ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಗುಲಬರ್ಗಾ ವಿಶ್ವವಿದ್ಯಾಲಯ,
ಕನ್ನಡ ಅಧ್ಯಯನ ಸಂಸ್ಥೆ

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ

ಜಾನಪದ ಸಂಪುಟ

ಸಂ. ಡಾ. ಪಿ.ಕೆ. ಖಂಡೋಬಾ



GULBARGA UNIVERSITY

ಗುಲಬರ್ಗಾ ವಿಶ್ವವಿದ್ಯಾಲಯ

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ವಿಶ್ವಕೋಶ

ಜಾನಪದ ಸಂಪುಟ

HYDERABAD KARNATAKA SAMSKRITIKA VISHAYA KOSHA: JANAPADA VOLUME -

An Cultural subject Encyclopaedia of Hyderabad Karnataka on folklore in Kannada, Edited by Dr. P.K. Khandoba Professor of Kannada, Published by the Institute of Kannada studies Gulbarga University, Gulbarga and Funded by Govt. of Karnataka.

Editor - in - chief: **Dr. P.K. Khandoba**

ISBN: 978-81-921036-8-6
First Impression: 2011
Total Pages: 551
Paper used: 80 GSM Maplitho
Valume price: Rs. 800/-
Cover Design by: Artists Gurunath Chavan, Mahesh Shrigani & Parashuram. P.

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ: ಜಾನಪದ ಸಂಪುಟ

ಪ್ರಧಾನ ಸಂಪಾದಕರು:
ಡಾ. ಪಿ.ಕೆ. ಖಂಡೋಬಾ. ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಪ್ರಕಾಶಕರು: ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಪ್ರಥಮ ಮುದ್ರಣ: 2011
ಬಳಸಿರುವ ಕಾಗದ: ಮ್ಯಾಪಲಿಥೊ 80 GSM Maplitho
ಮುಖಬೆಲೆ: **ರೂ. 800/-**
ಕೃತಿ ದೊರೆಯುವ ಸ್ಥಳ: ಕನ್ನಡ ಅಧ್ಯಯನ ಸಂಸ್ಥೆ
ಮುದ್ರಕರು:
ಪ್ರಿಂಟ್ ಪಾರ್ಕ್
ಕ್ವಾಲಿಟಿ ಅಫ್‌ಸೆಟ್ ಪ್ರಿಂಟರ್ಸ್
1496/4, 3ನೇ ಕ್ರಾಸ್, ಮರಿಯಪ್ಪನ ಪಾಳ್ಯ
ಶ್ರೀರಾಮಪುರಂ ಅಂಚೆ, ಬೆಂಗಳೂರು- 560021
ದೂರವಾಣಿ: 080-23422838

3

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ: ಜಾನಪದ

ಪ್ರಧಾನ ಸಂಪಾದಕರು

ಡಾ. ಪಿ.ಕೆ. ಖಂಡೋಬಾ

ಕನ್ನಡ ಭಾಷಾಭಿವೃದ್ಧಿ ಯೋಜನೆ ಅನುಷ್ಠಾನ ಸಮಿತಿ

ಅಧ್ಯಕ್ಷರು

ಪ್ರೊ. ಈ.ಟಿ. ಪುಟ್ಟಯ್ಯ

ಕುಲಪತಿಗಳು

ಉಪಾಧ್ಯಕ್ಷರು

ಪ್ರೊ. ಎಸ್.ಎಲ್. ಹಿರೇಮಠ

ಕುಲಸಚಿವರು

ಸದಸ್ಯರು

ಡಾ. ಡಿ.ಬಿ. ನಾಯಕ

ಡಾ. ಬಸವರಾಜ ಸಬರದ

ಡಾ. ಬಿ.ಎಸ್. ಪೋಲಿಸ್‌ಪಾಟೀಲ

ಡಾ. ಎಸ್.ಎಂ. ಹಿರೇಮಠ

ಡಾ. ವ್ಹಿ.ಜಿ. ಪೂಜಾರ

ಡಾ. ವಿ.ಎಸ್. ದಂಡೆ

ಡಾ. ಎಚ್.ಟಿ. ಪೋತೆ

ಡಾ. ಜಯಶ್ರೀ ದಂಡೆ

ಡಾ. ರಾಜಪ್ಪ ದಳವಾಯಿ

ಸಂಚಾಲಕರು

ಡಾ. ನಾಗಾಬಾಯಿ ಬುಳ್ಳಾ

ಸಲಹಾ ಸಮಿತಿ ಸದಸ್ಯರು

ಡಾ. ಮ.ಗು. ಬಿರಾದಾರ

ಡಾ. ವೀರಣ್ಣ ರಾಜೂರ

ಡಾ. ವಸಂತ ಕುಷ್ಟಿಗಿ

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿ

ಕರ್ನಾಟಕ ಸರಕಾರ

ವಿಧಾನಸೌಧ
ಬೆಂಗಳೂರು 560 001
ದಿನಾಂಕ: 15.10.2011

5

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ–ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂದಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತಕರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ, ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳ ಅಡಿಯಲ್ಲಿ ಈಗ ಸಿದ್ಧಪಡಿಸಿರುವ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ: ಜಾನಪದ ಸಂಪುಟವನ್ನು ಪ್ರಕಟಿಸಲು ಶ್ರಮಿಸಿದ ಸಂಪಾದಕರನ್ನು ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿ

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರಕಾರ

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು– 560 001
ದಿನಾಂಕ: 15.10.2011

ಶುಭ ಹಾರೈಕೆ

ಕನ್ನಡ ನಾಡು–ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು–ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡು ಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ 450 ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ ಹಲವು ಸಂಪುಟಗಳ ಪ್ರಕಟಣಾ ಯೋಜನೆಯ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹೈದ್ರಾಬಾದ ಕರ್ನಾಟಕದ ಸಾಂಸ್ಕೃತಿಕ ವಿಷಯಕೋಶ: ಜಾನಪದ ಎಂಬ ಬೃಹತ್ ಸಂಪುಟವು ಪ್ರಕಟವಾಗುತ್ತಿವೆ ಎಂಬ ವಿಚಾರ ತಿಳಿದು ನನಗೆ ತುಂಬಾ ಸಂತೋಷವಾಗಿದೆ.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು–ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು–ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ
ಸಚಿವರು

9

ಬಸವರಾಜು
ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರಕಾರ

2, ನೆಲಮಹಡಿ, #ವಿಕಾಸ ಸೌಧ,
ಬೆಂಗಳೂರು– 560 001
✆ 22205781ಮ 2203400
ಫ್ಯಾಕ್ಸ್: 22353105
ಇ–ಮೇಲ್: secy-kc@karnataka. Gov.in
ದಿ: 24.10.2011

ಶುಭ ಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.450ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ, ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಲಯದ ರವಿಕೀರ್ತಿಯ 5ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. 2009ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ: ಜಾನಪದ ಸಂಪುಟವನ್ನು ಪ್ರಕಟಿಸಿದೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತುಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು ಮತ್ತು ಯೋಜನೆಯ ಸಂಪಾದಕರು ಮತ್ತು ಸಂಪುಟದ ಪ್ರಧಾನ ಸಂಪಾದಕರಾದ ಡಾ. ಪಿ.ಕೆ. ಖಂಡೋಬಾ ಅವರನ್ನು, ಕುಲಪತಿ ಪ್ರೊ. ಈ.ಟಿ.ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ.ಎಸ್.ಎಲ್.ಹಿರೇಮಠ ಅವರನ್ನು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ.ವೀರಣ್ಣ ದಂಡೆಯವರನ್ನು ನಾನು ಕರ್ನಾಟಕ ಸರಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು
ಕಾರ್ಯದರ್ಶಿ

11

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು– 560 001
ದಿನಾಂಕ: 15.10.2011

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ರಚನಕಾರರ ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ದನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ 2009ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ ಇದೀಗ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ: ಜಾನಪದ ಎಂಬ ಬೃಹತ್ ಸಂಪುಟವನ್ನು ಪ್ರಕಟಿಸಿ ಬಿಡುಗಡೆ ಮಾಡುತ್ತಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ. ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ, ಪ್ರಾಧ್ಯಾಪಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಹಿಂದಿನ ಅಧ್ಯಕ್ಷರಾದ ಡಾ. ವೀರಣ್ಣ ದಂಡೆ, ಹಾಗೂ ಇಂದಿನ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೆ, ಈ ಯೋಜನೆಯ ಸಂಪಾದಕರು ಮತ್ತು ಸಂಪುಟದ ಪ್ರಧಾನ ಸಂಪಾದಕರಾದ ಡಾ. ಪಿ.ಕೆ. ಖಂಡೋಬಾ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರವಾಗಿ ನಾನು ಹೃತ್ಪೂರ್ವವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್.
ಆಯುಕ್ತರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: 25.10.2011

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. 1970–71ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ 1980ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು, ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ಕೋಶ ಸಂಪುಟಗಳ ಪ್ರಕಟನಾ ಯೋಜನೆಯೂ ಒಂದು. ಈ ಯೋಜನೆಗೆ ಸಂಬಂಧಿಸಿದಂತೆ ಜಾನಪದ ಮತ್ತು ಲಲಿತಕಲೆಗಳ ಎರಡು ಬೃಹತ್ ಸಂಪುಟಗಳು ಪ್ರಕಟನೆಗೊಂಡು ಹೊರಬರುತ್ತಿರುವುದು ಹರ್ಷದ ಸಂಗತಿಯಾಗಿದೆ.

ಪ್ರಸ್ತುತ, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ: ಜಾನಪದ ಸಂಪುಟವನ್ನು ನಮ್ಮ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಡಾ. ಪಿ.ಕೆ. ಖಂಡೋಬಾ ಅವರು ವಿಶೇಷ ಶ್ರಮವಹಿಸಿ ಸಿದ್ಧಪಡಿಸಿರುವರು. ಇಲ್ಲಿನ ವಿಷಯಗಳು ತುಂಬ ಮೌಲಿಕವಾಗಿವೆ, ಈ ಭಾಗದ ಜಾನಪದ ಸಾಂಸ್ಕೃತಿಕ ಲೋಕದ ವಿಶಿಷ್ಟತೆಗಳು ಇಲ್ಲಿವೆ. ಈ ವಿಷಯಕೋಶದ ಸಂಪುಟವನ್ನು ತುಂಬ ಶ್ರಮವಹಿಸಿ ಸಿದ್ಧಪಡಿಸಿದ ಯೋಜನೆಯ ಸಂಪಾದಕರು ಹಾಗೂ ಸಂಪುಟದ ಪ್ರಧಾನ ಸಂಪಾದಕರಾದ ಡಾ. ಪಿ.ಕೆ. ಖಂಡೋಬಾ ಅವರಿಗೂ, ಕನ್ನಡ ಅಧ್ಯಯನ ಸಂಸ್ಥೆಯ ಹಿಂದಿನ ಅಧ್ಯಕ್ಷರಾದ ಡಾ. ವೀರಣ್ಣ ದಂಡೆ, ಹಾಗೂ ಇಂದಿನ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

(ಈ.ಟಿ. ಪುಟ್ಟಯ್ಯ)
ಕುಲಪತಿಗಳು

ಪ್ರಾಸ್ತಾವಿಕ ಮಾತು

ಕರ್ನಾಟಕ ಸರಕಾರವು ಭಾಷಾಭಿವೃದ್ಧಿ ಯೋಜನೆ ಅಡಿಯಲ್ಲಿ ನೀಡಿದ ಒಂದು ಕೋಟಿ ರೂಪಾಯಿ ಅನುದಾನದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ವಿವಿಧ ಎಂಟು ಪ್ರಮುಖ ಯೋಜನೆಗಳನ್ನು ರೂಪಿಸಿ ಪ್ರಸ್ತಾವನೆಯನ್ನು ಸಲ್ಲಿಸಿತು. ಅಧ್ಯಯನ ಸಂಸ್ಥೆಯ ಶಿಕ್ಷಕರು ತಮಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಈ ಯೋಜನೆಗಳನ್ನು ರೂಪಿಸಿಕೊಟ್ಟರು, ಆರಂಭದಲ್ಲಿ ಒಂದೊಂದು ಯೋಜನೆಯ ಕಾರ್ಯಭಾರವನ್ನು ತಲಾ ಇಬ್ಬಿಬ್ಬರು ಶಿಕ್ಷಕರಿಗೆ ನಿರ್ವಹಿಸಿ ಕೊಡಲಾಯಿತು ಆದರೆ ಇಬ್ಬಿಬ್ಬರ ಸಹಭಾಗಿತ್ವದಲ್ಲಿ ಯೋಜನೆಯ ಕಾರ್ಯಗತಿಯು ತುಂಬಾ ಮಂದವಾಗಿ ಕುಂಟಿತವಾಯಿತು. ಹೀಗಾಗಿ ವೈಯಕ್ತಿಕವಾಗಿ ನಿರ್ದಿಷ್ಟ ಜವಾಬ್ದಾರಿಯನ್ನು ನೀಡದೆ ಹೋದರೆ ಯೋಜನೆಗಳು ತ್ವರಿತವಾಗಿ ಪೂರ್ಣಗೊಳ್ಳಲಾರವೆಂಬ ಕಾರಣದಿಂದ ಆಯಾ ಯೋಜನೆಗಳ ಸಂಪುಟಗಳ ರಚನೆಯ ಜವಾಬ್ದಾರಿಯನ್ನು ಒಬ್ಬೊಬ್ಬ ಶಿಕ್ಷಕರಿಗೆ ನಿಗದಿಗೊಳಿಸಿ, ಒಪ್ಪಿಸಿಕೊಡಲಾಯಿತು.

ಕನ್ನಡ ಅಧ್ಯಯನ ಸಂಸ್ಥೆಯ ಈ ಎಂಟು ಪ್ರಮುಖ ಯೋಜನೆಗಳಲ್ಲಿ 'ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ'ವು ಒಂದು. ಈ ಯೋಜನೆ ಅಡಿಯಲ್ಲಿ ಕೆಳಕಂಡ ಒಟ್ಟು ನಾಲ್ಕು ಸಂಪುಟಗಳನ್ನು ಸಿದ್ಧಪಡಿಸಿಕೊಡುವಂತೆ ರೂಪುರೇಷೆಗಳನ್ನು ಹಾಕಿಕೊಳ್ಳಲಾಯಿತು :

1. ಜಾನಪದ ಸಂಪುಟ
2. ಲಲಿತಕಲೆಗಳ ಸಂಪುಟ
3. ಕನ್ನಡ ಸಾಹಿತ್ಯ ಸಂಪುಟ ಮತ್ತು
4. ಸಂಕೀರ್ಣ ಸಂಪುಟ

ಈ ನಾಲ್ಕು ಸಂಪುಟಗಳಲ್ಲಿ ಜಾನಪದ ಮತ್ತು ಲಲಿತಕಲೆಗಳ ಸಂಪುಟಗಳ ಸಂಪಾದನಾ ಕಾರ್ಯವನ್ನು ಪ್ರೊ.ಪಿ.ಕೆ.ಖಂಡೋಬಾ ಅವರಿಗೂ, ಕನ್ನಡ ಸಾಹಿತ್ಯ ಮತ್ತು ಸಂಕೀರ್ಣ ಸಂಪುಟಗಳ ಸಂಪಾದನಾ ಕಾರ್ಯವನ್ನು ಡಾ. ಎಂ.ಎಸ್.ಪಾಟೀಲ್ ಅವರಿಗೂ ನಿರ್ವಹಿಸಿಕೊಡಲಾಯಿತು. ಈ ಹಿನ್ನೆಲೆಯಲ್ಲಿ ನಾನು ಇದೀಗ ಜಾನಪದ ಸಂಪುಟವನ್ನು ಸಂಪಾದಿಸಿ, ಸಿದ್ಧಪಡಿಸಿ ತಮ್ಮ ಮುಂದಿಟ್ಟಿದ್ದೇನೆ. ಇನ್ನು ಲಲಿತ ಕಲೆಗಳ ಸಂಪುಟದ ಕಾರ್ಯವು ಪ್ರಗತಿಯಲ್ಲಿದೆ.

ಹೈದ್ರಾಬಾದ ಕರ್ನಾಟಕ ಪ್ರದೇಶ ಕುರಿತು ಒಂದೆರಡು ಮಾತುಗಳನ್ನು ಸ್ಥೂಲವಾಗಿ ಹೇಳುವುದು ಇಲ್ಲಿ ಅಗತ್ಯ ಎಂದು ಭಾವಿಸುತ್ತೇನೆ. ಹೈದ್ರಾಬಾದ ಕರ್ನಾಟಕ ಎಂಬುದು ಇಂದಿನ ಕರ್ನಾಟಕ ರಾಜ್ಯದ ಬೀದರ್, ಕಲಬುರ್ಗಿ, ರಾಯಚೂರು, ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಗಳಿಂದ ಕೂಡಿದ ಪ್ರದೇಶ. ಇದು 1721 ರಿಂದ ಭಾರತ ಸರಕಾರದ ಒಕ್ಕೂಟದಲ್ಲಿ ಸೇರುವವರೆಗೆ ನಿಜಾಮರ ಆಡಳಿತದಲ್ಲಿದ್ದ ಭಾಗವಾಗಿತ್ತು. ಈ ಪ್ರದೇಶವು ಕೆಲವು ವಿಶಿಷ್ಟ ಮತ್ತು ವೈವಿಧ್ಯಮಯವಾದ ಸಂಪತ್ತುಗಳಿಂದ ಕೂಡಿದ ಭಾಗವಾಗಿದೆ. ಇದು ಆರ್ಥಿಕವಾಗಿ ಹಿಂದುಳಿದ ಪ್ರದೇಶವಾದರೂ ಕರ್ನಾಟಕದ ಇನ್ನುಳಿದ ಪ್ರದೇಶಗಳಿಗೆ ಹೋಲಿಸಿದರೆ ಇದು ತನ್ನದೇ ಆದ ಉಜ್ವಲ ಪರಂಪರೆ, ಇತಿಹಾಸ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ಕೆಲವು ಮೂಲಭೂತ ಸೌಕರ್ಯಗಳಿಲ್ಲದೆ ಇದು ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿಯನ್ನು ಅಂಟಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಇದರ ಸರ್ವಾಂಗೀಣ ಅಭಿವೃದ್ಧಿಗಾಗಿ ಕರ್ನಾಟಕ ಸರಕಾರ ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯನ್ನು ರಚಿಸಿದೆ. ಈ ಪ್ರದೇಶವು ಬಹು ಮುಖ್ಯವಾಗಿ ರಾಜ್ಯದ 'ತೊಗರಿ ಕಣಜ' ಹಾಗೂ 'ಸಿಮೆಂಟಿನ ಅಕ್ಷಯ ಪಾತ್ರೆ'ಯಾಗಿದೆ. ಈ ಭಾಗದ ಶಹಬಾದ ಪರಸಿಕಲ್ಲುಗಳು ಅತ್ಯಂತ ಪ್ರಸಿದ್ಧಿಯನ್ನು ಪಡೆದಿವೆ, ತೊಗರಿ, ಸಿಮೆಂಟು ಮತ್ತು ಪರಸಿಕಲ್ಲುಗಳ ಉದ್ಯಮಗಳಿಂದಾಗಿ ಈ ಪ್ರದೇಶ ದಕ್ಷಿಣ ಭಾರತದ ಪ್ರಮುಖ ಸಾರಿಗೆ ಕೇಂದ್ರವಾಗಿ ಪರಿಣಮಿಸಿದೆ. ಈ ಪ್ರದೇಶವು

ಹಲವು ಸುಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿದ್ದು, ಕೆಲವು ಮತೀಯ ಸಾಮರಸ್ಯಕ್ಕೆ ಹಾಗೂ ಹಿಂದೂ–ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾಗಿವೆ. ಕಲಬುರ್ಗಿ ಜಿಲ್ಲೆಯ ಸನ್ನತಿ, ನಾಗಾಯಿ, ಮಳಖೇಡ, ಬೀದರಿನ ಗವಾನ ಮದರಸಾ ವಿಶ್ವವಿದ್ಯಾಲಯ ಇತ್ಯಾದಿಗಳು ಪ್ರಾಚೀನ ವಿದ್ಯಾಕೇಂದ್ರಗಳಾಗಿವೆ. ಎಲ್ಲಕ್ಕೂ ಮಿಗಿಲಾಗಿ ಈ ಪ್ರದೇಶದ ಜನಪದ ಸಂಸ್ಕೃತಿ ಮತ್ತು ಭಾಷೆಯ ಮೇಲೆ ನೆರೆಯ ಆಂಧ್ರ ಮತ್ತು ಮಹಾರಾಷ್ಟ್ರ ರಾಜ್ಯಗಳ ಬಲವಾದ ಪ್ರಭಾವದ ನಡುವೆಯೂ ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡು ಬಂದಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

ಈ ಪ್ರಾಂತ್ಯದಲ್ಲಿ ಸ್ವಾತಂತ್ರ್ಯ ಪೂರ್ವದ ಸ್ಥಿತಿಗತಿ ತುಂಬಾ ಭೀಕರವಾಗಿದೆ. ಮೊಗಲರ ದಾಳಿಯಿಂದ ಆದಿಲ್ ಶಾಹಿಗಳು ಪತನವಾದ ಮೇಲೆ ಈ ಪ್ರಾಂತ್ಯ ತುಂಬಾ ದುಸ್ಥಿತಿಗೊಳಗಾಯಿತು. ಜನಸಮುದಾಯದ ಬದುಕು ಹೀನಾಯ ಸ್ಥಿತಿಗೆ ತಲುಪಿ ಎಲ್ಲ ಬಗೆಯ ಕ್ರೌರ್ಯಗಳನ್ನು ಅನುಭವಿಸಿದೆ. ದಾಸ್ಯತ್ವ, ಮತಾಂತರ ಹಾಗೂ ಒಳಮತಾಂತರಗಳು ಈ ಭಾಗದ ಜನಸಮುದಾಯವನ್ನು ತಲ್ಲಣಗೊಳಿಸಿವೆ. ಈ ಪ್ರಾಂತ್ಯದಲ್ಲಿ ಸೂಫಿಗಳು, ಸಂತರು, ನಾಥರು, ಸಿದ್ಧರು, ಆರೂಢರು, ದರ್ವೇಶಿಗಳು, ದೀನ್‌ದಾರರು ಮೊದಲಾದ ಹತ್ತಾರು ಧಾರ್ಮಿಕ ಪಂಥಗಳು ಕಾಣಿಸಿ ಕೊಂಡವು. ಇಲ್ಲಿನ ಜನಸಮುದಾಯಗಳು ಈ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಘರ್ಷಗಳಿಗೊಳಗಾಗಿ ತತ್ತರಿಸಿ ಹೋಗಿವೆ.

ಈ ಹಿನ್ನೆಲೆಯಲ್ಲಿ ಹೈದ್ರಾಬಾದ ಕರ್ನಾಟಕವು ಸಾಹಿತ್ಯ, ಸಂಸ್ಕೃತಿ, ಜಾನಪದ, ಲಲಿತ ಕಲೆ ಇವುಗಳಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿದೆ. ಇಲ್ಲಿಯ ಕಲೆ, ಜಾನಪದ, ಇತಿಹಾಸ, ಪುರಾತತ್ವ, ಇವೆಲ್ಲಾ ಅಧ್ಯಯನ ಯೋಗ್ಯವಾಗಿವೆ. ಇಲ್ಲಿಯ ಸಂಸ್ಕೃತಿ ವಿಶಿಷ್ಟವಾದದ್ದು, ಹೈದ್ರಾಬಾದ ಕರ್ನಾಟಕದ ಜನರ ಬದುಕು ಹೋರಾಟಮಯವಾದುದು ಅಷ್ಟೇ ಅಲ್ಲ, ವರ್ಣ ರಂಜಿತವಾದುದು ಕೂಡ. ನಾಡಿನ ಸಾಹಿತ್ಯ, ಸಂಸ್ಕೃತಿ, ಜನಪದ ಕಲೆಗಳು ಇವುಗಳಿಗೆಲ್ಲಾ ಇಲ್ಲಿಯ ಜನ ನೀಡಿರುವ ಕೊಡುಗೆ ಅಪೂರ್ವವಾದುದು. ಈ ಭಾಗದಲ್ಲಿ ನೂರಾರು ಜನ ತತ್ವಪದಕಾರರು, ಪುರಾಣಗಳು, ಲಾವಣಿಕಾರರು, ಶಾಹಿರರು, ಸಣ್ಣಾಟ, ದೊಡ್ಡಾಟ, ಕವಿ–ಕಲಾವಿದರು, ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಈ ಭಾಗದ ಕೆಲವು ಸಾಂಸ್ಕೃತಿಕ ಸಂಗತಿಗಳು ಅತ್ಯಂತ ಕುತೂಹಲಕಾರಿಯಾಗಿವೆ. ಕರ್ನಾಟಕದಲ್ಲಿ ಪ್ರಾದೇಶಿಕವಾಗಿ ವಿಭಿನ್ನ ಜನ ಸಂಸ್ಕೃತಿಗಳಿರುವುದನ್ನು ನಾವು ಗುರುತಿಸುತ್ತೇವೆ. ಭಾಷೆ ಒಂದಾದರೂ ಅದರಲ್ಲಿ ವೈವಿಧ್ಯತೆಗಳು ಇರುವುದನ್ನು ಗಮನಿಸಬಹುದು. ಹೈದ್ರಾಬಾದ ಕರ್ನಾಟಕದ ಕನ್ನಡ ಬಹು ಶಕ್ತಿಶಾಲಿಯಾದ ಗಂಡು ಭಾಷೆ. ಬೇರೆ ಬೇರೆ ಭಾಷೆಗಳ ಪದಗಳನ್ನು ಸ್ವೀಕರಿಸಿದಷ್ಟೇ ಅಲ್ಲ, ಕನ್ನಡದ ಪದಗಳನ್ನು ಕೂಡಾ ಅದು ಅನ್ಯ ರಾಜ್ಯದವರಿಗೆ ನೀಡಿದೆ. ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪಟ್ಟರೂ ಕೂಡಾ ಇಂದಿನವರೆಗೂ ತನ್ನತನವನ್ನು ಉಳಿಸಿಕೊಂಡು ಬಂದಿರುವ ಇಲ್ಲಿಯ ಜನ, ಅವರ ಸಂಸ್ಕೃತಿ ಇವೆಲ್ಲಾ ದಾಖಲಾಗುವುದು ಅಗತ್ಯ. ಅನೇಕ ಸಂಪ್ರದಾಯ, ನಂಬಿಕೆಗಳು, ಗಾದೆಗಳು, ಒಗಟುಗಳು ಇವೆಲ್ಲಾ ಮರೆಯಾಗುತ್ತಿರುವ ಸಂದರ್ಭದಲ್ಲಿ ಅವುಗಳನ್ನೆಲ್ಲಾ ದಾಖಲಿಸಿ ಕರ್ನಾಟಕದ ಸಮಸ್ತ ಜನತೆಯ ಮುಂದೆ ಇಡುವುದು ನಮ್ಮ ಉದ್ದೇಶವಾಗಿತ್ತು. ಆ ನಿಟ್ಟಿನಲ್ಲಿ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ಕೋಶ ಒಂದು ಅಪೂರ್ವ ದಾಖಲೆಯಾಗಿದೆ. ಈ ನಿಟ್ಟಿನಲ್ಲಿ ಇದು ಕೇವಲ ಮಾಹಿತಿಕೋಶವಾಗಿರದೆ, ಸಾಂಸ್ಕೃತಿಕ ಹುಡುಕಾಟದ ವಿಷಯ ವಿವರಗಳನ್ನು ಒಳಗೊಂಡ ಕೋಶವಾಗಿದೆ.

ಹೈದ್ರಾಬಾದ ಕರ್ನಾಟಕಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ಅಧ್ಯಯನಗಳು ಸಾಕಷ್ಟು ನಡೆದಿಲ್ಲ. ಕೆಲವು ವಿದ್ವಾಂಸರು ವೈಯಕ್ತಿಕ ನೆಲೆಯಲ್ಲಿ ಕೃತಿಗಳನ್ನು ರಚಿಸಿದ್ದುಂಟು. ಆದರೆ ಸಮಗ್ರವಾಗಿ ಮತ್ತು ಸಮರ್ಪಕವಾಗಿ ಈ ನಿಟ್ಟಿನಲ್ಲಿ ಅಧ್ಯಯನ ಸಂಶೋಧನೆಗಳು ನಡೆದು, ಅವು ದಾಖಲಾಗುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವು ದಿಟ್ಟ ಹೆಜ್ಜೆಯನ್ನಿಟ್ಟು ಸಾಂಸ್ಕೃತಿಕ ಕೋಶ ಪ್ರಕಟಿಸಿ ಸಮಗ್ರ ಕನ್ನಡಿಗರ ಮುಂದಿಟ್ಟಿದೆ.

ಕನ್ನಡ ಭಾಷೆಯಲ್ಲಿ ವಿಶ್ವಕೋಶಗಳನ್ನು ಸಿದ್ದಪಡಿಸುವ ಪರಿಕಲ್ಪನೆ ಹೊಸದೇನಲ್ಲ. ಜ್ಞಾನದ ವಿವಿಧ ಶಾಖೆಗಳ ವಿವೇಚನೆಯುಳ್ಳ ವಿಶ್ವಕೋಶಗಳ ಪ್ರಕಟಣೆ ಕರ್ನಾಟಕದಲ್ಲಿ ಹಿಂದಿನಿಂದಲೂ ನಡೆದು ಬಂದಿದೆ. ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿ ಪ್ರಾಚೀನ ಅರ್ಥದಲ್ಲಿ ಒಂದು ವಿಶ್ವಕೋಶವಾಗಿರಬಹುದು. ಕಡಲ ತೀರದ ಭಾರ್ಗವ ಡಾ. ಶಿವರಾಮ ಕಾರಂತರು ವಿಶ್ವಕೋಶ ಯೋಜನೆಗಳನ್ನು ಮಾಡಿ 1936ರಲ್ಲಿ ಮಕ್ಕಳಿಗಾಗಿ ಬಾಲ ಪ್ರಪಂಚ ಪ್ರಕಟಿಸಿದ್ದರು. ಇದು ವಿಶ್ವಕೋಶ ರಚನೆಯಲ್ಲಿ ಇಟ್ಟ ಪ್ರಪ್ರಥಮ ಹೆಜ್ಜೆಯೆಂದು ಭಾವಿಸಬಹುದು. ಆನಂತರ ವಿಷಯ ವಿಶ್ವಕೋಶವೆಂದು ಪರಿಗಣಿಸಬಹುದಾದ 'ವಿಜ್ಞಾನ ಪ್ರಪಂಚ'ವನ್ನು ಅವರು ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿದ್ದು ಉಲ್ಲೇಖನೀಯ. ಅದರೆ ಇದು ವೈಯಕ್ತಿಕ ನೆಲೆಯಲ್ಲಿ ವಿಶ್ವಕೋಶ ರಚಿಸಲು ಕಾರಂತರು ನಡೆಸಿದ ಒಂದು ಸಾಹಸಗಾಥೆ. ಕನ್ನಡದಲ್ಲಿ ವಿಶ್ವಕೋಶಗಳ ಪ್ರಕಟಣೆಯ ಬಗ್ಗೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು, ಕನ್ನಡದ ಹಲವು ಹಿರಿಯ ಲೇಖಕರು ಪ್ರಸ್ತಾಪಿಸಿದುಂಟು, ರಾಷ್ಟ್ರ ಕವಿ ಕುವೆಂಪುರವರು ಕನ್ನಡದಲ್ಲಿ ವಿಶ್ವಕೋಶಗಳ ಪ್ರಕಟಣೆಯಾಗಬೇಕು. ಇದರಿಂದ ಕನ್ನಡ ಸಾಹಿತ್ಯ ಸಿರಿವಂತವಾಗುವದು ಮತ್ತು ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡುವರಿಗೆ, ಸಂಶೋಧಕರಿಗೆ ಒಂದು ಆಕರ ಗ್ರಂಥ ಲಭ್ಯವಾಗಬಹುದೆಂದು ಮನಗಂಡು ಕನ್ನಡದಲ್ಲಿ ವಿಶ್ವಕೋಶ ಪ್ರಕಟಣೆ ಯೋಜನೆ ಹಮ್ಮಿಕೊಳ್ಳುವಂತೆ ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿದರು. ಈ ಸಲಹೆಯನ್ನು ಮಾಡಿದ ವಿಶ್ವವಿದ್ಯಾಲಯ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿಯ ಯೋಜನೆಯ ಬಗ್ಗೆ ಸವಿವರವಾದ ವರದಿ ಸಿದ್ದಪಡಿಸಿದ್ದರು. ಈ ಯೋಜನೆಯನ್ನು ಮೊದಲಿಗೆ ಸರ್ಕಾರದ ಶಿಕ್ಷಣ ಇಲಾಖೆಗೆ ಸಲ್ಲಿಸಲಾಯಿತು. ಅನಂತರ ಈ ಯೋಜನೆಗೆ ಮರು ಚಾಲನೆ ನೀಡಿತು. ಪ್ರೊ. ದೇ. ಜವರೇಗೌಡರು ಈ ಯೋಜನೆಯನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ತರುವಲ್ಲಿ ಯಶಸ್ವಿಯಾದರು. 1969ರಲ್ಲಿ ಕನ್ನಡ ವಿಶ್ವಕೋಶದ ಮೊದಲ ಸಂಪುಟ ಪ್ರಕಟವಾಯಿತು. 14 ಸಂಪುಟಗಳ ಈ ಯೋಜನೆ ಪೂರ್ಣವಾಗಲು ಸುಮಾರು 35 ವರ್ಷಗಳು ಹಿಡಿದವು. ವಿಶ್ವಕೋಶ ಯೋಜನೆಗಳೊಂದಿಗೆ 30 ಸಂಪುಟಗಳ ಕನ್ನಡ

ವಿಷಯ ವಿಶ್ವಕೋಶ ಯೋಜನೆಯನ್ನು ಸರ್ಕಾರ ಮೈಸೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿತು. ಆದರೆ ಈ ಯೋಜನೆಯಲ್ಲಿ ಕನ್ನಡ ವಿಶ್ವಕೋಶ ಕರ್ನಾಟಕ ಜಾನಪದ, ಪುರಾತತ್ವ ಮತ್ತು ಇತಿಹಾಸ, ಪ್ರಾಣಿ ವಿಜ್ಞಾನ, ಭೂಗೋಳ ಶಾಸ್ತ್ರಗಳು ಪ್ರಕಟವಾಗಿವೆ. ಕರ್ನಾಟಕ ಸಹಕಾರಿ ಪ್ರಕಟನಾಮಂದಿರದ ಹೆಸರಾಂತ ಲೇಖಕ ನಿರಂಜನರ ಪ್ರಧಾನ ಸಂಪಾದಕರಲ್ಲಿ ಜ್ಞಾನ ಗಂಗೋತ್ರಿಯು ಏಳು ಸಂಪುಟಗಳಲ್ಲಿ ಪ್ರಕಟವಾಯಿತು.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶ ಯೋಜನೆಯ ಮಾದರಿಯಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕೆಲವು ವಿಶ್ವಕೋಶಗಳನ್ನು ಪ್ರಕಟಿಸಿದೆ. ಇವುಗಳಲ್ಲಿ ಕರ್ನಾಟಕದ ಜನಪದ ಕಲೆಗಳ ಕೋಶ ಉಲ್ಲೇಖನೀಯ. ಕನ್ನಡ ಸಾಹಿತ್ಯ ಪರಿಷತ್ತು ಡಾ. ಚಂದ್ರಶೇಖರ ಕಂಬಾರ ಅವರ ಸಂಪಾದಕತ್ವದಲ್ಲಿ ಕನ್ನಡ ಜಾನಪದ ವಿಶ್ವಕೋಶಗಳ ಎರಡು ಸಂಪುಟಗಳನ್ನು ಪ್ರಕಟಿಸಿದೆ. ಹೀಗೆ ವಿಶ್ವಕೋಶಗಳ ಪ್ರಕಟಣೆ ನಿರಂತರವಾಗಿ ಸಾಗುತ್ತಿದೆ.

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ಕೋಶದ ಇತಿಮಿತಿ, ಕುರಿತು ಕೆಲವು ವಿಚಾರಗಳನ್ನು ಹೇಳುವದು ಇಲ್ಲಿ ಸೂಕ್ತವೆಂದು ಭಾವಿಸಿದ್ದೇನೆ. ಈ ಕೋಶವನ್ನು ಸಾಮಾನ್ಯ ಓದುಗರಿಗಷ್ಟೇ ಅಲ್ಲ, ಸಂಶೋಧಕರು ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಮತ್ತು ಈ ಭಾಗದ ಸಂಸ್ಕೃತಿ, ಜಾನಪದ ಮತ್ತು ಇತಿಹಾಸದಲ್ಲಿ ಆಸಕ್ತಿಯುಳ್ಳವರನ್ನು ಗಮನದಲ್ಲಿರಿಸಿಕೊಂಡು ರಚಿಸಲಾಗಿದೆ. ಈ ಸಂಪುಟದಲ್ಲಿ ಬಳಸಿರುವ ಭಾಷೆ ಸರಳವಾದುದು, ಲೇಖನಗಳು ಸುಲಭ ಗ್ರಾಹ್ಯವಾಗುವಂತಹದು. ಇಲ್ಲಿನ ಲೇಖನಗಳಿಗೆ ಒದಗಿಸಿರುವ ಮಾಹಿತಿ ನಿಖರವಾಗಿಯೂ ನಿರ್ದಿಷ್ಟವಾಗಿರುವಂತೆಯೂ ಎಚ್ಚರಿಕೆ ವಹಿಸಲಾಗಿದೆ. ಇಲ್ಲಿ ಲೇಖನಗಳ ವಿಮರ್ಶೆ, ವಿಶ್ಲೇಷಣೆಗೆ ಎಡೆಮಾಡಿಕೊಡದೆ ವಿಷಯದಲ್ಲಿ ಅದರ ಸ್ವರೂಪ, ಬಳಸುವ ಜನ ಸಮುದಾಯ ಸ್ಥಳ, ಸಂದರ್ಭ, ಆಚರಣೆ, ಪ್ರದರ್ಶನ, ವೇಷ ಭೂಷಣಗಳು ಮುಂತಾದ ವಿವರಗಳಿವೆ . ಇಲ್ಲಿ ಪ್ರಕಟವಾದ ಲೇಖನಗಳು ವಸ್ತು ನಿಷ್ಠವೂ ವ್ಯಾಪಕವೂ, ನಿಷ್ಪಕ್ಷಪಾತವಾಗಿಯೂ ಇರುವಂತೆ ಎಚ್ಚರಿಕೆ ವಹಿಸಲಾಗಿದೆ. ಸಾಮಾನ್ಯ ಓದುಗರಿಗೆ ಕೂಡಾ ಸುಲಭವಾಗಿ ಅರ್ಥವಾಗುವಂತೆ ಇಲ್ಲಿ ನಿರೂಪಿಸಲಾಗಿದೆ.

ಈ ಕೋಶದಲ್ಲಿ ದಾಖಲಾಗಿರುವ ಮಾಹಿತಿಗಳಾಗಲಿ, ಸ್ವರೂಪವಾಗಲಿ ಇದೇ ಅಂತಿಮವೆಂದು ಯಾರೂ ಭಾವಿಸಬೇಕಾಗಿಲ್ಲಾ. ಇಲ್ಲಿ ಹೈದ್ರಾಬಾದ ಕರ್ನಾಟಕದ ಪ್ರತಿ ಹಳ್ಳಿ ಹಳ್ಳಿಗೂ ಒಳಹೊಕ್ಕು ನೋಡುವುದು ಅಸಾಧ್ಯವಾದ ಸಂಗತಿ. ಇಲ್ಲಿ ಈ ಪ್ರದೇಶದ ಪ್ರಾತಿನಿಧಿಕವಾದ ಮಾಹಿತಿಯನ್ನು ಮಾತ್ರ ದಾಖಲಿಸಲಾಗಿದೆ. ಹೀಗಾಗಿ ಇಲ್ಲಿ ನೀಡಿರುವ ವಿವರಗಳು ಒಂದು ಜಿಲ್ಲೆಗೂ ಇನ್ನೊಂದು ಜಿಲ್ಲೆಗೂ ಹೋಲಿಸಿ ನೋಡಿದಾಗ ಒಂದಿಷ್ಟು ಭಿನ್ನತೆಗಳು ಕಾಣಿಸಬಹುದು ಒಂದು ಇನ್ನೊಂದಕ್ಕಿಂತ ತೀರ ಭಿನ್ನವಾಗಿ, ವಿಶಿಷ್ಟವಾಗಿ, ಸ್ವಾರಸ್ಯಕರವಾಗಿ ಹಾಗೂ ವೈವಿಧ್ಯಮಯವಾಗಿ ಕಾಣಿಸಬಹುದು. ಅಂತಹ ಕಡೆಗಳಲ್ಲಿ ವಿಪರ್ಯಾಸಗಳಿದ್ದರೆ ಅವುಗಳನ್ನು ಮುಂದಿನ ಆವೃತ್ತಿಯಲ್ಲಿ ಪರಿಷ್ಕರಿಸಿ ಸೇರಿಸಿಕೊಳ್ಳಲು ಅನುಕೂಲವಾಗುವಂತೆ ನಮಗೆ ತಿಳಿಸುವ ಕೃಪೆಮಾಡಬೇಕೆಂದು ಕೊರುತ್ತೇನೆ.

ಕೋಶದ ಕಾರ್ಯಕ್ಕೆ ಕೊನೆಯೆಂಬುದೇ ಇಲ್ಲ. ಅದು ಎಂದಿಗೂ ಮುಗಿಯದ ಕೆಲಸ. ವಾಸ್ತವವಾಗಿ ಯಾವ ವಿಶ್ವ ಕೋಶವೂ ಅಂತಿಮವಲ್ಲ. ನಮ್ಮ ಸಾಂಸ್ಕೃತಿಕ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ಅದು ಆಗಿಂದಾಗ್ಗೆ ಪರಿಷ್ಕರಣಗೊಳ್ಳುತ್ತಲೇ ಹೋಗುತ್ತದೆ. ಮೇಲಾಗಿ ಇದು ಪ್ರಾದೇಶಿಕ ಮಟ್ಟದಲ್ಲಿ ಕನ್ನಡದಲ್ಲಿ ರಚನೆಯಾಗಿರುವ ಪ್ರಪ್ರಥಮ ಕೋಶವಾದ್ದರಿಂದ ಇಲ್ಲಿ ಹಲವು ಅರೆಕೊರೆಗಳು ಇರುವದು ಸಹಜ. ಹೈದ್ರಾಬಾದ ಕರ್ನಾಟಕ ಭಾಗದ ಜಾನಪದ ಸಾಂಸ್ಕೃತಿಕ ವಿಷಯ ಸಂಗತಿಗಳನ್ನು ದಾಖಲಿಸುವುದು ಈ ಕೋಶದ ಪ್ರಮುಖ ಉದ್ದೇಶ ಈ ಪ್ರದೇಶದ ಜಾನಪದದ ಶ್ರೀಮಂತಿಕೆ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಎತ್ತಿ ಹೇಳುವ ನಿಟ್ಟಿನಲ್ಲಿ ಈ ಕೋಶ ತಕ್ಕ ಮಟ್ಟಿನ ಯಶಸ್ಸನ್ನು ಸಾಧಿಸಿದೆ ಎಂದು ಭಾವಿಸುತ್ತೇನೆ.

ಒಂದು ಕೋಶದ ಸಂಪಾದನಾ ಕೆಲಸವೆಂದರೆ ಅದು ಸುಲಭದ ಕೆಲಸವಲ್ಲ. ಅದು ಒಬ್ಬ ವ್ಯಕ್ತಿಯಿಂದ ಅಸಾಧ್ಯವಾದ ಕೆಲಸವೆಂದೇ ಹೇಳಬೇಕು. ಸಾಮಾನ್ಯವಾಗಿ ಯಾವುದೇ ಕೋಶದ ಕಾರ್ಯಕ್ಕೆ ಹತ್ತಾರು ಜನ ತಾಂತ್ರಿಕ ಸಿಬ್ಬಂದಿಗಳು ಸಂಪಾದಕರು, ಸಹಾಯಕ ಸಂಪಾದಕರು, ಉಪ ಸಂಪಾದಕರು, ಪ್ರಧಾನ ಸಂಪಾದಕರು, ಗೌರವ ಸಂಪಾದಕರು, ಲೇಖನ ಪರಿಶೀಲಕರು, ಪರಿಷ್ಕರಿಸುವವರು, ಕರಡು ಸಿದ್ಧಪಡಿಸುವವರು ಹೀಗೆ ಸುಮಾರು 50 ಕ್ಕೂ ಹೆಚ್ಚುಜನ ತಾಂತ್ರಿಕ ಸಿಬ್ಬಂದಿಗಳು ನಿರಂತರವಾಗಿ ಪರಿಶ್ರಮಿಸಿದಾಗ ಕೋಶಕ್ಕೆ ಒಂದು ನಿರ್ದಿಷ್ಟ ಸ್ವರೂಪ ಬರಲು ಸಾಧ್ಯವಾಗುತ್ತದೆ. ಆದರೆ ಪ್ರಸ್ತುತ ಹೈದ್ರಾಬಾದ ಕರ್ನಾಟಕ ವಿಷಯ ಕೋಶಕ್ಕೆ ಈ ಯಾವ ತಾಂತ್ರಿಕ ಸಿಬ್ಬಂದಿಗಳ ನೆರವು ಇಲ್ಲದೆ ಇದು ಏಕವ್ಯಕ್ತಿ ಸಂಪಾದಿತ ಕೋಶವಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಈ ಕೋಶ ರಚನೆಯಲ್ಲಿ ನೂರಾರು ಜನ ಲೇಖಕರಿಗೆ ನಿರ್ದಿಷ್ಟ ವಿಷಯಗಳನ್ನು ನೀಡಿ ಟಿಪ್ಪಣೆ/ಲೇಖನಗಳನ್ನು ಬರೆದು ಕೊಡಲು ಕೇಳಿಕೊಳ್ಳಲಾಗಿತ್ತು. ಜೊತೆಗೆ ಕೆಲವು ವಿಷಯಗಳನ್ನು ಪತ್ರಿಕೆ, ನಿಯತಕಾಲಿಕೆಗಳಿಂದ, ಕೃತಿಗಳಿಂದ, ಬರಹ, ಲೇಖನ ಸಾಮಗ್ರಿಗಳಿಂದ, ಅಪೂರ್ವ ದಾಖಲೆಗಳಿಂದ, ಆಕರ ಸಾಮಗ್ರಿಗಳನ್ನು ಗುರುತಿಸಿ, ಸಂಗ್ರಹಿಸಿ ಅವುಗಳಿಗೆ ನಿದಿರ್ಷ್ಟ ರೂಪ ಕೊಟ್ಟು ಈ ಕೋಶಕ್ಕೆ ಬಳಸಿಕೊಳ್ಳಲಾಗಿದೆ. ಈ ಕೋಶ ಒಂದು ಪ್ರದೇಶದ ವಿಶಿಷ್ಟ ಸಂಸ್ಕೃತಿ ಮತ್ತು ಭಾಷೆಯನ್ನು ಅಭಿವ್ಯಕ್ತಿಸುವುದರಿಂದ ಸಾಧ್ಯವಾದಷ್ಟು ಮೂಲ ರೂಪದಲ್ಲಿ ಉಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಇಲ್ಲಿನ ಪ್ರತಿಯೊಂದು ಸಂಗತಿಗಳು ಈ ಪ್ರದೇಶದ ಸಂಸ್ಕೃತಿ, ಸಂಪ್ರದಾಯ, ಆಚರಣೆ, ಆರಾಧನೆ, ನಂಬಿಕೆ, ಕಲೆ, ಕ್ರೀಡೆ, ಐತಿಹ್ಯ, ಪುರಾಣ, ಕಥೆ, ಸಾಹಿತ್ಯ, ಸಂಸ್ಕಾರ, ಮಾಟ, ಮಂತ್ರ, ತಂತ್ರ, ಮದುವೆ, ಮುಂಜಿವೆ, ಜಾತ್ರೆ, ಉತ್ಸವ, ಕವಿ, ಕಲಾವಿದರು ಮತ್ತು ವಿವಿಧ ಜನಾಂಗಗಳ ಕುಲ ಕಸಬು ಇತ್ಯಾದಿಗಳು ಸಾಂಸ್ಕೃತಿಕ ಅಂಶಗಳ ಮಹತ್ವವನ್ನು ತಿಳಿಸುತ್ತವೆ. ಇವೆಲ್ಲವುಗಳು ಸಾಂಸ್ಕೃತಿಕ ಪರಿಧಿಯೊಂದರ ತಾತ್ವಿಕ ಅಂಶಗಳನ್ನು ಒಳಗೊಂಡಿದ್ದು, ಯಾವುದೇ ಸಿದ್ಧಾಂತಕ್ಕೆ ಒಳಗಾಗಿಲ್ಲಾ ಎಂಬುದನ್ನು ಗಮನಿಸಬೇಕು.

'ಹೈದ್ರಾಬಾದ ಕರ್ನಾಟಕ ವಿಷಯ ಕೋಶ' ಜಾನಪದ ಸಂಪುಟದ ಸ್ವರೂಪ ಲಕ್ಷಣಗಳ ಬಗೆಗೆ ಇಲ್ಲಿ ಒಂದೆರೆಡು ಮಾತುಗಳನ್ನು ಪ್ರಸ್ತಾಪಿಸಬಹುದಾಗಿದೆ. ಇದುವರೆಗಿನ ಕನ್ನಡ ವಿಷಯ ವಿಶ್ವ ಕೋಶಗಳಿಗಿಂತ ಈ ಕೋಶ ಹಲವು ವಿಷಯಗಳಲ್ಲಿ ತೀರಾ ಭಿನ್ನವಾಗಿದೆ. ಪ್ರಮುಖವಾಗಿ ಇದು ಒಂದು ಪ್ರಾದೇಶಿಕ ಹಿನ್ನೆಲೆಯಲ್ಲಿ ರಚಿತವಾಗಿರುವ ಕೋಶ. ಒಂದು ಪ್ರದೇಶದ ಜಾನಪದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಈ ಸಂಪುಟವನ್ನು ಸಿದ್ಧಗೊಳಿಸಲಾಗಿದೆ. ಸಂಪುಟಕ್ಕೆ ಪುಟಮಿತಿ ಮತ್ತು ಕಾಲ ಮಿತಿ ಎರಡು ಇದ್ದುದ್ದರಿಂದ ವಿಷಯವನ್ನು ಆದ್ಯತೆಯ ಮೇರೆಗೆ ನಿರ್ಬಂಧನೆಯನ್ನು ಹಾಕಿಕೊಳ್ಳಲಾಗಿದೆ. ಒಂದೇ ವಿಷಯ ಬೇರೆ ಬೇರೆ ಕಡೆಗಳಲ್ಲಿ ಪುನರುಕ್ತಿಯಾಗದಂತೆ ಆದಷ್ಟು ಎಚ್ಚರಿಕೆವಹಿಸಲಾಗಿದೆ. ಲೇಖನಗಳನ್ನು ಸಂಪಾದಿಸುವಾಗ ಆಯಾ ಲೇಖಕರ ಲೇಖನಗಳನ್ನು ಸಾಧ್ಯವಿದ್ದಷ್ಟು ಮೂಲ ಸ್ವರೂಪದಲ್ಲೇ ಉಳಿಸಿಕೊಂಡು ಕೋಶದ ಏಕ ರೂಪತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ಹಾಗೂ ಅನಿವಾರ್ಯವಿದ್ದ ಕಡೆಗಳಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಳ್ಳಲಾಗಿದೆ. ಇಲ್ಲಿ ಕೆಲವು ವಿವರಗಳು ಕೈಬಿಟ್ಟು ಹೋಗಿರಬಹುದು ಆದರೆ ಯಾವುದೇ ದುರುದ್ದೇಶದಿಂದ ಕೈಬಿಡಲಾಗಿರುವುದಿಲ್ಲ. ಇದು ಪ್ರಾದೇಶಿಕ ಜಾನಪದ ವಿಷಯ ಕೋಶವಾಗಿರುವುದರಿಂದ ವಿಷಯದ ಗ್ರಹಿಕೆಗೆ ಪೂರಕವಾಗಿ ಅಗತ್ಯವಿದ್ದಷ್ಟು ವರ್ಣರಂಜಿತ ಭಾವಚಿತ್ರ ಹಾಗೂ ರೇಖಾ ಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಸಾಮಾನ್ಯ ಓದುಗ-ರಿಂದ ಹಿಡಿದು ವಿದ್ವಾಂಸರಿಗೂ ಈ ಪ್ರದೇಶದ ವಿಶಿಷ್ಟ ಮಾಹಿತಿಯನ್ನು ಒದಗಿಸುವ ಆಕರ ಗ್ರಂಥವಾಗುವಂತೆ ಈ ಕೋಶವನ್ನು ಸಿದ್ಧಪಡಿಸಲಾಗಿದೆ. ಇಲ್ಲಿನ ಟಿಪ್ಪಣಿ ರೂಪದ ಲೇಖನಗಳು ಅತ್ಯಂತ ಸರಳ, ಸಂಕ್ಷಿಪ್ತ ಹಾಗೂ ಸ್ಫುಟವಾದ ಮಾಹಿತಿಗಳನ್ನು ಒಳಗೊಂಡಿವೆ. ಈ ಕೋಶದ ಮುಖ್ಯ ಲಕ್ಷಣಗಳು ಹೀಗಿವೆ. ಗ್ರಂಥದ ಆಕಾರ, ಡೆಮ್ಮಿ ಚತುರ್ಥ ಆಕಾರ. ಕನ್ನಡ ವರ್ಣಮಾಲೆಯ 'ಅ' ಕಾರದಿಂದ ಆರಂಭಿಸಿ 'ಳ' ಕಾರದವರೆಗೆ ವಿವಿಧ ವಿಷಯಗಳನ್ನು ಕುರಿತ ಲೇಖನಗಳಿವೆ. ಇಲ್ಲಿ 173 ಜನ ವಿದ್ವಾಂಸರ ವಿವಿಧ ಲೇಖನಗಳಿದ್ದು, 584 ಕ್ಕೂ ಹೆಚ್ಚು ಶೀರ್ಷಿಕೆ ಹಾಗೂ ಉಪಶೀರ್ಷಿಕೆಗಳಿದ್ದು, 551 ಪುಟವ್ಯಾಪ್ತಿಯನ್ನು ಹೊಂದಿದೆ.

ಈ ಯೋಜನೆಯ ಪ್ರಾರಂಭಿಕ ಹಂತದಲ್ಲಿ ಶೀರ್ಷಿಕೆಗಳನ್ನು ಆಕಾರಾದಿಯಾಗಿ ಪಟ್ಟಿ ಮಾಡಲಾಯಿತು. ಈ ಪಟ್ಟಿಯನ್ನು ಸಮಗ್ರ ಪರಿಶೀಲನೆ ಮತ್ತು ಪರಿಷ್ಕರಣೆಗಾಗಿ ನಾಡಿನ ಖ್ಯಾತ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ, ಡಾ. ಎಂ.ಜಿ. ಬಿರಾದಾರ, ಡಾ. ವೀರಣ್ಣ ರಾಜೂರ, ಡಾ ವೀರಣ್ಣ ದಂಡೆ, ಡಾ. ಡಿ.ಕೆ. ರಾಜೇಂದ್ರ, ಡಾ. ವಸಂತ ಕುಷ್ಟಗಿ ಮೊದಲಾದವರನ್ನು ವಿನಂತಿಸಿಕೊಳ್ಳಲಾಯಿತು. ಈ ವಿದ್ವಾಂಸರಿಂದ ಬಂದ ಸಲಹೆ ಸೂಚನೆಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳಲಾಯಿತು. ಈ ಪಟ್ಟಿಯನ್ನು ಸಿದ್ದಪಡಿಸುವ ಮುನ್ನ ನಾಡಿನ ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ, ಅಲ್ಲಿನ ಕನ್ನಡ ಮತ್ತು ಜಾನಪದ ವಿದ್ವಾಂಸರ ಸಲಹೆ-ಸೂಚನೆಗಳನ್ನು ಪಡೆಯಲು ಅಲ್ಲಲ್ಲಿ ಸಮಾಲೋಚನಾ ಸಭೆಗಳನ್ನು ಕರೆದು, ಚರ್ಚಿಸಿ ಪಟ್ಟಿಯನ್ನು ಅಂತಿಮವಾಗಿ, ಒಂದು ಸಮಗ್ರತೆಯ ದೃಷ್ಟಿಯಿಂದ ರೂಪಿಸಲಾಯಿತು. ಪ್ರತಿಯೊಂದು ಶೀರ್ಷಿಕೆಗೂ ನೀಡಬೇಕಾದ ಸ್ಥಳವನ್ನು ನಿರ್ಧರಿಸಲಾಯಿತು. ಕರ್ನಾಟಕದ ನಾನಾ ಭಾಗದ ಹಿರಿ-ಕಿರಿಯ ವಿದ್ವಾಂಸರ ಪಟ್ಟಿಯನ್ನು ಸಿದ್ದಪಡಿಸಿ ಲೇಖನ ಕಳುಹಿಸುವಂತೆ ಅವರನ್ನು ಕೋರಲಾಯಿತು. ಇದು ಪ್ರಾದೇಶಿಕ ಕೋಶವಾದ್ದರಿಂದ ವಿಶೇಷವಾಗಿ ಹೈದ್ರಾಬಾದ ಕರ್ನಾಟಕದ ವಿದ್ವಾಂಸರಿಗೆ ಆದ್ಯತೆ ನೀಡಲಾಗಿದೆ. ಲೇಖಕರಿಗೆ ಬರೆಯಲು ಕೊಟ್ಟಿದ್ದ ಶೀರ್ಷಿಕೆಗಳು ಕೊನೆಯ ಘಳಿಗೆಯವರೆಗೂ ಎಷ್ಟು ಪ್ರಯತ್ನಿಸಿದರೂ ನಮ್ಮ ಕೈ ಸೇರಲಿಲ್ಲ. ನಮ್ಮ ನಿರಂತರ ಕಿರಿಕಿರಿಯನ್ನು ಸಹಿಸಿಕೊಳ್ಳದ ಕೆಲವು ಜನ ಲೇಖಕರು ತಮ್ಮ ಮೊಬೈಲ್ ಸಿಮ್‌ನ್ನು ಬದಲಾಯಿಸಿಕೊಂಡಿದ್ದೂ ಇದೆ. ನಮ್ಮ ಪ್ರಾಮಾಣಿಕ ಪ್ರಯತ್ನದ ನಡುವೆಯೂ ಕೆಲವು ಲೇಖನಗಳನ್ನು ಪಡೆಯಲು ಸಾಧ್ಯವಾಗಲೇ ಇಲ್ಲ. ಇದು ಕಾಲಮಿತಿ ಯೋಜನೆಯಾದ್ದರಿಂದ ಅನಿವಾರ್ಯವಾಗಿ ಅವುಗಳನ್ನು ಕೈಬಿಟ್ಟು ಈ ಕೋಶವನ್ನು ಅಂತಿಮಗೊಳಿಸಲಾಯಿತು. ಕೈಬಿಟ್ಟಿರುವ ಈ ಲೇಖನಗಳನ್ನು ಅವರಿಂದ ಪುನಃ ಪಡೆದು ಮುಂದಿನ ಪರಿಷ್ಕೃತ ಆವೃತ್ತಿಯ ಸಂದರ್ಭದಲ್ಲಿ ಸೇರಿಸಿಕೊಳ್ಳಲಾಗುವದು.

ಇಲ್ಲಿ ಪ್ರಕಟವಾದ ಕೆಲವು ಲೇಖನಗಳನ್ನು ವಿದ್ವಾಂಸರ ಕೃತಿಗಳಿಂದ ಪಡೆಯಲಾಗಿದೆ. ಸಂಯುಕ್ತ ಕರ್ನಾಟಕ ಗುಲಬರ್ಗಾ ಆವೃತಿಯ ಹೈದ್ರಾಬಾದ-ಕರ್ನಾಟಕದ (ಕಲ್ಯಾಣ ಕರ್ನಾಟಕ) ವಿಶೇಷ ಪುರವಣಿಯನ್ನು ಕಳೆದ ಒಂದು ದಶಕಗಳಿಂದಲೂ ನಿರಂತರವಾಗಿ ಪ್ರಕಟಿಸುತ್ತಿದೆ. ಈ ಪುರವಣಿಗಳಲ್ಲಿ ಪ್ರಕಟವಾದ ಹಲವು ಲೇಖನಗಳನ್ನು ಈ ಕೋಶಕ್ಕಾಗಿ ಬಳಸಿಕೊಳ್ಳಲಾಗಿದೆ. ಇದನ್ನು ಬಳಸಿಕೊಳ್ಳಲು ಅನುಮತಿಸಿದ ಸಂಯುಕ್ತ-ಕರ್ನಾಟಕ ಗುಲಬರ್ಗಾ ಆವೃತ್ತಿಯ ಸ್ಥಾನಿಕ ಸಂಪಾದಕರಾದ ಶ್ರೀ ಎಸ್.ಆರ್. ಮಣ್ಣೂರ ಅವರನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಈ ಸಂಪುಟ ಪ್ರಾರಂಭವಾದ ಒಂದು ವರ್ಷದೊಳಗಾಗಿ ಪ್ರಕಟಗೊಳ್ಳುತ್ತಿರುವುದು ಸಂತೋಷದ ಸಂಗತಿ. ಈ ಸಂದರ್ಭದಲ್ಲಿ ಹಲವರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ಆದ್ಯ ಕರ್ತವ್ಯವಾಗಿದೆ. ಈ ಸಂಪುಟ ಪ್ರಕಟಣೆಯಲ್ಲಿ ನನ್ನೊಂದಿಗೆ ಕೈ ಜೋಡಿಸಿದವರು ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶದ ವಿಶ್ರಾಂತ ಮಾನವಿಕ ಸಂಪಾದಕರಾದ ಜಿ.ಎಸ್. ಭಟ್ ಅವರು. ವಿಶ್ವಕೋಶದ ರಚನೆಯಲ್ಲಿ ಅಪಾರ ಅನುಭವ ಗಳಿಸಿದ ಅವರ ಅಮೂಲ್ಯ ಸಲಹೆ-ಸೂಚನೆಗಳು ನಮಗೆ ದೊರತಿವೆ. ಸಂಪುಟದ ಕಾರ್ಯದಲ್ಲಿ ಅವರು ನನ್ನೊಂದಿಗೆ ಸಹಕರಿಸಿದ್ದಾರೆ. ಜೊತೆಗೆ ನನ್ನ ವಿದ್ಯಾರ್ಥಿ ಶ್ರೀ ರಮೇಶ ಚವ್ಹಾಣ ಈ ಯೋಜನೆಯಲ್ಲಿ ಸಹಾಯಕ ಸಂಶೋಧಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರೀರ್ವರ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ.

ಈ ಕೋಶದ ರೂಪುರೇಷೆ, ವಿಷಯ ಪಟ್ಟಿ ಪರಿಶೀಲನೆ, ಹಾಗೂ ಪರಿಷ್ಕರಣೆಯಿಂದ ಹಿಡಿದು ಕೊನೆಯವರೆಗೂ ಸೂಕ್ತ ಸಲಹೆ ಸೂಚನೆ ಹಾಗೂ ಮಾರ್ಗದರ್ಶವನ್ನು ನೀಡಿದ ನಾಡಿನ ಖ್ಯಾತ ಸಂಶೋಧಕರಾದ ಡಾ.ಎಂ.ಎಂ. ಕಲಬುರ್ಗಿ, ಡಾ. ದೇಜಗೌ, ಡಾ. ಸೋಮಶೇಖರ ಇಮ್ರಾಪುರ, ಡಾ.ಮ.ಗು.ಬಿರಾದಾರ, ಡಾ.ವಸಂತ ಕುಷ್ಟಿಗಿ, ಡಾ.ಡಿ.ಕೆ. ರಾಜೇಂದ್ರ, ಡಾ.ವೀರಣ್ಣ ರಾಜೂರ, ಡಾ. ಬಿ.ವ್ಹಿ.ಶಿರೂರ ಈ ಮೊದಲಾದ ವಿದ್ವಾಂಸರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆಯೇ ಕರ್ನಾಟಕದ ಹಲವು

ವಿಶ್ವವಿದ್ಯಾಲಯಗಳಲ್ಲಿ ನಡೆಸಿದ ಈ ಕೋಶದ ಸಮಾಲೋಚನಾ ಸಭೆಯಲ್ಲಿ ಪಾಲ್ಗೊಂಡು ಸಲಹೆ ಸೂಚನೆಗಳನ್ನು ನೀಡಿದ ಡಾ. ಡಿ.ಕೆ. ರಾಜೇಂದ್ರ, ಡಾ. ರಂಗಸ್ವಾಮಿ, ಡಾ. ಅರವಿಂದ ಮಾಲಗತ್ತಿ, ಡಾ. ಕೆ.ಎಂ. ಮೇತ್ರಿ, ಡಾ.ಎಚ್.ಎಂ.ಮಹೇಶ್ವರಯ್ಯ, ಡಾ.ಶಾಲಿನಿ ರಘುನಾಥ, ಡಾ.ಶಾಂತಾ ಇಮ್ರಾಪೂರ, ಡಾ.ಸಣ್ಣರಾಮ, ಡಾ.ಅಂಬಳಿಕೆ ಹಿರಿಯಣ್ಣ, ಡಾ.ಬಸವರಾಜ ಮಲಶೆಟ್ಟಿ, ಡಾ.ಎಸ್.ಸಿ.ಪಾಟೀಲ್, ಡಾ.ದುರ್ಗಾದಾಸ. ಕೆ.ಆರ್., ಡಾ. ಹರಿಲಾಲ. ಪವಾರ, ಡಾ. ಚೆನ್ನಣ್ಣ ವಾಲೀಕಾರ, ಈ ಮೊದಲಾದ ವಿದ್ವಾಂಸರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆಯ ನನ್ನ ಎಲ್ಲ ಸಹೋದ್ಯೋಗಿ ಸ್ನೇಹಿತರು ಈ ಸಂಪುಟ ರಚನೆಯಲ್ಲಿ ಹಲವು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ವಿಶೇಷವಾಗಿ ಕನ್ನಡ ಅಧ್ಯಯನ ಸಂಸ್ಥೆಯ ಹಿಂದಿನ ಅಧ್ಯಕ್ಷರುಗಳಾದ ಡಾ. ಬಸವರಾಜ ಸಬರದ ಮತ್ತು ಡಾ. ವೀರಣ್ಣ ದಂಡೆ ಹಾಗೂ ಇಂದಿನ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರು ಹೆಚ್ಚಿನ ಆಸಕ್ತಿ ತೋರಿದ್ದಾರೆ. ಇಂತಹದ್ದೊಂದು ಮಹತ್ಕಾರ್ಯದಲ್ಲಿ ನನಗೆ ಸಂಸ್ಥೆಯ ಎಲ್ಲಾ ಅಧ್ಯಾಪಕರ ಸಹಾಯ ಸಹಕಾರ ಹೆಚ್ಚಿನ ಸ್ಫೂರ್ತಿಯನ್ನು ನೀಡಿದೆ. ಹೀಗಾಗಿ ಸಂಸ್ಥೆಯ ಎಲ್ಲ ಸ್ನೇಹಿತರಿಗೆ ನನ್ನ ಅನಂತ ಕೃತಜ್ಞತೆಗಳು.

ಕರ್ನಾಟಕ ಸರಕಾರದ ಕನ್ನಡ ಭಾಷಾಭಿವೃದ್ಧಿ ಯೋಜನೆಯನ್ನು ಹಿಂದಿನ ಕುಲಪತಿ ಡಾ.ಬಿ.ಜಿ. ಮೂಲೀಮನಿ, ಮತ್ತು ಕುಲಸಚಿವ ಡಾ.ಪಿ.ಕೆ. ತಿವಾರಿಯವರು ಅನುಷ್ಠಾನಗೊಳಿಸಿ ಚಾಲನೆಯನ್ನು ನೀಡಿದ್ದರು. ಈಗಿನ ಕುಲಪತಿ ಡಾ. ಈ.ಟಿ. ಪುಟ್ಟಯ್ಯ, ಮತ್ತು ಕುಲಸಚಿವ ಡಾ. ಎಸ್.ಎಲ್. ಹಿರೇಮಠ ಅವರು, ಈ ಯೋಜನೆಗೆ ಮರುಜೀವ ತುಂಬಿದ್ದಾರೆ. ಆಡಳಿತಾತ್ಮಕವಾಗಿ ಎಲ್ಲ ಬಗೆಯ ನೆರವು ನೀಡಿದ ಈ ಮಹನೀಯರಿಗೆ ನನ್ನ ಹೃತ್ಪೂರ್ವಕ ವಂದನೆಗಳು ಸಲ್ಲುತ್ತವೆ. ವಿಶ್ವವಿದ್ಯಾಲಯದ ಮಾನ್ಯ ಸಿಂಡಿಕೇಟ ಸದಸ್ಯರಿಗೂ ಹಾಗೂ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ.

ಕರ್ನಾಟಕ ರಾಜ್ಯದ ಹಿಂದಿನ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕನ್ನಡ ನಾಡು, ನುಡಿಗಳ ಬಗ್ಗೆ ವಿಶೇಷ ಕಾಳಜಿಯುಳ್ಳವರಾಗಿದ್ದರು. ಹಣಕಾಸು ಸಚಿವರೂ ಆಗಿದ್ದ ಅವರು ಕನ್ನಡ ಭಾಷಾ ಅಭಿವೃದ್ಧಿಗಾಗಿ ಕರ್ನಾಟಕದ ಪ್ರತಿಯೊಂದು ವಿಶ್ವವಿದ್ಯಾಲಯಕ್ಕೆ ಎರಡು ಕೋಟಿ ರೂಪಾಯಿಗಳ ಆರ್ಥಿಕ ನೆರವು ನೀಡುವುದರ ಮೂಲಕ ತಮ್ಮ ಭಾಷಾ ಪ್ರೇಮವನ್ನು ಮೆರೆದಿದ್ದಾರೆ. ಶ್ರೀಯುತರಿಗೆ ಸಮಸ್ತ ಕನ್ನಡಿಗರ ಪರವಾಗಿ ನನ್ನ ಗೌರವಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಅವರಷ್ಟೇ ಸಮರ್ಥರಾಗಿರುವ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ವಿ. ಸದಾನಂದಗೌಡ ಅವರಿಗೂ ಅತ್ಯಂತ ಗೌರವಪೂರ್ವಕವಾಗಿ ವಂದಿಸುತ್ತೇನೆ. ಈ ಯೋಜನೆಯನ್ನು ಕೈಕೊಳ್ಳಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ ಗೋವಿಂದ ಕಾರಜೋಳ ಅವರು ಎಲ್ಲ ಬಗೆಯ ಸಹಾಯ ಸಹಕಾರವನ್ನು ನೀಡಿದ್ದಾರೆ. ಹಾಗೆಯೇ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಹಿಂದಿನ ಕಾರ್ಯದರ್ಶಿ ಶ್ರೀ ಜಯರಾಮರಾಜೇಅರಸ ಹಾಗೂ ಇಂದಿನ ಕಾರ್ಯದರ್ಶಿ ಶ್ರೀ ಬಸವರಾಜು ಅವರಿಗೂ ಮತ್ತು ಇಲಾಖೆಯ ಆಯುಕ್ತರಾದ ಶ್ರೀ ಮ.ನು. ಬಳಿಗಾರ ಅವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಈ ಕೋಶದಲ್ಲಿ ಹಲವು ಅರೆಕೊರೆಗಳು ಇರಬಹುದಾದರೂ, ಅವುಗಳನ್ನು ಪರಿಷ್ಕರಣ ಸಂದರ್ಭದಲ್ಲಿ ಸರಿಪಡಿಸಬಹುದಾಗಿದೆ. ಈ ನಿಟ್ಟಿನಲ್ಲಿ ರಚನಾತ್ಮಕ ಸಲಹೆ-ಸೂಚನೆಗಳನ್ನು ನೀಡಬೇಕೆಂದು ಕೋರುತ್ತೇನೆ. ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ಕೋಶ ಒಂದು ಪ್ರದೇಶದ ಜನ ಜೀವನ, ಸಂಸ್ಕೃತಿಯನ್ನು ನಾಡಿನ ಜನರಿಗೆ ನಿರೂಪಿಸುವ ಒಂದು ಪ್ರಯತ್ನ. ಈ ಪ್ರಯತ್ನದಲ್ಲಿ ನಾನು ಒಂದಿಷ್ಟು ಯಶಸ್ವಿಯಾಗಿದ್ದೇನೆಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಕನ್ನಡ ಸಾಹಿತ್ಯದಲ್ಲಿ ಈ ಕೋಶ ಒಂದು ವಿಶಿಷ್ಟ ದಾಖಲೆಯಾಗಲಿದೆ.

ಈ ಕೋಶಕ್ಕೆ ಛಾಯಾಚಿತ್ರಗಳನ್ನು ಒದಗಿಸಿದ್ದಲ್ಲದೆ ವರ್ಣಚಿತ್ರಗಳನ್ನು ಅಳವಡಿಸಲು ನೆರವಾದ ಛಾಯಾಗ್ರಾಹಕರಾದ ಶ್ರೀ ಗುರುನಾಥ ಚವ್ಹಾಣ, ಮಹೇಶ ಶ್ರೀಗಣಿ ಹಾಗೂ ಪರಶುರಾಮ ಪಿ. ಅವರಿಗೆ ನನ್ನ ಕೃತಜ್ಞೆಗಳು. ಈ ಕೋಶಕ್ಕೆ ಸಂಬಂಧಿಸಿದ ಕೆಲವು ಚಿತ್ರಗಳನ್ನು ವಿವಿಧ ಗ್ರಂಥಗಳಿಂದ ಪಡೆಯಲಾಗಿದೆ. ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತದೆ. ಹಾಗೆಯೇ ಈ ಕೋಶದ ಬೆರಳಚ್ಚು ಕರಡು ಪ್ರತಿಯನ್ನು ಸಿದ್ದ ಪಡಿಸಿಕೊಟ್ಟ ಶ್ರೀ ವಿಶ್ವ ಎಂ. ಬಡಿಗೇರ ಮತ್ತು ಶ್ರೀ ವಿಜಯ ಎಂ. ಬಡಿಗೇರ ಅವರಿಗೂ ನನ್ನ ಕೃತಜ್ಞತೆಗಳು. ಅತ್ಯಂತ ಕಡಿಮೆ ಅವಧಿಯಲ್ಲಿ ಬೆಂಗಳೂರಿನ ಪ್ರಿಂಟ್ ಪಾರ್ಕ್ ಮುದ್ರಣಾಲಯದವರು ಇದನ್ನು ತುಂಬಾ ಸುಂದರವಾಗಿ ಮುದ್ರಿಸಿಕೊಟ್ಟಿದ್ದಾರೆ. ಮುದ್ರಣಾಲಯದ ಒಡೆಯರಾದ ಶ್ರೀ ಜಿ.ಬಿ. ಪಾಟೀಲ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನನ್ನ ವಂದನೆಗಳು.

ಕೊನೆಯದಾಗಿ, ಈ ಕೋಶದ ಸಂಪುಟವು ನಿರೀಕ್ಷಿತ ಮಟ್ಟಕ್ಕೇರಲು ವಾಚಕರ ಮತ್ತು ವಿದ್ವಾಂಸರ ರಚನಾತ್ಮಕ ಸಲಹೆಗಳಿಗೆ ಸದಾ ಸ್ವಾಗತವಿದೆ. ಪ್ರಾದೇಶಿಕ ಮಟ್ಟದ ಈ ಕೋಶವು ಒಂದು ವಿಶಿಷ್ಟ ದಾಖಲೆಯಾಗಿದ್ದು, ಇದನ್ನು ಈ ಭಾಗವರಷ್ಟೇ ಅಲ್ಲ; ಕರ್ನಾಟಕದ ಇನ್ನುಳಿದ ಪ್ರದೇಶಗಳ ಜನರೂ ಕೂಡ ಇದರ ಸದುಪಯೋಗ ಪಡೆಯುವರೆಂದು ಆಶಿಸುತ್ತೇನೆ.

ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಡಾ. ಪಿ.ಕೆ. ಖಂಡೋಬಾ
ಪ್ರಧಾನ ಸಂಪಾದಕರು

ಗುಲಬರ್ಗಾ ವಿಶ್ವವಿದ್ಯಾಲಯ

ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ವಿಶ್ವಕೋಶ

ಜಾನಪದ ಸಂಪುಟ

ಅ

ಅಂಕಲಗಿ (ಹೊಳೆ): ಕಲಬುರ್ಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಭೀಮಾ ನದಿ ದಂಡೆಯ ಮೇಲಿರುವ ಒಂದು ಪ್ರಮುಖ ಅಗ್ರಹಾರ. ಐತಿಹಾಸಿಕ ತಾಣ. ಇದು ಹಿಂದೆ ಅಗ್ರಹಾರವಾಗಿದ್ದು, ಶಿಕ್ಷಣ ಹಾಗೂ ರಾಜಕೀಯವಾಗಿಯೂ ಮಹತ್ವ ಪಡೆದ ಊರಾಗಿತ್ತು. ಈ ಊರಲ್ಲಿ ಐದು ಶಾಸನಗಳಿವೆ ಎಂದು ಹೇಳಲಾಗಿದ್ದು, ಅವುಗಳಲ್ಲಿ ಒಂದು ಮಾತ್ರ ಪತ್ತೆಯಾಗಿದೆ. ಶಂಕರಲಿಂಗ ದೇಗುಲದಲ್ಲಿರುವ ಈ ಶಾಸನದಲ್ಲಿ 1077ರಲ್ಲಿ ಶಂಕರೋಪಾಧ್ಯಾಯನಿಗೆ ಧರ್ಮದಲ್ಲಿ ಶಾಸ್ತ್ರ, ವೇದ, ಉಪನಿಷತ್ತು ಸಂಗೀತ, ಕಲೆ ಹಾಗೂ ಶಿಕ್ಷಣದ ಬೆಳೆವಣಿಗೆಗೆ ಎಂದು ಈ ಊರನ್ನು ದಾನವಾಗಿ 6ನೆಯ ವಿಕ್ರಮಾದಿತ್ಯ ಕೊಟ್ಟ ಬಗ್ಗೆ ತಿಳಿಸಲಾಗಿದೆ. ಗುರುಶಿಷ್ಯರ ಉಪಜೀವನಕ್ಕಾಗಿ ಮಾಣಿಕೇಶ್ವರದ ಬದಿಯಲ್ಲಿ ನಾಲ್ಕು ಎಕರೆ ಭೂಮಿ ಮತ್ತು ಬೇಲೂರಿನ ಹಾದಿಯಲ್ಲಿರುವ ಒಂದು ತೋಟವನ್ನು ದಾನವಾಗಿಕೊಟ್ಟ ಬಗ್ಗೆಯೂ ಶಾಸನದಲ್ಲಿ ವಿವರಿಸಲಾಗಿದೆ.

1077ರಲ್ಲಿ ಕಲ್ಯಾಣ ಚಾಲುಕ್ಯರು ಈ ಊರನ್ನು ಅಗ್ರಹಾರವಾಗಿ ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಬಗ್ಗೆ ತಿಳಿದುಬರುತ್ತದೆ. ದಾನಮಾಡಿದರೆ ಪುಣ್ಯಬರುತ್ತದೆ ಎಂಬ ನಂಬಿಕೆಯಿಂದ ಕಲ್ಯಾಣ ಅರಸರು ಈ ಕಾರ್ಯಮಾಡಿದ ಸಂಗತಿ ಶಾಸನಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಅಂಕಲಗಿ ಅಗ್ರಹಾರದಲ್ಲಿ ನೆಲೆಸಿದ್ದ ಬ್ರಾಹ್ಮಣರು ವಿದ್ಯಾರ್ಜನೆಗೆ ಶ್ರಮಿಸುತ್ತಿದ್ದರು. ಪ್ರಥಮವಾಗಿ ಈ ಅಗ್ರಹಾರದಲ್ಲಿ ಶಂಕರೋಪಾಧ್ಯಾಯ ಎಂಬ ಬ್ರಾಹ್ಮಣ ಮತ್ತು ರಾಮದೇವನಿಂದ ಇಲ್ಲಿ ಶಿಕ್ಷಣ ಪ್ರಾರಂಭವಾಗಿ ವೇದ, ಜೋತಿಷ್ಯ, ವ್ಯಾಕರಣ, ಸಂಗೀತ, ಯೋಗ, ವ್ಯಾಯಾಮ, ತತ್ವೋಪದೇಶ, ಶಿಸ್ತು, ಧ್ಯಾನ ಮುಂತಾದುವು ಇಲ್ಲಿ ಕಲಿಸುವ ಪ್ರಮುಖ ವಿಷಯಗಳಾಗಿದ್ದುವು. ಶಂಕರಲಿಂಗ ದೇಗುಲ ವಿಶಾಲವಾಗಿ ಪೂರ್ವಾಭಿಮುಖವಾಗಿದ್ದು ತ್ರಿಕುಟಾಕಾರವಾಗಿದೆ. ಒಂದೇ ನವರಂಗ ಅವುಗಳನ್ನು ಒಗ್ಗೂಡಿಸಿದೆ. ನವರಂಗದಿಂದ ಪೂರ್ವಕ್ಕೆ ಸಭಾಮಂಟಪ. ದೇವಾಲಯವನ್ನು ಬಳಸಿ ನಿಂತಿರುವ ದ್ವಾರಮಂಟಪ. ಮೂರು ಗರ್ಭಗೃಹಗಳಲ್ಲಿ ಶಿವಲಿಂಗಗಳಿದ್ದು ಅವುಗಳಲ್ಲೊಂದು ಬಲಹರಿ ಅಂಗವಿದೆ. ಗರ್ಭಗೃಹದ ದ್ವಾರಬಂಧ ತ್ರಿಶಲಾಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮೀ ಇದೆ. ತೆರೆದ ಸಭಾ ಮಂಟಪ, ರಕ್ಷಾಸನ ಹೊಂದಿದ್ದು, ನಾಲ್ಕು ಮಾದರಿಯ ಕಂಬಗಳನ್ನು ಇಲ್ಲಿ ಕಾಣಬಹುದು. ಈ ರಕ್ಷಾಸನದ ಹಿಂಬದಿಯು ಅಷ್ಟ ಕೋನಾಕಾರದ ಅಲಂಕಾರ ಹೊಂದಿದ್ದು, ಅಭಿಷ್ಠಾನ ಭಾಗದಲ್ಲಿ

ವಜ್ರಪಟ್ಟಿಕೆ ಹಾಗೂ ಆನೆಗಳ ಸಾಲನ್ನು ಕೆತ್ತಲಾಗಿದೆ. ಗುಡಿಯ ಗರ್ಭಗೃಹ ಅಂತರಾಳ ನವರಂಗ ಮುಖ ಮಂಟಪ ಹೊಂದಿದೆ. ಈ ದೇವಾಲಯದ ಮುಂಭಾಗ ಜಾಲಂಧ್ರವುಳ್ಳ ಭಿತ್ತಿಯನ್ನು ಹೊಂದಿದ್ದು ಮುಖಮಂಟಪವೂ ಸೇರಿದಂತೆ ರಕ್ಷಾಸನ ಸೌಲಭ್ಯ ಹೊಂದಿದೆ. ನವರಂಗದ ಮೇಲೆ ರಾಮ, ಸೂರ್ಯ ಭೈರವ, ವಿಷ್ಣು ಹಾಗೂ ನರ್ತಕಿಯರ ಶಿಲ್ಪಗಳು ರಮಣೀಯವಾಗಿ ಕೆತ್ತಲ್ಪಟ್ಟಿರುವದರಿಂದ ನೋಡುಗರ ಮನಸ್ಸು ಗೆಲ್ಲುತ್ತವೆ.

ಅಂಕಲಗಿ ಅಗ್ರಹಾರದಲ್ಲಿ 6ನೆಯ ವಿಕ್ರಮಾದಿತ್ಯನ ಪಟ್ಟದ ರಾಣಿ ಚಾಂದಲದೇವಿಯ ಸವಿನೆನಪಿಗಾಗಿ ವಿಕ್ರಮಾದಿತ್ಯ, ಸ್ತ್ರೀ ಶಿಕ್ಷಣಕ್ಕಾಗಿ 1077ರಲ್ಲಿ ಸಹದೇವಿ ದೇಗುಲ ನಿರ್ಮಿಸಿದ್ದ. ಆ ಕಾಲದಲ್ಲಿ ನೃತ್ಯ ಹಾಗೂ ಸಂಗೀತದಲ್ಲಿ ಮಹತ್ವದ ಪಾತ್ರ ಇರುವುದಾಗಿ ಕಂಡು ಬರುತ್ತದೆ. ಚಾಂದಲದೇವಿ ನೃತ್ಯ ಹಾಗೂ ಸಂಗೀತದಲ್ಲಿ ಪರಿಣಿತೆಯಾಗಿದ್ದು, ನೃತ್ಯವಿದ್ಯಾಧರಿ ಆಕೆ ಅಭಿನಯ ಸರಸ್ವತಿ ಎಂಬ ಬಿರುದುಗಳಿಗೆ ಪಾತ್ರಳಾಗಿದ್ದಳು.

ಆಕೆ ಅನೇಕ ಸಂಗೀತ ವಿದ್ವನ್ಮಣಿಗಳಿಗೆ ಹಾಗೂ ನಾಟ್ಯವಿಶಾರದರಿಗೆ ಆಶ್ರಯನೀಡಿದ್ದಳು. ಭಾರತೀಯ ಸಂಗೀತ ಪದ್ಧತಿಯ ಮಹಮ್ಮದೀಯರ ಸಂಪರ್ಕ ಮತ್ತು ಪ್ರಭಾವದಿಂದ ತನ್ನತನವನ್ನು ಕಳೆದುಕೊಳ್ಳುವದರಲ್ಲಿತ್ತು. ಆಗ ಅದಕ್ಕೆ ಒಂದು ಎಲ್ಲೆಯನ್ನು ನಿರ್ಮಿಸಿ ಪ್ರತ್ಯೇಕವಾದ ಕರ್ಣಾಟಕ ಸಂಗೀತ ಪದ್ಧತಿ ರೂಢಿಗೆ ತರುವಲ್ಲಿ ಅವಳ ಪಾತ್ರ ಗುರುತರವಾಗಿದೆ. ಅದರಲ್ಲಿ ದಕ್ಷಿಣದವರ ಸಂಗೀತ ಪದ್ಧತಿಯನ್ನು ಕರ್ಣಾಟಕ ಸಂಗೀತ ಎಂದು ಪ್ರಥಮತಃ ಹೆಸರಿಸಲಾಗಿದೆ. ಇಂತಹ ಮಾದರಿಯ ಸಂಗೀತ ಪೋಷಣೆಗಾಗಿ ರಾಣಿ ಚಾಂದಲದೇವಿ ಅಂಕಲಗೆ ಎಂಬ ಅಗ್ರಹಾರದಲ್ಲಿ ದೇಗುಲ ನಿರ್ಮಿಸಿದ ಸಂಗತಿ ತಿಳಿದುಬರುತ್ತದೆ.

12ನೆಯ ಶತಮಾನದಲ್ಲಿ ಈ ದೇಗುಲದಲ್ಲಿ ಭರತನಾಟ್ಯ ಶಾಸ್ತ್ರೀಯ ಸಂಗೀತ ಜರುಗುತ್ತಿದ್ದುವು. ಒಂದು ಸಮಯದಲ್ಲಿ ಈ ದೇವಾಲಯದಲ್ಲಿ ನಡೆಯುವ ಶಿಕ್ಷಣ ಪರಾಕಾಷ್ಠತೆ ತಲುಪಿ, ನಾನಾಭಾಗಗಳಿಂದ ಜನರನ್ನು ಆಕರ್ಷಿಸಿ ಸಹದೇವಿ ದೇಗುಲ ಎಂದೇ ಪ್ರಸಿದ್ಧಿ ಪಡೆದಿತ್ತು. ಮುಂದೆ ಈ ದೇಗುಲ ಮಹಮ್ಮದೀಯರ ದಾಳಿಗೆ ತುತ್ತಾಗಿ ಅಲ್ಪಸ್ವಲ್ಪ ಅವಶೇಷಗಳು ಮಾತ್ರ ಉಳಿದಿವೆ. ಇಲ್ಲಿ ಸಹದೇವಿ ಎನ್ನಲಾದ ಕಪ್ಪುಶಿಲೆಯ ಮೂರ್ತಿ ಈ ಭಾಗದಲ್ಲಿ ಉದಾಹರಣೆಯಾಗಿ ಇತಿಹಾಸಕಾರರಿಗೆ ತನ್ನ ಗತ ವೈಭವವನ್ನು ಹೇಳುತ್ತ ಇತಿಹಾಸ ಕೆದಕಲು ಸಹಾಯಕಾರಿಯಾಗಿದೆ.

ಈ ಅಗ್ರಹಾರದಲ್ಲಿ ಕೆಳಗಿನ ಮಠವಾದ ಬಸವೇಶ್ವರರ ಮಠವು ಅಂದಿನಕಾಲದಲ್ಲಿ ಶಿಕ್ಷಣ ಕೇಂದ್ರವಾಗಿರುವದು ಶಾಸನದಿಂದ ತಿಳಿದುಬರುತ್ತದೆ. ಸುಮಾರು 800 ವರ್ಷಗಳು ಗತಿಸಿದರೂ ಸಹ ಇಂದಿಗೂ ಈ ಮಠ ಸುವ್ಯವಸ್ಥಿತವಾಗಿದ್ದು, ಐತಿಹಾಸಿಕ ಚಾರಿತ್ರಿಕ ಮಹತ್ವ ಪ್ರತಿಬಿಂಬಿಸುವ ಕುರುಹಾಗಿದೆ. ಚಾಲುಕ್ಯ ಅರಸರು ಶಿಕ್ಷಣದ ಪ್ರಗತಿಗಾಗಿ ಈ ಮಠವನ್ನು ಕಟ್ಟಿಸಿದ ಸಂಗತಿ ತಿಳಿದು ಬರುತ್ತದೆ. ಮಠಗಳು ಚಾಲುಕ್ಯರ ಆಳ್ವಿಕೆಯಲ್ಲಿ ಪ್ರಮುಖ ವಿದ್ಯಾ ಕೇಂದ್ರಗಳಾಗಿದ್ದುವು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಶಿಕ್ಷಣ ಪ್ರಗತಿಗಾಗಿ ಈ ಮಠವನ್ನು ಅಂಕಲಗಿ ಅಗ್ರಹಾರದಲ್ಲಿ ಚಾಲುಕ್ಯ ಅರಸರು ಕಟ್ಟಿಸಿ, ಗುರು- ಶಿಷ್ಯರ ಉಪಜೀವನಕ್ಕಾಗಿ ಹೊಳೆಯ ಹಾದಿಯಲ್ಲಿರುವ ಭೂಮಿಯನ್ನು ದಾನವಾಗಿ ಕೊಟ್ಟ ಬಗ್ಗೆ ಶಾಸನಗಳು ಹೇಳುತ್ತವೆ. ಈ ಮಠವನ್ನು ಅಭಿವೃದ್ಧಿ ಪಡೆಸಿದ, ವಿದ್ವತ್ ಹೊಂದಿದ ಮಹಾತ್ಮ ಪರಮ ಪೂಜ್ಯ ನಿರಂಜನ ಸ್ವಾಮಿಯಾದ ಬಸವೇಶ್ವರರು ಈ ಮಠದಲ್ಲಿ ಇದ್ದು ಅನೇಕರ ಮನಸ್ಸನ್ನು ಗೆಲ್ಲವುದರಲ್ಲಿ ಯಶಸ್ವಿಯಾದರು.

ಹೊಳೆ ಅಂಕಲಗಿಯಲ್ಲಿ ಅನೇಕ ಐತಿಹಾಸಿಕ ಕಟ್ಟಡಗಳಿದ್ದು ಇಂದಿಗೂ ಇತಿಹಾಸವನ್ನು ತಿಳಿಸುವ ಪ್ರಮುಖ ಆಧಾರಗಳಾಗಿವೆ. ಇಲ್ಲಿಯ ಶಂಕರಲಿಂಗ ದೇಗುಲ ರಾಮಲಿಂಗ, ಮಹಾದೇವ, ಸಹದೇವಿ ದೇಗುಲಗಳು ಹಾಗೂ ಮೂಲ ಶಿಕ್ಷಣ ಕೇಂದ್ರವಾಗಿ ಮೇಲಿನಮಠ ಹೀಗೆ ಪ್ರಸಿದ್ಧಿ ಪಡೆದ ಧಾರ್ಮಿಕ ಮತ್ತು ಐತಿಹಾಸಿಕ ಕಟ್ಟಡಗಳಾಗಿವೆ. ಇಂದಿಗೂ ಈ ಕಟ್ಟಡಗಳು ಸುಂದರವಾಗಿ, ವ್ಯವಸ್ಥಿತವಾಗಿ ಇತಿಹಾಸಕಾರರನ್ನು ಆಹ್ವಾನಿಸುತ್ತವೆ. ಇಂತಹ ಅಗ್ರಹಾರಗಳು ಸರಕಾರದಿಂದ, ಪುರಾತತ್ವ ಇಲಾಖೆಯಿಂದ ರಕ್ಷಣೆ ಹಾಗೂ ಅಧ್ಯಯನಕಾರರಿಂದ ವಂಚಿತವಾಗಿವೆ.

(ಜಿಪಿ)

ಅಂತ್ಯ ಸಂಸ್ಕಾರ: ಮಾನವ ಹುಟ್ಟಿನಿಂದ ಸಾಯುವವರೆಗೆ ಅನೇಕ ಆಚರಣೆ ಸಂಪ್ರದಾಯಗಳಿಗೆ ಒಳಗಾಗುತ್ತಾನೆ. ಅವುಗಳಲ್ಲಿ ಹುಟ್ಟು, ಮದುವೆ, ಸಾವುಗಳು ಪ್ರಮುಖವಾದವುಗಳು. ಸಾವು ಭೂಮಿಯ ಮೇಲೆ ಜನ್ಮತಾಳಿರುವ ಪ್ರತಿಯೊಂದು ಜೀವಿಗೂ ಅನಿವಾರ್ಯ, ಅದು ಸೃಷ್ಟಿಯ ನಿಯಮವು ಹೌದು. ಸಾವು ಮಾನವನ ಜೀವನಾವರ್ತನದ ಕೊನೆಯ ಆಚರಣೆ. ಆದ್ದರಿಂದ ಅದನ್ನು ಅಂತ್ಯ (ಕೊನೆಯ) ಸಂಸ್ಕಾರವೆಂದು ಕರೆಯುತ್ತಾರೆ.

ಅಂತ್ಯ ಸಂಸ್ಕಾರಗಳಲ್ಲಿ ವ್ಯಕ್ತಿಯು ಮರಣ ಹೊಂದಿದ ಕ್ಷಣದಿಂದ ಹಿಡಿದು ಸತ್ತ ಆತ್ಮವನ್ನು ಪೂರ್ವಜರ ಆತ್ಮಗಳೊಂದಿಗೆ ಸೇರಿಸುವವರೆಗೂ ಹಲವಾರು ಆಚರಣೆಗಳನ್ನು ಆಚರಿಸುವುದುಂಟು. ಈ ಆಚರಣೆಗಳನ್ನು ದೇಹ ಸಂಸ್ಕಾರ ಹಾಗೂ ಆತ್ಮಸಂಸ್ಕಾರ ಆಚರಣೆಗಳೆಂದು ಗುರುತಿಸಲಾಗಿದೆ. ದೇಹವನ್ನು ಚಿತೆಗೆ ಅಥವಾ ಮಣ್ಣು ಮಾಡುವವರೆಗೆ ನಡೆಯುವ ಕ್ರಿಯೆಗಳು ದೇಹ ಸಂಸ್ಕಾರಕ್ಕೆ ಸಂಬಂಧಪಟ್ಟರೆ ಈ ಕ್ರಿಯೆ ಆನಂತರದಲ್ಲಿ ನಡೆಯುವ ಸಂಪ್ರದಾಯ ಕ್ರಿಯೆಗಳು ಆತ್ಮ ಸಂಸ್ಕಾರಕ್ಕೆ ಸಂಬಂಧಪಟ್ಟ ಆಚರಣೆಗಳಾಗಿವೆ. ಇಲ್ಲಿ ದೇಹ ಮಾತ್ರ ಸಾಯುತ್ತದೆ. ಆತ್ಮ ಈ ಬಂಧನದಿಂದ ಬಿಡುಗಡೆಯಾಗಿ ಮತ್ತೊಂದೆಡೆ ಹೋಗಲು ಅನುವುಮಾಡುವ ಆಚರಣೆಯಾಗಿರುತ್ತದೆ.

ಅಂತ್ಯ ಸಂಸ್ಕಾರದ ಆಚರಣೆಗಳು ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ, ಜಾತಿಯಿಂದ ಜಾತಿಗೆ, ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತವೆ. ಕೆಲವರು ಶವವನ್ನು ಹೂಳುವ ಪದ್ಧತಿ ಅನುಸರಿಸಿದರೆ, ಕೆಲವರು ಸುಡುತ್ತಾರೆ. ಇನ್ನು ಕೆಲವು ಸಮುದಾಯಗಳು ಪ್ರಾಣಿ-ಪಕ್ಷಿಗಳಿಗೆ ಆಹಾರವಾಗಿ ಕೊಡಲು ದೇಹವನ್ನು ಕಲ್ಲು, ಪೊಟರೆಯೊಳಗೆ ಇಟ್ಟು ಬರುತ್ತವೆ. ಟಿಬೇಟ್‌ನ ಬೌದ್ಧರು ಶವವನ್ನು ತುಂಡು ಮಾಡಿ ಪ್ರಾಣಿಗಳಿಗೆ ಆಹಾರ ನೀಡುತ್ತಾರೆ. ಇನ್ನು ಬಾಣ-

ತಿಯರನ್ನು, ಬಸುರಿಯರನ್ನು ತೊನ್ನು ರೋಗಿಯನ್ನು, ಇತರೆ ದೊಡ್ಡ ರೋಗಗಳಿಗೆ ತುತ್ತಾದವರನ್ನು ಶವಪರೀಕ್ಷೆ ಆದವರನ್ನು ಹೀಗೆ ಮುಂತಾದವರನ್ನು ಸಾಮಾನ್ಯವಾಗಿ ಸುಡುವುದುಂಟು.

ಸಾಮಾನ್ಯವಾಗಿ ವ್ಯಕ್ತಿ ಪ್ರಾಣ ಬಿಡುವ ಸಂದರ್ಭದಲ್ಲಿ ಮಕ್ಕಳು ಮತ್ತು ಸಮೀಪದ ಬಂಧುಗಳು ನೀರು ಬಿಡುವ ಕ್ರಮವುಂಟು. ಇದು ಪ್ರಾಯಶಃ ನೀರು ಬಿಟ್ಟು ಸಂಬಂಧವನ್ನು ಹರಿದುಕೊಳ್ಳುವ ಕ್ರಮವಾಗಿರಬಹುದು. ಎಳ್ಳು ನೀರು ಬಿಟ್ಟು ಸಂಬಂಧ ಹರಿದುಕೊಂಡೆ ಎಂಬ ನುಡಿಗಟ್ಟನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಪ್ರಾಣ ಹೋದ ಮೇಲೆ ಶವಕ್ಕೆ ಸ್ನಾನ ಮಾಡಿಸಿ, ಹೊಸ ಬಟ್ಟೆ ತೊಡಿಸಿ ಆಯಾ ಧರ್ಮಗಳ ಸಂಪ್ರದಾಯಗಳಿಗೆ ಅನುಗುಣವಾಗಿ ಪೂಜಾದಿ ಕಾರ್ಯಕ್ರಮ ಗಳನ್ನು ಮಾಡಿ ಚಟ್ಟದ ಮೇಲೆ ಶವಗಳನ್ನು ಇಟ್ಟುಕೊಂಡು ಬಂಧು–ಬಾಂಧವರ ಜೊತೆಗೂಡಿ ಸ್ಮಶಾನಕ್ಕೆ ಬಂದು ಹೆಣವನ್ನು ಹೂಳುವ/ಸುಡುವ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ. ಅನೇಕ ವಿಧಿವತ್ತಾದ ಕಾರ್ಯಕ್ರಮಗಳ ಮೂಲಕ ಶವ ದಫನ ಕಾರ್ಯಕ್ರಮ ಮಾಡಲಾಗುವುದು. ನಂತರ ತಮಗೆ ಅಂಟಿದ ಸಾವಿನ ಮೈಲಿಗೆಯನ್ನು ನಿವಾರಿಸಿಕೊಳ್ಳಲು ಕುಟುಂಬವು ಕೆಲವೊಂದು ವಿಧಿ ಆಚರಣೆಗಳನ್ನು ನಡೆಸುವುದು. ಇನ್ನು ವ್ಯಕ್ತಿಯ ಪ್ರಾಣ ಬಿಟ್ಟ ಸಮಯ ಸರಿಯಿಲ್ಲದಿದ್ದರೆ ಆ ಕುಟುಂಬದವರು ಅನೇಕ ದಿನಗಳವರೆಗೆ ತಮ್ಮ ಮನೆಯನ್ನು ತೊರೆದು ಬೇರೆಡೆ ವಾಸಿಸುವುದುಂಟು.

ವ್ಯಕ್ತಿಯ ಸಾವಿನ ಆನಂತರದಲ್ಲಿ ಮೂರು, ಐದು, ಏಳು, ಒಂಬತ್ತು, ಹನ್ನೊಂದು ಇಲ್ಲವೆ 21 ದಿನಗಳ ವರೆಗೆ ಆಯಾ ಸಮುದಾಯಗಳಲ್ಲಿ ಪ್ರಚಲಿತದಲ್ಲಿದ್ದಂತೆ ಆತ್ಮ ಸಂಸ್ಕಾರ ಆಚರಣೆಗಳನ್ನು ನಡೆಸುತ್ತವೆ. ಇದೊಂದು ಆಧ್ಯಾತ್ಮಿಕ ಜಿಜ್ಞಾಸೆ. ಹೆಣ ಸಂಸ್ಕಾರ ಮಾಡಿದ ಆನಂತರದಲ್ಲಿ ಆತ್ಮ ಸ್ಮಶಾನದಲ್ಲೊ, ಮರ ಗಿಡಗಳಲ್ಲೊ ಇರುತ್ತದೆ. ಅದಕ್ಕೆ ಸರಿಯಾದ ಸಂಸ್ಕಾರ ದೊರೆತ ಆನಂತರ ಅದು ತನ್ನ ಪೂರ್ವಜರ ಹತ್ತಿರ ಹೋಗುತ್ತದೆ. ಅಂದರೆ ಅದಕ್ಕೆ ಶಾಂತಿ ಸಿಕ್ಕು ಈ ಬಂಧನದಿಂದ ಬಿಡುಗಡೆಯಾಗುತ್ತದೆ. ಇಲ್ಲದಿದ್ದರೆ ಅದು ಭೂತ, ಪ್ರೇತ, ದೆವ್ವ ಆಗಿ ಮಾನವನನ್ನು ಕಾಡುತ್ತದೆಂಬ ನಂಬಿಕೆ ಸಾಮಾನ್ಯವಾಗಿ ಎಲ್ಲಾ ಸಮುದಾಯ ಗಳಲ್ಲುಂಟು. ಆದ್ದರಿಂದ ಮಾನವನು ಅಂತ್ಯ ಸಂಸ್ಕಾರ ಆಚರಣೆಗಳನ್ನು ಅಚ್ಚುಕಟ್ಟಾಗಿ, ವಿಧಿಪೂರ್ವಕವಾಗಿ ನಡೆಸಿಕೊಂಡು ಬಂದಿದ್ದಾನೆ. ಹೀಗಾಗಿ ನಿಗದಿತ ದಿನದಲ್ಲಿ ಆತ್ಮ ಪೂಜೆ, ಪಕ್ಷಿಗೆ ಆಹಾರ ನೀಡುವುದು, ಹೊಳೆಗೆ ಬೂದಿ ಬಿಡುವುದು, ತಿಥಿ ಊಟ, ಊದು ಹಾಕುವುದು, ಮಡಿ–ಹುಡಿಯಿಂದ ಶ್ರದ್ಧಾಪೂರ್ವಕವಾಗಿ ಎಲ್ಲಾ ಆಚರಣೆಗಳನ್ನು ಮಾಡುವುದುಂಟು. *(ವ್ಹಿಎಲ್‌ಪಿ)*

ಅಂಬವ್ವ ಭೀಮಣ್ಣ ಪಟ್ಟಣ: ಜನಪದ ಹಾಡುಗಾರ್ತಿ. ಗುಲಬರ್ಗಾ ಜಿಲ್ಲೆಯ ಅಫ್‌ಜಲ್‌ಪುರದ. ಗೂಡೂರಿನವರು. “ಆದಾವ ನಿಮಜೋಳ, ಉಳಿದಾವ ನಮಹಾಡು” ಎಂದು ಹಾಡುತ್ತಲೇ ನಡೆದ ಇವರು ಹಾಡಿನ ದೊಡ್ಡಗಣಿ. ಬೀಸುವಾಗ, ಕುಟ್ಟುವಾಗ, ಕಳೆ ಕೀಳುವಾಗ, ನಾಟಿ ಹಾಕುವಾಗ, ಇವರ ಹಾಡಿನ ಮಾಧುರ್ಯವನ್ನು ಸವಿಯಬೇಕು. ಇವರ ಹಾಡಿಗೆ ಮನಸೋಲದವರಿಲ್ಲ.

ಅಫ್‌ಜಲ್‌ಪುರದ, ಗೂಡೂರಿನ ಅಂಬವ್ವ ಊರಿನ ಎಲ್ಲರಿಗೂ “ಅಕ್ಕ” ಎಂದೇ ಚಿರಪರಿಚಿತರಾಗಿದ್ದಾರೆ ಒಂದೆಡೆ ಅಪಾರವಾದ ಸಾಹಿತ್ಯ ರಾಶಿಯಾಗಿದ್ದರೆ, ಮತ್ತೊಂದೆಡೆ ಅದಕ್ಕೆ ಸುಶ್ರಾವ್ಯತೆಯನ್ನು ತರುವ ಕಂಠಶ್ರೀ, ಇವೆರಡರ ಸಂಗಮ ‘ಅಕ್ಕ’ ಅಂಬವ್ವ, ತಮ್ಮ ಕಸಬು ತಮ್ಮ ಜೊತೆಯಲ್ಲೆ ಮಣ್ಣಾಗಬಾರದೆಂದು ಅನೇಕ ಶಿಷ್ಯೆಯರನ್ನು ತಯಾರು ಮಾಡಿರುವ ಇವರಿಗೆ ಕಲೆಯ ಬಗ್ಗೆ ಅಪಾರವಾದ ಕಾಳಜಿ ಸಾಹಿತ್ಯದ ಜೊತೆಗೆ ಹಾಡಿನ ಮಟ್ಟ ಸಹ ಅಷ್ಟೇ ಮುಖ್ಯವಾದುದೆಂದು ಇವರು ಮನಗಂಡಿದ್ದಾರೆ. *(ಜಿಆರ್‌ಟಿ)*

ಅಂಬಾಭವಾನಿ: ಮಹಾರಾಷ್ಟ್ರದ ಉಸ್ಮಾನಾಬಾದ ಜಿಲ್ಲೆ ತುಳಜಾಪುರ ತಾಲ್ಲೂಕಿನ ತುಳಜಾಪುರ ಪಟ್ಟಣದಲ್ಲಿಯೇ ಪ್ರಸಿದ್ಧಿ ಹೊಂದಿರುವ ದೇವತೆ. ಈ ದೇವಿಯ ಗುಡಿಯ ಬಾಗಿಲು ಪೂರ್ವ–ಪಶ್ಚಿಮ ಮತ್ತು ಉತ್ತರ–ದಕ್ಷಿಣವಾಗಿದ್ದರೂ, ಮುಖ್ಯವಾಗಿ ಭಕ್ತರನ್ನು ಹರಕೆ ಸಲ್ಲಿಸಲು ಪೂರ್ವ ಮತ್ತು ಉತ್ತರಕ್ಕೆ ಮಾತ್ರ ಪ್ರವೇಶ ಕೊಡುತ್ತಾರೆ. ಈ ದೇವರ ಹೆಸರಿನಲ್ಲಿ ಜಾವುಳ, ಗೊಂದಲ, ತನಾರತಿ, ದಂಡನಮಸ್ಕಾರದಂತಹ ಹರಕೆಗಳನ್ನು ಪೂರೈಸುತ್ತಿರುತ್ತಾರೆ. ಹೊಸದಾಗಿ ವಿವಾಹ ಆಗಿರುವ ಸ್ತ್ರೀ–ಪುರುಷರು ಮೊದಲು ಈ ದೇವರಿಗೆ ಹರಕೆ ಪೂರೈಸಿದ ಆನಂತರವೇ ಸತಿ–ಪತಿಯರಾಗಿ ಜೀವನ ಸಾಗಿಸುತ್ತಾರೆ.

‘ಅಂಬಾಭವಾನಿ’ ದೇವಿಗೆ ಸರ್ವಜನಾಂಗದವರು ನಡೆದು ಕೊಂಡರೂ, ವಿಶೇಷವಾಗಿ ಮರಾಠರು ಮತ್ತು ಕೆಳವರ್ಗದವರು ತಮಗಿಷ್ಟವಾದ ಹರಕೆಗಳನ್ನು ಹೊತ್ತು ಪೂರೈಸುವರು. ತುಳಜಾಪುರದಲ್ಲಿ ಸ್ಪೃಶ್ಯ ಮತ್ತು ಅಸ್ಪೃಶ್ಯರಿಗಾಗಿ ಎರಡು ದೇವಾಲಯಗಳನ್ನು ಸ್ಥಾಪಿಸಿದ್ದಾರೆ. ಒಂದು ಗುಡಿಗೆ ಮರಾಠರು ಅರ್ಚಕರಾದರೆ, ಇನ್ನೊಂದು ದೇವಾಲಯದಲ್ಲಿ ಅಸ್ಪೃಶ್ಯ ವರ್ಗದವರೇ ಅರ್ಚಕರಾಗಿದ್ದಾರೆ. ಈ ದೇವಿಯ ಜಾತ್ರೆಯು ‘ಮಹಾಲಯ’ ಅಮವಾಸ್ಯೆಯಿಂದ ಆರಂಭವಾಗಿ ‘ನವರಾತ್ರಿ’ (ಒಂಬತ್ತು) ದಿನಗಳವರೆಗೆ ಲಕ್ಷಾಂತರ ಜನರು ಬಂದು ದೇವಿಯ ದರ್ಶನ ಪಡೆಯುತ್ತಾರೆ. ದೇವಿಗೆ ಹಾಲು, ತುಪ್ಪ, ಬೆಣ್ಣೆ–ಮೊಸರಿನ ಅಭಿಷೇಕ ಮಾಡುವರು. ದೇವಿಯ ಮೂರ್ತಿ ಬೆಳ್ಳಿ–ಬಂಗಾರದ್ದು ಇದೆ. ಗರ್ಭ ಗುಡಿಯಿಂದ 10 ಅಡಿ ದೂರದಿಂದಲೇ ದೇವಿಯ ದರ್ಶನ ಪಡೆಯುವರು.

ಶಕ್ತಿ ಆರಾಧನೆಯಲ್ಲಿ ಪ್ರಮುಖ ದೇವತೆಯಾಗಿರುವ ‘ಅಂಬಾಭವಾನಿ’ಯನ್ನು ಗೊಂದಲಗರು ಗೊಂದಲ ಹಾಕುವಾಗ ಮತ್ತು ಇತರ ಸಂದರ್ಭದಲ್ಲಿಯೂ ಭಕ್ತರಿಂದ ಪೂಜಿಸಿಕೊಳ್ಳುತ್ತಾಳೆ. ದಸರೆಯ ಸಂದರ್ಭದಲ್ಲಿ ಒಂಬತ್ತು ದಿನಗಳವರೆಗೂ ಜಾತ್ರೆ–ಉತ್ಸವ, ಗೊಂದಲ ಹಾಕುವ ರೂಢಿಯುಂಟು. ಗೊಂದಲಿಗರು ಇರುವ ಕಡೆಗಳಲ್ಲಿ ಮದುವೆ ಸಂದರ್ಭದಲ್ಲಿಯೂ ದೇವಿ ಆರಾಧನೆ ಮಾಡುವಾಗ, ದೇವಿಯನ್ನು ಕುರಿತಿರುವ ಕಥೆಗಳನ್ನು ಹೇಳಿ ಜನರಿಗೆ ಭಕ್ತಿ ಮೂಡಿಸುವಂತೆ ವಿವರಿಸುವರು. ಈ ದೇವಿಯನ್ನು ಪೂಜಿಸುವುದರಿಂದ ಸರ್ವಜನಾಂಗಕ್ಕೂ ಶುಭ ಆಗುವುದೆಂಬುದು ನಂಬಿಕೆ.

ದೇವಿ ಹೆಸರಲ್ಲಿ ಗೊಂದಲಿಗರ ಮೇಳದವರು ಇಡೀ ರಾತ್ರಿ ನಡೆಯುವ ಕಥಾ ಪ್ರಸಂಗ ಸೂರ್ಯೋದಯಕ್ಕೆ ಸ್ವಲ್ಪ ಮುನ್ನ

ಮುಕ್ತಾಯವಾಗುತ್ತದೆ. ಆನಂತರ ದೇವಿಯ ಕಲಶಕ್ಕೆ ಕಾಯಿ ಒಡೆದು, ಕರ್ಪೂರದಾರತಿ ಬೆಳಗಿ, ಮಂಗಲಾಚರಣೆ ಮಾಡುವರು. ಕಥೆಯನ್ನು ಹೇಳಲು ಆಹ್ವಾನಿಸಿರುವವರಿಂದ, ವೀಳ್ಯ ಮತ್ತು ಸಂಭಾವನೆ ಪಡೆದ ಮೇಳದ ಕಲಾವಿದರು ದೇವತೆಯ ಸ್ತುತಿ ಮಾಡುವರು. ಗೊಂದಲ ಹಾಕಿಸಿದ ಯಜಮಾನರ ಹೆಸರ್ಹೇಳಿ, ತಾಯಿ ಜಗದಂಬೆ, ಅಂಬಾಭವಾನಿ ದೇವಿ ನಿನ್ನ ಭಕ್ತರನ್ನು ಉದ್ಧಾರ ಮಾಡು ಎನ್ನುವರು. ಅವರ ಸುಖ-ಸಂಪತ್ತು ವೃದ್ಧಿಯಾಗಲೆಂದು ಶುಭ ಹಾರೈಸುವರು. ಎಲ್ಲರಿಗೂ ದೇವಿಯ ನಂತರ ವಂದಿಸಿ ಕಥೆಯನ್ನು ಮುಗಿಸುವ ಸಂಪ್ರದಾಯವಿದೆ.

ಈ ಸಂಪ್ರದಾಯ ಮಹಾರಾಷ್ಟ್ರ ಮಾತ್ರವಲ್ಲದೆ ಕರ್ನಾಟಕದ ಅದರಲ್ಲೂ ಹೈದ್ರಾಬಾದ್ ಕರ್ನಾಟಕದವರು 'ಅಂಬಾ ಭವಾನಿ' ಆರಾಧಕರಿದ್ದಾರೆ. ಕಲಬುರಗಿಯಿಂದಲೂ ನವರಾತ್ರಿ ಉತ್ಸವದಲ್ಲಿ ಸಹಸ್ರ ಸಹಸ್ರಕ್ಕೂ ಅಧಿಕ ಸಂಖ್ಯೆಯ ಜನರು, ತುಳಜಾಪೂರದ ದೇವಿ 'ಅಂಬಾಭವಾನಿ'ಗೆ 'ಪಾದಸೇವೆ'ಯಿಂದ ನಡೆದುಕೊಂಡು ಹೋಗುವ ರೂಢಿ ಕರಗತ ಮಾಡಿಕೊಂಡಿದ್ದಾರೆ. ಈ ಭಾಗದ ಜನಸಾಮಾನ್ಯರಲ್ಲಿ 'ಅಂಬಾಭವಾನಿ' ಆರಾಧ್ಯದೈವ ಆಗಿದ್ದಾಳೆ.

(ಎಚ್‌ಡಿ)

ಅಗಸ: ಊರಿನ ಬಟ್ಟೆಗಳನ್ನು ಒಗೆದು ಮಡಿಮಾಡಿಕೊಡುವ ವೃತ್ತಿಯವ. ಮಡಿವಾಳ, ರಜಕ ಮೂಲತಃ ಅಗಸ ಒಂದು ಜಾತಿಯಲ್ಲ, ಅದೊಂದು ವೃತ್ತಿ, ಆದ್ದರಿಂದಲೇ ಬಸವಣ್ಣನವರು ತಮ್ಮ ವಚನದಲ್ಲಿ ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ ಎನ್ನುತ್ತಾರೆ.

ಗ್ರಾಮೀಣ ವ್ಯವಸಾಯದ ಆರ್ಥಿಕ ವ್ಯವಸ್ಥೆಯಲ್ಲಿ ಬಡಿಗ, ಕಮ್ಮಾರ, ಕುಂಬಾರ, ಅಕ್ಕಸಾಲಿಗ, ಕ್ಷೌರಿಕ, ತಳವಾರ, ಚಮ್ಮಾರ ಮುಂತಾದ ಆಯಗಾರರಂತೆ ಅಗಸನು ಒಬ್ಬ. ಈ ಊರಿನ ಬಟ್ಟೆಗಳನ್ನು ಮಡಿಮಾಡಿಕೊಡುವುದರ ಮೂಲಕ ತನ್ನ ಪಾಲಿನ ಆಯವನ್ನು ಪಡೆಯುತ್ತಿದ್ದ. ಅಗಸ ವೃತ್ತಿಯಲ್ಲಿ ಲಿಂಗಾಯತರು, ಮರಾಠಿಗರು, ತೆಲಗರು, ಮುಸಲ್ಮಾನರು, ಕ್ರಿಶ್ಚಿಯನ್‌ರು, ಕೋಮಟಿ ಮುಂತಾದವರು ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಅವರವರ ಜಾತಿ ಪಂಗಡಗಳ ಜೀವನ ವಿಧಾನ ಆಚಾರ, ವಿಚಾರ, ಆರಾಧ್ಯ ದೈವಗಳನ್ನು ಹಿಂಬಾಲಿಸುವುದುಂಟು. ಅಗಸರಲ್ಲೆಲ್ಲಾ ಮಡಿವಾಳ ಮಾಚಿದೇವ ಶರಣ ಪ್ರಸಿದ್ಧನಾಗಿದ್ದಾನೆ. ಜೊತೆಗೆ ಅನೇಕ ಅಗಸರಿಗೆ ಆತ ಆರಾಧ್ಯದೈವವೂ ಆಗಿದ್ದಾನೆ.

ಅಗಸ ಜೀವನಾವರ್ತನೆ ಆಚರಣೆಗಳಾದ ಹುಟ್ಟು, ಮದುವೆ, ಸಾವು ಮತ್ತು ಹಬ್ಬ-ಹರಿದಿನಗಳಲ್ಲಿ ವಿಶೇಷ ಸೇವೆಯನ್ನು ಸಲ್ಲಿಸುತ್ತಿದ್ದ. ಅದಕ್ಕಾಗಿ ವಿಶೇಷ ಸಂಭಾವನೆಯನ್ನು ಪಡೆಯುತ್ತಿದ್ದ. ಮಗು ಹುಟ್ಟಿದಾಗ ಬಾಣಂತೆಯ ಸೀರೆ ಅಗಸನಿಗೆ ಸೇರತಕ್ಕದ್ದು. ಹೆರಿಗೆ ದಿನದಿಂದ ಸೂತಕ ಕಳೆಯುವವರೆಗೆ, ಆದರೆ ಮೂರು ಇಲ್ಲವೆ ಹತ್ತು ದಿನಗಳವರೆಗೆ ಅಗಸ ಮಡಿಮಾಡಿ ತಂದ ಬಟ್ಟೆಗಳನ್ನು ಉಪಯೋಗಿಸಲಾಗುತ್ತದೆ. ಹೆಣ್ಣು ಮೈನೆರೆದಾಗ ಅವಳು ತೊಟ್ಟಿರುವ ಬಟ್ಟೆಗಳನ್ನು ಅಗಸನಿಗೆ ಕೊಡುವ ಸಂಪ್ರದಾಯವುಂಟು. ಇನ್ನು ವ್ಯಕ್ತಿ ಸತ್ತಾಗ ಸಂಸ್ಕಾರಕ್ಕೆ ಮುನ್ನ ಆತನಿಗೆ ಹೊಸ ಬಟ್ಟೆಗಳನ್ನು ಉಡಿಸಿ, ಆತನ ಹಳೆ ಬಟ್ಟೆ ಹಾಗೂ ಆತನ ಹಾಸಿಗೆಗಳನ್ನು ಅಗಸನಿಗೆ ಕೊಡುವುದುಂಟು. ಅಗಸ ಸತ್ತ ವ್ಯಕ್ತಿಯ ದಿನ ಮಾಡುವವರೆಗೂ ಅವನ ಮನೆಯೊಳಗಿನ ಜನರೆಲ್ಲರ ಬಟ್ಟೆಗಳನ್ನು ಮಡಿ ಮಾಡಿ ತಂದುಕೊಡುವನು.

ಮದುವೆಯಲ್ಲಿಯ ಅರಿಶಿಣ ಹಚ್ಚುವ ಅಂದರೆ ಸುರಿಗೆ ನೀರು ಬೀಳುವ ಅರಿವೆಗಳು ಅಗಸನಿಗೆ ಸೇರತಕ್ಕದ್ದು. ಮದುವೆಯಲ್ಲಿ ದೇವರ ಗುಡಿಗೆ ಗುಗ್ಗಳ ತೆಗೆದುಕೊಂಡು ಹೋಗುವಾಗ ಮತ್ತು ದೀಡ ನಮಸ್ಕಾರ ಹಾಕುವಾಗ ಅಗಸರು ಹಡದಿ ಹಾಸುವರು. ಅಲ್ಲದೆ ಪಲ್ಲಕ್ಕಿ ಉತ್ಸವ, ಮಹಾಸ್ವಾಮಿಗಳು ಬಂದಾಗಲೂ ಅಗಸರು ಹಡದಿ ಹಾಸುವರು.

ಅಗಸರು ಸಾಮಾನ್ಯವಾಗಿ ಬಟ್ಟೆಗಳನ್ನು ಮಡಿಮಾಡಲು ನೀರಿನ ಮೂಲಗಳಾದ ಬಾವಿ, ಕೆರೆ, ಹಳ್ಳ, ಹೊಳೆ ಇತ್ಯಾದಿಗಳಿಗೆ ತೆಗೆದುಕೊಂಡು ಹೋಗುವುದುಂಟು. ಅರಿವೆಗಳು ಬಹಳಷ್ಟಿದ್ದರೆ ಅವುಗಳನ್ನು ಹೊತ್ತೊಯ್ಯಲು ಕತ್ತೆಗಳನ್ನು ಬಳಸುವುದುಂಟು. ಕೆಲವೊಮ್ಮೆ ಕುದುರೆ, ಕೋಣಗಳ ಬಳಕೆಯು ಆಗುವುದುಂಟು. ಬಟ್ಟೆಗಳನ್ನು ಶುದ್ಧಿ ಮಾಡಲು ಚೌಳು ಮತ್ತು ಅಂಟವಾಳದ ಕಾಯಿಗಳನ್ನು ಬಳಸುತ್ತಿದ್ದರು. ಇಂದು ಸಾಬೂನು ಅನಿವಾರ್ಯವಾಗಿದೆ. ಅಗಸರು ಒಬ್ಬರ ಬಟ್ಟೆ ಇನ್ನೊಬ್ಬರಿಗೆ ಹೋಗದಂತೆ ನೋಡಿಕೊಳ್ಳಲು ಪ್ರತಿಯೊಂದು ಕುಟುಂಬದ ಅಥವಾ ಗುಂಪಿನ ಬಟ್ಟೆಗೆ ಗೇರಿನಿಂದ ಗುರುತು ಹಾಕಿರುತ್ತಾರೆ. ಅದು ಬದಲಾದರೆ ಆ ಸಂಕೇತದ ಮೂಲಕ ಗುರುತಿಸಿ, ಅದನ್ನು ಅವರಿಗೆ ಮುಟ್ಟಿಸುತ್ತಾರೆ. ಅಗಸ ಬಟ್ಟೆ ಮಡಿಮಾಡಿ ಜನರು ಬಯಸಿದಂತೆ ಗಂಜಿಹಾಕಿ, ಇಸ್ತ್ರೀ ಮಾಡಿ ಕೊಡುವುದುಂಟು.

ಜೋಕುಮಾರನ ಆಚರಣೆಯಲ್ಲಿ ಅಗಸರ ಪ್ರಸ್ತಾಪ ಬರುವುದುಂಟು. ಜೋಕುಮಾರನ ಅಗಸರ ಹುಡಗಿಯ ಶೀಲಭಂಗ ಮಾಡಿದ್ದಕ್ಕೆ ಅಗಸರೆಲ್ಲಾ ಸೇರಿ ಅವನನ್ನು ಕೊಂದು ತಾವು ಬಟ್ಟೆ ಒಗೆಯುವ ಕಲ್ಲಿನ ಕೆಳಗೆ ಆ ದೇಹವನ್ನು ಬಚ್ಚಿಟ್ಟರೆಂಬ ಕಥೆಯುಂಟು. ಅಗಸನಿಗೆ ಸಂಬಂಧಿಸಿದಂತೆ ನಾನಾ ಗಾದೆಗಳುಂಟು. 'ಅಗಸನ ಮಾತು ಅರಸನಿಗೆ ಮೂಲ' ಇದು ರಾಮ ಸೀತೆಯನ್ನು ಅರಣ್ಯಕ್ಕೆ ಅಟ್ಟಿದ ಪ್ರಸಂಗವನ್ನು ತಿಳಿಸುತ್ತದೆ. ಅದರಂತೆ 'ಅಗಸನ ಸಿಟ್ಟು ಅನ್ಯರ ಬಟ್ಟೆಯ ಮೇಲೆ', 'ಹೊಸದರಲ್ಲಿ ಅಗಸ ಗೋಣಿಯನ್ನು ಎತ್ತಿ ಎತ್ತಿ ಒಗೆದಂತೆ', 'ಬಿದ್ದಕಲ್ಲು ಅಗಸನದು, ಎದ್ದ ಕಲ್ಲು ಪೂಜಾರಿಯದು', 'ಕೊಟ್ಟಿದ್ದು ಅಗಸನಿಗೆ, ಉಟ್ಟಿದ್ದು ನಮಗೆ', 'ಅಗಸ ನೀರಡಿಸಿ ಸತ್ತಂತೆ' 'ಯಾರ ಇಲ್ಲದ ಊರಿಗೆ ಅಗಸರ ಮೂಳಿ ಮುತ್ತೈದೆ', 'ಊರಿಗೆ ಬಂತು ಉಗಾದಿ, ಅಗಸನಿಗೆ ಬಂತು ತಗಾದಿ' 'ಅಗಸನ ಕೈಶುದ್ಧ ಕತ್ತೆ ಬೆನ್ನು ಶುದ್ಧ', 'ಊರಿನ ಬಡತನ ಅಗಸನಿಗೆ ಗೊತ್ತು, ಸಿರಿತನ ಅಕ್ಕಸಾಲಿಗನಿಗೆ ಗೊತ್ತು', 'ಅಗಸನ ಅಂಗೈಲಿ ಉಣ್ಣಬಹುದು, ಕೆಲಸಿಗನ ಅಂಗಳದಲ್ಲಿ ಊಣ್ಣಾಕ್ಕಾಗಲ್ಲ. ಎಂಬೆಲ್ಲ ಗಾದೆಗಳು ಅಗಸನ ಸ್ಥಿತಿಗತಿಗಳನ್ನು ಕುರಿತು ತಿಳಿಸುತ್ತವೆ.

ಈಗ ಹಳ್ಳಿಗಳು ಬದಲಾಗುತ್ತಿವೆ. ಅಗಸರು ಬದಲಾಗುತ್ತಿದ್ದಾರೆ. ಅಗಸರಿಗೆ ಮೊದಲಿನಂತೆ ಗೌರವಿಸಿ ಸಂಭಾವನೆ ಕೊಡುವುದಿಲ್ಲ. ಹೀಗಾಗಿ ಅವರು ಬೇರೆ ಉದ್ಯೋಗದತ್ತ ವಾಲುತ್ತಿದ್ದಾರೆ. ಒಕ್ಕಲುತನ, ವ್ಯಾಪಾರ, ನೌಕರಿ ಬಯಸುತ್ತಿದ್ದಾರೆ. ವಿದ್ಯಾವಂತರು ಪಟ್ಟಣ ಸೇರಿ ಹೊಟ್ಟೆ ಹೊರೆಯುತ್ತಿದ್ದಾರೆ. ಅನಿವಾರ್ಯವಾಗಿ ಕೆಲವರು ತಮ್ಮ ವೃತ್ತಿಯನ್ನೇ ಮುಂದುವರಿಸಿಕೊಂಡು ಬರುತ್ತಿದ್ದಾರೆ. *(ಪ್ಹಿಎಲ್‌ಪಿ)*

ಅಗಸಿ: ಊರಿನ ಮುಖ್ಯ ಪ್ರವೇಶದ್ವಾರ. ಇದನ್ನು ಸಾಮಾನ್ಯವಾಗಿ ಅಗಸಿ, ಅಗಸೆ, ಅಗಸೆಬಾಗಿಲು, ಅಗಸೆ ಗೋಪುರ, ಅಗಸೆ ಹೆಬ್ಬಾಗಿಲು, ಹೆಬ್ಬಾಗಿಲು ಮಹಾದ್ವಾರ ಇತ್ಯಾದಿ ಹೆಸರುಗಳಿಂದ ಕರೆಯುವುದುಂಟು. ಹಿಂದೆ ಬಹುಪಾಲು ಹಳ್ಳಿಗಳಿಗೆ ಕೋಟೆಗಳಿರುತ್ತಿದ್ದುವು. ಆ ಕೋಟೆ ಮುಖ್ಯದ್ವಾರವೇ ಊರಿನ ಪ್ರಮುಖ ಹೆಬ್ಬಾಗಿಲವಾಗಿತ್ತು. ಅದು ಊರಿನ ಗಡಿ ರೇಖೆಯನ್ನು ಸೂಚಿಸುತ್ತಿತ್ತು. ಈಗ ಊರಿನ ಮುಂದೆ ಮುಖ್ಯದ್ವಾರಕ್ಕೆ ಕಟ್ಟಿದ ಕಮಾನಾಕೃತಿಯ ಗೋಡೆಯನ್ನೇ ಅಗಸಿ ಎಂದು ಕರೆಯುತ್ತಿದ್ದಾರೆ. ಈ ಅಗಸಿ ಸ್ಥಳ ಊರಿನ ಸಾಂಸ್ಕೃತಿಕ ಬದುಕಿನ ಒಂದು ಭಾಗವಾಗಿತ್ತು. ಗ್ರಾಮಗಳ ಮಂಗಳ–ಅಮಂಗಳ ಕಾರ್ಯಗಳ ಪ್ರವೇಶ ಹಾಗೂ ನಿರ್ಗಮನದ ಪ್ರಮುಖ ಸ್ಥಳವಾಗಿತ್ತು. ಮದುವೆ ಸಂದರ್ಭದಲ್ಲಿ ಬರುವ ದಿಬ್ಬಣ, ದೇವತೆಗಳ ಆಗಮನ ನಿರ್ಗಮನ ಈ ಅಗಸಿ ದ್ವಾರದ ಮೂಲಕವೇ ನಡೆಯುತ್ತಿತ್ತು. ಉಗ್ರ ದೇವತೆಗಳು ಊರಲ್ಲಿ ಪ್ರವೇಶಿಸುವ ಪೂರ್ವದಲ್ಲಿ ಹಾಗೂ ಪ್ಲೇಗು, ಕಾಲರ, ದಡಾರ ಮುಂತಾದ ಕಾಯಿಲೆಗಳನ್ನು ತರುವ ದೇವರುಗಳನ್ನು ಸಂತೃಪ್ತಿಪಡಿಸುವ ಸಂದರ್ಭದಲ್ಲಿ ಆಡು, ಹೋತ, ಕೋಳಿ, ಕುರಿ ಇತ್ಯಾದಿಗಳನ್ನು ಬಲಿಕೊಡುವ ಪ್ರಮುಖ ಸ್ಥಳವೇ ಅಗಸಿಯಾಗಿತ್ತು. ಸತ್ತ ವ್ಯಕ್ತಿಯ ದೇಹವನ್ನು ಅಗಸಿ ಬಾಗಿಲದ ಮೂಲಕವೇ ತೆಗೆದುಕೊಂಡು ಹೋಗುವ ಪದ್ಧತಿಯಿತ್ತು. ಆದರೆ ಆ ಸ್ಥಳದಲ್ಲಿ ಚಟ್ಟವನ್ನು ಸ್ವಲ್ಪ ಹೊತ್ತು ಇಳುಹಿಸಿ ಹಿಂದಿನವರು ಮುಂದಕ್ಕೂ ಮುಂದಿನವರು ಹಿಂದಕ್ಕೂ ಹೆಗಲು ಬದಲಿಸಿ ಹೊತ್ತುಕೊಂಡು ಹೋಗಬೇಕಾಗಿತ್ತು.

ಕಾರ ಹಬ್ಬದಲ್ಲಿ ಕರಿ ಹರಿಯುವ ಆಚರಣೆ ಅಗಸೆ ಬಾಗಿಲಲ್ಲೆ ನಡೆಯುತ್ತದೆ. ಅಂದು ರೈತರು ಶೃಂಗರಿಸಿದ ಎತ್ತುಗಳ ಮೂಲಕ ಹೆಬ್ಬಾಗಿಲಕ್ಕೆ ಕಟ್ಟಿರುವ ಬೇವಿನ ಸೊಪ್ಪು ಹಾಗೂ ಕೊಬ್ಬರಿಯನ್ನು ಹರಿದು ದಾಟುವುದು ಅಥವಾ ಕೆಲವು ಪ್ರದೇಶದಲ್ಲಿ ಎತ್ತುಗಳ ಕೊರಳಿಗೆ ಕಟ್ಟಿರುವ ಕೊಬ್ಬರಿ, ಹಣವನ್ನು ಓಡುವ ಎತ್ತಿನಿಂದ ಸಾಮರ್ಥ್ಯ ಇದ್ದವರು ಕಿತ್ತುಕೊಳ್ಳುವ ಆಚರಣೆ ನಡೆಯುತ್ತಿವೆ. ಇನ್ನು ಯುಗಾದಿ ಸಂದರ್ಭದಲ್ಲಿ ಕೆಲವು ಭಾಗಗಳಲ್ಲಿ ಚಕ್ಕಡಿ ಓಡಿಸುವ ಕಾರ್ಯವು ಸಹ ಅಗಸೆ ಸ್ಥಳದಿಂದಲೇ ಪ್ರಾರಂಭವು ಆಗುವ ಸಂಪ್ರದಾಯವುಂಟು.

ಭಯಂಕರ ತಪ್ಪು ಮಾಡಿ ಶಿಕ್ಷೆಗೆ ಒಳಗಾದ ವ್ಯಕ್ತಿಯನ್ನು ಸಿಗಿದು ಊರ ಹೆಬ್ಬಾಗಿಲಕ್ಕೆ ತೂಗುಬಿಡುವ ಪದ್ಧತಿಯು ಇತ್ತೆಂದು ಹೇಳುತ್ತಾರೆ. ಅಂಥ ಅನೇಕ ಘಟನೆಗಳು ಅನೇಕ ಜನಪದ ಕಥೆಗಳಲ್ಲೂ ಕಂಡಬರುತ್ತವೆ. ಅದರಿಂದ ಅಗಸೆ ಸ್ಥಳವು ಯಾವಾಗಲೂ ಜನನಿಬಿಡ ವಾಗಿದ್ದುಕೊಂಡು, ಜನರು ಓಡಾಡುವ ಸ್ಥಳವು ಆಗಿತ್ತೆಂದು ತಿಳಿದುಬರುತ್ತದೆ.

ಸಾಮಾನ್ಯವಾಗಿ ಆಕ್ರಮಣ ಕಾರರು ಹಾಗೂ ಯುದ್ಧಕ್ಕೆ ಬರುವ ಅರಸರು ಅಗಸೆ ಬಾಗಿಲಿನ ಮೂಲಕವೇ ಗ್ರಾಮ ಒಳಪ್ರವೇಶಿಸುತ್ತಿದ್ದರು. ರಕ್ಷಣೆಗೆ ಹಾಕಿದ ಬಾಗಿಲವನ್ನು ಮುರಿಯಲು ಹೊರಗಿನವರು ಪ್ರಯತ್ನಿಸಿದರೆ ಒಳಗೆ ಸಿದ್ಧವಾಗಿ ನಿಂತ ಸೈನಿಕರು ಒಮ್ಮೆಲೆ ಬಾಗಿಲು ತೆರೆದು ಹೊರನುಗ್ಗಿ ಬಂದು ದಾಳಿ ಮಾಡುವುದು ಅಲ್ಲಿಯೇ ಆಗಿತ್ತು. ಹೀಗಾಗಿ ಅನೇಕ ಸಲ ಕದನಗಳು ಅಗಸೆಯಲ್ಲಿ ನಡೆಯುತ್ತಿದ್ದವು. ಶಾಸನ ಒಂದರಲ್ಲಿ ಕೆರಕೋಡು ಗ್ರಾಮದ ಹಸುಗಳನ್ನು ಕಳ್ಳರು ಅಪಹರಿಸಿಕೊಂಡು ಹೋಗುವಾಗ ಅದೇ ಊರಿನ ವೀರರಾದ ದೇವಗಾವುಂಡ ಮತ್ತು ಮಲ್ಲಗಾವುಂಡರು ಊರ ಹೆಬ್ಬಾಗಿಲಿನಲ್ಲಿ 'ಗುಹೆಯ ಬಾಗಿಲಲ್ಲಿ ಸಿಂಹ ನಿಂತಂತೆ ನಿಂತು ಹೋರಾಡಿ ಮಡಿದ ಎಂಬ ವಿಷಯವನ್ನು ತಿಳಿಸುತ್ತದೆ.



ಅಗಸಿ

ಈ ಹಿಂದೆ ಸಂಜೆಯಾದ ಬಳಿಕ ಅಗಸೆ ಬಾಗಿಲವನ್ನು ಹಾಕಿ ರಾತ್ರಿ ವೇಳೆಯಲ್ಲಿ ಯಾರೇ ಬಂದರೂ ಊರೊಳಗೆ ಬಿಡುತ್ತಿರಲಿಲ್ಲ. ಇಂದಿಗೂ ಕಾಮಣ್ಣನ ಬೂದಿಯಿಂದ ಊರಿಗೆ ಕರಿಕಟ್ಟಿದ ದನ ಕೆಲವು ಗ್ರಾಮಗಳಲ್ಲಿ ಊರಿನಿಂದ ಯಾರೂ ಹೊರಗೆ ಹೋಗುವುದಾಗಲಿ, ಒಳಗೆ ಬರುವುದಾಗಲಿ ನಿಷೇಧಿಸ ಲಾಗಿರುತ್ತದೆ. *(ಫಿಎಲ್‌ಪಿ)*

ಅಗ್ಗಿ ತುಳಿಯುವುದು: ವೀರಭದ್ರ ದೇವರ ಜಾತ್ರೆಯ ಸಂದರ್ಭದಲ್ಲಿ ನಡೆ ಯುವಂಥ ಸಂಪ್ರದಾಯ. ಜಾತ್ರೆಯ ದಿನ ಊರಿನ ಜನರೆಲ್ಲ ಸೇರಿ ಬಂಡಿಗಳಲ್ಲಿ ಅಗ್ಗಿ ಸುಡುವ ಕಟ್ಟಿಗೆಗಳನ್ನು



ಅಗ್ಗಿ ತುಳಿಯುವುದು

ರಾಶಿ ರಾಶಿಯಾಗಿ ಗುಡಿಯ ಮುಂದೆ ಒಟ್ಟುವರು. ರಾತ್ರಿಯಾದಂತೆ ಊರ ಗೌಡನ ಮನೆಯಿಂದ ಕುಂಭ ಹಾಗೂ ಆರತಿಯನ್ನು ಮೆರವಣಿಗೆಯಲ್ಲಿ ಗುಡಿಗೆ ತರುವರು. ಎತ್ತರವಾಗಿ ಹಾಕಿದ ಕಟ್ಟಿಗೆಯ ರಾಶಿಗೆ ಅಗ್ನಿ ಹೊತ್ತಿಸುವರು. ಬೆಂಕಿಯ ಜ್ವಾಲೆ ಏಳಲನುವಾದಂತೆ 'ಪಟ್ಟದ ಪುರವಂತ' ಮೊಟ್ಟಮೊದಲಿಗೆ ಅಗ್ನಿಯಲ್ಲಿ ಪ್ರವೇಶಿಸಿ ಇತ್ತಿಂದ ಅತ್ತ ದಾಟಿ ಹೋಗುವನು. ಈ ಮಧ್ಯ ವೀರಭದ್ರ ದೇವರ ಮಹಿಮೆ ಕೊಂಡಾಡುತ್ತ ಜೈ ಘೋಷ ಹೇಳುವನು. ಕೆಳಗೆ ಬಿದ್ದ ಮೊಳಕಾಲಿನವರೆಗಿನ ಕಿಚ್ಚಿನಲ್ಲಿ ಒಬ್ಬರ ಹಿಂದೊಬ್ಬರಂತೆ ಜಾತ್ರೆಗೆ ಬಂದ ಸಾವಿರಾರು ಜನ ಭಯಪಡದೆ ಅಗ್ಗಿ ತುಳಿಯುವರು.

ಅಗ್ಗಿ ತುಳಿಯುತ್ತ ತಮಗಂಟಿದ ಕರ್ಮಗುಣಗಳೆಲ್ಲ ನಾಶವಾದವು ಎನ್ನುವ ಮಾನಸಿಕ ನೆಮ್ಮದಿ ತಾಳುವರು. ಇದರ ಬೆಂಕಿಯ ತುಂಡುಗಳನ್ನು ಜನ ತಮ್ಮ ಮನೆಯ ಒಲೆಗಳಲ್ಲಿ ಹಾಕಿ ಅಡಿಗೆ ಮಾಡುವರು ಹಾಗೂ ಹರಕೆಯವರು ನೂರಾರು ಜಂಗಮರನ್ನು ಊಟಕ್ಕೆ ಹಾಕುವರು. ಈ ಸಂದರ್ಭದಲ್ಲಿ ಎಲ್ಲೆಲ್ಲಿಯೋ ಇದ್ದಿರುವ ಪುರವಂತರೆಲ್ಲ ಜಾತ್ರೆಯ ದಿನ ಇಲ್ಲಿ ಕೂಡುತ್ತಾರೆ. ಪುರವಂತರ ಅವತಾರ ದೇವತೆ ವೀರಭದ್ರ. ಇವನ ಸಮ್ಮುಖದಲ್ಲಿಯೇ ಅವರು ಪಟ್ಟಕ್ಕೆ ಬಂದಿರುವುದರಿಂದ ಅವಶ್ಯವಾಗಿ ಇಲ್ಲಿ ಬಂದು ತಮ್ಮ ಸೇವೆ ಸಲ್ಲಿಸುತ್ತಾರೆ. ಪುರವಂತರ ಆಟ ಜನರ ಕಣ್ಮನವನ್ನು ತಣಿಸುವಂತಿರುತ್ತವೆ. ವಿವಿಧ ಭಾವ ಭಂಗಿಗಳಲ್ಲಿ ವಾದ್ಯಗಳ ಹಿನ್ನೆಲೆಯಲ್ಲಿ ನರ್ತಿಸುತ್ತಾರೆ. ಬೆಳಗಾಗುವವರೆಗೆ ಜನರಿಗೆ ರಂಜನೆ ನೀಡುತ್ತ 'ವೀರಭದ್ರನ ಒಡಬು'ಗಳನ್ನು ಹೇಳುತ್ತಾರೆ.

ವೀರಭದ್ರ ದೇವರ ಒಡಬುಗಳಲ್ಲಿ ಆತನ ಮಹಿಮೆ, ರೌದ್ರತೆ, ಭೀಕರತೆಯನ್ನು ಸಂಕೇತಿಸುವ ಗದ್ಯದ ತುಣುಕುಗಳಾಗಿ ಅವರ ಬಾಯಿಂದ ಹೊರಬೀಳುವವು. ಆಗಾಗ ಅಂಗಾಂಗಗಳಲ್ಲಿ ಶಸ್ತ್ರಗಳನ್ನು ಚುಚ್ಚಿಕೊಳ್ಳುತ್ತ ಜನರಲ್ಲಿ ಭಕ್ತಿ ಮೂಡಿಸುವುದರ ಜೊತೆಗೆ ರೋಮಾಂಚನಗೊಳ್ಳುವಂತೆ ಮಾಡುವರು. ಈ ಪದೇಶದಲ್ಲಿ ಸುಪ್ರಸಿದ್ಧ ಅಗ್ಗಿ ತುಳಿಯುವ ಸ್ಥಳಗಳೆಂದರೆ, ಚಿಣಮಗೇರಿ, ಹುಮನಾಬಾದ, ಹಲಕರ್ಟಿ, ಕೋಲಕುಂದಿ, ಕೋರವಾರ, ರಾಚೋಟಿ, ವಗ್ದರಗಿ, ಚಾಂಗ್ಲೇರಿ ಮುಂತಾದ ಕಡೆ ದೊಡ್ಡ ಪ್ರಮಾಣದಲ್ಲಿ ಆಚರಿಸುತ್ತಾರೆ. *(ಬಿಪಿಪಿ)*

ಅಟ್ಟ: ರೈತತು ತಮ್ಮ ಮನೆಯ ದನದ ಹಕ್ಕಿಯ ಮೇಲ್ಭಾಗದಲ್ಲಿ ದನಗಳಿಗೆ ಬೇಕಾಗುವ ಹೊಟ್ಟು, ಮೇವುಗಳನ್ನು ಇಡಲು ಮಾಡಿ–ಕೊಂಡ ವ್ಯವಸ್ಥೆ. ಇದನ್ನು ಸಾಮಾನ್ಯವಾಗಿ ಕಟ್ಟಿಗೆ ಹಲಿಗೆ, ಬಿದಿರು, ಲೆಕ್ಕಿಯ ಕಟ್ಟಿಗೆಯಿಂದ ಮಾಡಿರುತ್ತಾರೆ. ಇದನ್ನು ಹತ್ತಲು ದನಗಳನ್ನು ಕಟ್ಟುವ ಕಂಬದಲ್ಲಿಯೇ ಮೆಟ್ಟಲಿನಂತೆ ಕಟ್ಟಿಗೆ ಬಡಿದಿರುತ್ತಾರೆ. ಅಟ್ಟ ಪವಿತ್ರವಾದುದೆಂದು ಭಾವಿಸುವದರಿಂದ ಚಪ್ಪಲಿಗಳನ್ನು ಹಾಕಿಕೊಂಡು ಇದನ್ನು ಏರುವದಿಲ್ಲ. ಆದರೆ ಇಲ್ಲಿ ಚರ್ಮದಿಂದ ಮಾಡಿದ ಮಿಣಿ, ಕಣ್ಣಿ ಮೊದಲಾದವನ್ನು ಇಡಬಹುದಾಗಿದೆ. ಒಮ್ಮೊಮ್ಮೆ "ಗರಕೋಲಿನಿಂದ ಇದರಲ್ಲಿಯ ಹೊಟ್ಟು ಮೇವು ಎಳೆದು ಗೋದಲಿಗೆ ಹಾಕುವರು. ಇದನ್ನು ಪ್ರತಿ ಸೋಮವಾರಕ್ಕೊಮ್ಮೆ ಸ್ವಚ್ಛಗೊಳಿಸುವದುಂಟು. ಹೊಲದಲ್ಲಿಯ ಪೀಕು ಹೊಡೆ ಹಾದಾಗ ಅದನ್ನು ಹಕ್ಕಿ–ಪಕ್ಕಿಗಳಿಂದ ರಕ್ಷಿಸಲು, ಹೊಲ ಮಧ್ಯದಲ್ಲಿಯೇ ನಾಲ್ಕುಕಾಲಿನ ಚಪ್ಪರ (ಅಟ್ಟ) ಹಾಕಿ, ಅದರ ಮೇಲೆ ನಿಂತು ಕವಣಿ ಬೀಸುವದುಂಟು. ಮನೆಯ ಒಳಭಾಗದಲ್ಲೂ ಕೂಡ ಮನೆಬಳಕೆಯ ಹೆಚ್ಚಿನ ಸಾಮಾನುಗಳನ್ನಿಡಲು ತಲೆಗೆ ತಾಗದಂತೆ ಕಂಬಕ್ಕೆ ಮಣಿಗಳನ್ನು ಜೋಡಿಸಿರುವದಕ್ಕೂ ಅಟ್ಟವೆನ್ನುವರು. ಹಳ್ಳಿಗಳಲ್ಲಿ ಮಹಡಿಯ ಮನೆಗೂ 'ಅಟ್ಟ' ಎಂಬ ಪದ ಬಳಕೆಯಲ್ಲಿದೆ.

(ಬಿ.ವಿ.ಎಸ್.)

ಅಡಿಪೂಜೆ: ಮುಂಗಾರು–ಹಿಂಗಾರಿನ ಬಹು ಮುಖ್ಯವಾದ ಮಳೆಗಳು ಮುಗಿದ ನಂತರ ರೈತರು ಭೂಮಿಗೆ ಬೀಜವನ್ನು ಹಾಕುವ ಕೆಲಸ ಆರಂಭ ಮಾಡುತ್ತಾರೆ. ಹಾಗೆ ಆರಂಭ ಮಾಡುವ ದಿನ ನಡೆಸುವ ಪೂಜೆ.

ಬಡಿಗ–ಕಂಬಾರರು ಕಟ್ಟಿಗೆ ಕೆತ್ತಲು ಮತ್ತು ಕಬ್ಬಿಣ ಕಾಸಿ ಬಡಿಯಲು ನೆಲದಲ್ಲಿ ಒಂದು ದಪ್ಪವಾದ ಕಟ್ಟಿಗೆ ತುಂಡನ್ನು ನೆಡೆಸಿರುತ್ತಾರೆ. ಆ ಕಟ್ಟಿಗೆಯ ದಿಂಡಿಗೆ 'ಅಡಿಗಲ್ಲು' ಎಂದು ಹೇಳಲಾಗುತ್ತದೆ. ಬಡಿಗ–ಕಮ್ಮಾರರು ಅಡಿಗಲ್ಲನ್ನು ತಮ್ಮ ಅಧಿದೇವತೆಯಾದ ಕಾಳಿಯ ಸ್ವರೂಪವೆಂದು ತಿಳಿಯುತ್ತಾರೆ.

ಮಳೆಬಂದು ಬಿತ್ತುವುದಕ್ಕೆ ಭೂಮಿಯು ಹದವಾಗಿದೆಯೆಂದು ತಿಳಿದಾಗ ಒಂದು ದಿನ ಕುರುಬ ಜನಾಂಗದ ರೈತನೊಬ್ಬನು



ಅಡಿಪೂಜೆ

ಜಾಲಿಯ ಗಿಡದಿಂದ ಕಟ್ಟಿಗೆಯ ದಪ್ಪ ತುಂಡನ್ನು ಕಡಿದು ತಂದು ಬಡಿಗನ ಅಡಿಗಟ್ಟಿಗೆ ಇರಿಸುತ್ತಾನೆ. ಈ ಕ್ರಿಯೆಯೊಂದಿಗೆ ರೈತ ಸಮುದಾಯವು ಅಡಿ ಪೂಜೆ ಮತ್ತು ಕೂರಿಗೆಯ ಪೂಜೆಗಳಿಗೆ ಅಣಿಯಾಗುತ್ತದೆ.

ಅಡಿ ಪೂಜೆಯ ದಿನ ಮೊದಲ ಪೂಜೆಯು ಕಂಬಾರನ ಕುಲುಮೆಗೆ ಸಲ್ಲುತ್ತದೆ. ಏಕೆಂದರೆ ರೈತರು ಕುಲುಮೆಯನ್ನು ಸೃಷ್ಟಿಯ ಮೂಲವೆಂದು ನಂಬುತ್ತಾರೆ. ವಿಶ್ವಕರ್ಮನ ಮಕ್ಕಳಲ್ಲಿ ಮನು ಪ್ರಥಮ ಕಂಬಾರನಂತೆ. ಮಯ ಬಡಿಗನಂತೆ. ಕಬ್ಬಿಣ ಮತ್ತು ಬೆಂಕಿ ಇವು ಜನಪದರಲ್ಲಿ ಸಾಂಕೇತಿಕ ಅರ್ಥವನ್ನು ಪಡೆದುಕೊಂಡಿವೆ.

ಕುರುಬ ರೈತನು ಅಡಿಗಟ್ಟಿಗೆ ಬರುವಾಗ ಪಂಚ–ಫಳಾರ ಮತ್ತು ಕುಂಕುಮ, ಅರಿಶಿಣ, ಕರಿ ಕಂಬಳಿಯಾದಿ ಸಾಮಗ್ರಿಗಳನ್ನು ತರುತ್ತಾನೆ. ಈಗಾಗಲೇ ತಂದಿದ್ದ ಜಾಲಿಕಟ್ಟಿಗೆಯ ತುಂಡನ್ನು ಬಡಿಗನು ಕೂರಿಗೆ ತಾಳಿನ ಅಳತೆಗೆ ಸರಿಯಾಗಿ ಕತ್ತರಿಸಿ, ಹಾಸಿದ ಕಂಬಳಿಯ ಮೇಲೆ ಇರಿಸುತ್ತಾನೆ. ಮೂರುಗೇಣಿನ ನಾಲ್ಕು ತುಂಡುಗಳು ಅಲ್ಲಿ ಇರಿಸಲಾಗುತ್ತದೆ. ಇವುಗಳೊಂದಿಗೆ ಬಡಿಗತನದ ಸಾಮಗ್ರಿ ಮತ್ತು ಕೂರಗಿದಿಂಡು, ಮಂಡಿ ಇತ್ಯಾದಿ ಸಲಕರಣೆಗಳನ್ನು ಇರಿಸಲಾಗುತ್ತದೆ. ಅವುಗಳಿಗೆ ಪೂಜೆ ಸಲ್ಲಿಸಲಾಗುತ್ತದೆ. ಎಲೆ–ಅಡಿಕೆ–ನೆಲಗಡಲೆ ನೈವೇದ್ಯವಾಗಿ ಇಟ್ಟು, ತೆಂಗು ಒಡೆಯಾಗುತ್ತದೆ. ಅನಂತರ ರೈತರು ಪರಸ್ಪರ ಕುಂಕುಮ ಹಚ್ಚಿಕೊಂಡು ಅಲ್ಲಿನ ಪ್ರಸಾದವನ್ನು ಸ್ವೀಕರಿಸುತ್ತಾರೆ.

ಪೂಜೆ ಮುಗಿದ ನಂತರ ಬಡಿಗನು ಕೂರಿಗೆ ತಾಳು ಮಾಡಲು ತಂದಿರುವ ಜಾಲಿಯ ತುಂಡಿನ ಮೇಲೆ ಬಾಚಿಯಿಂದ ಮೊದಲ ಕಚ್ಚನ್ನು ಹಾಕುತ್ತಾನೆ. ಇದು ಮಹತ್ವದ ಗಳಿಗೆ. ರೈತನ ಸಮುದಾಯವು ಈ ಗಳಿಗೆಯನ್ನು ಭಕ್ತಿ ಮತ್ತು ವಿಸ್ಮಯದ ಭಾವದಿಂದ ಕಾಯುತ್ತಿರುತ್ತಾರೆ. ಬಾಚಿಯ ಏಟಿನಿಂದ ಕೆಳಗೆ ಬೀಳುವ ಚಕ್ಕೆಯು ಆ ವರುಷದ ಕೃಷಿ ಚಟುವಟಿಕೆಗಳ ಬಗೆಗೆ ಭವಿಷ್ಯ ಹೇಳುತ್ತದಂತೆ. ಚಕ್ಕೆಯು ನೆಲದ ಮೇಲೆ ಬೋರಲಾಗಿ ಬಿದ್ದರೆ ಮಳೆ–ಬೆಳೆಗಳ ಪ್ರಮಾಣವು ಕಡಿಮೆಯೆಂತಲೂ; ಅಂಗಾತ ಬಿದ್ದರೆ ಮಳೆ–ಬೆಳೆಗಳ ಪ್ರಮಾಣವು ಸಮೃದ್ಧಿಯೆಂತಲೂ ಕೃಷಿಕರು ಭಾವಿಸುತ್ತಾರೆ.

ಆನಂತರ ಕೂರಿಗೆ ಸಿದ್ಧಗೊಳ್ಳುತ್ತದೆ. ಕೂರಿಗೆಗೆ ಹೊಂದಿಸುವ ಎಲ್ಲ ಸಲಕರಣೆಗಳು ಹೊಸವು ಆಗಿರುತ್ತವೆ. ಕಂಬಳಿಯ ಮೇಲೆ ಕೂರಿಗೆಯನ್ನು ಇರಿಸಿ ರೈತರು ಅದರ ಮೂರೂ ತಾಳುಗಳಲ್ಲಿ ಬಿತ್ತುವ ಬೀಜಗಳು ಸರಿಯಾಗಿ ಹಂಚಿಹೋಗುವ ಕ್ರಮವನ್ನು ಪರೀಕ್ಷಿಸುತ್ತಾರೆ. ಆನಂತರ ರೈತರು ತಮಗೆ ಸಂಬಂಧಿಸಿದ ಕೂರಿಗೆಯನ್ನು ತಮ್ಮ ಮನೆಗಳಿಗೆ ತಂದು ಅಂಗಳದಲ್ಲಿ ಇರಿಸುತ್ತಾರೆ. ಅದಕ್ಕೆ ಸೀರೆ–ಕುಪ್ಪಸ ತೋಡಿಸುತ್ತಾರೆ. ಆಭರಣ–ತಳಿರು ತೋರ–ಣಗಳನ್ನು ಕಟ್ಟಿ ಶೃಂಗಾರ ಮಾಡುತ್ತಾರೆ. ಮುತ್ತೈದೆಯರ ಉಡಿತುಂಬಿ, ಊರದೇವರಿಗೆ ಎಣ್ಣೆ ದೀಪ ಹಚ್ಚಿ, ನೈವೇದ್ಯ ಅರ್ಪಿಸಿ ರೈತರು ಕೂರಿಗೆಯನ್ನು ತಮ್ಮ ಹೊಲಗಳಿಗೆ ಬಿತ್ತಲು ತೆಗೆದುಕೊಂಡು ಹೋಗುತ್ತಾರೆ. ಲಕ್ಷ್ಮಿ ಪೂಜೆಯನ್ನು ಪೂರೈಸಿ, ಬಿತ್ತುವ ಕಾರ್ಯಕ್ಕೆ ತೊಡಗುತ್ತಾರೆ. *(ಎಸ್‌ಎಂಎಚ್)*

ಅಣ್ಣಪ್ಪ ಸಾಬಣ್ಣ ಸಂಕರಡಗಿ: ದೊಡ್ಡಾಟದ ಕಲಾವಿದ. ಹೊರ ಜಗತ್ತನ್ನು ನೋಡುವ ಮತ್ತು ಆನಂದಿಸುವ ಕಣ್ಣುಗಳನ್ನು ಕಳೆದುಕೊಂಡು ಹುಟ್ಟಿದ ಅಣ್ಣಪ್ಪ ಮಾಸ್ತರರು ತಮ್ಮ ಅಂತರಂಗದ ಕಣ್ಣಿನಿಂದ ಜಾನಪದ ರಂಗಭೂಮಿಯನ್ನು ಬೆಳಗಿದ್ದಾರೆ. ಬಾಲ್ಯದಲ್ಲಿ ಊರಲ್ಲಿ ನಡೆಯುವ ಭಜನೆ ಮಂಡಳಿಯಲ್ಲಿ ಸೇರಿ ತನ್ನ ಮಧುರ ಕಂಠದಿಂದ ಹಿಮ್ಮೇಳದವರ ಧ್ವನಿಯಲ್ಲಿ ಧ್ವನಿಸೇರಿ ಹಾಡತೊಡಗಿದ ಅಣ್ಣಪ್ಪನವರು ಚಪ್ಪಾಳೆಯ ಬದಲು ತಾಳ ಹಾಕತೊಡಗಿದರು ಒಮ್ಮೊಮ್ಮೆ ಮದ್ದಲಿ ಬಾರಿಸುವ ಪಾಳಿಯೂ ಇವರದಾಗಿರುತ್ತಿತ್ತು. ಭಜನೆ ಮಾಡುವಾಗ ದಮಡಿ ನುಡಿಸುವವರೂ ಇವರೇ ಆಗಿರುತ್ತಿದ್ದರು. ಕ್ರಮೇಣ ಪರಿಣತ ಕಲಾವಿದರಾದ ಶಿವಶಂಕರ, ಭಿಕ್ಷುಕರಾಜನ ಕಥೆ, ಪರೀಕ್ಷಿತರಾಜನ ಕಥೆ, ಕೊಮಟಿಗನ ಆಟ, ಗುಣಸಾಗರಿ ಮುಂತಾದ ಆಟಗಳನ್ನು ಅಭ್ಯಸಿಸಿ ಶಾಸ್ತ್ರೀಯ ರೀತಿಯಲ್ಲಿ ರಂಗದ ಮೇಲೆ ತಂದರು. ಕರ್ಣಾರ್ಜುನರ ಕಾಳಗ, ಪ್ರಮೀಳಾ ಬಬ್ರುವಾಹನ, ದ್ರೌಪದಿ ವಸ್ತ್ರಾಪಹರಣ, ಕೀಚಕವಧಾ, ವೀರಅಭಿಮನ್ಯು ಮುಂತಾದ ದೊಡ್ಡಾಟಗಳನ್ನು ಹಳ್ಳಿಯ ಜನರಿಗೆ ಕಲಿಸಿ ಪ್ರಯೋಗಿಸಿ ಬಹುಬೇಗನೆ ಪ್ರಸಿದ್ಧಿಗೆ ಬಂದರು. (ಜಿಆರ್‌ಟಿ)

ಅನುಭಾವ ಪದಗಳು: ಅನುಭಾವಿಗಳು 'ಅನುಭಾವ' ಎಂಬ ಪದಕ್ಕೆ ನೂತನ ಅವಿಷ್ಕಾರ ನೀಡಿ ಅದರ ಅರ್ಥವ್ಯಾಪ್ತಿಯನ್ನು ಹಿಗ್ಗಿಸಿದರು. ಮಾನವನ ಇತಿಹಾಸದೊಂದಿಗೆ ನಡೆದು ಬಂದಿರುವ ಇದು ವಿಶ್ವದ ಎಲ್ಲ ಧರ್ಮ ತತ್ವಗಳ ಮೂಲ ನೆಲಯಾಗಿ ನಿಂತುಕೊಂಡಿದೆ. ಒಂದೊಂದು ಮತ, ಧರ್ಮ, ದರ್ಶನ–ತತ್ವಗಳಲ್ಲಿ 'ಅನುಭಾವ'ವು ವಿಭಿನ್ನ ಅರ್ಥ ವಲಯಗಳಲ್ಲಿ ಬೆಳೆದು ಬಂದಿದ್ದರೂ ಅದರ ಗುರಿ ಗಮ್ಯ ಒಂದೇ ಆಗಿದೆ.

'ಅನುಭವ' ಮತ್ತು 'ಅನುಭಾವ' ಎಂಬಿವುಗಳು ಸಂಸ್ಕೃತ ಪದಗಳು. 'ಅನು' ಎಂಬುದು ಉಪಸರ್ಗ, 'ಭವ' ಎಂಬುದು 'ಭೂ' ಎಂದರೆ ಇರುವುದು 'ಇರುವುದನ್ನು ಅನುಸರಿಸು' ಎಂಬುದು 'ಅನುಭವ' ಪದದ ನಿಘಂಟುವಿನ ಅರ್ಥ. 'ಭಾವ' ಎಂಬ ಪದ ಇರುವಿಕೆಯ ಸ್ಥಿತಿಯನ್ನು ಆಗುವಿಕೆಯ ಅವಸ್ಥೆಯನ್ನು ಹೇಳುತ್ತದೆ. ಅನುಭವದ ಪ್ರಯೋಜಕ ರೂಪ 'ಅನುಭಾವ'.

ಸಂಸ್ಕೃತದಲ್ಲಿ 'ಅನುಭವ' ಮತ್ತು 'ಅನುಭಾವ' ಪದಗಳು ಪರಸ್ಪರ ಅವಲಂಬಿತಗಳಾಗಿದ್ದು. ಅವು ಒಂದೇ ಅರ್ಥದಲ್ಲಿ ಬಳಕೆಯಾಗುತ್ತವೆ. ಆದರೆ ಕನ್ನಡದಲ್ಲಿ ಇವು ಬೇರೆ ಬೇರೆ ಅರ್ಥಗಳನ್ನು ಹೊಂದಿವೆ. ಇಂದ್ರಿಯ ಜನ್ಯವಾದ ಸಂಗತಿಗಳು ಅನುಭವಗಳು ಅಂದರೆ ಲೌಕಿಕಕ್ಕೆ ಸಂಬಂಧಿಸಿದ್ದು 'ಅನುಭವ' ಅಲೌಕಿಕಕ್ಕೆ ಸಂಬಂಧಿಸಿದ್ದು ಅನುಭಾವ ಕ್ರಿಯಾ–ಜ್ಞಾನಗಳ ಸಾಮರಸ್ಯ ಸ್ಥಿತಿಯನ್ನೇ 'ಅನುಭಾವ' ಎನ್ನಲಾಗುತ್ತದೆ.

ಶರಣರ ಪರಿಭಾಷೆಯಲ್ಲಿ 'ಅನುಭಾವ' ಎಂದರೆ 'ಅಂತರಂಗದ ರತ್ನ; ಅನುಭಾವವೆಂಬುದು ಆತ್ಮವಿದ್ಯೆ; 'ಅನುಭಾವ' ವೆಂಬುದು ತಾನಾರೆಂಬುದ ತೋರುವುದು; ಅದು ನಿಜ ನಿವಾಸದಲ್ಲಿರುವುದು; ಅನುಭವವೆಂಬುದು ನೆಲದ ಮರೆಯ ನಿಧಾನ; ಅದು ಶಿಶು ಕಂಡ ಕನಸು; ಅನುಭಾವವೆಂಬುದು ಮಡಿವಾಳನ ಕಾಯಕದಂತೆ; ಸಂಗನ ಶರಣರ ಅನುಭಾವ ಗಜವೈದ್ಯ; ಅನುಭಾವದಿಂದ ತನು–ಮನ ಹಾಳಾಯಿತ್ತು. ಇವು ಶಿವಶರಣರು 'ಅನುಭಾವ' ವೆಂಬುದು ಕುರಿತು ಹೇಳಿದ ನುಡಿ ರತ್ನಗಳು.

'ಅನುಭಾವ' ವೆಂದರೆ 'ಜೀವಾತ್ಮ–ಪರಮಾತ್ಮರ ಏಕತ್ವದ, ಲಿಂಗಾಂಗ ಸಾಮರಸ್ಯತ್ವದ ಅನುಭವ. ಅದೊಂದು ಅನುಭವ ನಿಜ, ಆದರೆ ಅದು ಇಂದ್ರಿಯ ಜನ್ಯವಲ್ಲ; ವಿಷಯಗಳ ಮೂಲಕ ಉಂಟಾದುದಲ್ಲ. ಅತೀಂದ್ರಿಯವು ಅತಿಮಾನಸವೂ, ಅತ್ಯಂತ ಸೂಕ್ಷ್ಮವು, ನಿರಾಲಂಬ ಆನಂದವನ್ನುಂಟು ಮಾಡುವಂತಹದ್ದು, ದ್ವಂದ್ವಾತೀತ, ಅನಿರ್ವಚನೀಯ, ವರ್ಣನಾತೀತವೂ, ಅಂತಃಸ್ಫುರಣ ರೂಪಿಯೂ ಆನಂದ ಸ್ವರೂಪಿಯಾಗಿರುವುದು, 'ಅನುಭಾವ' ದ ಪ್ರಮುಖ ಲಕ್ಷಣ. ಇಂಗ್ಲೀಷಿನ 'ಮಿಸ್ಟಿಸಿಜಂ' ಎಂಬ ಪದಕ್ಕಿಂತ ಹೆಚ್ಚು ವ್ಯಾಪಕವಾದ ಅರ್ಥ ಮೌಲ್ಯ ಹೊಂದಿರುವ 'ಅನುಭಾವ' ಪದವು ಭಕ್ತಿ ಪರಂಪರೆಯಲ್ಲಿ ಒಂದು ಸಾಧನಾ ಮಾರ್ಗವೆನಿಸಿದೆ. ಮಧ್ಯಯುಗದಲ್ಲಿ ಆರಂಭವಾದ ಭಕ್ತಿಯ ಆಂದೋಲನವು 'ಅನುಭಾವ' ಪರಂಪರೆಗೆ ಒಂದು ಹೊಸ ಆಯಾಮವನ್ನು ತಂದುಕೊಟ್ಟಿತು.

ಭಕ್ತಿಯೇ ಅನುಭಾವಕ್ಕೆ ಬೀಜ. 'ಅನುಭಾವ'ವಿಲ್ಲದ ಭಕ್ತಿ ಅನುವಿಂಗೆ ಬಾರದು ಎಂಬ ನುಡಿಯಂತೆ ಭಕ್ತಿಯ ನೆಲೆಗಟ್ಟಿನ ಮೇಲೆ ಅನುಭಾವದ ಸೌಧ ನಿರ್ಮಿತವಾಗಿದೆ. ಹೀಗಾಗಿ ಭಕ್ತಿಯಿಂದ ಕೂಡಿದ ತತ್ವಪದಗಳನ್ನು 'ಅನುಭಾವ ಪದಗಳು', ಭಜನೆ ಹಾಡುಗಳು ದೇವರ ನಾಮಗಳು, ಕೈವಲ್ಯ ಪದಗಳು ಎಂದು ಕರೆಯುತ್ತಾರೆ.

ಅನುಭಾವ ಪದಗಳು ಮೌಖಿಕ ಪರಂಪರೆಯ ಬಹುದೊಡ್ಡ ಹಾಡಿನ ಪ್ರಕಾರ. ಏಕತಾರಿ ತಂತಿವಾದ್ಯದೊಂದಿಗೆ ಏಕಾಂತದಲ್ಲಿ ಒಬ್ಬನಿಂದ ಹಾಗೂ ಭಜನೆಯ ಸಂದರ್ಭಗಳಲ್ಲಿ ಸಾಮೂಹಿಕವಾಗಿ ಅನೇಕರಿಂದ ಹಾಡಲ್ಪಡುತ್ತವೆ. ಓದು–ಬರೆಹ ಬಲ್ಲ, ಅಂತರ್ ಮು–ಖಿಗಳಾದ, ಆಧ್ಯಾತ್ಮ ಜೀವಿಗಳ ಸೃಷ್ಟಿಗಳಿವು. ಸಂಸಾರದ ಪೊಳ್ಳುತನವನ್ನು ಸಾರಿಸಾರಿ ಹೇಳುತ್ತವೆ. ಇರುವಷ್ಟು ದಿನ ಮನುಷ್ಯ ಕೂಡಿ ಬಾಳಬೇಕೆಂಬುದನ್ನು ಹೇಳುವುದೇ ಇವುಗಳ ಮುಖ್ಯ ಗುರಿ. ದೇವರನ್ನು ಪ್ರಾರ್ಥಿಸುವ, ಸ್ತುತಿಸುವ, ಲೋಕಾನುಭವದ ಕಷ್ಟಗಳನ್ನು ಹೊರಹಾಕುವ, ಗುರುವಿನ ಮಾರ್ಗದರ್ಶನ ಬೇಡುವ ಆಶಯಗಳೆಲ್ಲಾ ಈ ಪದಗಳಲ್ಲಿ ಅಡಕವಾಗಿರುತ್ತವೆ. *(ಎಸ್‌ಎಸ್‌ವೈ)*

ಅನುಭಾವಿ ಕವಿಗಳು: ಜೀವನಾನುಭವಿಗಳು. ಸ್ವಂತ ಅನುಭವಕ್ಕೆ ಬಂದಿರುವ ತಿಳಿವನ್ನು ಭಜನೆ ಪದಗಳ ಮೂಲಕ ಹೇಳುವವರು. ಆತ್ಮಜ್ಞಾನಿಗಳಾಗಿರುವ ಇವರು ಲೌಕಿಕ ಸಂಗತಿಗಳ ಮೂಲಕ ಅತೀಂದ್ರಿಯದ ಅನುಭವವನ್ನು ಹೇಳುವರು. ಅನುಭಾವಿ ಕವಿಗಳನ್ನು ತತ್ವಪದಕಾರರು, ಭಕ್ತ ಕವಿಗಳು ಭಜನಾ ಪದಗಳ ರಚನೆಕಾರರೆಂದು ಕರೆಯಲಾಗುತ್ತದೆ. ಹೈದ್ರಾಬಾದ ಕರ್ನಾಟಕದ ಎಲ್ಲ ಹಳ್ಳಿಗಳಲ್ಲಿ ಅನುಭಾವಿ ಪದಕಾರರು ಆಗಿ ಹೋಗಿದ್ದಾರೆ.

ಕನ್ನಡದಲ್ಲಿ ಸಾಕಷ್ಟು ತತ್ವ ಪದಗಳು ರಚಿತವಾಗಿವೆ. ಇವುಗಳನ್ನು ರಚಿಸಿದವರಲ್ಲಿ ಶರಣರು, ಅಧ್ಯಾತ್ಮಿಗಳು, ಅವಧೂತರು, ಸಂತರು ಹಾಗೂ ಮಠಾಧಿಪತಿಗಳು, ಹರಿದಾಸರು ಪ್ರಮುಖವಾಗಿದ್ದಾರೆ. ತಾವು ನಂಬಿದ ತತ್ವ–ಸಿದ್ಧಾಂತಗಳನ್ನು ತಮ್ಮ ಜೀವನಾನುಭವದ ಮೂಲಕ ಹಾಡಾಗಿ ಈ ಕವಿಗಳು ಪರಿವರ್ತಿಸಿದರು.

ಹೈದ್ರಾಬಾದ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಅನುಭಾವಿ ಕವಿಗಳ ಒಂದು ಪರಂಪರೆಯೇ ಇದೆ. 12ನೆಯ ಶತಮಾನದ ವಚನಕಾರರಿಂದ ಆರಂಭವಾದ ಸ್ವರವಚನಗಳು, ದಾಸರಲ್ಲಿ ಬೆಳೆದುನಿಂತ ಕೀರ್ತನ ಸಾಹಿತ್ಯವು ತತ್ವಪದ ಸಾಹಿತ್ಯ ರಚನೆಕಾರರಿಗೆ ಮೂಲದ್ರವ್ಯವಾಗಿದ್ದು, ಭಜನಾ ಪದಗಳ ಬೆಳವಣಿಗೆಗೆ ಸೃಷ್ಟಿ–ಪುಷ್ಟಿಯನ್ನೊದಗಿಸಿವೆ. ಕಳೆದೆರಡು ಶತಮಾನಗಳಿಂದ ಸಮೃದ್ಧವಾಗಿ ಬೆಳೆದು ನಿಂತಿರುವ ಈ ಅನುಭಾವಿ ಕವಿಗಳಲ್ಲಿ ಕಡಕೋಳ ಮಡಿವಾಳಪ್ಪ, ಬಂಡೆಪ್ಪ ಕವಿ, ಸಾವಳಗಿ ಮಹಮ್ಮದ ಸಾಬ, ಮಹಾಗಾಂವ ಮೀರಾಸಾಬ, ದ್ಯಾಗಾವಿ ಹಜರತಸಾಬ, ಚನ್ನೂರ ಜಲಾಲಸಾಹೇಬ, ಕಡ್ಲೆವಾಡ ಸಿದ್ದಪ್ಪ, ಖೈನೂರ ಕೃಷ್ಣಪ್ಪ, ತೆಲಗಬಾಳ ರೇವಪ್ಪ, ಮೋಟ್ನಳ್ಳಿ– ಹಸನಸಾಬ, ಬೇನೂರಿನ ಕಾಕಿಗುರು, ಜಂಬಗಿ ಶರಣ, ಕ್ವಾನಳ್ಳಿ ಮಹಾರಾಜ, ಮರಕುಂದಿ ಬಸವಣ್ಣೆಪ್ಪ, ಕೊಹಿನೂರ ಭದ್ರಪ್ಪ, ನಿಜಲಿಂಗ ಭದ್ರೇಶ್ವರ, ಚಿಟಗುಪ್ಪಾದ ಶಿಲ್ಲಪ್ಪ, ಕೊಳ್ಳೂರ ಹುಸನಾ, ಧುಮ್ಮನಸೂರು ಸಿದ್ಧಪ್ರಭು, ಮಂಕಲ್ ಹನಮಂತಪ್ಪ ಮೊದಲಾದರು ಈ ಭಾಗದಲ್ಲಿ ಪ್ರಸಿದ್ಧರಾಗಿದ್ದಾರೆ.

ಭಜನಾ ಪದಗಳನ್ನು ರಚನೆ ಮಾಡಿದ ಅನುಭಾವಿ ಕವಿಗಳು ಎಲ್ಲ ಸಮುದಾಯಗಳಲ್ಲೂ ದೊರೆಯುತ್ತಾರೆ. ಭಜನೆಯು ವೈಯಕ್ತಿಕವಾಗಿ ಏಕತಾರಿ ಹಿಡಿದು ಒಬ್ಬನೇ ಹಾಡಿಕೊಳ್ಳುವ, ಅಥವಾ ಸಮೂಹದೊಂದಿಗೆ ಹಾಡಿಕೊಳ್ಳುವ ಬಂದು ಹಾಡಿನ ಪ್ರಕಾರ. ಪ್ರಾರ್ಥನೆ ಹಾಗೂ ತತ್ವವೊಂದನ್ನು ಹೇಳುವುದು ಇದರ ಮುಖ್ಯ ಉದ್ದೇಶ. ಹೈದ್ರಾಬಾದ ಕರ್ನಾಟಕದ ಜನಾಂಗಗಳಲ್ಲಿ ಭಾವೈಕ್ಯತೆ ಮತ್ತು ಸಾಮಾಜಿಕ ಸಾಮರಸ್ಯವನ್ನು ಬೆಸೆಯುವಲ್ಲಿ ಭಜನಾ ಪದಗಳು ಹಾಗೂ ಅನುಭಾವಿ ಕವಿಗಳು ಬಹು ಮುಖ್ಯ ಪಾತ್ರವಹಿಸಿದ್ದಾರೆ. ಅನುಭಾವಿ ಕವಿಗಳು ಭಜನೆ ಪದಗಳ ಸೃಷ್ಟಿಕರ್ತರು. ನೇರ ಹಾಗೂ ಸ್ಪಷ್ಟ ವಿಚಾರಗಳ ಸಂಗಮದಂತಿರುವ ಇವರು ಜನಸಾಮಾನ್ಯರ ಮಧ್ಯದಲ್ಲಿಯೇ ಬಾಳಿ ಬದುಕಿದವರು. ತಮ್ಮ ಅನುಭವ ಸಿದ್ಧಾಂತದ ಮೂಲಕ ಲೌಕಿಕ–ಪಾರಮಾರ್ಥಗಳೆರಡನ್ನು ತೂಗಿ ನೋಡುವ, ಜನರಿಗೆ ತಿಳಿಯುವಂತೆ ಪದಗಳನ್ನು ರಚಿಸುವ ಲೋಕಾನುಭವ ಪಡೆದವರು. ಬದುಕಿನ ಉದ್ದೇಶದ ತಾತ್ವಿಕ ಮುಖವನ್ನು ಅನಾವರಣಗೊಳಿಸಿ ಈ ಕವಿಗಳು ಅಂತರ್ಮುಖಿಗಳು, ಆಧ್ಯಾತ್ಮ ಜೀವಿಗಳು ಅಲ್ಪಸ್ವಲ್ಪ ಓದು–ಬರಹ ಬಲ್ಲವರೂ ಆಗಿದ್ದಾರೆ. ಹಾಡುಗಬ್ಬ ಪರಂಪರೆಗೆ ವಿಶಿಷ್ಟ ಕಾಣಿಕೆ ಇತ್ತಿರುವ ಅನುಭಾವಿ ಕವಿಗಳು ಕವಿರಾಜಮಾರ್ಗಕಾರ ಹೇಳುವಂತೆ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎನ್ನಬಹುದು. *(ಎಸ್‌ಎಸ್‌ವೈ)*

ಅಪರಾಳ ತಮ್ಮಣ್ಣ: ಗೀತ ರೂಪದ 'ಶ್ರೀ ಕೃಷ್ಣ ಪಾರಿಜಾತವನ್ನು ಬರೆದು ಖ್ಯಾತಿ ಪಡೆದವ. ರಾಯಚೂರ ಜಿಲ್ಲೆ ದೇವದುರ್ಗ ತಾಲ್ಲೂಕಿನ ಅಪರಾಳ ಗ್ರಾಮದವ. ಸುಮಾರು 1800ರಲ್ಲಿ ಸದ್ಭಕ್ತ ಹರಿದಾಸ ಬ್ರಾಹ್ಮಣ ಪರಿವಾರದಲ್ಲಿ ಜನಸಿದ ಇವನ ಜೀವನ, ಸಾಧನೆ, ಶಿಕ್ಷಣ, ವೃತ್ತಿ ಇತ್ಯಾದಿ ವಿವರಗಳು ಅಲಭ್ಯ. ಆದರೆ ಈತ ಕನ್ನಡ, ಸಂಸ್ಕೃತ ಭಾಷೆಗಳೆರಡರಲ್ಲೂ ಪರಿಣತನಾಗಿದ್ದ. ಭಾಗವತ, ಹರಿವಂಶ ಪುರಾಣ, ದಾಸ ಸಾಹಿತ್ಯ ಮುಂತಾದ ಮತಿಯ ಸಾಹಿತ್ಯವನ್ನೆಲ್ಲ ಓದಿಕೊಂಡಿದ್ದ. ಸಂಗೀತ, ನೃತ್ಯ, ಅಭಿನಯಗಳಲ್ಲಿ ಪಾರಂಗತನಾಗಿದ್ದ. ಅಂದು ಪ್ರಸಿದ್ಧವಾಗಿದ್ದ ಕರ್ನಾಟಕ ಸಂಗೀತದಲ್ಲಿ ಪರಿಣತಿ ಹೊಂದಿದ್ದ.

ಗ್ರಹಸ್ಥ ಜೀವನ ಹೊಂದಿದ್ದ ತಮ್ಮಣ್ಣ ಪತ್ನಿ ಪುತ್ರನಿಂದ ಸುಖಜೀವನ ನಡೆಸುತ್ತಿದ್ದ. ಹವ್ಯಾಸಕ್ಕಾಗಿ ಕಲಾವ್ಯಾಸಂಗವನ್ನು ಹೊಂದಿದ್ದ. ತಮ್ಮಣ್ಣ ಊರಿನಲ್ಲಿ ನಡೆಯುತ್ತಿದ್ದ ಆಟ, ನೃತ್ಯಗಳಲ್ಲಿ ಭಾಗವಹಿಸುವ ಕಲಾವಿದರಿಗೆ ಮಾಸ್ತರನಾಗಿ, ಪ್ರಸಂಗ ಬಂದಾಗ ತಾನೂ ಪಾತ್ರಧಾರಿಯಾಗಿ ಅಭಿನಯಿಸುತ್ತಿರಲುಬಹುದು. ಇಂಥ ಸುಪ್ತ ಪ್ರತಿಭಾಶಕ್ತಿಗಳ ಪ್ರೇರಣೆಯಿಂದ ತಮ್ಮಣ್ಣ 'ಶ್ರೀಕೃಷ್ಣ ಪಾರಿಜಾತ' ಎಂಬ ಗೀತನಾಟಕವನ್ನು ರಚಿಸಿದ. ಪಾತ್ರಗಳ ಸಂಭಾಷಣೆ ಹಾಡುಗಳ ಮುಖಾಂತರವೇ ಮುಂದುವರೆಯುವ ಈ ಕೃತಿ ಶ್ರೀಕೃಷ್ಣ ಭಕ್ತಿಯನ್ನು ತನ್ನ ಜೀವಾಳವಾಗಿ ಮಾಡಿಕೊಂಡಿದೆ. ಜನತೆಯಲ್ಲಿ ಧರ್ಮಭಾವ, ಲೋಕನೀತಿ ಬೆಳೆಯಲೆಂದೇ ಈ ಕೃತಿ ರಚಿಸಿದಂತಿದೆ. ಕರ್ಣಾಟಕ ಸಂಗೀತದ ದೇಶಿಮಟ್ಟಗಳ ವಿವಿಧ ರಾಗಗಳಲ್ಲಿ ರಚಿತವಾದ ಈ ಗೀತ ನಾಟಕ ಕೃತಿ ತಾಳ–ಲಯ ಪದ್ಧತಿಯ ಪರಾಕಾಷ್ಠೆಯನ್ನು ಮುಟ್ಟಿದೆಯೆಂದೇ ಹೇಳಬಹುದು. ಅಪರಾಳ ತಮ್ಮಣ್ಣ ಈ ಆಟವನ್ನು ತಮ್ಮ ಮಗನ ಸಹಕಾರದಿಂದ ರಂಗಭೂಮಿಗೆ ಅಳವಡಿಸಿಕೊಂಡು ಅಭಿನಯಿಸಿದಾಗ ಅದು ಲೋಕಪ್ರಿಯವಾಯಿತು. ಅದನ್ನು ಕಂಡು ಕರಬುವ ಜನರು ಆ ಕಾಲದ ವ್ಯಾಸರಾಯ ಮಠದ ಸ್ವಾಮಿಗಳಾದ ಶ್ರೀ ವಿದ್ಯಾ ಪ್ರಸನ್ನ ತೀರ್ಥರಿಗೆ ದೂರಿತ್ತರಂತೆ. ಕೊನೆಗೆ ತಮ್ಮಣ್ಣ ತನ್ನ ಮಗನ ಕೂಡಿ ಸ್ವಾಮಿಗಳ ಸನ್ನಿಧಿಯಲ್ಲಿ ಆಟ ಆಡಿ ತಮ್ಮ ಆಟ ಮಧ್ವಮತದ ಯಾವ ತತ್ವಕ್ಕೂ ವಿರೋಧವಾಗಿಲ್ಲವೆಂದು ಮನದಟ್ಟು ಮಾಡಿದಾಗ ಸ್ವಾಮಿಗಳು ಸಂತುಷ್ಟರಾಗಿ ತಮ್ಮಣ್ಣನ ಕಲಾ ಪ್ರತಿಭೆಯನ್ನೂ, ಪಾಂಡಿತ್ಯವನ್ನೂ ಕಂಡು ಮೆಚ್ಚಿ ಅವರ ಮೇಲಿನ ಬಹಿಷ್ಕಾರ ತೆಗೆದು ಪುರಸ್ಕಾರವನ್ನಿತ್ತು ಸನ್ಮಾನಿಸಿದರಂತೆ.

ಇಷ್ಟಾದರೂ ತಮ್ಮಣ್ಣನ ಈ ಗೀತನಾಟಕ ಹಾಡುಗಬ್ಬವಾಯಿತೇ ಹೊರತು ಬಯಲಾಟವಾಗಲಿಲ್ಲ. ಸಾಹಿತ್ಯ ದೃಷ್ಟಿಯಿಂದ ಈ ಕೃತಿಗೆ ಒಂದು ಮಹತ್ವದ ಸ್ಥಾನ ಮೀಸಲೆನ್ನಬಹುದು. ಇಂಥ ಕೃತಿಯನ್ನು ಅಪರಾಳ ತಮ್ಮಣ್ಣ ಶ್ರೀಕೃಷ್ಣನು ಕೊರವಂಜಿಯ ರೂಪ ಧರಿಸಿ, ಸತ್ಯಭಾಮೆಯ ಮನೆಗೆ ಬಂದ ಪ್ರಸಂಗದವರೆಗೆ ಬರೆದರೆ ಮುಂದಿನ ಉತ್ತರಾರ್ಧ ಭಾಗವನ್ನು ಶಿರಗುಪ್ಪಿ ಸದಾಶಿವರಾಯ ಬರೆದು ಪೂರ್ತಿಗೊಳಿಸಿದರು. ಮುಂದೆ ಬೆಳಗಾವಿ ಜಿಲ್ಲೆಯ ಕುಲಗೋಡ ತಮ್ಮಣ್ಣ ಅದನ್ನು ಲೋಕನಾಟಕ ರೂಪಕ್ಕೆ ತಂದು ಅಟ್ಟದ ಮೇಲ ಪ್ರಯೋಗಗೊಳಿಸಿ ಜನಪ್ರಿಯಗೊಳಿಸಿದನು. *(ಸ್ಪಿಎಲ್‌ಪಿ)*

ಅಪಶಕುನ: ಪ್ರಾಚೀನ ಕಾಲದಿಂದಲೂ ಭಾರತದಲ್ಲಿ 'ಶಕುನ' ಒಂದು ಶಾಸ್ತ್ರವಾಗಿ ಬೆಳೆದು ಬಂದಿದೆ. ಇದನ್ನು ಸುಡುಗಾಡ ಸಿದ್ಧರು, ಬುಡುಬುಡಕಿಯವರು, ಕೊರವಂಜಿಗಳು, ಗಿಣಿ ಶಾಸ್ತ್ರಗಾರರು, ಜೋತಿಷ್ಯಿಗಳು ಒಂದು ವೃತ್ತಿಯಾಗಿ ಮಾಡಿಕೊಂಡಿದ್ದಾರೆ. ಇದು ಭವಿಷ್ಯ ಸೂಚಕ ಎಂದು ಪರಿಗಣಿತವಾಗುವ ಒಂದು ಅಸಾಧಾರಣ ಸಂಗತಿ. ಅಂದರೆ ಯಾವುದಾದರೊಂದು ಘಟನೆಯು ಮುಂದಿನ ಭವಿಷ್ಯವನ್ನು ಸೂಚಿಸುವ ಕ್ರಿಯೆ. ಪ್ರಾಣಿ ಅಥವಾ ಪಕ್ಷಿಯ ದರ್ಶನ, ಅಡ್ಡಹಾಯುವಿಕೆ, ಕೂಗು, ಮನುಷ್ಯನ ಕಣ್ಣು ಅದುರುವುದು, ಭುಜ ಹಾರುವುದು, ದೀಪ ಆರುವುದು ಇತ್ಯಾದಿಗಳು ಭವಿಷ್ಯದಲ್ಲಿ ಹೀಗಾಗಬಹುದೆಂದು ಸೂಚನೆಯನ್ನು ನೀಡುತ್ತವೆಂದು ನಂಬಲಾಗುತ್ತದೆ. ಅವುಗಳನ್ನು ಶಕುನ ಎಂದು ಕರೆಯಲಾಗುತ್ತದೆ. ಈ ಶಕುನದಲ್ಲಿ ಶುಭಶಕುನ ಮತ್ತು ಅಪಶಕುನಗಳೆಂದು ವಿಭಾಗಿಸುವುದುಂಟು. ಶುಭ ಶಕುನ ಒಳ್ಳೆಯ ಸೂಚಕವನ್ನು ಹೇಳಿದರೆ ಅಪಶಕುನ ಅಶುಭ ಸೂಚಕವನ್ನು ತಿಳಿಸುತ್ತದೆ. ಅಪಶಕನದಿಂದ ಕೆಡಕು ಉಂಟಾಗುತ್ತದೆ ಎಂದು ತಿಳಿಯಲಾಗಿದೆ.

ಪುರುಷನ ಎಡಗಣ್ಣು, ಸ್ತ್ರೀಯ ಬಲಗಣ್ಣು ಹಾರುವುದು, ಪ್ರಯಾಣಕ್ಕೆ ಹೊರಟಾಗ ಖಾಲಿಕೊಡ, ವಿಧವೆ, ಭಿಕ್ಷುಕ, ಕಟುಕ, ಕಟ್ಟಿಗೆ ಹೊತ್ತವರು, ಕುಡಗೋಲು, ಕತ್ತಿಗಳು ಎದುರಾದರೆ, ಮಂಗಳಕಾರ್ಯದಲ್ಲಿ ದೀಪ ಆರಿದರೆ, ಕಳಸದ ದೀಪ ಆರಿದರೆ, ಕುಂಕುಮ ಭರಣಿ, ಮಂಗಳಾರತಿಗಳು ಕೈಯಿಂದ ಜಾರಿ ಬಿದ್ದರೆ, ದೀಪ ಬೆಂಕಿಯಾಗಿ ಹತ್ತಿಕೊಂಡು ಉರಿಯಲಿಕ್ಕೆ ಹತ್ತಿದರೆ, ಮದುವೆಯ ಮಂಟಪ ಮುರಿದು ಬಿದ್ದರೆ, ಬೆಕ್ಕು ಬಲದಿಂದ ಎಡಕ್ಕೆ ದಾಟಿದರೆ, ಕಾಗೆಗಳು ಕೂಡಿದರೆ, ಒಂಟಿ ಸೀನು ಬಂದರೆ, ಧೂಮಕೇತು ಕಾಣಿಸಿಕೊಂಡರೆ, ಆಕಾಶದಿಂದ ಚಿಕ್ಕೆಗಳು ಬಿದ್ದರೆ, ಮನೆಯಲ್ಲಿಯ ಕಟ್ಟಿಗೆ ಕಿರುಗುಟ್ಟಿದರೆ, ದೇಹದ ಕೆಲವು ಭಾಗದಲ್ಲಿ ಹಲ್ಲಿ ಬಿದ್ದರೆ, ಕಾರಹುಣ್ಣಿಮೆಗೆ ಚಂದ್ರ ಕಣಕಟ್ಟಿದರೆ, ಅಶುಭವೆಂದು ತಿಳಿಯಾಗಿದೆ.

ಇನ್ನು ಯಾರಾದರೂ ಹೊರಗಡೆ ಹೊರಟು ನಿಂತಾಗ ಎಲ್ಲಿಗೆ ಹೋಗುತ್ತೀಯಾ? ಎಂದು ಕೇಳಿದರೆ, ಶುಭ ಕಾರ್ಯಯಕ್ಕೆಂದು ಹೋಗುವಾಗ ಲೈಟ್ ಆರಿದರೆ ಮುಂತಾದ ಸಂದರ್ಭಗಳಲ್ಲಿ ಅಪಶಕುನ ಉಂಟಾಗುತ್ತದೆ. ಅದರಿಂದ ಕೇಡು ಉಂಟಾಗುತ್ತೆ. ಹೀಗೆ ಪದೇ ಪದೇ ಅಪಶಕುನಗಳೂ ವ್ಯಕ್ತಿ ಒರ್ವನಲ್ಲಿ ನಡೆದರೆ ಆತ ದೇವರನ್ನು ಪೂಜಿಸಿ ಅಮಂಗಳ ನಿವಾರಣೆಯನ್ನು ಮಾಡಿಕೊಳ್ಳುವುದುಂಟು.


ಜನಪದ 'ಕೆರೆಗೆ ಹಾರ ಕಥೆ' ಯಲ್ಲಿ ಭಾಗೀರಥಿಯ ಗಂಡನಿಗೆ ಭಾಗೀರಥಿಯು ಕೆರೆಗೆ ಹಾರವಾದಾಗ ಗಂಡ ಮಹಾದೇವರಾಯನಿಗೆ ಕನಸು ಬೀಳುತ್ತದೆ. ಆ ಅಪಶಕುನದ ಕನಸು ಈ ರೀತಿ ಇತ್ತು ಎಂದು ಜನಪದ ಕವಿ ಹೇಳುತ್ತಾನೆ.

ಸೆಲ್ಯ ಸುಟ್ಟಂಗಾತು ಕೋಲು ಮುರಿದಂಗಾತು

ಕಟ್ಟಿಸಿದ ಮಹಲು ತಟ್ಟನೆ ಬಿದ್ದಂಗಾತು

ಹೀಗೆ ಕನಸಿನಲ್ಲಿ ಇಂಥ ಘಟನೆಗಳನ್ನು ಕಂಡರೆ ಅಪಶಕುನವೆಂದು ಜನಪದರು ನಂಬಿದ್ದಾರೆ. *(ಸ್ಪಿಎಲ್‌ಪಿ)*

ಅಬ್ಬೆತುಮಕೂರ ವಿಶ್ವಾರಾಧ್ಯ: ಕಲಬುರ್ಗಿ ಜಿಲ್ಲೆ ಸಗರನಾಡಿನ ಶರಣ. ಗಂವ್ಹರಪುರದಲ್ಲಿ ಜನಿಸಿದರು. ತಂದೆ ಬನ್ನಯ್ಯ ಶಾಸ್ತ್ರಿ ತಾಯಿ ನೀಲಮ್ಮ. ನಾನು ನೀನೆಂಬ ಭೇದವ ತೊರೆಯ, ಜ್ಞಾನದ ನೆಲೆಯನ್ನು ಅರಿತು ಅಹಂಕಾರವನ್ನು ನಿರಶನ ಮಾಡಿಕೊಂಡು, ಸದಾಚಾರ–ಸಂಪನ್ನರಾಗಿ ಬಾಳಿ–ಬದುಕಿದವರು. ನೀರ ಮೇಲಿನ ಗುಳ್ಳೆಯಂತಿರುವ ನಶ್ವರ ಬದುಕನ್ನು ಅರಿತು, ಶಾಶ್ವತ ಸಾಧನೆಗಾಗಿ ಮನಃಶುದ್ಧಿಯಿಂದ ಪರಮ ಭಾಗ್ಯ ಪ್ರಾಪ್ತಿ ಮಾಡಿಕೊಂಡ ಪುಣ್ಯಾತ್ಮರು. ಸರ್ವ ಜನತೆಯ ಗೌರವಗಳಿಗೆ, ಭಾವುಕ ಜನರ ಭಕ್ತಿ ಆದರಗಳಿಗೆ ಪಾತ್ರರಾದ ಪವಿತ್ರಾತ್ಮರು. ಅಂಗರಹಿತ ಭಾವ, ಅಗಣಿತ ಮಹಿಮೆ, ಕರುಣೆಯಿಂದ ಪರತತ್ವಜ್ಞಾನ ಪ್ರಾಪ್ತಿ ಮಾಡಿಕೊಂಡ ಘನ ಮಹಿಮರು, ಅಂಧಕಾರದ ಸಂಸಾರ ನೀಗಿ ಬ್ರಹ್ಮಾನಂದದ



ವಿಶ್ವರಾಧ್ಯರ ದೇವಸ್ಥಾನ

ಬೆಳಕಿನಲ್ಲಿ ಉನ್ನತಿಯ ಮೆಟ್ಟಿಲೇರಿದ ಶ್ರೇಷ್ಠರು. ಅಣಿಮಾದಿ ಅಷ್ಟಸಿದ್ಧಿಗಳನ್ನು ಕಟ್ಟಿ ಮೆರೆದ ಜಗಜಟ್ಟಿಗರು ಎಂದೇ ಖ್ಯಾತಿ ಹೊಂದಿದವರು ಅಬ್ಬೆತುಮಕೂರಿನ ವಿಶ್ವಾರಾಧ್ಯರು.

ಒಮ್ಮೆ ದಾಸೋಹ ಮಹಾಮನೆಯಿಂದ ನಾಯಿಯೊಂದು ಹೋಳಿಗೆ ಬಾಯಿಯಲ್ಲಿ ಕಚ್ಚಿಕೊಂಡು ಓಡಿ ಹೋಗುತ್ತದೆ. ಅದನ್ನು ಕಂಡ ವಿಶ್ವಾರಾಧ್ಯರು ತುಪ್ಪದ ಗಿಂಡಿಯನ್ನು ಕೈಯಲ್ಲಿ ಹಿಡಿದುಕೊಂಡು ನಾಯಿಯ ಹಿಂದೆ ಓಡುತ್ತಾರೆ. ನೋಡಿದ ಜನ ಚಕಿತರಾಗಿ, ಹೀಗೇಕೆ ಓಡುತ್ತಿರುವಿರೆಂದು ವಿಶ್ವಾರಾಧ್ಯರನ್ನು ಕೇಳಿದಾಗ, 'ಪಾಪ ನಾಯಿ ಬರೀ ಹೋಳಿಗೆ ತಿಂದರೆ, ಅದರ ಹೊಟ್ಟೆ ನೋವಾಗುತ್ತದೆ. ತುಪ್ಪವನ್ನೂ ಸೇರಿಸಿ ತಿನ್ನಿಸಲು ಓಡುತ್ತಿರುವೆ' ಎನ್ನುವರು. ಇಂತಹುದೇ ಇನ್ನೊಂದು ಪ್ರಸಂಗದಲ್ಲಿ, ತಿಳಗೂಳ ಗೌಡರ ಮನೆಯಲ್ಲಿ ನಾಯಿಯೊಂದು ರೊಟ್ಟಿ ತಿನ್ನುತ್ತಿರುತ್ತದೆ. ಅದನ್ನು ನೋಡಿದ ವಿಶ್ವಾರಾಧ್ಯರು ರೊಟ್ಟಿಗೆ ಎಣ್ಣೆ ಹಚ್ಚಿ ನಾಯಿಗೆ ತಿನ್ನಿಸುತ್ತಾರೆ.

ಮೇಲಿನ ಎರಡೂ ಪ್ರಸಂಗಗಳು ವಿಶ್ವಾರಾಧ್ಯರ ಪ್ರಾಣಿ ದಯೆ, ಸರ್ವಭೂತ ಪ್ರೀತಿಯನ್ನು ಎತ್ತಿ ತೋರಿಸುತ್ತದೆ. ಸಕಲ ಜೀವಾತ್ಮರಿಗೆ ಲೇಸನು ಬಯಸಿದ ಪರಂಪರೆಯ ವಾಹಿನಿಯಲ್ಲಿ ವಿಶ್ವಾರಾಧ್ಯರು ಬಂದವರು. ಯಾವುದೇ ಆದರ್ಶಗಳನ್ನು ಬರೀ ಬಾಯಿಂದ ಹೇಳಿದರೆ ಆಗದು. ಅವುಗಳನ್ನು ಆಚರಿಸಬೇಕು. ಅಂದಾಗಲೇ ಅದಕ್ಕೆ ಮಹತ್ವ ಬರುತ್ತದೆ. ಇಂತಹ ಉದಾತ್ತ ತತ್ತ್ವಾದರ್ಶಗಳ ಅನುಕರಣೆ ಅನುಸರಣೆಯಿಂದ ಸಾಧನೆಯ ಶಿಖರವನ್ನೇರಿ ಮಹಾತ್ಮರೆನಿಸಿಕೊಂಡರು.

ಮನುಷ್ಯನ ನಿರಂತರ ಹೋರಾಟದ ಗುರಿ ಆನಂದದ ಅನ್ವೇಷಣೆ. ಈ ಆನಂದವೆಂದರೆ ಬಂಧನದಿಂದ ಬಿಡುಗಡೆ ಹೊಂದುವದು. ಮಾನವ ಜೀವನ ಲೌಕಿಕದೊಂದಿಗೆ ಬಂಧಿತವಾಗಿದೆ. ಪ್ರಾಪಂಚಿಕ ಆಸೆ-ಆಕಾಂಕ್ಷೆಗಳಲ್ಲಿ ಸಿಲುಕಿದ ಜೀವ, ತನ್ನ ಹೋರಾಟದ ಗುರಿಯನ್ನು ಮರೆತು, ಮೋಹದಲ್ಲಿ ತಲ್ಲೀನವಾಗುತ್ತದೆ. ಜೀವನದ ಪರಮ ಸತ್ಯವನ್ನು ಕಂಡುಕೊಳ್ಳುವ ಬದಲು, ಶಾಂತಿ-ನೆಮ್ಮದಿಯನ್ನು ಹಾಳು ಮಾಡಿಕೊಂಡು, ಬದುಕಿನ ಅತ್ಯಂತ ಆನಂದದಿಂದ ವಂಚಿತರಾಗಿ ಸಾಮಾನ್ಯರೆನಿಸಿ ಬಿಡುತ್ತಾರೆ. ಕೆಲವು ಜನರು ಹಾಗಲ್ಲ. ಲೌಕಿಕ ಬಂಧನಗಳಿಂದ ಮುಕ್ತರಾಗಿ, ಪಾರಮಾರ್ಥಿಕ ಪಥದಲ್ಲಿ ಸಾಗಿ, ಜನನ-ಮರಣಗಳ ಬಾಧೆಯಿಂದ ಮುಕ್ತರಾಗಿ ಬದುಕಿನಲ್ಲಿ ಅಲೌಕಿಕ ಆನಂದ ಹೊಂದಿ, ಅದರ ಸಾರವನ್ನು ಮನುಜ ಲೋಕಕ್ಕೆ ಉಣಬಡಿಸಿ ಅಸಾಮಾನ್ಯರೆನಿಸುತ್ತಾರೆ. ಸದ್ಗುರು ವಿಶ್ವಾರಾಧ್ಯರು ಇಂತಹ ಸಾಮಾನ್ಯರಲ್ಲಿ ಅಗ್ರಗಣ್ಯರೆನಿಸುತ್ತಾರೆ.

ಬಾಲಕನಾಗಿದ್ದಾಗಲೇ ವಿಶ್ವಾರಾಧ್ಯ ಹಲವು ವೈಶಿಷ್ಟ್ಯಗಳನ್ನು ಮೆರೆದರು. ತನ್ನ ಬಾಲ್ಯದ ಗೆಳೆಯ ಹೂಗಾರ ಕಲ್ಯಾಣಿಗೆ ಹೊಸ ಬಟ್ಟೆಯಿಲ್ಲವೆಂದು ತನ್ನ ಮೈಮೇಲಿನ ಬಟ್ಟೆಯನ್ನೇ ಕಳಚಿಕೊಟ್ಟು, ಮಾನವಾಂತಃಕರುಣೆ ತೋರಿಸುತ್ತಾನೆ ಇಂತಹ ಅನಂತ ಲೀಲೆಗಳನ್ನು ಮೆರೆಯುತ್ತ, ಗುರು ರಾಚೋಟೇಶ್ವರಲ್ಲಿ ವಿದ್ಯೆ ಕಲಿತು, ಪಾರಂಗತನಾಗುತ್ತಾನೆ. 'ವಿದ್ಯಾಮೋಹಿ ಬಲು ದಾಹಿ' ಎಂಬಂತೆ ರಾಚೋಟಿ ಗುರುಗಳ ವಿದ್ಯೆಯಿಂದ ವಿಶ್ವಾರಾಧ್ಯನ ವಿದ್ಯಾದಾಹ ತಣಿಯುವದಿಲ್ಲ. ಗುರುಗಳ ಅಣತಿಯಂತೆ ಸೋದರ ಬಸವಲಿಂಗನೊಡನೆ ಪ್ರಸಿದ್ಧ ಕಾಶೀ ಕ್ಷೇತ್ರದ ಜಂಗಮ ವಾಡಿ ಮಠಕ್ಕೆ ಹೋಗಿ ಅಲ್ಲಿ ವಿದ್ಯೆ ಕಲಿಯಲಾರಂಭಿಸುತ್ತಾರೆ. ನಿರಂತರ 12 ವರ್ಷಗಳ ಕಾಲ ವೇದ, ಶಾಸ್ತ್ರ, ನ್ಯಾಯ, ತರ್ಕ, ವ್ಯಾಕರಣ ಮುಂತಾದ ವಿದ್ಯೆಗಳನ್ನು ಕರತಲಾಮಲಕ ಮಾಡಿಕೊಳ್ಳುತ್ತಾರೆ. ಪುಣ್ಯಸಿರಿ ಪಟ್ಟಣ ಕಾಶೀಯಲ್ಲಿ ಪಾಂಡಿತ್ಯ ಪರಿಪೂರ್ಣಗೊಂಡ ವಿಶ್ವಾರಾಧ್ಯರನ್ನು ರೂಢಿಯಲ್ಲಿ 'ಕಾಶೀಘನ ಪಂಡಿತ ವಿಶ್ವಾರಾಧ್ಯ' ಎಂತಲೇ ಜನ ಈಗಲೂ ಕರೆಯುತ್ತಾರೆ.

ಕಾಶೀ ಕ್ಷೇತ್ರದಲ್ಲಿ ಇವರು ವ್ಯಾಸಂಗ ಪರಿಣಿತರಾಗಿ ಬಂದ ಮೇಲೆ, ತಾವು ಸಂಪಾದಿಸಿದ ಜ್ಞಾನದ ಸವಿಯನ್ನು ಲೋಕದ ಜನತೆಗೆ ಉಣಬಡಿಸುತ್ತ ಧರ್ಮಜಾಗೃತಿಯ ಕೈಂಕರ್ಯದಲ್ಲಿ ತೊಡಗಿಸಿಕೊಳ್ಳುವರು. ಹೆತ್ತಪ್ಪಗಳ ಅಪೇಕ್ಷೆ, ಗುರುಗಳ ಒತ್ತಾಸೆಯಂತೆ ಒಲ್ಲದ ಮನಸ್ಸಿನಿಂದಲೇ ಮದುವೆಗೆ ಒಪ್ಪಿಕೊಳ್ಳುತ್ತಾರೆ. ವಿಶ್ವಾರಾಧ್ಯ ಭೋಗಮಯ ಬದುಕಿನ ಸಾಮಾನ್ಯ ಮನುಷ್ಯನಲ್ಲ. ಪಾರಮಾರ್ಥಿಕ ಪ್ರಪಂಚದ ಪ್ರಭುವಾಗಿರುವ ಆತನಿಗೆ ನಶ್ವರ ಬದುಕಿನ ಮೋಹ ಅಂಟಿಕೊಳ್ಳುವದಿಲ್ಲ. ರಾಮಕೃಷ್ಣ ಪರಮಹಂಸ-ಶಾರದಾ ಮಾತೆಯರಂತೆ ವಿಶ್ವಾರಾಧ್ಯರು ಧರ್ಮಪತ್ನಿ ಬಸಮ್ಮ ತಾಯಿ ಶರಣ ದಾಂಪತ್ಯವನ್ನು ಬಾಳುತ್ತಾರೆ. ಸಂಸಾರದಲ್ಲಿದ್ದರೂ ಯಾವತ್ತು ಸಂಸಾರವನ್ನು ಸಂಪರ್ಕಿಸಿಕೊಳ್ಳಲಿಲ್ಲ.

ವಿಶ್ವಾರಾಧ್ಯರು ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟ್‌ಸ್ಥಲವೇ ಆತ್ಮವಾಗಿ, ತ್ರಿಕಾಲ ಲಿಂಗಪೂಜೆಯಲ್ಲಿ ತೊಡಗುತ್ತಾರೆ. ಲಿಂಗ ಧ್ಯಾನದಲ್ಲಿದ್ದು, ಲಿಂಗ ವ್ಯಸನಿಯಾಗುತ್ತಾರೆ. ಲಿಂಗ ವ್ಯವಹಾರದಲ್ಲಿ ತೊಡಗಿ ಲಿಂಗ ಪ್ರಪಂಚದಲ್ಲಿ ವ್ಯವಹರಿಸುತ್ತ ಪರಮೋನ್ನತ ಸ್ಥಿತಿಯನ್ನು ತಲುಪುತ್ತಾರೆ. ವಿಶ್ವದ ತುಂಬ ವ್ಯಾಪಿಸುವ ವಿಶ್ವೇಶ್ವರನನ್ನು ದರ್ಶಿಸುವದು ವಿಶ್ವರಾಧ್ಯರ ಮನದ ಹಂಬಲವಾಗಿರುತ್ತದೆ.

ಸಂಸಾರ ಸಂತೆಯಿಂದ ನಿಶ್ಚಿಂತರಾದ ಮಹಾಂತರು ಒಂದೆಡೆ ನೆಲೆ ನಿಲ್ಲುವುದಿಲ್ಲ. ಭವದ ತಳಮಳವನ್ನು ನೀಗಿ ನರ ಹರನಾಗುವ ಆಧ್ಯಾತ್ಮ ಶಕ್ತಿ ಪ್ರಾಪ್ತ ಮಾಡಿಕೊಂಡ ವಿಶ್ವಾರಾಧ್ಯರು, ನಾಡಿನಾದ್ಯಂತ


ಪುರಾಣ, ಶಾಸ್ತ್ರಗಳನ್ನು ಹೇಳುತ್ತ, ಜನತೆಯ ಮನದೈವವಾಗಿ ಕಂಗೊಳಿಸುತ್ತಾರೆ. 'ನಡೆ–ನುಡಿಗಳೊಂದಾದ ಗುರುವಿನ ನುಡಿ ಪರುಷ' ಎನ್ನುವಂತೆ ನಡೆ–ನುಡಿಗಳೊಂದು ಮಾಡಿಕೊಂಡು ಮಹಾಂತನಾದ ವಿಶ್ವಾರಾಧ್ಯರು ಘನ ಮಹಿಮರು. ಸರ್ವರ ಗೌರವಾದರಗಳಿಗೆ ಪಾತ್ರರಾಗುವರು. ಭಕ್ತಿ, ಜ್ಞಾನ, ಕ್ರಿಯೆಗಳ ಸಂಗಮವಾಗಿದ್ದ ಪೂಜ್ಯರ ವಾಣಿಯಿಂದ ಅಂದಿನ ಜನತೆ ಪವಿತ್ರಾತ್ಮರಾಗಿ, ಸತ್‌ಧರ್ಮದಲ್ಲಿ ಸಾಗಿ, ಸದ್ಗತಿ ಕಾಣುತ್ತಿದ್ದರು.

ವಿಶ್ವಾರಾಧ್ಯರು, ನಾಯ್ಕಲ್, ಶಾಖಾಪುರ, ನಾಗೂರ, ಯಲಗೋಡಾ, ತಿಳಗೊಳ, ಕಲಬುರ್ಗಿ, ಮುಂಬೈ, ಶಹಾಬಾದ, ಯಾದಗಿರಿ ಹೀಗೆ ನಾಡಿನ ತುಂಬ ಸಂಚರಿಸಿ ಮನುಕುಲವನ್ನೂ ಬೆಳಗಿ, ಶಿಷ್ಯ ಸಕ್ರೆಪ್ಪಗೌಡನ ಅಪೇಕ್ಷೆಯಂತೆ ಅಬ್ಬೆತುಮಕೂರಿಗೆ ಆಗಮಿಸಿ, ಅಲ್ಲಿಯೇ ನೆಲೆನಿಲ್ಲುತ್ತಾರೆ. ಮನುಷ್ಯ ಬದುಕನ್ನು ಹಸನು ಮಾಡಿಕೊಳ್ಳಬೇಕು. ಮನಸ್ಸಿನ ಕಳವಳ, ತಾಕಲಾಟಗಳನ್ನು ನೀಗಿ ಪಾರಮಾರ್ಥಿಕ ಸುಖವನ್ನು ಕಾಣಬೇಕು. ಜೀವನದ ಯಾತ್ರೆಯನ್ನು ಮನುಷ್ಯ ಸೌಜನ್ಯಶೀಲನಾಗಿ, ಅಹಂಕಾರ ನಿರಸನಗೊಂಡು ಬಾಳಬೇಕು. ಭರವಸೆರೆಯ ಬಂಧನದಿಂದ ಪಾರಾಗಲು, ತನ್ನ ತಾನು ತಿಳಿಯಬೇಕು. ಶಿವನು ನಾದ, ಬಿಂದು, ಕಳಾತೀತನಾಗಿದ್ದಾನೆ. ಶಿವನಾದವೇ ಪ್ರರಬ್ರಹ್ಮವಸ್ತುವಾಗಿದ್ದು, ಅದನ್ನೇ ಪ್ರಾಪ್ತ ಮಾಡಿಕೊಳ್ಳಬೇಕೆಂದು ವಿಶ್ವಾರಾಧ್ಯರು ಜನತೆಗೆ ತಿಳಿ ಹೇಳಿದ್ದು ಅನನ್ಯವಾಗಿದೆ. *(ಎಸ್‌ಯುಕೆ)*

ಅಮರ ಕಲ್ಯಾಣ: ಬಸವಣ್ಣನವರ ಆಶೋತ್ತರಗಳನ್ನು ಮುಂದುವರಿಕೆಯಾಗಿಸಿಕೊಂಡ ಒಂದು ತಾಣ. ಯಾದಗೀರ ಜಿಲ್ಲೆ ಶಹಾಪುರದ ಸಮೀಪದಲ್ಲಿ ದಿಗ್ಗಿ ಸಂಗಮನಾಥರು 'ಅಮರ ಕಲ್ಯಾಣ'ವನ್ನು ಕಟ್ಟಿದ್ದಾರೆ. ಬಸವಣ್ಣನವರ ಕಾಲಾನಂತರದಲ್ಲಿ ಆಗಿಹೋಗಿರುವ ಸಂಗಮನಾಥರು, ಅವರ ಆಶೋತ್ತರಗಳನ್ನು ಮುಂದುವರೆಸಿಕೊಂಡು ಹೋಗಲು ಇಚ್ಛಿಸಿದರಾದರೂ, ಸಮಕಾಲೀನ ತುಡಿತಗಳಿಗೆ ಸಿಲುಕಿ ನಲುಗಿದರು. ಹೀಗಾಗಿ ಬಹಿರಂಗದ ಆಚರಣೆಗಳಾಗಿದ್ದ ಬಹಿರ್ ಅಷ್ಟಾವರಣಗಳನ್ನು ತೊರೆದರು. ಲಿಂಗಧಾರಣೆಯಾದಿಗಳನ್ನು ದೂರಮಾಡಿದ ಇವರು ಎಲ್ಲ ಜಾತಿ ಜನಾಂಗದವರನ್ನು ತನ್ನ ಜೊತೆಯಲ್ಲಿ ಸೇರಿಸಿಕೊಂಡು, ಬಸವಣ್ಣನ 'ಸಮಯ ಕಲ್ಯಾಣ' ದ ಮುಂದುವರಿಕೆಯಾದ 'ಅಮರ ಕಲ್ಯಾಣ' ಕಟ್ಟುವ ಕಾರ್ಯವನ್ನು ಮುಂದುವರಿಸಿದರೆನ್ನುತ್ತಾರೆ ಸಂಶೋಧಕ ಎಂ.ಎಂ. ಕಲಬುರ್ಗಿಯವರು.

'ಅಮರ ಕಲ್ಯಾಣ' ಕಟ್ಟಿದ ಸಂಗಮನಾಥನ ಗುರು ಸುರಪುರ ತಾಲ್ಲೂಕಿನ ಹೆಬ್ಬಾಳದ ಬೆಟ್ಟದ ಮೇಲೆ ಇರುವ ಪರಮಾನಂದ. ಈ ಪರಮಾನಂದನಿಗೆ ಹೇಗೋ, ಹಾಗೆಯೇ ದಿಗ್ಗಿ ಸಂಗಮನಾಥನಿಗೂ ಒಡೆಯರು, ಕುರುಬರು ಮೊದಲಾದ ಕೆಳಜಾತಿಯ ಜನಗಳೇ ಶಿಷ್ಯ ಪ್ರಶಿಷ್ಯರಾಗಿದ್ದಾರೆ. ಇವರೆಲ್ಲರೂ ಬಸವಣ್ಣನವರ ಅನುಯಾಯಿಗಳು ಆದರೂ ಲಿಂಗಧಾರಿಗಳಲ್ಲ. ಬಸವಣ್ಣನವರ ಮಹೋನ್ನತ ಕಾರ್ಯ ಹಾಗೂ ಆಶೋತ್ತರಗಳಿಗೆ ಮಣಿದಿರುವ ಸಂಗಮನಾಥರು 'ಅಮರ ಕಲ್ಯಾಣ' ದ ಮೂಲಕ ಹಲವು ಹತ್ತು ಕಾರ್ಯಗಳನ್ನು ಮಾಡಿದರು. ಕಾಲ ಬದಲಾಗಿ ಮುಸಲ್ಮಾನರ ಆಳ್ವಿಕೆಯ ಸಂದರ್ಭದಲ್ಲಿ ಗುರು–ಲಿಂಗ–ಜಂಗಮಾದಿ ಅಷ್ಟಾವರಣಗಳನ್ನು ಕೈಬಿಟ್ಟು, ಅವುಗಳನ್ನು ತಮ್ಮ ಅಂತರಂಗಕ್ಕೆ ಸೀಮಿತಗೊಳಿಸಿಕೊಂಡು, ಸಮಾಜೋದ್ಧಾರ ಕ್ಕಿಂತ, ವ್ಯಕ್ತಿಗತವಾದ ಆತ್ಮೋದ್ಧಾರವನ್ನೇ ಮುಖ್ಯವಾಗಿಟ್ಟುಕೊಂಡರು. ಜನರಿಂದ ದೂರದ ಬೆಟ್ಟದ ನಡುವೆ ವಾಸಿಸತೊಡಗಿದರು. ಅಲ್ಲಿಗೆ ಬರುವ ಭಕ್ತಾದಿಗಳಿಗೆ ಆಧ್ಯಾತ್ಮಿಕ ದೀಕ್ಷೆ ಕರುಣಿಸುತ್ತ ಒಂದು ಬಗೆಯಲ್ಲಿ ಅವಧೂತರಂತೆ ಇದು ಹೋದ ತಾಣವೇ 'ಅಮರ ಕಲ್ಯಾಣ' ಎಂದು ಕರೆಯಲ್ಪಡುತ್ತದೆ. *(ಎಸ್‌ಎಸ್‌ವೈ)*

ಅಮರೇಶ್ವರ: ಪುರಾತನ ಹಾಗೂ ಪುಣ್ಯ ಕ್ಷೇತ್ರ, ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನ ಗುಡಗುಂಟಿಯಲ್ಲಿದೆ. ಐತಿಹಾಸಿಕ ಹಿನ್ನೆಲೆ ಇರುವ ಲಿಂಗ ಅತ್ಯಂತ ಪ್ರಾಚೀನ ಕಾಲದ್ದೆಂದು ಪುರಾಣೇತಿಹಾಸದಿಂದ ತಿಳಿದು ಬರುತ್ತದೆ. ಇಲ್ಲಿನ ಅಮರಲಿಂಗ ತ್ರೇತಾಯುಗದ ಲಂಕಾಧಿಪತಿ ರಾವಣನ ಕಾಲದ್ದೆಂದು ಹೇಳಲಾಗುತ್ತದೆ.



ಗುಡಗುಂಟೆಯ ಅಮರೇಶ್ವರ

ಅಮರಲಿಂಗ ಇಲ್ಲಿಗೆ ಬಂದ ಬಗ್ಗೆ ಪುರಾಣಗಳಲ್ಲಿ ರೋಚಕವಾದ ಕಥೆಯೇ ಇದೆ. ರಾವಣನ ತಾಯಿ ಕೈಕಸಿ ಪ್ರತಿನಿತ್ಯ ರಜತಾದ್ರಿಗೆ ಹೋಗಿ ಕೇದಾರಲಿಂಗ ಪೂಜೆ, ಹಾಲಿನ ನೈವೇದ್ಯ ಮಾಡಿ ಮಗನಿಗೆ ಪ್ರಸಾದ ತಂದು ಕೊಡುತ್ತಿದ್ದಳು. ಹೀಗೆ ಅನೇಕ ವರ್ಷಗಳು ಉರುಳಿದುವು. ಒಂದು ದಿನ ಕೈಕಸಿ ಪೂಜೆ ಮುಗಿಸಿಕೊಂಡು ಬರುವುದು ತಡವಾಯಿತು. ರಾವಣ, ತಾಯಿಗೆ ತಡವಾಗಲು ಕಾರಣ ಕೇಳಿದಾಗ ತನಗೆ ವಯಸ್ಸಾಯಿತು, ರಜತಾದ್ರಿಗೆ ಹೋಗಿಬರಲು ಆಯಾಸವಾಗುತ್ತದೆ. ಆದ್ದರಿಂದ ಅಲ್ಲಲ್ಲಿ ಕುಳಿತು ವಿಶ್ರಾಂತಿ ಪಡೆದು ಬರಲು ತಡವಾಯಿತೆಂದು ಹೇಳುತ್ತಾಳೆ.

ತಾಯಿಯ ಮಾತು ಕೇಳಿ ರಾವಣನ ಮನಸ್ಸಿಗೆ ನೋವಾಯಿತು. ಆಗ ರಜತಾದ್ರಿಗೆ ಹೋಗಿ ಪರ್ವತವನ್ನೇ ಹೊತ್ತು ತರಬೇಕೆಂದು ಆಲೋಚಿಸಿದ. ರಜತಾದ್ರಿಗೆ ಹೋಗಿ ಪರ್ವತವನ್ನು ಎತ್ತಿ ತರುವಾಗ, ಶಿವ–ಪಾರ್ವತಿಯರಿಗೆ ವಿಷಯ ತಿಳಿಯಿತು. ಆಗ ಪರಮಾತ್ಮ ರಾವಣನನ್ನು ತನ್ನ ಪಾದದಿಂದ ಒತ್ತಿದಾಗ ರಾವಣ ಪಾತಾಳಕ್ಕಿಳಿದು ಹೋದನಂತೆ. ರಾವಣನ ಸೋದರ ಮಾವ ಮಹಿರಾವಣನಿಗೆ ಈ ವಿಷಯ ತಿಳಿದು, ಏನೇ ಆದರೂ ತನ್ನ ತಂಗಿ ಕೈಕಸಿಯ ವ್ರತಭಂಗವಾಗಲು ಬಿಡಬಾರದೆಂದು ಪರಮಾತ್ಮನ ಕುರಿತು ಘೋರ ತಪಸ್ಸು ಮಾಡಿ, ಪರಮಾತ್ಮನಿಂದಲೇ ಲಿಂಗವನ್ನು ಪಡೆದು ತಂಗಿಯ ವ್ರತ ಸಾಂಗವಾಗಿ ನಡೆಯುವಂತೆ ಮಾಡಬೇಕೆಂದು ನಿರ್ಧರಿಸಿದ. ರಜತಾದ್ರಿಯಲ್ಲಿ ಮಹಿರಾವಣನ ತಪಸ್ಸು ನಿರ್ವಿಘ್ನವಾಗಿ ನಡೆಯಿತು, ಮಹಿರಾವಣನಿಗೆ ಪರಮಾತ್ಮ ಪ್ರತ್ಯಕ್ಷನಾಗಿ, ರಜತಾದ್ರಿ ಲಿಂಗವನ್ನು ದಯಪಾಲಿಸಿದ ಆದರೆ, ಯಾವುದೇ ಕಾರಣಕ್ಕೂ ಆ ಲಿಂಗವನ್ನು ನೆಲದ ಮೇಲೆ ಇಡಕೂಡದೆಂದು ಪರಮಾತ್ಮ ಎಚ್ಚರಿಕೆ ನೀಡಿದ. ಈ ಲಿಂಗವನ್ನು ಪಡೆದು ತೂಗು ಮಂಚದ ಮೇಲಿಟ್ಟು ಪೂಜಿಸುವುದಾಗಿ ಮಹಿರಾವಣ ಪರಮಾತ್ಮನಿಗೆ ವಚನ ನೀಡಿದ.

ಲಿಂಗವನ್ನು ತೆಗೆದುಕೊಂಡು ಕೃಷ್ಣಾ ನದಿ ದಾಟಿ ಹೋಗುತ್ತಿರುವಾಗ, ಇಂದಿನ ಶ್ರೀ ಅಮರೇಶ್ವರ ಕ್ಷೇತ್ರ ತಲಪಿದಾಗ ರಾತ್ರಿಯಾಯಿತು. ರಾತ್ರಿ ಅಲ್ಲೇ ಮಲಗಿ ಬೆಳಗಿನ ಜಾವ ಪ್ರಯಾಣ ಮುಂದುವರಿಸಲು ಮಹಿರಾವಣ ನಿರ್ಧರಿಸಿದ. ಲಿಂಗವನ್ನು ತನ್ನ ಎದೆಯ ಮೇಲಿಟ್ಟುಕೊಂಡು ನಿದ್ರೆಯಲ್ಲಿ ಹೊರಳಾಡುವಾಗ, ಲಿಂಗವು ಭೂಮಿಯ ಮೇಲೆ ಬಿದ್ದುಬಿಟ್ಟಿತು. ನೆಲದಾಳಕ್ಕೆ ಲಿಂಗವಿಳಿದ ರಭಸಕ್ಕೆ ಅಂತರ್ಜಲ ಉಕ್ಕಿ ಮೇಲೆ ಬಂದು ಅಲ್ಲೊಂದು ಜಲಕುಂಡ ನಿರ್ಮಾಣವಾಯಿತು. ಆಗ ಎಚ್ಚರಗೊಂಡ ಮಹಿರಾವಣ, ಲಿಂಗವನ್ನು ಕಾಣದೆ ಕಂಗಾಲಾಗಿ ನೋಡಿದಾಗ, ತನ್ನ ನಿದ್ರಾವಸ್ಥೆಯಲ್ಲಾದ ಪ್ರಮಾದದ ಅರಿವಾಯಿತು. ಹೇಗಾದರೂ ಮಾಡಿ ಲಿಂಗವನ್ನು ನೆಲದಿಂದ ಕಿತ್ತುಕೊಂಡು ಹೋಗಲು ತನ್ನೆಲ್ಲಾ ಶಕ್ತಿಯನ್ನು ಉಪಯೋಗಿಸಿ ಮೇಲೆತ್ತಲು ಪ್ರಯತ್ನಿಸಿದ. ಇದರಿಂದ ಲಿಂಗದ ಸ್ವರೂಪ ಬದಲಾಯಿತೇ ವಿನಃ ಅದು ಮೇಲೇಳದೆ ಕೈಗೆ ಬರದೆ ಅಮರವಾಯಿತು. ಲಿಂಗದ ಸುತ್ತಲೂ ನೀರಿನ ಗುಂಡವಿದ್ದುದರಿಂದ ಅಮರಗುಂಡವಾಯಿತು.

ಈ ಹಿನ್ನೆಲೆಯಲ್ಲಿ ಅಮರೇಶ್ವರ ದೇವರ ಪೂರ್ವದಲ್ಲಿಯೇ ಇಲ್ಲಿ ಮಹಿರಾವಣನಿಂದಾಗಿ ಇಲ್ಲಿ ಲಿಂಗವಿತ್ತೆಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ. ಈ ಲಿಂಗ ಗೋಕರ್ಣದ ಮಹಾಬಲೇಶ್ವರ, ರಾಮೇಶ್ವರದ ರಾಮನಾಥ ಲಿಂಗದ ಸಮಕಾಲದ್ದೆಂದು ಹೇಳಲಾಗಿದೆ. ಅಗಸ್ತ್ಯ ಮಹರ್ಷಿಗಳು ಈ ಸ್ಥಳದಲ್ಲಿದ್ದು ತಪಸ್ಸು ಮಾಡಿದ್ದೆಂದೂ ಹೇಳಲಾಗುತ್ತದೆ. ದೇವಸ್ಥಾನದ ಪಶ್ಚಿಮಕ್ಕೆ ಕಪಿಲ ಮಹಾಋಷಿ ಪರ್ವತವಿದೆ. ಇದನ್ನು ಕಪ್ಪಿಲಪ್ಪನ ಗುಡ್ಡವೆಂದು ಗ್ರಾಮಸ್ಥರು ಕರೆಯುತ್ತಾರೆ. ತ್ರೇತಾಯುಗದ ಅಂತ್ಯದಲ್ಲಿ ದ್ವಾಪರದ ಆದಿಯಲ್ಲಿ ಆಗಸ್ತ್ಯ ಮುನಿಗಳ ಕಾಲದಲ್ಲೇ ಈ ಕ್ಷೇತ್ರ ಪ್ರಸಿದ್ಧಿ ಪಡೆದಿತ್ತು. ಈ ಕ್ಷೇತ್ರದ ಪಶ್ಚಿಮಾಭಿಮುಖವಾಗಿ ರೇಣುಕ ಶಿವಾಚಾರ್ಯರ ಚಿಕ್ಕದೊಂದು ಗುಡಿಯೂ ಇಲ್ಲಿದೆ. ದ್ವಾಪರ ಯುಗದಲ್ಲಿ ಆಗಸ್ತ್ಯ ಮಹರ್ಷಿಗಳಿಗೆ ಷಟ್‌ಸ್ಥಳ ಸಿದ್ಧಾಂತ ಉಪದೇಶಿಸಿದ ಜಗದ್ಗುರುಗಳು ಇಲ್ಲಿಯೇ ವಾಸವಾಗಿದ್ದಾರೆಂದು ತಿಳಿದು ಬರುತ್ತದೆ.

ಪರಂಪರೆಯಂತೆ ದೇವ ಭೂಪುರ ಮಠದ ಗುರುಗಳ ಸಮ್ಮುಖದಲ್ಲಿ ಪಲ್ಲಕ್ಕಿ ಉತ್ಸವ, ಅಮರೇಶ್ವರ ದೇವರ ಪ್ರಥಮ ಉತ್ಸವ, ಗುರುಗಳ ಸಮೇತ ಪ್ರಥಮ ಪಲ್ಲಕ್ಕಿ ಉತ್ಸವ ಗುರುಗುಂಟಾ ಸಂಸ್ಥಾನ, ಗುಂತಗೋಳ ಸಂಸ್ಥಾನಕ್ಕೆ ಪ್ರಯಾಣ ನಂತರ ದೇವಾಲಯಕ್ಕೆ ಕಳಸ, ಉತ್ಸವ ಮೂರ್ತಿ ಆಗಮನ, ಆ ನಂತರ ಪಲ್ಗುಣ ಶು. ಹೋಳಿ ಹುಣ್ಣಿಮೆಯಂದು ಮಹಾ ರಥೋತ್ಸವ ಜರುಗುವುದು. *(ಎನ್‌ಜಿಬಿ)*

ಅಮೃತಕುಂಡ: ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಬರುವ ಒಂದು ಪುಣ್ಯಕ್ಷೇತ್ರ. ಇಲ್ಲಿಯ ರಾಮೇಶ್ವರ ದೇವಾಲಯ ಪ್ರಸಿದ್ಧವಾಗಿದೆ. ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 09ರ ಮೇಲಿದೆ. ಬಸವಕಲ್ಯಾಣದಿಂದ ಸೊಲ್ಲಾಪೂರಕ್ಕೆ ಹೋಗುವಾಗ ಸುಮಾರು 15 ಕಿ.ಮೀ. ದೂರದಲ್ಲಿ ಬರುತ್ತದೆ. ರಮ್ಯವಾದ ನಿಸರ್ಗ ಸುತ್ತಲೂ ಗಿಡ ಮರಗಳು, ನಿಸರ್ಗ ನಿರ್ಮಿತವಾದ ತಗ್ಗು ಪ್ರದೇಶ ಸದಾಕಾಲ ಹರಿಯುವ ನೀರು. ಇಂತಹ ರಮ್ಯವಾದ ಪ್ರದೇಶದಲ್ಲಿ ರಾಮಲಿಂಗೇಶ್ವರ ದೇವಾಲಯವಿದೆ. ದೇವಾಲಯದಲ್ಲಿ ಎರಡು ಶಿವಲಿಂಗಗಳಿವೆ. ದೇವಾಲಯದ ಮುಂಭಾಗದಲ್ಲಿ ಆಳವಾದ ಕುಂಡವಿದೆ. ಇದನ್ನು ಅಮೃತಕುಂಡ ಎಂದು ಕರೆಯಲಾಗಿದೆ. ಎದುರಿಗೆ ಎರಡು ನಂದಿ ವಿಗ್ರಹಗಳಿವೆ. ದೇವಾಲಯದ ಎಡಬದಿಗೆ ಕಲ್ಲಿನಿಂದ ಕೆತ್ತಿದ ಶಿವನ ತಪೋ ಭಂಗಿಯಾಗಿರುವ ಸುಂದರ ಮೂರ್ತಿ ಇದೆ. ಅದರ ಮುಂಭಾಗದಲ್ಲಿ ನಾಥರ ಸಂಕೇತವಿರುವ ಗೋಪುರದಾಕಾರದ ಶಿಲೆ ಇದೆ. ಇದು ನಾಥಮಂದಿರವೆಂದೇ ಖ್ಯಾತಿ ಪಡೆದಿದೆ.

ಗೋಡೆಗಳಲ್ಲಿ ಕಲ್ಲಿನಲ್ಲಿ ಕೆತ್ತಲಾದ ದೇವಾಲಯದ ಚಿಕ್ಕ ಪ್ರತಿರೂಪವಿದೆ. ನಾಗದೇವತೆ ಹಾಗೂ ಅನೇಕ ದೇವರ ವಿಗ್ರಹಗಳಿವೆ. ದೇವಾಲಯದ ಬಲಬದಿಗೆ ಮಹಿಷಾಸುರ ಮರ್ದಿನಿ, ಗಣೇಶ, ವಿಷ್ಣು ಮುಂತಾದ ವಿಗ್ರಹಗಳಿವೆ. ಕುಂಡದ ಬಲಭಾಗದಲ್ಲಿ ಕಮಾನಿನ ನಾಲ್ಕು ಕೋಣೆಗಳಿವೆ. ಅದರ ಪಶ್ಚಿಮ ದಿಕ್ಕಿಗೆ ರೇವಣಸಿದ್ದೇಶ್ವರ ದೇವಾಲಯವಿದೆ.

ಪ್ರತಿವರ್ಷ ಶ್ರಾವಣ ಮಾಸದಲ್ಲಿ ಭಕ್ತಾದಿಗಳು ಅಪಾರ ಸಂಖ್ಯೆಯಲ್ಲಿ ಬರುತ್ತಾರೆ. ಶ್ರಾವಣ ಮಾಸ ಮುಗಿದ ಮರುದಿನ ಒಂದು ದಿನದ ಜಾತ್ರೆ ಜರುಗುತ್ತದೆ. ಹೋಳಿ ಹುಣ್ಣಿಮೆಯ ಮೂರನೆ ದಿನವಾದ ಸಂತ ತುಕಾರಾಮ ಬೀಜ ಬಹಳ ಭವ್ಯವಾದ ಪ್ರಮಾಣದಲ್ಲಿ ಆಚರಿಸಲಾಗುತ್ತದೆ. ಅದರಂತೆ ಅಖಂಡ ಹರಿನಾಮ ಸಪ್ತಾಹ ಏಳು ದಿನಗಳವರೆಗೆ ಆಚರಿಸುತ್ತಾರೆ.

ಪೌರಾಣಿಕ ಹಿನ್ನೆಲೆ: ರಾಮ ವನವಾಸಕ್ಕೆ ಸೀತೆಯೊಂದಿಗೆ ಬಂದಾಗ ಇಲ್ಲಿ ಲಿಂಗಸ್ಥಾಪಿಸಿರುವನೆಂದು, ರಾಮನ ಬಾಣದಿಂದ ಭೂಮಿಯಿಂದ ನೀರು ಚಿಮ್ಮಿ ಬಂದಿರುವುದೆಂದು, ಅದು ಇಂದಿನವರೆಗೆ ಸದಾ ಸರ್ವಕಾಲದಲ್ಲಿಯೂ ಹರಿಯುತ್ತಿರುತ್ತದೆ ಎನ್ನಲಾಗಿದೆ. ಲಿಂಗದ ಕೆಳಭಾಗದಿಂದ ಬಂದ ನೀರು ಅರವತ್ತು ಅಡಿಗಳಷ್ಟು ಆಳವಾದ ಕುಂಡದಲ್ಲಿ ಸೇರಿ ಮತ್ತೆ ಹಳ್ಳದ ರೂಪ ಪಡೆದು ಎಂದೂ ಬತ್ತದೆ ಹರಿಯುತ್ತಲಿದೆ. ಇದಕ್ಕೆ ಆಧಾರವೆಂಬಂತೆ ಅಲ್ಲೇ ಸುಮಾರು ಒಂದು ಕಿ.ಮೀ. ಸಮೀಪದಲ್ಲಿ "ಸೀತಾಬಚ್ಚಲು" (ಸೀತಾ ಕುಂಡ) ವಿದೆ. ಹಾಗೂ ಒಂದು ನೂರು ಮೀಟರ ಅಂತರದಲ್ಲಿ ಒಂದು ಶಿವಲಿಂಗವಿದೆ. ಅದನ್ನು ಸೋಮಲಿಂಗೇಶ್ವರ (ತೆಕ್ಕೆ ಸೋಮಲಿಂಗೇಶ್ವರ) ಎಂದು ಕರೆಯುತ್ತಾರೆ. ತೆಕ್ಕೆಯಲ್ಲಿ ಹಿಡಿದರೆ ಅದು ಯಾರ ತೆಕ್ಕೆಯಲ್ಲಿಯು ಹಿಡಿಯುವುದಿಲ್ಲ. ಅಷ್ಟು ದೊಡ್ಡದಾಗಿದೆ. ಐದು ಅಡಿ ಎತ್ತರವಿರುವ ಈ ಶಿವಲಿಂಗ ಈಗ ಸದ್ಯದ ಸ್ಥಿತಿಯಲ್ಲಿ ನೋಡಿದಾಗ ದೇವಾಲಯ ಹಾಗೂ ಶಿವಲಿಂಗ ಭಗ್ನಗೊಂಡಿರುವುದನ್ನು ಕಾಣುತ್ತೇವೆ. ಲಿಂಗದ ಮೂಲಭಾಗ ಹಾಗೆ ಇದ್ದು ಕೆಳಭಾಗ (ಪಾನವಟ) ತುಂಡರಿಸಲಾಗಿದೆ. ನಿಜಾಮನ ಆಳ್ವಿಕೆ ಸಂದರ್ಭದಲ್ಲಿ ಇದನ್ನು ಧ್ವಂಸ ಮಾಡಲಾಗಿದೆ. ಲಿಂಗವನ್ನು ಒಡೆಯಲು ಪ್ರಯತ್ನಿಸಿದ ಕುರುಹುಗಳಿವೆ.

ಮಾಣಿಕ ಪ್ರಭು ಮಹಾರಾಜರಿಗೆ ಜ್ಞಾನೋದಯವಾದದ್ದು ರಾಮಲಿಂಗೇಶ್ವರನ ಹತ್ತಿರದಲ್ಲೆ. ಅವರು ಇಲ್ಲಿ ಅನುಷ್ಠಾನಕ್ಕೆ ಕುಳಿತ್ತಿದ್ದರು. ಜ್ಞಾನೋದಯ ಅದನಂತರ ಹುಮನಾಬಾದಕ್ಕೆ ತೆರಳಿದರು. ಕರ್ನಾಟಕವಲ್ಲದೇ ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯಗಳ ಭಕ್ತರು ಅಪಾರ ಸಂಖ್ಯೆಯಲ್ಲಿ ಬರುತ್ತಾರೆ. ಈ ದೇವಾಲಯದ ಬಗ್ಗೆ ಅನೇಕ ಐತಿಹ್ಯಗಳಿವೆ. ನಿಜಾಮ ಮಂದಿರ ಧ್ವಂಸ ಮಾಡಲು ಕಳುಹಿಸಿದ್ದ ಸೈನ್ಯ ಕಂಗಾಲಾಗಿ ಓಡಿಹೋದದ್ದು, ಕುಂಡದ ಮೀನುಗಳನ್ನು ತಿಂದವರೆಲ್ಲ ಮರುದಿನ ಸಮಾಧಿಯಾದದ್ದು ಇತ್ಯಾದಿ. *(ಜಿಪಿಟಿ)*

ಅಮೋಘಸಿದ್ಧ: ಭವಿಷ್ಯ ಹೇಳುವ ಒಂದು ಸಂಪ್ರದಾಯ. ಜನಪದರಿಗೆ ಭವಿಷ್ಯದಲ್ಲಿ ಅಪಾರವಾದ ನಂಬಿಕೆ. ಮಳೆ-ಬೆಳೆ, ರೋಗ-ರುಜಿನಗಳಿಗಾಗಿ ಅವರು ಪಂಚಾಂಗ ಹಾಗೂ 'ಹೇಳಿಕೆ' ಹೇಳುವವರನ್ನು ಆಶ್ರಯಿಸಿಕೊಂಡಿದ್ದಾರೆ. ಹೇಳಿಕೆ ಹೇಳುವವರು ಹೆಚ್ಚಾಗಿ ಅನಕ್ಷರಸ್ಥರು. ಯಾವುದೇ ಒಂದು ಶಕ್ತಿ ಮೈಯಲ್ಲಿ ಬಂದು ವೀರಾವೇಶಗೊಂಡು, ಬಹಿರಂಗದ ಅರಿವು ತಪ್ಪಿಸಿ, ಅಂತರಂಗದಲ್ಲಿ ಒಂದಾಗ, ಅವನ ಬಾಯಿಂದ ಹೊರಬರುವ ಮಾತುಗಳೇ ಹೇಳಿಕೆಗಳಾಗುತ್ತವೆ. ಅದನ್ನು ಕೇಳಲು ಜನ ಕಾತುರಗೊಳ್ಳುವರು. ಇದನ್ನು ಹೇಳುವದರಲ್ಲಿ ಕೆಲವು ಮಠ, ಗುಡಿಗಳು ವಂಶಪರಂಪರೆಯನ್ನು ಕಾಯ್ದುಕೊಂಡು ಬಂದಿವೆ. 'ಮಾಡ್ಯಾಳದ ಅಮೋಘಸಿದ್ಧನ ಹೇಳಿಕೆ'ಗಳು ಈ ಭಾಗದ ಹೇಳಿಕಿ ಸಂಪ್ರದಾಯಕ್ಕೆ ಶಿಖರಪ್ರಾಯವಾಗಿದೆ.

ಬಾದಾಮಿ ಅಮವಾಸ್ಯೆಯಂದು ಮಾಡ್ಯಾಳದಲ್ಲಿ ಅಮೋಘ ಸಿದ್ಧನ ಹೇಳಿಕೆ ನಡೆಯುತ್ತವೆ. ಸುಮಾರು ಎರಡು ಸಾವಿರಕ್ಕಿಂತ ಹೆಚ್ಚು ಜನರು ಹೇಳಿಕೆ ಕೇಳಲು ಬರುತ್ತಾರೆ. ಗುಡಿಯ ಪೂಜಾರಿ ಮುಖಕ್ಕೆ ದೇವರ ಮುಖ ಕಟ್ಟಿಕೊಂಡು 'ಎಲೇ' ಎಂದು ಜೋರಾಗಿ ಚೀರುವನು. ಸದ್ದುಗದ್ದಲಡಗಿ ಜನ ನಿಂತಲ್ಲಿಯೇ ನಿಂತು ಬಿಡುವರು. ಕುತೂಹಲ, ಭಕ್ತಿ, ನಿಷ್ಠೆ ಅವರ ಮನದಲ್ಲಿ ತುಂಬುತ್ತದೆ. ಆ ಮೇಲೆ ಹೇಳಿಕೆ:

ಅರಕೇರಿ ಅರಮನಿ ಕಲ್ಲೂರ ಗುರುಮನಿ
ಸಮುದರಕೆ ಹೋಗಿ ಪೂಜೆ, ಮಾಡುದ್ರಾಗ
ಸಮಘಳಿಗಿ ತಡಾ ಆಯ್ತಲೆ
ಗೊಂಗಡ್ಯಾಗ ನೀರ ತಗೊಂಡು
ದೇಶದ ಮ್ಯಾಲ ಝಾಡಿಸೀನಿ
ಹಿಂಗಾರಿ ಮುಂಗಾರಿ ಹಚ್ಚಿ ತೂಗಿ ನೋಡದ್ರಾಗ
ಮುಂಗಾರಿ ಒಂದು ಗುಂಜಿ ಹೆಚ್ಚಾಯ್ತಲೇ
ಬಸವನ ಚಿಕ್ಕ ದಸರೀಗ ಹರದೀನಿ
ಭೂತ್ಯಾಗ್ಹಚ್ಚಿ ಬೈಲ ಮಾಡೀನಿ ಬಸವನ ಪೀಡಾ ಹಿಂದಾಯ್ತು
ಬಾಲನ ಪೀಡಾ ಹೆಚ್ಚಾಯ್ಯು
ಮಾಡ್ಯಾಳ ಅಮೋಘಸಿದ್ಧನ ಹೇಳಿಕೆಂದ್ರ
ಅರಗಲ್ಲ ಮ್ಯಾಲ ಗೂಟ ಜಡದ್ಹಂಗಲೇ

ಎಂದು ಏರು ಇಳುವಿನಲ್ಲಿ ಚೀರುತ್ತಾ, ಆವೇಶಭರಿತನಾಗಿ ಹೇಳಿಕೆಗಳನ್ನು ಹೇಳುತ್ತಾನೆ. ವರ್ಷಂಪ್ರತಿ ಇದರ ಧಾಟಿ ಒಂದೇ ಆಗಿದ್ದರೂ, ಭವಿಷ್ಯತ್ತಿನ ಬದಲಾವಣೆ ಆಗತ್ತಲೇ ಇರುತ್ತದೆ.

ಹೇಳಿಕೆಗಳನ್ನು ತೀರಾ ಸಮೀಪದಲ್ಲಿದ್ದವರು ಕೇಳಿ ಸರಸರನೆ ಬರೆದುಕೊಳ್ಳುವರು. ಅನಂತರ ಒಬ್ಬರ ನೋಡಿ ಒಬ್ಬರು ಬರೆದುಕೊಂಡು ಪ್ರಚಾರ ಮಾಡುತ್ತ ಊರಿಗೆ ಮರಳುವರು. ಅಮೋಘಸಿದ್ಧನ ಹೇಳಿಕೆಯ ಕುರಿತು ಅನೇಕ ಜನಪದ ಹಾಡುಗಳು ಈ ಭಾಗದಲ್ಲಿ ಪ್ರಚಲಿತದಲ್ಲಿವೆ.

ಬಂಗಾರ ಜಡಿ ಬಿಟ್ಟು ಬೈಲಿಗಿ ನಿಂತವನಾರೊ।
ಮುತ್ತ ಮುತ್ತಿನ ರಥಯೇರು। 'ಅಮೋಘಸಿದ್ಧ'
ಹೇಳ್ಯಾನ ಮುಂದೀನ ದಿನಮಾನ॥

ಎನ್ನುವ ಈ ಹಾಡು ಹೇಳಿಕೆಯ ವರ್ಣನೆ ಕುರಿತು ಚಿತ್ರಿಸುತ್ತದೆ. ಅಫಜಲಪುರ ತಾಲ್ಲೂಕಿನ 'ಕಲ್ಲೂರಿ'ನಲ್ಲಿಯೂ ಇದೇ ರೀತಿಯ ಹೇಳಿಕೆ ಸಂಪ್ರದಾಯ ಜರುಗುತ್ತದೆ. ಬಹುಶಃ ಮಾಡ್ಯಾಳದ ಹೇಳಿಕೆಗಿಂತ ಕಲ್ಲೂರಿನ ಹೇಳಿಕೆ ಪುರಾತನದಾಗಿರಬೇಕು. ಏಕೆಂದರೆ ಮಾಡ್ಯಾಳ ಅಮೋಘಸಿದ್ಧನ ಹೇಳಿಕೆ ಹೇಳುವ ಪೂಜಾರಿ ಆರಂಭಕ್ಕೆ 'ಕಲ್ಲೂರ ಗುರುಮನಿ' ಎಂಬ ಗುರುವಿನ ಸ್ಮರಣೆಯಿಂದ ಈ ಮಾತು ಸ್ಪಷ್ಟವಾಗುತ್ತದೆ. ಕಲ್ಲೂರಿನ ಹೇಳಿಕೆ ಕುರಿತು ಒಂದು ಹಾಡು,

ಅರಕೇರಿ ಅರಮನಿ ಡವಳಾರ ಗುರುಮನಿ।
ಪುಂಡ 'ಕಲ್ಲೂರ' ಕಡಿಮನಿಯ। ಬಾಗಿಲ್ದಾಗ
ಹೇಳಿಕಿ ಮಾಡ್ಯಾರ ಒಡೆಯರ।

ಇನ್ನು ಕೆಲವು ಕಡೆ ಕಬ್ಬಿಣದ ಗುಂಡುಗಳನ್ನು ಮೈಕೈಗಳಿಗೆ ಹೊಡೆಯುತ್ತಾ, 'ಉಷ್ ಉಷ್' ಎಂದು

ಆವೇಶದಿಂದ ಹೇಳಿಕೆ ಹೇಳುವ ಪೂಜಾರಿಗಳೂ ಅಲ್ಲಲ್ಲಿ ಸಿಗುತ್ತಾರೆ. ಸರ್ವ ಸಾಮಾನ್ಯವಾಗಿ ಹೇಳಿಕೆ ಹೇಳುವವರು ಕುರುಬ ಜನಾಂಗದವರಾಗಿರುತ್ತಾರೆ. ಮತ್ತೆ ಕೆಲವರು ಅಮವಾಸ್ಯೆಯ ದಿವಸ ದೇವರು ಮೈಮೇಲೆ ಬಂದು ಹೇಳಿಕೆ ಹೇಳುವರು. ಇಂಥವುಗಳಲ್ಲಿ ಭೂಸಣಗಿ, ಜೀವಣಗಿ, ಭಟ್ಟರಕಿ, ನೀಲೂರ, ಬಬಲಾದ, ಸುಲ್ತಾನಪುರ, ಗುಂಡಗುರ್ತಿ, ಮಹಾಗಾಂವ, ದುಬಲಗುಂಡಿ, ಮೈಲಾರ, ಕುರುಬ, ಚಿಂಚೋಳಿ, ಹಳ್ಳಿಖೇಡ, ಕೊಪ್ಪಳ, ಮಡ್ಡಿಪೇಟೆ ಮುಂತಾದವು ಪ್ರಸಿದ್ಧಿ ಪಡೆದಿವೆ. ಕೆಲವು ಗ್ರಾಮಗಳ ಮುಸ್ಲೀಂ ಜನರಲ್ಲಿ ಅಂಬಾಬಾಯಿ, ಹಿಂದೂ ಜನರಲ್ಲಿ ಮುಸ್ಲೀಂ ದೇವರುಗಳು ಬಂದು ಹೇಳಿಕೆ

ಹೇಳುತ್ತವೆ. ಜಾತ್ಯತೀತ ನಿವಾರಣೆ ಹಾಗೂ ಏಕ್ಯತೆಯ ದೃಷ್ಟಿಯಿಂದ ಇಂದು ಬಹು ಮಹತ್ವಪೂರ್ಣವೆನಿಸುತ್ತದೆ.

(ಜಿ.ಪಿ.ಪಿ)

ಅಯ್ಯನವರು: ವೀರಶೈವ ಧರ್ಮದಲ್ಲಿ ಅತ್ಯಂತ ಮಹತ್ವದ ಮತ್ತು ಪವಿತ್ರವಾದ ಸ್ಥಾನ ಪಡೆದವರು. ವೀರಶೈವ ಜನಪದರು ಜಂಗಮರನ್ನು ಶಿವರೂಪರೆಂದು ತಿಳಿದು, ವ್ಯವಹರಿಸುತ್ತಾರೆ. ತಾತ್ವಿಕ ನೆಲೆಗಟ್ಟು ಇಂತಹ ಪರಿಭಾವನೆಯನ್ನು ಜನಪದರ ಮನದಲ್ಲಿ ನೆಲೆಯೂರುವಂತೆ ಮಾಡಿದೆ.

ವೀರಶೈವ ಜನಪದ ಸಮಾಜದಲ್ಲಿ 'ಜಂಗಮ' ಎನ್ನುವದು ತತ್ತ್ವವಾಚಕವಾಗಿಯೂ, ಜಾತಿವಾಚಕವಾಗಿಯೂ ಬರುತ್ತದೆ. ಸುಜ್ಞಾನವನ್ನು ಸಮಾಜಕ್ಕೆ ಬೋಧೆ ಮಾಡುವ ಕರ್ತವ್ಯ ನಿರ್ವಹಿಸುತ್ತ; ಜನತೆಗೆ ಧಾರ್ಮಿಕವಾದ ಸಂಸ್ಕಾರಗಳನ್ನು ನೆರವೇರಿಸುವವರಿಗೆ ವೀರಶೈವ ಜನಪದರು 'ಅಯ್ಯನವರು' ಎಂದು ಕರೆಯುತ್ತಾರೆ. 'ಅಯ್ಯನವರು' ಎಂದರೆ 'ತಂದೆ ಸಮಾನರು' 'ದೊಡ್ಡವರು' ಎಂದು ಅರ್ಥ.

ವೀರಶೈವ ಧರ್ಮವು ತನ್ನ ಅನುಯಾಯಿಗಳಿಗೆ ಗುರು–ಲಿಂಗ ಜಂಗಮರ ಸೇವೆ ಮಾಡುವಂತೆ ಹೇಳುತ್ತದೆ. ಜಂಗಮರು ಭಕ್ತರ ಸೇವೆಗೆ ಪ್ರತಿಯಾಗಿ ಹಲವಾರು ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ಹಬ್ಬ–ಹರದಿನಾದಿಗಳಲ್ಲಿ ಭಕ್ತರ ಮನೆಯಲ್ಲಿ ಪಾದೋದಕವನ್ನು ಕರುಣಿಸುತ್ತಾರೆ. ಪ್ರಸಾದ ಸ್ವೀಕರಿಸಿ, ಭಕ್ತರಿಗೆ ಹರಕೆ ನೀಡುತ್ತಾರೆ. ಭಕ್ತರುಗಳಿಗೆ ಲಿಂಗ ದೀಕ್ಷೆಯ ಸಂಸ್ಕಾರವನ್ನು ಕರುಣಿಸುತ್ತಾರೆ. ವೀರಶೈವ ಜನಪದರ ಮನೆಯಲ್ಲಿ ಜರಗುವ ಯಾವುದೇ ಸಂಸ್ಕಾರ ವಿಶೇಷವಿದ್ದರೂ ಅದರಲ್ಲಿ ಅಯ್ಯನವರು ಭಕ್ತರುಗಳ ಬಿನ್ನಹದಂತೆ ಭಾಗವಹಿಸಿ, ತಮ್ಮ ಕಾಯಕಗಳನ್ನು ಪೂರೈಸುತ್ತಾರೆ. ಜನ್ಮಾರಭ್ಯದಿಂದ ಹಿಡಿದು ಮರಣದವರೆಗಿನ ಎಲ್ಲ ಸಂಸ್ಕಾರಗಳಿಗೆ ಜಂಗಮರು ಬರಲೇಬೇಕಾಗುತ್ತದೆ.

ಜಂಗಮರಿಗೆ ಭಕ್ತರು ದಾಸೋಹ ರೂಪದಲ್ಲಿ ಧನ ನೀಡುತ್ತಾರೆ. ಭೂಮಿಗಳ ದಾನ ಮಾಡುತ್ತಾರೆ. ದಿನ ನಿತ್ಯವೂ ಅವರಿಗೆ 'ಕೊ' ರಾನ್ನ ಭಿಕ್ಷೆ' ಸಲ್ಲಿಸುತ್ತಾರೆ. ತಮ್ಮ ಮನೆಗಳಿಗೆ ಬೆಳಗಿನ ಜಾವದಲ್ಲಿ ಜಂಗಮರು ಭಿಕ್ಷೆಗೆ ಬರುವುದು ಮಂಗಳದ ದ್ಯೋತಕವೆಂದು ಭಾವಿಸುತ್ತಾರೆ.

ಜಂಗಮರ ಮನೆಗಳು, ಕೇವಲ ಗೃಹಸ್ಥರ ಮನೆಗಳಾಗಿ ಇರುವುದಿಲ್ಲ. ಅವು ಪ್ರಸಾದ ವಿನಿಯೋಗ ತಾಣಗಳೂ ಆಗಿರುತ್ತವೆ. ಬೇರೆ ಸ್ಥಳಗಳಿಂದ ಬರುವ ಭಕ್ತರುಗಳಿಗೆ ಜಂಗಮರು ತಮ್ಮ ಮನೆಯಲ್ಲಿ ಪ್ರಸಾದವನ್ನು ನೀಡುತ್ತಾರೆ. ಪ್ರಸಾದದಾಸೋಹಕ್ಕಾಗಿ ಭಕ್ತರು ತಮ್ಮ ಹೊಲಗಳಲ್ಲಿ ಬೆಳೆದ ಫಲದಲ್ಲಿ ಒಂದಿಷ್ಟು ಮೀಸಲಾಗಿಟ್ಟು ಜಂಗಮರ ಮನೆಗಳಿಗೆ ಒಪ್ಪಿಸುತ್ತಾರೆ.

ಜಂಗಮನು ಜ್ಞಾನ ರೂಪನಾಗಿರುವಂತೆ ಭಕ್ತಿಯ ಮಂದಿರನೂ ಆಗಿರಬೇಕು. ಅವನು ಭಕ್ತ ಸಂಕುಲಕ್ಕೆ ಸುಜ್ಞಾನದ ಆಚರಣೆಯೊಂದಿಗೆ ಭಕ್ತಿಯ ಅನುಸಂಧಾನವೂ ತಿಳಿಸಿ ಕೊಡುತ್ತಾನೆ. ಶಿವಭಕ್ತರುಗಳಿಗೆ ಶಿವ ದೀಕ್ಷೆನ್ನು ಕರುಣಿಸುವುದರ ಮುಖಾಂತರ ಸದಾಚಾರದ ಹಾದಿಯನ್ನು ಜಂಗಮನು ತೋರಿಸಿಕೊಡುತ್ತಾನೆ.

ವೀರಶೈವ ಮಠಗಳಿಗೆ ಅಧಿಪತಿಗಳನ್ನು ಆಯ್ಕೆ ಮಾಡುವಾಗ ಜಂಗಮರ ಮನೆಗಳಿಂದಲೇ ಪ್ರಕ್ರಿಯೆ ಆರಂಭವಾಗುತ್ತದೆ. ಜಂಗಮರ ಮನೆಗಳಲ್ಲಿ ಹುಟ್ಟಿದವರೆ ಮಠದ ಸ್ವಾಮಿಗಳು ಆಗುವುದಕ್ಕೆ ಯೋಗ್ಯರೆಂಬುದು ಪರಂಪರಾಗತವಾದ ಜನಪದರ ನಂಬುಗೆಯಾಗಿದೆ. ಜಂಗಮರು ಮಠದ ಅಧಿಪತಿಗಳಾದಾಗ 'ಗುರು' ಅಥವಾ 'ವಿರಕ್ತ' ಸ್ವಾಮಿಗಳೆಂದು ನಾಮ ಪಡೆದುಕೊಳ್ಳುತ್ತಾರೆ. ವೀರಶೈವ ಜನಪದ ಸಮಾಜದಲ್ಲಿ ಒಟ್ಟಾರೆ ಜಂಗಮರೆಂಬು ಮೇಲು ಶ್ರೇಣಿಯಲ್ಲಿ ನಿಂತುಕೊಂಡು ಸಂಸ್ಕೃತಿ ರಾಯರುಭಾರಿಗಳಂತೆ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಆರ್ಥಿಕವಾಗಿ ಅಷ್ಟು ಜಂಗಮರು ಸಾಂಸ್ಕೃಕವಾಗಿ ಸಮರ್ಥರಾಗಿರುತ್ತಾರೆ. ಆದುದರಿಂದಲೇ ವೀರಶೈವ ಸಮಾಜದಲ್ಲಿ ಅವರಿಗೆ ಉನ್ನತ ಸ್ಥಾನವಿರುವುದು. *(ಎಸ್‌ಎಂಎಚ್)*

ಅಯ್ಯಾಚಾರ: ಜಂಗಮರ ಮಕ್ಕಳಿಗೆ ಕರುಣಿಸುವ ಲಿಂಗದೀಕ್ಷಾ ಸಂಸ್ಕಾರ. ಪ್ರತಿಯೊಂದು ಧರ್ಮವೂ ತನ್ನದೆ ಆದ ಸಂಸ್ಕಾರ ಮಾರ್ಗವನ್ನು ಹೊಂದಿದೆ. ತನ್ಮೂಲಕ ಅದು ತನ್ನ ಅನುಯಾಯಿಗಳಿಗೆ ಧರ್ಮದ ದೀಕ್ಷೆಯನ್ನು ನೀಡುತ್ತದೆ. ಹಾಗೆಯೇ ವೀರಶೈವ ಧರ್ಮವು ತನ್ನದೆ ಆದ ಧಾರ್ಮಿಕ ಸಂಸ್ಕಾರವನ್ನು ಒಳಗೊಂಡಿದೆ.

'ಅಯ್ಯ'ನಾದವನಿಗೆ ನಿಜವಾದ ಧಾರ್ಮಿಕ ಆಚಾರವನ್ನು ಕಲಿಸಿಕೊಡುವ ಕ್ರಿಯಾವಿಶೇಷವೇ ಈ 'ಅಯ್ಯಾಚಾರ' ಸಂಸ್ಕಾರವಾಗಿದೆ. ಮನೆತನದ ಗುರುಗಳಿಂದ ಇಲ್ಲವೆ ಬೇರೆ ಇನ್ನಾವುದೇ ಗುರುಸ್ಥಲ ಮಠದ ಗುರುಗಳಿಂದ 'ಅಯ್ಯಾಚಾರ'ವು ನಡೆಯುತ್ತದೆ.

ಗುರುವಾದನು ಜಂಗಮರ ಸಂತತಿಗೆ ಶರೀರದ ಮೇಲೆ ಇಷ್ಟ ಲಿಂಗವನ್ನು ಧರಿಸಿ; ಕಿವಿಯಲ್ಲಿ 'ನಮಃ ಶಿವಾಯ' ಎಂಬ ಪಂಚಾಕ್ಷರ ಮಂತ್ರವನ್ನು ಉಪದೇಶಿಸುತ್ತಾನೆ.

'ಅಯ್ಯಾಚಾರ'ವು ಅನುಗೊಳಿಸುವ ವಿಧಾನವು ಅತ್ಯಂತ ಸುಂದರ ಮತ್ತು ತತ್ತ್ವಾರ್ಥ ಪೂರ್ಣವಾಗಿದೆ. 'ಅಯ್ಯಾಚಾರ'ವು ಹುಟ್ಟಿದ ಏಳನೆಯ ವರ್ಷ ಅಥವಾ ಹನ್ನೊಂದು ವರ್ಷಗಳ ವಯಸ್ಸಿನಲ್ಲಿಯೇ ಜರುಗಬೇಕು. ಅಯ್ಯಾಚಾರ ಹೊಂದುವ ಬಾಲಕನು ತನ್ನ ತಲೆಯ ಕೇಶವನ್ನು ಮುಂಡನ ಮಾಡಿಕೊಳ್ಳಬೇಕಾಗುತ್ತದೆ. 'ಅಯ್ಯಾಚಾರ' ಜರುಗುವ ಮನೆಯು ಸುಣ್ಣ–ಬಣ್ಣಗಳಿಂದ ಅಲಂಕೃತಗೊಳ್ಳಬೇಕು. 'ಅಯ್ಯಾಚಾರ' ನಡೆಯುವ ದಿನ ಮನೆಯ ಗುರುಗಳು ಆಗಮಿಸುತ್ತಾರೆ. ತಮ್ಮ ಸ್ನಾನ–ಪೂಜೆಗಳನ್ನು ಪೂರೈಸಿಕೊಂಡು 'ಅಯ್ಯಾಚಾರ' ಕ್ರಿಯೆಗೆ ಅನುವಾಗುತ್ತಾರೆ. ಮನೆಯಲ್ಲಿ ತಳಿರು ತೋರಣಗಳಿಂದ ಮಂಟಪವನ್ನು ರಚಿಸಲಾಗುತ್ತದೆ. ಮಂಟಪದ ಮಧ್ಯದಲ್ಲಿ ಎತ್ತರದ ಆಸನದಲ್ಲಿ ಗುರುದೇವನು ಮೂರ್ತನಾಗಿರುತ್ತಾನೆ. ಅವನ 'ಅಯ್ಯಾಚಾರ' ಸಂಸ್ಕಾರಕ್ಕೆ ಒಳಗಾಗುವ ಬಾಲಕ ಅಥವಾ ಬಾಲಕರು ಕುಳಿತುಕೊಂಡಿರುತ್ತಾರೆ. ಅವರ ಮೈ ಮೇಲೆ ಯಾವುದೇ ಬಟ್ಟೆ ಇರುವುದಿಲ್ಲ. ಕೌಪೀನಧಾರಿಗಳಾಗಿರುತ್ತಾರೆ. ಮಂಟಪದ ಒಂದು ಬದಿಯಲ್ಲಿ ಪಂಚ ಪೀಠಗಳಿಗೆ ಸಂಕೇತವಾಗಿ

ಪಂಚಕಲಶಗಳನ್ನು ಸ್ಥಾಪಿಸಲಾಗುತ್ತದೆ. ಗುರುದೇವನು ಸಂಸ್ಕಾರಿಗಳಿಗೆ ಇಷ್ಟಲಿಂಗವನ್ನು ದೇಹದ ಮೇಲೆ ಧರಿಸುತ್ತಾನೆ. ಹಣೆಗೆ ವಿಭೂತಿ ಪೂಸುತ್ತಾನೆ. ಕಿವಿಯಲ್ಲಿ ಪಂಚಾಕ್ಷರ ಮಂತ್ರ ಉಪದೇಶಿಸುತ್ತಾನೆ. ಅವರ ಕೈಯಲ್ಲಿ ಜೋಳಿಗೆ–ದಂಡಕೋಲು ಕೊಟ್ಟು ಅಯ್ಯಾಚಾರ ಸಮಾರಂಭದಲ್ಲಿ ಭಾಗವಹಿಸಿಲು ಬಂದಿದ್ದ ಜನರಲ್ಲಿ ಹೋಗಿ ಭಿಕ್ಷೆ ಬೇಡುವಂತೆ ಗುರುದೇವನು ಆದೇಶಿಸುತ್ತಾನೆ. ನೆರೆದ ಜನರು ಅಯ್ಯಾಚಾರ ಹೊಂದಿದವನ ಜೋಳಿಗೆಯಲ್ಲಿ ತಮ್ಮ ಶಕ್ತಾನುಸಾರವಾಗಿ ಹಣವನ್ನು ನೀಡುತ್ತಾರೆ. ಅದನ್ನೆಲ್ಲ ತಂದು ಶಿಷ್ಯನು ಗುರುವಿನ ಸನ್ನಿಧಿಗೆ ಅರ್ಪಿಸುತ್ತಾನೆ. ಲಿಂಗಧಾರಣೆ ಮಂತ್ರೋಪದೇಶ ಕೋರಾನ್ನ ಭಿಕ್ಷೆಗಳ ಮುಖಾಂತರ ಅಯ್ಯಾಚಾರ ದೀಕ್ಷೆಯು ಮಂಗಳಗೊಳ್ಳುತ್ತದೆ. ಅಯ್ಯಾಚಾರದ ಕಾರ್ಯಕ್ಕೆ ಬಂದ ಬೀಗರು–ಬಾಂಧವರು ದೀಕ್ಷೆ ಹೊಂದಿದವರಿಗೆ ಹೊಸ ಬಟ್ಟೆಗಳನ್ನು, ಉಡುಗೊರೆಗಳನ್ನು ನೀಡುತ್ತಾರೆ. ಅಯ್ಯಾಚಾರ ಸಮಾರಂಭವು ವಿವಾಹ ಸಮಾರಂಭದಂತೆ ವಿಜೃಂಭಣೆಯಿಂದ ಜರುಗುತ್ತದೆ. ವಾದ್ಯಗಳು ಮಂಗಳದರವವನ್ನು ಹೊರಡಿಸುತ್ತವೆ. 'ಅಯ್ಯಾಚಾರ'ದಿಂದಲೇ ಜಂಗಮರಮಕ್ಕಳಿಗೆ ನಿಜವಾದ ಜಂಗಮತ್ವ ದೊರಕುತ್ತದೆಂಬ ಭಾವನೆ ವೀರಶೈವ ಧರ್ಮದಲ್ಲಿದೆ. ಅಂದಿನಿಂದ ಜಂಗಮನಾದವನು ಇಷ್ಟಲಿಂಗವನ್ನು ಯಾವಾಗಲೂ ದೇಹದ ಮೇಲೆ ಧಾರಣ ಮಾಡಿಕೊಂಡಿರಬೇಕು. ಒಂದು ಸಲವಾದರೂ ಅದರ ಪೂಜೆ ಮಾಡಬೇಕು. ಸ್ನಾನವಿಲ್ಲದೆ ಏನೂ ಬಾಯಲ್ಲಿ ಹಾಕದು. ಇಂತಹ ಕೆಲವು ನೇಮಗಳು ಅಯ್ಯಾಚಾರದಿಂದ ದೀಕ್ಷಿತನಿಗೆ ಅನ್ವಯಿಸಲಾಗುತ್ತದೆ.

(ಎಸ್‌ಎಂಎಚ್)

ಅರವಟಿಗೆ: ಬೇಸಿಗೆಯಲ್ಲಿ ದಾರಿಹೋಕರ ನೀರಿನ ದಾಹವನ್ನು ಹಿಂಗಿಸಲು ಮಾಡಿದ ವ್ಯವಸ್ಥೆ. ನೀರು ದೊರೆಯುವ ಸ್ಥಳ ಎಂಬರ್ಥದಲ್ಲಿ ಅರ + ವಾಟಿಕೆ = ಅರವಟಿಗೆ ಆಗಿರಬೇಕು. ಆಯಕಟ್ಟಿನ ಸ್ಥಳದಲ್ಲಿ, ಹೆಚ್ಚಾಗಿ ಬೇವಿನಗಿಡದ ಕೆಳಗಿನ ಕಟ್ಟೆಯ ಮೇಲೆ ಒಂದು ಸದಾ ತೇವದಿಂದ ಕೂಡಿದ ಉಸುಕಿನ ಗುಂಪಿಯನ್ನು ಹಾಕಿ ಅದರ ಮೇಲೆ ನೀರಿನ ಹರವಿಯನ್ನಿಟ್ಟು, ಅದಕ್ಕೆ ಒಂದು ತಂಪಾದ ಅರಿವೆಯನ್ನು ಸುತ್ತಿ, ನೀರಡಸಿ ಬಂದವರಿಗೆ ತಂಪಾದ ನೀರನ್ನು ಕೊಡುವುದು, ಪುಣ್ಯದ ಕೆಲಸವೆಂದು ಅಂದಿನ ಜನ ಭಾವಿಸಿದ್ದರು. ಸಾಮ್ರಾಟ ಅಶೋಕ ಪ್ರವಾಸಿಗರಿಗೆ ಅನುಕೂಲವಾಗಲೆಂದು ದಾರಿಯುದ್ದಕ್ಕೂ ಗಿಡ ನೆಡಿಸಿದುದಲ್ಲದೆ, ಅಲ್ಲಲ್ಲಿ ಅರವಟಿಗೆಯನ್ನಿಡಿಸಿದನೆಂದು ಇತಿಹಾಸ ಹೇಳುತ್ತದೆ. ಇತ್ತೀಚೆಗೆ ಜೈನರು ನಿರಂತರವಾಗಿ ಹಾಗೂ ಮುಸ್ಲಿಂರು ಹಬ್ಬ ಸಮಾರಂಭಗಳಲ್ಲಿ, ಲಿಂಗಾಯತರು ಮಠ ಮಾನ್ಯಗಳ ಮುಖಾಂತರ ಈ ಕಾರ್ಯವನ್ನು ಮಾಡುತ್ತಿದ್ದಾರೆ.

(ಬಿವಿಎಸ್)

ಅರಳಗುಂಡಿಗಿ: ಜೇವರ್ಗಿ ತಾಲ್ಲೂಕಿನ ಈ ಸ್ಥಳ ಕಲಬುರ್ಗಿಯ ಶರಣಬಸವೇಶ್ವರರ ಜನ್ಮ ಸ್ಥಳವಾಗಿದೆ. ಇಲ್ಲಿ ಕಲಬುರ್ಗಿ ಶರಣಬಸವೇಶ್ವರ ಪೂರ್ವಿಕರ ಮನೆ ಇದೆ. ಇಲ್ಲಿ ಶರಣಬಸವೇಶ್ವರ ಜಾತ್ರೆಯು ಹೋಳಿ ಹುಣ್ಣಿಮೆ ಸಂದರ್ಭದಲ್ಲಿ ಜರುಗುತಿದ್ದು, ಸಾವಿರಾರು ಜನ ಪಾಲ್ಗೊಳ್ಳುತ್ತಿದ್ದಾರೆ. ಶರಣಬಸವೇಶ್ವರರು ಹುಟ್ಟಿದ ಈ ಸ್ಥಳದಲ್ಲಿ ಈಗಲೂ ಸದಾಕಾಲ ಹಣತಿಯನ್ನು ಬೆಳಗಿಸುವ ಸಂಪ್ರದಾಯವಿದೆ. ಈ ಊರಲ್ಲಿ ಖ್ಯಾತಲಿಂಗ ಹನುಮಂತ, ಮಲಖಾನ, ಮಲ್ಲಯ್ಯ ಮುತ್ಯಾ ಹಾಗೂ ಲಕ್ಷ್ಮೀ ಗುಡಿಗಳಿವೆ. ಮತ್ತು ಎರಡು ಮಸೀದಿಗಳಿವೆ.

(ಪಿಕೆಕೆ)

ಅರಳಿಮರ: ಹಿಂದುಗಳಿಗೆ ಬಹು ಪವಿತ್ರವಾದ ವೃಕ್ಷ. ಗೋಪಾಲಕೃಷ್ಣ ಅರಳಿಮರದೆಲೆಯ ಮೇಲೆ ಪವಡಿಸಿರುವನೆಂಬುದು ಜನಪದರ ನಂಬಿಕೆ. ಅರಳಿಯೊಂದಿಗೆ ಬೇವಿನಮರವೂ ಬೆಳೆದಿದ್ದರೆ ಅವನ್ನು ಲಕ್ಷ್ಮೀ–ನಾರಾಯಣರ ರೂಪವೆಂದು ಪೂಜಿಸುವರು. ಸತ್ಯವಾನ–ಸಾವಿತ್ರಿಯರ ಕಥೆಯ ಹಿನ್ನೆಲೆಯಲ್ಲಿ ಜೇಷ್ಠ ಮಾಸದ ಕಾರ ಹುಣ್ಣಿಮೆಯ ದಿನ ಅರಳಿ ಬೊಡ್ಡೆಯ ಸುತ್ತ ನೂಲನ್ನು ಸುತ್ತಿ ಸಂಭ್ರಮಿಸುವುದುಂಟು. ಯಜ್ಞ–ಯಾಗಾದಿ, ಹೋಮ–ಹವನಗಳಲ್ಲಿ ಇದರ ಕಟ್ಟಿಗೆಯನ್ನು ಕಡ್ಡಾಯವಾಗಿ ಬಳಸುವರು. ಲಗ್ನದಲ್ಲಿ ಇದರ ಎಲೆಗಳನ್ನು ಕಂಕಣ–ಬಾಸಿಂಗ ಕಟ್ಟುವುದಕ್ಕೆ ಬಳಸಲಾಗುತ್ತದೆ. ಇದರ ಟೊಂಗೆಯನ್ನು ತಂದು ಮದುವೆಯ ಮೊದಲು ಹಾಲುಗಂಬಕ್ಕೆ ಕಟ್ಟಿದಾಗಲೇ ಆ ಶುಭಸಮಾರಂಭ ಪ್ರಾರಂಭ. ಅರಳಿ ಶಕ್ತಿ ಸ್ವರೂಪಿಣಿ ಎಂದು ತಿಳಿಯುವುದರಿಂದ ರೈತರು ಇದನ್ನು ಕಡಿಯುವುದಿಲ್ಲ. ಬಿತ್ತನೆಯ ಸಮಯದಲ್ಲಿ ಇದರ ಎಲೆಗಳನ್ನು ಕೂರಗಿಗೆ ಕಟ್ಟಿ ಪೂಜಿಸುವರು. ಅರಳಿ–ಬೇವಿನಮರದ ಜೋಡಿಗಳನ್ನು ನಸುಕಿನಲ್ಲಿ ಸುತ್ತಿದರೆ ಅಪೇಕ್ಷಿಸಿದ ಬೇಡಿಕೆಗಳೀಡೇರುವವು ಎಂಬ ನಂಬುಗೆ ಇದೆ.

(ಬಿವಿಎಸ್)

ಅಲಿಯಾಬಾದ: ಧಾರ್ಮಿಕ ಹಾಗೂ ಪ್ರಕೃತಿಯ ಸುಂದರ ತಾಣ. ಬೀದರ ಪಟ್ಟಣದ ಉತ್ತರ ಪಶ್ಚಿಮದೆಡೆಗೆ ನಾಲ್ಕು ಕಿ.ಮೀ. ದೂರದಲ್ಲಿದೆ. ದಾರಿ ಮಧ್ಯದಲ್ಲಿ ಪೂರ್ವದೆಡೆಗಿನ ಇಳಿಜಾರಿನಲ್ಲಿ ಸಿದ್ಧದೇವರ ಗುಹೆ ಸಮಾಧಿಗಳಿವೆ. ಎದುರಿಗೆ ನೀರಿನ ಗುಂಡ ಇದ್ದು, ಅದರ ಪಕ್ಕದ ಗುಹೆ ಆಕಾರದ ಖಾರೇಜನಿಂದ ಹರಿದು ಬಂದ ನೀರಿನಿಂದ ತುಂಬಿ ಹೆಚ್ಚಿದ ನೀರು ಹೊರಗೆ ಹರಿದು ಹೋಗುತ್ತಿರುತ್ತದೆ.

ಹೊರಗಿನ ಕುಂಡ (ಗುಂಡ)ದಿಂದ ಹರಿದು ಹೋಗುವ ನೀರನ್ನು ಮುಂದೆ ಬಾಗ್–ಎ–ಕಾರಂಜಾ ಎಂಬಲ್ಲಿ ಹೌಜದಾನಿ (ಈಜು ಕೊಳ ತರಹದ ರಚನೆ) ಯಲ್ಲಿ ಸಂಗ್ರಹಿಸಿ ಈಜಾಡಲು ಸ್ನಾನಕ್ಕಾಗಿ ಬಳಸಲಾಗುತ್ತಿತ್ತು. ಅದರ ಕುರುಹುಗಳು ಕಾಣಸಿಗುತ್ತವೆ. ಅದರ ಪರಿಸರದಲ್ಲಿ ಬಾಗ–ಎ–ಕಾರಂಜಾ ಹಾಗೂ ಅಲಿಯಾಬಾದ ಜನವಸತಿಗಳಿದ್ದುವು. ಆದರೆ ಆ ಎರಡೂ ಗ್ರಾಮಗಳ ಜನರು ನಿಲ್ಲುತ್ತಿದ್ದ ನೀರು ಅಲ್ಲದೆ ಕಳ್ಳಕಾಕರ ಭಯ ತಾಳಲಾರದೆ ಎತ್ತರದ ಮೇಲೆ ಈಗಿರುವ ಅಲಿಯಾಬಾದ ಗ್ರಾಮಕ್ಕೆ ಬಂದು ನೆಲೆಸಿದರು. ಬೀದರ ಪಟ್ಟಣದ ಉತ್ತರದೆಡೆಗಿನ ಹೊಸ ವರ್ತುಲ ರಸ್ತೆ ಈ ಗ್ರಾಮದ ದಕ್ಷಿಣಕ್ಕೆ ಹೊಂದಿಕೊಂಡಿದೆ.

ಪುರಾತತ್ವಜ್ಞರು ನಡೆಸಿದ ಸಂಶೋಧನೆಗಳಿಂದ ಅಲಿಯಾಬಾದನ ಸುತ್ತಣ ಪರಿಸರದಲ್ಲಿ ನೂತನ ಶಿಲಾಯುಗ–

ತಾಮ್ರ ಯುಗ ಸಂಸ್ಕೃತಿಗೆ ಸೇರಿದ ಕೆಲ ಕುರುಹುಗಳು ಪತ್ತೆಯಾಗಿವೆ. ಊರಿನ ಉತ್ತರದೆಡೆಗೆ ಪಾಪನಾಶ ಕ್ಷೇತ್ರವಿದೆ. ಸುಂದರ ನೈಸರ್ಗಿಕ ಪರಿಸರದಲ್ಲಿರುವ ಈ ಮಂದಿರದ ಎದುರಿಗೆ ಪವಿತ್ರ ನೀರಿನ ಕುಂಡವಿದೆ. ಮಂದಿರದ ಉತ್ತರದೆಡೆಗೆ ಹಳೆಯ ಕಾಲದ ಕೆರೆಯೊಂದಿದೆ. ಇತ್ತೀಚೆಗೆ ಅದನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ. ಅದೇ ಪರಿಸರದಲ್ಲಿ ಒಂದು ದರ್ಗಾ ಇದೆ. ಪಾಪನಾಶ ಹಾಗೂ ಅಲಿಯಾಬಾದ ಗ್ರಾಮದ ನಡುವೆ ಬಸವಗಿರಿ ಕೇಂದ್ರ ನಿರ್ಮಾಣಗೊಂಡಿದೆ. ಈ ಗ್ರಾಮದ ಹೆಚ್ಚಿನವರು ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಪರಿಣತಿ ಹೊಂದಿರುವ ಕಾರಿಗರ (ಕುಶಲ ಕರ್ಮಿ)ಗಳಾಗಿದ್ದು ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ವಿಶೇಷ.

ಈ ಗ್ರಾಮದಲ್ಲಿ ಲಕ್ಷ್ಮೀ, ಹನುಮಂತ, ಹಿರೋಡೆ, ಮರಗೆಮ್ಮ, ಮಾತಂಗಿ ಗುಡಿಗಳಿವೆ. ದರ್ಗಾಗಳಿವೆ. ಇತ್ತೀಚೆಗೆ ಬಸವ ಮಂಟಪ ನಿರ್ಮಾಣಗೊಂಡಿದೆ. ಮಹಬೂಬ ಸುಬಾನಿ ದರ್ಗಾದ ಹತ್ತಿರ ಹಿಂದೊಮ್ಮೆ ಸಿಡಿಲು ಬಿದ್ದಿದ್ದರಿಂದಾಗಿ ನಿರ್ಮಾಣಗೊಂಡಿತೆನ್ನಲಾದ ನೀರು ಇರುವ ತಗ್ಗಿಗೆ 'ಸಿಡಿಲು ಗುಂಡ' ಎಂದು ಕರೆಯುತ್ತಾರೆ. ಈ ಊರು ಹಿಂದೆ ಒಬ್ಬ ಜಾಗೀರದಾರನಿಗೆ ಸೇರಿದ್ದಿತು. ಊರಿನಲ್ಲಿ ಮೊಹರಂ ಆಚರಿಸುವುದರ ಜೊತೆಗೆ ಮೊಹರಂ ಮುಗಿದ ಒಂದು ತಿಂಗಳ ಆನಂತರ 'ಚಾಂದ ಮೊಹರಂ' ಎನ್ನುವ ಆಚರಣೆ ಜರುಗುತ್ತದೆ. ಅಂದು ಮೊಹರಂ ಹಾಡುಗಳ ಸ್ಪರ್ಧೆ ಜರುಗಿ ವಿಜೇತರಿಗೆ ಬೆಳ್ಳಿ ಕೈ ಕಡಗ ತೊಡಿಸುವುದು ವಾಡಿಕೆ. *(ಬಿಆರ್‌ಕೆ)*

ಅಷ್ಟೂರ: ಐತಿಹಾಸಿಕ ಗ್ರಾಮ, ಧಾರ್ಮಿಕ ಸ್ಥಳ. ಬೀದರನಿಂದ ಪೂರ್ವದೆಡೆಗೆ 4 ಕಿ.ಮೀ. ದೂರದಲ್ಲಿದೆ. ಹಳೆಯ ಬೀದರ ಪಟ್ಟಣಕ್ಕೆ ಸುತ್ತುವರಿದ ಕೋಟೆ ಆವರಣ ಗೋಡೆಯ ದುಲ್ಹನ್ ದರವಾಜಾ (ದ್ವಾರ) ದಿಂದ ಇಳಿಜಾರಿನೆಡೆಗೆ ಸಾಗುವ ರಸ್ತೆಯ ಮೂಲಕ ಈ ಊರಿಗೆ ತಲುಪಬಹುದು.

ಬೀದರ ಹಾಗೂ ಅಷ್ಟೂರ ಗ್ರಾಮದ ರಸ್ತೆ ಬದಿ ಊರಿಗೆ ಸಮೀಪದಲ್ಲಿ ಬೀದರನಿಂದ ಆಳಿದ ಬಹಮನಿ ಸುಲ್ತಾನರ ಹಾಗೂ ಅವರ ಪರಿವಾರದವರ ಗೋರಿ ಸ್ಮಾರಕಗಳಿವೆ. ಬೀದರಿನ ಬಹಮನಿ ಸುಲ್ತಾನರ ಆಹ್ವಾನದ ಮೇರೆಗೆ ಮಧ್ಯ ಏಷ್ಯದ ಕಿರಮಾನನಿಂದ ಬೀದರಿಗೆ ಆಗಮಿಸಿದ್ದ ಸಂತ ಖಲೀಲ್ ಉಲ್ಲಾ ಕಿರಮಾನಿಯವರ ಹಾಗೂ ಅವರ ಕುಟುಂಬದ ಸದಸ್ಯರ ಸಮಾಧಿ ಸ್ಥಳವೂ ಇದೆ. ಅದು ಚೌಖಂಡಿ ಎಂದೇ ಇದು ಪ್ರಸಿದ್ಧವಾಗಿದೆ. ಇವುಗಳ ಪರಿಸರದಲ್ಲಿ ವಿಶಿಷ್ಟ ರಚನೆ ಹೊಂದಿರುವ ಬಾವಿಗಳಿವೆ. ಪರ್ಷಿಯನ್ ಹಾಗೂ ಮರಾಠಿ ಭಾಷೆಗಳಲ್ಲಿನ ಶಿಲಾಲೇಖಗಳೂ ಇಲ್ಲಿವೆ.

ಈ ಗ್ರಾಮದಲ್ಲಿ ಮಹಾದೇವ, ಹನುಮಾನ ಹಾಗೂ ಮರಗೆಮ್ಮ ಗುಡಿಗಳಿವೆ. ಊರ ಹೊರ ವಲಯದಲ್ಲಿ ಅಲ್ಲಲ್ಲಿ ಕೆಲ ಧಾರ್ಮಿಕ ಕುರುಹುಗಳಿವೆ. ಇಲ್ಲಿ ಚಾಪೆ ಹೆಣೆಯುವ ಹಾಗೂ ಬಿದಿರಿನ ಕಲೆಯಲ್ಲಿ ಪರಿಣಿತ ಕುಶಲ ಕರ್ಮಿಗಳಿದ್ದಾರೆ.

ಗ್ರಾಮದ ಸಮೀಪದಲ್ಲಿ ಪಶ್ಚಿಮದೆಡೆಗೆ ಬೀದರನಿಂದ ಆಳಿದ ಬಹಮನಿ ಸುಲ್ತಾನರ ಗೋರಿ ಗುಂಬಗಳಲ್ಲಿ ಪ್ರಮುಖವಾದದ್ದು ಅಹಮದ ಶಾಹ ವಲಿ (1422–36)ಯ ಗೋರಿ ಸ್ಮಾರಕ. ಧರ್ಮ–ಜಾತಿ ಭೇದ ಇಲ್ಲದೆ ಜನ ಅಲ್ಲಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಪ್ರತಿ ವರ್ಷ ಹೋಳಿ ಹುಣ್ಣಿಮೆಯ ದಿನ ಗುಲಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಮಾಡಿಯಾಳ ಗ್ರಾಮದ ಅಲ್ಲಮ ಪ್ರಭು ಗುಡಿ–ದರ್ಗಾದ ಪೂಜಾರಿ ವಿಶಿಷ್ಟ ಉಡಿಗೆ ತೊಡಿಗೆ ಧರಿಸಿ ತಂಡದವರೊಂದಿಗೆ ಪಾರಂಪರಿಕ ರೀತಿಯಲ್ಲಿ ಹೊರಟು ಇಲ್ಲಿಗೆ ತಲಪಿದ ನಂತರವೇ ಅಹಮದ ಶಾಹ ವಲಿಯ ಉರುಸ್ (ಜಾತ್ರೆ) ಪ್ರಾರಂಭಗೊಳ್ಳುತ್ತದೆ. ಅದರಲ್ಲಿ ಸ್ಥಳೀಯ ಹಿಂದು–ಮುಸ್ಲಿಂರೆಲ್ಲರು ಪಾಲ್ಗೊಳ್ಳುತ್ತಾರೆ. ಭಾವೈಕ್ಯತೆ ಇಲ್ಲಿ ಮೆರೆಯುತ್ತದೆ.

ಅಹಮದ ಶಾಹ ವಲಿಯ ಗುಂಬಜದ ಒಳಗೆ ಪರ್ಷಿಯನ್ ಮಾದರಿಯ ಉತ್ಕೃಷ್ಟ ಬಣ್ಣದ ವಿಶಿಷ್ಟ ಪೇಂಟಿಂಗ್ ಮಾಡಲಾಗಿದೆ. ಭಾರತ ದೇಶದಲ್ಲಿಯೇ ಇದು ಅಪರೂಪದ್ದು. ಕರಗಿಸಿದ ಬಂಗಾರದ ಲೇಪನ ಕೂಡ ಕಾಣಸಿಗುತ್ತದೆ. ಪಕ್ಕದ ಎರಡನೆಯ ಅಲಾವುದ್ದೀನ ಶಾಹನ ಗೋರಿ ಕಟ್ಟಡದ ಹೊರಗೆ ಬಣ್ಣದ ತರ್ಕಷ್ ಟೈಲುಗಳ ಹೊದಿಕೆ (ಹಾಳಾಗಿದ್ದರೂ) ನಯನ ಮನೋಹರವಾಗಿದೆ. ಬಹಮನಿ ಸುಲ್ತಾನರ ಒಟ್ಟು ಎಂಟು ಗೋರಿಗಳಿವೆ. ಇವುಗಳಲ್ಲಿ ಕೆಲವು ಚಿಕ್ಕದಾಗಿವೆ. ಇಲ್ಲಿನ ಲಕ್ಷ್ಮಣ ಸಾಧು ಹಾಗೂ ನರಸಪ್ಪ ಮಾಸ್ತರ ಹೆಸರಾಂತ ತತ್ವ ಪದಕಾರರು.

(ಬಿ.ಆರ್.ಕೆ.)

ಅಳವಂಡಿ: ಕೊಪ್ಪಳ ತಾಲ್ಲೂಕಿನ ದೊಡ್ಡ ಗ್ರಾಮ. ಹಿಂದಿನ ದಿನಗಳಲ್ಲಿ 'ಅಳವಂಡಿ' ಎಂಬ ಹೆಸರಿನಲ್ಲಿ ಸುಪ್ರಸಿದ್ಧವಾಗಿದ್ದ ಅಗ್ರಹಾರ. ಚಾಳುಕ್ಯ ಪ್ರತಾಪ ಚಕ್ರವರ್ತಿ ಜಗದೇಕ ಮಲ್ಲವೀರ ಪೆರ್ಮಾಡಿಯ ಕ್ರಿ.ಶ.ಸು. 1158ರ ಶಾಸನದಲ್ಲಿ ಈ ಗ್ರಾಮವನ್ನು 'ಮಹಾಗ್ರಹಾರ ಮಳವಿಂಡಿ' ಎಂದು ಕರೆಯಲಾಗಿದೆ.

ಈ ಅಗ್ರಹಾರ ಕುಕ್ಕನೂರು ಅಗ್ರಹಾರದ ಆನಂತರ ಕೊಪ್ಪಳ ಜಿಲ್ಲೆಯ ಮಹತ್ವದ ಅಗ್ರಹಾರವಾಗಿರಬೇಕು. 'ಸಕಳಾಗ್ರಹಾರ ಶೇಕರ ರಮಣೀಯ ರತ್ನ' ವೆಂದು ಶಾಸನಕಾರ ಇದನ್ನು ಮುಕ್ತಕಂಠದಿಂದ ಹೊಗಳುತ್ತಾನೆ.

ಈ ಅಗ್ರಹಾರದ ನಿವಾಸಿಗಳಾಗಿದ್ದ 400 ಮಹಾಜನಗಳು ವ್ಯಾಕರಣ, ಆಗಮ, ಸ್ಮೃತಿ, ಪುರಾಣ, ತರ್ಕ, ನಾಟಕ, ಕಾವ್ಯಗಳ ಬಗ್ಗೆ ತಿಳಿದವರಾಗಿದ್ದರು. ಇವರು ಅತುಳ ಶ್ರೀಮಂತರೂ, ಸದ್ಗುಣಿಗಳೂ, ಉದ್ದಾಮರೂ, ಗಣ್ಯರೂ ಎನಿಸಿಕೊಂಡಿದ್ದರು. ಈ ಅಗ್ರಹಾರದ ಪ್ರತಿಮನೆಯೂ "ಶಂಕರಾಚ್ಯುತಬುಧಾತಿಥಿ ಪೂಜೆಯಿನಗ್ನಿ ಹೋತ್ರದಿಂದನು ಪಮವೇದನಾದ"ದಿಂದ ಶೋಭಿಸುತ್ತಿತ್ತೆಂದು ಶಾಸನ ಬಣ್ಣಿಸುತ್ತದೆ. ಈ ಅಗ್ರಹಾರ ನಿಸರ್ಗ ಸೌಂದರ್ಯದ ಬೀಡಾಗಿತ್ತು.

(ಎಲ್‌ಪಿ)

ಆ

ಆಣೆ–ಪ್ರಮಾಣ: ಆತ್ಮ ಸಾಕ್ಷಿಯಾಗಿ ಸತ್ಯವನ್ನು ಹೊರಹಾಕುವುದು. ಹಳ್ಳಿಗರು ಮಾತು ಮಾತಿಗೆ 'ಆಣೆ ಮಾಡು'ವುದು ಆಣೆ ಇಡುವುದು, ಆಣೆ ಹಾಕುವದು– ಹೀಗೆ ಹಲವಾರು ಪಡೆನುಡಿಗಳನ್ನು ಬಳಸುತ್ತಾರೆ. ದೇವರಾಣೆ, ತಾಯಿಯ ಆಣೆ, ಮಕ್ಕಳ ಆಣೆ ಮೊದಲಾಗಿ ಆಣೆ ಮಾಡಿ, ತಮ್ಮ ಮೇಲೆ ಹೊರಿಸಿದ ಮೊಸ ಅಪವಾದಗಳಿಂದ ಮುಕ್ತರಾಗುವ ಮಾರ್ಗಹುಡುಕುತ್ತಾರೆ. ಒಂದು ಕಾಲ ಇತ್ತು. ಯಾರೂ ಸುಳ್ಳು ಆಣೆ ಮಾಡುತ್ತಿರಲಿಲ್ಲ. ಹಾಗೇನಾದರೂ ಮಾಡಿದರೆ ನಿಶ್ಚಯವಾಗಿ ಅವರಿಗೆ ಕೆಡಕು ಕಟ್ಟಿಟ್ಟದ್ದೆಂದು ಜನ ಖಚಿತವಾಗಿ ನಂಬಿದ್ದರು.

ಇನ್ನೂ ಪ್ರೀತಿ ಪ್ರದರ್ಶನಕ್ಕೂ ಆಣೆ ಹಾಕುತ್ತಿದ್ದರು. ನೀನು ಹೋದರೆ ನನ್ನಾಣೆ, ಅಂದರೆ ನನಗೆ ಕೆಡಕು ಮಾಡುವ ಮನಸ್ಸಿದ್ದರೆ ಹೋಗು, ಉಣದಿದ್ದರೆ ಆಣೆ, ಇಲ್ಲಿ ಆಣೆ ಪ್ರೀತಿಯ ಆಗ್ರಹ, ಒತ್ತಾಯದ ಶಕ್ತಿಯಾಗುತ್ತಿತ್ತು.

ಯಾರಾದರೂ ಸಾಮಾಜಿಕವಾಗಿ ಅಪರಾಧ ಮಾಡಿದ ಸಂಶಯ ಬಂದರೆ ಅವರನ್ನು ದೇವರಸಾನಿಧ್ಯದಲ್ಲಿ ಜನ ದೇವರ ಆಣೆ ಮಾಡಲು ಹೇಳುತ್ತಿದ್ದರು. ಎಷ್ಟೋ ಜನ ಆಣೆ ಮಾಡದೆ ತಮ್ಮ ಅಪರಾಧ ಒಪ್ಪಿಕೊಂಡು ದೇವರೆದುರು ಸತ್ಯ ಪ್ರದರ್ಶಿಸಿದ ಉದಾಹರಣೆಗಳೂ ಇವೆ. ಬರಬರುತ್ತ ಅಪರಾಧಿಗಳು ಸುಳ್ಳಾಣೆ ಮಾಡಿ ಆತ್ಮ ವಂಚನೆ, ಅನ್ಯವಂಚನೆ ಮಾಡುವ ಪ್ರಸಂಗಗಳು ಅಧಿಕವಾದವು. ದೇವರ ಪಾದ ಬಡಿದು, ಮಕ್ಕಳ ತಲೆ ಬಡಿದೂ ಸುಳ್ಳು ಹೇಳಹತ್ತಿದರು. ಆಣೆಯಲ್ಲಿ ಜನರ ನಂಬಿಕೆ ಕಡಿಮೆಯಾಗಹತ್ತಿತು. ಆಣೆಗೆ ಅರ್ಥವಿಲ್ಲ ಕ್ವಾಣಿಗೆ ಥರಿ ಇಲ್ಲ ಅನ್ನುವ ಗಾದೆ ರೂಢಿಗೆ ಬಂತು. ಆಣೆ ಮಾಡಿಸಿ ಅಬರೂ ತಗದ್ರೂ ಅಂತ ವೈರ ಸಾಧಿಸಹತ್ತಿದರು. ಆಗ ದೇವರೆದುರು ದಿವ್ಯ ಗಳುರೂಢಿಗೆ ಬಂದವು. ಜಲದಿವ್ಯ, ಅಗ್ನಿ ದಿವ್ಯ ಮೊದಲಾದ ದಿವ್ಯಗಳಿಂದ ಅಪರಾಧಿಯನ್ನು ಪರೀಕ್ಷಿಸುವ ವಿಧಾನವೂ ರೂಢಿಗೆ ಬಂತು. ಸೀತೆಯನ್ನು ಅಗ್ನಿ ದಿವ್ಯಕ್ಕೆ ಒಳಪಡಿಸಿದ್ದನ್ನು 'ರಾಮಾಯಣ'ದಲ್ಲಿ ಕಾಣುತ್ತೇವೆ. ವ್ಯಕ್ತಿಯ ಆತ್ಮ ಪ್ರಜ್ಞೆ ಜಾಗ್ರತಗೊಳಿಸಿ ಸತ್ಯ ಹೊರ ಹಾಕಲು ರೂಢಿಸಿಕೊಂಡು ಬಂದ 'ಆಣೆ' ಈಗ ಸವಕಳಿಯಾಗಿ ನಡೆಯದ ನಾಣ್ಯ.


ವಿದ್ಯಾವಂತರು 'ಆಣೆ' ಪದದ ಬದಲು 'ಪ್ರಮಾಣ' ಪದ ಬಳಸುತ್ತಾರೆ. 'ಪ್ರಮಾಣ' ಮಾಡಿ ಹೇಳು ಅನ್ನುತ್ತಾರೆ ಪ್ರಮಾಣ ಅಂದರೆ ಅಳತೆ. ಸರ್ವಸ್ವೀಕೃತ ಚೌಕಟ್ಟು ಹೆಚ್ಚೂ ಅಲ್ಲ ಕಡಿಮೆಯೂ ಅಲ್ಲ. ಇದ್ದುದನ್ನು ಇದ್ದಂತೆ ಆತ್ಮ ಸಾಕ್ಷಿಯಾಗಿ ಹೇಳುವುದು ಇಲ್ಲವೆ ಹೇಳಿದಂತೆ ಇರುವುದು. ಇಂದು ಸಂಸತ್ತು ಶಾಸನ ಸಭೆಗೆ ಚುನಾಯಿತ ಸದಸ್ಯರು ಪ್ರಮಾಣ ವಚನ ಸ್ವೀಕರಿಸುತ್ತಾರೆ. ಅದೂ ದೇವರ ಹೆಸರಿನಲ್ಲಿ! ನಾನು ಸಂವಿಧಾನೊಕ್ತ ಚೌಕಟ್ಟಿನಂತೆ ನಡೆದುಕೊಳ್ಳುತ್ತೇನೆಂದು ಆಣೆಮಾಡಿದಂತೆ, ಇತ್ತತ್ತಲಾಗಿ ರೈತ ಅನ್ಯ ಮಹಾನ್ ವ್ಯಕ್ತಿಗಳ ಹೆಸರಿನಲ್ಲಿ ಪ್ರಮಾಣ ಮಾಡುತ್ತಾರೆ. ನಾನು ಸಂವಿಧಾನ ಹೇಳಿದಂತೆ ನಡೆದುಕೊಳ್ಳುತ್ತೇನೆ. ಎನ್ನುವ ಆತ್ಮ ಸಾಕ್ಷಿಯ ಭರವಸೆ ಈ ಪ್ರಮಾಣ ವಚನ. ಆದರೆ ದೇವರಲ್ಲಿ ನಂಬಿಕೆ, ಆತ್ಮ ಸಾಕ್ಷಿಯಲ್ಲಿ ನಿಷ್ಠೆ ಕಳೆದುಕೊಂಡವರ 'ಆಣೆ' 'ಪ್ರಮಾಣ'ಗಳು ಇಂದು ತೀರ ಯಾಂತ್ರಿಕವಾಗಿ, ಅರ್ಥ ಹೀನ ಶಬ್ದಗಳಾಗಿ ವ್ಯಕ್ತಿತ್ವ ವಿನಾಶಕ್ಕೇ ಕಾರಣವಾಗಿವೆ. ಪ್ರಮಾಣ, ವಚನ ಅಪ್ರಮಾಣಿಕತೆಗೆ ಆವರಣವಾಗಿದೆ. ಅಷ್ಟೇ ಮನುಷ್ಯ ತನ್ನ ಮೇಲೇ ನಂಬಿಗೆ ಕಳೆದುಕೊಂಡು ಬದುಕುವುದು ಪ್ರತೀಕ ಇದು. *(ಎಂಜಿಬಿ)*

ಆನಂದೇಶ್ವರ ದೇವಾಲಯ: ರಾಯಚೂರಿನ ಒಂದು. ದೇವಾಲಯ. ಜನ ಸಂಪರ್ಕದಿಂದ ದೂರ ಉಳಿದಿರುವ ದೇವಾಲಯಗಳಲ್ಲಿ ಒಂದಾಗಿದೆ. ಇದು ರಾಯಚೂರು ಜಿಲ್ಲೆಯಲ್ಲೇ ಶೇ. 70ರಷ್ಟು ಜನತೆಗೆ ಗೊತ್ತಿಲ್ಲದೇ, ಅಂಧಕಾರದಲ್ಲಿದೆ. ಆದರೆ, ನಗರದ ನಡುಮಧ್ಯದಲ್ಲಿ ಜವಾಹರನಗರ, ಅಂಬೇಡ್ಕರ ನಗರ, ತಿಮ್ಮಾಪೂರಪೇಟೆ ಹಾಗೂ ನೇತಾಜಿ ನಗರಗಳ ನಡು ಮಧ್ಯ ನಗರೇಶ್ವರ ಮಂದಿರಕ್ಕೆ ಹತ್ತಿರ ಕಾಂಕ್ರಿಟ ಕಾಡಿನಲ್ಲಿ ಮರೆಯಾಗಿರುವ ಈ ಆನಂದೇಶ್ವರ ದೇವಾಲಯದ ಸುತ್ತ ಮುತ್ತಲಿನವರ ಹೇಳಿಕೆಯ ಪ್ರಕಾರ, ಸುಮಾರು ಒಂದು ಶತಕ ಕಳೆದು, ನಾಲ್ಕರಿಂದ ಐದು ದಶಕಗಳ ಆಯುಷ್ಯ ಹೊಂದಿದೆ. ಕ್ರಿ.ಶ. 1850 ಸುಮಾರಿಗೆ ಬದುಕಿ ಬಾಳಿದ ಕ್ಷತ್ರಿಯ, ಮರಾಠ ಕುಟುಂಬಕ್ಕೆ ಸೇರಿದ ಒಬ್ಬ ಚಂದನದ ವ್ಯಾಪಾರಿ ಆನಂದರಾವ ಜಗತಾಪ್ ಎಂಬವರು ತಮ್ಮ ವ್ಯಾಪಾರವು ಸಮೃದ್ಧಿವಾಗಿ ಸಾಗುತ್ತಿರುವುದಕ್ಕಾಗಿ ಈ ದೇವಾಲಯದ ನಿರ್ಮಾಣ ಕಾರ್ಯ ಕೈಗೊಂಡನೆಂದು ಹೇಳಲಾಗುತ್ತದೆ. ವಾಸ್ತು ಬದ್ಧವಾಗಿರುವ ಈ ಆನಂದೇಶ್ವರ ದೇವಾಲಯವು ಸುಂದರವಾದ ಗಾರೆಯಿಂದ ಗೋಪುರ ಹಾಗೂ ಗೋಪುರದಲ್ಲಿ ಸುಂದರವಾದ ಮೂರ್ತಿಗಳಿಂದ ಅಲಂಕರಿಸಲಾಗಿದೆ. ಇದನ್ನು ನೋಡಿದಾಕ್ಷಣ, ಪುರಾತನ ಕಾಲದ ದೇವಾಲಯವೆಂದು ಸಾರ್ವಜನಿಕರ ಮನಸೆಳೆಯುತ್ತದೆ.

ಈ ಮಂದಿರ ನಿರ್ಮಾಣದಲ್ಲಿ ಕಲಾವಿದನ ಕುಶಲವಿದ್ಯೆ ಸಂಪೂರ್ಣ ವಿನಿಯೋಗವಾಗಿದ್ದು, ಪರಿಪೂರ್ಣ ಕಲಾತ್ಮಕತೆ ಈ ದೇವಸ್ಥಾನದ ನಿರ್ಮಾಣದಲ್ಲಿ ಕಾಣುವಷ್ಟು ವೈಭವ ಪೂರ್ಣತೆಯಿಂದ ನಿರ್ಮಿಸಲಾಗಿದೆ. ಸುಮಾರು ಕ್ರಿ.ಶ. 1850 ರ ಕಾಲದಲ್ಲಿ ದೇವಾಲಯದ ನಿರ್ಮಾಣ ಕಾರ್ಯ ಭರದಿಂದಸಾಗಿ, ಕಳಸಾರೋಹಣದ ವೇಳೆ ಆನಂದರಾವ್ ಜಗತಾಪ್ ಅವರ ಅಕಾಲಿಕವಾಗಿ ಶಿವಾಧೀನರಾದ ಕಾರಣ ಆನಂದೇಶ್ವರ ದೇವಾಲಯಕ್ಕೆ ಕಳಸಾರೋಹಣ ಸ್ಥಗಿತಗೊಂಡಿದ್ದು, ಮುಂದೆ ಅದನ್ನು ಯಾರೂ ಮಾಡದೇ ಇರುವುದರಿಂದ ಇಂದಿಗೂ ಈ ದೇವಾಲಯ ಕಳಸವಿಲ್ಲದ ದೇವಾಲಯ ಎಂದೇ ಹೆಸರಾಗಿದೆ.

(ಕೆ.ಎಂ.)

ಆನೆಗೊಂದಿ: ವಿಜಯನಗರ ಕಾಲದ ಒಂದು ಪ್ರಸಿದ್ಧ ಐತಿಹಾಸಿಕ ಸ್ಥಳ. ತುಂಗಭದ್ರಾ ನದಿಯ ಎಡದಂಡೆಯ ಮೇಲಿದೆ. ಇದೊಂದು ಚಿಕ್ಕ ಸಂಸ್ಥಾನವಾಗಿತ್ತು. ವಿಜಯನಗರದ ಅರಸರು ತಮ್ಮ ಸೈನ್ಯದ ಆನೆಗಳಿಗೆ ಇಲ್ಲಿ ಜಾಗ ಮಾಡಿದ್ದರೆಂದು ಅದಕ್ಕಾಗಿ ಈ ಹೆಸರು



ಕಲ್ಲಿನ ಸೇತುವೆ – ಆನೇಗುಂದಿ

ಬಂದಿತೆಂದು ಪ್ರತೀತಿ ಇದೆ. ಹಿಂದಿನ ಕೆಲವು ರಾಜರು ಆನೆಗೊಂದಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಆನೆಗೊಂದಿಯನ್ನು ಆಳುತ್ತಿದ್ದ ಕಂಪಿಲರಾಯ ಮತ್ತು ಅವನ ಮಗನಾದ ಕುಮಾರ ರಾಮ ಇವರು ಅಲ್ಲಾ ಉದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರರನ್ನು ಎದುರಿಸಿ ಯುದ್ಧ ಮಾಡಿದರೆಂದು ತಿಳಿಯಲಾಗಿದೆ. ದೇವಗಿರಿ ಯಾದವ ರಾಜ್ಯದ ಬಹುಭಾಗವು ಸ್ವತಂತ್ರವಾಗಿಯೇ ಉಳಿದಿದ್ದು ರಾಯಚೂರು ಜಿಲ್ಲೆಯು ಕಂಪಿಲ ರಾಜ್ಯದ ಒಂದು ಭಾಗವೇ ಆಗಿದ್ದಿತು. ಈ ಕಂಪಿಲ ಅರಸರಲ್ಲಿ ಸಿಂಗೆಯ ನಾಯಕ ಮತ್ತು ಅವನ ಮಗ ಕಂಪಿಲರಾಯರು ಪ್ರಸಿದ್ಧರು. ಕಂಪಿಲರಾಯ ತಘಲಖನಿಗೆ ಕಪ್ಪವನ್ನು ಕೊಡಲು ನಿರಾಕರಿಸಿ ತಘಲಖನ ವಿರೋಧಿಯೂ ಸಗರದ ಸುಬೇದಾರನೂ ಆದ ಬಹಾವುದ್ದೀನ್ ಗುರ್‌ಷೆಸ್ಪನೊಡನೆ ಸ್ನೇಹ ಬೆಳೆಸಿದ ಕಾರಣ ತಘಲಖನು ಗುರ್‌ಷೆಸ್ಪನ ಮೇಲೆ ದಂಡೆತ್ತಿ ಬಂದ ಸಂದರ್ಭದಲ್ಲಿ ಗುರ್‌ಷೆಸ್ಪನು ಕಂಪಿಲರಾಯನ ಮೊರೆ ಹೊಕ್ಕ. ಅವನನ್ನು ರಕ್ಷಿಸಲು ಕಂಪಿಲರಾಯನು ತನ್ನ ಪ್ರಾಣವನ್ನು ತೆರಬೇಕಾಯಿತು. ಆದರೆ ತಘಲಖನು ದಕ್ಷಿಣ ಭಾರತದಲ್ಲಿ ಹೆಚ್ಚು ಕಾಲ ಉಳಿಯಲಾಗಲಿಲ್ಲ. ದಂಗೆಗಳಾದವು. ಆಗ ಸ್ವತಂತ್ರ ರಾಜ್ಯಗಳು ಏರ್ಪಟ್ಟು ಇವುಗಳಲ್ಲಿ ಬಹಮನಿ ಮತ್ತು ವಿಜಯನಗರ ರಾಜ್ಯಗಳು ಮುಖ್ಯವಾದವು. ಹಕ್ಕ ಹಾಗೂ ಬುಕ್ಕ ಸಹೋದರರು ವಿಜಯನಗರ ಸ್ಥಾಪನೆಗಾಗಿ ಶ್ರಮಿಸಿದರು. ನ್ಯೂನಿಜ್ ಎಂಬ ವಿದೇಶೀ ಯಾತ್ರಿಕ ಆನೆಗೊಂದಿಯನ್ನು ವಿಜಯನಗರ ಸಾಮ್ರಾಜ್ಯದ ಮಾತೃಸ್ಥಾನವೆಂದು ಕರೆದಿದ್ದಾನೆ. ಅರಬ್ ಇತಿಹಾಸಕಾರರೂ ಅನೆಗೊಂದಿಯನ್ನು ನಾನುಂಡಿಮ್ ಎಂದು ಕರೆದಿದ್ದಾರೆ. ವಿಜಯನಗರದ ಪತನಾನಂತರ ಅರವೀಡು ಸಂತತಿಯ ಅರಸರ ಶಾಖೆಯೊಂದು ಆನೆಗೊಂದಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಲಾರಂಭಿಸಿತು. ಕ್ರಿ.ಶ. 17ನೆಯ ಶತಮಾನದಲ್ಲಿ ಆನೆಗೊಂದಿ ಸಂಸ್ಥಾನ ಮುಸ್ಲಿಮರ ವಶವಾಗಿತ್ತು. ಮುಂದೆ 1749ರಲ್ಲಿ ಮರಾಠರು ಅದನ್ನು ಸ್ವಾಧೀನಪಡಿಸಿಕೊಂಡರು. 1776ರಲ್ಲಿ ಆನೆಗೊಂದಿ ಟಿಪ್ಪುಸುಲ್ತಾನನ ವಶವಾಯಿತು. ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಪತನವಾದ ಮೇಲೆ ಬ್ರಿಟಿಷರು ಆನೆಗೊಂದಿಯ ಕೆಲವು ಭಾಗಗಳನ್ನು ತಮ್ಮ ವಶದಲ್ಲಿಟ್ಟುಕೊಂಡು ಉಳಿದ ಪ್ರದೇಶವನ್ನು ಹಿಂದಿನ ಅರಸರ ಸಂತತಿಗೆ ಒಪ್ಪಿಸಿಕೊಟ್ಟರು. ಇವರು ಹೈದರಾಬಾದಿನ ನಿಜಾಮನಿಗೆ ಅಧೀನರಾಗಿದ್ದರು. ಮುಂದೆ 1949ರ ವರೆಗೆ ಇದು ಆ ಅರಸರ ಸಂಸ್ಥಾನವಾಗಿತ್ತು. ಆನೆಗೊಂದಿ ಇಂದು ಕೇವಲ ಒಂದು ಹಳೆಯ ಊರಾಗಿ ಉಳಿದಿದೆ. *(ಪಿಎಚ್)*

ಆಯ ಪದ್ಧತಿ: ಇದೊಂದು ಸಹಕಾರ ಪದ್ಧತಿ. ಹೊಂದಾಣಿಕೆ ಮನೋಭಾವ ವಂಶ ಪಾರಂಪರ್ಯಕವಾಗಿ ನಡೆದು ಬಂದ ವೃತ್ತಿಗಾರರಿಗೆ ರೈತನೇ ಜೀವದಾತ. ರೈತರ ಜೀವನ ಯಶಸ್ವಿಗೆ ವೃತ್ತಿಗಾರರ ಸಹಾಯ ಅಗತ್ಯ. ವೃತ್ತಿಗಾರರ ಹೊಟ್ಟೆ ತುಂಬಬೇಕಾದರೆ ರೈತನ ಕೃಷಿ ಯಶಸ್ವಿಯಾಗಬೇಕು. ವೃತ್ತಿಗಾರರು ವರ್ಷಪೂರ್ತಿ ನೀಡುವ ಸಹಾಯಕ್ಕೆ (ವಸ್ತುಗಳಿಗೆ) ಪ್ರತಿಯಾಗಿ ರೈತರು ದವಸಧಾನ್ಯ ನೀಡುವ ಪದ್ಧತಿ, ಅದೇ ಆಯಾ ಪದ್ಧತಿಯಾಗಿ ಬೆಳೆದು ಬಂದಿದೆ. ಸುಗ್ಗಿಯ ಕಾಲದಲ್ಲಿ ಮಾಲನ್ನು ಹಿಗ್ಗಿ ಹಿಗ್ಗಿ ಚೀಲ ತುಂಬುತ್ತಿದ್ದರೆ, ಆಯಗಾರರ ಸರದಿ ಸಾಲಾಗಿ ಬರುತ್ತದೆ. ಆಯ ಪದ್ಧತಿಯಂತೆ ಎಲ್ಲರಿಗೂ ನೀಡಲಾಗುತ್ತದೆ. ಇವರಲ್ಲದೆ. ಇವರಲ್ಲದೆ ಸ್ವಾಮಿಗಳು, ಶರಣರು, ದೇವಸ್ಥಾನದ ಪೂಜಾರಿಗಳಿಗೂ ಹಂಚಬೇಕು. ಬೆಳೆದ ಬೆಳೆಯಲ್ಲಿ ಅರ್ಧ ಜಮೀನುದಾರರಿಗೆ ಕೊಟ್ಟು, ಅರ್ಧದಲ್ಲಿ ಆಯಗಾರರಿಗೆ ಮತ್ತು ಬೆಳೆಗೆ ಮಾಡಿದ ಖರ್ಚು, ವೆಚ್ಚ ಕೊಟ್ಟು ಉಳಿಯೋದು ರೈತನಿಗೆ ಸಾಲ ಮಾತ್ರ!

ಆಯ ಪದ್ಧತಿ ಮನೆಗಳ ಹಂಚಿಕೆ ಹಾಗೂ ಗ್ರಾಮಗಳ ಹಂಚಿಕೆಯ ಮೇಲೆ ನಿಂತಿದೆ. ಇತ್ತೀಚಿನ ದಿನಗಳಲ್ಲಿ ಆಯ ಪದ್ಧತಿ ದಿನೇ ದಿನೇ ಕಡಿಮೆಯಾಗುತ್ತಿದೆ. ಒಂದು ಊರಿನಲ್ಲಿ 3–4 ಮನೆಗಳು ಮಾತ್ರ ಆಯ ಪದ್ಧತಿಗೆ ಒಳಪಟ್ಟಿವೆ.

ಬಡಿಗರು: ಇವರು ಕೃಷಿ ಕೆಲಸಕ್ಕಾಗಿ ಬೇಕಾಗುವ ನೇಗಿಲು, ನಗ, ಚಕ್ಕಡಿ, ಕುಂಟಿ, ಕೂರಿಗೆ, ಮಡಿಕೆ, ಬುಕ್ಕಾ, ಮೇಟಿ, ಬಾರಕೋಲ ಗುಣಿ ಮತ್ತು ಮನೆ ಕೆಲಸಕ್ಕಾಗಿ ಬೇಕಾಗುವ ಒನಕೆ, ಬೀಸುವ ಕಲ್ಲು ಹಿಡಿಕೆ, ಲಟ್ಟಣಿಕೆ, ಮಣೆ, ಶಾವಿಗೆ ಮಣೆ ಮತ್ತು ರೈತನ ಮನೆಯಲ್ಲಿ ಯಾರಾದರೂ ಸತ್ತಾಗ ಶವದ ಮಂಟಪ ಮಾಡಲು ನೆರವಾಗುವರು. ಕಟ್ಟಿಗೆಗೆ ಬದಲಾಗಿ ಈಗ ಎಲ್ಲೆಡೆ ಕಬ್ಬಿಣದ ಬಳಕೆ ಹೆಚ್ಚು, ಗೃಹ ಬಳಕೆಗೂ ಇವರ ಆವಶ್ಯಕತೆ ಇಲ್ಲದಂತಾಗಿದೆ.

ಕುಂಬಾರರು: ಗೃಹೋಪಯೋಗಿ ವಸ್ತುಗಳಾದ ಒಲೆ, ಕಿಂಡಿ ಒಲೆ, ಬೆಳಕಿಂಡಿ, ಕುಂಡಾಳಿ, ಗಡಗಿ, ಕೊಡ, ಬೇಸಿಗೆ ಕಾಲದಲ್ಲಿ ರೈತ ಹೊಲಕ್ಕೆ ನೀರು ಒಯ್ಯಲು ತತ್ರಾಣಿ ಅಡಕಲ ಗಡಿಗಿ, ರೊಕ್ಕದ ಕುಡಕಿ ಗಡಗಿ, ದೇವರ ಪೂಜೆಗೆ ಪ್ರಣತಿ, ತಂಬಾಕು ಸೇದುವ ಚಿಲುಮೆ, ಮಳೆನೀರು ಹರಿಯಲು ಪನ್ನಾವಳಿಗೆ, ಹರವಿ ಮುಚ್ಚಳ, ಹೂಜಿ, ಹಬ್ಬಗಳಾದ ಆಷಾಢದಗುಳ್ಳವ್ವ ಗುಗ್ಗವ್ವ, ಮಣ್ಣೆತ್ತಿನ

ಅಮವಾಸ್ಯೆಗೆ ಮಣ್ಣೆತ್ತು, ಸೀಗೆ ಹುಣ್ಣಿಮೆಗೆ ಸೀಗವ್ವ, ಗೌರಿ ಹುಣ್ಣಿಮೆಗೆ ಗೌರವ್ವ, ಅನಂತ ಹುಣ್ಣಿಮೆಗೆ ಪ್ಲಾಸ್ಟಿಕ್ ಬಳಕೆಯಿಂದ ಮಣ್ಣಿನ ವಸ್ತುಗಳ ಬೇಡಿಕೆ ಕಡಿಮೆಯಾಗಿ, ಕುಂಬಾರನಿಗೆ ಕೆಲಸವೂ ಇಲ್ಲದಂತಾಗಿದೆ.

ಕಮ್ಮಾರ: ಕೊಡಲಿ, ಎಡೆಕೊಡ, ಮಡಕೆ, ಕುಡಗಳನ್ನು ಹೊಸದಾಗಿ ಮಾಡುವುದು ಮತ್ತು ಆವಶ್ಯಕತೆಗನುಗುಣವಾಗಿ ಚೂಪು ಮಾಡಿಕೊಡುವುದು, ಬಿತ್ತುವುದಕ್ಕೆ ಹೊಂಬಲ ಚಕ್ಕಡಿಗೆ ಹಳಿ ಬಿಗಿಯುವದು, ಗೃಹೋಪಯೋಗಿ ವಸ್ತುಗಳಾದ ಈಳಿಗೆ, ಕಡಚಗಿ ಮಾಡಿಕೊಡುವುದು ಇವನ ಕೆಲಸ. ಅದಕ್ಕೂ ಪೆಟ್ಟು ಬಿದ್ದಿದೆ.

ಅಗಸರು: ರೈತರ ಬಟ್ಟೆಗಳನ್ನು ವರ್ಷಾನುಗಟ್ಟಲೆ ತೊಳೆದು ಮಡಿಮಾಡಿ ತಂದು ಕೊಡುವುದಲ್ಲದೆ ಋತುಮತಿ, ಹೆರಿಗೆ ಸಂದರ್ಭದಲ್ಲಿ ಬಳಸಿದ ಬಟ್ಟೆ, ಸತ್ತವರ ಮನೆಯಲ್ಲಿನ ಬಟ್ಟೆಗಳನ್ನು ತೊಳೆದು ತಂದು ಕೊಡುವದು, ದೇವರ ಮತ್ತು ಧಾರ್ಮಿಕ ಕಾರ್ಯಕ್ರಮಗಳು ನಡೆದಾಗ ಹಡದಿಯನ್ನು ಹಾಸುವರು ಇವರೇ.

ಚಮ್ಮಾರ: ರೈತರಿಗೆ ಬಾರಕೋಲ, ಬಾರ, ಮಂಡಿಬಾರ ಕೊಡುವುದು ರೈತರಿಗೆ ಪಾದರಕ್ಷೆ ಮಾಡಿ ಕೊಡುವುದು ಹರಿದ ಪಾದರಕ್ಷೆಗಳನ್ನು ಹೊಲಿದು ಕೊಡುವದು.

ಪಾಡೇವಾರರು: ಇವರು ವರ್ಷಾನುಗಟ್ಟಲೆ ದನಕರುಗಳ, ಎತ್ತುಗಳ ಕೊಟ್ಟಿಗೆ ಕಸಗುಡಿಸುವುದು. ಕೊಟ್ಟಿಗೆಗೆ ಸುಣ್ಣ ಬಣ್ಣ ಬಳಿಯುವುದು. ಪ್ರತಿಯೊಂದು ರಾಶಿಯ ಕೆಲಸದಲ್ಲಿ ರೈತನಿಗೆ ನೆರವಾಗುವುದು. ರೈತರ ಮನೆಯಲ್ಲಿ ಯಾರಾದರೂ ಸತ್ತಾಗ ಸಮಾದಿ ತೋಡುವದು ನೆಂಟರಿಸ್ಟರಿಗೆ ಸುದ್ದಿ ತಿಳಿಸುವದು. ರೈತರ ಮನೆಗೆ ಬೇಕಾಗುವ ಉರುವಲು ಕಟ್ಟಿಗೆ ಒದಗಿಸುವುದು.

ಮಠದಯ್ಯ: ಶ್ರಾವಣ ಮಾಸದಲ್ಲಿ ರೈತರಿಗೆ ದಿನಾಲೂ ಪೂಜೆಗೆ ಬಿಲ್ವಪತ್ರಿ ಕೊಡುವದು ಮನೆಯಲ್ಲಿ ಪೂಜೆ, ಮನಸ್ಕಾರ, ಗುಗ್ಗಳ, ಶವಸಂಸ್ಕಾರ, ಗಂಗಾಸ್ಥಾನ, ಜವಳ, ದೀಡು ನಮಸ್ಕಾರ, ಅಭಿಷೇಕ, ನಾಮಕರಣ, ಮದುವೆ, ಜಾತ್ರೆ ಸಮಯದಲ್ಲಿ ರೈತನಿಗೆ ನೆರವಾಗುವದು. ರೈತನ ಮನೆಯಲ್ಲಿ ಮಗಳು ಹೆರಿಗೆ ಯಾದಾಗ ಗಂಡನ ಮನೆಗೆ ಸುದ್ದಿ ತಿಳಿಸುವದು. ಹತ್ತು ಹಲವು ಕಾರ್ಯಕ್ರಮದಲ್ಲಿ ರೈತನಿಗೆ ನೆರವಾಗುವರು.

ಹೂಗಾರ: ಧಾರ್ಮಿಕ ಕಾರ್ಯಕ್ರಮ ಹಬ್ಬ ಹರಿದಿನ ಮದುವೆ ಜವಳ ಜಾತ್ರಾ ಮಹೋತ್ಸವ ನಾಮಕರಣ ಸೀಮಂತಕಾರ್ಯ ಕೂರಿಗೆ ಪೂಜೆ ಸಮಾರಂಭದಲ್ಲಿ ಬಿಲ್ವಪತ್ರಿ, ಹಾರ, ಬಾಸಿಂಗ ಹೂವಿನ ದಂಡಿ ಕೊಡುವುದು ಮತ್ತು ಧಾರ್ಮಿಕ ವಿಷಯಗಳು ಮತ್ತು ಸಾರ್ವಜನಿಕ ವಿಷಯಗಳ ಡಂಗೂರ ಸಾರುವರು.

ಕ್ಷೌರಿಕ: ನಗರ ಪ್ರದೇಶಗಳಲ್ಲಾದರೆ, ಕ್ಷೌರಿಕರಿಗೆ ಆಗಿಂದಾಗ್ಗೆ ಹಣವನ್ನು ನೀಡಿ ಲೆಕ್ಕಾ ಚುಕ್ತಾ ಮಾಡಲಾಗುತ್ತದೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಇವನು ರೈತರಾದಿಯಾಗಿ ಇಡೀ ಗ್ರಾಮದಲ್ಲಿ ವರ್ಷಪೂರ್ತಿ ಕ್ಷೌರ ಮಾಡಿದರೂ ಹಣ ಕೇಳುವದಿಲ್ಲ. ಅವರಿಗೆ ವರ್ಷಕ್ಕೊಮ್ಮೆ ಗ್ರಾಮಸ್ಥರೆಲ್ಲ ದವಸ ಧಾನ್ಯಗಳನ್ನು ನೀಡುವ ಮೂಲಕವೇ ಅವರಿಗೆ ಆಯ ಕೊಡುವ ಪದ್ಧತಿ ನಡೆದುಕೊಂಡು ಬಂದಿದೆ. ಮನೆಯಲ್ಲಿ ಜಾವಳ, ಉಪನಯನಾದಿಗಳು ನಡೆದಾಗ, ಇವರಿಗೆ ವಿಶೇಷ ಉಡುಗರೆಗಳನ್ನು ನೀಡುವ ಪದ್ಧತಿಯೂ ಇದ್ದು, ಇದರೊಂದಿಗೆ ಅವರ ಸಂಬಂಧಗಳು ನಿರಂತರವಾಗಿ ಉಳಿದುಕೊಂಡು ಬಂದಿವೆ.

ಆದರೆ, ಗ್ರಾಮೀಣ ಪ್ರದೇಶದಲ್ಲಿ ಆಧುನಿಕತೆ ಕಾಲಿರಿಸುವಿಕೆಯೊಂದಿಗೆ ಶತಶತಮಾನಗಳಿಂದ ಪರಸ್ಪರ ಸಹಕಾರದೊಂದಿಗೆ ನಡೆದುಕೊಂಡು ಬಂದಿದ್ದ ಆಯ ಪದ್ಧತಿ ಮಾಯವಾಗುತ್ತಿದೆ. *(ಜಿಪಿ)*

ಆಯುಧಗಳು: ಆತ್ಮ ರಕ್ಷಣೆಗಾಗಿ ಮತ್ತು ಹೋರಾಟಕ್ಕೆ ಬಳಸುವ ಸಾಧನಗಳು. ಮಾನವನ ನಾಗರಿಕತೆಯೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿರುವ ಆಯುಧಗಳು ತಮ್ಮ ವಿಕಾಸ ಕ್ರಮದಲ್ಲಿಯೇ ನಾಗರಿಕತೆಯ ವಿಕಾಸ ಕ್ರಮವನ್ನು ಒಳಗೊಂಡಿವೆ. ಆಯುಧಗಳು ಮನುಷ್ಯ ಬದುಕಿನ ಹಲವು ಹತ್ತು ಹಂತಗಳಲ್ಲಿ ತಮ್ಮ ಪ್ರಯೋಜನವನ್ನು ಕಾಣುವಂತೆ ಮಾಡುತ್ತವೆ. ಆದಿಮಾನವನು ಅವುಗಳನ್ನು ತನ್ನ ಆತ್ಮ ರಕ್ಷಣೆಗಾಗಿ ಬಳಕೆ ಮಾಡುತ್ತಿದ್ದಂತೆ, ಬೇಟೆಯ ಕ್ರಿಯೆಯಿಂದ ಆಹಾರವನ್ನು



ಆಯುದಗಳು

ದೊರಕಿಸಿಕೊಳ್ಳುವುದಕ್ಕಾಗಿಯೂ ಉಪಯೋಗಿಸುತ್ತಿದ್ದನು. ಆದಿ ಮನುಷ್ಯನಿಗೆ ಆಯುಧಗಳ ಅವಶ್ಯಕತೆ ಕಂಡಂತೆ ಅಧುನಿಕ ಮನುಷ್ಯನಿಗೂ ಅವುಗಳ ಅನಿವಾರ್ಯತೆ ಇದ್ದೇ ಇದೆ.

ಮನುಷ್ಯನಿಗೆ 'ಮಾತು' ನಂತರ ಬಂದಿರಬೇಕು. ಅದಕ್ಕಿಂತ ಪೂರ್ವದಲ್ಲಿಯೇ ಅವನ ಕೈಯಲ್ಲಿ ಆಯುಧಗಳು ಬಂದವು. ಅವನನ್ನು ರಕ್ಷಣೆ ಮಾಡಿದವು; ಶತ್ರುಗಳ ತೊಂದರೆ ನಿವಾರಿಸಿದವು, ಆಹಾರವನ್ನು ದೊರಕಿಸಿಕೊಟ್ಟವು. ಮನುಷ್ಯ ಬದುಕಿನೊಂದಿಗೆ ಹೀಗೆ ನಿಕಟ ಸಂಬಂಧವನ್ನು ಸ್ಥಾಪಿಸಿಕೊಂಡವು.

ಇಂದು ಮನುಷ್ಯನು ಅಣುಯುಗದಲ್ಲಿ ಬಂದು ನಿಂತಿದ್ದಾನೆ. ಅಣ್ವಾಸ್ತ್ರಗಳಿಂದಲೇ ಹಲವು ದೇಶಗಳು ವಿಶ್ವದಲ್ಲಿ ಮಹಾಶಕ್ತಿಗಳಾಗಿ ಬೆಳೆದು ನಿಂತು, ತಮ್ಮ ಹಿಡಿತವನ್ನು ಬೇರೆ ದೇಶಗಳ ಮೇಲೆ ಸಾಧಿಸುತ್ತಲಿವೆ. ಇದು ವರ್ತಮಾನದ ದುರಂತವಾಗಿರುವಂತೆ ಭವಿಷ್ಯತ್ತಿನ ದುರಂತವೂ ಹೌದು. ದುರಂತಕ್ಕೆ ಆಯುಧಗಳನ್ನು ಹೊಣೆಯಾಗಿಸುವುದಕ್ಕಿಂತಲು, ಮನುಷ್ಯನ ಸ್ವಾರ್ಥ ಮತ್ತು ವಿಕೃತ ಮನಸ್ಸು ಹೊಣೆಯಾಗಿಸುವುದು ಹೆಚ್ಚು ಸಮಂಜಸ.

ಪ್ರಭುತ್ವ ವ್ಯವಸ್ಥೆಯಲ್ಲಿ ಅರಸರುಗಳ ಪ್ರಭುತ್ವ ವಿಸ್ತಾರಕ್ಕಾಗಿ ಆಯುಧಗಳು ನೆರವಾಗಿವೆ. ಅವರ ಬೇಟೆಯಾದಿಗಳಂತಹ ಆಮೋದ-ವಿನೋದ ಕಾರ್ಯಗಳಲ್ಲೂ ಅವು ಭಾಗಿಯಾಗಿವೆ. ಸ್ವಯಂವರಗಳಲ್ಲಿಯೂ ಅವು ತಮ್ಮ ಮಹತ್ವವನ್ನು ಕಾಣುವಂತೆ ಮಾಡಿವೆ. ಆಯುಧಗಳು ವೀರರ ವೀರತ್ವದ ನಿಕಷಗಳಾಗಿ ನಿಂತಿವೆ. ಪ್ರಾಚೀನ ಕಾಲದ ಕನ್ನಡ ಸಮಾಜದ ಸ್ತ್ರೀಯರು ದೇಹದ ಮೇಲೆ ಹೆಚ್ಚು ಆಯುಧಗಳ ಘಾಯದ ಗುರುತಿರುವ ಪುರುಷರನ್ನು ಮೆಚ್ಚಿಕೊಳ್ಳುತ್ತಿದ್ದರಂತೆ. ಹೀಗಾಗಿ ಸ್ತ್ರೀ-ಪುರುಷರ ಪ್ರೇಮಕ್ಕಾಗಿ ಅವು ತಮ್ಮ ಸಾಕ್ಷಿಯನ್ನು ಒದಗಿಸಿವೆಯೆನ್ನಬೇಕು. ಕ್ಷತ್ರಿಯರ ಕೈಗಳಿಗೆ ಭೂಷಣ ಪ್ರಾಯವಾಗಿದ್ದ ಆಯುಧಗಳು ಜನಸಾಮಾನ್ಯರ ಕೈಗಳಿಗೆ ಸಹಜವಾಗಿಯೇ ಬಂದಿವೆ. ಯಾವುದು ಕಟ್ಟು-ಪಾಡುಗಳಿಗೆ ಸಿಲುಕಿಕೊಳ್ಳದೆ ಅವು ದೊರಕಿವೆ.

ರೈತವರ್ಗವು ಹಲವಾರು ಆಯುಧಗಳನ್ನು ಒಕ್ಕಲುತನ ಕಾಯಕದ ಸಾಧನವಾಗಿಯೂ ಬಳಕೆ ಮಾಡುತ್ತದೆ. ಬೇಡರು, ಕಾಡು ಜನರು, ಹಲವು ಬುಡಕಟ್ಟಿನ ಜನರಿಗೆ ಆಯುಧಗಳು ಜೀವಂತುಗಳೇ ಆಗಿದ್ದವು; ಆಗಿವೆ. ಬ್ರಾಹ್ಮಣ-ವೈಶ್ಯರ ಮನೆಗಳಲ್ಲಿ ಆಯುಧಗಳು ಇಲ್ಲವೆಂದಲ್ಲ. ಮನೆಯ ಬಳಕೆಯ ವಸ್ತುಗಳಲ್ಲಿಯೇ ಅವು ಸೇರಿಕೊಂಡು ಉಪಯೋಗವಾಗುವುದನ್ನು ನೋಡಬಹುದು.

ಶಿಲಾಯುಗದ ಮನುಷ್ಯನು ಕಲ್ಲಿನಿಂದ ಮಾಡಿದ ಆಯುಧಗಳನ್ನು ಉಪಯೋಗಿಸುತ್ತಿದ್ದ. ಒರಟಾದ ಕಲ್ಲುಗಳು ಕಾಲಾಂತರದಲ್ಲಿ ರೂಪು ಪಡೆದುಕೊಂಡವು. ಅವು ನುಣುಪಾದವು, ಚೂಪಾದವು, ಮರದ ಚೂಪಾದ ಕಟ್ಟಿಗೆಗಳನ್ನು ಆದಿ ಮನುಷ್ಯ ಆಯುಧದಂತೆ ಉಪಯೋಗಿಸುತ್ತಿದ್ದ. ಬೆಲ್ಜಿಯಂ, ಫ್ರಾನ್ಸ್, ಭಾರತ, ಚೀನ, ಸಿರಿಯಾ, ಜರ್ಮನ, ಇಂಗ್ಲೆಂಡ ಮುಂತಾದ ದೇಶಗಳಲ್ಲಿ ನಡೆದ ಭೂಶೋಧನೆಯಲ್ಲಿ ಮೊದಲ ಶಿಲಾಯುಗದ ಆಯುಧಗಳ ಪಳಯುಳಿಕೆಗಳನ್ನು ಸಂಶೋಧಕರು ಶೋಧಿಸಿರುವರು. 50,000 ವರ್ಷಗಳ ಪೂರ್ವದಲ್ಲಿಯೇ ಆಯುಧಗಳ ಬಳಕೆ ಮನುಷ್ಯ ಬದುಕಿನಲ್ಲಿ ಆವಶ್ಯಕವಾಗಿತ್ತೆಂಬುದನ್ನು ಶೋಧಗಳು ತಿಳಿಸುತ್ತವೆ. ಕಲ್ಲಿನಿಂದ ಮಾಡಿದ ಕೊಡಲಿ, ಮೂಳೆಗಳಿಂದ ನಿರ್ಮಿಸಿದ ಚೂಪಾದ ಕತ್ತಿಯವಂತಹ ಆಯುಧಗಳು ಹಳೆಯ ಶಿಲಾಯುಗದ ಮನುಷ್ಯರು ಬಳಕೆ ಮಾಡುತ್ತಿದ್ದರು.

12000 ವರ್ಷಗಳ ಹಂತಕ್ಕೆ ಸರಿದು ನೋಡಿದಾಗ ಮನುಷ್ಯನು ಆಯುಧಗಳ ನಿರ್ಮಿತಿಯಲ್ಲಿ ಪ್ರಗತಿ ಸಾಧಿಸಿದನೆಂದು ಹೇಳಬೇಕಾಗುತ್ತದೆ. ಈ ಕಾಲಮಾನವನ್ನು ಮಧ್ಯಶಿಲಾಯುಗ ಎಂದು ಇತಿಹಾಸ ತಜ್ಞರು ಗುರುತಿಸಿರುವುದುಂಟು. ಈ ಕಾಲದಲ್ಲಿ ಲೋಹಗಳ ಶೋಧವಾದ ಕಾರಣದಿಂದ, ಲೋಹದ ಆಯುಧಗಳು ಬಳಕೆಗೆ ಬಂದವು. ಕಬ್ಬಿಣದ ಯುಗದಲ್ಲಿ ಕಬ್ಬಿಣ-ಉಕ್ಕಿನಿಂದ ನಿರ್ಮಿತವಾದ ಆಯುಧಗಳು ಮನುಷ್ಯನ ಕೈಗೆ ಬಂದವು. ತಾಮ್ರದ ಲೋಹವೂ ಆಯುಧಗಳ ನಿರ್ಮಿತಿಯಲ್ಲಿ ಬಳಕೆಯಾಯಿತು. ಹರಪ್ಪ-ಮಹೆಂಜೋದಾರೋ ಸಂಸ್ಕೃತಿಯಲ್ಲಿ ತಾಮ್ರದ ಆಯುಧಗಳ ಕುರುಹು ಕಂಡುಬರುತ್ತದೆ.

ಭಾರತೀಯ ಯುದ್ಧ ಪದ್ಧತಿಯಲ್ಲಿ ಚದುರಂಗ ವ್ಯವಸ್ಥೆಯಿದ್ದಿತು. ಚತುರಂಗ ಬಲಗಳು ಶಸ್ತ್ರಾಭ್ಯಾಸ ನಡೆಸುತ್ತಿದ್ದವು. ಹೀಗೆ ಆಯುಧಗಳ ಬಳಕೆಯಲ್ಲಿ ಶಾಸ್ತ್ರೀಯ ಕ್ರಮ ಜಾರಿಗೆ ಬಂದಿತು. ಪ್ರಾಚೀನ ಭಾರತ ಯುದ್ಧಗಳಲ್ಲಿ ಬಿಲ್ಲು-ಬಾಣಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದ್ದಿತು. ಕಲ್ಲು; ಕಠಾರಿ, ಶೂಲಗಳು, ಭಲ್ಲೆಗಳು, ಕೊಡಲಿ, ಕವಣೆಯಾದಿಗಳು ಆಯುಧಗಳಾಗಿ ಬಳಕೆಗೊಂಡುವು. ಹಲವೂ ಆಯುಧವಾಗಿತ್ತು. ಒನಕೆಯೂ ಒಂದು ಆಯುಧವಾಗಿತ್ತು. ಭಾರತೀಯ ಪುರಾಣ ಕಾವ್ಯಗಳಲ್ಲಿ ಹಲವಾರು ಧನಸ್ಸುಗಳ ಉಲ್ಲೇಖ ಬರುತ್ತದೆ. ಶಾರ್ಙ್ಗರವ, ಪಿನಾಕ, ಕೋದಂಡ, ಗಾಂಡೀವ ಅಂತಹ ಕೆಲವು ಧನಸ್ಸುಗಳಾಗಿವೆ. ವೀರರು ಧನಸ್ಸುಗಳೊಂದಿಗೆ ಅಗಲವಾದ ಎರಡು ಬಾಯಿಯ ಖಡ್ಗ, ಕಿರುಕತ್ತಿ, ಭರ್ಜಿ, ಗುರಾಣಿಗಳನ್ನು ಬಳಕೆ ಮಾಡುತ್ತಿದ್ದರು. ಆಯುಧಗಳಲ್ಲಿ ಕೆಲವು ವಿಷದ ಆಯುಧಗಳೂ ಒಳಗೊಂಡಿರುತ್ತಿದ್ದವು. ಮಂತ್ರ ಶಕ್ತಿಯಿಂದ ಪ್ರಯೋಗಿಸಬಹುದಾದ ಸನಿಹ್ರದಾದ ಕೆಲವು ಅಸ್ತ್ರಗಳು ಇದ್ದವು. ಪುರಾಣ ಕಾವ್ಯಗಳಲ್ಲಿ ಅವುಗಳ ವಿವರ ಬಂದಿದೆ. ಪಾಶುಪತ, ಇಂದ್ರ, ವಾಯವ್ಯ, ಆಗ್ನೇಯ, ಬ್ರಹ್ಮ, ಸಂಮ್ಮೋಹನ ಮುಂತಾದವುಗಳು ಮಂತ್ರ ಶಕ್ತಿಯ ಬಲದಿಂದ ಚಲಾಯಿಸುವ ಅಸ್ತ್ರಗಳಾಗಿದ್ದವು. ಗದೆಯೂ ಒಂದು ಮಹತ್ವದ ಆಯುಧವಾಗಿತ್ತು. ಮಹಾಭಾರತದ ಯುದ್ಧವು ಗದಾಯುದ್ಧದಿಂದಲೆ ಕೊನೆಗೊಂಡಿದೆ. ಆಭರಣಗಳನ್ನು ಕೆಲವು ಆಯುಧಗಳಂತೆ ಬಳಕೆ ಮಾಡಲಾಗುತ್ತಿದ್ದಿತು. ಉಗುರುಗಳಿಗೆ ಹಾಕಿಕೊಳ್ಳುತ್ತಿದ್ದ ಉಗುರುಗಳು, ಕೈ ಕಟ್ಟುಗಳಲ್ಲಿ ಇರುವ ಮೊನಚಾದ ಭಾಗಗಳು ಆತ್ಮರಕ್ಷಣೆಗೆ ಪೂರಕವಾದ ಆಯುಧಗಳಾಗಿ ಕಾರ್ಯ ಮಾಡುತ್ತಿದ್ದವು.

ಜನಪದರ ಬದುಕಿನಲ್ಲಿ ನಿತ್ಯ ಉಪಯೋಗವಾಗುವ ಕುರುಪಿ, ಕುಡಗೋಲು, ಚಾಕು, ಚೂರಿ, ಚೂಪಕೊಡಲಿ, ಹಾರೆ, ಕವಣಿ, ಬೆತ್ತ, ಗುದ್ದಲಿ, ಬಾರುಕೋಲು, ಚಾಟಿ, ಈಟಿ, ಕತ್ತರಿಯಾದಿಗಳೆಲ್ಲ ಆಯುಧ ಪ್ರಕಾರಗಳೇ ಆಗಿವೆ.

ಮನುಷ್ಯ ಬದುಕಿನೊಂದಿಗೆ ಆಯುಧಗಳ ನಿಕಟವಾದ ಸಂಪರ್ಕ ಇರುವುದರಿಂದಲೇ ಜನಪದರು ವಿಜಯದಶಮಿ ಹಬ್ಬದ ಸಂದರ್ಭದಲ್ಲಿ "ಆಯುಧ ಪೂಜೆ ಸಲ್ಲಿಸಿ" ಅವುಗಳಿಗೆ ತಮ್ಮ ಭಕ್ತಿ–ಕೃತಜ್ಞತೆಗಳನ್ನು ಅರ್ಪಿಸುತ್ತಾರೆ. *(ಎಸ್‌ಎಂಎಚ್)*

ಆರ: ಆಹಾರ ಜೀವಕೋಟಿಗೆಲ್ಲ ಅತ್ಯವಶ್ಯಕ. ಅದನ್ನು ಕಾಲ್ಪನಿಕ ಚೇತನಗಳಿಗೂ ಅರ್ಪಿಸುವ ವಿಧಾನಗಳನ್ನು ಸಮಾಜ ರೂಢಿಸಿಕೊಂಡು ಬಂದಿದೆ. ದೇವರಿಗೆ ಅರ್ಪಿಸಿದ ಆಹಾರ 'ಎಡೆ' 'ನೈವೇದ್ಯ' ಎನ್ನಿಸಿದರೆ, ಅದೇ ದೆವ್ವ ಭೂತ ಪಿಶಾಚಿಗಳಿಗೆ ಅರ್ಪಿಸಿದರೆ ಅದು 'ಆರ' ವಾಗುತ್ತದೆ.

'ಆರ' ಇಡುವ ಆಚರಣೆ ಹಳ್ಳಿಗಳಲ್ಲಿ ಸಾಕಷ್ಟು ದಟ್ಟ ಪ್ರಮಾಣದಲ್ಲಿತ್ತು. ದೆವ್ವ, ಭೂತ, ಪಿಶಾಚಿ, ಇವು ನಿರಾಕಾರ, ದೃಗ್ಗೋಚರವಲ್ಲದ ಕಾರಣ ಇವಕ್ಕೆ 'ಗಾಳಿ' ಎಂದೂ ಹೇಳಲಾಗುತ್ತದೆ. ಈ ಅಗೋಚರ ಶಕ್ತಿಗಳು ಅಲ್ಲಲ್ಲಿ ವಾಸಿಸುತ್ತಿರುತ್ತವಂತೆ! ಇದನ್ನರಿಯದ, ವಿಶೇಷವಾಗಿ ಮಕ್ಕಳು, ಹೆಣ್ಣು ಮಕ್ಕಳು ಆ ಸ್ಥಳದಲ್ಲಿ ಹಾದು ಹೋದರೆ ಅವರನ್ನು ಹಿಡಿದುಕೊಂಡು ಅವರ ಮೈ ಸೇರುತ್ತವಂತೆ, ಅವುಗಳಿಂದ ಮುಕ್ತರಾಗಲು ಮಾಂತ್ರಿಕರ ಮೊರೆ ಹೋಗುತ್ತಾರೆ ಅವರು ಮಾಟ ಮಂತ್ರ ಮಾಡಿ, ದೆವ್ವ ಭೂತ ಬಿಡಿಸುವ ಹಲವಾರು ವಿಧಾನಗಳನ್ನು ಅನುಸರಿಸುವುದಿರಲಿ, ವಿಶಿಷ್ಟ ಸ್ಥಳದಲ್ಲಿ 'ಆರ' ಇಟ್ಟು ಬರಲು ಹೇಳುತ್ತಾರೆ ಅದರಲ್ಲಿ ಆ ದೆವ್ವ ಬಯಸುವ ಆಹಾರವಲ್ಲದೆ, ನಿಂಬೇಹಣ್ಣು, ಟೆಂಗು, ಎಲೆ, ಅಡಿಕೆ, ಕುಂಕುಮ ಮೊದಲಾಗಿ ಮಂತ್ರಿಸಿದ ವಸ್ತುಗಳನ್ನು ಇಡುತ್ತಾರೆ. ಅದನ್ನು ನೋಡಿದ ಜನ ದೂರ ಹಾಯ್ದು ಹೋಗುತ್ತಾರೆ ಅದು ಭೂತ–ವಿರುವ ಸ್ಥಳವೆಂಬ ನಂಬುಗೆ.

'ಆರ' ಇಡಲು ಹೋಗುವವರು ವಿಶೇಷವಾಗಿ ಧೈರ್ಯವಂತ ಗಂಡಸರು. ಮೂರು ಸಂಜೆಯ ಹೊತ್ತು ಯಾರೂ ನೋಡದಂತೆ, ಮೌನವಾಗಿ ಹೋಗಿ ಮಾಂತ್ರಿಕ ಹೇಳಿದ ಸ್ಥಳದಲ್ಲಿ ಇಟ್ಟು ಆ ಕಡೆ ಹೊರಳಿ ನೋಡದೇ ಬರಬೇಕಂತೆ! ನೋಡಿದರೆ ಪಿಶಾಚಿ ಅವರ ಬೆನ್ನು ಹತ್ತಿ ಮತ್ತೆ ಮನೆಗೆ ಬರುತ್ತದಂತೆ! ಹೀಗೆ ಕಾಲ್ಪನಿಕ ಕ್ಷುದ್ರ ಶಕ್ತಿಗಳ ಸಂತೃಪ್ತಿಗೆ ಇಡುವ ಆಹಾರವೇ 'ಆರ'. ಇಂದು ಪಟ್ಟಣಗಳಲ್ಲಿ ಅಲ್ಲಲ್ಲಿ 'ಆರ' ಇಟ್ಟುದನ್ನು ನೋಡಬಹುದಾಗಿದೆ.

ಕನ್ನಡ ಜನಪದ ಸಾಹಿತ್ಯದಲ್ಲಿ 'ಕೆರೆಗೆ ಹಾರ' ಒಂದು ಪ್ರಖ್ಯಾತ ಹಾಡು. ಅದರ ಆಶಯವೂ ಬಲಿ ಆಹಾರ ಕೊಡುವುದೇ ಆಗಿದೆ. ಕಲ್ಲನಕೇರಿ ಮಲ್ಲನಗೌಡ ಕಟ್ಟಿಸಿದ ಕೆರೆಗೆ ನೀರು ಬರದಿದ್ದಾಗ ತನ್ನ ಸಣ್ಣ ಸೊಸೆ ಭಾಗೀರತಿಯನ್ನೇ ಕೆರೆಗೆ ಬಲಿ ಕೊಡುತ್ತಾರೆ. ನೀರು ಬರುತ್ತ ಕೆರೆಗೆ ಕೊಟ್ಟ ಈ ಆಹಾರವನ್ನೇ 'ಕೆರೆಗೆ ಹಾರ' ಎಂದು ವೈಭವೀಕರಿಸುತ್ತಾರೆ. ಜಲಾಶಯ ಜನರ ಬಲಿ ಕೇಳುತ್ತವೆನ್ನುವದನ್ನು ಈ ವಿಜ್ಞಾನ ಯುಗದಲ್ಲಿಯೂ ಜನ ನಂಬುತ್ತಾರೆ. ಈ 'ಹಾರ' ಆಹಾರದ ಇನ್ನೊಂದು ರೂಪವೇ ಆಗಿದೆ ಮೂಢ ನಂಬಿಕೆಯ ಹಿನ್ನೆಲೆಯಲ್ಲಿ ಈ ಬಲಿ 'ಹಾರ'ವಾಗಿದ್ದನ್ನು ಗಮನಿಸಬಹುದಾಗಿದೆ.

ಹೀಗೆ 'ಆಹಾರ' ಪದ ಆದಿ ಅಕ್ಷರ ಲೋಪವಾಗಿ 'ಹಾರ' ವಾದರೆ, ಮಧ್ಯಕ್ಷರಲೋಪವಾಗಿ 'ಆರ'ವಾದದ್ದು ಜನರ ಉಚ್ಚಾರ ದೋಷದಿಂದಾಗಿಯೋ, ಸಂದರ್ಭಕ್ಕನುಗುಣವಾಗಿಯೋ ಹೇಳುವುದು ಕಷ್ಟ. ಏನೇ ಆದರೂ ಭಾಷೆ ಹೇಗೆ ಸಂಸ್ಕೃತಿಯ ಸ್ವರೂಪ ಬದಲಿಸಬಲ್ಲುದೆಂಬುದಕ್ಕೆ ಇದೊಂದು ನಿದರ್ಶನ.

(ಎಂ.ಜಿ.ಐ.)

ಆರಿಹಾಜ್ ಪೀರ್ ಪಾಷ: ಜನಪದ ವೈದ್ಯ ಪೀರ್ ಪಾಷ ಇವರು ವೃತ್ತಿಯಿಂದ ಒಕ್ಕಲಿಗರಾಗಿದ್ದು. ಪ್ರವೃತ್ತಿಯಿಂದ ಜನಪದ ವೈದ್ಯರಾಗಿದ್ದಾರೆ. ಮೂಳೆ (ಎಲುಬು) ಜೋಡಣೆಯಲ್ಲಿ ವಿಶೇಷವಾದ ಹೆಸರನ್ನು ಪಡೆದಿರುವ ಇವರು ರೋಗಿಗಳಿಂದ ಯಾವುದೇ ರೀತಿಯ ಸಂಭಾವನೆ ಪಡೆದವರಲ್ಲ. ಸಿಂಧನೂರಿನವರಿಗೆ ಮಾತ್ರವಲ್ಲದೆ ರಾಯಚೂರು ಜಿಲ್ಲೆಯ ಬಹುತೇಕ ಎಲ್ಲಾ ತಾಲ್ಲೂಕಿನ ಜನರಿಗೆ ಚಿರಪರಿಚಿತ ವ್ಯಕ್ತಿ. ಈ ವೈದ್ಯ ಪದ್ಧತಿ ತನ್ನಿಂದ ನಿಂತು ಹೋಗಬಾರದು ಎಂಬುದು ತಮ್ಮ ಮಗನಿಗೆ ಕಲಿಸಿ. ಹಳ್ಳಿ ಹಳ್ಳಿಗೆ ಕಳಿಸಿ ವೈದ್ಯ ಪದ್ಧತಿ ಮುಂದುವರಿಯಲು ಕಾರಣರಾಗಿದ್ದಾರೆ. *(ಜಿಆರ್‌ಟಿ.)*

ಆರೋಲಿ ಹುಲಿಗೆಮ್ಮ: ರಾಯಚೂರು ಜಿಲ್ಲೆ ಮಾನವಿ ತಾಲ್ಲೂಕಿನ ಆರೋಲಿ ಗ್ರಾಮದೇವತೆ. ಮಟಮಾರಿ ರೈಲು ನಿಲ್ದಾಣದಿಂದ ಪಶ್ಚಿಮಕ್ಕೆ ಐದು ಕಿ.ಮೀ. ದೂರದಲ್ಲಿ ಈ ಊರಿದೆ. ಈ ಊರಿನಲ್ಲಿ ದ್ಯಾವಮ್ಮ, ಮಾರೆಮ್ಮ, ಪಾಲಕಮ್ಮರ ಗುಡಿಗಳಿದ್ದರೂ ಈ ದೇವಿಗೆ ಅಗ್ರಪೂಜೆ ನಡೆಯುವುದು. ಹೀಗಾಗಿ ಪರಸ್ಥಳದ ಜನರು ದೇವಿಯಿಂದಲೇ ಗುರುತಿಸಿ ಆರೋಲಿ ಹುಲಿಗೆಮ್ಮ ಎಂದು ಕರೆಯುವರು.

ಅರೋಲಿಹುಲಿಗೆಮ್ಮನ ಗುಡಿಯ ಬಾಗಿಲು ಪೂರ್ವ ದಿಕ್ಕಿನೆಡೆಗೆ ಇದೆ. ಮುಂದೆ ಮಾತಂಗಿ ಗುಡಿಯಿದೆ. ಮೊದಲಿದ್ದ ಗುಡಿಯ ಸ್ವರೂಪ ಈಗ ಉಳಿದಿಲ್ಲ. ಹದಿನೆಂಟು ಅಡಿ ಉದ್ದ, ಹದಿನೆಂಟು ಅಡಿ ಅಗಲ ಚೌಕಾಕಾರದಲ್ಲಿ ಕಟ್ಟಿದ್ದಾರೆ. ಮೇಲೆ ಸಿಮೆಂಟಿನ ಶಿಖರವಿದೆ. ಕೆಳಗೆ ಕಲ್ಲಿನ ತೊಲೆಗಳಿಂದ ದೊಡ್ಡ ಕಲ್ಲುಗಳಿಂದ ಗುಡಿ ಕಟ್ಟಿದ್ದಾರೆ. ಹನ್ನೆರಡು ಕಲ್ಲಿನ ಕಂಬಗಳಿವೆ, ಮೇಲೆ ಕಲ್ಲಿನ ಕಳಸವಿದೆ. ಮುಂದೆ ಕೆರೆಯಿದೆ, ಪಶ್ಚಿಮ ದಿಕ್ಕಿಗೆ ಸ್ವಲ್ಪ ದೂರದಲ್ಲಿ ಬಾವಿ ಇದೆ. ಗುಡಿಯ ಸುತ್ತಮುತ್ತಲು ಹಿಂದಿನ ಕಾಲದ ಮೂರ್ತಿಗಳಿವೆ. ಹಿಂದೆ ಇದು ಕಾಡಾಗಿದ್ದರಿಂದ ಈಗಲೂ ಗಿಡಗಳು ಸುತ್ತಮುತ್ತ ಇರುವುದನ್ನು ಕಾಣುತ್ತೇವೆ. ಕಾಲ ಕಾಲದಿಂದ ಹುತ್ತನ್ನೆ ಹುಲಿಗೆಮ್ಮ ಎಂದು ಭಾವಿಸಿ ಪೂಜಿಸುತ್ತ ಬಂದಿರುವುದರಿಂದ ಮೂಲದಲ್ಲಿಯೇ ಮೂರ್ತಿಯಿಲ್ಲ. ಇತ್ತೀಚೆಗೆ ಬೆಳ್ಳಿ ಮುಖವಾಡ ಮಾಡಿಟ್ಟಿದ್ದಾರೆ. ಆರೋಲಿ ಹುಲಿಗೆಮ್ಮನನ್ನು ಕುರಿತು ಜನಪದರು ಹೀಗೆ ಹೇಳುತ್ತಾರೆ. ಈಗ ಆರೋಲಿಯಲ್ಲಿ ಗುಡಿಯಿರುವ ಸ್ಥಳದಲ್ಲಿ ಹಿಂದೆ ದಟ್ಟವಾದ ಅಡವಿ ಇತ್ತಂತೆ. ಅಲ್ಲೊಂದು ಹುತ್ತವೂ ಇತ್ತೆಂದು ಹೇಳುವರು. ಆ ಹುತ್ತದಲ್ಲಿ ಆಳವಾಗಿ ಹೂತಿರುವಂತೆ, ಹುತ್ತದೊಳನಿಂದ ಒಬ್ಬ ಹೆಣ್ಣುಮಗಳು ಕೂಗಿದಂತೆ ಸ್ವರ ಕೇಳಿಬರುತ್ತಿತ್ತಂತೆ. ಅಲ್ಲಿಗೆ ಹೆಂಡಿ ಹಿಡಿಯಲು ಬಂದಿದ್ದ ಒಬ್ಬ ವಡ್ಡರ ಹೆಣ್ಣು ಮಗಳಿಗೆ ಆ ಸ್ವರ ಕೇಳಿಸಿತಂತೆ. ಅದೇ ಚಿಂತನೆಯಲ್ಲಿ ಆ ಹೆಣ್ಣು ಮಗಳು ವಿಚಾರಿಸುತ್ತ ಮನೆಗೆ ಹೋಗಿ ಮಲಗಿಕೊಂಡಳಂತೆ. ಆಕೆಯ ಕನಸಿನಲ್ಲಿ ಅಂದು ದೇವಿ ಬಂದು ಹೀಗೆಂದಳಂತೆ. ಅಮ್ಮ ಮಗಳೇ ನಾನು ಹುಲಿಗೆಮ್ಮ ನನ್ನನ್ನು ಪೂಜಿಸು. ನೀನು ನನ್ನನ್ನು ಪೂಜಿಸಿ ಶ್ರದ್ಧಾ–ಭಕ್ತಿಯಿಂದ ನಡೆದುಕೊಂಡರೆ ನಿನ್ನ ಜೀವನದುದ್ದಕ್ಕೂ ಯಶಸ್ವಿಯಾಗಿ ಮುಂದೆ

ಬರುವೆ ಎಂದು ತಿಳಿಸಿದಳಂತೆ. ಆ ವಡ್ಡರ ಹೆಣ್ಣುಮಗಳು ಅಂದಿನಿಂದ ಆ ಹುತ್ತವನ್ನು ಪೂಜಿಸುತ್ತ ಬಂದಳಂತೆ. ಹೀಗೆ ಪೂಜೆ ಮಾಡುತ್ತ ಬಂದಿರುವುದರಿಂದ ಆಕೆಯ ಬದುಕು ಉತ್ತಮಗೊಂಡಿತಂತೆ. ಈ ವಿಚಾರ ಊರಿನ ಜನರಿಗೆಲ್ಲ ಗೊತ್ತಾದಾಗ, ಅವರೂ ಆ ಹುತ್ತದ ಪೂಜೆ ಪೂಜೆ ಆರಂಭಿಸಿದರಂತೆ ಇದರಿಂದ ಅವರ ಬಯಕೆಗಳೆಲ್ಲ ಈಡೇರುತ್ತ ಬಂದಂತೆ ಆ ಹುತ್ತವನ್ನು ಗರ್ಭಗುಡಿ ಮಾಡಿಕೊಂಡು ಒಂದು ಚಿಕ್ಕ ಗುಡಿ ಕಟ್ಟಿಸಿದರಂತೆ. ಅದಕ್ಕೆ ಹುಲಿಗೆಮ್ಮನ ಗುಡಿಯೆಂದು ಕರೆಯತೊಡಗಿದರು. ಅಂದಿನಿಂದ ಈ ಸುದ್ದಿ ಸುತ್ತಿನ ಹಳ್ಳಿಗೆಲ್ಲ ಪಸರಿಸಿತ್ತು. ಈ ವಿಷಯ ತಿಳಿದ ಸುತ್ತಮುತ್ತಲಿನ ಗ್ರಾಮಗಳ ಜನ ದೇವಿಗೆ ನಡೆದುಕೊಳ್ಳಲು ಆರಂಭಿಸಿದರು ದೇವಿಯ ಹೆಸರಿನಲ್ಲಿ ಹಾಡು ಕಥೆಗಳು ಹುಟ್ಟಿಕೊಂಡವು. ಅವತ್ತಿನಿಂದ ದೇವಿಯ ಕುರಿತು ಪೂಜಾವಿಧಿವಿಧಾನ, ಜಾತ್ರೆ–ಉತ್ಸವಗಳು ಹುಟ್ಟಿಕೊಂಡು ಮುಂದೆ ದೊಡ್ಡ ಗುಡಿ ಆಗಿ ಸಾವಿರಾರು ಭಕ್ತರು ಇಂದಿಗೂ ನಡೆದುಕೊಳ್ಳುವಂತೆ ಬೆಳೆದು ಬಂದಿದೆ.

ಆರೋಲಿ ಹುಲಿಗೆಮ್ಮನ ಹುತ್ತಿನ ಪೂಜೆ ವಡ್ಡರ ಹೆಣ್ಣು ಮಗಳು ಆರಂಭಿಸಿದ್ದರಿಂದ ಈಗ ಆಕೆಯ ವಂಶದವರೇ ದೇವಿಯ ಪೂಜಾರಿಗಳಾಗಿದ್ದಾರೆ. ಇತ್ತೀಚೆಗೆ ಆ ಮನೆತನದಲ್ಲಿ ಕುಟುಂಬದ ಜನರ ಸಂಖ್ಯೆ ಹೆಚ್ಚಾದ್ದರಿಂದ ಅವರುಗಳೆಲ್ಲರೂ ವರುಷಕ್ಕೊಬ್ಬರಂತೆ ಎಲ್ಲಮ್ಮ ತಾಯಿ ಪೂಜೆ ಕಾರ್ಯವನ್ನು ನಿರ್ವಹಿಸುತ್ತಲಿದ್ದಾರೆಂದು ಚೆನ್ನಣ್ಣ ವಾಲೀಕಾರರ ಗ್ರಾಮದೇವತೆಗಳ ಜನಪದೀಯ ಅಧ್ಯಯನ ಗ್ರಂಥದಿಂದ ತಿಳಿದು ಬರುವುದು.


(ಎಚ್‌ಡಿ)

ಆಳಂದ: ಇದು ತಾಲ್ಲೂಕಾ ಕೇಂದ್ರವಾಗಿದ್ದು, ಚಾರಿತ್ರಿಕ ಮಹತ್ವವನ್ನು ಹೊಂದಿದೆ. ಇಲ್ಲಿ ಲಾಡಲೆ ಮಸಾಕ ದರ್ಗಾ ಅತ್ಯಂತ ಪ್ರಸಿದ್ಧವಾಗಿದೆ. ಹಿಂದೆ ಇದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು ಊರ ಹೊರಗೆ 'ಹಸ್ತಮಲ್ಲಿಕೇಶ್ವರ' ಗುಡಿಯು ಮಡಕಿ ತಾಂಡ ಹಳ್ಳದ ಮೇಲಿದ್ದು ಅತ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿ ಏಳು ಜ್ಯೋತಿರ್ಲಿಂಗಗಳಿವೆ. ಅಮರ್ಜಾ ನದಿಯ ಉಗಮಸ್ಥಾನ ಆಳಂದದ ಬಳಿ ಇದ್ದು, ಅಲ್ಲಿ ಅಮರೇಶ್ವರ ಲಿಂಗಗಳಿವೆ ಎಂದು ಉಹಿಸುತ್ತಾರೆ. ಊರಲ್ಲಿ ತುಳಜಾ ಭವಾನಿ ದೇವಾಲಯ ಹಾಗೂ ಪಾರ್ಶ್ವನಾಥ ಬಸದಿಗಳಿವೆ. ಇಲ್ಲಿನ 'ಲಾಡ್ಲೆ ಮಸಾಕ ದರ್ಗಾ'ದ ಉರುಸಿನ ಸಂದರ್ಭದಲ್ಲಿ ಹಿಂದು ಮುಸ್ಲಿಂರೆನ್ನದೇ ಲಕ್ಷಾಂತರ ಜನ ಪಾಲ್ಗೊಳ್ಳುತ್ತಾರೆ.

(ಪಿಕೆಕೆ)

ಇ

ಇಟ್ಟಿಗೆ: ರಾಯಚೂರು ಜಿಲ್ಲೆ ಯಲಬುರ್ಗಾ ತಾಲ್ಲೂಕಿಗೆ ಸೇರಿದ ಚಿಕ್ಕಗ್ರಾಮ. ಹಿಂದೆ ಇದು "ಬಹುಧರ್ಮ್ಮಧೇನು ನಿಹವಕ್ಕಾಡುಂಬೊಲಂ" ಆಗಿದ್ದ ಬೆಳವಲ ನಾಡಿನ "ನೆರೆಯಂಗಲ್ಪನ್ನೆರಡು" ವಿಭಾಗಕ್ಕೆ ಸೇರಿದ್ದ ಒಂದು ಪ್ರಮುಖವಾದ ಅಗ್ರಹಾರ. ಇಲ್ಲಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ದಂಡನಾಯಕರಲ್ಲೊಬ್ಬನಾದ



ಮಹಾದೇವ ದೇವಸ್ಥಾನ – ಇಟಗಿ

ಮಹಾದೇವ ದಂಡನಾಯಕ ಬರೆಯಿಸಿದ ಶಿಲಾಶಾಸನವೊಂದಿದೆ. ಈ ಶಾಸನದ ಕಾಲ ಕ್ರಿ.ಶ. 1112. ಈ ಶಾಸನದಲ್ಲಿ ದಂಡನಾಯಕ 'ಕಟ್ಟಿಸಿದ ಮಹದೇವ ದೇವಾಲಯ'ಧ ಅವನ ಹುಟ್ಟಿದ ಊರಾದ 'ಇಟ್ಟಿಗೆ ಮಹಾಗ್ರಹಾರ'ದ ರಮ್ಯವಾದ ವರ್ಣನೆ ಇದೆ.

'ಇಟ್ಟಿಗೆ' ಎನ್ನುವ ಈ ಗ್ರಾಮದ ಹೆಸರೇ ಹಿಂದೆ ಇದೊಂದು ಅಗ್ರಹಾರವಾಗಿದ್ದಿತೆಂಬ ಅಂಶವನ್ನು ಸೂಚಿಸುತ್ತದೆ. ಸಂಸ್ಕೃತದಲ್ಲಿ ಇಷ್ಟಿ, ಇಷ್ಟಿಕಾ ಎಂಬ ಪದಗಳು ಅಗ್ನಿಯನ್ನು ಪ್ರತಿನಿಧಿಸುತ್ತವೆ. ಅಲ್ಲದೇ ಯಜ್ಞಕುಂಡಗಳನ್ನು ಇಟ್ಟಿಗೆಗಳಿಂದ ನಿರ್ಮಿಸುವ ಧಾರ್ಮಿಕ ಪರಂಪರೆ ಇದೆ. ಇಟ್ಟಿಗೆಯ ಶಾಸನದಲ್ಲಿ ಹೋಮಧೂಮದ ವರ್ಣನೆ ಬರುವುದರಿಂದ, ಈ ಹೋಮಕುಂಡಗಳಿಂದಾಗಿಯೇ 'ಇಷ್ಟಿಕಾ' ಎಂಬ ಹೆಸರು ಈ ಗ್ರಾಮಕ್ಕೆ ಬಂದಿರಬೇಕು. ಕಾಲಕ್ರಮೇಣ ಇಟ್ಟಿಗೆ, ಇಟಗಿ ಎಂದು ರೂಪಾಂತರ ಹೊಂದಿರಬೇಕು.ಈ ಅಗ್ರಹಾರ "ಕನಕಾದ್ರಿಯಂತೆ ವಿಭುದಾಶ್ರಯ"ವಾಗಿತ್ತು. ನಿಸರ್ಗ ಸೌಂದರ್ಯದ ಬೀಡಾಗಿದ್ದಿತು.

ಇಟ್ಟಗಿ ಮಹಾಗ್ರಹಾರದಲ್ಲಿದ್ದ ಮಹಾಜನಗಳ ಸಂಖ್ಯೆ ನಾಲ್ಕುನೂರು. ಇವರು ಸಾಹಿತ್ಯ, ವೇದಾಂತ, ಬ್ರಹ್ಮವಿದ್ಯೆಗಳಲ್ಲಿ ಬಲ್ಲಿದರಾಗಿಯೂ, ಪರಿಶುದ್ಧ ಚರಿತ್ರರಾಗಿಯೂ, ನಾಡಿನಲ್ಲಿ ಗೌರವ ಪಡೆದಿದ್ದರು. ಹೋಮ-ಹವನಗಳು ಈ ಅಗ್ರಹಾರದಲ್ಲಿ ನಿರಂತರವಾಗಿ ನಡೆಯುತಿದ್ದುವು. ಇಲ್ಲಿಯ ವಿಪ್ರರು "ಸಕಳ ವ್ಯಾಕರಣಂಗಳುಂ ವಿವಿಧ ವೇದಾರ್ತ್ಥಂಗಳುಂ ಮೂರ್ತ್ತಿಗೊ" ಳ್ಡಂತ್ತಿದ್ದರು. "ಅಮಳ ಜ್ಞಾನರ್ದ್ಧಿ ಸಂಪನ್ನ"ರಾಗಿದ್ದರೆಂದು, ಈ ನಾಲ್ಕು ನೂರು ಇಟ್ಟಿಗೆಯ ವಿಪ್ರರು "ಸಕಳ ಕ್ಷೋಣಿಗೆ ಪೂಜ್ಯ"ರಾಗಿದ್ದರೆಂದು ಶಾಸನ ಹೇಳುತ್ತದೆ.

ಮಹದೇವ ದಂಡನಾಯಕ 'ದೇವಾಲಯ ಚಕ್ರವರ್ತಿ' ಎಂಬ ಅಭಿಧಾನಕ್ಕೆ ಪಾತ್ರನಾದ. ಈತ ಭವ್ಯವೂ ಸುಂದರವೂ ಆದ ಶೈವ ದೇವಾಲಯವನ್ನು ಇಲ್ಲಿ ನಿರ್ಮಿಸಿದ. ತನ್ನ ತಂದೆಯ ನೆನಪಿಗಾಗಿ 'ಮೂರ್ತಿ ನಾರಾಯಣ', ತಾಯಿಯ ಸ್ಮರಣಾರ್ಥ 'ಚಂದಲೇಶ್ವರ' ದೇವಾಲಯಗಳನ್ನು ಕಟ್ಟಿಸಿದ ದಂಡನಾಯಕ ಸರಸ್ವತಿ ಮಠವನ್ನೂ ಕೂಡ ನಿರ್ಮಿಸಿದನೆಂದು ಶಾಸನ ಸಾರುತ್ತದೆ.

"ಇದಪೂರ್ವ್ವಂ ಬ್ರಹ್ಮನುಂ ನಿರ್ಮ್ಮಿಸಲರಿಯನಿದಂ, ಪೋಲಲಾ ವಿಶ್ವಕರ್ಮ್ಮಂಗಿದೆ ದಲ್ಕರ್ಮ್ಮಾಂತರ ಪ್ರೌಢಿಗೆ ಗುರು" ವೆನಿಸುವಂತೆ ಈ ದೇವಾಲಯವಿತ್ತು. ಹೀಗಾಗಿ ಶಾಸನಕಾರ ಇದನ್ನು "ದೇವಾಲಯ ಚಕ್ರವರ್ತಿ" ಎಂದು ಘೋಷಿಸಿ ಬಿಡುತ್ತಾನೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಇಟ್ಟಿಗೆ ಒಂದು ಸುಪ್ರಸಿದ್ಧವೂ, ಸುಂದರವೂ ಆಗಿದ್ದ 'ಮಹಾಗ್ರಹಾರ'ವಾಗಿತ್ತು. *(ಎಲ್‌ಎ)*

ಇರಕಲ್ಲಗಡ ದ್ಯಾಮಮ್ಮದೇವಿ: ಕೊಪ್ಪಳ ಜಿಲ್ಲಾ ಕೇಂದ್ರದಿಂದ 14 ಕಿ.ಮೀ.ಗಳ ಅಂತರದಲ್ಲಿರುವ ಐತಿಹಾಸಿಕ, ಕೇಂದ್ರ. ಸುಮಾರು ಎಪ್ಪತ್ತು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಪುರಾಣ ಕಾರ್ಯಕ್ರಮ ಕುಂಭಮೇಳದ ಆಡಂಬರ ಸಾಮೂಹಿಕ ವಿವಾಹಗಳು ನೂರಾರು ವರ್ಷಗಳಿಂದಲೂ ಜಾರಿಯಲ್ಲಿರುವ ಹನುಮಪ್ಪನ ಜಾತ್ರೆ, ದುರ್ಗವ್ವನ ಕಾರ್ತೀಕೋತ್ಸವ, ಬಸವ ಜಯಂತಿ. ವೀರಭದ್ರೇಶ್ವರ ಕಾರ್ತೀಕೋತ್ಸವಗಳಿಂದಾಗಿ ಅತ್ಯಂತ ಪ್ರಸಿದ್ಧಿ ಪಡೆದಿದೆ. ಐದು ವರ್ಷಗಳಿಗೊಮ್ಮೆ ನಡೆಯುವ ಗ್ರಾಮ ದೇವತೆ ದ್ಯಾಮಮ್ಮದೇವಿಯ ಜಾತ್ರೆಯೂ ಕೂಡ ಈ ಭಾಗದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದು ಲಕ್ಷಾಂತರ ಭಕ್ತರನ್ನು ತನ್ನೆಡೆ ಬರುವಂತೆ ಮಾಡಿದ್ದಾಳೆ ದೇವಿ. ಹೊಸ ಮಳೆ ಪ್ರವೇಶವಾಗಿ ಬಿತ್ತನೆಯ ದಿನಗಳು ಹತ್ತಿರ ಬಂದಂತೆ, ಪ್ರತಿವರ್ಷವೂ ದೇವತೆಯನ್ನು ಗಂಗೆ ಸ್ಥಳಕ್ಕೆ ಕರೆದೊಯ್ದು ಉಡಿತುಂಬಲಾಗುತ್ತದೆ. ಆದರೆ ಐದು ವರ್ಷಕ್ಕೊಮ್ಮೆ ಮಾತ್ರ ಸತತ ಮೂರು ದಿನಗಳ ಕಾಲ ವಿಜ್ರಂಭಣೆಯಿಂದ ಜಾತ್ರೆ ಆಚರಿಸಲಾಗುತ್ತದೆ. ಮಧ್ಯಾಹ್ನದ ಇಳಿ ಹೊತ್ತಿಗೆ ಗುಡಿಯ ಹೊರಗೆ ತಂದ ಆಕರ್ಷಕ ದ್ಯಾಮಮ್ಮ ದೇವತೆಯ ಮೂರ್ತಿಯನ್ನು ಹೆಗಲುಕೊಟ್ಟು ಹೊರುತ್ತಾರೆ. ಮುಂದೆ ಪಾಲಕಿ, ಭಜನೆ, ಬ್ಯಾಂಡು, ಡೊಳ್ಳುಗಳ ಅಬ್ಬರ, ಅದರ ಹಿಂದೆ ದ್ಯಾಮಮ್ಮ ನಮೂರ್ತಿ ಹೊತ್ತವರು. ಮಡಿವಾಳರಿಂದ ಹಳದಿ ಸೇವೆ ನಡೆದಿರುತ್ತದೆ.

ಊರಿನ ಪ್ರಮುಖ ಬೀದಿಗಳಲ್ಲಿ ಹೊರಟ ಮೆರವಣಿಗೆ ಊರ ಹೊರಗಿನ ಗಂಗೆಯ ತಲುಪಿ, ಅಲ್ಲಿ ಪೂಜೆ ಪುನಸ್ಕಾರ, ಹೊಸಬಟ್ಟೆ ಧಾರಣೆ, ಹೂವಿನ ಅಲಂಕಾರ ನಡೆದು, ಪುನಃ ಮೆರವಣಿಗೆ ಊರ ಮಧ್ಯದಲ್ಲಿರುವ ಅರಳಿಗಿಡದ ದ್ಯಾಮಮ್ಮನ ಕಟ್ಟೆ ಮೇಲೆ ಮೂರ್ತಿಯನ್ನು ಕುಳ್ಳಿರಿಸಲಾಗುತ್ತದೆ.

ಜಾತ್ರೆಯ ಎರಡನೆಯ ದಿನ ಹರಕೆ ನಡೆಯುತ್ತವೆ. ಆಗ ಬೆಳಗಿನ ಜಾವ ಒಂದು ಗಂಟೆ ಸಮಯವಾಗಿರುತ್ತದೆ. ಅಷ್ಟೊತ್ತಿಗೆ ಯುವಕರ ತಂಡ ಜಾತ್ರೆ ನಡೆಯುವ ಸ್ಥಳಕ್ಕೆ ಆಗಮಿಸುತ್ತದೆ. ಎಲ್ಲರ ಕೈಯಲ್ಲಿ ಒಂದೊಂದು ಬುಟ್ಟಿಗಳು. ಅದರಲ್ಲಿ ಜೋಳದ ಕಿಚಡಿ ತುಂಬಲಾಗುತ್ತದೆ. ಮತ್ತೆ ಕೆಲವು ಯುವಕರು ಉದ್ದನೆಯ ಕೋಲು, ಕುಡಗೋಲು, ಕೊಡಲಿ ಹಿಡಿದಿರುತ್ತಾರೆ. ಸುಮಾರು 50 ರಿಂದ 100 ಯುವಕರ ತಂಡ ಬೇಟೆಯಾಡುವಂತಿರುತ್ತದೆ. ಆದರೆ ಅದು ಬೇಟೆಯ ಹರಕೆಯಲ್ಲ. ಚರಗ ಚೆಲ್ಲುವ ಹರಕೆ. ಕಿಚಡಿ ಬುಟ್ಟಿಹೊತ್ತು ಅಲ್ಲಿಂದ ಕಾಲುಕಿತ್ತಿದ ಯುವಕರು, ಊರಿನಲ್ಲಿ ಮನೆಗಳ ಸುತ್ತಲೂ ಚರಗ ಚೆಲ್ಲಲು ಓಡಾಡುತ್ತಾರೆ. ಓಡುತ್ತಲೇ ಚೀರುತ್ತಾರೆ. ಕೇಕೇ ಹಾಕುತ್ತಾರೆ. ಬಿರುಸಿನ ವೇಗದಲ್ಲಿ ಸಾಗುವಾಗ ಅಡ್ಡ ಪ್ರಾಣಿಗಳು ಊರ ಅಗಸಿಯ ಹೊರಗೆ ಕಳಿಸಿ ಬರುತ್ತಾರೆ. ಹೊರಗೆ ಹೋದ ಹಾಲೆರೆಯುವ ದಂಡು, ಊರ ಸೀಮೆಯಲ್ಲವೂ ಸುತ್ತಿ. ಪ್ರತಿವರ್ಷವೂ ಬೆಳೆಗಳು ಹಾಲಿನಂತೆ ಉಕ್ಕಲಿ ಎಂದು ಬಯಸಿ ಹಾಲೆರೆದು, ಊರು ಸೇರಿದಾಗ ಅವರಿಗೆ ಆಡಂಬರದ ಆತಿಥ್ಯ ದೊರೆಯುತ್ತದೆ. ಆನಂತರ ಹೂವುಗಳಿಂದ ಅಲಂಕಾರಗೊಂಡ ಗ್ರಾಮ ದೇವತೆಯನ್ನು ಮೆರೆವಣಿಗೆಯಲ್ಲಿ ತಂದಾಗ, ಊರ ಹೆಂಗಳೆಯರು, ಮುತ್ತೈದೆಯರಿಂದ ಮುಡುಪು ಸಲ್ಲುತ್ತದೆ. *(ಬಿವಿಎಂ)*

ಈ

ಈರಮ್ಮ: ಸೋಬಾನೆ ಹಾಡುವುದರಲ್ಲಿ ನಿಪುಣತರಾದ ಕಲಾವಿದೆ. ಹುಟ್ಟಿದ್ದು ಬೀದರ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಹಣಕುಣಿ ಗ್ರಾಮದಲ್ಲಿ. ಶ್ರೀಮಂತ ಕಂತದ ಬಡತನದ ಬೇಗೆಯ ಈ ಹೆಣ್ಣು ಮಗಳಿಗೆ ಹಾಡು ಕಲಿಸಿದವರು ಈಕೆಯ ತಾಯಿ, ನಾಗಮ್ಮನೇ ನೆರೆಮನೆಯ ಅಜ್ಜಿಯವರ ಹತ್ತಿರ ಕುಳಿತು, ಅವರಿಂದ ಹಾಡು ಹೇಳಿಸಿಕೊಂಡು, ತಾಯಿ ಜೊತೆಯಲ್ಲಿ ಮದುವೆ–ಮುಂಜಿ, ಹಬ್ಬ–ಹರಿದಿನ, ಸೋಬಾನ–ಶಾಸ್ತ್ರಗಳಲ್ಲಿ ಹಾಡುವುದೆಂದರೆ ಈರಮ್ಮನಿಗೆ ಎಲ್ಲಿಲ್ಲದ ಸಂತೋಷ. ಕನ್ನಡ 7ನೆಯ ವರ್ಷದಲ್ಲಿ ಓದುತ್ತಿರುವಾಗಲೇ ನೆರೆಯೂರಿನ ನರಸಪ್ಪನೊಂದಿಗೆ ವಿವಾಹ. ಹುಟ್ಟಿದ ಮನೆಯಲ್ಲಿ ಬಳುವಳಿಯಾಗಿ ಬಂದ ಸೋಬಾನೆ ಪದಗಳ ಬುತ್ತಿಗಂಟನ್ನು ಕೊಟ್ಟ ಮನೆಯಲ್ಲೂ ಬಿಚ್ಚಿದಳು. ತೋಟ ಗದ್ದೆಗಳಲ್ಲಿ ಉತ್ತುವಾಗ ಬಿತ್ತುವಾಗ, ಕಳೆ ಕೀಳುವಾಗ ತನ್ನ ಹಾಡಿನ ಪಲ್ಲವಿಯನ್ನು ಪ್ರಾರಂಭಿಸಿದರೆ ದಾರಿ ಹೋಕರು ಕೂಡಾ ನಿಂತು ನೋಡುವಂತಾಗುತ್ತಿತ್ತು. ಬೀದರ್ ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ನೂರಾರು ಬಾರಿ ಹಾಡುಗಳನ್ನು ಹಾಡಿ ತನ್ನ ಅನುಭವ ಸಂಪತ್ತನ್ನು ಬೆಳೆಸಿಕೊಂಡ ಇವರು. ಐತಿಹಾಸಿಕ ವ್ಯಕ್ತಿಗಳ, ಮಹಾಪುರುಷರ ಘಟನೆಗಳ ಹಾಡುಗಳನ್ನು ಸಂಗ್ರಹಿಸಿ ಹಾಡಿದರು. ಹಳ್ಳಿಯ ಹಾಡುಗಳೆಂದರೆ ಮುಖ ಕಿವುಚುವ ಇಂದಿನ ಕಾಲದಲ್ಲಿ ಜಾನಪದದ ಸತ್ವಭರಿತ ನುಡಿಗಳಿಂದ ಜನರ ಮೇಲೆ ಜಾದುಮಾಡಿ ಎಂಥ ಆಧುನಿಕ ವಿಚಾರವುಳ್ಳವನೂ ಸಹ ತಲೆ ದೂಗುವಂತೆ ಹಾಡು ಹೇಳುವ ಕಲೆ ಕರಗತ ಮಾಡಿಕೊಂಡ ಈಕೆಗೆ ಈಗ 48 ವರ್ಷ ವಯಸ್ಸು. ಈ ವಯಸ್ಸಿಯಲ್ಲೂ ಇವರಿಗೆ ಹಾಡುವುದೆಂದರೆ ಎಲ್ಲಿಲ್ಲದ ಉತ್ಸಾಹ. ಯಾರ ಮನೆಯ ಶುಭ ಕಾರ್ಯಗಳು ಜರುಗಿದರೂ ಅಲ್ಲಿ ಈರಮ್ಮ ಇರುತ್ತಾರೆ. ಆಹ್ವಾನಿಸಿ ಹಾಡಿಸುತ್ತಾರೆ. ಮದುವೆಯಲ್ಲಿ ಶಾಸ್ತ್ರಗಳು ಹಲವಾರು. ಆ ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಹಾಡುವುದರಲ್ಲಿ ಇವರು ನಿಪುಣತೆಯನ್ನು ಪಡೆದಿದ್ದಾರೆ. ನಿರರ್ಗಳವಾಗಿ ಸೋಬಾನೆ ಪದ ಹಾಡಿ ಎಲ್ಲರಿಂದಲೂ ಸೈ ಎನಿಸಿಕೊಂಡಿದ್ದಾರೆ. ಕರ್ನಾಟಕ ಜಾನಪದ ಯಕ್ಷಗಾನ ಪ್ರಶಸ್ತಿ ಪಡೆದಿದ್ದಾರೆ.

(ಜಿಆರ್‌ಟಿ)

ಉ

ಉಂಬಳಿ: ಮಾನ್ಯವಾಗಿ ಕೊಡುವ ಭೂಮಿ–ಗ್ರಾಮ. ಇದಕ್ಕೆ ದಾನ–ದತ್ತಿ ಎಂಬ ಹೆಸರುಗಳೂ ಉಂಟು. ಪ್ರಾಚೀನ ಕಾಲದಿಂದಲೂ ಕನ್ನಡನಾಡು ದಾನ–ಧರ್ಮದ ಬೀಡಾಗಿತ್ತು. ಹಿಂದಿನ ಕಾಲಕ್ಕೆ ರಾಜ ಮಹಾರಾಜರು, ನಿಷ್ಠೆಯಿಂದ ಸೇವೆ ಸಲ್ಲಿಸುವ, ಸೈನಿಕನಿರಲಿ, ದೇಶಭಕ್ತನಿರಲಿ, ರೈತನಿರಲಿ, ಕವಿ–ಕಲಾವಿದನಿರಲಿ, ಪುರೋಹಿತನಿರಲಿ, ಅಂಥವರ ಸೇವೆಯನ್ನು ಗುರುತಿಸಿ, ಅವರ ಗೌರವಾರ್ಥವಾಗಿ ಉಂಬಳಿಯ ರೂಪದಲ್ಲಿ ಭೂಮಿಯನ್ನು, ಗ್ರಾಮವನ್ನು ದಾನವಾಗಿ ಕೊಡುತ್ತಿದ್ದರು. ಆ ಭೂಮಿಯನ್ನು ಅವರು ಉತ್ತಿ–ಬಿತ್ತಿ ತಮ್ಮ ಉಪಜೀವನಕ್ಕೆ ಬಳಸಿಕೊಳ್ಳುತ್ತಿದ್ದರು.

ಪ್ರಾಚೀನ ಭಾರತದಲ್ಲಿ 'ದಾನ' ಒಂದು ಮಹೋನ್ನತವಾದ ಮೌಲ್ಯವಾಗಿತ್ತು. ಹಿಂದೆ ರಾಜ–ಮಹಾರಾಜರ ಕಾಲದಲ್ಲಿ ಒಟ್ಟು ಹದಿನಾರು ಪ್ರಕಾರದ ದಾನಗಳು ಪ್ರಚಲಿತವಾಗಿದ್ದವು ಅವುಗಳಲ್ಲಿ, 1. ಮಠ–ಬಸದಿ–ದೇವಾಲಯಗಳಿಗೆ ನೀಡಿದ ದಾನಗಳು, 2. ವಿದ್ಯಾ ಕೇಂದ್ರಗಳಿಗೆ ನೀಡಿದ ದಾನಗಳು, 3. ಕೆರೆ ಅವರಟ್ಟಿಗೆ–ಅಗ್ನಛತ್ರಗಳಿಗೆ ನೀಡಿದ ದಾನಗಳು, 4. ಪಂಡಿತ, ಗಣ್ಯ ವ್ಯಕ್ತಿಗಳಿಗೆ ನೀಡಿದ ದಾನಗಳು ಪ್ರಮುಖವಾದವುಗಳು. ಶಾಸನಗಳಲ್ಲಿ ದಾನಕೊಟ್ಟ ಉದಾಹರಣೆಗಳುಂಟು.

'ಹಲ್ಮಿಡಿ ಶಾಸನ' ನಮಗೆ 'ದಾನ ಶಾಸನ' ವಾಗಿದ್ದು, ಕನ್ನಡಿಗರ ದಾನ ಪರಂಪರೆಗೆ ತನ್ನ ಆಧಾರವನ್ನು ಒದಗಿಸುತ್ತದೆ. ರಾಷ್ಟ್ರಕೂಟ ದೊರೆ ಅಮೋಘವರ್ಷನ ಕಾಲ (866)ದಲ್ಲಿ ಪುಲಿಗೆರೆಯ ನಾಡಿನ ಕುಪ್ಪೆಯರಸ ಎಂಬವನು 'ಭಟಾರ' ಎಂಬ ದೇವಿಯ ದೇವಾಲಯಕ್ಕೆ ಭೂಮಿಯನ್ನು ದಾನ ಮಾಡಿದ ವಿಚಾರವನ್ನು ರಾಷ್ಟ್ರಕೂಟರ ಶಾಸನವು ಹೇಳುತ್ತದೆ. ಗುಲಬರ್ಗಾ ಜಿಲ್ಲೆಯ ಚಿತ್ತಾಪೂರದ ನಾಗಾವಿ, ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಸುಪ್ರಸಿದ್ಧ ಅಗ್ರಹಾರವಾಗಿದ್ದು, 1 ನೇ ಸೋಮೇಶ್ವರನ ಕಾಲಕ್ಕೆ ಘಟಿಕಾಸ್ಥಾನವಾಗಿತ್ತು. ರಾಷ್ಟ್ರಕೂಟ ಅರಸು ಮನೆತನದ 4 ನೇ ಗೋವಿಂದನು ತನ್ನ ಪಟ್ಟಾಭಿಷೇಕದ ಕಾಲದಲ್ಲಿ 600 ಅಗ್ರಹಾರಗಳಿಗೆ ದತ್ತಿಬಿಟ್ಟ ವಿಷಯವನ್ನು ನಾಗಾವಿ ಶಿಲಾ ಶಾಸನಗಳು ಹೇಳುತ್ತವೆ. ಈ ಭಾಗದಲ್ಲಿ ಹೆಚ್ಚು ಉಂಬಳಿ ಕೊಟ್ಟವರು ಸುರಪುರದ ದೊರೆಗಳು (1600–1857) ಎಂದು ತಿಳಿದು ಬರುತ್ತದೆ.

(ಎನ್‌ಕೆ)

ಉಡಕಿ: ಪತಿ ತ್ಯಜಿಸಿದಲ್ಲಿ ಅಥವಾ ಪತಿ ಸತ್ತಿದ್ದಲ್ಲಿ ಹೆಣ್ಣು ಒಪ್ಪಿದ ಬೇರೊಬ್ಬನೊಡನೆ ಸಂಸಾರ ಜೀವನ ನಡೆಸಲು ಅನುಮತಿ ಮಾಡಿಕೊಟ್ಟಿರುವ ಒಂದು ಪದ್ಧತಿ. ಉಡುಕಿ, ಉಡಕಿ ಕೂಡಾವಳಿ, ಕುಡಿಕೆ, ಉಡಿಕೆ ಎಂತಲೂ ಕರೆಯುತ್ತಾರೆ. ವಧು, ವರ ಇಬ್ಬರಿಗೂ ಇದು ಮೊದಲ ಮದುವೆಯಲ್ಲ. ಹೆಣ್ಣಿಗೆ ಮೊದಲ ಪತಿಯು ಮರಣಹೊಂದಿದ್ದಲ್ಲಿ ಅಥವಾ ವಿವಾಹ ವಿಚ್ಛೇದನವಾದಲ್ಲಿ ಅಥವಾ ಅವಳೇ ಅವನನ್ನು ಬಿಟ್ಟಿರುವುದಾಗಲಿ ಇರಬೇಕು. ಗಂಡು ಕೂಡ ವಿಧುರ, ವಿಚ್ಛೇದಿತನಾಗಿದ್ದಲ್ಲಿ ಮರುವಿವಾಹವಾಗುವುದು, ವಿಧುರ ವಿಚ್ಛೇದಿತ ಬಯಸಿದರೆ ಇನ್ನೊಂದು ಕನ್ಯೆಯ ಜೊತೆಗೆ ಮರು ವಿವಾಹವಾಗಬಹುದು. ಆದರೆ ಹೆಣ್ಣು ವಿಧವೆ, ವಿಚ್ಛೇದಿತೆಯಾಗಿದ್ದರೆ ಅದು ಮರುವಿವಾಹವಲ್ಲ ಉಡಿಕೆ ಅಥವಾ ಕೂಡಾವಳಿ ಎನಿಸುತ್ತದೆ.

ಇಲ್ಲಿ ವಯಸ್ಸಿನ ಮಿತಿ ಇಲ್ಲ. ಮೇಲ್ವರ್ಗದ ಬ್ರಾಹ್ಮಣ ಮತ್ತು ಇತರ ಸಮುದಾಯದವರಲ್ಲಿ ಈ ಪದ್ಧತಿಗಳಿಲ್ಲ. ಕೆಳವರ್ಗದ ಜನರಲ್ಲಿಯೇ ಹೆಚ್ಚು. ಇಲ್ಲಿ ಗಂಡು ಹೆಣ್ಣು ಇಬ್ಬರಿಗೂ ಮಕ್ಕಳಿರಬಹುದು. ಇಲ್ಲದಿರಬಹುದು. ಹೆಣ್ಣು ಮಾತ್ರ ಮೊದಲಿನ ಪತಿಯ ಆಸ್ತಿಗೆ ಹಕ್ಕುದಾರಳಾಗಿರದೆ ಎರಡನೆಯ ಪತಿಯ ಆಸ್ತಿಗೆ ಒಡತಿಯಾಗುತ್ತಾಳೆ. ಗುರು ಹಿರಿಯರ ಮತ್ತು ಕೂಡಿಕೆ ಮಾಡಿಕೊಳ್ಳುವ ಇಬ್ಬರ ಒಪ್ಪಿಗೆ ಇದ್ದರಾಯಿತು. ಮದುವೆಯ ಎಲ್ಲ ಶಾಸ್ತ್ರಗಳನ್ನು ಮಾಡುವುದಿಲ್ಲ. ಮಕ್ಕಳು ಇದರಲ್ಲಿ ಭಾಗವಹಿಸುವಂತಿಲ್ಲ. ಕೇವಲ ನಾಲ್ಕಾರು ಹಿರಿಯರ ಸಮ್ಮುಖದಲ್ಲಿ ರಾತ್ರಿ ಹೊತ್ತು. ಹೆಣ್ಣು ಗಂಡಿಗೆ ಹೊಸ ಬಟ್ಟೆ ಕೊಟ್ಟು ಅವಳಿಗೆ ದೇವರ ಮನೆಯಲ್ಲಿ ಮಾಂಗಲ್ಯ ಕಟ್ಟುವ ಶಾಸ್ತ್ರ ಮಾಡುತ್ತಾರೆ. ಇತ್ತೀಚೆಗೆ ದೇವಸ್ಥಾನದಲ್ಲಿ ಮಾಂಗಲ್ಯ ಕಟ್ಟಿ ಹಾರ ಬದಲಾಯಿಸಿಕೊಳ್ಳುತ್ತಾರೆ. ಹೆಚ್ಚಿನ ಸಂಭ್ರಮ ಸಂತೋಷಗಳು ಇರುವುದಿಲ್ಲ.

ಮುಂದೆ ಮಂಗಲ ಕಾರ್ಯಗಳಲ್ಲಿ ಮುತ್ತೈದೆಯರು ಭಾಗ ವಹಿಸುವಂತೆ ಕೂಡಾವಳಿ ಉಡಿಕೆಯಾದವರು ಭಾಗವಹಿಸುವಂತಿಲ್ಲ. ಮುಂದೆ ಅವರ ಮಕ್ಕಳ ಮದುವೆ ಸಂದರ್ಭದಲ್ಲೂ ಮದುವೆ ಆದವರು ಮಕ್ಕಳ ಸಂಬಂಧ ಬೆಳೆಯಿಸಲು ಅನುಮಾನಿಸುತ್ತಾರೆ. ಕೂಡಾವಳಿಯಾದವರ ಸಂಬಂಧ ಹುಡುಕಬೇಕಾಗುತ್ತದೆ.

ಹೆಣ್ಣು ಗಂಡನ ಮರಣದಿಂದ ಪರಿತ್ಯಕ್ತಳಾಗಿದ್ದಾಗ ಅಸಹಾಯಕ ಸ್ಥಿತಿಯಲ್ಲಿರುವವಳಿಗೆ ಬಂದು ಆಸರೆ ದೊರಕಿದಂತಾಗುತ್ತದೆ. ಒಂದು ಗಂಡಿನ ಆಸರೆ ಅವಳಿಗೊಂದು ಭದ್ರನೆಲೆ, ಜೀವನದಲ್ಲಿ ಭದ್ರತೆ ಇದ್ದಲ್ಲಿ ಸಮಾಜದಲ್ಲೊಂದು ಸ್ಥಾನ ದೊರಕುತ್ತದೆ.

(ವೈಎಸ್)

ಉಡಿತುಂಬುವುದು: ಮುತ್ತೈದೆಯರಿಗೆ ಶುಭ ಸಂದರ್ಭಗಳಲ್ಲಿ ಮಂಗಳಕಾರ್ಯಗಳಲ್ಲಿ ಅರಿಶಿಣ ಕುಂಕುಮ ಹಣೆಗೆ ಹಚ್ಚಿ ಹೂ ಮುಡಿಯಲು ಕೊಟ್ಟು ವೀಳ್ಯೆದೆಲೆ, ಅಡಕೆ ಹಣ್ಣು ರವಿಕೆ ಕಣ ಕೊಡುವ ಪದ್ಧತಿ. ಮದುವೆಗೆ ಮುಂಚೆ ಹೆಣ್ಣು ನಿಶ್ಚಯಿಸಿದ ಮೇಲೆ ಮೊದಲು ಹೆಣ್ಣಿಗೆ ಮಾಡುವ ಕಾರಣಕ್ಕೂ ಉಡಿತುಂಬುವ ಕುಂಕುಮ ಹಚ್ಚುವ ಕಾರಣ, ಭಾಷ್ಟಗಿ ಕಾರಣವೆಂತಲೂ ಕರೆಯುವುದುಂಟು. ಪ್ರಸ್ತಕ್ಕೂ ಫಲಶೋಭನ, ಉಡಿತುಂಬುವ ಕಾರಣವೆಂತಲೂ ಕರೆಯುತ್ತಾರೆ. ಜಾತಿ, ಅಂತಸ್ತುಗಳಿಗೆ ತಕ್ಕಂತೆ ಸ್ವಲ್ಪ ಹೆಚ್ಚು ಕಡಿಮೆ ಈ ಆಚರಣೆ ಇರುತ್ತದೆ.

ಸಾಮಾನ್ಯವಾಗಿ ಕುಂಕುಮ ಹಚ್ಚುವ ಉಡಿ ತುಂಬುವ ಸಮಯದಲ್ಲಿ ಒಂದು ಜಮಖಾನೆ ಇಲ್ಲವೆ ಕಂಬಳಿ ಹಾಸಿ ಅದರ ಅಂಚುಮುಂದೆ ಬರುವಂತೆ ಹಾಸಬೇಕು ಅದರ ಮೇಲೆ ಅಕ್ಕಿಯಿಂದ ಒಬ್ಬ ಮುತ್ತೈದೆ ಇಲ್ಲವೆ ಸ್ವಾಮಿಗಳಿಂದ ಹಸೆಯನ್ನು ಬರೆಯುತ್ತಾರೆ. ವಧು (ಉಡಿ ತುಂಬಿಸಿಕೊಳ್ಳುವ ಹೆಣ್ಣು) ಬಲಕೈ ಕೂಡಿಸಿ ಅವಳ ಪಕ್ಕದಲ್ಲಿ ನಂಟರಲ್ಲಿ ಒಬ್ಬಳಾದ ಚಿಕ್ಕ ಹುಡುಗಿಯನ್ನು ಕೂಡಿಸುತ್ತಾರೆ. ಹೆಣ್ಣಿಗೆ ಬಂಗಾರದ ಸರ, ಓಲೆ, ಕಾಲಿಗೆ ಬೆಳ್ಳಿಯ ಚೈನು, ತೊಡಿಸಿ ಬೆಲೆ ಬಾಳುವ ಸೀರೆ ಉಡಿಸಿ ಉಡಿಯಲ್ಲಿ ಅರಿಶಿಣದ ಕೊಂಬು, ಅಡಕೆ, ಕೊಬ್ಬರಿ ಉತ್ತತ್ತಿ, ಗೋದಿ, ಅಥವಾ (ಅಕ್ಕಿ) ಗಳಿಂದ ಉಡಿತುಂಬಿಸುವರು. ತಲೆಗೆ ಹೂವಿನ ದಂಡಿ ಕಟ್ಟುವರು. ಪಕ್ಕದಲ್ಲಿ ಕೂತವಳಿಗೂ ಸೀರೆ ಉಡಿಸಿ, ದಂಡಿ ಕಟ್ಟಿ ಉಡಿತುಂಬುವ ಹಾಡುಗಳನ್ನು ಹಾಡಿ ಆರತಿ ಮಾಡುವರು.

ಮನೆಯಲ್ಲಿ ಪೂಜೆ, ಮಂಗಳಕಾರ್ಯಗಳಿದ್ದಾಗ ಮುತ್ತೈದೆಯರನ್ನು ಊಟಕ್ಕೆ ಕರೆಯುತ್ತಾರೆ. ಇಬ್ಬರು, ಐದು ಜನ, ಒಂಬತ್ತು ಜನ ಇಲ್ಲವೆ ತಮಗೆ ಇಷ್ಟವಾದಂತೆ ನೂರಾ ಒಂದು ಜನರನ್ನು ಮುತ್ತೈದೆಯರಾಗಿ ಊಟಕ್ಕೆ ಹೇಳಿದಾಗ ಅವರ ಹಣೆಗೆ ಅರಿಶಿಣ ಕುಂಕುಮವಿಟ್ಟು ಹೂ ಮುಡಿಯಲು ಕೊಟ್ಟು ಉಡಿಯಲ್ಲಿ ರವಿಕೆ ಕಣ, ವೀಳ್ಯೆದೆಲೆ ಅಡಕೆ, ಹಣ್ಣುಗಳನ್ನಿಟ್ಟು ಉಡಿ ತುಂಬುವರು. ಆನಂತರ ಆರತಿ ಮಾಡಿ ಅವರ ಕಾಲಿಗೆ ನಮಸ್ಕರಿಸುವರು. ಇದಕ್ಕೂ ಉಡಿತುಂಬುವುದು ಎನ್ನುವರು.

(ವೈ.ಎಸ್.)

ಉಡುಗೆ ತೊಡುಗೆಗಳು: ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ವಿವಿಧ ವಯೋಮಾನದವರು ತೊಡುವ ಉಡುಗೆ ತೊಡುಗೆಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಬಾಲವಸ್ಥೆಯಲ್ಲಿ ಹುಡುಗಿಯರಾದರೆ ಲಂಗ–ಜಂಪರ್ ಹಾಕುವುದು ಸಾಮಾನ್ಯ. ಗಂಡು ಮಕ್ಕಳಾದರೆ ಚೆಡ್ಡಿ ಅಂಗಿ ಹಾಕುವುದು ಸಾಮಾನ್ಯ. ಯೌವ್ವನಾವಸ್ಥೆಗೆ ಬಂದಾಗ ಹುಡುಗರು, ಪ್ಯಾಂಟು, ಶರ್ಟು, ಕೆಲವರು ಜುಬ್ಬ ತೊಟ್ಟರೆ, ಹುಡುಗಿಯರು ಪಾದದವರೆಗಿರುವ ಲಂಗ (ಫಡಕಿ) ಜಂಪರ್, ಕೆಲವರು ಚುಡಿದಾರ, ಮಿಡ್ಡಿ, ಮ್ಯಾಕ್ಸಿ ಎಂದು ಇತ್ತೀಚಿನ ಹೊಸ ಪ್ರಕಾರದ ಬಟ್ಟೆಗಳನ್ನು ತೊಡುವರು. ಕೆಲವರು ಸೀರೆ ಕುಪ್ಪಸಗಳನ್ನು ತೊಡುವರು. ವಯಸ್ಸಾಗುತ್ತಿದ್ದಂತೆ ಗಂಡಸರು ಅದೇ ಪ್ಯಾಂಟು–ಶರ್ಟು ತೊಟ್ಟರೆ ಕೆಲವರು, ಧೋತರ ಖಮೀಸು ತೊಡುವರು, ಕೆಲವರು ಜುಬ್ಬ ಧರಿಸಿ ಮೇಲೊಂದು ಜಾಕೇಟ್ ಹಾಕುವರು, ಇನ್ನೊಂದು ವರ್ಗ ಅಂದರೆ ಕೃಷಿಕರು ಮೊದಲಾದವರು ತಲೆಯ ಮೇಲೆ ಗಾಂಧೀ ಟೋಪಿ ಅಥವಾ ಮುಂಡಾಸು (ರುಮಾಲು) ಸುತ್ತಿಕೊಳ್ಳುವರು. ಮುಂಡಾಸುಗಳಲ್ಲಿ ಜರದ ರುಮಾಲು ಧರಿಸುವವರು ಅನುಕೂಲಸ್ಥರು ಎಂದು ಗೊತ್ತಾಗುತ್ತದೆ. ಇದಕ್ಕೂ ಪೂರ್ವದಲ್ಲಿ ಬಾರಾಬಂದಿ ಅಂಗಿಗಳು ತೊಡುತ್ತಿದ್ದರು. ಈಗ ಇವುಗಳು ಅಪರೂಪಕ್ಕೂ ಕಾಣಲಾರವು. ಅಂಗಿಯ ಒಳಗಡೆಗೆ ಬನಿಯನ್ ತೊಡುವರು. ರೆಡಿಮೇಡ್ ಖರೀದಿಸಿದರೆ ಕೆಲವರು ಅಡ್ಡ ಕಿಸೆ ಇರುವ ಬನಿಯನ್ ಸಿಂಪಿಗನಿಂದ ಹೊಲಿಸಿಕೊಂಡೇ ತೊಡುವರು.

ಹೆಣ್ಣುಮಕ್ಕಳಲ್ಲಿ ಎರಡು ವರ್ಗ ಓದು ಬರೆಹ ಕಲಿತವರು ಸಾಮಾನ್ಯವಾಗಿ ಬಣ್ಣದ ಸೀರೆ, ಒಳಗೊಂದು ಲಂಗ, ಮೇಲೊಂದು ಪೋಲಕ (ಬ್ಲೌಜ್) ತೊಡುವರು. ಕೆಲವರು ಚುಡಿದಾರ ಮೊದಲಾದವು ಧರಿಸುವರು. ಅಶಿಕ್ಷಿತರು ಕೂಡ ಇಂತಹ ಉಡುಗೆಗಳನ್ನು ತೊಡುವರು. ಇನ್ನೊಂದು ವರ್ಗ ಅಂದರೆ ಓದು–ಬರಹ ಕಲಿಯದೆ ಇರುವವರು ಅಂಚಿರುವ ಸಾಮಾನ್ಯ ಸೀರೆ ಕುಪ್ಪಸ ತೊಡುವರು. ಕೇವಲ ಸೀರೆ ತೊಟ್ಟು ಕುಪ್ಪಸ ತೊಡದೆ ಇರುವವರು ಇದ್ದಾರೆ. ಸಾಮಾನ್ಯವಾಗಿ ದಿನನಿತ್ಯ ತೊಡುವ ಈ ಉಡುಗೆಗಳೊಂದಿಗೆ ಮಕ್ಕಳು ಚಪ್ಪಲಿ ಬೂಟು ಕಾಲಲ್ಲಿ ಧರಿಸುವರು. ಗಂಡ ಮಕ್ಕಳಾದರೆ ಟೊಂಕಕ್ಕೆ ಉಡುದಾರ ತೊಡುವರು. ಹೆಣ್ಣು ಮಕ್ಕಳಾದರೆ ಕಾಲಲ್ಲಿ ಚೈನು, ಮೂಗಿನಲ್ಲಿ ಸುಪಾನಿ, ಕಿವಿಯಲ್ಲಿ ಝುಮಕಾ ಧರಿಸುವರು. ದೊಡ್ಡವರಾದರೆ ಗಂಡಸರು,

ಕೈಯಲ್ಲೊಂದು ಗಡಿಯಾರ ಕೊರಳಲ್ಲೊಂದು ಚೈನು, ಬೆರಳಲ್ಲಿ ಉಂಗುರ ಧರಿಸುವರು. ಮಹಿಳೆಯರಲ್ಲಿ ಮದುವೆಯಾದವರಿದ್ದರೆ ತರತರಹದ ಮಾಂಗಲ್ಯ ಸರಗಳು. ಗೋದಿಮಣಿ, ಗುಂಡಸರ, ಕಿವಿಯೋಲೆ, ಮೂಗುತಿ, ಮೊದಲಾದ ಆಭರಣಗಳನ್ನು ತೊಡುವರು. ಸಹಾವಾರಿ ಸೀರೆ ಅಂದರೆ ದೊಡ್ಡ ಸೀರೆ ತೊಡುವ ಹಳ್ಳಿಯ ಮಹಿಳೆಯರು ಟೊಂಕಕ್ಕೆ ಡಾಬು, ಕಾಲಲ್ಲಿ, ಕಡಗ, ಬೆರಳುಂಗುರ, ತೋಳುಬಂದಿ ಮೊದಲಾದ ವುಗಳನ್ನು ಧರಿಸುವರು. ಇವುಗಳು ದಿನನಿತ್ಯ ಬಳಸುವ ಸಾಮಾನ್ಯ ಉಡುಗೆ ತೊಡುಗೆಗಳು.

ಮೇಲಿನ ಒಂದು ಪ್ರಕಾರವಾದರೆ ಇದೇ ಜನರು, ಮದುವೆ, ಹಬ್ಬ ಹರಿದಿನಗಳಲ್ಲಿ ವಿಶೇಷವಾದ ಬಟ್ಟೆ ಹೆಚ್ಚಿನ ಆಭರಣಗಳನ್ನು ತೊಡುವರು. ಕೆಲಸದ ಸಮಯಗಳಲ್ಲಾದರೆ ಸಾದಾ ಬಟ್ಟೆಗಳು ತೊಟ್ಟು ಕಚ್ಚೆ ಹಾಕುವುದನ್ನು ಕಾಣುತ್ತೇವೆ. ಗಂಡಸರಾದರೆ ಕೆಲಸಗಾರರು ಜೋಡಾ ತೊಡುವರು ವಿಶೇಷವಾಗಿ ಚರ್ಮದಿಂದ ತಯಾರಿಸಿದ ಚಡಾವು ಜೋಡಗಳಿಗೆ ಲಾಲ ಹೊಡೆದಿರುವರು.

ಹೈದ್ರಾಬಾದ ಕರ್ನಾಟಕ ಪ್ರದೇಶಗಳಲ್ಲಿ ಮೇಲೆ ಉಲ್ಲೇಖಿಸಿದ ಉಡುಗೆ-ತೊಡುಗೆ ಸಾಮಾನ್ಯವಾದುದು. ಆದರೆ ಇದಕ್ಕೂ ಹೊರತಾಗಿ ಉಡುಗೆ-ತೊಡುಗೆಗಳು ಒಂದೊಂದು ಜನಾಂಗ ಗಳಲ್ಲಿ, ಒಂದೊಂದು ಸಂದರ್ಭಗಳಲ್ಲಿ ತೊಡುವುದನ್ನು ಕಾಣುತ್ತೇವೆ. ಅವುಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದಾಗಿದೆ:

1. **ಸಾಮಾನ್ಯ ಜನರ ಉಡುಗೆ ತೊಡುಗೆ:** ದಿನನಿತ್ಯ ಧರಿಸುವ ಉಡುಗೆ ತೊಡುಗೆ ಅಂಗಿ, ಪ್ಯಾಂಟು, ಜುಬ್ಬ, ಧೋತರು, ಚಪ್ಪಲಿ, ಬೂಟು, ಜೋಡಾ, ಹೆಣ್ಣು ಮಕ್ಕಳಾದರೆ ಸೀರೆ, ಕುಪ್ಪಸ, ಚಪ್ಪಲಿ ಮೊದಲಾದವುಗಳು.

2. **ವಿವಿಧ ಜಾತಿಯ ಉಡುಗೆ ತೊಡುಗೆ:** ಮುಸ್ಲಿಂರಾದರೆ ಲುಂಗಿ, ತಲೆ ಮೇಲೊಂದು ದುಂಡಗೆ ಟೋಪಿ, ಮಹಿಳೆಯರಾದರೆ ಬುರಖಾ ಮೊದಲಾದವು ತೊಟ್ಟರೆ ಇವರು ಮುಸ್ಲಿಂರೆಂದು ತಕ್ಷಣ ಗುರುತಿಸಬಹುದು. ಲಂಬಾಣಿಗಳಾದರೆ ಗಂಡಸರ ಉಡುಗೆ ಸಾಮಾನ್ಯ ಆದರೆ ಮಹಿಳೆಯರಲ್ಲಿ ಕಾಂಚಳಿ, ಫೇಟಿಯಾ ಮೊದಲಾದ ಅವರ ಉಡುಗೆ ತೊಡುಗೆಗಳೇ ಒಂದು ವಿಶಿಷ್ಟ, ಕನ್ನಡಿ, ನಾಣ್ಯಗಳನ್ನು ಲಗತ್ತಿಸಿ ಕುಸುರಿಯಿಂದ ಹೊಲಿದಿರುವುದೇ ಒಂದು ವಿಶೇಷ. ಲಿಂಗಾಯತರಾದರೆ ಕೊರಳಲ್ಲಿ ಚೌಕ, ಹಣೆಗೆ ವಿಭೂತಿ, ಜಂಗಮರಾದರೆ ಕಾವಿ ಬಟ್ಟೆ ಇವುಗಳು ತಕ್ಷಣ ಗುರುತು ಸಿಗುತ್ತವೆ. ಬ್ರಾಹ್ಮಣರಾದರೆ ಜನಿವಾರ, ಹಣೆಗೆ ನಾಮ (ನೇರೆ-ಅಡ್ಡ) ಮೊದಲಾದವುಗಳು. ಮಾರವಾಡಿಗಳಾದರೆ ಗಂಡುಮಕ್ಕಳು ಸಾಮಾನ್ಯ ಉಡುಪಿದ್ದು ಹೆಣ್ಣು ಮಕ್ಕಳು ಬಲಬದಿಗೆ ಸೆರಗು ಹಾಕುವುದು ವಿಶೇಷವಾದ ಒಡವೆಗಳನ್ನು ಧರಿಸುವುದು. ಹೀಗೆ ಹಲವಾರು ಜಾತಿಗನುಗುಣವಾಗಿ ಉಡುಗೆ ತೊಡುಗೆಗಳನ್ನು ಕಾಣಬಹುದಾಗಿದೆ.

3. **ವೃತ್ತಿ ಆಧಾರಿತ ಉಡುಗೆ ತೊಡುಗೆಗಳು:** ಕಾನಕಪಡೆ: ಭುಜದಿಂದ ಕಾಲಿನವರೆಗೆ ಜುಬ್ಬ, ಕೈಯಲ್ಲಿ ಗಂಟೆಗಳು, ಮುಖಕ್ಕೆ ಅರಸಿಣ ಬಣ್ಣ, ಕಣ್ಣುಗಳಿಗೆ ಯಕ್ಷಗಾನದ ರೀತಿಯಲ್ಲಿ ಕಾಡಿಗೆ ಹಾಗೂ ಬಣ್ಣ ಧರಿಸುವುದು. ವೇಷಗಾರರಾದರೆ: ಪುರುಷರೆ ಸ್ತ್ರೀಯರ ಉಡುಪು ತೊಟ್ಟು ಮುಖಕ್ಕೆ ಬಣ್ಣ ಬಳಿದುಕೊಂಡು ಹಾಡುತ್ತ ಕುಣಿಯುತ್ತ ಬರುವುದು. ಗೀಗೀ ಪದದವರಾದರೆ ಕೈಯಲ್ಲಿ ಒಂದು ಡಪ್ಪು ತಲೆ ಮೇಲೆ ಟೋಪಿ, ಖಮೀಸು, ಧೋತರು ಸಾಥಿದಾರರಲ್ಲೊಬ್ಬ ತಾಳ, ಮತ್ತೊಬ್ಬ ತುಂತುಣಿ, (ಏಕತಾರಿ) ಹಿಡಿದುಕೊಂಡಿರುವುದು. ಪುರವಂತರಾದರೆ ಕಚ್ಚೆ ಹಾಕಿದ ಕೆಂಪು ಬಣ್ಣದ ಧೋತರು, ಕಾಲಿಗೆ ಬಿಗಿಯಾಗಿ ಕಟ್ಟಿರುವುದು, ಮೇಲೆ ಖಮಿಸು ಬಿಗಿಯಾಗಿ ತೊಟ್ಟು ಕೈಯಲ್ಲಿ ಖಡ್ಗ, ಕೊರಳಲ್ಲಿ ರುದ್ರಾಕ್ಷಿ, ವೀರಭದ್ರ ಮೂರ್ತಿ, ಕಾಲಲ್ಲಿ ಗೆಜ್ಜೆ ಹಾಗೂ ಶಸ್ತ್ರಗಳು ಧರಿಸಿರುವರು, ಹಣೆಗೆ ವಿಭೂತಿ ಹಚ್ಚಿರುವರು, ತಲೆಗೆ ಜರದ ರುಮಾಲು ಸುತ್ತಿರುವರು. ಭಡಂಗ್ಯೆ: (ಭಡಂಗಬಾವಾ) ಕಾಲಲ್ಲಿ ಗೆಜ್ಜೆ, ಕಚ್ಚೆ ಹಾಕಿ ಕಾಲಿಗೆ ಬಿಗಿದು ಕಟ್ಟಿರುವ ಬಣ್ಣ ಬಣ್ಣದ ಧೋತರು ಮೇಲೆ ಮೈಯಿಗೆ ಬಣ್ಣ, ಕೈಯಲ್ಲಿ ಉದ್ದನೆಯ ಸೋರೆಕಾಯಿ ಅದಕ್ಕೂ ಬಣ್ಣ ಬಳಿದು ಶಬ್ದ ಆಗುವಂತೆ ದಾರದಿಂದ ಕಟ್ಟಿಗೆ, ಗಂಟೆ ಕಟ್ಟಿರುವುದು. ಕಾಲಜ್ಞಾನದವರಾದರೆ ಕಾವಿ ಬಟ್ಟೆ, ಕೈಯಲ್ಲಿ ಕಂದೀಲು ಒಂದು ಛತ್ತರಿ (ಕೊಡೆ) ಹಿಡಿದು ವಿಭೂತಿ ಧರಿಸಿರುವರು. ಬುಡ ಬುಡಕಿ ಆದರೆ ಕೈಯಲ್ಲಿ ಸಣ್ಣದಾದ ಡಮರುಗ, ಧೋತರು, ಖಮಿಸು, ರುಮಾಲು ಅಥವಾ ಟೋಪಿ, ಗಿಳಿ ಬಲದವನಾದರೆ ಒಂದು ಪಂಜರ ಅದರಲ್ಲೊಂದು ಗಿಳಿ, ಬಗಲಿಗೊಂದು ಜೋಳಿಗೆ ಹಾಕಿರುವನು.

4. **ಮನರಂಜನಾ ಉಡುಗೆ ತೊಡುಗೆಗಳು:** ಇದರಲ್ಲಿ ಎರಡು ಪ್ರಕಾರಗಳನ್ನು ಗುರುತಿಸಬಹುದು. ಹಬ್ಬ ಹರಿದಿನಗಳ ಮನರಂಜನೆ ಇನ್ನೊಂದು ಮನರಂಜನೆಗಾಗಿ ಮನರಂಜನೆ.

ಅ) ಹಬ್ಬ ಹರಿದಿಗಳ ಮನರಂಜನೆ: ಮೊಹರಂ ಹಬ್ಬದಲ್ಲಿ ಹುಲಿಕುಣಿಯುವುದು. ಕೇವಲ ಲಂಗೋಟಿ ಮಾತ್ರ ಧರಿಸಿ ಮೈಯಲ್ಲಿ ಪಟ್ಟಿ ಪಟ್ಟಿಯಾಗಿ ಪೆವುಡಿಯಿಂದ ಬಣ್ಣ ಬಡಿದುಕೊಂಡು ಕುಣಿಯುವುದು. **ಕುದುರೆ ಕುಣಿತ:** ಒಬ್ಬ ಗಂಡು ಮತ್ತೊಬ್ಬ ಹೆಣ್ಣು ವೇಷಧರಿಸಿ ತಲೆಗೆ ದಸ್ತಿ ಕಟ್ಟಿಕೊಂಡು ರಟ್ಟಿನಿಂದ ಮಾಡಿರುವ ಕುದುರೆಗಳು ಭುಜಕ್ಕೆ ಜೋತಾಡಿಸಿಕೊಂಡು ಕುದುರೆ ಕುಣಿಯುವುದು. ಸೋಂಗು ತರುವುದು, ಹಜಾಮನಾಗಿ, ಬಡಿಗನಾಗಿ, ಕಂಬಾರನಾಗಿ, ಸಾವುಕಾರನಾಗಿ, ಹೆಣ್ಣಾಗಿ, ಪ್ರಾಣಿ ಆಗಿ ಅವರವರ ಆಸಕ್ತಿ ಹಾಗೂ ಆಯಾ ಸ್ಥಳದ ಸಂದರ್ಭಕ್ಕನುಗುಣವಾಗಿ ಉಡುಗೆ-ತೊಡುಗೆ ತೊಟ್ಟು ರಂಜಿಸುವುದು. **ಕರಡಿ ಕುಣಿತ:** ಕಂಬಳಿಯಂದ (ಘೊಂಗಡಿ) ಕರಡಿಯಂತೆ ಮೈಗೆ ಸುತ್ತಿ ವೇಷಧರಿಸುವುದು.

ಯುಗಾದಿ ಹಾಗೂ ಕೆಲವು ಕಡೆಗಳಲ್ಲಿ ಹೋಳಿ ಹುಣ್ಣಿಮೆಗೆ ಕೋಲಾಡುವುದು. ಕೋಲಾಟ ಆಡುವಾಗ, ರಾಮ, ಲಕ್ಷ್ಮಣ, ಸೀತೆ, ಹೆಣ್ಣು-ಗಂಡು, ಪೊಲೀಸ್, ಹನುಮಂತ, ಯಮ ಮೊದಲಾದ ವೇಷಗಳನ್ನು ಹಾಕಿಕೊಂಡು ಆಡುವುದು. ಹೋಳಿ ಹಬ್ಬಕ್ಕೆ ರಂಗಾಡುವಾಗ ವಿಶೇಷವಾಗಿ ಹಳೆಯ ಹಾಗೂ ಹರಕು ಬಟ್ಟೆಗಳನ್ನು ತೊಡುವರು.

ದೀಪಾವಳಿ, ದಸರಾ, (ವಿಜಯದಶಮಿ) ನಾಗರಪಂಚಮಿ, ರಂಜಾನ, ಕ್ರಿಸ್‌ಮಸ್ ಮೊದಲಾದ ಹಬ್ಬಗಳಲ್ಲಿ ಹೊಸ, ಹೊಸ ಬಟ್ಟೆಗಳನ್ನು ತೊಡುವರು, ಕಾರಹುಣ್ಣಿವೆ, ಹ್ವಾಳಾ ಸಂದರ್ಭದಲ್ಲಿ ಎತ್ತು, ಆಕಳು, ಮೊದಲಾದವುಗಳಿಗೆ ಝೂಲ ಹಾಕುವುದು ಮೈಯಿಗೆ ಬಣ್ಣ ಹಚ್ಚುವುದು, ಕೊಂಬುಗಳಿಗೆ ರಂಗಿಸುವುದನ್ನು ಕಾಣುತ್ತೇವೆ.

ಬ) ಮನರಂಜನೆಗಾಗಿ ಮನರಂಜನೆ: ಬಯಲಾಟ, ದೊಡ್ಡಾಟ, ಸಣ್ಣಾಟ, ಹಾಗೂ ಸಾಮಾಜಿಕ ಆಟಗಳ ಉಡುಗೆ ತೊಡುಗೆಗಳನ್ನು ಕಾಣಬಹುದಾಗಿದೆ. ಇವುಗಳಲ್ಲಿ ಈ ಕೆಳಗಿನಂತೆ ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸಬಹುದಾಗಿದೆ.

1. ದೇವ-ದಾನವರ ಉಡುಗೆ ತೊಡುಗೆ. 2. ರಾಜ ಮಹಾರಾಜರ ಉಡುಗೆ-ತೊಡುಗೆ. 3. ಹಾಸ್ಯ ಪಾತ್ರಗಳ ಉಡುಗೆ-ತೊಡುಗೆ. 4. ಸಾಮಾಜಿಕ ಪಾತ್ರಗಳ ಉಡುಗೆ-ತೊಡುಗೆ.

1. ದೇವ-ದಾನವರ ಉಡುಗೆ ತೊಡುಗೆ: ಗಣಪತಿ ಆನೆ ಮುಖ, ಸೊಂಡಿಲು, ಕೊರಳಲ್ಲಿ ಮುತ್ತಿನಾಭರಣ, ಕಿವಿಯಲ್ಲಿ ಕರ್ಣ ಕುಂಡಲು ಕೈಯಲ್ಲಿ ಚಿಕ್ಕದಾದ ಗದೆ ಮೊದಲಾದವು. ಶಿವನ ಪಾತ್ರವಾದರೆ ಮುಖಕೆ ನಸುನೀಲಿ, ಬಣ್ಣ ಬಳೆದು ತಲೆಯ ಮೇಲೆ ಜಡೆ, ಜಡೆಗೆ ರುದ್ರಾಕ್ಷಿ ಇಲ್ಲವೆ, ಹೂವಿನ ಮಾಲೆ ಕೊರಳಲ್ಲಿ, ರಟ್ಟೆಗಳಲ್ಲಿ ಹಾವು, ರುದ್ರಾಕ್ಷಿ ಸರ, ಕೈಯಲ್ಲಿ ತ್ರಿಶೂಲ ಮೊದಲಾದವು. ಕೃಷ್ಣನ ಪಾತ್ರವಾದರೆ ಕೈಯಲ್ಲಿ ಕೊಳಲು, ತಲೆಯ ಮೇಲೆ ಕಿರೀಟ, ನವಿಲುಗರಿ, ಮೈಮೇಲೊಂದು ಶೆಲ್ಯ ಮೊದಲಾದವು. ಹನುಮಂತನಾದರೆ ಉದ್ದನೆಯಬಾಲ, ಉಬ್ಬಿದ ಗಲ್ಲಗಳು, ಕೈಯಲ್ಲಿ ಗದೆ ಮೊದಲಾದವು. ದೇವಿ ಪಾತ್ರವಾದರೆ ತಲೆಗೆ ಟೋಪಿ ಹಾಕಿ ಕೂದಲು ಇಳಿ ಬಿಟ್ಟಿರುವುದು ಹುಲಿಯ ಮೇಲೆ ಕೂತಿರುವುದು, ಕೈಯಲ್ಲಿ ತ್ರಿಶೂಲ ಹಿಡಿದಿರುವುದು ಪಿತಾಂಬರ ಸೀರೆ ತೊಟ್ಟು ನಡುಕಟ್ಟಾಗಿ ಡಾಬು ಧರಿಸಿರುವುದು ಕಾಣುತ್ತೇವೆ. ಹೀಗೆ ಅರ್ಜುನ, ನಾರದ, ಭೀಮ ಮೊದಲಾದ ಉಡುಗೆ-ತೊಡುಗೆಗಳನ್ನು ತೊಡುವುದು ಕಾಣುತ್ತೇವೆ. ರಾವಣನಾದರೆ ಹತ್ತು ತಲೆ, ರಾಕ್ಷಸರಾದರೆ ಅಕರಾಳ ವಿಕರಾಳವಾಗಿ ಕಪ್ಪು ಬಣ್ಣ, ಭುಜಕಿರೀಟ, ತಲೆ ಕಿರೀಟ, ಮೊದಲಾದವುಗಳು.

2. ರಾಜ ಮಹಾರಾಜರ ಉಡುಗೆ ತೊಡುಗೆ: ಪೀತಾಂಬರ ಬಟ್ಟೆಗಳು ತಲೆ ಕಿರೀಟ, ತೋಳು ಕಿರೀಟ, ಕಾಲಲ್ಲಿ ರಾಜಬೂಟು, ಮೊದಲಾಗಿ ರಾಜ ಶೀವಿಯ ಉಡುಗೆ-ತೊಡುಗೆಗಳು.

3. ಹಾಸ್ಯ ಪಾತ್ರಗಳ ಉಡುಗೆ ತೊಡುಗೆ: ದೊಡ್ಡಾಟದಲ್ಲಿ ಸಾರಥಿ ಹಾಸ್ಯಗಾರನಾದರೆ ಯಕ್ಷಗಾನದಲ್ಲಿ ಹನುಮನಾಯಕ ಹಾಸ್ಯಗಾರ ಇವರಿಗೆ ಉಡುಗೆ ತೊಡಿಗೆಗಳಿಗಿಂತ ಮಾತೇ ಬಂಡವಾಳ, ಸಣ್ಣಾಟದಲ್ಲಿ ದೂತ, ಅಥವಾ ದೂತಿ ಇದ್ದರೆ ಯಕ್ಷಗಾನದಲ್ಲಿ ಕೋಡಂಗಿ ಪಾತ್ರ ಹಾಸ್ಯವಾಗಿರುತ್ತದೆ. ಹಾಸ್ಯಪಾತ್ರಗಳಿಗೆ ಇಂಥವೆ ಉಡುಗೆ-ತೊಡುಗೆಗಳೆಂದು ಕಟ್ಟುಪಾಡಿಲ್ಲ. ಸಾದಾ ಬಟ್ಟೆ ಧರಿಸಿ ಬಣ್ಣ ಬಳಿದುಕೊಳ್ಳದೆಯೂ ಬರುತ್ತಾರೆ. ಹಾಗೂ ಪಾತ್ರಕ್ಕೆ ತಕ್ಕಂತೆ ಅಥವಾ ಅಡಸೋಗಿನಂತೆ ವೇಷಧರಿಸಿ ಬಣ್ಣ ಬಳಿದುಕೊಂಡು ಬರುತ್ತಾರೆ.

4. ಸಾಮಾಜಿಕ ಪಾತ್ರಗಳ ಉಡುಗೆ ತೊಡುಗೆ: ಸಾಮಾಜಿಕ ಪಾತ್ರಗಳು ಸಾಮಾಜಿಕ ನಾಟಕಗಳಲ್ಲಿ ಬರುವವು. ನಾಟಕಕ್ಕೆ ಅನುಗುಣವಾಗಿ ಪೊಲೀಸ್ ಪಾತ್ರವಾದರೆ ಪೊಲೀಸ್ ಡ್ರೆಸ್, ಸಾವುಕಾರನಾದರೆ ಆ ರೀತಿ, ಭೀಕ್ಷುಕನಾದರೆ ಹರಕು ಮುರುಕು ಹೀಗೆ ಸಂದರ್ಭಾನುಸಾರ ವೇಷ ಹಾಕುವುದಾಗಿದೆ.

5. ದುಡಿಮೆಗೆ ಸಂಬಂಧಿಸಿದ ಉಡುಗೆ ತೊಡಿಗೆಗಳು: ದುಡಿಮೆಗಾಗಿಯೇ ತೊಡುವಂತಹ ಉಡುಗೆಗಳೆಂದು ಪ್ರತ್ಯೇಕವಿಲ್ಲ. ಆದರೆ ದುಡಿಮೆಗನುಸಾರ ತಮ್ಮ ಕೈ- ಕಾಲು ತಲೆ ಇವುಗಳ ರಕ್ಷಣೆಗಾಗಿ ತೊಡುವಂಥವುಗಳು. ಉದಾ: ರಾಶಿ ಮಾಡುವಾಗ ಸುಂಕ ತಲೆಗೆ ಸೇರದಿರಲೆಂದು ಒಂದು ಬಟ್ಟೆಯಿಂದ ತಲೆಗೆ ಸುತ್ತಿಕೊಂಡಿರುವುದು. ಮಳೆಗಾಲದಲ್ಲಾದರೆ ಘೋಂಗಡಿಯ ಟೊಪ್ಪಿಗೆ ಮಾಡಿ ಹಾಕಿಕೊಳ್ಳುವುದು. ಮಹಿಳೆಯರಾದರೆ ಕುಂಚಿ ತೆಗೆದುಕೊಂಡು ಹೋಗಿ ಹುಲ್ಲು ತರುವುದು. ಕೆಲಸದ ಸಂದರ್ಭದಲ್ಲಿ ಕಚ್ಚಿ ಹಾಕಿರುವುದು. ಸಿಮೆಂಟ್, ಹಾಗೂ ಡಾಂಬರ್ ಕೆಲಸ ಮಾಡುವವರು. ಮೊಣಕಾಲಿನವರೆಗೆ ಬೂಟುಗಳು ಹಾಕಿಕೊಳ್ಳುವುದು. ಕೈಗಳಿಗೆ ರಕ್ಷಾಕವಚವಾಗಿ ಹ್ಯಾಂಡ್ ಗ್ಲೋಜ ರೀತಿಯಲ್ಲಿ ಧರಿಸುವರು.

ಮೇಲಿನ ಉಡುಗೆ ತೊಡುಗೆಗಳಲ್ಲದೆ ಕುಸ್ತಿ ಆಡುವಾಗ ಟೊಂಕಕ್ಕೆ ಶಲ್ಯ ಸುತ್ತಿಕೊಂಡು ಬನಿಯನ್ ಮಾತ್ರ ಹಾಕಿಕೊಳ್ಳುವುದು. ಕೆಲವರು ಕೇವಲ ಲಂಗೋಟಿ ಧರಿಸಿ ಕುಸ್ತಿ ಆಡುವುದು. ಕೆಲಸ ಮಾಡುವಾಗ ಬೆವರು ಬರುವುದರಿಂದ ಪುರುಷರಾದವರು ಟೊಂಕದ ಮೇಲ್ಭಾಗದ ಬಟ್ಟೆಗಳೇ ತೆಗೆದು ಕೆಲಸ ಮಾಡುವುದು. ಮೊದಲಾಗಿ ಹಲವಾರು ಪ್ರಕಾರಗಳಲ್ಲಿ ಉಡುಗೆ ತೊಡುಗೆಗಳನ್ನು ಕಾಣಬಹುದಾಗಿದೆ.

(ಆರ್‌ವಾಯ್)

ಉಡುದಾರ: ಸೊಂಟಕ್ಕೆ ಕಟ್ಟುವ ದಾರ. ಸಾಮಾನ್ಯವಾಗಿ ಹಿಂದೂ ಪುರುಷರು ಸೊಂಟಕ್ಕೆ ನೂಲಿನದಾರ ಕಟ್ಟಿಕೊಳ್ಳುವ ಸಂಪ್ರದಾಯವಿದೆ. ಇದು ಪರಂಪರಾಗತವಾಗಿ ನಡೆದುಕೊಂಡು ಬಂದ ಪದ್ಧತಿ. 'ಉಡೆ' ಅಂದರೆ ಸೊಂಟ, ಟೊಂಕ, ಮಡಿಲು ಎಂದರ್ಥ. ಉಡೆಗೆ ಕಟ್ಟುವ ದಾರವೇ ಉಡುದಾರ. ಇದನ್ನು ಉಡುದಾರ, ಉಡಿದಾರ, ಉಡೆದಾರ ಎಂದು ಮೂರು ಬಗೆಯಾಗಿ ಶಬ್ದಕೋಶಗಳಲ್ಲಿ ಬಳಸಲಾಗಿದೆ.

ಮಗು ಹುಟ್ಟಿದ ಐದು ದಿವಸಕ್ಕೆ 'ಐದೇಶಿ' ಎಂಬ ಸಂಸ್ಕಾರ ಮಾಡುತ್ತಾರೆ. ಈ ಸಂದರ್ಭದಲ್ಲಿ ಪುರೋಹಿತರನ್ನು ಅಥವಾ ಜಂಗಮರನ್ನು, ಆಯಾ ಧರ್ಮಗುರುಗಳನ್ನು ಕರೆಯಿಸಿ, ಲಿಂಗವಂತರಿದ್ದರೆ ಮಗುವಿನ ಕೊರಳಲ್ಲಿ ಲಿಂಗ ಕಟ್ಟುವರು. ಹುಟ್ಟಿದ ಮಗು ಗಂಡಾಗಿದ್ದರೆ, ಅದೇ ಸಂದರ್ಭದಲ್ಲಿ ಮಗುವಿನ ಸೊಂಟದಲ್ಲಿ ಉಡುದಾರವನ್ನು ಕಟ್ಟುವರು. ಈ ಮಗುವಿಗೆ ಶಿವದಾರ ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವ ಉಡುದಾರಕ್ಕೂ ಇದೆ. ಹುಟ್ಟಿನಿಂದ ಸಾಯುವವರೆಗೆ ಇವೆರಡೂ ಜೊತೆಗಿರುತ್ತವೆ.

ಗಂಡು ಮಗುವಿಗೆ ನಾಮಕರಣ ಮಾಡುವ ಸಂದರ್ಭದಲ್ಲಿ ಬೆಳ್ಳಿಯ ಉಡುದಾರ ತೊಡಿಸುತ್ತಾರೆ. ಈ ಸಂಪ್ರದಾಯ ಅತ್ಯಂತ ಪುರಾತನವಾದುದು. ಇದರ ಉಲ್ಲೇಖ 'ಮನುಸ್ಮೃತಿ'ಯಲ್ಲಿ ಬಂದಿದೆ. (ಅಧ್ಯಯ-2 ಶ್ಲೋಕ-42-43) ವೈದಿಕ ಸಂಪ್ರದಾಯದಲ್ಲಿ ಕುಮಾರನ ಉಪನಯನ ಸಂದರ್ಭದಲ್ಲಿ ದರ್ಭೆಯ (ಹುಲ್ಲಿನ) ಉಡುದಾರ ಕಟ್ಟವರು. ಹತ್ತಿಯ ದಾರದಿಂದ ಮೂರು ಸುತ್ತುಸುತ್ತಿ ನಾಭಿಯ ಸ್ಥಾನದಲ್ಲಿ ಮೂರು

ಗಂಟುಗಳನ್ನು ಹಾಕಬೇಕು ಎಂಬುದು 'ಷೋಡಶ ಸಂಸ್ಕಾರ' ವಿಧಿಯಲ್ಲಿ ವಿವರಿಸಲಾಗಿದೆ.

ಉಡುದಾರ ಕೇವಲ ಹಿಂದೂಗಳಿಗೆ ಮಾತ್ರ ಮೀಸಲು. ಇದು ಕೊನೆಯವರೆಗೂ ಸೊಂಟದಲ್ಲಿ ಇರಲೇಬೇಕು. ಉಡದಾರ ಇರದವನಿಗೆ 'ಮುಡದಾರ' ಎಂದು ಬೈಯುತ್ತಾರೆ. ಮುಡದಾರ ಎಂದರೆ ಉಪಯೋಗವಿಲ್ಲದವ ಎಂದು ಅರ್ಥ.

ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರಿಗೂ ಕೂಡ ಸೊಂಟಪಟ್ಟಿ ಕಟ್ಟುವ ಸಂಪ್ರದಾಯವುಂಟು. ಅದನ್ನು 'ಡಾಬು' ಎಂದು ಕರೆಯುತ್ತಾರೆ. ಇದು ಬೆಳ್ಳಿಯ ಆಭರಣ. ಇತ್ತಿತ್ತಲಾಗಿ ಈ ಪದ್ಧತಿ ಮಾಯವಾದರೂ, ಇವತ್ತಿನ ಫ್ಯಾಶನ್ ಯುಗದಲ್ಲಿ ಕುಸುರಿನ ಅಲಂಕೃತ 'ಡಾಬ' ಧರಿಸುವುದು ಶ್ರೀಮಂತ ವರ್ಗದಲ್ಲಿ ಕಂಡು ಬರುತ್ತದೆ. *(ಎನ್‌ಕೆ)*

ಉತ್ತರಾಣಿ: ಮಳೆಗಾಲದಲ್ಲಿ ಎಲ್ಲೆಂದರಲ್ಲಿ ಬೆಳೆಯುವ ಔಷಧೀಯ ಗುಣವುಳ್ಳ ಸಸ್ಯ. 'ವಿಷ ಜಂತು ಕಡಿದರೆ ಇದನ್ನು ಬಳಸುತ್ತಾರೆ. ಕಣ್ಣಿಗೆ ಆಲಿಯಾದರೆ, ಉತ್ತರಾಣಿ ಕಡ್ಡಿಯನ್ನು ಕಿವಿಯಲ್ಲಿಡುತ್ತಾರೆ. ಕಿವಿ ಸೋರಿದರೆ, ಕಿವಿ ಹೊಡೆತ, ಕಿವಿನೋವು ಏನೇ ಇದ್ದರೂ ಉತ್ತರಾಣಿ ಕಡ್ಡಿ ಇಟ್ಟರೆ ಕಡಿಮೆಯಾಗುತ್ತದೆ. 'ಕಾಲಲ್ಲಿ ಮುಳ್ಳು ನಟ್ಟಾಗ ಉತ್ತರಾಣಿಯ ಹತ್ತು ಎಲ್ಲೆಗಳನ್ನು ಮೂರು ದಿನ ತಿಂದರೆ ಕಾಲಲ್ಲಿರುವ ಮುಳ್ಳು ಅಲ್ಲಿಯೇ ಕರಗಿ ಹೋಗುತ್ತದೆ. (ನಾಟಿವೈದ್ಯ)

ಉತ್ತರಾಣಿ ಗಿಡದ ಎಲೆಯನ್ನು ಶಿವ ಮತ್ತು ಗಣಪತಿಗೆ ಏರಿಸುತ್ತಾರೆ. ಶಿವರಾತ್ರಿಯ ದಿನ ಶಿವನಿಗೆ ಉತ್ತರಾಣಿ ಕಡ್ಡಿಯಿಂದ ದೀಪ ಬೆಳಗುತ್ತಾರೆ. ಭಾದ್ರಪದ ಶುಕ್ಲ ತೃತೀಯಾದ ದಿವಸ ಸುಮಂಗಲಿಯರು 'ಹರತಾಳ ಪೂಜೆ' ಮಾಡುತ್ತಾರೆ. ಮರಳಿನ ಶಿವಲಿಂಗ ಮಾಡಿ ನಾನಾ ರೀತಿಯ ಹೂ-ಪತ್ರಿಗಳನ್ನು ಏರಿಸುತ್ತಾರೆ. ಆಗ ಉತ್ತರಾಣಿಯ ಎಲೆಯನ್ನು ಏರಿಸುತ್ತಾರೆ. 'ಕೆಲವು ಕಡೆ ದೀಪಾವಳಿಯ ಬಲಿಪಾಡ್ಯಮಿಯಂದು ಉತ್ತರಾಣಿಯನ್ನು ಪೂಜಿಸುತ್ತಾರಂತೆ. ಬಲಿ ತಾನು ಸಾಯುವ ಪೂರ್ವದಲ್ಲಿ, ವರ್ಷಕ್ಕೊಂದು ದಿನ ತನಗೆ ಪೂಜೆಸಲ್ಲುವಂತೆ ಕೇಳಿದನಂತೆ. ಅದಕ್ಕಾಗಿ ಉತ್ತರಾಣಿಯ ರೂಪದಲ್ಲಿ ಒಂದು ದಿನ ಬಲಿಗೆ ಪೂಜೆ ಸಲ್ಲುತ್ತದೆ.

ಉತ್ತರಾಣಿ ಕಡ್ಡಿಯಿಂದ ಮಾಡಿದ ಸೆಡ್ಡ (ಬಾರಿಸಿ)ವನ್ನು ಹೊಲದಲ್ಲಿ ಕಣ ಮಾಡುವಾಗ ಬಳಸುತ್ತಾರೆ. ಜೋಳದ ರಾಶಿಯ ಮೇಲೆ ಸೆಡ್ಡವನ್ನು ಆಡಿಸುತ್ತಾರೆ. ಅದರಿಂದ ಶುಭವಾಗುವುದೆಂದು ಭಾವಿಸಿ, ಉತ್ತರಾಣಿ ಕಡ್ಡಿಯನ್ನು ಗೌರವ ಭಾವದಿಂದ ಕಾಣುತ್ತಾರೆ. ಈ ಗಿಡದಲ್ಲಿ 'ಅರುಂಧತಿದೇವಿ' ಇರುವಳೆಂಬ ನಂಬಿಕೆಯಿದೆ. ಅವಳಿಗೆ ಪ್ರಿಯವಾದ ಗಿಡವಿದು. ವೈದಿಕ ಮಹಿಳೆಯರು ಮುಟ್ಟುನಿಂತ ಮೇಲೆ 'ಋಷಿಪಂಚಮಿ' ಅಂತ ಆಚರಿಸುತ್ತಾರೆ. ಆಗ ಅವರು ತಲೆಯ ಮೇಲೆ ಉತ್ತರಾಣಿ ಕಡ್ಡಿ ಇಟ್ಟುಕೊಂಡು ನೀರು ಹಾಕಿಕೊಳ್ಳುವರಂತೆ. ಇದರಿಂದ ದೋಷ ನಿವಾರಣೆ –ಶುಭವೆಂಬ ನಂಬಿಕೆ ಅವರಲ್ಲಿರಬಹುದು. ಉತ್ತರಾಣಿ ಕಡ್ಡಿಯಿಂದ ಚಿಕ್ಕ ಮಕ್ಕಳಿಗೆ ಮುಟ್ಟುದೋಷ ಪರಿಹಾರ ಆಗುವುದೆಂಬ ನಂಬಿಕೆ ಜನಪದರಲ್ಲಿದೆ. *(ಎನ್‌ಕೆ)*

ಎ

ಎಕ್ಕೆ: ಔಷಧೀಯ ಗುಣಗಳಿಂದ ಕೂಡಿದ ಒಂದು ಗಿಡ. ಇದರಲ್ಲಿ ಬಿಳಿ, ಕೆಂಪು, ಕರಿ ಗಂಡುಎಕ್ಕೆಗಳೆಂಬ ಪ್ರಭೇಧಗಳುಂಟು. ಕೆಲವರು ಮನೆಯ ಮುಂದೆ ಬಿಳಿ ಎಕ್ಕೆಗಿಡ ಬೆಳೆಸಿರುವುದನ್ನು ಕಾಣುತ್ತೇವೆ. ಬಿಳಿ ಎಕ್ಕೆಗಿಡ ಮನೆಯ ಮುಂದಿದ್ದರೆ ಶುಭವೆಂದೂ, ಎಕ್ಕೆ ಹೂವಿನಲ್ಲಿ ಲಕ್ಷ್ಮೀ ವಾಸವಾಗಿದ್ದಾಳೆಂಬುದು ಜನಪದರ ನಂಬಿಕೆ.

ಈ ಗಿಡದ ಹೂ ಶಿವನಿಗೆ ಪ್ರಿಯವಾದದ್ದು. ಶಿವ ಎಕ್ಕೆ ಗಿಡದ ಕೆಳಗೆ ವಾಸ ಮಾಡುತ್ತಾನೆಂಬ ನಂಬಿಕೆ ಜನಪದರಲ್ಲಿದೆ. ಶಿವರಾತ್ರಿಯ ದಿನ ಶಿವನಿಗೆ ಈ ಗಿಡದ ಹೂ ಏರಿಸುತ್ತಾರೆ. ಹನುಮಂತ ದೇವರಿಗೆ ಎಕ್ಕೆ ಎಲೆಗಳ ಹಾರ ಮಾಡಿ ಕೊರಳಲ್ಲಿ ಹಾಕುವುದುಂಟು, ಗಣಪತಿಗೆ, ಹನುಮಂತ ದೇವರಿಗೆ ಎಕ್ಕೆ ಹೂ ಏರಿಸುತ್ತಾರೆ.

ಎಕ್ಕೆಗಿಡ ಕೃಷಿಕರಿಗೆ ತುಂಬ ಪೂಜ್ಯವಾದ ಗಿಡ. ಹೊಲದಲ್ಲಿ ರಾಶಿ ಮಾಡುವಾಗ, ಎಕ್ಕೆಗಿಡವನ್ನು ಪೂಜಿಸುತ್ತಾರೆ. ರಾಶಿಗೆ ಎಕ್ಕಿಯ ಹೂವೇ ಬೇಕು. ಕಣ ಮಾಡುವಾಗಲೇ ಎಕ್ಕೆಗಿಡದ ಸಮೀಪ ಮಾಡುತ್ತಾರೆ. ರಾಶಿ ತೂರುವ ಗಾಳಿ ಬಿಡದಿದ್ದರೆ ಮತ್ತೆ ಎಕ್ಕೆಯನ್ನೇ ಪೂಜಿಸಿ ಬೇಡಿಕೊಳ್ಳುತ್ತಾರೆ. ತಾರುಣ್ಯಾವಸ್ಥೆಗೆ ಬಂದರೂ, ವಿವಾಹವಾಗದೆ ಹೆಣ್ಣು ತೀರಿಕೊಂಡರೆ, ಎಕ್ಕೆ ಗಿಡದ ಜೊತೆಗೆ ಮದುವೆ ಮಾಡಿ ಅವರ ಶವ ಸಂಸ್ಕಾರ ಮಾಡುವುದುಂಟು. ಇದ-ರಿಂದ ಅವರಿಗೆ ಮುತ್ತೈದೆತನ ಸಿಕ್ಕಿತೆಂದು ಭಾವಿಸುತ್ತಾರೆ. ಹಾಗೆ ಗಂಡಿಗೂ ವಿವಾಹ ಮಾಡಿಸಿ ಶವ ಸಂಸ್ಕಾರ ಮಾಡುವರು.

ಎಕ್ಕೆ ಎಲೆಯ ಬತ್ತಿ ಕಟ್ಟಿ ಹಿಂದಿನ ಕಾಲಕ್ಕೆ ಹಳ್ಳಿಯ ಜನ ತಂಬಾಕು ಸೇದುತ್ತಿದ್ದರು. ಊರ ತಳವಾರ ಪ್ರತಿದಿನ ತಂಬಾಕು ಸೇದುವ ಶ್ರೀಮಂತರ ಮನೆಗೆ ಎಕ್ಕೆ ಎಲಿ ಕೊಡುತ್ತಿದ್ದನಂತೆ. ಅದಕ್ಕೆ ಪ್ರತಿಯಾಗಿ ಅವರು ಅವನಿಗೆ ಒಂದು ರೊಟ್ಟಿ ಕೊಡುತ್ತಿದ್ದರಂತೆ. ಎಕ್ಕೆಯ ಹೂ ದೇವರಿಗೆ ಪ್ರಿಯವಾದರೆ, ಎಕ್ಕೆಯ ಎಲೆ ಹಾಗೂ ಹಾಲಿನಲ್ಲಿ ಔಷಧೀಯ ಗುಣ ಹೊಂದಿದೆ. ಚೇಳು ಕಡಿದಾಗ ಬಿಳಿ ಎಕ್ಕೆಹಾಲು ಹಚ್ಚಿದರೆ ವಿಷ-ಉರಿ ಇಳಿದು ಹೋಗುತ್ತದೆ. ಎಕ್ಕಿ ಗಿಡದ ಹಾಲನ್ನು ಕುರು (ಹುಣ್ಣು) ಇದ್ದ ಜಾಗಕ್ಕೆ ಹಚ್ಚುವುದರಿಂದ ಕುರು ದೊಡ್ಡದಿದ್ದರೆ ಒಡೆಯುತ್ತದೆ. ಚಿಕ್ಕದಿದ್ದರೆ ಅಲ್ಲೇ ಕರಗಿ ಹೋಗುತ್ತದೆ. ದೇಹದ ಯಾವುದೇ ಭಾಗದಲ್ಲಿ ಗಡ್ಡೆ ಆದಾಗ, ಎಕ್ಕಿ ಹಾಲು ಹಚ್ಚಿದರೆ ಕರಗಿ ಹೋಗುತ್ತದೆ. ಎಕ್ಕಿ ಹಾಲನ್ನು ಕಾಲು ನೋವಿಗೂ ಉಪಯೋಗಿಸುತ್ತಾರೆ. ಪಾರ್ಶ್ವವಾಯ (ಲಕ್ವಾ) ಹೊಡೆದಾಗ ಬಿಳಿ ಎಕ್ಕಿ ಎಲೆಯನ್ನು 150ಗ್ರಾಂ. ತೆಗೆದುಕೊಂಡು, ಔಡಲಗಿಡದ ಆರು ಎಲೆಗಳನ್ನು ತೆಗೆದುಕೊಂಡು, ರೋಗಿಯ ತಲೆಗೆ ಮಂಗಳವಾರ ಹಾಗೂ ರವಿವಾರ ರಾತ್ರಿ ಕಟ್ಟಬೇಕು. ಮುಂಜಾನೆ ಎದ್ದ ತಕ್ಷಣ ಎಲೆಯನ್ನು ತೆಗೆಯಬೇಕು. ಹೀಗೆ ಒಂದು ತಿಂಗಳ ಕಾಲ ಮಾಡಿದರೆ ರೋಗ ನಿವಾರಣೆಯಾಗುತ್ತದೆ.ಎಕ್ಕೆ ಎಲೆಯನ್ನು ಬೆಂಕಿಯಲ್ಲಿ ರೊಟ್ಟಿ ಬೇಯಿಸಿದಂತೆ ಬೇಯಿಸಿ, ಮುಟಗಿ ಮಾಡಿ

ತಿಂದರೆ ಯಾವ ರೋಗವೂ ಬರುವುದಿಲ್ಲವೆಂಬುದು ಹಿಂದಿನವರ ನಂಬಿಕೆಯಾಗಿತ್ತು. *(ಎನ್‌ಕೆ)*

ಎದುರು ಗೊಳ್ಳುವುದು: ಮದುವೆಯ ಸಮಯದಲ್ಲಿ ನಡೆಯುವ ಒಂದು ವಿಶಿಷ್ಟ ಸಂಪ್ರದಾಯ. ಮದುವೆ ಮಾಡುವವರು ಕನ್ಯೆಯ ಕಡೆಯವರಾಗಿರಲಿ, ವರನ ಕಡೆಯವರಾಗಿರಲಿ ಮದುವೆಗೆ ಬರುವ ಕನ್ಯೆ ಇಲ್ಲವೆ ವರನ ಕಡೆಯವರನ್ನು ಅಂದರೆ ಬೀಗರನ್ನು ಎದುರುಗೊಳ್ಳುತ್ತಾರೆ. ಹಾಗೆ ಕರೆದುಕೊಂಡು ಬರಲು ಹೋಗುವುದೇ ಎದುರುಗೊಳ್ಳುವುದು. ಇದರ ನಂತರವೇ ಮುಂದಿನ ಮದುವೆಯ ಪ್ರತಿಯೊಂದು ಸಂಪ್ರದಾಯಗಳು, ಆಚರಣೆಗಳು ಪ್ರಾರಂಭವಾಗುತ್ತವೆ.

ಬೀಗರನ್ನು ಕರೆಯಲು ಮದುವೆ ಮಾಡುವವರ ಕಡೆಯಿಂದ ಒಬ್ಬನು ಮದುವೆಯ ಹಿಂದಿನ ದಿನವೇ ಹೋಗುತ್ತಾನೆ. ಅವನು ಬೀಗರನ್ನು ಕರೆದುಕೊಂಡು ಬಂದು ಊರ ಹೊರಗಿನ ದೇವಸ್ಥಾನದಲ್ಲಿಯಾಗಲಿ ಇಲ್ಲವೆ ಊರ ಅಗಸಿಯಲ್ಲಿಯಾಗಲಿ ಇಳಿಸಿರುತ್ತಾನೆ. ಬೀಗರು ಬಂದ ಈ ಸುದ್ದಿ ತಿಳಿದ ಬಳಿಕ ಮದುವೆ ಮಾಡುವ ಮನೆಯವರು ಬಂಧು–ಬಳಗದೊಂದಿಗೆ ಆರತಿಯನ್ನು ತೆಗೆದುಕೊಂಡು, ವಾದ್ಯ ಮೇಳ ಸಮೇತ ಬೀಗರನ್ನು ಕರೆಯಲು ಹೋಗುವರು. ಅಲ್ಲಿಗೆ ಹೋದ ಮೇಲೆ 'ವರ' ಇಲ್ಲವೆ 'ಕನ್ಯೆ'ಯ ಕಾಲಿಗೆ ನೀರು ಹಾಕಿ, ಕುಂಕುಮ ಹಚ್ಚಿ, ಕೊರಳಿಗೆ ಹೂವಿನ ಹಾರ ಹಾಕಿ ಆರತಿಯನ್ನು ಬೆಳಗುತ್ತಾರೆ. ಹಾಸಿದ ಕಂಬಳಿ ಇಲ್ಲವೆ ಜಮಖಾನೆ ಅಥವಾ ಗುಡಾರದ ಮೇಲೆ ಬೀಗರೆಲ್ಲರನ್ನು ಕೂಡ್ರಿಸುತ್ತಾರೆ. ಅನಂತರ ಮದುವೆ ಮಾಡುವವರ ಕಡೆಯಿಂದ ಒಬ್ಬ, ಬೀಗರ ಕಡೆಯಿಂದ ಒಬ್ಬ ಅಲ್ಲಿ ಕುಳಿತ ಜನರ ಮಧ್ಯದಲ್ಲಿ ಬಂದು ಎದ್ದು ನಿಂತುಕೊಳ್ಳುತ್ತಾರೆ. ಅವರು ಒಬ್ಬರಿಗೊಬ್ಬರು ಕುಂಕುಮ ಹಚ್ಚಿ, ಎಲೆ–ಕಡಿಕೆ–ತಂಗಿನಕಾಯಿ– ಸಕ್ಕರಿಯನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಕೊನೆಗೆ ಒಬ್ಬರಿಗೊಬ್ಬರ ಬಾಯಿಯಲ್ಲಿ ಸಕ್ಕರಿ ಹಾಕಿ, ಅಪ್ಪಿಕೊಂಡು ಸಂತೋಷ ಪಡುತ್ತಾರೆ. ನಂತರ ಕೂಡಿದ ಜನರಿಗೆ ಎಲೆ–ಸಕ್ಕರಿಯನ್ನು ಹಂಚಲಾಗುವುದು. ಆ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಎದುರುಗೊಳ್ಳುವ ಹಾಡುಗಳನ್ನು ಹಾಡುವರು. ಇದೇ ರೀತಿ ಬೀಗರನ್ನು ಅಪಹಾಸ್ಯ ಮಾಡಿ ಹಾಡಿ ರೇಗಿಸುವದುಂಟು. ಇದೆಲ್ಲ ಮುಗಿದ ಮೇಲೆ ಬೀಗರನ್ನು ವಾದ್ಯ ಮೇಳದೊಂದಿಗೆ ಮದುವೆಯ ಮನೆಗೆ ಕರೆತರುತ್ತಾರೆ. *(ಬಿಬಿಜಿ)*

ಎಲ್ಲಮ್ಮ: ವಿಶೇಷವಾಗಿ ಉತ್ತರ ಕರ್ನಾಟಕದ ಅತ್ಯಂತ ಜನಪ್ರಿಯ ಶಕ್ತಿದೇವತೆ. ದಕ್ಷಿಣ ಕರ್ನಾಟಕದ ಮಲೆನಾಡು ಪ್ರದೇಶಗಳಲ್ಲಿಯೂ ಎಲ್ಲಮ್ಮನ ಭಕ್ತರಿದ್ದಾರೆ. ಕರ್ನಾಟಕ, ಗೋವಾ, ಮಹಾರಾಷ್ಟ್ರ, ಆಂಧ್ರ ಮುಂತಾದ ಕಡೆಗೆ ಈ ದೇವಿಯ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸುತ್ತಾರೆ. ಎಲ್ಲಮ್ಮ, ರೇಣುಕಾ, ಹುಲಿಗೆಮ್ಮ ಮೊದಲಾದ ಹೆಸರುಗಳಿಂದ ಉತ್ತರ ಕರ್ನಾಟಕದಾದ್ಯಂತ ಪೂಜೆಗೊಳ್ಳುವ ಈ ದೇವಿಯ ಗುಡಿಗಳು ಹಲವು ಕಡೆಗಳಲ್ಲಿ ದೊರಕುತ್ತವೆ. ಬೆಳಗಾವಿ ಜಿಲ್ಲೆಯ ಸವದತ್ತಿ, ಹೊಸಪೇಟೆ ಬಳಿಗಿರುವ ಹುಲಗಿಯ ಹುಲಿಗೆಮ್ಮ ಹಾಗೂ ಚಂದ್ರಗುತ್ತಿಯ ರೇಣುಕೆ ಅತ್ಯಂತ ಪ್ರಸಿದ್ಧವಾಗಿರುವ ದೇವಾಲಯಗಳಾಗಿವೆ. ಏಳುಕೊಳಗಳ ನಡುವೆ ವಾಸವಾಗಿದ್ದರಿಂದ ಏಳುಕೊಳ್ಳದ ಎಲ್ಲಮ್ಮನೆಂದು ಹೆಸರಿದೆ.

ಎಲ್ಲಮ್ಮನನ್ನು ಕುರಿತಂತೆ ಹಲವು ಐತಿಹ್ಯ, ನಂಬಿಕೆ ಮತ್ತು ಪುರಾಣಗಳಿವೆ. ಅವಳು ಉತ್ತರದಿಂದ ಬಂದವಳು, ರೇಣುಕ ರಾಜನ ಮಗಳು, ಜಮದಗ್ನಿ ಋಷಿಯ ಹೆಂಡತಿ. ಪರಶುರಾಮ ಇವರ ಮಗ ಎನ್ನಲಾಗಿದೆ. ಎಲ್ಲಮ್ಮ ಜಮದಗ್ನಿ ಋಷಿಯಿಂದ ಪರಶುರಾಮನನ್ನೊಳಗೊಂಡಂತೆ ಒಟ್ಟು ಐದು ಮಕ್ಕಳನ್ನು ಪಡೆದಳೆಂಬ ಪೌರಾಣಿಕ ಕತೆಗಳಿವೆ. ಕಾರ್ತವೀರ್ಯನಿಂದ ಜಮದಗ್ನಿಯ ಕೊಲೆಯಾಯಿತೆಂದೂ, ಅದರಿಂದ ಅವಳು ವಿಧವೆಯಾದಳೆಂದೂ ಹೇಳಿಕೆಗಳಿವೆ. ಈ ಹಿನ್ನೆಲೆಯಲ್ಲಿ ಸವದತ್ತಿ ದೇವಸ್ಥಾನದಲ್ಲಿ ಹೊಸ್ತಿಲ ಹುಣ್ಣಿಮೆಯನ್ನು ರಂಡೆ ಹುಣ್ಣಿವೆ ಎಂದೂ, ತರುವಾಯದ ಬನದ ಹುಣ್ಣಿವೆಯನ್ನು ಮುತ್ತೈದೆ ಹುಣ್ಣಿವೆಯೆಂದು ಆಚರಿಸುವುದು ವಾಡಿಕೆ. ರಂಡೆ ಹುಣ್ಣಿಮೆಯಂದು ದೇವಿಯ ಕುಂಕುಮ, ಮಂಗಳಸೂತ್ರ ತೆಗೆದು ಹಾಕಿ ಅಂದು ಗುಡ್ಡಕ್ಕೆ ಬಂದ ಜೋಗತಿಯರು ತಮ್ಮ ಕೈಬಳೆಗಳನ್ನು ಒಡೆದುಕೊಳ್ಳುವರು. ಅಂತೆಯೇ, ಬನದ ಹುಣ್ಣಿವೆಗೆ ದೇವಿಗೆ ಪುನಃ ಮಂಗಳ ಸೂತ್ರ ಧಾರಣೆಮಾಡಿ ಜೋಗತಿಯರು ಬಳೆಗಳನ್ನು ಧರಿಸುವರು.

ರೇಣುಕಾದೇವಿಯು ಜಮದಗ್ನಿ ಋಷಿಯ ಶಾಪಕ್ಕೆ ಗುರಿಯಾಗುವುದು, ಕುಷ್ಠರೋಗಿಯಾಗಿ, ಕುರೂಪಿಯಾಗಿ ಆಶ್ರಮದಿಂದ ಹೊರಕ್ಕೆ ತಳ್ಳಲ್ಪಡುವುದು, ಏಕನಾಥ (ಎಕ್ಕಯ್ಯ), ಜೋಗಿನಾಥ (ಜೋಗಯ್ಯ) ಮುನಿಗಳ ದರ್ಶನ ಹಾಗೂ ಅವರ ಕೃಪೆಯಿಂದ ಜೋಗುಳಭಾವಿ (ಜೋಗಿಗಳ ಬಾವಿ) ಯಲ್ಲಿ ಸ್ನಾನಮಾಡಿ ರೋಗ ಮುಕ್ತಳಾಗಿ ಪುನಃ ಜಮದಗ್ನಿ ಋಷಿಯ ಬಳಿಗೆ ಮೊರೆಹೊಗುವುದು, ಅನ್ಯರಿಂದ ಶಾಪ ವಿಮೋಚನೆ ಪಡೆದು ಬಂದವಳ ತಲೆಯನ್ನು ಕತ್ತರಿಸಿ ಹಾಕುವಂತೆ ಮಕ್ಕಳಿಗೆ ಆಜ್ಞಾಪಿಸುವುದು, ತಂದೆಯ ಆಜ್ಞೆಯನ್ನು ನಿರಾಕರಿಸಿದ ನಾಲ್ಕು ಜನ ಮಕ್ಕಳು ನಪುಂಸಕರಾಗಲೆಂದು ಶಾಪ ಹಾಕುವುದು, ಅದರಿಂದ ಅವರು ಜೋಗಪ್ಪಗಳಾಗಿ ತಮ್ಮ ತಾಯಿಯ ಭಕ್ತರಾದರೆಂದು, ಇವರಿಂದಲೇ ಜೋಗಪ್ಪ ಸಂಪ್ರದಾಯ ಹುಟ್ಟಿಕೊಂಡಿತೆಂದು ಹೇಳುತ್ತಾರೆ. ಕೊನೆಯ ಮಗ ಪರುಶುರಾಮ ಮಾತ್ರ ತಂದೆಯ ಆಜ್ಞೆಯನ್ನು ಪರಿಪಾಲಿಸಿ ತಾಯಿ ರೇಣುಕೆಯ ತಲೆಯನ್ನು ಕತ್ತರಿಸಿ ಹಾಕುತ್ತಾನೆ. ಇದೆಲ್ಲ ಜೋಗತಿ ಸಂಪ್ರದಾಯ ಕುರಿತ ಪುರಾಣ.

ಎಲ್ಲಮ್ಮನ ಮೂಲದ ಬಗ್ಗೆ ನಿರ್ದಿಷ್ಟವಾಗಿ ಹೇಳಲಾಗದು. ಎಲ್ಲೆ (ಸೀಮೆ)ಯಲ್ಲಿರುವ ಅಮ್ಮ ಎಲ್ಲಮ್ಮ. ಅವಳು ಒಬ್ಬ ಗಡಿದೇವತೆ. ಒಂದು ನಿರ್ದಿಷ್ಟ ಊರಿನ ಸೀಮೆಯ ದೇವತೆಯಾಗಿದ್ದ ಏಳುಕೊಳ್ಳದ ಎಲ್ಲಮ್ಮ ಕಾಲಕ್ರಮೇಣ ಅವಳು ದಕ್ಷಿಣ ಭಾರತ, ಆಂಧ್ರ, ಮಹಾರಾಷ್ಟ್ರ, ಗೋವಾ ಮತ್ತು ಕರ್ನಾಟಕ ಪ್ರದೇಶಗಳಲ್ಲಿ ಪ್ರಚಾರ ಪಡೆದು ಕೋಟ್ಯಂತರ ಭಕ್ತಾದಿಗಳನ್ನು ಹೊಂದಿದ್ದಾಳೆ. ಒಂದು ಊರು ಅಥವಾ ಗಡಿಯ (ಸೀಮೆ) ದೇವತೆಯಾಗಿ ಸ್ಥಾಪಿತಗೊಂಡ ಎಲ್ಲಮ್ಮನ ಶಕ್ತಿ, ವ್ಯಾಪ್ತಿ, ಚಮತ್ಕಾರ ಮತ್ತು ಸಾಮರ್ಥ್ಯಗಳು ಎಲ್ಲೆ ಮೀರಿ ಬೆಳೆದಿವೆ.

ಎಲ್ಲಮ್ಮನ ಆರಾಧನೆ ಒಂದು ವಿಶಿಷ್ಟ ಸಂಪ್ರದಾಯವಾಗಿ ಬೆಳೆದು ಬಂದಿದೆ. ಎಲ್ಲಮ್ಮನಿಗೆ ಹರಕೆ ಹೊತ್ತುಕೊಳ್ಳುವ ಸಂಪ್ರದಾಯ ರೂಢಿಯಲ್ಲಿದೆ. ಎಲ್ಲಮ್ಮ ಒಬ್ಬ ಸಮೃದ್ಧ ದೇವತೆ. ಎಲ್ಲಮ್ಮನ ಜೋಗಿಗಳು ಹೊರುವ ಕೊಡ ಮತ್ತು ಜಗಗಳು ಸಮೃದ್ಧಿಯ

ಸಂಕೇತ. ಎಲ್ಲಮ್ಮ ಭಕ್ತರನ್ನು ಜೋಗಿ, ಜೋಗತಿಗಳೆಂದು ಕರೆಯುತ್ತಾರೆ. ಈ ಜೋಗಿಗಳಲ್ಲಿ ಜಗಹೊತ್ತ ಜೋಗಿಗಳು, ಕೊಡ ಹೊತ್ತ ಜೋಗಿಗಳೆಂದು ಎರಡು ವಿಧ. ಎಲ್ಲಮ್ಮನಿಗೆ ಎಲ್ಲ ಮತ ಜಾತಿ ಪಂಗಡಗಳಲ್ಲಿ ಭಕ್ತರಿದ್ದಾರೆ. ಅವಳು ಭಕ್ತ ಕೋಟಿಯ ಕುಲದೇವತೆ. ಅದರೂ ಕೆಳವರ್ಗದ ಶೂದ್ರರು, ಅತಿಶೂದ್ರರು, ಅಸ್ಪೃಶ್ಯರು ಹೆಚ್ಚಿನ ಸಂಖ್ಯೆಯಲ್ಲಿ ಈ ದೇವತೆಯ ಭಕ್ತರಾಗಿದ್ದಾರೆ, ಆರಾಧಕರಾಗಿದ್ದಾರೆ. *(ಪಿಕೆಕೆ)*

ಎಳ್ಳು ಅಮವಾಸ್ಯೆ: ರೈತನ ಹಬ್ಬ. ಭೂಮಿಯಲ್ಲಿ ಬೆಳೆದುನಿಂತ ಬಂಗಾರಂದ ಬೆಳೆ ಒಂದೆರಡು ತಿಂಗಳಲ್ಲಿ ಮನೆಗೆ ಬರುವ ಸಂಪತ್ತಿನ ಮಹಾಲಕ್ಷ್ಮೀಯನ್ನು ಮನೆ ತುಂಬಿಸುವ ಭೂತಾಯಿಗೆ ರೈತ ಅರ್ಪಿಸುವ ಕೃತಜ್ಞತೆಯ ಸಂಕೇತ ಚರಗ. ಚರಗವನ್ನು ಆಚರಿಸುವ ಈ ಎಳ್ಳು ಅಮವಾಸ್ಯೆಗೆ ಮಹತ್ವ ಬಂದಿದೆ. ಶಿಶಿರ ಋತುವಿನಲ್ಲಿ ಆರಂಭವಾದ ಚಳಿಗಾಲ ಪ್ರಕೃತಿದೇವಿಗೆ ಹುಮ್ಮಸ್ಸು ಹಾಗೂ ಸೊಗಸನ್ನು ಕೊಡುವ ದಿನಗಳಲ್ಲಿ ಬರುವುದು.

ಹೊಲದಲ್ಲಿ ಬೆಳೆದ ಬಿಳಿ ಜೋಳದ ಪೈರು ರೈತನ ಮನೆಯ ಭಾಗ್ಯಲಕ್ಷ್ಮಿ. ತನ್ನ ಹೊಲದಲ್ಲಿ ಬೆಳೆದು ನಿಂತ ಬಂಗಾರದ ಬೆಳೆಯನ್ನು ಕಣ್ಣಾರೆ ನೋಡುವುದೇ ರೈತನಿಗೆ ಆನಂದ. ಬೆಳೆಕೊಟ್ಟ ಭೂತಾಯಿಗೆ ಕೃತಜ್ಞತೆಯ ರೂಪದಲ್ಲಿ ಚೆರಗ ಚೆಲ್ಲಿ ರೈತರು ಧನ್ಯರಾಗುವ ಸಡಗರ. ಚೆರಗ ಚಲ್ಲುವ ಹಿಂದಿನ ರಾತ್ರಿ ರೈತ ಹೆಣ್ಣು ಮಕ್ಕಳಿಗೆ ಬಗೆ ಬಗೆಯ ಅಡುಗೆ ಮಾಡುವ ಸಂಭ್ರಮ, ಸಡಗರ. ಚಳಿಗಾಲದ ತಿನಿಸುಗಳಾದ ಎಳ್ಳು ಹೋಳಿಗೆ, ಕಡಬು, ಎಳ್ಳು ಹಚ್ಚಿದ ಸಜ್ಜೆ ರೊಟ್ಟಿ, ಎಣ್ಣೆ ಬದನೆಕಾಯಿ, ಕಾಳು, ಬಗೆ ಬಗೆಯ ಪುಡಿ ಚಟ್ನಿ, ಜೋಳದ ಬೋನ ಮೊದಲಾದ ರುಚಿಯಾದ ಅಡುಗೆ ಸಿದ್ಧವಾಗುತ್ತದೆ.

ಬೆಳಗಿನ ಜಾವ ರೈತನ ಮನೆಯವರು ಅವರ ಆಪ್ತರು ಮತ್ತು ಮಿತ್ರರು ಸಿಂಗರಿಸಿದ ಬಂಡಿಯಲ್ಲಿ ಹೊಲಕ್ಕೆ ಹೋಗುವ ನೋಟ ಮುದಗೊಳಿಸುತ್ತದೆ. ತಾವು ತಂದ ಅಡುಗೆ ಪದಾರ್ಥವನ್ನು ಬನ್ನಿಯ ಇಲ್ಲವೆ ಬೇವಿನ ಮರದ ಕೆಳಗೆ ಜಮಖಾನೆ ಹಾಸಿ, ಅವುಗಳನ್ನು ಓರಣವಾಗಿ ಇಡುತ್ತಾರೆ. ಅಡುಗೆಯನ್ನು ಭೂತಾಯಿಗೆ ಎಡೆಮಾಡಿ ದಿಗ್ಬಲಿಕೊಡುತ್ತಾರೆ. ದಿಗ್ಬಲಿಕೊಡವಾಗ 'ಹುಲುಲ್ಲಿಗ್ಯೋ ಚಳಮ್ರಿಗ್ಯೊ" ಎಂದು ಆಶಯ ನುಡಿಯನ್ನು ಹೇಳುತ್ತ ಹೊಲದ ನಾಲ್ಕೂ ಮೂಲೆಗೆ ಸುತ್ತಾಡುತ್ತಾರೆ. ರೈತನ ಉದಾತ್ತ ವಿಚಾರ ತುಂಬಿದ ಈ ಆಶಯ ನುಡಿಯ ಅರ್ಥ ನಮ್ಮನ್ನು ಬೆರಗುಗೊಳಿಸುತ್ತದೆ. ಅದರ ಅರ್ಥ ಹೀಗಿದೆ. 'ಹುಲ್ಲುಹುಲ್ಲಿಗೆ ಚೆಲ್ಲಲಿ ಅಮೃತ" (ಹುಲುಲ್ಲಿಗ್ಯೊ ಚಳಮ್ರುಗ್ಯೊ). ಅಂದರೆ ಭೂಮಿಯಲ್ಲಿ ಬೆಳೆದ ಪ್ರತಿಯೊಂದು ಹುಲ್ಲು ಕಡ್ಡಿಯೂ ಅಮೃತದಂತೆ ರಸಭರಿತವಾಗಲಿ ಎಂಬುದು.

ಸಂಜೆಯಾಗುತ್ತಿದ್ದಂತೆ ರೈತರ ಬಂಡಿಗಳು ಊರಿನ ಕಡೆ ನಾ ಮುಂದು ತಾ ಮುಂದು ಎಂದು ಸ್ಪರ್ಧಿಸಿ ಓಡಿಸುವ ಬಂದಿಗಳ ಚಕ್ರ ರೈತನ ಬದುಕಿನ ಚಲನಶೀಲತೆಯನ್ನು ಬಿಂಬಿಸುತ್ತದೆ.

(ಎಸ್.ಎಂ.)

ಏ

ಏಕನಾಥ: ಬಹುರೂಪಿ ಕಲೆಯ ಪ್ರಸಿದ್ಧ ಕಲಾವಿದ. ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ನಿರ್ಣಾವಾಡಿಯ ಏಕನಾಥರು 1924ರಲ್ಲಿ ಜನಿಸಿದರು. ತಂದೆ ಗಂಗಪ್ಪ. ತಾಯಿ ಚನ್ನಮ್ಮಾ 'ಬಹುರೂಪಿ ಕಲಾ' ಪ್ರದರ್ಶನವೇ ಇವರ ವಂಶಪಾರಂಪರ್ಯ ಉದ್ಯೋಗ. ಹೀಗಾಗಿ ಏಕನಾಥರು ಬಾಲ್ಯದಿಂದಲೇ ತಂದೆಯಿಂದ ಈ ಕಲೆಯನ್ನು ಕಲಿತರು. ಮೊದಮೊದಲು ಬಹುರೂಪಿ ಆಟಗಳಲ್ಲಿ ಬಾಲ ಪಾತ್ರಗಳನ್ನು ಮಾಡುತ್ತಿದ್ದರು. ತಮ್ಮ ಇಂಪಾದ ಕಂಠದಿಂದ ಜನಪ್ರಿಯತೆ ಗಳಿಸಿದರು. ಇವರು ಓದಿದ್ದು ನಾಲ್ಕನೆಯ ಇಯತ್ತೆಯಾದರೂ, ಬಹುರೂಪಿ ಕಲೆಯಿಂದ ಕಲಿತದ್ದು ಅಪಾರ.

ತಾವು ಬೆಳೆದಂತೆ 'ಬಹುರೂಪಿಕಲೆ' ಯನ್ನು ಬೆಳೆಸಿದ ಏಕನಾಥರು ವಿಶ್ವಾಮಿತ್ರ, ಭೀಮ, ಘಟೋತ್ಕಜ, ಭಸ್ಮಾಸುರ, ಮೋಹಿನಿ, ಸಿಂಧೂರ ಲಕ್ಷ್ಮಣ, ಸೂರದಾಸ, ಸತ್ಯಹರಿಶ್ಚಂದ್ರ, ಬಸವೇಶ್ವರ ಮೊದಲಾದ ಪಾತ್ರಗಳನ್ನು ಮಾಡಿದ್ದಾರೆ. ಪೌರಾಣಿಕ ಪಾತ್ರಗಳೇ 'ಬಹುರೂಪಿ' ಕಲೆಗೆ ಶ್ರೇಷ್ಠ ಪಾತ್ರಗಳೆನ್ನುವ ಇವರು ಈ ಪಾತ್ರಗಳನ್ನು ತಾವು ಹಾಡುವುದರ ಮೂಲಕ ಹೈದ್ರಾಬಾದ ಕರ್ನಾಟಕದ ತುಂಬ ಜನಮನ್ನಣೆಗಳಿಸಿದ್ದಾರೆ. ಕರ್ನಾಟಕದ ಉದ್ದಗಲಕ್ಕೂ ಸಂಚಾರ ಮಾಡಿರುವ ಇವರು ಇಲ್ಲಿಯ ಅನೇಕ ಹಳ್ಳಿ–ಪಟ್ಟಣಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. 85 ರ ಆಸುಪಾಸಿನಲ್ಲಿರುವ ಈ ಕಲಾಕಾರನಿಗೆ ಅನೇಕ ಜನ ಶಿಷ್ಯರಿದ್ದಾರೆ. ಅವರಲ್ಲಿ ದೇವೀಂದ್ರಪ್ಪ, ಕುಪೇಂದ್ರ, ಲಕ್ಷ್ಮಣ, ರಾಮಚಂದ್ರ, ಎಲ್ಲಪ್ಪ ಮೊದಲಾದವರು 'ಬಹುರೂಪಿ' ಕಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. (1989). *(ಎಸ್‌ಎಸ್‌ಪೈ)*

ಏವೂರ: ಕಲಬುರ್ಗಿ ಜಿಲ್ಲೆ ಕೃಷ್ಣಾ ಮತ್ತು ಭೀಮಾ ನದಿಗಳ ಮಧ್ಯದ ಪ್ರದೇಶ ಸಗರನಾಡು ಎಂದು ಕರೆಯುವ ಸಂಸ್ಥಾನವಾಗಿತ್ತು. ಈ ಸಗರನಾಡು ಸಕಲ ಧರ್ಮಗಳಿಗೆ ಆಶ್ರಯ ನೀಡಿದೆ. ಈ ಸಗರ ನಾಡಿನಲ್ಲಿ ವಿವಿಧ ಧರ್ಮಗಳ ಜನರು ನಿರ್ಭೀತಿಯಿಂದ ತಮ್ಮ ಧರ್ಮ ಆಚರಣೆಗೆ ಹಾಗೂ ತಮ್ಮ ಧರ್ಮದ ದೇವತೆಗಳನ್ನು ಪೂಜಿಸಲು ಯಾವುದೇ ಆತಂಕವಿರಲಿಲ್ಲ. ಇವೆಲ್ಲವುಗಳಿಗೆ ಸಾಕ್ಷಿಯಾಗಿ ಸಗರನಾಡಿನ ಹಳ್ಳಿಗಳಲ್ಲಿ ಬೌದ್ಧ, ಜೈನ, ಶೈವ ಧರ್ಮಕ್ಕೆ ಸಂಬಂಧಸಿದ ದೇವಸ್ಥಾನಗಳು, ಶಿಲ್ಪಗಳು, ಶಾಸನಗಳು ಹಾಗೂ ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಗುಮ್ಮಟಗಳು, ಜೈನ ಬಸದಿಗಳು, ಶೈವ ದೇವಾಲಯಗಳು ಇಂದಿಗೂ ಕಾಣಸಿಗುತ್ತವೆ.

ಸಗರ ನಾಡಿನ ಸುರಪುರ ತಾಲ್ಲೂಕಿನ ಈ ಗ್ರಾಮ ಬಹುಧರ್ಮಗಳಿಗೆ ಆಶ್ರಯ ನೀಡಿದ್ದು, ಅನೇಕ ಪುರಾತನ ದೇವಾಸ್ಥಾನಗಳು, ಶಿಲಾ ಶಾಸನಗಳು ಇಲ್ಲಿ ಇಂದಿಗೂ ನೋಡಲು ಸಿಗುತ್ತವೆ.

ಶಹಾಪೂರದಿಂದ ಸಿಂದಗಿಗೆ ಹೋಗುವ ಮಾರ್ಗದಲ್ಲಿರುವ ಏವೂರ ಗ್ರಾಮದಲ್ಲಿ ಅನೇಕ ಶಾಸನಗಳು ವರದಿಯಾಗಿವೆ. ಬಹುತೇಕ ಶಾಸನಗಳು ಕಲ್ಯಾಣ ಚಾಲುಕ್ಯರ ಹಾಗೂ ಕಲಚೂರಿ ಅರಸರ ಕಾಲದ್ದಾಗಿವೆ. ಈ ಶಾಸನಗಳ ಪ್ರಕಾರ ಏವೂರ ಹಿಂದೆ ಭತ್ತದ ಗ್ರಾಮವಾಗಿತ್ತೆಂದು ತಿಳಿಯುತ್ತದೆ.

ಕ್ರಿ.ಶ. 11-12ನೆಯ ಶತಮಾನದಲ್ಲಿ ಏವೂರ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕವಾಗಿ ಮಹತ್ವದ ಕೇಂದ್ರವಾಗಿತ್ತೆಂದು ತಿಳಿದು ಬರುತ್ತದೆ. ಇಂತಹ ವೈಭವದಿಂದ ಮೆರೆದ ಏವೂರ ಗ್ರಾಮ, ಇಂದು ತನ್ನ ಎಲ್ಲ ವೈಭವವನ್ನು ಕಳೆದುಕೊಂಡು ಅಳಿದುಳಿದ ಶಿಲ್ಪಗಳು ಗತವೈಭವದ ಕಥೆಯನ್ನು ಹೇಳತ್ತವೆ.

ಏವೂರಿನಲ್ಲಿ ಪ್ರಮುಖವಾಗಿ ಸಂಗಮೇಶ್ವರ ಮತ್ತು ಬಸವಣ್ಣ ಎಂದು ಕರೆಯುವ ಮತ್ತೊಂದು ಸೋಮೇಶ್ವರ ದೇವಾಲಯಗಳ ಸಂಕೀರ್ಣಇದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ತ್ರಿಕೂಟ ಮಾದರಿಯಲ್ಲಿವೆ. ಸೋಮೇಶ್ವರ ದೇವಾಲಯ ಕ್ರಿ.ಶ. 1077ರ ಶಾಸನವೂ ಸೇರಿದಂತೆ ಸುಮಾರು 11 ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಕ್ರಿ.ಶ. 1077ರಲ್ಲಿ ರವಿದೇವಚಮಾಪನ ಆದೇಶದಂತೆ ಏವೂರಿನ ಹೆಗಡೆ ನಾಗವರ್ಮ ಈ ದೇವಾಲಯ ನಿರ್ಮಿಸಿದ. ಮೊದಲು ಏಕ ಕೂಟವಾಗಿದ್ದ ಈ ದೇವಾಲಯ ನಂತರದ ಕಾಲದಲ್ಲಿ ದ್ವಿಕೂಟ, ತ್ರಿಕೂಟ ಮಾದರಿಯಲ್ಲಿ ನಿರ್ಮಾಣವಾಯಿತೆಂದು ತಿಳಿಯುತ್ತದೆ. ಈ ಸ್ವಯಂಭೂ ಸೋಮೇಶ್ವರ ದೇವಾಲಯ ಬಹು ಕೋನಾಕಾರದ ತಳವಿನ್ಯಾಸದಿಂದ ಕೂಡಿದೆ. ಗರ್ಭಗೃಹದಲ್ಲಿ ಶಿವಲಿಂಗ, ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪ, ಗರ್ಭಗೃಹ ತೆರೆದ ಅಂತರಾಳ, ರಂಗಮಂಟಪಗಳನ್ನು ಹೊಂದಿದೆ. ದ್ವಾರಬಂಧ 5 ಶಾಖೆಗಳಿಂದ ಅಲಂಕೃತಗೊಂಡಿದೆ. ರಂಗಮಂಟಪದ ಕಂಬಗಳು ಸೂಕ್ಷ್ಮ ಕೆತ್ತನೆಯಿಂದ ಆಕರ್ಷಕವಾಗಿದ್ದು, ಮೆಟ್ಟಲುಗಳನ್ನೊಳಗೊಂಡು ಗೋಪುರ ಮತ್ತು ಕಳಸವಿದೆ. ರಂಗಮಂಟಪದ ದಕ್ಷಿಣ ದ್ವಾರದ ಎದುರು ಆನೆಯ ಶಿಲ್ಪಗಳ ಮೇಲೆ ಸಿಂಹ ಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯದ ಮುಂದೆ ಭಗ್ನಗೊಂಡ ಗಣೇಶ ಹಾಗೂ ನಾಗಶಿಲ್ಪಗಳಿವೆ.

ಎಡಭಾಗಕ್ಕೆ ದಕ್ಷಿಣಭಿಮುಖವಾಗಿ ನಿರ್ಮಿಸಲಾದ ಇಂದಿನ ಸಂಗಮೇಶ್ವರ ದೇವಾಲಯ ಕ್ರಿ.ಶ. 1119 ರ ಶಾಸನೊತ್ತರ ಚಟ್ಟೇಶ್ವರ ದೇವಾಲಯವೆಂದು ಸಂಶೋಧಕರ ಅಭಿಪ್ರಾಯ. ವಿಶಾಲ ಗರ್ಭಗೃಹ ತೆರೆದ ಅಂತರಾಳ ಹೊಂದಿದ್ದು, ಗರ್ಭಗೃಹದಲ್ಲಿ ಶಿವಲಿಂಗ, ದ್ವಾರಬಂಧ ಪಂಚ ಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಗರ್ಭಗೃಹದ ಮೇಲಿರುವ ಗೋಪುರ ಸೋಪಾನ ಮಾದರಿಯಲ್ಲಿದ್ದು, ಈ ದೇವಾಲಯದ ಹೊರಮೈ ನಿರಾಡಂಬರವಾಗಿದ್ದು, ಹಿಂಬದಿಯಲ್ಲಿ ಮಿಥುನ ಶಿಲ್ಪಗಳನ್ನು ಕೆತ್ತಲಾಗಿದೆ. ಈ ದೇವಾಲಯ ಸಂಕೀರ್ಣ ಸುಂದರ ವಾಗಿದ್ದು, ಮೂರು ಗರ್ಭಗೃಹಗಳ ಮೇಲೆ ಪ್ರತ್ಯೇಕ ಗೋಪುರಗಳು, ಕಳಸಗಳನ್ನು ಹೊಂದಿದೆ. ಮೂರು ದೇವಾಲಯಗಳ ನಡುವೆ ಒಂದೇ ರಂಗಮಂಟಪವಿದ್ದು, ಆ ರಂಗಮಂಟಪದ ಕಂಬಗಳು ಒಂದಕ್ಕಿಂತ ಒಂದು ಸುಂದರ ಹಾಗೂ ವಿಭಿನ್ನಶೈಲಿಯಲ್ಲಿವೆ. ಈ ಪರಿಸರದಲ್ಲಿ ಬಾವಿ ಬಸವಣ್ಣ ಎಂಬ ಚಿಕ್ಕ ದೇವಾಲಯ ಹಾಗೂ ಶಾಸನೋಕ್ತ ಮಠ (ಉಗ್ರಾಣ ಮನೆ) ಮಲ್ಲಿಕಾರ್ಜುನ ದೇವಾಲಯ, ಮಧ್ಯದಲ್ಲಿ ಕಲ್ಯಾಣಿ (ಶಿವತೀರ್ಥವಿದ್ದು), ಕ್ರಿ.ಶ. 1077 ರ ಸ್ವಯಂಭೂ ಸೋಮೇಶ್ವರ ದೇವಾಲಯದ ನಿರ್ಮಾಣದ ಸಮಯದಲ್ಲಿ ಏವೂರಿನ ಹೆಗಡೆ ನಾಗವರ್ಮನು ನಿರ್ಮಿಸಿದ್ದನೆಂದು ತಿಳಿಯುತ್ತದೆ. ಈ ಕಲ್ಯಾಣಿಯ ನೀರನ್ನು ಕುಡಿದರೆ ಹಾವು, ಚೇಳು ಕಚ್ಚಿದ ವಿಷ ಪರಿಹಾರ ವಾಗುತ್ತದೆಂಬ ಪ್ರತೀತಿ ಇದೆ. ಅದಕ್ಕಾಗಿ ಈ ನೀರನ್ನು ವೈಜ್ಞಾನಿಕ ಸಂಶೋಧನೆಗೆ ಒಳಪಡಿಸುವದು ಅಗತ್ಯ ವಿದೆ. ದೇವಾಲಯದ ಮುಖ್ಯ ದ್ವಾರ ಪೂರ್ವಕ್ಕಿದ್ದು ಅಲ್ಲಿ ಭೈರವಿ ಶಿಲ್ಪ, ನಾಗಶಿಲ್ಪಗಳಿವೆ. ದಕ್ಷಿಣ ದ್ವಾರದ ಬಳಿ ಸಮುದ್ರ ಮಂಥನ ಶಿಲ್ಪ, ಪದ್ಮಾವತಿ, ಗಣಪತಿ ಶಿಲ್ಪಗಳಿವೆ.

ಇಲ್ಲಿ ಜೈನ ಧರ್ಮವೂ ಆಚರಣೆಯಲ್ಲಿತ್ತು ಎನ್ನುವುದಕ್ಕೆ ಊರಿನ ಪಶ್ಚಿಮಕ್ಕೆ ಒಂದು ಜೈನ ಬಸದಿ ಇದೆ. ಈ ಬಸದಿಗೆ ನಾಗವರ್ಮ ಶೆಟ್ಟಿಯು, ಶಾಂತಿನಾಥ ತೀರ್ಥಂಕರಿಗೆ 54 ಎಕರೆ ಭೂಮಿಯನ್ನು ದಾನವಾಗಿ ನೀಡಿರುವ ವಿಷಯ ವಾಯುವ್ಯ ದಿಕ್ಕಿನ ಹೊಲದಲ್ಲಿರುವ 2 ಶಾಸನಗಳಿಂದ ತಿಳಿಯುತ್ತದೆ. 10 ನೆಯ ಶತಮಾನದ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ಹೇಳಲಾಗುತ್ತದೆ.

ಒಂದು ಕಾಲದಲ್ಲಿ ವೈಭವದಿಂದ ಪೂಜೆಗೊಳ್ಳುತ್ತಿದ್ದ ಈ ಬಸದಿ ಗರ್ಭಗೃಹ ಇಂದು ಹಾಳು ಬಿದ್ದಿದೆ. ಬಸದಿಯ ಸುತ್ತಮುತ್ತ ಮುಳ್ಳುಜಾಲಿಗಿಡಗಳು ಬೆಳೆದಿದ್ದು, ನವರಂಗವನ್ನು ದನಗಳನ್ನು ಕಟ್ಟುವ ಕೊಟ್ಟಿಗೆ ಮಾಡಲಾಗಿದೆ. ದೇವಸ್ಥಾನ ಜೀರ್ಣೋದ್ಧಾರ ಅಥವಾ ಈ ಐತಿಹಾಸಿಕ ಸ್ಮಾರಕಗಳ ರಕ್ಷಣೆಗೆ ಯಾವುದೇ ಕ್ರಮ ಕೈಕೊಳ್ಳದೇ ಹಾಳು ಸುರಿಯುತ್ತಿವೆ.

ಏವೂರ ಗ್ರಾಮದಲ್ಲಿ ಬೌದ್ಧಧರ್ಮ ಕೂಡ ಅಸ್ತಿತ್ವದಲ್ಲಿತ್ತು. ಗ್ರಾಮದ ಹಣಮಂತ ದೇವರ ಗೋಡೆಯಲ್ಲಿರುವ ಪದ್ಮಾಸನ ಬುದ್ಧ ಶಿಲ್ಪದಿಂದ ಇದು ವ್ಯಕ್ತವಾಗುತ್ತದೆ. ವಿಗ್ರಹ ಪದ್ಮ ಪೀಠದ ಮೇಲೆ ಸಿದ್ಧಾಸನದಲ್ಲಿ ಶಾಂತಚಿತ್ತ ಮುಖಮುದ್ರೆಯ ವಿಗ್ರಹದ ಎರಡು ಕೈ ತ್ರುಟಿತಗೊಂಡಿದೆ. ವಿಗ್ರಹದ ಬಲಗಡೆ ಒಂದು ದಂಡವನ್ನು ನಿಲ್ಲಿಸಲಾಗಿದ್ದು, ಇಂತಹ ದಂಡಹೊಂದಿರುವ ಬುದ್ಧನ ಶಿಲ್ಪ ಕರ್ನಾಟಕದಲ್ಲಿ ಅಪೂರ್ವವಾದದ್ದೆಂದು ಡಾ. ರು.ಮಾ. ಷಡಕ್ಷರಯ್ಯ ಅವರು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು. ಸುಮಾರು ಕ್ರಿ.ಶ. 10 ನೆಯ ಶತಮಾನದ ಕೊನೆಯ ಭಾಗದ್ದಾಗಿರಬಹುದೆಂದು ಹೇಳಲಾಗುತ್ತದೆ. ಕರ್ನಾಟಕದ ಧಾರವಾಡ ಜಿಲ್ಲೆಯ ಡಂಬಳ, ಕೋಳಿವಾಡ, ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವಿ, ಉತ್ತರ ಕನ್ನಡ ಮುಂತಾದ ಕಡೆ ದೊರೆತಿರುವ ಬುದ್ಧ ವಿಗ್ರಹಗಳು ಇದಕ್ಕೆ ಹೋಲುತ್ತವೆ. ಈ ಅಪೂರ್ವವಾದ ಇತಿಹಾಸದ ದಾಖಲೆಗಳು ಇಂದು ಅಳಿವಿನ ಅಂಚಿನಲ್ಲಿವೆ. *(ಎನ್‌ಎಚ್‌ಡಿ)*

ಏಳು-ಹನ್ನೊಂದಾತು: ಒಂದು ಆಡು-ನುಡಿ. ಘಟನೆ ಘಟಿಸುವಂಥಾದ್ದು ಎಂಬ ಅರ್ಥದಂತೆ ಈ ಆಡು-ನುಡಿಯನ್ನು ಬಳಸುತ್ತಾರೆ. ಅಸಂಭವನೀಯವಾದ ವಿಷಯಗಳನ್ನು ವೈಭವೀಕರಿಸಿ, ಅತ್ಯಂತ ಪರಿಣಾಮಕಾರಿಯಾಗಿ ಹೇಳುವುದಕ್ಕಾಗಿ



ಕಾರಹುಣ್ಣಿಮೆ ಕರಿ



ಜಲಾಲಿ-ದರ್ವೇಶಿಗಳು

ಏಳು–ಹನ್ನೊಂದಾತು ಎಂಬ ಆಡು–ನುಡಿಯನ್ನು ಬಳಸುತ್ತಾರೆ. ಜನಪದ ಭಾಷೆಯಲ್ಲಿ ಅಂಕಿ–ಸಂಖ್ಯೆಗಳನ್ನು ಬಳಸಿಕೊಂಡು ಮಾಡನಾಡುವ ಪದ್ಧತಿ ಇದೆ. ಉದಾ: ಸಾಡೆ ಸಾತಿ, ಮೂರಕ್ಕ ಮುಗಿತು, ಜನಪದ ಭಾಷೆಯಲ್ಲಿ ಏಳು–ಹನ್ನೊಂದಾತು ಎಂಬ ಬೆಸ ಸಂಖ್ಯೆಯು ಅಸಂಭವನೀಯ ಸಂಗತಿಗಳನ್ನು ಪರಿಣಾಮಕಾರಿಯಾಗಿ ಹೇಳುವದಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಆದರೆ ಶಿಷ್ಟ ಭಾಷೆಯಲ್ಲಿ ಏಳು–ಹನ್ನೊಂದಾತು ಎಂಬುದು ಅತಿಶಯೋಕ್ತಿ ಅಥವಾ ಉತ್ಪ್ರೇಕ್ಷೆಯಾಗಿದೆ, ಮತ್ತು ದುರ್ಘಟನೆಯನ್ನು ಹೇಳುವಂತಹದು ಎಂಬರ್ಥದಲ್ಲಿ ಕೂಡ ಬಳಕೆಯಾಗುತ್ತದೆ.

ಏಳು–ಹನ್ನೊಂದು ಎನ್ನುವುದನ್ನು ಅಕ್ಷೋಹಿಣಿ ಎನ್ನುವ ಅರ್ಥದಲ್ಲಿಯೂ ಬಳಸಲಾಗುತ್ತದೆ. ಅಕ್ಷೋಹಿಣಿ ಎಂಬುದು ಒಂದು ಸಂಖ್ಯೆಯ ಅರ್ಥವನ್ನು ಹೊಂದಿದೆ. ಅದು ಸೈನ್ಯದ ಸಂಖ್ಯೆಯಾಗಿದೆ. 21870 ರಥಗಳು, 21870 ಆನೆಗಳು, 65610 ಕುದುರೆಗಳು, 109350 ಕಾಲಾಳು, ಇವೆಲ್ಲವೂ ಸೇರಿದರೆ ಅಕ್ಷೋಹಿಣಿಯಾಗುತ್ತದೆ. ಇಂತಹ 7 ಅಕ್ಷೋಹಿಣಿ ಸೈನ್ಯವು ಪಾಂಡವರ ಕಡೆಯಲ್ಲಿ ಇದ್ದಿತು. 11 ಅಕ್ಷೋಹಿಣಿ ಸೈನ್ಯವು ಕೌರವರ ಕಡೆಯಲ್ಲಿ ಇದ್ದಿತು. ಕೌರವ–ಪಾಂಡವರು ತಮ್ಮ ಸೈನ್ಯದ ಜತೆಗೂಡಿ ಯುದ್ಧ ಮಾಡಿದರು. ಯುದ್ಧದ ಪರಿಣಾಮವಾಗಿ ಕೌರವ–ಪಾಂಡವರಿಬ್ಬರಿಗೂ ಅಪಾರ ನಷ್ಟವಾಯಿತು. ಇವತ್ತಿಗೂ ಯಾರಿಗಾದರೂ ಪರಸ್ಪರ ದ್ವೇಷಾಸೂಯೆ, ಸೇಡಿನ ಭಾವವಿದ್ದು ನಷ್ಟ ಅನುಭವಿಸಿದರೆ ಏಳು–ಹನ್ನೊಂದಾಯಿತು ಎಂದು ವ್ಯಂಗತೆಯಿಂದ ವಿಮರ್ಶಿಸುತ್ತಾರೆ.

ಮಕ್ಕಳಿರಲಾರದ ಅಣ್ಣ, ಮದುವೆ ಪ್ರಯತ್ನ, ಮಗಲಗಿದಾಗ ಮಾಡಿದ ಕೊಲೆ, ಎಂಬ ಅರ್ಥಗಳಲ್ಲಿ ಕೂಡ ಬಳಕೆಯಾಗುತ್ತದೆ. ಮಲಗಿದಾಗ ಕೊಲೆ ಮಾಡಿದವನೇ 7 ತಿಂಗಳು 11 ದಿನಗಳಲ್ಲಿ ಸತ್ತು ಹೋಗುತ್ತಾನೆ, ಅಘಟಿತ ಘಟನೆಗಳು 7, 11ರ ಸಂಖ್ಯೆಯಲ್ಲಿ ನಡೆಯುತ್ತವೆ, ಎಂಬ ನಂಬಿಕೆಯಿದೆ. ಅದನ್ನೇ ಏಳು–ಹನ್ನೊಂದಾತು ಎಂಬ ಆಡು ನುಡಿಯು ಅರ್ಥೈಸುತ್ತದೆ.

(ಪಿಪಿ)

ಐ

ಐತಿಹಾಸಿಕ ಕಮಾನುಗಳು: ಹಳೆ ಶಿಲಾಯುಗದಿಂದ ಅಮೃತ ಶಿಲಾ ಯುಗದವರೆಗೂ, ಕೊಪ್ಪಳ ಜಿಲ್ಲೆ ಐತಿಹಾಸಿಕ, ಪೌರಾಣಿಕ, ಸಾಂಸ್ಕೃತಿಕ, ಧಾರ್ಮಿಕ, ಕಲಾ ಕ್ಷೇತ್ರದಲ್ಲಿ ತನ್ನ ಖ್ಯಾತಿಯನ್ನು ದಾಖಲಿಸಿದೆ. ಮೌರ್ಯರ ಕಾಲದಲ್ಲಿ ಕೊಪಣ ನಗರವಾಗಿದ್ದು, ಗವಿಮಠ ಹಾಗೂ ಪಾಲ್ಕಿಗುಂಡಗಳಲ್ಲಿ ದೇವನಾಂಪ್ರಿಯ ಅಶೋಕ ಸಾಮ್ರಾಟನ ಶಿಲಾ ಶಾಸನಗಳಿಗೆ ಆಶ್ರಯ ತಾಣವಾಗಿ, 9ನೆಯ ಶತಮಾನದಲ್ಲಿ 774 ಜೈನ ಬಸದಿಗಳನ್ನು ತನ್ನೊಡಲಲ್ಲಿರಿಸಿಕೊಂಡು, ಜೈನರ ಕಾಶಿ ಎಂದು ಹೆಸರಾಗಿತ್ತು. ಈಗಲೂ ಅನೇಕ ಜೈನ ಸ್ಮಾರಕಗಳು, ಶಿಲಾ ಶಾಸನಗಳ ಅಗರವಾಗಿದೆ. ಹೈದರಾಬಾದ ನಿಜಾಮರ ಕಾಲದ ಸ್ಮಾರಕಗಳಾದ 'ಕಲಾತ್ಮಕ ನಾಲ್ಕು ದಿಕ್ಕಿನಲ್ಲಿರುವ ಕಮಾನುಗಳು' ಕೊಪ್ಪಳ ನಗರದ ಸೌಂದರ್ಯ ವರ್ಧಕಗಳಾಗಿವೆಯೆಂದರೆ ಅತಿಶಯೋಕ್ತಿಯೇನಲ್ಲ.

ನಿಜಾಮನ ಗೌರವಾರ್ಥವಾಗಿ ನಗರದ ಮಧ್ಯಭಾಗದಲ್ಲಿ ಗಡಿಯಾರವಿರುವ ಕಂಬವೊಂದನ್ನು ಸ್ಥಾಪಿಸಲಾಗಿತ್ತು. ಇದನ್ನು ಕೇಂದ್ರವಾಗಿಸಿಕೊಂಡು ಸರಿಯಾದ ಅಂತರಕ್ಕೆ ಮೂಡಣ, ಪಡುವಣ, ತೆಂಕಣ, ಬಡಗಣ ದಿಕ್ಕುಗಳಿಗೆ ಈ ಮಹಾದ್ವಾರಗಳನ್ನು ನಿರ್ಮಿಸಲಾಯಿತು. ಇದರ ನಿರ್ಮಾತೃ ಗಾಂಜಿ ನರಸಿಂಹರಾಯರು. ಅವರ ಸೇವಾವಧಿ 1888 ರಿಂದ 1890ರ ವರೆಗೆ ಆಗ ಅವರು ಈ ಕಮಾನುಗಳ ನಿರ್ಮಾಣಕ್ಕೆ ಕಾರಣರಾದರು. ಈ ಕಮಾನುಗಳು, ಸುಮಾರು 111 ವರ್ಷಗಳಷ್ಟು ಹಳೆಯದಾದರೂ ಇದೀಗ ಹೊಸದಾಗಿ ನಿರ್ಮಿಸಿದವುಗಳಂತೆ ಆಕರ್ಷಣೀಯವಾಗಿವೆ. ಶತಮಾನದ ಹಿಂದಿನ ತಾಂತ್ರಿಕ ಪರಿಣತಿ ಮತ್ತು ಕಲಾತ್ಮಕತೆಯನ್ನು ಈ ಕಮಾನು ನಿರ್ಮಾಣದಲ್ಲಿ ಕಾಣಬಹುದು.

ದಕ್ಷಿಣೋತ್ತರದ ದ್ವಾರಗಳು, ಪೂರ್ವ–ಪಶ್ಚಿಮದ ದ್ವಾರಗಳಿಗಿಂತ ಸ್ವಲ್ಪ ದೊಡ್ಡವು. ಸುಮಾರು 50 ಅಡಿ ಅಗಲದ ಹಾಗೂ ಎತ್ತರದಿಂದ ಬೃಹದಾಕಾರವಾಗಿದೆ. ನಟ್ಟನಡುವೆ ಬೃಹತ್ ಕಮಾನು ಇದ್ದು, ಇದರ ಇಕ್ಕೆಲಗಳಲ್ಲಿ ಚಿಕ್ಕದಾದ ದ್ವಾರಗಳಿದ್ದು, ಇವುಗಳ ಮೂಲಕ ಮಹಾದ್ವಾರದ ಮೇಲ್ತುದಿಗೆ ಹೋಗಲು ಮೆಟ್ಟಲುಗಳ ವ್ಯವಸ್ಥೆ ಇದೆ. ಮೇಲ್ಗಡೆ ಜಾಲಂಧ್ರಗಳಲ್ಲದೆ, 19 ಚಿಕ್ಕ ಚಿಕ್ಕ ಕಮಾನಿನ ಜೋಡಣೆಯು ಈ ಮಹಾದ್ವಾರಗಳ ಅಂದವನ್ನು ನೂರ್ಮಡಿಗೊಳಿಸಿದೆ. ಆದರೆ, ಪೂರ್ವ–ಪಶ್ಚಿಮ ದ್ವಾರಗಳು, ಈ ಮಹಾದ್ವಾರಗಳಿಗಿಂತ ಕೊಂಚ ಭಿನ್ನವಾಗಿವೆ. ಇವುಗಳ ಇಕ್ಕೆಲ್ಲಕ್ಕೆ ಯಾವುದೇ ಚಿಕ್ಕದ್ವಾರಗಳಿಲ್ಲ. ದೊಡ್ಡ ಕಮಾನಿಗೆ ಅಡ್ಡಲಾಗಿ ಮೇಲ್ತುದಿಯಲ್ಲಿ ಚಿಕ್ಕ ಚಿಕ್ಕ ಕಮಾನುಗಳಿವೆ. ಪಶ್ಚಿಮ ದ್ವಾರದಲ್ಲಿ ಸುಮಾರು 14 ಕಮಾನುಗಳಿವೆ. ಪೂರ್ವದ್ವಾರದಲ್ಲಿ ಅತೀ ಚಿಕ್ಕದಾದ 36 ಕಮಾನುಗಳಿವೆ. ಪ್ರವೇಶ ದ್ವಾರದ ಬೃಹತ್ ಕಮಾನುಗಳಿಗೆ ಮಾತ್ರಕೆಂಪು ಬಣ್ಣ (ಸುರುಮ) ಬಳಿದಿರುವುದನ್ನು ಹೆಚ್ಚೇನೂ ರಂಗು ರಂಗಾಗಿಲ್ಲದಿದ್ದರೂ 'ನಿರಾಭರಣ ಸುಂದರಿ' ಯಂತೆ ಕಮಾನುಗಳು ಇಂದಿಗೂ ಕಂಗೊಳಿಸುತ್ತಿವೆ. ನಾಲ್ಕೂ ಕಮಾನುಗಳ ಮಧ್ಯದಲ್ಲಿರುವ ಗಡಿಯಾರ ಕಂಬದಿಂದ ಹೊರಟ ನಾಲ್ಕು ರಸ್ತೆಗಳಿಗೂ ನಾಮಕರಣ ಮಾಡಲಾಗಿದೆ! ಪಶ್ಚಿಮದ ರಸ್ತೆ ಕಿಲ್ಲಾ (ಹುಲಿಕೆರೆ) ರಸ್ತೆ, ಪೂರ್ವದ ರಸ್ತೆಗೆ ಗವಿಮಠ ರಸ್ತೆ, ಉತ್ತರದ ರಸ್ತೆಗೆ ಜವಾಹರ ರಸ್ತೆ, ದಕ್ಷಿಣದ ರಸ್ತೆಗೆ ಸಿರಸಪ್ಪಯ್ಯನ ಮಠದ ರಸ್ತೆ ಎಂದು ಕರೆಯುತ್ತಾರೆ.

ಈ ನಾಲ್ಕು ಮಹಾದ್ವಾರಗಳಷ್ಟೇ ಅಲ್ಲದೇ ಊರಿನ ಪ್ರವೇಶಕ್ಕೆ ಉತ್ತರದ ಕಡೆ ಜಾಮೀಯಾ ಮಸೀದಿ ಅಥವಾ ಟಾಂಗಾ ಕೂಟದ ಬಳಿ ಇದ್ದ ಇನ್ನೊಂದು ಮಹಾದ್ವಾರವನ್ನು 1966 ರಲ್ಲಿ ಈ ಐತಿಹಾಸಿಕ ಕಮಾನು ಕೆಡವಲಾಯಿತು! 1960 ರಲ್ಲಿಯೇ 'ಅದು ಶಿಥಿಲಗೊಂಡು ಅಪಾಯದಲ್ಲಿದೆ' ಎಂಬ ಹಣೆಪಟ್ಟಿ ಅಂಟಿಸಿಕೊಂಡಿತ್ತು. ಶಿಥಿಲಗೊಂಡು ಅಪಾಯದ ಅಂಚಿನಲ್ಲಿದ್ದ ಆ

ಮಹಾದ್ವಾರವನ್ನು ಒಡೆದು ಹಾಕಲು ಸುಮಾರು 60 ಜನರು ವಾರವಿಡೀ ಹೆಣಗಾಡಬೇಕಾಯಿತು! ಆಗ ದ್ವಾರಗಳ ಗಟ್ಟಿತನ, ದ್ವಾರ ಉಳಿಸಿಕೊಳ್ಳುವ (ಉಳಿದ ನಾಲ್ಕು) ದಿಟ್ಟತನ ಕೊಪ್ಪಳ ನಗರದ ನಾಗರಿಕರಲ್ಲಿ ಮೂಡಿತು.

ಕೊಪ್ಪಳದ ಅಂದಕ್ಕೆ ಬೂಷಣ ಪ್ರಾಯವಾಗಿರುವ ಮಹಾದ್ವಾರಗಳನ್ನು ಉಳಿಸಿಕೊಳ್ಳುವುದೂ ಒಂದು ಸಂಸ್ಕೃತಿ ಹಾಗೂ ಕಲೆಯ ಸ್ಮಾರಕವನ್ನು ರಕ್ಷಿಸಿದಂತೆ. *(ಕೆಎಸ್‌ಎನ್‌ಐ)*

ಐತಿಹ್ಯಗಳು: ನೈಜಸಂಗತಿಗಳೆಂದು ಜನಸಾಮಾನ್ಯರು ತಿಳಿದು ಕೊಂಡಿರುವುದು. ಜನಪದ ಕಥೆಗಳಲ್ಲಿ ಕಾಲ್ಪನಿಕತೆ ಎದ್ದು ಕಂಡರೆ, ಐತಿಹ್ಯಗಳಲ್ಲಿಯ ಕಾಲ್ಪನಿಕತೆಯು ಅಲ್ಪಮಟ್ಟಿನ ಸತ್ಯವನ್ನು ತನ್ನಲ್ಲಿ ಹುದುಗಿಸಿಟ್ಟುಕೊಂಡಿರುತ್ತದೆ. ಪುರಾಣ ಕಥೆಗಳು–ಜನರ ಧಾರ್ಮಿಕ ಮತ್ತು ವೈಚಾರಿಕತೆಯ ದ್ಯೋತಕಗಳಾಗಿರುತ್ತವೆ. ಐತಿಹ್ಯವು ಜನರು ನಂಬಿದ ಇತಿಹಾಸವಾದರೆ, ಪುರಾಣವು ಜನಪದರು ಅತ್ಯಂತ ಪವಿತ್ರವೆಂದು ನಂಬಿದ ಸತ್ಯಕಥನ ಆಗಿರುತ್ತದೆ. ಅದಕ್ಕಾಗಿ ಜನಪದ ಕಥೆಗಳಲ್ಲಿ ಐತಿಹ್ಯ ಮತ್ತು ಪುರಾಣಗಳನ್ನು ಸೇರಿಸಲಾಗದು. ಸಂಪೂರ್ಣವಾಗಿ ಈ ಮೂರರ ಸೃಷ್ಟಿಯ ಕಾರಣ, ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪಗಳು ತೀರ ಭಿನ್ನವಾಗಿವೆ. ಅದಕ್ಕಾಗಿ ಈ ಮೂರರ ಪ್ರತ್ಯೇಕ ಅಭ್ಯಾಸದ ಅವಶ್ಯಕತೆ ಎದ್ದುಕಾಣುತ್ತದೆ.

ಕನ್ನಡ ಐತಿಹ್ಯಗಳನ್ನು ಕುರಿತಂತೆ ನಮ್ಮಲ್ಲಿ ಸಾಕಷ್ಟು ಅಭ್ಯಾಸ ನಡೆದಿಲ್ಲ. ಪ್ರಾಸಂಗಿಕವಾಗಿ ಅಲ್ಲಷ್ಟು ಇಲ್ಲಷ್ಟು ಮಾತ್ರ ಐತಿಹ್ಯಗಳ ಬಗ್ಗೆ ಪ್ರಸ್ತಾಪ ಚರ್ಚೆ ನಡೆದುದನ್ನು ಬಿಟ್ಟರೆ, ಪ್ರತ್ಯೇಕವಾಗಿ ಮಹತ್ವದ ಅಭ್ಯಾಸ ನಡೆದಿಲ್ಲವೆಂದೇ ಹೇಳಬೇಕು. ಆದರೆ ಕೆಲವೊಂದು ಐತಿಹ್ಯಗಳ ಸಂಗ್ರಹಗಳು ಪ್ರಕಟವಾದುದು ಗಮನಕ್ಕೆ ಬರುತ್ತದೆ ಮು. ವೆಂಕಟಕೃಷ್ಣಪ್ಪ ಅವರಿಂದ ಕೋಲಾರ ನಾಡು ಕತೆಗಳೂ (1936), ಹುಲ್ಲೂರು ಶ್ರೀನಿವಾಸ ಜೋಯಿಸರಿಂದ ನಾಡ ಕಥೆಗಳು (1950), ಪಂಜೆ ಮಂಗೇಶರಾಯರಿಂದ ಕೋಟಿ ಚೆನ್ನಯ್ಯ (1953), ಕೆ. ವೆಂಕಟರಾಯಾಚಾರ್ಯರಿಂದ ಜಾನಪದ ಕಥೆಗಳು (ದ.ಕ. ಜಿಲ್ಲೆಯ ವೀರರ ಕಥೆಗಳು, 1956), ಅಮೃತ ಸೋಮೇಶ್ವರರಿಂದ ತುಳು ಪಾಡ್ದನದ ಕಥೆಗಳು (1962), ಬೇಕಲ ರಾಮನಾಯಕರಿಂದ ಕಿಚ್ಚಿನ ಕಿಡಿಗಳು (1966), ಹಾಗೂ ತೆಂಕನಾಡ ಐತಿಹ್ಯಗಳು (1969) ಮುಂತಾದ ಐತಿಹ್ಯಗಳ ಸಂಗ್ರಹಗಳು ಪ್ರಕಟವಾಗಿವೆ. ಇತ್ತೀಚೆಗೆ ಜಿ.ವಿ. ದಾಸೇಗೌಡ ಅವರಿಂದ ಒಂದು ಐತಿಹ್ಯ ಸಂಗ್ರಹ ಪ್ರಕಟವಾಗಿದೆ.

ಐತಿಹ್ಯಕ್ಕೂ, ಪುರಾಣಕ್ಕೂ ಹತ್ತಿರವಾದ ಸಂಬಂಧ ಇರುವುದನ್ನು ಮರೆಯಲಿಕ್ಕಾಗದು. ನಾವು ತೀರ ಸರಳವಾಗಿ ಐತಿಹ್ಯವನ್ನು ಗುರುತಿಸುವ ಅಂಶವೆಂದರೆ, ಒಂದು ಸಂಗತಿಯನ್ನು ವಿವರಿಸುತ್ತ, ಅದಕ್ಕೆ ಸಾಕ್ಷಿಯನ್ನು ತೋರಿಸುವುದು. ಈ ಸಂಗತಿ ಥಟ್ಟನೆ ನಿಜವೆಂದು ನಂಬಲಿಕ್ಕಾಗಲಿ, ಸುಳ್ಳೆಂದು ತಿರಸ್ಕರಿಸಲಿಕ್ಕಾಗಲಿ ಬರುವುದಿಲ್ಲ. ಇಂತಹ ಸಂಗತಿಗಳು ಇತಿಹಾಸ, ಪುರಾಣ, ವ್ಯಕ್ತಿ ಚರಿತ್ರೆ ಇಲ್ಲವೆ ಸ್ಥಳ ವಿವರಕ್ಕೆ ಸಂಬಂಧಿಸಿರುವುದು ಸರ್ವಸಾಮಾನ್ಯ. ಆದರೆ ಈ ಸಂಗತಿಗಳು ಮೂಲಭೂತವಾಗಿ ಐತಿಹ್ಯಗಳಾಗಿರುತ್ತವೆ. ಅದಕ್ಕಾಗಿ ಐತಿಹ್ಯಗಳಲ್ಲಿಯ ಚಾರಿತ್ರಿಕ, ಐತಿಹಾಸಿಕ, ಪೌರಾಣಿಕ ಅಂಶಗಳನ್ನು ಗುರುತಿಸಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಅಷ್ಟೆ

ಸುರಪುರ ಸಂಸ್ಥಾನಕ್ಕೆ ಸಂಬಂಧಿಸಿದಂತೆ ಒಂದು ಘಟನೆಯನ್ನು ಹೀಗೆ ಹೇಳಲಾಗುತ್ತದೆ: ಸುರಪುರ ನಾಯಕರ ಮೊದಲ ಕೇಂದ್ರ ಸ್ಥಳ ವಾಗಣಗೇರಿ ಆಗಿತ್ತು. ಪಿತಾಂಬರ ಬಹಿರಿ ಪಿಡ್ಡಿನಾಯಕನು (1687–1726) ಬೇಟೆಯಾಡಲು, ಈಗ ಸುರಪುರ ಇರುವ ಗುಡ್ಡಕ್ಕೆ ಬಂದನು. ಅಲ್ಲಿ ತಾನು ಜೊತೆಗೆ ತಂದಿದ್ದ ಬೇಟೆ ನಾಯಿ, ಒಂದು ಮೊಲದ ಬೆನ್ನಟ್ಟಿತು. ಆದರೆ ವಿಚಿತ್ರವೆಂದರೆ ಮೊಲವೇ ನಾಯಿಯನ್ನು ಹಿಡಿಯಿತು. ಈ ವಿಚಿತ್ರ ಕಂಡು, ನಾಯಕನು ಅಲ್ಲಿ ಸುರಪುರವನ್ನು ನಿರ್ಮಿಸಿ, ತನ್ನ ಕೇಂದ್ರ ಸ್ಥಳ ವನ್ನಾಗಿಸಿದನು (1705). ಇಲ್ಲಿ ಮೊಲವು ನಾಯಿಯನ್ನು ಹಿಡಿಯುವ ಸಂಗತಿ ಅಸಾಧ್ಯವಾದರೂ ನಾಯಕನು ಸುರಪುರವನ್ನು ನಿರ್ಮಿಸಿ ವಾಗ–ಣಗೇರಿಯಿಂದ ತನ್ನ ಆಡಳಿತ ಕೇಂದ್ರವನ್ನು ಸುರಪುರಕ್ಕೆ ಬದಲಾಯಿಸಿದನೆಂಬುದು ಸತ್ಯ ಸಂಗತಿಯಾಗಿದೆ. ಹೀಗಾಗಿ ಇದೊಂದು ಅಪ್ಪಟ ಇತಿಹಾಸದ ತುಕಡಿ ಎಂದು ಸ್ವೀಕರಿಸಲು ಬಾರದೆ ಐತಿಹ್ಯದಲ್ಲಿ ಇತಿಹಾಸವನ್ನು ಎಚ್ಚರಿಕೆಯಿಂದ ಗುರುತಿಸಬಹುದಾದುದರ ಒಂದು ನಮೂನೆಯಾಗಿದೆ.

ವ್ಯಕ್ತಿ ಮತ್ತು ಸ್ಥಳ ಐತಿಹ್ಯಗಳಿಗೂ ಪುರಾಣಗಳಲ್ಲಿ ಕಾಣಿಸಿಕೊಳ್ಳುವ ಅಂಶಗಳಿಗೂ ಕೆಲ ಅಂಶಗಳಲ್ಲಿ ಸಾಮ್ಯತೆಗಳನ್ನು ಗುರುತಿಸಬಹುದಾಗಿದೆ. ವ್ಯಕ್ತಿ ಐತಿಹ್ಯಗಳಂತೂ ಪವಾಡಗಳೇನೋ ಎಂಬಂತೆ ಭಾಸವಾಗುತ್ತವೆ. ಆದರೆ ಪವಾಡಗಳು ನಿರಾಧಾರ ಮತ್ತು ಅತ್ಯಂತ ಕಾಲ್ಪನಿಕತೆಯಿಂದ ತುಂಬಿಹೋಗಿರುತ್ತವೆ. ಆದರೆ ಒಂದು ವ್ಯಕ್ತಿ ಐತಿಹ್ಯವು ಸಾಕ್ಷಿ ಸಹಿತ ಒಂದು ಅದ್ಭುತ ಘಟನೆಯನ್ನು ಬಿತ್ತರಿಸುತ್ತದೆ. ಎಲ್ಲಿ ಸಾಕ್ಷಿ ಇದೆಯೋ ಅದು ಪವಾಡವಾಗಿರದೆ, ಒಂದು ಅದ್ಭುತ ಐತಿಹ್ಯವಾಗಿರುತ್ತದೆಂದು ನಾವು ಭಾವಿಸಬೇಕಾಗುತ್ತದೆ.

ಕಲಬುರ್ಗಿ ಶರಣಬಸವೇಶ್ವರ ಕುರುಡನಿಗೆ ಕಣ್ಣು, ಕಿವುಡನಿಗೆ ಕಿವಿ ಕೊಟ್ಟದ್ದು, ಬಂದೇನವಾಜನು ಗೋಡೆಯಮೇಲೆ ಸವಾರಿ ಮಾಡಿದ್ದು, ಬಸವಣ್ಣ ಬದನೆಕಾಯಿಯನ್ನು ಲಿಂಗವನ್ನಾಗಿ ಪರಿವರ್ತಿಸಿದ್ದು–ಕೇವಲ ಪವಾಡಗಳೆನಿಸುತ್ತವೆ. ಸುರಪುರ ಸಂಸ್ಥಾನದಲ್ಲಿ, 18ನೆಯ ಶತಮಾನದಲ್ಲಿ ಆಗಿಹೋದ ವೀರಪ್ಪ ನಿಷ್ಠಿ ಎನ್ನುವ ಮಹಾಮಂತ್ರಿ ಒಬ್ಬ ಶರಣ. ಅವರು ಸುರಪುರದ ತಿಮ್ಮಾಪುರ ಎಂಬಲ್ಲಿ ಒಂದು ಬಹುದೊಡ್ಡ ಬಾವಿಯನ್ನು ತೋಡಿಸಿದರು (250 x 250). ಈ ಬಾವಿ ಅಗೆಯುವ ಕೂಲಿಕಾರರಿಗೆ ತಾವು ದಿನವೂ ಅಗೆದ ಮಣ್ಣನ್ನು ಪ್ರತ್ಯೇಕವಾಗಿ ಹಾಕಲು ಸೂಚಿಸಲಾಗಿತ್ತಂತೆ. ಸಂಜೆಯ ಹೊತ್ತಿಗೆ ವೀರಪ್ಪನವರು ಬಂದು, ನಿಮ್ಮ ನಿಮ್ಮ ದೈವಕ್ಕೆ ತಕ್ಕ ಪ್ರತಿಫಲ ಸಿಗಲಿ ಎಂದು ಹೇಳುತ್ತ ಕೈಯಲ್ಲಿಯ ಬಡಿಗೆಯನ್ನು ಮಣ್ಣಿನ ಗುಡ್ಡೆಗಳಲ್ಲಿ ಒತ್ತುತ್ತ ಹೋಗುತ್ತಿದ್ದರಂತೆ. ಹೀಗೆ ನಿಷ್ಠಿ ವೀರಪ್ಪನವರು ತಮ್ಮ ಗುಡ್ಡೆಗಳಲ್ಲಿ ಕೋಲಿನಿಂದ ಒತ್ತಿದ ಸ್ಥಳಗಳಲ್ಲಿ ಅಗೆದರೆ, ತಮ್ಮ ಪರಿಶ್ರಮಕ್ಕೆ ಪ್ರತಿಫಲವಾಗಿ ಸಿಗಬೇಕಾದ ಹಣ ಸಿಗುತ್ತಿತ್ತಂತೆ. ಇದು ವೀರಪ್ಪನವರು ಎಂತಹ ಮಹಾತ್ಮರು ಎಂಬುದನ್ನು ಹೇಳಲು ಜನಜನಿತವಾಗಿರುವ ಒಂದು ಐತಿಹ್ಯ. ಆದರೆ ಕೇವಲ ಪವಾಡವಲ್ಲ. ಈ ಸಂಗತಿಯನ್ನು ಸ್ವಲ್ಪ ವೈಚಾರಿಕ ದೃಷ್ಟಿಯಿಂದ ಬಿಡಿಸಿ ನೋಡಿದರೆ ವೀರಪ್ಪನವರು ಮಣ್ಣಿನ ಗುಡ್ಡೆಯಲ್ಲಿ ಒತ್ತುವ ಕೋಲು, ಅಳತೆಯ ಕೋಲಾಗಿರಬೇಕೆಂದೂ, ಆಯಾ ಮಣ್ಣಿನ ಗುಡ್ಡೆಯಲ್ಲಿ

ಕೋಲು ತುರುಕಿ ಅಳತೆ ಮಾಡಿ ಅವರವರ ಪರಿಶ್ರಮಕ್ಕೆ ತಕ್ಕ ಕೂಲಿ ಕೊಡುತ್ತಿದ್ದರೆಂದೂ ಭಾವಿಸಬಹುದಾಗಿದೆ.

ಇನ್ನು ಪೌರಾಣಿಕ ಐತಿಹ್ಯಗಳ ಬಗ್ಗೆ ವಿಚಾರಿಸುವಾ: ರಾಮ ರಾವಣನನ್ನು ಕೊಂದಮೇಲೆ 'ರಾವಣ, ರಾವಣ' ಎನ್ನುವ ಶಬ್ದ ಅವನ ಬೆನ್ನು ಹತ್ತಿತಂತೆ. ಆತ ಈ ಶಬ್ದವು ಹೇಗಾದರೆ ತನ್ನ ಬೆನ್ನ ಬಿಡುವುದೆಂದು ಗುರುವಿಗೆ ಕೇಳಿದನು. ಆತ ಕೇರ ಎಣ್ಣೆಯಲ್ಲಿ ಒಂದು ಪಾವಡ (ಬಟ್ಟೆ)ವನ್ನು ಅದ್ದಿ, ನೀನು ಸಂಚಾರ ಮಾಡುತ್ತ ಎಲ್ಲೆಲ್ಲಿ ವಿಶ್ರಾಮ ತೆಗೆದುಕೊಳ್ಳುವಿಯೋ ಅಲ್ಲಲ್ಲಿ ಒಂದೊಂದು ಲಿಂಗಸ್ಥಾಪನೆ ಮಾಡಿ, ನೀರಿನ ಗುಂಡ ತೋಡಿ, ಈ ಬಟ್ಟೆಯನ್ನು ಅದರಲ್ಲಿ ತೊಳೆಯುತ್ತ ಹೋಗು; ಎಲ್ಲಿ ಈ ಬಟ್ಟೆ ಮೊದಲಿನಂತೆ ಶುಭ್ರವಾಗುವುದೋ ಅಲ್ಲಿ 'ರಾವಣ' ಶಬ್ದ ನಾಶವಾಗುತ್ತದೆಂದು ಹೇಳಿದ.

ರಾಮ ಸಂಚಾರ ಮಾಡುತ್ತ ಹೊರಟು, ವಿಶ್ರಾಂತಿ ಪಡೆದಲ್ಲಿ ಲಿಂಗ ಪ್ರತಿಷ್ಠಾಪನೆ ಮಾಡಿ, ಗುಂಡಿ ತೋಡಿ, ಲಿಂಗಪೂಜಿಸಿ, ಬಟ್ಟೆಯನ್ನು ತೊಳೆಯುತ್ತ ಹೊರಟ. ಕೊನೆಗೆ ಆಳಂದ ತಾಲ್ಲೂಕಿನ 'ನರೋಣ' ಎಂಬ ಗ್ರಾಮದಲ್ಲಿ ಲಿಂಗ ಸ್ಥಾಪಿಸಿ, ಗುಂಡ ತೋಡಿ, ಬಟ್ಟೆ ತೊಳೆಯಲು ಬಟ್ಟೆ ಶುಭ್ರವಾಯಿತಂತೆ, 'ರಾವಣ' ಶಬ್ದ ಮಾಯವಾಯಿತಂತೆ, ಇಲ್ಲಿ 'ನ ರಾವಣ' ಆದುದರಿಂದ, ಈ ಊರಿಗೆ 'ನರೋಣ' ಎಂಬ ಹೆಸರು (ನ ರಾವಣ–ನರೋಣ) ಬಂದಿತಂತೆ. ಆತ ಎಲ್ಲೆಲ್ಲಿ ಲಿಂಗ ಸ್ಥಾಪನೆ ಮಾಡಿದ್ದಾನೋ ಅವೆಲ್ಲ 'ರಾಮಲಿಂಗ'ಗಳೆಂದು ಪ್ರಸಿದ್ಧವಾಗಿವೆಯಂತೆ.

ಇದು ರಾಮಾಯಣದ ವಸ್ತುವನ್ನೊಳಗೊಂಡ ಒಂದು ಬಹುಮುಖ್ಯ ಐತಿಹ್ಯ. ರಾಮಾಯಣದಂತಹ ಪುರಾಣದ ಸಂಗತಿ ಇದಾದರೂ, ಒಂದು ಊರಿನ ಹೆಸರು ಹೇಗೆ ಬಂದಿತು ಹಾಗೂ ಅಲ್ಲಿ ಲಿಂಗ ಪ್ರತಿಷ್ಠಾಪನೆ ಮತ್ತು ಬಾವಿ ತೋಡುವಿಕೆ ನಡೆದ ಸಂಗತಿಗಳನ್ನು ಈ ಘಟನೆ ಬಿತ್ತರಿಸುವುದರಿಂದ ಅಷ್ಟರಮಟ್ಟಿಗೆ ಇದೊಂದು ಐತಿಹ್ಯವೆ. ಈ ಹಿಂದಿನ ಎರಡು ಐತಿಹ್ಯಗಳಲ್ಲಿ– ಇತಿಹಾಸದ ಮತ್ತು ವ್ಯಕ್ತಿ ಮಹಿಮೆಯ ಅಂಶಗಳನ್ನು ಗಮನಿಸಿದಂತೆ, ಪ್ರಸ್ತುತ ಐತಿಹ್ಯದಲ್ಲೂ ಪೌರಾಣಿಕ ಅಂಶಗಳನ್ನು ಗಮನಿಸಬಹುದು. ಆಗ 'ಐತಿಹ್ಯಗಳು ಪುರಾಣಗಳಾಗಿರುತ್ತವೆ' ಎಂಬ ಅಭಿಪ್ರಾಯದ ಬದಲು, ಐತಿಹ್ಯಗಳಲ್ಲಿ ಇತಿಹಾಸ, ಚರಿತ್ರೆ ಮುಂತಾದ ಅಂಶಗಳಿರುವಂತೆ ಪೌರಾಣಿಕ ಅಂಶಗಳೂ ಇರುತ್ತವೆ ಎಂದು ಹೇಳಬೇಕಾಗುತ್ತದೆ. ಇತಿಹಾಸವನ್ನು ರಚಿಸುವಲ್ಲಿ, ವ್ಯಕ್ತಿಯ ಚರಿತ್ರೆಯನ್ನು ಅರಿಯುವಲ್ಲಿ, ಸ್ಥಳದ ಮಹತ್ವವನ್ನು ಹೇಳುವಲ್ಲಿ ಐತಿಹ್ಯಗಳು ನಮಗೆ ಮಹತ್ವದ ಅಂಶಗಳನ್ನು ಒದಗಿಸುವಂತೆ, ಪುರಾಣಗಳ ಅಧ್ಯಯನದಲ್ಲೂ ಐತಿಹ್ಯಗಳು ನಮಗೆ ವಿಷಯವನ್ನೊದಗಿಸುತ್ತವೆ. *(ವಿಡಿ)*

ಐದೇಸಿ: ಮಗು ಹುಟ್ಟಿದ ಐದನೆಯ ದಿನದಂದು ಮಾಡುವ ಶಾಸ್ತ್ರ. ಸೆಟಗವ್ವ ಮಾಡುವುದು ಎಂತಲೂ ಕರೆಯುತ್ತಾರೆ. ಐದನೆಯ ದಿನ ಕಾರಣಾಂತರದಿಂದ ಆಗದಿದ್ದರೆ ಏಳು ಅಥವಾ ಒಂಭತ್ತನೆಯ ದಿನವೂ ಮಾಡಲಾಗುವುದು. ಅಂದು ಬೆಳಗ್ಗೆ ಬಾಣಂತಿ ಮತ್ತು ಮಗುವಿಗೆ ನೀರು ಹಾಕಿ ಮನೆಯಲ್ಲಿಯ ಎಲ್ಲ ಬಟ್ಟೆ ಬರೆ ಒಗೆದು, ಮನೆ ಸಾರಿಸಿ ಶುದ್ಧಗೊಳಿಸುವರು. ಅಂದಿನಿಂದ ಮೈಲಿಗೆ ಸೂತಕ ಕಳೆಯಿತು. ಲಿಂಗಾಯತರಲ್ಲಿ ಐನೋರನ್ನು ಕರೆಯಿಸಿ ಪಾದೋದಕ ಸ್ವೀಕರಿಸಿ, ಅವರಿಗೆ ಪ್ರಸಾದವೆಂದು ಉಣಲು ಬಡಿಸಿ ಮಗುವಿಗೆ ಲಿಂಗಧಾರಣೆ ಮಾಡಿಸುವರು. ಇತರರಲ್ಲಿ ಅಯ್ಯನವರನ್ನು (ಜಂಗಮರನ್ನು) ಕರೆಯಿಸುವ ಸಂಪ್ರದಾಯವಿಲ್ಲ. ಅಂದು ಸಾಯಂಕಾಲ ಬಾಣಂತಿಯ ಕೋಣೆಯಲ್ಲಿ ಹೊರಸಿನ ಪಕ್ಕದಲ್ಲಿಯೇ ಒಂದು ಗೋಡೆಯ ಮೇಲೆ ಕುಂಕುಮದಿಂದ ಬ್ರಹ್ಮ ಮತ್ತು ಸೆಟಿಗವ್ವ ಬರೆಯುವರು. ಮನುಷ್ಯಾಕಾರದ ಚಿತ್ರ ಬರೆಯುವರು. ಬೆಳಗಾಗುವುದರೊಳಗಾಗಿ ಅಳಿಸಿ ಬಿಡುತ್ತಾರೆ. ಆ ಚಿತ್ರ ಬರೆದುದರ ಮುಂದೆ ಕುಡುಗೋಲು ಸಣ್ಣ, ಒರಳು (ಖಲಗಲ್) ತೊಳೆದಿಡುವರು. ಜೋಳದ ಹಿಟ್ಟಿನಿಂದ ಕುದಿಸಿ ಮಾಡಿದ ಹಣತೆಗಳಲ್ಲಿ ದೀಪ ಹಚ್ಚಿಡುವರು. ಹೊರಸಿನ ನಾಲ್ಕೂ ಕಾಲಿನ ಮೇಲೆ ಒಂದೊಂದು ಖಲಗಲ್ ಮೇಲೆ ಒಂದು ಈ ಹಣತೆಗಳನ್ನು ಇಟ್ಟು ಪೂಜಿಸುವರು. ಖಲಗಲ್‌ನ್ನು ಸೆಟಿಗವ್ವನ ಪ್ರತಿರೂಪವೆಂದು ಪೂಜಿಸುತ್ತಾರೆ. ಅದರ ಮೇಲೆ ಇರುವ ಕುಟ್ಟುವ ಗುಂಡುಕಲ್ಲಿಗೆ ಪೂಜಿಸಿದ ಮೇಲೆಯೆ ಮರುದಿನದಿಂದ ಮಗುವಿಗೆ ಕುಲಾವಿ ಕಟ್ಟುವರು. ಅಂದು ಬಿಳಿಜೋಳದ ಹಿಟ್ಟಿನಿಂದ ಮಾಡಿದ ಕಡುಬು, ಹಿಂಡಿ ಪಲ್ಯ, ಅನ್ನ ಸಾರುಗಳನ್ನು ಬ್ರಹ್ಮ ಹಾಗೂ ಸೆಟಿಗವ್ವನಿಗೆ ನೈವೇದ್ಯ ಮಾಡುವರು. ಸೆಟಿಗವ್ವ ಮತ್ತು ಬ್ರಹ್ಮನ ಮುಂದಿಟ್ಟ ನೈವೇದ್ಯ ಸಣ್ಣ ಮಕ್ಕಳಿಗೆ ಉಣ್ಣಲು ಕೊಡುವರು. ಹೊರಸಿನ ಮೇಲೆಯೂ ಒಂದು ನೈವೇದ್ಯ ಇಟ್ಟು ಅದನ್ನು ಸೂಲಗಿತ್ತಿಗೆ ಕೊಡುವರು. ನೈವೇದ್ಯವಲ್ಲದೆ ಬಹಳಷ್ಟು ಗೋದಿ, ಅಕ್ಕಿ ಮುಂತಾದ ಕಾಳುಗಳನ್ನು ಉಡಿಯಕ್ಕಿ ಹಾಕಿ ಗೌರವಿಸುವರು. ಮಾಸು ಹೂಳಿದ ಸ್ಥಳದಲ್ಲಿ ನೀರು ಸುರುವಿ ಕುಂಕುಮ ಹಚ್ಚಿ ಊದಿನ ಕಡ್ಡಿ ಬೆಳಗಿ ಪೂಜಿಸುವರು. ಬಚ್ಚಲಿಗೂ ಕುಂಕುಮ ಹಚ್ಚಿ ಪೂಜಿಸುತ್ತಾರೆ. ಇದಾದ ಬಳಿಕ ಹೊರಸಿನ ಕಾಲಿಗೆ, ಬಾಣಂತಿಯ, ಮಗುವಿನ ಕೊರಳಿಗೆ ಬಜೆಯ ತುಂಡನ್ನು ದಾರದ ಸಹಾಯದಿಂದ ಕಟ್ಟುವರು.

ಪೂಜಿಸಿದುದರ ಮುಂದೆ ಮಗುವನ್ನು ಮಲಗಿಸಿ, ಅಲ್ಲಿ ಉರಿಯುತ್ತಿರುವ ಹಣತೆಯಲ್ಲಿ ಸೂಜಿಯನ್ನು ಕಾಯಿಸಿ ಮಗುವಿನ ಹೊಟ್ಟೆಯ ಮೇಲೆ ಬರೆ (ಚುಟಿಗೆ) ಹಾಕುವರು. ಅಧಿಕ ಚಿಹ್ನೆ+ ಬರುವಂತೆ ಹಾಕುತ್ತಾರೆ. ಮಗುವಿಗೆ ಇದರಿಂದ ಹೊಟ್ಟೆನೋವು ಆಗುವುದಿಲ್ಲವೆಂಬ ನಂಬುಗೆ ಜನಪದರಲ್ಲಿದೆ. ಆ ಸುಟ್ಟ ಗಾಯಗಳಿಗೆ ಮುಂದೆ ಕೊಬ್ಬರಿ ಎಣ್ಣೆ ಹಚ್ಚುವರು.

ಐದೇಸಿಯ ದಿನ ಸೆಟಿಗವ್ವ ಮತ್ತು ಬ್ರಹ್ಮ ಬಂದು ಮಗುವಿನ ಹಣೆ ಬರಹ ಬರೆಯುತ್ತಾರೆಂಬ ನಂಬುಗೆ ಜನಪದರಲ್ಲಿ ಇದೆ. ಬಾಣಂತಿ ಇರುವ ಕೋಣೆಯ ಬಾಗಿಲಲ್ಲಿ ಬಾಣಂತನ ಮಾಡುವವಳು ಮಲಗಿಕೊಳ್ಳುವಳು. ಐದೇಸಿಯ ದಿನದಿಂದ ಬಾಣಂತಿಯ ಸೂತಕ ಕಳೆಯುತ್ತದೆ. ಆ ಮೇಲೆ ಅವಳನ್ನು ಯಾರು ಬೇಕಾದರೂ ಮುಟ್ಟಿಸಿಕೊಳ್ಳಬಹುದು. ಆದರೂ ಬಾಣಂತಿಯ ಕೋಣೆ ಪ್ರತ್ಯೇಕವಾಗಿರುವುದರಿಂದ ಹೆಚ್ಚಾಗಿ ಯಾರನ್ನೂ ಒಳಗೆ ಬಿಡುವುದಿಲ್ಲ. ಬಾಣಂತಿಯ ಕೋಣೆಗೆ ಹೋಗಬೇಕಾದರೂ ಅಂಗಳದಲ್ಲಿಯೇ ಕಾಲು ತೊಳೆದುಕೊಂಡು ಹೊರಗಿನ ಪಡಸಾಲೆಯಲ್ಲಿ ಸ್ವಲ್ಪ ವಿಶ್ರಮಿಸಿ ಅನಂತರ ಮಗು ಬಾಣಂತಿಯನ್ನು ನೋಡಲು ಹೋಗುವರು.



ಬಳೆ ತೊಡಿಸುವುದು



ಕುಂಬಾರಿಕೆ

ಮಗುವಿನ ಕಾಡಿಗೆಯನ್ನು ಏಳನೆಯ ದಿನಕ್ಕೆ ಮಾಡುವರು. ಮಗುವಿಗೆ ದಿನವೂ ಎಣ್ಣೆ ಸ್ನಾನ ಮಾಡಿಸುವರು. ಮಗುವಿನ ಬೋಳ ತಾಯಿಯ ಹಾಲಲ್ಲಿ ತೇದು ಮಗುವಿಗೆ ದಿನವೂ ಎರಡು ಹನಿ ಕುಡಿಸುವರು. ಒಂದು ತಿಂಗಳಾದ ಮೇಲೆ ಬಾದಾಮು ಉತ್ತತ್ತಿ ಹಾಲಲ್ಲಿ ತೇದು ಮಗುವಿಗೆ ಕುಡಿಸುತ್ತಾರೆ. ಇದರಿಂದ ಮಗು ಆರೋಗ್ಯದಿಂದ, ದಷ್ಟಪುಷ್ಟವಾಗಿ ಬೆಳೆಯುತ್ತದೆ.

ಇತ್ತ ಬಾಣಂತಿಗೂ ಆರೋಗ್ಯ ಚೇತರಿಸುವಂಥ ಆಹಾರ ಪಥ್ಯ ಕೊಡಲಾಗುತ್ತದೆ. ಒಂದು ತಿಂಗಳವರೆಗೂ ಎಣ್ಣೆ ಸ್ನಾನ ಮಾಡಿಸಿ, ಬಿಸಿ ನೀರು ಹಾಕಿ, ಅಗ್ಗಿಷ್ಟಿಕೆಯ ಬೆಂಕಿಯಲ್ಲಿ ಕಾಯಿಸಿಕೊಳ್ಳಲು ಕೊಡುವರು. ಹೊತ್ತು ಹೊತ್ತಿಗೂ ಬಿಸಿ ಅಡುಗೆ ಮಾಡಿ ಕೊಡುವರು. ಕೊಬ್ಬರಿ, ಉತ್ತತ್ತಿ, ಬಾದಾಮು, ಚಪಾತಿ, ಕಡಬು, ಹಸಿರು ತರಕಾರಿಗಳು, ತುಪ್ಪ ಊಟದಲ್ಲಿ ಕೊಡುವರು. ಆಳಿ-ಅಂಟು ಕುದಿಸಿ ಕೊಡುವರು. ಗಸಗಸೆಯ ಹುಗ್ಗಿ, ಕೊಬ್ಬರಿ ಸಕ್ಕರೆ, ತುಪ್ಪ ತಿನ್ನಲು ದಿನವೂ ಬೆಳಗ್ಗೆ ಕೊಡುತ್ತಾರೆ. ಅಂಟಿನ ಉಂಡಿ ತಯ್ಯಾರಿಸಿಟ್ಟು ಮಧ್ಯಾಹ್ನದಲ್ಲಿ ಕೊಡುತ್ತಾರೆ.

ಐದನೆಯ ದಿನವೇ ಮಗು ಹುಟ್ಟಿದ ದಿನ, ವಾರ, ಸಮಯ ಹೇಳಿ ಪಂಚಾಗ ನೋಡುವರು ದುಷ್ಟ ನಕ್ಷತ್ರಗಳ ಶಾಂತಿ ಹೋಮಗಳು, ಗೋದಾನ ಮುಂತಾದವುಗಳು ಕೊಡಬೇಕೆಂದು ಅಯ್ಯನವರು ಅಥವಾ ಪುರೋಹಿತರು ಹೇಳಿದರೆ ತೊಟ್ಟಿಲಲ್ಲಿ ಹಾಕುವಾಗ ಅವುಗಳನ್ನು ಕೊಟ್ಟು ಮುಟ್ಟಿಸುವರು.

ಚೊಚ್ಚಲ ಬಾಣಂತನ ತವರಿನಲ್ಲಿಯೇ ಆಗುವುದರಿಂದ ಮಗು ಹುಟ್ಟಿದ ಮೊದಲ ದಿನವಾಗಲಿ ಅಥವಾ ಒಂದೆರಡು ದಿನಗಳಲ್ಲಿ ಮಗುವಿನ ತಂದೆಯ ಊರಿಗೆ ಸುದ್ದಿ ಹೇಳಿ ಕಳಿಸುವರು. ಸುದ್ದಿ ಒಯ್ದವರಿಗೆ ಹಣ ಕೊಟ್ಟು ಇಲ್ಲವೆ ಶಲ್ಯ ಟೋಪಿ ಮಾಡಿ ಸನ್ಮಾನಿಸುವರು. ಇದಲ್ಲದೆ ಮಗು ಹುಟ್ಟಿದ ಸಂತೋಷದ ಸುದ್ದಿ ಓಣಿಯಲ್ಲಿ ಸಿಹಿ ಹಂಚಿ ತಿಳಿಸುವರು. ಗಂಡು ಮಗು ಹುಟ್ಟಿದರೆ ಪೇಡೆ, ಹೆಣ್ಣು ಮಗುವಾದರೆ ಜಿಲೇಬಿ ಹಂಚುವ ಸಂಪ್ರದಾಯವಿದೆ. ಐದೇಸಿಯಾದ ಮೇಲೆ ಮುಂದಿನ ಸಮಾರಂಭ ತೊಟ್ಟಿಲಲ್ಲಿ ಹಾಕುವುದಾಗಿರುತ್ತದೆ.


(ವೈಎಸ್)

ಐರಾಣಿ: ಸುರಗಿ ನೀರಿಗೆ ಬೇಕಾಗುವ ಎರಡು ಗಡಿಗೆ, ನಾಲ್ಕು ಸಣ್ಣ ಮಗಿಗಳು, ಅವುಗಳ ಮೇಲೆ ಮುಚ್ಚಳ ಇವುಗಳನ್ನು ಕುಂಬಾರನ ಮನೆಯಿಂದ ತರುವ ಸಂಪ್ರದಾಯ. ವಾದ್ಯಮೇಳ ಕಳಸಗಿತ್ತಿ, ಮಕ್ಕಳು, ಮುತ್ತೈದೆಯರು, ಇಬ್ಬರು ದಂಪತಿಗಳು ಹೋಗುತ್ತಾರೆ. ಇವನಿಗೂ ಅಕ್ಕಿ ಬೇಳೆ ಬೆಲ್ಲ ಮುಂತಾದ ಧಾನ್ಯಗಳ **"ಪಡಿ"** ಕೊಟ್ಟು ತರುವರು. ಕುಂಬಾರನ ಮನೆಯ ಅಂಗಳದಲ್ಲಿ ಒಂದು ಕಂಬಳಿ ಇಲ್ಲವೆ ಜಮಖಾನೆ ಹಾಸಿ ಅದರ ಮೇಲೆ ಅವುಗಳನ್ನೆಲ್ಲ ಇಟ್ಟಿರುವರು. ಪಡಿಕೊಟ್ಟು ಕುಂಬಾರನ ಹೆಂಡತಿ ಪೂಜಿಸಿಟ್ಟ ಐರಾಣಿ (ಗಡಿಗೆ ಮುಚ್ಚಳ ಇತ್ಯಾದಿಗಳು) ತರುವರು. ಬರುತ್ತಾ ದಾರಿಯಲ್ಲಿ ಮದುವೆಯ ಮನೆಯವರೆಗೆ ಹಾಡುತ್ತ ಬರುತ್ತಾರೆ.

ಐರಾಣಿಯನ್ನು ಮದುವೆಯ ಮನೆಗೆ ತರುವರು. ತಂದವರಿಗೆ ಆಯೇರಿಯಾಗಿ ಗಂಡನಿಗೆ ಶಲ್ಯ ಟೊಪ್ಪಿಗೆ, ಹೆಂಡತಿಗೆ ಒಂದು ಕುಪ್ಪಸದ ಕಣ ಕೊಡುವರು. ಐರಾಣಿ ತರುವ ಉದ್ದೇಶವೂ ಕೂಡ ಕುಂಬಾರನಿಗೆ ಗೌರವ ಕೊಡುವುದು ಮತ್ತು ಅವನಲ್ಲಿರುವ ವಸ್ತುಗಳನ್ನು ತಮ್ಮ ಉಪಯೋಗಕ್ಕೆ ತರುವುದು ಒಮ್ಮೆ ಮಡಿಕೆ ತಂದರೆ ಮುಂದೆ ಮದುವೆಯಾದ ಒಂದು ವರುಷದವರೆಗೂ ಹೊಸ ಮಡಕೆಗಳನ್ನು ತರುವುದಿಲ್ಲ.

ಎದುರು ನೀರು ತರುವುದು: ವಿವಾಹದ ಒಂದು ಪದ್ಧತಿ. ಇದನ್ನು "ಗಂಗಿ ಪೂಜೆಗೆ" ಹೋಗುವುದು ಎಂದೂ ಕರೆಯಲಾಗಿದೆ. ವಾದ್ಯಗಳು ಕಳಸಗಿತ್ತಿ ಐದು ಜನ ಕೊಡ ಹೊರುವಂತ ಮುತ್ತೈದೆಯರು, ಐದು ತಾಮ್ರದ ಕೊಡಗಳನ್ನು ತೆಗೆದುಕೊಂಡು ಹೋಗುವರು. ಮಕ್ಕಳು ಗಂಡಸರೂ ಜೊತೆಯಲ್ಲಿರುತ್ತಾರೆ. ಬಾವಿಗೆ ಹೋದ ಮೇಲೆ ನೀರು ಸೇದುವ ಗಿರಕಿಯ ಭಾಗದಲ್ಲಿ ಇರುವ ಹೊಸ್ತಿಲಂಥ ಕಟ್ಟೆಗೆ ಸ್ವಲ್ಪವೇ ನೀರು ಸೇದಿಕೊಂಡು ತೊಳೆಯುವರು. ವಿಭೂತಿ ಕುಂಕುಮ ಹಚ್ಚಿ ವೀಳೆಯದ ಎಲೆಯ ಮೇಲೆ ನೆನೆ ಹಾಕಿದ ಕಡಲೆಬೇಳೆ ಇಟ್ಟು ಪೂಜಿಸಿ ಊದಿನ ಕಡ್ಡಿಯಿಂದ ಬೆಳಗಿ ಕೊಡಗಳನ್ನು ತುಂಬಿಕೊಂಡು ಅವುಗಳಿಗೂ ಕುಂಕುಮ ಹೂಗಳಿಂದ ಪೂಜಿಸಿ ಮನೆಗೆ ಹೊತ್ತುಕೊಂಡು ಬರುವರು. ಮದುವೆಯ ಮನೆ ತಲಪುವವರೆಗೂ ಹಾಡುತ್ತ ಬರುವರು.

ಹಾಡುತ್ತ ನೀರನ್ನು ತಂದು ಮನೆಯಲ್ಲಿ ಕೊಡಗಳನ್ನು ಇಳಿಸುವರು. ಮದುವೆಯ ಮನೆಯಲ್ಲಿ ಸಾಕಷ್ಟು ನೀರಿನ ಸಂಗ್ರಹವಿದ್ದರೂ ಮದು ಮಕ್ಕಳಿಗೆ ಅರಿಶಿನ ಹಚ್ಚಲು ನೈಯಣ್ಣೆ ಇಟ್ಟು ನೀರು ಹಾಕಲು ತುಂಬಿದ ಕೊಡದಲ್ಲಿಯ ಮೀಸಲು ನೀರು ತರಬೇಕೆಂಬುದಕ್ಕಾಗಿ ಈ ಸಂಪ್ರದಾಯವಿದ್ದಿರಬೇಕು. ನೀರು ಎಲ್ಲ



ಐರಾಣಿ

ಕೆಲಸಗಳಿಗೂ ಅಗತ್ಯವಾದುದು. "ಜಲವು" ದೇವತೆಯ ಸಮಾನ. ಮದು ಮಕ್ಕಳನ್ನು ಕೂಡಿಸಿ ನೀರೆರೆಯಲು ಬಾವಿಗೆ ಪೂಜೆ ಸಲ್ಲಿಸಿ, ಪವಿತ್ರವಾದ ನೀರು ತಂದರೆ ಒಳಿತಾಗುವುದೆಂಬ ಕಾರಣವೂ ಇದ್ದಿರಬೇಕು. ಅರಸರ ಪಟ್ಟಾಭಿಷೇಕಕ್ಕೆ ಪವಿತ್ರ ನದಿ ನೀರು ತರುವಂತೆ ಮದು ಮಕ್ಕಳಿಗೂ ಸ್ನಾನ ಮಾಡಿಸುವ ನೀರು ಪವಿತ್ರವಾದುದಾಗಿರಲಿ ಎಂಬ ಉದ್ದೇಶವಿದ್ದಿರಬಹುದು.

(ವೈಎಸ್)

ಒ

ಒಗಟುಗಳು: ಜನಪದ ಸಾಹಿತ್ಯದ ಪ್ರಕಾರಗಳನ್ನು ಗಮನಿಸಿದರೆ, ಅಲ್ಲಿಯ ಭಾಷೆಯು ಪ್ರಾಸ, ಲಯ ಮತ್ತು ನಾದದ ಕಡೆಗೆ ಹೆಚ್ಚು ವಾಲಿರುವಂತೆ ಕಂಡುಬರುತ್ತದೆ. ವಿಶೇಷವಾಗಿ ಒಗಟು, ಒಡಪು ಮತ್ತು ಗಾದೆ ಇವುಗಳ ಶಿಲ್ಪಗಳು ಕೂಡ ಕಾವ್ಯದ ಛಾಯೆಯಲ್ಲಿಯೇ ಕಾಣುತ್ತವೆ. ಆ ಕಡೆ ಸಂಪೂರ್ಣವಾಗಿ ಗದ್ಯಮಾದರಿಗಳೂ ಆಗದೆ, ಈ ಕಡೆ ಪರಿಪೂರ್ಣವಾಗಿ ಪದ್ಯಗಳೂ ಆಗದೆ. ಗದ್ಯ–ಪದ್ಯಗಳೆರಡರ ಲಕ್ಷಣಗಳನ್ನು ತಮ್ಮಲ್ಲಿ ಇಂಗಿಸಿಕೊಂಡು ರೂಪುಪಡೆದ ಪ್ರಕಾರಗಳಿವು.

ಜೀವನದ ಅನುಭವ ವಲಯವನ್ನೇ ವಸ್ತುವಾಗಿಸಿಕೊಳ್ಳುವ ಒಗಟು, ಬುದ್ಧಿಯ ಕಸರತ್ತು ಮತ್ತು ಭಾಷಾ ಚಮತ್ಕಾರ ಇವೆರಡರ ಸಮ್ಮಿಳನದಿಂದ ರೂಪುಪಡೆಯುತ್ತದೆ. ಇದರ ಪ್ರಾಸಾನುಪ್ರಾಸಗಳು, ಲಯಗಳು– ಒಂದು ವಸ್ತುವನ್ನು ಇನ್ನೊಂದೆಂಬ ಭ್ರಮೆ ಮೂಡಿಸುವಲ್ಲಿ ಪ್ರಭಾವ ಬೀರುವ ವಿಶೇಷಣಗಳು–ಭಾಷೆಯ ಮಟ್ಟದಲ್ಲಿ ಆಕರ್ಷಕವಾದ ಗುಣಗಳು. ಒಂದನ್ನು ಇನ್ನೊಂದೆಂದು ಭ್ರಮಿಸುವಂತೆ ಒತ್ತಾಯಿಸುವಲ್ಲಿ ಕಾಣಿಸುವ ಚಮತ್ಕಾರಕ ಶಕ್ತಿಗಳೆಲ್ಲ, ಮೂಲವಾಗಿ ಬುದ್ಧಿಯ ಕಸರತ್ತುಗಳೇ. ಒಂದು ವಸ್ತುವು ಯಾವುದ ರಂತಿದೆ ಎಂದು ತಟ್ಟನೆ ನಿರ್ಧರಿಸಿಕೊಳ್ಳುವ; ಅದರ ಆಕಾರ, ಸ್ವರೂಪ, ಲಕ್ಷಣಗಳನ್ನು ಥಟ್ಟನೆ ಗ್ರಹಿಸುವ ಬುದ್ಧಿಯು, ಭಾಷಾ ಮಾಧ್ಯಮದ ಮೂಲಕ ಅದಕ್ಕೊಂದು ರೂಪು ಕೊಡುತ್ತದೆ.

ಒಗಟು ಬರೀ ಚಮತ್ಕಾರವಾದ ಮಾತಿನ ಬಂಡವಾಳ ಆಗಿರುವುದಿಲ್ಲ. ಅದು ಸಾದೃಶ್ಯ ಸಂಪತ್ತಿನ ಮೂಲಕ ಒಂದು ವಸ್ತು, ವಿಷಯ, ಸ್ಥಳ ಅಥವಾ ಜೀವಿಯ ನಿಜ ರೂಪವನ್ನು ಮುಚ್ಚಿಟ್ಟು, ಗೂಢವಾದ ವಿವರಣೆಗಳನ್ನು ಕೊಡುತ್ತದೆ. ಇದರಿಂದಾಗಿ ಒಗಟು ಸಾಂಕೇತಿಕ ಅಭಿವ್ಯಕ್ತಿಯಾಗಿ ಪರಿಣಮಿಸುತ್ತದೆ. ಒಂದು ರೂಪಕ ವಾಗಿ ಉಪಮಾನ ಸಾಮಾನ್ಯವಾಗಿ ಇರುತ್ತವೆ. ಇಲ್ಲಿ ಉಪಮೇಯ ಒಗಟಿನ ಅರ್ಥವಾಗಿದ್ದು, ಅದನ್ನು ಗೌಪ್ಯವಾಗಿಡಲಾಗುತ್ತದೆ. ಅದರ ಲಕ್ಷಣಗಳನ್ನು ಉಪಮಾನಕ್ಕೆ ಆರೋಪಿಸಿ, ವರ್ಣಿಸುತ್ತ ಹೋಗಲಾಗುತ್ತದೆ.

'ಹಸರ ಗಿಡದಾಗ ಮಸರ ಚೆಲ್ಲ್ಯಾದ' ಎಂಬ ಒಗಟಿನ ಉತ್ತರ ಹತ್ತಿ. ಇಲ್ಲಿ ಹತ್ತಿ ಉಪಮೇಯ. ಇದನ್ನು ಗೌಪ್ಯವಾಗಿ ಇಡಲಾ ಗುತ್ತದೆ. ಹತ್ತಿಯ ಆಕರ್ಷಕ ಗುಣ, ಅದರ ಬೆಳ್ಳನೆಯ ಹೊರ ಮೈಬಣ್ಣ, ಇಲ್ಲಿ ಹತ್ತಿಯನ್ನು ಮರೆಮಾಡಿ, ಅದರ ಬಣ್ಣವಷ್ಟನ್ನೇ ಮುಖ್ಯವಾಗಿ ಹಿಡಿಯಲಾಗುತ್ತದೆ. ಈ ಬಣ್ಣಕ್ಕೆ ಸಾದೃಶ್ಯವಾದುದು ಮೊಸರಿನ ಬಣ್ಣ. ಇಲ್ಲಿ ಮೊಸರನ್ನು ಉಪಮಾನವನ್ನಾಗಿ ಬಳಸಿ ಕೊಂಡು, 'ಹಸರ ಗಿಡದಾಗ ಮಸರ ಚೆಲ್ಯಾದ' ಎಂಬ ಒಗಟನ್ನು ಹೆಣೆಯಲಾಗುತ್ತದೆ. ಹಸರ ಗಿಡದಲ್ಲಿ ಚೆಲ್ಲಿದುದು ಹತ್ತಿಯಲ್ಲ ಮೊಸರೇ ಎಂದು ನೇರವಾಗಿ ಹೇಳಿ, ಕೇಳುಗನಲ್ಲಿ ಹುಡುಕಾಟದ ಆಸಕ್ತಿ ಕೆರಳಿಸುವಂತೆ ಮಾಡಲಾಗುತ್ತದೆ.

ಹೀಗೆ ಹೆಚ್ಚು ಕಡಿಮೆ ರೂಪಕಗಳ ಮೂಲಕವೇ ರೂಪು ಪಡೆಯುವ ಒಗಟುಗಳು, ತನ್ಮೂಲಕ ಕಲಾತ್ಮಕತೆಯನ್ನೂ ಗೌಪ್ಯತೆಯನ್ನೂ ಮೈಗೂಡಿಸಿಕೊಳ್ಳುತ್ತವೆ. ನಿಜ ಸಂಗತಿಯನ್ನು ಮರೆಮಾಡಿ, ತಮ್ಮ ಗೂಢತೆಯ ಒಡಲನ್ನು ತೋರಿಸಿ, ಕೇಳುಗರಲ್ಲಿ ಹುಡುಕಾಟದ ಆಸಕ್ತಿಯನ್ನು ಮೂಡಿಸುತ್ತವೆ. ಒಗಟು ತನ್ನ ನಿಜರೂಪವನ್ನು ಮರೆಮಾಚುವಲ್ಲಿ, ತನಗಿರುವ ಗೂಢಾರ್ಥವನ್ನು ಥಟ್ಟನೆ ಹೊಳೆಯದಂತೆ ಮಾಡುತ್ತದೆ. ಆದರೆ ಕೇಳುಗನಲ್ಲಿ ಅಸ್ಪಷ್ಟವಾಗಿ ಹೊಳೆದ ಸಂಗತಿಗಳಲ್ಲಿಯೇ ಅರ್ಥವನ್ನು ಗುರುತಿಸಿಕೊಳ್ಳಲು ಕೇಳುಗ ತವಕಿಸುವಂತೆ ಮಾಡುತ್ತದೆ.

ಒಗಟು ಒಡೆದಾಗಲೇ ನಿಜವಾಗಿಯೂ ಅದರ ಹುಟ್ಟು ಸಾರ್ಥಕವಾಗುವುದು. ಅರ್ಥ ಅದರ ಜೀವ. ಒಗಟು ಏನಿದ್ದರೂ 'ಬಾಹ್ಯ ಜೀವ' ಹೊಂದಿರುವ ಜೀವಿಯ ಕಲ್ಪನೆಯಂತಿದೆ. ಅನೇಕ ಸುತ್ತುಗಳಲ್ಲಿಯ ಆ ಬಾಹ್ಯಜೀವವನ್ನು ಶೋಧಿಸಿ, ಹೊರ ತೆಗೆದಾಗಲೇ ಒಗಟಿನ ನಿಜವಾದ ಬಣ್ಣ ನಮಗೆ ತಿಳಿಯುವುದು.

ಒಗಟು ಉತ್ತರಾಪೇಕ್ಷಿ. ಆದರೂ ಉತ್ತರದ ಭಾಗವನ್ನು ಹೊರಗಿಟ್ಟು ರಚನೆಗೊಂಡಿರುತ್ತದೆ. ಅದರ ಶಿಲ್ಪದಲ್ಲಿ ಉತ್ತರಕ್ಕೆ ಸ್ಥಾನವಿಲ್ಲ. ಒಗಟಿನ ಶಿಲ್ಪವು ಒಗಟು ಒಡ್ಡುವವನ ಭಾಗ. ಉತ್ತರದ ಭಾಗವು ಒಗಟು ಒಡೆಯುವವನ ಪಾಲಾಗಿರುತ್ತದೆ. ಹೀಗೆ ಒಗಟಿನ ಎರಡು ಮುಖ್ಯ ಭಾಗಗಳಾದ ಶಿಲ್ಪ ಮತ್ತು ಉತ್ತರಗಳು, ಎರಡು ಗುಂಪುಗಳ ಮಧ್ಯ ಹರಿದು ಹಂಚಿಹೋಗಿರುತ್ತವೆ. ಆದರೆ ಉತ್ತರ ಹುಡುಕಿ ಹೊರತೆಗೆದಾಗ ಮಾತ್ರ ಒಗಟಿನ ಚಂದದ, ಚಮತ್ಕಾರದ ಶಕ್ತಿ ಪ್ರದರ್ಶನಗೊಳ್ಳುವದು. ಅದರ ಹುಟ್ಟು ಸಾರ್ಥಕವಾಗುವದು, ಉದ್ದೇಶ ಈಡೇರುವುದು.

ಒಗಟುಗಳು ಸಂಜ್ಞೆ ಮತ್ತು ಸಂಕೇತಗಳ ರೂಪದಲ್ಲಿ ಮೊದಲು ಬಳಕೆಯಾಗುತ್ತಿದ್ದುವೆಂದು ತೋರುತ್ತದೆ. ಈ ರೂಪದಲ್ಲಿದ್ದಾಗ ಅವು ಇನ್ನೂ ಭಾಷಿಕ ರೂಪ ಪಡೆದಿರಲಿಲ್ಲ. ಕ್ರಿಯೆಗಳ ರೂಪದಲ್ಲಿದ್ದು, ಅಂಗಾಂಗಗಳ ಹಾವಭಾವ ಮತ್ತು ಇತರ ಕೆಲವು ಸೂಚನೆಗಳ ಮೂಲಕ ಸಂಜ್ಞೆ ಮತ್ತು ಸಂಕೇತ ರೂಪದ ಒಗಟುಗಳನ್ನು ಒಡ್ಡಲಾಗುತ್ತಿತ್ತು. ಇವನ್ನು ಒಬ್ಬನ ಜಾಣತನ ಮತ್ತು ಪಾಂಡಿತ್ಯವನ್ನು ಪರೀಕ್ಷಿಸುವಲ್ಲಿ ಒರೆಗಲ್ಲುಗಳಾಗಿ ಬಳಸುತ್ತಿದ್ದರೆಂದು ತೋರುತ್ತದೆ. ಒಗಟುಗಳನ್ನು ಒಡೆದವನಿಗೆ ಪ್ರತಿಯಾಗಿ ಬಹುಮಾನ ಘೋಷಿಸು ವುದು ಇವು ಬಳಕೆಯಲ್ಲಿ ಬಂದ ಉದ್ದೇಶವನ್ನು ಮತ್ತು ಸಾಮಾಜಿಕ ಮೌಲ್ಯವನ್ನು ಹೇಳುತ್ತವೆ.

(ಖ್ವಿಡಿ)

ಓ

ಓಕುಳಿ: ಒಂದು ಜಾನಪದ ಉತ್ಸವ ಹಾಗೂ ಸಂಪ್ರದಾಯದ ಮನರಂಜನೆಯ ಕ್ರೀಡೆ. ಈ ಆಟದಲ್ಲಿ ಪರಸ್ಪರ ಮೈಮೇಲೆ ಬಣ್ಣದ ನೀರನ್ನು ಎರಚುವರು, ಓಕುಳಿಯಲ್ಲಿ ಹಲವು ಬಗೆಯ



ಹೋಳಿ ಓಕಳಿ

ಬಣ್ಣವನ್ನು ಬಳಸುವರಾದರೂ ಕೆಂಪು ಬಣ್ಣಕ್ಕೆ ಪ್ರಾಧ್ಯಾನತೆ. ಜನಪದರು ತಮ್ಮ ಪ್ರೀತಿ-ಸಂತೋಷವನ್ನು ಬಣ್ಣ ಹಾಕುವುದರ ಮೂಲಕ ತೋರಿಸಿಕೊಡುವರು ಓಕುಳಿ ಆಡುವುದರಿಂದ ಒಬ್ಬರಿಗೊಬ್ಬರು ಆತ್ಮೀಯರಾಗಿ ದ್ವೇಷಭಾವ ಕಳಚಿ ಬಂಧುತ್ವ ಹೆಚ್ಚುವುದು. ಜಾತಿ-ಮತ ಬೇಧವಿಲ್ಲದೆ ಎಲ್ಲ ಜಾತಿಯ ಜನರು, ಈ ಕ್ರೀಡೆಯಲ್ಲಿ ಭಾಗವಹಿಸುವರು. ಮಕ್ಕಳಿಂದ-ಮುದುಕರವರೆಗೆ, ಹೆಣ್ಣು-ಗಂಡು ಎಲ್ಲರೂ ಸೇರಿ ಓಕುಳಿ ಆಡುವರು.

ಹಲವು ಸಂದರ್ಭ, ಸಂಪ್ರದಾಯಗಳಲ್ಲಿ ಓಕುಳಿ ಆಡಬೇಕೆನ್ನುವ ಪರಂಪರೆಯನ್ನು ಜನಪದರು ಬೆಳೆಸಿಕೊಂಡು ಬಂದಿದ್ದಾರೆ. ನೀರೋಕಳಿ, ಬಣ್ಣದೋಕುಳಿ, ಗಂಧದ ಓಕುಳಿ, ಹಾಲೋಕಳಿ, ಹೋಳಿ ಓಕುಳಿ, ಜಿದ್ದಿನ ಓಕುಳಿ ಎಂದು ಇದರಲ್ಲಿ ಹಲವು ಪ್ರಕಾರಗಳುಂಟು. ಹನುಮಂತ ದೇವರ ಹಾಗೂ ವೀರಭದ್ರ ದೇವರ ಜಾತ್ರೆಯಲ್ಲಿ, ಕೃಷ್ಣ ಜನ್ಮಾಷ್ಟಮಿಯಂದು, ಹೋಳಿ ಹಬ್ಬದಲ್ಲಿ ಓಕುಳಿಯಾಡುವರು. ಇಡೀ ಊರಿನ ಜನ ಇದರಲ್ಲಿ ಭಾಗವಹಿಸುವರು.

ವೇದಗಳ ಕಾಲದಿಂದ ಪ್ರಾರಂಭವಾದ ಓಕುಳಿಯಾಟ ಈಗಲೂ ತನ್ನ ಸತ್ವವನ್ನು ಉಳಿಸಿಕೊಂಡು ಬಂದಿದೆ. ಶ್ರೀಕೃಷ್ಣ-ರಾಧೆಯರು, ಗೋಕುಲಾಷ್ಟಮಿಯ ದಿನ ಸಂತೋಷದಿಂದ ಆಡುವ ಕ್ರೀಡೆಯೇ ಬಣ್ಣದ ಓಕುಳಿ. 'ಗಲ್ಲುಗಲ್ಲೆನುತ ಗೆಜ್ಜೆಗಲ್ಲು ಚಿಮ್ಮುತ। ಬಲ್ಲಿದ ರಂಗನ ವಲ್ಲಿಯ ಮೇಲೆ ಚಲ್ಲಿದ ರೋಕುಳಿಯಾ!' ಎಂಬ ಜನಪದ ಗೀತೆ ಜನಪ್ರಿಯವಾಗಿದೆ.

ವಿಜಯನಗರದ ಅರಸರ ಕಾಲದಲ್ಲಿ ಈ ಉತ್ಸವ ಸಡಗರದ ಶಿಖರ ತಲಪಿತ್ತು. ಶ್ರೀಕೃಷ್ಣದೇವರಾಯನ ಆಳ್ವಿಕೆಯಲ್ಲಂತೂ ಹೆಚ್ಚು ಜನಪ್ರಿಯವಾಗಿತ್ತು. ಅರಸನ ಜೊತೆಗೆ, ಮಾಂಡಲಿಕ ಅರಸರು, ರಾಣಿಯರು, ವಿಳಾಸಿನಿಯರೂ ಇದರಲ್ಲಿ ಪಾಲ್ಗೊಳ್ಳುತ್ತಿದ್ದರು. ಸುರಪುರದಲ್ಲಿ ಇಂದಿಗೂ ರೋಹಿಣಿ ನಕ್ಷತ್ರದಲ್ಲಿ, ಕೃಷ್ಣ ಜನ್ಮಾಷ್ಟಮಿ ಬಂದರೆ ಗೋಪಾಲ ಸ್ವಾಮಿಯ ಗುಡಿಯ ಮುಂದೆ ಹಾಲೋಕಳಿಯಾಡುವರು. ಹಾಲಗಂಬದ ಮೇಲೆ ಒಬ್ಬರು ಒಂದು ಗಡಿಗೆಯಲ್ಲಿ ಹಾಲು-ಮೊಸರು-ತುಪ್ಪ ಹಾಕಿಕೊಂಡು ಕೂತಿರುತ್ತಾರೆ. ಕೆಳಗೆ 8-10 ಜನ ಯುವಕರು ಕಂಬ ಏರಲು ಪ್ರಯತ್ನಿಸುವರು. ಕಂಬ ಏರಲು ಬರಬಾರದೆಂದು, ಕಾಲು ಜಾರಿ ಬೀಳಲೆಂದು, ಕೆಳಗಿನಿಂದ ಕೆಲವರು ಕಂಬಕ್ಕೆ ರಾಡಿ ಉಗ್ಗುತ್ತಾರೆ. ಮೇಲಿನಿಂದ ಕಂಬದ ಮೇಲೆ ಹಾಲು-ತುಪ್ಪ ಸುರಿಯುತ್ತಾರೆ. ಆದರೂ ಯುವಕರು ಏರಿ ಹೋಗಿ, ಗಡಗಿ ಒಡೆಯುವಲ್ಲಿ ಯಶಸ್ವಿಯಾಗುತ್ತಾರೆ. ಈ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ- ಸನ್ಮಾನವಿರುತ್ತದೆ. ದೇವರ ಮುಂದಾಗುವುದು 'ದೇವರ ಕಂಬ'ವಾದರೆ, ಬಜಾರಿನಲ್ಲಿ ಆಗುವುದು ರಣಗಂಬ' ಎಂದು ಕರೆಯುವರು.

ಹನುಮಂತ ದೇವರ ಜಾತ್ರೆಯಲ್ಲಿ ನೀರೋಕುಳಿ ಮಾಡುತ್ತಾರೆ. ನೀರು ಉಗ್ಗುವವರು ಯುವಕರಾದರೆ ಅದನ್ನು ಪ್ರತಿಭಟಿಸುವವರು ಯುವತಿಯರು. ಲಕ್ಕಿ ಕಟಗಿ ನೆನೆ ಹಾಕಿ, ಕಸ ಪೊರಕೆ ಮಾಡಿ ಬಡಿಯುತ್ತಾರೆ. ಈ ಸ್ಪರ್ಧೆಯಲ್ಲಿ ಗೆದ್ದವರಿಗೆ ಪುರಸ್ಕಾರ ಮಾಡುವರು. ಹೋಳಿ ಹಬ್ಬದಲ್ಲಿ ಬಣ್ಣ ಎರಚಾಡುವುದು ಎಲ್ಲರಿಗೂ ಗೊತ್ತಿರುವ ವಿಷಯ. ಮನುಷ್ಯನಿಗೆ ಅತ್ಯಂತ ಸಂತೋಷವಾದಾಗ, ಅದನ್ನು ಹೊರ ಚೆಲ್ಲುವ ಮಾಧ್ಯಮವೇ ಓಕುಳಿ. ಇದು ಶುಭ ಹಾಗೂ ಸಂತೋಷದ ಸಂಕೇತ. *(ಎನ್‌ಕೆ)*


ಓದಿಸುವ ಅಯ್ಯನವರು: ಹಳ್ಳಿಗಳಲ್ಲಿ ಖಾಸಗಿಯಾಗಿ ವಿದ್ಯಾಭ್ಯಾಸ ಮಾಡಿಸುವವರು. ಮಕ್ಕಳಿಗೆ ಅಕ್ಷರವನ್ನು ಕಲಿಸುವ ಮತ್ತು ಓದಿಸುವವರನ್ನು ಅಯ್ಯನವರೆಂದು ಗೌರವಿಸಿ ಕರೆಯುತ್ತಿದ್ದರು. ಊರಿನ ಗುಡಿ-ಗುಂಡಾರ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಕ್ಕಳನ್ನು ಕೂಡಿಸಿ ಅವರಿಗೆ ಅಭ್ಯಾಸ ಮಾಡಿಸುವ ಅಯ್ಯನವರಿಗೆ ಗುರುಗಳೆಂದು ಸಮಾಜದಲ್ಲಿ ಪೂಜ್ಯ ಸ್ಥಾನವಿತ್ತು.

ಅವರು ನಡೆಸುವ ಶಾಲೆಗಳನ್ನು 'ಗಾಂವಠಿ' (ಗ್ರಾಮ) ಶಾಲೆಗಳೆಂದು, ಓದಿಸುವವರನ್ನು ಅಯ್ಯನವರೆಂದು ಕರೆಯುವ ಸಂಪ್ರದಾಯವಿದೆ. ಓದಿಸುವ ಅಯ್ಯನವರು ಕನ್ನಡ ಭಾಷೆ, ಕಾವ್ಯ-ಶಾಸ್ತ್ರ ಹಾಗೂ ಗಣಿತ ವಿಷಯಗಳಲ್ಲಿ ಪಾರಂಗತರಾಗಿರುತ್ತಿದ್ದರು. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಮೇಲ್ವರ್ಗದ ವೀರಶೈವರಲ್ಲಿ ಜಂಗಮರು ಖಾಸಗಿ ಶಾಲೆಗಳನ್ನು ತೆರೆದು ಶಿಕ್ಷಣ ನೀಡುತ್ತಿದ್ದುದು ಒಂದು ಪರಿಪಾಠ. ಸಾಮಾನ್ಯವಾಗಿ ಜಂಗಮರನ್ನು ಅಯ್ಯನವರೆಂದು ಕರೆಯುವುದು ರೂಢಿಯಲ್ಲಿದೆ. ಈ ಭಾಗದಲ್ಲಿ ಅಯ್ಯನವರೆ ಸಾಮಾನ್ಯವಾಗಿ ಖಾಸಗಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿಸುತ್ತಿದ್ದುದರಿಂದ ಅವರಿಗೆ ಓದಿಸುವ ಅಯ್ಯನವರೆಂದು ಹೆಸರಾಯಿತು. ಜಂಗಮರಲ್ಲದ ಇತರರು ಓದಿಸುತ್ತಿದ್ದವರನ್ನೂ ಅಯ್ಯನವರೆಂದು ಕರೆದರು.

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಸರಕಾರದ ಶಾಲೆಗಳ ಸಂಖ್ಯೆ ಬಹು ಕಡಿಮೆ, ಇದ್ದರೂ ಅವು ಉರ್ದು ಭಾಷಾ ಮಾಧ್ಯಮ ಶಾಲೆಗಳು. ಕನ್ನಡದ ಕಲಿಕೆ ಇರುತ್ತಿರಲಿಲ್ಲ. ಇದರಿಂದ ಬಹು ಸಂಖ್ಯಾತ ಜನರು ಶಿಕ್ಷಣದಿಂದ ವಂಚಿತರಾಗುತ್ತಿದ್ದರು. ಅಯ್ಯನವರ ಖಾಸಗಿ ಶಾಲೆಗಳ ಶಿಕ್ಷಣ ಈ ಕೊರತೆಯನ್ನು ನೀಗಿದುವು. ಹಾಗೂ ಅವು ಶಿಕ್ಷಣ ಕೇಂದ್ರಗಳಾದುವು. ಈ ಶಾಲೆಗಳಲ್ಲಿ ಸಾಂಪ್ರದಾಯಿಕ ಶಿಕ್ಷಣ ಕೊಡಲಾಗುತ್ತಿತ್ತು. ಕನ್ನಡ ಮತ್ತು ಗಣಿತ ಇಲ್ಲಿಯ ಮುಖ್ಯ ವಿಷಯಗಳು.

ಕನ್ನಡ ವರ್ಣಮಾಲೆ, ಶುದ್ಧವಾಗಿ ಓದುವುದು, ಬರೆಯುವುದು, ನೀತಿಪಾಠಗಳು, ಹಾಡುಗಳು ಕಾವ್ಯ ಪಠಣಗಳನ್ನು ಹೇಳಿಕೊಡುತ್ತಿದ್ದರು. ಭಾರತೀಯರ ವಾರ, ಮಾಸ, ಸಂವತ್ಸರ, ಋತು, ನಕ್ಷತ್ರಗಳ ಅಭ್ಯಾಸ ನಡೆಯುತ್ತಿತ್ತು. ಮಗ್ಗಿಗಳನ್ನು ಕಲಿಸುತ್ತಿದ್ದರು. ಅಂಕ ಗಣಿತ ಮತ್ತು ಬೀಜ ಗಣಿತವನ್ನು ಹೇಳಿಕೊಡುತ್ತಿದ್ದರು. 'ಅಯ್ಯನವರ ಶಾಲೆಯಲ್ಲಿ ಕಲಿತ ವಿದ್ಯೆ ಗಟ್ಟಿ ವಿದ್ಯೆ' ಎಂಬ ಪ್ರಶಂಸನೀಯ ಮಾತು ರೂಢಿ ಮಾತಾಗಿತ್ತು. *(ಎಸ್‌ಎಂ)*

ಓಲೆಗರಿ ಗ್ರಂಥ: ಹಸ್ತಪ್ರತಿಯ ಒಂದು ಪ್ರಕಾರ. ಸಾಮಾನ್ಯವಾಗಿ ತಾಳೆಗರಿಗ್ರಂಥ ಎಂದು ಕರೆಯುವುದು ರೂಢಿ. ಇದನ್ನು ಲೇಖನ ಸಾಮಗ್ರಿಗಳಲ್ಲಿ ಆಧಾರ ಸಾಮಗ್ರಿ ಎಂದು ಕರೆಯುತ್ತಾರೆ. ಅಂದರೆ ಯಾವುದು ತನ್ನ ಮೈಮೇಲೆ ಬರೆಸಿಕೊಳ್ಳುತ್ತದೆಯೋ ಅದನ್ನು ಆಧಾರ ಲೇಖನ ಸಾಮಗ್ರಿ ಎನ್ನುತ್ತೇವೆ. ತಾಳೆಗರಿಯ ಮೇಲೆ ಆಧಾರ ಸಾಮಗ್ರಿ ಎನಿಸುವ ಕಂಟದಿಂದ ಬರೆಯುತ್ತಾರೆ. ಕುಮಾರವ್ಯಾಸ 'ಕಂಠ ಪತ್ರದ ಹುಲುವು ಗೆಡದಗ್ಗಳಿಕೆ" ಎಂದು ಹೇಳಿರುವುದನ್ನು ನೋಡಿದರೆ ಕಬ್ಬಿಣದಲಗಿನಿಂದ ತಯಾರಿಸಿದ ಕಂಠದಿಂದ ತಾಡಪತ್ರದ ಮೇಲೆ ಬರೆಯುವುದು ಪ್ರಾಚೀನ ಕನ್ನಡಿಗರದಾಗಿತ್ತು. ಕವಿರಾಜಮಾರ್ಗಕಾರ "ತಾಳತರು



ತಾಳೆಗರಿ ಕಟ್ಟು

ವಿತತಿಯೋಳ್ ಬೇತಾಳಂಗಳ್ ಮೋಜಿದು" (ಪರಿಚ್ಛೇದ 3 ಪದ್ಯ 164) ಅಂದರೆ ತಾಳೆಮರಗಳ ತೋಪಿನಲ್ಲಿ ಬೇತಾಳಗಳು ಆರ್ಭಟಿಸಿದವು ಎನ್ನುವಲ್ಲಿ ಕವಿರಾಜಮಾರ್ಗಕಾರನ ಕಾಲದಲ್ಲಿ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಅದರಲ್ಲೂ ಮಾನ್ಯಖೇಡದ ಭಾಗದಲ್ಲಿ ತಾಳೆಗರಿಗಳ ವೃಕ್ಷ ಸಂಪತ್ತು ಹೇರಳವಾಗಿರಬೇಕೆಂದು ತೋರುತ್ತದೆ. ಕನ್ನಡಿಗರು ತಾಳೆಗರಿಯನ್ನು ಲೇಖನ ಸಾಮಾಗ್ರಿಯಾಗಿ ವಿಶೇಷವಾಗಿ ಬಳಸಿಕೊಂಡಿದ್ದಾರೆ. ಈ ಮಾತು ಹೈದ್ರಾಬಾದ್ ಕರ್ನಾಟಕ ಭಾಗಕ್ಕೂ ಅನ್ವಯಿಸುತ್ತದೆ.

ತಾಡಪತ್ರ ದೃಢ, ಸೌಮ್ಯ, ಋಜು ಮತ್ತು ಅಗ್ರವಾಗಿದ್ದರೆ ಬರೆಯಲಿಕ್ಕೆ ಉತ್ತಮವಾದದ್ದು, ಇದರಲ್ಲಿ ತಾಳ-ಶ್ರೀತಾಳ ಎಂದು ಎರಡು ಪ್ರಕಾರ. ತಾಳ ಆಕಾರದಲ್ಲಿ ಚಿಕ್ಕದು, ಪೆಡಸಾಗಿರುತ್ತದೆ, ಮಡಿಸಿದಿರೆ ಮಣಿಯುತ್ತದೆ. ಗ್ರಂಥದ ಹಂತದಲ್ಲಿ ಓಲೆಗರಿಗಳನ್ನು ಆಕಾರಕ್ಕೆ ಸರಿಯಾಗಿ ಕತ್ತರಿಸಿ, ಅಳತೆಯ ಅನುಕೂಲದಂತೆ ಒಂದು, ಎರಡು, ಮೂರು ರಂಧ್ರಗಳನ್ನು ಕೊರೆದು, ಗರಿಗಳ ರಕ್ಷಣೆಗೆ ಎರಡೂಬದಿಗೆ ಹಲಗೆಗಳನ್ನು ಜೋಡಿಸುವುದು ರಂಧ್ರಗಳ ಮೂಲಕ ದಾರ ಪೋಣಿಸಿ ಬಿಗಿಯಾಗಿ ಕಟ್ಟುವುದು. ಕೆಲವು ಸಲ ಸೌಂದರ್ಯಕ್ಕಾಗಿ ಹಲಗೆಗಳ ಮೇಲೆ ಚಿತ್ರ ವಿನ್ಯಾಸ ಮಾಡಿರುತ್ತಾರೆ. ಓಲೆಯವರು, ಬಡಿಗರು, ಚಿತ್ರಕಾರರು, ವಸ್ತ್ರದವರು, ಮಸಿಕಾಯಕದವರು, ಲಿಪಿಕಾರರು, ಓಲೆಗ್ರಂಥದ ಹಿಂದೆ ದುಡಿದಿರುವ ವೃತ್ತಿಮನೆತನದವರ ಶ್ರಮ ಅಕ್ಷರ ಲೋಕದಲ್ಲಿಯೇ ಸ್ಮರಣೀಯವಾದದ್ದು.

ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿಯ ಮಠ-ಮಾನ್ಯಗಳಲ್ಲಿ ದೇಸಾಯಿ ನಾಡದೇಸಾಯಿಗಳ ಮನೆತನಗಳಲ್ಲಿ ಓಲೆಗರಿ ಗ್ರಂಥಗಳು ದೊರೆಯುತ್ತವೆ. ಈ ಭಾಗದ ಓಲೆಗರಿ ಗ್ರಂಥಗಳಲ್ಲಿ ವ್ಯಾಕರಣ, ಛಂದಸ್ಸು, ಅಲಂಕಾರ, ವೈದ್ಯ, ಅಶ್ವ, ಗಜಶಾಸ್ತ್ರಗಳ ಪ್ರತಿಗಳು ದೊರೆಯುತ್ತವೆ. ಈಗಾಗಲೇ ಈ ಭಾಗದ ಹಸ್ತ ಪ್ರತಿಗಳನ್ನು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಸರ್ವೇಕ್ಷಣೆ ಮಾಡಿ ಸಂಗ್ರಹಿಸಿದೆ. ಈ

ಸಂಗ್ರಹವನ್ನು ಗಮನಿಸಿದರೆ ಓಲೆಗಿರಿ ಗ್ರಂಥಗಳಿಗಿಂತ ಕಾಗದ ಗ್ರಂಥಗಳೇ ಹೆಚ್ಚು ಇರುವುದು ತಿಳಿಯುತ್ತದೆ. ಹೀಗಾಗಿ ಈ ಭಾಗದ ಓಲೆಗರಿ ಗ್ರಂಥಗಳ ಸರ್ವೇಕ್ಷಣೆ-ಸಂಗ್ರಹ ಹಾಗೂ ಅಧ್ಯಯನ ನಡೆಯಬೇಕಿದೆ.

(ಕೆಆರ್)

ಓವಿ ಪುಸ್ತಕ: ಹಾಡುಗಬ್ಬ ಪರಂಪರೆಯ ಸಾಹಿತ್ಯ ರಚನಾ ಪ್ರಕಾರ. ಮೂಲತಃ ಇದು ಛಂದಸ್ಸಿನ ಒಂದು ರೂಪ ಎಂಬುದು ಶಬ್ದಕೋಶದಲ್ಲಿ ಅರ್ಥವಿದೆ. ಮರಾಠಿ ಸಾಹಿತ್ಯದಲ್ಲಿ ಇದು ಒಂದು ಪದ್ಯ ಜಾತಿ. ಅಲ್ಲಿ ಓವಿ ಅಭಂಗಗಳ ಮೂಲಕ ಜ್ಞಾನ ಭಕ್ತಿಗಳನ್ನು ಸಂತರು ಪ್ರಚಾರ ಮಾಡಿದರು. ಪ್ರಾಯಶಃ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ರಚನೆಯಾದ ಶ್ರೀ ವಿಜಯನ ಕವಿರಾಜಮಾರ್ಗದಲ್ಲಿ ಬರುವ 'ಒನಕೆವಾಡು' ಎಂಬುದಕ್ಕೆ ಇದು ಪ್ರೇರಣೆ ನೀಡಿರಬಹುದು.

ಇತ್ತೀಚಿನ ದಿನಗಳಲ್ಲಿ ಇದರ ಅರ್ಥವ್ಯಾಪ್ತಿ ಬದಲಾವಣೆಗೊಂಡಂತಿದೆ. ಪ್ರಾಚೀನ ಕೋರಿಕಾಗದ ನಂತರದಲ್ಲಿ ಆವಿಷ್ಕಾರಗೊಂಡ ಇಂಗ್ಲೀಷ್‌ಕಾಗದದ ಬಳಕೆ ಬಂದಾಗಿನಿಂದ ಅದರಲ್ಲಿ ನೆನಪಿಗಾಗಿ,, ವಚನಕ್ಕಾಗಿ ಬರೆದಿಟ್ಟುಕೊಳ್ಳುವ ಟಿಪ್ಪಣಿ ಪುಸ್ತಕಗಳಿಗೆ 'ಓವಿ ಪುಸ್ತಕ' ಎಂದು ಕರೆಯಲಾಗುತ್ತದೆ. ನಿದರ್ಶನಕ್ಕಾಗಿ ಹಳ್ಳಿಯ ಜನರು ಹವ್ಯಾಸಕ್ಕಾಗಿ ಬಯಲಾಟಗಳನ್ನೊ, ನಾಟಕಗಳನ್ನೊ ಆಡುತ್ತಾರೆ. ಅಂಥಲ್ಲಿ ನಾಟಕದ ಮಾತುಗಳನ್ನು "ಕಂಠಪಾಠ" ಮಾಡಲು ಬರೆದು ಇಟ್ಟುಕೊಳ್ಳುವ ಪುಸ್ತಕಕ್ಕೆ ಓವಿ ಪುಸ್ತಕವೆಂದು ಕರೆಯುವ ರೂಢಿಯಿದೆ. ಈ ಬರವಣಿಗೆ ನೆನಪಿಗಾಗಿ ಟಿಪ್ಪಣಿ ರೂಪದಲ್ಲಿ ಮನೆಯ ವ್ಯವಹಾರವಾಗಿರಬಹುದು, ಯಾವುದೇ ಒಪ್ಪಂದಗಳು ಆಗಿರಬಹುದು ಅವುಗಳೆಲ್ಲವನ್ನೂ 'ಓವಿ' ಬರಹಗಳೆಂದೂ, ಅದನ್ನೊಳಗೊಂಡ ಪುಸ್ತಕವನ್ನು ಓವಿ ಪುಸ್ತಕವೆಂದೂ ಕರೆಯಲಾಗುತ್ತಿದೆ. *(ಕೆಆರ್)*

ಔ

ಔರಾದ: ಬೀದರ ಜಿಲ್ಲೆಯ ತಾಲ್ಲೂಕು ಕೇಂದ್ರ. ಇದು ತನ್ನದೇ ಆದ ಭವ್ಯ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಹೊಂದಿದೆ. ಆಂಧ್ರ ಮತ್ತು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ಇದರ ಪುರಾತನ ಹೆಸರು ಅಮರವಾಡಿ ಎಂದಿತ್ತು. ಕ್ರಮೇಣವಾಗಿ ಅವರವಾಡಿ, ಅವರಾದಿ, ಔರಾದ ಎಂದು ಪರಿವರ್ತನೆಗೊಂಡಿತ್ತು. ಕಲ್ಯಾಣ ಚಾಲುಕ್ಯರ ಆಡಳಿತಕ್ಕೊಳ್ಳಪಟ್ಟ ಪ್ರದೇಶದಲ್ಲಿ ಇದು ಒಂದಾಗಿದ್ದು, 1133ರಲ್ಲಿ ಸೋಮೇಶ್ವರನ ದಂಡನಾಯಕ ಶ್ರೀಧರಯ್ಯ ಅವರವಾಡಿಯನ್ನು ಆಳಿದ್ದಾನೆ ಎಂಬ ಉಲ್ಲೇಖವಿದೆ. ಇದಕ್ಕೂ ಮೊದಲು ಜೈನ ಧರ್ಮದ ಪ್ರಭಾವ ಇತ್ತು. 14ನೆಯ ಶತಮಾನದಿಂದೀಚೆಗೆ ಹೈದ್ರಾಬಾದ ನಿಜಾಮನ ಕಾಲದವರೆಗೆ ಮುಸ್ಲಿಂ ಆಳ್ವಿಕೆಯಲ್ಲಿ ಸಾಗಿದೆ.

11ನೆಯ ಶತಮಾನದಲ್ಲಿ ಕಲ್ಯಾಣಿ ಚಾಲುಕ್ಯರ ಪ್ರಸಿದ್ಧ ಅರಸ 6ನೆಯ ವಿಕ್ರಮಾದಿತ್ಯನ ಮಗ 3ನೇ ಸೋಮೇಶ್ವರನ ಕಾಲದಲ್ಲಿ ನಿರ್ಮಾಣವಾದ ಅಮರೇಶ್ವರ ಎಂಬ ಮಂದಿರವು ವಿಶಿಷ್ಟವಾಗಿದೆ. ಈ ಮಂದಿರದ ಸ್ಥಳದಲ್ಲಿ ಅರಣ್ಯವಿತ್ತು. ಪ್ರತಿದಿನವೂ ಒಂದು ಗೋವು ಆ ಘಟ್ಟ ಪ್ರದೇಶದಲ್ಲಿನ ಹುತ್ತಕ್ಕೆ ಹಾಲುಣಿಸುತ್ತಿತ್ತು. ಇಲ್ಲಿ ಏನಿರಬೇಕೆಂದು ಗೋವನ್ನು ಹಿಂಬಾಲಿಸಿಕೊಂಡು ಬಂದು ಅದು ಹಾಲುಣಿಸುವ ಹುತ್ತವನ್ನು ದಣಿವಾಗುವವರೆಗೂ ಹಾರೆಯಿಂದ ಏಟುಕೊಟ್ಟಾಗ ಲಿಂಗ ಭಿನ್ನವಾಗದೆ ಅದರಲ್ಲಿ ಏಳು ರಂಧ್ರಗಳು ಕಾಣಿಸಿಕೊಂಡವು. ಪ್ರತ್ಯಕ್ಷ ಶಿವನೆ ರುದ್ರಾವತಾರ ತಾಳಿ ಗುಡುಗಿದ ಧ್ವನಿಯಾಯಿತೆಂದು, ಭಯಂಕರ ಧ್ವನಿಯಿಂದ ಆ ಕೇಡಿಗರು ಹೃದಯಾಘಾತದಿಂದ ಮಡಿದರೆಂಬ ಹೇಳಿಕೆಯಿದೆ. ಮುಂದೆ ಅದೇ ಸ್ಥಳದಲ್ಲಿಯೇ ಮಂದಿರ ನಿರ್ಮಾಣವಾಯಿತು ಎನ್ನಲಾಗಿದೆ. ಪ್ರತಿವರ್ಷ ಮಹಾ ಶಿವರಾತ್ರಿಯ ಐದು ದಿನಗಳವರೆಗೆ ಅತೀ ವೈಭವದಿಂದ ಜಾತ್ರೆ ನಡೆಯುತ್ತದೆ. ಜಾತ್ರಾ ಸಂದರ್ಭದಲ್ಲಿ ಒಂಟೆಗಳ ಹಾಗೂ ಜಾನುವಾರ ಪ್ರದರ್ಶನ ಕುಸ್ತಿ ಪ್ರದರ್ಶನ, ಪ್ರಮುಖವಾಗಿ ನಡೆಯುವಂಥವು.

ಈ ಪಟ್ಟಣದ ಹಿರಿಯ ಚೇತನರಾದ ಕೇದಾರೆ ಗಣಂಗಳಪ್ಪ ಮತ್ತು ಜೈಶಂಕರಂಥ ಮಹಾನುಭಾವರು ಚಿರಕಾಲ ಸ್ಮರಣೆಗೆ ಅರ್ಹರಾದವರು. ದಯಾಪರತೆ, ದಾನ, ಪ್ರೇಮ, ಮಾನವೀಯತೆ ಎಲ್ಲರಿಗೂ ಧಾರೆಯೆರೆದವರು ಶ್ರೇಷ್ಠ ಸಂಸ್ಕೃತಿಯನ್ನು ಈ ನೆಲದಲ್ಲಿ ಬೆಳಸಿದ ಸಿದ್ಧ ಪುರುಷರು.

ದಿನನಿತ್ಯದ ಕಾಯಕದ ಜೊತೆಗೆ ತ್ತೊಂಭತ್ತರ ವಯಸ್ಸಿನ ಸದಾ ಲವಲವಿಕೆಯಿಂದ ಕ್ರಿಯಾಶೀಲರಾಗಿರುವ ಪಟ್ಟಣದ ಜಾನಪದ ಕಲಾವಿದೆ ಗೋಪೆಮ್ಮ ಶಿವಲಿಂಗಪ್ಪ ತಂಬಾಕೆ. ಕನ್ನಡ, ಹಿಂದಿ, ಮರಾಠಿ, ತೆಲುಗು ಭಾಷೆಯಲ್ಲಿ ಎರಡು ಸಾವರಕ್ಕೂ ಹೆಚ್ಚು ಜಾನಪದ ಹಾಡು ಹೇಳುವ ಮೂಲಕ ನಮ್ಮ ಸಂಸ್ಕೃತಿ ಕಲೆಯ ರಕ್ಷಕರಾಗಿದ್ದಾರೆ. ಇಲ್ಲಿ ಶರಣ ಸಂಗಮ, ಬಸವಜ್ಯೋತಿಯಂಥಂಹ ಭಕ್ತಿಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ. *(ಜೆಟಿ)*

ಕ


ಕಂದಾಯ (ಸುಂಕ): ಭೂಮಿ, ಮನೆ, ನೀರು, ಬಳಕೆ ಮುಂತಾದುವುಗಳಿಗಾಗಿ ಸರಕಾರಕ್ಕೆ ಕೊಡಬೇಕಾದ ನಿಗದಿಯಾದ ಹಣ, ಸುಂಕ, ಬಿರಾಡ, ತೆರ, ತೆರಿಗೆ, ಕರ, ತೀರ್ವೆ ಎಂಬ ಬೇರೆ ಬೇರೆ ಹೆಸರುಗಳಿವೆ. ಹಿಂದೆ ಇದನ್ನು ರಾಜರಿಗೆ ಸಲ್ಲಿಸಲಾಗುತ್ತಿತ್ತು.

ಪ್ರಾಚೀನ ಕಾಲದಿಂದ ಇಂದಿನವರೆಗೆ ಕಂದಾಯ ಕೊಡುವ ಪದ್ಧತಿ ಜಾರಿಯಲ್ಲಿದೆ. ಭೂಮಿಯ ಪ್ರಕಾರಗಳನ್ನು, ಫಲವತ್ತತೆಯನ್ನು ಆಧರಿಸಿ, ಅವುಗಳಿಗೆ ಬಳಿಸುವ ನೀರನ್ನು ಅನುಸರಿಸಿ; ಮನೆಯ ವಿಸ್ತೀರ್ಣ ಅದಕ್ಕೆ ಉಪಯೋಗಿಸಿದ ಸಾಮಗ್ರಿಗಳ ಆಧಾರದ ಮೇಲೆ ಹಾಗೂ ದಿನಬಳಕೆಯ ತಿನ್ನುವ ಸಾಮಗ್ರಿಗಳ ಮೇಲೆ, ಅಂದರೆ ವ್ಯಾಪಾರದ ಮೇಲೆ ಸುಂಕವನ್ನು ಕಟ್ಟುವ ಪದ್ಧತಿ, ಹಿಂದಿನಿಂದಲೂ ನಡೆದು ಬಂದಿದೆ. ಬಹುಶಃ ರಾಜ ಮನೆತನಗಳು ಹುಟ್ಟಿಕೊಂಡ ಮೇಲೆ ಈ ಸಂಪ್ರದಾಯ ಬಳಿಕೆಗೆ ಬಂದಿದೆ. ಇದಕ್ಕೆ ಅನೇಕ ಶಾಸನಗಳು, ಸಾಹಿತ್ಯ ಕೃತಿಗಳು ಆಧಾರಗಳನ್ನು ಒದಗಿಸುತ್ತವೆ. ಪಂಚತಂತ್ರ (221–2) ದಲ್ಲಿ 'ನುಡಿದ ದ್ರವ್ಯಮಂ ಕಂಡಾಯದೊಳ್ ಕುಡುವುದು ಸ್ಕಂದೋಪನಯ ಸಂಧಿಯೆಂಬುದಕ್ಕುಂ' ಎಂದು ಮತ್ತು 'ಸಂಗ್ಯಾ–ಮಂಗ್ಯಾ ಕೂಡಿ ಕರಕಿ ಹೊಲಾ ಮಾಡಿ ಬಿರಾಡ ಬಂತು ಸಂಗ್ಯಾ ಓಡಿ ಹೋಗೊ ಮಂಗ್ಯಾ' ಎಂಬ ಚಿಕ್ಕಮಕ್ಕಳ ಜನಪದ ಹಾಡನ್ನು ನೋಡಿದರೆ ಇದಕ್ಕೆ ಸಾಕಷ್ಟು ಪ್ರಾಚೀನತೆ ಇದೆ ಎಂಬುದು ಸ್ಪಷ್ಟ. ಅದಕ್ಕಾಗಿ ಸುಂಕದ ಕಟ್ಟೆಗಳನ್ನು ಕಟ್ಟಿ, ಅಧಿಕಾರಿಗಳನ್ನು ನೇಮಿಸಿದುದು ತಿಳಿದು ಬರುತ್ತದೆ. ಹಾಗೆಯೇ ತೆರ ಕೊಟ್ಟು ಹೆಣ್ಣನ್ನು ತರುವ ಸಂಪ್ರದಾಯ ಹಿಂದೆ ಇತ್ತು. ಇತ್ತಿತ್ತಲಾಗಿ ಅದು ನಿಂತು, ವರದಕ್ಷಣೆ ಕೊಟ್ಟು ಗಂಡುಕೊಳ್ಳುವ ಕಾರ್ಯ ನಡಿದಿದೆ.

ಆಧುನಿಕ ಯುಗದಲ್ಲಿ ವಾಹನಗಳಿಗೆ, ಅವು ಓಡಾಡುವ ರಸ್ತೆಗಳಿಗೆ, ಕುಡಿಯುವ ನೀರಿಗೆ, ತಿನ್ನುವ ಅನ್ನಕ್ಕೆ, ಮಲಗುವ ಸ್ಥಳಕ್ಕೆ, ತೊಡುವ ಬಟ್ಟೆಗೆ, ಹಾಕಿಕೊಳ್ಳುವ ಪಾದರಕ್ಷೆಗಳಿಗೆ, ಪಡೆಯುವ ಸಂಬಳಕ್ಕೆ, ಬೆಳೆದ ಬೆಳೆಗೆ, ಕುಡಿಯುವ–ಸೇದುವ ಮಾದಕ ವಸ್ತುಗಳಿಗೆ ಸರಕಾರಗಳು ಸುಂಕ ಹೇರಿವೆ. ಇದು ಇಲ್ಲದೆ ಸರಕಾರಗಳು ನಡೆಯುವುದಿಲ್ಲ ಎನ್ನುವಷ್ಟರ ಮಟ್ಟಿಗೆ ಇಂದು ಪರಸ್ಥಿತಿ ನಿರ್ಮಾಣವಾಗಿದೆ. *(ಶ್ರೀಶ್ರೀಶ್ರೀ)*

ಕಂದೀಲು: ಜನಪದರು ಬಳಸುವ ದಿನಬಳಕೆಯ ಸಾಧನಗಳಲ್ಲಿ ಒಂದು. ಹತ್ತಿಪ್ಪತ್ತು ವರುಷಗಳ ಹಿಂದೆ ಚಿಮಣಿ ದೀಪವನ್ನು ಮನೆಯಲ್ಲಿ ಉರಿಸಿದರೆ ಕಂದೀಲು ದೀಪವು ಮನೆಯ ಒಳಗೂ ಮತ್ತು ಹೊರಗಡೆಯಲ್ಲಿಯೂ ಸಹ ಬೆಳಕಿಗಾಗಿ ಬಳಸುತ್ತಿದ್ದರು. ಹಬ್ಬ ಹುಣ್ಣಿಮೆ, ಶುಭ ಮಂಗಳ ಕಾರ್ಯಗಳೆಲ್ಲವುಗಳಲ್ಲಿ ಇದನ್ನು ಉಪಯೋಗಿ ಸುತ್ತಿದ್ದರು. ವಿದ್ಯುತ್ ದೀಪದ ಸೌಕರ್ಯವು ಪ್ರತಿ ಹಳ್ಳಿಗೂ ಇರಲಿಲ್ಲ. ಆದುದರಿಂದ ಕಂದೀಲು ದೀಪದ ಅವಶ್ಯಕತೆಯು ಪ್ರತಿ ಯೊಬ್ಬರಿಗೂ ಬೇಕಾ ಗಿತ್ತು. ಅಲ್ಲದೆ ಹೊಲದಲ್ಲಿ ರಾಶಿ ಮಾಡು ವಾಗಲು ಕೂಡ ದೊಡ್ಡ ರೈತರು ಕಂದೀಲನ್ನು ಉಪಯೋಗಿ ಸುತ್ತಿದ್ದರು.

ಬಹುತೇಕ ಪ್ರತಿ ಒಂದು ಹಳ್ಳಿಗರ ಮನೆ ಯಲ್ಲಿ 'ಚಿಮಣಿ' ದೀಪ ವನ್ನು ನಿತ್ಯವೂ ಬೆಳಕಿಗಾಗಿ ಬಳಸುತ್ತಿದ್ದರು. ತದನಂತರ ಸ್ವಲ್ಪ ದೊಡ್ಡದಾಗಿ ಇರುವ ಹೆಚ್ಚು ಬೆಳಕನ್ನು ಕೊಡುವ ಕಂದೀಲನ್ನು ಕಂಡು ಹಿಡಿದರು. ಇದರಿಂದ ಸಾರ್ವಜನಿಕರಿಗೆ ಮತ್ತಷ್ಟು ಅನುಕೂಲವಾಯಿತು. ಪ್ರಾಚೀನರು ವಿವಿಧ ಸಭೆ ಸಮಾರಂಭಗಳಿಗೆ ಇದನ್ನು ಬಳಸ ತೊಡಗಿದರು.



ಕಂದೀಲು ಕಬ್ಬಿಣದ ತಗಡಿನಿಂದ ತಯಾರಾದ ಸಾಧನ. ಇದು 'ಚಿಮಣಿ–ಗಿಂತ ದೊಡ್ಡದಾಗಿದ್ದು 100 ಮೀಟರದವರೆಗೆ ಬೆಳಕು ಬೀರುತ್ತದೆ. ತಗಡಿನಿಂದ ನಿರ್ಮಿಸಲ್ಪಟ್ಟ ಕಂದೀಲು ನಡುವೆ ಗ್ಲಾಸು ಹಾಕಲು ಜಾಗ ಬಿಟ್ಟಿರುತ್ತಾರೆ. ಏಕೆಂದರೆ ಗ್ಲಾಸಿನಿಂದಾಗಿ ಗಾಳಿ ಬಡಿದು ದೀಪವು ಆರುವುದಿಲ್ಲ ಮತ್ತು ಹೆಚ್ಚು ಬೆಳಕು ಕಾಣುತ್ತದೆ. ಕೆಳಗಡೆ ಎಣ್ಣೆ ಹಾಕಲು ಡಬ್ಬಿ ಇರುತ್ತದೆ. ಲೀಟರ್ ಎಣ್ಣೆಯು ಹಿಡಿಯುತ್ತದೆ. ಅದರೊಳಗಡೆ ನೈಲಾನ ಬಟ್ಟೆಯ ಬತ್ತಿಯು ಇರುತ್ತದೆ. ದೀಪವನ್ನು ಹೆಚ್ಚು ಕಡಿಮೆ ಮಾಡಲು ಬತ್ತಿಯಿಂದ ಜೋಡಿಸಲ್ಪಟ್ಟ ಚಕ್ರವಿರುತ್ತದೆ. ತಮಗೆ ಅನುಕೂಲಕ್ಕೆ ತಕ್ಕಂತೆ ಜಾಸ್ತಿ ಕಡಿಮೆ ಮಾಡಬಹುದು. ಕಂದೀಲಿನ ಒಳಗಡೆಯಿಂದ ಗ್ಲಾಸ್ ತೆಗೆಯಲು ಬಲು ಸುಲಭವಾಗಿದೆ. ಪ್ರತಿಸಲ ಕಂದೀಲಿನ ಹಿಡಿಕೆಯಿಂದ ಗ್ಲಾಸ್ ತೆಗೆದು ಸ್ವಚ್ಛ ಮಾಡಿ ಮತ್ತೆ ಹಾಕಬಹುದಾಗಿದೆ. ಹೀಗೆ ಅತಿ ಕಡಿಮೆ ವೆಚ್ಚದಲ್ಲಿ ಬೆಳಕನ್ನು ನೀಡುವ ಸಾಧನವೆಂದು ಪರಿಗಣಿಸಲ್ಪಟ್ಟ ಕಂದೀಲು ಒಂದು ಕಾಲಕ್ಕೆ ಹೆಚ್ಚು ಬೇಡಿಕೆಯಿದ್ದ ವಸ್ತುವಾಗಿತ್ತು. ಆದರೆ ಕಾಲ ಕ್ರಮೇಣ ವಿದ್ಯುತ್ತಿನ ಸೌಕರ್ಯದಿಂದಾಗಿ ಕಂದೀಲೀನ ಅವಶ್ಯಕತೆಯು ಇಲ್ಲದಂತಾಗಿದೆ. *(ಪಿಕೆಕೆ)*

ಕಂಬಳಿ: ಜನಪದರು ಹೊದೆಯಲು ಹಾಸಲು ಉಪಯೋಗಿಸುವ ಉಣ್ಣೆಯ ನೇಯ್ಗೆ. 'ಕಂಬಳಿ' ಸ್ವದೇಶೀ ಉದ್ಯಮ'. ಕುರಿಗಳ ಉಣ್ಣೆಯಿಂದ ರಚಿಸುತ್ತಾರೆ. ಬಹುಶಃ ಇದರ ಬಣ್ಣ ಕಪ್ಪಾಗಿರುವುದ–ರಿಂದ 'ಕಂಬಳಿ' ಎಂಬ ಹೆಸರು ಬಂದಿರಬಹುದಾಗಿದೆ.

ಮಳೆಗಾಲದ ಸಮಯದಲ್ಲಿ ಜನರು ದೇಹದ ರಕ್ಷಣೆಗೋಸ್ಕರ

ಬಳಸುತ್ತಾರೆ. ಮುದುಕರು, ದನಗಾಹಿಗಳು, ಕೂಲಿ ಕಾರ್ಮಿಕರು, ರೈತರು ಮುಂತಾದವರು ಮಳೆಯಾಗುವ ಸಮಯದಲ್ಲಿ ಧರಿಸುವ ಪ್ರಮುಖ ಉಡುಪಾಗಿದೆ. ಇದರ ಉಪಯುಕ್ತತೆಯೂ ಮಳೆಗಾಲದಲ್ಲಿ ಅತ್ಯಧಿಕ. ಮಳೆ, ಚಳಿ, ಬಿಸಿಲಿನಿಂದ ರಕ್ಷಣೆ ಪಡೆಯಲು ಇದು ಉಪಯುಕ್ತವಾಗಿದೆ. ಬೇರೆಲ್ಲಾ ಉಡುಪುಗಳಿಗಿಂತಲೂ ಅತಿ ಕಡಿಮೆ ಬೆಲೆಯಲ್ಲಿ ಕೈಗೆಟಕುವ ಈ ಉಡುಪು ಮಳೆಗಾಲದಲ್ಲಿ ಎಲ್ಲರೂ ತೊಡಲು ಅನುಕೂಲಕರವಾಗಿದೆ. ಪಟ್ಟಣ ಪ್ರದೇಶದಲ್ಲಿ ಶ್ರೀಮಂತ ವರ್ಗದವರು ರಗ್ಗು, ಶಾಲು, ಚಾದರ ಮುಂತಾದ ಅತ್ಯಾಧುನಿಕವಾಗಿ ತಯಾರಿಸಲ್ಪಟ್ಟ ಉಡುಪನ್ನು ದೇಹ ರಕ್ಷಣೆಗೋಸ್ಕರ ಉಪಯೋಗಿಸಿದರೆ, ಗ್ರಾಮೀಣರಿಗೆ ಕಂಬಳಿಯೇ ಅವರ ಹೊದಿಕೆಯಾಗಿದೆ. ಏಕೆಂದರೆ ಅತ್ಯಾಧುನಿಕ ಉಡುಪುಗಳ ಬೆಲೆಯು ದುಬಾರಿಯಾದುದರಿಂದ ಕೊಂಡುಕೊಳ್ಳಲಾಗದೇ ಕಂಬಳಿಯೇ ಇವರಿಗೆ ಮಳೆಗಾಲದ ಹೊದಿಕೆಯಾಗಿದೆ.


ಹೈದ್ರಾಬಾದ ಕರ್ನಾಟಕ ಭಾಗದ ಚಿಂಚೋಳಿ ತಾಲ್ಲೂಕಿನ ಸುಲೇಪೇಟ ಗ್ರಾಮ ಕಂಬಳಿಯ ಪ್ರಮುಖ ವ್ಯಾಪಾರ ಕೇಂದ್ರವಾಗಿದೆ. ವರ್ಷದಲ್ಲಿ ಎರಡು ಸಲ ಕುರಿಗಳಿಂದ ಉಣ್ಣೆ ತೆಗೆದು ತಾವೇ ಅದನ್ನು ಹಿಂಜಿ ತಮಗೆ ಬೇಕಾದ ರೀತಿಯಲ್ಲಿ ರಾಟಿ ಮತ್ತು ತಕಲಿಯಿಂದ ನೂತು, ನೂಲು ತೆಗೆಯುತ್ತಾರೆ. ತಾವು ನೂತು ಉತ್ತಮವಾದ ಕಂಬಳಿಯನ್ನು ತಯಾರಿಸುತ್ತಾರೆ. ಇಲ್ಲಿ ತಯಾರಿಸಲ್ಪಟ್ಟ ಕಂಬಳಿಗಳಿಗೆ ದೇಶದೆಲ್ಲೆಡೆ ಉತ್ತಮವಾದ ಬೇಡಿಕೆಯಿದೆ. ಈ ಗ್ರಾಮದಲ್ಲಿ ಕಂಬಳಿ ನೇಯುವ 40ಕ್ಕಿಂತ ಮಿಗಿಲಾದ ಮಗ್ಗಗಳಿದ್ದು, ನೇಕಾರರು ಬ್ಯಾಂಕಿನ ನೆರವು ಪಡೆದುಕೊಂಡಿದ್ದಾರೆ. ಸುಲೇಪೇಟ ಎಂಬ ಗ್ರಾಮವು ಸಂತೆಯಾಗುವ ಊರುಗಳಲ್ಲಿ ದೊಡ್ಡ ಗ್ರಾಮವಾಗಿದ್ದು, ಕಂಬಳಿ ನಿರ್ಮಿಸುವ ಮತ್ತು ಬೇರೆ ಬೇರೆ ಕಡೆ ಸರಕಾಗುವ ಪ್ರಮುಖವಾದ ಕೇಂದ್ರವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. *(ಪಿಕೆಕೆ)*

ಕಂಬಳಿ ಮಠ: ಐತಿಹಾಸಿಕ ಮಹತ್ವ ಪಡೆದಿರುವ ಸ್ಮಾರಕ. ಇದು ಶಿವಶರಣರ ಕಂಬಳಿ ನಾಗದೇವರ ಸ್ಮಾರಕ ಎಂಬ ಸಿದ್ದಣ್ಣ ಲಂಗೋಟಿಯವರ ಅಭಿಪ್ರಾಯ. ಆದರೆ ಹೆಚ್. ಚಂದ್ರಶೇಖರ ಈ ಮಾತನ್ನು ಅಲ್ಲಗಳೆದು ಇದು ಸಂಬೋಳಿ ನಾಗಿದೇವರ ಮಠ ಎಂದು ಸ್ಥಿರಪಡಿಸುತ್ತಾರೆ. ಮಠದೊಳಗೆ ಸಂಬೋಳಿ ನಾಗಿದೇವರ ಗದ್ದುಗೆ ಇದೆ. ಸುತ್ತಲೂ ಬಯಲು ಪ್ರದೇಶವಿದೆ. ಕಾಲಾಂತರದಲ್ಲಿ ಮಠದೊಳಗೊಬ್ಬ ಮಹಾಪುರುಷ ವಾಸಿಸುತ್ತಿದ್ದರೆಂದು ಅವರು ಸದಾ ಕಂಬಳಿಯನ್ನು ಹೊದ್ದು ಕೊಂಡಿರುತ್ತಿದ್ದುದರಿಂದ ಈ ಮಠಕ್ಕೆ 'ಕಂಬಳಿ ಮಠ' ವೆಂದು ಹೆಸರು ಬಂದಿತ್ತೆಂದು ಸೊಲ್ಲಾಪುರದ ಕುಮಾರ ಕೋಠವಾಳೆಯವರು ಉಲ್ಲೇಖಿಸುತ್ತಾರೆ. ಸದ್ಯಕ್ಕೆ ಮಠದ ಸುತ್ತಲೂ ಅಂಗಡಿಗಳು ನಿರ್ಮಾಣಗೊಂಡಿವೆ.

(ಆರ್.ಜಿ.)

ಕಂಬಾರ: ಹಳ್ಳಿಯ ಹನ್ನೆರಡು ಆಯಗಾರರಲ್ಲಿ ಒಬ್ಬ. ಕಂಬಾರರು ವ್ಯವಸಾಯಕ್ಕೆ, ಯುದ್ಧಕ್ಕೆ, ನಿತ್ಯಜೀವನಕ್ಕೆ ಅನಿವಾರ್ಯವಾದ ಕಬ್ಬಿಣದ ಉಪಕರಣಗಳನ್ನು ತಯಾರಿಸಿಕೊಡುವ ಕಸಬುಗಾರರು; ಮಾನವನ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಬಲ್ಲ ವ್ಯವಸಾಯದ ದೃಷ್ಟಿಯಿಂದ ಈ ಕಮ್ಮಾರ ವೃತ್ತಿ ಮಿಕ್ಕ ವೃತ್ತಿಗಳಲ್ಲೆಲ್ಲ ಅತ್ಯಂತ ಉಪಯುಕ್ತವಾದುದು. ಆದ್ದರಿಂದ ಆಯವನ್ನು ಕೊಡುವ ಒಕ್ಕಲಿಗನ ದೃಷ್ಟಿಯಲ್ಲಿ ಕಂಬಾರ, ಜರೂರು ಆಯಗಾರನಾಗಿದ್ದಾನೆ. ಒಕ್ಕಲಿಗನಿಗೆ ತನ್ನ ವ್ಯವಸಾಯದ ಅನುಕೂಲಕ್ಕಾಗಿ ದುಡಿಯುವ ಕಂಬಾರನದೇ ನಿಜವಾದ ಕರ್ಮ. ಅಂತೆಯೇ ಒಕ್ಕಲಿಗ ಕರ್ಮಯೋಗಿ ಎನಿಸಿಕೊಂಡರೆ, ಈತ ಕರ್ಮಕಾರ ಎನಿಸಿಕೊಂಡಿದ್ದಾನೆ. ಕರ್ಮ ಎಂಬ ಶಬ್ದದಿಂದಲೇ ಕಂಬಾರ ಎಂಬ ಶಬ್ದದ ವ್ಯುತ್ಪತ್ತಿಯಾದಂತಿದೆ. ಕಮ್ಮಾರ ಎನ್ನುವದು ಕರ್ಮಕಾರ ಎಂಬ ಶಬ್ದದ ತದ್ಭವ. ಇಂದು ಕಮ್ಮಾರ ಹಾಗೂ ಕಂಬಾರ ಎಂಬ ಎರಡೂ ಶಬ್ದಗಳು ಸಮಾನ ಬಳಕೆಯಲ್ಲಿವೆ. ಕಂಬಾರ ಎಂಬ ಶಬ್ದದ ಪ್ರಭಾವದಿಂದ ಕಮ್ಮಾರ ಎನ್ನುವದು ಕಂಬಾರ ಎಂದು ಮಾರ್ಪಾಟು ಹೊಂದಿದಂತಿದೆ. ಮರಾಠಿಯ ಪ್ರಭಾವದಿಂದಾಗಿ ಬೆಳಗಾವಿ ಹಾಗೂ ಕಾರವಾರ ಜಿಲ್ಲೆಗಳಲ್ಲಿ ಲೋಹಾರ ಎಂದೂ ಕರೆಯಲಾಗುತ್ತದೆ. ಕಮ್ಮಾರ, ಕಂಮಾರ, ಕರ್ಮಹರ, ಕಂಮರ, ಕಂಮಱಿಗ, ಕಮ್ಮಱ, ಕಂಬಱ, ಕನ್ಮಾರ, ಕಮ್ಬಾರ, ಕಂಬಾರ ಎಂಬ ಹೆಸರುಗಳು ಪ್ರಾಚೀನ ಹಾಗೂ ಅರ್ವಾಚೀನ ಕನ್ನಡಶಾಸನಗಳಲ್ಲಿ ಕಾವ್ಯ, ವ್ಯಾಕರಣಗಳಲ್ಲಿ ಕಾಣಿಸಿಕೊಂಡಿವೆ. ಈ ವೃತ್ತಿಯ ಹೆಣ್ಣುಮಕ್ಕಳಿಗೆ ಕಮ್ಮಾಱಗಾತಿ, ಕಮ್ಮಾರಗಿತ್ತಿ, ಕಮ್ಮಱತಿ, ಕಮ್ಮಾಱತಿ, ಕಂಬಾರತಿ ಎಂದು ಮೊದಲಾಗಿ ಕರೆಯಲಾಗಿದೆ.

ಕರ್ನಾಟಕದಲ್ಲಿ ಕಂಬಾರರು ಅತ್ಯಂತ ಪ್ರಾಚೀನ ಕಾಲದಿಂದಲೂ ಜನಾಂಗದ ಮನ್ನಣೆಯನ್ನು ಪಡೆದು ಗಮನಾರ್ಹವಾದ ಬಾಳನ್ನು ಬಾಳುತ್ತ ಬಂದಿದ್ದಾರೆ. ಕರ್ನಾಟಕದ ಹಲವಾರು ಶಾಸನಗಳಲ್ಲಿ ಕಮ್ಮಾರ ಹೆಸರಿನ ವ್ಯಕ್ತಿ, ಊರು, ಹಳ್ಳಿ, ಸ್ಥಳಗಳ ಉಲ್ಲೇಖ, ವೃತ್ತಿ ಹಾಗೂ ಅವರ ಸಾಮಾಜಿಕ



ಕಮ್ಮಾರ

ಜೀವನವನ್ನು ಕುರಿತ ಉಲ್ಲೇಖಗಳು ದೊರೆಯುತ್ತಿದ್ದು, ಅವೆಲ್ಲ ಅವರ ಬದುಕಿನ ಸ್ವರೂಪವನ್ನು, ಅವರ ಆರ್ಥಿಕ, ಸಾಮಾಜಿಕ ಸಾಂಸ್ಕೃತಿಕ ಮಟ್ಟವನ್ನು ಪ್ರಭಾವಕಾರಿಯಾಗಿ ಕಲ್ಪನೆಗೆ ತಂದು ಕೊಡಬಲ್ಲವುಗಳಾಗಿವೆ.

ಎಷ್ಟೋ ಜನ ಕಮ್ಮಾರರು ಊರಿನ ಹಾಗೂ ಸಮಾಜದ ಮುಖಂಡರಾಗಿದ್ದಂತೆಯೂ ಕೆಲವು ಶಾಸನಗಳು ತಿಳಿಸುತ್ತವೆ. ಹಾಗೆ ಕರ್ನಾಟಕದ ಕಂಬಾರರು ಧರ್ಮಪರರು, ಧೈರ್ಯಶಾಲಿಗಳು, ಶೂರರು, ಸಾಹಸಿಗಳು, ಸತ್ಪುಜೆಗಳೂ ಆಗಿ ಉದಾತ್ತವಾದ, ನೆಮ್ಮದಿಯ, ಸಾರ್ಥಕ ಬಾಳನ್ನು ಬಾಳಿದ ವಿಷಯ ವೇದ್ಯವಾಗುತ್ತದೆ.

ಕಂಬಾರ ವೃತ್ತಿ ವ್ಯವಸಾಯದ, ದಿನಬಳಕೆಯ, ಮತ್ತು ಯುದ್ಧೋಪಕರಣಗಳ ದೃಷ್ಟಿಯಿಂದ ಎಷ್ಟೇ ಅನಿವಾರ್ಯ ಆದರೂ, ಅದು ವಿಶ್ವಕರ್ಮಿಗಳ ಇತರ ವೃತ್ತಿಗಳಾದ ಬಡಿಗತನ, ಪತ್ತಾರಿಕೆ, ಮತ್ತು ಶಿಲ್ಪವೃತ್ತಿಯಂತೆ ವಿಶೇಷ ಕರಕೌಶಲವನ್ನು ಒಳಗೊಂಡ ಕಲಾತ್ಮಕ ವೃತ್ತಿಯಲ್ಲ. ಇದೊಂದು ಉಪಯುಕ್ತ ಕಲೆಯೇ ಹೊರತು ಲಲಿತಕಲೆಯಲ್ಲ. ಕಂಬಾರರು ಸಿದ್ಧವಾದ ಕಬ್ಬಿಣವನ್ನು ಬಳಸಿ ಉಪಕರಣಗಳನ್ನು ತಯಾರಿಸುವರೇ ಹೊರತು ಕಬ್ಬಿಣವನ್ನು ತಯಾರಿಸುವವರಲ್ಲ. ತಮ್ಮ ಉದ್ಯೋಗಕ್ಕೆ ವಿಶೇಷ ಬಂಡವಾಳವನ್ನು ತೊಡಗಿಸಬೇಕಾಗಿಯೂ ಇಲ್ಲ. ತಿದಿ, ಘನ (ದೊಡ್ಡ ಸುತ್ತಿಗೆ), ಸಣ್ಣ ಸುತ್ತಿಗೆಗಳು, ಅರಣ, ಇಕ್ಕಳ, ಸಣ್ಣ ದೊಡ್ಡ ಚಾಣಗಳು, ಕಬ್ಬಿಣದಲ್ಲಿ ತೂತು ತೆಗೆಯಲು ಪೊಗರ, ಇದ್ದಲಿಯನ್ನು ಸರಿಪಡಿಸಲು ದಾನಿ (ಕಬ್ಬಿಣಸಳಿ), ಅಡಗಲ್ಲು (ಐರಸ್), ಮತ್ತು ಒಂದು ನೀರಿನ ಕುಂಡ ಅಥವಾ ದೋಣಿ ಇವಿಷ್ಟು ಅವರ ಸಾಧನ ಸಾಮಗ್ರಿಗಳು. ಇವುಗಳಲ್ಲಿ ತಿದಿಗೆ ಬೇಕಾಗುವ ಚರ್ಮವೊಂದು ದೊರೆತರೆ ಸಾಕು ಉಳಿದೆಲ್ಲ ಉಪಕರಣಗಳನ್ನು ತಾವೇ ಸಿದ್ಧಪಡಿಸಿಕೊಳ್ಳಬಲ್ಲರು, ಇವುಗಳಲ್ಲಿ ಎಲ್ಲ ದೃಷ್ಟಿಯಿಂದಲೂ ತಿದಿಯೇ ಹೆಚ್ಚು ಬೆಲೆಬಾಳುವ ಸಾಧನವಾಗಿದ್ದು ಸೊಂಡೆಯ ಹಾಗೂ ಗಾಲಿಯ ತಿದಿಗಳು ಇಂದಿಗೂ ಬಳಕೆಯಲ್ಲಿವೆ. ಕಂಬಾರರು ತಿದಿಯನ್ನು ಅತ್ಯಂತ ಪೂಜ್ಯಭಾವನೆಯಿಂದ ಕಾಣುತ್ತಾರೆ.

ಸೊಂಡೆಯ ತಿದಿಯನ್ನು ತಯಾರಿಸಲು ಆನೆಯ ಸೊಂಡೆಯಾಕಾರದ ಒಂದು ದೊಡ್ಡ ಚರ್ಮದ ಕೋಶವನ್ನು ನಿರಿಗೆಯಾಗಿ ಮಡಚಿ ನಾಲ್ಕುದಿನಗಳವರೆಗೆ ಭಾರ ಹೇರಿ ಇಡಲಾಗುವದು. ಅನಂತರ ಅದರ ಕೆಳಭಾಗವನ್ನು ಮರದ ಹಲಿಗೆಯಿಂದ ಜೋಡಿಸಲಾಗುವದು. ಮೇಲ್ಭಾಗದ ಹಲಗೆಗೆ ಚರ್ಮದ ಕೋಶದಲ್ಲಿ ಗಾಳಿಸೇರಿಕೊಳ್ಳಲು ರಂಧ್ರವಿರುತ್ತದೆ. ಕೋಶದಲ್ಲಿ ತುಂಬಿಕೊಂಡ ಗಾಳಿ ಕುಲುಮೆಗೆ ಬರಲು ಅನುಕೂಲವಾಗುವಂತೆ ಮುಂಭಾಗದಲ್ಲಿ ಅದಕ್ಕೊಂದು ರಂಧ್ರವನ್ನು ಮಾಡಿ ತಗಡಿನ ಕೊಳವೆಯನ್ನು ಜೋಡಿಸುತ್ತಾರೆ. ಆ ಕೊಳವೆಯ, ಇನ್ನೊಂದು ತುದಿಯಲ್ಲಿ ಒಲೆಯನ್ನು ಹೂಡುತ್ತಾರೆ. ಕೆಳಗಿನ ಹಲಗೆಯ ಹಿಂಬದಿಯಲ್ಲಿ ಒಂದು ಕಬ್ಬಿಣ ಗುಂಡನ್ನು ಜೋಡಿಸಿದ ಕಬ್ಬಿಣದ ಸರಪಳಿಯನ್ನು ಎತ್ತಿ ಮೇಲ್ಗಡೆಗೆ ಉದ್ದವಾಗಿ ಜೋಡಿಸಿದ ಬಿದಿರಿನ ಗಳಕ್ಕೆ ಜೋಡಿಸಲಾಗುವುದು. ಆ ಬಿದಿರಿನ ಗಳಕ್ಕೆ ಸೊನ್ನೆಯನ್ನು ಉಪಯೋಗಿಸಲಾಗಿದ್ದು ಅದರ ಇನ್ನೊಂದು ತುದಿಯನ್ನು ಕುಲುಮೆಯ ಮುಂದೆ ತರುತ್ತಾರೆ. ಆ ತುದಿಗೆ ಹಗ್ಗವನ್ನು ಕಟ್ಟಿಯೋ, ಸರಪಳಿಯನ್ನು ಜೋಡಿಸಿಯೋ ಎಳೆಯಲು ಉಪಯೋಗಿಸುತ್ತಾರೆ. ಕೋಲನ್ನು ಕೆಳಗೆ ಎಳೆದಾಗ ಚರ್ಮದ ಕೋಶವು ಆಕುಂಚನಗೊಂಡು ಮೇಲಿನ ರಂಧ್ರವು ಮುಚ್ಚಿಕೊಳ್ಳುತ್ತದೆ. ಆ ಕೋಶದ ಗಾಳಿಯು ಜೋಡಿಸಿದ ತಗಡಿನ ಕೊಳವೆಗುಂಟ ಕುಲುಮೆಗೆ ಹೋಗುತ್ತದೆ. ಬಿದಿರಿನ ಕೋಲನ್ನು ಮೇಲೆ ಬಿಟ್ಟಾಗ ಕೋಶವು ಪ್ರಸರಣಗೊಂಡು ಮೇಲ್ಭಾಗದ ಹಲಗೆಯ ರಂಧ್ರದ ಮೂಲಕ ಗಾಳಿಯು ಚರ್ಮದ ಕೋಶವನ್ನು ತುಂಬಿಕೊಳ್ಳುತ್ತದೆ. ಹೀಗೆ ಕುಲುಮೆಗೆ ಗಾಳಿಯ ಪೂರೈಕೆಯಾಗುವುದರಿಂದ ಬೆಂಕಿ ಅಥವಾ ಉರಿ ಹುಟ್ಟಿಕೊಳ್ಳುತ್ತದೆ. ಕುಲುಮೆಗೆ ಜೋಡಿಸಿರುವ ತಗಡಿನ ಕೊಳವೆಯ ತುದಿಗೆ ಹೊಂದಿಕೊಂಡು ಇಟ್ಟಿಗೆಯ ಇಲ್ಲವೆ ಮಣ್ಣಿನ ಸಣ್ಣಗೋಡೆಯನ್ನು ಕಟ್ಟುತ್ತಾರೆ. ಇದರಿಂದ ಕುಲುಮೆಯಲ್ಲಿ ಹಾಕಿದ ಇದ್ದಲಿ ಅಥವಾ ಬೂದಿ ತಿದಿಯತ್ತ ಜರೆದು ಹೋಗದೆ ಸೀಮಿತ ಸ್ಥಳದಲ್ಲಿಯೇ ಉಳಿಯುತ್ತದೆ. ತಿದಿಯನ್ನು ಹಾಗೂ ಗೋಡೆಯನ್ನು ಬಗೆಬಗೆಯಾಗಿ ಬಣ್ಣ ಬಣ್ಣದಿಂದ ಅಲಂಕರಿಸುವದುಂಟು.

ಗಾಲಿಯ ತಿದಿಯ ಬಳಕೆ ಇಂದು ತೀರ ಕಡಿಮೆಯಾಗಿದ್ದು, ಬಹಳ ಅಪರೂಪಕ್ಕೆ ನೋಡಲು ದೊರೆಯುತ್ತವೆ. ಅದಕ್ಕೆ ಸಿಲಿಂಡರ ಆಕಾರದ ಎರಡು ಚರ್ಮದ ಕೋಶಗಳನ್ನು ಬಳಸಲಾಗುತ್ತದೆ. ಆ ಚರ್ಮದ ಕೋಶಗಳನ್ನು ನಿರಿಗೆಯಾಗಿ ಮಡಚಿಟ್ಟು ಒಣಗಿಸುತ್ತಾರೆ. ಅದಕ್ಕೂ ಮೊದಲು ಹೊರಮಡಿಕೆಗಳು ಬೀಳುವಲ್ಲಿ ಬೆತ್ತದ ಗಾಲಿಗಳನ್ನು ಆ ಕೋಶಗಳ ಒಳಭಾಗದಲ್ಲಿ ನಿಯಮಿತ ಅಂತರದಲ್ಲಿ ಜೋಡಿಸುತ್ತಾರೆ. ಕೋಶದ ಒಂದು ಭಾಗವನ್ನು ಅಡ್ಡನಿಲ್ಲಿಸಿದ ಹಿರಿದಾದ ಮಂಚದ ಎಡ–ಬಲ ಬದಿಗೆ ಒಂದೊಂದರಂತೆ ಜೋಡಿಸಲಾಗುತ್ತದೆ. ಹಾಗೂ ಆ ಕೋಶಗಳಲ್ಲಿ ಗಾಳಿ ತುಂಬಿಕೊಳ್ಳಲು ಮಂಚಕ್ಕೆ ಒಂದು ರಂಧ್ರವನ್ನು ಮಾಡಿರುತ್ತಾರೆ. ಅದಕ್ಕೆ ಒಳಭಾಗದಲ್ಲಿ ಒಂದು ಪಟಲವೂ ಇದ್ದು, ಗಾಳಿ ಕೋಶದ ಒಳಗೆ ಹೋಗಬೇಕಾದಾಗ ತೆರೆದುಕೊಳ್ಳುವ ಮತ್ತು ಕೋಶದಿಂದ ಗಾಳಿ ಕುಲುಮೆಗೆ ಹೋಗಬೇಕಾದಾಗ ಮುಚ್ಚಿಕೊಳ್ಳುವ ವ್ಯವಸ್ಥೆ ಇರುವದು. ಆ ಪಟಲವು ಮೇಲಿಂದಮೇಲೆ ಮಂಚಕ್ಕೆ ಬಡಿದು ಸವೆಯಬಾರದೆಂದು ಅದಕ್ಕೆ ಉಣ್ಣೆಯನ್ನು ಮೆತ್ತಲಾಗುವದು. ಚರ್ಮದ ಕೋಶಗಳ ಇನ್ನೊಂದು ತುದಿಯನ್ನು ರಂಧ್ರವಿರದ ಹಲಗೆಗೆ ಜೋಡಿಸಿ ಮತ್ತು ಆ ಹಲಗೆಯ ಮೇಲ್ಬದಿಗೆ ಕಟ್ಟಿಗೆಯ ಹಿಡಿಕೆಯನ್ನು ಜೋಡಿಸಿ ಮತ್ತು ಆ ಹಲಗೆಯ ಮೇಲ್ಬದಿಗೆ ಕಟ್ಟಿಗೆಯ ಹಿಡಿಕೆಯನ್ನು ಜೋಡಿಸಿ ತುದಿಯನ್ನು ಒತ್ತಲು ಉಪಯೋಗಿಸಿಕೊಳ್ಳುವರು. ಇನ್ನು ಚರ್ಮದ ಕೋಶಗಳ ಕೆಳಬದಿಯಲ್ಲಿ ಒಂದೊಂದು ರಂಧ್ರವನ್ನು ಮಾಡಿ ತಗಡಿನ ಕೊಳವೆಯ ತುದಿಯನ್ನು ಅದಕ್ಕೆ ಜೋಡಿಸಿ ಇನ್ನೊಂದು ತುದಿಯನ್ನು ಕುಲುಮೆಯ ಹತ್ತಿರದ ಮಣ್ಣಿನ ಅಥವಾ ಇಟ್ಟಿಗೆಯ ಕಟ್ಟಿಗೆ ಜೋಡಿಸುವರು. ಎಡಬಲದಲ್ಲಿರುವ ಆ ಎರಡೂ

ಕೋಶಗಳ ಹಿಂದೆ ನಿಂತು ಅಥವಾ ಎತ್ತರವಾದ ಆಸನದಲ್ಲಿ ಕುಳಿತು ತಮ್ಮ ಎರಡೂ ಕೈಗಳಿಂದ ಕೋಶದ ಹಿಡಿಕೆಗಳನ್ನು ಹಿಡಿದು ಒಂದೊಂದನ್ನು ಕ್ರಮವಾಗಿ ಒತ್ತಿ ಎಳೆಯುವರು. ಒಂದು ಕೋಶವನ್ನು ಒತ್ತಿದಾಗ ಇನ್ನೊಂದನ್ನು ಎಳೆಯುವರು. ಇತ್ತಿತ್ತಲಾಗಿ ಕೆಲವರು ತಿದಿಗೆ ಬದಲಾಗಿ ಬ್ಲೋವರ (Blower) ಬಳಸಿಕೊಳ್ಳುತ್ತಿರುವರು. ತಿದಿ ಇದ್ದ ಮನೆಯ ಮುಂದಿನ ಅಂಕಣವೇ ಕಮ್ಮಾರ ಶಾಲೆ.

ಕಂಬಾರ ಈ ಎಲ್ಲ ಉಪಕರಣಗಳ ಸಹಾಯದಿಂದ ಮುಖ್ಯವಾಗಿ ವ್ಯವಸಾಯಕ್ಕೆ, ಮನೆಯ ಬಳಕೆಗೆ ಹಾಗೂ ಇತರ ವೃತ್ತಿಯವರಿಗೆ ಉಪಯುಕ್ತವಾದ ಕಬ್ಬಿಣ ಸಾಧನವನ್ನು ಸಿದ್ಧ ಮಾಡಿಕೊಡುವನು. ಒಕ್ಕಲುತನಕ್ಕೆ ಬೇಕಾಗುವ ಚಕ್ಕಡಿಯ ಹಾರಿ, ಕೀಲು, ಗುಮ್ ಕಟ್ಟುಗಳನ್ನು ಹೊಲದ ಕೆಲಸಕ್ಕೆ ಬೇಕಾಗುವ ಪಾಳು, ಕುಡಾ, ಕೂರಿಗೆಯ ಹೊಂಬಲದುದಿ, ಕುಡಗೋಲು, ಕುರುಪಿ, ಗುದ್ದಲಿ, ಬಾಯ್‌ಗುದ್ದಲಿ, ಸಲಿಕೆ, ಕೊಡಲಿ, ಟಿಕಾವಗಳನ್ನು; ಬೆಲ್ಲದ ಗಾಣಕ್ಕೆ ಬೇಕಾಗುವ ಘಮೆ, ಚಾಣಗಿ (ಸಾಣಗಿ). ಗಂಗಾಳ, ಹೌದುಗಳನ್ನು, ಮಟ್ಟಿಗೆ ಬೇಕಾಗುವ ಬಳೆ ಹಾಗೂ ಎತ್ತಿನ ಕಾಲಿಗೆ ಬೇಕಾಗುವ ನಾಲುಗಳನ್ನು ಮಾಡಿ– ಕೊಡುತ್ತಾನೆ. ಬಂಡಿಯ ಗಾಲಿಗೆ ಹಳಿಯನ್ನು ಬಿಗಿದು ಕೊಡುತ್ತಾನೆ.

ವ್ಯವಸಾಯಕ್ಕೆ ಬೇಕಾಗುವ ಸಲಕರಣೆಗಳನ್ನಲ್ಲದೆ ಬಡಿಗತನಕ್ಕೆ ಬೇಕಾಗುವ ಬಾಚಿ, ಉಳಿ, ಗುಡುಕಿ ಉಳಿ (ರಂಧ್ರ ತಗೆಯಲು), ನೀಲವಾರ ಅಲಗುಗಳನ್ನು, ಅಕ್ಕಸಾಲಿಗಳಿಗೆ ಬೇಕಾಗುವ ಇಕ್ಕಳ, ಸುತಗಿ ಐರಾಸ, ಕಾನಸ್, ಚಿಮಟಿಗಳನ್ನು, ಕ್ಷೌರಿಕರಿಗೆ ಬೇಕಾಗುವ ಕತ್ತಿ, ಕತ್ತಿರಿಗಳನ್ನು ಸಮಗಾರನಿಗೆ ಬೇಕಾಗುವ ರ‍್ಯಾಪಿ, ಅರಿ (ತೊಗಲು ಜಜ್ಜಲು), ಡಬ್ಬಣದುಳಿಗಳನ್ನು, ಮನೆಬಳಕೆಗೆ ಬೇಕಾಗುವ ಊದುಗೋಳಿ, ಕೀಲಿ, ಈಳಗಿ, ಕಡತಾರ, ಹಾರಿ, ಒನಕೆಯ ಬಳಿ, ಇಕ್ಕಳ, ತವಿ, ಚಿಮಟಾ, ಚಿಲಕ, ಕೊಂಡಿ ಇವೇ ಮೊದಲಾದವುಗಳನ್ನು ಮಾಡಿ ಕೊಡುವನು.

ಯುದ್ಧದಲ್ಲಿ ಹೋರಾಡಲುಬೇಕಾದ ಖಡ್ಗ, ಕತ್ತಿ, ಕಠಾರಿ, ಭರ್ಚಿ, ಈಟಿ, ಭಲ್ಯ, ಪರೀಘ, ಭಿಂಡಿವಾಳ, ಶಕ್ತಿ, ಮೊದಲಾದ ಆಯುಧಗಳನ್ನು ರಕ್ಷಣೆಗೆ ಬೇಕಾಗುವ ರಾವುತರ ಎದೆಗವಚ, ಶಿರಸ್ತ್ರಾಣಗಳನ್ನು, ಅಶ್ವಗಳಿಗೆ ತೊಡಿಸುತ್ತಿದ್ದ ಕವಚ, ಲೋಹವಕ್ಕರೆ, ಕಡಿವಾಣ, ಆನೆಯ ಕಾಲಿಗೆ ಕಟ್ಟುವ ಸರಪಣಿ ಇವೇ ಮೊದಲಾದವುಗಳಿಗೆ ಕಂಬಾರನನ್ನು ಅವಲಂಬಿಸಬೇಕಾಗುತ್ತಿತ್ತು. 'ಕಮ್ಮರನಂಬು ಕಮ್ಮಂಗೆ' ಎಂಬ ಗಾದೆಯೂ ಕಂಬಾರರು ಬಾಣಗಳನ್ನು ತಯಾರಿಸುತ್ತಿದ್ದರು ಎನ್ನುವದಕ್ಕೆ ಒಂದು ನಿದರ್ಶನವಾಗಿದೆ.

ಹಿಂದೆ ಹೇಳಿದಂತೆ ಇದು ಉಳಿದ ಪಂಚಾಳರ ವೃತ್ತಿಯಂತೆ ಕೌಶಲವಂತೂ ಇದ್ದೇ ಇದೆ ಎಂಬುದನ್ನು ಮರೆಯಲಾಗದು; ಮೇಲಾಗಿ ಈ ವೃತ್ತಿ ತನ್ನದೇ ಆದ ರಹಸ್ಯವನ್ನು ಉಳಿಸಿಕೊಂಡು ಬಂದಿದೆ. ಕಬ್ಬಿಣವನ್ನು ಕಾಸುವಲ್ಲಿ ಉದ್ದೇಶಿತ ಆಕಾರಕ್ಕೆ ಬರುವಂತೆ ಪೆಟ್ಟು ಹಾಕುವಲ್ಲಿ, ಅರಣದಿಂದ ತಿಕ್ಕಿ ಕುಡುಗೋಲು ಕುರುಪಿಗಳಂಥ ಉಪಕರಣಗಳನ್ನು ಹರಿತಗೊಳಿಸುವಲ್ಲಿ ಕಾದ ಉಪಕರಣಗಳಿಗೆ ನೀರುಣಿಸುವಲ್ಲಿ ಆತನ ಜಾಣ್ಮೆ ಅಡಿಗಿರುವದು. ಕಾಯ್ದ ಕಬ್ಬಿಣವು ಉಪಕರಣದ ಆಕಾರ ತಾಳಿದಾಗ ಹೆಚ್ಚಿಗೆ ನೀರುಣಿಸಿದರೆ ಬಿರುಸುಗೊಂಡು, ಬಳಸುವಾಗ ಪೆಟ್ಟು ತಗಲಿದರೆ ಮುರಿದು ಹೋಗುವದು. ನೀರುಣಿಸುವದು ಕಡಿಮೆಯಾದರೆ ಮೃದುಗೊಂಡು ಮಣಿದು ಹೋಗುವುದು. ಆದ್ದರಿಂದ ಕಾದ ಆಯುಧವು ನೀಲಿವರ್ಣಕ್ಕೆ ತಿರುಗುವಂತೆ ಮಾತ್ರ ನೀರುಣಿಸಬೇಕಾಗುತ್ತದೆ. ಹೆಚ್ಚು ನೀರುಂಡು ಬಿಳಿಯ ವರ್ಣಕ್ಕೆ ತಿರುಗಿದರೆ, ಇಲ್ಲವೆ ಬಡಿಯುತ್ತಿದ್ದಂತಯೇ ಆರಿದರೆ ಮತ್ತೊಮ್ಮೆ ಕಾಯಿಸಬೇಕಾಗುವದು. ಈ ನೀರುಣಿಸುವಲ್ಲಿಯೇ ವಿಶೇಷ ರಹಸ್ಯವಡಗಿರುವದು. ಇದಕ್ಕೆ ಸಾಕಷ್ಟು ಪಳಗಬೇಕಾಗುತ್ತದೆ. ಅಂತೆಯೇ ಇದು ವಂಶಪರಂಪರೆಯಾಗಿ ನಡೆದುಕೊಂಡು ಬಂದ, ಅದರ ರಹಸ್ಯವನ್ನು ಕಾಪಾಡಿಕೊಂಡು ಬಂದ ವೃತ್ತಿಯಾಗಿದೆ.

ಚಕ್ಕಡಿಯ ಗಾಲಿಗೆ ಹಳಿ ಬಿಗಿಯಬೇಕಾದಾಗ ಗಾಲಿಯ ಚಕ್ರಕ್ಕೆ ಸರಿ ಹೋಗುವಂತೆ ಕಬ್ಬಿಣದ ಪಟ್ಟಿಯನ್ನು ಮೊದಲು ವರ್ತುಲಗೊಳಿಸಿ, ಅದನ್ನು ನೆಲದ ಮೇಲಿಟ್ಟು ಅದರ ಸುತ್ತಲೂ ಕುಳ್ಳನ್ನು ಒಟ್ಟಿ ಚೆನ್ನಾಗಿ ಕಾಸುವನು. ಅದು ಕಾದು ಪ್ರಸರ– ಣಗೊಂಡ ಮೇಲೆ ಅದನ್ನು ಮೂರು ನಾಲ್ಕು ಜನರು ಇಕ್ಕಳದಿಂದ ಎತ್ತಿತಂದು, ಮಲಗಿಸಿದ ಚಕ್ಕಡಿಯ ಕಟ್ಟಿಗೆಯ ಗಾಲಿಗೆ ಸರಿಯಾಗಿ ಜೋಡಿಸುವರು. ಆಮೇಲೆ ಕಂಬಾರ ಅದು ನೀಲಿವರ್ಣಕ್ಕೆ ತಿರುಗುವಂತೆ ಹದವಾಗಿ ನೀರುಣಿಸುವನು. ಆಗ ಅದು ಆಕುಂಚನಗೊಂಡು ಚಕ್ರಕ್ಕೆ ಬಿಗಿಯಾಗಿ ಅಂಟಿಕೊಳ್ಳುವುದು.

ಕಂಬಾರರು ತಮ್ಮ ಉಪಜೀವನಕ್ಕೆ ಆಯವನ್ನು ಅವಲಂಬಿಸಿದವರು; ಅಂದರೆ ವ್ಯವಸಾಯಕ್ಕೆ ಬೇಕಾಗುವ ಎಲ್ಲಬಗೆಯ ಕಬ್ಬಿಣದ ಉಪಕರಣಗಳನ್ನು ತಯಾರಿಸಿಕೊಟ್ಟು ಸುಗ್ಗಿಯ ಕಾಲದಲ್ಲಿ ಒಕ್ಕಲಿಗರಿಂದ ನಿಗದಿಪಡಿಸಿದ ಬೆಳೆಯ ಒಂದು ಭಾಗವನ್ನು ಪ್ರತಿ ಫಲವಾಗಿ ಪಡೆಯುವರು. ಒಕ್ಕಲುತನಕ್ಕೆ ಕಂಬಾರನ ವೃತ್ತಿ ಹಾಗೂ ಆತನ ಸಹಕಾರ ಅತ್ಯಗತ್ಯ.

ಹೈದ್ರಾಬಾದ ಕರ್ನಾಟಕದ ಒಂದು ಸಾಧಾರಣ ಹಳ್ಳಿಯಲ್ಲಿಯೂ ಇಂದಿಗೂ ಮೂರು–ನಾಲ್ಕು ಕಂಬಾರರ ಮನೆತನಗಳು ಇದ್ದೇ ಇವೆ. ಸಣ್ಣ ಹಳ್ಳಿಯವರು ಮಾತ್ರ ತಮ್ಮ ಪಕ್ಕದ ಹಳ್ಳಿಯ ಕಮ್ಮಾರರಿಂದ ಸಾಮಾನುಗಳನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಅಂಥವರು ವರುಷಕ್ಕೆ ಒಂದು ಸಲ ಆಯುಧವನ್ನಾದರೂ ಕೊಡಬಹುದು; ಇಲ್ಲವೆ ಕೂಲಿಯನ್ನಾದರೂ ಕೊಡಬಹುದು. ಹೀಗೆ ಹಳ್ಳಿಯಲ್ಲಿ ಕಮ್ಮಾರರು ಆರ್ಥಿಕವಾಗಿ ಸಾಕಷ್ಟು ನೆಮ್ಮದಿಯ ಜೀವನವನ್ನು ನಡೆಸುತ್ತ ಬಂದಿದ್ದಾರೆ. *(ಎಸ್‌ಎಸ್‌ಕೆ)*

ಕಂಬಿ: ಶ್ರೀಶೈಲ ಮಲ್ಲಿಕಾರ್ಜುನನ ಹೆಸರಿನಲ್ಲಿರುವ ಒಂದು ಸಂಪ್ರದಾಯ. ಶೈವ ಸಂಸ್ಕೃತಿಯ ಪ್ರತೀಕ. ಇದಕ್ಕೆ 'ಕಾವಡಿ ಹೊರುವುದು' ಎಂದು ಕರೆಯುತ್ತಾರೆ. ಹೈದ್ರಾಬಾದ ಕರ್ನಾಟಕ ಪ್ರದೇಶದ ಅನೇಕ ಹಳ್ಳಿಗಳಲ್ಲಿ ಕಂಬಿ ಹೊರುವ ಅಯ್ಯಗಳು ದೊರೆಯುತ್ತಾರೆ. ಯುಗಾದಿಯ ಹಬ್ಬದಂದು ಶ್ರೀಶೈಲ ಪರ್ವತದಲ್ಲಿ ಇವರ ದೊಡ್ಡ ಜಾತ್ರೆಯೇ ನೆರೆದು, ಅಲ್ಲಲ್ಲಿ

ವಾಸಿಸಿರುವ ಕಂಬಿಯವರು ಈ ದಿನ ಇಲ್ಲಿ ಸಮಾವೇಶಗೊಂಡಿರುತ್ತಾರೆ. ತಮ್ಮ ಭಕ್ತಿ ಸೇವೆಯನ್ನು ಸಲ್ಲಿಸುತ್ತಾರೆ. ನಾಗರಿಕತೆಯ ಸೌಲಭ್ಯವಿರದ ಪ್ರಾಚೀನ ಕಾಲದಲ್ಲಿ ನೂರಿನ್ನೂರು ಮೈಲುಗಳವರೆಗೆ ಇವರು ನಡೆದುಕೊಂಡೇ ಹೋಗಿಬರಬೇಕಿತ್ತು. ದೂರ ಪ್ರಯಾಣದ ಆಯಾಸ ಕಳೆಯಲು, ದಾರಿ ಸಾಗಲು ಕಂಬಿ ಹಾಡುಗಳನ್ನು ಇವರು ಬಳಕೆಗೆ ತಂದಂತಿದೆ.

ಮುಮ್ಮೇಳ–ಹಿಮ್ಮೇಳಗಳೊಂದಿಗೆ ದಮ್ಮಡಿ, ತಾಳ ಮುಂತಾದ ವಾದ್ಯಗಳ ಹಿನ್ನೆಲೆಯಲ್ಲಿ ರಾಗಬದ್ಧವಾಗಿ ಹಾಡುಗಳನ್ನು ಹಾಡುತ್ತ, ಕುಣಿಯುತ್ತ, ಶ್ರೀಶೈಲದ ಕಡೆಗೆ ಸಾಗುವರು. ಭಾರತೀಯರ ಪ್ರಾಚೀನ ದೇವಾಲಯ ಹಾಗೂ ಪಂಚಪೀಠಗಳಲ್ಲಿ ಒಂದಾದ ಶ್ರೀಶೈಲ ಮಲ್ಲಿಕಾರ್ಜುನನ ದರ್ಶನ ಪಡೆಯುವರು. ಚೌರಮ್ಮ, ಹೇಮರಡ್ಡಿ ಮಲ್ಲಮ್ಮ, ನಂದಿಕೊಳ್ಳ, ಭೀಮನಕೊಳ್ಳ, ಅಡಿಕೇಶ್ವರ, ಕದಳಿವನ ಮುಂತಾದ ಪವಿತ್ರ ಸ್ಥಳಗಳಿಗೆ ಭೆಟ್ಟಿಯಿತ್ತು ಪೂಜಿಸುವರು. ಇಲ್ಲಿಯೂ ಕಂಬಿ ಹಾಡುಗಳನ್ನು ಹಾಡುತ್ತಲೇ ಸುತ್ತುವರಿಯುವರು. ಪಾತಾಳ ಗಂಗೆಗೆ ಹೋಗಿ ನೀರು ಮುಟ್ಟಿ ಪುನೀತರಾಗುವರು. ಜೀರ್ಣವಾದ ಕಂಬಿಗಳನ್ನು ಪಾತಾಳ ಗಂಗೆಯಲ್ಲಿ ಬಿಟ್ಟು ಹೊಸ ಕಂಬಿಗಳನ್ನು ಖರೀದಿಸುವರು. ಊರಿನಿಂದ ಬರುವಾಗ 'ಗಿರಿಮಲ್ಲಯ್ಯನಿಗಾಗಿ ಕೊಟ್ಟ ಭಕ್ತರ ಕಾಣಿಕೆಗಳನ್ನು ಅರ್ಪಿಸುವರು. ತಮ್ಮ ಶಿಷ್ಯರಿಗೆ 'ಬಿರುದಾವಳಿ'ಗಳನ್ನು ಹಾಕುವರು. ಅವರ ಮನೆಯವರಿಗೆಲ್ಲ ಆಯುರಾರೋಗ್ಯ ನೀಡಲು ದೇವರನ್ನು ಪ್ರಾರ್ಥಿಸುತ್ತ ಹರಕೆ ನೀಡುವರು.

ಸಾಗವಾನಿ (ತೇಗ) ಮರದ ಉದ್ದನೆಯ ಕಟ್ಟಿಗೆಗೆ 'ಕಂಬಿ' ಎಂದು ಹೆಸರು. ಶ್ರೀಶೈಲ ಗುಡ್ಡದಲ್ಲಿ ಬೆಳೆದ ಈ ಮರಗಳನ್ನು ಕಡಿದು ಕಂಬಿಯ ರೂಪಕೊಟ್ಟು ಮಾರಾಟ ಮಾಡುವರು. ಅದರ ಮೇಲೆ ವಿವಿಧ ಕುಸುರು ಕಲೆಗಳನ್ನು ಕೆತ್ತಿರುವರು. ಮಲ್ಲಿಕಾರ್ಜುನನ ಸಂಕೇತವೇ ಇದು ಎಂದು ಭಾವಿಸಿ, ಕಂಬಿ ಅಯ್ಯಗಳು ಇದನ್ನು ಭಕ್ತಿಯಿಂದ ಪಡೆಯುವರು. ಶ್ರೀಶೈಲದ ಹೊರತು ಇವು ಬೇರೆ ಕಡೆಗೆ ದೊರೆಯಲಾರವು. ಈಗಲೂ ಗ್ರಾಮದೇವತೆಗಳ ಜಾತ್ರೋತ್ಸವದಲ್ಲಿ ಮೆರವಣಿಗೆ, ಆಟ ಕಲೆಗೆ ಬಳಸುವ 'ನಂದಿಕೋಲು'ಗಳನ್ನು ಜನಪದರು ಇಲ್ಲಿಂದಲೇ ತೆಗೆದುಕೊಂಡು ಹೋಗುವರು. ಕಂಬಿಯ ಕಟ್ಟಿಗೆಗೆ ಕಾವಿಬಣ್ಣದ 'ಧಟ್ಟಿ' ಹೊದಿಸುವರು. ಇದರ ಎರಡೂ ತುದಿಗಳಿಗೆ ಬೆಳ್ಳಿಯ ಬಸವಣ್ಣನ ಮೂರ್ತಿ, ನಡುವೆ ಮಲ್ಲಿಕಾರ್ಜುನನ ಮೂರ್ತಿ ಜೋಡಿಸಿರುತ್ತಾರೆ. ಅವರವರ ಅಭಿರುಚಿಗೆ ತಕ್ಕಂತೆ ವಿವಿಧ ರೀತಿಯ ಅಲಂಕಾರ ಮಾಡಿ ಕಂಬಿಯ ಸೌಂದರ್ಯವನ್ನು ಹೆಚ್ಚಿಸುತ್ತಾರೆ. ಇದನ್ನು ಹೊರುವ ಅಯ್ಯಗಳು ನೀರು ತುಂಬಿದ ಮಗಿ, ಜೋಳಿಗೆಗಳಲ್ಲದೆ ಹಾದಿ ಪ್ರಯಾಣಕ್ಕೆ ಬೇಕಾಗುವ ತಮ್ಮೆಲ್ಲ ವಸ್ತುಗಳನ್ನು ಕಂಬಿಗೆ ಜೋತು ಹಾಕಿರುತ್ತಾರೆ. ಹೆಚ್ಚಾಗಿ ಅವರು ಕಾವಿಯ ಬಣ್ಣದ ಬಟ್ಟೆಯನ್ನೆ ಧರಿಸಿರುತ್ತಾರೆ. ತಲೆ ಅಥವಾ ಭುಜದ ಮೇಲೆ ಇದನ್ನು ಹೊತ್ತಿರುತ್ತಾರೆ. ಪ್ರತಿ ವರ್ಷವೂ ಇವರು ಗಿರಿಗೆ ಹೋಗುವುದರಿಂದ ಪ್ರಯಾಣದಲ್ಲಿ ಯಾವ ತೊಂದರೆಯೂ ಬರಲಾರದೆಂದು ಭಾವಿಸಿ, ಅನೇಕ ಜನ ಅವರ ಜೊತೆಯಲ್ಲಿ ಗಿರಿಗೆ ಹೋಗುವರು. ಅಲ್ಲದೆ ಕಂಬಿ ಅಯ್ಯಗಳ ಜೊತೆ ಪ್ರಯಾಣ ಹೊರಟರೆ ಊಟದ ಪ್ರಶ್ನೆಯೂ ಬರಲಾರದು. ದಾ–ರಿಯಲ್ಲಿ ಬರುವ ಊರು ಜನ ಇವರನ್ನು ಸ್ವಾಗತಿಸಿ, ಭೋಜನ ಮಾಡಿಸಿ, ದಕ್ಷಿಣೆ ಕೊಡುವರು.

ಕಂಬಿ ಹೊರುವುದು ಹೆಚ್ಚಾಗಿ ವಂಶಪಾರಂಪರ್ಯ ಪದ್ಧತಿಯಾಗಿ ಬೆಳೆಸಿಕೊಂಡು ಬಂದಂತಿದೆ. ತಂದೆ ಮುಪ್ಪಾವಸ್ಥೆಗೆ ಬಂದಾಗ ಮಗ ಅದನ್ನು ಹೊರಲು ಸಿದ್ಧನಾಗುತ್ತಾನೆ. ಕಂಬಿ ಸಂಪ್ರದಾಯ ಮು–ರಿಯದೆ ಮುಂದುವರೆಸಿಕೊಂಡು ಬರುತ್ತಾನೆ. ಶ್ರೀಶೈಲದಿಂದ ತಿರುಗಿ ಬರುವಾಗ ಅವರು ಅಲ್ಲಿಯ ಪ್ರಸಿದ್ಧ ಬಿದರಿನ ಬುಟ್ಟಿ–ಮೊರಗಳನ್ನು ಗಿರಿಉಂಡಿ, ಹಿಪ್ಪಿಹೂ, ಪಾತಾಳ ಗಂಗೆಯ ತೀರ್ಥಗಿಂಡಿ ಕಾಶಿದಾರ, ಕುಂಕುಮ ಮುಂತಾದವುಗಳನ್ನು ಕಂಬಿಗೆ ಜೋತು ಹಾಕಿಕೊಂಡು ತಮ್ಮೂರಿಗೆ ಹಿಂತಿರುಗುವರು. ತಮ್ಮ ಭಕ್ತರಿಗೆ ಮಲ್ಲಿಕಾರ್ಜುನನ ಪ್ರಸಾದ ರೂಪದಲ್ಲಿ ಇವುಗಳನ್ನು ಕೊಡುವರು.

(ಜಿ.ಪಿ.ಪಿ)

ಕಕ್ಕಯ್ಯ ಮಂದಿರ: ಯಾದಗಿರ ಜಿಲ್ಲೆ ಸುರಪುರ ತಾಲ್ಲೂಕಿನ ಐತಿಹಾಸಿಕ ಗ್ರಾಮ. ಇಲ್ಲಿಯ ಕಕ್ಕಯ್ಯನ ಗುಡಿಯ ಮೊದಲ ಹೆಸರು 'ದೇವಾನಾಂ ಪ್ರಿಯ ತ್ರೀಭುವನಮಲ್ಲ' ಎಂದು ಇತ್ತೆಂದು ಪುರಾತನ ಇತಿಹಾಸದಿಂದ ತಿಳಿದು ಬರುತ್ತದೆ. ಫಲ ಸಂತಾನಕ್ಕೋಸ್ಕರ ದಂಪತಿಗಳು ಈ ದೇವಸ್ಥಾನವನ್ನು ಅಶೋಕ ಚಕ್ರವರ್ತಿ ಕಾಲದಲ್ಲಿ ನಿರ್ಮಿಸಿದರೆಂದು ಹೇಳಲಾಗುತ್ತದೆ.

ಕಾಶೀ ಪಂಡಿತ ರೇಣುಕಾಚಾರ್ಯ ಎಂಬುವರು ಇಲ್ಲಿ ಅರ್ಚಕರಾಗಿದ್ದರಂತೆ. ಇವರಿಂದ ಇಲ್ಲಿಯ ಈಶ್ವರ ಲಿಂಗಕ್ಕೆ ದಿನಕ್ಕೆ ಮೂರು ಸಲ ಪಂಚಾಮೃತ ಅಭಿಷೇಕ ನೆರವೇರಿಸುತ್ತಿದ್ದರು. ಆ ಕಾಲದಲ್ಲಿ ಈ ದೇವಸ್ಥಾನಕ್ಕೆ ನಾಲ್ಕು ದಿಕ್ಕಿಗೆ 16 ಎಕರೆಗಳಂತೆ ಒಟ್ಟು 64 ಎಕರೆ ಇನಾಮು ಜಮೀನು ಕೂಡ ನೀಡಿ, ದೇವಸ್ಥಾನದ ಯಾವುದೇ ಕಾರ್ಯಕ್ಕೆ ಯಾವುದೇ ಕಾಲದಲ್ಲಿ ವಿಘ್ನಬಾರದಂತೆ ವ್ಯವಸ್ಥೆ ಮಾಡಲಾಗಿದ್ದಿತು.

ದೇವಸ್ಥಾನ ಹಿಂದೆ ಸುಂದರವಾದ ಬಾವಿ, ಪಕ್ಕದಲ್ಲಿ ಎಲ್ಲಮ್ಮನ ಕೊಳ್ಳ ಎಂದು ಕರೆಯುವ ಸರೋವರ ಇತ್ತು. ಆ ಸರೋವರದಲ್ಲಿ ಕಕ್ಕರ ಎಂಬ ಪಕ್ಷಿ ವಾಸವಾಗಿತ್ತು. ಇದರಿಂದಾಗಿಯೇ ಕಕ್ಕಯ್ಯನ ಗುಡಿ ಎಂದು ಈ ದೇವಸ್ಥಾನಕ್ಕೆ ಹೆಸರು ಬರಲು ಕಾರಣವೆಂದು ಹೇಳಲಾಗುತ್ತದೆ. ಬಸವಣ್ಣನವರ ಕಾಲದಲ್ಲಿ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ, ಕಲ್ಯಾಣದಿಂದ 63 ಶಿವಶರಣರು ಚದುರಿ ಹೋದರು. ಅವರಲ್ಲಿ ಡೋಹರ ಕಕ್ಕಯ್ಯ ಎಂಬ ಶರಣ ಈ ದೇವಸ್ಥಾನಕ್ಕೆ ಬಂದು ನೆಲೆಸಿ, ಆಶ್ರಮ ಪಡೆದಿದ್ದ. ಆದ್ದರಿಂದ ಇದಕ್ಕೆ ಕಕ್ಕಯ್ಯನ ಗುಡಿ ಎಂಬ ಹೆಸರು ಬಂದಿದೆ ಎಂದೂ ಹೇಳಲಾಗುತ್ತದೆ.

ಈ ದೇವಸ್ಥಾನದ ಬಲಗಡೆ ಒಂದು ಈಶ್ವರ ಲಿಂಗ. ಲಿಂಗದ ಎದುರುಗಡೆ ಬಸವಣ್ಣನವರ ಮೂರ್ತಿ, ನಾಲ್ಕು ಸುಂದರವಾದ ಕೆತ್ತನೆಯ ಕಲ್ಲಿನ ಕಂಬಗಳು. ಕಂಬಗಳಲ್ಲಿ ಈ ದೇವಸ್ಥಾನದ ಇತಿಹಾಸದ ಬಗ್ಗೆ ಕೆತ್ತಿದ ಶಿಲಾ ಲಿಪಿಗಳು ಹಾಗೂ ಈ ಗುಡಿ ಕಟ್ಟಿಸಿದ ಹಣಮಂತಿ ದಂಪತಿ ದಾನಿಗಳ ಚಿತ್ರ ಕಂಡು ಬರುತ್ತದೆ. ದೇವಸ್ಥಾನದ ಹಿಂದೆ ಅತ್ಯಂತ ಶುದ್ಧವಾದ ನೀರಿನಿಂದಿದ್ದ ಬಾವಿ ಈಗ ಹಾಳುಬಿದ್ದು ನೀರಿಲ್ಲದೆ ಬತ್ತಿಹೋಗಿದೆ. ದೇವಸ್ಥಾನದ ಆಸ್ತಿ 64 ಎಕರೆಗಳು ಎಂದು ಪೂರ್ವಕಾಲದ ಇತಿಹಾಸದಲ್ಲಿ ಇದ್ದು,

ಈಗ ಉಳಿದ ಎಲ್ಲಾ ಜಾಗದಲ್ಲಿ ಕಕ್ಕೇರಾ ಪಟ್ಟಣದ ಮನೆಗಳು ಅನೇಕ ವರ್ಷಗಳಿಂದ ತಲೆ ಎತ್ತಿ ನಿಂತಿವೆ. ಹಿಂದೆ ಈ ದೇವಸ್ಥಾನದ ಪಕ್ಕದಲ್ಲಿ ಸರೋವರ ಇದ್ದ ಬಗ್ಗೆ ಈಗಲೂ ಕುರುಹು ಸಿಗುತ್ತದೆ. ಈ ಭಾಗದ ಭೂಮಿಯನ್ನು ಒಂದು ಆಳು ತೋಡಿದರೆ ಒಳಭಾಗದಲ್ಲಿ ಬರೀ ಉಸುಕು ಮಣ್ಣು ಸಿಗುತ್ತದೆ. ಇನ್ನೊಂದು ವಿಶೇಷವೆಂದರೆ ಕಕ್ಕೇರಾ ಸಮೀಪದ ದೇವಪೂರ ಗ್ರಾಮದಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನ ಹಾಗೂ ಕಕ್ಕೇರಾದ ಕಕ್ಕಯ್ಯನ ಗುಡಿಗಳು ಎರಡೂ ಒಂದೇ ಮಾದರಿಯಲ್ಲಿ ನಿರ್ಮಿಸಿರುವದು. ಈ ಎರಡು ದೇವಸ್ಥಾನಗಳನ್ನೂ ಒಂದೇ ಕಾಲದಲ್ಲಿ ಕಟ್ಟಿಸಿರುವ ಸಾಧ್ಯತೆಗಳಿವೆ. ಕಕ್ಕೇರಾದ ಅತ್ಯಂತ ಪುರಾತನ ದೇವಸ್ಥಾನ ಇದಾಗಿದ್ದು, ಪೂರ್ವಕಾಲದಿಂದಲೂ ಈ ದೇವಸ್ಥಾನದ ಪೂಜಾದಿಗಳು ನಿಯಮಿತವಾಗಿ ನಡೆದು ಬಂದಿದ್ದು, ಇತ್ತೀಚಿನ ಕೆಲವರ್ಷಗಳ ಹಿಂದಿನವರೆಗೂ ಮುಂದುವರೆದಿತ್ತು. ಈಗ ಈ ದೇವಸ್ಥಾನಕ್ಕೆ ಅರ್ಚಕರು ಇಲ್ಲದೇ ಪೂಜಾದಿ ಕಾರ್ಯಗಳು ನಿಂತುಹೋಗಿದೆ. ಯಾವುದೇ ಪೂಜೆಗಳು ನಡೆಯದೇ ಈ ಐತಿಹಾಸಿಕ ಪ್ರಸಿದ್ಧ ದೇವಸ್ಥಾನ ಅವಸಾನದ ಅಂಚಿನಲ್ಲಿದೆ. *(ಎಂಎಸ್‌ಕೆ)*

ಕಟ್ಟೆ ಸಂಗಾವಿ: ಜೇವರ್ಗಿ ತಾಲ್ಲೂಕಿನ ಈ ಊರು ಭೀಮಾ ನದಿ ಬಳಿ ಇದೆ. ಇಲ್ಲಿ 12ನೆಯ ಶತಮಾನದ ಸಂಗಮೇಶ್ವರ ರಾಮಲಿಂಗ ಗುಡಿಯು ಪ್ರಾಚೀನ ದೇವಾಲಯವಾದರೂ ಶಿವಲಿಂಗ ಒಂದನ್ನು ಬಿಟ್ಟು ಅಲ್ಲಿ ಮತ್ತೇನಿಲ್ಲ. ಆಗಿ ಹುಣ್ಣಿಮೆ ಮತ್ತು ವಿಜಯ ದಶಮಿ ಸಂದರ್ಭದಲ್ಲಿ ಸಂಗಮೇಶ್ವರ ದೇವಾಲಯ ಜಾತ್ರೆ ಜರಗುತ್ತದೆ. ಇಲ್ಲಿ ಬಸವಣ್ಣ, ಹನುಮಂತ, ಮಹಾಲಕ್ಷ್ಮೀ ಎಲ್ಲಮ್ಮ ಮೊದಲಾದ ಪ್ರಮುಖ ಗುಡಿಗಳಿವೆ. ಜೊತೆಗೆ ಮಸೀದಿ ಹಾಗೂ ದರ್ಗಾಗಳು ಇವೆ. *(ಪಿಕೆಕೆ)*

ಕಡ: ಒಂದು ಬಗೆಯ ತುರ್ತಿನ ಸಾಲ. ಸಾಮಾನ್ಯವಾಗಿ ನೆರೆ ಹೊರೆಯವರು, ಸ್ನೇಹಿತರು ಹೀಗೆ ಅವಸರಕ್ಕೆ ಆಗುವವರಲ್ಲಿ ಕೆಲವು ದಿನಗಳಿಗಾಗಿ ಪಡೆಯುವ ವಸ್ತು. ಅಕ್ಕಪಕ್ಕದ ಮನೆಗಳಲ್ಲಿ 'ಕಡ' ವ್ಯವಹಾರ ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ಅಡಿಗೆ ಮಾಡುವಾಗ ಹೆಣ್ಣುಮಕ್ಕಳಿಗೆ ತುರ್ತಾಗಿ ಬೇಕಾಗುವ ಅಡಿಗೆ ಸಾಮಾನು ಉದಾ: ಹಿಟ್ಟು, ಅಕ್ಕಿ, ಬೇಳೆ, ಬೆಲ್ಲ, ಸಕ್ಕರೆ, ಚಹಾಪುಡಿ, ಉಳ್ಳಾಗಡ್ಡಿ, ಬೆಳ್ಳುಳ್ಳಿ, ಜೀರಗಿ, ಮೆಣಸು, ಉಪ್ಪು, ಖಾರ, ಎಣ್ಣೆ ಹೀಗೆ ಯಾವೊಂದು ವಸ್ತುವಿನ ಅಗತ್ಯತೆ ಉಂಟಾದಾಗ ಕೂಡಲೇ ಪಕ್ಕದ ಮನೆಗೆ ಹೋಗಿ ಸ್ವಲ್ಪ ಹಿಟ್ಟು 'ಕಡ' ಕೊಡಿ, ನಾಲ್ಕು ದಿನದ ನಂತರ ಕೊಡುತ್ತೇನೆ, ಇಲ್ಲ ನಾಳೆ ನಾಡಿದ್ದು ಕೊಡುತ್ತೇನೆ ಎಂದು ಹೇಳಿ ತರುವುದು ಹೆಚ್ಚು ರೂಢಿಯಲ್ಲಿದೆ. ಒಂದು ಬಟ್ಟಲಿನಿಂದ ಒಂದು ಸೇರಿನವರೆಗೆ ಮಾತ್ರ ಅದರ ಪರಿಮಿತಿ ಇರುತ್ತದೆ. ನಾಲ್ಕಾರು ಸೇರು ಅಕ್ಕಿ ಕಿಲೋಗಟ್ಟಲೇ ಬೇಳೆ, ಸಕ್ಕರೆ ಕೇಳಿದರೆ ಅದು ಸಿಗುವುದೂ ಇಲ್ಲ, ಅದಕ್ಕೆ 'ಕಡ' ಎಂದು ಕರೆಯುವುದೂ ಇಲ್ಲ. ಅದಕ್ಕೆ "ಖಂಡಗ ಉಣ್ಣೋರ ಮನಿಗಿ ಕಡ ಯಾರು ಕೊಟ್ಟಾರ" ಎಂಬ ಗಾದೆ ಹುಟ್ಟಿಕೊಂಡಿದೆ.

ವಸ್ತುವಿನಂತೆ ಹಣವನ್ನು 'ಕಡ' ಪಡೆಯುವುದಕ್ಕೆ 'ಮುಂಗಡ' ಎಂದು ಹೇಳುವರು. ಅದು ಹತ್ತಿಪ್ಪತ್ತು ರೂಪಾಯಿಯಿಂದ ಸಾವಿರದವರೆಗೂ ಆಗಿರಬಹುದು. ಈ ಹಣಕ್ಕೆ 'ಬಡ್ಡಿ' ಇರುವುದಿಲ್ಲ. ತಮ್ಮ ತಕ್ಷಣದ ಉಪಯೋಗಕ್ಕೆ ಪಡೆದು ವಾಯಿದೆಯಂತೆ ನಾಲ್ಕಾರು ದಿನಗಳಲ್ಲಿ ಹಿಂತಿರುಗಿಸಿದರೆ ಮುಂಗಡ ಹಿಂದೆ ಪಡೆದಂತೆ, ಹಿಂತಿರುಗಿಸದಿದ್ದರೆ ಅಂಥವರಿಗೆ ಮತ್ತೆ ಯಾರೂ 'ಕಡ' ಕೊಡುವುದಿಲ್ಲ. ಅದಕ್ಕೆಂತಲೇ "ಕಡ ಹುಟ್ಟಿ ಬಡವ ಕೆಟ್ಟ" ಎಂಬ ಗಾದೆ ಹುಟ್ಟಿಕೊಂಡಿದೆ. ಕಡ ಸಿಗುತ್ತದೆ ಅಂತ ತಂದು ತಂದು ಬಳಸಬಹುದು. ಆದರೆ ತೀರಿಸಲಿಕ್ಕಾಗದಿದ್ದರೆ ಕೊಟ್ಟವರ ಕಿರಿಕಿರಿ, ವ್ಯಂಗ್ಯದ ನುಡಿಗಳಿಂದ ಅವಮಾನವಾಗುವುದು ಖಂಡಿತ. ಅದಕ್ಕೆಂದೇ ಕಡ ಮುಂಗಡಗಳ ಕಾಲಾವಧಿ ಒಂದೆರಡು ದಿನಗಳಿಂದ ತಿಂಗಳಾದರೆ ಬಹಳ ಹೆಚ್ಚಾಯಿತು. ಪಡೆದು ಹಿಂತಿರುಗಿಸುವ ಪರಿಪಾಠವಿದ್ದಲ್ಲಿ 'ಕಡ' ಹಾಗೆ ಮುಂದುವರಿಯುತ್ತದೆ. "ಕಡ ಸಿಗೋದಾದರೆ ಹಡಗು ನನಗಿರಲಿ ಎಂಬ ಗಾದೆಯು ಕೊಡದೇ ಕಾರ್ಯ ಸಾಧಿಸುವ ಮನಸ್ಸಿನವರಿಗೆ ಸಿಗುವ ಸವಲತ್ತಿನ ಕುರಿತು ತಿಳಿಸುತ್ತದೆ.

ಸಾಲ ತೀರಿಸುವುದು ಆಗದಿದ್ದಲ್ಲಿ ಅವನು 'ಕಡ'ದ ಋಣದಲ್ಲಿ ಸಿಕ್ಕು ಬಿದ್ದಂತೆ ಆಗುತ್ತದೆ. 'ಸರ್ವಜ್ಞ'ನ 'ಸಾಲವನು ಕೊಂಬಾಗ' ವಚನದಂತೆ ಸಾಲ ಪಡೆದು ತೀರಿಸದಿದ್ದರೆ ಕಿಬ್ಬದಿಯ ಕೀಲು ಮುರಿಸಿಕೊಳ್ಳಬೇಕಾಗುತ್ತದೆಂಬ ಎಚ್ಚರಿಕೆ 'ಕಡ' (ಸಾಲ) ಪಡೆಯುವವರೆಗೆ ಇರಲೇಬೇಕು. *(ಸಿಜೆಎಂ)*

ಕಡಕೋಳ: ಜೇವರ್ಗಿ ತಾಲ್ಲೂಕಿನ ಯಡ್ರಾಮಿಯ ಚಿಮಣಗೇರಾ ಹೊಳೆಯ ಎಡದಂಡೆಯ ಮೇಲೆ ಇರುವ ಈ ಊರು ಧಾರ್ಮಿಕ ಕೇಂದ್ರವಾಗಿದೆ. ಕಡಕೋಳ ಮಡಿವಾಳಪ್ಪ ಶರಣಬಸವೇಶ್ವರರ ಸಮಕಾಲೀನರಾಗಿದ್ದು, ಅವರ ಪ್ರಭಾವಕ್ಕೆ ಒಳಗಾಗಿದ್ದರು. ಗುಲಬರ್ಗಾ ತಾಲ್ಲೂಕಿನ ಬಿದನೂರಿನಲ್ಲಿ ಜನಿಸಿದ ಕಡಕೋಳ ಮಡಿವಾಳಪ್ಪ ಕಡಕೋಳಕ್ಕೆ ಬಂದು ಅಲ್ಲಿಯೇ ನೆಲೆಸಿ, ಐಕ್ಯರಾಗಿರುವುದರಿಂದ ಇದಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಮಡಿವಾಳಪ್ಪನ ಜಾತ್ರೆಯು ಪ್ರತಿ ವರ್ಷ ಹೊಸ್ತಿಲ ಹುಣ್ಣಿಮೆಯಂದು ಇದು ಐದು ದಿನ ಅತ್ಯಂತ ವೈಭವದಿಂದ ಸತತವಾಗಿ ನಡೆಯುತ್ತಿದ್ದು, ರಥೋತ್ಸವವಿರುತ್ತದೆ. ಯಮನೂರಪ್ಪನ ದರ್ಗಾ ಇಲ್ಲಿದ್ದು ಪ್ರತಿ ವರ್ಷ ಉರುಸು ನಡೆಯುತ್ತದೆ. *(ಪಿಕೆಕೆ)*

ಕಡಕೋಳ ಮಡಿವಾಳಪ್ಪ: ಅನುಭಾವಿ ಕವಿ ವಚನಕಾರರು. ಬಿದನೂರಿನಲ್ಲಿ ಹುಟ್ಟಿ ಚಿಣಮಗೇರಿ ಗುಡ್ಡದಲ್ಲಿ ಬೆಳೆದು ಕಡಕೋಳದಲ್ಲಿ ಕಡೆಹಾಯ್ದ ಮಡಿವಾಳಪ್ಪನವರು ಹುಟ್ಟು ಹೋರಾಟಗಾರರು. ಇವರು ಬರೆದ ವಚನಗಳು "ನಿರುಪಮ ನಿರಾಳ ಮಹತ್ಪ್ರಭು ಮಹಾಂತಯೋಗಿ" ಎಂಬ ಅಂಕಿತದೊಂದಿಗೆ ರಚನೆ ಆಗಿವೆ. ಈ ವಚನಗಳು ಇನ್ನೂ ಸಂಶೋಧನೆಯಾಗಬೇಕು. ಪರಿಷ್ಕರಿಸಿ ಪ್ರಕಟಗೊಳ್ಳಬೇಕು. ಆಗ ಅವರ ವ್ಯಕ್ತಿತ್ವ ಇನ್ನೂ ನಿಚ್ಚಳವಾಗಿ ಕಾಣುತ್ತದೆ.

1850ರ ಸುಮಾರಿಗೆ ಜನ್ಮ ತಳೆದ ಇವರು ಕಲಬುರ್ಗಿ 'ಶರಣಬಸವ' ಶರಣರ ಸಮಕಾಲೀನರು. ಶರಣರು ಅರಳುಗುಂಡಿಗೆಯಲ್ಲಿ ಇರುವಾಗ ಇವರಿಗೆ ಮಹೇಶ್ವರ ದೀಕ್ಷೆಯಾಯಿತು. ಮಡಿವಾಳರು ಚಿಣಮಗೇರಿಯ ಗುಡ್ಡ, ಶ್ರೀಶೈಲದ ಕಮರಿಕೊಳ್ಳದಲ್ಲಿ ತಪಸ್ಸು ಮಾಡಿ ಕೊನೆಗೆ ಕಡಕೋಳಕ್ಕೆ ಆಗಮಿಸುತ್ತಾರೆ.

ಜೀವನದಲ್ಲಿ ಅನಂತ ಕಷ್ಟ ಕೋಟಲೆಗಳನ್ನು ಎದುರಿಸಿ ಬಂದ ಈ ಯೋಗಿವರನಿಗೆ ಆಧ್ಯಾತ್ಮ ಆಭರಣದಂತೆ ಕಂಗೊಳಿಸುತ್ತದೆ. ಅವರ ಸ್ವರ ವಚನಗಳ ಮಿಂಚು ಹೀಗಿದೆ: "ಅಲ್ಯಾಕೊ ಹುಡುಕುತಿ, ಇಕೊ ಇಲ್ಯಾದೊ ಮುಕುತಿ", "ಆವ ಭಯವು ಇನ್ನೇನೆಮಗ, ಮಾಯಾ ನಿರ್ಮಾಯನಾದವಗ", "ಧನವ ಗಳಿಸಬೇಕಿಂಥಾದ್ದು ಈ ಜನರಿಗೆ ತಿಳಿಯದಂಥಾದ್ದು", "ಚಿಂತಿ ಎಂಬುದು ಬಹಳ ಘನವಾಗಲಿ ಸಂತೋಷವೆಂಬುದು ತುಸು ಇಲ್ಲದೋಗಲಿ" ಮುಂತಾದ ತತ್ತ್ವಪದಗಳಲ್ಲಿ ಆಧ್ಯಾತ್ಮ ಲೋಕಾನುಭವ ಕೆನೆಗಟ್ಟಿ ನಿಂತಿದೆ. ಅವರ ಈ ಪದ್ಯಗಳನ್ನು ಹಾಡಿದಾಗ, ಕೇಳಿದಾಗ "ಮಡಿವಾಳನ ಗುಟ್ಟು ಮಹಾಂತನೇ ಬಲ್ಲ" ಎಂದು ಎನಿಸುತ್ತದೆ.

ಮಡಿವಾಳಪ್ಪನವರಿಗೆ ಖೈನೂರು ಕೃಷ್ಣಪ್ಪ, ಚೆನ್ನೂರು ಜಲಾಲಸಾಹೇಬ, ತೆಲಗು ಬಾಳ ರಾಮಪ್ಪ, ಕಹ್ಳೋಡ ಸಿದ್ಧಪ್ಪ ಮುಂತಾದವರು ಇವರ ಶಿಷ್ಯರಾಗಿದ್ದರು. ಇವರು ಸದಾ ಅವರೊಡನೆ ಇದ್ದು ಜನಜಾಗೃತಿ ಮಾಡುತ್ತಿದ್ದರು. ಇವರೆಲ್ಲರಿಗೂ ಕಡಕೋಳ ಮಡಿವಾಳಪ್ಪನವರು "ತನ್ನ ತಾ ತಿಳಿದ ಮೇಲೆ ಇನ್ನೇನಿನ್ನೇನಿನ್ನೇನೋ" ಎಂದು ಹೃದಯಂಗಮವಾಗಿ ಹೇಳುತ್ತಿದ್ದರು. ಅವರ ಈ ಧ್ವನಿ ತರಂಗ ಇಂದಿಗೂ ಸಕಲರ ಹೃದಯ ತರಂಗವನ್ನು ಅರಳಿಸುತ್ತದೆ.

(ಎಕೆಆರ್

ಕಡತಗಳು: ಪ್ರಾಚೀನ ಕರ್ನಾಟಕದ ಇತಿಹಾಸವನ್ನು ರಚಿಸಲು ನೆರವಾಗುವ ಆಕರ ಸಾಮಗ್ರಿಗಳು. ಇವು ನಾಲ್ಕು ಬಗೆಯಾಗಿವೆ ಎಂದು ವಿದ್ವಾಂಸರು ಗುರುತಿಸಿರುತ್ತಾರೆ. 1. ವಸ್ತು ಸಾಮಗ್ರಿ, 2. ಜ್ಞಾನಸಾಮಗ್ರಿ, 3. ಕ್ರಿಯಾ ಸಾಮಗ್ರಿ ಮತ್ತು 4. ಭಾಷಾ ಸಾಮಗ್ರಿ, ಇವುಗಳಲ್ಲಿ ವಸ್ತುವೇ ಇರಲಿ, ಜ್ಞಾನವೇ ಇರಲಿ, ಕ್ರಿಯೆಯೇ ಇರಲಿ ಈ ಮೂರನ್ನೂ ಪ್ರತಿನಿಧಿಸುವ ಭಾಷೆಯ ಪಾತ್ರ ಮುಖ್ಯವಾದುದು.

ಇಲ್ಲಿ ಭಾಷೆಯೇ ಒಂದು ಸಾಮಗ್ರಿಯಾಗುವುದು, ಭಾಷಾ ಮಾಧ್ಯಮದ 'ರಚನೆ'ಗಳು ಸಾಮಗ್ರಿಯಾಗುವುದು ಎಂಬ ಎರಡು ಬಗೆಗಳನ್ನು ಗುರುತಿಸಲಾಗುತ್ತದೆ. ಇವುಗಳಲ್ಲಿ ಎರಡನೆಯದಾದ 'ರಚನೆ'ಯೆನ್ನುವುದು ಮೌಖಿಕ ಮತ್ತು ಲಿಖಿತವೆಂದು ಎರಡು ತೆರನಾಗಿದೆ, ಮತ್ತೆ ಇವುಗಳಲ್ಲಿ ಸಾಹಿತ್ಯಿಕ ಸಾಮಗ್ರಿ ಮತ್ತು ದಾಖಲಾತ್ಮಿಕ ಸಾಮಗ್ರಿಯೆಂಬ ಎರಡು ಬಗೆಗಳನ್ನು ಗುರುತಿಸಲಾಗುತ್ತದೆ. ಕವಿಗಳ ಕೃತಿಗಳನ್ನು ಸಾಹಿತ್ಯಿಕ ಬಗೆಗೆ ಸೇರಿಸಿದರೆ, ದಾಖಲಾತ್ಮಕ ಬಗೆಯಲ್ಲಿ ಪ್ರಮುಖವಾಗಿ ಶಾಸನಗಳನ್ನು ಮತ್ತು ಗೌಣವಾಗಿ ಕಡತಗಳನ್ನು ಸೇರಿಸಬಹುದಾಗಿದೆ.

ಹಿಂದೆ ಮುದ್ರಣಮಾಧ್ಯಮ ಇಂದಿನಷ್ಟು ಅನುಕೂಲಕರ ಆಗಿರಲಿಲ್ಲ. ಆಗೆಲ್ಲ ತೆಳುವಾದ ಬಟ್ಟೆಯಂತದ್ದರ ಮೇಲೆ ಸೀಸದ ದೌತಿಯಲ್ಲಿ ಲೆಕ್ಕಣಿಕೆ (ಬಳಪ) ಹಿಡಿದು ಒಂದೊಂದು ಅಕ್ಷರಕ್ಕೂ ಒಮ್ಮೆ ಸೀಸದಲ್ಲಿ ಅದ್ದಿ ಅದ್ದಿ ಬರೆಯುವ ರೂಢಿ ಇತ್ತು. ಹಾಗೆ ಬರೆದ ಬಟ್ಟೆಯ ಹಾಳೆಗಳನ್ನು ಮಡಚಿ ಮೇಲೆ ಚಾರಕೋಲ ಪೇಸ್ಟ (Charcoal Paste) ಮೆತ್ತಿದ, ಬಟ್ಟೆ ಹೊದಿಕೆ ಹಾಕಿ ಜೋಪಾನವಾಗಿ ಇಡಲಾಗುತ್ತಿತ್ತು. ಇಂಥದ್ದಕ್ಕೆ "ಕಡತ" ಎಂದು ಹೇಳಲಾಗುತ್ತದೆ. (ಕಿಟೆಲ್ ನಿಘಂಟು)

ಕಡತದಲ್ಲಿ ಮುಖ್ಯವಾಗಿ ದಸ್ತಾವೇಜು, ಫರ್ಮಾನು, ನಾಮೆಗಳು (ರಾಜೇಂದ್ರ ನಾಮೆ ಇತ್ಯಾದಿ) ಕೈಫಿಯತ್ತುಗಳು ಕೈಫಿಯತ್ತಿನ ಮಾದರಿಯಲ್ಲಿಯೇ ಬಬೈರು (ರಾಮರಾಮನ ಬಬೈರು) ರಾಜವಂಶಾವಳಿಗಳು, ಜಾಗೀರನಾಮಾ, ಬರಖಾಸ್ತನಾಮಾ, ಲೆಕ್ಕಪತ್ರಗಳು ಬಿನ್ನವತ್ತಳೆಗಳು, ಪ್ರಶಸ್ತಿಪತ್ರ, ದಾನಪತ್ರ, ಆಸ್ತಿಪತ್ರ, ಪಹಣಿ ಜನ್ಮಕುಂಡಲಿ, ವಂಶಾವಳಿಗಳು ಇವುಗಳನ್ನೆಲ್ಲ ಸೇರಿಸಲಾಗುತ್ತದೆ.

ನ್ಯಾಯಶಾಸ್ತ್ರದಲ್ಲಿ ಅಥವಾ ವಾಣಿಜ್ಯದಲ್ಲಿ ಸಾಕ್ಷ್ಯವನ್ನು ಒದಗಿಸುವ ಪತ್ರಬರಹಗಳು; ಸರ್ಕಾರಕ್ಕೆ ಅಥವಾ ನ್ಯಾಯಸ್ಥಾನಕ್ಕೆ ಸಂಬಂಧಿಸಿದ ಕಾಗದಪತ್ರ ಅಥವಾ ದಸ್ತಾವೇಜನ್ನು ಕಡತದಲ್ಲಿ ತೆಗೆದುಕೊಳ್ಳಲಾಗುತ್ತದೆ. ಹೀಗಾಗಿ ಸಾಕ್ಷ್ಯಪೂರ್ವಕ ಸ್ಥಾಪಿಸುವಂತಹ, ದಾಖಲೆಗಳಿಂದ ರುಜುವಾತು ಪಡಿಸುವ ಅಥವಾ ಆಧಾರಗಳಿಂದ ಪ್ರಮಾಣೀಕರಿಸುವ ಕಾಗದಪತ್ರಗಳಿಗೆ 'ಕಡತ'ಗಳೆಂದು ಕರೆಯಲಾಗುತ್ತದೆ. ಉದಾ: ಕ್ರಿ.ಶ. 574ರಲ್ಲಿ ಕಾಶಿಮಹಾಪೀಠಕ್ಕೆ ಭೂದಾನ ಜಯನಂದ ದೇವನು ಮತ್ತು ಕ್ರಿ.ಶ. 635ರಲ್ಲಿ ನೇಪಾಳದ ಅರಸು ವಿಶ್ವಮಲ್ಲನು ಶ್ರೀ ಕಾಳಿಮಹಾಪೀಠಕ್ಕೆ ಭೂದಾನ ಮಾಡಿದ ದಾನಪತ್ರಗಳನ್ನು ಕಾಶಿ ಶ್ರೀಪೀಠದಲ್ಲಿ ಇಂದಿಗೂ ನೋಡಬಹುದಾಗಿದೆ. ಕ್ರಿ.ಶ. 1530ರಿಂದ 1668ರ ವರೆಗೆ ಭಾರತವನ್ನಾಳಿದ ಹುಮಾಯೂನ, ಅಕ್ಬರ, ಜಹಾಂಗೀರ, ಷಹಾಜಹಾನ, ಔರಂಗಜೇಬ ಮುಂತಾದ ಮೊಘಲ ಚಕ್ರವರ್ತಿಗಳು ಭೂದಾನ ಮಾಡಿದ ಫರ್ಮಾನುಗಳು ಶ್ರೀಪೀಠದಲ್ಲಿ ಇಂದಿಗೂ ಇವೆ.

ಸುಶಿಕ್ಷಿತರ ಮನೆಗಳಲ್ಲಿ ತಮ್ಮ ವಂಶಾವಳಿಯನ್ನು ಬರೆಯಿಸಿ ಇಡುವ ಪದ್ಧತಿಯಿತ್ತು. ಅನೇಕರ ಮನೆಗಳಲ್ಲಿ ಇಂದಿಗೂ ಅವರ ಹಿಂದಿನ ನಾಲ್ಕಾರು ತಲೆಮಾರಿನ ಹಿರಿಯರ ಹೆಸರುಗಳನ್ನುಳ್ಳ ವಂಶಾವಳಿ ಬರಹಗಳು ಕಾಣ ಸಿಗುತ್ತವೆ. ಊರಿನಲ್ಲಿ ಯಾರಾದರೂ ಸಾಧನೆಗಳನ್ನು, ಸಾಹಸದ ಕಾರ್ಯಸಾಧನೆಯನ್ನು ಕೈಗೊಂಡಿದ್ದರೆ ಅಂಥವರಿಗೆ ಪ್ರಶಸ್ತಿ ಪತ್ರಗಳನ್ನು ಬರೆಯಿಸುತ್ತಿದ್ದರು. ಧಾರ್ಮಿಕ ಗುರುಗಳು, ರಾಜಕೀಯ ನಾಯಕರು ಅಥವಾ ಊರ ಮುಖಂಡರಿಗೆ ತಮ್ಮ ಅಹವಾಲು ತಿಳಿಸಲು ಬರೆಸಿದ ಬರಹವು ಬಿನ್ನವತ್ತಳೆ ಎನಿಸಿಕೊಳ್ಳುತ್ತಿತ್ತು. ಇತ್ತೀಚೆಗೆ ಭೂ ಒತ್ತುವರಿ ಕಾರ್ಯವು ಮಂಡಳಿ ನೇಮಕಗೊಂಡು, ಕಾರ್ಯ ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕಡತಗಳಲ್ಲಿನ ಆಸ್ತಿಪತ್ರದ ದಾಖಲೆಗಳು ಮುಖ್ಯ ಆಕರಗಳಾಗಿ ಪರಿಣಮಿಸುತ್ತವೆ.

(ಸಿಜೆಎಂ)

ಕಡೆಯ ಕಲ್ಯಾಣ: ಬಸವಣ್ಣನವರು ಕಟ್ಟುತ್ತಾ ಹೋದ ಕಲ್ಯಾಣಗಳನ್ನು 'ಸಮಯ ಕಲ್ಯಾಣ, ಅಮರ ಕಲ್ಯಾಣ, ಧರ್ಮ ಕಲ್ಯಾಣ, ವಿಜಯ ಕಲ್ಯಾಣ ಮತ್ತು ಕಡೆಯ ಕಲ್ಯಾಣ' ಗಳೆಂದು ಎಂ.ಎಂ. ಕಲಬುರ್ಗಿಯವರು ಕರೆದಿದ್ದಾರೆ. ಚಿತ್ತಾಪುರ ತಾಲ್ಲೂಕಿನ ನಾಗಾವಿಯಲ್ಲಿ 'ಗುರು ಗುಂಡಬಸವ' ನು 'ಧರ್ಮ ಕಲ್ಯಾಣ' ಕಟ್ಟುತ್ತಾನೆ. ತರುವಾಯ ಹುಟ್ಟಿಕೊಂಡದ್ದೇ ಕಡೆಯ ಕಲ್ಯಾಣ.

'ಕಡೆಯ ಕಲ್ಯಾಣ' ವನ್ನು ಈಗ ಕೊಡೇಕಲ್ ಪ್ರದೇಶ ಎನ್ನಲಾಗುತ್ತದೆ. ಕೊಡೇಕಲ್ಲಿನ ಬಸವಣ್ಣನು ದಿಗ್ಗಿ ಸಂಗಮನಾಥನ ಶಿಷ್ಯ. ಅಂದಿನ ಕಾಲದಲ್ಲಿ ಈತನೊಬ್ಬ ಶ್ರೀಮಂತ ವ್ಯಾಪಾರಿ. 'ಬಣಜಿಗ' ನಾಗಿದ್ದ ಈತ ಮೊದಲು ಹಂಪೆಯಲ್ಲಿದ್ದ ಕೃಷ್ಣದೇವರಾಯನ ಸ್ನೇಹಿತನಾಗಿದ್ದ 'ಬಸವಣ್ಣ' ಅಲ್ಲಿ ವ್ಯಾಪಾರ ಮಾಡುತ್ತಿದ್ದ. ಒಂದು ದಿನ ಈತ ತನ್ನ ಅಂಗಡಿಯಲ್ಲಿ ಎಂದಿನಂತೆ ವ್ಯಾಪಾರ ಮಾಡುತ್ತಿದ್ದಾಗ, ಹಿಂದಿನಿಂದ ಗುರು ಸಂಗಮನಾಥ ಕಾಣಿಕೊಂಡು 'ಇದೇನು ಮಾಡುತ್ತಿರವಿ?' ನೀನು ಭೂಮಿಗೆ ಬಂದದ್ದು ಯಾಕೆ ಅನ್ನೋದನ್ನೇ ಮರೆತು ವ್ಯಾಪಾರದಲ್ಲಿ ಮುಳುಗಿದ್ದಿಯಾ? ಎಂದು ಕೇಳಿದರಂತೆ. ಆಗ ಅವನಿಗೆ ಎಚ್ಚರವಾಯಿತು. ಆಗ ಅವನು ಗುರುವಿನ ಜೊತೆಗೆ ಸುತ್ತಾಡಿ, ಬಸವನನಾಡಲ್ಲೆಲ್ಲಾ ಅಲೆದಾಡಿ, ಕೊಡೇಕಲ್ಲಿಗೆ ಬಂದು ನಿಲ್ಲುತ್ತಾನೆ.

ಕೊಡೇಕಲ್ ಬಸವಣ್ಣ, 12ನೆಯ ಶತಮಾನದ ಬಸವಣ್ಣನ ಅನುಯಾಯಿಯಾಗಿದ್ದರೂ ಸಹ, ಇವರಲ್ಲಿ ಯಾವುದೇ ಸೈದ್ಧಾಂತಿಕ ಬದ್ಧತೆ ಇಲ್ಲ. ಇವರದು ಒಂದು ತೆರನಾದ 'ನಾಥ' ಪರಂಪರೆ. ಆಂತರಿಕವಾಗಿ 'ಬಸವ ತತ್ವ' ಗಳನ್ನು ಒಪ್ಪಿಕೊಳ್ಳುವ ಇವರು ಬಹಿರಾಚರಣೆಗಳಿಂದ ಭಿನ್ನರಾಗುತ್ತಾರೆ. ಇವರು ಕಟ್ಟಿದ 'ಕಡೆಯ ಕಲ್ಯಾಣ' ಬಸವಣ್ಣನ ಕಲ್ಯಾಣವನ್ನೇ ನೆನಪಿಗೆ ತರುತ್ತದೆ. ಯಾಕಂದರೆ ಈ ಕಲ್ಯಾಣದಲ್ಲಿ 'ಮನುಷ್ಯ ಮಾನವರೆಲ್ಲರನ್ನೂ ಸಮಾನವಾಗಿ ಕಾಣುತ್ತಾರೆ. ಇವರ ಶಿಷ್ಯ, ಪ್ರಶಿಷ್ಯ ಪರಂಪರೆಯಲ್ಲಿ ಎಲ್ಲ ಜಾತಿಯ ಜನರಿದ್ದಾರೆ. ಇವರಿಗೆ ಯಾವುದೇ ಸೈದ್ಧಾಂತಿಕ ಬದ್ಧತೆಯಿಲ್ಲ. 'ಬಸವಣ್ಣನ ಸಮಯ ಕಲ್ಯಾಣದ ಮುಂದುವರೆದ ಇದನ್ನು 'ಕಡೆಯ ಕಲ್ಯಾಣ' ಎನ್ನಲಾಗಿದೆ. *(ಎಸ್‌ಎಸ್‌ವೈ)*

ಕಣಜ: ರಾಶಿ ಮಾಡಿದ ದವಸ ಧಾನ್ಯಗಳನ್ನು ಕೆಡದಂತೆ, ರಕ್ಷಿಸಿಡುವ ಗುಮ್ಮಿ. ನೆಲದ ಅಡಿಯಲ್ಲಿ ಕಟ್ಟಲಾಗುವ ಕಣಜವನ್ನು ಹಗೇವು ಎನ್ನುವ ವಾಡಿಕೆಯಿದೆ. ಜೋಳವನ್ನು ಹಗೇವುಗಳಲ್ಲಿ, ಭತ್ತ ಹಾಗೂ ಇತರ ಧಾನ್ಯಗಳನ್ನು ಕಣಜಗಳಲ್ಲಿ ಸಂಗ್ರಹಿಸಿಡುವ ಪದ್ಧತಿ ರೂಢಿಯಲ್ಲಿತ್ತು.


ಭತ್ತ–ಧಾನ್ಯಗಳಿಗೆ ತೇವ ಹತ್ತದಂತೆ, ಇಲಿ, ಹೆಗ್ಗಣ, ಪಕ್ಷಿಗಳು, ದನ–ಕರುಗಳು ತಿನ್ನದಂತೆ, ಹುಳು ಬೀಳದಂತೆ ರಕ್ಷಿಸಿಡುವುದೇ ಕಣಜಗಳ ಕಾರ್ಯ. ಹೀಗಾಗಿ ಆಯಾ ಕುಟುಂಬಗಳಿಗೆ ಬೇಕಾಗುವಷ್ಟು ಧಾನ್ಯಗಳನ್ನು ಸಂಗ್ರಹ ಮಾಡಬಹುದಾದ ಈ ಕಣಜಗಳು 2 ಚೀಲದಿಂದ ಹಿಡಿದು 5,10, ಹಾಗೂ 50 ಚೀಲಗಳ ಧಾನ್ಯವನ್ನು ಸಂಗ್ರಹಿಸುವಷ್ಟು ಅವುಗಳ ಗಾತ್ರವಿರುತ್ತಿತ್ತು. ಈ ಕಣಜಗಳಲ್ಲಿ 1. ತಾತ್ಕಾಲಿಕ ಕಣಜಗಳು, 2. ಶಾಶ್ವತವಾದ ಕಣಜಗಳು ಹಾಗೂ 3. ಧಾನ್ಯಗಳು ಬೇರೆಡೆಗೆ ವರ್ಗಾಯಿಸುವ ಕಣಜಗಳಿದ್ದುವು.

ಕಣಜಗಳನ್ನು ಬಿದಿರು, ಈಚಲು ಮರದ ಶಿಬಿರು, ಮರದ ಹಲಗೆಗಳು ಹಾಗೂ ತೆಳ್ಳನೆಯ ತಗಡು ಇಲ್ಲವೆ ಕಲ್ಲು, ಮಣ್ಣುಗಳಿಂದ ಕಟ್ಟಿ ಅವುಗಳನ್ನು ತಯಾರಿಸಲಾಗುತ್ತಿತ್ತು. ಇಂದಿನ ಗೋದಾಮುಗಳ ರಚನೆಗೆ ಈ ಕಣಜಗಳೇ ಮೂಲ ಎನ್ನಬಹುದು. ರೈತರು ಬೆಳೆಯುವ ಎಲ್ಲ ಧಾನ್ಯಗಳನ್ನು ಸಾಮಾನ್ಯವಾಗಿ ಮಾರಾಟಕ್ಕೆ ಮೊದಲು, ಅವುಗಳನ್ನು ಸರಿಯಾಗಿ ಒಣಗಿಸಿ ಅವು ಕೆಡದಂತೆ ಇಂಥ ಕಣಜಗಳಲ್ಲಿ ಸಂಗ್ರಹಿಸಿ ಇಡಲಾಗುತ್ತಿತ್ತು.

ಬಿದಿರು ಅಥವಾ ಈಚಲು ಶಿಬಿರಗಳಿಂದ ತಯಾರಿಸಿದ ಕಣಜಗಳಿಗೆ ಸೆಗಣಿ ಅಥವಾ ಸೇಡಿ ಮಣ್ಣಿನಿಂದ ಅವುಗಳ ಒಳ ಹಾಗೂ ಹೊರ ಮೈಯನ್ನು ಮೆತ್ತಿ ಒಣಗಿಸಿಡಲಾಗುತ್ತಿತ್ತು. ಕಾರಣ ಆ ಕಾಳುಗಳಿಗೆ, ನೀರು, ಆರ್ದ್ರತೆ, ಹವೆ, ಹತ್ತಬಾರದು, ಹುಳುಗಳು ತಗುಲಬಾರದು ಎಂದು ಆಲೋಚಿಸಿ ಅವುಗಳನ್ನು ತುಂಬಾ ಒಣದಾಗಿರುವ ಜಾಗಗಳಲ್ಲಿ ಇಲ್ಲವೇ ಎತ್ತರದ ಕಟ್ಟೆ ಅಥವಾ ಮನೆಗಳ ಮೇಲೆ ಇಡಲಾಗುತ್ತಿತ್ತು.

(ಎಸ್‌ಎಸ್‌ವೈ)


ಕನಕಗಿರಿ: ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಐತಿಹಾಸಿಕ ಗ್ರಾಮ. ಪ್ರೇಕ್ಷಣೀಯ ಸ್ಥಳ. ಕಣ್ಣಿದ್ದವರು ಕನಕಗಿರಿ ನೋಡಬೇಕು, ಕಾಲಿದ್ದವರು ಹಂಪಿ ನೋಡಬೇಕು' ಎಂಬುದು ಜನವಾಣಿ. ಈ ಊರಿನಲ್ಲಿ ಸಾಕಷ್ಟು ದೇವಾಲಯಗಳು, ಕೋಟೆ ಕೊತ್ತಲಗಳಿದ್ದು ಶಿಲ್ಪಕಲೆಗೆ ತುಂಬಾ ಹೆಸರಾದುದಾಗಿದೆ. ಈ ಊರಿನಲ್ಲಿ ಪರ್ವತಮಲ್ಲಯ್ಯ ಎನ್ನುವ ತತ್ವಪದ ಹಾಡುಗಾರರಿದ್ದಾರೆ. ಸುಮಾರು ಇಪ್ಪತ್ತೈದು ವರ್ಷಗಳಿಂದ ತತ್ವಪದ ಗೀತೆಗಳನ್ನು ಹಾಡುತ್ತ ಬಂದಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಈ ಕಲಾವಿದ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಜೊತೆಗೆ ಇವರದೊಂದು ತತ್ವಪದ ಹಾಡುಗಾರಿಕೆಯ ತಂಡವಿದೆ. ಈ ತಂಡಕ್ಕೆ ಪರ್ವತಮಲ್ಲಯ್ಯನವರೇ ಅಧ್ಯಕ್ಷರು, ದೇವಸ್ಥಾನದಲ್ಲಿ ವಿಶೇಷ ಪೂಜೆ, ಹಬ್ಬ, ಜಾತ್ರೆ ಮುಂತಾದ ಸಂದರ್ಭದಲ್ಲಿ ಸಾಂಪ್ರದಾಯಿಕವಾಗಿ ಇವರು ಹಾಡುತ್ತಾರೆ. ತಾಳ, ಡಕ್ಕೆ, ಗೆಜ್ಜೆ, ಹಾರ್ಮೋನಿಯಂ ಮುಂತಾದ ವಾದ್ಯಗಳನ್ನು ಬಳಸುವ ಇವರು ತತ್ವ ಪದಕಾರರು ಬರೆದ ಸಾಹಿತ್ಯವನ್ನು ತಮ್ಮ ಹಾಡಿಗೆ ಬಳಸಿಕೊಳ್ಳುತ್ತಾರೆ. ತತ್ವಪದ ಹಾಡುಗಾರಿಕೆಗೆ ಕೆಲವರು ಭಜನೆ ಎಂದೂ ಕರೆಯುತ್ತಾರೆ. ಭಜಿಸು ಎನ್ನುವ ಅರ್ಥ ಕೂಡ ಬರುತ್ತದೆ. ಭಜನೆಯನ್ನು ಏಕ ವ್ಯಕ್ತಿ ಮಾಡಬಹುದು. ಸಾಮೂಹಿಕವಾಗಿ ಮಾಡಬಹುದು. ಕನಕಗಿರಿಯಲ್ಲಿ ಪರ್ವತ ಮಲ್ಲಯ್ಯನವರ ತಂಡಕ್ಕೆ ಒಳ್ಳೆಯ ಹೆಸರಿದೆ. *(ಡಿಎಸ್‌ಡಿ)*



ಕನಕಗಿರಿ – ಕೊಪ್ಪಳ



ಮಹಾದೇವ ದೇವಸ್ಥಾನ ಇಟಗಿ (ಕೊಪ್ಪಳ)



ಜಾಮಾಮಸೀದಿ ಕೋಟೆ (ಗುಲಬರ್ಗಾ)

ಕಪಲಿ: ಪ್ರಾಚೀನ ಕಾಲದ ವ್ಯವಸಾಯದ ಒಂದು ಮಹತ್ವದ ಉಪಕರಣ. ಇದನ್ನು ಹೈದ್ರಾಬಾದ ಕರ್ನಾಟಕದ ಜಿಲ್ಲೆಗಳಾದ ಬೀದರ, ಗುಲಬರ್ಗಾಗಳಲ್ಲಿ ಹೆಚ್ಚಾಗಿ ಬಳಸುತ್ತಿದ್ದರು. ಈ ಭಾಗದಲ್ಲಿ ಕಪಲಿಗೆ ಬಕ್ಕಣ ಎಂದು ಕರೆಯುತ್ತಾರೆ. ಬಾವಿಯಿಂದ ನೀರೆತ್ತಿ ತೋಟಗಾರಿಕೆ ಮಾಡಲು ಈ ಉಪಕರಣ ತುಂಬಾ ಆವಶ್ಯಕವಾಗಿತ್ತು. ಇದನ್ನು ಸತ್ತ ದನಗಳ ಚರ್ಮದಿಂದ ನಿರ್ಮಿಸುತ್ತಾರೆ. ವಿಶೇಷ ವಾಗಿ ಎತ್ತು, ಎಮ್ಮೆಗಳ ಚರ್ಮವನ್ನು ಚೆನ್ನಾಗಿ ಹದ ಮಾಡಿ ಗೋಲಾಕಾರದ ಕಟ್ಟಿಗೆ ಅಥವಾ ಕಬ್ಬಿಣದ ಸರಿಗೆಗೆ ತಕ್ಕಂತೆ ಹೊಲಿಯುತ್ತಾರೆ. ಅದನ್ನು ಲಡಿಗಳಿಂದ ಕಟ್ಟುತ್ತಾರೆ. ಕಪಲಿಗೆ ಉದ್ದವಾದ ಚರ್ಮದ ಸೊಂಡಿಲು ಇರುತ್ತದೆ. ಇದರಿಂದ ತುಂಬಿದ ನೀರು ಹೊರಬರುತ್ತದೆ.



ಕಪಲಿ (ಮಟ್ಟಿ)

ಕಪಲಿಯನ್ನು ಮೊದಲು ಗೋಲಾಕಾರದಲ್ಲಿ ಹೊಲಿದು ಸರಿಗೆಗೆ ಲಡಿಗಳಿಂದ ಜೋಡಿಸುತ್ತಾರೆ. ಇದರ ಬಾಯಿಗೆ ಮಿಳಿ ಎಂಬ ದೊಡ್ಡ ಹಗ್ಗದಿಂದ ಕಟ್ಟುತ್ತಾರೆ. ಸೊಂಡಿಲಗೆ ಸೊಂಡಿ ಹಗ್ಗ ಕಟ್ಟುತ್ತಾರೆ. 'ಮಿಳಿ ಹಗ್ಗ' ಬಾವಿಯ ಕೊಮರಿ ಮೇಲಿದ್ದ ದೊಡ್ಡ ಗಿರಕಿಯ ಮೇಲಿಂದ ಹಾಯ್ದು ಎತ್ತುಗಳ ನೊಗಕ್ಕೆ ಜೋಡಿಸುತ್ತಾರೆ. ಎತ್ತರವಾದ ಸ್ಥಳದಿಂದ ಎತ್ತುಗಳು ತಗ್ಗು ಪ್ರದೇಶಕ್ಕೆ ಭಾರವಾದ ನೀರು ತುಂಬಿದ ಕಪಲಿ ಎಳೆಯುತ್ತವೆ. ಮೇಲೆ ಬಂದಾಗ ಕಪಲಿಯ ಸೊಂಡಿಲಿಂದ ನೀರು ಹೊರ ಬಂದು ಹೊಳಿ ಎಂಬ ಚಿಕ್ಕ ಹೊಂಡಕ್ಕೆ ಬೀಳುತ್ತದೆ. ಅಲ್ಲಿಂದ ಕಾಲುವೆ ಮೂಲಕ ಬೆಳೆಗಳಿಗೆ ನೀರು ಹರಿಯುತ್ತದೆ. ಕಪಲಿ ಹೊಡೆಯುವದಕ್ಕೆ 'ಮಟ್ಟಿ' ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಎರಡು ಎತ್ತುಗಳ ಅಥವಾ ನಾಲ್ಕು ಎತ್ತುಗಳ ಮಟ್ಟಿ ಇರುತ್ತದೆ. ಎರಡು ಎತ್ತುಗಳು ಎಳೆಯುವದಕ್ಕೆ ಕಪಲಿ ಚಿಕ್ಕದಾಗಿ, ನಾಲ್ಕು ಎತ್ತುಗಳಿಗೆ ದೊಡ್ಡದಾಗಿರುತ್ತದೆ.

ಕನ್ನಡ ಜನಪದ ಸಾಹಿತ್ಯದಲ್ಲಿ 'ಕಪಲಿ ಹಾಡುಗಳು' ದೊರೆಯುತ್ತವೆ. ಎತ್ತುಗಳು ಕಪಲಿ ಎಳೆಯುತ್ತಿದ್ದಾಗ ಅವುಗಳಿಗೆ ಪ್ರೋತ್ಸಾಹದಾಯಕವಾಗಿ ಹಲವಾರು ಹಾಡುಗಳು, ನುಡಿ ಗಟ್ಟುಗಳು ಬಳಸುತ್ತಿದ್ದರು. 'ಹೋ ಹೋ ಹೋಗತಾನಲೋ ಜಾಣ' ರಾಜಾ, ರಾಜಾ, ಪಾರೆ, ಪಾರೆ ಎಂದು ಬಾಯಿಂದ ಮಟ್ಟಿ ಹೊಡೆಯು ವವನು ನುಡಿಯುತ್ತಿದ್ದನು. ಒಂದೊಂದು ಸಲ 'ಮಿಳಿ' ಮೇಲೆ ಹಾದಿಗೆ ಹೋಗುವ ಹೆಂಗಳೆಯರನ್ನು ಕಂಡು 'ಹೋಗತಾಳಲೋ ರಾಣಿ' ಎಂದು ರಾಗವಾಗಿ ಧ್ವನಿ ಎಳೆಯುತ್ತ ಬಾಯಿ ಮಾಡುತ್ತಿದ್ದನು. ಕಪಲಿ ನೀರು ಸುರಿದ ನಂತರ ಮತ್ತೆ ಎತ್ತುಗಳಿಗೆ ಸರ್, ಸರ್ ಎಂದು ಬಾಯಿಂದ ಹೇಳುತ್ತ ಹಿಂದಕ್ಕೆ ಸರಿಸುತ್ತಿದ್ದರು.

ಕಪಲಿ ನೀರು ತುಂಬಿಕೊಂಡು ಮೇಲೆ ಬರುವಾಗ ಅದರಿಂದ ನೀರು ತುಂತುರವಾಗಿ ಬಾವಿಗೆ ಬೀಳುತ್ತಾ ಒಂದು ತರದ 'ಜೀ' ಎಂಬ ಧ್ವನಿ ಉಂಟಾಗಿ ಮಟ್ಟಿ ಹೊಡೆಯುವ ಆಳಿಗೆ ಹಾಡಲು ಹುಮ್ಮಸ್ಸು ಬರುತ್ತಿತ್ತು. ಗಂಡಸರು ಮಟ್ಟಿ ಹೊಡೆಯುವಾಗ ಹೆಂಗಸರು ಬಟ್ಟೆ ಒಗೆಯಲು ಹೊಳಿಗೆ ಬಂದು ಸೇರುತ್ತಿದ್ದರು. ಅವರನ್ನು ಕಣ್ಣ ಸನ್ನೆಯಲ್ಲಿ ನೋಡುತ್ತ ಹಾಡು ಹಾಡುತ್ತಾ ಮಟ್ಟಿ ಹೊಡೆಯುವುದೆಂದರೆ ಬಲು ಮೋಜಿನ ಕೆಲಸವಾಗಿರುತ್ತಿತ್ತು. ಆದರೆ ಈಗ ಎಂಜಿನ್‌ಗಳು, ವಿದ್ಯುತ್ ಮೋಟಾರುಗಳು ಬಂದು ಕಪಲಿಗಳು ಕಣ್ಮರೆಯಾಗಿವೆ. ಯಂತ್ರಗಳು ಹತ್ತು ಕಪಲಿಗಳ ಕೆಲಸ ಸರಳವಾಗಿ ಮಾಡುತ್ತಿವೆ. ಮುಂದಿನ ಮಕ್ಕಳಿಗೆ ಕಪಲಿಗಳು ಆಕಾಶ ಕುಸುಮಗಳಾಗುತ್ತವೆ. ಈ ಮಕ್ಕಳಿಗೆ ತೋರಿಸಲು ಕೂಡಾ ಒಂದು ಕಪಲಿ ಇಲ್ಲದಾಗಿದೆ. ನೀರು ತುಂಬಿದ ಬಕ್ಕಣಕ್ಕೆ (ಕಪಲಿ) ಚಿಕ್ಕ ಮಕ್ಕಳನ್ನು ಹೋಲಿಸಿ 'ಕೂಸು ಬಕ್ಕಣ ಬಕ್ಕಣ ಆಗ್ಯಾದ' ಎಂದು ಹೇಳುತ್ತಾರೆ. *(ಎಚ್‌ಕೆ)*

ಕಪ್ಪೆ ಆಟ: ಕಪ್ಪೆಗಳಿಗೆ ಮಳೆ ಬರುವ ಸೂಚನೆ ಗೊತ್ತಾಗಿ ಕೂಗಲು ಪ್ರಾರಂಭಿಸುತ್ತವೆ. ಹಳ್ಳದ ದಂಡೆಯಲ್ಲಿನ ತಮ್ಮ ಮೊಟ್ಟೆಗಳನ್ನು ತೀರದಿಂದ ದೂರಕ್ಕೆ ಸಾಗಿಸುತ್ತವೆ ಎಂಬ ಬಲವಾದ ನಂಬಿಕೆಗಳಿವೆ. ಅದರಿಂತೆ ಸಕಾಲಕ್ಕೆ ಮಳೆ ಬಾರದಿರುವಾಗ, ನೆಲವೆಲ್ಲ ಒಣಗಿ ರೈತ ಕಂಗಾಲಾದಾಗ, ಮಳೆಯ ತೀವ್ರ ಅವಶ್ಯಕತೆ ಉಂಟಾದಾಗ ಜನಪದರಲ್ಲಿ 'ಕಪ್ಪೆಗಳ ಮದುವೆ' ಮಾಡುವ ರೂಢಿಯಿದೆ.

ಗಾತ್ರದಲ್ಲಿ ದೊಡ್ಡದಾಗಿರುವ ಎರಡು ಹೆಣ್ಣು, ಗಂಡು ಕಪ್ಪೆಗಳನ್ನು ಹಿಡಿದು ತರುತ್ತಾರೆ. ಗಂಡು ಕಪ್ಪೆಗೆ ಪಂಚೆಯ ತುಂಡು ಸುತ್ತಿ, ಹೆಣ್ಣು ಕಪ್ಪೆಗೆ ಸೀರೆ ತುಂಡು ಸುತ್ತುತ್ತಾರೆ. ಎರಡಕ್ಕೂ ಚೆನ್ನಾಗಿ ಸಿಂಗರಿಸಿ ಕೊರಳಿಗೆ ಹೂವಿನ ಹಾರ ಹಾಕಿ ಬಾಜಾ ಬಜಂತ್ರಿ ಸಮೇತ ಊರಿನಲ್ಲಿ ಮೆರವಣಿಗೆ ಮಾಡಿಸುತ್ತಾರೆ. ಇದುವೆ ಕಪ್ಪೆ ಮದುವೆ, ಹೀಗೆಲ್ಲ ಮಾಡಿದರೆ ಖಂಡಿತ ಮಳೆ ಬರುತ್ತದೆ ಎಂಬ ನಂಬಿಕೆ ಜನಪದರದು.

ಎರಡೂ ಕಪ್ಪೆಗಳನ್ನು ಹಿಡಿದು ಬಟ್ಟೆ ತೊಡಿಸಿ, ಅಲಂಕರಿಸು ವಲ್ಲಿ ಮೆರವಣಿಗೆ ತೆಗೆಯುವಲ್ಲಿ ಅವುಗಳ ಜಿಗಿದಾಟ, ತಪ್ಪಿಸಿಕೊಳ್ಳುವ ಪ್ರಯತ್ನ, ಓಟ, ಕುಪ್ಪಳ ಇವೆಲ್ಲವು ಮದುವೆ ಮಾಡುವವರಿಗೆ ಮತ್ತು ನೋಡುವವರಿಗೆ ಆನಂದದ, ಮೋಜಿನ ಆಟವಾಗಿ ಕಂಡುಬರುತ್ತದೆ. ಅದಕ್ಕೆ ಕಪ್ಪೆ ಮದುವೆಯನ್ನು ಕಪ್ಪೆ 'ಆಟ' ಎಂದು ಕರೆದಿರಬಹುದಾಗಿದೆ.

ಇನ್ನೊಂದು 'ಕಪ್ಪೆ ಆಟ' ಎನ್ನುವುದು ಶಾಲೆಗಳಲ್ಲಿ ಮಕ್ಕಳಿಗಾಗಿ ಆಡಿಸುವ ಬಯಲ ಆಟ. ಈ ಆಟಕ್ಕೆ ಕಪ್ಪೆಯ ಕುಪ್ಪಳ (Leap Frog Relay) ಅಥವಾ ಕಪ್ಪೆಯೋಟ (Frog Relay) ಎಂತಲೂ ಕರೆಯುತ್ತಾರೆ. ಕಪ್ಪೆಯೋಟ ಅಥವಾ ಆಟಕ್ಕೆ ನಾಲ್ಕಾರು ಗುಂಪಿನ ಮಕ್ಕಳು ಬೇಕು. ಪ್ರತಿ ಗುಂಪಿನ ಮಧ್ಯೆ 9 ಅಡಿಗಳ ಅಂತರವಿರುತ್ತದೆ. ಎಲ್ಲರೂ ಹೊರಡು ಗೆರೆಯ ಬಳಿ ಕುಕ್ಕುರಗಾಲಿನಲ್ಲಿ ಕುಳಿತಿರಬೇಕು. ತಮ್ಮ ಕೈಗಳನ್ನು ನೆಲದ ಮೇಲೆ ಇಟ್ಟುಕೊಂಡಿರಬೇಕು.

ಹೊರಡುಗೆರೆಯ ಮುಂದೆ 20 ಅಡಿಗಳ ದೂರದಲ್ಲಿ ಪ್ರತಿ ಗುಂಪಿನ ಎದುರು ಗುರುತು ಮಾಡಲು ಒಂದು ಗುರಿಯಾಗಿ ಡಂಬೆಲ್ ಅಥವಾ ಗದೆಯನ್ನು ಇಟ್ಟಿರಬೇಕು. ಸಂಜ್ಞೆ (ಸೀಟಿ)

ಆದಕೂಡಲೇ ಪ್ರತಿ ಗುಂಪಿನಿಂದ ಮೊದಲಿಗರು ತಮ್ಮ ಕೈ ಮತ್ತು ಕಾಲುಗಳ ಮೇಲೆ ಕಪ್ಪೆಯಂತೆ ಕುಪ್ಪಳಿಸುತ್ತ ಹೊರಡುತ್ತಾರೆ. ತಮ್ಮ ಮುಂದಿನ ಗುರಿಯ ಗುರುತನ್ನು ಸುತ್ತಿಕೊಂಡು ಪುನಃ ತಾವು ಹೊರಟ ಸ್ಥಳಕ್ಕೆ ಬಂದು ಮುಟ್ಟುವರು. ಹೀಗೆ ಅವರು ಬಂದಕೂಡಲೇ ಆ ಗುಂಪಿನ ಎರಡನೆಯವರು ಹೊರಡುತ್ತಾರೆ. ಕುಪ್ಪಳಿಸಿ ಬಂದವರು ತಮ್ಮ ಗುಂಪಿನ ಹಿಂದೆ ನಿಲ್ಲುವರು. ಅವರ ತರುವಾಯ ಮೂರನೆಯವರು ಹೀಗೆ ಪ್ರತಿ ಗುಂಪಿನ ಆಟಗಾರರ ಸರದಿ ಮುಗಿಯುತ್ತಲೇ ಆಟ ಮುಗಿಯುವುದು, ಯಾವ ಗುಂಪಿನವರು ಮೊದಲು ಮುಗಿಸುವರೋ ಆ ಗುಂಪು ಗೆಲ್ಲುವುದು ಇದು ಕಪ್ಪೆ ಆಟದ ಒಂದು ರೀತಿ.

'ಕಪ್ಪೆಯ ಕುಪ್ಪಳ' ಎಂಬ ಇನ್ನೊಂದು ರೀತಿಯಲ್ಲಿ ಹೊರಡುಗೆರೆಯನ್ನು ಗುರುತಿಸಿ ಅದರ ಹಿಂದೆ ಗುಂಪುಗಳವರು ಒಬ್ಬರ ಹಿಂದೆ ಒಬ್ಬರಂತೆ, ಗುಂಪಿನಿಂದ ಗುಂಪಿಗೆ 9 ಅಡಿಗಳ ದೂರವಿರುವಂತೆ ನೋಡಿಕೊಳ್ಳಬೇಕು.

ಎಲ್ಲ ಗುಂಪಿನವರು ನೇರವಾಗಿ ಒಂದೇ ಸಾಲಿನಲ್ಲಿರುವಂತೆ ಕಾಲುಗಳನ್ನು ಹೊರಮಾಡಿ, ಮುಂದೆ ಬಾಗಿ ತಮ್ಮ ಕೈಗಳಿಂದ ಮೊಣಕಾಲು ಮೇಲ್ಭಾಗದಲ್ಲಿ ಹಿಡಿದುಕೊಂಡು ಬಲವಾಗಿ ನಿಲ್ಲುವರು. ಸಂಜ್ಞೆಯಾದ ಕೂಡಲೇ ಗುಂಪುಗಳ ಆಟಗಾರರು ಒಬ್ಬರಾದ ಮೇಲೆ ಒಬ್ಬರು ತಮ್ಮ ಮುಂದಿರುವ 4 ಮಂದಿಯ ಬೆನ್ನ ಮೇಲೆ ಒಬ್ಬರ ತರುವಾಯ ಒಬ್ಬರು ಚೆಂಗನೆ ಹಾರಿ, ಅವರ ಬಲಭಾಗದಿಂದ ಹಿಂತಿರುಗುವ ತಾವು ಹೊರಡುವುದಕ್ಕೆ ಮುಂದೆ ನಿಂತಿದ್ದಂತೆ ನಿಲ್ಲುವರು. ಹಿಂದಿನವರು ಅವರ ಮೇಲೆ ಹಾರಿ ಬರುವರು. ಯಾವ ಗುಂಪಿನವರು ಮೊದಲು ಮುಗಿಸುವರೋ ಆ ಗುಂಪು ಗೆಲ್ಲುವುದು. *(ಸಿಜೆಂ)*

ಕಮಠಾಣ: ಬೀದರ ಜಿಲ್ಲೆಯಿಂದ 8 ಕಿ.ಮೀ. ದೂರದಲ್ಲಿದೆ. ಈ ಊರಿನಲ್ಲಿ ಮೊಟ್ಟ ಮೊದಲು ವಾಸಿಸಲು ಬಂದವರು ಕೊಮಟ ಗೇರರು. ಆದ್ದರಿಂದ ಈ ಊರಿಗೆ ಕಮಠಾಣಾವೆಂಬ ಹೆಸರು ಬಂದಿದೆ. ಇಲ್ಲಿ ಜೈನ ಮಂದಿರವಿದೆ. ರಟ್ಟ ಅರಸು ಮನೆತನದ ಕಾಲದ ಭಗವಾನ ಪಾರ್ಶ್ವನಾಥ ತೀರ್ಥಂಕರರ ಸುಂದರ ಬಸದಿ ಇದೆ. ಈ ಬಸದಿಯು ವಿಶಾಲವಾದ ಅಂಗಳ ಹೊಂದಿದೆ. ಸುತ್ತಲೂ ಮಾವಿನ ಗಿಡಗಳಿವೆ. ಪ್ರತಿವರ್ಷ ಮಾಘ ಪಂಚಮಿಯಿಂದ ಸಪ್ತಮಿವರೆಗೆ ಜಾತ್ರೆ ನಡೆಯುತ್ತದೆ. ಆಂಧ್ರ, ಮಹಾರಾಷ್ಟ್ರದಿಂದ ಸಾವಿರಾರು ಜಿನಭಕ್ತರು ಇಲ್ಲಿಗೆ ಆಗಮಿಸುತ್ತಾರೆ. ಜೈನ ಮುನಿಗಳು ಆಗಾಗ ಬಂದು ಪ್ರವಚನ ಕಾರ್ಯಕ್ರಮ ನೀಡುತ್ತಾರೆ. ದಿಗಂಬರ ಪಂಥದ ಜಿನಾಲಯಗಳು ಇವೆ. ಊರಿನ ಸುತ್ತಲೂ ಜೋಡು ಕಂದಕಗಳಿವೆ. ಈ ಕಂದಕ 15 ಅಡಿ ಅಗಲ 10 ಅಡಿ ಆಳ ಇದೆ. ಇಲ್ಲಿ ಸೇಡಿ ಬಾವಿಗಳಿವೆ. ಭೂಮಿಯ ಆಳದಲ್ಲಿ ಸೇಡಿ ದೊರಕುತ್ತದೆ.

ಗಚ್ಚಿನ ಮಠ, ಗವಿಮಠಗಳು ಈ ಕಮಠಾಣದಲ್ಲಿವೆ. ಶ್ರಾವಣ ಮಾಸದಲ್ಲಿ ಗವಿಮಠದೊಳಗೆ ತ್ರಿಕಾಲ ರುದ್ರಾಭಿಷೇಕ ನಡೆಯುತ್ತದೆ. ವೀರಭದ್ರೇಶ್ವರ ದೇವಾಲಯವು ಇದೆ. ಡಿಸೆಂಬರ್ 14,15 ರಂದು ಪ್ರತಿ ವರ್ಷ ಜಗದ್ಗುರುಗಳ ಕೃಪಾಶೀರ್ವಾದದ ಮೇರೆಗೆ ಕಾರ್ಯಕ್ರಮಗಳು ನಡೆಯುತ್ತವೆ. ಈ ವೀರಭದ್ರೇಶ್ವರ ದೇವಾಲಯದ ವಿಶೇಷವೆಂದರೆ ನೇಪಾಳದಲ್ಲಿಯ ಶರಭವತಾರವನ್ನೇ ಹೋಲುತ್ತದೆ.

ಕೋಳಿವಾಡವೆಂಬ ಓಣಿಯಲ್ಲಿ ಮಹಾದೇವ ಮಂದಿರವಿದೆ. ನಂದಿ ಬಸವೇಶ್ವರ ದೇವಾಲಯವೂ ಇದೆ. ಇಲ್ಲಿ ಶ್ರಾವಣ ಮಾಸದಲ್ಲಿ ನಿತ್ಯ ಭಜನೆ ನಡೆಯುತ್ತದೆ. ಇಲ್ಲಿ ಎರಡು ಅಗಸಿ, ಒಂದು ಹನುಮಾನ ದೇವಾಲಯ ಸಮೀಪದ ಅಗಸಿ, ಎರಡನೆಯದ್ದು ಬಸವೇಶ್ವರ ದೇವಾಲಯದ ಎದುರುಗಡೆ ಇರುವ ಅಗಸಿ ಎಂದು ಭವಾನಿ ದೇವಾಲಯ ಹೊಸದಾಗಿ ನಿರ್ಮಾಣವಾಗಿದೆ. ಬೀರಲಿಂಗೇಶ್ವರ ದೇವಾಲಯವೂ ಇದೆ. ಗಣೇಶ ಮಂದಿರವೂ ಇದೆ. ಈ ಮೂರ್ತಿ ಕಲ್ಲಿನಲ್ಲಿ ಕೆತ್ತಲ್ಪಟ್ಟಿದೆ. 4 ಅಡಿ ಅಗಲ 5 ಅಡಿ ಎತ್ತರ ವಿರುವ ಈ ಮೂರ್ತಿ ಕಮಠಾಣಾದಲ್ಲಿಯೇ ತಗ್ಗು ತೋಡುವಾಗ ದೊರೆತದ್ದು.

ಕೋಳಿವಾಡದಲ್ಲಿ ಯುಗಾದಿ, ಹೋಳಿ ಹುಣ್ಣಿಮೆ ಹಬ್ಬಕ್ಕೆ ಕೋಲಾಟವಾಡುತ್ತಾರೆ. ಈಗಲೂ ಉತ್ಸವವಿದೆ. ನರಸಪ್ಪಾ ಚಿನ್ನಗೇಪಳ್ಳಿ, ಬಕ್ಕಣ ಕೋಳಿ, ಚಂದ್ರಪ್ಪ ಮಲ್ಲಿಕಾರ್ಜುನ ಕೋಲಾಟದ ನಿಸ್ಸೀಮರು ಮೋಹರಂ ಹಬ್ಬವನ್ನು ಎಲ್ಲಾ ಜಾತಿಯ ಜನರೂ ಆಚರಿಸುತ್ತಾರೆ.

ಶಾ–ಅಬ್ದುಲ್– ರಜಾಕ್ ದರ್ಗಾ ಉರಸ್ ಜಾತ್ರೆ ಮಾಡುತ್ತಾರೆ. ಇಲ್ಲಿ 60% ರಷ್ಟು ಜನ ಮುಸಲ್ಮಾನರಿದ್ದಾರೆ. 40% ಹಿಂದೂ ಇದ್ದಾರೆ. ಇಲ್ಲಿನ ದರ್ಗಾ ಹತ್ತಿರ 10 ಊರು ವಿಶಾಲದಷ್ಟು ಕೆರೆ ಇದೆ. ಇಲ್ಲಿನ ಜನರ ಸಮಸ್ಯೆಗೆ ಸ್ಪಂದಿಸುವುದು, ಬಗೆ ಹರಿಸುವುದು ಹಾಗೂ ಧರ್ಮ ಕಾರ್ಯಕ್ರಮಗಳು ನಡೆಸಿಕೊಂಡು ಹೋಗುವುದ–ರಿಂದ 'ವೀರಶೈವ ದೀಪ್ತಿ' ಎಂಬ ಬಿರುದು ಪಡೆದವರು "ಶ್ರೀ ಕುಶಲ್‌ರಾವ್ ಯಾಬಾ' *(ಎಸ್.ಬಿ.ಎಂ.)*

ಕರಡಕಲ್: ರಾಯಚೂರು ಜಿಲ್ಲೆ ಲಿಂಗಸೂಗುರು ತಾಲ್ಲೂಕಿನ ಪುರಾತನ ನೆಲೆ ಐತಿಹಾಸಿಕ ಸ್ಥಳ. ಪ್ರಾಚೀನ ಕಾಲದ ಅಗಸಿ ಬೃಹತ್ ಬಾಗಿಲು ಇಲ್ಲಿನ ಅಪೂರ್ವ ಇತಿಹಾಸಕ್ಕೆ ಸಾಕ್ಷಿಯಾಗಿ ನಿಂತಿದೆ. ಹತ್ತಿರದಲ್ಲೇ ಕನ್ನಡ ಭಾಷೆಯ ಅಸ್ಪಷ್ಟ ಶಾಸನವೊಂದು ಸೇಗುಣ, ಸೇಮುಣ, ಸೇಉಣ ಎಂದು ಬರೆಯಲ್ಪಟ್ಟಿರುವದು ಕಂಡು ಬರುತ್ತದೆ. ಶಾಸನ ಈ ರಾಜವಂಶದ ಬಗ್ಗೆ ನಿಖರ ಮಾಹಿತಿ ತಿಳಿಸುತ್ತದೆ.

ಸೇವುಣರು ಕ್ರಿ.ಶ. 835 ರಿಂದ 133 ರ ವರೆಗೆ ಆಡಳಿತ ನಡೆಸಿ, ಕರ್ನಾಟಕದ ಚರಿತ್ರೆಯಲ್ಲಿ ಬಹುಮುಖ್ಯ ಪಾತ್ರವಹಿಸಿದ್ದಾರೆ. ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದ ಸೇವುಣರು, ಕಲ್ಯಾಣ ಚಾಲುಕ್ಯರ ಅಸ್ಥಿರ ರಾಜಕೀಯ ವಿದ್ಯಮಾನದಿಂದ ಪತನಗೊಂಡ ನಂತರ ಕ್ರಿಶ 835 ರಲ್ಲಿ ಸ್ವತಂತ್ರವಾಗಿ ಅಧಿಕಾರ ಹಿಡಿದರೆಂದು ಶಾಸನಗಳಿಂದ ತಿಳಿದು ಬರುತ್ತದೆ.

ಆರಂಭದಲ್ಲಿ ಇವರು ತಮ್ಮನ್ನು ಯಾದವ ಕುಲದವವೆಂದು ಹೇಳಿಕೊಂಡಿದ್ದರು. ದೇವಗಿರಿಯನ್ನು ರಾಜಧಾನಿ ಯನ್ನಾಗಿ ಮಾಡಿಕೊಂಡು, ದೇವಗಿರಿಯಿಂದ ಯಾದವರು, ಸೇವುಣರು ಎಂದೇ ಖ್ಯಾತಿ ಹೊಂದಿದರು. 'ಚಾತುರ್ಮಾರ್ಗ ಚಿಂತಾಮಣಿ' ಎಂಬ ಗ್ರಂಥ ಇವರು 'ಯದು' ವಿನಿಂದ ಬಂದವರೆಂದು, ದ್ವಾರಕಾ ಇವರ ಮೂಲ ಸ್ಥಾನವಾಗಿತ್ತೆಂದು ತಿಳಿಸುತ್ತದೆ. ಪುರಾದೀಶ್ವರ, ಯಾದವ ನಾರಾಯಣ, ವಿಷ್ಣುವಂಶೋದ್ಭವ ಮುಂತಾದ ಬಿರುದುಗಳು ಕೃಷ್ಣನ ವಂಶಂಜರದ್ದೆಂದು ತಿಳಿಸುತ್ತವೆ.

ಯಾದವ ಕುಪ್ಪೆ ಅರಸ, ಕುಪ್ಪದೇವ, ಪೆರ್ಮಡಿಯರಸ ದೃಢ

ಪ್ರಹಾರ, ಸೇವುಣ ಚಂದ್ರ ಮುಂತಾದ ಹೆಸರುಗಳಿಂದ ಇವರು ಖ್ಯಾತಿ ಪಡೆದಿದ್ದರು. ಧಡಿಯಪ್ಪ ಬಡ್ಡಿಗೆ, ರಾಜುಗಿ, ಮಲ್ಲುಗಿ, ಜೈತುಗಿ, ಸಿಂಘಣ, ಭಿಲ್ಲಮ ಮುಂತಾದವರು ಆಳ್ವಿಕೆ ನಡೆಸಿದರೆಂದು ತಿಳಿದುಬರುತ್ತದೆ. ವಡ್ಡಿಯವ್ವ, ಲಚ್ಚಿಯವ್ವ ಎಂಬ ಸ್ತ್ರೀಯರ ಹೆಸರುಗಳು ಇವರಲ್ಲಿ ಕಂಡು ಬರುತ್ತವೆ. ಬೊಪ್ಪಣ್ಣ, ಬಚ್ಚಿದೇವ ರಸ, ಕಲ್ಲರಸ, ಆನೆ ಮಲ್ಲಯ್ಯ, ಚಾವುಂಡರಸ ಮುಂತಾದವರು ಸೇವುಣರ ಆಳ್ವಿಕೆಯಲ್ಲಿ ಉನ್ನತ ಹುದ್ದೆಯಲ್ಲಿ ಇದ್ದರು ಎಂಬುದು ಸ್ಪಷ್ಟವಾಗುತ್ತದೆ.

ಸೇವುಣರ ಆರಂಭದ ಅರಸ ಮೂಲ ಪುರುಷ ಯಾರೆಂಬುದು ನಿಖರವಾಗಿ ತಿಳಿಯುವದಿಲ್ಲ, ಕರ್ನಾಟಕದ ಶಿವಮೊಗ್ಗ, ಚಿತ್ರದುರ್ಗ, ಧಾರವಾಡ, ವಿಜಾಪೂರ, ರಾಯಚೂರು, ಬೀದರ ಮತ್ತು ಬಳ್ಳಾರಿ ಜಿಲ್ಲೆಗಳ ಗಡಿ ಭಾಗಗಳಲ್ಲಿ ಆಳ್ವಿಕೆ ನಡೆಸಿದರೆಂದು ಕನ್ನಡ ಶಾಸನಗಳಿಂದ ತಿಳಿದುಬರುತ್ತದೆ. ಕರ್ನಾಟಕ ರಾಜವಂಶಾಧಿರಾಯ ಬಿರುದನ್ನು ಸೇವುಣ ಅರಸರು ಹೊಂದಿದ್ದರು.

ಸೇವುಣರ ಚರಿತ್ರೆ ಅರಿಯಲು ಸಾಹಿತ್ಯಿಕ ಗ್ರಂಥಗಳಾದ ಚಾತುರ್ಮಾರ್ಗ ಚಿಂತಾಮಣಿ, ಸೂಕ್ತಿಕ ಮುಕ್ತಾವಳಿ, ಕೀರ್ತಿ ಕೌಮುದಿ, ಹಮ್ಮೀರ ಮದ ಮರ್ಧನ, ಪ್ರತಾಪರುದ್ರ ಯಶೋಭೂಣಷ ಪ್ರತಾಪ ಚರಿತ್ರಮು, ಸಿದ್ದೇಶ್ವರ ಚರಿತ್ರೆಯ ಲೀಲಾಚರಿತ, ರುಕ್ಮೀಣಿ ಸ್ವಯಂವರ ಶಿಶುಪಾಲ ವಧೆ, ಶಾಂತೇಶ್ವರ ಪುರಾಣ, ವ್ಯವಹಾರ ಗಣಿತ, ಖಜ್ವಾನ್–ಉಲ್–ಫುತುಹ ದೇವಲ್ ರಾಣಿ–ವ–ಖಿಪ್ರು, ತಾರೀಖ್ ಏ–ಫಿರೋಜ್ ಶಾಹಿ ಮುಂತಾದ ಸಂಸ್ಕೃತ, ಕನ್ನಡ, ಮರಾಠಿ, ತೆಲುಗು, ಮತ್ತು ಉರ್ದು ಭಾಷೆಯ ಗ್ರಂಥಗಳಿಂದ ಸೇವುಣರ ಚರಿತ್ರೆಯಮೇಲೆ ಬೆಳಕು ಚೆಲ್ಲುತ್ತವೆ.

ಹೆಚ್ಚಾಗಿ ಕನ್ನಡ ಭಾಷೆಯ ಶಾಸನಗಳ ಲಿಪಿ ಕಂಡಬರುವುದು ಇವುಗಳ ವಿಶೇಷವಾಗಿದೆ. ಸಂಗಮನೇರ, ಅಂಜನೇರಿ, ಕಲಕೇರಿ, ಸಂಗಮ, ತಟ್ಟೂರ, ಹಿಪ್ಪರಗಿ, ಕಡ್ಲೆವಾರ ಹಾಗೂ ಕರಡಕಲ್ ಮುಂತಾದ ಗ್ರಾಮಗಳಲ್ಲಿ ಅಪ್ಪಟ ಕನ್ನಡ ಶಾಸನಗಳು ಈ ರಾಜವಂಶಜರ ಬಗ್ಗೆ ವಿವರಗಳು ಸಿಗುತ್ತವೆ.

ದೃಢ ಪ್ರಹಾರನ ಉತ್ತರಾಧಿಕಾರಿಯಾದ ಸೇವುಣ ಚಂದ್ರ ಈ ವಂಶದ ಅತ್ಯಂತ ಪ್ರಬಲ ಅರಸನಾಗಿದ್ದನೆಂದು ತಿಳಿದುಬರುತ್ತದೆ. ಧಾಡಿಯಪ್ಪ, ಐದನೆಯ ಬಿಲ್ಲಮ, ರಾಜುಗಿ ಮತ್ತು ವಡ್ಡುಗಿಯವರು ಸಾಧನೆಯ ಶಿಖರವೇರಿದ್ದರು ಎಂಬುದು ಉಲ್ಲೇಖವಿದೆ.

ಸೇವುಣರು ಕಲೆ ವಾಸ್ತುಶಿಲ್ಪಕ್ಕೆ ಅಪಾರ ಮನ್ನಣೆ ನೀಡಿದ್ದರು. ಚಾಲುಕ್ಯರ ಶೈಲಿಯಂತೆಯೇ ಇವು ಕಂಡುಬರುತ್ತಿದ್ದರೂ ಇವು, ಇವರ ಕಾಲದ ಶಿಲ್ಪಕಲೆಗಳೆನ್ನಲಾಗಿದೆ. ಹೇಮಾದ್ರಿ ಪಂತಿ ಎಂದು ಕರೆಯಲ್ಪಡುವ ನರಗೂಂದ ದಂಡಿಕೇಶ್ವರ ಸೂಡಿಯ ಜೋಡು ಕಳಸಾರ, ಲಕ್ಕುಂಡಿಯ ಕಾಶೀ ವಿಶ್ವೇಶ್ವರ, ಡಂಬಳದ ದೊಡ್ಡ ಬಸವನ ದೇವಾಲಯ ಮುಂತಾದವುಗಳು ಅವರ ಕಾಲಕ್ಕೆ ಪ್ರಸಿದ್ಧವಾದವುಗಳು.

ಲಿಂಗಸುಗೂರ ತಾಲ್ಲೂಕಿನ ಕರಡಕಲ್‌ನಲ್ಲಿ ಐದನೆಯ ಬಿಲ್ಲಮನು ಕಟ್ಟಿಸಿದ ಕೋಟೆ, ಅಗಸಿ ಬಾಗಿಲು ವಿನೂತನ ವಾಗಿತ್ತೆಂದು ಸ್ಥಳೀಯರು ಹೇಳುತ್ತಾರಾದರೂ, ಇಂದು ಸಂಪೂರ್ಣ ನಶಿಸಿಹೋಗಿದೆ. ಇಲ್ಲೊಂದು ಸುಂದರ ಸೋಮನಾಥ ದೇವಾಲಯವು ಇದ್ದು, ಅಪೂರ್ವ ಕಲಾಕೃತಿಗಳೊಂದಿಗೆ ಮೆರೆದು ಇಂದು ಅವಸಾನದ ಅಂಚಿನಲ್ಲಿದೆ. ಹನುಮಾನ ದೇವಾಲಯ, ಕೃಷ್ಣ ದೇವಾಲಯ ಈ ಗ್ರಾಮದ ಶಿಲ್ಪ ಸೌಂದರ್ಯಕ್ಕೆ ಮಾದರಿಯಾಗಿವೆ. ಅಂದು ವೈಭವದ ಶಿಲ್ಪಕಲೆಯಿಂದ ಮೆರೆದ ಕರಡಕಲ್ ಗ್ರಾಮ ಇಂದು ತಿಪ್ಪೆರಾಶಿಯಲ್ಲಿ ಕೊಳೆಯುತ್ತ, ತನ್ನ ಗತವೈಭವದ ಇತಿಹಾಸವನ್ನು ಮೆಲಕು ಹಾಕುತ್ತಿದೆ.

ಆಸ್ಥಾನ ಗುರುಗಳಾದ ಪಂ.ಶಿವಜಾತ ಒಡೆಯ ಮಹಾ ಸ್ವಾಮಿಗಳಿಂದ ಬಿಲ್ಲಮ ಪುರಾಣದಲ್ಲಿ ಹಳೆಗನ್ನಡ ಭಾಷೆಯಲ್ಲಿ ರಚಿಸಲ್ಪಟ್ಟಿದೆ. ಭಿಲ್ಲಮ ಪುರಾಣ ಗ್ರಂಥ ಇಂದಿಗೂ ಗುಂಡಕನಾಳ ಮಠದಲ್ಲಿ ನಿತ್ಯ ಪೂಜಿಸಲ್ಪಡುತ್ತಿರುವುದು ವಿಶೇಷವಾಗಿದೆ.

ಮರೆತು ಹೋದ ಬಿಲ್ಲಮನ ಚರಿತ್ರೆಯನ್ನು ಕಣ್ಣಿಗೆ ಕಟ್ಟುವಂತೆ ಇಂದಿಗೂ ಪ್ರತಿವರ್ಷ ಪುರಾಣ ಪ್ರವಚನದ ಮೂಲಕ ಅಂದಿನ ಆಳ್ವಿಕೆಯ ತಳಹದಿಯನ್ನು ಅಲ್ಲಮನಂತೆ ಸವಿಸ್ತಾರವಾಗಿ ಇಂದಿನ ಜನ–ಮನಕ್ಕೆ ತಲುಪಿಸುವ ಕಾರ್ಯ ಶ್ರೀಗಳಿಂದ ನಡೆಯುತ್ತಿದೆ.

(ಎಸ್.ವೈ.ಕೆ.)

ಕರಡಿ ಮಜಲು: ಒಂದು ಜನಪದ ಕಲಾ ಪ್ರಕಾರ. ಕರಡಿಯ ಚರ್ಮ ವಾದ್ಯ, ಈ ವಾದ್ಯದಿಂದ ಕರಡಿಯಂತೆ ನಾದ ಹೊರಡುವುದು. ಕರಡೆಯ ಉಲ್ಲೇಖವು ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ ಬಂದಿದ್ದು, ಅದು ಹೀಗಿದೆ. "ಕರಡೆಯ ಗಿರ್ಗಟದ ಧ್ವನಿವೋಲ್". ಚಾಮರಸ ಕವಿಯ ಪ್ರಭುಲಿಂಗಲೀಲೆಯಲ್ಲಿ 'ಮಧುಕೇಶ್ವರನ ಪೂಜಾ ಸಮಯದಲ್ಲಿ ಕರಡೆಗಳ ವಾದನವಿರುತ್ತದೆಯೆಂದೂ, ಮೆರವಣಿಗೆಯ ಮುಂದೆ ಇರುವ ವಾದ್ಯಗಳ ಸಮೂಹದಲ್ಲಿ ಕರಡೆ ಇರುತ್ತಿತ್ತೆಂದು ಪದ್ಮರಾಜ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಕರಡೆಯು ಬಹು ಪ್ರಾಚೀನ ಕಾಲದಿಂದಲೂ ಬಳಸುತ್ತಿದ್ದ ವಾದ್ಯವೆಂಬುದು ವಿದಿತ.

'ಕರಡೆ'ಯನ್ನು ಸೀಹೊನ್ನ, ಟೊಣಪಿ ಕಟ್ಟಿಗೆಯಿಂದ ತಯಾರಿಸುವರು ದುಂಡಾಕಾರದ ಕಟ್ಟಿಗೆ ಹಲಗೆಯ ಎರಡೂ ಬದಿಗೆ ಆಡಿನ ಚರ್ಮವನ್ನು ಹೊದಿಸಿ ನೂಲಿನ ಹುರಿಯಿಂದ ಕಟ್ಟುವರು ಹೀಗೆ ಕಟ್ಟುವಾಗ ಎರಡೂ ಬದಿಗಳ ಅಂಚುಗಳಲ್ಲಿ ಕಬ್ಬಿಣ ಬಳೆಹಾಕಿ ಬಿಗಿಯುವರು. ಬಿಗಿದ ನಂತರ ಕರಡೆ ಬಾರಿಸಲು ಯೋಗ್ಯ ವಾಗುವುದು. ಎರಡೂ ಕೈಗಳಲ್ಲಿ ಒಂದೊಂದು ಕೋಲು ಹಿಡಿದು



ಕರಡಿ ಮಜಲು

ಬಾರಿಸುವರು ಕರಡೆ ವಾದ್ಯದೊಂದಿಗೆ ತಾಳ, ದಿಮ್ಮು, ಚೌಗಡ, ಶಹನಾಯಿ ಶೃತಿ ಮೊದಲಾದ ವಾದ್ಯಗಳನ್ನೂ ನುಡಿಸಲಾಗುವುದು. ಎಲ್ಲಾ ವಾದ್ಯಗಳನ್ನು ಏಕಕಾಲಕ್ಕೆ ನುಡಿಸುವುದರಿಂದ ಒಂದು ವಿಧದ ನಾದ ಹೊರಡುವುದಕ್ಕೆ ಕರಡಿಮಜಲು ಎನ್ನುವರು. ಈ ವಾದ್ಯಗಳನ್ನು ಜನ ಗುಂಪು ಗೂಡಿ ಮದುವೆ, ದೇವರ ಓಕಳಿ, ಜಾತ್ರೆ, ಹಬ್ಬ ಮುಂತಾದ ಪ್ರಸಂಗಗಳಲ್ಲಿ ನುಡಿಸುವುದುಂಟು.

'ಕರಡಿ ಮಜಲು' ವಾದನ ಮುಖ್ಯವಾಗಿ ಗುಲಬರ್ಗಾ ಜಿಲ್ಲೆಯಲ್ಲಿ ನುಡಿಸುವರು. ಕರಡಿಮಜಲು ಮೇಳದಲ್ಲಿ ವಾದನಕಾರ, ಕಲಾಕಾರರ ವೇಷ ಭೂಷಣಗಳು ಸಾದಾ ಇದ್ದು, ಇವರು ಒಂಬತ್ತು ಜನ ಇರುವರು. ಇವರಲ್ಲಿ ಆರು ಜನ ಹಿಮ್ಮೇಳ ವಾದ್ಯದವರಿದ್ದರೆ, ಇಬ್ಬರು ಶಹನಾಯಿ ವಾದಕರು ಹಾಗೂ ಒಬ್ಬರು ಶೃತಿಗಾರರಿರುವರು. ಈ ಕಲೆಯ ಪ್ರದರ್ಶನ ಸಂದರ್ಭದಲ್ಲಿ ಒಂದು ಕರಡಿ ಎರಡು ದಿಮ್ಮು, ಎರಡು ತಾಳಗಳನ್ನು ಬಳಸುತ್ತಾರೆ. ಜೊತೆಗೆ ಇದರೊಂದಿಗೆ ಸಾಥಿಕೊಡಲು ಸನಾದಿಯನ್ನು ಬಳಸುತ್ತಾರೆ. ಇಲ್ಲಿ ಪ್ರಧಾನವಾಗಿ ಕರಡಿ ವೇಷಧಾರಿಯ ಕಲೆಯೇ ಮುಖ್ಯವಾಗಿ ಕಂಡು ಬರುತ್ತದೆ. ತಾಳ, ಲಯಕ್ಕನುಗುಣವಾಗಿ ಇವನು ಹೆಜ್ಜೆ ಹಾಕುತ್ತಾನೆ. ಧಾರ್ಮಿಕ ಉತ್ಸವ ಸಂದರ್ಭಗಳ ಕರಡಿ ಮಜಲನ್ನು ವಿಶೇಷವಾಗಿ ಬಳಸುವುದನ್ನು ಕಾಣುತ್ತೇವೆ. ವಿಶೇಷವಾಗಿ ಗುಗ್ಗಳ, ಹಾಗೂ ವೀರಶೈವ ಅಧಿದೈವವಾದ ವೀರಭದ್ರನ ಉತ್ಸವಗಳಲ್ಲಿ ಇದನ್ನು ಬಳಸುತ್ತಾರೆ.

ಕರಡಿ ಮಜಲಿನ ಮೇಳವು ಒಂದು ಗುಂಪು ವಾದ್ಯಗಳ ವಾದನ ಕಲೆ. ಇದು ಜಾನಪದ ಹಾಗೂ ಶಾಸ್ತ್ರೀಯ ಕಲೆಗಳ ನಡುಮಧ್ಯದ ಕಲೆ. ಈ ಕಲೆ ಕೆಲವು ವಿಧಿ ನಿಷೇಧಗಳಿಂದ ತುಂಬಿದೆ. ಈ ವಾದ್ಯ ನುಡಿಸುವ ಮುಂದೆ ವಾದಕನು ಶುಚಿರ್ಭೂತ ನಾಗಿರಬೇಕು, ಪಾದರಕ್ಷೆಗಳನ್ನು ಆತ ಹಾಕಿಕೊಂಡಿರಬಾರದು. ಮತ್ತು ಕರಡಿ ವಾದ್ಯಕ್ಕೆ ಸತ್ತ ಪ್ರಾಣಿಗಳ ಚರ್ಮ ಬಳಸಿರಬಾರದು.

(ವಿಜಿಪಿ)

ಕರಿ: ಹೈದ್ರಾಬಾದ ಕರ್ನಾಟಕದಲ್ಲಿ ಕಾರ ಹುಣ್ಣಿಮೆಯನ್ನು 'ಊರ ಹಬ್ಬ'ವಾಗಿ ಆಚರಿಸುವ ಪದ್ಧತಿ ಇದೆ. ಅದು ಕರಿ ಹರಿಯುವ ಹಬ್ಬ ಎಂದೂ ಹೆಸರು ಪಡೆದಿದೆ. ಬೇಸಾಯದ ಎತ್ತುಗಳನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ಶೃಂಗರಿಸುತ್ತಾರೆ. ಮಳೆ–ಬೆಳೆಯ ಭವಿಷ್ಯ ತಿಳಿದುಕೊಳ್ಳುವ, ಪ್ರತಿಷ್ಠೆ ಪಣಕ್ಕಿಡುವ ಹಬ್ಬವೂ ಆಗಿ ಪ್ರಚಲಿತದಲ್ಲಿದೆ.

ಹುಣ್ಣಿಮೆಗೆ 8–10 ದಿನಗಳಿರುವಾಗ ಹಬ್ಬದ ಚಟುವಟಿಕೆಗಳು ಆರಂಭವಾಗುತ್ತವೆ. ಎತ್ತುಗಳ ಕೋಡುಗಳನ್ನು ಕೆತ್ತಿ ಪಾಲಿಶ್ ಮಾಡಿ ಅವುಗಳಿಗೆ ಬಣ್ಣ ಹಚ್ಚುವುದು, ಗಗ್ಗರಿ–ಕೊಡನಸು ಹಾಕುವುದು, ಗೊಂಡೆ (ರಿಬ್ಬನ್) ಕಟ್ಟುವುದು, ಕೊರಳಿಗೆ ಗೆಜ್ಜೆ ಗುಮುರಿ ಸರ ಕಟ್ಟುವುದು, ಹಣೆಕಟ್ಟು, ಜೂಲು ಹಾಕಿ ಶೃಂಗರಿಸುವುದು ಇತ್ಯಾದಿಗಳನ್ನು ರೈತರು ಪೈಪೋಟಿ ಮೇಲೆ ಮಾಡುತ್ತಾರೆ.

ಕಾರ ಹುಣ್ಣಿಮೆ ದಿನ ಸಂಜೆ ಇಡೀ ಊರ ಜನರು ಅಗಸೆ ಬಳಿ ಸೇರುತ್ತಾರೆ. ಊರಿನ ಬಾಬುದಾರರ ಮನೆಯ ಕೆಂದ (ಕಂದು) ಮತ್ತು ಬಿಳಿ ಬಣ್ಣದ ಹೋರಿ ಅಥವಾ ಎತ್ತುಗಳನ್ನು ಕರಿ ಹರಿಯುವುದಕ್ಕಾಗಿ ಸಿದ್ಧಗೊಳಿಸುತ್ತಾರೆ. ಅನಂತರ ಅವನ್ನು ಅಗಸೆ ಬಾಗಿಲಿಗೆ ತಂದು ನಿಲ್ಲಿಸಿ ಪೂಜೆ ಮಾಡಿದ ನಂತರ ಕೇಕೆ ಹಾಕುತ್ತ ಹೋರಿಗಳನ್ನು ನಿಗದಿಪಡಿಸಿದ ಸ್ಥಳದವರೆಗೆ ಓಡಿಸುತ್ತಾರೆ. ಈ ಓಟದ ಸ್ಪರ್ಧೆಯಲ್ಲಿ ಕಂದು ಬಣ್ಣದ ಎತ್ತು ಮುಂದೆ ಬಂದರೆ ಮುಂಗಾರು ಬೆಳೆ ಸಮೃದ್ಧ ಎಂದೂ, ಬಿಳಿ ಎತ್ತುಗಳು ಮುಂದೆ ಬಂದರೆ ಹಿಂಗಾರು ಬೆಳೆ ಸಮೃದ್ಧ ಎಂದು ಜನ ಭಾವಿಸುತ್ತಾರೆ. ಊರಿನ ಎಲ್ಲಾ ರೈತರು ತಮ್ಮ ಎತ್ತು, ಆಕಳುಗಳನ್ನು ಈ ಸಂದರ್ಭದಲ್ಲಿ ಅಗಸೆ ಮೂಲಕ ಓಡಿಸುತ್ತಾರೆ.

ಕರಿ ಹರಿಯುವ ಈ ಹಬ್ಬ ರೈತರ ನಂಬಿಕೆಯ ಸಂಕೇತ. ಕರಿ ಹರಿಯುವ ಮುನ್ನ ಅಗಸೆ ಬಾಗಿಲಿಗೆ ಅಡ್ಡವಾಗಿ ಎತ್ತರದಲ್ಲಿ ಕಟ್ಟಿದ ಕೊಬ್ಬರಿ ಸರವನ್ನು ಕರಿ ಹರಿದ ನಂತರ ಜಿಗಿದು ಕಿತ್ತುಕೊಂಡ ಯುವಕರಿಗೆ ವಿಶೇಷ ಮನ್ನಣೆ ಸಿಗುತ್ತದೆ. ಕರಿ ಹರಿಯುವ ಸಂದರ್ಭದಲ್ಲಿ ಬೇರೆ ಊರುಗಳ ಎತ್ತುಗಳು ತಮ್ಮ ಸೀಮೆಗೆ ಬಂದರೆ ಅವನ್ನು ಕಟ್ಟಿಹಾಕಿ ಆ ಊರಿನಲ್ಲಿ ಕರಿ ಹರಿಯದಂತೆ ಮಾಡುವುದು, ಕರಿ ಹರಿಯುವ ಹೋರಿಗಳು ಕೊಸರಿಕೊಂಡು ಹೋಗದಂತೆ ಹಿಡಿದುಕೊಳ್ಳುವ ಎದೆಗಾರಿಕೆ ಎಲ್ಲವೂ ರೋಚಕ ಕ್ಷಣಗಳು ಹಾಗೂ ಸವಾಲಿನವು.

ಕರಿ ಹಬ್ಬದ ಸಂದರ್ಭದ ನಂಬಿಕೆಗಳು ನಿಜವಾಗುತ್ತವೆಯೋ ಇಲ್ಲವೂ ಗೊತ್ತಿಲ್ಲ. ಆದರೆ ಹಬ್ಬದ ನೆಪದಲ್ಲಿ ಎತ್ತುಗಳನ್ನು ಸಿಂಗರಿಸುವುದೂ ಸೇರಿದಂತೆ ಊರಲ್ಲಿ ಉಲ್ಲಾಸದ ವಾತಾವರಣ, ಸಾಮರಸ್ಯ ಸೃಷ್ಟಿಯಾಗುತ್ತದೆ. ಕರಿ ಹರಿಯುವ ಸಂದರ್ಭದಲ್ಲಿ ಊರ ಜನರು ಬೀಳುವ, ಏಳುವ ಘಟನೆಗಳು ಮನರಂಜನೆ ನೀಡುತ್ತವೆ.

(ಎಸ್‌ಜಿಇ)


ಕರಿ ಹರಿಯುವುದು: ಕಾರಹುಣ್ಣಿಮೆಯ ಹಬ್ಬದ ದಿವಸ ಈ ಸಂಪ್ರದಾಯದ ಆಚರಣೆಯಾಗುತ್ತದೆ. ದನಗಳಿಗೆ ಮತ್ತು ಮನುಷ್ಯರಿಗೆ ಬರಬಹುದಾದ ಕರ್ಮ, ಕಷ್ಟ, ಪೀಡೆ, ದೆವ್ವ ಮುಂತಾದ ಅನಿಷ್ಟ ಪೀಡೆಗಳನ್ನು ನಿವಾರಣೆ ಮಾಡುವುದೇ ಕರಿಹರಿಯುವುದರ ಮುಖ್ಯ ಉದ್ದೇಶವಾಗಿದೆ. ಗುಲ್ಬರ್ಗಾ ಜಿಲ್ಲೆಯ ಪ್ರತಿಗ್ರಾಮದಲ್ಲಿಯೂ ಹೆಚ್ಚಾಗಿ ಕರಿಹರಿಯುತ್ತಾರೆ. ಬೇವಿನ ತಪ್ಪಲೇ ಕರಿ– ಎಂದು ಮಾಡಿ, ಅದನ್ನು ಎತ್ತುಗಳ ಮೂಲಕ ಕಡಿಸಿ, ತಮ್ಮ ತಮ್ಮ ಮನೆಗಳಿಗೆ ಒಯ್ದು ಧಾನ್ಯಗಳಲ್ಲಿ ಮುಚ್ಚಿಡುವರು. ಇದು ಜನಪದರ ನಂಬಿಕೆಯ ಜೊತೆಗೆ, ವೈಜ್ಞಾನಿಕ ಅಂಶವೂ ಅಡಗಿದೆ.



ಕರಿಹರಿಯುವ ಕಂಬಗಳು



ಮಾಪುರತಾಯಿ ದೇವದಾಸಿಯರು (ಚಿಂಚನಸೂರು)



ಕೃಷಿ ಸಲಕರಣೆ, ಕೂರಿಗೆ

ಹೋಬಳಿಯಾಗಿ ಉಳಿದಿತ್ತು. ಕಲ್ಯಾಣದ ಮೇಲೆ ಆವರಿಸಿದ ಧೂಳು ಒರೆಸುವ ಕೆಲಸ ಆರಂಭಿಸಿದವರು ಸೊಲ್ಲಾಪುರದ ಬಾಬಾಸಾಹೇಬ್ ಮಲ್ಲಪ್ಪ ವಾರದ್. ಜತೆಗೆ ಫ.ಗು. ಹಳಕಟ್ಟಿಯವರು ವಚನಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ ಅವುಗಳ ಮಹತ್ವ ಅರಿಯುವಂತೆ ಮಾಡಿದರು.

ಇದು ಬಸವಾದಿ ಶರಣರ ಕಲ್ಯಾಣ ಹೌದೋ ಇಲ್ಲವೋ ಎಂಬಂತಹ ಯಾವ ಸ್ಥಳವೂ ಇಲ್ಲಿ ಇರಲಿಲ್ಲ. ಸುಸ್ಥಿತಿಯಲ್ಲಿದ್ದ ಕೋಟೆ 10–11 ನೆಯ ಶತಮಾನದ್ದು ಎಂಬುದೂ ಯಾರಿಗೂ ಗೊತ್ತಿರಲಿಲ್ಲ. ವಾರದ್ ಅವರು ಇದರ ಇತಿಹಾಸವನ್ನು ಜನರಿಗೆ ಮನದಟ್ಟು ಮಾಡಿದರು. ರಾಜಕೀಯ ನಾಯಕರನ್ನು ಧಾರ್ಮಿಕ ಮುಖಂಡರನ್ನು ಕರೆತಂದು ಈ ಸ್ಥಳದ ಮಹತ್ವ ತಿಳಿಹೇಳಿದರು.

ಕೆಲವು ಆಧಾರಗಳನ್ನು ಮುಂದಿಟ್ಟುಕೊಂಡು ಹಾಳು ಬಿದ್ದಿದ್ದ ಮಠ, ಮಂದಿರ, ಗವಿಗಳಿಗೆ ಶರಣರ ಹೆಸರನ್ನು ಕೊಟ್ಟರು. ಬಸವ ಜಯಂತಿಗೆ ಕಲ್ಯಾಣದಲ್ಲಿ ಜಾತ್ರೆ ಹಮ್ಮಿಕೊಂಡು ರಥ ಎಳೆಯುವ ಪರಂಪರೆ ಆರಂಭಿಸಿ ನಾಡಿನ ಜನರ ಗಮನ ಸೆಳೆದರು. ಕಲ್ಯಾಣಕ್ಕೆ 'ಬಸವಕಲ್ಯಾಣ' ಎಂದು ನಾಮಕರಣ ಮಾಡುವಲ್ಲಿಯೂ ಇವರ ಪ್ರಯತ್ನ ಮರೆಯಲಾಗದ್ದು.

ಭಾಲ್ಕಿಯ ಚನ್ನಬಸವ ಪಟ್ಟದೇವರು ಸಹ ಇಲ್ಲಿನ ಶರಣ ಸ್ಮಾರಕಗಳ ಸಂರಕ್ಷಣೆಗೆ ದುಡಿದವರು. ಇಲ್ಲಿ ಅನುಭವ ಮಂಟಪದ ಕೊರತೆ ಎದ್ದು ಕಂಡಿದ್ದರಿಂದ ಸ್ವತಃ ತಲೆಯ ಮೇಲೆ ಕಲ್ಲು, ಮಣ್ಣನ್ನು ಹೊತ್ತುಕೊಂಡು ನೂತನ ಅನುಭವ ಮಂಟಪ ನಿರ್ಮಿಸಿದರು. ಬೆಂಗಳೂರಿನ ವೀರಶೈವ ಕ್ಷೇಮಾಭ್ಯುದಯ ಟ್ರಸ್ಟ್‌ನ ಎಸ್.ಬಿ. ಮುದ್ದಪ್ಪ ಅವರ ನೇತೃತ್ವದಲ್ಲಿಯೂ ಸ್ಮಾರಕಗಳ ಅಭಿವೃದ್ಧಿ ಕೆಲಸ ಕೈಗೆತ್ತಿಕೊಳ್ಳಲಾಗಿತ್ತು. ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ರಚನೆ ಆಗಿದ್ದರಿಂದ ಅವರು ಈ ಕಾರ್ಯ ಕೈಬಿಟ್ಟರು.

ಮಂಡಳಿಯಿಂದ ಅಭಿವೃದ್ಧಿ: 'ಬಸವಕಲ್ಯಾಣ ಅಭಿವೃದ್ಧಿ ಮಂಡಳಿ' ಅಲ್ಲಮಪ್ರಭುಗಳ ಗದ್ದುಗೆ ಮಡಿವಾಳ ಮಾಚಿದೇವರ ಹೊಂಡ, ಬಸವಣ್ಣನವರ ಅರಿವಿನ ಮನೆ, ಉರಿಲಿಂಗ ಪೆದ್ದಿಯವರ ಗವಿ, ಅಕ್ಕನಾಗಮ್ಮನ ಗವಿ, ಹರಳಕಯ್ಯನವರ ಗವಿ, ನುಲಿ ಚಂದಯ್ಯನ ಗವಿ, ಅಂಬಿಗರ ಚೌಡಯ್ಯನವರ ಗವಿ, ಕಂಬಳಿ ನಾಗಿದೇವನ ಮಠ, ಬಂದವರ ಓಣಿ, ಜೇಡರ ದಾಸಿಮಯ್ಯನ ಮಠ, ವಿಜ್ಞಾನೇಶ್ವರ ಗುಹೆ, ಬಸವವನ ವಸ್ತು ಸಂಗ್ರಹಾಲಯ ಮತ್ತು ಪಂಚಸೂತ್ರದ ಗವಿಯಲ್ಲಿ ಅಭಿವೃದ್ಧಿ ಕಾರ್ಯ ಕೈಗೊಂಡಿದೆ. ಶರಣ ಸಾಹಿತ್ಯ ಸಂಶೋಧನಾ ಕೇಂದ್ರದ ಗ್ರಂಥಾಲಯದ ಭವ್ಯ ಕಟ್ಟಡ ನಿರ್ಮಾಣಗೊಂಡಿದೆ. ಇಲ್ಲಿ ಸುಸಜ್ಜಿತ ಗ್ರಂಥಾಲಯ ಆರಂಭಿಸಲು ಈಚೆಗೆ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಈ ಕಟ್ಟಡವನ್ನು ಹಸ್ತಾಂತರಿಸಲಾಗಿದೆ.

ಪ್ರತಿಯೊಂದು ಸ್ಮಾರಕದ ಎದುರಿಗೆ ಚಾಲುಕ್ಯ ಶೈಲಿಯಲ್ಲಿ ಗ್ರಾನೈಟ್ ಕಲ್ಲಿನ ಸುಂದರ ಮಂಟಪಗಳನ್ನು ನಿರ್ಮಿಸಲಾಗಿದೆ. ಸುತ್ತ ಉದ್ಯಾನ ಬೆಳೆಸಲಾಗಿದೆ. ಆವರಣ ಗೋಡೆ, ಆಕರ್ಷಕ ಮತ್ತು ಭವ್ಯ ಪ್ರವೇಶ ದ್ವಾರಗಳನ್ನು ನಿರ್ಮಿಸಲಾಗಿದೆ. ಸ್ಮಾರಕಕ್ಕೆ ಹೋಗುವ ರಸ್ತೆಗೆ ಹಾಸುಗಲ್ಲುಗಳನ್ನು ಹಾಕಲಾಗಿದೆ. ಅಗತ್ಯವಿದ್ದಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಕೂಡು ರಸ್ತೆಗಳ ಡಾಂಬರೀಕರಣ ಕೈಗೊಳ್ಳಲಾಗಿದೆ. ಇದಲ್ಲದೆ ಪ್ರತಿ ಸ್ಮಾರಕದ ಸಮೀಪ ಪ್ರವಾಸಿಗರ ಕೋಣೆಗಳು, ಪರಿಚಾರಕರ ವಸತಿಗೃಹ ಕಟ್ಟಲಾಗಿದೆ. ಹೀಗಾಗಿ ಗಿಡ ಗಂಟೆಗಳ ಮಧ್ಯದಲ್ಲಿ ಯಾರಿಗೂ ಕಾಣದಂತೆ ಇದ್ದ ಗವಿಗಳು ಈಗ ನಿಸರ್ಗ ಸೌಂದರ್ಯದಿಂದ ಕಂಗೊಳಿಸುತ್ತಿದ್ದು ಪ್ರವಾಸಿಗರ ಆಕರ್ಷಣೆಯ ಕೇಂದ್ರಗಳಾಗಿ ಮಾರ್ಪಟ್ಟಿವೆ.

ಅಲ್ಲಮಪ್ರಭುದೇವರ ಗದ್ದುಗೆ ಮಠದ ಹತ್ತಿರ ಅನುಭವ ಮಂಟಪ ನಿರ್ಮಿಸುವ ಬಹು ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ. ಕಲ್ಯಾಣ ಕ್ರಾಂತಿ ನಡೆದಾಗ ಹರಳಯ್ಯ ಮಧುವರಸನಿಗೆ ಯಳೆಹೂಟೆ ಶಿಕ್ಷೆ ಕೊಡಿಸಿದ ದೃಶ್ಯವನ್ನು ಹೊನಲು ಬೆಳಕಿನ ವ್ಯವಸ್ಥೆಯೊಂದಿಗೆ ಪ್ರಸ್ತುತಪಡಿಸುವ ಕೆಲಸವನ್ನೂ ಕೈಗೆತ್ತಿಕೊಳ್ಳಲಾಗುತ್ತಿದೆ.

ಸಮಾನತೆಗಾಗಿ ಕ್ರಾಂತಿ ನಡೆದ ಈ ನೆಲ ಜಗತ್ತಿಗೆ ಒಳ್ಳೆಯ ಸಂದೇಶ ಸಾರುವುದಕ್ಕಾಗಿ ಮತ್ತೆ ಸಿದ್ಧಗೊಳ್ಳುತ್ತಿದೆ. 'ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿ ರಸವೆಂಬ ತೈಲವನೆರೆದು, ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು, ತೊಳಗಿ ಬೆಳಗುತಿರ್ದುತಯ್ಯ ಶಿವನ ಪ್ರಕಾಶ, ಆ ಬೆಳಗಿನೊಳಗೊಪ್ಪುತಿರ್ದರಯ್ಯಾ ಅಸಂಖ್ಯಾತ ಭಕ್ತ ಮಹಾಗಣಂಗಳು..' ಎಂದು ಅಲ್ಲಮಪ್ರಭು ಅಂದಿನ ವೈಭವವನ್ನು ವಚನದಲ್ಲಿ ಹಿಡಿದಿಟ್ಟಿದ್ದಾರೆ. ಅದರಂತೆ ಗತವೈಭವದ ಬೆಳಕು ಪಸರಿಸಲು ಕಲ್ಯಾಣ ಇನ್ನೊಮ್ಮೆ ಸನ್ನದ್ಧವಾಗುತ್ತಿದೆ. ಪ್ರೇರಣಾ ಸ್ಥಾನವಾಗಿ ರೂಪುಗೊಳ್ಳುತ್ತಿದೆ. *(ಡಿಪಿ)*

ಕಲ್ಲಪ್ಪ ಫಕೀರಪ್ಪ ಹೂಗಾರ: ಕರಡಿ ಮಜಲು ಕಲಾವಿದ. ರಾಯಚೂರು ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ಕುಕನೂರು ಗ್ರಾಮದಲ್ಲಿ ಎಳೆಯ ಹರೆಯದ ಯುವಕರ ತಂಡವೊಂದು ಹುಟ್ಟಿಕೊಂಡಿತು. ಅದರಲ್ಲಿ ಕೆಲವರಿಗೆ ದೊಡ್ಡಾಟದ ಖಯಾಲಿ: ಕೆಲವರಿಗೆ ಭಜನೆ ಹಾಡುಗಳ ಗೀಳು; ಮತ್ತೆ ಕೆಲವರಿಗೆ ಗೀಗೀ ಪದಗಳ ಆಸಕ್ತಿ. ಆದರೆ ಆ ತಂಡದಲ್ಲಿದ್ದು ಮಂಗಳಕರ ಹಾಗೂ ಅದ್ಭುತ ಶಬ್ದ ನೀಡುವ ಕರಡೆ ಮಜಲಿನ ಮೇಲೆ ಒಲವು. ಹೂಗಾರರಿಗೆ ಕರಡೆ ಮಜಲಿನ ವಾದನದಲ್ಲಿ ಅವರು ತೋರುವ ಪರಿಣತಿ ಮತ್ತು ಹಿಡಿತ ಪ್ರಶಂಸಾರ್ಹ.

ಇವರು ತಮ್ಮ ಗುರು ಬಂದಗಿ ಸಾಬ ಅಸೂಟಿ ಅವರನ್ನು ಈಗಲೂ ಸ್ಮರಿಸಿಕೊಳ್ಳುತ್ತಾರೆ. ಸಂಸ್ಕೃತಿ ಸುದಿನ ಕಾರ್ಯಕ್ರಮ, ಬೆಂಗಳೂರಿನ ಕಲಾಕ್ಷೇತ್ರ, ದೆಹಲಿಯ ಭಾರತದ ಗಣರಾಜ್ಯೋತ್ಸವ, ಮೈಸೂರಿನ ದಸರಾ ಮಹೋತ್ಸವ, ಹಂಪೆ ಉತ್ಸವ ಮುಂತಾದ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಕರಡೆ ಮಜಲಿನಂಥ ವಾದ್ಯಮೇಳಕ್ಕೆ ವಿಶೇಷ ಕಳೆಯನ್ನುತಂದ ಕೀರ್ತಿ ಇವರದು. ಕರ್ನಾಟಕ ಜಾನಪದ ಪ್ರಶಸ್ತಿ ಪಡೆದಿದ್ದಾರೆ. *(ಜಿಆರ್‌ಟಿ)*

ಕಲ್ಲೂರು: ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮ ಈ ಊರಿನ ಸುತ್ತಮುತ್ತಲೂ ದೊಡ್ಡ ದೊಡ್ಡ ಗುಡ್ಡಗಳಿವೆ. ಹೀಗಾಗಿ ಈ ಊರಿಗೆ ಕಲ್ಲೂರು ಎಂಬ ಹೆಸರು ಬಂದಿರಬಹುದು. ಈ ಊರಿನ ಕವಿ ಲಿಂಗಣ್ಣೊಡೆಯ ಬರೆದ 'ಬಾರಮಾಸ' ಎನ್ನುವ ಕೃತಿಯನ್ನು ಶಾಂತರಸರು ಸಂಪಾದಿಸಿ ಪ್ರಕಟಿಸಿದ್ದಾರೆ.

ಹೀಗೆ ಮಾಡುವುದರಿಂದ ಧಾನ್ಯಗಳಿಗೆ ಹುಳ ಹಿಡಿಯುವುದಿಲ್ಲ. ಈ ಸಂಪ್ರದಾಯ ಚಿತ್ತಾಪೂರ ತಾಲ್ಲೂಕಿನ ಭಂಕುರ ಗ್ರಾಮದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ನಡೆಯುತ್ತದೆ. ಆ ದಿವಸ ಎತ್ತಿನ ಗಾಡಿಯಲ್ಲಿ ಊರಿನ ಅಧಿಕಾರಿಗಳಾದ ಮಾಲಿಗೌಡ, ಪೊಲೀಸಗೌಡ, ಕುಲಕರ್ಣಿ ಮೂವರನ್ನು ಕೂಡ್ರಿಸಿ ಮೆರವಣಿಗೆ ಮಾಡುತ್ತ ಊರಿಂದ ಸ್ವಲ್ಪ ದೂರದಲ್ಲಿರುವ ಕರಿಯಮ್ಮ ತಾಯಿಯ ಗುಡ್ಡಕ್ಕೆ ಬರುತ್ತಾರೆ. ಕೆಳಗೆ ಇಳುಕಲಿಗೆ ಅಡ್ಡವಾಗಿ ಒಂದು ವಿಧದ ದಾರವನ್ನು ಆ ಕಡೆ ಈ ಕಡೆ ಹಿಡಿದಿರುತ್ತಾರೆ. ಮಾಲಿಗೌಡ, ಹತಿಯಾರ ಕೈಯಲ್ಲಿ ಹಿಡಿದು ನಿಂತಿರುತ್ತಾನೆ. ಗಾಡಿಯನ್ನು ಕೆಳಗೆ ಓಡಿಸುತ್ತಾರೆ. ದಾರದ ಸಮೀಪಕ್ಕೆ ಬಂದ ತಕ್ಷಣ ಮಾಲೀಗೌಡ ತನ್ನ ಹತಿಯಾರದಿಂದ ಒಂದೇ ಸಲಕ್ಕೆ ಆ ದಾರವನ್ನು ಕತ್ತರಿಸಬೇಕು. ಇಲ್ಲದಿದ್ದರೆ ಊರಿಗೆ ಕೇಡು– ಎಂದು ಜನರ ನಂಬಿಕೆ. ಇದನ್ನು ನೋಡಲು ಬೇರೆ ಊರಿನಿಂದ ಸಾವಿರಾರು ಜನ ಬಂದಿರುತ್ತಾರೆ. ಭಂಕೂರಿನ ಕರಿಯ ಬಗ್ಗೆ ಕಟ್ಟಿದ ಜನಪದ ಹಾಡುಗಳಿಗಂತೂ ಲೆಕ್ಕವಿಲ್ಲ. ಈ ಭಾಗದ ಹಳ್ಳಿಯ ಜನರು ಆ ಹಾಡುಗಳನ್ನು ರಾಗಬದ್ಧವಾಗಿ ಹೇಳುತ್ತಾರೆ.

ಇವುಗಳಲ್ಲದೆ ಇನ್ನೂ ಅನೇಕ ಸಂಪ್ರದಾಯಗಳನ್ನು ಆಯಾ ಪ್ರಸಂಗಗಳಲ್ಲಿ ಆಚರಣೆಯಲ್ಲಿರುವುದನ್ನು ಕಾಣುತ್ತೇವೆ. ಮೇಲೆ ಕಾಣಿಸಿದ ಸಂಪ್ರದಾಯಗಳು ಹೆಚ್ಚಾಗಿ ದೇವ–ದೇವತೆಗಳ ಜಾತ್ರೆಯಲ್ಲಿ ಆಚರಿಸಲ್ಪಡುತ್ತವೆ.

ಕಲಬುರ್ಗಿ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ತೀರ ಹಿಂದುಳಿದ ಅಫಜಲಪೂರ ತಾಲ್ಲೂಕು ಈ ನಂಬಿಕೆ ಸಂಪ್ರದಾಯಗಳ ಆಗರವಾಗಿದೆಯೆಂದು ಮೇಲಿನ ಅವಲೋಕನದಿಂದ ನಿಚ್ಚಳವಾಗಿ ತಿಳಿದುಬರುತ್ತದೆ. *(ಬಿಪಿಪಿ)*

ಕರಿಗಾಲಬಾಯಿ: ಇದೊಂದು ಕನ್ನಡ ಬಯ್ಗುಳ, ನುಡಿಗಟ್ಟು. ಕರಿಗಾಲಬಾಯಿ ಎಂದರೆ ಅಶುಭವನ್ನು ನುಡಿಯುವುದು ಎಂಬುದು ಅರ್ಥ. ಕೆಲವರು ನುಡಿದರೆ ಕೆಟ್ಟದಾಗುತ್ತದೆ, ಅಮಂಗಳವಾಗುತ್ತದೆ ಎಂಬ ನಂಬಿಕೆ ರೂಢಿಯಲ್ಲಿದೆ. ಕರಿಗಾಲ ಪದದಲ್ಲಿರುವ 'ಕರಿ' ಶಬ್ದ ಅಶುಭ, ಕೆಟ್ಟದ್ದು ಎಂಬ ಅರ್ಥವನ್ನು ಕೊಡುತ್ತದೆ. ಜನಪದರು ಆಚರಿಸುವ ಹಬ್ಬ–ಹರಿದಿನಗಳ ಶುಭ ದಿನಗಳಲ್ಲಿ ಒಂದು ದಿನವನ್ನೂ 'ಕರಿದಿನ' ಎಂದು ಆಚರಿಸುವುದು ವಾಡಿಕೆ. ಈ ಕರಿದಿನ ಅಶುಭ, ಅಮಂಗಳವೆಂದು ಭಾವಿಸಿ ಅಂದು ಯಾವುದೇ ಶುಭ ಕಾರ್ಯವನ್ನು ಆಚರಿಸುವುದಿಲ್ಲ. ಕರಿಗೆ ಯಾವ ಶಾಸ್ತ್ರದ ಆಧಾರವಿಲ್ಲ. ಅದು ಜನಪದರ ಆಳವಾದ ನಂಬುಗೆ. 'ಕರಿ' ಎಂದರೆ ಕತ್ತಲು, ಅಂಧಕಾರವೆಂದು ಅರ್ಥ. ಕತ್ತಲು ಅಶುಭ, ಅಮಂಗಳದ ಸಂಕೇತ. ಅದರ ವಿರುದ್ಧ ಶಬ್ದವಾದ 'ಬಿಳಿ' ಎಂದರೆ ಬೆಳಕು, ಉಜ್ವಲ ಪ್ರಕಾಶ. ಅದು ಶುಭ, ಮಂಗಲಕಾರಕ ಎಂಬುದು ಜನಪದರು ಅವರೇ ನಂಬಿಕೊಂಡ ಶಾಸ್ತ್ರ. ಅಂತೆಯೇ 'ಕರಿಗಾಲಬಾಯಿ' ಎಂಬುದು ಅವರೇ ರಚಿಸಿದ ನಂಬುಗೆಯ ಶಾಸ್ತ್ರ.

ಕೆಲವರು ನುಡಿದರೆ ಕೆಟ್ಟದಾಗುತ್ತದೆ ಎಂಬ ಜನಪದರ ನಂಬುಗೆಯನ್ನು ಅಂಧಶ್ರದ್ಧೆಯೆಂದು ಅಷ್ಟು ಸುಲಭವಾಗಿ ಅಲ್ಲಗಳೆಯು ವಂತಿಲ್ಲ. ಸಾವಿರಾರು ವರ್ಷಗಳ ಸಾವಿರಾರು ಜನ ಸಮುದಾಯದವರ ಅನುಭವಕ್ಕೆ ಬಂದ ಸತ್ಯ ಅದಕ್ಕೆ ಅರ್ಥವಿರುತ್ತದೆ. 'ಕರಿಗಾಲಬಾಯಿ' ಎಂಬುದು ಜನಪದರು ನಂಬಿದ ಸತ್ಯ. ಕೆಲವರು ನುಡಿದು ಕೆಟ್ಟದಾಗಿ ಪರಿಣಮಿಸಿದ್ದಕ್ಕೆ ಮಾತು ನುಡಿಗಟ್ಟಾಗಿ ರೂಪು ಗೊಂಡಿದೆ. ಕೆಟ್ಟದ್ದನ್ನು ಉಂಟು ಮಾಡುವವರ ನಾಲಿಗೆಯ ಮೇಲೆ ಕರಿ ಮಚ್ಚೆ ಇರುತ್ತದೆಂದು ನಂಬಿಸುವ ಮೂಲಕ ಜನಪದರು ಈ ನುಡಿಗಟ್ಟಿಗೆ ಜೀವತುಂಬಿದ್ದಾರೆ. 'ಅವನ ನಾಲಿಗೆ ಮ್ಯಾಲ ಕರಿಮಚ್ಚಿ ಐತಿ' ಎಂಬ ರೂಢಿಯ ಮಾತು ಇದಕ್ಕೆ ನಿದರ್ಶನವಾಗಿದೆ. *(ಎಸ್‌ಎಂ)*

ಕಲ್ಮೇಶ್ವರ ದೇವಸ್ಥಾನ: ಕೊಪ್ಪಳ ಜಿಲ್ಲೆ ಕರಮುಡಿ ಗ್ರಾಮದಲ್ಲಿ 11–12ನೆಯ ಶತಮಾನದ ಹೊಯ್ಸಳರ ಸಾಮ್ರಾಜ್ಯದ ಮಹಾನ್ ಶಿಲ್ಪಿ ಜಕನಾಚಾರಿಯಿಂದ ನಿರ್ಮಾಣಗೊಂಡ ದೇವಾಲಯ.

ಈ ದೇವಸ್ಥಾನದ ನಿರ್ಮಾಣದ ಹಿಂದೆ ಒಂದು ಸ್ವಾರಸ್ಯಕರ ಕಥೆ ಇದೆ. 11–12 ನೆಯ ಶತಮಾನದಲ್ಲಿ ಗ್ರಾಮದಲ್ಲಿ ಕುಸುಮೇಶ್ವರ ದೇವಸ್ಥಾನ ಹಾಗೂ ಕಲ್ಮೇಶ್ವರ ದೇವಸ್ಥನಗಳ ನಿರ್ಮಾಣಕಾರ್ಯ ಭರದಿಂದ ರೂಪುಗೊಳ್ಳುತಿದ್ದುವು. ಈ ಎರಡು ದೇವಸ್ಥಾನಗಳಲ್ಲಿ ಯಾವುದಾದರೂ ಒಂದು ದೇವಸ್ಥಾನಕ್ಕೆ ಗೋಪುರವಾದರೆ, ಮೊದಲನೆ ಅಕ್ಷರದಿಂದ ಯಾವುದಾದರು ಹೆಸರು ಈ ಗ್ರಾಮಕ್ಕೆ ಇಡಬೇಕೆಂಬ ಒಡಂಬಡಿಕೆಯಾಗಿತ್ತಂತೆ. ಅದರಂತೆ ಕಲ್ಮೇಶ್ವರ ದೇವಸ್ಥಾನದ ಗೋಡೆ ಮೊದಲು ನಿರ್ಮಾಣಗೊಂಡಿತು. ಅದಕ್ಕೆ ಈ ಗ್ರಾಮಕ್ಕೆ ಕರಮುಡಿ ಎಂದು ನಾಮಕರಣವಾಯಿತೆಂದು ಹೇಳಲಾಗುತ್ತದೆ.

ಸುಂದರವಾದ ಗೋಪುರ ಹೊಂದಿರುವ ಈ ದೇವಸ್ಥಾನದ ಗೋಡೆಗಳ ಮೇಲೆ ದೇವತೆಗಳ ಚಿತ್ರಗಳಿವೆ. ದೇವಸ್ಥಾನದ ಗರ್ಭಗುಡಿಯಲ್ಲಿ ಎಡಹರಿ ಲಿಂಗವಿದೆ. ಗರ್ಭಗುಡಿಯ ಒಳಗೆ ಹೋದರೆ, ತಂಪಾದ ವಾತಾವರಣವಿರುತ್ತದೆ. ಇಂತಹ ವೈವಿಧ್ಯಮಯವಾದ ಈ ದೇವಸ್ಥಾನ ಇಂದು ಅತಿಕ್ರಮಣಕ್ಕೆ ತುತ್ತಾಗಿದೆ. ಈ ದೇವಸ್ಥಾನಕ್ಕೆ ನಡೆದುಕೊಳ್ಳುವ ಭಕ್ತರ ಸಂಖ್ಯೆ ಅಪಾರವಾಗಿದೆ. ಹರಕೆ ಹೊತ್ತವರು ಇಲ್ಲಿ ಪ್ರದಕ್ಷಿಣೆ ಹಾಕಿ ದೀಡು ನಮಸ್ಕಾರ ಹಾಕಬೇಕಾದರೆ ಜಾಗವೇ ಇಲ್ಲದಂತೆ ಮಾಡಲಾಗಿದೆ. ದೇವಸ್ಥಾನದ ಪುರಾತನವಾದ ಗೋಡೆ ಮತ್ತು ಗೋಪುರದ ಕಲ್ಲುಗಳು ಮಳೆ, ಗಾಳಿ, ಬಿಸಿಲಿಗೆ ಶಿಥಿಲವಾಗಿ ಬಿರುಕುಗಳು ಕಂಡು ಬರುತ್ತಿವೆ. *(ಎಸ್‌ಬಿಪಿ)*

ಕಲ್ಯಾಣ: ಬೀದರ ಜಿಲ್ಲೆ ಬಸವಕಲ್ಯಾಣದಲ್ಲಿ ಜಂಗಮ ಸ್ವರೂಪಿಯ ನೆನಪಿಗೆ ಸ್ಥಾವರದ ಸ್ಮಾರಕಗಳು ತಲೆಯೆತ್ತುತ್ತಿವೆ. ಹನ್ನೆರಡನೆಯ ಶತಮಾನದಲ್ಲಿ ಸಾಮಾಜಿಕ ಬದಲಾವಣೆಯ ಚಿಂತನೆಗೆ ಕಾರಣೀಭೂತರಾದವರು ಬಸವಣ್ಣ. ಅವರ ಚಿಂತನೆಗೆ ನೆಲ–ನೆಲೆ ಒದಗಿಸಿದ್ದು 'ಕಲ್ಯಾಣ'. ಗತವೈಭವವನ್ನು ಮರುಸೃಷ್ಟಿಸುವ ಉದ್ದೇಶದಿಂದ ನೂತನ ಸ್ಮಾರಕಗಳ ನಿರ್ಮಾಣದ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಅನೇಕ ನೂತನ ಸ್ಮಾರಕಗಳು ಮೇಲೆದ್ದಿವೆ.

ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಸಾಂಸ್ಕೃತಿಕ ಕ್ರಾಂತಿಗೆ ನೆಲೆಗಟ್ಟು ಒದಗಿಸಿದ ಕಲ್ಯಾಣ ನಗರಿಯ ವೈಭವ ಇತಿಹಾಸದ ಕಾಲಚಕ್ರದಲ್ಲಿ ಸಿಲುಕಿ ಮೂಲೆಗುಂಪಾಗಿತ್ತು. ಚಾಲುಕ್ಯ ಮತ್ತು ಕಳಚುರಿ ಮನೆತನಗಳಿಗೆ ರಾಜಧಾನಿಯಾಗಿದ್ದ ಕಲ್ಯಾಣ ಪಟ್ಟಣವು 20ನೆಯ ಶತಮಾನದ ಆರಂಭದಲ್ಲಿ ಕೇವಲ ಕಸಬಾ

ಅನಿವಾರ್ಯವೆಂಬ ವಾಸ್ತವ ಸತ್ಯವನ್ನು ತಿಳಿಸುತ್ತದೆ. ಕವಿರಾಜ ಮಾರ್ಗ ಶಾಸ್ತ್ರಕೃತಿಯಾದರೂ ಅದರಲ್ಲಿನ ಕೆಲ ಸ್ವತಂತ್ರ ಭಾಗಗಳು ಕಾವ್ಯಾಂಶದಿಂದ ತುಂಬಿಕೊಂಡಿವೆ. ಇದರಿಂದಾಗಿ ಕವಿರಾಜಮಾರ್ಗ ಕಾರ ಕೇವಲ ಶಾಸ್ತ್ರಕಾರನಾಗಿರದೇ ಕವಿಯಾಗಿದ್ದನೆಂದೂ ವಿದಿತವಾಗುವುದು. ಕವಿರಾಜ ಮಾರ್ಗದಲ್ಲಿ ಪರಮತ ಸಹಿಷ್ಣುತೆ, ಕರ್ತವ್ಯ ನಿಷ್ಠೆ, ಸ್ತುತಿ ನಿಂದೆಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಪರರ ವಿಚಾರಗಳನ್ನು ಪರರ ಧರ್ಮವನ್ನು ಸಹಿಸುವುದೇ ನಿಜವಾದ ಬಂಗಾರವೆಂದು, ಸಂಪತ್ತೆಂದು ಹೇಳಿದ್ದೂ ಈ ಕೃತಿಯಲ್ಲಿಯೇ ಪರಮತಸಹಿಷ್ಣು ವಿಚಾರವನ್ನು ಈ ಕೃತಿ ಚೆನ್ನಾಗಿ ಬಿಂಬಿಸಿದೆ. ಕವಿರಾಜ ಮಾರ್ಗ ಎಲ್ಲ ದೃಷ್ಟಿಯಿಂದ ಕನ್ನಡದ ಆದಿ ಗ್ರಂಥವಾಗಿದ್ದು, ಇದು ವಿಚಾರ ಸಂಪತ್ತಿಯಿಂದ ಕೂಡಿದ ಬೆಲೆಯುಳ್ಳ ಕೃತಿ. *(ವಿಜಿಪಿ.)*

ಕಾ

ಕಾಟಿಗ: ವೃತ್ತಿಯಿಂದ ಬಂದ ಪದ. ಕಾಟಿಗ, ಕಟಿಗರು, ಖಾಟಿಕ, ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮುಸ್ಲಿಂರಲ್ಲಿ, ಮರಾಠರಲ್ಲಿ, ಕ್ಷತ್ರಿಯರಲ್ಲಿ, ಸಿಖ್‌ರಲ್ಲಿಯೂ ಕಾಟಿಗರಿರುತ್ತಾರೆ. ಕಡೆಯಲಿಕ್ಕೆ ತಂದಂಥ ಜಾನುವಾರುಗಳನ್ನು ಕಟ್ಟಲಿಕ್ಕೆ ಒಂದು ಸ್ಥಳವನ್ನು ಮಾಡಿರುತ್ತಾರೆ. ದನ, ಕರು, ಎತ್ತು ಅಥವಾ ಎಮ್ಮೆ ಕೊಯ್ಯಬೇಕಾದರೆ ಹರಿತವಾದ ಚೂರಿಯಿಂದ ಕುತ್ತಿಗೆ ಕಡಿಯುತ್ತಾರೆ. ಮುಸ್ಲಿಂರಲ್ಲಿ ಹಲಾಲ್ ಮಾಡುತ್ತಾರೆ. ಸಿಖ್‌ಧರ್ಮದಲ್ಲಿ ಒಂದೇ ಏಟಿಗೆ ರಕ್ತ ಹೋಗದಂತೆ ಕಡಿಯುತ್ತಾರೆ. ಕೆಲವರು ಜಾನುವಾರುಗಳಿಗೆ ಬೇಸುದ್ದ ಮಾಡಿ ಒಂಧೇ ಏಟಿಗೆ ಕಡಿಯುತ್ತಾರೆ. ಮತ್ತೆ ಕೆಲವರು ಜಾನುವಾರುಗಳನ್ನು ಅಂಗಾತವಾಗಿ ಮಲಗಿಸಿ ಕಡಿಯುತ್ತಾರೆ. ಹಂದಿಯನ್ನು ಕೊಯ್ದು ಬಿಸಿನೀರಿನಲ್ಲಿ ಸ್ವಲ್ಪಮಟ್ಟಿಗೆ ಇಟ್ಟು ಆಮೇಲೆ ಚರ್ಮ ಬೇರ್ಪಡಿಸುತ್ತಾರೆ. ಕಾಟಿಗರು ಇತ್ತೀಚೆಗೆ ದನಕರುಗಳನ್ನು ಕಡಿಯಲಿಕ್ಕೆ ಹೊಸ ಬಗೆಯ ಯಂತ್ರೋಪಕರ–ಣಗಳನ್ನು ಬಳಸುತ್ತಾರೆ. ಅವುಗಳನ್ನು ಕಡಿಯುವ ಪೂರ್ವದಲ್ಲಿ ಮನುಷ್ಯನಿಗೆ ತಿನ್ನಲಿಕ್ಕೆ ಬೇಕಾಗುವ ಮಾಂಸವನ್ನು ಕಡಿದು ಸ್ವಚ್ಛ ಜಾಗದಲ್ಲಿ ಇಡುತ್ತಾರೆ. ಕಡಿಯುವ ಪೂರ್ವದಲ್ಲಿ ನಗರ ಪಾಲಿಕೆಯಿಂದ ಅದನ್ನು ಪರೀಕ್ಷಿಸಿ ಕಡಿಯುತ್ತಾರೆ. ಒಂದು ಜಾನುವಾರನ್ನು ಕಡಿದರೆ ಕಟಿಗರಿಗೆ ಜಾನುವಾರುಗಳಿಂದ ಮಾಂಸ, ಚರ್ಮ, ಉಲನ್, ಚರಬಿ, ಎಲುವು ಕೋಡು, ರಕ್ತ ಇತ್ಯಾದಿಗಳು ದೊರೆಯುತ್ತದೆ.

ಕಾಟಿಗರಲ್ಲಿ ಎರಡು ಬಗೆ. ಮನೆಯಲ್ಲಿ ಕಡಿಯುವವರಿಗೆ ಕಾಟಿಗ ಎನ್ನುವುದಿಲ್ಲ. ಯಾರು ವ್ಯಾಪಾರಕ್ಕಾಗಿ ವೃತ್ತಿ ಮಾಡುತ್ತಾರೋ ಅವರಿಗೆ ಕಾಟಿಗ ಎನ್ನುತ್ತಾರೆ. ವೇದ ಕಾಲದಿಂದಲೂ ಶಸ್ತ್ರ, ಗೋಹತ ಎನ್ನುವ ವರ್ಣನೆ ಬರುತ್ತದೆ. ಪ್ರಾಚೀನ ಕಾಲದಿಂದಲೂ ಪಶುವಧೆ ಊರ ಹೊರಗಡೆ ಇರುವುದು ಉಲ್ಲೇಖವಿದೆ. ಸತ್ತ ಪ್ರಾಣಿಗಳ ಮಾಂಸ ತಿನ್ನಬಾರದೆಂಬ ನಿಷಿದ್ಧತೆ ಮೊದಲಿನಿಂದಲೂ ಇದೆ. ಜನಸಂಖ್ಯೆ ಹೆಚ್ಚಾದಂತೆಲ್ಲ ಜನರಿಗೆ ಮಾಂಸ ಸರಬರಾಜು ಮಡುವ ಹೊಣೆ ಹೆಚ್ಚಾಯಿತು. ಆದ್ದರಿಂದ ಇದೊಂದು ವೃತ್ತಿಯಾಗಿಯೇ ಬೆಳೆಯಿತು. *(ಎಚ್‌ಪಿ)*

ಕಾಯಕದಯ್ಯ: ಅಯ್ಯನವರು (ಜಂಗಮರು) "ಕೋರಾನ್ನ ಭಿಕ್ಷೆ"ಯಲ್ಲದೆ ಇನ್ನೂ ಹಲವು ವಿಶಿಷ್ಟವಾದ ಕಾಯಕಗಳನ್ನು ಕೈಗೊಂಡಿರುತ್ತಾರೆ. ವೈದಿಕವೃತ್ತಿ; ಪುರಾಣ ಪ್ರವಚನ ನಡೆಸಿಕೊಡುವುದು, ಜ್ಯೋತಿಷ್ಯ ಹೇಳುವುದು– ಇವು ಸರ್ವೇಸಾಮಾನ್ಯವಾದ ಜಂಗಮರ ಕಾಯಕಗಳು. ಸಾರುವಕಾಯಕ, ಮುಳ್ಳಾವಿಗೆಯ ಕಾಯಕ ಅವರು ಕೈಗೊಳ್ಳುವ ವಿಶಿಷ್ಟವಾದ ಕಾಯಕಗಳು. ಅಂತಹ ಕಾಯಕದಿಂದ ಜೀವಿಸುವವರನ್ನು ಉತ್ತರ ಕರ್ನಾಟಕದ ಜನಪದರು "ಕಾಯಕದಯ್ಯ'ಗಳೆಂದೇ ಇಂದಿಗೂ ಗುರುತಿಸುತ್ತಾರೆ.

ಸಾರುವ ಕಾಯಕ ಹೊಂದಿದ ಜಂಗಮರು ನಿಲುವಂಗಿ ತೊಟ್ಟು, ತಲೆಯ ಮೇಲೆ ಕಾವಿ ವರ್ಣದ ರುಮಾಲು ಹಾಕಿಕೊಂಡು, ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ ಧರಸಿಕೊಂಡು, ಕೈಯಲ್ಲಿ ಕಂದೀಲು ಹಿಡಿದು ಹೊತ್ತು ಮುಳುಗುವ ಸಮಯಕ್ಕೆ ಊರಲ್ಲಿ ಭಕ್ತರ ಮನೆಗಳಿಗೆ ಹೋಗುತ್ತಾರೆ. ತಲೆಯ ಮೇಲೆ ಕೊಡೆಯೊಂದು ಹಿಡಿದುಕೊಂಡಿರುತ್ತಾರೆ. ಅವರು ಸಾರುವುದು 'ಕಾಲಜ್ಞಾನ'ವನ್ನು ಭವಿಷ್ಯತ್ ಕಾಲದಲ್ಲಿ ಘಟಿಸಬಹುದಾದ ಸಂಗತಿಗಳನ್ನು ಕುರಿತು ಅವರು ರಾಗ ಬದ್ಧವಾಗಿ ಹಾಡುತ್ತಾರೆ. ಕೆಲವು ಅಯ್ಯನವರು ತಮ್ಮನ್ನು "ಕೊಡೆಕಲ್ಲ ಸಂಪ್ರದಾಯದ ಅಯ್ಯ"ನೆಂದು ಹೇಳಿಕೊಳ್ಳುತ್ತಾರೆ. ಮುಂದಾಗಬಹುದಾದ ಮಳೆ–ಬೆಳೆಗಳ ಬಗೆಗೂ ಇವರು ಭವಿಷ್ಯ ನುಡಿಯುತ್ತಾರೆ. ಜನಪದರಿಗೆ ಕಾಯಕದ ಅಯ್ಯನವರಲ್ಲಿ ಭಕ್ತಿ ಶ್ರದ್ಧೆಗಳಿರುತ್ತವೆ. ಅವರು ಹೇಳುವ ಭವಿಷ್ಯವನ್ನು ನಂಬುತ್ತಾರೆ. ಮರತುಂಬಿ ಧಾನ್ಯವನ್ನು ಅಯ್ಯನವರ ಜೋಳಿಗೆಗೆ ಸುರುವುತ್ತಾರೆ. ಕೆಲವರು ದಕ್ಷಿಣೆಯನ್ನು ಕೊಡುತ್ತಾರೆ.

ಮುಳ್ಳು ಆವುಗೆಯ ಕಾಯಕದವರು ಸಾರುವ ಅಯ್ಯಗಳಂತೆ ಮನೆ–ಮನೆಗಳಿಗೆ ಹೋಗುವುದಿಲ್ಲ. ಅವರು ಜನಸಂದಣಿ ಇರುವ ಸ್ಥಳದಲ್ಲಿ ಅಥವಾ ಚೌರಸ್ತೆಯ ಕೇಂದ್ರದಲ್ಲಿ ನಿಂತು ತಾವು ಹೇಳಬೇಕಾದುದನ್ನು ಉಗ್ಘಡಿಸುತ್ತಾರೆ. ಇವರು ತಮ್ಮನ್ನು 'ವೀರಭದ್ರನ ಸಂಪ್ರದಾಯದವರೆಂದು' ಗುರುತಿಸಿಕೊಳ್ಳುತ್ತಾರೆ. ಭಕ್ತರಿಂದ ಇಂತಿಷ್ಟು ಕಾಣಿಕೆಗಾಗಿ ಆಗ್ರಹಿಸುತ್ತಾರೆ. ಭಕ್ತರು ಅಷ್ಟು ಕಾಣಿಕೆಯನ್ನು ಕೂಡಲೇ ಸಂಗ್ರಹಿಸಿ ನೀಡದೆ ಹೋದರೆ, ಮುಳ್ಳಿನಿಂದ ಕೂಡಿದ ಆವುಗೆ (ಖಡಾವು)ಗಳ ಮೇಲೆ ನಿಂತುಕೊಳ್ಳುತ್ತಾರೆ. ಭಕ್ತರು ಕಾಣಿಕೆ ಸಂಗ್ರಹಿಸಿ ಕೊಡುವವರೆಗೂ ಅವರು ಆವುಗೆಯಿಂದ ಕೆಳಗೆ ಇಳಿಯುವುದಿಲ್ಲ. ಅವರು ಹಠವಾದಿ ಜಂಗಮರು. ಕೆಲವು ಸಲ ಇಂತಹ ಅಯ್ಯನವರಿಂದ ಭಕ್ತರಿಗೆ ಕಿರಿಕಿರಿಯೂ ಉಂಟಾಗುತ್ತದೆ. *(ಎಸ್‌ಎಂಎಚ್)*

ಊರಿನಲ್ಲಿ ತತ್ವಪದಗಳನ್ನು ಹಾಡುವ ಕಲಾವಿದರಿದ್ದಾರೆ. ಗಂಗಣ್ಣ ಎಸ್.ಸಿ ಇವರು ಜನಪದ ಹಾಡುಗಳನ್ನು ಹಾಡುವುದರೊಂದಿಗೆ ತತ್ವಪದ ಗೀತೆಗಳನ್ನು ಕೂಡ ಸೊಗಸಾಗಿ ಹಾಡುತ್ತಿದ್ದರು. ಈಗ ಈ ಕಲಾವಿದರು ಇಲ್ಲ. ಭೀಮಣ್ಣ ಕೈಕಟ್ಟು ಎನ್ನುವವರು ಕೂಡ ತತ್ವಪದಗಳನ್ನು ಹಾಡುವ ಕಲಾವಿದರು. ಇವರು ಪ್ರಾಥಮಿಕ ಶಾಲಾ ಶಿಕ್ಷಕರು, ಭಾವುದ್ದೀನ್ ಕೃಷ್ಣ ಸಗರ ಎನ್ನುವವರು ಮುಸ್ಲಿಂರಾಗಿದ್ದರೂ ಕೂಡ ಸೊಗಸಾಗಿ ತತ್ವಪದಗಳನ್ನು ಹಾಡುತ್ತಾರೆ. ಹಾರ್ಮೋನಿಯಂನ್ನು ನುಡಿಸುತ್ತಾ ಅದರ ಲಯಕ್ಕನುಗುಣವಾಗಿ ಹಾಡುತ್ತಾರೆ. ತೆಲುಗಿನಲ್ಲಿ ರಚನೆಯಾದ ಭಕ್ತಿ ಗೀತೆ, ಭಜನೆ ಗೀತೆಗಳನ್ನು ಇವರು ಹಾಡುತ್ತಾರೆ. ಹದಿನೈದು ವರ್ಷದಿಂದ ಈ ಕಲೆಯಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ.

ಸಣ್ಣಪ್ಪ ಯಾದವ ಇವರದು ಪೇಟೆ ಮಾರುತಿ ಭಜನೆ ಮಂಡಳಿಯಿದೆ. 65 ವಯಸ್ಸಿನ ಇವರು ಈಗಲೂ ಕ್ರಿಯಾಶೀಲರು, ತತ್ವಪದ, ದಾಸರ ಕೀರ್ತನೆಗಳನ್ನು ಹಾಡುತ್ತಾರೆ. ಇವರ ಸಂಘದ ಇನ್ನುಳಿದ ಕಲಾವಿದರೆಂದರೆ ಅಯ್ಯಪ್ಪ ಟೈಲರ್, ಹನುಮಂತಪ್ಪ ಯಾದವ, ಹನುಮಂತಪ್ಪ ಹನುಮನ ದೊಡ್ಡಿ, ಜನ್ನಿ, ಬಸವರಾಜ, ಕೃಷ್ಣ ಯಾದವ, ಆಂಜಿನಯ್ಯ ಯಾದವ, ಶ್ರೀಧರ ಯಾದವ, ಮತ್ತು ಈರಣ್ಣ ಯಾದವ, ಇವರು ಮೂರು ದಶಕಗಳಿಂದ ಭಜನೆ ಮಾಡುತ್ತ ಬಂದಿದ್ದಾರೆ. ಮಾರೆಮ್ಮ ದೇವಿ ಭಜನೆ ಮಂಡಳಿ ಕೂಡ ಈ ಊರಿನಲ್ಲಿದೆ. ಭೀಮಣ್ಣ, ವಡವಾಟಿ ಮಾಯಪ್ಪ, ಅಲ್ಲೋಡಿ ಬಸವರಾಜ, ಚನ್ನಪ್ಪ ಈರಪ್ಪ, ಶಿವರಾಜ ಇವರೆಲ್ಲರೂ ಸಾಂಪ್ರದಾಯಿಕವಾಗಿ ಸುಮಾರು 30 ವರ್ಷಗಳಿಂದ ಭಜನೆ ಪದಗಳನ್ನು ಹಾಡುತ್ತ ಬಂದಿದ್ದಾರೆ.

ಕಲ್ಲೂರಿನಲ್ಲಿ ಗೋಪಾಲಸ್ವಾಮಿ ಭಜನೆ ಮಂಡಳಿ ಕೂಡ ಇದೆ. ಪ್ರತಿ ಗುರುವಾರದಂದು ದೇವಿಯ ಹಾಡುಗಳೊಂದಿಗೆ ತತ್ವಪದಗೀತೆಗಳನ್ನು ದೇವಸ್ಥಾನದಲ್ಲಿ ಹಾಡುತ್ತಾರೆ. *(ಡಿಎಸ್‌ಡಿ)*

ಕವಡೆ : ಆಧುನಿಕ ಜ್ಯೋತಿಷಿಗಳು, ಕವಡೆ ಶಾಸ್ತ್ರ ಲೆಕ್ಕಾಚಾರದಿಂದ ನಮ್ಮ ಭವಿಷ್ಯವಾಣಿಯನ್ನು ಹೇಳುವ ಚಪಲತೆಯುಳ್ಳವರು. ಕರಿ ಕೋಟು, ಹೆಗಲಲ್ಲಿ ಜೋಳಿಗೆ, ಪಂಚಾಂಗ ಮತ್ತು ಕೈಯಲ್ಲಿ ಪಂಜರದ ಗಿಳಿಯನ್ನು ಹಿಡಿದುಕೊಂಡು ಊರೂರು ಸುತ್ತಿ ತಮ್ಮ ಪರಮ ಪಾಂಡಿತ್ಯವನ್ನು ಜನರ ಮುಂದೆ ಪ್ರದರ್ಶಿಸುವರು. ಇವರು ಕವಡೆ ಶಾಸ್ತ್ರ ಮತ್ತು ಪಂಚಾಂಗ ಹೇಳುವಲ್ಲಿ ನಿಪುಣತೆ ಹೊಂದಿವರಾಗಿದ್ದು, ಕವಡೆ ಮತ್ತು ಪಂಚಾಂಗ ಶಾಸ್ತ್ರಗಳು ಕಟ್ಟು ನಿಟ್ಟಿನದಾಗಿದ್ದು ಕ್ರಮಬದ್ಧವಾಗಿ ನಾವು ಹೇಳುವ ಅಂಶಗಳನ್ನು ಗಮನದಲ್ಲಿರಿಸಬೇಕೆಂದು ಜನರಿಗೆ ಮನವರಿಕೆ ಮಾಡುವರು. ಕವಡೆಗಳು ಬೀಳುವ ಚಿತ್ತ ಮತ್ತು ಅಡ್ಡಗಳ ಮೇಲೆ ಭವಿಷ್ಯ ನಿರ್ಧರಿಸುತ್ತದೆ ಎಂದು ತಿಳಿ ಹೇಳುವರು. ನಂತರ ಒಂಬತ್ತೂ ಕವಡೆಗಳನ್ನು ರಳ ರಳನೆ ಬಲಗೈಯಿಂದ ದೇವರ ನಾಮಸ್ಮರಣೆ ಮಾಡಿ ಹಾಕುವರು. ತದನಂತರ ಎದುರಿಗಿರುವ ವ್ಯಕ್ತಿಯ ಹಾವ ಭಾವ, ಮತ್ತು ಮನಸ್ಸಿನ ಸ್ಥಿತಿಯನ್ನು ಅರ್ಥೈಸಿಕೊಂಡು ಎಳೆ ಎಳೆಯಾಗಿ ಹೇಳುವರು ಗುರು, ರಾಹು, ಕೇತು, ಕಾಲಗಳ ಬಗೆಗೆ ಪರಿಚಯಿಸುತ್ತ ಮುಂದೊದಗುವ ಸಂಕಷ್ಟದಿಂದ ಪಾರಾಗಲು, ಮನೆ ದೇವರು, ಊರ ದೇವರುಗಳ ಹೆಸರಿಗೆ ಪೂಜೆ, ಪುನಸ್ಕಾರ ಮಾಡಿದರೆ ಬಂದ ಸಂಕಷ್ಟ ದೂರವಾಗುವುದೆಂದು ಹೇಳುವರು. ಹೀಗೆ ಕವಡೆ ಶಾಸ್ತ್ರವು ಸೂಕ್ಷ್ಮಾತಿಸೂಕ್ಷ್ಮ ವಿಚಾರವನ್ನೊಳಗೊಂಡಿದ್ದು, ಮಹತ್ವಪೂರ್ಣವಾದ ಶಾಸ್ತ್ರ ಪದ್ಧತಿಯೆಂದು ಸ್ಪಷ್ಟವಾಗುತ್ತದೆ.


(ಪಿಕೆಕೆ)

ಕವಲೂರು: ಒಂದು ಪ್ರಾಚೀನ ಅಗ್ರಹಾರ. ಅಳವಂಡಿಯಿಂದ ಉತ್ತರಕ್ಕೆ 8 ಕಿ.ಮೀ ದೂರವಿರುವ ಗ್ರಾಮ. ಹಿಂದೆ 'ಕೌರವಪುರ' 'ಕೌರೂರ' ಮುಂತಾದ ಹೆಸರುಗಳಿದ್ದುವು. ಕ್ರಿ.ಶ. 1177ರಿಂದ ಕ್ರಿ.ಶ. 1188ರ ಅವಧಿಗೆ ಸೇರಿದ ಕಳಚೂರಿ ಚಕ್ರವರ್ತಿ ಸಂಕಮದೇವ ಭೂವಲ್ಲಭವನ ಶಾಸನ ಈ ಗ್ರಾಮವನ್ನು 'ಶ್ರೀಮದನಾದಿಯಗ್ರಹಾರ ಕೌರೂರ' ಎಂದು ಉಲ್ಲೇಖಿಸುತ್ತದೆ. ಈ 'ಕೌರೂರು' ಮಾಸನಾಡಿ ನಾಡಿನಲ್ಲಿದ್ದ ಒಂದು ಮಹತ್ವದ ಅಗ್ರಹಾರವಾಗಿದ್ದಿತು. ಇಲ್ಲಿ ವಾಸವಾಗಿದ್ದ ಮಹಾ ಜನಗಳ ಸಂಖ್ಯೆ ಐದುನೂರು. ಈ ಮಹಾಜನರು "ವರವಿಪ್ರವಂಶ ಮಹಿತರ್ ನಿರುಪಮಚಾರಿತ್ರ ರಪ್ರತರ್ಕ್ಯವಿವೇಕರ್" ಆಗಿದ್ದರು.

ಇಲ್ಲಿಯ ಐದುನೂರು ಮಹಾಜನಗಳು ವ್ಯಾಕರಣ, ಸ್ಮೃತಿ, ಪುರಾಣ, ನ್ಯಾಯ, ಕಾವ್ಯ, ನಾಟಕ, ವಾತ್ಸಾಯನ, ವೇದ, ವೇದಾಂಗಗಳಲ್ಲಿ ಪರಿಣಿತರಾಗಿದ್ದರೆಂದು ಶಾಸನವು ಹೇಳುತ್ತದೆ. ಇಂತಹ ಅಯ್ನೂರ್ವರ ಸನ್ನಿಧಾನವಾಗಿದ್ದ ಈ ಅಗ್ರಹಾರವನ್ನು ಶಾಸನಕಾರ 'ತೆಂಕಣಯ್ಯಾವಳಯ ಕೌರೂರ' ಎಂದು ಕರೆಯುತ್ತಾನೆ. ಅಂದರೆ ಸುಪ್ರಸಿದ್ಧವಾಗಿದ್ದ 'ಐಯ್ಯಾವಳೆಗೆ' (ಐಹೊಳೆ) ದಕ್ಷಿಣದಲ್ಲಿದ್ದ ಕೌರೂರು ಅಗ್ರಹಾರ ಸರಿದೊರೆಯಾಗಿತ್ತು. *(ಎಲ್‌ಎ)*

ಕವಿರಾಜಮಾರ್ಗ: ಕನ್ನಡದಲ್ಲಿ ಮೊಟ್ಟ ಮೊದಲ ಉಪಲಬ್ಧ ಕೃತಿ. ಇದು ಸಂಸ್ಕೃತದ ದಂಡಿಯ ಕಾವ್ಯಾದರ್ಶದ ರೂಪಾಂತರ ಆಗಿದ್ದರೂ ಇದರಲ್ಲಿ ಕನ್ನಡ ನಾಡು–ನುಡಿಚಿಂತನೆ, ನಾಡವರ ಗು–ಣಗಾನ, ನಾಡಿನ ಸೀಮೆ ಇತ್ಯಾದಿ ವಿಷಯಗಳು ಸೇರಿಕೊಂಡಿವೆ. ಇದೊಂದು ಸ್ವತಂತ್ರ ಕೃತಿಯಂತೆಯೇ ತೋರುತ್ತದೆ. ಈ ಕೃತಿಯ ಕರ್ತೃ ರಾಷ್ಟ್ರಕೂಟ ರಾಜನಾದ ನೃಪತುಂಗನೆಂದು ಹೇಳಿದರೆ, ಎಂ.ಎಂ. ಕಲಬುರ್ಗಿ ಅವರು ನೃಪತುಂಗನ ಸಭಾಸದನಾದ ಶ್ರೀ ವಿಜಯ ಎಂದು ಹೇಳಿದ್ದಾರೆ. ಈ ಕೃತಿಯ ಕರ್ತೃತ್ವದ ಬಗೆಗೆ ಇನ್ನೂ ವಾದ ನಡೆದಿದೆ. ಕರ್ತೃ ಯಾರೇ ಇರಲಿ, ಈ ಕೃತಿ ತುಂಬ ಮಹತ್ವದ್ದಾಗಿದೆ. ಇದು ಪ್ರಧಾನವಾಗಿ ಒಂದು ಅಲಂಕಾರ ಗ್ರಂಥ. ಇದರಲ್ಲಿ ವ್ಯಾಕರಣ, ಛಂದಸ್ಸು ಅಲಂಕಾರ, ಭಾಷೆ, ನಾಡು–ನುಡಿ ಕುರಿತಾದ ಅನೇಕ ವಿಷಯಗಳು ಎಡೆ ಪಡೆದಿವೆ. ಇದೊಂದು ಪ್ರಧಾನವಾಗಿ ಶಾಸ್ತ್ರ ಗ್ರಂಥವಾಗಿದೆ.

ಕಾವ್ಯದ ಬಗ್ಗೆ ಅದು ಶಾಸ್ತ್ರ ಸಮ್ಮತವಾಗುವ ರೀತಿಯಲ್ಲಿ ತಿಳಿವಳಿಕೆಯನ್ನು ಜನರಲ್ಲಿ ತುಂಬುವುದು ಈ ಕೃತಿಯ ಧ್ಯೇಯವಾದಂತಿದೆ. ಇದು ಕವಿಗಳಿಗೆ ಒಂದು ರಾಜಮಾರ್ಗವನ್ನು ನಿಸ್ಸಂಶಯವಾಗಿ ತೋರಿಸಿದ ಕೃತಿ ಎಂಬುದರಲ್ಲಿ ಎರಡು ಮಾತಿಲ್ಲ. ಕಾವ್ಯದೋಷಗಳ ಚರ್ಚೆಯೂ ಈ ಕೃತಿಯಲ್ಲಿ ವಿಸ್ತಾರವಾಗಿ ಬಂದಿದೆ. "ನುಡಿಗೆಲ್ಲಂ ಸಲ್ಲದ ಕನ್ನಡ" ವೆಂದು ಕವಿರಾಜಮಾರ್ಗ ಕನ್ನಡದ ಪರಿಮಿತಿಯನ್ನು ಸೂಚಿಸಿ ಸಂಸ್ಕೃತದ ಬಳಕೆ ನಮಗೆ



ಕಾರ್ಯಾ

ಕಾರ್ಯಾ ಆಚರಣೆ: ದೇವರುಗಳಿಗೆ ಶಾಂತಿ ಮಾಡಲು ಆಚರಿಸುವ ಸಂಪ್ರದಾಯ ಮೂರು ವರ್ಷಕ್ಕೊಮ್ಮೆ ಜರುಗುವ ಲಕ್ಷ್ಮೀದೇವಿಯ ಜಾತ್ರೆಯಲ್ಲಿ ಈ ಸಂಪ್ರದಾಯದ ಆಚರಣೆ ಆಗುತ್ತದೆ. ಅಪರೂಪವಾಗಿ ಕೆಲವು ಗ್ರಾಮಗಳಲ್ಲಿ ವರ್ಷಕ್ಕೊಮ್ಮೆ ನಡೆಯುತ್ತದೆಎಂದು ತಿಳಿದು ಬರುತ್ತದೆ. ಹೆಚ್ಚಾಗಿ ಇದು ಬಾದಾಮಿ ಹಬ್ಬದಲ್ಲಿ ಕಾಣಿಸುತ್ತದೆ. ಕಾರ್ಯಾ ಮಾಡುವಾಗ ಪೋತರಾಜ, ಆಷಾಡಗಿತ್ತಿ (ಪಟ್ಟಕ್ಕೆ ಹಾಕಿದ ಹೆಣ್ಣು ಮಕ್ಕಳು)ಯರು ಇರಲೇಬೇಕು. ಅವರನ್ನು ಮೆರವಣಿಗೆ ಮಾಡುತ್ತ ಗುಡಿಯವರೆಗೆ ಕರೆದುಕೊಂಡು ಬರುವರು. ಆಗ ಕುಂಭಗಳ ಮೆರವಣಿಗೆಯೂ ಆಗುತ್ತದೆ. ಹೆಂಡತಿಯ ಕೊರಳಲ್ಲಿಯ ತಾಳಿ ಹರಿದು, ಬೇವಿನ ಉಡುಗೆಯನ್ನುಟ್ಟು ಕೈಯಲ್ಲಿ, 'ಬಾಳ ಬಟ್ಟಳ' (ಬೆಳ್ಳಿ ಬಟ್ಟಲ) ಹಿಡಿದುಕೊಂಡು ಪೋತರಾಜ ಅಗಸಿಯ ಬಾಗಿಲಿಗೆ ಬರುವನು. ಅನಂತರ ಬಟ್ಟಲವನ್ನು ಹಿಡಿದುಕೊಂಡೇ ಊರನ್ನು ಐದು ಸುತ್ತು ತಿರುಗಿ ಬರುವನು. ಬೇರೆ ಊರಿನ ಜನ ಈ ಬಟ್ಟಲನ್ನು ಕಸಿದುಕೊಂಡು ಓಡಿಹೋದರೆ, ಇಲ್ಲಿಯ ಸಂಪತ್ತು ಮುಗ್ಗಿದಂತೆ ಎನ್ನುವುದು ಜನಪದರ ನಂಬಿಗೆ. ಹಾಗಾಗದಂತೆ ಎಚ್ಚರಿಕೆ ವಹಿಸುತ್ತಾರೆ. ಇಲ್ಲಿ ಅವನ ಪ್ರಾಣಕ್ಕೆ ಅಪಾಯವಿರುವುದು. ಯಾರೂ ಕಸಿದುಕೊಂಡು ಹೋಗದಿದ್ದರೆ ಅವನು ಸುರಕ್ಷಿತವಾಗಿ ಪಾರಾದಂತೆ. ಆಮೇಲೆ ಅವನಿಗೆ ಹಾಗೂ ಅವನ ಹೆಂಡತಿಗೆ ಆಯೇರಿ ಮಾಡುವರು. ಹೆಂಡತಿಯ ಕೊರಳಿಗೆ ಆತ ಮತ್ತೆ ತಾಳಿಕಟ್ಟುವನು.

ಆ ದಿವಸ ಮಧ್ಯರಾತ್ರಿ, ಒಂದು ಪಟ್ಟದ ಕೋಣವನ್ನು ಬಲಿ ಕೊಡುತ್ತಾರೆ. ಕೋಣ ಕಡಿಯುವಾಗ ಬೇರೆ ಊರಿನ ಜನ ನೋಡದಂತೆ ಊರನ್ನು ಕಾವಲುಮಾಡಿರುತ್ತಾರೆ. ಪಟ್ಟದ ಕೋಣ ಬಿದ್ದ ಮೇಲೆ ಹರಕೆಗಾಗಿ ಬಿಟ್ಟ ಜನರ ನೂರಾರು ಕೋಣಗಳನ್ನು ಕಡಿದು ಬಣವೆ ಒಟ್ಟುವರು. ಇದಾದ ಮರುದಿವಸ "ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ" ವೆನ್ನುವಂತೆ ಒಂದು ಮನರಂಜನೆ ಜರುಗುತ್ತದೆ: ನೂರಾರು ಡೊಳ್ಳುಗಳ ವಾದ್ಯದ ಮಧ್ಯದಲ್ಲಿ ಒಂದು ಗರ್ಭದ ಕುರಿಯನ್ನು ಆಟವಾಡಲಿಕ್ಕೆ ತರುತ್ತಾರೆ. ಆಷಾಡಗಿತ್ತಿಯರು ಅದು ಸಿಗದಂತೆ ಎಲ್ಲಿಯೋ ಮುಚ್ಚಿಡುತ್ತಾರೆ. ಆಗ ಪೋತರಾಜ ಡೊಳ್ಳಿನ ಬಡಿತದ ಸಂಕೇತದ ಮೂಲಕ ಹೋಗಿ, ಆ ಕುರಿಯನ್ನು ಹಿಡಿದುತಂದು ಆಟವಾಡಿಸುವನು. ಜನ ಅದನ್ನು ನೋಡುತ್ತ ರಂಜನೆಗೈಯುತ್ತಿರುತ್ತಾರೆ. ಆಡಿಸುತ್ತ ಅದನ್ನು ದಣಿವಿಗೆ ತಂದು ಅದರ ಸ್ವಾಟಿ (ಸೊಂಡೆ) ಹರಿದು ತೊಗಲು ಕಿತ್ತಿ ತೆಗೆಯುವನು ಆಮೇಲೆ ಲಕ್ಷ್ಮೀದೇವಿಯ ಪಲ್ಲಕ್ಕಿಯ ಮೆರವಣಿಗೆ ಊರಿನ ಸೀಮೆಯವರೆಗೆ ನಡೆಯುವದು. ಈ ಮಧ್ಯೆ ಅನೇಕ ಮನರಂಜನೆ ಜರುಗುವುದು.

ಕಾರ್ಯಾ ಮಾಡುವ ಸಂಪ್ರದಾಯ ಈ ಜಿಲ್ಲೆಯ ಕೋಗನೂರು, ಪಟ್ಟಣ, ಗೊಳ್ಳಾ, ಇಟಗಿ, ಬಡದಾಳ, ಗಾಜರಕೋಟ, ಶಿವಪೂರ, ಕೊಡದುರ ಮುಂತಾದ ಊರುಗಳಲ್ಲಿ ಇಂದಿಗೂ ಇದೆ. *(ಬಿಪಿಪಿ)*

ಕಾಲಜ್ಞಾನ: ಭವಿಷತ್‌ನಲ್ಲಿ ಒದಗುವುದನ್ನು ಮೊದಲೇ ಹೇಳುವುದು. 'ಕಾಲಜ್ಞಾನ'ವೆಂದರೆ ಸಮಯದ ಅರಿವು, ತಿಳಿವಳಿಕೆ ಎಂದರ್ಥ. ಮುಂದೊದಗುವ ವಿಪತ್ತುಗಳನ್ನು ಜನತೆಗೆ ತಿಳಿಸಿ, ಅವುಗಳಿಂದ ಪಾರಾಗುವ ಉಪಾಯಗಳನ್ನೂ ಇದು ತಿಳಿಸುತ್ತದೆ. ಕನ್ನಡದಲ್ಲಿ ಕಾಲಜ್ಞಾನ ಒಂದು ಪ್ರತ್ಯೇಕ ಸಾಹಿತ್ಯ ಪ್ರಕಾರವಾಗಿ ಬೆಳೆದು ಬರಲಿಲ್ಲ. ವಚನಗಳಲ್ಲಿಯೇ ಇದು ಸೇರಿಕೊಂಡು ಬೆಳೆದು ಬಂದಂಥದು. ಜನತೆಯ ನಂಬಿಕೆಯ ಮೇಲೆಯೇ ಇದು ನಿಂತುಕೊಂಡಿದೆ. ಶರಣ ಮಾರ್ಗಾವಲಂಬಿಗಳಾದ ಸಂತರು, ಸಾಧು ಸತ್ಪುರುಷರು ಈ ಸಾಹಿತ್ಯ ರಚಿಸಿದ್ದಾರೆ. ವಚನ, ತ್ರಿಪದಿ, ಚೌಪದಿ ಮುಂತಾದ ದೇಸಿ ಬಂಧಗಳಲ್ಲಿ ರಚನೆಗೊಂಡ ಈ ಸಾಹಿತ್ಯ ಜನಸಮ್ಮುಖಿವಾದುದು, ಸಾಮಾನ್ಯ ಜನತೆಗೆ ಸುಲಭವಾಗಿ ತಿಳಿಯುವಂಥದು. ಈ ಸಾಹಿತ್ಯ ಉತ್ತರ ಕರ್ನಾಟಕದಲ್ಲಿಯೇ ಹುಟ್ಟಿ ಬೆಳೆದಂಥದು. ಶ್ರೀಶೈಲ, ಬಸವಕಲ್ಯಾಣ, ಹಂಪಿ, ಬೀದರ, ತಿಂಥಿಣಿ ಹಾಗೂ ಕೊಡೇಕಲ್ ಈ ಸಾಹಿತ್ಯದ ಕೇಂದ್ರ ನೆಲೆಗಳು. ಅದರಲ್ಲೂ ಕಲಬುರ್ಗಿ ಜಿಲ್ಲೆಯ

ಕಾರ ಹುಣ್ಣಿಮೆ: ಮೂಲತಃ ಕೃಷಿಕರಾಗಿರುವ ಮುನ್ನೂರು ಕಾಪು ಸಮಾಜವು ಅತ್ಯಂತ ಶ್ರಮಜೀವಿಗಳು. ಮಹಾನ್ ಶಕ್ತಿಶಾಲಿಗಳು. ಆದ್ದರಿಂದಲೇ ಕೋಟೆ ಕೊತ್ತಲಗಳನ್ನು ಕಟ್ಟಲು ಕರ್ನಾಟಕದ ಬಹುಭಾಗದಲ್ಲಿ ಇವರನ್ನು ಕರೆಸುತ್ತಿದ್ದರು. ಕರ್ನಾಟಕದಲ್ಲಿ ಹಿಂದೆ ಅರಸರು ಕೋಟೆಗಳನ್ನು ನಿರ್ಮಿಸುವಾಗ ಆಂಧ್ರದಿಂದ ಮುನ್ನೂರು ಕಾಪು ಸಮಾಜದವರನ್ನು ಕರೆಸುತ್ತಿದ್ದರು.

ನೂರಾರು ವರ್ಷಗಳ ಹಿಂದೆ ಬಂದವರು ಕರ್ನಾಟಕದಲ್ಲೇ ನೆಲೆಸಿ ಕನ್ನಡಿಗರಾಗಿರುವ ಮುನ್ನೂರು ಕಾಪು ಸಮಾಜ ಆಂಧ್ರ ಗಡಿಯಲ್ಲಿರುವ ಕಲಬುರ್ಗಿ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಇವರು ಹೆಚ್ಚಾಗಿರುವದನ್ನು ಗಮನಿಸಬಹುದು.

ಬಂಡೆಗಲ್ಲುಗಳಿಂದಾವೃತ ಹಂಪಿಯ ವಿಜಯನಗರದಲ್ಲಿ ಮುನ್ನೂರು ಕಾಪು ಸಮಾಜದವರು ಕೋಟೆಗಳನ್ನು ನಿರ್ಮಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದರೆಂದು, ವಿಜಯನಗರ ಉತ್ಸವದಲ್ಲಿ ಶ್ರೀಕೃಷ್ಣದೇವರಾಯ, ಮುನ್ನೂರು ಕಾಪು ಸಮಾಜದ ಶಕ್ತಿಶಾಲಿಗಳಿಗೆ ಆನೆ ಬಲದವರೆಂದು ಬಿರುದು ನೀಡಿ, ಕೈಗೆ ಚಿನ್ನದ ಕಡಗ ಹಾಕಿ ಸತ್ಕರಿಸಿದರೆಂದು ಇತಿಹಾಸದ ಪುಟಗಳನ್ನು ತಿರುವಿದಾಗ ತಿಳಿದುಬರುತ್ತದೆ.

ಇಂಥ ಬಲಶಾಲಿಗಳಾದ ಮುನ್ನೂರು ಕಾಪು ಸಮಾಜಕ್ಕೆ ಆಶ್ರಯವಾಗಿದ್ದ ಅರಸೊತ್ತಿಗೆ ಅಳಿದ ಮೇಲೆ ಅವರಿಗೆ ಕೃಷಿಯೇ ಮೂಲ ಉದ್ಯೋಗವಾಗಿ, ಎಲ್ಲೆಡೆ ಬೇಸಾಯ ಮಾಡಿಕೊಂಡಿದ್ದಾರೆ. ಕೃಷಿಯಲ್ಲೂ ಕೂಡ ಆಧುನಿಕತೆಯನ್ನು ಅಳವಡಿಸಿಕೊಂಡಿರುವ ಇವರು ಪ್ರಗತಿಪರ ರೈತರೆನಿಸಿಕೊಂಡು ಅತ್ಯಧಿಕ ಇಳುವರಿ ತೆಗೆಯುವ ಮೂಲಕ ರಾಜ-ರಾಷ್ಟ್ರ ಮಟ್ಟದಲ್ಲೂ ಪ್ರಶಸ್ತಿ ಪಡೆದ ಶ್ರೇಯಸ್ಸು ಇವರದು.

ಅರಸೊತ್ತಿಗೆ ಪರಂಪರೆಯಿಂದ ಬಂದಿರುವ ಮುನ್ನೂರು ಕಾಪು ಸಮಾಜ, ಸಾಂಸ್ಕೃತಿಕವಾಗಿಯೂ ಶ್ರೀಮಂತಿಕೆಯನ್ನು ಹೊಂದಿದ ವರು. ಗ್ರಾಮೀಣ ಕಲೆ, ಸಂಸ್ಕೃತಿಯನ್ನು ಜೀವಂತವಾಗಿರಿಸುವ ದಿಸೆಯಲ್ಲಿ ಈ ಸಮಾಜ ಕೃಷಿ ಹಬ್ಬಗಳನ್ನು ಆಚರಿಸಿಕೊಂಡು ಪರಂಪರೆಯನ್ನು ಉಳಿಸಿಕೊಂಡು ಬಂದಿದೆ.

ಮುಂಗಾರು ಉತ್ಸವ: ಕಳೆದ ನಾಲ್ಕು ವರ್ಷಗಳಿಂದ ಬರಗಾಲದ ಬೇಗುದಿಯಲ್ಲೇ ಜೀವನರಥ ಸಾಗಿಸುತ್ತಿರುವ ರಾಯಚೂರು ಜಿಲ್ಲೆಯ ಜನತೆಯ ಪಾಲಿಗೆ ಈ ಅವಧಿಯಲ್ಲಿ ನೋವು ಮರೆಯಲು ಆರಂಭವಾದ ಮುಂಗಾರು ಸಾಂಸ್ಕೃತಿಕ ಹಬ್ಬ, ವರ್ಷದಿಂದ ವರ್ಷಕ್ಕೆ ತನ್ನ ಮೆರುಗನ್ನು ಹೆಚ್ಚಿಸಿಕೊಂಡು ರಾಷ್ಟ್ರದ ಗಮನ ಸೆಳೆಯುತ್ತಿದೆ.

ಕೃಷಿಯನ್ನೇ ತಮ್ಮ ಮೂಲವೃತ್ತಿಯನ್ನಾಗಿಸಿಕೊಂಡು ಜೀವನ ಸಾಗಿಸುವ ಮುನ್ನೂರು ಕಾಪು ರೈತ ಸಮಾಜ ಬರದಿಂದ ಬತ್ತಿಹೋದ ಜಿಲ್ಲೆಯ ರೈತರಲ್ಲಿ ಉತ್ಸಾಹದ ಚಿಲುಮೆ ಜೀವಂತವಾಗಿರಿಸುವ ಪ್ರಯತ್ನದಲ್ಲಿ ಆರಂಭಿಸಿರುವ 'ಮುಂಗಾರು ಕಾರ ಹುಣ್ಣಿಮೆ' ಮಹೋತ್ಸವ ರೈತರ ಸಾಂಸ್ಕೃತಿಕ ಹಬ್ಬ.

ಸಾಮಾನ್ಯವಾಗಿ ಕಾರ ಹುಣ್ಣಿಮೆ ಎಂದರೆ, ಅಂದಿನ ದಿನ ಬೆಳಿಗ್ಗೆ ಎತ್ತುಗಳನ್ನು ನದಿಗೆ ಕರೆದೊಯ್ದು ಸ್ನಾನ ಮಾಡಿಸಿ, ಶೃಂಗಾರ ಮಾಡಿ ಅವುಗಳಿಗೆ ವಿಶೇಷ ಭೋಜನ ಮಾಡಿಸಿ, ಸಂಜೆ ಎತ್ತಿನ ಬಂಡಿ ಮತ್ತು ಎತ್ತುಗಳ ಓಟದ ಸ್ಪರ್ಧೆ ಇತ್ಯಾದಿ ಮಾಡುವದನ್ನು ಕಾಣಬಹುದು. ಇದೆಲ್ಲ ನಡೆಯುವದು ಒಂದು ದಿನದ ಮಟ್ಟಿಗೆ ಮಾತ್ರ ಆಚರಿಸುವದನ್ನು ಎಲ್ಲೆಡೆ ಕಾಣಬಹುದು.

ಆದರೆ ರಾಯಚೂರಿನಲ್ಲಿ ಮುನ್ನೂರು ಕಾಪು ಸಮಾಜದವರು ಆಚರಿಸುವ ಮುಂಗಾರು ಕಾರ ಹುಣ್ಣಿಮೆ ಮೂರು ದಿನಗಳವರೆಗೆ ಆಚರಿಸಲಾಗುತ್ತದೆ. ಕಳೆದ ನಾಲ್ಕು ವರ್ಷಗಳ ಹಿಂದೆ ಆರಂಭವಾದ ಕಾರ ಹುಣ್ಣಿಮೆ ಹಬ್ಬದ ವಿಶೇಷ ಕಾರ್ಯಕ್ರಮಗಳು, ವರ್ಷದಿಂದ ವರ್ಷಕ್ಕೆ ಹೆಚ್ಚಿನ ಆಕರ್ಷಣೆ ಪಡೆದು ರಾಯಚೂರು ಜನತೆಯ ಪಾಲಿಗೆ ಇದೊಂದು ಮೈಸೂರು ದಸರಾ ಹಬ್ಬದ ಸಂಭ್ರಮ ವೆನಿಸಿದೆ. ರಾಯಚೂರು ಮಾತ್ರವಲ್ಲ ಸುತ್ತಮುತ್ತಲಿನ ಗ್ರಾಮಸ್ಥರು, ನೆರೆಯ ಆಂಧ್ರ ಪ್ರದೇಶದ ರೈತರೂ ಈ ಉತ್ಸವ ಸವಿಯಲು ಬರುವಂಥ ಆಕರ್ಷಣೆಯನ್ನು ಮೂಡಿಸಿವಲ್ಲಿ ಸಂಘಟಕರು ಯಶಸ್ವಿಯಾಗಿದ್ದಾರೆ.

ಕೇವಲ ಎತ್ತುಗಳು ಭಾರ ಎಳೆಯುವ ಸ್ಪರ್ಧೆಯೊಂದಿಗೆ ಆರಂಭವಾದ ಈ ವಿಶೇಷ ಉತ್ಸವ, ಇಂದು ಸಾಂಸ್ಕೃತಿಕ ಮೆರುಗಿನೊಂದಿಗೆ ಮೈದಳೆಯುತ್ತಲಿದೆ. ಇಂಥ ಹಬ್ಬ ಕೇವಲ ಆಂಧ್ರ ಪ್ರದೇಶದಲ್ಲಿ ಮಾತ್ರ ನೋಡಲು ಸಿಗುತ್ತಿತ್ತು. ಎತ್ತುಗಳ ಬಲ ಪ್ರದರ್ಶನವೀಗ ರಾಯಚೂರ ಜಿಲ್ಲೆಯ ಜನತೆಯ ಪಾಲಿಗೂ ರಸದೌತಣದ ಅನುಭವ ನೀಡುತ್ತಿದೆ.

ರಾಯಚೂರು ಹಾಗೂ ನೆರೆಯ ಆಂಧ್ರ ಪ್ರದೇಶದ ಕೆಲವೇ ಜಿಲ್ಲೆಗಳ ಎತ್ತುಗಳು ಮಾತ್ರ ಕಳೆದ ವರ್ಷದವರೆಗೆ ಪಾಲ್ಗೊಳ್ಳುತ್ತಿದ್ದ ಈ ಉತ್ಸವದಲ್ಲಿ, ಈ ವರ್ಷ ದೂರದ ಮಹಾರಾಷ್ಟ್ರದಿಂದಲೂ ಎತ್ತುಗಳೂ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಇದರೊಂದಿಗೆ ಈ ಉತ್ಸವ ರಾಷ್ಟ್ರ ಮಟ್ಟದಲ್ಲೂ ಗಮನ ಸೆಳೆಯುವಂತಾಗಿದೆ.

ವಿವಿಧ ತಳಿಯ ಎತ್ತುಗಳನ್ನು ನೋಡುವ ಸೌಭಾಗ್ಯದ ಜೊತೆಗೆ ಈ ಬಾರಿ ರಾಜ ಮಹಾರಾಜರ ಕಾಲದಲ್ಲಿ ನಡೆಯುತ್ತಿದ್ದ ಕುಸ್ತಿ ಪಂದ್ಯಗಳೂ ನಡೆದವು. ಮೈಸೂರು ದಸರಾ ಉತ್ಸವದಲ್ಲಿ ಮಾತ್ರ ಕುಸ್ತಿ ಸ್ಪರ್ಧೆಗಳು ನಡೆಯುವದನ್ನು ದೂರದರ್ಶದಲ್ಲಿ ಕಾಣುತ್ತಿದ್ದ ಜನತೆಗೆ, ಈ ಬಾರಿ ಇಂತಹ ಪಂದ್ಯಗಳು ರಾಯಚೂರಲ್ಲಿ ಸಾಕ್ಷಾತ್ ನೋಡಿ ಆನಂದ ಪಟ್ಟರು.

ಉದಾರೀಕರಣ, ಜಾಗತೀಕರಣದ ಹೆಸರಿನಲ್ಲಿ ನಮ್ಮ ಮೂಲ ಸಂಸ್ಕೃತಿ ಮಾಯವಾಗುತ್ತಿರುವ ಸಂಕೀರ್ಣ ಪರಿಸ್ಥಿತಿಯಲ್ಲಿ ಇಂತಹ ಸಾಂಸ್ಕೃತಿಕ ಉತ್ಸವಗಳಿಗೆ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಮುನ್ನೂರು ಕಾಪು ಸಮಾಜದ ಸಾಧನೆ ಒಂದು ದಾಖಲೆ ಎನ್ನಬಹುದು.

ಭಾರ ಎಳೆಯುವ ಎತ್ತುಗಳ ಸ್ಪರ್ಧೆ ಹಾಗೂ ಕುಸ್ತಿ ಪಂದ್ಯಗಳನ್ನು ಈ ವರ್ಷದಿಂದ ಆರಂಭಿಸುವುದರ ಮೂಲಕ ಮುನ್ನೂರು ಕಾಪು ಸಮಾಜ ರಾಯಚೂರು ನಗರವನ್ನು ವಿವಿಧ ರಾಜ್ಯಗಳ ಮಧ್ಯೆ ಸಾಂಸ್ಕೃತಿಕ ರಾಯಭಾರಿಯಾಗಿ ಪರಿವರ್ತನೆಗೊಳಿಸುವ ನಿಟ್ಟಿನಲ್ಲಿ ಯಶಸ್ಸು ಸಾಧಿಸಿದೆ.

ಕಾರ ಹುಣ್ಣಿಮೆ ಉತ್ಸವ ಕೇವಲ ಮುನ್ನೂರು ಕಾಪು ಸಮಾಜಕ್ಕೆ ಮಾತ್ರ ಮೀಸಲಾಗಿರಿಸದೇ, ಉತ್ಸವಕ್ಕೆ ಸಾಂಸ್ಕೃತಿಕ ಮೆರಗು ನೀಡಿ ಇಡೀ ರಾಷ್ಟ್ರದ ಗಮನ ಸೆಳೆಯುತ್ತಿರುವದು ಜಿಲ್ಲೆಗೆ ಹೆಮ್ಮೆ ತರುವ ಸಂಗತಿಯಾಗಿದೆ.

(ಎಸ್‌ಕೆಪಿ.)

ಮೋನಪ್ಪಯ್ಯನಿಗಿಂತಲೂ ಹೆಚ್ಚು ಕಾಲಜ್ಞಾನ ವಚನಗಳನ್ನು ಬರೆದು ಈ ಸಾಹಿತ್ಯ ಪ್ರಕಾರವನ್ನು ಪ್ರಸಿದ್ಧಿಗೆ ತಂದವನೆಂದರೆ ಕೋಡೆಕಲ್ ಬಸವಣ್ಣ. ಈತನ ಕಾಲ ಕ್ರಿ.ಶ. 1700. ಕಲಬುರ್ಗಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕೊಡೇಕಲ್ ಗ್ರಾಮದಲ್ಲಿ ನೆಲೆನಿಂತ ವೀರಶೈವ ಶರಣನೀತ. ಜಾತಿ-ಮತಗಳನ್ನು ಮೀರಿನಿಂತ ಸಂತನೀತ. ಕೊಡೇಕಲ್‌ದಲ್ಲಿ ಈತನ ಸಮಾಧಿ ಇದೆ. ಸಮಾಧಿಯೇ ಇಂದು ಮಠವಾಗಿದೆ. ಹಿಂದೂ-ಮುಸ್ಲಿಂ ಎರಡೂ ಧರ್ಮದ ಜನತೆಗೆ ಈ ಸ್ಥಾನ ಪ್ರಿಯವಾದುದಾಗಿದೆ. ಧರ್ಮ ಸಮನ್ವಯ ಇಲ್ಲಿ ಸಾಕಾರಗೊಂಡಿದೆ. ಮುಸ್ಲಿಂರು ಈತನಿಗೆ 'ಮಹಮ್ಮದ್ ಸರ್ದಾರ' ಎನ್ನುತ್ತಾರೆ. ಈತನ ಸಮಾಧಿ ಮುಸ್ಲಿಂರ ಗೋರಿಯಂತಿದೆ. ಗರ್ಭಗುಡಿಯಲ್ಲಿ ಕುರಾನ್ ಹಾಗೂ ಕಾಲಜ್ಞಾನ ವಚನ ಗ್ರಂಥದ ಕಟ್ಟುಗಳಿವೆ. ಒಟ್ಟಾರೆಯಾಗಿ ಕೊಡೇಕಲ್ ಮಠವು ಭಾವೈಕ್ಯತೆಯ ಜೀವಂತ ಸ್ಮಾರಕವಾಗಿದೆ.

ಕಾಲಜ್ಞಾನ ಸಾಹಿತ್ಯಕ್ಕೆ ಕೊಡೇಕಲ್ ತುಂಬಾ ಪ್ರಸಿದ್ಧವಿದೆ. ಇಂದಿಗೂ ಕಾಲಜ್ಞಾನ ವಚನಗಳನ್ನು ಉತ್ತರ ಕರ್ನಾಟಕದ ಊರೂರಿಗೆ ಬಂದು ಸಾರುವ ಅಯ್ಯಗಳು ತಾವು ಕೊಡೇಕಲ್ ಮಠದ ಸಂಪ್ರದಾಯಕ್ಕೆ ಸೇರಿದವರು ಎಂದು ಹೇಳಿಕೊಳ್ಳುವುದನ್ನು ಕೇಳಬಹುದು. ಹೀಗೆ ಹೇಳಿಕೊಳ್ಳುವುದು ಅವರಿಗೊಂದು ಹೆಮ್ಮೆಯ ಸಂಗತಿ. ಕಾಲಜ್ಞಾನ ಸಾಹಿತ್ಯ ಸಮಗ್ರವಾಗಿ ಪ್ರಕಟವಾಗಬೇಕಿದೆ.


ಕೊಡೇಕಲ್ ಬಸವಣ್ಣನ ಕಾಲಜ್ಞಾನವೆಂದೇ ಖ್ಯಾತಿ ಇದೆ. ಇವನ್ನು ಅನೇಕ ಸಾರುವಯ್ಯಗಳು ಸಾರುತ್ತಾರೆ. ಅವರಲ್ಲಿ ಒಂದು ವಿಧದ ಆತ್ಮ ವಿಶ್ವಾಸವಿರುತ್ತದೆ. ಕೇಳುಗರಲ್ಲೂ ಆಸ್ತಿಕಭಾವ, ಶ್ರದ್ಧೆ ನಂಬಿಗೆ ಇದ್ದಾಗ ಮಾತ್ರ ಇವಕ್ಕೆ ಬೆಲೆ ಇದೆ. ಕೇಳುಗರ ಶ್ರದ್ಧೆ, ನಂಬುಗೆಗಳನ್ನೇ ಈ ಸಾಹಿತ್ಯ ಒಳಗೊಂಡಿದೆ.

ಈತನ ಕಾಲಜ್ಞಾನಗಳಲ್ಲಿ ಹೆಚ್ಚಾಗಿ ನೀತಿ ಬೋಧೆ ಇದೆ. ಲೋಕ ಕಲ್ಯಾಣಾರ್ಥ ಸಾರಿದ ನುಡಿಗಡಣಗಳೇ ಇವು ಆಗಿವೆ. ಪರಿಶುದ್ಧ ಹೃದಯದ, ಪವಿತ್ರರಾದ ಕೊಡೇಕಲ್ ಬಸವಣ್ಣನ ಹೇಳಿಕೆಗಳು ಎಂಬ ಭಾವನೆಯೇ ಇವುಗಳ ಮೇಲೆ ಜನನಂಬಿಕೆ ಇಡುವಂಥದ್ದಾಗಿದೆ.

ಬಸವಾದಿ ಶರಣರ ವಚನಗಳ ಪ್ರಭಾವ ಇವರ ಕಾಲಜ್ಞಾನ ವಚನಗಳ ಮೇಲಾದುದು ಸ್ಪಷ್ಟ. ತಿಂಥಿಣಿ ಮೋನಪ್ಪಯ್ಯ ಹಾಗೂ ಕೊಡೇಕಲ್ ಬಸವಣ್ಣ ಇವರೀರ್ವರೂ ಶರಣರ ಧ್ಯೇಯ ಧೋರಣೆಗಳನ್ನು ಸಾಮಾನ್ಯ ಜನರಿಗೆ ತಿಳಿಯುವ ಸರಳ ಭಾಷೆಯಲ್ಲಿ ಹೇಳಲೆತ್ನಿಸಿದುದರ ಫಲವೇ ಈ ಕಾಲಜ್ಞಾನ ವಚನಗಳು. ಕಲಬುರ್ಗಿ ಜಿಲ್ಲೆಯ ಜನತೆಯ ಜೀವನಕ್ರಮ, ಉರ್ದು ಭಾಷೆಯ ಬಳಕೆ, ಮುಸ್ಲಿಂ ಸಂಸ್ಕೃತಿ, ಇವರ ಕಾಲಜ್ಞಾನ ವಚನಗಳಲ್ಲಿ ವಿಶೇಷವಾಗಿ ಬಂದಿದೆ. ಕನ್ನಡ ಕಾಲಜ್ಞಾನ ಸಾಹಿತ್ಯಕ್ಕೆ ಇವರ ಕಾಲಜ್ಞಾನ ವಚನಗಳ ಕೊಡುಗೆ ಮಹತ್ವದ್ದಾಗಿದೆ. *(ವ್ಹಿಜಿಪಿ)*

ಕಾಲನಿರ್ಣಯದ ಕಲ್ಲುಗಳು: ಅನಾದಿ ಕಾಲದಲ್ಲಿ ಸಮಯ ಹಾಗೂ ಕಾಲ ನಿರ್ಣಯಗಳನ್ನು ತಿಳಿದುಕೊಳ್ಳಲು ಯಾವುದೇ ಸಲಕರಣೆಗಳು ಇರಲಿಲ್ಲ. ಜನಪದರು ಇದಕ್ಕಾಗಿ ತಮ್ಮದೇ ಆದ ವಿಧಾನವನ್ನು ರೂಢಿಸಿಕೊಂಡಿದ್ದರು ಎನ್ನುವುದಕ್ಕೆ ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ಇಂತಹ ಪದ್ಧತಿ ಜಾರಿಯಲ್ಲಿತ್ತು ಎನ್ನುವ ಕುರುಹುವನ್ನು ಶೋಧಿಸಿ ಅದರ ಮೇಲೆ ಬೆಳಕು ಚೆಲ್ಲಿದವರು ಸುರಪುರ ಸಂಸ್ಥಾನದಲ್ಲಿ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಮೇಡೋಸ್ ಟೇಲರ್. ಸಾವಿರಾರು ವರ್ಷಗಳ ಹಿಂದೆ ಕಾಲ ನಿರ್ಣಯಿಸಲು ಕಲ್ಲುಗಳನ್ನೇ ಬಳಸಿಕೊಳ್ಳುತ್ತಿದ್ದರು. ಈ ಜ್ಞಾನದ ಕುರುಹುಗಳನ್ನು ಹೊಂದಿರುವ ಕಲ್ಲುಗಳು ಶಹಾಪುರ- ಸುರಪುರ ಹೆದ್ದಾರಿಗೆ ಹೊಂದಿಕೊಂಡಿರುವ ವಿಭೂತಿಹಳ್ಳಿ ಗ್ರಾಮದ ಬಳಿ ಇವೆ.

ಶಹಾಪುರ-ಸುರಪುರ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ವಿಭೂತಿಹಳ್ಳಿ ಗ್ರಾಮದ ಬಳಿ 12 ಎಕರೆ ಪ್ರದೇಶದಲ್ಲಿ 400ಕ್ಕೂ ಹೆಚ್ಚು ಕಲ್ಲುಗಳಿವೆ. ಅರಣ್ಯ ಇಲಾಖೆಯು



ಕಾಲ ನಿರ್ಣಯ ಕಲ್ಲುಗಳು

ಕೊಡೇಕಲ್ ಹಾಗೂ ತಿಂಥಿಣಿ ಈ ಸಾಹಿತ್ಯದ ಸಮೃದ್ಧಿಗೆ ಪ್ರಮುಖ ನೆಲೆಗಳಾಗಿವೆ.

ಜ್ಯೋತಿಷ್ಯ, ಭವಿಷ್ಯ, ಕಣಿ ಮುಂತಾದುವು ಮೇಲ್ನೋಟಕ್ಕೆ ಕಾಲಜ್ಞಾನದಂತೆ ಕಂಡರೂ ಇವೆಲ್ಲ ಭಿನ್ನವಾಗಿವೆ. ಜ್ಯೋತಿಷ್ಯ ನಕ್ಷತ್ರ ಗ್ರಹ-ಗತಿಗಳನ್ನು ಕುರಿತ ಶಾಸ್ತ್ರವಾದರೆ, ಭವಿಷ್ಯ ಮುಂದೊದಗುವ ಸಂಗತಿಗಳನ್ನು, ಘಟನೆಗಳನ್ನು ವ್ಯಕ್ತಿಗತ ನೆಲೆಯಲ್ಲಿ ತಿಳಿಸುವ ಶಾಸ್ತ್ರವಾಗಿದೆ. ಕಣಿ ಕೊರವಂಜಿ ಸ್ತ್ರೀಯರಿಗೆ ಮಾತ್ರ ಪ್ರೀತಿ-ಪ್ರಣಯ-ವಿರಹ ವಿಷಯ ಕುರಿತಾಗಿ ಹೇಳುವಂಥದು. ಇವೆಲ್ಲ ವೈಯಕ್ತಿಕವಾದುವೇ ಹೊರತು ಸಾರ್ವತ್ರಿಕವಾದುವು ಅಲ್ಲ. ಕಾಲಜ್ಞಾನ ಮಾತ್ರ ಎಲ್ಲರಿಗೂ ಅನ್ವಯವಾಗುವಂಥದು. ಇದು ನಕ್ಷತ್ರಗಳನ್ನು ಎಣಿಸುವ, ಗುಣಿಸುವ ಕಲಿಕೆಯ ಶಾಸ್ತ್ರವಲ್ಲ. ಅನುಭಾವಿಯ ಅಂತಃಸ್ಫುರಣದಿಂದ ಹೊರಬರುವ ತ್ರಿಕಾಲ ಸತ್ಯದ ನುಡಿಗಳಿಂದ ಕೂಡಿರುತ್ತದೆ. ಜ್ಞಾನಿಯು ಇಲ್ಲವೆ ಅನುಭಾವಿ ಕವಿಯು ಮುಂದಾಗುವುದನ್ನು ದೈವೀ ಪ್ರೇರಣೆಯಿಂದ ಹೇಳುವನು. ಒಂದರ್ಥದಲ್ಲಿ ಕಾಲಜ್ಞಾನ ಸಾಹಿತ್ಯ ಹೇಳಿಕೆಗಳ ಸಮೂಹವೇ ಆಗಿದೆ. ಇದು ಕರಾರುವಾಕ್ಕಾದ ವಿಜ್ಞಾನವೂ ಅಲ್ಲ. ಶಾಸ್ತ್ರವೂ ಅಲ್ಲ. ಅನುಭಾವಿಗಳು, ಧಾರ್ಮಿಕ ಮಹಾಪುರುಷರು ಪವಿತ್ರಾತ್ಮರು ನುಡಿದ ದೈವೀ ವಾಣಿಯೇ ಈ ಸಾಹಿತ್ಯ. ಜನತೆಯ ಶ್ರದ್ಧೆ, ವಿಶ್ವಾಸಗಳೇ ಇದರ ಜೀವಾಳ, ಸರ್ವಸ್ವ. ಮುಂದಾಗುವ ಸಂಗತಿಗಳನ್ನು ಇದು ಹೆಚ್ಚಾಗಿ ಬೆಡಗಿನ ರೂಪದಲ್ಲಿ ಹೇಳುತ್ತದೆ. ಇದರ ಮುಖ್ಯ ಸಂದೇಶ ಕರ್ಮ ಲಯವಾಗಿ, ಧರ್ಮ ಉಳಿದು, ನೀತಿ ನೆಲೆಗೊಳ್ಳಬೇಕೆಂಬುದೇ ಆಗಿದೆ. ಸಮಾಜ ನೀತಿ ನೆಲೆಗಟ್ಟಿನ ಮೇಲೆ ರೂಪಗೊಳ್ಳಬೇಕೆಂಬುದೇ ಈ ಸಾಹಿತ್ಯದ ಮುಖ್ಯ ಧ್ಯೇಯವಾಗಿದೆ. ಇದು ಧಾರ್ಮಿಕ ಸಾಹಿತ್ಯವೆಂಬಂತೆ ಮೇಲ್ನೋಟಕ್ಕೆ ಕಂಡರೂ ಇದರ ಅಂತರಾರ್ಥ ಸಾಮಾಜಿಕ ಕಳಕಳಿಯಾಗಿದೆ. ನೀತಿಯೇ ಇದರ ಬೆನ್ನೆಲುಬು ಧರ್ಮ-ಸಮಾಜ, ನೀತಿ ಹಾಗೂ ಭಕ್ತಿ ಈ ಸಾಹಿತ್ಯದ ವ್ಯಾಪ್ತಿಗೆ ಸೇರುವವು.

ಕಾಲಜ್ಞಾನ ಸಾಹಿತ್ಯವನ್ನು ಸಾರುವಯ್ಯಗಳು ಸಂಜೆ ಹೊತ್ತು ಕೈಯಲ್ಲಿ ಕಂದೀಲು ಕೊಡೆ ಹಿಡಿದುಕೊಂಡು ಬೀದಿ ಬೀದಿಗಳಲ್ಲಿ ಸಾರುತ್ತ ಬರುವರು. ಕಡಾವಿಗೆ, ಕಾವಿಚಣ್ಣ, ಕಾವಿಅಂಗಿ ರುಮಾಲು ಇವರ ವೇಷ. ಇವರು ಕೈಯಲ್ಲಿ ಹಿಡಿದ ಕೊಡೆ ತ್ರಿಕಾಲಜ್ಞಾನಿಗಳೆಂಬುದರ ಸಂಕೇತವಾದರೆ, ಕಂದೀಲು ಜ್ಞಾನದ ಸಂಕೇತವಾಗಿದೆ. ಕಾಲಜ್ಞಾನ ಸಾಹಿತ್ಯ ಕತ್ತಲೆಯಿಂದ ಜನತೆಯನ್ನು ಬೆಳಕಿನೆಡೆಗೆ ಒಯ್ಯುವ ಸಾಹಿತ್ಯವೆಂದು ಜನಸಾಮಾನ್ಯರ ನಂಬಿಕೆಯಾಗಿದೆ. ನಿಸರ್ಗದಲ್ಲಿ ಸಹಜವಾಗಿ ಘಟಿಸುವ ಬಿರುಗಾಳಿ, ಮಹಾಪೂರ, ಭೂಕಂಪ, ಸಿಡಿಲು, ದೂಮಕೇತು ಮುಂತಾದವುಗಳೂ ಈ ಸಾಹಿತ್ಯದ ವ್ಯಾಪ್ತಿಗೇ ಸೇರುತ್ತವೆ. ಮುಂದೆ ಬರುವ ಇಂಥ ವಿಪತ್ತುಗಳ ಹಾಗೂ ಇವುಗಳಿಂದಾಗುವ ಪ್ರಾಣ ಹಾನಿಯ ಬಗ್ಗೆ ಈ ಸಾಹಿತ್ಯ ಎಚ್ಚರಿಸುತ್ತದೆ.

ತಿಂಥಿಣಿ ಮೋನಪ್ಪಯ್ಯ ಹಾಗೂ ಕೊಡೇಕಲ್ ಬಸವಣ್ಣ ಇವರು ಕಲಬುರ್ಗಿ ಜಿಲ್ಲೆಯ ಪ್ರಮುಖ ಕಾಲಜ್ಞಾನ ಸಾಹಿತಿಗಳು. ತಿಂಥಿಣಿ ಮೋನಪ್ಪಯ್ಯ (ಕ್ರಿ.ಶ. 1677) ಸುರಪುರ ತಾಲ್ಲೂಕಿನ ದೇವರಗೋನಾಳ ಎಂಬ ಗ್ರಾಮದಲ್ಲಿ ವಿಶ್ವಕರ್ಮ ಸಾಸಲಗೋತ್ರದ ಕಮ್ಮಾರ ಮನೆತನದಲ್ಲಿ ಜನಿಸಿದ. ಶೇಷಪ್ಪ ಶೇಷಕ್ಕ ಈತನ ತಂದೆ ತಾಯಿಗಳು. ಹಿಂದೂ ಮುಸ್ಲಿಂರನ್ನು ಸಮಾನ ದೃಷ್ಟಿಯಿಂದ ಕಂಡ ಸಂತ ಈತ. ಹಿಂದುಗಳು ಈತನನ್ನು ಮೌನೇಶ್ವರ, ಮೋನಪ್ಪಯ್ಯ ಎಂದೆಲ್ಲ ಕರೆದರೆ ಮುಸ್ಲಿಂರು ಈತನಿಗೆ ಮೋಯಿನುದ್ದೀನ್ ಎನ್ನುವರು. ಈತನ ಸಮಾದಿ ಇಂದಿನ ಯಾದಗೀರ ಜಿಲ್ಲೆ ಸುರಪೂರ ತಾಲ್ಲೂಕಿನ ಕೃಷ್ಣಾ ನದಿ ತೀರದ ತಿಂಥಿಣಿಯಲ್ಲಿದೆ. ಈತನ ಸಮಾಧಿಯ ಮೇಲೆ ಭವ್ಯ ಗುಡಿ ಇದೆ. ಈ ಗುಡಿ ಹಿಂದೂ-ಮುಸ್ಲಿಂ ಸಮ್ಮಿಶ್ರ ಸಂಸ್ಕೃತಿಯನ್ನು ಹೊಂದಿದೆ. ಇದೊಂದು ಪವಿತ್ರ ಯಾತ್ರಾಸ್ಥಳವಾಗಿದ್ದು, ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಧರ್ಮ ಸಮನ್ವಯ ಭಾವನೆಗೆ, ವಿಶ್ವ ಬಂಧುತ್ವಕ್ಕೆ ಈ ಸ್ಥಳ ಹೆಸರುವಾಸಿಯಾಗಿದೆ.

ಮೋನಪ್ಪಯ್ಯ ವಚನಗಳನ್ನು ಬರೆದಂತೆ ಕಾಲಜ್ಞಾನ ವಚನಗಳನ್ನೂ ಬರೆದಿದ್ದಾನೆ. ಈತನ ಕಾಲಜ್ಞಾನ ವಚನಗಳು ತ್ರಿಪದಿಯಲ್ಲಿವೆ. ಇವುಗಳಲ್ಲಿ ಕೆಲವು ಬಸವಣ್ಣ ಅಂಕಿತವನ್ನು ಹೊಂದಿ ಕೊನೆಗೊಂಡರೆ ಇನ್ನು ಕೆಲವು ಹುಷಾರು, ಪರಾಕು, ಸುವ್ವಿ, ಸುವ್ವಿ ಬಾ ಲಿಂಗಯ್ಯ, ಸುವ್ವಿ ಬಾ ಸಂಗಯ್ಯ, ಹೊಯ್ಯಲೆ ಡಂಗುರವ ಮುಂತಾದ ಸಂಬೋಧನಾ ರೂಪದ ಸೊಲ್ಲುಗಳನ್ನು ಹೊಂದಿ ಕೊನೆಗೊಳ್ಳುತ್ತವೆ. ಮೋನಪ್ಪಯ್ಯ ತನ್ನ ಕಾಲಜ್ಞಾನ ವಚನಗಳಲ್ಲಿ ಮುಸ್ಲಿಂರ ಆಡಳಿತವನ್ನು ಖಂಡಿಸಿದ್ದಾನೆ. ಅಕ್ಕನಾಗಮ್ಮನ ಮಗನಾದ ಚೆನ್ನಬಸವಣ್ಣ ಮತ್ತೆ ಜನಿಸಿ ಬರುವೆನೆಂದು ಹೇಳಿದುದನ್ನು ನೋಡಬಹುದು. ಯಷಾರು, ಸುವ್ವಿ ಸೊಲ್ಲುಗಳಿಂದ ಕೊನೆಗೊಳ್ಳುವ ಈತನ ಕಾಲಜ್ಞಾನ ವಚನಗಳಲ್ಲಿ ಅಲ್ಲಮಪ್ರಭುವಿನ ಆಗಮನವನ್ನು ಸೂಚಿಸುತ್ತಾನೆ. ರಾಜಕೀಯ ವಿಚಾರಗಳನ್ನು, ಮುಂದೊದಗುವ ವಿದ್ಯಮಾನಗಳನ್ನು ಮೋನಪ್ಪಯ್ಯ ತನ್ನ ಅನೇಕ ಕಾಲಜ್ಞಾನ ವಚನಗಳಲ್ಲಿ ಸೂಚಿಸಿದ್ದಾನೆ. ಮೊಗಲ್ ಸಾಮ್ರಾಟರ ಕೊನೆಯ ಚಕ್ರವರ್ತಿ ಔರಂಗಜೇಬನ ಸಮಕಾಲೀನನಾದ ಮೋನಪ್ಪಯ್ಯನು ಆಂಗ್ಲರ ಆಗಮನವನ್ನು ಸೂಚಿಸುವುದರ ಜೊತೆಗೆ, ದಿಲ್ಲಿಯ ಖಾನರು ಆಳಿವ ದಿನಗಳು ಬರುವವೆಂದು ಸಾರಿದ್ದಾನೆ.

ಇಂಥ ದಿನಗಳಲ್ಲಿ ಶರಣರಾದ ಬಸವಣ್ಣ, ಅಲ್ಲಮಪ್ರಭು ಹಾಗೂ ಚೆನ್ನ ಬಸವಣ್ಣ ಉದಯವಾಗುತ್ತಾರೆಂದು ಜನತೆಗೆ ತಿಳಿಸಿದ್ದಾನೆ. ಆತನ ಕಾಲಜ್ಞಾನ ವಚನಗಳಲ್ಲಿ ವಿಶ್ವಬಂಧುತ್ವ-ಭಾವೈಕ್ಯತೆಯ ವಿಷಯವೂ ಬಂದಿದೆ. ಹಿಂದೂ-ಮುಸ್ಲಿಂರಲ್ಲಿದ್ದ ಹಗೆತನ ಕಾಲಕ್ರಮೇಣ ಹೋಗುವುದೆಂದೂ, ಮುಂದೊಂದುದಿನ ಅವರು ಸಹೋದರರಂತೆ ನಡೆದುಕೊಳ್ಳುವರೆಂದು ಮೋನಪ್ಪಯ್ಯ ನುಡಿದಿದ್ದಾನೆ. ಇದಕ್ಕೆ ಉಜ್ವಲ ಸಾಕ್ಷಿಯೆಂದರೆ ತಿಂಥಿಣಿ ಮೋನಪ್ಪಯ್ಯನ ಗುಡಿಯೇ ಆಗಿದೆ. ಅಲ್ಲಿಗೆ ಹಿಂದೂ-ಮುಸ್ಲಿಂರೆಲ್ಲರೂ ಬರುವರು.

ಮೋನಪ್ಪಯ್ಯ ಬರೆದ ಕಾಲಜ್ಞಾನ ವಚನಗಳು ಸಂಖ್ಯಾದೃಷ್ಟಿಯಿಂದ ಕಡಿಮೆ ಇದ್ದರೂ ಸತ್ವದ ದೃಷ್ಟಿಯಿಂದ ಮೌಲಿಕವಾಗಿವೆ. ಕಾಲಜ್ಞಾನ ಸಾಹಿತ್ಯ ಪ್ರಕಾರದಲ್ಲಿ ಈತನಿಗೆ ಗಣ್ಯಸ್ಥಾನವಿದೆ.

ಹಿಟ್ಟಿನಿಂದ ಚೌಕ ಬರೆದು ಸ್ಥಳ ಬಿಟ್ಟುಕೊಳ್ಳುತ್ತಾರೆ. ಅಲ್ಲಿ ಕಾಲಧೂಳಾದ ವ್ಯಕ್ತಿ ಉಣ್ಣುವ ರೊಟ್ಟಿ, ಅನ್ನ, ಪಲ್ಯ, ಎಲ್ಲ ಸ್ವಲ್ಪ ಸ್ವಲ್ಪ ಹಾಕಿ ಆ ವ್ಯಕ್ತಿಯ ಮುಂದೆ ಮತ್ತು ಹಿಂದೆ ಮೂರು ಮೂರು ಸಲ ಇಳಿಸುತ್ತಾರೆ. ಇಳಿ ತೆಗೆಯುವ ಮೊದಲೇ ಒಂದು ಪಾತ್ರೆಯಲ್ಲಿ (ಬೋಗೋಣಿ) ನೀರು ಕಾಯಲಿಟ್ಟುಕೊಂಡಿರುತ್ತಾರೆ. ನೀರು ಸಳಮಳ ಕುದಿಯತೊಡಗಿದಾಗ ಆ ನೀರಿಗೆ ಇಳಿತೆಗೆದ ಮರದಲ್ಲಿರುವುದನ್ನೆಲ್ಲ ಹಾಕುತ್ತಾರೆ. ಆ ಬೋಗೋಣಿಯ ಮೇಲೆ ತಾಟು ಪರಾತ ಇಟ್ಟು ಒಲೆ ಮೇಲಿಂದ ಇಳಿಸಿ ನೆಲದ ಮೇಲೆ ಬೋರಲು ಇಡುತ್ತಾರೆ. ಆ ಪಾತ್ರೆ ಮೇಲೆ ಕಾಲಿಟ್ಟು ದಾಟಲು ಹೇಳುತ್ತಾರೆ. ನೀರು ಹೊರಬರದೇ ತಟ್ಟೆಯನ್ನು ಬಲವಾಗಿ ಹಿಡಿದಿದ್ದರೆ ಕಾಲ್ಧೂಳಾಗಿದೆ ಎಂಬ ನಂಬಿಕೆ, ನಂತರದಲ್ಲಿ ಕಾಲ್ಧೂಳು ಹೋಗಿ ಹೊಟ್ಟೆ ಕಡಿತ ನೋವು ಕಡಿಮೆ ಆಯಿತು ಎಂದುಕೊಳ್ಳುತ್ತಾರೆ. ಇಂದಿಗೂ ಇಂತಹ ನಂಬಿಕೆಗಳು ಜನರಲ್ಲಿ ರೂಢಿಯಲ್ಲಿವೆ. *(ಸಿಜೆಎಂ)*

ಕಾಶಮ್ಮ: ಜನಪದ ಗಾಯಕಿ. ಬೀದರ್ ಜಿಲ್ಲೆಯ ಕುಗ್ರಾಮ ದುರ್ಖಿಲೆಯಲ್ಲಿ ಜನಿಸಿದವರು. ಜೀವನದುದ್ದಕ್ಕೂ ಬಡತನದಲ್ಲೇ ಬೆಂದವರು. ಕೂಲಿನಾಲಿ ಮಾಡಿ ಉದರು ಬವಣೆ ಹೊರೆಯುವ ಹೊತ್ತಿನಲ್ಲೂ ಜನಪದ ಹಾಡುಗಳಿಗೆ ಮನಸೋತವರು. ಹಾಡಹಾಡತ್ತ ಬದುಕು ಬವಣೆ ಮರೆತವರು. ಇವರು ತಮ್ಮ ಮಧುರ ದನಿಯಿಂದ ಹೊರಡಿಸಿದ ಪದಗಳೆಲ್ಲ ಶ್ರಮದ ಕೆಲಸಗಳ ನಡುವೆ ಹಾಡಿಕೊಳ್ಳುವಂಥವು, ಬಹುತೇಕ ಕುಟ್ಟುವ, ಬೀಸುವ, ಕಳೆಕೀಳುವ ಪದಗಳು, ಹಾಗೆಂದ ಮಾತ್ರಕ್ಕೆ ಇವರಿಗೆ ಇತರ ಹಾಡುಗಳು ಗೊತ್ತಿಲ್ಲವೆಂದೇನೂ ಇಲ್ಲ. ತೊಟ್ಟಿಲು ಪದಗಳು, ಸೋಬಾನೆ ಪದಗಳು, ಗೀಗಿ ಪದಗಳನ್ನು ಹಾಡುವುದರಲ್ಲೂ ಇವರು ನಿಷ್ಣಾತರು, ಅನೇಕ ಶಿಷ್ಯರಿಗೂ ಇವರು ತಮ್ಮ ಹಾಡುಗಳನ್ನು ಧಾರೆ ಎರೆದಿದ್ದಾರೆ.

ಹಾಡು ಇರುವುದೆ ಶ್ರಮವನ್ನು ಮರೆಯುವದಕ್ಕೆ ಎಂಬ ಮಾತನ್ನು ಸತ್ಯ ಎಂದು ಸಾಬೀತು ಪಡಿಸಿದವರು ಒಪ್ಪತ್ತಿನ ಕೂಳಿಗೂ ಗತಿಯಿಲ್ಲದೆ, ತನ್ನ ತೋಳ ಬಲದಿಂದಲೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಕಲಾವಿದೆಗೆ ಸಂತೋಷವನ್ನು ನೀಡುತ್ತಿದ್ದದ್ದು ಜನಪದ ಹಾಡುಗಳು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಪ್ರಶಸ್ತಿ ಪಡೆದಿದ್ದಾರೆ. *(ಜಿಆರ್‌ಟಿ)*

ಕಾಶೀನಾಥ ರೆಡ್ಡಿ ಎಚ್: ಜನಪದ ಕ್ಷೇತ್ರಕಾರ್ಯ ತಜ್ಞ, ಜನಪದ ಕಲಾಸಂಘಟಕ, ಮತ್ತು ಪತ್ರಕರ್ತ. ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಹಣಕುಣಿ ಎಂಬ ಗ್ರಾಮದಲ್ಲಿ 1947ರ ಜನೇವರಿ 15 ರಂದು ಜನಿಸಿದರು. ತಂದೆ ಗುಂಡಾರೆಡ್ಡಿ. ತಾಯಿ ನಾಗಮಣಿ. ಇವರ ಪ್ರಾಥಮಿಕ ಅಭ್ಯಾಸ ಹುಟ್ಟೂರಿನಲ್ಲಿ ಆಯಿತು. ಪ್ರೌಢಶಾಲೆಯ ಶಿಕ್ಷಣ ಹುಮನಾಬಾದನಲ್ಲಿ ಮುಗಿಯಿತು. ಪ್ರಾರಂಭದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ, ಅನಂತರ ಪ್ರೌಢ ಶಾಲೆಯ ಶಿಕ್ಷಕರಾದರು.



ವೃತ್ತಿಯ ಜೊತೆಗೆ ಶಿಕ್ಷಣವನ್ನು ಮುಂದು ವರೆಸಿದರು. ಕನ್ನಡ ಹಾಗೂ ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಬಸವಕಲ್ಯಾಣದ ಸರಕಾರಿ ನೀಲಾಂಬಿಕಾ ಬಾಲಕಿಯರ ಪ.ಪೂ. ಕಾಲೇಜಿನಲ್ಲಿ ಇತಿಹಾಸ ಉಪನ್ಯಾಸಕರಾಗಿ ನಿವೃತ್ತಿ ಹೊಂದಿರುತ್ತಾರೆ.

ಗ್ರಾಮಗಳಲ್ಲಿ ಸಂಚರಿಸಿ. ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ ಎಂ.ಎಸ್. ಲಠ್ಠೆ, ಮಾಣಿಕರಾವ ಧನಶ್ರೀ ಅವರೊಂದಿಗೆ ಹಲವಾರು ಕೃತಿಗಳನ್ನು ಪ್ರಕಟಿಸಿದ್ದಾರೆ. 'ಭೂಕೈಲಾಸ ಮತ್ತು ಚಂದ್ರ ಶಿರೋಮಣಿ', 'ನಿಜಲಿಂಗ ಭದ್ರೇಶ್ವರರ ಅನುಭವ ಪದಗಳು', 'ಶ್ರೀ ವೀರಭದ್ರೇಶ್ವರ ದೇವಾಲಯ', 'ಶಿಲ್ಲಪ್ಪ ಕವಿಯ ಬದುಕು ಬರಹ', 'ಜನಸೇವಕನ ವಚನಗಳು', 'ಕೋರಿಕೆ' (ಕವನ ಸಂಕಲನ), 'ಮರಕುಂದಿ ಬಸವಣಪ್ಪನ ಭಜನೆಗಳು', 'ಸಿದ್ಧಪ್ರಭು' (ಜೀವನ ಚರಿತ್ರೆ), 'ಬಸವಣ್ಣನವರ ವಚನಗಳು', 'ಕಲ್ಯಾಣ ನಾಡಿನ ಪರಂಜ್ಯೋತಿ', 'ಹುಮನಾಬಾದ ತಾಲ್ಲೂಕ ಪರಿಚಯ', 'ಕಲ್ಯಾಣ ಕಲಾಶ್ರೀ' (ಅಭಿನಂದನ ಗ್ರಂಥ), 'ಕಾಯಕ ವೀರ ಮೋಳಿಗೆಯ ಮಾರಯ್ಯ' (ಜೀವನ ಚರಿತ್ರೆ), 'ಆಚರಣೆಯ ಹಾಡುಗಳು', ಸಾಹಿತ್ಯ ಸುಧಾ', 'ಸಾಹಿತ್ಯ ಸಿಂಧು', 'ಆರಾಧನೆ', 'ಸಾವಧಾನ' ಇತರ ಕೃತಿಗಳು.

ಇವರಿಗೆ 'ಆದರ್ಶ ಶಿಕ್ಷಕ ಪ್ರಶಸ್ತಿ' ಹಾಗೂ 'ಕನ್ನಡ ರಾಜ್ಯೋತ್ಸವ' ಪ್ರಶಸ್ತಿ ನೀಡಿ, ಜಿಲ್ಲಾಡಳಿತವು ಗೌರವಿಸಿದೆ. ಆರ್ಬಿಟ್ ಸಂಸ್ಥೆಯ 2003ರಲ್ಲಿ ವಿಶೇಷ ಸೇವಾ ಪ್ರಶಸ್ತಿ ನೀಡಿದೆ. 1983ರಲ್ಲಿ ಜರುಗಿದ ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನ ಜಾನಪದ ಸಾಹಿತ್ಯ ಕ್ಷೇತ್ರ ಕಾರ್ಯದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದಾರೆ.

ಇವರು ಗುಲಬರ್ಗಾ ಆಕಾಶವಾಣಿಯಿಂದ ಅನೇಕ ಕಾರ್ಯಕ್ರಮ ನೀಡಿದ್ದಾರೆ. 'ಹೆದ್ದಾರಿ ಹೇಳಿದ ಕಥೆ' ರೂಪಕ ಪ್ರದರ್ಶನ. ಮುಸ್ಲಿಂ ತತ್ವ ಪದಕಾರರ ಬಗ್ಗೆ ದೂರದರ್ಶನದಲ್ಲಿ ಸಂದರ್ಶನ. ದೂರದರ್ಶನ ಕೇಂದ್ರ ಬೆಂಗಳೂರಿನಿಂದ ಸೋಬಾನೆ ಹಾಡುಗಳು ತಂಡದ ನೇತೃತ್ವವಹಿಸಿ ಕಾರ್ಯಕ್ರಮ ನೀಡಿದರು. 'ಬತ್ತದ ಹಾಡು ಬುಲಾಯಿ' ರೂಪಕಕ್ಕೆ ಕಲಾಕಾರರನ್ನು ಹಾಗೂ ಸಾಹಿತ್ಯ ಒದಗಿಸಿದ್ದು, ಉಲ್ಲೇಖನೀಯ. *(ಜಿ.ಪಿ.)*

ಕಾಶೀನಾಥ ಗವಾಯಿ: ಜನಪದ ಗಾಯಕ. ಬೀದರ್ ಜಿಲ್ಲೆ ಹುಮನಾಬಾದ್ ತಾಲ್ಲೂಕಿನ ಹಿಲಾಲಪುರದಲ್ಲಿ 1919ರಲ್ಲಿ ಹುಟ್ಟಿದ ಪಂಚಶೀಲ ಗವಾಯಿಗಳು ಸಿಡುಬುರೋಗಕ್ಕೆ ತುತ್ತಾಗಿ ತಮ್ಮ ಎರಡು ಕಣ್ಣು ಕಳೆದುಕೊಂಡರು ತಮ್ಮ ಸಂಗೀತ, ಸಾಹಿತ್ಯಗಳನ್ನು ಜನಗಳ ಮಧ್ಯೆ ಪ್ರಚಾರ ಮಾಡುತ್ತ ಜನತೆಯ ಒಳಗಣ್ಣು ತೆರೆಸಿದ್ದಾರೆ. ಹನ್ನೆರಡನೇ ವಯಸ್ಸಿಗೇ ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಿದ ಗವಾಯಿಯವರು ಹಿಂದೂಸ್ತಾನಿ ಸಂಗೀತವನ್ನು ತಬಲ, ಹಾರ್ಮೋನಿಯಂ, ಕೊಳಲು, ಕ್ಲಾರಿಯೋ

ಹುಣಸೆ ಮರಗಳನ್ನು ನೆಟ್ಟಿದೆ. ಭಾರತೀಯ ಪುರಾತತ್ವ ಇಲಾಖೆಯು ತನ್ನ ಸುಪರ್ದಿಗೆ ತೆಗೆದುಕೊಂಡು ನಾಮಫಲಕ ಹಾಕಿದೆ. ಅಲ್ಲದೆ ಕಲ್ಲುಗಳ ಸಂರಕ್ಷಣೆಗೆ ಹೈದರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ವಿಶೇಷ ಕಾಳಜಿವಹಿಸಿ ಅಲ್ಲಿನ ಸ್ಥಳದ ಸುತ್ತಲು ಎತ್ತರ ಕಂಪೌಂಡ ಹಾಗೂ ಬೇಲಿ ತಂತಿ ಹಾಕಿದೆ. ಆಸೆಗಾಗಿ ಹೆಚ್ಚಿನ ಕಲ್ಲುಗಳನ್ನು ಅಗೆಯಲಾಗಿದೆ. ಗ್ರಾಮಸ್ಥರು ಅಲ್ಲಿನ ಜಾಗವನ್ನು ಮಲ ವಿಸರ್ಜನೆಯ ತಾಣವನ್ನಾಗಿ ರೂಪಿಸಿಕೊಂಡಿರುವುದು ಮಾತ್ರ ವಿಪರ್ಯಾಸ.

ನೋಡುವ ವಿಧಾನ: ಕಾಲ ನಿರ್ಣಯದ ಕಲ್ಲುಗಳ ಸ್ಥಳಕ್ಕೆ ಭೇಟಿ ನೀಡಿದಾಗ ಒಮ್ಮೆಲೆ ಕಲ್ಲುಗಳ ಬಗ್ಗೆ ಅರ್ಥವಾಗುವದಿಲ್ಲ. ನೆಡಲಾದ ಕಲ್ಲುಗಳು ಸಾಲಾಗಿದ್ದು ವೃತ್ತಾಕಾರವಾಗಿವೆ. ಯಾವುದೇ ದಿಕ್ಕಿನಿಂದ ನೋಡಿದರೂ ಸಹ ಸಾಲುಗಳ ಕಲ್ಲು ನಮಗೆ ಕಾಣಿಸುತ್ತವೆ. ಆದರೂ ಅಲ್ಲಿನ ಜಾಗದಲ್ಲಿ ಒಂದು ಕಲ್ಲು ಮಧ್ಯದಲ್ಲಿದೆ. ಅದರ ದಕ್ಷಿಣ ದಿಕ್ಕಿನ ಕೊನೆಯ ಕಲ್ಲಿನ ಮೇಲೆ ಸೂರ್ಯನ ಕಿರಣಗಳು ನೇರವಾಗಿ ಬಿದ್ದರೆ ಮಳೆಗಾಲವೆಂದು ತಿಳಿದು ಕೃಷಿ ಚಟುವಟಿಕೆಗಳಲ್ಲಿ ಮಗ್ನರಾಗುತ್ತಿದ್ದರು. ಹೀಗೆ ಬೇರೆ ಕಾಲ ನಿರ್ಣಯಿಸುವ ರೂಢಿ ಇತ್ತು ಎನ್ನುತ್ತಾರೆ.

ನಂಬಿಕೆ: ಗ್ರಾಮಕ್ಕೆ ಹೊಂದಿಕೊಂಡು ಇರುವ ಅಲ್ಲಿನ ಸ್ಥಳಕ್ಕೆ ಗ್ರಾಮಸ್ಥರು ಹೆಚ್ಚು ಪ್ರವೇಶ ಮಾಡುವುದಿಲ್ಲ. ಅಲ್ಲಿ ಜಾನುವಾರುಗಳನ್ನು ಕೂಡಾ ಮೇಯಿಸುವದಿಲ್ಲ. ಅಲ್ಲಿರುವ ಕಲ್ಲುಗಳನ್ನು ಬಳಸಿಕೊಂಡರೆ ಆಪತ್ತು ಬರುವುದು ಹಾಗೂ ಮಕ್ಕಳ ಭಾಗ್ಯದಿಂದ ವಂಚಿತರಾಗುವರೆಂಬ ನಂಬಿಕೆಯಿಂದ ಒಂದಿಷ್ಟು ಕಲ್ಲುಗಳು ಹಾಗೂ ಜಾಗ ಸುರಕ್ಷಿತವಾಗಿ ಉಳಿದುಕೊಂಡಿದೆ.

ಸಂಶೋಧನೆ: ಪುರಾತತ್ವದ ಬಗ್ಗೆ ಹೆಚ್ಚು ಆಸಕ್ತನಾಗಿದ್ದ ಮೇಡೋಸ್ ಟೇಲರ್ 'ವಿಭೂತಿಹಳ್ಳಿ ಕಾಲ ನಿರ್ಣಯ'ದ ಕಲ್ಲುಗಳ ಬಗ್ಗೆ ಹೆಚ್ಚು ಸಂಶೋಧನೆ ನಡೆಸಿ ಅದರ ಮಹತ್ವವನ್ನು ಸಾರಿದ. ಆನಂತರ ಅದರ ಮೇಲೆ ಬೆಳಕು ಚೆಲ್ಲಿದವರು ಇತಿಹಾಸ ತಜ್ಞ ಪ್ರೊ. ಅಲಚಿನ್ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಕಾಲ ನಿರ್ಣಯದ ಸಂಶೋಧನೆ ನಡೆಸಿ ಹೆಚ್ಚಿನ ಪ್ರದೇಶದಲ್ಲಿ ಅವನತಿಯಾಗಿವೆ, ಆದರೆ ವಿಭೂತಿಹಳ್ಳಿ ಗ್ರಾಮದ ಬಳಿ ಮಾತ್ರ ಉಳಿದುಕೊಂಡಿವೆ, ಎಂದು ವರದಿ ನೀಡಿದ. ಆಗ ಎಚ್ಚೆತ್ತ ಪುರಾತತ್ವ ಇಲಾಖೆಯು ತನ್ನ ಸುಪರ್ದಿಗೆ ತೆಗೆದುಕೊಂಡು ರಕ್ಷಿತ ಪ್ರದೇಶವೆಂದು ಘೋಷಣೆ ಮಾಡಿತು.

(ಟಿ.ಎನ್.)

ಕಾಲ್ಧೂಳಿ ತೆಗೆಯುವುದು: ಒಂದು ಜನಪದರ ನಂಬಿಕೆ, ಇಂದಿಗೂ ಗ್ರಾಮೀಣ ಭಾಗದಲ್ಲಿ ಆಚರಣೆಯಲ್ಲಿದೆ. ಸಣ್ಣವರು ದೊಡ್ಡವರು ಎನ್ನದೇ ಎಲ್ಲ ವಯಸ್ಸಿನವರಿಗೂ ಕಾಲ್ಧೂಳಿ ತೆಗೆಯುವ ರೂಢಿಯಿದೆ. ಇದರಲ್ಲಿ ಬೇರೆ ಬೇರೆ ವಿಧಾನಗಳಿವೆ.

ಊಟ ಸೇರದಿದ್ದರೆ, ಹೊಟ್ಟೆ ಉಬ್ಬರಿಸಿಕೊಂಡಿದ್ದರೆ, ಹೊಟ್ಟೆ ಕಡಿತ, ನೋವು ಇದ್ದರೆ ಅಂಥವರಿಗೆ 'ಕಾಲಧೂಳಿನಾದರೂ ತೆಗೆಯಿರಿ' ಎಂದು ಸಲಹೆ ನೀಡುತ್ತಾರೆ. ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಊಟ ತಿಂಡಿಗಳನ್ನು ಒಳಮನೆಯಲ್ಲಿ ಮಾಡಬೇಕು ಎನ್ನುತ್ತಾರೆ. ಹೊರಗೆ ಪಡಸಾಲೆ, ಅಂಗಳದಲ್ಲಿ ಕುಳಿತು ಉಣ್ಣುವಾಗ ಹೊರಗಿನವರ ಧೂಳು ಕಾಲಿನಿಂದ ಬಂದರೆ ಆ ಧೂಳು ಇವರ ಊಟದೊಂದಿಗೆ ಹೊಟ್ಟೆ ಸೇರುತ್ತದೆಂಬ ನಂಬಿಕೆ ಇಲ್ಲಿದೆ. ಧೂಳಿನೊಂದಿಗೆ ಬಂದವರ ದೃಷ್ಟಿ ದೋಷವೂ ತಗುಲಿ 'ದಿಟ್ಟಿ' (ದೃಷ್ಟಿ) ಯಾಯಿತು ಎಂದು ಭಾವಿಸುತ್ತಾರೆ. ಅದಕ್ಕೆ ಮಾಡುವ ಪರಿಹಾರವೇ 'ಕಾಲ್ಧೂಳಿ ತೆಗೆಯುವುದು' ಎಂದು ಕರೆಯುವರು ಎಂದು ತಿಳಿದುಬರುತ್ತದೆ. ಅಲ್ಲಿನ ಪದ್ಧತಿಗಳು ಇಲ್ಲಿಗಿಂತ ಭಿನ್ನವಾಗಿವೆ. ಐದು ವಿಧದ ಕಾಲ್ಧೂಳಿ ತೆಗೆಯುವ ಆಚರಣೆ ಯನ್ನು ಅಲ್ಲಿ ಸೂಚಿಸಿ ರುತ್ತಾರೆ.

ಹೈದ್ರಾಬಾದ ಕರ್ನಾಟಕ ಭಾಗ ದಲ್ಲಿಯೂ ಜಾತಿ, ಜನಾಂಗ ಮತ್ತು ದೇಶಗಳ ಭಿನ್ನತೆಯಿಂದಾಗಿ ಕಾಲ್ಧೂಳಿ ತೆಗೆಯುವ ವಿಧಾನಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳು ಕಂಡುಬರುತ್ತವೆ.

ಒಂದು ಅಗಲವಾದ ತಟ್ಟೆ (ಪರಾತ) ಅಥವಾ ಬುಟ್ಟಿಯಲ್ಲಿ ಸೆಗಣಿ (ಹೆಂಡಿ ರಾಡಿ) ಕಲಿಸಿದ ನೀರನ್ನು ಹಾಕಿಟ್ಟುಕೊಳ್ಳುತ್ತಾರೆ. ಅದರಲ್ಲಿ ಮೂರು ಹಾದಿ ಕೂಡಿದ ಜಾಗದಿಂದ ಮಣ್ಣನ್ನು ತಂದು ಹಾಕಿರುತ್ತಾರೆ. (ಹೆಂಡಿ ಸಿಗದಿದ್ದಲ್ಲಿ ಕೇವಲ ನೀರನ್ನು ಹಾಕಿಟ್ಟುಕೊಳ್ಳುವುದುಂಟು) ಆ ನೀರಿನಲ್ಲಿ ಕಾಲ್ಧೂಳಿ ಆಗಿರುವ ವ್ಯಕ್ತಿ ಉಣ್ಣುವ ತಿನಿಸುಗಳ (ರೊಟ್ಟಿ, ಚಪಾತಿ, ಅನ್ನ, ಪಲ್ಯ ಬೇಳೆಸಾರು) ಚೂರುಗಳನ್ನು ಹಾಕಿರುತ್ತಾರೆ. ಒಂದು ದೊಡ್ಡ ಬಟ್ಟಲಿನಲ್ಲಿ ಸ್ವಲ್ಪ ಬೆಂಕಿ ಹಾಕಿಟ್ಟುಕೊಂಡು ಮೇಲೆ ಸ್ವಲ್ಪ ಗುಗ್ಗುಳ ಹಾಕಿ ಅದರಿಂದ ಯಾರಿಗೆ ಕಾಲ್ಧೂಳಿ ತೆಗೆಯಬೇಕಾಗಿದೆಯೋ ಅವರ ಮೇಲಿಂದ ಮೂರು ಸಲ ಇಳಿಸಿ ತೆಗೆದು ಆ ಬಟ್ಟಲನ್ನು 'ಡಬ್' ಎಂದು ಸಗಣಿ ನೀರಿನ ತಟ್ಟೆಗೆ ಬಡಿಯುತ್ತಾರೆ. ಕಾಲ್ಧೂಳಿ ಆದವರು ಆ ಬಟ್ಟಲ ಮೇಲೆ ಕಾಲು ಕೊಟ್ಟು ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಮೂರು ಸಲ ಹೋಗಬೇಕು. ಆಗ ಕಾಲ್ಧೂಳಿ ಹೋಯಿತೆಂದು ನಂಬುತ್ತಾರೆ. ಬಟ್ಟಲು ತಟ್ಟೆಗೆ ಬಲವಾಗಿ ಅಂಟಿಕೊಂಡಿದ್ದರೆ ಕಾಲ್ಧೂಳಿ ಹೆಚ್ಚಾಗಿತ್ತೆಂದು ನಂಬಲಾಗುತ್ತದೆ.

ಇನ್ನೊಂದು ವಿಧಾನದಲ್ಲಿ ಬಟ್ಟಲಿಗೆ ಬದಲಾಗಿ ಸಣ್ಣ ಗಡಿಗೆ ಇಲ್ಲ ಕಿರಿದಾದ ಬಾಯುಳ್ಳ ಪಾತ್ರೆ (ಡೇಲಚಿ, ತೌಲಿ, ಠೋಕಿ)ಯನ್ನು ತೆಗೆದುಕೊಂಡು ಅದರಲ್ಲಿ ಅರಬಿ (ಬಟ್ಟೆ) ಚಿಂದಿ, ಕಸಬರಿಗೆ ಕಡ್ಡಿ, ಉಪ್ಪು, ಒಣಮೆಣಸಿನಕಾಯಿ, ಅಥವಾ ಮೆಣಸಿನಕಾಯಿ ತುಂಬುಗಳು ತಲೆಗೂದಲು ಇವೆಲ್ಲವನ್ನು ಹಾಕಿಟ್ಟುಕೊಂಡು ಅದಕ್ಕೆ ಕಡ್ಡಿಗೀರಿ ಉರಿ ಹಚ್ಚಿ ನಂತರ ಆ ಪಾತ್ರೆಯಿಂದ ಕಲ್ಧೂಳಿಯಾದ ವ್ಯಕ್ತಿಗೆ ಎದುರಿನಿಂದ ಮೂರು ಸಲ, ಹಿಂದಿನಿಂದ ಮೂರು ಸಲ ಇಳಿಸಿ ತೆಗೆದು ತಟ್ಟೆಯಲ್ಲಿ ಡಬ್ (ಬೋರಲು) ಹಾಕುತ್ತಾರೆ. ನಂತರ ಅದಕ್ಕೆ ಠಪ್ ಠಪ್ ಎಂದು ಬಡಿಯುತ್ತಾರೆ. ಆ ಮಡಿಕೆ ಅಥವಾ ಪಾತ್ರೆಯು ನೀರನ್ನೆಲ್ಲ ಒಳಗೆ ಎಳೆದುಕೊಂಡರೆ ಕಾಲ್ಧೂಳಿ ಆಗಿತ್ತೆಂಬ ನಂಬಿಕೆ ಗಟ್ಟಿಯಾಗುತ್ತದೆ. ಕೆಲವೊಮ್ಮೆ ನೀರು ಒಳಸೇರದಿದ್ದರೆ ಕಾಲ್ಧೂಳಿ ಆಗಿಲ್ಲವೆಂದು ಅಂದುಕೊಳ್ಳುತ್ತಾರೆ.

ಬೀದರ ಜಿಲ್ಲೆಯ ವಿಧಾನ ಒಂದರಂತೆ ಈ ಕೆಳಗಿನಂತೆ ಮಾಡುವ ರೂಢಿಯಿದೆ. ಒಂದು ಮರದಲ್ಲಿ (ಮೊರ) ಸ್ವಲ್ಪ ಪುಡಿ



ಕಾಳೇಶ್ವರ ದೇವಸ್ಥಾನ, ಕಾಳಗಿ

ನೀಲಕಂಠನನ್ನು ಮನೋನು ರಾಗದಿಂದ ಬಗೆ ಬಗೆಯಾಗಿ ವರ್ಣಿಸಿ ಸರಸ್ವತಿಯಂತೆ ಆಡುತ್ತಿರುವ ಮೂರ್ತಿಯ ವರ್ಣನೆ ಇದೆ. ಹೀಗೆ ಶಾಸನಗಳನ್ನುಳ್ಳ ಶಿಲಾಬಾಲಿಕೆಯ ಮೂರ್ತಿಗಳಿರುವುದು ಚಾಳುಕ್ಯ ಶಿಲ್ಪದಲ್ಲಿ ಅಪರೂಪವೇ ಉಳಿದಂತೆ ದೇವಾಲಯದ ದ್ವಾರಗಳು, ಕಂಬಗಳು, ಒಳ ಚಾವಣಿಯ ಶಿಲ್ಪಗಳು ಇತರ ಸಾಮಾನ್ಯವಾದ ಚಾಳುಕ್ಯ ದೇವಾಲಯಗಳಲ್ಲಿರುವಂತೆಯೇ ಇವೆ.

ಈ ದೇವಾಲಯದ ಮುಂದೆ ಕೆಲವು ಗಜಗಳ ಅಂತರದಲ್ಲಿ ನಿಂತಿರುವ ದೇವಾಲಯವೇ ಇಲ್ಲಿನ ಅತ್ಯಂತ ಪ್ರಾಚೀನ ದಿಬ್ಬೇಶ್ವರ ದೇವಾಲಯವಿರಬಹುದು. ಎತ್ತರವಾದ ಜಗತಿಯ ಮೇಲೆ ಮೂರು ಗರ್ಭಗೃಹಗಳು, ಮೂರು ಸುಕನಾಸಿಗಳು, ನಡುವೆ ಒಂದು ನವರಂಗ, ಮುಂದೆ ಒಂದಂಕಣದ ಮುಖಮಂಟಪಗಳಿವೆ. ಹೊರಗೋಡೆಗಳು ಕಚ್ಚು ಕಚ್ಚಾಗಿ ಉಬ್ಬಿದ ಆಯತಾಕಾರದ ಗೋಡೆಗಳಿಂದ ಕೂಡಿವೆ. ಚಾಳುಕ್ಯರ ಕಾಲದ ದೇವಾಲಯಗಳ ತಳವಿನ್ಯಾಸದಲ್ಲಿ ಇದು ಅಪರೂಪವಾದುದೆನಿಸಿದೆ. ಹೊರ ಗೋಡೆಗಳ ಮೇಲೆ ಹೆಚ್ಚು ಉಬ್ಬಿನಂತಿರುವ ಸುಂದರವಾದ ಮೂರ್ತಿಗಳನ್ನು ಕಾಣಬಹುದು. ಆದರೆ ದೇವಾಲಯ ಅತ್ಯಂತ ಜೀರ್ಣಾವಸ್ಥೆಯಲ್ಲಿದೆ.

ಈಗ ಊರು ಈ ದೇವಾಲಯಗಳಿರುವ ಹಳೆಯ ನಿವೇಶನದಿಂದ ಸ್ವಲ್ಪ ದೂರದಲ್ಲಿದೆ. ಅಲ್ಲಿಯೂ ಮಲ್ಲಿಕಾರ್ಜುನ ದೇವಾಲಯ, ಚೌಡೇಶ್ವರಿ ಗುಡಿ, ಅಂಜನೇಯನ ಗುಡಿಗಳಿವೆ. ಆದರೆ ವಾಸ್ತುಶಿಲ್ಪ ದೃಷ್ಟಿಯಿಂದ ಇವು ಸಾಮಾನ್ಯ ರಚನೆಗಳು. ಕಾಳಗಿಯ ಕಾಳೇಶ್ವರ ಮತ್ತು ನರಸಿಂಹ ದೇವಾಲಯಗಳು ವರ್ಷವಿಡೀ ಈ ಸುತ್ತಿನ ಯಾತ್ರಾರ್ಥಿಗಳನ್ನು ಆಕರ್ಷಿಸುತ್ತವೆ. ವಾರ್ಷಿಕ ಜಾತ್ರೆಯ ನಡೆಯುವುದು ಮೇ ತಿಂಗಳಲ್ಲಿ. ಕಾಳಗಿಯಿಂದ ಎರಡು ಕಿ.ಮೀ. ದೂರದಲ್ಲಿ ಹಜರತ ಬಾಷಾ ಖಾದ್ರಿ ಎಂಬ ದೇವಸ್ಥಾನ ಗುಡ್ಡದ ಮೇಲಿದೆ. ಈ ಮುಸ್ಲಿಂ ದೇವಸ್ಥಾನಕ್ಕೆ ಹಿಂದೂ ಮುಸ್ಲಿಂ ಎರಡೂ ಧರ್ಮೀಯರು ಭಕ್ತಿಭಾವದಿಂದ ನಡೆದು ಕೊಂಡು ಬಂದಿದ್ದಾರೆ. ಪ್ರತಿ ವರ್ಷ ಜನೆವರಿ ತಿಂಗಳು (ಚಾಂದಕಿರಾತ) ಎನ್ನುವ ದಿನದಂದು ಭಾರಿ ಪ್ರಮಾಣ ದಲ್ಲಿ ಜಾತ್ರೆಯು ನೆರವೇರುತ್ತದೆ. ಸುತ್ತಮುತ್ತಲಿನ ಪ್ರದೇಶದ ಜನರು ಭಾಷಾ ಖಾದ್ರಿ ದೇವರಿಗೆ ತಮ್ಮ ಭಕ್ತಿಗನುಗುಣ ವಾಗಿ, ಪೂಜೆ, ಕಾಯಿ ಕರ್ಪೂರ ಸಲ್ಲಿಸಿ, ಕುರಿ, ಕೋಳಿ, ಬಲಿಕೊಡುತ್ತಾರೆ. ಈ ಗುಡ್ಡದ ಪಕ್ಕದಲ್ಲಿಯೇ ಇನ್ನೊಂದು ಗಣೇಶನ ಮೂರ್ತಿ ಇದ್ದು, ಇದನ್ನು ರಟಕಲ್ ರೇವಣಸಿದ್ಧ ಮುತ್ಯಾನ ಅನುಷ್ಠಾನದಿಂದ ನಿರ್ಮಿತಿಯಾಗಿದೆ ಎಂದು ಹೇಳುತ್ತಾರೆ. ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಭಜನೆ, ಕೀರ್ತನೆ, ನಡೆಯುತ್ತವೆ. ಹೀಗೆ ಕಾಳಗಿ ಗ್ರಾಮ ಪ್ರಮುಖ ದೇವರು ಮತ್ತು ದೇವಾಲಯಗಳಿಂದ ಪ್ರಸಿದ್ಧ ಪಡೆದಿದೆ.

(ಎಂ.ಎಚ್.)

ಕಾಳಮ್ಮ ಚಲವಾದಿ: ಸಂಪ್ರದಾಯದ ಹಾಡುಗಳನ್ನು ಹಾಡುವ ಕಲಾವಿದೆ. ದೇವದುರ್ಗ ರಾಯಚೂರ ಜಿಲ್ಲೆ ಕೂಲಿ ವೃತ್ತಿಯಾದರೂ ಕೇವಲ 9ನೇ ತರಗತಿವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ್ದರೂ ದೇವದುರ್ಗ ತಾಲ್ಲೂಕಿನ (ರಾಯಚೂರು ಜಿಲ್ಲೆ) ಹಳ್ಳಿ ಹಳ್ಳಿಗಳಲ್ಲಿ ಪರಿಚಿತೆ. ಮದುವೆ, ಸೋಬಾನ, ಐರಾಣಿ, ತೊಟ್ಟಿಲು, ಬೀಸುವುದು, ಕುಟ್ಟುವುದು, ಕಳೆ ಕೀಳುವುದು ಹೀಗೆ ಹಲವು ಹತ್ತು ಸಂದರ್ಭಗಳಲ್ಲಿ ಸಂಪ್ರದಾಯದ ಹಾಡುಗಳನ್ನು ಹಾಡಿದ್ದಾರೆ. ಇವರು ರಾಯಚೂರಿನಲ್ಲಿ ನಡೆದ ಜಿಲ್ಲಾ ಜಾನಪದ ಸಮ್ಮೇಳನದಲ್ಲೂ ಭಾಗವಹಿಸಿ ಈ ಕಲಾವಿದೆ ಪ್ರಶಂಸೆಗಳಿಸಿದ್ದರು.

(ಜಿ.ಆರ್.ಟಿ.)

ನೇಟ್ ನುಡಿಸುವದನ್ನು ಕಲಿತರು, ತತ್ವಪದ, ಭಜನೆಪದ, ಜನಪದ ಗೀತೆಗಳನ್ನು ಹಾಡುತ್ತಲೇ ಅಂಥ ಸಾಹಿತ್ಯ ನಿರ್ಮಾಣವನ್ನೂ ಮಾಡಿದ್ದಾರೆ.

ಬುದ್ಧ,ಬಸವ, ಅಂಬೇಡ್ಕರ್ ಅವರ ಚಿಂತನೆಗಳನ್ನು ಜನಪದ ಶೈಲಿಯಲ್ಲಿ ರಚಿಸಿ, ಹಾಡಿ ಜನಪ್ರಿಯಗೊಳಿಸಿರುವುದಷ್ಟೇ ಅಲ್ಲದೆ ಸುತ್ತಮುತ್ತಿನ ಗ್ರಾಮಗಳಲ್ಲಿ ನಾಟಕಗಳನ್ನೂ ಕಲಿಸಿದ್ದಾರೆ. ಗಡಿನಾಡ ಚಳವಳಿ, ರೈತ ಚಳವಳಿ ಮುಂತಾದ ಜನಪರ ಹೋರಾಟಗಳಲ್ಲಿಯೂ ತೊಡಗಿಸಿಕೊಂಡಿರುವ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಡಾ!! ಬಾಬಾಸಾಹೇಬ ಅಂಬೇಡ್ಕರ್ ರಾಷ್ಟ್ರೀಯ ಪ್ರಶಸ್ತಿ ಲಭಿಸಿವೆ. ಕಾಶೀನಾಥ ಕಾಳಿದಾಸ, ಹಿಲಾಲಪೂರ ಎಂಬ ಹುಟ್ಟು ಹೆಸರನ್ನುಳ್ಳ ಇವರಿಗೆ ಜನತೆಯೇ ಅಬಿಮಾನದಿಂದ ಪಂಚಶೀಲ ಗವಾಯಿ ಎಂಬ ಬಿರುದು ನೀಡಿದ್ದಾರೆ. *(ಜಿಆರ್‌ಟಿ)*

ಕಾಶೆಪ್ಪ ಮರೆಪ್ಪ ಹಾಲು: ಡಪ್ಪಿನಾಟದ ಕಲಾವಿದ. ಡಪ್ಪಿನಾಟದ ಮನೆತನದಿಂದ ಬಂದ ಕೊಡುಗೆ. ಅಕ್ಷರ ಕಲಿಯಲಾಗದ ಈತನ ಕೊರಗನ್ನು ಮುಚ್ಚಿದ್ದು ಕುಣಿತ. ಕಾಡು ಮೇಡುಗಳಲ್ಲಿ ದನಕರು ಮೇಯಿಸುವಾಗ ರೂಢಿಸಿಕೊಂಡ ಕೂಗುಗಳೇ ಇವರ ಇನಿದನಿಯಲ್ಲಿ ಹಾಡುಗಳಾಗಿ ಬದಲಾದವು. ಈಗ ಊರಲ್ಲಿ ಕೋಲಾಟ ಶಬ್ದ ಕೇಳಿದರೆ ಅದು ಕಾಶೆಪ್ಪನದೇ ಸೈ ಎನ್ನುವಷ್ಟರ ಮಟ್ಟಿಗೆ ಇವರ ಹಾಡು ಕುಣಿತಗಳು ಹೆಸರುವಾಸಿ. ಹಬ್ಬ ಹರಿದಿನ ಜಾತ್ರೆಗಳಲ್ಲಿ ಡಪ್ಪಿನಾಟ, ಮೊಹರಂನಲ್ಲಿ ರಿವಾಯತ್ ಹಾಡುಗಳು ಜೊತೆಗೆ ಕುಣಿತ 65 ವರ್ಷದ ಇಳಿಗಾಲದಲ್ಲಿಯೂ ಇವರ ಎಡಬಿಡದ ಸಂಗಾತಿ. ಕೂಲಿ ಮಾಡಿ ಬದುಕು ಸಾಗಿಸುತ್ತಿರುವ ಕಾಶೆಪ್ಪ ಡಪ್ಪಿನಾಟಕ್ಕೊಂದು ಮಹತ್ವದ ಕಾಣಿಕೆ. ಕಲೆ ಎನ್ನುವುದು ಕೆಲವರಿಗೆ ರಕ್ತಗತವಾಗಿ ಬಂದಿರುತ್ತದೆ. ಕೆಲವರಿಗೆ ಸ್ವಂತ ಪರಿಶ್ರಮದಿಂದ ಬಂದಿರುತ್ತದೆ. ಎಂಬುದು ಕೇಳಿದ್ದೇನೆ. ಇವರಿಗೆ ರಕ್ತಗತವಾಗಿ ಬಂದಿರುವ ಕಲೆಯೆಂದರೆ ಡಪ್ಪಿನಾಟ. ಶ್ರೀಯುತರಿಗೆ ಅಕ್ಷರ ಕಲಿಯುವ ಆಸಕ್ತಿಯಿದ್ದರು, ಅಕ್ಷರ ಕಲಿಯಲಾಗದೆ, ತಮ್ಮ ಭಾವನೆಗಳನ್ನು ಡಪ್ಪಿನಾಟದ ಮೂಲಕ ಅಭಿವ್ಯಕ್ತಪಡಿಸಿದ ಅಪರೂಪದ ಕಲಾವಿದ. *(ಜಿಆರ್‌ಟಿ)*

ಕಾಳಗಿ: ಗುಲಬರ್ಗಾ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ. ಗುಲಬರ್ಗಾ ಪಟ್ಟಣದಿಂದ 60 ಕಿ.ಮೀ. ಅಂತರದಲ್ಲಿದೆ. ಇಲ್ಲಿಯ ನೀಲಕಂಠ ಕಾಳೇಶ್ವರ ದೇವಾಲಯ ಪ್ರಸಿದ್ಧವಾದುದು. ಕೃತಯುಗದಲ್ಲಿ ಶ್ರೀ ಜ್ಯೋತಿರ್ಲಿಂಗವೆಂದು ತ್ರೇತಾಯುಗದಲ್ಲಿ ಸೋಮೇಶ್ವರಲಿಂಗವೆಂದು ದ್ವಾಪರಯುಗದಲ್ಲಿ ನೀಲಕಂಠ ಕಾಳೇಶ್ವರ ಕಲಿಯುಗದಲ್ಲಿ ಕಾಳೇಶ್ವರನೆಂದು ಹೇಳಲಾಗಿದೆ.

ಕ್ರಿ.ಶ. 2ನೆಯ ಶತಮಾನದಲ್ಲಿಯ ಇಲ್ಲಿಯ 'ನೀಲಕಂಠ ದೇವಾಲಯ ನಿರ್ಮಾಣವಾಯಿತೆಂದು ಪುರಾತನ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ದ್ವಾಪರಯುಗದಲ್ಲಿಯೂ ನೀಲಕಂಠ ದೇವಾಲಯವಿತ್ತು ಆಗ ಬೀದರ ಜಿಲ್ಲೆಯ ಕಾಳೇಶ್ವರರೆಂಬವರು ಬೀದರಿನ ಕಾಶಿಗೆ ತೆರಳುವ ಸಂದರ್ಭದಲ್ಲಿ ಕಾಳಗಿ ಮಾರ್ಗವಾಗಿ ಬಂದು ನೀಲಕಂಠೇಶ್ವರರಿಗೆ ಪೂಜೆ ಸಲ್ಲಿಸಿ, ಕಾಶಿಯಲ್ಲಿ ತಂಗಿದ್ದು, ಅನಂತರ ನೀಲಕಂಠ ದೇವರ ದರ್ಶನಕ್ಕೆ ಬಂದು ದರ್ಶನ ಪಡೆದ ನಿದರ್ಶನಗಳಿವೆ.

ಪುರಾಣ ಪ್ರಸಿದ್ಧ ಊರಿನ ಹೆಸರಿನ ಬಗ್ಗೆ ಕೌತುಕದ ಕಥೆಗಳಿವೆ. ರಾವಣನ ಬಲಗೈ ಬಂಟನಾಗಿದ್ದ, ಕಾಳಾಸುರನ ಸಂಹಾರಕ್ಕೆ ಆಂಜನೇಯ ಮುಂದಾಗುತ್ತಾನೆ. ರಾವಣನಂತೆ ಕಾಳಾಸುರ ಕೂಡ ಶಿವಭಕ್ತ. ಪ್ರಾಣಭಯದಿಂದ ಓಡಿ ಬಂದು ಹನುಮಂತನಿಂದ ರಕ್ಷಣೆ ನೀಡುವಂತೆ ಇಲ್ಲಿ ನೆಲೆನಿಂತಿದ್ದ, ನೀಲೇಶ್ವರನಿಗೆ ಮೊರೆ ಹೋಗುತ್ತಾನೆ. ಆತನನ್ನು ಅನುಗ್ರಹಿಸಿದ ನೀಲೇಶ್ವರ ನೀನು ಕಲಿಯುಗದ ಕಾಳೇಶ್ವರನಾಗಿ ಇಲ್ಲಿ ನೆಲೆ ನಿಲ್ಲು ಎಂದು ಅಭಯ ನೀಡುತ್ತಾನೆ. ಅರಸನೊಬ್ಬ ಪೂಜಿಸಲ್ಪಡುವುದನ್ನು ಕಾಣಲು ಇಲ್ಲಿಗೆ–33 ಕೋಟಿ ದೇವತೆಗಳು ಬರುತ್ತವೆ. ಕಾಳೇಶ್ವರನ ಮನವಿ ಮೇರೆಗೆ ಇಲ್ಲಿಯೇ ನೆಲೆ ನಿಂತರು ಎಂಬುದು ಕಥೆಗಳಲ್ಲೊಂದು. ದಿಬ್ಬೇಶ್ವರ ಕಾಳೇಶ್ವರ ದೇವಾಲಯಗಳಲ್ಲದೆ ಚಾಳುಕ್ಯ ಮತ್ತು ಕಳಚುರಿಗಳ ಕಾಲದಲ್ಲಿ ಸೋಮೇಶ್ವರ, ಜಯಲಿಂಗೇಶ್ವರ ದೇವಾಲಯ ಮೊದಲಾದ ಹಲವು ದೇವಾಲಯಗಳು ಇಲ್ಲಿ ನಿರ್ಮಿತವಾದುದಾಗಿ ಶಾಸನಗಳು ತಿಳಿಸುತ್ತವೆ. ಆದರೆ ದೇವಾಲಯಗಳು ಜೀರ್ಣಾವಸ್ಥೆಯಲ್ಲಿವೆ. ಕೆಲವು ನಾಮಾವಶೇಷವಾಗಿವೆ. ದೇವಾಲಯಗಳ ಶಿಲ್ಪಗಳು, ಗೋಡೆ ಭಾವಣಿಗಳ ಭಾಗಗಳು, ಇತರ ಶಿಲಾಫಲಕಗಳು ಊರಿನ ಸುತ್ತ ಚೆಲ್ಲಾಡಿವೆ. ಇವುಗಳಲ್ಲಿ ತಕ್ಕ ಮಟ್ಟಿಗೆ ಉಳಿದು ಬಂದಿರುವ ದೇವಾಲಯವೆಂದರೆ ಕಾಳಮೇಶ್ವರ ಅಥವಾ ಕಾಳೇಶ್ವರ ದೇವಾಲಯ, ಆದರೆ ಮೂಲ ದೇವಾಲಯಕ್ಕೆ ಅನಂತರದ ಕಾಲದಲ್ಲಿ ಕೆಲವು ಭಾಗಗಳನ್ನು ಸೇರಿಸಿರುವುದಲ್ಲದೆ ದೇವಸ್ಥಾನಕ್ಕೆ ಪೂರ್ಣವಾಗಿ ಸುಣ್ಣ ತುಂಬಿರುವುದರಿಂದ ಅದರ ಮೂಲ ಸೌಂದರ್ಯ ಮಾಸಿದೆ.

ಈ ದೇವಾಲಯದ ಹೊರಗೋಡೆಗಳ ಮೇಲೆ ಇರುವ ಸುಂದರವಾದ ಭಂಗಿಗಳಲ್ಲಿ ನಾಟ್ಯಮಗ್ನರಾಗಿರುವ ಸ್ತ್ರೀ ಮೂರ್ತಿಗಳ ಉಬ್ಬು ಶಿಲ್ಪಗಳು ಆಕರ್ಷಕವಾಗಿವೆ. ಇವುಗಳಲ್ಲಿನ ಒಂದು ವಿಶೇಷವೆಂದರೆ ಇಲ್ಲಿನ ಕೆಲವು ಮೂರ್ತಿಗಳ ಮೇಲೆ ಅಪರೂಪವಾಗಿ ಕಿರುಶಾಸನಗಳಿದ್ದು ಆ ಮೂರ್ತಿಗಳ

ಭಾವಭಂಗಿ ಗಳನ್ನು ಅವುಗಳನ್ನು ಕಂಡರಿಸಿ ರುವ ಉದ್ದೇಶ ವನ್ನು ವಿವರಿಸುತ್ತದೆ. ಸಾಮಾ ನ್ಯವಾಗಿ ಈ ಕಿರುಶಾಸ ನಗಳು ನೀಲಕಂಠನನ್ನು ಬಗೆ ಬಗೆಯಾಗಿ ಅಲ್ಲಿ ಕಂಡರಿಸಿರುವ ಸ್ತ್ರೀಯರು ವರ್ಣಿಸು ತ್ತಿರುವುದನ್ನು ಸೂಚಿ ಸುತ್ತವೆ.

ವೀಣೆಯನ್ನು ನುಡಿಸಿ ಹಾಡುತ್ತಿರುವ ಸ್ತ್ರೀ ಮೂರ್ತಿಯ ಶಿಲ್ಪ ಒಂದರ ಮೇಲಿನ ಶಾಸನ ಧರೆಯೊಳಗೆ ನೀಲಕಂಠನೆ ಸುಜನಂ ಧಾರ್ಮಿಕನು ಎಂದು ಒರಳಿ ವಸಂತಂ ಗುಜರಿ ಸಿರಿಲಾಗದೆ ವೀಣಾಕಾರ್ತಿ ಪಾಡುತ್ತು ಮಿರ್ದಳ್' ಎಂದಿದೆ. ಇಲ್ಲಿ ಹೆಸರಿಸಿರುವ ಕೆಲವು ರಾಗಗಳು ಗಮನಿಸತಕ್ಕ ವಾಗಿವೆ. ಮೋಹಕ ಭಂಗಿಯಲ್ಲಿ ನಿಂತು ಮುಂಗೈ ಮೇಲೆ ಕುಳಿತಿರುವ ಗಿಳಿಯೊಂದನ್ನು ನುಡಿಸುತ್ತಿರುವ ಸ್ತೀ ಮೂರ್ತಿಯ ಮೇಲಿನ ಒಂದು ಶಾಸನ, ಲಲಿತಾಂಗಿ ಆಡಿಸುತ್ತಿರೆ ಗಿಳಿಯಾಡಿತು, ನೀಲಕಂಠನ್ ಈ ಬಂಧಂ ನೀವೇಳಿರೆ ಏಳಿರೆ ತೋರಣಂಗೂಡಿ ಕಳಕನ್ನಡಿಯಿಂದ ಇದಿರುಗಳ್ವದು ಎಂದು ವರ್ಣಿಸಿದರೆ, ಮತ್ತೊಂದರಲ್ಲಿ ಬುಧಾಗ್ರಣಿ

ಮೊದಲಾದ ರೋಗಾಣುಗಳನ್ನು ಗುರುತಿಸಿ, ನಾಶಪಡಿಸಲು ಈ ಕೀರ್ತನ ಕಲೆ ಮಹತ್ವದ ಪಾತ್ರ ವಹಿಸುತ್ತದೆ.

ಕೀರ್ತನಕಾರ ತನ್ನ ಸಹ ಕಲಾವಿದರ ಸಹಾಯದಿಂದ ಒಂದು ಮೇಳ ಕಟ್ಟಿ ಹಾಡುತ್ತ, ಕುಣಿಯುತ್ತ ಜನರ ಮೇಲೆ ಪರಿಣಾಮ ಬೀರುವಂತೆ ವಿಷಯ ನಿರೂಪಿಸುತ್ತಾನೆ. ಕೀರ್ತನ ಕಲೆಯ ಅನುಭವವು ಮನುಷ್ಯನನ್ನು ಉನ್ನತ ಮಾನಸಿಕ ಸ್ತರಕ್ಕೆ ಕೊಂಡೊಯ್ಯುತ್ತದೆ. ಅವನು ತನ್ನ ಇಹದ ಬದುಕಿನ ಜಂಜಾಟ, ಒತ್ತಡ, ಆತಂಕಗಳನ್ನು ಒಂದಿಷ್ಟು ಸಮಯದವರೆಗೆ ಮರೆತು ಆದರಲ್ಲಿ ತನ್ಮಯನಾಗುತ್ತಾನೆ. ಅಲ್ಲದೆ ಇಹದ ಬದುಕಿನ ಸಮಸ್ಯೆ, ಸವಾಲುಗಳನ್ನು ಎದುರಿಸಲು ಸಬಲನಾಗುತ್ತಾನೆ. ಈ ದೃಷ್ಟಿಯಿಂದ ಮಾನವ ಧರ್ಮವನ್ನು ಕಟ್ಟುವ ಪ್ರಯತ್ನವನ್ನು ಹರಿದಾಸರು ಕೀರ್ತನ ಕಲೆಯ ಮುಖಾಂತರ ಕೈಕೊಂಡರು. ದಾಸರ ಹಾಗೂ ಸಾಮಾನ್ಯ ಜನತೆಯ ಈ ಅನುಭವಗಳ ವಿನಿಮಯಕ್ಕೆ ಕೀರ್ತನ ಕಲೆ ಮಾಧ್ಯಮವಾಗಿ ನಿಂತು ಕಾವ್ಯದ ಗೌರವವನ್ನು ಸಾಧಿಸಿಕೊಂಡಿದೆ.

(ಕೆಬಿಸ್‌ಬಿನ್)

ಕು

ಕುಂಬಾರ: ಹಳ್ಳಿಯ ಹನ್ನೆರಡು ಆಯಗಾರರಲ್ಲಿ ಒಬ್ಬ. ಅನಾದಿಕಾಲದಿಂದ ನಮ್ಮ ಜನಾಂಗದ ಬದುಕಿನ ಅವಿಭಾಜ್ಯ ಅಂಗವಾಗಿ ಬೆಳೆದುಬಂದ ಕುಂಬಾರ ಎನ್ನುವ ಶಬ್ದಕ್ಕೆ ಕುಲಾಲ, ಚಕ್ರಿ, ದಂಡಧರ, ಕುಂಭಕಾರ ಮುಂತಾದ ಅರ್ಥಗಳಿವೆ. ಶಿವಪಥವನ್ನು ಅರಿಯಲು, ಸಾಧಿಸಲು ಗುರುಪಥವೇ ಮೊದಲು ಎಂದು ಸಾರಿದ ಬಸವಣ್ಣನವರು ತಮ್ಮ ಈ ಅನುಭವಕ್ಕೆ ಸಾದೃಶ್ಯಗಳನ್ನು ಕೊಡುವಾಗ ಆಯ್ದುಕೊಳ್ಳುವ ಮೊದಲ ವಾಕ್ಯ 'ಮಡಕೆಯ ಮಾಡುವರೆ ಮಣ್ಣೇ ಮೊದಲು' ಎನ್ನುವುದು. ಮಣ್ಣು, ಅದರಿಂದ ಮಾಡುವ ಮಡಿಕೆಯ ಹಿಂದೆ ಕುಂಬಾರನ ಹಿರಿಮೆ ಇಲ್ಲಿ ಧ್ವನಿತವಾಗಿರುವುದು ಸುಸ್ಪಷ್ಟ.

ಕುಂಬಾರನ ಹುಟ್ಟನ್ನು ಕುರಿತ ಐತಿಹ್ಯವೊಂದು ಕುತೂಹಲಕಾರಿಯಾಗಿದೆ, ಕೃತಾಯುಗದಲ್ಲಿ ಮಹೇಶ್ವರ ಅಂದರೆ ಶಿವ, ಹೇಮಂತನ ಮಗಳು ಗಿರಿಜೆಯೊಡನೆ ಮದುವೆ ಯಾಗಬಯಸಿದ. ಆಗ ಸುರಾಸುರರು ಕೈಲಾಸ ಪರ್ವತದಲ್ಲಿ ಕೂಡಿ ವಿವಾಹ ಸಮಾರಂಭದ ಬಗೆಗೆ ಆಲೋಚನೆ ನಡೆಸಿದರು. ಆಗ ಎದ್ದ ಮುಖ್ಯ ಪ್ರಶ್ನೆಯೆಂದರೆ ಈ ಸಮಾರಂಭಕ್ಕೆ ಅಗತ್ಯವಾದ ಪಾತ್ರೆಪಡಿಗಳನ್ನು ಪೂರೈಸುವವರು ಯಾರು ಎನ್ನುವುದು ಕುಲಾಲ ಎನ್ನುವ ಒಬ್ಬ ಬ್ರಾಹ್ಮಣ ಈ ಪಾತ್ರೆಗಳನ್ನು ತಯಾರಿಸಿಕೊಡಬೇಕು ಎಂದು ನಿರ್ಣಯಿಸಲಾಯಿತು. ಕುಲಾಲಕ ನೆರೆದ ಸಮೂಹದ ಎದುರು ಎದ್ದು ಕೈಮುಗಿದು ಅದಕ್ಕೆ ಅಗತ್ಯವಾದ ವಸ್ತು ದ್ರವ್ಯಗಳನ್ನು ತನಗೆ ಒದಗಿಸಿಕೊಡಬೇಕೆಂದು ಪ್ರಾರ್ಥಿಸಿ ಕೊಂಡನಂತೆ. ಆಗ ವಿಷ್ಣು ತಿಗರೆಯಂತೆ ಬಳಸಲು ತನ್ನ ಸುದರ್ಶನ ಚಕ್ರ ಕೊಟ್ಟ; ಮಂದಾರ ಪರ್ವತ ಈ ಚಕ್ರ–ತಿಗರೆಗೆ ಆಧಾರವಾಯಿತು. ಆದಿಕೂರ್ಮ ಮಣ್ಣು ಹದ ಗೊಳಿಸಲು ಕಾರ್ಯಮಾಡಿತು. ಒಂದು ಮಳೆಮೋಡದ ತುಂಡು ನೀರಿನ ಬಾನಿಯಾಯಿತು.

ವಿಶ್ವಕರ್ಮನನ್ನು ಕುರಿತು ಒಂದು ಪೌರಾಣಿಕ ಕಥೆಯಲ್ಲಿ ಬರುವ ಕುಂಬಾರನ ಉಲ್ಲೇಖ ಹೀಗಿದೆ.

ವಿಶ್ವಕರ್ಮ ಪರಬ್ರಹ್ಮರೂಪಿ;ಜಗತ್‌ಶಿಲ್ಪಿ, ಆತನಿಗೆ ಮನು, ಮಯ, ಶಿಲ್ಪಿ, ವಿಶ್ವಜ್ಞ ಮತ್ತು ತಷ್ಟ್ರ ಎಂಬ ಐದು ಮಕ್ಕಳು. ಐವರೂ ಋಷಿ ಶ್ರೇಷ್ಠರು. ವಿಶ್ವ ಕರ್ಮ ತನ್ನ ಐದು ಮಕ್ಕಳಿಗೆ ಅಪೂರ್ವ ಜ್ಞಾನವನ್ನು ಧಾರೆಯೆರೆದ. ಐದು ಮಕ್ಕಳೂ ತಂದೆಯ ಕೃಪೆಯಿಂದ ಐದು ವಿವಿಧ ಶಿಲ್ಪ ಕಾಯಕಗಳಲ್ಲಿ ಪರಿಣತರಾದರು. ಶಿಲ್ಪಿ ವಿಗ್ರಹ, ದೇವಾಲಯ ರಚನೆಯಲ್ಲಿ ಕುಶಲಮತಿ. ವಿಶ್ವಜ್ಞ ವಿವಿಧ ಬಗೆಯ ಆಭರಣ ಮಾಂಗಲ್ಯಗಳ ವಿನ್ಯಾಸರೂಪಣದಲ್ಲಿ ನಿಪುಣ. ತ್ವಷ್ಟ್ರ ಜೀವನಕ್ಕೆ ಅತ್ಯಗತ್ಯವಾದ ಪಾತ್ರೆ ಪಡಗಳನ್ನು ಮಾಡುವುರದಲ್ಲಿ ಜಾಣ. ಈ ತ್ವಷ್ಟ್ರವೇ ಜಾಣ ಕುಂಬಾರ.

ಮಹಾಭಾರತದಲ್ಲಿ ಒಂದೆರಡು ಕಡೆ ಕುಂಬಾರನ ಉಲ್ಲೇಖ ಬರುತ್ತದೆ. ಏಕಚಕ್ರ ನಗರದಲ್ಲಿ ಭೀಮ ಅಲ್ಲಿಯ ಕುಂಬಾರನೊಬ್ಬ ಮಾಡಿಕೊಟ್ಟ ಅತಿ ದೊಡ್ಡ ಗಾತ್ರದ ಹರಿವಿಯನ್ನು ಎತ್ತಿಕೊಂಡೇ ಅಲೆದು ಆಹಾರ ಸಂಗ್ರಹಿಸುತ್ತಿದ್ದನಂತೆ. ದ್ರೌಪದಿ ಸ್ವಯಂವರ ಕಾಲದಲ್ಲಿ ಪಾಂಡವರು ಗುಪ್ತವಾಗಿ ವಾಸವಾಗಿದ್ದುದು ಕುಂಬಾರನ ಕೊಟ್ಟಿಗೆಯಲ್ಲೇ.ಕುಂಬಾರರ ಬಗೆಗೆ ಜನಪದ, ಶಿಲಾಶಾಸನ,ಶಿಷ್ಟಪದ ಸಾಹಿತ್ಯಗಳಲ್ಲಿ ಹೇರಳವಾದ ದಾಖಲೆಗಳು ದೊರೆಯುತ್ತವೆ.

ಕುಂಬಾರ ವೃಂದದಲ್ಲಿ ನಡೆದಿರಬಹುದಾದ ಒಂದು ಮದುವೆ ಅಥವಾ ಉತ್ಸವದ ಪ್ರಸಂಗದಲ್ಲಿ ನಾಯಂದರರಿಂದ ಕುಂಬಾರರು ಕಾಲುಗುರು ತೆಗೆಸಿಕೊಳ್ಳುವ ಹಕ್ಕು ಇಲ್ಲ ಎಂದೂ, ಅಗಸರಿಂದ ಅವರ ಮಂಟಪ ಅಥವಾ ಹಂದರಕ್ಕೆ ಬಟ್ಟೆಯ ಮೇಲ್ಕಟ್ಟು ಕಟ್ಟಿಸಿಕೊಳ್ಳುವ ಹಕ್ಕು ಇಲ್ಲ ಎಂದೂ ವಾದಿಸುತ್ತಾರೆ. ಅವರೆಲ್ಲ ಕೂಡಿ ಇದಕ್ಕೆ ಪರಿಹಾರ ಕಂಡುಕೊಂಡದ್ದು ಶ್ರೀಸಿದ್ಧಲಿಂಗೇಶ್ವರರಿಗೆ ಗುರುಗಳಾಗಿದ್ದ ಗೋಸಲ ಯತಿಯ ಗ್ರಾಮ ಹರದನಹಳ್ಳಿಯ ದಿವ್ಯಲಿಂಗೇಶ್ವರನ ಸಮಕ್ಷಮದಲ್ಲಿ ಕುಂಬಾರರು ಕುದಿ ತುಪ್ಪದಲ್ಲಿ ಕೈಯಿಟ್ಟು ಸತ್ವ ಪರೀಕ್ಷೆಯಲ್ಲಿ ಗೆಲ್ಲುತ್ತಾರೆ. ಆಗ ಕುಂಬಾರರಿಗೆ ನಾಯಂದರು ಕಾಲುಗುರು ತೆಗೆಯುವುದು ಉಂಟು. ಅಗಸರು ಕಟ್ಟುವುದುಉಂಟು ಎಂದು ಶಾಸನ ಬರೆಸಲಾಯಿತು. ಜಾತಿ ಪದ್ಧತಿಯ ಗಾಢ ಪ್ರಭಾವದ ನಮ್ಮ ಸಾಮಾಜಿಕ ಪರಿಸರದಲ್ಲಿ ಕುಂಬಾರರು ತಮ್ಮ ಉನ್ನತ ಸ್ತರವನ್ನು ಕಾಪಾಡಿಕೊಳ್ಳಲು ಸಂಘರ್ಷ ನಡೆಸುತ್ತಿದ್ದರು ಎನ್ನುವುದು ಸ್ಪಷ್ಟ.

ಕುಂಬಾರಿಕೆ–ವಿಶೇಷತ: ಕುಶಲಕಲಾ ಕುಂಬಾರಿಕೆ. ಇರಾನ್ ಮುಂತಾದ ಪ್ರದೇಶ ಗಳಿಂದ ಭಾರತದ ವಿವಿಧ ಪ್ರದೇಶಗಳಿಗೆ ಹರಡಿತೆಂದು ಎಚ್.ಆರ್. ಸಂಕಾಲಿಯಾ ಊಹಿಸುತ್ತಾರೆ. ಇಂಡಸ್ (ಸಿಂಧೂಕೊಳ್ಳಗಳ) ನಾಗರಿ ಕತೆಯ ಅಧ್ಯಯನ ನಡೆಸಿದ ಈ ವಿದ್ವಾಂಸರು ಕುಂಬಾರಿಕೆ ಭಾರತದ ಪ್ರಾಚೀನ

ಕಿ

ಕಿನ್ನಾಳ: ಕೊಪ್ಪಳ ತಾಲ್ಲೂಕಿನ ಪ್ರಸಿದ್ಧ ಗ್ರಾಮ. ಮುಖ್ಯವಾಗಿ ಇದು ಗೊಂಬೆಗಳ ತಯಾರಿಕೆಯಲ್ಲಿ ಪ್ರಸಿದ್ಧಿಯನ್ನು ಗಳಿಸಿದ್ದುದಾಗಿದೆ. ಇದರ ಜೊತೆಗೆ ಚಿತ್ತ ಚಿತ್ತಾರ ಬಣ್ಣದ ಚೌಕಿಗಳನ್ನು ತಯಾರಿಸಿ ಮಾರುತ್ತಾರೆ. ಈ ಕಲೆಗೆ ಈ ಹಳ್ಳಿ ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದುಕೊಂಡಿದೆ. ಟೇಬಲ್ ಚೌಕಿ, ಸಿಂಹಾಸನ ಚೌಕಿ, ಗೊಂಬೆಯಾಟದ ಮಂಟಪಗೌರಿ, ನಂದಿ, ಗೌರಿ, ಶಿವ ಗೊಂಬೆಗಳನ್ನು ಇಲ್ಲಿನ ಚಿತ್ರಗಾರ ಮನೆತನದವರು ತಯಾರಿಸುತ್ತಾರೆ.

1979ರಲ್ಲಿ ಈ ಊರಿನ ಕೃಷ್ಣವೆಂಕಪ್ಪ ಚಿತ್ರಗಾರರಿಗೆ ಕರ್ನಾಟಕ ಸರ್ಕಾರ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಸಂಬಂಧಿಕರಾದ ರಾಮಚಂದ್ರ ಪರಶುರಾಮ ಚಿತ್ರಗಾರ, ವೆಂಕೋಬಪ್ಪ ಚಿತ್ರಗಾರ, ನಾರಾಯಣಪ್ಪ ಚಿತ್ರಗಾರ ಮುಂತಾದವರು ಇಂದಿಗೂ ಈ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಮುಂದುವರಿಯುತ್ತಿದ್ದಾರೆ.

(ಡಿ.ಎಸ್.ಡಿ.)

ಕಿಷ್ಟಯ್ಯ ಭೀಮಯ್ಯ ದಾಸರ: ಬಯಲಾಟದ ಕಲಾವಿದ. ಅವರು ಏಳನೆಯ ತರಗತಿಯವರೆಗೆ ಮಾತ್ರ ಓದಿದ್ದರೂ ತೆಲುಗು, ಉರ್ದು, ಕನ್ನಡದಲ್ಲಿ ಓದಿ ಬರೆಯಬಲ್ಲಷ್ಟು ಬುದ್ಧಿವಂತರು. ತಂದೆ ಭೀಮಯ್ಯನವರಿಂದ ಕುಲಕಸುಬಾದ ದಾಸರ ಹಾಡು ದಾಸರ ಆಟ ಕಲಿಸುತ್ತ ಹದಿನೈದನೆಯ ವಯಸ್ಸಿನಿಂದಲೇ ಬಯಲಾಟಗಳಲ್ಲಿ ಪಾತ್ರವಹಿಸಲು ಆರಂಭಿಸಿದರು. ಮುಂದೆ ಬೆಳೆಯುತ್ತ ಹಾರ್ಮೋನಿಯಂ, ಪಿಟೀಲು, ಢಕ್ಕೆ, ಮದ್ದಳೆ, ಕೊಳಲು, ಏಕನಾದ ವಾದ್ಯಗಳನ್ನು ಕಲಿತರು. ಪದ್ಮವ್ಯೂಹ, ಗಯೋಪಖ್ಯಾನ, ಭಕ್ತಮಾರ್ಕಂಡೇಯ, ಮಹಿಷಾಸುರ ಮರ್ದಿನಿ, ತಾಮ್ರಧ್ವಜ ಕನರಾಂಗಿ ಕಲ್ಯಾಣ, ರತಿಕಲ್ಯಾಣ, ದಕ್ಷಯಜ್ಞ ಮುಂತಾದ ಬಯಲಾಟಗಳನ್ನು ಕಲಿಸುತ್ತ, ಪಾತ್ರವಹಿಸುತ್ತ ಇದುವರೆಗೂ 50 ದೊಡ್ಡಾಟ ಆಡಿಸಿದ್ದಾರೆ. 15 ಜನ ದೊಡ್ಡಾಟದ ಭಾಗವತರಿಗೆ ತರಬೇತಿ ನೀಡಿದ್ದಾರೆ.

(ಜಿಆರ್‌ಟಿ)

ಕೀರ್ತನ ಕಲೆ: ಕನ್ನಡ ಸಾಹಿತ್ಯ ವಾಙ್ಮಯದಲ್ಲಿ ಹರಿದಾಸರ ಉಗಾಭೋಗ, ಸುಳಾದಿಗಳನ್ನುಳಿದ ಬಿಡಿ ರಚನೆಗಳ ಸಮೂಹಗಳು. ಕೀರ್ತನೆ ಎಂಬ ಮಾತಿಗೆ ಭಾಗವತದಲ್ಲಿ ಸ್ತುತಿ, ಸ್ತೋತ್ರ ಎಂಬ ಅರ್ಥ ಸ್ಫುರಿಸುತ್ತದೆ. ಈ ಕೀರ್ತನೆಗಳನ್ನು ರಾಗ ಬದ್ಧವಾಗಿ ಹಾಡುವ ಕಲೆ ಕೀರ್ತನೆ.

ಅನಾದಿ ಕಾಲದಿಂದಲೂ ಮಾನವನ ಮನಸ್ಸನ್ನು ಶುದ್ಧಗೊಳಿಸುವ ಒಳ್ಳೆಯ ಆಲೋಚನೆ, ಭಾವನೆ, ಉದ್ದೇಶ, ಮಾದರಿಗಳನ್ನು ನೀಡುವ ಗುರಿಯನ್ನು ಇಟ್ಟುಕೊಂಡು ಹಲವಾರು ಮಾರ್ಗಗಳಿಂದ ಪ್ರಯತ್ನಿಸಿರುವುದನ್ನು ಕಾಣುತ್ತೇವೆ. ಇದೆ ರೀತಿಯಲ್ಲಿ ದೇವರನ್ನು ಒಲಿಸಿಕೊಳ್ಳಲು, ಪುಣ್ಯ ಸಂಪಾದಿಸಲು, ದೈವೋಪಾಸನೆಗಾಗಿ ಅನತಿಕಾಲದಿಂದ ಕೀರ್ತನೆ, ಭಜನೆ, ನೃತ್ಯಗಳನ್ನು ಮಾಡುವುದು ಸರ್ವವಿಧಿತವಾಗಿದೆ. ನವವಿಧ ಭಕ್ತಿ ಮಾರ್ಗಗಳಲ್ಲಿ ಕೀರ್ತನ ಕಲೆಯು ಒಂದು ಎಂದು ಹೇಳಲಾಗಿದೆ. ಹಳ್ಳಿ ಹಳ್ಳಿಗಳಲ್ಲಿ ಕೀರ್ತನಕಾರರು ತುಂಬ ಸೊಗಸಾಗಿ ರಂಜನೀಯವಾಗಿ ಮತ್ತು ಉದ್ಬೋಧಕವಾಗಿ ಜನ ಸಾಮಾನ್ಯನನ್ನು ಸೆರೆ ಹಿಡಿದು ಭಕ್ತಿ ಹಾಗೂ ನೈತಿಕ ಸಂದೇಶಗಳನ್ನು ನೀಡುವುದು ಅನುಚಾನವಾಗಿ ನಡೆದುಕೊಂಡು ಬರುತ್ತಿರುವ ಸಂಗತಿಯಾಗಿದೆ. ಮಾಹಿತಿ ತಂತ್ರಜ್ಞಾನದ ಕ್ರಾಂತಿಯ ಸಂದರ್ಭದಲ್ಲಿ ಈ ಕಲೆಗಳು ನಶಿಸುತ್ತವೆ ಎನ್ನುವ ಭಯ ಒಂದು ಕಡೆ ವ್ಯಕ್ತವಾಗುತ್ತದೆ. ಆದರೆ ಈ ಮಾಧ್ಯಮಗಳು ತಮ್ಮ ಇಪ್ಪತ್ನಾಲ್ಕು ಗಂಟೆಗಳ ಪ್ರಚಾರ ಕಾರ್ಯದಲ್ಲಿ ಕೀರ್ತನೆ ಕಲೆಯನ್ನು ಉಳಿಸಿಕೊಳ್ಳುವ ಅನಿವಾರ್ಯತೆ ಉಂಟಾಗಿರುವುದನ್ನು ಕಾಣಬಹುದಾಗಿದೆ.

ನಿತ್ಯ ಜೀವನದಲ್ಲಿ ಕಾಣುವ ಸಾಮಾನ್ಯ ಘಟನೆಗಳೂ ಸಹ ಕೀರ್ತನೆಗಳ ವಸ್ತುವಾಗಿ ಪರಿಣಮಿಸಿವೆ. ಹೀಗಾಗಿ ಕೀರ್ತನೆ ವಿಶೇಷವಾಗಿ ಹಬ್ಬ ಹರಿದಿನಗಳ ಸಂದರ್ಭದಲ್ಲಿ, ಊರಿನ ಜಾತ್ರೆ, ಉತ್ಸವಗಳಲ್ಲಿ, ಕೆಲವೊಮ್ಮೆ ಗಣ್ಯವ್ಯಕ್ತಿಯ ಮರಣ, ಪುಣ್ಯ ತಿಥಿಗಳ ಆಚರಣೆಗಳ ಸಂದರ್ಭಗಳಲ್ಲಿ ಏರ್ಪಡಿಸಲಾಗುತ್ತದೆ. ಕೀರ್ತನಕಾರ ತನ್ನ ನಿಪುಣತೆ, ಸೋದಾಹರಣೆಗಳನ್ನು ಬಳಸಿಕೊಂಡು ಕೇಳುಗರು ದುಃಖದ ಸಂದರ್ಭವನ್ನು ಮರೆತು ಸಾವಿನಾಚೆಗಿನ ಬದುಕು, ಅದರ ಸುಖ, ಸಂತೋಷಗಳೆಡೆಗೆ ಮತ್ತೊಮ್ಮೆ ಮುಖ ಮಾಡಲು ಅಣಿಗೊಳಿಸುತ್ತಾನೆ. ಇದು ಮನಸ್ಸನ್ನು ದುಃಖದಿಂದ ದೂರಗೊಳಿಸುವ ಮತ್ತು ಸಮಸ್ಯೆ ಸವಾಲುಗಳನ್ನು ಎದುರಿಸಲು, ಧೈರ್ಯ, ಭಕ್ತಿಗಳನ್ನು ನೀಡುವ ಒಂದು ಮಾರ್ಗವಾಗಿ ನಡೆದುಕೊಂಡು ಬಂದಿದೆ.

ಕೀರ್ತನೆ ಕಲೆಯಲ್ಲಿ ಹಾಡುಗಾರಿಕೆ, ಭಜನೆ, ಕುಣಿತ, ಸಂಗೀತ, ಮೃದಂಗ ಮುಂತಾದ ವಿವಿಧ ಉಪಕರಣಗಳ ಒಂದು ಸಂಕೀರ್ಣವಾಗಿ ಸಂಯೋಜನೆಗೊಂಡು ಕೇಳುಗನನ್ನು ಸೆಳೆಯುವ ಒಂದು ಅದ್ಭುತ ಸಂದರ್ಭವು ಸೃಷ್ಟಿಯಾಗುತ್ತದೆ.

ಕಲೆ ಎಂದರೆ ಕೆಲಸ ಮಾಡುವ ಕೌಶಲ್ಯ, ಪಾಂಡಿತ್ಯ, ನೈಪುಣ್ಯತೆಗಳು ಮಾತ್ರವಿರದೆ ಇವುಗಳೆಲ್ಲವುಗಳೊಂದಿಗೆ ಸೃಜನಶೀಲತೆಯು ಮೇಳೈಸಿ ಹೊಸದಾದ ರೂಪವೊಂದು ಸೃಷ್ಟಿಸಲ್ಪಡುತ್ತದೆ. ಕಲಾವಿದನು ತನ್ನ ಜ್ಞಾನ, ಅನುಭವ, ತರಬೇತಿ ಮಾತ್ರವಲ್ಲದೆ ಅದಕ್ಕೆ ನಾವಿನ್ಯತೆ ಮತ್ತು ಚಲನಶೀಲತೆಯನ್ನು ನೀಡಿ ಜೀವ ತುಂಬುತ್ತಾನೆ. ಸುಂದರಗೊಳಿಸುತ್ತಾನೆ. ಕೀರ್ತನ ಕಲೆಯು ಸಹ ತನ್ನ ಕಾಲದ ತುಡಿತ, ತಲ್ಲಣಗಳನ್ನು ಮೈಗೂಡಿಸಿಕೊಂಡು ನಿರಂತರವಾಗಿ ಬೆಳೆದಿರುವುದನ್ನು ಸಮಾಜದ ಆರೋಗ್ಯ ಸೂತ್ರಗಳಾದ ಸತ್ಯ, ಧರ್ಮ, ಸ್ವಚ್ಛತೆ, ಭಕ್ತಿ, ಸಜ್ಜನಿಕೆಗಳನ್ನು ಬೋಧಿಸುವುದರೊಂದಿಗೆ, ಸಮಾಜದಲ್ಲಿದ್ದ ಸಣ್ಣತನ, ಮತ್ಸರ, ಮೋಹ, ಭ್ರಮೆ, ಅಂಧ ಶ್ರದ್ಧೆಗಳೇ

ಪಿಂಗಾಣಿಗೆ ಕೊಟ್ಟಿರುವ ಹೆಸರು ನೋಡಿದರೆ ಇದರ ವಾಸ್ತವ ಸತ್ಯ ಸ್ಫುಟವಾಗುತ್ತದೆ. ಈ ಜೇಡಿಯನ್ನು ಸುಟ್ಟಾಗ ಅದರ ಬಣ್ಣ ಸುಣ್ಣದಂತೆ ಬಿಳಿ. ಇನ್ನು ಇದಕ್ಕಿಂತ ಭಿನ್ನವಾದ ಮಣ್ಣು 'ಜೇಂಡುಜೇಡಿ'. ಗುಡ್ಡಗಾಡು ಪ್ರದೇಶದಿಂದ ಧುಮ್ಮಿಕ್ಕಿ ಮಂದ ಪ್ರವಾಹವಾಗಿ ಬರುವ ನೀರು ಸಮತಟ್ಟಾದ ಭೂಪ್ರದೇಶಕ್ಕೆ ಬಂದಾಗ ತನ್ನ ಜೊತೆಗೆ ತಂದ ಬ್ರಹತ್ ಪ್ರಮಾಣದ ರೇವನ್ನು ಅಲ್ಲಲ್ಲಿ ಬಿಟ್ಟು ಹೋಗುತ್ತದೆ. ಅಂಥ ನೆಲೆಗಳನ್ನು ಗುರುತಿಸಿ ಅಲ್ಲಿಂದ ಅಗಿದು ತರುವ ಉಂಡೆ ಮಣ್ಣು 'ಜೇಂಡುಜೇಡಿ'

ನಯವಾದ ಉತ್ಪತ್ತಿಗಳು: ಜೇಡಿಮಣ್ಣಿಗೆ ಬೆಣಚುಗಲ್ಲಿನ ಹಿಟ್ಟು ಮಿಶ್ರಣ ಮಾಡಿದಾಗ ಇದರಿಂದ ಕಲ್ಲು ಗಡಿಗೆ, ಕಾವಲಿ ಮುಂತಾದವುಗಳನ್ನು ಸಿದ್ಧಮಾಡಲಾಗುತ್ತದೆ. ಇಂಥ ಮಿಶ್ರಣ ಸುಟ್ಟಾಗ ಗಟ್ಟಿಯಾಗುವುದರ ಜೊತೆಗೆ ದ್ರವವನ್ನು ಹೀರದೆ ಬಹುಕಾಲ ಅದನ್ನು ಕಾಪಾಡುತ್ತದೆ. ಸಾಮಾನ್ಯ ಜೇಡಿಗಿಂತ ಇದರಲ್ಲಿ ಗಡಸುಗುಣ ಜಾಸ್ತಿ. ಇದರ ಸಾರಾಂಶ ಇಷ್ಟೇ: ಕುಂಬಾರ ತನ್ನ ಕಾರ್ಯವನ್ನು ಆರಂಭಿಸುವ ಮೊದಲಹಂತದಲ್ಲಿ ಜೇಡಿ ತರುವುದು, ಕಲಸುವುದು, ಸೋಸಿ ಬೆರೆಸಿ ಹದಗೊಳಿಸುವುದು ಇದನ್ನೆಲ್ಲ ಮಾಡ ಬೇಕಾಗುತ್ತದೆ. ಹೀಗೆ ಹದಗೊಳಿಸುವಾಗ ಸೇರಿರುವ ನೀರಿನ ಪ್ರಮಾಣದ ಬಗೆಗೆ ಆತ ಜಾಗರೂಕನಾಗಿರುತ್ತಾನೆ. ಜೇಡಿಮಣ್ಣನ್ನು ಒಂದೆಡೆ ಕೂಡಿಟ್ಟು ಕಲಸಿ, ನೆನೆದ ಬಳಿಕ ಕುಂಬಾರರು, ಅದನ್ನು ಕಾಲಿನಿಂದ ತುಳಿದು ತುಳಿದು, ಮತ್ತೆ ಒಂದೆರಡು ದಿನ ಬಿಟ್ಟು ಅಷ್ಟಷ್ಟೇ ಅರ್ಲಿನ ಉಂಡೆಗಳನ್ನು ಕೈಗೆತ್ತಿಕೊಂಡು ಮಿದ್ಧಿ, ನಾದಿ ಅದಕ್ಕೊಂದು ಪ್ರಮಾಣದ ಜಿಗುಟುಗುಣ ಬಂದಿರುವುದನ್ನು ಖಾತ್ರಿ ಮಾಡಿಕೊಳ್ಳುತ್ತಾರೆ ಅನೇಕ ಸಲ ಆಯಾ ಭೂಪ್ರದೇಶದ ಗುಣಕ್ಕೆ ಅನುಗುಣವಾಗಿ ಕೆರೆಕಟ್ಟೆಗಳ ಕೋಡಿ, ತುಂಬುಗಳಲ್ಲಿ ದೊರೆಯುವ ಮಣ್ಣನ್ನೇ ತಂದು ಹದಗೊಳಿಸಲಾಗುತ್ತದೆ. ಕಪ್ಪು ಜೇಡಿಗೆ ಸ್ವಲ್ಪ ಕೆಂಪು ರೇವು, ಉಪ್ಪು ಕೂಡಿಸಿ ಅದರ ಮಿಶ್ರಣವನ್ನು ಹದಗೊಳಿಸಿ ನಿರೀಕ್ಷಿತ ಪ್ರಮಾಣದ ಹಂತದಲ್ಲೂ ಕುಂಬಾರಗಿತ್ತಿಯರು ತಮ್ಮ ಗಂಡಸರಿಗೆ ಸಮನಾದ ಕಾರ್ಯನಿರ್ವಹಿಸುವುದು ಗಮನಾರ್ಹ. ಈ ರೀತಿ ಅತಿ ಮಿದು ಮತ್ತು ಹದವಾದ ಮಿಶ್ರಣದಿಂದ ತತ್ರಾಣಿ, ಮಂಗಲ ಸಮಾರಂಭಕ್ಕೆ ಅಗತ್ಯವಾಗುವ ಹಣತೆ, ಮಡಿಕೆಗಳು, ಹುಕ್ಕಾ, ಗುಡಗುಡಿ ಚಿಲುಮೆಗಳು, ವಿವಿಧ ಸುಂದರ ಆಕಾರದ ಹೊರಮೈ ಹೊಳಪುಳ್ಳ ಹೂಜಿ, ಹೂಬಳ್ಳಿ ಚಿತ್ರವಿನ್ಯಾಸಗಳುಳ್ಳ ಕುಡಿಕೆ, ಬಿಂದಿಗೆ ಮುಂತಾದ ಸೂಕ್ಷ್ಮ ಸುಳುಹು ಹೊಳಹುಗಳುಳ್ಳ ಪಡಗ ಪಾತ್ರೆಗಳನ್ನು ಸಿದ್ಧಗೊಳಿಸಲಾಗುತ್ತದೆ. ಇಂದಿಗೂ ಕುಂಬಾರಿಕೆ ಹೈದ್ರಾಬಾದ-ಕರ್ನಾಟಕದಲ್ಲಿ ಸುಪ್ರಸಿದ್ಧವಾಗಿದೆ.

ತಿಗರಿ-ಆವಿಗೆ: ಕುಂಬಾರಿಕೆಯಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುವ ಅಂಶಗಳಲ್ಲಿ ತಿಗರಿ ಒಂದು: ಎರಡನೆಯದು ಆವಿಗೆ, ತಿಗರಿಯ ಎದುರು ಕುಳಿತ ಕುಂಬಾರ ಚಕ್ರಾಕಾರದ ಮಧ್ಯ ಮೇಲ್ಭಾಗದ ರಂಧ್ರದಲ್ಲಿ ಒಂದು ನಯಗೊಳಿಸಿದ ಕೋಲು ಸಿಕ್ಕಿಸುತ್ತಾನೆ. ತಿಗರಿ ತಿರುಗುತ್ತಿರುವಂತೆ ಕೋಲನ್ನು ಒಂದು ಬದಿಗೆ ಇಟ್ಟು ಹದಗೊಳಿಸಿದ ಅರ್ಲು ಮುದ್ದೆಯನ್ನು ತಿಗರಿ ಮೇಲಿಟ್ಟು, ಅದನ್ನು ತನ್ನ ಕೈಚಳಕದಿಂದಲೇ ತನಗೆ ಬೇಕಾದ ಆಕಾರಕ್ಕೆ ತಿರುಗಿಸುತ್ತಾನೆ. ನಡುನಡುವೆ ತಿಗರಿಯ ವೇಗ ಕಡಿಮೆಯಾಗದಂತೆ ಆಗಾಗ ತಿರುಗಿಸುತ್ತಲೇ ಇದ್ದು, ನಿರೀಕ್ಷಿತ ಆಕೃತಿಯ ರೂಪ ತೃಪ್ತಿಕರವೆಂದು ತೋರಿದಾಗ ಒಂದು ಸೂಕ್ಷ್ಮದಾರದ ಮೂಲಕ ಅರ್ಲಿನ ಮುದ್ದೆಯಿಂದ ಆ ಪಾತ್ರೆಯನ್ನು ನಯವಾಗಿ ಕತ್ತರಿಸಿ ಬೇರ್ಪಡಿಸಿ ಆ ಪಾತ್ರೆಯನ್ನು ಬೂದಿಯ ಹಾಸುಗೆಯ ಮೇಲೆ ಇರಿಸುತ್ತಾನೆ. ತಿಗರಿಯ ಚಕ್ರ ಸುಮಾರು ಒಂದು ಅಥವಾ ಒಂದು ಮೀಟರು ಸುತ್ತಳತೆಯದಾಗಿದ್ದು ಇದು ಮೊದಮೊದಲು ಒಂದೇ ತೆಳುಬಂಡೆಯದಾಗಿರುತ್ತಿತ್ತು. ಬರುಬರುತ್ತ ಬಂಡಿಯ ಗಾಲಿಯಂತೆ ಕಟ್ಟಿಗೆಯ ಹಲ್ಲುಗಳನ್ನು ಸ್ವಲ್ಪ ಸ್ವಲ್ಪ ಅಂತರದಲ್ಲಿ ಜೋಡಿಸಲಾಗಿರುತ್ತದೆ, ಗಡ್ಡೆ, ಹಲ್ಲುಗಳಿಂದ ಕೂಡಿದ ಚಕ್ರಕಾರದ ತಿಗರೆ ಪಾತ್ರೆ ಪಡಗಗಳ ವಿನ್ಯಾಸ ರಚನೆಯ ಮೂಲ ಸಲಕರಣೆ.

ಕುಂಬಾರಿಕೆಯ ಇನ್ನೊಂದು ಅಷ್ಟೇ ಮಹತ್ವದ ಅಂಗ 'ಆವಿಗೆ'. ಕುಂಬಾರ ಆವಿಗೆಯ ರಚನೆ ಬಹಳ ಪೇಚಿನದೆಂದು ಕುಂಬಾರರ ಹೇಳಿಕೆ. ತಿಗರಿಯಿಂದ ಸಿದ್ಧವಾದ ಪಾತ್ರೆಗಳನ್ನು ಬೂದಿಯ ಹಾಸಿಗೆ ಮೇಲಿಟ್ಟು ಬಿಸಿಲಲ್ಲಿ ಅದರ ಮೇಲ್ಮೈತೇವ ಆರುವಷ್ಟು ಮಟ್ಟಿಗೆ ಒಣಗಿಸಿ ಆ ಬಳಿಕ ಅವುಗೆಯ ಒಳಬದಿ ಅಲ್ಲಲ್ಲಿ ಒಣಗಿದ ಹುಲ್ಲು ಸೀಳಿದ ಚೆಕ್ಕೆಗಳನ್ನು ಪ್ರಾತ್ರೆಗೆ ತಾಕದಂತೆ ಪಾತ್ರೆಗಳ ಗೂಡುಗಳನ್ನು ಸಾಲುಸಾಲಾಗಿ ಜೋಡಿಸಲಾಗುತ್ತದೆ. ಹೀಗೆ ಜೋಡಿಸಿದಾಗ ತಳದಿಂದ ಮೇಲ್ಭಾಗದವರೆಗೂ ಕಂಡಿ ಬಿಟ್ಟಿರಲಾಗುತ್ತದೆ. ತಳಭಾಗದಲ್ಲಿ ಉರಿ ಮಾಡಿದಾಗ ಪಾತ್ರೆಗಳಿಗೆ ವ್ಯಾಪಕ ಮತ್ತು ಸಮಾನ ಮಂದೋಷ್ಣ ಪೂರೈಕೆಯಾಗಿ ಪಾತ್ರೆಗಳಲ್ಲಿರುವ ತೇವಾಂಶ ನಿವಾರಣೆಗೊಂಡು ಸುಟ್ಟ ಮಡಿಕೆ ಗಡಸು, ನಿಶ್ಚಿತ ಗಾತ್ರ, ಗಟ್ಟಿ ಆಕಾರಗಳನ್ನು ಹೊಂದಿ ಸಿದ್ಧವಾಗುತ್ತವೆ.

ಕುಂಬಾರರು 'ತಿಗರಿ' ಮತ್ತು 'ಆವಿಗೆ'ಗಳನ್ನು ತಮ್ಮ ಪಾಲಿನ ದೇವತೆಗಳೆಂದು ಪೂಜಿಸುತ್ತಾರೆ. ಕೃಷಿ ಪ್ರಧಾನವಾಗಿರುವ ನಮ್ಮ ಹಳ್ಳಿಗಳಲ್ಲಿ ಕುಂಬಾರ ಬಹು ಮುಖ್ಯ ಗುಂಪು. ಒಕ್ಕಲು ಕುಟುಂಬಗಳಿಗೆ ವರ್ಷಾವಧಿ ಅಗತ್ಯವಾಗುವ ಕುಡಿಕೆ ಮಡಿಕೆಯಿಂದ ಹಿಡಿದು ಹರವಿ, ಗಡಿಗೆ, ಬೃಹತ್ ಗಾತ್ರದ ರಂಜಣಿಗೆ, ಹಂಚು, ಹರನಾಳಿಗೆ ಹಂಚು ಒಳ ಗಟ್ಟಿಯ ದೊಡ್ಡ ದೊಡ್ಡ ಕೊಳವೆಗಳ ವರೆಗೆ ಬಗೆ ಬಗೆಯ ಸಾಮಾನುಗಳನ್ನು ಪೂರೈಸುವ ಹೊಣೆ ಕುಂಬಾರರದೇ. ಅದಕ್ಕೆ ಪ್ರತಿಯಾಗಿ ಕೃಷಿಕರು ಕುಂಬಾರನಿಗೆ ನಿಗದಿಪಡಿಸಿದ ಮತ್ತು ತಮ್ಮ ತಮ್ಮ ಆದಾಯದ ಪ್ರಮಾಣಕ್ಕೆ ಅನುಗುಣವಾಗಿ ಸುಗ್ಗಿಯಲ್ಲಿ ಆಯ ಕೊಡುತ್ತಾರೆ. ಸಾಮಾನ್ಯವಾಗಿ ಕುಂಬಾರ ಪ್ರತಿಯೊಬ್ಬರ ಕಣಕ್ಕೂ ಹೋಗಿ ತನ್ನ ಆಯವನ್ನು ಸಂಗ್ರಹಿಸುವುದಿಲ್ಲ. ಅಂಥ ಪ್ರಸಂಗಗಳಲ್ಲಿ ಕೃಷಿಕರ ಮನೆಗಳಿಂದ ತನ್ನ ಆಯವನ್ನು ಎತ್ತುತ್ತಾನೆ; ಅಥವಾ ಅವರೇ ಕುಂಬಾರನ ಮನೆಗೂ ತಂದು ಹಾಕುತ್ತಾರೆ. ಕೃಷಿಕರಲ್ಲದವರು ಕುಂಬಾರಗಿತ್ತಿ ತಲೆಯ ಮೇಲೆ ಹೊತ್ತು ಕೇರಿಕೇರಿ ತಿರುಗಿ ಮಡಿಕೆ ಕುಡಿಕೆ ಮಾರಿದಾಗ ಅವುಗಳನ್ನು ಕೊಂಡು ಅದಕ್ಕೆ ಪ್ರತಿಯಾಗಿ ಕಾಳು, ಹಣ ಕೊಡುತ್ತಾರೆ. ಬಹುಶ: ಈ ದೃಷ್ಟಿಯಿಂದಲೇ ಕುಂಬಾರರಿಗೆ ತೆರಿಗೆ ವಿಧಿಸಿದ ಉಲ್ಲೇಖಗಳುಂಟು.



ಕುಂಬಾರರು

ಕಲೆಯಾಗಿತ್ತೆನ್ನುವುದನ್ನು ಅಲ್ಲಗಳೆ ಯುವುದಿಲ್ಲ ಆದರೆ ಕುಂಬಾರಿಕೆ ಒಂದು ವರ್ಣ ಮಯ ಕುಶಲ ಕಲೆಯಾಗಿ ರೂಪುಗೊಂಡ ಸಂದರ್ಭವನ್ನು ಕುರಿತು ಹೇಳುವಾಗ ಮಾತ್ರ ಅಂಥ ಕಲಾತ್ಮಕ ನೈಪುಣ್ಯ ಇರಾನ, ಅಫ್ಘಾನಿಸ್ಥಾನ, ಬಲೂಚಿಸ್ಥಾನ ಮೊದಲಾದ ದೇಶಗಳ ನಯಗಾರಿಕೆಯಿಂದ ಪ್ರಭಾವಿತವಾಯಿತು ಎಂದು ಹೇಳುತ್ತಾರೆ. ಇದು ಕುಂಬಾರರ ಮತ್ತು ಕುಂಬಾರಿಕೆಯ ಪ್ರಸರಣದ ಗುಣವನ್ನು ತೋರಿಸುತ್ತದೆ. ಕುಂಬಾರನ ತಿಗರಿ ತಿರುಗುವಂತೆ ಕುಂಬಾರಿಕೆಯೂ ಹತ್ತಾರು ದಿಕ್ಕುಗಳಲ್ಲಿ ಪ್ರಸಾರಗೊಂಡಿರುವುದು ಸಹಜವಾಗಿದೆ. ಜೀವನದ ಅತ್ಯವಶ್ಯಕವಾದ ಕುಂಬಾರಿಕೆ ಕರ್ನಾಟಕ ಜನಾಂಗ ಸಾಧಿಸಿದ ಒಂದು ಗ್ರಾಮೀಣ ಉದ್ಯಮ;ಕುಂಬಾರ ವೃಂದ ಅದಕ್ಕೆ ಆಧಾರವಾದ ಒಂದು ವೃತ್ತಿಗುಂಪು. ಕರ್ನಾಟಕದ ಸಾಮಾಜಿಕ ಸ್ವರೂಪದಲ್ಲಿ ಕುಂಬಾರರ ಸ್ಥಾನ ದ್ವಿತೀಯ ಅಥವಾ ತೃತೀಯ ದರ್ಜೆಯದು.

ಹೈದ್ರಾಬಾದ-ಕರ್ನಾಟಕದ ಕಿನ್ನಾಳ, ಕುಕನೂರು, ರಾಯಚೂರಿನ ಗ್ರಾಮೀಣ ಭಾಗ, ಕಲಬುರ್ಗಿ ತೀರಪ್ರದೇಶದ ಗ್ರಾಮಗಳಲ್ಲಿ ಕುಂಬಾರರ ಜನವಸತಿ ನಿಬಿಡವಾಗಿದ್ದು ಔದ್ಯಮೀಕರಣದ ರಭಸಕ್ಕೆ ಸಿಲುಕಿದ ಅನೇಕ ಕಡೆಗಳಲ್ಲಿ ಕುಂಬಾರಿಕೆ ಮಾಯವಾಗುತ್ತಿದೆ. ಕರ್ನಾಟಕದ ಕುಂಬಾರರು ಆರಂಭದಲ್ಲಿ ವಿವಿಧ ನಂಬುಗೆಗಳಿಗೆಸೇರಿದವರಾಗಿದ್ದು ಹನ್ನೆರಡನೆಯ ಶತಮಾನದ ಶಿವಶರಣರ ಪ್ರಭಾವದಿಂದಾಗಿ ಅಧಿಕ ಸಂಖ್ಯೆಯ ಜನ ಲಿಂಗಾಯತ ಧರ್ಮವನ್ನು ಸ್ವೀಕರಿಸಿದಂತೆ ತೋರುತ್ತದೆ. ಕರ್ನಾಟಕದ ಕುಂಬಾರರು ಅಧಿಕ ಸಂಖ್ಯೆಯಲ್ಲಿ ಲಿಂಗಾಯತರಾಗಿದ್ದರೆ, ಕುಂಬಾರಿಕೆಯ ವಿಭಿನ್ನ ವಿಧಾನ ಗಳಿಂದಾಗಿಯೂ ಇವರಲ್ಲಿ ಬೇರೆ-ಬೇರೆ ಹೆಸರಿನ ಗುಂಪುಗಳಿವೆ; ಕೈಕುಂಬಾರ, ಗೋರಾಕುಂಬಾರ, ಕೋಲು ಕುಂಬಾರ, ತಿಗರಿಕುಂಬಾರ ಅಥವಾ ಚಕ್ರಿ ಮುಂತಾದವು

ಕೈಕುಂಬಾರ,ಚಕ್ರವನ್ನು ಬಳಸದೆ ಕೈಯಿಂದಲೇ ಮಡಕೆಗಳನ್ನು ರೂಪಿಸಿದರೆ, ಗೋರಾಕುಂಬಾರ ಕೇವಲ ಕೆಂಪು ಅಥವಾ ಬಿಳಿ ಮಣ್ಣಿನ ಮಡಿಕೆ ಮಾಡುತ್ತಾನೆ. ತೆಳು ಬಂಡೆಯೊಂದರ ಮೇಲೆ, ಕೋಲಿನ ಸಹಾಯದಿಂದ, ಅರ್ಲುಮುದ್ದೆ ತಿರುಗಿಸುತ್ತ, ಕುಡಿಕೆ ರೂಪಿಸುವವ ಕೋಲುಕುಂಬಾರನಾದರೆ, ತಿಗುರಿ ಕುಂಬಾರ, ಒಂದು ಚಕ್ರವನ್ನು ತಿರುಗಿಸುತ್ತ ಮಡಿಕೆಗೆ ರೂಪು ಕೊಡುತ್ತಾನೆ. ಇವು ಕೇವಲ ವೃತ್ತಿ ಕೌಶಲ್ಯವನ್ನು ಸೂಚಿಸುವ ಗುಂಪುಗಳೆಂದು ಭಾವಿಸಬಹುದು.

ಕುಂಭೋದ್ಯಮ: ಮಾನವನ ಜೀವನದ ಅತ್ಯಂತ ಪ್ರಾಚೀನ ಸಾಧನೆಗಳಲ್ಲಿ ಕುಂಬಾರಿಕೆಯೂ ಒಂದು ಅಗತ್ಯವಾದ ವೃತ್ತಿ-ಸಾಧಿತ ಕಲೆ. ಜಗತ್ತಿನ ಅನೇಕ ಪ್ರಾಚೀನ ನಾಗರಿಕತೆಗಳಿಗೆ ತಮ್ಮದೇ ಆದ ವಿಶಿಷ್ಟ ಬಗೆಯ ಗಡಿಗೆ, ಬಿಂದಿಗೆ, ಮಡಿಕೆಗಳನ್ನು ತಯಾರಿಸುವ ವೃತ್ತಿ ಕೌಶಲ ಸಿದ್ಧಿಸಿತ್ತು. ಪುರಾತತ್ವ ಸಂಶೋಧಕರು, ಈ ಕುಂಭಗಳ ಮಾದರಿ, ಆಕಾರ, ವಿನ್ಯಾಸಗಳನ್ನು ಆಯಾ ಜನಾಂಗದ ಬದುಕಿನ ವಿವಿಧ ಹಂತಗಳ ವಿಕಾಸದ ಪಳಿಯುಳಿಕೆಗಳೆಂದು ಸ್ವೀಕರಿಸಿ. ಅವುಗಳನ್ನು ಆಧರಿಸಿ ಅವು ಯಾವ ಯಾವ ಪ್ರದೇಶದ ಸಾಂಸ್ಕೃತಿಕ ನೆಲೆ, ವಸತಿಗಳಿಗೆ ಸೇರಿದ್ದುವು ಎನ್ನುವುದರ ಪತ್ತೆ ಹಚ್ಚುತ್ತಾರೆ.

ಕುಂಬಾರರು ಸಿದ್ಧಗೊಳಿಸುವ ಪಾತ್ರೆ ಪಗಡಗಳನ್ನು ಸುಮಾರು ಐದರಿಂದ ಆರು ಬಗೆಯಲ್ಲಿ ವಿಂಗಡಿಸಬಹುದಾದರೂ ಎಲ್ಲದಕ್ಕೂ ಆಧಾರವಾಗಿರುವುದು ಮಾನವ ಜೀವನದ ಪ್ರಾಥಮಿಕ ವಿಧಾನವೇ ಎನ್ನುವುದು ಮುಖ್ಯ.

ದೇಸೀ ಕುಂಬಾರಿಕೆ,ಉರುಟು ಬಗೆಯ ಮಡಿಕೆ ಕುಡಿಕೆ: ಮೊದಲು ಜೇಡಿಮಣ್ಣಿನ ಕಲ್ಲುಬಂಡೆಗಳನ್ನು ಸೀಳಿ ಹರಿಯುವ ನೀರಿನೊಡನೆ ಸಾಗಿದ ಮಣ್ಣು ತಾನೇ ತಾನಾಗಿ ಸೋಸಿ ಬಂದು ಬಂಡೆಯ ಅಡಿಗಳಲ್ಲಿ ಒಟ್ಟು ಗೂಡುತ್ತದೆ. ಇಂಥ ಮಣ್ಣಿನಲ್ಲಿ ಇತರ ಖನಿಜ ದ್ರವ್ಯ, ಕಡ್ಡಿಗಳು ಸೇರಿರುವುದರಿಂದ ಇದು ಶುದ್ಧ ಜೇಡಿ ಅಲ್ಲ. ಮಣ್ಣುಗುಡ್ಡ, ಅಥವಾ ಬೆಟ್ಟದ ಓವರಿಗಳಿಂದ , ಇಂಥ ಜೇಡಿ ಮಣ್ಣನ್ನು ಅಗೆದು ತರಲಾಗುತ್ತಿತ್ತು. ಚೀನೀ

ಶಾಕ್ತಪಂಥದಲ್ಲಿ ಶಕ್ತಿ ದೇವತೆಗೆ ಪ್ರಥಮ ಸ್ಥಾನ. ಶಿವನಿಗೆ! ಆನಂತರದ ಸ್ಥಾನ ಈ ಶಕ್ತಿಯ ಆರಾಧನಾ ಸ್ಥಳವೇ 'ಶಕ್ತಿ ಪೀಠ' ಜೇಷ್ಠಾದೇವಿ ಈ ಶಕ್ತಿ ಪೀಠದ ಅಥವಾ ಕುಕನೂರಿನ ಅಧಿಷ್ಠಾನ ದೇವತೆ. ಈ ದೇವಿಯನ್ನು 'ಮಹಾಮಾಯಾ' ಎನ್ನುವ ಜನಪ್ರಿಯ ಹೆಸರಿನಿಂದಲೇ ಇಂದು ಕರೆಯಲಾಗುತ್ತಿದೆ. ಶಾಸನಗಳಲ್ಲಿ ಈ ದೇವಿಯನ್ನು 'ಭಗವತೀ ಪ್ರಾತ್ಯಕ್ಷ ಜಗದಂಬಿಕೆ' ಎಂದು ಸಂಬೋಧಿಸಲಾಗಿದೆ. ಮಹಾಮಾಯಾ ದೇವಾಲಯದಲ್ಲಿರುವ ಕಲಚೂರಿ ಸಂಕಮದೇವನ ಶಾಸನ "ಶಿವಶಕ್ತಿ ಸ್ಫುರತ್ಸಂಪುಟ"ವೆಂದು ಈ ಕ್ಷೇತ್ರವನ್ನು ಹೊಗಳುತ್ತದೆ.

ಇಬ್ಬರು ಶಕ್ತಿ ದೇವತೆಗಳಿರುವುದು ಈ ಶಕ್ತಿಪೀಠದ ಮತ್ತೊಂದು ವೈಶಿಷ್ಟ್ಯ. ಒಂದೇ ವೇದಿಕೆಯ ಮೇಲೆ ಜೇಷ್ಠಾದೇವಿ (ಮಹಾಮಾಯಾಳ) ಜೊತೆಗಿರುವ ಮತ್ತೊಬ್ಬ ಶಕ್ತಿದೇವತೆಯು 'ಮಹಾಕಾಲಿ'. ಶಾಸನಗಳು ಈ ದೇವಿಯನ್ನು 'ಪ್ರಲಯಾಂಬಾ' ಎಂದು ಹೆಸರಿಸಿವೆ. ಶಿವ ಇಲ್ಲಿ ಭೈರವ ಅಥವಾ ಕ್ಷೇತ್ರಪಾಲನ ರೂಪದಲ್ಲಿ ಆ ಶಕ್ತಿದೇವತೆಗಳ ಬಳಿ ಇದ್ದಾನೆ.

ಇನ್ನೊಂದು ಸ್ಥಳೀಯ ಐತಿಹ್ಯದ ಪ್ರಕಾರ ಇಂದಿನ ಕುಕನೂರೇ ಹಿಂದಿನ 'ಕುಂತಳಪುರ'ವಾಗಿದ್ದಿತು. ಚಂದ್ರಹಾಸನ ರಾಜಧಾನಿಯಾಗಿದ್ದರಿಂದ 'ಚಂದ್ರಹಾಸಪುರ'ವೆಂಬ ಹೆಸರೂ ಈ ಗ್ರಾಮಕ್ಕೆ ಇತ್ತು. ಚಂದ್ರಹಾಸ ಉಗ್ರತಪಸ್ಸನ್ನು ಆಚರಿಸಿ ದೇವಿಯನ್ನು ಒಲಿಸಿಕೊಂಡು, ಆನಂತರ ಅವಳನ್ನು ಇಲ್ಲಿಯೇ ಪ್ರತಿಷ್ಠಾಪಿಸಿದನಂತೆ! ಅವಳೇ ಮಹಾಮಾಯಾ. ಹೀಗೆಂದು ಒಂದು ದಂತಕಥೆ ಈ ಭಾಗದಲ್ಲಿ ಪ್ರಚಲಿತವಿದೆ.

ವಾಸ್ತುಶಿಲ್ಪದ ದೃಷ್ಟಿಯಿಂದಲೂ ಕುಕನೂರು ಮಹತ್ವ ಪಡೆದ ಸ್ಥಳ. ಸುಂದರವೂ, ಪ್ರಾಚೀನವೂ ಆದ ಅನೇಕ ದೇವಾಲಯಗಳು ಇಲ್ಲಿವೆ. ಮಹಾಮಾಯ ದೇವಾಲಯದ ಪಕ್ಕದಲ್ಲಿರುವ 'ನವಲಿಂಗೇಶ್ವರ' ಹಾಗೂ ಇಟ್ಟಿಗೆಯ ರಸ್ತೆಯಲ್ಲಿರುವ 'ಮೂಲಸ್ಥಾನ ಕಲ್ಲೇಶ್ವರ'ನ ದೇವಾಲಯಗಳು ವಾಸ್ತುಶಿಲ್ಪದ ದೃಷ್ಟಿಯಿಂದ ಮಹತ್ವದ ರಚನೆಗಳು. ಹಿಂದೆ ಶೈಕ್ಷಣಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ವಾಸ್ತುಶಿಲ್ಪದ ನೆಲೆಯಾಗಿ "ಮಹಾಗ್ರಹಾರ ಕುಕ್ಕನೂರು"ನೆಗಳ್ತೆ ಪಡೆದ ಗ್ರಾಮವಾಗಿದ್ದಿತು.

(ಎಲ್‌ಪಿ)

ಕುದಮುಡ ಕರಡಿ: ಕರಡಿ ಆಟಕ್ಕೆ ತುಂಬಾ ಪ್ರಸಿದ್ಧಿ ಪಡೆದ ಗುಲಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನ ಒಂದು ಚಿಕ್ಕ ಗ್ರಾಮ. ಕಮಲಾಪುರದಿಂದ 9 ಕಿ.ಮೀ. ಅಂತರದಲ್ಲಿದೆ. ಇಲ್ಲಿನ ಮುಸ್ಲಿಂ ಕುಟುಂಬಗಳ ಕಾಯಕ ಕರಡಿ ಆಡಿಸಿ ಜೀವನ ಸಾಗಿಸುವುದು. ಇವರು ಮೊದಲು ಫಕೀರ ವೃತ್ತಿ ಅವಲಂಬಿಸಿದ್ದರು. ಊರೂರಿಗೆ ಹೋಗಿ ಭಿಕ್ಷೆ ಬೇಡುವುದೇ ಇವರ ವಂಶಪಾರಂಪರ್ಯ ಉದ್ಯೋಗವಾಗಿತ್ತು. ಕಳೆದ ನೂರಾರು ವರ್ಷಗಳಿಂದ ಕರಡಿ ಆಡಿಸುವುದೇ ಮುಖ್ಯಕಾಯಕವಾಯಿತು.

ಸುಮಾರು ಒಂದು ನೂರು ವರ್ಷಗಳ ಹಿಂದೆ ಈ ಮನೆತನದ ಇಸ್ಮಾಯಿಲ್ ಎಂಬುವನಿಗೆ ಬೇಡರವನೊಬ್ಬ ಕರಡಿ ಮರಿಯನ್ನು ತಂದು ಕೊಟ್ಟು; 'ಸುಮ್ಮನೆ ಭೀಕ್ಷೆ ಕೇಳಿದರೆ ಯಾರು ನೀಡುತ್ತಾರೆ. ಈ ಕರಡಿಯ ಆಟ ತೋರಿಸಿ ಭಿಕ್ಷೆ ಕೇಳು' ಎಂದನಂತೆ. ಅಂದಿನಿಂದ ಆ ಕರಡಿ ಮರಿಯನ್ನು ಸಾಕಿ ಅದಕ್ಕೆ ಒಳ್ಳೆಯ ತರಬೇತಿ ನೀಡಿ ಜನರ ಮುಂದೆ ಆಡಿಸಿ ರಂಜಿಸುವುದು ಇಸ್ಮಾಯಿಲನ ಕೆಲಸವಾಯಿತು. ಮುಂದೆ ಇಸ್ಮಾಯಿಲನ ಆನಂತರ ಅವನ ಮಗ ಸುಲ್ತಾನ ಕರಡಿ ಆಡಿಸಲಕ್ಕೆ ಪ್ರಾರಂಭಿಸಿದನಂತೆ. ಸುಲ್ತಾನನ ಅವಧಿಯಲ್ಲಿ ಮಹಾರಾಷ್ಟ್ರದ ಅಜ್ಜಣಗಿ ಗ್ರಾಮದಿಂದ ಕರಡಿ ಖರೀದಿಸಿ ತಂದರಂತೆ. ಹೀಗೆ ಕರಡಿ ಆಟ ಆಡಿಸುವುದರಲ್ಲಿ ಆ ಭಾಗಕ್ಕೆ ಪ್ರಸಿದ್ಧಿ ಪಡೆಯಿತು ಕುದುಮುಡ ಗ್ರಾಮ. ಆ ಗ್ರಾಮಕ್ಕೆ ಈಗಲೂ ಕರಡಿ ಗ್ರಾಮವೆಂದೆ ಕರೆಯತ್ತಾರೆ.

ಕುದುಮುಡ ಕರಡಿ ಆಡಿಸುವ ಒಂದು ಕುಟುಂಬ ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಮಾಸಿಮಾಡ ಗ್ರಾಮಕ್ಕೆ ವಲಸೆ ಹೋಯಿತು. ಅಲ್ಲಿ ಅದು ಕರಡಿ ಆಟ ಪ್ರಾರಂಭಿಸಿತು. ಈಗ ಮಾಸಿಮಾಡ ಕರಡಿ ಎಂದು ಪ್ರಸಿದ್ಧವಾಗಿದೆ. ಕುದುಮುಡನಲ್ಲಿ ಈಗ ಕರಡಿ ಇಲ್ಲ. 1969ರಿಂದಲೇ ಆಟ ಆಡಿಸುವುದು ನಿಲ್ಲಿಸಲಾಗಿದೆ. ಮಲಂಗಶಹಾನಿಗೆ ಈಗ 70 ವರ್ಷ ವಯಸ್ಸಾಗಿದೆ. ತನ್ನ ಹಳೆಯ ನೆನಪುಗಳು ನಮ್ಮ ಜೊತೆ ಮೆಲಕು ಹಾಕಿದಾಗ ಅವನು 20 ವರ್ಷದ ತರುಣನಂತೆ ಕಾಣುತ್ತಿದ್ದ. ಕುದುಮುಡ ಗ್ರಾಮದ ಸುತ್ತಲಿನ ಯಾರೇ ಹೆಂಗಸು ಅಥವಾ ಗಂಡಸು ನೋಡಲು ಅಸ್ತವ್ಯಸ್ತವಾಗಿದ್ದರೆ 'ಅವ ನೋಡ ಕುದುಮುಡ ಕರಡಿ ಆಗಿದ್ದಾನೆ' ಅಥವಾ ಆಗಿದ್ದಾಳೆ' ಎಂದು ಹಂಗಿಸದೆ ಬಿಡರು.

(ಎಚ್‌ಕೆ)

ಕುಪ್ಪಸ ಶಾಸ್ತ್ರ: ಇದಕ್ಕೆ "ಹೂ ಮುಡಿಸುವುದು" "ಸೀಮಂತ" ಮಾಡುವುದು ಎಂತಲೂ ಕರೆಯುತ್ತಾರೆ. ಹೆಣ್ಣು ಪೂರ್ಣತ್ವ ಪಡೆಯುವುದು ತಾಯಿಯಾದಾಗಲೆ. ಪ್ರತಿ ಹೆಣ್ಣಿಗೆ ತಾಯಿಯಾಗುವ ಬಯಕೆ ಅದಮ್ಯವಾಗಿರುತ್ತದೆ. ಬಹಳ ದಿನಗಳವರೆಗೆ ಮಕ್ಕಳಾಗದಿದ್ದರೆ ಗಂಡನೆಲ್ಲಿ ಇನ್ನೊಂದು ಮದುವೆಯಾಗುವನೋ ಎಂಬ ಆತಂಕ ಒಂದೆಡೆ. ಅತ್ತೆ ಮಾವಂದಿರು, "ಬಂಜೆ" ಎಂದು ಮೂದಲಿಸುವರು. ನೆರೆಹೊರೆಯವರ ಕೊಂಕುನೋಟ ಇನ್ನೊಂದೆಡೆಗೆ. ಎಷ್ಟು ಕಷ್ಟಗಳಿದ್ದರೂ ಮಕ್ಕಳ ಮುಖ ನೋಡಿ ಸಹಿಸುವೆನು ಎಂಬ ಧೈರ್ಯವಿರುತ್ತದೆ. ದುಃಖ ಮರೆಯಿಸುವಂಥ ಮುದ್ದು ಕಂದನಿಲ್ಲದ ಕೊರಗು. ಹೆಣ್ಣು ಈ ರೀತಿ ದುಃಖ ವ್ಯಕ್ತಮಾಡಿ ಮನ ಹಗುರ ಮಾಡಿಕೊಳ್ಳಬಹುದು. ಆದರೆ ಗಂಡಸರು ತಮ್ಮ ಕೊರಗು ಹೊರಗೆ ವ್ಯಕ್ತ ಮಾಡಿದಿದ್ದರೂ ಮನಸ್ಸಿನಲ್ಲಿ ಇದ್ದೇ ಇರುತ್ತದೆ. ಸಂತಾನ ಪಡೆಯದೆ ಪಿತೃ ಋಣ ತೀರದು, ಮುಕ್ತಿ ದೊರಕದು ಎಂಬ ಆಧ್ಯಾತ್ಮದ ಕಲ್ಪನೆ ಒಂದೆಡೆಗೆ, ತಮ್ಮ ಆಸ್ತಿಗೆಲ್ಲ ಹಕ್ಕುದಾರರಿಲ್ಲದೆ, ಕುಲದೀಪಕನಿಲ್ಲದೆ ಯಾರ ಪಾಲಾಗುವುದೊ ಎಂಬ ಕೊರಗುಂಟಾಗುವುದು ಸಹಜವಾಗಿದೆ.

ಸುಣ್ಣಕಾಚಗಳ ಜೊತೆಗೂಡಿ ವೀಳ್ಯೆ ಮೆಲಿದರೆ ಅದಕ್ಕೊಂದು ಸೊಗಸು. ವೀಳ್ಯೆತಿಂದ ಸ್ವಾದ ಅನುಭವಕ್ಕೆ ಬರುವುದು. ಬರಿ ಎಲೆ ಸುಣ್ಣ ತಿಂದರೆ ಬಾಯಿ ಉರಿ ಅಷ್ಟೆ. ಸ್ವಾದವಂತೂ ದೂರ ಉಳಿಯಿತು. ಅದೇ ರೀತಿ ಗೋಸಾಯಿಗಳು ಮಕ್ಕಳು, ದನಕರು, ತಮ್ಮ ಬಿಡಾರದ ಸಮೇತ ಅಲ್ಲಲ್ಲಿ ವಾಸಮಾಡಿದರೂ ಅವರಿಗೆ ತಮ್ಮದೆ ಆದ ಒಂದು ನೆಲೆ ಇರುವುದಿಲ್ಲ. ಅತ್ಯಂತ

ಯುಗಾದಿಯ ಪಾಡ್ಯ, ಕುಂಬಾರ ತಾನು ಸಿದ್ಧಿಗೊಳಿಸಿದ ಹೊಸ ಮಡಿಕೆಯಲ್ಲಿ ಒಂದನ್ನು ಗ್ರಾಮದೇವತೆಗೆ, ಇನ್ನೊಂದನ್ನು ತಮ್ಮ ಗುರುವಿಗೆ ಅಥವಾ ಮಠಕ್ಕೆ ಕೊಟ್ಟು ಬರುತ್ತಾನೆ. ಆ ಬಳಿಕ ತನ್ನ ಸಾಮಾನುಗಳನ್ನು ಆತ ಮಾರಿಕೊಳ್ಳಬಹುದು. ಮದುವೆಯ ಸಂದರ್ಭದಲ್ಲಿ ಮದುಮಗಳ ಕಡೆಯವರು ಹೊಸ ಮಡಿಕೆಗಳನ್ನು'ಐರಾಣಿ' ಎಂದು ಕುಂಬಾರ ಮನೆಯಿಂದ ತರಲೇಬೇಕು. ಕೆಲವು ಕಾಲದ ಹಿಂದೆ ಐರಾಣಿ ತರುವಾಗ ಮುತ್ತೈದೆಯರು ತಮ್ಮ ಜೊತೆ ಮದುಮಗಳನ್ನು ಕರೆದೊಯ್ಯುತ್ತಿದ್ದರಂತೆ. ಆಗ ಕುಂಬಾರ ತನ್ನ ತಿಗರಿಯ ಮೇಲೆ ಮದುಮಗಳನ್ನು ಕುಳ್ಳಿರಿಸಿ ಅದನ್ನು ಏಳು ಸುತ್ತು ತಿರುಗಿಸುತ್ತಿದ್ದ. ಆ ಬಳಿಕ ಕುಂಬಾರಗಿತ್ತಿ ಏಳು ಹೊಸ ಮಡಿಕೆ ಕುಡಿಕೆಗಳನ್ನು ಕೊಡುವಳು. ಎರಡು ಕುಡಿಕೆ ಐದು ಬಿಂದಿಗೆ–ಇವುಗಳಲ್ಲಿ ನೀರು ತುಂಬಿ ಪೂಜೆ ಮಾಡಿದಾಗ ಇವುಗಳಲ್ಲಿ ಏಳು ಸಮುದ್ರಗಳೂ ತುಂಬಿವೆ ಎನ್ನುವ ನಂಬಿಗೆ, ಆಕಸ್ಮಾತ್ ಯಾವುದಾದರೂ ಎರಡು ಪಾತ್ರೆ ಒಂದಕ್ಕೊಂದು ತಾಗಿದರೆ, ಸೀಳಿದರೆ, ಗಂಡಹೆಂಡಿರು ತಮ್ಮ ಜೀವನದಲ್ಲಿ ಜಗಳವಾಡುವುದು ಖಾತ್ರಿ ಎಂದು ಭಾವನೆ. ಈ ಏಳು ಮಡಿಕೆಗೆ ಪ್ರತಿಯಾಗಿ ಮುತ್ತೈದೆಯರು ಕುಂಬಾರಗಿತ್ತಿಗೆ ಹೊಸ ಸೀರೆ ಕೊಡುವರು.


ಊರಲ್ಲಿ ಯಾರಾದರೂ ಸತ್ತಾಗಲೂ ಕುಂಬಾರ ಹದಿಮೂರು ಹೊಸ ಕುಡಿಕೆ ಮಡಿಕೆಗಳನ್ನು ಶವಸಂಸ್ಕಾರಕ್ಕಾಗಿ ಪೂರೈಸಬೇಕು. ಹಳ್ಳಿಯ ಬದುಕಿನಲ್ಲಿ ಕುಂಬಾರ ವಹಿಸುವ ಪಾತ್ರ ಪಾತ್ರೆಯಷ್ಟೇ ಮಹತ್ವದ್ದು. ಸುಗ್ಗಿ ಮುಗಿದ ಬಳಿಕ ಕುಂಬಾರರು, ಬೇಸಿಗೆ ಕಾಲದಲ್ಲಿ ತಮ್ಮ ಪಾತ್ರೆ ಪಡಗಗಳನ್ನು ಚಕ್ಕಡಿಗಳ ಮೇಲೆ ಹೇರಿಕೊಂಡು ಊರೂರಿಗೆ ಹೋಗಿ ಮಾರಿ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವುದುಂಟು.

ಹಬ್ಬ–ಮದುವೆ: ಕುಂಬಾರರು ಆಚರಿಸುವ ಮುಖ್ಯ ಹಬ್ಬಗಳು ಮೂರು. ಜೇಷ್ಠ ಬಹುಳದ ಮಣ್ಣೆತ್ತಿನ ಅಮಾವಾಸ್ಯೆ ಒಂದು; ಎರಡು ದಸರೆ; ಮೂರು ಗೌರೀಹುಣ್ಣಿಮೆಯ ಸಂದರ್ಭದ ಗೌರೀಹಬ್ಬ. ಜನಪ್ರಿಯವಾದ ಮಣ್ಣೆತ್ತಿನ ಅಮಾವಾಸ್ಯೆಯಂದು ಒಕ್ಕಲಿಗರ ಮನೆಗಳಿಗೆ ಮಣ್ಣಿನ ಎತ್ತುಗಳನ್ನು ಕುಂಬಾರರು ಮಾಡಿ–ಕೊಡುತ್ತಿದ್ದರು, ಅದಕ್ಕಾಗಿ ಕುಂಬಾರಗಿತ್ತಿಯರಿಗೆ ಒಕ್ಕಲುಗಿತ್ತಿಯರಿಂದ ವಿಶೇಷ ಕಾಣಿಕೆ ಸಲ್ಲುತ್ತಿತ್ತು; ವಸ್ತ್ರ, ಕಾಳು ಹೀಗೆ ಅವರವರ ಇಷ್ಟಾನುಸಾರ. ಅದರಂತೆ ಸೀಗೆ ಹುಣ್ಣಿಮೆಗೆ ಸೀಗವ್ವ, ಗೌರೀಹಬ್ಬದಲ್ಲಿ ಗೌರವ್ವ, ಗುಳಕವ್ವ, ಜೋಕುಮಾರ ಹೀಗೆ ಅನೇಕ ಬಗೆಯ ಮಣ್ಣಿನ ಮೂರ್ತಿಗಳನ್ನು ಕುಂಬಾರರು ಸಿದ್ಧಮಾಡುತ್ತಿದ್ದರು. ಕಿನ್ನಾಳ ಇಂದಿಗೂ ಇಂಥ ಕಲೆಗೆ ಪ್ರೇರಕ ಎನ್ನುವುದನ್ನು ಮರೆಯುವಂತಿಲ್ಲಾ. ಕನ್ನೂರಿನ ಗಣಪತಿ ಇಂದಿಗೂ ಪ್ರಸಿದ್ಧ.

ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವ ಕುಂಬಾರರ ವೃತ್ತಿ ಇಂದು ತುಂಬಾ ಕ್ಷೀಣ ಸ್ಥಿತಿಯಲ್ಲಿ ಜೀವ ಹಿಡಿದಿದೆ. ಸಮಾಜದ ನಿರ್ಲಕ್ಷ್ಯಕ್ಕೆ ಒಳಗಾದ ಕುಂಬಾರರು ಸಮಾಜದ ನಡುವೆ ಇದ್ದರೂ ಸಮಾಜಕ್ಕೆ ಅನ್ಯರಾಗಿ ಬದುಕುತ್ತಿದ್ದಾರೆ. 'ಕುಂಬಾರ ಕೂಟಲ್ಲ; ಕೂದಲು ಗೂಟಲ್ಲ' ಅನ್ನುವ ಗಾದೆ ಕುಂಬಾರರನ್ನು ಸಮಾಜದಲ್ಲಿ ವಿಶೇಷ ಗೌರವದಿಂದ ಅನಾದಿಕಾಲದ ಶಿವನ ಮದುವೆಗೆ ಪಾತ್ರೆಪಗಡೆ ಪೂರೈಸಿದ ಆದಿಮ ಕುಂಭಕಾರ; ಅನನ್ಯ ಭಕ್ತಿಯಿಂದ ಕಾಯಕ ಮಾಡಿ ಶಿವನನ್ನೇ ಕುಣಿಸಿದ ಶಿವನಭಕ್ತ; ಒಕ್ಕಲುತನ ಮುಖ್ಯವಾದ ನಮ್ಮ ಗ್ರಾಮೀಣ ಬದುಕಿನ ಅಗತ್ಯತೆಗಳನ್ನು ಪೂರೈಸುವ ಮಹತ್ವದ ವ್ಯಕ್ತಿ; ಜನಪದರ ಬದುಕಿನ ಎಲ್ಲ ಹಂತಗಳಲ್ಲೂ ತನ್ನ ಪಾಲಿನ ಸೇವೆಯನ್ನು ಸಲ್ಲಿಸುವ ಉದಾರಶೀಲ ಕುಂಬಾರ. *(ಡಿಎಸ್‌ಎಚ್)*

ಕುಕನೂರು: ಯಲಬುರ್ಗಾ ತಾಲ್ಲೂಕಿಗೆ ಸೇರಿದ, ಐತಿಹಾಸಿಕ ಪಟ್ಟಣ. ಕಾಲಪ್ರವಾಹದಲ್ಲಿ ಅನೇಕ ಏಳು–ಬೀಳುಗಳನ್ನು ಕಂಡ ಅಗ್ರಹಾರ 'ಚಂದ್ರಹಾಸನಪುರ' 'ಕುಂತಲಪುರ' ವೆಂದು ದಂತಕತೆಗಳಲ್ಲಿ ಕರೆಯಿಸಿಕೊಂಡಿದೆ. ಈ ಅಗ್ರಹಾರಕ್ಕೆ 'ಶ್ರೀಮನ್ಮ ಹಾಗ್ರಹಾರ ಕುಕ್ಕನೂರು' 'ಕುಕ್ಕನೂರು ಮೂವತ್ತು' 'ತ್ರಿಂಶದ್ಗ್ರಾಮಾಧಿಪತಿ' ಮುಂತಾದ ಬೇರೆ ಬೇರೆ ಹೆಸರುಗಳೂ ಕೂಡ ಇದ್ದುವೆಂದು ಇಲ್ಲಿರುವ ಶಿಲಾಶಾಸನಗಳಿಂದ ತಿಳಿದುಬರುತ್ತದೆ. ಶಿಕ್ಷಣಕೇಂದ್ರವಾದ ಮಹಾಗ್ರಹಾರವಾಗಿ, ಶಾಕ್ತ ಪಂಥದ ಸುಪ್ರಸಿದ್ಧ ಶಕ್ತಿಪೀಠವಾಗಿ, ಕಲೆ–ವಾಸ್ತುಗಳ ನೆಲೆಯಾಗಿ, ಮೂವತ್ತು ಗ್ರಾಮಗಳ ಆಡಳಿತ ಘಟಕದ ಕೇಂದ್ರವಾಗಿ ಈ ಗ್ರಾಮ ಶತಮಾನಗಳ ಏಳು–ಬೀಳುಗಳನ್ನು ಕಂಡಿದೆ.

ಪ್ರಖ್ಯಾತ ಶಿಕ್ಷಣಕೇಂದ್ರವಾಗಿದ್ದಂತೆ, ಇದೊಂದು ಧಾರ್ಮಿಕ ಕೇಂದ್ರ ಕೂಡ ಆಗಿದ್ದಿತು. ಉತ್ತರ ಭಾರತದಲ್ಲಿ ಉದಯವಾದ 'ಶಾಕ್ತಪಂಥ'ದ ಅಂಗವಾಗಿ ಕ್ರಿ.ಶ.10ರಿಂದ 13ನೆಯ ಶತಮಾನಗಳ ನಡುವ ಅವಧಿಯಲ್ಲಿ ದಕ್ಷಿಣ ಭಾರತದಲ್ಲಿ ಸ್ಥಾಪನೆಗೊಂಡ ಕೆಲವೇ 'ಶಕ್ತಿಪೀಠ'ಗಳಲ್ಲಿ ಕುಕನೂರು ಕೂಡ ಒಂದೆಬುದು ವಿದ್ವಾಂಸರ ಅಭಿಪ್ರಾಯ.



ಮಹಾಮಾಯ ದೇವಸ್ಥಾನ – ಕುಕನೂರ

ಶೀಘ್ರವಾಗಿ ಹೊರಬೀಳ ಲೆಂಬುದು. ಸ್ತ್ರೀಯರಿಗೆ ಗರಡಿ ಮನೆ ಪ್ರವೇಶ ನಿಷೇಧ ಅವರು ಒಳ ಹೋಗಿದ್ದೇ ಆದರೆ ಅವರ ತಲೆ ಕೂದಲು ಉದುರಿ ಹೋಗುತ್ತವೆ ಎಂಬುದು ಜನಪದರ ನಂಬಿಕೆ. ಈ ನಿಷೇದಕ್ಕೆ ಇನ್ನೊಂದು ಬಲವಾದ ಕಾರಣವೇನೆಂದರೆ ಕುಸ್ತಿ ಕಲೆಯಲ್ಲಿ ನಿರತರಾದ ಕುಸ್ತಿ ಪಟುಗಳ ಮನಸ್ಸು ಹೆಣ್ಣಿನ ಕಡೆಗೆ ತಿರುಗಿ ಚಿತ್ತ ಚಂಚಲವಾಗಬಾರದು ಎಂಬುದು.

ಕುಸ್ತಿಯ ಅಖಾಡ ಅಥವಾ ಕಣ ಚಚ್ಚೌಕವಾಗಿ ಇರುತ್ತದೆ. ಇದರ ವಿಸ್ತೀರ್ಣ ಸುಮಾರು 12. ಮೀಟರ್ ನಷ್ಟಿರುತ್ತದೆ. ಗರಡಿ ಮನೆಯ ಒಳಭಾಗದ ನೆಲವನ್ನು 'ಮಟ್ಟಿ' ಎಂದು ಕರೆಯುತ್ತಾರೆ. ಅದು ಕೆಂಪು ಮಣ್ಣಿನಿಂದ ಕೂಡಿರುತ್ತದೆ. ಅಲ್ಲದೆ ಅತಿ ಮೃದುವಾಗಿರುವುದುದಲ್ಲದೆ ಹರಳು ಕಲ್ಲು ರಹಿತವಾಗಿರುತ್ತದೆ. ಈ ಮಣ್ಣಿಗೆ ಕರ್ಪೂರ, ಜೇಕಿನ ಗಡ್ಡೆಯ ಪುಡಿ, ದೇವನಾರು, ಎಣ್ಣೆ, ಕುಂಕುಮ, ಎಳ್ಳೆಣ್ಣೆ, ಗಂಧದಪುಡಿ, ಅಲ್ಲದೆ ಸುವಾಸನೆ ದ್ರವ್ಯಗಳನ್ನು ಸಮಪ್ರಮಾಣದಲ್ಲಿ ಬೆರಸಿ ಈ ಮಟ್ಟಿಯನ್ನು ನಿರ್ಮಿಸಿರುತ್ತಾರೆ. ಈ ಮಟ್ಟಿ ಕ್ರಿಮಿನಾಶಕವಾಗಿಯೂ ಕೆಲಸ ಮಾಡುತ್ತದೆ.


ಸಾಮಾನ್ಯವಾಗಿ ಕುಸ್ತಿ ಆಡುವ ಜನಾಂಗವೆಂದರೆ ನಾಯಕ, ಕುರುಬ, ಕಬ್ಬೇರ, ವಡ್ಡರು, ಮುಸ್ಲಿಂಮರು, ಹರಿಜನರು ಹಾಗೂ ಲಂಬಾಣಿಗಳು ಮಾತ್ರ, ಉಳಿದ ಸಮುದಾಯಗಳ ಜನರು ಅತಿ ವಿರಳವೆನ್ನಬಹುದು.

ಗರಡಿ ಮನೆ ದೈವ ಮತ್ತು ಕುಸ್ತಿ ಪಟುಗಳ ದೈವ ಆಂಜನೇಯ ಮತ್ತು ಮೌಲಾಲಿ ಪ್ರತಿಯೊಂದು ಗರಡಿ ಮನೆಯಲ್ಲೂ ಈ ಎರಡು ದೈವಗಳನ್ನು ಕಾಣಬಹುದಾಗಿದೆ. ಪ್ರತಿಯೊಬ್ಬ ಕುಸ್ತಿ ಪಟು ತಮ್ಮ ಕೊರಳಿನಲ್ಲಿ ಆಂಜನೇಯ ಸ್ವಾಮಿಯ ಮುದ್ರಿತ ಸರವನ್ನು ಧರಿಸುವುದು ವಾಡಿಕೆ. 'ದೇಹದಂಡನೆಯ ಹೊರತು ಕುಸ್ತಿ ವಿದ್ಯೆ ಫಲಿಸದು' ಎಂಬುದು ಮನವರಿಕೆ ಯಾದುದರಿಂದ, ಬೆಳಗ್ಗೆ 4ರಿಂದ 7 ರ ವರೆಗೆ ಮತ್ತು ಸಾಯಂಕಾಲ 3 ರಿಂದ 8 ರ ವರೆಗಿನ ಸಮಯ ಕುಸ್ತಿ ಕಲಿಯುವವರಿಗೆ ಯೋಗ್ಯ ಸಮಯ. ಆ ಸಮಯದಲ್ಲಿ ಸಾಧನೆ ಮಾಡುತ್ತಾರೆ.

ಕುಸ್ತಿ ಕಲೆಯ ಬಗ್ಗೆ ಆಸಕ್ತಿ ಇರುವ ಕುಸ್ತಿ ಪಟುಗಳು ಸಾಮಾನ್ಯವಾಗಿ ತಾಲೀಮು ಮಾಡಿ ಗರಡಿ ಮನೆಗಳಲ್ಲಿಯೇ ಮಲಗುತ್ತಿದ್ದುದು ಉಂಟು. ಸಾಮು ಮಾಡುವುದು, ಬಸ್ಕಿ ಕೂಡುವುದು, ಗಜ ತಿರುಗಿಸುವುದು, ಕಲ್ಲು ಗುಂಡುಗಳನ್ನು ಎತ್ತುವುದು, ಹರಿವ ನೀರಿಗೆ ಎದುರಾಗಿ ಈಜುವುದು, ಕಡಿದಾದ ಬೆಟ್ಟಗಳನ್ನು ಹತ್ತುವುದು (ಏರುವುದು) ಇಳಿಯುವುದು ಮುಂತಾದವುಗಳನ್ನು ದಿನಂಪ್ರತಿ ಅಭ್ಯಾಸ ಮಾಡಬೇಕಾಗಿರುತ್ತದೆ. ಈ ವಿಷಯದಲ್ಲಿ ಹಿರಿಯ ಕುಸ್ತಿ ಪಟುಗಳ ಮಾರ್ಗದರ್ಶನ ಅತ್ಯಗತ್ಯವಾಗಿರುತ್ತದೆ. ಇವರನ್ನು 'ಉಸ್ತಾದ್' ಎಂದು ಕರೆಯುತ್ತಾರೆ. ಉಸ್ತಾದ್ ಎಂದರೆ ಗುರು ಎಂದು ಅರ್ಥ. ಗರಡಿ ಮನೆಗೊಬ್ಬರಂತೆ ಉಸ್ತಾದ್‌ಗಳು ಇರುತ್ತಾರೆ. ಅವರನ್ನು ಗೌರವಾದರಗಳಿಂದ ಕಾಣುತ್ತಾರೆ.

ಕುಸ್ತಿ ಪಟುಗಳು ಎಷ್ಟೇ ಶಕ್ತಿ ಬಲಶಾಲಿಗಳಾಗಿದ್ದು ದಷ್ಟಪುಷ್ಟರಾಗಿದ್ದರೂ ಕೂಡ. ಪಟ್ಟುಗಳನ್ನು ಕಲಿಯದ ಹೊರತು ಕುಸ್ತಿಯಲ್ಲಿ ಜಯಸಿಗಲಾರರು. ಪಟ್ಟುಗಳನ್ನು ಕಲಿಯದವರು ಕುಸ್ತಿ ಪಟುಗಳೇ ಅಲ್ಲ. ಕುಸ್ತಿ ಪಟ್ಟುಗಳನ್ನು ಕರಗತಮಾಡಿಕೊಂಡ ವ್ಯಕ್ತಿಯನ್ನು ಮಣ್ಣು ಮುಕ್ಕಿಸುವುದು ಅಷ್ಟು ಸುಲಭದ ಮಾತಲ್ಲ. ಚೆನ್ನಾಗಿ ಪಟ್ಟುಗಳನ್ನು ಕರಗತ ಮಾಡಿಕೊಂಡ ಪಟುವಿಗೆ ಜಯ ಕಟ್ಟಿಟ್ಟ ಬುತ್ತಿ ಎನ್ನುವುದು ವಾಡಿಕೆ. ಉಸ್ತಾದ್ ಕುಸ್ತಿ ಪಟುಗಳಿಗೆ ಹೇಳಿಕೊಡುವ ಪಟ್ಟುಗಳೆಂದರೆ ಕೊಕ್ಕರೆ ಪಟ್ಟು, ಸವಾರಿ ಪಟ್ಟು, ಸನ್ನೆಪಟ್ಟು, ಟಾಂಗ್ ಪಟ್ಟು, ಚಡ್ಡಿ ಪಟ್ಟು, ಕತ್ತರಿಪಟ್ಟು ಒಳಪಟ್ಟು, ಹೊರಪಟ್ಟು ಇನ್ನಿತರ ಪಟ್ಟುಗಳು ಚಾಲ್ತಿಯಲ್ಲಿವೆ. ಕುಸ್ತಿ ಪಟುಗಳಿಗೆ ಆರೋಗ್ಯ ಸಂಪತ್ತಿಗಿಂತ ಮಿಗಿಲಾದ ಸಂಪತ್ತು ಇನ್ನೊಂದಿಲ್ಲ. ಎಂಬ ಸ್ಪಷ್ಟವಾದ ತಿಳುವಳಿಕೆ ಇದೆ. ಹಾಗಾಗಿ ಅವರು ಕಾಫಿ, ಚಹ, ಧೂಮಪಾನ, ಮಧ್ಯಪಾನ, ಗುಟಕಾ, ತಂಬಾಕು, ಇನ್ನಿತರ ದುಶ್ಚಟಗಳಿಂದ ದೂರವಿರುತ್ತಾರೆ. ಅದೇನೇ ಆದರೂ ಇತ್ತೀಚಿನ ದಿನಗಳಲ್ಲಿ ಕುಸ್ತಿ, ಅವನತಿಯ ಹಾದಿ ಹಿಡಿದಿದೆ. ಕುಸ್ತಿ ಸ್ಪರ್ಧೆಗಳು ಅಪರೂಪವಾಗಿದೆ. ಈ ಕ್ರೀಡೆಯನ್ನು ಪ್ರೋತ್ಸಾಹಿಸುವ ಸಂಘ ಸಂಸ್ಥೆಗಳು ಸಾಕಷ್ಟು ಕಡಿಮೆಯಾಗಿವೆ. ಪಾಶ್ಚಾತ್ಯ ಕ್ರೀಡೆಗಳ ಸತತದಾಳಿ ಹಾಗೂ ಟಿ.ವಿ. ಮಾಧ್ಯಮದ ಪ್ರಭಾವದಿಂದ ಎಷ್ಟೋ ದೇಶೀಯ ಕಲೆಗಳು ಜನಮನದಿಂದ ದೂರ ಸರಿಯುತ್ತಿವೆ ಅವುಗಳಲ್ಲಿ ಕುಸ್ತಿ ಕಲೆಯೂ ಒಂದು. ಕುಸ್ತಿ ಕಲೆ ಪ್ರಾಚೀನ ಕಲೆಯಾಗಿರುವುದರಿಂದ ಇದನ್ನು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗಬೇಕಾಗಿದೆ.

(ಟಿಎಚ್)



ಕುಸ್ತಿ

ಮಾರ್ಮಿಕವಾದ ಈ ಎರಡು ಉಪಮೆಗಳಿಂದ ಮಕ್ಕಳಿಲ್ಲದವರ ದುಃಖ ವ್ಯಕ್ತಗೊಳಿಸಿದ್ದಾರೆ.

ನಿರೀಕ್ಷೆ, ಹಾರೈಕೆ, ಹರಕೆಗಳ ಫಲವಾಗಿ ತಮ್ಮಿಬ್ಬರ ಪ್ರೀತಿಯ ದ್ಯೋತಕವಾಗಿ ಹೆಂಡತಿ ಗರ್ಭಿಣಿಯಾದರೆ ಎಲ್ಲಿಲ್ಲದ ಸಂತಸವಾಗುವುದು. ಮೊದಲು ಮನೆಯವರಿಗೆ ತಿಳಿದು, ಆನಂತರ ನೆರೆಹೊರೆ, ಬಂಧು ಬಳಗದವರಿಗೆ ಈ ಸಂತಸದ ಸುದ್ದಿಯಿಂದ ಸಂತೋಷವಾಗಿ ಬಗೆಬಗೆಯ ಅಡುಗೆಗಳನ್ನು ಮಾಡಿ ಅವಳಿಗೆ ಉಣಬಡಿಸುವರು.

ಗರ್ಭಿಣಿಗೆ ಮೂರು ತಿಂಗಳು ಇರುವಾಗ ತವರಿನವರು ಕಳ್ಳಕುಬಸ ಮಾಡುವರು. ಮೂರು ತಿಂಗಳ ಗರ್ಭ ನಿಜವೊ ಸುಳ್ಳೊ ಎಂದು ಜನರಾಡಿಕೊಳ್ಳಬಹುದೆಂದು ಬೇರೆಯವರಿಗೆ ಹೇಳದೆ ಮನೆಯವರೇ ನೆರವೇರಿಸಿಕೊಳ್ಳುವರು. ನೆರೆಹೊರೆಯವರನ್ನು ಮಾತ್ರ ಕರೆಯುತ್ತಾರೆ. ಹೂರಣವ ಕುದಿಸಿ ಮಾಡಿದ ಕಡುಬು, ಮೊಸರನ್ನು ಕೊಡುತ್ತಾರೆ. ಒಂದು ಹಸಿರು ಕುಪ್ಪಸ ಹೊಲಿಸಿ ಅಂದು ಉಡಿಸುವರು. ಕೆಲವು ಭಾಗದಲ್ಲಿ ಒಲೆಯ ಮೇಲಿರುವ "ಎಂಬುಲು" ಗಡಿಗೆಗೆ ಪೂಜಿಸಿ, ಅದಕ್ಕೆ ಹುಗ್ಗಿ ನೈವೇದ್ಯಕೊಟ್ಟು ಗೋದಿ, ಕೊಬ್ಬರಿ, ಉತ್ತತ್ತಿ, ಅರಿಶಿನ, ಅಡಿಕೆ, ಹಸಿರುಕಣ, ಮುಗ್ಗಿಹೂವಿನ ದಂಡಿ ಇಟ್ಟು ಪೂಜಿಸುವರು. ಒಲೆಯ ಪಕ್ಕದಲ್ಲಿ ಗರ್ಭಿಣಿಯನ್ನು ಕೂಡಿಸಿ ಅವಳಿಗೂ ಅದೇ ಉಡಿಯಕ್ಕಿ ಹಾಕಿ ಮಗ್ಗಿದಂಡಿ ಅವಳಿಗೆ ಮುಡಿಸುವರು. ಬಳೆಗಾರನಿಗೆ ಪಡಿ (ಉಲುಪೆ) ಕೊಟ್ಟು ಮನೆಗೆ ಕರೆಯಿಸಿ, ಬಳೆಯ ಗಂಟಿಗೆ ಪೂಜಿಸಿ ಬಸುರಿಗೆ ಹಸಿರು ಬಳೆ ತೊಡಿಸುವರು. ಅಲ್ಲಿರುವ ಐದು ಜನ ಮುತ್ತೈದೆಯರಿಗೂ ಹಸಿರು ಬಳೆ ತೊಡಿಸುವರು. ಮುಂದೆ ಐದು ಅಥವಾ ಏಳು ತಿಂಗಳಲ್ಲಿ ಕುಪ್ಪಸ ಮಾಡುವರು.

ಹೆಣ್ಣಿನ ತವರವರು ತಮ್ಮ ಮಗಳಿಗೆ ಸೀರೆ, ಕುಪ್ಪಸ, ಅಳಿಯನಿಗೆ ಬಟ್ಟೆ ಬಂಗಾರ ತರುವರು. ಜೊತೆಗೆ ಬಗೆಬಗೆಯ ತಿಂಡಿ ತಿನಿಸುಗಳು, ಕರಜಿಕಾಯಿ, ಪುಂಡಿಪಲ್ಯ, ರೊಟ್ಟಿಧಪಾಟಿ, ಹಿಂಡಿ ಮೊಸರನ್ನ (ಜೋಳ ಕುಟ್ಟಿ ಮಾಡಿದ ಹುಳಬಾನ) ತರುವರು. ಊರಿನಲ್ಲಿ, ಓಣಿಯಲ್ಲಿ ಗಂಡನ ಮನೆಯವರು, ಈ ಪದಾರ್ಥಗಳನ್ನೆಲ್ಲ ಮನೆಮನೆಗೆ ಬೀರುವರು. ಸಾಯಂಕಾಲ ಬಟ್ಟೆ ಮಾಡಿ ಉಡಿಯಕ್ಕಿ ಹಾಕಿ, ಗೋದಿ ನೆನೆಹಾಕಿ ಪೋಣಿಸಿದ ಸರ ಅವಳ ಕೊರಳಲ್ಲಿ ಹಾಕುತ್ತಾರೆ. ಇದೊಂದು ವಿಶೇಷ ಆಚರಣೆಯಾಗಿದೆ. ಧಾನ್ಯಗಳಲ್ಲಿ ಗೋದಿ ಶ್ರೇಷ್ಠವೆಂಬ ನಂಬುಗೆಯಿಂದ, ಅದರಿಂದ ಮಾಡಿದ ಹಾರ ಅವಳ ಕೊರಳಲ್ಲಿ ಹಾಕುತ್ತಿರಬೇಕು. ಅಂದು ಸಂಜೆ ಕೂಡಿಸಿ ಹಾಡುವರು.

ಗರ್ಭಿಣಿಯೂ ಏನು ಬಯಸುವಳೊ, ಅದನ್ನೆಲ್ಲ ಕೊಡಬೇಕು. ಇಲ್ಲದಿದ್ದರೆ. ಮುಂದೆ ಹುಟ್ಟಿದ ಮಗುವಿಗೆ ಕಿವಿ ಸೋರುವುದು ಎಂಬ ಕುರುಡು ನಂಬಿಕೆ ಇದೆ. ಇದರ ಉದ್ದೇಶ ಅವಳ ಮನಸ್ಸಿನಲ್ಲಿ ಯಾವ ಕೊರಗು ಇಲ್ಲದೆ ಬಯಸಿದುದೆಲ್ಲವೂ ತಿನ್ನಲಿ, ಅವಳು ಸಂತೋಷದ ಮನಸ್ಥಿತಿಯಿಂದಿರಲಿ ಎಂಬ ಉದ್ದೇಶದಿಂದ ಹೀಗೆ ಪ್ರಚಾರದಲ್ಲಿ ತಂದಿರಬೇಕು. ಬಂಧುಗಳು ತಂದ ಊಟ ತಿಂಡಿಗಳು ಯಾವುದನ್ನೂ ತಿನ್ನದೆ ಅವಳು ಹಾಗೆಯೇ ಮಲಗಿದ್ದಾಳೆ, ಎಂಬ ಹಾಡುಗಳು ಮತ್ತು ಒಂದು ತಿಂಗಳಿನಿಂದ ಒಂಬತ್ತು ತಿಂಗಳವರೆಗೆ ಅವಳಿಗೆ ಎಂಥೆಂಥ ಬಯಕೆಗಳಾಗುತ್ತವೆ ಎಂಬ ಹಾಡುಗಳನ್ನೇ ಕುಪ್ಪಸ ಮಾಡುವಾಗ ಹಾಡುವರು. ಈ ಹಾಡುಗಳಲ್ಲಿ ಗರ್ಭಿಣಿ ಒಂಬತ್ತು ತಿಂಗಳ ಮಾನಸಿಕ ಸ್ಥಿತಿಯನ್ನು ಹೇಳಲಾಗುತ್ತದೆ. ಇವಲ್ಲದೆ ಹುಳಿ ಮಾವು, ಎಳೆ ಬಿಸಿಲು, ಸೀರೆ ಕುಪ್ಪಸ, ಬಯಸಿದಳೆಂದು ಹಾಡುವ ಇತರ ಹಾಡುಗಳನ್ನು ಹಾಡಿ ಆರತಿ ಮಾಡಿ ಗಂಡನ ಹೆಸರು ಕೇಳುವರು.

ಗರ್ಭಿಣಿ ಬಯಸುವ ವಸ್ತುಗಳು ಕೆಲವು ಸಲ ಸಾಮಾನ್ಯವೆನಿಸುತ್ತವೆ. ದೇಹದಲ್ಲಾಗುವ ಬದಲಾವಣೆಯೊಂದಿಗೆ, ಮಾನಸಿಕ ತೊಳಲಾಟ, ಆತಂಕ, ಆರಂಭದ ದಿನಗಳಲ್ಲಿರುತ್ತವೆ. ಮನೆಯವರ ಪ್ರೀತಿಯ ಉಪಚಾರದಿಂದ ಅವಳಿಗೆ ಧೈರ್ಯ ಬರುವುದು. ಕೆಲವು ಹೆಂಗಸರು ಈ ಮೊದಲು ತಮಗೆ ದೊರಕದ ವಸ್ತುಗಳನ್ನು ಬಯಕೆಯ ನೆವದಿಂದ ತರಿಸಿ ತಿಂದುಟ್ಟು ತೃಪ್ತಿಪಡೆದುಕೊಂಡದ್ದು ಇದೆ. ಬಸಿರಿನ ಆರಂಭದ ದಿನಗಳಲ್ಲಿ ಅವಳ ಬಯಕೆಗಳೇನಿದ್ದರೂ ಕೊನೆಯ ದಿನಗಳಲ್ಲಿ ತವರಿಗೆ ಹೋಗಿ ತಾಯಿಯ ಹತ್ತಿರ ಇರಬೇಕೆಂಬ ಅವಳ ಮನೋಭಾವನೆಗೆ ಕಾರಣ ಹುಡುಕಬೇಕಾಗಿಲ್ಲ. ತಾಯಿಗಿಂತ ಆತ್ಮೀಯ ವ್ಯಕ್ತಿ ಇನ್ನೊಬ್ಬರಿಲ್ಲ. ತನ್ನ ತಾಯಿ ನೋವು ಅನುಭವಿಸಿದವಳು. ಅವಳ ಹತ್ತಿರವಿದ್ದರೆ ಎಷ್ಟೋ ಧೈರ್ಯ, ನೆಮ್ಮದಿ ಸಿಗುತ್ತದೆ. ಹೀಗಾಗಿ ಹೆರಿಗೆಯ ದಿನಗಳು ಸಮೀಪಿಸಿದಂತೆ ತಾಯಿಯ ಹತ್ತಿರ ಹೋಗಬೇಕೆಂಬ ಅಪೇಕ್ಷೆ ವ್ಯಕ್ತಪಡಿಸುವುದು ಸಹಜವಾಗಿದೆ. *(ವೈಎಸ್)*

ಕುಸ್ತಿ: ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವ ಒಂದು ಜನಪದ ಕ್ರೀಡೆ. ಇದಕ್ಕೆ ಮಲಯುದ್ಧ ವೆಂತಲೂ ಕರೆಯುತ್ತಾರೆ. 64 ವಿದ್ಯೆಗಳಲ್ಲಿ ಶೌರ್ಯಕಲೆ ಎಂದೇ ಗುರುತಿಸಲ್ಪಡುವ ಈ ಕಲೆ ದೇಸೀಯ ಕಲೆಯೂ ಹೌದು. ಈ ಕಲೆ ವಿಜಯನಗರದ ಅರಸರ ಕಾಲದಲ್ಲಿ ಶ್ರೀಮಂತವಾಗಿ ಬೆಳೆದದ್ದನ್ನು ವಿದೇಶೀ ಪ್ರವಾಸಿ ಗರು, ಬರೆಹಗಾರರು, ವರ್ಣಿಸಿ ದ್ದುಂಟು. ಮೈಸೂರಿನ ಅರಸರೂ ಕೂಡ ಈ ಕಲೆಗೆ ಪ್ರಾಶ್ಯಸ್ತ್ಯ ಕೊಟ್ಟಿದ್ದರು. ಒಂದು ಕಾಲದಲ್ಲಿ ನಮ್ಮ ಜನಪದ ದೈನಂದಿನ ಬದುಕಿನೊಂದಿಗೆ ಬಿಡಿಸಲಾಗದ ನಂಟು ಹೊಂದಿದ ಜನಪದ ಕ್ರೀಡೆ ಕುಸ್ತಿಯಾಗಿತ್ತು. ದೈಹಿಕ ಶಕ್ತಿ, ಯುಕ್ತಿ ಪ್ರತಿಯುಕ್ತಿಗಳ ಸಂಗಮವಾದ ಕುಸ್ತಿಯ ಬಗ್ಗೆ ಪುರಾಣಗಳಲ್ಲಿ ಉಲ್ಲೇಖವಿದೆ.

ನಮ್ಮ ಪೂರ್ವಿಕರಿಗೆ ಆರೋಗ್ಯ ಸಂಪತ್ತಿಗಿಂತ ಮಿಗಿಲಾದ ಸಂಪತ್ತು ಇನ್ನೊಂದಿಲ್ಲ ಎಂಬ ಸ್ಪಷ್ಟವಾದ ತಿಳುವಳಿಕೆ ಇತ್ತು. ಅಂತೆಯೇ ಅವರು ದೇಹದಾರ್ಢ್ಯ ಬಲವರ್ಧನೆಗೆ ಪೂರಕವಾಗುವ ಹಾಗೂ ದೈಹಿಕ ಸಂಪತ್ತನ್ನು ವೃದ್ಧಿಸುವ ಕುಸ್ತಿಯಂತಹ ಕಲೆಗಳನ್ನು ರೂಢಿಸಿಕೊಂಡರು.

ಕುಸ್ತಿಯಾಡುವ ಮನೆಯನ್ನು "ಗರಡಿಮನೆ" ಎಂದು ಕರೆಯುತ್ತಾರೆ. ದೈಹಿಕ ಬೆಳವಣಿಗೆಯ ಸಾಧನ ಪರಿಕರಗಳನ್ನು ಈ ಗರಡಿ ಮನೆಗಳು ಹೊಂದಿವೆ. ಗರಡಿ ಮನೆಗಳು ಪಾರಂಪರಿವಾಕವಾಗಿ ಹಲವು ಸಮುದಾಯಗಳ ಅಥವಾ ಸಮಾಜದ ವ್ಯವಸ್ಥೆಗೆ ಮೊದಲಿನಿಂದಲೂ ಕಾರಣಗಳಾಗಿವೆ.

ಗರಡಿಮನೆಗಳು ಚಿಕ್ಕ ಬಾಗಿಲನ್ನು ಹೊಂದಿದ್ದರೂ ಕೂಡ ಒಳಭಾಗದಲ್ಲಿ ವಿಸ್ತಾರವಾಗಿ ಹೆಚ್ಚಾಗಿ ಗಾಳಿ, ಬೆಳಕು, ಪ್ರವೇಶಿಸದಂತೆ ಮಾಡಲಾ ಗುತ್ತದೆ. ಇದಕ್ಕೆ ಕಾರಣ ಕುಸ್ತಿ ಪಟುಗಳ ಮೈ ಬೆವರು

ಹಗ್ಗ (ಸರ್ಹಗ್ಗ), ಹಗ್ಗಕಣ್ಣಿ, ಹಂತಿಕಣ್ಣಿ, ಹೊಂಬಲ ಸಸಿಕೆ ಹೀಗೆ ಕೃಷಿ ಉಪಕರಣಗಳ ದೊಡ್ಡ ಪಟ್ಟಿಯೇ ಇದೆ.

ಈ ಉಪಕರಣಗಳಲ್ಲಿ ಕೆಲವು ಕಟ್ಟಿಗೆಯಿಂದ ತಯಾರಿಸಿದವು, ಮತ್ತೆ ಕೆಲವು ಕಬ್ಬಿಣದಿಂದ ಸಿದ್ಧಪಡಿಸಿದವು. ಇನ್ನು ಕೆಲವು ಎರಡನ್ನೂ ಬಳಿಸಿ ಸಿದ್ಧಪಡಿಸಿದವು. ಅಲ್ಲದೆ ನಾರು, ಚರ್ಮ, ತೆಂಗಿನ ಸಿಪ್ಪಿಯಿಂದ ತಯಾರಿಸಿದವು ಆಗಿವೆ. ಉದಾ: ಬಡಮಣಿ, ಬ್ಯಾಕಟ್ಟಿಗೆ, ಮೆಟ್ಟನಾಲಿಗೆ, ಗ್ವಾರಿ ಮುಂತಾದವುಗಳನ್ನು ಕೇವಲ ಕಟ್ಟಿಗೆಯಿಂದ ಮಾಡಿದವು. ಕುಂಟಿ, ಎಡಿದಿಂಡು, ಗಳೆ, ಚಕ್ಕಡಿ ಮುಂತಾದವು ಕಟ್ಟಿಗೆ, ಕಬ್ಬಿಣ ಎರಡನ್ನೂ ಬಳಿಸಿ ತಯಾರಿಸಿದವು. ಕಬ್ಬಿಣ ನೇಗಲಿ ಕಬ್ಬಿಣದಿಂದ ತಯಾರವಾದದ್ದು, ಕಣ್ಣಿ, ಹಗ್ಗ, ಬಾಚಿಕ್ಕ ಮುಂತಾದವು ನಾರಿನಿಂದ ತಯಾರಾದವು. ಕಬ್ಬಿಣ ಬಳಿಸಿದ ಉಪಕರಣಗಳು ಹೆಚ್ಚಾಗಿ ನೆಲವನ್ನು ಹದಮಾಡುವ ಉಪಕರಣ ಗಳಾಗಿವೆ. ಹಾಗೂ ಇವುಗಳ ಬಳಕೆಯ ಉಪಕರಣಗಳೇ ಹೆಚ್ಚು. ಆದರೆ ಕೃಷಿ ಉಪಕರಣಗಳಲ್ಲಿ ಹೆಚ್ಚು ಬಳಕೆಯಾಗುವುದು ಕಟ್ಟಿಗೆ ಹೀಗಾಗಿ ಆಯಾ ಪ್ರದೇಶಗಳಲ್ಲಿ ಬೆಳೆಯುವ ಬೇವು, ಕರಿಜಾಲಿ ಮುಂತಾದ ಮರಗಳಿಂದ ಅವುಗಳನ್ನು ತಯಾರಿಸಲಾಗುತ್ತದೆ. ತೊಗಲಿನಿಂದ ಸಿಂದಿ ಮರದಿಂದ ತಯಾರಿಸಿದ ಉಪಕರಣಗಳು ಬಹಳ ಕಡಿಮೆ. ಯಾಕಂದರೆ ಅವು ಅಪವಿತ್ರ ಎಂಬ ಭಾವನೆ ಇದೆ. ಇವು ಎಂಟ್ಹತ್ತು ವರ್ಷ ಬಾಳಿಕೆ ಬರುತ್ತವೆ. ಆದರೂ ಪ್ರತಿವರ್ಷ ಇವುಗಳನ್ನು ಬಳಸುವಾಗ ಸರಿಪಡಿಸಿಕೊಳ್ಳಲಾಗುತ್ತದೆ. ಈ ಉಪಕರಣಗಳನ್ನು ತಯಾರಿಸುವವರಲ್ಲಿ ಪ್ರಮುಖರೆಂದರೆ ಬಡಿಗ, ಮತ್ತು ಕಮ್ಮಾರ, ಸಾಮಾನ್ಯ ಉಪಕರಣಗಳನ್ನು ಹೆಚ್ಚಾಗಿ ತಾವೇ ತಯಾರಿಸಿಕೊಳ್ಳುತ್ತಾರೆ. ಇಲ್ಲವೆ ಬಲ್ಲವರಿಂದ ತಯಾರಿಸುತ್ತಾರೆ. ಕೃಷಿ ಉಪಕರಣಗಳೆಂದರೆ ರೈತರಿಗೆ ದೇವರ ಸಮಾನ. ಹೀಗಾಗಿ ಪ್ರತಿಸಲ ಬಳಸುವಾಗ ಅವುಗಳಿಗೆ ಪೂಜೆ ಪುನಸ್ಕಾರಗಳನ್ನು ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಅವುಗಳಿಗೆ ವಿಶೇಷ ಪೂಜೆ ಮಾಡುವುದುಂಟು. ಉದಾ: ಹಂತಿಯ ಸಮಯದಲ್ಲಿ ಹಂತಿಗೆ ಬೇಕಾಗುವ ಎಲ್ಲ ಉಪಕರಣಗಳನ್ನು ಕಣದಲ್ಲಿಟ್ಟು ಪೂಜಿಸಿದರೆ, ಬಿತ್ತುವಾಗ ಕೂರಿಗೆಗೆ ಕಾರ ಹುಣ್ಣಿಮೆಯಲ್ಲಿ ಚಕ್ಕಡಿಗೆ ಪೂಜಿಸಿ ನಮಿಸುತ್ತಾರೆ. *(ಙ.ಙ.ಙ.)*

ಕೃಷಿ ದೇವತೆಗಳು: ಒಕ್ಕಲಿಗ ಆರಾಧಿಸುವ ದೇವತೆಗಳು. ಎಲ್ಲವೂ ದೇವರ ಕೈಯಲ್ಲಿದೆ ಎಂದು ತಿಳಿದುಕೊಂಡು ದುಃಖ–ದುಮ್ಮಾನಗಳನ್ನು ದೂರ ಮಾಡಲು, ಸುಖ–ಸಂತೋಷಗಳನ್ನು ನೀಡಲು, ತನ್ನ ಬೆಳೆ ರಕ್ಷಣೆಯಾಗಲೆಂದು ಹುಲುಸಾಗಲೆಂದು ಗೃಹದೇವತೆ, ಕುಲದೇವತೆ, ಗ್ರಾಮದೇವತೆ ಅಲ್ಲದೆ ಅನ್ಯದೈವಗಳ ಮೊರೆ ಹೋಗುತ್ತಾನೆ. ಅವುಗಳಲ್ಲಿ ಕೃಷಿಗೆ ಸಂಬಂಧಿಸಿದ ದೇವತೆಗಳು ಹಲವಾರು. ಅವುಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಆರಾಧಿಸುತ್ತ ಬಂದಿದ್ದಾನೆ. ಅವು– 1. ರೈತನ ಸಂಗಾತಿ ಎತ್ತು. 2. ನಿಸರ್ಗದೇವತೆಗಳು– ಭೂಮಿ ತಾಯಿ, ಗಾಳಿ, ಮಳೆ, ಬನದಮ್ಮ, ಪತ್ರಿ ಗಿಡ, ಎಕ್ಕಿ ಗಿಡ, ಬನ್ನಿ ಗಿಡ ಮುಂತಾದವು 3. ಸಂಪ್ರದಾಯ ದೇವತೆಗಳು– ಮಳೆರಾಜ, ಗುರ್ಜಿ, ಜೋಕುಮಾರ ಮುಂತಾದವು 4. ಭೂತಾದಿಗಳು–ಬರಮಪ್ಪ, ಬ್ರಹ್ಮ ರಾಕ್ಷಸ, ಏಳು ಮಕ್ಕಳ ತಾಯಿ, ಕೊಳ್ಳಿ ದೆವ್ವ, ಗಾಳಿ ದೆವ್ವ ಮುಂತಾದವು. 5. ಒಕ್ಕಲುತನದ ಉಪಕರ–ಣಗಳು–ಚಕ್ಕಡಿ, ಕೂರಿಗೆ, ಮೇಟಿ, ಕುಡುಗೋಲ ಮುಂತಾದವು.

ಒಕ್ಕಲಿಗರಿಗೆ ಎತ್ತು ಎಂದರೆ ಪಂಚಪ್ರಾಣ. ಹೀಗಾಗಿ ಅನೇಕ ಸಲ ವಿಶೇಷ ಸಂದರ್ಭಗಳಲ್ಲಿ ಎತ್ತುಗಳನ್ನು ಪೂಜಿಸುತ್ತಾನೆ. ಉದಾ: ಪ್ರತಿ ಸೋಮವಾರ ಮೈತೊಳೆದು ಪೂಜಿಸುತ್ತಾನೆ. ಕಾರ ಹುಣ್ಣಿವೆ ಎತ್ತುಗಳ ಹಬ್ಬವೆಂದೇ ಹೇಳಬೇಕು. ಅಂದು ಎತ್ತುಗಳಿಗೆ ಸ್ನಾನ ಮಾಡಿಸಿ, ಮೈಗೆ ಬಣ್ಣ ಹಚ್ಚಿ, ಒಡವೆಗಳಿಂದ ಶೃಂಗರಿಸಿ ಪೂಜಿಸುತ್ತಾನೆ. ಅಷ್ಟೇ ಅಲ್ಲ 'ಬಸವಣ್ಣ ದೇವರು' ಎಂದು ನಂಬಿದ್ದಾನೆ. ಅಂತೆಯೇ ಉತ್ತರ ಕರ್ನಾಟಕದಲ್ಲಿ ಅವನ ದೇವಸ್ಥಾನಗಳು ಇಲ್ಲದ ಹಳ್ಳಿಗಳೇ ಇಲ್ಲ. ನಿಸರ್ಗ ದೇವತೆಗಳಲ್ಲಿ ಭೂಮಿ ಅವನಿಗೆ ತಾಯಿಯ ಸಮಾನ. ಹೀಗಾಗಿ ವರ್ಷದಲ್ಲಿ ಹಲವಾರು ಸಲ ಅದನ್ನು ಪೂಜಿಸುತ್ತಾನೆ. ಹಾಗೆಯೇ ಅನೇಕ ಹಬ್ಬಗಳಲ್ಲಿ ಮಣ್ಣು ಪೂಜೆಯನ್ನು ಮಾಡುತ್ತಾನೆ.

ಬನ್ನಿಗಿಡದಲ್ಲಿ ಶಕ್ತಿದೇವತೆ ಇರುವಳೆಂದು ಹೊಲದಲ್ಲಿ ಒಂದಾದರೂ ಬನ್ನಿಗಿಡ ಬೆಳೆಸಿ, ರಕ್ಷಿಸಿ ಪೂಜಿಸುತ್ತ ಬಂದಿದ್ದಾನೆ. ಮಳೆ ಇಲ್ಲದೆ ಅವನ ಬದುಕೇ ಇಲ್ಲ. ಹೀಗಾಗಿ ಅದೂ ದೇವರೆಂದು ತಿಳಿದುಕೊಂಡಿದ್ದಾನೆ. ಅದು ಬರುವದು ತಡವಾದರೆ ಸಾಕು ಊರದೇವತೆಗಳಿಗೆಲ್ಲ ನೀರು ನೀಡುವದು, ಸಪ್ತಾಹ ಮಾಡುವದು, ಕತೆ–ಕಪ್ಪೆಗಳ ಮದುವೆ ಮಾಡುವದು ಮುಂತಾದ ಸಂಪ್ರದಾಯಗಳನ್ನು ಮಾಡುತ್ತಾನೆ. ಅಂತೆಯೇ ಈ ಭಾಗದಲ್ಲಿ ಕೆಲವು ಮಳೆರಾಜನ ಮರಗಳಿವೆ.

ಗಾಳಿಯನ್ನು ಕೆಲವು ಸಂದರ್ಭಗಳಲ್ಲಿ ದೇವರೆಂದು, ಇನ್ನು ಕೆಲವು ಸಂದರ್ಭಗಳಲ್ಲಿ ದೆವ್ವವೆಂದು ಆರಾಧಿಸುತ್ತ ಬಂದಿದ್ದಾನೆ. ಸಾಂಪ್ರದಾಯಿಕ ದೇವತೆಗಳಾದ ಜೋಕುಮಾರ, ಗುರ್ಜಿ ಆಡಿಸದರೆ ಮಳೆ ಬರುವದೆಂಬ ನಂಬಿಕೆ. ಹೀಗಾಗಿ ರೈತ ಅವು ಮಳೆ ತರುವ ದೇವರೆಂದು ಆರಾಧಿಸಿದ್ದಾನೆ. ಕೆಲವು ಮಠಗಳ ಸ್ವಾಮಿಗಳು, ಸಾಧು–ಸತ್ಪುರುಷರು ಕಂಬಳಿ ಬೀಸಿದರೆ ಮಳೆ ಬರುವದೆಂದು ನಂಬಿದ್ದಾನೆ. ಅಂತೆಯೇ ಮಳೆ ಬರದಿದ್ದಾಗ ಅವರ ಮೊರೆ ಹೋಗುವುದುಂಟು.

ಭೂತಾದಿ ದೊಡ್ಡಮನೆ, ಹಾಳು ಮನೆ, ಕೋಟೆ ಕೊತ್ತಲಗಳು, ದೊಡ್ಡ ದೊಡ್ಡ ಮರಗಳಲ್ಲಿ ವಾಸಿಸುತ್ತವೆ ಎಂದು ಅವು ಬೆಳೆ ನಾಶ ಮಾಡುವವು, ತೊಂದರೆ ಕೊಡುವವು ಎಂದು ಅವುಗಳನ್ನು ಅನೇಕ ಸಂದರ್ಭಗಳಲ್ಲಿ ಪೂಜಿಸುತ್ತ ಬಂದಿದ್ದಾನೆ. ಉದಾ: ಏಳುಮಕ್ಕಳ ತಾಯಿ ದೊಡ್ಡ ಮರಗಳಲ್ಲಿರುವಳೆಂದು ಅವಳು ಮತ್ತು ಅವಳ ಮಕ್ಕಳು ಬೆಳೆಯನ್ನು ತಿಂದು ನಾಶ ಮಾಡುವವೆಂಬ ಭಯ ಅವನಿಗಿದೆ. ತನ್ನ ಉದ್ಯೋಗಕ್ಕೆ ಬಳಿಕೆಯಾಗುವ ಉಪಕರಣಗಳೆಲ್ಲ ದೇವರೆಂದು ಉತ್ತುವಾಗ, ಬಿತ್ತುವಾಗ, ಒಕ್ಕುವಾಗ ಮತ್ತು ವಿಶೇಷ ಸಂದರ್ಭಗಳಲ್ಲಿ ಪೂಜಿಸುತ್ತಾನೆ. ಹೀಗೆ ಒಕ್ಕಲಿಗ ಅನೇಕ ಕೃಷಿ ದೇವತೆಗಳನ್ನು ಆರಾಧಿಸುತ್ತ ಬಂದಿದ್ದಾನೆ. *(ಙಙಙ)*

ಕೃಷಿ ನಂಬಿಕೆಗಳು: ನಂಬಿಕೆಗಳು ಒಕ್ಕಲಿಗರ ಜೀವನದಲ್ಲಿ ಅಸಾಧಾರಣ ಪಾತ್ರ ವಹಿಸಿವೆ. ಜೀವನಕ್ಕೆ ಉಸಿರಾಟ ಎಷ್ಟು ಆವಶ್ಯಕವೋ, ನಂಬಿಕೆಗಳೂ ಅಷ್ಟೇ ಆವಶ್ಯಕ. ಹೀಗಾಗಿ ಅವು ಎಂದೂ ಬತ್ತದ ಗುಪ್ತಗಾಮಿನಿಗಳಾಗಿ ಹರಿಯುತ್ತಿವೆ. ರೈತರ ಜೀವನವನ್ನು ರೂಪಿಸುವಲ್ಲಿ, ಅವರ ಸಂಸ್ಕೃತಿಯನ್ನು ಪೋಷಿಸುವಲ್ಲಿ, ಅವರ ಸಮಾಜವನ್ನು ರಕ್ಷಣೆ ಮಾಡುವಲ್ಲಿ

ಕೂ

ಕೂಡಲಸಂಗಮ: ಮಾಂಜರಾ, ಕಾರಂಜಾ ದೇವಣಿ ಮೂರು ನದಿಗಳ ಸಂಗಮ. ಇದು ಬೀದರ ಹೋಗುವ ರಸ್ತೆಯ ಮೇಲಿದೆ. ಪ್ರಕೃತಿ ಸೌಂದರ್ಯದಿಂದ ಎಲ್ಲರ ಮನಸ್ಸಿಗೆ ಮುದ ನೀಡುವ ರಮ್ಯ ತಾಣವಿದು. ಇಲ್ಲಿನ ಸಂಗಮೇಶ್ವರ ದೇವಾಲಯ ಬಹು ಪುರಾತನವಾದುದು. ಮಾಂಜರಾ ಬೀದರ ಜಿಲ್ಲೆಯಲ್ಲೇ ದೊಡ್ಡ ನದಿ. ಈ ನದಿಯ ಮೇಲೆ ಸಂಗಮೇಶ್ವರನ ಮಂದಿರದ ಶಿಖರದ ಕಳಸ ದೂರದಿಂದಲೇ ಆರಾಧಕರ ಮನ ಸೆಳೆಯುತ್ತದೆ. ದೇವಸ್ಥಾನ ದೊಡ್ಡದಾದ ಪಡಸಾಲೆಯನ್ನು ಹೊಂದಿದ್ದು ಸಾವಿರಾರು ಜನ ಒಂದೇ ಪಂಕ್ತಿಯಲ್ಲಿ ಊಟ ಮಾಡುವಷ್ಟು ವಿಶಾಲವಾಗಿದೆ. ಬೇಸಿಗೆ ಕಾಲದಲ್ಲಿ ನಿರಂತರವಾಗಿ ಲಗ್ನ ಕಾರ್ಯಗಳು ಜರುಗುತ್ತವೆ.

ಕೂಡಲಸಂಗಮದಲ್ಲಿ ಮೊದಲು ಶೈವ ಧರ್ಮದ ಗೌಳಿಯರ ನಾಲ್ಕು ಮನೆಗಳು ಮಾತ್ರ ಇದ್ದವು. ಒಬ್ಬ ಹೆಣ್ಣು ಮಗಳು ದಿನಾಲು ರಾತ್ರಿ 12 ಗಂಟೆಯ ಸಮಯದಲ್ಲಿ ನದಿಯ ನೀರಿನಲ್ಲಿರುವ ದೇವರನ್ನು ಪೂಜಿಸಿ ಬರುತ್ತಿರುವುದನ್ನು ಅವಳ ಅತ್ತೆ ಗಮನಿಸಿ ಮಗನಿಗೆ ತಿಳಿಸುವಳು. ಗಂಡ ಅವಳನ್ನು ಹಿಂಬಾಲಿಸಿಕೊಂಡು ಹೋಗುತ್ತಾನೆ. ನದಿಯ ನೀರು ಹೆಣ್ಣು ಮಗಳಿಗೆ ದಾರಿಕೊಟ್ಟು ಅವಳ ಗಂಡನಿಗೆ ಹೋಗಲು ಆಸ್ಪದ ನೀಡಲಿಲ್ಲ. ಆ ಸಂದರ್ಭದಲ್ಲಿ ದೇವರು ಪ್ರತ್ಯಕ್ಷನಾಗಿ ನಿನಗೆ ಅತ್ತೆ ಗಂಡ ಕಾವಲು ಮಾಡುತ್ತಿದ್ದಾರೆ ನೀನು ಪೂಜೆಗೆ ಬರಬೇಡ ಎಂದು ಹೇಳಿ ಮೂರು ಮುಷ್ಠಿ ಉಸುಕು ಕೊಟ್ಟು ನದಿಯ ದಂಡೆಯ ಮೇಲೆ ಪ್ರತಿಷ್ಠಾನ ಮಾಡಿ ನನ್ನನ್ನು ಪೂಜಿಸು ಎಂದು ನುಡಿದಂತೆ ದಂಡೆಯ ಮೇಲೆ ಸಂಗಮೇಶ್ವರನನ್ನು ಪ್ರತಿಷ್ಠಾಪಿಸುತ್ತಾಳೆ ಎಂಬುದು ಒಂದು ದಂತ ಕಥೆ.

ಸಂಗಮೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದಲ್ಲಿ ನಿತ್ಯ ಭಜನೆ ದಾಸೋಹ ನಡೆಯುತ್ತದೆ. ಸೋಮವಾರ ಅಮವಾಸ್ಯೆ ಬಂದರೆ ಮಹಾರಾಷ್ಟ್ರ ಮತ್ತು ಕರ್ನಾಟಕದ ಅಪಾರ ಭಕ್ತರು ದರ್ಶನ ಪಡೆಯುತ್ತಾರೆ. ಈ ದೇವಾಲಯ 10ನೆಯ ಶತಮಾನದ್ದೆಂದು ಹೇಳಲಾಗಿದೆ. ಸಂಗಮೇಶ್ವರ ದೇವಾಲಯದ ಹಿಂಭಾಗದಲ್ಲಿ ನೀಲಾಂಬಿಕೆ ಆಶ್ರಮವಿದೆ. ಅದು ಅಧ್ಯಾತ್ಮ ಕಾರ್ಯ ಚಟುವಟಿಕೆಯ ಕೇಂದ್ರವಾಗಿದೆ. ಪ್ರಾಥಮಿಕ ಪ್ರೌಢಶಾಲೆ ಅಲ್ಲಿದ್ದು ಸುಶಿಕ್ಷಿತ ಜನಸಮುದಾಯವಿದೆ. ಬಸವಣಿಪ್ಪಾ ಹೊಡಗೆ ಎಂಬ ಜನಪದ ಕಲಾವಿದರೊಬ್ಬರು ಆಗಿ ಹೋಗಿದ್ದಾರೆ. ಕನ್ನಡ ಮರಾಠಿ, ಹಿಂದಿ ಭಾಷೆಯಲ್ಲಿ ಹಾಡು ಹೇಳುವುದರ ಜೊತೆಗೆ ಒಳ್ಳೆಯ ನಟರೆಂಬ ಹೆಸರನ್ನು ಪಡೆದಿದ್ದರು. *(ಜೆಬಿ)*

ಕೂಸೊಪ್ಪಿವುದು: ಮದುವೆಯಾದ ಮೇಲೆ ಮಗಳನ್ನು ಗಂಡನ ಮನೆಗೆ ಕಳಿಸುವ ಸಂಪ್ರದಾಯ. ಮದುವೆಯ ಕಾರ್ಯಗಳು ಮು–ಗಿಯುತ್ತಿರುವಂತೆಯೇ ಹೆಣ್ಣಿನವರು ತಮ್ಮ ಊರಿಗೆ ಹೊರಡುವ ತಯಾರಿ ಮಾಡುವ ಮೊದಲು ತಮ್ಮ ಮಗಳನ್ನು ಗಂಡನ ಮನೆಯಲ್ಲಿ ಬಿಟ್ಟು ಹೋಗಬೇಕಾದ ಸಂದರ್ಭದಲ್ಲಿ ಹೆಣ್ಣಿನವರ ಆತಂಕ ಹೇಳತೀರದು. ಇಷ್ಟು ದಿನಗಳವರೆಗೆ ಸಾಕಿ ಸಲಹಿದ ಮಗಳನ್ನು ಹೊಸದಾಗಿರುವ ಬೀಗರ ಹತ್ತಿರ ಬಿಟ್ಟು ಹೋಗಬೇಕಾದಾಗ ಒಂದು ಕಡೆ ಸಂಭ್ರಮ ಇನ್ನೊಂದು ಕಡೆ ಆತಂಕವಿರುತ್ತದೆ. ಹೆಣ್ಣು ಹಡೆಯಲೇಬಾರದು ಎಂಬ ಭಾವನೆ ಬರುತ್ತದೆ.

ಗಂಡು ಹುಟ್ಟಿದರೆ ಒಬ್ಬ ಸೊಸೆ ಮನೆಗೆ ಬರುವಳು. ಅದು ಮಗಳು ಬಂದಂತೆಯೇ. ಆದರೆ ಹೆಣ್ಣು ಹೆತ್ತವರು ತಮ್ಮ ಮಗಳನ್ನು ಕಳಿಸಬೇಕಲ್ಲಾ "ಹೆಣ್ಣಿನ ಜನ್ಮ ಸುಡಲಿ" ಎಂದು ಉದ್ಗಾರ ತೆಗೆದಿದ್ದಾರೆ. ಆದರೂ ಮಗಳನ್ನು ಹಡೆದ ಮೇಲೆ ಗಂಡನ ಮನೆಗೆ ಕಳಿಸಬೇಕಲ್ಲ. ಅತ್ತೆ ನಾದುನಿಯರಿಗೆಲ್ಲ ತಮ್ಮ ಮಗಳನ್ನು ಚೆನ್ನಾಗಿ ನೋಡಿಕೊಳ್ಳಿರಿ ಎಂದು ಹೇಳುವ ತಾಯಿಯ ಮಮತೆಯ ಹಾಡುಗಳು ಶೋಕ ರಸ ಮಡುಗಳಾಗಿವೆ.

(ವೈಎಸ್)

ಕೃ

ಕೃಷಿ ಉಪಕರಣಗಳು: ಕೃಷಿ ಕಾರ್ಯಕ್ಕೆ ಉಪಯೋಗಿಸುವ ಪರಿಕರಗಳು. ಕೃಷಿಯ ಕಾರ್ಯ ಮೂರು ಹಂತಗಳಲ್ಲಿ ನಡೆಯುತ್ತದೆ. 1. ಉತ್ತುವುದು 2. ಬಿತ್ತುವುದು 3. ಒಕ್ಕುವುದು. ಈ ಮೂರು ಹಂತಗಳಲ್ಲಿ ಒಕ್ಕಲಿಗ ಬಳಿಸುವ ಉಪಕರಣಗಳು ನೂರಾರು. ಅವುಗಳ ಹೆಸರುಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದು ಕಂಡು ಬರುತ್ತದೆ. ಹಾಗೆಯೇ ಅವುಗಳ ಸ್ವರೂಪದಲ್ಲಿ ಅಲ್ಪ–ಸ್ವಲ್ಪ ವ್ಯತ್ಯಾಸ ಕಂಡು ಬಂದರೂ ಬಳಿಸುವ ಉದ್ದೇಶ ಒಂದೇ. ಗುಲಬರ್ಗಾ, ಬೀದರ, ರಾಯಚೂರ ಜಿಲ್ಲೆಗಳ ಕೃಷಿ ಉಪಕರಣಗಳು ಹೀಗಿವೆ: ಅಕ್ಕಡಿಕೋಲು, ಈಸು, ಉಡಿಚೀಲ, ಎಡೆದಿಂಡು (ಎಡಿಕುಂಟಿ), ಎಡಿಕುಡ, ಎಡಿಚಕ್ಕಿ, ಕತ್ತಿ ಎಡಿ, ಕ್ವಾತಾಳ (ತಾಳ), ಕುಂಟಿ (ಗಳೆ), ಕುಂಟಿ ದಿಂಡು, ಕುಂಟಿ ಬಳಿ, ಕುಡ, ಕುಡುಗೋಲು, ಕರುಗೊಡ್ಡ, ಕುರುಪಿ, ಕೂರಿಗೆ, ಕೊಂಡಿ, ಕೊಯ್ತ, ಕೋಲ, ಖಡಕಿಲ ನೊಗ, ಖೋಡ, ಗಳೇದ ಸೋಲು, ಗುದ್ದಲಿ, ಗ್ವಾರಿ, ಚಾಟಮಣಿ (ಬಡಮಣಿ), ಜಮದಿಂಡು, ಟಿಕಾವು, ಡಿಬ್ಬಿದಿಂಡು, ಡುಮ್ಮದಿಂಡು (ಡುಮ್ಮ), ಎಡಿದಿಂಡು (ಎಡಿ), ತಾಳ, ತೂರು ಬುಟ್ಟಿ (ತರಾಣಿ), ದೊಡ್ಡ ಕ್ವಾತಾಳ, ನೇಗಿಲು, ನಾಂಜಿಲ್ (ಕಬ್ಬಿಣ ನೇಗಿಲ), ಕಟಗಿ ಮಡಿಕಿ, ನಾಗಿಲ, ನೊಗ, ನೊಗಸುತ್ತ, ಪಳಿ, ಪಾಸು, ಪಾಳ, ಪಿಳ್ಳಿದುಂಡು, ಬಂಡಿ (ಚಕ್ಕಡಿ, ಎತ್ತಿನಗಾಡಿ), ಬಾಚಿಕ್ಕ, ಬಾದಕೇಲ, ಬ್ಯಾಕಟ್ಟಿಗೆ, ಬುಕ್ಕ, ಬೆಡಗ, ಮಂಡಿ, ಮಂಡಿದಾರ (ಮಂಡಿಬಾರ), ಮಿಣಿ, ಮೇಳಿ, ಮೇಟಿ, ಮೆಟ್ಟ (ಮೆಟ್ಟನಾಲಿಗೆ), ಲಂಬ, ಲಗ್ಗೋಣಿ, ಲಾಂಗೂಲ (ರಾಮನೇಗಲಿ), ಶೆಲ್ಲೆ, ಶೆಡ್ಡಿ, ಸಾಲುದಿಂಡು, ಸೆಳ್ಳು,

ಕೆಂಭಾವಿ: ಯಾದಗೀರ ಜಿಲ್ಲೆಯ ಸುರಪುರ ತಾಲ್ಲೂಕಿನ ಐತಿಹಾಸಿಕ ಸ್ಥಳ. ಇಲ್ಲಿ ದೊರೆತಿರುವ ಅಪರೂಪದ ವೃಷಭನಾಥ ವಿಗ್ರಹ ಕ್ರಿ.ಶ. 9 ನೆಯ ಶತಮಾನದ್ದು. ಕೆಂಭಾವಿಯ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ ಆವರಣದಲ್ಲಿರುವ ಈ ವಿಗ್ರಹ ಯಾರದು ಎಂಬ ಬಗ್ಗೆ ಗ್ರಾಮಸ್ಥರಿಗೆ ಗೊತ್ತಿರಲಿಲ್ಲ. ಕೆಲವರು ಬುದ್ಧನ ವಿಗ್ರಹವೆಂದು ಕರೆದರೆ, ಮತ್ತೆ ಕೆಲವರು ಮಹಾವೀರ ಮುಂತಾದ ತಮಗೆ ತೋಚಿದಂತೆ ಹೆಸರಿಟ್ಟಿದ್ದರು.

ಈ ವೃಷಭನಾಥ (ಆದಿನಾಥ) ವಿಗ್ರಹ 3 ಅಡಿ ಎತ್ತರ, 2 ಅಡಿಗೂ ಹೆಚ್ಚು ಅಗಲವಿದ್ದು, ಪದ್ಮಾಸನ ಹಾಕಿ ಕುಳಿತಿರುವ ಶಾಂತಚಿತ್ತ ಮುಖಮುದ್ರೆಯೊಂದಿಗೆ ಧ್ಯಾನ ಭಂಗಿಯಲ್ಲಿದೆ. ವಿಗ್ರಹದ ತಲೆಗೂದಲು ಗುಂಗರ ಗುಂಗುರವಾಗಿದ್ದು, ಎರಡು ಕೈಗಳು ಒಂದರ ಮೇಲೆ ಒಂದು ಹಾಕಿ ಕುಳಿತಿರುವ ವಿಗ್ರಹ ಮುಂಗೈಗಳು ಭಗ್ನಗೊಂಡಿವೆ. ಅಲ್ಲದೆ ವಿಗ್ರಹ ಸಂಪೂರ್ಣ ನಗ್ನ ಹಾಗೂ ನಿರಾಭರಣವಾಗಿದೆ. ಕಪ್ಪು ಕಲ್ಲಿನಲ್ಲಿ ಕೆತ್ತಿರುವ ವಿಗ್ರಹದ ಮೂಲ ಸ್ವರೂಪ ಅತ್ಯಂತ ಸುಂದರವಾಗಿರಬಹುದೆಂದು ಇದನ್ನು ಸೂಕ್ಷ್ಮವಾಗಿ ಕಂಡಾಗ ಅರಿವಾಗುತ್ತದೆ.

ಬಟ್ಟ ಬಯಲಲ್ಲಿ ರಕ್ಷಣೆ ಇಲ್ಲದೆ ಶಾಲಾ ಆವರಣದಲ್ಲಿರುವುದರಿಂದ ಯಾರೊ ತಿಳಿಗೇಡಿ ಮಕ್ಕಳು ಅಥವಾ ದೊಡ್ಡವರೆ ಅದರ ಮುಖ ಹಾಗೂ ನಾಸಿಕ ಸಂಪೂರ್ಣ ಭಗ್ನಗೊಳಿಸಿದ್ದಾರೆ. ಈ ವಿಗ್ರಹವು ಸುಮಾರು ವರ್ಷಗಳ ಹಿಂದೆಯೇ ಗ್ರಾಮದ ಕೋಟೆ ಗೋಡೆಯೊಳಗಿನಿಂದ ಇಲ್ಲಿ ತಂದಿಡಲಾಗಿದೆ. ಇಲ್ಲಿ ತಂದಿಟ್ಟ ನಂತರ ಅನೇಕ ಬಾರಿ ಬೋರಲು ಬಿದ್ದಿದೆ. ಕಾರಣ ಗ್ರಾಮದಲ್ಲಿ ಮಾತೆಯರಿಗೆ ಪ್ರಸವ ವೇದನೆಯಾದಾಗ, ಈ ವಿಗ್ರಹವನ್ನು ಬೋರಲಾಗಿ ಹಾಕಿದರೆ ಹೆರಿಗೆ ಸುಸೂತ್ರವಾಗಿ ಆಗುತ್ತದೆಂಬ ಮೂಢ ನಂಬಿಕೆಗೆ ಬಲಿಯಾದ ಈ ಯೋಗಿಯ ವಿಗ್ರಹವನ್ನು ಮೇಲಿಂದ ಮೇಲೆ ಬೋರಲಾಗಿ ಹಾಕಿದ್ದುಂಟು. ಮತ್ತೆ ಯಾರೋ ಪುಣ್ಯಾತ್ಮರು ಇದನ್ನು ಎತ್ತಿ ಸರಿಯಾಗಿಟ್ಟರೂ ಮತ್ತೆ ಮತ್ತೆ ಬೋರಲಾಗಿ ಹಾಕಲಾಗುತ್ತಿತ್ತು. ಮೇಲಿಂದ ಮೇಲೆ ವಿಗ್ರಹ ಬೋರಲಾಗಿ ಹಾಕುತ್ತಿರುವುದರಿಂದ, ಈ ಸುಂದರ ಪ್ರತಿಮೆಯ ಕಿವಿ, ಮುಖ, ನಾಸಿಕ ಮುಂತಾದವುಗಳು ಹಾಳಾಗಿ ಹೋಗಿವೆ. ಇದೇ ರೀತಿ ಅನಾಥವಾಗಿ ರಕ್ಷಣೆಯಿಲ್ಲದೆ ಬಿಟ್ಟರೆ, ಈ ಐತಿಹಾಸಿಕ ಮಹತ್ವ ಪಡೆದಿರುವ ವಿಗ್ರಹ ಸಂಪೂರ್ಣ ನಾಶವಾಗುತ್ತದೆ.

ಈ ವೃಷಭನಾಥ ವಿಗ್ರಹದ ಕೆಳಗೆ ಮಲಗಿದ ವೃಷಭ (ಬಸವ) ಶಿಲ್ಪವಿದೆ. ವೃಷಭನಾಥ ತೀರ್ಥಂಕರನ ಲಾಂಛನವಾದ ಬಸವನ ಚಿತ್ರವುಳ್ಳ ಇಂತಹ ಶಿಲ್ಪ ಈ ಭಾಗದಲ್ಲಿ ಈಗಾಗಲೇ ಅಲ್ಲಲ್ಲಿ ದೊರೆತರೂ ಕೂಡ ಇಷ್ಟೊಂದು ಸ್ಪಷ್ಟವಾದ ಲಾಂಛನವುಳ್ಳ ವಿಗ್ರಹ ದೊರೆತಿರುವದು, ಈ ಭಾಗದಲ್ಲಿನ ಬಹು ಅಪರೂಪ ಹಾಗೂ ಇಂತಹ ವಿಗ್ರಹಗಳನ್ನು ಹಲವಾರು ವರ್ಷಗಳಿಂದ ಸಂರಕ್ಷಿಸಿಕೊಂಡು ಬಂದ ಗ್ರಾಮಸ್ತರು ಶಾಲಾ ಶಿಕ್ಷಕರು ಇತಿಹಾಸಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಆದರೆ, ಸಾರ್ವಜನಿಕರ ಮೂಢ ನಂಬಿಕೆಗೆ ಈ ಐತಿಹಾಸಿಕ ಮಹತ್ವದ ವಿಗ್ರಹ ಬಲಿಯಾಗದಂತೆ ಶಾಶ್ವತ ರಕ್ಷಣೆಯ ವ್ಯವಸ್ಥೆ ಮಾಡಬೇಕಾಗಿದೆ.

ಈ ವಿಗ್ರಹ ಶೈಲಿಯ ದೃಷ್ಟಿಯಿಂದ ನೋಡಲಾಗಿ ಕ್ರಿ.ಶ. 9 ನೇ ಶತಮಾನದ ರಾಷ್ಟ್ರಕೂಟರ ಕಾಲದಲ್ಲಿ ಕೆತ್ತಲಾಗಿದೆ ಎಂದು ಹೇಳಬಹುದು. ಅಲ್ಲದೆ ಸ್ಪಷ್ಟವಾದ ಲಾಂಛನ ಕೆತ್ತಿದ್ದನ್ನು ನೋಡಿದರೆ, ಈ ವಿಗ್ರಹ ಉತ್ತಮ ಶಿಲ್ಪಿಯಿಂದ ಕೆತ್ತನೆಯಾಗಿದೆ ಎಂದು ಹೇಳಬಹುದು.

ಪ್ರಾಚೀನ ಶಾಸನಗಳಲ್ಲಿ ಕೆಂಭಾವಿ ಎಂದೇ ಉಲ್ಲೇಖಿತಗೊಂಡಿರುವ ಈ ಗ್ರಾಮ ಹಿಂದೆ ಹನ್ನೊಂದು ಹಳ್ಳಿಗಳ, ನಂತರ 24 ಹಳ್ಳಿಗಳ ಆಡಳಿತ ಕೇಂದ್ರವಾಗಿತ್ತೆಂದು ಶಾಸನಗಳಿಂದ ತಿಳಿದು ಬರುತ್ತದೆ. ಬಸವ ಪೂರ್ವ ಯುಗದ ಶರಣ ಭೋಗಣ್ಣನ ಊರು ಇದೇ ಆಗಿದ್ದರಿಂದ ಮತ್ತಷ್ಟು ಮಹತ್ವ ಕೆಂಭಾವಿಗೆ ದೊರೆತಿದೆ. ಸದ್ಯ ಈ ಗ್ರಾಮದಲ್ಲಿ ರೇವಣಸಿದ್ದೇಶ್ವರ, ಭೋಗಣ್ಣ, ಬಸವಣ್ಣ ಎಂಬ ಐತಿಹಾಸಿಕ ದೇವಾಲಯಗಳಿವೆ. ಅಲ್ಲದೇ ಆದಿಲ್ ಶಾಹಿ ಕಾಲದ ಮುಸ್ಲಿಂ ಸ್ಮಾರಕವೂ (ಗುಮ್ಮಟ) ಇಲ್ಲಿದೆ. ಕ್ರಿ.ಶ. 11 ನೆಯ ಶತಮಾನದಲ್ಲಿ ಕೆಂಭಾವಿ ಮಹತ್ವದ ಗ್ರಾಮವಾಗಿತ್ತೆಂದು ದೊರೆತಿರುವ ಶಾಸನಗಳಿಂದ ತಿಳಿದಿರುತ್ತದೆ.

(ಎನ್‌ಎಚ್‌ಡಿ)

ಕೊ

ಕೊಂಡ ಹಾಯುವುದು: (ಅಗ್ಗಿ ತುಳಿಯುವುದು) ದೇವರಿಗೆ ಹರಕೆ ಹೊತ್ತವರು ಗೊತ್ತಾದ ದಿನ ನಿಗಿ ನಿಗಿ ಉರಿಯುತ್ತಿರುವ ಕೆಂಡದ ಕೊಂಡದಲ್ಲಿ ಬರಿಗಾಲಿನಲ್ಲಿ ನಡೆದು ಹೋಗುವ ಒಂದು ಜನಪದ ಸಂಪ್ರದಾಯ. ವಿವಿಧ ಪ್ರದೇಶಗಳಲ್ಲಿಯೂ ಆಚರಣೆಯಲ್ಲಿದೆ. ಕೊಂಡದ ಆಳ ಕೆಲವು ಕಡೆ ಆರು ಅಂಗುಲಗಳಿಂದ ನಾಲ್ಕು ಅಡಿಯವರೆಗೂ ಇರುವುದು ಕಂಡು ಬರುತ್ತದೆ. ಉದ್ದ ನಲವತ್ತು (40) ಅಗಲ ನಾಲ್ಕೈದು ಅಡಿಗಳಷ್ಟು ಇರುವುದುಂಟು. ಕೊಂಡ ಹಾಯುವಾಗ ಕಾಲುಗಳು ಕೆಂಡದಲ್ಲಿ ಹಲವಾರು ಅಂಗುಲಗಳಷ್ಟು ಆಳಕ್ಕೆ ಮುಳುಗುತ್ತವೆ. ಕೊಂಡ ಹಾಯುವವರು ಹೆಚ್ಚು ಸಮಯದವರೆಗೆ ಕೆಂಡದ ಮೇಲೆ ನಿಂತಿರಲು ಸಾಧ್ಯವಿಲ್ಲ. ಕೆಂಡದ ಮೇಲೆ ನಡೆಯುವವರ ವೇಗವನ್ನು ಗಮನಿಸಿದರೆ ಅಂಗಾಲಿನ ಪ್ರತಿಯೊಂದು ಭಾಗವೂ ಕೆಂಡದ ಮೇಲೆ ಒಂದು ಸೆಕೆಂಡಿಗಿಂತಲೂ ಕಡಿಮೆ ಸಮಯ ಇರಲು ಸಾಧ್ಯವೆನಿಸುತ್ತದೆ. ಹೆಂಗಸರು, ಗಂಡಸರು, ಮಕ್ಕಳು ಭಾಗವಹಿಸುವ ಈ ಸಂಪ್ರದಾಯ ದಿಗ್ಭ್ರಮೆ ಹುಟ್ಟಿಸುವಂತಹುದು.

ಕೊಂಡ ಹಾಯುವ ಸಂಪ್ರದಾಯ ಆಚರಣೆಯನ್ನು ಕಣ್ಣಾರೆ ಕಂಡ ಜನರು ಭಯ, ಆಶ್ಚರ್ಯ, ಭಾವನೆಗಳನ್ನು ವ್ಯಕ್ತ ಪಡಿಸುವರು. ಕೊಂಡ ಹಾಯುವುದು ದೈವೀ ಕೃಪೆಯ ಪವಾಡವೆಂದು ನಂಬಲಾಗಿದೆ.

ನಂಬಿಕೆಗಳು ಬಹು ಮುಖ್ಯವಾದ ಕಾರ್ಯ ನಿರ್ವಹಿಸಿವೆ. ಒಕ್ಕಲಿಗರ ಬದುಕಿನಲ್ಲಿ ನಂಬಿಕೆಗಳು ಸುಖ–ಶಾಂತಿ–ನೆಮ್ಮದಿಗಳನ್ನುಂಟು ಮಾಡಿವೆ. ಇದಕ್ಕೆ ಕಾರಣ ಅವು ಒಕ್ಕಲಿಗರ ಮಾನಸಿಕ ನೆಮ್ಮದಿಯನ್ನು ನೀಡಿ ಸದಾಕಾಲ ಲವಲವಿಕೆಯಿಂದ, ಸಂತೋಷದಿಂದ ಇಟ್ಟಿವೆ. ಸಮಾಜವನ್ನು ಒಳ್ಳೆಯ ಮಾರ್ಗದಲ್ಲಿ ನಡೆಸಲು ಮತ್ತು ಅದನ್ನು ರಕ್ಷಿಸಲು ಅಲಿಖಿತ ಶಾಸನಗಳಾಗಿ ಅವು ಕೆಲಸ ಮಾಡಿವೆ. ಎಷ್ಟೋ ವೇಳೆ ಕಾಯ್ದೆ–ಕಾನೂನುಗಳು ಮಾಡದ ಕೆಲಸವನ್ನು ಅವು ಪರಿಣಾಮಕಾರಿಯಾಗಿ ಮಾಡಿವೆ.

ಮಾನವನ ಹುಟ್ಟು, ಸಾವು, ಮದುವೆ–ಮುಂಜಿ, ಹಬ್ಬ–ಹರಿದಿನ, ಮಾಡುವ ಉದ್ಯೋಗ ಮುಂತಾದವುಗಳ ಕುರಿತ ನಂಬಿಕೆಗಳು ಹುಲುಸಾಗಿ ಬೆಳೆದಿವೆ. ಅದರಲ್ಲಿ ಕೃಷಿ ಕುರಿತಾದ ನಂಬಿಕೆಗಳು ಸಾಕಷ್ಟು, ಎತ್ತು, ಭೂಮಿ, ಮಳೆ, ಗಾಳಿ ಕುರಿತಾದ ನಂಬಿಗಳು, ಹೊಲ ಹದ ಮಾಡುವಾಗಿನ ನಂಬಿಕೆಗಳು, ಬಿತ್ತುವಾಗಿನ ನಂಬಿಕೆಗಳು, ಕಳೆ ತಗೆಯುವಾಗಿನ ಎಡೆ–ಡುಮ್ಮು ಹೊಡೆಯುವಾಗಿನ ನಂಬಿಕೆಗಳು, ಬೆಳೆ ಕುರಿತಾದ ನಂಬಿಕೆಗಳು, ಬೆಳೆ ಕೊಯ್ಯುವಾಗಿನ ನಂಬಿಕೆಗಳು, ಹಂತಿಯ ಕುರಿತಾದ ನಂಬಿಕೆಗಳು, ರಾಶಿಯನ್ನು ಹಗೆಗೆ ಹಾಕುವಾಗಿನ ನಂಬಿಕೆಗಳು, ಕೃಷಿ ಉಪಕರಣಗಳ ಕುರಿತಾದ ನಂಬಿಕೆಗಳು ಎಂದು ವಿಭಾಗಿಸಬಹುದು. ಮತ್ತೆ ಇವುಗಳಲ್ಲಿ ಕೆಲವು ಉಪವಿಭಾಗಗಳನ್ನು ಕಲ್ಪಿಸಬಹುದು. ಉದಾ: ಹಂತಿಯ ಕುರಿತಾದ ನಂಬಿಕೆಗಳನ್ನು 1. ಕಣ ಮಾಡುವಾಗಿನ ನಂಬಿಕೆಗಳು, 2. ತೆನೆ ಮುರಿಯುವಾಗಿನ ನಂಬಿಕೆಗಳು, 3. ಹಂತಿ ಉಪಕರಣಗಳ ಕುರಿತಾದ ನಂಬಿಕೆಗಳು, 4. ಹಂತಿ ಕಟ್ಟುವಾಗಿನ ನಂಬಿಕೆಗಳು, 5. ಹಂತಿ ಬಿಡುವಾಗಿನ ನಂಬಿಕೆಗಳು, 6. ಹಂತಿ ಬಿಟ್ಟ ಮೇಲಿನ ನಂಬಿಕೆಗಳು, 7. ರಾಶಿಯ ಕುರಿತಾದ ನಂಬಿಕೆಗಳು – ಹೀಗೆ ವರ್ಗೀಕರಿಸುತ್ತ ಹೋದರೆ ಕೃಷಿ ಕುರಿತಾದ ನಂಬಿಕೆಗಳ ಹರವು ಎಷ್ಟಿದೆ ಎಂಬುದು ಅರಿವಾಗುತ್ತದೆ. ಒಕ್ಕಲಿಗನ ಉದ್ಯೋಗವೇ ನಂಬಿಕೆಗಳ ಆಗರವಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಉದಾ: ಇಲ್ಲಿ ಕೆಲವು ಕೃಷಿ ನಂಬಿಕೆಗಳನ್ನು ನೋಡಬಹುದು. 1. ಉಗಾದಿ ಪಾಡ್ಡೆ ದಿವಸ ಹರಗುವ ಮೂರ್ತ ಮಾಡಬೇಕು, 2. ಕರಿ ಎತ್ತನ್ನು ಬಿತ್ತುವ ಮೊದಲ ದಿವಸ ಕೂರಿಗೆಗೆ ಹೂಡಬಾರದು, 3. ಹಂತಿ ಬಿಡುವಾಗ ಕೊನೆ ಎತ್ತಿನ ಸೆಗಣಿಯಿಂದ ಭೂದನನ್ನು ಮಾಡಬೇಕು, 4. ಬೆಳೆ ಬೆಳೆದು ನಿಂತಾಗ ಚೆರಗ ಚೆಲ್ಲಬೇಕು. 5. ರಾಶಿಯಲ್ಲಿ ಮೊದಲು ಸ್ವಾಮಿಗಳಿಗೆ ಮಠಗಳಿಗೆ ದಾನ ಮಾಡಬೇಕು, 6. ಹಂತಿ ಹೊಡೆಯುವಾಗ ಮೇಟಿ ಸಡಿಲಾದರೆ, ಇಲ್ಲಾ ಮುರಿದರೆ ಮನೆ ಯಜಮಾನನಿಗೆ ತೊಂದರೆಯಾಗುತ್ತದೆ. ಇಲ್ಲವೆ ಸಾಯುತ್ತಾನೆ ಮುಂತಾದವು. ಇಂದು ಕೃಷಿಯ ಕಾರ್ಯವು ಹೆಚ್ಚಾಗಿ ಯಂತ್ರಗಳಿಂದ ಆಗುತ್ತಿರುವದರಿಂದ ಅನೇಕ ನಂಬಿಕೆಗಳು ಮಾಯವಾಗುತ್ತವೆ. ಇದಕ್ಕೆಲ್ಲ ಕಾರಣ ವಿಜ್ಞಾನ, ನಾಗರಿಕತೆ ಎಂದು ಹೇಳಬಹುದು. *(ಬಿಜಬಿ)*

ಕೃಷ್ಣಪ್ಪ ಕುರ್ಡಿ: ತೊಗಲು ಗೊಂಬೆಯಾಟ ಪ್ರದರ್ಶನದಲ್ಲಿ ಪರಿಣಿತರು. ಮಾನ್ವಿ ತಾಲ್ಲೂಕಿನ ಕುರ್ಡಿ ಗ್ರಾಮದವರು. ಜಿಂಕೆ, ಮತ್ತು ಆಡಿನ ಚರ್ಮವನ್ನು ಕತ್ತರಿಸಿ ಗೊಂಬೆ ಮಾಡಿ, ಬಣ್ಣ ಬಳಿದು, ನಿರ್ಜೀವ ಚಿತ್ರಗಳಿಗೆ ಜೀವ ತುಂಬುವ ಕೈ ಚಳಕ. ಇವರು ಹುಟ್ಟಿಸುವ ಭ್ರಮಾಲೋಕ ವಿಶಿಷ್ಟವಾದುದು. ರಾಮಾಯಣ, ಮಹಾಭಾರತ ಮುಂತಾದ ಪೌರಾಣಿಕ ಕೃತಿಗಳಲ್ಲಿಯ ಸಂದರ್ಭಗಳನ್ನು ಆಯ್ದುಕೊಂಡು, ಹೆಣೆದ ಪರದೆಯ ಹಿಂದೆ ಚಿತ್ರಗಳನ್ನು ಕಾಣಿಸುತ್ತಾ, ಸನ್ನಿವೇಶಕ್ಕೆ ತಕ್ಕಂತೆ ಸಂಭಾಷಣೆ, ಸಂಗೀತವನ್ನು ಅಳವಡಿಸಿಕೊಂಡು ಪ್ರೇಕ್ಷರಿಗೆ ರಂಜನೆಯನ್ನೀಯುತ್ತಿದ್ದರು.

ತಮ್ಮ ವಂಶಪಾರಂಪರ್ಯವಾಗಿ ಬಂದ ಈ ಕಲೆಯನ್ನು ಸುಮಾರು ಐವತ್ತು ವರ್ಷಗಳವರೆಗೆ ರಾಯಚೂರು, ಆಂಧ್ರ ಪ್ರದೇಶ ಮುಂತಾದ ಬೇರೆ ಬೇರೆ ಜಿಲ್ಲೆ ಹಾಗೂ ರಾಜ್ಯಗಳಲ್ಲಿ ಪ್ರದರ್ಶಿಸಿದ್ದರು. ಮೈಸೂರಿನಲ್ಲಿ ಜರುಗಿದ ವಿಶ್ವ ಕನ್ನಡ ಸಮ್ಮೇಳನದಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ "ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯ" ಪ್ರಶಸ್ತಿಯನ್ನು ಪಡೆದಿದ್ದರು. ಇವರ ಮಗ ಲಕ್ಷ್ಮಣ ತಂದೆಯ ಈ ಕಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಗುಂಜಳ್ಳಿ ಗಡಿ ಭಾಗದಲ್ಲಿ ಗೊಪ್ಪೇರ ಜನಾಂಗದವರು ಈಗಲೂ ಕೂಡಾ ಈ ತೊಗಲು ಗೊಂಬೆಯಾಟದ ಪ್ರದರ್ಶನದಲ್ಲಿ ತೊಡಗಿದ್ದಾರೆ. *(ವಿಎಂ)*

ಕೆ

ಕೆಂಪು ಪಾವಡ: ಒಂದು ವರ್ಣ ಸಂಕೇತ. ಪ್ರೀತಿ ಪ್ರಾಮಾಣಿಕತೆ, ಸಹಕಾರ ಹಾಗೂ ಸಹಬಾಳ್ವೆಯನ್ನು ಸಾರುವ ಉತ್ತಮತೆಯ ಲಕ್ಷಣ ಧರ್ಮದ ಹಿರಿಮೆ ತೋರುವವರು, ಸಮಾಜಕ್ಕೆ ಮಾರ್ಗದರ್ಶಕರಾಗಿವವರು, ಸಂಸಾರಕ್ಕೆ ವಿಮುಖರಾದವರು ಈ 'ಕೆಂಪು ಪಾವಡ'ಗಳನ್ನು ಧರಿಸುತ್ತಿದ್ದರು. ಆನಂತರದಲ್ಲಿ ಇದು ಜನಾಂಗದ ಸೂಚಕವಾಗಿ 'ಜಂಗಮ'ರು ಮೈಮೇಲೆ ಹೊದ್ದುಕೊಳ್ಳುವ ಶಲ್ಯೆಯಾಯಿತು. ಆನಂತರದಲ್ಲಿ ಈ ಜನಾಂಗಗಳಲ್ಲಿಯೇ ವಿಭಾಗಗಳಾಗಿ ಹಲವು ಪಂಗಡಗಳಾದವು. ಆಗ ಕೆಲವರು 'ಕೆಂಪು ಪಾವುಡ' ಕೆಲವರು 'ಹಸಿರು ಪಾವಡ' ಕೆಲವರು 'ಬಿಳಿ ಪಾವುಡ' ಧರಿಸಲು ಆರಂಭಿಸಿದರು. ಇವರ ಅನುಯಾಯಿಗಳಾದವರು ಸಹ ಇದೇ ದಾರಿಯಲ್ಲಿ ನಡೆದರು.

ಬೀದರ ಜಿಲ್ಲೆಯ 'ಶೀಲವಂತ' ರಲ್ಲಿ ಈಗಲೂ 'ಕೆಂಪು ಪಾವಡ' ದವರು, 'ಹಸಿರು ಪಾವಡ'ದವರೂ ಇದ್ದಾರೆ. ಇವರು ಭಾವಿಗಳಿಂದ ನೀರು ತರುವಾಗ ಕೊಡಗಳ ಮೇಲೆ ಆಯಾ ಬಣ್ಣದ 'ಪಾವಡ'ಗಳನ್ನು ಬಳಸುತ್ತಾರೆ. ಹೊಲಗಳಿಗೆ ಕೆಲಸಕ್ಕೆ ಹೋಗುವಾಗಲೂ ಸಹ ಬುತ್ತಿ ಪಾವುಡ' ಗಳನ್ನು ಆಯಾ ಬಣ್ಣದ ಹಿನ್ನೆಲೆಯಲ್ಲಿಯೇ ಬಳಸುತ್ತಿದ್ದಾರೆ. ಇಷ್ಟೇ ಅಲ್ಲ ಅವರು ನಂಬಿ ನಡೆದುಕೊಳ್ಳುತ್ತಿರುವ ಮಠ–ಮಂದಿರಗಳ ಮೇಲೆಲ್ಲ ಇಂಥ 'ಕೆಂಪು ಬಣ್ಣದ ಪಾವುಡ' ಗಳನ್ನೇ ಧ್ವಜಗಳಾಗಿ ಉಪಯೋಗಿಸುತ್ತಿದ್ದಾರೆ. *(ಎಸ್‌ಎಸ್‌ವೈ)*

ಮಾಲೀಕನ ಅಪರಾಧ. ಈ ವಿಷಯದಲ್ಲಿ ಅವರಿಗೆ ತಾಕೀತು ಕೊಟ್ಟಾಗಲೂ ಮತ್ತೆ ದನಗಳನ್ನು ಬಿಟ್ಟು ಅನ್ಯರ ಪೈರು ನಾಶಮಾಡುತ್ತಿದ್ದರೆ. ಅಂಥ ತುಡುಗಣಿ ದನಗಳನ್ನು ಹಿಡಿದು ತಂದು ಕೊಂಡವಾಡೆಗೆ ಹಾಕುತ್ತಿದ್ದರು. ಅಂಥ ದನಗಳನ್ನು ಬಂಧಿಸಿ ಇಡುವ ಸ್ಥಳವೇ ಕೊಂಡವಾಡೆ. ಒಂದು ರೀತಿಯಿಂದ ಇದು ದನಗಳ ಜೈಲು.

ಕೊಂಡವಾಡೆಯ ಸ್ವರೂಪದಲ್ಲಿ ವೈವಿಧ್ಯತೆ ಇತ್ತು. ಗೌಡ ಗೊತ್ತುಪಡಿಸಿದ ಸ್ಥಳದಲ್ಲಿ ದುಂಡನೆ ಮುಳ್ಳಿನ ಬೇಲಿ ಹಾಕಿ, ಸಂರಕ್ಷಿಸುವ ವ್ಯವಸ್ಥೆಗೆ ಕ್ರಮಕೈಕೊಳ್ಳಲಾಗುತ್ತಿತ್ತು. ಅದರಲ್ಲಿ ಕೂಡಿಹಾಕಿದ ದನಗಳು ಹೊರಬರದಂತೆ, ಅಥವಾ ಅದರ ಒಡೆಯ, ಯಾರಿಗೂ ಗೊತ್ತಾಗದಂತೆ ಬಿಡಿಸಿ ಕೊಂಡು ಹೋಗದಂತೆ ಎಚ್ಚರ ವಹಿಸಲಾಗುತ್ತಿತ್ತು. ಕೆಲವು ಊರುಗಳಲ್ಲಿ ಅದಕ್ಕಾಗಿಯೇ ಕಟ್ಟಿಸಿದ ಕಟ್ಟಡಗಳು ಇದ್ದುವು. ಅವಕ್ಕೆ ಕಬ್ಬಿಣದ ಸಲಾಕೆಗಳ ಪಾರದರ್ಶಕ ಬಾಗಿಲು, ಭದ್ರ ಕೀಲಿ ಹಾಕುವ ವ್ಯವಸ್ಥೆ ಇತ್ತು. ಅದನ್ನು ನೋಡಿಕೊಳ್ಳಲು ದೊಡ್ಡಿದಾರನೊಬ್ಬ ಕೆಲವು ಕಡೆ ಇರುತ್ತಿದ್ದನಂತೆ. ಇಲ್ಲವಾದಲ್ಲಿ ವಾಲೀಕಾರ, ತಳವಾರ ಯಾರಾದರೂ ಗೌಡನ ಆದೇಶದಂತೆ ನೋಡಿಕೊಳ್ಳುತ್ತಿದ್ದರು ಕೊಂಡವಾಡೆಗೆ ಹಾಕಿದ ದನಗಳ ವಿವರ ಬರೆದುಕೊಳ್ಳಲು ಒಂದು ದಪ್ತರ ಇಡುವ ವ್ಯವಸ್ಥೆ ಇತ್ತು. ಅದರ ನಿರ್ವಹಣೆಯನ್ನು ಯಾರೇ ಮಾಡಿದರೂ ಸಂಪೂರ್ಣ ಹೊಣೆಗಾರಿಕೆ ಗೌಡರದೇ ಆಗಿರುತ್ತಿತ್ತು. ದಪ್ತರದ ಕೆಲಸ ಕೆಲವು ಕಡೆ ಕುಲಕರ್ಣಿ ನೋಡಿ–ಕೊಳ್ಳುತ್ತಿದ್ದನಾದರೂ, ಅದಕ್ಕೆಲ್ಲ ಗೌಡರದೇ ಹೆಬ್ಬೆರಳ ಗುರುತು ಅಥವಾ ಸಹಿ ಬೇಕಿರುತ್ತಿತ್ತು. ಯಾಕೆಂದರೆ ಕೊಂಡವಾಡೆಯ ಮೇಲ್ವಿಚಾರಣೆ ಗೌಡರದೇ ಆಗಿತ್ತು. ಯಾರನ್ನು ನೇಮಿಸಿದರೂ ಅವನೇ ನೇಮಿಸುತ್ತಿದ್ದ.

ಕೊಂಡವಾಡೆಯಲ್ಲಿದ್ದ ದನಗಳನ್ನು ಸರಳು ಬಾಗಿಲಿನಿಂದ ನೋಡಿ ಅದರ ಮಾಲೀಕ ಗುರುತಿಸಿಕೊಳ್ಳಬಹುದಿತ್ತು ಇಲ್ಲವೆ ಕೊಂಡವಾಡೆಯಲ್ಲೋ, ಚಾವಡಿಯಲ್ಲೋ ಇಟ್ಟಿರುವ ದಪ್ತರ ನೋಡಿ, ತನ್ನ ದನ ಒಳಗಿರುವುದನ್ನು ಅದರ ಮಾಲೀಕ ಖಚಿತ ಪಡಿಸಿಕೊಳ್ಳುತ್ತಿದ್ದ. ದನವನ್ನು ಹಿಡಿದು ತಂದು ಕೊಂಡವಾಡೆಗೆ ಹಾಕಿದವರ ಹೆಸರು, ಅವರ ದೂರು ಎರಡನ್ನು ದಪ್ತರದಲ್ಲಿ



ಗೋ ಶಾಲಾ – ರಾಯಚೂರು

ನಮೂದಿಸಲಾಗುತ್ತಿತ್ತು. ಕೆಲವು ವೇಳೆ ಮೇಲ್ವಿಚಾರಕ ಮೌಖಿಕವಾಗಿ ವಿಷಯದ ವಿವರಗಳನ್ನು ಸಂಗ್ರಹಿಸಿಟ್ಟುಕೊಂಡಿರುತ್ತಿದ್ದ. ಸಾಮಾನ್ಯ ಪರಿಸ್ಥಿತಿಯಲ್ಲಿ ಮೇಲ್ವಿಚಾರಕ ದನದ ಮಾಲೀಕ ಬಂದಾಗ ತಾನು ಪಡೆದ ಸವಿವರದ ಮಾಹಿತಿಯನ್ನು ಅವನಿಗೆ ನೀಡಿ, ಇನ್ನೊಮ್ಮೆ ದನವನ್ನು ಹೀಗೆ ಬಿಡದಂತೆ ತಾಕೀತು ಮಾಡಿ ನಿಯಮಾನುಸಾರ, ದನ ಅಲ್ಲಿದ್ದ ದಿನಗಳ ಲೆಕ್ಕಹಾಕಿ, ನೀರು ಮತ್ತು ಮೇವಿನ ಕಿಮ್ಮತ್ತು ಪಡೆದು, ಅವನಿಗೆ ರಶೀದಿ ಕೊಟ್ಟು, ಸಹಿಪಡೆದು ದನಗಳನ್ನು ಬಿಡುಗಡೆ ಮಾಡುತ್ತಿದ್ದ.

ದೂರು ದೊಡ್ಡದಾಗಿದ್ದರೆ, ದನಗಳನ್ನು ಹಿಡಿದು ತಂದವ ತನ್ನ ಹೊಲದ ಬೆಳನಾಶದ ಪ್ರತಿ ಹಣವನ್ನು ಕೊಡಬೇಕೆಂದು ಪ್ರತಿಪಾದಿಸಿದ್ದರೆ, ದನದೊಡೆಯನನ್ನು ಹಲದೊಡೆಯನ ಕಡೆಗೆ ಕಳಿಸುತ್ತಿದ್ದ. ಅವನಿಗೆ ಹಣಕೊಟ್ಟು, ನ್ಯಾಯ ಬಗೆಹರಿಸಿಕೊಂಡು ಬಂದಾಗ ಮಾತ್ರ, ಕೊಂಡವಾಡೆಯ ದಿನಗಳ ಖರ್ಚು ಪಡೆದು ಅವನ ದನಗಳನ್ನು ಅವನಿಗೆ ಒಪ್ಪಿಸುತ್ತಿದ್ದ. ಒಂದು ವೇಳೆ ಅವರೀರ್ವರಲ್ಲಿ ರಾಜೀ ಏರ್ಪಡದಿದ್ದರೆ. ಆ ತಕರಾರನ್ನು ಗೌಡರ ಕಡೆಗೇ ಒಯ್ಯಲಾಗುತ್ತಿತ್ತು. ಗೌಡರ ತೀರ್ಮಾನದಂತೆ ಈರ್ವರೂ ನಡೆದುಕೊಳ್ಳಬೇಕಾಗುತ್ತಿತ್ತು. ಕೊಂಡವಾಡೆ ಸೇರಿದ ದನವನ್ನು ಏಳುದಿನಗಳವರೆಗೆ ಅದರ ಮಾಲೀಕ ಬಿಡಿಸಿಕೊಂಡು ಹೋಗದಿದ್ದರೆ, ಊರೆಲ್ಲ ಡಂಗುರ ಸಾರಿ, ಆ ದನಗಳನ್ನು ಲಿಲಾವು ಮಾಡಲಾಗುತ್ತಿತ್ತು. ಒಂದು ವೇಳೆ ಬೆಳೆಹಾನಿ ದೊಡ್ಡದಾಗಿದ್ದರೆ, ದನಗಳ ಒಡೆಯ ಅದನ್ನು ಭರಿಸಲು ಸಿದ್ಧನಾಗದಿದ್ದರೆ, ದನಗಳನ್ನು ಲಿಲಾವು ಮಾಡಿ ಆ ಹಣವನ್ನು ಹೊಲದೊಡೆಯನಿಗೆ ಕೊಡುವ ಅಧಿಕಾರ ಗೌಡರಿಗಿತ್ತು.

ದನಕರುಗಳು ಪರವೂರಿನವಾಗಿದ್ದರೆ, ಅವುಗಳ ಮಾಲೀಕ ತಾನೇ ಎಂಬುದನ್ನು ಸಾಬೀತು ಪಡಿಸಲು ತನ್ನ ಊರಿನ ಗೌಡ–ರಿಂದ ದೃಢೀಕರಣಪತ್ರ ತರಬೇಕಾಗಿತ್ತಷ್ಟೇ ಅಲ್ಲದೆ ಆ ದನಗಳ ಚೀಟಿಯನ್ನೂ ಸಾದರ ಪಡಿಸಬೇಕಾಗುತ್ತಿತ್ತು. ಆಗ ಹಳ್ಳಿಗಳಲ್ಲಿ ಪ್ರತಿ ದನದ ಕೊಂಬು, ಬಣ್ಣ ವಯಸ್ಸು ಮೊದಲಾದ ವೈಶಿಷ್ಟ್ಯಗಳನ್ನೊಳಗೊಂಡ ಚೀಟಿಗಳನ್ನು ಸಿದ್ಧಪಡಿಸಿಡುತ್ತಿದ್ದರು. ದನಗಳನ್ನು ಕೊಳ್ಳುವಾಗ ಮಾರುವಾಗ ಈ ಚೀಟಿಗಳು, ಅಧಿಕೃತ ಒಡೆತನದ ಪತ್ರಗಳಾಗಿ ಪರಿಗಣಿಸಲ್ಪಡುತ್ತಿದ್ದುವು.

ಒಂದು ಮನೆತನದ ಶ್ರೀಮಂತಿಕೆಯನ್ನು ಆ ಮನೆಯ ದಾವಣಿಯಲ್ಲಿ ಕಟ್ಟಿದ ಎತ್ತು, ಆಕಳು ಮೊದಲಾದ ದನಗಳ ಸಂಖ್ಯೆಯಿಂದ ಅಳೆಯಲಾಗುತ್ತಿತ್ತು. ಅವರ ಮನೆತನದ ಭೂಮಿಸೀಮೆಗಳನ್ನು ಎಕರೆ ಗುಂಟೆಗಳ ಲೆಕ್ಕದಲ್ಲಿ ಹೇಳದೆ ಅವರದು ಎಂಟೆತ್ತಿನ ಕಮತ, ಹತ್ತೆತ್ತಿನ ಒಕ್ಕಲುತನ ಎಂದು ಪ್ರತಿಷ್ಠೆಯ ಮಾತಾಗಿ ಹೇಳಲಾಗುತ್ತಿತ್ತು. ಹದಿನಾರು, ಇಪ್ಪತ್ತು ಎತ್ತುಗಳ ಒಕ್ಕಲುತನದ ಮನೆತನಗಳೂ ಇದ್ದವು. ಒಬ್ಬರ ಮನೆಯಲ್ಲಿ ಎಷ್ಟು ದನಗಳಿದ್ದವೆಂದರೆ "ಕಸದಲ್ಲಿ ಕರು ಮರೆತು ಹೋಗಿತ್ತಂತೆ" ಉಳಮೆಗೆ ಎತ್ತುಗಳು, ಹೈನಕ್ಕೆ ಎಮ್ಮೆ ಆಕಳುಗಳು, ಕುಳಿತು ತಿರುಗಾಡಲು ಕುದುರೆ, ಹೇರು, ಹೊರಲು ಕೋಣ, ಲಗಳಿ ಹಾಕಿ ನೀರು ತರಲು ಕಂಟ್ಲೆತ್ತು. ಹೊಲ ಮನೆ ಕಾಯಲು ನಾಯಿ, ಬೆಕ್ಕು ಹೀಗೆ ಪ್ರಾಣಿ ಪ್ರಪಂಚವೇ ಅವರಲ್ಲಿರುತ್ತಿತ್ತು. ಈ



ಕೊಂಡ ಹಾಯುವುದು

ಗ್ರಾಮೀಣ ಪ್ರದೇಶದಲ್ಲಿ ಕೊಂಡ ಹಾಯುವ ಸಂಪ್ರದಾಯ ನಡೆದಾಗ ಕೊಡ್ಡ ಪೂಜೆ ಮಾಡುವರು. ಈ ಕಾರ್ಯವು ಕೊಂಡ ಹಾಯುವ ಐದು ದಿವಸಗಳು ಮುಂಚಿತವಾಗಿ ಕೊಡ್ಡಗಳ ಪೂಜೆ ಮಾಡುವರು. ಇದಕ್ಕೆ ಕೊಂಡದ ತೆಗ್ಗು ತೋಡುವುದಕ್ಕಿಂತ ಮೊದಲು ಗಂಗಾಸ್ನಾನ ಮಾಡಿ, 40 ಅಡಿ ಉದ್ದ ನಾಲ್ಕೈದು ಅಡಿ ಅಗಲವಿರುವ ತೆಗ್ಗನ್ನು ತೋಡಿ, ಅದರೊಳಗೆ ದೊಡ್ಡ ದೊಡ್ಡ ಕೊಡ್ಡಗಳನ್ನು (ಮರದ ಕೊಂಬುಗಳನ್ನು ಹಾಕಿ, ಪೂಜೆಯ ವಿಧಿ-ಕ್ರಿಯೆಗಳನ್ನು ಪೂರೈಸಿ, ಮರದ ತುಂಡುಗಳ ಮೇಲೆ ತುಪ್ಪ ಸುರುವಿ ಬೆಂಕಿ ಮಾಡುವರು. ಆ ಬೆಂಕಿ ಐದು ದಿವಸಗಳವರೆಗೆ ಹೊತ್ತಿ ಹೊಗೆಯಾಗಿ ಬೆಂಕಿ ಆಗುವುದು. ಐದನೆಯ ದಿನದಂದು, ಯಾವ ದೇವರ ಹೆಸರಿನಲ್ಲಿ ಕೊಂಡ ಹಾಯುವುದು ಇದೆಯೋ, ಆಯಾ ದೇವರ ಬೆಳ್ಳಿ ಅಥವಾ ಕಂಚಿನ ಮೂರ್ತಿಯನ್ನು ಗಂಗಾಸ್ನಾನ ಮಾಡಿಕೊಂಡು ಊರ ಪ್ರವೇಶ ಮಾಡುವರು. ಈ ಸಂದರ್ಭದಲ್ಲಿ ಊರಿನ ಭಕ್ತರ ಮನೆ ಮನೆಗಳ ಬಾಗಿಲಿಗೆ ಹೋಗಿ ಭಕ್ತರಿಂದ ಕಾಯಿ-ಕರಪುರ ಸೇವೆ ಪಡೆದುಕೊಂಡು 'ಕೊಂಡ ಹಾಯುವರು', ಗ್ರಾಮೀಣ ಜನತೆ ಈ ಸಂಪ್ರದಾಯಕ್ಕೆ 'ಅಗ್ಗಿ ಹಾಯುವುದು' (ಅಗ್ನಿ ಪ್ರವೇಶ) ಎಂದು ಕರೆಯುವ ವಾಡಿಕೆ ಈಗಲೂ ಇದೆ. ಇಂಥ ಸಂಪ್ರದಾಯ ವೀರಭದ್ರ, ಹುಚ್ಚೇಶ್ವರ, ಚಂದ್ರಗಿರಿ (ಚಂದ್ರಾತಾಯಿ) ಮುಂತಾದ ದೇವರುಗಳ ಹೆಸರಲ್ಲಿ ಈಗಲೂ ಚಾಲಿತಿಯಲ್ಲಿದೆ. ಕೊಂಡ ಹಾಯುವ ಮೊದಲು ಅಥವಾ ಆನಂತರ ಅಂಗಾಲನ್ನು ಪರೀಕ್ಷಿಸುವುದು.

ಕೊಂಡ ಹಾಯುವ ಸಂಪ್ರದಾಯ ಹಿಂದಿನಿಂದಲೂ ಆಶ್ಚರ್ಯವನ್ನುಂಟು ಮಾಡುತ್ತದೆ. ಕೊಂಡ ಹಾಯುವುದನ್ನು ವೈಜ್ಞಾನಿಕವಾಗಿ ಪರೀಕ್ಷಿಸಲು, ಪ್ರಯೋಗಕ್ಕೆ ಒಳಪಡಿಸಲು ಸಾಧ್ಯವಾಗದ್ದರಿಂದ ಬಹಳ ಕಾಲದವರೆಗೆ ಇದೊಂದು ಪವಾಡವಾಗಿಯೇ ಉಳಿದುಕೊಂಡು ಬಂದಿದೆ. ಇತ್ತೀಚೆಗೆ ಕೊಂಡ ಹಾಯುವ ಸಂಪ್ರದಾಯದ ಬಗೆಗೆ ನಡೆದಿರುವ ವೈಜ್ಞಾನಿಕ ಪ್ರಯೋಗಗಳನ್ನು ಗಮನಿಸಿದಾಗ, ಇದೊಂದು ಪವಾಡವೇನೂ ಅಲ್ಲ. ದೃಢವಾದ ನಂಬಿಕೆ, ಮಾನಸಿಕ ಸ್ಥೈರ್ಯ ಮೊದಲಾದ ಕೆಲವು ಗುಣಗಳು ಈ ಸಾಹಸಕ್ಕೆ ಅಗತ್ಯವೆಂಬ ಅಂಶ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಸಂಪ್ರದಾಯ ಎಂದಿನಿಂದ ಬಂದಿತೆಂಬುವುದು ಖಚಿತವಾಗಿ ಹೇಳಲು ಸಾಧ್ಯವಾಗದು. *(ಎಚ್‌ಡಿ)*

ಕೊಂಡವಾಡೆ: ತುಡುಗುನಿ ದನಗಳನ್ನು ಬಂಧಿಸಿಡುವ ಸ್ಥಳ. 'ಕೊಂಡವಾಡೆ' 'ಕುರಿದೊಡ್ಡಿ' ಪದಗಳು ನುಡಿಗಟ್ಟುಗಳಾಗಿಯೂ ಬಳಕೆಯಲ್ಲಿದೆ. ಪ್ರಾಚೀನ ಕರ್ನಾಟಕದಲ್ಲಿ ಅದರಂತೆ ಸ್ವಾತಂತ್ರ್ಯ ಪೂರ್ವದ ಆಂಗ್ಲರ ಆಳ್ವಿಕೆಯಲ್ಲಿ ಗ್ರಾಮಗಳ ಆಡಳಿತದ ಒಂದು ಅಂಗವಾಗಿ ಈ ವ್ಯವಸ್ಥೆ ರೂಢಿಯಲ್ಲಿತ್ತು.

ಗೌಡ ಗ್ರಾಮದ ವ್ಯವಸ್ಥೆ ಕೊಲೆ, ಸುಲಿಗೆ, ನಡೆದರೆ ಆಸ್ತಿಪಾಸ್ತಿ, ಪೈರು ಹಾನಿಯಾದರೆ ಅದಕ್ಕೆ ಕಾರಣರಾದವರ ವಿರುದ್ಧ ಕ್ರಮಕೈಕೊಂಡು ಮೇಲಾಧಿಕಾರಗಳಿಗೆ ವರದಿ ಮಾಡುವ ಅಧಿಕಾರ ಹೊಂದಿದ್ದರು. ಅಂಥ ಅಪರಾಧಿಗಳನ್ನು ಮೇಲಾಧಿಕಾರಿಗಳಿಗೆ ಒಪ್ಪಿಸುವವರೆಗೆ ತಮ್ಮ ಹದ್ದುಬದ್ದಿನಲ್ಲಿ; ಇಟ್ಟುಕೊಂಡಿರುತ್ತಿದ್ದರು. ಚಾವಡಿಯಲ್ಲಿ ದಳವಾಯಿ ವಾಲೀಕಾರರ ಕಾವಲಿನಲ್ಲಿ ಅವರನ್ನು ಇರಿಸಿಕೊಳ್ಳಲಾಗುತ್ತಿತ್ತು. ಕೆಲವು ಚಾವಡಿಗಳಲ್ಲಿ ಸರಳುಗಳಿಂದ ನಿರ್ಮಿಸಿದ ಒಂದು ಚಿಕ್ಕ ಬಂದೀಖಾನೆಯೇ ಇರುತ್ತಿತ್ತು.

ಕೆಲವು ಗ್ರಾಮಗಳಲ್ಲಿ ಇಬ್ಬರು ಗೌಡರು ಇರುತ್ತಿದ್ದರು. ಮಾಲೀಗೌಡ ಮತ್ತು ಪೋಲಿಸಗೌಡ. ಇನ್ನು ಕೆಲವು ಕಡೆ ಒಬ್ಬನೇ ಎರಡೂ ಕೆಲಸ ನೋಡಿಕೊಳ್ಳುತ್ತಿದ್ದರು. ಮಾಲೀಗೌಡ ಕಂದಾಯ ವಸೂಲಿ ಮಾಡಿ ಮೇಲೆ ಕಳಿಸಿದರೆ, ಅವರ ಕೆಲಸ ಮುಗಿಯಿತು. ಪೋಲೀಸಗೌಡ ಕಾನೂನು ವ್ಯವಸ್ಥೆ ನೋಡಿಕೊಳ್ಳಬೇಕಾಗುತ್ತಿತ್ತು. ಅಪರಾಧಿಗಳ ಬಂಧನ, ತತ್ಪೂರ್ವಕ ವಿಚಾರಣೆ ಪ್ರಸಂಗ ಬಂದರೆ, ನ್ಯಾಯ ಬಗೆಹರಿಸುವ ಕೆಲಸ ಪೋಲೀಸಗೌಡರದು ಇಂದೂ ಉತ್ತರ ಹಾಗೂ ಹೈದ್ರಾಬಾದ ಕರ್ನಾಟಕದಲ್ಲಿ ಮಾಲೀಪಾಟೀಲ, ಪೋಲೀಸಪಾಟೀಲ ಎಂಬ ಅಡ್ಡ ಹೆಸರುಗಳು ರೂಢಿಯಲ್ಲಿವೆ.

ಊರಿನ ವ್ಯವಸ್ಥೆ ನೋಡುವಂತೆ ತೋಟಪಟ್ಟಿ ಹೊಲಗದ್ದೆಗಳಲ್ಲಿ ನಡೆಯುವ ಅಪರಾಧಗಳನ್ನು ನೋಡಿಕೊಳ್ಳುವ ಹೊಣೆಗಾರಿಕೆ ಪೋಲೀಸ ಪಾಟೀಲರದಾಗಿತ್ತು. ಹಳ್ಳಿಗಳಲ್ಲಿ ದನಗಳನ್ನು ಸೇರೀ ಬಿಡುವುದು ರೂಢಿ. ದನಗಳನ್ನು ಕಾಯುವವರಿಲ್ಲದೆ ಅಡವಿಗೆ ಬಿಟ್ಟು ಬಿಡುವುದಕ್ಕೆ 'ಸೇರೀ' ಬಿಡುವುದು ಎನ್ನುತ್ತಾರೆ. ಅವು ಅಲ್ಲಲ್ಲಿ ಮೇದು ಮನೆಗೆ ಬರುವುದು ರೂಢಿ. ಆದರೆ ಕೆಲವು ದನಗಳು ಹಸುರು ಕಂಡು ತೋಟಪಟ್ಟಿ, ಹೊಲ-ಗದ್ದೆ ಹೊಕ್ಕು ಬೆಳೆತಿಂದು ತುಳಿದು ಹಾಳುಮಾಡಿ ಬರುತ್ತಿದ್ದುವು. ಹೀಗೆ ಸೇರೀ ಬಿಡುವುದು ದನಗಳ

ಪ್ರಸಿದ್ಧಿ ಪಡೆದಿತ್ತು. ಊರ ನಡುವೆ ಬಸವೇಶ್ವರ ದೇವಾಲಯವಿದ್ದು, ಗಾತ್ರದಲ್ಲಿ ಬೃಹತ್ತಾಗಿದ್ದು, ಭವ್ಯವಾಗಿದೆ. ಇಲ್ಲಿನ ರಾಮೇಶ್ವರ ದೇವಾಲಯ ಸಮುಚ್ಚಯ ಭೀಮಾ ತೀರದ ಮೇಲೆ ಪೂರ್ವಾಭಿಮುಖವಾಗಿ ನೆಲೆಯಾಗಿದ್ದು ಇದರಲ್ಲಿ ಬೇರೆ ಬೇರೆ ಹತ್ತು ದೇವಾಲಯಗಳಿವೆ. ಇಲ್ಲಿ 12ನೆಯ ಶತಮಾನಕ್ಕೆ ಸೇರಿದ ಜೈನ ಬಸದಿ ಇದೆ. ಊರಲ್ಲಿ ಮಲ್ಲಿಕಾರ್ಜುನ, ಕೊಟ್ರ ಬಸವಣ್ಣ, ಶರಣಬಸವೇಶ್ವರ, ಹನುಮಂತ, ದ್ಯಾಮವ್ವ, ದುರ್ಗವ್ವ ಮತ್ತು ಪೋಚಮ್ಮ ಮೊದಲಾದ ಗುಡಿಗಳಿದ್ದು, ಹಲವು ಮಸೀದಿ ಹಾಗೂ ದರ್ಗಾಗಳು ಕೂಡ ಇವೆ. *(ಪಿಕೆಕೆ)*

ಕೊಳ್ಳಿದೆವ್ವ: ಜನಪದರು ಬಳಸುವ ಈ ಪದವು ವೈಶಿಷ್ಟ ಪೂರ್ಣವಾಗಿದೆ. ಈ ಪದವು ವ್ಯಂಗ್ಯ, ಹಾಸ್ಯ, ವಿಡಂಬನೆಯನ್ನು ಪ್ರತಿನಿಧಿಸುತ್ತದೆ. ಜನಪದರು ಇಂತಹ ಪದಗಳನ್ನು ತಮಗರಿವಿಲ್ಲದೆ ಪ್ರಯೋಗಿಸುತ್ತಾರೆ. ಆದರೆ ಅದಕ್ಕೆ ಒಂದು ವಿಶೇಷವಾದ ಅರ್ಥವು ಇರುವುದುಂಟು. ಎಂಭತ್ತು ತೊಂಬತ್ತರ ದಶಕದಲ್ಲಿ ಈ ಪದವು ಪ್ರಚಲಿತವಿತ್ತು. ಚಿತ್ತಾಪೂರ ಹಾಗೂ ಸೇಡಂ ತಾಲ್ಲೂಕಿನ ಹಳ್ಳಿಗಳಲ್ಲಿ ಗ್ರಾಮೀಣ ಜನಪದರು ಈ ಪದವನ್ನು ಪ್ರಯೋಗಿಸುತ್ತಿದ್ದರು. ಎಂಭತ್ತು ತೊಂಬತ್ತರ ದಶಕದಲ್ಲಿ ದೆವ್ವಗಳು ಎದ್ದು ಕುಣಿದಾಡುತ್ತಿವೆ ಎಂದು ಯಾರೋ ಒಬ್ಬರು ಹೇಳಿದ ಕೂಡಲೇ ಅದು ಪ್ರತಿಯೊಂದು ಹಳ್ಳಿಗೆ ಪಸರಿಸಿತು. ಆಗಿನ ಸಂದರ್ಭದಲ್ಲಿ ಹಳ್ಳಿಯ ಜನರು ಭಯದ ವಾತಾವರಣದಲ್ಲಿ ಇದ್ದುದ್ದನ್ನು ಕಾಣುತ್ತೇವೆ. ಆ ಪದವನ್ನು ಹೆದರಿಸಲು ಬಳಸುತ್ತಿದ್ದರು. ಅದು ಹಾಗೆ ಮುಂದುವರಿಯುತ್ತ ಹೆಣ್ಣು ಅಥವಾ ಗಂಡು ಯಾರನ್ನೇ ಆಗಲಿ ಅವರ ಚಟುವಟಿಕೆಗಳನ್ನು ಅನುಸರಿಸಿ ಈ ಪದ ತುಂಬ ದಿವಸ ಪ್ರಚಲಿತವಿತ್ತು. ಒಂದು ಕೆಲಸವನ್ನು ಹೇಳಿದಾಗ ಆ ಕೆಲಸವನ್ನು ಮಾಡದ ವ್ಯಕ್ತಿಗೆ ನಿನಗೆ 'ಕೊಳ್ಳಿದೆವ್ವ' ಹತ್ತಿದೇನು ಎಂದು ಅವನನ್ನು ಹೀಯಾಳಿಸುತ್ತಿದ್ದರು. ಅಂದರೆ ಒಬ್ಬ ವ್ಯಕ್ತಿ ಯಾವುದೇ ಕೆಲಸವನ್ನು ಮಾಡದೆ, ಇನ್ನೊಬ್ಬರ ಮಾತನ್ನು ಕೇಳದೆ, ತನ್ನ ಪಾಡಿಗೆ ತಾನು ಇದ್ದಾಗ, ಮೌನವಾಗಿದ್ದು, ತನ್ನೊಳಗೆ ತಾನು ಇದ್ದು ಬೇರೆಯವರ ಪರಿವೆಯೇ ಇಲ್ಲದಿದ್ದ ಸಂದರ್ಭದಲ್ಲಿ ಜನಪದ ಗ್ರಾಮೀಣರು ಈ ಪದವನ್ನು ಬಳಸುತ್ತಿದ್ದರು. ಇದು ಪ್ರಾದೇಶಿಕ ಪದವಾಗಿದ್ದು, ತನ್ನದೇ ಆದ ವೈಶಿಷ್ಟ್ಯವನ್ನು ಹಾಗೂ ಹಲವಾರು ಅರ್ಥಗಳನ್ನು ಅದು ಗರ್ಭೀಕರಿಸಿಕೊಂಡಿದೆ. *(ಎಸ್.ಯು.ಕೆ.)*

ಕೋ

ಕೋಟೆ ಕೊತ್ತಲಗಳು (ಗುಲ್ಬರ್ಗಾ ಜಿಲ್ಲೆ): ಈ ಜಿಲ್ಲೆಯಲ್ಲಿ ಇತಿಹಾಸದುದ್ದಕ್ಕೂ ಶಿಲಾಶಾಸನಗಳು, ಗುಡಿಗುಂಡಾರಗಳು, ಕೆರೆ ಬಾವಿ ಪುಷ್ಕರಣಿಗಳು, ಬೌದ್ಧ ಸ್ತೂಪಗಳು, ಬ್ರಾಹ್ಮಣ ಅಗ್ರಹಾರಗಳು, ಮಸೀದಿಗಳು, ಗುಂಬಝುಗಳು, ದರ್ಗಾಗಳು, ರಕ್ಷಣಾ ಗೋಡೆಗಳು, ಕೋಟೆಗಳು ಕೊತ್ತಲಗಳು ಇತ್ಯಾದಿ ಸಾಕಷ್ಟು ಪರಂಪರೆಯ (Heritage) ನಿದರ್ಶನಗಳಾಗಿವೆ.

ಸನ್ನತಿ ಕೋಟೆ: ಚಿತ್ತಾಪೂರ ತಾಲ್ಲೂಕಿನಲ್ಲಿ, ಅರ್ಧಚಂದ್ರಾಕಾರವಾಗಿ ಹರಿವ ತಿರುಗುವ ಭೀಮಾ ನದಿಯ ದಡದಲ್ಲಿರುವ ಈ ಕೋಟೆ ಕರ್ನಾಟಕದ ನೆಲದಲ್ಲಿ ಅತ್ಯಂತ ಪ್ರಾಚೀನ ಕೋಟೆ. ಬಾದಾಮಿ ಚಾಲುಕ್ಯರ 7ನೆಯ ಶತಮಾನದ ಈ ಕೋಟೆ ಎರಡು ಅರ್ಧಚಂದ್ರಾಕೃತಿಯ ವಿನ್ಯಾಸಗಳಲ್ಲಿ, ಒಂದರೊಳಗೊಂದರಂತೆ, ನದಿಯ ದಡದ ಗುಂಟ, ಇಟ್ಟಿಗೆ (ಶಾತವಾಹನ ಕಾಲೀನ Standard bricks 50x30x10 ಸೆ.ಮೀ)ಗಳ ಗೋಡೆಯ ಎರಡೂ ಬದಿಗೆ ಸೇರಿಸಿದ ಮಣ್ಣಿನ ದಿಬ್ಬಗಳಿಂದ ನಿರ್ಮಿಸಲಾಗಿದೆ. ಈ ಕೋಟೆ ಎರಡು ನೆಲಮಟ್ಟಗಳಲ್ಲಿ ಇದ್ದು (ರಣಮಂಡ ಮೇಲ್ ಕೋಟೆ (Citadeel) ಹಾಗೂ ಕೆಳಕೋಟೆ (lower fort) ಹೀಗೆ ವಿಭಾಗಿಸಲ್ಪಟ್ಟು ಅರಸ ರಿಗೆ ಹಾಗೂ ಜನಸಾ ಮಾನ್ಯರಿಗೆ ಕ್ರಮ ವಾಗಿ ಸ್ಥಾನನೀಡಿ, ವಾಸಿಸಲು ಪ್ರಭೇದ ಪಾತಳಿಗಳನ್ನು ನೀಡಿತ್ತು. ಹೊರಗಡೆಯ ಗೋಡೆ ಸುಮಾರು 2ಕಿ.ಮೀ.,ಒಳ ಗೋಡೆ ಸುಮಾರು 1ಕಿ.ಮೀ. ಉದ್ದ ಅಳತೆಗಳಲ್ಲಿ ಹರಡಿವೆ. ಪೂರ್ವ ಬದಿಯಿಂದ ಒಂದರ ನೇರ ಮತ್ತೊಂದರಂತೆ ಪ್ರವೇಶದ್ವಾರಗಳು ಈ ಎರಡೂ ಕೋಟೆ ಗೋಡೆಗಳನ್ನು ಭೇದಿ ಸಿವೆ. ಇದೊಂದು ಸರಳ ಸಾದಾ ಗೋಡೆ ಗಳಿಗಿರುವ ಕೋಟೆ. ಬೌದ್ಧ ನೆಲೆ ಆಗಿದ್ದ–ರಿಂದ ಇದು ಸಾರ್ವಜನೀಯ ಉಪಯೋಗಿ ಅಷ್ಟೇನೂ ರಕ್ಷಣಾ ಚಾಕಚಕ್ಯತೆಗಳು ಇಲ್ಲದ ಕೋಟೆ; 'ಶಾಂತಿ ಕಾಲದ ಶಾಂತಿ ಕೋಟೆ' ಎಂದು ಕರೆಯಬಹುದು.

ಮಳಖೇಡ (ಮಾನ್ಯಖೇಡ) ಕೋಟೆ: ಸೇಡಂ ತಾಲ್ಲೂಕಿನ ಕಾಗಿಣ ನದಿ ದಂಡೆಯ ಮೇಲೆ, 8ನೆಯ ಶತಮಾನದಿಂದ 10ನೆಯ ಶತಮಾನದವರೆಗೆ ಆಳಿದ ರಾಷ್ಟ್ರಕೂಟರ ವಿಶಾಲ ರಾಜ್ಯದ ರಾಜಧಾನಿ ಮಳಖೇಡ. 1ನೆಯ ಕೃಷ್ಣ, ಧ್ರುವ, 3ನೆಯ ಗೋವಿಂದ, ನೃಪತುಂಗ, 3ನೆಯ ಕೃಷ್ಣ ಮುಂತಾದ ಪರಾಕ್ರಮಿ ರಾಜರು ರಾಷ್ಟ್ರಕೂಟ ರಾಜ್ಯವನ್ನು ಉತ್ತರದ ಕನೋಜದ ಹಾಗೂ ಬಿಹಾರದ ಮಿಥಿಲೆಯವರೆಗೂ ಹಬ್ಬಿಸಿದ ಮಹಾನ್ ಯೋಧರು. ಎಲ್ಲೋರಾದ ಕೈಲಾಸನಾಥ ದೇವಾಲಯವನ್ನೂ, ಎಲಿಫಂಟಾದ ಗುಹಾಂತರ ದೇವಾಲಯಗಳನ್ನು ಕೆತ್ತಿದ ಶ್ರೇಯ ಇವರದು. ವಾಸ್ತುಕಲೆಯ ಉತ್ತಮ ನಿದರ್ಶನಗಳು.

ಮಾಳವದ ಪರಮಾರ ಎರಡನೆಯ ಸೀಯಕನು ಕ್ರಿ.ಶ. 972ರಲ್ಲಿ ಚೋಳ ರಾಜೇಂದ್ರನು ಕ್ರಿ.ಶ. 1019ರಲ್ಲಿ, ಹಸನಗಂಗೂ ಬಹಮನಿಯಲ್ಲಿ 14ನೆಯ ಶತಕದಲ್ಲಿ, ಔರಂಗಜೇಬನು 17ನೆಯ ಶತಕದಲ್ಲಿ ದಾಳಿ ಮಾಡಿ ಸೂರೆ ಗೊಳಿಸಿದರು. ಔರಂಗಜೇಬನು ಬೀದರನ್ನು ವಶಪಡಿಸಿಕೊಂಡಾಗ, ಮಳಖೇಡವನ್ನು ಜಾನ್ ನಿಸ್ಸಾರ್ ಬೇಗ್‌ನಿಗೆ ಜಹಾಗೀರನ್ನಾಗಿ ಕೊಟ್ಟನು. ಈ ಜಹಗೀರದಾರನು ಕಾಗಿನಾ ನದಿ ಹಾಗೂ ದಕ್ಷಿಣಕ್ಕೆ ಹರಿವ ಹಳ್ಳದ ಸಂಗಮ ತಾಣದಲ್ಲಿ ಹೊಸದಾಗಿ ಕೋಟೆ ಕಟ್ಟಿಸಿ, 'ಮಝುಪರ್‌ಕಿಲ್ಲಾ' ಎಂದು ಹೆಸರಿಟ್ಟ, ಕಾಲಕಾಲಕ್ಕೆ ಆಕ್ರಮ–ಣಗೊಂಡ ಪ್ರಾಚೀನ ಮಳಖೇಡ ಕೋಟೆಯು ಮುಸ್ಲಿಮರ ಕಾಲಕ್ಕೆ ಪೂರ್ತಿ ಮಾರ್ಪಾಟಾಗಿ, ಇಸ್ಲಾಂ ವಾಸ್ತುಶಿಲ್ಪ ಹೊತ್ತ

ದನಗಳನ್ನು ದ್ರವ್ಯ ಆಸ್ತಿ ಎಂದು ಪರಿಗಣಿಸಲಾಗುತ್ತಿತ್ತು.

ಎತ್ತುಗಳನ್ನು ಮಾತ್ರ ಕಟ್ಟಿ ಮೇಯಿಸುವುದೂ ರೂಢಿ. ಕುದುರೆಯನ್ನೂ ಪ್ರತಿಷ್ಠೆಯ ಸಂಕೇತವಾಗಿ ಸಾಕಲಾಗುತ್ತಿತ್ತು. ಅವುಗಳನ್ನು ಕಡಲೆ ಮೊದಲಾದ ಕಾಳು ಹಾಕಿ ಸಲುಹುತ್ತಿದ್ದರು. ಉಳಿದ ಆಕಳು, ಕರು, ಮಣಕ ಮೊದಲಾದವುಗಳನ್ನು ಕಾಗರುಗಳೆಂದು ಕರೆಯುತ್ತಿದ್ದರು. ಇವುಗಳನ್ನು ಮೇಯಿಸಲು ಹುಲ್ಲು ಗಾವಲುಗಳಿರುತ್ತಿದ್ದವು. ಅವುಗಳನ್ನು 'ಗೋಮಾಳ' 'ಗೈರಾಣಿ ಎಂದು ಹೇಳಲಗುತ್ತಿತ್ತು. ಈ ಕಾಗರುಗಳನ್ನು ಕಾಯ್ದುಕೊಂಡು ಬರಲು 'ದನಗಾಯಿ' ಗಳಿರುತ್ತಿದ್ದರು. ಈ ದನಗಾಯಿಗಳ ನಿರ್ಲಕ್ಷದಿಂದಾಗಿ 'ತುಡುಗುಣಿ' ದನಗಳು ತಪ್ಪಿಸಿಕೊಂಡು, ಪಶುವೇನು ಬಲ್ಲದು ಹಸುರೆಂದೆಳಸಿ, ಅನ್ಯರ ಹೊಲಗದ್ದೆಗಳ ಪೈರನ್ನು ತಿಂದು, ತುಳಿದು ಹಾಳುಮಾಡುತ್ತಿದ್ದವು. ಅಂಥ ದನಗಳನ್ನು ಹಿಡಿದು ತಂದು ಕೊಂಡವಾಡೆಗೆ ಹಾಕುತ್ತಿದ್ದರು. ಅಲ್ಲದೆ ಕೆಲವು ಜನ, ವೈರ ಕಾರಣವಾಗಿ ರಾತ್ರಿ ತಮ್ಮ ದನಕರುಗಳನ್ನು ಅನ್ಯರ ಹೊಲದಲ್ಲಿ ಬಿಟ್ಟು, ಬೆಳೆ ಹಾಳುಮಾಡುವ ಉದ್ದೇಶವನ್ನೂ ಹೊಂದಿರುತ್ತಿದ್ದರು. ಇಂಥ ಪ್ರಸಂಗದಲ್ಲಿಯೂ ಗೌಡರೇ ನ್ಯಾಯ ತೀರಿಸಬೇಕಿತ್ತು. ಕೆಲವು ಸೇರಿ ದನಗಳು ಹೊಲದ ಮಾಲೀಕನ ಕೈಗೆ ಸಿಗದೆ, ಹಿಡಿಯಬಂದವರನ್ನು ಇರಿದು ಅಂಜಿಸಿ ಓಡಿಬರುತ್ತಿದ್ದುವು. ಇಂಥ ಪ್ರಕರಣಗಳೂ, ಕೊಂಡವಾಡೆಯ ಕಾನೂನು ವ್ಯಾಪ್ತಿಗೇ ಬರುತ್ತಿದ್ದುವು.

ಹೀಗೆ ಆಂಗ್ಲರ ಆಳ್ವಿಕೆಯಲ್ಲಿ ಕುಗ್ರಾಮದಿಂದಾದಿಯಾಗಿ ಪಟ್ಟಣಗಳವರೆಗೆ, ಕಾನೂನು ಬದ್ಧ ಕೊಂಡವಾಡೆಯ ವ್ಯವಸ್ಥೆ ಇತ್ತು. ಈ ವ್ಯವಸ್ಥೆಯಿಂದ ಸಾಮಾಜಿಕ ಮನಸ್ತಾಪಗಳು ಕಡಿಮೆಯಾಗಿ ಪರಸ್ಪರರಲ್ಲಿ ಸಂಬಂಧಗಳು ಕೆಡದಂತೆ ನೋಡಿ-ಕೊಳ್ಳಲು ಸಾಧ್ಯವಾಗಿತ್ತು. ಊರಿನ ಬೆಳೆಯ ಹಾನಿಯನ್ನು ನಿಯಂತ್ರಿಸಲಾಗುತ್ತಿತ್ತು. ಆದರೆ ಇಂದು ಕೊಂಡವಾಡೆಗಳಿಲ್ಲವಾಗಿ ಗ್ರಾಮದಿಂದ ಪಟ್ಟಣದವರೆಗೆ ದನಗಳನ್ನು ಸೇರೀ ಬಿಡುವ ಸಂಪ್ರದಾಯ ಉಲ್ಬಣಗೊಂಡಿದೆ. *(ಎಂಜಿಬಿ)*

ಕೊಂಬು ಕಹಳೆ: ಊದುವ ಒಂದು ವಾದ್ಯ. ಯುದ್ಧ ಸಂದರ್ಭದಲ್ಲಿ ಗೆಲ್ಲುವ ಸೂಚನೆಗಾಗಿ ಅಥವಾ ಯುದ್ಧ ಪ್ರಾರಂಭ ಮಾಡುವಾಗ ಅದನ್ನು ಧ್ವನಿಸುತ್ತಿದ್ದರು. ಈ ವಾದ್ಯವನ್ನು ಧಾರ್ಮಿಕ ಆಚರಣೆಗಳಲ್ಲಿ ಬಳಸುತ್ತಾರೆ. ಈಗಲೂ ಕೆಲವು ಧಾರ್ಮಿಕ ಕ್ಷೇತ್ರಗಳಲ್ಲಿ, ದೇವಾಲಯಗಳಲ್ಲಿ ಬಳಸುತ್ತಾರೆ.

ಕೊಂಬುಗಳು ಕರೆದಾವು ಕಹಳೆಗಳು ಊದ್ಯಾವ
ದಿಮ್ಮಿ ಕಂಡೆಲ್ಲ ಕಣಿ ಕಣಿಸಿ ನಿಬ್ಬಣದ
ಅಬ್ಬರದ ಸಂಭ್ರಮ ಹೇಳ್ಯಾವ

ಎಂಬುದನ್ನು ತ್ರಿಪದಿಯಲ್ಲಿ ಜನಪದರು ಈ ವಾದ್ಯಗಳ ಹಿರಿಮೆಯನ್ನು ಹಾಡಿದ್ದು ಕಂಡು ಬರುತ್ತದೆ.


ಸಭೆ, ಸಮಾರಂಭ, ಮದುವೆ, ಜಾತ್ರೆ, ಮುಂತಾದ ಕಾರ್ಯಕ್ರಮಗಳಲ್ಲಿ ಸಂಭ್ರಮವನ್ನು ಹೆಚ್ಚಿಸಲು ಇದನ್ನು ಬಳಸುತ್ತಿದ್ದರೆಂಬುದು ಮೇಲಿನ ತ್ರಿಪದಿ ಹಾಡಿನಿಂದ



ಕಹಳೆ ಊದುವುದು

ತಿಳಿದುಬರುತ್ತದೆ. 'ಕೊಂಬು ಕಹಳೆ'ಯ ಪದವು ಹೆಸರೇ ಸೂಚಿಸುವಂತೆ ಎತ್ತಿನ ಕೊಂಬಿನಂತಿರುತ್ತದೆ. ಚಲವಾದಿಗಳು ಇದನ್ನು ಉಪಯೋಗಿಸುತ್ತಾರೆ. ಹೊಲೆಯ ಜಾತಿಗೆ ಸೇರಿದ ಈ ಜನಾಂಗವು ಇಂದು ಹೈದ್ರಾಬಾದ ಕರ್ನಾಟಕದಲ್ಲಿ ಈಗಲೂ ಇದನ್ನು ಉಪಯೋಗಿಸುತ್ತಾರೆ. *(ಎಸ್‌ಯುಕೆ)*

ಕೊಡೇಕಲ್: ಇದು ಸುರಪುರ ತಾಲ್ಲೂಕಿನಲ್ಲಿದೆ. 'ಆರೂಢ' ಸಂಪ್ರದಾಯದದ ಕೊಡೇಕಲ್ ಬಸವಣ್ಣ ಇಲ್ಲಿ ನೆಲೆನಿಂತು



ಕೊಡೇಕಲ್ ಬಸವಣ್ಣ

'ಕಾಲಜ್ಞಾನ' ವನ್ನು ರಚಿಸಿ, ಹಿಂದು ಮುಸ್ಲಿಂ ಭಾವೈಕ್ಯತೆಗಾಗಿ ದುಡಿದು ದೇವರನ್ನು ತ್ಯಜಿಸಿದ ಸ್ಥಳವಿದು. ಊರಲ್ಲಿ ಎರಡು ಬಸವಣ್ಣನ ಗುಡಿಗಳಿದ್ದು, ಪೇಟೆ ಬಸವಣ್ಣನ ಗುಡಿಯು 'ಕಾಲಜ್ಞಾನ' ರಚನೆಯಾದ ಸ್ಥಳವಾದರೆ ಊರ ಬಸವಣ್ಣನ ಗುಡಿಯು ಅವನು ಐಕ್ಯ ಹೊಂದಿದ ಸ್ಥಳವಾಗಿದೆ. ದೀಪಾವಳಿ ಮತ್ತು ಯುಗಾದಿ ಸಂದರ್ಭದಲ್ಲಿ ಕೊಡೇಕಲ್ ಬಸವಣ್ಣನ ಜಾತ್ರೆಯು ನೆರವೇರುತ್ತದೆ. *(ಪಿ.ಕೆಕೆ)*

ಕೊಲ್ಲೂರು: ಚಿತ್ತಾಪುರ ತಾಲ್ಲೂಕಿನ ಈ ಊರು ಭೀಮಾನದಿಯ ಎಡದಂಡೆಯ ಮೇಲೆ ಇದ್ದು, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವದ ಸ್ಥಳವಾಗಿದೆ. ಇದು ಹಿಂದೆ ರಾಜಧಾನಿ ಪಟ್ಟಣವಾಗಿ

ಫಿರೋಜಾಬಾದ್ ಕೋಟೆ: ಗುಲಬರ್ಗಾ ತಾಲ್ಲೂಕಿನಲ್ಲಿ, ಗುಲಬರ್ಗಾದಿಂದ ದಕ್ಷಿಣಕ್ಕೆ ಜೇವರ್ಗಿ ರಸ್ತೆಯಲ್ಲಿ 34 ಕಿ.ಮೀ. ದೂರದಲ್ಲಿದೆ. ಭೀಮಾನದಿ ದಡದಲ್ಲಿ, ಬಹಳ ಅಂದವಾಗಿ ತಾಜುದ್ದೀನ ಫಿರೋಜ್‌ಶಹ ಕ್ರಿ.ಶ. 1400ರಲ್ಲಿ ಕಟ್ಟಿಸಿದ. ಅಕಬರನ ಫತೆಪುರಸಿಕ್ರಿ ಕೈ ಕೋಟೆ (ಆಗ್ರಾದ ಹತ್ತಿರ ಉ.ಪ್ರ) ಕಟ್ಟಿಸಿದ ಸೌಂದರ್ಯ ಇದರಲ್ಲಿದೆ.



ಫಿರೋಜಾಬಾದ ಕೋಟೆ

ಬಲಿಷ್ಠವಾದ ಕೋಟೆ, ಭದ್ರಬಾಗಿಲುಗಳು, ತೆನೆಗಳು, ಬುರುಜುಗಳು, ಪ್ರವೇಶ ಸುಂದರ ದ್ವಾರಗಳು, ಅಗಳ, ತೋಪುಗಳು, ಕಮಾನುಗಳುಳ್ಳ ಕಾವಲುಗಾರರ ಕೋಣೆಗಳು, ಬಂದೂಕು ಕಿಂಡಿಗಳು, ದಿಕ್ಕು ತಪ್ಪಿಸುವ ತಿರುಗುಗಳು, ಅಗಲವಾದ ಕೋಟೆ ಗೋಡೆಗಳು ಉದ್ದುದ್ದಾದ ಸುಣ್ಣದ ಕಲ್ಲುಗಳಿಂದ ಸಂದಿ ಇಲ್ಲದೆ ಕಟ್ಟಲ್ಪಟ್ಟಿವೆ. ಪೂರ್ವದ ಬಾಗಿಲು ಬಲು ಭದ್ರ. ಪಶ್ಚಿಮ ದಿಕ್ಕಿನಲ್ಲಿ ನದಿಯು ಸ್ವಾಭಾವಿಕ ರಕ್ಷಣಾ ವಲಯವನ್ನು ನಿರ್ಮಿಸಿದೆ. ಪೂರ್ವದ ಹಾಗೂ ಪಶ್ಚಿಮದ ಪ್ರವೇಶ ದ್ವಾರಗಳನ್ನು ಜೋಡಿಸುವ ಅಗಲ ರಸ್ತೆ, ಎಡ–ಬಲ ಬದಿಗೆ ಅಳಿದುಳಿದ ಕಟ್ಟಡಗಳು, ಪಶ್ಚಿಮದ್ವಾರದ ಸಮೀಪ ಅರಮನೆ. ಎರಡು ಮಹಡಿಗಳುಳ್ಳ ರಾಣಿಯರ ವಾಸದ ಮನೆಗಳು, ಸ್ನಾನದ ಮನೆಗಳು, ನೀರಿನ ಸರಬರಾಜಿನ ವ್ಯವಸ್ಥೆ. ಅರಮನೆ ಆವರಣದ ಪೂರ್ವಕ್ಕೆ ದೊಡ್ಡ ಸುಂದರ ಜಾಮೀ ಮಸೀದಿ (95‘x95’) ಸಭಾಂಗಣ ಇವೆ. ಕೋಟೆಯ ಉತ್ತರಕ್ಕೆ 2ಕಿ.ಮೀ. ದೂರದಲ್ಲಿ ಬಹಮನಿ ಕಾಲದ ಖಲೀಫಲ್ ಅಲ್ ರಹಮಾನನ ದರ್ಗಾ ಇದೆ. ದಕ್ಷಿಣ ಭಾರತದಲ್ಲಿ ಇಸ್ಲಾಂ ಅರಸರು ಕಟ್ಟಿಸಿದ ಸುಂದರ ಕೋಟೆಗಳಲ್ಲಿ ಇದೊಂದು ಮೈಲುಗಲ್ಲಾಗಿದೆ.


ಶಹಪುರ ಕೋಟೆ: ತಾಲ್ಲೂಕು ಕೇಂದ್ರವಾದ ಶಹಪುರವು ಗುಲಬರ್ಗಾದಿಂದ ದಕ್ಷಿಣಕ್ಕೆ 77 ಕಿ.ಮೀ. ದೂರದಲ್ಲಿದ್ದು, ಪುರಾಣದ ಸಗರ ಚಕ್ರವರ್ತಿಯ ಸಗರನಾಡಿನ ಮುಖ್ಯಕೇಂದ್ರವಾಗಿ ಇದ್ದೀತೆಂದೂ, ಸಮೀಪದ ಬೆಟ್ಟ ಸಗರಾದ್ರಿಯೆಂದೂ ಕರೆಯಲಾಗುತ್ತಿದೆ.

ಕೋಟೆ ಗೋಡೆ ಈಗ ಬಹಳಷ್ಟು ನಾಶವಾಗಿದೆ. ಪಶ್ಚಿಮದ ಗೋಗಿದರ್ವಾಜಾ, ಸುರಪುರಕ್ಕೆ ಹೋಗುವ ರಸ್ತೆಯ ಪಕ್ಕದ ಮತ್ತೊಂದು ದರ್ವಾಜಾ ಮಾತ್ರ ಉಳಿದಿವೆ. ಊರ ದಕ್ಷಿಣಕ್ಕೆ ಇರುವ ಬೆಟ್ಟದ ಮೇಲಿನ ಬಹಳ ಸುತ್ತುಗಳಿಂದ ಕೂಡಿದ ಕೋಟೆಯ ಸಂಶೋಧಕರ ಗಮನ ಸೆಳೆಯುತ್ತದೆ. ಪೂರ್ವದ ಬೆಟ್ಟ ಹಾಗೂ ಪಶ್ಚಿಮದ ಬೆಟ್ಟಗಳ ಮೇಲಿರುವ ಕೋಟೆಗಳನ್ನು, ಮಧ್ಯದ ಕೊಳ್ಳದಲ್ಲಿರುವ ಕೋಟೆಯ ಗೋಡೆಗಳು ಜೋಡಿಸಿರುವುದ ರಿಂದ ಎರಡೂ ಸೇರಿ ಒಂದೇ ಕೋಟೆಯಂತೆ ಭಾಸವಾಗುತ್ತದೆ. ಇದು ಬಿಜಾಪುರದ ಆದಿಲ್‌ಶಹನ ಕಾಲದಲ್ಲಿ ಕ್ರಿ.ಶ. 1555ರಲ್ಲಿ ಮುಹಮ್ಮದ ಯುಸುಫನಿಂದ ಕಟ್ಟಲ್ಪಟ್ಟಿತ್ತೆಂದು ಪೂರ್ವದ ಕೋಟೆಯ ಬಾಗಿಲಿನ ಮೇಲಿರುವ ಶಾಸನವು ಹೇಳುತ್ತದೆ. ಗೋಗಿ ದರ್ವಾಜಾ ಶಾಸನವೊಂದು ನಸ್ರತಾಬಾದ ನಿರ್ಮಾತೃ ಮೀರ್ ಮುಹಮ್ಮದ ಈ ಕೋಟೆ ಮತ್ತು ನಗರವನ್ನು ಕ್ರಿ.ಶ. 1558–59ರಲ್ಲಿ ಕಟ್ಟಿಸಿದನೆಂದು ಹೇಳುತ್ತದೆ. ಶಹಪುರಕ್ಕೆ ಶಸ್ರತಾಬಾದ ಎಂದೂ ಹೆಸರಿತ್ತು. ಮತ್ತೆ ಕ್ರಿ.ಶ. 1567–68ರಲ್ಲಿ ಬಿಜಾಪುರ ಸುಲ್ತಾನರ ಆಳ್ವಿಕೆಯಲ್ಲಿ ಮೀರ್ ತಾಜುದ್ದೀನ್ ಎಂಬವನಿಂದ ಪುನರಪಿ ಕೋಟೆಯ ಜೀರ್ಣೋದ್ಧಾರವಾಯಿತು. ಮುಹಮ್ಮದೀ ಬುರಜ್ (ಕ್ರಿ.ಶ. 1656–57) ಹಾಗೂ ಇನ್ನೊಂದು ಬುರುಜನ್ನು ಶಹ ಮಹಮ್ಮದನು ಕ್ರಿ.ಶ. 1666–67ರಲ್ಲಿ ಕಟ್ಟಿಸಿದನೆಂದು ತಿಳಿದು ಬರುತ್ತದೆ. ಕ್ರಿ.ಶ. 1555–1666ರ ವರೆಗೆ ಒಂದು ಶತಮಾನಕ್ಕಿಂತ ಹೆಚ್ಚು ನಿರಂತರ ಕಾಲದಲ್ಲಿ/ಇತಿಹಾಸದಲ್ಲಿ ತನ್ನ ಬದುಕನ್ನು ಈ ಕೋಟೆಯು ನೀಡಿದೆ.

ಬೆಟ್ಟದ (ಪೂರ್ವದ) ಮೇಲಿನ ಕೋಟೆಗೆ 6 ಪ್ರವೇಶ ದ್ವಾರಗಳಿವೆ. ಮೊದಲನೆಯ ಬಾಗಿಲು ನೆಲಸಮತಟ್ಟಾದ ಪ್ರದೇಶದಲ್ಲಿದ್ದು, ಉಳಿದವು ಮೇಲೆ ಏರಿದಂತೆ ಎತ್ತರ ಎತ್ತರ ಪ್ರದೇಶಗಳಲ್ಲಿ ಕಟ್ಟಲ್ಪಟ್ಟಿದೆ. ದುಂಡನೆಯ ಹಿಂದು ಕಂಬಗಳು, ಚೌಕಟ್ಟುಗಳು, ಬಾಗಿಲು ಶಾಖೆಗಳು, ಇದು ಮೊದಲು ಹಿಂದು ಆಡಳಿತದಲ್ಲಿ ಇತ್ತು ಎಂದು ಗುರುತಿಸುತ್ತವೆ. ಇದೊಂದು ಇಸ್ಲಾಂ ಕೋಟೆಯ ಉತ್ತಮ ಉದಾಹರಣೆ.



ಶಹಪೂರ ಕೋಟೆ



ಮದ್ದು ಸಂಗ್ರಹಗಳು ಹಾಗೂ ತೋಪುಗಳು

ರೂಪ ತಳೆಯಿತು. ದುಂಡನೆ ಬುರುಜುಗಳು, ತಂಗುರಾಗಳು, ಮಸೀದಿ, ಬತ್ತೇರಿ, ಕೊಳ, ಕಾರಂಜಿ, ಮಿನಾರ್ ಗುಂಬಜ್‌ಗಳು, ಕಬ್ರಗಳು ಬೆಳೆದು ಬಂದವು. ಮಳಖೇಡ ಕೋಟೆಯು ಎರಡು ಸುತ್ತಿನ ಕೋಟೆ. ಹೊರಸುತ್ತು ಸಾರ್ವಜನಿಕರಿಗೆ ಬಳಸುತ್ತಾ ಬಾದಶಹನ ಮನೆತನದವರೆಗೆ. ಪಶ್ಚಿಮದ ಕಾಗಿಣಾ ನದಿಯು ಹಾಗೂ ದಕ್ಷಿಣದಲ್ಲಿ ಹರಿಯುವ ಹಳ್ಳವು ನೈಸರ್ಗಿಕ ಕಂದರಗಳಾಗಿವೆ. ಉಪ್ಪಲೀ ಬುರ್ಜ, ಹುಸೇನಿ ದರ್ಗಾ, ಕಾಲೀ ಮಸೀದಿ, ಕಮಾನುಗಳುಳ್ಳ ಅರಮನೆಯ ಅವಶೇಷಗಳು ಹಾಗೂ ವೈಷ್ಣವ ಸಂತ ಮಧ್ವಾಚಾರ್ಯರಲ್ಲಿಯ ನಾಲ್ವರು ಶಿಷ್ಯರಲ್ಲಿ ಒಬ್ಬರಾದ ಅಕ್ಷೋಭ್ಯತೀರ್ಥರ ಶಿಷ್ಯರಾದ ಜಯತೀರ್ಥರು (ಟೀಕಾಚಾರ್ಯರು) ಮಳಖೇಡನ್ನು ತಮ್ಮ ವಾಸಸ್ಥಳವನ್ನಾಗಿ ಮಾಡಿಕೊಂಡು, ಮಧ್ವಾಚಾರ್ಯರ ಕೃತಿಗಳ ಮೇಲೆ ಟೀಕೆಗಳನ್ನು ಬರೆದರು. ದೂರದಲ್ಲಿ ಈ ಇಬ್ಬರೂ ಯತಿಗಳ ಸಮಾಧಿಗಳಿವೆ. ಇದೊಂದು ಅತ್ಯಂತ, ಇತಿಹಾಸದಲ್ಲಿ ಮಹತ್ವವಾದ ತಾಣ; ಕನ್ನಡ ಸಾಹಿತ್ಯ, ಆಧ್ಯಾತ್ಮ ಬೆಳೆಸಿದ, ನಾಡನ್ನು ಕಟ್ಟಿದ ಕೋಟೆ. ಆದರೆ ಬಹಳ ಶಿಥಿಲವಾಗಿದೆ. ಕರ್ನಾಟಕದಲ್ಲಿ ಇಷ್ಟೊಂದು ಬಲಾಢ್ಯ ರಾಜ್ಯಕಟ್ಟಿದ, ಕಾವೇರಿಯಿಂದ ಗೋದಾವರಿ ಯವರೆಗೂ ಸೀಮಾ ರೇಖೆಯನ್ನು ಕೊರೆದ, ರಾಷ್ಟ್ರಕೂಟರ ಕೋಟೆಯು ಇಷ್ಟು ಚಿಕ್ಕದಾಗಿತ್ತೇ? ಎಂದು ಯಾವುದೇ ಇತಿಹಾಸಕಾರನಿಗೆ ಆಶ್ಚರ್ಯದ ಪ್ರಶ್ನೆ ಏಳುವುದು ಸ್ವಾಭಾವಿಕ. ಭಾಗಶಃ ಜಲಾವೃತ, ಭಾಗಶಃ (ಮೂರು ಕಡೆ) ಸ್ಥಳಾವೃತ್ತ ಸಂಕೀರ್ಣ ಕೋಟೆ ಇದು. ಕನ್ನಡಿಗರ ಸ್ವಾಭಿಮಾನವನ್ನು ಎತ್ತರಿಸಿದ ಕೋಟೆದಾಗಿದೆ.

ಗುಲ್ಬರ್ಗಾ ಕೋಟೆ: 'ಗುಲ್‌ಬರ್ಗ' ಅಂದರೆ ಹೂದೋಟ, ಪರ್ಶಿಯನ್ ಭಾಷೆಯ ಛಾಯೆ, ಬಹಮನೀಯರು ಇಟ್ಟ ಹೆಸರು; ಆದರೆ 11ನೆಯ ಶತಕದ ಶಾಸನಗಳಲ್ಲಿ 'ಕಲುಂಬರಗೆ' ಎಂಬ ಉಲ್ಲೇಖ. ಮುಹಮ್ಮದ್ ಬಿನ್‌ತುಘಲಕ್ ದಿಲ್ಲಿಯ ಸುಲ್ತಾನ ನಿದ್ದರೂ ದಕ್ಷಿಣದ ದೇವಗಿರಿ (ದೌಲತಾಬಾದ್) ಅವನ ಕೆಲಕಾಲ ರಾಜಧಾನಿಯಾಗಿತ್ತು. ಆತ ಮರಳಿದ ದಿಲ್ಲಿಗೆ ಕ್ರಿ.ಶ. 1347ರಲ್ಲಿ ಹಸನ್‌ಗಂಗೂ ಬಹಮನ್ ಸ್ವತಂತ್ರ ಶಹನೆಂದು ಘೋಷಿಸಿ, ಕಲಬುರ್ಗಿಯನ್ನು ದಕ್ಷಿಣದ ರಾಜಧಾನಿಯನ್ನಾಗಿ ಮಾಡಿದ. ಕ್ರಿ.ಶ. 1424ರಲ್ಲಿ ಅಹಮ್ಮದಶಹ ಅರಸು ಕಲುಬುರ್ಗಿಯಿಂದ ಬೀದರಕ್ಕೆ ಬಹಮನಿ ಶಾಹಿಯ ರಾಜಧಾನಿಯನ್ನು ಸ್ಥಳಾಂತರಿಸಿದ. ಕ್ರಿ.ಶ. 1514ರಿಂದ ಬಿಜಾಪುರ ಅದಿಲ್‌ಶಹರ ಕೈಯಲ್ಲಿ, ಅನಂತರ ಮತ್ತೆ 1514ರಲ್ಲಿ ಅಮೀರ್ ಬರೀದನ ಮರಳಿ ವಶ, ಕ್ರಿ.ಶ. 1657 ಮೊಘಲ ಔರಂಗಜೇಬನ ವಶ, ಅನಂತರ ನಿಜಾಮರ ಆಳ್ವಿಕೆಗೆ ಒಳಪಟ್ಟು, 1948ರಲ್ಲಿ ನೈಜಾಮ–ರಿಂದ ಭಾರತ ಒಕ್ಕೂಟಕ್ಕೆ ಮಿಲನ (ಸರದಾರ್ ವಲ್ಲಭಾಯಿ ಪಟೇಲ), ನಂತರ ಕ್ರಿ.ಶ. 1956ರಲ್ಲಿ ಕರ್ನಾಟಕ ರಾಜ್ಯದಲ್ಲಿ ಸೇರಿತು. ಈ ಕೋಟೆ ದಕ್ಷಿಣದ ಶಾಹಿಕೋಟೆಗಳಲ್ಲಿ ನಾಮ ಶೇಖರಿಸಿದೆ.

ಈ ಕೋಟೆ ರಾಜ ಗುಲಚಂದ, ವರಂಗಲ್ಲಿನ ರಾಜ ಕಟ್ಟಿಸಿದನು. ಅನಂತರ ಅಲ್ಲಾ ಉದ್ದೀನ ಬಹಮನ ಶಹ ಇದನ್ನು ಬಲಿಷ್ಠಗೊಳಿಸಿದ. ಅಂಕುಡೊಂಕಾದ ಜೋಡಿಗೋಡೆಗಳಿದ್ದು, ಆಳ ಮತ್ತು ಅಗಳವಿದೆ. ಪೂರ್ವ ಮತ್ತು ವಾಯುವ್ಯ ದಿಶೆಗಳಲ್ಲಿ ಪ್ರವೇಶ ದ್ವಾರಗಳು, ಹಾಗೂ ದಕ್ಷಿಣಕ್ಕೆ ಒಂದು ಚಿಕ್ಕ ಬಾಗಿಲು ಇವೆ. ವಾಯವ್ಯ ದಲ್ಲಿ ಐದು ದ್ವಾರಗಳ ಸಂಕೀರ್ಣ ದೊಡ್ಡ ಬಾಗಿಲು, ಕಾವಲುಗಾರರ ಕೋಣೆ ಗಳು, ದುಂಡನೆಯ ತೋಪು ಹೊತ್ತ ಬುರುಜು ಗಳು, ತೆನೆಗಳು ಕೋಟೆಯ ಒಳಗಡೆ ಜಾಮೀ ಮಸೀದಿ 216'X176', ಬಹಮನಿ ಮಹಮ್ಮದ ಶಹ ಕ್ರಿ.ಶ. 1367ರಲ್ಲಿ ಕಟ್ಟಿಸಿದ. ಶಿಲ್ಪಿ ಇರಾನಿನ ಪಾಸ್ಪಿನ್ ನಿವಾಸಿ ರಫಿ. ಅನೇಕ ಗುಂಬಝುಗಳ ವಿಶಿಷ್ಟ ಮಾಳಿಗೆ ಹೊತ್ತಿದೆ. ಸ್ಪೇನಿನ ಕಾರ್ಡೋವದ ಮಸೀದಿಯ ವಿನ್ಯಾಸ ಹೊಂದಿದ್ದು, ಭಾರತ ದಲ್ಲಿಯ ವಿಶಾಲ ಮಸೀದಿಗಳಲ್ಲಿ ಇದೊಂದು.




ಗುಲಬರ್ಗಾ ಕೋಟೆ

ಸುರಪುರ ಕೋಟೆ: ಗುಲಬರ್ಗಾದ ದಕ್ಷಿಣಕ್ಕೆ 166 ಕಿ.ಮೀ. ದೂರ. ಇರುವ ಇದು 18ನೆಯ ಶತಮಾನದ ಕೋಟೆ. ಕ್ರಿ.ಶ. 1707ದಲ್ಲಿ ಔರಂಗಜೇಬನು ಅಹಮದಾಬಾದಿನಲ್ಲಿ ಮರಣ ಹೊಂದಿದಾಗ ಪಿಡ್ಡ ನಾಯಕನೆಂಬ ಆಡಳಿತಗಾರನು ಕೋಟೆಯನ್ನು ವಶಪಡಿಸಿಕೊಂಡು 'ಸುರಪುರ'ವೆಂಬ ಹೊಸ ನಗರವನ್ನು ನಿರ್ಮಿಸಿದನು. ನಗರದ ಸುತ್ತ ವಾಘಣಗೇರಿ ಕೋಟೆಯನ್ನು ಕಟ್ಟಿಸಿದ ಹಾಗೂ ಶ್ರೀ ವೇಣುಗೋಪಾಲಸ್ವಾಮಿಯ ಅಡಿಪಾಯವನ್ನು ಹಾಕಿದನು. ವೆಂಕಟಪ್ಪ ನಾಯಕನು (ಕ್ರಿ.ಶ. 1747–52) ಊರ ಮಧ್ಯದಲ್ಲಿ ಹಳೆ ದರ್ಬಾರ ಅರಮನೆಯನ್ನು ಕಟ್ಟಿಸಿ ಕೋಟೆಯ ಗೋಡೆಯ ಆಯಕಟ್ಟಿನ ಸ್ಥಳವಾಗಿ ಸ್ಥಳವಾಗಿ ಹೆಚ್ಚು ಬುರುಜುಗಳನ್ನು ಕಟ್ಟಿಸಿ ಅವುಗಳ ಮೇಲೆ ತೋಫುಗಳನ್ನು ಇಡಿಸಿದನು. ನಾಲ್ಕನೆಯ ವೆಂಕಟಪ್ಪನ ಕಾಲದಲ್ಲಿ (ಕ್ರಿ.ಶ. 1820–48) ನಯಾ ದರ್ಬಾರ ಅರಮನೆ ಹಾಗೂ ಮೆಡೋಸ್ ಟೇಲರ್‌ಗಾಗಿ ಟೇಲರ್ ಮಂಜಿಲನ್ನು ಕಟ್ಟಲಾಯಿತು.

ಈ ಕೋಟೆಯ ಬೆಟ್ಟಗಳ ಮಧ್ಯದಲ್ಲಿ ಎತ್ತರವಾದ ಪ್ರದೇಶದಲ್ಲಿ (450 ಮೀ. ಸಮುದ್ರ ಸಪಾಟಿಯಿಂದ ಎತ್ತರ) ಹಾಗೂ ಸ್ವಲ್ಪ ತಗ್ಗಾದ ಪ್ರದೇಶದಲ್ಲಿ ಕಣಿವೆಯ ಸುತ್ತ ಬೆಟ್ಟಗಳನ್ನು ಜೋಡಿಸಿ ಗೋಡೆಯನ್ನು ಇಡಿಯಾಗಿ ಒಂದಕ್ಕೊಂದರಂತೆ ಸೇರಿಸಲಾಗಿದೆ. ಕೋಟೆಯ ವಿನ್ಯಾಸ ಅನಿಯಮಿತ ಜ್ಯಾಮಿತಿಯಲ್ಲಿದ್ದು ಕೆತ್ತಿದ ದಪ್ಪ ಕಲ್ಲುಗಳಿಂದ ಕಟ್ಟಲಾಗಿದೆ ಹಾಗೂ ಅಲ್ಲಲ್ಲಿ ಗುಂಡು ಕಲ್ಲುಗಳನ್ನು, ಚಿಕ್ಕ ಕಲ್ಲುಗಳನ್ನು ಉಪಯೋಗಿಸಲಾಗಿದೆ. ವೃತ್ತಾಕಾರದ ಬುರುಜುಗಳ ಮೇಲೆ ತೋಫುಗಳನ್ನು ಇಡಲಾಗಿದೆ. ಕೋಟೆಯ ಪ್ರವೇಶಕ್ಕಾಗಿ ವಿವಿಧ ದಿಕ್ಕುಗಳಲ್ಲಿ ಆರು ಪ್ರವೇಶ ದ್ವಾರಗಳನ್ನು ಕಟ್ಟಲಾಗಿದೆ. ಪೂರ್ವಕ್ಕೆ ರಂಗಮ್‌ಪೇಟೆ ಅಗಸೆ, ಉತ್ತರಕ್ಕೆ ಸಿದ್ದಾಪುರ ಅಗಸೆ, ಪಶ್ಚಿಮಕ್ಕೆ ಕಪ್ಪಲಿ......ಅಗಸೆ, ದೇವನ ಅಗಸೆ ಇತ್ಯಾದಿಗಳು. ಇವುಗಳಲ್ಲಿ ದೇವಪುರ ಅಗಸೆಯು ದೊಡ್ಡದು.

ಊರ ಮಧ್ಯದಲ್ಲಿ ಒಳಕೋಟೆ ಚಿಕ್ಕದಾಗಿದ್ದು 350 ಮೀ. ಉದ್ದ 250 ಮೀ. ಅಗಲ ಆಯತಾಕಾರದಲ್ಲಿದ್ದು 20 ಮೀ ಎತ್ತರವಿರುವ ಈ ಕೋಟೆಯ ಹೊರಗೋಡೆಯಲ್ಲಿ ಮುಂದೆ ಚಾಚಿದ ಕಿಟಿಕಿಗಳಿವೆ. ಒಳಕೋಟೆಯಲ್ಲಿ ಅದಾಗಲೇ ಹೇಳಿದಂತೆ ವೇಣುಗೋಪಾಲ ಸ್ವಾಮಿಯ ದೇಗುಲ ಸುಂದರವಾಗಿದೆ. ಅದರ ಹೊರ ಮಂಟಪದಲ್ಲಿ 46 ಕಂಬಗಳಿದ್ದು ಅಂತರಾಳ ಹಾಗೂ ಗರ್ಭಗೃಹದಿಂದ ಈ ದೇವಾಲಯವು ವಿನ್ಯಾಸ ಗೊಂಡಿದೆ. ಇದು 19ನೆಯ ಶತಮಾನದ ಕರ್ನಾಟಕದ ಸುರಪುರ ನಾಯಕರ ಕೋಟೆಯೆಂದೇ ಹೆಸರು ಪಡೆದಿದ್ದು ಮೆಡೋಸ್ ಟೇಲರ್ ಎಂಬ ಬ್ರಿಟಿಶ್ ಕಲೆಕ್ಟರನು ಇಲ್ಲಿ ವಾಸವಾಗಿದ್ದು ಆತನಿಂದ ಪ್ರಾಗೈತಿಹಾಸ ಕಾಲದ ಇತಿಹಾಸ ಸಂಶೋಧಕನೆಂದು ಪ್ರಸಿದ್ಧಿ.



ಸುರಪೂರ ಕೋಟೆ

ವಾಘಣಗೇರಿ ಕೋಟೆ: ಇದು ಸುರಪುರ ತಾಲ್ಲೂಕಿನಲ್ಲಿದೆ. ಸುರಪುರದಿಂದ ಪಶ್ಚಿಮಕ್ಕೆ 7 ಕಿ.ಮೀ. ದೂರ. ಬಿಜಾಪುರದ ಸುಲ್ತಾನ ಮುಹಮ್ಮದ ಆದಿಲ್‌ಶಹನು 1ನೆಯ ಪಿಡ್ಡನಾಯಕನಿಗೆ ಕರ್ಶಿಹಳ್ಳಿಯನ್ನು ಕೊಟ್ಟಾಗ, ಪಿಡ್ಡನಾಯಕನು ಈ ವಾಘಣಗೇರಿ ಕೋಟೆಯನ್ನು ಕಟ್ಟಿಸಿದನು, ಹಾಗೂ ಆಳಿದನು (ಕ್ರಿ.ಶ. 1639–66). ಕ್ರಿ.ಶ. 1705ರಲ್ಲಿ ಔರಂಗಜೇಬನ ವಶವಾಯಿತು, ತತ್‌ಪೂರ್ವದಲ್ಲಿ ಇದು ಸುರಪುರ ಸಂಸ್ಥಾನದ ರಾಜಧಾನಿ ಆಗಿತ್ತು.

ಇಲ್ಲಿ ಎರಡು ಕೋಟೆಗಳಿವೆ–ಪಶ್ಚಿಮದ 'ಪಡುಕೋಟೆ' ಪೂರ್ವದ ಹೊಸಕಿಲ್ಲಾ. ಪಡುಕೋಟೆಯಲ್ಲಿ ಎರಡು ಭಾಗಗಳು. ಕೆಳಕೋಟೆಯ ಭೂಮಟ್ಟದಲ್ಲಿ ಚಾಚಿ, ಊರನ್ನು ಸುತ್ತುವರಿದು, ಬೆಟ್ಟವನ್ನೇರಿದೆ; ಮೇಲ್ ಕೋಟೆ ಬೆಟ್ಟದ ಮೇಲೆ ಇದೆ. ಈ ಬೆಟ್ಟದ ಮೇಲಿನ ಕೋಟೆಯನ್ನು ಕ್ರಿ.ಶ. 1705ರಲ್ಲಿ ಔರಂಗಜೇಬನು ಭದ್ರಪಡಿಸಿದ; ಭದ್ರಪಡಿಸಲು ದೇವಾಲಯದ ಕಂಬ, ಬಾಗಿಲುವಾಡ, ಅಧಿಷ್ಠಾನಗಳನ್ನು ಉಪಯೋಗಿಸಲಾಗಿದೆ. ವೃತ್ತಾಕಾರದ ಬುರುಜುಗಳ ಜೋಡಣೆಯಿಂದ, ಕೋಟೆಯ ಗೋಡೆಗಳು 450ಮೀ x 150 x 6 ಮೀ (ಎ) ದಷ್ಟು ಚಾಚಿವೆ. ಗೋಡೆಯ ಮೇಲೆ ನಡೆದಾಡಲು ಕಿರಿದಾದ ದಾರಿ (wall walk) ಇದೆ. ತೆನೆಗಳು ಹಾಗೂ ಬುರುಜುಗಳು ಬಂದೂಕು ಕಿಂಡಿಗಳೂ ಇವೆ.

ಪಶ್ಚಿಮಕ್ಕಿರುವ ಕೆಳಕೋಟೆಗೆ ದಕ್ಷಿಣದಲ್ಲಿ ಬಾಗಿಲಿದೆ; ಎರಡು ಅರ್ಧವೃತ್ತಾಕಾರದ ಬುರುಜುಗಳ ಮಧ್ಯ ಈ ಬಾಗಿಲಿದೆ. ಈಗ ಶಿಥಿಲವಾಗಿದೆ, ಇದರ ಮುಂದೆ ಚೌಕಾದ ಆವರಣವಿದೆ; ಇಲ್ಲಿ ಮರಾಠಾ ಸೈನಿಕರ ವಂಶಸ್ಥರ ಮನೆಗಳಿವೆ, ಒಂದು ದೇವಾಲಯ, ಕಟ್ಟೆಗಳುಳ್ಳ ಒಂದು ಬಾವಿ; ಬಾವಿಯ ದಕ್ಷಿಣಕ್ಕೆ ಮಸೀದಿ, ದುಂಡನೆಯ ಬಾವಿ, ವೀರಗಲ್ಲು, ನರಸಿಂಹ, ವಾಮನ, ರಾಮಕೃಷ್ಣರ ಕೆತ್ತನೆಯ ಕಂಬಗಳು, ಇತ್ಯಾದಿಗಳು ಈ ಕೆಳಕೋಟೆಯ ಅವಶೇಷಗಳು.

ಹೊಸಕಿಲ್ಲಾ ಪಡುಕೋಟೆಯ ಪೂರ್ವಕ್ಕೆ ಬೆಟ್ಟದ ಮೇಲೆ ಇದೆ. ಇದು ವಿನ್ಯಾಸದಲ್ಲಿ ವೃತ್ತಾಕಾರವಾಗಿದೆ. ದಕ್ಷಿನ ಮತ್ತು ನೈರುತ್ಯಗಳಲ್ಲಿ ಕಡಿದಾದ ಭಾಗವಿದ್ದು, ಈ ಭಾಗಗಳ ಆಚೆ ಮಾತ್ರ ಗೋಡೆಗಳನ್ನು ಕಟ್ಟುವ ಪ್ರಕ್ರಿಯೆ ನಡೆದಿದೆ. ಹೊರಕೋಟೆಗೆ ದಕ್ಷಿಣ ಭಾಗದಲ್ಲಿ ಪ್ರವೇಶದ್ವಾರವಿದೆ. ಒಳಕೋಟೆಯ ಪೂರ್ವಗೋಡೆಯಲ್ಲೂ ಪ್ರವೇಶದ್ವಾರವಿದೆ. ಕೋಟೆಯ ಮಧ್ಯದಲ್ಲಿ ಎತ್ತರವಾದ ಚೌಕಾದ ಕಟ್ಟಡವಿದೆ. ಇದು ಮದ್ದಿನ ಮನೆಯೂ ವೀಕ್ಷಣಾ ಕಟ್ಟೆಯೂ ಆಗಿರಬಹುದು. ವಾಯುವ್ಯ ಭಾಗದಲ್ಲಿ ಕೆಲ ಅಳಿದುಳಿದ ಕಟ್ಟಡಗಳ ಅವಶೇಷಗಳಿವೆ. ಇದೊಂದು ಮೂಲತಃ ಹಿಂದೂ ರಕ್ಷಣಾ ವಾಸ್ತು ಹೊಂದಿದ ಕೋಟೆ, ಆ ಮೇಲೆ ಮುಸ್ಲಿಮರ ಕೈಯಿಂದ ಬಹಳ ಮಾರ್ಪಾಟಾಗಿದೆ.

ಇಜೇರಿ ಕೋಟೆ: ಇದು ತಾಲ್ಲೂಕು ಕೇಂದ್ರವಾದ ಜೇವರ್ಗಿಯಿಂದ ನೈರುತ್ಯಕ್ಕೆ 20 ಕಿ.ಮೀ. ದೂರದಲ್ಲಿದೆ. ಕಲ್ಯಾಣ

ಗುಲಬರ್ಗಾದಿಂದ ಆಗ್ನೇಯಕ್ಕೆ 124 ಕಿ.ಮೀ. ದೂರದಲ್ಲಿ ಯಾದಗಿರಿ ಇದೆ. ಇದು ಈಗ ಜಿಲ್ಲಾ ಕೇಂದ್ರ. ಶಾಸನಗಳಲ್ಲಿ 'ಏತಗಿರಿ', 'ಯದುಗಿರಿ' ಎಂದು ಹೆಸರುಗಳು. ಕಲ್ಯಾಣ ಚಾಲುಕ್ಯ ಅರಸು ಜಯಸಿಂಹ ಕ್ರಿ.ಶ. 1019–33, ಇದನ್ನು ರಾಜಧಾನಿಯನ್ನಾಗಿಸಿದ್ದ. ಕ್ರಿ.ಶ. 1044–50ರ ಮಧ್ಯೆ, ಚೋಳರು ಕೃಷ್ಣೆಯನ್ನು ದಾಟಿ ಇಲ್ಲಿ ಬೀಡುಬಿಟ್ಟು, ಹುಲಿಯ ಲಾಂಛನದ ಸ್ತಂಭ ನೆಟ್ಟರು. ವಿಕ್ರಮಾದಿತ್ಯ ಕ್ರಿ.ಶ. 1077ರಲ್ಲಿ ಏತಗಿರಿಯಲ್ಲಿ ಅದು ಅವನ ರಾಜಾಧಾನಿ–ತುಲಾಪುರುಷ ಹಾಗೂ ಹಿರಣ್ಯ ಗರ್ಭ ದಾನ.

ಇಷ್ಟೊಂದು ವೈಭವೋಪೇತವಾದ ಹಿಂದು ಅರಸರ ರಾಜಧಾನಿ ಏತಗಿರಿ ತನ್ನ ಮೂಲಕೋಟೆಯ ಸ್ವರೂಪವನ್ನು ಆದಿಲ್‌ಶಹರ 14–15 ಶತಕಗಳಲ್ಲಿ ಕಳೆದುಕೊಂಡು, 'ಇಸ್ಲಾಂಮತ್ವ' ಪಡೆದುಕೊಂಡಿತು. ಇದೊಂದು 'ತೋಫುಗಳ ಕೋಟೆ' ಎಂದು ವಿಶೇಷ ಹೆಸರಿನಿಂದ ಕರೆಯಬಹುದು. ಎಲ್ಲ ಬುರುಜುಗಳ ಮೇಲೆ, ಪ್ರವೇಶದ್ವಾರಗಳ ಮೇಲೆ, ಮೇಲಟ್ಟಣೆಗಳ ಮೇಲೆ ತೋಫುಗಳೇ ತೋಫುಗಳು. ಇಲ್ಲಿ ತೋಫುಗಳನ್ನು ತಯಾರಿಸುತ್ತಿದ್ದರೆಂದು ಪುಷ್ಟೀಕರಿಸಲು ಕ್ರಿ.ಶ. 1557ರಲ್ಲಿ ಒಬ್ಬ ಮೆಟಲರ್ಜಿಸ್ಟ್ ಮುಹಮ್ಮದ ಅಲಿ ಆತನನೆಂಬವನ ನೇತೃತ್ವದಲ್ಲಿ ತೋಫು ತಯಾರಾದ ವಿಷಯದ ಶಾಸನವೊಂದು ಹೇಳುತ್ತದೆ. ಕ್ರಿ.ಶ. 1785ರಲ್ಲಿ ಹೈದರಾಬಾದಿನ ನಿಜಾನ ಆಲೀಖಾನನ ಭೆಟ್ಟಿಯ ನೆನಪಿನಲ್ಲಿ (ಹದಿನೆಂಟನೆಯ ಶತಕದ ಕೊನೆಯಲ್ಲೂ) 'ನಿಜಾಮ್ ಬುರ್ಜ್' ಎಂಬ ಬುರುಜನ್ನು ಕಟ್ಟಲಾಯಿತು.

ಬೆಟ್ಟದ ಮೇಲಿನ ಮೂರು ಸುತ್ತಿನ ಕೋಟೆ, ಅನಿಯಮಿತ ವಿನ್ಯಾಸ, ಬೆಟ್ಟದ ಕಂಟೂರ್ (contours) ಬಳಸಿ, ಬಡೆಗಲ್ಲುಗಳ ಆಸರೆ ಹೊಂದಿ, ಅರ್ಧ, ಪೂರ್ಣ ಹಾಗೂ ಚೌಕಾದ ಬುರುಜುಗಳನ್ನು (bastions) ಜೋಡಿಸಿ, ಹರಡಿದ ಭದ್ರ ಕೋಟೆ ಇದು. ಎಂಟು ಪ್ರವೇಶದ್ವಾರಗಳು, ಪ್ರತಿ ದ್ವಾರದ ಎಡಬಲಗಳಲ್ಲಿ ಅರ್ಧ ಇಲ್ಲವೆ ಪೂರ್ಣ ವರ್ತುಲಗಳ ಬುರುಜುಗಳು, ಮೇಲಿಟ್ಟ ತೋಫುಗಳು, ಕಾವಲುಗಾರರ ಗುಮ್ಮಟವುಳ್ಳ ಕೊಠಡಿಗಳು, ಅಲ್ಲಲ್ಲಿ ಬಾವಿಗಳು, ಕೊಳ್ಳಗಳು, ಬೆಟ್ಟವನ್ನು ಮೇಲೇರಿದಂತೆ ಕಾಣಸಿಗುತ್ತವೆ.

ಕೊನೆಯ ಬಾಗಿಲು ದಾಟಿದ ಕೂಡಲೆ ಚೌಕಾಕಾರದ ಆವರಣ, ಶಿಥಿಲವಾದ ಕಟ್ಟಡದ ಅವಶೇಷಗಳು ಇಲ್ಲಿ. ಫಿರ್‌ದೇಶ ಮಹಲ್, ಮೋತಿ ತಲಾಬ್, ದರಬಾರ್ ಮಹಾಲ್, ಕಬೂತರ್ ಖಾನಾ, ಚೀನಿ ಮಸೀದಿ, ಎಣ್ಣೆ ಶೇಖರಿಸುವ ಕೊಳ ಹಿಂದೂ ದೇವಾಲಯಗಳೂ ಕೂಡ, ಪಾತಾಳ ಬಾವಿ, ವೃತ್ತಾಕಾರದ ಬತೇರಿಗಳು ಅಲ್ಲಲ್ಲಿ. ಅವು ಕೋಟೆಯ ಗೋಡೆಗಿಂತ ಎತ್ತರವಾಗಿದ್ದು, ತೋಫು ಹೊತ್ತು ನಿಂತಿವೆ. ಒಟ್ಟಿನಲ್ಲಿ ಇದೊಂದು ಹನ್ನೊಂದನೆಯ ಶತಕದಿಂದ 18–19 ಶತಮಾನಗಳವರೆಗೂ ಜೀವಂತ ಹಾಗೂ ಭದ್ರ ಇಸ್ಲಾಂ ಕೋಟೆ ಎಂದು ಹೇಳಬಹುದು. ಸುಮಾರು ಸಾವಿರ ವರುಷಗಳ ಬದುಕನ್ನು ಬಾಳಿದೆ.

ನಗರ ಕೋಟೆ: ತಾಲ್ಲೂಕು ನೆಲೆಯಾದ ಶಹಾಪೂರದಿಂದ ನೈರುತ್ಯಕ್ಕೆ 10 ಕಿ.ಮೀ. ದೂರ ಕೃಷ್ಣೆ ಹಾಗೂ ಭೀಮೆಗಳ ಮಧ್ಯದಲ್ಲಿ ನಗರವು ಸೈನಿಕ ಹಾಗೂ ಆಡಳಿತ ಕೇಂದ್ರ, ಅಲ್ಲಾವುದ್ದೀನ ಖಿಲಜಿಯ ಮಗ ಮುಬಾರಕ ಖಿಲಜಯು ಒಬ್ಬ ಅಧಿಕಾರಿಯನ್ನು ನೇಮಿಸಿದ್ದನು. ಮಹಮ್ಮದ್ ಬಿನ್ ತುಘಲಕ್‌ನ ಕಾಲದಲ್ಲಿ ಅವನ ದಾಯಾದಿ ಬಾಹುದ್ದೀನ ಗುರುಷಾಸ್ಪನು ನಗರ ಪ್ರಾಂತ್ಯದ ಅಧಿಕಾರಿಯಾಗಿದ್ದನು. ಕ್ರಿ.ಶ. 1347ದಲ್ಲಿ ಬಹಮನಿ ರಾಜ್ಯ ಸ್ಥಾಪನೆಯಾದ ಮೇಲೆ ನಗರವೂ ದಕ್ಷಿಣ ಭಾಗದ ಪಟ್ಟಣವಾಯಿತು. ಕ್ರಿ.ಶ. 1398–99ರಲ್ಲಿ ಫಿರೋಜಶಹನು ವಿಜಯ ನಗರದ ಮೇಲೆ ದಂಡೆತ್ತಿ ಹೋದಾಗ ಹಾಗೂ ಮರಳಿ ಬರುವಾಗ ಇಲ್ಲಿ ಬೀಡು ಬಿಟ್ಟಿದ್ದನು ಹಾಗೂ ಇದಕ್ಕೆ ನಸರತಾಬಾದ ಎಂದು (ವಿಜಯದ ಪಟ್ಟಣ) ಹೆಸರಿಟ್ಟ.

ಬಹಮನಿ ಅರಸರ ಕಾಲದಲ್ಲಿ ಇಲ್ಲಿಯ ಕೋಟೆ ಮತ್ತು ಇತರ ಅನೇಕ ಕಟ್ಟಡಗಳು ನಿರ್ಮಾಣವಾದುವು, ಆದಿಲಶಹರ ಕಾಲದಲ್ಲಿಯೂ ಕೂಡ. ಕ್ರಿ.ಶ. 1686ರಲ್ಲಿ ಬಿಜಾಪುರದ ಅರಸರ ಕೈಯಲ್ಲಿದ್ದ ನಗರವೂ ಔರಂಗಜೇಬನ ವಶವಾಗಿತ್ತು ಹಗೂ ಆತನ ಮರಣದವರೆಗೆ ಇದು ಮೊಘಲರ ದಕ್ಷಿಣದ ಟಂಕಸಾಲೆಯಾಗಿತ್ತು. ಈ ತಾಣದ ಪಶ್ಚಿಮಕ್ಕೆ ಇರುವ ಕೋಟೆ ಗೋಡೆಯು 8 ಮೀ ಅಗಲ ಮತ್ತು 5 ಮೀ ಎತ್ತರವುಳ್ಳ ಮಣ್ಣಿನ ಗೋಡೆಯನ್ನು ಹೊಂದಿದೆ. ಕೋಟೆಯು ನಾಲ್ಕು ವೃತ್ತಾಕಾರದ ಬುರುಜುಗಳನ್ನು ಹೊಂದಿದ್ದು ಪೂರ್ವ ಹಾಗೂ ಉತ್ತರ ದಿಕ್ಕುಗಳಲ್ಲಿ ಒಂದೊಂದು ಬಾಗಿಲುಗಳಿವೆ. ಪಶ್ಚಿಮಕ್ಕೆ ರೋಜಾ ಗುಮ್ಮಟಗಳು ಜಾಮಿ ಮಸೀದಿ ಸೂಫಿ ಸಂತ ಹಜರತ್ ದರ್ಗಾ, ವಾಯುವ್ಯಕ್ಕೆ ಕೆರೆ, ಕಮಾನುಗಳು ಬಾಗಿಲವಾಡಗಳು ಬಾವಿಗಳು ಅಲ್ಲಲ್ಲಿ ಇದ್ದು, ಈ ಕೋಟೆ ಸಂಪೂರ್ಣ ಶಿಥಿಲಾವಸ್ಥೆಯಲ್ಲಿದೆ.

ವನದುರ್ಗಾ ಕೋಟೆ: ಹೆಸರೇ ಸೂಚಿಸುವಂತೆ ಇದೊಂದು ಅರಣ್ಯ ಕೋಟೆ. ಶಹಪುರ ತಾಲ್ಲೂಕಿನ, ಶಹಪುರದಿಂದ ನೈರುತ್ಯಕ್ಕೆ 24 ಕಿ.ಮೀ. ದೂರದಲ್ಲಿದೆ. ಊರ ಪಶ್ಚಿಮಕ್ಕೆ ಚಿಕ್ಕ ಕೋಟೆ ಇದ್ದು, ಹೊರಕೋಟೆಯ ಪ್ರವೇಶದ್ವಾರದ ಮೇಲೆ ಇರುವ ಶಾಸನವು ಕ್ಷೇತ್ರಪಾಲನಾದ ವೇಣುಗೋಪಾಲಸ್ವಾಮಿಯ ವರಪುತ್ರನಾದ ಬದರೀಬಹಾದ್ದೂರ ರಾಜಾಪಿಡ್ಡನಾಯಕನು ತನ್ನ ರಾಣಿ ವೆಂಕಮ್ಮಳ ಬೇಡಿಕೆಯಂತೆ ಕ್ರಿ.ಶ. 1806ರಲ್ಲಿ ಈ ವನದುರ್ಗವನ್ನು ಕಟ್ಟಲು ಮುಂದಾದನಂತೆ.

ಕೋಟೆ ಚೌಕಾಗಿದ್ದು, ಎರಡು ಸುತ್ತಿನಲ್ಲಿ 250'X250' ಹರಡಿ, ಹೊರಗೋಡೆ ಎತ್ತರವಾಗಿದ್ದು, ಪೂರ್ವದ ಗೋಡೆ ಅತಿ ಎತ್ತರವಾಗಿದೆ. ವಿಶಿಷ್ಟ ಕಟ್ಟುವ ಪದ್ಧತಿ ಇಲ್ಲಿ. ಒಳಮೈಯನ್ನು ಕಲ್ಲಿನಿಂದ ಸ್ತರಗಳಲ್ಲಿ ಕಟ್ಟಿ, ಹೊರಮೈಯನ್ನು ಮಣ್ಣಿನ ಇಳಿಜಾರಿನಲ್ಲಿ (ramp) ನಿರ್ಮಿಸಲಾಗಿದೆ. ಇಂಥ ಚೌಕಾದ ಎರಡು ಸುತ್ತಿನ ಗೋಡೆ ಹೀಗೆಯೇ ಕಟ್ಟಲಾಗಿದೆ ಇವುಗಳ ಮಧ್ಯದಲ್ಲಿ ಕಂದಕವಿದೆ. ಇದು ಸಮಕಾಲೀನ ಬೆಳಗಾವಿ ಜಿಲ್ಲೆಯ ಕಿತ್ತೂರಿನ ಕಟ್ಟುವಿಕೆಯ ಪದ್ಧತಿಯಂತೆ ಇದೆ.

ಪ್ರವೇಶ ದ್ವಾರದಲ್ಲಿ ಆಂಗ್ಲ ಭಾಷೆಯ 'U' ಆಕಾರದ ವಿನ್ಯಾಸವಿದ್ದು, ಪ್ರವೇಶಕರನ್ನು ದಂಗು ಬಡಿಸುತ್ತವೆ. ಕಾವಲುದಾರರ ಕೋಣೆ, ಬಾಗಿಲುಗಳ ಕಮಾನುಗಳು ತೆನೆಗಳು; ಒಳಗೋಡೆಯನ್ನು ಚೆನ್ನಾದ ಕಲ್ಲುಗಳಿಂದ ಕಟ್ಟಲ್ಪಟ್ಟಿದೆ. ಕಲ್ಯಾಣ ಚಾಲುಕ್ಯ ಕಂಬಗಳನ್ನು ಇಲ್ಲಿಯ ಕೆಲವು ಅಂಕಣಗಳಿಗೆ ಉಪಯೋಗಿಸಲಾಗಿದೆ. ನೈರುತ್ಯ ಮೂಲೆಯಲ್ಲಿ ಚೌಕಾಕಾರದ ಒಂದು ಕಟ್ಟಡವಿದೆ. ಪುಟ್ಟಕೋಟೆಯಾದರೂ, ವಿನ್ಯಾಸ ಹಾಗೂ ಕಟ್ಟಡದ ಅಳವಡಿಕೆಯಲ್ಲಿ ಸೌಂದರ್ಯ ಪಡೆದಿದೆ. ಇದೊಂದು 19ನೆಯ ಶತಮಾನದ (ಆಧುನಿಕ ಕಾಲದ)ಕೋಟೆಗಳ ಮಾದರಿ.

ಕ್ಷೇ

ಕ್ಷೇತ್ರಪಾಲ ನರೋಣಾ: ಒಂದು ಪುಣ್ಯ ಕ್ಷೇತ್ರ. ಶ್ರೀಪ್ರಭು ರಾಮಚಂದ್ರನು ರಾವಣನ ಕೊಂದ ಆನಂತರ ಬ್ರಹ್ಮ ಹತ್ಯೆ ಮಾಡಿದ ಪಾಪವೆಂದು ಭಾವಿಸಿ ಭ್ರಮಿತನಾಗುತ್ತಾನೆ. ಅದಕ್ಕಾಗಿ ಮಾನಸಿಕ ಅಸ್ವಾಸ್ಥವುಂಟಾಗುತ್ತದೆ. ಸರಿಯಾಗಿ ನಿದ್ರೆ ಬಾರದೇ ರಾವಣ ಹಿಂದೆ ಬಂದಂತೆ ಭಾಸವಾಗುತ್ತಿತ್ತು. ಮನಃಶಾಂತಿಗಾಗಿ ಶ್ರೀ ಕ್ಷೇತ್ರ ಪಾಲ ದರ್ಶನಕ್ಕೆ ಬಂದಾಗ, ಇಲ್ಲಿ ರಾವಣ ಬೆಂಬತ್ತಿದಂತೆ ಭಾಸವಾಗದೇ ಮನಸ್ಸಿಗೆ ಶಾಂತಿ ಲಭಿಸಿತು. ಇದೇ 'ನ–ರಾವಣ' ನ ಕ್ಷೇತ್ರ ಇಂದಿನ ನರೋಣ.

ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕು ನರೋಣಾ ಗ್ರಾಮದಿಂದ ಎರಡು ಮೈಲು ದೂರದ ನಿಸರ್ಗ ರಮ್ಯ ತಾಣದಲ್ಲಿರುವ ಶಂಕರನ ಕ್ಷೇತ್ರಕ್ಕೆ ಕ್ಷೇತ್ರಪಾಲವೆಂದು ಕರೆಯುತ್ತಾರೆ. ಇಂತಹ ಒಂದು ದೇವಾಲಯ ಸುಮಾರು 2 ಕಿ.ಮೀ. ದೂರದಲ್ಲಿ ನರೋಣಾ ಗ್ರಾಮದ ಪೂರ್ವ ದಿಕ್ಕಿನಲ್ಲಿ ಇದೆ. ಈ ಕ್ಷೇತ್ರಪಾಲ ಮಣಿಚೂರ ಪರ್ವತದ ಮಡಿಲಲ್ಲಿ ಇದೆ. ಈ ಪರ್ವತ ಪ್ರದೇಶದಲ್ಲಿ ಬರುವ ಬೀದರ, ಬಸವಕಲ್ಯಾಣ ಹಾಗೂ ಆಳಂದ ತಾಲ್ಲೂಕುಗಳ ಅನೇಕ ಪವಿತ್ರ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಂದ ತುಂಬಿಕೊಂಡಿವೆ. ಇಂತಹವುಗಳಲ್ಲಿ ನರೋಣಾದ ಶಂಕರನ ದೇವಾಲಯವೂ ಒಂದು. ಇದಕ್ಕೆ ವಿಶ್ವೇಶ್ವರನ ದೇವಾಲಯವೆಂದು ಹೇಳುತ್ತಾರೆ.

ಈ ಕ್ಷೇತ್ರಪಾಲದ ಸುತ್ತ ಏಳು ತೀರ್ಥಗಳುಂಟು. ಇವುಗಳಿಗೆ ಸಪ್ತ ಕುಂಡಗಳೆಂದು ಕರೆಯುತ್ತಾರೆ. ಇಲ್ಲಿ ಹರಿಯುವ ಸಣ್ಣ ನದಿಯೊಂದನ್ನು ಕೂಡಿ ಒಟ್ಟು ಎಂಟು ಕುಂಡಗಳಾಗಿ ಅಷ್ಟತೀರ್ಥಗಳ ಮಹಾತ್ಮೆ ಈ ಕ್ಷೇತ್ರಕ್ಕುಂಟು. ಇತ್ತೀಚೆಗೆ ಈ ವಿಶ್ವೇಶ್ವರ ದೇವಸ್ಥಾನಕ್ಕೆ ಕ್ಷೇಮಲಿಂಗವೆಂದು ಕರೆಯುತ್ತಾರೆ.

ಕಾರ್ತೀಕ ಸ್ವಾಮಿಗೆ ಆರು ಮುಖಗಳು, ಹನ್ನೆರಡು ಕೈಗಳು, ಹನ್ನೆರಡು ತರಹದ ಶಸ್ತ್ರಗಳು, ನವಿಲು ವಾಹನ ಹಾಗೂ ಉತ್ತರ ಮುಖಿಯಾಗಿ ವೈಜ್ಞಾನಿಕವಾಗಿ ಸ್ಥಾಪಿಸಲ್ಪಟ್ಟಿದೆ. ಮತ್ತೊಂದು ವೈಶಿಷ್ಟ್ಯವೆಂದರೆ, ಇಲ್ಲಿ ದರ್ಶನಕ್ಕೆ ಬರುವವರು ಕೇವಲ ಪುರುಷರು. ಸ್ತ್ರೀಯರಿಗೆ ಆಸ್ಪದವಿಲ್ಲ. ಹಾಗೂ ಕುಂಡದ ನೀರಿನ ಉಪಯೋಗವು ಅವರಿಗೆ ನಿಷಿದ್ಧ, ಇದು ಇಲ್ಲಿಯ ಸಂಸ್ಕೃತಿಯಾಗಿದೆ. ಈ ಷಡಾನನ ಮೂರ್ತಿಯ ಮಂದಿರದ ಮೇಲೆ ಮಹಾದೇವರ ಪೀಠವಿದೆ. ಈ ದೇವರಿಗೆ ಇತ್ತೀಚೆಗೆ ಮಲ್ಲಿಕಾರ್ಜುನ ಮಂದಿರವೆಂದು ಕರೆಯಲಾಗುತ್ತದೆ. ಕಾರಣ ಶ್ರೀರಾಮನಿಂದ ಸ್ಥಾಪಿತ ರಾಮನು ಶ್ರೀಶೈಲದಿಂದ ಇಲ್ಲಿಗೆ ಬಂದದ್ದರ ದ್ಯೋತಕವಾಗಿ ಇದಕ್ಕೆ ಶ್ರೀರಾಮ ಸರೋವರ ಎಂದು ಕರೆಯುತ್ತಾರೆ.

ನರೋಣಾದ ಸಮೀಪದ ಚಿಂಚನಸೂರ್ ಎಂಬಲ್ಲಿ ರಾಮಚಂದ್ರ ಶಿವಲಿಂಗವೊಂದನ್ನು ಸ್ಥಾಪಿಸಿದನೆಂದು ಪ್ರತೀತಿ ಇದೆ. ಶ್ರೀ ಕ್ಷೇತ್ರಪಾಲವು ಅತ್ಯಂತ ನಿಸರ್ಗ ರಮಣೀಯ ಕ್ಷೇತ್ರ. ಇಲ್ಲಿನ ನಿಸರ್ಗವೇ ಮನಮೋಹಕವಾಗಿದೆ. ಪ್ರತಿ ವರುಷ ಕಾರ್ತೀಕ ಶುದ್ಧ ಪೂರ್ಣಿಮೆಗೆ ಮತ್ತು ವೈಶಾಖ ಶುದ್ಧ ಪೂರ್ಣಿಮೆಗೆ ದೇವರ ಹೆಸರನಲ್ಲಿ ಇಲ್ಲಿ ದೊಡ್ಡ ಪ್ರಮಾಣದಲ್ಲಿ ಜಾತ್ರೆ ನಡೆಯುತ್ತದೆ.

(ಎನ್‌ಆರ್‌ವಿ)

ಖ

ಖಂಡೋಬಾ ಪಿ.ಕೆ.: ಕನ್ನಡ ಜಾನಪದ ಕ್ಷೇತ್ರದಲ್ಲಿ ಡಾ. ಪಿ.ಕೆ. ಖಂಡೋಬಾ ಅವರದು ಮಹತ್ವದ ಹೆಸರು. ಅವರ ಹಾಗೆ ಕರ್ನಾಟಕ ಲಂಬಾಣಿಗರ ಜಾನಪದ ಮತ್ತು ಸಂಸ್ಕೃತಿ ಸಂಶೋಧನಾ ಕಾರ್ಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವರು ವಿರಳ. ಅವರು ಈ ಕೆಲಸವನ್ನು ತುಂಬ ಶ್ರದ್ಧೆ ಮತ್ತು ಪರಿಶ್ರಮದಿಂದ ನಡೆಸಿಕೊಂಡು ಬಂದಿದ್ದಾರೆ. ಅಧ್ಯಯನ, ಅಧ್ಯಾಪನ, ಸಂಶೋಧನೆ, ಬರವಣಿಗೆ ಮತ್ತು ಪ್ರಕಟಣೆಗಳಂಥ ಕೆಲಸ ಕಾರ್ಯಗಳಲ್ಲಿ ಸದಾ ಕ್ರಿಯಾಶೀಲರಾಗಿರುವ



ಖಂಡೋಬಾ ಒಬ್ಬ ವಿಶಿಷ್ಟ ಛಾಪಿನ ಅಧ್ಯಾಪಕ, ಮಾರ್ಗದರ್ಶಕ. ಸುಮಾರು ಮೂವತ್ತನಾಲ್ಕು ವರ್ಷಗಳ ಕಾಲ ಅಧ್ಯಾಪಕರಾಗಿ, ಪ್ರವಾಚಕರಾಗಿ ಹಾಗೂ ಪ್ರಾಧ್ಯಾಪಕರಾಗಿ, ಇಂದಿಗೂ ವೃತ್ತಿ ಜೀವನವನ್ನು ಸಮರ್ಥವಾಗಿ ಹಾಗೂ ನಿಷ್ಠೆಯಿಂದ ನಿರ್ವಹಿಸಿ ಕೊಂಡು ಬರುತ್ತಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಸುಮಾರು 20 ಮಂದಿ ಪಿಎಚ್.ಡಿ. ಸಂಶೋಧಕರು ಹಾಗೂ 20 ಜನ ಎಂ.ಫಿಲ್ ವಿದ್ಯಾರ್ಥಿಗಳು ಪದವಿ ಪಡೆದಿದ್ದಾರೆ. ಇನ್ನೂ ಕೆಲವರು ಪಡೆಯುವವರಿದ್ದಾರೆ. ತೀರ ಬಡತನದ ಪರಿಸರದಿಂದ ಪುಟಿದೆದ್ದು ಬಂದ ಅವರು ಸ್ವಾಭಿಮಾನ, ಛಲ, ಆತ್ಮ ವಿಶ್ವಾಸ ಮತ್ತು ಹೋರಾಟಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡು ಬಂದವರು. ಅಕೆಡೆಮಿಕ್ ವಲಯದಲ್ಲಿ ಶಿಸ್ತಿಗೆ ಇನ್ನೊಂದು ಹೆಸರಾಗಿದ್ದವರು ಪಿ.ಕೆ. ಖಂಡೋಬಾ. ಅವರ ಚಿಂತನೆ ಮತ್ತು ಆಡಳಿತ ವೈಖರಿಯಲ್ಲಿ ಶಿಸ್ತು ಎದ್ದು ಕಾಣಿಸುತ್ತದೆ.

ಡಾ. ಖಂಡೋಬಾ ಅವರು ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲ್ಲೂಕಿನ ಶಿರೂರ ತಾಂಡಾದಲ್ಲಿ 1953ರ

ಚಾಲುಕ್ಯ ಅರಸರ ಆರನೆಯ ವಿಕ್ರಮಾದಿತ್ಯನ ಕ್ರಿ.ಶ. 1088ರ ಶಾಸನವು ಈ ಊರನ್ನು 'ಇರಜೇರಿ' ಎಂದು ಕರೆದಿದೆ, ಹಾಗೂ ಶ್ರೀ ಶಂಕರನಾರಾಯಣ ದೇವರಿಗೆ ಮತ್ತು ಅಗ್ರಹಾರದ ವಿದ್ಯಾರ್ಥಿಗಳಿಗೆ ಕೊಟ್ಟ ದಾನವನ್ನು ಉಲ್ಲೇಖಿಸುತ್ತದೆ. ಮುಸ್ಲಿಂ ದಾಳಿ ತಡೆಯಲು ಸುರಪುರದ ಎರಡನೆಯ ವೆಂಕಟಪ್ಪ ನಾಯಕನು (ಕ್ರಿ.ಶ. 1773–1802) ಇಲ್ಲಿ ಕೋಟೆಯನ್ನು ಕಟ್ಟಿಸಿದ.

ಊರ ನೈರುತ್ಯಕ್ಕೆ ಎರಡು ಸುತ್ತಿನ ಚೌಕಾಕಾರದ ಚಿಕ್ಕ ಕೋಟೆ. ಅದರ ಹೊರಗಡೆ ಇದ್ದ ಕಂದಕ ಮುಚ್ಚಿ ಹೋಗಿದೆ. ಹೊರಗೋಡೆಯ ಹೊರ ಬದಿ ಬಿದ್ದು, ಅದರ ಮಣ್ಣಿನ ದಿಬ್ಬ ಮಾತ್ರ ಉಳಿದಿದೆ. ಒಳಬದಿಕೋಣೆ ಗೋಡೆ ಉಳಿದಿದೆ.

ಊರ ಹೊರಗಡೆಯ ಹೊರ ಕೋಟೆಯ ಉತ್ತರ ಭಾಗದಲ್ಲಿ ಪ್ರವೇಶ ದ್ವಾರವಿದೆ. ಬಾಗಿಲ ಪಕ್ಕದಲ್ಲಿ ಕೊತ್ತಲಗಳಿಲ್ಲ (bastions), ಚೌಕಟ್ಟಿನಲ್ಲಿ ಲಲಾಟದ ಮೇಲೆ ಸೂರ್ಯ ಚಂದ್ರ ವೃತ್ತಾಕಾರದ ಹೂ ಇವೆ. ವೈರಿಯ ಕಣ್ಣು ಮರೆಮಾಚಲು ಅದರ ಮುಂದೆ ಮತ್ತೊಂದು ಗೋಡೆ ಕಟ್ಟಲಾಗಿದೆ.

ಒಳಕೋಟೆಯ ನಾಲ್ಕು ಮೂಲೆಗಳಲ್ಲಿ ವೃತ್ತಾಕಾರದ ಬುರುಜುಗಳಿವೆ. ಪೂರ್ವದ ಗೋಡೆಯಲ್ಲಿ ಪ್ರವೇಶದ್ವಾರವಿದೆ. ಎದುರು ಬದುರಾದ ಮೀನುಗಳೆರಡು ಇವೆ, ಅವು ಸುರಪುರ ರಾಜರ ಚಿನ್ಹೆ, ಕೋಟೆಯ ಒಳಭಾಗ 185 x 185 x 1 (z) ಮೀ. ಇದೆ ಯಾವುದೇ ಕಟ್ಟಡಗಳಿಲ್ಲ. ಇದೊಂದು ಸರಳ ಸಾದಾ ಚೌಕಾದ ವಿನ್ಯಾಸದ ಕೋಟೆ.

ಚಿನ್ಮಳ್ಳಿ ಕೋಟೆ: ಈ ಕೋಟೆಯು ಅಫಜಲ್‌ಪುರ ತಾಲ್ಲೂಕಿನಲ್ಲಿದೆ. ತಾಲ್ಲೂಕಿನ ಆಗ್ನೇಯಕ್ಕೆ 42 ಕಿ.ಮೀ. ಹಾಗೂ ಗುಲಬರ್ಗಾದಿಂದ ನೈರುತ್ಯಕ್ಕೆ, 53 ಕಿ.ಮೀ. ದೂರದಲ್ಲಿದೆ. 12ನೆಯ ಶತಮಾನದಲ್ಲಿ ಇದಕ್ಕೆ 'ಚೆಲ್ಲಮೆಳೆ', ಚಿಲ್ಲಮಶೆ ಎಂದು ಕರೆಯಲಾಗಿದೆ. ಇಲ್ಲಿ 11–12 ಶತಕದಲ್ಲಿ ಶ್ರೀ ಮಲ್ಲಿಕಾರ್ಜುನ ದೇವಾಲಯ ಉತ್ತರಾಭಿಮುಖವಾಗಿದೆ. ಎದುರಿಗೆ ಹರಿವ ಭೀಮಾನದಿಗೆ ಹೋಗಲು ಪ್ರಾಕಾರದಲ್ಲಿ ದ್ವಾರಮಂಟಪವಿದೆ.

ಈ ಕೋಟೆಯು ಶ್ರೀ ಮಲ್ಲಿಕಾರ್ಜುನ ದೇವಾಲಯವನ್ನೊಳಗೊಂಡು, ಊರನ್ನು ಸುತ್ತುವರಿದಿದೆ. ಪೂರ್ವಭಾಗದ ಕೋಟೆ ಸರಳ ರೇಖೆಯಲ್ಲಿದ್ದು, ಈಶಾನ್ಯ ಮೂಲೆಯ ಮೊನಚಾದ ಕೋನಗಳಿಂದ ಓರೆಯಾಗಿ ಸರಳ ರೇಖೆಯಲ್ಲಿ ನದಿಯ ದಂಡೆಯ ಮೇಲೆ ಪಶ್ಚಿಮ ಬಾಗಿಲದ ಪಕ್ಕದ ಕೊತ್ತಲವನ್ನು ಸೇರುತ್ತದೆ. ಪೂರ್ವ ಪಶ್ಚಿಮದಲ್ಲಿ ಎರಡು ಬಾಗಿಲಗಳು, ಉತ್ತರ ದಕ್ಷಿಣ ಭಾಗಗಳಲ್ಲಿ ಎರಡು ದಿಡ್ಡಿ ಬಾಗಿಲಗಳು, ಮತ್ತು ಹದಿನಾರು ವೃತ್ತಾಕಾರದ ಅರ್ಧ ವೃತ್ತಾಕಾರದ ಬುರುಜುಗಳು ಇವೆ. ಗೋಡೆ ಚೆನ್ನಾಗಿ ಕತ್ತರಿಸಿದ ಕಟೆದ ಕಲ್ಲುಗಳಿಂದ ಸ್ತರಗಳನ್ನು ಹೊಂದಿದೆ ಇದೆ. ಮಲ್ಲಿಕಾರ್ಜುನ ದೇವಾಲಯದಿಂದ ನದಿಗೆ ಹೋಗಲು ಉತ್ತರ ದಿಕ್ಕಿನಲ್ಲಿ ಕೋಟೆಯ ಮೂಲಕ ಮೆಟ್ಟಿಲುಗಳ ದಾರಿ ಇದೆ. ಇದು 17–18 ಶತಮಾನಲ್ಲಿಕ ನಿರ್ಮಾಣವಾದ ಕೋಟೆ.

ಸೇಡಂ ಕೋಟೆ: ಸೇಡಂ ಊರು ತಾಲ್ಲೂಕು ಕೇಂದ್ರವಾಗಿದ್ದು. ಗುಲಬರ್ಗಾದಿಂದ ಪೂರ್ವಕ್ಕೆ ಸುಮಾರು 25 ಕಿ.ಮೀ. ದೂರ ಇದೆ. ರೈಲು ಹಾಗೂ ರಸ್ತೆಯಿಂದ ಗುಲಬರ್ಗಾದಿಂದ ತಲಪಬಹುದು.

ಸೇಡಂ, ರಾಷ್ಟ್ರಕೂಟರ ದಕ್ಷಿಣ ಭಾಗದ ಮಹತ್ವದ ಆಡಳಿತ ಕೇಂದ್ರವಾಗಿತ್ತು. (900 ಸುತ್ತಮುತ್ತ ಕ್ರಿ.ಶ.); ಇಲ್ಲಿ ಜೈನ ಬಸದಿಗಳು, ಮಾನಸಸ್ತಂಭ, ಅವುಗಳಲ್ಲಿ ಇರುವ ಶಿಲಾಲೇಖಗಳು, ಬಾವಿಗಳು ರಾಷ್ಟ್ರಕೂಟರ ಐತಿಹಾಸಿಕ ಸಂಪರ್ಕ ಸಾರುತ್ತವೆ; ಶಿಥಿಲವಾದ, ಬಹುಮಟ್ಟಿಗೆ ತನ್ನ ಇಡೀ ವಿನ್ಯಾಸವನ್ನೇ ಕಳೆದುಕೊಂಡ ರಾಷ್ಟ್ರಕೂಟರ ಕಾಲೀನ ಕೋಟೆಯಂತೂ ಗುರುತಿಸಲು ಕಷ್ಟ ಕಲ್ಯಾಣ ಚಾಲುಕ್ಯರ ಶಿವಾಲಯಗಳು ಒಂದೆರಡು ಇವೆ.

ಮುಸ್ಲಿಂ ಆಡಳಿತದಲ್ಲಿ 1500–1800 ಕ್ರಿ.ಶ. ವರೆಗೆ, ಇದರ ಕೋಟೆಯು ಅಲ್ಲಿಲ್ಲಿ ದುರಸ್ತಿಗೊಂಡಿದ್ದು, ಉತ್ತರ–ಪಶ್ಚಿಮ ದಿಶೆಯಲ್ಲಿ ಮಾತ್ರ ಪ್ರವೇಶದ್ವಾರವಿದೆ ಆಂಗ್ಲ ಭಾಷೆಯ 'ಐ' ಆಕಾರದಲ್ಲಿ. ಈ ಪ್ರವೇಶದ್ವಾರದಲ್ಲಿ ಎರಡೂ ಬದಿಗೆ ಬೇಕಾದ ಬುರುಜುಗಳಿವೆ. ಒಂದು ಬುರುಜಿನ ಮೇಲೆ ಗುಮ್ಮಟವುಳ್ಳ ಮಸೀದಿಯನ್ನು ಕಟ್ಟಲಾಗಿದೆ. ಇದು ಪುಟ್ಟದಾಗಿದೆ. *(ಎಸ್‌ಕೆಜೆ)*

ಕೋರಣೇಶ್ವರ ಉತ್ಸವ: ಆಳಂದ ತಾಲ್ಲೂಕಿನ ಗಡಿಗ್ರಾಮ ಖಜೂ–ರಿಯ ಆರಾರ್ಧ್ಯ ದೈವ ಕೋರಣೇಶ್ವರ ಮಹಾ ರಥೋತ್ಸವದಲ್ಲಿ ಸಾವಿರಾರೂ ಬಕ್ತರ ಧನತಾಭಾವದೊಂದಿಗೆ ಸಡಗರ ಸಂಭ್ರಮದಿಂದ ಪಾಲ್ಗೊಳುತ್ತಾರೆ.

ಗ್ರಾಮದ ಹೊರವಲಯದ ಕೋರಣೇಶ್ವರ ವ್ಮಠದ ಮುಂದೆ ಎಲ್ಲಿ ನೋಡಿದರೂ ಜನ ಜಂಗುಳಿ. ಗ್ರಾವದ ವಿಠಲ ರುಕ್ಮೀಣಿ ಮಂದಿರದಿಂದ ಉತ್ಸವ ಮೆರವಣಿಗೆಯು ಅತಂತ ಅದ್ಧೂರಿಯಾಗಿ ಗ್ರಾಮದ ಸಾಂಸ್ಕೃತಿಕ ಕಲಾತಂಡಗಳ ಪ್ರದರ್ಶನ ಕುಣಿತ, ಜೈಕಾರದಿಂದ ಡೊಳ್ಳು, ಬಾಜಾ, ಬಜಂತ್ರಿ ಸಮೇತವಾಗಿ ಗ್ರಾಮದಲ್ಲಿ ಸಂಚರಿಸಿ ಬೆಳಿಗ್ಗೆ ಕೋರಣೇಶ್ವರ ಗದ್ದುಗೆಗೆ ಬರುತ್ತದೆ.

ಸೂರ್ಯೋದಯದ ಜೊತೆಗೆ ಸುತ್ತಲಿನ ಭಕ್ತರ ಹಿಂಡು ಹಿಂಡಾಗಿ ಕೈಯಲ್ಲಿ ತೆಂಗಿನಕಾಯಿ ಒಡೆದು ದರ್ಶನ ಪಡೆದರು ನಂತರ ಮತ್ತೆ ಮಹಾರಥೋತ್ಸವದ ಕಳಶ, ನಂದಿಕೋಲ ಮೆರವಣಿಗೆ, ದಾರಿಯಲ್ಲಿ ಸುಮಂಗಲೆಯರು ರಸ್ತೆಯ ಇಕ್ಕೆಲದ ಸರತಿ ಸಾಲಿನಲ್ಲಿ ಕುಂಭವನ್ನು ಹೊತ್ತು ಸಾಗುತ್ತಿದ್ದರೆ, ಯುವಕರು ನಂದಿಕೋಲು ಎತ್ತಿಕೊಂಡು ಕೋರಣೇಶ್ವರ ಸ್ವಾಮಿಗಳು ಕರಸ್ಪರ್ಶದಿಂದ ಕಳಶಾರೋಹಣ ಜರುಗುತ್ತದೆ.

ರಥ ಪಕ್ಕದ ಬಾವಿ ಬದಿಯಲ್ಲಿ ನಿಂತ ಹೊಸ ಬಿಳಿಲುಂಗಿ ಬನಿಯನ್ ಧರಿಸಿದ ಯುವಕರು, ಹಿರಿಯರು ಹಾಗೂ ಮಹಿಳೆಯರು ಕೊಡದಿಂದ ಮೈಮೇಲೆ ನೀರು ಹಾಕಿಕೊಂಡು ಅಗ್ನಿಕಟ್ಟೆಯಲ್ಲಿ ಸಮಾವೇಶವಾಗುತ್ತಾರೆ.

ಪುರವಂತರು ರಾಜಗಾಂಭೀರ್ಯದಿಂದ ಕರಿವೀರಭದ್ರೇಶ್ವರರ ವಚನ ಒಡಪುಗಳನ್ನು ಅರ್ಭಟಿಸುತ್ತಾ ಕತ್ತಿವರಸೆ ಮತ್ತು ಸರುಳುಗಳನ್ನು ತಮ್ಮ ದೇಹದ ತುಟಿ, ನಾಲಿಗೆ, ಕೊರಳುಗಳಿಗೆ ಚುಚ್ಚಿಕೊಳ್ಳುವುದು ನೋಡುಗರಿಗೆ ರೋಮಾಂಚನ ಉಂಟುಮಾಡುತ್ತದೆ. ಸುಡು ಬಿಸಿಲಿನಲ್ಲಿಯೇ ಬಾಲಕರು, ಹಿರಿಯರು ಹಾಗೂ ಮಹಿಳೆಯರು ಹಸಿ ಮೈಯಲ್ಲಿ ಅಗ್ನಿ ಪ್ರವೇಶ ಮಾಡಿ ಹರಕೆ ತೀರಿಸಿಕೊಳ್ಳುತ್ತಾರೆ.

(ಪಿ.ಕೆ.ಕೆ)

ವಿಶಿಷ್ಟ ಬಗೆಯ ಸಂಗೀತವಾಗಿದೆ. ಖವಾಲಿಯು 'ಸೂಫಿ' ಸಂಪ್ರದಾಯದೊಂದಿಗೆ ತಳುಕು ಹಾಕಿಕೊಂಡಿದೆ. ಹೀಗಾಗಿ ಇಸ್ಲಾಂ ಧರ್ಮೀಯರಲ್ಲಿ ಇದರ ಹಾಡುಗಾರಿಕೆ ಹೆಚ್ಚಾಗಿದೆ. ಖವಾಲಿಯ ಪ್ರಾಚೀನತೆಯು ಕ್ರಿ.ಶ. 8ನೆಯ ಶತಮಾನಕ್ಕೆ ಹೋಗುತ್ತದೆ. ಫರ್ಶಿಯಾ ದೇಶ (ಇಂದಿನ ಇರಾನ ಮತ್ತು ಅಫಘಾನಿಸ್ತಾನ)ದಲ್ಲಿ ಖವಾಲಿಯ ಹಾಡುಗಾರಿಕೆ ಇತ್ತೆಂದು ತಿಳಿದುಬರುತ್ತದೆ.

ಭಾರತಕ್ಕೆ ಮುಸ್ಲೀಮರು 11ನೆಯ ಶತಮಾನದಲ್ಲಿ ಬಂದರು. ಮೊದ ಮೊದಲು ಸೂಫಿ ಸಂತರಾಗಿದ್ದ ಖಾಜಾ ಮೈನೊದ್ದೀನ ಚಿಸ್ತಿ ಅವರು ಅಜಮೀರಕ್ಕೆ ಬಂದು ಇಸ್ಲಾಂ ಧರ್ಮಕ್ಕೆ ಇಂಬು ನೀಡಿದರು. ಆಗ ಭಾರತದಲ್ಲಿ ಸಂಗೀತ ಸಾಧನೆ ಜೋರಾಗಿತ್ತು. ಹಿಂದುಗಳ 'ಭಜನೆ' ಮತ್ತು ಸಿಖ್ಖರ 'ಭಕ್ತಿ' ಸಂಪ್ರದಾಯದ ಹಾಡುಗಳ ಪ್ರಭಾವ ಒಂದು ಕಡೆ ಮತ್ತು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ಆಕರ್ಷಣೆ ಇನ್ನೊಂದು ಕಡೆ ಇತ್ತು. ಇವೆಲ್ಲ ಮೈನೊದ್ದೀನ ಚಿಸ್ತಿ ಅವರಿಗೆ ಅತ್ಯಂತ ಆಕರ್ಷಣೀಯವೆನಿಸಿತು.

ಭಾರತದಲ್ಲಿನ ಎಲ್ಲ ಧರ್ಮೀಯರಿಗೂ ಇಸ್ಲಾಂ ಧರ್ಮದ ಸಂದೇಶಗಳನ್ನು ತಲುಪಿಸಬೇಕೆಂಬ ಉದ್ದೇಶದಿಂದ 'ಖವಾಲಿ'ಯನ್ನು ಮಾಧ್ಯಮವಾಗಿಸಿ ಮುಸ್ಲಿಂ ಸಂತರು ಬಳಸಿದರು. ತುಂಬಾ ಪ್ರಾಚೀನವಾದ ಖವಾಲಿಯನ್ನು, ಸಾಂಪ್ರದಾಯಿಕ ಖವಾಲಿ ಹಾಡುಗಾರರು ತಮ್ಮ ಕುಟುಂಬ ಮತ್ತು ಸಮುದಾಯಗಳಲ್ಲಿ ಮಾತ್ರ ಹಾಡಿಕೊಂಡು ಬರುತ್ತಿದ್ದರು.

ಖವಾಲಿಯನ್ನು ಇಂದು ಸಭಿಕರ ಎದುರು ಮತ್ತು ಸ್ಟುಡಿಯೋ ಎರಡರಲ್ಲಿಯೂ ಕೇಳಬಹುದಾಗಿದೆ. ಖವಾಲಿಯ ಎಂದರೆ ಅದರ ಓತಪ್ರೇತ ಹಾಡುಗಾರಿಕೆ (Spontanious flow) (ಗಿರಾಹ) ಮತ್ತು ಧ್ವನಿಯ ಏರಿಳಿತಗಳು ವೈಶಿಷ್ಟ್ಯ.

ಇಸ್ಲಾಂ ಧರ್ಮದಲ್ಲಿ ದೇವರು ಮತ್ತು ಭಕ್ತನ ನಡುವೆ ಆತ್ಮೀಯ ಪ್ರಾರ್ಥನೆ, ಪ್ರಶಂಸೆ ಮತ್ತು ನಿವೇದನೆ ಕಂಡು ಬರುತ್ತವೆ. ಶಿವಶರಣರ 'ಶರಣಸತಿ ಲಿಂಗಪತಿ' ಭಾವದ, ಮಧುರ ಭಕ್ತಿಯ ಹಾಡುಗಳನ್ನೇ 'ಖವಾಲಿ' ಎಂದು ಕರೆಯುವರು. ವಿಶೇಷವಾಗಿ ಸಂತರು ಭಕ್ತರು ತಮ್ಮ ಆತ್ಮಶುದ್ಧಿಗಾಗಿ ಹಾಡಿಕೊಳ್ಳುವ ಹಾಡುಗಳು ಇವಾಗಿವೆ.

ಖವಾಲಿಯೂ 'ಖೌಲ್' ದಿಂದ ಬಂದಿದೆ. 'ಖೌಲ್' ಎಂದರೆ ಹೇಳುವುದು, ಖವಾಲಿಯ ಅರ್ಥ ಬಹಳ ಹೇಳುವುದು ಅಥವಾ ದೀರ್ಘಕಾಲ ಹಾಡುವುದು ಎಂದಾಗುತ್ತದೆ. ಖ್ವಾಲ್ ಹೇಳುವವ ಖವಾಲ್, ಖವಾಲ್‌ನಿಂದ ಖವಾಲಿ ಹೀಗೆ ಖ್ವಾಲ > ಖವಾಲ > ಖವಾಲಿ ರೂಪ ಪಡೆಯಿತು.

ದಿಲ್ಲಿಯ ನಿಜಾಮೊದ್ದೀನ ಔಲಿಯಾ ಅವರ ಶಿಷ್ಯ ಅಮೀರ ಖುಸ್ರೋ ಸೂಫಿ ಪಂಥದ ಚಿಸ್ತಿಗಳಾಗಿದ್ದರು. ಇವರು ಪಾರ್ಸಿ ಮತ್ತು ಭಾರತೀಯ ಸಂಗೀತ ಸಂಪ್ರದಾಯಗಳನ್ನು ಸಮ್ಮಿಳನಗೊಳಿಸಿ ಖವಾಲಿಯನ್ನು ಸೃಷ್ಟಿಸಿದ್ದರು. ಮತ್ತು ತಮ್ಮ ಗುರುಗಳಿಗಾಗಿ ಅನೇಕ ಖವಾಲಿಗಳನ್ನು ರಚಿಸಿ ಹಾಡಿ ರಂಜಿಸಿದರು.

13ನೆಯ ಶತಮಾನದ ಹೊತ್ತಿಗೆ ಖವಾಲಿ ಹಿಂದುಸ್ತಾನಿ ಸಂಗೀತದ ಪ್ರಭಾವದಿಂದ ಮತ್ತಷ್ಟು ಆಕರ್ಷಕವಾಯಿತು. ಮಧ್ಯ ಏಷ್ಯಾ ಮತ್ತು ತುರ್ಕಿಯಲ್ಲಿ ರೂಢಿಯಲ್ಲಿದ್ದ ಸಮಾ (Sama) ಕೇಳುವುದು ಎಂದರ್ಥ) 'ಖವಾಲಿ' ಹಾಡುವಾಗ ಜನ ಅದನ್ನು ಕೇಳುತ್ತಿದ್ದರು. ಆದ್ದರಿಂದ ಖವಾಲಿ ಹಾಡುಗಾರಿಕೆಯೂ ಭಾರತ, ಪಾಕಿಸ್ತಾನ ಮತ್ತು ಬಾಂಗ್ಲಾ ದೇಶಗಳಲ್ಲಿ 'ಮೆಹಫಿಲ್-ಎ-ಸಮಾ' ಎಂಬ ಹೆಸರಿನಲ್ಲಿಯೂ ಪ್ರಸಿದ್ಧಿ ಪಡೆಯಿತು.

1970ರಿಂದ ಖವಾಲಿ ಹಾಡುಗಾರರಾದ ನುಸ್ರತ ಫತೇ ಅಲಿ ಖಾನ್, ಗುಲಾಮ ಫರೀದ ಸಭೇರಿ, ಮಗದುಮ ಸಭೇರಿ ಸಹೋದರರು ಮತ್ತು ಅಜೀಜ ಮಿಯಾನಿ ಮೊದಲಾದವರು ತಮ್ಮ ಸಂಗಡಿಗರೊಂದಿಗೆ ದೇವರ (ಅಲ್ಲಾಹ) ಮತ್ತು ಪ್ರವಾದಿ ಮಹ್ಮದರ ಕುರಿತು ಅನೇಕ ಪ್ರಾರ್ಥನಾ ಹಾಡುಗಳನ್ನು ಹಾಡಿ ಜನಮನ ರಂಜಿಸಿದ್ದಾರೆ. ಇವರು ತಮ್ಮ ಹಾಡಿಗಾಗಿ ಸಾಹಿತ್ಯವನ್ನು ಉರ್ದು, ಪಂಜಾಬಿ ಮತ್ತು ಪರ್ಶಿಯನ್ ಕಾವ್ಯಗಳಿಂದ ಪಡೆದುಕೊಂಡಿರುತ್ತಾರೆ.

ಖವಾಲಿ ಹಾಡುಗಳು 15 ರಿಂದ 30 ನಿಮಿಷಗಳವರೆಗಿನ ದೀರ್ಘ ಹಾಡುಗಳಾಗಿರುತ್ತವೆ. ಕೇವಲ ಪುರುಷರು ಮಾತ್ರ ಖವಾಲಿ ಹಾಡುತ್ತಾರೆ. ಇತ್ತೀಚೆಗೆ ಅಬಿದಾ ಪರ್ವಿನ್ ಎಂಬ ಮುಸ್ಲಿಂ ಮಹಿಳೆ ಖವಾಲಿ ಹಾಡತೊಡಗಿದ್ದಾರೆ. ಸಭಿಕರು ಹೆಚ್ಚಾಗಿದ್ದಲ್ಲಿ ಖವಾಲಿ ಜನ-ಮನ ರಂಜಿಸುವ ಸಂಗೀತವಾಗಿದೆ. ಖವಾಲಿಯ ಜನಪ್ರಿಯತೆಯಿಂದಾಗಿ ಇಂದು ಸಿನಿಮಾಗಳಲ್ಲಿಯೂ ಖವಾಲಿ ಹಾಡುಗಳನ್ನು ಹಾಡುತ್ತಿದ್ದಾರೆ. ಹಾಗಾಗಿ ದೇವರ ನಾಮಕ್ಕೆ ಬದಲಾಗಿ ಪ್ರೀತಿ-ಪ್ರೇಮಗಳ ಆಲಾಪಗಳನ್ನು ಖವಾಲಿಯಲ್ಲಿ ಕೇಳಬಹುದಾಗಿದೆ. *(ಸಿಜಿಎಂ)*

ಖಾಜಾ ಬಂದೇನವಾಜ: ಕ್ರಿ.ಶ. 1317-1422 ಸೂಫಿ ಸಂತರು. ಇವರ ಬದುಕು-ಬರಹಗಳನ್ನು ಕುರಿತು ನಡೆಯುವ ಅಧ್ಯಯನ ಒಂದು ರೀತಿಯದಾದರೆ, ಜನಪದ ಕಾವ್ಯದಲ್ಲಿ ಅರಳಿರುವ ಬಂದೇ ನವಾಜರ ಅಧ್ಯಯನ ಮತ್ತೊಂದು ರೀತಿಯದಾಗಿದೆ. ನವಾಜರ ವೈಯಕ್ತಿಕ ಬದುಕಿಗೆ ಸಂಬಂಧಿಸಿದಂತೆ ಕೆಲವು ಲೇಖನಗಳು ಮತ್ತು ಕೃತಿಗಳು ಪ್ರಕಟವಾಗಿವೆ. ಬರಹಕ್ಕೆ ಸಂಬಂಧಿಸಿದಂತೆ ಫಾರಸಿ ಭಾಷೆಯಲ್ಲಿ ಅವರ ನೂರಾ ಐದು ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿ ಕೆಲವು ಕವಿತೆಯ ಭಾಗಗಳು ಅನುವಾದಗೊಂಡಿವೆ.

ಬಂದೇ ನವಾಜರ ಪೂರ್ವದ ಹೆಸರು ಸೈಯದ್ ಮುಹಮ್ಮದ ಗೇಸುದರಾಜ. ಇವರು ಸೂಫಿ ಪಂಥದ ಚಿಷ್ತಿ ಪಂಗಡಕ್ಕೆ ಸೇರಿದವರು. ಇವರ ಗುರುಗಳಾದ ನಸೀರುದ್ದೀನ ಷಾಹ ಅವರು ಇವರಿಗೆ ಗೇಸುದರಾಜ ಎಂದು ಕರೆದದ್ದರಿಂದ ಅದೇ ಹೆಸರು ಪ್ರಚಲಿತವಾಯಿತು. ನೀಳವಾದ ಕೇಶರಾಶಿಯನ್ನು ಹೊಂದಿದ್ದ ಇವರು ಗುರುವಿನ ಪಾಲಕಿಯನ್ನು ಹೊತ್ತಾಗ ಅದರಲ್ಲಿ ಇವರ ಕೂದಲು ಸಿಲುಕಿ ರಕ್ತ ಸುರಿದರೂ ನೊಂದುಕೊಳ್ಳದೇ ಇದ್ದುದನ್ನು ಗಮನಿಸಿ ಗುರುಗಳು ನಸೀರುದ್ದೀನಷಾಹ ಅವರು ಗೇಸೂದರಾಜ ಎಂದು ಕರೆದರು. ಪರಹಿತ ಕಾರ್ಯಗಳನ್ನು ಮಾಡತೊಡಗಿದುದರಿಂದ ಇವರಿಗೆ ಮುಂದೆ ಬಂದೇ ನವಾಜ ಅಥವಾ ಬಂದಾ ನವಾಜ ಹೆಸರು ಬಂತು.

ಇವರು ಕ್ರಿ.ಶ. 1317ರಲ್ಲಿ ದೆಹಲಿಯಲ್ಲಿ ಜನಿಸಿದ್ದು, ಸೈಯ್ಯದ್ ಯೂಸುಫ್ ಹುಸೇನಿ ಮತ್ತು ಬೀಬೀ ರಾಣಿ ಇವರ ತಂದೆ-ತಾಯಿಗಳಾಗಿದ್ದರು. ಬಾಲ್ಯದಲ್ಲಿಯೇ ಧಾರ್ಮಿಕ

ಜೂನ್ 1 ರಂದು ಜನಿಸಿದರು. ಅವರ ಪ್ರಾಥಮಿಕ ಶಿಕ್ಷಣ ತಮ್ಮ ಹುಟ್ಟೂರಾದ ಶಿರೂರ ತಾಂಡಾದ ಮರಿಯಮ್ಮ ದೇವರ ಗುಡಿಯಲ್ಲಿಯೇ ಆಯಿತು. ತಮ್ಮ ಮುಂದಿನ ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣವನ್ನು ಶಿರೂರ ಗ್ರಾಮಕ್ಕೆ ಹತ್ತಿರವಾಗಿದ್ದ ಶ್ರೀ ಸಿದ್ದೇಶ್ವರ ಬೋರ್ಡಿಂಗ್‌ನಲ್ಲಿದ್ದುಕೊಂಡು ನಡೆಸಿದರು. 1971ರಲ್ಲಿ ಪಿ.ಯು.ಸಿ ಯಿಂದ ತೇರ್ಗಡೆ ಹೊಂದಿ, 1974ರಲ್ಲಿ ಗದಗದ ಜಗದ್ಗುರು ತೋಂಟದಾರ್ಯ ಕಾಲೇಜಿನಲ್ಲಿ ಬಿ.ಎ. ಪದವಿ ಮುಗಿಸಿದರು 1976ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಕನ್ನಡ ಎಂ.ಎ. ಪದವಿ ಹಾಗೂ ಸ್ನಾತಕೋತ್ತರ ಭಾಷಾಂತರ ಡಿಪ್ಲೋಮಾ ಪದವಿಗಳನ್ನು ಪಡೆದುದಲ್ಲದೆ 1984ರಲ್ಲಿ 'ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯ ಕುರಿತ ಸಂಶೋಧನೆಯನ್ನು ನಡೆಸಿ ಪಿಎಚ್.ಡಿ. ಪದವಿಯನ್ನು ಗಳಿಸಿದ್ದಾರೆ.

ಖಂಡೋಬಾ ಅವರು ಗುಲಬರ್ಗಾ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾಗಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಎರಡು ಅವಧಿಗೆ ಮುಖ್ಯಸ್ಥರಾಗಿ, ಕಲಾ ನಿಕಾಯದ ಡೀನ್ ಆಗಿ, ಸೆನೆಟ್ ಸದಸ್ಯರಾಗಿ, ಎರಡು ಅವಧಿಗೆ ಸಿಂಡಿಕೇಟ್ ಸದಸ್ಯರಾಗಿ, ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳಾಗಿ ಅನೇಕ ವರ್ಷಗಳ ಕಾಲ ಕನ್ನಡ ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿಗಳ ಅಧ್ಯಕ್ಷರಾಗಿ, ಸದಸ್ಯರಾಗಿ, ಪ್ರಸಾರಾಂಗದ ನಿರ್ದೇಶಕರಾಗಿ ಹಾಗೂ ಸಂಡೂರು ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಸಮರ್ಥ ಆಡಳಿತ ನಡೆಸಿ ಶೈಕ್ಷಣಿಕ ಕ್ಷೇತ್ರದ ಎಲ್ಲ ಅಧಿಕಾರವನ್ನು ಅನುಭವಿಸಿದರು. ಇದು ಅವರ ದಕ್ಷತೆ ಮತ್ತು ಪಾಂಡಿತ್ಯಕ್ಕೆ ಸಾಕ್ಷಿಯಾಗಿವೆ. ಶೈಕ್ಷಣಿಕ ವಲಯದಲ್ಲಿ ಖಂಡೋಬಾ ಅವರು ಹಿರಿಯರೂ ಹಾಗೂ ನುರಿತವರೂ ಆಗಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗಳ ಸದಸ್ಯರಾಗಿ, ಸೇವೆ ಸಲ್ಲಿಸಿದ್ದಾರೆ. ಹೀಗೆ ವಿಶ್ವವಿದ್ಯಾಲಯ ಹಾಗೂ ಅಕಾಡೆಮಿ, ಪರಿಷತ್ತುಗಳಲ್ಲಿ ಅವರು ಅಧಿಕಾರದಲ್ಲಿದ್ದಾಗ ಕೆಲವು ವಿಚಾರ ಸಂಕಿರಣ, ಕಾರ್ಯಗಾರ, ಕಮ್ಮಟಗಳನ್ನು ರೂಪಿಸಿ ಅದರ ನಿರ್ದೇಶಕರಾಗಿ, ಸಂಚಾಲಕರಾಗಿ ಹಗಲಿರುಳು ದುಡಿದಿದ್ದಾರೆ.

ಲಂಬಾಣಿ ತಾಂಡಾದ ಗುಡಿಸಲಿನಿಂದ ವಿದ್ವತ್ತಿನ ವಿಶ್ವವಿದ್ಯಾಲಯದವರೆಗೆ ನಡೆದು ಬಂದಿರುವ ಖಂಡೋಬಾ ಅವರ ಬದುಕಿನ ಪುಟಗಳನ್ನು ತೆಗೆದು ನೋಡಿದಾಗ ಅಲ್ಲಿ ಬಡತನ ದುಃಖ, ಸಾವು, ನೋವು, ಕಷ್ಟಗಳಂಥ ಸಾಂಸಾರಿಕ ಚಿತ್ರಣಗಳು ಹಾಗೂ ಶಿಸ್ತು ಸಂಯಮ ಅಚ್ಚುಕಟ್ಟುತನ. ನಿರ್ದಿಷ್ಟತೆ, ನಿಖರತೆ, ಸೂಕ್ಷ್ಮತೆ ಮತ್ತು ಸಮಯ ಪ್ರಜ್ಞೆಯಂಥ ಶೈಕ್ಷಣಿಕ ಚಿಂತನೆಗಳು ತೆರೆದುಕೊಳ್ಳುತ್ತದೆ. ಬದುಕಿನುದ್ದಕ್ಕೂ ನಿರ್ದಿಷ್ಟ ಗುರಿಗಳನ್ನಿಟ್ಟುಕೊಂಡು ಬಂದ ಅವರ ನಡೆ ಗಂಭೀರವಾದುದು. ಶ್ರಮ ಸಂಸ್ಕೃತಿ ನೆಲೆಯಿಂದ ಬಂದ ತಮ್ಮ ಸಮುದಾಯದ ಬೆವರಿನ ಬೆಲೆಯನ್ನು ಚೆನ್ನಾಗಿ ಅರಿತವರು. ಕರ್ನಾಟಕದ ಲಂಬಾಣಿಗಳ ವಿಷಯವನ್ನು ಕೈಗೆತ್ತಿಕೊಂಡು ಆಳವಾದ ಅಭ್ಯಾಸ ಮತ್ತು ಕ್ಷೇತ್ರಕಾರ್ಯದ ಮೂಲಕ ಈ ಜನಾಂಗದ ಸಂಸ್ಕೃತಿಯ ಸೂಕ್ಷ್ಮ ಸಂವೇದನೆಗಳನ್ನು ವಿವರ ವಿವರವಾಗಿ ಅನಾವರಣ ಮಾಡಿದ್ದಾರೆ. ಅನ್ಯಾಯ, ಅಧರ್ಮ, ಅ ನೀತಿಗಳನ್ನು ನೇರವಾಗಿ ಖಂಡಿಸುತ್ತಾ ಬಂದವರು. ಆದರೆ ಆತ್ಮ ಸಾಕ್ಷಿಗೆ ಎಂದೂ ವಿರುದ್ಧವಾಗಿ ನಡೆದವರಲ್ಲ. ತಮ್ಮ ವಯೋಮಾನಕ್ಕೆ ಮೀರಿದ ಕೆಲವು ಶೈಕ್ಷಣಿಕ ಸ್ಥಾನಮಾನಗಳು ದೊರಕಿರುವುದರಿಂದ ಅವರು ಸದಾ ಸಂತೃಪ್ತರಾಗಿದ್ದಾರೆ. ಇಂಥ ಸ್ಥಾನಮಾನಗಳ ಎತ್ತರಕ್ಕೆ ಏರಿದ ಅವರು ಅವುಗಳ ಘನತೆ, ಗೌರವ ಪ್ರತಿಷ್ಠೆಗಳನ್ನು ಕಾಪಾಡಿ ತಮ್ಮ ವ್ಯಕ್ತಿತ್ವವನ್ನು ಮತ್ತಷ್ಟು ಕಟ್ಟಿಕೊಂಡಿದ್ದಾರೆ.

ಸಂಸ್ಕೃತಿ ಚಿಂತಕರಾದ ಪಿ.ಕೆ. ಖಂಡೋಬಾ ಅವರು ಜಾನಪದ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ಕೃಷಿ ಮಾಡುತ್ತಾ ಬಂದಿದ್ದಾರೆ. ಅವರು ಇದುವರೆಗೆ ಜಾನಪದ ಮತ್ತು ಬುಡಕಟ್ಟು ಅಧ್ಯಯನಗಳಿಗೆ ಸಂಬಂಧಿಸಿದ ಹಲವಾರು ಮಹತ್ವದ ಕೃತಿಗಳನ್ನು ಪ್ರಕಟಿಸಿದ್ದಾರೆ. ಆ ಮೂಲಕ ಅಧ್ಯಯನದ ಹೊಸ ಸಾಧ್ಯತೆಗಳನ್ನು ತೆರೆದಿದ್ದಾರೆ. ಲಂಬಾಣಿ ಸಂಸ್ಕೃತಿ (1988), ಲಂಬಾಣಿ ಒಗಟುಗಳು (1988), ತಾಂಡಾಸಂಸ್ಕೃತಿ (1990), ಕರ್ನಾಟಕದ ಲಂಬಾಣಿಗಳು (1991), ಸುಡುಗಾಡು ಸಿದ್ಧರು (1993), ಜಾನಪದ ಮುನ್ನೋಟ (1994), ಶೋಧ ಸಮೀಕ್ಷೆ (ಸಂ) (1995), ಜಾನಪದ ಕಥನ ಗೀತೆಗಳು (1996) ಜ್ಞಾನಪೀಠ ಪ್ರಶಸ್ತಿ ವಿಜೇತ ಕಾರಂತ (1996) ಜೈನ ಸಂಸ್ಕೃತಿ ಮತ್ತು ಸಿದ್ಧಾಂತಗಳು (ಸಂ) (1996) ಹಲಸಂಗಿ ಗೆಳೆಯರು (ಸಂ) (1997) ಪರಿಸರ ಸಂಬಂಧಿ ದೈವಗಳು (1997), ಕನ್ನಡ ಪ್ರಾದೇಶಿಕ ಕಾದಂಬರಿಗಳು ಜಾನಪದೀಯ ಅಧ್ಯಯನ (1998), ಕರ್ನಾಟಕ ಬುಡಕಟ್ಟು ಲಂಬಾಣಿಗಳು (2000), ಲಂಬಾಣಿಗೋತ್ರಗಳು ಮತ್ತು ಶಾಸ್ತ್ರಗಳು (2002) ಹೀಗೆ ಖಂಡೋಬಾ ಅವರು ಜಾನಪದಕ್ಕೆ ಸಂಬಂಧಿಸಿದಂತೆ ಇಪ್ಪತ್ತಕ್ಕೂ ಹೆಚ್ಚು ಸಂಶೋಧನಾ ಮತ್ತು ಸಂಪಾದನಾ ಕೃತಿಗಳನ್ನು ಹೊರತಂದಿದ್ದಾರೆ. ಒಂದು ಜನಾಂಗದ ಮೂಲದಿಂದ ಬಂದಿರುವ ಅವರು ಆ ಜನಾಂಗದ ಸಂಸ್ಕೃತಿಯನ್ನು ಆಮುಲಾಗ್ರವಾಗಿ ಸೋಪಜ್ಞ ನೆಲೆಯಿಂದ ಶೋಧಿಸುವ ಕೆಲಸ ಮಾಡಿದ್ದಾರೆ.

ವಿಶ್ವವಿದ್ಯಾಲಯಗಳು ಕಾಲೇಜು ಅಧ್ಯಾಪಕರಿಗೆ ಆಯೋಜಿಸಿದ ಪುನಶ್ಚೇತನ ಹಾಗೂ ನವೀಕರಣ ಶಿಬಿರಗಳ ಸಂಪನ್ಮೂಲ ವ್ಯಕ್ತಿಯಾಗಿಯೂ, ಹಾಗೂ ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ, ಶಿಬಿರ ಸಮ್ಮೇಳನಗಳ ಗೋಷ್ಠಿಯ ಅಧ್ಯಕ್ಷರಾಗಿ, ಪ್ರಬಂಧಕಾರರಾಗಿ ತಮ್ಮ ಪ್ರಬುದ್ಧ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಒಟ್ಟಾರೆ, ಖಂಡೋಬಾ ಅವರು ಸಮಕಾಲೀನ ಕರ್ನಾಟಕದ ಜಾನಪದ ಮತ್ತು ಬುಡಕಟ್ಟು ಸಂಸ್ಕೃತಿ ಚಿಂತನೆಯಲ್ಲಿ ತಮ್ಮದೇ ಆದ ಮಾದರಿಯೊಂದನ್ನು ಹೊಂದಿದ್ದಾರೆ. ತಲಸ್ಪರ್ಶಿ ಅಧ್ಯಯನ, ವ್ಯಾಪಕ ಕ್ಷೇತ್ರಕಾರ್ಯ, ಅಧಿಕೃತ ಮಾಹಿತಿ ಸಂಗ್ರಹಣೆ ಹಾಗೂ ಅಚ್ಚುಕಟ್ಟಾದ ನಿರೂಪಣೆಗಳು ಅವರ ಬಹುಮುಖ ವಿದ್ವತ್ತಿನ ಪಾಂಡಿತ್ಯಕ್ಕೆ ನಿದರ್ಶನವಾಗಿದೆ. *(ಎನ್‌ಬಿಚ್)*

ಖವಾಲಿ: ಒಂದು ಬಗೆಯ ಹಾಡುಗಾರಿಕೆ, ಖವಾಲ್ ಎಂದರೆ ಪುರುಷ ಹಾಡುಗಾರರು, ತಬಲಾ ಹಾರ್ಮೋನಿಯಂ ವಾದ್ಯಗಳ ಹಿಮ್ಮೇಳದೊಂದಿಗೆ ಚಪ್ಪಾಳೆಯನ್ನು ತಟ್ಟುತ್ತಾ ಹಾಡುವ ಒಂದು

ಹನ್ನೆರಡನೆಯ ಶತಮಾನದ ಶಿವಶರಣರ ಸಂಸ್ಕೃತಿಯೂ ಇವರ ಮೇಲೆ ಪ್ರಭಾವಬೀರಿರಬಹುದಾಗಿದೆ. ಜಾತಿ ಭೇದವನ್ನು ಹೊಡೆದೋಡಿಸಲು ನವಾಜರು ನಿರಂತರ ಪ್ರಯತ್ನಿಸಿದರು. ಜಾತ್ಯಾತೀತ ಪರಂಪರೆಯೊಂದನ್ನು ಇವರು ಬೆಳೆಸಿದರು. ಸಾವಳಗಿಯ ಶಿವಲಿಂಗ ಮಠದಲ್ಲಿ ಇಂದಿಗೂ 'ಬಂದೇ ನವಾಜ್‌ಕೀ ದೋಸ್ತ್ ರಾಹೋದ್ದೀನ್' ಎಂದು ಜಯಕಾರ ಹಾಕುತ್ತಾರೆ. ಪ್ರತಿ ವರ್ಷ ಗುಲಬರ್ಗಾದ ದರಗಾದಲ್ಲಿ ನಡೆಯುವ ಅವರ ಪುಣ್ಯ ತಿಥಿಯ ಸಮಯದಲ್ಲಿ ಮುಸ್ಲೀಮ್ ಬಾಂಧವರ ಜತೆಗೆ ಹಿಂದೂ ಭಕ್ತರು ದೀವಟಿಗೆ (ಮಶಾಲ) ಬೆಳಗುವ ಭಾಗ್ಯವನ್ನು ಪಡೆದಿದ್ದಾರೆ. ಹೀಗೆ ಪ್ರತಿವರ್ಷ ಗುಲಬರ್ಗಾದಲ್ಲಿ ನಡೆಯುವ ಬಂದೇ ನವಾಜ ಉರುಸು ಹಿಂದೂ ಮುಸ್ಲೀಮ್‌ರ ಭಾವೈಕ್ಯತೆಯ ಸಂಕೇತವಾಗಿದೆ. ಪ್ರತಿವರ್ಷ ನಡೆಯುವ ಕಲಬುರ್ಗಿ ಶರಣಬಸವೇಶ್ವರ ರಥೋತ್ಸವವೂ ಧರ್ಮ ಸಮನ್ವಯದ ಪ್ರತೀಕವಾಗಿದೆ. ಬಂದೇ ನವಾಜ ದರಗಾದಿಂದ ಪರಸುಬಟ್ಟಲು ಬಂದ ಮೇಲೆಯೇ ಶರಣಬಸವನ ರಥೋತ್ಸವ ಪ್ರಾರಂಭವಾಗುತ್ತದೆ. ಇಂತಹ ಧಾರ್ಮಿಕ ಸಾಮರಸ್ಯವನ್ನು ಈ ಪ್ರದೇಶದಲ್ಲಿ ಮೊದಲಿನಿಂದಲೂ ಕಾಣಬಹುದಾಗಿದೆ.

ಖಾಜಾ ಬಂದೇನವಾಜರು ಸ್ಥಗಿತ ಸಂಪ್ರದಾಯಗಳನ್ನು ಮೌಢ್ಯ ಮತಾಚಾರಣೆಗಳನ್ನು ತಿರಸ್ಕರಿಸಿ ಧರ್ಮವನ್ನು ಮಾನವೀಯ ನೆಲೆಯಲ್ಲಿ ಅರ್ಥೈಸಿದರು. ಕೇವಲ ತತ್ತ್ವೋಪದೇಶ ಮಾಡದೆ ತಾವೂ ಅದನ್ನು ಅಚರಣೆಯಲ್ಲಿ ತಂದರು. ಶಿವಶರಣ–ರಂತೆ ಬಂದೇ ನವಾಜರು ನುಡಿದಂತೆ ನಡೆದರು. ಇವರ ಬದುಕು–ಬರೆಹ ಒಂದೇ ಆಗಿತ್ತು.

ಪ್ರಾರ್ಥನೆಗೆ ನವಾಜರು ಹೊಸವ್ಯಾಖ್ಯಾನ ನೀಡಿದರು. ಕೇವಲ ಅಲ್ಲಾನನ್ನು ಸ್ಮರಿಸುವುದು ಮಾತ್ರ ಪ್ರಾರ್ಥನೆಯಲ್ಲ, ಇನ್ನೊಂದು ಜೀವಿಗೆ ಹಾನಿಯನ್ನುಂಟು ಮಾಡದೇ ಇರುವುದೇ ನಿಜವಾದ ಪ್ರಾರ್ಥನೆಯೆಂದು ಸಾರಿ ಹೇಳಿದರು. ಬಡವ–ಬಲ್ಲಿದ, ಧನಿಕ–ತಿರುಕ, ಮೇಲ್ಜಾತಿ–ಕೀಳ್ಜಾತಿ ಈ ಎಲ್ಲ ಭೇದಗಳನ್ನು ತೊಡೆದ ನವಾಜರು ಸರ್ವಧರ್ಮಗಳ ಸಾರವೆಲ್ಲಾ ಒಂದೇ ಆಗಿದೆಯೆಂದು ಸ್ಪಷ್ಟಪಡಿಸಿದರು. ಅರಬ್ಬಿ–ಫಾರಸಿ ಧರ್ಮ ಗ್ರಂಥಗಳ ರಹಸ್ಯವನ್ನು ಭೇದಿಸಿ ಧರ್ಮದ ತಿರುಳನ್ನು ಸರಳವಾದ ರೀತಿಯಲ್ಲಿ ವ್ಯಾಖ್ಯಾನಿಸಿದರು. ಅಲ್ಲಾ–ಈಶ್ವರ ಒಂದೇ ಎಂಬುದು ನವಾಜರ ಬದುಕಿನ ಮೂಲಮಂತ್ರವಾಗಿತ್ತು.

ಧಾರ್ಮಿಕ ಕ್ಷೇತ್ರದಲ್ಲಿ ಇಹ–ಪರಗಳಿಗೆ ಸಂಬಂಧಿಸಿದಂತೆ ವಿವಿಧ ರೀತಿಯ ಚರ್ಚೆ ನಡೆದಿದೆ. ಕೆಲವರು ಇಹವನ್ನು ತಿರಸ್ಕರಿಸಿ ಪರವನ್ನು ಶ್ರೇಷ್ಠವೆಂದು ಭಾವಿಸಿದರೆ, ಕೆಲವರು ಪರವನ್ನೇ ಸುಳ್ಳೆಂದು ಹೇಳಿ ಇಹಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ. ಹನ್ನೆರಡನೇ ಶತಮಾನದ ಬಸವಾದಿ ಶಿವಶರಣರು ಇಹವನ್ನು ತಿರಸ್ಕರಿಸದೆ, ಪರವನ್ನು ಬಿಟ್ಟುಕೊಡದೆ ಇಹದ ಮೂಲಕವೇ ಪರವನ್ನು ಹೇಳಿದರು. ಅದೇ ರೀತಿ ಬಂದೇ ನವಾಜರೂ ಕೂಡ ಇಹವನ್ನು ಒಪ್ಪಿಕೊಂಡು ಸಂಸಾರಿಯಾಗಿದ್ದು ಕೊಂಡೇ ಪರದ ಮಹತ್ವವನ್ನು ತಿಳಿಸಿ ಹೇಳಿದರು. ಪೈಗಂಬರರ ಮೂಲಕವೇ ಈಶ್ವರನನ್ನು ಕಂಡುಕೊಂಡರು.


ಇಸ್ಲಾಂ ಹಾಗೂ ಹಿಂದೂ ಧರ್ಮಗಳ ಗ್ರಂಥಗಳನ್ನು ಅಧ್ಯಯನ ಮಾಡಿದ್ದ ಬಂದೇ ನವಾಜರು ಧರ್ಮದ ಮುಖ್ಯ ತಿರುಳನ್ನು ಸರಳವಾದ ನುಡಿಗಳಲ್ಲಿ ಬೋಧಿಸಿದರು. ತಂದೆ–ತಾಯಿಗಳನ್ನು ಗುರುಹಿರಿಯರನ್ನು ಆದರಿಸು, ಸಾವು ಬರುವ ಮುನ್ನವೇ ಸಿದ್ಧವಾಗಿರು, ದೇಹ ಅಳಿಯುವ ಮೊದಲೇ ಪೂಜಿಸು, ನಿನ್ನ ಗಳಿಕೆ ನ್ಯಾಯವಾದುದಾಗಿರಲಿ, ಯಾರಿಗೂ ಕೆಟ್ಟ ನುಡಿಯನ್ನಾಡಬೇಡ, ಶ್ರೀಮಂತರ ಸಹವಾಸದಿಂದ ದೂರವಿರು, ರಾಜರ ಹತ್ತಿರ ಸುಳಿಯಬೇಡ ಈ ಮುಂತಾದ ನವಾಜರ ನುಡಿಗಳಲ್ಲಿ ಶಿವಶರಣರು ಹೇಳಿ ಹೋದ ಸಾರವೇ ಅಡಕವಗಿದೆ. ನೇರವಾಗಿ ಶರಣರ ಸಾಹಿತ್ಯದ ಪ್ರಭಾವವಾಗದಿದ್ದರೂ, ಶರಣಸಂಸ್ಕೃತಿಯ ಪ್ರಭಾವ ಆಗಿರಬಹುದಾಗಿದೆ. ಶರಣರ ವಿಚಾರಧಾರೆಗೂ ಬಂದೇ ನವಾಜರ ವಿಚಾರಧಾರೆಗೂ ಸಾಮ್ಯತೆಯಿದೆ.

ಬಂದೇನವಾಜರು ಬಹುಭಾಷಾ ಪಂಡಿತರಾಗಿದ್ದರು. ಅವರು ಧಾರ್ಮಿಕ ಕ್ಷೇತ್ರದ ಗುರುಗಳಾಗಿರುವಂತೆ, ಶ್ರೇಷ್ಠ ಸೂಫಿ ಕವಿಗಳಾಗಿದ್ದರು. ದಖನಿ ಶೈಲಿಯಲ್ಲಿ ಬರೆದ ಮಹತ್ವದ ಲೇಖ–ಕರಾಗಿದ್ದರು. ಉರ್ದು ಸಾಹಿತ್ಯಕ್ಕೆ ಮೂಲವಾಗಿದ್ದ ದಖನಿ ಶೈಲಿಯಲ್ಲಿ ಫಾರಸಿ ಭಾಷೆಯಲ್ಲಿ ನೂರಾಐದು ಕೃತಿಗಳನ್ನು ರಚಿಸಿ ಸಾಹಿತ್ಯ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿದರು. ಅರಬ್ಬೀ, ಫಾರಸಿ ಹಾಗೂ ಸಂಸ್ಕೃತ ವಿದ್ವಾಂಸರಾಗಿದ್ದ ನವಾಜರು ಸೂಫಿ ಪಂಥಕ್ಕೆ ಸೇರಿದ ಅನೇಕ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಅವರನ್ನು ಸಂತ ಸಾಹಿತಿಯೆಂದು ಕರೆಯಲಾಗುತ್ತದೆ.

'ಮಿರಾಜಲ್ ಆಷಿಕಾನ್' ಎಂಬ ಕೃತಿ ಖದೀಮ ದಖನಿ ಭಾಷಾಶೈಲಿಯಲ್ಲಿದ್ದು ಸುಮಾರು 660 ವರ್ಷಗಳ ಹಿಂದೆ ರಚಿಸಿದುದಾಗಿದೆ. 1921ರಲ್ಲಿ ಮಹಮ್ಮದ ಶೇಖ ಅಬ್ದುಲ್ ಹಕ್ ಈ ಗ್ರಂಥವನ್ನು ಮೊದಲ ಬಾರಿಗೆ ಪ್ರಕಟಿಸಿದರು. ಅನಂತರ 1957ರಲ್ಲಿ ಗೋಪಿನಾಥ ನಾರಾಯಣರು ಈ ಗ್ರಂಥದ ಮರುಮುದ್ರಣವನ್ನು ದೆಹಲಿಯಲ್ಲಿ ಮಾಡಿದರು. ದೇವರ ಹಂಬಲ, ಆಧ್ಯಾತ್ಮದ ಔನ್ನತ್ಯ, ಸರಳ ಸದ್ಗುಣಗಳ ಸೇವಾಭಾವನೆಗಳ ಪವಿತ್ರ ಸಂಗಮವೇ ಈ ಕೃತಿಯಲ್ಲಿದೆಯೆಂದು ಹೇಳಲಾಗುತ್ತದೆ. ಇಹದಲ್ಲಿದ್ದುಕೊಂಡೇ ಪರವನ್ನು ಕಾಣುವ ಸಾಧ್ಯತೆಗಳನ್ನು ಈ ಕೃತಿಯಲ್ಲಿ ಬಿಂಬಿಸಲಾಗಿದೆ.

'ಜವಾಮೆ ಉಲ್ ಕಲಿಮ್' ಗ್ರಂಥದಲ್ಲಿ ಸರ್ವಧರ್ಮಗಳ ಸಮನ್ವಯವನ್ನು ಕಾಣಬಹುದಾಗಿದೆ. ಸಮಾನತೆ, ಸಹಿಷ್ಣುತೆ, ಸ್ನೇಹಪರತೆ, ಆತ್ಮೀಯತೆಯಂತಹ ಮೌಲ್ಯಗಳನ್ನಿಲ್ಲಿ ಎತ್ತಿಹಿಡಿಯಲಾಗಿದೆ. 'ಮಿಕ್ತುಬಾತ್' ಗ್ರಂಥದಲ್ಲಿ ಜೀವ–ದೇವರ ಸಂಬಂಧಗಳನ್ನು, ವ್ಯಕ್ತಿ ಶಕ್ತಿಯಾಗಿ ಬೆಳೆಯುವ ಸಾಧ್ಯತೆಗಳನ್ನು ತಿಳಿಸಲಾಗಿದೆ. ಸರಳ ನುಡಿಗಳಲ್ಲಿ ಸನ್ಮಾರ್ಗದ ದಾರಿ ತೋರುವ ಈ ಗ್ರಂಥ ಸಕಲ ಜೀವರಿಗೂ ಲೇಸನ್ನು ಬಯಸುವ ಆಶಯಹೊಂದಿದೆ.

ಬಂದೇ ನವಾಜರ ಕಾವ್ಯದಲ್ಲಿ ಜಾನಪದೀಯ ಅಂಶಗಳು ಪ್ರಮುಖ ಸ್ಥಾನಪಡೆದಿವೆ. ಭಾವತೀವ್ರತೆ ಹಾಗೂ ನೇರವಾಗಿ ಮುಟ್ಟುವ ಗುಣ ಇವರ ಕಾವ್ಯದಲ್ಲಿದೆ. 'ದೀವಾರ್' ಮತ್ತು 'ಷಿಕರನಾಮಾ' ಎಂಬ ಕಾವ್ಯ ಕೃತಿಗಳು ಅವರ ಪದ್ಯ



ಖ್ವಾಜಾ ಬಂದೇ ನವಾಜ್, ಗುಲಬರ್ಗಾ

ವಾತಾವರಣದಲ್ಲಿ ಬೆಳೆದ ಇವರಿಗೆ ಚಿಂತಕರ ಸಾಮೀಪ್ಯ ದೊರೆಯಿತು. ಹೀಗೆ ಬಾಲ್ಯದಲ್ಲಿ ಲಭಿಸಿದ ಒಳ್ಳೆಯ ಸಂಸ್ಕಾರದಿಂದ ಇವರು ಧಾರ್ಮಿಕ ಗ್ರಂಥಗಳ ಅಧ್ಯಯನ ನಡೆಸಿದರು. ತಮ್ಮ ಹತ್ತೊಂಬತ್ತನೆಯ ವಯಸ್ಸಿನಲ್ಲಿ ದೀಕ್ಷೆ ಪಡೆದು ಧರ್ಮೋಪದೇಶ ಮಾಡತೊಡಗಿದರು. ದೆಹಲಿಯ ದೊರೆ ಮುಹಮ್ಮದ ತುಘಲಕನ ಆಜ್ಞೆಯಂತೆ ಇವರ ತಂದೆ-ತಾಯಿಗಳು ದೌಲತಾಬಾದಿಗೆ ಬಂದು ನೆಲಸಿದರು. ಅಲ್ಲಿ ಕೆಲವು ವರ್ಷಗಳ ಅನಂತರ ತಂದೆ ನಿಧನ ಹೊಂದಿದರು. ನಲವತ್ತನೆಯ ವಯಸ್ಸಿನಲ್ಲಿ ನವಾಜರು ಬೀಬೀರಜಾಖಾತೂನ ಅವರನ್ನು ಮದುವೆಯಾದರು. ಇವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಮೂವರು ಹೆಣ್ಣುಮಕ್ಕಳು ಜನಿಸಿದರು.

'ಬಂದೇ ನವಾಜ' ಎಂದರೆ ಪರೋಪಕಾರಿ, ಭಕ್ತಿ ಪ್ರಿಯ. ಬಂದೇ ನವಾಜರಲ್ಲಿದ್ದ ಪರೋಪಕಾರಿ ಗುಣವನ್ನು ಅವರ ಬಾಲ್ಯ ಜೀವನದಲ್ಲಿಯೇ ಕಾಣ ಬಹುದಾಗಿತ್ತು. ತಮ್ಮ ತಾಯಿ ಎದೆಹಾಲನ್ನು ಕುಡಿಸಲು ಇವರನ್ನು ಎತ್ತಿಕೊಂಡಾಗ, ನವಾಜರು ತಮ್ಮ ಪಕ್ಕದಲ್ಲಿದ್ದ ಅನಾಥಚಿಕ್ಕ ಮಗುವಿಗೆ ಹಾಲು ಕುಡಿಸುವಂತೆ ಹಠ ಮಾಡುತ್ತಿದ್ದರಂತೆ. ಆ ಅನಾಥ ಮಗು ಹಾಲು ಕುಡಿದ ಅನಂತರವೇ ತಾವು ಹಾಲು ಕುಡಿಯುತ್ತಿ ದ್ದರಂತೆ. ಲಂಗರ ಖಾನೆಯಿಂದ ಬಂದ (ದಾಸೋ ಹದಿಂದ) ಆಹಾರ ವನ್ನು ಬಡವರಿಗೆ ಹಂಚಿ ಬಿಡುತ್ತಿದ್ದ ರಂತೆ. ಹೀಗೆ ಪರಹಿತ ಸಾಧನೆಯನ್ನೇ ತಮ್ಮ ಗುರಿಯನ್ನಾ ಗಿರಿಸಿ ಕೊಂಡಿದ್ದರಿಂದ ಇವರಿಗೆ ಬಂದೇ ನವಾಜ ಎಂಬ ಹೆಸರು ಸಾರ್ಥಕ ಆಯಿತು. ಗುರು ಗಳಾದ ನಸೀರುದ್ದೀನ ಷಾಹ ಅವರ ಮರಣದ ಅನಂತರ ತಮ್ಮ ಮೂವತ್ತಾರನೇ ವಯಸ್ಸಿ ನಲ್ಲಿ ಬಂದೇ ನವಾಜರು ಗುರುಗಳ ಪೀಠಕ್ಕೆ ಬಂದರು. ಅನೇಕ ವರ್ಷಗಳ ಕಾಲ ಧರ್ಮ ಪ್ರಚಾರ ಮಾಡುವಲ್ಲಿ ತೊಡಗಿಸಿ ಕೊಂಡರು. ಬಡವರ ಕಣ್ಣೀರು ಒರಿಸಿದರು. ಬಸವಣ್ಣನ ವರಂತೆ ಇವರೂ ಕೂಡ ಸಂಸಾರದಲ್ಲಿದ್ದುಕೊಂಡೇ ಅನುಭಾವ ಕಂಡವರು. ಆದರೆ ಬಸವಣ್ಣನವರಂತೆ ಹೋರಾಟ ದ ಮಾರ್ಗ ವನ್ನು ಆಯ್ದು ಕೊಳ್ಳದೆ, ಸಮನ್ವಯದ ದಾರಿ ಕಂಡುಕೊಂಡರು. ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ ಇವರು ಗುಲಬರ್ಗ ಬಹಮನಿ ದೊರೆ ಫಿರೋಜನ ಆಹ್ವಾನವನ್ನು ಮನ್ನಿಸಿ ಸಂಸಾರ ಸಮೇತ ಗುಲಬರ್ಗಕ್ಕೆ ಬಂದು ನೆಲೆಸಿದರು.

ತಮ್ಮ ಬದುಕಿನ ಪರಿಪಕ್ವ ವಯಸ್ಸಿನ ಮಹತ್ವದ ಕಾಲವನ್ನು ನವಾಜರು ಗುಲಬರ್ಗದಲ್ಲಿಯೇ ಕಳೆದರು. ನೂರಾ ಐದು ವರ್ಷಗಳ ತುಂಬು ಜೀವನವನ್ನು ಬದುಕಿ ಕ್ರಿ.ಶ. 1422ರಲ್ಲಿ ಗುಲಬರ್ಗಾದಲ್ಲಿಯೇ ನಿಧನರಾದರು. ಆಗಿದ್ದ ದೊರೆ ಅಹಮ್ಮದ ಬಂದೇ ನವಾಜರು ನೆಲಸಿದ್ದ ಸ್ಥಳದಲ್ಲಿ ಭವ್ಯವಾದ ಗುಂಬಜ್ ಕಟ್ಟಿಸಲು ಪ್ರಾರಂಭಿಸಿದ. ಆತನ ಅನಂತರ ಬಂದ ಅಲ್ಲಾವುದ್ದೀನನ ಕಾಲದಲ್ಲಿ ಗುಂಬಜ್ ಕಟ್ಟುವ ಕಾರ್ಯಪೂರ್ಣಗೊಂಡಿತು. ವಿಶಿಷ್ಟ ವಾಸ್ತು ಶೈಲಿಯಿಂದ ಕೂಡಿರುವ ಬಂದೇ ನವಾಜ ದರಗಾ ಇಂದಿಗೂ ಗುಲಬರ್ಗಾದಲ್ಲಿ ಪ್ರೇಕ್ಷಕರನ್ನು ಆಕರ್ಷಿಸುತ್ತದೆ. ಹಿಂದೂ ಮುಸ್ಲೀಮರ ಭಾವೈಕ್ಯತೆಯ ಸಂಕೇತವಾಗಿರುವ ಈ ದರಗಾ ಭಾರತದ ಸೂಫಿ ಸಂತರ ಮಹತ್ವದ ಸ್ಮಾರಕವಾಗಿ ನಿಂತಿದೆ.

ಬಂದೇ ನವಾಜರು ತಮ್ಮ ಪ್ರಾರಂಭದ ಬದುಕಿನಲ್ಲಿ ಅನೇಕ ಸಂಕಷ್ಟಗಳನ್ನು ಎದುರಿಸಿದರೆಂದು ತಿಳಿದುಬರುತ್ತದೆ. ಗೀಗೀ ಪದಗಳಲ್ಲಿ ಇವರ ಬದುಕಿನ ಅನೇಕ ವಿವರಗಳು ದಾಖಲಾಗಿವೆ. ಇವರ ವೈರಿಗಳು ಹೊಟ್ಟೆಕಿಚ್ಚಿನಿಂದ ಇವರನ್ನು ಕೊಲೆ ಮಾಡಲು ಪ್ರಯತ್ನಿಸಿದ ಪ್ರಸಂಗಗಳು ಇಲ್ಲಿ ಚಿತ್ರಿತವಾಗಿವೆ. ಅವೆಲ್ಲ ಸಂಕಷ್ಟಗಳನ್ನು ಗೆದ್ದು ಬಂದ ವೀರನೆಂದು ಇವರನ್ನು ವರ್ಣಿಸಲಾಗಿದೆ. ಇವರ ಬದುಕಿನ ಸುತ್ತ ಕೆಲವು ಪವಾಡ ಕತೆಗಳೂ ಹೆಣೆದುಕೊಂಡಿವೆ. ಬಂದೇ ನವಾಜರದು ಸಾರ್ಥಕ ಜೀವನ.

ಧರ್ಮಸಮನ್ವಯ: ಕಲಬುರ್ಗಿಯ ಖಾಜಾ ಬಂದೇನವಾಜರಾಗಲಿ-ಶರಣ ಬಸವೇಶ್ವರರಾಗಲಿ ಇಂದಿಗೂ ಮುಖ್ಯವಾಗವುದು ಧರ್ಮಸಮನ್ವಯದ ಕಾರಣಕ್ಕಾಗಿ. ಖಾಜಾ ಬಂದೇನವಾಜರು ಪರಮಾತ್ಮನ ಗೂಢಾರ್ಥವನ್ನು ಸಮಾಜದಲ್ಲಿ ಕಂಡುಕೊಂಡರು. ಖುರಾನ ಪಠಣಕ್ಕಿಂತ ಸಮಾಜ ಸೇವೆ ದೊಡ್ಡದೆಂದು ಭಾವಿಸಿದರು. ಇವರ ಮೇಲೆ ಹಿಂದೂ ಧರ್ಮದ ಪ್ರಭಾವ ಗಾಢವಾಗಿದ್ದುದು ಕಂಡು ಬರುತ್ತದೆ. ಅಂತೆಯೇ ಇವರಿಂದ ಚೈತನ್ಯ ಸಂಪ್ರಾದಾಯವೊಂದು ಹುಟ್ಟಿಕೊಂಡಿತು. ಆದ್ದರಿಂದ ಖಾಜಾ ಬಂದೇನವಾಜರನ್ನು ಕೇಶವ ಚೈತನ್ಯರೆಂದು ಕರೆಯುತ್ತಾರೆ. ಭಾರತದ ಎಲ್ಲ ಕಡೆ ಇವರ ಶಿಷ್ಯ ಪರಂಪರೆಯಿದೆ. ಮಹಾರಾಷ್ಟ್ರದ ಸಂತಕವಿ ಏಕನಾಥರು ಇವರ ಶಿಷ್ಯರಾಗಿದ್ದರು.

ಗ

ಗಂಗಾಪೂಜೆ: ಭಾರತೀಯರಿಗೆ ದೇಶದ ಯಾವ ಮೂಲೆಯಲ್ಲಿದ್ದ ನೀರೂ ಗಂಗೆಯೇ. ಹಾಗಾಗಿ ನೀರಿನ ಸ್ಥಾನಗಳನ್ನು ಪೂಜಿಸುವುದಕ್ಕೆ ಗಂಗಾ ಪೂಜೆಯೆಂಬುದು ರೂಢಿಯಲ್ಲಿ ಬಂದಿದೆ. ಬಾವಿ, ಕೆರೆ, ನದಿಗಳ ಹತ್ತಿರ ಹೋಗಿ ಪೂಜಿಸುವುದಕ್ಕೆ ಗಂಗಮ್ಮನ ಪೂಜೆಯೆಂತಲೂ ಕರೆಯುತ್ತಾರೆ.

ಹಲವು ಸಂದರ್ಭಗಳಲ್ಲಿ ಗಂಗಾ ಪೂಜೆ ಮಾಡುತ್ತಾರೆ. ಹೆರಿಗೆಯಾದ ಮೇಲೆ ಬಾಣಂತಿ ಮೂರು ತಿಂಗಳೊಳಗಾಗಿ ಮಗುವಿನ ಜೊತೆಗೆ ಬಾವಿಗೆ ಹೋಗಿ, ಎರಡು ವೀಳ್ಯೆದೆಲೆ, ಅಡಿಕೆ, ಹೂ ನೆನೆಯಿಸಿದ ಕಡಲೆ ಬೇಳೆಗಳನ್ನಿಟ್ಟು ಅರಿಶಿಣ, ಕುಂಕುಮ ಏರಿಸಿ, ಪೂಜಿಸಿ, ಊದಿನಕಡ್ಡಿ ಹಚ್ಚಿ, ನಮಸ್ಕರಿಸಿ ಬರುವುದಕ್ಕೂ ಗಂಗಾಪೂಜೆ ಎನ್ನುವರು. ಗಂಗಾಪೂಜೆ ಮಾಡಿ ಬಂದ ಮೇಲೆ ಮಗುಸಹಿತ ದೇವರಿಗೆ ಹೋಗಿ ದರ್ಶನ ಪಡೆದು ತೆಂಗು, ಹೂ, ಹಣ್ಣು ಅರ್ಪಿಸಿ ಬಂದ ಮೇಲೆ ಅವಳು ಮನೆಯ ಹೊರಗೆ ಹಾಗೂ ಇತರರ ಮನೆಗೆ ಹೋಗಬಹುದು. ಇದು ಚೊಚ್ಚಿಲ ಮಗು ಹುಟ್ಟಿದಾಗ ಎರಡನೆಯ, ಮೂರನೆಯ ಮಕ್ಕಳಿಗೂ ಬಾಣಂತಿ ಬಾವಿಗೆ ಹೋಗಿ ಪೂಜಿಸಿ ಬರುವುದುಂಟು.

ಮನೆಯಲ್ಲಿ ಹಿರಿಯರಾದ ಮುತ್ತೈದೆ (ಪುರುಷ ಅಥವಾ ಸ್ತ್ರೀ) ಗತಿಸಿದ ಮೇಲೆ ಮುಂದಿನ ದಿನಗಳಲ್ಲಿ ಮಂಗಲಕಾರ್ಯ ಮಾಡುವ ಮೊದಲು ಗಂಗಾಪೂಜೆ ಮಾಡಿ ಬರುತ್ತಾರೆ. ಇದಕ್ಕೆ ಮೆರೆಯಿಸಿಕೊಂಡು ಬರುವುದು ಎಂತಲೂ ಕರೆಯುತ್ತಾರೆ. ಮೆರೆಯಿಸಿಕೊಂಡು ಬರಲು ಹಲವು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಸತ್ತವರು ಗಂಡಸಾಗಿದ್ದರೆ ಒಂದು ಹೊಸ ಮೊರದಲ್ಲಿ ಧೋತರ, ಅಂಗಿ ಬಟ್ಟೆ, ಟೋಪಿ, ಟಾವೆಲ್‌ಗಳಿಟ್ಟು, ಅದರ ಮೇಲೊಂದು ಹೊದಿಕೆ ಮುಚ್ಚುತ್ತಾರೆ. ಹೆಣ್ಣು ಮಗಳಾಗಿದ್ದರೆ ಸೀರೆ ಕುಪ್ಪಸಕ್ಕೆ ಅರಿಶಿಣ, ಕುಂಕುಮ ಹಚ್ಚಿ ಹೂವಿನ ದಂಡಿ ಇಟ್ಟಿರುತ್ತಾರೆ. ಅಕ್ಕಸಾಲಿಗರಲ್ಲಿ ದೊರೆಯುವ ಸ್ತ್ರೀ ಅಥವಾ ಪುರುಷರ ಆಕಾರದ ಬೆಳ್ಳಿಯಿಂದ ಮಾಡಿದ ಚಿಕ್ಕಮೂರ್ತಿ ತಂದು ಮೊರದಲ್ಲಿಟ್ಟಿರುತ್ತಾರೆ. ಅದಕ್ಕೆ 'ರತಿ' ಎಂದು ಕರೆಯುವರು. ಹೋಳಿಗೆ ಅನ್ನದ ನೈವೇದ್ಯ ಮಾಡಿಕೊಂಡು ಬಂಧು, ಬಳಗ, ಆಪ್ತರು ಸೇರಿಕೊಂಡು ಡೊಳ್ಳು ಬಾರಿಸುತ್ತ ಬಾವಿಗೆ ಹೊರಡುತ್ತಾರೆ. ಮನೆಯ ಮಗಳು ಆರತಿ ಹಿಡಿದಿರುತ್ತಾಳೆ. ಅವಳಿಗೂ ತಲೆಗೆ ಹೂವಿನ ದಂಡಿ ಕಟ್ಟುವರು.

ಬಾವಿಗೆ ತಲುಪಿದ ಮೇಲೆ ಬಾವಿಯ ದಂಡೆಯ ಮೇಲೆ ಐದು ಕಲ್ಲುಗಳನ್ನಿಟ್ಟು ತೊಳೆದು ಅವುಗಳನ್ನು ಅರಿಶಿಣ, ಕುಂಕುಮಗಳಿಂದ ಪೂಜಿಸಿ ವೀಳ್ಯೆದೆಲೆ ಅಡಕೆ, ನೆನೆಯಿಸಿದ ಕಡಲೆಬೇಳೆ ಹೂ, ಹೋಳಿಗೆ ಅನ್ನ ಮುಂತಾದವು ನೈವೇದ್ಯವಿಟ್ಟು ಪೂಜಿಸಿ ಊದಿನಕಡ್ಡಿ ಬೆಳಗಿ, ಚಿಪ್ಪಾಡಿಯಿಂದ ಮಾಡಿದ ಚಿಕ್ಕ ತೆಪ್ಪದ ಮೇಲೆ ಐದು ಹೋಳಿಗೆ, ಅನ್ನ ನಿಟ್ಟು ಅದರ ಮೇಲೆ ಕಣಕದಿಂದ ಮಾಡಿದ ಆರತಿಯನ್ನಿಟ್ಟು ದೀಪಹಚ್ಚಿ ನೀರಲ್ಲಿ ಬಿಟ್ಟು ಐದು ಕೊಡ, ಇಲ್ಲವೆ ಐದು ತಂಬಿಗೆಗಳನ್ನು ತುಂಬಿಕೊಂಡು ಮತ್ತೆ ಡೊಳ್ಳು ಬಾರಿಸುತ್ತ ಮನೆಯತ್ತ ಬರುತ್ತಾರೆ. ಕೊಡಗಳು ಮದುವೆ ಸಂದರ್ಭದಲ್ಲಿ ತಂದರೆ ಅದಕ್ಕೆ (ಐರಾಣಿಕೊಡ) ಎನ್ನುವರು. ಅವುಗಳಿಂದಲೇ ಮದುಮಕ್ಕಳ ಸ್ನಾನ ಮಾಡಿಸುವರು, ಇತರ ಸಂದರ್ಭಗಳಲ್ಲಾದರೆ ಮುತ್ತೈದೆಯರು ಐದು ತಂಬಿಗೆಗಳನ್ನು ತಂದು ದೇವರ ಜಗುಲಿಯ ಮೇಲಿಟ್ಟು ಪೂಜಿಸುತ್ತಾರೆ. ನೀರು ತಂದ ಮುತ್ತೈದೆಯರಿಗೆ ಸಿಹಿಯೂಟ ಮಾಡಿಸುವರು. ಆನಂತರ ಶುಭ ಸಮಾರಂಭ ನೆರವೇರಿಸುತ್ತಾರೆ.

ಮನೆಯಲ್ಲಿ ಮರಣ ಹೊಂದಿದಾಗ ದಿನ ಮಾಡುವ ಸಂದರ್ಭದಲ್ಲೂ ಕೆರೆ, ಬಾವಿಗಳಿಗೆ ಹೋಗಿ ಪೂಜಿಸಿ ನೈವೇದ್ಯ ಅರ್ಪಿಸಿ ಬರುವುದುಂಟು. ಅದಕ್ಕೆ ಗಂಗಾ ಪೂಜೆ ಎನ್ನದೆ ದಿನ ಮಾಡುವುದು ಎನ್ನುತ್ತಾರೆ. ಇನ್ನೊಂದು ಸಂದರ್ಭದಲ್ಲೂ ನೀರಿನ ಪೂಜೆ ಮಾಡುವುದುಂಟು. ನದಿ, ಹಳ್ಳಗಳು ಮಳೆಗಾಲದಲ್ಲಿ ಪೂರ್ಣ ತುಂಬಿ ಹರಿಯುವಾಗ ಹೊಸ ಮೊರದಲ್ಲಿ ಹೂ, ಹಣ್ಣು, ವೀಳ್ಯೆದೆಲೆ, ತೆಂಗು ಮುಂತಾದವು ಇಟ್ಟು ನೀರಿಗೆ ಬಾಗಿನ ಬಿಡುವುದುಂಟು. ಇದಕ್ಕೆ ನೀರಿಗೆ ಬಾಗಿನ ಅರ್ಪಿಸುವುದು ಎನ್ನುವರು. ಕೆಲವು ಜನಾಂಗಗಳಲ್ಲಿ ನದಿ ತೀರದಲ್ಲಿ ಪಿಂಡ ಪ್ರದಾನ ಮಾಡುವುದುಂಟು ಅದು ಪಿಂಡಪ್ರದಾನ ಹಿರಿಯರ ಆತ್ಮಕ್ಕೆ ಶಾಂತಿ ಮಾಡಿಸುವುದು ಎನ್ನುತ್ತಾರೆ. ಹೊರತು ಗಂಗಾಪೂಜೆ ಎನ್ನಿಸಿಕೊಳ್ಳದು. *(ವೈಎಸ್)*

ಗಂಗಾವತಿ: ಕೊಪ್ಪಳ ಜಿಲ್ಲೆಯ ಐತಿಹಾಸಿಕ ಸ್ಥಳ. ತಾಲ್ಲೂಕು ಕೇಂದ್ರ ಮತ್ತು ಮುಖ್ಯಪಟ್ಟಣ. ಕೊಪ್ಪಳ–ರಾಯಚೂರು ಮಾರ್ಗದಲ್ಲಿ ಕೊಪ್ಪಳದಿಂದ ಸುಮಾರು 48 ಕಿ.ಮೀ. ಪೂರ್ವಕ್ಕಿದೆ. ಹಿಂದೆ ಈ ಪಟ್ಟಣಕ್ಕೆ ನೀಲಾವತಿ ಎಂದು ಹೆಸರಿತ್ತೆಂದು ಐತಿಹ್ಯ ಇದೆ. ವಿಜಯನಗರ ವಾಸಿಯಾದ ಗಂಗಾಧರನೆಂಬ ಬ್ರಾಹ್ಮಣನು ಭಾರತದ ಪುಣ್ಯಕ್ಷೇತ್ರಗಳ ತೀರ್ಥಯಾತ್ರೆ ಮಾಡಿ ಮರಳಿ ಬರುವಾಗ ಒಂದು ಶಿವಲಿಂಗವನ್ನು ತಂದಿದ್ದನೆಂದು ಹಾಗೂ ಆ ಲಿಂಗವನ್ನು ಈ ಗ್ರಾಮದಲ್ಲಿ ಸ್ಥಾಪಿಸಿ ತನ್ನ ಯಾತ್ರೆಯ ಪುಣ್ಯ ಫಲವನ್ನು ಅರಸನಿಗೆ ಗಂಗಾಜಲದೊಂದಿಗೆ ಧಾರೆ ಎರೆದನೆಂದೂ ಗಂಗಾಧರನ ಈ ಸಮರ್ಪಣೆಯಿಂದ ಸಂತೋಷಗೊಂಡ ದೊರೆ ಈ ಊರಿಗೆ ಗಂಗಾವತಿ ಎಂದು ಹೆಸರು ಇಟ್ಟನೆಂದು ಚರಿತ್ರೆಯಿಂದ ತಿಳಿದುಬರುತ್ತದೆ.

ಗಂಗಾವತಿಯ ದಕ್ಷಿಣಕ್ಕೆ ಮೂರು ಕಿ.ಮೀ. ದೂರದಲ್ಲಿ ತುಂಗಭದ್ರಾ ನದಿ ಹರಿಯುತ್ತದೆ. ತುಂಗಭದ್ರಾ ಜಲಾಶಯದಿಂದ ನೀರಾವರಿ ಪ್ರಾರಂಭವಾದ ಮೇಲೆ ಗಂಗಾವತಿ ದೊಡ್ಡ ಪಟ್ಟಣವಾಗಿ ಬೆಳೆಯುತ್ತಿದೆ. ದೇವಾಂಗ ಸಮಾಜದ ಗುರುಗಳಾದ ಮುದ್ದುಸಂಗ ಸ್ವಾಮಿಗಳ ಮಠ ಮತ್ತು ಮಡಿಮಲ್ಲಪ್ಪನ ಗುಡಿ, ಪಾರ್ವತಿಯ ತಟಾಕ ಹಾಗೂ ಪ್ರಸಿದ್ಧವಾದ ಏಳು ನೂರು ವರ್ಷಗಳ ಹಿಂದಿನ ಅರಳಿಯ ಮರವು ಈ ಊರಿನಲ್ಲಿ ಪ್ರಸಿದ್ಧವಾಗಿದೆ. ಪ್ರಸನ್ನ ವೆಂಕಟೇಶ ದೇವಾಲಯ ನಗರದ ಕೋಟೆಯ ಒಳಭಾಗದಲ್ಲಿ ಇದ್ದು, ಇತಿಹಾಸ ಪ್ರಸಿದ್ಧವಾದ

ಸಂಗ್ರಹಗಳಲ್ಲಿಯೇ ಶ್ರೇಷ್ಠ ಮಟ್ಟದವುಗಳಾಗಿವೆ. ಜೀವನದ ಆಂತರಿಕ ಹಾಗೂ ಬಾಹ್ಯ ರೀತಿ-ನೀತಿಗಳ ಕಡೆಗೆ ಸೆಳೆಯುವ ಈ ಕೃತಿಗಳು ಮನಸ್ಸು ಕಟ್ಟುವ ಕಾರ್ಯದಲ್ಲಿ ಯಶಸ್ವಿಯಾಗಿವೆ.

'ರಿಸಾಲೆ ಇಮಾಮೆ ಹುಕ್ಷೇರಿಯಾ' ಎಂಬುದು ಅನುವಾದಿತ ಕೃತಿ. ಜೀವನದ ಸಮಸ್ಯೆಗಳನ್ನು ಸನ್ಮಾರ್ಗದ ನಡೆತೆಯಿಂದ ಬಗೆಹರಿಸಿಕೊಳ್ಳಬೇಕೆಂಬ ಸಂದೇಶಗಳನ್ನು ಈ ಕೃತಿ ಕೊಡುತ್ತದೆ.

ನವಾಜರ ಮಹತ್ವದ ಕೃತಿ 'ಮಿರಾಜಲ್ ಆಷಿಕಾನ್' ಶಿವಶರಣರ ಬೆಡಗಿನ ವಚನಗಳನ್ನು ಹೋಲುತ್ತದೆ. ಉಪ್ಪನ್ನು ನೀರಿಗೆ ಹಾಕಿ ಕಲಿಸಿದಾಗ, ಉಪ್ಪಿನ ರೂಪ ಉಳಿಯದು ಅದು ನೀರಿನ ರೂಪವನ್ನೇ ಪಡೆಯುತ್ತದೆ. ಹಾಗೆ ಭಕ್ತ-ಭಗವಂತನ ಸಂಬಂಧವೆಂದು ಬಂದೇ ನವಾಜ ತಿಳಿಸಿದ್ದಾರೆ.

ಫಾರಸಿ, ಉರ್ದು, ಅರಬ್ಬೀ, ಸಂಸ್ಕೃತ, ಹಿಂದಿ, ಬ್ರಜ್ ಈ ಮುಂತಾದ ಭಾಷಾ ಸಾಹಿತ್ಯಕ್ಕೂ ಬಂದೇನವಾಜರ ಕೃತಿಗಳು ಹೊಸ ತಿರುವನ್ನು ನೀಡಿವೆ. ಇದಲ್ಲದೆ 'ತಷರೀ-ಕಲ್ಮ-ಎ-ತಯ್ಯಬ್' ಹಾಗೂ 'ಖಿಲಾಸಾ-ಉಥ್-ತೌಹೀದ್' ಮತ್ತು 'ದಾರುಲ್ ಅಸರ್' ಮೊದಲಾದ ಅವರ ಕೃತಿಗಳು ಗಮನಾರ್ಹವಾಗಿವೆ. ಬದುಕಿನ ಸಮರಸ್ಯವನ್ನು ಇಹ-ಪರಗಳ ಸಮನ್ವಯತೆಯನ್ನು ಹೇಳುವ ಇಂತಹ ಕೃತಿಗಳ ಕನ್ನಡನುವಾದ ಇಂದು ಅನಿವಾರ್ಯವಾಗಿದೆ.

ನಿನ್ನಂತೆಯೇ ಪರಮಾತ್ಮನಿದ್ದಾನೆಂದು ಹೇಳಿದ ಬಂದೇನವಾಜರು ಜೀವರಲ್ಲಿಯೇ ದೇವರನ್ನು ಕಂಡರು. ಶಿವನಿಗಿಂತ ಶಿವಶರಣರಧಿಕ ಎಂಬ ಶರಣರ ನುಡಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸಾಧನೆಯಿಂದ ಮನುಷ್ಯ ಮಹಿಮನಾಗುತ್ತಾನೆಂದು ನವಾಜರು ಸಾರಿದರು. ಮನುಷ್ಯ ಪ್ರಯತ್ನಕ್ಕೆ ಮಹತ್ವದ ಸ್ಥಾನನೀಡಿದರು.

ಜನಪದ ಕಾವ್ಯದಲ್ಲಿ ಬಂದೇ ನವಾಜ: ಕನ್ನಡ ಜನಪದ ಕಾವ್ಯದಲ್ಲಿ ಬಂದೇನವಾಜರನ್ನು ಕುರಿತಂತೆ ಅನೇಕ ಹಾಡುಗಳಿವೆ. ಹಂತಿಹಾಡು, ತ್ರಿಪದಿ, ಗೀಗೀಪದ, ಭಜನೆಪದ ಮತ್ತು ಖವ್ವಾಲಿಗಳಲ್ಲಿ ಬಂದೇನವಾಜರನ್ನು ಕುರಿತಂತೆ ವಿಪುಲ ಸಾಹಿತ್ಯ ದೊರೆಯುತ್ತದೆ. ಇವರ ಕಾವ್ಯ ಪ್ರಕಟವಾದದ್ದು ಬಹಳ ಕಡಿಮೆ, ಪ್ರಕಟವಾಗದೇ ಇರುವುದು ಬಹಳಷ್ಟಿದೆ.

ಎಂ.ಎಸ್. ಲಠ್ಠೆಯವರು ಸಂಪಾದಿಸಿ ಪ್ರಕಟಿಸಿರುವ 'ಉತ್ತರ ಕರ್ನಾಟಕದ ಹಂತಿಯ ಹಾಡುಗಳು' ಕೃತಿಯಲ್ಲಿ ಬಂದೇನವಾಜರನ್ನು ಕುರಿತಂತೆ ಒಂದು ಹಂತಿಯ ಹಾಡು ಇದೆ. ಈ ಹಾಡಿನಲ್ಲಿ ಬಂದೇನವಾಜರ ಹಿರಿಮೆಯನ್ನು, ವೈಭವವನ್ನು ಕಲಬುರ್ಗಿಯ ಆಡುಮಾತಿನ ಮೂಲಕ ವಿವರಿಸಲಾಗಿದೆ.

ಈ ಹಾಡಿನಲ್ಲಿ ದಿಲ್ಲಿ ಮತ್ತು ಕಲಬುರ್ಗಿಗಳ ನಡುವೆ ಸೇತುವೆಯಾಗಿ ನಿಂತಿರುವ ಬಂದೇನವಾಜರ ವರ್ಣನೆಯಿದೆ. ಹೂಗಳಿಂದ ಮಾಡಿದ ಛತ್ರಿಗೆ ಝುಲ್ಯಾಯೆಂದು ಕರೆಯುತ್ತಾರೆ. ಬಂದೇನವಾಜರ ಭಕ್ತನೊಬ್ಬ ತಾನು ಕಣದಲ್ಲಿ ರಾಶಿ ಮಾಡುತ್ತ ಅಲ್ಲಿಂದಲೇ ಕೈಮುಗಿಯುವ ಪರಿಯನ್ನು ಈ ಹಂತಿ ಹಾಡಿನಲ್ಲಿ ಹೇಳಲಾಗಿದೆ. ಕಲಬುರ್ಗಿಯ ಹಿರಿರೋಜದಲ್ಲಿರುವ ಬಂದೇನವಾಜರ ದರಗಾವನ್ನು ಕುರಿತು ಎರಡನೆಯ ನುಡಿಯಲ್ಲಿ ಹೇಳಲಾಗಿದೆ. ಮಗದೋಮಾ ಎಂದರೆ ಒಡೆಯ. ಇಂತಹ

ಒಡೆಯ ಬೇರಾರೂ ಆಗಿರದೆ ಆತ ಬಂದೇನವಾಜ ರಾಗಿದ್ದನೆಂದು ತಿಳಿಸುತ್ತ ಹಾಡು ಮುಂದವರೆಯುತ್ತದೆ. ಕಲಬುರ್ಗಿ ಊರು ಉತ್ತಮವೆಂದು ಹೇಳಿರುವುದರಿಂದ ಕಲಬುರ್ಗಿಯ ಜನಪದ ಕವಿಯೇ ಈ ಹಾಡನ್ನು ರಚಿಸಿರಬಹುದಾಗಿದೆ. *(ಬಿಎಸ್‌ಬಿ)*

ಖಾನಾಪುರ: ಧಾರ್ಮಿಕ ಕ್ಷೇತ್ರ. ಇಲ್ಲಿ ಮೈಲಾರ ಲಿಂಗೇಶ್ವರ (ಮೈಲಾರ ಮಲ್ಲಣ್ಣ)ನ ಪ್ರಸಿದ್ಧ ದೇವಾಲಯವಿದೆ. ಶಾಸನದಲ್ಲಿ ಮಹಾಭೈರವ, ಮೈಲಾರವೆಂದು ಕರೆಯಲಾಗಿದೆ. ಬಾಲ್ಕಿ ತಾಲ್ಲೂಕಿನ ಆಗ್ನೆಯ ದಿಕ್ಕಿನಲ್ಲಿ ಸುಮಾರು 26 ಕಿ.ಮೀ ದೂರದಲ್ಲಿದೆ.

ಚಾಲುಕ್ಯ ರಾಜನಾದ ಎರಡನೆಯ ಜಗದೇಕಮಲ್ಲ ತನ್ನ ಪಟ್ಟಾಭಿಷೇಕದ ಸಂದರ್ಭದಲ್ಲಿ ಹಾಗೂ ತನ್ನ ತಂದೆಯ ಹೆಸರಿನಲ್ಲಿ ಈ ದೇವಾಲಯಕ್ಕೆ ಕೆಲವು ಭೂಮಿ ಕಾಣಿಕೆ ಕೊಟ್ಟಿರುವುದಲ್ಲದೆ ಈ ದೇವಾಲಯದ ಶಿಖರ ಕೂಡ ಕಟ್ಟಿಸಿದ್ದಾಗಿ ತಿಳಿದು ಬರುತ್ತದೆ. ಈ ದೇವಾಲಯದ ಪೂರ್ವದಿಕ್ಕಿನ ಮುಖ್ಯ ದ್ವಾರವನ್ನು ಅಹಲ್ಯಾಬಾಯಿ ಹೋಳ್ಕರ ಕಟ್ಟಿಸಿದ್ದಾಗಿಯೂ, ಕೆಲವು ಭೂಮಿಗಳನ್ನು ದೇವಾಲಯಕ್ಕೆ ಕಾಣಿಕೆ ಕೊಟ್ಟಿದ್ದಾಗಿಯೂ ಹೇಳುತ್ತಾರೆ. ಈ ದೇವಾಲಯವನ್ನು ಪ್ರಕೃತಿಯ ಸುಂದರ ಪರಿಸರದ ಮಧ್ಯದಲ್ಲಿ ಕಟ್ಟಲಾಗಿದೆ. ದೇವಾಲಯದ ಸುತ್ತ ನೀರಿನ ಹೊಂಡಗಳು, ಝರಿಗಳು ಇವೆ. ಈ ದೇವಾಲಯದ ಜಾತ್ರೆ ಡಿಸೆಂಬರ್-ಜನವರಿ ತಿಂಗಳಲ್ಲಿ ಪ್ರತಿವರ್ಷ 30 ದಿನಗಳವರೆಗೆ ನಡೆಯುತ್ತದೆ. ಆಂಧ್ರ-ಮಹಾರಾಷ್ಟ್ರ ಮತ್ತು ಕರ್ನಾಟಕದಿಂದ ಸಾವಿರಾರು ಜನರು ಬರುತ್ತಾರೆ. ಈ ಪುಣ್ಯಕ್ಷೇತ್ರಕ್ಕೆ ದಕ್ಷಿಣ ಕಾಶಿ ಎಂದು ಕರೆಯುತ್ತಾರೆ. ಇಲ್ಲಿ ಶನೀಶ್ವರ, ಗಾಯ ಮುಖಿಗಳೂ ಇವೆ. ಇಲ್ಲಿಗೆ ಮಂಗಳವೇಡೆಯಿಂದ ದಾಮಾಜಿ ಸಂತ ಬಂದು ಸ್ನಾನ ಕೊಂಡದಲ್ಲಿ ಸ್ನಾನ ಮಾಡಿರುವುದಾಗಿ ಹೇಳುತ್ತಾರೆ. ಪ್ರತಿ ರವಿವಾರ ಇಲ್ಲಿ ದನಗಳ ಸಂತೆ ನಡೆಯುತ್ತದೆ. *(ಜಿಬಿವಿ)*

ಮೊಟ್ಟ ಮೊದಲ ಹೆಸರು ಗುಂಡಮ್ಮನವರದು, ಇವರ ಹೆಸರಿನೊಂದಿಗೆ 'ಗಜಲ್' ಪದ ಅನ್ವರ್ಥವಾಗಿ ಸೇರಿಕೊಂಡಿದೆ.

ಇವರು ಮೂಲತಃ ಇಂದಿನ ಯಾದಗೀರ ಜಿಲ್ಲೆ ಸುರಪುರದವರು. ಪಾತರದವರ ಕುಟುಂಬದಲ್ಲಿ ಜನನ. ಮುಜರಾದಂತಹ ಸಂಗೀತ ಮತ್ತು ನರ್ತನಗಳ ಮೂಲಕ ವಿನೋದ, ವಿಡಂಬನೆ, ಹಾಸ್ಯದ ಮೂಲಕ ರಸಿಕಲೋಕವನ್ನು ಖುಷಿ ಪಡಿಸುತ್ತಿದ್ದರು. ಇಂತಹ ಕುಟುಂಬದಿಂದ ಬಂದ ಇವರಿಗೆ ಸಹಜವಾಗಿಯೇ ಹಾಡುಗಾರಿಕೆಯ ಕಡೆ ಮನಸ್ಸುವಾಲಿತು.

'ಗಮ್ ಉತಾರ್ನೇಕೆ ಲೀಯೆ ಮೈತೋ ಜೀಯಾ ಗಾವೂಂಗಾ' ದಿಲ್ ಕಾ ಖಿಲೋನಾ ಹಾಯ್ ಟುಟ್‌ಗಯಾ' ದಂತಹ ಗಜಲ್‌ಗಳು ಗುಂಡಮ್ಮನವರ ಅತ್ಯಂತ ಮೆಚ್ಚಿನ ಗೀತೆಗಳಾಗಿದ್ದವು. ಪ್ರತಿ ಗಾಯನದಲ್ಲೂ ಇವುಗಳನ್ನು ಹಾಡುತ್ತ ಅದ್ಭುತ ಲೋಕವನ್ನೇ ಸೃಷ್ಟಿಸುತ್ತಿದ್ದರು. ಗುಂಡಮ್ಮನವರ ಗಾಯನಕ್ಕೆ ವಿದ್ವಾಂಸರ ವಲಯದಲ್ಲಿ ಮನ್ನಣೆ ಸಿಗುವಂತೆ ಮಾಡಿದವರೆಂದರೆ ಶಾಂತರಸರು. ಗಜಲ್‌ಗಳ ಜೊತೆಗೆ ಇವರು ತತ್ವಪದಗಳನ್ನು ಕೂಡ ಹಾಡುತ್ತಿದ್ದರು. ಆದರೆ ಗುರುತಿಸಿಕೊಂಡದ್ದು ಗಜಲ್‌ಗಳ ಮೂಲಕವೇ. *(ಡಿಎಸ್‌ಡಿ)*

ಗಡಿಕೇಶ್ವಾರ: ಜೈನಧರ್ಮದ ಪ್ರಾಚೀನ ಕೇಂದ್ರಗಳಲ್ಲೊಂದು. ಕಲಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಚಿಂಚೋಳಿಯಿಂದ ನೈಋತ್ಯಕ್ಕೆ 25 ಕಿ.ಮೀ. ಕಲಬುರ್ಗಿಯಿಂದ ಈಶಾನ್ಯಕ್ಕೆಕ 65 ಕಿ.ಮೀ. ದೂರದಲ್ಲಿದೆ.

ಶಾಸನಗಳಲ್ಲಿ ಕೇಶವಪುರವೆಂದು ಉಲ್ಲೇಖಗೊಂಡಿರುವ ಇದು, ಕೇಶ್ವಾರ, ಗಡಿಕೇಶ್ವಾರವೆಂದು ಮಾರ್ಪಾಟಾಗಿದೆ. ಇಲ್ಲಿನ ಕುಂಬಾರ ಓಣಿಯಲ್ಲಿರುವ ಜಿನಾಲಯವನ್ನು ಜನ ದೇಗುಲ, ಜೈನರ ಗುಡಿ ಎಂದು ಅಲ್ಲಿರುವ ದೇವರುಗಳನ್ನು ಕಂಚ್ಗಾರರ ದೇವರು ಎಂದು ಹೇಳುತ್ತಾರೆ. ಕಂಚ್ಗಾರರು ಎಂದರೆ ಜೈನ ಪಾತ್ರೆವ್ಯಾಪಾರಿಗಳು.

ರಾಷ್ಟ್ರಕೂಟರ ಕಾಲದ ಇಲ್ಲಿನ ಬಸದಿ ಕಾಲಕಾಲಕ್ಕೆ ಬದಲಾಗಿದೆ. ಜೀರ್ಣೋದ್ಧಾರಗೊಂಡಿದೆ. ಮುಖ ಮಂಟಪದ ಬಲಗೋಡೆಯ ಛಾವಣಿಗೆ ಹೊಂದಿಕೊಂಡಿರುವ ಕ್ರಿಶ. 11ನೆಯ ಶತಮಾನದ ಶಾಸನ ಮಸಣಯ್ಯನೆಂಬುವನು ಪಾರ್ಶ್ವನಾಥ ಚೈತ್ಯಾಲಯವನ್ನು ಮಾಡಿಸಿದ ಬಗ್ಗೆ ತಿಳಿಸುತ್ತಿದೆಯಾದರೂ ಇದರ ರಚನಾಶೈಲಿಯಿಂದ ಇದೊಂದು 10ನೆಯ ಶತಮಾನದ ನಿರ್ಮಿತಿಯೆಂದು ಊಹಿಸಬಹುದಾಗಿದೆ. ಕ್ರಿ.ಶ. 1385ರ ಇನ್ನೊಂದು ಶಾಸನದಲ್ಲಿ ಮಾಘನಂದಿ ಯತಿಯ ಶಿಷ್ಯ ಮತಿಸೆಟ್ಟಿಯು ಈ ಬಸದಿಯ ಜೀರ್ಣೋದ್ಧಾರ ಗೈದ ಉಲ್ಲೇಖವಿದೆ.

ಕೆಲವೊಂದು ಜಿನಮಂದಿರಗಳ ವಿಗ್ರಹಗಳು ರಾಷ್ಟ್ರಕೂಟರ ಕಾಲದವುಗಳಾದರೆ ಬಹುತೇಕ ಅವಶೇಷಗಳು ಕಲ್ಯಾಣ ಚಾಳುಕ್ಯರ ಕಾಲದವುಗಳಾಗಿವೆ. ಲಭ್ಯವಿರುವ ಕ್ರಿಶ. 1079, 1124, 1137, 1138, 1228, ಇನ್ನಿತರ ಶಾಸನಗಳಾಧಾರದ ಮೇಲೆ ತ್ರಿಕೂಟ ಬ್ರಹ್ಮ ಜಿನಾಲಯ, ಶಾಂತಿನಾಥ ಬಸದಿ, ಲೋಕ ಜಿನಾಲಯ, ಪಾರ್ಶ್ವನಾಥ ಬಸದಿ, ತೆಂಕಣ ಬಸದಿ ಇನ್ನಿತರ ಜಿನಮಂದಿರಗಳ ಬಗ್ಗೆ ಮಾಹಿತಿ ಸಿಗುತ್ತವೆ.

ಅಂದಾಜು ಪೂರ್ವಪಶ್ಚಿಮ 65 ಅಡಿ ಉದ್ದ, ದಕ್ಷಿಣೋತ್ತರ 30 ಅಡಿ ಅಗಲ, ಪೂರ್ವಾಭಿಮುಖವಾಗಿರುವ ಈ ಜಿನಾಲಯ ಗರ್ಭಗೃಹ, ತೆರದ ಅಂತರಾಳ, ನವರಂಗ, ಮುಖ ಮಂಟಪಗಳನ್ನು ಹೊಂದಿದೆ. ಮುಖ ಮಂಟಪದ ಮುಂಭಾಗ ಬಿದ್ದು ಬಯಲಾಗಿದೆ. ಇಲ್ಲಿ ಕಕ್ಷಾಸನಗಳಿದ್ದ ಕುರುಹುಗಳಿವೆ. ಮಂದಿರಕ್ಕೆ ಪೂರ್ವ ದಕ್ಷಿಣ ದಿಕ್ಕುಗಳಿಂದ ಒಳ ಬರಲು ಬಾಗಿಲುಗಳಿವೆ. ಅರೆಗಂಭಗಳ ಸಾದಾ ಹೊರಭಿತ್ತಿಯನ್ನು ಸೇದಿ (ಸುಣ್ಣದ) ಕಲ್ಲಿನಿಂದ ಕಟ್ಟಿದ್ದರೆ, ಒಳಮೈಗೆ ಕರಿಕಲ್ಲುಗಳನ್ನು ಬಳಸಿದ್ದಾರೆ. ಉಪಾನ, ತ್ರಿಪಟ್ಟಕುಮುದ, ಪಟ್ಟಿಕೆಗಳ ಅಧಿಷ್ಠಾನದ ಈ ಬಸದಿಗೆ ಇಳಿಜಾರಾದ ದಪ್ಪಕಲ್ಲಿನ ಸಾದಾ ಲೋವೆ ಇದೆ. ಗರ್ಭಗೃಹ, ನವರಂಗ ರಾಷ್ಟ್ರಕೂಟರ ಕಾಲದ್ದಾದರೆ, ಮುಖಮಂಟಪ ಹಾಗೂ ಮುಖಮಂಟಪದ ಕಂಬಗಳ ಶೈಲಿ ಕಲ್ಯಾಣ ಚಾಲುಕ್ಯರ ಕಾಲದವುಗಳೆಂದು ತೋರುತ್ತದೆ. ಬಸದಿಯ ಮುಂದೆ ತೀರ್ಥಂಕರರ ಆಸೀನ (ಸಿಂಹ) ಪೀಠವೊಂದಿದೆ. ದ್ವಿಶಾಖೆಯ ದ್ವಾರಬಂಧಗಳನ್ನು ಹೊಂದಿರುವ ಗರ್ಭಗೃಹ ಮತ್ತು ನವರಂಗದ ಬಾಗಿಲುವಾಡಗಳ ಲಲಾಟಪಟ್ಟಿಕೆಗಳ ಮೇಲೆ ಕೂಡುಕೀರ್ತಿಮುಖಗಳುಳ್ಳ ನಾಲ್ಕು ಚೈತ್ಯಾಕಾರದ ಕಿರು ಕಮಾನುಗಳನ್ನು ಕೆತ್ತಿದ್ದಾರೆ.

ನವರಂಗದ ಉತ್ತರದ ಕಡೆ ಅಂತರಾಳದ ಗೋಡೆಗಾನಿಸಿ ಪೂರ್ವಕ್ಕೆ ಮುಖಮಾಡಿ ನಿಲ್ಲಿಸಿದ, 23ನೆಯ ತೀರ್ಥಂಕರ ಪಾರ್ಶ್ವನಾಥರ (5'X3') ಭವ್ಯ ಸುಂದರ ಖಡ್ಗಾಸನದ (ನಿಂತ) ಕಪ್ಪುಕಲ್ಲಿನ ಪ್ರತಿಮೆ ಗಮನ ಸೆಳೆಯುವಂತಿದೆ. ಮೃದು ಮಂದಹಾಸದ ಗುಂಗುರು ಕೂದಲಿನ ತಲೆಯ ಮೇಲೆ, ಜಿನನ ತಪಸ್ಸಿಗೆ ಭಂಗ ಬಾರದಂತೆ ಉಪಸರ್ಗವನ್ನು ತಡೆಯಲು ಧರಣನೆಂಬ ಸರ್ಪ (ಧರಣೇಂದ್ರ ಯಕ್ಷ) ಸಪ್ತ ಫಣಿಗಳನ್ನು ಬಿಚ್ಚಿ ನೆರಳಾಸರೆ ನೀಡಿದೆ. ಹೆಡೆಯ ಮಧ್ಯಭಾಗದಲ್ಲಿ ಪ್ರಭಾಮಂಡಲ ಇದೆ. ಸರ್ಪದ ಹೆಡೆಯ ಮೇಲೆ ಒಕ್ಕೊಡೆ ಇದೆ. ಪ್ರತಿಮೆಯ ಪಾದಗಳ ಎಡ ಬಲದಲ್ಲಿ ಯಕ್ಷ-ಯಕ್ಷಿಯರ ಕಿರುಶಿಲ್ಪಗಳಿಲ್ಲ. ಹೊಟ್ಟು ಕಣಿಕೆಗಳ ಮಧ್ಯ ಧೂಳು ಜೇಡರ ಬಲೆಯ ನಡುವೆ ಸಿಲುಕಿರುವ ಈ ಅಮೂಲ್ಯ ವಿಗ್ರಹದ ದುರವಸ್ಥೆ ನಮ್ಮವರ ಸೊಂಭೇರಿತನಕ್ಕೆ ಸಾಕ್ಷಿ ಎನಿಸಿದೆ.

ಗರ್ಭಗೃಹದಲ್ಲಿ ಪಾರ್ಶ್ವನಾಥ ಪದ್ಮಾಸನದ ಪ್ರತಿಮೆ ಇದೆ. 5 ಅಡಿ ಎತ್ತರ 3 ಅಡಿ ಅಗಲದ ಕರಿಕಲ್ಲಿನ ಗುಂಗುರು ಕೂದಲಿನ ತಲೆಯ ಮೇಲೆ, ಏಳು ಹೆಡೆಯ ಸುಂದರ ನಾಗಶಿಲ್ಪವಿದೆ. ನಾಗನ ತಲೆಯ ಮೇಲೆ ಸ್ವಾಮಿಯ ಮೂರು ಲೋಕದ ಸ್ವಾಮ್ಯತ್ವದ ಸಂಕೇತವಾಗಿ ಮುಕ್ಕೊಡೆ ಇದೆ. ನೀಳಕರ್ಣಗಳ ಮುಖದ ಹಿಂದೆ ಪ್ರಭಾಮಂಡಲವಿದೆ. ಒರಗು ದಿಂಬು, ಪ್ರತಿಮೆಯ ಕೆಳಭಾಗದಲ್ಲಿ ಎಡಬಲದಲ್ಲಿ ಆನೆಯ ತಲೆಯ ಮೇಲೆ ಲಂಘಿಸಿ ನಿಂತ ಸಿಂಹಗಳು ಅದರ ಮೇಲೆ ಬಾಯ್ದೆರೆದ ಮಕರಗಳು, ಇವುಗಳ ಮೇಲೆ ತೊಡೆಯವರೆಗಿರುವ ದ್ವಿಭಂಗಿಯ ದ್ವಿಭುಜಗಳ ಚಾಮರಧಾರಿಗಳಿದ್ದಾರೆ. ಕಿರೀಟ, ಪತ್ರಕುಂಡಲ, ಎದೆಹಾರ, ಭುಜದಾಭರಣ, ತೋಳುಬಂಧಿ, ಕಂಕಣ, ಉದರಬಂಧ, ನಡುಬಂಧ, ಉಪವೀತಗಳನ್ನು ಈ ಚವರಿಗರು ಹೊಂದಿದ್ದಾರೆ. ಬಲಗಡೆಯ ಚಾಮರಧಾರಿಯ ಬಲಗೈಯಲ್ಲಿ ಚಾಮರ, ಎಡಗೈಯಲ್ಲಿ ಫಲವಿದೆ. ಎಡಚಾಮರಧಾರಿಯು ಎಡಗೈಯಲ್ಲಿ

ಪುರಾತನ ಮಂದಿರವಾಗಿದೆ. ಮೂರ್ತಿರಹಿತವಾದ ಭಿನ್ನವಾದ ಸೌಂದರ್ಯಪೂರ್ಣ ಶಿಲಾ ಸಾಮಗ್ರಿಗಳಿಂದೊಡಗೂಡಿದ ವೆಂಕಟೇಶ್ವರ ಸ್ವಾಮಿಯ ದೇವಾಲಯವು ವಿರೂಪಾಕ್ಷೇಶ್ವರ ದೇವಸ್ಥಾನದ ಬಲಗಡೆಗೆ ಹೊಂದಿಕೊಂಡಿದ್ದು ಅಂದಿನ ಪ್ರಾಚೀನತೆ ಮತ್ತು ವೈಭವಗಳನ್ನು ನೆನಪಿಗೆ ತರುತ್ತದೆ.

ಇತ್ತೀಚೆಗೆ ನಿರ್ಮಾಣಗೊಂಡ ಶ್ರೀರಾಮ ದೇವಾಲಯದ ಮೇಲ್ಭಾಗದಲ್ಲಿ ರಾಮಾಯಣದಲ್ಲಿ ಬರುವ ಪ್ರಮುಖ ಸನ್ನಿವೇಶಗಳನ್ನು ತಿಳಿಸುವ ಸಚಿತ್ರ ಶಿಲ್ಪಕಲೆಯು ಪ್ರೇಕ್ಷಕರ ಕಣ್ಮನ ಸೆಳೆಯುತ್ತವೆ. ನಗರದಲ್ಲಿ ನೋಡಬಹುದಾದ ಇತರ ದೇವಾಲಯಗಳು ಶ್ರೀ ನಗರೇಶ್ವರ ದೇವಾಲಯ, ಸುಂಕದಕಟ್ಟೆ ಶ್ರೀ ಪ್ರಾಣದೇವರ ದೇವಾಲಯಗಳು. *(ಪಿಎಚ್)*

ಗಂವ್ಹಾರ: ಕಲಬುರ್ಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಐತಿಹಾಸಿಕ ತಾಣ. ಜೇವರ್ಗಿ–ಶಹಾಪುರದ ಮುಖ್ಯರಸ್ತೆಯಲ್ಲಿರುವ 'ಚಿಗರಹಳ್ಳಿ' ಕ್ರಾಸ್ನಿಂದ ಪೂರ್ವಕ್ಕೆ 5 ಕಿ.ಮೀ. ದೂರದಲ್ಲಿದೆ. ಇಲ್ಲಿನ ಅಮೃತೇಶ್ವರ ಗುಡಿಯಲ್ಲಿರುವ ಹೈಹಯ ವಂಶದ ಅಲ್ಲಹುಲಿ ದೇವರಸನ ಕಾಲದ ಶಾಸನದಲ್ಲಿದ್ದ ಊರ ಹೆಸರು 'ಗವಂಹಜ'ವೇ ಈಗಿನ ಗಂವ್ಹಾರವಾಗಿದೆ. ಗವ ಎಂದರೆ ಗೋವು ಹರ ಎಂದರೆ ಕಾಯುವವ ಅಂದರೆ ಗೋಪಾಲ. ಹಿಂದೆ ಇಲ್ಲಿ ಪಶು ಸಂಗೋಪನೆ ಮೂಲ ವೃತ್ತಿಯಾಗಿರುವುದನ್ನು ಇದು ಬಿಂಬಿಸುತ್ತದೆ.

ಹಿಂದೆ ಈ ಭಾಗದಲ್ಲಿ ಜೈನಧರ್ಮ ಊರ್ಜಿತಾವಸ್ಥೆಯಲ್ಲಿತ್ತು. ಜೈನಧರ್ಮಕ್ಕೆ ಸಂಬಂಧಿಸಿದ ತೀರ್ಥಂಕರರ ವಿಗ್ರಹಗಳೂ ಯಕ್ಷ–ಯಕ್ಷಿಯರ ಪೂರ್ಣ ಹಾಗೂ ಭಗ್ನಗೊಂಡ ಅನೇಕ ಪ್ರತಿಮೆಗಳೂ ಈ ಭಾಗದಲ್ಲಿ ಸಿಕ್ಕಿವೆ. ಕಲೆ ಮತ್ತು ಐತಿಹಾಸಿಕವಾಗಿ ಮಹತ್ವವಾದ ಯಕ್ಷ–ಯಕ್ಷಿಯರ ಪ್ರತಿಮೆಗಳು ಈ ಊರಲ್ಲಿವೆ.

ಗಂವ್ಹಾರದ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಒಂದು ದೊಡ್ಡ ಮಂಟಪವಿದೆ. ಇದನ್ನು ಊರಿನ ಜನರು ಸರಸ್ವತಿ (ಮಂದಿರ) ಮಂಟಪ ಎಂದು ಕರೆಯುತ್ತಾರೆ. ವಾಸ್ತುಶಿಲ್ಪದ ದೃಷ್ಟಿಯಿಂದ ಇದು ಅಷ್ಟೇನೂ ಪ್ರಮುಖವಾದದ್ದಲ್ಲ. ಮೇಲ್ಛಾವಣಿ ರಹಿತವಾದ ಇದು ಹೊರನೋಟಕ್ಕೆ ಒಂದು ಬಯಲು ಚಾವಡಿಯಂತೆ ಕಂಡುಬರುತ್ತದೆ. ಈ ಚಾವಡಿಯಲ್ಲಿ ಕುಳಿತ ಭಂಗಿಯಲ್ಲಿರುವ ಎರಡು ಗಣೇಶನ ಶಿಲ್ಪಗಳು, ತ್ರಿಭಂಗಿಯಲ್ಲಿ ನಿಂತಿರುವ ಒಂದು ಧರಣೇಂದ್ರ ಯಕ್ಷ ಹಾಗೂ ಒಂದು ಪದ್ಮಾವತೀಯಕ್ಷಿಯ ವಿಗ್ರಹಗಳಿವೆ. ಧರಣೇಂದ್ರ ಯಕ್ಷನ ವಿಗ್ರಹ ಮೂರು ಅಡಿ ಎತ್ತರವಿದೆ. ಪಾಶ, ಅಂಕುಶ, ತಾವರೆ ಹೂ ಬೀಜಪೂರಫಲಗಳನ್ನು ಧರಿಸಿರುವ ಧರಣೇಂದ್ರ ಯಕ್ಷನ ಒಡಲ ತುಂಬಾ ಸೂಕ್ಷ್ಮವಾದ ಕುಸುರಿ ಕೆಲಸಗಳಿಂದೊಡಗೂಡಿರುವ ಆಭರಣಗಳನ್ನು ಧರಿಸಿರುವಂತೆ ಕಂಡರಿಸಲಾಗಿದೆ. ತಲೆಯ ಮೇಲೆ ಕಿರೀಟ, ಕಿವಿಯಲ್ಲಿ ಕರ್ಣಕುಂಡಲ, ಕೊರಳಲ್ಲಿ ಹಲವು ಬಗೆಯ ಹಾರಗಳು, ಉದರಬಂಧ, ಕಟೀಬಂಧ, ಯಜ್ಞೋಪವೀತ, ಉಪವೀತ, ಕೈಗಳಲ್ಲಿ ಹಾಗೂ ಕಾಲುಗಳಲ್ಲಿ ಕಡಗಗಳು, ಭುಜಕೀರ್ತಿ ತೋಳುಬಂದಿ ಮುಂತಾದ ಆಭರಣಗಳನ್ನು ತೊಟ್ಟಿದ್ದಾನೆ. ಆತನು ಧರಿಸಿರುವ ವಸ್ತುಗಳು ಸಹ ಸ್ಪಷ್ಟವಾಗಿ ಕಾಣುವಂತಿವೆ. ಆತನ ಕಟೀವಸ್ತ್ರ ಸೊಂಟವನ್ನು ಬಳಸಿ ನೆಲದವರೆಗೆ ಜೋತಾಡುವಂತೆ ಚಿತ್ರಿಸಲ್ಪಟ್ಟಿದೆ. ಧರಣೇಂದ್ರನ ಹಿಂಭಾಗದಲ್ಲಿರುವ ಪ್ರಭಾವಳಿಯಿಂದ ಕೂಡಿರುವ ಶಿಲಾಫಲಕ ವಿಗ್ರಹಕ್ಕೆ ಆಧಾರವನ್ನೊದಗಿಸುವ ಸಲುವಾಗಿ ನಿರ್ಮಿತವಾಗಿದ್ದು ಆಕರ್ಷಕವಾಗಿದೆ. ಕಿರೀಟದ ಮೇಲೆ ಮೂರು ಹೆಡೆಗಳ ಸರ್ಪವಿದೆ ಹಾಗೂ ಕಿರೀಟದ ಮಧ್ಯೆ ಸಣ್ಣದಾದ ಕುಳಿತ ಜಿನ ಬಿಂಬವಿದೆ.

ಪದ್ಮಾವತಿ ವಿಗ್ರಹದ ಎತ್ತರ 2¾ ಅಡಿ. ತ್ರಿಭಂಗಿಯಲ್ಲಿರುವ ಪದ್ಮಾವತಿ ಯಕ್ಷಿಯು ಪಾಶ, ಅಂಕುಶ, ಬೀಜಪೂರ ಹಾಗೂ ಪುಷ್ಪವನ್ನು ಹಿಡಿದಿದ್ದಾಳೆ. ಕರಂಡ, ಮಕುಟ, ಕರ್ಣಕುಂಡಲ, ಕಂಕಣ, ಕಾಲಂದಗೆ ಹಾಗೂ ಕೊರಳಲ್ಲಿ ಹಲವು ರೀತಿಯ ಸರಗಳನ್ನು ಧರಿಸಿದ್ದಾಳೆ. ಈಕೆಯ ಸೊಂಟದಲ್ಲಿರುವ ವಸ್ತ್ರಗಳು ಮೊಣಕಾಲಿನವರೆಗೆ ಇಳಿಬಿದ್ದಿವೆ. ಈಕೆಯ ಕಟೀವಸ್ತ್ರವು ಹಲವು ನೆರಿಗೆಗಳಿಂದೊಡಗೂಡಿ ಎಡಬಲಗಳಲ್ಲಿ ಕೆಳಭಾಗದವರೆಗೆ ಇಳಿಬಿದ್ದಿದೆ. ತಲೆಯ ಮೇಲಿರುವ ಕಿರೀಟ ಸೂಕ್ಷ್ಮವಾದ ಚಿಕಣಿ ಕೆಲಸದಿಂದ ಕೂಡಿದೆ. ಕಿರೀಟದ ಮಧ್ಯಭಾಗದಲ್ಲಿ ಸಣ್ಣದಾದ ಜಿನಬಿಂಬ, ಹಾಗೂ ಕಿರೀಟದ ಮೇಲ್ಭಾಗದಲ್ಲಿ ಒಂದು ಹೆಡೆಯ ಸರ್ಪವಿದೆ. ಅಮೂಲ್ಯವಾದ ಈ ವಿಗ್ರಹವು ದುರದೃಷ್ಟವಶಾತ್ ಸಂಪೂರ್ಣ ಭಗ್ನವಾಗಿದ್ದು ಎರಡು ತುಂಡಾಗಿದೆ.

ಧರಣೇಂದ್ರ ಯಕ್ಷ ಹಾಗೂ ಪದ್ಮಾಪತಿ ಯಕ್ಷಿಯ ಈ ವಿಗ್ರಹಗಳು ಸರ್ವಾಂಗ ಸುಂದರವಾಗಿರುವುದನ್ನು ಹಾಗೂ ಇಷ್ಟು ಎತ್ತರವಾಗಿರುವುದನ್ನು ಗುಮನಿಸಿದರೆ ಇನ್ನೂ ಆ ಬಸದಿಯ ಮೂಲನಾಯಕ ಪ್ರತಿಮೆ ಮುಖ್ಯ ತೀರ್ಥಂಕರ ವಿಗ್ರಹವಾದ ಪಾರ್ಶ್ವನಾಥರ ಪ್ರತಿಮೆ ಇನ್ನೆಷ್ಟು ಎತ್ತರವಾಗಿ ಹಾಗೂ ಸುಂದರವಾಗಿ ನಿರ್ಮಿತವಾಗಿದ್ದಿರಬಹುದೆಂದು ಊಹಿಸಬಹುದು. ಈ ಪ್ರತಿಮೆಗಳಿರುವ ತಾವಿನಲ್ಲೆ ದಕ್ಷಿಣಕ್ಕೆ ಕಪ್ಪುಕಲ್ಲಿನ ಸಪ್ತಮಾತೃಕೆಯರ ಒಡೆದ ಶಿಲಾಫಲಕದಲ್ಲಿ ಕೊನೆಯ ಮೂರು ದೇವತೆಗಳ ಶಿಲ್ಪಗಳು ಮಾತ್ರ ಉಳಿದುಕೊಂಡಿವೆ. ಚತುರ್ಭುಜಗಳು, ಪದ್ಮಾಸನದ ಈ ಪ್ರತಿಮೆಗಳು ಸುಂದರವಾಗಿವೆ. ಆದರೆ ದುರ್ದೈವವಶಾತ್ ಇಲ್ಲಿರುವ ಎಲ್ಲ ಮೂರ್ತಿಗಳಿಗೆ ಸುಣ್ಣ ಬಳಿದು ಅಂದಗೆಡಿಸಿದ್ದಾರೆ.

ಹೈಹಯ ವಂಶದ ಅಲ್ಲಹುಲಿಯ ಆಳ್ವಿಕೆಯ ಕಾಲದ ದಾನ ಶಾಸನದಲ್ಲಿ ಗಂವ್ಹಾರದಲ್ಲಿದ್ದ ಪ್ರಾಚೀನ ವಿದ್ಯಾಕೇಂದ್ರವೊಂದಕ್ಕೆ ದಾನಗಳನ್ನು ಕೊಟ್ಟಿದ್ದನ್ನು ದಾಖಲಿಸಿದೆ. ಶಾಸನದ ಪಾಠ ಅಲ್ಲಲ್ಲಿ ತ್ರುಟಿತವಾಗಿದ್ದರೂ ಒಟ್ಟಾರೆ ಅದರ ಸಾರಾಂಶವನ್ನು ಅರಿಯಬಹುದಾಗಿದೆ. *(ಡಿಎನ್ಎ)*

ಗಜಲ್ ಗುಂಡಮ್ಮ: ಗಜಲ್ ಕಲಾವಿದೆ. ಭಾವಪೂರ್ಣವಾಗಿ ಹಾಡಲು ತೊಡಗಿದರೆ ಸಾವಿರಾರು ರಸಿಕ ಮನಸ್ಸುಗಳು ಪುಳಕಗೊಳ್ಳುತ್ತಿದ್ದುವು. ಈಕೆಯ ಹಾಡಿನ ಮೋಡಿಯಿಂದ ನೂರಾರು ಮುಜರಾಗಳು: ಗಾನ ಪಾರ್ಟಿಗಳು ಜೀವ ಪಡೆದುಕೊಳ್ಳುತ್ತಿದ್ದುವು. ಅಂತಹ ಹಾಡುಗಾರಿಕೆಯ ಕಲೆಗಾರಿಕೆ ಕಂಠ ಮಾಧುರ್ಯ, ತನ್ಮಯತೆ, ಗುಂಡಮ್ಮನವರ ಕಂಠದಲ್ಲಿತ್ತು. 'ಗಜಲ್' ಎಂದರೆ ಸಾಕು ಸಂಗೀತ ಪ್ರಿಯರಿಗೆ ನೆನಪಾಗುವ



ಗರಡಿ ಮನೆ

ಸಣ್ಣ ಮರಳು, ನುರುಜುಕಲ್ಲುಗಳಿಲ್ಲದಂತೆ ಮಾಡಲು ಮಣ್ಣನ್ನು ಜರಡಿ ಆಡಿಸಿರುತ್ತಾರೆ.

ಗರಡಿ ಮನೆ ತಯಾರಿಯಲ್ಲಿ ಕೆಮ್ಮಣ್ಣು, ಜೇಡಿನಪುಡಿ, ಕರ್ಪೂರ, ಕುಂಕುಮ ಟಿಂಕ್ಚರ್, ದೇವದಾರು ಎಣ್ಣೆ, ಗಂಧದ ಹುಡಿ, ಅತ್ತರು, ಎಳ್ಳೆಣ್ಣೆ ಇವೇ ಮೊದಲಾದ ಸಾಮಾಗ್ರಿಗಳನ್ನು ಹದವಾಗಿ ಬೆರಸಿದ ಮಟ್ಟಿಯು ತುಂಬ ಆರೋಗ್ಯಕರವಾದುದು ಆಗಿರುತ್ತದೆ. ಕುಸ್ತಿ ಮಾಡಿದ ಮೇಲೆ ಪೈಲ್ವಾನರು ಇಂತಹ ಮಟ್ಟಿಯಲ್ಲಿ ಗುಂಡಿ ತೆಗೆದು ಅದರಲ್ಲಿ ಮಲಗಿಕೊಳ್ಳುತ್ತಾರಲ್ಲದೆ, ದೇಹದ ತುಂಬ ಮಣ್ಣನ್ನು ಮುಚ್ಚಿಕೊಳ್ಳುತ್ತಾರೆ. ಇಂತಹ ಮಟ್ಟಿಯಲ್ಲಿ ಮಲಗಿ ವಿಶ್ರಾಂತಿ ಪಡೆಯುವುದರಿಂದ ದೇಹದ ಕಾವೆಲ್ಲವೂ ಆರಿಹೋಗುತ್ತದೆ. ಶರೀರಕ್ಕೆ ತುಂಬ ತಂಪೊದಗಿ ಶರೀರವು ಕಾಂತಿಯುಕ್ತವಾಗುತ್ತದೆ. ಹಾಗೆಂದೇ ಇದಕ್ಕೆ ಮಟ್ಟಿ ತೆಗೆದುಕೊಳ್ಳುವುದೆಂದು ಹೇಳುತ್ತಾರೆ. ಇಂತಹ ಮಟ್ಟಿಯಲ್ಲಿ ಕುಸ್ತಿ ಆಡುವಾಗ ಪೈಲ್ವಾನರಿಗೆ ಗಾಯಗಳೇನಾದರೂ ಆದರೆ ಅವರು ಯಾವ ವೈದ್ಯರ ಬಳಿಗೂ ಹೋಗುವುದಿಲ್ಲ. ಗಾಯದ ಮೇಲೆ ಈ ಮಟ್ಟಿಯ ಮಣ್ಣನ್ನು ಮೆತ್ತುತ್ತಾರೆ.

ಗರಡಿ ಮನೆಯಲ್ಲಿನ ಈ ಮಟ್ಟಿಗೆ ನವರಾತ್ರಿಯ ದಿವಸ ಹೊಸ ಮಣ್ಣು ಸೇರಿಸಿ ಪೈಲ್ವಾನರುಗಳೆಲ್ಲ ಸೇರಿ ಪೂಜೆ ಮಾಡುತ್ತಾರೆ. ಕುಸ್ತಿಯ ಸ್ಪರ್ಧೆ ಇರುವ ದಿವಸ ಮಟ್ಟಿಯ ಮಣ್ಣನ್ನು ಒಂದೆಡೆ ದೊಡ್ಡ ರಾಶಿಯಾಗಿ ಏರುಹಾಕಿ ಅದರೊಂದಿಗೆ ಸ್ಪರ್ಧೆಯಲ್ಲಿ ಭಾಗವಹಿಸುವ ಪೈಲ್ವಾನರುಗಳು ಕಾಚ, ಹನುಮಾನ್ ಚೆಡ್ಡಿ, ವ್ಯಾಯಾಮ ಸಾಮಗ್ರಿಗಳೆಲ್ಲವನ್ನೂ ಇಟ್ಟು ಪೂಜಿಸುತ್ತಾರೆ. ಪೂಜೆಯಾದ ದಿವಸ ಗರಡಿಯಲ್ಲಿ ಯಾರೂ ಕುಸ್ತಿ ಮಾಡುವುದಿಲ್ಲ. ಕುಸ್ತಿ ಮುಗಿದ ಮೂರನೆಯ ದಿವಸ ಏರು ಹಾಕಿದ್ದ ಮಟ್ಟಿಯ ಮಣ್ಣನ್ನು ಒಡೆದು ದೈನಂದಿನ ಸಾಧನೆ ನಡೆಸುತ್ತಾರೆ.

ಹಿಂದಿನ ಕಾಲದ ಗರಡಿಮನೆಗಳಲ್ಲಿ ವ್ಯಾಯಾಮ ಸಾಮಗ್ರಿಗಳು ಹೆಚ್ಚು ಇದ್ದಿರಲಿಲ್ಲ. ದಂಡೆ ಒತ್ತುವುದು, ಬಸ್ಕಿ ಹೊಡೆಯುವುದು ಮತ್ತು ಮಟ್ಟಿ ಕುರಾಯಿಸುವುದು ಇವೆ ಅಂದಿನ ಪ್ರಧಾನ ವ್ಯಾಯಮಗಳಾಗಿದ್ದವು. ಗರಡಿ ಮನೆಯಲ್ಲಿನ ವ್ಯಾಯಾಮ ಸಾಮಗ್ರಿಗಳೆಂದರೆ ಡಂಬೆಲ್ಸ್, ಲೋಡು, ಬಳಪದ ಗಾಲಿ, ಕಬ್ಬಿಣದ ಗುಂಡು, ಮಲ್ಲಗಂಬ, ಮಣೆ, ಗುದ್ದಲಿ ಮುಂತಾದವುಗಳು ಆಗಿದ್ದವು. ಈ ಎಲ್ಲ ಗರಡಿ ಮನೆಯ ವ್ಯಾಯಾಮ ಸಾಮಗ್ರಿಗಳೂ ಕುಸ್ತಿಕಲೆಗೆ ಸಹಾಯಕ ಆಗುವಂಥವುಗಳು ಆಗಿವೆ.

ಗರಡಿ ಮನೆಯಲ್ಲಿ ಪೈಲ್ವಾನರುಗಳ ಆರಾಧ್ಯ ದೈವ ಎಂದರೆ ಮೌಲಾಲಿ ಮತ್ತು ಹನುಮಂತ. ಹೀಗೆಂದೆ ಎಲ್ಲ ಗರಡಿಮನೆಗಳಲ್ಲೂ ಹನುಮಂತ ಮತ್ತು ಮೌಲಾಲಿ ದೇವರುಗಳನ್ನು ಕಾಣಬಹುದು. ಮೌಲಾಲಿ ಆಕಾರವಿಲ್ಲದ ದೇವರು. ಸಾಮಾನ್ಯವಾಗಿ ಗರಡಿ ಮನೆಗಳಲ್ಲಿ ಕೆಳಗಡೆ ಮೂರು ಗುಂಡುಗಳನ್ನು ಇಟ್ಟು ಮೇಲ್ಗಡೆ ಒಂದು ಗುಂಡನ್ನು ಇಟ್ಟು ಇದನ್ನೇ ಮೌಲಾಲಿ ದೇವರೆಂದು ಪೂಜಿಸುತ್ತಾರೆ. ಕುಸ್ತಿ ಆಡುವ ದಿವಸ ಪೈಲ್ವಾನರು ಆಖಾಡವನ್ನು ಪ್ರವೇಶಿಸುವಾಗ, ಯಾಲಿ ಮೌಲಾಲಿ, ಯಾಲಿ ಉಸ್ತಾದ್, ಜೈ ಭಜರಂಗಬಲಿ ಎಂದು ಘೋಷಣೆಗಳನ್ನು ಮಾಡುತ್ತಾರೆ. ಈಗೀಗ ಇದರ ಜೊತೆಗೆ ಹಿಂಕಣ್ಣು ಮುಂಕಣ್ಣು ಲಾಗ ಹಾಕಿಕೊಂಡು ಬರುವುದು ರೂಢಿಯಲ್ಲಿದೆ. *(ಕೆಎಸ್‌ಎನ್)*

ಗವಾನ್ ಮದರಸಾ: ಒಂದು ಕಾಲದಲ್ಲಿ ಇಡೀ ವಿಶ್ವದ ವಿದ್ವಾಂಸರನ್ನು, ಅಧ್ಯಯನಶೀಲರನ್ನು, ವಿದ್ಯಾಕಾಂಕ್ಷಿಗಳನ್ನು ಕೈಬೀಸಿ ಕರೆದು, ಜ್ಞಾನಧಾರೆ ಎರೆದಿದ್ದ ಜ್ಞಾನದೇಗುಲ.

ಶಿಕ್ಷಣ ಪ್ರೇಮಿ, ದಕ್ಷ ಆಡಳಿತಗಾರ ಎಂದೇ ಹೆಸರಾಗಿದ್ದ ಖಾಜಾ ಇಮಾಮುದ್ದೀನ್ ಮಹಮ್ಮದ್ ಗವಾನ್ (ಜನನ: 1395; ಮರಣ: 1481) 1472ರಲ್ಲಿ ಈ ಜ್ಞಾನದೇಗುಲವನ್ನು ನಿರ್ಮಿಸಿದ್ದರು. ರಾಜ್ಯಶಾಸ್ತ್ರ, ತತ್ವಜ್ಞಾನ, ಭೂಗೋಳ ಶಾಸ್ತ್ರ, ಖಗೋಳ ಶಾಸ್ತ್ರ, ಗಣಿತ, ಔಷಧ ವಿಜ್ಞಾನ, ಕಾವ್ಯ, ಜ್ಯೋತಿ ಶಾಸ್ತ್ರ, ಸಂಸ್ಕೃತ, ಅರಬ್ಬಿ ಭಾಷೆ, ಖುರಾನ್, ವಾಸ್ತುಶಿಲ್ಪ ಮುಂತಾದವುಗಳಲ್ಲಿ ಪಾರಂಗತರಾಗಿದ್ದ ಜಗತ್ತಿನ ವಿವಿಧ ಭಾಗಗಳ ವಿದ್ವಾಂಸರು ಇಲ್ಲಿ ಜ್ಞಾನಾರ್ಜನೆ ಮಾಡುತ್ತಿದ್ದರು. ವಿದ್ಯಾಸಕ್ತರಾದ ದೇಶ ವಿದೇಶಗಳ ವಿದ್ಯಾರ್ಥಿಗಳು ಇಲ್ಲಿ ಅಧ್ಯಯನ



ಗವಾನ್ ಮದರಸಾ – ಬೀದರ್

ಚವರಿಯನ್ನು ಹಿಡಿದಿದ್ದರೆ ಬಲಗೈ ಫಲದಿಂದ ಕೂಡಿದೆ. ಸೇವಾಧನ್ಯತೆಯ ಸಂತೃಪ್ತತೆ; ಮಿನುಗುವ ಮಂದಹಾಸ ಚಾಮರಧಾರಿಗಳ ವದನದಲ್ಲಿದೆ. ಇವರ ಹಿಂದೆ ತಲೆಯ ಮೇಲಿರುವ ಪ್ರಭಾವಳಿಯಲ್ಲಿ ಸುರುಳಿಯಾಕಾರದ ಲತಾ ಪಟ್ಟಿಕೆಗಳಲ್ಲಿ ಕಿರುಮಾನವ ಬಿಂಬಗಳಿವೆ. ಧ್ಯಾನದ ಗಾಢತೆ ಮತ್ತು ಅದರಿಂದ ಲಭಿಸುವ ಪ್ರಶಾಂತತೆಯನ್ನು ಜಿನನ ಮುಖದಲ್ಲಿ ವ್ಯಕ್ತಗೊಳಿಸುವಲ್ಲಿ ಶಿಲ್ಪಿ ಸಫಲನಾಗಿದ್ದಾನೆ. ಶಿಲ್ಪ, ವಾಸ್ತುಶಿಲ್ಪಕಲೆಗಳಲ್ಲಿ ಈ ಭಾಗದ ಸ್ಥಪತಿ ಶಿಲ್ಪಿಗಳು ಪರಿಣಿತರಷ್ಟೇ ಅಲ್ಲ ಪ್ರಬುದ್ಧರು ಇದ್ದರೆಂಬುದಕ್ಕೆ ಈ ಪ್ರದೇಶದಲ್ಲಿರುವ ಪ್ರಾಚೀನ ಸ್ಮಾರಕಗಳೇ ಸಾಕ್ಷಿ. *(ಡಿಎನ್‌ಬಿ)*

ಗಬ್ಬೂರು: ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನಲ್ಲಿರುವ ಒಂದು ಚಿಕ್ಕ ಹಳ್ಳಿಯಾಗಿದ್ದು. (ಹಿಂದೆ 'ಗೋಪುರಪುರ') 'ಗೋಪುರ ಗ್ರಾಮ'ಗಳೆಂಬ ಹೆಸರಿನಲ್ಲಿ ಪ್ರಸಿದ್ಧವಾದ ಅಗ್ರಹಾರವಾಗಿತ್ತು. ಕ್ರಿಸ್ತಶಕ 11 ನೆಯ ಶತಮಾನದಿಂದ ಕ್ರಿಸ್ತಶಕ 13 ನೆಯ ಶತಮಾನಗಳ ನಡುವಣ ಅವಧಿಯಲ್ಲಿ ಇದೊಂದು ಹೆಸರಾದ ಅಗ್ರಹಾರವಾಗಿದ್ದಿತೆಂದೂ ಶಾಸನಗಳಿಂದ ತಿಳಿದು ಬರುತ್ತದೆ. *(ಎಲ್‌ಬಿ)*


ಗರಡಿ: ಅಂಗಸಾಧನೆ, ವ್ಯಾಯಾಮಗಳಿಗಾಗಿ ನಿರ್ದಿಷ್ಟ ಪಡಿಸಿದ ಸ್ಥಳ. ಗರಡಿ ಮನೆಯೊಳಗೆ ಕುಸ್ತಿ ಕಲಿಯುವ ಸ್ಥಳಕ್ಕೆ ಮಟ್ಟಿ ಎಂದು, ಸ್ಪರ್ಧೆಯಲ್ಲಿ ಭಾಗವಹಿಸಿ ಕುಸ್ತಿ ಮಾಡುವ ಸ್ಥಳಕ್ಕೆ ಆಖಾಡ ಎಂದೂ ಕರೆಯುತ್ತಾರೆ. ಗರಡಿ ಮಾಡುವುದು ಎಂದರೆ ಸಾಧನೆ ಮಾಡುವುದು, ವ್ಯಾಯಾಮ ಮಾಡುವುದು ಎಂಬುದಷ್ಟೇ ಅಲ್ಲದೆ ಕುಸ್ತಿ ಮಾಡುವುದು ಎಂಬ ಅರ್ಥವೂ ರೂಢಿಯಲ್ಲಿದೆ. ಅಂದಿನ ಕಾಲದಲ್ಲಿ ಗರಡಿಗಳು ವಿಶಾಲವಾಗಿರದೆ ಚಿಕ್ಕದಾಗಿರುತ್ತಿದ್ದುವು. ದೂರದಿಂದ ನೋಡಿದರೆ ಸುಲಭವಾಗಿ ಅವುಗಳನ್ನು ಪತ್ತೆಮಾಡಬಹುದಾಗಿತ್ತು. ಗರಡಿಯ ಹೊರ ಗೋಡೆಗಳ ಮೇಲೆ ಕೆಮ್ಮಣ್ಣಿನ ದೊಡ್ಡ ದೊಡ್ಡ ಹಾಗೂ ಉದ್ದವಾದ ಪಟ್ಟಿಗಳನ್ನು ಹಾಕಿರುತ್ತಿದ್ದರು. ಹಾಗೂ ಗರಡಿಯ ಮುಂದೆ ದಪ್ಪ ದಪ್ಪ ಕಲ್ಲು ಗುಂಡುಗಳನ್ನು ಇಟ್ಟಿರುತ್ತಿದ್ದರು. ಗರಡಿಯ ಬಾಗಿಲಿನಲ್ಲಿ ಗರುಡನ ಅಥವಾ ಹನುಮಂತನ ಚಿತ್ರಪಟವಿರುತ್ತಿತ್ತು. ಗರಡಿ ಮನೆಗಳಿಗೆ ಎಲ್ಲೋ ಒಂದು ಸಣ್ಣ ಕಿಟಕಿ ಇದ್ದರೆ ಅದೇ ಹೆಚ್ಚು, ಒಳಗಡೆ ಹೆಚ್ಚು ಗಾಳಿ, ಬೆಳಕು ಪ್ರವೇಶ ಮಾಡುತ್ತಿರಲಿಲ್ಲ. ಬಾಗಿಲು ಚಚ್ಚೌಕವಾಗಿದ್ದು, ಸುಮಾರು ಎರಡುವರೆ ಘೂಟು ಅಗಲ ಹಾಗೂ ಎರಡುವರೆ ಘೂಟು ಎತ್ತರವಿರುತ್ತಿತ್ತು. ಗರಡಿ ಮನೆಗೆ ಆ ಬಾಗಿಲು ತುಂಬ ಚಿಕ್ಕದೆಂದೇ ಹೇಳಬೇಕು. ಅಲ್ಲದೆ ಅದರ ದಪ್ಪ ಅರ್ಧ ಘೂಟು ಇರುತ್ತಿತ್ತಾಗಿ ಅದನ್ನು ದಬ್ಬಿಕೊಂಡು ಒಳಗೆ ಹೋಗಬೇಕಾದರೆ ಸಾಕಷ್ಟು ತಾಕತ್ತು ಇರಬೇಕಾಗುತ್ತಿತ್ತು. ಈ ಗರಡಿಮನೆಯ ಬಾಗಿಲಿನ ವೈಶಿಷ್ಟ್ಯವೆಂದರೆ ಮುಂಭಾಗದಲ್ಲಿ ಬೀಗ ಹಾಕಲು ಚಿಲಕವಿರುತ್ತಿರಲಿಲ್ಲ. ಆದರೆ ಒಳಗಡೆಯಿಂದ ಬಾಗಿಲನ್ನು ಹಾಕಿಕೊಳ್ಳಲು ಅಗಳಿ ಇರುತ್ತಿತ್ತು.

ಸಾಧಾರಣವಾಗಿ ಒಂದೇ ಊರಿನಲ್ಲಿ ಮೂರು–ನಾಲ್ಕು ಗರಡಿ ಮನೆಗಳಿದ್ದು ಅವಕ್ಕೆಲ್ಲ ಹೆಸರಾಂತ ಪೈಲ್ವಾನರ ಹೆಸರುಗಳು ಇರುತ್ತಿತ್ತು. ಅಲ್ಲದೆ ಒಂದು ಗರಡಿಯವರಿಗೂ ಮತ್ತೊಂದು ಗರಡಿಯವರಿಗೂ ಪೈಪೋಟಿಯಲ್ಲದೆ ವಿರೋಧವೂ ಇರುತ್ತಿತ್ತು. ಹೀಗೆ ವಿರೋಧ ಇರುವುದರಿಂದಲೇ ಗರಡಿ ಮನೆಗಳಿಗೆ ಬಾಗಿಲಿನ ಮುಂಭಾಗದಲ್ಲಿ ಬೀಗ ಹಾಕಿಕೊಳ್ಳಲು ಚಿಲಕ ಇರುತ್ತಿರಲಿಲ್ಲ ಕಾರಣ ಗರಡಿ ಮನೆಯೊಳಗೆ ಸಾಧನೆ ನಡೆಯುತ್ತಿರುವಾಗ ಆಗದವರು ಹೊರಗಿನ ಚಿಲಕ ಹಾಕಿ ಹೋಗಿ ಬಿಟ್ಟರೆ ಒಳಗಡೆ ಇದ್ದವರು ಬೆಳಕು, ಗಾಳಿ ಇಲ್ಲದೆ ಅಲ್ಲಿಯೇ ಸಾಯಬೇಕಾಗುತ್ತಿತ್ತು. ಹಾಗೆಯೇ ಸಾಧನೆ ಮಾಡುವಾಗ ಪೈಲ್ವಾನ ತನ್ನ ಶಿಷ್ಯರಿಗೆ ಹೇಳಿಕೊಡುವ ಡಾವುಗಳನ್ನು ಅವನ ಎದುರಾಳಿಗಳು ಯಾರಾದರೂ ನೋಡಬಹುದೆಂಬ ಕಾರಣಕ್ಕೂ ಒಳಗಡೆಯಿಂದ ಬಾಗಿಲನ್ನು ಹಾಕಿಕೊಳ್ಳಲು ಅಗಳಿ ಇರುತ್ತಿತ್ತು. ಗರಡಿ ಮನೆಗಳು ಚಿಕ್ಕವಾಗಿದ್ದು, ಗಾಳಿ ಬೆಳಕು ಪ್ರವೇಶ ಮಾಡದಿದ್ದುದಕ್ಕೆ ಇನ್ನೊಂದು ಕಾರಣ ಮೈ ಬೆವರು ಶೀಘ್ರವಾಗಿ ಹೊರಬೀಳಬೇಕೆಂಬುದೇ ಆಗಿತ್ತು. ಹೆಣ್ಣು ಮಕ್ಕಳಾರೂ ಗರಡಿ ಮನೆಯನ್ನು ಪ್ರವೇಶ ಮಾಡಬಾರದು ಎಂಬ ನಿಲುವಿತ್ತು. ಒಂದು ವೇಳೆ ಪ್ರವೇಶ ಮಾಡಿದರೆ ಅವರ ತಲೆಗೂದಲೆಲ್ಲ ಉದುರಿಹೋಗುತ್ತದೆ ಎಂಬ ನಂಬಿಕೆಯೂ ಇತ್ತು. ಹಾಗೆಯೇ ಸಾಧನೆ ಮಾಡುವ ಪೈಲ್ವಾನರುಗಳಿಗೆ ಹೆಂಗಸಿನ ದೃಷ್ಟಿ ತಗಲಬಾರದು, ಆತ ಆಕೆಯ ಬಲೆಗೆ ಬೀಳಬಾರದು ಎಂಬುದು ಈ ಕಟ್ಟಳೆಯ ಉದ್ದೇಶವೆಂದು ತೋರುತ್ತದೆ.

ಹಿಂದೆ ಕೆಲವು ಕಡೆಗಳಲ್ಲಿ ಗರಡಿ ಮನೆಗಳು ಹೊರಗಡೆಯಿಂದ ಬಂದ ಪೈಲ್ವಾನರುಗಳಿಗೆ ಇಳಿದುಕೊಳ್ಳುವ ವ್ಯವಸ್ಥೆಯು ಆಗಿದ್ದುವು. ಮಹಾರಾಷ್ಟ್ರದ ಕೆಲವು ಕಡೆಯ ಗರಡಿ ಮನೆಗಳಲ್ಲಿ ಊಟದ ಸೌಕರ್ಯವೂ ಇರುತ್ತಿತ್ತು.

ಆಧುನಿಕವಾಗಿ ಕಟ್ಟುತ್ತಿರುವ ಗರಡಿಗಳನ್ನು ವ್ಯಾಯಾಮ ಶಾಲೆಗಳು ಎಂದು ಕರೆಯುತ್ತಾರೆ. ಇವು ವಿಶಾಲವಾಗಿದ್ದು ಗಾಳಿ, ಬೆಳಕು ಹೆಚ್ಚು ಹೆಚ್ಚಾಗಿ ಬರುವಂತಿರುತ್ತದೆ. ಹಾಗೆಯೇ ಈ ಗರಡಿಗಳಲ್ಲಿ ಸುತ್ತಲೂ ಎತ್ತರವಾದ ನಿಲುಗನ್ನಡಿಗಳನ್ನು ನಿಲ್ಲಿಸಿರುತ್ತಾರೆ. ಇದು ಸಾಧನೆ ಮಾಡುವವರಿಗೆ ತಮ್ಮ ದೇಹದ ಅಂಗಾಂಗಳನ್ನು ಪೂರ್ಣವಾಗಿ ನೋಡಿಕೊಳ್ಳುವ ಅವಕಾಶವಿರುತ್ತದೆ. ಇಂಥ ವ್ಯಾಯಾಮ ಶಾಲೆಗಳಲ್ಲಿ ಕುಸ್ತಿಗಿಂತ ದೇಹದ ಅಂಗಸೌಷ್ಠವಕ್ಕೆ ಹೆಚ್ಚು ಪ್ರಾಧಾನ್ಯತೆ ಇರುತ್ತದೆ. ಅಂತೆಯೇ ಈಗಿನ ವ್ಯಾಯಾಮ ಶಾಲೆಗಳಲ್ಲಿ ದೇಹದ ಪ್ರತಿ ಅಂಗಾಂಗಳನ್ನು ಸದೃಢವಾಗಿಸಲು ಬೇಕಾದ ವ್ಯಾಯಾಮ ಸಾಮಗ್ರಿಗಳನ್ನು ಕಾಣಬಹುದಾಗಿದೆ.

ಗರಡಿ ಮನೆ: ಗರಡಿ ಮನೆಯಲ್ಲಿ ಅತ್ಯಂತ ಪ್ರಧಾನವಾದ ಭಾಗವೆಂದರೆ ಮಟ್ಟಿ ಅಂದರೆ ಕುಸ್ತಿ ಆಡುವ ಸ್ಥಳ. ಈ ಮಟ್ಟಿಯ ಜಾಗ ಕನಿಷ್ಠ ಹದಿನಾಲ್ಕು ಅಡಿ ಇರುವ ಬಂದು ಚೌಕ. ಇಂಥ ಗರಡಿ ಮನೆಯಲ್ಲಿ ಒಂದು ಜೊತೆ ಅಥವಾ ಎರಡು ಜೊತೆ ಜಟ್ಟಿಗಳು ಕುಸ್ತಿ ಮಾಡಬಹುದು. ಗರಡಿ ಮನೆಯಲ್ಲಿ ಕುಸ್ತಿ ಆಡುವ ಸ್ಥಳವನ್ನು ಸುಮಾರು ಒಂದು ಅಡಿ ಆಳದವರೆಗೂ ಹುಡಿಮಣ್ಣಿನಿಂದ ತುಂಬಿರಬೇಕು. ಇದಕ್ಕೆ ಕೆಮ್ಮಣ್ಣು ಶ್ರೇಷ್ಠವೆಂದು ಹೇಳಲಾಗಿದೆ. ಗರಡಿ ಮನೆಯಲ್ಲಿ ಉತ್ತಮ ದರ್ಜೆಯ ಮಣ್ಣನ್ನು ತುಂಬುವುದರಿಂದ ಚರ್ಮಕ್ಕೆ ತಗಲುವ ಅಪಾಯಗಳು ಕಡಿಮೆ. ಮಣ್ಣಿನಲ್ಲಿ ಸಣ್ಣ



ದತ್ತಾತ್ರೇಯ ದೇವಾಲಯ ಗಾಣಗಾಪುರ

ಭಿತ್ತಿಯ ಮೇಲೆ ಪೌರಾಣಿಕ ಕಥೆಗಳ ಕೆತ್ತನೆಯನ್ನು ಕಾಣಬಹುದಾಗಿದ್ದು ಬರುವ ಯಾತ್ರಿಕರಿಗೆಂದು ದೇವರ ಗಾಣಗಾಪುರದಲ್ಲಿ ಹಲವಾರು ಮಠ, ಧರ್ಮಶಾಲೆಗಳಲ್ಲಿ ವಸತಿ ಸೌಕರ್ಯವಿದೆ. ವರ್ಷದುದ್ದಕ್ಕೂ, ಅದರಲ್ಲೂ ವಿಶೇಷವಾಗಿ ಗುರುವಾರ ಮತ್ತು ಅಮವಾಸ್ಯೆ ದಿನಗಳಂದು ಯಾತ್ರಿಕರನ್ನು ಆಕರ್ಷಿಸುವುದು. ಪುಣ್ಯಕ್ಷೇತ್ರಕ್ಕೆ ಮಹಾರಾಷ್ಟ್ರ, ಗೋವ, ಆಂಧ್ರ ಪ್ರದೇಶ, ಗುಜರಾತ, ತಮಿಳುನಾಡು ಮತ್ತು ರಾಜಸ್ಥಾನಗಳಿಂದಲೂ ವಿಶೇಷವಾಗಿ ಭಕ್ತರು ಆಗಮಿಸುವರು. ದೇವಸ್ಥಾನದ ಆಡಳಿತ ಮಂಡಳಿಯು ಸರ್ಕಾರದ ನಿಯಂತ್ರಣದಲ್ಲಿದೆ.

ಗಾಣಗಾಪುರ ದತ್ತ ಕ್ಷೇತ್ರದಿಂದ ಮೂರು ಕಿ.ಮೀ. ಅಂತರದಲ್ಲಿರುವ ಸಂಗಮ ಸ್ಥಳದಲ್ಲಿ, ಭೀಮಾ ಮತ್ತು ಅಮರ್ಜಾ ಸಂಗಮಿಸುವಲ್ಲಿ ಯಾತ್ರೆಗೆ ಬರುವ ಜನ ಪವಿತ್ರ ಸ್ನಾನ ಮಾಡುತ್ತಾರೆ. ಆನಂತರ ದತ್ತಾತ್ರೇಯ ದರ್ಶನ ಪಡೆಯುತ್ತಾರೆ. ಗ್ರಹಣ, ಹುಣ್ಣಿಮೆ ಮತ್ತು ಅಮವಾಸ್ಯೆ ಮುಂತಾದ ದಿನಗಳಂದು ಸಂಗಮದಲ್ಲಿ ಸಹಸ್ರಾರು ಜನ ಭಕ್ತರು ಪುಣ್ಯಸ್ನಾನ ಮಾಡುವರು. *(ಎಚ್‌ಟಿ)*

ಗಾಣಿಗರು: ಗಾಣದಿಂದ ಎಣ್ಣೆ ತೆಗೆದು ಮಾರಿ ಬದುಕು ಸಾಗಿಸುವವರು. ಗಾಣ ಎಂಬ ಯಂತ್ರದಿಂದ ಗಾಣಿಗರು ಎಂಬ ಪದ ನಿಷ್ಪತ್ತಿಯಾಗಿದೆ. 'ಗಾಣ' ಎಂಬ ಎಣ್ಣೆ ತೆಗೆಯುವ ಯಂತ್ರಕ್ಕೆ 'ಅರು' ಎಂಬ ಬಹುವಾಚಕ ಪ್ರತ್ಯಯವನ್ನು ಹಚ್ಚಿ 'ಗಾಣಿಗರು' ಎಂಬ ವೃತ್ತಿವಾಚಕ ಪದವನ್ನು ರೂಢಿಸಲಾಗಿದೆ. ಅಂತೆಯೇ ಇದು 'ಇಗ', ಗಿತ್ತಿ' ಎಂಬ ಪ್ರತ್ಯಯಗಳನ್ನು ಸೇರಿಸಿಕೊಂಡು "ಗಾಣಿಗ, 'ಗಾಣಿಗಿತ್ತಿ" ಎಂಬಿತ್ಯಾದಿ ತದ್ಧಿತ ವಾಚಕಗಳು ರೂಢಿಸಿ ಕೊಂಡಿದೆ. ಎಳ್ಳು, ಕುಸುಬಿ, ಶೇಂಗಾ ಇತ್ಯಾದಿ ಎಣ್ಣೆ ಕಾಳುಗಳಿಂದ ಎಣ್ಣೆ ತೆಗೆಯುವುದನ್ನು ವೃತ್ತಿಯಾಗಿ ನಡೆಸಿಕೊಂಡು ಬರುತ್ತಿರುವ ಸಮುದಾಯಗಳಿಗೆ ಗಾಣಿಗರು ಎಂದು ಕರೆಯಲಾಗುತ್ತದೆ. ಮೊದ ಮೊದಲು ತೀರ ಸರಳವಾಗಿದ್ದ ಗಾಣ ಯಂತ್ರಗಳು ಕಾಲ ಕಳೆದಂತೆ ಹಲವಾರು ಪರಿವರ್ತನೆಗಳನ್ನು ಕಂಡಿವೆ. ಚಕ್ರದಲ್ಲಾದ ಆವಿಷ್ಕಾರಗಳು ಗಾಣದ ಮೇಲೆ ಪ್ರಭಾವ ಬೀರಿ ಮೊದ ಮೊದಲು ಮಾನವ ಶ್ರಮದಿಂದ, ಆನಂತರ ಎತ್ತು, ಎಮ್ಮೆ, ಪಶುಗಳ ಶ್ರಮದಿಂದ ಈಗೀಗ ವಿದ್ಯುತ್‌ಚಾಲಿತ ಯಂತ್ರಗಳಿಂದ ನಡೆಯುತ್ತಿವೆ.

ಒಟ್ಟಾರೆ ಗಾಣಿಗ ವೃತ್ತಿ ಕರ್ನಾಟಕದ ಪ್ರಾಚೀನ ವೃತ್ತಿಗಳಲ್ಲೊಂದಾಗಿತ್ತು ಎಂಬುದಕ್ಕೆ ಹಲವಾರು ಪುರಾವೆಗಳು ದೊರೆಯುತ್ತವೆ. ಗಾಣದ ಮೇಲೆ ಕಂದಾಯ ಹೇರಿದ ವಿವರಗಳು ದೊರೆಯುತ್ತವೆ. ಗಾಣಿಗರು ದೇವಸ್ಥಾನಗಳಲ್ಲಿ ದೀಪಾರಾಧನೆಗೆ ಎಂದು ಎಣ್ಣೆ ನೀಡಿದ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಕ್ರಿ.ಶ. 1081ರಲ್ಲಿ ರಚನೆಯಾದ ಕೊನಕೊಂಡ್ಲೆದಲ್ಲಿ ದೊರೆತ ಶಾಸನವೊಂದರಲ್ಲಿ ಪೊಟ್ಟಳ ಕೆರೆಯ ನೆಲೆವೀಡಿನಿಂದ ಆಳುತ್ತಿದ್ದ ಚಾಲುಕ್ಯ ದೊರೆ ತ್ರಿಭುವನಮಲ್ಲದೇವ ಹಾಗೂ ಸಿಂಧವಾಡಿ 1000ದ ದೊರೆ ಮಹಾಮಂಡೇಶ್ವರ ಜೋಯಿ ಮರಸಯ್ಯನು ಕೊಂಡಕುಂದೆಯ ಚಟ್ಟ ಜಿನಾಲಯಕ್ಕೆ ದೇವರ ಸೇವೆಗಾಗಿ 30 ಮತ್ತರು ಭೂಮಿಯನ್ನು, ಒಂದು ಹೂವಿನ ತೋಟವನ್ನು, ಒಂದು ಗಾಣವನ್ನು, ಎಂಟು ಮನೆ ನಿವೇಶನಗಳನ್ನು ದತ್ತಿಯಾಗಿ ನೀಡಿದ ವಿವರಗಳಿವೆ.

ಹೈದ್ರಾಬಾದ ಕರ್ನಾಟಕ ಪ್ರದೇಶ ಕಪ್ಪು ನೆಲ, ಸೊಕ್ಕಿದ ಸೂರ್ಯನ ನಾಡು. ಇಲ್ಲಿಯ ಬಹುಭಾಗದಲ್ಲಿ ಕುಸುಬಿ, ಶೇಂಗಾ, ಎಳ್ಳುಗಳನ್ನು ಸಮೃದ್ಧವಾಗಿ ಬೆಳೆಯುತ್ತಾರೆ. ಎಣ್ಣೆ ಕಾಳುಗಳನ್ನು ಭರ್ತಿ ಬೆಳೆಯುತ್ತಿದ್ದುದರಿಂದ ಇಲ್ಲಿ ಗಾಣಿಗ ವೃತ್ತಿಯು ಹುಲುಸಾಗಿ ಬೆಳೆದು ಬಂದಿದೆ. ವಿಶೇಷವಾಗಿ ಗುಲಬರ್ಗಾ ಜಿಲ್ಲೆಯ ಜೇವರ್ಗಿ, ಅಫಜಲಪೂರ, ಯಾದಗೀರ ಜಿಲ್ಲೆ ಶಹಾಪುರ ತಾಲ್ಲೂಕುಗಳಲ್ಲಿ ಕೊಪ್ಪಳದ ಗಂಗಾವತಿ, ಕುಷ್ಟಗಿಯಲ್ಲಿ ಬೀದರನ್ ಹುಮನಾಬಾದ, ಭಾಲ್ಕಿಗಳಲ್ಲಿ ಗಾಣಿಗರು ಕಂಡು ಬರುತ್ತಾರೆ. ಶೇಂಗಾ, ಎಳ್ಳು, ಹತ್ತಿಕಾಳು, ಕುಸುಬಿ ಇತ್ತೀಚೆಗೆ ಸೂರ್ಯಕಾಂತಿ ಬೆಳೆಯಿಂದಲೂ ಎಣ್ಣೆ ತೆಗೆಯುತ್ತಾರೆ. ಎಣ್ಣೆಯೊಂದಿಗೆ ಬರುವ ಭೂಸಾ, ದನಗಳು ತಿನ್ನುವ ಹಿಂಡಿ ಇತ್ಯಾದಿಗಳನ್ನು ಉಪ ಉತ್ಪನ್ನಗಳಾಗಿ ತೆಗೆಯುತ್ತಾರೆ.

ಗಾಣಿಗ ಅಥವಾ ತೇಲಿಗ ವೃತ್ತಿಯು ಪಾರಂಪಾರಿಕವಾಗಿ ಹಿಂದಿನಿಂದ ಬಂದ ವೃತ್ತಿಗಳಲ್ಲಿ ಒಂದಾಗಿದೆ. ಹೈದ್ರಾಬಾದ ಕರ್ನಾಟಕ ಪ್ರದೇಶದ ಗಾಣಿಗರು ಮೂಲತಃ ಶಿವಾರಾಧಕರು. ವಿಶೇಷವಾಗಿ ಶ್ರೀಶೈಲ ಮಲ್ಲಿಕಾರ್ಜುನನ ಒಕ್ಕಲು. ಈ ಭಾಗದಲ್ಲಿ ಅವರು ವೀರಶೈವ ಧರ್ಮವನ್ನು ಅಪ್ಪಿಕೊಂಡಿದ್ದಾರೆ. ಗಾಣಿಗರಲ್ಲಿ ಖರೇಕುಲ ಗಾಣಿಗರು, ಸಜ್ಜನಶೆಟ್ಟಿ, ಕಲಶೆಟ್ಟಿ ಎಂದು ವಿವಿಧ ಪಂಗಡಗಳು ಕಂಡು ಬರುತ್ತವೆ. ಖರೇ ಕುಲ ಗಾಣಿಗರನ್ನು ಆಡುಮಾತಿನಲ್ಲಿ ಕರಿಕುಲ ಗಾಣಿಗರು ಎಂದು ಕರೆಯುವುದುಂಟು.

ಮಾಡುತ್ತಿದ್ದರು. ವಿವಿಧ ಶಾಸ್ತ್ರಗಳ ಅಧ್ಯಯನದ ಜೊತೆಗೆ ವಿಜ್ಞಾನ ಮತ್ತು ಖಗೋಳ ಶಾಸ್ತ್ರದಲ್ಲಿ ಸಂಶೋಧನೆ ಸಹ ನಡೆಯುತ್ತಿತ್ತು ಎಂಬುದು ಇತಿಹಾಸದ ಪುಟಗಳಿಂದ ತಿಳಿದುಬರುತ್ತದೆ.

ಶಿಕ್ಷಣ ಪ್ರೇಮಿ ಹಾಗೂ ಸ್ವತಃ ತಜ್ಞನಾಗಿದ್ದ ಮಹಮ್ಮದ್ ಗವಾನ್ ಈ ಸೌಧವನ್ನು ಯೋಜನಾ ಬದ್ಧವಾಗಿ ನಿರ್ಮಿಸಿದ್ದ. ಮೂರು ಅಂತಸ್ತುಗಳ ಭವ್ಯ ಕಟ್ಟಡದಲ್ಲಿ ಸುಸಜ್ಜಿತ ಗ್ರಂಥಾಲಯ, ಅಧ್ಯಾಪಕರಿಗೆ ಪ್ರತ್ಯೇಕ ವಸತಿ, ಖಗೋಳ ವೀಕ್ಷಣಾಲಯ, ಪ್ರಯೋಗಶಾಲೆ, ಪ್ರಾರ್ಥನೆಗಾಗಿ ವಿಶಾಲವಾದ ಪ್ರಾಂಗಣ ಮುಂತಾದ ಸಕಲ ಸೌಲಭ್ಯಗಳಿದ್ದವು. ಸುಸಜ್ಜಿತ ಗ್ರಂಥಾಲಯದಲ್ಲಿ ವಿವಿಧ ಶಾಸ್ತ್ರಗಳಿಗೆ ಸಂಬಂಧಿಸಿದ 3,000 ಕ್ಕೂ ಹೆಚ್ಚು ಪುಸ್ತಕಗಳಿದ್ದವು.

ಬಹಮನಿ ಅರಸರ ಕಾಲದ ಭವ್ಯ ವಾಸ್ತು ಶಿಲ್ಪ ಪರಂಪರೆಯನ್ನು ಸಾರುವ ಈ ಬೃಹತ್ ಕಟ್ಟಡ ಇಂದು ಶಿಥಿಲಾವಸ್ಥೆಗೆ ತಲುಪಿದೆ. ಇಲ್ಲಿರುವ ಭವ್ಯವಾದ ಕಲಾ ಸಂಪತ್ತನ್ನು ಅರಿಯುವ ವ್ಯವಧಾನ ಯಾರಿಗೂ ಇಲ್ಲದ್ದರಿಂದ ಇಡೀ ಕಟ್ಟಡ ಬಿಕೋ ಎನ್ನುವ ಸ್ಥಿತಿಗೆ ತಲುಪಿದೆ.

ಐತಿಹಾಸಿಕ ಹಿನ್ನೆಲೆ ಹೊಂದಿರುವ ಬೀದರ ನಗರದ ಆಕರ್ಷಣೆಯನ್ನು ಹೆಚ್ಚಿಸುವ ಸ್ಮಾರಕಗಳಲ್ಲಿ ಗವಾನ್ ಮದರಸಾ ಸ್ಥಾನ ಅತ್ಯಂತ ಮಹತ್ವದ್ದಾಗಿದೆ. ಕೋಟೆ ಕೊತ್ತಲಗಳು ಎಲ್ಲೆಡೆ ಕಾಣಲು ಸಾಧ್ಯವಿದೆಯಾದರೂ ಗವಾನ್ ಮದರಸಾದಂತಹ ಜ್ಞಾನ ದೇಗುಲ ಕಾಣಸಿಗುವುದು ತೀರಾ ವಿರಳ. ಸಮೃದ್ಧವಾದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಹಾಗೂ ರಾಷ್ಟ್ರೀಯ ಮಹತ್ವ ಹೊಂದಿರುವ ಈ ಜ್ಞಾನದೇಗುಲದ ನಿರ್ವಹಣೆ ಮತ್ತು ವ್ಯವಸ್ಥಿತ ಪ್ರಚಾರಕ್ಕೆ ಕ್ರಮ ಕೈಗೊಳ್ಳುವ ಅಗತ್ಯವಿದೆ.

ಮಹ್ಮದ್ ಗವಾನ್: ಈ ಜ್ಞಾನ ದೇಗುಲದ ರೂವಾರಿ, ಬಹಮನಿ ಅರಸರ ಪ್ರಧಾನ ಮಂತ್ರಿಯಾಗಿದ್ದ ಖಾಜಾ ಇಮಾಮುದ್ದೀನ್ ಮಹಮ್ಮದ್ ಗವಾನ್ ಮೂಲತಃ ಇರಾನ್ ಮೂಲದವರು ವ್ಯಾಪಾರಕ್ಕಾಗಿ ವಿಶ್ವಪರ್ಯಟನ ಮಾಡುತ್ತ ಬೀದರಿಗೆ ಬಂದ ನಂತರ ನೆಲೆಯೂರಿದ ಅವರು, ತಮ್ಮ ಜಾಣ್ಮೆ ಹಾಗೂ ಚಾಣಕ್ಷ್ಯತನದಿಂದ ಬಹುಬೇಗ ಅರಸರ ಕಣ್ಣಿಗೆ ಬಿದ್ದು, ಹಂತಹಂತವಾಗಿ ಮೇಲೇರುತ್ತ ಪ್ರಧಾನ ಮಂತ್ರಿಯ ಸ್ಥಾನಕ್ಕೇರಿದ್ದರು. ಆದರೆ, ಇತರೆಲ್ಲ ಸಾಧನೆಗಳಿಗಿಂತ ಅವರು ನಿರ್ಮಿಸಿದ್ದ ಗವಾನ್ ಮದರಸಾ ಎಂಬ ಜ್ಞಾನದೇಗುಲ ಅವರ ಸಾಧನೆಯ ಶಿಖರದಂತಿದೆ. ಆದರೆ, ಅತ್ಯಲ್ಪ ಕಾಲದಲ್ಲಿ ಅಪಾರ ಜನಮನ್ನಣೆ ಹಾಗೂ ಪ್ರಖ್ಯಾತಿ ಪಡೆದ ಗವಾನ್ ಅವರ ಸಾಧನೆ ಹಲವರಲ್ಲಿ ಮತ್ಸರ ಹುಟ್ಟಿಸಿತ್ತು. ಕ್ರಮೇಣ ಗವಾನ್ ವಿರೋಧಿಗಳು ದುಷ್ಟಕೂಟ ರಚಿಸಿಕೊಂಡು ಅರಸ ಮತ್ತು ಗವಾನ್ ಮಧ್ಯೆ ವಿರಸ ಮೂಡುವಂತೆ ಮಾಡಿದರು. ವಿಲಾಸಿ ಹಾಗೂ ಅವಿವೇಕಿಯಾಗಿದ್ದ ಆಗಿನ ಅರಸನಿಂದಾಗಿ ಗವಾನ್ ಕೊಲೆಗೆ ರೂಪಿಸಲಾಗಿದ್ದ ಸಂಚು ಕೈಗೂಡಿತ್ತು. ಗವಾನ್ ತಮ್ಮ ವಿರುದ್ಧ ಬಂಡೇಳಲು ಯತ್ನಿಸುತ್ತಿದ್ದಾನೆ ಎಂಬ ವಿರೋಧಿಗಳ ಮಾತು ಕೇಳಿದ ಅರಸ, ಯಾವುದೇ ವಿವೇಚನೆ ಇಲ್ಲದೆ, ಗವಾನ್ ಕೊಲೆಗೆ ಆದೇಶ ನೀಡಿದ. ಇದರೊಂದಿಗೆ ವಿಶ್ವಖ್ಯಾತಿಯ ಜ್ಞಾನಸೌಧ ನಿರ್ಮಿಸಿದ ಶಿಕ್ಷಣ ಪ್ರೇಮಿಯ ಜೀವನ ದುರಂತದಲ್ಲಿ ಕೊನೆಗೊಂಡಿತು.

(ಎಂ.ಎಸ್.)

ಗಾ

ಗಾಣಗಾಪುರ: ದಕ್ಷಿಣಕಾಶಿಯೆಂದು ಪ್ರಸಿದ್ಧವಾಗಿರುವ ಕ್ಷೇತ್ರ. ಕಲಬುರ್ಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನಲ್ಲಿದೆ. ತಾಲ್ಲೂಕಾ ಕೇಂದ್ರದಿಂದ ಪೂರ್ವ ದಿಕ್ಕಿನೆಡೆಗೆ 28 ಕಿ.ಮೀ. ಅಂತರದಲ್ಲಿದೆ. ಕಲಬುರ್ಗಿ ಮತ್ತು ಸೊಲ್ಲಾಪುರ ರೈಲು ಮಾರ್ಗ ಮಧ್ಯದಲ್ಲಿ ಬರುವ ಗಾಣಗಾಪುರದ ರೈಲು ನಿಲ್ದಾಣದಿಂದ ನೈಋತ್ಯಕ್ಕೆ 20 ಕಿ.ಮೀ. ದೂರದಲ್ಲಿದೆ. ಇಲ್ಲಿ ದೇವಸ್ಥಾನವಿದ್ದು. ಶ್ರೀದತ್ತ ದೇವಸ್ಥಾನದಿಂದ ಸದ್ಯದ ಗಾಣಗಾಪುರ ಪಟ್ಟಣಕ್ಕೆ "ದೇವರ ಗಾಣಗಾಪುರ" ದೇವಲ ಗಾಣಗಾಪುರವೆಂದು ಕರೆಯುವುದು ವಾಡಿಕೆ. ಪಶ್ಚಿಮದಿಂದ ಪೂರ್ವಾಭಿಮುಖವಾಗಿ ಭೀಮಾ ನದಿ ಹರಿಯುವುದು. ಉತ್ತರದಿಂದ ದಕ್ಷಿಣಕ್ಕೆ "ಅಮರಜಾ" ನದಿ ಹರಿದು ಬಂದು ಭೀಮಾದಲ್ಲಿ ಕೂಡಿ ಕೊಂಡಲ್ಲಿ ಸಂಗಮವಾಗಿದೆ. ಸಂಗಮದಲ್ಲಿ ಸಂಗಮೇಶ್ವರ ದೇವಾಲಯ ವಿದೆ. ಇದು ಕಾಶಿ ವಿಶ್ವೇಶ್ವರಕ್ಕೆ ಸಮಾನವಾದುದೆಂದು ಜನ ಜನಿತವಾಗಿದೆ. ಇಲ್ಲಿಯ ಕಲ್ಲೇಶ್ವರವು ಗೋಕರ್ಣಕ್ಕೆ ಸಮಾನವಾದುದೆಂದು ವಾಡಿಕೆ. ಸಂಗಮದಿಂದ ವಾಯುವ್ಯ ಮತ್ತು ಉತ್ತರ ಎರಡೂ ದಿಕ್ಕಿನರ್ಧದಲ್ಲಿ ಪರಶುರಾಮ ಯಜ್ಞಮಾಡಿದ ಸ್ಥಳವಿದೆ. ಈ ಸ್ಥಳಕ್ಕೆ ಭಸ್ಮಗುಡ್ಡವೆಂದು ಹೇಳಲಾಗಿದೆ.

ದೇವರ ಗಾಣಗಾಪುರ ಭೀಮಾನದಿಯ ಎಡದಂಡೆಯ ಮೇಲಿರುವ ಪ್ರಸಿದ್ಧ ಯಾತ್ರಾ ಸ್ಥಳ. ಪ್ರಾಚೀನ ಶಾಸನಗಳಲ್ಲಿ ಗಾಣಗಾಪುರ (ಬಂದರವಾಡ 1174) ಎಂದೇ ಉಲ್ಲೇಖಿತವಾಗಿದೆ. ಈ ಊರು ಹಿಂದೆ ಅತನೂರ–80 ಸಾಸಿರಕ್ಕೆ ಸೇರಿದ್ದು. ಸಂಗಮ ಗಾಣಗಾಪುರ ರಸ್ತೆಯಲ್ಲಿ ಷಟ್‌ಕುಲ, ನರಸಿಂಹ, ಚಕ್ರ, ಮನ್ಮಥ, ಭಾಗೀರಥಿ, ಪಾಪ ವಿನಾಶಿನಿ, ಕೋಟಿ ಹಾಗೂ ರುದ್ರ ಪಾದಗಳೆಂಬ ಎಂಟು ತೀರ್ಥಗಳಿವೆ. ಈ ಪಟ್ಟಣದಲ್ಲಿ ನರಸಿಂಹ ಸರಸ್ವತಿ ದತ್ತ ಮಹಾರಾಜರ ದತ್ತಾತ್ರೇಯ ದೇವಸ್ಥಾನವಿದೆ. ಮೂಲತಃ ಮಹಾರಾಷ್ಟ್ರದ ಕಾರಂಜಾದವರಾದ ನರಸಿಂಹ ಮಹಾರಾಜರು, ಇಲ್ಲಿ 23 ವರ್ಷ ನೆಲೆಸಿದ್ದು ಶ್ರೀಶೈಲಕ್ಕೆಂದು ಹೊರಡುವಾಗ ಭಕ್ತರಿಗೆಂದು ಇಲ್ಲಿ ನಿರ್ಗುಣ ಪಾದುಕೆ ಬಿಟ್ಟಿದ್ದಾರೆ. ಈ ಪಾದುಕೆಗಳೇ ಇಲ್ಲಿಗೆ ಆಗಮಿಸುವ ಭಕ್ತರ ಆರಾಧನಾ ದೈವ ಇಲ್ಲಿ ಫೆಬ್ರುವರಿ ತಿಂಗಳಲ್ಲಿ ಐದು ದಿನಗಳ ದೊಡ್ಡ ಜಾತ್ರೆ ನಡೆಯುತ್ತಿದ್ದು ಲಕ್ಷಾಂತರ ಜನ ಪಾಲ್ಗೊಳ್ಳುತ್ತಾರೆ.

ಇಲ್ಲಿಯ ದತ್ತಾತ್ರೇಯ ದೇವಾಲಯ ಯಾತ್ರಿಕರ ಆಕರ್ಷಣಾ ಕೇಂದ್ರವಾಗಿದ್ದು, ಸುಂದರವಾದ ರಚನೆಯಾಗಿದೆ. ದೇವಾಲಯದ

ಪ್ರಸ್ತುತ ಜೀವನದಲ್ಲಿ ಮೌಲ್ಯವನ್ನು ಕಳೆದುಕೊಂಡಿವೆ ಎಂದೇ ಹೇಳಬೇಕು.

ಗಾದೆಗಳು ಸಮಾಜ ಶಾಸ್ತ್ರಜ್ಞರಿಗೆ ವಿಪುಲವಾದ ವಿಷಯಗಳನ್ನು ಒದಗಿಸುತ್ತವೆ. ಸಮಾಜದ ಸ್ವರೂಪ, ಕಟ್ಟುಪಾಡುಗಳು, ನಂಬಿಕೆ, ಆಚರಣೆ, ಕುಲಸಂಬಂಧ ಮುಂತಾದ ವಿಷಯಗಳ ತಿಳುವಳಿಕೆಗಳನ್ನು ಸಂಗ್ರಹಿಸಿ ಕೊಡುತ್ತವೆ. ಕೌಟುಂಬಿಕ ಪರಿಸರದ ಅಭ್ಯಾಸದಲ್ಲಂತೂ ಗಾದೆಗಳು ಬಹು ಮಹತ್ವದ ಸಂಗತಿಗಳನ್ನು ಹೇಳುತ್ತವೆ. 'ಕುಲ ಕೆಟ್ರೂನೂ ವರ ಕೆಡಬಾರ್ದು' ಎಂಬುದೊಂದು ಬಹುದೊಡ್ಡ ಮಾತು. ಇಲ್ಲಿ ಜನಪದರು ಜಾತಿ–ಗಿಂತಲೂ ಗುಣಕ್ಕೆ, ವಧು–ವರ ಜೋಡಿಗೆ ಪ್ರಾಮುಖ್ಯತೆ ಇತ್ತುದು ಕಂಡುಬರುತ್ತದೆ. ಇಂದಿನವರ ವಿವಾಹಕ್ಕೆ ಜನಪದರು ಸಾಮಾಜಿಕವಾಗಿ ಅಲ್ಲದಿದ್ದರೂ ವೈಯಕ್ತಿಕವಾಗಿ, ಪರವಾದ ಅಭಿಪ್ರಾಯಹೊಂದಿದ್ದರು ಎಂಬ ಮಾತು ಇದರಿಂದ ಸ್ಪಷ್ಟವಾಗುತ್ತದೆ.


ಗತಕಾಲದ ಮಾನವ ಜೀವನವನ್ನು ಚಿತ್ರಿಸುವ ಗಾದೆಗಳೂ ನಮ್ಮಲ್ಲಿ ಪ್ರಚಲಿತದಲ್ಲಿವೆ. ಇದರಿಂದ ಪೂರ್ವಕಾಲದ ಸಾಮಾಜಿಕ ಸ್ಥಿತಿಗತಿಗಳನ್ನು, ರೀತಿ ನೀತಿಗಳನ್ನು, ಆಡಳಿತ ಪದ್ಧತಿಗಳನ್ನು, ಕುಲಸಂಬಂಧಗಳನ್ನು ತಿಳಿದುಕೊಂಡು ಅಭ್ಯಾಸ ಮಾಡಲು ಸಮಾಜಶಾಸ್ತ್ರಜ್ಞರಿಗೆ ಇಂತಹ ಗಾದೆಗಳು ಅತ್ಯಂತ ಮಹತ್ವದ ಸಂಗತಿಗಳನ್ನು ಪೂರೈಸುತ್ತವೆ. 'ದೊರೆಯತನಕ ದೂರು ಹೊಳೆಯತನಕ ಓಟ' ಎಂಬ ಗಾದೆ ಊರಿಗೊಬ್ಬ ಅರಸನಿರುತ್ತಿದ್ದ ಬಹು ಹಿಂದಿನ ಕಾಲದ ಆಡಳಿತದ ಅಂಶವನ್ನು ಹಿಡಿದಿಟ್ಟಿದೆ. ಜೊತೆಗೆ ಊರುಗಳನ್ನು ನೀರಿನ ತಾಣಗಳಿದ್ದಲ್ಲಿ ನಿರ್ಮಿಸುತ್ತಿದ್ದರು ಎಂಬ ಸಂಗತಿಯನ್ನು ಹೇಳುತ್ತದೆ. 'ಊರ ಸುಟ್ರು ಹನುಮಪ್ಪ ಹೊರಗೆ' ಎಂಬುದು ಹನಮಂತನ ಗುಡಿ ಊರ ಹೊರಗಿರುತ್ತಿದ್ದುದನ್ನು ಹೇಳುತ್ತವೆ.

ಊರಿದ್ದ ಮೇಲೆ ನೂರೆಂಟು ಜಾತಿ ಜನಾಂಗಗಳು, ಉದ್ಯೋಗಸ್ಥರು ಅಲ್ಲಿರುವುದು ಸಹಜ. ನಮ್ಮದು ಕೃಷಿಪ್ರಧಾನವಾದ ದೇಶ. ಜನಪದರ ಮುಖ್ಯ ಉದ್ಯೋಗ ಒಕ್ಕಲುತನ. ತಮ್ಮ ಜೀವನದ ಬಹು ಕಾಲವನ್ನು ಅವರು ಈ ಉದ್ಯೋಗದಲ್ಲಿಯೇ ಕಳೆಯುತ್ತಾರೆ. ಅವರಿಗೆ ಕೃಷಿ ಸಂಬಂಧಿಯಾದ ಅನುಭವ ಅಪಾರ. ಒಕ್ಕಲಿಗನ ಜೀವನ ಸ್ವಭಾವಗಳು, ಅವನ ಪರಿಸರ–ಹೊಲ, ಗದ್ದೆ, ತೋಟ; ಉತ್ತುವುದು, ಬಿತ್ತುವುದು, ಮಳೆ ಬೆಳೆ, ಆಳು, ಕೂಲಿನಾಲಿ ಇತ್ಯಾದಿಗಳ ಬಗ್ಗೆ ಜನಪದರಿಗಿರುವ ಜ್ಞಾನ ಎಷ್ಟು ಅಪಾರವಾದುದು ಎಂಬುದನ್ನು ಗಾದೆಗಳಲ್ಲಿ ಕಾಣಬಹುದಾಗಿದೆ.

ಮನುಷ್ಯ ಸ್ವಭಾವಗಳನ್ನು ದಾಖಲಿಸುವಲ್ಲಿ ಗಾದೆಗಳದು ಎತ್ತಿದ ಕೈ. ಹೀಗಾಗಿ ಮನಶ್ಶಾಸ್ತ್ರಜ್ಞರು ಗಾದೆಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದರೆ, ಗಾದೆಗಳಿಂದ ಮನುಷ್ಯ ಸ್ವಭಾವಗಳನ್ನು ಗುರುತು ಹಚ್ಚುವ ಸಹಜ ಲಕ್ಷಣಗಳನ್ನು ಕಂಡುಕೊಳ್ಳ ಬಹುದಾಗಿದೆ. 'ಮನಿ ಹಸನ ಇರಬೇಕಂದ್ರ ಮನಸ ಹಸನ ಇರ್ಬೇಕು' ಎಂಬ ಮಾತು ಸ್ವಚ್ಛತೆಯ ಅರಿವುಳ್ಳವನನ್ನು ಗುರುತಿಸುವ ಸೂಚಿ ಫಲಕ ಇದ್ದಂತಿವೆ. ವ್ಯಕ್ತಿಯ ವೈಯಕ್ತಿಕ ಸ್ವಭಾವಗಳನ್ನು ಗುರುತಿಸಲು ಅವನ ದೈಹಿಕ ಗುಣ ಲಕ್ಷಣಗಳನ್ನು, ಚಲನವಲನಗಳನ್ನು ಮಾನದಂಡಗಳನ್ನಾಗಿ ಬಳಸಿ ಕೊಳ್ಳಲಾಗುತ್ತದೆ. ಇಂತಹ ಲಕ್ಷಣಗಳನ್ನು ಗಮನಿಸಿ, ಗಾದೆ ಮನುಷ್ಯ ಸ್ವಭಾವಗಳನ್ನು ಗುರುತಿಸಿ ಹಿಡಿದಿಟ್ಟುದನ್ನು ಕಾಣಬಹುದಾಗಿದೆ. 'ಬಾಯಿ ಒಳ್ಳೆದಾದ್ರ ಊರೆಲ್ಲ ಒಳ್ಳೇದು', ಮಾತಿಗೆ ಸೋತು ಹೋದವ್ನೆ ಜಾಣ', 'ಕಳ್ಳಿಗೆ ನಾಚ್ಗಿಲ್ಲ ಅಂಗಾಲಿಗಿ ಹೇಸ್ಗಿಲ್ಲ' ಮುಂತಾದ ಇನ್ನೂ ನೂರಾರು ಗಾದೆಗಳನ್ನು ಮನಶ್ಶಾಸ್ತ್ರಜ್ಞರು ಅವಶ್ಯವಾಗಿ ಅಭ್ಯಾಸ ಮಾಡುವಂತಿವೆ.

ಆಡು ಮಟ್ಟದ ಗಿಡವಿಲ್ಲವೆಂಬಂತೆ, ಗಾದೆ ಹೇಳದ ವಿಷಯವಿಲ್ಲ ಗಾದೆಗಳನ್ನು ಕೇವಲ ಮಾನವ. ನಾಗರಿಕತೆಯ ಪಳೆಯುಳಿಕೆಗಳು ಮಾತ್ರ ಎಂದು ನಾವು ಭಾವಿಸುವಂತಿಲ್ಲ ಎಂಬ ಮಾತನ್ನು ನೆನಪಿನಲ್ಲಿಡಬೇಕು. ಪ್ರಸ್ತುತ ಜೀವನವನ್ನು, ಮಾನವ ಸ್ವಭಾವಗಳನ್ನು ಅರ್ಥೈಸಲು, ಪ್ರತಿಬಿಂಬಿಸಲು, ಧ್ವನಿಸಲು ಸಹಕಾರಿಗಳನ್ನಾಗಿ ಗಾದೆಯೂ ಗತಕಾಲದ ಸಂಗತಿಗಳನ್ನು ಬಳಸಿಕೊಂಡಿರುವುದು ಸ್ಪಷ್ಟವಿದೆ. ಅವೆಲ್ಲ ಪಾರದರ್ಶಿಕೆಗಳು ಮಾತ್ರ. ಅವುಗಳಲ್ಲಿ ಕಾಣುವುದು ನಮ್ಮ ನಿಮ್ಮ ಪ್ರತಿಬಿಂಬಗಳೇ. ಇದು ಗಾದೆಗಳ ಬಹುದೊಡ್ಡ ಸಾಹಿತ್ಯಿಕ ಗುಣ. ಈ ಗುಣಗಳಿಂದ ಗಾದೆಗಳನ್ನು ಹೊರತುಪಡಿಸಲು ಸಾಧ್ಯವೇ ಇಲ್ಲ. *(ಕ್ಷಿತಿ)*

ಗ್ರಾಮದೇವತೆಗಳು (ಯಾದಗಿರಿ ಜಿಲ್ಲೆ): ಹೈದ್ರಾಬಾದ ಕರ್ನಾಟಕದ ಗಡಿಜಿಲ್ಲೆಯಾದ ಯಾದಗಿರಿ ಆಂಧ್ರದ ಗಡಿಭಾಗಕ್ಕೆ ಹೊಂದಿಕೊಂಡಿದ್ದು, ಇದು ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಕ್ಷೇತ್ರದಲ್ಲಿ ತನ್ನದೇಯಾದ ಘನತೆಯನ್ನು ಹೊಂದಿದೆ. ಜಲಸಂಪತ್ತು, ಕೃಷಿಸಂಪತ್ತು, ಖನಿಜಸಂಜಪತ್ತಿನೊಂದಿಗೆ ವಿವಿಧ ಸಂಪನ್ಮೂಲಗಳ ತಾಣವಾಗಿದೆ. ನಿಸರ್ಗದತ್ತವಾಗಿ ಹರಿಯುವ ಭೀಮಾನದಿ, ಜಿಲ್ಲೆಯ ಜೀವನದಿಯಾಗಿದೆ. ಇದೇ ನದಿ ಮುಂದೆ ಸಾಗಿ 'ಸಂಗಮ' ಎಂಬ ಗ್ರಾಮದ ಬಳಿ ಹರಿಯುವ ಕೃಷ್ಣ ನದಿಯೊಂದಿಗೆ ಸೇರಿ ಸಂಗಮವಾಗುತ್ತದೆ. ಇಲ್ಲಿ ಸಂಗಮೇಶ್ವರ ದೇವಾಲಯವಿದ್ದು, ಪ್ರೇಕ್ಷಣೀಯ ಸ್ಥಳವಾಗಿದೆ. ಈ ಜಿಲ್ಲೆಯ ಗ್ರಾಮದೇವತೆಗಳು ತುಂಬಾ ಜನಪ್ರೀಯವಾಗಿವೆ.



ಗ್ರಾಮ ದೇವತೆ

ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ, ಚಿಂಚೋಳಿಯಲ್ಲಿ ಸಜ್ಜನಶೆಟ್ಟಿ ಗಾಣಿಗರು ಕಂಡು ಬಂದರೆ, ಆಳಂದ ತಾಲ್ಲೂಕಿನಲ್ಲಿ ಕಲಶೆಟ್ಟಿ ಗಾಣಿಗರು ಮತ್ತು ಅಫಜಲಪೂರ, ಜೇವರ್ಗಿ, ಶಹಾಪೂರ, ಸುರಪುರಗಳಲ್ಲಿ ಕರಿಕುಲ ಗಾಣಿಗರು ಕಂಡುಬರುತ್ತಾರೆ.

ಗಾಣಿಗರು ಎಣ್ಣೆ ತೆಗೆಯುವುದು ಮತ್ತು ಮಾರುವುದು ಎರಡನ್ನು ಮಾಡುತ್ತಿದ್ದರು. ಒಕ್ಕಲಿಗರು ತಾವು ಬೆಳೆದ ಎಣ್ಣೆಕಾಳುಗಳನ್ನು ತೆಗೆದುಕೊಂಡು ಹೋಗಿ ಗಾಣಾ ಹಿಡಿಸಿಕೊಂಡು ಎಣ್ಣೆ ತರುತ್ತಿದ್ದರು. ಬದಲಾಗಿ ಗಾಣಿಗರಿಗೆ ಜೋಳ, ಗೋದಿ, ಇತರ ಧವಸ ಧಾನ್ಯಗಳನ್ನು ಕೂಲಿಯಾಗಿ ಕೊಡುತ್ತಿದ್ದರಂತೆ. ಒಂಟೆತ್ತಿನ ಗಾಣಗಳು, ಜೋಡೆತ್ತಿನ ಗಾಣಗಳು ಇದ್ದವಂತೆ. ಗಾಣದ ಕಲ್ಲನ್ನು ಅವರು ಈ ಹೊತ್ತಿನವರೆಗೂ ದೇವರೆಂದು ಪೂಜಿಸುವ ವಾಡಿಕೆ ಇದೆ. ಅಮವಾಸ್ಯೆಯಂದು ಗಾಣ ಕಟ್ಟಲಾಗದು. ತಮ್ಮ ಮನೆಯ ಮಂಗಳ ಕಾರ್ಯಗಳಲ್ಲಿ ಮೊದಲ ಪೂಜೆ ಗಾಣಕ್ಕೆ ಸಲ್ಲಿಸಲಾಗುತಿತ್ತಂತೆ.

(ಎಂಬಿ)

ಗಾದೆಗಳು: ಜನಪದ ಸಾಹಿತ್ಯದ ಮುಖ್ಯ ಪ್ರಕಾರಗಳಲ್ಲೊಂದು. ಗಾದೆಗಳು ತಮ್ಮ ಅಸ್ತಿತ್ವದಲ್ಲಿ ಪರಸ್ಪರ ಆಂತರಿಕ ಸಂಬಂಧವನ್ನು ಹೊಂದಿದವುಗಳಲ್ಲ. ಒಂದು ಗಾದೆ ಇನ್ನೊಂದರಂತೆ ಕಂಡರೂ ಈ ಸಾಮ್ಯವು ಗಾದೆಗಳೆರಡು ತಳೆದಿರುವ ಧೋರಣೆಯಾಗಿರುತ್ತದೆ. ಒಂದು ಗಾದೆಯಿಂದ ಇನ್ನೊಂದು ಗಾದೆ ಹುಟ್ಟಿಕೊಳ್ಳಲಾರದು. ಇಲ್ಲವೆ ಒಂದು ಗಾದೆಯ ಹುಟ್ಟಿಗೆ ಇನ್ನೊಂದು ಗಾದೆಯ ಮೂಲಕಾರಣವಾಗಲಿ, ಪ್ರೇರಣೆಯಾಗಲಿ ಆಗಿರಲಾರದು. ಮತ್ತು ಅವುಗಳ ಹುಟ್ಟಿನ ಮೂಲ ಕೂಡ ಒಂದೇ ಆಗಿರಲು ಸಾಧ್ಯವಿಲ್ಲ. ಒಂದು ಅನುಭವಕ್ಕೆ ಒಂದು ಗಾದೆ. ಒಮ್ಮೆ ಒಂದು ಅನುಭವ ಆಯಿತೆಂದರೆ ಪುನಃ ತದ್ವತ್ತಾದ ಪುನರಾವರ್ತನೆ ಆಗಲಾರದು. ಇದಕ್ಕೆ ಕಾರಣ ಮನುಷ್ಯನ ಮನಸ್ಸು ತೀರ ಸಂಕೀರ್ಣವಾಗಿರುವುದು. ಮಾನವನ ಈ ಮನಸ್ಸಿನ ಸಂಕೀರ್ಣತೆ ಎಂತಹದು ಎಂಬುದನ್ನು ಅರಿಯಲು ಗಾದೆಗಳನ್ನು ಅವಲೋಕಿಸಬೇಕು.

ಗಾದೆಗಳು ಹಲವರ ಅನುಭವಗಳು. ವ್ಯಷ್ಟಿ ಸೃಷ್ಟಿಗಳಾದರೂ ಸಮಷ್ಟಿ ಪ್ರಜ್ಞೆವುಳ್ಳವುಗಳು. ಹೀಗಾಗಿ ಒಂದು ಗಾದೆಯನ್ನು ತನ್ನದೆಂಬಂತೆ ಪ್ರತಿಯೊಬ್ಬ ಶ್ರೀಸಾಮಾನ್ಯನು ಬಳಸುತ್ತಾನೆ. ಅದಕ್ಕಾಗಿ ಗಾದೆ ಹಲವರ ಸೊತ್ತು ಎನಿಸುತ್ತದೆ. ಸಾರ್ವಜನಿಕ ಮುದ್ರೆಯೊತ್ತಿಸಿಕೊಂಡು ಅದು ಶ್ರೀಸಾಮಾನ್ಯನ ನಾಲಿಗೆಯ ಮೇಲೆ ಸಹಜವಾಗಿ ಹರಿದಾಡುತ್ತಿರುತ್ತದೆ. ಗಾದೆಗಳಿಗೂ ಅಧಿಕಾರಕ್ಕೂ ಅಜಗಜಾಂತರ. ಗಾದೆಯು ಹೀಗೆ ಮಾಡು ಎಂದು ಒತ್ತಿ ಹೇಳಿ ಬೇಲಿ ಹಾಕುವುದಿಲ್ಲ. ಬದಲಾಗಿ ತಾನೊಂದು ಅನುಭವವನ್ನು ಸಾರಿ ಹೇಳುತ್ತದೆ. ಒತ್ತಾಯಿಸುವ ಬದಲು ವಿನಂತಿಸಿಕೊಳ್ಳುತ್ತದೆ. ಅದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವಲ್ಲಿ ಕೊಂಕು ಆಡಬಹುದು, ಚುಚ್ಚಿ ನುಡಿಯಬಹುದು. ಓರೆಕೋರೆಗಳನ್ನು ಗುರುತಿಸಬಹುದು. ಆದರೆ ಅದು ಒತ್ತಾಯ ಹೇರಲಾರದು. ತನ್ನದೇ ಸರಿಯೆಂದು ಸಾರಲಾರದು. ಹೀಗೆ ನಡೆಯಬೇಕೆಂದು ಆಜ್ಞೆ ಮಾಡಲಾರದು. ಆಯ್ಕೆಯನ್ನು ಗಾದೆ ನಮಗೆ ಬಿಟ್ಟು ಕೊಡುತ್ತದೆ. ಇದು ಗಾದೆಯ ಬಹುದೊಡ್ಡ ಗುಣ. ಈ ಗುಣ ಇನ್ನೊಂದಕ್ಕೆ ಬರಲಾರದು. ಸುಭಾಷಿತಗಳು ಹೇಳಿದವನ ದೊಡ್ಡಸ್ಥನವನ್ನು ಎತ್ತಿ ತೋರಿಸಿದರೆ, ಗಾದೆಗಳು ತನ್ನಂತೆ ಅನುಸರಿಸುವವನ ಗುಣಗಳನ್ನು ವೃದ್ಧಿಪಡಿಸುತ್ತವೆ.

ಪ್ರಸ್ತುತ ಜೀವನಕ್ಕೆ ಸಂಬಂಧಿಸಿದ ಅನುಭವಗಳನ್ನು ತನ್ನ ವಸ್ತುವಾಗಿಸಿಕೊಂಡ ಗಾದೆಗಳು, ನಿತ್ಯ ಜೀವನದಲ್ಲಿ ಬಳಕೆಯಾಗುತ್ತ ಚಲಾವಣೆಯಲ್ಲಿರುತ್ತವೆ. ನಾವು ಬದುಕಿನಲ್ಲಿ ಅಳವಡಿಸಿಕೊಂಡ ರೂಢಿ, ಸಂಪ್ರದಾಯ, ಆಚರಣೆ, ನಂಬಿಕೆ, ಆಚಾರ, ವಿಚಾರ, ವಿಧಿನಿಷೇಧ ಮುಂತಾದವುಗಳು ಗಾದೆಗಳಾಗಿ ರೂಪು ಪಡೆಯುತ್ತವೆ. ದಿನಗಳೆದಂತೆ, ಬದುಕಿನ ರೀತಿ ನೀತಿಗಳು ಬದಲಾದಂತೆ; ತಲೆಮಾರುಗಳು ಉರುಳಿದಂತೆ, ನಾಗರಿಕತೆ ಬೆಳೆದಂತೆ; ನಮ್ಮ ಜೀವನದ ಸಂಪರ್ಕ ಕಳೆದುಕೊಳ್ಳುತ್ತ, ಸವಕಲು ನಾಣ್ಯದಂತೆ ಚಲಾವಣೆಯಿಂದ ತಪ್ಪಿಹೋಗುವ ಈ ಮೇಲಿನ ಸಾಮಾಜಿಕ ಮೌಲ್ಯಗಳುಳ್ಳ ಗಾದೆಗಳು ಬಳಕೆಯಿಂದ ದೂರವಾಗುತ್ತ ಹೋಗುತ್ತವೆ. ಬದಲಾಗಿ ಹೊಸ ಬದುಕನ್ನು ಪ್ರತಿನಿಧಿಸುವ ಗಾದೆಗಳು ಹುಟ್ಟಿಕೊಳ್ಳುತ್ತವೆ. ಇವುಗಳಿಗೆ ಜೀವಂತ ಅನುಭವಗಳು ವಸ್ತುವಾಗಿರುತ್ತವೆ. ಹೀಗಾಗಿ ಸಮಕಾಲೀನ ಪ್ರಜ್ಞೆ ಗಾದೆಗಳಲ್ಲಿ ಮಿಡಿಯುತ್ತಿರುತ್ತದೆ. ಆದರೆ ಯಾವುದೇ ಕಾಲದಲ್ಲಿ ಬಳಕೆಯಲ್ಲಿ ಬಂದ ಗಾದೆಯ ಚಿರಂಜೀವಿಯಾಗಿರುತ್ತವೆ. ಗಾದೆಗಳಿಗೆ ಈ ನಿತ್ಯ ಜೀವನವನ್ನು ಕೊಡುವ ಶಕ್ತಿಯೇ ಅವುಗಳಲ್ಲಿರುವ ಸಾಹಿತ್ಯ ಅತ್ಯಂತ ಗಟ್ಟಿ ಮೌಲ್ಯ ಎನ್ನಬೇಕು.

ಗಾದೆಗಳಿಗಾಗಿ ವಸ್ತುವನ್ನು ಬಳಸಿಕೊಳ್ಳುವ ವ್ಯಾಪಕತೆಯನ್ನು ಗಮನಿಸಿದರೆ ಜನಪದರ ಅರಿವಿನ ಬಗೆಗೆ ನಮಗೆ ದಿಗ್ಭ್ರಮೆಯಾಗುತ್ತದೆ. ಬಾಯಿಮಾತಿನ ಪರಂಪರೆಯಲ್ಲಿ ಹರಿದುಕೊಂಡು ಬರುವಾಗ, ಗಾದೆಗಳು ಮಾನವನ ಗತಕಾಲದ ಚರಿತ್ರೆಯ ಅನೇಕ ಅಂಶಗಳನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. 'ದಿಲ್ಲಿಯಿಂದ ದೇವಗಿರಿಗೆ ದೇವಗಿರಿಯಿಂದ ದಿಲ್ಲಿಗೆ' ಎಂಬ ಗಾದೆ ತುಘಲಕನ ಇತಿಹಾಸವನ್ನು ನೆನಪಿಗೆ ತರುತ್ತದೆ. 'ದಂಡ ಬಂದಾಗ ತುರಕ ಮಾತ ಕಲ್ತಂಗ', 'ತುರುಕ ಮಿಂಡ ಬರಾಗ ಎದುರ ಚುಕ್ಕಿ ನೋಡಿದರು' ಎಂಬುವು ಮುಸ್ಲೀಮರ ದಾಳಿಗಳಿಂದ ಜನ ಭಯಗ್ರಸ್ಥರಾದುದನ್ನು ಹೇಳುತ್ತವೆ. 'ಮುರಕ ಇರ್ಲಿ ಹರಕ ಇರ್ಲಿ ಮಗಲಾಗೊಂದು ತುರುಕ ಇರ್ಬೇಕು' ಎಂಬುದು ಮುಸ್ಲೀಮರ ಆಳಿಕೆಯ ಕಾಲದಲ್ಲಿಯ ತುರುಕರ ಸ್ನೇಹದ ಅನಿವಾರ್ಯತೆಯನ್ನು ಹೇಳುತ್ತವೆ.ಹಾಗೆಯೇ ಬಳಕೆಯಿಂದ ತಪ್ಪಿಹೋಗಿರುವ, ಹೋಗುತ್ತಲಿರುವ ಕೆಲವು ಪೌರಾಣಿಕ ವಸ್ತುಗಳುಳ್ಳ ಗಾದೆಗಳನ್ನೂ ಕಾಣಬಹುದಾಗಿದೆ. ಬೆಳ್ತನ ರಾಮಾಯಣ ಕೇಳಿ ಬೆಳಗಾಗಾಣ ರಾಮ ಸೀತಾಗ ಏನಾಗ್ಬೇಕು ಅಂದ್ನಂತ, ಉತ್ತರನ ಪೌರುಷ ಒಲಿ ಮುಂದ, ತಪಸ್ಸಿಗ ಹ್ವಾದ್ರೂ ಮಾಯಿ ಬೋಳಿ ಶಂಕರ್‍ನ ಬಿಡಲಿಲ್ಲ, ಕಲ್ಲ ಕೊಡ ಹಾವಿನ ಸಿಂಬಿ ಹೊರಸ್ದಂಗ ಮುಂತಾದವು ಪುರಾಣ ವಸ್ತುವನ್ನೊಳಗೊಂಡ ಗಾದೆಗಳಾಗಿವೆ. ತಿರುಪತಿ ಹಜಾಮ ತೆಲಿ ಬೋಳಸ್ದಂಗ, ಗುಡ್ಡ ಸುತ್ತಿ ಮೈಲಾರ್‍ಕ ಬಂದಂಗ, ಕಾಶೀಗ ಹ್ವಾದ್ರೂ ಕಸಬಾರ್‍ಗಿ ತಪ್ಪಿಲ್ಲ, ರಾಮೇಸೂರಕ ಹ್ವಾದ್ರೂ ಶನಿಸೂರನ ಕಾಟ ತಪ್ಪಿಲ್ಲ ಮುಂತಾದವು ಸ್ಥಳ ಪುರಾಣ ಮತ್ತು ಸ್ಥಳ ಮಹಾತ್ಮೆಯನ್ನು ಹೇಳುತ್ತವೆ. ಆದರೆ ಕೇವಲ ಪಳೆಯುಳಿಕೆಗಳಂತೆ ಉಳಿದುಕೊಂಡ ಇಂತಹ ಗಾದೆಗಳು ಈಗ ಚಲಾವಣೆಯಲ್ಲಿ ಇನ್ನೆಷ್ಟು ದಿನ ಇರಲು ಸಾಧ್ಯ. ಇವೆಲ್ಲ

ಗಾಳಿದೆವ್ವ ಮೈಮೇಲೆ ಬಂದಾಗ ಅದನ್ನು ಬಿಡಿಸುವುದಕ್ಕೆ ಜನ ಕೆಲವು ವಿಶಿಷ್ಟ ಆಚರಣೆಗಳಲ್ಲಿ ತೊಡಗುತ್ತಾರೆ. ದೆವ್ವ ಬಡಿದ ವ್ಯಕ್ತಿಯನ್ನು ಅನೇಕ ರೀತಿಯ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಆಗ ಆ ದೆವ್ವ ಕೆಲವು ವೇಳೆ ಸರಿಯಾದ ಉತ್ತರವನ್ನು ಹೇಳಿ ತನ್ನ ಪೂರ್ವೋತ್ತರಗಳನ್ನು ತಿಳಿಸುವುದರೊಂದಿಗೆ, ತಾನು ಬಂದಿರುವ ಉದ್ದೇಶವನ್ನು ತಿಳಿಸಿ, ತಾನು ಬಿಟ್ಟುಹೋಗಬೇಕಾದರೆ ಮಾಡಬೇಕಾದ ಕ್ರಿಯೆಗಳನ್ನೂ ತಿಳಿಸುತ್ತದೆ. ದೆವ್ವ ಬಿಡಿಸುವ ಕ್ರಿಯೆಯು ಸಾಮಾನ್ಯವಾಗಿ ಊರಿನ ಗ್ರಾಮದೇವತೆಯ ಗುಡಿಯಲ್ಲಿ ನಡೆಯುತ್ತದೆ. ಮಂತ್ರ ವಿದ್ಯೆಯನ್ನು ಕಲಿತ ವ್ಯಕ್ತಿ ಆ ಕ್ರಿಯೆಯನ್ನು ನಡೆಸಿಕೊಡುತ್ತಾನೆ. ಗಾಳಿದೆವ್ವ ಬಯಸಿದ ಭಕ್ಷಗಳನ್ನು ದೆವ್ವ ಹಿಡಿದಿರುವ ವ್ಯಕ್ತಿಯ ಮೇಲೆ ನಿವಾಳಿಸಿ ದೂರದ ಬಯಲಿಲ್ಲ ಇಟ್ಟು ಬರುತ್ತಾರೆ. ಕೆಲವು ವೇಳೆ ಗಾಳಿದೆವ್ವ ಹೆಚ್ಚು ತಕರಾರು ಮಾಡಿದರೆ ಅಂಥದನ್ನು ಬಿಡಿಸಲು ದಕ್ಷರಾದ ಮಾಂತ್ರಿಕರನ್ನು ಕರೆಸಿ ವಿಧಿವತ್ತಾಗಿ ಉಗ್ರಸ್ವರೂಪದ ಪೂಜೆಯನ್ನು ಮಾಡಿಸುವುದು ಉಂಟು. ಇಂಥ ಪೂಜೆಗಳನ್ನು ಅಮವಾಸ್ಯೆಯ ದಿನದಂದು ಸ್ಮಶಾನದಲ್ಲಿ ನಡೆಸುತ್ತಾರೆ.

ಕರ್ನಾಟಕದಲ್ಲಿ ಮಹಾದೇಶ್ವರ ಬೆಟ್ಟ, ಧರ್ಮಸ್ಥಳ, ಗಾಣಗಾಪುರ, ಬಿಜಾಪುರದ ಜೋಡಗುಂಬಜ್ ಗುಲಬರ್ಗಾ ದರ್ಗಾ ಮೊದಲಾದ ಕ್ಷೇತ್ರಗಳಲ್ಲಿ ಗಾಳಿದೆವ್ವ ಬಿಡಿಸುವ ಪರಿಪಾಠ ಇಂದಿಗೂ ನಡೆದುಕೊಂಡು ಬರುತ್ತಿದೆ. ಸಾಮಾನ್ಯವಾಗಿ ಇವು ಯಾರಿಗೂ ಗೋಚರಿಸುವುದಿಲ್ಲ. ಬಹಳ ಅಪರೂಪಕ್ಕೆ ಯಾರಿಗಾದರೂ ಕಂಡರೆ ಕಂಡವರಿಗೆ ಅಪಾಯವಾಗುವುದಲ್ಲದೆ ಅಂಥವರು ವಿಶೇಷ ಗುಣವುಳ್ಳ ಕಣ್ಣಿನವರೆಂದು ತಿಳಿಯುವುದುಂಟು. *(ಕೆಎಸ್‌ಎನ್)*

ಗಾಳಿಪಟ: ಬಿದರಿನ ಕಡ್ಡಿಗಳು ಮತ್ತು ಬಣ್ಣದ ಕಾಗದ ಬಳಸಿ ತಯಾರಿಸಿದ ಆಟದ ಪಟ. ಇದನ್ನು ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಪತಂಗ ಎಂದು ಕರೆಯುವುದುಂಟು. ಚಳಿಗಾಲದಲ್ಲಿ ಸುಳಿಗಾಳಿಯು ಪತಂಗವು ಬಾನೆತ್ತರಕ್ಕೆ ಹಾರಲು ಅನುಕೂಲವಾಗಿರುತ್ತದೆ.

ಕಿರಿಯ ವಯಸ್ಸಿನಿಂದ ಮಧ್ಯಮ ಮತ್ತು ವಯೋ ವೃದ್ಧರವರೆಗೆ ಎಲ್ಲರೂ ಪತಂಗ ಹಾರಿಸುತ್ತಾರಾದರೂ ಹೆಚ್ಚಾಗಿ ಕಿಶೋರರು ಮತ್ತು ತರುಣರು ಇದರಲ್ಲಿ ಭಾಗವಹಿಸುತ್ತಾರೆ. ಈ ಹುಡುಗರು ತಮ್ಮೂರಿನ ಹೊಲ, ಕಾಡುಗಳಿಗೆ ಹೋಗಿ ಅಲ್ಲಿಂದ ಬಿದಿರು ಕಡ್ಡಿ, ಅಥವಾ ಜೇಕಿನ (ಒಂದು ಜಾತಿಯ ಹುಲ್ಲು) ಕಡ್ಡಿಗಳನ್ನು ಆಯ್ದು ತರುತ್ತಿದ್ದರು. ಆನಂತರ ಅಂಗಡಿಗಳಲ್ಲಿ ಬಣ್ಣ ಬಣ್ಣದ ಕಾಗದಗಳನ್ನು ಖರೀದಿಸಿ ತಂದು ವಿವಿಧಾಕಾರಕ್ಕೆ ತಕ್ಕಂತೆ ಕತ್ತರಿಸಿಕೊಳ್ಳುವರು. ಬಿಲ್ಲಿನ ಕಡ್ಡಿಗಳನ್ನು ಬಗ್ಗಿಸಿ ಪತಂಗದ ಆಕಾರಕ್ಕೆ ದಾರ ಬಿಗಿದು ಕಟ್ಟಿಕೊಳ್ಳುವರು. ಅನಂತರ ಮನೆಯಲ್ಲಿ ತಯಾರಿಸಿದ ಗೋದಿ ಹಿಟ್ಟಿನ ಗಂಜಿಯಿಂದ ತಯಾರಿಸಿದ ದ್ರಾವಣದಿಂದ ಕತ್ತರಿಸಿಕೊಂಡ ಬಣ್ಣದ ಕಾಗದಗಳನ್ನು ಅಂಟಿಸುವರು. ಗೋದಿ ಗಂಜಿಗೆ ನಮ್ಮ ಜನಪದರು 'ಲಯಿ' ಎಂದು ಕರೆದರೆ ಬಣ್ಣದ ಕಾಗದಗಳಿಗೆ ಫರಫರಿ ಎನ್ನುತ್ತಿದ್ದರು. ಆನಂತರ ಮಾಂಜಾ ತಯಾರಿಸಿಕೊಳ್ಳುವರು. ಮಾಂಜ ಎಂದರೆ ಕುಟ್ಟಿದ ಗಾಜಿನ ಪುಡಿಯನ್ನು ಸವರಿ ತಯಾರಿಸಿದ ಮಜಬೂತಾದ ದಾರ. ಈ ಮಾಂಜಾ ಅಥವಾ ದಾರ ತಯಾರಿಸುವುದು ಕೂಡ ವಿಶೇಷ ಪರಿಣತಿಯಿಂದ ಕೂಡಿರುತ್ತಿತ್ತು. ಹೀಗೆ ತಯಾರಿಸಿದ ದಾರದಿಂದ ಪತಂಗಕ್ಕೆ ಕನ್ನ ಹಾಕುತ್ತಿದ್ದರು. ಕನ್ನ ಹಾಕುವುದು ಎಂದರೆ ಗಾಳಿಪಟಕ್ಕೆ ಆಕಾಶದೆತ್ತರಕ್ಕೆ ಹಾರಲು ಅನುಕೂಲವಾಗುವಂತೆ ದಾರ ಕಟ್ಟುವುದು ಎಂದು ಅರ್ಥ. ಕೆಲವು ಭಾಗದಲ್ಲಿ ಸೂತ್ರ ಕಟ್ಟುವುದು ಎಂದು ಕರೆಯುತ್ತಾರೆ.

ಕನ್ನ ಹಾಕಲು ವಿಶೇಷ ಪರಿಣತಿಬೇಕು. ಕನ್ನ ಹಾಕುವುದು ಸ್ವಲ್ಪ ತಪ್ಪಿದರೂ ಸಾಕು ಪತಂಗ ನೆಲ ಬಿಟ್ಟು ಮೇಲೇರುವುದೇ ಇಲ್ಲ. ಗಾಳಿಪಟಕ್ಕೆ ಬಾಲಂಗೋಚಿ ಹಚ್ಚುವುದು ಅಷ್ಟೇ ಮುಖ್ಯ. ಈ ಬಾಲಂಗೋಚಿ ಅಥವಾ ನಮ್ಮವರ ಬಾಯಿಯಲ್ಲಿ ಬಾಲಂಗೋಸಿಯು ಪತಂಗಕ್ಕೆ ಸಮತೋಲನ ಮಾಡುತ್ತಿರುತ್ತದೆ. ಪತಂಗದ ಭಾರಕ್ಕೆ ತಕ್ಕಂತೆ ಹಗ್ಗವಾಗಲೀ ಅಥವಾ ಹಗುರವಾದ ಕಾಗದದಿಂದ ಉದ್ದವಾದ ಬಾಲಂಗೋಚಿ ಮಾಡಲಾಗುತ್ತದೆ. ಹೀಗೆ ಕನ್ನ ಹಾಕಿದ ಪತಂಗ, ಕಟ್ಟಿಗೆ ತುಂಡು ಅಥವಾ ಖಾಲಿ ಡಬ್ಬಿಗಳಿಗೆ ಸುತ್ತಿಕೊಂಡ ದಾರದ ಉಂಡೆಯನ್ನು ಹಿಡಿದು ಹುಡುಗರು ಮನೆಯ ಮಾಳಿಗೆ, ಪಂಚಾಯಿತಿಯ ಕಟ್ಟೆ ಅಥವಾ ಊರ ಹೊರಗಿನ ಎತ್ತರದ ಬಯಲಿಗೆ ಬಂದರೆ ಸಾಕು. ಹಾರಾಟದ ಭರಭರಾಟೆ.

ಸಾಮಾನ್ಯವಾಗಿ ಸಾಯಂಕಾಲದ ಹೊತ್ತಿಗೆ ಪತಂಗದ ಹಾರಾಟ ಜೋರು. ಬೀದರ ಜಿಲ್ಲೆಯ ಹುಮನಾಬಾದಿನಲ್ಲಿ ಸಂಕ್ರಮಣದ ದಿನದಲ್ಲಿ ಹಾರಿಸುವ ಪತಂಗಗಳ ಅರ್ಭಟ ನೋಡುವಂತಿರುತ್ತದೆ. ಬಣ್ಣ ಬಣ್ಣದ ಚಿತ್ರ ಚಿತ್ತಾರದ ಪತಂಗಗಳು. ಅವುಗಳಿಗೆ ನಾನಾ ನಮೂನಿ ಹೆಸರುಗಳಿವೆ. ಕನ್ನಿ ಪತಂಗ, ಪರಿಪತಂಗ, ಚಾಕಳಿ ಪತಂಗ.

ಪತಂಗ ಹಾರಿಸುವವರ ಮಧ್ಯೆ ಏರ್ಪಡುವ ಸ್ಪರ್ಧೆಯಂತೂ ತುಂಬಾ ರೋಚಕವಾಗಿರುತ್ತದೆ. ಪರಸ್ಪರರ ಗಾಳಿಪಟಗಳನ್ನು ಕತ್ತರಿಸುವುದು (ಅದಕ್ಕೆ ಸಾಫ್ ಮಾಡುವುದು ಎನ್ನುತ್ತಾರೆ) ಕಡಿದ ಪತಂಗಗಳಿಗಾಗಿ ಮಾಳಿಗೆ ಮಾಳಿಗೆ ಜಿಗಿಯುವುದು, ಜಿಗಿ ಜಿಗಿದು ಪತಂಗದ ದಾರ ಸುತ್ತಿಕೊಳ್ಳುವುದು ಇವೆಲ್ಲಾ ತುಂಬಾ ಆಕರ್ಷಕವಾಗಿರುತ್ತವೆ. ಗ್ರಾಮೀಣ ಪ್ರದೇಶದಲ್ಲಿಯಂತೂ ಪರಸ್ಪರ ಓಣಿಗಳ ನಡುವೆ ಗಾಳಿಪಟ ಹಾರಿಸುವವರ ಮಧ್ಯೆ ಬಿರುಸಿನ ಪೈಪೋಟಿಯು ನಡೆಯುತ್ತದೆ. ಪತಂಗಗಳನ್ನು ಸಾಫ್ ಮಾಡುವುದು ಪ್ರತಿಷ್ಠೆಯ ವಿಷಯವು ಆಗುವುದುಂಟು. ಪತಂಗ ಹಾರಿಸುವ ಚಾಣಾಕ್ಷರನ್ನು ತಮ್ಮ ತಮ್ಮ ಓಣಿಗಳಿಗೆ ಕರೆಸಿಕೊಂಡು ಅವರಿಗೆ ಭಾರಿ ಭಾರಿ ಗಾತ್ರದ ಪತಂಗಗಳನ್ನು ಕೊಟ್ಟು ತಮ್ಮ ಪರವಾಗಿ ಹಾರಿಸುವಂತೆ ಪುಸಲಾಯಿಸುವುದು ಉಂಟು. ಇದೊಂದು ಶುದ್ಧ ಜನಪದ ಆಟ.

ಈಗಲೂ ಅಲ್ಲಲ್ಲಿ ಆಗಾಗ ಮಕ್ಕಳು ಗಾಳಿಪಟ ಹಾರಿಸುವುದು ಇದೆಯಾದರೂ ಮೊದಲಿನಂತೆ ಪಟಗಳನ್ನು ಮನೆಯಲ್ಲಿ ತಯಾರಿಸುವ ಸಂಭ್ರಮ ಪೈಪೋಟಿ, ಸಾಹಸ ಪ್ರದರ್ಶನಗಳು ಕಂಡು ಬರುತ್ತಿಲ್ಲ. ಅಂಗಡಿಯಲ್ಲೂ ಈಗ ಮಳೆ ಬಂದರೂ ನೆನೆಯದ ಪ್ಲಾಸ್ಟಿಕ್ ಪಟಗಳು ದೊರೆಯುತ್ತವೆ. ಆದರೆ

ಯಾದಗಿರಿಯ ಗ್ರಾಮದೇವತೆಗಳೆಂದರೆ, ಮರಗಮ್ಮ, ದ್ಯಾವಮ್ಮ, ಪಾಲಕಮ್ಮ, ಯಲ್ಲಮ್ಮರು ವಿಶಿಷ್ಟ ಶಕ್ತಿಯನ್ನು ಪಡೆದಿರುವ ಪ್ರಮುಖ ದೇವತೆಯರು. ಈ ದೇವತೆಯರನ್ನು ಗ್ರಾಮೀಣ ಜನರು ತಲತಲಾಂತರದಿಂದ ಆರಾಧಿಸುತ್ತ ಬಂದಿದ್ದಾರೆ. ತಾವು ನಂಬಿರುವ ಈ ದೇವತೆಗಳು ಆಯಾ ಗ್ರಾಮಗಳಲ್ಲಿ ತುಂಬಾ ಜನಪ್ರೀಯತೆಗಳಿಸಿವೆ. ಪ್ರತಿವರ್ಷ ನಿಗದಿತ ದಿನದಂದು ಭಕ್ತಿ ಭಾವದಿಂದ ಅರ್ಚನೆ, ಅರ್ಪಣೆ, ಆರಾಧನೆ ಮಾಡುವುದು ಕಂಡುಬರುತ್ತದೆ.

ಈ ಜಿಲ್ಲೆಯ ಶಹಾಪೂರ, ಸುರಪುರ, ತಾಲ್ಲೂಕುಗಳಲ್ಲಿ ದ್ಯಾವಮ್ಮನ ಪ್ರಭಾವವಿರುವುದನ್ನು ಕಾಣಬಹುದು. ಅರಸೊತ್ತಿಗೆಯ ಕಾಲದಲ್ಲಿ ಸುರಪುರವನ್ನು ನಾಯಕ ಜನಾಂಗದವರು ರಾಜಧಾನಿಯನ್ನಾಗಿ ಆಳುತ್ತಿದ್ದ ಕಾಲದಲ್ಲಿ ದ್ಯಾವಮ್ಮ, ದುರ್ಗಮ್ಮರು ಪ್ರಭಾವಿ ದೇವತೆಯರಾಗಿದ್ದರು. ಕಾಲಕ್ರಮೇಣ ಅಲ್ಲಿನ ಆಳರಸರು ತಿರುಪತಿಯ ತಿಮ್ಮಪ್ಪನನ್ನು ಆರಾಧಿಸತೊಡಗಿದರು. ಇದರಿಂದಾಗಿ ಈ ದೇವತೆಗಳ ಪ್ರಭಾವ ಕಡಿಮೆ ಆಯಿತೆಂದು ತಿಳಿದುಬರುತ್ತದೆ. ಏಕೆಂದರೆ ತಿರುಪತಿ ತಿಮ್ಮಪ್ಪನ ಅವತಾರಿಯಾದ ಗೋಪಾಲಸ್ವಾಮಿ ದೇವಸ್ಥಾನ ನಿರ್ಮಾಣಗೊಂಡು ಅದರ ಉತ್ಸವಗಳು ಹೆಚ್ಚಿದುದರ ಪರಿಣಾಮ ಗ್ರಾಮದೇವತೆಗಳ ಆಚರಣೆ ಸ್ವಲ್ಪ ಕಡಿಮೆಯಾಯಿತು. ಆದರೂ ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ಗ್ರಾಮ ದೇವತೆಗಳ ಜಾತ್ರೆ, ಪೂಜೆ-ಪುನಸ್ಕಾರಗಳಿಗೆ ಕೊರತೆಯೇ ಇಲ್ಲ. ತುಂಬಾ ಅದ್ಭುತವಾಗಿ, ಅಲಂಕಾರಿಕವಾಗಿ, ಜನಸಂದಣಿಯಿಂದ ಆಯಾ ಗ್ರಾಮಗಳಲ್ಲಿ ಜಾತ್ರೆ, ಕಾರ್ಯ, ಉತ್ಸವ ಎಂಬ ನಾನಾ ಹೆಸರಿನಲ್ಲಿ ಗ್ರಾಮದೇವತೆಗಳನ್ನು ಆರಾಧಿಸುತ್ತಿರುವುದು ಕಟುಸತ್ಯ. ಇಂತಹ ಗ್ರಾಮದೇವತೆಗಳು ಆಯಾ ತಾಲ್ಲೂಕವಾರು ಹೀಗಿವೆ.

ಯಾದಗಿರಿ ತಾಲ್ಲೂಕು: ಯಾದಗಿರಿಯ ಗಾಳಿಮರಗಮ್ಮ, ಎಲ್ಲೇರಿ-ಮರಗಮ್ಮ, ಹತ್ತಿಕುಣಿ-ಮರಗಮ್ಮ, ಬಾಲಚೌಡಿ ಮರಗಮ್ಮ, ಗೌಡಗೇರ-ಮರೆಗಮ್ಮ, ಕಿಲ್ಲನಕೇರ-ಮಾರೆಮ್ಮ, ರಾಚನಳ್ಳಿ-ಕರಿಬೆಟ್ಟದ ಮಾರೆಮ್ಮ, ಶೆಟ್ಟಳ್ಳಿ-ಮಾರೆಮ್ಮ ಅಲ್ಲದೆ, ಯಾದಗಿರಿ ದುರಗಮ್ಮ, ಸೌರಾಷ್ಟ್ರಹಳ್ಳಿ-ದುರಗಮ್ಮ, ಖ್ಯಾತನಾಳ-ದುರಗಮ್ಮ, ಯರಗೋಳ ಪಾಲಕಮ್ಮ; ಮೋಟ್ನಳ್ಳಿ- ದ್ಯಾವಮ್ಮ.

ಶಹಾಪುರ ತಾಲ್ಲೂಕು: ನಾಯ್ಕಲ-ದ್ಯಾವಮ್ಮ, ಬೆಂಡಿ ಗುಂಬಳಿ-ದ್ಯಾವಮ್ಮ, ಅಯ್ಯಾಳ-ದ್ಯಾವಮ್ಮ, ದೋರನಳ್ಳಿ-ದ್ಯಾವಮ್ಮ, ಗೋನಾಳ-ದ್ಯಾವಮ್ಮ, ಬಾಡ್ಯಾಳ-ಮರಗಮ್ಮ, ಹಾಲಗೇರಿ-ಯಲ್ಲಮ್ಮ, ಸಗರ-ಯಲ್ಲಮ್ಮ.

ಸುರಪುರ ತಾಲ್ಲೂಕು: ದೇವಪುರ-ದ್ಯಾವಮ್ಮ, ಕಕ್ಕೇರಿ-ದ್ಯಾವಮ್ಮ, ಹುಣಸಗಿ-ದ್ಯಾವಮ್ಮ, ರಾಯನಹಳ್ಳಿ-ದ್ಯಾವಮ್ಮ ಇತ್ಯಾದಿ. *(ಸಿ.ಆರ್.ಜಿ.)*

ಗಾಳಿದೆವ್ವ: ಜನರಿಗೆ ಕೇಡುಂಟು ಮಾಡುವ ಒಂದು ಕ್ಷುದ್ರ ಶಕ್ತಿ. ಇದನ್ನು ಪಿಶಾಚಿ, ದೆವ್ವ, ಭೂತ, ಗಾಳಿಸೋಕು ಮುಂತಾದ ಹೆಸರಿನಿಂದಲೂ ಜನಪದರು ಕರೆಯುತ್ತಾರೆ. ಅಕಾಲ ಮರಣಕ್ಕೆ ತುತ್ತಾದ ಅತೃಪ್ತ ಜೀವಗಳು ದೆವ್ವ, ಪಿಶಾಚಿ, ಭೂತಗಳಾಗಿ ಅಲೆಯುತ್ತ, ಹಲವರ ಮೈ ಹೊಕ್ಕು ಅವರ ಮುಖಾಂತರ ಅತೃಪ್ತ ಆಸೆಯನ್ನು ಈಡೇರಿಸಿಕೊಂಡು ತೃಪ್ತಿಪಟ್ಟುಕೊಳ್ಳುತ್ತವೆ ಎಂಬುದು ಜನಪದ ನಂಬಿಕೆ. ಹಾಗಲ್ಲದೆ ಅನ್ಯಾಯದಿಂದ ಕೊಲೆಗೀಡಾದವರು ಕೊಲೆ ಮಾಡಿದವರ ಮೇಲೆ ಸೇಡು ತೀರಿಸಿಕೊಳ್ಳಲೆಂದೇ ದೆವ್ವವಾಗಿ ಅವರಿಗೆ ಕಾಟ ಕೊಡುತ್ತಾರೆಂದೂ, ಆಸ್ತಿ, ಪಾಸ್ತಿ, ಒಡವೆ ವಸ್ತುಗಳ ಮೇಲೆ ಅತಿಯಾದ ಆಸೆಯುಳ್ಳವರು, ಜಿಪುಣರು ಸತ್ತರೂ ಅವರ ಆತ್ಮ ಐಹಿಕ ಆಸೆ, ಅಪೇಕ್ಷೆಗಳಿಂದ ಮುಕ್ತವಾಗದೆ ಹೀಗೆ ದೆವ್ವವಾಗಿ ಅಲೆಯುತ್ತ ಕಾಟ ಕೊಡುತ್ತಾರೆಂಬುದು ನಂಬಿಕೆ. ಅಕಾಲ ಮರಣಕ್ಕೆ ತುತ್ತಾದವರ ಜೀವಗಳು ಅಗೋಚರವಾಗಿ ಇಹಲೋಕದಲ್ಲೇ ಅಲೆದಾಡುತ್ತಿದ್ದು ಕಾಲ ಪ್ರಾಪ್ತಿಯಾದಾಗ ಸ್ವರ್ಗಕ್ಕೋ, ನರಕಕ್ಕೋ ಹೋಗುತ್ತವೆಂದು ತತ್ತ್ವ ಶಾಸ್ತ್ರ ಹೇಳುತ್ತದೆ. ಇದು ವೈಜ್ಞಾನಿಕ ಸತ್ಯವೋ ಅಲ್ಲವೋ, ಆದರೂ ಅನೂಚಾನವಾಗಿ ಜನಮನದಲ್ಲಿ ಬೇರೂರಿ ಬೆಳೆದು ಬಂದಿರುವ ಅಂಶವಿದು. ನೀನು ಗಾಳಿಪಾಲಾದೆ ಎಂಬ ಬೈಗಳೂ ಗಾಳಿ ಹಿಡಿದವನ್ಹಂಗೆ, ಗಾಳಿ ಹೊಕ್ಕವನ್ಹಂಗೆ ಎಂಬ ಮಾತುಗಳೂ ಗಾಳಿದೆವ್ವದ ಅಸ್ತಿತ್ವವನ್ನು ಸೂಚಿಸುತ್ತವೆ. ಮನೋವಿಜ್ಞಾನ ಇದನ್ನು ಉನ್ಮಾದವೆಂದೂ, ಅದುಮಿಟ್ಟ ಅತೃಪ್ತ ಭಾವನೆಗಳಿಂದ ಹದಗೆಟ್ಟ ಚಿತ್ತ ಕ್ಷೋಬೆಯೆಂದೂ ಹೇಳುತ್ತಾರೆ. ಆದರೆ ಗಾಳಿದೆವ್ವ ಹಿಡಿದವರ ಮಾತುಕತೆಗಳನ್ನು ಕೇಳದವರಿಗೆ, ಕಣ್ಣಾರೆ ನೋಡಿದವರಿಗೆ ವಿಜ್ಞಾನ ಒದಗಿಸುವ ಕಾರಣಗಳಲ್ಲಿ ಅಷ್ಟಾಗಿ ನಂಬಿಕೆ ಬರುವುದಿಲ್ಲ.

ಸಾಮಾನ್ಯವಾಗಿ ಸ್ತ್ರೀಗೆ ಪುರುಷ, ಪುರುಷನಿಗೆ ಸ್ತ್ರೀ ಗಾಳಿದೆವ್ವ ಹಿಡಿಯುತ್ತದೆಂದು ಹೇಳುವುದುಂಟು, ಹುಣಿಸೆ ಮರ, ಆಲದ ಮರ, ಸ್ಮಶಾನ ಈ ದೆವ್ವದ ವಾಸಸ್ಥಾನ. ಈ ಜಾಗದಲ್ಲಿ ಮಟಮಟ ಮಧ್ಯಾಹ್ನದಲ್ಲಿ ಒಬ್ಬಾಕೆ ಇದ್ದಾಗ ಗಾಳಿದೆವ್ವ ಅವರನ್ನು ಹಿಡಿಯುತ್ತದೆ ಎಂದೂ, ಅಮವಾಸ್ಯೆ ಮತ್ತು ಹುಣ್ಣಿಮೆ ದಿವಸಗಳಲ್ಲಿ ಇದು ಜಾಸ್ತಿ ಎಂದು ತಿಳಿಯುತ್ತದೆ.

ಈ ದೆವ್ವಕ್ಕೆ ನಿಶ್ಚಿತ ರೂಪವೆಂಬುದಿಲ್ಲ, ಕುರಿ, ನಾಯಿ, ಬೆಕ್ಕು ಮುಂತಾದ ಪ್ರಾಣಿರೂಪಗಳಲ್ಲಿ ಬಂದು ವ್ಯಕ್ತಿಯ ಕಾಲಿನಲ್ಲಿ ನುಸುಳಿ ಹೋದಂತಾಗುವುರು, ಇದ್ದಕ್ಕಿಂದ್ದಂತೆ ದೊಡ್ಡದಾಗಿ ಬೆಳೆಯುವುದು, ಆ ಕ್ಷಣದಲ್ಲೆ ಮಾಯವಾಗುವುದು, ಒಂದು ರೀತಿಯ ಭಯೋತ್ಪಾದಕ ಶಬ್ದವನ್ನುಂಟು ಮಾಡುವುದು ಇಂತಹ ಬಾಹ್ಯಾಚರಣೆಗಳ ಮೂಲಕ ಮನುಷ್ಯರನ್ನು ಗಾಳಿದೆವ್ವ ಹಿಡಿಯುವುದೆಂಬುದು ನಂಬಿಕೆ. ಈ ದೆವ್ವ ಹಿಡಿದ ವ್ಯಕ್ತಿಗೆ ಆ ಸ್ಥಳದಲ್ಲೇ ಮೈ ನಡುಗಿದಂತಾಗಿ ಜ್ವರ ಬರುವುದು, ಆನಂತರ ಚೇಷ್ಟೆಗಳು ಪ್ರಾರಂಭವಾಗುವುದು. ಇದ್ದಕ್ಕಿದ್ದಂತೆ ಹುಚ್ಚನಂತೆ ಓಡಾಡುವುದು, ವಿಚಿತ್ರವಾಗಿ ಕೂಗಾಡುವುದು, ಮೈಕೈಗಳನ್ನು ಕುಣಿಸುವುದು, ನಾಲ್ಕಾರು ಮಂದಿ ಹಿಡಿದುಕೊಂಡರೂ ಬಗ್ಗದಿರುವುದು, ವಿಚಿತ್ರ ರೀತಿಯಲ್ಲಿ ವರ್ತಿಸುವುದು, ತನಗೆ ಬರದ ಭಾಷೆಯಲ್ಲಿ ನಿರರ್ಗಳವಾಗಿ ಮಾತನಾಡುವುದು ಮೊದಲಾದ ಕ್ರಿಯೆಗಳು ನಡೆಯುತ್ತವೆ. ಗಾಳಿದೆವ್ವ ಬಿಟ್ಟ ನಂತರ ಗಾಳಿ ಹಿಡಿದ ಸಂದರ್ಭದಲ್ಲಿ ತಾನು ಮಾಡಿದ ಪರಿವೆ ಆ ವ್ಯಕ್ತಿಗೆ ಇರುವುದಿಲ್ಲ ಈ ದೆವ್ವ ಸ್ವಜನರನ್ನು, ಅನ್ಯರನ್ನು ಹಿಡಿಯುತ್ತವಂತೆ. ಅವುಗಳಿಗೆ ಯಾರಾದರೊಬ್ಬರ ಆಶ್ರಯ ಬೇಕಾಗಿರುತ್ತದೆ.

ಕಣಿ ಭವಿಷ್ಯ: ಗಿಣಿ ಶಾಸ್ತ್ರದಂತೆಯೇ ಭವಿಷ್ಯ ಹೇಳುವ ಕಲೆ. ಇಲ್ಲಿ ಕಣಿ ಭವಿಷ್ಯಕಾರರು ಊರೂರು ಸುತ್ತಿ ಮನೆ ಮನೆಗೆ ತೆರಳಿ ಕಣಿ ಕೇಳ್ತಿರೆನವ್ವ ಕಣಿ' ಎಂದು ಕೂಗುತ್ತ ಕಣಿ ಭವಿಷ್ಯ ಹೇಳುತ್ತಾರೆ. ಇವರಲ್ಲಿ ಹೆಣ್ಣು ಮಕ್ಕಳೇ ಹೆಚ್ಚಿಗೆ ಇರುತ್ತಾರೆ. ಕಣಿ ಭವಿಷ್ಯ ಕೇಳಲು ಬಂದ ವ್ಯಕ್ತಿಯನ್ನು ಅವರ ಮನೆಯ ಕಟ್ಟೆಯ ಮೇಲೆ ಕುಳ್ಳರಿಸಿಕೊಂಡು ತಮ್ಮ ಕೈಚೀಲದಿಂದ ಐದು ಕವಡಿ ದಾಳಗಳನ್ನು ತೆಗೆದುಕೊಂಡು, ಅವುಗಳನ್ನು ಎರಡು ಕೈಗಳಿಂದ ಕುಲುಕಿ ಕೆಳಗೆ ಹಾಕುತ್ತಾರೆ. ಅವುಗಳಲ್ಲಿ ಚಿತ್ತ ಎಷ್ಟು, ಪಟ್ ಎಷ್ಟು ಎಂದು ಲೆಕ್ಕ ಹಾಕುತ್ತ ಅವರ ಭವಿಷ್ಯ ಹೇಳುತ್ತಾರೆ.

ಕಣಿ ಭವಿಷ್ಯ ಕಲೆಯು ಕೂಡ ಅನಾದಿಕಾಲದಿಂದ ಬಂದ ಕಲೆ. ಗಿಣಿ ಶಾಸ್ತಕಾರರು, ಕಣಿ ಭವಿಷ್ಯಕಾರರು ಹೈದ್ರಾಬಾದ ಕರ್ನಾಟಕ, ಮತ್ತು ಮಹಾರಾಷ್ಟ್ರದಲ್ಲಿ ಇಂದಿಗೂ ನಮಗೆ ನೋಡ ಸಿಗುತ್ತಾರೆ. ಇವರು ಭವಿಷ್ಯ ಶಾಸ್ತ್ರವನ್ನೇ ತಮ್ಮ ಉಪಜೀವನಕ್ಕೆ ಆಸರೆ ಮಾಡಿ-ಕೊಂಡು ಬದುಕುತ್ತಿರುತ್ತಾರೆ. ಆದರೆ ಪ್ರಾಣಿದಯಾ ಸಂಘದವರು ಯಾವುದೇ ಪ್ರಾಣಿ, ಪಕ್ಷಿಗಳನ್ನು ಬಂಧಿಸಿ, ಅವುಗಳಿಗೆ ಉಪಟಳ ಕೊಡಬಾರದು ಎಂಬ ಕಾರಣಕ್ಕೆ ಕಾನೂನು ರಚಿಸಿರುವುದರಿಂದ ಗಿಣಿ ಭವಿಷ್ಯ ಹೇಳುವ ಕಲೆಯು ನಶಿಸುವ ಸ್ಥಿತಿಯಲ್ಲಿ ಇದ್ದು ಗಿಣಿ ಭವಿಷ್ಯಕಾರರ ಭವಿಷ್ಯವೇ ಇಲ್ಲದಂತಾಗಿದೆ. *(ಕೆಬಿಸ್‌ಎನ್)*

ಗಿರಿಜಾಬಾಯಿ ರಾಠೋಡ: ಜನಪದ ಗಾಯಕಿ. ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಅಲ್ಲಾಳ ತಾಂಡಾದವರು. 22 ವಯಸ್ಸಿನವರಿರುವಾಗಲೇ ಗೀಗೀ ಪದಗಳು ಹಾಡಲು ಪ್ರಾರಂಭಿಸಿದವರು. ಗೀಗೀ ಪದಗಳಲ್ಲಿ ಹರದೇಶಿ (ತುರಾಯಿ) ನಾಗೇಶಿ (ಕಲ್ಗಿ) ಎಂದು ಎರಡು ಪ್ರಕಾರಗಳು. ನಾಗೇಶಿ ಪಂಗಡದವರು ಹೆಣ್ಣು ಹೆಚ್ಚು ಎಂದು ಹಾಡಿದರೆ ಹರದೇಶಿದವರು ಗಂಡು ಹೆಚ್ಚು ಎಂದು ಹಾಡುವರು. ಇದರಲ್ಲಿ ಗಿರಜಾಬಾಯಿ ರಾಠೋಡರವರು ನಾಗೇಶಿ ಪಂಗಡದವರು. ಇವರಿಗೆ ಪ್ರೇರಣೆ ದೊರೆತದ್ದು ಗುರುಗಳಾದ ಬಿ.ಬಿ. ಇಂಗಳಗಿ ಹಾಗೂ ಬಾಳಗೇರಿ ಅವರಿಂದ. ಇದರು ಹರದೇಶಿ-ನಾಗೇಶಿ ಪಂಗಡವಿರದಿದ್ದರೆ ಮಹಾತ್ಮರ, ಪುಣ್ಯಪುರುಷರ, ಹಾಗೂ ಐತಿಹಾಸಿಕ ವಿಷಯಗಳನ್ನೊಳಗೊಂಡ ಗೀಗೀ ಪದಗಳನ್ನು ಹಾಡುತ್ತಾರೆ.

(ಆರ್‌ವಾಯ್)

ಗೀ

ಗೀಗೀ ಪದಗಳು: ಒಂದು ಜನಪದ ಗೀತ ಸಂಪ್ರದಾಯ. ಸಾಂಸ್ಕೃತಿಕ ಅಧ್ಯಯನದಲ್ಲಿ ಜನಪದ ಸಾಹಿತ್ಯದಲ್ಲಿ ಇದಕ್ಕೆ ಅಗ್ರಸ್ಥಾನವಿದೆ. ಪ್ರಾಚೀನ ಕಾಲದಿಂದಲೂ ಬದುಕಿಕೊಂಡು ಬಂದ ಈ ಸಾಹಿತ್ಯ ಪ್ರಕಾರ ಸಂಸ್ಕೃತಿಯ ಗುಣಮೌಲ್ಯಗಳನ್ನು ತನ್ನ ಅಂತರಾಳದಲ್ಲಿ ಜೀವಂತವಾಗಿ ಸೆರೆಹಿಡಿದುಕೊಂಡು ಬಂದಿವೆ. ಗ್ರಾಮೀಣ ಸಂಸ್ಕೃತಿಯ ಸುಮನ ಇವುಗಳ ಅಂತರಂಗದಿಂದ ಹೊರಸೂಸುತ್ತಿದೆ. ಜನ ಜೀವನದ ಸೂಕ್ಷ್ಮ ಪದರುಗಳನ್ನು ಇವು ಹಿಂಜಿ ಹಿಂಜಿ ನೋಡಿವೆ. ಜನಪದರು ಇವುಗಳ ಮೂಲಕ ತಮ್ಮ ಬೌದ್ಧಿಕ ಬೆಳವಣಿಗೆಯ ಜೊತೆಗೆ ಚೇತನ ಶಕ್ತಿಯನ್ನೂ ಪಡೆದುಕೊಂಡಿದ್ದಾರೆ. ಸಾವಿರಾರು ಜನರನ್ನು ಒಂದೆಡೆ ಕೂಡಿಸಿ, ತಣಿಸಿ, ಮಂತ್ರಮುಗ್ಧರನ್ನಾಗಿ ಮಾಡುವ ಸುಂದರ ಜಾನಪದ ಸಂಗೀತ ಕಲೆಯೂ, ಕಥನಗೀತವೂ ಇವಾಗಿವೆ.

ಜನತೆಯ ತೀರ ಹತ್ತಿರದ, ವಾಸ್ತವಿಕ ಬದುಕಿನ ನಿತ್ಯ-ಸತ್ಯ ದೃಷ್ಟಾಂತಗಳೊಂದಿಗೆ ಈ ಸಂಪ್ರದಾಯದ ಹಾಡುಗಳಲ್ಲಿಯ ಲಾವಣಿಗಳು ರಚನೆಗೊಂಡಿವೆ. ಜನಪದ ಜೀವನದ ವಿವಿಧ ಮುಖಗಳ ದರ್ಶನ ಇಲ್ಲಿ ಚಿತ್ರಿತವಾಗಿದೆ. ಜನಪ್ರಿಯ ಸಾಹಿತ್ಯವೆನಿಸಿ ಸರ್ವರಿಗೂ ಅಚ್ಚುಮೆಚ್ಚಿನದಾಗಿರುವ ಗೀಗಿ ಹಾಡುಗಳು ಈಗಲೂ ಊರದೇವರ ಜಾತ್ರೆ, ಹಬ್ಬ, ಹರಿದಿನ ಮುಂತಾದ ವಿಶೇಷ ಸಂದರ್ಭಗಳಲ್ಲಿ ಕಾಣಿಸಿಕೊಳ್ಳುತ್ತವೆ. ಈ ಮೇಳಗಳು ಬಾರದ ಹೊರತು ಜಾತ್ರೆಗಳೇ ನಡೆಯುತ್ತಿರಲಿಲ್ಲ ಎನ್ನುವುದು ಇವುಗಳ ಜನಪ್ರಿಯತೆಗೆ ನಿದರ್ಶನ. ಊರವರೆಲ್ಲ ಸೇರಿ ಹಣ ಕೊಟ್ಟು ಹಾಡುಗಾರರನ್ನು ಕರೆಸಿ ಹಾಡು ಕೇಳುತ್ತ ಆನಂದ ಪಡೆಯುವರು. ಹಗಲು-ರಾತ್ರಿ ಕೂಡಿಯೇ ಇವುಗಳನ್ನು ಹಾಡುವುದುಂಟು. ಹಾಡು ಕೇಳಿದ ಜನರಲ್ಲಿ ಕುತೂಹಲ ಕೆರಳಿದಂತೆ ಹಾಡುಗಾರನಿಗೆ ಇನ್ನೂ ಹಾಡಬೇಕೆನ್ನುವ ಹುರುಪು ಸಹಜವಾಗಿ ಮೂಡುವುದು.

ಹಾಡು ಕೇಳುವವ ತನ್ನ ಆನಂದ ಪ್ರಕಟಿಸುತ್ತ ಸಿಳ್ಳು ಹೊಡೆಯುವುದು, ಚಪ್ಪಾಳೆ ತಟ್ಟುವುದು, ಮತ್ತೊಮ್ಮೆ ಹಾಡಿ ಎನ್ನುವುದರ ಜೊತೆಗೆ, ಭಕ್ಷೀಸ ಮಾಡುತ್ತ ಕಲಾಕಾರನ ಜೀವನೋಪಾಯದ ಜೊತೆಗೆ ಕಲೆಯನ್ನು ಪ್ರೋತ್ಸಾಹಿಸುವರು. ಪ್ರಾಚೀನ ಕಾಲದಲ್ಲಿ ಈ ಹಾಡುಗಳನ್ನು ರಣರಂಗದಲ್ಲಿ ಯೋಧರಿಗೆ ಹುರಿದುಂಬಿಸಲು, ದೇಶಾಭಿಮಾನ ಕುದುರಿಸಲು ಬಳಸುತ್ತಿದ್ದರಂತೆ. ವಿಜಯಾನಂದ ವಿವರ್ಧನಕ್ಕಾಗಿ ಕುಣಿಯುತ್ತ ಹಾಡುತ್ತಿದ್ದ ಲಯಪ್ರಧಾನವಾದ ರಣಗೀತೆಗಳು ಇವಾಗಿವೆ. ಇದರ ಮೇಲಿಂದ ಹಿಂದೆ ಇವುಗಳು ರಾಜಮರ್ಯಾದೆಯನ್ನೂ ಪಡೆದಿದ್ದುವು ಎನ್ನುವುದಕ್ಕೆ ನಿದರ್ಶನವೆನಿಸುತ್ತದೆ. ಮೊದ ಮೊದಲು ರಣರಂಗಕ್ಕೆ ಮೀಸಲಾದ ಹಾಡುಗಳು ಬರಬರುತ್ತಾ



ಗೀಗೀ ಪದ

ಸಮಾಜದ ವಿವಿಧ ರಂಗಗಳಲ್ಲೆಲ್ಲ ಕಾಣಿಸಿಕೊಂಡು ಸರ್ವವ್ಯಾಪಿ ಆದಂತಿವೆ. ವೀರರಸದ ಜೊತೆಗೆ ಶೃಂಗಾರ, ಹಾಸ್ಯ, ಕರುಣ ರಸಗಳೂ ಸೇರಿ ಲಾವಣಿ ಸಾಹಿತ್ಯ ಬಹುಮುಖವಾಗಿ ಬೆಳೆಯುವಂತಾಯಿತು.

ಅಲ್ಲದೆ ಸಾಮಾಜಿಕ ಬದುಕಿನ ನಿತ್ಯ ವಸ್ತುಗಳೇ ಇಲ್ಲಿನ ಹಾಡುಗಳಿಗೆ ಮೂಲಭೂತವಾಗತೊಡಗಿ ಈ ಸಾಹಿತ್ಯದ ಮೋಹಕ ಶಕ್ತಿಗೆ ಒಳಗಾಗಿ ಇವುಗಳನ್ನು ಈಗಲೂ ಕುಟುಂಬ ಯೋಜನೆ, ಹಸಿರು ಕ್ರಾಂತಿ, ಶಿಕ್ಷಣ ಪ್ರಸಾರ, 20 ಅಂಶಗಳ ಕಾರ್ಯಕ್ರಮ ಮುಂತಾದ ಸರಕಾರದ ಅಭಿವೃದ್ಧಿಯ ಪ್ರಚಾರಕಾರ್ಯಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಆಕಾಶವಾಣಿ, ದೂರದರ್ಶನ ಕೇಂದ್ರದವರೂ ಇವುಗಳ ಮೂಲಕ ಜನರಲ್ಲಿ ಪ್ರಚಾರಂದೋಲನ ಕಾರ್ಯಮಾಡುತ್ತಿದ್ದಾರೆ.

ಗೀಗೀ ಹಾಡುಗಳನ್ನು ರಚಿಸಿದವರಲ್ಲಿ ಹೆಚ್ಚಾಗಿ ಮುಸಲ್ಮಾನರು ಮತ್ತು ಹಿಂದುಳಿದವರೇ ಅಧಿಕವಾಗಿದ್ದಾರೆ. ಅವರಿಂದಲೇ ಸೃಷ್ಟಿಯಾಗಿ, ಬೆಳೆದು ಅವರ ಮಧ್ಯದಲ್ಲಿಯೇ ಉಳಿದುಕೊಂಡು ಬಂದಿವೆ. ಅದರಂತೆ ಹಾಡುಗಾರರೂ ಇದೇ ಜನಾಂಗದವರೇ ಆಗಿದ್ದಾರೆ. ಇವುಗಳ ರಚನೆಯಲ್ಲಿ ಹೆಣ್ಣುಮಕ್ಕಳು ಕವಿಗಳಾಗಿ ಕಂಡುಬರುವುದಿಲ್ಲ. ಹೆಣ್ಣು ಹೆಚ್ಚೆನ್ನುವ ಹಾಡುಗಳನ್ನು ಗಂಡಸರೇ ಬರೆದು ಹೆಣ್ಣಿನ ಮೇಲು ಕಟ್ಟಿ ಅವರೇ ಹಾಡುತ್ತಾ ಆ ವಾತಾವರಣ ಬೆಳೆಸಿಕೊಂಡು ಬಂದಿದ್ದಾರೆ. ಕವಿಗಳೂ ಕಲಾಕಾರರಾಗಿ ಹಾಡು ಹೇಳಿಕೊಂಡು ಬಂದವರು. ಹಾಡುತ್ತ ಹಾಡುತ್ತ ತನ್ನ ಗುರುವಿನ ಮಾರ್ಗದರ್ಶನದಲ್ಲಿ ತಾವೂ ಕವಿಗಳಾಗಿ ಹಾಡು ಕಲಿಸಿದ್ದುಂಟು. ವಂಶಪರಂಪರೆಯಾಗಿ ಈ ಹಾಡುಗಳನ್ನು ಕಟ್ಟುತ್ತ ಹಾಡುತ್ತ ಬಂದ ಕುಟುಂಬಗಳು ಅಲ್ಲಲ್ಲಿ ಕಾಣಸಿಗುತ್ತವೆ.

ನಾಗೇಶಿಯ ಪರವಹಿಸಿ ಮೇಳಗಳಲ್ಲಿ ಹೆಣ್ಣುಮಕ್ಕಳು ಭಾಗವಹಿಸಿದ್ದು ಇತ್ತೀಚೆಗಷ್ಟೆ. ಅವರಲ್ಲಿ ಪ್ರಮುಖವಾಗಿ ಬಬಲೇಶ್ವರದ ಬಂಗಾರೆವ್ವ, ಮಹಾಲಿಂಗಪುರದ ರಾಣವ್ವ, ಮನಿಕಟ್ಟಿ ಗಂಗವ್ವ, ಹಂದೂರ ಸೀತಾ, ಯಂಕಂಚಿ ರುಕುಮಾ ಬಾಯಿ, ತಂಬಾಕವಾಡಿ ಶಿವಮ್ಮ, ಗುಡಿಸಾರಗದ ಫಕೀರವ್ವ ಮುಂತಾದವರು. ಇವರ ಪ್ರಭಾವಕ್ಕೊಳಗಾಗಿ ಹೈದ್ರಾಬಾದ ಕರ್ನಾಟಕ ಪ್ರದೇಶದ 'ಭಟ್ಟರಕಿಯ ಗುರುಬಾಯಿ' ಎನ್ನುವ ಹರಿಜನ ಹೆಣ್ಣುಮಗಳೊಬ್ಬಳು ನಾಗೇಶಿ ಪಂಗಡಕ್ಕೆ ಮುಖ್ಯ ಹಾಡುಗಾರಳಾಗಿ ಹೊರಬರುತ್ತಾಳೆ. ಮುಂದೆ ಈ ಪಕ್ಷವನ್ನು ಬೆಳೆಸುತ್ತಾಳೆ. ಮುಂದೆ ಗುರುಬಾಯಿ ತೀರಿಕೊಂಡದ್ದರಿಂದ ಅದನ್ನು ಪುರುಷರೇ ಪಕ್ಷ ಕಟ್ಟಿ ಮುಂದುವರಿಸಿಕೊಂಡು ಬರುತ್ತಾರೆ.

ಈ ಕವಿಗಳ ಮತ್ತು ಹಾಡುಗಾರರ ವೃತ್ತಿ ಬೇರೆಯಾಗಿದ್ದರೂ, ಹವ್ಯಾಸಕ್ಕಾಗಿ ಇದನ್ನು ಬೆಳೆಸಿಕೊಂಡು ಬಂದಿದ್ದಾರೆ. ಅದರ ಜೊತೆಗೆ ಜನಪದ ಸಂಸ್ಕೃತಿಯನ್ನು ಉಳಿಸಿಕೊಂಡುಬಂದ ಹಿರಿಮೆ ಕಲಾಕಾರರದಾಗಿದೆ. ಇಲ್ಲಿನ ಕವಿಗಳೆಲ್ಲ ನಿರಕ್ಷರಿಗಳಾಗಿ ತಮ್ಮ ಪ್ರತಿಭಾಶಕ್ತಿಯಿಂದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ನೈತಿಕ, ತಾತ್ವಿಕಪರ ಹಾಡುಗಳನ್ನು ರಚಿಸಿ 'ಗೀಗೀ ಲಾವಣಿ' ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಗೀಗೀ–ಲಾವಣಿಗಳ ತವರುಮನೆಯೆಂದು ಹೆಸರಾದ ಬಿಜಾಪುರ, ಬೆಳಗಾಂವ ಜಿಲ್ಲೆಯ ಕವಿಗಳು ರಚಿಸಿದ ಹಾಡುಗಳು ಹೈದ್ರಾಬಾದ ಕರ್ನಾಟಕ ಪ್ರದೇಶದ ಜನರ ಮೇಲೆ ತುಂಬಾ ಪರಿಣಾಮ ಬೀರಿವೆ. ಜಿಲ್ಲೆಯ ಅನೇಕ ಕವಿಗಳು ಈ ಭಾಗದ ಕೆಲ ಕವಿಗಳಿಗೆ ಗುರುಗಳಾಗಿಯೂ ಕಂಗೊಳಿಸಿದ್ದಾರೆ. ಇಲ್ಲಿಯ ಜನರು ತಮ್ಮೂರಿನ ಜಾತ್ರೋತ್ಸವ ಗಳಲ್ಲಿ ಈಗಲೂ ಆ ಕಡೆಯಿಂದಲೇ ಮೇಳಗಳನ್ನು ಕರೆಯಿಸಿ ಹಾಡಿಸಿ ಖುಷಿ ಪಡುವುದುಂಟು.

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ನೂರಾರು ಜನ ಲಾವಣಿ ಕವಿಗಳು ದೊರೆಯುತ್ತಾರೆ. ಪ್ರತಿಭಾನ್ವಿತ ಲಾವಣಿ ಕವಿಗಳು ಗುಲಬರ್ಗ ಜಿಲ್ಲೆಯಲ್ಲಿ ಸಾಕಷ್ಟು ಜನರಿದ್ದಾರೆ. ಇವರು ರಚಿಸಿದ ಹಾಡುಗಳು ಬಹುಸಂಖ್ಯೆಯಲ್ಲಿದ್ದರೂ ಜನಪ್ರಿಯ ಮೂಲದಲ್ಲಿ ಉಳಿಯಬಲ್ಲ ಸತ್ವವನ್ನು ಪಡೆದ ಲಾವಣಿಗಳು ಮಾತ್ರ ಅನೇಕ ಸಲ ಬದುಕಿರುತ್ತವೆ. ಉಳಿದವು ಕಾಲದ ದವಡೆಯಲ್ಲಿ ಕರಗಿ ಹೋಗುತ್ತವೆ ಎನ್ನುವ ಮಾತು ಗಮನದಲ್ಲಿರಿಸಿಕೊಂಡು ಸಂಸ್ಕೃತಿಗೆ ಸಂಬಂಧಿಸಿದ ಹೆಚ್ಚು ಪ್ರಚಾರದಲ್ಲಿರುವ ಕರಗದೆ ಸತ್ವ ಉಳಿಸಿಕೊಂಡು ಬಂದಿರುವ ಹಾಡುಗಳನ್ನಿರಿಸಿಕೊಂಡು ಸಂಸ್ಕೃತಿಯ ಒಳನೋಟವನ್ನು ಇಲ್ಲಿ ಕಾಣಲಾಗಿದೆ.

(ಜಿ.ಪಿ.ಪಿ)

ಗು

ಗುಂಡಪ್ಪ ಫಾಳಪ್ಪ ಬೇಮಳಗಿ: ಕರ್ಬಲ ಪದಗಳಿಗೆ ದನಿ ನೀಡುವ ಕಲಾವಿದ. ಸುಮಾರು 50 ವರ್ಷಗಳಿಂದಲೂ ಕರ್ಬಲ ಪದಗಳನ್ನು ಹಾಡುತ್ತಾ ಬಂದಿರುವರು. ಕಡು ಬಡತನದಿಂದ ನಾಲ್ಕನೇ ತರಗತಿಗೇ ಓದಿಗೆ ವಿದಾಯ ಹೇಳಿದ ಇವರನ್ನು ಕರ್ಬಲ ಪದಗಳು ಕೈಬೀಸಿ ಕರೆದವು. ದಿನಸಿ ಅಂಗಡಿಗಳಲ್ಲಿ ಲೆಕ್ಕ ಪತ್ರ ಬರೆಯುತ್ತಲೇ ಇವರು ಹಾಡುಗಳಿಗೆ ದನಿಗೂಡಿಸಿದರು. ಭಜನೆ, ತತ್ವ ಪದಗಳು, ಅಲಾಯಿಕುಣಿತ, ಖವಾಲಿಗಳನ್ನು ಬಲ್ಲ ಗಂಡಪ್ಪ ಹಲವರಿಗೆ ಕರ್ಬಲ ಹಾಡುಗಳನ್ನು ಕಲಿಸಿಕೊಟ್ಟಿದ್ದಾರೆ. ಇದುವರೆವಿಗೂ ನೆನೆಗುದಿಗೆ ಬಿದ್ದಂತಹ ಮುಸ್ಲಿಂ ಜನಾಂಗದ ಜಾನಪದ ಕಲೆಗಳಿಗೆ ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಮಹತ್ವ ದೊರೆಯುತ್ತಿದೆ. ಇವರು ಕರ್ಬಲ ಹಾಡುಗಳನ್ನು ಹಾಡುತ್ತಾರೆಂದರೆ ಬೀದರ್ ಜನರಿಗೆ ಊಟ–ನಿದ್ರೆಯ ಅಗತ್ಯವಿಲ್ಲ.

(ಜಿ.ಆರ್.ಟಿ.)

ಗುರಣ್ಣ ಮಾರ್ತಾಂಡಪ್ಪ ಹಡಪದ: ಜನಪದ ವೈದ್ಯ. ಇಪ್ಪತ್ತನೆಯ ವಯಸ್ಸಿನಿಂದಲೇ ಜನಪದ ವೈದ್ಯಕೀಯ ಸೇವೆಯನ್ನು ಕೈಗೊಂಡರು. ತಂದೆ ಮಾರ್ತಾಂಡಪ್ಪನವರೇ ಇವರಿಗೆ ಗುರು. ಇವರ ವಿಶೇಷ ಎಂದರೆ ಕಣ್ಣಲ್ಲಿ ಹೂ ಬಿದ್ದರೆ ತೆಗೆಯುವುದು.

ಒಂದು ಸಲ ಇವರು ಹೂವನ್ನು ತೆಗೆದರೆ ಮತ್ತೊಮ್ಮೆ ಅದು ಕಾಣಿಸಿಕೊಳ್ಳುವುದಿಲ್ಲ ಎಂಬ ದಂತಕತೆ ಇದೆ. ಇದಲ್ಲದೆ ಗಂಡಮಾರಿ, ಗಜಕರ್ಣ ಹುಳುಕು, ಕಜ್ಜಿ ಇಂತಹ ಸೋಂಕು ರೋಗಕ್ಕೂ ತಪ್ಪಲ ಹಿಂಡಿ ಕಡಿಮೆ ಮಾಡುತ್ತಾರೆ. ಮನುಷ್ಯರಿಗೆ ಔಷಧಿಕೊಟ್ಟಂತೆ ದನಕರುಗಳಿಗೂ ಕಾಲುಬೇನೆ, ಬಾಯಿಬೇನೆ ಔಷಧಿ ಮಾಡಿ ವಾಸಿಮಾಡುತ್ತಾರೆ.

ಪ್ರತಿಫಲ ಏನನ್ನೂ ಬಯಸದೆ ದನಕರುಗಳಿಗೆ, ಜನಗಳಿಗೆ ತಪ್ಪಲ, ಭಸ್ಮಗಳ ಮೂಲಕ ಔಷಧ ಕೊಟ್ಟು ಬಡವರ ಬಂಧು ಎನ್ನಿಸಿಕೊಂಡ ಇವರು ಈ ವೃತ್ತಿಯನ್ನು ಸೇವೆ ಎಂದು ಮಾಡುತ್ತಾರೆ. ಕರ್ನಾಟಕ ಜಾನಪದ ಪ್ರಶಸ್ತಿ ಪಡೆದಿದ್ದಾರೆ.

(ಜಿ.ಆರ್.ಟಿ.)

ಗುರುನಾಥ ಕೋಟೆ: ದೊಡ್ಡಾಟದ ಕಲಾವಿದ. ಬೀದರ ಜಿಲ್ಲೆ ಔರಾದ ತಾಲ್ಲೂಕಿನ ಜಿರಗಾ ಗ್ರಾಮದವರು. ಜನಿಸಿದ್ದು 1936ರಲ್ಲಿ ತಂದೆ ಉಂಗರ ಶೆಟ್ಟಿ ತಾಯಿ ರತ್ನಮ್ಮ. ಕೇವಲ 7ನೆಯ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ ಇವರು ತಮ್ಮ 16ನೆಯ ವಯಸ್ಸಿನಲ್ಲಿಯೇ ದೊಡ್ಡಾಟವನ್ನು ಪ್ರವೇಶಿಸಿದರು. ಪೌರಾಣಿಕ ನಾಟಕ ಮತ್ತು ದೊಡ್ಡಾಟ ಕಲಾಕ್ಷೇತ್ರದಲ್ಲಿ ಬಹುದೊಡ್ಡ ಕಲಾವಿದರೆಂದು ಹೆಸರು ಗಳಿಸಿದವರು. ಕಲೆಯ ಜೊತೆಯಲ್ಲಿ ಶಾಲಾ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಸ್ವಂತದ ಕೃಷಿ ಭೂಮಿಯಿಂದ ಒಕ್ಕಲುತನ ಬೇಸಾಯ ಮಾಡಿ–ಕೊಂಡು ಉಪಜೀವನ ನಿರ್ವಹಿಸುತ್ತಿದ್ದಾರೆ.

ಪೌರಾಣಿಕ ನಾಟಕಗಳಲ್ಲಿ ಅನೇಕ ಪಾತ್ರಗಳನ್ನು ಮಾಡಿ ಜನ ಮನ್ನಣೆಗಳಿಸಿದ ಮೇಲೆ ಅಭಿನಯನವನ್ನು ಧಾರೆ ಯರೆಯಬೇಕೆಂದು ನಾಟಕಗಳ ನಿರ್ದೇಶಕರಾಗಿ, ಕೆಲಸ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗುರು ಶಿಷ್ಯರ ಪರಂಪರೆ ಯೋಜನೆಯಡಿಯಲ್ಲಿ ದೊಡ್ಡಾಟ ಪ್ರದರ್ಶನ ಮಾಡಿದ್ದಾರೆ. ಆನಂತರ ಶಿವಲಿಂಗೇಶ್ವರ ನಾಟಕ ಸಂಘವನ್ನು ಕಟ್ಟಿಕೊಂಡು ಸತತವಾಗಿ ಯುವಕರಿಗೆ ದೊಡ್ಡಾಟ ತರಬೇತಿ ನೀಡಿ. ಪ್ರದರ್ಶನೇರ್ಪಡಿಸಿದ್ದಾರೆ. ಇವರಿಗೆ ಹಲವಾರು ಸಂಘ, ಸಂಸ್ಥೆಗಳ ಸನ್ಮಾನ ದೊರಕಿದೆ. 2006ರಲ್ಲಿ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

(ಎಸ್.ಎಸ್.ವೈ.)

ಗುಳೆ ಹೋಗುವುದು: ವಲಸೆ ಹೋಗುವ ಪ್ರವೃತ್ತಿ. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ದೇಶಾಂತರ ಹೋಗುವುದು ಎಂದು ಕರೆಯಲಾಗುತ್ತದೆ. ಪಕ್ಕದ ಜಿಲ್ಲೆಯನ್ನು ಕೂಡಾ ದೂರದ ನಾಡು, ಪರದೇಶ ಎಂದು ಕರೆಯುವ ವಾಡಿಕೆ ಈ ಪ್ರದೇಶದಲ್ಲಿತ್ತು. ಸಂಪರ್ಕ ಸಾಧನಗಳು ವೆಗ್ಗಳವಾಗಿ ದೊರೆಯದಿದ್ದ ಹೊತ್ತಿನಲ್ಲಿ ಹತ್ತಿಪ್ಪತ್ತು ಹರದಾರಿ ಕೂಡಾ ನಮ್ಮವರಿಗೆ ದೂರದ ನಾಡೇ ಎನಿಸಿತ್ತು. ಆದ್ದರಿಂದ ಹೊಟ್ಟೆಪಾಡಿಗಾಗಿ ಕೆಲವು ಹರದಾರಿಗಳಷ್ಟು ದೂರ ಕ್ರಮಿಸುವುದನ್ನು ಅವರು ದೇಶಾಂತರ ಎಂದೇ ಕರೆದರು.

ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಜೀವನೋಪಾಯವನ್ನು ಅರಸಿ ಅಲೆದಾಡುವುದು ಮಾನವ ಸಮುದಾಯಗಳ ಪ್ರಾಚೀನ ಪ್ರವೃತ್ತಿಗಳಲ್ಲೊಂದಾಗಿದೆ. ಮೊದ ಮೊದಲು ಆಹಾರವನ್ನರಸಿ ಅಲೆದಾಡಿದ ಮಾನವ ಸಮುದಾಯಗಳು ಸ್ಥಿರ ಸಮುದಾಯಗಳಾಗಿ ನೆಲೆಗೊಂಡದ್ದು ತೀರ ತಡವಾಗಿ ಎಂಬುದನ್ನು ನೋಡಿದ್ದೇವೆ. ಆ ಹೊತ್ತು ಅಲೆಮಾರಿತನವು ಮಾನವರ ಅವಿಚ್ಛಿನ್ನ ಜೀವನ ವಿಧಾನವಾಗಿತ್ತು. ಆದರೆ ಇಂದಿನ ಗುಳೆ ಹೋಗುವುದು ಆಯಾ ಪ್ರದೇಶದಲ್ಲಿನ ಭೂಹೀನ ಬಡ ಕಾರ್ಮಿಕರಿಗೆ ಅನಿವಾರ್ಯದ ಪ್ರಾಣಸಂಕಟವಾಗಿ, ಅಸದಳ ನೋವಿನ ಸಂಗತಿಯಾಗಿ ಪರಿಣಮಿಸಿದೆ.

ಹೈದ್ರಾಬಾದ ಕರ್ನಾಟಕ ಪ್ರದೇಶ ಫಲವತ್ತಾದ ನೆಲ, ಸಮೃದ್ಧ ಜಲ, ತಕ್ಕಷ್ಟು ಖನಿಜ ಸಂಪತ್ತನ್ನು ಹೊಂದಿದ್ದು, ಇಲ್ಲಿನವರು ಸ್ವಾವಲಂಬಿಯಾಗಿದ್ದರು. ಕೃಷಿಕೃತ್ಯಗಳು ಸಮರ್ಪಕವಾಗಿ ನಡೆಯುತ್ತಿದ್ದು ಗ್ರಾಮಗಳು ಸ್ವಾಯತ್ತ ವ್ಯವಸ್ಥೆಯನ್ನು ಅನುಸರಿಸಿಕೊಂಡು, ಬರುತ್ತಿದ್ದ ಸಂದರ್ಭದಲ್ಲಿ ಇಲ್ಲಿನವರು ಬದುಕನ್ನು ಅರಸಿ ದೂರದ ಊರುಗಳಿಗೆ ಗುಳೆ ಹೋದದ್ದು ಕಡಿಮೆಯೇ. ಪಕ್ಕದ ಬಿಜಾಪೂರ, ಬಾಗಲಕೋಟ, ಜಿಲ್ಲೆಗಳಿಗೆ ಹೋಲಿಸಿದರೆ ಗುಲಬರ್ಗಾ, ಬೀದರ, ರಾಯಚೂರು ಸೀಮೆಯವರು ಹೊಟ್ಟೆ ಹೊರೆದುಕೊಳ್ಳಲೆಂದೇ ಪರ ಊರಿಗೆ ಹೋದದ್ದು ಕಡೆಮೆ ಎಂದೇ ಹೇಳಬೇಕು. ಆದರೆ ಇತ್ತೀಚಿನ ವರ್ಷಗಳಲ್ಲಿ ಅಸಮತೋಲನ ಅಭಿವೃದ್ಧಿ, ಪ್ರಾಕೃತಿಕ ಅವಘಡಗಳ ಕಾರಣವಾಗಿ ಇಲ್ಲಿಯೂ ಗುಳೆ ಹೋಗುತ್ತಿರುವವರ ಸಂಖ್ಯೆ ಹೆಚ್ಚಾಗಿದೆ. ಕಳೆದ ಮೂವತ್ತು ವರ್ಷಗಳ ಅವಧಿಯಲ್ಲಿ ಅಂದರೆ 1971–2001 ಸಾಲಿನ ನಡುವೆ ಈ ನಾಡಿನಲ್ಲಿ ಕಾಣಿಸಿಕೊಂಡ ಕ್ಷಾಮಗಳ ಪರಿಣಾಮವಾಗಿ ಗುಳೆ ಹೋಗುವುದು ಇಲ್ಲಿನವರಿಗೆ ತುಂಬಾ ಅನಿವಾರ್ಯವಾಗುತ್ತಿದೆ.

ಹೈದ್ರಾಬಾದ ಕರ್ನಾಟಕದ ಪ್ರತಿ ತಾಲ್ಲೂಕುಗಳು ಕನಿಷ್ಠವೆಂದರೂ ಮುವತ್ತು ವರ್ಷಗಳ ಅವಧಿಯಲ್ಲಿ ನಾಲ್ಕಾರು ಬಾರಿ ಬರಗಾಲವನ್ನು ಎದುರಿಸಿವೆ. ಬಯಲು ಭೂಮಿಯಲ್ಲಿ ಒಣ ಬೇಸಾಯದ ಮೇಲೆ ಅವಲಂಬಿಸಿರುವ ಈ ಭಾಗಕ್ಕೆ ಅನಾವೃಷ್ಟಿ ಶಾಪವಾಗಿ ಪರಿಣಮಿಸಿದೆ. ಅಷ್ಟಕ್ಕೂ ಇಲ್ಲಿ ಕೃಷಿಗೆ ಪರ್ಯಾಯವಾಗಿ ಯಾವುದೇ ಉದ್ಯಮಗಳು ಅಭಿವೃದ್ಧಿಯಾಗಿಲ್ಲ. ಬದುಕುವ ಬೇರೆ ದಾರಿ ಕಾಣದಿದ್ದಾಗ ಇಲ್ಲಿನ ಗ್ರಾಮೀಣರು ಜೀವನೋಪಾಯವನ್ನರಿಸಿ ದೂರದ ಮುಂಬೈ, ಪುಣೆ, ಸಾತಾರಾ, ಸಾಂಗ್ಲಿ, ಮೀರಜ್, ಗೋವಾ, ಬೆಂಗಳೂರು, ಹೈದ್ರಾಬಾದಗಳಿಗೆ ಗುಳೆ ಹೋಗುತ್ತಿದ್ದಾರೆ. ಸಾಮಾನ್ಯವಾಗಿ ಕೃಷಿ ಕಾರ್ಮಿಕರು, ಕುಶಲ ಕರ್ಮಿಗಳು, ಒಟ್ಟಾರೆ ದೈಹಿಕ ದುಡಿಮೆಗಾರರು ಹೊಟ್ಟೆ ಹೊರೆಯಲೆಂದು ಗುಳೆ ಹೋಗುವುದುಂಟು. ಅಲ್ಲಿ ಇವರು ಕಟ್ಟಡ ಕಾರ್ಮಿಕರಾಗಿ, ರಸ್ತೆ ಕಾಮಗಾರಿಗಳಲ್ಲಿ, ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಾರೆ.

ಗುಳೆ ಹೋಗುತ್ತಿರುವವರಲ್ಲಿ ಎರಡು ವಿಧಗಳಿವೆ. ಕೆಲವರು ಅಲ್ಪಾವಧಿಗೆ ಅಂದರೆ ಹಳ್ಳಿಗಳ ಜಮೀನುಗಳಲ್ಲಿ ಕೆಲಸವಿಲ್ಲದ್ದಾಗ ಅಂದರೆ ಬೇಸಿಗೆ ಕಾಲದಲ್ಲಿ ಆರು ತಿಂಗಳ ಮಟ್ಟಿಗೆ ಪಕ್ಕದೂರುಗಳಿಗೆ ದುಡಿಯಲು ಹೋಗುತ್ತಾರೆ. ಸುಗ್ಗಿ, ಬಿತ್ತಣಿಕೆ, ಕಳೆ–ಕಸ ತೆಗೆಯುವ ಕಾಲಕ್ಕೆ ತಮ್ಮ ಊರುಗಳಿಗೆ ಮರಳುತ್ತಾರೆ.

ಇವರು ಒಂದಷ್ಟು ಹಣ ಸಂಪಾದನೆ ಮಾಡಿಕೊಂಡು ಬಂದು ತಮ್ಮ ಸಂಸಾರಗಳನ್ನು ಒಪ್ಪ ಓರಣಗೊಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಹೀಗೆ ಅಲ್ಪಾವಧಿಗೆ ದುಡಿಯಲು ಹೋಗುವವರು ಸಾಮಾನ್ಯವಾಗಿ ತಮ್ಮ ಮನೆಯ ಮಹಿಳೆಯರು, ಮಕ್ಕಳನ್ನು ಊರಲ್ಲಿಯೇ ಬಿಟ್ಟು ಹೋಗುತ್ತಾರೆ. ತಾವು ದುಡಿದದ್ದನ್ನು ತುಂಬಾ ಕಷ್ಟಪಟ್ಟು ಮನೆಗಳಿಗೆ ಕಳಿಸುವ ಪ್ರಾಮಾಣಿಕತೆ ಮೆರೆಯುತ್ತಾರೆ. ಇನ್ನು ಕೆಲವರು ದೀರ್ಘ ಕಾಲದವರೆಗೆ ಗುಳೆ ಹೋದದ್ದು ಉಂಟು. ಇವರು ತಮ್ಮ ಹೆಂಡತಿ, ಮಕ್ಕಳು ಒಮ್ಮೊಮ್ಮೆ ವೃದ್ಧ ತಂದೆ-ತಾಯಿಯರನ್ನು ಕಟ್ಟಿಕೊಂಡು ದುಡಿಯಲು ಶಹರುಗಳಿಗೆ ಹೋಗುವುದುಂಟು. ಗಂಡ, ಹೆಂಡತಿ ಮಕ್ಕಳಾದಿಯಾಗಿ ಎಲ್ಲರೂ ದುಡಿ ಯುವುದುಂಟು. ಇವರು ವರ್ಷಕ್ಕೊಮ್ಮೆ ತಮ್ಮ ಗ್ರಾಮದೇವತೆಗಳ ಜಾತ್ರೆ, ಉತ್ಸವಾದಿಗಳಿಗೆ ಮರಳಿ ತಮ್ಮೂರಿಗೆ ಬರುವುದುಂಟು. ಅಥವಾ ಊರಿನಲ್ಲಿ ಬಂಧು-ಬಳಗದವರ ಮದುವೆ, ಇತರ ಕಾರ್ಯಕ್ರಮಗಳಿಗೆ, ಸಾವು, ನೋವುಗಳ ಸಂದರ್ಭಗಳಲ್ಲಿ ಮಾತ್ರ ಊರಿಗೆ ಬರುವುದು ಇದೆ.

ಗುಳೆಯ ಸ್ವರೂಪ ಭಿನ್ನ-ವಿಭಿನ್ನವಾಗಿವೆ. ಕೆಲವೊಮ್ಮೆ ಕೂಲಿಕಾರರ ಮನೆಯ ವಯಸ್ಸಿನ ಗಂಡಸರು ಮಾತ್ರ ಅರಕಾಲಿಕ ಅವಧಿಗೆ ದುಡಿಯಲು ಹೋದರೆ, ಕೆಲವೊಮ್ಮೆ ಗಂಡಸರೊಂದಿಗೆ ಆ ಮನೆಯ ಹೆಂಗಸರು ಮಕ್ಕಳು ಕೂಡಾ ಗುಳೆ ಹೋಗುತ್ತಾರೆ. ಒಮ್ಮೊಮ್ಮೆ ಓಣಿಯ ಎಲ್ಲ ಕಾರ್ಮಿಕರು ಒಟ್ಟಾಗಿ ಗುಂಪುಗಳೊಂದಿಗೆ ಗುಳೆ ಹೊರಡುವುದು ಇದೆ. ಕೂಲಿಕಾರರ ದಲ್ಲಾಳಿಗಳು ಹಳ್ಳಿಯ ದುಡಿಮೆಗಾರರನ್ನು ಒಟ್ಟೊಟ್ಟಿಗೆ ಸೇರಿಸಿಕೊಂಡು ಅವರಿಗೆ ಒಂದಿಷ್ಟು ಮುಂಗಡ ಹಣ ಕೊಟ್ಟು ಕರೆದುಕೊಂಡು ಹೋಗುವುದುಂಟು. ಒಂದೊಂದು ಊರಿನ ನೂರಾರು ಕಾರ್ಮಿಕರು ಶಹರದ ಕೊನೆಯಲ್ಲಿ ಒಂದೆಡೆ ಗುಡಿಸಲು ಹಾಕಿಕೊಂಡು ವಾಸಿಸುತ್ತಾರೆ. ಹೀಗೆ ನೆಲೆಸಿದ ಕಡೆ ತಮ್ಮ ಊರುಗಳ ಹೆಸರನ್ನೆ ತಾವು ನೆಲೆಸಿರುವ ಸ್ಥಾನಕ್ಕೂ ಕರೆಯುವುದುಂಟು. ಈಗ ಬೆಂಗಳೂರಿನಲ್ಲಿ ಗುಲಬರ್ಗಾ, ರಾಯಚೂರ, ಬೀದರಗಳ ಹೆಸರಿನ ಕೊಳಚೆ ಪ್ರದೇಶಗಳೇ ಆಗಿವೆ.

ಸಮರ್ಪಕ, ಮತ್ತು ನಿರಂತರ ಕೆಲಸವಿಲ್ಲದ್ದಕ್ಕಾಗಿ ದುಡಿಮೆಗಾರರು ಗುಳೆ ಹೋಗುತ್ತಿದ್ದರೆ, ಗುಳೆ ಹೋಗುತ್ತಿದ್ದುದ-ರಿಂದಲೇ ಸುಗ್ಗಿ, ಬಿತ್ತಣಿಕೆ ಸಮಯದಲ್ಲಿ ಕೃಷಿಕರಿಗೆ ಕೂಲಿಕಾರರು ಲಭ್ಯವಾಗುತ್ತಿಲ್ಲ. ಇದೊಂದು ವಿಷ ವರ್ತುಲವಾಗಿ ಪರಿಣಮಿಸಿದೆ.

ಗುಳೆ ಕಟ್ಟುವುದು: ದುಡಿಯುವ ಕೈಗಳಿಗೆ ವರ್ಷದ 365 ದಿನಗಳಿಗೆ ಕೆಲಸ ದೊರೆಯುವುದಿಲ್ಲ. ಆದ್ದರಿಂದ ಬಿತ್ತನೆ, ಕಳೆ-ಕಸ ಮತ್ತು ರಾಶಿ ಕಾಲದಲ್ಲಿ ಜಮೀನ್ದಾರರ ಹೊಲದಲ್ಲಿ ದುಡಿಯುವ ಕೂಲಿಕಾರರು ಈ ಕೆಲಸಗಳು ಮುಗಿದೊಡನೆ ಬೇಸಿಗೆ ಕಾಲದಲ್ಲಿ ಅರೆಕಾಲಿಕ ಅವಧಿಗಾಗಿ ದುಡಿಯಲು ಶಹರುಗಳತ್ತ ತೆರಳುತ್ತಾರೆ. ವಿಶೇಷವಾಗಿ ಮನೆಯ ತರುಣ ಕೆಲಸವನ್ನರಸಿ ಮುಂಬೈ, ಪುಣೆ, ಗೋವಾ, ಬೆಂಗಳೂರುಗಳಿಗೆ ಹೋಗುವುದುಂಟು. ಆದರೆ ಕೆಲವೊಮ್ಮೆ ತೀವ್ರ ಅನಾವೃಷ್ಟಿ, ನೆರೆ ಹಾವಳಿ ಮುಂತಾದ ಅವಘಡಗಳು ಬಂದೆರಗಿದಾಗ ಮನೆಯ ಗಂಡಸರೊಂದಿಗೆ ಮಹಿಳೆಯರು ಮತ್ತು ಮಕ್ಕಳಾದಿಯಾಗಿ ಹಳ್ಳಿಗೆ ಹಳ್ಳಿಯೇ ಗುಳೆ ಹೋಗುವುದುಂಟು. ಹೀಗೆ ಗುಳೆ ಹೊರಡುವಾಗ ಅವರು ತಮ್ಮ ಸಾಮಾನು-ಸರಂಜಾಮು ಕಟ್ಟಿಕೊಂಡು ಹೊರಡುತ್ತಾರೆ. ಇದಕ್ಕೆ ಕಟ್ಟುವುದು ಎಂದು ಕರೆಯಲಾಗುತ್ತದೆ.

ಗುಳೆ ಕಟ್ಟುವುದು ಕೂಡ ಅವರಿಗೆ ಒಂದು ಕಲಾತ್ಮಕ ಸಂಕಟವಾದಂತಿದೆ. ಒಂದು ಕಡೆ ತಮ್ಮ ನೆಲ ಬಿಟ್ಟು ಪರಸ್ಥಳಕ್ಕೆ ಹೋಗಬೇಕಲ್ಲ ಎಂಬ ತಳಕಮಳ ಎದುರಾದರೆ ಇನ್ನೊಂದೆಡೆ ಏನು ಒಯ್ಯಬೇಕು? ಹೇಗೆ ಗಂಟು-ಮೂಟೆ ಕಟ್ಟಬೇಕೆಂಬ ಬಡಿದಾಟ ಎದಿರಾಗುತ್ತದೆ. ತಮಗೆ ಬೇಕಾಗುವ ಪಾತ್ರೆ- ಪಗಡೆ, ಅಲ್ಪ ಸ್ವಲ್ಪ ಕಾಳು-ಕಡಿ, ಅಳಿದುಳಿದ ಬಟ್ಟೆ, ಅರಿವಿ, ಅಂಚಡಿ ಮತ್ತು ಹಾಸಲು-ಹೊದೆಯಲು ಚಿತ್ರಚಿತ್ತಾರದ ಕೌದಿ. ಅದರೊಟ್ಟಿಗೆ ಮನೆಯ ದೇವರ ಫೋಟೋ, ಮೂರ್ತಿಗಳು, ವಿಭೂತಿ, ಕುಂಕುಮ ಏನೆಲ್ಲವನ್ನು ಜೋಡಿಸಿ ಕಟ್ಟಿಕೊಳ್ಳುತ್ತಾರೆ. ವಿಶೇಷವಾಗಿ ಗುಳೆ ಹೋಗುವವರಲ್ಲಿ ಬಡ, ಹಿಂದುಳಿದ, ದಲಿತ, ಅಲ್ಪ ಸಂಖ್ಯಾತ ಸಮುದಾಯಗಳೇ ಹೆಚ್ಚಾಗಿರುವುದರಿಂದ ಅವರು ತಮ್ಮ ಸಾಂಸ್ಕೃತಿಕ ನೆಲೆ-ನಂಬಿಕೆ, ಆಚರಣೆ, ಸಂಪ್ರದಾಯಗಳನ್ನು ತಮ್ಮೊಟ್ಟಿಗೆ ಒಯ್ಯುವುದುಂಟು.

ಫೆಬ್ರುವರಿ-ಮಾರ್ಚ್ ತಿಂಗಳುಗಳಲ್ಲಿ ಅಂದರೆ ಯುಗಾದಿ ಮುಗಿದೊಡನೆ ಯಾದಗಿರಿ, ಗುಲಬರ್ಗಾ, ರಾಯಚೂರು ರೈಲು ನಿಲ್ದಾಣಗಳಲ್ಲಿ ರಾಶಿ, ರಾಶಿಯಾಗಿ ಗುಳೆ ಹೋಗುವವರನ್ನು ಕಾಣಬಹುದು. ಹರೆಯದ ಕಟ್ಟುಮಸ್ತಾದ ದುಡಿಯುವ ಗಂಡು-ಹೆಣ್ಣು ಮಕ್ಕಳು ಮರಿಗಳೊಂದಿಗೆ ಗಂಟು-ಗಟೋರಾ ಕಟ್ಟಿ ಕೊಂಡು ಹೊರಟಿರುತ್ತಾರೆ. ಅವರ ಗಂಟುಗಳಲ್ಲಿ ಜೀವನಾವಶ್ಯಕ ವಸ್ತುಗಳೆಲ್ಲಾ ಒಂದೇ, ಎರಡೇ ಹತ್ತು ಹಲವು ಬಗೆಯ ಸಾಮಾನುಗಳು ಸೇರಿಕೊಂಡಿರುತ್ತವೆ. ವಾರಕ್ಕಾಗುವಷ್ಟು ಜೋಳದ, ಸಜ್ಜೆಯ ರೊಟ್ಟಿ, ಬಾಳಕ ಹಾಕಿದ ಕುಸುಬಿ, ಕಡ್ಲಿ ಪಲ್ಲೆ, ಹುರಿದ ಮೆಣಸಿನಕಾಯಿ, ಹುಳಬಾನ, ಅಗಸಿಹಿಂಡಿ ಹೀಗೆ ಶುದ್ಧ ಸ್ಥಳೀಯ ಆಹಾರ ಪದಾರ್ಥಗಳು ಅವರ ಮೂಟೆಯಲ್ಲಿ ಇರುತ್ತವೆ. ಅದೊಂದು ನಮೂನಿ ಸಂಚಾರಿ ಸಂಸಾರ ಅವರದು.

(ಎಂ.ಬಿ.)

ಗೂ

ಗೂಳಿ ಬಿಡುವುದು: ದೇವರ ಹೆಸರಿನ ಮೇಲೆ ಹೋರಿಯನ್ನು ಬಿಡುವುದು ಮನೆಯಲ್ಲಿ ದನ, ಕರುಗಳು ಹುಟ್ಟಿ, ಹುಟ್ಟಿ ಸಾಯುತ್ತಿದ್ದರೆ, ಅಥವಾ ಯಾವುದಾದರೂ ಕೆಲಸ–ಕಾರ್ಯಗಳಿಗಾಗಿ ಹರಕೆ ಕಟ್ಟಿಕೊಂಡಿದ್ದರೆ ಅಂಥವರು ತಮ್ಮ ಮನೆಯಲ್ಲಿ ಹುಟ್ಟುವ ಗಂಡುದನ (ಹೋರಿ)ವನ್ನು ದೇವರ ಗುಡಿ, ಮಠ, ಸಂಸ್ಥಾನಗಳಿಗೆ ಬಿಡುವುದುಂಟು. ಕೆಲವೊಮ್ಮೆ ಆಕಳನ್ನು ಸಹಿತ ವಿಶೇಷವಾಗಿ ಅದು ಗರ್ಭಕಟ್ಟಿಕೊಂಡಾಗ, ಇಲ್ಲವೆ ಹಸುವನ್ನು ಈದಾಗ ಹರಕೆ ಕಟ್ಟಿಕೊಂಡ ದೇವರಿಗೆ ಬಿಡುವುದುಂಟು. ಆಕಳು ದೇವರಿಗೆ ಬಿಟ್ಟರೆ ಅದಕ್ಕೆ 'ಕಪಲಿ' ಎಂದು ಕರೆದರೆ ಹೋರಿಯನ್ನು ದೇವರಿಗೆಂದು ಬಿಟ್ಟರೆ ಅದಕ್ಕೆ 'ಗೂಳಿ' ಎಂದು ಕರೆಯುತ್ತಾರೆ.

ಹೀಗೆ ಬಿಟ್ಟ ಗೂಳಿಯನ್ನು ಯಾರೂ ಕೃಷಿ ಕೃತ್ಯಗಳಿಗೆ ಬಳಸುವುದಿಲ್ಲ. ಇವುಗಳನ್ನು 'ಸಾಯಕೀ' ದನಗಳೆಂದು ಕರೆಯುತ್ತಾರೆ. ಹೆಗಲು ಹೂಡುವುದಿಲ್ಲವಾದ್ದರಿಂದ ಈ ದನಗಳು ಮನಬಂದಂತೆ ಕಂಡಲ್ಲಿ ತಿರುಗಿ, ಸಿಕ್ಕದ್ದನ್ನು ತಿಂದು ಕೊಬ್ಬಿರುತ್ತವೆ.

ಈ ಗೂಳಿಗಳನ್ನು ಕಟ್ಟಿ ಯಾರೂ ಮೇವು ಹಾಕುವಂತಿಲ್ಲವಾದ್ದರಿಂದ ಇವು ಕಂಡವರ ಹೊಲ–ಗದ್ದೆಗಳಿಗೆ ನುಗ್ಗಿ ಮೇಯ್ದರೂ ಯಾರೂ ಶಿಕ್ಷಿಸುವಂತಿಲ್ಲ. ಏಕೆಂದರೆ ಇವು ದೇವರ ದನಗಳು. ಹಳ್ಳಿಗಳ ಭಾವುಕ ಭಕ್ತರಿಗೆ ಇಂಥ ದನಗಳಿಗೆ ಒಂದುರೀತಿಯ ಭಯ–ಭಕ್ತಿ ಇರುವುದುಂಟು. ತಮ್ಮ ಮನೆಯ ಮುಂದೆ ಗೂಳಿಗಳು ಬಂದಾಗ ಗ್ರಾಮಸ್ಥರು ಎರಡು ಸೂಡು ಕಣಕಿ (ಜೋಳದ ದಂಟು) ಮೇವು, ಅಥವಾ ದಪ್ಪನೆ ರೊಟ್ಟಿಯೊ ತಿನಿಸುವುದುಂಟು. ಆಕಳುಗಳಂತೆ ಇವುಗಳನ್ನು ಮೈ ಮುಟ್ಟಿ ನಮಸ್ಕರಿಸುವುಂತಿಲ್ಲವಾದರೂ ದೂರದಿಂದಲೇ ಕೈಮು–ಗಿಯುವವರಿಗೆ ಕಡಿಮೆ ಇಲ್ಲ.

ವಿಶೇಷವಾಗಿ ಕಲಬುರ್ಗಿಯ ಶರಣಬಸವೇಶ್ವರ, ಹುಮನಾಬಾದಿನ ವೀರಭದ್ರೇಶ್ವರ, ಬೀದರಿನ ಪಾಪನಾಶ, ರಾಯಚೂರಿನ ಸೂಗೂರೇಶ್ವರನಿಗೆ ಗೂಳಿಗಳನ್ನು ಬಿಡುವ ವಾಡಿಕೆ ಇದೆ. ಪ್ರತಿಯೊಂದು ಹಳ್ಳಿಗಳಲ್ಲೂ ಆಯಾ ಭಾಗದ ಪ್ರಭಾವಿ ದೇವರುಗಳಿಗೆ ಗೂಳಿ ಬಿಡುವ ಪದ್ಧತಿ ಕಂಡು ಬರುತ್ತದೆ. ಎತ್ತನ್ನು ಬಸವ ಎಂದು ಕರೆಯುವಂತೆ ದೇವರಿಗೆ ಬಿಟ್ಟ ದೇವದಾಸಿಯರನ್ನು "ಬಸವಿ" ಎಂದು ಕರೆಯುವುದುಂಟು. ಇವು ಸಾಯುವವರೆಗೆ ಯಾರ ಅಂಕೆಗೂ ಸಿಗದೆ, ಎತ್ತಾಗಿ ದುಡಿಯದೆ ಮಸ್ತ ತಿಂದು ತಿರುಗುತ್ತವೆ. ಕೊಬ್ಬಿದ ಈ ಗೂಳಿಗಳು ಡುರಕಿ ಹೊಡೆದರೆ ಒಮ್ಮೊಮ್ಮೆ ಹಳ್ಳಿಗೆ ಹಳ್ಳಿಯೇ ಅನುರಣಿಸುವುದುಂಟು.

ಸಹಜ ಸಾವು ಬಂದು ಸಾಯುವವರೆಗೆ ಇಂಥ ದನಗಳನ್ನು ಊರವರು ಭಕ್ತಿಯಿಂದ ಕಾಪಾಡಿಕೊಂಡು ಬರುತ್ತಾರೆ. ಹೀಗೆ ಸತ್ತ ಗೂಳಿಗಳ ನೆನಪಿಗಾಗಿಯೇ ದೇವಸ್ಥಾನಗಳನ್ನು ಕಟ್ಟಿಸಿದ ಉದಾಹರಣೆಗಳು ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಇಲ್ಲ. ಒಟ್ಟಾರೆ ಕೃಷಿ ಕೃತ್ಯಗಳಲ್ಲಿ ಎತ್ತುಗಳ ಬಳಕೆ ತುಂಬಾ ಕಡಿಮೆಯಾಗುತ್ತಿರುವ ಈ ಹೊತ್ತಿನಲ್ಲಿ ಗೂಳಿ ಬಿಡುವ ಪದ್ಧತಿಯು ಅನಿವಾರ್ಯವಾಗಿ ಮುಂದುವರೆದುಕೊಂಡು ಬರುತ್ತಿದೆ. ದೇವರ ಹೆಸರಿನ ಮೇಲೆ ಗೂಳಿ ಬಿಡುವುದರಿಂದ ತಮ್ಮ ಮನೆಯ ದನಗಳು ಬದುಕುತ್ತವೆ. ತಮ್ಮ ಮನೆಯ ಒಕ್ಕಲುತನವು ಊರ್ಜಿತವಾಗುತ್ತದೆ. ಬಂದ ಕಂಟಕಗಳು ಬಯಲಾಗುತ್ತವೆ ಎಂಬುದು ಜನಪದರ ನಂಬಿಕೆ. *(ಎಂ.ಬಿ.)*

ಗೊ

ಗೊಂಡ: ಭಾರತದ ಒಂದು ಬುಡಕಟ್ಟು. ವಿಂಧ್ಯ ಸಾತಪುರ ಪರ್ವತ ಶ್ರೇಣಿಯಿಂದ ಗೋದಾವರಿ ಜಲಾನಯನ ಭೂ ಪ್ರದೇಶದವರೆಗೆ, ಉತ್ತರ ಪ್ರದೇಶ ಮತ್ತು ಬಿಹಾರ ದಿಂದ ಆಂಧ್ರ ಪ್ರದೇಶ, ಕರ್ನಾಟಕದವರೆಗೆ ಮತ್ತು ಮಹಾರಾಷ್ಟ್ರದಿಂದ ಓರಿಸ್ಸಾದವರೆಗೆ ಇವರು ಪಸರಿಸಿಕೊಂಡಿದ್ದಾರೆ. ಇವರ ಮಾತೃ ಭಾಷೆ ಗೊಂಡಿ. ಅಲ್ಲದೆ ಹಿಂದಿ, ಮರಾಠಿ, ಕನ್ನಡ, ತೆಲುಗು, ಇತ್ಯಾದಿ ಪ್ರಾದೇ ಶಿಕ ಭಾಷೆಗಳನ್ನು ಬಳಸು ವರು. ಗೊಂಡ ವಾನಾ ಇವರ ಹೃದಯ ಸ್ಥಾನ ವಾಗಿರುವುದು. ಇವರಲ್ಲಿ 60ಕ್ಕೂ ಹೆಚ್ಚಿನ ಒಳ ಪಂಗಡಗಳಿವೆ.

ಬೀದರ ಜಿಲ್ಲೆಯ ಗೊಂಡರು ಪಶುಪಾಲಕರು. ಕುರಿ ಹಾಗೂ ದನಗಳ ಪಾಲನೆಯಿಂದಾಗಿ ಇವರಿಗೆ ಕುರುಬ ಮತ್ತು ದ(ಧ)ನಗರ ಎಂತಲೂ ಕರೆಯುವುದುಂಟು. ಆಂಧ್ರಪ್ರದೇಶ ಹಾಗೂ ಮಧ್ಯಪ್ರದೇಶದ ಗೊಂಡರಿಗೂ ಕಸುಬಾಧಾರಿತ ಪದಗಳು ಬಳಕೆಯಾಗುವುವು. ಉದಾ: ಕೋಯ್ತರ ಗೊಂಡ (ಕುರುಬ), ಗೋವಾರಿಗೊಂಡ (ದನ ಗಾರ), ರಾಜಗೊಂಡ, ಇತ್ಯಾದಿ ಬೀದರಿನ ಗೊಂಡರಲ್ಲಿ ಈರಕಾರ, ವಾರು. ವಗ್ಯ, ಕರಗಾರ, ಘುಲೇಕರ, ಬಿರಾದಾರ, ಮೇತ್ರಿ, ಶರಗಾರ ಎಂಬ ಇತ್ಯಾದಿ ಪ್ರಬೇಧಗಳು ಇರುವವು. ಇವು ಕಸಬು ಹಾಗೂ ಧಾರ್ಮಿಕ ಆಚರಣೆ ಗಳನ್ನು ಪ್ರತಿನಿಧಿಸುವವು. ಇವ ರಲ್ಲಿ ಶೇ. 99ರಷ್ಟು ಉಣ್ಣೆ ಕಂಕಣ, ಇವರ ಲ್ಲಿಯ ಬೆಡಗುಗಳು ಮಾಯ



ಗೊಂಡ

ಆಗಿವೆ. ಇವರು ಖಂಡೋಬ, ಬೀರಗೊಂಡ, ಮಾಳಗೊಂಡ, ಹಿರೋಡ್ಯ, ಎಲ್ಲಮ್ಮ, ಲಕ್ಷ್ಮಿ ಇತ್ಯಾದಿ ದೈವಗಳನ್ನು ಪೂಜಿಸುವರು. ಇವರಲ್ಲಿ ಸತ್ತವರನ್ನು ಹೂಳುವ ಮತ್ತು ಸೂತಕಾಚರಿಸುವ ಸಂಪ್ರದಾಯವಿದೆ.

ಗೊಂಡರು ಸಾಂಪ್ರದಾಯಿಕ ಅಲೆಮಾರಿ ಪಶು ಪಾಲನೆಯಿಂದ ವಿಮುಖರಾಗುತ್ತ ಕೃಷಿ ಕೂಲಿಗಳಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಬೃಹತ್ ಕೈಗಾರಿಕೆಗಳಿಂದಾಗಿ ಗೊಂಡರ ಗೃಹ ಕೈಗಾರಿಕೆಯಾಗಿ ಕಂಬಳಿ ನೇಯ್ಗೆ ನೆಲಕಚ್ಚಿದೆ. ಗ್ರಾಮೀಣ ಗುಡ್ಡಗಾಡುಗಳಲ್ಲಿ ಇಂದಿಗೂ ಗೊಂಡರಲ್ಲಿ ಅಧಿಕ ಪಶುಪಾಲನೆ ಕಂಡುಬರುತ್ತದೆ.

ಕರ್ನಾಟಕದಲ್ಲಿ ಹಿಂದೆ ಗೊಂಡರು ಅಧಿಕ ಸಂಖ್ಯೆಯಲ್ಲಿದ್ದು ಕಾಲಾಂತರದಲ್ಲಿ ಸಂಸ್ಕೃತೀಕರಣದ ಪ್ರಭಾವಕೊಳ್ಳಗಾಗಿ ಕಸುಬುಗಳ ಆಯ್ಕೆಯ ಹಿನ್ನೆಲೆಯಲ್ಲಿ ಕುರುಬ, ಕೂಡು ಒಕ್ಕಲಿಗ, ಲಾಳಗೊಂಡ, ನೊಳಂಬ, ಗೌಡ ಅಥವಾ ಒಕ್ಕಲಿಗರಾಗಿ ಗುರುತಿಸಿಕೊಂಡು ಸ್ವತಂತ್ರ ಜಾತಿಗಳಾಗಿರುವ ಸಾಧ್ಯತೆಗಳಿವೆ. ಕಾರಣ ಕರ್ನಾಟಕದಲ್ಲಿ ಸುಮಾರು 300ಕ್ಕೂ ಹೆಚ್ಚಿನ ನೆಲೆಗಳ ಹೆಸರು ಗೊಂಡ, ರಾಜಗೊಂಡ, ಕುರುಬಗೊಂಡ, ಲಾಲಗೊಂಡ ಇತ್ಯಾದಿ ಸಮುದಾಯ ಮೂಲದ ಸ್ಥಳನಾಮಗಳನ್ನು ಕಾಣಬಹುದು. *(ಕೆ.ಎಂ.ಎಂ.)*

ಗೊಂದಲ: ದೈವಿ ಆರಾಧನೆ ಹೆಸರಲ್ಲಿ ನಡೆಯುವ ಒಂದು ಕ್ರಿಯೆ. ಅಂಬಾಭವಾನಿ ಆರಾಧನೆಗೆ ಪ್ರಾರ್ಥಿಸುವ ಪದ್ಧತಿ. ಗೊಂದಲ ಹಾಕುವ ಹಾಡುಗಳು ಶಿವ-ಶಕ್ತಿಯರ ಅವತಾರ ಮಹಾತ್ಮೆಗಳನ್ನು ತಿಳಿಸುವಂತಹವುಗಳಾಗಿವೆ. 'ಅಂಬಾಭವಾನಿ' 'ಮಹಾಲಕ್ಷ್ಮಿ' ಮೂಕಾಂಬಿಕಾ ಚಂದ್ರಗುತ್ತಿ ಗುತ್ತೆವ್ವ, ಮಹಾಕಾಳಿ, ಚಂದ್ರಲಾ ಪರಮೇಶ್ವರಿ, ಎಲ್ಲಮ್ಮ ಮತ್ತು ಮಾಪುರತಾಯಿ ಮುಂತಾದ ದೇವತೆಗಳ ಹೆಸರಿನ್ನು ಸ್ಮರಿಸಿ ಪ್ರಾರ್ಥಿಸುವ ಹಾಡನ್ನು ಹಾಡುತ್ತಾರೆ.

ಶಕ್ತಿಯ ಉಪಾಸಕರಾದ ಗೊಂದಲಿಗರು ದೈವೀ ಆರಾಧನೆಗಾಗಿ ಯಾವ ನಿರ್ದಿಷ್ಟ ಕ್ಷೇತ್ರಕ್ಕೂ ಸೀಮಿತರಾಗಿಲ್ಲ. ಹಾಗಾಗಿ ಶಕ್ತಿ ಉಪಾಸನೆಯ ಮಟ್ಟಿಗೆ ಶಕ್ತಿ ದೇವತೆಯಾಗಿರುವ ಅಂಬಾಭವಾನಿಯನ್ನು ಹೆಚ್ಚಾಗಿ ಪೂಜಿಸುತ್ತಾರೆ. ಗೊಂದಲಿಗರು ತಾವು ವಾಸಿಸುವ ಸ್ಥಳಕ್ಕೆ ಸಮೀಪವಾಗಿರುವ ಶಕ್ತಿ ದೇವತೆಗಳನ್ನು ಆರಾಧಿಸುವುದುಂಟು. ಪ್ರತಿ ಮಂಗಳವಾರ, ಶುಕ್ರವಾರ ಮತ್ತು ಅಮವಾಸ್ಯೆಯ ದಿನ ಭಕ್ತಿಯಿಂದ ಪೂಜೆ ಸಲ್ಲಿಸುವರು. ನವರಾತ್ರಿಯಲ್ಲಿ ಈ ಪೂಜೆ ಇನ್ನೂ ವೈಭವಕ್ಕೇರುವುದು ಶಕ್ತಿಯ ಮಹಿಮೆಯನ್ನು ಹೇಳುವಾಗ ಗೊಂದಲಿಗರು ಭಕ್ತಿ ಪರವಶರಾಗುತ್ತಾರೆ.



ಗೊಂದಲ

ಮದುವೆಗೆ ಮುಂಚಿತವಾಗಿಯೇ ತಮ್ಮ ಮನೆಯ ಶಕ್ತಿ ದೇವತೆಯಾಗಿರುವ ಅಂಬಾಭವಾನಿಯ ಸ್ಮರಣೆಯಲ್ಲಿ ಇಡೀ ರಾತ್ರಿ ಜಾಗರಣೆ ನಡೆಸುತ್ತಾರೆ. ಈ ಸಂದರ್ಭದಲ್ಲಿ ದೇವಿಯ ಹೆಸರಲ್ಲಿ ಹಾಡಿ ದೇವಿಯನ್ನು ಹೊಗಳಿ ದೇವ-ದೇವತೆಗಳ ಕಥೆಗಳನ್ನು ಹಾಡುವ ಮೂಲಕ ದೇವಿಯನ್ನು ಪೂಜಿಸುವ ಕ್ರಿಯೆಯೆ 'ಗೊಂದಲ'ವಾಗಿದೆ.

ಗೊಂದಲ ಹಾಕುವುದು: ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮುಂತಾದವರೆಲ್ಲರೂ ತಮ್ಮ ತಮ್ಮ ಮನೆಗಳಲ್ಲಿ 'ಮದುವೆ ಮುಂಜಿವಿ ಮೊದಲಾದ ಶುಭ ಕಾರ್ಯಗಳು ಏರ್ಪಟ್ಟಾಗ, ಕಾರ್ಯಕ್ರಮದ ಪ್ರಾರಂಭದಲ್ಲಾಗಲೀ ಕಾರ್ಯಸಮಾಪ್ತಿ ಯಲ್ಲಾಗಲೀ ದೇವಿಯ ಗೊಂದಲ ಹಾಕುವ ಸಂಪ್ರದಾಯ ನಡೆದುಕೊಂಡು ಬಂದಿದೆ. ಈ ಸಂಪ್ರದಾಯ ರಾತ್ರಿ ಸಮಯದಲ್ಲಿ ನಡೆಸುವರು. ತಳಿರು-ತೋರ-ಣಗಳ ಮಂಟಪದಲ್ಲಿ ರಂಗಹೊಯ್ದು ದೇವಿಯ ಕಲಶವನ್ನು ಪ್ರತಿಷ್ಠಾಪನೆ ಮಾಡುವರು. ಅಂದು ಇಡೀ ರಾತ್ರಿ ಜಾಗರಣೆ ಮಾಡಬೇಕಾಗುವುದು.

ಗೊಂದಲ ಹಾಕಿಸುವವನಿಂದ ಆಮಂತ್ರಣ ಸ್ವೀಕರಿಸಿದ ಗೊಂದಲಿಗರು, ಅವರ ಮನೆ ಜಗಲಿಯ ಮೇಲೆ ಕವಡಿ ಸರ ಹಾಗೂ ಚಿಕ್ಕ ತುಂತುಣಿ ಇಟ್ಟು ಬರುತ್ತಾರೆ. ಗೊಂದಲ ರಾತ್ರಿ, ಚೌರಂಗ ರಚನೆ, ಕಲಶ ಸ್ಥಾಪನೆ ನಡೆಯುತ್ತದೆ. ಈ ಸಮಾರಂಭಕ್ಕೆ ಗೊಂದಲಿಗನ ಹೇಳಿಕೆಯಂತೆ ಸಾಧನ ಸಾಹಿತ್ಯಗಳುಬೇಕು. ಯಾವುದೇ ಒಂದು ವಸ್ತುವೂ ಐದಕ್ಕಿಂತ ಕಡಿಮೆ ಇರಕೂಡದು. ಬೆಳ್ಳಂಬೆಳಗು ಕಲಶದ ಸುತ್ತಲೂ ದೀವಟಿಗೆ ಉರಿಯುತ್ತಿರಬೇಕು. ಈ ದೀವಟಿಗೆಗೆ ಎಣ್ಣೆ ಹಾಕುವವನನ್ನು "ದೀವಟಿಗೆಯ ಮಾಮಾ" ಎಂದು ಕರೆಯುತ್ತಾರೆ. ದೇವಿ ಪೂಜೆಯ ಪ್ರಾರಂಭದಿಂದ ಮಂಗಲ ವಾಗುವವರೆಗೂ ಗೊಂದಲಿಗನು ದೇವಿಯ ಮಹಾತ್ಮೆಗಳನ್ನು ಬಣ್ಣಿಸುವನು. ಆರಾಧನೆಯಲ್ಲಿ ಗೊಂದಲಿಗನಿಗೆ ಆಗ್ರಸ್ಥಾನ, ಜನರು ರಾತ್ರಿಯೆಲ್ಲ ಭಕ್ತಿಯಿಂದ ಪೂಜೆಯನ್ನು ನೋಡುತ್ತ ಗೀತೆಗಳನ್ನು ಕೇಳುತ್ತ ಕೂಡ್ರುವರು.

ಪರಶುರಾಮನಿಗೂ ಎಲ್ಲಮ್ಮನಿಗೂ ನಡೆದ ಸಂವಾದದ ಗೀತೆಯನ್ನು ಹಾಡುವರು. ತಿನ್ನುವ ವಸ್ತು ಎಲ್ಲವೂ ಎಂಜಲು, ಮೀಸಲಕ್ಕೆ ಯೋಗ್ಯವಲ್ಲ. 'ತನಗೆ ಭಕ್ತಿಯೇ ಮೀಸಲು' ಎಂಬ ಎಲ್ಲಮ್ಮನ ಬೇಡಿಕೆಯ ಸಂದರ್ಭ 'ಗೊಂದಲ ಹಾಕುವುದು' ಎನ್ನುವ ಪ್ರಸಂಗವನ್ನು ಗೊಂದಲಿಗರು ಬಹು ಮಾರ್ಮಿಕವಾಗಿ ವಿವರಿಸುವರು. ಇದರಲ್ಲಿ ನಾಟಕೀಯ ತಂತ್ರ ಮೋಹಕವಾದುದು.

ಗೊಂದಲ ಹಾಕುವ ಪ್ರಸಂಗದ ಕಥೆ ಪದ್ಯ ರೂಪದಿಂದ ಪ್ರಾರಂಭವಾಗಿ ಗದ್ಯ ರೂಪ ತಾಳಿ, ತಾಳ ಬದ್ಧವಾಗಿ ಹಾಡುತ್ತಾರೆ. ಹೀಗೆ ಗೊಂದಲ ಹಾಕುವ ಪ್ರಸಂಗವನ್ನು ಜನಪದ ಹಾಡನ್ನಾಗಿ

ಮಾಡಿ, ಜನರ ಮನಸ್ಸನ್ನು ಆಧ್ಯಾತ್ಮದ ಕಡೆಗೂ ಹರಿಸುತ್ತಾರೆ. ಜನಮನ ತಿದ್ದುವ ಕಾರ್ಯ ಮಾಡುತ್ತಾರೆ. ಸೂರ್ಯೋದಯಕ್ಕೆ ಈ ಪ್ರಸಂಗ ಕೊನೆಗೊಂಡ ಬಳಿಕ ಮಂಗಳಾರುತಿ ಹಾಡುಗಳನ್ನು ಹಾಡಿ ಗೊಂದಲ ಕಾರ್ಯ ಕ್ರಮವನ್ನು ಕೊನೆಗೊಳಿಸುವರು. *(ಎಚ್.ಡಿ.)*

ಗೊಂದಲಿಗರ ಆಟ: 'ನಂದಗೋಪಾಲ' ಇದು ಗೊಂದಲಿಗರ ಆಟ. ಖೇಳಗಿಯ ಪೀರಪ್ಪ ಬರೆದ ಸಣ್ಣಾಟ ಗೊಂದಲಿಗರು. ನಂದಗೋಪಾಲ ಆಟವನ್ನು ಊರೂರಿಗೆ ಹೋಗಿ ಪ್ರದರ್ಶಿಸಿ ಜನಪ್ರಿಯಗೊಳಿಸಿದ್ದರ ಕಾರಣವಾಗಿ ಇದಕ್ಕೆ ಗೊಂದಲಿಗರ ಆಟವೆಂದು ಹೆಸರು ಬಂದಿದೆ. ಕಥಾವಸ್ತು, ಸಂಭಾಷಣೆ, ಹಾಡುಗಾರಿಕೆ ಎಲ್ಲವುಗಳಲ್ಲಿಯೂ ಹೊಸತನವಿದ್ದು, ಜನರನ್ನು ಹೆಚ್ಚು ಆಕರ್ಷಿಸಿದೆ. ಶೃಂಗಾರ ಮತ್ತು ಕರುಣ ರಸಗಳು ಈ ಆಟದಲ್ಲಿ ಪ್ರಾಧಾನ್ಯತೆ ಪಡೆದಿವೆ. ಮಲತಾಯಿ ಮತ್ಸರಕ್ಕೆ ಗೊಂದಲಿಗರ ಆಟ ತಕ್ಕ ನಿದರ್ಶನ.

ಇಂದ್ರಸೇನ ಅರಸ ಬೇಟೆಗೆಂದು ಅರಣ್ಯಕ್ಕೆ ಹೋಗುತ್ತಾನೆ. ಅಲ್ಲಿಯೇ ಹತ್ತಿರದಲ್ಲಿ ಒಂದು ದೇವಾಲಯ ಇರುತ್ತದೆ. ರಾಜನ ಮಗಳಾದ 'ರೋಹಿಣಿ' ದೇವಿ ಪೂಜೆಗೆ ಎಂದು ದೇವಸ್ಥಾನಕ್ಕೆ ಬರುತ್ತಾಳೆ. ಇಂದ್ರಸೇನ ಅರಸನು ಅವಳತ್ತ ನೋಡುತ್ತಾನೆ. ರೂಪ ಲಾವಣ್ಯಕ್ಕೆ ಮನ ಸೋಲುತ್ತಾನೆ. ಈಗಾ ಗಲೇ ಅವನಿಗೆ ಮದುವೆ ಆಗಿರುತ್ತದೆ. ಆದರೂ ರೋಹಿಣಿಯನ್ನು ಮದುವೆಯಾಗಲು ಬಯಸುತ್ತಾನೆ. ತನ್ನ ಆಪೇಕ್ಷೆಯನ್ನು ಅವಳಿಗೆ ತಿಳಿಸುತ್ತಾನೆ, ರೋಹಿಣಿ ಆರಂಭದಲ್ಲಿ ಇದಕ್ಕೊ ಪ್ಪುವುದಿಲ್ಲ. ಇಬ್ಬರ ನಡುವೆ ಸಂವಾದ ನಡೆಯುತ್ತದೆ.

ಹೀಗೆ ವಾದ– ವಿವಾದದ ನಂತರ ಹೆಣ್ಣು ಸೋತು ಗಂಡಿಗೆ ವಶವಾಗುವ ಚಿತ್ರ ಆಟದಲ್ಲಿದೆ. ರಾಜನ ಹಂಬಲಕ್ಕೆ ಮಣಿದು ರಾಜಕುಮಾರಿಯನ್ನು ಕರಾರಿನ ಮೇಲೆ ಲಗ್ನವಾಗಲು ಬಯಸುತ್ತಾಳೆ. ರಾಜನ ಮೊದಲ ಹೆಂಡತಿ 'ಚಂದ್ರಾವತಿ'ಯನ್ನು ಬೇರೆಡೆ ಇಡಬೇಕೆಂದು ಕೋರುತ್ತಾಳೆ. ಅವಳ ಕರಾರಿಗೆ ಅರಸ ಒಪ್ಪಿಕೊಂಡಾಗ ಮದುವೆ ವಿಜೃಂಭಣೆಯಿಂದ ನಡೆಯುತ್ತದೆ. ರೋಹಿಣಿಯನ್ನು ಕರೆದುಕೊಂಡು ರಾಜ್ಯಕ್ಕೆ ಅರಸ ಹಿಂದುರುತ್ತಾನೆ. ಒಬ್ಬ ಜಂಗಮ ಭಿಕ್ಷೆಗಾಗಿ ಬಂದಾಗ ಮಕ್ಕಳಿಲ್ಲದವರ ಕೈಯಿಂದ ಭಿಕ್ಷೆ ನೀಡಿಸಿಕೊಳ್ಳುವುದಿಲ್ಲವೆಂದು ಹಿಂದುರುಗುತ್ತಾನೆ. ರಾಜನ ಮನಸ್ಸಿನ ಮೇಲೆ ಇದು ಗಂಭೀರ ಪರಿಣಾಮ ಬೀರುತ್ತದೆ. ಮಕ್ಕಳ ಫಲ ಪಡೆದುಕೊಂಡು ಬರಬೇಕೆಂದು ನಿಶ್ಚಯಿಸಿ ತಪಸ್ಸಿಗೆಂದು ಕಾಡಿಗೆ ಹೊರಡುತ್ತಾನೆ. ಅಲ್ಲಿ ದೀರ್ಘಕಾಲ ತಪಸ್ಸನ್ನಾಚರಿಸುವನು. ಅವನ ಭಕ್ತಿಗೆ ಮೆಚ್ಚಿದ ದೇವರು ಎರಡು ಹಣ್ಣು ನೀಡುತ್ತಾನೆ. ರಾಜ ಅವುಗಳನ್ನು ತೆಗೆದು ಕೊಂಡು ರಾಜ್ಯಕ್ಕೆ ಹಿಂದಿರುಗುತ್ತಾನೆ. ರೋಹಿಣಿ ಮತ್ತು ತಾನು ತಲಾ ಒಂದೊಂದು ಹಣ್ಣು ತಿನ್ನಬೇಕೆಂದು ರಾಜ ಇಚ್ಚಿಸಿರುತ್ತಾನೆ. ದಾಸಿ ಉಪಾಯದಿಂದ ಒಂದು ಹಣ್ಣು ಮೊದಲ ಹೆಂಡತಿ ಚಂದ್ರಾವತಿಗೆ ದೊರೆಯುವಂತೆ ಮಾಡುತ್ತಾಳೆ.

ಮುಂದೆ ಚಂದ್ರಾವತಿ ಗರ್ಭಿಣಿಯಾಗುತ್ತಾಳೆ. ರೋಹಿಣಿಗೆ ಸವತಿ ಮತ್ಸರ ಮೂಡಲನುವಾಗುತ್ತದೆ. ನವಮಾಸ ತುಂಬಿ ಚಂದ್ರಾವತಿ ಅವಳಿ ಮಕ್ಕಳನ್ನು ಹೆರುತ್ತಾಳೆ. ಅವರಿಗೆ ನಂದ ಗೋಪಾಲರೆಂದು ಹೆಸರಿಡುತ್ತಾರೆ. ರೋಹಿಣಿಗೆ ತನ್ನ ಮಲಮಕ್ಕಳ ಮೇಲೆ ಮಾತ್ಸರ್ಯ ಅತಿಯಾಗಿ ದಿನೇ ದಿನೇ ಬೆಳೆಯುತ್ತದೆ. ಕೊನೆಗೊಂದು ದಿನ ಪತಿಯ ಕಿವಿಯೂದಿ ಎರಡೂ ಮಕ್ಕಳು ಕಾಡು ಪಾಲಾಗುವಂತೆ ವ್ಯವಸ್ಥೆ ಮಾಡುತ್ತಾಳೆ. ಹೆಂಡತಿಯ ರೂಪಕ್ಕೆ ಮರುಳಾಗಿದ್ದ ಅರಸ ತನ್ನ ವಿವೇಕ ಕಳೆದುಕೊಳ್ಳುವನು. ಎರಡನೆಯ ಹೆಂಡತಿಯ ಮಾತಿಗೆ ತಲೆದೂಗುತ್ತಾನೆ. ರೋಹಿಣಿ ಹೇಳಿದಂತೆ ಕುಣಿದು ಸರ್ವಸ್ವವನ್ನೆಲ್ಲ ಕಳೆದುಕೊಳ್ಳುತ್ತಾನೆ.

ಅರಣ್ಯದಲ್ಲಿ ಕಷ್ಟ–ನಷ್ಟಗಳು ಅನುಭವಿಸುತ್ತ ಇತ್ತ ನಂದ–ಗೋಪಾಲರು ಬೆಳೆಯುತ್ತಾರೆ. ಹಲವು ವರುಷಗಳ ತರುವಾಯ ಮಕ್ಕಳು ಹಿಂದಿರುಗಿ ಮನೆ ಸೇರುತ್ತಾರೆ. ಕಿರಿಯ ಹೆಂಡತಿಯ ಕುತಂತ್ರ ಬುದ್ಧಿ ಹೊರ ಬೀಳುತ್ತದೆ. ಹಿರಿಯ ಹೆಂಡತಿ ಚಂದ್ರಾವತಿಯಿಂದ ರಾಜನು ಮತ್ತೆ ಉದ್ಧಾರವಾಗುತ್ತಾನೆ. ಮೋಹಿಸಿ ಮೆಚ್ಚಿದ ಕಿರಿಯ ರಾಣಿ ರೋಹಿಣಿಗೆ ತಕ್ಕ ಶಿಕ್ಷೆ ನೀಡುತ್ತಾನೆ. ಈ ಘಟನೆ ಹಿನ್ನೆಲೆಯಲ್ಲಿ ಗೊಂದಲಿಗರ ಆಟ ಪ್ರಚಾರವಾಯಿತು. *(ಎಚ್‌ಡಿ)*

ಗೊಂದಲಿಗರು: ಅಂಬಾ ಭವಾನಿಯ ಹೆಸರಿನಲ್ಲಿ ಗೊಂದಲ ಹಾಕುವುದನ್ನೇ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡವರು. ಗೊಂದಳಿ, ಗೊಂದಲಿ ಎಂಬ ಹೆಸರಿನಲ್ಲೂ ಗುರುತಿಸಲಾಗುತ್ತದೆ. ಜಮದಗ್ನಿ ಮತ್ತು ಆತನ ಪತ್ನಿ ರೇಣುಕೆ ಈ ಸಮುದಾಯದ ಸ್ಥಾಪಕಳೆಂದು ಹೇಳಲಾಗಿದೆ. ಅಂಬಾ ಭವಾನಿ (ತುಳಜಾ ಭವಾನಿ) ಇವರ ಕುಲ ದೇವತೆ. ತುಳಜಾ ಭವಾನಿಯ ಮೂಲ ಸ್ಥಾನ ಮಹಾರಾಷ್ಟ್ರ. ಕರ್ನಾಟಕದ ವೃತ್ತಿಗಾಯಕರಲ್ಲಿ ಪ್ರಮುಖರು.



ಗೊಂದಲಿಗರು



ಗೊಂದಲಿಗರ ಕುಣಿತ

ಕರ್ನಾಟಕದ ಮಧ್ಯ ಭಾಗದಲ್ಲಿ ವಾಸಿಸುವ ಇವರು ಆಂಧ್ರಪ್ರದೇಶ ದಲ್ಲಿ ಕೊಂದಲಿಗರು. ಮಹಾರಾಷ್ಟ್ರದಲ್ಲಿ ಗೊಂಧಳದವರು ಎನ್ನಿಸಿ ಕೊಳ್ಳುವರು. ಕನ್ನಡ ಮರಾಠಿ ಮತ್ತು ತೆಲುಗು ಮಾಡನಾಡುವುದರಿಂದ ಈ ಜನಾಂಗದ ಪದ್ಯ ಜಾತಿಯಾಗಿರುವ ಗೊಂದಲ ಪದದ ಮೂಲ ಯಾವ ಭಾಷೆಯೆಂಬ ಪ್ರಶ್ನೆ ಎದುರಾಗುವುದು. ಮೇಲೆ ನಮೂದಿಸಿದ ಮೂರು ಭಾಷೆಗಳಲ್ಲಿ ಹುಟ್ಟಿದ ಸಾಹಿತ್ಯವನ್ನು ನೋಡಿದಾಗ ಅದು ಪ್ರಥಮ ಪ್ರಯೋಗ ಆದದ್ದು ಕಂಡು ಬರುತ್ತದೆ.

ಈ ಸಮುದಾಯದ ದೇವತೆಗಳು ಮೂಲತಃ ಕರ್ನಾಟಕಕ್ಕೆ ಸಂಬಂಧ ಪಟ್ಟವುಗಳಾಗಿವೆ. ದಕ್ಷಿಣದಲ್ಲಿ ಮರಾಠರು–ಪೇಶ್ವೆಗಳು ಪ್ರಬಲರಾದಾಗ ಕರ್ನಾಟಕದ ಅನೇಕ ಸ್ಥಳಗಳು ಮಹಾರಾಷ್ಟ್ರದ ವಶವಾದುವು. ಆಯಾ ಸ್ಥಳಗಳಲ್ಲಿ ವಾಶವಾಗಿದ್ದ ಜನರು ರಾಜರ ಮೆಚ್ಚುಗೆಗಾಗಿ ಮರಾಠಿ ಭಾಷೆ ಕಲಿತರು. ಗೊಂದಲಿಗರು ಮರಾಠಿ ಭಾಷೆ ಕಲಿತುಕೊಂಡುದ್ದಲ್ಲದೆ, ಅಲ್ಲಿಯ ಶಕ್ತಿದೇವತೆಯಾಗಿರುವ ಅಂಬಾಭವಾನಿಯ ಗೀತಸೇವೆ ಪ್ರಸಂಗದಲ್ಲಿಯೂ, ಮರಾಠಿಯಲ್ಲಿ ಹಾಡಲು ಪ್ರಾರಂಭಿಸಿದರು. ಇವರು ಶಿವಾಜಿಯ ಕಾಲಕ್ಕೆ ಗುಪ್ತಚಾರರ ಕಾರ್ಯವನ್ನು ಮಾಡುತ್ತಿದ್ದರು. ಪ್ರತ್ಯಕ್ಷವಾಗಿ ವೀರಗೀತೆಗಳನ್ನು ಹಾಡುತ್ತಿದ್ದರು. ಈ ಹಾಡುಗಳಿಂದ ಜನ ಜಾಗೃತೆ ಮಾಡುವ ಕಾರ್ಯವನ್ನು ಕೈಕೊಂಡರು. ಅರಸರ ಪ್ರೇರಣೆಯಿಂದ ಮುಂದೆ ಬಂದರು. ವೀರ ಗೀತೆಗಳನ್ನು ಹೇಳಿ ಜನರಿಂದ ಕಾಣಿಕೆಗಳನ್ನು ಪಡೆಯಲಾರಂಭಿಸಿದರು. ಹಳ್ಳಿಹಳ್ಳಿಗೆ ಹೋಗಿ ಹಾಡುಗಳನ್ನು ಹೇಳುವುದವನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡರು. *(ಎಚ್‌ಡಿ)*

ಗೊಂಬೆ: ಗೊಂಬೆಗೆ ಬೊಂಬೆಯೆಂದೂ ಹೆಸರು. ಯಾವುದೇ ವ್ಯಕ್ತಿಯ ಆಕಾರ ತೊಟ್ಟ ಈ ಬೊಂಬೆ ಕಲಾಕಾರನ ಮಾನಸ ಪುತ್ರಿ. ಮರ್ತ್ಯಲೋಕದ ಪ್ರತೀಕ ಎನ್ನುವಂತೆ ಜನಪದ ಜೀವನಾಡಿಯಲ್ಲಿ ಹರಿದುಬಂದ ಕಲೆ ಜಾನಪದ ಕಲೆ ಎನಿಸಿದೆ. ಮಕ್ಕಳ ಲೋಕದಲ್ಲಂತೂ ಗೊಂಬೆಗಳಿಗೆ ವಿಶೇಷ ಸ್ಥಾನವಿದೆ. ಗೊಂಬೆಗಳಲ್ಲಿ ಗಂಡು, ಹೆಣ್ಣು ಎಂದು ತಾವೇ ನಿಬ್ಬಣಿಗರಾಗಿ ಮಕ್ಕಳು ಹಾಡು ಹಾಡುತ್ತ ಗೊಂಬಿ ಮದುವೆ ಮಾಡಿ ಆಡುವುದನ್ನು ಕಾಣುತ್ತೇವೆ. ತಿಳುವಳಿಕೆಗೆ ಬಾರದ ಗಂಡು ಹೆಣ್ಣು ಜೀವಿಗಳ ಲಗ್ನ ಮಾಡುವ ಪರಿಪಾಠವು ಬಹುಹಿಂದಿನ ಕಾಲದ ಮಾತು. ಹಿರಿಯರ ಇಚ್ಛೆಯಂತೆ ನಡೆದು ಹೋಗುವ ಇಂತಹ ಲಗ್ನಗಳಿಗೆ 'ಗೊಂಬಿ ಮದುವೆ' ಎಂದೂ ಕರೆಯುತ್ತಿದ್ದರು.

ಗೊಂಬೆಗಳನ್ನು ಮರ, ಮಣ್ಣು, ಬಿದಿರು, ಚಿಂದಿಬಟ್ಟೆ, ಅರಳೆ, ಬಂಗಾರ, ಬೆಳ್ಳಿ ಹಾಗೂ ಚರ್ಮದಿಂದಲೂ ತಯಾರಿಸುತ್ತಿದ್ದರು. ಇತ್ತೀಚೆಗೆ ರಟ್ಟು, ಕಾಗದ ಪ್ಲ್ಯಾಸ್ಟಿಕ್ ಹಾಗೂ ಸಿಂಪೆ–ಚಿಪ್ಪುಗಳಿಂದಲೂ ಮಾಡುವುದನ್ನು ಕಾಣುತ್ತೇವೆ. ವಸ್ತ್ರದಂತಹ ಕಾಷ್ಠಾದಿಗಳಿಂದ ಮಾಡಿದ ಗೊಂಬೆಗಳಿಗೆ ಸಂಸ್ಕೃತದಲ್ಲಿ ಪಂಚಾಲಿಕೆ, ಪುತ್ರಿಕೆ ಎಂದು ಹೊನ್ನಬೊಂಬೆಗೆ ಹೇಮಪ್ರತಿಮೆ, ಹರಿಣಿ ಎಂದು, ಮನುಷ್ಯನ ಕಣ್ಣುಗೊಂಬೆಗೆ ತಾರಕೆ, ಕಣ್ಣ ಹಾಹೆ ಎಂದೂ, ಪ್ರತಿರೂಪಿನ ಗೊಂಬೆಗೆ ಪ್ರತುಮೆ ಎಂದೂ ಕರೆಯುತ್ತ ಬಂದಿದ್ದೇವೆ. ಇಂಗ್ಲೀಷಿನಲ್ಲಿ doll ಎಂದು ಕರೆಯುವುದುಂಟು. ಕಣ್ಣಾಲಿಯಲ್ಲಿ ತಾನು ಕಂಡಂತೆ ಚಲಿಸುವ ಪ್ರತಿಮೆಯೊಂದನ್ನು ಕಲಾಕಾರ ತನ್ನ ಹೃದಯ ಭಿತ್ತಿಯಲ್ಲಿ ಮೂಡಿಸಿಕೊಂಡು, ಪ್ರತಿರೂಪದಂತಿರುವ ಕಟ್ಟಿಗೆಯ ಇಲ್ಲವೆ ತೊಗಲು ಗೊಂಬೆಗಳನ್ನು ಮಾಡಿ ದಾರ ಇಲ್ಲವೆ ಛಡಿಯೊಂದರ ಸಹಾಯದಿಂದ ಅವುಗಳನ್ನು ಚಲಿಸುವಂತೆ ಮಾಡಿದ ಹಿನ್ನೆಲೆಯಲ್ಲಿ ಹಾಡು ಹೇಳುತ್ತ, ಮಾತು ಆಡುತ್ತ, ಪರದೆಯ ಮೇಲೆ ಇಳಿಬಿಟ್ಟೋ, ನೆರಳು ಬೆಳಕಿನಲ್ಲೊ ಅವುಗಳನ್ನು ಅಭಿನಯಿಸುವಂತೆ ಮಾಡಿದ. ಯಾವುದೋ ಒಂದು ಪೌರಾಣಿಕ, ಐತಿಹಾಸಿಕ ಇಲ್ಲವೆ ಸಾಮಾಜಿಕ ಕಥೆಯೊಂದನ್ನು ಆಧರಿಸಿ ಗೊಂಬೆ ಕುಣಿಸುವ ಈ ಆಟಕ್ಕೆ 'ಗೊಂಬೆಯಾಟ' ಎಂದು ಕರೆಯುತ್ತ ಬಂದಿದ್ದೇವೆ.

ಇಂದು ವಿದ್ಯುದ್ದೀಪಗಳ ಸೌಕರ್ಯ ಇದ್ದುದನ್ನು ಅರಿಯಬಹುದು. ಯಕ್ಷಗಾನ ಹಾಗೂ ದೊಡ್ಡಾಟದಲ್ಲಿ ಕಾಣುವಂತಹ ವೇಷ–ಭೂಷಣಗಳ ರೀತಿಯಲ್ಲಿ ಆ ಪ್ರದೇಶದ ಆಟಗಾರರು ತಮ್ಮ ಗೊಂಬೆಗಳಿಗೆ ತೊಡಿಸುವರು. ಕುಣಿತ ಹಾಡುಗಳೂ ಕೂಡ ಅದೇ ಧಾಟಿ. ಬಹು ಪ್ರಾಚೀನಕಾಲದ ಆಟವಿದಾದುದರಿಂದ ಗೊಂಬೆಯಾಟದ ಪ್ರಭಾವದಿಂದಾಗಿಯೇ ನಮ್ಮಲ್ಲಿ ಯಕ್ಷಗಾನ–ಬಯಲಾಟಗಳು ಹುಟ್ಟಿಕೊಂಡಿವೆಯೆಂದೂ ಹೇಳವುದುಂಟು. ಅಷ್ಟು ನಿಕಟಸಾಮ್ಯ ಬಯಲಾಟಗಳಿಗೂ ಗೊಂಬೆಯಾಟಕ್ಕೂ ಇದ್ದುದನ್ನು ತಿಳಿಯಬಹುದಾಗಿದೆ. ಅಷ್ಟೇ ಅಲ್ಲ– ಈ ಗೊಂಬೆಯಾಟವೇ ಮೊದಮೊದಲಿಗೆ ಬಯಲಾಟ ವಾಗಿ ಹುಟ್ಟಿಕೊಂಡು ಬಂದದ್ದೂ ಎಂದು ಅಭಿಪ್ರಾಯ ತಾಳಿದವರಿದ್ದಾರೆ. ಅದಿನ್ನೂ ಸಂಶೋಧನೆಗೆ ಸಿಲುಕಿ ನಿಶ್ಚಿತ ಆಧಾರ ಪಡೆಯಬೇಕಾಗಿದೆ ಎಂದೇ ಹೇಳಬೇಕು. ಯಾವುದು ಮೊದಲು ಎಂದು ಬಿಡಿಸುವುದು ಅದೊಂದು ಒಡೆಯಲಾರದ ಒಗಟಿನಂತಾಗಿದೆಯೆಂದೇ ಹೇಳಬೇಕಾಗುವುದು. *(ಎಂಎಸ್‌ಎಲ್)*

ಗೊಂಬೆಯಾಟ: ಜನಪದ ರಂಗಭೂಮಿಯ ಒಂದು ಪ್ರದರ್ಶಕ ಕಲೆ. ಬಯಲಾಟಗಳಲ್ಲಿ ಮಾನವ ಪಾತ್ರವಹಿಸುವುದಕ್ಕಿಂತ ಪೂರ್ವದಲ್ಲಿ ಗೊಂಬೆಗಳನ್ನು ಕುಣಿಸಿ ಆಟವಾಡಿಸುತ್ತಿದ್ದರು. ಗೊಂಬೆಯಾಟವೇ ಬಯಲಾಟಗಳಿಗೆ ಮೂಲ. ಹೀಗಾಗಿ ಬಯಲಾಟಗಳ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಗೊಂಬೆಯಾಟಗಳ ಪಾತ್ರ ವಿಶಿಷ್ಟ ರೀತಿಯದು. ಪ್ರಾಚೀನ ಪರಂಪರೆಯನ್ನು

ಹೊಂದಿದ ಆಟ ಜನಪದರ ಬದುಕಿನಲ್ಲಿ ಮೋಜಿನಾಟವಾಗಿ ಪರಿಣಮಿಸಿದೆ. ಇವುಗಳ ಬೆಳೆವಣಿಗೆಯೇ ದೊಡ್ಡಾಟ, ಯಕ್ಷಗಾನ ಬಯಲಾಟಗಳ ಈಗಿನ ಸ್ವರೂಪಕ್ಕೆ ತಿರುಗಿರಬೇಕೆಂಬುದು ಸತ್ಯವೆನಿಸುತ್ತದೆ. ಪ್ರಾಚೀನ ಪರಂಪರೆಯನ್ನೊಳಗೊಂಡ ಗೊಂಬೆಯಾಟ ಜನಪದರ ಜೀವನಾಡಿಯಾಗಿ ಮಿಡಿದಿವೆ. 'ಗೊಂಬೆಯಾಟವಯ್ಯಾ ಬ್ರಹ್ಮಾಂಡವೇ ಆ ದೇವನಾಡುವ ಗೊಂಬೆಯಾಟವಯ್ಯಾ' ಎನ್ನುವ ದಾಸರ ನುಡಿಯಲ್ಲಿ ಇದರ ಸಾಂಕೇತಿಕ ಸ್ವರೂಪವನ್ನು ಕಾಣಬಹುದಾಗಿದೆ. ದೇವನ ಸೃಷ್ಟಿಯಾದ ಮಾನವಜೀವಿಗಳನ್ನು ಗೊಂಬೆಗಳನ್ನಾಗಿ ಮಾಡಿ ಸೂತ್ರಧಾರನಂತೆ ಪ್ರಪಂಚವನ್ನು ಆಡಿಸುತ್ತಿದ್ದಾನೆ ಎನ್ನುವ ಸಾಂದರ್ಭಿಕ ಮಾತು ಗೊಂಬೆಯಾಟಕ್ಕೆ ತುಂಬ ಅನ್ವಯವಾಗುವಂತಿದೆ. ಹೆಚ್ಚಾಗಿ ಪೌರಾಣಿಕ ಕಥಾವಸ್ತುಗಳನ್ನೇ ಒಳಗೊಂಡ ಈ ಕಲೆಯಲ್ಲಿ ದೇವದೇವತೆಗಳು ಪಾತ್ರವಹಿಸುತ್ತಾರೆ. ಹೀಗಾಗಿ ಅಲ್ಲಿ ಮಾನವರು ಅಭಿನಯಿಸಬಾರದು ಎಂಬ ನಂಬಿಕೆಯಿಂದ ಗೊಂಬೆಯಾಟಗಳು ಬಳಕೆಗೆ ಬಂದು ಇದರ ಅನುಕರಣೆಯಿಂದ ಮಾನವರು ಆ ಕಲೆಯನ್ನು ತಮ್ಮ ಕೈಗೆ ತೆಗೆದುಕೊಂಡಿರಬಹುದು ಎಂಬ ಊಹೆಯನ್ನು ಸುಲಭವಾಗಿ ನಿರಾಕರಿಸುವಂತಿಲ್ಲ. ಅಟ್ಟವೇರಿ ಅಭಿನಯಿಸುವುದು ಅಪವಿತ್ರ ಎನ್ನುವ ಮನೋಭಾವನೆಯ ಜೊತೆಗೆ ನಾಚಿಕೆ ಸ್ವಭಾವವೂ



ಗೊಂಬೆಯಾಟ

ಒಂದು ಕಾರಣವಾಗಿ ಗೊಂಬೆಯಾಟಕ್ಕೆ ಪ್ರೇರಣೆ ಸಿಕ್ಕಿರಬಹುದೆಂದು ಊಹಿಸಿದ್ದಾರೆ.

ಗೊಂಬೆಗಳನ್ನು ಕುಣಿಸುವವನಿಗೆ 'ಸೂತ್ರಧಾರ'ನೆಂದು ಹೆಸರು. ಅವನು ತನ್ನ ಕೈಚಳಕದಿಂದ ಗೊಂಬೆಗಳಿಗೆ ಜೀವಕಳೆ ತುಂಬುವನು. ಸೂತ್ರಧಾರ ಆಡಿಸಿದಂತೆ ಇವು ಆಡುವವು, ನರ್ತಿಸುವವು, ವಿವಿಧ ಭಾವ-ಭಂಗಿಗಳನ್ನು ವ್ಯಕ್ತಪಡಿಸುತ್ತ ಸಜೀವತೆಯನ್ನು ಮೆರೆಯುತ್ತ ಕಣ್ಮನವನ್ನು ತಣಿಸುವವು. ಸೂತ್ರಧಾರನಿಗೆ ರಾಯಚೂರು ಭಾಗದಲ್ಲಿ 'ನಾಯಕ'ನೆಂದು ಕರೆಯುತ್ತಾರೆ. 'ಸೂತ್ರಧಾರ' ಎಂಬ ಪದದ ಬಳಕೆ ಬಂದುದು ಗೊಂಬೆಯಾಟದಿಂದ. ಸೂತ್ರಗಳಿಂದ ಹೀಗೆ ಗೊಂಬೆಯನ್ನು ಆಡಿಸುವ ಆಟ ಬಹಳ ಪುರಾತನವಾದದ್ದು. ನಾಟಕಕ್ಕಿಂತಲೂ ಮೊದಲು ಹುಟ್ಟಿಕೊಂಡದ್ದು. ನಾಟಕದ 'ಸೂತ್ರಧಾರ' ಎಂಬ ಮಾತು ದಾರಹಿಡಿದು ಗೊಂಬೆಯಾಡಿಸುವುದರಿಂದ ಬಂದಂಥ ಮಾತು ಎನ್ನುವುದು ಆ ಪದದ ಮೂಲ ಹಾಗೂ ಅದರ ಮಹತ್ವ ಕುರಿತು ತಿಳಿಸುತ್ತದೆ. ಬದುಕಿನ ಪ್ರತಿಬಿಂಬವೇ ಎನ್ನುವಂತೆ ಸೂತ್ರಧಾರನ ಕೈಚಳಕದಿಂದ ಅಲ್ಲಿಯ ಗೊಂಬೆಗಳು ಕುಣಿಯುತ್ತವೆ. ಕಣ್ಣಿಗೆ ಕಾಣದ ಎಳೆಯ ದಾರ ಅಥವಾ ಕೂದಲುಗಳನ್ನು ಬಳಸಿ, ಗೊಂಬೆಗಳ ಅಂಗಾಂಗಳಿಗೆ ಕಟ್ಟಿ ಪ್ರೇಕ್ಷಕರಿಗೆ ಕಾಣದಂತೆ ಪರದೆಯ ಹಿಂದೆ ನಿಂತುಕೊಂಡು ಚಮತ್ಕಾರಿಕವಾಗಿ ಇವುಗಳನ್ನು ಕುಣಿಸುವನು. ಪ್ರೇಕ್ಷಕರಿಗೆ ಸೂತ್ರಧಾರನು ಕುಣಿಸುತ್ತಿರುವನೆಂಬ ಕಲ್ಪನೆಯೇ ಬಾರದಂತೆ ಭಾಸವಾಗುವದು. ಇದು ಅವನ ಕಲಾಕೌಶಲ್ಯಕ್ಕೆ ಸಾಕ್ಷೀಭೂತವಾಗಿದೆ. ನಿರ್ಜೀವ ಗೊಂಬೆಗಳಲ್ಲಿ ಸಜೀವತೆಯನ್ನು ತುಂಬಿ ಆಟವಾಡಿಸುವ ಇವನ ಕೈಚಳಕ ನಿಜಕ್ಕೂ ಬೆರಗುಗೊಳಿಸವಂತಹದು. ಇವುಗಳಿಗೆ ಸ್ವತಂತ್ರಶಕ್ತಿಯಾಗಲಿ, ಚೇತನವಾಗಲಿ ಇಲ್ಲದೆ ಸೂತ್ರಧಾರನ ಹೇಳಿಕೆ, ಆಧೀನದಲ್ಲಿ ಕುಣಿಯುವುದು ಗೊಂಬೆಗಳ ಕರ್ತವ್ಯವಾಗಿದೆ.

ಗೊಂಬೆಗಳನು ಮೊದಮೊದಲು 'ಕಿಟ್ಟ' ದಿಂದ ನಿರ್ಮಿಸುತ್ತಿದ್ದರು. ಅವು ಭಾರವಾಗತೊಡಗಿದಂತೆ ಕಿಟ್ಟದ ಬದಲಾಗಿ ಹದಮಾಡಿದ ಚರ್ಮವನ್ನು ಉಪಯೋಗಿಸಿ ಗೊಂಬೆ ತಯಾರಿಸತೊಡಗಿದರು. ಅವುಗಳಿಗೆ ಬಣ್ಣ ಹಚ್ಚಿ ಗೊಂಬೆಗಳ ಸೌಂದರ್ಯ ಹೆಚ್ಚಿಸುತ್ತಿದ್ದರು. ಗೊಂಬೆಗಳನ್ನು ತಯಾರಿಸುವ ವೃತ್ತಿಕಲೆಯ ಮೇಲೆಯೇ ಕೆಲವರು ಉಪಜೀವನ ಮಾಡುತ್ತಿದ್ದರು. ಈ ರೀತಿಯ ತೊಗಲು ಗೊಂಬೆಗಳಿಂದ ಆಡಿಸುವ ಗೊಂಬೆಯಾಟಕ್ಕೆ ಕಲಬುರಗಿ ಜಿಲ್ಲೆಯಲ್ಲಿ 'ಕಟಬಾನ' ಆಟವೆಂದು ಕರೆಯುತ್ತಾರೆ. ಗೊಂಬೆಗಳು ಮಾನವನ ಜೀವನದಲ್ಲಿ ಅತ್ಯುಪಯುಕ್ತ ಕಾರ್ಯನಿರ್ವಹಿಸಿಕೊಟ್ಟಿವೆ. ಭಾಡಿ, ಭಾನಾಮತಿ, ವಶೀಕರಣ ಮಾಡುವವರು ಇವುಗಳನ್ನು ಬಳಸಿಯೇ ತಮಗೆ ಬೇಕಾಗದವರನ್ನು ಹಿಂಸಿಸುವರು. ಮದುಮಕ್ಕಳ ಕೈಯಲ್ಲಿ ಮೊದಲು ಗೊಂಬೆಗಳನ್ನು ಕೊಟ್ಟು ಗೊಂಬೆಮದುವೆ ಮಾಡುವರು. ಅದಲ್ಲದೆ ಮಕ್ಕಳ ಮಾನಸಿಕ ವಿಕಾಸವಾದದ್ದು ಗೊಂಬೆಗಳ ಮೂಲಕವೇ. ಹೀಗೆ ಜನಪದರ ಬದುಕಿನ ವಿವಿಧ ರಂಗಗಳಲ್ಲಿ ಗೊಂಬೆಗಳು ವಿಶಿಷ್ಟ ಪಾತ್ರವಹಿಸಿವೆ. ಜನಪದ ಸಂಸ್ಕೃತಿಯ ವಿಕಾಸಕ್ಕೆ ಕಾರಣೀಭೂತವೂ ಆಗಿವೆ.

ಗೊಂಬೆಯಾಟದಲ್ಲಿ ಸೂತ್ರಧಾರನಿಗೆ ಸಹಕಾರಿಯಾಗಿ 3–4 ಜನ ಕಾರ್ಯನಿರ್ವಹಿಸುತ್ತಿರುತ್ತಾರೆ. ಸಂವಾದ ರೂಪದಲ್ಲಿ ಸೂತ್ರಧಾರನೇ ಮಾತುಗಳನ್ನು ಹೆಣ್ಣು–ಗಂಡಿನ ಅಭಿನಯ, ನರ್ತನ ಮೂಲಕ ಹೇಳುತ್ತಾನೆ. ಸಂದರ್ಭಕ್ಕೆ ತಕ್ಕಂತೆ ಅಲ್ಲಲ್ಲಿ ವಾದ್ಯಗಳ ಜೊತೆ ಹಾಡುಗಳನ್ನು ಹೇಳುತ್ತಾನೆ. ಹಾಸ್ಯ, ಶೃಂಗಾರ, ರೌದ್ರ, ಕರುಣೆ, ಹೋರಾಟ ಮುಂತಾದವುಗಳನ್ನು ತನ್ನ ಕಲಾಕೌಶಲ್ಯದಿಂದ, ಗೊಂಬೆಗಳ ಅಭಿನಯದ ಮೂಲಕ ತೋರಿಸುತ್ತಾನೆ. ಕಥಾ ವಸ್ತುವಿಗೆ ತಕ್ಕಂತೆ ಗೊಂಬೆಗಳಿಗೆ ವೇಷ–ಭೂಷಣಗಳನ್ನು ಮಾಡಿರುತ್ತಾನೆ. ಹೆಚ್ಚಾಗಿ ರಾಮಾಯಣ, ಮಹಾಭಾರತದ ರಸವತ್ತಾದ ಸಂದರ್ಭಗಳೇ ಗೊಂಬೆಯಾಟದ ಕಥಾವಸ್ತುವಾಗಿರುತ್ತವೆ. ಶಿಷ್ಟ ಕವಿಗಳಿಂದ ನಿರ್ಮಿತವಾದ ಈ ಮಹಾಕಾವ್ಯಗಳು ಪಂಡಿತರ ಸೊತ್ತಾಗಿ ಉಳಿದು ಮುಂದೆ ಅವು ಪಾಮರರ ಸೊತ್ತಾಗಿ ಆ ಸಂಸ್ಕೃತಿಯ ಅರಿವು ಜನಪದರಿಗಾಗಲು ಗೊಂಬೆಯಾಟಗಳು ಪ್ರಮುಖ ಪಾತ್ರವಹಿಸಿದವು. ಗೊಂಬೆ ಆಟಗಳ ಸಾಹಿತ್ಯ ಕುರಿತು ಹಸ್ತಪ್ರತಿಗಳು ದೊರೆಯದೆ ಸೂತ್ರಧಾರನ ಕಂಠದಲ್ಲಿಯೇ ನೆಲೆಸಿಕೊಂಡಿವೆ. ಆಟಕ್ಕೆ ಬೆಳಕಿನ ಸಾಧನವಾಗಿ 'ದೀವಟಿ'ಗೆಗಳನ್ನು ಬೆಳಗಿಸುವರು. ಗೊಂಬೆಯಾಟ ನಡೆಯುವ ಪ್ರಮುಖ ಸ್ಥಳಗಳೆಂದರೆ ಗುಡಿ–ಗುಂಡಾರಗಳ ಕಟ್ಟೆ– ಅಥವಾ ವಿಶಾಲವಾದ ಎತ್ತರ ಪ್ರದೇಶ. ಪ್ರೇಕ್ಷಕರು ಎದುರುಗಡೆ ಕಂಬಳಿ, ಗುಡಾರ, ಜಮಖಾನೆ, ಹೊರಸು ಮುಂತಾದವುಗಳನ್ನು ಹಾಕಿಕೊಂಡು ಆಟದ ರಸಗ್ರಹಣ ಮಾಡುವರು. ಆಟದ ಸ್ವಾರಸ್ಯ ಏರಿದಂತೆ ಜನರಿಂದ ಪ್ರತಿಕ್ರಿಯೆಯಾಗಿ ಸಿಳ್ಳು, ಚಪ್ಪಾಳೆ, ಪ್ರಶಂಸೆಗಳು ಕೇಳಿಬರುತ್ತವೆ. ಇದೆಲ್ಲ ಗೊಂಬೆಗಳಿಗೆ ಕೇಳಿಸದೇ ಇದ್ದರೂ ಅವುಗಳ ಜನಕನಾದ ಸೂತ್ರಧಾರನಿಗೆ ಅತೀವ ಸಂತೋಷ–ಇನ್ನೂ ಹುರುಪಿನಿಂದ ಆಟ ಮುಂದುವರಿಸುವನು.

ಪ್ರಾಚೀನ ಕಾಲದ ಅರಸರ ಮೆಚ್ಚಿಗೆಯ ಆಟಗಳಾಗಿ ಇವು ಅಭಿನಯಿಸಲ್ಪಡುತ್ತಿದ್ದು. ತಮ್ಮ ರಾಜ್ಯದ ಪ್ರಜೆಗಳ ರಂಜನೆಗಾಗಿ ಆಗಾಗ ಗೊಂಬೆಯಾಡಿಸುವವರನ್ನು ಕರೆಸಿ ಆಡಿಸುತ್ತಿದ್ದರು. ಇದಲ್ಲದೆ ಹಬ್ಬ – ಹರಿದಿನಗಳಲ್ಲಿ, ಜಾತ್ರೆ–ಸಂಪ್ರದಾಯಗಳಲ್ಲಿ ಇವು ಹೆಚ್ಚಾಗಿ ಪ್ರದರ್ಶಿಸಲ್ಪಡುತ್ತವೆ. ಗೊಂಬೆಯಾಟ ನಡೆಯದಿದ್ದರೆ ಜಾತ್ರೆ ಶೋಭಿಸಲಾರದು ಎನ್ನುವ ಜನಪದರ ನುಡಿಯಲ್ಲಿ ಅದರ ಮಹತ್ವ ಅಡಗಿದಂತಿದೆ. ಗೊಂಬೆ ಆಡಿಸುವವರು ಸಂಚಾರಿಗಳಾಗಿ ಊರಿಂದೂರಿಗೆ ಅಲೆಯುತ್ತ, ಆಟಗಳನ್ನು ಪ್ರದರ್ಶಿಸುತ್ತ ರಂಜನೆಯ ಜೊತೆಗೆ ಲೋಕ ಶಿಕ್ಷಣವನ್ನೂ ಪ್ರಸಾರ ಮಾಡಿದ್ದು ತಿಳಿಯುತ್ತದೆ. ಗೊಂಬೆ ಆಟವು ಜಾನಪದ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮೈಲುಗಲ್ಲು ಇದ್ದ ಹಾಗೆ. ಬಹು ಪ್ರಾಚೀನ ಕಾಲದಿಂದಲೂ ಮನರಂಜನೆಗಾಗಿ ಮೂರ್ತ ಸ್ವರೂಪ ತಾಳಿ ಶ್ರೀಸಾಮಾನ್ಯರ ಪಾಠಶಾಲೆಯಾದುದನ್ನು ಕಾಣುತ್ತೇವೆ. ಮುಗ್ಧ ಮಕ್ಕಳ ಮನೋವಿಕಾಸಕ್ಕೂ ಇದು ದಾರಿದೀಪ.

ಮಾನವನ ಮನೋವಿಕಾಸಕ್ಕೆ ಅರಳಿಬಂದ ಗೊಂಬೆ ಆಟಗಳು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬಹು ಮಹತ್ವದ ದಾಖಲೆಗಳಾಗಿವೆ. ಹೈದ್ರಾಬಾದ ಕರ್ನಾಟಕ ಅದರಲ್ಲೂ ರಾಯಚೂರು ಜಿಲ್ಲೆ ಗೊಂಬೆಯಾಟಗಳ ತವರುಮನೆಯಾಗಿದೆ. ಈ ಜಿಲ್ಲೆಯ ಇಟಗಿ, ಕುಕನೂರ, ಕಿನ್ನಾಳ ಮುಂತಾದ ಗ್ರಾಮಗಳು ಕಲಾ ಕೇಂದ್ರಗಳಾಗಿ ಪ್ರಸಿದ್ಧಿ ಪಡೆದಿದ್ದವು. ಹೊಸಪೇಟೆ ಮಾರಪ್ಪ ಗೋಪ್ಪೆದ ಮತ್ತು ಮಂಜರ್ಲಾ ದೇವಪ್ಪ ಅವರು ತೊಗಲುಗೊಂಬೆ ಆಡಿಸುವುದರಲ್ಲಿ ಪ್ರಸಿದ್ಧರಾಗಿದ್ದರು. ಗುಲಬರ್ಗಾ ಜಿಲ್ಲೆಯ ಉಡಚಣ ಗ್ರಾಮದ ಲಕು–ಲಕ್ಷ್ಮಣರು ತೊಗಲುಗೊಂಬೆ ಆಟಗಳನ್ನು ಆಡಿಸುತ್ತಿದ್ದರು. ಹಿಂದೊಮ್ಮೆ ಜನಪದರ ಜೀವಂತ ಕಲೆಯಾಗಿ ಬೆಳೆದು ಬಂದಿದ್ದಕ್ಕೆ ಇವು ಸಾಕ್ಷಿಯಾಗಿವೆ. ಮಾನವ ಪಾತ್ರ ವಹಿಸಿ ಬಯಲಾಟಗಳಲ್ಲಿ ಭಾಗವಹಿಸಿ ಅಭಿನಯಿಸುವ ವರೆಗೂ ಇವು ಬಳಕೆಯಲ್ಲಿದ್ದು ಈಗ ಇವುಗಳ ಪ್ರಭಾವ ಕುಗ್ಗಿ ಅಲ್ಲಲ್ಲಿ ಜೀವ ಹಿಡಿದುಕೊಂಡಿವೆ.

(ಬಿಪಿ)

ಗೊಬ್ಬೂರು: ಅಫಜಲಪೂರ ತಾಲ್ಲೂಕಿನ ಗೊಬ್ಬೂರ ಎಂಬ ಗ್ರಾಮವು ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಮಹತ್ವವನ್ನು ಪಡೆದಿದೆ. ಪ್ರಾಚೀನ ಶಾಸನಗಳಲ್ಲಿ ಸಂತೆಯ ಗೊಬ್ಬುರು ಎಂದೇ ಉಲ್ಲೇಖಿತಗೊಂಡಿದೆ. ಇಲ್ಲಿ ಶಿವಲಿಂಗೇಶ್ವರ ದೇವಾಲಯ ಹಾಗೂ ಮಲ್ಲಿಕಾರ್ಜುನ ಗುಡಿಯು ಅತ್ಯಂತ ಪ್ರಾಚೀನವಾಗಿವೆ. ಊರಲ್ಲಿ ಹನುಮಂತ, ಮೌನೇಶ್ವರ, ಮಡಿಸಿದ್ಧ, ಮಲ್ಲಯ್ಯ ಪ್ರಭುದೇವ, ಉಣಚಿರಾಯ, ಬಂಡಿ ಪೊಚ್ಚ ಸಂಗಯ್ಯ ಮುತ್ಯಾ, ಶರಣ ಬಾಚರಸ ಚೌಡಮ್ಮ, ದ್ಯಾವಮ್ಮ ಹಾಗೂ ಮರಗಮ್ಮನ ನವೀನ ಗುಡಿಗಳಿದ್ದು, ಜುಮ್ಮಾ ಮಸೀದಿ ಹಾಗೂ ಧಾವಲ್ ಮಲ್ಲಿಕ್ ದರ್ಗಾಗಳಿವೆ. *(ಪಿಕೆಕೆ)*

ಗೊರವರು: ಮೈಲಾರಲಿಂಗನ ಪರಮಭಕ್ತರು. ಮೈಲಾರಲಿಂಗನ ಹೆಸರಲ್ಲಿ ದೀಕ್ಷಾಬದ್ಧರಾದ ಗುಡ್ಡರು. (ಭಕ್ತರು) ಯಾವ ಜಾತಿಯವರಾದರೂ ಈ ಸಂಪ್ರದಾಯವನ್ನು ಆಚರಿಸಬಹುದು. ದೇವರ ಆರಾಧನೆಗಾಗಿ ನಡೆದು ಬಂದಿರುವ ಧಾರ್ಮಿಕ ಪರಂಪರೆ ಬೆಳೆದು ಬಂದಿದೆ. ಈ ಸಂಪ್ರದಾಯ ಕುರುಬ, ಉಪ್ಪಾರ, ನಾಯಕರು ಮತ್ತು ಹರಿಜನರಲ್ಲಿ ಕಂಡು ಬಂದರೂ ಹೆಚ್ಚು ಈಗ ಪ್ರಚಲಿತವಿರುವುದು ಕುರುಬ ಜನಾಂಗದಲ್ಲಿ ಮಾತ್ರ. ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಗೊರವರ ಸಂಪ್ರದಾಯ ವೃತ್ತಿ ಕಲೆಯಾಗಿ ಬೆಳೆದು ಬಂದಿದೆ. ಗೊರವರ ಕುರಿತಿರುವ ನಂಬಿಕೆಯೂ ಹೀಗಿದೆ.

"ಮಣಿಸುರ– ಮಲ್ಲಾಸುರರೆಂಬ ಅರಸರು ತಪಸ್ಸು ಮಾಡಿ ತಮಗೆ ಯಾರಿಂದಲೂ ಮರಣ ಬರದಿರಲೆಂದು ಶಿವನಿಂದ ವರ ಪಡೆದರೆಂಬುದು ಈ ಅಸುರರು, ಕಂಟಕಪ್ರಾಯರಾಗಬಾರದೆಂದು ಪರಶಿವನೆ ಕಂಬಳಿ ಗೊರವನ ವೇಷಧರಿಸಿ, ಅವರನ್ನು ಸಂಹಾರ ಮಾಡಿದ ಪರಶಿವನ ರೂಪವೇ ಇಂದಿನ ಗೊರವ"ರೆಂದು ತಿಳಿದು ಬರುತ್ತದೆ.

"ಎರಡನೆಯ ಪ್ರಸಂಗದಲ್ಲಿ ಗೊರವರ ಮನೆತನಕ್ಕೆ ಮಕ್ಕಳಿರಲಿಲ್ಲ. ಮಕ್ಕಳಾದರೆ ಮೊದಲ ಮಗನನ್ನು ಶಿವನ ಹೆಸರು ಹೇಳಿ 'ಗುಡ್ಡ'ನಾಗಿ ಬಿಡುತ್ತೇವೆಂದು, ತಂದೆ–ತಾಯಿ ಮೊರೆ ಹೊಕ್ಕರು. ಈ ಹರಕೆ ಈಡೇರಿತು ಮಕ್ಕಳಾದವು. ಅಂತೆಯೇ ತಮ್ಮ ವಂಶೋದ್ಧಾರ ಮಾಡಿದ ಪರಶಿವನ ಹೆಸರಲ್ಲಿ ಗೊರವರ ಮನೆತನದ ಹಿರಿಯ ಮಗನನ್ನು 'ಗುಡ್ಡ'ನಾಗಿ ಬಿಡುವ ಸಂಪ್ರದಾಯ ಈಗಲೂ ರೂಢಿಯಲ್ಲಿದೆ."



ಗೊರವರು

ಕಲಶಗಳನ್ನು ಹೂಡಿ, ಮಧ್ಯದಲ್ಲಿ ಕುಳ್ಳಿರಿಸಿ, ಕಳಶಕ್ಕೂ, ವ್ಯಕ್ತಿಯ ಕೊರಳಿಗೂ ಸೂತ್ರ ಬಿಟ್ಟು ಬಹುಕ್ರುತವಾಗಿ ಈ ಶಾಸ್ತ್ರವನ್ನು ನಡೆಸುತ್ತಾರೆ. ಮುಂದೆ ಆತನು ನಡೆಸಬೇಕಾದ ಶುದ್ಧ ಜೀವನ ಕುರಿತು ತಿಳುವಳಿಕೆ ನೀಡಿ ವಚನ ಪಡೆಯುತ್ತಾರೆ. ಆಗ ಆತನ ಕೊರಳಿಗೆ ಕವಡೆಯ ಸರ ಹಾಕಿ "ಗುಡ್ಡ"ನೆಂದು ಘೋಷಿಸುತ್ತಾರೆ. ಈತ ಯಾರ ಮಗನೆಂದು ಆತನ ತಂದೆ-ತಾಯಿಗೆ ಕೇಳಿದರೆ, ಇದುವರೆಗೆ ನಮ್ಮ ಮಗನಿದ್ದನು. ಈಗ ಆತ ಶಿವನ ಮಗನೆಂದು ಹೇಳುತ್ತಾರೆ.

ಕೆಲವು ಕಟ್ಟು ಪಾಡುಗಳನ್ನು 'ಗುಡ್ಡ' ನಾದವರು ಪಾಲಿಸಿಕೊಂಡು ಹೋಗಬೇಕೆಂದು ಸಲಹೆ ನೀಡುವರು. ಹೊಲದಲ್ಲಿ ಹಸು ಮೇಯುತ್ತಿದ್ದರೆ, ಅದು ಮೇಯುತಿದೆ ಎಂದು ಹೇಳಬಾರದು. ಕರು ಹಾಲು ಕುಡಿಯುತ್ತಿದ್ದರೆ, ಅದು ಹಾಲು ಕುಡಿಯುತ್ತಿದೆಯೆಂದು ಹೇಳಬಾರದು. ಕಾಲಿಗೆ ಪಾದರಕ್ಷೆ ಹಾಕುವಂತಿಲ್ಲ. ಸರ್ಪವನ್ನು ಹೊಡೆಯಬಾರದು. ಇಷ್ಟೆಲ್ಲ ನಿಯಮಗಳನ್ನು ಹೇಳಿದ ನಂತರ ಹಿರಿಯ ಗೊರವ ಸಾಂಬ್ರಾಣಿಯ ಧೂಪ-ದೀಪ ಹಾಕಿ ಕೊರಳಿಗೆ ಕವಡೆಯ ಸರವನ್ನು ಕಟ್ಟಿ ಹಣೆಗೆ ವಿಭೂತಿ ಭಂಡಾರ ಧರಿಸುತ್ತಾರೆ. ಇದು 'ಗೊರವ' ನಾದುದರ ಸಂಕೇತ. ದೀಕ್ಷೆಯ ಆನಂತರ ಗೊರವರೆಲ್ಲರು ಸೇರಿ ಹಿತ್ತಾಳೆಯ ದೋಣಿ ಜೋಳಿಗೆಯನ್ನು ನೀಡಿ 'ಮರಿಪೂಜೆ' ಮಾಡುತ್ತಾರೆ. ಆ ದಿನ ನಾಲ್ಕು ಮನೆಯ ಭಿಕ್ಷೆ ಮಾಡಲೇಬೇಕು. ಇದಕ್ಕೆ ಗೊರವ ದೀಕ್ಷೆ ಎಂದು ಕರೆಯುತ್ತಾರೆ.

ಗೊರವರಲ್ಲಿ ಮಂಟೇಸ್ವಾಮಿ ಒಕ್ಕಲು, ಮ್ಯಾಲೂರಯ್ಯನ ಒಕ್ಕಲು, ಬೀರೇಶ್ವರನ ಒಕ್ಕಲು, ಪಾರ್ವತಿಯ ಒಕ್ಕಲು ಮುಂತಾದ ಅನೇಕ ಪ್ರಭೇದಗಳಿದ್ದರೂ ವೇಷಭೂಷಣ ಸಂಪ್ರದಾಯಗಳಲ್ಲಿ ಸಾಮಾನ್ಯವಾಗಿ ಏಕತೆ ಕಂಡು ಬರುತ್ತದೆ. ಗೊರವರಲ್ಲಿ "ಗೊರವ ದೀಕ್ಷೆ" ಸಂಪ್ರದಾಯ ಬದ್ಧವಾಗಿ ಸಂಬಂಧಪಟ್ಟ ಜನಾಂಗದ ಪ್ರಮುಖರೆದುರು, ಹೆತ್ತ ತಂದೆ-ತಾಯಿ ಸಮ್ಮುಖದಲ್ಲಿ ನಡೆಯುವ ಒಂದು ಧಾರ್ಮಿಕ ಕ್ರಿಯೆ. ತಮ್ಮ ಮನೆಯ ಹಿರಿಯ ಮಗನಿಗೆ ಹನ್ನೆರಡು ವರುಷ ಅಥವಾ ಇಪ್ಪತ್ತು ವರ್ಷಗಳು ತುಂಬುವುದರೊಳಗೆ ಮದುವೆಗೆ ಮುಂಚೆ "ಗೊರವ ದೀಕ್ಷೆ" ಶಾಸ್ತ್ರ ಮಾಡುವರು. ಆ ಸಮಾರಂಭದಲ್ಲಿ ಹಣ್ಣು, ಕಾಯಿ, ಎಲೆ, ಅಡಿಕೆ, ಹೂವು ಗಂಧ ಮೊದಲಾದ ಶುಭ ಸಾಮಗ್ರಿಗಳನ್ನು ಅಣಿಮಾಡಿಕೊಂಡು ದೀಕ್ಷೆ ತೆಗೆದುಕೊಳ್ಳುವ ವ್ಯಕ್ತಿಗೆ ವಪನಕ್ರಿಯೆ ಮಾಡಿ, ಮೈ ತೊಳೆದು ವಿಭೂತಿ ಭಂಡಾರ ಧರಿಸಿ ನಾಲ್ಕು

ಎಚ್‌ಡಿ)

ಗೋ

ಗೋಗಿ: ಐತಿಹಾಸಿಕ ಸ್ಥಳ. ಮುಸ್ಲಿಮರ ಧಾರ್ಮಿಕ ಕೇಂದ್ರ. ಯಾದಗಿರ ಜಿಲ್ಲೆ ಶಹಾಪುರದಿಂದ ಪಶ್ಚಿಮಕ್ಕೆ 11 ಕಿ.ಮೀ. ಅಂತರದಲ್ಲಿದೆ. ಮುಸ್ಲಿಂ ವಾಸ್ತುಶಿಲ್ಪದ ಔನ್ನತ್ಯವನ್ನು ಸಾರಿಹೇಳುತ್ತಿದೆ. ಗೋಗಿ, ಗಾವ್‌ಗೀರ್ ಎನ್ನುವ ಫಾರ್ಸಿ ಶಬ್ದದ ಅಪಭ್ರಂಶ ಗೋಗಿ, ಗಾವ್ ಎಂದರೆ ಆಕಳು. ಗೀರ್ ಎಂದರೆ ಹಟ್ಟಿ. ಹಿಂದೆ ಈ ಗ್ರಾಮವಿದ್ದ ಜಾಗದಲ್ಲಿ ದನಗಳನ್ನು ನಿಲ್ಲಿಸುತ್ತಿದ್ದರೆನ್ನಲಾಗಿದೆ. ಗಾವ್‌ಗೀರ್ ಎನ್ನುವುದು ಜನರ ಬಾಯಿಯಲ್ಲಿ ಗೋಗಿ ಎಂದಾಯಿತೆಂದು ಹೇಳುತ್ತಾರೆ. ಈ ಗ್ರಾಮದಲ್ಲಿ ಕ್ರಿ.ಶ. 1374–1438ರಲ್ಲಿ ಬಾಳಿದ ಪವಾಡ ಪುರುಷ ಸಂತ ಚಂದಾಹುಸೇನಿಯರು ತಮ್ಮ ಅಧ್ಯಾತ್ಮದ ಹೊಂಗಿರಣದಿಂದ ಸಾಮಾನ್ಯ ಜನರ ಮೌಢ್ಯವನ್ನು ತೊಡೆದು ಸನ್ಮಾರ್ಗಕ್ಕೆ ಹಚ್ಚುವಲ್ಲಿ ಪರಿಣಾಮಕಾರಿ ಕೆಲಸ ಮಾಡಿದ್ದಾರೆ. ಇವರ ಪ್ರಭಾವಕ್ಕೊಳಗಾಗಿ, ವಿಜಾಪುರದ ಆದಿಲ್‌ಶಾಹಿ ಅರಸರು ಇವರ ಅನುಯಾಯಿಗಳಾದುದಕ್ಕೆ, ದರ್ಗಾದಲ್ಲಿರುವ ಯುಸೂಫ್ ಆದಿಲ್ ಶಾರವರ ಗೋರಿಗಳೇ ಸಾಕ್ಷಿ. ಚಂದಾಹುಸೇನಿಯವರ ದರ್ಗಾವನ್ನು ಕ್ರಿ.ಶ. 1587ರಲ್ಲಿ ಕಟ್ಟಲಾಗಿದ್ದು, ಪ್ರತಿ ವರ್ಷ ಗಂಧ, ದೀಪೋತ್ಸವಗಳ ಹನ್ನೆರಡು ದಿನಗಳು ಜರುಗುವ ಜಾತ್ರೆಯಲ್ಲಿ ಸಾವಿರಾರು ಹಿಂದು-ಮುಸ್ಲಿಮರು ಒಂದಾಗಿ ಪಾಲ್ಗೊಳ್ಳುತ್ತಾರೆ.



ಗೋಗಿ ಗುಂಬಜ್

ಬಿಜಾಪುರ ಅರಸರ ಸೋದರಿಯಾದ ಫಾತಿಮಾ ಸುಲ್ತಾನಳು ಕ್ರಿ.ಶ. 1745ರಲ್ಲಿ ಕಟ್ಟಿಸಿದ ಇಲ್ಲಿಯ 'ಕರಿಮಸೀದಿ' ಕಟ್ಟಡವು ಮುಸ್ಲಿಂ ವಾಸ್ತುಶಿಲ್ಪದ ಪರಾಕಾಷ್ಠೆಯ ಪ್ರತೀಕ.

ಕಲ್ಯಾಣ ಚಾಲುಕ್ಯ ತ್ರಿಭುವನಮಲ್ಲನ ಕಾಲದ ಕನ್ನಡ ಲಿಪಿಯ ತ್ರುಟಿತ ಶಾಸನವೊಂದು ಚಂದಾಹುಸೇನಿ ದರ್ಗಾದ ಹತ್ತಿರವಿರುವ ಶಾಲಾ ಆವರಣದಲ್ಲಿದೆ. ದಂಡನಾಯಕ ದುಗ್ಗರಸ ಹೆಗ್ಗಡೆ ನಾಳರಸರ ಉಲ್ಲೇಖವಿದೆ. ದರ್ಗಾಕ್ಕೆ ಹೊಂದಿಕೊಂಡಂತೆ 'ಬುಡ್ಡಿಕಾ ಘರ್' ಇದೆ. ಹಳ್ಳಿಯ ಆಡು ಭಾಷೆಯಲ್ಲಿ ದೊಡ್ಡವರಿಗೆ ಶರಣ ಸಂತರಿಗೆ ಬುದ್ಧಿ, ಬುದ್ಧಿಯೋರು ಎನ್ನುವುದು ವಾಡಿಕೆ. ಬುದ್ಧಿಯೋರು ಇರುವ ಸ್ಥಳಕ್ಕೆ ಮುಸ್ಲಿಮರು 'ಬುದ್ಧಿಕಾ ಘರ್' ಎನ್ನುತ್ತಾ ಕ್ರಮೇಣ ಬುಡ್ಡಿಕಾ ಘರ್ ಆಗಿ ಮಾರ್ಪಟ್ಟು 'ಮುದುಕಿ ಮನೆ' ಆಗಿರಬೇಕು. ಈಗಲೂ ಇಲ್ಲಿ ಹಿಂದೂ ದೇವಾಲಯದ ನಿಚ್ಚಳ ಕುರುಹುಗಳು, ಚಾಲುಕ್ಯರ ವಾಸ್ತುಶಿಲ್ಪವನ್ನು ಸಾರಿ ಹೇಳುತ್ತವೆ.

ಗೋಗಿಯಲ್ಲಿ ರಾಷ್ಟ್ರಕೂಟರ ಕಾಲದ (ಕ್ರಿ.ಶ.9-10) ಜೈನ ಮಂದಿರ (ಬಸದಿ)ವೊಂದಿದ್ದು, ಇಲ್ಲಿ 23ನೆಯ ತೀರ್ಥಂಕರ ಭಗವಾನ್ ಪಾರ್ಶ್ವನಾಥಸ್ವಾಮಿಯ ಎರಡೂವರೆ ಅಡಿ ಎತ್ತರದ ವಿಗ್ರಹವಿದೆ. ಅದೇ ಗ್ರಾಮದ ಕ್ರಿ.ಶ. 11ನೆಯ ಶತಮಾನದ ಚಂದ್ರ ಪ್ರಭ ತೀರ್ಥಂಕರರ ವಿಗ್ರಹ, 13-14ನೆಯ ಶತಮಾನದ ಪದ್ಮಾವತಿ ಕಂಚಿನ ವಿಗ್ರಹಗಳು ತುಂಬಾ ಸುಂದರವಾಗಿದ್ದು, ಹಿಂದೆ ಜೈನ ಧರ್ಮ ಪ್ರಸಿದ್ಧಿ ಪಡೆದಿತ್ತೆನ್ನುವುದಕ್ಕೆ ಈ ತಾಲ್ಲೂಕಿನ ಇತರೆಡೆಗಳಲ್ಲೂ ದೊರೆಯುವ ಜೈನಧರ್ಮದ ಕುರುಹುಗಳಿಂದ-ರಿಯಬಹುದು.

ಗೋಗಿಯಲ್ಲಿ ಮಹಮ್ಮದ್ ಭೈರಿ ದರ್ಗಾ, ಮುಜ್ಜುಖಾದ್ರಿ ದರ್ಗಾ ಅಲ್ಲದೆ ಸಿದ್ಧಪುರುಷರಾದ ಈಶ್ವರಪ್ಪಾ ಚೌಡಪ್ಪರ ಗದ್ದಿಗೆ, ಬಾಲಗ್ರಹ ದೋಷಕ್ಕೊಳಗಾದ ಮಕ್ಕಳಿಗೆ ಸಂಜೀವಿನಿಯಾಗಿದೆ. ಪ್ರತಿ ರವಿವಾರ ಬಹುಸಂಖ್ಯಾತ ಜನ ಈ ಗದ್ದುಗೆಗೆ ನಡೆದುಕೊಳ್ಳುತ್ತಾರೆ. ಹಿಂದೆ ಗೋಗಿ ಪ್ರಸಿದ್ಧ ಪಟ್ಟಣವಾಗಿತ್ತಲ್ಲದೆ ಆದಿಲ್‌ಶಾಹಿ ಅರಸರ ಕಾಲದಲ್ಲಿ ಗೋಗಿಮಹಲ್ ಎನ್ನಿಸಿಕೊಂಡಿತ್ತು. (ಡಿಎನ್‌ಅ)

ಗೋಗಿ ಬನಶಂಕರಿ ಜಾತ್ರೆ: ಯಾದಗಿರ ಜಿಲ್ಲೆ ಶಹಾಪೂರ ತಾಲ್ಲೂಕಿನ ಪ್ರಸಿದ್ಧ ಜಾತ್ರೆ. ಜಾತ್ರೆ ಬನಶಂಕರಿಗೆ ಗೋಗಿ ಚೌಡಮ್ಮ ಎಂದೂ ಕರೆಯುತ್ತಾರೆ. ಈ ದೇವಾಲಯಕ್ಕೆ ಬನಶಂಕರಿ ಎಂದು ಕೂಡಾ ಕರೆಯುತ್ತಾರೆ. ಇದು ಶತಮಾನಕ್ಕಿಂತ ಪೂರ್ವದ್ದಾಗಿದೆಯೆಂದು ಹೇಳಲಾಗುತ್ತದೆ. ದೇವಿ ಬನಶಂಕರಿಯ ಹೆಸರಿನಲ್ಲೇ ಸೂಚಿಸುವಂತೆ ಪ್ರತಿ ವರ್ಷ ಬನ ಚಿಗುರುವ ಋತುವಿನ ಕಾಲದ ಬನದ ಹುಣ್ಣಿಮೆಯಲ್ಲಿ ಜರುಗುತ್ತದೆ.

ಬನಶಂಕರ ದೇವಿಯ ಗರ್ಭಗುಡಿ ಮುಂಭಾಗದಲ್ಲಿ ವಿಶಾಲವಾದ ಪ್ರಾಂಗಣ. ಆನಂತರ ವಿಶಾಲವಾದ ಆಕಾಶ ಕಾಣುವಂತಿರುವ ಅದರ ಮುಂದಿನ ಸ್ಥಳ. ಇದಕ್ಕೆ ಹೊಂದಿಕೊಂಡಂತೆ ಗೋಡೆಗೆ ಅಂಟಿಕೊಂಡಿರುವ ಸಣ್ಣದಾದ ವೇದಿಕೆ ಇದೆ. ಇಲ್ಲಿ ಗುಡಿಯಲ್ಲಿ ನಡೆಯುವ ಎಲ್ಲ ಪ್ರವಚನ ಪುರಾಣ ಸಂಕೀರ್ತನೆಗಳನ್ನು ಈ ಎತ್ತರದಲ್ಲಿರುವ ದೇವರ ದಾಸಿಮಯ್ಯನ ವೇದಿಕೆ ಎಂದೇ ಕರೆಯುವ ಸ್ಥಳದಲ್ಲಿ ನಡೆಯುವುದು. ಇದರ ಮುಂಬದಿಯಲ್ಲಿ ಭಕ್ತರು ಕುಳಿತು ಕೇಳಲು ವಿಶಾಲವಾದ ಸ್ಥಳವಿದೆ. ಬಾದಾಮಿಯಲ್ಲಿನ ಮೂಲ ದೇವಿ ಬನಶಂಕರಿಯ ಜಾತ್ರೆಯಷ್ಟು ವೈಭವಯುತ ವಾಗಿರದಿದ್ದರೂ ಇದು ಇತ್ತೀಚಿಗೆ ತನ್ನದೇ ಆದ ವಿಶೇಷತೆಯಿಂದ ಈ ಜಾತ್ರೆ ನಡೆಯುತ್ತದೆ. ಬನದ ಹುಣ್ಣಿಮೆಯ ದಿನ ಮುಂಜಾನೆಯಿಂದ ದೇವಾಲಯ ಅಲಂಕಾರಗೊಂಡು ಬೆಳಿಗ್ಗೆ ದೇವಿಯ ಉತ್ಸವದ ವಿಗ್ರಹವನ್ನು ಗಂಗಾ ಸ್ನಾನಕ್ಕೆಂದು ಸಮೀಪದ ಭಾವಿಗೆ ಕೊಂಡೊಯ್ದು, ವಿಧಿ ವಿಧಾನಗಳಿಂದ ಭಜನೆ ಮೇಳದೊಂದಿಗೆ ತಾಯಿ ಸರ್ವ ಶಕ್ತಿರೂಪಿಣಿ ಬನಶಂಕರಿಯನ್ನು ಭಜನೆ ಮಾಡುತ್ತ ಊರಿನ ಪ್ರಮುಖ ಬೀದಿಯಲ್ಲಿ ಪುರವಂತಿಕೆಯೊಂದಿಗೆ ಗುಗ್ಗಳ ಹಾಕುತ್ತ ನಡೆದು, ಪುರವಂತರಾಡುವ ಈ ಜಾತ್ರೆಯ ವಿಶೇಷತೆಗಳಲ್ಲೊಂದು.

ಪುರವಂತರು ಒಡಪು ಹೇಳಿದರೆ ಮೈ ಜುಮ್ಮೆನ್ನುವುದು ಅದಕ್ಕೆ ತಕ್ಕಂತೆ ಮೃದಂಗ ಬಾರಿಸುವ ಮತ್ತು ಸನಾದಿ ಕಣಿನಾದ ನೋಡುಗರನ್ನು ಭಾವುಕತೆಗೆ ಕೊಂಡೊಯುತ್ತದೆ. ಪುರವಂತರು ಹತ್ತು ಹನ್ನೆರಡು ಜನರಿದ್ದು, ಸರದಿಯಂತೆ ಈ ಒಡಪು (ವಚನಗಳು ಹೇಳುತ್ತಾರೆ. ಅಲ್ಲಲ್ಲಿ ಕುಣಿದು (ಇದೊಂದು ವಿಶೇಷ ನರ್ತನದ ಹೆಜ್ಜೆ ಹಾಕುವುದು) ದೇವಿಯ ಉತ್ಸವದ ಪಲ್ಲಕ್ಕಿ ಎದುರು ಇದು ನಡೆಯುವುದು. ಆ ನಂತರ ಈ ಪುರವಂತಿ-ಕೆಯವರು ಶಸ್ತ್ರಹಾಕುವುದು.

ಒಡಪು ಹೇಳುತ್ತ 4–5 ಅಡಿ ಉದ್ದವಾದ ಸಣ್ಣ ಛಡಿಯಂತೆ ಕಾಣುವ ಪಂಚಲೋಹ ಅಥವಾ ತಾಮ್ರದಿಂದ ಕೂಡಿದ ಅಸ್ತ್ರವನ್ನು ಹಾಕಿಕೊಳ್ಳುವರು. ಅದರಂತೆ ದೇವಿಗೆ ಹರಕೆ ಹೊತ್ತಿರುವ ಭಕ್ತರಿಗೂ ಕೂಡಾ ಇದನ್ನು ಹಾಕುವ ವಾಡಿಕೆ ಇದೆ. ಇದು ಗಲ್ಲದ ಮತ್ತು ದೇಹದ ಯಾವುದೇ ಮೆತ್ತನೆಯ ನಿರ್ದಿಷ್ಟ ಭಾಗದಲ್ಲಿ ಹಾಕಿಕೊಳ್ಳಲಾಗುವುದು. ಇದನ್ನು ಶಸ್ತ್ರಹಾಕುವುದು ಎನ್ನುತ್ತಾರೆ. ಇದು ಹಾಕಿದ ಜಾಗದಲ್ಲಿ ರಕ್ತವಾಗಲಿ, ಗಾಯವಾಗಲಿ ಕಾಣದು. ಹಾಕಿದ ಆನಂತರ ದೇವಿಯ ಹೆಸರಿನಲ್ಲಿ ಭಸ್ಮ ಹಚ್ಚುವರು.

ಹೀಗೆಯೇ ಮುಂದುವರೆಯುತ್ತ 108 ಕುಂಭಗಳನ್ನು (ಕೊಡ) ಹೊತ್ತ ಊರಿನ ಸುಮಂಗಲೆಯರು ಮೂಲ ಗುಡಿಗೆ ಬರುವರು. ಆನಂತರ ದೇವಿಯ ಸನ್ನಿಧಿಗೆ ಬಂದು ದೇವಿಗೆ ಉಡಿ ತುಂಬಿ, ತದನಂತರ ಸುಮಂಗಲೆಯರಿಗೆ ಉಡಿತುಂಬುವರು. ಹರಕೆ ಬೇಡಿಕೊಂಡ ಭಗಿನಿಯರು ಭಕ್ತರ ಸನ್ನಿಧಿಯಲ್ಲಿ ತಮ್ಮ ಹರಕೆ ಮುಟ್ಟಿಸುವರು. ಸಾಯಂಕಾಲ ಗೋಧೂಳಿ ಸಮಯಕ್ಕೆ ರಥೋತ್ಸವ ನಡೆಯುವದು. ರಥದಲ್ಲಿ ಬನಶಂಕರಿಯನ್ನು ವಿಧಿವಿಧಾನದಿಂದ ಪೂಜೆ ಸಲ್ಲಿಸಿ, ಶಿವಾಚಾರ್ಯರು ರಥಕ್ಕೆ ಅಭಿನಂದಿಸಿ ಅಪ್ಪಣೆ ನೀಡಿದಾಗ ಉತ್ತತ್ತಿ, ಕಲ್ಲು ಸಕ್ಕರೆ, ಮಂಡಾಳು ಹಾಗೂ ಹೂವುಗಳನ್ನು ರಥಕ್ಕೆ ಹಾರಿಸಿ ತಾಯಿಯ ನಾಮಸ್ಮರಣೆಯ ಉದ್ಘೋಷ ಮಾಡುತ್ತ ರಥ ತನ್ನ ಮೂಲ ನೆಲೆಯಿಂದ ನೂರಾರು ಅಡಿಗಳವರೆಗೆ ಸಾಗಿ ಬರುವುದು. ಈ ತೇರು ನೋಡಲು ಭಕ್ತರು ಕಿಕ್ಕಿರಿದು ತುಂಬುವರು.

ಈ ಜಾತ್ರೆ ಪ್ರಾರಂಭವಾಗುವ ಹಿಂದಿನ ಐದಾರು ದಿನಗಳಲ್ಲಿ ದಿನಾಲು ಸಂಜೆ ಗುಡಿಯಲ್ಲಿ ಏಳರಿಂದ ಹತ್ತು ಗಂಟೆಯವರೆಗೆ ವಿಶೇಷವಾಗಿ ಆಹ್ವಾನಿಸಲ್ಪಟ್ಟ ಶರಣರು, ಪೀಠಾಧಿಪತಿಗಳು, ಶಿವಾಚಾರ್ಯರು, ಅವಧೂತರು ಮುಂತಾದವರು ಮಾನವನು ಜೀವನ್ಮುಕ್ತಿ ಪಡೆಯಲು ಪ್ರಾಪಂಚಿಕವನ್ನು ಗೆದ್ದು ಶಿವನೊಲುಮೆ ಪಡೆಯಲು ಈ ಎಲ್ಲ ಪೂಜ್ಯರು ಒಂದೊಂದು ವಿಷಯವಾಗಿ (ಉದಾಹರಣೆಗೆ) "ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ಕಾಣಾ ರಾಮನಾಥ (ದೇವರ ದಾಸಿಮಯ್ಯ)" ಮತ್ತು ಅಕ್ಕನವರ ವಚನದ ತಿರುಳಿನ "ಅಗಸ ನಿರೋಳಗಿರ್ದು ಬಾಯಾರಿ ಸುತ್ತಂತೆ" ಹೀಗೆಯೇ ಅನೇಕ ಶರಣ–ಶರಣೆಯರ ಅಮೃತವಾಣಿಗಳ ಸಿಂಚನವಾಗುತ್ತದೆ. ಈ ಎಲ್ಲ ಶಿವಾಚಾರ್ಯರು, ಶರಣರು ಜನರ ಮನದಾಳಕ್ಕಿಳಿಯುವಂತೆ ಪ್ರಪಂಚದಿಂದ ಪಾರಮಾರ್ಥದೆಡೆ ಹೋಗಲು ಬೋಧಿಸುವರು. ಈ ದೇವಾಲಯ ಸರ್ವಧರ್ಮ ಸಮನ್ವಯದ ಸಂಕೇತ ಇಲ್ಲಿ ಯಾವುದೇ ತಾರತಮ್ಯಗಳಿಲ್ಲ. ಊರಿನ ಜನ ಬಂದಂತಹ ಭಕ್ತರಿಗೆ ಸಹಕಾರ ನೀಡುತ್ತ ಜಾತ್ರೆ ಸರಾಗವಾಗಿ ನಡೆಯಲು ಶ್ರಮಿಸುತ್ತಾರ

(ಎಂಎನ್‌ಜಿ)

ಗೋರಟಾ: ಬೀದರ ಜಿಲ್ಲೆಯ ಮಹತ್ವದ ಸಾಂಸ್ಕೃತಿಕ ಕೇಂದ್ರ. ಬಸವಕಲ್ಯಾಣದ ಸೆರಗಿನಲ್ಲಿದೆ. ಕಲ್ಯಾಣ ಕರ್ನಾಟಕದ ಪುರಾತನ ನೆಲೆಗಳಲ್ಲಿ ಇದು ಕೂಡ ಒಂದಾಗಿದೆ. ಶತಮಾನಗಳಿಂದ ಗೋರಟಾ ಈ ಭಾಗದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಕೊಡುಗೆ ನೀಡುತ್ತ ಬಂದಿದೆ. ಜಿಲ್ಲೆಯಲ್ಲಿಯೇ ಇದು ಅತ್ಯಧಿಕ ಶಾಸನಗಳನ್ನು ಹೊಂದಿದೆ. ಅದರಿಂದಾಗಿ ಇದನ್ನು 'ಕಲ್ಯಾಣ ಚಾಲುಕ್ಯರ ಶಾಸನಗಳ ತವರು ಮನೆ' ಎಂದು ಕರೆಯಲಾಗಿದೆ.

ಇದು ಕಲ್ಯಾಣ ಚಾಲುಕ್ಯರ ಪ್ರಮುಖ ವಿದ್ಯಾ ಕೇಂದ್ರ, ಅಗ್ರಹಾರವೂ ಆಗಿತ್ತು. ಧಾರ್ಮಿಕ ಮತ್ತು ಸಂಗೀತಕ್ಕೂ ಅಷ್ಟೇ ಮುಖ್ಯ ಕೇಂದ್ರವಾಗಿತ್ತು ಎಂದು ಲಭ್ಯವಿರುವ ಅನೇಕ ಶಾಸನಗಳು ಹೇಳುತ್ತವೆ. ಈ ಗ್ರಾಮದ ಅಧಿದೇವತೆ ರುದ್ರೇಶ್ವರ. ಇಲ್ಲಿ ದೊರೆತಿರುವ ಶಾಸನಗಳು ಹನ್ನೆರಡು. ಇವುಗಳಲ್ಲಿ ಒಂದು ತಾಮ್ರ ಶಾಸನವೂ ಸೇರಿದೆ. ಇವುಗಳಲ್ಲದೆ 5 ವೀರಗಲ್ಲುಗಳು, ಒಂದು ಮಾಸ್ತಿಕಲ್ಲು ಇವೆ. ಈ ಶಾಸನಗಳಲ್ಲಿ ಒಂದು 'ನಿಷದಿ'. ಇನ್ನುಳಿದವು ದಾನ ಶಾಸನಗಳು. ಇವುಗಳೆಲ್ಲವೂ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ್ದು. 6ನೆಯ ವಿಕ್ರಮಾದಿತ್ಯ, 3ನೆಯ ಸೋಮೇಶ್ವರ, ವಿಕ್ರಮಾದಿತ್ಯನ ಪಟ್ಟದ ರಾಣಿಯರಾಗಿದ್ದ ಚಂದ್ರಲಾ, ಕೇಸಲಾ ದೇವಿಯರು, ಅಮಾತ್ಯರು, ಸಾಮಂತರು, ಅಧಿಕಾರಿಗಳು ಇಲ್ಲಿದ್ದ ರುದ್ರೇಶ್ವರ ದೇವರಿಗೆ ಭೂಮಿ–ಸೀಮೆಗಳನ್ನು ದಾನ ನೀಡಿದ ಸಂಗತಿಗಳನ್ನು ಇವು ಹೊಂದಿದೆ. ತಾಮ್ರ ಶಾಸನ ಮಾತ್ರ ಇಲ್ಲಿಯವರೆಗೆ ದೊರಕಿಲ್ಲ. ಆ ಕಾಲದ ಪ್ರಸಿದ್ಧ ವಿದ್ಯಾ ಕೇಂದ್ರವಾಗಿದ್ದ ಗೋರಂಟಿಯಲ್ಲಿ ಸಂಗೀತ ವಿಶ್ವವಿದ್ಯಾಲಯವೇ ಇತ್ತು. ಸಂಗೀತ ವಿದ್ವಾಂಶರ ಭಾಸ್ಕರ ಚಟ್ಟೋಪಾಧ್ಯಾಯ ಎಂಬುವರು 'ಪ್ರಧಾನಾಚಾರ್ಯ' ಅಂದರೆ ಕುಲಪತಿಗಳಾಗಿದ್ದರು. 200 ಜನ ಪ್ರಾಧ್ಯಾಪಕರು ಇಲ್ಲಿ ಬೋಧಿಸುತ್ತಿದ್ದರು. ಆದರೆ ಇತ್ತೀಚಿನ ಸಂಶೋಧನೆ ಮಾಡಿದ ಕೆಲವು ಕುಲಪತಿಯಾಗಿದ್ದವರು ಸಂಗೀತಜ್ಞ 'ರುದ್ರಮಿಶ್ರ'ನೇ ಹೊರತು ಭಾಸ್ಕರ ಚಟ್ಟೋಪಾಧ್ಯಾಯ ಅಲ್ಲ ಎಂದಿದ್ದಾರೆ.

ರುದ್ರಮಿಶ್ರ ಘನಸಂಗೀತ ವಿದ್ವಾಂಸ. ಸಂತರ್ದೇವಾಡಿ (ಬಸವನ ಬಾಗೇವಾಡಿ) ಈತ ಅರಸ 6ನೆಯ ವಿಕ್ರಮಾದಿತ್ಯನ 'ಗುರು' ಆಗಿದ್ದನೆಂದು ಕೆಲವರು ಹೇಳುತ್ತಾರೆ. ಈತನಲ್ಲಿಯೇ ಪಟ್ಟದರಸಿಯರಾಗಿದ್ದ ಚಂದ್ರಲಾ (ಚಂದ್ರಲೇಖ?) ಮತ್ತು ಕೇಶಲಾ (ಮಹಾದೇವಿ?) ಸಂಗೀತ ನಾಟ್ಯ ಕುರಿತು ಪ್ರವೀಣೆಯರಾಗಿದ್ದರು. ಚಂದ್ರಲಾದೇವಿ 'ಸಂಗೀತ ನೃತ್ಯ ವಿದ್ಯಾಧರಿ', 'ಸಂಗೀತ ವಿಶಾರದೆ' ಎಂಬ ಮುಂತಾದ 'ಪದವಿ' ಹೊಂದಿದ್ದಳು.

ಈ ಎಲ್ಲ ಮಹತ್ವದ ಸಂಗತಿಗಳು ಇಲ್ಲಿರುವ ಶಾಸನಗಳಿಂದ ತಿಳಿದು ಬರುತ್ತವೆ. ಸ್ವತಃ ಕಲೆ, ಸಾಹಿತ್ಯ ಸಂಗೀತ ಪ್ರೇಮಿಯಾಗಿದ್ದ ಆರನೆಯ ವಿಕ್ರಮಾದಿತ್ಯ ಅವುಗಳ ನಿರಂತರ ಅಭ್ಯುದಯಕ್ಕೆ ಅಪಾರ ಪ್ರೋತ್ಸಾಹ ನೀಡುತ್ತಿದ್ದ. ವಿದ್ಯಾರ್ಥಿಗಳ, ಕಲಾವಿದರ, ಅಧ್ಯಾಪಕರ ಮತ್ತು ಅರ್ಚಕರ ಯೋಗಕ್ಷೇಮಕ್ಕೆ, ವಿದ್ಯಾಕೇಂದ್ರಗಳ, ದೇವಾಲಯಗಳ ನಿತ್ಯ ವ್ಯವಸ್ಥೆಗೆ ಅಮೂಲ್ಯವಾದ ಭೂಮಿಯನ್ನು ದಾನ ನೀಡಿದ್ದ.

ಇಲ್ಲಿಯ ಒಂದು ಶಾಸನ ಕರ್ನಾಟಕದ ಅತ್ಯಂತ ದೊಡ್ಡ ಶಾಸನಗಳಲ್ಲಿ ಒಂದಾಗಿದೆ. 10 ಅಡಿ ಉದ್ದ, ಐದೂವರೆ ಅಡಿ ಅಗಲವಾಗಿದೆ. ಶಾಸನದ ತುದಿಯಲ್ಲಿ ಸುಂದರ ಶಿಲ್ಪಗಳಿವೆ. ಎರಡು ಬದಿಗಳಲ್ಲಿ ಹಾಲು ಕರೆವ ಗೋವುಗಳಿವೆ. ಹಾಲುಣ್ಣುತ್ತಿರುವ 'ಕರು'ಗಳು ಬಲು ಮುದ್ದಾಗಿವೆ. ನಡುವೆ

ಎರಡು ನಿಂತ ಮೂರ್ತಿಗಳು. ಎರಡು ಶಿವಲಿಂಗಗಳು ಮತ್ತು ಸೂರ್ಯ ಚಂದ್ರರ ಕೆತ್ತನೆ ಇವೆ. ರಸ್ತೆ ನಿರ್ಮಿಸಲು ಹೊಲವನ್ನು ಅಗೆಯುತ್ತಿದ್ದಾಗ ಅಮೂಲ್ಯ ಶಾಸನ ಆಕಸ್ಮಿಕವಾಗಿ ದೊರಕಿತು. ಎಷ್ಟೋ ದಿನಗಳ ಕಾಲ ಇದು ಅಜ್ಞಾತವಾಗಿಯೇ ಇತ್ತು. ಇದು ದಾನ ಶಾಸನವಾಗಿದ್ದು ಗ್ರಾಮದ ಅಧಿದೇವತೆಯಾಗಿದ್ದ ರುದ್ರೇಶ್ವರ ದೇವರ ನಿತ್ಯವ್ಯವಸ್ಥೆಗೆ ಮತ್ತು ಸಂಗೀತ ವಿಶ್ವವಿದ್ಯಾಲಯಕ್ಕೆ 'ಭಲ್ಲುಂಕೆ-42' ಹಳ್ಳಿಗಳನ್ನು ಅರಸ 6ನೆಯ ವಿಕ್ರಮಾದಿತ್ಯ ತನ್ನ ಸಾಮಂತ ರುದ್ರ ಚಂಪ ಮತ್ತು ಸ್ಥಳೀಯ ಮಹಾಜನಗಳ ಸಮ್ಮುಖದಲ್ಲಿ ದಾನ ನೀಡಿದ ಸಂಗತಿ ಒಳಗೊಂಡಿದೆ. ಗೋರಂಟಿಯಲ್ಲಿ ರುದ್ರೇಶ್ವರ, ಸಂಕೇಶ್ವರ, ಮಲ್ಲೇಶ್ವರ, ಕುಂಭೇಶ್ವರ ಮತ್ತು ನಗರೇಶ್ವರ ಎಂಬ ಐದು ದೇವಾಲಯಗಳಿದ್ದುವು. ಇವುಗಳಲ್ಲಿ ರುದ್ರೇಶ್ವರ ಅಗ್ರ ದೇವತೆ. ಅರಸರು ಈ ದೇವರಿಗೆ ತುಂಬಾ ನಡೆದುಕೊಳ್ಳುತ್ತಿದ್ದರು. ಈ ಭಾಗದಲ್ಲಿಯೂ ರುದ್ರೇಶ್ವರ ದೇವರ ಪ್ರಭಾವ ಇತ್ತು. ದೇವಾಲಯವೂ ಅಷ್ಟೇ ಭವ್ಯವಾಗಿತ್ತು ಎಂಬ ಮಹತ್ವದ ಅಂಶವು ಈ ಶಾಸನದಿಂದ ತಿಳಿದು ಬಂದಿದೆ. 6ನೆಯ ವಿಕ್ರಮಾದಿತ್ಯ ಆತನ ರಾಣಿಯರ ಬಿರುದುಗಳನ್ನು ಕೂಡ ಇದು ಒಳಗೊಂಡಿದೆ. ಇದರ ಲಿಪಿಕಾರ ಮಲ್ಲಪೋಜ. ಇನ್ನು 30–40 ಸಾಲುಗಳು ಓದಲು ಬಾರದಷ್ಟು ಸವೆದು ಹೋಗಿವೆ.

ರುದ್ರೇಶ್ವರ ದೇವಾಲಯದ ಬಗ್ಗೆ ಐದಾರು ಶಾಸನಗಳಲ್ಲಿ ಪ್ರಸ್ತಾಪ ಇದೆ. ಈಗಿರುವ ಹನುಮಾನ ಮಂದಿರದ ಪಕ್ಕದಲ್ಲಿ ರುದ್ರೇಶ್ವರ ದೇವಾಲಯ ಇತ್ತೆಂದು ಕೆಲವು ಸಂಶೋಧಕರು ಪತ್ತೆ ಹಚ್ಚಿದ್ದಾರೆ. ಇಲ್ಲೊಂದು ಪುಷ್ಕರಿಣಿಯೂ ಇದೆ. ಅಲ್ಲಿ ಮಣ್ಣು ಅಗೆಯುವಾಗ ಅನೇಕ ಭಗ್ನಗೊಂಡ ಅವಶೇಷಗಳು ದೊರಕಿವೆ. ಪುಷ್ಕರಣಿ ತೋಟಕ್ಕಾಗಿ ಬೇರೆ ಜನರು ಉಪಯೋಗಿಸುತ್ತಿದ್ದಾರೆ.

ಹನುಮಾನ ಮಂದಿರದ ಹತ್ತಿರ ದೊರಕಿರುವ ಶಾಸನದಲ್ಲಿ ಅಂದು ಗೋರಂಟಿಯ ರುದ್ರೇಶ್ವರ ದೇವರಿಗೆ ನಿತ್ಯವೂ ಸಂಗೀತದಲ್ಲಿ ರುದ್ರಪಠಣ ಅರ್ಚನೆಯಾಗುತ್ತಿತ್ತು. ರುದ್ರೇಶ್ವರ ದೇವರ ಲಿಂಗಭೋಗ ಮತ್ತು ಗೀತ ವಾದ್ಯಗೈದ ಮೂಲ ಮಹೇಶ್ವರ ಪರಿವಾರದವರ ಅಂಗಭೋಗಕ್ಕೆ ಸಮೃದ್ಧ ಗ್ರಾಮಗಳನ್ನು ದಾನ ನೀಡಿದ ಮಹತ್ವದ ಸಂಗತಿ ಒಳಗೊಂಡಿದೆ.

ಇಂದು ಕೂಡ ಗೋರಟಾದಲ್ಲಿ 'ಸಂಗೀತ ರುದ್ರ ಪಠಣ' ವಿನೂತನ ಕಾರ್ಯ ನಡೆದುಕೊಂಡು ಬಂದಿದೆ. ಅದು 'ವೇದಗಾಯನಾ ಚಾರ್ಯ'. 'ಸಂಗೀತ ಶ್ರೀ ರುದ್ರ ರತ್ನ' ಶ್ರೀ ವಿರೂಪಾಕ್ಷಯ್ಯಸ್ವಾಮಿ ಅವರ ನೇತೃತ್ವದಲ್ಲಿ ಕಳೆದ 50 ವರ್ಷಗಳಿಂದ ತಮ್ಮ ಶ್ರೀ ಸಂಗೀತ ರುದ್ರ ಸಂಘದ ಮುಖಾಂತರ ಸದ್ದಿಲ್ಲದೆ ಸಾಂಸ್ಕೃತಿಕ ಸೇವೆ ಮಾಡುತ್ತಿದ್ದಾರೆ. ತಮ್ಮ 11 ಜನ ವೇದಗಾಯಕರು. 11 ವಿಧಗಳ ವಾದ್ಯಗಳೊಂದಿಗೆ ಪ್ರಸ್ತುತ ನಡೆಸುವ 'ಸಂಗೀತ ಶ್ರೀ ರುದ್ರ' ಕಾರ್ಯ ಕೇಳಿಯೇ ಆನಂದ ಪಡಬೇಕು. ದೇಶದ ನಾನಾ ಕಡೆಗಳಲ್ಲಿ ತಮ್ಮ ವಿನೂತನ ಭಕ್ತಿ ಸಂಗೀತ ಕಾರ್ಯಕ್ರಮ ನೀಡಿ ಅಪಾರ ಜನಪ್ರಿಯತೆ ಪಡೆದುಕೊಂಡಿದ್ದಾರೆ.

ಕಲ್ಯಾಣ ಚಾಲುಕ್ಯರ ಭವ್ಯ ಸಾಂಸ್ಕೃತಿಕ ಕೇಂದ್ರವಾಗಿದ್ದ ಗೋರಟಾ ಕಾಲನ ಹೊಡೆತಕ್ಕೆ ಸಿಕ್ಕು ಜರ್ಜರಿತಗೊಂಡು ಇಂದು ಪಾಳು ಬಿದ್ದಿದೆ. ಬಹಮನಿ, ಬರಿದಷಾಹಿ ಸುಲ್ತಾನರ ಮತ್ತು ಹೈದರಾಬಾದ್ ನಿಜಾಂ 'ರಜಾಕಾರರ' ದಾಳಿಗೆ ತುತ್ತಾದ ಗೋರಟಾದ ಭವ್ಯ ದೇವಾಲಯ. ವಾಸ್ತುಶಿಲ್ಪ ಶಾಸನಗಳು ಧ್ವಂಸಗೊಂಡಿವೆ. ಅವುಗಳ ಭಗ್ನಾವಶೇಷಗಳು ಮನೆ, ಮಠ, ಶಾಲೆ, ದೇವಾಲಯ, ಹಾದಿ-ಬೀದಿ ದನಗಳ ಕೊಟ್ಟಿಗೆ ಎಲ್ಲೆಂದರಲ್ಲಿ ಬಿದ್ದಿವೆ. ಸಾಸನ್ ಪಟ್ಟಿ ಕಲ್ಯಾಣದ ಚಾಲುಕ್ಯರ ಆಡಳಿತದಲ್ಲಿ 'ಗೋರಂಟಿ' ಶಾಸನ ತಯಾರಿಸುವ ತರಬೇತಿ ಕೇಂದ್ರವೂ ಆಗಿತ್ತು. ಗೋರಟಾ ಸಮೀಪ ನೈಋತ್ಯದಲ್ಲಿ ಹತ್ತಾರು ಎಕರೆ ಪ್ರದೇಶವನ್ನು ಗ್ರಾಮಸ್ಥರು. ಶಾಸನ್-ಸಾಸನ್‌ಪಟ್ಟಿ ಎಂದಾಗಿದೆ. ಈ ಹಿಂದೆ ಅದು ಶಾಸನ ಕೆತ್ತುವ ಕಾರ್ಯಾಗಾರ ಇದ್ದ ಪ್ರದೇಶವೆಂದು ಶಾಸನಗಳಿಂದ ತಿಳಿದು ಬರುತ್ತದೆ.

(ಜಿಆರ್)

ಗೌ

ಗೌರಿ ಕೂಡಿಸುವುದು: ಶಿವನ ಮಡದಿ ಪಾರ್ವತಿ ಎಂದೇ ಗೌರಿಯನ್ನು ಕರೆಯುತ್ತಾರೆ. ಗೌರಿಯನ್ನು ಒಂಬತ್ತು ದಿನಗಳವರೆಗೆ ಕೂಡಿಸಿದರೂ ಹಾಡುವುದು ಐದು ದಿನಗಳು ಮಾತ್ರ. ಗೌರಿಯ ಆಚರಣೆಯಲ್ಲಿ ಹೈದ್ರಾಬಾದ ಕರ್ನಾಟಕದಲ್ಲಿ ವೈವಿಧ್ಯತೆಯಿದ್ದರೂ ಹಾಡುಗಳಲ್ಲಿ ಹೋಲಿಕೆ ಇದೆ. ಯಾದಗೀರ ತಾಲ್ಲೂಕಿನಲ್ಲಿ ಪಡಸಾಲೆಯ ಒಂದು ಮಾಡದಲ್ಲಿ (ಅದಕ್ಕೆ ಗೌರಿ ಮಾಡವೆಂದೇ ಕರೆಯಲಾಗುತ್ತದೆ.) ಶಿವಗೌರಿ ಗಣಪತಿ ಒಂದೇ ಪೀಠದಲ್ಲಿ ಕುಳಿತಿರುವಂತೆ ಬಡಿಗನಿಂದ ಮಾಡಿಸಿದ ಮೂರ್ತಿ ಇದ್ದು ಪ್ರತಿ ವರ್ಷವೂ ಅದನ್ನೇ ತೊಳೆದು ಇಟ್ಟು ಪೂಜಿಸುವರು. ಒಂಬತ್ತು ದಿನಗಳವರೆಗೆ ಹಾಡಿ ಕೊನೆಯ ದಿನ ಕಾರ್ತೀಕ ಹುಣ್ಣಿಮೆಯಂದು ನೈವೇದ್ಯ ಮಾಡಿ ಮುಗಿಸುವರು. ಆಳಂದ ತಾಲ್ಲೂಕಿನಲ್ಲಿ ಇದು ಬೇರೆ ರೀತಿ ಸಂಪ್ರದಾಯ ಇದೆ. ತಳವಾರ "ಭಾಜದ" ಮನೆಗಳಿಗೆ ಒಂದೊಂದು ಬುಟ್ಟಿ ಮಣ್ಣು ತಂದು ಹಾಕುವನು (ಮಾಲಿಗೌಡ, ಪೊಲೀಸಗೌಡ, ಕುಲಕರ್ಣಿ, ಐಗೋಳು, ಅಕ್ಕಸಾಲಿಗರು, ಹೂಗಾರರು ಭಾಜದ ಮನೆಯವರು). ಅವನಿಗೆ ಕೊಬ್ಬರಿ, ಅಳ್ಳ, ಕುಬಸದ ಕಣ ಕೊಡುವರು. ಸಂಜೆಯವರೆಗೂ ಹೆಣ್ಣುಮಕ್ಕಳು ಗೌರಮ್ಮ ಮಾಡುವರು. ಕೆಲಸರಿನಿಂದ ಚಿಕ್ಕ ಚಿಕ್ಕ ಇಟ್ಟಂಗಿಗಳಂತೆ ಮಾಡಿ ತಳದಲ್ಲಿ ಐದು ಇಟ್ಟು ಮೇಲೆ ಕಡಿಮೆಯಾಗುತ್ತಾ ಶಿಖರಾಕೃತಿ ಬರುವಂತೆ ಗೋಪುರದ ರೀತಿಯಲ್ಲಿ ಕಡಿಮೆ ಮಾಡುತ್ತಾ ಹೋಗುವರು. ಈ ರೀತಿ ಮಾಡಿ ಸಾಯಂಕಾಲ ಅರಿಸಿನ ಕುಂಕುಮದಿಂದ ಪೂಜಿಸಿ ಹೂ ಏರಿಸಿ ಪಟಾಕಿ ಹಚ್ಚಿ ಆರತಿ ಬೆಳಗುವರು. ಗೌರಿಯ ಮತ್ತು ಕೋಲು ಪದಗಳನ್ನು ಹಾಡುವರು. ಆರತಿ ಮಾಡಿದ ಮೇಲೆ ಮತ್ತೆ ಇನ್ನೊಬ್ಬರ ಮನೆಗೆ ಹೋಗಿ ಅಲ್ಲಿಯೂ ಪೂಜಿಸಿ

ಹಾಡುವರು. ತಮ್ಮ ತಮ್ಮ ಓಣಿಯಲ್ಲಿ ಹೀಗೆಯೇ ಮನೆ ಮನೆಗೆ ಹೋಗಿ ಹಾಡಿದ ಮೇಲೆ ಊರಿನ ಪ್ರಮುಖ ಸ್ಥಳದಲ್ಲಿ ವಾದ್ಯಗಳನ್ನು ಬಾರಿಸುತ್ತ ಬಡಿಯುತ್ತ ಭಜನೆ ಮಾಡುತ್ತ ತಂದಿಡುವರು. ಎಲ್ಲರೂ ತಂದಾದ ಮೇಲೆ ಊರ ಹೊರಗಿನ ಕೆರೆಗೋ ಭಾವಿಗೋ ಅಥವಾ ಹೊಲಕ್ಕೋ ಒಯ್ದು ವಿಸರ್ಜಿಸುವರು. ಗೌರಮ್ಮನನ್ನು ಒಂದು ಮಣೆಯ ಮೇಲೆ ಮಾಡಿಟ್ಟಿರುತ್ತಾರೆ. ಅದನ್ನು ಗಂಡಸರು ತಲೆ ಮೇಲೆ ಹೊತ್ತುಕೊಂಡು ಹೋಗುತ್ತಾರೆ. ಹೆಣ್ಣು ಮಕ್ಕಳು ಅಗಸಿಯವರೆಗೆ ಮಾತ್ರ ಹೋಗುವರು. ಆ ಮೇಲೆ ಮುಂದೆ ಗಂಡಸರು ಹೋಗಿ ವಿಸರ್ಜಿಸಿ ಬರುತ್ತಾರೆ.

ಗೌರಮ್ಮನ ಹಾಡುಗಳಲ್ಲಿ ಶಿವನು ಗುಟ್ಟಾಗಿ ಗಂಗೆಯನ್ನು ಮದುವೆಯಾದದ್ದು, ಗೌರಿ ಗಂಗೆಯ ಜಗಳ, ಗಂಗೆ ಕೋಪಿಸಿಕೊಂಡು ಹೋದಾಗ ಗೌರಿಗೆ ನೀರಿಲ್ಲದೆ ತೊಂದರೆಯಾದದ್ದು, ಗೌರಿ ಗಣಪನನ್ನು ತವರಿಗೆ ಕರೆದುಕೊಂಡು ಹೋದಾಗ ಗಣಪತಿ ಜಗಳ ತೆಗೆದದ್ದು, ಗೌರಿಯನ್ನು ಗಂಡನ ಮನೆಗೆ ಕಳಿಸುವುದು, ಶಿವನು ಗಂಗೆಯನ್ನು ಮದುವೆಯಾದಾಗ ಗೌರಿಗಾದ ದುಃಖ ಮುಂತಾದ ಹಾಡುಗಳನ್ನು ಹಾಡುತ್ತಾರೆ.

ಸೀಗಿಗೌರಿ ಕೂಡಿಸುವುದು, ಹಾಡುವುದು ಸಾಮಾನ್ಯವಾಗಿ ಒಂದೇ ರೀತಿ ಆಗಿದ್ದರೂ, "ಬೊಡ್ಡೆಮ್ಮ" ಎಂಬುದೊಂದು ವಿಶಿಷ್ಟ ಆಚರಣೆ ಚಿಂಚೋಳಿ ತಾಲ್ಲೂಕಿನಲ್ಲಿದೆ. ಗಣೇಶ ಚತುರ್ಥಿಯ ಮರುದಿನ ಈ ಆಚರಣೆ ಆರಂಭವಾಗುತ್ತದೆ. ಗುಳ್ಳವ್ವನ ತರಹ ಮೊದಲು ಏಳು ದಿನ ಸಗಣಿಯಿಂದ ಮಾಡಿ ಅನಂತರ ಹತ್ತು ದಿನ ಕೆಮ್ಮಣ್ಣಿನಿಂದ ಮಾಡಿ ಹಾಡುವರು. ಇಪ್ಪತ್ತೈದನೆಯ ದಿನ ಹೊನ್ನೆಕುಕ್ಕಿ ಹೂವಿನಿಂದ ಪೂಜಿಸಿ ವಿಸರ್ಜಿಸುವರು. ಮಳಖೇಡದ ಸುತ್ತಮುತ್ತಲು ಗೊಂಡೆಮ್ಮ, ಬದುಕಮ್ಮ ಎಂತಲೂ ಕರೆಯುತ್ತಾರೆ. ಅಂಗಳದಲ್ಲಿ ದೊಡ್ಡ ದೊಡ್ಡ ರಂಗೋಲೆಗಳನ್ನು ಹಾಕಿ ಅದರ ಮಧ್ಯದಲ್ಲಿ ಸಗಣಿಯಿಂದ ಗೋಲಾಕಾರ ಮಾಡಿಟ್ಟು ಪೂಜಿಸಿ ಅಡವಿಯಲ್ಲಿ ಸಿಗುವ ಕುಕ್ಕೆ, ಅವರಿ, ಹೂಗಳಿಂದ ಪೂಜಿಸಿ ಸುತ್ತಲೂ ನಿಂತು ಹಾಡುವರು. ಇದು ಕೂಡ ಗುಳ್ಳವ್ವನಂತೆಯೇ ಇದೆ. ಈ ಸಮಯದಲ್ಲಿ ಹಾಡಲಾಗುವ ಹಾಡುಗಳು ತೆಲಗು ಭಾಷೆಯಲ್ಲಿರುವುದರಿಂದ ಇದು ಸಂಪೂರ್ಣವಾಗಿ ಆಂಧ್ರದ ಆಚರಣೆಯಾಗಿದೆ. ಹೈದ್ರಾಬಾದ ಕರ್ನಾಟಕ ಭಾಗದಲ್ಲಿರುವ ಗೋಲವ್ವ, ಗುಳ್ಳವ್ವನೇ ಗೊಂಡೆಮ್ಮ, ಬೊಡ್ಡೆಮ್ಮ, ಬದುಕಮ್ಮ ಆಗಿರಬೇಕು. ಇದು ಸಾರ್ವತ್ರಿಕವಾದ ಆಚರಣೆಗಳಾಗಿರದೆ, ಪ್ರಾದೇಶಿಕವಾಗಿ ಸೀಮಿತವಾಗಿರುವ ಇನ್ನೂ ಹಲವಾರು ಆಚರಣೆಗಳು ಇವೆ.

ಹಬ್ಬಗಳ ಹಾಡುಗಳಲ್ಲಿ ವಿಶೇಷವಾಗಿ ಉಂಡುಟ್ಟು ನಲಿಯುವದರ ಜೊತೆಗೆ, ಗಂಡನ ಮನೆಯಲ್ಲಿರುವ ಹೆಣ್ಣು ಮಗಳು ತವರಿಗಾಗಿ ಹಂಬಲಿಸುವುದು, ತವರಿಗೆ ಹಾತೊರೆದು ಬರುವುದು, ತಾಯಿಯ ಮುಖ ಕಂಡೊಡನೆಯೇ ಸಂತೋಷ ಗೊಳ್ಳುವುದು ದಾಂಪತ್ಯದ ವಿರಸಗಳು ಮುಂತಾದವುಗಳ ಚಿತ್ರಣವಿದೆ. ಈ ಹಾಡುಗಳಲ್ಲಿ ಇನ್ನೂ ಎಳೆ ಹರೆಯದ ಹೆಣ್ಣಿನ ಮನೋಭಾವನೆಯನ್ನು ಕಾಣುತ್ತೇವೆ. ಗಂಗೆ-ಗೌರಿಯ ಹಾಡುಗಳಲ್ಲಿ ಮಾತ್ರ ಗೃಹಸ್ಥ ಜೀವನಾನುಭವಗಳು ಬಂದಿವೆ.

(ವೈಎಸ್)

ಗೌರೀ ಹಬ್ಬ: ಗೌರೀಹುಣ್ಣಿಮೆಯಲ್ಲಿ ಆಚರಿಸುವ ಹಬ್ಬ. ಗೌರಿ ಈಶ್ವರನ ಹೆಂಡತಿ, ಅವಳಿಗೆ ಈ ಹುಣ್ಣಿಮೆಯಂದು ವಿಜೃಂಭಣೆಯಿಂದ ಪೂಜೆ ಸಲ್ಲುತ್ತದೆ. ಇದು ಮುಖ್ಯವಾಗಿ ಹೆಣ್ಣು ಮಕ್ಕಳ ಹಬ್ಬ. ಈ ಹಬ್ಬದಲ್ಲಿ ಗೌರಿ ಮೂರ್ತಿಯನ್ನಿಟ್ಟು ಅದಕ್ಕೆ ಸೀರೆಯನ್ನು ಉಡಿಸಿರುತ್ತಾರೆ. ಇದನ್ನೇ ಅವರು ಗೌರಿ ಎಂದು ಕರೆಯುತ್ತಾರೆ. ಋತುಮತಿಯಾಗದ ಹುಡುಗಿಯರು ಮೂರು ದಿನ ಈ ಗೌರಿ ಮಕ್ಕಳಾಗುತ್ತಾರೆ. ಈ ಮಕ್ಕಳು ಗೌರಮ್ಮನನ್ನು ಕೂರಿಸುವ ಮನೆಗೆ ಹೋಗಿ ಗೌರಿಯನ್ನು ನೋಡಿಕೊಂಡು ಬರುತ್ತಾರೆ. ಹೀಗೆ ಗೌರಿಗೆ ಮೂರು ದಿನವೂ ನಾನಾ ವಿಧದ ಹೂಗಳೊಂದಿಗೆ ಆರತಿಯೊಂದಿಗೆ ಪೂಜೆ ನೆರವೇರಿಸುತ್ತಾರೆ. ಈ ಹಬ್ಬದಂದು ಆರತಿಯನ್ನು ಕೊಡುವ ಸಂಪ್ರದಾಯವಿದೆ. ಹೆಣ್ಣು ಮಕ್ಕಳನ್ನು ತವರು ಮನೆಗೆ ಕರೆದುಕೊಂಡು ಬಂದು ಅವರ ಕೈಯಿಂದ ಆರತಿ ಬೆಳಗಿಸುವುದು ಸಂಪ್ರದಾಯ.

ಗೌರಿಯನ್ನು ಪೂಜಿಸುವ ಸ್ಥಳದಲ್ಲಿ ಹುತ್ತಿನ ಮಣ್ಣನ್ನು ತಂದು ಆ ಮಣ್ಣಿನಿಂದ ಮಾಡಿದ ಆಕೃತಿಗಳನ್ನು ಸಹ ಇಟ್ಟಿರುತ್ತಾರೆ. ಈ ಹಳ್ಳಿಗಾಡಿನಲ್ಲಿ ಸಿಗುವಂತಹ ವನಂಬ್ರಿ ಹೂವು, ಕವಡಿ ಹೂವು ಇನ್ನೂ ಹಲವಾರು ಹೂಗಳನ್ನು ಹಾಕಿ ಶೃಂಗರಿಸಿ ಗೌರಿಯ ಮೂರ್ತಿಯನ್ನಿಟ್ಟು ಅದಕ್ಕೆ ಸೀರೆಯುಡಿಸಿ ಅಲಂಕರಿಸುತ್ತಾರೆ. ಅನಂತರ ಈ ಗೌರಿಗೆ ಆರತಿಯ ತಟ್ಟೆಯ ಮುಖಾಂತರ ಪೂಜೆ ನೆರವೇರುತ್ತದೆ. ಆರತಿಯ ತಟ್ಟೆಯಲ್ಲಿ ಶಿವ, ಗೌರಿ, ನಂದಿ, ಗಣಪ, ಆನೆ, ಒಂಟೆ ಹಲವಾರು ರೀತಿಯ ಸಕ್ಕರೆ ಮೂರ್ತಿಗಳಿರುತ್ತವೆ. ಹೀಗೆ ಒಂಬತ್ತು ದಿನ ಒಂಬತ್ತು ರೀತಿಯ ಬತ್ತಗಳನ್ನು ಹಚ್ಚಿಕೊಂಡು, ಒಂಬತ್ತು ರೀತಿಯ ಹೂಗಳನ್ನು ಇಟ್ಟು, ಒಂಬತ್ತು ದಿನ ಗೌರಿ ಇದ್ದ ಮನೆಗೆ ಬಂದು ಪೂಜೆಯನ್ನು ಸಲ್ಲಿಸುತ್ತಾರೆ. ಹೀಗೆ ಒಂಬತ್ತು ದಿನಗಳಲ್ಲಿ ಕೊನೆಯ ಮೂರು ದಿನಗಳು ಮುಖ್ಯವಾದವು. ಮೂರು ದಿನ ಸಕ್ಕರೆಯ ಆರತಿಯನ್ನು ಗೌರಿಯ ಮುಂದೆ ಹಾಡನ್ನು ಹಾಡುತ್ತಾ ಬೆಳಗುತ್ತಾರೆ.

ಹೀಗೆ ಗೌರಿಯ ಮುಂದೆ ಹಾಡನ್ನು ಹಾಡುತ್ತಾ ಪೂಜೆ ಸಲ್ಲಿಸಿ, ಗೌರಿ ಹೋಗುವ ಮುನ್ನ ಎಲ್ಲ ಹೆಣ್ಣು ಮಕ್ಕಳು ಆಟವಾಡಿ, ಗೌರಿಯನ್ನು ಕಳಿಸಿ ಮನೆಗೆ ಹೋಗುತ್ತಾರೆ. ಮನೆಯ ಬಾಗಿಲ ಮುಂದೆ ಬಾಳೆಹಣ್ಣನ್ನು ಅಥವಾ ಸೌತೇಕಾಯಿಯನ್ನು ಗೋಲಾಕಾರವಾಗಿ ಕತ್ತರಿಸಿ ಬತ್ತಿಯನ್ನಾಗಿ ಮಾಡಿ ದೀಪವನ್ನು ಹಚ್ಚುತ್ತಾರೆ. ಅನಂತರ ಆರತಿ ತಟ್ಟೆಯನ್ನು ಹಿಡಿದು ಹೊಸ್ತಿಲಿಗೆ ಬೆಳಗಿ, ಅಣ್ಣಂದಿರಿಗೆ ಬೆಳಗಿ ಜಗಲಿಯ ಮೇಲೆ ಇಡುತ್ತಾರೆ.

ವಿಶೇಷತೆ: ಹೆಣ್ಣು ಮಕ್ಕಳಲ್ಲಿ ನಡೆಯುವ ಗೌರೀ ಹುಣ್ಣಿಮೆ ಸುಖ ಸಂತೋಷವನ್ನು ಕೊಡುವುದರ ಜೊತೆಗೆ ಜನಪದರ ವೈಶಿಷ್ಟತೆಯನ್ನು ತೋರಿಸುತ್ತದೆ. ಸ್ನೇಹ, ಬಂಧುತ್ವ ಹಾಗೂ ನಂಟನ್ನು ಹೆಚ್ಚಿಸುತ್ತದೆ.

(ಎನ್‌ಬಿಎಚ್)

ಗೌಳಗಿತ್ತಿ ಡಪ್ಪಿನಾಟ: ಹೈದ್ರಾಬಾದ ಕರ್ನಾಟಕದ ಪ್ರಮುಖ ಡಪ್ಪಿನಾಟ. ಈ ಆಟದಲ್ಲಿ ಡಪ್ಪು ಮುಖ್ಯ ವಾದ್ಯವಾಗಿದ್ದು ಚಿಕ್ಕ ಕಂಚಿನ (ಹಿತ್ತಾಳೆ) ತಾಳಗಳು ಮತ್ತು ಹಾರ್ಮೋನಿಯಮ್ ಇರುತ್ತದೆ. ಪ್ರಚಾರ ಪಡೆದದ್ದು ಕುಲಗೋಡು ತಮ್ಮಣ್ಣನಿಂದ ಮುಂದೆ ಜಮಖಂಡಿ ಅಪ್ಪಲಾಲನ ಆಟವೆಂದು ಪ್ರಸಿದ್ಧಿ

ಪಡೆಯಿತು. ಹೀಗೆ ಈ ಆಟ ಹಲವಾರು ಪ್ರಭೇದಗಳನ್ನು ಹೊಂದಿದೆ. ಸತತ ಮೂರು ದಿನಗಳವರೆಗೆ ಆಡುವ ಆಟವು ಸಣ್ಣಾಟಕ್ಕೆ ತಿರುಗಿ ಡಪ್ಪಿನಾಟವಾಯಿತು. ಪಾರಿಜಾತದಲ್ಲಿ ಕೊರವಂಜಿ ಪಾತ್ರದಲ್ಲಿ ಶ್ರೀಕೃಷ್ಣ ಶಕುನ ಹೇಳಿದರೆ, ಡಪ್ಪಿನಾಟದಲ್ಲಿ ಗೌಳಗಿತ್ತಿಯ ಹಾಲು, ಮೊಸರು ಮಾರುವ ಗೌಳಗಿತ್ತಿ ಪಾತ್ರ ಮುಖ್ಯವಾಗುತ್ತದೆ.

ಪಾರಿಜಾತದಲ್ಲಿ ಶ್ರೀಕೃಷ್ಣ ಪಾರಿಜಾತ ಪುಷ್ಪ ತಂದು ಕೊಡುವುದು ಈ ಕತೆಯು ಮುಖ್ಯ ವಸ್ತುವಾಗಿದೆ. ಆದ್ದರಿಂದಲೇ 'ಪಾರಿಜಾತ' ಆಟವು ಸಣ್ಣಾಟಕ್ಕೆ ತಿರುಗಿ ಸಾಮಾನ್ಯ ಜನರಿಗೂ ತಿಳಿಯುವಂತಾಯಿತು. ಸಣ್ಣಾಟಕ್ಕೆ ತಿರುಗಿದ 'ಪಾರಿಜಾತ' ಆಟವೇ ಪರಿವರ್ತನೆಗೊಂಡು ಗೌಳಗಿತ್ತಿ ಡಪ್ಪಿನಾಟವಾಯಿತೆಂದು ಜನಪದ ಕಲಾವಿದರ ಮತ್ತು ಕಲಾಕಾರರ ಅಭಿಪ್ರಾಯ. ಪಾರಿಜಾತದಲ್ಲಿ ರುಕ್ಮಿಣಿ-ಸತ್ಯಭಾಮೆಯರು ಸವತಿಯ ಮಕ್ಕಳಾಗಿ ತಾ ಹೆಚ್ಚು - ನಾ ಹೆಚ್ಚು ಎಂದು ತಮ್ಮ ತಮ್ಮ ಪ್ರತಿಷ್ಠೆಗಾಗಿ ವಾದಿಸುತ್ತಾರೆ. ಹಾಗೆಯೇ ಗೌಳಿಗಿತ್ತಿ ಡಪ್ಪಿನಾಟದಲ್ಲಿ ಗೌಳಗಿತ್ತಿಯಾಗಿ ಹಾಲು ಮಾರಿ, ಮೊಸರು ಮಾರಿ ಗೋಪಿಕಾ ಸ್ತ್ರೀಯರೊಂದಿಗೆ ಆಟ ಆಡುವ ದೃಶ್ಯ ಶ್ರೀಕೃಷ್ಣನದು. ಪರಸ್ತ್ರೀಯರೊಂದಿಗೆ ಗೌಳಗಿತ್ತಿಯಾಗಿ ನಲಿಯುವ ಶ್ರೀಕೃಷ್ಣನ ಲೀಲೆ ಮನರಂಜನೆಯನ್ನು ತಂದು ಕೊಡುತ್ತದೆ. ಜತೆ ಜತೆಯಾಗಿ ಹಾಸ್ಯ ರಸವೂ ಇದೆ.

(ಎಚ್‌ಡಿ)

ಗ್ರಾ

ಗ್ರಾಮದೇವತೆಗಳು (ಗುಲ್ಬರ್ಗ ಜಿಲ್ಲೆ): ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಅಲ್ಲೂರ ದುರಗಮ್ಮ, ಅದೇ ತಾಲ್ಲೂಕಿನ ಕೊಡದೂರ ಮರಗಮ್ಮ, ನಾಲವಾರ ಮರಗಮ್ಮ, ಸಂಕರಡಗಿ ಪಾಲಕಮ್ಮ, ಗೋಳ್ಯಾದ ದ್ಯಾವಮ್ಮ, ಬಳ್ಳಡಗಿ ಎಲ್ಲಮ್ಮ, ಸೂಗೂರು ದ್ಯಾವಮ್ಮ, ಕುನ್ನೂರ ಕಾಳಮ್ಮ, ಗುಲ್ಬರ್ಗಾ ತಾಲ್ಲೂಕಿನ ಕೀರಣಗಿ ಮರಗಮ್ಮ, ಆಲಳ್ಳಿ ಮರಗಮ್ಮ, ಹಡಗಲಿ ಎಲ್ಲಮ್ಮ, ಗುಲ್ಬರ್ಗಾ ನಗರದ ಜಗತಿ ಎಲ್ಲಮ್ಮ, ಅಫಜಲಪೂರ ತಾಲ್ಲೂಕಿನ ಹಡಲಗಿ ಎಲ್ಲಮ್ಮ, ಮಾಸ್ಯಾಳ ಚೌಡಮ್ಮ, ಘತ್ತರಗಿ ಭಾಗಮ್ಮ (ಭಾಗವಂತಿ), ಗೊಬ್ಬೂರ ಎಲ್ಲಮ್ಮ, ಆಳಂದ ತಾಲ್ಲೂಕಿನ ಚುಂಚುರ ಮಾಪುರತಾಯಿ, ಗೋಳ್ಯಾ ಲಕ್ಕಮ್ಮ, ಸುರಪುರದ ದುರಗಮ್ಮ, ಕೆಂಭಾವಿ ದ್ಯಾವಮ್ಮ, ಸೇಡಂ ತಾಲ್ಲೂಕಿನ ಯಾನಾಗುಂದಿ ಮಾಣಿಕಮ್ಮ, ಕೊಳ್ಳಿ ಮರಗಮ್ಮ, ಶಹಾಪುರ ತಾಲ್ಲೂಕಿನ ಹಾಲಗೇರಿ ಎಲ್ಲಮ್ಮ, ಯಾತಗಿರಿ ತಾಲ್ಲೂಕಿನ ಬಳಿಚಕ್ರದ ಮಸ್ಸೆಮ್ಮ, ಅರಕೇರಿ ಎಲ್ಲಮ್ಮ, ಚಿಂಚೋಳಿ ತಾಲ್ಲೂಕಿನ ನಿಡಗುಂದಿ ಚೌಡಮ್ಮ, ದ್ಯಾವಮ್ಮ, ಹೊರಗುಂಟ ಪಾಲಕಮ್ಮ.

ಈ ಹೆಣ್ಣು ಗ್ರಾಮದೇವತೆಗಳ ನಡುವೆ ಒಬ್ಬನೇ ಪುರುಷ ಗ್ರಾಮದೇವತೆ ಹನುಮಂತ. ಮಧ್ವಾಚಾರ್ಯ ಮತ್ತು ಸಮರ್ಥ ರಾಮದಾಸರ ಪ್ರಭಾವದಿಂದ ಹಿಂದೂಧರ್ಮ ಸಂರಕ್ಷಣೆಗಾಗಿ, ಯುವಶಕ್ತಿಯನ್ನು ಬೆಳೆಸಲು ಪ್ರತಿ ಊರಿನಲ್ಲಿ ಹನುಮಂತ ದೇವರ ಸ್ಥಾಪನೆಯಾಯಿತು. ಗ್ರಾಮದೇವತೆಗಿರುವ ಎಲ್ಲ ಹಕ್ಕುಗಳು, ಚ್ಯಾಜ ಎಂದರೆ ಅಧಿಕಾರಗಳು ಹನುಮಂತನಿಗೆ ಇರುವುದರಿಂದ ಹನುಮಂತನನ್ನೂ ಗ್ರಾಮದೇವತೆಯೆಂದು ಸ್ವೀಕರಿಸಲಾಗಿದೆ.

ದ್ಯಾವಮ್ಮ: ಪದನಿಷ್ಪತ್ತಿ: ದೆವ್ವ < ದೈವ < ದೇವ < ದೇವತೆ. ದೆವ್ವ + ಅಮ್ಮ=ದೆವ್ವಮ್ಮ; ದ್ಯಾವಮ್ಮ, ದಿಯಾಮ್ಮ, ದ್ಯಾಮ್ಮ, ದ್ಯಾಮವ್ವ ಎಂದಾಗುತ್ತದೆ. ಪ್ರೇತಾತ್ಮದ ಸಂಕೇತವಾದ ದೇವತೆ. ಊರಿನ ಎಲ್ಲ ಜನರಿಂದಲೂ ಪೂಜಿಸಲ್ಪಡುವ ಹಿರಿಯ ದೇವತೆ, ಪ್ರತಿ ಊರಿನಲ್ಲಿ ಒಂದಲ್ಲ ಒಂದು ಸ್ವರೂಪದಲ್ಲಿ ಇರುವಳು. ವಾಸ್ತವವಾಗಿ ದ್ಯಾವಮ್ಮ ಮಾತ್ರ ಊರದೇವತೆ. ಬೇರೆಲ್ಲ ದೇವತೆಗಳು ಅವಳ ಸಹಾಯಕರು. ಗುಲ್ಬರ್ಗಾ ಜಿಲ್ಲೆಯ ಶೇಕಡ ಮೂವತ್ತೊಂದರಷ್ಟು ಜನ ದ್ಯಾವಮ್ಮನನ್ನು ಪೂಜಿಸುತ್ತಾರೆ. ಚಿತ್ತಾಪೂರ ತಾಲ್ಲೂಕಿನ ಶಂಕರವಾಡಿ ಗ್ರಾಮದಲ್ಲಿ ಸಂತಾನದ



ದ್ಯಾಮವ್ವ ದೇವಿ

ಸಲುವಾಗಿ ದ್ಯಾಮವ್ವನನ್ನು ಏಳು ಮಕ್ಕಳ ತಾಯಿಯೆಂಬ ಭೂತದ ರೂಪದಲ್ಲಿ ಪೂಜಿಸಲಾಗುತ್ತಿದೆ. ಸಂತಾನ, ಸಕಾಲಕ್ಕೆ ಮಳೆ, ಬೆಳೆಯ ರಕ್ಷಣೆ, ಒಡ್ಡುಗಳ ಸಂರಕ್ಷಣೆ, ಹೈನು ಹೆಚ್ಚಳ, ಸಾಂಕ್ರಾಮಿಕ ರೋಗಗಳು ಊರೊಳಗೆ ಬಾರದಂತೆ ತಡೆಯುವಿಕೆ, ಶಿಶುಮರಣ ನಿಲ್ಲಿಸುವಿಕೆ, ಹೊಲಗಳ ಗಡಿ ನಿರ್ಧರಿಸುವಿಕೆ, ಜಗಳ ಬಿಡಿಸುವಿಕೆ, ಭೂತಪ್ರೇತೋಚ್ಚಾಟನೆ, ಹುಚ್ಚು ಬಿಡಿಸುವಿಕೆ, ಬಂಜೆತನ ನಿವಾರಣೆ ಇವೇ ಮುಂತಾದುವು ದ್ಯಾವಮ್ಮನ ಕಾರ್ಯಗಳೆಂದು ಪರಿಗಣಿಸಲಾಗಿವೆ.

ದ್ಯಾವಮ್ಮ ಸಾತ್ವಿಕ ದೇವತೆ: ಸಮೃದ್ಧಿಯ ದೇವತೆ. ಮಾಲೇ ಗೌಡನ ಮನೆತನದವಳು. ಊರ ಮಧ್ಯೆ, ದೊಡ್ಡ ಗುಡಿಯಲ್ಲಿ ಅಥವಾ ಸಣ್ಣ ಗುಡಿಯಲ್ಲಿ, ಮನೆಯಲ್ಲಿ, ಗೋಡೆಯಲ್ಲಿ ಈ ದೇವತೆಯ ವಾಸ್ತವ್ಯವಿರುತ್ತದೆ. ತಳವಾರನು ಈ ದೇವತೆಯ ಆನುವಂಶಿಕ ಪೂಜಾರಿಯಾಗಿರುತ್ತಾನೆ. ದ್ಯಾವಮ್ಮನ ಮೂರ್ತಿಯನ್ನು ಶ್ರೀಗಂಧದ ಅಥವಾ ಮಳಗಿಯ ಮರದಿಂದ ತಯಾರಿಸುವರು. ಆಸೀನಮೂರ್ತಿ ಇವಳು. ಚಂದ್ರಾಯುಧ, ತ್ರಿಶೂಲ, ಭರ್ಜಿ ಇವಳ ಆಯುಧಗಳು ಸಿಂಹ ವಾಹನ, ಈ ದೇವಿಗೆ ಪಾದುಕೆಗಳಿಲ್ಲ. ಬಿಳಿ ಸೀರೆ, ಬಿಳಿ ಕುಪ್ಪಸ ಅಥವಾ ಕೆಂಪು ಸೀರೆ, ಕೆಂಪು ಕುಪ್ಪಸ, ಕೆಂಪು ಅಥವಾ ಹಸಿರು ಬಳೆ, ತಾಳಿ, ಮೂಗುತಿ, ಡಾಬುಗಳನ್ನು ಧರಿಸಿರುತ್ತಾಳೆ. ದೇವಿಯ ಮುಂದುಗಡೆ ಪೂಜೆ. ಈ ದೇವಿಯ ವಾರ ಶುಕ್ರವಾರ. ಕುರಿ, ಕೋಣಗಳನ್ನು ಬಲಿ ಕೊಡಲಾಗುತ್ತದೆ. ಕುರಿ, ಕೋಣಗಳ ಬಲಿಯನ್ನು ಕುರಿತಂತೆ ಇರುವ ಕಥೆಯು ಮಾರಮ್ಮನ ಕಥೆಯನ್ನು ಹೋಲುವಂತಿದ್ದು ಆ ಪ್ರಕಾರವಾಗಿ ಮೇಲ್ಜಾತಿಯಲ್ಲಿ ಹುಟ್ಟಿದ ದ್ಯಾವಮ್ಮನನ್ನು ಪಂಚಮನೊಬ್ಬನು ಮೋಸದಿಂದ ಮದುವೆ ಆದ. ಅವನಿಂದ ಅವಳಿಗೆ ಎರಡು ಮಕ್ಕಳಾದ ಮೇಲೆ ಗಂಡ ತನಗೆ ಮಾಡಿದ ಮೋಸವನ್ನು ತಿಳಿದು ಅವನನ್ನು ಕೊಂದುಹಾಕಿ ಎಂದು ತನ್ನ ಅಧೀನ ದೇವತೆಗಳಿಗೆ ಆಜ್ಞೆ ನೀಡಿದಳು. ಅದರಂತೆ ಅವನ ಬೆನ್ನಟ್ಟಿ ಹೋಗಿ ಕೊಂದು ಅವನ ರುಂಡವನ್ನು ತಂದು ದ್ಯಾವಮ್ಮನ ಮುಂದಿಟ್ಟರು. ಈ ಘಟನೆಯ ನೆನಪಾಗಿ ಪ್ರತಿವರುಷ ಉತ್ಸವ ನಡೆಸಿ ಕುರಿ, ಕೋಣಗಳನ್ನು ದ್ಯಾವಮ್ಮನ ಮುಂದೆ ಬಲಿ ಕೊಡುವುದು ಪದ್ಧತಿ. ಭಕ್ತರಿಗೆ ಹಣಚಿ ಬಟ್ಟು ಮುದ್ರೆ ಹಾಕಲಾಗುತ್ತದೆ. ದೀವಟಿಗೆ ಇರುತ್ತದೆ. ಹಲಗೆ, ಡೊಳ್ಳು, ಬಾಜಿ ವಾದ್ಯಗಳೊಡನೆ ಕುಣಿತ ಉತ್ಸವದ ಸಂದರ್ಭದಲ್ಲಿ ನಡೆಯುತ್ತದೆ. ಈ ದೇವಿಗೆ ಚಳಿಗಾಲ ಮತ್ತು ಬೇಸಿಗೆ ಕಾಲಗಳಲ್ಲಿ ಉತ್ಸವ ನಡೆಯುತ್ತದೆ. ದ್ಯಾವಮ್ಮನ ತವರೂರು ಗುಲ್ಬರ್ಗಾ ಜಿಲ್ಲೆಯ ಖಾಜಾಪುರ, ಸುರಪುರ ತಾಲ್ಲೂಕಿನ ಯಾಳಗಿ, ಸೇಡಂ ತಾಲ್ಲೂಕಿನ ಹಾಬಳ, ಚಿತ್ತಾಪುರ ತಾಲ್ಲೂಕಿನ ಗೋಳ್ಳ, ಜೇವರ್ಗಿ ತಾಲ್ಲೂಕಿನ ಕುಕನೂರು, ಕೆಂಭಾವಿ, ಸೂಗೂರು, ನಿಡಗುಂದಿ ಈ ಏಳೂ ಊರುಗಳಲ್ಲಿ ದ್ಯಾವಮ್ಮನ ಗಂಡನ ಮನೆಗಳಿವೆ. ಗಂಡನ ಮನೆಯಾದ ಮಾಗಣಗೇರಿಯಿಂದ ತವರೂರಾದ ಖಾಜಾಪುರಕ್ಕೆ ದ್ಯಾವಮ್ಮನನ್ನು ಉತ್ಸವದ ವೇಳೆಗೆ (ಬಾದಾಮಿ ಅಮಾವಾಸ್ಯೆ) ತರುವರು. ಇಲ್ಲಿ ಹದಿನೈದು ದಿನವಿರಿಸಿಕೊಂಡು ಮತ್ತೆ ಗಂಡನ ಮನೆಗೆ ಕಳುಹಿಸುವರು. ಅಲ್ಲಿಂದ ಬರುವ ವರ್ಷದವರೆಗೆ ಪ್ರತಿ ತಿಂಗಳು ಹದಿನೈದು ದಿನಕ್ಕೊಮ್ಮೆ ಒಂದೊಂದು ಊರಿಗೆ ಹೋಗಿ ಗಂಡನ ಮನೆಯಲ್ಲಿದ್ದು ಮುಂದೆ ಹೊರಡುವಳು. ದ್ಯಾಮವ್ವನ ತವರಿನವರು ತಳವಾರರು, ಗಂಡನ ಮನೆಯವರು ಬಡಿಗೇರರು. ತಳವಾರ ಮತ್ತು ಬಡಿಗೇರ ಸಮುದಾಯಗಳ ನಡುವೆ ಸಾಮರಸ್ಯ ಮೂಡಿಸುವುದೇ ದ್ಯಾಮವ್ವನ ಈ ಉತ್ಸವದ ಉದ್ದೇಶವಾಗಿರುತ್ತದೆ.

ಊರ ದ್ಯಾವಮ್ಮ ದೇವಯ ಪೂಜೆ, ಉತ್ಸವ ಮೂರು ಹಂತಗಳಲ್ಲಿ ನಡೆಯುತ್ತದೆ. ಮೊದಲನೆಯದು ಮುಂಜಾನೆಯಲ್ಲಿ ಗುಡಿಯ ಸಿಂಗಾರ, ಊರ ಜನರ ಮನೆಗಳ ಸಿಂಗಾರ, ದೇವಿಯ ಸ್ನಾನ, ಊರ ಜನರ ಗಂಗಾಸ್ನಾನ, ಶುಭ್ರವಸ್ತ್ರ, ಅಲಂಕಾರ, ಹಲಗೆ ಡೊಳ್ಳುಗಳೊಂದಿಗೆ ಊರಲ್ಲಿ ಮೆರವಣಿಗೆ; ಎರಡನೆಯದು ಮಧ್ಯಾಹ್ನದಲ್ಲಿ ದೇವಿಗೆ ಹರಕೆ ಸಲ್ಲಿಸುವುದು, ದೀಡ ನಮಸ್ಕಾರ, ಗಂಟೆ ಬಾರಿಸುವುದು, ಜಾವಳ (ಕೂದಲು ತೆಗೆಸುವುದು), ದೇವಿಗೆ ಪ್ರದಕ್ಷಿಣೆ ಹಾಕುವುದು, ಕೋಣ, ಕುರಿ, ಕೋಳಿ ಬಲಿಕೊಡುವುದು, ಕಾಯಿ ಒಡೆದು ಕರ್ಪೂರದಾರತಿ ಬೆಳಗುವುದು; ಮೂರನೆಯದು ಸಂಜೆಯಲ್ಲಿ ದೇವರ ಹೇಳಿಕೆ, ಊರ ಜನರ ಊಟ, ಲಾವಣಿ ಹಾಡುವುದು, ಬಯಲಾಟ ಆಡುವುದು, ಮತ್ತಿತರ ಮನರಂಜನೆಯ ಕಾರ್ಯಕ್ರಮಗಳನ್ನು ನಡೆಸುವುದು.

ದ್ಯಾವಮ್ಮನ ಪೂಜಾರಿ ತಳವಾರರಾಗಿದ್ದಾಗ ಮಾತ್ರ ತಳವಾರನ ಮನೆಯ ಜಗುಲಿಯ ಮೇಲೆ ಮನೆ ದ್ಯಾವಮ್ಮ ನಿರುತ್ತಾಳೆ. ಬೆಳ್ಳಿ, ತಾಮ್ರ, ಕಂಚಿನಿಂದ ಊರ ದ್ಯಾವಮ್ಮನಿಗೆ ಮಾಡಿದ ಮುಖ, ಕಳಸಗಳನ್ನು ಗುಡಿಯಲ್ಲಿಡುವುದು ವಿಹಿತವಲ್ಲವೆಂದು ಪೂಜಾರಿ ಅವುಗಳನ್ನು ತನ್ನ ಮನೆಯಲ್ಲಿ ತಂದಿಡುವನು, ಜಾತ್ರೆ ಉತ್ಸವ ವಿಶೇಷ ದಿನಗಳಲ್ಲಿ ಗುಡಿಗೊಯ್ದು ಪೂಜಾದಿ ಕಾರ್ಯಗಳ ಅನಂತರ ಪುನಃ ತನ್ನ ಮನೆಯ ಜಗುಲಿಯ ಮೇಲೆ ತಂದಿಟ್ಟು ಪ್ರತಿ ಶುಕ್ರವಾರ ವಿಶೇಷ ಪೂಜೆ ಮಾಡುವನು. ಪೂಜಾರಿಯ ಮನೆತನ ಹೆಚ್ಚಿದಂತೆಲ್ಲ ದ್ಯಾವಮ್ಮ ಈ ಎಲ್ಲರ ಮನೆಗಳ ಜಗುಲಿ ಮೇಲೆ ಇಡಲ್ಪಟ್ಟು ಮನೆ ದ್ಯಾವಮ್ಮ ನೆನಿಸುವಳು. ಊರ ದ್ಯಾವಮ್ಮನಿಗೆ ಸಲ್ಲಿಸುವಂತೆ ಇವಳಿಗೂ ಕೆಂಪು ಸೀರೆ ರವಿಕೆ ತೊಡಿಸಿ, ಹೂ ಮುಡಿಸಿ, ಚಂದ್ರ ಕುಂಕುಮ ಹಚ್ಚಿ, ಮಡಿಲಕ್ಕಿ ಇಟ್ಟು, ಹೋಳಿಗೆ ಹುಗ್ಗಿ ಉಂಡೆ ನೈವೇದ್ಯಕ್ಕಿಟ್ಟು ಏಳು ಮಂದಿ ಸುವಾಸಿನಿಯರಿಗೆ ಉಣಬಡಿಸುವರು.

ಸುರಪುರ ತಾಲ್ಲೂಕಿನ ಯಾಳಗಿ ದೇವಮ್ಮನ ಉತ್ಸವದ ಜೊತೆಯಲ್ಲೇ ಲಕ್ಷ್ಮಿಯ ಉತ್ಸವವನ್ನೂ ಆಚರಿಸುವರು. ದ್ಯಾವಮ್ಮನ ಮೆರವಣಿಗೆಯಾಗಿ ಗಂಗಾಸ್ನಾನದ ನಂತರ ಲಕ್ಷ್ಮಿ ಗುಡಿಗೆ ಬಂದು ಲಕ್ಷ್ಮಿಗೂ ಜಳಕ ಮಾಡಿಸುವರು, ಅಲಂಕಾರ ಪೂಜೆ, ಕುರಿಬಲಿ ನಡೆಸುವರು. ಸಂಜೆತನಕ ಕುಸ್ತಿಗಳು ನಡೆಯುವುವು. ಸಂಜೆಯಾಗುತ್ತಲೇ ದೇವಿ ಊರ ಸಂಚಾರ ಮಾಡಿ ಮೂಲಸ್ಥಾನಕ್ಕೆ ಹಿಂದಿರುಗುವಳು.

ಚಿಂಚೋಳಿ ತಾಲ್ಲೂಕಿನ ನಿಡಗುಂದಿ ದ್ಯಾವಮ್ಮನ ಗುಡಿಯು ಊರ ಮಧ್ಯದಲ್ಲಿದ್ದು ದೇವಿಯ ಮೂರ್ತಿಯು ಮರದಿಂದ ಮಾಡಿದ್ದು ಆರಡಿ ಎತ್ತರವಿದೆ. ಇಲ್ಲಿ ಪೂಜಾರಿಗಳು ಕಬ್ಬಲಿಗರು. ಇಲ್ಲಿನ ಸ್ಥಳಪುರಾಣದ ಪ್ರಕಾರ ಪಕ್ಕದ ಊರಾದ ಮೀರಾಣದಲ್ಲಿ

ಜಾತ್ರೆ ನಡೆದಾಗ ಅಗಸನೊಬ್ಬ ಅನ್ನದ ಫಲಿ ತರಲು ಹೋದನಂತೆ. ಹಿಂದಿರುಗುವಗ ಅಗಸಿ ಬಾಗಿಲು ಹಾಕಿದ್ದರಿಂದ ಸಿಕ್ಕಿಬಿದ್ದಾಗ ಬಾಗಿಲ ಕಿಟಕಿಯಲ್ಲಿ ತಲೆಯಿಟ್ಟು ತನ್ನ ಜತೆಯಲ್ಲಿ ಬಂದಿದ್ದ ಜನರಿಗೆ ತನ್ನ ತಲೆಯನ್ನು ಕಡಿದು ಊರಿಗೆ ಕೊಂಡೊಯ್ಯಲು ಹೇಳಿದನಂತೆ. ಅದರಂತೆ ಅಗಸನ ತಲೆ ಅಗಸಿಯಲ್ಲಿದೆ, ಸೀಮೆಯ ಮೇಲೆ ಅವನ ನೆನಪಿನಲ್ಲಿ ದಂಡ ನಿಲ್ಲಿಸಿದ್ದಾರೆ. ಮೊದಲು ದಂಡವಿದ್ದಲ್ಲಿಗೆ ಹೋಗಿ ದೀಪಹಚ್ಚಿ ಪೂಜೆ ಸಲ್ಲಿಸಿ ಅನಂತರ ರುಂಡಕ್ಕೆ ಕಾಯಿ ಕರ್ಪೂರ ಸಲ್ಲಿಸಿದ ಬಳಿಕವೇ ದ್ಯಾವಮ್ಮನ ಪೂಜೆ ನಡೆಯುವುದು.

ಎಲ್ಲಮ್ಮ: ಮೂಲದಲ್ಲಿ ಈ ದೇವತೆ ಎಲ್ಲೆ ಅಥವಾ ಸೀಮೆಯ ದೇವತೆ. ಇವಳು ಲೋಕ ದೇವತೆಯೂ ಹೌದು, ಸ್ಥಳೀಯ ದೇವತೆಯೂ ಹೌದು. ಇವಳನ್ನು ಬ್ರಾಹ್ಮಣರು ರೇಣುಕಾ, ವೀರಶೈವರು ಸತ್ಯಕ್ಕ, ಜೈನರು ಪದ್ಮಾವತಿ, ಕೆಳವರ್ಗದವರು ಹುಲಿಗೆಮ್ಮ, ಸವಾರೆಮ್ಮ, ಮಾಪುರತಾಯಿ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುವರು. ಪದನಿಷ್ಪತ್ತಿ ರೀತ್ಯಾ ಎಲ್ಲೆ + ಅಮ್ಮ=ಎಲ್ಲಮ್ಮ ಅಥವಾ ಎಲ್ಲರಮ್ಮ=ಎಲ್ಲಮ್ಮ. ಎಲ್ಲಮ್ಮ ಪದದ ಅರ್ಥವನ್ನು ಯಕ್ಷಿಣಿ+ಅಮ್ಮ=ಎಕ್ಕಲ್ಲಮ್ಮ < ಎಲ್ಲಮ್ಮ ಎಂದೂ ಹೇಳುವರು.

ಗುಲ್ಬರ್ಗಾ ಜಿಲ್ಲೆಯ ಎಲ್ಲಮ್ಮ ದೇವತೆಗಳು ತುಂಬಾ ವಿಶಿಷ್ಟರಾಗಿದ್ದಾರೆ. ಚಿತ್ತಾಪುರ ತಾಲ್ಲೂಕಿನ ನಾಗಾಯಿ ಎಲ್ಲಮ್ಮ ಮತ್ತು ಬಳ್ಳಡಗಿ ಎಲ್ಲಮ್ಮ ಮಹತ್ವದ ದೇವತೆಗಳೆನಿಸಿದ್ದಾರೆ. ಇತರೆಡೆ ಎಲ್ಲಮ್ಮನ ಗುಡಿಯ ಪೂಜಾರಿಗಳು ಕೆಳವರ್ಗದವರಾಗಿದ್ದಾರೆ. ಆದರೆ ಈ ಎಲ್ಲಮ್ಮ ಗುಡಿಯಲ್ಲಿ ಪೂಜಾರಿ ಬ್ರಾಹ್ಮಣ. ನಾಗಾಯಿ ಎಲ್ಲಮ್ಮ ಗುಡಿಯ ತಳಭಾಗದಲ್ಲಿ ಬರುವ ಝರಿಯ ನೀರಿನಿಂದ ದೇವಿ ಪೂಜೆಯು ನಡೆಯುತ್ತದೆ. ನಾಗಾಯಿ ಎಲ್ಲಮ್ಮನ ಪಕ್ಕದಲ್ಲಿರುವ ನಂದಿ ಬಾವಿ ಬತ್ತಬೇಕು, ಕಲ್ಲಕೋಳಿ ಕೂಗಬೇಕು, ಮುಲ್ಲಾ ಜವಾಬು ಕೊಡಬೇಕು ಅಗ ಜಗತ್ತು ಪ್ರಳಯವಾಗುತ್ತದೆ ಎಂಬುದು ಜನಪದರ ನಂಬಿಕೆ. ದ್ಯಾವಮ್ಮ, ಮರಗಮ್ಮ, ದುರಗಮ್ಮರನ್ನು ಒಬ್ಬರೊಳಗೊಬ್ಬರನ್ನು ಸೇರಿಸಿದಂತೆ ಎಲ್ಲಮ್ಮನನ್ನು ಪ್ರತ್ಯೇಕ ದೇವತೆಯಾಗಿರಿಸಿ ಗುಲ್ಬರ್ಗಾ ಜಿಲ್ಲೆಯ ಚುಂಚುರ ಮಾಪುರತಾಯಿ, ಬೀದರ ಜಿಲ್ಲೆಯ ಬಗದುರಿ ಎಲ್ಲಮ್ಮ, ರಾಯಚೂರು ಜಿಲ್ಲೆಯ ಆರೋಲಿ ಹುಲಿಗೆಮ್ಮ, ಮುನಿರಾಬಾದಿನ ಹುಲಿಗೆಮ್ಮರನ್ನು ಎಲ್ಲಮ್ಮನ ಗುಂಪಿನ ದೇವತೆಗಳೆಂದೇ ಪರಿಗಣಿಸಲ್ಪಟ್ಟಿದ್ದಾರೆ. ಕಾರಣ, ಎಲ್ಲಮ್ಮನ ಪೂಜೆಯ ರೀತಿಯಲ್ಲಿಯೇ ಈ ದೇವತೆಗಳಿಗೂ ಪೂಜೆ ನಡೆಯುತ್ತದೆ. ಎಲ್ಲಮ್ಮ ಹುಲಿಸವಾರಿ ಮಾಡಿದ್ದರಿಂದ ಆಕೆಗೆ ಹುಲಿಗೆಮ್ಮನೆಂಬ ಹೆಸರೂ, ಸವಾರೆಮ್ಮ ಎಂಬ ಹೆಸರೂ, ಮಹಾರಾಷ್ಟ್ರದ ಮಾಪುರದಿಂದ ಬಂದವಳೆಂದು ಎಲ್ಲಮ್ಮನಿಗೆ ಚುಂಚುರ ಮಾಪುರತಾಯಿ ಎಂಬ ಹೆಸರೂ ಬಂದವು. ಅಲ್ಲದೆ, ಜಮದಗ್ನಿ ಋಷಿಯ ಪತ್ನಿ ರೇಣುಕಾಳ ಪಾತಿವ್ರತ್ಯ ಭಂಗವಾದಾಗ ಪತಿಯ ಶಾಪದಿಂದ ಮೈಯೆಲ್ಲ ಹುತ್ತಿನಂತೆ ಹುಣ್ಣಾಗಿಹೋದ ಕಾರಣ ರೇಣುಕಾಳ ಅವತಾರಿಯಾದ ಎಲ್ಲಮ್ಮನನ್ನು ಹುತ್ತಿನೆಲ್ಲಮ್ಮ ಎಂದು ಕರೆಯುತ್ತಾರೆ. ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ಸಗರದ ಎಲ್ಲಮ್ಮ, ಶಹಾಪುರ ತಾಲ್ಲೂಕಿನ ಹಾಲ್ಗೇರಿ ಎಲ್ಲಮ್ಮರು ಕುರಿಬಲಿಗಳಿಂದ ಉಟ್ಟಿಗೆ ಉಡುವುದರಿಂದ ಪ್ರಸಿದ್ಧರಾಗಿದ್ದಾರೆ.

ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಚುಂಚುರ ಮಾಪುರತಾಯಿ ಇಂದು ಭಾರತದಲ್ಲೇ ಪ್ರಸಿದ್ಧಿಯನ್ನು ಪಡೆದಿರುವ ದೇವತೆ. ಈ ಚುಂಚುರ ಪ್ರದೇಶದಲ್ಲಿ ಚಂಚು ಎಂಬ ಕಡುಜನಾಂಗ ಇದ್ದುದರಿಂದ ಊರಿಗೆ ಈ ಹೆಸರು ಬಂದಿದೆ. ಚಂಚು ಜನರ ದೇವತೆ ಮಾಪುರತಾಯಿಯೇ ಎಲ್ಲಮ್ಮ ಆದಳು. ಜನಪದರ ಕಥೆಯ ಪ್ರಕಾರ ಮಾಪುರತಾಯಿ ಮಹಾರಾಷ್ಟ್ರದ ಮೋಹಿತ ಆಂಬ್ರಾ ಪ್ರದೇಶಕ್ಕೆ ಸೇರಿದ್ದು ಸಂಚಾರ ಹೊರಟು ಏಳುಗುತ್ತಿ ಗುಡ್ಡಕ್ಕೆ ಬಂದಾಗ ಚುಂಚುರದಲ್ಲಿದ್ದ ಮಹಾಸುರ, ಬಾಣಾಸುರ, ಗೌಳಾಸುರ, ಸಂಕಾಸುರ, ಸಿದ್ಧಾಸುರ, ಶಿವಲಿಂಗಾಸುರ, ಸೋಮಾಸುರರನ್ನು ಕೊಂದು ಊರ ಜನರನ್ನು ಪರೀಕ್ಷಿಸಲು ಮೈಯೆಲ್ಲ ಹುಣ್ಣುಳ್ಳ ಮುಪ್ಪಾನ ಮುದುಕಿಯಾಗಿ ಊರೊಳಗೆ ಬಂದಳು. ಯಾರೂ ಲಕ್ಷಿಸದಿದ್ದ ಇವಳನ್ನು ಪಾಡೇವಾರ ಮಲ್ಲಪ್ಪ ರಾಶಿಗಳು ಹೆಗಲ ಮೇಲೆ ಕೂರಿಸಿಕೊಂಡು ತಮ್ಮ ಮನೆಗೆ ಕರೆತಂದರು. ಅಂದು ಅವರ ಮನೆಯಲ್ಲೇ ತಂಗಿದ್ದ ಮಾಪುರತಾಯಿಯು ಮಾರನೇ ದಿನ ಮಧ್ಯಾಹ್ನ ಕುಳ್ಳು ಹಿಡಿಯುವ ನೆಪದಿಂದ ಹಂಡಿ ತೆಗೆದುಕೊಂಡು ಅವನ ಇಬ್ಬರು ಹೆಣ್ಣುಮಕ್ಕಳಾದ ಗಂಗಮ್ಮ, ನೀಲಮ್ಮರನ್ನು ಕರೆದುಕೊಂಡು ಏಳುಗುತ್ತಿ ಅಣಿ ಕೆಳಗಡೆ ಹುಣಸೀಮರದ ನಡುವೆ ಐಕ್ಯಳಾಗಿ ಮಲ್ಲಪ್ಪ ಮತ್ತು ಊರಗೌಡನ ಕನಸಿನಲ್ಲಿ ಬಂದು ಅವರಿಬ್ಬರಿಗೂ ತಾನಿರುವ ಎಡೆಯನ್ನು ತಿಳಿಸಿ ಅಲ್ಲಿ ಗುಡಿಯನ್ನು ತನಗೆ ಕಟ್ಟಿಸಬೇಕೆಂದೂ ತನ್ನ ಸೇವೆಗೆ ನಿಂತ ಹೆಣ್ಣು ಮಕ್ಕಳ ಭಾರವನ್ನು ಗೌಡ ಕುಲಕರ್ಣಿ ಹೊರಬೇಕೆಂದೂ, ವೈಶಾಖ ಮಾಸದಿಂದ ಕಾರುಹುಣ್ಣಿಮೆಯ ತನಕ ತನ್ನನ್ನು ಪೂಜೆ ಮಾಡಬೇಕೆಂದೂ, ಹಾಗೆ ಪೂಜೆ ಮಾಡಿದೋರ ಮನಸ್ಸಿನ ಮಾತು ಸತ್ಯವಾಗುವುದೆಂದೂ ತಿಳಿಸಿದಳು. ಅದರಂತೆ ಮಾಪುರತಾಯಿಯ ಗುಡಿಯು ಚುಂಚುರದಲ್ಲಿ ಕಟ್ಟಲಾಗಿದೆ. ಅಂದಿನಿಂದ ಮಲ್ಲಪ್ಪ ಪಡೇವಾರ ಮನೆತನದವರೇ ಇಂದಿನವರೆಗೆ ಈ ದೇವತೆಯ ಪೂಜೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಈ ದೇವಿಗೆ ರಥೋತ್ಸವ ನಡೆಯುವುದಿಲ್ಲ.

ಎಲ್ಲಮ್ಮ ಜಮದಗ್ನಿ ಋಷಿಯ ಪತ್ನಿ ರೇಣುಕೆಯೆಂದೂ ಬ್ರಾಹ್ಮಣ ದೇವತೆಯೆಂದೂ ಪರಿಗಣಿಸಲ್ಪಟ್ಟಿರುವ ಕಾರಣ ಚಿತ್ತಾಪುರ ತಾಲ್ಲೂಕಿನ ಬಳ್ಳಡಗಿ ಎಲ್ಲಮ್ಮನ ಪೂಜಾರಿಗಳು ಬ್ರಾಹ್ಮಣರು. ಜಮದಗ್ನಿ ಋಷಿಯು ಶೀಲಗೆಟ್ಟ ರೇಣುಕೆಯನ್ನು ಕೊಲ್ಲಲು ಮಗ ಪರಶುರಾಮನಿಗೆ ಹೇಳಲು ಅದರಂತೆ ತಾಯಿಯ ಶಿರ ಕಡಿದು ತಂದೆಯನ್ನು ಪ್ರಸನ್ನಗೊಳಿಸಿ ವರ ಪಡೆದು ತಾಯಿಯನ್ನು ಬದುಕಿಸಿದ. ಒಮ್ಮೆ ಅವಳು ಉರಿಬಿಸಿಲಲ್ಲಿ ನಡೆಯಲಸಾಧ್ಯವಾದಾಗ ಭೃಗು ಮಹರ್ಷಿಗಳು ಕರುಣೆ ದೋರಿ ಅವಳಿಗೆ ಪಾದುಕೆ ಛತ್ರಗಳನ್ನು ನೀಡದರಂತೆ. ಆ ಪಾದುಕೆಗಳನ್ನು ಇಂದಿಗೂ ಸಾಂಕೇತಿವಾಗಿಟ್ಟು ಕೊರಳಲ್ಲಿ ಕಟ್ಟಿಕೊಳ್ಳುವರು. ಎಲ್ಲಮ್ಮನ ಮುಂದೆ ಪೂಜೆಗಾಗಿ ಇಡುವರು. ಆಕೆಯ ದರ್ಶನಕ್ಕಿಂತಲೂ ಅವಳ ಪಾದುಕೆಗಳ ದರ್ಶನ ಅತ್ಯಂತ ಮಹತ್ವದ್ದೆಂದು ಜನ ತಿಳಿಯುತ್ತಾರೆ.

ಎಲ್ಲಮ್ಮನಿಗೆ ಪತಿಯ ಶಾಪದಿಂದ ತೊನ್ನು ರೋಗ ಹತ್ತಿತ್ತು. ಮುಂದೆ ಜೋಗುಳಬಾವಿಯಲ್ಲಿ ಮಿಂದಾಗ ತೊನ್ನು ರೋಗ ನಿವಾರಣೆಯಾಯಿತು. ತನ್ನ ಪತ್ನಿಗೆ ಶಾಪ ವಿಮೋಚನೆ ನೀಡದ ಎಕ್ಕಯ್ಯ ಜೋಗಯ್ಯರಿಗೆ ಷಂಡತನ ಬರಲಿ ಎಂದು ಜಮದಗ್ನಿಯು ಶಾಪನೀಡಿದರು. ಆದುದರಿಂದ ಎಲ್ಲಮ್ಮನ ಹತ್ತಿರ ಗಂಡು ಜೋಗಯ್ಯರನ್ನು ಕಾಣುತ್ತೇವೆ. ಎಲ್ಲಮ್ಮನ ಪೂಜೆಯಾಗುವಾಗ ಜೋಗಯ್ಯರ ಸ್ತುತಿಯೂ ಆಗುವುದು.

ಎಲ್ಲಮ್ಮನಿಗೆ ಮಾತಂಗಿ ಎಂಬ ರೈತ ಪತ್ನಿಯ ಆಶ್ರಯ ನೀಡಿದಕ್ಕಾಗಿ ಎಲ್ಲಮ್ಮನು ಪ್ರಸನ್ನಳಾಗಿ ನನ್ನ ಪೂಜೆಗೆ ಮೊದಲು ನಿನಗೆ ಪೂಜೆ ಸಲ್ಲಲಿ ಎಂದು ವರವನ್ನು ನೀಡಿದಳು. ಅದರಂತೆ ಎಲ್ಲಮ್ಮನ ಪೂಜೆಯಲ್ಲಿ ಮೊದಲ ಎಡೆ ಮಾತಂಗಿಗೆ ನೀಡಲಾಗುತ್ತದೆ. ಇನ್ನೊಂದು ಕಥೆಯ ಪ್ರಕಾರ ಎಲ್ಲಮ್ಮ ಮಕ್ಕಳನ್ನು ಹಡೆಯಲು ಹೋದಾಗ ಜಮದಗ್ನಿ ಋಷಿಯು ತನ್ನ ಸೇವಗಾಗಿ ಮಾತಂಗಿಯನ್ನಿಟ್ಟುಕೊಂಡಿದ್ದನೆಂದೂ ಮಾತಂಗಿಯು ಎಲ್ಲಮ್ಮನ ತಂಗಿ ಎಂದೂ ಹೇಳಲಾಗುತ್ತದೆ. ಅದಕ್ಕಾಗಿ ಹಳ್ಳಿಗಳಲ್ಲಿ ಬ್ರಾಹ್ಮಣರು, ಗೌಡರು, ಸಾಹುಕಾರರು ಮಾತಂಗಿಯ ಸಂಬಂಧವನ್ನು ಇಟ್ಟುಕೊಳ್ಳುವುದು ಸಾಮಾನ್ಯವಾಗಿದ್ದಿತು. ಎಲ್ಲಮ್ಮನೂ ಶಕ್ತಿ ದೇವತೆಯಾದ ಕಾರಣ ಮಾರಮ್ಮನ ಆಚಾರ–ವಿಚಾರಗಳನ್ನು ಎಲ್ಲಮ್ಮನಿಗೂ ಆರೋಪಿಸಲಾಯಿತು. ಇದರಿಂದ ಕುರಿಬಲಿಯ ಉತ್ಸವದಾಚರಣೆಯಲ್ಲಿ ಸೇರಿತು. ದ್ಯಾವಮ್ಮನಂತೆ ಎಲ್ಲಮ್ಮನೂ ಫಲೋತ್ಪತ್ತಿ ದೇವತೆಯೆಂದು ಕೊಡದ ಪೂಜೆಯನ್ನೂ ಸೇರಿಸಲಾಯಿತು.

ಮರಗಮ್ಮ: ಮರಗಮ್ಮ, ಮರೆಮ್ಮ ಮೂಲದಲ್ಲಿ ಮೃತ್ಯುವಿನಿಂದ ಕಾಪಾಡುವ ದೇವತೆ. ಆದರೆ ಇಂದು ಇವಳು ಮರಣ ತರುವ ದೇವತೆಯೆಂದು ಪರಿಗಣಿಸಲಾಗುತ್ತದೆ. ಇವಳನ್ನು ಪ್ಲೇಗು, ಕಾಲರ ಸಿಡುಬುಗಳ ದೇವತೆಯೆಂದೂ ಹೇಳಲಾಗುತ್ತದೆ. ಹಳ್ಳಿಗಳಲ್ಲಿ ಮರಗಮ್ಮನ ಸ್ಥಾಪನೆಯಾದದ್ದು ಮರಣದ ಭಯದಿಂದ. ಆದಿಮಾನವನು ಪೂಜಿಸುತ್ತಿದ್ದ ಮರ ಅಮ್ಮನಾಗಿ ಗ್ರಾಮಗಳಾದಾಗ ರೋಗರುಜಿನ, ಬಂಜೆತನನಿವಾರಕಳಾಗಿ, ಆಯುರ್ವೇದ ವೃತ್ತಿಯಾಧಾರವಾಗಿ ವೃಕ್ಷ ದೇವತೆಯಾಗಿ ಪೂಜೆಗೊಳ್ಳತೊಡಗಿದಳು. ಈಡಿಗರು ಈಚಲ, ಮ್ಯಾದರು ಬಿದಿರು, ಪಾಂಚಾಲರು ಬನ್ನಿ, ಶೈವರು ಬಿಲ್ವ, ಬ್ರಾಹ್ಮಣರು ತುಳಸಿ, ಬ್ಯಾಡರು ಮತ್ತು ತಳವಾರರು ಬೇವು, ಕುರುಬರು ಕುಸಬಿ, ಮಾದರು ಮಾವು, ಕುಂಬಾರರು ಕುಂಬಳ, ಜಾಡರು ಜಾಲಿ ಮರಗಳನ್ನು ತಂತಮ್ಮ ಕೇರಿಗಳ ದೇವತೆಗಳೆಂದು ಪೂಜಿಸುತ್ತಾರೆ.

ಊರು ಮರಗಮ್ಮ, ಗಾಳಿ ಮರಗಮ್ಮ, ಸೀಮೆ ಮರಗಮ್ಮ, ಕೌಟಾ ಮರಗಮ್ಮ, ಗಡವಂತಿ ಮರಗಮ್ಮ, ಕೀರಣಗಿ ಮರಗಮ್ಮ ಎಂಬ ಪ್ರಭೇಧಗಳು ಈ ದೇವತೆಯಲ್ಲಿ ಕಂಡುಬರುತ್ತವೆ. ಊರು ಮರಗಮ್ಮ ಎಂದರೆ ಊರಿನ ರಕ್ಷಣೆಗಾಗಿ ಇರುವವಳು ಎಂದರ್ಥ. ಈಕೆ ಊರಿನ ಮಧ್ಯೆ ಇದ್ದು ಊರನ್ನು ಕಾಯುವ ದ್ಯಾವಮ್ಮನನ್ನು ನಡೂರ ದೇವಮ್ಮನೆಂದೂ ಕರೆದರೆ ಊರ ಮುಂದಿದ್ದು ಸಾವಿನಿಂದ ಕಾಯುವ ಮರಗಮ್ಮನನ್ನು ಊರ ಮುಂದಿನ ಮರಗಮ್ಮನೆನ್ನುವರು. ದ್ಯಾವಮ್ಮನಿಗೆ ಸಲ್ಲುವ ಪೂಜೆಗಳು ಮರಗಮ್ಮನಿಗೂ ಸಲ್ಲಿಸಲಾಗುವುದು. ಊರಲ್ಲಿ ಸಾವಿನೋವುಗಳಾದಾಗ, ಭೀಕರ ರೋಗರುಜಿನಗಳೊಂಟಾದಾಗ ಮರಗಮ್ಮನಿಗೆ ವಿಶೇಷ ಪೂಜೆಗಳನ್ನು ಮಾಡಲಾಗುವುದು. ಮರಗಮ್ಮನ ಗುಡಿಯ ಮುಂದೆ ಹಲಗೆ ಡೊಳ್ಳುಗಳನ್ನು ಬಡಿಯುತ್ತ, ಜೊತೆಗೆ ಪೂಜಾರಿಯನ್ನು ಕರೆದುಕೊಂಡು ದೇವಿಯ ಗುಡಿಗೆ ಬರುತ್ತಿದ್ದರು. ಆಗ ಪೂಜಾರಿಯ ಮೈಮೇಲೆ ದೇವಿಯು ಮೂಡಿ ಬಂದು ಜನರು ಕೇಳಿದ ಪ್ರಶ್ನೆಗಳಿಗೆ ಹೇಳಿಕೆ ನೀಡುವನು. ಮರಗಮ್ಮನ ಉತ್ಸವ ಮಾಡಲು ಹೇಳುವನು. ಈ ಉತ್ಸವ ನಡೆಸುವ ಸಂಪೂರ್ಣ ಜವಾಬ್ದಾರಿಯನ್ನು ಮರಗಮ್ಮನ ಮನೆತನದ ಕುಲಕರ್ಣಿ ಹೊರುವನು. ಊರಲ್ಲಿ ಏಳು ದಿವಸ ದೀಪ ಇಡುತ್ತಾರೆ. ಆ ಏಳೂ ದಿವಸಗಳಲ್ಲಿ ಹೊರಗಿನ ಜನ ಊರೊಳಗಾಗಲೀ, ಊರಿನ ಜನ ಊರ ಹೊರಗೆ ಹೋಗುವುದಾಗಲೀ ನಿಷಿದ್ಧ. ಏಳೂ ದಿನಗಳ ಉತ್ಸವದ ಕೊನೆಯಲ್ಲಿ ಸಿಂಗಾರಗೊಂಡ ಗಾಳಿಮರಗಮ್ಮನನ್ನು ಬಂಡಿಯ ಮೇಲೆ ಕೂರಿಸಿಕೊಂಡು ಹಲಗೆ ಡೊಳ್ಳುಗಳನ್ನು ಮೆರೆಸುತ್ತ ಏಳೂರು ಸೀಮೆ ಕೂಡುವಲ್ಲಿಗೆ ತಂದು ಇಡುತ್ತಿದ್ದರು. ಗಾಳಿ ಮರಗಮ್ಮನನ್ನು ಊರು ಸೀಮೆ ದಾಟಿಸಿ ಬಂದದ್ದರಿಂದ ರೋಗದ ಹಾವಳಿ ಊರು ಬಿಟ್ಟು ಹೋಯಿತು ಎಂದು ಜನ ಸಂತೋಷದಿಂದ ಹಿಂತಿರುಗುವರು. ಊರುಮರಗಮ್ಮನ ಸಮೀಪದಲ್ಲಿ ಗಾಳಿಮರಗಮ್ಮ ಏಳು ದಿನಗಳು ಕುಳಿತಿದ್ದ ಸ್ಥಳದಲ್ಲಿ ಗುಡಿಕಟ್ಟಿಸಿ ಗಾಳಿಮರಗಮ್ಮನ ಸಮೀಪದಲ್ಲಿ ಸ್ಥಾಪಿಸುವರು. ಪ್ರತಿ ಬೇಸಿಗೆಯಲ್ಲೊಮ್ಮೆ ಮರಗಮ್ಮನಿಗೆ ಕುರಿಬಲಿಯನ್ನು ಕೊಟ್ಟು ಉತ್ಸವವನ್ನು ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಶಂಕರವಾಡಿಯಲ್ಲಿ ಈಗಲೂ ಆಚರಿಸುತ್ತಾರೆ. ಆಳಂದ ತಾಲ್ಲೂಕಿನ ಇವತ್ತಿನ ಕಮಲನಗರ ಹಿಂದೆ ಕೌಂಟಗಿ ಆಗಿತ್ತು. ಈ ಕೌಂಟಗಿ ಊರಿನ ಮರಗಮ್ಮ ಜೇವರ್ಗಿ ತಾಲ್ಲೂಕಿನ ಅಡವಿ ಸೇರಿ ವೈಭವದಿಂದ ಪೂಜೆಗೊಳ್ಳುತ್ತಿದ್ದಾಳೆ. ಇವಳಿಗೆ ಒಂದೇ ದಿನದ ಉತ್ಸವ. ರಾತ್ರಿ ಇಲ್ಲಿ ಯಾರು ಇರುವಂತಿಲ್ಲ. ಪ್ರತಿ ಶುಕ್ರವಾರ ಈ ದೇವಿಯ ಉತ್ಸವ ಚೈತ್ರದಿಂದ ಜ್ಯೇಷ್ಠದವರೆಗೆ ನಡೆಯುತ್ತದೆ. ಗುಲ್ಬರ್ಗಾ ತಾಲ್ಲೂಕಿನ ಆಲಳ್ಳಿ ಮರಗಮ್ಮನ ಪೂಜಾರಿ ಬಲವಾದ ಹೇಳಿಕೆ ಮಾಡುವುದರಿಂದ ಈ ದೇವಿಯ ಭಕ್ತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

ಇಡೀ ಗುಲ್ಬರ್ಗಾ ಜಿಲ್ಲೆಗೆ ಕೀರಣಗಿಯಲ್ಲಿರುವ ದೇವಿಯ ಜೋಡು ಮರಗಮ್ಮರಿಂದ ಪ್ರಸಿದ್ಧವಾಗಿದೆ. ಇಲ್ಲಿ ಹೇಳಿಕೆ ಮಾಡುವವಳು ಹರಿಜನರ ಹೆಣ್ಣುಮಗಳು. ಉತ್ಸವದ ದಿನ ಮಾತ್ರ ಎಲ್ಲರೂ ಅವಳ ಕಾಲುಮುಟ್ಟಿ ನಮಸ್ಕರಿಸುವರು. ಇಲ್ಲಿ ಊರ ಮುಂದೆ ಊರ ಮರಗಮ್ಮ ಮತ್ತು ಸೀಮೆಯ ಮೇಲೆ ದಂಡಿನ ಮರಗಮ್ಮ ಇದ್ದಾಳೆ. ಐದು ದಿನಗಳ ಉತ್ಸವವಿದ್ದದ್ದು ಈಗ ಮೂರು ದಿನಕ್ಕಿಳಿದಿದೆ. ಸಂಜೆ ರಥೋತ್ಸವವಿರುತ್ತದೆ. ಇಲ್ಲಿ ರಥಕ್ಕೂ ಸೀರೆ ಉಡುಸುವುದೊಂದು ವಿಶೇಷ. ಕುರಿ ಕೋಣಗಳನ್ನು ಬಲಿಕೊಡುವರು. ಕೈಗೆ ಮೈಗೆ ಹಣೆಗೆ ಹಣಚಿ ಬಟ್ಟಿನ ಮುದ್ರೆ ಇದೆ. ಉರುಳುಸೇವೆ ನಡೆಯುತ್ತದೆ. ರಾತ್ರಿಯಲ್ಲಿ ದೀವಟಿಗೆಯಿದೆ. ಹೊಳೆ ಕೆರೆ ಬಾವಿ ಇಲ್ಲ. ಉಟ್ಟ ಬಟ್ಟೆಯ ಮೇಲೆ ನ್ಯಾಯಸ್ಥಾನವಿದೆ. ಮಂಗಳವಾರ ದೇವಿಯ ವಾರ, ಹಸಿರು

ಸೇರೆ, ಹಸಿರು ರವಿಕೆ, ಹಸಿರು ಬಳೆ, ಡಾಬು, ಮೂಗುತಿ ಇವಳ ಉಡುಗೆ ಆಭರಣಗಳು, ಚಂದ್ರಾಯುಧ, ತ್ರಿಶೂಲ, ಭರ್ಜಿಗಳು ಆಯುಧಗಳು. ವಾಹನ ಸಿಂಹ ಬಯಲಾಟ, ಕುಣಿತ ಮನರಂಜನೆಗಳು.

ಪಾಲಕಮ್ಮ, ಪೋಚಮ್ಮ: ಗುಲ್ಬರ್ಗಾ ಜಿಲ್ಲೆಯಲ್ಲಿ ಮಕ್ಕಳ ದೇವತೆಗೆ ಪಾಲಕಮ್ಮನೆನ್ನುವರು. ಪಾಲಕಮ್ಮನ ತಂಗಿಗೆ ಪೋಚಮ್ಮ ಪೋಷಮ್ಮ ಎನ್ನುವರು. ದ್ಯಾವಮ್ಮ ಊರಿಗೆ ಮಳೆ ಬೆಳೆಯಿಂದ ಸಮೃದ್ಧಿ, ಸುಖ ಉಂಟುಮಾಡುವ, ಮರಗಮ್ಮ ಕುಂಡಿಬಾಯಿ ಹಾವಳಿಯಿಂದ ಉಳಿಸುವ ದೇವತೆಗಳಾದರೆ ಪಾಲಕಮ್ಮ, ಪೋಚಮ್ಮರು ಮಕ್ಕಳನ್ನು ಥಟ್ಟು, ಹೊಟ್ಟು, ಗೊಬ್ಬರ, ದೇವಿ, ಗಣಜಲು, ಉರಿಚಳಿಗಳಿಂದ ಉಳಿಸುವ ದೇವತೆಗಳು. ಜೋಡು ದ್ಯಾವಮ್ಮ, ಜೋಡು ಮರಗಮ್ಮ ಇರುವಂತೆ ಪಾಲಕಮ್ಮನ ಜೊತೆಗಾರ್ತಿಯಾಗಿ ತಂಗಿಯಾಗಿ ಹಾಲು ಕುಡಿವ ಮಕ್ಕಳನ್ನು ಪೋಷಿಸಲು ಪೋಚಮ್ಮನಿರುವಳು. ಪೋಚಮ್ಮ ಸಹಾಯಕ ದೇವತೆಯಾದ್ದರಿಂದ ಅವರಿಬ್ಬರೂ ಒಂದೇ ಗುಡಿಯಲ್ಲಿದ್ದರೂ ಆ ಗುಡಿಯನ್ನು ಪಾಲಕಮ್ಮನ ಗುಡಿ ಎನ್ನುವರು.

ಪಾಲಕಮ್ಮ ಪ್ರಮುಖ ಗ್ರಾಮದೇವತೆಯಲ್ಲ. ಆದರೆ ಮಾರಮ್ಮನ ಉಪದೇವತೆ. ಮಾರಮ್ಮ ಊರಿನ ಸ್ತ್ರೀಪುರುಷರ ರೋಗಗಳನ್ನು ನಿವಾರಿಸಿದರೆ ಪಾಲಕಮ್ಮ ಅವರ ಮಕ್ಕಳ ಪೀಡೆಗಳನ್ನು ಪರಿಹರಿಸುವಳು. ಇವಳು ಸೌಮ್ಯದೇವತೆ. ಇವಳ ಆನುವಂಶಿಕ ಪೂಜಾರಿ ತಳವಾರ. ಆಭರಣಗಳು ಹಸಿರುಬಳೆ, ಹಸಿರು ಮಣಿಸರ, ಅರಿಷಿಣ, ಉಡಿಗೆ ಬಿಳಿ ಪತ್ತಲ, ಬಿಳಿ ರವಿಕೆ. ಆಯುಧಗಳು, ವಾಹನ, ವಾದ್ಯ, ದೀವಟಿಗೆ, ತೇರು, ಪಲ್ಲಕ್ಕಿ ಈ ದೇವತೆಗಿಲ್ಲ. ಸ್ವರೂಪ ಆಲದ ಮರ ಮತ್ತು ಹುತ್ತ. ಸಸ್ಯಾಹಾರ ಮಾಂಸಾಹಾರ ಎರಡನ್ನು ನೈವೇದ್ಯಕ್ಕಿಡುವರು. ಇವಳು ಅಲೆಮಾರಿ ದೇವತೆಯಲ್ಲ. ಪರಿಶಿಷ್ಟರ ದೇವತೆ, ಕಟ್ಟೆಗೆಯಲ್ಲಿ ಮೂರ್ತಿ ಮಾಡಿ ಜಾಜಿ ಬಣ್ಣ ಹಚ್ಚುವರು. ಮಂಗಳವಾರ ದೇವಿಯ ವಾರ.

ದುರಗಮ್ಮ: ಸಪ್ತಮಾತೃಕೆಯರಲ್ಲಿ ಮೂರನೆಯವಳು. ದುರ್ಗಮ್ಮ ಮೂಲತಃ ಶಬರರ ದೇವತೆ, ಸ್ಥಳೀಯ ದೇವತೆ. ದುರಗಮ್ಮ ಯಾವುದೇ ವರ್ಗದ ಅಥವಾ ಉದ್ಯೋಗದ ದೇವತೆಯಾಗಿರದೆ ಯುದ್ಧದ ಮತ್ತು ದುರ್ಗದ ದೇವತೆ ಆಗಿದ್ದಾಳೆ. ಆದ್ದರಿಂದ ಕೋಟೆಯಿರುವ ಊರುಗಳಲ್ಲಿ ಮಾತ್ರ ಇವಳು ಗ್ರಾಮದೇವತೆ, ಕಷ್ಟದ ದೇವತೆ. ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಅಲ್ಲೂರಿನಲ್ಲಿ ಕೋಟೆಯ ಮುಂದುಗಡೆ ದುರಗಮ್ಮನನ್ನು ಸ್ಥಾಪಿಸಿರುವುದು ಕಂಡುಬರುತ್ತದೆ. ಇವಳಿಗೆ ಕಾಳಿ, ಕರಾಳಿ, ಕಾಪಾಲಿ, ಕಾತ್ಯಾಯಿನಿ, ಕುಮಾರಿ, ಚಂಡಿ ಮುಂತಾದ ಬಿರುದುಗಳು ಅವಳು ಎಸಗುವ ಕಾರ್ಯಕ್ಕಾಗಿ ಬಂದಿವೆ. ಗುಡ್ಡಗಾಡು, ಗುಹೆಗಳು, ಕಾಡುಗಳಲ್ಲಿ ವಾಸವಾಗಿದ್ದ ಶಬರ, ಪುಳಿಂದ, ಬರ್ಬರ ಮೊದಲಾದ ಕಾಡು ಜನಾಂಗಗಳ ಕುಲದೇವತೆಯಾಗಿದ್ದಳು. ಗ್ರಾಮದೇವತೆಗಳಾದ ದ್ಯಾವಮ್ಮ ಮಾರಮ್ಮರ ಎಲ್ಲ ಆಚಾರ–ವಿಚಾರಗಳನ್ನು ಈಕೆಗೂ ಆರೋಪಿಸಿ ಗ್ರಾಮದೇವತೆಯಾಗಿ ಮಾಡಲಾಗಿದೆ. ಈಕೆ ಸಂಪತ್ತನ್ನು ಹೆಚ್ಚಿಸುವ ದೇವತೆಯೆಂದು ಶುಕ್ರವಾರದ ದಿನ ಇವಳಿಗೆ ವಿಶೇಷ ಪೂಜೆ ನಡೆಸುವರು.

ಲೋಕ ಸಂಚಾರಕ್ಕಾಗಿ ಹೊರಟ ದೇವಿ ಮೊದಲು ಬಂದು ಅಲ್ಲೂರಿನ ಒಂದು ಕಟ್ಟೆಯ ಮೇಲೆ ವಿಶ್ರಾಂತಿಗಾಗಿ ಕುಳಿತಿದ್ದರಿಂದ ಇವಳನ್ನು ಕಟ್ಟೆಮ್ಮನೆನ್ನುವರು. ಮುಂದೆ ಅಲ್ಲಿಂದ ನಡೆದು ಬಂದು ಈಗಿರುವ ದಿಬ್ಬದ ಸ್ಥಳದಲ್ಲಿ ನೆಲೆಸಿ ದುರಗಮ್ಮನಾಗಿದ್ದಾಳೆ. ದುರ್ಗಮ್ಮನದು ಅರಸು ಮನೆತನ. ಈ ದೇವಿಯ ಪೂಜಾರರು ತಳವಾರರು. ಮೂರ್ತಿ ಕಟ್ಟಿಗೆಯದು. ವಾಹನ ಸಿಂಹ. ಕೆಂಪು ಬಳೆ, ಮೂಗುತಿ, ಕೆಂಪು ಮಣಿಸರ, ಅರಿಷಿಣ, ಇವಳ ಆಭರಣ, ಅಲಂಕಾರ, ಚಂದ್ರಾಯುಧ, ತ್ರಿಶೂಲ ಭರ್ಜಿ, ಖಡ್ಗ ಈ ದೇವತೆಯ ಆಯುಧಗಳು. ಉಗ್ರ ಮುಖಭಾವದ ದೇವತೆಯಿವಳು.

ಶಹಾಪುರ ತಾಲ್ಲೂಕಿನ ಸೀಪುರ ಗೋನಾಳದ ದುರಗಮ್ಮನ ಮೂರ್ತಿ ಕಂಚಿನದು, ನಾಲ್ಕು ಅಡಿ ಎತ್ತರವಿದೆ. ದೇವಿಯ ವಾಹನ ಸಿಂಹ ಹಿತ್ತಾಳೆಯದು. ಇಲ್ಲಿ ದೇವಿಯ ಪೂಜಾರಿ ಹರಿಜನರು. ಅಲ್ಲೂರ ದುರ್ಗಮ್ಮನ ಗುಡಿ ಗುಡ್ಡದ ಮೇಲಿದೆ. ದೇವಿಯ ಮೂರ್ತಿಯನ್ನು ದೊಡ್ಡ ಬಂಡೆಯ ಮೇಲೆ ಕೊರೆಯಲಾಗಿದೆ. ಇವಳಿಲ್ಲಿ ಬಡಿಗೇರರ ದೇವತೆ. ಜಾತ್ರೆ ಫೆಬ್ರವರಿಯಲ್ಲಿ. ಪ್ರತಿ ಮೂರು ವರುಷಕ್ಕೆ ಒಮ್ಮೆ ತಪ್ಪದೇ ಜಾತ್ರೆ ನಡೆಸುವರು. ಬೇಸಿಗೆಯಲ್ಲಿ ಬಾದಾಮಿ ಅಮಾವಾಸ್ಯೆಯಲ್ಲಿ ಮತ್ತು ಚಳಿಗಾಳದಲ್ಲಿ ಉತ್ಸವ ನಡೆಸುವರು. ಆಗ ಅಗ್ನಿ ತುಳಿಯುವರು. ಹಲಗೆ, ಡೊಳ್ಳು, ಬಾಜಿ ವಾದ್ಯಗಳೊಂದಿಗೆ ದ್ವಿಪದಿ, ತ್ರಿಪದಿ, ಚೌಪದಿಗಳನ್ನು ಹಾಡುತ್ತ ದುರಗಿ ಮುರಗಿ ಕುಣಿತ ನಡೆಸುವರು. ಕುರಿಯನ್ನು ಬೇರೆಡೆ ಕಡಿದು ಕುರಿಯ ಮಾಂಸವನ್ನು ತಂದು ದೇವಿಗೆ ನೈವೇದ್ಯಕ್ಕಿಡುವರು. ದೇವಿಯು ತಪ್ಪಿತಸ್ಥರನ್ನು ಉಗ್ರವಾಗಿ ಶಿಕ್ಷಿಸುವಳೆಂಬ ಭಯದಿಂದ ಯಾರೂ ಕಳ್ಳತನ ಮಾಡುವುದಿಲ್ಲ. ಉತ್ಸವದ ಕೊನೆಯಲ್ಲಿ ಭಕ್ತರಿಗೆಲ್ಲ ಚಜ್ಜುಕ (ಸಜ್ಜಿಗೆ)ದ ಊಟವನ್ನು ಮಾಡಿಸುವರು.

ಕಾಳಮ್ಮ: ಯುದ್ಧ ದೇವತೆ. ಪಾಂಚಾಳರ (ಬಡಿಗೇರ, ಅಕ್ಕಸಾಲಿಗ, ಕಂಬಾರ, ಪತ್ತಾರ, ಕಂಚುಗಾರ)ರ ಉದ್ಯೋಗ ದೇವತೆ, ಬುಡಕಟ್ಟಿನ ದೇವತೆ. ಎಲ್ಲೋರರ ಅಭಿಪ್ರಾಯದಲ್ಲಿ ಕಾಳಿ–ದುರ್ಗೆ ಒಂದೇ. ಆದರೆ ಹೈದ್ರಾಬಾದ ಕರ್ನಾಟಕದಲ್ಲಿ ಆಚಾರ–ವಿಚಾರ ಸ್ವರೂಪದಲ್ಲಿ ಇವರಿಬ್ಬರೂ ಬೇರೆ ಬೇರೆ ದೇವತೆಗಳು. ಕಾಳಮ್ಮ ಲೋಕದೇವತೆಯೂ ಹೌದು, ಸ್ಥಳೀಯ ದೇವತೆಯೂ ಹೌದು, ಅಂತೆಯೇ ಇವಳು ಶಿಷ್ಟರ ಮತ್ತು ಪರಿಶಿಷ್ಟರ ದೇವತೆಯೂ ಹೌದು. ಕಾಳಮ್ಮನ ಗುಡಿಯು ಯಾವಾಗಲೂ ಪಾಂಚಾಳರ ಕೇರಿಯಲ್ಲಿರುತ್ತದೆ. ಆದರೆ ಕುನ್ನೂರ ಕಾಳಮ್ಮನ ಗುಡಿಯು ಮಾತ್ರ ಊರ ಹೊರಗೆ ಭೀಮಾ ಮತ್ತು ಕಾಗಿಣಿ ನದಿಗಳು ಯನಗುಂಟಿ ಸಮೀಪ ಸಂಗಮವಾಗಿರುವ ಕೆಳಭಾಗದಲ್ಲಿ ಹೊಳೆದಂಡೆಯ ಮೇಲಿದೆ. ಕುನ್ನೂರ ಕಾಳಮ್ಮನಿಗೆ ನಡೆದುಕೊಂಡರೆ ಸಾಕು, ಧಾರವಾಡದ ಸಿರಸಿಂಗಿಗೆ ಹೋಗಬೇಕಾದ ಅಗತ್ಯವಿರುವುದಿಲ್ಲವೆಂಬ ಜನಹೇಳಿಕೆ ಇದೆ. ಪೌರಾಣಿಕ ಹಿನ್ನೆಲೆಯಲ್ಲಿ ಇವಳು ದಕ್ಷಬ್ರಹ್ಮನ ಯಾಗದಲ್ಲಿ ಸುಟ್ಟುಹೋದ ಕಾರಣ ಕಪ್ಪು ಮೈಯವಳಾದಳು. ಇವಳ ಗುಡಿಯಲ್ಲಿ ಆನುವಂಶಿಕ ಪೂಜಾರಿ ಪಾಂಚಾಳನು. ಮೂರ್ತಿ ಮರದ್ದು. ಪಾದುಕೆ ಇಲ್ಲ. ವಾಹನ ಸಿಂಹ, ಕರಿ ಸೀರೆ, ಕರಿ

ಕುಬುಸ, ಕರಿ ಬಳೆ, ಮೂಗುತಿ, ಇವಳ ಉಡುಗೆ ತೊಡುಗೆಗಳು. ಕೊಡಲಿ, ಖಡ್ಗ, ಭರ್ಜಿ, ತ್ರಿಶೂಲಗಳು ಇವಳ ಆಯುಧಗಳು. ಉಗ್ರ ದೇವತೆಯಿವಳು. ದೇವಿಯ ವಾರ ಶುಕ್ರವಾರ. ಗುಡಿಯ ಸ್ಥಳ ಊರೊಳಗೆ. ಈ ದೇವಿಗೆ ಚಳಿಗಾಲ ಹಾಗೂ ಬೇಸಿಗೆ ಕಾಲಗಳಲ್ಲಿ ಜಾತ್ರೆ ನಡೆಯುವುದು. ದೀವಟಿಗೆ ಇಲ್ಲ. ದೀಪದ ಕಂಬ ಇದೆ. ತೇರು, ಪಲ್ಲಕ್ಕಿ ಇವೆ. ಡೋಲು, ಮದ್ದಳೆ, ಕೊಂಬು, ಕಹಳೆ, ತಾಳ, ಜಾಗಟೆ ವಾದ್ಯಗಳನ್ನು ದೇವಿಯ ಪೂಜೆ ಉತ್ಸವಗಳಲ್ಲಿ ನುಡಿಸಲಾಗುವುದು. ಹಲಗೆ, ಡೊಳ್ಳುಗಳನ್ನು ಅಪವಿತ್ರವಾದ ವಾದ್ಯಗಳೆಂದು ನಿಷೇಧಿಸಿರುವರು. ದೇವಿಯ ಉತ್ಸವವನ್ನು ಕೆಲವರು ಶಿವರಾತ್ರಿಗೆ, ಇನ್ನೂ ಕೆಲವರು ಯುಗಾದಿಗೆ ಆಚರಿಸುವರು. ಈಕೆಯ ಉತ್ಸವವನ್ನು ಕೆಲವೆಡೆ ಐದು ದಿವಸ, ಕೆಲವೆಡೆ ಒಂಬತ್ತು ದಿವಸಗಳ ಕಾಲ ಆಚರಿಸುವರು.

ಚೌಡಮ್ಮ: ದೇವಾಂಗದವರ ಹಟಗಾರರ ದೇವತೆ. ನೇಕಾರರ ಉದ್ಯೋಗದೇವತೆ. ಇವಳು ಲೋಕದೇವತೆ ಮತ್ತು ಸ್ಥಳೀಯ ದೇವತೆ ಎರಡೂ ಆಗಿದ್ದಾಳೆ. ಜಾನಪದರ ಹೇಳಿಕೆಯಲ್ಲಿರುವ ಕಥೆಗಳೆಂದರೆ ಏಳುಕೊಳ್ಳದಲ್ಲಿ ಮುಳುಗಿದ ಎಲ್ಲಮ್ಮ ಮೇಲೇಳದಿದ್ದಾಗ ಚೌಡಿಕೆ ವಾದ್ಯದ ಶಬ್ದಕ್ಕೆ ಸಂಪ್ರೀತಳಾಗಿ ಮೇಲೆದ್ದು ಬಂದಳಂತೆ. ಹೀಗೆ ಚೌಡಿಕೆಯಿಂದ ಸಂಪ್ರೀತಳಾದ ಅಮ್ಮನನ್ನು ಚೌಡಮ್ಮ ಎಂದೇ ಕರೆಯಲಾಯಿತು. ಇನ್ನೊಂದು ಕಥೆಯ ಪ್ರಕಾರ ಚಾವಡಿಯಲ್ಲಿ ಪೂಜೆಗೊಳ್ಳುತ್ತಿದ್ದ ಅಮ್ಮ ಚೌಡಮ್ಮ. ಇವಳು ಚೇಳಿನ ಅಮ್ಮನೆಂದೂ, ಚೇಳಮ್ಮ < ಚೌಳಮ್ಮ < ಚೌಡಮ್ಮ ಎಂದಾ ಯಿತೆಂದೂ ಹೇಳುವರು. ರಾಘವಾಂಕ ಕವಿಯ ವೀರೇಶಚರಿತೆಯಲ್ಲಿ ಹೇಳಿರುವಂತೆ ವೀರಭದ್ರನು ದಕ್ಷಯಜ್ಞ ನಾಶದ ಸಂದರ್ಭದಲ್ಲಿ ಜನರನ್ನು ಕೊಲ್ಲುತ್ತಾ ಬಂದಾಗ ರಕ್ತವು ಮಡುಕಟ್ಟಿ ನಿಂತು ಮುಂದೆ ನಡೆದು ಹೋಗಲು ಅಡ್ಡಿಯಾಗಲು ವೀರಭದ್ರನು ಶಿವನನ್ನು ಪ್ರಾರ್ಥಿಸಲು ಚೌಡಮ್ಮನನ್ನು ಸೃಷ್ಟಿಸಿದನು. ಚೌಡಮ್ಮ ವೀರಭದ್ರ ಕಡಿದ ರುಂಡಗಳಿಂದ ಕಾರುತ್ತಿದ್ದ ರಕ್ತವನ್ನು ತನ್ನ ನಾಲಗೆ ಚಾಚಿ ನೆಕ್ಕುತ್ತ ನಡೆದಳು. ಚೌಡಮ್ಮನಿಗೆ ರಕ್ತದಾಹ ಹೆಚ್ಚಾಗಿ ರಕ್ತ ಮೆತ್ತಿದ ವೀರಭದ್ರನ ಹಿಂಬಡಗಳನ್ನು ನೆಕ್ಕತೊಡಗಿದಾಗ ವೀರಭದ್ರನು ಕೋಪಗೊಂಡು ಅವಳನ್ನು ಮೂರು ತುಂಡಾಗಿ ಕತ್ತರಿಸಿದನು. ಅದಕ್ಕಾಗಿ ರುಂಡವನ್ನು ಹಟಗಾರರೂ, ಮುಂಡವನ್ನು ಬ್ರಾಹ್ಮಣ–ರೂ, ಪಾದವನ್ನು ಮಾದರೂ ಹಂಚಿಕೊಂಡು ಪೂಜಿಸುತ್ತಾರೆ.

ಮೂಲದಲ್ಲಿ ಚೌಡಮ್ಮ ಕಾಳಮ್ಮನಂತೆ ಉಗ್ರದೇವತೆ. ಆದರೆ ಸಸ್ಯಾಹಾರಿಗಳಾದ ನೇಕಾರರ ದೇವತೆಯಾದ್ದರಿಂದ ಮಾಂಸಾಹಾರ ನೈವೇದ್ಯವಿಲ್ಲ. ಹೋಳಿಗೆ, ಹುಗ್ಗಿ, ಕಡುಬು, ಅನ್ನ, ತುಪ್ಪಗಳನ್ನು ನೈವೇದ್ಯಕ್ಕಿಡುವರು. ಗುಲ್ಬರ್ಗಾ ಜಿಲ್ಲೆಯಲ್ಲಿ ನೇಕಾರರು ಹೆಚ್ಚಾಗಿರುವುದು ಜೇವರ್ಗಿ ತಾಲ್ಲೂಕಿನ ಮಳ್ಳಿಯಲ್ಲಿ, ಅಫಜಲಪುರ ತಾಲ್ಲೂಕಿನ ಮಾಸ್ಯಾಳದಲ್ಲಿ. ಚೌಡಮ್ಮ ಗುಡಿಯಲ್ಲಿ ಕೇವಲ ರುಂಡದ ರೂಪದಲ್ಲಿರುವಳು. ಒಂದೇ ರುಂಡ ಇಡುವುದು ಸರಿಯಲ್ಲವೆಂದು ಗುಡಿಯ ಗದ್ದುಗೆಯ ಮೇಲೆ ಚೌಡಮ್ಮನ ಜೋಡಿ ರುಂಡವಿಡುವರು. ಆಕೆಯ ಮುಖವನ್ನು ಕಟ್ಟಿಗೆಯಿಂದ ಮಾಡಿ ಕೆಂಪು ಬಣ್ಣವನ್ನು ಹಚ್ಚುವರು. ಖಡ್ಗ, ತ್ರಿಶೂಲ, ಚಕ್ರ, ಕೊಡಲಿ ಈ ಆಯುಧಗಳನ್ನು ಇವಳ ರುಂಡದ ಪಕ್ಕದಲ್ಲಿಡುವರು. ಕೊಂಬು, ಕಹಳೆ, ಹಲಗೆ, ಡೊಳ್ಳುಗಳನ್ನು ಈಕೆಯ ಉತ್ಸವದಲ್ಲಿ ಬಾರಿಸುವರು. ಸಂಪತ್ತಿನ ದೇವತೆಯೆಂದು ಈಕೆಯನ್ನು ಶುಕ್ರವಾರದ ದಿನ ವಿಶೇಷವಾಗಿ ಪೂಜಿಸುವರು. ಗುಲ್ಬರ್ಗಾ ಜಿಲ್ಲೆಯಲ್ಲಿ ಚೌಡಮ್ಮನ ಸ್ಥಳಗಳೆಂದರೆ ನಾಲವಾರ, ಕನ್ನೇಕೋಳೂರ, ಮಳ್ಳಿ ಮತ್ತು ಮಾಸ್ಯಾಳ. ಮೊದಲು ಇವಳ ಉತ್ಸವ ಐದು ದಿನಗಳು ನಡೆಯುತ್ತಿದ್ದು ಈಗ ಮೂರು ದಿನ ಮಾತ್ರ ನಡೆಯುತ್ತದೆ. ಕುದುರೆ ಕುಣಿತ, ಕೋಳಿ ಬಲಿ, ಕುಸ್ತಿ, ಬಯಲಾಟ, ನಾಟಕ, ಹಾಡಕ್ಕಿ, ಉತ್ಸವದ ದಿನಗಳಲ್ಲಿ ನಡೆಯುವುವು. *(ಜಿಎಸ್‌ಎಸ್‌ಆರ್)*

ಗ್ರಾಮದೇವತೆಗಳು (ಯಾದಗಿರಿ ಜಿಲ್ಲೆ): ಹೈದ್ರಾಬಾದ ಕರ್ನಾಟಕದ ಗಡಿಜಿಲ್ಲೆಯಾದ ಯಾದಗಿರಿ ಆಂಧ್ರದ ಗಡಿಭಾಗಕ್ಕೆ ಹೊಂದಿಕೊಂಡಿದ್ದು, ಇದು ಶೈಕ್ಷಣಿಕ, ಸಾಂಸ್ಕೃತಿಕ, ರಾಜಕೀಯ ಕ್ಷೇತ್ರದಲ್ಲಿ ತನ್ನದೇಯಾದ ಘನತೆಯನ್ನು ಹೊಂದಿದೆ.

ಜಲಸಂಪತ್ತು, ಕೃಷಿಸಂಪತ್ತು, ಖನಿಜಸಂಜಪತ್ತಿನ ಜೊತೆಗೆ ವಿವಿಧ ಸಂಪನ್ಮೂಲಗಳ ತಾಣವಾಗಿದೆ. ನಿಸರ್ಗದತ್ತವಾಗಿ ಹರಿಯುವ ಭೀಮಾನದಿ, ಜಿಲ್ಲೆಯ ಜೀವನದಿಯಾಗಿದೆ. ಇದೇ ನದಿ ಮುಂದೆ ಸಾಗಿ 'ಸಂಗಮ' ಎಂಬ ಗ್ರಾಮದ ಬಳಿ ಹರಿಯುವ ಕೃಷ್ಣ ನದಿಯೊಂದಿಗೆ ಸೇರಿ ಸಂಗಮವಾಗುತ್ತದೆ. ಇಲ್ಲಿ ಸಂಗಮೇಶ್ವರ ದೇವಾಲಯವಿದ್ದು, ಪ್ರೇಕ್ಷಣೀಯ ಸ್ಥಳವಾಗಿದೆ. ಈ ಜಿಲ್ಲೆಯ ಗ್ರಾಮದೇವತೆಗಳು ತುಂಬಾ ಜನಪ್ರೀಯವಾಗಿವೆ.

ಯಾದಗಿರಿಯ ಗ್ರಾಮದೇವತೆಗಳೆಂದರೆ, ಮರಗಮ್ಮ, ದ್ಯಾವಮ್ಮ, ಪಾಲಕಮ್ಮ, ಯಲ್ಲಮ್ಮರು ವಿಶಿಷ್ಟ ಶಕ್ತಿಯನ್ನು ಪಡೆದಿರುವ ಪ್ರಮುಖ ದೇವತೆಯರು. ಈ ದೇವತೆಯರನ್ನು ಗ್ರಾಮೀಣ ಜನರು ತಲತಲಾಂತರದಿಂದ ಆರಾಧಿಸುತ್ತ ಬಂದಿದ್ದಾರೆ. ತಾವು ನಂಬಿರುವ ಈ ದೇವತೆಗಳು ಆಯಾ ಗ್ರಾಮಗಳಲ್ಲಿ ತುಂಬಾ ಜನಪ್ರೀಯ ತೆಗಳಿಸಿವೆ. ಪ್ರತಿವರ್ಷ ನಿಗದಿತ ದಿನದಂದು ಭಕ್ತಿ ಭಾವದಿಂದ ಅರ್ಚನೆ, ಅರ್ಪಣೆ, ಆರಾಧನೆ ಮಾಡುವುದು ಕಂಡುಬರುತ್ತದೆ.

ಈ ಜಿಲ್ಲೆಯ ಶಹಾಪೂರ, ಸುರಪುರ, ತಾಲ್ಲೂಕುಗಳಲ್ಲಿ ದ್ಯಾವಮ್ಮನ ಪ್ರಭಾವವಿರುವುದನ್ನು ಕಾಣಬಹುದು. ಅರ ಸೊತ್ತಿಗೆಯ ಕಾಲದಲ್ಲಿ ಸುರಪುರವನ್ನು ನಾಯಕ ಜನಾಂಗದವರು ರಾಜಧಾನಿಯನ್ನಾಗಿ ಆಳುತ್ತಿದ್ದ ಕಾಲದಲ್ಲಿ ದ್ಯಾವಮ್ಮ, ದುರ್ಗಮ್ಮರು ಪ್ರಭಾವಿ ದೇವತೆಯರಾಗಿದ್ದರು. ಕಾಲಕ್ರಮೇಣ ಅಲ್ಲಿನ ಆಳರಸರು ತಿರುಪತಿಯ ತಿಮ್ಮಪ್ಪನನ್ನು ಆರಾಧಿಸತೊಡಗಿದರು. ಇದರಿಂದಾಗಿ ಈ ದೇವತೆಗಳ ಪ್ರಭಾವ ಕಡಿಮೆ ಆಯಿತೆಂದು ತಿಳಿದುಬರುತ್ತದೆ. ಏಕೆಂದರೆ ತಿರುಪತಿ ತಿಮ್ಮಪ್ಪನ ಅವತಾರಿಯಾದ ಗೋಪಾಲಸ್ವಾಮಿ ದೇವಸ್ಥಾನ ನಿರ್ಮಾಣಗೊಂಡು ಅದರ ಉತ್ಸವಗಳು ಹೆಚ್ಚಿದುದರ ಪರಿಣಾಮ ಗ್ರಾಮದೇವತೆಗಳ ಆಚರಣೆ ಸ್ವಲ್ಪ ಕಡಿಮೆಯಾಯಿತು. ಆದರೂ ಪರಂಪರಾಗತವಾಗಿ ನಡೆದುಕೊಂಡು ಬಂದಿರುವ ಗ್ರಾಮ ದೇವತೆಗಳ ಜಾತ್ರೆ, ಪೂಜೆ–ಪುನಸ್ಕಾರಗಳಿಗೆ ಕೊರತೆಯೇ ಇಲ್ಲ. ತುಂಬಾ ಅದ್ಭುತವಾಗಿ, ಅಲಂಕಾರಿಕವಾಗಿ, ಜನಸಂದಣಿಯಿಂದ ಆಯಾ ಗ್ರಾಮಗಳಲ್ಲಿ ಜಾತ್ರೆ, ಕಾರ್ಯ, ಉತ್ಸವ ಎಂಬ ನಾನಾ ಹೆಸರಿನಲ್ಲಿ ಗ್ರಾಮದೇವತೆಗಳನ್ನು ಆರಾಧಿಸುತ್ತಿರುವುದು ಕಟುಸತ್ಯ.

ಇಂತಹ ಗ್ರಾಮದೇವತೆಗಳು ಆಯಾ ತಾಲ್ಲೂಕವಾರು ಹೀಗಿವೆ.

ಯಾದಗಿರಿ ತಾಲ್ಲೂಕು: ಯಾದಗಿರಿಯ ಗಾಳಿಮರಗಮ್ಮ, ಎಲ್ಲೇರಿ–ಮರಗಮ್ಮ, ಹತ್ತಿಕುಣಿ–ಮರಗಮ್ಮ, ಬಾಲಚೌಡಿ ಮರಗಮ್ಮ, ಗೌಡಗೇರ–ಮರೆಗಮ್ಮ, ಕಿಲ್ಲನಕೇರ–ಮಾರೆಮ್ಮ, ರಾಚನಳ್ಳಿ–ಕರಿಬೆಟ್ಟದ ಮಾರೆಮ್ಮ, ಶೆಟ್ಟಳ್ಳಿ–ಮಾರೆಮ್ಮ ಅಲ್ಲದೆ, ಯಾದಗಿರಿ ದುರಗಮ್ಮ, ಸೌರಾಷ್ಟ್ರಹಳ್ಳಿ–ದುರಗಮ್ಮ, ಖ್ಯಾತನಾಳ–ದುರಗಮ್ಮ, ಯರಗೋಳ ಪಾಲಕಮ್ಮ; ಮೋಟ್ನಳ್ಳಿ– ದ್ಯಾವಮ್ಮ.

ಶಹಾಪುರ ತಾಲ್ಲೂಕು: ನಾಯ್ಕಲ–ದ್ಯಾವಮ್ಮ, ಬೆಂಡಿ ಗುಂಬಳಿ–ದ್ಯಾವಮ್ಮ, ಅಯ್ಯಾಳ–ದ್ಯಾವಮ್ಮ, ದೋರನಳ್ಳಿ–ದ್ಯಾವಮ್ಮ, ಗೋನಾಳ–ದ್ಯಾವಮ್ಮ, ಬಾಡ್ಯಾಳ–ಮರಗಮ್ಮ, ಹಾಲಗೇರಿ–ಯಲ್ಲಮ್ಮ, ಸಗರ–ಯಲ್ಲಮ್ಮ.

ಸುರಪುರ ತಾಲ್ಲೂಕು: ದೇವಪುರ–ದ್ಯಾವಮ್ಮ, ಕಕ್ಕೇರಿ–ದ್ಯಾವಮ್ಮ, ಹುಣಸಗಿ–ದ್ಯಾವಮ್ಮ, ರಾಯನಹಳ್ಳಿ–ದ್ಯಾವಮ್ಮ ಇತ್ಯಾದಿ.

(ಸಿಆರ್‌ಬಿ)

ಗ್ವಾಡ್ಲಿಗೂಡು: ದನಗಳನ್ನು ಕಟ್ಟುವ ಜಾಗದಲ್ಲಿ ಮೇವು ಕಣಿಕೆ, ಹೊಟ್ಟು ಮುಂತಾದವುಗಳನ್ನು ಹಾಕಲು ಮಾಡಿರುವ ಕಾಲುವೆ ಅಥವಾ ಹಲಿಗೆಯಿಂದ ಸಿದ್ಧಪಡಿಸಿರುವ ತೊಟ್ಟಿಯಾಕಾರದ ರಚನೆ. 'ಗೂಡು' ಎಂದರೆ ಗ್ವಾಡ್ಲಿಯಿಂದ ಅಣತಿ ದೂರದಲ್ಲಿ ಅಥವಾ ಕೊಟ್ಟಿಗೆಯ ಮೂಲೆಯಲ್ಲಿ ಇಲ್ಲವೇ ಮಲಗುವ ಕಟ್ಟೆಯ ಕೆಳಗಡೆ ಫಳ್ಳಾಕಾರದ ಜಾಗ. ಅದರಲ್ಲಿ ಕಣಿಕೆ, ಕತ್ತರಿಸಿ ಸಂಗ್ರಹಿಸಿರುತ್ತಾರೆ. ಜೊತೆಗೆ ಮಿಣಿ ಜೋಡಣೆ ಇಡುವ ಜಾಗಕ್ಕೆ ಗೂಡು ಎನ್ನುತ್ತಾರೆ. ಕೆಲವರು ಕಲ್ಲು–ಮಣ್ಣಿನಿಂದ ಕಟ್ಟಿಸಿದರೆ ಮತ್ತೆ ಕೆಲವರು ಇಟ್ಟಿಗೆ ಗಾರೆಯಿಂದ ಕಟ್ಟಿಸಿರುತ್ತಾರೆ. ಎತ್ತುಗಳು ನಿಲ್ಲುವ ಜಾಗಕ್ಕೆ ಹಕ್ಕಿ ಎಂದು ಕರೆಯುತ್ತಾರೆ. ಗ್ವಾಡ್ಲಿಯ ಎದುರಿಗಿರುವ ಗೋಡೆಯಲ್ಲಿ ಒಂದು ಸಣ್ಣ ಮಾಡ ಮಾಡಿ ಅದರಲ್ಲಿ 'ಹಕ್ಕಿ ಕರೆಮ್ಮ' ಅಥವಾ ಇನ್ನಾವುದೋ ತಮ್ಮ ಮನೆದೇವರುಗಳ ಹೆಸರಿನಲ್ಲಿ ಒಂದು ತೆಂಗಿನಕಾಯಿ ಇಟ್ಟಿರುತ್ತಾರೆ. ಪ್ರತಿ ಸೋಮವಾರ ಗ್ವಾಡ್ಲಿ ಪೂಜೆ ಮಾಡುತ್ತಾರೆ. ಪ್ರತಿ ಅಮವಾಸ್ಯೆಗೆ ಹೊಸ ತೆಂಗಿನಕಾಯಿ ತಂದು, ಹಳೆ ತೆಂಗಿನಕಾಯಿ ಜಾಗದಲ್ಲಿಟ್ಟು, ಹಳೆ ಕಾಯಿಯನ್ನು ಒಡೆದು ಪೂಜೆ ಮಾಡುತ್ತಾರೆ. ಹೀಗೆ ಮಾಡುವುದರಿಂದ ಜಾನುವಾರುಗಳಿಗೆ ರೋಗ, ರುಜಿನಗಳು ಬರುವುದಿಲ್ಲವೆಂದು ನಂಬಿಕೆ. ಸೋಮವಾರ, ಅಮವಾಸ್ಯೆ, ಕಾರಹುಣ್ಣಿಮೆ, ದೀಪಾವಳಿ ಮತ್ತು ಬಸವಜಯಂತಿ ಯಂದು, ಜಾನುವಾರುಗಳ ಮೈತೊಳೆದು ಪೂಜೆ ಮಾಡುತ್ತಾರೆ.

(ಎಚ್‌ಪಿ)

ಘ

ಘತ್ತರಗಿ ಭಾಗ್ಯವಂತಿ: ಇದೊಂದು ಪುರಾತನ ದೇವಾಲಯ. ಅಫಜಲಪೂರ ತಾಲ್ಲೂಕಿನ ಘತ್ತರಗಿ 'ಭಾಗ್ಯವಂತಿ' ಭಕ್ತರ ಪಾಲಿನ ಭಾಗಮ್ಮ ಎಂದೇ ಪ್ರಸಿದ್ಧಿ. ಈ ದೇವಿಗೆ ಹರಕೆ ಹೊತ್ತ ಭಕ್ತರು, ಸೊಂಟದ ಬೆನ್ನೆಲುಬಿಗೆ ಉಕ್ಕಿನ ಕೊಂಡಿಯಾಕಾರದ ಹುಕ್ ಸಿಕ್ಕಿಸಿಕೊಂಡು, ದೇವಿಯ ಮುಂದೆ ತೂಗಾಡುವ ಮೂಲಕ 'ಸಿಡಿ' ಎಂಬ ವಿನೂತನ ರೀತಿಯ ಹರಕೆ ಸಲ್ಲಿಸುವ ಪರಂಪರೆ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ.

ಇಂದಿನ ವೈಜ್ಞಾನಿಕ ಯುಗದಲ್ಲೂ ಇಂತಹ ನಂಬಿಕೆಗಳು, ಹರಕೆಗಳು ಜೀವಂತವಾಗಿವೆಯೇ? ಎಂದು ಅಚ್ಚರಿ ಆಗಬಹುದು. ಆದರೆ, ಇದು ಸತ್ಯ. ಪ್ರತಿ ಶುಕ್ರವಾರ, ನಾ ಮುಂದು ತಾ ಮುಂದು ಎಂದು ಭಕ್ತರು ನೂಕು ನುಗ್ಗಲಿನಲ್ಲಿ ಆಗಮಿಸಿ ತೆರಳುವ ಪುರುಷರು, ಮಹಿಳೆಯರು ಮತ್ತು ಮಕ್ಕಳೂ ಕೂಡ 'ಸಿಡಿ' ಹರಕೆಯ ಸೇವೆ ಸಲ್ಲಿಸಿ, ಪುನೀತ ಭಾವದಿಂದ ದೇವಿ ದರ್ಶನ ಪಡೆಯುವದನ್ನು ಇಲ್ಲಿ ಕಾಣಬಹುದು.

ಸಿಡಿ ಹರಕೆ ವೈಶಿಷ್ಟ: ಭಾಗ್ಯವಂತಿ ದೇವಿಗೆ ಹರಕೆ ಹೊತ್ತವರು ಮಾತ್ರ ತಮ್ಮ ಬಯಕೆ ಈಡೇರಿದ ನಂತರ, 'ಸಿಡಿ' ಸೇವೆ ಸಲ್ಲಿಸುತ್ತಾರೆ. ಸಿಡಿ ಹರಕೆ ಸಲ್ಲಿಸುವುದಕ್ಕೆ ಮುನ್ನ ಹರಕೆ ಹೊತ್ತವರು, ತಮ್ಮ ಹರಕೆಯನ್ನು ಹೇಳಬೇಕು. ಅದೂ ಸತ್ಯವನ್ನೇ ಹೇಳಬೇಕು. ಇಲ್ಲವಾದರೆ, ದೇವಿ ಹರಕೆ ಸ್ವೀಕರಿಸುವುದಿಲ್ಲವೆಂಬ ಪ್ರತೀತಿ ಇದೆ. ಅದಕ್ಕೆ ನೂರಾರು ದೃಷ್ಟಾಂತಗಳನ್ನು ಇಲ್ಲಿನ ಭಕ್ತರು ಹೇಳುತ್ತಾರೆ.

ಹರಕೆ ಹೊತ್ತವರು ಸಿಡಿ ಸೇವೆ ಸಲ್ಲಿಸುವ ಬಗ್ಗೆ ಒಂದು ವಾರ ಮೊದಲೇ ದೇವಸ್ಥಾನ ಸಮಿತಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸುತ್ತಾರೆ. ಶುಕ್ರವಾರದ ಮುನ್ನಾ ದಿನವೇ ದೇವಸ್ಥಾನಕ್ಕೆ ಬಂದು ತಂಗಿರುತ್ತಾರೆ. ಅಂದು ಬೆಳಗ್ಗೆ ಹರಕೆ ಸಲ್ಲಿಸುವವರು ತಲೆಗೆ ಮುಂಡಾಸು ಸುತ್ತಿಕೊಂಡು, ದೇವಿ ದರ್ಶನ ಮಾಡಿಸಿ, ಕೊರಳಿಗೆ ಹೂಹಾರ ಹಾಕಿಕೊಂಡು ಸಿಡಿ ಸೇವೆಗೆ ಸಿದ್ಧರಾಗುತ್ತಾರೆ. ಅನಂತರ ಅವರನ್ನು ದೇವಸ್ಥಾನದ ಹಿಂಭಾಗದ ಕಬ್ಬಿಣದ ಕಟಕಟೆಗೆ ಕರದೊಯ್ಯಲಾಗುತ್ತದೆ. ಕಟಕಟೆಯಲ್ಲಿ ಕೈಜೋಡಿಸಿಕೊಂಡು ನಿಲ್ಲುವ ಹರಕೆಯ ಭಕ್ತನಿಗೆ, ಸೊಂಟದ ಮೇಲೆ ದೇವಿಯ ಪ್ರಸಾದ (ಆದಾರ) ಲೇಪಿಸುತ್ತಾರೆ. ನಂತರ ಎರಡು ಕೊಂಡಿಯಾಕಾರದ ಉಕ್ಕಿನ ಹುಕ್‌ಗಳನ್ನು ಚುಚ್ಚುತ್ತಾರೆ. ಈ ಹುಕ್ ಚುಚ್ಚುವ ಮೊದಲೇ ಹರಕೆ ಯಾವಾಗ ಈಡೇರಿತೆಂಬುದನ್ನು ಸತ್ಯ ಹೇಳಬೇಕು. ಸುಳ್ಳು ಹೇಳಿದರೆ, ಹುಕ್ ನಾಟುವುದಿಲ್ಲ. ನಾಟಿದರೂ ರಕ್ತ ಸೋರತೊಡಗುತ್ತದೆ. ಸತ್ಯ ಹೇಳಿದರೆ, ಹುಕ್ ರಕ್ತ ಗಾಯಗಳಿಲ್ಲದೇ ನಿರಾತಂಕವಾಗಿ ನಾಟುತ್ತದೆ. ಎದುರು ಬದಿರಾಗಿ ಎರಡು ಕೊಂಡಿಯಾಕಾರದ ಹುಕ್‌ಗಳನ್ನು ಚುಚ್ಚಿದ ನಂತರ, ಅವುಗಳನ್ನು ಹಗ್ಗಗಳನ್ನು ಸಿಕ್ಕಿಸಲಾಗುತ್ತದೆ.

ಈ ಪ್ರಕ್ರಿಯೆ ಮುಗಿದ ನಂತರ ಬಾಜಾ ಭಜಂತ್ರಿಯೊಂದಿಗೆ ಈ ಸಿಡಿ ಹರಕೆಯ ಭಕ್ತನನ್ನು, ಮೆರವಣಿಗೆಯಲ್ಲಿ ದೇವಸ್ಥಾನದ ಕಾಂಪೌಂಡ ಗೋಡೆಯ ಹಿಂದೆ ಕರೆದೊಯ್ದು, ಅಲ್ಲಿ ನಿಲ್ಲಿಸಿರುವ ರಥದಾಕಾರದ ಗಾಡಿಯ ನೊಗಕ್ಕೆ ಹಗ್ಗವನ್ನು ಬಿಗಿಯಲಾಗುತ್ತದೆ.

ನಂತರ ನಿಧಾನವಾಗಿ ನೊಗ ಮೇಲೇಳುತ್ತದೆ. ಸುಮಾರು 20 ಅಡಿ ಎತ್ತರಕ್ಕೆ ನೊಗ ಮೇಲೆದ್ದು, ಸಿಡಿ ಹರಕೆಯ ಭಕ್ತ ನೊಗಕ್ಕೆ ನೇತಾಡುತ್ತಾನೆ. ನೊಗ ಮೇಲೇಳುತ್ತಲೇ ಭಕ್ತರ ಹರ್ಷೋದ್ಗಾರ ಹಾಗೂ ಭಾಗ್ಯವಂತಿ ದೇವಿಯ ಜಯಕಾರದ ಘೋಷಣೆಗಳು ಮೊಳಗುತ್ತವೆ. ಅದೇ ಸಮಯಕ್ಕೆ ಜೋರಾಗಿ ತಮಟೆಗಳ ಸದ್ದು, ಸುತ್ತಲಿನ ವಾತಾವರಣವೇ ಉಸಿರು ಬಿಗಿ ಹಿಡಿಯುವಂತೆ ಮಾಡುತ್ತದೆ.

ಸಿಡಿ ಹರಕೆಯ ಭಕ್ತ, ನೊಗಕ್ಕೆ ನೇತಾಡುತ್ತಿರುವಂತೆಯೇ, ಈ ಹರಕೆಯ ರಥ ಮುಂದೆ ಚಲಿಸುತ್ತದೆ. ನೇತಾಡುತ್ತಿರುವ ಹರಕೆಯ ಭಕ್ತ, ತನ್ನ ಉಡಿಯಲ್ಲಿ ಕಟ್ಟಿಕೊಂಡಿರುವ ಹೂವಿನ ಪಕಳೆಗಳನ್ನು ಕೆಳಗೆ ಚೆಲ್ಲುತ್ತ, ದೇವಿ ಮಂತ್ರ ಪಠಣ ಮಾಡುತ್ತಿರುತ್ತಾನೆ. ಸಿಡಿ ಭಕ್ತನನ್ನು ಹೊತ್ತ ರಥ, ಸುಮಾರು ಒಂದು ಫರ್ಲಾಂಗ ದೂರದ ಭಾಗ್ಯವಂತಿ ದೇವಿಯ ಮಹಾದ್ವಾರಕ್ಕೆ ಬರುತ್ತದೆ. ಅಲ್ಲಿ ಸಿಡಿ ಹರಕೆ ಭಕ್ತನನ್ನು ನೊಗದಿಂದ ಕೆಳಗಿಳಿಸಲಾಗುತ್ತದೆ. ನಂತರ ದೇವಿಯ ಗರ್ಭಗುಡಿಗೆ ಕರೆದೊಯ್ದು, ಮಂಗಳಾರತಿ ಮಾಡಿ, ದೇವಿಗೆ ಸೀರೆ-ಕುಪ್ಪಸ, ಅರಿಷಿಣ-ಕುಂಕುಮ, ಬಳೆ ಮತ್ತು ಬೆಳ್ಳಿ-ಬಂಗಾರದ ಆಭರಣಗಳನ್ನು ಸಮರ್ಪಿಸಿ, ಭಕ್ತನನ್ನು ಹೊರ ಕರೆತಂದು ಸೊಂಟಕ್ಕೆ ಚುಚ್ಚಿರುವ ಎರಡೂ ಉಕ್ಕಿನ ಹುಕ್‌ಗಳನ್ನು ಹೊರತೆಗೆದು, ಹುಕ್‌ಗಳನ್ನು ಚುಚ್ಚಿರುವ ಜಾಗದಲ್ಲಿ ದೇವಿಯ ಪ್ರಸಾದ ಲೇಪಿಸಲಾಗುತ್ತದೆ. ಯಾವುದೇ ರಕ್ತ ಗಾಯಗಳಿಲ್ಲದೇ, ನೋವಿಲ್ಲದೇ ಹರಕೆಯ ಭಕ್ತ, ಸಂತೃಪ್ತಿಯೊಂದಿಗೆ ಹೊರಬರುತ್ತಾನೆ. ಆನಂತರ ಹರಕೆಯವನಿಗೆ ಆತನ ಬಂಧುಗಳು ಹೊಸ ಬಟ್ಟೆಯ ಉಡುಗೊರೆ ನೀಡುತ್ತಾರೆ.

ಪ್ರತಿ ಶುಕ್ರವಾರ ಸುಮಾರು 20-25 ಭಕ್ತರು ಈ ರೀತಿ ಹರಕೆ ಸಲ್ಲಿಸುತ್ತಾರೆ. ಈ ದೃಶ್ಯ ನೋಡುಗರ ಮೈನವಿರೇಳುವಂತಿರುತ್ತದೆ. ಆದರೆ, ಹರಕೆ ಸಲ್ಲಿಸುವ ಭಕ್ತರಾದ ಮಹಿಳೆಯರು, ಪುರುಷರು ಹಾಗೂ ಬಾಲಕರ ಮುಖದಲ್ಲಿ ಮಾತ್ರ ಒಂದಿನಿತೂ ನೋವಿನ ಛಾಯೆ ಇಲ್ಲದೇ ಸಂತೃಪ್ತಿ, ಧನ್ಯತೆಯ ಭಾವ ಮೂಡಿರುತ್ತದೆ. ಹರಕೆ ಸಲ್ಲಿಸುವವರಿಗೆ ಉಕ್ಕಿನ ಹುಕ್ ಚುಚ್ಚುವ ದೃಶ್ಯ ಕಂಡರೂ ಕೂಡ, ಹರಕೆ ಸಲ್ಲಿಸುವ ಸಾಲಿನಲ್ಲಿ ನಿಂತವರ ಮುಖದಲ್ಲಿ ಮಾತ್ರ ಯಾವುದೇ ಭಯ-ಭೀತಿ ಕಾಣುವುದಿಲ್ಲ ಬದಲಾಗಿ ಪೈಪೋಟಿಯಲ್ಲಿ ನಾಮುಂದು-ತಾಮುಂದು ಎಂದು ಧಾವಿಸುತ್ತಾರೆ.

ದೇವರು-ದೈವದಲ್ಲಿ ನಂಬಿಕೆ ಕೇವಲ ಅನಕ್ಷರಸ್ಥರು ಹಾಗೂ ಮೂಢನಂಬಿಕೆಯ ಹಳ್ಳಿ ಗುಗ್ಗುಗಳಿಗೆ ಸೀಮಿತವೆಂದೂ ಹೇಳುವಂತಿಲ್ಲ. ಸುಶಿಕ್ಷಿತ ವಿದ್ಯಾವಂತರೂ ಕೂಡ ಹರಕೆ-ಪವಾಡಗಳಲ್ಲಿ ಅಪಾರ ನಂಬಿಕೆಯನ್ನಿಟ್ಟಿರುವದನ್ನು 'ಘತ್ತರಗಿ' ಭಾಗ್ಯವಂತಿ ದೇವಸ್ಥಾನದಲ್ಲಿ ಕಾಣಬಹುದು.


ನೂರಾರು ವರ್ಷಗಳ ಸಂಪ್ರದಾಯ: ಘತ್ತರಗಿ ಭಾಗ್ಯವಂತಿ ದೇವಸ್ಥಾನದಲ್ಲಿ 'ಸಿಡಿ' ಹರಕೆ ನೂರಾರು ವರ್ಷಗಳಿಂದ ರೂಢಿಯಲ್ಲಿ ನಡೆದುಕೊಂಡು ಬಂದಿದೆ. ದೀಪಾವಳಿ ಹಬ್ಬದ ನರಕ ಚತುರ್ದಶಿಯ ಮೊದಲ ದಿನ ನೀರು ತುಂಬುವ ಹಬ್ಬದಿಂದ 'ಸಿಡಿ' ಹರಕೆ ಪ್ರಾರಂಭವಾಗುತ್ತದೆ. ನಂತರ ಕಾರಹುಣ್ಣಿಮೆಯ ಹೊನ್ನುಗ್ಗಿಯಂದು ಕೊನೆಗೊಳ್ಳುತ್ತದೆ. ಈ ಅವಧಿಯಲ್ಲಿ ಪ್ರತಿ ವರ್ಷ ಸುಮಾರು 4000 ಭಕ್ತರು ಇಲ್ಲಿಗೆ ಬಂದು ಸಿಡಿ ಹರಕೆ ಸಲ್ಲಿಸುತ್ತಾರೆ.

ಶುಕ್ರವಾರ ಹಾಗೂ ಅಮಾವಾಸ್ಯೆಯ ದಿನಗಳಂತೂ ಭಕ್ತರು ಘತ್ತರಗಿಗೆ ಪ್ರವಾಹೋಪಾದಿಯಲ್ಲಿ ಹರಿದು ಬರುತ್ತಾರೆ. ಘತ್ತರಗಿ ಪುಟ್ಟ ಗ್ರಾಮ. ಅಫಜಲಪೂರ ತಾಲ್ಲೂಕು ಕೇಂದ್ರದಿಂದ 14 ಕಿ.ಮೀ. ದೂರದಲ್ಲಿದೆ. ಘತ್ತರಗಿಯಂಥ ಚಿಕ್ಕ ಗ್ರಾಮದಲ್ಲಿ ಶುಕ್ರವಾರ ಹಾಗೂ ಅಮಾವಾಸ್ಯೆಯ ದಿನಗಳಂದು ಹಲವು ಸಾವಿರ ವಾಹನಗಳಲ್ಲಿ ಬರುವ ಭಕ್ತರ ವಾಹನಗಳೇ ಊರ ಸುತ್ತ ನಿಂತಿರುತ್ತವೆ. ಇರುವೆ ಓಡಾಡಲು ಕಷ್ಟ ಪಡುವ ಜನದಟ್ಟಣೆ ಸೇರುತ್ತದೆ.

ಭಾಗ್ಯವಂತಿ ಯಾರು?: ಘತ್ತರಗಿಯ ಈ ಭಾಗ್ಯವಂತಿ ಯಾರು? ಇದರ ಇತಿಹಾಸವೇ ಸಿಗುವುದಿಲ್ಲ. ಆದರೆ, ಸ್ಥಳೀಯ ಪುರಾಣದ ಪ್ರಕಾರ 13ನೆಯ ಶತಮಾನದಷ್ಟು ಪುರಾತನ ಇತಿಹಾಸ ಕಂಡುಬರುತ್ತದೆ.

ವಿಜಯನಗರ ಸಾಮ್ರಾಜ್ಯ ಯಮನರ ದಾಳಿಗೆ ಸಿಕ್ಕು, ಅತ್ಯಾಚಾರಗಳು ಹೆಚ್ಚಾಗಿ ಅಳಿಯುವ ಕಾಲ ಬಂದಾಗ, ಅಲ್ಲಿನ ಭಾಗ್ಯ ದೇವತೆ ನದಿಗಳಿಗೆ ವಿಮುಖವಾಗಿ, ಸರ್ಪ ರೂಪದಲ್ಲಿ ಹರಿದು ಬಂದು, ಭೀಮಾ ನದಿ ತೀರದಲ್ಲಿರುವ ಪುಟ್ಟ ಕುಗ್ರಾಮ ಘತ್ತರಗಿಯಲ್ಲಿ ಕಂಬದ ರೂಪದಲ್ಲಿ ಬಿದ್ದಳೆಂದು ಹೇಳಲಾಗುತ್ತದೆ. ನಂತರ ಗ್ರಾಮಸ್ಥರ ಕನಸಲ್ಲಿ ಬಂದು, ನಾನು ವಿಜಯನಗರ ಸಾಮ್ರಾಜ್ಯದಲ್ಲಿ ನಡೆಯುತ್ತಿರುವ ಅತ್ಯಾಚಾರ, ಅಧರ್ಮಗಳಿಂದ ಬೇಸರಗೊಂಡು ಇಲ್ಲಿ ಬಂದಿರುವ ಭಾಗ್ಯದೇವತೆ ಎಂದು ಹೇಳಿದಾಗ, ಈ ಕಂಬವನ್ನೇ ಗ್ರಾಮದಲ್ಲಿ ತಂದಿಟ್ಟು ದೇವಸ್ಥಾನ ನಿರ್ಮಿಸಲಾಯಿತೆಂದು ಹೇಳಲಾಗುತ್ತದೆ. ಈ ದೇವಸ್ಥಾನದಲ್ಲಿ ದೇವಿಯ ಪ್ರತಿಮೆ ಇಲ್ಲ. ಕಂಬಕ್ಕೆ ಅಗ್ರ ಪೂಜೆ ಸಲ್ಲಿಸುಲಾಗುತ್ತದೆ. ಕಂಬದ ಮುಂಭಾಗದಲ್ಲಿ ಬೆಳ್ಳಿಯ ಮುಖವಾಡ ಹಾಕಿರುವ, ದೇವಿಯ ಕಾಲ್ಪನಿಕ ಚಿತ್ರಗಳೇ ಇಲ್ಲಿನ ಭಕ್ತರ ಮನೆಗಳಲ್ಲಿ ರಾರಾಜಿಸುತ್ತವೆ. *(ಎಸ್‌ಆರ್‌ಎಂ)*

ಘತ್ತರಗಿ ಭಾಗ್ಯವಂತಿ ಕ್ಷೇತ್ರ: ಭೀಮಾ ತೀರದಲ್ಲಿರುವ ಅತ್ಯಂತ ಪ್ರಸಿದ್ಧಿ ಪಡೆದಿರುವ ಯಾತ್ರಾ ಸ್ಥಳ. ಭೀಮಾ ನದಿಯ ಈಕಡೆ ಇರುವುದು ಕಲಬುರ್ಗಿ ಜಿಲ್ಲೆ. ನದಿಯ ಆ ಬದಿಯಲ್ಲಿರುವದು ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕು. ನದಿ ತೀರದಲ್ಲೇ



ಭಾಗ್ಯವಂತಿ ದೇವಸ್ಥಾನ - ಘತ್ತರಗಾ

ಇರುವ ಭಾಗ್ಯವಂತಿ ದೇವಸ್ಥಾನಕ್ಕೆ ಬರುವ ಭಕ್ತರ ಸಂಖ್ಯೆ ವಾರ್ಷಿಕ ಸುಮಾರು ಐದು ಲಕ್ಷ ದಾಟಬಹುದು. ಪ್ರತಿ ಶುಕ್ರವಾರ, ಮಂಗಳವಾರ, ಹುಣ್ಣಿಮೆ ಹಾಗೂ ಅಮವಾಸ್ಯೆ ಮತ್ತಿತರ ವಿಶೇಷ ಸಂದರ್ಭಗಲ್ಲಿ ಇಲ್ಲಿಗೆ ಬರುವ ಭಕ್ತರ ಸಂಖ್ಯೆ ಅಪಾರ. ಈ ದಿನಗಳಂದು ಇಲ್ಲಿ ಜಾತ್ರೆಯಂತೆಯೇ ಭಕ್ತರು ಹರಿದು ಬರುತ್ತಾರೆ. ಸಿಡಿ ಆಡುವ ಮೂಲಕ ಭಕ್ತರು ತಮ್ಮ ಹರಕೆ ತೀರಿಸುತ್ತಾರೆ. ಇತ್ತೀಚಿನ ದಶಕಗಳಿಂದ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದಾರೆ.

ದೇವಸ್ಥಾನದ ಹುಂಡಿಗೆ ಚಿನ್ನ, ಬೆಳ್ಳಿ ಹಾಗೂ ಹಣ ಮುಂತಾದವುಗಳನ್ನು, ಭಕ್ತರು ಮುಕ್ತ ಮನಸ್ಸಿನಿಂದ ಸಮರ್ಪಿಸಿತ್ತಾರೆ. ಸಿಡಿ ಆಡುವವರಿಗೆ ಹರಾಜು ಮೂಲಕ ಹೆಚ್ಚಿನ ಹಣವನ್ನು ದೇವಸ್ಥಾನ ಕಮಿಟಿಗೆ ನೀಡಿ ತಮ್ಮ ಹರಕೆ ತೀರಿಸುತ್ತಾರೆ. ಎಷ್ಟೇ ಹಣವಾದರೂ ಸರಿ ಹರಕೆ ಸಲ್ಲಿಸುವುದು ಭಕ್ತರ ಅದಮ್ಯ ಆಕಾಂಕ್ಷೆಯಾಗಿರುತ್ತದೆ. ಅದೇ ರೀತಿ ಉರುಳು ಸೇವೆ, ಸಾವಿರಗಟ್ಟಲೇ ಇಡಿಗಾಯಿ ಹರಕೆ, ಚೌಲ (ಜಾವಳ), ದೇವಿಗೆ ಸೀರೆ ಉಡಿಸುವದು ಹೀಗೆ ಹಲವಾರು ಮಾದರಿಗಳಲ್ಲಿ ಭಕ್ತರು ಹರಕೆ-ಸೇವೆಗಳನ್ನು ಸಲ್ಲಿಸುತ್ತಾರೆ. ಹೀಗೆ ದೇವಸ್ಥಾನಕ್ಕೆ ಹಲವು ಮೂಲಗಳಿಂದ ಹಣದ ಹೊಳೆಯೇ ಹರಿದು ಬರುತ್ತದೆ. ಒಂದು ವರ್ಷಕ್ಕೆ ಇತ್ತೀಚಿನ ವರ್ಷಗಳಲ್ಲಿ ಕೋಟಿ ರೂ ಅಂದಾಜಿನಲ್ಲಿ ಬೆಳ್ಳಿ-ಬಂಗಾರ ಹಾಗೂ ಹಣ ಸಂಗ್ರಹವಾಗುತ್ತಿದೆ ಎಂದು ಹೇಳಲಾಗುತ್ತಿದೆ. *(ಜಿಎಸ್)*

ಘನಲಿಂಗ ರುದ್ರಮುನಿ (ಬಸವಕಲ್ಯಾಣ): ಘನಲಿಂಗ ರುದ್ರಮುನಿ 12ನೆಯ ಶತಮಾನದಲ್ಲಿ ಲಿಂಗಾಯತ ಧರ್ಮದ ಪುನರುಜ್ಜೀವನದ ಸಂದರ್ಭದಲ್ಲಿ ಮಹತ್ತರ ಪಾತ್ರವಹಿಸಿದ ಶಿವಶರಣ. ಬಸವಕಲ್ಯಾಣದ ತ್ರಿಪುರಾಂತ ಕೆರೆಯ ಪಶ್ಚಿಮ ದಂಡೆಯ ಮೇಲೆ ರುದ್ರಮುನಿಗಳ (ಘನಲಿಂಗ) ಗವಿ ಇದೆ. ಇದಕ್ಕೆ ಮರಿದೇವರ ಗುಡ್ಡವೆಂದು ಹೆಸರು. ಇದರ ಪಕ್ಕದಲ್ಲಿ ವಿಜ್ಞಾನೇಶ್ವರ, ಪ್ರಭುದೇವರ ಗದ್ದುಗೆ, ಮಡಿವಾಳ ಮಾಚಯ್ಯ ರುದ್ರಮನಿಯ ತಂದೆ ರೇವಣಸಿದ್ದರು ಮುಂತಾದವರ ಗವಿ ಮತ್ತು ಗುಡಿಗಳಿವೆ.

ಎಂಟನೆಯ ವರ್ಷದಲ್ಲಿ ಲಿಂಗ ದೀಕ್ಷೆ ಪಡೆದ ಇವರು ಗುರುಲಿಂಗಾಚಾರ್ಯರಿಂದ ಷಟ್ಸ್ಥಲ ಜ್ಞಾನ ಪಡೆದುಕೊಂಡು ಮುಂದೆ ರುದ್ರಮುನಿ ದೇವರೆಂದೇ ಹೆಸರುವಾಸಿಯಾದರು. ಚೆನ್ನಬಸವಣ್ಣನ ಆನಂತರ ಶೂನ್ಯ ಸಿಂಹಾಸನದ ಅಧಿಕಾರ ವಹಿಸಿಕೊಂಡು ಇವರು ಶ್ರೀಶೈಲದಲ್ಲಿ ಸಿಂಹಾಸನದ ಮಠವನ್ನು ನಿರ್ಮಿಸಿದ್ದಾರೆಂದು ಹಾಗೂ ಕಾಲಜ್ಞಾನ ಎಂಬ ಪುಸ್ತಕ ಬರೆದಿರುತ್ತಾರೆಂದು ತಿಳಿದುಬರುತ್ತದೆ. *(ಜಿಎಚ್)*

ಘೋ

ಘೋಡವಾಡಿ ಪೀರ: ಹಿಂದೂ-ಮುಸ್ಲಿಂ ಜನಾಂಗದ ಭಾವೈಕ್ಯತೆಯ ತಾಣ. ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಒಂದು ಚಿಕ್ಕ ಗ್ರಾಮ. ಈ ಗ್ರಾಮ ಇಲ್ಲಿ ಘೋಡವಾಡಿ ಶರೀಫ್ ಹಜರತ್ ಇಸ್ಮಾಯಲ್ ಖಾದ್ರಿ ದರ್ಗಾವಿದೆ. ಇಸ್ಮಾಯಿಲ್ ಖಾದ್ರಿಯವರು ಸೂಫಿ ಸಂತರಾದ ಖಾಜಾ ಬಂದೇ ನವಾಜರ ಶಿಷ್ಯರಾಗಿದ್ದರು. ಇವರು ಎಲ್ಲಿ ಜನ್ಮ ತಾಳಿದರು, ಎಷ್ಟು ವರ್ಷ ಬದುಕಿದ್ದರು, ಊರು ಯಾವುದು? ಮುಂತಾದ ವಿಷಯಗಳು ನಿಖರವಾಗಿ ತಿಳಿದು ಬಂದಿಲ್ಲ. ಅರಬ್ಬೀ ಭಾಷೆಯಲ್ಲಿರುವ 'ತಜಕಿ-ರುತಲ್-ಖದ್ರಿ' ಎಂಬ ಗ್ರಂಥ ಇವರ ಮರಣ ಹಿಜರಿ ಶಕೆ 882ರಲ್ಲಿ ಸಂಭವಿಸಿದೆ ಎಂದು ತಿಳಿಸುತ್ತದೆ.

ಯಾದಗಿರ ಜಿಲ್ಲೆ ಶಹಾಪುರ ತಾಲ್ಲೂಕಿನ ಗೊಗಿ ಗ್ರಾಮದ ಪ್ರಸಿದ್ಧ ಸಂತರಾದ ಹಜರತ ಸೈಯದ ಶಹ ಚಂದಾ ಹುಸೇನಿಯವರು ಇಸ್ಮಾಯಿಲ್ ಖಾದ್ರಿಯವರ ತಾತ, ಆದಕಾರಣ ಇಸ್ಮಾಯಿಲ್ ಖಾದ್ರಿಯವರು ತಮ್ಮ ಎರಡನೆಯ ಮಗನಿಗೆ ಚಂದಾಹುಸೇನಿ ಎಂದು ನಾಮಕರಣ ಮಾಡಿದ್ದರು. ಇಸ್ಮಾಯಿಲ್ ಖಾದ್ರಿಯವರು ಮುಸ್ಲಿಂ ಧರ್ಮ ಸಂಸ್ಥಾಪಕರಾದ ಮಹಮದ್ ಪೈಗಂಬರ ಅವರ ಮೊಮ್ಮಗನಾದ ಹಜರತ ಸೈಯದ ಇಮಾಮ ಹುಸೇನರ (ಶಹೀದೆ ಕರ್ಬಲಾ) 33ನೇ ವಂಶಜರಾಗಿ ಜನ್ಮ ತಾಳಿದ್ದರು. ಈ ವಿಷಯವಕನ್ನು 'ಮೆಹಬೂಬ-ಜಿಲ್-ಮನನ' ಎಂಬ ಗ್ರಂಥ ತಿಳಿಸುತ್ತದೆ.

ಬಂದೇನವಾಜರು 105 ವರ್ಷಗಳ ಕಾಲ ಬದುಕಿದ್ದು; ಹಿಜರಿ ಶಕೆ 825ರಲ್ಲಿ ಮರಣ ಹೊಂದಿದರು. ಅವರ ಮರಣದ ಆನಂತರ ಇಸ್ಮಾಯಿಲ್ ಖಾದ್ರಿಯವರು ಸಂಸಾರ ಸಮೇತರಾಗಿ ಬೀದರಕ್ಕೆ ಬಂದು ನೆಲೆಸಿದರು. ಅಲ್ಲಿ ಬಹಮನಿ ಅರಸ ನಿಜಾಮಷಾಹನ ಸೈನ್ಯದಲ್ಲಿ ಸಿಪಾಯಿಯಾಗಿ ಸೇರಿಕೊಂಡರು. ಇಸ್ಮಾಯಿಲ್ ಖಾದ್ರಿಯವರು ಕೆಲವೇ ದಿವಸಗಳಲ್ಲಿ ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಪದೋನ್ನತಿ ಹೊಂದಿ 'ಸಿಪಾಯಿ ಸಾಲಾರ' ಆದರು. ಅವರು ದೈವಭಕ್ತರಾಗಿದ್ದು ನಿತ್ಯವೂ ತಪ್ಪದೆ ಐದು ಸಲ ನಮಾಜ ಮಾಡುತ್ತಿದ್ದರು. ದೇವರ ಧ್ಯಾನದಲ್ಲಿ ಸಮಯ ಕಳೆಯುತ್ತಿದ್ದರು. ನಿಜಾಮಷಾಹನ ಮರಣಾನಂತರ ಅವನ ಮಗ ಹುಮಾಯೂನ ಶಹ ಜಾಲೀಮ್ ಪಟ್ಟಕ್ಕೆ ಬಂದ. ಈತ ತುಂಬಾ ಕ್ರೂರಿ; ವಿಷಯ ಲಂಪಟ ಇಸ್ಮಾಯಿಲ್ ಖಾದ್ರಿಗೆ ಅರಸನ ನಡುವಳಿಕೆ ಹಿಡಿಸಲಿಲ್ಲ.

ಒಂದು ಸಲ ಇಸ್ಮಾಯಿಲ್ ಖಾದ್ರಿಯವರು ತಮ್ಮ ಪಕ್ಕದ ಮನೆಯ ಬ್ರಾಹ್ಮಣ ಕನ್ಯೆಯನ್ನು ರಾಜನ ಕಾಮುಕ ಕಪಿಮುಷ್ಠಿಯಿಂದ ಬಿಡಿಸಿ ಅವನ ಕೋಪಕ್ಕೆ ಗುರಿಯಾದರು. ಅರಸನಿಂದ ತಪ್ಪಿಸಿಕೊಂಡು ಪರಿವಾರ ಸಮೇತರಾಗಿ ಘೋಡವಾಡಿ ಎಂಬ ಹಳ್ಳಿಗೆ ಬಂದು ನೆಲೆಸಿದರು. ಅವರು ತಮ್ಮ ದೈವಭಕ್ತಿಯಿಂದ ಕಾಡನ್ನು ನಾಡನ್ನಾಗಿ ಪರಿವರ್ತಿಸಿ ಜನರ ಹಿತಕ್ಕಾಗಿ ದೊಡ್ಡ ಕೆರೆ ಮತ್ತು ಹಲವಾರು ಕಟ್ಟಡಗಳು

ನಿರ್ಮಿಸಿದರು. ಅವರು ಘೋಡವಾಡಿಗೆ ಬಂದು ಕೇವಲ ನಲವತ್ತು ದಿವಸಗಳಲ್ಲಿ ಅನೇಕ ಜನಹಿತ ಕಾರ್ಯಗಳು ಕೈಗೊಂಡರು. ಭವಿಷ್ಯತ್ ಕಾಲ ಚೆನ್ನಾಗಿಲ್ಲ ಎಂಬ ಸೂಚನೆ ದೊರೆತ ದಿವಸವೇ ಅವರು ತಮ್ಮ ಧರ್ಮಪತ್ನಿ ಹಾಗೂ ಮೂವರು ಮಕ್ಕಳೊಂದಿಗೆ ನಿರ್ವಿಕಲ್ಪ ಸಮಾಧಿಯಿಂದ ಪ್ರಾಣ ತ್ಯಾಗ ಮಾಡಿದರು.

ಇಸ್ಮಾಯಿಲ್ ಖಾದ್ರಿಯ ಸೇವಕರಾದ ಇಬ್ಬರು ಕಾದಿಮಗಳು ಅವರ ಸಮಾಧಿಯ ಮೇಲೆ ಸುಂದರವಾದ ದರ್ಗಾ ನಿರ್ಮಿಸಿದರು. ಇಸ್ಮಾಯಿಲ್ ಖಾದ್ರಿಯವರು ಪವಾಡ ಪುರುಷರಾಗಿದ್ದರು. ಅವರಿಗೆ ಹಜರತ್ ಸೈಯದ್ ಸಹ ಮೆಹತಾಬ ಖಾದ್ರಿ, ಹಜರತ್ ಚಂದಾ ಹುಸೇನಿ ಹಜರತ ಸೈಯದ್ ಸಹ ಫೈಜುಲಾ ಖಾದ್ರಿ ಎಂಬ ಮೂವರು ಗಂಡು ಮಕ್ಕಳಿದ್ದರೆಂದು ಇತಿಹಾಸ ಗ್ರಂಥಗಳಾದ 'ತಾರೀಖ–ಏ–ಖುರ್ವೋದ ಜಾಹಿ', 'ತಾರೀಖ–ಎ–ರಶಿದೋದ್ದಿನ್ ಖಾನಿ; ತಜರುಕಿರು ತಲ್–ಖಾದ್ರಿ; 'ಹದಿಕ್–ಎ–ರೆಹಮಾನಿ'; ತಿಳಿಸುತ್ತವೆ. ಪ್ರತಿವರ್ಷ ಮಾರ್ಚ್ ಎಪ್ರಿಲ್‌ನಲ್ಲಿ ನಡೆಯುವ ವಾರ್ಷಿಕ ಉತ್ಸವದಲ್ಲಿ ಗುರುವಾರ ಹಾಗೂ ಶುಕ್ರವಾರದಂದು ಎರಡು ಸಾವಿರದಿಂದ ಮೂರು ಸಾವಿರವರೆಗೆ ಕುರಿಗಳು ಬಲಿ ನಡೆಯುತ್ತದೆ. *(ಎಚ್‌ಕೆ)*

ಘೋಷಾ ಪದ್ಧತಿ: ವಯಸ್ಸಿಗೆ ಬಂದ ಸ್ತ್ರೀಯರು ತಮ್ಮ ಕಣ್ಣು ಮತ್ತು ಪಾದಗಳ ಹೊರತಾಗಿ ಇತರ ಅವಯವಗಳನ್ನು ಕಾಣಿಸದಂತೆ ಬಟ್ಟೆಯಿಂದ ಮುಚ್ಚಿಕೊಳ್ಳುವ ಪದ್ಧತಿ. ಇಸ್ಲಾಂ ಧರ್ಮದ ಸ್ತ್ರೀಯರು ತಮ್ಮ ಧಾರ್ಮಿಕಾಚರಣೆಯ ರೂಪದಲ್ಲಿ ಮೈಮುಚ್ಚಿಕೊಳ್ಳುವುದನ್ನು ಪಾಲಿಸಿಕೊಂಡು ಬರುತ್ತಿದ್ದರೆ, ಇತರ ಧರ್ಮೀಯರು ಕೂಡ ಈ ಪದ್ಧತಿಯನ್ನು ಪ್ರತಿಷ್ಠೆಯ ಸಂಕೇತವಾಗಿ ಆಚರಿಸಿಕೊಂಡು ಬರುತ್ತಿದ್ದರು. ಉರ್ದುವಿನಲ್ಲಿ ಮುಸ್ಲಿಂ ಸ್ತ್ರೀಯರು ಧರಿಸುವ ಮೇಲುಡಿಗೆಗೆ ಬುರಖಾ ಎಂದು ಕರೆಯುವ ವಾಡಿಕೆ ಇದೆ.

ಘೋಷಾ, ಪರದಾ, ಬುರಖಾ ಎಂದು ಕರೆಸಿಕೊಳ್ಳುವ ವಿದ್ಯಮಾನವು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ವಿಶೇಷವಾಗಿ ಚಾಲ್ತಿಯಲ್ಲಿದೆ. ಹೈದ್ರಾಬಾದ ಕರ್ನಾಟಕ ಪ್ರದೇಶವನ್ನು ಬಹುಕಾಲದವರೆಗೆ (ಕ್ರಿ.ಶ. 1347ರಿಂದ 1948) ಮೊಘಲರು ಮತ್ತು ಅವರ ಆಡಳಿತಾಧಿಕಾರಿಗಳಾಗಿದ್ದಂಥ ನಿಜಾಮರು ಆಳಿದ್ದರಿಂದ ಇಲ್ಲಿ ಘೋಷಾ ಪದ್ಧತಿ ಉಚ್ಚ ವರ್ಗ ಮತ್ತು ವರ್ಣದವರಿಗೆ ಕಡ್ಡಾಯವಾಗಿತ್ತು.

ನಿಜಾಮಶಾಹಿಯ ನವಾಬಗಿರಿಯಲ್ಲಿ ತಮ್ಮ ಆದರ್ಶಗಳನ್ನು ಕಂಡುಕೊಂಡಿದ್ದ ಪೊಲೀಸ್‌ಗೌಡರು, ಮಾಲಿಗೌಡರು, ದೇಶಮುಖರು, ದೇಶಪಾಂಡೆ, ಕುಲಕರ್ಣಿ, ಸಾಹುಕಾರ ಮನೆತನದವರು ತಮ್ಮ ಮನೆಯ ಸ್ತ್ರೀಯರಿಗೆ ಘೋಷಾ ಪದ್ಧತಿಯನ್ನು ಪಾಲಿಸಿಕೊಂಡು ಬಂದರು. ಮುಸ್ಲಿಂ ಸ್ತ್ರೀಯರಂತೆ ಮೇಲ್ಕಾಣಿಸಿದ ಮನೆತನದ ಸ್ತ್ರೀಯರು ಬುರಖಾ ಹಾಕಿಕೊಳ್ಳುತ್ತಿರಲಿಲ್ಲವಾದರೂ ಮೈತುಂಬಾ ಬಟ್ಟೆ ಮುಚ್ಚಿಕೊಳ್ಳುತ್ತಿದ್ದರು. ಮನೆಯ ಒಳಗಿನ ಸ್ತ್ರೀಯರು ಹೊರಗೆ ಕಾಣಿಸದಂತೆ ಬಾಗಿಲುಗಳಿಗೆ ಪರದೆ ಹಾಕುತ್ತಿದ್ದರು. ನಿಜಾಂ ಆಳ್ವಿಕೆಯ ಪ್ರಭಾವದಿಂದಾಗಿ ಇಲ್ಲಿನ ಲಿಂಗಾಯತ, ಬ್ರಾಹ್ಮಣ, ರಾಜಪೂತ, ಮರಾಠಾ, ವೈಶ್ಯ ಜಾತಿಯ ಜಮಿನ್ದಾರರು, ವ್ಯಾಪಾರಿಗಳು ತಮ್ಮ ಮನೆಯ ಮಹಿಳೆಯರಿಗೂ ಪರದಾ ಅಥವಾ ಘೋಷಾ ಪದ್ಧತಿಯನ್ನು ಮೌಲ್ಯವೆಂಬಂತೆ ಆಚರಿಸಿಕೊಂಡು ಬರುತ್ತಿದ್ದರು. ಮಹಿಳೆಯರನ್ನು ಭೋಗದ ವಸ್ತು, ಖಾಸಗಿ ಆಸ್ತಿಯೆಂಬಂತೆ ಬಿಂಬಿಸಿಕೊಂಡು ಬರುತ್ತಿದ್ದ ಎಲ್ಲ ಜನಸಮುದಾಯಗಳಲ್ಲಿ ಈ ರೀತಿಯ ದಮನಿತ ಆಚರಣೆಗಳು ಒಂದಿಲ್ಲೊಂದು ಬಗೆಯಲ್ಲಿ ಚಾಲ್ತಿಯಲ್ಲಿದ್ದಂತೆ ತೋರುತ್ತದೆ. ಅದೇನೆ ಇರಲಿ. ಹೈದ್ರಾಬಾದ ಕರ್ನಾಟಕ ಭಾಗದಲ್ಲಿಯಂತೂ ಮೊನ್ನೆ ಮೊನ್ನಿನವರೆಗೆ ಅಂದರೆ 1960–70ರ ವರೆಗೆ ಸ್ತ್ರೀಯರಿಗೆ ಈ ಘೋಷಾ ಪದ್ಧತಿಯು ಕಡ್ಡಾಯವಾಗಿತ್ತು. ಮೊದಲನೆಯದಾಗಿ ಇಲ್ಲಿ ಮಹಿಳೆಯರು ಯಾವುದೇ ಕಾರಣಕ್ಕೂ ಹೊರಗೆ ಬರುವಂತಿರಲಿಲ್ಲ. ಹಾಗೇ ಒಂದು ವೇಳೆ ಹೊರಗೆ ಹೊರಡುವ ಪ್ರಸಂಗ ಬಂದರೆ ಅವರು ಕುಳಿತುಕೊಳ್ಳುವ ಟಾಂಗಾ, ರಿಕ್ಷಾ, ಎತ್ತಿನ ಬಂಡಿಗಳಿಗೆ ಪರದಾ, ಕಮಾನು ಹಾಕಲಾಗುತ್ತಿತ್ತು.

ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಅರವತ್ತು–ಎಪ್ಪತ್ತರ ದಶಕದವರೆಗೆ ಮಹಿಳೆಯರು ಮಾರ್ಕೇಟುಗಳಿಗೆ ಬರುವಂತಿರಲಿಲ್ಲ. ಅಂಗಡಿಗಳ ಮುಖವಂತೂ ಅವರು ನೋಡುತ್ತಲೇ ಇರಲಿಲ್ಲ. ಸ್ತ್ರೀಯರಿಗೆ ಬೇಕಾಗುವ ಸೀರೆ, ಕುಪ್ಪಸ ಇತ್ಯಾದಿ ಸಾಮಾನುಗಳನ್ನು ಅವರ ಮನೆಯ ಪುರುಷರೆ ತಂದು ಕೊಡುತ್ತಿದ್ದರು. ಹಿರಿಯರು ತಂದ ಬಟ್ಟೆಗಳನ್ನು ಎರಡು ಮಾತಿಲ್ಲದೆ ಸ್ತ್ರೀಯರು ಧರಿಸುತ್ತಿದ್ದರು. ತಮಗೆ ಬೇಕಾದ ಬಣ್ಣ ಅಥವಾ ಡಿಸೈನುಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವೂ ಅವರಿಗಿರಲಿಲ್ಲ. ಸ್ವಲ್ಪ ಆರ್ಥಿಕವಾಗಿ ಅನುಕೂಲಸ್ಥರಾಗಿದ್ದರೆ ಅಂಥವರ ಮನೆಗಳಿಗೆ ಬಟ್ಟೆ ಅಂಗಡಿಯವರೇ ಎಂಟ್ಹತ್ತು ಸೀರೆಗಳನ್ನು ಹೊತ್ತು ತರುತ್ತಿದ್ದರು. ಅದೂ ನಂಬಿಗಸ್ಥ, ಪರಿಚಯಸ್ಥ ಅಂಗಡಿಯವರು ಮಾತ್ರ ಉಳ್ಳವರ ಮನೆಯ ಪ್ರವೇಶ ಪಡೆಯಬಹುದಿತ್ತು. ಹೀಗೆ ಹೊತ್ತು ತಂದ ಸೀರೆಗಳಲ್ಲಿ ಒಂದೆರಡನ್ನು ಆಯ್ಕೆ ಮಾಡಿಕೊಳ್ಳಬಹುದಿತ್ತು. ನಿಗದಿತವಾಗಿದ್ದ ಬಳೆಗಾರರು ಮನೆಗಳಿಗೆ ಬಂದು ಹಜಾರದಲ್ಲಿ ಕುಳಿತು ಬಳೆ ತೊಡಿಸಿ ಹೋಗುತ್ತಿದ್ದರು. ಹಣೆಗೆ ಹಚ್ಚಿಕೊಳ್ಳುವ ಮೇಣ (ಮ್ಯಾಣಾ)ವನ್ನು ಮನೆಯಲ್ಲಿ ತಯಾರಿಸಲಾಗುತ್ತಿತ್ತು. ಕುಂಕುಮವನ್ನು ಗ್ರಾಮ ದೇವತೆಗಳ ಜಾತ್ರೆಗೊಮ್ಮೆ ಪುರುಷರೆ ಖರೀದಿಸಿ ತರುತ್ತಿದ್ದರು. ಒಟ್ಟಾರೆ ಯಾವುದಕ್ಕೂ ಸ್ತ್ರೀಯರು ಮನೆಯ ಹೊರಗೆ ಬರುವ ಅವಕಾಶ ಕೊಡುತ್ತಿರಲಿಲ್ಲ.

ಸ್ತ್ರೀಯರ ತಲೆಯ ಮೇಲಿನ ಸೆರಗು ತುಸು ಹಿಂದಕ್ಕೆ ಸರಿಯುವಂತಿರಲಿಲ್ಲ. ಗಂಡನಲ್ಲದೆ ಪರ ಪುರುಷರೊಂದಿಗೆ ಯಾವುದೇ ಕಾರಣಕ್ಕೂ ಮಾತಾಡುವಂತಿರಲಿಲ್ಲ. ಗಂಡನ ಮನೆಯಲ್ಲಿದ್ದಾಗ ತವರು ಮನೆಯಿಂದ ಅಪ್ಪ, ಅಣ್ಣ, ತಮ್ಮ, ಸೋದರ ಮಾವ ಯಾರೇ ಬಂದರೂ ಸೊಸೆಯಂದಿರು ಹೊರಗೆ ಬಂದು ಅವರೊಂದಿಗೆ ಮಾತಾಡುವಂತಿರಲಿಲ್ಲ. ಹೀಗೆ ಬಂದವರು ಆ ಮನೆಯ ಪುರುಷರೊಂದಿಗೆ, ಇಲ್ಲವೆ ಹಿರಿಯ

ವೃದ್ಧೆಯರೊಂದಿಗೆ ಕುಶಲೋಪರಿ ಮಾತಾಡಿ ಮರಳಿ ಹೋಗಬೇಕಿತ್ತು. ಇದೆಲ್ಲವನ್ನು ಮೊಘಲಾಯಿ ಶೈಲಿಯ ಶಾಹಿ ಅಂದಾಜಿನಲ್ಲಿಯೇ ನಡೆಸಿಕೊಂಡು ಬರಲಾಗುತ್ತಿತ್ತು. ಘೋಷಾ ಪದ್ಧತಿ ಪಾಲಿಸುವ ಮನೆತನಗಳನ್ನು "ಖಾನ್‌ದಾನಿ" ಕುಟುಂಬಗಳೆಂದು ವೈಭವೀಕರಿಸಲಾಗುತ್ತಿತ್ತು.

ಇಂದು ಕಾಲ ಬದಲಾಗಿದೆ. ಮೊದಲಿನ ಘೋಷಾ ಪದ್ಧತಿ ಈಗ ಉಳಿದಿಲ್ಲವಾದರೂ ಕೆಲವೊಂದು ಮೊಘಲಾಯಿ ಸಂಪ್ರದಾಯಸ್ಥರು ತುಂಬಾ ಸೂಕ್ಷ್ಮವಾಗಿ ಕೆಲವು ಸಂಪ್ರದಾಯಗಳನ್ನು ಪಳಿಯುಳಿಕೆಗಳಂತೆ ಆಚರಿಸಿಕೊಂಡು ಬರುತ್ತಿದ್ದಾರೆ. ಅಂಥವರನ್ನು ಅಲ್ಲಲ್ಲಿ ಕಾಣಬಹುದು.

(ಎಂಐ)

ಚ

ಚಂದನಕೆರೆ: ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಒಂದು ಕಿ.ಮೀ. ದೂರದಲ್ಲಿರುವ ಐತಿಹಾಸಿಕ ಗ್ರಾಮ. ಕೇವಲ 40ರಿಂದ50 ಮನೆಗಳಿರುವ ಅತ್ಯಂತ ಚಿಕ್ಕ ಹಳ್ಳಿ. ಕರ್ನಾಟಕವನ್ನು ಆಳಿದ ರಾಜರಲ್ಲಿ ಪ್ರಮುಖರಾದ ಕಲ್ಯಾಣ ಚಾಲುಕ್ಯರು ಕನ್ನಡ ಸಾಹಿತ್ಯ, ಕಲೆ, ಶಿಲ್ಪಕಲೆಗೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಈ ಅರಸರ ಕಾಲದ ಅನೇಕ ಸಾಂಸ್ಕೃತಿಕ ಸ್ಥಳಗಳು ಇತಿಹಾಸಕಾರರಿಗೆ ಅಪರಿಚಿತವಾಗಿಯೇ ಉಳಿದಿವೆ. ಅಂಥವುಗಳ ಸಾಲಿಗೆ ಈ ಗ್ರಾಮವೂ ಸೇರುತ್ತದೆ.

ರಾಯಚೂರು ಜಿಲ್ಲೆಯಲ್ಲಿನ ಕಲ್ಯಾಣ ಚಾಲುಕ್ಯರ ದೇವಾಲಯಗಳು ಮತ್ತು ಶಿಲ್ಪಗಳ ಅಧ್ಯಯನ ಮಾಡಿ, ಪ್ರೌಢ ಗ್ರಂಥ ಪ್ರಕಟಿಸಿರುವ ಸಿ.ಎಸ್. ಪಾಟೀಲರ ಗಮನಕ್ಕೂ ಬಾರದ ಈ ಐತಿಹಾಸಿಕ ಗ್ರಾಮಕ್ಕೆ ತೆರಳಿದಾಗ, ಕಂಡು ಬಂದ ಹಲವಾರು ಭಗ್ನ ಶಿಲ್ಪಗಳು, ದೇವಾಲಯಗಳ ಅವಶೇಷಗಳು ಮತ್ತು ಶಿಲಾ ಲಿಪಿಗಳು ಅಧ್ಯಯನ ಯೋಗ್ಯವಾಗಿವೆ. ಚಂದನಕೆರೆ ಕುರಿತು, ಸುರಪುರ ಸಂಸ್ಥಾನದಲ್ಲಿದ್ದ ಬ್ರಿಟಿಷ ಅಧಿಕಾರಿ ಮೆಡೋಸ್ ಟೇಲರನ ಆತ್ಮ ಕತೆಯಲ್ಲೂ ವಿವರಣೆ ಇಲ್ಲ. ಆದರೆ, ದೇವದುರ್ಗದ ದೊರೆಗಳು ಚಂದನಕೆರೆಯಿಂದ ದೇವದುರ್ಗಕ್ಕೆ ತಮ್ಮ ರಾಜಧಾನಿಯನ್ನು ಸ್ಥಳಾಂತರಿಸಿದರೆಂಬುದು ಶಾಸನಗಳಿಂದ ತಿಳಿದು ಬರುತ್ತದೆ. ಆದರೂ ಈ ಸ್ಥಳದ ಬಗ್ಗೆ ಇರುವ ಯಾವ ದಾಖಲೆಗಳೂ ಮತ್ತು ಶಿಲಾ ಶಾಸನಗಳನ್ನು ಇಲ್ಲಿಯವರೆಗೆ ಯಾರೂ ಅಧ್ಯಯನ ಮಾಡಿಲ್ಲ ಇಲ್ಲಿ ದೊರೆತ ಅಮೂಲ್ಯವಾದ ಶಿಲ್ಪಕಲಾ ಶ್ರೀಮಂತಿಕೆಯಿಂದ ಮೆರೆದ ಅವಶೇಷಗಳು ಇಲ್ಲಿ ಕಂಡು ಬರುತ್ತವೆ.

ಗುಡಿಗಳು: ಚಂದನಕೆರೆ ಹಳ್ಳಿಯನ್ನು ದೇವದುರ್ಗದಿಂದ ಪ್ರವೇಶಿಸುವಾಗ ಮೊದಲು ಬಲಕ್ಕೆ ಹನುಮಪ್ಪನ ಗುಡಿ, 'ಚಂದನಕೆರೆ ಹನುಮಪ್ಪ' ಎಂದೇ ಪ್ರಸಿದ್ಧಿ ಪಡೆದ ದೇಗುಲವಿದು. ಇಲ್ಲಿಂದ ನೂರು ಮೀಟರ ಅಂತರದಲ್ಲಿ ಚಂದನಕೆರೆ ಹಳ್ಳಿ ಎಡಕ್ಕೆ ಒಂದು ಕಟ್ಟೆ (ಅಧಿಷ್ಠಾನ). ಇದೊಂದು ಈಶ್ವರ ದೇವಾಲಯ. ಅದರ ಎದುರಿಗೆ ಇನ್ನೊಂದು ಚಿಕ್ಕ ಹನುಮಪ್ಪನ ಗುಡಿ. 12 x 12 ಅಳತೆಯ ಈ ಕಟ್ಟೆ, ಹಿಂದೆ ಚಾಲುಕ್ಯರ ಕಾಲದ ಈಶ್ವರ ದೇವಸ್ಥಾನದ ಅಧಿಷ್ಠವಾಗಿತ್ತು. ಈಗ ಇದನ್ನು ಅಲ್ಲಿಯ ರೈತರು ಸೊಪ್ಪೆ ಕಾಳು, ದವಸ ಧಾನ್ಯ ಒಣಗಿಸಲು ಉಪಯೋಗಿಸುತ್ತಾರೆ. ಈ ಕಟ್ಟೆಯ ದಕ್ಷಿಣದ ಅಂಚಿನಲ್ಲಿ ಮೂರು ಅಡಿ ಎತ್ತರದ ಪಾಣಿವಾಟದ ಮೇಲೆ ಒಂದು ಸಣ್ಣ ಸ್ಥಾವರ ಲಿಂಗವಿದೆ. ಎದುರುಗಡೆ ಒಂದು ಭಿನ್ನ ನಂದಿ ಶಿಲ್ಪ. ಪಕ್ಕದಲ್ಲಿ ಮೂರು ಅಡಿ ಎತ್ತರದ ಚಾಲುಕ್ಯ ಶೈಲಿಯ ತಿಳಿಗೆಂಪು ವರ್ಣದ ಕಣಶಿಲೆಯ ಸ್ತಂಭ. ಶಕ್ತಿ ದೇವತೆಯ ಭಗ್ನ ಶಿಲ್ಪ ಲಿಂಗ, ಪಾಣಿವಾಟ ಮತ್ತು ಇತರ ಶಿಲ್ಪಗಳನ್ನು ಡಾಲೋರೈಟ್ ಶಿಲೆಯಲ್ಲಿ ಕೆತ್ತಲಾಗಿದೆ.

ಕಟ್ಟೆಯ ಎದುರಿನ ಚಿಕ್ಕ ಹನುಮಪ್ಪನ ಗುಡಿ ಇತ್ತೀಚೆಗೆ ನಿರ್ಮಿಸಿದ್ದು ಕಂಡು ಬರುತ್ತದೆ. ಗುಡಿಯ ಮುಂದೆ ಎರಡು ವೀರಗಲ್ಲುಗಳಿವೆ, ಅಲ್ಲಿಯ ಜನರು ಮೇಣ ಮೆತ್ತಿರುವುದರಿಂದ ಸರಿಯಾದ ವಿವರ ಗೊತ್ತಾಗುವುದಿಲ್ಲ. ಈ ಪರಿಸರದಲ್ಲಿ ಎರಡು ಶಿಲಾ ಲೇಖನಗಳಿವೆ. ಅವುಗಳಲ್ಲಿ ಒಂದು ಭಗ್ನವಾಗಿದೆ. ಲಿಪಿಯಿಂದ ಇವು ಕನ್ನಡದ ಶಾಸನಗಳೆಂದು ಸ್ಪಷ್ಟವಾಗುತ್ತದೆ.

ಚಂದನಕೆರೆ ಹನುಮಪ್ಪನ ಗುಡಿ ದಕ್ಷಿಣಾಭಿಮುಖವಾಗಿದೆ, ಎಂಟು ಕಂಬಗಳ ಚಾಲುಕ್ಯ ಶೈಲಿಯಲ್ಲಿ ಈ ಗುಡಿ ನಿರ್ಮಿಸಲಾಗಿದೆ. ಗರ್ಭಗುಡಿ ಮತ್ತು ಅದರ ಮುಂದಿನ ಪಡಸಾಲೆ ಮೇಲೆ ಎಂಟು ಕಂಬಗಳನ್ನು ನಿಲ್ಲಿಸಿ, ಛತ್ತಿನಲ್ಲಿ ಕಣಶಿಲೆಯ ಹಾಸುಗಲ್ಲುಗಳನ್ನು ಹಾಕಲಾಗಿದೆ. ಇದರ ಕಂಬಗಳು ಮತ್ತು ಗರ್ಭಗುಡಿ ಬಾಗಿಲಿನ ಚೌಕಟ್ಟು ಕಲ್ಯಾಣ ಚಾಲುಕ್ಯರ ಕಾಲದವು ಎಂಬುದು ಸ್ಪಷ್ಟವಾಗುತ್ತದೆ. ಇದನ್ನು ಇತ್ತೀಚೆಗೆ ಅಂದರೆ, 17 ಅಥವಾ 18 ನೆಯ ಶತಮಾನದಲ್ಲಿ ನಿರ್ಮಿಸಿದಂತೆ ಕಂಡು ಬರುತ್ತಿರುವುದರಿಂದ ಚಾಲುಕ್ಯರ ಕಾಲದ ಈಶ್ವರ ದೇವಾಲಯದ ಕಂಬಗಳು ಹಾಗೂ ಬಾಗಿಲಿನ ಚೌಕಟ್ಟು ಇಲ್ಲಿಗೆ ಸ್ಥಳಾಂತರಿಸಿರಬಹುದೆಂದು ಊಹಿಸಬಹುದು.

ಮೂರ್ತಿ ಶಿಲ್ಪಗಳು: ಈ ಹಳ್ಳಿಯ ಪಶ್ಚಿಮಕ್ಕಿರುವ ಚಂದನಕೆರೆ ಎಂದು ಕರೆಯಲಾಗುವ ಕೆರೆಯ ಹತ್ತಿರ ಮಣ್ಣಿನ ದಿಬ್ಬ ಇದೆ. ಇದು ಒಂದು ಯಾವುದೋ ದೇವಸ್ಥಾನದ ಅಧಿಷ್ಠಾನವಿದ್ದಂತೆ ಭಾಸವಾಗುತ್ತಿದ್ದು, ಈಗ ಇದು ತಿಪ್ಪೆಯಾಗಿ ಪರಿವರ್ತನೆಗೊಂಡಿದೆ. ಈ ದಿಬ್ಬದ ಮೇಲೆ ವೀರಭದ್ರ ಮತ್ತು ಭದ್ರಕಾಳಿ ಮೂರ್ತಿಗಳಿವೆ. ವೀರಭದ್ರನ ಶಿಲ್ಪಕ್ಕೆ ನಾಲ್ಕು ಕೈಗಳಿದ್ದು, ಕೈಗಳಲ್ಲಿ ಬಿಲ್ಲು, ತ್ರಿಶೂಲ, ಖಡ್ಗ ಮತ್ತು ಢಮರುಗವಿದೆ. ಜಟೆಯಲ್ಲಿ ಶಿವಲಿಂಗ ಸರ್ಪ ಮತ್ತು ಕೀರ್ತಿ ಮುಖ ಕೆತ್ತಲಾಗಿದೆ. ಇಂತಹ ಅಪೂರ್ವವಾದ ಮೂರ್ತಿಯನ್ನು ಎರಡು ತುಂಡುಗಳನ್ನಾಗಿ ಮಾಡಿದ್ದು, ಕೆಳಭಾಗ ಕಳೆದು ಹೋಗಿದೆ. ಇದರ ಪಕ್ಕದಲ್ಲಿಯೇ ಸುಂದರವಾದ ಭದ್ರಕಾಳಿ ಮೂರ್ತಿ, ನಾಲ್ಕು ಕೈಗಳ ಪೈಕಿ ಎರಡು ಕೈಗಳು ಭಗ್ನಗೊಂಡಿವೆ. ಬಲಗಡೆಯ ಒಂದು ಕೈಯಲ್ಲಿ ಖಡ್ಗ ಮತ್ತೊಂದು ಕೈಯಲ್ಲಿ ಒಂದು ರುಂಡವಿದೆ. ಭುಜದ ಎತ್ತರದಲ್ಲಿ ಎರಡೂ ಕಡೆ ಹೂಗಳನ್ನು ಕೆತ್ತಲಾಗಿದೆ. ಹೂಗಳ ಅಡಿಯಲ್ಲಿ ತಪಸ್ವಿಗಳು ಧ್ಯಾನದಲ್ಲಿದ್ದಾರೆ.

ಭದ್ರಕಾಳಿಯ ಕಿವಿಯ ಆಭರಣಗಳು, ಕಂಠಾಭರಣಗಳು, ಕಟಿಯಾಭರಣಗಳನ್ನು ಹಾಗೂ ಭದ್ರಕಾಳಿಯ ಜಟೆಯಲ್ಲಿ ಮತ್ತು ರುಂಡದ ತಲೆಯ ಮೇಲೆ ಶಿವಲಿಂಗವನ್ನು ಕಲಾತ್ಮಕವಾಗಿ ಕೆತ್ತಲಾಗಿದೆ. ಈ ಎರಡೂ ಶಿಲ್ಪಗಳ ಪಕ್ಕದಲ್ಲಿ ರುಂಡವಿಲ್ಲದ ಇನ್ನೊಂದು ಶಿಲ್ಪವಿದ್ದು, ಇದು ಪುರುಷ ಮೂರ್ತಿ ಎಂದು ಊಹಿಸಬಹುದಾಗಿದೆ.

ಇದೇ ಸ್ಥಳದಲ್ಲಿ ಇನ್ನೆರಡು ಭಗ್ನ ಶಿಲ್ಪಗಳಿದ್ದು, ಒಂದು ಶಿಲ್ಪದ ಕೆಳಭಾಗ ಮಾತ್ರ ಇದೆ. ಇದಕ್ಕೆ ರುಂಡಮಾಲೆ ಸ್ಪಷ್ಟವಾಗಿದೆ. ಇದೇ ದಿಬ್ಬದ ಮೇಲೆ ನಂದಿ ವಿಗ್ರಹದ ತುಂಡು ಇದೆ. ಒಂದು ಶಾರ್ದೂಲ ಸ್ತಂಭ ಇದೆ. ಈ ಮೂರ್ತಿ ಶಿಲ್ಪಗಳಲ್ಲದೇ ಕೆರೆಯ ಬಲದಂಡೆ ಕೊನೆಯಲ್ಲಿ ಒಂದು ಭದ್ರಕಾಳಿ ವಿಗ್ರಹವಿದ್ದು, ಇದನ್ನೀಗ 'ಚೌಡಮ್ಮ' ಎಂದು ಕರೆಯಲಾಗುತ್ತಿದೆ. ಕೆರೆ ದಂಡೆ ಮೇಲೆ ರುಂಡವಿಲ್ಲದ ನಂದಿ ವಿಗ್ರಹ, ಅದರ ಪಕ್ಕದಲ್ಲಿರುವ ಶಿಲ್ಪಕ್ಕೆ ಜನಪದ ಶೈಲಿಯಲ್ಲಿ ಬಾಣಂತಿ ಸಂಗಮ್ಮ ಎಂದು ಕರೆಯಾಲಾಗುತ್ತಿದ್ದು, ಕೈಯಲ್ಲಿ ಚಾಕು ಹಾಗೂ ಎಡಕೊನೆಯಲ್ಲಿ ಗಂಡಿನ ಮುಖ ಇರುವ ಕಾರಣ ಇದನ್ನು ಚಾಮುಂಡಿ ಶಿಲ್ಪವೆಂದು ಕರೆಯಬಹುದಾಗಿದೆ ಅಥವಾ ಮಾಸ್ತಿ ಶಿಲ್ಪವಿರಬಹುದು.

ಬಸದಿಗಳು: ಈ ದಿಬ್ಬ ದಾಟಿ, ಇತ್ತೀಚೆಗೆ ಕಟ್ಟಲಾಗಿರುವ ಶಾಲೆ ಹತ್ತಿರ ಬಂದರೆ ಒಂದು ಸಣ್ಣ ಬಯಲಿದೆ. ಅಲ್ಲಿಗೆ ಹೋದಾಗ ಸ್ಥಳೀಯ ವೃದ್ಧರೊಬ್ಬರು ಈ ಸ್ಥಳದಲ್ಲಿ ಮಠ ಇತ್ತೆಂದು ತಿಳಿಸಿದ್ದು, ಹಾಗೂ ನಿವೇಶನ, ಅಲ್ಲಿ ಬಿದ್ದಿರುವ ಕಂಬಗಳು, ತುಂಡಾಗಿರುವ ವಿಶಿಷ್ಟ ಶಿಲ್ಪಗಳನ್ನು ಗಮನಿಸಿದರೆ, ಈ ಸ್ಥಳದಲ್ಲಿ ಜೈನ ಬಸದಿ ಇದ್ದಿರುವ ಸೂಚನೆ ಕಂಡು ಬರುತ್ತಿದೆ. ಬಸದಿಗಳಿಗೂ ಮಠಗಳೆಂದು ಸಾಮಾನ್ಯರು ಕರೆಯುವುದುಂಟು. ಇಲ್ಲೊಂದು ಭಗ್ನಗೊಂಡ ಶಿಲಾ ಶಾಸನವಿದ್ದು, ಮಠದ ಆವರಣದಲ್ಲಿ ಪುರುಷ ಶಿಲ್ಪವಿದೆ. ತಲೆಯ ಮೇಲೆ 14 ಹೆಡೆಗಳ ಸರ್ಪ ಕೆತ್ತಲಾಗಿದೆ. ಇದು ಪಾರ್ಶ್ವನಾಥ ಶಿಲ್ಪವಿರಬಹುದು. ಕೆರೆಯ ದಡದ ಮೇಲೆ ರೊಕ್ಕದ ಬಂಡೆ ಎಂದು ಜನಪದರು ಕರೆಯುವ ಹಾಸು ಬಂಡೆ ಇದೆ. ಇದನ್ನೆಲ್ಲಾ ಗಮನಿಸಿದಾಗ ಚಂದನಕೆರೆಯಲ್ಲಿ 10–12 ನೆಯ ಶತಮಾನದಲ್ಲಿ ಜೈನ ಬಸದಿ ಇದ್ದಿರಬಹುದೆಂದು ಸೂಚಿಸುತ್ತದೆ.

ಮಾಸ್ತಿಕಲ್ಲುಗಳು: ಬಾಣಂತಿ ಸಂಗಮ್ಮ ಎಂಬ ಮಾಸ್ತಿಕಲ್ಲು ಅಲ್ಲದೆ, ದೇವದುರ್ಗ ಪೊಲೀಸ್ ಠಾಣೆ ಆವರಣದಲ್ಲಿರುವ ಎರಡು ಮಾಸ್ತಿ ಕಲ್ಲುಗಳನ್ನು ಇಲ್ಲಿಂದಲೇ ಸಾಗಿಸಲಾಗಿದೆ. ಒಂದು ಶಿಲ್ಪದಲ್ಲಿ ಮೂರು ಹೆಣ್ಣಿನ ಮೂರ್ತಿಗಳಿದ್ದು, ನಡುವಿನ ಹೆಣ್ಣಿನ ಮೂರ್ತಿ ಸ್ವಲ್ಪ ದೊಡ್ಡದಿದ್ದು, ಎಲ್ಲಾ ಮೂರು ಶಿಲ್ಪಗಳ ಕೈ ಮುರಿದಿವೆ. ಇನ್ನೊಂದು ಶಿಲ್ಪ ಒಂದು ಮೀಟರ್ ಎತ್ತರವಿದ್ದು, ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಪ್ರಾಣಿಯ ರುಂಡ, ಕೊರಳಲ್ಲಿ ಆಭರಣಗಳಿವೆ. ವಿಗ್ರಹದ ಬಲ ಕೊನೆಯಲ್ಲಿ ನವಿಲಿನ ಉಬ್ಬು ಶಿಲ್ಪ ಕೆತ್ತಲಾಗಿದೆ. ಆದ್ದರಿಂದ ಇದು ಜೈನ ಧರ್ಮಕ್ಕೆ ಸೇರಿದ ಯಕ್ಷಿಣಿ ಶಿಲ್ಪವಾಗಿರಬಹುದೆಂದು ಊಹಿಸಬಹುದು.

ವೀರಗಲ್ಲುಗಳು: ಚಂದನಕೆರೆಯಲ್ಲಿ ಎರಡು ವೀರಗಲ್ಲುಗಳಿದ್ದರೆ, ದೇವದುರ್ಗ ಪೊಲೀಸ್ ಠಾಣೆಯಲ್ಲಿ ಹತ್ತು ವೀರರಗಲ್ಲುಗಳನ್ನು ಜೋಡಿಸಲಾಗಿದೆ. ಇವುಗಳನ್ನೆಲ್ಲಾ ಚಂದನಕೆರೆಯಿಂದಲೇ ತರಲಾಗಿದೆ. ಈ ಎಲ್ಲಾ ಶಿಲ್ಪಗಳ ಪೈಕಿ ಕೇವಲ ಒಂದು ಮಾತ್ರ ಯುದ್ದದ ದೃಶ್ಯ ತೋರಿಸುತ್ತದೆ. ಇವು ವಿಜಯನಗರ ಶೈಲಿಗೆ ಸೇರಿದ ಶಿಲ್ಪಗಳಂತೆ ಕಂಡು ಬರುತ್ತವೆ.

ಕಾವಲು ಕಮಾನು: ಈಗಿನ ತಹಶೀಲ್ ಕಚೇರಿ ಹಿಂದೆ ಇರುವ ಮೂರು ಕಮಾನುಗಳ ಕಾಲವು ಕಟ್ಟಡ ಸ್ಪಷ್ಟ ಪುರಾವೆ ನೀಡುತ್ತದೆ. 16–17 ನೆಯ ಶತಮಾನದ ದೊರೆ ಕಟ್ಟಿಸಿರಬಹುದಾದ ಈ ಕಟ್ಟಡ ಚಂದನಕೆರೆಯ ಪೂರ್ವದ ಹೆಬ್ಬಾಗಿಲಿರಬಹುದು. ಇದರ ಶೈಲಿಯ ಮೇಲೆ ಮುಸ್ಲೀಂ ಪ್ರಭಾವ ಕಂಡು ಬಂದರೂ ಅಲ್ಲಿ ಕೆತ್ತಲಾಗಿರುವ ಸೂರ್ಯ ಚಂದ್ರರ ಶಿಲ್ಪ ಹಾಗೂ ಆನೆಯ ಶಿಲ್ಪಗಳು ಹಿಂದೂ ದೊರೆ ಕಟ್ಟಿಸಿರುವ ಗುರುತು ನೀಡುತ್ತವೆ. ಪಶ್ಚಿಮಕ್ಕಿರುವ ಬಯಲು ಸ್ಥಳದಲ್ಲಿ ಮುಸ್ಲೀಮರ ಗೋರಿಗಳಿವೆ. ಈ ಪ್ರದೇಶದಲ್ಲಿ ನಿಜಾಮ ಸರಕಾರವಿದ್ದಾಗ ಇದು ಮುಸ್ಲೀಮರ ಕೈ ಸೇರಿರಬಹುದು.

ಇತರ ಅವಶೇಷಗಳು: ಚಂದನಕೆರೆಯ ತುಂಬೆಲ್ಲಾ ಹಲವಾರು ಭಗ್ನ ಶಿಲ್ಪಗಳು, ಪಾದಗಳು ಅನಾಥವಾಗಿ ಬಿದ್ದಿವೆ. ಐದು ಅಡಿ ಎತ್ತರದ ಹಾಳು ಮಣ್ಣಿನ ದಿಬ್ಬದಲ್ಲಿ ಮಣ್ಣಿನ ಮಡಿಕೆಯ ಚೂರುಗಳು, ಎಲುಬಿನ ಚೂರುಗಳು ಕಂಡು ಬರುತ್ತಿವೆ. ಇವುಗಳನ್ನು ಸಂಶೋಧನೆಗೆ ಒಳಪಡಿಸಿದರೆ ಹೆಚ್ಚಿನ ಮಾಹಿತಿ ತಿಳಿದು ಬರಬಹುದು.

ಮೇಲೆ ವಿವರಿಸಲಾದ ಪುರಾತತ್ವದ ಅವಶೇಷಗಳ ವಿವರಗಳನ್ನು ಪುನರಾವಲೋಕಿಸಿದಾಗ ಚಂದನಕೆರೆಯು 10–12ನೆಯ ಶತಮಾನದಲ್ಲಿ ಒಂದು ಅತ್ಯಂತ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು ಎಂಬಂಶ ವ್ಯಕ್ತವಾಗುತ್ತದೆ. ಈ ಅವಧಿಯಲ್ಲಿ ಹೆಚ್ಚಾಗಿ ಶೈವ ಮತ್ತು ಜೈನ ಧರ್ಮಗಳೆರಡೂ ಪ್ರಸಾರದಲ್ಲಿದ್ದುವು. ಇಲ್ಲಿ ಜೈನ ಧರ್ಮದ ಕುರುಹುಗಳು ದೊರೆತಿರುವುದು ಕುತೂಹಲಕಾರಿ ಏಕೆಂದರೆ, ದೇವದುರ್ಗ ತಾಲ್ಲೂಕಿನಲ್ಲಿ ಒಂದೂ ಜೈನ ಕುಟುಂಬ ಇಲ್ಲ. ಕೊಪ್ಪಳದಲ್ಲಿ ಮಾತ್ರ ಜೈನ ಕುಟುಂಬಗಳಿವೆ. ಕೊಪ್ಪಳ ಹಿಂದೆ ಜೈನ ಧರ್ಮದ ಸುಪ್ರಸಿದ್ಧ ಕೇಂದ್ರವಾಗಿತ್ತು. ಕೊಪ್ಪಳ ಹೊರತುಪಡಿಸಿದರೆ ಚಂದನಕೆರೆಯೇ ಇನ್ನೊಂದು ಜೈನ ಕೇಂದ್ರವಾಗಿತ್ತು ಎಂಬುದು ಕುತೂಹಲಕಾರಿ ಅಂಶ.

17ನೆಯ ಶತಮಾನದಲ್ಲಿ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹರಿದಾಸರ ಪ್ರಭಾವ ಹೆಚ್ಚಾದಾಗ ಚಂದನಕೆರೆ ದೊರೆಗಳು ವೈಷ್ಣವ ಸಂಪ್ರದಾಯ ಸ್ವೀಕರಿಸಿರಬೇಕು. ಈ ದೊರೆಗಳ ವಂಶಸ್ಥರು ಇಂದಿಗೂ ದೇವದುರ್ಗದಲ್ಲಿದ್ದಾರೆ. ಈ ಸಂಪ್ರದಾಯದ ಬದಲಾವಣೆ ಚಂದನಕೆರೆಯ ಶೈವ ದೇವಾಲಯಗಳು ಹಾಗೂ ಜೈನ ಬಸದಿಗಳ ಮೇಲಾಗಿ ಎಲ್ಲಾ ಗುಡಿಗಳು ಮತ್ತು ಬಸದಿಗಳು ಅರಕ್ಷಿತವಾದುವು. ಇದರ ಜೊತೆಗೆ 18ನೆಯ ಶತಮಾನದ ಆನಂತರ ಬಂದ ಮುಸ್ಲಿಮರ ಪ್ರಭಾವದಿಂದ ಎಲ್ಲಾ ಗುಡಿ ಬಸದಿಗಳು ಭಾಗಶಃ ನಾಶವಾದವು.

ಇದರ ಪರಿಣಾಮವಾಗಿ ಚಂದನಕೆರೆ ಹಾಳಾಯಿತು. ಈ ಗ್ರಾಮದ ಮೇಲೆ ಇತಿಹಾಸಕಾರರು ಮತ್ತು ಪುರಾತತ್ವ ತಜ್ಞರು ಬೆಳಕು ಚೆಲ್ಲುವ ಆವಶ್ಯಕತೆ ಇದೆ. *(ಹೆಚ್‌ಸಿ)*

ಚಂದ್ರಲಾ ಪರಮೇಶ್ವರಿ: ಕಲಬುರ್ಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ಸನ್ನತಿ ಕ್ಷೇತ್ರ ಆಡುಭಾಷೆಯಲ್ಲಿ ಸಂತಿ ಎಂದೇ ಪ್ರಸಿದ್ಧವಾಗಿದೆ. ಮುಂಬೈ-ಬೆಂಗಳೂರು ಮಧ್ಯದ ರೈಲು ಮಾರ್ಗದಲ್ಲಿ ಬರುವ ನಾಲವಾರ ಗ್ರಾಮದಿಂದ ಸುಮಾರು 16 ಕಿ.ಮೀ. ಅಂತರದಲ್ಲಿದೆ ಈ ಇತಿಹಾಸ ಪ್ರಸಿದ್ಧ ಕ್ಷೇತ್ರ. ಚಂದ್ರಲಾ ಪರಮೇಶ್ವರಿ ಇಲ್ಲಿನ ಪ್ರಸಿದ್ಧ ದೇವತೆ.


ಚಂದ್ರಲಾಂಬೆಗೆ ಹಿಂಗುಳಾಂಬೆ, ಬ್ರಹ್ಮರಾಂಬೆ ಅಂತೆಲ್ಲ ಕರೆಯುವುದಕ್ಕೆ ಹಿನ್ನೆಲೆ ಹೀಗಿವೆ. ಈ ದೇವಿಯು ಹಿಂಗುಳ ಪೀಠದಿಂದ ಬಂದವಳು. ಇದೊಂದು ಶಕ್ತಿ ಪೀಠ. ರಾಷ್ಟ್ರಮರುಳುಭೂಮಿ ಎಂದೆನೆಸಿದ ಬಿಕಾನೇರ ರಾಜ್ಯದ ಗಡಿಯಲ್ಲಿದೆ. ಪಾಕಿಸ್ತಾನದ ಕರಾಚಿ ಬಂದರಿನಿಂದ 24 ಮೈಲುಗಳ ಅಂತರದ ದೂರದಲ್ಲಿ ಈ ದೇವಿಯನ್ನು ಬೇಬಿನಾನಿ ಎಂದು ಪೂಜಿಸುತ್ತಾರೆ. ಅಲ್ಲಿರುವ ಹಿಂಗುಲಾ ಎಂಬ ನದಿಯ ದಂಡೆಯ ಮೇಲೆ ಹಿಂಗುಳಾ ದೇವಿಯ ಗುಡಿಯಿದೆ.

ಗೋರಖನಾಥ ಪಂಥಕ್ಕೆ ಸೇರಿದ ಯೋಗಿಗಳು ಇಲ್ಲಿಗೆ ಬರುತ್ತಾರೆ. ಈ ದೇವಿಯನ್ನು ಯಾರು ಮತ್ತು ಹೇಗೆ ಕರೆತಂದರು? ಎಂಬ ವಿಷಯ ಸ್ಕಂದ ಹಾಗೂ ಮಾರ್ಕಂಡೇಯ ಪುರಾಣಗಳಲ್ಲಿ ಪ್ರಸ್ತಾಪವಾಗಿದೆ. ಚಂದ್ರಲಾ ಪರಮೇಶ್ವರಿಯ ಗುಡಿ ಚಕ್ರಾಕಾರವಾಗಿದೆ. ಮಹಾದ್ವಾರ ಪೂರ್ವಾಭಿಮುಖವಾಗಿದ್ದು, ಹೊರಗೆ ಮಾರ್ಕಂಡೇಯನ ಗುಡಿ, ಆಂಜನೇಯ ಸ್ವಾಮಿ ಗುಡಿ, ಮತ್ತು ವಿಶ್ವಂಭರ ದೀಕ್ಷಿತರ ಸಮಾಧಿಗಳಿವೆ. ಕೆಳಗಡೆ ತುಂಬಿ ತುಳುಕುವ ಭೀಮರಥಿ. ಮಧ್ಯಭಾಗದಲ್ಲಿ ಈಶ್ವರ ಲಿಂಗ ಇದೆ.

ಗುಡಿಯ ಒಳಗಡೆ ಬೃಹದಾಕಾರದ ಎರಡು ದೀಪ ಸ್ತಂಭಗಳಿವೆ. ಆರಡಿ ಮನುಷ್ಯನ ಆರಪಟ್ಟು ಎತ್ತರವಿರುವ ಈ ಮಾಲ್ಗಂಬಗಳು, ಎಣ್ಣೆ ದೀಪ ಹಚ್ಚಿದರೆ ಇಡೀ ಸನ್ನತಿ ಸುತ್ತ ಬೆಳಕು ಚೆಲ್ಲುತ್ತಿತ್ತಂತೆ. ಆದರೆ, ಈಗ ವಿದ್ಯುತ್ ಮತ್ತು ಸೋಲಾರ ದೀಪಗಳ ವ್ಯವಸ್ಥೆ ಮಾಡಲಾಗಿದೆ. ಆದರೆ, ಇಲ್ಲಿನ ಗರ್ಭಗುಡಿಯದೊಂದು ವಿಶೇಷ ಅಂದರೆ, ಅನಾದಿಕಾಲದಿಂದ ಇಂದಿನವರೆಗೂ ಇಲ್ಲಿ ತುಪ್ಪದ ದೀಪ ಬೆಳಗುತ್ತದೆ. ಹೊರಗಡೆ ವಿದ್ಯುತ್ ಅಲಂಕಾರ, ಗರ್ಭಗುಡಿಯಲ್ಲಿ ಮಾತ್ರ ತುಪ್ಪದ ದೀಪವೇ...!

ಗುಡಿಯ ಬಲಕ್ಕೆ ಮಹಾಸರಸ್ವತಿ, ಎಡಕ್ಕೆ ಮಹಾಕಾಳಿ ದೇವಸ್ಥಾನಗಳಿವೆ. ಶ್ರೀ ಚಂದ್ರಲಾ ದೇವಿಯ ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿ, ತ್ರಿರೂಪ ಅವತಾರಣಿ. ಇವಳು ಚಾಲುಕ್ಯರ ಕುಲದೇವತೆ. ದುಷ್ಟರ ಸಂಹಾರ, ಶಿಷ್ಟರ ರಕ್ಷಣೆ ಮಾಡುವಳೆಂದು ಭಕ್ತರ ನಂಬಿಕೆ.

ಈ ದೇವಸ್ಥಾನ ನಾಲ್ಕನೆಯ ಶತಮಾನದಷ್ಟು ಹಳೆಯದು. ಅನೇಕ ಶಿಲಾಶಾಸನ ಗುಡಿಯ ಆಸುಪಾಸಿನಲ್ಲಿವೆ. ಬೌದ್ಧರ ಕಾಲದಲ್ಲಿ ಭಗವತಿಯ ಪವಿತ್ರ ಸ್ಥಾನವಾಗಿಯೂ ಸನ್ನತಿ ಕಂಗೊಳಿಸಿತ್ತು ಪೂರ್ವಕಾಲದಲ್ಲಿ ರಾಜಸೇನನೆಂಬ ರಾಜನಿದ್ದ. ಆತನ ಮುದ್ದಿನ ಮಗಳೇ ಚಂದ್ರಲಾ. ಹೆಸರಿನಂತೆ ಚಂದ್ರವದನೆ,



ಚಂದ್ರಲಾಂಬ ದೇವಾಲಯ – ಸನ್ನತಿ

ಅಷ್ಟೇ ಗುಣವಂತೆ ಕೂಡಾ. ಮಗಳ ಮದುವೆಗಾಗಿ ರಾಜನು ವರಾನ್ವೇಷಣೆಯಲ್ಲಿ ತೊಡಗಿದ್ದ. ಸ್ವಯಂವರ ಏರ್ಪಡಿಸಿ, ಎಲ್ಲ ರಾಜಕುಮಾರರಿಗೆ ಸೂಚನೆ ಕಳುಹಿಸಿದನಂತೆ. ಲೋಹಸ್ತಂಭದ ನೆರಳನ್ನು ನೀರಿನಲ್ಲಿ ನೋಡಿ ಬಾಣದಿಂದ ಹೊಡೆದು ಉರುಳಿಸುವುದು ಸ್ವಯಂವರ ಸ್ಪರ್ಧೆಯ ಷರತ್ತು. ಯಾವ ರಾಜಕುಮಾರರೂ ಇದನ್ನು ಎದುರಿಸದೇ ಹೋದರೆಂದು ಹೇಳಲಾಗುತ್ತದೆ.

ರಾಜಸೇನಾನಿಗೆ ಇದು ದೊಡ್ಡ ಚಿಂತೆಯಾಯಿತು. ಕೆಲ ದಿನಗಳ ಆ ನಂತರ ರಾಜನಿಗೆ ಕನಸಿನಲ್ಲಿ ದೇವಿ ಬಂದು ನಿನ್ನ ಮಗಳಿಗೆ ಯೋಗ್ಯವರ ನಾಳೆ ಬೆಳಗಾಗುವುದರ ಒಳಗಾಗಿ ನಿನ್ನ ಉಪವನಕ್ಕೆ ಬಂದಿರುತ್ತಾನೆ ಎಂದು ಹೇಳಿದಳು. ಹಾಗೆಯೇ ಆಯಿತು. ನಾರಾಯಣ ಮುನಿ ಎಂಬ ತರುಣ ತಪಸ್ವಿ ಬಂದ. ಆತನನ್ನು ರಾಜ ಮಾರ್ಯಾದೆಗಳಿಂದ ಗೌರವಿಸಿ, ಸ್ವಯಂವರ ಪದ್ಧತಿಯನ್ನೆಲ್ಲ ಮುಗಿಸಿ, ಮಗಳು ಚಂದ್ರಲೆಯನ್ನು ವರಿಸಬೇಕೆಂದು ವಿನಂತಿಸಿದ. ಆಗ ನಾರಾಯಣ ಮುನಿ ತನಗೆ ಸಂಸಾರ ಬಂಧನ ಬೇಡ. ತನ್ನನ್ನು ಬಿಟ್ಟುಬಿಡಿ ಎಂದ. ಕೊನೆಗೆ ಚಂದ್ರಲೆಯೇ ಮುಂದೆ ಬಂದು ಸ್ವಾಮಿ ನಾನು ನಿಮ್ಮ ಪಾದದಡಿ ದಾಸಿಯಾಗಿರುತ್ತೇನೆ. ನಿಮ್ಮ ಸಾಧನೆಗೆ ನಾನು ಅಡ್ಡಿ

ಮಾಡುವುದಿಲ್ಲ ಎಂದು ಬೇಡಿಕೊಂಡಳು. ನಾರಾಯಣ ಸ್ವಾಮಿಗಳು ಸಮ್ಮತಿಸಿ, ಮದುವೆಯಾಗಿ ನಂತರ ಭೀಮಾ ತಟದಲ್ಲಿರುವ ಪರ್ಣಕುಟೀರದಲ್ಲಿ ಬಂದು ನೆಲೆಸಿದರು.

ಮತ್ತೊಂದು ಕಡೆ, ಸೇತುರಾಜನೆಂಬ ರಾಜ ಬೇಟೆ ಯಾಡುತ್ತಾ ಬಾಯಾರಿ ಭೀಮಾ ತಟಕ್ಕೆ ಬಂದು ದಣಿವಾರಿಸಿ ಕೊಂಡ. ಬಳಿಕ ಹತ್ತಿರದಲ್ಲಿಯೆ ಇರುವ ಪರ್ಣ ಕುಟೀರವನ್ನು ಕಂಡು, ಅಲ್ಲಿರುವ ಚಂದ್ರಲೆಯ ರೂಪಕ್ಕೆ ಮಾರುಹೋಗಿ ಅವಳನ್ನು ಬಲೆಗೆ ಹಾಕಿಕೊಳ್ಳಬೇಕೆಂಬ ದುರ್ಬುದ್ಧಿಯಿಂದ ಕುಟೀರದಲ್ಲಿ ಬೇರೆ ಯಾರೂ ಇಲ್ಲವೆಂದು ಖಚಿತಪಡಿಸಿಕೊಂಡು ತನ್ನ ಕಾಮದಾಹಕ್ಕೆ ಮುಂದಾದ, ಅವನಿಂದ ತಪ್ಪಿಸಿಕೊಳ್ಳಲು ಚಂದ್ರಲೆಯು, ನಿನ್ನೆಯಿಂದ ನಾನು 40 ದಿನಗಳ ವೃತ್ತದಲ್ಲಿದ್ದೇನೆ ಎಂದು ಉತ್ತರಿಸಿದಾಗ, ಸೇತು ರಾಜುನು ಅದಕ್ಕೇನಂತೆ ನನ್ನ ರಾಜಧಾನಿಯಲ್ಲಿರುವ ದೇವಾಲಯದಲ್ಲಿ ವ್ರತ ಮಾಡು. ಅಲ್ಲಿಯವರೆಗೆ ನಾನು ಕಾಯುತ್ತೇನೆ ಎಂದು ಕರೆದುಕೊಂಡು ಹೊರಟೇಬಿಟ್ಟ.

ಅದೇ ರಾಜಧಾನಿಯ ಅಂಚಿನಲ್ಲಿರುವ ಅಂದರೆ ಈಗಿರುವ ಸನ್ನತಿ ಸೋಮೇಶ್ವರನ ದೇವಸ್ಥಾನದಲ್ಲಿ ಬಂದು, ಮಹಾ ಪತಿವ್ರತೆಯಾದ ಚಂದ್ರಲೆಯು ಸೋಮೇಶ್ವರನಲ್ಲಿ 'ನನ್ನ ರಕ್ಷಣೆಯು ನಿನ್ನ ಹೊಣೆ' ಎಂದು ಪ್ರಾರ್ಥಿಸಿ ವ್ರತವನ್ನು ಆರಂಭಿಸಿದಳು.

ನಾರಾಯಣ ಮುನಿ ಸ್ನಾನ ಮುಗಿಸಿಕೊಂಡು ಕುಟೀರಕ್ಕೆ ಬಂದು ನೋಡಿದಾಗ, ಚಂದ್ರಲೆ ಇರಲಿಲ್ಲ. ಸೇತುರಾಜನೇ ಇದಕ್ಕೆ ಕಾರಣ ಎಂದು ನಿರ್ಧರಿಸಿ, ಕಾಶ್ಮೀರದ ಹತ್ತಿರವಿರುವ ಹಿಂಗುಳ ಪೀಠಕ್ಕೆ ಹೋಗಿ ತನ್ನ ಕುಲದೇವತೆ ಹಿಂಗುಲಾಂಬಿಕೆಯನ್ನು ಪ್ರಾರ್ಥಿಸಿ, ಸೇತುರಾಜನು ತನ್ನ ಮಡದಿಯನ್ನು ಅಪಹರಿಸಿರುವುದು ಮತ್ತು ಆತನಿಂದ ತಪ್ಪಿಸಿಕೊಳ್ಳಲು ವ್ರತದ ನೆಪ ಮಾಡಿ ಸೋಮೇಶ್ವರನ ಗುಡಿಯಲ್ಲಿರುವುದನ್ನು ಹೇಳಿದ ಅವಳನ್ನು ಕಷ್ಟದಿಂದ ಪಾರು ಮಾಡು ಎಂದು ಬೇಡಿಕೊಂಡ.

ಹಿಂಗುಳಾಂಬೆ ನಾನು ನಿನ್ನ ಜೊತೆಗೆ ಬಂದು ಕಷ್ಟದಿಂದ ಪಾರು ಮಾಡುತ್ತೇನೆ. ನೀನು ಸೇತು ರಾಜನ ರಾಜಧಾನಿಯ ದಾ–ರಿಯನ್ನು ತೋರಿಸುತ್ತಾ ಮುಂದೆ ನಡೆಯಬೇಕು. ಊರು ಮುಟ್ಟುವ ತನಕ ಯಾವುದೇ ಕಾರಣಕ್ಕೂ ಹಿಂತಿರುಗಿ ನೋಡಕೂಡದು. ನಾನು ಹಿಂದೆ ಬರುವುದಕ್ಕೆ ನನ್ನ ಗೆಜ್ಜೆಯ ಧ್ವ–ಜಯೇ ಗುರುತು ಎಂದು ಹೇಳಿದಳು. ಅದೇ ರೀತಿ ಭಕ್ತಿಯಿಂದ ದೇವಿಯ ನಾಮಸ್ಮರಣೆ ಮಾಡುತ್ತಾ ಮುಂದೆ ಸಾಗಿದಂತೆ ದೇವಿಯ ಗೆಜ್ಜೆನಾದ ಇವಳನ್ನು ಹಿಂಬಾಲಿಸಿ ಅಷ್ಟೊತ್ತಿಗೆ ಭೀಮಾ ಕಾಗಿಣಾ ಸಂಗಮದ ಕೇಂದ್ರ ಸ್ಥಾನ ಹೊನಗುಂಟಿ ಗ್ರಾಮ ಬಂದಿತು. ಆ ಸಂಗಮನ ನೀರಿನ ಭರಾಟೆ, ಗಿಡಗಂಟೆಗಳ ಶಬ್ದಕ್ಕೆ ಆ ದೇವಿಯ ಗೆಜ್ಜೆಯ ನಾದ ಕೇಳದೆ ಅನುಮಾನದಿಂದ ನಾರಾಯಣ ಮುನಿಯು ಹಿಂತಿರುಗಿ ನೋಡಿದಾಗ, ದೇವಿ ತಟ್ಟನೆ ಅಲ್ಲಿಯೆ ನಿಂತು ಬಿಟ್ಟಳು. ಎಷ್ಟೇ ಬೇಡಿಕೊಂಡರೂ ಮುಂದೆ ಬರಲು ಒಪ್ಪಲಿಲ್ಲ. ನಾನು ವಿಗ್ರಹರೂಪದಲ್ಲಿ ಇಲ್ಲಿಯೆ ನೆಲೆಸುತ್ತೇನೆಂದು ಹೇಳಿ ಅವನಿಗೊಂದು ತೆಂಗಿನ ಕಾಯಿಕೊಟ್ಟು ಇದರಲ್ಲಿ ಐದು ಭೃಂಗಗಳಿವೆ. ಇದನ್ನು ತೆಗೆದುಕೊಂಡು ಆ ಸೇತುರಾಜನ ಅರಮನೆಯ ಹತ್ತಿರ ಒಡೆಯಬೇಕು ಎಂದು ಆಶೀರ್ವದಿಸಿ ಕಳಿಸಿದಳು.

ನಾರಾಯಣ ಮುನಿ ಸನ್ನತಿ ಕಡೆಗೆ ಬಂದು ಸೇತುರಾಜನ ಅರಮನೆಯ ಬಳಿ ತೆಂಗಿನಕಾಯಿ ಒಡೆದಾಗ, ತಕ್ಷಣ ಐದು ಭ್ರಮರಗಳು ಐದರಿಂದ ಸಾವಿರಾರು ಹೀಗೆ ಅನೇಕ ಸಂಖ್ಯೆಯಲ್ಲಿ ಬೆಳೆದು, ಆ ಸೇತುರಾಜನ ಸುತ್ತ ಮುತ್ತಿಕೊಂಡವು. ಅವುಗಳಿಂದ ತಪ್ಪಿಸಿಕೊಳ್ಳಲು ಭೀಮಾನದಿಯ ಮಡುವಿನಲ್ಲಿ ಮುಳುಗಿದನು. ಅಷ್ಟಾದರೂ ಭ್ರಮರಗಳು ಕಚ್ಚಿ ಹಾಕುತ್ತವೆ ಎಂದು ಬಹಳ ಹೊತ್ತಿನವರೆಗೂ ನೀರಲ್ಲೆ ಮುಳುಗಿ ಜಲ ಸಮಾಧಿಯಾದನೆಂದು ಪುರಾಣ ಕಥೆ ಹೇಳುತ್ತದೆ.

ಈಗಲೂ ಕೂಡಾ ಸನ್ನತಿಯಲ್ಲಿ ನದಿಯ ಒಂದು ಭಾಗದಲ್ಲಿರುವ ಮಡುವಿಗೆ ಸೇತುರಾಜನ ಮಡುವು ಎಂದೇ ಕರೆಯುತ್ತಾರೆ. ಇತ್ತ ಚಂದ್ರಲೆಯು ತನ್ನ ವ್ರತದ ಅವಧಿ ಮು–ಗಿಯುದಕ್ಕಿಂತ ಮುಂಚೆಯೇ ಸೋಮೇಶ್ವರ ಪಾದದಡಿಯಲ್ಲಿ ಐಕ್ಯಳಾದಳು. ಇಂದಿಗೂ ಆ ತೆಂಗು ಸೀಳಿದ ಗುರುತು ಅದಕ್ಕೆ ಸಾಕ್ಷಿ. ಇದನ್ನೆಲ್ಲಾ ತಿಳಿದ ನಾರಾಯಣಮುನಿ ಅಲ್ಲಿದ್ದ ಚಂದ್ರಾಲಾಂಬೆಯ ಪಾದುಕೆಗಳನ್ನೇ ಅವರ ಪ್ರತಿರೂಪವೆಂದು ಪೂಜಿಸಿದನು. ಅಂದಿನಿಂದ ಸನ್ನತಿ ಕ್ಷೇತ್ರವು ಚಂದ್ರಲಾಂಬೆಯ ದಿವ್ಯ ಪಾದುಕೆಗಳಿಂದ ಪ್ರಸಿದ್ಧಿ ಪಡೆದಿದೆ. ಬಂದ ಭಕ್ತರೆಲ್ಲರೂ ಹೇಳುವುದೊಂದೆ 'ಪಾದ ಕಂಡು ಪಾವನನಾದೆ ನಾ' ಅದಕ್ಕಾಗಿ ಭಕ್ತರ ನಿವೇದನೆ ಹೀಗೆ. 'ನೆಡ ಚಂದಮ್ಮ ದರುಶನಕ್ಕೆ ಇಷ್ಟಾರ್ಥ ವರಗಳನ್ನು ಬೇಡುವುದಕ್ಕೆ...' ಪ್ರತಿ ವರ್ಷ ಯುಗಾದಿಯ ಆನಂತರ, ದವನದ ಹುಣ್ಣಿಮೆಯ ಮಾರನೇ ದಿನ ಪ್ರತಿಪದೆಯಂದು ನವಮಿಯವರೆಗೆ ಸಾವಿರಾರು ಭಕ್ತರು ಸೇರಿ ಉತ್ಸವ ನಡೆಸಿಕೊಂಡು ಬರುತ್ತಿದ್ದಾರೆ. ಅದೇ ಪಂಚಮಿಯ ದಿನ ದೇವಿಯ ರಥೋತ್ಸವ ಜರುಗುತ್ತದೆ. ಈ ವರ್ಷವೂ ಕೂಡ ಪೌರ್ಣಿಮೆಯಿಂದ ಪಂಚಮಿಯವರೆಗೆ ಉತ್ಸವ ನಡೆಯಲಿದೆ.

(ಜಿಕೆಎಂ)

ಚಂದ್ರಂಪಳ್ಳಿ: ಚಂದ್ರಂಪಳ್ಳಿ ಗ್ರಾಮವು ಚಿಂಚೋಳಿ ತಾಲ್ಲೂಕಿನ ವಾಯುವ್ಯಕ್ಕೆ ಗೊಟ್ಟಂಗೊಟ್ಟ ಪರ್ವತ ಶ್ರೇಣಿಯಲ್ಲಿ ನೆಲೆನಿಂತ ಸುಂದರ ಪ್ರವಾಸಿ ಧಾಮವಾಗಿದೆ. ಇದು ಪ್ರವಾಸಿಗರಿಗೆ ಉತ್ತಮವಾಗಿ ಅನುಭವವನ್ನು ನೀಡುತ್ತದೆ. ಅಲ್ಲದೆ ಪ್ರಸಿದ್ಧವಾದ ಪ್ರವಾಸಿ ತಾಣವಾಗಿದೆ. ಸುತ್ತ ಮುತ್ತಲಿನ ಪ್ರದೇಶದ ಜನರಿಗೆ ವಾರಾಂತ್ಯದ ವಿಹಾರ ಭೋಜನಕ್ಕೆ ಪ್ರಮುಖವಾದ ಸ್ಥಳವಾಗಿದೆ. ಇಲ್ಲಿ ನೀರಾವರಿ ಇಲಾಖೆಯ ವಸತಿ ಗೃಹದ ವ್ಯವಸ್ಥೆಯು ಇದೆ. ಈ ಗುಡ್ಡದ ಮೇಲೆ ರೈತ ತರಬೇತಿ ಕೇಂದ್ರದ ಭವ್ಯ ಕಟ್ಟಡವಿದೆ. ಇಲ್ಲಿಂದ ಸುಮಾರು ಏಳು ಕಿ.ಮೀ. ದೂರದಲ್ಲಿ ಗೊಟ್ಟಂಗೊಟ್ಟ (ಬೇಚಿರಾಕ್) ಎಂಬ ಗುಡ್ಡವಿದೆ, ಈ ಸ್ಥಳಕ್ಕೆ ಬಂದವರ ಹಿನ್ನಿರಿನ ಗುಂಟ ಗುಡ್ಡ ಹತ್ತುವುದೇ ಒಂದು ಸಾಹಸ ಯಾತ್ರೆಯಾಗಿದೆ. ಈ ಹಿಂದೆ ಈ ತಾಣವು ವಿರಾಟನಗರವಾಗಿದ್ದು, ಪಾಂಡವರೊಂದಿಗೆ ಸಂಬಂಧ ಹೊಂದಿತ್ತೆಂಬ ಐತಿಹ್ಯ ರೂಢಿಯಲ್ಲಿದೆ. ಇಲ್ಲಿ ಬಕ್ಕಪ್ರಭು, ಹನುಮಂತ, ಹಾಗೂ ದುರ್ಗಾದೇವಿಯ ದೇವಾಲಯಗಳಿವೆ. ಗುಡ್ಡದ ತುತ್ತ ತುದಿಯಲ್ಲಿ ಬಕ್ಕಪ್ರಭುವಿನ ದೇವಾಲಯವಿದ್ದು ಪ್ರತಿವರ್ಷ ಶಿವರಾತ್ರಿ ಹಬ್ಬದಂದು ಸಾಕಷ್ಟು

ಜನ ಭಜನೆ, ಕೀರ್ತನೆ, ಹಲವಾರು ಜನ ಸಾಂಸ್ಕೃತಿಕ ಚಟುವಟಿ–ಕೆಯಲ್ಲಿ ತೊಡಗುತ್ತಾರೆ. ಸುಮಾರು ಎರಡೂವರೆ ಶತಮಾನದ ಹಿಂದೆ ಮೆಡಕ್ ಜಿಲ್ಲೆಯ ಸದಾಶಿವ ಪೇಟ ತಾಲ್ಲೂಕಿನ ಬಕ್ಕಪ್ರಭುಗಳು ತಪಸ್ಸು ಮಾಡಿದ ಸ್ಥಳವು ಇದಾಗಿದೆ. ಇವರ ಸಮಾಧಿಯು ಬೀದರ ಜಿಲ್ಲೆಯ ಕರಕನಳ್ಳಿಯಲ್ಲಿ ಇಲ್ಲಿ ಪ್ರತಿ ವರ್ಷ ಹುಣ್ಣಿಮೆಯಂದು ಸಡಗರದಿಂದ ಜಾತ್ರೆಯು ನೆರವೇರುತ್ತದೆ.


ಆಂಧ್ರದ ಗಡಿಯಲ್ಲಿರುವ ಚಂದ್ರಂಪಳ್ಳಿ ಜಲಾಶಯ ಪ್ರವಾಸಿ ತಾಣವಾಗಿ ನಿರ್ಮಾಣವಾಗಿರುವುದರಿಂದ ಇದೊಂದು ಸುಂದರ ನಿಸರ್ಗ ರಮಣೀಯ ಸ್ಥಳವಾಗಿದೆ. ಮಳೆಗಾಲದಲ್ಲಿ ತುಂಬಿ ತುಳುಕುವ ಜಲಾಶಯ ಹಾಗೂ ಗುಡ್ಡಗಳ ಮೇಲೆ ಹಚ್ಚ ಹಸಿರಿನ ತೊಪ್ಪಲಿನಿಂದ ಕಂಗೊಳಿಸುವದನ್ನು ನೋಡಿದರೆ, ಕಲಬುರ್ಗಿಯಂಥ ಬರಗಾಲ ನಾಡಿನಲ್ಲೂ ಇಂಥ ರಮಣೀಯ ತಾಣವಿದೆಯೇ ಎಂದು ಅಚ್ಚರಿಯಾಗುವದು ಸಹಜ. ಜಿಲ್ಲೆಯ ವಿವಿಧ ಭಾಗಗಳಿಂದ ಜನರು ಇಲ್ಲಿಗೆ ವಿಹಾರಕ್ಕಾಗಿ ಬರುತ್ತಾರೆ. ಎತ್ತರ ಪ್ರದೇಶದಲ್ಲಿರುವ ಜಲಾಶಯ, ಅದರ ಸುತ್ತಲೂ ಹಚ್ಚ ಹಸುರಿನ ಗುಡ್ಡಗಳು. ಜಲಾಶಯದ ಏರಿಯ ಮೇಲೆ ನಿಂತು ಕಣ್ಣು ಹಾಯಿಸಿದರೆ, ದೂರದಿಂದ ಬಂದವರಿಗೆ ಆಯಾಸವೆಲ್ಲ ಮರೆಸುತ್ತದೆ. *(ಪಿಕೆಕೆ)*

ಚಕ್ಕ ಆಟ: ಹಳ್ಳಿಗಳಲ್ಲಿ ಬೇಸಿಗೆ ಕಾಲದಲ್ಲಿ ಮನರಂಜನೆಗಾಗಿ ಆಡುವ ಹಲವಾರು ಆಟಗಳಲ್ಲಿ ಒಂದು. ಚಿಕ್ಕ ಮಕ್ಕಳಿಂದ ಹಿಡಿದು ಮುದುಕರವರೆಗೆ ಹೆಣ್ಣು ಗಂಡೆಂಬ ಬೇಧವಿಲ್ಲದೆ ಆಡುವ ಒಂದೇ ಒಂದು ಆಟ ಮನೆಗಳಲ್ಲಿ ಗಿಡಮರಗಳ ಕೆಳಗೆ, ಜಗಲಿ ಕಟ್ಟೆಗಳ ಮೇಲೆ ಎಲ್ಲೆಂದರಲ್ಲಿ ಕುಳಿತು ಈ ಆಟವನ್ನು ಆಡುತ್ತಿದ್ದರು. ಒಂದು ಕಾಲಕ್ಕೆ ಚಕ್ಕ ಆಟ ಬಹು ಜನಪ್ರಿಯ ಆಟವಾಗಿತ್ತು. ಇಂದು ಕ್ರಿಕೆಟ್ ಆಟದಲ್ಲಿ ಬೆಟ್ಟಿಂಗ್ ಇದ್ದ ಹಾಗೆ ಅಂದು ಈ ಆಟದಲ್ಲಿ ಆಡುವವರು ಬೆಟ್ ಕಟ್ಟಿ ಆಡುತ್ತಿದ್ದರು. ಆದರೆ ಇಂದು ಎಲ್ಲ ಆಟಗಳಿಗೆ ಉಂಟಾದ ಗತಿಯೇ ಈ ಆಟಕ್ಕೂ ಬಂದಿದೆ. ಹಳ್ಳಿಗಳಲ್ಲಿಯೂ ಈ ಆಟ ಆಡುವವರ ಸಂಖ್ಯೆ ಕಡಿಮೆಯಾಗಿದೆ.

ಚಕ್ಕ ಆಟದಲ್ಲಿ 5 ಮನೆ, 7 ಮನೆ, 9ಮನೆ ಮತ್ತು 11 ಮನೆ ಆಟ ಎಂದು 4 ವಿಧ. ಜನರ ಸಂಖ್ಯೆ ಬಹಳ ಇದ್ದರೆ 7, 9 ಹಾಗೂ 11 ಮನೆ ಆಟಗಳನ್ನು ಜೋಡಿಯಾಗಿ ಆಡುತ್ತಾರೆ. ಮೇಲ್ಕಾಣಿಸಿದ ಮನೆಗಳ ಆಟವನ್ನು ಆಡುವಾಗ ಬಹಳ ಜಾಗರುಕತೆ ಹಾಗೂ ಅನುಭವದಿಂದ ಕಾಯಿ ನಡೆಸಬೇಕಾಗುತ್ತದೆ.

ಈ ಆಟ ಆಡಲು ಕವಡೆ, ಹಾಗೂ ಕಾಯಿಗಳು ಬೇಕು. ಕನಿಷ್ಠ 2 ತಂಡದಿಂದ ಗರಿಷ್ಠ 4 ತಂಡಗಳವರೆಗೆ ಆಟವನ್ನು ಆಡಬಹುದು. ಚಕ್ಕ ಆಟದ ಮನೆಗಳು ಮತ್ತು ಆಡುವ ವಿಧಾನ ಈ ಕೆಳಗಿನಂತಿರುತ್ತದೆ.


ನಾಲ್ಕು ಕಟ್ಟೆಗೆ ನಾಲ್ಕು ತಂಡಗಳು ಆಟ ಆಡುತ್ತಾರೆ. ನಾಲ್ಕು ಕವಡೆ ಮತ್ತು ಪ್ರತಿಯೊಂದು ತಂಡಕ್ಕೆ 4 ರಂತೆ ಕಾಯಿಗಳು ಇರುತ್ತವೆ. ಎದುರಾಳಿಯ ಕಾಯಿಯನ್ನು ಕಡಿಯದೆ ಒಳಗೆ ಹೋಗಿ ಹಣ್ಣು ಮಾಡಲು ಬರುವುದಿಲ್ಲ. ನಾಲ್ಕು ಕಟ್ಟೆಗೆ ನಾಲ್ಕು ತಂಡಗಳು ಆಟ ಆಡುತ್ತಾರೆ. ಎಂಟು ಕವಡೆ ಆರು ಕಾಯಿ.



ಚಕ್ರದ ಮನಿ, ಕೈಲಾಸ ಪಟ, ಹುಲಿಮನಿ

ಹೊರಗಿನ ಸಾಲಿನಲ್ಲಿ ಒಂಟಿ (Single) ಕಾಯಿನ್ನು ನಡೆಸಬೇಕು ಒಳಗಡೆ (2ಕಾಯಿಯನ್ನು) ಜೋಡಿ ಕಾಯಿಯ ಮೂಲಕ ಆಟವನ್ನು ಆಡುತ್ತಾರೆ. ಇದರಲ್ಲಿ ಕೂಡ ಎದುರಾಳಿಯ ಕಾಯಿಯನ್ನು ಕಡಿದೇ ಒಳಗೆ ಹೋಗಲು ಸಾಧ್ಯ. ಒಳಗೆ ಹೋದ ನಂತರ 2,4,6,8,... ಸರಿ ಬಿದ್ದರೆ ಮಾತ್ರ ಕಾಯಿಯನ್ನು ಮುಂದಕ್ಕೆ ನಡೆಸುತ್ತಾರೆ. ಇದೇರೀತಿ 9 ಮನೆ ಮತ್ತು 11 ಮನೆಗಳ ಆಟವನ್ನು ಆಡುತ್ತಾರೆ. *(ಎಂಕೆಜಿ)*

ಚಕ್ಕಡಿ ಬಂಡಿ: ಪ್ರಾಚೀನ ಕಾಲದಿಂದ ಇಂದಿನವರೆಗೆ ರೈತನಿಗೆ ಸರಕು ಸಾಗಾಣಿಕೆಯ ಸಾಧನ ಚಕ್ಕಡಿ ಬಂಡಿ. ಬಿತ್ತನೆ ಬೀಜಗಳನ್ನು ಮತ್ತು ಇತರ ಕೃಷಿಗೆ ಬೇಕಾದ ವಸ್ತುಗಳನ್ನು ಹೊಲಕ್ಕೆ ಒಯ್ಯಲು, ಹೊಲದಿಂದ ಫಸಲನ್ನು ತರಲು ಮತ್ತು ಮಾರುಕಟ್ಟೆಗೆ ಫಸಲನ್ನು ಮಾರಲು ತೆಗೆದುಕೊಂಡು ಹೋಗಲು ಈ ಬಂಡಿಯನ್ನು ಬಳಸುತ್ತಾನೆ. ಕೊರಕಲು ಮಣ್ಣಿನ ರಸ್ತೆಯಲ್ಲಿ ಓಡಾಡಲು ಯೋಗ್ಯವಾದಂಥ ಕಟ್ಟಿಗೆ ಮತ್ತು ಕಬ್ಬಿಣದಿಂದ ಭದ್ರವಾಗಿ ಮಾಡಲ್ಪಟ್ಟಿರುತ್ತದೆ. ರೈತನಿಗೆ ಬಹು ಉಪಯೋ–ಗಿಯೂ, ಅವಶ್ಯಕವೂ ಆದ ಈ ಬಂಡಿಯನ್ನು ಇಂದಿಗೂ ಹಳ್ಳಿಗಳಲ್ಲಿ ಕಾಣಬಹುದಾಗಿದೆ.



ಚಕ್ಕಡಿ ಬಂಡಿ

ಚಕ್ಕಡಿ ಬಂಡಿಯ ನಿರ್ಮಾಣವು ಬಹು ವೈಜ್ಞಾನಿಕ ಮತ್ತು ಪ್ರಮಾಣ ಬದ್ಧವಾಗಿರುತ್ತದೆ. ಇದರ ಎಲ್ಲ ಭಾಗಗಳು ಇಂತಿಷ್ಟೇ ಅಳತೆವುಳ್ಳದ್ದಾಗಿರಬೇಕೆಂಬ ನಿಯಮದ ಪ್ರಕಾರ ನಿರ್ಮಾ–ಣಗೊಂಡಿರುತ್ತದೆ. ಚಕ್ಕಡಿ ಬಂಡಿಯ ಎಲ್ಲ ಭಾಗಗಳಿಗೆ ಪ್ರತ್ಯೇಕವಾದ ಹೆಸರು, ಇಂತಿಷ್ಟೆ ಅಳತೆಯನ್ನು ಹೊಂದಿರುತ್ತವೆ. ಅವು ಕೆಳಗಿನಂತಿವೆ.

ಚಕ್ಕಡಿ ಬಂಡಿಯ ಭಾಗಗಳು ಮತ್ತು ಅವುಗಳ ಅಳತೆಗಳು: 1) ನೋಗ–6 ಅಡಿ, 2) ಹೇರ್ ಕೋಲು– 14ಅಡಿ, 3) ಅಚ್ಚು 5ಅಡಿ, 4) ಬಿಲ್ಲು 6ಅಡಿ, 5) ಹೋಲೆ ಮಣಿ– 3 ಅಡಿ ಉದ್ದ 1½ ಅಡಿ ಅಗಲು, 6) ಮುಂಕ 1½ ಅಡಿ ಉದ್ದ, 7) ಕಣುಗ– 10 ಇರುತ್ತವೆ, 8) ಅಲಿಗಿ– 1 ಅಡಿ ಅಗಲ, 6ಅಡಿ ಉದ್ದ, 9) ಉದಿಗಿ ಕಟಿಗಿ– 3ಅಡಿ ಉದ್ದ, 10) ಹಣಿ ಪಟ್ಟಿ– 1½ ಅಡಿ ಉದ್ದ, 11) ಗಾಲಿ ಅಳಿ– 1½ ಅಡಿ, 12) ವಂಕಿ– 2ಅಡಿ ಉದ್ದ, ಅರ್ಧ ಅಡಿ ಅಗಲ ಒಂದು ಚಕ್ರಕ್ಕೆ 6 ಒಟ್ಟು 12 ಬೇಕು, 13) ಎಲಿ– 1½ ಅಡಿ ಉದ್ದ 4 ಇಂಚು ಅಗಲ ಒಂದು ಗಾಲಿಗೆ 12 ಒಟ್ಟು 24 ಬೇಕು, 14) ಕುಂಭ– 2½ ಸುತ್ತಳತೆ, 15) ಹಾಡಗಿ– 7ಅಡಿ ಉದ್ದ, 15 ಇಂಚು ಅಗಲು, 16) ಬಳಿ– 8 ಇಂಚು ಅಗಲ, 17) ಕೀಲು– 1 ಅಡಿ ಉದ್ದ, ಒಟ್ಟು 2 ಬೇಕು, 18) ರಿಂಗು– 3 ಅಡಿ ಸುತ್ತಳತೆ.

ಇಂಥ ಪ್ರಮಾಣ ಭದ್ರವಾದ ಚಕ್ಕಡಿ ಬಂಡಿಗೆ ಕೀಲು ಬಹಳ ಪ್ರಮುಖ ಅದನ್ನು 'ಕಡೆಗೀಲು ಬಂಡಿಗಾಧಾರ' ಎಂದು ದೇವರ ದಾಸಿಮಯ್ಯನು ತನ್ನ ವಚನ ಒಂದರಲ್ಲಿ ಹೇಳುತ್ತಾನೆ.

(ಎಂಕೆಜೆ)

ಚಟಗಿ ಒಡೆಯುವದು: ಭಾರತ ಹುಣ್ಣಿಮೆಯಾದ ಐದನೆಯದಿನದಂದು ಗುಲ್ಬರ್ಗ ಜಿಲ್ಲೆ ಅಫಜಲಪುರ ತಾಲ್ಲೂಕಿನ 'ಗಾಣಗಾಪುರ ದತ್ತದೇವರ' ಜಾತ್ರೆಯಲ್ಲಿ ನಡೆಯುವ ಸಂಪ್ರದಾಯ. ಇದಕ್ಕೆ ಸ್ವಲ್ಪ ಎತ್ತರದಲ್ಲಿ ಪಂಚಕ್ಷೀರಗಳಿಂದ ತುಂಬಿದ ಎರಡು ಮಣ್ಣಿನ ಗಡಿಗೆಗಳನ್ನು ಕಟ್ಟಿರುತ್ತಾರೆ. ಕೆಳಗೆ ಸಾವಿರಾರು ಜನ ನೆರೆದಿರುತ್ತಾರೆ. ಪೂಜೆಯಾದ ಬಳಿಕ ಬೆಳ್ಳಿಯ ಬೆತ್ತದಿಂದ ಅದಕ್ಕೆ ಬಡಿಯುವರು. ಚೆಲ್ಲಾಪಿಲ್ಲಿಯಾಗಿ ಸುರಿದ ಪಂಚಕ್ಷೀರವನ್ನು ಜನ ಎತ್ತಿ ತಿನ್ನುವರು. ಅದಾದ ಅನಂತರ ಪಲ್ಲಕ್ಕಿಯ ಮೆರೆವಣಿಗೆ ನಡೆಯುವದು. ಆಗ ಭೂತಗಳ ಒಂದು ಸಣ್ಣ ಜಾತ್ರೆಯೇ ನೆರೆಯುತ್ತದೆ. ದೇವರನ್ನು ಅಶ್ಲೀಲವಾಗಿ ಬೈಯ್ಯುತ್ತ ಭೀಮಾ ನದಿಯ ಕಡೆಗೆ ಓಡಿ ಹೋಗುವವು. ನೀರು ಮಟ್ಟಿದಾಕ್ಷಣ ಭೂತ ಪ್ರವೇಶ ಇಳಿಯುವುದೆಂಬುದು ಜನರ ನಂಬಿಕೆ. ಯಾದಗಿರ ಜಿಲ್ಲೆ ಸುರಪುರದಲ್ಲಿಯೂ 'ಹಾಲೋಕಳಿ' ಮಾಡುವ ಸಂಪ್ರದಾಯವಿದೆ. ಇದು ಸುರಪುರ ದೊರೆಗಳ ಕೃಪಾಶ್ರಯದಲ್ಲಿ ಈಗಲೂ ನಡೆಯುತ್ತ ಬಂದ ಪದ್ಧತಿ. ಆದರೆ ಗಾಣಗಾಪುರ ಮತ್ತು ಸುರಪುರ ಹಾಲೋಕುಳಿ ನಡುವೆ ಸಾಮ್ಯತೆಗಿಂತ ಭಿನ್ನತೆ ಹೆಚ್ಚಿವೆ. *(ಜಿಪಿಹಿ)*

ಚಟ್ಟ: ಶವವನ್ನು ಹೊತ್ತುಕೊಂಡು ಹೋಗಲು ಬಳಸುವ ಸಾಧನ. ಬಿದಿರಿನ ಬೊಂಬುಗಳಿಂದ ನಿರ್ಮಿಸುತ್ತಾರೆ. ವ್ಯಕ್ತಿ ಸತ್ತೊಡನೆಯೇ ಚಟ್ಟ ಕಟ್ಟುವ ಕೆಲಸ ಪ್ರಾರಂಭವಾಗುತ್ತದೆ. ಎರಡು ಆಕಾರದಲ್ಲಿ ಚಟ್ಟ ಕಟ್ಟುವ ಪದ್ಧತಿ ಇದೆ. ಮೃತ ವ್ಯಕ್ತಿ ಶ್ರೀಮಂತನಾಗಿದ್ದರೆ ಚಟ್ಟವನ್ನು ಗೋಪುರಾಕೃತಿಯಲ್ಲಿ ನಿರ್ಮಿಸಿ ಅದನ್ನು ಹೂವಿನಿಂದ ಶೃಂಗರಿಸಲಾಗುತ್ತದೆ. ಅನಂತರ ತಳಕ್ಕೆ ಮೆತ್ತನೆಯ ಬಟ್ಟೆಯನ್ನು ಹಾಸಿ ಸತ್ತವರನ್ನು ಕೂರುವಂತೆ ವ್ಯವಸ್ಥೆ ಮಾಡಿ ಶರೀರವನ್ನು ಪಟ್ಟಕ್ಕೆ ಸೇರಿಸಿ ಕಟ್ಟಲಾಗುತ್ತದೆ.

ಮತ್ತೊಂದು ಬಗೆಯ ಚಟ್ಟವನ್ನು ಬಹಳ ಸಾಧಾರಣ ರೀತಿಯಲ್ಲಿ ನಿರ್ಮಿಸಲಾಗುತ್ತದೆ. ಇದನ್ನು ಎರಡು ಸಮಾನಾಂತರ ಬಿದಿರು ಬೊಂಬುಗಳಿಂದ ನಿರ್ಮಿಸಿ ವ್ಯಕ್ತಿಯನ್ನು ಉದ್ದಕ್ಕೆ ಮಲಗಿಸುವಂತೆ ವ್ಯವಸ್ಥೆ ಮಾಡಲಾಗುತ್ತದೆ.

ಮದುವೆಯಾಗದೆ ಸತ್ತರೆ ಅಂಥವರಿಗೆ ಚಟ್ಟ ಕಟ್ಟುವುದಿಲ್ಲ. ಬದಲಾಗಿ ಒಂದು ಮರದ ದಂಡಿಗೆ ದುಪ್ಪಟಿ ಅಥವಾ ರಗ್ಗನ್ನು ಕಟ್ಟಿ ಅದರೊಳಕ್ಕೆ ಹೆಣವನ್ನು ಇಟ್ಟು ಇಬ್ಬರು ಹೊತ್ತೊಯ್ಯುತ್ತಾರೆ.

(ಎಂಕೆಜೆ)

ಚನ್ನಬಸಪ್ಪ ಗೊಂದಳಿ: ಮಾನ್ವಿ ರಾಯಚೂರು ಜಿಲ್ಲೆ ಜನಪದ ಗಾಯಕರು. ಬದುಕಿನ ಕಷ್ಟ ನಿಷ್ಠುರಗಳಿಗೆ ಜಗ್ಗದೆ ಹಾಡುವ ಕಲೆಗೆ ತಮ್ಮನ್ನು ಅರ್ಪಿಸಿಕೊಂಡು ಆತ್ಮಸಂತೋಷ ಪಡೆದವರು. ಕಳೆದ ಮುವ್ವತ್ತೈದು ವರ್ಷಗಳಿಂದ ನಿರಂತರವಾಗಿ ಹಾಡುತ್ತ ಬಂದಿರುವ ಇವರಿಗೆ ಅನೇಕ ಶಿಷ್ಯರೂ ಇದ್ದಾರೆ. ತಲೆಗೆ ರುಮಾಲು ಸುತ್ತಿ, ಅದಕ್ಕೊಂದು ತುರಾಯಿ ಇಟ್ಟು, ನಡುವಿನ ಪಟ್ಟಿಕಟ್ಟಿ, ತಾಳ ಹಾಕುತ್ತ ಹಾಡಲು ಇವರು ದನಿ ಎತ್ತಿದರೆ ಯಾರೂ ತಲೆ ಅಲ್ಲಾಡಿಸಬೇಕು. ಅನೇಕ ಜನಪದ ಕಥಾ ಪ್ರಸಂಗಗಳನ್ನು ಇವರು ರೂಢಿಸಿ ಕೊಂಡಿದ್ದಾರೆ. ತಾವು ಇರುವಷ್ಟು ಕಾಲವೂ, ತಮಗೆ ದೊರೆತಂತಹ ಎಲ್ಲ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಜನಪದ ಹಾಡುಗಾರಿಕೆಗೆ ಇಂಬುಕೊಂಡುವುದು ಇವರ ಧ್ಯೇಯವಾಗಿದೆ.

ಕಲೆಯನ್ನು ಆತ್ಮ ತೃಪ್ತಿಗಾಗಿ ರೂಢಿಸಿಕೊಂಡ ಕಲಾವಿದರು. ಇವರಿಗೆ ಇವರು ಹಾಡುವುದನ್ನೇ ಬಾಳಿನ ವೃತ್ತಿಯಾಗಿಸಿ ಕೊಂಡರು. ಶಿಷ್ಯ ಕಲಾವಿದರು ಹೆಚ್ಚಾಗಿಯೇ ಇದ್ದಾರೆ. *(ಜಿಆರ್‌ಟಿ)*

ಚರಗ ಚೆಲ್ಲುವದು: ಹೊಲಗದ್ದೆಗಳಲ್ಲಿ ಫಸಲು ಬರುವ ಸಂದರ್ಭದಲ್ಲಿ ರೈತರು ಚರಗ ಚೆಲ್ಲುವುದನ್ನು ಬಹು ಸಂಭ್ರಮದಿಂದ ಆಚರಿಸುತ್ತಾರೆ. ಅನಂತಹುಣ್ಣಿಮೆಯಿಂದ ಸೀಗೆಹುಣ್ಣಿಮೆವರೆಗೆ ಚರಗ ಚೆಲ್ಲುವದನ್ನು ಹೈದ್ರಾಬಾದ ಕರ್ನಾಟದಲ್ಲಿ ರೈತರು ಆಚರಿಸುತ್ತಾರೆ. (ನೋಡಿ ಎಳ್ಳ ಅಮವಾಸ್ಯೆ)

ಚರಗ ಚೆಲ್ಲುವ ದಿನದಂದು ರೈತನು ತನಗೆ ಬೇಕಾದವರನ್ನು 'ಕೊಲ್ಲಾರಿ ಬಂಡಿ ಕಟ್ಟಿಕೊಂಡು' ತನ್ನ ಹೊಲಕ್ಕೆ ಕರೆದುಕೊಂಡು ಹೋಗುತ್ತಾನೆ. ಹೊಲದಲ್ಲಿದ್ದ ಬನ್ನಿ ಮರಕ್ಕೆ ಕೆಂಪು ಬಟ್ಟೆಯನ್ನು ಸುತ್ತಿ ಅಥವಾ ಹೊಸ ಸೀರೆಯನ್ನು ಇಟ್ಟು, ವಿಭೂತಿ, ಕುಂಕುಮ, ಪುಷ್ಪಗಳಿಂದ ಪೂಜೆ ಮಾಡಿ ಉಡಿ ತುಂಬುತ್ತಾರೆ. ಆನಂತರ ತಾವು ತಂದಂಥ ಊಟದ ಪದಾರ್ಥಗಳನ್ನು ಎಡೆ ಮಾಡಿ ಕಾಯಿ ಒಡೆಯುತ್ತಾರೆ. ತದನಂತರ ಆ ಎಡೆಯನ್ನು ಹೊಲದ ತುಂಬೆಲ್ಲಾ 'ಹುಲ್ಲಲ್ಲೆಗೊ ಸುರ್ರಂಬೈಗೊ, ಹುಲ್ಲೆಲ್ಲಗೊ ಸುರ್ರಂಬೈಗೊ' ಎಂದು ಜೈಕಾರ ಮಾಡುತ್ತ ಚೆಲ್ಲುತ್ತಾರೆ.

ಚರಗು ಚೆಲ್ಲುವ ದಿನದಂದು ರೈತರು ವಿಶೇಷವಾಗಿ ಅಡುಗೆಯನ್ನು ಮಾಡುತ್ತಾರೆ. ಎಳ್ಳು ಹೋಳಿಗೆ, ಶೇಂಗಾ ಹೋಳಿಗೆ, ಎಣ್ಣೆ ಹೋಳಿಗೆ, ನವಣಿಕ್ಕಿಯಿಂದ ಮಾಡಿದ ಹೋಳಿಗೆ, ಕಡುಬು, ರೊಟ್ಟಿ, ಚಪಾತಿ, ಕಾಳು ಪಲ್ಯೆ, ವಿವಿಧ ಧಾನ್ಯ ಹಾಗೂ ತರಕಾರಿ ಸಮಿಶ್ರಣದ ಪಲ್ಯೆ (ಭರ್ತ), ಚಿತ್ರಾನ್ನ ಮೊದಲಾದ ಹಲವಾರು ವಿಧಗಳ ಊಟದ ತಿನಿಸುಗಳನ್ನು ಮಾಡುತ್ತಾರೆ.

ಚರಗ ಚೆಲ್ಲಿದ ಆನಂತರ ಎಲ್ಲರೂ ಸೇರಿ ಸಂತೋಷವಾಗಿ ಊಟ ಮಾಡುತ್ತಾರೆ. ಹೀಗೆ ಚರಗ ಚೆಲ್ಲುವದರಿಂದ ಭೂತಾಯಿ ಸಂತೃಪ್ತಳಾಗಿ, ಫಸಲನ್ನು ಚೆನ್ನಾಗಿ ಕೊಡುತ್ತಾಳೆ ಎಂದು ರೈತರ ನಂಬಿಕೆ. ಹಳ್ಳಿಗಳಲ್ಲಿ ಈಗಲೂ ಕಂಡು ಬರುವ ಈ ಪದ್ಧತಿಯು ಬಹು ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

(ಎಂಕೆಜೆ)

ಚರಬಸವೇಶ್ವರ ತಾತನವರು: ಮಹಾತಪಸ್ವಿ, ವೈರಾಗ್ಯ ಮೂರ್ತಿ. ಯಾದಗೀರ ಜಿಲ್ಲೆ ಶಹಾಪುರ ತಾಲ್ಲೂಕಿನ ಆನವಾರ ಗ್ರಾಮದ ಶೀಲವಂತಯ್ಯ ಹಾಗೂ ಅವ್ವಮ್ಮಾಂಬೆಯ ಪುತ್ರನಾಗಿ ಜನಿಸಿದರು. ಇವರ ಜೀವನ ವೃತ್ತಿ, ಬಟ್ಟೆ ವ್ಯಾಪಾರ. ವ್ಯಾಪಾರದಲ್ಲಿ ಮೋಸ–ವಂಚನೆ ಒಂದೂ ಗೊತ್ತಿಲ್ಲದೇ ಜೀವನ ಸಾಗಿಸುತ್ತಿದ್ದ ಇವರಿಗೆ ತಮ್ಮ ಸುತ್ತಮುತ್ತಲೂ ಅನೇಕ ಬಡ ಹಾಗೂ ದರಿದ್ರರನ್ನು ಕಂಡು, ಇವರೆಲ್ಲರ ಬದುಕು ಹೀಗೇಕೆ? ಇನ್ನುಳಿದವರು ಹಾಗೇಕೆ ಎಂದು ಚಿಕ್ಕಂದಿನಿಂದಲೂ ಚಿಂತಿಸುತ್ತಿದ್ದರು.

ಬಟ್ಟೆ ವ್ಯಾಪಾರದಲ್ಲಿ ಶ್ರೀಮಂತರು ಹಣ ಸುರಿದು ತಮಗೆ ಬೇಕಾದಂಥ ಬಟ್ಟೆಗಳನ್ನು ಖರೀದಿಸುತ್ತಿದ್ದರೆ, ದರಿದ್ರರಿಗೆ ಮೈಮುಚ್ಚಿಕೊಳ್ಳಲೂ ಬಟ್ಟೆಯಿಲ್ಲದೇ ಬರಿಮೈಯಲ್ಲಿ, ತುತ್ತು ಅನ್ನಕ್ಕಾಗಿ ಅಂಗಲಾಚುವದನ್ನು ಕಂಡು, ಮನುಷ್ಯ ಮನುಷ್ಯರಲ್ಲಿ ಭೇದಯಾಕೆ ಎಂದು ತಮ್ಮಲ್ಲಿ ತಾವೇ ಆತ್ಮ ವಿಮರ್ಶೆ ಮಾಡಿಕೊಳ್ಳುತ್ತಿದ್ದರು. ಎಲ್ಲರೂ ಸಮಾನರಾಗಿರಬೇಕು. ಸಕಲ ಐಶ್ವರ್ಯಗಳು ಎಲ್ಲರೂ ಸಮಾನವಾಗಿ ಹಂಚಿಕೊಂಡು ತಿನ್ನಬೇಕು. ಹೀಗೇಕೆ ಆಗುತ್ತಿಲ್ಲ? ಮನುಷ್ಯನಲ್ಲಿ ಎಲ್ಲವನ್ನೂ ತಾನೇ ಅನುಭವಿಸಬೇಕೆಂಬ ಸ್ವಾರ್ಥವೇಕೆ? ಇದರಲ್ಲಿ ಯಾರ ತಪ್ಪು? ತಮ್ಮನ್ನು ತಾವೇ ವಿಮರ್ಶೆ ಮಾಡಿಕೊಳ್ಳುತ್ತ ಸಮಾನತೆಯ ಸತ್ವವನ್ನು ಅರಸುತ್ತ, ನಡೆದರು.

ಇವರ ಮೂಲ ಮಂತ್ರ ಎಲ್ಲರೂ ದುಡಿದು ತಿನ್ನಬೇಕು. ಕಾಯಕವಿಲ್ಲದೇ ಜೀವನದಲ್ಲಿ ಮೋಕ್ಷವಿಲ್ಲ. ಹುಟ್ಟುತ್ತಲೇ ಎಲ್ಲರಿಗೂ ಎಲ್ಲವೂ ಇರುವದಿಲ್ಲ. ಹಿರಿಯರು ಕಟ್ಟಿಟ್ಟದ್ದು ಶಾಶ್ವತವಲ್ಲ. ತಾನು ಮಾಡಿದ ಕಾಯಕದ ಫಲವೇ ಶಾಶ್ವತ. ಪರೋಪಕಾರವೇ ಮೋಕ್ಷ ಎಂಬ ಸತ್ವವನ್ನು ಜಗತ್ತಿಗೆ ಸಾರಿದರು.

ತಮ್ಮ ಜೀವನದುದ್ದಕ್ಕೂ ಅಪಾರ ಶಿಷ್ಯವರ್ಗವನ್ನು ಹೊಂದಿದ್ದು, ಸುತ್ತಮುತ್ತಲಿನ ಪ್ರದೇಶದಲ್ಲಿ ಚರಬಸವೇಶ್ವರ ತಾತನವರೆಂದರೆ, ಭಕ್ತಿ ಭಾವ ತುಂಬಿ ಹರಿಯುತ್ತಿತ್ತು. ತಾತನವರು ತುಂಬು ಜೀವನ ನಡೆಸಿ, ಜಗತ್ತಿಗೆ ಜೀವನದ ಮುಖ್ಯ ಉದ್ದೇಶವೇನು? ಹೇಗೆ ಬದುಕಬೇಕೆಂಬುದನ್ನು ತೋರಿಸಿಕೊಟ್ಟು, ಪರೋಪಕಾರದಿಂದ ಆಗುವ ಮಾನಸಿಕ ತೃಪ್ತಿ, ಭಗವಂತನಿಗೂ ಸಂತೃಪ್ತಿಗೊಳಿಸುತ್ತದೆ ಎಂದು ಸಾರಿದರು, ಶಹಾಪೂರ ಬೆಟ್ಟದ ಕೆಳಗೆ ಶಿವಾಧೀನರಾದರು.

ಈ ಸ್ಥಳದಲ್ಲಿ ತಾತನವರ ಗದ್ದುಗೆ ಇದೆ. ಈಗ ಬೃಹತ್ ದೇವಸ್ಥಾನವೂ ನಿರ್ಮಾಣವಾಗಿದೆ. ಅಸಂಖ್ಯ ಭಕ್ತರು ಇಲ್ಲಿಗೆ ಆಗಮಿಸುತ್ತಾರೆ. ಈ ದೇವಸ್ಥಾನದ ವಿಶೇಷವೆಂದರೆ, ಬಡವ ಬಲ್ಲಿದ ಎಂಬ ಭೇದವಿಲ್ಲದೇ ಅಸಂಖ್ಯ ಮದುವೆ ಸಮಾರಂಭಗಳು ನಡೆಯುತ್ತವೆ. ಇಲ್ಲಿ ಮೊದಲು ಕಲ್ಯಾಣ ಮಂಟಪವಿರಲಿಲ್ಲ. ಇತ್ತೀಚೆಗೆ ಒಂದು ಮಂಟಪ ನಿರ್ಮಿಸಲಾಗಿದೆ. ಒಂದೊಂದು ದಿನ 8–10 ಮದುವೆಗಳೂ ಇಲ್ಲಿ ನಡೆಯುತ್ತವೆ. ತಾತನವರ ಸನ್ನಿಧಿಯಲ್ಲಿ ಮದುವೆ, ಅಕ್ಷತೆ ನಡೆದರೇನೇ ಹೊಸ ಜೋಡಿಯ ಜೀವನ ಸುಗಮ ಎಂಬ ನಂಬಿಕೆ ಈ ಭಾಗದಲ್ಲಿದೆ.

ಬೇಸಿಗೆಯಲ್ಲಿ ತಾತನವರ ಗದ್ದುಗೆಯ ಪ್ರದೇಶ ವಿಶ್ರಾಂತಿ ಧಾಮದಂತಿದೆ. ವ್ಯಾಪಾರದಲ್ಲಿ ನಷ್ಟವಾಗಿ, ಕುಟುಂಬದಲ್ಲಿ ಕಲಹ ಮುಂತಾದವುಗಳಾದರೆ ಅಥವಾ ಮಾನಸಿಕ ಕ್ಷೋಬೆ ಯುಂಟಾದಾಗ ತಾತನವರ ಗದ್ದುಗೆಯ ಸನ್ನಿಧಾನಕ್ಕೆ ಬಂದು ಮಾನಸಿಕ ನೆಮ್ಮದಿ ಪಡೆಯುತ್ತಾರೆ. ದೇವಾಲಯದಲ್ಲಿ ನಿತ್ಯ ನೆಮ್ಮದಿ ಪಡೆಯುತ್ತಾರೆ. ದೇವಾಲಯದಲ್ಲಿ ನಿತ್ಯ ದಾಸೋಹ ನಡೆಯುತ್ತಿದ್ದು, ಭಕ್ತಾದಿಗಳ ಮಂಗಲ ಕಾರ್ಯಗಳಿಗೆ ಸುಸಜ್ಜಿತ ಕಲ್ಯಾಣ ಮಂಟಪವೂ ಇತ್ತೀಚೆಗೆ ನಿರ್ಮಾಣಗೊಂಡಿದೆ.

ದಿ. ಬಾಪೂಗೌಡ ದರ್ಶನಾಪೂರ ಅವರು ಚರಬಸವೇಶ್ವರರ ಹೆಸರಿನಲ್ಲಿ ಶಿಕ್ಷಣ ಸಂಸ್ಥೆಯನ್ನೊಂದು ಆರಂಭಿಸಿದ್ದು, ಪ್ರಾಥಮಿಕ, ಪ್ರೌಢ ಶಾಲೆ, ಕೈಗಾರಿಕಾ ತರಬೇತಿ ಸಂಸ್ಥೆ ಮುಂತಾದವುಗಳನ್ನು ನಡೆಸಲಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಪ್ರಸಿದ್ಧಿ ಪಡೆದಿರುವ ಚರಬಸವೇಶ್ವರ ತಾತನವರ ಶಾಖಾ ಮಠಗಳಾಗಿ ಜೇವರ್ಗಿ ತಾಲ್ಲೂಕಿನ ಮಾರಡಗಿ,, ಕೆಲ್ಲೂರ, ಯಾಳವಾರ, ಶಹಾಪೂರ ತಾಲ್ಲೂಕಿನ ಅನವಾರದಲ್ಲಿಯೂ ಮಠಗಳಿವೆ. ಈ ಪ್ರದೇಶದ ಅನೇಕ ಕಡೆ ಚರಬಸವೇಶ್ವರರ ಹೆಸರಿನಲ್ಲಿ ವ್ಯಾಪಾರ ಮಳಿಗೆಗಳು ಹಾಗೂ ಖಾಸಗಿ ಬ್ಯಾಂಕುಗಳೂ ನಡೆಯುತ್ತಿವೆ. ಜೀವನದಲ್ಲಿ ಯಶಸ್ಸಿನ ದಾರಿ ತುಳಿಯಬೇಕಾದರೆ, ಚರಬಸವೇಶ್ವರ ತಾತನವರ ಹೆಸರೇ ನಮಗೆ ಮೂಲ ಮಂತ್ರವೆಂದು ಭಕ್ತರು ಅಪಾರವಾಗಿ ನಂಬಿಕೊಂಡು ಬಂದಿದ್ದಾರೆ.

(ಕೆಕೆ)

ಚಾ

ಚಾಪೆ ಹೆಣೆಯುವುದು: ಗೃಹ ಕೈಗಾರಿಕೆಗಳಲ್ಲಿ ಒಂದು. ಭಾರತದ ಆದಿವಾಸಿ ಜನಾಂಗಗಳು ಹೆಚ್ಚಾಗಿ ಈ ಗುಡಿ ಕೈಗಾರಿಕೆಯನ್ನು ಅವಲಂಬಿಸಿದ್ದಾರೆ. ಈ ವೃತ್ತಿಯಿಂದಲೇ ತಮ್ಮ ಜೀವನವನ್ನು ನಿರ್ವಹಿಸುತ್ತಾರೆ. ಚಾಪೆ ಹೆಣೆಯುವ ಕಾಯಕವು ಬಡ ಬಗ್ಗರಿಗೆ ಪ್ರಮುಖವಾದ ಉದ್ಯಮವಾಗಿದ್ದು ಆದರಿಂದಲೇ ಜೀವನ ನಿರ್ವಹಿಸಿಕೊಂಡು ಹೋಗುತ್ತಾರೆ. ಈ ಕಲೆಯು ನಶಿಸದೇ ಇಂದಿಗೂ ಜೀವಂತವಾಗಿ ಜನರ ಬದುಕಿಗೆ ಆಸರೆಯಾಗಿದೆ.

ಚಾಪೆ ಹೆಣೆಯುವ ಉದ್ಯಮ ಭಾರತದಲ್ಲಿ ಹೈದ್ರಾಬಾದ ಕರ್ನಾಟಕ ಭಾಗದ ಕಡಕೋಳ, ಚಿಕ್ಕಜೋಗಿಹಳ್ಳಿ, ಸೋಮೇಶ್ವರಪುರ ಮುಂತಾದ ಹಳ್ಳಿಗಳಲ್ಲಿ ಕಂಡು ಬರುತ್ತದೆ. ಚಾಪೆಯನ್ನು ಬಿದಿರು, ಕಡ್ಡಿಹುಲ್ಲು, ಈಚಲುಗರಿ, ತೆಂಗಿನಗರಿ ಮತ್ತು ಓಲೆಗರಿ, ಸಿಂಧಿ ಗಿಡದ ಪರಕಿಯಿಂದ ನೇಯುವರು. ವಿಶಿಷ್ಟವಾದ ಕಲಾತ್ಮಕ ಶೈಲಿಯಿಂದ ಆಧುನಿಕ ನೇಕಾರಿಕರು. ಚಾಪೆಯನ್ನು ರಚಿಸುತ್ತಾರೆ. ಚಾಪೆಗಳಲ್ಲಿ ಹಲವು ತರಹಗಳಿವೆ. 1. ಹಾಸಿಗೆ ಚಾಪೆ, 2. ಊಟಕ್ಕೆ ಕೂಡುವ ಚಾಪೆ, 3. ಬಾಗಿಲಿಗೆ ಹಾಕುವ ಚಾಪೆ ಮತ್ತು ಕೈ ಚೀಲಗಳು, ಹ್ಯಾಟುಗಳು ಹೀಗೆ ಹತ್ತು ಹಲವು ಬಗೆಗಳಲ್ಲಿ ಚಾಪೆ ಹೆಣೆಯುತ್ತಾರೆ. ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಚಾಪೆ ಹೆಣೆಯುವ ಕಾಯಕ ವೃತ್ತಿಯನ್ನು ಕೊರವ ಜನಾಂಗದ ಜನರು ಈ ಉದ್ಯಮವನ್ನು ಅನುಸರಿಸಿಕೊಂಡು ಈ ವೃತ್ತಿಯಿಂದ ಬಂದಂಥಹ ಲಾಭದಿಂದ ಜೀವನವನ್ನೂ ಸಾಗಿಸುತ್ತಿದ್ದಾರೆ.

ಜನ ಸಾಮಾನ್ಯರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ಚಾಪೆ ದೊರೆಯುತ್ತದೆ. ಆದುದರಿಂದ ಸಾಮಾನ್ಯ ಜನರು ಕೂಡ ಕೊಂಡುಕೊಳ್ಳಲು ಅನುಕೂಲವಾಗುತ್ತದೆ. ಆದರೆ ಜಮಖಾನೆಯು ಇವರಿಗೆ ಕೊಂಡುಕೊಳ್ಳಲು ಅಸಾಧ್ಯವಾಗಿದ್ದು ಶ್ರೀಮಂತರು ಉಪಯೋಗಿಸಿದ ಬಡವರಿಗೆ ಚಾಪೆಯೇ ಜಮಖಾನೆಯ ಮಾನವನ್ನು ಕಾಪಾಡುತ್ತದೆ. ಅಲ್ಲದೆ ಚಾಪೆಯಿಂದ ಚಳಿಗಾಲದಲ್ಲಿ ಕೆಲವು ಪ್ರಯೋಜನವುಂಟು. ಚಾಪೆ ಹಾಸಿದರೆ ಸೀತವಾಗುವುದಿಲ್ಲ ಮತ್ತು ಹೊಲಸು ಕೂಡ ಆಗುವುದಿಲ್ಲ. ಬಡವರಿಗೆ ಚಾಪೆಯು ವಿಶಿಷ್ಟ ಅಲಂಕಾರದ ವಸ್ತುವಾಗಿ ಗೋಚರಿಸುತ್ತದೆ. ಹೇಗೆಂದರೆ ತಮ್ಮ ಮನೆಗಾಗಮಿಸಿದ ನೆಂಟರಿಷ್ಟರು ಬಂಧು ಬಳಗದವರಿಗೆ ಕೈ ಕಾಲು ತೊಳೆಯುಲು ನೀರು ಕೊಟ್ಟು, ಕುಡಿಯಲು ನೀರು ಕೊಟ್ಟು ಕುಳಿತುಕೊಳ್ಳಲು ಚಾಪೆಯನ್ನು ಹಾಸುವರು. ಹೀಗೆ ಜನಪದರಿಗೆ ಚಾಪೆಯು ಒಂದು ಸಂಸ್ಕಾರದ ಸಂಕೇತವಾಗಿದೆ.

ಚಾಪೆ ಹೆಣೆಯುವ ಉದ್ದಿಮೆಯು ನಿರಂತರವಾಗಿ ಸಾಗುತ್ತಾ ಬಂದ ಗುಡಿಕೈಗಾರಿಕೆಯಾಗಿದೆ. ಈ ಉದ್ಯಮದಿಂದ ನಿರುದ್ಯೋಗಿಗಳಿಗೆ ಸ್ವಂತ ಉದ್ಯೋಗ ಕೈಗೊಂಡು ಹಣ ಸಂಪಾದಿಸಿ, ಜೀವನ ನಿರ್ವಹಣೆಗೆ ನೆರವಾಗುತ್ತದೆ. ಚಾಪೆ ಹೆಣೆಯುವವರು ಕೇವಲ ಒಂದೇ ವಿಧದ ಚಾಪೆ ರಚಿಸದೆ ವಿವಿಧ ಬಣ್ಣಗಳಿಂದ ಆವೃತ್ತವಾದ ವಿಶಿಷ್ಟ ಶೈಲಿಯಲ್ಲಿ ಇಂದಿನ ಚಾಪೆಗಳು ರಚನೆಯಾಗುತ್ತಿರುವುದು ಕಂಡು ಬರುತ್ತದೆ. ಆದುದರಿಂದ ಜನರು ನೋಡಲು ಸುಂದರ ಮತ್ತು ಸರಿಯಾದ ಚಾಪೆಯನ್ನು ಕೊಂಡು ಕೊಂಡು ನಿತ್ಯ ಬಳಕೆಯ ವಸ್ತುವಾಗಿ ಉಪಯೋಗಿಸುತ್ತಿದ್ದಾರೆ.

ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಈ ಮೊದಲು ಸಿಂಧಿ ಗಿಡದ ಪರಕಿಯಿಂದ ಚಾಪೆಯನ್ನು ಹೆಣೆಯುತ್ತಿದ್ದರು ಮತ್ತು ಆ ಚಾಪೆಗಳು ಕೂಡ ವಿಶಿಷ್ಟವಾಗಿತ್ತು. ಮತ್ತು ಅವುಗಳಿಗೆ ಗೃಹೋಪಯೋಗಿ ವಸ್ತುವಾಗಿ ಬಳಸುತ್ತಿದ್ದರು. ಆದರೆ ಇಂದು ಅತ್ಯಾಧುನಿಕವಾಗಿ ಚಾಪೆಗಳ ತಯಾರಿಕೆಯಾಗುತ್ತಿರುವುದರಿಂದ ಸಿಂಧಿ ಪುರಕಿ ಚಾಪೆಗಳು ನಿರ್ನಾಮವಾಗಿ ಹುಲ್ಲಿನ ಕಡ್ಡಿ, ಬಿದಿರು ಕಡ್ಡಿ, ಓಲೆಗರಿ ಮುಂತಾದವುಗಳಿಂದ ರಚಿತವಾದ ವಿಶಿಷ್ಟ ಆಕೃತಿಯ ಚಾಪೆಗೆ ಹೆಚ್ಚಿನ ಪ್ರಾಧ್ಯಾನ್ಯತೆ ಇದೆ. ಅದನ್ನೇ ಜನರು ಕೊಂಡುಕೊಳ್ಳುತ್ತಿದ್ದಾರೆ. ಇವುಗಳಿಂದ ನೇಕಾರರಿಗೆ ಹೆಚ್ಚು ಲಾಭಗಳಿಕೆ ಇದೆ. ಪುಸ್ತುತವಾಗಿ ಪ್ಲಾಸ್ಟಿಕ್ ಚಾಪೆಗಳು ಕೂಡ ಮಾರುಕಟ್ಟೆಯಲ್ಲಿ ಲಭ್ಯವಿರುತ್ತದೆ. *(ಪಿಕೆಕೆ)*

ಚಾವಡಿ (ಅಗಸಿ): ಹಳ್ಳಿಯ ಗ್ರಾಮಾಧಿಕಾರಿಗಳ ಆಡಳಿತದ ಕಚೇರಿ. ಗ್ರಾಮದ ಪೊಲೀಸ್, ಮಾಲ್ಗುಜಾರಿ, ಭೂಮಿಯ ಲೆಕ್ಕ ಮೊದಲಾದ ವಿವರಗಳ ಮಾಹಿತಿಗಳನ್ನು ಇಡುವ ಸ್ಥಳ. ಇಲ್ಲಿ ನ್ಯಾಯ ನಿರ್ಣಯಗಳು ಹಾಗೂ ಪಂಚರ ಸಭೆಗಳು ನಡೆಯುತ್ತವೆ. ಗ್ರಾಮಾಧಿಕಾರಿಗಳಾದ ಪೊಲೀಸಗೌಡ, ಮಾಲೀಗೌಡ ಮತ್ತು ಪಟವಾರಿ ಇವರು ರೈತರಿಗೆ ಸಂಬಂಧಿಸಿದ ವ್ಯವಹಾರಗಳನ್ನು ಚಾವಡಿಯಲ್ಲಿ, ನಡೆಸುತ್ತಾರೆ. ಚಾವಡಿಗಳು ಸಾಮಾನ್ಯವಾಗಿ ಊರಿನ ಅಗಸಿಯ ಬಳಭಾಗದಲ್ಲಿ ಹೊಂದಿಕೊಂಡಿರುತ್ತವೆ. ಕೆಲವು ಕಡೆ ಅಗಸಿಯ ಒಳಗಿನ ಹಜಾರದ ಎರಡು ಬದಿಯ ದೊಡ್ಡ ಜಗಲಿ ಕಟ್ಟೆಯ ಮೇಲೆ ಚಾವಡಿ ಕೆಲಸ ನಡೆಯುತ್ತದೆ. ಈ ಅಗಸಿಗಳು ಕೋಟೆಯನ್ನು ಪ್ರವೇಶಿಸುವ ಮಹಾದ್ವಾರಗಳು. ಇಲ್ಲವೆ ಊರನ್ನು ಪ್ರವೇಶಿಸುವ ದೊಡ್ಡ ಬಾಗಿಲುಗಳಿಗೆ ಅಗಸಿಗಳೆಂದು ಹೆಸರು. ಪ್ರತಿಯೊಂದು ಗ್ರಾಮವು ಇಂಥ ಅಗಸಿಗಳನ್ನು ಹೊಂದಿರುತ್ತವೆ. ಸಾಮಾನ್ಯವಾಗಿ ಅಗಸಿಗಳಿಲ್ಲದ ಊರುಗಳಿಲ್ಲ. ಅಗಸಿಗಳಿಲ್ಲದ ಊರುಗಳು ಇತ್ತೀಚೆಗೆ ಕಟ್ಟಿದ ಊರುಗಳೆಂದು ತಿಳಿಯಬೇಕು.

ಅಗಸಿಗಳು ಊರಿನ ಪೂರ್ವ ಇಲ್ಲವೆ ಉತ್ತರ ದಿಕ್ಕಿಗೆ ಮುಖ ಮಾಡಿರುತ್ತವೆ. ಅಗಸಿಯ ಮೂಲಕ ಊರಿಗೆ ಪ್ರವೇಶಿಸುವ ದಾರಿ ಒಂದೇ ಆಗಿದ್ದರಿಂದ ಊರಿನ ಸಂಚಾರ ಚಟುವಟಿಕೆಗಳಿಗೆ ಅಗಸಿ ಪ್ರಮುಖವಾಗುತ್ತದೆ. ಅಗಸಿಗೆ ಪ್ರವೇಶಿಸುವ ಹೊರಗಿನ ಬಾಗಿಲು ಮತ್ತು ಒಳಗಿನ ಬಾಗಿಲುಗಳು ಎರಡು. ಇವೆರಡರ ಮಧ್ಯೆ ಮೂರು ಅಂಕಣದ ವಿಶಾಲವಾದ ಹಜಾರ. ಇದರ ಎರಡು ಕಡೆ ದೊಡ್ಡ ಜಗಲಿ ಕಟ್ಟೆಗಳು. ಅಗಸಿ ಪ್ರವೇಶದ ಬಾಗಿಲಗೆ ಮರದ ಎರಡು ಕದಗಳು ಜೋಡಿಸಿರುತ್ತದೆ. ಕದಗಳು ಮುಚ್ಚಿದರೆ ಅಗಸಿಯ ಪ್ರವೇಶಕ್ಕೆ ಸಾಧ್ಯವಿರುವುದಿಲ್ಲ. ಮತ್ತೆ ಕದಗಳನ್ನು ತೆಗೆದ ಮೇಲೆಯೇ ಸಂಚಾರದ ಚಟುವಟಿಕೆಗಳು ನಡೆಯುತ್ತವೆ. ಅದು ಅಗಸಿಯ ಕಟ್ಟಡದ ರಚನೆ ಆದುದರಿಂದ ಅಗಸಿಗಳು ಗ್ರಾಮೀಣ ಜನರ ಜೀವರಕ್ಷಣೆಯ ಒಂದು ಭಾಗವಾಗಿದೆ. ಅಂತೆಯೇ 'ಊರು ಕೊಳ್ಳೆ ಹೋದ ಮೇಲೆ ಅಗಸಿ ಬಾಗಿಲು ಹಾಕಿದರು', 'ಚರ್ಮ ಸುಲಿಸಿ ಅಗಸಿ ಬಾಗಿಲಿಗೆ ತೋರುಣ ಕಟ್ಟುವೆ' ಎಂಬ ನಾಣ್ನುಡಿಗಳು ಜನಪದರ ಪ್ರಾಣ ರಕ್ಷಣೆಗೆ ಅಗಸಿಗಳ ಪಾತ್ರವನ್ನು ತಿಳಿಸುತ್ತದೆ.

(ಎಸ್‌ಎಂ)

ಚಿ

ಚಿಂಚನಸೂರು: ಆಳಂದ ತಾಲ್ಲೂಕಿನ ಚಿಂಚನಸೂರ ಎಂಬ ಗ್ರಾಮವು ಚಾರಿತ್ರಿಕ ಹಾಗೂ ಸಾಂಸ್ಕೃತಿಕವಾಗಿ ಮಹತ್ವದ ಸ್ಥಳವಾಗಿದೆ. ಈ ಊರ ನಡುವೆ ಮಾಹೇಶ್ವರ ಗುಡಿಯು ಶಾಸನೋಕ್ತ ಬ್ರಹ್ಮೇಶ್ವರ ದೇವಾಲಯವಾಗಿದ್ದು, ಭದ್ರಕಾಳಿ ಹಾಗೂ ಭೈರವನ ಉಗ್ರ ಶಿಲ್ಪವಿದ್ದು, ಇನ್ನೊಂದರಲ್ಲಿ ಗಣಪತಿಯೊಂದಿಗೆ ಸಿದ್ಧಿ ಬುದ್ಧಿಯರು ಇರುವುದು ಗಮನಾರ್ಹವಾಗಿದೆ. ಭಿತ್ತಿಯ ತುಂಬ ಭೈರವ, ಭೈರವಿ, ಗಣಪತಿ, ವಿವಿಧ ವಾದ್ಯ ನುಡಿಸುತ್ತಿರುವ ರತಿ ಮನ್ಮಥರ ಫಲಕಗಳಿವೆ. ಸೋಮೇಶ್ವರ ಗುಡಿಯಲ್ಲಿ ವಿಷ್ಣು ಗಣಪತಿಯರ ಶಿಲ್ಪಗಳಿವೆ. 12ನೆಯ ಶತಮಾನಕ್ಕೆ ಸೇರಿದ ಎರಡು ಹಂತದ ಕೆತ್ತನೆಯುಳ್ಳ ಹುಲಿ ಬೇಟೆಯ ಅಪೂರ್ವ ವೀರಗಲ್ಲಿದೆ. ಈ ಊರಲ್ಲಿ ಬಾಣೇಶ್ವರ, ಗೌಳೇಶ್ವರ, ಬೀರಲಿಂಗ ವಡ್ಡಿನ ಬಸವಣ್ಣ, ವೀರಭದ್ರ, ಸಿದ್ಧಾನಂದ ಚೌಡಮ್ಮ ಹಾಗೂ ಮಹಾಪೂರ ತಾಯಿಯ ಇತ್ತೀಚಿನ ಗುಡಿಗಳಿವೆ. ಮಹಾಪೂರ ತಾಯಿಯ ಜಾತ್ರೆಯು ಪ್ರತಿ ವರ್ಷ ಅಕ್ಷಯತದಗಿ ಹಾಗೂ ಬಾದಾಮಿ ಅನವಾಸ್ಯೆಗಳಂದು ವಿಜೃಂಬಣೆಯಿಂದ ಜರುಗುತ್ತದೆ.

(ಪಿಕೆಕೆ)

ಚಿಂಚೋಳಿ ನಗರ: ಮುಲ್ಲಾಮಾರಿ ಎಡದಂಡೆಯ ಮೇಲಿರುವ ಚಿಂಚೋಳಿಯು ತಾಲ್ಲೂಕಾ ಕೇಂದ್ರವಾಗಿದ್ದು, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಮಹತ್ವದ ಸ್ಥಳವಾಗಿದೆ. ಈ ಊರು 77 ಹಳ್ಳಿಗಳ ಸಂಸ್ಥಾನವಾಗಿ ಪೇಶ್ವೆಗಳ ಕಾಲದಲ್ಲಿ ಅಸ್ತಿತ್ವಕ್ಕೆ ಬಂತು. ಸುಭದ್ರ ಕೋಟೆ ಮತ್ತು ಅರಮನೆ ಹಾಗೂ ವೆಂಕಟೇಶ್ವರ ಮಂದಿರ ಇವರ ಕಾಲದ ರಚನೆಗಳಾಗಿವೆ. ಊರ ಹೊರಗೆ ಪಾಪನಾಶಿನಿ ಬುಗ್ಗೆ ಇದೆ. ಈ ಬುಗ್ಗೆಗಳಲ್ಲಿ ಪಂಚಲಿಂಗಗಳಿದ್ದು, ವರ್ಷದುದ್ದಕ್ಕೂ ಸದಾ ನೀರು ಹರಿಯುತ್ತಿರುತ್ತದೆ. ಇಲ್ಲಿಯ ಐದು ಲಿಂಗಗಳ ಐದು ಹಂತದಲ್ಲಿ ನೀರಿನ ಮಟ್ಟವನ್ನು ಸೂಚಿಸುತ್ತವೆ. ಊರಲ್ಲಿ ವೆಂಕಟೇಶ್ವರ ದೇವಾಲಯ ವಿದೆ. ಗರ್ಭಗುಡಿಯ ಒಳಗೆ ಸುಂದರವಾದ ವೆಂಕಟೇಶ್ವರ ಮೂರ್ತಿ ಇದೆ. ಇದರ ಕಂಬಗಳು ಚಾಲುಕ್ಯರ ಶೈಲಿಯದಾಗಿವೆ. ಊರಲ್ಲಿ ಮಲ್ಲಿಕಾರ್ಜುನ, ಭೋಗಲಿಂಗೇಶ್ವರ ಪರ್ವತ, ಗಂಗಾಧರ, ರೇವಣಸಿದ್ಧ, ಬಸವಣ್ಣ, ಹನುಮಂತ ಹಾಗೂ ವೆಂಕಟರಮಣ ಗುಡಿಗಳಿದ್ದು, ಮಹಾಂತೇಶ್ವರ ಮಠ ಹಾಗೂ ಹಾರಕೋಡ ಚೆನ್ನಬಸವೇಶ್ವರ ಮಠಗಳಿವೆ. ಚನ್ನಬಸವೇಶ್ವರ ಜಾತ್ರೆಯು ಶಿವರಾತ್ರಿಯಲ್ಲಿ ಜರುಗುತ್ತದೆ. ಊರಲ್ಲಿ ನಾಲ್ಕು ಮಸೀದಿ ಹಾಗೂ ಹಾಜ್ ಖೂದಾನ್ಮಾ ಹುಸೇನಿ ದರ್ಗಾಗಳು ಇವೆ. *(ಪಿಕೆಕೆ)*


ಚಿಂಚೋಳಿ: ಐತಿಹಾಸಿಕ ಮಹತ್ವವನ್ನು ಹೊಂದಿದ ಗ್ರಾಮ. ಬೀದರ ಜಿಲ್ಲೆಯ ಭಾಲ್ಕಿಯಿಂದ ಹುಮನಾಬಾದಿಗೆ ಹೋಗುವ ರಸ್ತೆಯ ಮೇಲೆ 14 ಕಿ.ಮಿ. ದೂರ ಸಾಗಿದಾಗ ಒಂದು ಕಿಲೋ ಮೀಟರ ಒಳಗಡೆ ಇದೆ. ಇಲ್ಲಿಂದ ಎರಡು ಕಿಲೋ ಮೀಟರ ಅಂತರದಲ್ಲಿ ಸುತ್ತಮುತ್ತ ಪರ್ವತ ಗಿಡಗಳಿಂದ ಅವೃತ್ತವಾಗಿರುವ ಪ್ರಶಾಂತ ವಾತಾವರಣದಲ್ಲಿ ಹುಲುಕುಂಠಿ ಮಠವಿದೆ.

ದೊಡ್ಡದಾದ ಪ್ರವೇಶದ್ವಾರ ಪುರಾತನ ಮನೆಗಳ ಶೈಲಿಗಳಂತೆ ಒಳ ಪ್ರವೇಶಿಸಿದಾಗ ಎರಡು ಕಡೆ ಕುಳಿತು ಕೊಳ್ಳಲು ಬರುವಂತೆ (ಬಂಕ, ಢೆಲೋಜಿ) ಇದ್ದು ಒಳಾಂಗಣ ವಿಶಾಲವಾಗಿದ್ದು, ಸುತ್ತಮುತ್ತಲು ಕೋಣೆಗಳು ಸಾರ್ವಜನಿಕರಿಗೆ ಅಡಿಗೆ ಮಾಡಲು ಬರುವಂತೆ ತೆರೆದ ಮನೆಗಳಿವೆ. ಪಶ್ಚಿಮ ದಿಕ್ಕಿಗೆ ಗುರುಗಳು ಇರಲು ಗುರುಮನೆ ಹಾಗೂ ಪೂಜೆ ಮಾಡಿಕೊಳ್ಳಲು ಪೂಜಾ ಗ್ರಹವಿದೆ. ನಿಸರ್ಗ ನಿರ್ಮಿತ ಸೌಂದರ್ಯದ ನಡುವೆ ಈ ಮಠ ಬಹಳ ರಮ್ಯವೂ ಮನ ಮೋಹಕವೂ ಆಗಿದ್ದು ಮನಸ್ಸಿಗೆ ಶಾಂತಿಯನ್ನು ಕಲ್ಪಿಸುವ ಸ್ಥಾನವಾಗಿದೆ.

ಹಳೆಯ ಕಾಲದ ಕಟ್ಟಡ ಕಟ್ಟಣಿಕೆಯನ್ನು ಹೊಂದಿದ ಈ ಮಠ ಪರ್ವತದ ಹೊಟ್ಟೆಯಲ್ಲಿ ಅಡಗಿ ಕುಳಿತಂತೆ ಅದರ ಪೂರ್ವಭಾಗದಲ್ಲಿ ವಿಶಾಲವಾದ ಮೈದಾನ ಹರಡಿದೆ. ಜಾವಳ, ಮದುವೆ ಮೊದಲಾದ ಮಂಗಳ ಕಾರ್ಯಗಳು ನಡೆಯುತ್ತವೆ. ಹದಿನೈದನೆಯ ಶತಮಾನದಿಂದ ಈ ಮಠ ಬೆಳೆದು ಬಂದಿರಬಹುದೆಂದು ಊಹಿಸಲಾಗಿದೆ. ದೊರೆತ ಆಧಾರಗಳಿಂದ ಅತಿ ಪುರಾತನವಾದ ಈ ವಿರಕ್ತಮಠವು ಹನ್ನೊಂದು ಮಠಾಧೀಶರನ್ನು ಹೊಂದಿರುವುದಾಗಿ ತಿಳಿದು ಬರುತ್ತದೆ. ಮೂಲ ಸಂಸ್ಥಾಪಕರು ಶಾಂತಲಿಂಗ ಮಹಾಶಿವಯೋಗಿಗಳು, ರುದ್ರಮುನಿ ಸ್ವಾಮಿಗಳು, ಚನ್ನವೀರ ಸ್ವಾಮಿಗಳು, ಜೋಳದ ಸ್ವಾಮಿಗಳು, ತೋಂಟದ ಸ್ವಾಮಿಗಳು, ಸಿದ್ಧಬಸವ ಸ್ವಾಮಿಗಳು, ಶಾಂತಲಿಂಗ ಸ್ವಾಮಿಗಳು, ಪ್ರಭು ಸ್ವಾಮಿಗಳು, ಕರಿಬಸವ ಸ್ವಾಮಿಗಳು. ಹುಲಕುಂಠಿ ಮಠದ ಸದ್ಯದ ಶ್ರೀಗಳಾದ ಮ.ನಿ.ಪ್ರ. ಶಿವಾನಂದ ಮಹಾಶಿವ ಯೋಗಿಗಳು ಹುಲಸೂರ ಮಠದ ಮಠಾಧೀಶರಾಗಿದ್ದಾರೆ. *(ಜಿಪಿಟಿ)*

ಚಿಟಗುಪ್ಪಾ: ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಅಗ್ನೇಯ ದಿಕ್ಕಿನಲ್ಲಿರುವ ಒಂದು ಪಟ್ಟಣ ಹಾಗೂ ಐತಿಹಾಸಿಕ ಸ್ಥಳ. ಶರಣ ಸಂಸ್ಕೃತಿಯನ್ನು ಉಸಿರಾಡಿಸುವ ನಗರ. ಪ್ರಾಚೀನ ಕಾಲದಿಂದಲೂ ಕೈ ಮಗ್ಗದ ಕೈಗಾರಿಕೆ, ಬಟ್ಟೆಗಳಿಗೆ ಬಣ್ಣ ಹಾಕುವಲ್ಲಿ ಪ್ರಸಿದ್ಧವಾಗಿದೆ. ನಿಜಾಮನ ನವಾಬ ಮೊಯಿನದ್ದೌಲನ ಕಾಲದಲ್ಲಿ ಇದು ಒಂದು 'ಪೈಗಾ' ತಾಲ್ಲೂಕಗಳ ಕೇಂದ್ರ ಸ್ಥಾನವಾಗಿತ್ತು. ಅದಕ್ಕಾಗಿ ಇದನ್ನು ಮೊಯಿನದ್ದೌಲಾನ ಪ್ರಭಾವದಿಂದ ಮೊಯಿನಾಬಾದ ಎಂದು ಕರೆಯುತ್ತಿದ್ದರು. ಅದರೆ ಚಿಟಗುಪ್ಪಾ ಎಂಬ ಹೆಸರು ಚಿಟ್ಯಾ–ಗುಪ್ಯಾ ಎಂಬ ಎರಡು ಹೆಸರಿನ ವ್ಯಕ್ತಿಗಳಿದ್ದರೆಂದು ಊಹಿಸಬಹುದಾಗಿದೆ. ಅಲ್ಲದೆ ಚಿಟಗುಪ್ಪಾ ಎಂದರೆ ಗುಪ್ಪೆ ಗುಂಪಾ ಎಂಬುದಾಗಿ ವಿದ್ವಾಂಸರು ಕನ್ನಡ ಪದವನ್ನೇ ಉಳಿಸಿಕೊಂಡು ಬಂದಿದ್ದಾರೆ.

ಇಲ್ಲಿ ಸೇಂಟ ಸಲಾರ ಮುಕದಮನ ಕರೀಮಲ್ಲಾ ಶಾಹ ದರ್ಗಾಗಳಿವೆ. ವಾರ್ಷಿಕ ಉರ್ಸನ್ನು ಆಚರಿಸುತ್ತಾರೆ. ಅಲ್ಲದೆ ಈ ನಗರದ ದಕ್ಷಿಣ ದಿಕ್ಕಿಗೆ ಒಂದು ಪ್ರಾಚೀನ ಗವಿ ಇದೆ. ಇದು ಮೊದಲು ಪಾಪಸ ಕಳ್ಳಿಯಿಂದ ಆವೃತ್ತವಾದ ಭಯಾನಕ ಸ್ಥಳವಾಗಿತ್ತು. ಈಗ ಇದು ಸುಂದರ ಸ್ಥಳವಾಗಿದೆ.



ಪುರಾತನಕಾಲದ ಮಹಾದ್ವಾರ, ಚಿಟಗುಪ್ಪ

ಕರೀಬಸಪ್ಪಾನವರ ಶಿಷ್ಯರಾದ ಸಂತ ಶಿರೋಮಣಿ ಮಡಿವಾಳಪ್ಪನವರು ಇಲ್ಲಿ ತಪಗೈದು ಐಕ್ಯ ಹೊಂದಿದ ಸ್ಥಾನ ಇದಾಗಿದೆ. ಇದೆ ಪಟ್ಟಣದಲ್ಲಿ ಗೋವಳಿಗರ (ಗೌಳಿಗರ) ಆರಾಧ್ಯ ದೈವ ಮಹಾದೇವಪ್ಪಾ ದೇವರ್ಷಿ ಬಾಳೋಬಾನ ಜಾತ್ರೆ ನಡೆಯುತ್ತದೆ. ಇನ್ನೊಂದು ಕಡೆ ಈ ಪಟ್ಟಣದಲ್ಲಿ ಭವಾನಿ ಮಂದಿರವಿದೆ. ಭಾವಸಾರ ಕ್ಷತ್ರೀಯ ಜನರು ಇದರ ಜಾತ್ರೆಯನ್ನು ವಿಜ್ರಂಭಣೆಯಿಂದ ಜರುಗಿಸುತ್ತಾರೆ. ಇಲ್ಲಿ ವಿವಿಧ ಧರ್ಮದ, ವಿವಿಧ ಜಾತಿ ಜನಾಂಗ, ಆಚಾರ-ವಿಚಾರ, ನಂಬಿಕೆ ಹಾಗೂ ವೈವಿಧ್ಯಮಯವಾದ ಜೀವನ ಪದ್ಧತಿಯನ್ನು ಹೊಂದಿದ್ದಾರೆ. ಇದು ಸಾಂಸ್ಕೃತಿಕ ಪಟ್ಟಣವಾಗಿದ್ದು, ಇಲ್ಲಿಯ ದೇಸೀಯ ಕಲೆಗಳಾದ ಕೈ ಮಗ್ಗದಿಂದ ಬಟ್ಟೆ ತಯಾರಿಸುವದು, ಈಗಲೂ ಕೂಡಾ ದೇವಾಂಗ ಜನರಲ್ಲಿ ಕಾಣುತ್ತೇವೆ.

ಇಲ್ಲಿ ಪ್ರಾಚೀನ ಕಾಲದಲ್ಲಿ ಮುತ್ತು ರತ್ನಗಳ ವ್ಯಾಪಾರಕ್ಕೆ ಪ್ರಸಿದ್ಧವಾಗಿತ್ತು. ದೇಶೀ ಕಲೆ ಚಪ್ಪಲಿ ತಯಾರಿಸುವದು ಕೂಡ ಇಲ್ಲಿ ಪ್ರಸಿದ್ಧವಾಗಿದೆ. ಇಲ್ಲಿಯ ಜನಪದದಲ್ಲಿ ಸೀಗೀ ಹಾಡು, ಬುಲಾಯಿ, ಹಾಡು, ಮೋಹರಂ ಹಾಡು, ಕೋಲಾಟ ಪದ, ಗೊಂದಲಿಗರ ಹಾಡು, ವಿಶೇಷತೆಯಿಂದ ಕೂಡಿದೆ. ಇಲ್ಲಿ ಗೋಸ್ವಾಮಿ ಜನಾಂಗದ ಮಠಗಳು ಕಾಣಸಿಗುತ್ತವೆ. ಇಲ್ಲಿಯ ಪದಕಾರರಾದ ಶಿಲ್ಲಪ್ಪಕವಿ, ಮಂಕಲ ಹಣಮಂತಪ್ಪಾ, ಹಣಮಂತರಾವ ನಾರಾಯಣರಾವ ಕೊಡಂಬಲಕರ್ ಮುಂತಾದವರು ತಮ್ಮ ತಮ್ಮ ತತ್ವಪದಗಳನ್ನು, ನಾಟಕಗಳನ್ನು, ಕಥೆಗಳನ್ನು ನೀಡಿದ್ದಾರೆ. *(ಬಿಎಸ್‌ಬಿ)*

ಚಿಣ್ಣಿದಾಂಡು: ಒಂದು ಜನಪದ ಆಟ. ಚಿಣ್ಣಿದಾಂಡು ಎಂಬ ಪದದ ಅರ್ಥ ವಿಭಿನ್ನವಾಗಿದೆ. ಚಿಣ್ಣಿ ಮತ್ತು ದಾಂಡುಗಳೆರಡು ಪದಗಳು ವಿಶೇಷತೆಯನ್ನು ಹೊಂದಿದ್ದು, ಆಟದಲ್ಲಿ ಇವೆರಡು ವಸ್ತುಗಳು ಪ್ರಮುಖವಾಗಿವೆ. ಈ ಆಟ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಹೆಚ್ಚು ಪ್ರಚಲಿತವಿರುವ ಸಹಜವಾಗಿ ಜನಸಾಮಾನ್ಯರೆಲ್ಲರೂ ಆಡುವ ಆಟವಾಗಿದೆ. ಈ ಆಟವನ್ನು ಅಧಿಕ ಪ್ರಮಾಣದಲ್ಲಿ ಗ್ರಾಮಸ್ಥ, ಹಳ್ಳಿಯ ಹುಡುಗರು ಆಡುತ್ತಾರೆ. ಗ್ರಾಮಾಂತರ ಪ್ರದೇಶದ ದನಗಾಹಿ ಹುಡುಗರು ಮತ್ತು ಇತರೆಯವರೊಡಗೂಡಿ ಆಡುವ ಆಟವಾಗಿದೆ. ಈ ಆಟವನ್ನಾಡಲು ನಿರ್ಧಿಷ್ಟವಾದ ಸ್ಥಳ, ಮತ್ತು ಸಮಯ ವೆಂಬುದಿಲ್ಲ. ವಿಶಾಲವಾದ ಬಯಲು ಪ್ರದೇಶದಲ್ಲಿ ಆಡುತ್ತಾರೆ. ಬಿಡುವಿನ ಸಮಯದಲ್ಲಿ ಇಲ್ಲವೆ, ಸಮಯ ಸಿಕ್ಕಾಗ ಆಟವಾಡುತ್ತಾರೆ. ಆಟವಾಡುವುದರ ಜೊತೆ ಜೊತೆಯಲ್ಲಿ ಮನೋರಂಜನೆಯೂ ಕೂಡ ಸಿಗುತ್ತದೆ. ಅತ್ಯಂತ ಆಸಕ್ತಿದಾಯಕವಾದ ಆಟವಾಗಿದೆ. ನೋಡುಗರಿಗೂ ಕೂಡ ಆನಂದವನ್ನುಂಟು ಮಾಡುತ್ತದೆ.

ಚಿಣ್ಣಿ ದಾಂಡು ಆಟವಾಡಲು ಯಾವುದೇ ವಯಸ್ಸಿನ ಮಿತಿಯಿಲ್ಲ. ಇದರಲ್ಲಿ ಶಕ್ತಿ ಪ್ರದರ್ಶನವು ಪ್ರಮುಖವಾಗಿದೆ. ಈ ಆಟದಲ್ಲಿ ಎರಡು ತಂಡಗಳಿರುತ್ತವೆ. ಯಾವ ತಂಡದವರು ಹೆಚ್ಚು ಅಂಕಗಳಿಸುವರೊ ಅವರಿಗೆ ಗೆಲುವು ಖಚಿತವಾಗುತ್ತದೆ. ಪ್ರಾಚೀನ ಕಾಲದಿಂದಲೂ ಆಡುತ್ತ ಬಂದಿರುವ ಜನಪದ ಆಟವು ದೈಹಿಕ ಕಸರತ್ತು, ಇದರ ಜೊತೆಗೆ ಮಕ್ಕಳಿಗೆ ವ್ಯಾಯಾಮವು ದೊರಕುತ್ತದೆ. ಈ ಆಟದ ಪ್ರಯೋಗವನ್ನು ಹಳ್ಳಿಗಳಲ್ಲಿ ಹಬ್ಬ, ಹುಣ್ಣಿಮೆ, ಉತ್ಸವಗಳಲ್ಲಿ ಆಡುತ್ತಾರೆ. ಆಟವಾಡುವುದರ ಜೊತೆಯಲ್ಲಿ ಮನೋರಂಜನೆಯು ಸಹ ಒದಗುತ್ತದೆ.

ಪ್ರಸ್ತುತವಾಗಿ ದುಡ್ಡಿಗಾಗಿ ಜಿದ್ದು ಕಟ್ಟಿ ಆಡುವ ರೂಢಿಯನ್ನು ಬೆಳೆಸಿಕೊಂಡಿದ್ದಾರೆ. ಹೀಗಾಗಿ ಈ ಆಟವಾಡುವವರ ಸಂಖ್ಯೆಯು ತುಂಬಾ ವಿರಳವಾಗಿದೆ. ಅಲ್ಲಲ್ಲಿ ಕೇವಲ ಗುಂಪು ಕಟ್ಟಿ ಆಡುತ್ತಾರೆ. ಸ್ಪರ್ಧಾತ್ಮಕ ಯುಗದಲ್ಲಿ ವಿವಿಧ ಪ್ರಮುಖ ಆಟಗಳ ಬೆಲೆಯಿರುವುದರಿಂದ ಚಿಣ್ಣಿ ದಾಂಡು ಆಟ ನಿರ್ನಾಮದ ಹಂತದಲ್ಲಿದೆ. ಇದೊಂದು ಆಟವು ಹಳ್ಳಿಗರಿಗೆ ಮಾತ್ರ ಗೊತ್ತಿರುವ ಆಟವಾಗಿದೆ. ಹೊರತು ಪಟ್ಟಣ ಪದೇಶದ ಜನಗಳಿಗೆ ಈ ಆಟವು ಗೊತ್ತಿಲ್ಲ. ಇದೊಂದು ಕೆಲಸವಿಲ್ಲದವರ ಆಟವೆಂದು ಹಳ್ಳಿಗರು ಸಹ ಅಸಡ್ಡೆ ಮಾಡುತ್ತಾರೆ. ಈ ಜನಪದ ಆಟಕ್ಕೆ ತಕ್ಕುದಾದ ಬೆಲೆ ಇಲ್ಲ.

ಚಿಣ್ಣಿದಾಂಡು ತಯಾರಿಕೆಯ ವಿಧಾನ: ಕೇವಲ ಒಣ ಕಟ್ಟಿಗೆಯಿಂದ ತಯಾರಿಸಲ್ಪಟ್ಟ, ಚಿಣ್ಣಿಯು 12 ಸೆಂ.ಮೀ. ಉದ್ದವಿರುತ್ತದೆ. ಇದನ್ನು ಎರಡು ಕಡೆಗೆ ಚೂಪಾಗಿ ಮಾಡಿರುತ್ತಾರೆ. ಅದಕ್ಕೆ ಹೊಡೆಯಲು ಎರಡು ಕಟ್ಟಿಗೆಯ ಎರಡು ಅಡಿಗಳ ದಾಂಡುಗಳಿರುತ್ತವೆ. ಒಂದು ತೆಳ್ಳನೆ ದಾಂಡುವಿದ್ದರೆ, ಇನ್ನೊಂದು ದಪ್ಪವಾಗಿದ್ದು, ಚಿಣ್ಣಿ ಹೊಡೆಯಲು ಅನುಕೂಲ ಕರವಾಗುತ್ತದೆ ಎನ್ನುವ ದೃಷ್ಟಿಯಿಂದ ತಯಾರು ಮಾಡಿರುತ್ತಾರೆ.

ಆಟವಾಡುವ ವಿಧಾನ: ವಿಶಾಲವಾದ ಬಯಲು ಪ್ರದೇಶದಲ್ಲಿ

ಈ ಆಟವನ್ನಾಡುತ್ತಾರೆ. ಮನೆಯ ಹೊರಗಡೆ ವಿಶಾಲವಾದ ಪ್ರದೇಶವು ಆಟವಾಡಲು ಸಜ್ಜು ಮಾಡಿಕೊಂಡಿರುತ್ತಾರೆ. ಚಿಣ್ಣಿದಾಂಡು ಆಟವಾಡುವುದು ತುಂಬಾ ಸುಲಭ. ಈ ಆಟದಲ್ಲಿ ಎರಡು ತಂಡಗಳಿರುತ್ತವೆ. ಪ್ರತಿಯೊಂದು ತಂಡದಲ್ಲಿ ಮೂರ–ರಿಂದ ನಾಲ್ಕು ಜನರು ಆಟಗಾರರಿರುತ್ತಾರೆ. ಈ ಆಟವನ್ನು ಮೊದಲು ಜಿದ್ದಿಗಾಗಿ ಪಣಕ್ಕಾಗಿ ಆಡುತ್ತಿದ್ದರು ಆದರೆ ಪ್ರಸ್ತುತ ಎರಡು ತಂಡದವರು ಜಿದ್ದಿಗಾಗಿ ದುಡ್ಡು ಕಟ್ಟಿ ಆಡುವ ನಿದರ್ಶನಗಳು ಕಂಡು ಬರುತ್ತವೆ. ಕ್ರಿಕೆಟ್‌ನಲ್ಲಿ ರನ್ ಗಳಿಕೆಯ ವಿಧಾನ ಹೇಗಿದೆಯೋ ಹಾಗೇನೆ ಈ ಆಟದಲ್ಲಿಯೂ ಕೂಡ ದಾಂಡುವಿನಿಂದ ಚಿಣ್ಣಿಗೆ ಹೊಡೆದು ಚಿಣ್ಣಿ ಹೋದ ದೂರವನ್ನು ಅಳೆಯಲು ಪ್ರತಿಯೊಂದು ದಾಂಡುಗೆ ಒಂದಂಕ ಎನ್ನುವಂತೆ ಸರಿಯಾಗಿ ಲೆಕ್ಕಾಚಾರ ಹಾಕಿ ಹೇಳಬೇಕು ಒಂದು ವೇಳೆ ಅಳತೆ ಕ್ರಮಾಂಕವನ್ನು ಆಡುತ್ತಿರುವವರು ಸರಿಯಾಗಿ ಹೇಳದೆ ಹೆಚ್ಚು ಕಡಿಮೆ ಹೇಳಿದರೆ ಗಳಿಸಿದ ಕ್ರಮಾಂಕವೆಲ್ಲವು ಪೂರ್ತಿ, ಸೊನ್ನೆಯಾಗಿ ಮಾರ್ಪಟ್ಟು ಆಡಿದ್ದೆಲ್ಲವೂ ವ್ಯರ್ಥವಾಗುತ್ತದೆ. ಎದುರಿನ ತಂಡದವರು ಗೆಲುವು ಸಾಧಿಸುತ್ತಾರೆ. ಅದುದರಿಂದ ಈ ಆಟದಲ್ಲಿ ಅಂಕಗಳಿಕೆ ಮತ್ತು ಆಟಗಾರನ ಜಾಣ್ಮೆಯು ಎದ್ದು ಕಾಣುತ್ತದೆ. *(ಪಿಕೆಕೆ)*

ಚಿತ್ತಾಪುರ: ಚಿತ್ತಾಪುರ ತಾಲ್ಲೂಕಾ ಕೇಂದ್ರವಾಗಿದ್ದು. ಈ ಊರಿನಲ್ಲಿ ಮಹಾವೀರ, ಪಾರ್ಶ್ವನಾಥ, ನೇಮಿನಾಥ, ಬಾಹುಬಲಿ ಮತ್ತು ಪದ್ಮಾವತಿ ಯಕ್ಷಿಯರ ಪ್ರಾಚೀನ ಶಿಲ್ಪಗಳಿವೆ. ಇಲ್ಲಿನ ಕಂಗಳೇಶ್ವರ ಗುಡಿಯು ಪ್ರಾಚೀನವಾಗಿದ್ದು, ಗರ್ಭಗೃಹದಲ್ಲಿ ಪ್ರಾಚೀನಲಿಂಗವಿದೆ. ಮುಂದೆ ರಕ್ಷಾಸನವನ್ನುಳ್ಳ ನವರಂಗವಿದೆ. ಗಣಪತಿಯ ಗುಡಿ, ಹನುಮಂತನ ಗುಡಿಯ ಕಂಬಗಳ 12ನೆಯ ಶತಮಾನದ್ದಾಗಿವೆ. ಉಳಿದಂತೆ ಊರಲ್ಲಿ ಹನುಮಂತ, ವೆಂಕಟೇಶ್ವರ, ಪಾಂಡುರಂಗವಿಠ್ಠಲ, ಬಸವಣ್ಣ, ಶರಣಬಸವೇಶ್ವರ ರಾಮಮಂದಿರ ಚೌಡಮ್ಮ, ಅಂಬಾಭವಾನಿ, ಅಕ್ಕಮಹಾದೇವಿ, ಮರಗಮ್ಮ ಮುಂತಾದ ನವೀನ ಗುಡಿಗಳಿವೆ. ಹಾಗೂ ಗಚ್ಚಿನಮಠ ಮತ್ತು ರಾಯರ ಮಠಗಳಿವೆ. ಬಹುಮನಿ ಅರಸರ ಕಾಲಕ್ಕೆ ಸೇರಿದ ಕೋಟೆಯಿದ್ದು, ಊರಲ್ಲಿರುವ 'ಚಿತಾಶಾವಲಿ' ದರ್ಗಾದಿಂದಾಗಿ ಪ್ರಸಿದ್ಧವಾಗಿದೆ. ಈ ದರ್ಗಾದ ಉರುಸು ಎಪ್ರಿಲ್ ತಿಂಗಳಲ್ಲಿ ಜರಗುತ್ತದೆ. ಮತ್ತು ಜೊತೆಯಲ್ಲಿ ಜುಮ್ಮಾ ಮಸೀದಿ ಹಾಗೂ ಮಹಬೂಬ ಸುಬಾನಿಯ ದರ್ಗಾಗಳಿವೆ. ಶಹಾಬಾದಿ ಕಲ್ಲು, ಹಾಗೂ ಪರಸಿ ಹಾಗೂ ನೇಕಾರಿಕೆ ಇಲ್ಲಿಯ ಪ್ರಮುಖ ಉದ್ಯಮಗಳಾಗಿವೆ. ಮಾಡಬೋಳ ರಸ್ತೆಯಲ್ಲಿ ಇರುವ ಮಲ್ಲಿಕಾರ್ಜುನ ದೇವಾಲಯವು ಕಲ್ಯಾಣ ಚಾಳುಕ್ಯರ ಕಾಲದ್ದಾಗಿದೆ. *(ಪಿಕೆಕೆ)*

ಚಿನ್ಮಳ್ಳಿ: ಅಫಜಲಪೂರ ತಾಲ್ಲೂಕಿನ ಚಿನ್ಮಳ್ಳಿ ಎಂಬ ಗ್ರಾಮವು ಭೀಮಾನದಿ ತೀರದ ದಂಡೆಯ ಮೇಲಿರುವ ಮಹತ್ವದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿದೆ. ಪ್ರಾಚೀನ ಶಾಸನಗಳಲ್ಲಿ 'ಚಿಲ್ಲಮಳೆ', ಚಿಲ್ಲಮೆಳೆ ಎಂದು ಉಲ್ಲೇಖಿತವಾಗಿದೆ. ಈ ಊರು 'ಅಭಿನವ ಕೈಲಾಸವಾಗಿದ್ದು, ಶ್ರೀಶೈಲ ಮಲ್ಲಿಕಾರ್ಜುನನ ನಿವಾಸ ಸ್ಥಾನವೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಊರಲ್ಲಿ ಹೊಳೆಯ ದಂಡೆಯ ಮೇಲಿರುವ ಮಲ್ಲಿಕಾರ್ಜುನ ದೇವಾಲಯವು ವಿಶಾಲವಾದ ಪ್ರಾಕಾರ ಹೊಂದಿದೆ. ಇಲ್ಲಿ 'ಈಶ್ವರ ಗುಡಿ ಹಾಗೂ ಕಳ್ಳನ ಗುಡಿಗಳಿದ್ದು, ಒಂದರಲ್ಲಿ ಶಿವಲಿಂಗವಿದ್ದರೆ, ಇನ್ನೊಂದರಲ್ಲಿ ವಿಷ್ಣು ಮತ್ತು ನಾಗೇಂದ್ರರ ಶಿಲ್ಪಗಳಿವೆ. ದೇವಾಲಯದ ಒಳಗಡೆ ಹೋಗಲು ದ್ವಾರವು ಸುಂದರವಾದ ಮಂಟಪವನ್ನು ಹೊಂದಿದೆ. ಈ ಊರಿನಲ್ಲಿ ಬಸವಣ್ಣ, ಹನುಮಂತ, ಲಕ್ಷ್ಮೀ ಹಾಗೂ ದ್ಯಾಮವ್ವ ಗುಡಿಗಳಿದ್ದು, ಮಸೀದಿ ಮತ್ತು ದರ್ಗಾಗಳೂ ಸಹ ಇವೆ. *(ಪಿಕೆಕೆ)*

ಚಿಮಣಗೇರಿ: ಅಫಜಲಪೂರ ತಾಲ್ಲೂಕಿನ ಚೌಡಾಪುರ ಕ್ರಾಸ್‌ದಿಂದ ಸುಮಾರು ಎರಡೂವರೆ ಕಿ.ಮೀ. ದೂರದಲ್ಲಿ ಚಿನ್ಮಳ್ಳಿ ರಸ್ತೆಯ ಬದಿಯಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಚಿಮಣಗೇರ' ಎಂದೇ ಉಲ್ಲೇಖಿವಾಗಿದೆ. ಈ ಊರಿನಲ್ಲಿ ವೀರಭದ್ರನ ಗುಡಿಯ ಆವರಣದಲ್ಲಿ ಇರುವ ದೇಗುಲವು ತ್ರಿಕೂಟವಾಗಿದ್ದು, ಪೂರ್ವಾಭಿಮುಖಿವಾಗಿದೆ.

ಇಲ್ಲಿನ ವೀರಭದ್ರ ದೇವಾಲಯವು ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದ್ದು, ಒಳಗೆ ವೀರಭದ್ರನ ಸುಂದರ ಶಿಲ್ಪವಿದೆ. ಇಲ್ಲಿ ಅಂಬಾಭವಾನಿ, ಹಾಗೂ ಮೈಲಾರನ ಚಿಕ್ಕ ಗುಡಿಗಳಿವೆ. ಈ ದೇವಾಲಯದ ಹೊರಗೆ ಓಕಳಮ್ಮನ ಬಾವಿ ಬಳಿ ಶಿವಲಿಂಗ, ಚಾಮುಂಡಿ ಸೂರ್ಯ ಹಾಗೂ ವೀರಗಲ್ಲು ಕೂಡ ಇದೆ. ಇಲ್ಲಿ ಗುಡ್ಡದ ಮಹಾಂತೇಶ್ವರ ಮಠವು ಇದೆ. ಈ ಊರಿನಲ್ಲಿ ನಿಜಾಮರ ಕಾಲದಿಂದ ಇರುವ ಕಾಳಮ್ಮನ ಗುಡಿ ಇದ್ದು ಸುಂದರವಾಗಿದೆ. ಉಗ್ರಮೂರ್ತಿ ದೇಗುಲ ಗೂಳಪ್ಪ, ಬಸವಣ್ಣ, ಜಟಿಂಗರಾಯ, ಹನುಮಂತ, ಲಕ್ಷ್ಮೀ, ಎಲ್ಲಮ್ಮ ಹಾಗೂ ಮರಗಮ್ಮನ ಗುಡಿಗಳಿದ್ದು, ಮಹಾಂತೇಶ್ವರ ಹಾಗೂ ಸುರಗಿ ಶಾಂತೇಶ್ವರ ಮಠಗಳಿವೆ. ಅಂತೆಯೇ ಊರಲ್ಲಿ ಮಸೀದೆ ಹಾಗೂ ಧಾವಲಮಲಿಕ ದರ್ಗಾಗಳಿದ್ದು ಗ್ಯಾರವಿ ತಿಂಗಳಲ್ಲಿ ಉರುಸು ನಡೆಯುತ್ತದೆ. ವೀರಭದ್ರನ ಕೊಡವು ಛಟ್ಟಿ ಅಮವಾಸ್ಯೆಯಾದ ಆರು ದಿನಕ್ಕೆ ಹಾಗೂ ರಥೋತ್ಸವವು ದವನದ ಹುಣ್ಣಿಮೆಯದ ಐದು ದಿನಕ್ಕೆ ಜರಗುತ್ತದೆ. ಆ ಸಮಯದಲ್ಲಿ ಸಾವಿರಾರು ಭಕ್ತಾದಿಗಳು ದೇವರಿಗೆ ಬಂದು ಹರಕೆ ಹೊತ್ತು ಬರುತ್ತಾರೆ. ದೇವರ ಸ್ಮರಣೆಯಿಂದ ಅವರ ಸಕಲ ಕೆಲಸವು ಪಾವನವಾಗುತ್ತವೆ ಎಂಬ ಪ್ರತೀತಿ ಇದೆ. *(ಪಿಕೆಕೆ)*

ಚಿಮಣಿ: ಗ್ರಾಮೀಣರು ಬೆಳಕಿಗಾಗಿ ಉಪಯೋಗಿಸುತ್ತಿದ್ದ ದೀಪ. ಜನರು ವಿದ್ಯುತ್ ಸಂಪರ್ಕವಿಲ್ಲದೆ. 'ಚಿಮಣಿ' ಬತ್ತಿಯನ್ನು ಉರಿಸಿ ಕಾಲ ಕಳೆಯುತ್ತಿದ್ದರು. ಇದು ನಮ್ಮ ತಾತ ಮುತ್ತಾತನ ಕಾಲದಿಂದಲೂ ಆಸ್ತಿತ್ವದಲ್ಲಿತ್ತು.



ಆದರೆ ಪ್ರಸ್ತುತವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಹೊಸ ಹೊಸ ಅವಿಷ್ಕಾರದೊಂದಿಗೆ 'ಚಿಮಣಿ' ಎನ್ನುವ ದೀಪ ಇತಿಹಾಸದ ಪುಟ ಸೇರಿದೆ.

'ಚಿಮಣಿ'ಯು ತಗಡಿನಿಂದ ತಯಾರಾದ, ಸಣ್ಣ ಆಕಾರದಲ್ಲಿದ್ದು, ಇದರ ಒಳಗಡೆ ಪೊಳ್ಳಾಗಿದ್ದು ಚಿಮಣಿ ಎಣ್ಣೆ ಹಾಕಿರುತ್ತಾರೆ. ಒಳಗಡೆ ಒಂದು ಸಣ್ಣದಾದ ತೂತಿದ್ದು, ಅದರ ಮೂಲಕ ಹರಕು ನೈಲಾನ ಇಲ್ಲವೆ ಚಿಂದಿ ಬಟ್ಟೆಯ ಬತ್ತಿಯನ್ನು ಮಾಡಿ ಹಾಕಿರುತ್ತಾರೆ. ಕೇವಲ 50ಮಿ. ಎಣ್ಣೆಯಿಂದ ಇಡೀ ರಾತ್ರಿ ಉರಿಯುತ್ತದೆ. ಇಲ್ಲವೆ ಸಣ್ಣ ಖಾಲಿ ಬಾಟಲಗಳನ್ನೂ ಸಹ ಚಿಮಣಿಯಾಗಿ ಬಳಸುತ್ತಾರೆ. ಇದು ಅವರು ಕೃತಕವಾಗಿ ತಯಾರಿಸಲ್ಪಟ್ಟ ಜನಪದ ಸಾಧನ ಮತ್ತು ಸಲಕರಣೆಗಳು. ಇಂದು ನಿರ್ನಾಮದ ಹಂತದಲ್ಲಿದೆ. ಹಳೆಯ ಜಾನಪದೀಯ ಸಾಧನ ಸಲಕರಣೆಗಳೆಲ್ಲವು ಮರೆಯಾಗಿ ಅವು ಹೊಸದಾದ ಒಂದು ರೂಪವನ್ನು ಪಡೆಯುತ್ತಿವೆ. ಈ ಹಿಂದೆ ಉರಿಸುತ್ತಿದ್ದ, ಚಿಮಣಿ ಗತಕಾಲಕ್ಕೆ ಸೇರಿದರೆ ಇಂದಿನ ವಿದ್ಯುತ್ ದೀಪವು ನಾಳೆ ಗತಕಾಲದ ಜಾನಪದ ಸಲಕರಣೆಯಾಗಿ ಬಿಡುತ್ತದೆ. ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಚಿಮಣಿಯ ಉಪಯೋಗ ಇನ್ನೂ ವಿದ್ಯುತ್ ಸಂಪರ್ಕವಿಲ್ಲದ ಗ್ರಾಮಗಳಲ್ಲಿ ಇದೆ.

(ಪಿಕೆಕೆ)

ಚು

ಚುಕ್ಕೋಳ ಪದಗಳು: ತಾಯಂದಿರು, ದಾದಿಯರು, ವಯಸ್ಕರು ಒಮ್ಮೊಮ್ಮೆ ಮಕ್ಕಳೂ ಚಿಕ್ಕವರಿಗಾಗಿ ಹಾಡಿದ ಹಾಡುಗಳು ಎನ್ನುವರು. ಕಲಬುರ್ಗಿ ಜಿಲ್ಲೆಯಲ್ಲಿ ಇಂಥ ಹಾಡುಗಳಿಗೆ 'ಚುಕ್ಕೋಳ ಪದಗಳು' ಎನ್ನುವರು. ಈ ಪದಗಳಲ್ಲಿ ಮೂರು ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. 1. ಹುಡುಗಿಯರ ಪದಗಳು, 2. ಹುಡುಗರ ಪದಗಳು, 3. ಸಮ್ಮಿಶ್ರ ಪದಗಳು. ಅದರಂತೆ ವಿಷಯ ವೈವಿಧ್ಯಕ್ಕನುಗುಣವಾಗಿ ಐದು ಭಾಗಗಳನ್ನಾಗಿಯೂ ವಿಂಗಡಿಸಿ ಕೊಳ್ಳಬಹುದು. 1. ರಮಿಸುವ ಪದಗಳು, 2. ಆಟದ ಪದಗಳು, 3. ಕಥಾ ರೂಪದ ಪದಗಳು, 4. ವಿಡಂಬನೆಯ ಪದಗಳು, 4. ಒಗಟು ರೂಪದ ಪದಗಳು. ಯಾವ ಬಗೆಯ ವರ್ಗೀಕರಣವಾದರೂ ಅದು ಅಭ್ಯಾಸದ ಅನುಕೂಲಕ್ಕಾಗಿ ಎಂದು ಮಾತ್ರ ಮರೆಯಕೂಡದು. ಅಳುವ ಮಕ್ಕಳನ್ನು ಹಾಡಿ, ಆಟವಾಡಿಸಿ ಸುಮ್ಮನೇ ಇರಿಸುವ ಹಾಡುಗಳನ್ನು ರಮಿಸುವ ಹಾಡುಗಳೆಂದು ಹೇಳಬಹುದು. ತೊಟ್ಟಿಲ ಹಾಡು, ಲಾಲಿಪದ, ಆನಿಬಂತಾನಿ, ಅಳಬ್ಯಾಡ ಎನ್ನ ಕಂದ, ಅಳ್ಳುಳ್ಳು ಆಯಿ ಮೊದಲಾದವುಗಳನ್ನು ಈ ಭಾಗಕ್ಕೆ ಸೇರಿಸಬಹುದು. ಆಟವಾಡುತ್ತ ಹೇಳುವ ಪದಗಳೇ ಆಟದ ಪದಗಳೆನಿಸುತ್ತವೆ. ಚಿನಿ ಕೋಲಾಟ, ಕುಪ್ಪಿಆಟ, ಘುಗಡಿ ಆಟ ಮೊದಲಾದವುಗಳು ಈ ಗುಂಪಿಗೆ ಸೇರಿದವುಗಳು. ಕಥೆಯನ್ನೊಳಗೊಂಡವು ಕಥಾರೂಪದ ಹಾಡುಗಳಾಗಿಯೂ, ಕೊಂಕು, ವ್ಯಂಗ್ಯ, ಅಣಕಕ್ಕೆ ಹೆಸರಾದ ಹಾಡುಗಳೆಲ್ಲಾ ವಿಡಂಬನೆಯ ಹಾಡುಗಳಾಗಿಯೂ, ಸಮಸ್ಯಾಮೂಲವಾಗಿ ಪ್ರಶ್ನೋತ್ತರ ರೂಪಗಳಲ್ಲಿ ಬರುವಂತಹವು ಒಗಟು ರೂಪದ ಪದಗಳಾಗಿಯೂ ಕರೆಯಿಸಿಕೊಳ್ಳುತ್ತವೆ.

ಚುಕ್ಕೋಳ ಪದಗಳಲ್ಲಿ ಇಂಥದೇ ವಸ್ತು, ವಿಷಯ ಇರಬೇಕೆಂದೇನೂ ಇಲ್ಲ. ಸಣ್ಣ ಬಾಯಿಗೆ ದೊಡ್ಡ ತುತ್ತೂ ಆಗಬಹುದು. ತಮ್ಮ ಸುತ್ತ ಮುತ್ತಲಿನ, ವಿಶಾಲ ಪ್ರಪಂಚದ ಯಾವುದೇ ಘಟನೆ ವಸ್ತುವಾಗಬಲ್ಲುದು. ಲಗ್ನವಾಗದಿದ್ದರೂ ಲಗ್ನವೆಂದರೇನು ಎನ್ನುವುದರ ಕಲ್ಪನೆಯೂ ಕೂಡ ಇಲ್ಲದ ಮಕ್ಕಳು ಅನುಕರಣಶೀಲರಾಗಿ ಲಗ್ನ ಹೂಡುತ್ತಾರೆ. ಆಟ ಆಡುತ್ತಾರೆ. ಹಾಡು ಹೇಳುತ್ತಾರೆ. 'ಗುಜು ಗುಜು ಮಾಪುರಾಡೋಣ' ಎಂದು ಹೆಣ್ಣು ಕೇಳುತ್ತ ವಸ್ತ್ರಾವಡವಿಗಳ ಕುರಿತು ವಾಗ್ವಾದ ನಡೆಸುತ್ತಾರೆ. ವಧೂವರರನ್ನಾಗಿ ಗೊಂಬೆಗಳನ್ನೋ, ಕಲ್ಲುಗಳನ್ನೋ ಅವಾವೂ ದೊರಕದಾದಾಗ ತಮ್ಮಲ್ಲಿಯೆ ಯಾರಾದರೂ ಗಂಡ– ಹೆಂಡಿರಾಗಿ ಮದುವೆ ಸಮಾರಂಭ ಹೂಡುತ್ತಾರೆ. ಮದುವೆಗೆ ಬಂದಂಥ ಬೀಗರು, ಬಿಜ್ಜರಿಗೆ ಊಟ ಹಾಕುತ್ತಾರೆ. ಚುರಮರಿ, ಗುಗ್ಗರಿ, ರೊಟ್ಟಿಯ ಚೂರು ಇಲ್ಲವೆ ಗಿಡದ ಎಲೆಗಳನ್ನೇ ಮೃಷ್ಟಾನ್ನವೆಂದು ಉಣಬಡಿಸುತ್ತಾರೆ. ಗಂಡನ ಮನೆ ಸೇರಿದ ಹೆಣ್ಣು, ಅತ್ತೆಯ ಮನೆಯಲ್ಲಿ ಕೆಲಸ ಮಾಡುತ್ತದೆ ಅನುಕರಣೆಗಿಳಿದು. ಮಕ್ಕಳನ್ನು ಆಡಿಸುವುದು, ತೂಗುವುದು, ರಮಿಸುವುದು, ಮರದಲ್ಲಿ ಕಾಳು ಹಾಕಿ ಕೇರುವುದು – ಹೀಗೆ ಸುತ್ತಲಿನ ಪ್ರತಿನಿತ್ಯ ಕಾಣುವ ಪ್ರಪಂಚದ ಅನುಕರಣೆ ಮಾಡುತ್ತ, ಆ ಆಟಕ್ಕೆ ತಕ್ಕ ಹಾಡು ಹೇಳುತ್ತದೆ. ಕ್ರೀಡೆಗೆ ತಕ್ಕಂತೆ ಹೆಜ್ಜೆ ಹಾಕಿ, ಆಡುತ್ತ ಹೋಗುವ ದೃಶ್ಯವಂತೂ ಜಾನಪದ ಕುಣಿತದ ವೈಖರಿಯನ್ನು ಸಾರುತ್ತದೆ.

ಗಂಡು–ಹೆಣ್ಣು ಒಂಟಿ–ಒಂಟಿಯಾಗಿಯೂ, ಒಮ್ಮೊಮ್ಮೆ ಜೊತೆಯಾಗಿ, ಮೇಳ ಕಟ್ಟಿಕೊಂಡೂ ಆಡಬಹುದು. ಒಬ್ಬರು ಅತ್ತೆಯಾಗಿ, ಇನ್ನೊಬ್ಬರು ಸೊಸೆಯಾಗಿ, ಆಳು ಯಜಮಾನರಾಗಿ, ಅಣ್ಣ–ತಮ್ಮ, ಅಕ್ಕ–ತಂಗಿಯರಾಗಿ, ಗೆಣೆಯ–ಗೆಣತಿಯರಾಗಿ, ಜಾಣ–ಜಾಣೆಯರಾಗಿ ಹಾಡುಗಳಿಗಂತೂ ಲೆಕ್ಕವಿಲ್ಲ. ಪಂಚಮಿ, ಚೌತಿ, ಮಾನೌಮಿ, ಹೋಳಿ ಮೊದಲಾದ ಹಬ್ಬಗಳಲ್ಲು ಸಂಪ್ರದಾಯವಾಗಿ ಹಾಡುತ್ತ ಬಂದ ಹಾಡುಗಳನ್ನೇ ಹೇಳುತ್ತಾರೆ. ಗುರ್ಚಿ, ಗುಳ್ಳವ್ವ, ಕುಂಯ್ಯಾ ಎಂದಂದು ವೇಷ ತೊಟ್ಟು ಹಾಡು ಹಾಡುತ್ತಾರೆ. ಆ ಆ ಕಾಲದ ನಿಸರ್ಗ ದೇವತೆಗಳ, ರಾಜಕೀಯ ಮುಖಂಡರ ಚಾರಿತ್ರಿಕ ಅಂಶಗಳನ್ನೂ ಕೆಲವೊಂದು ಹಾಡುಗಳು

ಉಲ್ಲೇಖಿಸುತ್ತವೆ. ಸಮಕಾಲೀನ ಪ್ರಜ್ಞೆ, ವಿಂಡಬನೆಗಳಲ್ಲೂ, ಬುದ್ಧಿಯ ಕಸರತ್ತಿನ ಒಗಟುಗಳಲ್ಲೂ ಚಿತ್ರಿತವಾಗಿರುತ್ತದೆ. ಧಾರ್ಮಿಕ ವಿಧಿ, ನಿಯಮಗಳನ್ನು ಉದಾಹರಿಸುವ, ವಿಜ್ಞಾನ ಯುಗದ ಪ್ರತೀಕವಾಗಿಯೂ ಬರುತ್ತಿರುವ, ಹಲವಾರು ಉಪಕರಣ–ಸಾಧನೆಗಳನ್ನು ಉಲ್ಲೇಖಿಸುವ ಹಾಡುಗಳೂ ಇಲ್ಲದಿಲ್ಲ. ಅಂತೂ ಪ್ರಪಂಚದ ಅನುಕರಣೆಯ ಈ ಹಾಡುಗಳಲ್ಲಿ ಜೀವನದ ಸರಸ–ವಿರಸದ ನೂರಾರು ವಿನ್ಯಾಸಗಳನ್ನು ಗುರುತಿಸಬಹುದಾಗಿದೆ.

ಮಕ್ಕಳ ಹಾಡುಗಳ ಲಕ್ಷಣಗಳನ್ನು ಹೀಗೆಯೇ ಎಂದು ಗೆರೆ ಕೊರೆದು ಹೇಳಲಿಕ್ಕಾಗದು. ಒಂದೊಂದು ಪ್ರದೇಶಕ್ಕೆ ಒಂದೊಂದು ರೀತಿ, ಪದ್ಧತಿ, ಧಾಟಿ, ಗೇಯತೆ ಬರಲೇಬೇಕು. ಪ್ರಾಸ ಇರಲೇಬೇಕು. ಹಾಗೆಂದಾಗ ಕಟ್ಟು ನಿಟ್ಟುಗಳ ಬಂಧನ ಇವಕ್ಕಿಲ್ಲ. ಸಹಜ ಬರುವುದುಂಟು. ಮಕ್ಕಳು ಹೆಚ್ಚಾಗಿ ಅನುಕರಣಶೀಲರು. ಅವರ ಅವಸ್ಥೆಯನ್ನು ದಾಟಿಬಂದ ವಯಸ್ಕರಿಗೂ ಅದು ತಪ್ಪಿದ್ದಲ್ಲ. ಸಹಜವಾಗಿ ಅಂಟಿಕೊಂಡದ್ದು. ಕೊಂಕು, ವ್ಯಂಗ್ಯ, ವಿಡಂಬನೆಯ ಪದ ಹಾಡಿದಾಗ, ಕೇಳಿದ ಹಿರಿಯರು ಕೋಪ ತಾಳಿದರೂ ಮುನಿಸುನಗೆ ಬೀರಬೇಕಾಗುತ್ತದೆ. ಪಾಪ! ಮಕ್ಕಳು ತಿಳಿದೂ ತಿಳಿದು ಒಬ್ಬರ ಅವಮಾನಕ್ಕಾಗಿ ಹಾಗೆ ಹಾಡುತ್ತಾರೆಂದೇನಲ್ಲ. ಮುಗ್ಧರಾದ ಅವರು ಮೋಜಿಗಾಗಿ ಹಾಡುವುದುಂಟು. ವಯಸ್ಕರಿಂದ ರಚಿತವಾದ ಅನೇಕ ವಿಡಂಬನೆಯ ಹಾಡುಗಳಲ್ಲಿ ಕೊಂಕು ಇಲ್ಲದಿಲ್ಲ. ಬುದ್ಧಿಪೂರ್ವಕವಾಗಿಯೂ ವಯಸ್ಕರು ಹಾಡು ಹೇಳಿಕೊಟ್ಟು ಮಕ್ಕಳ ಬಾಯಿಂದ ಯಾವ ಭಾಧೆಯೂ ಇಲ್ಲ ಎನ್ನುವ ರೀತಿಯಲ್ಲಿ ಹಾಡಿಸುತ್ತಿರುತ್ತಾರೆ.

ಮಾತಿನ ಮೋಡಿ, ಚಾಕಚಕ್ಯತೆ, ಬಾಲಭಾವಗಳಿಂದ ಕೂಡಿದ ಹೇರಳ ಶಬ್ದಗಳು ಈ ಹಾಡುಗಳಲ್ಲಿ ಹೊರಬರುತ್ತಿರುತ್ತವೆ. ಕೆಲವಂತೂ ಸೂತ್ರಬದ್ಧವಾಗಿ ಕಾವ್ಯದ ತುಣುಕುಗಳೋಪಾದಿಯಲ್ಲಿ ಗಾದೆಗಳಂತೆಯೂ, ಅಲಂಕಾರ ಧ್ವನಿಗಳಾಗಿಯೂ, ಒಮ್ಮೊಮ್ಮೆ ಚಿತ್ರಕಾವ್ಯಗಳಾಗಿಯೂ ರೂಪತಾಳುತ್ತಿರುತ್ತವೆ. ಚತುರ ಸಂಭಾಷಣೆಗಳಿಂದಾಗಿ ನಾಟಕೀಯತೆ ತಲೆ ಎತ್ತಿದೆ. ಕೇವಲ ಹಾಸ್ಯಕ್ಕಾಗಿ, ಅಣಕಕ್ಕೆಂದು ಹುಟ್ಟಿಕೊಂಡ ಹಾಡುಗಳೂ ಇಲ್ಲದಿಲ್ಲ. ಅರ್ಥವಾಗದ, ಅಸ್ಪಷ್ಟ ಶಬ್ದಗಳಿಂದ ಕೂಡಿದ, ಪ್ರಾಸಬದ್ಧ ಸಂಯೋಜನೆಯ ಹಾಡುಗಳನ್ನೂ ಮಕ್ಕಳ ಹಾಡುಗಳಲ್ಲಿ ಓದಬಹುದಾಗಿದೆ. ಮಕ್ಕಳ ಮಾನಸಿಕ ವಿಕಾಸವಾದಂತೆಲ್ಲಾ, ತಿಳುವಳಿಕೆ ಹೆಚ್ಚೆಚ್ಚಾದಂತೆ ಅವರಿಂದ ಹೊರಬೀಳುವ ಹಾಡುಗಳಲ್ಲೂ ಭಾವದ ತೀವ್ರತೆ ಹೆಚ್ಚುತ್ತ ಹೋಗುತ್ತದೆ. ಜೊತೆಗೆ ದೇಹದ ಬೆಳೆವಣಿಗೆಯನ್ನೂ ಕಾಣುತ್ತೇವೆ.

ಮಕ್ಕಳು ಆಡುತ್ತ ಹೋದಂತೆ ಅವರಿಗೆ ಹಾಡುಗಳೂ ಪಾಠವಾಗುವುದುಂಟು. ಅಂತೆಯೆ ಅದನ್ನೊಂದು ಮಕ್ಕಳ ಪಾಠಶಾಲೆಯೆಂದೇ ಕರೆಯಭಹುದು. ಆದರೆ ಈ ಪಾಠಶಾಲೆಗಳಿಗೆ ಯಾವ ಬಂಧನಗಳಿಲ್ಲ. ಮಕ್ಕಳ ಬಯಲಾಟಗಳವು. ಇಲ್ಲಿ ಗಂಡು ಹೆಣ್ಣು ಎನ್ನುವ ಭೇದವಿಲ್ಲ. ಆದರೂ ಹೆಣ್ಣಿಗೆ ಕೆಲವೊಂದು ಅವಧಿಯವರೆಗೆ ಮಾತ್ರ ಕೂಡಿ ಆಡುವ ಹಕ್ಕು. ಮಕ್ಕಳಿಗೆ ತಿಳುವಳಿಕೆ ಹೆಚ್ಚಾದಂತೆ, ಜವಾಬ್ದಾರಿ ಬಿದ್ದಂತೆ, ನಾಚಿಕೆಯು ಹುಟ್ಟುತ್ತದೆ. ಹೆಣ್ಣಿಗಂತೂ– ಆಗ ಹುಡುಗರ ಜೊತೆ ಕೂಡಿ ಆಡುವ ಪರಿಪಾಠ ನಿಂತುಬಿಡುತ್ತದೆ. ಆ ಪಾತ್ರಗಳನ್ನು ಮುಂದಿನ ಹೊಸ ಹೊಸ ಪೀಳಿಗೆ ಆಕ್ರಮಿಸುತ್ತ ಬರುತ್ತದೆ. ಭಾಷಾಗೊಂದಲವಂತೂ ಮಕ್ಕಳ ಲೋಕದಲ್ಲಿ ಕಡಿಮೆ, ಇಲ್ಲವೆಂದರೂ ನಡೆದೀತು. ಅವರಿವರ ಎಲ್ಲರ ಭಾಷೆಗಳು ಮಕ್ಕಳಿಗೆ ಕರತಲಾಮಲಕ, ಬೇಕಾದ ಹಾಗೆ ಮಾತನಾಡುವದುಂಟು. ಅರ್ಥವಾಗದಿದ್ದರೂ ಕೂಡ ಹಾವ–ಭಾವಗಳ ಮೇಲಿಂದ ಅರ್ಥೈಸಿಕೊಂಡು ಸಂತೋಷಪಡುವ ಮಕ್ಕಳಲ್ಲಿ ಭಾವೈಕ್ಯವನ್ನು ಕಾಣಬಹುದಾಗಿದೆ. ಹಾಗೆಯೆ ಬೇರೆ ಭಾಷೆಯ ಹಾಡುಗಳೂ ಅವರ ಬಾಯಲ್ಲಿ ಕುಣಿದಾಡುತ್ತಿರುತ್ತವೆ. ಹೀಗೆ ಮಕ್ಕಳು ಒಬ್ಬರಿಗೊಬ್ಬರು ಕೂಡಿಕೊಂಡು, ಸಮರಸಭಾವತಾಳಿ ಹಾಡು ಹೇಳುತ್ತ ಹೋಗುತ್ತಾರೆ. ಅವರಿಗೆ ಆಗ ಯಾರ ಹಂಗೂ, ಭಯವೂ ಇಲ್ಲ. ಮೋಜಿನೊಂದಿಗೆ ಹಾಡು ಹಾಗೆಯೆ ಮುಂದುವರಿಯುತ್ತಿರುತ್ತವೆ. ಊಟದ ಪರಿವೆಯಂತೂ ದೂರವೇ ಉಳಿಯಿತು. ತಾಯಿ ಮನೆಯಲ್ಲಿ ಕೂಗುತ್ತಿದ್ದರೂ ಲಕ್ಷಿಸದ ತಲ್ಲೀನತೆ ಮಕ್ಕಳಿಗೆ ಈ ಹಾಡುಗಳಲ್ಲಿ ಅವರಿವರ ನಡುವೆ ವಿರಸ ಬಂದಾಗ ಮಾತ್ರ ಆಟ ಚೆಲ್ಲಾಪಿಲ್ಲಿ, ಹಾಡು ನಿಂತು ಬಿಡುತ್ತದೆ. ಮನೆಯ ಕಡೆ ತಿರುಗಿ–ಅಕ್ಕರೆಯಿಂದ ಬೆಳೆಸಿದ ತಾಯಿಯ ಹತ್ತಿರ ಹೋಗಿ, ತನಗೆ ಬೇಕದುದೆಲ್ಲವನ್ನೂ ಪಡೆದುಕೊಂಡು ಸಂತೋಷಪಡುತ್ತದೆ. ಹಾಯಾಗಿ ನಿದ್ದೆಮಾಡಿ ಎದ್ದು ಎಂದಿನಂತೆ ಮತ್ತೆ ಆಟಕ್ಕೆ ನಡೆಯುತ್ತದೆ. ಹಿಂದಿನ ದಿನದ ವೈರಭಾವವಿಲ್ಲ ಅವರಿವರ ನಡುವೆ ಮತ್ತೆ ಕಕ್ಕುಲತೆಯ ಮಾತು, ಸ್ನೇಹ ಹಸ್ತ.

ಮಕ್ಕಳು ಈ ಹಾಡುಗಳನ್ನು ಯಾವಾಗಲೂ ಹಾಡು ತ್ತಾರೆಂದೇನಲ್ಲ. ಅಂದಹಾಗೆ ವೇಳೆ. ಸ್ಥಳಗಳ ನಿಗದಿಯೂ ಇಲ್ಲ. ಇಚ್ಛೆಯಾದಾಗ ಆಟ ಸುರುವು. ಹಾಡು ಪ್ರಾರಂಭ– ಎಲ್ಲಿ ಬೇಕಲ್ಲಿ; ಯಾವಾಗ ಬೇಕಾದಾಗ.

ಕೆಲವು ಪ್ರದೇಶಗಳ ಹಾಡುಗಳಲ್ಲಿ ಪ್ರಾದೇಶಿಕ ಭಿನ್ನತೆ ಕಂಡಬರುತ್ತದೆ. ಹಾಗೆಯೆ ಅದಕ್ಕಂಟಿಕೊಂಡು ಬಂದ ಆಟಗಳಲ್ಲೂ ವ್ಯತ್ಯಾಸ ಇದ್ದುದನ್ನೂ ಕಾಣಬಹುದಾಗಿದೆ. ಧಾಟಿ ಬೇರೆಯಿರಬಹುದು. ಆಟದ ಬಗೆ ಬೇರೆಯಗಿರಬಹುದು. ಉದ್ದೇಶ ಮಾತ್ರ ಒಂದೇ ಇರುತ್ತದೆ. ಆಚಾರ ವಿಚಾರ ಸಂಪ್ರದಾಯಗಳು ಬದಲಾದಂತೆ; ನೆರೆಯ ಪ್ರದೇಶದ ಪ್ರಭಾವ ಮುದ್ರೆ ಮೂಡಿದಂತೆ, ಹಾಡುಗಳಲ್ಲೂ ಭಿನ್ನತೆ ಎದ್ದು ಕಾಣುತ್ತದೆ. ಒಳಹೊಕ್ಕು ಅರಿತುಕೊಂಡಾಗ ಮೂಲ ಸಂಸ್ಕೃತಿ ಒಂದೇ ಎಂದು ಗೊತ್ತಾಗದಿರದು.

ಶಿಶುಪ್ರಾಸಗಳನ್ನು ಜನಪದ ಗೀತೆಗಳ ಪೂರ್ವ ಸೃಷ್ಟಿಯೆಂದು ಕರೆಯಬಹುದು. ಅಂತೂ ಜನ ಹುಟ್ಟಿ ಬೆಳೆದಾಗ, ನಗ್ಗಾ–ಅಳ್ತಾ ಇರುವಾಗ, ಮಾತು ಬಂದಾಗ, ಹಬ್ಬ ಹರಿದಿನಗಳಲ್ಲಿ ಕೂಡಿ ಆಡುವಾಗ, ಸಂಘ ಜೀವಿಯಾಗಿ ಸಮಾಜದಲ್ಲಿ ಓಡಾಡುತ್ತಿರುವಾಗ ಈ ಪದಗಳು ಹುಟ್ಟಿಕೊಂಡಿರಬೇಕು. ಮಾನವನ ಹುಟ್ಟುವಿಕೆ, ಬೆಳವಣಿಗೆ ಯಾವಾಗಲೂ ಅದು ಹೇಗೆ ಅವ್ಯಾಹತವಾಗಿ ನಡೆದೇ ಇರುತ್ತದೆಯೊ ಹಾಗೆಯೆ ಈ ಹಾಡಿನ ಸೃಷ್ಟಿ ಕಾಲಮಾನ ಪರಿಸ್ಥಿತಿಗೆ ತಕ್ಕಂತೆ ಬದಲಾಗುತ್ತಲೂ ಇರುತ್ತದೆ. ವಯಸ್ಕರಿಂದ ಹುಟ್ಟಿ ಬಂದದ್ದರೂ ಈ ಹಾಡುಗಳಲ್ಲಿ ಮಿಡಿತವಾದ ಹೃದಯ ಮಾತ್ರ ಮಕ್ಕಳಂತಹ ಮೃದು ಹೃದಯಿಗಳದೇ.

ಮಕ್ಕಳ ಈ ಪದಗಳಿಂದ ಹಣ ಸಿಗಲಿಕ್ಕಿಲ್ಲ. ಕೀರ್ತಿ ಬರಲಿಕ್ಕಿಲ್ಲ. ಪ್ರೀತಿ ಮಾತ್ರ ಹುಟ್ಟುತ್ತದೆ. ಆನಂದ ಉಕ್ಕೇರುತ್ತದೆ. ಎಲ್ಲಕ್ಕೂ ಹೆಚ್ಚಾಗಿ

ಮೋಜು ಅನಿಸಿ, ಮನರಂಜನೆ ದೊರಕುತ್ತದೆ. ಮಕ್ಕಳು ಹಸನ್ಮುಖಿಗಳಾಗಿ ಹಾಡುವುದರಿಂದ ತಾಯಿಗೂ ಆನಂದ. ಹೊರಬಿದ್ದು ಆಡಲು ಹೋಗುವುದರಿಂದ ಅವಳಿಗೆ ಕಿರಿಕಿರಿ ತಪ್ಪಿ ಮನೆಗೆಲಸ ತೀರಿಸಿಕೊಳ್ಳಲು ಅನುವು ದೊರಕುತ್ತದೆ. ಹೊರಗೆ ಓರಿಗೆಯ ಮಕ್ಕಳ ಜೊತೆ ಆಡುವಾಗ ಪರಸ್ಪರ ತಿಳುವಳಿಕೆ ಹೆಚ್ಚಿ ಮಕ್ಕಳಿಗೆ ಪ್ರಪಂಚದ ಜ್ಞಾನವಾಗುತ್ತದೆ. ತಾಯಿಯೂ ಕಲಿಸುತ್ತಾಳೆ. ಹಾಡು ಹೇಳಿ ಕೊಡುತ್ತಾಳೆ. ಹೀಗೆ ಮಕ್ಕಳಿಗೆ ಶಬ್ದಭಂಡಾರ ಬೆಳೆಯಿಸಿಕೊಳ್ಳಲು ಈ ಹಾಡುಗಳು ಸಾಕಷ್ಟೂ ಸಹಾಯಕಾರಿಯಾಗಿವೆ.

ಹಾಡಿನೊಂದಿಗೆ ಆಟವಾಡುವುದರಿಂದ, ಮೈ ಮಣಿಸಿ ಕುಣಿಯುವುದರಿಂದ ಶರೀರಕ್ಕೆ ಒಳ್ಳೆಯ ವ್ಯಾಯಾಮ ದೊರಕಿ, ದೈಹಿಕ ಬೆಳವಣಿಗೆಯಾಗುತ್ತದೆ. ಮೈಮನಗಳಿಗೆ ನೆಮ್ಮದಿ ಉಂಟಾಗಿ ಹೊಸ ಹೊಸ ಕಾರ್ಯಕೈಕೊಳ್ಳಲು ಹೆಚ್ಚಿನ ಸ್ಫೂರ್ತಿ ದೊರಕುತ್ತದೆ. ಮನೆಯ ಒಳಹೊರಗೂ ಸಂತೋಷ ಹೆಚ್ಚಿ, ಹಬ್ಬದ ವಾತಾವರಣ ಉಂಟಾಗುತ್ತದೆ.

ಈ ಹಾಡುಗಳಲ್ಲಿ ಮಕ್ಕಳ ಶಬ್ದ ಭಂಡಾರ ಸೂರೆಯಾಗಿದೆ. ಸಂಪರ್ಕ ಬೆಳೆಸುತ್ತ ಆಡುತ್ತ ಹಾಡುತ್ತ ಹೋದಹೋದಂತೆ ಅದಿನ್ನೂ ದೊಡ್ಡದಾಗುತ್ತ ಹೋಗುತ್ತದೆ. ಹಾಡು ರಚಿಸಲು ಮತ್ತೆ ಹೆಚ್ಚುಹೆಚ್ಚಿನ ಸಂಸ್ಕಾರ ದೊರಕುತ್ತದೆ. ಅಣಕದ, ವಿಡಂಬನೆಯ ಹಾಡು ಕೇಳಿದ ಹಿರಿಯರನೇಕರು ತಮಗಂಟಿಕೊಂಡು ಬಂದಿದ್ದ ಡೊಂಕುಗಳನ್ನು ತಿದ್ದಿಕೊಳ್ಳುವುದೂ ಉಂಟು. ಮಕ್ಕಳ ಅವಸ್ಥೆಯಲ್ಲಿ ಅನುಕರಣೆಯೆಂದಂದು ಆಟವಾಡಿದ, ಹಾಡುಹೇಳಿದ ಕ್ರಿಯೆಗಳೆಲ್ಲಾ ಭಾವೀಜೀವನದ ಹೋರಾಟದಲ್ಲಿ ನಿಜಕ್ಕಿಳಿದಾಗ ತನಗೆ ಗೊತ್ತು ಎನ್ನುವುದರೊಂದಿಗೆ ಭವ್ಯಜೀವನದ ಅರಿವಾಗುತ್ತ ಹೋಗುತ್ತದೆ.

ನಮ್ಮಲ್ಲಿ ಮಕ್ಕಳ ಹಾಡುಗಳಿಗೇನೂ ಕೊರತೆಯಿಲ್ಲ. ಮಕ್ಕಳು ಹಾಡುತ್ತಿರುತ್ತಾರೆ, ಅವರ ಜೊತೆ ವಯಸ್ಕರೂ ಭಾಗಿಗಳಾಗುತ್ತಾರೆ. ಮಕ್ಕಳು ತಪ್ಪಿದಲ್ಲಿ ಹಾಗಲ್ಲ–ಹೀಗೆ–ಹೀಗೆ ಎಂದಂದು ಹಿರಿಯರು ಸಲಹೆ ಸೂಚನೆಗಳನ್ನಿತ್ತು ತಿದ್ದುತ್ತಿರುತ್ತಾರೆ. ತಮಗೆ ಗೊತ್ತಿದ್ದ ಹಲವಾರು ಹಾಡುಗಳನ್ನೂ ಹೇಳಿಕೊಡುತ್ತಿರುತ್ತಾರೆ. ಹೀಗೆ ಬಾಯಿಂದ ಬಾಯಿಗೆ, ಕರ್ಣಾಕರ್ಣಿಯಾಗಿ ಅಂತೂ ಅವು ಜನಪದ ನಾಲಿಗೆಯ ಮೇಲೆ ಉಳಿದುಕೊಂಡು ಬಂದಿರುತ್ತವೆ.

(ಎಂಎಸ್‌ಎಲ್)

ಚೆ

ಚೆಂಚರು: ಆಂಧ್ರಪ್ರದೇಶದ ಶ್ರೀಶೈಲ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗುಡ್ಡಗಾಡಿನ ಗಿರಿಜನ. ದಟ್ಟವಾದ ಕಾಡು–ಮೇಡುಗಳಲ್ಲಿ ಸಂಚರಿಸುವ ಇವರು ಅಲೆಮಾರಿ ಜನಾಂಗ. ವನ್ಯ ಮೃಗಗಳು ತುಂಬಿದ ಅರಣ್ಯದಲ್ಲಿ ನಿರ್ಭೀತಿಯಿಂದ ತಿರುಗಾಡುವ ಚೆಂಚರು ಧೈರ್ಯಶಾಲಿಗಳು. ಒಂದೇ ಕಡೆ ನೆಲೆನಿಲ್ಲದ ಈ ಜನ ಹೆಚ್ಚಾಗಿ ಬೇಟೆಯನ್ನು ವೃತ್ತಿಯಾಗಿ ಮಾಡಿಕೊಂಡಿದೆ. ಬಿಲ್ಲು–ಬಾಣಗಳ ಅಸ್ತ್ರಗಳನ್ನು ಹಿಡಿದು ಕಾಡಿನಲ್ಲಿ ಓಡಾಡುವ ಚಂಚರು ಜೇನು, ಪುನಗು, ಕಸ್ತೂರಿಗಳಂಥ ಬೆಲೆಬಾಳುವ ವಸ್ತುಗಳನ್ನು ಸಂಗ್ರಹಿಸುತ್ತಾರೆ. ಕೆಲವರು ಪಶುಪಾಲನೆಯಿಂದ ಹೈನುಗಾರಿಕೆಯನ್ನು ಮಾಡಿಕೊಂಡಿದ್ದಾರೆ. ಮತ್ತೆ ಕೆಲವರು ಕೈಯಲ್ಲಿ ಏಕತಾರಿಯ ತಂತಿವಾದ್ಯ (ಕುರ್ರಂ)ವನ್ನು ಹಿಡಿದು ಊರೂರು ತಿರುಗಿ ಭಿಕ್ಷಾಟನೆಯಿಂದ ಬದುಕುತ್ತಿದ್ದಾರೆ. ಅವರಿಗೆ ಗಿಡಮೂಲಿಕೆಯ ಪರಿಚಯವಿರುವುದರಿಂದ ಜನರು ಅವರಿಂದ ಔಷಧಿಯನ್ನು ಪಡೆಯುತ್ತಾರೆ. ಇವರಲ್ಲಿ ಕೆಲವರು ಭವಿಷ್ಯವನ್ನು ಹೇಳುತ್ತಾರೆ. ಚೆಂಚರು ಶ್ರೀಶೈಲ ಮಲ್ಲಿಕಾರ್ಜುನನ ಒಕ್ಕಲು. ಆತನ ಪರಮಭಕ್ತರು. ಇವರು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಸಂಚರಿಸುತ್ತಾರೆ. ತಮ್ಮ ಕುರ್ರಂ ವಾದ್ಯದಿಂದ ಮತ್ತು ಭವಿಷ್ಯ ನುಡಿಯುವ ಮೂಲಕ ಚೆಂಚರು ಕನ್ನಡಿಗರಿಗೆ ಸುಪರಿಚಿತರು. ಇವರನ್ನು 'ಅಡವಿ ಚೆಂಚರು' ಎಂದು ಗುರುತಿಸುತ್ತಾರೆ.

(ಎಸ್‌ಎಂ)

ಚೆನ್ನಣ್ಣ ವಾಲೀಕಾರ: ಜಾನಪದ ತಜ್ಞ, ದಲಿತ ಬಂಡಾಯ ಘಟ್ಟದಲ್ಲಿನ ಮಹತ್ವದ ಕವಿ, ಬರಹಗಾರ. ಬಹುಮುಖ ವ್ಯಕ್ತಿತ್ವ ಹೊಂದಿದ ಇವರು ಕಥೆ, ಕಾದಂಬರಿ, ನಾಟಕ, ವಚನ, ಡಪ್ಪಿನಾಟ, ವಿಮರ್ಶೆ, ಸಂಶೋಧನೆ ಹಾಗೂ ಸಂಪಾದನಾ ಕಾರ್ಯಗಳಲ್ಲಿ ತಮ್ಮನ್ನು ನಿರಂತರ ತೊಡಗಿಸಿ ಕೊಂಡಿದ್ದಾರೆ. ಹೈದ್ರಾಬಾದ ಕರ್ನಾಟಕ ಭಾಗದ ಭಾಷೆಯಲ್ಲಿ ಬಂಡಾಯದ ಕಹಳೆಯನ್ನು ಮೊದಲಿಗೆ ಮೊಳಗಿಸಿದ ಕವಿ ಇವರು. ಮಗುವಿನಂತಹ ಮುಗ್ಧತೆಯನ್ನು ಹೊಂದಿದ ದೈತ್ಯ ಶಕ್ತಿಯ ಬಂಡಾಯದ ಸೃಜನಶೀಲ ಲೇಖಕ. ಒಳ್ಳೆಯ ಸಾಹಿತಿ, ಉತ್ತಮ ವಾಗ್ಮಿ ಹಾಗೂ ಅಚ್ಚು ಮೆಚ್ಚಿನ ಪ್ರಾಧ್ಯಾಪಕರಿವರು.



ಗುಲಬರ್ಗಾ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಶಂಕರವಾಡಿ ಎಂಬ ಊರಿನ ಧೂಳಪ್ಪ ಸಾಬಮ್ಮ ದಂಪತಿಗಳ ನಾಲ್ಕನೆಯ ಮಗನಾಗಿ 1943 ಏಪ್ರಿಲ್ 6 ರಂದು ಜನಿಸಿದರು. ಹುಟ್ಟಿದ ಕೆಲವೇ ತಿಂಗಳಲ್ಲಿ ತಾಯನ್ನು ಕಳೆದುಕೊಂಡು ಅಕ್ಕಂದಿರರೊಡನೆ ಹಳ್ಳಿಯಲ್ಲಿ ಆಡುತ್ತ ಹಾಡುತ್ತ, ದನ, ಕುರಿ ಕಾಯುತ್ತ ಎಂಟು ವರ್ಷದವರೆಗೆ ಕಾಲ ಕಳೆದರು. ಹಿರಿಯಕ್ಕ ಸಾವಂತ್ರಮ್ಮಳಿಗೆ ಸೋದರಮಾವ ಸಾಬಣ್ಣನಿಗೆ ಕೊಟ್ಟು ಮದುವೆ ಮಾಡಿದ್ದರು. ಅವರೇ ಶಂಕರವಾಡಿಯಲ್ಲಿ ಶಾಲೆಗೆ ಹಚ್ಚಿದರು. ನಾಲವಾರ, ಶಹಾಬಾದ, ಗುಲಬರ್ಗಾದಲ್ಲಿ ವಿದ್ಯಾಭ್ಯಾಸ ಪೂರೈಸಿದರು. ಅನೇಕ ಕಷ್ಟಕೋಟಲೆಗಳನ್ನು ಎದುರಿಸಿದರೂ ಅಧ್ಯಯನ

ನಿಲ್ಲಿಸಲಿಲ್ಲ. 1965ರಲ್ಲಿ ಬಿ.ಎ. ಮುಗಿಸಿ ಶಿಕ್ಷಕರಾಗಿ ಸೇವೆಯನ್ನು ಪ್ರಾರಂಭಿಸಿದರು. ಆದರೆ ಎಂ.ಎ. ಓದಬೇಕೆಂಬ ಅಭಿಲಾಷೆಯಿಂದ 1971ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಕನ್ನಡದಲ್ಲಿ ಸ್ನಾನಕೋತ್ತರ ಪದವಿ ಪಡೆದುಕೊಂಡರು.

ಮೊದಲಿಗೆ ರಾಯಚೂರಿನ ಎಲ್.ವಿ.ಡಿ. ಪದವಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಪ್ರಾರಂಭಿಸಿದರು. 1987ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರವಾಚಕರಾಗಿ, 1995ರಲ್ಲಿ ಪ್ರಾಧ್ಯಾಪಕರಾಗಿ, ಪ್ರಸಾರಾಂಗದ ನಿರ್ದೇಶಕರಾಗಿ, ಸೇವೆ ಸಲ್ಲಿಸಿ ನಿವೃತ್ತರಾಗಿರುವರು (2003). ಇವರ ಸಾಹಿತ್ಯಿಕ ಸೇವೆಗಾಗಿ ಹಲವಾರು ಪ್ರಶಸ್ತಿಗಳು ದೊರೆತಿವೆ. ಹುಟ್ಟು ಹೋರಾಟಗಾರರಾದ ಇವರು ಅನೇಕ ಸಂಘ ಸಂಸ್ಥೆಗಳನ್ನು ಹುಟ್ಟುಹಾಕಿದ್ದಾರೆ. ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ.

ವಿದ್ಯಾರ್ಥಿ ದೆಸೆಯಿಂದಲೇ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಯಾವಾಗಲು ಪಾಲ್ಗೊಳ್ಳುತ್ತಿದ್ದರು. ರಜೆಯಲ್ಲಿ ಊರಿಗೆ ಬಂದಾಗ ಸಣ್ಣಾಟ ನೋಡುವದು, ಜನಪದ ಹಾಡುಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗುತ್ತಿದ್ದರು. ಜನರ ಮಧ್ಯೆ ಬದುಕುತ್ತ ಅವರ ಆಚಾರ ವಿಚಾರಗಳನ್ನು ಗಮನಿಸುತ್ತ ಅನುಭವ ಪಡೆದರು. ಇದೇ ಅವರ ಸಾಹಿತ್ಯ ರಚನೆಗೆ ಪ್ರೇರಣೆ ಒದಗಿಸಿತು. ಸುತ್ತಮುತ್ತಲು ಕೆಳವರ್ಗದ ಬಡಜನರು, ಅಜ್ಞಾನದಿಂದಾಗಿ ಮೂಢನಂಬಿಕೆಗಳಿಂದಾಗಿ ಕಷ್ಟದ ಜೀವನ ನಡೆಸುತ್ತಿದ್ದರು. ಶತಮಾನಗಳಿಂದ ಶೋಷಣೆಗೊಳಗಾದ ಜನರ ಬದಲಾವಣೆ ಆಗುವುದೆಂದು, ಶೋಷಣೆ ತಪ್ಪುವದೆಂಬ ಚಿಂತನೆ ಇವರದಾಗಿದೆ. ಶೋಷಿತರ ಕಷ್ಟ ಪರಂಪರೆಗಳನ್ನು ಅವರದೇ ಆದ ಆಡುಭಾಷೆಯಲ್ಲಿ ಕಥೆ, ಕಾದಂಬರಿ ಕಾವ್ಯಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಚೆನ್ನಣ್ಣ ವಾಲೀಕಾರ ಅವರು "ಹೈದ್ರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ" ಕೃತಿ ಪ್ರಕಟಿಸಿದ್ದಾರೆ (1998). ಇದು ಇವರ ಪ್ರೌಢ ಪ್ರಬಂಧ. ಹೈದ್ರಾಬಾದ ಕರ್ನಾಟಕ ಪ್ರದೇಶದುದ್ದಕ್ಕೂ ಕ್ಷೇತ್ರಕಾರ್ಯ ಮಾಡಿ ಗ್ರಾಮದೇವತೆಗಳ ಕುರಿತ ಸಮಗ್ರ ಅಧ್ಯಯನ ಮಾಡಿದ್ದಾರೆ. ಇಂದಿನ ಸಂದರ್ಭದಲ್ಲಿ ಗ್ರಾಮದೇವತೆಗಳ ಮಹತ್ವ ಹಾಗೂ ಪ್ರಸ್ತುತತೆ ಕುರಿತು ಚರ್ಚಿಸಿದ್ದಾರೆ. 'ಟೋಕ್ರೆ ಕೋಳಿ' ಕುರಿತು ಕನ್ನಡ ವಿಶ್ವವಿದ್ಯಾಲಯ ಹಂಪಿಯ, "ಬುಡಕಟ್ಟು ಅಧ್ಯಯನ" ಪುಸ್ತಕದ ಸಂಶೋಧನ ಲೇಖನವಾಗಿದ್ದು ಅತ್ಯಂತ ಮಹತ್ವದ್ದಾಗಿದೆ. ಜಾನಪದ ಲೋಕ ಮತ್ತು ಒಂದು ಗ್ರಾಮದ ಜಾನಪದ ಕೃತಿಗಳು ಸಂಶೋಧಕರಿಗೆ ಮೂಲ ಆಕರಗಳಾಗಿವೆ. ಇದಲ್ಲದೆ ಇವರು ಸಂಗ್ರಹಿಸಿ ಸಂಪಾದಿಸಿದ ಗುಲಬರ್ಗಾ ಜಿಲ್ಲೆಯ ತ್ರಿಪದಿಗಳು, ಮೊಹರಂ ಪದಗಳು ಮುಖ್ಯವಾಗಿವೆ. ಹಲವಾರು ವರ್ಷ ನಿರಂತರ ಬರವಣಿಗೆಯಲ್ಲಿ ತೊಡಗಿಸಿಕೊಂಡು "ಕರ್ನಾಟಕ ದೇವದಾಸಿಯರ, ಸಮಾಜೋ ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ" ವೆಂಬ ಕೃತಿಯನ್ನು ಪ್ರಕಟಿಸಿದ್ದಾರೆ (2001).

ಕನ್ನಡ ಸಾರಸ್ವತ ಪ್ರಪಂಚಕ್ಕೆ ಚೆನ್ನಣ್ಣ ವಾಲೀಕಾರರು ಕವಿತೆ, ಕಥೆ, ನಾಟಕ, ಕಾದಂಬರಿ, ಜಾನಪದ ಸಂಶೋಧನೆ ಹಾಗೂ ವೈಚಾರಿಕ ಬರಹಗಳಿಂದ ಸುಪರಿಚಿತರಾಗಿದ್ದಾರೆ. ಪ್ರತಿಭಟನಾ ಮನೋಧರ್ಮವನ್ನು ಹೊಂದಿದ ಇವರ ಕವನಗಳು ಜನಪರವಾಗಿದ್ದು ಜನ ಬದುಕಲೆಂದು ಸೃಷ್ಟಿಯಾಗಿವೆ. ಬಡಜನರ ಶೋಷಿತರ ದನಿಯಾಗಿವೆ, ಅವರ ನೋವು ಹಾಡಾಗಿ ಹೊರಬಂದಿವೆ. ಸಂಕಲನದ ಶೀರ್ಷಿಕೆಗಳೇ ಬಂಡಾಯದ ಕಹಳೆಯನ್ನು ಮೊಳಗಿಸುತ್ತವೆ. ಮರದ ಮೇಲಿನ ಗಾಳಿ, ಕರಿತೆಲಿ ಮಾನವನ ಜೀಪದ, ಹಾಡಕ್ಕಿ ಹಾಗೂ ಇತರ ಪದಗಳು, ಪ್ಯಾಂಥರ್ ಪದ್ಯಗಳು, ಬಂಡೆದ್ದ ದಲಿತರ ಬೀದಿ ಹಾಡುಗಳು, ಧಿಕ್ಕಾರದ ಹಾಡುಗಳು, ಐದು ಜನಪರ ಸಮಾಜವಾದಿ ಪದ್ಯಗಳು, ವೈರಿಗಳ ಮಧ್ಯೆ ಎದ್ದ ಕಗ್ಗತ್ತಲೆ ಖಂಡದ ಕಾವ್ಯ ಇವುಗಳಲ್ಲದೇ ಮುನ್ನೂರ ಮೂರು ವಚನಗಳು ಹಾಗೂ ಉರ್ದು ಕವಿತೆಗಳು ಮುಖ್ಯವಾಗಿವೆ.

1975ರಲ್ಲಿಯೇ ಬರೆದ 'ಬೆಳ್ಯಾ' ಕಾದಂಬರಿ ಹೈದ್ರಾಬಾದ ಕರ್ನಾಟಕದ ಪ್ರಾದೇಶಿಕ ಭಾಷೆಯಲ್ಲಿದೆ. ಒಂದು ಹೆಣ್ಣಿನ ಒಳಜಗತ್ತು, ಕೋಟೆಬಾಗಿಲು ಹುಲಿಗೆಮ್ಮ ಹಾಗೂ ಗ್ರಾಮಭಾರತ ಇತರ ಕಾದಂಬರಿಗಳಾಗಿವೆ. ಚೆನ್ನಣ್ಣನವರು ಒಟ್ಟು ಹನ್ನೊಂದು ನಾಟಕ ಬರೆದಿದ್ದಾರೆ. ಇವರ "ಟೊಂಕದ ಕೆಳಗಿನ ಜನ" ಪ್ರಕಟವಾಗಿದೆ.


(ಎನ್‌ಬಿಬಿ)

ಚೇಂಗಟಾ: ಚಿಂಚೋಳಿ ತಾಲ್ಲೂಕಿನ ಚೇಂಗಟಾ ಎಂಬ ಗ್ರಾಮವು ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಮಹತ್ವ ಹೊಂದಿದ ಗ್ರಾಮವಾಗಿದೆ. ಸೋಮೇಶ್ವರ ದೇವಾಲಯದಿಂದಾಗಿ ಈ ಊರು ಪ್ರಸಿದ್ಧಿಯನ್ನು ಪಡೆದಿದೆ. ಈ ದೇವರ ಜಾತ್ರೆಯು ಪ್ರತಿ ವರ್ಷ ಯುಗಾದಿ ಪಂಚಮಿ ಹಬ್ಬದದಂದು ಆಚರಿಸಲ್ಪಡುತ್ತದೆ. ಊರಲ್ಲಿ ಬಸವಣ್ಣ, ಮಂಗಳೇಶ್ವರ ಗುಡ್ಡದ ಮಲ್ಲಿಕಾರ್ಜುನ, ಸಿದ್ದಪ್ಪ ಹನುಮಂತ, ದೇವಮ್ಮ, ಮರಗಮ್ಮ ಮುಂತಾದ ಗುಡಿಗಳಿದ್ದು, ಮಸ್ತಾನ ಖಾದ್ರಿ ಎಂಬ ಪ್ರಸಿದ್ಧ ದರ್ಗಾವಿದೆ. ದರ್ಗಾದ ಉರುಸು ಎಪ್ರಿಲ್‌ನಲ್ಲಿ ನಡೆಯುತ್ತದೆ.

(ಪಿಕೆಕೆ)

ಚೇಳಿನ ಆರಾಧನೆ: ಬೆಟ್ಟ ಹತ್ತಿ, ಚೇಳುಗಳನ್ನು ಹಿಡಿಯುವ ತವಕ ಎಲ್ಲರಲ್ಲಿಯೂ ಇತ್ತು. ಮಹಿಳೆಯರು, ಮಕ್ಕಳು ಬೆಟ್ಟದಲ್ಲಿನ ಕಲ್ಲುಗಳನ್ನು ತೆಗೆದು ಚೇಳುಗಳನ್ನು ಹುಡುಕುವ ಹುಮ್ಮಸ್ಸಿನಲ್ಲಿದ್ದರು. ಚೇಳು ಸಿಕ್ಕೊಡನೆ ನಿಧಿ ಸಿಕ್ಕಂತೆಯೇ ಕೇಕೆ ಹೊಡೆದು ಸಂಭ್ರಮಿಸಿದರು.

ಯಾದಗಿರಿ ತಾಲ್ಲೂಕಿನ ಕಂದಕೂರಿನಲ್ಲಿ ಗುರುವಾರ ನಾಗರ ಪಂಚಮಿ ನಿಮಿತ್ತ ಚೇಳುಗಳ ಪೂಜೆ ನಡೆಯಿತು. ಎಲ್ಲೆಡೆಯೂ ನಾಗಪ್ಪನ ಮೂರ್ತಿಗಳಿಗೆ ಹಾಲೆರೆದು ಸಂಭ್ರಮಿಸುವ ಸಂಪ್ರದಾಯವಿದ್ದರೆ. ಕಂದಕೂರಿನಲ್ಲಿ ಮಾತ್ರ ಈ ವಿಭಿನ್ನ ಸಂಪ್ರದಾಯ ದಶಕಗಳಿಂದಲೇ ನಡೆದುಕೊಂಡು ಬಂದಿದೆ. ನಾಗಪ್ಪನ ಬದಲು ಇಲ್ಲಿ ಚೇಳುಗಳಿಗೆ ಪೂಜೆ ಮಾಡಲಾಗುತ್ತದೆ.



ಕಂದಕೂರು ಗ್ರಾಮದ ಪಕ್ಕದಲ್ಲಿರುವ ಬೆಟ್ಟದ ಮೇಲೆ ಕೊಂಡಮಾಯಿ ದೇವಿಯ ದೇವಸ್ಥಾನವಿದೆ. ಪಂಚಮಿಯಂದು ಕೊಂಡಮಾಯಿಗೆ ವಿಶೇಷ ಪ್ರಜೆ, ಅಭಿಷೇಕ ಮಾಡಲಾಗುತ್ತದೆ. ಸಾವಿರಾರು ಭಕ್ತಾದಿಗಳು ಕೊಂಡಮಾಯಿ ದೇವಿಗೆ ಕೈಮುಗಿದು, ಚೇಳು ಹಿಡಿಯುವ ಕೆಲಸದಲ್ಲಿ ನಿರತರಾಗುತ್ತಾರೆ. ವಿಶೇಷವಾಗಿ ಚಿಕ್ಕ ಮಕ್ಕಳೇ ಹುಮ್ಮಸ್ಸಿನಿಂದ ಕಲ್ಲುಗಳನ್ನು ತೆಗೆದು ಚೇಳುಗಳನ್ನು ಹುಡುಕುತ್ತಾರೆ.


ಸಿಕ್ಕ ಚೇಳುಗಳನ್ನು ಕೈ, ಮೈಗಳ ಮೇಲೆ ಆಡಿಸಿಕೊಳ್ಳುವುದಷ್ಟೇ ಅಲ್ಲ, ನಾಲಿಗೆಯ ಮೇಲೂ ಇಟ್ಟುಕೊಂಡು ಸಂಭ್ರಮಿಸುತ್ತಾರೆ. ಇಲ್ಲಿನ ಜನರು ಚೇಳುಗಳನ್ನು ಸುಲಭವಾಗಿ ಹಿಡಿಯುತ್ತಾರೆ. ಆದರೆ ಹೊರಗಿನಿಂದ ಭಕ್ತರಿಗೆ ಇದು ಸುಲಭವಲ್ಲ. ಸ್ಥಳೀಯರು ಹೇಳುವ ಪ್ರಕಾರ ಇಲ್ಲಿ ಪಂಚಮಿಯಂದು ಚೇಳುಗಳು ಕಚ್ಚುವುದಿಲ್ಲ. ಆದರೆ ಗುರುವಾರ ಬೆಟ್ಟ ಏರಿ, ಚೇಳು ಹಿಡಿಯುವ ಸಾಹಸ ಮಾಡಿದ ಹೊರಗಿನ ಮೂವರು ಭಕ್ತರಿಗೆ ಚೇಳು ಕಚ್ಚಿವೆ. ಬೆಟ್ಟದ ಕೆಳಗಡೆ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಲಾಯಿತು.

(ಪಿ.ಕೆ.ಕೆ.)

ಚೌ

ಚೌಕಾಬಾರ: ಜನಪದ ಆಟಗಳಲ್ಲಿ ಒಂದು. ಹೆಣ್ಣುಮಕ್ಕಳು ವಿಶೇಷವಾಗಿ ಗಂಡಸರು ವಿರಳವಾಗಿ ಆಡುವ ಆಟ. ಬಿಡುವಿನ ವೇಳೆಯಲ್ಲಿ ಸಮಯ ಕಳೆಯಲು ಇಬ್ಬರು, ಮೂರುಜನ, ನಾಲ್ಕು ಜನ ಸೇರಿ ಒಂದೆಡೆ ಕುಳಿತು ಆಡುವ ಆಟ. ಕಟ್ಟಿಗೆಯ ಮಣೆಯ ಮೇಲೆ, ಕಲ್ಲಿನ ಮೇಲೆ ಅಥವಾ ಕಟ್ಟೆಯ ಮೇಲೆ ಇದ್ದಿಲು, ಸೀಮೆ ಸುಣ್ಣ ಅಥವಾ ವಿಭೂತಿಯಿಂದ ಗೆರೆ ಎಳೆದು ಮನೆ ಬರೆಯುತ್ತಾರೆ. ಸಾಮಾನ್ಯವಾಗಿ ದೇವಸ್ಥಾನದ ಕಟ್ಟೆಯ ಮೇಲೆ ಈ ಮನೆಯನ್ನು ಕಲ್ಲಿನಲ್ಲಿ ಕೆತ್ತಿರುತ್ತಾರೆ. ಐದು ಮನೆ ಅಥವಾ ಏಳು ಮನೆಗಳ ಆಟ ಇದಾಗಿರುತ್ತದೆ. ಏಳು ಮನೆಗಿಂತ ಐದು ಮನೆಯಾಟ ಹೆಚ್ಚು ಜನಪ್ರಿಯವಾದುದು.

ಈ ಆಟದಲ್ಲಿ ವಿವಿಧ ಬಣ್ಣದ ಬಳೆಯ ಚೂರುಗಳನ್ನು ಕಾಯಿಗಳಾಗಿ ಸಾಮಾನ್ಯವಾಗಿ ಬಳಸುತ್ತಾರೆ. ಒಬ್ಬರ ಕಾಯಿಯ ಬಣ್ಣ ಒಂದು ಕೆಲವೊಮ್ಮೆ ಸೀತಾಫಲ ಬೀಜ, ಚಿಕ್ಕ ಚಿಕ್ಕ ಕಲ್ಲುಗಳು, ಬಣ್ಣ ಬಣ್ಣದ ಗುಂಡಿಗಳೂ ಕಾಯಿಗಳ ಸ್ಥಾನ ಪಡೆಯುತ್ತವೆ. ಒಬ್ಬರಿಗೆ ಒಂದು ಬಣ್ಣದಂತೆ ನಾಲ್ಕು ಬಣ್ಣದ ಬಳೆ ಚೂರುಗಳನ್ನು ನಾಲ್ಕು ನಾಲ್ಕರಂತೆ ಒಂದೊಂದು ಮನೆಗಳಲ್ಲಿ ಇರಿಸುತ್ತಾರೆ. ಹುಂಚಿಕಪ್ಪ ಅಥವಾ ಹುಣಸಿ ಬೀಜಗಳನ್ನು ತುಂಡಾಗದಂತೆ ಎರಡು ಹೋಳಾಗಿ ಒಡೆದು ದಾಳಗಳನ್ನು ತಯಾರಿಸಿಕೊಳ್ಳುತ್ತಾರೆ. ಇಲ್ಲವೆ ಕವಡೆಗಳನ್ನು ದಾಳವಾಗಿ ಬಳಸುತ್ತಾರೆ. ಕಾಯಿಗಳು ಹಣ್ಣಾಗಲು ಆಟದ ಮನೆಯ ನಟ್ಟ ನಡುವಿನ ಮನೆಗೆ ಹೋಗಬೇಕು. ಹೊರ ಆವರಣದಲ್ಲಿ ನಾಲ್ಕು ಮನೆಗಳಿದ್ದು ನಟ್ಟ ನಡುವೆ ಒಂದು ಮನೆ ಇರುತ್ತವೆ. ಉಳಿದ ಗುಣಾಕಾರ ಚಿಹ್ನೆಯ ಚೌಕಗಳನ್ನು ಕಟ್ಟೆ ಎನ್ನುತ್ತಾರೆ. ಒಳ ಮನೆ ಪ್ರವೇಶಿಸಲು ಕಡಿತ ಸಿಗಬೇಕು. ಅಂದರೆ ಇನ್ನೊಬ್ಬರ ಕಾಯಿಯನ್ನು ಕಡಿದು ಮರಳಿ ಮನೆಗೆ ಕಳಿಸಬೇಕು. ಕಟ್ಟೆಯಲ್ಲಿರುವ ಕಾಯಿಯನ್ನು ಕಡಿಯಲು ಬರುವುದಿಲ್ಲ. ಕಡಿತ ಸಿಕ್ಕ ಬಳಿಕ ಒಳಮನೆಗೆ ಹೋಗುವ ಕಾಯಿಗಳು ತಮ್ಮ ತಮ್ಮ ಮನೆಗಳ ಎಡ ಪಕ್ಕದ ಮೂಲೆಯಿಂದ ಒಳ ಸೇರಿ ಬಲದಿಂದ ಹಣ್ಣಾಗುವ ಮನೆಯನ್ನೇ ಸೇರುತ್ತವೆ. ಕಡಿತ ಸಿಕ್ಕ ಮೇಲೂ ಎದುರಾಳಿಯ ದಾಳಿಗೆ ಸಿಕ್ಕು ಎಲ್ಲ ಕಾಯಿಗಳು ಮರಳಿ ಮನೆಗೆ ಬಂದರೆ ಪುನಃ ಕಡಿತ ಸಿಗದೆ ಆಟ ಮುಗಿದರೆ ಸೋತವರು ಹಸಿಕಾಯಿ ತಿಂದಂತೆ ಎಂದರೆ ತೀರ ಹೀನಾಯ ಸೋಲು ಅನುಭವಿಸಿದಂತೆ, ದಾಳ ಹಾಕಿದಾಗ ಬಿಳಿಭಾಗ ಮೇಲಾಗಿ ಒಂದು ಬಿದ್ದರೆ ಒಚ್ಚಿ, ಎರಡು ಬಿದ್ದರೆ ದೋನಿ, ಮೂರು ಬಿದ್ದರೆ ತೀನಿ, ನಾಲ್ಕು ಬಿದ್ದರೆ ಚಕ್ಕಾ ನಾಲ್ಕೂ ದಾಳಗಳು ಬೋರಲು ಎಂದರೆ ಕಂದುಭಾಗ ಮೇಲಾಗಿ ಬಿದ್ದರೆ ಎಂಟು ಎಂದು ಲೆಕ್ಕ. ಒಂದೇ ಕಾಯಿ ಉಳಿದು ಹೆಚ್ಚು ಅಂಕಿ



ಪಗಡೆ ಆಟ

ಬಂದರೆ ಕಾಯಿ ಸುತ್ತುತ್ತಲೇ ಇರಬೇಕು. ಇಲ್ಲವೇ ಇದ್ದಲ್ಲೇ ಇರಬೇಕು.

ಏಳು ಮನೆಯಾಟದಲ್ಲಿ ಆರು ಕಾಯಿ ಆರು ಕವಡಿ ಇಲ್ಲವೆ ಹುಣಸಿ ಬೀಜದ ದಾಳಗಳಿರುತ್ತವೆ. ಈ ಆಟದಲ್ಲಿ ಜೂಗಕ್ಕೆ ಮಹತ್ವ ಇದೆ. ಜೂಗ ಎಂದರೆ ಜೋಡಿ, ಎರಡು ಕಾಯಿಗಳು ಒಟ್ಟಾಗಿ ಸಾಗಬೇಕು. ಜೂಗವಾಗಬೇಕೆಂದರೆ ಮನೆಯಿಂದ ಹೊರಟ ಎರಡು ಕಾಯಿಗಳು ಕಟ್ಟೆಯಲ್ಲಿ ಸೇರಿದಾಗ ಅವನ್ನು ಮುಟ್ಟಿ ಜೂಗವೆಂದು ಘೋಷಿಸಬೇಕು. ಜೂಗವಾದವರ ಒಂಟಿಕಾಯಿ ಅವರ ಜೂಗದ ಕಾಯಿಗಳನ್ನು ದಾಟಿಕೊಂಡು ಹೋಗಬಹುದು ಬೇರೆಯವರ ಕಾಯಿ ಹೋಗುವಂತಿಲ್ಲ. ಜೂಗವನ್ನು ಜೂಗ ಮಾತ್ರ ದಾಟಬಹುದು, ಹಾಗೆ ದಾಟುವಾಗ ಅವು ನಡುವಿನ ಮನೆಯಲ್ಲಿದ್ದರೆ ಕಡಿತಕೊಳ್ಳಗಾಗಿ ಮನೆಗೆ ಮರಳುತ್ತವೆ. ಈ ಆಟದಲ್ಲಿ ಕಡಿತಕ್ಕಿಂತ ಜೂಗವೇ ಮುಖ್ಯ. ಜೂಗಗಳು ಎರಡು ಅಂಕಿಗೆ ಒಂದು ಮನೆ ನಡೆಯುತ್ತವೆ. ಸಮ ಸಂಖ್ಯೆಯಲ್ಲಿ ಮಾತ್ರ ಇವುಗಳ ಚಲನೆ, ಜೂಗವೇ ಮೊದಲು ಹಣ್ಣಾಗಬೇಕೆಂಬುದು ಆಟದ ನಿಯಮ. ಒಂಟಿ ಕಾಯಿ ನಡೆ ಜೂಗದ ನಡೆ ಎರಡೂ ಇರುತ್ತವೆ.

ಈ ಆಟದ ಆಕರ್ಷಣೆ ತೀವ್ರವಾದುದು. ಒಮ್ಮೆ ಆಟದ ಆಸಕ್ತಿ ಮೂಡಿತೆಂದರೆ ಕೆಲಸ-ಬೊಗಸೆ, ಊಟ-ನಿದ್ರೆ ಬಿಟ್ಟು ಆಡುತ್ತಾರೆ. ದಾಳ ಹಾಕುವ ಚಾತುರ್ಯವಿರುವವರು ಸೋಲದೆ ಆಡುತ್ತಾರೆ. ಪಂಥ ಕಟ್ಟಿ ಆಡುವುದೂ ಇದೆ. ಚೌಕಾಬಾರ ಹೆಣ್ಣುಮಕ್ಕಳ ಪ್ರೀತಿಯ ಆಟವಾಗಿತ್ತು. ಈಗಲೂ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಅಲ್ಲಲ್ಲಿ ಕಂಡು ಬರುತ್ತದೆ. *(ಸಿಜಿಬಿ)*

ಚೌಡಮ್ಮನ ಜಾತ್ರೆ: ಕಲಬುರ್ಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಮಳ್ಳಿ ಗ್ರಾಮ ದೇವತೆ ಚೌಡೇಶ್ವರಿ ದೇವಿಯ ಜಾತ್ರೆ ಪ್ರತಿ ಎರಡು ವರ್ಷಗಳಿಗೊಮ್ಮೆ ನಡೆಯುತ್ತದೆ. ಮುಖವಾಡಗಳನ್ನು ನಿರ್ದಿಷ್ಟ ಪಡಿಸಿದ ವ್ಯಕ್ತಿಗಳು ಧರಿಸಿಕೊಂಡು, ಊರ ಪ್ರಮುಖರು ಮತ್ತು ಹರಿಜನರು ಒಟ್ಟುಗೂಡಿ ಆಡುವ ಬಡಿಗೆ ಆಟ ಹಾಗೂ ಇನ್ನಿತರ ಹಲವಾರು ವೈಶಿಷ್ಟಪೂರ್ಣವಾದ ಈ ಜಾತ್ರೆ ತನ್ನದೇ ಆದ ಮಹತ್ವ ಪಡೆದಿದೆ. ಇಂತಹ ಜಾತ್ರೆ ಕರ್ನಾಟಕದ ಯಾವುದೇ ಭಾಗದಲ್ಲಿಯೂ ಕಾಣ ಸಿಗುವುದಿಲ್ಲ.

ಗ್ರಾಮದ ದೇವಸ್ಥಾನದಲ್ಲಿ ಚೌಡೇಶ್ವರಿ ದೇವಿಯ ಎರಡು ಮುಖವಾಡಗಳಿವೆ. ಜನರು 'ಸಣ್ಣ ಚೌಡಮ್ಮ', 'ದೊಡ್ಡ ಚೌಡಮ್ಮ' ಎಂದು ಕರೆಯುತ್ತಾರೆ. ಜಾತ್ರೆಯು ಇನ್ನೂ ಹಲವು ದಿನಗಳಿರುವಾಗಲೇ ಒಳ್ಳೆಯ ಮುಹೂರ್ತ ನೋಡಿ ದೇವಿಯ ಮುಖವಾಡಗಳಿಗೆ ಬಣ್ಣ ಹಾಕಲು ಕಲಾಕಾರರನ್ನು ಆಮಂತ್ರಿಸುತ್ತಾರೆ.

ಜಾತ್ರೆಯ ಹಿಂದಿನ ದಿನದ ರಾತ್ರಿ ದೇವಿಯರನ್ನು 'ಗಂಗಸ್ಥಳ'ವೆಂದು ಕರೆಯುವ ಉಸುಕಿನ ತೋಟದಿಂದ ತರುತ್ತಾರೆ. ಜೊತೆಗೆ ಊರ ಪ್ರಮುಖರು ಡೊಳ್ಳು, ಬಾಜಾ, ಭ-ಜಂತ್ರಿ, ಕಹಳೆ, ಬ್ಯಾಂಡು ಮುಂತಾದ ವಾದ್ಯಗಳೊಂದಿಗೆ ಊರ ಸಮೀಪದ ಹಳ್ಳದ ಪಕ್ಕದ ಕಟ್ಟೆಗೆ ಕರೆದುಕೊಂಡು ಬರುತ್ತಾರೆ. ಈ ಕಟ್ಟೆಗೆ 'ಚೌಡಮ್ಮನ ಕಟ್ಟೆ' ಎಂದು ಕರೆಯುತ್ತಾರೆ. ಕಟ್ಟೆಯ ಮೇಲೆ ಮುಖಗಳನ್ನು ಪೂಜೆ ಮಾಡುತ್ತಾರೆ. ಆಗಲೇ ಊರ ಜನರೆಲ್ಲ ಜಮಾಯಿಸುತ್ತಾರೆ. ಮರುದಿನ ಮುಂಜಾನೆ ಸೂರ್ಯ ಹುಟ್ಟುವುದರೊಂದಿಗೆ ಜಾತ್ರೆಯ ಸಡಗರ ಆರಂಭ. ಊರಿನ ಎಲ್ಲ ಜನ ತಮ್ಮ ಮಂದಿ ಮಕ್ಕಳೊಂದಿಗೆ ಗುಡಿಗೆ ಬಂದು ಪೂಜೆ ಸಲ್ಲಿಸಿ, ನೈವೇದ್ಯ ಕಾಯಿ ಕರ್ಪೂರ ಅರ್ಪಿಸಿ, ಉಡಿ ತುಂಬುತ್ತಾರೆ. ಮಧ್ಯಾಹ್ನದ ಹೊತ್ತಿಗೆ ಬಡಿಗೆ ಆಡಲು ದೇವಿಯನ್ನು ಸಿದ್ಧ ಮಾಡುತ್ತಾರೆ. ಕೀರಿಟವನ್ನು ಹೂವಿನ ಮಾಲೆಗಳಿಂದ ಅಲಂಕರಿಸುತ್ತಾರೆ.

ಈ ಜಾತ್ರೆಯಲ್ಲಿ ಮುಖವಾಡ ಧರಿಸಿ ಬಡಿಗೆ ಆಟ ಆಡಲು ಎಲ್ಲರಿಗೂ ಅವಕಾಶವಿರುವುದಿಲ್ಲ. ಹೆಚ್ಚಾಗಿ 'ಬಡಿಗ ಜನಾಂಗ'ಕ್ಕೆ ಸೇರಿದ ಪುರುಷರಿಗೆ ಮಾತ್ರ ಅವಕಾಶವಿದೆ. ಅವರು ಕೈಯಲ್ಲಿ ಬೆಳ್ಳಿಯ ಕಡಗ ಹಾಕಿಕೊಳ್ಳುತ್ತಾರೆ. ದೇವಿಯ ಮುಖವಾಡ ಧರಿಸಿದ ವ್ಯಕ್ತಿಯನ್ನು ಈ ಸಂದರ್ಭದಲ್ಲಿ 'ದೇವಿ'ಯೆಂದು ತಿಳಿದು ಪೂಜ್ಯ ಭಾವನೆಯಿಂದ ಕಾಣುವುದು ಇಲ್ಲಿನ ವಿಶೇಷ. ಅಲಂಕೃತ ದೇವಿಯರನ್ನು ಮಂಗಳವಾದ್ಯಗಳೊಂದಿಗೆ 'ಗೌಡರಕಟ್ಟೆ'ಗೆ ಕರೆತಂದು ಕೂಡಿಸಿದಾಗ, ಈ ದೇವತೆಗಳು ಬಿಚ್ಚುಗತ್ತಿಯೊಂದಿಗೆ ಬರುವಾಗ, ಯುದ್ಧಕ್ಕೆ ಹೊರಟ 'ಚಾಮುಂಡಿ'ಯರಂತೆ ಕಾಣುತ್ತಾರೆ.

ದೇವಿಯ ಜೊತೆ ಬಡಿಗೆ ಆಟ ಆಡಲು ಹರಿಜನರಿಗೆ ಆಹ್ವಾನ ಕೊಡಲು ಕೆಲವು ಪ್ರಮುಖರು ಸೇರಿ, ವಾಲೀಕಾರರು ಮತ್ತು ವಾದ್ಯ ಮೇಳದವರೊಂದಿಗೆ ಅವರ ಓಣಿಗೆ ಹೋಗುತ್ತಾರೆ. ಹರಿಜನ ಜನಾಂಗಕ್ಕೆ ಸೇರಿದ ಎರಡು ಪಂಗಡದವರು ಇಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಆಹ್ವಾನ ಕೊಡುತ್ತಲೇ ನೂರಾರು ಜನ ಹರಿಜನರು ಆಗಲೇ ಸಿದ್ಧಪಡಿಸಿಟ್ಟುಕೊಂಡ ಬಡಿಗೆಗಳನ್ನೆತ್ತಿಕೊಂಡು ಓಡುತ್ತಾ ಕೂಗು ಹಾಕುತ್ತಾ ಯುದ್ಧಕ್ಕೆ ಹೊರಟ ಸಿಪಾಯಿಗಳಂತೆ ಆವೇಶದಿಂದ ನುಗ್ಗಿ ಬರುವ ದೃಶ್ಯ ನೋಡಲು ಭಯಂಕರವಾಗಿರುತ್ತದೆ.

ಅವರು ಹಣೆಗೆ ಹಳದಿ ಭಂಡಾರ ಬಳಿದುಕೊಂಡಿರುತ್ತಾರೆ. ಆಗ ಎರಡನೆಯ ಆಗಸಿ ಬಾಗಿಲ ಬಳಿ ಉರಗೌಡ-ಕುಲಕರ್ಣಿಯವರ ಮನೆತನಕ್ಕೆ ಸೇರಿದವರು ಗಂಧದ ಬಟ್ಟಲು ಹಿಡಿದುಕೊಂಡು ನಿಂತಿರುತ್ತಾರೆ. ಓಡುತ್ತಾ ಬಂದ ಆ ಎರಡು ಗುಂಪಿನ ಮುಖಂಡರಲ್ಲಿ ಯಾರು ಮೊದಲು ಗಂಧದ ಬಟ್ಟಲು ಹಿಡಿದು ನಿಂತವರನ್ನು ಮುಟ್ಟುವರೋ, ಆ ಪಂಗಡದವರು ತಮ್ಮವರೊಂದಿಗೆ 'ತಂಗಿ (ಸಣ್ಣ) ಚೌಡಮ್ಮನೆದುರು ಆಡುತ್ತಾರೆ. ಮೊದಲು ಬಡಿಗೆ ಏಟು ಅವಳಿಂದಲೆ ಇನ್ನೊಂದು ಪಂಗಡ ದೊಡ್ಡ ಚೌಮ್ಮ'ನೆದುರು ಆಡುತ್ತಾರೆ. ಪ್ರತಿ ಜಾತ್ರೆಗೂ ಒಂದು ಪಂಗಡವೇ ಮೊದಲು ಮುಟ್ಟಿ ಆಡುವುದು. ಆತನ ಕೈಯಲ್ಲಿ ನಾಲ್ಕು ಬಡಿಗೆಗಳಿರುತ್ತವೆ. ಒಂದನ್ನು ದೇವಿಗೆ ಮತ್ತೆರಡು ಪ್ರಮುಖರಿಬ್ಬರಿಗೂ ಕೊಟ್ಟು ತಾನೊಂದು ತೆಗೆದುಕೊಳ್ಳುತ್ತಾನೆ.

ನಿಯಮಕ್ಕನುಗುಣವಾಗಿ ಆಯಾ ಗುಂಪಿನ ಹರಿಜನರು ದೊಡ್ಡ ಮತ್ತು ಸಣ್ಣ ಚೌಡಮ್ಮನ ಸುತ್ತ ಜಮಾಯಿಸುತ್ತಾರೆ. ಚೌಡಮ್ಮ ದೇವಿಯ ಎದುರುಗಡೆ ನಿಂತ ಬಡಿಗೆ ಹಿಡಿದವರು ವರ್ತುಲಾಕಾರದಲ್ಲಿ ಜಮಾಯಿಸಿ ಬಡಿಗೆಗಳನ್ನು ಒಂದರ ಮೇಲೊಂದು ಒಟ್ಟಾಗಿ ಹಂದರಕ್ಕೆ ರಚಿಸಿರುತ್ತಾರೆ. ಬಡಿಗೆಯ

ಹಂದರಕ್ಕೆ ಆಧಾರ ಒದಗಿಸಲು ಒಂದಿಬ್ಬರು ವ್ಯಕ್ತಿಗಳು ದೊಡ್ಡ ಬಡಿಗೆಗಳ ಸಹಾಯ ಪಡೆದುಕೊಂಡು ಅದರ ಕೆಳಗೆ ಬಗ್ಗಿ ನಿಂತಿರುತ್ತಾರೆ. ಹಿಂದೆ ನಿಂತವರು ಬಡಿಗೆಗಳನ್ನು ಮೇಲೆ ಎತ್ತಿಕೊಂಡು ಕೂಗು ಹಾಕುತ್ತಾ ಹಿಂಬಾಲಿಸುತ್ತಾರೆ.

ಬಡಿಗೆ ಆಟ ಆರಂಭವಾದಾಗ ಹಲಿಗೆಗಳ ನಾದಕ್ಕೆ ತಕ್ಕಂತೆ ದೇವಿಯ ಮುಖ ಧರಿಸದವರು ಮತ್ತು ಎಡಬಲದವರು ಎದುರಿನ ಬಡಿಗೆಯ ಹಂದರಕ್ಕೆ ಏಟು ಹಾಕುತ್ತಾರೆ. ಏಟಿನ ರಭಸಕ್ಕೆ ಬಡಿಗೆ ಹಂದರ ಕೆಳಕ್ಕೆ ಕುಸಿದಂತೆ ಕಂಡು ಬರುತ್ತದೆ. ಆಗ ಕೂಡಲೇ ಎಲ್ಲರೂ ಇಡೀ ಹಂದರ ಮೇಲಕ್ಕೆತ್ತುತ್ತಾರೆ. ಕೆಳಗೆ ಆಧಾರ ಕೊಟ್ಟು ನಿಂತವರು ಸಹಾಯ ಮಾಡುತ್ತಾರೆ. ಕೆಳಗಿನಿಂದ ಹಂದರ ಮೇಲಕ್ಕೆತ್ತುತ್ತಲೇ ಮತ್ತೆ ಅದಕ್ಕೆ ಏಟು ಬೀಳುತ್ತದೆ. ಅದು ಕೆಳಕ್ಕೆ ಕುಸಿಯುತ್ತದೆ. ಇದೇ ರೀತಿ ಆಟ ಆಡುತ್ತಾ ಮುಂದೆ ಸಾಗುವಾಗ, ಮುಖವಾಡ ಧಾರಿಗಳು ಆಚೆ ತಲೆಯನ್ನು ಲಯಬದ್ಧವಾಗಿ ಹೊಯ್ದಾಡಿಸುತ್ತಾರೆ. ಜೊತೆಗೆ ಎಡಬಲಕ್ಕೆ ಇರುವವರು ಕಾಲು ಮೇಲೆತ್ತಿ ತಾಲಕ್ಕೆ ತಕ್ಕಂತೆ ಕಾಲೆತ್ತಿ ಕುಣಿಯುತ್ತ ಶಕ್ತಿಯಿಂದ ಏಟು ಹಾಕುವುದು ಕಲಾತ್ಮಕವಾಗಿ ಇರುತ್ತದೆ. ದೇವಿಯ ಎಡಬಲ್ಲದಲ್ಲಿರುವ ಹಲಿಗೆಗಳ ನಾದಕ್ಕೆ ತಕ್ಕಂತೆ ಹೆಜ್ಜೆ ಹಾಕುವಲ್ಲಿ ವಿಶೇಷವಿದೆ.

ದೃಷ್ಟಿ ತಮಾಷೆ: ರುದ್ರರಮಣೀಯ, ವರ್ಣರಂಜಿತ ಈ ದೃಶ್ಯ ತದೇಕ ಚಿತ್ತದಿಂದ ದೇವಿಯರನ್ನು ದಿಟ್ಟಿಸಿದರೆ 'ದೃಷ್ಟಿ' ತಾಗುತ್ತದೆ ಎಂಬ ನಂಬಿಕೆ ಇದೆ. ಆದ್ದರಿಂದ ಇದನ್ನು ತಪ್ಪಿಸಲು, 'ತಳವಾರ' ಜನಾಂಗಕ್ಕೆ ಸೇರಿದವರಲ್ಲಿ ಒಂದಿಬ್ಬರು ಬುಟ್ಟಿಗಳಲ್ಲಿ ಕಿಚಡಿಯನ್ನು, ಮತ್ತೊಬ್ಬನು ಸಗಣಿ ತುಂಬಿಕೊಂಡು, ಆಗಾಗ ಜನರತ್ತ ಎಸೆಯುತ್ತಾ ಅಡ್ಡಾಡಿಕೊಂಡಿರುತ್ತಾರೆ. ಆಗ ದೃಷ್ಟಿ ತಾನಾಗಿಯೇ ಬೇರೆ ಕಡೆ ಹರಿಯುತ್ತದೆ. ಆಟ ನಡೆದಿರುವಾಗ ಆಟಕ್ಕೆ ಜನಗಳಿಂದ ಆಡಚಣೆಯಾಗದಿರಲೆಂದು 'ಅಗಸರ' ವ್ಯಕ್ತಿಯೊಬ್ಬ ಕೆಸರಿನಲ್ಲಿ ಅದ್ದಿದ ಕೌದಿಯನ್ನು ಮೈಗೆಸುತ್ತಿಕೊಂಡು ರಸ್ತೆಗಡ್ಡವಾಗಿ ಬರುವ ಇತರೆ ಜನಗಳಿಗೆ ಒರೆಸುತ್ತಾ ಸಾಗುತ್ತಾನೆ. ಆಗ ಜನ ತಮ್ಮ ಬಟ್ಟೆ ಎಲ್ಲಿ ಹೊಲಸಾದಿತೋ ಎಂದು ದೂರಕ್ಕೆ ಸರಿಯುತ್ತಾರೆ. 'ಕ್ಷೌರಿಕ' ಜನಾಂಗಕ್ಕೆ ಸೇರಿದ ಮತ್ತೊಬ್ಬ ಬಂದು ಜನರ ಗಮನ ತನ್ನೆಡೆ ಸೆಳೆಯುತ್ತಾನೆ.

ಆನಂತರ 'ಚೌಡಮ್ಮನ ಕಟ್ಟೆಯ' ಮೇಲೆ ದೇವಿಯರನ್ನಿಟ್ಟು ಮುಖವಾಡಗಳನ್ನು ಧರಿಸಿದವರು ಬಿಚ್ಚಿ ವಿಶ್ರಾಂತಿ ತೆಗೆದುಕೊಳ್ಳುತ್ತಾರೆ. ರಾತ್ರಿ ಮತ್ತೆ ಜನ ಸೇರಿ, ಡೊಳ್ಳಿನ ಕುಣಿತ, ಹಾಡು, ಕೊಳಲ ನಾದ, ದೇವರ ಹೇಳಿಕೆಗಳು, ನರ್ತನ ನಡೆಯುತ್ತವೆ. ಮಧ್ಯರಾತ್ರಿಯ ಶಾಂತ ವಾತಾವರಣ ಭೇದಿಸಿ, ಬಹುದೂರ ಡೊಳ್ಳಿನ ಕೊಳಲಿನ ನಾದ ಕೇಳುತ್ತದೆ. ಮಧ್ಯರಾತ್ರಿ ಮೀರಿದ ನಂತರ ನಸುಕಿನಲ್ಲಿ ದೇವಿಯವನ್ನು ಕರೆದುಕೊಂಡು ಎಲ್ಲರೂ ಸಕಲ ವಾದ್ಯಗಳೊಂದಿಗೆ ಊರೊಳಗೆ ಬರುತ್ತಾರೆ.

'ನಾಯಿಕೊಡಿ' ಕಟ್ಟೆಯ ಮೇಲೆ ಉಡಿ ತುಂಬಿಸುವುದು, 'ಅಗಸರ' ಮನೆಗೆ ಹೋಗಿ ಹೊಸ ವಸ್ತ್ರ ಧರಿಸುವ ಶಾಸ್ತ್ರ, ನಂತರ ತವರೆಂದು ಕರೆಯುವ ಕೋರವಾರ ಅವರ ಮನೆಗೆ ಹೋಗಿ ಅನ್ನ ಪಾಯಸದ ಊಟದ ಶಾಸ್ತ್ರ ಮುಗಿಸಿ ಮುಂದೆ ಪೊಲೀಸಗೌಡ ಮತ್ತು ಮಾಲಿಗೌಡರ ಮನೆಗಳಿಗೆ ತೆರಳುತ್ತಾರೆ. ಇಲ್ಲಿ ಮುಖವಾಡ ಕಳಚಿಟ್ಟು ನೈವೇದ್ಯ ಸ್ವೀಕರಿಸುತ್ತಾರೆ. ಇಷ್ಟೊತ್ತಿಗೆ ನಸುಕು ಹರಿಯುತ್ತದೆ. ಕೊನೆಗೆ ಕುಲಕರ್ಣಿಯ ಮನೆ ಭೇಟಿ ತಲಬಾಗಿಲಲ್ಲಿ ಕಾಲು ತೊಳೆದು ಆರತಿ ಮಾಡಿ, ಈಡುಗಾಯಿ ಒಡೆದು ದೇವಿಯರನ್ನು ಸ್ವಾಗತಿಸಲಾಗುತ್ತದೆ. ಅವರಿಗೆ ಒರಗಿ ಕುಳಿತುಕೊಳ್ಳಲು ಗೋದಿ ಚೀಲವೇ ಆಗಬೇಕು. ನಂತರ ಪೂಜೆ, ನೈವೇದ್ಯ, ಕಾಯಿ, ಕರ್ಪೂರ, ಉಡಿ ತುಂಬುವಿಕೆ ಮುಂತಾದ ಶಾಸ್ತ್ರಗಳು ನಡೆಯುತ್ತದೆ. ಈ ಜಾತ್ರೆ ಎಂದಿನಿಂದ ಪ್ರಾರಂಭವಾಯಿತೋ ಗೊತ್ತಿಲ್ಲ. ಆದರೆ ಈ ವೈಶಿಷ್ಟಪೂರ್ಣ ಜಾತ್ರೆ ಇಂದಿಗೂ ತನ್ನ 'ಜನಪದ' ಸೊಗಡನ್ನು ಉಳಿಸಿಕೊಂಡು ಬಂದಿದೆ. *(ಆರ್‌ಕೆಎಂ)*

ಚೌಡಿಕೆ ಮೇಳ: ಎಲ್ಲಮ್ಮನ ಭಕ್ತರು ಅವಳ ಕಥೆ ಹಾಡುತ್ತ ಕುಣಿಯುವ ಮೇಳ. ಎಲ್ಲಮ್ಮನ ಭಕ್ತರು–ಆಕೆಯ ಹೆಸರಿನ ಮೇಲೆ ಜಗಹೊತ್ತ ಹೆಂಗಸರು, ಸೀರೆ ಉಟ್ಟ ಗಂಡಸರು ಬಿಟ್ಟರೆ ಜೀವನವೇ ಇಲ್ಲ. ಎಲ್ಲಮ್ಮನನ್ನು ಹಾಡಿ ಹೊಗಳಲು, ಸ್ತುತಿ ಮಾಡಲು, ಅವಳ ಮಹಿಮೆ ಸಾರಲು ಈ ಹಾಡು ಬೇಕೆ ಬೇಕು. ಈ ಎಲ್ಲ ಕಾರ್ಯಗಳು ಜರುಗದಿದ್ದರೆ ತಮಗೆ ಮೋಕ್ಷವಿಲ್ಲ. ಸುಖ–ಸಂತೋಷಗಳಿಲ್ಲ ಎಂಬುದು ಅವರ ನಂಬುಗೆ.



ಚೌಡಿಕೆ ಮೇಳ

ಚೌಡಿಕೆ ಮೇಳವು ಗೀಗೀ ಹಾಗೂ ಗೊಂದಲಿಗರ ಮೇಳವನ್ನು ಬಹುತೇಕ ಎಲ್ಲ ಅಂಶಗಳಲ್ಲಿ ಹೋಲುತ್ತಿರುತ್ತದೆ. ಈ ಮೂರು ಮೇಳಗಳಲ್ಲಿ ಶ್ರುತಿಚೌಡಿಕೆ ಸಾಮಾನ್ಯವಾಗಿ ಕಾಣಿಸುತ್ತದೆ. ಗೀಗೀ ಮೇಳದಲ್ಲಿ ಕಾಣಿಸುವ ಡಪ್ಪು, ಗೊಂದಲಿಗರ ಮೇಳದಲ್ಲಿಯ ಸಂಬಾಳಗಳ ಬದಲಾಗಿ ಇಲ್ಲಿ ಬಾರ್ಕಿ ಚೌಡಿಕೆ ಬಳಕೆಯಗುತ್ತದೆ. ಅಂದರೆ ಡಪ್ಪು ಹಾಗೂ ಸಂಬಾಳ ಮಾಡುವ ಕೆಲಸವನ್ನೇ ಇಲ್ಲಿ ಬಾರ್ಕಿ ಚೌಡಿಕೆ ಮಾಡುತ್ತದೆಂಬುದು ಗಮನಾರ್ಹ ಅಂಶ.

ಈ ಮೂರು ಮೇಳದಲ್ಲಿ ಮುಖ್ಯವಾಗಿ ಹಾಡುಗಾರ ಒಬ್ಬನೇ ಆಗಿದ್ದು, ಆತನೇ ಒಂದು ಮುಖ್ಯ ವಾದ್ಯವನ್ನು ಬಾರಿಸುತ್ತಿರುತ್ತಾನೆ. ಒಂದು ಮೇಳದಲ್ಲಿ ವಾದ್ಯದ ಉಪಯೋಗವಿದ್ದು, ಅದೂ ಮುಖ್ಯ ಹಾಡುಗಾರನೇ ಆ ವಾದ್ಯವನ್ನು ಬಾರಿಸುತ್ತಿದ್ದರೆ– ಅಲ್ಲಿಯ ಮುಮ್ಮೇಳದಲ್ಲಿ ಕೇವಲ ಒಬ್ಬನೇ ಹಾಡುಗಾರ ಕಾಣಿಸಿಕೊಳ್ಳುತ್ತಾನೆ– ಎಂಬ ಸಾಮಾನ್ಯ ನಿಯಮವೊಂದು ಇಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ವಾದ್ಯವಿಲ್ಲದ ಮೇಳದಲ್ಲಿ ಒಬ್ಬರಿಗಿಂತ ಹೆಚ್ಚಿಗೆ, ಅಂದರೆ ಇಬ್ಬರು ಮುಮ್ಮೇಳದಲ್ಲಿ ಕಾಣಿಸಿಕೊಳ್ಳುತ್ತಾರೆ. ಉದಾಹರಣೆ: ಹಂತಿ, ಮೋಹರಂ, ಹಾಗೂ ಯಾವುದೇ ತರಹದ ಹೆಂಗಸರ ಹಾಡುಗಳನ್ನು ಗಮನಿಸಬಹುದು. ಒಟ್ಟಿನಲ್ಲಿ ವಾದ್ಯವಿರುವ ಒಬ್ಬನೇ ಹಾಡುಗಾರನಾಗಿದ್ದು, ಇನ್ನು ಉಳಿದ ವಾದ್ಯಗಳೊಂದಿಗೆ ಇಬ್ಬರು ಮೂವರು ಅಥವಾ ಹೆಚ್ಚಿನ ಜನ ಹಿಮ್ಮೇಳದಲ್ಲಿ ಭಾಗವಹಿಸುತ್ತಾರೆ. ಚೌಡಿಕೆ ಮೇಳದಲ್ಲಿ ಶ್ರುತಿಚೌಡಿಕೆಯೊಂದಿಗೆ ಹಿಮ್ಮೇಳ ಕಾಣಿಸುತ್ತದೆ.

ಚೌಡಿಕೆ ಸಂಪ್ರದಾಯದಲ್ಲಿ ಎಲ್ಲಮ್ಮನ ಚರಿತ್ರೆ ಹಾಗೂ ಅನೇಕ ಬಗೆಯ ಕಥನಕವನಗಳನ್ನು ಹಾಡುವ ಧಾಟಿಗಳು ಮೇಲು ನೋಟಕ್ಕೆ ರಂಜನೀಯವೆನಿಸಿದರೂ, ಅವು ಮನಸ್ಸಿನ ಆಳದಲ್ಲಿ ತೀರ ಗಂಭೀರವಾದ ಭಯ–ಭಕ್ತಿಯ ಭಾವವನ್ನು ಉದ್ದೀಪನಗೊಳಿಸುವ ಧಾಟಿಗಳಾಗಿವೆ. ಎಲ್ಲಮ್ಮನ ಬಗೆಗೆ ಜನಪದರ ಮನಸ್ಸಿನಲ್ಲಿರುವ ಭಯ. ಸಮರ್ಪಣಭಾವ, ಆಕೆಯ ರೌದ್ರಾವತಾರದ ಕಲ್ಪನೆ ಮುಂತಾದುವುಗಳನ್ನು ಬಹು ಸ್ಪಷ್ಟವಾಗಿ ಕೇಳುಗರ ಮನಸ್ಸಿನ ಮೇಲೆ ಮುದ್ರೆಯೊತ್ತುತ್ತವೆ. ಒಂದು ರೀತಿಯ ಗೋಳೋ ಎಂದು ರೋಧಿಸುವ, ಹಂಬಲಿಸುವ ಈ ಧಾಟಿಗಳ ಆರ್ತನಾದ– ಅನಾಥ ಭಾವನೆಗಳನ್ನು ಬಡಿದೆಬ್ಬಿಸುತ್ತದೆ!

ಹೆಚ್ಚಾಗಿ ಹೆಂಗಸರು ಹಾಡುವ ಸ್ತುತಿ ಪರವಾದ ಬಿಡಿ ಹಾಡುಗಳ ಧಾಟಿಗಳು ಗೀಗೀ ಹಾಡುಗಳಲ್ಲಿಯ ಖ್ಯಾಲಗಳ ಧಾಟಿಗಳನ್ನು ಹೋಲುತ್ತವೆ. ಖ್ಯಾಲಗಳಂತೆ ತೀವ್ರಲಯದೊಂದಿಗೆ ಪ್ರಾರಂಭವಾಗುವ ಈ ಹಾಡುಗಳ ಪ್ರತಿ ನುಡಿಯ ಕೊನೆಯು, ಧೃತ್‌ಲಯದಲ್ಲಿ ಕೊನೆಗೊಳ್ಳುತ್ತಿರುತ್ತದೆ. ಗೀಗೀ ಹಾಡುಗಳ ಗತ್ತುಗಳನ್ನು ಡಪ್ಪಿನಮೇಲೆ ಮುರಿಯುವ ರೀತಿಯಲ್ಲೇ ಇಲ್ಲಿಯ ಗತ್ತುಗಳನ್ನು ಬಾರ್ಕಿ ಚೌಡಿಕೆಯ ಮೇಲೆ ಮುರಿಯಲಾಗುತ್ತದೆ. ಪ್ರಾರಂಭದ ಗತ್ತುಗಳು ಕೂಡ ಗೀಗೀ ಅಥವಾ ಗೊಂದಲಿಗರ ಸಂಬಾಳದ ಗತ್ತಿನಂತೆಯೇ ಅಂಕುರಿಸುತ್ತವೆ.

ಚೌಡಿಕೆ ಸಂಪ್ರದಾಯದ ಹಾಡುಗಳನ್ನು **1.** ಎಲ್ಲಮ್ಮನ ಚರಿತ್ರೆಗೆ ಸಂಬಂಧಿಸಿದ ಹಾಡುಗಳು, **2.** ಸ್ತುತಿಯ ಹಾಡುಗಳು, **3.** ಚೌಡಿಕೆ ವಾದ್ಯದೊಂದಿಗೆ ಹಾಡುವ ಇತರ ಕಥನ ಕವನಗಳು ಎಂದು ಮೂರು ಭಾಗಗಳಲ್ಲಿ ವಿಂಗಡಿಸಬಹುದು. ಒಂದನೆಯ ಪ್ರಕಾರದ ಹಾಡುಗಳಲ್ಲಿ – ಪುರಾಣದಲ್ಲಿ ಕಾಣಿಸುವ ರೇಣುಕೆ ಹಾಗೂ ಎಲ್ಲಮ್ಮ ಒಂದೇ ಎಂದು ಭಾವಿಸಿ, ಜಾನಪದೀಯ ಅಂಶಗಳ ಹಿನ್ನೆಲೆಯಲ್ಲಿ ಅವಳ ವೃತ್ತಾಂತಗಳನ್ನು ಹಾಡಿಕೊಳ್ಳಲಾಗುತ್ತದೆ. ಎಲ್ಲಮ್ಮ ಶಿವನಿಂದ ಪರಶುರಾಮನನ್ನು ಪಡೆಯುವುದು. ಪರಶುರಾಮ ತಂದೆಯನ್ನು ತೊರೆದು ಹಟಮಾಡಿ, ತಾಯಿಯನ್ನು ಪೀಡಿಸುವುದು, ಕೊನೆಗೆ ಅವಳನ್ನು ಕೊಲ್ಲುವ ಮತ್ತು ಎಲ್ಲಮ್ಮ ಜೀವಹೊಂದುವ ಪ್ರಸಂಗಗಳನ್ನಲ್ಲದೆ. ಜೋಗುಳಬಾವಿ ಸತ್ತೆವ್ವ, ನಗರಗಾಣಿಗ ಮುಂತಾದವರಿಗೆ ಸಂಬಂಧಪಟ್ಟಂತೆ ಎಲ್ಲಮ್ಮನ ಮಹಿಮೆ ಸಾರುವ ಹಾಡುಗಳೂ ಇಲ್ಲಿ ಸೇರುತ್ತವೆ.

ಸ್ತುತಿಯ ಹಾಡುಗಳು ಹೆಚ್ಚಾಗಿ ಜೋಗಾಡುವಾಗ ಹಾಗೂ ಪೂಜೆಯ ಸಮಯದಲ್ಲಿ ಬಳಕೆಯಾಗುವ ಹಾಡುಗಳಾಗಿವೆ. ಇವನ್ನು ಗಂಡಸರು ಪ್ರಾಸಂಗಿಕವಾಗಿ ಹಾಡಿಕೊಂಡರೆ, ಹೆಂಗಸರು ಈ ಹಾಡುಗಳನ್ನೇ ಹಾಡುವುದು ಜಾಸ್ತಿಯಾಗಿ ತೋರುತ್ತದೆ. ಮೂರನೆಯ ಪ್ರಕಾರದ ಹಾಡುಗಳು ಎಲ್ಲಮ್ಮನ ಜಗಹೊತ್ತ ಗಂಡಸರು ಹಾಡುವ ಹಾಡುಗಳಾಗಿವೆ. ಇಲ್ಲಿ ಅನೇಕ ಬಗೆಯ ಕಥನ ಕವನಗಳನ್ನು ಅವರು ಬೆಳ್ಳಬೆಳತನಕ ಹಾಡುವುದನ್ನು ಕಾಣಬಹುದಾಗಿದೆ. ಸರ್ಜಪ್ಪನಾಯ್ಕ, ಬಳ್ಳಾರಿತತ್ವ, ಅಣ್ಣ ತಂಗಿ, ಆನಂದ್ವತಿ, ವಿಶ್ವಬ್ರಹ್ಮ ಮುಂತಾದ ಕಥನ ಕವನಗಳನ್ನು ಅವರು ಹಾಡುವುದುಂಟು. ಎಲ್ಲಮ್ಮನ ಚರಿತ್ರೆಗೆ ಸಂಬಂಧಪಟ್ಟ ಹಾಡುಗಳನ್ನು ಕೂಡ ಹೆಚ್ಚಾಗಿ ಗಂಡು ಜೋಗತಿಯರೇ ಹಾಡುವುದುಂಟು.

ಚೌಡಿಕೆ ಸಂಪ್ರದಾಯ ಸಾಹಿತ್ಯ, ಸಂಗೀತ ಮತ್ತು ಕುಣಿತ ಈ ಮೂರರ ಸಮ್ಮಿಶ್ರ ಕಲೆ. ಇಲ್ಲಿಯ ಧಾಟಿಗಳು ಎಷ್ಟು ವಿಶಿಷ್ಟವಾಗಿವೆಯೋ ಇಲ್ಲಿ ಬಳಕೆಯಾಗುವ ವಾದ್ಯಗಳು ಕೂಡ ಅಷ್ಟೇ ವಿಶಿಷ್ಟವಾದವುಗಳಾಗಿವೆ. ಚೌಂಡಿಕಿ, ಚೌಡಿಕೆ, ಚೌಟಿಗಿ ಹಾಗೂ ಚವುಡ್ಕಿ– ಎಂಬ ಹೆಸರಿನ ವಾದ್ಯ ಈ ಹಾಡುಗಾರಿಕೆಯಲ್ಲಿ ಬಳಕೆಯಾಗುತ್ತದೆ. ಜೊತೆಗೆ ತಾಳಗಳನ್ನು ಕೂಡ ಉಪಯೋಗಿಸಲಾಗುತ್ತದೆ.

ಚೌಡಿಕೆ ವಾದ್ಯದ ಹುಟ್ಟಿನ ಮೂಲವನ್ನು ಹೇಳುವ ಒಂದು ಕಾಲ್ಪನಿಕ ಐತಿಹ್ಯ ದೊರೆಯುತ್ತದೆ. ಎಲ್ಲಮ್ಮನ ಅಣ್ಣನಾದ ಕಾರ್ತ್ಯವೀರ್ಯಾರ್ಜುನ, ಜಮದಗ್ನಿಯನ್ನು ಕೊಂದು, ಅವನಲ್ಲಿರುವ ಕಾಮಧೇನುವನ್ನು ಅಪಹರಿಸುತ್ತಾನೆ. ತನ್ನ ಗಂಡ ಸತ್ತುದಕ್ಕೆ ಎಲ್ಲಮ್ಮ ಗೋಳಾಡುತ್ತಿರಲು, ತಾಯಿಯ ದುಃಖವನ್ನು ಸಹಿಸದ ಪರಶುರಾಮನ ಕಾರ್ತ್ಯವೀರ್ಯಾರ್ಜುನನನ್ನು ಕೊಂದು ಅವನ ಶಿರವನ್ನೇ ಕೊಳಗಮಾಡಿ, ಚರ್ಮವನ್ನೇ ಕೊಳಗಕ್ಕೆ ಮೆತ್ತುವ ತೊಗಲು ಮಾಡಿ, ಕರುಳನ್ನು ದಾರ ಮಾಡಿ, ತೋಳನ್ನು ದಂಡಿಗೆ ಮಾಡಿ, ಕಿರುಬೆರಳನ್ನು ನುಡಿಸುವ ಕಡ್ಡಿ ಮಾಡಿ ಹೀಗೆಲ್ಲ ಚೌಡಿಕೆ ತಯಾರಿಸಿ ನುಡಿಸುತ್ತ ಬಂದು ತಾಯಿಯನ್ನು ಸಂತೈಸಿದನು. ಇನ್ನೊಂದು ಕಥೆಯ ಪ್ರಕಾರ– ಭೇತಾಸುರನೆಂಬ ರಾಕ್ಷಸನ ಶಿರ ಕಡಿದು ಅದರಿಂದ ಚೌಡಿಕೆ ಮಾಡಿದನು.

ಪ್ರಾಚೀನ ಕರ್ನಾಟಕದಲ್ಲಿ "ಚಂಡಾಲ(ಳ)ವಲ್ಲಕಿ" ಎಂಬ

ಒಂದು ವಾದ್ಯವಿರುವ ಬಗ್ಗೆ ನಮಗೆ ಸುಳುಹು ದೊರೆಯುತ್ತದೆ. "ಚಂಡಾಲವಲ್ಲಕಿ" ಎಂದರೆ, ಒಂದು ಬಗೆಯ ಸಾಮಾನ್ಯವಾದ ತಂತಿವಾದ್ಯ ಅಥವಾ ಕಿನ್ನರಿಯಂತಹ ಕೀಳುದರ್ಜೆಯ ವಾದ್ಯ ಎಂಬ ಅರ್ಥವನ್ನು ಕಾಣುತ್ತೇವೆ. ಎರಡನೆಯ ನಾಗವರ್ಮ (1145), ತನ್ನ "ಅಭಿದಾನ ವಸ್ತು ಕೋಶಂ" (1933) ಎಂಬ ಗ್ರಂಥದಲ್ಲಿ ಚಂಡಾಳಿಕೆ ಚಂಡಾಳವಲ್ಲಕೀ ಪರ್ಯಾಯಂ (51–38) ಎಂದು ಬರೆಯುತ್ತಾನೆ. ಹೀಗಾಗಿ ಚಂಡಾಳವಲ್ಲಕಿ ಮತ್ತು ಚಂಡಾಳಿಕೆ ಎಂಬ ಹೆಸರುಗಳು ಒಂದೇವಾದ್ಯದ ಎರಡು ಭಿನ್ನರೂಪಗಳು ಎಂಬುದು ಸ್ಪಷ್ಟವಾಗುತ್ತದೆ. ಕಿಟೆಲ್ಲರು ಚಂಡಾಳಿಕೆ ಅಥವಾ ಚಾಂಡಾಲಿಕೆ ಈ ಪದಗಳು 'ಚೌಡಿಕೆ' ಪದದ ಹಳೆಯ ರೂಪಗಳು ಎಂಬಂತೆ ಉಲ್ಲೇಖಿಸುತ್ತಾರೆ. ಹೀಗಾಗಿ ಚಾಂಡಾಲ(ಳ)ವಲ್ಲಕಿ>ಚಾಂಡಾಲಿ(ಳಿ)ಕೆ>(ಚಂಡಾಲಿ–ಳಿ–ಕೆ)ಯಾಗಿ, ಇವುಗಳಿಂದ ಚೌಂಡಿಕೆ 'ಚೌಡಿಕೆ' ಎಂಬ ಪದ ರೂಪ ಪಡೆದಂತೆ ತೋರುತ್ತದೆ.

ಚೌಡಿಕೆ ಪದದ ತೀರ ಹಳೆಯ ರೂಪವಾದ 'ಚಂಡಾಲ(ಳ)ವಲ್ಲಕಿ' ಎಂಬ ಪದ ಒಂದು ಕೂಡುಪದವಾಗಿದ್ದು. ಚಂಡಾಲ(ಳ) ಮತ್ತು ವಲ್ಲಕಿ ಎಂಬ ಎರಡು ಭಿನ್ನ ಪದಗಳು ಅಲ್ಲಿ ಕಾಣಿಸುತ್ತವೆ. 'ಚಂಡಾಲ(ಳ)' ವೆಂದರೆ ಕೆಳವರ್ಗದ, ಕೀಳುಜಾತಿಯ ಅಥವಾ ಅನೈತಿಕ ಸಂಬಂಧದಲ್ಲಿ ಜನಿಸಿದವನೆಂಬ ಅರ್ಥ ಬರುತ್ತದೆ. 'ವಲ್ಲಕಿ' ಎಂದರೆ ಒಂದು 'ಸಾಮಾನ್ಯ ತಂತಿವಾದ್ಯ' ಎಂಬ ಅರ್ಥವಿದೆ. ಹೀಗಾಗಿ 'ಚಂಡಾಲ(ಳ)ವಲ್ಲಕಿ' ಎಂದರೆ ಕೆಳವರ್ಗದವರು ಬಾರಿಸುವ ತಂತಿವಾದ್ಯ, ಅರ್ಥಾತ್ ಸಾಮಾನ್ಯರ ತಂತಿವಾದ್ಯ>ಸಾಮಾನ್ಯ ತಂತಿವಾದ್ಯ ಎಂಬ ಅರ್ಥ ಉಳಿದುಕೊಳ್ಳುತ್ತದೆ. ಹೀಗಾಗಿ 'ಚೌಡಿಕೆ' ಎಂದರೆ–ಸಾಮಾನ್ಯರು ಬಾರಿಸುವ ತಂತಿವಾದ್ಯ ಅಥವಾ ಸಾಮಾನ್ಯ ತಂತಿವಾದ್ಯ ಎಂದು ಅರ್ಥ ಉಳಿದುಕೊಳ್ಳುತ್ತದೆಂದು ಹೇಳಬಹುದಾಗಿದೆ.

ಚೌಡಿಕೆಯಲ್ಲಿ ಎರಡು ಬಗೆಗಳಿದ್ದು, ಒಂದು ದನಿಗೆ ಆಧಾರವಾಗಿ ಬಾರಿಸುವ ಪಕ್ಕವಾದ್ಯವಾಗಿರುವ ಸುತಿ ಅಥವಾ ಶ್ರುತಿ ಚೌಡಿಕೆಯಾದರೆ, ಇನ್ನೊಂದು ಪ್ರಧಾನ ತಾಳವಾದ್ಯವಾದ ಬಾರ್ಕಿಚೌಡಿಕೆ ಅಥವಾ ಡಪ್ಪಚೌಡಿಕೆ ಎನಿಸಿಕೊಳ್ಳುತ್ತದೆ.

ಬುಡವಿಲ್ಲದ ಕೊಳಗದ ಆಕಾರದ ಕಂಚಿನ ಅಥವಾ ಕಟ್ಟಿಗೆಯ ಸಾಧನಕ್ಕೆ ಒಂದು ಕಡೆ ಬಾತಕೋಳಿ, ಆಡು ಅಥವಾ ಆಕಳಿನ ಒಳಚರ್ಮವನ್ನು ಅಂಟಿಸಲಾಗುತ್ತದೆ. ಅದರ ಇನ್ನೊಂದು ಮಗ್ಗುಲಿನ ಒಂದು ಕಡೆ ಎರಡು ಮೊಳದಷ್ಟು ಉದ್ದದ ಬಿದಿರಿನ ಕೋಲನ್ನು ಜೋಡಿಸಿದ್ದು, ಅದರ ತುದಿಗೆ ಸ್ವಲ್ಪ ಹಿಂದೆ ತೂತು ಕೊರೆದು, ಅದರಲ್ಲಿ ಒಂದು ಕಟ್ಟಿಗೆಯ ಬೆಣೆಯನ್ನು ಹಾಕಿರುತ್ತಾರೆ. ಒಂದು ಮಗ್ಗಲು ಮುಚ್ಚಿದ ಚರ್ಮದ ನಡುವೆ ತೂತುಹಾಕಿ, ಸಣ್ಣನೆಯ ತಂತಿಯನ್ನು ಇದರಲ್ಲಿ ಹಾಸಿ, ತಂತಿಯ ತುದಿಗೆ ಒಂದು ದುಡ್ಡು ಕಟ್ಟಿರುತ್ತಾರೆ. ಈ ತಂತಿಯ ಇನ್ನೊಂದು ತುದಿಯನ್ನು ಕೋಲಿನ ತುದಿಯಲ್ಲಿರುವ ಚಿಣಿಗೆ ಸುತ್ತಿರುತ್ತಾರೆ. ಇದರಿಂದ ತಂತಿಯನ್ನು ಅವರವರ ದನಿಗೆ ತಕ್ಕಂತೆ ಬಿಗಿಯಾಗಿಸಲು, ಸಡಿಲುಗೊಳಿಸಲು ಬರುವಂತಿದ್ದು, ಈ ತಂತಿಯನ್ನು ಒಂದು ಕಡ್ಡಿಯಿಂದ ಮೀಟುತ್ತ ಶ್ರುತಿ ಹಿಡಿಯಲಾಗುತ್ತದೆ. ಇದು ಶ್ರುತಿಚೌಡಿಕೆ ತಯಾರಿಕೆಯ ಕ್ರಮವಾಗಿದೆ.

ಬಾರ್ಕಿಚೌಡಿಕೆ ಅಥವಾ ಡಪ್ಪಚೌಡಿಕೆ ಕೂಡ ಶ್ರುತಿಚೌಡಿ–ಕೆಯಂತೆಯೇ ಇದ್ದು, ಇಲ್ಲಿ ತಂತಿಯ ಬದಲಾಗಿ ಕುರಿಯ ಕರುಳಿನ ಹೊಸೆದಾರವನ್ನು ಬಳಸಿರುತ್ತಾರೆ. ಇದಕ್ಕೆ ಬಿದಿರಿನ ಕಟ್ಟಿಗೆಯ ಕೋಲನ್ನು ಬಳಸದೆ–ಹೊಸೆದರದ ಮುಂದಿನ ತುದಿಗೆ ಒಂದು ಕಟ್ಟಿಗೆಯ ಚಿಣಿಯನ್ನು ಕಟ್ಟಿದ್ದು, ಈ ಚಿಣಿಯ ಸಹಾಯದಿಂದ ಹು–ರಿಯನ್ನು ಎಡಗೈಯಿಂದ ಜಗ್ಗಿ ಹಿಡಿದು, ಬಲಗೈಯ ಬೆರಳುಗಳಿಂದ ಅಥವಾ ಬಿದಿರಿನ ಕಡ್ಡಿಯಿಂದ ಮೀಟುತ್ತಿರುತ್ತಾರೆ.

ತಂತಿವಾದ್ಯವಾದ ಶ್ರುತಿಚೌಡಿಕೆ ಹಿಮ್ಮೇಳದ ಪ್ರಮುಖ ಪಕ್ಕವಾದ್ಯವಾಗಿದ್ದು, ಹಾಡುಗಾರರ ದನಿಗೆ ಸಹಾಯವಾಗಿ, ಶ್ರುತಿ ಹಿಡಿಯುವ ಕೆಲಸ ಮಾಡುತ್ತದೆ. ತಂಬೂರಿ, ಏಕತಾರಿ ಹಾಗೂ ಹಲಗೆಮೇಳದಲ್ಲಿ ಗಾಯಕನ ದನಿಗೆ ಆಸರೆಯಾಗಿರುವ ಸನಾದಿಗಳ ಕೆಲಸವನ್ನೇ ಈ ಶ್ರುತಿಚೌಡಿಕೆ ಮಾಡುತ್ತಿರುತ್ತದೆ. ಇನ್ನೂ ಮುಂದೆ ಹೋಗಿ ಹೇಳುವುದಾದರೆ – ಹಾರ್ಮೋನಿಯಂ ಹಾಗೂ ಅದರ ಮಾದರಿಯ ವಾದ್ಯಗಳ ಕೆಲಸವನ್ನೇ ಶ್ರುತಿಚೌಡಿಕೆ ಮಾಡುತ್ತಿರುತ್ತದೆ.

ಕುರಿಯ ಕರುಳಿನ ಹೊಸೆದಾರವನ್ನು ಹೊಂದಿದ ಬಾರ್ಕಿ ಚೌಡಿಕೆಯು ಮೇಳದ ಪ್ರಧಾನ ತಾಳವಾದ್ಯವಾಗಿದ್ದು. ಇದು ಚರ್ಮವಾದ್ಯದ ಕೆಲಸ ಮಾಡಿ, ಸಂಗೀತದ ತಾಳ ಲಯವನ್ನು ಕಾಯ್ದುಕೊಂಡು ಹೋಗುತ್ತದೆ. ಗೊಂದಲಿಗರ ಮೇಳದಲ್ಲಿ ಸಂಬಾಳ, ಗೀಗೀಮೇಳದಲ್ಲಿ ಡಪ್ಪು, ಬಾಜಿ ಮೇಳದಲ್ಲಿ ಹಲಗೆ – ದಿಮ್ಮಿ, ಸಂಗೀತದಲ್ಲಿ ತಬಲಾ–ಮೃದಂಗಗಳು ಮಾಡುವ ಕೆಲಸವನ್ನು ಎಲ್ಲಮ್ಮನ ಹಾಡುಗಾರಿಕೆಯಲ್ಲಿ ಬಾರ್ಕಿಚೌಡಿಕೆ ಮಾಡುತ್ತದೆ.

ತಂತಿವಾದ್ಯಗಳಲ್ಲಿ ತತ ಮತ್ತು ವಿತತ ವಾದ್ಯಗಳೆಂದು ಎರಡು ಪ್ರಕಾರಗಳನ್ನು ಗುರುತಿಸಲಾಗುತ್ತದೆ. ತತವಾದ್ಯಗಳೆಂದರೆ ಕೈಬೆರಳಿನಿಂದ ತಂತಿಯನ್ನು ಮೀಟಲಾಗುವ ವಾದ್ಯಗಳು. ವಿತತವಾದ್ಯಗಳೆಂದರೆ ಬಿಲ್ಲಿನಿಂದ ತೀಡಿ, ಸ್ವರೋತ್ಪನ್ನ ಮಾಡುವ ವಾದ್ಯಗಳು. ಎಲ್ಲಮ್ಮನ ಹಾಡುಗಳಲ್ಲಿ ಬಳಕೆಯಾಗುವ ಚೌಡಿಕೆಗಳು ತತ ಮತ್ತು ವಿತತ ಎರಡೂ ಬಗೆಯ ವಾದ್ಯಗಳನ್ನು ಬಾರಿಸುವ ರೀತಿಯನ್ನು ಒಟ್ಟಿಗೆ ಅನುಕರಿಸುವಲ್ಲಿ ತನ್ನದೇ ಆದ ಕ್ರಮವನ್ನು ಪಡೆದಂತೆ ತೋರುತ್ತದೆ. ಚೌಡಿಕೆಗಳನ್ನು ಕಡ್ಡಿಯಿಂದ ಮೀಟಲಾಗುತ್ತದೆ. ತತವಾದ್ಯಗಳನ್ನು ಬಾರಿಸುವ ಬೆರಳಿನ ಬದಲಾಗಿ ಇಲ್ಲಿ ಕಡ್ಡಿ ಉಪಯೋಗವಾಗಿರಬೇಕು. ಹೀಗಾಗಿ ಇದು ತತವಾದ್ಯಗಳ ವಾದನ ಕ್ರಮಕ್ಕೆ ಸಮೀಪದ ಸಂಬಂಧಿಯಂತೆ ತೋರುತ್ತದೆ. ಜೊತೆಗೆ ವಿತತವಾದ್ಯಗಳಂತೆ, ಬೇರೊಂದು ಸಾಧನದ ಘರ್ಷಣೆಯಿಂದ ನಾದ ಹೊರಡಿಸುವ ಕ್ರಮವನ್ನು ಲಕ್ಷಿಸಿದರೆ ವಿತತ ವಾದ್ಯಗಳ ವಾದನ ಕ್ರಮಕ್ಕೆ ಸಮೀಪವಾಗಿಯೂ ಕಾಣುತ್ತದೆ.

ವಿತತ ವಾದ್ಯಗಳಲ್ಲಿ ಒಂದಾದ ಸಾರಂಗಿಯಲ್ಲಿ ಕುರಿಯ ಕರುಳಿನ ದಾರವನ್ನೇ ಬಳಸುತ್ತಾರೆ. ಜೊತೆಗೆ ಸ್ವರಗಳ ಪ್ರತಿಧ್ವನಿಗಾಗಿ ಕೆಲವು ತಂತಿಗಳನ್ನೂ ಉಪಯೋಗಿಸುತ್ತಾರೆ. ಇಲ್ಲಿ ಕುರಿಯ ಕರುಳಿನ ಹೊಸೆದಾರ ಹಾಗೂ ತಂತಿ ಎರಡೂ ಒಂದೇ ವಾದ್ಯದಲ್ಲಿ ಉಪಯೋಗವಾಗಿವೆ ಮತ್ತು ಅದು ಹಾಡುಗಾರನ ದನಿಗೆ ಸಹಾಯಕವಾಗಿ ಬಾರಿಸುವ ಪಕ್ಕ ವಾದ್ಯವಾಗಿದೆ ಎಂಬುದನ್ನು ಲಕ್ಷಿಸಬೇಕು. ಚೌಡಿಕೆಯಲ್ಲಿ ಒಂದು ಕುರಿಯ ಕರುಳಿನ ದಾರ ಹೊಂದಿದ್ದರೆ ಇನ್ನೊಂದು ತಂತಿ ಹೊಂದಿದೆ. ಜೊತೆಗೆ ಎರಡೂ ಒಂದೇ ಬಗೆಯ ಹಾಡಿನ ಸಂಪ್ರದಾಯದಲ್ಲಿ, ಏಕಕಾಲಕ್ಕೆ

ಬಳಕೆಯಾಗುತ್ತವೆ. ಅಲ್ಲಿ ಒಂದೇ ವಾದ್ಯದಲ್ಲಿ ಕಾಣಿಸುವ ಕ್ರಮ ಇಲ್ಲಿ ಎರಡಾಗಿ ಹೋಗಿದೆ. ಆದರೆ ಯಾವುದರಿಂದ ಯಾವುದು ಪ್ರೇರಿತವಾಯಿತೆಂದು ಹೇಳುವುದು ಕಷ್ಟದ ಕೆಲಸ. ಆದರೆ ಇಷ್ಟು ಮಾತ್ರ ಹೇಳಬಹುದು, ಕುರಿಯ ಕರುಳಿನ ಹೊಸೆದಾರ ಹೊಂದಿದ ಚೌಡಿಕೆಯ ಉಪಯೋಗ ಮಾತ್ರ ಶ್ರುತಿಯ ಬದಲಾಗಿ ತಾಳವಾದ್ಯವಾದುದು ಗಮನಾರ್ಹ ಅಂಶ.

ಎಲ್ಲಮ್ಮನ ಮುಂದೆ ಅಥವಾ ಅವಳ ಹೆಸರಿನಲ್ಲಿ ಕುಣಿಯುವುದನ್ನು ಅವಳ ಭಕ್ತರು ಕರೆಯುವುದು 'ಆಡುವುದು' ಎಂದು. ಜೋಗ ಬೇಡುವುದನ್ನು 'ಜೋಗಾಡುವುದು' ಎಂದು ಕರೆಯುತ್ತಾರೆ. ಏಕೆಂದರೆ ಜೋಗ ಬೇಡುವುದು ಕೇವಲ ತಮ್ಮ ಹೊಟ್ಟೆ ಹೊರಕೊಳ್ಳುವ ಕೆಲಸ ಎಂದು ಭಾವಿಸದೆ, ಅದು ಎಲ್ಲಮ್ಮನ ಸೇವೆ ಎಂಬ ಭಾವನೆಯಿದೆ; ಹೀಗಾಗಿ ಕುಣಿಯವಲ್ಲಿಯೂ ಕೂಡ 'ಅವಳಿಗೆ ಸಲ್ಲಿಸುವ ಸೇವೆ' ಎಂಬ ಭಾವನೆಯಿದ್ದು, ಕುಣಿಯುವಾಗ ಎಲ್ಲಮ್ಮ ತಮ್ಮ ದೇಹದಲ್ಲಿ ಸಂಚಾರ ಮಾಡುವಳೆಂದು ಬಗೆಯುವ ಜನ, ತಾವು ಕುಣಿಯುವುದು ಕೂಡ ಎಲ್ಲಮ್ಮನ ಒಂದು ಬಗೆಯ 'ಲೀಲೆ' ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತಾರೆ.

ಬಾರ್ಕಿಚೌಡಿಕೆಯ ತಾಳಗತ್ತಿನೊಂದಿಗೆ ಹೆಜ್ಜೆ ಹಾಕುವುದೇ ಸುಮಾರಾಗಿ ಇಲ್ಲಿಯ ಕುಣಿತವಾಗಿದೆ. ವಿಶೇಷವಾದ ಕುಣಿತವೇನೂ ಇಲ್ಲಿ ಕಂಡುಬರುವುದಿಲ್ಲ. ಗಂಡು ಜೋಗತಿಯರ ಕುಣಿತವನ್ನು ಗಮನಿಸಿದರೆ ಹೆಣ್ಣಿನ ಹಾವಭಾವಗಳನ್ನು ಅನುಕರಣೆ ಮಾಡುತ್ತ, ನಿಂತಲ್ಲಿಯೇ ಹೆಜ್ಜೆ ಹಾಕುತ್ತ, ಹುಬ್ಬೇರಿಸುತ್ತ, ಸೀರೆ ಸರಿಪಡಿಸುತ್ತ, ಕೈಬೀಸಿ ನಡೆಯುವ ನಟನೆ ಮಾಡುವುದನ್ನು ನೋಡಿದರ ತಮ್ಮ ಸವಾರಿ ಏಳುಕೊಳ್ಳದ ಕಡೆಗೆ ಎಂಬ ಭಾವವನ್ನೇ ವ್ಯಕ್ತಪಡಿಸುತ್ತಾರೆ ಏನೋ ಎನಿಸುತ್ತದೆ. ಹೆಣ್ಣು ಮಕ್ಕಳು ಕೂಡ ಎಲ್ಲಮ್ಮನತ್ತ ಧಾವಿಸುವ ಭಾವವನ್ನೇ ವ್ಯಕ್ತಗೊಳಿಸುವ ಕುಣಿತವನ್ನೇ ಕುಣಿಯುತ್ತಿರುತ್ತಾರೆ.

(ಖಿಠ)

ಛಾ

ಛಾಯಾ ಭಗವತಿ: ಯಾದಗೀರ ಸುರಪೂರ ತಾಲೂಕಿನ ಕೃಷ್ಣಾ ಯೋಜನಾ ಪ್ರದೇಶ ನಾರಾಯಣಪೂರ ಸಮೀಪದ ಕೃಷ್ಣಾ ನದಿಯ ದಂಡೆ ಮೇಲಿರುವ ದಕ್ಷಿಣ ಕಾಶೀ ಎಂದೇ ಪ್ರಸಿದ್ಧ ಸ್ಥಳದಲ್ಲಿ ಛಾಯಾ ಭಗವತಿ ದೇವಿಯ ದೇವಸ್ಥಾನವಿದೆ. ಹಿಂದೆ ಇಲ್ಲಿ ದಟ್ಟವಾದ ಅರಣ್ಯ ಪ್ರದೇಶವಿತ್ತೆಂದು ಸ್ಥಳ ಪುರಾಣ ಹೇಳುತ್ತದೆ. ಇಂದು ಈ ದೇವಸ್ಥಾನಕ್ಕೆ ಹೋಗಬೇಕಾದರೂ, ಕಲ್ಲು ಬಂಡೆಗಳ ರಸ್ತೆಯನ್ನು ಸವೆಸಿ ಹೋಗಬೇಕು. ಕೃಷ್ಣಾ ನದಿ ಪಾತ್ರದಲ್ಲೂ ಬರೀ ಕಲ್ಲು ಬಂಡೆಗಳು. ಈ ದೇವಸ್ಥಾನ ನದಿ ತೀರದ ಬೃಹದಾಕಾರದ ಬಂಡೆಗಳಲ್ಲೇ ಇರುವದು ವಿಶೇಷ.

ಛಾಯಾ ಭಗವತಿ ಅಂದರೆ, ಪುರಾಣಗಳ ಪ್ರಕಾರ, ಸೂರ್ಯನ ಪತ್ನಿ ಸಂಜ್ಞೆ, ಸೂರ್ಯನ ಪ್ರಖರ ಶಾಖದಿಂದ ಬೇಸತ್ತು ತವರು ಮನೆಗೆ ಹೋಗುವಾಗ, ತನ್ನ ಪ್ರತಿರೂಪ (ಛಾಯೆ)ವನ್ನು ಸೂರ್ಯನಲ್ಲಿ ಕೂರಿಸಿ ಹೋದಳೆಂದು ಹೇಳಲಾಗುತ್ತದೆ. ಸೂರ್ಯನಿಗೆ ತನ್ನೊಂದಿಗಿರುವಳು ಪತ್ನಿ ಸಂಜ್ಞೆಯಲ್ಲ. ಅವರ ಪ್ರತಿರೂಪ (ಛಾಯೆ) ಎಂದು ತಿಳಿದಾಗ, ಅವಳಿಗೆ ಶಾಪ ನೀಡುತ್ತಾನೆ. ಶಾಪಗ್ರಸ್ಥಳಾದ ಛಾಯೆ ವಿಹ್ವಲಳಾಗಿ ಭೂಲೋಕಕ್ಕೆ ಬರುತ್ತಾಳೆ.

ಆನಂತರ ಸೂರ್ಯನಿಗೆ ಪಶ್ಚಾತ್ತಾಪವಾಗುತ್ತದೆ. ಇದರಲ್ಲಿ ಛಾಯೆಯ ತಪ್ಪೇನೂ ಇಲ್ಲ. ಅನಗತ್ಯವಾಗಿ ಶಾಪಕ್ಕೆ ಗು-ರಿಯಾದಳಲ್ಲ ಎಂದು ಪರಿತಪಿಸುತ್ತಾನೆ. ನಂತರ ಛಾಯೆಯ ಬಳಿ ಈ ಬಗ್ಗೆ ತನ್ನ ಪಶ್ಚಾತ್ತಾಪ ವ್ಯಕ್ತಪಡಿಸಿದಾಗ, ನಾನು ನಿನ್ನ ಬಿಟ್ಟಿರಲಾರದಷ್ಟು ನಿನ್ನವಳಾಗಿದ್ದೇನೆ. ಆದರೆ ನಿನ್ನ ಪತ್ನಿ ಸಂಜ್ಞೆ ಇರುವಾಗ ನಾನು ನಿನ್ನೊಂದಿಗಿರುವಂತಿಲ್ಲ. ಆದರೆ ನನಗೆ ನಿತ್ಯ ನಿನ್ನ ದರುಷನ ಸಾನಿಧ್ಯಬೇಕೇಬೇಕು. ಆ ರೀತಿಯಲ್ಲಿ ನನಗೆ ಉಪಕರಿಸು ಎಂದು ಕೇಳಿಕೊಳ್ಳುತ್ತಾಳೆ. ಆಗ ಸೂರ್ಯ, ಕೃಷ್ಣಾ ತೀರದ ಇಂದಿನ ದೇವಸ್ಥಾನ ಇರುವಲ್ಲಿ ನೀನು ನೆಲೆಸು. ನಾನು ಉದಯಿಸುತ್ತಲೇ ನನ್ನ ಪ್ರಥಮ ಕಿರಣಗಳು ನಿನ್ನ ಮುಖಾರವಿಂದದ ಮೇಲೆ ಬೀಳುತ್ತವೆ ಎಂದು ವರ ನೀಡುತ್ತಾನೆ.

ಈಗ ದೇವಸ್ಥಾನವಿರುವುದು ಪೂರ್ವಾಭಿಮುಖದ ಕಡಿದಾದ ಬೆಟ್ಟದಲ್ಲಿ ಕೆಳಗಡೆ ಭೋರ್ಗರೆಯುವ ಕೃಷ್ಣಾ ನದಿ. ಈ ದೇವಸ್ಥಾನಕ್ಕೆ ಹೋಗುವದೂ ಕಷ್ಟ. ಛಾಯೆಗೆ ಸೂರ್ಯ ವರ ನೀಡಿರುವಂತೆಯೇ, ಈ ಬೆಟ್ಟದಲ್ಲಿ ನೆಲೆಸಿರುವ ಛಾಯಾ ಭಗವತಿಯ ಮುಖದ ಮೇಲೆ ಸೂರ್ಯೋದಯದ ಪ್ರಥಮ ಕಿರಣಗಳು ಬೀಳುವದನ್ನು ಇಲ್ಲಿ ನೋಡಬಹುದು.

ಛಾಯಾ ಭಗವತಿ ನೆಲೆಸಿರುವ ಕೃಷ್ಣಾ ಪಾತ್ರದಲ್ಲಿ 18 ತೀರ್ಥಗಳಿವೆ. ಈ ಪುಣ್ಯಸ್ನಾನ ಮಾಡುವುದರಿಂದ ಭವ ರೋಗಗಳು ಪರಿಹಾರವಾಗಿ, ಎಲ್ಲ ಯಾತ್ರೆಗಳ ಪುಣ್ಯ ಬರುತ್ತದೆಂದು ಸ್ಥಳೀಯ ಪುರಾಣ ಹೇಳುತ್ತದೆ. ಛಾಯಾ ಭಗವತಿಯ ಉತ್ಸವವು ಪ್ರತಿವರ್ಷ ಚೈತ್ರ ಬಹುಳ ಅಕ್ಷತ್ತದಗಿ ಅಮವಾಸ್ಯೆಗೆ ಆರಂಭವಾಗಿ ಐದು ದಿನಗಳವರೆಗೂ ನಡೆಯುತ್ತದೆ. ಈ ಸಂದರ್ಭದಲ್ಲಿ ಘಟಸ್ಥಾಪನೆ, ದೀಪಾರಾಧನೆ, ಕ್ಷೇತ್ರ ಉಪವಾಸ ವೃತ, ಶ್ರಾದ್ಧ ವಿಧಿಗಳು, ಪಿಂಡಪ್ರಧಾನ, ಅಕ್ಷಯ ತೃತಿಯ ದಿನದಂದು 18 ತೀರ್ಥಗಳ ಪುಣ್ಯ ಸ್ನಾನ, ಸತ್ಯನಾರಾಯಣ ಪೂಜೆ ಹಾಗೂ ವಸಂತ ಪೂಜೆ, ಛಾಯಾ ದೇವಿಗೆ ಬಾಗಿಣ ಅರ್ಪಣೆ, ಅನ್ನ ಸಂತರ್ಪಣೆ, ಘಟ ವಿಸರ್ಜನೆ ಮುಂತಾದ ಕಾರ್ಯಕ್ರಮಗಳೊಂದಿಗೆ ಉತ್ಸವ ಪೂರ್ಣ ಗೊಳ್ಳುತ್ತದೆ. ಛಾಯಾ ಭಗವತಿ ಕ್ಷೇತ್ರ, ಕೇವಲ ಪುಣ್ಯ ಕ್ಷೇತ್ರ ಮಾತ್ರವಲ್ಲದೆ, ಉತ್ತಮ ಪ್ರವಾಸಿ ತಾಣವೂ ಆಗಿದೆ. ಛಾಯಾ ಭಗವತಿಯ ದೇವಸ್ಥಾನವಿರುವಲ್ಲಿ ಕೃಷ್ಣಾ ನದಿಯ ಪಾತ್ರದಲ್ಲಿ ಅನೇಕ ಜಲಪಾತವೆಂದೇ ಕರೆಯಲಾಗುತ್ತದೆ.

(ವೈಎಂ)

ಜ

ಜಂಗ ಜಂಗಮ: ಜಂಗ ಜಂಗಮ ಪದದಲ್ಲಿ ಎರಡು ಪದಗಳು ಅಡಕವಾಗಿದೆ. ಒಂದನೆಯದು ಜಂಗ ಎರಡನೆಯದು ಜಂಗಮ. ಕನ್ನಡ ಕಸ್ತೂರಿ ಕೋಶದ ಪ್ರಕಾರ ಜಂಗ ಎಂದರೆ ಜಂಗಮರು ಕಾಲಿಗೆ ಕಟ್ಟುವ ಗಗ್ಗರಿ. ಭುಜ, ಹೆಗಲು, ಭಾರವಾದ ಪದಾರ್ಥಗಳನ್ನು ಒಯ್ಯುವಾಗ ಹಲವರ ಹೆಗಲಿಗೆ ಅನುಕೂಲವಾಗುವಂತೆ ಕಟ್ಟುವ ರೀತಿಗೆ ಜಂಗ ಎನ್ನುತ್ತಾರೆ. ಇನ್ನೊಂದು ಅರ್ಥದಲ್ಲಿ ಮೋಹರಂ ಹಬ್ಬದಲ್ಲಿ ಅಲಾಯಿ ಹಾಡುಗಳು ಹಾಡುವಾಗ ಮುಂದೆ ಹಾಡುವ ನಾಯಕನ ಕೈಯಲ್ಲಿ ಒಂದು ಕೋಲು ಇರುತ್ತದೆ. ಈ ಕೋಲಿಗೆ ನಡುವೆ ಗೆಜ್ಜೆ ಕಟ್ಟಿರುತ್ತಾರೆ. ಹಾಡುವವನು ಕೋಲನ್ನು ನೆಲಕ್ಕೆ ಕುಟ್ಟುತ್ತ ಹಾಡು ಹೇಳುತ್ತಾನೆ. ಆ ಕೋಲಿಗೆ ಜಂಗ ಎಂದು ಕರೆಯುತ್ತಾರೆ.

ಹಿಂದಿ ಭಾಷೆಯಲ್ಲಿ ಜಂಗ ಎಂಬ ಪದಕ್ಕೆ ಇನ್ನೊಂದು ಅರ್ಥ ಯುದ್ಧ ಎರಡು ದೇಶಗಳ ನಡುವೆ ಜಂಗ ನಡೆದಿದೆ ಎಂದು ಹೇಳುವುದುಂಟು. ಜಂಗಮ ಎಂಬ ಪದವು ಸ್ಥಿರ ಜಂಗಮ ಹಾಗೂ ಚರಜಂಗಮ ಎಂದು ಎರಡು ವಿಧವಾಗಿದೆ. ಎತ್ತಲೂ ಹೋಗದೆ ಒಂದೇ ಸ್ಥಳದಲ್ಲಿ ಸ್ಥಿರವಾಗಿರುವದಕ್ಕೆ ಸ್ಥಿರ ಜಂಗಮವೆಂದು ಹೇಳುತ್ತಾರೆ. ಒಂದೇ ಸ್ಥಳದಲ್ಲಿ ಸ್ಥಾಯಿಯಾಗಿ ನಿಲ್ಲದೆ ಸದಾ ಪ್ರವಾಸದಲ್ಲಿರುವವರಿಗೆ ಚರಜಂಗಮರೆಂದು ಹೇಳುತ್ತಾರೆ. ಜಂಗಮ ಪದ ಬಿಡಿಸಿದಾಗ ಜನನವಿಲ್ಲ, ಗಮನವಿದೆ, ಹಾಗೂ ಮರಣವಿಲ್ಲ ಎಂಬ ಅರ್ಥ ಸೂಚಿಸುತ್ತದೆ. 'ಜಂಗಮಕ್ಕಳಿವಿಲ್ಲ ಸ್ಥಾವರಕ್ಕಳಿವುಂಟು' ಎಂದು ಬಸವಣ್ಣನವರು ಹೇಳಿದ್ದಾರೆ. ಪ್ರಾಚೀನ ಕಾಲದಲ್ಲಿ ಜಂಗಮರು ಹಳ್ಳಿಗಳಲ್ಲಿ ನಸುಕಿನ ಜಾವದಲ್ಲೆದ್ದು ಕಾಲಿಗೆ ಸದ್ದು ಮಾಡುವ ಗಗ್ಗರಿ ಕಟ್ಟಿಕೊಂಡು ಕೈಯಲ್ಲಿ ಜಂಗ ಹಿಡಿದುಕೊಂಡು ಊರಿನ ಓಣಿ ಓಣಿ ತಿರುಗಾಡಿ ಜನರನ್ನು ಎಚ್ಚರಗೊಳಿಸುತ್ತಿದ್ದರು. ಸಮಾಜ ಕಂಟಕರನ್ನು ದುಷ್ಟ ಕಾರ್ಯಗಳಿಂದ ಮುಕ್ತರಾಗಲು ಇವರು ಪ್ರಯತ್ನಿಸುತ್ತಿದ್ದರು. ಜಂಗಮರ ಮಾತಿಗೆ ಬೆಲೆ ಕೊಡದೆ ಹೋದಾಗ ಅವರ ಮನೆಯ ಮುಂದೆ ಮುಳ್ಳಾವಿಗೆ ಮೇಲೆ ನಿಂತು ವೀರಭದ್ರನ ವಡಬುಗಳು ಉಚ್ಛಡಿಸುತ್ತಿದ್ದರು. ಸಮಾಜದ ಹೀಯಾಳಿಕೆಗೆ ಅಂಜಿ ಎಂಥಾ ದುಷ್ಟನೂ ಸನ್ಮಾರ್ಗ ಕಂಡುಕೊಳ್ಳುತ್ತಿದ್ದನು. ಇದು ಜಂಗ ಜಂಗಮರ ಕಾಯಕವಾಗಿತ್ತು.

(ಎಚ್‌ಕೆ)

ಜಗನ್ನಾಥ ಮಹಾರಾಜ: ತತ್ವಪದ ಗಾಯಕ. ಬೀದರ ಜಿಲ್ಲೆ ಬೆಳ್ಳೂರು ಗ್ರಾಮದಲ್ಲಿ ಇವರ ಜನನವಾಯಿತು. ತಂದೆ ನಾಗಪ್ಪಾ ತಾಯಿ ಪಾರಮ್ಮ. ಇವರು ಪಾಂಡುರಂಗನ ಭಕ್ತರಾಗಿದ್ದರು. ಇವರ ವಿದ್ಯಾಭ್ಯಾಸ ಹತ್ತನೆಯ ತರಗತಿಯವರೆಗೆ ಆಗಿತ್ತು. ಇವರು ಮೊದಲು ಭಾರತೀಯ ಸೈನ್ಯದಲ್ಲಿ ಸೇವೆ ಸಲ್ಲಿಸಿ ಅನಂತರ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಸೇರಿಕೊಂಡರು. ಇವರು ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ಸೇವೆ ಸಲ್ಲಿಸಿ ಇಲಾಖೆಯಲ್ಲಿ ವಿಶ್ವಾಸವನ್ನು ಸಂಪಾದಿಸಿದರು. ಇವರು ಆಗಾಗ ಏಕಾಂತವಾಸ ಬಯಸುತ್ತಿದ್ದರು. ನಿರ್ಜನಪ್ರದೇಶದಲ್ಲಿ ಕುಳಿತು ಶಿವಧ್ಯಾನ ಮಾಡುತ್ತಿದ್ದರು.

ಜಗನ್ನಾಥ ಮಹಾರಾಜರ ಗುರು ಮಿರ್ಜಾಪುರದ ಕಲ್ಲಪ್ಪ ಮಹಾರಾಜರು. ಇವರು ತಮ್ಮ ಕೈಯಲ್ಲಿದ್ದ ಏಕತಾರಿ ಹಾಗೂ ರಾಮತಾಳಗಳನ್ನು ಶಿಷ್ಯನಿಗೆ ಧಾರೆಯೆರೆದು ಹರಸಿದರು. ಜನರಿಗೆ ನೀತಿ ಮಾರ್ಗಕ್ಕೆ ಕೊಂಡೊಯ್ಯುವ ಶಕ್ತಿ ನಿನ್ನ ಕೈಯಲ್ಲಿದೆ. ಅದನ್ನು ಮಾಡು ಎಂದು ಆದೇಶಿಸಿದರು. ಗುರುವಿನ ಅಪ್ಪಣೆಯಂತೆ ಜಗನ್ನಾಥ ಮಹಾರಾಜರು ಆಂಧ್ರ, ಮಹಾರಾಷ್ಟ್ರ ಹಾಗೂ ಕರ್ನಾಟಕದ ಗಡಿಯುದ್ದಕ್ಕೂ ಸಂಚರಿಸಿ ಹಿಂದಿ, ಮರಾಠಿ, ಕನ್ನಡ ಭಾಷೆಗಳಲ್ಲಿ 'ತತ್ತ್ವದ ಪದ' ಸಂಗೀತ ಸುಧೆಯೊಡನೆ ಇಂಪಾಗಿ ಹಾಡಿದರು. ಅವರ ಹಾಡಿನ ಮೋಡಿಗೆ ಮರುಳಾಗದವರೇ ಇಲ್ಲ.

ಭಕ್ತಿರಸದ ಹೊನಲನ್ನು ಹರಿಸುವ ಇವರ ಗಾಯನ ಸಮುದಾಯದ ಮನಸ್ಸನ್ನು ನೀತಿ–ತತ್ತ್ವ ಆಧ್ಯಾತ್ಮದೆಡೆಗೆ ಕೊಂಡೊಯ್ಯುವುದಾಗಿದೆ. ಜಗನ್ನಾಥ ಮಹಾರಾಜರ ಅಖಂಡ ಆಧ್ಯಾತ್ಮಿಕ ಗಾಯನ ಸೇವೆಯನ್ನು ಮೆಚ್ಚಿ ನಾಡಿನ ಅನೇಕ ಗುರುಮಠಗಳು ಮತ್ತು ಹತ್ತು ಹಲವು ಸಂಘ ಸಂಸ್ಥೆಗಳು ಕರೆದು ಸನ್ಮಾನಿಸಿವೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 2003ರ ಸಾಲಿನ ಜ್ಞಾನ–ವಿಜ್ಞಾನ ಪ್ರಶಸ್ತಿ ನೀಡಿ ಗೌರವಿಸಿದೆ.

(ಎಚ್‌ಕೆ)

ಜಗಲಿ: ವೇದಿಕೆ ಬಹುಪಯೋಗಿ ಸ್ಥಳ. ಇದಕ್ಕೆ ಹೊಸತಿಲು, ಮನೆಯ ಮುಂದಿನ ಕಟ್ಟೆ, ಸಣ್ಣ ಚಾವಡಿ, ಪಡಸಾಲೆ ಮುಂತಾದ ಅರ್ಥಗಳಿವೆ. ಕರ್ನಾಟಕದ ಕರಾವಳಿಯ ಪ್ರದೇಶದಲ್ಲಿ ಜಗಲಿಯೆಂದರೆ ಪಡಸಾಲೆಯ ಮುಂಭಾಗಕ್ಕೆ ಹೆಸರು. ಮೈಸೂರು ಪ್ರದೇಶದಲ್ಲಿ ಅದನ್ನು ಮನೆಯ ಮುಂದಿನ ಕಟ್ಟೆ ಎನ್ನುವ ಅರ್ಥದಲ್ಲಿ ಬಳಸುವರು. ಉಳಿದ ಭಾಗಗಳಲ್ಲಿ ದೇವರನ್ನು ಸ್ಥಾಪಿಸುವ ಎತ್ತರವಾದ ಕಟ್ಟೆಗೆ ಜಗಲಿ ಎಂದು ಕರೆಯುವರು. 'ದೇವರ ಜಗಲಿ'ಯೆಂದೇ ಕರೆಯುವದು ಇಂದಿಗೂ ರೂಢಿಯಲ್ಲಿದೆ. ದೇವರನ್ನು, ಪುಣ್ಯಾತ್ಮರನ್ನು ಕೂಡ್ರಿಸುವ ಕಟ್ಟೆಯೇ ಜಗಲಿ. ಹೂವಿನೊಡನೆ ನಾರು ಸ್ವರ್ಗ ಕಂಡಂತೆ ದೇವರೊಡನೆ ಜಗಲಿಗೂ ಪೂಜ್ಯಸ್ಥಾನ ಬಂದಿದೆ. ಜಗಲಿ ಮೂರ್ತಿಪೂಜೆ ಪ್ರಾರಂಭವಾದಾಗಲೇ ಅಸ್ತಿತ್ವಕ್ಕೆ ಬಂದಿರುವದು ಸಹಜವಾಗಿದೆ. ದೇವನಿಗಾಗಿ ಜಗಲಿ ನಿರ್ಮಿತವಾಗುತ್ತದೆ. ಜಗಲಿ ಇದೆಯೆಂದು ಅದರ ಮೇಲೆ ದೇವನನ್ನು ಸ್ಥಾಪಿಸುವದಿಲ್ಲ. ಇದನ್ನು ಅವಲೋಕಿಸಿದರೆ ದೇವ ಮೊದಲು, ಜಗಲಿ ಸ್ವಲ್ಪ ಹಿಂದೆ ಎನ್ನುವ ಮಾತು ಸ್ಪಷ್ಟವಾಗುವದು. ದೇವ ಅನಾದಿಯೆಂದರೆ ಜಗಲಿಯೂ ಸ್ವಲ್ಪ ಕಡಮೆ ಅನಾದಿಯೆಂದು ಹೇಳಬಹುದಾಗಿದೆ. ಆದ್ದರಿಂದ ಜಗಲಿಯೆಂಬುದು ಬಹು ಪ್ರಾಚೀನ ಕಾಲದಿಂದಲೂ ಅಸ್ತಿತ್ವಕ್ಕೆ ಬಂದಿರಬೇಕೆನಿಸುತ್ತದೆ.

ಮಾನವನ ಚಿತ್‌ಪಾತಳಿಯಲ್ಲಿ ಜಗಲಿಯ ಬಗೆಗೆ ಸ್ಪಷ್ಟ ಉಲ್ಲೇಖ ಇದ್ದಂತಿಲ್ಲ. ಪ್ರಜ್ಞಾ ಪಾತಳಿಗೆ ಮನುಷ್ಯನು ಏರಿದಾಗಲೇ

ದೇವರ ಕಲ್ಪನೆ ಬಂದಿತು. ದೇವನಿಗಾಗಿ ಜಗಲಿ ನಿರ್ಮಾಣಗೊಂಡಿತು. ಅಂದಿನಿಂದ ದೇವರಮನೆ, ದೇವರಗುಡಿ, ದೇವರಕಟ್ಟೆ, ಪಾದಗಟ್ಟೆ ಮುಂತಾದುವು ಹುಟ್ಟಿಕೊಂಡಿರಲು ಸಾಕು. ದೇವನನ್ನು ಸಾಮೂಹಿಕವಾಗಿ ಪೂಜಿಸಲೆಂದು ದೇವಸ್ಥಾನ ಹುಟ್ಟಿಕೊಂಡಂತೆ ಮನೆ ಮನೆಯಲ್ಲಿ ನಡೆಯುವ ವ್ಯಕ್ತಿಗತ ಪೂಜೆಗಾಗಿ ದೇವರಮನೆ ನಿರ್ಮಾಣವಾಯಿತು. ಹೀಗಾಗಿ ದೇವಸ್ಥಾನಗಳಲ್ಲಿ ಜಗಲಿ ಇರುವಂತೆ ಪ್ರತಿಯೊಂದು ದೇವರಮನೆಯಲ್ಲಿ ಜಗಲಿ ಇರಬೇಕಾಯಿತು. ಈ ಜಗಲಿಯ ಮೇಲೆ ತಮ್ಮ ಇಷ್ಟ ದೇವತೆಗಳನ್ನಿಟ್ಟು ಪೂಜಿಸುವುದು ನಡೆದು ಬಂದ ರೂಢಿ. ಹೀಗಾಗಿ ಜಗಲಿಗೆ ದೇವನಷ್ಟೇ ಪ್ರಧಾನಸ್ಥಾನ ದೊರೆಯುತ್ತ ಬಂದುದನ್ನು ಅರಿಯುತ್ತೇವೆ. ಜಗಲಿ ವೇದಕಾಲಕ್ಕಿಂತಲೂ ಹಳೆಯದು. ಯಾಕಂದರೆ ಯಜ್ಞ ಮಾಡುವ ಕಟ್ಟೆಗೆ ಜಗಲಿಯೆಂದು ಕರೆದುದೂ ಉಂಟು.

ಈ ಜಗಲಿ ಎನ್ನುವ ಶಬ್ದ ಕನ್ನಡ ಸಾಹಿತ್ಯದಲ್ಲೂ ಜನಪದ ಸಾಹಿತ್ಯದಲ್ಲೂ ಸಾಕಷ್ಟು ಬಳಕೆಗೊಂಡುದನ್ನು ಕಾಣುತ್ತೇವೆ. ಎಲ್ಲ ಮತಧರ್ಮ ಗ್ರಂಥಗಳಲ್ಲಿ ಜಗಲಿಯೆಂದೇ ಬಂದಿದ್ದು, 'ದೇವರ ಕಟ್ಟೆ' ಎನ್ನುವ ಏಕಾರ್ಥದಲ್ಲಿ ಪ್ರಯೋಗವಾಗಿದೆ. 'ಜಗ ಹೊರು'ವದು ಎಂದರೆ ದೇವರನ್ನು ಹೊತ್ತುಕೊಳ್ಳುವದು, 'ಜಗ ಇಡು'ವದು ಎಂದರೆ ದೇವರನ್ನು ಇಳಿಸುವ ಕಟ್ಟೆಯೆಂದು ಹೇಳುವದು ಈ ಭಾಗದಲ್ಲಿ ಪ್ರಚಲಿತವಾಗಿದೆ.

ಜಗಲಿಯ ನಿರ್ಮಿತಿ ಎಲ್ಲರಲ್ಲೂ ಒಂದೇ ಬಗೆಯಾಗಿ ಇರುವುದನ್ನು ಕಾಣುತ್ತೇವೆ. ಅದೊಂದು ಚೌಕ, ಚೌಕಕಟ್ಟೆ. ದೇವಸ್ಥಾನದಲ್ಲಿಯೇ ಆಗಲಿ, ಮನೆಯಲ್ಲೇ ಆಗಲಿ, ಇಲ್ಲವೇ ಗುಡಿಸಲಲ್ಲೇ ಆಗಲಿ, ಅದು ಚೌಕಾಕಾರದಲ್ಲಿ ನಿರ್ಮಾಣಗೊಂಡಿರುವದನ್ನು ಕಾಣುತ್ತೇವೆ. ಜಗಲಿಯ ರಚನೆ ಭಕ್ತರ ಅಂತಸ್ತಿನ ಮೇಲೆ ರಚಿತವಾಗಿರುವುದುಂಟು. ಉಳ್ಳವರು ಅದನ್ನು ಸಂಗಮರವರಿ ಕಲ್ಲಿನಲ್ಲಿ ಕಟ್ಟುವರು, ಬಡವರು ಕಲ್ಲುಮಣ್ಣಿನಲ್ಲಿ ರಚಿಸುವರು. ಇನ್ನು ದೇವಸ್ಥಾನದಲ್ಲಿರುವ ಜಗಲಿ ಭಕ್ತರ ಸಾಮೂಹಿಕ ಹಣದಿಂದ ರಚಿಸಲ್ಪಡುವುದರಿಂದ ಅದು ಸ್ವಲ್ಪ ಭವ್ಯವಾಗಿಯೇ ಇರುವುದುಂಟು. ಗುಡಿ ಯಾವಾಗಲೂ ಉತ್ತರ ಇಲ್ಲವೆ ಪೂರ್ವಕ್ಕೆ ಮುಖಮಾಡಿಕೊಂಡಿರುತ್ತದೆ. ದೇವಸ್ಥಾನವನ್ನು ಪ್ರವೇಶಿಸುತ್ತಲೇ ನಮಗೆ ಎದುರು ಕಾಣುವುದು ಗರ್ಭಗುಡಿ. ಗರ್ಭ ಗುಡಿಯ ಪ್ರವೇಶಿಸುತ್ತಲೇ ದರ್ಶನೀಯವಾಗಿರುವುದು ಜಗಲಿ. ಆ ಜಗಲಿಯ ಮೇಲೆ ಸಾರ್ವಜನಿಕರ ಇಷ್ಟದೇವತೆ ಮೂರ್ತಿಗೊಳ್ಳುವುದು. ದೇವಸ್ಥಾನದ ಜಗಲಿಯೇ ಆಗಿರಲಿ; ದೇವರ ಮನೆಯಲ್ಲಿರುವ ಜಗಲಿಯೇ ಆಗಿರಲಿ; ಅದನ್ನು ಶಾಸ್ತ್ರೋಕ್ತವಾಗಿ ಪಂಚಾಮೃತ, ಬಂಗಾರ ಇಲ್ಲವೆ ಬೆಳ್ಳಿಯ ನಾಣ್ಯಗಳನ್ನು ಮಡಕೆಯಲ್ಲಿ ಹಾಕಿ ಜಗಲಿಯ ಮಧ್ಯದಲ್ಲಿಟ್ಟು ಕಟ್ಟೆ ಕಟ್ಟುವರು. ಮನೆಯ ಜಗಲಿ ಬಡವರದಾಗಿದ್ದರೆ ಬರಿ ಪಂಚಾಮೃತವೇ ನಡೆಯುತ್ತದೆ. ದೇವಸ್ಥಾನದ ಜಗಲಿ ಇಲ್ಲವೆ ಗದ್ದುಗೆಯಲ್ಲಿ ಹೂಳಿಡುವ ಹಣ ಒಮ್ಮೊಮ್ಮೆ ದೇವರಿಗೇ ಮಾರಕವಾಗಿ ಪರಿಣಮಿಸುವುದುಂಟು. ದುಡ್ಡಿನ ಮೇಲೆ ಮೋಹವಿದ್ದ ನಾಸ್ತಿಕರು ದೇವರನ್ನು ಕಿತ್ತೊಗೆದು, ಜಗಲಿಯನ್ನು ನುಚ್ಚುನೂರು ಮಾಡಿದ್ದಕ್ಕೆ ಇತಿಹಾಸದಲ್ಲಿ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ. ಇದೆಲ್ಲ ಗೊತ್ತಿದ್ದರೂ ನಗನಾಣ್ಯಗಳನ್ನು ದೇವರ ಕೆಳಗೆ, ಜಗಲಿಯ ಮಧ್ಯದಲ್ಲಿ ಇಡದಿದ್ದರೆ ಗದ್ದುಗೆಗೊಳಿಸಿದುದು ಶಾಸ್ತ್ರೋಕ್ತವಾಗಲಾರದೆಂಬ ನಂಬಿಕೆ ಭಕ್ತರಲ್ಲುಂಟು. ಹೀಗಾಗಿ ಬಹಳಲ್ಲದಿದ್ದರೂ ಅಲ್ಪಾದರೂ ನಾಣ್ಯ ಇಡುವದನ್ನು ಕಾಣುತ್ತೇವೆ.

ಗ್ರಾಮೀಣರು ಶ್ರೀಮಂತರಾಗಿದ್ದರೆ ಜಗಲಿಯಲ್ಲಿ ಸಂಪತ್ತು ಹೂಳುವುದುಂಟು ಬಡವರು ಜಗಲಿಯ ಪಾಯದಲ್ಲಿ ಅಂಬಲಿ, ಮೊಸರು ಸಿಂಪಡಿಸಿ, ಮಧ್ಯದಲ್ಲಿ ಒಂದು ನಾಣ್ಯ ಹಾಕಿ, ಜಗಲಿಯನ್ನು ಪೂರ್ಣಗೊಳಿಸುವರು. ಮನೆಯನ್ನು ಕಟ್ಟಿದಾಗಲೇ ಜಗಲಿಯನ್ನು ನಿರ್ಮಿಸಬೇಕೆಂಬ ನಿಯಮವಿಲ್ಲ. ಮುಂದೆ ಶುಭಮುಹೂರ್ತ ನೋಡಿ ಜಗಲಿಯನ್ನು ಕಟ್ಟುವರು. ಯುಗಾದಿಯ ಪಾಡ್ಯದ ಸೂರ್ಯೋದಯಕ್ಕೆ ಜಗಲಿಯನ್ನು ನಿರ್ಮಿಸುವುದು ಮಂಗಳಕರವೆಂದು ಶಾಸ್ತ್ರ ಹೇಳುತ್ತದೆ. ಜಗಲಿ ಪೂರ್ಣಗೊಂಡ ಅನಂತರ ಅದರ ಮೇಲೆ ತಮ್ಮ ಮನೆದೇವರನ್ನು ಇಡುವರು. ನಿತ್ಯದಲ್ಲಿ ಆ ದೇವರಿಗೂ ಜಗಲಿಗೂ ಪೂಜೆ ಮಾಡುವರು.

ಹೈದ್ರಾಬಾದ್ ಕರ್ನಾಟಕದ ಕೆಲವೆಡೆಗಳಲ್ಲಿ ಮಂಟಪ ಮಾಡಿಸಿ, ಜಗಲಿಯ ಮೇಲಿಟ್ಟು ಅದರಲ್ಲಿ ದೇವರನ್ನು ಕೂಡ್ರಿಸುವದು ರೂಢಿಯಲ್ಲಿದೆ. ಜಗಲಿಯ ಮೇಲಿರುವ ಕಟ್ಟಿಗೆಯ ಮಂಟಪಕ್ಕೆ 'ಮಂದಾಸ'. ಈ ಮಂದಾಸಗಳು ನಯನ ಮನೋಹರವಾಗಿರುವದನ್ನು ಕಾಣಬಹುದಾಗಿದೆ.

ದೇವರ ಜಗಲಿ ಸುಂದರವಾಗಿರುವುದರ ಜೊತೆಗೆ ಪವಿತ್ರವೂ ಆಗಿರಬೇಕೆಂದು ಭಕ್ತರ ಮನದಿಚ್ಛೆ. ಕೆಲವರು ಜಗಲಿಯ ಮೇಲೆ ದೇವರ ಚಿತ್ರಗಳನ್ನೂ ದೇವರಿಗೆ ಸಂಬಂಧಿಸಿದ ವಾಹನಗಳನ್ನೂ ಬಣ್ಣ ಬಣ್ಣದಲ್ಲಿ ಚಿತ್ರಿಸಿರುವುದನ್ನು ಕಾಣುತ್ತೇವೆ. ಜಗಲಿಯ ಗೋಡೆಗಳ ಮೇಲೆ ಗಿಡಬಳ್ಳಿಗಳ ಗೋಟು ಕಟ್ಟಿಸಿ, ನಡುವೆ ದೇವರ ಲೀಲಾಮೂರ್ತಿಗಳನ್ನು ಬರೆಯಿಸುವದೂ ಉಂಟು. ಶ್ರೀಗಂಧ, ತೇಗು, ಸೀಸ ಕಟ್ಟಿಗೆ ತರಿಸಿ, ಪಡುವಣಿಗೆ (ಚಟ್ಟು) ಮಾಡಿಸಿ, ಜಗಲಿಯ ಮೇಲ್ಗಡೆ ಜಂತೆಗೆ ತೂಗು ಹಾಕುವರು. ಮಹಾನವಮಿಯಲ್ಲಿ ಜಗಲಿಯ ಮಗ್ಗಲು ನಂದಾದೀಪ ಉರಿಸುವರು. ಸಿರಹಪ್ಪಳ, ಕಂಚೀಕಾಯಿ, ಬುಡ್ಡಿ ಹೋಳಿಗೆ, ತರಗ ಮುಂತಾದ ಖಾದ್ಯ ಪದಾರ್ಥಗಳನ್ನು ತಯಾರಿಸಿ, ಪಡುವಣಿಗೆಗೆ ತೂಗು ಬೀಳುವಂತೆ ಕಟ್ಟುವರು. ಬನ್ನಿ ಮುಡಿದು ಬಂದ ಗಂಡಸರು ಅವುಗಳನ್ನು ಜಿಗಿದು ಹರಿದು ತಿನ್ನುವರು; ಅಲ್ಲಿದ್ದ ಇತರರಿಗೂ ಹಂಚುವರು. ಇದೇ ರೀತಿಯಲ್ಲಿ ಮದುವೆಯ ಸಮಯದಲ್ಲಿಯೂ ಮಾಡುವ ರೂಢಿ ಕೆಲವು ಕಡೆಗೆ ಇದೆ. ಅಕ್ಕೀಕಾಳು ಬಿದ್ದು, ಮೆರವಣಿಗೆ ಮುಗಿದ ನಂತರ ದಂಪತಿಗಳು ಪಡುವಣಿಗೆಗೆ ಕಟ್ಟಿದ ಸಿಹಿತಿಂಡಿಗಳನ್ನು ಹರಿದುತಿನ್ನುವ ಶಾಸ್ತ್ರವೂ ನಡೆಯುತ್ತದೆ.

ಸಾಮಾನ್ಯವಾಗಿ, ಕೆಳವರ್ಗದ ಜನಾಂಗಗಳಲ್ಲಿ ಆಯಾಮನೆಯ ಸಾಂಸ್ಕೃತಿಕ ಪರಂಪರೆಯನ್ನು ಗೊತ್ತುಪಡಿಸಲು ಜಗಲಿ ದಿಕ್‌ಸೂಚಿಯಾಗಿದೆ. ಮನೆಯಲ್ಲಿ ಯಾವುದೇ ಪವಿತ್ರ ಕಾರ್ಯ ನಡೆದರೂ ಅದು ಜಗಲಿಯಿಂದಲೇ ಪ್ರಾರಂಭ

ಆಗುವದು. ದೇವತಾಕಾರ್ಯದ ನಂತರ, ಹಿಂದಿನ ಹಿರಿಯರ ನೆನಪಿಗೆಂದು ಬೆಳ್ಳಿಯ ಮೂರ್ತಿಯೊಂದನ್ನು ಮಾಡಿಸಿ ತಂದು, ಜಗಲಿಯ ಮೇಲಿಡುವ ಪದ್ಧತಿ ಇಂದಿಗೂ ಇದೆ. ಆರತಿ, ಧೂಪಾರತಿ, ಕಳಸಗಿಂಡಿ, ತಾಮ್ರದ ಚರಿಗೆ, ನಾಗಬೆತ್ತ, ದೇವರ ಕಂಚಿನ ಮೂರ್ತಿಗಳು, ದೇವರ ಭಾವಚಿತ್ರಗಳು, ಗಂಟೆ, ಚೌರಿ, ಶಂಖ, ಕವಡಿ, ಹಡ್ಡಲಗೆ, ಸಾಲಿಗ್ರಾಮ, ಗಂಧದ ಕರಡಿಗೆ, ಕುಂಕುಮ ಭರಣಿ, ರುದ್ರಾಕ್ಷಿ ಸರ, ನಾಮದ ಉಚಿಡಿ, ವಿಭೂತಿಗಟ್ಟಿ, ಜಗ ಮುಂತಾದವುಗಳನ್ನು ಜಗಲಿಯ ಮೇಲೆ ಇಟ್ಟಿರುವದನ್ನು ಕಾಣಬಹುದಾಗಿದೆ. ಜಗಲಿಯ ಮುಂದೆ ಧೂಪ ಹಾಕಿ, ದೀಪ ಬೆಳಗಿ, ಊದಿನ ಕಡ್ಡಿಯನ್ನು ಉರಿಸುವದು ಹಬ್ಬಹರಿದಿನಗಳಲ್ಲಿ ಸಂಪ್ರದಾಯವಾಗಿ ಬಿಟ್ಟಿದೆ.

ಮನೆಯಲ್ಲಿ ಮದುವೆ ನಡೆದರೆ, ದೇವರ ಮನೆಯಲ್ಲಿ ಜಗಲಿಯೊಂದಿದ್ದರೂ ಅಂಗಳದ ಹಂದರದಲ್ಲಿ ಒಂದು ಜಗಲಿಯನ್ನು ಹೊಸದಾಗಿ ನಿರ್ಮಿಸುವ ಪದ್ಧತಿ ಕೆಲವು ಪಂಗಡದವರಲ್ಲಿ ಇದೆ. ಅದನ್ನು ಮಣ್ಣಿನಿಂದ ರಚಿಸಿ, ಅದರ ಗೋಡೆಗಳ ಮೇಲೆ ಸೂರ್ಯ, ಚಂದ್ರ, ಶಿವಲಿಂಗ, ಗಣಪತಿ ಇತ್ಯಾದಿ ಚಿತ್ರಗಳನ್ನು ಬರೆಯಿಸಿ, ಅಲ್ಲಲ್ಲಿ ಸ್ವಸ್ತಿಕ ಚಿಹ್ನೆಗಳನ್ನು ಹಾಕಿಸುವರು. ಅದರ ಎಡಬಲಗಳಲ್ಲಿ ಹಂದರಗಂಬಗಳನ್ನು ನೆಟ್ಟು, ಆ ಕಂಬಗಳಿಗೆ ತೆಂಗಿನ ಗರಿ, ಬಾಳೆಕಂಬಗಳನ್ನು ಕಟ್ಟಿ, ತಳಿರು ತೋರಣಗಳಿಂದ ಜಗಲಿಯನ್ನು ಅಲಂಕರಿಸುವರು. ಈ ಜಗಲಿಗೆ "ಹಸೆ ಜಗಲಿ" ಎಂದು ಕರೆಯುತ್ತಾರೆ. ಮದುವೆಯಲ್ಲಿ ಸುರಗಿ ಸುತ್ತುವುದು ಒಂದು ಮಂಗಲ ಕಾರ್ಯ. ಸುರಗಿ ಸುತ್ತಲು ನೂಲುಬೇಕು. ಬಲಬಂದ ಮುತ್ತೈದೆಯೊಬ್ಬಳು ಈ ಜಗಲಿಯ ಮೇಲೆ ಕುಳಿತು ಕೈರಾಟಿಯಿಂದ ಮೂಲು ತೆಗೆಯುವಳು. ಈ ಜಗಲಿ ಬಹಳ ಪವಿತ್ರವಾದುದು. ಅದರ ಮೇಲೆ ಶೇಸಕ್ಕಿ ಹೊಯ್ದು, ಬಣ್ಣ ಬಣ್ಣದ ಅಕ್ಕಿಯ ಕಾಳನ್ನು ತೆಗೆದುಕೊಂಡು ರಂಗವಲ್ಲಿ ಹಾಕುವರು. ಅದು ಕುಸುರಿ ಕಲೆ; ಅದನ್ನು ಸಾಮಾನ್ಯವಾಗಿ ಮುತ್ತೈದೆಯರೇ ಚಿತ್ರಿಸುವರು. ಇದರ ಮೇಲೆ ಕುಳಿತು, ಗುರುವಾದವನು ಮದುವೆಯ ಮಂಗಲ ಕಾರ್ಯಗಳನ್ನೆಲ್ಲ ನೆರವೇರಿಸುವದು ರೂಢಿಯಲ್ಲಿದೆ. ಅದರ ಮುಂದೆಯೇ ಕೊಂಡವೊಂದನ್ನು ನಿರ್ಮಿಸಿ, ಅಗ್ನಿ ಸಾಕ್ಷಿಯಾಗಿ ವರನು ವಧುವಿನ ಕೈಯನ್ನು ಹಿಡಿಯುವನು. ಈ ಕೊಂಡವನ್ನು ಏಳು ಸಲ ಸುತ್ತುವುದೇ ಸಪ್ತಪದಿಯೆಂದು ಹೆಸರುಗೊಂಡಿದೆ. ಇದೆಲ್ಲ ಹೊರಜಗಲಿಯಲ್ಲಿ ನಡೆಯುತ್ತಿದ್ದರೂ ಅವರು ದೇವರ ಮನೆಯಲ್ಲಿರುವ ಒಳ ಜಗಲಿಯನ್ನು ಮರೆಯುವದಿಲ್ಲ. ಅದಕ್ಕೂ ಸಲ್ಲಬೇಕಾದ ಮರ್ಯಾದೆ, ಪೂಜೆ ತಪ್ಪದೆ ನಡೆಸುವರು. ಅದಕ್ಕೆ ವಧುವರರು ಪ್ರತಿಯೊಂದು ಮಂಗಳಕಾರ್ಯದ ಕೊನೆಯಲ್ಲಿ ನಮಿಸುತ್ತಲೇ ಇರುವರು.

ಮದುವೆಗೆಂದು ತಂದ ಹೊಸ ಜವಳಿ, ಬಂಗಾರದ ಆಭರಣ ಮುಂತಾದುವುಗಳನ್ನು ಜಗಲಿಯ ಮೇಲೆ ಇಡುವರು. ಅವಕ್ಕೂ ಪೂಜೆ, ನೈವೇದ್ಯ ಸಲ್ಲಿಸುವರು. ಈ ಜಗಲಿಯನ್ನು ಕುರಿತು ಸೋಬಾನದ ಹಾಡುಗಳಲ್ಲಿ, ಸಂದರ್ಭಗಳು ಬಂದಿವೆ. ವಧುವರರಿಗಾಗಿ ತಂದ ತಾಳಿ, ಬಾಸಿಂಗಗಳನ್ನು ಜಗಲಿಯ ಮೇಲೆ ಇಡುವರು. ಅಕ್ಕಿಕಾಳು ಬಿದ್ದು ಬೀಗರು ಊರಿಗೆ ಹೋಗುವಾಗ, ಆ ಮನೆಯ ಜಗಲಿಗೆ ನಮಸ್ಕರಿಸಿ ಹೋಗುವರು. ಹೊಸಮಾಲಗಿತ್ತಿ ಮನೆತುಂಬಿಸುವ ಸಮಯದಲ್ಲಿ ಬಲಗಾಲನ್ನು ಒಳಗಿಟ್ಟು ನೇರವಾಗಿ ದೇವರ ಮನೆಗೆ ಬಂದು, ಜಗಲಿಗೆ ಅಡ್ಡ ಬಿದ್ದು, ದೇವರಿಗೆ ಕೈಮುಗಿಯುವಳು. ಅನಂತರ ಗುರುಹಿರಿಯರಿಗೆ ಬಾಗುವಳು. ಹೀಗೆ ಜಗಲಿ ನಮ್ಮ ಜನಾಂಗದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತ ಬಂದಿರುವದನ್ನು ಕಾಣುತ್ತೇವೆ.

ಹಬ್ಬ ಹರಿದಿನಗಳಲ್ಲಿ ಜಗಲಿಯೊಡನೆ ದೇವರ ಪೂಜೆ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಯಾತ್ರೆ ಮಾಡಿ ಬಂದವರು ತೀರ್ಥ ಪ್ರಸಾದಗಳನ್ನು ತಂದಿದ್ದರೆ ಮೊದಲು ಜಗಲಿಯ ಮೇಲಿಟ್ಟು, ಬಂಧು-ಬಳಗದವರನ್ನು ಕರೆದು, ಅದನ್ನು ಹಂಚುವ ಪದ್ಧತಿ ಇದೆ. ಎಲ್ಲಮ್ಮನ ಭಕ್ತರು ಜೋಗತಿ ಜೋಗಪ್ಪಗಳು ಗುಡ್ಡಕ್ಕೆ ಹೋಗಿ ಮರಳಿ ಬಂದ ಮೇಲೆ, 'ಜಗ'ವನ್ನು ಜಗಲಿಯ ಮೇಲೆ ಇರಿಸುವರು. ಎಲ್ಲಮ್ಮನ ಜಗ ಜಗತಿಯ ಸಂಕೇತವೆಂದೂ ಜಗದಂಬೆ ವಿಶ್ವದ ಮಾಯಕಾರ್ತಿಯೆಂದೂ ಭಕ್ತರ ನಂಬಿಕೆ. ಆದ್ದರಿಂದಲೇ ಅವಳು ಜಗಲಿಯ ಮೇಲೆ ಶೋಭಿಸುವಳು. ಇವರಂತೆಯೇ ಗೊಂದಲಿಗರು ಸೇವಾ ಪ್ರತೀಕವೆನಿಸಿದ ಸಂಬಾಳ, ಚೌಡಿಕೆ, ತುಂತುಣಿ, ತಾಳ, ಕವಡಿಯ ಸರ ಮುಂತಾದುವನ್ನು ಜಗಲಿಯ ಮೇಲೆ ಮಡಗಿಸುವದು ಪದ್ಧತಿಯಾಗಿದೆ.

ಒಕ್ಕಲಿಗರಿಗೆ ಉತ್ತಿ ಬಿತ್ತಿ ಬೆಳೆಪಡೆಯುವದೇ ಮೂಲ ಉದ್ಯೋಗ. ಮುಂಗಾರು ಮಳೆ ಬರುತ್ತಲೇ ರೈತರು ಹೊಲವನ್ನು ಹಸನಮಾಡಿ, ಆಗಿಹುಣ್ಣಿಮೆಯ ಸುಮಾರಿಗೆ ಬಿತ್ತುವುದಕ್ಕೆ ಪ್ರಾರಂಭಿಸುವರು. ನಾಳೆ ಬಿತ್ತಿಬೇಕು ಎಂದಿದ್ದರೆ, ಇಂದೇ ಅಂಬಲಿ ಕಿಚಡಿ ತಯಾರಿಸಿ, ಮಧ್ಯರಾತ್ರಿಯ ಸುಮಾರಿಗೆ ಗ್ರಾಮದೇವತೆಯ ಗುಡಿಗೆ ಹೋಗಿ, ನೈವೇದ್ಯ ಅರ್ಪಿಸುವದುಂಟು. ಮಾರನೆಯ ದಿನ, ಸರ್ವರೂ ಬಿತ್ತಲು ಹೊಲಕ್ಕೆ ಹೋಗುವರು. ಅಂದು ಮನೆಯಲ್ಲಿ ಅಂಬಲಿಯ ಅಡುಗೆ ಮಾಡಿ, ಎಡೆ ತಯಾರಿಸಿ, ಜಗಲಿಯ ಮೇಲೆ ಇಡುವರು. ಜಗಲಿಗೆ ಹತ್ತಿ ಕೂರಿಗೆಯ ಸೆಡ್ಡೆಯನ್ನಿಟ್ಟು ಪೂಜಿಸುವರು. ಈ ಪದ್ಧತಿಗೆ ಕೂರಿಗೆದೇವಿ ಪೂಜೆಯೆಂದು ಹೆಸರು. ಬಿತ್ತಲು ಹೊರಟವರು ಅಂಬಲಿ, ಕುಡಿದು, ಒಂದು ಹಿಡಿ ಬೀಜವನ್ನು ಜಗಲಿಯ ಮೇಲಿಟ್ಟು, ಐದು ಹಿಡಿ ಬೀಜಗಾಳನ್ನು ಗ್ರಾಮದೇವತೆಯ ಹೊಸ್ತಿಲಿಗೆ ಸುರುವಿ, ನಮಸ್ಕರಿಸಿ ಬಿತ್ತಲು ಹೋಗುವುದು, ಮೊದಲಿನಿಂದಲೂ ನಡೆದು ಬಂದ ರೂಢಿ. ರೈತನ ದುಡಿಮೆಯ ಫಲವಾಗಿ ರಾಶಿ ಮನೆಗೆ ಬರುತ್ತಲೇ ಗುಡಿಹುಣ್ಣಿವೆಯ ಸೂಚನೆ ಆಗುತ್ತದೆ. ಒಕ್ಕಲಿಗರು ಈ ಹುಣ್ಣಿವೆಯಿಂದ ಯುಗಾದಿಯವರೆಗೆ ಅತ್ಯಂತ ಚಟುವಟಿಕೆಯಲ್ಲಿ ಇರುವರು. ಅನೇಕ ಸಂಪ್ರದಾಯ ಬದ್ಧ ಆಚರಣೆಗಳಲ್ಲಿ ತೊಡಗುವರು. ಗುಡಿ ಹುಣ್ಣಿವೆಯ ಮೊದಲ ರಾತ್ರಿ ದೇವರನ್ನು ಬರಮಾಡಿಕೊಳ್ಳುವ ಸಂಪ್ರದಾಯವಿದೆ.

ಯುಗಾದಿಯ ಪಾಡ್ಯದ ನೈವೇದ್ಯ ದೇವರಿಗೂ ಜಗಲಿಗೂ ಮೀಸಲಾಗಿರುವದು ಒಂದು ವಿಶೇಷವೆನ್ನಬಹುದು. ಜಗಲಿಯ ಮೇಲೆ ಅಂದು, ಹೊಸ ಅರಿವೆಗಳನ್ನು ತಂದಿಟ್ಟು ಪೂಜಿಸುವುದು ರೂಢಿಯಲ್ಲಿದೆ. ಕೆಲವರು ತಮ್ಮ ಮನೆಯ ಹೊರಜಗಲಿ (ಕಟ್ಟೆಯ

ಮುಂಭಾಗ)ಯಲ್ಲಿ ಹೊಸ ಅರಿವೆ, ಹೊಸ ಪಾತ್ರೆ, ಹೂಗೊಂಚಲು, ಬೇವಿನ ಕುಚ್ಚಗಳನ್ನು ಕೋಲಿಗೆ ಸಿಕ್ಕಿಸಿ ಸಂಜೆಯವರೆಗೂ ನಿಲ್ಲಿಸುವರು. ಅದಕ್ಕೆಂದೇ ಅದು 'ಗುಡಿಯ ಹಬ್ಬ'ವೆಂದು ಹೆಸರಾಗಿದೆ. ಜಗಲಿ ನಿಜವಾಗಿಯೂ ದೇವರು ಇರುವ ಸ್ಥಳ; ದೇವರ ಪೂಜೆಯ ವೇದಿಕೆ; ಪವಿತ್ರತೆಯ ಪ್ರತೀಕ.

(ಎನ್‌ಎಸ್)

ಜಗ್ಗಲಿಗೆ: ಒಂದು ಚರ್ಮವಾದ್ಯ 'ಜಗ್ಗ' ಎಂದರೆ 'ಬಹಳ', 'ದೊಡ್ಡ' ಎಂದರ್ಥ ಹಲಗೆ ದೊಡ್ಡದಾಗಿರುವುದರಿಂದ ಇದಕ್ಕೆ 'ಜಗ್ಗಲಿಗೆ' ಎಂಬ ಹೆಸರು ಬಂದಿರಬೇಕು. ಇಲ್ಲವೆ ಒಂದೊಂದು ಮೇಳದಲ್ಲಿ 25 ರಿಂದ 30 ಜಗ್ಗಲಿಗೆಗಳನ್ನು ಬಳಸುವುದರಿಂದ ಈ ಹೆಸರು ಬಂದಿರಬಹುದು. ಸಾಮಾನ್ಯವಾಗಿ ಜಗ್ಗಲಿಗೆ ಐದು ಅಡಿ ಎತ್ತರವಿರುತ್ತದೆ. ಚಕ್ಕಡಿ ಗಾಲಿಯ ಹಳಿ ಅಥವಾ ಕಬ್ಬಿಣದ ಸಲಾಕೆ ಅಥವಾ ಪಟ್ಟಿಯನ್ನು ದುಂಡಗೆ ಮಾಡಿಕೊಂಡು ಅದಕ್ಕೆ ಎತ್ತು, ಎಮ್ಮೆ, ಆಕಳು, ಕೋಣನ ಚರ್ಮವನ್ನು ಹದ ಮಾಡಿ ಬಿಗಿಯುತ್ತಾರೆ. ನಂತರ ಅದನ್ನು ಕುಣಿಯಿಂದ ಬಾರಿಸುತ್ತಾರೆ.

ಈ ವಾದ್ಯ ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲ್ಲೂಕಿನ ಹಲವಾರು ಹಳ್ಳಿಗಳಲ್ಲಿಯೂ ಹಾಗೂ ಹೈದ್ರಾಬಾದ ಕರ್ನಾಟಕದಲ್ಲಿಯೂ ಅಲ್ಲಲ್ಲಿ ಕಂಡುಬರುತ್ತದೆ. ಕರ್ನಾಟಕದ ಇತರ ಕಡೆ ಇದು ಕಾಣಸಿಗದು. ಇದನ್ನು ಆಯಾ ಊರಿನ ಗೌಡ, ಶಾನುಭೋಗ, ಶ್ರೀಮಂತರು, ದೇವಸ್ಥಾನದ ಮುಖ್ಯಸ್ಥರು ಮಾಡಿಸುತ್ತಾರೆ.



ಜಗ್ಗಲಗಿ

ಜಗ್ಗಲಿಗೆಗಳನ್ನು ಊರಿನಲ್ಲಿ ನಡೆಯುವ ಜಾತ್ರೆ, ಯುಗಾದಿ, ದಸರಾ, ದೀಪಾವಳಿ ಮುಂತಾದ ಹಬ್ಬಗಳಲ್ಲಿ, ಹೋಳಿ ಹುಣ್ಣಿಮೆ, ಬಸವ ಜಯಂತಿ, ಹನುಮ ಜಯಂತಿ, ಮೆರವಣಿಗೆ, ಉತ್ಸವಗಳು, ವಿಶೇಷ ಸಭೆ ಸಮಾರಂಭಗಳಲ್ಲಿ ಜಗ್ಗಲಿಗೆಗಳನ್ನು ಬಾರಿಸುತ್ತಾರೆ. ಜಗ್ಗಲಿಗೆ ಮೇಳದವರು ತಮ್ಮ ಊರಿನಲ್ಲಷ್ಟೇ ಅಲ್ಲದೆ ವೀಳ್ಯ ಕೊಟ್ಟರೆ ಎಲ್ಲಿಗೆ ಬೇಕಾದರೂ ಹೋಗಿ ಪ್ರದರ್ಶನ ಕೊಡುತ್ತಾರೆ. ಜಗ್ಗಲಿಗೆ ಬಾರಿಸುವುದರಲ್ಲಿ ಪರಿಣತಿ ಪಡೆದವ ಮೇಳದ ಮುಖ್ಯಸ್ಥನಾಗಿರುತ್ತಾನೆ.

(ಎಸ್‌ಎಸ್)

ಜನಪದ ಅಳತೆ ಮಾಪನಗಳು: 'ಚೆಲ್ಲಬೇಕಾದ್ರುನು ಅಳೆದು ಚೆಲ್ಲಬೇಕು' ಇದು ನಮ್ಮ ಜನಪದರಿಗಿರುವ ಮಾಪನ ಪ್ರಜ್ಞೆಗೆ ಒಂದು ನಿದರ್ಶನ. ಜಾನಪದ ಚೈತನ್ಯವೇ ನಮ್ಮ ಅರ್ಥಪೂರ್ಣ ನಾಗರಿಕತೆಯ ಮೂಲ. ವಿಜ್ಞಾನ, ತಂತ್ರಜ್ಞಾನದ ಬೇರು ಗಳಿರುವುದು ಜಾನಪದದಲ್ಲಿ. ನಮ್ಮ ಪೂರ್ವಜರು ಅನುಭವ ಗಳನ್ನು ತಮ್ಮ ಬದುಕಿನ ಸುಧಾರಣೆಗೆ ಬಳಸಿಕೊಂಡ ಪರಿ ಅನನ್ಯ, ವೈವಿಧ್ಯಮಯ. ಮುಂದಿನ ಪೀಳಿಗೆಗಳಿಗೂ ಅವು ಮಾರ್ಗದರ್ಶಿಯಾಗುವಂತೆ ಅವರು ಎಚ್ಚರವಹಿಸುತ್ತಿದ್ದರು. ಜಾನಪದದಲ್ಲಿ ಉದ್ದ, ಅಗಲ, ಆಳ, ಎತ್ತರ, ತೂಕ, ಸಮಯ ಕುರಿತ ಗ್ರಹಿಕೆಗಳು ಸಮರ್ಥವಾಗಿದ್ದು, ಇಂದಿಗೂ ಆ ಮಾಪನ ವಿಧಾನ ನಗರ ಗ್ರಾಮ, ಶ್ರೀಮಂತಿಕೆ ಬಡತನ, ಸಾಕ್ಷರರು, ನಿರಕ್ಷರರು ಮುಂತಾದ ಭೇದಭಾವಗಳಿಲ್ಲದೆ ಪ್ರಸ್ತುತವೆ ಆಗಿದೆ. ಸ್ವಾರಸ್ಯವೆಂದರೆ ಮಾಪಿಸುವ ಪ್ರಕ್ರಿಯೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಯ ವಾದರೂ ಅದನ್ನು ಉದಾರವಾಗಿ ಸ್ವೀಕರಿಸುವ ಸಂಪನ್ನತೆ ಜನಪದರಿಗಿದೆ. ಒಂದು ಪಾವು ಬೇಳೆಯನ್ನೊ, ಅವಲಕ್ಕಿಯನ್ನೊ ವಾಪಸ್ಸು ನೀಡುವಾಗ ಸಾಲವಾಗಿ ಅದನ್ನು ಕೊಟ್ಟವರು ಪಾವಿನ 'ತಲೆ ತುಂಬ' ಒಯ್ದಿದ್ದೊ ಅಲ್ಲವೊ ಎಂದು ತಾಕೀತು ಮಾಡುವುದಿಲ್ಲ. ಅಂತೆಯೇ ವ್ಯವಹಾರದಲ್ಲಿ ತೂಕ ಮಾಡುವ ಪದ್ಧತಿ ಜನಪದರಲ್ಲಿ ಇಂದಿಗೂ ವಿರಳ. ಅಳತೆಯದೆ ಅಲ್ಲಿ ಕಾರಬಾರು.

ಕಾಲವನ್ನು ಅಭಿವ್ಯಕ್ತಿಸುವಾಗ ಆಗಸ ಕಾಯಗಳೇ ನೆರವಿಗೆ ಬರುತ್ತವೆ. ಹೊತ್ತು ಎಂದರೆ ಸೂರ್ಯ ಹೊತ್ತು ಹುಟ್ಟಿತು, ಹೊಂಟಿತು ಎಂದರೆ ಜೀವಾಧಾರ ಸೂರ್ಯ ಉದಯಿಸಿದ, ಹುಟ್ಟಿದ ಎಂದರ್ಥ. ಹೊತ್ತು ನೆತ್ತಿಯ ಮೇಲೆ ಬಂತು ಎಂದರೆ ನಡುಹಗಲು. ಹೊತ್ತು ಮುಳುಗಿತು ಎನ್ನುವುದು ಸಂಜೆ ಎಂದು ಅರ್ಥೈಸಲ್ಪಡುತ್ತದೆ. ಅಂತರಿಕ್ಷದಲ್ಲಿ ಚಿಕ್ಕಿ ಕಂಡರೆ ಸೂರ್ಯ ಪೂರ್ಣ ಮುಳುಗಿದನೆಂಬ ವ್ಯಾಖ್ಯೆ. ಅಂತರವನ್ನು ಸಮಯದ ರೂಪದಲ್ಲಿ ಸಾದರಪಡಿಸುವ ರೂಢಿಯೂ ಜನಪದರಲ್ಲಿದೆ. ಗುಡಿಸಲಿನಿಂದ ಗದ್ದೆ, ತೋಟ ಕಾಲು ಗಂಟೆ ದೂರ ಇದೆ ಎಂದರೆ ನಡೆದು ಕ್ರಮಿಸಲು ಕಾಲು ಗಂಟೆ ಸಮಯ ಹಿಡಿಯುತ್ತದೆ ಎಂದು ಖಗೋಳಶಾಸ್ತ್ರದಲ್ಲಿ ನಕ್ಷತ್ರಗಳಿಗಿರುವ ಪರಸ್ಪರ ದೂರವನ್ನು ನಿಷ್ಕರ್ಷಿಸುವಾಗ ಇದೇ ವಿಧಾನವನ್ನು ಅನುಸರಿಸುತ್ತಾರೆ. ನಮಗೆ ಅತ್ಯಂತ ಹತ್ತಿರವಾಗಿರುವ ತಾರೆ 'ಆಲ್ಫ ಸೆಂಚುರಿ' ನಮ್ಮಿಂದ 4.2 ಬೆಳಕಿನ ವರ್ಷ ದೂರವಿದೆ (ಒಂದು ಬೆ.ವ= 6000, 000, 0000, 0000 ಮೈಲಿಗಳು). ಅಳತೆಗೆ ದೇಹದ ಅಂಗಗಳನ್ನೇ ಅಭಿವ್ಯಕ್ತಿಗೆ ಬಳಸುವುದು ಜನಪದರಲ್ಲಿ ಪರಂಪರಾಗತವಾಗಿ ಬೇರೂರಿದೆ. ಅನ್ನ ಮಾಡಲು ನೀರಿಡುವಾಗ ಅಕ್ಕಿಯ ಮೇಲೆ ನಡು ಬೆರಳಿನ ಅರ್ಧದಷ್ಟು ಮಟ್ಟಕ್ಕೆ ನೀರಿರಬೇಕು ಎಂಬ ತಂತ್ರ ಎಷ್ಟೊಂದು ಜನಪ್ರಿಯವಲ್ಲವೆ? ಕಿರುಬೆರಳ ದಪ್ಪ, ಹೆಬ್ಬರಳ ದಪ್ಪ, ಗೇಣು ಇತ್ಯಾದಿ ಅಳತೆಯನ್ನು ವಿವರಿಸುವುದು ಸಾಮಾನ್ಯ. ಇನ್ನು ನೀರಿನ ಆಳ, ಬೆಳೆಯ ಎತ್ತರ ಹೇಳಲು ಒಂದಾಳು, ಮೊಣಕಾಲುದ್ದ, ಮಂಡಿತನಕ, ಎದೆಗಂಟ, ಕುತ್ತಿಗೆವರೆಗೆ ಮುಂತಾಗಿ ಬಣ್ಣಿಸುತ್ತಾರೆ. ಜನಪದದಲ್ಲಿ ಸಣ್ಣ ಪ್ರಮಾಣಕ್ಕೆ ಅತ್ಯಂತ ನಿಗಾ ವಹಿಸಿಯೆ ಮಾನ್ಯತೆ. ಉಪ್ಪು ಖಾರ,

ಹುಳಿ ವಗೈರೆ ಬೆರೆಸುವಾಗ ಹಿಡಿಯುವಷ್ಟು ಕೈ ಮುಚ್ಚುವಷ್ಟು, ಬೊಗಸೆ ಎನ್ನುತ್ತಾರೆ. ಹಾಗೆಯೇ ಚಿಟಿಕೆ, ಮುಕ್ಕ ಬಾಯಲ್ಲಿ ತುಂಬಿಕೊಳ್ಳುವಷ್ಟು ರೂಢಿಯಲ್ಲಿದೆ. ಹಣ್ಣು ಕಾಯಿಗಳ ಎಣಿಕೆಯಲ್ಲಿ ಒಂದು ಕೈ ಎಂದರೆ, ಐದು. ಒಡ್ಡಿ ಎಂದರೆ ನಾಲ್ಕು ಎಂಬ ಪರಿಕಲ್ಪನೆ. 'ಮೂಗ್ಗಂಟ ಉಂಡಿದೆ', ಹೊಟ್ಟೆ ತುಂಬ ಸಂಕಟ' 'ಉಡಿ ತುಂಬ ಹೂವು' 'ಕಣ್ತುಂಬ ನಿದ್ದೆ' ನಾಲ್ಕು ಬೆರಳು ಎಣ್ಣೆ' ಇತ್ಯಾದಿ ಪದಪ್ರಯೋಗಗಳು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ. ನಾಲ್ಕು ಎಕರೆ ಹೊಲ, ಗದ್ದೆಗೆ ಕೂರಿಗೆ' ಎನ್ನುತ್ತಾರೆ. ಒಂದು ಉಡಿ ಹೊಲ, ಎರಡು ಹುಡಿ ಹೊಲ ಎಂದರೆ ಅಷ್ಟು ಪ್ರಮಾಣದಲ್ಲಿ ಬಿತ್ತನೆ ಬಳಸಲಾಗುವ ಹೊಲ ಎಂದು ಅರ್ಥ. ಬಹಳ ಹಿಂದೆ ಹೊಲವನ್ನು ಅಳೆಯಲು ಗಳುಗಳನ್ನು ಬಳಸಲಾಗುತ್ತಿತ್ತು. ಹಗ್ಗದಿಂದ ಅಳತೆ ಮಾಡುವುದು ಇಂದಿಗೂ ಉಂಟು. ಕಣ ಮಾಡಿ ಕಾಳುಗಳ ರಾಶಿಯನ್ನು ರೈತಾಪಿ ಬಂಧುಗಳು ಚೀಲ, ಗಾಡಿ ಲೆಕ್ಕದಲ್ಲಿ ಅಂದಾಜಿಸುತ್ತಾರೆ. ಐದು ಚೀಲ ಒಂದು ಗಾಡಿ ಆದೀತು. ಖಂಡುಗ ಎಂದರೆ ಇಪ್ಪತ್ತು ಚೀಲ. ಮೊರಗಳಲ್ಲಿ ಅಳತೆ ಗ್ರಾಮೀಣ ಪ್ರದೇಶಗಳಲ್ಲಿ ಪ್ರಚಲಿತ. ಕಾಳು ಕಡಿ ಸಾಲವಾಗಿ ಕೊಡುವುದಕ್ಕೆ, ಪಾಲು ಮಾಡುವುದಕ್ಕೆಂದೆ ನಿರ್ದಿಷ್ಟ ಅಳತೆಯ ಬುಟ್ಟಿಗಳನ್ನು ಹೆಣೆಯುತ್ತಾರೆ. ಅದೇಕೊ ಇಪ್ಪತ್ತಕ್ಕಿಂತ ಹೆಚ್ಚಾಗಿ ಎಣಿಸಲು ಹಳ್ಳಿಗರಿಗೆ ಮುಜುಗರವಿರಬೇಕು! ಅದಕ್ಕಾಗಿಯೆ ಎರಡಿಪ್ಪತ್ತು, ಮೂರಿಪ್ಪತ್ತು ಎಂಬಿತ್ಯಾದಿ ಲೆಕ್ಕಾಚಾರ.

ಜಾನುವಾರುಗಳ ವಯಸ್ಸನ್ನು ಅವುಗಳ ಹಲ್ಲುಗಳನ್ನು ಗಮನಿಸಿ ಪಕ್ವವಾಗಿಯೇ ಅಂದಾಜಿಸುತ್ತಾರೆ. 'ಹಾಲ್ಹಲ್ಲ ಹಲ್ಲ ಕೆಡವು' ಎಂದರೆ ಎರಡೂವರೆ ವರ್ಷ, 'ಹಲ್ಲ ಹಚ್ಚು' ಎಂದರೆ ಮೂರು ವರ್ಷ. ಎಂಟು ವರ್ಷ ವಯೋಮಾನದ ಎತ್ತಾದರೆ 'ಬಾಯೊಡು' ಎನ್ನುವರು. 'ಹೆಗಲು ಹತ್ತು ವರ್ಷ' ಎಂದರೆ ಮುಂದೆ ಎತ್ತು ಹತ್ತು ವರ್ಷ ಉಳುಮೆಗೆ ತಕ್ಕದ್ದು ಎಂದರ್ಥ ಹಸು ಇಷ್ಟು ಕರು ಹಾಕಿದೆ ಎನ್ನುವುದೂ ಸಹ ಅದರ ವಯಸ್ಸಿನ ಅಭಿವ್ಯಕ್ತಿಯಾಗುತ್ತದೆ. ಇನ್ನು ಹಾಲಿನ ಪ್ರಮಾಣದ ಬಗ್ಗೆ ಹೇಳುವಾಗ ಎಳಗಂದಿ ಹಾಲು (ಈದು ನಾಲ್ಕು ದಿನಗಳ ತನಕ), ಗಿಣ್ಣ ಹಾಲು (ಈದು ಹತ್ತು ತನಕ) ಎನ್ನುತ್ತಾರೆ. ಜನಪದದಲ್ಲಿ ಮನೆ ಇಂತಿಷ್ಟು ಚದರ ಎನ್ನದೆ 'ಅಂಕಣ' ಎನ್ನುವುದೇ ರೂಢಿ. ಕಂಬಗಳ ಲೆಕ್ಕದಲ್ಲೂ ಮನೆಯ ವಿಸ್ತೀರ್ಣ ಹೇಳುತ್ತಾರೆ. ಮೊಳ, ಮಾರು ಲೆಕ್ಕ ಸಾಮಾನ್ಯ. ಬಾಣಲೆಯಲ್ಲಿ ಸಂಡಿಗೆ, ಹಪ್ಪಳ ವಗೈರೆ ಕರಿಯುವಾಗ 'ಒಬ್ಬೆ' ಲೆಕ್ಕ 'ಒಬ್ಬೆ' ಎಂದರೆ ಒಬ್ಬರಿಗೆ ತಿನ್ನಲು ಕೊಡಬಹುದಾದಷ್ಟು 'ಉಳ್ಳಿ' ಎಂದರೆ ಒಂದು ರೊಟ್ಟಿಗೆ ಸಾಕಾಗುವಷ್ಟು ಹಿಟ್ಟು ಇಂದಿಗೂ ಹಾಲು, ಮೊಸರನ್ನು ವರ್ತನೆಯಾಗಿ ನೀಡುವ ವ್ಯಾಪಾರಿಗಳು ಗೋಡೆ, ತೊಲೆ ಮೇಲೆ ಬೊಟ್ಟು ಹಾಕಿ ತಿಂಗಳ ಕೊನೆಗೆ ಲೆಕ್ಕ ಹಾಕುವ ಪರಿಪಾಠವುಂಟು.

(೨೪೨೯)

ಜನಪದ ಕಥೆಗಳು: ಗುಲಬರ್ಗಾ ಜಿಲ್ಲೆಯಲ್ಲಿ ಜನಪದ ಸಾಹಿತ್ಯದ ಸಂಗ್ರಹಕಾರ್ಯ ನಡೆದಷ್ಟು ಹೈದ್ರಾಬಾದ ಕರ್ನಾಟಕದ ರಾಯಚೂರು ಮತ್ತು ಬೀದರ ಜಿಲ್ಲೆಗಳಲ್ಲಿ ನಡೆದಿಲ್ಲ. ಜನಪದ ಕಥೆಗಳ ಸಂಗ್ರಹ ಕಾರ್ಯವನ್ನು ಗಮನಿಸಿ ಹೇಳುವುದಾದರೆ ಟಿ.ಎಸ್.ರಾಜಪ್ಪ ಅವರ 'ರಾಯಚೂರು ಜಿಲ್ಲೆಯ ಜನಪದ ಕಥೆಗಳು' ಹಾಗೂ ಕ್ಯಾತನಹಳ್ಳಿ ರಾಮಣ್ಣನವರ 'ಬೀದರ ಜಿಲ್ಲೆಯ ಕಥೆಗಳು' ಎಂಬ ಎರಡು ಸಂಕಲನಗಳು ಕಾಣಸಿಗುತ್ತವೆ. ಆದರೆ ಗುಲಬರ್ಗಾ ಜಿಲ್ಲೆಯಿಂದ ಜನಪದ ಕಥೆಗಳ ಒಂದು ಸಂಕಲನ ಕೂಡ ಹೊರಬಂದಿಲ್ಲ. ಎಚ್.ಎಲ್.ನಾಗೇಗೌಡ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡ ಅನೇಕ ಜನ ಸಂಗ್ರಹಿಸಿಕೊಟ್ಟ ಕಥೆಗಳ ಸಂಕಲನ 'ಕರ್ನಾಟಕದ ಜನಪದ ಕಥೆಗಳು' ಎಂಬುದರಲ್ಲಿ-ಕಲಬುರ್ಗಿ, ರಾಯಚೂರು ಹಾಗೂ ಬೀದರಿನ ತಲಾ ಐದ್ಯೆದು ಕಥೆಗಳು ಮಾತ್ರ ಸೇರಿಕೊಂಡಿವೆ.

ಸಂಗ್ರಹಗೊಂಡು ಪ್ರಕಟವಾಗದೇ ಉಳಿದ ಹೈದ್ರಾಬಾದ ಕರ್ನಾಟಕದ ಜನಪದ ಸಾಹಿತ್ಯ ವಿಪುಲವಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಸ್ನಾತಕೋತ್ತರ ಕೇಂದ್ರವಾಗಿದ್ದಾಗ, ಅಲ್ಲಿನ ಕನ್ನಡ ವಿಭಾಗ ಜನಪದ ಸಾಹಿತ್ಯದ ಸಂಗ್ರಹಕಾರ್ಯ ಕೈಗೊಂಡಿತ್ತು. 'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಸಂಗ್ರಹ, ಸಂಪಾದನೆ ಮತ್ತು ಪ್ರಕಟಣೆ' ಎಂಬ ಯೋಜನೆ 1975-76ರಲ್ಲಿ, ವಿಶ್ವವಿದ್ಯಾಲಯದ ನೆರವಿನಡಿ, ಬಿ.ಬಿ. ಹೆಂಡಿ ಅವರ ನೇತೃತ್ವದಲ್ಲಿ ಕೆಲಸ ಪ್ರಾರಂಭಿಸಿತು. ಇದೇವೇಳೆಗೆ "ಉತ್ತರ ಕರ್ನಾಟಕದ ಏಳು ಜಿಲ್ಲೆಗಳ ಜನಪದ ಕಥೆ, ಹಾಡುಗಳ ಸಂಗ್ರಹ ಸಂಪಾದನೆ ಮತ್ತು ಪ್ರಕಟನೆ" ಎಂಬ ಬಹು ದೊಡ್ಡ ಯೋಜನೆಯೊಂದು, ಯು.ಜಿ.ಸಿಯ ನೆರವಿನಿಂದ, ಬಿ.ಬಿ. ಹೆಂಡಿ ಅವರ ನೇತೃತ್ವದಲ್ಲಿ ಕಾರ್ಯಪ್ರವೃತ್ತವಾಯಿತು.

ಈ ಎರಡು ಯೋಜನೆಗಳಡಿ ಜನಪದ ಕಥೆ ಹಾಗೂ ಹಾಡುಗಳ ವಿಪುಲವಾದ ಸಂಗ್ರಹ ಕಾರ್ಯ ನಡೆಯಿತು. ಅವೆಲ್ಲ ಇಂದು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ವ್ಯವಸ್ಥಿತವಾದ ಹೊಂದಾಣಿಕೆಯೊಂದಿಗೆ, ಹಸ್ತಪ್ರತಿಗಳಲ್ಲಿ ದೊರೆಯುತ್ತವೆ. ಈ ಸಂಗ್ರಹದಲ್ಲಿ ಹೈದ್ರಾಬಾದ ಕರ್ನಾಟಕದಿಂದ ಸಂಗ್ರಹಿತಗೊಂಡ ಸುಮಾರು 3000 ಕಥೆಗಳು ಕಾಣಸಿಗುತ್ತವೆ. ಇವೆಲ್ಲ ಸಂಪಾದನೆಗೊಂಡು, ಪ್ರಕಟವಾದಾಗ ಅಭ್ಯಾಸಕ್ಕೆ ಲಭ್ಯವಾಗಬಹುದು.

"ಗುಲಬರ್ಗಾ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು" ಎಂಬ ಸಂಶೋಧನಾ ಪ್ರಬಂಧವೊಂದು ವೀರಣ್ಣ ದಂಡೆ ಅವರಿಂದ ರಚಿಸಲ್ಪಟ್ಟಿದೆ. ಇದು ಪ್ರಾದೇಶಿಕ ಮಟ್ಟದಲ್ಲಿ ಕಥೆಗಳ ಅಭ್ಯಾಸ ನಡೆದಾಗ, ದೊರೆಯಬಹುದಾದ ಫಲ ಎಂತಹುದು ಎಂಬುದನ್ನು ಎತ್ತಿ ತೋರಿಸುವಂತಹದು.

ಪ್ರಾದೇಶಿಕ ಮಟ್ಟದಲ್ಲಿ ಜನಪದ ಕಥೆಗಳ ಅಧ್ಯಯನ: ಜನಪದ ಕಾವ್ಯವನ್ನು ಕುರಿತು ಅಭ್ಯಾಸ ಮಾಡುವಾಗ ಪ್ರಾದೇಶಿಕ ಅಧ್ಯಯನದ ಮಹತ್ವ ಎಷ್ಟು ಪ್ರಮುಖವಾದುದೋ ಜನಪದ ಕಥೆಗಳನ್ನು ಕುರಿತು ವಿಚಾರ ಮಾಡುವಾಗಲೂ ಅಷ್ಟೇ ಆವಶ್ಯಕವೆನಿಸುತ್ತದೆ. ಆದರೆ ಕಥೆಗಳ ಪ್ರಾದೇಶಿಕ ಮಟ್ಟದ ಅಧ್ಯಯನದಲ್ಲಿ ಗಮನಿಸಬೇಕಾದ ಸಂಗತಿಗಳು, ದೃಷ್ಟಿ-ಧೋರಣೆಗಳು ಭಿನ್ನವಾಗುತ್ತವೆ ವ್ಯಾಪಕವಾಗುತ್ತವೆ.

ಜನಪದ ಗೀತೆಗಳಾದರೋ ಪ್ರಾದೇಶಿಕ ಪ್ರತಿನಿಧಿಗಳಾಗಿದ್ದು

ಸ್ಥಳೀಯ ಬಣ್ಣದಿಂದ ಲಕಲಕನೆ ಹೊಳೆಯುತ್ತಿರುತ್ತವೆ. ಪ್ರಾದೇಶಿಕತೆ ಜನಪದ ಕಾವ್ಯದ ಜೀವಾಳ. ಅದರ ಜೊತೆಗೆ ಗಾದೆ, ಒಗಟು, ಒಡಪು, ಇತ್ಯಾದಿಗಳೆಲ್ಲ ತಾವು ಪ್ರಸಾರಗೊಂಡಿರುವ ಪರಿಸರದ ಕೂಸುಗಳಾಗಿ ಕಾಣಿಸಿಕೊಳ್ಳುತ್ತವೆ. ಒಂದು ಗೊತ್ತಾದ ಪ್ರದೇಶ ಅಥವಾ ಸಾಂಸ್ಕೃತಿಕ ಪರಿಸರವು ಜನಪದ ಕಾವ್ಯವನ್ನು ನಿಯಂತ್ರಿಸುತ್ತದೆ. ಅದಕ್ಕೆ ವಸ್ತುವನ್ನು, ಆವರಣವನ್ನು ಒದಗಿಸಿಕೊಡುತ್ತದೆ. ಹೀಗಾಗಿ ಅವುಗಳಲ್ಲಿ ಆಯಾ ಪ್ರದೇಶದ ಕುರುಹುಗಳು ಸಹಜವಾಗಿ ಕಾಣಿಸಿಕೊಳ್ಳುವಾಗ, ಅದು ಆ ಪ್ರದೇಶದ ಸಂಸ್ಕೃತಿಯ ಭಿನ್ನತೆಯಿಂದುಂಟಾದ, ಕವಿಯ ಸಮಷ್ಟಿ ಪ್ರಜ್ಞೆಯ ದ್ಯೋತಕವಾಗಿರುತ್ತದೆ.

ಕಥೆಗಳ ವಸ್ತು, ಪ್ರಾದೇಶಿಕ ಮಟ್ಟಕ್ಕೇ ಸೀಮಿತವಾಗಿರದೆ ಅದು ಮಾನವನ ನಾಗರಿಕತೆಯ ಬೆಳವಣಿಗೆಯ ಹಂತಗಳಿಂದ ಉಳಿಸಿಕೊಂಡ ಪಳೆಯುಳಿಕೆಗಳನ್ನು, ನಂಬಿಕೆ, ಆಚರಣೆಗಳನ್ನು ತನ್ನ ವಸ್ತುವಾಗಿ ಪಡೆದಿರುತ್ತದೆ. ಕಥೆಗಳ ಅವತಾರಗಳಲ್ಲಿ ಕಾಣಿಸಿಕೊಳ್ಳುವ ಬದಲಾವಣೆಗಳು, ವಕ್ತಾರನಿಗೆ ಸಂಬಂಧಿಸಿದಂತೆ–ವಿವರಣಾ ಹಂತದಲ್ಲಿಯ ಏರು ಪೇರುಗಳೆನಿಸುತ್ತವೆ. ಅವು ವಕ್ತಾರನ ವೈಯಕ್ತಿಕ ಜಾಣ್ಮೆಯನ್ನು ಅವಲಂಬಿಸಿರುತ್ತವೆ. ಇದ–ರಿಂದಾಗಿ ಕಥೆಯ ವಿವರಣೆಯ ಮೇಲ್ಮೈಯಲ್ಲಿ ಕೆಲ ಪ್ರಾದೇಶಿಕ ಗುಣಗಳು ಸೇರಿಕೊಳ್ಳ ಬಹುದಾಗಿದೆ. ಆದರೆ ಇದರಿಂದ ಕಥೆಯ ವಸ್ತು(ಕ್ರಿಯೆ)ವಿನಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ.

ಆದರೆ ಕಥೆಗಳ ವಿಪುಲವಾದ ಬೆಳವಣಿಗೆ, ಸುಗಮವಾದ ಪ್ರಸಾರ, ಅವುಗಳ ವಿವರಣೆಯಲ್ಲಿ ವಿರೂಪವಾಗದೆ ಇರುವಿಕೆ, ಕಥಾ ಸಂವಿಧಾನದ ಕ್ರಮಬದ್ಧತೆ, ಬಾಯಿಮಾತಿನ ಪರಂಪರೆಯಲ್ಲಿ ಕಥೆ ಉಳಿದುಕೊಂಡುಬರಲು ಕೇಳುಗರನ್ನು ಆಕರ್ಷಿಸುವ ಗುಣ, ಸಾಹಿತ್ಯಿಕ ಹಾಗೂ ಆರ್ಥಿಕ ಅಂಶಗಳು ಪ್ರಭಾವ ಬೀರುತ್ತವೆ. ಸಾಕ್ಷರತೆ–ನಿರಕ್ಷರತೆಗಳು, ನಗರ ಸಂಪರ್ಕ–ನಗರೀಕರಣಗಳು ಕಥೆಗಳಲ್ಲಿ ಬದಲಾವಣೆಗಳನ್ನು ತರುತ್ತವೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಪರಭಾಷೆ, ಪರಸಂಸ್ಕೃತಿಗಳಿಂದ–ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಆಗುವ ಪರಿಣಾಮಗಳು, ಆ ಪ್ರದೇಶದ ಜನಪದ ಕಥೆಗಳ ಮೇಲೂ ಬೀರುತ್ತವೆ.

ಜಗತ್ತಿನಾದ್ಯಂತ ದೊರೆಯುವ ಜನಪದಗಳ ಸ್ವರೂಪ–ಲಕ್ಷ–ಣಗಳು ಒಂದೇ ಬಗೆಯಾಗಿದ್ದು, ಒಂದು ಪ್ರದೇಶದ ಕಥೆಗಳ ಅಧ್ಯಯನ ಮಾಡುವುದೆಂದರೆ, ಅದು ಒಂದು ಮಟ್ಟದಲ್ಲಿ–ಪ್ರಪಂಚದ ಕಥೆಗಳೊಂದಿಗಿನ ತೌಲನಿಕ ಅಧ್ಯಯನವಾಗಿಯೇ ಬೆಳೆಯುತ್ತದೆ.

ಈ ಎಲ್ಲ ಅಂಶಗಳನ್ನು ಗಮನಿಸಿದೆ ಕೇವಲ ಪ್ರಾದೇಶಿಕ ಅಂಶಗಳನ್ನಷ್ಟೇ ಕಥೆಗಳಲ್ಲಿ ಹುಡುಕುತ್ತ ಹೋದರೆ ವ್ಯಾನ್‌ಸಿಡೋ ಮಹಾಶಯನಂತೆ, ಸ್ಥಳಮಾದರಿಗಳನ್ನು ಗುರುತು ಹಚ್ಚುವ ವ್ಯರ್ಥ ಪ್ರಯತ್ನದಂತಾಗುತ್ತದೆ. ಹಾಗಾದರೆ, ನಾವು ಮಾಡುವ ಪ್ರಯತ್ನಕ್ಕೆ ಕೇವಲ ಐತಿಹ್ಯಗಳು ಮಾತ್ರ ನಮ್ಮ ಕೈಗೆ ಸಿಗುತ್ತ ಹೋಗುತ್ತವೆ.

ಐತಿಹಾಸಿಕ ಹಿನ್ನೆಲೆ: ಭಾಷಾವಾರು ಪ್ರಾಂತ್ಯರಚನೆಯ ಮುಂಚೆ 1956 ಕರ್ನಾಟಕ ದಕ್ಷಿಣ ಭಾಗ ಮೈಸೂರು ಪ್ರಾಂತ್ಯಕ್ಕೆ ಮತ್ತು ಕೊಡಗಿನ ಸಂಸ್ಥಾನಕ್ಕೆ ಸೇರಿದ್ದರೆ, ಉತ್ತರದ ಭಾಗಗಳು ಮುಂಬೈ, ಮದ್ರಾಸ ಮತ್ತು ಹೈದರಾಬಾದ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿದ್ದುವು.

ಗುಲಬರ್ಗಾ, ರಾಯಚೂರು ಮತ್ತು ಬೀದರ ಜಿಲ್ಲೆಗಳು–1948ರ ಹಿಂದೆ ಅನೇಕ ವರ್ಷಗಳವರೆಗೆ ಮುಸ್ಲೀಮರ ಆಡಳಿತಕ್ಕೆ ಒಳಪಟ್ಟಿದ್ದುವು. ಹಸನಗಂಗು ಬಹುಮನಿ 1347ರ ಆಗಸ್ಟ್ 3ರಂದು, ಕಲಬುರ್ಗಿಯನ್ನು ತನ್ನ ರಾಜಧಾನಿಯನ್ನಾಗಿಸಿಕೊಂಡು, ರಾಜ್ಯವಾಳಲು ಪ್ರಾರಂಭಿಸಿದಂದಿನಿಂದ, ಈ ಜಿಲ್ಲೆಗಳ ಒಂದಿಲ್ಲಾ ಒಂದು ಭಾಗಗಳು ಮುಸ್ಲೀಮರ ಆಡಳಿತಕ್ಕೆ ಒಳಪಡುತ್ತ ಬಂದವು, 1885 ರಿಂದ 1948ರ ವರೆಗೆ ಖಾಯಂ ಆಗಿ ಈ ಜಿಲ್ಲೆಗಳು ಹೈದರಾಬಾದಿನ ನೈಜಾಮ ಆಡಳಿತಕ್ಕೆ ಒಳಪಟ್ಟಿದ್ದುವು.

ಮುಸ್ಲೀಮರ ಆಡಳಿತದ ಅವಧಿಯಲ್ಲೆಲ್ಲ ಈ ಭಾಗದಲ್ಲಿ ಉರ್ದು ಶೈಕ್ಷಣಿಕ ಮತ್ತು ಆಡಳಿತ ಭಾಷೆಯಾಗಿತ್ತು. ತಮ್ಮ ನಾಡು ಕರ್ನಾಟಕ, ನಮ್ಮ ಭಾಷೆ ಕನ್ನಡ ಎಂಬ ಅರಿವು ಈ ಭಾಗದ ಜನರ ಸ್ಮೃತಿಯಿಂದ ದೂರಸರಿದು ಹೋಗಿದ್ದುವು.

ಹೈದ್ರಾಬಾದ ಸ್ಟೇಟ್: ಆಗಿನ ಹೈದರಾಬಾದ ಸ್ಟೇಟಿನಲ್ಲಿ ಔರಂಗಾಬಾದ, ಗುಲಬರ್ಗಾ, ಗುಲಶನ್‌ಬಾದ ಮತ್ತು ವರಂಗಲ್‌ಎಂಬ ನಾಲ್ಕು ವಿಭಾಗಗಳಿದ್ದುವು. ಕರ್ನಾಟಕದ ಕಲಬುರ್ಗಿ, ರಾಯಚೂರು ಮತ್ತು ಬೀದರ ಪ್ರದೇಶಗಳು, ಗುಲಬರ್ಗಾ ವಿಭಾಗಕ್ಕೆ ಸೇರಿದ್ದುವು

1948ರ ಆನಂತರ ನೈಜಾಮನ ಆಳ್ವಿಕೆಯಿಂದ ಈ ಪ್ರದೇಶ ಹೊರಗಾಯಿತು. 1956ರಲ್ಲಿ ಭಾಷಾವಾರು ಪ್ರಾಂತ್ಯ ರಚನೆಗಳಿಂದಾಗಿ–ಈ ಮೂರು ಜಿಲ್ಲೆಗಳು ಮೈಸೂರು ರಾಜ್ಯಕ್ಕೆ ಸೇರಿಕೊಂಡವು.

ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಬಗ್ಗೆ ಅಧ್ಯಯನ ಮಾಡುವಾಗ ರಾಯಚೂರು ಮತ್ತು ಬೀದರ ಜಿಲ್ಲೆಗಳ ಕಥೆಗಳನ್ನು ಇಲ್ಲಿ ಅವಲೋಕಿಸಲಾಗಿದೆ. ಈ ಎಲ್ಲ ಅಭ್ಯಾಸಗಳ ಸಹಾಯದಿಂದ ಮತ್ತು ಇಲ್ಲಿಯವರೆಗೆ ಗಮನಿಸಿದ ಹಿನ್ನೆಲೆಯ ಆಧಾರದಿಂದ ಕೆಳಕಂಡ ನಿರ್ಣಯಗಳಿಗೆ ಬರಲು ಸಾಧ್ಯವಾಗಿದೆ.

- ಹೈದರಾಬಾದ ಕರ್ನಾಟಕ ಜಿಲ್ಲೆಗಳಲ್ಲಿ ಅನಕ್ಷರಸ್ಥರ ಸಂಖ್ಯೆ ಜಾಸ್ತಿ ಇರುವುದರಿಂದ, ಬಹು ಪ್ರಾಚೀನ ಕಾಲದ ಜನಪದ ಸಾಹಿತ್ಯದ ಪ್ರಕಾರಗಳು ಇಲ್ಲಿ ಕಾಣಸಿಗುತ್ತವೆ.
- ಈ ಮೂರು ಜಿಲ್ಲೆಗಳು ರಾಜ್ಯದಲ್ಲಿಯೇ ಅತಿ ಕಡಿಮೆ ಮಳೆ ಬೀಳುವ ಪ್ರದೇಶಗಳಾದರೂ ಇವು ಮಳೆಯನ್ನೇ ಅವಲಂಬಿಸಿದ ಒಕ್ಕಲುತನ ಹೊಂದಿರುವುದರಿಂದ–ಆರ್ಥಿಕ ವಾಗಿ ಮುನ್ನಡೆ ಸಾಧಿಸಲು ಸಾಧ್ಯವಾಗಿಲ್ಲ. ಹೀಗಾಗಿ ನಗರಗಳ ಸಂಪರ್ಕ ಮತ್ತು ನಗರೀಕರಣಗಳು ಅಷ್ಟೊಂದು ತೀವ್ರಗತಿಯಲ್ಲಿ ಸಾಗದೆ, ತೀರ ಮಂದಗತಿಯಲ್ಲಿ ಕಾಣಿಸುತ್ತದೆ. ಹೀಗಾಗಿ ಬಹುಕಾಲದಿಂದಲೂ ಉಳಿದುಕೊಂಡು ಬಂದ ಇಲ್ಲಿಯ ಜನಪದ ಸಾಹಿತ್ಯ ಪ್ರಕಾರಗಳಿಗೆ ಹೆಚ್ಚಿನ ಅಪಾಯವೇನೂ ಆಗಿಲ್ಲ.
- ಹೈದರಾಬಾದ ಕರ್ನಾಟಕ ಆರುನೂರು ವರ್ಷಗಳವರೆಗೆ ಮುಸ್ಲೀಮರ ಆಡಳಿತಕ್ಕೆ ಒಳಪಟ್ಟುದರಿಂದ ಮತ್ತು ಪರಭಾಷೆಯ

ಗಡಿ ಪ್ರದೇಶಗಳಿಗೆ ಈ ಪ್ರದೇಶದ ಗಡಿಗಳು ಹತ್ತಿಕೊಂಡಿರುವುದರಿಂದ–ನಾನಾ ಕಡೆಗಳಿಂದ ಹರಿದುಬಂದ ಜನಪದ ಸಾಹಿತ್ಯ ಪ್ರಕಾರಗಳು ಈ ನಾಡಿನಲ್ಲಿ ಪ್ರಚಲಿತದಲ್ಲಿರುವುದನ್ನು ಕಾಣಬಹುದಾಗಿದೆ.

- ಇನ್ನೊಂದು ಭಾಷೆ, ಸಂಸ್ಕೃತಿಯ ಅತಿಯಾದ ಪ್ರಭಾವಗಳಿಂದ ಒಂದು ಭಾಷೆ ತನ್ನ ಓಜಸ್ಸನ್ನು, ಹರಿತವನ್ನು ಕಳೆದುಕೊಳ್ಳುತ್ತದೆ. ವಿಷಯವನ್ನು ವೈಭವೀಕರಿಸುವ ಗುಣ ಆ ಭಾಷೆಯಲ್ಲಿ ಇಲ್ಲವಾಗುತ್ತದೆ. ಹೀಗಾಗಿ ಸಂಪೂರ್ಣವಾಗಿ ಬಾಯಿಮಾತಿನ ಶ್ರೀಮಂತಿಕೆಯನ್ನು ಅವಲಂಬಿಸಿದ ಜನಪದ ಸಾಹಿತ್ಯದ ಬೆಳೆವಣಿಗೆ ಕುಂಠಿತವಾಗುತ್ತದೆ.

ಈ ಮಾತಿಗೆ ಬೀದರ ಜಿಲ್ಲೆ ಒಳ್ಳೆಯ ನಿದರ್ಶನ. ವಿಸ್ತೀರ್ಣದಲ್ಲಿ ತೀರ ಚಿಕ್ಕದಾದ ಈ ಜಿಲ್ಲೆ ಪರಭಾಷೆ, ಪರಸಂಸ್ಕೃತಿಗಳ ತುಳಿತಕ್ಕೆ ಈಡಾಗಿ, ಇಲ್ಲಿಯ ಕನ್ನಡ ತನ್ನ ಶ್ರೀಮಂತಿಕೆಯನ್ನು ಕಳೆದುಕೊಂಡು ಬರಡಾಗಿದೆ. ಇದರಿಂದಾಗಿ ಇಲ್ಲಿ ಜನಪದ ಸಾಹಿತ್ಯದ ವಿಪುಲವಾದ ಬೆಳವಣಿಗೆಗೆ ಪೆಟ್ಟು ಬಿದ್ದಿದೆ. ಅದರಲ್ಲೂ ಜನಪದ ಸಾಹಿತ್ಯದ ದೊಡ್ಡ ಪ್ರಕಾರಗಳಾದ ಕಥೆ, ಬಯಲಾಟಗಳು ಇಲ್ಲಿ ಸಮೃದ್ಧಿಯಾಗಿ ಬೆಳೆಯಲು ಆಗಿಲ್ಲ. ಜನಪದ ಕಥೆಗಳ ಜೀವಂತಿಕೆ–ವಕ್ತಾರನ ಜಾಣ್ಮೆ ಮತ್ತು ಭಾಷೆಯ ಚಮತ್ಕಾರವನ್ನು ಅವಲಂಬಿಸಿದೆ. ಇಲ್ಲಿನ ವಕ್ತಾರನಲ್ಲಿ ಭಾಷೆಯ ಚಮತ್ಕಾರ ಕಾಣದೆ ಕಥಾ ವಿವರಗಳು ತೇಪೆ ಹಾಕಿದಂತೆ ಕಾಣುತ್ತವೆ. ಒಂದೊಂದು ಸಲ ತೀರ ವಿಕಾರತೆಯನ್ನು ಪಡೆಯುತ್ತವೆ.

ರಾಯಚೂರಿನ ಮೇಲೆ ವ್ಯಾಪಕವಾಗಿ ಮುಸ್ಲೀಮ–ಉರ್ದುಗಳ, ಮತ್ತು ಪೂರ್ವದ ಒಂದು ತುದಿಯಿಂದ ತೆಲುಗರ ಪ್ರಹಾರವಾಗಿದೆ. ಆದರೂ ಕೂಡ ಪರಕೀಯ ಪ್ರಭಾವಗಳನ್ನು ಸಹಿಸಿಕೊಂಡು ಸ್ವಂತಿಕೆಯನ್ನು ಪ್ರದರ್ಶಿಸಲು ರಾಯಚೂರು ಸಾಕಷ್ಟು ಹೆಣಗಾಡಿದೆ. ಹೀಗಾಗಿ ಅಲ್ಪಮಟ್ಟಿನ ಜನಪದ ಸಾಹಿತ್ಯದ ಬೆಳೆವಣಿಗೆ ಇಲ್ಲಿ ಆದಂತೆ ತೋರುತ್ತದೆ.

ಗುಲ್ಬರ್ಗಾ ಜಿಲ್ಲೆ ವಿಸ್ತಾರವಾದ ನಾಡಾದುದರಿಂದ ಪರಕೀಯ ಪ್ರಭಾವವಿದ್ದರೂ, ಅದರ ಒಳನಾಡುಗಳಲ್ಲಿ ಈ ಪ್ರಭಾವದ ಮೊತ್ತ ಅಲ್ಪಮಟ್ಟಿಗೆ ಪೇಲವವಾಗುತ್ತ ಹೋಗಿದೆ. ಉರ್ದುವಿನ ಪ್ರಭಾವ ಎಲ್ಲ ಕಡೆ ಕಂಡರೂ ಅದು ಭಾಷೆಯ ಹೊದಿಕೆಯಲ್ಲಿ ಕೆಲ ಪದಗಳನ್ನು ಬಳಸುವಷ್ಟರ ಮಟ್ಟಿಗೆ ನಿಂತುಹೋಗಿದೆ. ಹೀಗಾಗಿ ಜನಪದ ಸಾಹಿತ್ಯದ ತಕ್ಕಮಟ್ಟಿನ ಬಳೆವಣಿಗೆಗೆ ಪರಕೀಯ ಪ್ರಭಾವ ಹೆಚ್ಚಿನ ಆತಂಕಗಳನ್ನು ಒಡ್ಡಲು ಸಾಧ್ಯವಾಗಿಲ್ಲವೆನಿಸುತ್ತದೆ.

1. ಸಾಹಿತ್ಯದ ಮೊದಲ ಕೃಷಿ ಜನಪದ ಸಾಹಿತ್ಯ. ಇದರ ಸಹಾಯದಿಂದಲೇ ಪುರಾಣ ಸಾಹಿತ್ಯದ ಉಗಮ ಪ್ರಾರಂಭವಾಗುವುದು, ಮೂರನೆಯ ಹಂತ ಶಿಷ್ಟ ಸಾಹಿತ್ಯದ್ದು.

ಪರಕೀಯರ ತೀವ್ರ ಹೊಡೆತಕ್ಕೆ ಒಳಗಾದ ಬೀದರಿನಲ್ಲಿ ವಿಪುಲವಾದ ಜನಪದ ಸಾಹಿತ್ಯ ಸೃಷ್ಟಿ ನಡೆಯಲಿಲ್ಲ. ತನ್ಮೂಲಕ ರೂಪು ಪಡೆಯುವ ಪುರಾಣಗಳೂ ಕೂಡ ಅಲ್ಲಿಂದ ಹೊರಬರಲಿಲ್ಲ. ಹೀಗಾಗಿ ಬೀದರಿಗೆ ಇವತ್ತಿಗೂ ಪ್ರತಿಭಾವಂತನಾದ ಒಬ್ಬ ಸಾಹಿತಿಯನ್ನು ಕೂಡ ಕೊಡಲಾಗಲಿಲ್ಲ. ಆದರೆ ವಚನಕಾರರ ಕ್ರಾಂತಿ ಮತ್ತು ವಚನಗಳ ನಿರ್ಮಾಣ ನಡೆದು ಹೋದದ್ದು ಪರಭಾಷಾ ಪರಸಂಸ್ಕೃತಿಗಳ ದಬ್ಬಾಳಿಕೆಯ ಪ್ರಭಾವ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ಎಂಬುದು ತೀರ ಗಮನಾರ್ಹ ಸಂಗತಿಯಾಗಿದೆ.

ಕಲಬುರ್ಗಿ ಜಿಲ್ಲೆಯಲ್ಲಿ ಕವಿರಾಜಮಾರ್ಗಕಾರ ಮತ್ತು ದೇವರದಾವಸಿಮಯ್ಯ ಮುಂತಾದವರು ಆಗಿಹೋದದ್ದು ಕೂಡ ಮುಸ್ಲೀಮರ ಆಡಳಿತ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ. ಕಲಬುರ್ಗಿ ಬೀದರಿನಷ್ಟು ಅನಾಹುತಕ್ಕೆ ಒಳಗಾಗಲಿಲ್ಲ. ಜನಪದ ಸಾಹಿತ್ಯದ ತಕ್ಕಮಟ್ಟಿನ ಬೆಳೆವಣಿಗೆ ಇಲ್ಲಿ ನಡೆಯಿತು. ಪುರಾಣ–ಕಾರರ ಆಗರವಾಯಿತು. ಇಲ್ಲೂ ಶಿಷ್ಟ ಸಾಹಿತ್ಯ ಹುಟ್ಟು ಪಡೆಯಲಿಲ್ಲ.

ರಾಯಚೂರು ಜಿಲ್ಲೆಯಲ್ಲಿ ಕಲಬುರ್ಗಿಗೆ ಸರಿಸಮಾನವಾದ ಜನಪದ ಸಾಹಿತ್ಯದ ಸೃಷ್ಟಿ ನಡೆಯಲಿಲ್ಲವೇನೋ ಅನ್ನಿಸುತ್ತದೆ. ಏಕೆಂದರೆ ಕಲಬುರ್ಗಿ ಜಿಲ್ಲೆ ಶರಣರ ವೈಚಾರಿಕ, ಧಾರ್ಮಿಕ ಕ್ರಾಂತಿಯಿಂದ ಬೀದರಿಗಿಂತಲೂ ವ್ಯಾಪಕವಾಗಿ ಪ್ರಭಾವಕ್ಕೆ ಒಳಗಾಯಿತು. ಇಲ್ಲಿಯ ಮತಮಾನ್ಯಗಳು ಜಾಗೃತಗೊಂಡವು. ಇದರ ಫಲವಾಗಿ ಮುಸ್ಲೀಮ, ಉರ್ದುಗಳ ಪ್ರಭಾವವನ್ನು ಮೀರಿನಿಂತು–ಜನಪರವಾದ ವೀರಶೈವ ಪುರಾಣಗಳು ಬೆಳೆದುಬಂದುವು. ಪುರಾಣಗಳ ಪರಂಪರೆ ಜನಪದ ಸಾಹಿತ್ಯಕ್ಕೆ ಪೂರಕವಾಗಿ ಬೆಳೆಯಿತು. ಆದರೆ ರಾಯಚೂರು ಜಿಲ್ಲೆ ಮುಸ್ಲೀಮರ ಆಡಳಿತಕ್ಕೆ ತುತ್ತಾದ ಅನಂತರ ಅದರಿಂದ ತಪ್ಪಿಸಿಕೊಳ್ಳುವ ಯಾವುದೇ ಸಾಂಸ್ಕೃತಿಕ ಕ್ರಾಂತಿ ಅಲ್ಲಿ ನಡೆಯಲಿಲ್ಲ. ಮೇಲಾಗಿ ಮೊದಲಿನಿಂದಲೂ ಹಲವಾರು ಕದನಗಳ ಯುದ್ಧ ಭೂಮಿಯಾಗಿ ರಾಯಚೂರು ಕಾಣಿಸಿ ಕೊಳ್ಳುತ್ತದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲೂ ಅನೇಕ ಯುದ್ಧಗಳಿಗೆ ತುತ್ತಾಯಿತು. ಹದಿನಾರನೇ ಶತಮಾನದ ಕೊನೆ, ಹದಿನೇಳನೇ ಶತಮಾನದ ಪ್ರಾರಂಭದಲ್ಲಿ ಇದು ದಾಸರ ಕೇಂದ್ರ ಸ್ಥಾನವಾಗಿ, ದೈವಪರ ವೈದಿಕ ಪುರಾಣಗಳು ಸಾಕಷ್ಟು ಬೆಳಕಿಗೆ ಬಂದುವು. ಈ ಎಲ್ಲ ಚಾರಿತ್ರಿಕ ಅಂಶಗಳು ಇಲ್ಲಿಯ ಜನಪದ ಸಾಹಿತ್ಯದ ಸಮೃದ್ಧಿಗೆ ಯಾವ ಸಹಾಯವನ್ನೂ ಮಾಡಲಿಲ್ಲ ಎನಿಸುತ್ತದೆ. ಹೀಗಾಗಿ ಈ ಎಲ್ಲ ಅನಾನುಕೂಲಗಳ ಮಧ್ಯ ರಾಯಚೂರಿನಿಂದಲೂ ಪ್ರತಿಭಾವಂತ ಶಿಷ್ಟಸಾಹಿತಿಗಳು ಕಾಣಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದು ತೋರುತ್ತದೆ.

ಏನಿದ್ದರೂ ಹೈದರಾಬಾದ ಕರ್ನಾಟಕದ ಜಿಲ್ಲೆಗಳ ಸಾಹಿತ್ಯ ಕೃಷಿ ಜನಪದ ಸಾಹಿತ್ಯ ಮತ್ತು ಪುರಾಣ ಸಾಹಿತ್ಯದ ಹಂತಕ್ಕೇ ನಿಂತಿದ್ದು, ಶಿಷ್ಟಸಾಹಿತ್ಯದ ಬೆಳವಣಿಗೆಗೆ ಅವಕಾಶವಾದ ವಾತಾವರಣ ನಿರ್ಮಾಣವಾಗಲೇ ಇಲ್ಲ ಎಂಬುದನ್ನು ಗಮನಿಸಬೇಕು. ಸೃಷ್ಟಿಗೊಂಡ ಶಿಷ್ಟಸಾಹಿತ್ಯವೂ ಪರಕೀಯ ಪ್ರಭಾವ ಪ್ರಾರಂಭವಾಗುವುದಕ್ಕಿಂತ ಮುಂಚಿನದು ಎಂಬುದು ಗಮನಾರ್ಹ ಸಂಗತಿ. 1321ರಲ್ಲಿ ತುಘಲಕನ ಕಿರಿಕಿರಿ ಪ್ರಾರಂಭಗೊಂಡು, 1347, ಅಗಷ್ಟ 3ರ ಅನಂತರ, ಸಾರ್ವತ್ರಿಕವಾಗಿ ಈ ಪ್ರದೇಶದ ಮೂರೂ ಜಿಲ್ಲೆಗಳು, ಸುಮಾರು ಆರು ಶತಮಾನಗಳವರೆಗೆ (1347–1948), ಒಂದಲ್ಲಾ ಒಂದು

ಹಂತದಲ್ಲಿ ಮುಸ್ಲೀಮ ಮತ್ತು ಉರ್ದುವಿನ ಅಧೀನದಲ್ಲಿ ಉಳಿದವು. ಜೊತೆಗೆ ನೆರೆಭಾಷೆ, ಸಂಸ್ಕೃತಿಗಳ ಹೊಡೆತಕ್ಕೆ ತುತ್ತಾದವು, ಹೀಗಾಗಿ ಈ ನಾಡಿನ ಹೆಚ್ಚಿನ ಶಕ್ತಿಯೆಲ್ಲ ಪರಕೀಯ ಪ್ರಭಾವವನ್ನು ಎದುರಿಸುವಲ್ಲಿಯೇ ವ್ಯಯವಾಯಿತೆನ್ನಬೇಕು.

2. ಇನ್ನು ಜನಪದ ಕಥೆಗಳನ್ನು ಗಮನಿಸಿ ಹೇಳುವುದಾದರೆ, ಕಲಬುರ್ಗಿ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಜನಪದ ಕಥೆಗಳೇ ಸರಿಸುಮಾರಾಗಿ ಬೀದರ ಮತ್ತು ರಾಯಚೂರು ಜಿಲ್ಲೆಗಳಲ್ಲೂ ಪ್ರಚಾರದಲ್ಲಿವೆ. ಆದರೆ ಬೀದರಿನ ಕಥೆಗಳ ವಿವರಣೆಯಲ್ಲಿ ಸ್ಪಷ್ಟತೆ ಎದ್ದು ಕಾಣಿಸುವುದಿಲ್ಲ ಕಲಬುರ್ಗಿ ಮತ್ತು ರಾಯಚೂರು ಜಿಲ್ಲೆಗಳ ಕಥೆಗಳ ವಿವರಣೆಗಳು ಹೆಚ್ಚಿನ ಮಟ್ಟಿಗೆ ಒಂದೇ ಬಗೆಯಾಗಿವೆ.

ಹೈದರಾಬಾದ ಕರ್ನಾಟಕದಲ್ಲಿ ದೊರೆಯುವ ಪ್ರಸಿದ್ಧ ಮಾದರಿಗಳು: ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಅಧ್ಯಯದ ಬಲದಿಂದ, ರಾಯಚೂರು ಮತ್ತು ಬೀದರ ಕಥೆಗಳ ಅವಲೋಕನದಿಂದ ಜನಪದ ಕಥಾಮಾದರಿಗಳನ್ನು ಗಮನಿಸುವುದಾದರೆ–ಸುಮಾರು 154 ಜಗತ್ಪ್ರಸಿದ್ಧವಾದ ಕಥಾಮಾದರಿಗಳು ಹೈದರಾಬಾದ ಕರ್ನಾಟಕದ ಪ್ರದೇಶದಲ್ಲಿ ಪ್ರಚಲಿತದಲ್ಲಿದ್ದುದು ತಿಳಿದುಬರುತ್ತದೆ. ಅವಳಿ ಜವಳಿ ಸಹೋದರರು, ಮಂತ್ರವಾದಿ ಮತ್ತು ಅವನ ಶಿಷ್ಯರು, ಹೆಣ್ಣಿನಲ್ಲಿಯ ಹೆಣ್ಣು, ಕೊರಳ ಹಾರದಲ್ಲಿ(ಬಾಹ್ಯ) ಜೀವವಿರುವ ಯುವತಿ–ಯುವಕ, ಕಪ್ಪೆಯ ರೂಪದಲ್ಲಿದ್ದ ರಾಜಕುಮಾರ, ಸಿಂಡ್ರೆಲ್ಲಾ, ಒಕ್ಕಣ್ಣು ಇಕ್ಕಣ್ಣು ಮುಕ್ಕಣ್ಣು, ನಂಬಿಗಸ್ಥ ಸೇವಕ, ಮಾಟದ ಮಾವಿನ ಹಣ್ಣು(567), ಮಾಟದ ಹಕ್ಕಿ ಮತ್ತು ಅಗಲಿದ ಸಹೋದರರು(567), ಹತ್ತಂಡ್ಯೊ ಬಿಟ್ಟಂಡ್ಯೊ, ಚೋಟು ಹುಡುಗ, ಮಾತನಾಡುವ ಗಿಳಿ, ಹಾಡುವ ಗಿಡ, ಬಂಗಾರವರ್ತಿ ನೀರು–ಮುಂತಾದ ಇನ್ನೂ ಅನೇಕ ಪ್ರಸಿದ್ಧ ಮಾದರಿಗಳು ಈ ಪ್ರದೇಶದ ತುಂಬೆಲ್ಲ ದೊರೆಯುತ್ತವೆ.

ಪ್ರಸಿದ್ಧ ಭಾರತೀಯ ಕಥಾಗುಚ್ಛಗಳಾದ ಕಥಾಸರಿತ್ಸಾಗರ, ಪಂಚತಂತ್ರ; ಗ್ರೀಸಿನ ಇಸೋಫನ ನೀತಿಕಥೆಗಳು, ತುರ್ಕಿ ದೇಶಗಳಿಗೆ ಸಂಬಂಧಿಸಿದ ಅರೇಬಿಯನ್ ನೈಟ್ಸ್, ಗುಲೇಬಕಾವಲಿ–ಮುಂತಾದವುಗಳಲ್ಲಿ ಕಥಾ ಮಾದರಿಗಳ ರೂಪಗಳು ಈ ಭಾಗದಲ್ಲಿ ಕಂಡುಬರುತ್ತವೆ. 'ತಂದೆಯ ಉಪಶಮನಕ್ಕಾಗಿ ಶೋಧ ನಡೆಸಿದ್ದು' ಎಂಬ ಮಾದರಿ ಗುಲ್ಬಕಾವಲಿ ಎಂಬ ಪ್ರಸಿದ್ಧ ಕಥೆಯಾಗಿದೆ. ಎರಡು ಪ್ರಸಿದ್ಧ ಮಾದರಿಗಳಾದ ಅಲ್ಲಾವುದ್ದೀನ್, ಸೇಸಮ್ ತೆರೆ–ನಾಲ್ವತ್ತು ಜನ ಕಳ್ಳರು ಎಂಬವು ಅರೇಬಿಯನ್ ನೈಟ್ಸ್ ಕಥಾಗುಚ್ಛದಿಂದ ಪ್ರಸಿದ್ಧಿಗೆ ಬಂದಂತಹುಗಳಾಗಿವೆ.

ತೋಳ ಬಂತಲೇತೋಳ, ಕೊಡಲಿ ನೀರಿನಲ್ಲಿ ಬಿದ್ದಿತು, ಹಿಂಬಡಿಯನ್ನು ಕಚ್ಚಿ ಹಿಡಿಯುವದು, ಮಂಗವು ಬೆಣ್ಣೆಯನ್ನು ಪಾಲು ಮಾಡಿಕೊಟ್ಟಿತು, ಬಾಯೊಳಗೆ ಮಾಂಸ ಹಿಡಿದ ಕಾಗೆ, ಬೆಕ್ಕಿಗೆ ಗಂಟೆ ಕಟ್ಟುವವರು ಯಾರು, ಮೊಲ ಮತ್ತು ಆಮೆಯ ಸ್ಪರ್ಧೆ, ಮುಂತಾದ ಇನ್ನೂ ಕೆಲವು ಪ್ರಾಣಿ ಕಥೆಗಳು ಇಸೋಫನ ನೀತಿ ಕಥೆಗಳಿಂದ ಪ್ರಸಿದ್ಧವಾದವುಗಳಾಗಿವೆ. ಪ್ರಾಣಿ ಕಥೆಗಳ ಇನ್ನೂ ಹೆಚ್ಚಿನ ಮಾದರಿಗಳಾದ ಮುಂಗುಲಿ ಮತ್ತು ಬ್ರಾಹ್ಮಣ, ಆನೆ ಮತ್ತು ಟಿಟ್ಟಿಭ ಮುಂತಾದ ಕಥೆಗಳು ಪಂಚತಂತ್ರದಿಂದ ಬಂದವುಗಳಾಗಿವೆ. ಇವಲ್ಲದೆ–ಅಕಬರ ಬೀರಬಲ್ಲರ ಕಥೆಗಳು, ಕಾಳಿದಾಸ ಭೋಜರಾಜರ ಕಥೆಗಳು, ಬತ್ತೀಸ ಪುತ್ಥಳಿಯ ಕಥೆಗಳು, ಬೇತಾಳನ ಕಥೆಗಳು, ಚಂದ್ರಹಾಸ ಚರಿತೆ–ಮುಂತಾದ ಕೃತಿಗಳಲ್ಲಿ ದೊರೆಯುವ ಅನೇಕ ಕಥಾ ಮಾದರಿಗಳು ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಪ್ರಚಲಿತದಲ್ಲಿವೆ.

ಈ ಪ್ರದೇಶದಲ್ಲಿ ಪ್ರಾಣಿ ಕಥೆಗಳು ತೀರ ಕ್ವಚಿತ್ತಾಗಿ ದೊರೆಯುತ್ತವೆ. ಲಭ್ಯವಾಗುವ ಕಥೆಗಳಲ್ಲಿ–ಹೆಚ್ಚಿನವು ಈಗಾಗಲೇ ಪ್ರಸಿದ್ಧ ಪ್ರಾಣಿ ಕಥಾಸಂಕಲನಗಳಾದ ಪಂಚತಂತ್ರ, ಇಸೋಫನ ನೀತಿಕಥೆಗಳು ಮುಂತಾದವುಗಳಲ್ಲಿ ಕಾಣಿಸಿಕೊಂಡವುಗಳು. ಅದರಲ್ಲೂ ಕೆಲವು ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳಿಂದ ಪ್ರಸಿದ್ಧಿಯಾದಂತವುಗಳು. ಹೊಸ ಪ್ರಾಣಿಕಥೆಗಳೇನಾದರೂ ದೊರೆಯಬಹುದೇ ಎಂದು ಪ್ರಯತ್ನ ಮಾಡಿದರೆ–ಬಹಳವೆಂದರೆ ಬೆರಳೆಣಿಕೆಯ ಮಾದರಿಗಳನ್ನು ಮಾತ್ರ ಗುರುತಿಸಲು ಸಾಧ್ಯವಾಗಬಹುದಾಗಿದೆ. ಈ ಪ್ರಾಣಿಕಥೆಗಳಲ್ಲಿ ನರಿ ಮತ್ತು ಮಂಗಗಳು ಕ್ರಮವಾಗಿ ಮೊದಲನೆಯ ಮತ್ತು ಎರಡನೆಯ ತಂತ್ರಗಳಾಗಿ ಕಾಣಸಿಗುತ್ತವೆ. ಕೇವಲ ಪ್ರಾಣಿಕಥೆಗಳಲ್ಲಿ ಅಲ್ಲದೆ, ಸಾಮಾನ್ಯ ಜನಪದ–ಕಥೆಗಳಲ್ಲೂ ನರಿ ಮತ್ತು ಮಂಗಗಳೇ ತಂತ್ರಿಗಳಾಗಿ ಪಾತ್ರವಾಡುವುದನ್ನು ನೋಡಬಹುದಾಗಿದೆ.

'ಕೆರೆ ಹಳ್ಳ ಬಾವಿಗಳು ಮೈದೆಗೆದರೆ–ಗುಳ್ಳೆ, ಗೊರಜೆ, ಚಿಪ್ಪುಗಳು ಕಾಣುತ್ತವೆ, ವಾರಿಧಿ ಮೈದೆಗೆದರೆ ರತ್ನಗಳು ಕಾಣುವಂತೆ,' ಜನಪದ ಕಥೆಗಳು ಮೈದೆಗೆದರೆ ಗತೇತಿಹಾಸದ ಕುರುಹುಗಳನ್ನು, ಪ್ರಸ್ತುತ ಜೀವನವು ಆ ಗತಕಾಲದೊಂದಿಗೆ ಬೆಸೆದು ಕೊಂಡ ಕೊಂಡಿಗಳನ್ನು ಕಾಣಬಹುದಾಗಿದೆ. ಅದಕ್ಕಾಗಿ ಜನಪದ ಕಥೆಗಳನ್ನು ಪ್ರಾದೇಶಿಕ ಮಟ್ಟದಲ್ಲಿ ಅಧ್ಯಯನ ಮಾಡುವಾಗ, ಈ ಕಥೆಗಳು ಸಾಂಸ್ಕೃತೀಕರಣಗೊಂಡ ಬಗೆಯನ್ನು ಶೋಧಿಸುವ ಕೆಲಸ ಮಾಡಬೇಕಾಗುತ್ತದೆ. ಹಾಗೆ ಮಾಡಿದಾಗ ಒಂದು ನಾಡಿನ ಇಡಿಯಾದ ಚರಿತ್ರೆಯ ಛಾಯೆಯ ಎಳೆಗಳು ಅವುಗಳ ಆಳದಲ್ಲಿ ಹುದುಗಿರುವುದನ್ನು ಕಾಣುತ್ತೇವೆ. ಹೀಗೆ ಒಂದು ನಾಡಿನ ಚಾರಿತ್ರಿಕ, ಸಾಂಸ್ಕೃತಿಕ ರಂಗಪರಿಕರಗಳ ಸಹಾಯದಿಂದಲೇ ವ್ಯಾಪಕವಾಗಿ ವಿಶ್ವದಾದ್ಯಂತ ತೋರುವ ಸಮಾನ ಕ್ರಿಯೆಗಳನ್ನು ಒಂದು ಕಥೆ ಪ್ರದರ್ಶಿಸುತ್ತಿರುತ್ತದೆ.

ಹೈದರಾಬಾದ ಕರ್ನಾಟಕದ ಕಥೆಗಳ ಆವರಣಗಳನ್ನು ಬಿಚ್ಚಿ ನೋಡಿದರೆ ಅಲ್ಲೆಲ್ಲ ಇಡೀ ಕರ್ನಾಟಕದ, ತನ್ಮೂಲಕ ಇನ್ನೂ ವ್ಯಾಪಕವಾಗಿ ಇಡೀ ಭಾರತದ ಸಾಂಸ್ಕೃತಿಕ, ಚಾರಿತ್ರಿಕ, ಪರಿಸರಗಳನ್ನು ಕಾಣಬಹುದಾಗಿದೆ; ಮೊದಲನೆಯದಾಗಿ, ಹೈದರಾಬಾದ ಕರ್ನಾಟಕದ ಕಥೆಗಳಲ್ಲಿ, ಮುಸ್ಲೀಮ ಆಡಳಿತದ ಕುರುಹುಗಳಾಗಿ, ನ್ಯಾಯಾಧೀಶ ಖಾಜಿಯನ್ನು, ಗಸ್ತಿ ತಿರುಗುವ ಸಾಬನನ್ನು, ಜವಾಬಕೊಡುವ ಮುಲ್ಲಾನನ್ನು, ಮಾಟಗಾರ ಭಿಕ್ಷುಕರಾದ ಬಾವಾ, ಫಕೀರಸಾಬರುಗಳನ್ನು ಕಾಣಬಹುದಾಗಿದೆ. ಇವರಿಗಿಂತಲೂ ಮಿಗಿಲಾಗಿ, ಬಹುಕಾಲದ ಹಿಂದೆ ವೈಭವದ ದಿನಗಳನ್ನು ಕಂಡ ರಾಜ–ಮಹಾರಾಜರು, ಮಂತ್ರಿ–

ಮಹೋದಯರು, ರಾಜಕುಮಾರ, ರಾಜಕುಮಾರಿಯರು–ಕಥೆಗಳ ತುಂಬ ಅಡ್ಡಾಡುತ್ತಾರೆ, ಕಾದಾಡುತ್ತಾರೆ, ಶೌರ್ಯ ಸಾಹಸಗಳನ್ನು ಮೆರೆಯುತ್ತಾರೆ. ಅರಸರ ಮನೆಯಲ್ಲಿ ಅರಸರ ಹೆಂಗಸರ ಗಜಿಬಿಜಿ ಗದ್ದಲ. ಮನೆಯಲ್ಲಿ ರಾಣಿಯರು, ನೆರೆಮನೆಯಲ್ಲಿ ಮನದನ್ನೆಯರು. ಅರಸನ ಆಡಳಿತದಲ್ಲಿ ನೆರವಾಗುವ–ರಾಜಸೇವಕರು, ಪರಿಚಾರಕರು, ಸೈನಿಕರು, ಚಾಂಡಾಲರು ಮುಂತಾದವರು. ಇವರೆಲ್ಲ ನಮ್ಮವರೆ ನಮ್ಮ ನಾಡಿನವರೆ.

ಕಥೆಗಳ ತುಂಬ ಹರಡಿಕೊಂಡಿರುವವು ಒಂದಾನೊಂದು ಕಾಲಕ್ಕೆ ಆಳರಸರುಗಳನ್ನು ಕಂಡು ವಿಜೃಂಭಿಸಿದ, ಸುತ್ತಲೂ ಕೋಟೆ (ಬೇಲಿ), ಕೊತ್ತಲುಗಳುಳ್ಳ ಹೆಬ್ಬಾಗಿಲಿನ (ಅಗಸಿ) ಊರುಗಳು, ಊರನ್ನಾಳುವ ಗೌಡ, ಕಾನೂನು ಬಲ್ಲ ಕುಲಕರ್ಣಿ, ಊರಬಾಗಿಲ ಕಾಯುವ ತಳವಾರ, ರಾತ್ರಿಗಸ್ತು ತಿರುಗುವ ವಾಲಿಕಾರ, ದಂಗೂರ ಸಾರುವ ಮಾದಿಗ–ಇವರೆಲ್ಲ ಅರಸನ ಆಡಳಿತ ವರ್ಗಕ್ಕೆ ಸೇರಿದವರು. ಅವನ ಆಜ್ಞೆಯಂತೆ ಊರಿನ ದಿನನಿತ್ಯದ ಆಗುಹೋಗುಗಳನ್ನು ನೋಡಿಕೊಳ್ಳುವ ಜವಾಬ್ದಾರರು. ಊರೆಂದಮೇಲೆ ಅದಕ್ಕೊಂದು ಹೊಲಗೇರಿ ನೂರೆಂಟು ಜಾತಿ ಜನಾಂಗಗಳು. ಉದ್ಯೋಗಸ್ಥರು. ಸಾಮಾಜಿಕ ಹೊರೆಗಳನ್ನು ಹೊತ್ತ ಆಯಗಾರರು: ಕಟ್ಟಿಗೆಯ ಕುಶಲಕರ್ಮಿ ಬಡಿಗ, ಕಬ್ಬಿಣ ಕಾಸಿ ಕುಡಗೋಲು ಕುರುಪಿ ತಯಾರಿಸುವ ಕಂಬಾರ, ಗಡಿಗೆ ಮಡಿಕೆಗಳ ಕುಂಬಾರ, ಬಟ್ಟೆ ತೊಳೆಯುವ ಅಗಸ ಎಣ್ಣೆ ತೆಗೆಯುವ ಗಾಣಿಗ, ಹೂಪತ್ರೆಯ ಜೀರ, ಕ್ಷೌರ ಮಾಡುವ ನಾವಿದ, ಇವರೆಲ್ಲರಿಗೂ ಮಿಕ್ಕಿದ ಮನೆಯ ಲೆಂಕಮಗ. ಎಲ್ಲ–ಎಲ್ಲರೂ ನಮ್ಮವರೆ. ಖಾಸ ನಮ್ಮೂರ ಮಣ್ಣಿನ ಮಕ್ಕಳೆ. ಈ ಮಕ್ಕಳ ರೂಪವನ್ನು ನೀವು ಬೇರೊಂದು ದೇಶದಲ್ಲಿ ಕಾಣಲಾರಿರಿ. ಇವರಿಷ್ಟೆ ಅಲ್ಲ–ರೈತ, ಬ್ಯಾಡ, ಬೆಸ್ತ, ವ್ಯಾಪಾರಿ, ಬಳೆಗಾರ, ಮಣಿಗಾರ, ಮುತ್ತುಗಾರ, ಗೊಲ್ಲ, ಡೊಂಬ, ಕೊರವ, ಬ್ರಾಹ್ಮಣ, ಬುಡಬುಡಕ್ಯಾ, ಜಂಗಮ, ಅಕ್ಕಸಾಲಿ, ವೈದ್ಯ ಇವರೆಲ್ಲ ನಮ್ಮ ಕಥೆಗಳಲ್ಲಿ ಕಾಣಸಿಗುವ ಸಾಮಾಜಿಕರು.

ಇಲ್ಲಿಯ ಕೌಟುಂಬಿಕ ದೃಶ್ಯಗಳಲ್ಲಿ ಕಾಣಸಿಗುವವರು ಬೇರೆ ಯಾರೂ ಅಲ್ಲ, ನಾವೇ. ನಾನು–ನೀವು, ನಮ್ಮಜ್ಜ–ಅಜ್ಜಿ, ಅಪ್ಪ–ಅವ್ವ, ನಮ್ಮ ಒಡಹುಟ್ಟಿದವರು, ನಮ್ಮ ಹೆಂಡತಿ–ಮಕ್ಕಳು, ಅಳಿಯ–ಮಾವ, ಭಾವ–ಮೈದುನ, ಅತ್ತೆ–ಸೊಸೆ, ನಾದಿನಿ–ನೆಗೆಯಣ್ಣಿ, ಎಲ್ಲರೂ ನಮ್ಮ ನಿಮ್ಮ ಸಂಬಂಧಿಕರೇ. ಹರಿದು ಹಂಚಿದ ಕರುಳ ಬಳ್ಳಿಯವರೇ. ಇವರ ಜೊತೆಗೆ ಮುದುಕ–ಮುದುಕಿ, ಪಾರ–ಪೋರಿ ಎಲ್ಲರೂ ನಾವು ನಂಬಿದಂತೆ, ನಮ್ಮ ಸಂಪ್ರದಾಯಗಳಂತೆ ಪಾತ್ರವಾಡುತ್ತಾರೆ. ಮದುವೆ ಮುಂಜಿವೆಗಳನ್ನು ಮಾಡಿಕೊಳ್ಳುತ್ತಾರೆ. ಹೆಂಡತಿ–ಮಕ್ಕಳಿಗಾಗಿ ತೊಳಲಾಡುತ್ತಾರೆ. ಹರಕೆ ಹೊರುತ್ತಾರೆ. ಪೂಜೆ ಸಲ್ಲಿಸುತ್ತಾರೆ.

ನಾವು ಪೂಜಿಸುವ ದೈವಗಳು–ಅದೇ ಊರ ಹೊರಗಿನ ಹನುಮ. ನಮ್ಮ ದರಿದ್ರ ಹಣೆಬರೆಹ ಬರೆಯುವ ಶಟವಿ. ಶಿವ–ಪಾರ್ವತಿಯರು ಎಲ್ಲರಿಗೂ ಮಿಗಿಲಾದವರು. ಆದರೂ ನಮ್ಮ ನಿಮ್ಮಂತೆ ಭೂಮಿಯ ಮೇಲೆ ಅಡ್ಡಾಡುತ್ತಾರೆ. ಬೇಕಾದವರು ಕರೆದರೆ ಓಗೊಡುತ್ತಾರೆ. ಮಳೆರಾಜ, ಚಂದ್ರರಂತೂ, ತೀರ ಲಂಪಟ ಮಹಾಶಯರು. ನಮ್ಮ ಮಾವಂದಿರು. ಚೆಂದದ ಹೆಣ್ಣನ್ನು ಕಂಡರೆ ಭೂಮಿಯ ಮೇಲೆ ಬಂದು ಬೀಗಸ್ತನ ಮಾಡುವವರು. ಆಕಾಶದಲ್ಲಿರುವ ಗಂಡಸರ ಪಾಡು ಇದಾದರೆ ಹೆಂಗಸರೇನೂ ಕಡಿಮೆಯವರಲ್ಲ. ದೇವಕನ್ನಿಕೆಯರು, ಗಂಧರ್ವ ಕನ್ಯೆಯರು. ಬೇಕಾದ ಚಂದದ ಗಂಡು ಸಿಕ್ಕರೆ, ಅಂತರ್ಲೆ ಇರುವುದನ್ನು ಬಿಟ್ಟು ಅಂಜಿಕೆಯಿಲ್ಲದೆ ಭೂಮಿಯ ಮೇಲೆ ಸಂಸಾರ ಹೂಡುತ್ತಾರೆ. ಇವರೆಲ್ಲರಿಗೂ ಮಿಕ್ಕಿ–ಸತ್ತು ದೆವ್ವಾದವರು, ಅಡವಿಯಲ್ಲಿ ಬದುಕಿ ರಾಕ್ಷಸರೆನಿಸಿಕೊಂಡವರು. ಎಲ್ಲರಿಗೂ ನಮಗೆ ಮೊದಲಿನಿಂದಲೂ ಪರಿಚಯಸ್ತರೆ. ಅಜ್ಜಿಯ ಸೀರೆಗೋ ಅಜ್ಜನ ಪಂಜೆಗೋ ಹತ್ತಿಕೊಂಡವರೇ. ಇವರೆಲ್ಲ ಕಥೆಗಳಲ್ಲಿ ಪ್ರವೇಶಿಸಿ ತಮ್ಮ ತಮ್ಮ ಸ್ವಭಾವಗಳಿಗೆ ತಕ್ಕಂತೆ ವರ್ತಿಸುತ್ತಾರೆ. ಅಳುತ್ತಾರೆ, ನಗುತ್ತಾರೆ. ಈ ಸಹಜ ವರ್ತನೆಗಳೊಂದಿಗೆ ಒಬ್ಬೊಬ್ಬರೂ ಕಥೆಯ ಒಟ್ಟು ಕ್ರಿಯೆಯ ಹಿನ್ನೆಲೆಯಲ್ಲಿ ಪಾತ್ರವಾಡುತ್ತಿರುತ್ತಾರೆ. ಅರ್ಥಾತ್ ಈ ವರ್ತನೆಗಳೇ ಕಥೆಯ ಕ್ರಿಯೆಗಳನ್ನು ಹುಟ್ಟುಹಾಕುತ್ತವೆ. ಪ್ರಪಂಚದಲ್ಲೆಲ್ಲ ಒಂದೇ ರೂಪದಲ್ಲಿ ಕಾಣಿಸುವ ಕಥೆಗಳನ್ನು ಹೆಣೆಯುತ್ತವೆ. ಇದೊಂದು ವಿಚಿತ್ರ ಕುಶಲಕಲೆ. *(ವಿಡಿ)*

ಜನಪದ ಕಲಾವಿದರು: (ಕೊಪ್ಪಳ ಜಿಲ್ಲೆ) ಈ ಜಿಲ್ಲೆಯ ಪ್ರತಿಹಳ್ಳಿಯಲ್ಲಿಯೂ ಜಾನಪದ ಕಲೆ ಮತ್ತು ಕಲಾವಿದರನ್ನು ಕಾಣಬಹುದು. ಬಡತನವನ್ನು ಬೆನ್ನಿಗಂಟಿಸಿಕೊಂಡು ಅನಕ್ಷರಸ್ಥರಾದರೂ ಕಲೆಯನ್ನು ಪೋಷಿಸುತ್ತ ಬಂದ ಸಾವಿರಾರು ಕಲಾವಿದರಿಂದ ಈ ಜಿಲ್ಲೆ ಶ್ರೀಮಂತವಾಗಿದೆ. ನೂರಾರು ಜನಪದ ಕಲಾ ಪ್ರಕಾರಗಳು ಈ ಜಿಲ್ಲೆಯ ಹಳ್ಳಿ ಹಳ್ಳಿಯ ಮನೆ ಮನೆಗಳಲ್ಲಿ ತುಂಬಿ ತುಳುಕುತ್ತಿದೆ. ಕೊಪ್ಪಳ ಜಿಲ್ಲೆಯ ಜಾನಪದ ಸಿರಿಯನ್ನು ಬೆಳಗಿಸಿದ ಕೆಲವು ಕಲಾವಿದರ ವೃತ್ತಿ–ಬದುಕಿನ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಕೊಪ್ಪಳ ತಾಲ್ಲೂಕಿನ ಮೋರನಾಳ ಎಂಬ ಕುಗ್ರಾಮದಲ್ಲಿ ಚಿಕ್ಕ ಗುಡಿಸಲಿನಲ್ಲಿಯೇ ಎಂಟು ದಶಕಗಳನ್ನು ಕಂಡ ಭೀಮವ್ವ ಅನಕ್ಷರಸ್ಥೆಯಾದರೂ ತೊಗಲುಗೊಂಬೆಯಾಟದ ಕಲಾಪ್ರದರ್ಶನದಲ್ಲಿ ಸಿದ್ಧ ಹಸ್ತಳು. ಗಂಡ ದೊಡ್ಡ ಬಾಳಪ್ಪ ಒಬ್ಬ ಶ್ರೇಷ್ಠ ತೊಗಲು ಗೊಂಬೆಯ ಕಲಾವಿದನಾಗಿ 1987ರಲ್ಲಿಯೇ ಕರ್ನಾಟಕ ಜಾನಪದ ಅಕಾಡೆಮಿಯಿಂದ ಪ್ರಶಸ್ತಿಯನ್ನು ಪಡೆದಿದ್ದರು. ಈ ಕಲೆಯನ್ನು ಮುಂದುವರೆಸಿಕೊಂಡು ಬಂದ ಭೀಮವ್ವ ತಾನೂ ಜನಪದ ಅಕಾಡೆಮಿಯ ಪ್ರಶಸ್ತಿಯನ್ನು ಪಡೆಯುವ ಮಟ್ಟಿಗೆ ಬೆಳೆದು ನಿಂತಿದ್ದಾಳೆ.

ಕರ್ನಾಟಕ ಉದ್ದಗಲಕ್ಕೂ ಕಲಾಪ್ರದರ್ಶನವನ್ನು ನೀಡಿದ ಭೀಮವ್ವ ಪ್ಯಾರೀಸ್, ಲಂಡನ್, ಸ್ವಿಜರಲ್ಯಾಂಡ್, ಇರಾನ್–ಇರಾಕ್ ಜರ್ಮನಿ. ತೆಹರಾನ, ಅರೆಬಿಯಾ ಮುಂತಾದ ಹತ್ತಾರು ದೇಶಗಳಿಗೆ ಸುತ್ತಾಡಿ ಕೊಪ್ಪಳದ ತೊಗಲು ಗೊಂಬೆಯ ಕಲೆಯನ್ನು ಜಗದ ಬಾನಂಚಿನಲ್ಲಿ ಮಿನುಗಿಸಿದ್ದಾಳೆ.

ಭೀಮವ್ವನ ಮಕ್ಕಳಾದ ವಿರೂಪಾಕ್ಷಪ್ಪ ಮತ್ತು ಯಂಕಪ್ಪಾ ಕಿಳ್ಳಿಕ್ಯಾತರ ಹಾಗೂ ಬೆಳಗಟ್ಟಿಯ ರಾಮಣ್ಣ ಮತ್ತು ಹನುಮಪ್ಪ ಕಿಳ್ಳಿಕ್ಯಾತರ ಮುಂತಾದವರು ಭೀಮವ್ವನ ಈ ಕಲೆ ಮುಂದುವರೆಸಿಕೊಂಡು ಪ್ರಸಿದ್ಧಿಯನ್ನು ಪಡೆದಿದ್ದಾರೆ.

ಜಿ. ಕರಿಯಪ್ಪ ಮಾಸ್ತರ (ಹುಲಿಹೈದರ): ಜನಪದ ಕಲೆಗಳಲ್ಲಿಯೇ ಹೆಚ್ಚು ಜನಾಕರ್ಷಿತವೆಂದು ಹೇಳಬಹುದಾದ ಡಪ್ಪಿನಾಟವು ಕೊಪ್ಪಳ ಜಿಲ್ಲೆಯಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಈ ಡಪ್ಪಿನಾಟದ ಶ್ರೇಷ್ಠತೆಯ ಹಿಂದೆ ಕೇಳಿ ಬರುತ್ತಿರುವ ಪ್ರಮುಖವಾದ ಹೆಸರು ಜಿ. ಕರಿಯಪ್ಪ ಮಾಸ್ತರ. ಹುಲಿಹೈದರ ಎಂಬ ಚಿಕ್ಕ ಗ್ರಾಮದಲ್ಲಿ ಜನಿಸಿದರು. ಚಿಕ್ಕವರಾಗಿದ್ದಾಗಲೆ, ಪ್ರಾಥಮಿಕ ಶಿಕ್ಷಣಕ್ಕೆ ತಮ್ಮ ಓದನ್ನು ನಿಲ್ಲಿಸಿ ಡಪ್ಪಿನಾಟಕ್ಕೆ ಮರುಳಾಗಿ ಅದರ ಹಿಂದೆ ಹೊರಟವರು.

ರತಿಕಲ್ಯಾಣ ಡಪ್ಪಿನಾಟದಲ್ಲಿ ಸ್ತ್ರೀಪಾತ್ರ ಮಾಡುವುದರ ಮೂಲಕ ರಂಗ ಪ್ರವೇಶ ಮಾಡಿದ, ಇವರ ಪ್ರತಿಭೆಯನ್ನು ಕಂಡ ಡಪ್ಪಿನಾಟದ ಹೆಸರಾಂತ ಕಲಾವಿದ ಹೊಳೆಯಪ್ಪ ಮಾಸ್ತರ ಕ-ರಿಯಪ್ಪನವರಿಗೆ ತಮ್ಮ ಸಂಪೂರ್ಣ ಕಲೆಯನ್ನು ಧಾರೆಯೆರೆದರು. ರತಿಕಲ್ಯಾಣ, ಗಿರಿಜಾಕಲ್ಯಾಣ ಮುಂತಾದ ಡಪ್ಪಿನಾಟಗಳಲ್ಲಿ ಕಲಾವಿದನಾಗಿ ಭಾಗವಹಿಸಿದ ಕರಿಯಪ್ಪನವರು ಡಪ್ಪಿನಾಟದ ನಿರ್ದೇಶನಕ್ಕೂ ಕೈ ಹಾಕಿದರು. ಬಾಲ ಭಿಕ್ಷರಾಜ, ಛತ್ರಪತಿ ರಾಜಾ, ಕಬೀರದಾಸ, ಸಂಗ್ಯಾಬಾಳ್ಯಾ, ತಿರುನೀಲಕಂಠ, ಬಸವಂತ ಬಲವಂತ, ಸ್ಟೇಷನ್ ಮಾಸ್ತರ ಹಾಗೂ ಮೈನಾವತಿ ಮುಂತಾದ ಅನೇಕ ಡಪ್ಪಿನಾಟಗಳನ್ನು ನಿರ್ದೇಶಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಮಾಧುರ್ಯದಿಂದ ಕೂಡಿದ ಕಂಠಸಿರಿಯನ್ನು ಹೊಂದಿದ, ಸ್ಪಷ್ಟ ಸಂಭಾಷಣೆಗೆ ಹೆಸರಾದ ಲಯಬದ್ಧವಾಗಿ ಡಪ್ಪನ್ನು ಬಾರಿಸುವ ಕ-ರಿಯಪ್ಪ ಮಾಸ್ತರ ಶಿಷ್ಟ ಸಾಹಿತ್ಯದಿಂದ ಕೂಡಿದ, ಚಂಪೂ ಶೈಲಿಯ ಶುದ್ಧ ಡಪ್ಪಿನಾಟ ಕಲೆಯನ್ನು ಕಲಿಸಲು ನಾಡಿನುದ್ದಗಲಕ್ಕೂ ಸಂಚರಿಸಿದ್ದಾರೆ. ರಾಮದುರ್ಗ, ಸುರೇಬಾನು, ಇಟಗಿ, ಲಕ್ಷ್ಮೇಶರ, ಯಲ್ಲಾಪುರ ಹಳೇಕೋಟೆ, ಶಿರಗುಪ್ಪಾ, ಹೊಸಪೇಟೆ, ಔರಾದ್, ಕಮಲಾಪುರ ಮುಂತಾದ ಕಡೆಗಳಲ್ಲಿ ಸಂಚರಿಸಿದ ಕರಿಯಪ್ಪನವರು ಕರ್ನಾಟಕದ ಬೀದರದಿಂದ ಮಹಾರಾಷ್ಟ್ರದ ಸಾಂಗ್ಲಿಯವರೆಗೆ ಅನೇಕ ಊರುಗಳಲ್ಲಿ ಡಪ್ಪಿನಾಟದ ನಿರ್ದೇಶನವನ್ನು ಮಾಡಿದ್ದಾರೆ. ಡಪ್ಪಿನಾಟದೊಂದಿಗೆ ಇತರ ಜನಪದ ಕಲೆಗಳನ್ನು ಕರಿಯಪ್ಪನವರು ಕರಗತ ಮಾಡಿಕೊಂಡಿದ್ದಾರೆ.

ಭಜನೆಹಾಡು, ರಂಗಗೀತೆ, ದಾಸರ, ಶರಣರಪದಗಳು, ಜನಪದ ಗಾಯನ ಮುಂತಾದ ಅನೇಕ ಜಾನಪದ ಕಲಾಪ್ರಕಾರಗಳನ್ನು ಮೈಗೂಡಿಸಿಕೊಂಡ ಕರಿಯಪ್ಪನವರಿಗೆ ಅನೇಕ ಪುರಸ್ಕಾರಗಳು, ಸನ್ಮಾನಗಳು ದೊರೆತಿವೆ. ವಾರ್ತಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಆರೋಗ್ಯ, ಕುಟುಂಬ ಕಲ್ಯಾಣ ಇಲಾಖೆಯ ಯೋಜನೆಗಳನ್ನು ಪ್ರಚಾರ ಮಾಡುವ ಕಾರ್ಯಕ್ರಮಗಳನ್ನು ನಿರ್ದೇಶಿಸುತ್ತಾರೆ. ಜನಪರ ಹಾಡುಗಳೊಂದಿಗೆ ಜನ ಜಾಗೃತಿ ಮೂಡಿಸಿರುತ್ತಾರೆ. ತಮ್ಮ ಜನಪದ ಸಿರಿಯನ್ನು ಹನ್ನೊಂದು ಆಡಿಯೋ ಕ್ಯಾಸೆಟ್‌ಗಳಲ್ಲಿ ತುಂಬಿಕೊಟ್ಟಿದ್ದಾರೆ.

ಚುಟ್ಟವ್ವ (ಸುಟ್ಟವ್ವಾ) ಹರಿಜನ: ಈ ಜಿಲ್ಲೆಯಲ್ಲಿ ಯಾರಾದರೂ ತೀರಿಕೊಂಡರೆ ತೀರಿಕೊಂಡವರ ಮನೆಯಲ್ಲಿ ಭಜನೆ ಪದಗಳನ್ನು, ತತ್ವಪದಗಳನ್ನು ಹಾಡುವ ಸಂಪ್ರದಾಯವು ಇದೆ. ಆಗ ಹಳ್ಳಿಗರಿಗೆಲ್ಲಾ ತಕ್ಷಣ ನೆನಪಾಗುವವಳೇ ಜನಪದ ಸಿರಿ ಎನಿಸಿರುವ ಚುಟ್ಟವ್ಮ ಹರಿಜನ. ದಿನಗಟ್ಟಲೇ ಭಜನೆ ಪದಗಳನ್ನು ಹಾಡುವ ಮೂಲಕ ಸೂತಕದ ಮನೆಯಲ್ಲಿ ಜೀವನದ ನಶ್ವರತೆಯನ್ನು, ಆಧ್ಯಾತ್ಮಕ ಅನಿವಾರ್ಯತೆಯನ್ನು, ಸಾರುವ ಹಾಡುಗಳನ್ನು ಚುಟ್ಟಮ್ಮಾ ಹಾಡುತ್ತಾಳೆ.

ಇದಲ್ಲದೆ ಮದುವೆ ಸಂದರ್ಭಗಳಲ್ಲಿ ಸೋಬಾನೆ ಪದಗಳು, ನಾಮಕರಣ ಸಮಯದಲ್ಲಿ ಜೋಗುಳ ಪದಗಳನ್ನು, ಗುಡಿಗಳಲ್ಲಿ ಸಭೆ ಸಮಾರಂಭಗಳಲ್ಲಿ ಭಜನೆ ಪದಗಳನ್ನು, ತತ್ವಪದಗಳನ್ನು ನಿರಾತಂಕವಾಗಿ ಹಾಡುವ ಕಲೆಗಾರಿಕೆ ಇವಳಲ್ಲಿದೆ. ಹುಬ್ಬಳ್ಳಿಯ ಸಿದ್ಧಾರೂಢ ಮಠದಲ್ಲಿ ಸತತವಾಗಿ 6 ದಿನಗಳ ಕಾಲ ನಿರಂತರವಾಗಿ ಭಜನಾ ಪದಗಳನ್ನು ಹಾಡಿದ ಕೀರ್ತಿ ಚುಟ್ಟವ್ವಳಿಗೆ ಸಲ್ಲುತ್ತದೆ.

ಅರವತ್ತೈದರ ಇಳಿವಯಸ್ಸಿನಲ್ಲಿಯೂ ಸಾವಿರಾರು ಪದಗಳನ್ನು ನಿರರ್ಗಳವಾಗಿ ಹಾಡುವ ಚುಟ್ಟಮ್ಮಾ ಮಸಬಹಂಚಿನಾಳ ಎಂಬ ಪುಟ್ಟ ಗ್ರಾಮದ ದೇವದಾಸಿ ಕುಟುಂಬದಿಂದ ಬಂದವರು. ಇದ್ದೊಬ್ಬ ಮಗಳನ್ನು ಕಳೆದುಕೊಂಡು ಮೊಮ್ಮಕ್ಕಳನ್ನು ಪೋಷಿಸಿಕೊಂಡು ಬರುವ ಚುಟ್ಟಮ್ಮನಿಗೆ ದೇವದಾಸಿ ಪುನರ್ವಸತಿ ಯೋಜನೆಯಲ್ಲಿ ಬಂದ ಒಂದು ಪುಟ್ಟ ಮನೆಯಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಡುವ ಕಲಾವಿದರ ಮಾಸಾಶನ ಪಡೆಯುತ್ತಿದ್ದಾರೆ. ಈ ಕಲಾವಿದೆಯ ಕಲಾ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಜನಪದ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅನಾರೋಗ್ಯದಿಂದ ಬಳಲುತ್ತಿರುವ ಈ ಕಲಾವಿದೆಯ ಕಂಠದಲ್ಲಿ ಹುದುಗಿದ ಸಾವಿರಾರು ಪದಗಳು ದಾಖಲಾಗಬೇಕಿದೆ.

ರೇಚಪ್ಪಾ ಮಾಸ್ತರ ಮಡಿವಾಳರ: ಯಲಬುರ್ಗಾ ತಾಲ್ಲೂಕಿನ ತಳಕಲ್ ಗ್ರಾಮದ ರೇಚಪ್ಪಾ ಮಾಸ್ತರರು ಏಕತಾರಿ ಪದಗಳನ್ನು ಹಾಡುವುದರಲ್ಲಿ ಸಿದ್ಧಹಸ್ತರು. ಏಕತಾರಿ ತಂಬೂರಿಯನ್ನು ಹಿಡಿದು ದಾಸರ ಪದಗಳನ್ನು ಶರಣರ ವಚನಗಳನ್ನೂ, ಶರೀಫರ ತತ್ವಪದಗಳನ್ನು, ಅನುಭಾವ ಗೀತೆಗಳನ್ನು ಹಾಡುತ್ತ ಕುಳಿತರೆ ಕೇಳುಗರನ್ನು ಆಧ್ಯಾತ್ಮ ಲೋಕಕ್ಕೆ ಕೊಂಡೊಯ್ಯುತ್ತಾರೆ. ಆಕಾಶವಾಣಿ ಕಲಾವಿದರಾದ ಇವರು ಜಿಲ್ಲೆಯಾದ್ಯಂತ ಹಾಡುಗಾರಿಕೆಯನ್ನು ಮೆರೆದಿದ್ದಾರೆ.

ಮೂಲತಃ ರೇಚಪ್ಪನವರು ದೊಡ್ಡಾಟದ ಕಲಾವಿದರು, ದೊಡ್ಡಾಟಗಳಲ್ಲಿ ಅನೇಕ ಸ್ತ್ರೀ-ಪುರುಷ ಪಾತ್ರಗಳನ್ನು ಮಾಡುತ್ತಾ ಕಲಾವಿದರಾಗಿ ಬೆಳೆದರು. ಪ್ರಬುದ್ಧ ಕಲಾವಿದರಾಗಿ ರೂಪುಗೊಂಡ ನಂತರ ದೊಡ್ಡಾಟದ ನಿರ್ದೇಶನಕ್ಕೂ ಕೈ ಹಾಕಿದರು. ಅನೇಕ ಪೌರಾಣಿಕ ಮತ್ತು ಐತಿಹಾಸಿಕ ದೊಡ್ಡಾಟದ ಪ್ರಸಂಗಗಳನ್ನು ರಂಗಕ್ಕಿಳಿಸಿದರು. ಜೀವನದುದ್ದಕ್ಕೂ ಜನಪದ ಕಲೆಗಳನ್ನು ಉಳಿಸಿ ಬೆಳೆಸಿದ್ದಾರೆ. ಕರ್ನಾಟಕ ಜನಪದ ಅಕಾಡೆಮಿ ಈ ಶ್ರೇಷ್ಠ ಕಲಾವಿದರನ್ನು ಕೈಬೀಸಿ ಕರೆದು ಪ್ರಶಸ್ತಿಯ ಗರಿಯನ್ನು ಮೂಡಿಸಿದ್ದಾರೆ.

ಬೀರಪ್ಪಾ ಯಡಿಯಾಪುರ: ಗೀಗೀ ಮೇಳವನ್ನು ಕಟ್ಟಿಕೊಂಡು ನಾಡಿನಾದ್ಯಂತ ಸಂಚರಿಸಿ ಕಾರ್ಯಕ್ರಮಗಳನ್ನು ನೀಡಿದ ಬೀರಪ್ಪನವರ ಜಾನಪದ ಬತ್ತಳಿಕೆಯಲ್ಲಿ ನೂರಾರು ಪದಗಳಿವೆ. ಹರದೇಶಿ-ನಾಗೇಶಿ ಸಂವಾದಿ ಪದದಲ್ಲಿ ಎಂತಹವರಿಗೂ

ಸವಾಲೆಸಗುವ ಛಾತಿ ಇವರಿಗಿದೆ. ರಾತ್ರಿ ಇಡೀ ಗೀಗೀ ಪದಗಳ ಮೂಲಕ ಜನರಿಗೆ ಮನರಂಜನೆ ನೀಡುತ್ತ ನೀತಿಪಾಠ ಹೇಳುತ್ತಾ ಬದುಕಿನ ವಾಸ್ತವತೆಯನ್ನು ಬಿಂಬಿಸುತ್ತ ಸಾಗಿದ್ದಾರೆ.

ಕಿತ್ತೂರು ರಾಣಿ ಚೆನ್ನಮ್ಮಾ, ವೀರ ಸಿಂಧೂರ ಲಕ್ಷ್ಮಣ, ಮಹಾತ್ಮಗಾಂಧೀಜಿ ಮುಂತಾದ ಗಣ್ಯರ ಕುರಿತು ಲಾವಣಿ ಪದಗಳನ್ನು ಕಟ್ಟಿ ಹಾಡುತ್ತಾರೆ. ಹಂತಿ ಪದ, ಲಾವಣಿ ಪದ, ಭಜನೆ ಪದ ಹಾಡುವುದರಲ್ಲಿಯೂ ಇವರಿಗೆ ಆಸಕ್ತಿ ಇದೆ. ಇವರ ಇನ್ನೊಂದು ಆಸಕ್ತಿಯ ಜನಪದ ಪ್ರಕಾರವೆಂದರೆ ಡೊಳ್ಳಿನ ಪದ, ಡೊಳ್ಳಿನ ಪದಗಳನ್ನು ಹಾಡುವಾಗ ಇಡೀ ಮೇಳದ ಮುಖಂಡತ್ವ ಇವರದ್ದಾಗಿರುತ್ತದೆ. ಸರ್ಕಾರಿ ಕಾರ್ಯಕ್ರಮಗಳಾದ ಅಕ್ಷರ ಕ್ರಾಂತಿ, ಮರಳಿ ಬಾ ಶಾಲೆಗೆ, ಬಿಸಿಯೂಟ, ಉದ್ಯೋಗ ಖಾತ್ರಿ ಯೋಜನೆ, ಏಡ್ಸ್ ಜಾಗೃತಿ, ಶೌಚಾಲಯ, ಮುಂತಾದ ವಿಷಯಗಳ ಬಗ್ಗೆ ಪದ ಕಟ್ಟಿ ಹಾಡುತ್ತಾ ಜನಜಾಗೃತಿ ಮೂಡಿಸಿದ್ದಾರೆ.

ಜಾನಪದ ಅಕಾಡೆಮಿ ಪ್ರಶಸ್ತಿಯೂ ಸೇರಿದಂತೆ ಅನೇಕ ಪ್ರಶಸ್ತಿ–ಪುರಸ್ಕಾರಗಳು ಯಡಿಯಾಪುರರವರ ಮಡಿಲು ಸೇರಿವೆ. ಮೈಸೂರು ದಸರಾದಲ್ಲಿ ಗೀಗೀ ಪದಕ್ಕೆ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ತಾಯಮ್ಮಾ ಎಸ್.ಸಿ. ಮಲ್ಲಯ್ಯ ದತ್ತಿ ಪ್ರಶಸ್ತಿಗಳಲ್ಲದೆ; ಸಾಹಿತ್ಯ ಸಮ್ಮೇಳನದಲ್ಲಿ, ಜನಪದ ಜಾತ್ರೆ ಉತ್ಸವಗಳಲ್ಲಿ ಮೆಚ್ಚುಗೆ ಪತ್ರಗಳನ್ನು ಪಡೆದಿದ್ದಾರೆ. ಇವರ ಬಾಳಸಂಗಾತಿ ಬೀರವ್ವ ಒಬ್ಬ ಪ್ರತಿಭಾನ್ವಿತ ಜನಪದ ಕಲಾವಿದೆ. ಸೋಬಾನೆ ಪದ, ಬೀಸುವ, ಕುಟ್ಟುವ ಪದ, ದೇವರ ನಾಮಗಳು, ಮೈಲಾರಲಿಂಗಪ್ಪನ ಪದ, ಯಲ್ಲಮ್ಮನ ಪದ, ಸಂಪ್ರದಾಯದ ಪದಗಳು ಹೀಗೆ ಅನೇಕ ಜನಪದ ಶೈಲಿಯ ಹಾಡುಗಳನ್ನು ಬೀರವ್ವ ಹಾಡುತ್ತಾರೆ. ಹೊಸಪೇಟೆ ಆಕಾಶವಾಣಿಯಲ್ಲಿಯೂ ಇವರ ಹಾಡುಗಳು ಬಿತ್ತರವಾಗಿವೆ. ಅರವತ್ತೈದರ ಮಾಗಿದ ಕಲಾವಿದೆ ಗಂಡನಿಂದಲೆ ಸಂವಾದಿ ಪದಗಳನ್ನು ಕಲಿಯುತ್ತಿರುವುದು ವಿಶೇಷವಾಗಿದೆ.

ವಾಲ್ಮೀಕಿ ಯಕ್ಕರನಾಳ: ವೃತ್ತಿಯಿಂದ ಶಿಕ್ಷಕರಾದರೂ ಪ್ರವೃತ್ತಿಯಿಂದ ಜನಪದ ಕಲಾವಿದರಾದ ವಾಲ್ಮೀಕಿ ಯಕ್ಕರನಾಳ ಕುಷ್ಟಗಿಯಲ್ಲಿ ನೆಲೆ ನಿಂತಿದ್ದಾರೆ. ಒಂದು ತ್ರಿಪದಿಯನ್ನು ನಲವತ್ತೆರಡು ಜನಪದ ದಾಟಿಗಳಲ್ಲಿ ಹಾಡಿ ತೋರಿಸುವ ವಿಶಿಷ್ಟ ಪ್ರತಿಭೆ ಇವರದು. ಇದರ ಪ್ರಯೋಗಗಳನ್ನು ನಾಡಿನಾದ್ಯಂತ ಮಾಡಿ ತೋರಿಸುವ ಮೂಲಕ ಜನಪದದ ವೈವಿಧ್ಯತೆಗಳನ್ನು ಸಾರಿ ಹೇಳುತ್ತಾರೆ. ಲಾವಣಿ ಪದಗಳನ್ನು ರಚಿಸುವಲ್ಲಿ ಇವರ ಜಾಣ್ಮೆ ಎದ್ದು ಕಾಣುತ್ತದೆ. ಪ್ರಸಕ್ತ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ತಮ್ಮ ಲಾವಣಿಗಳ ಮೂಲಕ ಹೇಳುತ್ತಾ ಜಿಡ್ಡುಗಟ್ಟಿದ ವ್ಯವಸ್ಥೆಗೆ ಚಾಟಿ ಏಟು ನೀಡುತ್ತಾರೆ.

ಜನಪದ ಕಲೆ ಎಂದೋ ನಡೆದು ಹೋದ ಕಲೆಯಲ್ಲ. ಇಂದಿಗೂ ಪ್ರಸ್ತುತವಾದ ಜೀವಂತ ಕಲೆ ಎಂಬುದನ್ನು ಅನೇಕ ಜನಪದ ಜಾಗೃತಿ ಶಿಬಿರಗಳನ್ನು ನಡೆಸುವ ಮೂಲಕ ಸಾಬೀತು ಪಡಿಸಿದ್ದಾರೆ. ಪುಣ್ಯಕೋಟಿ ಸ್ವಯಂ ಸೇವಾ ಸಂಸ್ಥೆಯ ಮುಖ್ಯಸ್ಥರಾಗಿದ್ದಾರೆ. ಕಥೆ, ಕವನ, ನಾಟಕ, ರೂಪಕಗಳನ್ನು ಬರೆದು ಅನೇಕ ಕೃತಿಗಳನ್ನು ಹೊರತಂದ ಇವರು ಆಕಾಶವಾಣಿ ಕಲಾವಿದರೂ ಹೌದು. ಬೆಂಗಳೂರು ದೂರದರ್ಶನದ ಸಿರಿಗಂಧ ಜಾನಪದ ಧಾರಾವಾಹಿಯಲ್ಲಿ ವಿಶಿಷ್ಟ ಜಾನಪದ ಕಲಾವಿದರಾಗಿ ಈ ನಾಡಿಗೆ ಪರಿಚಿತರಾಗಿದ್ದಾರೆ.

ಶರಣಪ್ಪಾ ವಡಗೇರಿ: ಕೈಯಲ್ಲಿ ಡಪ್ಪು ಚಿಟಿಕೆಗಳನ್ನು ಹಿಡಿದು ತಲೆಗೊಂದು ರುಮಾಲು ಸುತ್ತಿ ಅಪ್ಪಟ ಜನಪದ ವೇಷದೊಂದಿಗೆ ವೇದಿಕೆಗಿಳಿದ ಶರಣಪ್ಪ ವಡಗೇರಿ ಕ್ಷಣಾರ್ಧದಲ್ಲಿ ಇಡೀ ಸಭಾ ಜನರನ್ನು ತಮ್ಮ ಹಾಡುಗಳ ಮೂಲಕ ತಮ್ಮತ್ತ ಸೆಳೆದುಕೊಳ್ಳುತ್ತಾರೆ. ಇವರ ಕಂಠಸಿರಿಯಿಂದ ಒಂದೊಂದು ಜನಪದ ಹಾಡುಗಳು ಹೊರಬರುತ್ತಿದ್ದಂತೆ. ಕರತಾಡನದ ಮಳೆ ಸುರಿಯಲಾರಂಭಿಸುತ್ತದೆ. ತತ್ವಪದಗಳನ್ನು, ಲಾವಣಿ ಪದಗಳನ್ನು ಹಾಡುವುದರ ಮೂಲಕ ಜನಪದ ಸಿರಿಯ ಆರಾಧಕರಾಗುತ್ತಾರೆ.

ಯುವಕರಾಗಿದ್ದಾಗಲೆ ಅನೇಕ ಯುವ ಜನ ಮೇಳಗಳಲ್ಲಿ, ಜನಪದ ಸ್ಪರ್ಧೆಗಳಲ್ಲಿ ಭಾಗವಹಿಸಿ ರಾಜ್ಯಮಟ್ಟಕ್ಕೆ ಹೋಗಿ ಅನೇಕ ಬಹುಮಾನಗಳನ್ನು ಪಡೆದಿದ್ದಾರೆ. ಯುವ ಸಂಘಟನೆಗಳನ್ನು ಮಾಡುವಲ್ಲಿ ನಿಸ್ಸೀಮರು ಇವರ ಯುವಜನ ಸೇವೆಯನ್ನು ಪರಿಗಣಿಸಿ ರಾಜ್ಯ ಸರಕಾರ ಯುವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ದೂರದರ್ಶನ ಸಿರಿಗಂಧ ಧಾರಾವಾಹಿಯಲ್ಲಿ ಅನೇಕ ಜನಪದ ಗೀತೆಗಳನ್ನು ಹಾಡಿದ ಇವರು ಆಕಾಶವಾಣಿಯ ಕಲಾವಿದರಾ–ಗಿಯೂ ಅನೇಕ ಕಾರ್ಯಕ್ರಮಗಳನ್ನು ನೀಡುತ್ತ ಬಂದಿದ್ದಾರೆ. ಹಲವಾರು ಸಂಘ ಸಂಸ್ಥೆಗಳಿಂದ ಬಿರುದು–ಸನ್ಮಾನಗಳನ್ನು ಪಡೆದಿದ್ದಾರೆ. ಕಳೆದಬಾರಿ ಕರ್ನಾಟಕ ಜಾನಪದ ಅಕಾಡೆಮಿಯು ಇವರಿಗೆ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದೆ.

ಮಾರೆಪ್ಪಾ ಮಾರೆಪ್ಪ ದಾಸರ: ಇವರು ತಮ್ಮ ತತ್ವಪದಗಳ ಮೂಲಕ ದೇಶ–ವಿದೇಶಗಳಲ್ಲಿ ಹೆಸರುವಾಸಿಯಾಗಿದ್ದಾರೆ. ಇವರು ಕೇವಲ ನಾಲ್ಕನೆ ತರಗತಿಯಲ್ಲಿ ಓದಿದವರಾಗಿದ್ದಾರೆ. ತುಮರಗುದ್ದಿ ದಾಸರ ಕುಟುಂಬದಲ್ಲಿ ಜನಿಸಿದ ಮಾರಪ್ಪನವರು ಬಡತನದ ಬೇಗೆಯಲ್ಲಿಯೇ ಬಾಳು ಸಾಗಿಸಿದವರು. ಜನಪದ ದೇವತೆ ಇವರ ಕಂಠದಲ್ಲಿ ನಲಿದಾಡುತ್ತಾಳೆ. ವೇದಿಕೆಯಲ್ಲಿ ಏಕತಾರಿ ಪೀಟಿಲು ಬಾರಿಸುತ್ತ ಹಾಗೂ ಚೌಡಕಿ ಹಾಗೂ ತಾಳಗಳನ್ನು ಬಾರಿಸುತ್ತ ತತ್ವಪದಗಳನ್ನು ಹಾಡಲು ಪ್ರಾರಂಭಿಸಿದರೆ ಕುಳಿತ ಪ್ರೇಕ್ಷಕರೆಲ್ಲಾ ಮಂತ್ರಮುಗ್ಧರಾಗುತ್ತಾರೆ. ಇವರ ಮಗ ಯಂಕಣ್ಣನು ಸಾಥ ಕೊಡುತ್ತಾರೆ. ದಾಸರ, ಶರಣರ, ಸೂಫಿಸಂತರ ತತ್ವಪದಗಳನ್ನು ಹಾಡುವುದರ ಮೂಲಕ ಹೊಸದೊಂದು ಆಧ್ಯಾತ್ಮದ ಲೋಕವನ್ನು ಸೃಷ್ಟಿಸಿಕೊಡುತ್ತಾರೆ. ಇವರ ಈ ಕಲಾ ಸೇವೆಯನ್ನು ಗುರುತಿಸಿ ಕರ್ನಾಟಕ ಜನಪದ ಅಕಾಡೆಮಿಯು ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಇಮಾಮಸಾಬ ಅಲ್ಲಾನಗರ: ಸರಳ ಸಜ್ಜನಿಕೆಯ ಜನಪದ ಕಲಾವಿದ. ಕೊಪ್ಪಳ ಜಿಲ್ಲೆಯ ಶ್ರೇಷ್ಠ ಜನಪದ ಹಾಡುಗಾರರೆಂದು ಪ್ರಸಿದ್ಧಿ ಪಡೆದಿದ್ದಾರೆ. ರಿವಾಯತ್ ಪದ, ಮೊಹರಂ ಪದ, ತತ್ವಪದ, ಲಾವಣಿ ಪದ, ಗೀಗೀ ಪದ ಹೀಗೆ ಅನೇಕ ಜನಪದ ಪ್ರಕಾರದ ಪದಗಳನ್ನು ಮೂಲ ದಾಟಿಯಲ್ಲಿಯೇ ಹಾಡುತ್ತ ಜನಮಾನಸದಲ್ಲಿ ಚಿರಸ್ಥಾಯಿಯಾಗಿದ್ದಾರೆ.

ರಿವಾಯತ್ ಮತ್ತು ಮೋಹರಂ ಪದಗಳ ಮೂಲಕ ಸೂಫಿ–ಸಂತರ, ತತ್ವಪದಗಳ ಮೂಲಕ ಮುಸ್ಲಿಂ ಸಂವೇದನೆಯ

ಭಾವೈಕ್ಯತೆಯ ದೀವಟಿಗೆಯನ್ನು ಹಿಡಿದು ಜನಪದ ದೇವತೆಯ ಆರಾಧನೆ ಮಾಡಿದಂತೆ ಇಮಾಮ ಸಾಹೇಬರು ಬದುಕಿನುದ್ದಕ್ಕೂ ಜನಪದವನ್ನು ಮೈಗೂಡಿಸಿಕೊಂಡು ಬೆಳೆದಿದ್ದಾರೆ. ಇವರಿಗೆ ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ 2000ರಲ್ಲಿಯೇ ಪ್ರಶಸ್ತಿಯನ್ನು ನೀಡಿ ಗೌರಿವಿಸಿದೆ.

ಭರಮಪ್ಪ ಹರಿಜನ: ಕುಷ್ಟಗಿ ತಾಲ್ಲೂಕಿನ ಡಪ್ಪಿನಾಟದ ಹಿರಿಯ ಕಲಾವಿದರಲ್ಲಿ ಒಬ್ಬರಾದ ಭರಮಪ್ಪನವರು ತಾವರಗೇರೆಯಲ್ಲಿ ಜನಿಸಿದವರು. ಬಾಲ್ಯದಿಂದಲೆ, ತತ್ವಪದ, ಜಾನಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ. ಡಪ್ಪಿನಾಟಗಳಲ್ಲಿ ವಿಶೇಷ ಆಸಕ್ತಿ ವಹಿಸಿದ ಇವರು ಡಪ್ಪಿನಾಟದ ಹಾಡುಗಾರಿಕೆ, ನಿರ್ದೇಶನ ಕುಣಿತ ಹಾಗೂ ಡಪ್ಪು ಬಾರಿಸುವದನ್ನು ರೂಢಿಸಿಕೊಂಡಿದ್ದಾರೆ. ಇವರು ಸಂಗ್ಯಾ ಬಾಳ್ಯಾ, ಸ್ಟೇಷನ್ ಮಾಸ್ತರ, ಬಾಲ ಭಿಕ್ಷುಕ ರಾಜಾ ಸೇರಿದಂತೆ ಅನೇಕ ಡಪ್ಪಿನಾಟಗಳನ್ನು ಬೇರೆಯವರಿಗೂ ಕಲಿಸಿದ್ದಾರೆ.

ನೂರಾರು ಪ್ರಯೋಗಗಳನ್ನು ಮಾಡಿಸಿ ಎಲ್ಲರ ಮನ ಗೆದ್ದಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ, ಇಲಾಖೆ, ವಾರ್ತಾ ಇಲಾಖೆ, ಹಾಗೂ ವಿವಿಧ ಸಂಸ್ಥೆಗಳ ಆಶ್ರಯದಲ್ಲಿ ದೊಡ್ಡಾಟದ ವಿಭಿನ್ನ ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಆಶ್ರಯದಲ್ಲಿ ಇವರ ಡಪ್ಪಿನಾಟ ಪದಗಳನ್ನು ಹಾಡಿ ಜನಮನ ಸೆಳೆದಿದ್ದಾರೆ. ತಮ್ಮ ಊರಲ್ಲಿ ಯುವಕರನ್ನು ಸೇರಿಸಿ ಈ ಕಲೆ ನಶಿಸದಂತೆ ಅವರಿಗೆ ಕಲಿಸುತ್ತಿದ್ದಾರೆ.

ಸಿದ್ದಪ್ಪ ಇಟಗಿ: ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಡೋಣಿಗುಡ್ಡ ಗ್ರಾಮದ ಗುರುಪಾದಪ್ಪ ಇಟಗಿ ಅವರ ಪುತ್ರ ಸಿದ್ದಪ್ಪಾ ಇಟಗಿಯವರು ಬಾಲ್ಯದಿಂದಲೂ ತಂದೆಯ ಕಲೆ ಡಪ್ಪಿನಾಟಗಳನ್ನು ನೋಡಿ ಮಾರುಹೋದ ಸಿದ್ದಪ್ಪ ಇವರು ಹಳ್ಳಿಯಲ್ಲಿ ದೊಡ್ಡಾಟವನ್ನು, ಮಾಡುತ್ತಾ, ಮಾಡಿಸುತ್ತಾ, ಇಂದು ಜನಪದ ಕಲೆ ಉಳಿಯಲಿ ಎಂದು ತಮ್ಮ ಸುತ್ತಮುತ್ತಲಿನ ಗ್ರಾಮಗಳಲ್ಲಿ ದೊಡ್ಡಾಟಗಳನ್ನು ಮಾಡಿ ಜನಮನ ಗೆದ್ದಿದ್ದಾರೆ.

ಬಾಷುಸಾಬ ಚೌಧರಿ: ಕುಷ್ಟಗಿ ವಾಸಿಯಾಗಿರುವ ಚೌಧ-ರಿಯವರು ಡಪ್ಪು ಬಾರಿಸುವದರಲ್ಲಿ ಪ್ರಾವೀಣ್ಯತೆ ಹೊಂದಿದ್ದಾರೆ. ಬಾಲ್ಯದಿಂದಲೂ ತತ್ವಪದ, ಭಜನೆ ಪದಗಳನ್ನು ಹಾಡುತ್ತಾ ದೊಡ್ಡಾಟದ ಹಿಮ್ಮೇಳದಲ್ಲಿ ಹಾಡುವದರ ಮೂಲಕ ತಾಳಹಾಕುವದರಲ್ಲಿ ಮೇಲುಗೈ ಸಾಧಿಸುತ್ತಾ ಶಾಂತಯ್ಯ ಸಗಣಾಚಾರಿಯವರ ಶಿಷ್ಯರಾಗಿ ಇವರು ಡಪ್ಪಿನಾಟ ಸಣ್ಣಾಟ ಪ್ರಕಾರಗಳಲ್ಲಿ ಭಾಗವಹಿಸುತ್ತಾ ಬಂದಿದ್ದಾರೆ. ಈ ಭಾಗದ ಜನಪ್ರಿಯ ಡಪ್ಪಿನ ನಾಟಕಗಳಾದ ಸಂಗ್ಯಾ-ಬಾಳ್ಯಾ ಸೇರಿದಂತೆ ಅನೇಕ ಡಪ್ಪಿನಾಟಗಳನ್ನು ತಾಲ್ಲೂಕಿನಾದ್ಯಂತ ಮಾಡಿಸಿದ್ದಾರೆ. ಬಸವಂತ, ಬಲವಂತ, ಸ್ಟೇಷನ್ ಮಾಸ್ತರ, ಬಾಲ ಭಿಕ್ಷುಕ ರಾಜ ಸೇರಿದಂತೆ ಅನೇಕ ದಪ್ಪಿನಾಟಗಳು ಸಾಕಷ್ಟು ಪ್ರಯೋಗಗಳನ್ನು ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಕಲೆಯಲ್ಲಿ ಶ್ರೀಮಂತನಾದರೂ ಜೀವನದಲ್ಲಿ ಬಡತನ ಕಾಡುತ್ತಿದೆ.

ಪರಶುರಾಮ ಹಾಗೂ ಹನುಮಂತಪ್ಪ: ಈ ಜೋಡಿ ಕಲಾವಿದರು ತಮ್ಮ ಬದುಕಿಗಾಗಿ ಜನಪದ ಕಲೆಯನ್ನು ತಮ್ಮ ವೃತ್ತಿ ಬದುಕಾಗಿಸಿಕೊಂಡಿದ್ದಾರೆ. ರಾತ್ರಿಯಿಡಿ ಕಥೆ ಹೇಳುತ್ತಾ ಹಾಡುವುದು ಕುಣಿಯುವದನ್ನು, ಮಾಡಿ ಮನರಂಜನೆಯನ್ನು ನೀಡುತ್ತಾರೆ. ಈ ಕಲಾವಿದರು ಜೈರಾಣಿ ಕಥೆ, ಬಸಕುಮಾರ, ಲೋಹಿತಕುಮಾರ, ವಿದ್ಯಾವತಿ, ಶೀಲಾವತಿ, ಪದ್ಮಾವತಿ, ಅರಣ್ಯಕುಮಾರ ಮುಂತಾದ 50ಕ್ಕೂ ಮಿಕ್ಕಿ ಜನಪದ ಸರಗಥೆಯನ್ನು ಹೇಳುತ್ತಾ ಬದುಕು ಸಾಗಿಸುತ್ತಿದ್ದಾರೆ. ಇವರು ಜ್ಯೋತಿಷ್ಯ ಕೂಡಾ ಹೇಳುತ್ತಾ ತಮ್ಮ ಜನಪದ ಶೈಲಿಯಲ್ಲಿ ಉಡುಗೆ-ತೊಡುಗೆ ತೊಟ್ಟುಕೊಂಡು ಸಾಂಬಾಳ ಹಿಡಿದು ತಾಳ ಹಾಕುತ್ತಾ ಬರುತ್ತಾರೆ. ಗೊಂದಲಿಗರ ಆರಾಧ್ಯ ದೈವವಾದ ಹುಲಿಗೆಮ್ಮನ ಮೇಲೆ ಪದ ರಚಿಸಿದ್ದಾರೆ. ಇವರು ಕಲೆಯನ್ನು ಉಸಿರಾಗಿಸಿಕೊಂಡು ಬದುಕು ಸಾಗಿಸುತ್ತಿದ್ದಾರೆ.

ಮುದಕವ್ವಾ ಮಾದರ: ಹಿರೇಗೊಣ್ಣಾಗರ ಗ್ರಾಮದ ಮುದಕವ್ವಾ ಮಾದರ ಗೀಗೀ ಪದ ಕಲಾವಿದೆಯಾಗಿ ಈ ಭಾಗದಲ್ಲಿ ಎಲ್ಲರಿಗೂ ಚಿರಪರಿಚಿತರು. ಬಾಲ್ಯದಿಂದಲೇ ಸಾಂಪ್ರದಾಯಕ ಪದಗಳತ್ತ ಹೆಚ್ಚು ಒಲವು. ಬೀಸುವಕಲ್ಲು ಪದಗಳು, ಹಂತಿ ಪದ, ಗೀಗೀ ಪದಗಳನ್ನು ಹಾಡುವುದನ್ನು ಕಲಿತು ಅವರ ಗುರುಗಳಾದ ಫಕೀರಮ್ಮ ದೇವದುರ್ಗ ಇವರ ಮಾರ್ಗದರ್ಶನದೊಂದಿಗೆ ಈ ಕಲೆಯನ್ನು ಬೆಳೆಸಿಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನೇಕ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮೋಹರಂ ಜಾತ್ರೆ, ಉತ್ಸವ ಹಬ್ಬ, ಹರಿದಿನ ಮುಂತಾದ ವಿಶಿಷ್ಟ ಸಂದರ್ಭಗಳಲ್ಲಿ ಜಿಲ್ಲೆಯಾದ್ಯಂತ ದೇವಪ್ಪಾ ಕುರಬರ, ಫಕೀರಪ್ಪಾ ಹಾಬಲಕಟ್ಟಿ ಇವರೊಂದಿಗೆ ಕಾರ್ಯಕ್ರಮ ನೀಡಿದ್ದಾರೆ.

ಹನುಮಂತಪ್ಪಾ ಪೂಜಾರ: ಹೊಸಹಳ್ಳಿ ಗ್ರಾಮದವರಾದ ಹನುಮಂತಪ್ಪ ದೊಡ್ಡಾಟದ ಮಾಸ್ತರ ಎಂದೇ ಪ್ರಸಿದ್ಧಿ ಪಡೆದಿದ್ದಾರೆ. ಇದಲ್ಲದೆ ಡಪ್ಪು ಬಾರಿಸುವದರಲ್ಲಿ ಪ್ರಾವೀಣ್ಯತೆ ಯನ್ನು ಹೊಂದಿದ ಇವರು ಹಿನ್ನೆಲೆಯಾಗಿ ಹಾಡುವುದನ್ನು ಸಹ ರೂಢಿಸಿಕೊಂಡಿದ್ದಾರೆ. ದಿ. ಕಂದಗಲ್ ಹನುಮಂತರಾಯರ ಎಲ್ಲಾ ಪೌರಾಣಿಕ ನಾಟಕಗಳನ್ನು ಈ ಭಾಗದ ಕಲಾವಿದರಿಗೆ ಕಲಿಸಿ ರಂಗ ಪ್ರವೇಶ ಮಾಡಿಸಿದ್ದಾರೆ. ದೊಡ್ಡಾಟ, ಡಪ್ಪಿನಾಟ ನಶಿಸಿಹೋಗದಂತೆ ಇಂದಿಗೂ ಶ್ರಮಿಸುತ್ತಿರುವ ಹನುಮಂತಪ್ಪ ನವರು ಅನೇಕ ಯುವಕರಿಗೆ ಕಲಿಸಿ ಕಲಾವಿದರನ್ನು ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಡೊಳ್ಳು ಕುಣಿತದ ತಂಡ: ಕುಷ್ಟಗಿ ತಾಲ್ಲೂಕಿನ ಟಿಕ್ಕಳಿಕೆ ಗ್ರಾಮದಲ್ಲಿ ಬೀರಲಿಂಗೇಶ್ವರ ಡೊಳ್ಳು ಕುಣಿತದ ಸಂಘ ವಿಶೇಷವಾದುದು. ಏಕೆಂದರೆ ಇವರು ಹಾಡುವುದರೊಂದಿಗೆ ಕುಣಿಯುವದರಿಂದ ಜನಪ್ರಿಯತೆಯನ್ನು ಗಳಿಸಿದ್ದಾರೆ. ಹಿರಿಯ ಕಲಾವಿದರಾದ ಸಿದ್ದಪ್ಪ ಬಿಜಕಲ್ ಇವರ ಮಾರ್ಗದರ್ಶನದಲ್ಲಿ ತಂಡದ ಕಲಾವಿದರಾದ ಭರಮಣ್ಣ ಕಂಬಳಿ, ದೊಡ್ಡಪ್ಪಾ ಕಂಬಳಿ, ಬಾಲಪ್ಪ ಮೆಂಟಗಿ, ಹನುಮಂತ ಮೆಂಟಗೇರಿ, ಮಳಿಯಪ್ಪ, ರೇವಣಸಿದ್ದಪ್ಪ ಇವರುಗಳು ಡೊಳ್ಳಿನ ಪದಗಳನ್ನು ಹಾಡುವುದನ್ನು ರೂಢಿಸಿಕೊಂಡಿದ್ದು ಜಿಲ್ಲೆಯಲ್ಲಿ ಬೇರೆ ಯಾವುದೇ ಹಬ್ಬ ಹರಿದಿನ ಜಾತ್ರೆ, ಮದುವೆ ಇಂತಹ ವಿಶೇಷ ಸಂದರ್ಭಗಳಲ್ಲಿ ಈ ಡೊಳ್ಳಿನ ಪದಗಳನ್ನು ಹಾಡುತ್ತಾರೆ. ಜನಪದ ಕಲೆಯ ಸೊಗಡನ್ನು ಗ್ರಾಮೀಣ ಮತ್ತು ನಗರ ಪ್ರದೇಶಕ್ಕೆ ಕೊಂಡೊಯ್ಯುವ ತಂಡವಾಗಿದೆ.

ಈ ತಂಡವು ಪ್ರಮುಖ ಡೊಳ್ಳಿನ ಪದಗಳನ್ನು ಹಾಡುವುದನ್ನು

ಮತ್ತು ಕಲಾತ್ಮಕವಾಗಿ ಡೊಳ್ಳು ಬಾರಿಸುವದನ್ನು ಕರಗತ ಮಾಡಿ-ಕೊಂಡಿದ್ದು; ರಾಜ್ಯದ ಅನೇಕ ಜಿಲ್ಲೆಗಳಲ್ಲಿ ತಮ್ಮ ಪ್ರದರ್ಶನವನ್ನು ನೀಡಿದ್ದಾರೆ.

ಶಿವಪ್ಪ ಬಸರಿಗಿಡ: ಶಿವಪ್ಪನವರು ಯುವಕರಾಗಿದ್ದಾಗಲೇ ನಾಟಕದತ್ತ ಹಾಗೂ ದೊಡ್ಡಾಟದ ಮೂಲಕ ಜನರಿಗೆ ಚಿರಪರಿಚಿತರಾಗಿದ್ದರು. ಕುಕನೂರಿನ ರೆಹಮಾನವ್ವ ಕಂಪನಿಯಲ್ಲಿ ಕಲಾವಿದರಾಗಿ ಕೆಲಸ ಮಾಡಿದ ಶಿವಪ್ಪ ತಾವೇ ಸಂಗಮೇಶ್ವರ ನಾಟ್ಯ ಸಂಘ ತೆಗೆದು ಕಲಾಸೇವೆ ಗೈದರು. ಆದರೆ ಯಶಸ್ವಿ ಕಾಣಲಿಲ್ಲ. ನಂತರ ದೊಡ್ಡಾಟದಲ್ಲಿ ಹೆಸರು ಮಾಡಿದ ಮರೇಗೌಡ್ರ ಇವರ ಗುರುಗಳಾದರು. ಶಿವಪ್ಪನವರು 50ಕ್ಕೂ ಹೆಚ್ಚು ದೊಡ್ಡಾಟ ಮಾಡಿಸಿ ಜನಮನ ಸೆಳೆದಿದ್ದಾರೆ. ಇವರ ಕಂಚಿನ ಕಂಠ, ಸಂಭಾಷಣಾ ಶೈಲಿ, ಮುಖಭಾವ ಅಭಿನಯದಿಂದ ತಮ್ಮ ಕಲಾ ಪ್ರತಿಭೆಯನ್ನು ತೋರಿಸಿ ಕೊಡುತ್ತಾರೆ. ರಾಮಾಂಜನೇಯ ಯುದ್ಧ. ಕಡ್ಲಿಮಟ್ಟಿ ಸ್ಟೇಷನ್ ಮಾಸ್ತರ, ಲವಕುಶ, ಬಾಲ ಬಿಕ್ಷುಕರಾಜ ಹೀಗೆ ಹಲವಾರು ನಾಟಕಗಳನ್ನು ಮಾಡಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಇದೇ ತಾಲ್ಲೂಕಿನ ಇನ್ನೊಬ್ಬ ದೊಡ್ಡಾಟದ ಮಾಸ್ತರ ಬಸವಂತಪ್ಪ ಪಟ್ಟಲಚಿಂತಿ ಗ್ರಾಮದವರಾಗಿದ್ದಾರೆ. ಇವರು ಕಲಾಸಕ್ತರಿಗೆ ಈ ಕಲೆಯನ್ನು ಕಲಿಸಿದ್ದಲ್ಲದೆ ಅನೇಕ ಊರುಗಳಲ್ಲಿ ಸಂಚರಿಸಿ ಈ ಕಲೆಯನ್ನು ಬೆಳೆಸುತ್ತಿದ್ದಾರೆ. ಕುಷ್ಟಗಿಯ ಭಾಷುಸಾಬ ಹೊಕ್ಕಳ ಇವರು ಡಪ್ಪಿನಾಟದ ಮಾಸ್ತರ ಎಂದೇ ಖ್ಯಾತರಾಗಿದ್ದಾರೆ. ತಾಳಕ್ಕೆ ತಕ್ಕ ಹಾಗೆ ಡಪ್ಪು ಬಾರಿಸುವುದು. ಹಿಮ್ಮೇಳನದಲ್ಲಿ ಹಾಡುವುದು ಹಾಗೂ ಇವರ ವಿಶೇಷತೆ ಎಂದರೆ, ಸಂಗ್ಯಾ-ಬಾಳ್ಯಾ ಸ್ಟೇಷನ್ ಮಾಸ್ತರ ಬಾಲ ಬಿಕ್ಷುಕ ರಾಜ ಸೇರಿದಂತೆ ಅನೇಕ ಡಪ್ಪಿನಾಟ ನಿರ್ದೇಶಿಸಿ ಪ್ರದರ್ಶನಗಳನ್ನು ಮಾಡಿಸಿ ಪ್ರಸಿದ್ಧಿಯನ್ನು ಪಡೆದಿದ್ದಾರೆ.

ಈಶಪ್ಪ ಕಾಮನೂರ: ಕುಷ್ಟಗಿ ತಾಲ್ಲೂಕಿನ ಕಂದಕೂರು ಗ್ರಾಮದವರಾದ ಈಶಪ್ಪ ಕಾಮನೂರ ಬಯಲಾಟದ ವಿಶೇಷ ಕಲಾವಿದರೆನಿಸಿಕೊಂಡಿದ್ದಾರೆ. ಇವರು ಏಕತಾರಿ, ತತ್ವಪದಗಳನ್ನು ಹಾಡಿಕೊಂಡು ಬೆಳೆದವರು. 25 ಬಯಲಾಟಗಳ ನಿರ್ದೇಶಕರಾಗಿ ಅದರಲ್ಲೂ ಸ್ತ್ರೀ ಪಾತ್ರದಲ್ಲಿ ಭಾವನಾತ್ಮವಾಗಿ ನಟಿಸಿದರೆ ಗಂಡೋ ಅಥವಾ ಹೆಣ್ಣೋ ಎಂದು ಅನುಮಾನ ಬರುವಂತೆ ಇವರ ನಟನೆ ಅತ್ಯದ್ಭುತವಾಗಿರುತ್ತದೆ. ಇವರ ಗುರುಗಳು ಕಳಕಪ್ಪ ಮಾಸ್ತರರಾಗಿದ್ದರು. ಜೊತೆಗೆ ಹಾರ್ಮೋನಿಯಂ ನುಡಿಸುವುದು, ಬಯಲಾಟದ ರಾಗ ಹಾಗೂ ತಾಳಗಳನ್ನು ಕಲಾಸಕ್ತರಿಗೆ ಕಲಿಸಿಕೊಡುತ್ತಾರೆ.

ಅಡಿವೆಪ್ಪ ಮಡಿವಾಳರ: ವೃತ್ತಿಯಿಂದ ಮಡಿವಾಳರಾದರೂ ಪ್ರವೃತ್ತಿಯಿಂದ ಜನಪದ ಕಲಾವಿದರಾಗಿ ಹನುಮಸಾಗರದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಜನಪದ ಕಲೆ, ಭಜನೆ ಹಾಡು, ತತ್ವಪದಗಳನ್ನು ಬಾಲ್ಯದಿಂದಲೂ ಬೆಳಸಿಕೊಂಡು ಬಂದು ಈ ಕಲೆಯನ್ನು ಬೆಳಸುತ್ತಿದ್ದಾರೆ. ಸತ್ಯವಾನ ಸಾವಿತ್ರಿ, ಗಿರಿಜಾ ಕಲ್ಯಾಣ, ಮಾರ್ಕಂಡೇಯ ಮೃದ್ವತಿ, ಬಯಲಾಟ, ದೊಡ್ಡಾಟ, ನಾಟಕಗಳಲ್ಲಿ ವಿಶೇಷವಾಗಿ ಸ್ತ್ರೀ ಪಾತ್ರಧಾರಿಯಾಗಿ ಕಾಣಿಸಿಕೊಂಡಾಗ ಪ್ರೇಕ್ಷಕರಿಗೆ ಆಶ್ಚರ್ಯ ಮೂಡಿಸುತ್ತಿದ್ದರು, ಮೃದಂಗ, ತಪ್ಪಡಿ ಬಾರಿಸುತ್ತಾರೆ.

ಇದೇ ಊರಿನ ಇನ್ನೊಬ್ಬ ಹಿರಿಯ ಕಲಾವಿದ ಶಂಕ್ರಪ್ಪ ಹೂಗಾರ ಕರಡಿ ಮಜಲು ವಾದಕರು. ಉದ್ಯೋಗದಲ್ಲಿ ಹೂ ಮಾರಿದರೂ ಕರಡಿ ಮಜಲು ಮಾಸ್ತರ ಎಂದೇ ಹೆಸರು ವಾಸಿಯಾಗಿದ್ದಾರೆ. ಹಲಗೆ ಬಾರಿಸುವುದು, ತಪ್ಪಡಿ ಬಡಿಯುವುದು ಚರ್ಮವಾದ್ಯಗಳಲ್ಲಿ ಶಬ್ದ ಹೊರಡಿಸುವದೆಂದರೆ, ಇವರಿಗೆ ಬಲು ಖುಷಿ. ಚಂದ್ರಹಾಸ ನಾಟಕದಲ್ಲಿ ಕಾಳಿಕಾದೇವಿ ಪಾತ್ರಮಾಡಿ ನೋಡುಗರ ಕಣ್ಣಲ್ಲಿ ರೋಮಾಂಚನ ಹುಟ್ಟಿಸುತ್ತಾರೆ. 70ರ ವಯಸ್ಸಿನಲ್ಲಿಯೂ ಈ ಕ್ರಿಯಾಶೀಲ ಮನಸ್ಸು ಗೀತಾ ಪ್ರವಚನ, ದೇವಿ ಪುರಾಣ ಶರಣ ಸಂಸ್ಕೃತಿಯ ಬಗ್ಗೆ ಮಕ್ಕಳನ್ನು ಕೂಡಿಸಿಕೊಂಡು ಕಥೆ ಹೇಳಿ ಕಾಲ ಕಳೆಯುತ್ತಿದ್ದಾರೆ.

ಕೃಷ್ಣಪ್ಪ ಗೊಂದಳಿ ಮನ್ನೇರಾಳ: ಜಾನಪದ ಕ್ಷೇತ್ರದಲ್ಲಿ ಗೊಂದಳಿಗರ ಕಥೆಗಳಿಂದ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅವರ ಮಗ ರಾಮಚಂದ್ರನ ಜೊತೆಗೆ ಅನೇಕ ಊರುಗಳಲ್ಲಿ ಕಥೆಯನ್ನು ಹೇಳುತ್ತಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿಯಲ್ಲಿ ಕಾರ್ಯಕ್ರಮ ಕೊಡುತ್ತಾ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಈ ತಾಲ್ಲೂಕಿನಲ್ಲಿ ದೊಡ್ಡಾಟದ ಕಲಾವಿದರಾದ ಪೀಟಿಲು ವಾದಕ ಶೇಖರಯ್ಯ ಗುರುಸ್ಥಲಮಠ ಇವರು ದೊಡ್ಡಾಟದಲ್ಲಿ ವಿಶೇಷವಾಗಿ ಪೀಟಿಲು ತಂತಿ ವಾದ್ಯವನ್ನು ನುಡಿಸುವುದರಿಂದ ಅನೇಕ ಸರ್ಕಾರಿ ಕಾರ್ಯಕ್ರಮಗಳನ್ನು ನೀಡಿರುವುದಲ್ಲದೆ ಇವರಿಗೆ ಅನೇಕ ಸಂಘ-ಸಂಸ್ಥೆಗಳಿಂದ ಸನ್ಮಾನ ದೊರೆತಿವೆ. ಇವರಿಗೆ ಕಲಾವಿದರ ಮಾಸಾಶನ ಬರುತ್ತದೆ. ಈಗ ಇವರು ಯಮನೂರಿನಲ್ಲಿ ವಾಸವಾಗಿದ್ದಾರೆ.

ಜಗದಯ್ಯ ಸಾಲಿಮಠ: ಯುವಕ ಮಂಡಳಿಯ ಅಧ್ಯಕ್ಷರಾದ ಜಗದಯ್ಯ ಸಾಲಿಮಠರು 2004-05ನೇ ಸಾಲಿನ ರಾಜ್ಯ ಯುವ ಪ್ರಶಸ್ತಿಯನ್ನು ಪಡೆದವರಾಗಿದ್ದಾರೆ. ಪ್ರಸ್ತುತ ವರ್ಷದಲ್ಲಿ ಇವರ ಯುವಕ ಮಂಡಳಿಯಿಂದ ಬಯಲಾಟ ತರಬೇತಿ ಶಿಬಿರ, ವಿಭಾಗಮಟ್ಟದ ಭಜನಾ ಸ್ಪರ್ಧೆ, ಮಹಿಳೆಯರಿಗೆ ತರಬೇತಿ, ಸರಾಯಿ ನಿಷೇಧ ಕಾರ್ಯಕ್ರಮ, ಶ್ರಮದಾನದಿಂದ ಬಾವಿ ಹೊಳೆತ್ತುವುದು. ರಂಗೋಲಿ ಸ್ಪರ್ಧೆ, ಏಡ್ಸ್ ಜಾಗೃತಿ ಕಾರ್ಯಕ್ರಮ, ವರದಕ್ಷಿಣೆ ಪಿಡುಗು ನಿವಾರಣೆ ಕಾರ್ಯಕ್ರಮ ಇನ್ನೂ ಅನೇಕ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

2002-03ರಲ್ಲಿ ಸೊರಬದಲ್ಲಿ ನಡೆದ ಬಯಲಾಟದ ಪ್ರದರ್ಶನವನ್ನು ನೀಡಿ ಪ್ರಥಮ ರಾಜ್ಯ ಪ್ರಶಸ್ತಿ ಇವರಿಗೆ ಲಭಿಸಿದೆ. 2004ರಲ್ಲಿ ತುಮಕೂರಿನ ಶಿರಾದಲ್ಲಿ ರಾಜ್ಯಮಟ್ಟದ ಬಯಲಾಟದ ಪ್ರಥಮ ರಾಜ್ಯ ಪ್ರಶಸ್ತಿ ದೊರಕಿದೆ. ಎರಡು ಬಾರಿ ಯುವಜನ ಮೇಳದಲ್ಲಿ ರಾಜ್ಯ ಪ್ರಶಸ್ತಿಯನ್ನು ಇವರು ಪಡೆದು ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇವರ ಜಾನಪದ ಕಲೆಯನ್ನು ಅನೇಕ ಸಂಘ ಸಂಸ್ಥೆಯವರು ಗೌರವ ಸನ್ಮಾನವನ್ನು ನೀಡಿದ್ದಾರೆ.

ಹೀಗೆ, ಕೊಪ್ಪಳ ಜಿಲ್ಲೆ ಇಂಥ ನೂರಾರು ಜನ ಜನಪದ ಕಲಾವಿದರನ್ನು ತುಂಬಿಕೊಂಡು ಕಂಗೊಳಿಸುತ್ತದೆ. ಈ ಕಲಾವಿದ-ರಿಂದ ಶ್ರೀಮಂತರಾದ ಕಲೆಯೂ ವೈಭವದಿಂದ ದೊರೆಯುತ್ತಿದೆ.

(ಎಸ್‌ಎಂ)

ಜನಪದ ಕಲಾವಿದರು: (ಗುಲಬರ್ಗಾ ಜಿಲ್ಲೆ) ಗುಲಬರ್ಗಾ ಜಿಲ್ಲೆ ಅನೇಕ ಕವಿ, ಕಲಾವಿದರಿಗೆ ನೆಲೆ ಬೀಡಾಗಿದೆ. ಸಾವಿರಾರು ವರ್ಷಗಳ ಹಿಂದೆಯೇ ಇಲ್ಲಿನ ಜಾನಪದ ಕವಿ, ಸಾಹಿತ್ಯವನ್ನು ಕುರಿತು ಕವಿರಾಜಮಾರ್ಗಕಾರನು ವರ್ಣಿಸಿರುವನು. ಇಲ್ಲಿನ ಜನರ ಬದುಕಿನಲ್ಲಿ ಜನಪದ ಸಂಸ್ಕೃತಿ ಹಾಸು ಹೊಕ್ಕಾಗಿದೆ. ಅದು ಅವರ ಬದುಕು, ಭಾಷೆ ಧರ್ಮ, ವೈದ್ಯ ಕಲೆ, ಸಾಹಿತ್ಯದಲ್ಲಿ ಕಾಣದೆ ಇರಲಾರೆವು. ಕರ್ನಾಟಕದ ಇತರೆ ಪ್ರದೇಶಗಳಲ್ಲಿ ಜಾನಪದ ಕ್ಷೇತ್ರದಲ್ಲಿ ದೇಶಿಯ, ವಿದೇಶಿ ವಿದ್ವಾಂಸರಿಂದ ಸಂಗ್ರಹ, ಸಂಪಾದನೆ ಪ್ರಕಟಣೆ ಕಾರ್ಯ ನಡೆಯುತ್ತಿದ್ದರೆ. ಈ ಪ್ರದೇಶದ ಜನತೆ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದರು. ಇಂಥ ಪರಿಸ್ಥಿತಿಯಲ್ಲಿ ಇಲ್ಲಿನ ಕವಿ, ಕಲಾವಿದರ ಬಗೆಗೆ ಕೆಲಸ ಕಾರ್ಯಗಳೇ ನಡೆಯಲಿಲ್ಲ.

ಈ ಜಿಲ್ಲೆಯ ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಸಂಶೋಧನೆ, ಸಂಗ್ರಹ, ಸಂಪಾದನೆ ಕೆಲಸಗಳು ಮೊಟ್ಟ ಮೊದಲ ಬಾರಿಗೆ 1976ರಿಂದ ಈಚೆಗೆ ನಡೆಯಿತೆಂದು ಹೇಳಬಹುದು. ಅದೂ ಕರ್ನಾಟಕ ವಿಶ್ವವಿದ್ಯಾಲಯದ ಕಲಬುರ್ಗಿ ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸಿದ ಮೇಲೆಯೇ ಡಾ. ಬಿ.ಬಿ. ಹೆಂಡಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ಜಾನಪದ ಸಾಹಿತ್ಯ ಸಂಶೋಧನೆ ಅನೇಕ ಉತ್ಸಾಹಿ ಯುವ ಸಂಶೋಧಕರನ್ನು ಈ ಕ್ಷೇತ್ರಕ್ಕೆ ಧುಮಿಕಿಸಿತು. ಇದರಿಂದಾಗಿ ಇಲ್ಲಿನ ಅನೇಕ ಸಾಹಿತ್ಯ, ಕಲಾ ಪ್ರಕಾರಗಳ ಜೊತೆಗೆ ಅವುಗಳ ಸೃಷ್ಟಿಕಾರರಾದ ಕವಿ ಕಲಾವಿದರು ಬೆಳಕಿಗೆ ಬರಲಾರಂಭಿಸಿದರು. ಇಂದು ಜಿಲ್ಲೆಯ ಅನೇಕ ಕಲಾವಿದರು ತಮ್ಮ ವಿಶಿಷ್ಟ ಕಲಾ ಪ್ರತಿಭೆಯಿಂದ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಮಿಂಚಿದ್ದಾರೆ. ಅನೇಕ ಪ್ರಶಸ್ತಿ ಗೌರವಗಳನ್ನು ಪಡೆದಿದ್ದಾರೆ. ಇಷ್ಟಾಗಿಯೂ ಈ ಸ್ಥಾನಮಾನಗಳು ಇನ್ನೂ ಹಲವರಿಗೆ ದಕ್ಕದೆ ಹೋಗಿವೆಯಾದರೂ, ಅವರ ಕಲಾ ಪ್ರತಿಭೆಯೇನು ಕಡಿಮೆಯದಾಗಿಲ್ಲ ಅಂತಹ ಪ್ರಮುಖ ಕಲಾವಿದರ ಸ್ಥೂಲ ಪರಿಚಯವನ್ನು ಇಲ್ಲಿ ನೀಡಲಾಗಿದೆ.

ನಾಗಲಿಂಗಪ್ಪ ಕಾಶಿಪತಿ ಪತ್ತಾರ: ಅವರು ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಕೋರವಾರ ಗ್ರಾಮದಲ್ಲಿ ಜನಿಸಿದರು. ವಿಶ್ವಕರ್ಮ ಮನೆತನಕ್ಕೆ ಸೇರಿದ ನಾಗಲಿಂಗಪ್ಪ ಕೋರವಾರ ಅಣವೀರ ಭದ್ರೇಶ್ವರನ ಪರಮಭಕ್ತರು. ದೇವರ ಜಾತ್ರೆ, ಉತ್ಸವ, ಮದುವೆ ಮುಂತಾದ ಧಾರ್ಮಿಕ, ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಬಹುಕಾಲದಿಂದ ಪುರುವಂತಿಗೆ ಕಲೆಯನ್ನು ಪ್ರದರ್ಶಿಸಿ ಸುತ್ತಮುತ್ತಲಿನ ಪ್ರದೇಶದಲ್ಲಿ ಹೆಸರುವಾಸಿಯಾದ ಕಲಾವಿದರಾಗಿದ್ದಾರೆ. ನಾಗಲಿಂಗಪ್ಪ ಪುರುವಂತಿಗೆ ಕಲಾವಿದರಾಗಿದ್ದಂತೆಯೇ ಜನಪದ ಹಾಡುಗಾರರೂ ಆಗಿದ್ದಾರೆ. ಜಿಲ್ಲೆಯಾದ್ಯಂತ ಹಲವಾರು ಕಾರ್ಯಕ್ರಮಗಳಲ್ಲಿ ತಮ್ಮ ಕಲೆ ಪ್ರದರ್ಶಿಸಿ ಕಲಾ ಪೋಷಕರೂ ಆಗಿರುವ ಅವರಿಗೆ ಜಾನಪದ ಅಕಾಡೆಮಿ ಬೆಂಗಳೂರು 1980ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ.

ಶರಣಪ್ಪ ಮೈಲಾರಪ್ಪ ಕಾಳೆ: ಅವರು ಗುಲಬರ್ಗಾ ನಗರದ ಜಗತ್ ಬಡಾವಣೆಯ ಮೇಲಿನ ಕೇರಿಯ ನಿವಾಸಿಯಾಗಿದ್ದಾರೆ. ದೊಡ್ಡಾಟದ ಕಲಾವಿದರು. ಹಲವಾರು ದಶಕಗಳಿಂದ ಅನೇಕ ದೊಡ್ಡಾಟದಲ್ಲಿ ವಿವಿಧ ಪಾತ್ರಗಳನ್ನು ಹಾಕಿ ಅಭಿನಯಿಸಿ ಜಿಲ್ಲೆಯಾದ್ಯಂತ ಹೆಸರಾಗಿದ್ದಾರೆ. ಅವರು ಅಭಿನಯಿಸಿದ ಪ್ರಮುಖ ಬಯಲಾಟಗಳಲ್ಲಿ, ಐರಾವಣ-ಮೈರಾವಣ, ಶುಂಭ-ನಿಶುಂಭ ಪಾಂಡವ ವನವಾಸ, ಶ್ರೀಕೃಷ್ಣ ಸಂಧಾನ, ದೇವಿಮಹಾತ್ಮೆ ಮುಂತಾದವು ಸೇರಿವೆ. ಮೈಲಾರಲಿಂಗೇಶ್ವರ ಬಯಲಾಟ ಸಂಘಕಟ್ಟಿ ನೂರಾರು ಜನರನ್ನು ತರಬೇತುಗೊಳಿಸಿದ್ದಾರೆ. 1981ರಲ್ಲಿ ರಾಜ್ಯ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇವರನ್ನು ಗೌರವಿಸಿ ಸನ್ಮಾನಿಸಿದೆ.

ಶಿವಶರಣಪ್ಪ ಬಸಣ್ಣಪ್ಪ ನಾಟಕಾರ: ಅವರು ಲಾವಣಿ ಹಾಡುಗಾರರೆಂದೇ ಪ್ರಸಿದ್ಧರು. ಅವರ ಹುಟ್ಟೂರು ಗುಲಬರ್ಗಾ ಜಿಲ್ಲೆಯ, ಆಳಂದ ತಾಲ್ಲೂಕಿನ ಧಂಗಾಪುರ, ತುಂಬಾ ಹಿಂದೆ ಈ ತಾಲ್ಲೂಕಿನಲ್ಲಿ ದ್ಯಾಗಾವಿ ಗುಂಡಪ್ಪನೆಂಬ ಪ್ರಸಿದ್ಧ ಲಾವಣಿ ಕವಿ ಆಗಿ ಹೋಗಿದ್ದಾನೆ. ಗುಂಡಪ್ಪನ ಅನೇಕ ಶಿಷ್ಯ ಬಳಗ ತಾಲ್ಲೂಕಿನಾದ್ಯಂತ ಕಾಣಿಸುತ್ತಾರೆ. ಶಿವಶರಣಪ್ಪ ನಾಟಕಕಾರ ದ್ಯಾಗಾವಿ ಗುಂಡಪ್ಪ, ಸಾವಳಗಿ ಮಹಮ್ಮದ ಸಾಬ್‌ರ ಲಾವಣಿಗಳನ್ನು ತುಂಬಾ ಸುಶ್ರಾವ್ಯವಾಗಿ ಹಾಡುತ್ತಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 1982 ಪ್ರಶಸ್ತಿ ಲಭಿಸಿದೆ.

ಬಸಪ್ಪ ಸಿದ್ರಾಮಪ್ಪ ಹೊಟ್ಟಿ: ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುರುಕುಂಟಾದವರಾದ ಬಸಪ್ಪ ಹೊಟ್ಟಿ ದೊಡ್ಡಾಟದ ಕಲಾವಿದರು. ಜಿಲ್ಲೆಯ ದೊಡ್ಡಾಟ ಪರಂಪರೆಗೆ ಬಸಪ್ಪ ಹೊಟ್ಟಿಯವರ ಕೊಡುಗೆ ಸಾಕಷ್ಟಾಗಿದೆ. ಇವರ ಕಲಾ ಸೇವೆಯನ್ನು ಗುರುತಿಸಿದ ರಾಜ್ಯ ಜಾನಪದ ಅಕಾಡೆಮಿಯು 1983ರಲ್ಲಿ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಿದೆ.

ಮೋನಪ್ಪ ಸುತಾರ (ಬಡಿಗೇರ): ಗುಲಬರ್ಗಾ ಜಿಲ್ಲೆಯ ಅಫಜಲ್‌ಪುರ ತಾಲ್ಲೂಕಿನ ಚಿಂಚೋಳಿಯವರು. ತಮ್ಮ ಕುಲಕಸುಬು ಬಡಿಗತನ ದೊಂದಿಗೆ ದೊಡ್ಡಾಟ. ಹಾಡುಗಾರಿಕೆ ಹಾಗೂ ಪುರವಂತಿಕೆಯ ಸೇವೆಯಲ್ಲಿ ತೊಡಗಿರುವ ಶ್ರೇಷ್ಠ ಜಾನಪದ ಕಲಾವಿದರಾಗಿದ್ದಾರೆ. ಮೋನಪ್ಪ ಸುತಾರ ಅವರು ಗುಲಬರ್ಗಾ, ಬೀದರ, ರಾಯಚೂರು, ಬೆಂಗಳೂರು ಮುಂತಾದ ಕಡೆಗಳಲ್ಲಿ ತಮ್ಮ ಕಲಾ ಪ್ರದರ್ಶನದಿಂದ ರಾಜ್ಯಮಟ್ಟದಲ್ಲಿ ಹೆಸರು ಮಾಡಿದ ಕಲಾವಿದರು.



ಕೆಲವು ವರ್ಷಗಳವರೆಗೆ ಗುಲಬರ್ಗಾ ವಿಶ್ವವಿದ್ಯಾಲಯ ಎಂ.ಎ. ಜಾನಪದ ವಿದ್ಯಾರ್ಥಿಗಳಿಗೆ ದೊಡ್ಡಾಟ, ಸಣ್ಣಾಟಗಳ ತರಬೇತಿ ನೀಡಿದ್ದಾರೆ. 1984ರಲ್ಲಿ ಇವರಿಗೆ ರಾಜ್ಯ ಜಾನಪದ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಸಿದ್ದಪ್ಪ ರೇವಣಪ್ಪ ನಾಗೋಜಿ: ಆಳಂದ ತಾಲ್ಲೂಕಿನ ಧಂಗಾಪೂರ ಗ್ರಾಮದವರಾಗಿದ್ದಾರೆ. ಇವರು ಅಪ್ಪಟ ಜಾನಪದ ಬಯಲಾಟ ಕಲಾವಿದರು. ಸಾರಥಿ ಪಾತ್ರ ಮಾಡುವುದರಲ್ಲಿ ಇವರದು ಎತ್ತಿದ ಕೈ. ಸುತ್ತಲೆಲ್ಲ ಪ್ರಸಿದ್ಧರಾಗಿದ್ದಾರೆ. ಪ್ರಸ್ತುತ 1985ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಇವರಿಗೆ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಿದೆ.

ಸೋಮಯ್ಯ ಚನ್ನಬಸಯ್ಯ ಬೀಳಗಿ: ಗುಲಬರ್ಗಾ ಜಿಲ್ಲೆಯ ಅಫಜಲ್‌ಪುರ ತಾಲ್ಲೂಕಿನ ಹಿರೇಮಣ್ಣೂರಿನಲ್ಲಿ ಜನಿಸಿದ ಸೋಮಯ್ಯ ಬೀಳಗಿಯವರು ಸಣ್ಣಾಟ, ದೊಡ್ಡಾಟ ಹಾಗೂ ಜಾನಪದ ಭಜನೆ ಹಾಡುಗಳಿಗೆ ಪ್ರಸಿದ್ಧರಾಗಿದ್ದಾರೆ. ಸ್ವತಃ ಕವಿಯಾದ ಬೀಳಗಿಯವರು ಅನೇಕ ಭಜನೆ ಹಾಡುಗಳನ್ನು ರಚಿಸಿರುವರು. 1986ರಲ್ಲಿ ಇವರಿಗೆ ಕರ್ನಾಟಕ ಜಾನಪದ ಅಕಾಡೆಮಿಯಿಂದ ಅವರ ಜಾನಪದ ಕಲಾ ಪ್ರದರ್ಶನಕ್ಕೆ ಪ್ರಶಸ್ತಿ ದೊರಕಿದೆ.

ಅಣ್ಣಪ್ಪ ಸಾಬಣ್ಣ ಸಂಕರಡಗಿ: ಇವರು ಚಿತ್ತಾಪುರ ತಾಲ್ಲೂಕಿನ ಸಂಕರಡಿ ಗ್ರಾಮದವರು. ಜಾನಪದ ಹಾಡುಗಾರಿಕೆಗೆ ತುಂಬ ಪ್ರಸಿದ್ಧ ಕಲಾವಿದರಾಗಿದ್ದಾರೆ. ಇವರ ತಂದೆಯ ಹೆಸರು ಸಾಬಣ್ಣ. ತಂದೆಯೇ ಅಪ್ಪಣ್ಣನವರಿಗೆ ಹಾಡು ಕಲಿಸಿದ ಗುರುವಾಗಿದ್ದರು. ಸುದೀರ್ಘವಾದ ಖಂಡಕಾವ್ಯವನ್ನು ಹಾಡುವುದರಲ್ಲಿ ಈ ಕಲಾವಿದರು ಪ್ರಸಿದ್ಧರಾಗಿದ್ದಾರೆ. ಅನೇಕ ಸಂಘ ಸಂಸ್ಥೆಗಳು, ಅಲ್ಲದೆ 1987ರಲ್ಲಿ ರಾಜ್ಯಮಟ್ಟದ ಜಾನಪದ ಅಕಾಡೆಮಿಯ ಪ್ರಶಸ್ತಿ ಅಣ್ಣಪ್ಪ ಅವರಿಗೆ ದೊರಕಿತು.

ಹೈದರ ಸಾಹೇಬ ಮೋದೀನ ಸಾಹೇಬ, ಬೈರಾಮಡಗಿ: ಹೈದರ ಸಾಹೇಬ ಅವರು ಅಫಜಲ್‌ಪುರ ತಾಲ್ಲೂಕಿನ ಬೈರಾ ಮಡಿ–ಗಿಯವರು. ಇವರು ಗೀಗೀ ಪದಗಳನ್ನು ಹಾಡುವುದರಲ್ಲಿ ಅತ್ಯಂತ ನಿಷ್ಣಾತರು. ಗುಲಬರ್ಗಾ, ಬೆಂಗಳೂರು, ಮೈಸೂರು ಮುಂತಾದೆಡೆಗಳಲ್ಲಿ ಹಲವಾರು ಸಭೆ ಸಮಾರಂಭಗಳಲ್ಲಿ ಇವರು ತಮ್ಮದೆ ವಿಶಿಷ್ಟ ಶೈಲಿಯ ಹಾಡುಗಾರಿಕೆಯಿಂದ ಜನಮನ ಗೆದ್ದ ಕಲಾವಿದರಾಗಿದ್ದಾರೆ. 1988ರಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಹೈದರ ಸಾಹೇಬ ಅವರಿಗೆ ದೊರಕಿದೆ.

ಕಾಶೆಪ್ಪ ಮರೆಪ್ಪ ಹಾಲು: ಆಳಂದ ತಾಲ್ಲೂಕಿನ ಖಾನಾಪುರದವರಾದ ಕಾಶೆಪ್ಪ ಹಾಲು ಜಿಲ್ಲೆಯ ಪ್ರತಿಭಾವಂತ ಗೀಗೀ ಹಾಡುಗಾರರೆನಿಸಿದ್ದಾರೆ. ಇವರು ಹಾಡಲು ಆರಂಭಿಸಿದರೆ ಶ್ರೋತೃವೃಂದ ಅತ್ಯಂತ ಆನಂದ ಪಡುವುದು. ಇಂಥ ಪ್ರತಿಭಾವಂತ ಹಾಡುಗಾರನಿಗೆ 1989ರಲ್ಲಿ ರಾಜ್ಯ ಜಾನಪದ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

ಶಿವಶರಣಪ್ಪ, ಮಹಾಂತಪ್ಪ ಮಲ್ಲೆ: ಗುಲಬರ್ಗಾ ಜಿಲ್ಲೆಯವರಾದ ಶಿವಶರಣಪ್ಪ ಮಲ್ಲೆ ಅವರು ದೊಡ್ಡಾಟದ ಕಲಾವಿದರು ಮತ್ತು ಮುಮ್ಮೇಳದ ಹಾಡುಗಾರರಾಗಿದ್ದಾರೆ. ಇವರಿಗೆ ದೊಡ್ಡಾಟ ಪಾತ್ರಾಭಿನಯಕ್ಕಾಗಿ 1990ರಲ್ಲಿ ರಾಜ್ಯ ಮಟ್ಟದ ಪ್ರಶಸ್ತಿ ದೊರೆತಿದೆ.

ಅಂಬವ್ವ ಭೀಮಣ್ಣ ಪಟ್ಟಣ: ಜನಪದ ಸಂಪ್ರದಾಯದ ಹಾಡುಗಳನ್ನು ಹಾಡುವ ಕಲಾವಿದೆಯಾದ ಅಂಬವ್ವ ಪಟ್ಟಣ ಅಫಜಲ್‌ಪುರ ತಾಲ್ಲೂಕಿನ ಗೂಡೂರು ಗ್ರಾಮದವರಾಗಿದ್ದಾರೆ. 1991ರಲ್ಲಿ ಅವರಿಗೆ ರಾಜ್ಯಮಟ್ಟದ ಪ್ರಶಸ್ತಿ ಲಭಿಸಿದೆ.

ಗುರಣ್ಣ ಮಾರ್ತಾಂಡಪ್ಪ ಹಡಪದ: ಗುರಣ್ಣ ಹಡಪದ ಅವರು ಶಹಪೂರ ತಾಲ್ಲೂಕಿನ ದೊಡ್ಡ ಸಗರಿನವರಾಗಿದ್ದಾರೆ. ಹಲವಾರು ದಶಕಗಳಿಂದ ನಾಟಿ ವೈದ್ಯ ನಡೆಸುತ್ತಿರುವ ಅವರು ಶಹಪುರ ಹಾಗೂ ಸುತ್ತಮುತ್ತಲಿನಲ್ಲೆಲ್ಲ ತುಂಬಾ ಪ್ರಸಿದ್ಧರಾಗಿದ್ದಾರೆ. ಅವರಿಗೆ ರಾಜ್ಯ ಜಾನಪದ ಅಕಾಡೆಮಿಯು 1992ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

ಕೃಷ್ಣಯ್ಯ ಭೀಮಯ್ಯ ದಾಸರ: ಕೃಷ್ಣಯ್ಯ ಭೀಮಯ್ಯ ದಾಸರ ಬಯಲಾಟದ ಕಲಾವಿದರು. ಊರು ಯಾದಗಿರ ತಾಲ್ಲೂಕಿನ ಅನುಪನೂರ, ಹಲವಾರು ವರ್ಷಗಳಿಂದ ಬಯಲಾಟಗಳನ್ನು ಆಡಿಸಿ, ಸ್ವತಃ ಪಾತ್ರವಹಿಸುತ್ತ ಗ್ರಾಮೀಣ ಜನಪದ ಕಲೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ರಾಜ್ಯ ಜಾನಪದ ಅಕಾಡೆಮಿ ಕೃಷ್ಣಯ್ಯನವರ ಸೇವೆಯನ್ನು ಗುರುತಿಸಿ 1993ರಲ್ಲಿ ರಾಜ್ಯಮಟ್ಟದ ಪ್ರಶಸ್ತಿ ನೀಡಲಾಗಿದೆ.

ಸಾಂತರವ್ವ ಸಾಬಣ್ಣ ಸುಣಗಾರ: ಜಾನಪದ ಸಂಪ್ರದಾಯ, ಸೋಬಾನೆ ಹಾಗೂ ತತ್ವಪದಗಾರಿಕೆಯಲ್ಲಿ ಹೆಸರು ಮಾಡಿದ ಸಾಂತರೆವ್ವ ಸುಣಗಾರ ಅವರು ಚಿತ್ತಾಪುರ ತಾಲ್ಲೂಕ ನಾಲವಾರ ಗ್ರಾಮದವರು. ಅವರಿಗೆ ಜಾನಪದ ಹಾಡುಗಾರಿಕೆಗಾಗಿ ರಾಜ್ಯಮಟ್ಟದ ಪ್ರಶಸ್ತಿಯನ್ನು 1994ರಲ್ಲಿ ನೀಡಲಾಗಿದೆ.

ನೂರಂದಪ್ಪ ಹೆರೂರ: ನೂರಂದಪ್ಪ ಹೆರೂರ ಆಳಂದ ತಾಲ್ಲೂಕಿನ ವಿ.ಕೆ. ಸಲಿಗರ ಗ್ರಾಮದವರಾಗಿದ್ದಾರೆ. ಇವರು ಬಯಲಾಟದ ಕಲಾವಿದರು ಇವರ ಜಾನಪದ ಕಲಾ ಸೇವೆಯನ್ನು ಗುರುತಿಸಿ ಕರ್ನಾಟಕ ಜಾನಪದ ಅಕಾಡೆಮಿ 1995ರಲ್ಲಿ ಸನ್ಮಾನಿಸಿ ಗೌರವಿಸಿದೆ.

ಸಿದ್ದಪ್ಪ ಮೇಟಿ: ಸಿದ್ದಪ್ಪ ಮೇಟಿ ಶಹಪೂರ ತಾಲ್ಲೂಕಿನ ಸೈದಾಪುರದವರು. ವಿಶಿಷ್ಟ ಜಾನಪದ ಹಾಡುಗಾರ. ಡೊಳ್ಳಿನ ಹಾಡು, ಹಾಲುಮತ ಕುರಿತು ಸುದೀರ್ಘವಾಗಿ ಹಾಡುತ್ತಿದ್ದ ಸಿದ್ದಪ್ಪ ಮೇಟಿಯವರಿಗೆ ಜಾನಪದ ಹಾಡುಗಾರಿಕೆಗೆ 1996ರಲ್ಲಿ ಜಾನಪದ ಅಕಾಡೆಮಿ ಪ್ರಶಸ್ತಿ ದೊರಕಿತು. ಇತ್ತೀಚೆಗೆ ಈ ಕಲಾವಿದರು ಮರಣ ಹೊಂದಿದ್ದಾರೆ.

ಹನುಮಂತ ಮಾರುತಿ ಹೂಗಾರ: ಹನುಮಂತ ಹೂಗಾರ ಅವರು ಆಳಂದ ತಾಲ್ಲೂಕಿನ ಖಾನಾಪುರ ಗ್ರಾಮದವರಾಗಿದ್ದಾರೆ. ತಮ್ಮ ನಾಟಿ ವೈದ್ಯ ಸೇವೆಯಿಂದ ತಾಲ್ಲೂಕಿನ ಸುತ್ತಮುತ್ತಲೆಲ್ಲ ಪ್ರಸಿದ್ಧರಾದ ಹನುಮಂತಪ್ಪನವರಿಗೆ 1997ರಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಲಭಿಸಿದೆ.

ಗಿರಿಜಮ್ಮ ಅಲ್ದಿಹಾಳ: ಇಂಪಾದ ತನ್ನ ಕಂಠ ಸಿರಿಯಿಂದ ಗೀಗೀ ಪದಗಳನ್ನು ಹಾಡುವ ಗಿರಿಜಮ್ಮ ಲಂಬಾಣಿ ಸಮುದಾಯಕ್ಕೆ ಸೇರಿದ ಕಲವಿದೆಯಾಗಿದ್ದಾಳೆ. ಚಿತ್ತಾಪುರ ತಾಲ್ಲೂಕ ಅಲ್ದಿಹಾಳ ತಾಂಡಾದಲ್ಲಿ ನೆಲೆಸಿರುವ ಗಿರಿಜಮ್ಮಳಿಗೆ 1998ರ ಕರ್ನಾಟಕ ಜಾನಪದ ಅಕಾಡೆಮಿಯ ಪ್ರಶಸ್ತಿ ದೊರೆತಿರುವುದು.

ಸಂಬಣ್ಣ ಪುರವಂತ: ಗುಲಬರ್ಗಾ ಜಿಲ್ಲೆಯ ಜೇವರಗಿ ತಾಲ್ಲೂಕಿನ ನೆಲೋಗಿಯವರಾದ ಸಂಬಣ್ಣ ಪುರವಂತಿಗೆ ವೇಷ ಹಾಗೂ ಕುಣಿತದಲ್ಲಿ ತುಂಬ ಪ್ರಸಿದ್ಧಿ ಹೊಂದಿದ್ದಾರೆ. ಅಲ್ಲದೆ ಏಕತಾರಿ ಹಾಡುಗಾರರೂ ಆಗಿರುವರು. ಸಂಬಣ್ಣನವರ ಸೇವಾ ವಿಶಿಷ್ಟತೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಅಕಾಡೆಮಿ 1999ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

ಗಿರಿಜಾ ಮಲ್ಲಪ್ಪ ಕರ್ಪೂರ: ಗಿರಿಜಾ ಕರ್ಪೂರ ಅವರು ಸಂಪ್ರದಾಯದ ಹಾಡುಗಳನ್ನು ಹೇಳುವ ಕಲಾವಿದರು. ಸಧ್ಯಕ್ಕೆ ಅವರೀಗ ಗುಲಬರ್ಗಾ ನಗರದ ವೆಂಕಟೇಶ ನಗರದಲ್ಲಿ ವಾಸವಾಗಿದ್ದಾರೆ. ಕಲಬುರ್ಗಿ ಜಿಲ್ಲಾ ಸಾಹಿತ್ಯ ಸಮ್ಮೇಳನ ಆಕಾಶವಾಣಿ, ದೂರದರ್ಶನಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅವರ ಹಾಡುಗಾರಿಕೆಗೆ 2003ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಗೌರವ ಪ್ರಶಸ್ತಿ ನೀಡಿದೆ.

ಗಿರಿಜಾಬಾಯಿ ಜಿ. ರಾಠೋಡ: ಗೀಗೀ ಪದ ಗಾಯಕಿ ಗಿರಿಜಾಬಾಯಿ ರಾಠೋಡ ಲಂಬಾಣಿ ಬುಡಕಟ್ಟು ಜನಾಂಗಕ್ಕೆ ಸೇರಿದ ಜನಪದ ಕಲಾವಿದೆ. ಈಗವರು ಗುಲಬರ್ಗಾದ ಆದರ್ಶನಗರ ಬಡಾವಣೆಯಲ್ಲಿ ನೆಲೆಸಿದ್ದಾರೆ. ಪ್ರಸ್ತುತ ಅವರ ಹಾಡುಗಾರಿಕೆ ಕಲೆಗೆ ರಾಜ್ಯಮಟ್ಟದ ಪ್ರಶಸ್ತಿ ದೊರಕಿರುತ್ತದೆ.

ಶಿವಲಿಂಗಪ್ಪ ಡಿಗ್ಗಿ: ಶಿವಲಿಂಗಪ್ಪ ಡಿಗ್ಗಿ ಶಹನಾಯಿ ವಾದಕರಾಗಿದ್ದು ಜಿಲ್ಲೆಯಲ್ಲಿ ತಮ್ಮ ಶಹನಾಯಿ ವಾದನದಿಂದ ಮನೆಮಾತಾಗಿದ್ದಾರೆ. ಅವರಿಗೆ ಹಲವು ಸಂಘಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿದೆ. 2006ರಲ್ಲಿ ಕರ್ನಾಟಕ ರಾಜ್ಯಪ್ರಶಸ್ತಿ ಪಡೆದಿರುತ್ತಾರೆ.

ಸಿದ್ರಾಮಪ್ಪ ಗುರುಬಸಪ್ಪ ಗುರುನಂಜಿ: ಜನಪದ ವೈದ್ಯರು. 85 ವರ್ಷದಲ್ಲಿರುವ ಶ್ರೀಯುತರ ಹುಟ್ಟೂರು ಅಫಜಲ್‌ಪುರ ತಾಲ್ಲೂಕು ಬೈರಾಮಡಗಿಯಾಗಿದೆ. ಜನಪದ ಸಂಗೀತಗಾರರು. ಯುನಾನಿ ವೈದ್ಯಪದ್ಧತಿಯನ್ನು ಜನಸೇವೆಗೆ ಬಳಸಿದ ಎಲೆ ಮರೆಯಕಾಯಿಯಂತಿರುವ ಸಿದ್ರಾಮಪ್ಪ ಅವರಿಗೆ 2008ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

(ಬಿಪಿಪಿ)

ಜನಪದ ಕಲಾವಿದರು: (ಬೀದರ ಜಿಲ್ಲೆ) ತಮ್ಮ ಬದುಕಿನ ದಿನನಿತ್ಯದ ಅನುಭವದಲ್ಲಿ ನೂರಾರು ಜನಪದ ಕಲೆಗಳನ್ನು ಹುಟ್ಟಿಸಿ ಬೆಳೆಸಿದ ಕೀರ್ತಿ ಬೀದರ ಜಿಲ್ಲೆಯ ನೂರಾರು ಕಲಾವಿದರಿಗೆ ಸಲ್ಲುತ್ತದೆ. ಜನಪದ ಸಾಹಿತ್ಯ, ಸಂಗೀತ ಹಾಗೂ ಕಲೆಗಳೊಂದಿಗೆ ಅನೇಕ ಕಲಾವಿದರು ಇಲ್ಲಿ ಆಗಿಹೋಗಿದ್ದಾರೆ ಹಾಗೂ ರೂಪುಗೊಳ್ಳುತ್ತಿದ್ದಾರೆ. ಆ ಕಲಾಕಾರರ ಕಲೆ ಹಾಗೂ ಸಾಹಿತ್ಯವನ್ನು ಉಳಿಸಿಕೊಂಡು ಮುಂದಿನ ಜನಾಂಗಕ್ಕೆ ತೋರಿಸಬೇಕಾದುದು ಇಂದಿನ ಆದ್ಯ ಕರ್ತವ್ಯವಾಗಿದೆ. ಈ ದೃಷ್ಟಿಯಲ್ಲಿ ಈಗ ಪ್ರಸಿದ್ಧಿ ಪಡೆದು ಹೋಗಿರುವ ಕೆಲವು ಜನಪದ ಕಲಾಕಾರರ ಸ್ಥೂಲ ಪರಿಚಯವನ್ನಿಲ್ಲಿ ನೀಡಿದೆ.

1980ಕ್ಕಿಂತ ಮುಂಚೆಯೇ ಇಲ್ಲಿ ನೂರಾರು ಕಲಾಕಾರರು ಆಗಿ ಹೋಗಿದ್ದರೂ ಸಹ ಜನಪದ ಕಲಾಕಾರರನ್ನು ಗುರುತಿಸುವ ಕಾರ್ಯ ಆರಂಭವಾದುದು ಇಲ್ಲಿ 1980ರಿಂದಲೇ. ಅವರಲ್ಲಿ 1980ರಲ್ಲಿ 'ನನ್ನಾಸಾಹೇಬ ಮಂಗಲಗಿ'ಯವರನ್ನು ಜಿಲ್ಲೆಯ "ಜನಪದ ಕಲಾಕಾರ"ನೆಂದು ಗುರುತಿಸಿ ಅವರಿಗೆ 'ಪ್ರಶಸ್ತಿ' ನೀಡಲಾಯಿತು.

ನನ್ನಾ ಸಾಹೇಬ ಮಂಗಲಗಿ: ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಮಂಗಲಗಿ ಗ್ರಾಮದ ಇವರು ಶ್ರೇಷ್ಠ ಜನಪದ ಕಲಾಕಾರರು. ತತ್ವಪದ, ಭಜನೆಹಾಡು, ಮೋಹರಂ ಹಾಡು, ಕಲ್ಗಿತುರಾಯಿ ಮೊದಲಾದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ ಕಲಾವಿದರು. ಮುಸ್ಲಿಂ ಕುಟುಂಬದಲ್ಲಿ ಜನಿಸಿದ ನನ್ನಾಸಾಹೇಬ ನಿರಕ್ಷರಿಗಳಾಗಿದ್ದರು. ಬಡತನ ಕುಟುಂಬದ ತಂದೆ ಫಕೀರ್ ಅಹಮದ್, ತಾಯಿ ಮೌಲಾನಬಿಯವರು ಈತನನ್ನು ಶಾಲೆಗೆ ಕಳಿಸಿರಲಿಲ್ಲ. ಚಿಕ್ಕಂದಿನಿಂದ ಹಾಡುವ ಹವ್ಯಾಸವುಳ್ಳ ಇವರು ಅಲ್ಲಿ ಇಲ್ಲಿ ತಿರುಗುತ್ತ, ಅಲ್ಪ ಸ್ವಲ್ಪ ಮೋಡಿ ಅಕ್ಷರ ಜ್ಞಾನ ಪಡೆದುಕೊಂಡಿದ್ದರು. 'ಕಲ್ಗಿ ತುರಾಯಿ' ಹಾಡುಗಾರಿಕೆಯಲ್ಲಿ ಪ್ರಾವೀಣ್ಯ ಪಡೆದ ಇವರು ಹಾಡುತ್ತ ಹಾಡುತ್ತ ಊರೂರು ತಿರುಗತೊಡಗಿದರು. ನಂತರದಲ್ಲಿ ಈ ಭಾಗದ ಪ್ರಸಿದ್ಧ ಲಾವಣಿಕಾರರೆನಿಸಿದರು. ಸುತ್ತಮುತ್ತಲಿನ ಜಾತ್ರಾ ಸ್ಥಳಗಳಲ್ಲಿ ಲಾವಣಿ ಹಾಡುತ್ತಿದ್ದ ಇವರಿಗೆ ದುಬಲಗುಂಡಿ ಗ್ರಾಮದ ಶರಣಪ್ಪ ಫತ್ತೆಪುರ ಅವರು ಹೆಚ್ಚಿನ ಪ್ರೋತ್ಸಾಹ ನೀಡಿ ಗೌರವಿಸಿದರು. ಮಂಗಲಗಿಯು 'ಮೌಲಾಹುಸೇನಿ'ಯವರು ಇವರಿಂದ ಪ್ರಭಾವಿತರಾದರೆ, ಅಮಿನಸಾಬ ಎಂಬವರು ನನ್ನಾಸಾಹೇಬರ ಶಿಷ್ಯರಾದರು, ಇವರ ಕಲೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 1980ರಲ್ಲಿ ಅವರಿಗೆ 'ಅಕಾಡೆಮಿ' ಪ್ರಶಸ್ತಿ ನೀಡಿತು. ಪ್ರಶಸ್ತಿ ಗಳಿಸಿದ ಕೆಲವೇ ವರ್ಷಗಳಲ್ಲಿ ನನ್ನಾಸಾಹೇಬರು ತಮ್ಮ 65ನೆಯ ವಯಸ್ಸಿನಲ್ಲಿ ನಿಧನರಾದರು.

ಚಿಮಣಾಬಾಯಿ: ಬಸವಕಲ್ಯಾಣ ತಾಲ್ಲೂಕಿನ ಮಂಠಾಳ ಗ್ರಾಮದವರಾದ ಚಿಮಣಾಬಾಯಿ ಬೀದರ ಜಿಲ್ಲೆಯ ಪ್ರಸಿದ್ಧ ಜನಪದ ಕಲಾವಿದೆ. ಹೆಣ್ಣಮಕ್ಕಳ 'ಸಾಂಪ್ರದಾಯಿಕ ಹಾಡು'ಗಳನ್ನು ಹಾಡುವ ಕಲೆ ಇವರಿಗೆ ಕರಗತವಾಗಿತ್ತು. ಬೀಸುವ, ಕುಟ್ಟುವ, ಮದುವೆ, ಶೋಭಾನ ಹಾಗೂ ಶೀಗಿ ಹಾಡುಗಳನ್ನು ಹಾಡುತ್ತಿದ್ದ ಇವಳು ಅಂಥ ಕಲಾವಿದೆ. ಇವಳ ತಂದೆ ಶಿವಪುತ್ರಪ್ಪ, ತಾಯಿ ಶಿವಮ್ಮ ಇವಳು ಏಳು ವರ್ಷದವಳಾಗಿದ್ದಾಗ ಶ್ರೀ ಮಡೆಪ್ಪ ಕಲ್ಲಶೆಟ್ಟಿ ಎಂಬುವವರ ಜೊತೆಯಲ್ಲಿ ವಿವಾಹವಾಗಿತ್ತು. ಎಣ್ಣೆಗಾಣ ಹೊಡೆಯುವ ತಂದೆ-ತಾಯಿಯರೊಂದಿಗೆ ಉದ್ಯೋಗದಲ್ಲಿಯೇ ಸಹಾಯ ಮಾಡುತ್ತ ಹಾಡಲು ಕಲಿತು ಚಿಮಣಾಬಾಯಿ ಮುಂದೆ ಒಬ್ಬ ಉತ್ತಮ ಹಾಡುಗಾರ್ತಿಯಾಗಿ ರೂಪುಗೊಂಡಳು.

ಚಿಮಣಾಬಾಯಿಯ ವೈಯಕ್ತಿಕ ಬದುಕು ತುಂಬಾ ಕಷ್ಟದ್ದಾಗಿತ್ತು. ಅವಳು ಬೇಗನೆ ತನ್ನ ಗಂಡ ಹಾಗೂ ಮಗನನ್ನು ಕಳೆದುಕೊಂಡಳು. ಈ ಮೊದಲೇ ಕುರುಡಿಯಾಗಿದ್ದ ಅವಳ ಬದುಕಿನಲ್ಲಿ ಇದರಿಂದ ಅಂಧಕಾರ ಕವಿಯಿತು. ಆದರೂ ಅವಳು 'ಸಾಂಪ್ರದಾಯಿಕ ಹಾಡು'ಗಳನ್ನು ಹಾಡುತ್ತ ಎಲ್ಲ ಮರೆತಳು.

ಅವಳೊಬ್ಬ ಉತ್ತಮ ಜನಪದ ಕಥೆಗಾರಳೂ ಆಗಿದ್ದಳು. ಅವಳಿಗೆ ಅನೇಕ ಕಥೆಗಳು ಬರುತ್ತಿದ್ದವು. ಕಥೆ ಹಾಗೂ ಹಾಡು ಹೇಳುವ ಸಂದರ್ಭದಲ್ಲಿ ತನ್ನನ್ನೇ ತಾನು ಮರೆತು ಅದರಲ್ಲೇ ತಲ್ಲೀನವಾಗುತ್ತಿದ್ದ ದೃಶ್ಯ ಅನುಪಮವಾದುದು. ಅವಳ ಈ ಕಲೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 1981ರಲ್ಲಿ ಅವಳಿಗೆ ಪ್ರಶಸ್ತಿ ನೀಡಿ ಗೌರವಿಸಿತು.

ಶಾಂತಪ್ಪ ಶೀಲವಂತ: 'ಅಕ್ಕಸಾಲಿಗ'ನಾದ ಶಾಂತಪ್ಪ ತನ್ನ ಉದ್ಯೋಗದೊಂದಿಗೆ ಜನಪದ ಕಲೆಯನ್ನು ಮೈಗೂಡಿಸಿಕೊಂಡು ಬೆಳೆದ ಕಲಾವಿದ. ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಹಾರಕೂಡ ಗ್ರಾಮದವನಾಗಿರುವ ಈತನು ತನ್ನ ಜೀವನದ 40 ವರ್ಷಗಳ ಕಾಲ ಜನಪದ ಹಾಡುಗಳನ್ನು ಹೇಳುತ್ತ 'ಡಪ್ಪಿನಾಟ' ಕಲಿಸುತ್ತಿದ್ದನು. ತಂದೆ ಶಿವಲಿಂಗಪ್ಪ, ತಾಯಿ ನೀಲಮ್ಮ, ಶಾಂತಪ್ಪನ ಈ ಕಲೆಗೆ ಗುರು ಬಸವಣ್ಣೆಪ್ಪ ತನ್ನ ಉದ್ಯೋಗದಲ್ಲಿ ಅಲ್ಪಸ್ವಲ್ಪ ಹಾಡುತ್ತ ಇದ್ದ ಇವರಿಗೆ ಬಸವಣ್ಣೆಪ್ಪರ ಕಲ್ಗಿ ತುರಾಯಿಹಾಡು, ದಪ್ಪಿನಾಟದ ಹಾಡುಗಳು ಪ್ರಭಾವ ಬೀರಿದವು. ಇದರಿಂದ ಬಸವಣ್ಣೆಪ್ಪನ ಶಿಷ್ಯರಾಗಿ ಅವರಿಂದ ಇವುಗಳನ್ನು ಕಲಿತನು. ತಾನೇ ಸ್ವತಃ ಕೆಲವು ಹಾಡುಗಳನ್ನು ರಚಿಸಿದನು. ಅಷ್ಟೇ ಅಲ್ಲದೆ ಅಂದು ಆಡುತ್ತಿದ್ದ 'ಮದನ ಮಂಜರಿ', ಸತ್ಯಹರಿಶ್ಚಂದ್ರ ಮೊದಲಾದ ಡಪ್ಪಿನಾಟಗಳಲ್ಲಿ ಸ್ವತಃ ಪಾತ್ರಧಾರಿಯಾಗಿ ಜನಮನ್ನಣೆ ಗಳಿಸಿದರು.

ಬೀದರ ಜಿಲ್ಲೆಯ ತುಂಬ ಅನೇಕ ಊರುಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸುತ್ತ ಬಂದಿರುವ ಈತನು ಬಹಳಷ್ಟು ಡಪ್ಪಿನಾಟಗಳನ್ನು ಆಡಿಸಿದ್ದಾನೆ. ಒಂದು ಮಳೆಗಾಲದಲ್ಲಿ ಸಿಡಿಲಿನ ಹೊಡೆತಕ್ಕೆ ಸಿಲುಕಿ ತನ್ನೆರಡು ಕಾಲುಗಳನ್ನು ಕಳೆದುಕೊಂಡರೂ ಸಹ ವಿಚಲಿತನಾಗದೆ ತನ್ನ ಹಾಡುಗಾರಿಕೆಯನ್ನು ಹಾಗೆ ಉಳಿಸಿಕೊಂಡು ಬಂದ ವ್ಯಕ್ತಿ. 1982ರಲ್ಲಿ ಈತನ ಕಲೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯು ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿತು. ನಂತರದ 3ನೇ ವರ್ಷದಲ್ಲಿ ಇವರು ನಿಧನರಾದರು.

ಹನಕುಣಿ ನಾಗಮ್ಮ: ಬುಲಾಯಿ ಹಾಡು, ಕುಟ್ಟುವ, ಬೀಸುವ ಹಾಡು, ಮದುವೆ ಹಾಡು, ಶೀಗಿ–ಗೌರಿ ಹಾಡುಗಳನ್ನು ಹಾಡುತ್ತಿದ್ದ ನಾಗಮ್ಮ ಈ ಜಿಲ್ಲೆಯ ಶ್ರೇಷ್ಠ ಹಾಡುಗಾರ್ತಿ. ಹುಮನಾಬಾದ ತಾಲ್ಲೂಕಿನ ಹಣಕುಣಿ ಗ್ರಾಮದವಳಾದ ಈ ಕಲಾವಿದೆಯ ತಂದೆ ಭೀಮರೆಡ್ಡಿ. ತಾಯಿ ಲಿಂಗಮ್ಮ. ಅದೇ ಊರಿನ ಗುಂಡಪ್ಪರೆಡ್ಡಿ ಎಂಬುವರೊಡನೆ ಬಾಲ್ಯವಿವಾಹ ಮಾಡಿಕೊಂಡ ಇವಳು ಶಾಲೆ ಕಲಿತವಳಲ್ಲ. ಒಕ್ಕಲುತನದ ಉದ್ಯೋಗದ ಮನೆತನದಲ್ಲಿ ತನ್ನ ಮನೆಗೆಲಸ ಮಾಡಿಕೊಳ್ಳುವುದರೊಂದಿಗೆ ಜಾನಪದ ಹಾಡುಗಳನ್ನು ಹಾಡುವುದನ್ನು ರೂಢಿಸಿಕೊಂಡರು. ತನ್ನ ಸುತ್ತಮುತ್ತಲ ಹಿರಿಯರು ಹಾಡುತ್ತಿದ್ದ ಹಾಡುಗಳನ್ನು ಕಲಿತು ತಾನು ಚೆನ್ನಾಗಿ ಹಾಡುವುದನ್ನು ರೂಢಿಸಿಕೊಂಡಿರುವ ನಾಗಮ್ಮ ಈ ಭಾಗದ ಹಾಡುಗಾರಿಕೆಯಲ್ಲಿ ತುಂಬಾ ಪ್ರಸಿದ್ಧಿ ಪಡೆದರು. ಇಬ್ಬರು ಹೆಣ್ಣು ಮಕ್ಕಳು ಹಾಗೂ ಒಂದು ಗಂಡು ಮಗುವನ್ನು ಪಡೆದ ಇವಳು ನಂತರದಲ್ಲಿ ಗಂಡನನ್ನು ಕಳೆದುಕೊಂಡು ಸಂಸಾರದ ಭಾರ ತಾನೇ ಹೊತ್ತು ಬಳಲಿದಳು. ಆದರೂ ಅವಳು ಹಾಡುವುದನ್ನು ತನ್ನ ಉಸಿರಾಗಿರಿಸಿಕೊಂಡು ನಾಡಿಗೆ ಹಾಡುಗಾರಿಕೆಯ ಶ್ರೀಮಂತಿಕೆಯನ್ನು ತಂದುಕೊಟ್ಟಳು. ಇದರ ಫಲವಾಗಿ 1983ರಲ್ಲಿ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದಳು.

ಗೊಂದಳಿ ವಿಠ್ಠಲರಾವ: ದುಮ್ಮನಸೂರಿನ ಸಿದ್ಧಪ್ರಭುಗಳ ಶಿಷ್ಯನಾಗಿದ್ದ ವಿಠ್ಠಲರಾವ ಅವರು ಭಾಲ್ಕಿ ತಾಲ್ಲೂಕಿನ ಭಾತಮ್ರಾ ಊರಿನವರು. ತಂದೆ ಜಯವಂತರಾವ ತಾಯಿ ಅಂಬಾಬಾಯಿ ಚಿಕ್ಕಂದಿನಿಂದಲೇ ತಂದೆ ತಾಯಿಗಳಿಂದ ಜನಪದ ಕಲೆಯನ್ನು ಕಲಿತರು. ತಂದೆಯು ಇವರಿಗೆ ತಮ್ಮ ಕುಲಕಸುಬಾದ ಗೊಂದಲ ಹಾಕುವುದನ್ನು ಕಲಿಸಿದರೆ, ತಾಯಿ ಈತನಿಗೆ ಹಾಡು ಹಾಡುವುದನ್ನು ಹೇಳಿಕೊಟ್ಟಳು. ಹೀಗಾಗಿ ಇವರು ಎರಡೂ ಕಲೆಯಲ್ಲಿ ಪರಿಣತಿ ಪಡೆದರು. ಮೊದಮೊದಲು ತತ್ತ್ವಪದಗಳನ್ನು ಹಾಡುತ್ತಿದ್ದ ಇವರು, ನಂತರದಲ್ಲಿ ಭಜನೆಹಾಡು, ಲಾವಣಿಪದ ಜೋಗುಳಪದ ಹಾಗೂ ಅನುಭಾವ ಪದಗಳನ್ನು ಹಾಡಿ ಜನಮನ ಗೆದ್ದರು. ಬೀದರ ಹಾಗೂ ಸುತ್ತಮುತ್ತಲ ಜಿಲ್ಲೆಗಳಲ್ಲಿ ಸಂಚಾರ ಮಾಡಿ ಹಲವು ಕಲಾಮೇಳಗಳಲ್ಲಿ ತಮ್ಮ ಹಾಡುಗಾರಿಕೆಯನ್ನು ಪ್ರದರ್ಶಿಸಿ ಪ್ರಸಿದ್ಧರಾದರು. 1984ರಲ್ಲಿ ಇವರ ಕಲಾ ಸೇವೆಯನ್ನು ಕಂಡ ಕರ್ನಾಟಕ ಜಾನಪದ ಅಕಾಡೆಮಿಯು ರಾಜ್ಯ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿತು.

ಕೊಳಾರ ಇಮಾಮಸಾಬ: ಮುಸ್ಲಿಂ ಕುಟುಂಬದಲ್ಲಿ ಜನಿಸಿರುವ ಇಮಾಮಸಾಬರು ಕೊಳಾರ ಗ್ರಾಮದವರು. ತಂದೆ ಪೀರಸಾಬ ಹಾಗೂ ತಾಯಿ ಖುಲಸುಂಬಾ, ಸರ್ವಜನಾಂಗದ ಪ್ರೀತಿಗೆ ಪಾತ್ರರಾಗಿದ್ದ ಇಮಾಮಸಾಬರಿಗೆ ಉರ್ದು ಓದು ಬರಹ ಗೊತ್ತಿರಲಿಲ್ಲ. ಅಲ್ಪ–ಸ್ವಲ್ಪ ಮೋಡಿ ಲಿಪಿಯನ್ನು ಕಲಿತ ಇವರು ಬೀದರ ಜಿಲ್ಲೆಯ ಅದ್ಭುತ ಕಲಾವಿದರೆನಿಸಿದ್ದರು. ಡಪ್ಪು ಬಾರಿಸುವ ಕಲೆಯಲ್ಲಿ ನೈಪುಣ್ಯತೆ ಪಡೆದಿದ್ದ ಇವರು ಪಾತ್ರಧಾರಿಯೂ ಹಾಗೂ ಬಯಲಾಟದ ರಚನಾಕಾರರೂ ಆಗಿದ್ದರು. ಕನಕಾಂಗಿ ಕಲ್ಯಾಣ, ಐರಾವಣ–ಮೈರಾವಣ, ದ್ರೌಪದಿ ವಸ್ತ್ರಾಪಹರಣ ಮೊದಲಾದ ಅನೇಕ ದಪ್ಪಿನಾಟಗಳನ್ನು ರಚಿಸಿ ಪ್ರದರ್ಶಿಸಿದ್ದಾಗಿ ತಿಳಿದುಬರುತ್ತದೆ. ಸುಮಾರು 96 ವರ್ಷಗಳ ಕಾಲ ಬದುಕಿದ್ದ ಇಮಾಮರು ತಮ್ಮ ಜೀವಿತದ ಕೊನೆಯ ಅವಧಿಯಲ್ಲಿ ಶಾಲಿವಾನ, ಸತ್ಯಭಗಿಣಿ, ಭಾಗ್ಯಶಾಲಿ, ಕೊಮಟಿಗನ ಆಟ ಮತ್ತು ಕಬೀರದಾಸ ಮೊದಲಾದ ಆಟಗಳನ್ನು ರಚಿಸಿದರು, ಜನಪದ ವೈದ್ಯರೂ ಆಗಿದ್ದ ಇವರು ದಪ್ಪು ಬಾರಿಸುವ ಕಲೆಯಲ್ಲಿ ಅದ್ವಿತೀಯರಾಗಿದ್ದರು. ಇವರ ಈ ಸೇವೆಯನ್ನು ಗುರುತಿಸಿದ ಜಾನಪದ ಅಕಾಡೆಮಿ 1985ರ ರಾಜ್ಯಪ್ರಶಸ್ತಿ ನೀಡಿ ಸನ್ಮಾನಿಸಿದೆ.

ಬಹುರೂಪಿ ಏಕನಾಥ: ಹುಮನಾಬಾದ ತಾಲ್ಲೂಕಿನ ನಿರ್ಣಾವಾಡಿಯ ಏಕನಾಥರು ಬಹುರೂಪಿ ಕಲೆಯಲ್ಲಿ ಜಿಲ್ಲೆಯಲ್ಲಿಯೇ ಪ್ರಸಿದ್ಧಿ ಪಡೆದಿದ್ದರು. 1924ರಲ್ಲಿ ಜನಿಸಿದ ಇವರ ತಂದೆ ಗಂಗಪ್ಪ ತಾಯಿ ಚನ್ನಮ್ಮ ಬಹುರೂಪಿ ಕಲೆ ಇವರ ಮನೆತನದ ಉದ್ಯೋಗವಾಗಿತ್ತು. ಹೀಗಾಗಿ ಬಾಲ್ಯದಿಂದಲೇ ತಂದೆಯಿಂದ ಈ ಕಲೆಯಲ್ಲಿ ಪರಿಣತಿ ಪಡೆದರು. ಬಹುರೂಪಿ ಆಟಗಳಲ್ಲಿ ಬಾಲ ಪಾತ್ರಗಳನ್ನು ಧರಿಸುತ್ತ ತಮ್ಮ ಇಂಪಾದ

ಕಂಠದಿಂದ ಜನಮನ ಗಳಿಸಿದರು. ಓದಿ-ಬರೆದಿದ್ದು ಕೇವಲ ನಾಲ್ಕನೆಯ ಇಯತ್ತೆಯಾದರೂ ಅವರು ಬಹುರೂಪಿಯಿಂದ ಕಲಿತದ್ದು ಅಪಾರ.

ತಮ್ಮ ಬಹುರೂಪಿಯಲ್ಲಿ ಅನೇಕ ಪಾತ್ರಗಳನ್ನು ಮಾಡಿರುವ ಏಕನಾಥರು ವಿಶ್ವಾಮಿತ್ರ, ಭೀಮ, ಘಟೋತ್ಕಜ, ಭಸ್ಮಾಸುರ, ಮೋಹಿನಿ ಮೊದಲಾದ ಪೌರಾಣಿಕ ಪಾತ್ರಗಳೇ ಶ್ರೇಷ್ಠವೆನ್ನುತ್ತಾರೆ. ಇದರೊಂದಿಗೆ ಸಿಂಧೂರ ಲಕ್ಷ್ಮಣ, ಸೂರದಾಸ, ಸತ್ಯಹರಿಶ್ಚಂದ್ರ, ಬಸವಣ್ಣ ಮೊದಲಾದ ಪಾತ್ರಗಳು ಜನಮನ್ನಣೆ ಗಳಿಸಿದ್ದನ್ನೂ ಹೇಳುತ್ತಾರೆ. ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿದ ಅವರ ಅಲೆದಾಟ ಒಂದು ಸಂಸ್ಕೃತಿಯ ಸಂಚಾರವಾಗಿದೆ. 70ರ ಅಂಚಿನಲ್ಲಿರುವ ಈ ಕಲಾಕಾರನಿಗೆ ಅನೇಕ ಶಿಷ್ಯವರ್ಗವಿದೆ. ದೇವೀಂದ್ರಪ್ಪ, ಕುಪೇಂದ್ರ, ಲಕ್ಷ್ಮಣ, ರಾಮಚಂದ್ರ, ಎಲ್ಲಪ್ಪ ಮೊದಲಾದವರು ಈ ಕಲೆಯನ್ನು ಮುಂದುವರೆಸಿಕೊಂಡು ಸಾಗಿದ್ದಾರೆ. ಬಹುರೂಪಿ ಕಲೆ ಒಂದು ಸಂಯುಕ್ತ ಕಲೆ ಅಲ್ಲಿಯ ಹಾಡು, ಸಾಹಿತ್ಯ, ಪಾತ್ರದ ವೇಷಭೂಷಣ, ಕುಣಿತ, ಸಂಗೀತ ಇವುಗಳಿಗಾಗಿ ಬಳಕೆಯಾಗುವ ಹಲವು ವಾದ್ಯಗಳು ಕೇಳುಗರ ಹಾಗೂ ನೋಡುಗರನ್ನು ಮಂತ್ರಮುಗ್ಧಗೊಳಿಸುತ್ತದೆ. ಆ ರೀತಿ ಕಲಾಪ್ರದರ್ಶನ ಮಾಡುತ್ತಿದ್ದ 'ಏಕನಾಥ'ನಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 1986ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

ಶರಣಪ್ಪ ಭೂತೇರ: ಶರಣಪ್ಪನವರು 1987ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪಡೆದ ಬೀದರ ಜಿಲ್ಲಾ ಕಲಾಕಾರರು. ಇವರು ಹುಟ್ಟಿದ್ದು ಆಂಧ್ರಪ್ರದೇಶದ ಮೊರ-ಗಿಯಲ್ಲಿ. ತಂದೆ ರಾಮಶೆಟ್ಟಿ ತಾಯಿ ಶಂಕರಮ್ಮ, ಬಡವರಾದ ಇವರು ತಮ್ಮ ಚಿಕ್ಕ ಮಗನೊಂದಿಗೆ ಬೀದರಕ್ಕೆ ವಲಸೆ ಬಂದು ಇಲ್ಲಿಯೇ ನೆಲೆಸಿದರು. ಶರಣಪ್ಪ ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಕೆಲಸಕ್ಕೆ ಸೇರಿಕೊಂಡು ದುಡಿಯ ತೊಡಗಿದರು. ಆಗ ಭಕ್ತಿಯ ಹಾಡುಗಳನ್ನು ಹಾಡತೊಡಗಿದರು. ನಂತರದಲ್ಲಿ ಈ ಹಾಡೇ ಇವರ ಉದ್ಯೋಗವಾಗಿ ತುಳಜಾಭವಾನಿಯ ಭಕ್ತನಾಗಿ ಭೂತೇರ ವೃತ್ತಿ ಆರಂಭಿಸಿದರು. ಕೈಯಲ್ಲಿ ಹಡಗಿ ಮೈಯಲ್ಲಿ ಕುಂಕುಮ, ಕೊರಳಲ್ಲಿ ಕವುಡಿಸರ, ಕಾಲಲ್ಲಿ ಕಿರುಗೆಜ್ಜೆ, ಕಟ್ಟಿಕೊಂಡು ಒಂದು ಕೈಯಲ್ಲಿ ದೀವಟಿಗೆ ಹಿಡಿದುಕೊಂಡು ಭೂತೇರಾಗಿ ನಿಂತರು.

ಭೂತೇರ ಶರಣಪ್ಪ ಜಿಲ್ಲೆಯಾದ್ಯಂತ 'ಎಲ್ಲಮ್ಮನ' ಆಟವನ್ನು ಆಡಿ ತೋರಿಸಿದರು. ಪರಶುರಾಮನ ಕಥೆಯನ್ನೊಳಗೊಂಡ ಈ ಆಟದ ಕಥೆ ವಿಚಿತ್ರವೆನಿಸಿದ್ದರೂ ಗಮನಾರ್ಹವಾಯಿತು. 'ರಾಮ ರಾಮ' ಎಂಬ ಪಲ್ಲವಿಯೊಡನೆ ಆರಂಭವಾಗಿ ಸಾಗುವ ಇಲ್ಲಿಯ ಕಥಾನಕವನ್ನು ಶರಣಪ್ಪ ಹಾಡುತ್ತಿದ್ದರೆ ಜನ ನಿಂತು ಕೇಳುತ್ತಿತ್ತು. ಇಂಥ ಈ ಕಲೆಯು ಬೆಂಗಳೂರಿನ 10ನೆಯ ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿಯೂ ಪ್ರದರ್ಶಿತವಾಯಿತು.

ಈರಮ್ಮ ಚಿನಕೇರಾ: ಜಿಲ್ಲೆಯ ಹಾಡುಗಾರಿಕೆಯಲ್ಲಿ ಪ್ರಸಿದ್ಧವಾದ ಇನ್ನೋರ್ವ ಜಾನಪದ ಕಲಾವಿದೆ ಈರಮ್ಮ. ಹುಮನಾಬಾದ ತಾಲ್ಲೂಕಿನ ಚಿನಕೇರಾ ಗ್ರಾಮದವರಾದ ಈಕೆಯು ಸೋಬಾನ ಪದಗಳನ್ನು ತುಂಬಾ ಸುಂದರವಾಗಿ ಹಾಡುತ್ತಾಳೆ. ತಾಯಿ ನಾಗಮ್ಮನಿಂದಲೇ ಹಾಡು ಕಲಿತ ಈರಮ್ಮ ಮುಂದೆ ಈ ಜಿಲ್ಲೆಯ ಶ್ರೇಷ್ಠ ಕಲಾಕಾರರಾಗಿ ಬೆಳೆದರು. ಎರಡು ಮಕ್ಕಳ ತಾಯಿಯಾದ ಈರಮ್ಮಳ ಗಂಡ ಅನಾರೋಗ್ಯದಿಂದ ತೀರಿಹೋದಾಗ ತುಂಬಾ ಬಡತನ ಕಾಡುತ್ತಿತ್ತು. ತಮ್ಮ ಹಾಡುಗಾರಿಕೆಯಿಂದಲೇ ಅದನ್ನು ಎದುರಿಸಿ ನಿಂತಳು.

ಮದುವೆ ಹಾಡು, ಭಜನೆ ಪದ ಹಾಗೂ ಸೋಬಾನ ಹಾಡುಗಳನ್ನು ಹಾಡುವುದರಲ್ಲಿ ಅದ್ವಿತೀಯರೆನಿಸಿದ್ದ ಈರಮ್ಮ ದೂರದರ್ಶನದಲ್ಲಿಯೂ ಹಾಡಿ ಸೈ ಎನಿಸಿಕೊಂಡಳು. ಇವಳ ಹಾಡುಗಾರಿಕೆ ಗುರುತಿಸಿದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1988ರಲ್ಲಿ ಇವರಿಗೆ ರಾಜ್ಯಪ್ರಶಸ್ತಿ ಇತ್ತು ಗೌರವಿಸಿತು.

ಗುಂಡಪ್ಪ ಬೆಮಳಗಿ: ಗುಂಡಪ್ಪನವರು ಬೀದರ ಜಿಲ್ಲೆಯ ತಾದಲಾಪುರ ಗ್ರಾಮದವರು. ದೈವಭಕ್ತರಾಗಿದ್ದ ಇವರು ದಿನಾಲು ಪೂಜಾ-ಪಾಠಗಳನ್ನು ಮಾಡುತ್ತಾರೆ. ಆ ಪೂಜೆಯೊಂದಿಗೆ ಸುಶ್ರಾವ್ಯವಾಗಿ ಹಾಡುವುದನ್ನು ಕಲಿತರು. ತಾದಲಾಪುರದ ದತ್ತಮಹಾರಾಜರು ಇವರ ಆರಾಧ್ಯ ದೈವ. ಪ್ರತಿ ಗುರುವಾರ ಹಾಗೂ ಹುಣ್ಣಿಮೆ ಅಮವಾಸ್ಯೆಗಳಂದು ಈ ಮಠದಲ್ಲಿ ಭಜನೆ ಹಾಡುಗಳನ್ನು ಹಾಡುತ್ತಿದ್ದರು. ಜಿಲ್ಲೆಯ ಸಮಗ್ರ ಇತಿಹಾಸ ಬಲ್ಲವರಾದ ಇವರು ಬೀದರ ಜಿಲ್ಲೆಯಾದ್ಯಂತ, ಜಹಿರಾಬಾದ, ಉದಗಿರಿ ಮುಂತಾದ ಕಡೆಗಳಲ್ಲಿ ತಿರುಗಾಡಿ ತಮ್ಮ ಹಾಡುಗಾರಿಕೆಯನ್ನು ಪ್ರದರ್ಶಿಸಿದ್ದಾರೆ. ಇವರ ಈ ಕಲಾವಂತಿ-ಕೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1989ರ ರಾಜ್ಯ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು.

ರತ್ನಮ್ಮ ತಂಬಾಕಿ: ಶ್ರೀಮತಿ ರತ್ನಮ್ಮ ಸೋಬಾನೆಯ ಹಾಡುಗಾರ್ತಿ. ಬೀದರ ಜಿಲ್ಲೆಯ ಈ ಕಲಾವಿದೆ ಹುಟ್ಟು ಕುರುಡಿ. ಅಂಗವಿಕಲತೆಯನ್ನು ಎಂದೂ ಲಕ್ಷಕ್ಕೆ ತಂದುಕೊಳ್ಳದ ಈ ಕಲಾಗಾರ್ತಿ ಸದಾ ಹಾಡನ್ನು ಹಾಡಲು ಕಲಿತಳು. ಜನಪದ ಸಾಹಿತ್ಯ ಬಾಯಿಂದ ಬಾಯಿಗೆ ಕಿವಿಯ ಮೂಲಕ ಹರಿದು ಬಂದದ್ದು ಎಂಬುದಕ್ಕೆ ಸಾಕ್ಷಿಯಂತೆ ಈ ಕುರುಡು ಕಲಾವಿದೆ ಕಂಡು ಬರುತ್ತಾಳೆ. ಇವಳು ಮದುವೆ, ಮುಂಜಿ, ತೊಟ್ಟಿಲು ಕಾರ್ಯಕ್ರಮ ಹಾಗೂ ನೋವು ನಲಿವಿನ ಪ್ರಸಂಗದಲ್ಲಿ ತಮ್ಮ ಹಾಡುಗಳನ್ನು ಹಾಡಿ ಜನರನ್ನು ರಂಜಿಸಿದರು.

1990ರಲ್ಲಿ ಅವರಿಗೆ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಸಿಕ್ಕಾಗ ಅವಳು 62 ವರ್ಷದ ಹಾಡುಗಾರ್ತಿ, ಕಣ್ಣು ಇಲ್ಲದಿದ್ದರೂ ಬಾಳನ್ನು ಕಳೆದುಕೊಂಡವಳಲ್ಲ. ಬದುಕಿನಲ್ಲಿ ಸದಾ ಆಸಕ್ತಿಯನ್ನುಳಿಸಿಕೊಂಡ ಹೃದಯವಂತೆ. ಹಾಡುಗಳನ್ನೇ ತನ್ನ ಬದುಕಿನ ಊರು ಗೋಲಾಗಿಸಿಕೊಂಡವರು. ಭಜನೆ ಮೇಳದಲ್ಲಿಯೂ ಇವರ ಪಾತ್ರ ಹಿರಿದಾಗಿತ್ತು. ಬೀದರ ಜಿಲ್ಲೆಯ ತುಂಬ ಹೆಸರುವಾಸಿಯಾಗಿದ್ದ ರತ್ನಮ್ಮನ ಹಲವು ಶಿಷ್ಯೆಯರು ಈಗಲೂ ಸುಂದರವಾಗಿ ಹಾಡುತ್ತಾರೆ.

ಅಬ್ರಾಹಿಮ್ ಸುಂದ್ಯಾಳ: ಚಿಕ್ಕಂದಿನಿಂದಲೇ ಹಾಡುವುದರಲ್ಲಿ ಆಸಕ್ತಿ ಹೊಂದಿದ್ದ ಅಬ್ರಾಹಿಮ್ ಔರಾದ ತಾಲ್ಲೂಕಿನ ಸುಂದ್ಯಾಳದವನು. ಆರಂಭದಲ್ಲಿ ಸಿನಿಮಾ ಹಾಡುಗಳನ್ನು ಚೆನ್ನಾಗಿ ಹಾಡಲು ಕಲಿತ ಅಬ್ರಾಹಿಮ್ ನಂತರದಲ್ಲಿ ಜನಪದ ಹಾಡುಗಳಲ್ಲಿ

ಆಸಕ್ತಿ ಹೊಂದಿದರು. ತುಂಬಾ ಸುಂದರವಾಗಿ ಜನಪದ ಹಾಡುಗಳನ್ನು ಹಾಡುತ್ತ, ಹಾಡುತ್ತ ಎಲೆಯಿಂದ ಸ್ವರ ಹೊರಡಿಸಿ, ಅದರಿಂದಲೇ ಹಾಡುಗಳನ್ನು ಹಾಡುವ ರೀತಿ ಜನರನ್ನು ಮೆಚ್ಚಿಸಿತು. ಈ ಕಲೆಯಲ್ಲಿ ಪರಿಣತಿ ಹೊಂದಿದ ಅಬ್ರಾಹಿಮ್‌ರು ಆ ಮೂಲಕ ಅನೇಕ ಕಾರ್ಯಕ್ರಮಗಳನ್ನು ನೀಡಿದರು. ಈ ಕಲೆ ಹಾಗೂ ಕಲಾವಿದನನ್ನು ಗುರುತಿಸಿದ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 1991 ಪ್ರಶಸ್ತಿಯನ್ನು ನೀಡಿ ಇವರನ್ನು ಗೌರವಿಸಿತು.

ಶ್ರೀಮತಿ ರತ್ನಮ್ಮ ಗಾದ್ಗಿ: ರತ್ನಮ್ಮ ಅವರು ಬೀದರ ಜಿಲ್ಲೆಯ ಇನ್ನೋರ್ವ ಹೆಸರಾಂತ ಕಲಾಕಾರ್ತಿ. ಬೀದರ ಜಿಲ್ಲೆ ಹಲವಾರು ಜನಪದ ಕಲೆಗಳ ಹುಲ್ಲುಗಾವಲು. ಇಲ್ಲಿನ ವಿಶಿಷ್ಟ ಕಲೆಗಳಾದ ಕೋಲಾಟ, ಬುಲಾಯಿ ಹಾಡು, ಗೀಗೀ ಪದ, ಸಾಂಪ್ರದಾಯಿಕ ಹಾಡುಗಳ ರಾಶಿ ಇದೆ. ರತ್ನಮ್ಮ ಗಾದ್ಗಿ ಹೆಣ್ಣುಮಕ್ಕಳ ಸಂಪ್ರದಾಯಕ್ಕೆ ಸೇರಿದ ಬುಲಾಯಿ ಪದ ಹಾಗೂ ಗೀಗೀ ಪದಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲರು. ಅವಳೊಂದು ಹಾಡಿನ ಭಂಡಾರ ಹೊಂದಿರುವ ಕಲಾವಿದೆ. ಅವಳು ಸರಸ್ವತಿ ಗದ್ದೆಮ್ಮ, ಪದ್ಮಾವತಿ, ಪಾಪಮ್ಮ, ಚಂದ್ರಮ್ಮರಂತಹ ಶಿಷ್ಯೆಯರನ್ನು ತಯಾರಿಸಿದ್ದಾರೆ. 1992ರ ಕರ್ನಾಟಕ ರಾಜ್ಯ ಜನಪದ ಅಕಾಡೆಮಿ ಪ್ರಶಸ್ತಿ ಇವರಿಗೆ ದೊರೆಯಿತು.

ಕಾಶಮ್ಮ ಮರ್ಖಲೆ: 1993ರಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ರಾಜ್ಯಪ್ರಶಸ್ತಿಯನ್ನು ಪಡೆದ ಕಾಶಮ್ಮ ಬೀದರ ಜಿಲ್ಲೆಯ ಅಪರೂಪದ ಜಾನಪದ ಕಲಾವಿದೆ. ಜಿಲ್ಲೆಯ ಹಿಂದುಳಿದ ಗ್ರಾಮವಾದ ಮರ್ಖಲೆಯಲ್ಲಿ ಜನಿಸಿದರು. ಜೀವನದುದ್ದಕ್ಕೂ ಬಡತನವನ್ನು ಅನುಭವಿಸಿದರು. ಕೂಲಿನಾಲಿ ಮಾಡಿ ಹೊಟ್ಟೆ ಹೊರೆಯುತ್ತಿದ್ದ ಹೊತ್ತಿನಲ್ಲೂ ಜನಪದ ಹಾಡುಗಳಿಗೆ ಮನಸೋತರು. ಕುಟ್ಟುವ, ಬೀಸುವ, ಕಸ ತೆಗೆಯುವ ಹಾಡುಗಳೆಲ್ಲ ಇವಳ ನಾಲಗೆಯ ಮೇಲೆ ಸದಾ ಕುಣಿದಾಡುತ್ತಿದ್ದವು. ಇತರ ಜನಪದ ಹಾಡುಗಳಾದ ತೊಟ್ಟಿಲ ಹಾಡು, ಸೋಬಾನ ಪದ, ಭಜನೆ ಹಾಡು ಹಾಗೂ ಹಂತಿ ಪದಗಳನ್ನು ಹಾಡುವುದರಲ್ಲಿಯೂ ಅವಳು ನಿಷ್ಣಾತಳು. ಅನೇಕ ಶಿಷ್ಯರಿಗೆ ತಮ್ಮ ಹಾಡುಗಳನ್ನು ಕಲಿಸಿದ ಕೀರ್ತಿಯೂ ಈ ಕಲಾವಿದೆಗಿದೆ.

ನಾಗಮ್ಮ ಗುಂಡಯ್ಯಸ್ವಾಮಿ: ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಆಳಂದಿ ಗ್ರಾಮದ ಈ ಕಲಾವಿದೆ ಸಂಪ್ರದಾಯದ ಹಾಡುಗಾರ್ತಿ. ತವರು ಮನೆಯಾದ ಹಳ್ಳಿಖೇಡ (ಬಿ)ಯಲ್ಲಿಯೇ ಈ ಹಾಡುಗಳನ್ನು ಕಲಿತಳು. ಅದರಲ್ಲೂ ತೊಟ್ಟಿಲು ಹಾಡು, ಸೋಬಾನೆ ಪದ ಹಾಗೂ ಮದುವೆ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವಳು. ಅವಳಿಗೆ 1994ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿತು.

ಸಂಗಪ್ಪ ಕರಡ್ಯಾಳ: ಸಂಗಪ್ಪ ಬೀದರ ಜಿಲ್ಲೆಯ ಅಪರೂಪದ ಕಲಾವಿದ. ಭಾಲ್ಕಿ ತಾಲ್ಲೂಕಿನ ಕರಡ್ಯಾಳ ಈತನ ಊರು. ಜಾನಪದ ಹಾಡುಗಳನ್ನು ಹಾಡಿಕೊಳ್ಳುತ್ತ ದುಡಿಯುತ್ತಿದ್ದ ಈತನು ಇಲ್ಲಿಯ ಜನಪದ ಹಾಡುಗಳ ಕಣಜವಾಗಿದ್ದಾನೆ. ತತ್ವಪದ, ಬುಲಾಯಿ ಹಾಡು, ಜೋಗುಳ ಪದ, ಭಜನೆಹಾಡು, ಹಂತಿ ಪದ, ಲಾವಣಿ ಹಾಗೂ ಸೋಬಾನೆ ಪದಗಳನ್ನು ಸೊಗಸಾಗಿ ಹಾಡುವ ವ್ಯಕ್ತಿ. ಆಕಾಶವಾಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಾಹಿತ್ಯ ಪರಿಷತ್ತು ಮೊದಲಾದ ಕನ್ನಡ ಸಂಘ ಸಂಸ್ಥೆಗಳ ಆಶ್ರಯದಲ್ಲಿ ನಡೆದ ವಿವಿಧ ಕಾರ್ಯಕ್ರಮಗಳಲ್ಲಿ ಹಾಡಿ ಯಶಸ್ವಿಯಾಗಿದ್ದಾರೆ. ಜಾನಪದ ಹಾಡುಗಳ ಅದ್ಭುತವಾದ ಸವಿಯನ್ನು ಜನರಿಗೆ ಹಂಚುತ್ತ, ತಮ್ಮ ಜೀವನ ಸಾಗಿಸಿದ ಅವರಿಗೆ ಹಾಡುಗಾರಿಕೆ ಒಂದು ಬಳುವಳಿಯಂತಿದೆ. ಇವರ ಈ ಜನಪ್ರಿಯತೆ ಹಾಗೂ ಹಾಡುಗಾರಿಕೆಯ ಕಲೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಅಕಾಡೆಮಿ ಅವರಿಗೆ 1995ರ ರಾಜ್ಯಪ್ರಶಸ್ತಿ ನೀಡಿ ಸನ್ಮಾನಿಸಿತು. ಒಕ್ಕಲುತನದ ಮನೆಯ ವಾತಾವರಣದಿಂದ ಬಂದ ಸಂಗಪ್ಪನವರು ಹಳ್ಳಿಯ ಜನರ ಹತ್ತಾರು ಸಮಸ್ಯೆಗಳನ್ನು ಕಣ್ಣಾರೆ ಕಂಡಿದ್ದರು ಹಾಗೂ ಅನುಭವಿಸಿದ್ದರು. ಸ್ವತಃ ಕವಿಯಾದ ಅವರು ಬಡತನ, ಬರಗಾಲ, ಜನಸಂಖ್ಯೆಯಂತಹ ಸಮಸ್ಯೆಗಳನ್ನು ಕುರಿತು ಹಾಡು ಬರೆದು, ಹಾಡುತ್ತಿದ್ದರು. ಇಂತಹ ಜನಪದ ಗಾಯಕರಿಂದಲೇ ಜಾನಪದ ಹಾಡುಗಳ ಕ್ಷೇತ್ರ ಅತ್ಯಂತ ಶ್ರೀಮಂತವಾಗಿದೆ ಎನ್ನಬಹುದು.

ನೂರೊಂದಪ್ಪ ಹೆರೂರ: ಜನಪದ ಕಲೆಗಳಲ್ಲಿ ಪ್ರಮುಖವಾಗಿದ್ದ ಬಯಲಾಟದ ಹವ್ಯಾಸವನ್ನು ನೂರೊಂದಪ್ಪ ನವರು ಚಿಕ್ಕವಯಸ್ಸಿನಲ್ಲಿಯೇ ರೂಢಿಸಿಕೊಂಡಿದ್ದರು. ಈ ಆಟಗಳಲ್ಲಿಯ ಗಣಪತಿ, ಸಾರಥಿ, ಮತ್ತಿತರ ಪಾತ್ರ ಮಾಡಿದ್ದಲ್ಲದೆ, ಹಿಮ್ಮೇಳಕ್ಕೆ ಸೇರಿಕೊಂಡು ಹಾಡಿದ್ದು ಕೂಡ ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಬಯಲಾಟದ ಪಾತ್ರಗಳೊಂದಿಗೆ ಏಕತಾರಿಪದ ಹಾಡುವುದರಲ್ಲೂ ಇವರು ನಿಸ್ಸೀಮರು. ಜಿಲ್ಲೆಯ ಪ್ರಸಿದ್ಧಿ ಕಲಾಕಾರರಾಗಿದ್ದ ಇವರು ತಮ್ಮ ವೃದ್ಧಾಪ್ಯ ಜೀವನವನ್ನು ಕಲಬುರ್ಗಿಯಲ್ಲಿ ಕಳೆದರು.

ಕಾಶೀನಾಥ ಗವಾಯಿ: ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಹಿಲಾಲಪುರದ ಈ ಕಲಾವಿದರು ಅಂಧರಾಗಿದ್ದರು. 1919ರಲ್ಲಿ ಹುಟ್ಟಿದ ಪಂಚಶೀಲ ಗವಾಯಿಗಳು ಸಿಡುಬುರೋಗಕ್ಕೆ ತುತ್ತಾಗಿ ತಮ್ಮ ಎರಡೂ ಕಣ್ಣು ಕಳೆದುಕೊಂಡರು. ಆದರೆ ತಮ್ಮ ಸಂಗೀತ–ಸಾಹಿತ್ಯವನ್ನು ಜನರ ಮಧ್ಯೆ ಹಾಡುತ್ತ, ಅದರ ಪ್ರಚಾರಮಾಡುತ್ತ ಜನಮನ ಗೆದ್ದರು. ತಮ್ಮ 12ನೆಯ ವಯಸ್ಸಿನಿಂದ ಸಂಗೀತಾಭ್ಯಾಸ ಮಾಡಿದ ಇವರು ಹಾರ್ಮೋನಿಯಂ, ಕೊಳಲು, ತಬಲಾ ನುಡಿಸುವುದನ್ನು ಕಲಿತರು. ತತ್ವಪದ, ಭಜನೆ ಹಾಡು, ಇತರ ಜನಪದ ಗೀತೆಗಳನ್ನು ಹಾಡುತ್ತ, ಸ್ವತಃ ಸಾಹಿತ್ಯ ರಚಿಸುತ್ತ ಸಾಗಿದರು.

ಬುದ್ಧ, ಬಸವ, ಅಂಬೇಡ್ಕರ ಅವರ ಚಿಂತನೆಗಳನ್ನು ಜನಪದ ಶೈಲಿಯಲ್ಲಿ ರಚಿಸಿ, ಹಾಡಿ ಅವುಗಳನ್ನು ಜನಪ್ರಿಯ ಗೊಳಿಸಿದ್ದಲ್ಲದೇ ಅವುಗಳನ್ನು ತಮ್ಮ ಶಿಷ್ಯ ಬಳಗಕ್ಕೆ ಕಲಿಸಿದರು. ಗಡಿನಾಡ ಚಳವಳಿ, ರೈತ ಚಳವಳಿ ಮುಂತಾದ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಡಾ. ಬಾಬಾಸಾಹೇಬ ಅಂಬೇಡ್ಕರ ರಾಷ್ಟ್ರೀಯ ಪ್ರಶಸ್ತಿ ಲಭಿಸಿವೆ. ಕಾಶಿನಾಥ ಕಾಳಿದಾಸ ಹಿಲಾಲಪುರ ಎಂಬ ಹುಟ್ಟು ಹೆಸರುಳ್ಳ ಇವರನ್ನು ಜನತೆ ಅಭಿಮಾನದಿಂದ ಪಂಚಶೀಲ ಗವಾಯಿಗಳೆಂದೇ ಕರೆಯುತ್ತಾರೆ.

ಘಾಳೆ ಸಿದ್ರಾಮಪ್ಪ: ಸಿದ್ರಾಮಪ್ಪ ಬೀದರ ಜಿಲ್ಲೆಯ ಕಪಲಾಪುರ ಗ್ರಾಮದವನು. ಬೀದರ ಸಂಸ್ಕೃತಿಯ ಜನಪದ ಪರಂಪರೆಯಲ್ಲಿ ಹೆಸರುವಾಸಿಯಾದ ಕಲಾವಿದನೀತ, ಹುಟ್ಟಿನಿಂದಲೇ ಹಳ್ಳಿಯಲ್ಲಿ ಬೆಳೆದ ಈತನು ತನ್ನ ಸುತ್ತಮುತ್ತಲ ಪರಿಸರದಲ್ಲಿ ಕೇಳಿಬರುತ್ತಿದ್ದ ಹಾಡುಗಳನ್ನು ಕಲಿತು, ತಾನು ಹಾಡುತ್ತ ನಂತರದಲ್ಲಿ ಜನಪ್ರಿಯತೆ ಗಳಿಸಿದ ಹಾಡುಗಾರ, ಇಲ್ಲಿ ಜನಪದ ಹಾಡುಗಳಾದ ಬುಲಾಯಿ ಪದ, ಹಂತಿ ಹಾಡು, ತತ್ವಪದ, ಲಾವಣಿಗಳನ್ನು ಜನ ಮೆಚ್ಚುವಂತೆ ಹಾಡುತ್ತಿದ್ದ ಸಿದ್ರಾಮಪ್ಪನವರು ಸಾಹಿತಿಯೂ ಆಗಿದ್ದರು ವಚನ ಸಾಹಿತ್ಯ ಕುರಿತು ಅವರು ಕೆಲವು ಕೃತಿಗಳನ್ನು ಪ್ರಕಟಿಸಿದ್ದಾರೆ. ಸಾರ್ವಜನಿಕ ಸೇವೆಯಲ್ಲಿ ಆಸಕ್ತಿ ಮೂಡಿಸಿಕೊಂಡಿದ್ದ ಇವರು ಜಾನಪದ ಸಾಹಿತ್ಯದ ಅಭಿವ್ಯಕ್ತಿಯ ಮೂಲಕ ಸಾಮಾಜಿಕ ಜಾಗೃತಿಯನ್ನುಂಟು ಮಾಡಿದರು. ಜನಪದ ಸಾಹಿತ್ಯದ ನಿರಂತರತೆಗಾಗಿ ಬಹು ಶ್ರಮಿಸಿದ ಇವರ ಕಲಾವಂತಿಕೆಗೆ ರಾಜ್ಯ ಅಕಾಡೆಮಿ ಪ್ರಶಸ್ತಿಯೂ ದೊರಕಿತು.

ಗಂಗಮ್ಮ ಮಂಠಾಳಕರ: ಕಲಾವಿದೆ. ಮೂಲತಃ ಮಂಠಾಳದವರಾದ ಇವಳು ಹುಮನಾಬಾದಕ್ಕೆ ಬಂದು ಖಾನಾವಳಿ ನಡೆಸುತ್ತ ಉಪಜೀವನ ಸಾಗಿಸಿದರು. ಸೊಗಸಾದ ಅಡಿಗೆ ತಯಾರಿಸುವ ಗಂಗಮ್ಮ ಒಳ್ಳೆಯ ಹಾಡುಗಾರ್ತಿಯೂ ಆಗಿದ್ದಾಳೆ. ಬೀದರ ಭಾಗದ ಜನಪ್ರಿಯ ಸಿಹಿಯೂಟವಾದ 'ಹುಗ್ಗಿ' ತಯಾರಿಸುವುದರಲ್ಲಿ ಅತ್ಯಂತ ನಿಪುಣೆ. ಗಂಗಮ್ಮ ತತ್ವಪದ, ಭಜನೆ ಪದ, ಬೀಸುವ ಹಾಡು, ಶೀಗಿ ಪದಗಳನ್ನು ಹಾಡತೊಡಗಿದರೆ ಜನ ಕುಳಿತು ಕೇಳುತ್ತಿತ್ತು. ಇವಳ ಪಾಕಶಾಸ್ತ್ರಜ್ಞೆ ಹಾಗೂ ಜನಪದ ಗಾಯಿಕೆಯ ಕಲೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅವಳಿಗೆ 2002ರ ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸಿದೆ.

ನಬಿಲಾಲ: ಬಸವಕಲ್ಯಾಣ ತಾಲ್ಲೂಕಿನ ಹಿಪ್ಪರಗಾ ಭಾಗದ ಕಲಾವಿದ. ಈ ನಬಿಲಾಲ ಉರ್ದು ಭಾಷಿಕನೊಬ್ಬನ ಕಲಾಸೇವೆಯಿಂದಾಗಿ ಬಸವನ ಬಾಗೇವಾಡಿ ಪ್ರಾಂತ್ಯದ ಅಪಾರ ಜನಮನ ಗೆದ್ದಿರುವ ಈ ಜನಪದ ಕಲಾವಿದ ಅನಕ್ಷರಸ್ಥ, ತಮ್ಮ 65 ವರ್ಷಗಳ ಇಡೀ ಬದುಕಿನಲ್ಲಿ ಜನಪದ ಸಂಗೀತದೊಂದಿಗೆ ಕಳೆದಿರುವುದು ವಿಶೇಷ, ಕೋಲಾಟ, ದಪ್ಪಿನಾಟ, ಮೋಹರಂ ಪದಗಳನ್ನು ಹಾಡುವ ಈ ಕಲೆ ನಬಿಲಾಲರಿಗೆ ಚಿಕ್ಕವಯಸ್ಸಿನಿಂದಲೇ ಕರಗತವಾಯಿತು. ಆಮೇಲೆ ಹರದೇಶಿ-ನಾಗೇಶಿ ಪದಕಟ್ಟಿ ಹಾಡುವ ಮೂಲಕ ಜನಮನ ಸೆಳೆದರು. ಇವರ ಹಾಡಿನ ಧಾಟಿ, ಚುಟುಕು ಸಂಭಾಷಣೆಗಳಿಂದ ಪ್ರೇರೇಪಿತರಾದ, ಕುಟುಂಬ ಕಲ್ಯಾಣ ಇಲಾಖೆ, ಕುಟುಂಬ ಯೋಜನೆ ಕುರಿತ ಹಾಡುಗಳನ್ನು ಸಭೆ, ಸಮಾರಂಭಗಳಲ್ಲಿ ಹಾಡಿಸುವ ಮೂಲಕ ಇವರ ಕಲೆಗೆ ಪ್ರೋತ್ಸಾಹ ನೀಡಿದರು. ಮುಂದೆ ಸಾಕ್ಷರತಾ ಮಿತ್ರ ಯೋಜನೆಯಲ್ಲಿ ಹಾಡಿದ ನಬಿಲಾಲರು ಜನಪ್ರಿಯ ಕಲಾವಿದರಾದರು. ರಾಜ್ಯಸಾಹಿತ್ಯ ಸಮ್ಮೇಳನ, ಯುವಜನ ಮೇಳ, ಜನಪದ ಕಲಾಮೇಳಗಳಲ್ಲಿ ಸೊಗಸಾಗಿ ಹಾಡಿದರು. ತನಗಾಗಿ ಏನನ್ನೂ ಮಾಡಿಕೊಳ್ಳದ ಈ ಇಳಿವಯಸ್ಸಿನ ಹಾಡುಹಕ್ಕಿಗೆ 2004ರ ರಾಜ್ಯ ಪ್ರಶಸ್ತಿ ದೊರಕಿದೆ.

ಗಂಗಾಧರಯ್ಯಸ್ವಾಮಿ ಚಿಕ್ಕಮಠ: ಹುಮನಾಬಾದ ತಾಲ್ಲೂಕಿನ ಹಳ್ಳಿಖೇಡ (ಕೆ) ಗ್ರಾಮದ ಈ ಜನಪದ ಕಲಾವಿದ ಭಜನೆ ಪದಗಳ ಹಾಡುಗಾರ. ಶ್ರೀ ಶಿವಲಿಂಗಯ್ಯ ಹಾಗೂ ಶ್ರೀಮತಿ ನಾಗಮ್ಮ ದಂಪತಿಗಳ ಮಗನಾದ ಇವರು ತಂದೆಯಿಂದಲೇ ಭಜನೆ ಪದ, ತತ್ವಪದಗಳನ್ನು ಹಾಡಲು ಕಲಿತರು. ತಮ್ಮ ಬಾಲ್ಯದಲ್ಲಿಯೇ ಭಜನೆ ಪದಗಳ ಗುಂಗಿಗೆ ಮೊರೆಹೋಗಿ ಆ ಕಾಲದ ಪ್ರಸಿದ್ಧ ತತ್ವಪದಕಾರರ ಜೊತೆ ತಿರುಗಾಡಿ ಈ ಕಲೆಯನ್ನು ರೂಢಿಸಿಕೊಂಡರು. ಶಿಶುನಾಳ ಶರೀಫ, ಕಡಕೋಳ ಮಡಿವಾಳಪ್ಪ, ಚಳ್ಳಗುರಕಿ ಎರಿತಾತ, ನಿಜಗುಣ ಶಿವಯೋಗಿ ಹೀಗೆ ಮೊದಲಾದ ತತ್ವಪದಕಾರರ ಹಾಡುಗಳನ್ನು ಇವರು ಲೀಲಾಜಾಲವಾಗಿ ಹಾಡುತ್ತಾರೆ. ಇವರ ಈ ಕಲಾಸೇವೆಯನ್ನು ಅರಿತ ಕರ್ನಾಟಕ ಜಾನಪದ ಅಕಾಡೆಮಿ 2005ರ ರಾಜ್ಯಪ್ರಶಸ್ತಿ ನೀಡಿ ಗೌರವಿಸುವುದರ ಮೂಲಕ ಭಜನೆ ಪದ ಪ್ರಸಾರಕ್ಕೆ ಮಾನ್ಯತೆ ನೀಡಿದೆ.

ಶ್ರೀ ಗುರುನಾಥ ಕೋಟೆ: ಇವರು ಬೀದರ ಜಿಲ್ಲೆಯ ಔರಾದ ತಾಲ್ಲೂಕಿನ ಜೀರಗಾ ಗ್ರಾಮದವರು. ಏಳನೆಯ ಈಯತ್ತೆ ಪಾಸು ಮಾಡಿರುವ ಗುರುನಾಥರು. ಪೌರಾಣಿಕ ನಾಟಕ, ದೊಡ್ಡಾಟದ ಬಹುದೊಡ್ಡ ಕಲಾವಿದರು. ಒಕ್ಕಲುತನ ಮಾಡಿಕೊಂಡು ಶಾಲಾ ಶಿಕ್ಷಕರಾಗಿಯೂ ಸೇವೆ ಸಲ್ಲಿಸಿ ಅನೇಕ ವಿದ್ಯಾರ್ಥಿಗಳನ್ನು ಬೆಳೆಸಿದ್ದಾರೆ. 1936ರಲ್ಲಿ ಜನಿಸಿದ ಇವರ ತಂದೆ ಉಂಗರಶೆಟ್ಟಿ ತಾಯಿ ರತ್ನಮ್ಮ, ತಮ್ಮ 16ನೆಯ ವಯಸ್ಸಿನಲ್ಲಿ ದೊಡ್ಡಾಟಕ್ಕೆ ಪ್ರವೇಶ ಮಾಡಿದರು.

ಪೌರಾಣಿಕ ನಾಟಕದಲ್ಲಿ ಅನೇಕ ಪಾತ್ರಗಳನ್ನು ಮಾಡಿ ಜನಮನ್ನಣೆ ಗಳಿಸಿದ ಮೇಲೆ ತಮ್ಮ ಅಭಿನಯಾನುಭವವನ್ನು ಧಾರೆಯೆರೆಯಬೇಕೆಂದು, ಬಹಳಷ್ಟು ನಾಟಕಗಳ ನಿರ್ದೇಶಕರಾಗಿ ಕೆಲಸ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗುರು-ಶಿಷ್ಯ ಪರಂಪರೆ ಯೋಜನೆಯಡಿಯಲ್ಲಿ ದೊಡ್ಡಾಟ ಕಲಿಕಾ ಕೇಂದ್ರಕ್ಕೆ ಗುರುಗಳಾಗಿ ತರಬೇತಿ ನೀಡಿದ್ದಾರೆ. ಸುಗ್ಗಿ ಯೋಜನೆಯಡಿ ದೊಡ್ಡಾಟ ಪ್ರದರ್ಶನ ಮಾಡಿದ್ದಾರೆ. ನಂತರ 'ಶಿವಲಿಂಗೇಶ್ವರ ನಾಟಕ ಸಂಘ(ರಿ)ವನ್ನು ಕಟ್ಟಿಕೊಂಡು ಸತತವಾಗಿ ಯುವಕರಿಗೆ ದೊಡ್ಡಾಟ ತರಬೇತಿ ನೀಡಿ ಪ್ರದರ್ಶನವೇರ್ಪಡಿಸಿದ್ದಾರೆ. ಇವರಿಗೆ ಹಲವಾರು ಸಂಘ ಸಂಸ್ಥೆಗಳ ಸನ್ಮಾನ ದೊರಕಿದೆ. 2006ರಲ್ಲಿ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ.

ಗೌರಮ್ಮಜ್ಜಿ ಕಾಡಾದಿ: ತನ್ನ 80ರ ಇಳಿವಯಸ್ಸಿನಲ್ಲಿ ಕುಗ್ಗದ ಉತ್ಸಾಹದ ಗೌರಮ್ಮಜ್ಜಿ ಬೀದರ ಜಿಲ್ಲೆಯ ಮಹಾನ್ ಕಲಾವಿದೆ. ಜಿಲ್ಲೆಯ ಹುಲುಸೂರ ಗ್ರಾಮದವರಾದ ಇವರು ಕಾಡಾದಿ ಮನೆತನದವರು. ತಮ್ಮ ಸುಮಧುರ ಕಂಠದಿಂದ ತತ್ವಪದಗಳು ಮತ್ತು ವಚನಗಳನ್ನು ಹಾಡುವ ಮೂಲಕ ಜನಜಾಗೃತಿ ತರುವುದರಲ್ಲೇ ನಿಜಜೀವನ ಶೈಲಿಯನ್ನು ಪರಿಚಯಿಸಿದ ಕೀರ್ತಿ ಈ ಹಾಡುಗಾರ್ತಿಯದು.

ಅವಸಾನದ ಅಂಚಿನಲ್ಲಿರುವ ಜಿಲ್ಲೆಯ ಜಾನಪದ ಸಾಹಿತ್ಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಇವರು ಬಹಳಷ್ಟು ಶ್ರಮಸಿದ್ದಾರೆ. ನೂರಾರು ತತ್ವಪದಗಳು ಸೇರಿದ 'ಕಾಡಾದಿ ಗೌರವ್ವ

ಹಾಡಿದ ಹಾಡುಗಳು' ಎಂಬ ಕೃತಿಯನ್ನು ಸಹ ಇವರು ಹೊರತಂದಿದ್ದಾರೆ. ಸೋಬಾನೆ ಹಾಡುಗಳು, ತೊಟ್ಟಿಲ ಹಾಡು, ಬುಲಾಯಿ ಹಾಡು, ಕೋಲಾಟ ಹಾಗೂ ಸಂತರ, ಶರಣರ ತತ್ವಪದಗಳನ್ನು ನಿರಾಳವಾಗಿ ಹಾಡುತ್ತಾರೆ. ಅವರ ಹಾಡುಗಾರಿಕೆ ಸುತ್ತ-ಮುತ್ತಲಿನ ಊರುಗಳಲ್ಲೆಲ್ಲ ಚಿರಪರಿಚಿತವಾಗಿದೆ.

ಗೌರಮ್ಮ ಕಾಡಾದಿ ಅವರ ಸಾಧನೆಗಾಗಿ ಹುಲುಸೂರ್ ಗುರು ಬಸವೇಶ್ವರ ಸಂಸ್ಥಾನಮಠ, ಭಾಲ್ಕಿ ಹಿರೇಮಠಗಳು ಪ್ರಶಸ್ತಿ ನೀಡಿ ಗೌರವಿಸಿವೆ. ಗೌರಮ್ಮಜ್ಜಿಯ ಕಲಾ ಶ್ರೀಮಂತಿಕೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಅಕಾಡೆಮಿ ಅವರಿಗೆ 2008ನೆಯ ಸಾಲಿನ ರಾಜ್ಯ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಕೂಡಲ ಸಂಗಮದಲ್ಲಿ ಈ ಪ್ರಶಸ್ತಿಯನ್ನು ಸ್ವೀಕರಿಸಿದ ಖ್ಯಾತಿ ಗೌರಮ್ಮನವರದಾಗಿದೆ.

ಪ್ರಶಸ್ತಿ ಪಡೆದ ಕಲಾವಿದರ ಸಂಖ್ಯೆ ಇಷ್ಟಿದ್ದರೆ, ಯಾವ ರೀತಿಯ ಪ್ರಶಸ್ತಿಗಾಗಿ ಹಂಬಲಿಸದೇ ತಮ್ಮ ಜೀವನದ ಕಷ್ಟ ಸುಖಗಳಲ್ಲಿ ಸಂತೋಷವಾಗಿ ಹಾಡಿಕೊಂಡು ಜನಪದ ಸಾಹಿತ್ಯ ಸಿರಿಯನ್ನು ಸದಾ ಉಳಿಸಿಕೊಂಡು ಬಂದ ನೂರಾರು ಕಲಾವಿದರು ಈ ಬೀದರ ಜಿಲ್ಲೆಯಲ್ಲಿ ಸಿಗುತ್ತಾರೆ.

(ಎಸ್‌ಎಸ್‌ವ್ಹೆ)

ಜನಪದ ಕಲಾವಿದರು: (ರಾಯಚೂರು ಜಿಲ್ಲೆ) ಆಧುನಿಕ ಕಲಾ ಮಾಧ್ಯಮಗಳ ಅಬ್ಬರದ ನಡುವೆಯೂ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿ ಕಲಾ ರಸಿಕರನ್ನು ರಂಜಿಸುವ ಜನಪದ ಕಲೆಗಳು ಸಮೃದ್ಧವಾಗಿವೆ. ಅವುಗಳನ್ನು ನಂಬಿ ಜೀವನ ಸಾಗಿಸುತ್ತಿರುವ ಅನೇಕ ಕಲಾವಿದರು ನಾಡಿನಾದ್ಯಾಂತ ಇದ್ದಾರೆ. ಹಾಗೆಯೇ ರಾಯಚೂರು ಜಿಲ್ಲೆಯು ಇದಕ್ಕೆ ಹೊರತಾಗಿರದೆ ಅನೇಕ ಜಾನಪದ ಕಲೆಗಳ ಮತ್ತು ಕಲಾವಿದರ ನೆಲ ಬೀಡಾಗಿದೆ. ಈ ಜಿಲ್ಲೆಯ ಕಲೆಗಳಲ್ಲಿ ತೊಗಲು ಗೊಂಬೆಯಾಟ, ಬಯಲಾಟ, ಸಂಪ್ರದಾಯದ ಹಾಡುಗಳು, ಹಲಗೆ ಕುಣಿತ, ಗೊಂದಳಿ ಪದ, ಲಂಬಾಣಿ ನೃತ್ಯ, ಕಣಿ ವಾದನ ಮೊಹರಂ ಪದ ಮುಂತಾದವು ಗಮನಾರ್ಹವಾಗಿವೆ. ಇಂತಹ ಕಲೆಗಳನ್ನು ಕರಗತಮಾಡಿ-ಕೊಂಡಿರುವ ಕಲಾವಿದರೂ ಈ ಜಿಲ್ಲೆಯಲ್ಲಿ ಅಧಿಕವಾಗಿದ್ದಾರೆ.

ಫಕೀರಪ್ಪ ಎನ್: ಬಯಲಾಟ ಕಲಾವಿದ. ಮಾನವಿ ತಾಲ್ಲೂಕಿನ ಕರಡಿಗುಡ್ಡ ಗ್ರಾಮದವರು. ಜನನ 1914. ತಂದೆ ನರಸಪ್ಪ. ಚಿಕ್ಕವರಿರುವಾಗಲೇ ತಂದೆ-ತಾಯಿಯರನ್ನು ಕಳೆದುಕೊಂಡು ಬಡತನದ ಬೇಗೆ ತಾಳದೆ ತನ್ನ ತಮ್ಮಂದಿರೊಂದಿಗೆ ರಾಯಚೂರಿಗೆ ಬಂದರು. ಆರಂಭದಲ್ಲಿ ಕುಳ್ಳುಮಾರಿ ಜೀವನ ಸಾಗಿಸಿದರು. ರಾಯಚೂರಿನ ಪಕ್ಕದಲ್ಲಿರುವ ಮಲಿಯಬಾದ ಗ್ರಾಮದ ಚಂದಮ್ಮನವರೊಡನೆ ವಿವಾಹವಾದರು.

ಹನ್ನೆರಡು ವರ್ಷದ ಹುಡುಗನಿರುವಾಗಲೇ ಇವರಿಗೆ ಬಯಲಾಟ ಆಕರ್ಷಿಸಿತು. ಇವರಿಗೆ ಹೊಸಪೇಟೆಯ ನಬಿಸಾಬ ಹುಡೆದ ಬಸಣ್ಣ ಇವರಿಗೆ ದೊರೆತರು. ಆನಂತರ ಹೆಜ್ಜೆಮೇಳ ರೂಢಿಸಿಕೊಂಡು ಬಯಲಾಟ ಕಲಿಸುವ ಮಾಸ್ತರ ಆದರು. ಬದುಕಿನುದ್ದಕ್ಕೂ ಮಡುಗಟ್ಟಿನಿಂತ ಬಡತನ ನೋವು ನಿರಾಶೆ ದುಃಖಗಳನ್ನು ಬಯಲಾಟಗಳನ್ನು ಆಡಿಸುವುದರಲ್ಲೇ ಗುಣ ಪಡಿಸಿಕೊಂಡರು. ಎಪ್ಪತ್ತು ವರ್ಷಗಳ ಧೀರ್ಘ ಬದುಕಿನಲ್ಲಿ ಒಂದು ನೂರಾ ಇಪ್ಪತ್ತು ಬಯಲಾಟಗಳನ್ನು ಕಲಿಸಿ ಆಡಿಸಿದ್ದಾರೆ.

ಸಮಾಜ ಸೇವಕರಾದ ಇವರು ಗಾಂಧೀಜಿಯವರ ಅನುಯಾಯಿಗಳು. ಸ್ವಾತಂತ್ರ್ಯ ಚಳವಳಿಯಲ್ಲಿ ಕೆಲ ದಿವಸ ಜೈಲುವಾಸ ಅನುಭವಿಸಿದರು. ಇವರಿಗೆ ಕನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿದೆ (1980).

ಮಹ್ಮದ್ ಮೆಹಬೂಬ್: ಜನಪದ ಹಾಡುಗಾರರು. ರಾಯಚೂರು ಜಿಲ್ಲೆ ಲಿಂಗಸ್ಗೂರು ತಾಲ್ಲೂಕಿನ ಮುದಗಲ್ ಗ್ರಾಮದವರು. ತಂದೆ ಕರೀಂಖಾನ್. ತಾಯಿ ಹುಸೇನ್‌ಬಿ. ಹುಟ್ಟಿನಿಂದ ಮುಸ್ಲಿಂನಾದರೂ ಲಿಂಗಾಯಿತ ಗವಾಯಿಗಳ ಪ್ರಭಾವಕ್ಕೆ ಒಳಗಾಗಿದ್ದರು. ಆರಂಭದಲ್ಲಿ ಇವರಿಗೆ ಬೇಟೆಯಾಡುವುದರಲ್ಲಿಯೇ ಹೆಚ್ಚಿನ ಆಸಕ್ತಿಯಿತ್ತು. ಉರ್ದು ಶಾಲೆಗೆ ಪ್ರವೇಶ ಪಡೆದು ಆಸಕ್ತಿಯಿಲ್ಲದೆ ನಾಲ್ಕನೆಯ ತರಗತಿಯವರೆಗೆ ಅಭ್ಯಾಸ ಮಾಡಿದರು. ಗವಾಯಿ ಸಂಗನ ಬಸಪ್ಪನವರಲ್ಲಿ ಪ್ರವೇಶ ಪಡೆದು ಅಲ್ಲಿಯೇ ಸಂಗೀತ ದೀಕ್ಷೆ ಪಡೆದರು. ಮುಂದೆ ಸಂಗೀತ ಕಲಿಯುತ್ತಾ ವಚನಗಳನ್ನು ಹಾಡ ತೊಡಗಿದರು. ಕನ್ನಡ ಬಾರದ ಮೊಹ್ಮದ್ ಆರಂಭದಲ್ಲಿ ವಚನಗಳನ್ನು ಉರ್ದುವಿನಲ್ಲಿಯೇ ಬರೆದುಕೊಂಡು ಹಾಡುವುದನ್ನು ಕಲಿತರು. ಆದರೂ ಕನ್ನಡವನ್ನು ಸುಂದರವಾಗಿ ಉಚ್ಚರಿಸುವ ರೀತಿ ಬೆರಗುಗೊಳಿಸುವಂತ್ತಿತ್ತು. ಗುರು ಸಂಗನ ಬಸ್ಸಪ್ಪ ಲಿಂಗೈಕ್ಯರಾದಾಗ ಮೊಹ್ಮದ್ ಸಂಗೀತಕ್ಕೆ ಶರಣು ಹೊಡೆದು ಮತ್ತೆ ಬೇಟೆಯ ಕಡೆಗೆ ಮುಖ ತಿರುಗಿಸಿದ ಮೊಹ್ಮದ್ ಬೇಟೆಯಾಡುವುದನ್ನು ಕಲಿತಿದ್ದರೂ ಹುಟ್ಟು ಕಲಾವಿದರಾದ ಇವರು ಬಿಡುವುಸಿಕ್ಕಾಗಲೆಲ್ಲಾ ಬುಲ್ ಬುಲ್ ತರಂಗ ವಾದ್ಯದಿಂದ ತನಗೆ ಬರುವ ವಚನಗಳನ್ನು ಹಾಡುತ್ತಾ ತಿರುಗುತ್ತದ್ದರು. ಹರಮತ್‌ಬಿಯವರೊಡನೆ ವಿವಾಹವಾಯಿತು. ಇವರ ಹಾಡುಗಾರಿಕೆಯನ್ನು ಮೆಚ್ಚಿಕೊಂಡ ಹೆಂಡತಿ ಪ್ರೋತ್ಸಾಹಿಸಿ ಮತ್ತೆ ಸಂಗೀದೆಡೆಗೆ ಮೊಹಬೂಬ್‌ರ ಮನಸ್ಸನ್ನು ತಿರುಗಿಸಿದರು. ಕನ್ನಡ ಬಲ್ಲವಳಾಗಿದ್ದ ಆಕೆ ಗಂಡನಿಗೆ ಕನ್ನಡ ಕಲಿಸಿ ಮುಂದೆ ಕನ್ನಡ ಖವ್ವಾಲಿಗಾರನನ್ನಾಗಿ ಮಾಡಿದಳು.

ಇವರು ಪ್ರಾರಂಭದಲ್ಲಿ ಬುಲ್‌ಬುಲ್ ತರಂಗ ವಾದ್ಯದೊಡನೆ ಹಾಡುವುದನ್ನು ಕಲಿತು ಅದರೊಂದಿಗೆ ಸ್ವತಂತ್ರವಾಗಿ ಶರಣರ ವಚನಗಳನ್ನು ದಾಸರ ಪದಗಳನ್ನು ಖವ್ವಾಲಿ ಶೈಲಿಯಲ್ಲಿ ಸುಶ್ರಾವ್ಯವಾಗಿ ಹಾಡುವುದನ್ನು ಕಲಿತರು. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಅನೇಕ ಜನರ ಮೆಚ್ಚುಗೆ ಪಡೆದರು. ಆಕಾಶವಾಣಿಯಲ್ಲಿ ಇವರ ಹಾಡುಗಳು ಪ್ರಸಾರಗೊಂಡವು. ಇವರ ಕಲಾಸೇವೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1981ನೇ ಸಾಲಿನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಮುದ್ದಯ್ಯ ನೂಲಿ: ಬಯಲಾಟ ಕಲಾವಿದ. ದೇವದುರ್ಗ ತಾಲ್ಲೂಕಿನ ಕೊತ್ತದೊಡ್ಡಿ ಗ್ರಾಮದವರು. ತಂದೆ ಕರಿಬಸ್ಸಯ್ಯ ಅವರು ಬಯಲಾಟದ ಕಲಾವಿದ. ಬಯಲಾಟವನ್ನು ನಿರ್ದೇಶಿಸಿ ಹಳ್ಳಿಗಳಲ್ಲಿ ಪ್ರದರ್ಶಿಸುವುದರ ಮೂಲಕ ಜೀವನ ಸಾಗಿಸುತ್ತಿದ್ದರು. ಕುಟುಂಬದ ಪರಂಪರೆಯಂತೆ ಈ ಬಯಲಾಟ ಕಲೆ ಕರಿಬಸ್ಸಯ್ಯನವರ ಮಕ್ಕಳಾದ ರುದ್ರಯ್ಯ ಮತ್ತು ಮುದ್ದಯ್ಯನವರು ಕಲಿತುಕೊಂಡರು. ತಂದೆಯ ತರುವಾಯ ಈ ಕಲೆಯನ್ನು ಮುಂದುವರೆಸಿಕೊಂಡು ಬಂದರು.

ಮುದ್ದಯ್ಯನವರು ಹದಿನಾರನೆಯ ವಯಸ್ಸಿನಲ್ಲಿಯೇ ಬಯಲಾಟಗಳನ್ನು ಹಳ್ಳಿಗಳಲ್ಲಿ ನಿರ್ದೇಶಿಸುವುದರೊಂದಿಗೆ ಒಳ್ಳೆಯ ಪಾತ್ರಗಳನ್ನು ತಾನೇ ವೇಷ ಹಾಕಿಕೊಂಡು ನಟಿಸುವುದನ್ನು ಕಲಿತರು. ಚಿಕ್ಕ ವಯಸ್ಸಿನಲ್ಲಿಯೇ 'ಬಯಲಾಟದ ಮಾಸ್ತರ' ಎಂದು ಕರೆಸಿಕೊಂಡು ಸುತ್ತಲಿನ ನಾಲ್ಕು ಹಳ್ಳಿಗಳಿಗೆ ಜನಪ್ರಿಯರಾದರು. ಹೆಚ್ಚಾಗಿ ಹೆಣ್ಣು ಪಾತ್ರಗಳನ್ನು ಅಭಿನಯಿಸುವುದರಲ್ಲೆ ಇವರಿಗೆ ಆಸಕ್ತಿಯಿತ್ತು. ಊರ್ವಶಿ, ಪ್ರಮೀಳೆ, ಇದಲ್ಲದೆ ಅರ್ಜುನನ ಪಾತ್ರವನ್ನು ತುಂಬ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಜಲಂಧರನ ಕಥೆ ಬಭ್ರುವಾಹನ, ದೇವಿಕಥೆ, ಕರ್ಣಾರ್ಜುನ ಕಾಳಗ, ರಂಭಾವಿಲಾಸ– ಹೀಗೆ ಒಟ್ಟು ಹನ್ನೆರಡು ಬಯಲಾಟದ ಕಥೆಗಳನ್ನು ನಿರ್ದೇಶಿಸಿದ್ದಾರೆ. ನೂರಕ್ಕೂ ಅಧಿಕ ಬಯಲಾಟಗಳನ್ನು ಕಲಿಸಿದ್ದಾರೆ.

ಇವರ ಕಲಾಸೇವೆಯನ್ನು ಗುರುತಿಸಿ 1984ರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಕೃಷ್ಣಪ್ಪ: ತೊಗಲುಗೊಂಬೆಯಾಟದ ಪ್ರಸಿದ್ಧ ಕಲಾವಿದ. ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ಕುರ್ಡಿ ಗ್ರಾಮದವರು. ಕಿಳ್ಳೇಕ್ಯಾತರ ಜನಾಂಗಕ್ಕೆ ಸೇರಿದವರು. ವಂಶಪಾರಂಪರ್ಯವಾಗಿ ಇವರ ಪೂರ್ವಜರಿಂದ ಬಂದ ತೊಗಲುಗೊಂಬೆ ಆಟದ ಕಲೆಯಲ್ಲಿ ಇವರು ಸ್ವಾಭಾವಿಕವಾಗಿ ತಮ್ಮನ್ನು ತೊಡಗಿಸಿಕೊಂಡು ಈ ಕಲೆಯನ್ನು ಸರ್ವಸ್ವವೆಂದು ನಂಬಿಕೊಂಡು ಅದರ ಬೆಳಕಿನಲ್ಲಿಯೇ ಬದುಕಿದವರು.

ಇವರು ಸುಮಾರು ಮೂವತ್ತೈದು ವರ್ಷಗಳಿಂದ ಜಿಲ್ಲೆಯ ನಾನಾ ಭಾಗಗಳಲ್ಲಿ ಈ ಕಲೆಯನ್ನು ಪ್ರದರ್ಶನ ಮಾಡುತ್ತಾ ಬಂದು ಜನರನ್ನು ರಂಜಿಸಿದ್ದಾರೆ. ಅನೇಕರಿಗೆ ತಮ್ಮ ಕಲೆಯನ್ನು ಕಲಿಸಿಕೊಟ್ಟಿದ್ದಾರೆ. ಇವರ ಕಲೆಯನ್ನು ಮಗ ಲಕ್ಷ್ಮಣ ತಂದೆಯಷ್ಟೇ ಸಮರ್ಥವಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇವರಿಗೆ ಬಡತನವಿದ್ದರಿಂದ ಗೊಂಬೆಗಳನ್ನು ತಯಾರಿಸಿಕೊಳ್ಳಲು ಸಾಧ್ಯವಾಗದೇ ಇರುವುದರಿಂದ ಹಳೆಯ ಗೊಂಬೆಗಳ ಮೂಲಕ ಆಟವನ್ನು ಆಡಿಸುತ್ತಿದ್ದಾರೆ. ಮೈಸೂರಿನ ವಿಶ್ವಕನ್ನಡ ಸಮ್ಮೇಳನ ಮುಂತಾದ ಕಡೆ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ. ಇವರಿಗೆ ದೊಡ್ಡಾಟ ಕಲೆಯ ಪೂರ್ಣ ಪರಿಚಯವೂ ಇದೆ. ಇವರ ಕಲಾ ಸೇವೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1986ನೆಯ ಸಾಲಿನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ದುರ್ಗಮ್ಮ ಬ್ಯಾಡರ: ಸಂಪ್ರದಾಯದ ಹಾಡುಗಾರ್ತಿ. ದೇವದುರ್ಗ ತಾಲ್ಲೂಕಿನ ಕೊತ್ತದೊಡ್ಡಿ ಗ್ರಾಮದವರು. ಕೂಲಿ ಮಾಡುತ್ತಲೇ 40 ವರ್ಷಗಳ ಕಾಲ ಹಾಡುಗಳೊಡನೆ ಕಾಲ ದೂಡಿದ್ದಾರೆ. ರಾಯಚೂರು ಜಿಲ್ಲೆಯಾದ್ಯಂತ ಮದುವೆ, ಮುಂಜಿ ಹಬ್ಬ ಹುಣ್ಣಿಮೆಗಳಲ್ಲಿನ ಅವಿಭಾಜ್ಯ ಅಂಗ. ಅಕ್ಕ ಹನುಮವ್ವನಿಂದ ಹಾಡು ಕಲಿತ ಈಕೆ. ಅರ್ಥಪೂರ್ಣ ಕಲಾವಿದೆ. ಹುಟ್ಟು ಮೂಕ ಹಾಗೂ ಕಿವುಡ ಗಂಡನ ಜೊತೆ ಸಂತೋಷವಾಗಿಯೇ ಕಾಲನೂಕಿದ ಈಕೆ ತನ್ನೆಲ್ಲಾ ನೋವನ್ನು ಮರೆತು ತನ್ನನ್ನು ಕಲೆಗೆ ಅರ್ಪಿಸಿಕೊಂಡವಳು. ಈ ಪ್ರತಿಭಾವಂತ ಕಲಾವಿದೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1989 ರ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ರಾಮಯ್ಯ ದಾಸರ: ದೊಡ್ಡಾಟದ ಕಲಾವಿದ. ಮೂಲತಃ ಮಾನ್ವಿ ತಾಲ್ಲೂಕಿನ ಹುಣಸೇಡಿ ಗ್ರಾಮದವರು. 1946ರಲ್ಲಿ ಜನಿಸಿದರು. ಬಯಲಾಟ ಕಲೆ ವಂಶಪಾರಂಪರ್ಯವಾದುದು. ಇವರ ಕುಟುಂಬದ ಹಿರಿಯರು ಸ್ವತಃ ಬಯಲಾಟದ ಮೇಳವನ್ನು ಕಟ್ಟಿಕೊಂಡು ನೆರೆ ರಾಜ್ಯಗಳಾದ ಆಂಧ್ರ, ಮಹಾರಾಷ್ಟ್ರ ಮತ್ತು ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ಬಯಲಾಟಗಳನ್ನು ಪ್ರದರ್ಶಿಸಿ ಹೆಸರು ವಾಸಿಯಾಗಿದ್ದಾರೆ. ಕುಟುಂಬದ ಪರಂಪರೆಯಂತೆ ಇವರು ತಮ್ಮ ಹದಿನಾರನೆಯ ವಯಸ್ಸಿನಲ್ಲಿಯೇ ಬಯಲಾಟ ಕ್ಷೇತ್ರವನ್ನು ಪ್ರವೇಶಿಸಿದರು. ಆರಂಭದಲ್ಲಿ ಸ್ತ್ರೀ ಪಾತ್ರ ಧಾರಿಯಾಗಿ ಅಭಿನಯಿಸಿ ಆನಂತರ ತಾವೇ ಸ್ವತಃ ಬಯಲಾಟಗಳನ್ನು ಕಲಿಸಲು ಪ್ರಾರಂಭಿಸಿದರು. ಜೊತೆಗೆ ಇವರು ಜೈಮಿನಿ ಭಾರತ, ಅಮರಕಾಂಡ ಮುಂತಾದ ಹಳಗನ್ನಡ ಕಾವ್ಯಗಳ ಬಗ್ಗೆ ಅಪಾರವಾದ ಪರಿಣಿತಿ ಪಡೆದಿದ್ದಾರೆ. ರಾಮಾಯಣ, ಮಹಾಭಾರತಗಳ ಅನೇಕ ಪ್ರಸಂಗಗಳನ್ನು ಕಂಠಗತ ಮಾಡಿ–ಕೊಂಡಿರುವ ಇವರು ಬಯಲಾಟ ಕ್ಷೇತ್ರದ ಒಂದು ಅಪೂರ್ವ ಕಲಾವಿದ. ಇಂದು ಇಳಿವಯಸ್ಸಿನಲ್ಲಿದ್ದರೂ ಕರೆ ಬಂದ ಕಡೆ ಹೋಗಿ ಯುವಕರಂತೆ ಬಯಲಾಟಗಳನ್ನು ಕಲಿಸಿ ಬರುತ್ತಿದ್ದಾರೆ. ಇಲ್ಲಿಯವರೆಗೆ ಎರಡು ನೂರಕ್ಕೂ ಅಧಿಕ ಬಯಲಾಟಗಳನ್ನು ಕಲಿಸಿದ್ದಾರೆ.

ಇವರ ಕಲಾಸೇವೆಯನ್ನು ಗಮನಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1993 ನೆಯ ಸಾಲಿನ ರಾಜ್ಯಮಟ್ಟದ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಚನ್ನಬಸಪ್ಪ ಗೊಂದಳಿ: ಜನಪದ ಗಾಯಕ ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನವರು. ಬದುಕಿನ ಕಷ್ಟ ನಿಷ್ಠುರಗಳಿಗೆ ಜಗ್ಗದೆ ಹಾಡುವ ಕಲೆಗೆ ತಮ್ಮನ್ನು ಅರ್ಪಿಸಕೊಂಡಿದ್ದರು. ಕಳೆದ ನಲವತ್ತು ವರ್ಷಗಳಿಂದ ನಿರಂತರವಾಗಿ ಹಾಡುತ್ತಾ ಬಂದಿರುವ ಇವರಿಗೆ ಅನೇಕ ಶಿಷ್ಯರೂ ಇದ್ದಾರೆ. ತಲೆಗೆ ರುಮಾಲು ಸುತ್ತಿ ಅದಕ್ಕೊಂದು ತುರಾಯಿ ಇಟ್ಟು ನಡುವಿನ ಪಟ್ಟಿ ಕಟ್ಟಿ, ತಾಳ ಹಾಕುತ್ತಾ ಹಾಡಲು ಇವರು ಧ್ವನಿ ಎತ್ತಿದರೆ ಪ್ರತಿಯೊಬ್ಬರೂ ತಲೆ ಅಲ್ಲಾಡಿಸಲೇಬೇಕು. ಅನೇಕ ಜನಪದ ಕಥಾ ಪ್ರಸಂಗಗಳನ್ನು ಇವರು ರೂಢಿಸಿಕೊಂಡಿದ್ದರು. ತಾವು ಇರುವಷ್ಟು ಕಾಲವೂ ತಮಗೆ ದೊರೆತಂತಹ ಎಲ್ಲ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ಜನಪದ ಹಾಡುಗಾರಿಕೆಗೆ ಇಂಬುಕೊಡುವುದು ಇವರ ಧ್ಯೇಯವಾಗಿದೆ.

ಕಲೆಯನ್ನು ಆತ್ಮತೃಪ್ತಿಗಾಗಿ ರೂಢಿಸಿಕೊಂಡ ಕಲಾವಿದ ಶ್ರೀ ಚನ್ನಬಸಪ್ಪ ಗೊಂದಳಿ ಹಾಡುವುದನ್ನೇ ಬಾಳಿನ ವೃತ್ತಿಯಾಗಿಸಿಕೊಂಡಿದ್ದಾರೆ. ಶ್ರೀಯುತರಿಗೆ ಅನೇಕ ಜನ ಶಿಷ್ಯ ಕಲಾವಿದರಿದ್ದಾರೆ. ಅವರು ಸಹಿತ ಗುರುವಿನ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇವರ ಕಲಾ ಪ್ರತಿಭೆಯನ್ನು ಗುರುತಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾಯ ಅಕಾಡೆಮಿ 1994ನೆಯ ಸಾಲಿನ ರಾಜ್ಯ ಮಟ್ಟದ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಕಾಳಮ್ಮ ಚೆಲುವಾದಿ: ಜನಪದ ಗಾಯಕಿ. ದೇವದುರ್ಗ ತಾಲ್ಲೂಕಿನವರು ಕಡುಬಡತನದ ಕುಟುಂಬದಲ್ಲಿ ಜನಿಸಿದರು.

ಅಂದಿನ ಕಾಲದಲ್ಲಿ ಒಂಭತ್ತನೆಯ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾರೆ. ಕೂಲಿ ಕೆಲಸ ಮಾಡಿ ಜೀವನ ಸಾಗಿಸಿದ್ದಾರೆ. ಇವರ ವೃತ್ತಿ ಕೂಲಿ ಕೆಲಸವಾದರೂ ಪ್ರವೃತ್ತಿಯಿಂದ ಜಾನಪದ ಗಾಯಕಿಯಾಗಿದ್ದು ಪ್ರತಿಭಾವಂತ ಕಲಾವಿದೆಯಾಗಿದ್ದಾರೆ. ದೇವದುರ್ಗ ತಾಲ್ಲೂಕಿನ ಜೊತೆಗೆ ರಾಯಚೂರು ಜಿಲ್ಲೆ ಯಾದ್ಯಂತ ಹಳ್ಳಿ ಹಳ್ಳಿಗೆ ಚಿರಪರಿಚಿತರಾಗಿದ್ದಾರೆ. ಮದುವೆ ಸೋಬಾನ, ಐರಾಣಿ, ತೊಟ್ಟಿಲು, ಬೀಸುವುದು, ಕುಟ್ಟುವುದು, ಕಳೆ ಕೀಳುವುದು ಹೀಗೆ ಹತ್ತು ಹಲವು ಸಂದರ್ಭದಲ್ಲಿ ಸಂಪ್ರದಾಯದ ಹಾಡುಗಳನ್ನು ಶ್ರೀಮತಿ ಕಾಳಮ್ಮನವರು ಹಾಡಿದ್ದಾರೆ. 1994 ರಲ್ಲಿ ರಾಯಚೂರಿನಲ್ಲಿ ನಡೆದ ಜಿಲ್ಲಾ ಜಾನಪದ ಮೇಳದಲ್ಲೂ ಭಾಗವಹಿಸಿದ ಈ ಕಲಾವಿದೆ. ಅನೇಕರ ಪ್ರಶಂಸೆಗೆ ಪಾತ್ರರಾಗಿದ್ದರು. ಇಂತಹ ಪ್ರತಿಭಾವಂತ ಕಲಾವಿದೆಯನ್ನು ಗಮನಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1995ನೆಯ ಸಾಲಿನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಅಲಿಹಾಜ್ ಪೀರ್ ಪಾಷಾ: ಜಾನಪದ ವೈದ್ಯ. ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನವರು. ವೃತ್ತಿಯಿಂದ ಕೃಷಿಕರಾಗಿದ್ದು ಪ್ರವೃತ್ತಿಯಿಂದ ಜನಪದ ವೈದ್ಯರು. ಮೂಳೆ (ಎಲುಬು) ಜೋಡಣೆಯಲ್ಲಿ ವಿಶೇಷವಾದ ಪರಿಣತಿ. ಪಡೆದಿರುವ ಇವರು ರೋಗಿಗಳಿಂದ ಯಾವುದೇ ರೀತಿಯ ಸಂಭಾವನೆಯನ್ನು ಪಡೆದವರಲ್ಲ ಸುಮಾರು 40 ವರ್ಷಗಳಿಂದ ಈ ಕೆಲಸ ಮಾಡುತ್ತಾ ಬಂದಿರುವ ಇವರು ಸಿಂಧನೂರಿಗೆ ಮಾತ್ರವಲ್ಲ ರಾಯಚೂರು ಜಿಲ್ಲೆಯ ಬಹುತೇಕ ಎಲ್ಲ ತಾಲ್ಲೂಕಿನ ಜನರಿಗೆ ಚಿರಪರಿಚಿತ ವ್ಯಕ್ತಿ. ಈ ವೈದ್ಯ ಪದ್ಧತಿ ತನ್ನಿಂದ ನಿಂತು ಹೋಗಬಾರದೆಂದು ತಮ್ಮ ಮಗನಿಗೆ ಕಲಿಸಿ ಹಳ್ಳಿ ಹಳ್ಳಿಗೆ ಕಳಿಸಿ ವೈದ್ಯ ಪದ್ಧತಿಯು ಮುಂದುವರೆಯಲು ಕಾರಣರಾಗಿದ್ದಾರೆ. ಇವರ ಸೇವೆಯನ್ನು ಗಮನಿಸಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಇವರಿಗೆ 1996ನೆಯ ಸಾಲಿನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ರಾಮದಾಸಪ್ಪ: ಜನಪದ ಗಾಯಕ, ಬಯಲಾಟದ ಕಲಾವಿದ. ಲಿಂಗಸ್ಗೂರು ತಾಲ್ಲೂಕಿನ ಅಸಿಹಾಳ ತಾಂಡಾದವರು. ಲಂಬಾಣಿ ಜನಾಂಗಕ್ಕೆ ಸೇರಿದ ಇವರದು ಕೃಷಿಕ ಕುಟುಂಬ, ಮೂರನೆಯ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಅನೇಕ ಜನಪದ ಗೀತೆಗಳನ್ನು ಸ್ವತಃ ರಚನೆ ಮಾಡಿ ಹಾಡಿದ್ದಾರೆ. ಭಜನಾ ಪದಗಳನ್ನು ಸರಾಗವಾಗಿ ಹಾಡುತ್ತಿದ್ದರು. ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ಸಂಸಾರವನ್ನು ತ್ಯಜಿಸಿ ಸಜ್ಜಲಗುಡ್ಡ ಶರಣಮ್ಮನವರ ಪ್ರಭಾವದಿಂದ ಗುರುಬೋಧವನ್ನು ಸ್ವೀಕರಿಸಿದರು. ಸಾಧು-ಸಂತರ ಗುಂಪಿನಲ್ಲಿ ಸೇರ್ಪಡೆಗೊಂಡು ಶರಣರಗಿದ್ದಾರೆ. ಸಮಾಜದಲ್ಲಿನ ಅನೇಕ ಮೂಢ ನಂಬಿಕೆ. ಕಂದಾಚಾರಗಳನ್ನು ಬಯಲಿಗೆಳೆದು ತಮ್ಮ ಹಾಡುಗಳ ಮುಖಾಂತರ ಜನರಿಗೆ ಪ್ರಜ್ಞೆಯನ್ನು ಮೂಡಿಸಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಅಕಾಡೆಮಿ 1997ನೆಯ ಸಾಲಿನ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಗಜಲ್ ಗುಂಡಮ್ಮ: ಗಜಲ್ ಹಾಡುಗಾರ್ತಿ. ಮೂಲತಃ ಕಲ್ಬುರ್ಗಿ ಜಿಲ್ಲೆಯ ಸುರಪುರದವರಾದರೂ ಇವರು ಬಾಳಿ ಬದುಕಿದ್ದು, ರಾಯಚೂರಿನಲ್ಲಿಯೇ. ಹೀಗಾಗಿ ಇವರನ್ನು ರಾಯಚೂರಿನ ಗಜಲ್ ಗುಂಡಮ್ಮನೆಂದೇ ಕರೆಯುತ್ತಾರೆ. ಇವರೊಬ್ಬ ಅಪರೂಪದ ಕಲಾವಿದರು. ಕಾನಪೂರ ಶೈಲಿಯ ಉರ್ದು ಭಾಷೆಯಲ್ಲಿ ಮಡುಗಟ್ಟಿದ ಎದೆಯಾಳದ ನೋವನ್ನು ಗಜಲ್‌ಗಳ ಮೂಲಕ ಭಾವಪೂರ್ಣವಾಗಿ ಹೊರ ಹಾಕುತ್ತಾ ಹಾಡಲು ತೊಡಗಿದರೆ ಸಾವಿರಾರು ರಸಿಕ ಮನಸುಗಳು ಪುಳಕಗೊಳ್ಳುತ್ತಿದ್ದವು. ಈಕೆಯ ಹಾಡಿನ ಮೋಡಿಯಿಂದ ನೂರಾರು ಮುಜರಾಗಳು ಗಾನಪಾರ್ಟಿಗಳು ಜೀವಪಡೆದು ಕೊಳ್ಳುತ್ತಿದ್ದವು. ಅಂತಹ ಹಾಡುಗಾರಿಕೆಯ ಕಲೆಗಾರಿಗೆ ಕಂಠಮಾಧುರ್ಯ ತನ್ಮಯತೆ ಗುಂಡಮ್ಮನವರ ಕೊರಳಿಗಿತ್ತು. 'ಗಜಲ್ ಎಂದರೆ ಸಾಕು ಸಂಗೀತ ಪ್ರೀಯರಿಗೆ ನೆನಪಾಗುವ ಹೆಸರು ಗುಂಡಮ್ಮನವರದು ಇವರ ಹೆಸರಿನೊಂದಿಗೆ 'ಗಜಲ್' ಪದ ಅನ್ವರ್ಥವಾಗಿ ಸೇರಿಕೊಂಡಿದೆ.

ಗಜಲ್‌ಗಳ ಜೊತೆಗೆ ಇವರು ತತ್ವಪದಗಳನ್ನು ಕೂಡಾ ಹಾಡುತ್ತಿದ್ದರು ಆದರೆ ತನ್ನನ್ನು ಗುರುತಿಸಿಕೊಂಡಿದ್ದು ಗಜಲ್‌ಗಳ ಮೂಲಕವೇ. ಇವರಿಗೆ ಕರ್ನಾಟಕ ಜಾನಪದ ಅಕಾಡೆಮಿ ಮತ್ತು ರಾಜ್ಯೋತ್ಸ ಪ್ರಶಸ್ತಿಗಳು ಲಭಿಸಿವೆ.

ದೇವಪುತ್ರಪ್ಪ: ತತ್ತ್ವಪದದ ಕಲಾವಿದ. ರಾಯಚೂರಿ ನವರಾಗಿದ್ದು, ಬಡತನ ಕುಟುಂಬದಲ್ಲಿ ಜನಿಸಿದವರು. 'ಹುಟ್ಟಿ ಸಾರ್ಥಕವಾಯಿತು ನರಜನ್ಮ' ಎಂದು ತತ್ವಪದ ಹಾಡನ್ನು ಹಾಡುತ್ತಾ ಜನರ ಗಮನಸೆಳೆದ ಹಿರಿಯ ಕಲಾವಿದರು. ಡೋಲಕ್, ತಬಲಾದ ಸಾಥಿಯನ್ನು ಸಮುದಾಯದ ನಾಟಕ ಗಳಿಗಷ್ಟೇ ಅಲ್ಲದೆ ಸಾಮಾಜಿಕ ನಾಟಕ, ಬಯಲಾಟದಂತಹ ಸಂಗೀತ ಕಾರ್ಯಕ್ರಮಗಳಿಗೂ ಸಾಥಿ ನೀಡಿದವರು.

ಸುಗಮ, ಸಂಗೀತ, ನಾಟಕ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ಬಿಡದೆ ಕಾಣಿಸಿಕೊಳ್ಳುವ ಇವರು ಈಗಾಗಲೇ ಅನೇಕ ಹಿರಿಯ ಕಲಾವಿದರಿಗೆ ಸಾಥಿ ನೀಡಿದ್ದಾರೆ. ನೂರಾರು ಸಾಮಾಜಿಕ ನಾಟಕಗಳಲ್ಲಿ ಭಾಗವಹಿಸಿ ಸಂಗೀತವನ್ನೊದಗಿಸಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

ಲಕ್ಷ್ಮಣ ಪೂಜಾರಿ: ಜನಪದ ಕಲಾವಿದ. ಮಾನ್ವಿ ತಾಲ್ಲೂಕಿನ ಬೆಟ್ಟದೂರು ಗ್ರಾಮದವರು. ಇವರದು ಕೃಷಿಕ ಕುಟುಂಬ. ಊರಿನ ಮಾರೆಮ್ಮ ದೇವಿಯ ಪೂಜಾರರಾಗಿದ್ದಾರೆ. ವೃತ್ತಿಯಿಂದ ಕೃಷಿಕರಾಗಿದ್ದರೂ ಪ್ರವೃತ್ತಿಯಿಂದ ಹಲಗೆ ಬಾರಿಸುವ ಕಲಾವಿದರಾಗಿದ್ದಾರೆ. ತಮ್ಮ ಹದಿನೈದನೆಯ ವಯಸ್ಸಿನಿಂದಲೇ ಹಲಗೆ ಬಾರಿಸುವುದರಲ್ಲಿ ಪರಿಣಿತರಾಗಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಜನಪ್ರಿಯರಾಗಿರಾದ್ದಾರೆ. ವಿಶೇಷವಾಗಿ ಇವರು ಮೊಹರಂ, ದೀಪಾವಳಿ, ದಸರಾ, ಹಬ್ಬಗಳು, ತಾಲ್ಲೂಕು, ಜಿಲ್ಲಾ, ರಾಜ್ಯ ಮಟ್ಟದ ಧರಣಿ ಸತ್ಯಾಗ್ರಹ ಸಂದರ್ಭಗಳಲ್ಲಿ, ಮೆರವಣಿಗೆ, ಸಂದರ್ಭಗಳಲ್ಲಿ ಹಲಗೆಯನ್ನು ಬಾರಿಸಿ ಜನರ ಮೆಚ್ಚುಗೆಯನ್ನು ಪಡೆದು 'ಭಲೆ ಕಲಾವಿದ'ರೆನಿಸಿಕೊಂಡಿದ್ದಾರೆ. ಶ್ರೀಯುತರಿಗೆ 2006ನೆಯ ಸಾಲಿನ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಲಂಕೆಪ್ಪ ಭಜಂತ್ರಿ: ಖಣಿವಾದನ ಕಲಾವಿದ. ಲಿಂಗಸ್ಗೂರು ತಾಲ್ಲೂಕಿನ ಅಮದಿಹಾಳ ಗ್ರಾಮದವರು. ನಾಲ್ಕನೆಯ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾರೆ. ಮನೆಯಲ್ಲಿ ಬಡತನವಿದ್ದರಿಂದ ಶಾಲೆಯನ್ನು ಬಿಟ್ಟು, ಮನೆತನದ ಕುಲ ಕಸುಬನ್ನು ಮಾಡಿಕೊಂಡು ಜೀವನ ಸಾಗಿಸಿದವರು. ಇವರ ತಂದೆ ರಾಮಚಂದ್ರಪ್ಪ ಖಣಿವಾದಕರು ಮತ್ತು ಶಣ್ಯೆವಾದಕರೂ ಆಗಿದ್ದರು. ಹಾಗೆಯೇ ಇವರ ದೊಡ್ಡಪ್ಪನವರಾದ ಖಜಿಯಪ್ಪನವರು ಕೂಡಾ ಇದೇ ಕಲೆಯಲ್ಲಿ ಪರಿಣಿತರಾಗಿದ್ದಾರೆ. ಇವರಿಬ್ಬರ ಪ್ರೇರಣೆಯಿಂದ ಲಂಕೆಪ್ಪನವರು ಕೂಡ ಖಣಿವಾದನ ಮತ್ತು ಶಣೆವಾದನ ಕಲಾವಿದರಾಗಿ ಹೊರಹೊಮ್ಮಿದ್ದಾರೆ. ತಮ್ಮ 12ನೆಯ ವಯಸ್ಸಿನಲ್ಲಿಯೇ ಈ ಕಲೆಯನ್ನು ರೂಢಿಸಿಕೊಂಡು ತಮಿಳುನಾಡು, ಆಂಧ್ರ ಪ್ರದೇಶ ಮತ್ತು ದೆಹಲಿಗಳಲ್ಲಿ ಕಾರ್ಯಕ್ರಮವನ್ನು ನೀಡಿದ್ದಾರೆ.

ಇವರ ಕಲೆಯನ್ನು ಗಮನಿಸಿ ಅನೇಕ ಪ್ರಶಸ್ತಿಗಳು ಇವರನ್ನು ಅರಸಿ ಬಂದಿವೆ. ತಾಲ್ಲೂಕು, ಜಿಲ್ಲಾ ಮಟ್ಟದ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1991) ದೆಹಲಿಯ ಶಿವರಾಜ ಕುಂದ್ರಾದಲ್ಲಿ ಸನ್ಮಾನ (1994) 2008ರ ಜಾನಪದ ಅಕಾಡೆಮಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ.

ಮಹಾದೇವಯ್ಯ ನೂಲಿ: ಬಯಲಾಟದ ಕಲಾವಿದ. ದೇವದುರ್ಗ ತಾಲ್ಲೂಕಿನ ಕೊತ್ತದೊಡ್ಡಿ ಗ್ರಾಮದವರು. ಇವರ ಮನೆತನ ಬಯಲಾಟ ಕಲೆಯಲ್ಲಿ ಪರಿಣತಿ ಹೊಂದಿದೆ. ಇವರ ಕುಟುಂಬದ ಹಿರಿಯರೆಲ್ಲರೂ ಬಯಲಾಟದ ಕಲಾವಿದರಾಗಿದ್ದು ಸುತ್ತಲೂ ನಾಲ್ಕು ಹಳ್ಳಿಗಳಿಗೆ ಹೆಸರಾಗಿದ್ದರು. ಇವರ ತಂದೆ ರುದ್ರಯ್ಯ ನೂಲಿ. ಇವರು ಸಹ ಬಯಲಾಟದ ಮಾಸ್ತರರಾಗಿದ್ದರು. ಇವರ ಬಾಲ್ಯ ಜೀವನ ಕಷ್ಟಕರವಾಗಿದ್ದರಿಂದ ಚಿಕ್ಕವರಿರುವಾಗಲೇ ಜೀವನೋಪಾಯಕ್ಕಾಗಿ ಬಯಲಾಟ ಕಲೆಯನ್ನು ಅವಲಂಬಿಸಿದರು. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿಯೇ ಬಯಲಾಟ ಕ್ಷೇತ್ರವನ್ನು ಪ್ರವೇಶಿಸಿದರು. ಪ್ರಾರಂಭದಲ್ಲಿ ಪಾತ್ರಧಾರಿಯಾಗಿ ಅಭಿನಯಿಸಿ ಆನಂತರ ಸ್ವತಃ ಬಯಲಾಟದ ಮಾಸ್ತರರಾಗಿದ್ದರು. ಕಳೆದ ಅರವತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಇಲ್ಲಿಯವರೆಗೆ 400ಕ್ಕಿಂತ ಅಧಿಕ ಬಯಲಾಟಗಳನ್ನು ಕಲಿಸಿದ್ದಾರೆ.

ಇವರ ಸೇವೆಯನ್ನು ಮನಗಂಡು ರಾಯಚೂರು ಜಿಲ್ಲಾ ಸಾಹಿತ್ಯ ಪರಿಷತ್ತು ವತಿಯಿಂದ 2010 ಮಾರ್ಚ್ ತಿಂಗಳು ದೇವದುರ್ಗದಲ್ಲಿ ನಡೆದ ಏಳನೆಯ ರಾಯಚೂರು ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಇವರನ್ನು ಸನ್ಮಾನಿಸಿ ಗೌರವಿಸಿಲಾಗಿದೆ. ಹಾಗೆಯೇ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 2009 ನೆಯ ಸಾಲಿನ ಪ್ರಶಸ್ತಿಯನ್ನು ರಾಜ್ಯಮಟ್ಟದ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಯಮನಪ್ಪ ಭಜಂತ್ರಿ: ಶಹನಾಯಿ ವಾದನ ಕಲಾವಿದ. ಲಿಂಗಸ್ಗೂರು ತಾಲ್ಲೂಕಿನ ಅಮದಿಹಾಳ ಗ್ರಾಮದವರು. ಬಡ ಕುಟುಂಬದಲ್ಲಿ ಹುಟ್ಟಿ ಜೀವನೋಪಾಯಕ್ಕಾಗಿ ಕುಲಕಸುಬನ್ನು ಮಾಡಿಕೊಂಡು ಬಂದಿದ್ದಾರೆ. ವೃತ್ತಿಯಿಂದ ಬುಟ್ಟಿ ಹೆಣೆಯುವ ಕಾಯಕವನ್ನು ಮಾಡಿದರೂ ಪ್ರವೃತ್ತಿಯಿಂದ ಶಣ್ಯೆ ವಾದಕರಾಗಿರುವ ಹನ್ನೆರಡನೆಯ ವರ್ಷದ ಬಾಲಕರಿದ್ದಾಗಲೇ ಈ ಕಲೆಯನ್ನು ರೂಢಿಸಿಕೊಂಡು ಆ ಕಲೆಯಲ್ಲಿಯೇ ಪರಿಣಿತಿ ಸಾಧಿಸಿದ್ದಾರೆ. ಇವರಿಗೆ 2009ನೆಯ ಸಾಲಿನ ಜಾನಪದ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಗ್ಯಾನಪ್ಪ ಭಜಂತ್ರಿ: ಶಣ್ಯೆ ವಾದಕ. ಲಿಂಗಸ್ಗೂರು ತಾಲ್ಲೂಕಿನ ಅಮದಿಹಾಳ ಗ್ರಾಮದವರು. ಅತ್ಯಂತ ಕಡು ಬಡತನದ ಕುಟುಂಬದಲ್ಲಿ ಜನಿಸಿದ್ದಾರೆ. ವೃತ್ತಿಯಿಂದ ಬುಟ್ಟಿ ಹೆಣೆಯುವ ಕಾಯಕವನ್ನು ಮಾಡಿಕೊಂಡು ಬಂದಿದ್ದಾರೆ. ಪ್ರವೃತ್ತಿಯಿಂದ ಶಣ್ಯೆ ವಾದಕರಾಗಿ ಬಾಲಕರಿದ್ದಾಗಿನಿಂದಲೇ ಈ ಕಲೆಗೆ ಆಕರ್ಷಿತರಾದರು. ಇವತ್ತಿಗೂ ಆ ಕಲೆಯನ್ನೇ ಮೈಗೂಡಿಸಿ ಕೊಂಡಿದ್ದರೆ. ಇವರು ಗ್ರಾಮೀಣ ಪ್ರದೇಶದಿಂದ ಜಿಲ್ಲಾ ಮಟ್ಟದವರೆಗೆ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಕಲೆಯನ್ನು ಪ್ರದರ್ಶಿಸಿದ್ದಾರೆ ಇವರಿಗೆ 2010ನೆಯ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಅಳ್ಳಪ್ಪ ದಾಸರು: ಬಯಲಾಟ ಕಲಾವಿದ. ದೇವದುರ್ಗ ತಾಲ್ಲೂಕಿನವರು. ತಂದೆ ತಿಮ್ಮಯ್ಯ 1937ರಲ್ಲಿ ಜನನ. ಜಾನಪದ ತತ್ವಪದ ಮತ್ತು ಬಯಲಾಟದ ಪದಗಳನ್ನು ಹಾಡುತ್ತಿದ್ದರು. ತಂದೆಯ ಆನಂತರ ಅಳ್ಳಪ್ಪನವರು ಅದೇ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ತಂದೆಯಿಂದ ಕಲಿತ ಅಲ್ಪಸ್ವಲ್ಪ ಬಯಲಾಟದ ಕಲೆಗೆ ತೃಪ್ತರಾಗದೆ ಅಂದು ಮಸರಕಲ್ ಗ್ರಾಮದಲ್ಲಿ ಪದಗಳನ್ನು ಕಲಿಸುತ್ತಿದ್ದ ಗುರುವಿನಲ್ಲಿಗೆ ಹೋಗಿ. ಪಿಟಿಲು ಬಾರಿಸುವುದು ಮತ್ತು ಹಾಡುವುದನ್ನು ಕಲಿತಿದ್ದಾರೆ. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಬಯಲಾಟ ಕ್ಷೇತ್ರವನ್ನು ಪ್ರವೇಶಿಸಿದ ಇವರು ಆ ಕಲೆಯನ್ನು ಬಿಟ್ಟಿರಲಿಲ್ಲ ತಾಲ್ಲೂಕಿನ ಜನರಿಗೆ 'ಬಯಲಾಟದ ಮಾಸ್ತರ' ಎಂದೇ ಪರಿಚಿತರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರಾಯಚೂರಿನಲ್ಲಿ ನಡೆದ ಜನಪದ ರಂಗ ಪಂಚಮಿ ಮತ್ತು ಮಾನ್ವಿಯಲ್ಲಿ ಜರುಗಿದ ರಾಯಚೂರು ಜಿಲ್ಲಾ ಎರಡನೆಯ ಸಾಹಿತ್ಯ ಮೇಳದಲ್ಲಿಯೂ ಸಹ ಇವರನ್ನು ಸನ್ಮಾನಿಸಿ ಗೌರವಿಸಿದ್ದಾರೆ.

ಆಜಪ್ಪ ಗಣದಿನ್ನಿ: ಬಯಲಾಟ ಕಲಾವಿದ. ಮೂಲತಃ ರಾಯಚೂರು ತಾಲ್ಲೂಕಿನ ಮಮದಾಪುರ ಗ್ರಾಮದವರು. ಈಗ ಮಾನ್ವಿ ತಾಲ್ಲೂಕಿನ ಗಣದಿನ್ನಿ ಗ್ರಾಮದಲ್ಲಿ ನೆಲೆಸಿದ್ದಾರೆ. ಕೇವಲ ಎರಡನೆಯ ತರಗತಿಯವರೆಗೆ ಅಭ್ಯಾಸ ಮಾಡಿದ್ದಾರೆ. ಬಯಲಾಟ ಕಲೆ ವಂಶಪಾರಂಪರ್ಯವಾಗಿ ಬಂದಿದೆ. ಇವರು ಕಲಾವಿದರಾಗಿ, ಮಾಸ್ತರರಾಗಿ, ಕವಿಯಾಗಿ ಬೆಳೆದು ಬಂದಿದ್ದಾರೆ. ಆಂಧ್ರದ ಕೆಲವು ಹಳ್ಳಿಗಳಲ್ಲಿ ಮತ್ತು ರಾಯಚೂರು ಜಿಲ್ಲೆಯಾದ್ಯಂತ ಅನೇಕ ಹಳ್ಳಿಗಳಲ್ಲಿ ಬಯಲಾಟಗಳನ್ನು ಕಲಿಸಿ ಹೆಸರಾಗಿದ್ದಾರೆ. ಇಲ್ಲಿಯವರೆಗೆ ಒಂದು ನೂರಕ್ಕಿಂತ ಅಧಿಕ ಬಯಲಾಟಗಳನ್ನು ಕಲಿಸಿದ್ದಾರೆ. ಹಾಗೆಯೇ ಬಯಲಾಟ ಕವಿಗಳಾಗಿ ಒಟ್ಟು ಹತ್ತು ಬಯಲಾಟಗಳನ್ನು ರಚಿಸಿದ್ದಾರೆ.

ಕೃಷ್ಣಮೂರ್ತಿ ದಾಸರ್: ಬಯಲಾಟ ಕಲಾವಿದ. ಲಿಂಗಸೂರು ತಾಲ್ಲೂಕಿನ ನಿರ್ಲೂಟಿ ಗ್ರಾಮದವರು. ಕಳೆದ ಇಪ್ಪತ್ತೈದು ವರ್ಷಗಳಿಂದ ಸಿಂಧನೂರು ತಾಲ್ಲೂಕಿನ ಯಲೆಕೂಡ್ಲಿಗಿ ಕ್ರಾಸ್ ಬಳಿ ನೆಲೆಸಿದ್ದಾರೆ. ಇವರ ತಾತ ರಂಗಣ್ಣ, ತಂದೆ ಈರಣ್ಣ ಸಹೋದರ ರಾಮಣ್ಣ ಇವರೆಲ್ಲಲೂ ಬಯಲಾಟದ ಮಾಸ್ತರರಾಗಿದ್ದರು. ಇವರ

ಇಡೀ ಕುಟುಂಬವೇ ಬಯಲಾಟ ಕಲೆಯಲ್ಲಿ ಪರಿಣತಿ ಪಡೆದಿದೆ. ಕೃಷ್ಣಮೂರ್ತಿಯವರ ಬಾಲ್ಯಜೀವನ ಕಷ್ಟಕರವಾಗಿದ್ದರಿಂದ ಮೂರನೆಯ ತರಗತಿಯವರೆಗೆ ವ್ಯಾಸಂಗ ಮಾಡಿ ಚಿಕ್ಕವರಿರುವಾಗಲೇ ಜೀವನೋಪಾಯಕ್ಕಾಗಿ ಭಿಕ್ಷೆ ಎತ್ತುವ ಕಾಯಕವನ್ನು ಮಾಡಿದರು. ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಬಯಲಾಟ ಕ್ಷೇತ್ರವನ್ನು ಪ್ರವೇಶಿಸಿ ತಮ್ಮ ತಂದೆಯವರ ಪ್ರೇರಣೆಯಿಂದ ಆರಂಭದಿಂದಲೇ ಬಯಲಾಟದ ಮಾಸ್ತರರಾಗಿ ಸೇವೆಸಲ್ಲಿಸುತ್ತಾ ಬಂದಿದ್ದಾರೆ. ಜೊತೆಗೆ ಕೆಲವು ಬಯಲಾಟಗಳಲ್ಲಿ ಸ್ತ್ರೀ ಪಾತ್ರಧಾರಿಯಾಗಿ ಅಭಿನಯಿಸಿದ್ದಾರೆ. ಜನಮೆಚ್ಚುಗೆ ಪಡೆದು 'ಬಯಲಾಟದ ಸಾಮ್ರಾಟ್' ಎಂದೇ ಹೆಸರಾಗಿದ್ದಾರೆ. ಇಲ್ಲಿಯವರೆಗೆ ಮೂರುನೂರಕ್ಕೂ ಅಧಿಕ ಬಯಲಾಟಗಳನ್ನು ಕಲಿಸಿದ್ದಾರೆ.

ಹನುಮಂತ ನೂಲಿ: ಬಯಲಾಟ ಕಲಾವಿದ. ದೇವದುರ್ಗ ತಾಲ್ಲೂಕಿನ ಕೊತ್ತದೊಡ್ಡಿ ಗ್ರಾಮದವರು. ತಂದೆ ಮುದ್ದಯ್ಯ ನೂಲಿ; ಬಯಲಾಟದ ಮಾಸ್ತರರಾಗಿದ್ದು, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಹನುಮಂತನವರ ಬಾಲ್ಯ ಜೀವನ ಕಷ್ಟಕರವಾಗಿದ್ದರಿಂದ ಕೇವಲ ಎರಡನೆಯ ತರಗತಿಯವರೆಗೆ ಅಭ್ಯಾಸ ಮಾಡಿದರು. ಅಣ್ಣನವರ ಸಾವಿನಿಂದಾಗಿ ಶಾಲೆಗೆ ವಿದಾಯ ಹೇಳಿ, ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಹಾಗೆಯೇ ಕೆಲಕಾಲ ಗೌಡರ ಮನೆಯಲ್ಲಿ ಜೀತದಾಳಾಗಿ ದುಡಿದಿದ್ದಾರೆ.

ಕುಟುಂಬದ ಹಿರಿಯರ ಪ್ರೇರಣೆಯಿಂದ ಪ್ರಮುಖ ಬಯಲಾಟ ಕಲಾವಿದರೆನಿಸಿಕೊಂಡ ಇವರು ಆರಂಭದಲ್ಲಿ **'ಶಾಪನಿಶ್ಶಾಪ'** ದಲ್ಲಿ ಕೀಚಕ ಮತ್ತು ನಾರದ, ಕನಕಾಂಗಿ ಕಲ್ಯಾಣದಲ್ಲಿ ಬಲರಾಮ, ವಿರೋಚನ ಕಥೆಯಲ್ಲಿ ವಜ್ರಮುಕುಟ, ವೀರಜಲಂಧರನ ಕಥೆಯಲ್ಲಿಯೂ ವಜ್ರಮುಕುಟನ ಪಾತ್ರಧಾ-ರಿಯಾಗಿ ಅಭಿನಯಿಸಿದ್ದಾರೆ. ಆನಂತರ ತಾವೇ ಸ್ವತಃ ಬಯಲಾಟದ ಮಾಸ್ತರರಾಗಿ ಮೂರನೂರಕ್ಕಿಂತ ಅಧಿಕ ಬಯಲಾಟಗಳನ್ನು ಕಲಿಸಿದ್ದಾರೆ.

ಸಣ್ಣಬಾಬು: ಬಯಲಾಟ ಕಲಾವಿದ. ರಾಯಚೂರು ತಾಲ್ಲೂಕಿನ ಗಡಿ ಗ್ರಾಮವಾದ ಹೂಗನಹಳ್ಳಿಯವರು. ಇವರ ತಂದೆ ದೊಡ್ಡಬಾಲಯ್ಯ ಬಯಲಾಟದ ಮಾಸ್ತರರಾಗಿದ್ದರು. ಐದನೆಯ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾರೆ. ಮನೆಯಲ್ಲಿ ಬಡತನವಿದ್ದರಿಂದ ಹತ್ತನೆಯ ವಯಸ್ಸಿನಿಂದ ಹದಿನೇಳನೆಯ ವಯಸ್ಸಿನವರೆಗೆ ಭಿಕ್ಷೆ ಎತ್ತುವ ಕಾಯಕವನ್ನು ಮಾಡಿದರು. ಆನಂತರ ಬಯಲಾಟ ಕ್ಷೇತ್ರವನ್ನು ಪ್ರವೇಶಿಸಿ ಪ್ರಾರಂಭದಲ್ಲಿ ಕೆಲವು ಬಯಲಾಟಗಳಲ್ಲಿ ಸ್ತ್ರೀ ಪಾತ್ರಧಾರಿಯಾಗಿ ಅಭಿನಯಿಸಿದರು. ಆನಂತರ ಮದ್ದಲಿ ಮತ್ತು ಪಿಟಿಲುವಾದಕರಾಗಿ ಸೇವೆಸಲ್ಲಿಸಿದ್ದಾರೆ. ಹದಿನಾರನೆಯ ವಯಸ್ಸಿನಿಂದಲೇ ಬಯಲಾಟದ ಮಾಸ್ತರರಾಗಿ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಬಯಲಾಟಗಳನ್ನು ಕಲಿಸಿ ಜನಪ್ರಿಯರಾಗಿದ್ದಾರೆ. ಇಲ್ಲಿಯವರೆಗೆ ಐದು ನೂರಕ್ಕಿಂತ ಅಧಿಕ ಬಯಲಾಟಗಳನ್ನು ಕಲಿಸಿದ್ದು ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಬಯಲಾಟಗಳನ್ನು ಕಲಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.

ಸಣ್ಣ ವೆಂಕಟೇಶ: ಬಯಲಾಟದ ಕಲಾವಿದ. ರಾಯಚೂರಿನ ಗಡಿ ಗ್ರಾಮವಾದ ಯಾಪಲದಿನ್ನಿಯವರು. ರಾಯಚೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಬಯಲಾಟಗಳನ್ನು ಕಲಿಸಿದವರಲ್ಲಿ ಎರಡನೆಯ ಸ್ಥಾನದಲ್ಲಿದ್ದಾರೆ. ಇವರು ಬಾಲಕರಿದ್ದಾಗ ಬಡತನವೆಂಬ ಭೂತ ಇವರನ್ನು ಕಾಡಿ ಸಂಕಷ್ಟದಲ್ಲಿರಿಸಿತ್ತು. ವೆಂಕಟೇಶರು ಆರಂಭದಲ್ಲಿ ಭಿಕ್ಷೆ ಬೇಡಿ ಜೀನವಸಾಗಿಸಿದ್ದಾರೆ. ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಬಯಲಾಟ ಕ್ಷೇತ್ರವನ್ನು ಪ್ರವೇಶಿಸಿ ಅನೇಕ ಬಯಲಾಟಗಳಲ್ಲಿ ಸ್ತ್ರೀ ಪಾತ್ರಧಾರಿಯಾಗಿ ಅಭಿನಯಿಸಿ ಸ್ತ್ರೀಯರನ್ನು ನಾಚಿಸುವಷ್ಟರ ಮಟ್ಟಿಗೆ ಅಭಿನಯಿಸಿದ್ದಾರೆ. ಬಯಲಾಟದ ಮಾಸ್ತರರಾಗಿ ಆಂಧ್ರ ಪ್ರದೇಶದ ಗಡಿ ಗ್ರಾಮಗಳು ಮತ್ತು ರಾಯಚೂರು ಜಿಲ್ಲೆಯಾದ್ಯಂತ ಬಯಲಾಟಗಳನ್ನು ಕಲಿಸಿ ಜನಪ್ರಿಯರಾಗಿದ್ದಾರೆ. ಇಲ್ಲಿಯವರೆಗೆ ನಾಲ್ಕನೂರಕ್ಕಿಂತ ಅಧಿಕ ಬಯಲಾಟಗಳನ್ನು ಕಲಿಸಿದ್ದಾರೆ.

ನಿರುಪಾಧಿ ಕನ್ನಾರಿ: ಬಯಲಾಟದ ಹಾಸ್ಯಕಲಾವಿದ. ಸಿಂಧನೂರು ತಾಲ್ಲೂಕಿನ ಕನ್ನಾರಿ ಗ್ರಾಮದ ನಿರುಪಾದಿ ಬಾಲ್ಯದಿಂದಲೇ ಬಯಲಾಟದಲ್ಲಿ ಅಭಿನಯಿಸುತ್ತಾ ಬಂದಿದ್ದಾನೆ. ಇಂದಿನ ಮಾಧ್ಯಮಗಳ ಪ್ರಭಾವದಿಂದ ಕಣ್ಮರೆಯಾಗುತ್ತಿರುವ ಬಯಲಾಟ ಕಲೆಯನ್ನು ಜೀವಂತವಾಗಿಸುವಲ್ಲಿ ಪ್ರಯತ್ನಿಸಿದ್ದಾರೆ. ನಿರುಪಾದಿ ಶಾಲೆ ಕಲಿತದ್ದು ಕೇವಲ ಮೂರನೆಯ ತರಗತಿಯಾದರೂ ತಂದೆಯವರ ಪ್ರೇರಣೆಯಿಂದ ತಬಲಾ ಕೊಳಲು, ಹಾರ್ಮೋನಿಯಂ ನುಡಿಸುವುದರ ಜೊತೆಗೆ ಹಾಡುವುದನ್ನು ಕಲಿತು ಬಾಲಕಾರ್ಮಿಕ ನಿರ್ಮೂಲನಾ ಜಾಥಾಕ್ಕೆ ಆಯ್ಕೆಯಾದ ಪ್ರಸ್ತುತವಾಗಿ ನಿರುಪಾದಿ ಬಯಲಾಟ ಕಲಾವಿದನಾಗಿ ತಾಲ್ಲೂಕಿನ ಯಾವುದೇ ಹಳ್ಳಿಯಲ್ಲಿ ಬಯಲಾಟ ನಡೆದರೂ ಅಲ್ಲಿ ಸಾರಥಿಯಾಗಿ ಹಾಜರಿರುತ್ತಾನೆ. ಹಾಸ್ಯ ರಾಜಕೀಯ, ಸಾಮಾಜಿಕ ವಿಡಂಬನೆಯ ಮಾತುಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿ ನಗೆಗಡಲಿನಲ್ಲಿ ತೇಲಿಸಿ ಬಿಡುತ್ತಾನೆ. ಬಯಲಾಟ ಕಲೆಯನ್ನು ತನ್ನ ಬದುಕನ್ನಾಗಿ ಮಾಡಿದ್ದಾರೆ. ಇವರು ಇತ್ತೀಚೆಗೆ ಚಲನಚಿತ್ರವೊಂದರಲ್ಲಿ ನಟರಾಗಿಯೂ ಅಭಿನಯಿಸಿ ಜನರ ಪ್ರೀತಿಗೆ ಪಾತ್ರರಗಿದ್ದಾರೆ. *(ಎಚ್‌ಎಚ್‌ಬಿ)*

ಜನಪದ ಕಲೆಗಳು: (ಗುಲಬರ್ಗಾ ಜಿಲ್ಲೆ) ಧರ್ಮ, ಜಾತಿ, ವೃತ್ತಿಗಳಿಗೆ ಅಂಟಿಕೊಂಡು ಜನಪದ ಕಲೆಗಳು ಬಂದಿವೆ. ಇಂತಹ ಕಲೆಗಳಲ್ಲಿ ಅವು ಬಳಕೆಯಾಗುವ ಪರಿಸರದ ಅಂಶಗಳು ಕೂಡಿ-ಕೊಂಡಿರುವುದು ಸಾಮಾನ್ಯ. ಅದಕ್ಕಾಗಿ ಮಾಡಬೇಕಾದ ಮೊದಲನೆಯ ಕೆಲಸವೆಂದರೆ ಒಂದು ಗೊತ್ತಾದ ಪರಿಸರದಲ್ಲಿ ಬಳಕೆಯಾಗುವ ಕಲೆಯೊಂದರಲ್ಲಿ ಸ್ವೀಕರಿಸಬಹುದಾದ, ನಮ್ಮ ಹೃದಯವನ್ನು ವಿಕಾಸ ಗೊಳಿಸಬಹುದಾದ ಭಾಗಗಳಾವವು; ಅದರಲ್ಲಿ ನಿರರ್ಥಕವಾದ ಭಾಗಗಳಾವವು ಎಂಬುದನ್ನು ಕಂಡುಕೊಂಡು, ಅನಾವಶ್ಯಕ ಭಾಗಗಳನ್ನು ಕಡಿದುಹಾಕುವ ಕೆಲಸ ನಡೆಯಬೇಕಾಗಿದೆ.

ಇಲ್ಲಿ ಕಲಬುರ್ಗಿ ಜಿಲ್ಲೆಯಲ್ಲಿ ದೊರೆಯುವ ಪ್ರದರ್ಶಕ ಜನಪದ ಕಲೆಗಳನ್ನು ಮಾದರಿಗಾಗಿ ಎತ್ತಿಕೊಂಡು ಚರ್ಚಿಸಿ – ಅವನ್ನು ವಿಭಾಗೀಕರಣದೊಂದಿಗೆ ಹೀಗೆ ಪಟ್ಟಿ ಮಾಡಬಹುದಾಗಿದೆ.

- ನಾಟಕಗಳು: ದೊಡ್ಡಾಟ, ಸಣ್ಣಾಟ, ಬೀದಿ ಬಯಲಾಟ, ವೇಷಗಾರರ ಆಟ.
- ಗೊಂಬೆಯಾಟ: ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟ.
- ಕುಣಿತಗಳು: ಕೋಲಾಟ, ಮರಗಾಲು, ಮರಗಾಲು ಕುದುರೆ, ಅಲಾಯಿ ಕುಣಿತ, ಪೈತ್ರ (ಹೆಜ್ಜೆ ಕುಣಿತ), ಲಂಬಾಣಿ ಕುಣಿತ.
- ಮಾಟದಾಟಗಳು: ಮೋಡಿಕರರಾಟ, ಹಾವುಗಾರರಾಟ, ಸುಡಗಾಡ ಸಿದ್ಧರಾಟ.
- ವೃತ್ತಿಕಲಾವಿದರು: ಡೊಂಬರಾಟ.
- ಜಟ್ಟಿ ಪ್ರದರ್ಶನಗಳು: ಹಾಲಗಂಬ, ಬಡಿಗೆ ತಿರುಗಿಸುವುದು, ಖಡ್ಗ ತಿರುಗಿಸುವುದು.
- ಮನರಂಜಕಗಳು: ಬೆಂಕಿ ಉಗ್ಗುವುದು, ಅಳ್ಳೋಳಿ ಬಾವಾ (ಹವ್ಯಾಸಿ ಕಲೆಗಳು), ಹೆಣದ ವೇಷ, ಹನುಮಂತನ ವೇಷ, ಹುಲಿ ವೇಷ.
- ವೃತ್ತಿಗಾಯಕರು: ಗೀಗೀಮೇಳ, ಗೊಂದಲಿಗರು, ಚೌಡಿಕೆ ಮೇಳ, ಜೋಗಣಿಯರು, ಡೊಳ್ಳಿನ ಹಾಡು, ಗೊಗ್ಗಯ್ಯಗಳು,
- ವಾದ್ಯಮೇಳ: ಹಲಗೆ, ದುಮ್ಮಾಲಿ, ಡೊಳ್ಳು, ಲೌಷೆ, ನಗಾರಿ, ಸಿಂಗ (ಕೊಂಬು ಕಹಳೆ), ಬಾಜಿ ಮೇಳ.
- ಪ್ರಾಣಿ ಪ್ರದರ್ಶನಗಳು: ಕರಡಿ ಕುಣಿತ, ಕೌಲೆತ್ತು, ಕೋತಿಯಾಟ, ನಾಯಿ, ಕುದುರೆ, ಕೋಳಿ ಕಾಳಗ, ಕೋಣದ ಕುಸ್ತಿ, ಎತ್ತಿನ ಕುಸ್ತಿ.

ಕಲಬುರ್ಗಿ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಹತ್ತು ನಮೂನೆಯ ಒಟ್ಟು 45 ಕಲೆಗಳನ್ನು ಗುರುತಿಸಿಕೊಳ್ಳಲಾಗಿದೆ.

▸ ನಾಟಕಗಳು: ಈ ವಿಭಾಗದಲ್ಲಿ ಮೊಟ್ಟ ಮೊದಲನೆಯದಾಗಿ ಗುರುತಿಸಿದ 'ಬೀದಿ ಬಯಲಾಟ' ಎಂಬ ಪ್ರಕಾರವೂ, ಕನ್ನಡ ಬಯಲಾಟಕ್ಕೆ ಕಲಬುರ್ಗಿ ಮತ್ತು ಬೀದರ ಜಿಲ್ಲೆಗಳ ಬಹು ದೊಡ್ಡ ಕಾಣಿಕೆಯಾಗಿದೆ. ಮೂಲತಃ ಇದು ಬೀದರ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಒಂದು ಕಲೆ. ಅದರ ಪ್ರಭಾವದಿಂದ ಬೀದರ ಜಿಲ್ಲೆಗೆ ಹತ್ತಿಕೊಂಡಿರುವ ಕಲಬುರ್ಗಿ ಜಿಲ್ಲೆಯ ಆಳಂದ ಮತ್ತು ಕಲಬುರ್ಗಿ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿ ಈ ಬೀದಿ ಬಯಲಾಟ ಪ್ರಚಲಿತದಲ್ಲಿದೆ. ಹಗಲು ಹೊತ್ತಿನಲ್ಲಿಯೇ, ನಡು ಬೀದಿಗಳಲ್ಲಿ ವೇಷಗಾರರ ಆಟದಂತೆ ಪ್ರದರ್ಶಿತವಾಗುವ ಆಟ ಇದು. 'ರಾಮ ಲಕ್ಷ್ಮಣ' ಮತ್ತು 'ಕೃಷ್ಣ ಗೊಲ್ಲತಿ' ಎಂಬ ಗೀತ ರೂಪಕಗಳನ್ನು ಹೀಗೆ ಬೀದಿಯ ಮೇಲೆ ಪ್ರದರ್ಶಿಸಲಾಗುತ್ತದೆ.

ಬೀದರ ಜಿಲ್ಲೆಯ ಕೋಲಾಟ ಒಂದು ಪ್ರಮುಖ ಜಾನಪದ ಕಲೆ. ಹಬ್ಬ ಹರಿದಿನಗಳಲ್ಲಿ ಕೋಲಾಟವಾಡುವ ಪದ್ಧತಿ ಬಹುತೇಕ ಹಳ್ಳಿಗಳಲ್ಲಿದೆ. ಹೀಗೆ ಕೋಲಾಟದ ಜೊತೆಗೆ 'ಕೃಷ್ಣ ಗೊಲ್ಲತಿ' ಮತ್ತು 'ರಾಮ ಲಕ್ಷ್ಮಣ' ಎಂಬ ಗೀತ ರೂಪಕಗಳನ್ನು ಕಲಿತುಕೊಳ್ಳುತ್ತಾರೆ. ಹಬ್ಬದ ದಿನ ಕೋಲಾಟದ ಕಲಾಕಾರರೊಂದಿಗೆ ಗೀತರೂಪಕದ ಪಾತ್ರಧಾರಿಗಳೂ ಹೊರಡುತ್ತಾರೆ. ಬೀದಿಯ ಒಂದು ಪ್ರಮುಖ ಸ್ಥಳದಲ್ಲಿ ಒಂದು ದಮ್ಮು ಕೋಲಾಟ ಆಡಿದ ನಂತರ, ಆ ಕಲಾವಿದರಿಗೆ ವಿರಾಮ ಕೊಟ್ಟು, ಗೀತರೂಪಕವನ್ನು ಪ್ರಾರಂಭಿಸುತ್ತಾರೆ.

ಕುಳಿತ ಜನ ಕುಳಿತಲ್ಲಿಯೇ ಇರುತ್ತಾರೆ. ಕೋಲಾಟದ ಹುಡುಗರು ತಾವು ನಿಂತಲ್ಲಿಯೇ ಚಕ್ರಾಕಾರದಲ್ಲಿ ದುಂಡಗೆ ಕುಳಿತುಕೊಳ್ಳುತ್ತಾರೆ. ಕೋಲಾಟದ ಮಾಸ್ತರನೇ ಈ ಗೀತ ರೂಪಕಗಳ ಮಾಸ್ತರನಾಗಿರುವುದರಿಂದ ಕೋಲಾಟದ ಸಂಗೀತ ಮೇಳವೇ ಗೀತರೂಪಕದ ಸಂಗೀತ ಮೇಳವಾಗಿರುತ್ತದೆ. ನಟ್ಟ ನಡುವೆ ಕುಳಿತ ಸಂಗೀತಗಾರರ ಹಾಗೂ ಸ್ವಲ್ಪ ದೂರದಲ್ಲಿ ಚಕ್ರಾಕಾರದಲ್ಲಿ ಕುಳಿತ ಕೋಲಾಟದ ಹುಡುಗರ ನಡುವೆ ಇರುವ ಗೋಲಾಕಾರದ ಸ್ಥಳವೇ ಗೀತ ರೂಪಕದ ರಂಗಸ್ಥಳ. ಇಲ್ಲಿ ಪಾತ್ರಧಾರಿಗಳು ಸುತ್ತಲೂ ತಿರುಗುತ್ತಾ ಅಭಿನಯಿಸುತ್ತಾರೆ.

'ರಾಮ ಲಕ್ಷ್ಮಣ' ಮತ್ತು 'ಕೃಷ್ಣ ಗೊಲ್ಲತಿ' ಈ ಎರಡೂ ಗೀತರೂಪಕಗಳ ವಸ್ತು ಪೌರಾಣಿಕ ಪ್ರಸಂಗಗಳಾಗಿವೆ. ಆದರೆ ಪ್ರದರ್ಶನಗೊಳ್ಳುವ ರೀತಿ ಸಾಮಾನ್ಯವಾಗಿದ್ದು, ಸಣ್ಣಾಟದ ತಂತ್ರಗಳಿಗೆ ತೀರ ಹತ್ತಿರವಾಗಿದೆ. ಈಗಲೂ ಪೌರಾಣಿಕ ವಸ್ತು ಹೊಂದಿದ ಲವಕುಶ, ರಾಮಕೃಷ್ಣ, ಗೌಳಗಿತ್ತಿ ಮುಂತಾದ ಸಣ್ಣಾಟಗಳ ಪ್ರಯೋಗಗಳನ್ನು ನೋಡುತ್ತೇವೆ. ಪೌರಾಣಿಕ ಕಥೆಯುಳ್ಳ ಪಾರಿಜಾತವೂ ಸಣ್ಣಾಟದ ಒಂದು ವಸ್ತು. ಪಾರಿಜಾತ, ಗೌಳಗಿತ್ತಿ ಮತ್ತು ಬೀದಿ ಬಯಲಾಟದ ಗೀತರೂಪಕವಾದ ಕೃಷ್ಣ ಗೊಲ್ಲತಿ ಇವುಗಳ ವಸ್ತು ಒಂದೇ ಆಗಿದೆ. ಜೊತೆಗೆ ದಾಸರಾಟ, ರಾಧಾನಾಟ, ರಾಜಾನಾಟ ಇವುಗಳ ವಸ್ತು 'ಕೃಷ್ಣ ಗೊಲ್ಲತಿ'ಗೆ ಸಮೀಪವಾಗಿದೆ. ಈ ಎಲ್ಲ ಅಂಶಗಳನ್ನು ಗಮನಿಸಿ ಹೇಳುವುದಾದರೆ, ಬೀದಿ ಬಯಲಾಟವು ಬಯಲಾಟದ ಹಳೆಯ ರೂಪವೆಂಬಂತೆ ಕಂಡುಬರುತ್ತದೆ. ಏಕೆಂದರೆ ಬಯಲಾಟದ ಬೇರುಗಳು ಬೀದಿ ಬಯಲಾಟಗಳಲ್ಲಿ ಕಂಡುಬರುತ್ತವೆ.

▸ ಮಾಟದಾಟಗಳು: ಇವು ಮಾಟ, ಕೈಚಳಕ ಮುಂತಾದವುಗಳ ಮೂಲಕ ಪ್ರದರ್ಶಿಸಲ್ಪಡುವ ಆಟಗಳು. ಮೋಡಿಕಾರರ ಆಟ ಸಂಪೂರ್ಣವಾಗಿ ಮಾಟವನ್ನು ಅವಲಂಬಿಸಿದರೆ, ಸುಡಗಾಡಸಿದ್ಧರ ಆಟವು ಕೈಚಳಕದ ಆಟವಾಗಿದೆ. ಇಲ್ಲಿ ಪ್ರಥಮವಾಗಿ ಉಲ್ಲೇಖಿತವಾದ ಹಾವುಗಾರರ ಪ್ರದರ್ಶನ ಈ ಎರಡೂ ತಂತ್ರಗಳನ್ನು ಒಳಗೊಂಡಿರುತ್ತದೆ. ಮೋಡಿಗಾರರು ಶಹಾಪುರ ತಾಲ್ಲೂಕಿನ ಮೂಡಬೂಳ ಗ್ರಾಮದಲ್ಲಿ ವಾಸವಾಗಿದ್ದಾರೆ. ಹಾವುಗಾರರು ಆಂಧ್ರದ ಗಡಿಭಾಗಗಳಾದ ಚಿಂಚೋಳಿ, ಯಾದಗಿರಿ ಮತ್ತು ಸೇಡಂ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕಂಡುಬರುತ್ತಾರೆ. ಕಾಗದ ನೋಟು ಮಾಡುವುದು, ಮಲಗಿದ ವ್ಯಕ್ತಿಯನ್ನು ಅನಾಮತ್ತಾಗಿ ಮೇಲೆತ್ತುವುದು, ಹಾವುಗಳನ್ನು ಪುಂಗಿ ಊದಿ ಆಡಿಸುವುದು ಈ ರೀತಿಯ ಇನ್ನೂ ಕೆಲವು ಪ್ರದರ್ಶನಗಳನ್ನು ಅವರು ನೀಡುತ್ತಾರೆ.

▸ ವೃತ್ತಿ ಕಲಾವಿದರು: ಈ ಭಾಗದಲ್ಲಿ ಗುರುತಿಸಿದ ಡೊಂಬರಾಟ ಸಾಮಾನ್ಯರ ಸರ್ಕಸ್. ಸರ್ಕಸ್ಸಿನಲ್ಲಿ ಪ್ರದರ್ಶಿಸುವ ತಾರಿನ ಮೇಲೆ ನಡೆಯುವುದು, ಲಾಗ ಹಾಕುವುದು, ಗಣೆಯನ್ನು ಏರುವುದು, ಉದ್ದ ಕೂದಲಿಗೆ ತುಂಬಿದ ಕೊಡ ಕಟ್ಟಿ ಎತ್ತುವುದು, ಕಬ್ಬಿಣ ಗುಂಡೆಸೆಯುವುದು, ಕಬ್ಬಿಣದ ಬಳೆಗಳಲ್ಲಿ ತೂರಿ ಬರುವುದು, ಅಡ್ಡಲಾಗಿಟ್ಟ ಸೀಸೆಯ ಮೇಲೆ ಕಟ್ಟಿಗೆಯ ಹಲಗೆಯನ್ನಿಟ್ಟು ಅದರ ಮೇಲೆ ನಿಂತು, ಹಲಿಗೆಯನ್ನು ಅಲ್ಲಾಡಿಸುತ್ತ ವಸ್ತ್ರ ಕಳಚುವುದು

ಮುಂತಾದ ಕಲೆಗಳನ್ನು ಪ್ರದರ್ಶಿಸುತ್ತಾರೆ. ಆಳಂದ ತಾಲ್ಲೂಕಿನ ದರ್ಗಾ ಶಿರೂರ ಎಂಬ ಗ್ರಾಮದಲ್ಲಿ ಈ ಜನಾಂಗದ ಕೆಲವು ಕುಟುಂಬಗಳಿವೆ. 'ಕಾಶಿಬಾಯಿ' ಎಂಬ ದೇವತೆಯ ಆರಾಧಕರಿವರು. ದರ್ಗಾ ಶಿರೂರದಲ್ಲಿರುವ ಕಾಶಿಬಾಯಿಯ ಜಾತ್ರೆ ಮೂರು ವರ್ಷಗಳಿಗೊಮ್ಮೆ ಆಗುತ್ತದೆ. ಆಗ ದೇಶದ ತುಂಬ ಹರಿದು ಹಂಚಿಹೋದ ಈ ಜನಾಂಗವೆಲ್ಲ ಅಲ್ಲಿ ಬರುತ್ತದೆಂದು ಹೇಳಲಾಗುತ್ತದೆ.

▸ **ಜಟ್ಟಿ ಪ್ರದರ್ಶನಗಳು:** ಶಕ್ತಿವಂತರು ತಮ್ಮ ಪ್ರತಿಭೆಯ ಮೂಲಕವಾಗಿ ಶಕ್ತಿ ಮತ್ತು ಯುಕ್ತಿಗಳನ್ನು ಪ್ರದರ್ಶನ ಮಾಡುವ ವಿಶೇಷಗಳು ಇವು. 'ಹಾಲಗಂಬ' ಏರುವ ಕಲೆ ಸುರಪುರ ತಾಲ್ಲೂಕಿನಲ್ಲಿ ಹೆಚ್ಚು ಪ್ರಚಲಿತವಾಗಿದೆ. ಸುರಪುರದ 'ವೇಣುಗೋಪಾಲ'ನ ಜಾತ್ರೆಯಲ್ಲಿ ಈ ಕಲೆಯನ್ನು ವಿಶೇಷವಾಗಿ ಪ್ರದರ್ಶಿಸಲಾಗುತ್ತದೆ. ಹಾಲೋಕಳೆ ಜಾತ್ರೆ ದಿನ 'ದೇವರಗಂಬ' ಎಂದು ಗುಡಿಯ ಆವರಣದಲ್ಲಿ, ನಾಲ್ಕು ಉದ್ದನೆಯ ಕಂಬಗಳನ್ನು ನೆಡುತ್ತಾರೆ. ಅವಕ್ಕೆ ರಾಳ, ನೀರು ಇತ್ಯಾದಿಗಳನ್ನು ಸವರಿ, ಕೈಹಿಡಿದರೆ ಜಾರುವಂತೆ ಮಾಡಿರುತ್ತಾರೆ. ಚಡ್ಡಿ ಹೊಡೆದು ತಯಾರಾದ ಪೈಲ್ವಾನರು ಕಂಬಕ್ಕೆ ತೆಕ್ಕೆ ಹಾಯ್ದು, ಇಡೀ ದೇಹವನ್ನು ಮೇಲಕ್ಕೆ ಮಾಡಿ, ಪುನಃ ಕೈಗಳನ್ನು ಮೇಲಕ್ಕೆ ಒಯ್ದು ಹಿಡಿಯುತ್ತ ಹೀಗೆ ಲಾಗ ಹಾಕುವ ರೀತಿಯಲ್ಲಿ ಕೆಳಗೆ ಜಾರದಂತೆ ಕಂಬವನ್ನು ಹತ್ತುತ್ತಾರೆ. ಅದೇ ಕ್ರಮದಲ್ಲಿ ಪುನಃ ಲಾಗ ಹಾಕುತ್ತ ಇಳಿಯುತ್ತಾರೆ. 'ದೇವರಗಂಬ'ಕ್ಕಿಂತ 'ರಣಗಂಬ' ದೊಡ್ಡವು. ಇವನ್ನು ಕೂಡ ಹಾಲಗಂಬ ಏರಿದಂತೆ ಏರಿ ಇಳಿಯುವ ಸ್ಪರ್ಧೆ ನಡೆಯುತ್ತದೆ. ಇಲ್ಲೂ ಶಕ್ತಿಯ ಜೊತೆಗೆ ಲಾಗ ಹಾಕಿ ಏರಿ ಇಳಿಯುವ ಯುಕ್ತಿ ಎದ್ದುಕಾಣುತ್ತದೆ. ಹೀಗಾಗಿ ಇದು ಅಪರೂಪದ ಜಾನಪದ ಕಲೆಗಳಲ್ಲಿ ಒಂದಾಗಿ ನಿಲ್ಲುತ್ತದೆ.

ಇನ್ನು 'ಬಡಿಗೆ ತಿರುಗಿಸುವುದು' ಚಾಣಾಕ್ಷ ಪೈಲ್ವಾನರ ಕೆಲಸ. ಬಡಿಗೆಯನ್ನು ಒಂದು ತುದಿಗೆ ಹಿಡಿದು ತಿರುಗಿಸುವುದು, ನಡುವೆ ಹಿಡಿದು ಚಕ್ರಾಕಾರವಾಗಿ ತಿರುಗಿಸುತ್ತ ಕೈಯನ್ನು ದೇಹದ ಸುತ್ತಮುತ್ತ ತಿರುಗಿಸುವುದು; ಒಂದೊಂದು ಕೈಯಲ್ಲಿ ಪ್ರತ್ಯೇಕ ಕೋಲು ಹಿಡಿದು ತಿರುಗಿಸುವುದು ಮುಂತಾದ ಪ್ರದರ್ಶಿಸುವ ರೀತಿ. ಇಬ್ಬರು ಕೂಡಿದರೆ ಮತ್ತೆ ಅದು ಭಿನ್ನ ರೀತಿಯಲ್ಲಿ ಪ್ರಯೋಗಗೊಳ್ಳುತ್ತದೆ. ಇಬ್ಬರೂ ಎದುರು ಬದುರಿಗೆ ನಿಂತು, ಕೋಲುಗಳನ್ನು ತಾಕಿಸುವ, ಕುಣಿಯುತ್ತ ಗುರಿತಪ್ಪದೆ ಕೋಲುಗಳನ್ನು ತಾಕಿಸುವ ನೋಟ ತುಂಬ ಮನೋಹರವಾಗಿರುತ್ತದೆ.

ಬಡಿಗೆಯಂತೆಯೇ ಕೇವಲ ಒಬ್ಬನು ಮಾತ್ರ ಖಡ್ಗ ತಿರುಗಿಸುವ ಕಲೆಯೂ ಅಪರೂಪವಾಗಿ ಕಾಣುತ್ತದೆ. ಬಿಚ್ಚುಗತ್ತಿ ಮೈಗೆ ತಾಗದಂತೆ ಜಾಣತನದಿಂದ ತಿರುಗಿಸುವ ಕಲೆ ಇದು.

▸ **ಮನರಂಜಕಗಳು (ಹವ್ಯಾಸಿ ಕಲೆಗಳು):** ಇದರಲ್ಲಿ ಬೆಂಕಿ ಉಗ್ಗುವುದು, ಅಳ್ಳೊಳ್ಳಿಬಾವಾ ಮತ್ತು ಹೆಣದ ವೇಷ ಇವುಗಳನ್ನು ಇಲ್ಲಿ ಹೊಸದಾಗಿ ಗುರುತಿಸಿಕೊಳ್ಳಲಾಗಿದೆ. ಇವೆಲ್ಲ ಹವ್ಯಾಸಿ ಕಲೆಗಳು. ನಾವು ಇಂತಹ ಕಲೆಗಳನ್ನು ಗುರುತು ಹಚ್ಚಿದರೆ ಜಾನಪದದ ಶುದ್ಧ ಕಲೆಗಳನ್ನು ಗುರುತಿಸಿದಂತಾಗುತ್ತದೆ. ಇಂತಹ ಕಲೆಗಳನ್ನು ಪ್ರೋತ್ಸಾಹಿಸುವುದರಿಂದ, ಯಾರನ್ನೂ ನಿರಂತರವಾಗಿ ಮೌಢ್ಯಕ್ಕೆ ತಳ್ಳಿದಂತಾಗುವುದಿಲ್ಲ. ಇಲ್ಲಿ ವಂಶಪಾರಂಪರ್ಯದಲ್ಲಿ ಕಲೆ ಬೆಳೆಯದೆ ಗುರು-ಶಿಷ್ಯ ಪರಂಪರೆಯಲ್ಲಿ ಬೆಳೆಯುವ ಸಾಧ್ಯತೆಗಳು ಕಾಣಿಸುತ್ತವೆ.

ಬೆಂಕಿ ಉಗ್ಗುವುದು ಒಂದು ಅದ್ಭುತ ಕಲೆ. ಬಾಯಿಯಲ್ಲಿ ಸೀಮೆಎಣ್ಣೆ ಹಾಕಿಕೊಂಡು, ಕೈಯಿಂದ ಎತ್ತಿಹಿಡಿದ ದೀವಟಿಗೆಗೆ ಬಾಯಿಯಿಂದ ಸೀಮೆ ಎಣ್ಣೆಯನ್ನು ತುಂತುರುತುಂತುರಾಗಿ ಉಗ್ಗುವುದರಿಂದ ಒಮ್ಮೆಗೇ ಧಗ್ಗೆಂದು ಬೃಹದಾಕಾರದ ಉರಿ ಹತ್ತಿಕೊಂಡು ಆರುತ್ತದೆ. ನೋಡಲು ತುಂಬ ಮೋಹಕವಾದ, ಅದ್ಭುತ, ಬೆರಗುಗೊಳಿಸಬಲ್ಲ ಕಲೆಯಿದು. ಆಳಂದ ತಾಲ್ಲೂಕಿನ ಸಲಗರ ಗ್ರಾಮದ ವಿಠ್ಠಲ ಉಪ್ಪಾರ ಎನ್ನುವವರು ಈ ಕಲೆಯಲ್ಲಿ ಪರಿಣಿತರು.

ಅಳ್ಳೊಳ್ಳಿಬಾವಾ ಮೋಹರಂ ಹಬ್ಬಗಳಲ್ಲಿ ತೊಡುವ ವೇಷ. ತನ್ನ ಅಳತೆಗೆ ಹೋಲಿಸದ, ಯಾರದೋ ಢಗಳು ಅಂಗಿ, ಚೊಣ್ಣ ಹಾಕಿಕೊಂಡು ತಲೆಗೆ ಶಂಖುವಿನ ಆಕಾರದಲ್ಲಿ ತಯಾರಿಸಿದ, ಕಾಗದಗಳಿಂದ ಅಲಂಕೃತವಾಗಿರುವ ಟೊಪ್ಪಿಗೆ ಇಟ್ಟು ಕೊಂಡಿರುತ್ತಾರೆ. ಟೊಂಕಕ್ಕೆ ಎತ್ತಿನ ಕೊರಳಿಗೆ ಕಟ್ಟುವ ಗಂಟೆಯ ಸರ ಕಟ್ಟಿಕೊಂಡಿರುತ್ತಾರೆ. ಮುಖಕ್ಕೆಲ್ಲ ಬೂದಿ ಬಳಿದು ಕೊಂಡಿರುತ್ತಾರೆ. ಈ ಎಲ್ಲ ಒಟ್ಟಾರೆ ವೇಷ ನೋಡಿದರೇನೇ ನಗು ಬರುವಂತಿರುತ್ತದೆ. ಈ ವೇಷಧಾರಿ ಮನೆಮನೆಗೆ ಹೋಗಿ, ತಾಳಿಲ್ಲದ ಹೆಜ್ಜೆಗಳಲ್ಲಿ ಕುಣಿದು ಕುಪ್ಪಳಿಸಿ, ನಗಿಸಿ ನಕ್ಕು, ಖುಷಿಪಡಿಸುತ್ತ ಹೊರಡುತ್ತಾನೆ. ಇದನ್ನು ನೋಡಿದರೆ ಪಗರಣದ ವೇಷಧಾರಿಯ ನೆನಪಾಗುತ್ತದೆ.

ಹೆಣದ ವೇಷ ಹಾಕುವುದು ಹೆಚ್ಚಾಗಿ ಹೋಳಿ ಹುಣ್ಣಿಮೆ ಯಲ್ಲಿ. ಒಬ್ಬರು ಸತ್ತಂತೆ ನಟಿಸಿದರೆ, ಇನ್ನು ಕೆಲವರು ಅವನ ತಂದೆ, ತಾಯಿ, ಹೆಂಡತಿ, ಮಕ್ಕಳಾಗಿ ಸುದ್ದಿ ಮುಟ್ಟಿಸುವುದು; ಹಾಡಿಕೊಂಡು ಅಳುವುದು, ಹೆಣದ ಮೆರವಣಿಗೆ ಮಾಡುವುದು ಇವೆಲ್ಲ ನೋಡಲು ಬಲು ಮನರಂಜನೆ ನೀಡುತ್ತವೆ.

▸ **ವೃತ್ತಿಗಾಯಕರು:** ಇಲ್ಲಿ ಹೊಸದಾಗಿ ಹೆಸರಿಸಲಾದ ಜೋಗಣಿಯರು ಆಳಂದ ತಾಲ್ಲೂಕಿನ ಚಿಂಚನಸೂರ, ಮಾಪುರ ತಾಯಿಯ ಭಕ್ತರು. ಗೊಗ್ಗಯ್ಯಗಳು ಯಾದಗಿರಿ ತಾಲ್ಲೂಕಿನ ಮೈಲಾಪುರ ಗ್ರಾಮದ ಮಲ್ಲಯ್ಯನ ಭಕ್ತರು.

▸ **ವಾದ್ಯ ಮೇಳ:** ಆಳಂದ ತಾಲ್ಲೂಕಿನ ಮಾದನ ಹಿಪ್ಪರಗಾ ಗ್ರಾಮ ಮೊದಲು 'ಮಾದರ ಹಿಪ್ಪರಗಾ' ಎಂದೇ ಪ್ರಸಿದ್ಧವಾಗಿತ್ತು. ಇಲ್ಲಿಯ ಮಾದರು ಬಾರಿಸುವ ಹಲಿಗೆಯ ಗತ್ತುಗಳನ್ನು ಕರ್ನಾಟಕದ ಯಾವ ಮೂಲೆಯಲ್ಲೂ ಕಾಣಲು ಸಾಧ್ಯವಿಲ್ಲ. ದುಮ್ಮಲಿ ಮೇಳ ಒಡ್ಡರಲ್ಲಿ ಪ್ರಚಲಿತವಾಗಿರುವ ಒಂದು ವಾದ್ಯ ಕಲೆ. ಇದೂ ಕೂಡ ಕೇವಲ ಮಾದನ ಹಿಪ್ಪರಗಾದಲ್ಲಿ ಮಾತ್ರ ನೋಡುತ್ತೇವೆ. ತಾಷೆ ಬಡಿತ-ಇಲ್ಲಿ ಹೊಸದಾಗಿ ಗುರುತಿಸಿದ ವಾದನ ಕಲೆ. ಮುಸ್ಲಿಮರ ವಾದ್ಯ ಇದು. ಮೋಹರಂ ಹಬ್ಬಗಳಲ್ಲಿ 'ಪಂಜೆ' (ಮೋಹರಂ ಪೀರ)ಗಳ ಮೆರವಣಿಗೆ ಕಾಲಕ್ಕೆ ತಾಷೆಯನ್ನು ಕಲಾತ್ಮಕವಾಗಿ ಬಾರಿಸುವ ಕೆಲವು ಅಪರೂಪದ ವ್ಯಕ್ತಿಗಳನ್ನು ನಾವು ಇಲ್ಲಿ ನೋಡುತ್ತೇವೆ. ಬಾಜಿ ಮೇಳ- ಇನ್ನೊಂದು ಹೊಸದಾಗಿ ಗುರುತಿಸಿದ ಕಲೆ. ಇದು ಕರ್ನಾಟಕದ



ಘತ್ತರಗಿ ಭಾಗ್ಯವಂತಿಯ ಸಿಡಿ ಆಚರಣೆ



ಪುರವಂತರ ಕುಣಿತ

ತುಂಬ ಪ್ರಚಲಿತವಾಗಿರುವ ಕಲೆ. ಕಣಿಹಲಿಗೆ, ದಿಮ್ಮು ಮತ್ತು ಸನಾದಿಯ ಜೊತೆಗೆ ಬಾಜಿಯಿಂದ ತರತರದ ರಾಗಗಳನ್ನು ಬಾರಿಸಲಾಗುತ್ತದೆ.

▶ **ಪ್ರಾಣಿ ಪ್ರದರ್ಶನಗಳು:** 'ಕುದುಮುಡ ಕಡ್ಡಿ' ಎಂಬುದು ನಮ್ಮ ಭಾಗದಲ್ಲಿಯ ಒಂದು ನುಡಿಗಟ್ಟು. ಕರಡಿಯ ಹಿಂದೆ ಇರುವ **'ಕುದುಮುಡ'** ಆಳಂದ ತಾಲ್ಲೂಕಿನ ಒಂದು ಗ್ರಾಮ. ಕರಡಿಗಳನ್ನು ಸಾಕಿ ಅವುಗಳನ್ನು ನಟನೆಯಲ್ಲಿ ಪಳಗಿಸಿ ಪ್ರದರ್ಶನ ಕೊಡುವಲ್ಲಿ ಕುದುಮುಡದ ಜನ ಪ್ರವೀಣರು. ಎದುರಿಗೆ ಬಂದವರಿಗೆ ಸಲಾಂ ಮಾಡುವುದು, ಬೆನ್ನಮೇಲೆ ಮಕ್ಕಳನ್ನು ಕೂರಿಸಿಕೊಂಡು ತಿರುಗಾಡುವುದು, ಪುಂಡಿಪಲ್ಯಾ ಕಡಿಯುವುದು ಮುಂತಾಗಿ ಕರಡಿಯಿಂದ ಪ್ರದರ್ಶಿಸಲಾಗುತ್ತದೆ. ಕೌಲೆತ್ತು (ಕೋಲೆ ಬಸವ) ಆಡಿಸುವವರು ಆಳಂದ ತಾಲ್ಲೂಕಿನ ಕೆರೂರ ಗ್ರಾಮದಲ್ಲಿ ವಾಸವಾಗಿದ್ದಾರೆ. ಈ ಎರಡು ಕಲೆಗಳು ಈಗಾಗಲೇ ಸಾಕಷ್ಟು ಪ್ರಸಿದ್ಧಿಗೆ ಬಂದಿವೆ. ಆದರೆ ಕೋತಿ ಆಟ, ನಾಯಿ ಆಟ, ಕುದುರೆ ಕುಣಿತ, ಕೋಳಿ ಕಾಳಗ, ಕೋಣನ ಕುಸ್ತಿ ಮತ್ತು ಎತ್ತಿನ ಕುಸ್ತಿ ಈ ಆರು ಕಲೆಗಳನ್ನು ಇಲ್ಲಿ ಹೊಸದಾಗಿ ಗುರುತಿಸಲಾಗಿದೆ.

ಯಾದಗಿರಿ ತಾಲ್ಲೂಕಿನಲ್ಲಿ ಕೆಂಪು ಕೋತಿಗಳು ವಾಸಿಸುತ್ತವೆ. ಹೀಗಾಗಿ ಅಲ್ಲಿಯ ಕೆಲವು ಜನ ಕೋತಿಗಳನ್ನು ಪಳಗಿಸಿ ಪ್ರದರ್ಶನಗಳನ್ನು ನೀಡುತ್ತಾರೆ. ಡಮರುಗ ಬಾರಿಸುತ್ತ ಕೋತಿಯೊಂದಿಗೆ ಬರುವ ಈ ಜನ ಲಾಗ ಹಾಕಿಸುವುದು, ಸಲಾಂ ಮಾಡಿಸುವುದು, ಒಂದು ಕೋತಿ ರಾಣಿ ಎಂದೂ, ಇನ್ನೊಂದು ಕೋತಿ ರಾಜಾ ಎಂದೂ ಮಾಡಿ ಹೆಣ್ಣು ಬೇಡಲು ಬರುವ ದೃಶ್ಯಗಳನ್ನು ಸಾಮಾನ್ಯವಾಗಿ ಪ್ರದರ್ಶಿಸುತ್ತಾರೆ. ಡೊಂಬರು ನಾಯಿಗಳನ್ನು ಪಳಗಿಸಿ ಅಂತರದಲ್ಲಿ ಹಿಡಿದ ಕೋಲಿನ ಮೇಲಿಂದ ಹಾರಿಸುವುದು, ಕಬ್ಬಿಣದ ಬಳೆಯಿಂದ ಹಾಯಿಸುವುದು, ತಮಗೆ ಬೇಕಾದ ಸಾಮಾನುಗಳನ್ನು ತರಿಸುವುದು ಇತ್ಯಾದಿಗಳನ್ನು ಪ್ರದರ್ಶಿಸುತ್ತಾರೆ. ಆಳಂದ ತಾಲ್ಲೂಕಿನ ತಡಕಲ್ ಎಂಬ ಗ್ರಾಮದಲ್ಲಿ ಕುದುರೆಯನ್ನು ಪಳಗಿಸಿ ಕುಣಿಸುವ ದೃಶ್ಯ ಪ್ರದರ್ಶನ ಮಾಡುತ್ತಾರೆ. ಸುರಪುರದ ತಾಲ್ಲೂಕಿನಲ್ಲಿ ಕೋಳಿ ಕಾಳಗ ಮತ್ತು ಕೋಣನ ಕುಸ್ತಿ ಪ್ರಸಿದ್ಧವಾಗಿದೆ. ಕಾರ್ಹುಣ್ಣಿಮೆಯಂದು ಎತ್ತುಗಳ ಕುಸ್ತಿ ಸಾಮಾನ್ಯವಾಗಿ ಎಲ್ಲ ಗ್ರಾಮಗಳಲ್ಲಿ ಪ್ರದರ್ಶಿಸಲ್ಪಡುತ್ತದೆ.

(ಜ್ಞಿಡಿ)

ಜನಪದ ಕಲೆಗಳು: (ಬೀದರ ಜಿಲ್ಲೆ) ಕರ್ನಾಟಕದ ಉತ್ತರ ತುದಿಯಲ್ಲಿರುವ ಒಂದು ಚಿಕ್ಕ ಜಿಲ್ಲೆ ಬೀದರ. ಹಲವು ಶತಮಾನಗಳ ಹಿಂದಿನ ಚರಿತ್ರೆ ಹೊಂದಿರುವ ಬೀದರ ಜಿಲ್ಲೆ ವಿವಿಧ ಜನಾಂಗ ಮತ್ತು ಸಂಸ್ಕೃತಿಗಳ ಸಮ್ಮಿಲನ. ಜಿಲ್ಲೆಯ ಪ್ರಮುಖ ಭಾಷೆ ಕನ್ನಡವಾಗಿದೆ. ಇಲ್ಲಿಯ ಕನ್ನಡದ ಮೇಲೆ ಉರ್ದು, ಪರ್ಷಿಯನ್ ಭಾಷೆಗಳಲ್ಲದೆ ಗಡಿನಾಡಿನ ತೆಲಗು, ಮರಾಠಿ ಭಾಷೆಗಳು ಪ್ರಭಾವ ಬೀರಿದೆ. ಬೀದರ ಭಾಷೆಯು ಪ್ರಾದೇಶಿಕವಾದ ಭಿನ್ನತೆಯನ್ನು ಪಡೆದಿದ್ದು ವಿಶಿಷ್ಟವಾಗಿದೆ.

ಬೀದರ ಜಿಲ್ಲೆಯಲ್ಲಿ ಉತ್ತರ ಕರ್ನಾಟಕದ ಸಾಮಾನ್ಯ ಜನಪದ ಕಲೆಗಳೆಲ್ಲವು ಅಸ್ತಿತ್ವದಲ್ಲಿವೆ. ಸಾಮಾನ್ಯ ಲಕ್ಷಣಗಳೊಂದಿಗೆ ಕೆಲವು ಪ್ರಾದೇಶಿಕ ವೈಶಿಷ್ಟ್ಯತೆಗಳನ್ನು ಈ ಕಲೆಗಳು ಹೊಂದಿವೆ. ಗೊಂದಲಿಗರು, ಭೂತೇರು, ಪುರವಂತರು ಮುಂತಾದ ಧಾರ್ಮಿಕ ಕಲಾ ತಂಡಗಳು ಬಹುರೂಪಿಗಳಂಥ ವೃತ್ತಿ ಕಲಾವಿದರು, ಮೊಹರಂ ಹಬ್ಬಕ್ಕೆ ಸಂಬಂಧಿಸಿದ ಹುಲಿ ಕುಣಿತ, ಅಲಾವಿ ಕುಣಿತ, ಪೈತ್ರಿ ಆಟ ಮುಂತಾದ ಕುಣಿತಗಳು, ದೊಡ್ಡಾಟ, ಡಪ್ಪಿನಾಟ (ಸಣ್ಣಾಟ) ಮುಂತಾದ ಜನಪದ ರಂಗಪ್ರಕಾರಗಳು, ಕೋಲಾಟದಂಥ ಜನಪದ ನೃತ್ಯ ಪ್ರಕಾರಗಳು ಇಲ್ಲಿಯ ಪ್ರಮುಖ ಕಲೆಗಳಾಗಿವೆ.

ಗೊಂದಲಿಗರು: ಬೀದರ ಜಿಲ್ಲೆಯ ಬಹಳಷ್ಟು ಊರುಗಳಲ್ಲಿ ಗೊಂದಲಿಗರಿರುವರು, ಇವರು ಮೂಲತಃ ಮಹಾರಾಷ್ಟ್ರದವರಾಗಿದ್ದಾರೆ. ಇವರೆಲ್ಲ ಅಂಬಾಬಾಯಿ ಭಕ್ತರು. ಗೊಂದಲ ಹಾಕುವುದು ಇವರ ಕುಲಕಸುಬು, ಇವರು ವೃತ್ತಿ ಕಲಾವಿದರು. ಇವರು ನಡೆಸುವ ಧರ್ಮಾಚರಣೆಗೆ ಗೊಂದಲ (ಗೊಂದುಳು) ಹಾಕುವದು ಎಂದು ಕರೆಯುತ್ತಾರೆ. ಹಿನ್ನೆಲೆ ವಾದ್ಯಗಳ ಮೂಲಕ ದೊಡ್ಡ ದನಿಯಲ್ಲಿ ಕಥೆಯನ್ನು ಹೇಳುವುದರ ಮೂಲಕ ಗೊಂದಲವೆಬ್ಬಿಸುವುದರಿಂದ ಈ ಹೆಸರು ಬಂದಿರಬಹುದೆಂದು ಊಹಿಸುತ್ತಾರೆ.

ಬೀದರ ಜಿಲ್ಲೆಯಲ್ಲಿ ಬಹಳಷ್ಟು ಜನಾಂಗದವರು ದಸರ ಹಬ್ಬದ (ನವರಾತ್ರಿ) ಸಂದರ್ಭದಲ್ಲಿ ಗೊಂದಳ ಹಾಕಿಸುವ ರೂಢಿ ಇದೆ. ಇದಲ್ಲದೆ ಮನೆಯಲ್ಲಿ ಯಾವುದಾದರೂ ಶುಭ ಕಾರಣ ನಡೆದಾಗ ಲಗ್ನ, ಗೋದಿ ಏರಿಸುವ ಹುಣ್ಣಿವೆ, ಯುಗಾದಿ ಹಬ್ಬ ಹರಿದಿನ, ಶ್ರಾವಣ, ಜಾತ್ರೆ, ಉತ್ಸವ ಮುಂತಾದ ಸಂದರ್ಭಗಳಲ್ಲಿಯೂ ಗೊಂದಲ ಹಾಕಿಸುವರು. ಗೊಂದಲಿಗಳು ವೃತ್ತಿ ಕಲಾವಿದರಾದ ಕಾರಣ ಅನೇಕ ಊರುಗಳಿಗೆ ಹೋಗಿ ಪ್ರದರ್ಶನ ನೀಡಿ ಅವರು ಕೊಟ್ಟದ್ದನ್ನು ಸ್ವೀಕರಿಸಿ ಮರಳುವರು.

ಗೊಂದಲ ಹಾಕುವಾಗ ಅಂಬಾದೇವಿಯನ್ನು ಪ್ರತಿಷ್ಠಾಪಿಸಿ ಕಳಸ ಹೂಡಿ ಗೊಂದಲ ಹಾಕಲು ಬಳಸುವ ವಾದ್ಯಗಳಾದ ಸಂಬಾಳ, ತುಂತುನಿ, ರಾಮತಾಳ ಮುಂತಾದವುಗಳನ್ನು ಇಟ್ಟು ಪೂಜಿಸುತ್ತಾರೆ. ರಾತ್ರಿ ಎಲ್ಲರ ಊಟವಾದ ಮೇಲೆ ಗೊಂದಲ ಪ್ರಾರಂಭಿಸುವರು. ಮೊದಲಿಗೆ ಗಣಸ್ತುತಿ, ದೇವಿ ಮಹಿಮೆ ಸ್ತುತಿ, ಗುರು ಸ್ತುತಿ, ಎಲ್ಲಾ ಪದಗಳನ್ನು ಹೇಳಿದ ಮೇಲೆ ಕಥಾಸಾರ ಪದದೊಂದಿಗೆ ಕಥೆ, ಅಡ್ಡಗತೆ, ಸಂದರ್ಭಾನುಸಾರ ನೀತಿ ತತ್ವದ ಪದ ಹಾಡುತ್ತಾ ನಿದ್ದೆ ಬಂದಾಗ ನಗಿಸುತ್ತಾ ಇಡೀ ರಾತ್ರಿ ಕಥೆ ಮುಂದುವರೆಸಿಕೊಂಡು ಹೋಗುತ್ತಾರೆ. ದೇವಿಯ ಹೆಸರ ಮೇಲೆ ಆ ರಾತ್ರಿ ದೀವಟಿಗೆ ಉರಿಸುತ್ತಾರೆ. ಬೆಳಗಾದ ಮೇಲೆ ಮಂಗಲದೊಂದಿಗೆ ಮುಗಿಸುವರು.

ಬೀದರ ಜಿಲ್ಲೆಯ ಗೊಂದಲಿಗರಲ್ಲಿ ಪ್ರಮುಖವಾದ ಮೇಳ ಭಾಲ್ಕಿ ತಾಲ್ಲೂಕಿನ ಭಾತಂಬ್ರಾದ ವಿಠಲ ಗೊಂದಲಿಯವರದು. ಇವರನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯವರು 1984 ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಮಾಣಿಕನಗರದ ಮುಕುಂದರಾವ ಗೊಂದಲಿ ಅವರಿಗೂ ಪ್ರಶಸ್ತಿ ಬಂದಿದೆ. ಗುಂಡಪ್ಪ ಅಲ್ಲೂರ, ಗುಂಡಪ್ಪ ಹಳ್ಳಿಖೇಡ, ಮಾಣಿಕ, ಸಿದ್ಧರಾಮ ಚಿಟಗುಪ್ಪ, ಹುಮನಾಬಾದಿನ ಪಾಂಡುರಂಗ, ರಾಜೇಶ್ವರದ ಶ್ರೀ ಮಾಣಿಕ ಮುಂತಾದವರು ಜಿಲ್ಲೆಯ ಇನ್ನುಳಿದ ಪ್ರಮುಖ ಗೊಂದಲ ಕಲಾವಿದರಾಗಿದ್ದಾರೆ. ಗೊಂದಲಿಗರು ತಮ್ಮ

ಗೊಂದಳದಲ್ಲಿ ಸಾಮಾನ್ಯವಾಗಿ ವಿಕ್ರಮರಾಜ, ನಳ-ನಿಳ, ಹರಿಶ್ಚಂದ್ರ ರಾಜ, ಘೋವಾರಂಗಿ, ಶ್ಯಾಮನೀಳ, ಲಾಲುಸೇನ, ಚಾಮರಾಜ ಮುಂತಾದ ಕಥೆಗಳನ್ನು ಗೊಂದಲ ಹಾಕುವಾಗ ಹೇಳುವರು.

ಭೂತೇರು: ಭೂತೇರು ಸವದತ್ತಿ ಎಲ್ಲಮ್ಮಾ ಅಥವಾ ತುಳಜಾಪೂರದ ಅಂಬಾಬಾಯಿಯ ಪರಮ ಭಕ್ತರು ಮತ್ತು ವೃತ್ತಿಗಾಯಕರು. ಬೀದರ ಜಿಲ್ಲೆಯಲ್ಲಿಯ ಭೂತೇರು ಕಮಟ ನಿಲುವಂಗಿ ಹಾಕಿಕೊಂಡು ಕೈಯಲ್ಲಿ ಅರಿವೆಯ ಕಕ್ಕಡ ಹಿಡಿದಿರುತ್ತಾರೆ. ಕೊರಳಲ್ಲಿ ಕವಡೆ, ಸರ, ಕೈಗೆ ಕವಡೆಪಟ್ಟಿ ದೇವಿಯ ಚಿತ್ರವುಳ್ಳ ಚಗಡುಗಳ ಸರ, ಕಾಲಲ್ಲಿ ಗೆಜ್ಜೆ, ತಲೆಯಲ್ಲಿ ಜಡೆ, ಕೈಯಲ್ಲಿ ಚೌಡಕಿ ಹಿಡಿದಿರುತ್ತಾರೆ. ಬಗಲಿಗೆ ಒಂದೆಡೆ ಭಂಡಾರ ಚೀಲ ಮತ್ತೊಂದೆಡೆ ಎಣ್ಣೆ ಡಬ್ಬಿ ಇರುತ್ತದೆ. ಹಣೆಯ ಮೇಲೆ ಅರಿಷಿಣ ಕುಂಕುಮ ಅಡ್ಡ ಹಚ್ಚಿಕೊಡಿರುತ್ತಾರೆ. ಊರೂರು ತಿರುಗಿ ದೇವಿ ಮಹಿಮೆಯ ಹಾಡು ಹಾಡಿ ಹೊಟ್ಟೆ ತುಂಬಿಕೊಳ್ಳುವರು. ಭೂತೇರು ಯಾವ ಜಾತಿಯವರೂ ಆಗಬಹುದು. ನಿಷ್ಠೆ, ಭಕ್ತಿ ಇರುವುದರಿಂದ ಭೂತೇರೆಲ್ಲರು ಒಂದೇ ಎಂಬ ಭಾವ. ಇವರಲ್ಲಿ ಎಲ್ಲಮ್ಮನ ಭಕ್ತರಿಗೆ ಜೋಗೇರು, ಜೋಗತಿಯರು ಅನ್ನುತ್ತಾರೆ. ಇವರ ಸಂಖ್ಯೆ ಇಲ್ಲಿ ಕಡಿಮೆ.

ಬೀದರ ತಾಲ್ಲೂಕಿನಲ್ಲಿ ಭೂತೇರ ಸಂಖ್ಯೆ ಹೆಚ್ಚು. ಬೀದರದ ಸೈದಪ್ಪಾ, ಶರಣಪ್ಪಾ, ಮನ್ನಾಖೆಳ್ಳಿಯಲ್ಲಿ ಮಾಣಿಕ, ಅಣದೂರದಲ್ಲಿ ಪಾರಮ್ಮಾ ಅಂಬವ್ವ, ಮಂಕನಳ್ಳಿಯಲ್ಲಿ ಪ್ರಭು, ದುಬಲಗುಂಡಿಯಲ್ಲಿ ಮನೋಹರ ಮುಂತಾದವರು ಸುಪ್ರಸಿದ್ಧ ಭೂತೇರರಾಗಿದ್ದಾರೆ.

ಮಹಾನವಮಿ ವಿಜಯದಶಮಿ ಸಂದರ್ಭದಲ್ಲಿ ಗೊಂದಳ ಹಾಕುವಂತೆ ಭೂತೇರು ಗೊಂದಳ ಹಾಕುತ್ತಾರೆ. ಹಿಮ್ಮೇಳ ವಾದ್ಯವಾಗಿ ದಮ್ಮಡಿ ತುಂತುನಿ ಬಳಸುತ್ತಾರೆ. ಎಲ್ಲಮ್ಮನ ಕಥೆ, ಪರಶುರಾಮನ ಕಥೆ ಪ್ರಧಾನವಾಗಿರುತ್ತವೆ. ಗೊಂದಲಿಗರು ಅನೇಕ ಬೇರೆ ಬೇರೆ ಕಥೆ ಹೇಳಿದಂತೆ ಇವರೂ ಸಹ ಬೇರೆ ಬೇರೆ ಕಥೆ ರಾತ್ರಿಯಿಡಿ ಹೇಳುತ್ತಾರೆ. ತಂಬಿಗೆ ಮೇಲೆ ತೆಂಗು ವಿಳ್ಯದೆಲೆ ಇಟ್ಟು ದೇವಿಯ ಪ್ರತಿಷ್ಠಾಪನೆ ಮಾಡಿ ಪೂಜೆ ಸಲ್ಲಿಸಿ, ಸ್ತುತಿ ಮಾಡಿ ನಂತರ ಮಾಟಗಾರ ನಾಗಶೆಟ್ಟಿ, ನದುರ ಘಾಣಗ್ಯಾ, ಸಂಗಮದಾಥ, ವಿಕ್ರಮ ರಾಜಾ, ಜ್ಞಾನಿವಂತ ರಾಜಾ, ಭಂಗಾರ ಸಾಧು, ನಳ-ನಿಳ, ರತ್ನಶೆಟ್ಟಿ ಮುಂತಾದ ಕಥೆ ಗೊಂದಲಿಗರು ಹೇಳಿದಂತೆ ಹೇಳುತ್ತಾರೆ. ಬೇರೆ ಸಂದರ್ಭದಲ್ಲಿ ಊರೂರಿಗೆ ಮನೆ ಮನೆಗೆ ಹೋಗಿ ಒಂದೊಂದು ನುಡಿ ಹಾಡು ಹೇಳುತ್ತಾ ಹೋಗುತ್ತಾರೆ. ಬೀದರ ಜಿಲ್ಲೆಯ ಜನಪದ ಗೀತೆಗಳು ಸಂಗ್ರಹದಲ್ಲಿ ಕ್ಯಾತನಹಳ್ಳಿ ರಾಮಣ್ಣನವರು ಭೂತೇರು ಕಾವ್ಯವನ್ನು ಪರಿಚಯಿಸಿದ್ದಾರೆ. ಇದೊಂದು ಬೀದರ ಜಿಲ್ಲೆಯ ವಿಶಿಷ್ಟ ಕಲೆಯಾಗಿದೆ.

ಪುರವಂತರು: ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಶೈವ ವೀರಶೈವ ಪರಂಪರೆಯ ವಿಶಿಷ್ಟವಾದ ಧಾರ್ಮಿಕ ಕಲೆ ಪುರವಂತಿಕೆ. ಈ ಕಲೆಯನ್ನು ಪ್ರದರ್ಶಿಸುವವರಿಗೆ ಪುರವಂತರೆಂದು ಕರೆಯುತ್ತಾರೆ. ಸಾಕ್ಷಾತ್ ವೀರಭದ್ರನ ಅವತಾರವೆಂಬ ನಂಬಿಕೆ ಇದೆ.

ಮದುವೆಗಳ ಹಾಲುಗುಗ್ಗಳು ದೇವಕಾರ್ಯ ತೆಗೆಯುವ ಸಮಯಕ್ಕೆ, ದೇವರ ಉತ್ಸವ, ಪಲ್ಲಕ್ಕಿ ಮೆರವಣಿಗೆ, ಅಗ್ಗಿ (ಅಗ್ನಿಕುಂಡ) ತುಳಿಯುವ ಸಂದರ್ಭಗಳಲ್ಲಿ ಪುರವಂತರು ವೀರಾವೇಶದಿಂದ ವೀರಭದ್ರನ ಖಡೆ ಒಡಪು ಹೇಳುತ್ತಾ ಕುಣಿಯುತ್ತಾರೆ. ಬೀದರ ಜಿಲ್ಲೆಯಲ್ಲಿ ಇದಕ್ಕೆ ಒಡು ಓದುವರು ಎನ್ನುತ್ತಾರೆ. ಒಂದೊಂದು ಸಾಲಿನ ಕೊನೆಗೂ ಓಂ ನಮಃ ಶಿವಾಯ ಎಂದು ಹಿಮ್ಮೇಳವಾಗಿ ಹೇಳುವರು.

ವೀರಾವೇಶದಿಂದ ಕುಣಿಯುವಾಗ ಪುರವಂತನು ಶಸ್ತ್ರ ಚುಚ್ಚಿಸಿಕೊಳ್ಳುವನು. ಭಕ್ತಿಯಿಂದ ಚುಚ್ಚಿಕೊಳ್ಳುವವರಿಗೂ ಚುಚ್ಚುವನು ಹಳ್ಳಿಯಲ್ಲಿ ಇದನ್ನು ಬಹಳ ಶ್ರದ್ಧೆಯಿಂದ ಪೋಷಿಸಿಕೊಂಡು ಬಂದಿದ್ದಾರೆ. ಕಲಾವಿದರ ವೇಷಭೂಷಣ ತುಂಬಾ ವರ್ಣಮಯ ಮತ್ತು ಆಕರ್ಷಕವಾಗಿರುತ್ತವೆ. ವೀರಗಾಸೆ, ಕಾವಿ ಅಂಗಿ, ಟೊಂಕಕ್ಕೆ ವೀರಭದ್ರನ ಮುದ್ರೆಯ ವಡಕಟ್ಟು, ತೋಳಿಗೆ ಬೆಳ್ಳಿಯ ನಾಗರಗಳು, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಹಣೆಗೆ ವಿಭೂತಿ, ತಲೆಗೆ ಕಾವಿ ರುಮಾಲು ಸುತ್ತಿರುತ್ತಾರೆ.

ಬೀದರ ಜಿಲ್ಲೆಯಲ್ಲಿ ಹುಮನಾಬಾದ ವೀರಭದ್ರ, ಚಾಂಗಲೇರ ವೀರಭದ್ರ ದೇವರು ಉಗ್ರದೇವರೆಂದೇ ಖ್ಯಾತಿ ಪಡೆದಿದ್ದಾರೆ. ಈ ಜಾತ್ರಾ ಮಹೋತ್ಸವದಲ್ಲಿ ಅಲ್ಲಲ್ಲಿ ಇರುವ ಪುರವಂತರೆಲ್ಲಾ ಸೇರಿ ತಮ್ಮ ಸೇವೆ ಸಲ್ಲಿಸುತ್ತಾರೆ. ವೀರಭದ್ರದೇವರ ಅಗ್ಗಿ (ಅಗ್ನಿ) ಮೊದಲು ಪುರವಂತರೇ ತುಳಿಯುತ್ತಾರೆ. ಜಿಲ್ಲೆಯಲ್ಲಿ ಹುಮಾನಾಬಾದ, ಗೊರ್ಟಾ, ಚಾಂಗಲೇರ, ಸಸ್ತಾಪೂರ ಮುಂತಾದ ಊರುಗಳಲ್ಲಿ ಪುರವಂತರಿದ್ದಾರೆ. ಸಪ್ತಾಪೂರಿನ ಹಣಮಂತಪ್ಪಾ ಅತಲಾಪೂರ ಅವರು ಬಡಮಿ ಸುಪ್ರಸಿದ್ಧ ಪುರವಂತರಿದ್ದಾರೆ. ಪುರವಂತರು ಒಡಪು ಓದುವಾಗ ವೀರಭದ್ರನ ಅವತಾರ ಲೀಲೆ, ರೌದ್ರತೆಯ ವರ್ಣನೆ ಮಾಡುತ್ತಾರೆ. ಅದರೊಂದಿಗೆ ಅವರ ಹಾವಭಾವವು ವೀರಾವೇಶದಿಂದ ಕೂಡಿರುತ್ತದೆ. ಇವಲ್ಲದೆ ಶರಣರ ವಚನಗಳು, ವಿಶೇಷವಾಗಿ ಅಂಬಿಗರ ಚೌಡಯ್ಯ ಮತ್ತು ಮಡಿವಾಳ ಮಾಚಿದೇವರ ವಚನಗಳನ್ನು ಹೇಳುತ್ತಾರೆ. ಒಡಪುಗಳು ಜಿಲ್ಲೆಯ ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಉಳಿಸಿಕೊಂಡಿವೆ.

ಬಹುರೂಪಿಗಳು: ಜೀವನ ನಿರ್ವಹಣೆಗಾಗಿ ವಿವಿಧ ಬಣ್ಣದ ವೇಷಗಳನ್ನು ಹಾಕುವವರು ವೇಷಗಾರರು. ಇವರಿಗೆ ಬಹುರೂಪಿಗಳೆಂದು, ಜಾತಗಾರರೆಂದು ಕರೆಯುತ್ತಾರೆ. ಇವರು ವೃತ್ತಿಕಲಾವಿದರು. ಇವರು ಅಲೆಮಾರಿಗಳ ಗುಂಪಿಗೆ ಸೇರುತ್ತಾರೆ. ಇವರು ಬಹುರೂಪಿ ಚೌಡಯ್ಯನ ವಂಶಜರು ಎಂದು ಹೇಳಿಕೊಳ್ಳುತ್ತಾರೆ. ಒಂದೊಂದು ಕಡೆಗೆ 10-15 ದಿವಸಗಳವರೆಗೆ ಬಿಡಾರ ಹೂಡಿದ್ದು ಪ್ರತಿ ದಿವಸ ಒಂದೆರಡು ವೇಷಗಳನ್ನು ಹಾಕಿಕೊಂಡು ಮನೆ ಮನೆಗೆ ಹೋಗಿ ಹಗಲು ಹೊತ್ತಿನಲ್ಲಿ ಅನೇಕ ಪ್ರಸಂಗಗಳನ್ನಾಡಿ ಜನರನ್ನು ಮನರಂಜಿಸುತ್ತಾರೆ. ಅವರು ಸಂತೋಷದಿಂದ ಕೊಟ್ಟ ಕಾಳುಕಡ್ಡಿಗಳನ್ನು ಸ್ವೀಕರಿಸುತ್ತಾರೆ. ಇವರ ಉದ್ದೇಶ ಭಿಕ್ಷೆಯಾಗಿರದೆ ಕಲಾ ಪ್ರಚಾರವಾಗಿರುತ್ತದೆ.

ವೇಷಾಗಾರರು ಸಾಮಾನ್ಯವಾಗಿ ಭಸ್ಮಾಸರು, ನರಕಾಸುರ, ಹರಿಶ್ಚಂದ್ರ, ವಿಶ್ವಾಮಿತ್ರ, ರಾಮ ಲಕ್ಷ್ಮಣ, ಹನುಮಂತ, ಲಂಬಾಣಿ ವೇಷ ಇತ್ಯಾದಿ ಹಾಕುತ್ತಾರೆ. ಒಂದು ತಂಡದಲ್ಲಿ ಎಂಟು ಹತ್ತು ಜನರಿರುವರು. ಒಂದೊಂದು ಮನೆಯ ಮುಂದೆ ಹತ್ತು ಹದಿನೈದು ನಿಮಿಷ ಕಲಾ ಪ್ರದರ್ಶನ ಮಾಡುವರು.



ಬಹುರೂಪಿಗಳು

ಬೀದರ ಜಿಲ್ಲೆಯಲ್ಲಿ ಅನೇಕ ಊರುಗಳಲ್ಲಿ ಬಹುರೂಪಿಗಳಿದ್ದಾರೆ. ಹುಮನಾಬಾದ ತಾಲ್ಲೂಕಿನ ನಿರ್ಣಾವಾಡಿ ಗ್ರಾಮದ ಏಕನಾಥ ಗಂಗಪ್ಪಾ ಬಹುರೂಪಿಯವರು ನಾಡಿನಾದ್ಯಂತ ಓಡಾಡಿ ಬಹುರೂಪಿ ಕಲೆಗೆ ಹೆಸರು ತಂದುಕೊಟ್ಟಿದ್ದಾರೆ. ಏಕನಾಥ ಬಹುರೂಪಿಯವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಬಹುರೂಪಿ ಕಲೆಗಾಗಿ 1986 ರ ಪ್ರಶಸ್ತಿ ನೀಡಿ ಗೌರವಿಸಿದೆ. ಮೊಹರಂ ಹಬ್ಬದ ಕುಣಿತಗಳನ್ನು ಹುಲಿವೇಷ ಕುಣಿತ, ಅಲಾಯಿ ಕುಣಿತ ಮತ್ತು ಪೈತ್ರಿ ಎಂದು ವಿಂಗಡಿಸಬಹುದು.

ಹುಲಿವೇಷ ಕುಣಿತ: ಮೊಹರಂ ಹಬ್ಬದ ಸಂದರ್ಭದಲ್ಲಿ ಮನರಂಜನೆಗಾಗಿ ಹುಲಿವೇಷ ಹಾಕಿಕೊಂಡು ಹಲಗೆಯ ಗತ್ತಿಗೆ ಕುಣಿಯುತ್ತಾರೆ. ವೇಷ ಹಾಕದೆಯೂ ಹಲಗೆಯ ಗತ್ತಿಗೆ ಸಂತೋಷದಿಂದ ಹುಲಿವೇಷದವರ ಹಾಗೆ ಕುಣಿಯುತ್ತಾರೆ. ಪೀರನ ಸವಾರಿಯ ಖತಬ್ ರಾತ್ರಿ ಮೆರವಣಿಗೆಯ ಎದುರಿಗೆ ಈ ದೃಶ್ಯ ನೋಡಲು ಲಭ್ಯವಾಗುತ್ತದೆ. ಔರಾದ ಬೀದರ ತಾಲ್ಲೂಕುಗಳಲ್ಲಿ ಹೆಚ್ಚಿಗೆ ಈ ಹುಲಿವೇಷದ ಕುಣಿತ ಕಂಡುಬರುತ್ತದೆ.

ಅಲಾಯಿ ಕುಣಿತ: ಮೊಹರಂ ಹಬ್ಬದಲ್ಲಿ ಕೆಂಡದಿಂದ ಮಾಡಿದ ಕೊಂಡದ ಸುತ್ತ ಕುಣಿಯುವುದೇ ಅಲಾಯಿ ಕುಣಿತ. ದುಂಡಗೆ ಸುತ್ತುತ್ತ ಹೆಜ್ಜೆ ಹಾಕುತ್ತ ಕುಣಿಯುತ್ತಾರೆ. ಕಾಲಲ್ಲಿ ಗೆಜ್ಜೆಗಳಿರುತ್ತವೆ. ಮುಸ್ಲಿಂ ಅಲ್ಲದವರೂ ಈ ಕುಣಿತಗಳಲ್ಲಿ ಭಾಗವಹಿಸುವದು ಒಂದು ವಿಶೇಷ.

ಪೈತ್ರಿ: ಮೊಹರಂ ಹಬ್ಬವು ಹಿಂದು-ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿದೆ. ಭಾಲ್ಕಿ ತಾಲ್ಲೂಕಿನ ಶಿವಣಿಯಲ್ಲಿ ಹಿಂದುಗಳ ಮನೆಯಲ್ಲಿ ಪೀರ ಕೂಡಿಸಿ ಮೊಹರಂ ಆಚರಿಸುವದು ಇದಕ್ಕೆ ನಿದರ್ಶನ. ಬೀದರ ಜಿಲ್ಲೆಯಲ್ಲಿ ಹೇರಳವಾಗಿ ಮೊಹರಂ ಪದಗಳು ಸಿಗುತ್ತವೆ. ಈ ಹಾಡುಗಳೊಂದಿಗೆ ಪೈತ್ರಿ ಆಡುವದು (ಕುಣಿಯುವದು) ಬೀದರ ಜಿಲ್ಲೆಯಲ್ಲಿದೆ. ಢೋಲಕಿ, ತಾಳ ಹಿನ್ನೆಲೆ ವಾದ್ಯವಾಗಿ ಬಳಸುತ್ತಾರೆ. ಹಾಡಿನೊಂದಿಗೆ ಕುಣಿಯುವ ಕಲಾವಿದರು ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡಿರುತ್ತಾರೆ. ಸೊಂಟಕ್ಕೆ ಕಲ್ಸ ಬಿಗಿದು ಒಂದು ಕೈಯಲ್ಲಿ ಹೂವಿನ ಗಿಡ, ಇನ್ನೊಂದು ಕೈಯಲ್ಲಿ ಕರವಸ್ತ್ರ ಹಿಡಿದು ಎದಿರುಬದಿರಾಗಿ ನಿಲ್ಲುತ್ತಾರೆ. ಕಲಾವಿದರು ಮೂರು ಹೆಜ್ಜೆ ಕುಣಿತ ಮಾಡುತ್ತ ಆಗಾಗ ಫಿರಕಿ ಹೊಡೆಯುತ್ತ ಬೈಠಕ್ ಹೊಡೆಯುತ್ತ ಹುಮ್ಮಸ್ಸಿನಿಂದ ಕುಣಿಯುತ್ತಾರೆ. ಎರಡು ತಂಡಗಳ ನಡುವೆ ಸವಾಲ್ ಜವಾಬ್ ಕೂಡ ನಡೆಯುತ್ತದೆ. ಪೀರನ ಸವಾರಿಯು ಹೊರಟಾಗ ಪೈತ್ರಿ ಕುಣಿಯುತ್ತ ಜನರನ್ನು ಮನರಂಜಿಸುತ್ತಾರೆ. ಬೀದರ ಜಿಲ್ಲೆಯಾದ್ಯಂತ ಊರೂರಿಗೆ ಈ ಮೇಳಗಳಿವೆ.

ದೊಡ್ಡಾಟ: ಬಯಲಾಟವು ಕರ್ನಾಟಕದ ಜನಪದ ಕಲೆಗಳಲ್ಲಿ ಅತ್ಯಂತ ವೈವಿಧ್ಯದಿಂದ ಕೂಡಿದ ರಂಗಕಲೆಯಾಗಿದೆ. ಇದರಲ್ಲಿ ಸಾಹಿತ್ಯ, ಸಂಗೀತ, ನೃತ್ಯಗಳ ಮಿಲನವಿದೆ. ಬಯಲಾಟದಲ್ಲಿ ದೊಡ್ಡಾಟ ಮತ್ತು ಸಣ್ಣಾಟಗಳೆಂದು ಸ್ಥೂಲವಾಗಿ ವಿಂಗಡಿಸಿಕೊಳ್ಳಬಹುದು. ದೊಡ್ಡಾಟವನ್ನು 'ಮೂಡಲಪಾಯ' 'ಅಜ್ಜುದಾಟ' ಬೈಲ್ಕತೆ ಎಂದೂ ಕರೆಯುವರು. ಪೌರಾಣಿಕ ಪ್ರಸಂಗಗಳನ್ನೊಳಗೊಂಡ ಈ ಆಟಗಳು ರಾತ್ರಿಯೆಲ್ಲ ನಡೆದು ಸೂರ್ಯೋದಯದ ವೇಳೆಗೆ ಮುಕ್ತಾಯವಾಗುತ್ತವೆ. ದೊಡ್ಡಾಟಗಳಿಗೆ ಬಯಲಾಟವೆಂದು ಕರೆಯುವುದೇ ಬೀದರ ಜಿಲ್ಲೆಯಲ್ಲಿ ಹೆಚ್ಚು ರೂಢಿಯಲ್ಲಿದೆ. ಬಹಳ ಹಿಂದಿನಿಂದಲೂ ಗ್ರಾಮೀಣರಿಗೆ ಮನರಂಜನೆ ಒದಗಿಸಿಕೊಂಡು ಬರುತ್ತಿರುವ ಹವ್ಯಾಸಿ ಕಲೆ ಬಯಲಾಟ.

ಬೀದರ ಜಿಲ್ಲೆಯಲ್ಲಿ ಕೋಳಾರ ಗ್ರಾಮದ ಇಮಾಮಸಾಬ ತಂದೆ ಪೀರಸಾಬ ಇವರು ಬಯಲಾಟದ ಕವಿಯಾಗಿದ್ದಾರೆ. ಇವರು 'ದ್ರೌಪದಿ ವಸ್ತ್ರಾಪಹರಣ' 'ಕನಕಾಂಗಿ' 'ಐರಾವಣ-ಮೈರಾವಣ' ದೊಡ್ಡಾಟಗಳನ್ನು ಬರೆದಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಬಯಲಾಟ ಕಲೆಗಾಗಿ 1985ರ ಪ್ರಶಸ್ತಿ ನೀಡಿ ಗೌರವಿಸಿದೆ. 'ಬಾಣಾಸುರ' ದೊಡ್ಡಾಟ ಕೊಳ್ಳೂರು ಹುಸನಾ ರಚಿಸಿದ್ದಾರೆ.

ಕೋಸಮ್ ಗ್ರಾಮದ ಹಣಮಂತಪ್ಪ ಬಿರಾದಾರ, ಬೇನಚಿಂಚೋಳಿಯ ಗಿರಪ್ಪಾ ಜಮಾದಾರ, ಮುಚಳಂಬಿಯ ಗದಗಯ್ಯ, ಸಂತಪೂರದ ಶಿವಮೂರ್ತಪ್ಪಸ್ವಾಮಿ, ಹುಲಸೂರಿನ ಶಂಬು ಮತ್ತು ಶ್ರೀರಂಗ ಮಾಸ್ತರ ಬೀದರ ಜಿಲ್ಲೆಯ ದೊಡ್ಡಾಟಗಳ ಪ್ರಮುಖ ಮಾಸ್ತರರಾಗಿದ್ದಾರೆ.

'ಐರಾವಣ ಮೈರಾವ' ಮತ್ತು 'ಬಾಣಾಸುರ ದೊಡ್ಡಾಟ' ಗಳು ಏಣಕೂರ, ದಾಡಗಿ, ಚಿಂಚೋಳಿ ಕೊಹಿನೂರು, ಮಂಠಾಳ ಮುಂತಾದ ಊರುಗಳಲ್ಲಿ ಹೆಚ್ಚು ಆಡುತ್ತಾರೆ. 'ದ್ರೌಪದಿ ವಸ್ತ್ರಾಪಹರಣ' 'ಕನಕಾಂಗಿ' ದೊಡ್ಡಾಟಗಳು ಕೋಸಮ್, ತೇಗಂಪೂರ ಕೋಳಾರ ಮುಂತಾದ ಊರುಗಳಲ್ಲಿ 'ಗಿರಿಜಾ ಕಲ್ಯಾಣ' ಸಂತಪೂರ ಮತ್ತು ಸುತ್ತಲಿನ ಊರುಗಳಲ್ಲಿ ಹೆಚ್ಚು ಆಡುವರು.



ಜಗ್ಗಲಗಿ



ಅಲಾಯಿ ಕುಣಿತ

'ಕೃಷ್ಣಾರ್ಜುನ ಕಾಳಗ' ಮುಚಳಂಬಿಯ ಗದಗಯ್ಯ ಮಾಸ್ತರ ಜಿಲ್ಲೆಯ ಅನೇಕ ಕಡೆಗೆ ಕಲಿಸಿ ಗಂಗಾಳ ಮಂಟಪ ರಚಿಸಿ ಪ್ರದರ್ಶನ ನೀಡಿದ್ದಾರೆ. 'ದಕ್ಷ ಬ್ರಹ್ಮ' ದೊಡ್ಡಾಟ ಶ್ರೀ ಗಿರೆಪ್ಪಾ ಜಮಾದಾರ ಜಿಲ್ಲೆಯ ಅನೇಕ ಊರುಗಳಲ್ಲಿ ಕಲಿಸಿ ಆಡಿಸಿದ್ದಾರೆ.

ಡಪ್ಪಿನಾಟ (ಸಣ್ಣಾಟ): ಸಣ್ಣಾಟವೆಂದು ಗುರುತಿಸಲ್ಪಡುತ್ತಿರುವ ಡಪ್ಪಿನಾಟ ಕಳೆದ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿ ಬೆಳಕಿಗೆ ಬಂದಿರುವಂಥದು. ಡಪ್ಪಿನ ವಾದ್ಯಗಳೊಂದಿಗೆ ಸಾಗುವ ಹಾಡುಗಳನ್ನೊಳಗೊಂಡ ಬಯಲಾಟ ಡಪ್ಪಿನಾಟ. ಮೂಡಲ ಪಾಯದಿಂದ ಡಪ್ಪಿನಾಟವನ್ನು ಬೇರ್ಪಡಿಸಿ ಸೂಚಿಸುವುದಕ್ಕಾಗಿ 'ಸಣ್ಣಾಟ' ಶಬ್ದ ಹುಟ್ಟಿಕೊಂಡಿದೆ. ಉತ್ತರ ಕರ್ನಾಟಕದ ಬಹಳಷ್ಟು ಭಾಗಗಳಲ್ಲಿ ಹಾಗೂ ಬೀದರ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಇವುಗಳಿಗೆ ಡಪ್ಪಿನಾಟವೆಂದು ಕರೆಯುವುದೇ ರೂಢಿ.

ಬೀದರ ಜಿಲ್ಲೆಯಲ್ಲಿ ಎಲ್ಲ ಪ್ರಕಾರದ ಡಪ್ಪಿನಾಟಗಳೂ ಇವೆ. ಡಪ್ಪಿನಾಟಗಳನ್ನು ರಚಿಸಿದ ಅನೇಕ ಕವಿಗಳು ಆಗಿಹೋಗಿದ್ದಾರೆ. ಅನೇಕರು ಇದ್ದಾರೆ. ಕೋಳಾರ ಗ್ರಾಮದ ಇಮಾಮಸಾಬರು ಕೊಮಟಗ್ಯಾನ ಆಟ, ಕಬೀರದಾಸನಾಟ, ಭಾಗ್ಯಶಾಲಿ, ಸತ್ಯಭಗಿಣಿ ಮುಂತಾದ ಡಪ್ಪಿನಾಟಗಳನ್ನು ಬರೆದಿದ್ದಾರೆ, ಕಲಿಸಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯವರು ಬಯಲಾಟ ಡಪ್ಪಿನಾಟ ಕಲೆಗಾಗಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ (1985). ಚಳಕಾಪೂರ ಗ್ರಾಮದ ಬಸಪ್ಪಾ ಬೆಟ್ಟದವರು ಮನಚಂದ ರಾಜಾ, ಧರ್ಮಪಾಲ ರಾಜಾ, ಅಂಬರ ರಾಜಾ, ಸೋನಾರಂಗಿ ಮುಂತಾದ ಡಪ್ಪಿನಾಟಗಳನ್ನು ಬರೆದಿದ್ದಾರೆ.

ಬೇಲೂರ ಬಸವಂತರಾಯರು 'ಹೇಮರಡ್ಡಿ ಮಲ್ಲಮ್ಮ' ನರೋಣಾ ಕಾಶಿನಾಥರು 'ಕಬೀರ ಕಮಲ' ಗೋರಟಾ (ಬಿ) ಶಿವಲಿಂಗ ಸ್ವಾಮಿಗಳು 'ಸತ್ವಪರೀಕ್ಷೆ', ಉಚ್ಚಾ ಚನ್ನಬಸಯ್ಯ ಸ್ವಾಮಿಯವರು 'ಲೋಕ ಸುಂದರಿ', 'ಶಿವಶಂಕರ', ಐನಾಪೂರ ಮಾರುತಿಯು 'ಮೈದುನ ಮಾಯಾ', 'ಗುಣವಂತ', ಧುಮ್ಮನಸೂರ ಸಿದ್ಧಪ್ರಭುಗಳು 'ಭೂ ಕೈಲಾಸ', 'ಚಂದ್ರ ಶಿರೋಮಣಿ', ಬೇನಚಿಂಚೋಳಿ ಗಿರಪ್ಪಾ ಜಮಾದಾರ 'ಮೀನಾಕ್ಷಿ ಬಡಬಸವಂತ', 'ತವರು ಮನಿ', 'ಬಂಧುಪ್ರೇಮ' ಮುಂತಾದ ಡಪ್ಪಿನಾಟಗಳನ್ನು ರಚಿಸಿದ್ದಾರೆ. ಆಟ ಕಲಿಸುವುದೇ ಒಂದು ಕಾಯಕ ಮಾಡಿಕೊಂಡ ಗಿರಪ್ಪಾ ಅಂಬಣ್ಣ ಜಮಾದಾರ ಅವರು ವೃತ್ತಿ ಕಲಾವಿದರಾಗಿಬಿಟ್ಟಿದ್ದಾರೆ. ಅವರು ಸಂಗೀತ ನಾಟಕವನ್ನು ಕಲಿಸುವುದರಿಂದ ಇವರ ಹಾಡುಗಾರಿಕೆಯ ಮೇಲೆ ನಾಟಕದ ಛಾಯೆ ಕಾಣುತ್ತಿದೆ. ಇವರು ಜಿಲ್ಲಿಯ ಹೆಚ್ಚಿನ ಊರುಗಳಲ್ಲಿ ಕಲಿಸಿ ಪ್ರದರ್ಶನ ನೀಡಿ ಖ್ಯಾತಿ ಪಡೆದಿದ್ದಾರೆ.

ಗಂಗಾಳ ಮಂಟಪ: ಜಿಲ್ಲೆಯಲ್ಲಿ ಕೆಲವು ಕಡೆಗೆ ಗಂಗಾಳ ಮಂಟಪ ರಚಿಸಿ ಅಟ್ಟಕಟ್ಟಿ ಆಡುವರು. ಇದು ಅಪರೂಪದ ರಂಗ ಮಂಟಪ. ಮುಂಭಾಗದಲ್ಲಿ ಎದುರಿನ ಮೇಲ್ಭಾಗದಲ್ಲೆಲ್ಲ ಹಿತ್ತಾಳೆ ಗಂಗಾಳಗಳು ಹೊಂದಿಸಿರುತ್ತಾರೆ. ಅಟ್ಟದ ಮೇಲೆ ಪಾತ್ರಗಳು ಕುಣಿದಾಗ ಇವು ನವಿರಾಗಿ ಅಲುಗಾಡಿ ಒಂದಕ್ಕೊಂದು ತಗುಲಿ ವಿಶೇಷ ನಾದವನ್ನುಂಟು ಮಾಡುತ್ತವೆ. ರಂಗ ಮಂಟಪ ಥಳಥಳ ಹೊಳೆಯುತ್ತದೆ. ಮೇಳದವರು ವೇದಿಕೆಯ ಒಂದು ಕಡೆಗೆ ಇರುತ್ತಾರೆ. ಮಾಸ್ತರನು ವೇದಿಕೆ ಮೇಲೆ ಕಾಣುವಂತೆಯೇ ಇರುತ್ತಾನೆ. ಸಾರಥಿ ಪ್ರೇಕ್ಷಕರ ಪ್ರತಿನಿಧಿಯಾಗಿ ಪಾತ್ರ ಪರಿಚಯ ಮಾಡಿಸಿಕೊಡುವುದರೊಂದಿಗೆ ಹಾಸ್ಯವನ್ನುಂಟು ಮಾಡುತ್ತಾನೆ. ಕುಣಿತ ಮತ್ತು ಹಾಡುಗಾರಿಕೆಯಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ.

ಕೋಲಾಟ: ಕೋಲಾಟ ಜನಪ್ರಿಯವಾದ ಹಳ್ಳಿಯ ಗಂಡು ಕಲೆ. ಗುಡಿ ಇಲ್ಲದ ಊರಿಲ್ಲ, ಕೋಲಾಟವಿಲ್ಲದ ಹಳ್ಳಿಯಿಲ್ಲ. ಕೋಲಾಟ ಒಂದು ಪ್ರಮುಖ ಜನಪದ ಕಲೆ. ಹಾಡು ಮತ್ತು ನೃತ್ಯ ಎರಡೂ ಕೋಲಾಟದಲ್ಲಿ ಇರುವುದರಿಂದ ಹೆಚ್ಚು ಜನಪ್ರಿಯವಾಗಿದೆ. ಸಾಹಿತ್ಯ, ಸಂಗೀತ, ನೃತ್ಯಗಳ ಒಂದು ಸಮ್ಮಿಶ್ರ ಜನಪದ ಕಲೆಯೇ ಕೋಲಾಟವಾಗಿದೆ. ಆದುದರಿಂದ ಇದೊಂದು ಸಂಕೀರ್ಣ ಕಲೆಯಾಗಿದೆ. ಇದರಿಂದ ದೇಹಕ್ಕೆ ಒಳ್ಳೆಯ ವ್ಯಾಯಾಮವಾಗುತ್ತದೆ. ಸಾಮಾನ್ಯವಾಗಿ ಗಂಡಸರೇ ಕೋಲಾಟ ಮಾಡುವರು. ಆದರೆ ಲಂಬಾಣಿ ಜನಾಂಗಗಳಲ್ಲಿ ಹೆಣ್ಣು ಮಕ್ಕಳು ಪ್ರತ್ಯೇಕವಾಗಿ ಕೋಲಾಟವಾಡುವರು. ಲಂಬಾಣಿ ಹೆಂಗಸರ ಕೋಲಾಟ ತುಂಬ ಆಕರ್ಷಣೀಯವಾಗಿರುವುದು.

ಬೀದರ ಜಿಲ್ಲೆಯ ಕೋಲಾಟ ವಿಶಿಷ್ಟವಾದುದಾಗಿದೆ. ಕೋಲಾಟ ರಂಗ ಪ್ರಯೋಗ ಇಲ್ಲಿ ಜನಪ್ರಿಯವಾಗಿದೆ. ಇಲ್ಲಿಯ ಕೋಲಾಟದ ಪರಂಪರೆಯಲ್ಲಿ ಕೋಲಾಟ ಪ್ರಸಂಗಗಳು ಅಡಕವಾಗಿವೆ. ಬೇರೆ ಕಡೆಗೆ ಸಿಕ್ಕುವ ಕೋಲಾಟ ಪ್ರಕಾರಗಳ ಜೊತೆಗೆ ಇಲ್ಲಿಯವೇ ಆದ ವಿಶಿಷ್ಟ ಕೋಲಾಟದ ಪ್ರಕಾರಗಳಿವೆ. 84 ಕೋಲಾಟದ ಪ್ರಕಾರಗಳು ಹಾಗೂ ಅಪರೂಪದ ಜಡೆಕೋಲಾಟ ಬೀದರ ಜಿಲ್ಲೆಯಲ್ಲಿ ಚಾಲ್ತಿಯಲ್ಲಿವೆ. ಇಲ್ಲಿಯ ಕಲಾವಿದರು ಬಳಸುವ ಕೋಲುಗಳಲ್ಲಿ ವೈವಿಧ್ಯತೆಯಿದೆ. ಅದರಿಂದ ಇಲ್ಲಿಯ ಜನರ ಕಲಾರಸಿಕತೆ



ಕೋಲಾಟ

ಕಂಡುಬರುತ್ತದೆ. ಕೋಲಾಟವು ಹೆಚ್ಚಾಗಿ ಹೋಳಿ ಹುಣ್ಣಿಮೆಯಿಂದ ಬಸವ ಜಯಂತಿಯವರೆಗೆ ಆಡುತ್ತಾರೆ. ಅಪವಾದವೆಂಬಂತೆ ಕೊಹಿನೂರಿನಲ್ಲಿ ಹಾಗೂ ಬೀದರ ಸುತ್ತುಲಿನ ಹಳ್ಳಿಗಳಲ್ಲಿ ನಾಗರ ಪಂಚಮಿಗೆ ಕೋಲಾಟ ಆಡುತ್ತಾರೆ.

ಕೋಲಾಟದ ಕಲಾವಿದರಲ್ಲಿ ಸಮವಸ್ತ್ರ ಬಳಸುವುದಿಲ್ಲ. ಕೋಲಾಟ ರಂಗಪ್ರದರ್ಶನದ ದಿವಸ ಗಂಡಾಳು ಹೆಣ್ಣಾಳುಗಳು ಕೃಷ್ಣ–ರಾಧಾ, ಶಿವ–ಪಾರ್ವತಿ, ರಾಮ–ಸೀತಾ, ಮಾರವಾಡಿ–ಸೇಟಾಣಿ, ಇರಾಣಿ ಗಂಡು–ಹೆಣ್ಣು, ಸರದಾರಜಿ–ಸರದಾರಣಿ, ಮುಸ್ಲಿಂ ಗಂಡು, ಭುರಕಾ ಹೆಣ್ಣು, ಗೋಸಾಯಿ–ಫಕೀರ, ಲಕ್ಷ್ಮಣ–ಮಾರುತಿ, ಒಕ್ಕಲಿಗ–ಒಕ್ಕಲಗಿತ್ತಿ ಮುಂತಾದ ನಮೂನೆಯ ಪಾತ್ರ ಧರಿಸುತ್ತಾರೆ. ಆಟದಲ್ಲಿ ಎಲ್ಲಾ ಜಾತಿಯ ಜನರು ಆಡುತ್ತಾರೆ. ಆಟದಲ್ಲಿಯೂ ಜಾತ್ಯಾತೀತತೆ, ಭಾವೈಕ್ಯತೆ ಕಂಡುಬರುತ್ತದೆ.

'ಕೃಷ್ಣ–ಗೋಪಿ', 'ರಾಮಾಯಣ ಅಧ್ಯಾಯ' ಜಿಲ್ಲೆಯ ಎಲ್ಲೆಡೆಗೆ ಮತ್ತು 'ಪಾಂಡುರಂಗ ಅಧ್ಯಾಯ' ಕೆಲವೆಡೆಗೆ ಕೋಲಾಟದೊಂದಿಗೆ ಆಡುವದು ಜಿಲ್ಲೆಯಲ್ಲಿ ವಿಶೇಷ ವಾದುದಾಗಿದೆ. ಹೀಗಾಗಿ ಬೀದರ ಜಿಲ್ಲೆಯ ಕೋಲಾಟ ತನ್ನದೇ ವಿಶೇಷತೆಯಿಂದ ಮೆರೆಯುತ್ತದೆ. ಗಡಿನಾಡಿನ ಭಾಷೆಗೆ ವೈಶಿಷ್ಟ್ಯತೆ ಕೋಲಾಟದ ಹಾಡುಗಳಲ್ಲಿ ಗುರುತಿಸಬಹುದು.

ಹಣಮಂತಪ್ಪ ಬಿರಾದಾರ ಕೋಸಮ್, ವಿಶ್ವನಾಥ ಮೇತ್ರೆ ಮದಕಟ್ಟೆ, ರುದ್ರಪ್ಪಾ ಕುರ್ನೆ ಕುರಚಿಖೇಳಗಿ, ನಾಗಪ್ಪಾ ತಿಗಾರೆ ತಳವಾಡ, ನಾಗಪ್ಪ ದಾಸರೆ ಬೀದರ, ಶ್ರೀಪತಿ ಖಡ್ಕೆ ಸಂತಪೂರ, ಮನೋಹರ ರೇಕುಳಗೆ ದಬಲಗುಂಡಿ, ಕಲ್ಲಪ್ಪ ಭಾಲ್ಕಿ, ಭೀಮಣ್ಣ ಕೊಳಕೂರ ಕಟ್ಟಿ ತೊಗಾಂವ, ಮಾಣಿಕಪ್ಪಾ ಸಂಗೊಳಗಿ ಪ್ರತಾಪನಗರ, ನರಸಪ್ಪಾ ಹಡಪದ ಕಮಲನಗರ, ದೇವೇಂದ್ರಪ್ಪ ಸುತ್ತಾರ ಧನ್ನೂರಾ, ತುಕಾರಾಮ ಕಮಲಾಪುರ ಔರಾದ, ಅರ್ಜುನ ಶೆಂಬೆಳ್ಳಿ ಔರಾದ ಮುಂತಾದವರು ಬೀದರ ಜಿಲ್ಲೆಯ ಕೋಲಾಟ ಮತ್ತು ಕೋಲಾಟದ ಪ್ರಸಂಗಗಳ ಪ್ರಮುಖ ಮಾಸ್ತರರಾಗಿದ್ದಾರೆ.

ಬೀದರ ಜಿಲ್ಲೆಯಾದ್ಯಂತ ಲೆಕ್ಕಕ್ಕೆ ಸಿಗದಷ್ಟು ಕೋಲಾಟದ ತಂಡಗಳಿವೆ. ನೌಬಾದ, ಬೀದರ, ಸಂತಪೂರ ಮುಂತಾದ ಕೋಲಾಟದ ತಂಡದವರು ಮೈಸೂರಿನ ದಸರಾ ಉತ್ಸವದಲ್ಲಿ ತಮ್ಮ ಪ್ರದರ್ಶನ ನೀಡಿ ಬಂದಿದ್ದಾರೆ. ಕೋಸಮ್, ಮರ್ಜಾಪೂರ, ಭಾಲ್ಕಿ, ದುಬಲಗುಂಡಿ, ಕುರುಬ ಖೇಳಗಿ, ಕಟ್ಟಿ ತುಗಾಂವ, ದಾಡಗಿ, ಚಿಮಕೋಡ, ನಾರಾಯಣಪೂರ ಮುಂತಾದ ಊರಿನ ತಂಡದವರು ಕೋಲಾಟದೊಂದಿಗೆ ಕೋಲಾಟ ಪ್ರಸಂಗವಾಡುವ ಪ್ರಮುಖ ಮೇಳಗಳಾಗಿವೆ.

ಕೋಲಾಟದ ಪ್ರಸಂಗಗಳು: ಕೋಲಾಟ ಪ್ರಸಂಗದ ಹಾಡುಗಳಿಗೆ ಸ್ವಂತಿಕೆ ಇದೆ. ಸಾಮಾನ್ಯ ಕೋಲಾಟ, ಸಣ್ಣಾಟ, ದೊಡ್ಡಾಟ ಇವುಗಳ ಅಷ್ಟಿಷ್ಟು ಪ್ರಭಾವ ಈ ಹಾಡುಗಳ ಮೇಲಿದ್ದರೂ ಅದನ್ನೆಲ್ಲ ಮೀರಿ ಇವು ಸ್ವಂತಿಕೆಯನ್ನು ಪಡೆದುಕೊಂಡಿವೆ. ಈ ಹಾಡಿನ ಧಾಟಿಯು ಮತ್ತೆಲ್ಲಿಯೂ ಕಾಣಸಿಗುವುದಿಲ್ಲ.

ಕೋಲಾಟ ಪ್ರಸಂಗದ ಕುಣಿತಗಳು ವೈಶಿಷ್ಟ್ಯ ಪೂರ್ಣವಾಗಿವೆ. ಜಾನಪದ ಸಾಮಾನ್ಯ ನೃತ್ಯ ಪರಂಪರೆಯ ಒಡಲಿನಿಂದ ಹುಟ್ಟಿ ಬಂದಿರುವ ಈ ಕುಣಿತಗಳಿಗೆ ಸ್ವಂತಿಕೆ ಇದೆ. ಒಂದಿಷ್ಟು ಹೊಸ ಕುಣಿತಗಳೂ ಇಲ್ಲಿವೆ. ಕೆಲವು ವಿಶಿಷ್ಟ ರಂಗತಂತ್ರಗಳು ಕೋಲಾಟ ಪ್ರಸಂಗದಲ್ಲಿವೆ. ಪ್ರಣಯ, ಯುದ್ಧ, ಬೇಟೆ ಮುಂತಾದ ಸಂದರ್ಭಗಳು ತೀರಾ ವಿಭಿನ್ನ ರೀತಿಯಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಹೀಗೆ ಹಾಡು, ಕುಣಿತ, ರಂಗತಂತ್ರಗಳಲ್ಲಿ ತನ್ನದೇ ಆದ ವೈಶಿಷ್ಟ್ಯತೆಗಳನ್ನು ಒಳಗೊಂಡಿರುವ ಕೋಲಾಟ ಪ್ರಸಂಗವು ಸ್ವತಂತ್ರರಂಗ ಪ್ರಕಾರವಾಗಿದೆ.

ಬೀದರ ಜಿಲ್ಲೆಯ ವಿಶಿಷ್ಟ ಜನಪದ ಕಲೆಗಳು ಹೊಂದಿದಂತೆ ಜಗತ್ ಪ್ರಸಿದ್ಧವಾದ ಬಿದರಿ ಕಲೆ ನೋಡಿ. ಅದಕ್ಕಾಗಿಯೇ ಇದಕ್ಕೆ ಬೀದರಿನ ಹೆಸರಂಟಿದೆ. ಆಂಧ್ರದಲ್ಲಿ ಪ್ರಚಲಿತವಿರುವ ಚಿಟಕಿ ಭಜನೆಯು ಬೀದರ ತಾಲ್ಲೂಕಿನ ಬರೂರು ಗ್ರಾಮದ ನಾರಾಯಣರೆಡ್ಡಿಯವರ ಮೇಳದವರು ರೂಢಿಸಿಕೊಂಡಿದ್ದಾರೆ. ನಂದಿಕೋಲ ಮೆರವಣಿಗೆ ಬಸವಕಲ್ಯಾಣ ಜಾತ್ರೆಯಲ್ಲಿ ನಡೆಯುತ್ತದೆ. ಜನಪದೀಯರ ಜೀವನವೇ ಒಂದು ಕಲೆಯಾದುದ–ರಿಂದ ಇನ್ನೂ ಅನೇಕ ಜನಪದ ಕಲೆಗಳನ್ನಿಲ್ಲಿ ಗುರುತಿಸಲು ಸಾಧ್ಯ.

(ಎಸ್‌ಎನ್)

ಜನಪದ ಕಲೆಗಳು: (ರಾಯಚೂರು ಜಿಲ್ಲೆ) ಮಾನವ ನಾಗರಿಕ ನೆಲೆಗಟ್ಟನ್ನು ಭದ್ರಪಡಿಸಿಕೊಂಡ ಆನಂತರ ಜೈವಿಕ ಆಯಾಮವು ವಿಸ್ತಾರವಾಗುತ್ತ ನಡೆಯಿತು. ನದಿ ಸಂಸ್ಕೃತಿಯ ಅಂಚಿನಲ್ಲಿ ಬದುಕನ್ನು ನಿಜಾಂಶಾಯಿ ಆಳ್ವಿಕೆಯಲ್ಲಿ ತತ್ತರಿಸಿದ್ದರೂ ಇಲ್ಲಿಯ ಜನಪದ ಜೀವನ, ಕಲೆ ಸಮೃದ್ಧವಾಗಿದೆ. ಈ ಭಾಗದ ಜನಪದ ಸಾಹಿತ್ಯವನ್ನು ಪ್ರತ್ಯೇಕಿಸಲು ಕಾರಣಗಳಿವೆ, ಇಲ್ಲಿಯ ಜನರ ಮಾತೃಭಾಷೆಯ ಮೇಲೆ ಉರ್ದು, ತೆಲಗು, ಹಿಂದಿ ಭಾಷೆಗಳ ಪ್ರಭಾವವಿದೆ. ಕಲಾವಿದರ ಶೈಲಿ, ಸಾಹಿತ್ಯ, ನೃತ್ಯ, ತಾಳ, ವಾದ್ಯಗಳ,, ಪರಿಕರಿಗಳು, ವೇಷಭೂಷಣಗಳಲ್ಲಿ. . . ವೈವಿಧ್ಯತೆಯನ್ನು ಕಾಣಬಹುದಾಗಿದೆ. ಪ್ರಾದೇಶಿಕ ಭಿನ್ನತೆಯಿಂದ ಜನಪದ ಸಾಹಿತ್ಯದ ಹೊಸ–ಹೊಸ ರೂಪಗಳು ದೊರಕುತ್ತವೆ. "ಜನಪದ ಸಾಹಿತ್ಯ ಬರವಣಿಗೆಯ ಅಭಾವದ ಮೂಲಕ ಅವಸ್ಥಾನ ಬೇಧಗಳನ್ನು ಅಳಿಸಿಕೊಂಡು ಪ್ರಾಂತ್ಯ–ಭೇದಗಳನ್ನು ಉಳಿಸಿಕೊಳ್ಳುತ್ತವೆ." ಎಂಬ ಕಲಬುರ್ಗಿಯವರ ವಿಚಾರದಂತೆ ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಬಹುದಾಗಿದೆ.

ರಾಯಚೂರು ಜಿಲ್ಲೆಯಲ್ಲಿ ಪ್ರತಿ ಊರಿನಲ್ಲಿಯೂ ಜನಪದ ಕಲಾವಿದರು ಅಸಂಖ್ಯಾತರಾಗಿದ್ದಾರೆ. ಜನಪದ ಕಲೆಗಳಾದ ಬಯಲಾಟ (ದೊಡ್ಡಟ) ಸಣ್ಣಾಟ, ದಪ್ಪಿನಾಟ ತೊಗಲು ಬೊಂಬೆಯಾಟ......ಮುಂತಾದ ರಂಗ ಪ್ರದರ್ಶನ ಕಲೆಗಳು, ಹಾಗೂ ಸಾಂದರ್ಭಿಕ ಕಲೆಗಳಾದ ಸುಗ್ಗಿ ಹಾಡು, (ಹಂತಿಪದ), ಕೋಲಾಟದ ಹಾಡು, ರಿಯಾವತ್ ಪದಗಳು, ಲಾವಣಿ ಪದ, ಗೀಗೀ ಪದ, ಗೊಂದಲಿಗರ ಕಥನ, ಗೀತೆಗಳು, ನೃತ್ಯಕಲೆಗಳಾದ ಹೆಜ್ಜೆಕುಣಿತ ಹಲಗೆ ಅಲಾವಿ ಕುಣಿತ, ಕೀಲು ಕುದುರೆ ಕುಣಿತ, ಸ್ತ್ರೀಯರೇ ಪ್ರಧಾನವಾಗಿ ಹಾಡುವ ಬೀಸುವ, ಕುಟ್ಟುವ, ಸೋಬಾನೆ ಪದ, ಎದುರುಗೊಳ್ಳುವ ಪದ, ಬೀಗರ ಹಾಡು, ಕಳೆ ತೆಗೆಯುವಾಗ, ನಾಟಿ ಹಾಕುವಾಗ ಹೀಗೆ ವಿವಿಧ ಸಂದರ್ಭಗಳಲ್ಲಿ ಉಂಟಾದ

ಶ್ರಮವನ್ನು ಕಡಿಮೆ ಮಾಡಿಕೊಳ್ಳಲು ಮತ್ತು ಸಂಪ್ರದಾಯವನ್ನು ಮುಂದುವರಿಸುವುದಕ್ಕಾಗಿ ಆಡಿದ-ಆಟ, ಹಾಡಿದ ಹಾಡುಗಳಲ್ಲಿ ಸಾಹಿತ್ಯ, ಸಂಸ್ಕೃತಿ ನವರಸಗಳು ಮುಪ್ಪುರಿಗೊಂಡಿವೆ.

ಬಯಲಾಟ(ದೊಡ್ಡಾಟ), ಸಣ್ಣಾಟ, ದಪ್ಪಿನಾಟ: ಜನಪದ ಕಲಾವಿದರಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅತಿ ಮುಖ್ಯವಾದ್ದು ವೇದಿಕೆ. ಈ ಕಲೆಗಳ ಪ್ರದರ್ಶನವನ್ನು ಊರಿನ ಉತ್ಸವಗಳಲ್ಲಿ ಹಾಗೂ ವಿಶೇಷ ದಿನಗಳಲ್ಲಿ ಆಚರಿಸಲಾಗುತ್ತಿದೆ. ಈ ಆಟಗಳ ಕಥಾವಸ್ತುಗಳು ಪೌರಾಣಿಕವಾಗಿದ್ದು ತಮಗೆ ಸೂಕ್ತವೆನಿಸಿದ ಕೈ ಬರೆಹದ ಕಥೆಗಳನ್ನು ಆರಿಸಿಕೊಂಡ ಅನಂತರ ಪಾತ್ರಗಳನ್ನು ಹಂಚಿಕೊಂಡು ರಂಗ ಪ್ರದರ್ಶನಕ್ಕೆ ಸಿದ್ಧವಾಗುವವರೆಗೂ ನುರಿತ ಅನುಭವಿಗಳಿಂದ ಮಾತು, ಹಾಡು, ಕುಣಿತಗಳನ್ನು ಕಲಿತು ಪ್ರದರ್ಶನಕ್ಕೆ ಸಿದ್ಧರಾಗುತ್ತಾರೆ. ಕುಣಿತ, ಹಾಡು, ಹಾವ-ಭಾವ ಹಾಡುಗಾರಿಕೆಯಲ್ಲಿ ಪ್ರಾದೇಶಿಕ ಭಿನ್ನತೆಯನ್ನು ಕಾಣುತ್ತೇವೆ. ಸಣ್ಣಾಟ, ದಪ್ಪಿನಾಟಗಳು ಬಯಲಾಟದ ಅನುಕರಣೆಯಿಂದಲೇ ಹುಟ್ಟಿಕೊಂಡರೂ ಶೈವ-ವೈಷ್ಣವ ಲೌಕಿಕ ಎಂದು ವಿಂಗಡಣೆ ಮಾಡಲಾಗಿದೆ. ದಪ್ಪಿನಾಟದ ಕುಣಿತ ಸರಳವಾಗಿದ್ದು ವೇಷ-ಭೂಷಣಗಳು ಸಾಮಾನ್ಯವಾಗಿದ್ದು ಮಾನ್ವಿ-ಲಿಂಗಸೂಗೂರು ತಾಲ್ಲೂಕಿನ ಕೆಲ ವೃತ್ತಿಪರ ಕಲಾವಿದರು ಊರೂರಿಗೆ ಹೋಗಿ ಅಭಿನಯಿಸುತ್ತಾರೆ. ಲೌಕಿಕ ಕಥಾ ವಸ್ತುಗಳಾದ ಬಸವಂತ-ಬಲವಂತ, ಬಾಲನಾಗಮ್ಮ ಮುಂತಾದ ಕಥಾವಸ್ತುಗಳನ್ನು ಆರಿಸಿಕೊಂಡು ಅಭಿನಯಿಸುವ ಈ ಜನಾಂಗದವರನ್ನು 'ಜಾತಿಗೇರ' ಎಂದೂ ಕರೆಯುತ್ತಾರೆ.

ರಂಗಸಜ್ಜಿಕೆ: ಊರಿನ ಪ್ರಮುಖ ರೊಂದಿಗೆ ಚರ್ಚಿಸಿ ಸಾಕಷ್ಟು ಜನ ಕೂಡುವ ವ್ಯವಸ್ಥೆಯಿರುವ ಬಯಲನ್ನು ಆರಿಸಿಕೊಂಡು, ಬಂಡಿಗಾಲಿಗಳನ್ನು ಅರ್ಧದಷ್ಟು ನೆಲದಲ್ಲಿ ಹೂತು ಸುತ್ತಲೂ ನಾಲ್ಕು ಮೂಲೆಗಳಿಗೆ ಕಂಬಗಳನ್ನು, ಅಡ್ಡ, ಅಡಿ ಕಂಬಗಳನ್ನು ಕಟ್ಟಿ ಬಾಗಿಲುಗಳನ್ನು ಮುಚ್ಚುವ ಮರದ ಕದಗಳನ್ನು ಜೋಡಿಸುತ್ತಾರೆ. ಸುತ್ತಲೂ ಪರದೆಗಳನ್ನು ಕಟ್ಟಿ ಸಿಂಗರಿಸುತ್ತಾರೆ.

ವೇಷಬೂಷಣಗಳು: ರಾಜಾ ಪಾತ್ರಧಾರಿಗಳು ವೈಭವ ಪೂರ್ಣವಾದ ವಸ್ತ್ರಾಭರಣಗಳನ್ನು, ಕಿರೀಟ, ಭುಜಕೀರ್ತಿ, ಮಣಿಹಾರ, ಕಾಗೆ ಬಂಗಾರದಿಂದ ಸಿಂಗರಿಸಿದ ಎದೆ ಕವಚ, ಕೈಪಟ್ಟಿ ಮುಂತಾದವುಗಳನ್ನು ಧರಿಸಿಕೊಂಡು ಬೆಳಕಿಗೆ ಮಿಂಚುವಂತೆ ಮಾಡಿದ ಪರಿಕರಗಳನ್ನು ಧರಿಸಿರುತ್ತಾರೆ. ಸ್ತ್ರೀ ಪಾತ್ರಧಾರಿಗಳು ಜರತಾರಿ ಸೀರೆಗಳನ್ನು ಉಟ್ಟುಕೊಂಡು ಸಣ್ಣ ಕಿರೀಟ ವಂಕಿ, ಡಾಬು, ಮಣಿಹಾರ, ನಡುಪಟ್ಟಿ, ಧರಿಸಿಕೊಂಡರೆ, ರಾಕ್ಷಸಿ ಸ್ತ್ರೀ ಪಾತ್ರಗಳು ಉಗ್ರವಾದ ವೇಷಭೂಷಣಗಳನ್ನು ಧರಿಸಿಕೊಂಡು ಪ್ರೇಕ್ಷಕರ ಮಧ್ಯದಿಂದಲೇ ಹಲಗೆ ಬಾರಿಸಿಕೊಂಡು ಬರಮಾಡಿಕೊಳ್ಳುತ್ತಾರೆ. ಪುರುಷ ಪಾತ್ರಗಳಂತೆ ಕುಣಿಯುತ್ತ ಪ್ರವೇಶಿಸುತ್ತವೆ.

ಸಂಭಾಷಣೆ: ಹೈದ್ರಾಬಾದ್ ಕರ್ನಾಟಕದ ಗಂಡು ಕಲೆಯಾದ ಬಯಲಾಟಗಳು ಗಂಭೀರವಾದ, ಸಂಸ್ಕೃತ-ಭೂಯಿಷ್ಟವಾದ, ಪ್ರಾಸಬದ್ಧವಾದ ಮಾತುಗಳನ್ನು ಹೊಂದಿರುತ್ತವೆ. ರಾಜ ಪಾತ್ರಗಳು, ರಾಕ್ಷಸ ಪಾತ್ರಗಳ ಮಾತುಗಳು ಬಿರುಸಾಗಿದ್ದರೆ, ಸ್ತ್ರೀ, ದೇವತೆಗಳ ಪಾತ್ರದ ಮಾತುಗಳು ಮೃದುವಾಗಿರುತ್ತವೆ. ಸಾರಥಿಯಿಲ್ಲದೆ ಬಯಲಾಟಗಳು ಸಾಗಲಾರವು. ಪ್ರೇಕ್ಷಕರಿಗೆ ಎಲ್ಲ ಪಾತ್ರಗಳ ಮೊದಲ ಪರಿಚಯವನ್ನು ನೀಡುತ್ತಾನೆ. ಹಾಗೂ ಪಾತ್ರ ಪಾತ್ರಗಳಿಗೆ ಪರಿಚಯಿಸುವುದು, ಮತ್ತು ಆಗಾಗ ಹಾಸ್ಯ ಲೇಪನದ ಮಾತುಗಳನ್ನು ಹೇಳಿ ನೋಡುಗರನ್ನು ರಂಜಿಸುತ್ತಾನೆ. ಬಂದವರದಾರೆಂದು ವಿಚಾರಿಸುತ್ತಾನೆ. ಕಥಾ ನಿರೂಪಕನಂತೆ ಕಾರ್ಯ ನಿರ್ವಹಿಸುತ್ತಾನೆ.

ಕಥಾ ವಸ್ತು: ಪೌರಾಣಿಕ ಮಹಾಕಾವ್ಯಗಳನ್ನು ಆಧರಿಸಿದ ಕಥೆಗಳಿರುತ್ತವೆ. ಸಣ್ಣಾಟದ ಕಥಾವಸ್ತುಗಳು ಲೌಕಿಕ ಜೀವನಕ್ಕೆ ಸಮೀಪವಿರುವಂತೆ ಇರುತ್ತವೆ. ದಪ್ಪಿನಾಟದ ಕಥೆಗಳು ಲೌಕಿಕ ಜೀವನದ ಕಥೆಗಳೇ ಆಗಿರುತ್ತವೆ. ರತಿ-ಕಲ್ಯಾಣ ಕನಕಾಂಗಿ-ಕಲ್ಯಾಣ, ಪ್ರಭಾವತಿ- ಕಲ್ಯಾಣ, ಸುಭದ್ರಕಲ್ಯಾಣ ಬಬ್ರುವಾಹನ ಕಾಳಗ, ಕರ್ಣಾರ್ಜುನರ ಕಾಳಗ, ಅಭಿಮನ್ಯು ಕಾಳಗ ಜರಾಸಂಧ ವಧೆ, ರಾಮಾಂಜನೇಯ ಯುದ್ಧ ಲವ-ಕುಶ ಕಾಳಗ, ಬಾಣಾಸುರ, ವಿರೋಚನಾ, ಪಮೀಳಾ ಬಬ್ರುವಾಹನ, ದೇವಿ ಕಥೆ ಕರ್ಣಪರ್ವ ಸಣ್ಣಾಟಗಳು: ಶ್ರೀಕೃಷ್ಣ ಪಾರಿಜಾತ, ಭಕ್ತ ಪ್ರಹ್ಲಾದ ರುಕ್ಮಿಣಿ ಸ್ವಯಂವರ ದಪ್ಪಿನಾಟ, ಬಸವಂತ, ಬಲವಂತ, ಬಾಲನಾಗಮ್ಮ, ಮುಂತಾದ ಕಥಾ ವಸ್ತುಗಳುಳ್ಳ ಕಥೆಗಳನ್ನು ಆಧರಿಸಿರುತ್ತವೆ.

ಸುಧಾರಣೆಯ ಸುಂಟರಗಾಳಿ ಗ್ರಾಮೀಣ ಬದುಕಿಗೂ ತನ್ನ ಕಾಲು ಚಾಚಿದೆ. ದೂರದರ್ಶನ ಸಂಸ್ಕೃತಿಗೆ ಮಾರುಹೋದ ಜನಪದರನ್ನು ಕುರಿತು ಹಳೆಯ ತಲೆಮಾರಿನವರು ಖೇದ ವ್ಯಕ್ತಪಡಿಸುತ್ತಾರೆ. ಆದರೂ ವರ್ಷಕ್ಕೆ ಒಂದಾದರೂ ಬಯಲಾಟಗಳು ಪ್ರದರ್ಶನವಾಗುತ್ತಿರುವುದರಿಂದ ಈ ಕಲೆಯು ತನ್ನ ಅಸ್ತಿತ್ವವನ್ನು ಉಳಿಸಿ ಕೊಂಡಿದೆ.

ಸೂತ್ರದ ಬೊಂಬೆಯಾಟ-ತೊಗಲು ಬೊಂಬೆಯಾಟ: ಸಂಸ್ಕೃತ ಸಾಹಿತ್ಯದಲ್ಲಿ ಮೊದಲು ನಾಟಕಗಳು ದೊರೆಯುತ್ತವೆ. ಕಾಳಿದಾಸ, ಹರ್ಷ, ಭವಭೂತಿ, ಭಟ್ಟನಾರಾಯಣ, ವಿಶಾಖದತ್ತ ಮುಂತಾದ ನಾಟಕಗಳಲ್ಲಿ ನಾಂದಿ ಪದದ ಸ್ತೋತ್ರ ಮುಗಿದ ತಕ್ಷಣವೇ ಬರುವ ಪಾತ್ರ ಸೂತ್ರಧಾರನ ಪಾತ್ರವಾಗಿದೆ. ಇದರಿಂದಾಗಿ ಸೂತ್ರದ ಗೊಂಬೆಗಳು ಅದಕ್ಕಿಂತ ಪೂರ್ವದಲ್ಲಿ ಇದ್ದವೆಂದು ತಿಳಿದು ಬರುತ್ತದೆ. ಪಾತ್ರಗಳ ರಚನೆ, ವಿನ್ಯಾಸ ಬಣ್ಣ, ವಾದ್ಯಗಳು, ಕುಣಿಸುವ ತಂತ್ರ ಎಲ್ಲವೂ ತನ್ನದೇ ಆದ ವೈವಿಧ್ಯತೆಯಿಂದ ಕೂಡಿರುತ್ತದೆ.

ಮೇಳದವರು ಬಹು ಮುಖ್ಯವಾಗಿರಬೇಕಾಗಿರುತ್ತದೆ. ವಾದ್ಯ ಪರಿಕರಗಳಾದ ಮೃದಂಗ, ವೀಣೆ, ತಂಬೂರಿ ಮತ್ತು ತಿದಿ ವಾದ್ಯಗಳನ್ನು ಬಳಸುತ್ತಾರೆ. ಆಯಾ ಊರಿನಲ್ಲಿ ಸಿಗುವ ಪರಿಕರಗಳಿಂದ ಎರಡೂವರೆಯಿಂದ ಮೂರು ಅಡಿ ಎತ್ತರವಿರುತ್ತದೆ. ಆಯಾ ಊರಲ್ಲಿ ಸಿಗುವ ಪರಿಕರಿಗಳಿಂದ ಸುತ್ತಲೂ ಮುಚ್ಚುವುದು. ಕಪ್ಪು ಪರದೆಯನ್ನು ಹಿಂಭಾಗದಲ್ಲಿ ಬಿಳಿ ಪರದೆಯನ್ನು ಮುಂಭಾಗದಲ್ಲಿ ಕಟ್ಟಿರುತ್ತಾರೆ. ಗೊಂಬೆ ಆಡಿಸುವವರು ಪ್ರೇಕ್ಷಕರಿಗೆ ಕಾಣದಂತೆ ಕೈಚಳಕವನ್ನು ತೋರುತ್ತಾರೆ. ಹವ್ಯಾಸಿ ಮತ್ತು ವೃತ್ತಿಕಲಾವಿದರು ಊರಿಂದೂರಿಗೆ ಹೋಗಿ ವೀಳ್ಯ ಸ್ವೀಕರಿಸಿ ಪ್ರಯೋಗಿಸುತ್ತಾರೆ.

ಗೊಂಬೆಯಾಟದ ಪ್ರದರ್ಶನಗಳನ್ನು ಉತ್ತರ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಪ್ರಯೋಗಿಸುತ್ತಾರೆ. ಆಂಧ್ರದಲ್ಲಿ ಇವರನ್ನು 'ಬೊಮ್ಮಲಾಟ-ವಾಳ್ಳ' ಎಂದು ಕರೆಯುತ್ತಾರೆ. ಮಾನ್ವಿ ತಾಲ್ಲೂಕಿನ ಕುರ್ಡಿ, ಲಿಂಗಸೂರು ತಾಲ್ಲೂಕಿನಲ್ಲಿಯೂ ಮತ್ತು ಕಿನ್ನಾಳದಲ್ಲಿ ಗೊಂಬೆಗಳನ್ನು ತಯಾರಿಸುವವರು, ಹಾಗೂ ಪ್ರಯೋಗಿಸುವವರು ಇದ್ದಾರೆ. ಇವರನ್ನು ಕಿಳ್ಳೆಕ್ಯಾತರು, ಗೊಪ್ಪೇರು ಎಂದು ಕರೆಯುತ್ತಾರೆ.

ತೊಗಲು ಗೊಂಬೆಯಾಟ: ಚರ್ಮದಿಂದ ಹೊರಹೊದಿಕೆ ಹೊಂದಿದ್ದ ಒಳಭಾಗದಲ್ಲಿ ಭತ್ತದ ಹೊಟ್ಟು, ಕಟ್ಟಿಗೆಯ ಪುಡಿ ಮುಂತಾದವುಗಳನ್ನು ಉಪಯೋಗಿಸಿಕೊಂಡು ತಯಾರಿಸುತ್ತಾರೆ. ಮರದ ಗೊಂಬೆಗಳಂತೆ ವಸ್ತು ಬಣ್ಣ, ಕುಣಿಸುವ ಶೈಲಿ ಕಥಾರೂಪದಲ್ಲಿ ವಿಶೇಷ ಭಿನ್ನತೆ ಕಾಣುವುದಿಲ್ಲ ಕಿಳ್ಳೆಕ್ಯಾತರು ಎಂಬ ಜನಾಂಗದವರು ಈ ಗೊಂಬೆಗಳನ್ನು ರಚಿಸಿ, ಕುಣಿಸುತ್ತಾರೆ. ಕಂಬಳಿಯ ಹಿಂದೆ ಸಂಭಾಷಣೆಕಾರರು, ಕುಣಿಸುವ ತಂತ್ರಜ್ಞರು ಇರುತ್ತಾರೆ. ಗೊಂಬೆಗಳ ಮೇಲೆ ಬಿದ್ದ ಬೆಳಕು ಬಿಳಿ ಪರದೆಯ ಮೇಲೆ ಪ್ರತಿಬಿಂಬಿತವಾಗುತ್ತದೆ. ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ಕುರ್ಡಿ ಕೃಷ್ಣಪ್ಪನವರು ಮೈಸೂರಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಗೊಂಬೆ ಕುಣಿಸಿ ಮೆಚ್ಚಿಗೆ ಪಡೆದವರು, ಇವರಿಗೆ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಕುರ್ಡಿಯ ಹುಲಿಗೆಪ್ಪ ತಂದೆ ಗಂಗಪ್ಪ, ಬುಡ್ಡಪ್ಪ ತಂದೆ ರಂಗಪ್ಪ, ತಿಪ್ಪಣ್ಣ ತಂದೆ ಈರಣ್ಣ ರಾಯಚೂರು ತಾಲೂಕಿನ ಗುಂಜಳ್ಳಿಯ ಶಂಕ್ರಪ್ಪ ಮುಂತಾದವರು ಈ ಕಲೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.



ಕಿಳ್ಳೇಕ್ಯಾತರು

ಇಂದು ಹಳ್ಳಿಗಳಲ್ಲಿಯೂ ಗೊಂಬೆಯಾಟಕ್ಕೆ ಪ್ರೋತ್ಸಾಹ ಕಡಿಮೆಯಾಗಿದೆ. ಗೊಪ್ಪೇರು ಬೇರೆ ಬೇರೆ ವೃತ್ತಿಗಳೆಡೆ ವಾಲಿದ್ದಾರೆ. ಇವರನ್ನು ಕಂಡಾಗ ಪ್ರಾಚೀನ ಕಲೆ ನಶಿಸುವ ಅಂಚಿನಲ್ಲದೆಯೆಂಬ ಖೇದವನ್ನು ವ್ಯಕ್ತಪಡಿಸುತ್ತಿದ್ದಾರೆ.

ಸಾಂಧರ್ಬಿಕ ಕಲೆಗಳು: ಕೃಷಿಯೇ ಬದುಕಿನ ಜೀವಾಳವನ್ನಾಗಿಸಿಕೊಂಡ ಈ ಜಿಲ್ಲೆಯ ಜನಪದರು ವಿಶೇಷ ಸಂದರ್ಭಗಳಲ್ಲಿ ಹಾಡಿ-ಕುಣಿಯುವ ಉಲ್ಲಸಿತ ಮನೋಭಾವ ದವರಾಗಿದ್ದಾರೆ. ಭೂಮಿ ತಾಯಿಯ ಹರಕೆಯು ನಮ್ಮೆಲ್ಲರ ಬದುಕನ್ನು ಬಂಗಾರವಾಗಿಸುತ್ತದೆ. ವರ್ಷವಿಡಿ ದುಡಿದು ಬೆಳೆದ ಬೆಳೆಯನ್ನು ರಾಶಿಮಾಡಿ ವರ್ಷವಿಡಿ ಬಳಸುವುದು ಕೃಷಿಕರ ಪರಿವಿಡಿಯಾಗಿದೆ. ರಾಶಿಮಾಡುವಾಗ ಹಂತಿ-ತಿರುಗಿಸುತ್ತ ರಾತ್ರಿಯೆಲ್ಲ ಹಾಡುತ್ತ ಮೇಟಿ ಕಟ್ಟಿಗೆಯ ಮೇಲೆ ಕುಳಿತು ಎತ್ತುಗಳನ್ನು ತಿರುಗಿಸುತ್ತ ಹಾಡುವುದನ್ನು ಕೇಳಿಯೇ ಆನಂದಿಸಬೇಕು.

ಎಂಟೆತ್ತು ಕಟ್ಟಿಕೊಂಡು ಕಂಟ್ಯಾಗ ಬರುವಾಗ
ಗಂಟ ಬಿದ್ದಾಳೊ ಗೋಪಮ್ಮ! ಗೋಪಮ್ಮನ ಹೊಟ್ಟೀಲಿ
ಬಂಟ ಹುಟ್ಯಾನೋ ಬಸವಣ್ಣೋ!!

ಜನಪದರಿಗೆ ಎತ್ತುಗಳೆಂದರೆ ಶಿವನ ವಾಹನವಾದ ನಂದಿಯೇ ಭೂಲೋಕಕ್ಕಿಳಿದು ಬಂದಾನೆಂಬ ನಂಬಿಕೆ. ಎತ್ತುಗಳನ್ನು ಕಾರಹುಣ್ಣಿಮೆ ಸಂದರ್ಭದಲ್ಲಂತೂ ವಿಶೇಷವಾಗಿ ಸಿಂಗರಿಸುತ್ತಾರೆ. ಕೂರಿಗೆ ಸಾಗುವಾಗ್ ಮೊದಲು ಬಸವನ ಪೂಜೆಯಾಗಬೇಕು.

ಬೆಳದಿಂಗಳ ರಾತ್ರಿಯಲ್ಲಿ ಹಂತಿ ತಿರುಗಿಸುತ್ತ ದೇವ-ಸ್ತುತಿ ಬಸವನಾಮಾವಳಿ, ಭೂಮಿ ತಾಯಿಯ ನೆನೆಕೆ, ಶೃಂಗಾರ, ಸಂವಾದ, ವೀರ ಮುಂತಾದ ರಸಗಳುಳ್ಳ ಹಾಡುಗಳನ್ನು ಎಲ್ಲ ಹೊಲಗಳಲ್ಲಿ ಕೇಳಿಬರುತ್ತವೆ. ಸುಗ್ಗಿಯ ಜೀವನದ ಸಂತಸದ ಸೌಹಾರ್ದತೆಯ, ಜೀವನ ಇಂದು ಬದಲಾಗಿದೆ. ಯಂತ್ರಯುಗದ ಅರ್ಭಟದ ಅಟ್ಟಹಾಸದಿಂದ ಇಂಥ ಮಧುರಕ್ಷಣಗಳು ಮರೆಯಾಗಿವೆ.

ರಿವಾಯತ್ ಹಾಡುಗಳು: ಮೊಹರಂ ಹಬ್ಬದ ಸಂದರ್ಭದಲ್ಲಿ ಮಾತ್ರ ಈ ಹಾಡುಗಳು ಮೂಡಿಬರುತ್ತವೆ. ಧಾರ್ಮಿಕ ಮಹಾ ಪುರುಷರ ಜೀವನವನ್ನು ವಿವರಿಸುವ ಉದ್ದೇಶವನ್ನು ಹೊಂದಿರುತ್ತವೆ. ರಿವಾಯತ್ ಹಾಡುಗಾರರು ಮಸೀದಿಯ ಬಯಲಲ್ಲಿ ಹೆಜ್ಜೆ ಹಾಕುತ್ತಾ ಕೈಯಲ್ಲಿನ ಕೋಲನ್ನು ನೆಲಕ್ಕೆ ಕುಟ್ಟುತ್ತ ಯುದ್ಧದಲ್ಲಿ ಪ್ರಾಣಾರ್ಪಣೆ ಮಾಡಿದ ಪೈಗಂಬರರ ವಂಶಜರ ಕರುಣಾಜನಕ ಕಥೆಯನ್ನು ವಿವರಿಸುತ್ತಾರೆ.

ಹಸೀನ್ ಹುಸೇನ್ ಸಾಹೇಬರಿಗೆ

ಬಂತ್ರಪ ಕಠಿಣ ಕಾಣೋದು ಕೈಲಾಸ. . . .. .

ಈ ಮೇಳದಲ್ಲಿ 10ರಿಂದ20 ಜನರಿರುತ್ತಾರೆ. ಹೈದ್ರಾಬಾದ್ ಕರ್ನಾಟಕದ ಪ್ರತಿ ಹಳ್ಳಿಯಲ್ಲಿ ಈ ಮೇಳದವರಿದ್ದಾರೆ. ಮುದಗಲ್ಲಿನ ಮೊಹರಂ ಹಬ್ಬವಂತೂ ನಾಡಿನ ತುಂಬಾ ಪ್ರಸಿದ್ಧಿಯನ್ನು ಪಡೆದಿದೆ.

ಡೊಳ್ಳಿನ ಪದಗಳು: ಕರ್ನಾಟಕದ ತುಂಬೆಲ್ಲಾ ಡೊಳ್ಳಿನ ಕುಣಿತ ಮತ್ತು ಹಾಡುಗಳು ಕೇಳಬಹುದಾಗಿದೆ. ದೇವದುರ್ಗ ತಾಲ್ಲೂಕಿನ ಮುಂಡರಗಿ ಶಿವರಾಯ ಜಾತ್ರೆ ಮೈಲಾರಲಿಂಗನ ಜಾತ್ರೆಗಳಲ್ಲಿ ನೂರಾರು ಡೊಳ್ಳು ಕುಣಿತದ ಮೇಳಗಳು ಸೇರುತ್ತವೆ. ಡೊಳ್ಳು ಬೃಹದಾಕಾರವಾದ ಚರ್ಮವಾದ್ಯ. ಈ ಕಲೆಯ ಜೊತೆಗೆ ಶಕ್ತಿಯೂ ಬಹು ಮುಖ್ಯವಾಗಿರಬೇಕಾಗುತ್ತದೆ. ಕಂಬಳಿಯ ಉಡಿಗೆ, ಅರಬೆತ್ತಲೆ ಮೈ, ತಲೆಗೆ ವಸ್ತ್ರ, ಕೈಗೆ ಕಂಬಳಿಯ ದಾರವನ್ನು ಕಟ್ಟಿಕೊಂಡ ಯುವಕರು ಡೊಳ್ಳು ಬಾರಿಸುತ್ತ ಗತ್ತು, ತಾಳಕ್ಕೆ ತಕ್ಕಂತೆ ವೀರಾವೇಶದಿಂದ ಕುಣಿಯುತ್ತಾರೆ.

ನಾಗರಿಕತೆಯ ಹೊಸಗಾಳಿ ತಾಗಿದರೂ ಪೂರ್ವಜರಿಂದ ಬಂದ ಈ ಕಲೆ ನಿರಂತರವಾಗಿ ಇಂದೂ ಸಹ ಮುಂದುವರಿದಿದೆ. ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರ ಮಟ್ಟದಲ್ಲಿಯೂ ಡೊಳ್ಳು ಕುಣಿತ ಹಾಗೂ ಹಾಡುಗಳು ಪ್ರಸಿದ್ಧವಾಗಿ ನೆಲೆನಿಂತಿರುವುದರಿಂದ ಈ ಜಾನಪದ ಕಲೆ ಹೀಗೆಯೇ ಮುಂದುವರಿಯಬಹುದೆಂಬ ಭರವಸೆಯಿದೆ.

ಭಜನೆ: ಭಜನೆ ಎಂದರೆ ದೇವರನ್ನು ಭಜಿಸು, ಆರಾಧಿಸು, ಸೇವೆ, ನಾಮಸ್ಮರಣೆ, ಕೀರ್ತನೆ, ಸ್ತುತಿ ಎಂಬರ್ಥಗಳಿವೆ. ತತ್ವ, ಆಧ್ಯಾತ್ಮ ಧಾರ್ಮಿಕ ತತ್ವಗಳನ್ನು ಸಮಾಜಕ್ಕೆ ತಿಳಿಸುವ ಉದ್ದೇಶವನ್ನು ಹೊಂದಿದ ಭಜನಾ ಮಂಡಳಿಗಳು ಎಲ್ಲಾ ಊರಲ್ಲಿಯೂ ಹೇರಳವಾಗಿವೆ.



ಭಜನಾ ಮಂಡಳಿ

ಭಜನಾ ಮಂಡಳಿಗಳು ಹೆಚ್ಚಾಗಿ ದೇವಸ್ಥಾನದಲ್ಲಿ ಪ್ರತಿವಾರ, ಅಮಾವಾಸ್ಯೆ, ಹುಣ್ಣಿಮೆ, ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳಲ್ಲಿ ಜನಪದ ಕಲಾವಿದರು ಸೇರಿಕೊಂಡು ಹಾರ್ಮೋನಿಯಂ, ತಬಲಾ, ಢೋಲಕ, ದಮ್ಮಡಿ ಕಂಚಿನ ತಾಳ, ಏಕತಾರಿ 'ವಾದ್ಯಗಳನ್ನು ಬಳಸಿಕೊಂಡು ಮುಖ್ಯ ಹಾಡುಗಾರನೊಂದಿಗೆ ಪಲ್ಲವಿಗಳನ್ನು ಪುನರುಚ್ಚಿಸುತ್ತಾ ಆರೋಹಣ ಅವರೋಹಣ ಕ್ರಮದಲ್ಲಿ ಸಾಗುತ್ತವೆ. ಇತ್ತೀಚೆಗೆ ಮಹಿಳಾ ಭಜನಾ ಮಂಡಳಿಗಳು ಹುಟ್ಟಿಕೊಂಡು ಪ್ರದರ್ಶನ ನೀಡುತ್ತಿವೆ.

ದೊಂಬಿದಾಸರು: ಏಕತಾರಿ ಹಿಡಿದು ಮನೆ-ಮನೆಗೆ ತಿರುಗಿ ತತ್ವಪದಗಳನ್ನು ಹಾಡುತ್ತ ಭಿಕ್ಷೆಬೇಡುವ ವೃತ್ತಿಗಾಯಕರು ಪ್ರತಿ ಊರಿನಲ್ಲಿ ದೊರೆಯುತ್ತಾರೆ. ಇವರನ್ನು ದಾಸರು, ದಾಸಯ್ಯಗಳು ಎಂದು ಕರೆಯುತ್ತಾರೆ. ದೊಂಬಿದಾಸರು ಗಾಯನಕ್ಕೆ ಹೆಸರಾದವರು. ಅವರ ಕಂಠ ಬಹಳ ಮಧುರವಾಗಿರುತ್ತದೆ. ವೈಷ್ಣವ ಸಂಪ್ರದಾಯಕ್ಕೆ ಸೇರಿದ ಇವರು ತತ್ವಪದ ಆಧ್ಯಾತ್ಮ ಪದಗಳನ್ನು ದೇವರ ನಾಮಾವಳಿಗಳನ್ನು ಹಾಡುತ್ತಾರೆ. ಶೈವ ಸಂಪ್ರದಾಯದವರು ಶಿವನನ್ನು ಕುರಿತು ರಚಿಸಿದ ತತ್ವಪದಗಳನ್ನು ಹಾಡುತ್ತಾರೆ.

ಲಂಬಾಣಿನೃತ್ಯ: ಲಂಬಾಣಿಗಳು ಭಾರತೀಯ ಪುರಾತನ ಪರಂಪರೆಯನ್ನು, ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಬಂದ ಜನಾಂಗವೆಂದೇ ಹೆಸರಾಗಿದೆ. ದೇವದುರ್ಗ ತಾಲ್ಲೂಕಿನ ಅರಿಕೇರಾ ತಾಂಡಾ ಹಾಗೂ ಲಿಂಗಸೂಗೂರು ತಾಲ್ಲೂಕಿನ ಆಶಿಯಾಳ ತಾಂಡಾದ ಜನರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಾಕಷ್ಟು ಮುಂದುವರೆದರೂ ಸಹ ಇಂದಿಗೂ ತಮ್ಮ ಹಳೆಯ ಸಂಪ್ರದಾಯದಿಂದ ದೂರವಾಗದೆ ಉಳಿದಿದ್ದಾರೆ. ಮನರಂಜನೆಯೊಂದಿಗೆ ಸಂಸ್ಕೃತಿಯ ವಾಹಕಗಳಾದ ಜನಪದ ಕಲೆಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಲಂಬಾಣಿ ನೃತ್ಯಗಳಲ್ಲಿ ಪುರುಷರಿಗಿಂತ ಸ್ತ್ರೀಯರ ನೃತ್ಯಗಳು ಆಕರ್ಷಕವಾಗಿದ್ದು, ಬಣ್ಣ ಬಣ್ಣದ ಉಡುಪು, ದೇಹದ ಹಲವು ಭಾಗಗಳಿಗೆ ಧರಿಸಿಕೊಂಡ ಬಗೆಬಗೆಯ ಆಭರಣಗಳು ಕೇಶವಿನ್ಯಾಸ ಬಳಕುವ ರೀತಿ, ಕೈಕುಣಿಸುವ ಭಂಗಿಗಳು ಉಳಿದ ನೃತ್ಯಗಳಿಗಿಂತ ಭಿನ್ನವಾಗಿದ್ದು ವಿಶೇಷತೆಯದಾಗಿದೆ. ಇದನ್ನು ದೀಪಾವಳಿ ಹಾಗೂ ಹೋಳಿ ಹುಣ್ಣಿಮೆ ಸಂದರ್ಭಗಳಲ್ಲಿ ನೋಡಿಯೇ ಆನಂದಿಸಬೇಕು.

ಗೊಂದಲಿಗರು: ಅಂಬಾಭವಾನಿ ಹೆಸರಲ್ಲಿ ಗೊಂದಳ ಹಾಕುವ ವೃತ್ತಿಪರ ಕಲಾವಿದರು. ದೇವಿಯ ಮಹಿಮೆಯನ್ನು ಹೊಗಳುವ ಹಾಡು-ನೃತ್ಯಗಳಿರುತ್ತವೆ. ಶಕ್ತಿ ದೇವತೆಯನ್ನು ಆರಾಧಿಸುವ ಭಕ್ತರನ್ನು ಆಹ್ವಾನಿಸಿ ಮನೆಯಲ್ಲಿ ಗೊಂದಳ ಹಾಕಿಸಿದರೆ ಶುಭ ಎನ್ನುವುದು ಜನಪದರ ನಂಬಿಕೆ. ನವರಾತ್ರಿಯ ಸಂದರ್ಭಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಕೆಲವು ಹಳ್ಳಿಗಳಲ್ಲಿ ರಾತ್ರಿಹೊತ್ತು ಕಥೆಗಳನ್ನು ಹೇಳಿಸುತ್ತಾರೆ. ರಾಯಚೂರು ಜಿಲ್ಲೆಯ ಮಾನ್ವಿ, ದೇವದುರ್ಗ ಲಿಂಗಸೂಗೂರು ತಾಲ್ಲೂಕುಗಳಲ್ಲಿ ಗೊಂದಲಿಗರ ಹಲವು ಮನೆತನಗಳವರು ವಾಸಿಸುತ್ತಾರೆ.

ಕೋಲಾಟ: ನೃತ್ಯ ಸಾಹಿತ್ಯ, ಸಂಗೀತಗಳ ಸಮ್ಮಿಳನವು ಇದರಲ್ಲಿದೆ. ಪ್ರತಿ ಊರಿನಲ್ಲಿ ಕೋಲಾಟದ ಮೇಳಗಳಿವೆ. ಜಾಲಿಮರದ, ಇಲ್ಲವೆ ಬಿಟ್ಟಲ ಮರದ ಕಟ್ಟಿಗೆಯನ್ನು ಸುಂದರವಾಗಿ ಕೆತ್ತಿ ಬಣ್ಣ ಬಳಿದು ಕೋಲುಗಳನ್ನು ಸಿದ್ದಪಡಿಸಿಕೊಳ್ಳುತ್ತಾರೆ. ಸುಗ್ಗಿಯ ನಂತರದ ಬೆಳದಿಂಗಳ ರಾತ್ರಿಯಲ್ಲಿ ಕೋಲಾಟ ಆಡುವ ರೂಢಿಯಿದೆ. ಈಗೀಗ ಕೆಲವು

ಹವ್ಯಾಸಿಗರು ತಂಡವನ್ನು ಕಟ್ಟಿಕೊಂಡು ಬೇರೆ ಊರುಗಳಲ್ಲಿ ನಡೆಯುವ ಉತ್ಸವಗಳಲ್ಲಿ ಸ್ಪರ್ಧಾತ್ಮಕ ಕಲೆಯಲ್ಲಿ ಪಾಲ್ಗೊಳ್ಳುವುನ್ನು ಕಾಣಬಹುದು. ತಮ್ಮೂರಿನಲ್ಲಿದ್ದುಕೊಂಡು ಬೆಳದಿಂಗಳ ರಾತ್ರಿ ಆಡುವಾಗ ವಿಶೇಷವಾದ ವೇಷ ಭೂಷಣಗಳನ್ನು ಧರಿಸುವುದಿಲ್ಲ. ಈಗೀಗ ಬೇರೆಡೆ ಹೋಗಿ ಪ್ರದರ್ಶನ ನೀಡುವಾಗ ಸಮವಸ್ತ್ರದಂತೆ ಏಕರೂಪದ ಬಣ್ಣದ ಉಡಿಗೆಗಳನ್ನು ಧರಿಸಿ ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು ಕೋಲುಗಳಿಗೆ ರಿಬ್ಬನ್‌ಗಳನ್ನು ಕಟ್ಟಿ ಸಿಂಗರಿಸುವುದು ಕಾಣಬಹುದಾಗಿದೆ.

ಕೋಲಾಟದ ಹಾಡುಗಳು ವಾದ-ಸಂವಾದಗಳಿಂದ ಕೂಡಿದ್ದು, ನೃತ್ಯ ಮಾಡುತ್ತ ಕೋಲಿನಿಂದ-ಕೋಲಿಗೆ ಲಯಬದ್ಧವಾಗಿ ಬಡಿಯುತ್ತ ಸುತ್ತುತ್ತ, ತಿರುಗುತ್ತ ಹೆಜ್ಜೆಗಳನ್ನು ಬದಲಿಸುತ್ತ ಆಟ ಮುಂದುವರೆಯುತ್ತದೆ. ಈ ಜಿಲ್ಲೆಯ ಎಲ್ಲ ಗ್ರಾಮಗಳಲ್ಲಿ ಈ ತಂಡಗಳಿವೆ. ಹಿರಿಯರ ಮಾರ್ಗದರ್ಶನ ದೊಂದಿಗೆ ವಿಶೇಷ ಸಂದರ್ಭಗಳಲ್ಲಿ ಮನರಂಜನೆಗಾಗಿ ಮತ್ತು ಆರಾಧನೆಯ ಸ್ವರೂಪದಲ್ಲಿಯೂ ಆಡಿ ಆನಂದಿಸುವರು.

ನಂದಿಕೋಲು ಕುಣಿತ: ಶೈವ ಸಂಪ್ರದಾಯದ ಹಬ್ಬಗಳಲ್ಲಿ, ಜಾತ್ರೆಗಳಲ್ಲಿ ನಂದಿಕೋಲು ಕುಣಿತಗಳು ನಡೆಯುತ್ತವೆ. 20ರಿಂದ 25 ಅಡಿ ಎತ್ತರವಿರುವ ಕೋಲಿಗೆ ಬುಡದಿಂದ ನಾಲ್ಕೈದು ಅಡಿ ಅಂತರಕ್ಕೆ ಅಡ್ಡ ಮಣಿಯನ್ನು ಕಟ್ಟಿರುತ್ತಾರೆ. ಅದರ ಮೇಲೆ ನಂದಿಯನ್ನು ಕೂಡಿಸಿರುತ್ತಾರೆ. ಅದನ್ನು ಭುಜದ ಮೇಲೆ ಇಟ್ಟಿಕೊಂಡು ಡೋಲು, ಶಹನಾಯಿ ಮತ್ತು ದಮ್ಮಡಿ, ತಾಳಗಳೊಂದಿಗೆ ಕುಣಿಸುತ್ತಾರೆ. ಕೋಲಿನುದ್ದಕ್ಕೂ ಕೆಂಪು, ಹಸಿರು ಬಿಳಿ ಬಟ್ಟೆಯನ್ನು ಸುತ್ತಿ ಅಲ್ಲಿಗಲ್ಲಿಗೆ ಗೆಜ್ಜೆಗಳನ್ನು ಕಟ್ಟಿರುತ್ತಾರೆ. ಕೊನೆಗೆ ಕಳಶವನ್ನು ಕೂಡಿಸಿ ಸಿದ್ಧಪಡಿಸುತ್ತಾರೆ. ಕುಣಿಸುವ ವ್ಯಕ್ತಿ ಆಯಾಸಗೊಂಡಾಗ ನಂದಿಕೋಲು ಕುಣಿತ ನಿಲ್ಲಿಸುತ್ತಾರೆ. ಆಗ ವೀರಭದ್ರ ದೇವರ ವಡಬುಗಳನ್ನು, ವಚನಗಳನ್ನು ಹೇಳುತ್ತಾರೆ.

ದಕ್ಷಬ್ರಹ್ಮನ ಯಾಗವನ್ನು ಕೆಡಿಸಿ ದಕ್ಷನ ಹರಿದ ತಲೆಗೆ ಕುರಿತಲೆಯಿಟ್ಟು ವೀರಭದ್ರದೇವರ ವಿಜಯದ ಸಂಕೇತವಾಗಿ ಆಚರಿಸಲ್ಪಡುತ್ತದೆ. ನಂದಿ ಧ್ವಜವನ್ನು ಕುಣಿಸುವವರು ಶಕ್ತಿಶಾಲಿ ಗಳಾದಂತೆ ಅದರ ತಂತ್ರವನ್ನು ಮಡಿವಂತಿಕೆಯನ್ನು ಉಳ್ಳವರಾಗಿ ಇರಬೇಕೆಂದು ತಿಳಿಸುತ್ತಾರೆ. ನಂದಿಕೋಲುಗಳು ಜಾತ್ರೆ-ಉತ್ಸವಗಳಲ್ಲಿ ಮಾತ್ರ ಹೊರ ಬರುತ್ತವೆ. ರಾಯಚೂರಿನ ಪೇರೂನ್ ಕಿಲ್ಲಾದ ಮಲ್ಲಯ್ಯ ದೇವರ ಉತ್ಸವದಲ್ಲಿ ಶಶಿಧರ್ ಪೂಜಾರಿ, ದೇವಸೂಗೂರಿನ ಸಿದ್ದರಾಮಪ್ಪ ಸಾಹುಕಾರ, ದೇವದುರ್ಗ ತಾಲ್ಲೂಕಿನ ಕಾಡಪ್ಪ, ನವಿಲುಗುಡ್ಡ ಹಲವು ಕಲಾವಿದರಿದ್ದಾರೆ.

ಪುರುವಂತರ ಕುಣಿತ: ವೀರಗಾಸೆ ಕುಣಿತ ಎಂದು ಕರೆಯಲಾಗುತ್ತದೆ. ಇದು ದಕ್ಷಬ್ರಹ್ಮನ ಯಾಗದ ಕಥೆಯ ಹಿನ್ನೆಲೆಯಾಗಿ ಹುಟ್ಟಿ ಬಂದ ಸಂಪ್ರದಾಯ ಆಗಿದೆ. ತಲೆಗೆ ರೂಮಾಲು, ಹಣೆಗೆ ವಿಭೂತಿ, ಕಾವಿಅಂಗಿ, ಬಿಗಿಯಾದ ಧೋತಿ, ಕೊರಳಲ್ಲಿ ರುದ್ರಾಕ್ಷಿ, ಕಾಲ್ಗೆಜ್ಜೆ, ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಶಸ್ತ್ರ, ನಡುಪಟ್ಟಿಗೆ ಗಂಟೆ ಜೋಲುವಂತೆ ಕಟ್ಟಿ ಕೊಂಡಿರುತ್ತಾರೆ. ಮೊಳಕಾಲಿಗೆ ಝುಂಗು (ದೊಡ್ಡಗೆಜ್ಜೆ) ಕಟ್ಟಿ ಕೊಂಡ ಇವರು ಊರಿನ ದೇವಸ್ಥಾನದ ಮುಂದೆ ಆವಿಗೆ ಮೇಲೆ (ಮುಳ್ಳಿನ




ಪುರವಂತರು

ಪಾದರಕ್ಷೆ) ನಿಂತಿರು ತ್ತಾರೆ. ಮತ್ತು ಶೈವ ಸಂಪ್ರದಾಯದ ಗುಗ್ಗಳ ಮದುವೆ, ಜಾತ್ರೆ, ಹಬ್ಬಗಳಲ್ಲಿ ಊರಿಂದ ಊರಿಗೆಹೋಗಿ ಕಾಯಕ ಮಾಡಿ ಬರುತ್ತಾರೆ. ತಿಂತಿಣಿ ಮೌನೇಶ್ವರ ಜಾತ್ರೆ, ಸೂಗೂರೇಶ್ವರ ಜಾತ್ರೆಗಳಲ್ಲಿ ಈ ಬಗೆಯ ಪುರುವಂತರ ವೀರ ಆವೇಶದ ಕುಣಿತ ರುದ್ರ ಭೀಕರ ವಾಗಿರುತ್ತದೆ. ದೇವ ಸೂಗೂರಿನ ಪ್ರಕಾಶ ನಂದಿಯವರ ನೇತೃ ತ್ವದ ಈ ಮೇಳ ಕರ್ನಾಟಕದೆಲ್ಲೆಡೆಯೂ ಪ್ರಸಿದ್ಧಿಯಾಗಿದೆ.

ಹೆಜ್ಜೆ ಕುಣಿತ: ಹೈದ್ರಾಬದ್ ಕನಾಟಕದ ಜಿಲ್ಲೆಗಳಲ್ಲಿ ಬಹಳ ಪ್ರಸಿದ್ಧವಾದ ಕಲೆ. ಮೊಹರಂ ಸಮೀಪಿ ಸುತ್ತಿದ್ದಂತೆ ಹೆಜ್ಜೆ ಮೇಳದವರೆಲ್ಲಾ ಒಂದೆಡೆ ಸೇರುತ್ತಾರೆ. ಒಂದು ತಿಂಗಳ ವರೆಗೂ ನಿತ್ಯ ರಾತ್ರಿ ಬೈಠಕ್ಕು ಮಾಡಿ ಸಿದ್ದತೆ ಮಾಡಿ ಕೊಳ್ಳುತ್ತಾರೆ. ನಾಯಕ ಆದವನು ನೀತಿ ಯುಕ್ತ ಹಾಡುಗಳನ್ನು ಹೇಳು ತ್ತಾನೆ. ಮೇಳ ದವರು ಜೋಡು ಹಲಗೆ(ತಿಪ್ಪಡಿ)ನಾದಕ್ಕೆ ಲಯಕ್ಕೆ, ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾರೆ. ಮೊಹರಂ ಸಂದರ್ಭದ ಒಂಬತ್ತು ದಿನಗಳವರೆಗೂ ಊರೂರಿಗೆ ಹೋಗಿ ಹೆಜ್ಜೆ ಹಾಕುತ್ತಾರೆ. ಮೇಳದವರೆಲ್ಲಾ ಒಂದೇ ಬಗೆಯ ಅಂಗಿ, ಬನೀನು ಧರಿಸಿ ತಲೆಗೆ ರಿಬ್ಬನ್ ಕಟ್ಟಿ ಕೈಯಲ್ಲಿ ಕರವಸ್ತ್ರ ಹಿಡಿದು ಕಾಲಲ್ಲಿ ಗೆಜ್ಜೆ

ಕಟ್ಟಿಕೊಂಡಿರುತ್ತಾರೆ. ಈ ಕಲೆಯು ಕಾಯಕ ಮನೋಭಾವನೆ ಮತ್ತು ಕಲಾಪ್ರದರ್ಶನದ ಗುರಿಹೊಂದಿದ ಕಲೆಯಾಗಿದೆ. ಕೆಲ ಹಳ್ಳಿಗಳಲ್ಲಿ ಕಲಾವಿದರು ದೊರೆಯುತ್ತಾರೆ.

ಅಲಾವಿ ಕುಣಿತ: ಮೊಹರಂನಲ್ಲಿ ಎಲ್ಲ ಊರುಗಳಲ್ಲಿ ಹಸನ ಹುಸೇನರ ಮುಖಗಳೆಂದು ಭಾವಿಸಲಾದ ಮೂರ್ತಿಗಳನ್ನು ಕೂಡಿಸುತ್ತಾರೆ. ಮಸೀದಿಯ ಅಂಗಳದಲ್ಲಿ ವೃತ್ತಾಕಾರದ ತಗ್ಗನ್ನು ತೋಡಿ ಸಾಕಷ್ಟು ಕಟ್ಟಿಗೆಯನ್ನು ಉರಿಸಿ ಖತಲ್ ರಾತ್ರಿಯವರೆಗೂ ಹಿಂದೂ ಮುಸ್ಲಿಂ ಎನ್ನದೆ ಕುಣಿಯುವ ಕುಣತವೇ ಅಲಾವಿ ಕುಣಿತವಾಗಿದೆ. ಈ ಕಲೆಯಲ್ಲಿ ತಮಟೆವಾದಕನ ಪಾತ್ರ ಹಿರಿದಾದುದು. ಆತ ಬಡಿಯುವ ಹಲಗೆ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕುವುದು ಹಿಂದೆ-ಮುಂದೆ, ಕುಳಿತು-ಏಳುವುದು ವಿವಿಧ ರೀತಿಯಲ್ಲಿ ಕುಣಿಯುವ ಕಲೆಯಾಗಿದೆ. ಸಾಮೂಹಿಕವಾಗಿ ಎಲ್ಲ ಊರುಗಳಲ್ಲಿಯೂ ಕುಣಿಯುವ ಕಲೆಯಾಗಿದೆ.



ಅಲಾಯಿ ಕುಣಿತ

ಹುಲಿವೇಷ: ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಹುಲಿವೇಷ ಧರಿಸುವ ಸಂದರ್ಭ ಮತ್ತು ಉದ್ದೇಶಗಳಿಗೂ ರಾಯಚೂರು ಜಿಲ್ಲೆಯ ಹುಲಿವೇಷ ಧರಿಸುವ ಉದ್ದೇಶಗಳಿಗೂ ಭಿನ್ನತೆಯಿದೆ. ಇಲ್ಲಿ ಮೊಹರಂ ಸಂದರ್ಭಗಳಲ್ಲಿ ದೇವರಿಗೆ ಹರಕೆ ಹೊತ್ತವರು ಮಾತ್ರ ಹುಲಿವೇಷ ಧರಿಸುತ್ತಾರೆ. ದೇವರ ಮುಂದೆ ಕುಣಿದು ಹರಕೆಯನ್ನು ಒಪ್ಪಿಸುತ್ತಾರೆ.

ಹಲಗೆ: ಹೈದ್ರಾಬಾದ್ ಕರ್ನಾಟಕದ ಉತ್ಸವ, ಜಾತ್ರೆ, ಹಬ್ಬ, ಮೆರವಣಿಗೆ ಮದುವೆ, ಡಂಗೂರ ಬಾರಿಸಲು, ಬೇಟೆಯಾಡಲು ಹೋಗುವಾಗ ಹಲಗೆ ಬಾರಿಸುತ್ತಾರೆ. ಶವಸಂಸ್ಕಾರ ಸಂದರ್ಭದಲ್ಲಿ ಹಲಗೆ ಬಳಕೆಯಾಗುತ್ತದೆ. ಹಲಗೆ ವಾದಕರು ವೈವಿಧ್ಯಮಯವಾದ ಕುಣಿತ-ಮಣಿತಗಳಿಂದ, ಕಸರತ್ತುಗಳನ್ನು ತೋರುತ್ತ ಪ್ರದರ್ಶನ ನೀಡುತ್ತಾರೆ.

ಕಣಿಹಲಗೆ: ಇದು ಹಲಗೆಯಂತೆ ಇದ್ದು ಆಕಾರದಲ್ಲಿ ಚಿಕ್ಕದಾಗಿದ್ದು ನಾದ ತೀಕ್ಷ್ಣವಾಗಿರುತ್ತದೆ. ಕಣಿಮೇಳದಲ್ಲಿ ಶಹನಾಯಿ, ತಾಳ, ಡೋಲು ಬಳಸುತ್ತಾರೆ. ಉತ್ಸವಗಳಲ್ಲಿ ಎಲ್ಲ ವಾದ್ಯಗಳ ಧ್ವನಿಯನ್ನು ನುಂಗಿ ಪ್ರೇಕ್ಷಕನನ್ನು ತನ್ನಡೆಗೆ ಆಕರ್ಷಣೆ ಮಾಡಿ ಕೊಳ್ಳುವ ವಿಶೇಷ ನಾದ ಕಣೆ ಹಲಗೆಗೆ ಇದೆ. ಲಿಂಗಸೂರು ತಾಲ್ಲೂಕಿನ ಅಮದಿಹಾಳದ ಲಂಕೆಪ್ಪ ಭಜಂತ್ರಿ 1994ರಲ್ಲಿ ದೆಹಲಿ ಜಾನಪದ ಮೇಳದಲ್ಲಿ ಭಾಗವಹಿಸಿ ಪ್ರಥಮಸ್ಥಾನ ಪಡೆದಿದ್ದಾನೆ. ಅದೇ ವರ್ಷ ಅವನಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಒಟ್ಟು 8 ಜನ ಕಲಾವಿದರು ಈ ತಂಡದಲ್ಲಿರುತ್ತಾರೆ.

ಗೊರವರ ಕುಣಿತ: 'ಗೊರವರ ಡುಂಡುಚಿಯೇ' ಎಂದು ಮಧುರಕವಿ ಕರೆದಿರುವುದರಿಂದ ಗೊರವ ಜನಾಂಗದ ಪುರಾತನತೆಯು ದೊರೆಯುತ್ತದೆ. ಇವರು ಮೈಲಾರಲಿಂಗನ ಆರಾಧಕರೆಂದು ಕರೆದುಕೊಳ್ಳುತ್ತಾರೆ. ಏಳು ಕೋಟಿ ಏಳುಕೋಟಿಗೆ ಗಂಗೆಮಾಳಮ್ಮನ ಏಳುಕೋಟಿಗೆ ಎಂದು ಮನೆಮನೆಗೆ ಬರುತ್ತಾರೆ.

ಕಂಬಳಿಯಿಂದ ಮಾಡಿದ ನಿಲುವಂಗಿ, ಕೈಯಲ್ಲಿ ತ್ರಿಶೂಲ, (ಭಂಡಾರ) ಹಿಡಿದು, ಕವಡೆ ಜೋಡಿಸಿ ಹೋಲಿದ ಚೀಲ ಮತ್ತು ಕವಡೆ ಹಾರ, ಇವರಲ್ಲಿ ಕೆಲವರು ಗೊಗ್ಗಯ್ಯ (ನಾಯಿ)ರಾಗಿರುತ್ತಾರೆ. ಅವರು ನಾಯಿ ಯಂತೆ ಬೊಗಳುವಾಗ ಚೀಲದ ಒಳಗಿನ ಭಂಡಾರ ಎಸೆದು ನಿಲ್ಲಿಸುವುದು, ಸುತ್ತುವರಿಯುವುದು ಹೀಗೆ ಆಡುತ್ತ ಮುಂದೆ ಸಾಗುವುದು ಕೆಲಮನೆತನಗಳ ವೃತ್ತಿಯಾಗಿದೆ. ವಚನಕಾರರು ಇಂಥವರನ್ನು ನೋಡಿ ಕಾವಿ, ಕಾಶಾಂಬರ ದಂಡ, ಗಿಳಿಜಾಗ್ರವ ಹೊತ್ತು ಕೂಳಿಗಾಗಿ ನಾನಾದೇಶವನ್ನು ತಿರುಗುವವರು ಎಂದಿರಬೇಕು.

ಚೌಡಮ್ಮನ ಕುಣಿತ: ಪ್ರತಿವರ್ಷ ಬಾದಾಮಿ ಅಮವಾಸ್ಯೆಯಂದು ಚೌಡಮ್ಮನ ಜಾತ್ರೆ ಸಂದರ್ಭದಲ್ಲಿ ನಡೆಯುತ್ತದೆ. ಈ ಕುಣಿತವನ್ನು ಮಾಡುವವರು. ಪಂಚಾಳರು ವೀರಗಾಸೆ ಕುಣಿತದ ವೇಷ ಭೂಷ-ಣಗಳಿರುತ್ತವೆ. ದಕ್ಷಬ್ರಹ್ಮನನ್ನು ವೀರಭದ್ರನು ಸಂಹರಿಸಿದಾಗ ಒಂದೊಂದು ಹನಿ ರಕ್ತದಿಂದ ಒಬ್ಬೊಬ್ಬ ರಾಕ್ಷಸನ ಜನನವಾಗುತ್ತದೆ. ಆಗ ಚೌಡಮ್ಮ ಬಂದು ನಾಲಿಗೆಯಿಂದ ರಕ್ತ ನೆಕ್ಕುತ್ತಾ ವೀರಭದ್ರನಿಗೆ ಸಹಾಯಕಳಾಗುತ್ತಾಳೆ ಚೌಡಿಯ ಜಾತ್ರೆ ದಿನ ನಡೆಯುವ ಕಲೆ. ಈಕೆ ಪ್ರತಿ ಊರಿನಲ್ಲಿ ಗ್ರಾಮದೇವತೆಯಾಗಿದ್ದಾಳೆ.

ದುರಗಮುರಗಿ: ಬಿದಿರಿನ ಬುಟ್ಟಿ ಇಲ್ಲವೆ ತೆರೆದ ಪೆಟ್ಟಿಗೆಯಲ್ಲಿ ಮರಗಮ್ಮ ಇಲ್ಲವೆ ದುರಗಮ್ಮನನ್ನು ಕೂಡಿಸಿಕೊಂಡು ಕೆಲವರು ಬಂಡಿಯಲ್ಲಿ ಕೂಡಿಸಿಕೊಂಡು, ಸಂಸಾರ ಸಮೇತ ಊರೂರು ಅಲೆಯುವರು. ಇವರನ್ನು 'ಕರಕರ ಮಂಡರು' ಎಂದೂ ಕರೆಯುತ್ತಾರೆ. ದೇವದುರ್ಗ ತಾಲ್ಲೂಕಿನಲ್ಲಿ ಕಿರಿ ಕಿರಿ

ಮಾಡುವವರನ್ನು ಕರಕರಮಂಡರು ಎಂದು ಬಯ್ಯುವುದನ್ನು ಕಾಣಬಹುದಾಗಿದೆ. ಆಹಾರ ಪದಾರ್ಥಗಳನ್ನು ರೊಟ್ಟಿ, ಅನ್ನ, ವಸ್ತ್ರಗಳನ್ನು ದಾನ ಪಡೆಯುವ ಅಲೆಮಾರಿ ಜನಾಂಗದವರಾಗಿದ್ದಾರೆ.

ಪೋತರಾಜ: ಇವರು ಮುಖಕ್ಕೆ ಕೆಂಪು– ಹಳದಿ ಬಣ್ಣ ಬಳೆದುಕೊಂಡು ಸೀರೆಯನ್ನು(ಧೋತಿಯಂತೆ) ವೀರಗಾಸೆಯವರಂತೆ ಸುತ್ತಿಕೊಂಡು ಕಾಲಲ್ಲಿ ಗೆಜ್ಜೆ, ಹೆಗಲಿಗೊಂದು ಜೋಳಿಗೆ, ಕೈಯಲ್ಲಿ ಬಾರಕೋಲು (ಲಡ್ಡು) ಹಿಡಿದಿರುತ್ತಾರೆ. ದೇವಿಯ



ಪೋತರಾಜ

ಆರಾಧಕರಾಗಿದ್ದಾರೆ. ಹಲಗೆ ಸಪ್ಪಳ, ಲಘು ನೃತ್ಯ ಮಾಡುತ್ತಾ ಬಾರಕೋಲಿನಿಂದ ಹೊಡೆದುಕೊಳ್ಳುತ್ತ ಭಿಕ್ಷೆ ಬೇಡಿ ಜೀವನ ನಡೆಸುವ ಅಲೆಮಾರಿ ಜನಾಂಗದವರ ಕಲೆಯಾಗಿದೆ.

ಕವಲೆತ್ತಿನವರು, ಮಂಗನಾಡಿಸುವವರು, ಕರಡಿ ಕುಣಿಸುವವರು, ಹಾವಾಡಿಗರು, ಗಿಳಿಪಂಚಾಂಗ ಹೀಗೆ ಮಾನವ ತನ್ನ ಉಪಜೀವನಕ್ಕಾಗಿ ಅನೇಕ ದೇವರುಗಳ ಪ್ರತಿರೂಪವಾಗಿ, ಆರಾಧಕನಾಗಿ, ಅನುಕರಣೆ ಮಾಡುತ್ತ ಜೀವನಸಾಗಿಸುವವರೂ ಇದ್ದಾರೆ. ಕೆಲವರು ಪ್ರಾಣಿಗಳನ್ನು ಜೀವನೋಪಾಯದ ಬಂಡವಾಳವನ್ನಾಗಿಸಿಕೊಂಡು ಅವುಗಳನ್ನೇ ಮನೆತನದ ವೃತ್ತಿಯಾಗಿಸಿಕೊಂಡಿದ್ದಾರೆ. ಹಿರಿಯರನ್ನು ಅನುಸರಿಸುತ್ತಾ ಅವುಗಳನ್ನೇ ಜೀವನಾಧಾರ ಮಾಡಿಕೊಂಡು ನೆಲೆನಿಂತಿದ್ದಾರೆ.

ಮಹಿಳೆಯರ ಸಂಪ್ರದಾಯದ ಹಾಡುಗಳು: ಪುರುಷನಿಗೆ ಹೆಗಲೆಣೆಯಾಗಿ ಎಲ್ಲ ಕ್ಷೇತ್ರಗಳ ಸ್ತ್ರೀ ಕೈಯಿರುವಂತೆ ಜನಪದ ಕ್ಷೇತ್ರದಲ್ಲೂ ವಿಫುಲವಾದ ಸಾಹಿತ್ಯವನ್ನು ನೀಡಿದ್ದಾಳೆ. ಹಾಡುಗಬ್ಬವಾದ ತ್ರಿಪದಿಯಲ್ಲಿ ಜೀವನಾನುಭವವೇ ಮುಪ್ಪುರಿ ಗೊಳಿಸಿದ್ದಾರೆ. ತ್ರಿಪದಿ ಛಂದದಲ್ಲಿ ಹೊರ ಹೊಮ್ಮಿದ ಸಂಪ್ರದಾಯದ ಹಾಡುಗಳ ಋಷಿಗಳು ನಮ್ಮ ಜನಪದ ತಾಯಂದಿರು, ಜೀವನವೇ ಕಾರ್ಯವಾಗಿ ಮೂಡಿಬಂದ ಸಾಹಿತ್ಯವೇ ಜನಪದ ಸಾಹಿತ್ಯವಾಗಿದೆ. ಮಾತೃ ಹೃದಯದ ವೈಶಾಲ್ಯತೆ, ದುಃಖ, ಸಹಿಷ್ಣುತೆ, ವಜ್ರ, ಕುಸುಮ, ಅಸಾಧಾರಣೋಕ್ತಿ, ಧ್ವನಿ ಪ್ರಾಣವಾದ ಸ್ವಭಾವ ಸರಳ. ವಸ್ತು ಸಹಜ ನಿವೇದನಾ ಪದ್ಧತಿಯಿಂದ ನುಡಿದುಬಂದ ಮುತ್ತುಗಳೇ ಜನಪದ ಹಾಡುಗಳಾಗಿವೆ. ಪಾಡು ಪಡೆಯಬೇಕಾದರೆ ಹಾಡು ಹಡೆಯಬೇಕಾಗಿದೆ. ಗರತಿಯರ ಮಾತು ಗಂಟಲಿನಿಂದ ಹೊರಡದೆ ಹೃದಯದಿಂದ ಹೊರಡುತ್ತದೆ. ಜನಪದರು ತ್ರಿಪದಿಗಳಲ್ಲಿ ಜೀವನ ರಸವನ್ನು ಎರಕ ಹೊಯ್ದರೂ ಅಚ್ಚಗನ್ನಡ ಛಂದದೊಂದಿಗೆ ಕನ್ನಡ ಎದೆಯ ಬಗೆಗಳನ್ನು ಕನ್ನಡಿಸಿದೆ. ಸಹಜ ಸ್ವರೂಪದ ಉಪಮಾನಗಳು ಸ್ತ್ರೀಯರ ಹಾಡಿನಲ್ಲಿ ಅಲಂಕೃತಗೊಂಡಿವೆ.

ಹುಟ್ಟಿದ ಮನೆಯನ್ನು ಬಿಟ್ಟು ಕೊಟ್ಟ ಮನೆಯನ್ನು ಬೆಳಗುವ ತಾಯಿ ತನ್ನ ಜೀವನದ ಪಾಡನ್ನು ಹಾಡಿನ ರೂಪದಲ್ಲಿ ಹೊಮ್ಮಿಸುವ ಚೇತನವಾಗಿದ್ದಾಳೆ. ಮಗುವನ್ನು ಕಂಡು ತನ್ನೆಲ್ಲಾ ನೋವುಗಳನ್ನು ಮರೆಯುವವಳು. ಅತ್ತೆ ಮನೆಯಲ್ಲಿ ಎತ್ತಾಗಿ ಎಳೆದು, ತೊತ್ತಾಗಿ ಉಂಡು ಉತ್ತಮರ ಮಗಳೆಂಬ ಅಭಿದಾನಕ್ಕೆ ಉಪಮಾತೀತ ವಸ್ತುವಾಗಿದ್ದಾಳೆ.

ಜನಪದ ತಾಯಂದಿರ ಹಾಡುಗಳಲ್ಲಿ ತತ್ವ, ಆಧ್ಯಾತ್ಮ ನೀತಿ, ಸಂಸ್ಕೃತಿ ಪರಂಪರೆಯನ್ನು ತಿಳಿಸುವ ವಿಚಾರಗಳಿವೆ. ದಾಸೋಹ ಮನೋಭಾವನೆ, ತ್ಯಾಗ, ವೀರತ್ವ, ಕರುಣೆ, ಮಮತೆ, ಪ್ರೀತಿ, ಸಂತಸ, ಸಹಬಾಳ್ವೆ, ಸಹಕಾರ ಜೀವನದ ಎಲ್ಲಾ ಆಯಾಮಗಳನ್ನು ಅನುಭವಿಸಿದ ಮಹಿಳೆಯರ ಸಾಹಿತ್ಯವು ಬಹು ವಿಪುಲವಾಗಿದೆ.

ಕಲ್ಲಮ್ಮ ಮಾತಾಯಿ ಮೆಲ್ಲಮ್ಮ ರಾಗೀಯ
ಜಲ್ಲ ಜಲ್ಲನೆ ಉದರಮ್ಮ ನಾ ನಿನಗೆ
ನೆಲ್ಲಕ್ಕಿ ಪಡಿಯ ನೆಡಸೇನು,

ಬೆಳಗಾಗುವ ಮುಂಚೆ ಎದ್ದು ಬೀಸಿ ಹಿಟ್ಟನ್ನು ಮಾಡಿಟ್ಟುಕೊಳ್ಳುವುದರಿಂದ ನಿತ್ಯ ಜೀವನದ ಪರಿವಿಡಿಯು ಆರಂಭವಾಗುತ್ತದೆ. ಮುಂಗೋಳಿ ಕೂಗಿದ ತಕ್ಷಣವೇ ಗರತಿಯ ಹಾಡು ಕೇಳಿ ಬರುತ್ತಿದ್ದು, ಆ ಧ್ವನಿಯನ್ನು ಕೇಳಿಯೇ ಉಳಿದವರೆಲ್ಲ ಎದ್ದು ತಮ್ಮ ತಮ್ಮ ಕೆಲಸದಲ್ಲಿ ನಿರತರಾಗುತ್ತಿದ್ದರು. ಆದ್ದರಿಂದ ಬೀಸುವ ಕಲ್ಲಿಗೆ ಬೇಗ ಬೇಗನೆ ಹಿಟ್ಟನ್ನು ಉದರಿಸೆಂದು ವಿನಂತಿಸುತ್ತಾಳೆ. 'ಏಳುತಲೆ ಎದ್ದು ಯಾರ್ಯಾರ ನೆನೆಯಲಿ ಎಳ್ಳು ಜೀರಿಗೆ ಬೆಳಿಯೋಳ' ಭೂದೇವಿಯೇ ಜನಪದ ಜೀವನ ರಂಗವಾಗಿದೆ. ಜನಪದದಲ್ಲಿ ಹೆತ್ತತಾಯಿ ಹೊತ್ತು ಪೊರೆಯುವ ಭೂಮಿಯ ಬಗ್ಗೆ ಅನನ್ಯವಾದ ಭಾವ ಸಂಗಮವಿದೆ. ಹಾಲುಂಡ ತವರನ್ನು ನೆನಯುವುದೇ ಭಾಗ್ಯವಾಗಿದೆ. ಹಾಗೆಯೇ ತಾಯಿಯ ಋಣವನ್ನು ತೀರಿಸಲಾಗದು ಎಂಬ ಕೃತಜ್ಞತಾ ಭಾವವನ್ನು ಜನಪದ ಗೀತೆಗಳಲ್ಲೇ ಕಾಣಬೇಕು.

'ಅತ್ತೆಗೊಂದು ಕಾಲ ಸೊಸೆಗೊಂದು ಕಾಲ' ಎಂಬ ಗಾದೆಯಂತೆ ಅತ್ತೆಯಿರುವ ಮನೆಯ ಸೊಸೆಯಂದಿರ ಪಾಡನ್ನು ಕುರಿತಾದ ಹಾಡುಗಳು ಯಥೇಚ್ಛವಾಗಿವೆ. "ಅಡಗೀಯ ಮನೆಯಾಗ ಅರವತ್ತು ಗಂಗಾಳ ಬೆಳಗುತ್ತೀನಿ ಅತ್ತಿ ಬೈಬ್ಯಾಡ ರೊಟ್ಟಿ ಸುಟ್ಟಿಗಾಂತ–ಬಿಟ್ಟಾಳ ಕಣ್ಣೀರ" ಎಂಬಲ್ಲಿ ಅತ್ತೆಯ ಅಂಕೆಯಲ್ಲಿರುವ ಸೊಸೆಯಂದಿರು ಅನುಭವಿಸುವ ತೊಂದರೆಗಳನ್ನು ತಿಳಿಸುತ್ತಾರೆ.

ತನ್ನೆಲ್ಲಾ ನೋವನ್ನು ಮಗು ಮತ್ತು ಗಂಡನ ಮುಖ ನೋಡಿ ಮರೆತು ಸಾಗುತ್ತಾಳೆ.

ಬೀಗರ ಹಾಡುಗಳು ವಾದ-ಸಂವಾದಗಳಿಂದ ಕೂಡಿರುತ್ತವೆ. ಮದುವೆಗಳು ಐದುದಿನ, ಮೂರುದಿನ ನಡೆಯುವಾಗ ಅನೇಕ ಸಂಪ್ರಾಯದ ಹಾಡುಗಳನ್ನು ಹಾಡುವುದು ವಾಡಿಕೆ. "ಬೀಗರು ಬರುತ್ತಾರೆಂದು ಆರು ಬಣವೆಯ ಕೊಂಡೆ ಬೀಗರೆಲ್ಲ ನಿಮ್ಮ ದಳವೆಲ್ಲ.... ಶುಭ-ಸೋಭನ ಕಾರ್ಯಗಳಲ್ಲಿ ಹಾಡುಗಳು ಇರಲೇ ಬೇಕು. ಅಸಲೊಂದು ಕುಶಲೊಂದು ಜಾತೊಂದು ಮುತ್ತೊಂದು ಕನ್ನಡಿ ಬಸವಣ್ಣನ ಮಡದಿಗೆ ಸೋಭಾನವೇ ಎಂದಾರಂಭವಾಗುವ ಹಾಡುಗಳು ಕನ್ನೆಯವರ್ಣನೆಗಳಿಂದ ಕೂಡಿರುತ್ತಾವೆ. *(ಬಿಎಲ್‌ಜಿ)*

ಜನಪದ ಕವಿ-ಕಲಾಕಾರರು: (ರಾಯಚೂರ ಜಿಲ್ಲೆ) 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಖ್ಯಾತಿಗೆ ಪಾತ್ರರಾದ ಹಲವಾರು ಜನಪದ ಕಲಾವಿದರು ರಾಯಚೂರು ಜಿಲ್ಲೆಯಲ್ಲಿ ಸಾಹಿತ್ಯ ಸೃಷ್ಟಿ ಮಾಡಿದ್ದಾರೆ. ಜನಪದದ ವಿವಿಧ ಪ್ರಕಾರಗಳಲ್ಲಿ ಕೆಲಸ ಮಾಡಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಜನತೆಯ ಜ್ಞಾನದಾಸೋಹಕ್ಕೆ ಇಲ್ಲಿನ ಹಿರಿ-ಕಿರಿಯ ಕವಿ ಕಲಾವಿದರು ಶ್ರಮವಹಿಸಿದ್ದಾರೆ. ಅಂಥವರಲ್ಲಿ ಈ ಕೆಳಕಂಡವರು ಪ್ರಮುಖರಾಗಿದ್ದಾರೆ.

ಕೂಡಲೂರು ಬಸವಲಿಂಗ: (1725-1796) ಕಲಬುರಗಿ ಜಿಲ್ಲೆಯ ಯಾದಗಿರಿ ತಾಲ್ಲೂಕಿನ ಬಳಿ ಚಕ್ರ ಗ್ರಾಮದಲ್ಲಿ ಜನಿಸಿ, ಸುಮಾರು ಇಪ್ಪತ್ತು ವರುಷ ತಮ್ಮೂರಿನಲ್ಲಿ ಕಳೆಯುತ್ತಾರೆ. ಜ್ಞಾನ ಪಿಪಾಸೆ ಹೆಚ್ಚಿ, ಆಧ್ಯಾತ್ಮ ತೃಷೆಗಾಗಿ ಊರು ಬಿಡುತ್ತಾರೆ. ಮದುವೆಗೆ ಒಪ್ಪದೆ ವೈರಾಗ್ಯ ತಾಳುತ್ತಾರೆ.

ಇವರು ಕಡಕೋಳ ಮಡಿವಾಳಪ್ಪನವರ ಸಮಕಾಲೀನರಾದ್ದರಿಂದ ಆಗಾಗ ಬಸವಲಿಂಗರು ಕಡಕೋಳಕ್ಕೆ ಹೋಗಿ ಅನುಭವ ಗೋಷ್ಠಿಗಳನ್ನು ನಡೆಸಿ ಬರುತ್ತಿದ್ದರೆಂದು ಕಾಣುತ್ತದೆ. ಹಂಪೆಗೆ ಬಂದು ದೀರ್ಘಕಾಲ ತಪಸ್ಸು ಮಾಡಿ ಸಿದ್ಧಿ ಪಡೆಯುತ್ತಾರೆ. 'ಕೂಡಲೂರೇಶ' ಎನ್ನುವ ಅಂಕಿತದಲ್ಲಿ ತತ್ವಪದಗಳನ್ನು ರಚಿಸುತ್ತಾರೆ. ಗುಲಬರ್ಗಾ ಮತ್ತು ರಾಯಚೂರ ಜಿಲ್ಲೆಯ ಹಲವಾರು ಊರುಗಳಲ್ಲಿ ಅಡ್ಡಾಡಿ ಜನತೆಯ ಪ್ರೀತಿ ಗಳಿಸುತ್ತಾರೆ. ದೇವದುರ್ಗ ತಾಲ್ಲೂಕಿನ 'ಖಾನಾಪೂರ' ಗ್ರಾಮದಲ್ಲಿ ಲಿಂಗೈಕ್ಯರಾಗುತ್ತಾರೆ.

ಬಸವಲಿಂಗರು ರಚಿಸಿದ ತತ್ವಪದಗಳು ಗುಲಬರ್ಗಾ, ರಾಯಚೂರು, ಬಳ್ಳಾರಿ ಜಿಲ್ಲೆಯಾದ್ಯಂತ ಪಸರಿಸಿವೆ. ಈಗಲೂ ಈ ಪ್ರದೇಶದ ಜನ ಭಜನೆ, ಹಬ್ಬ-ಹರಿದಿನ, ಜಾತ್ರೆ ಮುಂತಾದ ಶುಭ ಸಂದರ್ಭಗಳಲ್ಲಿ ಇವರ ಹಾಡುಗಳನ್ನು ಹೇಳಿ ತೃಪ್ತಿಪಡುತ್ತಾರೆ. ಅನೇಕ ಹಾಡುಗಳು ಆಕಾಶವಾಣಿ ಮೂಲಕ ಬಿತ್ತರಗೊಂಡಿವೆ. ಬಸವಲಿಂಗರು ರಚಿಸಿದ ಹಾಡುಗಳನ್ನು ಸಂಗ್ರಹಿಸಿ ಕೆಲವರು ಪ್ರಕಟಿಸಿದ್ದಾರೆ.

ಅಪರಾಳ ತಮ್ಮಣ್ಣ: (1800-1880) ರಾಯಚೂರ ಜಿಲ್ಲೆಯ ಅಪರಾಳ ಗ್ರಾಮ 'ಶ್ರೀಕೃಷ್ಣ ಪಾರಿಜಾತ'ದ ಜನ್ಮಸ್ಥಳ. ಇಲ್ಲಿನ ತಮ್ಮಣ್ಣ ಕವಿ ಗೀತನಾಟಕವಾಗಿ ಈ ಕೃತಿಯನ್ನು ರಚಿಸುತ್ತಾನೆ. ತಮ್ಮಣ್ಣನ ಗೀತನಾಟಕದ ಪ್ರೇರಣೆಗೆ ಒಳಗಾಗಿ ಬೆಳಗಾಂವ ಜಿಲ್ಲೆಯ ಕುಲಗೋಡ ಗ್ರಾಮದ ತಮ್ಮಣ್ಣ ಕವಿ ಇದನ್ನು ಸಣ್ಣಾಟಕ್ಕೆ ತಿರುಗಿಸುತ್ತಾನೆ. ಇದು ಎಲ್ಲೆಡೆ ಪ್ರದರ್ಶಿಸಲ್ಪಟ್ಟು 'ಸಣ್ಣಾಟಗಳ ರಾಜ 'ನೆನ್ನುವ ಕೀರ್ತಿ ಪಡೆಯಿತು. ಜೊತೆಗೆ ರಾಜ್ಯಮಟ್ಟದ ಜಾನಪದ ಕೃತಿಗಳ ಶ್ರೇಷ್ಠ ಮಾಲಿಕೆಯಲ್ಲಿ ಅಗ್ರಸ್ಥಾನ ಪಡೆಯಿತು. ಇದಕ್ಕೆ ಅಪರಾಳ ತಮ್ಮಣ್ಣ ಮೂಲ ಪ್ರೇರಕ. ತಮ್ಮಣ್ಣ ರಾಯಚೂರು ಜಿಲ್ಲೆಯ ಹೆಮ್ಮೆಯ ಕವಿ. 'ಕನಕಾದ್ರಿವಾಸ' ಎನ್ನುವ ಅಂಕಿತದಲ್ಲಿ ಕೃತಿಯನ್ನು ರಚಿಸಿದ್ದಾನೆ.

ನೀರಲಕೇರಿ ಬಸವಲಿಂಗ: (1812-1872) ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನ ಹಿರೇಗೂಡೂರು ಗ್ರಾಮದವರಾದ ಇವರು ಸಂಚರಿಸುತ್ತ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ನೀರಲಕೇರಿಗೆ ಬಂದು ಜನಸೇವೆಗೆ ತೊಡಗುತ್ತಾರೆ. ಹಲವು ಜನರ ಅಪವಾದ, ನಿಂದನೆಗಳ ಮಧ್ಯದಲ್ಲಿ ಬದುಕುತ್ತಾರೆ. ಸಮಾಧಾನ ಚಿತ್ತದಿಂದ ಜನರನ್ನು ನೀತಿ ತತ್ವಗಳತ್ತ ಸೆಳೆಯುತ್ತಾರೆ. ಶಕ್ತಿಯ ಆರಾಧಕರಾಗುತ್ತಾರೆ. 'ಗಡಿಯ ನೀರಲಕೇರಿಯ ಒಡೆಯ ಪಂಚಾಕ್ಷರಿ' ಅಂಕಿತದಲ್ಲಿ ತತ್ವಪದಗಳನ್ನು ರಚಿಸುತ್ತಾರೆ.

ಘನ ವಿದ್ವಾಂಸರೂ, ಮಹಾ ತಪೋನಿಧಿಗಳೂ, ಪ್ರತಿಭಾನ್ವಿತ ಕವಿಗಳೂ ಆದ ಸಂತೆಕೆಲ್ಲೂರಿನ ಘನಮಠಾರ್ಯರು ಅಂದು ಇವರನ್ನು ಸಂದರ್ಶಿಸುವ ನೀರಲಕೇರಿಗೆ ಬಂದಿದ್ದರಂತೆ. ಇಬ್ಬರೂ ಸೇರಿ ಜ್ಞಾನದಾಸೋಹ ಕಾರ್ಯದಲ್ಲಿ ನಿರತರಾಗಿ ಕಲ್ಯಾಣದ ಶರಣರ ಕಾರ್ಯವನ್ನು ಮುಂದುವರಿಸಿಕೊಂಡು ಬಂದಂತೆ ಕಾಣುತ್ತದೆ. ಈಗಲೂ ಈ ಪ್ರದೇಶದ ಜನ ಇವರ ಹಾಡುಗಳನ್ನು ಭಜನೆಯ ಸಂದರ್ಭದಲ್ಲಿ ಹೇಳುತ್ತಾರೆ.

ಸಂತೆಕೆಲ್ಲೂರಿನ ನಾಗಭೂಷಣ: (1829-1880) ಮೂಲತಃ ಆಂಧ್ರಪ್ರದೇಶದ 'ದೋರವಾಡ' ಗ್ರಾಮದವರು. ಹಿರಿಯರ ಒತ್ತಾಯಕ್ಕೆ ಮಣಿದು ಮದುವೆಯಾಗಿ, ಒಂದು ಹೆಣ್ಣುಮಗುವಿನ ತಂದೆಯಾಗಿ ಮುಂದೆ ವೈರಾಗ್ಯ ತಾಳುತ್ತಾರೆ. ಪರಮ ಮುಕ್ತಿಗಾಗಿ ಹಂಬಲಿಸಿ ಊರನ್ನು ಬಿಟ್ಟು ಕರ್ನಾಟಕವನ್ನು ಪ್ರವೇಶಿಸುತ್ತಾರೆ. ರಾಯಚೂರು ಅವರ ಕರ್ಮಸ್ಥಳವಾಗುತ್ತದೆ. ಜನರ ಆಧ್ಯಾತ್ಮಿಕ ತೃಷೆಯನ್ನು ಹಿಂಗಿಸುತ್ತಾರೆ. ನೂರಾರು ತತ್ವಪದಗಳನ್ನು 'ಘನಮಠೇಶ' ಅಂಕಿತದಲ್ಲಿ ಕಟ್ಟಿ ಹಾಡುತ್ತಾರೆ. 'ಕೃತಿಜ್ಞಾನ ಪ್ರದೀಪಿಕೆ' ಎನ್ನುವ ಕೃತಿಯೊಂದನ್ನು ರಚಿಸುತ್ತ ರೈತರ ಕೃಷಿ ಸಮಸ್ಯೆಗೆ ಪರಿಹಾರ ನೀಡುತ್ತಾರೆ ಇವರು ಬರೆದ ಕೃತಿಗಳು ಈಗಾಗಲೇ ಪ್ರಕಟವಾಗಿವೆ.

ಘನಮಠೇಶರ ಪದಗಳು ರಾಯಚೂರು ಜಿಲ್ಲೆಯಾದ್ಯಂತ ಕೇಳಿಬರುತ್ತವೆ. ಜೋಗುಳ, ಭಜನೆ, ಮಂಗಳಾರತಿ ಹೀಗೆ ವಿವಿಧ ಸಂದರ್ಭಗಳಲ್ಲಿ ಇವರು ಹಾಡು ಹೇಳುವುದನ್ನು ಕೇಳಬಹುದಾಗಿದೆ.

ತಾಳಕೇರಿ ಬಸವರಾಜ ಹೂಗಾರ: ಜನಪದ ಸಾಹಿತ್ಯ, ಸಂಗೀತ, ನೃತ್ಯಗಳ ಮೂಲಕ ರಾಯಚೂರು ಜಿಲ್ಲೆಯನ್ನು ಪ್ರತಿನಿಧಿಸುವ ಕವಿ ಬಸವಾರಾಜ ಹೂಗಾರ ಅವರು, ಪ್ರಭಾವ, ಪ್ರಸರಣ, ಜನಪ್ರಿಯತೆಯಿಂದ ಜಿಲ್ಲೆಯಲ್ಲಿ ಎದ್ದುಕಾಣುವ ಕವಿ-ಕಲಾವಿದ. ಇವರು ರಾಯಚೂರು ಜಿಲ್ಲೆಯ ಯಲಬುರ್ಗಿ

ತಾಲ್ಲೂಕಿನ ತಾಳಕೇರಿ ಗ್ರಾಮದಲ್ಲಿ 1930ರಲ್ಲಿ ಜನಿಸಿದರು. ಮನೆತನದಿಂದಲೇ ಕಲೆಯನ್ನು ರೂಢಿಸಿಕೊಂಡು ಬಂದ ಬಸವರಾಜರು ಚಿಕ್ಕವಯಸ್ಸಿನಲ್ಲೇ ಸಂಗೀತಕ್ಕೆ ಹೆಚ್ಚು ಮಾರುಹೋಗುತ್ತಾರೆ. ತಮ್ಮ ಹನ್ನೊಂದನೆಯ ವರ್ಷದಲ್ಲಿ ಪಂಚಾಕ್ಷರಿ ಗವಾಯಿಗಳ ನಾಟ್ಯ ಸಂಘದಲ್ಲಿ ಸೇರಿಕೊಳ್ಳುವರು. ಎಂಟನೆಯ ತರಗತಿಯವರೆಗೆ ಮಾತ್ರ ಅಭ್ಯಾಸ ಮಾಡುವರು. ಹಲವು ವಾದ್ಯಗಳನ್ನು ನುಡಿಸುವ ಪರಿಣತಿ ಹೊಂದಿದ ಇವರು ನಾಟಕದಲ್ಲಿ ಪಾತ್ರಗಳನ್ನು ಹಾಕಿ ಅಭಿನಯಿಸುವುದೆಂದರೆ ಎಲ್ಲಿಲ್ಲದ ಸಂತಸ. 'ಹೇಮರಡ್ಡಿ ಮಲ್ಲಮ್ಮ' ನಾಟಕದಲ್ಲಿ 'ನಾಗಮ್ಮ'ನ ಪಾತ್ರ ಹಾಕಿ ಒಳ್ಳೆಯ ನಟರೆನ್ನುವ ಕೀರ್ತಿ ಸಂಪಾದಿಸಿದರು.

ಬಸವರಾಜ ಹೂಗಾರ ಅವರು ಒಟ್ಟು 35 ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಬಹುಪಾಲು ಕೃತಿಗಳು ಜನಪದಕ್ಕೆ ಮೀಸಲಾದವುಗಳಾಗಿವೆ. ಅವುಗಳಲ್ಲಿ 'ಬಸವಗೀತ', 'ಕಲ್ಯಾಣ ಗೀತ', 'ತಾಯಿಯ ಹಾಡು' ಕೃತಿಗಳು ಅಮೂಲ್ಯವಾದವುಗಳು. ಇವುಗಳಲ್ಲಿನ ಹಾಡುಗಳು ಎಲ್ಲೆಡೆ ಪ್ರಸಾರವಾಗಿ ಜನಮನ ಸೂರಗೊಂಡಿವೆ. ಜನ ಮಂತ್ರಮುಗ್ಧರಾಗಿ ಈ ಹಾಡುಗಳನ್ನು ಕೇಳಿದ್ದಾರೆ. ಉತ್ತರ ಕರ್ನಾಟಕ ಹೆಚ್ಚು ಕಡಿಮೆ ಎಲ್ಲ ಹಳ್ಳಿಗಳಲ್ಲಿ ಇವರು ರಚಿಸಿದ ಹಾಡುಗಳನ್ನು ಭಜನೆ, ಹೆಣ್ಣುಮಕ್ಕಳ ಹಾಡುಗಳನ್ನು ಗಳೆ ಹೊಡೆಯುವಾಗ, ಜೋಕಾಲಿ ಜೀಕುವಾಗ, ಹಬ್ಬದದಿನ, ಜಾತ್ರೋತ್ಸವ–ಹೀಗೆ ಹಲವು ಸಮಯ ಸಂದರ್ಭಗಳಲ್ಲಿ ಹೇಳುತ್ತಾರೆ. ತಮ್ಮೆಲ್ಲ ಹಾಡುಗಳಿಗೆ ಕವಿ 'ಮುದ್ದುಬಸವ–ಎನ್ನುವ ಅಂಕಿತ ಬಳಸಿದ್ದಾರೆ.

ತಾಳಕೇರಿ ಬಸವರಾಜರು ರಚಿಸಿದ ಹಾಡುಗಳು ಎಂಥವರ ಬಾಯಲ್ಲೂ ಗುಣಗುಣಿಸುತ್ತವೆ. ತವರುಮನೆಯ ನೆನಪು, ತಾಯಿಯ ಮಹತ್ವ ಕುರಿತು ರಚಿಸಿದ ಹಾಡುಗಳನ್ನು ಕೇಳು ಕೇಳುತ್ತ ಕಣ್ಣೀರಿಟ್ಟವರೂ ಇದ್ದಾರೆ. ಇನ್ನೊಂದು ಸಲ ಹಾಡಲು ಒತ್ತಾಯಿಸಿ ಕೇಳಿ ತಣಿದಿದ್ದಾರೆ. ನಿತ್ಯ ಜೀವನದ ಕೌಟುಂಬಿಕ ಸಂಗತಿಗಳೇ ಇಲ್ಲಿನ ಹಾಡುಗಳಿಗೆ ವಸ್ತುವಾಗಿರುವುದರಿಂದ ಜನಮನವನ್ನು ಇವು ಹೆಚ್ಚು ಸ್ಪಂದಿಸಿವೆ.

ಬಸವರಾಜ ಹೂಗಾರ ಅವರ ಬಹುಮುಖ ಪ್ರತಿಭೆಯನ್ನು ಗಮನಿಸಿ ಇವರಿಗೆ 'ಜಾನಪದ ಸಂಗೀತ ವಿಭೂಷಣ', 'ಸಂಗೀತ ಸಾಹಿತ್ಯ ನಾಟ್ಯ ಕಲಾರತ್ನ' ಎಂಬ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. 25 ವರುಷ ಭಾರತ ಸರಕಾರದ ಕ್ಷೇತ್ರ ಪ್ರಚಾರ ಇಲಾಖೆಯಲ್ಲಿ ಹಾಗೂ ಸಾಂಗ್ ಆ್ಯಂಡ್ ಡ್ರಾಮಾ ವಿಭಾಗದ ರಿಜಿಸ್ಟರ್ಡ್ ಕಲಾವಿದರಾಗಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಜನಪದ ಕಲೆಯ ಪ್ರದರ್ಶನ ನಡೆಸಿದ್ದಾರೆ. ಇವರ ಕಲಾಸಂಪತ್ತು, ಪ್ರತಿಭೆ, ಜನಮನ್ನಣೆ ಕಂಡು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 1983ರ ಪ್ರಶಸ್ತಿ ನೀಡಿ ಗೌರವಿಸಿದೆ.

ಗಬ್ಬೂರ ಹಂಪಣ್ಣ ಮತ್ತು ಗುರಣ್ಣ: (1893–1978) ಹಂಪಣ್ಣ 'ಘನ ವೃಷಭ' ಎನ್ನುವ ಅಂಕಿತದಲ್ಲಿ 'ಮೋಹವಿವೇಕ' ಎನ್ನುವ ದೊಡ್ಡಾಟವೊಂದನ್ನು ರಚಿಸಿದ್ದಾನೆ. ಇದೇ ಊರಿನ ಗುರಣ್ಣ 'ಹರದೇಶಿ' ಹಾಡುಗಳನ್ನು ವ್ಯಾಪಕವಾಗಿ ರಚಿಸಿದ್ದುದು ತಿಳಿದುಬರುತ್ತದೆ. ಸುತ್ತಲಿನ ಜನ ಈತನ ಹಾಡುಗಳನ್ನು ಮೇಳಕಟ್ಟಿ ಹೇಳುತ್ತಾರೆ.

ಬಳಗಾನೂರ ಮರಿಸ್ವಾಮಿ: (1860–1930) ಈತ 'ಬಂಧುಶತಧೀಶ' ಎನ್ನುವ ಅಂಕಿತದಲ್ಲಿ 'ದೇವಿಕಥೆ', 'ಜಲಂಧರ', 'ಗಿರಿಜಾ ಕಲ್ಯಾಣ' ಎಂದು ಮೂರು ದೊಡ್ಡಾಟಗಳನ್ನು ರಚಿಸಿದ್ದಾನೆ.

ಕುಷ್ಟಗಿ ಲಿಂಗಣ್ಣ: (1900–1965) 'ರಾಮಲಿಂಗೇಶ' ಎನ್ನುವ ಅಂಕಿತದಲ್ಲಿ 'ಮಹಿಷಾಸುರ ಮರ್ದನ' ಎನ್ನುವ ದೊಡ್ಡಾಟವೊಂದನ್ನು ರಚಿಸುತ್ತಾನೆ.

ಸಿಂಗನೇಡಿಯ ಭೀಮಾಚಾರಿ: (1900–1964) 'ವಿಠ್ಠಲ' ಎನ್ನುವ ಅಂಕಿತದಲ್ಲಿ 'ಶಬರ ಶಂಕರ' ಕಥೆ ರಚಿಸುತ್ತಾನೆ.

ಮರ್ಚೇಡದ ಸಿದ್ಧಯ್ಯ: (1912–1970) 'ಮ್ಯಾಗಡಿ ಭೀಮಪ್ಪ' ಎನ್ನುವ ಅಂಕಿತದಲ್ಲಿ 'ವೀರಸಂಗಯ್ಯ', 'ಚಿತ್ರಸೇನ', 'ಗಯ್ಯಾಖ್ಯಾನ ಕಥೆ', 'ಗುಣಸುಂದರ' ಬಯಲಾಟಗಳನ್ನು ಬರೆದಿದ್ದಾನೆ.

ಮಾನ್ವಿ ಗುಂಡಾಚಾರಿ: (1912–1970) 'ಶ್ಯಾಮಸುಂದರ ಎನ್ನುವ ಅಂಕಿತದಲ್ಲಿ 'ಶಚಿ ಸ್ವಯಂವರ', 'ಲಂಕಾದಹನ' ಎಂಬೆರಡು ಕೃತಿಗಳನ್ನು ರಚಿಸಿದ್ದಾನೆ.

ಸಗಮಕುಂಟ ರಾಮಾಚಾರಿ: (1912–1972) ಪ್ರತಿಭಾವಂತ ಬಯಲಾಟದ ಕವಿ. ಸುಭದ್ರಾ ಕಲ್ಯಾಣ, ಬಾಣಾಸುರ, ರಂಭಾ, ವಿಲಾಸ, ಲವ–ಕುಶ ಕಾಳಗ, ಭೀಮಸೇನ ವಿಲಾಸ, ಕನಕಾಂಗಿ ಕಲ್ಯಾಣ, ಸತ್ಯರತ್ನ ಕಥೆ, ಸುಧನ್ವಕಾಳಗ, ಐರಾವಣ–ಮೈರಾವಣ, ಹಿರಣ್ಯಂಧರಾಸುರ, ಕರ್ಣಾರ್ಜುನ ಕಾಳಗ, ಬಬ್ರುವಾಹನ, ದುಶ್ಯಾಸನ ಕಥೆ, ಕುರುಕ್ಷೇತ್ರ, ಶಂಭಕಾಸುರ, ಸುಗಂಧಿತ ಪುಷ್ಪ– ಹೀಗೆ ಒಟ್ಟು 16 ದೊಡ್ಡಾಟಗಳನ್ನು ರಚಿಸಿದ್ದಾನೆಂದು ತಿಳಿದುಬರುತ್ತದೆ.

ಮದರಕಲ್ಲ ನಾಗಯ್ಯ: (1917–1972) 'ಮದರಶೀಲವಾಸ' ಎನ್ನುವ ಅಂಕಿತದಲ್ಲಿ ದೊಡ್ಡಾಟಗಳನ್ನು ಬರೆದ ಕವಿ ನಾಗಯ್ಯ ಈತ 'ಚಿತ್ರ ಪರಿಶೋಧನ', 'ಉತ್ತರಾಸುರ' ಎಂಬೆರಡು ದೊಡ್ಡಾಟಗಳನ್ನು ರಚಿಸಿದ್ದಾನೆ.

ಕುಕ್ಕನೂರ ಸಿದ್ರಾಮಪ್ಪ ಮಾಸ್ತರ: 1919ರಲ್ಲಿ ಬದುಕಿ 'ರಾಮಲಿಂಗೇಶ' ಎನ್ನುವ ಅಂಕಿತದಲ್ಲಿ ಚಂದ್ರಪ್ರಭೆ ಸ್ವಯಂವರ', 'ಮೂರರ್ಧ ವಜ್ರದ ಕಥೆ', 'ಗೋಪಿಚಂದ್ರ', 'ಸತ್ಯಹರಿಶ್ಚಂದ್ರ' ಎಂಬ ದೊಡ್ಡಾಟಗಳನ್ನು ರಚಿಸಿದ ಕವಿ. ಈತ ಒಳ್ಳೆಯ ಕಲಾಕಾರನೂ ಆಗಿದ್ದನೆಂದು ತಿಳಿಯುತ್ತದೆ.

ಚಿಕ್ಕಸುಗೂರಿನ ನೀಲಕಂಠ ಶಾಸ್ತ್ರಿ: ಲಾವಣಿ ಹಾಡು ರಚಿಸುವಲ್ಲಿ ಶ್ರೇಷ್ಠರಾಗಿದ್ದರೆಂದು ತಿಳಿಯುತ್ತದೆ. ಶಾಸ್ತ್ರಿಯವರ ನಿಖರವಾದ ಕಾಲ ಮತ್ತು ಅಂಕಿತವನ್ನು ಶೋಧಿಸಬೇಕಿದೆ.

(ಬಿಪಿಪಿ)

ಜನಪದ ಕ್ರೀಡೆಗಳು: ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಜನಪದ ಕ್ರೀಡೆಗಳಿಗೆ ಮಹತ್ವಪೂರ್ಣವಾದ ಸ್ಥಾನವಿದೆ. ಜನಪದ ಕ್ರೀಡೆಗಳು ಹೆಚ್ಚಾಗಿ ಈ ಭಾಗದಲ್ಲಿ ಕಂಡು ಬರುವುದರಿಂದ ಕ್ರೀಡಾಲೋಕಕ್ಕೆ ಈ ಭಾಗದ ಅಭೂತಪೂರ್ವ ಕೊಡುಗೆ ನೀಡಿವೆ. ಜನಪದ ಕ್ರೀಡೆಗಳು ಬದುಕಿನೊಂದಿಗೆ ಅವಿನಾಭಾವ ಸಂಬಂಧ

ಹೊಂದಿದ್ದು, ಪ್ರಮುಖವಾಗಿ ಜನಪದರಿಗೆ ಸ್ಪರ್ಧಾ ಮನೋಭಾವನೆ ಹಾಗೂ ಮನೋರಂಜನೆ ಮತ್ತು ಶಾರೀರಿಕ ಬಲವರ್ಧನೆಗೆ ಸಹಾಯಕವಾಗಿವೆ. ಚಿಕ್ಕಂದಿನಿಂದ ಆಟದ ಪ್ರವೃತ್ತಿಯನ್ನು ಬೆಳೆಯಿಸಿಕೊಂಡು ಬಂದ ಮಕ್ಕಳು ಅವುಗಳಿಗೆ ಆಟಗಳು ಮನೋರಂಜನೆಯಾಗಿ ಕಂಡು ಬರುತ್ತವೆ. ತದನಂತರ ಪ್ರಾಯಕ್ಕೆ ಬಂದಾಗ ಸ್ಪರ್ಧಾಮನೋಭಾವನೆಗೆ ಗಟ್ಟಿರೂಪವನ್ನು ತಂದುಕೊಡುತ್ತದೆ.

ಜನಪದ ಆಟಗಳು ಕೆಲವು ನಿತ್ಯ ಹಾಗೂ ಕೆಲವು ವಿಶೇಷ ಸಂದರ್ಭದಲ್ಲಿ ಹಬ್ಬ ಹುಣ್ಣಿಮೆಯಂದು ಆಡಲ್ಪಡುತ್ತವೆ. ಜನಪದ ಆಟಗಳನ್ನು ನಾಲ್ಕು ರೀತಿಯಾಗಿ ವರ್ಗೀಕರಣ ಮಾಡಬಹುದು. 1. ಗಂಡು ಮಕ್ಕಳಾಟಗಳು 2. ಹೆಣ್ಣು ಮಕ್ಕಳಾಟಗಳು 3. ಪ್ರಾಣಿ ಸಂಬಂಧಿ ಆಟಗಳು.

1. ಗಂಡು ಮಕ್ಕಳಾಟಗಳು: ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಗಂಡಸರು ಆಡುವ ಆಟಗಳು ವಿವಿಧ ತೆರನಾಗಿದೆ. 10ರಿಂದ 18 ವರ್ಷದ ಮಕ್ಕಳು ಲಗೋರಿ, ಚಿಣ್ಣಿದಾಂಡು, ಚೆಂಡಿನಾಟ, ಕಬ್ಬಡ್ಡಿ ಆಟ, ಖೋ ಖೋ, ಕ್ರಿಕೇಟ್ ಆಟ, ಆಮ್ರೇಟ ಎಸ್. ಮುಟ್ಟಾಟ. ಕಣ್ಣು ಮುಚ್ಚಾಲೆ ಹೀಗೆ ವಿಭಿನ್ನ ಪ್ರಕಾರವಾಗಿರುವ ಆಟವನ್ನು ಗಮನಿಸುತ್ತೇವೆ. ಹಬ್ಬ ಹುಣ್ಣಿಮೆ ಸಮಯದಲ್ಲಿ ವಯಸ್ಕರು ಜಿದ್ದನ್ನು ಕಟ್ಟಿ ಆಡುತ್ತಾರೆ. ಎರಡು ಕಣ್ಣಿಗೆ ಬಟ್ಟೆ ಕಟ್ಟಿ ನಿಗದಿತ ಸ್ಥಳ, ಗಿಡ ಮರ, ದೇವಸ್ಥಾನ, ರಸ್ತೆ ಮುಂತಾದ ಸ್ಥಳಕ್ಕೆ ಮುಟ್ಟಿ ಬರುವ ಸ್ಪರ್ಧೆಯನ್ನು ಇಡುತ್ತಾರೆ. ಇಂತಹ ಸ್ಪರ್ಧೆಗಳು ಹಬ್ಬ, ಹುಣ್ಣಿಮೆಯಂದು ಏರ್ಪಡುತ್ತವೆ. ಏಕೆಂದರೆ ವಿಭಿನ್ನ ತರ ತರದ ಸಿಹಿ, ಅಡುಗೆಯನ್ನುಂಡು ಸಂತೋಷದ ಸಂಭ್ರಮದಲ್ಲಿರುವ ಈ ಜನರು ಬಗೆ ಬಗೆಯಾದ ಜಿದ್ದನ್ನು ಕಟ್ಟಿ ಆಡುವುದು ಈ ಭಾಗದ ವಿಶೇಷತೆಯಾಗಿದೆ.

2. ಹೆಣ್ಣು ಮಕ್ಕಳ ಆಟಗಳು: ಗಂಡು ಹೆಣ್ಣೆಂಬ ತಾರತಮ್ಯ ಮನೋಭಾವನೆಯು ಸಮಾಜದಲ್ಲಿ ಬೇರೂರಿರುವುದರಿಂದ ಹೆಣ್ಣು ಮಕ್ಕಳು ಆಡುವ ಆಟಗಳು ಒಂದು ಸಮಯದ ಪರಿಮಿತಿಯೊಳಗೆ ಮಾತ್ರ ಸೀಮಿತವಾಗಿದೆ. ಗ್ರಾಮಾಂತರ ಭಾಗದಿಂದ-1 ವರ್ಷದಿಂದ 12 ವರ್ಷದ ಪ್ರಾಯ ತುಂಬುವುದಕ್ಕಿಂತ ಮುಂಚಿತವಾಗಿ ಮಾತ್ರ ಆಡುತ್ತಾರೆ. 13 ವರ್ಷದ ಆನಂತರ ಪ್ರಾಯಕ್ಕೆ ಬಂದ ಹೆಣ್ಣುಮಕ್ಕಳು ಸಮಾಜದ ಹೊರಗಡೆ ಬಂದು ಆಟವಾಡುವಂತಿಲ್ಲ, ಏಕೆಂದರೆ ಸಮಾಜದ ಹೊರಗಡೆ ಕಟ್ಟು ನಿಟ್ಟಿನ ಕಟ್ಟಳೆ ಮತ್ತು ನಿರ್ಭಂಧಗಳಿರುವುದರಿಂದ ಅವರವರ ಮನೆ ಅಥವಾ ಓಣಿಯಲ್ಲಿ ಮಾತ್ರ ತಮ್ಮ ವಾರಗೆಯ ಗೆಳತಿಯರೊಂದಿಗೆ ಚಕ್ಕಾ ಆಟ, ಜೋಕಾಲಿ ಆಟ, ಬಳಿ ಚೂರಾಟ, ಹುಲಿಮನಿಯಾಟ, ಮುಂತಾದ ಆಟಗಳನ್ನು ಆಡುತ್ತಾರೆ. ಅದು ಸಮಯ ಸಿಕ್ಕಾಗ ಮಾತ್ರ. ಯಾಕೆಂದರೆ ಹೆಣ್ಣು ಮಕ್ಕಳಿಗೆ ಮನೆಯಲ್ಲಿ ಸಾಕಷ್ಟು ಕೆಲಸದ ಹೊರೆ ಇರುವುದರಿಂದ ಆಟವಾಡಲು ಸಮಯ ಸಿಗುವುದು ದುರ್ಲಭ,

3. ಪ್ರಾಣಿ ಸಂಬಂಧಿ ಆಟಗಳು: ತಮ್ಮ ಒಡನಾಟದ ಪ್ರಾಣಿಗಳು ಬದುಕಿನ ಅವಿಭಾಜ್ಯ ಅಂಗವೆಂದು ಜನಪದರು ಭಾವಿಸಿದ್ದಾರೆ. ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ ಪ್ರಾಣಿಗಳ ಆಟದ ಸ್ಪರ್ಧೆಯಿರುವುದು ಎಲ್ಲರಿಗೂ ಅಚ್ಚರಿ ಮೂಡುವಂತಹುದು. ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಪ್ರಾಣಿಗಳ ಆಟದ ಸ್ಪರ್ಧೆಯು ವಿವಿಧ ಆಟಗಳಿಗೆ ಅಣಿ ಮಾಡಿ–ಕೊಡುತ್ತದೆ. ಹೀಗಾಗಿ ಪ್ರಾಣಿಗಳಿಗೂ ಕೂಡ ಪೂರ್ವ ಸಿದ್ಧತೆಯೊಂದಿಗೆ ಮೊದಲೆ ತರಬೇತಿಯನ್ನು ಕೊಡುವುದುಂಟು. ಎತ್ತಿನ ಬಂಡಿ ಓಡಿಸುವಂತಹುದು, ಊರ ಹೊರಗಡೆ ವಿಶಾಲವಾದ ಮೈದಾನದಲ್ಲಿ ಎತ್ತಿನ ಕುಸ್ತಿ, ಹಚ್ಚುವುದು, ಕೋಳಿಗಳ ಕಾಳಗ, ಮುಂತಾದ ಹತ್ತೂ ಹಲವು ಪ್ರಾಣಿಗಳಿಗೆ ಸ್ಪರ್ಧೆಗೆ ಅಣಿಗೊಳಿಸಿ ಹಬ್ಬ, ಹುಣ್ಣಿಮೆ, ಉತ್ಸವಗಳಂದು ನಡೆಯುತ್ತವೆ. ಜಾತ್ರೆಯ ಸಂದರ್ಭದಲ್ಲಿ ಜೋಡೆತ್ತಿಗೆ ಪ್ರಥಮ, ದ್ವಿತೀಯ, ಮತ್ತು ತೃತೀಯ ಸ್ಥಾನ ನೀಡಿ ಬಹುಮಾನವನ್ನು ನೀಡುವರು, ಉದಾ: ಬಸವಕಲ್ಯಾಣ ತಾಲ್ಲೂಕಿನ ಹಾರಕೂಡ ಜಾತ್ರೆ, ಶರಣಬಸವೇಶ್ವರ ಜಾತ್ರೆ ಹೀಗೆ ಪ್ರಮುಖವಾದ ಜಾತ್ರಾಮಹೋತ್ಸವಗಳಂದು ವಿವಿಧ ತೆರನಾದ ಆಟಗಳು ನಡೆಯುವುದು ಸಾಮಾನ್ಯವಾಗಿದೆ.

ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಕಾರ ಹುಣ್ಣಿಮೆ (ನೋಡಿ) ಹಬ್ಬದಂದು 'ಕರಿ ಹರಿಯುವ' (ನೋಡಿ) ವಿಶಿಷ್ಟ ಸಾಂಪ್ರದಾಯಿಕ ಆಚರಣೆಯನ್ನು ಗಮನಿಸುತ್ತೇವೆ. ಹಬ್ಬದ ದಿನದಂದು ಊರಿನ ಎಲ್ಲಾ ಎತ್ತು ಕರುಗಳಿಗೆ ಊರ ಹೊರಗಿನ ಅಗಸಿಗೆ ತಂದು ಅಲ್ಲಿಂದ ಎತ್ತುಗಳನ್ನು ಓಡಿಸುತ್ತಾರೆ. ಒಂದುವೇಳೆ ಬಿಳಿಯ ಎತ್ತು ಪ್ರಥಮ ಬಂದರೆ ಬಿಳಿ, ಜೋಳ, ಎಳ್ಳು, ಬಿಳಿ ದವಸ ಧಾನ್ಯಗಳು ಉತ್ತಮ ಫಸಲು ಬರುತ್ತದೆಂಬ ಸಂಕೇತ, ಕೆಂಪು ಎತ್ತು ಪ್ರಥಮ ಬಂದರೆ ತೊಗರಿ, ಹಾಗೂ ಕೆಂಪು ಏಕದಳ ಮತ್ತು ದ್ವಿದಳ ಧಾನ್ಯಗಳ ಉತ್ತಮವಾಗಿ ಬೆಳೆಯುತ್ತದೆಂಬ ಸೂಚನೆ, ಕಪ್ಪು ಎತ್ತು ಪ್ರಥಮ ಬಂದರೆ ಕಪ್ಪು ದವಸ ಧಾನ್ಯಗಳಾದ ಹೆಸರು ಉದ್ದು, ಪುಂಡಿ, ಸೂರ್ಯಪಾನ ಸೋಯಾಬಿನ ಮುಂತಾದ ದವಸ ಧಾನ್ಯಗಳು ಸರಿಯಾಗಿ ಬೆಳೆಯುತ್ತದೆಂದು ರೈತರು ಲೆಕ್ಕಾಚಾರವನ್ನು ನಿರ್ಧರಿಸುತ್ತಾರೆ. ಅಲ್ಲದೆ ಇನ್ನು ಹಲವು ಬಗೆಯ ಆಟವನ್ನು ಗಮನಿಸುತ್ತೇವೆ. ಕುಸ್ತಿ, ಜೋಕಾಲಿ, ಕಬ್ಬಡ್ಡಿ, ಸ್ಪರ್ಧೆ, ಲಿಂಬೆ ಹಣ್ಣಿನ ಆಟ, ಗಾರುಡಿಯ ಆಟ ಮುಂತಾದವುಗಳು ಆಟಕ್ಕೆ ಸ್ಪರ್ಧೆಯನ್ನೇರ್ಪಡಿಸಿ ಬಹುಮಾನವನ್ನು ಗೆಲ್ಲುವಂತಹುದು ಗೆದ್ದಂತಹ ತಂಡದವರು ಗುಲಾಲನ್ನು ಹಚ್ಚಿ ಬಾಜಾ ಭಜಂತ್ರಿಯೊಂದಿಗೆ ವಿಜೃಂಬಣೆಯಿಂದ ಆಚರಿಸುವ ಸಂಪ್ರದಾಯವನ್ನು ಈ ಭಾಗದಲ್ಲಿ ತುಂಬಾ ವೈಶಿಷ್ಟ್ಯತೆಯಿಂದ ಆಚರಿಸುವ ರೂಢಿಯಿದೆ. *(ಪಿಕೆಕೆ)*

ಜನಪದ ತೂಕ ಮತ್ತು ಅಳತೆಯ ವಿಧಾನಗಳು: ಮಾನವನ ವ್ಯಾವಹಾರಿಕ ಬದುಕಿನ ಹುಟ್ಟಿನೊಂದಿಗೇ ತೂಕ, ಅಳತೆಗಳೂ ಹುಟ್ಟಿಕೊಂಡವು. ಇಂದಿನ ವೈಜ್ಞಾನಿಕ ಯುಗದಲ್ಲೂ ಜನಪದ ಜೀವನದಲ್ಲಿ ಈ ಹಳೆಯ ತೂಕ ಅಳತೆಗಳ ವಿಧಾನಗಳು ಉಳಿದುಕೊಂಡು ಬಂದಿರುವುದು ಆಶ್ಚರ್ಯದ ಸಂಗತಿ. ಅವರು ಕಾಲದ ಅಳತೆಗೆ ನಿಸರ್ಗವನ್ನು, ಉದ್ದಗಲಗಳ ಅಳತೆಗೆ ದೇಹದ ಅಂಗಗಳನ್ನು, ಭೂಮಿಯ ಅಳತೆಗೆ ನೇಗಿಲು, ಬೀಜಗಳನ್ನು, ದವಸಧಾನ್ಯ, ಮೇವುಗಳ ಅಳತೆಗೆ ಕೊಳಗ, ಬಿಟ್ಟಿಗಳನ್ನು ಮಾನದಂಡಗಳನ್ನಾಗಿ ಮಾಡಿಕೊಂಡಿದ್ದಾರೆ. ಇವುಗಳಲ್ಲಿ ನಾವು ಪ್ರಾದೇಶಿಕ ವೈಶಿಷ್ಟ್ಯವನ್ನು ಕಾಣಬಹುದು.

ದೊಡ್ಡದು–ಸಣ್ಣದು, ಹೆಚ್ಚು–ಕಡಿಮೆ, ದೂರ–ಸನಿಹ ಎನ್ನುವ ತಾರತಮ್ಯ ವಿಚಾರ ಮಾನವ ಸಹಜವೆನ್ನುವುದಕ್ಕಿಂತ ಪ್ರಾಣಿ ಸಹಜವೆನ್ನುವುದೇ ಹೆಚ್ಚು ಸಮಂಜಸ. ಒಂದು ಪ್ರಾಣಿ ಆಹಾರದ ದೊಡ್ಡ ಗುಂಪಿನ ಕಡೆಗೆ ಹೋಗುವುದೆ ವಿನಾ ಸಣ್ಣದರ ಕಡೆಗಲ್ಲ. ಮಗುವಿಗೆ ದೊಡ್ಡದು ಬೇಕಲ್ಲದೆ ಸಣ್ಣದನ್ನೆಂದೂ ಇಚ್ಛಿಸದು. ಈ ಬುದ್ಧಿ ವ್ಯಾವಹಾರಿಕ ಅಳತೆಯ ವಿಧಾನಗಳನ್ನು ಬೆಳಸಿಕೊಂಡು ಬರಲು ಮೂಲವಾಯಿತು. ಅನಾಗರಿಕ ಸ್ಥಿತಿಯಿಂದಲೇ ಬೆಳೆದುಬಂದ ಈ ವಿಚಾರ ಈಗ ತೀರ ಸೂಕ್ಷ್ಮವೂ ಅಷ್ಟೇ ಬೃಹತ್ತೂ ಆದುದನ್ನು ಕಾಣುತ್ತೇವೆ. ಇಂದು ಅಣುವನ್ನು ಅಳತೆ ಮಾಡುತ್ತೇವೆ; ಭೂಮಿಯನ್ನೇ ತೂಗುತ್ತೇವೆ, ಆಕಾಶವನ್ನೇ ಅಳೆಯುತ್ತೇವೆ. ಅಳತೆ ತೂಕಗಳ ಹಲವಾರು ವಿಧಾನ, ಸಾಧನಗಳನ್ನು ಬೆಳೆಸಿಕೊಂಡು ಬಂದಿರುತ್ತೇವೆ.

ತಕ್ಕಡಿ ಕಲ್ಲುಗಳಿಂದ ತೂಕ; ಚೇನು, ಟೇಪು, ಇಂಚುಪಟ್ಟಿಗಳಿಂದ ಉದ್ದಗಲ; ಗಡಿಯಾರದಿಂದ ಕಾಲ; ಸೇರು, ಲೀಟರ್‌ಗಳಿಂದ ಪ್ರವಾಹಿಯನ್ನು ಅಳೆಯುವ ಕಾಲವೂ ತೀರ ಹಳೆಯದೀಗ– ವೈಜ್ಞಾನಿಕ ಯುಗ ಸಾಧಿಸಿರುವ ತೂಕ, ಅಳತೆಯ ಸೂಕ್ಷ್ಮಾತಿ ಸೂಕ್ಷ್ಮ ಸಾಧನಗಳನ್ನು ಜನಸಾಮಾನ್ಯರನ್ನು ಬಿಡಿ, ಕಲಿತವರೂ ಕಲ್ಪಿವುದು ಅವಶ್ಯಕವಾಗಿದೆ. ಇದು ಕಂಪ್ಯೂಟರ್ ಯುಗ. ಬಟನ್ ಒತ್ತಿದರೆ ಸಾಕು ನೀವು ಬಯಸಿದ ತೂಕ, ಅಳತೆ, ಲೆಕ್ಕ ಎಲ್ಲವೂ ಸಿದ್ಧ.

ಮಾನವ ಮೂಲವಾದ ಅವನ ವ್ಯಾವಹಾರಿಕ ಬದುಕಿನ ತೀರ ಹಳೆಯ ಅಳತೆಯ ವಿಧಾನಗಳು ಇಂದೂ ಜನಪದದಲ್ಲಿ ರೂಢಿಯಲ್ಲಿವೆ. ಅವರು ಈ ವೈಜ್ಞಾನಿಕ ಯುಗದಲ್ಲಿಯೂ ಆ ವಿಧಾನಗಳನ್ನೇ ಅನುಸರಿಸುವುದನ್ನು ಗಮನಿಸಿದರೆ ಜನಪದರನ್ನು ಅನಾಗರಿಕರು ಮುಂತಾಗಿ ಹೇಳುವುದಕ್ಕಿಂತ, ವೈಜ್ಞಾನಿಕ ವಿಧಾನಗಳಿಗೇ ಮೂಲದ ಸಾಧನಗಳ ಸ್ಥಾನಮಾನ ಪಡೆಯಲು ಶಕ್ತಿ ಸಾಕಿಲ್ಲವೆಂದೇ ಹೇಳಬೇಕು.

ಕಾಲ: ಜಾನಪದದಲ್ಲಿ ಕಾಲವನ್ನು ಅಳೆಯುವ ಸಾಧನವೇ ಇಲ್ಲ. ನಿಸರ್ಗದ ಕ್ರಿಯೆಯನ್ನೇ ಸಾಮೂಹಿಕ ತಿಳುವಳಿಕೆಗೆ ತಂದಿದ್ದರು. ಬಿಸಿಲು ಹೆಚ್ಚಾದ ಕಾಲವನ್ನು ಬೇಸಿಗೆ, ಚಳಿ ಹೆಚ್ಚಾದ ಕಾಲವನ್ನು ಚಳಿಗಾಲ, ಮಳೆ ಬೀಳುವ ಕಾಲವನ್ನು ಮಳೆಗಾಲ ಅಂದರು. ಹೊತ್ತು ಹೊಂಟು ಹೊತ್ತು ಮುಳುಗುವವರೆಗೆ ದಿನ, ತಿರುಗಿ ಹೊತ್ತು ಹೊರಡುವವರೆಗೆ ರಾತ್ರಿ. ದಿನವನ್ನು ನಸುಕು, ಮುಂಜಾನೆ, ಮದಿ (ಮಧ್ಯಾಹ್ನ), ಇಳಿಹೊತ್ತು, ಚೆಂಜಿ (ಸಂಜೆ), ರಾತ್ರಿ ಎಂದು ವಿಭಾಗಿಸಿದರು. ಹುಣ್ಣಿವೆಯಿಂದ ಹುಣ್ಣಿವೆ, ಅಮವಾಸ್ಯೆಯಿಂದ ಅಮವಾಸ್ಯೆ ಒಂದು ತಿಂಗಳು. ಯುಗಾದಿಯಿಂದ ಯುಗಾದಿ ಒಂದು ವರ್ಷ. ಇದು ಅವರು ನಿಗದಿ ಪಡಿಸಿಕೊಂಡ ಕಾಲಚಕ್ರ.

ಸಮಯ: ಆದರೆ ಸಮಯ ಅಳೆಯಲು ಸೂರ್ಯ, ಚಿಕ್ಕೆ, ಚಂದ್ರರನ್ನೇ ಒಂದು ಸಾಧನವಾಗಿ ಮಾಡಿಕೊಂಡರು. ಜನಪದದಲ್ಲಿ ಸೂರ್ಯನಿಗೆ ಸಮಯ, ಹೊತ್ತು ಎಂದೇ ಅರ್ಥ. 'ಹೊತ್ತ ಹೊಂಟಿತು', 'ಹೊತ್ತ ಹೊಳ್ಳಿತ್ತು', 'ಹೊತ್ತು ಮುಳುಗಿತು' ಎಂದು ಹೇಳುತ್ತಾರೆ. 'ಮೋಡ್ಡಾನ ಹೊತ್ತು ನೋಡ್ಡ ಹೊತ್ತು; ಅತ್ತಿಮನಿ ಸೊಸಿ ಉಣ್ಣದ ಹೋದ್ಳು' ಎಂಬ ಗಾದೆಯೆ ಇದೆ.

ಸೂರ್ಯ, ಚಿಕ್ಕೆಗಳನ್ನಾಧರಿಸಿ ಜನಪದದಲ್ಲಿ ಸಮಯ ಗುರುತಿಸುವ ಬೇರೆ ಪದ ಪ್ರಯೋಗಗಳೇ ಇವೆ: 'ಬೆಳ್ಳಿ ಮೂಡಿತ್ತು', 'ಜುಮು ಜುಮು ನಸುಕಾಗಿತ್ತು', 'ಮೂಡ್ಲ ಹರಿದಿತ್ತು', 'ಸೂರ್ಯಾ ಮಾರ ಏರಿದ್ದ', 'ಸೂರ್ಯಾ ನೆತ್ತಿಮ್ಯಾಲ ಬಂದಿದ್ದ', 'ಸೂರ್ಯಾ ತಾಯಿ ಹೊಟ್ಟ್ಯಾಗ ಹೋಗಿದ್ದ', 'ಚಿಕ್ಕಿ ಬಿದ್ದಿದ್ದು', 'ಬೆಳ್ದಿಂಗ್ಳು ಹೊಂಟಿತ್ತು', 'ಮುತಾಳ ಕೂರ್ಗಿ ಮೂಡಿತ್ತು', 'ಚೆನ್ನಮ್ಮನ ದಂಡಿ ನೆತ್ತಿ ಮ್ಯಾಲ ಬಂದಿತ್ತು' ಹೀಗೆ ವಿವಿಧ ರೀತಿಯ ನಿಸರ್ಗ ಕ್ರಿಯೆಯನ್ನು ಸರ್ವಸ್ವೀಕೃತ ಅಭಿವ್ಯಕ್ತಿಗಳಿಂದ ಸಮಯ ಗುರುತಿಸಲಾಗುತ್ತದೆ. ಅವರ ವ್ಯವಹಾರ ನಿಸರ್ಗದ ಕ್ರಿಯೆಯೊಂದಿಗೆ.

ಉದ್ದ, ಅಗಲ, ಅಳ, ಅಂತರ: ದಪ್ಪ (Thickness), ಉದ್ದಗಲ (Length and bredth), ಆಳ (Depth), ಅಂತರ (Distance), ಅಳೆಯುವಾಗ ತಮ್ಮ ದೇಹದ ಅಂಗಗಳನ್ನೇ ಅಳತೆ ಗೋಲಾಗಿಸುವ ವಿಧಾನ ಇಂದೂ ಜನಪದದಲ್ಲಿದೆ.

ದಪ್ಪ ಕುರಿತು ಹೇಳವಾಗ: ಕಿರಬಳ್ಳ ಅಳತಿ, ಹೆಬ್ಬಳ್ಳ ದಪ್ಪ, ಹಿಡಿ ಅಳತಿ, ತೆಕ್ಕೆಗಡತರ ಎಂದು ಹೇಳಿದರೆ, ಉದ್ದಗಲ ಹೇಳುವಾಗ: ಬಳ್ಳ, ಎಡ್ಡ ಬಳ್ಳ, ಮೂಬೆಳ್ಳ, ನಾಬೆಳ್ಳ, ಚೋಟು, ಗೇಟು, ಮಳ, ಮಾರು ಎಂದು ಬೆರಳು, ಕೈಗಳನ್ನು ಅಳತೆಗೋಲಾಗಿಸುತ್ತಾರೆ.

ಪ್ರವಾಹಿಯ ಆಳ, ಬೆಳೆಯ ಎತ್ತರ (Hight) ಮೊದಲಾದವನ್ನು ಹೇಳುವಾಗ ಆಳನ್ನೇ (ಮನುಷ್ಯ) ಅಳತೆಗೋಲಾಗಿಸುತ್ತಾರೆ. ಪಿಂಡ್ರಿ, ಮಟ, ಮಳಕಾಳಮಟ, ತೊಡಿಮಟ, ಟೊಂಕಮಟ, ಎದಿಮಟ, ಕುತ್ತಿಗಿ ಮಟ ಅದಕ್ಕೂ ಹೆಚ್ಚಿನದನ್ನು ಒಂದಾಳ, ಎಡ್ಡಾಳ ಎಂದು ಬಾವಿಯ ನೀರಿನ ಆಳವನ್ನು ಹೇಳುತ್ತಾರೆ.

ತೀರ ಸಣ್ಣ ಪ್ರಮಾಣದ ಅಳತೆಗೂ ತಮ್ಮ ಕೈಯನ್ನೇ ಅಳತೆಯ ಸಾಧನವಾಗಿಸುತ್ತಾರೆ. ಒಂದು ಕೈ ಮುಚ್ಚಿ ಹಿಡಿಯುವಷ್ಟು (ಮುಟ್ಟಿ) 'ಮುಟಿಗಿ', ಒಂದು ಕೈ ತೆರೆದಾಗ ತುಂಬುವಷ್ಟು; ಸೆರೆ, ಎರಡು ಕೈ ಕೂಡಿಸಿ ತುಂಬುವಷ್ಟು ಬಗ್ಗಿ ಕೈಯಿಂದ ಇದಕ್ಕೂ ಹೆಚ್ಚು ಅಳೆಯಲು ಶಕ್ಯವಿರದಾಗ ಅದಕ್ಕೆ ಬೇರೆ ಸಾಧನಗಳನ್ನು ಬಳಸಿಕೊಂಡರು. 'ಉಗರಟ' ಅಂದರೆ ತೀರ ಕಡಿಮೆ. 'ಒಂದ ಮುಕ್ಕ' ಅಂದರೆ ಬಾಯಲ್ಲಿ ಹಿಡಿಯುವಷ್ಟು ಅಥವಾ ಬೀಸುವ ಕಲ್ಲಿನ ಬಾಯಿ ತುಂಬುವಷ್ಟು.

ಬಹಳಷ್ಟು, ಸಾಕಷ್ಟು ಎಂದು ಹೇಳುವಾಗಲೂ ಅಂಗಾಂಗಗಳನ್ನೇ ಅಳತೆಯಾಗಿ ಹೇಳುತ್ತಾರೆ: ತಲಿ ತುಂಬ ಬಳಗ (ಕೂದಲಿರುವಷ್ಟು), ಕಯ ತುಂಬ ಕೆಲಸ: ಹೊಟ್ಟಿ ತುಂಬ ಊಟ; ಮೈ ತುಂಬ ಅರಿಬಿ. ಸಂಕಟ, ಸಂತುಷ್ಟಿಯ ಭಾವವನ್ನು ಅಳೆಯಲು ಇಂಥವೇ ಪ್ರಯೋಗಗಳು ಅವರಲ್ಲಿವೆ. ಎದೀ ತುಂಬ ಸಂಕಟ, ಕಣ್ತುಂಬ ನೋಡು, ಬಾಯ್ತುಂಬ ಹೊಗಳು, ಉಡಿ ತುಂಬ, ಮನತುಂಬ (........ಮಂಜಾಣದಾನ ಗಿರಿಮಲ್ಲ ಕೊಟ್ಟರ ಮನಿತುಂಬಿ ನಮ್ಮ ಮನ ತುಂಬ) ಹಣ್ಣು ಮೊದಲಾದವುಗಳನ್ನು ಎಣಿಸುವಾಗ ಒಂದಕ್ಕೆ (ಐದು) ಎಡ್ಡ ಕೈ ಮೂರಕ್ಕೈ ಎಂದೇ ಎಣಿಸುತ್ತಾರೆ. ಇಂದ್ರಿಯಗಳ ಶಕ್ತಿ–ಸಾಮರ್ಥ್ಯವನ್ನೇ ಒಂದು;

ಪ್ರಮಾಣ' ವಾಗಿಸಿ, ಅಂತರವನ್ನು ಅಳೆಯುವ ರೂಢಿ ಇಂದು ಗ್ರಾಮಗಳಲ್ಲಿದೆ: 'ಕೂಗಳತೆ' (ಕೂಗಿದರೆ ಗರಿಷ್ಠ ಕೇಳಬಹುದಾದ ದೂರ), ಕೈಗಲ್ಲಳತೆ (ಕಲ್ಲನ್ನು ಎಸೆದಾಗ ಕ್ರಮಿಸುವ ಅಂತರ). ಅದರಂತೆ ಕೌಣೆ ಕಲ್ಲಳತೆ, ಕಣ್ಣಳತೆ (ಕಾಣಿಸುವ ದೂರ). ಜನಪದದಲ್ಲಿ ತೂಕದ ಸಾಧನಗಳು ಇರಲಿಲ್ಲ. ಎಲ್ಲವೂ ಅಳತೆಯಿಂದಲೇ ಸಾಗಬೇಕು. ಭಾರ (weight) ವನ್ನು ನಿರ್ದೇಶಿಸುವಾಗ 'ಹೊರೆ' ಒಬ್ಬ ವ್ಯಕ್ತಿ ಹೊರುವಷ್ಟು 'ತಲೆಭಾರ', 'ಹೇರು' ಒಂದು ಎತ್ತಿನ ಮೇಲೆ ಅಥವಾ ಚಕ್ಕಡಿ ಮೇಲೆ ಹೇರುವಷ್ಟು ಎಂದು ಹೇಳುತ್ತಾರೆ.

ಹೊಲ (ಕ್ಷೇತ್ರ): ಹೊಲದ ಕ್ಷೇತ್ರವನ್ನು ಅಳೆಯಲೂ ಅವರು ತಮ್ಮದೇ ಆದ ವಿಧಾನಗಳನ್ನು ಅನುಸರಿಸುತ್ತಾರೆ. ತಮ್ಮ ದಿನಬಳಕೆಯ ಎತ್ತು, ನೇಗಿಲು, ಕೂರಿಗೆ, ಬೀಜ ಇವುಗಳನ್ನೇ ಮಾನದಂಡವಾಗಿಸಿಕೊಂಡರು. ಆಂಗ್ಲರು ಅಶ್ವಶಕ್ತಿ (Horse power) ಯನ್ನು ಒಂದು ಪ್ರಮಾಣವಾಗಿಸಿದರೆ ಭಾರತೀಯರು ಎತ್ತಿನ ಶಕ್ತಿಯನ್ನೇ ಪ್ರಮಾಣವಾಗಿಸಿಕೊಂಡರು.

ಇಂದಿನ ನಾಲ್ಕು ಎಕರೆ ಹೊಲಕ್ಕೆ ಅವರು 'ಕೂರಿಗೆ' ಎಂದು ಹೇಳುತ್ತಾರೆ. ಎರಡು ಎತ್ತುಗಳು, ಒಂದು ಕೂರಿಗೆಯಿಂದ ಒಂದು ದಿನ ಪೂರ್ತಿ ಬಿತ್ತುವ ಕ್ಷೇತ್ರ 'ಒಂದು ಕೂರಿಗೆ'. ಅದೇರೀತಿಯಲ್ಲಿ ನೇಗಿಲದಿಂದಲೂ ಕ್ಷೇತ್ರ ನಿರ್ದೇಶಿಸುವ ರೂಢಿ ಇದೆ. 'ಯಾಡ ನೇಗಲಿ ಹೊಲಾ', 'ನಾಕ ನೇಗಲಿ ಹೊಲಾ', 'ಐದು ನೇಗಲಿ ಹೊಲಾ' ಎಂದು ಹೊಲಕ್ಕೆ ಹೆಸರೇ ಇವೆ. ಅಷ್ಟು ಎತ್ತುಗಳು ಕೂಡಿ ಎಳೆಯಬಹುದಾದ ನೇಗಿಲ, ಎಂಟೆತ್ತಿನ ನೇಗಿಲಗಳೂ ಇವೆ. ಅಷ್ಟು ಎತ್ತುಗಳು ಕೂಡಿ ಎಳೆಯಬಹುದಾದ ನೇಗಿಲು ಅದು. ಎತ್ತುಗಳು ರಾಬ ಮಾಡುವುದನ್ನು ಲಕ್ಷಿಸಿಯೂ ಕ್ಷೇತ್ರ ಪ್ರಮಾಣ ಹೇಳುತ್ತಾರೆ. ಎಡ್ಡೆತ್ತಿನ ಹೊಲಾ, ನಾಕೆತ್ತಿನ ಹೊಲಾ, ಎಂಟೆತ್ತಿನ ಹೊಲಾ ಹೀಗೆ.

ಬೀಜ: ಹೊಲಗಳ ಅಳತೆಯನ್ನು ನಿರ್ಧರಿಸುವ ಇನ್ನೊಂದು ಸಾಧನವೂ ಪ್ರಬಲವಾಗಿ ರೂಢಿಯಲ್ಲಿದೆ. ಆ ಪ್ರದೇಶದ ಪ್ರಮುಖ ಬೆಳೆಯ ಬೀಜ ಬಿತ್ತುವ ಅಳತೆಯ ಮೇಲೆ ಹೊಲವನ್ನು ಅಳೆಯಲಾಗುತ್ತಿತ್ತು. 'ಒಂದುಡಿ ಹೊಲಾ', 'ನಾಕುಡಿ ಹೊಲಾ' ಹೀಗೆ 'ಉಡಿ' ಅಂದರೆ ಬೀಜ ತುಂಬಿ ಉಡಿಗೆ ಕಟ್ಟಿಕೊಳ್ಳುವ ಚೀಲದ ಅಳತೆ. ಅದಕ್ಕೆ 'ಉಡಿ ಚೀಲ' ಎಂದೇ ಹೆಸರು. ಹಲವಾರು ಶಾಸನಗಳಲ್ಲಿಯೂ ಇಂಥ ಉದಾಹರಣೆಗಳು ದೊರೆಯುತ್ತವೆ. ಹನ್ನೆರಡನೆಯ ಶತಮಾನದ ಒಂದು ಶಾಸನದಲ್ಲಿ 'ಎರಡ ಸಲಗೆ ಗದ್ದೆ' ಎಂದು ಹೇಳಲಾಗಿದೆ. ಆ ಕಾಲದ ಸೊಲಿಗೆ, ಅದ್ದನ, ಗಿದ್ದನ, ಕೊಳವೆ, ನಿಳಿವೆಯ ಮಾಪುಗಳು ವಿಜಾಪುರ ಜಿಲ್ಲೆಯ ಗ್ರಾಮಗಳಲ್ಲಿ ಇಂದು ರೂಢಿಯಲ್ಲಿವೆ.

ಗಳೆ (ಕೋಲು): ಹೊಲ ಅಳೆಯಲು 'ಗಳೆ' ಬಳಸುತ್ತಿದ್ದರೆಂದು ಹಲವಾರು ಶಾಸನಗಳು ಹೇಳುತ್ತವೆ. ವ್ಯವಹಾರ ಗಣಿತ, ಕ್ಷೇತ್ರಗಣಿತಗಳ ಕರ್ತೃವಾದ ರಾಜಾದಿತ್ಯನೂ ಹೊಲ ಅಳೆಯಲು 'ಗಳೆ' ಬಳಸಬೇಕೆಂದು ಹೇಳಿದ್ದಾನೆ. ಶಾಸನಗಳಲ್ಲಿ 'ಇರ್ಪತ್ತೆಂಟು ಗೇಣಗಳೆ' 'ಐವತ್ತೆರಡು ಗೇಣಗಳೆ' 'ಕತ್ತವಿಯಗಳೆ' ಎಂಬುಕ್ತಿಗಳಿವೆ. ಈ 'ಗಳೆ' ಅಂದರೆ 'ಗಳ' ಬಿದರಿನ ಕೋಲು ಎಂಬರ್ಥಕ್ಕೆ ಪುಷ್ಟಿ ಕೊಡಲು 'ಪದಿನರು ಗೇಣ್‌ಕೋಲ್' 'ಕುರಿತ ಕೊಂಟೆಯ ಕೋಲ್' 'ನಗರೇಶ್ವರ ಗಡಿಂಬದ ಕೋಲ್' ಎಂಬ ಹೇಳಿಕೆಗಳೂ ಶಾಸನಗಳಲ್ಲಿವೆ. ಆದರೆ ಜಾನಪದದಲ್ಲಿ 'ಗಳೆ' ಅಂದರೆ ನೇಗಿಲು ಅಥವಾ ಕುಂಟೆಯಿಂದ ಕೋಡೆತ್ತ ಒಂದು ದಿನ ದುಡಿಯುವುದಕ್ಕೆ ಒಂದು 'ಗಳೆ' ಎಂದು ಹೇಳಲಾಗುತ್ತದೆ. ಶಾಸನೋಕ್ತ 'ಗಳೆ' ಅಂದರೆ 'ಕೋಲು' ಎಂಬುದಂತೂ ಖಚಿತವೆನ್ನಲಿಕ್ಕೆ ಊರೂರಿನ ದೇವಸ್ಥಾನಗಳಲ್ಲಿ ಆ ಕೋಲಿನ ಉದ್ದಳತೆಯನ್ನು ಕೆತ್ತಿಡಲಾಗುತ್ತಿತ್ತು ಎಂಬ ಶಾಸನೋಕ್ತ ಮಾತೂ ಸಾಕ್ಷಿ. ಆದರೆ ಜಾನಪದದಲ್ಲಿ 'ಆ ಹೊಲಕ್ಕೆ ನಾಕ ಗಳೇ ಬೇಕಾಗತಾವ', 'ಎಂಟಗಳೇದ ಹೊಲಾ ಐತೆದು' ಎಂದು ಹೇಳಲಾಗುತ್ತದೆ. ಜಾನಪದ ಈ 'ಗಳೆ' ಪದ ಎರಡೆತ್ತಿನಿಂದ ಒಂದು ದಿನ ಕೆಲಸ ಮಾಡಬಹುದುದಾದ, ಶಾಸನೋಕ್ತ 'ಗಳೆ'ದಿಂದ ಅಳೆದ ಹೊಲವನ್ನು ಸೂಚಿಸುತ್ತದೆ. ಶಾಸನೋಕ್ತ 'ಗಳೆ' ಎಲ್ಲ ಕಡೆಗೆ ಒಂದೇ ಅಳತೆಯವಿದ್ದುವೆಂದು ಹೇಳಲು ಆಧಾರಗಳಿಲ್ಲ. ಆದರೆ ಸಾಮಾನ್ಯವಾಗಿ ಜೋಡೆತ್ತಿನ ಒಂದು ದಿನದ ಕೆಲಸ ಮಾಡುವ ಕ್ಷೇತ್ರವನ್ನು ಒಂದು ಅಳತೆಯಾಗಿ ಸರ್ವಸಾಮಾನ್ಯವಾಗಿ ಜಾನಪದದಲ್ಲಿ 'ಗಳೆ' ಎಂದು ಸ್ವೀಕರಿಸಲಾಗಿದೆ ಗಳೇದ ಮುಯ್ಯ ಕೂಡುವ ರೂಢಿ ಇಂದೂ ಗ್ರಾಮಗಳಲ್ಲಿ ರೂಢಿಯಲ್ಲಿದೆ.


ಹೆಜ್ಜೆ, ಹಗ್ಗ: ನಡೆದ ಹೆಜ್ಜೆಯ ಲೆಕ್ಕದ ಮೇಲೂ ಹೊಲ ಅಳೆಯುತ್ತಿದ್ದರು. ಬರಬರುತ್ತ ಎತ್ತಿನ ಹಣೆಗೆ ಹಚ್ಚುವ 'ಹಣೆಗ್ಗ' ದಿಂದ ಹೊಲ ಅಳೆಯಹತ್ತಿದರು. ಹಗ್ಗದಿಂದ ಅಳೆಯುವುದು ಇನ್ನೂ ರೂಢಿಯಲ್ಲದೆ. ಮೋಜಣಿ ಅಧಿಕಾರಿಯನ್ನು 'ರಜ್ಜುಕ' ಎಂದು ಶಾಸನಗಳಲ್ಲಿ ಕರೆದುದೂ ಉಂಟು.

ಮಳೆ: ಮಳೆ ಅಳತೆಗೆ ತಮ್ಮದೇ ಆದ ಸಾಮೂಹಿಕ ಅರ್ಥ ಕೊಡುವ ಅಳತೆಗಳಿವೆ. 'ಹನಿಸಿಡಿತು', 'ಜುಡ್ರ ಮಳಿ', 'ಕಂಬ್ಳಿ ಬಸೀವಂಗ', 'ಚಿಲಕ ನೀರಗಟ್ಟು', 'ನೀರು ಹರೀತು' ಎಂದು ಅನುಕ್ರಮವಾಗಿ ಈ ಮಾತುಗಳು ಹೆಚ್ಚು ಹೆಚ್ಚು ಮಳೆಯಾದುದನ್ನು ಸೂಚಿಸುತ್ತವೆ.

ಮಳೆಯ ಪ್ರಮಾಣವನ್ನು ಭೂಮಿ ಹಸಿಯಾದುದರ ಮೇಲೂ ಕಂಡುಹಿಡಿಯುತ್ತಾರೆ. 'ಸತ್ತಮಣ್ಣ ತೋದೈತಿ', 'ಒಂದು ಬಳ್ಳ', 'ಎರಡ ಬಳ್ಳ' ಹಸಿಯೆಂದು ಬೆರಳೆಣಿಕೆಯಿಂದ 'ಗೇಣು' ಹಸಿಯವರೆಗೆ ಹೇಳುತ್ತಾರೆ. ಅದಕ್ಕೂ ಹೆಚ್ಚಾದರೆ 'ಬಿತ್ತು ಹಸಿ' ಎಂದು ತಿಳಿಯುತ್ತಾರೆ. 'ಹಸಿಗಿ ಹಸಿ ಕೂಡೈತಿ' ಅಂದರೆ ತೃಪ್ತಿಕರ ಮಳೆಯಾಗಿದೆ ಎಂದೇ ಅರ್ಥ. ಮಳೆ ಅತಿ ಹೆಚ್ಚಾದರೆ 'ನೀರ ಹತ್ತಂಗ' ಆಗೈತಿ ಅನ್ನುತ್ತಾರೆ.

ಎತ್ತು, ಗಾಡಿ: ಒಕ್ಕಲುತನದ ವ್ಯವಹಾರದಲ್ಲಂತೂ ಎತ್ತು, ಎತ್ತಿನ ಗಾಡಿಗಳನ್ನೇ ಒಂದು ಅಳತೆಯ ಸಾಧನವಾಗಿಸುವುದು ರೂಢಿ.

'ಕಣ' ಮಾಡುವಾಗ ರಾಶಿಯ ಅಂದಾಜು ನೋಡಿ ಎತ್ತುಗಳ ಲೆಕ್ಕದಿಂದ ಕಣ ಕಡಿಯುತ್ತಾರೆ. ನಾಕೆತ್ತಿನಿಂದ ಹದಿನೆಂಟು ಎತ್ತಿನವರೆಗಿನ ಕಣಗಳಿರುತ್ತವೆ. ಆರೆತ್ತಿನ ಕಣ, ಹತ್ತೆತ್ತಿನ ಕಣ ಮುಂತಾಗಿ. ಇನ್ನು ಕಾಳು, ಕಣಿಕೆ, ಗೊಬ್ಬರಕ್ಕೆ ಎತ್ತಿನ ಗಾಡಿಯನ್ನೇ ಒಂದು ಅಳತೆಯಾಗಿಸುತ್ತಾರೆ 'ಒಂದ ಗಾಡಿ ಕಾಳು' ಅಂದರೆ



ಅಗ್ಗಿ ತುಳಿಯುವುದು (ಕೊಂಡ ಹಾಯುವುದು)



ಲಂಬಾಣಿ ನೃತ್ಯ

ಐದು ಚೀಲ ಕಾಳು. ಹೊಲಕ್ಕೆ ಗೊಬ್ಬರ ಹಾಕುವಾಗಂತೂ ಗಾಡಿಯೇ ಒಂದು ಅಳತೆಯ ಸಾಧನ; ಕೂರಿಗೆಗೆ ಹತ್ತಗಾಡಿ, ಮೊದಲಾಗಿ ಲೆಕ್ಕ. ಕಣಿಕೆಯ ಬಣವೆಯನ್ನು ಕುರಿತು ಹೇಳುವಾಗ ಹತ್ತ ಗಾಡಿ ಬಣವಿ, ಇಪ್ಪತ್ತಗಾಡಿ ಬಣವಿ ಎಂದು ಹೇಳುತ್ತಾರೆ.

ಕೋಳ ಕಿತ್ತಿ ಗೂಡು ಹಾಕುವಾಗ 'ಅಕ್ಕಡಿ'ಯ ಲೆಕ್ಕದ ಗೂಡುಗಳ ಅಳತೆಯನ್ನು ಹೇಳುತ್ತಾರೆ 'ನಾಕಕ್ಕಡಿ ಗೂಡು', 'ಏಳಕ್ಕಡಿ ಗೂಡು' ಇತ್ಯಾದಿ. ಆ ಅಳತೆಯ ಸಹಾಯದಿಂದ ಇಷ್ಟೇ ಕಾಸ ಹೊರಡುತ್ತದೆಂದು ಅವರು ಹೇಳುತ್ತಾರೆ. ರಾಶಿಯನ್ನು 'ತೆಲಿರಾಸಿ' (ಮೊದಲ ಸಲ ತುಳಿಸಿದ್ದು) 'ನಡಗಣ' 'ಕಡಿಗಣ' ಎಂದು ಹೇಳಿದರೆ. ಹತ್ತಿ ಬಿಡಿಸಿದ್ದನ್ನು 'ಕನ್ನಿ ಬೀಡು' (ಕನ್ಯೆ ಬೀಡು) 'ಎರಡ್ನೇ ಬೀಡು', 'ಕಡಿ ಬೀಡು' ಎಂದು ಹೇಳುತ್ತಾರೆ.

ಅಳತೆಯ ಪ್ರಮುಖ ಸಾಧನಗಳು: ಮನೆಯಲ್ಲಿ ಬಳಸುವ ದಿನಬಳಕೆಯ ಸಾಮಾನುಗಳು ಅಳತೆಯ ಸಮರ್ಥ ಹಾಗೂ ಸಹಜ ಸಿಕ್ಕಬಲ್ಲ ಉಪಕರಣಗಳಾಗಿದ್ದುವು ಗಡಿಗೆ ಮಾಡುವ ಕುಂಬಾರ, ಗಳೆಗಾಡಿ ಮಾಡುವ ಬಡಿಗ, ಸೀರಿ, ಧೋತ್ರ ನೇಯುವ ಜಾಡ, ಮರ, ಬುಟ್ಟಿ ಹೆಣ್ಣೆಯುವ ಮೇದಾರ, ಹೆಡಿಗೆ, ಗಳಿಗಿ ಹೆಣೆಯುವ ಕೊರವ ಮೊದಲಾದವರು ಗ್ರಾಮೀಣ ಬದುಕಿನ ಪ್ರಮುಖ ಅಂಗ. ಬ್ರಹ್ಮಸೃಷ್ಟಿಯ ಮನುಷ್ಯ, ಪಶು ಪಕ್ಷಿ ಮೊದಲಾದವುಗಳ ಆಕಾರ ಅಳತೆಯಲ್ಲಿ ಒಂದು ಸಾಮ್ಯ (Uniformity) ಇರುವಂತೆ, ಈ ಆಯಗಾರರು ರಚಿಸುವ ವಸ್ತುಗಳಲ್ಲಿಯೂ ಒಂದು ರೀತಿಯ ರೂಪ ಸಾಮ್ಯ ಇರುವುದೊಂದು ವೈಶಿಷ್ಟ್ಯ ಸಾಮಾನ್ಯವಾಗಿ ಕುಂಬಾರ ಮಾಡಿದ ಗಡಿಗೆಗಳು, ಕೊರವರ ಬುಟ್ಟಿ, ಹೆಡಿಗೆಗಳು ಒಂದೇ ಆಕಾರ ಅಳತೆಯವೇ ಇರುತ್ತವೆ. ಇನ್ನು ಜಾಡ ಮತ್ತು ಬಡಿಗರ ರಚನೆಯಲ್ಲಿ ವ್ಯತ್ಯಾಸ ಇರುವುದಂತೂ ಅಶಕ್ಯ.

ಈ ದಿನಬಳಕೆ ಗಡಿಗೆ, ಬುಟ್ಟಿ, ಹೆಡಿಗೆಗಳನ್ನೇ ಅಳತೆಯ ಸಾಧನಗಳನ್ನಾಗಿ ಬಳಸಿಕೊಂಡರು. ಕುಂಬಾರರಲ್ಲಿ ಮಿಳ್ಳಿ, ಕುಳ್ಳಿ, ಮಗಿ, ಗಡಿಗಿ, ಸ್ವಾರಿ, ರಂಜಣಿಗಿ, ಬಿಂದಿಗೆ, ಜೊಡ, ಹರವಿ ಹೀಗೆ ವಿವಿಧ ಅಳತೆ ಆಕಾರದ ಪಾತ್ರೆ ನಿರ್ಮಾಣವಾಗುತ್ತವೆ. ಪ್ರವಾಹಿಯನ್ನಳೆಯಲು ಇಂದೂ ಹಳ್ಳಿಗಳಲ್ಲಿ ತುಪ್ಪದ ಮಿಳ್ಳಿ, ಮಸರಿನ ಕುಳ್ಳಿ, ಎಣ್ಣಿಮಗಿ, ಮಜ್ಜಗಿ ಗಡಗಿ, ಹಾಲಸ್ವಾರಿ, ನೀರಬಿಂದಗಿ, ಕೊಡ, ಹರವಿ, ರಂಜಣಗಿ ಹೀಗೇ ಹೇಳುತ್ತಾರೆ. ಅವರು ಬದಕ (ಹಣ, ಬಂಗಾರ) ಹುಗಿದಿಡಲು ಕೊಡ, ರಂಜಣಿಗೆಗಳನ್ನೇ ಬಳಸುತ್ತಿದ್ದುದು ಇಂದೂ ನಿದರ್ಶನಕ್ಕೆ ಬರುತ್ತಿವೆ. ಒಂದು ಮಗಿಗೂ ಇನ್ನೊಂದು ಮಗಿಗೂ ವಿಶೇಷ ವ್ಯತ್ಯಾಸ ಅಳತೆಯಲ್ಲಿ ಇರುತ್ತಿರಲಿಲ್ಲ. ಅದರಂತೆ ಗಡಿಗೆ, ಬಿಂದಿಗೆ, ಕೊಡಗಳಲ್ಲಿ ಸಹಿತ. ಇಷ್ಟು ಮಿಳ್ಳಿ ಅಂದರೆ ಒಂದು ಕುಳ್ಳಿ; ಇಷ್ಟ ಕುಳ್ಳಿ ಅಂದರೆ ಒಂದ ಗಡಗಿ. ಹೀಗೆ ಅವರ ಕೋಷ್ಟಕವೇ ಇದೆ!

ಇದರಂತೆ ಬುಟ್ಟಿ, ಗಳಿಗೆಗಳೂ ಕಾಳು ಮೊದಲಾದವನ್ನು ಅಳತೆ ಮಾಡುವ ಸಾಧನಗಳಾಗಿದ್ದವು. ವಸ್ತುವಿನ ಭಾರವನ್ನನುಸರಿಸಿ, ಸಣ್ಣದೊಡ್ಡ ಆಕಾರದ ಹೆಡಿಗೆ, ಬುಟ್ಟಿಗಳನ್ನು ಹೆಣೆಯುತ್ತಿದ್ದರು. 'ಹಿಟ್ಟಿನ ಬುಟ್ಟಿ' 'ಜ್ವಾಳದ ಬುಟ್ಟಿ' ಗಳಿದ್ದಂತೆ, ಕೆಸರಿನ ಹೆಡಿಗಿ, ಹೆಂಡಿ ಹೆಡಿಗಿ, ಹೊಟ್ಟಿನ ಹೆಡಿಗೆಗಳೂ ಇದ್ದುವು. ಬುಟ್ಟಿಗಳು ಅಡಿಗೆ ಮನೆಯಿಂದ ಪಡಸಾಲೆಗೆ ಓಡಾಡುವ ಹಕ್ಕು ಪಡೆದಿದ್ದರೆ, ಹೆಡಿಗೆಗಳ ಹಕ್ಕು ಕೇವಲ ಅಂಗಳಕ್ಕೆ ಮೀಸಲು. ಕಾರಣ ಹೆಡಿಗೆಗಳನ್ನು ಸಿಂದಿ (ಈಚಲು) ಫರಕೆಯಿಂದ ಮಾಡುತ್ತಾರೆ; ಆ ಗಿಡ ಮೈಲಿಗೆಯದೆಂಬ ಭಾವವಿದೆ. ಬುಟ್ಟಿಗಳನ್ನು ಲಕ್ಕಿ ಮತ್ತು ಹೂಲಿಯ ಜಬರಿಗಳಿಂದ ಮಾಡುತ್ತಾರೆ. ಅದರಂತೆ ಬಿದಿರಿನ 'ದುರಡಿ' ಬುಟ್ಟಿ, ಮೊರಗಳನ್ನು ಮ್ಯಾದಾರರು ಮಾಡುತ್ತಾರೆ. ಅವುಗಳಿಗೆ ಎಣ್ಣೆಮಾಡಿ ಬಳಸುವರು. ಮೊರಗಳು ಒಂದೇ ಅಳತೆಯವಿದ್ದರೂ, ಬುಟ್ಟಿಗಳು ವಿವಿಧ ಅಳತೆ, ಆಕಾರದವಿರುತ್ತವೆ. 'ದುರಡಿ' ಮಾತ್ರ ರೊಟ್ಟೀ ಇಡಲು ಮಾಡಿದ್ದು, ಅದಕ್ಕೆ ಎಣ್ಣೆಯಾಗಲಿ, ಮತ್ತೇನೇ ಆಗಲಿ ಹುಚ್ಚುತ್ತಿರಲಿಲ್ಲ.

ಈ ಬುಟ್ಟಿಗಳಿಂದಲೇ ಕೊಡ-ಕೊಳ್ಳುವುದು, ಕಾಳುಕಡಿ ಹಂಚಿಕೊಳ್ಳುವುದು. ಪಾಲು ಮಾಡಿಕೊಳ್ಳುವುದು ಈಗಲೂ ರೂಢಿ. ಇದಕ್ಕೆ ಅಳತೆಯ ಗಡಿಗೆಗಳನ್ನು ಬಳಸುವ ವಿಧಾನವೂ ಕೆಲವು ಕಡೆಗಳಲ್ಲಿದೆ. ಸಾಮಾನ್ಯವಾಗಿ 'ಮಾನ' (Measurement) ಅಂದರೇನೇ ಅಳತೆ ಈ ಪದವನ್ನೇ ಮೂಲವಾಗಿಟ್ಟುಕೊಂಡು, ಒಮ್ಮನ, ಇಮ್ಮನ, ನಾಕಮನ, ಆರಮಾನ ಎಂದು ಹೇಳುತ್ತಾರೆ. ಇಮ್ಮನ ಬುಟ್ಟಿ, ನಾಕ ಮಾನ ಬುಟ್ಟಿ ಎಂದು ಅಳತೆಯ ಬುಟ್ಟಿಗಳಿವೆ. ಒಮ್ಮನ ಗಡಿಗಿ, ಇಮ್ಮನ ಗಡಿಗಿ ಎಂದು ಅಳತೆಯ ಗಡಿಗೆಗಳೂ ಇದ್ದವು. ಈ 'ಮಾನ' ಪದ ತೀರ ಹಳೆಯದು. ಬಸವಣ್ಣನವರ ವಚನ ಮತ್ತು ಅದಕ್ಕೂ ಮೊದಲಿನ ಗ್ರಂಥಗಳಲ್ಲಿ ಕಾಣದೊರೆಯುತ್ತದೆ. ಆದರೂ ಎಲ್ಲ ಕಡೆಗೂ ಒಂದೇ ಅಳತೆಯ ಮಾಪು ಅದಾಗಿರಲಿಲ್ಲ ನಾಲ್ಕು ಸೊಲಿಗೆಗೆ ಒಂದು ಮಾನ; ಹದಿನಾರು ಮಾನಕ್ಕೆ ಒಂದು ಒಕ್ಕಳ, 'ಚೀಲ' ಎಂದು ಹೇಳುವ ರೂಢಿ ಸಾಮಾನ್ಯವಾದುದು. ಇದೇ ಲೆಕ್ಕದ ಮೇಲೆ 'ಗಳಿಗೆ', 'ಹಗಿ', 'ಅಂಬಾರಿ' ಗಳನ್ನು ವಿರಚಿಸುತ್ತಿದ್ದರು. ನಾಕಮಾನದ ಗಳಿಗೆ, ಎಂಟಮಾನದ ಗಳಿಗೆ, ನಾಕವಕ್ಕಳ ಗಳಗಿ ಮುಂತಾಗಿ 'ಹಗೆ'ಗಳ ಅಳತೆಯನ್ನು ಹೇಳುವಾಗಲೂ ಮೂರಿಪ್ಪತ್ತ ಚೀಲದ ಹಗೆ, ಎಡ್ಡಿಪ್ಪತ್ತ ಚೀಲದ ಹಗೆ, ಹತ್ತರ ಹಗೆ, ಅಂಬಾರಿ ಹತ್ತ ಹೇರಿನದು, ನಾಕ ಖಂಡುಗದ್ದು, (ಖಂಡುಗ=ಇಪ್ಪತ್ತು ಚೀಲ) ಎಂದೂ ಹೇಳುತ್ತಾರೆ. ಮಾನದಂಡಗಳೂ ಇದ್ದವೆನ್ನುವುದನ್ನು ಈಗಗಾಲೇ ನೋಡಿದ್ದೇವೆ. ಅದರಂತೆ 'ಚಾಪಿ, ಮೆಣಸಿನಕಾಯಿ, ಜಾಳಿಗಿ, ಹತ್ತಿ ಜಾಳಗಿ, ಹೊಟ್ಟು' ಇವೆಲ್ಲ ಅವರ ಪ್ರಮಾಣದ ಸಾಧನಗಳು.

ಸಣ್ಣ ಪ್ರಮಾಣ: ತೀರ ಚಿಕ್ಕ, ಸೂಕ್ಷ್ಮ ಅಳತೆ ಹೇಳಲು, ಕಾಳು ಕಾಯಿಗಳು ಗಾತ್ರವನ್ನು ಒಂದು ಪ್ರಮಾಣವಾಗಿ ಹೇಳುತ್ತಾರೆ. ಎಳ್ಳ ಕಾಳಷ್ಟು, ಸಾಸ್ವಿ ಕಾಳಟ್ಟು, ಜ್ವಾಳದ ಕಾಳಟ್ಟು, ಗುಲಗುಂಜಿಯಟ್ಟು, ನಿಂಬಿಕಾಯಟ್ಟು, ಬಳೂಲ ಕಾಯಟ್ಟು, ಟೆಂಗಿನಕಾಯಟ್ಟು ಮುಂತಾಗಿ.

ಹನಿ ನೀರಿಲ್ಲ ಹನಿ ತುಪ್ಪಾ ನೀಡು ಎನ್ನುವಲ್ಲಿ ಹನಿ ತೀರ ಸೂಕ್ಷ್ಮ ಪ್ರಮಾಣಕ್ಕೆ ಸಾಕ್ಷಿ. 'ಹಾಂ ಅನೂದ್ರಾಗ ಬರ್ತೀನು', 'ಕಣ್ಣುಚ್ಚಿ ತೆರಿಯೊದ್ರಾಗ ಬರ್ತೀನು' ಎನ್ನುವಲ್ಲಿ ತೀರ ಸೂಕ್ಷ್ಮ ಅವಧಿಯನ್ನು ನಿರ್ದೇಶಿಸುತ್ತಾರೆ. ಹೀಗೆ ಚಿಕ್ಕಗಾತ್ರ ಸೂಕ್ಷ್ಮ ಅವಧಿಯನ್ನು ಹೇಳುವ ರೂಢಿ ಇದೆ.

ಅಳತೆಯ ಸಾಧನೆಗಳು ಕಾಲಾನುಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತ ಬಂದಿವೆ. ಜನಪದ ಎಲ್ಲದರಲ್ಲಿಯೂ

ತನ್ನ ಪ್ರಾದೇಶಿಕ ವೈಶಿಷ್ಯಗಳನ್ನು ಕಾಯ್ದುಕೊಂಡು ಬಂದಿವೆ. ಅಂತೇ ಈ ಸಾಧನೆಗಳಲ್ಲಿಯೂ ಪ್ರಾದೇಶಿಕತೆಯ ಪ್ರಾಬಲ್ಯವನ್ನು ಉಳಿಸಿಕೊಂಡು ಬಂದಿದೆ. ಅದಕ್ಕೆಂದೇ ನಾನು ಜಾನಪದ ಅಳತೆ ಮಾಪುಗಳಿಗೆ ಸರಿಸಮಾನವಾದ ಇಂದಿನ ಅಳತೆಯ ಮಾಪುಗಳ ಪ್ರಮಾಣ, ಕೋಷ್ಟಕವನ್ನು ಹೇಳದೆ, ಜನಪದದಲ್ಲಿ ಸಾಮೂಹಿಕ ವಾಗಿ ಸ್ವೀಕರಿಸಿದ ಅಳತೆಯ ಪದ್ಧತಿಗಳ ಕಡೆಗೆ ಗಮನ ಸೆಳೆದಿದ್ದೇನೆ.

ತೂಕ ಪದ್ಧತಿ ಇರಲಿಲ್ಲ: ಅಳತೆಗೆ ಸಂಬಂಧಪಟ್ಟಂತೆ ಜಾನಪದದಲ್ಲಿ ಕಂಡ ಇನ್ನೊಂದು ವೈಶಿಷ್ಯವೆಂದರೆ ತೂಕ (weight) ಮಾಡುವ ಪದ್ಧತಿಯೇ ಇರಲಿಲ್ಲ. ಅಳೆಯುವ (Measurement) ರೀತಿಯನ್ನೇ ಎಲ್ಲದರಲ್ಲಿಯೂ ಅಳವಡಿಸಿಕೊಂಡಿದ್ದರು. ತಮ್ಮ ದೇಹದ ಅಂಗಾಂಗಗಳನ್ನು, ಮರ, ಬುಟ್ಟಿ, ಗಡಿಗೆ ಮೊದಲಾದ ದಿನಬಳಕೆಯ ವಸ್ತುಗಳನ್ನು, ಎತ್ತು ಮೊದಲಾದ ಪ್ರಾಣಿಗಳನ್ನು ಅಳತೆಗೋಲಾಗಿರಿಸಿಕೊಂಡರು. ಅವರ ವಿಧಾನವನ್ನೇ ಉಪಯೋಗಿಸಿಕೊಂಡು ಆಧುನಿಕ ಅಳತೆ ಮತ್ತು ಅಳತೆಯ ಸಾಧನಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಲಾಗಿದೆ. ಉದಾಹರಣೆಗೆ: ಒಂದು ಕುಣಿ (Pit) ಅಥವಾ 'ಕಟ್ಟಿ' ಮಣ್ಣು ಅಗೆಯುವುದೇನೆಂದರೆ ಒಂದು ಗುದ್ಮಳಾ (ಮುಷ್ಟಿಮಾಡಿದ ಮಳ) ತಗ್ಗು, ಹತ್ತು ಗುದ್ಮಳಾ ಉದ್ದಗಲ ಅಗೆಯುವುದು. ಅದನ್ನೇ ಇಂದು ಒಂದು ಅಡಿ ಆಳ, ಹತ್ತು ಅಡಿ ಉದ್ದಗಲ ಮಾಡಿ-ಕೊಂಡಿದ್ದೇವೆ. ಆದರೆ ಅಂದು ಕಟ್ಟಿಗೆ ಕೋಲು, ಹಗ್ಗದಿಂದ ಅಳೆಯುತ್ತಿದ್ದರೆ, ಇಂದು ಟೇಪು ಬಂದಿದೆ ಅಷ್ಟೆ. ಆದರೆ ಈ ಅಳತೆಗೆ ಮೂಲ ಒಬ್ಬ ಮನುಷ್ಯ (ಆಳು) ಒಂದು ದಿನದ ಕೆಲಸದ ಅವಧಿಯಲ್ಲಿ ಎಷ್ಟು ಅಗೆಯಬಲ್ಲ ಎನ್ನುವುದನ್ನು ನಿರ್ಧರಿಸಿದ್ದು ಮಾತ್ರ ಜಾನಪದ ಬುದ್ಧಿ. *(ಎಂಜಿಬಿ)*

ಜನಪದ ನಂಬಿಕೆಗಳು: ಜನಪದ ನಂಬಿಕೆಗಳನ್ನು ಮೂರು ವಿಧಗಳಲ್ಲಿ ಕಾಣಬಹುದಾಗಿದೆ. 1. ಸಾಮಾನ್ಯ ನಂಬಿಕೆಗಳು 2. ವಾಸ್ತವ (ವೈಜ್ಞಾನಿಕ) ನಂಬಿಕೆಗಳು 3. ಮೂಢ ನಂಬಿಕೆಗಳು.

1. ಸಾಮಾನ್ಯ ನಂಬಿಕೆಗಳು: ಸಾಮಾನ್ಯ ನಂಬಿಕೆಗಳಲ್ಲಿ ಮೂಢ ನಂಬಿಕೆಯು ಇಲ್ಲ; ವೈಜ್ಞಾನಿಕ ಆಧಾರವೂ ಇಲ್ಲ. ಕೇವಲ ನಂಬಿಕೆಗಾಗಿ ನಂಬಿಕೆ ಇರುವಂಥವುಗಳು. ಉದಾ: ಯಾವುದೇ ಕೆಲಸ ಕಾರ್ಯಗಳಿಗೆ ಹೋಗುವಾಗ ಬೆಕ್ಕು ಅಡ್ಡ ಬಂದರೆ ಕೆಲಸ ಆಗುವುದಿಲ್ಲ ಎಂಬ ನಂಬಿಕೆ. ಅದರಲ್ಲೂ ಕಪ್ಪು ಬಣ್ಣದ ಬೆಕ್ಕು ಅಡ್ಡ ಬಂದರಂತೂ ಕೆಲಸ ಆಗುವುದೇ ಇಲ್ಲ ಎಂಬುದು. ಎಷ್ಟೋ ಸಲ ಕಾಕತಾಳೀಯವೆಂಬಂತೆ ಕೆಲಸ ಆಗದೆ ಇದ್ದಾಗ "ನೋಡು ಬೆಕ್ಕು, ಅಡ್ಡ ಬಂದಿತ್ತು ಹೀಗಾಯಿತು" ಎಂದು ಮಾತನಾಡುತ್ತೇವೆ. ಆದರೆ ಹಲವಾರು ಸಲ ಬೆಕ್ಕು ಅಡ್ಡ ಹೋದರೂ ಹೋದ ಕೆಲಸಗಳು ಆಗುತ್ತವೆ. ಆವಾಗ ಈ ಕುರಿತು ಚಿಂತಿಸುವುದಿಲ್ಲ. ಕೆಲವರು ಬಲದಿಂದ ಎಡಕ್ಕೆ, ಹೋಗಬಾರದು, ಎಡದಿಂದ ಬಲಕ್ಕೆ ಹೋಗಬಾರದು, ಅಥವಾ ಎದುರಿಗೆ ಬರಬಾರದು ಎಂಬಿತ್ಯಾದಿ ನಂಬಿಕೆಗಳನ್ನು ಹೇಳುತ್ತಾರೆ. ಈ ರೀತಿ ಅಡ್ಡ ಬಂದರೆ ಸ್ವಲ್ಪ ಹೊತ್ತು, ಕೂತು ಹೋಗಬೇಕು. ಇಲ್ಲವೆ ಸ್ವಲ್ಪ ಹಿಂದೆ ಬಂದು ಹೋಗಬೇಕು ಎಂಬ ಪರಿಹಾರಗಳನ್ನು ಹೇಳುತ್ತಾರೆ. ಬೆಕ್ಕು, ಅಡ್ಡ ಅಥವಾ ಎದುರಿಗೆ ಬರುತ್ತಿದ್ದು ಇದ್ದಕ್ಕಿದ್ದಂತೆ ಹಿಂದಕ್ಕೆ ಹೊರಟು ಹೋದರೆ ಬರುವ ವಿಘ್ನಗಳೆಲ್ಲ ದೂರ ಹೋದಂತೆ ಎಂಬ ನಂಬಿಕೆಯೂ ಇದೆ.

ಇದೇ ರೀತಿ ಕಾಗೆ ನೆತ್ತಿ ಬಡಿದರೆ ಕೆಡುಕಾಗುತ್ತದೆ ಎಂಬ ನಂಬಿಕೆ ಇದೆ. ಕಾಗೆ ಯಾವಾಗ ನೆತ್ತಿ ಬಡಿಯುತ್ತದೆಂದರೆ ಕೈಯಲ್ಲಿ ತಿನ್ನುವ ಪದಾರ್ಥ (ರೊಟ್ಟಿ, ಚಪಾತಿ) ಇದ್ದರೆ ಅದನ್ನು ತೆಗೆದುಕೊಂಡು ಹೋಗಬೇಕೆಂಬ ಕಾರಣಕ್ಕೆ ಭರ್ರನೆ ಬಂದು ಬಡಿಯುತ್ತದೆ. ಹೊರತು ಕಾಗೆಗೆ ನೆತ್ತಿ ಬಡಿಯಬೇಕೆಂಬ ಉದ್ದೇಶವಿಲ್ಲ. ಜೊತೆಗೆ ಕಾಗೆ ಮನೆ ಹೊಕ್ಕರೆ ಅಪಶಕುನ ಎಂಬ ನಂಬಿಕೆ; ಕಾಗೆಗಳು ಮನೆಯ ಒಳಗೆ ಬರುವುದೇ ಇಲ್ಲ. ಮನೆಯ ಅಕ್ಕ ಪಕ್ಕದಲ್ಲಿ ಅವುಗಳು ತಿನ್ನುವ ಪದಾರ್ಥ, ಮುಸುರೆ ಮೊದಲಾಗಿ ತಿನ್ನುತ್ತ ಇರುವಾಗ ಸಹಜವಾಗಿ ಹಾರಿ ಬಂದರೆ ಬರಬಹುದು. ಇಲ್ಲವೆ ಗಾಬರಿಯಲ್ಲಿ ಇದ್ದಕ್ಕಿದ್ದಂತೆ ಬರಬಹುದು. ಬಂದರು ತಕ್ಷಣ ಹೊರಟು ಹೋಗುತ್ತವೆ. ಕಾಗೆ ಕಪ್ಪಾಗಿರುವುದ-ರಿಂದ ಕಪ್ಪು ತಿರಸ್ಕಾರದ ಬಣ್ಣ ಎಂಬ ನಂಬಿಕೆ ಇದೆ. ಹಾಗಾಗಿ ಅದು ಅಪಶಕುನ ಎಂಬ ನಂಬಿಕೆ ಬೆಳೆದಿದೆ.

ಇದೇ ಕಾಗೆ ನೆಂಟರು ಬರುವ ಸಂದೇಶ ಸಾರುವುದು ಆಗಿದೆ. ಇದು ಒದರಿದರೆ ನೆಂಟರು ಬರುತ್ತಾರೆ ಎಂಬ ನಂಬಿಕೆ ಇದೆ. ಕಾಗೆ ಒದರುವುದಕ್ಕೂ ನೆಂಟರು ಬರಲಿಕ್ಕು ಕೂಡಿದ ಯಾವುದೋ ಒಂದು ಸಂದರ್ಭವಿರಬಹುದು. ಅದು ನಂಬಿಕೆಯಾಗಿ ಬೆಳೆದು ಬಂದಿದೆ. ಕಾಗೆಗಳು ಮನೆ ಹತ್ತಿರದ ಮರದ ಮೇಲೆ ಮನೆ ಕಟ್ಟಿಕೊಂಡಿದ್ದರೆ ದಿನಾಲೂ ಮನೆ ಮೇಲೆ ಕೂತು ಒದರುತ್ತವೆ. ಹಾಗೆಂದು ದಿನಾಲೂ ನೆಂಟರು ಬಂದಿರುತ್ತಾರೆಯೆ? ಇಲ್ಲ. ಎಷ್ಟೋ ನಂಬಿಕೆಗಳಿಗೆ ಅದು "ಕಾಕತಾಳೀಯ" ಎಂದು ಮಾತನಾಡುವಲ್ಲಿ ಕಾಗೆಯೇ ಪರಿಹಾರವಾಗಿದೆ. ಏಕೆಂದರೆ "ಕಾಗೆ ಕೂಡಲಿಕ್ಕು, ಟೊಂಗೆ ಮು-ರಿಯಲಿಕ್ಕು" ಸರಿಹೋಯ್ತು. ಹಾಗೆಂದು ಕಾಗೆಯ ಭಾರಕ್ಕೆ, ಟೊಂಗೆ ಮುರಿಯುತ್ತದೆಯೇ? ಎಂಬುವುದು.

ಹಲ್ಲಿ ಒದರಿದರೆ ಅಪಶಕುನ ಎನ್ನುವ ನಂಬಿಕೆ ಉಳ್ಳವರಿದ್ದಾರೆ. ಕೆಲವರು ಒಮ್ಮೆ ಒದರಿದರೆ ಅಪಶಕುನ ಎರಡು ಸಲ ಒದರಿದರೆ ಏನು ಇಲ್ಲ ಎನ್ನುತ್ತಾರೆ. ಕೆಲವರು ಮಾಡನಾಡುವಾಗ ಅವರ ಮಾತಿಗೂ ಹಲ್ಲಿ ಒದರುವುದಕ್ಕೂ ಒಂದೇ ಸಮಯ ಕೂಡಿದರೆ "ನೋಡು ನಾನ್ಹೇಳಿದ್ದೆ ಸರಿ. ನಾನು ಹೇಳಿದಾಗಲೆ ಹಲ್ಲಿ ಲೊಚಗುಟ್ಟಿತು" ಎಂದು ತಮ್ಮ ಮಾತು ಸಮರ್ಥಿಸಿಕೊಳ್ಳುತ್ತಾರೆ.

ಗೂಗಿ ಒದರಿದರೆ ಕೆಡುಕು ಎಂಬ ನಂಬಿಕೆಗಳಿವೆ. ಹಾಗೆಂದು ಗೂಗಿ ಒದರದೆ ಇರಲಿಕ್ಕಾಗುತ್ತದೆಯೇ? ಕೂಗಿ ಒದರುವುದೆ ರಾತ್ರಿ ಸಂದರ್ಭದಲ್ಲಿ ಇದರಿಂದಾಗಿ ಕೆಲವರು ಮಕ್ಕಳಿಗೆ "ಗೂಗಿ ಒಳ್ಳೊ ಕಡಿಗೆ ತಗೊಂಡು ಹೋಯ್ತಾ ನೋಡು" (ಗೂಗಿ ಒದರುವ ಕಡೆಗೆ ತೆಗೆದುಕೊಂಡು ಹೋಗುತ್ತೇನೆ ನೋಡು) ಎಂದು ಹೆದರಿಸಿ ಸುಮ್ಮನಾಗಿಸುವ ಪರಿಯೂ ಇದೆ.

ದಾರಿಯಲ್ಲಿ ಹೋಗುವಾಗ ತುಂಬಿದ ಕೊಡ ತೆಗೆದುಕೊಂಡು ಬಂದರೆ ಒಳ್ಳೆಯದು, ಖಾಲಿ ಕೊಡ ಬಂದರೆ ಕೆಡಕು ಎಂಬ

ನಂಬಿಕೆ. ಬಹುಶಃ ತುಂಬಿದ ಕೊಡದ ಸಂಕೇತ ಸದಾ ಕಾರ್ಯಗಳು ತುಂಬಿ ಸಾಗಲಿ, ಮನೆ ತುಂಬಿರಲಿ, ಎಂಬುದು ಖಾಲಿ ಕೊಡ ಬಂದರೆ ಕೆಲಸವೆಲ್ಲ ಖಾಲಿ ಆದಂತೆಯೇ ಎಂಬುದಾಗಿದೆ. ಹೀಗಾಗಿ ಇದು ಮೂಢವೂ ಅಲ್ಲ ಇದಕ್ಕೆ ವೈಜ್ಞಾನಿಕ ಆಧಾರವೂ ಇಲ್ಲ.

2. ವಾಸ್ತವ (ವೈಜ್ಞಾನಿಕ) ನಂಬಿಕೆಗಳು: ವಾಸ್ತವ ನಂಬಿಕೆಗಳೆಂದರೆ ಬದುಕಿನ ಒಂದಿಲ್ಲೊಂದು ಸಂದರ್ಭಗಳಲ್ಲಿ ಅನಿವಾರ್ಯತೆ ಹಾಗೂ ಅವಶ್ಯಕತೆಗಳಿಗೆ ಹೊಂದಿಕೊಂಡಿರುವಂಥವುಗಳು. ಅಷ್ಟೇ ಅಲ್ಲ ನೇರ ಮಾತಿನ ಪರಿಣಾಮಕ್ಕಿಂತ ನಂಬಿಕೆಯ ಹಿನ್ನೆಲೆಯಲ್ಲಿ ಹೇಳಿದರೆ ಕಟ್ಟು ನಿಟ್ಟಾಗಿ ಪಾಲನೆ ಮಾಡುತ್ತಾರೆಂಬ ಒಳಗುಟ್ಟು ಅಡಗಿದೆ. ಉದಾ: ಊಟ ನೀಡುವಾಗ ಒಮ್ಮೆ ನೀಡಬಾರದು ಎಂಬ ನಂಬಿಕೆ. ವಾಸ್ತವದಲ್ಲಿ ಸಾಕು ಅಂದರು ಕೂಡ ಇನ್ನು ಒಂದೆರಡು ತುತ್ತು ಊಟ ಮಾಡಲಿ ಎನ್ನುವ ದೃಷ್ಟಿಯಿದ ಮತ್ತೊಂದು ಅರ್ಧ ಚಮಚ ಬಡಿಸುವುದಾಗಿದೆ.

ಮೂರು ಸಂಜೆ ಹೊತ್ತು ಮಲಗಬಾರದು ಎನ್ನುವುದು. ಮೂರು ಸಂಜೆ ಹೊತ್ತು ಎಂದರೆ 4 ರಿಂದ 5 ಗಂಟೆಯ ಸಮಯ. ಸಾಮಾನ್ಯವಾಗಿ ಕೆಲವರು ಮಧ್ಯಾಹ್ನ ಹೊತ್ತು ಮಲಗುವ ರೂಢಿ ಹೊಂದಿರುತ್ತಾರೆ. ಮಧ್ಯಾಹ್ನ 2 ರಿಂದ 3ರ ವರೆಗೆ ಮಲಗಿ ಏಳುತ್ತಾರೆ. ಆದರೆ ತೀರಾ ಸಾಯಂಕಾಲ ಮಲಗಿ ರಾತ್ರಿ 7–8 ಘಂಟೆಗೆ ಎದ್ದರೆ ಪುನಃ ರಾತ್ರಿಗೆ ಬೇಗ ನಿದ್ರೆ ಬರುವುದಿಲ್ಲ. ಎನ್ನುವ ಸತ್ಯ ಒಂದಾದರೆ ಬೆಳಿಗ್ಗೆ 5 ರಿಂದ 6 ಗಂಟೆ, ಸಂಜೆ 5–6 ಗಂಟೆ ವಾಯುವಿಹಾರಕ್ಕೆ ತಕ್ಕುದಾದ ಸಮಯ. ಈ ಸಮಯಗಳಲ್ಲಿ ಮನುಷ್ಯ ಮಲಗುವವನು ರೋಗಿ, ಓಡಾಡುವವನು ನಿರೋಗಿ ಎಂಬ ವೈಜ್ಞಾನಿಕ ಸತ್ಯವು ಇದೆ.

ಮಜ್ಜಿಗೆ ಕುಡಿಯುವಾಗ ನಿಂತು ಕುಡಿಯಬಾರದು ಹಾಗೆ ಕುಡಿದರೆ ಹಾಲುಕೊಡುವ ಆಕಳು ಅಥವಾ ಎಮ್ಮೆ ಒದ್ದು ಹೋಗುತ್ತದೆ (ಅಂದರೆ: ಹಾಲು ಕೊಡುವುದು ನಿಲ್ಲಿಸಿ ಬಿಡುತ್ತದೆ) ಎಂಬುದು. ಮಜ್ಜಿಗೆ ಅಷ್ಟೇ ಅಲ್ಲ ಯಾವುದೇ ಪಾನೀಯ ನೀರು ಕೂಡ ನಿಂತು ಕುಡಿಯಬಾರದು ಏಕೆಂದರೆ ನಿಂತು ಕುಡಿಯುವುದ-ರಿಂದ ನೇರವಾಗಿ ಕರುಳಿಗೆ ತಾಗುತ್ತವೆ. ಕೂತು ಕುಡಿದರೆ ನಿಧಾನವಾಗಿ ಹೊಟ್ಟೆಯಲ್ಲಿ ಹೋಗುತ್ತವೆ ಎಂಬುದು ವೈಜ್ಞಾನಿಕ ಸತ್ಯ. ಆದರೆ ನೇರವಾಗಿ ಈ ರೀತಿ ಹೇಳಿದರೆ ನೀನು ಕುಡಿಯುವ ಮಜ್ಜಿಗೆ ಹಾಲು ನಿಂತು ಕುಡಿದರೆ ಹಾಲು ಕೊಡುವ ಆಕಳು ಅಥವಾ ಎಮ್ಮೆ ಹಾಲು ಕೊಡದೆ ಇದ್ದಾಗ ಗತಿ ಏನು? ಎಂಬ ಹೆದರಿಕೆಯ ಹಿನ್ನೆಲೆಯಲ್ಲಿ ಹೇಳುತ್ತಾರೆ.

ಸ್ನಾನ ಮಾಡಿ ಬರುವಾಗ ನೀರು ಕಾಯಿಸುವ ಹಂಡೆಯಲ್ಲಿ ಒಂದು ಕೊಡ ನೀರು ಹಾಕಿ ಬರಬೇಕು ಇಲ್ಲದಿದ್ದರೆ ಸ್ನಾನ ಮಾಡಿರುವುದು ವ್ಯರ್ಥ ಎನ್ನುವುದು. ಬಚ್ಚಲ ಮನೆಯಲ್ಲಿ ಒಲೆ ಉರಿಯುತ್ತ ಹಂಡೆಯಲ್ಲಿ ನೀರು ಕಾಯುತ್ತಿರುವಾಗ ಸ್ನಾನ ಮಾಡಿದವರೆಲ್ಲ ಹಾಗೆ ಬಂದರೆ ಮುಂದಿನವರಿಗೆ ಸ್ನಾನಕ್ಕೆ ನೀರಿರುವುದಿಲ್ಲ. ಹಾಗಾಗಿ ತಾನು ಸ್ನಾನ ಮಾಡಿ ಖಾಲಿ ಆದಷ್ಟು ನೀರು ಹಾಕಿದರೆ ಮುಂದಿನವರಿಗೆ ನೀರು ಕಾಯುತಿರುತ್ತವೆ ಎನ್ನುವುದು.

ಮದುವೆ ಸಂದರ್ಭದಲ್ಲಿ ಬೇಳೆ–ಕಾಳು–ಅಕ್ಕಿ ಆರಿಸುವಾಗ ಅವುಗಳು ತಿಂದರೆ ತಿಂದವರ ಮದುವೆಯಲ್ಲಿ ಮಳೆ ಬರುತ್ತದೆ, ಮದುವೆಯೆಲ್ಲ ಹಾಳಾಗುತ್ತದೆ ಎಂಬ ನಂಬಿಕೆ. ಮಳೆ ಬರುವಂತಿದ್ದರೆ ಮಳೆಗಾಲ ಕಡಿಮೆ ಆಗುವ ಇಂದಿನ ದಿನಗಳಲ್ಲಿ ಬೇಕಂತಲೆ ಅರಿಸುವ ಕಾಳು ತಿಂದು ಮದುವೆ ಆಗುವಾಗ ಮಳೆ ಬರಿಸಬಹುದಿತ್ತು. ಆದರೆ ಈ ಮೊದಲೆ ಹೇಳಿದಂತೆ ನಂಬಿಕೆಯ ಅರ್ಥಗಳೆಲ್ಲ ಬೇರೆಯೇ ಆಗಿದ್ದು ಹೇಳುವ ಪರಿ ಮಾತ್ರ ಹೆದರಿಕೆ ಹಾಗೂ ಮುಂದಾಗುವ ತೊಂದರೆಗೆ ಸಂಕೇತಗಳಾಗಿವೆ. ಬಹುಶಃ ವಾಸ್ತವ ಹೇಳಿ ಅರ್ಥ ಆಗದೆ ಇದ್ದಾಗ ತಿಳಿಯದವರೊಂದಿಗೆ ತಲೆ ಕೆಡಿಸಿಕೊಳ್ಳುವುದೇಕೆ? ಎಂಬುದಕ್ಕಾಗಿ ಪೂರ್ವಜರು ಹುಡುಕಿರುವ ಸರಳ ಉಪಾಯಗಳಾಗಿವೆ.

ಹೆಣ್ಣು ಮಕ್ಕಳು ಸಿಕ್ಕವರ ಜೊತೆಯಲ್ಲಿ ತಮಾಷೆ ಮಾಡಬಾರದು. ಇಂದು ಹೆಣ್ಣು ಗಂಡು ಸಮಾನ ಎನ್ನುವ ವಾದದಲ್ಲಿ ಯಾವುದಕ್ಕೆ, ಸಮಾನತೆ ಇರಬೇಕು ಎನ್ನುವಲ್ಲಿ ಎಡುವುತ್ತಿದ್ದೇವೆ. ಊಟ, ಬಟ್ಟೆ, ಶಿಕ್ಷಣ ಮೊದಲಾದಲೆಲ್ಲ ಸಮಾನತೆ ಇರಲಿ. ಮೇಲಿನ ನಂಬಿಕೆಯಲ್ಲಿ ಪೂರ್ವಜರಿಂದ ಬೆಳೆದು ಬಂದ ಸಿದ್ಧಾಂತವೆಂದರೆ ಸಿಕ್ಕವರ ಸಂಗಡ ಹೆಣ್ಣು ಮಕ್ಕಳು ನಗೆ ಆಡುತ್ತಿದ್ದರೆ ಸಲುಗೆ ಹೆಚ್ಚಾಗಿ ದಾರಿ ತಪ್ಪುವ ಸಾಧ್ಯತೆಗಳಿರುತ್ತದೆ. ಆದ್ದರಿಂದ ತಲೆ ತುಂಬ ಸೆರಗು ಹೊದ್ದಿ ಕೊಂಡು ಕಾಣುವವರಿಗೆ ಚಂಚಲತೆ ಆಗದಂತೆ ಸೌಮ್ಯವಾಗಿ ಇರಬೇಕು ಎನ್ನುವುದಾಗಿದೆ. ಆದರೆ ಹೆಣ್ಣು ಮುಟ್ಟಾದಾಗ ಅಡುಗೆ ಮನೆ ಪ್ರವೇಶಿಸಬಾರದು, ಮಕ್ಕಳು ಹತ್ತಿರ ಹೋಗಬಾರದು ಎಂಬ ನಂಬಿಕೆಯಲ್ಲೂ ಸತ್ಯಾಂಶವಿದೆ. ರಜಸ್ವಲೆಯ ಸೂಕ್ಷ್ಮಾಣುಗಳಿಂದ ರೋಗಾಣುಗಳು ಅಂಟಬ ಹುದು ಆದ್ದರಿಂದ 3 ದಿವಸಗಳವರೆಗೆ ಹೊರಗಿರಬೇಕು ಎಂಬುದು ಹಾಗೆಂದು ಮನೆಯಿಂದ ಪೂರ್ಣ ಹೊರಗಿರಬೇಕೆಂಬುದಲ್ಲ.

ಶ್ರಾವಣದಲ್ಲಿ ಗಂಡ–ಹೆಂಡತಿ ಕೂಡಬಾರದು ಎಂಬ ನಂಬಿಕೆ. ಕೂಡಿದರೆ ದೇವರಿಗೆ ಒಪ್ಪುವುದಿಲ್ಲ. ಹಾಗಾಗಿ ಶ್ರಾವಣ ಮಾಸ ಪಾಲಿಸಬೇಕು ಎನ್ನುವುದು. ದೇವರಿಗೆ ಒಪ್ಪಿಗೆವಾಗುತ್ತದೊ ಬಿಡುತ್ತದೊ ಆದರೆ ಹೆಣ್ಣು ಗರ್ಭವತಿ ಆಗಿ ಬಾಣಂತನ ಆಗುವುದು ಎಪ್ರಿಲ್–ಮೇ ತಿಂಗಳಲ್ಲಿ. ಆವಾಗ ಬಾಣಂತಿಗೆ ಕಾವು ಕೊಡುವುದು ಬಿಸಿ ನೀರು ಸ್ನಾನ ಮಾಡಿಸುವುದು ಬೇಸಿಗೆ ಕಾಲವಾದ್ದರಿಂದ ಇನ್ನೂ ಕಷ್ಟ ಎನ್ನುವ ಸಿದ್ಧಾಂತ ಅಡಿಗಿದೆ.

ಎಷ್ಟೋ ನಾಟಿ ಔಷಧಿಗಳು ನಮ್ಮಲ್ಲಿಯೇ ಇವೆ. ಹಾವು–ಚೇಳು ಕಡಿದಾಗ ಇಂದಿಗೂ ಜನರು ಆಸ್ಪತ್ರೆಗೆ ಹೋಗದೆ ಗಿಡಮೂಲಿಕೆ ಔಷಧಿ ಕೊಡುವವರಲ್ಲಿ ಹೋಗುತ್ತಾರೆ. ಇಂಥ ಔಷಧಿಗಳು ನಮ್ಮ ಅಕ್ಕ ಪಕ್ಕದಲ್ಲಿದ್ದರೂ ನಮಗೆ ಗೊತ್ತಿಲ್ಲ. ಏಕೆಂದರೆ ಬಲ್ಲವರು ಹೇಳುವುದಿಲ್ಲ. ಹೇಳಿದರೆ ಅದರ ಗುಣಕಡಿಮೆ ಆಗುತ್ತದೆ ಎನ್ನುತ್ತಾರೆ. ಔಷಧಿ ಗುಣ ಕಡಿಮೆ ಆಗುವುದಿಲ್ಲ. ಆದರೆ ಅದರ ಮಹತ್ವ ಇಲ್ಲದಂತಾಗುತ್ತದೆ.

3. ಮೂಢ ನಂಬಿಕೆಗಳು: ಮೂಢ ನಂಬಿಕೆಗಳು ಹೆಸರೆ ಸೂಚಿಸುವಂತೆ ಮೂರ್ಖವಾದದ ನಂಬಿಕೆಗಳು, ತಿಳುವಳಿಕೆ ಇಲ್ಲದ ನಂಬಿಕೆಗಳು, ಅರ್ಥವಿಲ್ಲದ ನಂಬಿಕೆಗಳು ಎಂದರ್ಥ; ಹಾಗೆಂದು ಎಲ್ಲವೂ ಮೂಢ ನಂಬಿಕೆಗಳೆಂದು ಹೇಳಲಾಗದು. ಇವುಗಳಲ್ಲಿ ಮೊದಲು ಯಾವುದೊ ಅರ್ಥದಲ್ಲಿ ಮಾಡಿದ



ವೇಷಗಾರರು



ಮೊಹರಂ ಆಚರಣೆ

ಕಾರ್ಯ ಮುಂದೆ ಅದನ್ನು ಅರಿಯದೆ ಪಾಲಿಸಿಕೊಂಡು ಬರುವುದು. ಇನ್ನೊಂದು ಅರ್ಥವಿದೆಯೋ ಇಲ್ಲವೊ ಸಧ್ಯದಲ್ಲಿ ಮಾತ್ರ ಯಾವುದೇ ಹಿನ್ನೆಲೆಯಲ್ಲಿ ನೋಡಿದರೂ ಅದಕ್ಕೆ ಅರ್ಥ ಇರುವುದಿಲ್ಲ. 1. ಅರ್ಥವಿದ್ದು ಕಳೆದುಕೊಂಡಿದ್ದು, 2. ಅರ್ಥವಿಲ್ಲದ್ದು, ಎಂದು ಎರಡು ಪ್ರಕಾರಗಳಲ್ಲಿ ವಿಂಗಡಿಸಬಹುದಾಗಿದೆ. ಇವುಗಳು ಉದಾಹರಣೆಗೆ ಕೆಲವೊಂದು ಈ ಕೆಳಗಿನಂತೆ ಕಾಣಬಹುದಾಗಿದೆ.

ಒಂದು ಪ್ರಸಿದ್ಧವಾದ ನಂಬಿಕೆ ಬೆಕ್ಕನ್ನು ಕಟ್ಟಿ ಪೂಜೆ ಮಾಡುತ್ತಿದ್ದರೆಂಬ ವಿಷಯ ಗೊತ್ತಿದ್ದವರೊಬ್ಬರು ವಿಶೇಷ ಪೂಜೆ ಮಾಡುವಾಗ ಅಕ್ಕ–ಪಕ್ಕದವರ ಮನೆಗೆ ಹೋಗಿ ಒಂದು ಬೆಕ್ಕು ತೆಗೆದುಕೊಂಡು ಬಂದು ಒಂದು ಕಂಬಕ್ಕೆ ಕಟ್ಟಿಯೇ ಪೂಜೆ ಮಾಡುತ್ತಿದ್ದರು. ಇದರ ಪೂರ್ವಾಪರ ಕುರಿತು ಚಿಂತಿಸಿದಲ್ಲಿ ಇವರ ಪೂರ್ವಜರೊಬ್ಬರು ಬೆಕ್ಕು ಸಾಕಿಕೊಂಡಿದ್ದರು. ಅದು ಇವರ ಪ್ರೀತಿಯ ಬೆಕ್ಕು. ಹೀಗಾಗಿ ಏನೇ ಕಾರ್ಯ ಮಾಡಿದರು ಮೈಮೇಲೆಲ್ಲ ಬರುವುದು. ಹೀಗಾಗಿ ಪೂಜೆ ಮಾಡುವಾಗ ಪೂಜಾ ಪದಾರ್ಥಗಳಾದ ಪಂಚಾಮೃತ ಮೊದಲಾಗಿ ಚೆಲ್ಲಬಹುದು ಹಾಗೂ ಪೂಜೆಯ ಏಕಾಗ್ರತೆಗೆ ಭಂಗ ತರಬಹುದೆಂದು ಒಂದು ಕಂಬಕ್ಕೆ ಕಟ್ಟಿಯೇ ಪೂಜೆ ಮಾಡುತ್ತಿದ್ದರು.

ಇದರಂತೆಯೇ ಹಾಲು ಹಿಂಡುವಾಗ ಆಕಳ ಕಾಲು ಕಟ್ಟಿ ಹಿಂಡುತ್ತಿದ್ದರು. ಏಕೆಂದು ಕೇಳಿದರೆ ಹಾಲು ಹಿಂಡುವಾಗ ಕಾಲುಕಟ್ಟಿಯೇ ಹಿಂಡಬೇಕು, ಎಂದು ಹೇಳಿದರು. ವಾಸ್ತವದಲ್ಲಿ ಕೆಲವು ಆಕಳು ಅಥವಾ ಎಮ್ಮೆಗಳು ಹಾಲು ಹಿಂಡುವಾಗ ಲತ್ತಿ ಹೊಡೆಯುತ್ತವೆ. ಹೀಗಾಗಿ ಒದೆಯುವುದನ್ನು ತಪ್ಪಿಸಿಕೊಳ್ಳಲು ಕಾಲು ಕಟ್ಟಿ ಹಾಲು ಹಿಂಡುತ್ತಾರೆ. ಇಂತಹ ದೃಶ್ಯ ಮೂಕ ಪ್ರೇಕ್ಷಕರಾಗಿ ನೋಡಿದವರು. ಮುಂದೆ ಅದನ್ನೆ ಪಾಲನೆ ಮಾಡುತ್ತ ನಂಬಿಕೆಯಾಗಿ ಸೃಷ್ಟಿಸುತ್ತಾರೆ. ಹೀಗಾಗಿ ಇದು ಮೂಢ ನಂಬಿಕೆಯಾಗುತ್ತದೆ.

ವಿಧವೆ ಎದುರಿಗೆ ಬಂದರೆ ಅಪಶಕುನ ಎಂಬ ನಂಬಿಕೆ ಇದೆ. ಮೊದಲು ಪತಿ ಸತ್ತರೆ ಸತಿ ತಲೆಬೋಳಿಸಿಕೊಳ್ಳುವ ಪದ್ಧತಿ ಇತ್ತು. ಹಾಗಾಗಿ ತಲೆ ಬೋಳಿಸಿಕೊಂಡ ಹೆಣ್ಣುಮಗಳು ನೋಡಲು ಅಸಹ್ಯವಾಗಿ ಕಾಣುವಳು ಅಷ್ಟನ್ನು ಬಿಟ್ಟರೆ ಅವಳು ಯಾವ ಪಾಪವೂ ಮಾಡಿರುವುದಿಲ್ಲ. ಹೀಗೆ ಅಸಮಾನತೆಯಿಂದ, ಅಪಮಾನದಿಂದ ಕೂಡಿದ ಈ ನಂಬಿಕೆ ಮೂಢನಂಬಿಕೆಯೇ ಆಗಿದೆ. ಇದರಂತೆ ಎದ್ದಾಗ ಯಾರ ಮುಖ ನೋಡಿದೇನೊ ಏನೊ? ಕೆಲಸನೇ ಆಗಿಲ್ಲ" ಎನ್ನುವುದು, ಏಳುವಾಗ ಯಾವ ಕಡೆಯಿಂದ ಎದ್ದಿರುವೆನೊ ಏನೊ ಎನ್ನುವುದು. ಹೀಗೆ ನೂರಾರು ನಂಬಿಕೆಗಳನ್ನು ಹೆಸರಿಸುತ್ತ ಹೋಗಬಹುದು.

ಒಟ್ಟಿನಲ್ಲಿ ಜನಪದ ನಂಬಿಕೆಗಳಿಗೆ ಯಾವುದೋ ಒಂದು ರೀತಿಯಲ್ಲಿ ಅರ್ಥವಿದೆ. ಅದರ ಮೂಲವನ್ನು ಗುರುತಿಸಿಕೊಂಡು ನಂಬಿಕೆಗಳನ್ನು ನಂಬುವಂತೆ ಬಾಳುವುದರಲ್ಲಿ ಅರ್ಥವಿದೆ.

(ಆರ್‌ವಾಯ್)

ಜನಪದ ನುಡಿಗಟ್ಟು: ಭಾಷೆಗೆ ಸೊಗಸು ಹಾಗೂ ಸಾಮರ್ಥ್ಯ ನೀಡುವ, ಸೊಗಸನ್ನು ಹೆಚ್ಚಿಸುವ ಹಾಗೂ ವಿಶಿಷ್ಟ ಅರ್ಥವನ್ನು ಕಟ್ಟಿಕೊಡುವ ಮೂಲಕ ಪರಿಣಾಮಕಾರಿಯಾಗುತ್ತವೆ. ಅದರಲ್ಲೂ ಜನಪದರು ಗಾದೆ–ನುಡಿಗಟ್ಟುಗಳಿಲ್ಲದೆ ಮಾತನಾಡುವುದೇ ಅಪರೂಪ.

ಜನಪದ ನುಡಿಗಟ್ಟುಗಳು ಆ ಭಾಷೆಯನ್ನಾಡುವ ಜನಾಂಗದ ಸಂಸ್ಕೃತಿ ಇತಿಹಾಸವನ್ನು ಬಿಂಬಿಸುತ್ತವೆ. ಐತಿಹ್ಯ ಪರಂಪರೆಯನ್ನು ಪ್ರತಿನಿಧಿಸುತ್ತವೆ. ಶಾಬ್ದಿಕ ಅರ್ಥಕ್ಕಿಂತ ಭಿನ್ನವಾದ ಅರ್ಥ ಹಾಗೂ ಜನರೂಢಿಯಲ್ಲಿ ವಿಶೇರ್ಷವುಳ್ಳ ಪದರಚನೆಯೆ ನುಡಿಗಟ್ಟು. ನುಡಿಗಟ್ಟಿಗೆ ಪಡೆ ನುಡಿ, ವಾಗ್ರೂಢಿ ವಾಕ್ಪ್ರಚಾರ ಮುಂತಾದ ಪರ್ಯ್ಯಾಯ ಪದಗಳಿಂದಲೂ ಕರೆಯಲಾಗುತ್ತದೆ. ನುಡಿಗಟ್ಟು ಗಳಲ್ಲಿ ಸಮಾಸ ಪದಗಳೇ ಇರಬೇಕೆಂದಿಲ್ಲ. ವಿಶೇಷಾರ್ಥ ಹೊಮ್ಮದಿದ್ದರೆ ಅದು ನುಡಿಗಟ್ಟಾಗಿ ಉಳಿಯುವುದಿಲ್ಲ. ಅವುಗಳಲ್ಲಿ ಶಬ್ದಾರ್ಥಕ್ಕೆ ಸೀಮಿತವಾಗದೆ ಹೊಸ ಅರ್ಥ ವಿಸ್ತರಿಸುವ ಗುಣವಿರುತ್ತದೆ.

ನುಡಿಕಟ್ಟು ಅಥವಾ ನುಡಿಗಟ್ಟು ಎಂಬುದಕ್ಕೆ ಮಾತಿನ ನಿಯಮ ಮಾತಿನ ಜೋಡಣೆ ಎಂಬ ಅರ್ಥಗಳಿವೆ. ಭಾಷೆಯ ವಿಶಿಷ್ಟವಾದ ಜೋಡಣೆ ಎಂದು ವಿವರಿಸಲಾಗಿದೆ. ಇಂಥ ಅನೇಕ ನುಡಿಗಟ್ಟುಗಳು ಭಾಷೆಯಲ್ಲಿ ಬಳಕೆಯಾಗುತ್ತವೆ.

ನುಡಿಗಟ್ಟಿನ ಘಟಕಗಳಾದ ಶಬ್ದಗಳಿಂದ ಅವುಗಳ ಪೂರ್ಣ ಅರ್ಥ ಪಡೆಯಲು ಸಾಧ್ಯವಿಲ್ಲ. ರೂಢಿಯನ್ನು ನೋಡಿಯೇ ಅರ್ಥ ತಿಳಿಯಬೇಕು ಎಂದು ಡಾ. ಎಂ. ಚಿದಾನಂದಮೂರ್ತಿ ಅವರು ಅಭಿಪ್ರಾಯ ಪಡುತ್ತಾರೆ. ಜನಪದ ಭಾಷೆ ಎಂದರೆ ಸಜೀವ ಭಾಷೆ, ಜೋಡು ನುಡಿ, ಮಾರು ನುಡಿ, ನಾಣ್ನುಡಿ ಪಡೆನುಡಿಗಳಲ್ಲಿ ದೇಶಿಯ ಸಾರ ತುಂಬಿದೆ. ಪಡೆನುಡಿ ಎಂದರೆ ಭಾಷೆಯ ಕೆನೆ ಇದ್ದಂತೆ ಎನ್ನುತ್ತಾರೆ ಟಿ.ವಿ. ವೆಂಕಟರಮಣಯ್ಯ. ಮಾತು ಬರಹ ಸತ್ವ ಪೂರ್ಣವಾಗಲು ಅದಕ್ಕೊಂದು ತೀಕ್ಷ್ಣತೆ ವ್ಯಂಜಕತೆ, ಉಜ್ವಲತೆ ತರಲು ಇವು ಸಹಕಾರಿಯಾಗಿವೆ.

(ಸಿಬಿಐ)

ಜನಪದ ವಸ್ತು ಸಂಗ್ರಹಾಲಯಗಳು: ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಬಿ.ಬಿ. ಹೆಂಡಿ, ಎಂ.ಜಿ. ಬಿರಾದಾರ, ಎಂ.ಎಸ್. ಲಠ್ಠೆ ಇವರು ಜಾನಪದ ವಸ್ತು ಸಂಗ್ರಹಾಲಯ ಪ್ರಾರಂಭಿಸಿದರು. ಇಲ್ಲಿ ಹೈದ್ರಾಬಾದ ಕರ್ನಾಟಕ ಭಾಗದ ಜನಪದ ವಸ್ತುಗಳಾದ ಕರಿಸಿ, ಅಡ್ಡಣಗಿ, ಬುಟ್ಟಿ, ಮಂಕಣಿ, ಜಂತುರ ಭೌರಿ ಮೊದಲಾದ ವಸ್ತುಗಳಿವೆ. ಜೊತೆಗೆ ತಾಳೆಗರಿಗಳ ಹಸ್ತ ಪ್ರತಿಗಳನ್ನು ಸಂಗ್ರಹಿಸಲಾಗಿದೆ.

ಗುಲಬರ್ಗಾದಿಂದ 25 ಕಿ.ಮೀ. ಅಂತರದಲ್ಲಿ ಬೀದರಿಗೆ ಹೋಗುವ ಹೆದ್ದಾರಿಗೆ ಹೊಂದಿಕೊಂಡು ನಾವದಗಿ (ಬಿ) ಗ್ರಾಮದ ಹತ್ತಿರ "ಸಾಂಸ್ಕೃತಿಕ ಲೋಕ" ಹೆಸರಿನಿಂದ ಜನಪದ ವಸ್ತು ಸಂಗ್ರಹಾಲಯ ಸ್ಥಾಪಿಸಲಾಗಿದೆ. ಇಲ್ಲಿ ಬಯಲಾಟ, ದೊಡ್ಡಾಟಗಳ ಭುಜಕಿರೀಟ, ತಲೆಕಿರೀಟ, ಹುಲಿ, ಸಿಂಹ, ದೇವಿ, ರಾಜ, ರಾಣಿ, ಹನುಮಂತ ಮೊದಲಾದ ಪಾತ್ರಧಾರಿಗಳ ವೇಷಭೂಷಣಗಳು, ಖಡ್ಗಗಳು, ಬೀಸುಕಲ್ಲು, ಕೃಷಿ ಪರಿಕರಗಳು ಗೃಹೋಪಯೋಗಿ ವಸ್ತುಗಳು, ಆಟಿಕೆಗಳು ಹಾಗೂ ವಿವಿಧ ದೇಶದ ನಾಣ್ಯಗಳು ಮೊದಲಾದುವನ್ನು ಸುಸಜ್ಜಿತ ಕಟ್ಟಡಗಳಲ್ಲಿ

ಸಂಗ್ರಹಿಸಲಾಗಿದೆ. 13 ಎಕರೆ ಪ್ರದೇಶದಲ್ಲಿ ಸಾಹಿತಿ-ಕಲಾವಿದರ ಮಾಹಿತಿ, ನಾಟಕ, ನೃತ್ಯ ಸಭಾಂಗಣ, ಬಯಲು ರಂಗಮಂದಿರ ಗೃಹ ಕೈಗಾರಿಕಾ ವಸ್ತುಗಳ ಮಾರಾಟ ಮಳಿಗೆ ಮೊದಲಾದ ಕಾಮಗಾರಿಗಳು ಪ್ರಗತಿಯಲ್ಲಿದ್ದು ಸಾಂಸ್ಕೃತಿಕ ಜಗತ್ತನ್ನೇ ಕಾಣುವಂತಿದೆ. ಇದನ್ನು ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಪರಿಷತ್ತು ಗುಲಬರ್ಗಾ ವತಿಯಿಂದ ಸ್ಥಾಪಿಸಲಾಗಿದೆ. ರಾಜೇಂದ್ರ ಯರನಾಳೆ ಸಂಸ್ಥಾಪಕ ಅಧ್ಯಕ್ಷರು. ವಾಣಿಶ್ರೀ ಯರನಾಳೆ ಅವರು ಅಧ್ಯಕ್ಷರಾಗಿದ್ದಾರೆ.

ಗುಲಬರ್ಗಾದ ವಿಜಯ ಹಾಗರಗುಂಡಗಿ ಪ್ರಸಿದ್ಧ ಚಿತ್ರಕಲಾವಿದರಾಗಿದ್ದು, ವಸ್ತು ಸಂಗ್ರಹಗಳ ಹವ್ಯಾಸಿಗರಾಗಿದ್ದಾರೆ. ಇವರ ಸಂಗ್ರಹದಲ್ಲಿ ಹಿತ್ತಾಳೆ, ತಾಮ್ರ ಮೊದಲಾದ ಲೋಹಗಳ ಮೂರ್ತಿಗಳು, ಪಾತ್ರೆಗಳು, ಪರಿಕರಗಳು ಸಾವಿರಾರು ಸಂಖ್ಯೆಯಲ್ಲಿವೆ. ಕಟ್ಟಿಗೆಯ ಕಂಬಗಳು, ಕೃಷಿ ಸಾಮಗ್ರಿಗಳು ಇವೆ. ನೂರಾರು ವರ್ಷಗಳ ಹಳೆಯ ವಸ್ತುಗಳು ಸಾವಿರಾರು ರೂಪಾಯಿಗಳಲ್ಲಿ ಖರೀದಿಸಿ ಸಂಗ್ರಹಿಸಿರುವುದು ಅದ್ಭುತವಾಗಿದೆ. ಈ ಸಂಗ್ರಹಕ್ಕಾಗಿ ಪ್ರತ್ಯೇಕ ಸಂಗ್ರಹಾಲಯ ನಿರ್ಮಿಸುವ ಉದ್ದೇಶ ವಿಜಯ ಹಾಗರಗುಂಡಗಿ ಹೊಂದಿದ್ದಾರೆ. ಡಿ.ಎನ್. ಅಕ್ಕಿ ಅವರು ನಿವೃತ್ತ ಶಿಕ್ಷಕರು, ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಗೋಗಿ ಗ್ರಾಮದವರು. ಇವರು ಪುರಾತನ ನಾಣ್ಯ ಮತ್ತು ನೋಟುಗಳನ್ನು ಸಂಗ್ರಹಿಸಿದ್ದಾರೆ. ಅಶೋಕ ಹಿರೇಮಠ ಹುಮನಾಬಾದದಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದು, ಪುರಾತನ ನಾಣ್ಯಗಳು ಹಾಗೂ ವಿವಿಧ ಚಿತ್ರಕಲಾ ಕೃತಿಗಳನ್ನು ಸಂಗ್ರಹಿಸಿದ್ದಾರೆ. ವಿ.ಜಿ. ಅಂದಾನಿ ಖ್ಯಾತ ಚಿತ್ರಕಲಾವಿದರಿದ್ದು, ಗುಲಬರ್ಗಾದ ಮಹಾನಗರ ಪಾಲಿಕೆ ಹತ್ತಿರವಿರುವ ಕಲಾನಿಕೇತನ ದಲ್ಲಿ ಚಿತ್ರಕಲಾ ಕೃತಿಗಳನ್ನು ಸಂಗ್ರಹಿಸಿದ್ದಾರೆ. ಯಾದಗಿರಿ ಜಿಲ್ಲೆಯ ಸುರಪುರದಲ್ಲಿ ನಾಗಲಿಂಗಪ್ಪ ಶಹಾಪುರಕರ್ ನಿವೃತ್ತ ಶಿಕ್ಷಕರು ಇವರು ಪುರಾತನ ನಾಣ್ಯಗಳು, ಕೀಲಿ ಹಾಗೂ ಕೀಲಿ ಕೈಗಳನ್ನು ಸಂಗ್ರಹಿಸಿದ್ದಾರೆ. ಗುಲಬರ್ಗಾದಲ್ಲಿ ಸರಕಾರಿ ಆಸ್ಪತ್ರೆ ಎದುರುಗಡೆಗೆ ಸರಕಾರಿ ಪ್ರಾಚ್ಯವಸ್ತು ಸಂಗ್ರಹಾಲಯವಿದ್ದು ಇಲ್ಲಿ ಪ್ರಾಚೀನ ಶಿಲಾ ಮೂರ್ತಿಗಳು, ಲೋಹದ ವಸ್ತುಗಳು ಮೊದಲಾಗಿ ವ್ಯವಸ್ಥಿತವಾಗಿ ಸಂಗ್ರಹಿಸಿಡಲಾಗಿದೆ.

(ಆರ್‌ವಾಯ್)

ಜನಪದ ವೈದ್ಯ: ಜನಸಾಮಾನ್ಯರು ಸಾಮಾನ್ಯವಾಗಿ ಕರೆಯುವುದು ಹಳ್ಳಿ ವೈದ್ಯ ಎಂದು. ನಾಟಿ ವೈದ್ಯವೆಂಬುದು ಶಾಸ್ತ್ರೀಯ ಹೆಸರು. ಆದಿಮಾನವ ಸಮೂಹದಲ್ಲಿ ಮಳೆ, ಗಾಳಿ, ಬಿಸಿಲು, ಬೆಂಕಿ ಮುಂತಾದವುಗಳ ವಿಕೋಪದಿಂದ ತೊಂದರೆಯಾದರೆ, ಇವೆಲ್ಲ ದೇವರ ನಿಟ್ಟಿನಿಂದಲೇ ಬಂದಿವೆಂಬ ನಂಬಿಕೆ ಬಲವಾಗಿತ್ತು. ದೇವರೆ ಹಲವು ರೋಗಗಳನ್ನು ಕಳಿಸಿ ನಾಶ ಮಾಡುವನೆಂದು ಗ್ರಹಿಸಿದ್ದರು. ರೋಗ ಬಂದವರಿಗೆ ಮದ್ದು ನೀಡಿ ಜೀವ ಉಳಿಸುವವನು 'ದೇವದೂತ' ನೆಂದೇ ಭಾವಿಸಿದರು.

ನೈಸರ್ಗಿಕ ವಿಕೋಪಗಳಲ್ಲದೆ ಮರದಿಂದ ಬಿದ್ದು ಕೈ-ಕಾಲು ಮುರಿದರೆ, ಕಾಡು ಪ್ರಾಣಿಗಳೊಂದಿಗೆ ಹೋರಾಡಿ ಗಾಯಗಳಾದರೆ ಅಲ್ಲದೆ ಹಾವು ಕಚ್ಚಿದರೆ ಅವುಗಳ ನೋವಿನ ಹರಿಹಾರಕ್ಕಾಗಿ ಆದಿ ಮಾನವನು ಗಿಡ-ಬಳ್ಳಿಯ ಬೇರು-ನಾರು, ಎಲೆ-ಕಾಯಿ, ಬೀಜಗಳನ್ನು ಕುಟ್ಟಿ ಕಟ್ಟಿದ, ರಸ ತೆಗೆದು ಕುಡಿದು ಬದುಕಿದ. ಇತರರಿಗೆ ಇವುಗಳನ್ನೇ ನೀಡಿದ. ಹೀಗೆ ರೋಗ ಇಲ್ಲವೆ ಹಾವಿನ ವಿಷ ನಾಶ ಮಾಡಿ ಜೀವ ಉಳಿಸಿದವನೇ ಜನಪದ ವೈದ್ಯನಾದ. ತಾನು ಉಪಯೋಗಿಸಿದ ಮರ, ಬಳ್ಳಿ ಬೇರು-ನಾರು, ಕಾಯಿ-ಬೀಜಗಳನ್ನು ಮರೆಯದೇ ನೆನಪಿಟ್ಟುಕೊಂಡು ಸ್ವಾನುಭವದಿಂದ ಒಡನಾಡಿಗಳಿಗೆ ತನ್ನದೇ ರೀತಿಯಲ್ಲಿ ಮದ್ದು ನೀಡಿ ಉಪಚರಿಸುವದರ ಮೂಲಕ ಜನಪದ ವೈದ್ಯ ಪದ್ಧತಿ ಬೆಳೆಯಿತು. ಕ್ರಮೇಣ ಯಾವ ರೋಗಕ್ಕೆ ಎಂಥ ಗಿಡ ಮೂಲಿಕೆಯ 'ಮದ್ದು' ಕೊಡಬೇಕೆಂಬ ಖಚಿತ ಪಡಿಸಿಕೊಂಡನು. ತಾನು ಪಡೆದ ಅನುಭವದ ಜ್ಞಾನವನ್ನು ತಂದೆ-ಮಗನಿಗೆ ಕಲಿಸುತ್ತ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ, ಸಮುದಾಯದ ಪರಂಪರೆಯಲ್ಲಿ ಬೆಳೆದು-ಉಳಿದು ಬಂದಿತು. ಅದೇ ಇಂದಿನ ಆಧುನಿಕ ವೈದ್ಯ ಪದ್ಧತಿಗೆ ಪೂರಕ ಮತ್ತು ಪ್ರೇರಕವಾಯಿತು.

ಜನಪದ ವೈದ್ಯರ ಪ್ರಕಾರಗಳು: ಜನಪದ ವೈದ್ಯರಲ್ಲಿಯೂ ಅನೇಕ ಪ್ರಕಾರಗಳಿವೆ. 1. ಸಾಮಾನ್ಯ ವೈದ್ಯರು: ಜ್ವರ, ನೆಗಡಿ, ಕೆಮ್ಮು, ಮೈಬೇನೆ ಮುಂತಾದ ರೋಗಗಳಿಗೆ ಮದ್ದು ಕೊಡುವವರು ಸಾಮಾನ್ಯ ವೈದ್ಯರು ಇವರು ಮನೆಯಲ್ಲಿಯ ಬಳ್ಳೊಳ್ಳಿ, ಜೀರಿಗಿ, ಶುಂಠಿ, ಅಜಿವಾನ ಮುಂತಾದ ಸಾಂಬರ ಪದಾರ್ಥಗಳಿಂದ ಮದ್ದು ತಯಾರಿಸಿಕೊಡುವರು ಇವರ ಮದ್ದುಗಳಿಗೆ ಹೆಚ್ಚಿನ ಖರ್ಚು ಇರುವುದಿಲ್ಲ.

2. ಶಸ್ತ್ರ ಅಥವಾ ಚಿಕಿತ್ಸಾ ವೈದ್ಯರು: ದೇಹದ ಮೇಲೆ ಗಡ್ಡೆ, ಕುರುವು ಮುಂತಾದವಾದರೆ ಸೂಜಿ, ಇಲ್ಲವೆ ಡಬ್ಬಣವನ್ನು ಬೆಂಕಿಯಲ್ಲಿ ಕಾಸಿ ಬರೆಹಾಕುವರು. ಬರೆ ಹಾಕುವದು, ಇಲ್ಲವೆ ಚುಟುಕಿ ಹಾಕುವುದರಿಂದ ಗಡ್ಡೆ ಕರಗುವದು, ಇಲ್ಲವೆ ಒಡೆದು ಕೀವು ಸೋರುವದು. ಹೀಗೆ ಬರೆ ಹಾಕಿ ರೋಗ ವಾಸಿ ಮಾಡುವವರೆ ಶಸ್ತ್ರ ವೈದ್ಯರು.

3. ಮಂತ್ರ ಇಲ್ಲವೆ ಮನೋವೈದ್ಯರು: ಜನಪದರಲ್ಲಿ ರೋಗಗಳು ದೇವರು ಇಲ್ಲವೆ ದೆವ್ವ-ಪಿಶಾಚಿ, ಭೂತಗಳಿಂದ ಬರುವವೆಂಬ ನಂಬಿಕೆ ಬಲವಾಗಿದೆ. ದೆವ್ವ, ಪಿಶಾಚಿಗಳು ರೋ-ಗಿಯ ನಂಬಿಕೆಯನ್ನೇ ಅವಲಂಬಿಸಿವೆ. ದೆವ್ವ- ಪಿಶಾಚಿಗಳ ಭ್ರಮೆಯನ್ನು ಹೋಗಲಾಡಿಸಲು ಪೂಜೆ, ಹೋಮ, ಯಜ್ಞ, ವ್ರತ ಮಾಡಿ, ಮಂತ್ರಿಸಿದ ನೀರು, ಲಿಂಬೆ ಹಣ್ಣು, ತಾಯಿತ ಕಟ್ಟುವರು, ಇವರೆ ಮಂತ್ರ ವೈದ್ಯ. ಒಂದು ರೀತಿಯಲ್ಲಿ ಆಧುನಿಕ ಮನೋವೈದ್ಯರಿದ್ದಂತೆ. ಇವರು ರೋಗಿಯ ಮಾನಸಿಕ ಭ್ರಮೆಯನ್ನು ಮಂತ್ರ-ತಾಯಿತದ ಮೂಲಕ ಹೋಗಲಾಡಿಸುವರು.

ಹೊಟ್ಟೆ ಕಡಿತಕ್ಕೆ ಜನಪದರಲ್ಲಿ 'ಕಾಲಧೂಳಿ, ತೆಗೆಯುವರು. ಕಾಲುಧೂಳಿ ತೆಗೆಯಲು ಮೂರು ಹಾದಿ ಕೂಡಿದಲ್ಲಿಯ ಒಂದು ಹಿಡಿ ಮಣ್ಣು ತಂದು, ಒಂದು ಸಣ್ಣ ಗಡಿಗೆಯಲ್ಲಿ ಹಾಕಿ, ಅದರಲ್ಲಿ ಒಂದು ಹಿಡಿ ಕಟ್ಟಿಗಿ ಚೂರು ಹಾಕಿ ಉರಿ ಹಚ್ಚುವರು. ಅರಿಶಿಣ ಪುಡಿ ಕಲಿಸಿದ ನೀರು ತುಂಬಿದ ಗಂಗಾಳದಲ್ಲಿ ಉರಿ ಹಚ್ಚಿದ ಗಡಿಗೆಯನ್ನು ಬೋರಲಾಗಿಡುವರು. ಕೆಲ ನಿಮಿಷದಲ್ಲಿಯೇ

ಗಂಗಾಳದಲ್ಲಿಯ ಅರಿಶಿಣ ನೀರು ಗಡಿಗೆಯೊಳಗೆ ಎಳೆದುಕೊಳ್ಳುವದು. ಗಡಿಗೆ ಮೇಲೆ ಎತ್ತಿ ಹಿಡಿದರೂ, ಗಂಗಾಳ ಕೆಳಗೆ ಬೀಳುವದಿಲ್ಲ. ಮೇಲೆ ಹಾಗೆಯೇ ನಿಂತಿರುತ್ತದೆ. ಅಲ್ಲದೆ ಗಡಿಗೆಯೊಳಗೆ ನೀರು ಸೇರುವಾಗ ಒಳಗಿನ ಹೊಗೆ ಹೊರಗೆ ಬಂದು ಪುಕ್, ಪುಕ್, ಎನ್ನುವ ಶಬ್ದ ಬರುವದು. ದೃಷ್ಟಿತಾಗಿದವರ ಹೊಟ್ಟೆಯು ಹೀಗೆ ಕಡಿಯುವದೆಂದು ತೋರಿಸುವರು. ನೀರೆಲ್ಲ ಗಡಿಗಿಯೊಳಗೆ ಸೇರಿದ ಮೇಲೆ ಶಬ್ದ ಹೊರಡುವದಿಲ್ಲ. ಆಗ ಹೊಟ್ಟೆನೋವು ನಿವಾರಣೆಯಾಯಿತೆಂದು ಪ್ರತಕ್ಷ ಪ್ರಯೋಗದ ಮೂಲಕ ರೋಗಿಗೆ ಮನವರಿಕೆ ಮಾಡಿ ಕೊಡುವದರಿಂದ ಅವರ ಮಾನಸಿಕ ಭ್ರಮೆ ದೂರವಾಗುವದು. ಹೀಗೆಯೇ ದೆವ್ವ, ಪಿಶಾಚಿಗಳಿಂದ ಬಳಲುವವರಿಗೆ ಮಂತ್ರಿಸಿದ ತಾಯಿತ, ಇಲ್ಲವೆ ಲಿಂಬು ಕೊಟ್ಟು ಮಾನಸಿಕ ಭ್ರಮೆಯನ್ನು ಹೋಗಲಾಡಿಸುವವರೆ ಮಂತ್ರ ವೈದ್ಯರು.

4. ಮಕ್ಕಳ ವೈದ್ಯರು: ಗರ್ಭಿಣಿಯರಿಗೆ ಪೌಷ್ಠಿಕ ಆಹಾರ ಮತ್ತು ಆರೈಕೆಯ ಬಗ್ಗೆ ಸಲಹೆ ನೀಡುವವರಿಗೆ ಜನಪದರಲ್ಲಿ 'ಸೂಲಗಿತ್ತಿ' ಎನ್ನುವರು. 'ಸೂಲಗಿತ್ತಿ' ನಿಜಕ್ಕೂ ಹೆರಿಗೆ ವೈದ್ಯಳು. ಬಾಣಂತಿಗೆ ನೋವು ಶಮನವಾಗಲೂ, ರೋಗ ಬಾರದಂತೆ ತಡೆಯಲು ರೋಗ ನಿರೋಧಕ ಆಹಾರ ನೀಡಲು ಸಲಹೆ ಮಾಡುವಳು. ಮಗು ಜನಿಸುವ ದಿನ, ಸಮಯ ಅರಿತು, ಹೆರಿಗೆಯಲ್ಲಿ ಅನುಸರಿಸುವ ವಿಧಾನ, ತಿಳಿಸಿ, ಸರಳವಾಗಿ ಹೆರಿಗೆಯಾಗುವಂತೆ ಮುಂಜಾಗ್ರತೆ ವಹಿಸುವಳು ಅಲ್ಲದೆ ಬಾಣಂತಿಗಾಗಿಯೇ ತಯಾರಿಸಿದ 'ಬಾಣಂತಿ ಎಚ್ಚ' ಕೊಡವಳು ಬಾಣಂತಿ ಎಚ್ಚದಲ್ಲಿ ಆರೋಗ್ಯ ಕಾಪಾಡುವ ಸಾಂಬರ ದಿನಸುಗಳೇ ಇರುತ್ತವೆ. ಹುಟ್ಟಿದ ಕೂಸಿಗೆ ನೀರು ಎರೆದು ಕೈ-ಕಾಲು ಎಣ್ಣೆ ಹಚ್ಚಿ ತಿಕ್ಕುವಳು. ಹೀಗೆ ಸಲಹೆ ಸಾಂತ್ವನ ಹೇಳಿ ತಾಯಿ ಮಗುವಿನ ಆರೋಗ್ಯ ಕಾಪಾಡುವಳು. ಯಾವ ಆಹಾರ ತಿಂದರೂ ಮಗುವಿನ ಹೊಟ್ಟೆ ನೋವು ಬಾರದಿರಲೆಂದು ಸೂಜಿ ಕಾಸಿ ಮಗುವಿನ ಹೊಟ್ಟೆಯ ಮೇಲೆ ++ ಈ ರೀತಿ ಚುಟುಕಿ ಹಾಕುವಳು. ನಂತರ ಚುಟುಕಿಯ ಮೇಲೆ ಅರಳಿಯನ್ನು ಮೊಸರಲ್ಲಿ ಎದ್ದಿ ಹಾಕುವಳು. ಹೀಗೆ ಹಾಕುವದರಿಂದ ನೋವು ಕಡಿಮೆಯಾಗುವದಲ್ಲದೆ ಗಾಯವೂ ಮಾಯುವವು.

ಜನಪದರಲ್ಲಿ ವಿವಿಧ ರೋಗಗಳಿಗೆ 'ಮದ್ದು' ಕೊಡುವವರು ಇರುವಂತೆ, ಕೇವಲ ಹಾವಿನ ವಿಷ, ಕಾಮಾಲೆ, ತೊನ್ನ ಮುಂತಾದ ಒಂದೊಂದೇ ರೋಗಕ್ಕೆ ಮದ್ದು ಕೊಡುವ ವೈದ್ಯರು ಸಾಕುಷ್ಟು ದೊರೆಯುವರು.

5. ಪಶು ವೈದ್ಯರು: ಪಶುಗಳಿಗೆ ಬಾಯಿಬೇನೆ ಬಂದರೆ ಉಪ್ಪನ್ನು ನೀರಲ್ಲಿ ಬೆರೆಸಿ ಕುಡಿಸುವರು, ಕಾಲುಬೇನೆ ಬಂದ ದನ-ಕರುಗಳನ್ನು ಸುಡುವ ಉಸುಕು ಅಥವಾ ಹುಡಿ ಮಣ್ಣಿನಲ್ಲಿ ನಿಲ್ಲಿಸುವರು. ಉಸುಕು ಸುಡುವದರಿಂದ ನೋವು ಶಮನಾಗುವದು. ದನಗಳು ಮೇವು ತಿನ್ನದಿದ್ದರೆ 'ಕುಕ್ಕಡಿ' ರೋಗ ಬಂದಿದೆ ಎನ್ನುವರು. ಅದಕ್ಕೆ ಜನಪದ ಪಶು ವೈದ್ಯರು 'ಸೌಟಿನಲ್ಲಿ ಹುಣಸೆಕಾರ ತೆಗೆದುಕೊಂಡು, ಅದಕ್ಕೆ ಸ್ವಲ್ಪ ಒಳ್ಳೆಣ್ಣೆ ಬೆರಿಸಿ, ರೋಗ ಬಂದ ದನದ ನಾಲಿಗೆ ಹೊರಗೆಳೆದು ಸೌಟಿನಿಂದ ತಿಕ್ಕುವರು. ಹೀಗೆ ತಿಕ್ಕುವದರಿಂದ ದನದ ನಾಲಿಗೆ ರೋಗವಾಸಿಯಾಗಿ ಕೆಲ ಸಮಯದಲ್ಲಿಯೇ ಮೇವು ತಿನ್ನುವದು. ಎತ್ತುಗಳಿಗೆ ಗಾಡಿ, ಗಳೆ ಹೊಡೆಯುವದರಿಂದ ಹೆಗಲು ಗಡ್ಡೆಯಾದರೆ ಅತ್ತಿ ಇಲ್ಲವೆ ಆಲದ ಮರದ ಹಾಲು ಹಚ್ಚುವದು ಗಡ್ಡೆ ಕರಗುವದು ಇಲ್ಲವೆ ಹೊಡೆದು ಕೀವು ಸೋರುವದು, ಕಾಲು ಕುಂಟುತಿದ್ದರೆ ಮೊದಲು ಸರಿಯಾಗಿ ಜೋಡಿಸಿ ನಂತರ ಕಬ್ಬಿಣದ ಕುಡವನ್ನು ಬೆಂಕಿಯಲ್ಲಿ ಕಾಸಿ ಜೋಡಿಸಿದ ಕಾಲಿನ ನರ ಇಲ್ಲವೆ ಎಲವಿನ ಮೇಲೆ – ++ ಹೀಗೆ ಬರೆ ಹಾಕುವದು. ಇದರಿಂದ ಕಾಲಿನ ಕುಂಟು ಶಮನವಾಗುವದು. ಆಕಳು ಎಮ್ಮೆಗಳು ಕರು ಹಾಕಿದ ನಂತರ ಉಳಿದ ಮಾಂಸ ಬೀಳದಿದ್ದರೆ ಜನಪದ ಪಶು ವೈದ್ಯರು ಗಿಡ ಮೂಲಿಕೆಯ ಮದ್ದು ಕೊಟ್ಟು ಮಾಂಸ ಬೀಳುವಂತೆ ಮಾಡುವರು.

6. ನಾಟಿ ವೈದ್ಯರು: ನಾಟಿ ಪದಕ್ಕೆ ಹಚ್ಚು, ಮೊಳಕೆ ಹೊಡೆ, ನಾಟಿಸು, ಚಿಗುರು, ಎಂಬ ಅರ್ಥಗಳಿವೆ. ಜನಪದರಲ್ಲಿ ಒಂದು ಪ್ರದೇಶದಲ್ಲಿ ಬೆಳೆದ ಸಸಿ, ಇಲ್ಲವೆ ಬಳ್ಳಿಯ ಬೇರು, ಕಾಂಡವನ್ನು ಕಿತ್ತು ತಂದು ನೀರಿರುವ ಬೇರೊಂದು ಪ್ರದೇಶದಲ್ಲಿ ಹಚ್ಚುವದಕ್ಕೆ ನಾಟಿ ಮಾಡುವದು ಎನ್ನುವರು. ಉದಾ: ಭತ್ತ ಇಲ್ಲವೆ ಮೆಣಸಿನ ಸಸಿಗಳನ್ನು ಮೊದಲು ಮಡಿ ಮಾಡಿ ಬೆಳಸುವರು. ನಂತರ ಕಿತ್ತು ತಂದು ಗದ್ದೆಯಲ್ಲಿ ನಾಟಿಸುವದಕ್ಕೆ ನಾಟಿ ಮಾಡುವದು ಎನ್ನುವದು ವಾಡಿಕೆ. ಜನಪದ ವೈದ್ಯರು ಔಷಧೀಯ ಗುಣಧರ್ಮವಿರುವ ಅನೇಕ ಬಳ್ಳಿ, ಗಿಡದ ಎಲೆ, ಟೊಂಗೆ, ತೊಗಡೆ, ಕಾಯಿ, ಬೀಜಗಳನ್ನು ಸಂಗ್ರಹಿಸಿಟ್ಟುಕೊಳ್ಳುವರು. ಮಳೆ ಬೀಳುವ ಇಲ್ಲವೆ ನೀರು ಹರಿಯುವ ಪ್ರದೇಶದಲ್ಲಿಯೇ ಸಸ್ಯಗಳು ಬೆಳೆಯುವದು ಸಾಮಾನ್ಯ ಮಳೆ ಬಾರದಿದ್ದರೆ ಇಲ್ಲವೆ ಬೇಸಿಗೆಯಲ್ಲಿ ಒಣಗುತ್ತವೆ. ಆದ್ದರಿಂದ ಔಷಧೀಯ ಗುಣಧರ್ಮ ಹೊಂದಿದ ಬಳ್ಳಿ ಗಿಡದ ಬೀಜ, ಇಲ್ಲವೆ ಟೊಂಗೆ ತಂದು ನೀರು ಹರಿಯುವ ಪ್ರದೇಶದಲ್ಲಿ ಇಲ್ಲವೆ ತಮ್ಮ ಮನೆಯ ಸುತ್ತಲೂ ಹಚ್ಚಿ ನಾಟಿ ಮಾಡುವರು. ಹೀಗೆ 'ನಾಟಿ' ಮಾಡಿದ ಬೀಜ ಮೊಳಕೆಯೊಡೆದು, ಟೊಂಗೆ ಬೆಳೆತು ದೊಡ್ಡದಾದಂತೆ ಅವುಗಳ ಎಲೆ, ತೊಗಟೆ ಬಳಿಸಿ ಮದ್ದು ಮಾಡಿ ರೋಗಿಗಳಿಗೆ ಕೊಡವವರೆ 'ನಾಟಿ ವೈದ್ಯರು'. ತಾವು ನಾಟಿಸಿದ ಸಸ್ಯಗಳಿಂದ ಮದ್ದು ತಯಾರಿಸಿ ಕೊಡುವದರಿಂದ ಈ ಹೆಸರು ಬಂದಿರಬೇಕು.

7. ನಾಡೀ ವೈದ್ಯರು: ನಾಡಿಗಳು ದೇಹದ ಉಷ್ಣತೆ, ಶೀತವನ್ನು ತಿಳಿಸುವ ವಾಹಕಗಳು. ಸಾಮಾನ್ಯವಾಗಿ ದೇಹದ ಆರೋಗ್ಯವನ್ನು 'ನಾಡಿ' ಪರೀಕ್ಷೆಯ ಮೂಲಕ ಅರಿಯುವವರು. ನಾಡಿ ಬಡಿತ ಒಂದೇ ಸ್ಥಿತಿಯಲ್ಲಿರುವುದಿಲ್ಲ. ಭಯ, ಉದ್ವೇಗ, ದುಃಖವಾದಾಗ ಇಲ್ಲವೆ ಜ್ವರ, ಶೀತವಾದಾಗ ಹೆಚ್ಚು-ಕಡಿಮೆ ಬಡಿಯುತ್ತವೆ. ನಾಡಿಯ ಬಡಿತದ ಮೂಲಕವೆ ಜ್ವರದ ಉಲ್ಬಣ, ಇಲ್ಲವೆ ಉಪಶಮನ ಅರಿತು ಅದಕ್ಕೆ ಮದ್ದು ಕೊಟ್ಟು ಉಪಚರಿಸುವವರು ನಾಡೀ ಪರೀಕ್ಷಕರಾದ ಪರಿಣಿತ ವೈದ್ಯರು ಆದ್ದರಿಂದಲೇ "ನಾಡೀ ಪರೀಕ್ಷೆ ಆಡೇನು ಬಲ್ಲದು" ಎಂಬ ಗಾದೆ ಮಾತು ನಾಡೀ ವೈದ್ಯರ ಮಹತ್ವವನ್ನು ತಿಳಿಸುತ್ತದೆ.

ಇಂದು ಯೋಗದ ಮೂಲಕ ರೋಗ ಕಳೆದುಕೊಳ್ಳಲು ಮಾಡುವ ಯೋಗಾಸನಗಳಲ್ಲಿಯೂ ನಾಡಿಯ ಪಾತ್ರ ಪ್ರಮುಖವಾಗಿದೆ.

(ಎಸ್‌ಎಚ್)

ಜನಪದ ಸಂಕೇತಗಳು: ಜನಪದರ ಶಬ್ದ ರಹಿತ–ಆಂಗಿಕ ಭಾಷೆ–ಭಾಷಾ ಸಂಕೇತಗಳು ಇಡೀ ಮನುಕುಲದಲ್ಲಿ ಇಂದೂ ಬಳಕೆಯಲ್ಲಿವೆ. ಇಂದು ಎಲ್ಲ ಕ್ಷೇತ್ರಗಳಲ್ಲಿ ಸಾಂಕೇತಿಕತೆ, ಸಂಕ್ಷಿಪ್ತತೆ ಅನಿವಾರ್ಯವಾಗಿವೆ. ಜನಪದ ಸಮಾಜದಲ್ಲಿ ಈ ಸಂಕೇತಗಳು ಪರಿಣಾಮಕಾರಿಯಾಗಿ ಮಾಧ್ಯಮಗಳ ರೂಪದಲ್ಲಿ ಕೆಲಸ ಮಾಡುತ್ತಿದ್ದು, ಹೆಣ್ಣು ಮಗಳು ಕಟ್ಟಿಕೊಂಡ 'ತಾಳಿ' ಅವಳು ಧರಿಸಿದ ಕುಂಕುಮ ಸುಮಂಗಲೆ ಎನ್ನುವುದಕ್ಕೆ ಸಾಕ್ಷಿ. ಅದೇ ಕುಂಕುಮ ರಹಿತ ಹಣೆ ವೈಧವ್ಯವನ್ನು ಸಾರುವ ಸಂಕೇತವಾಗಿತ್ತು.

ಊರ ದೇವರ ಹೆಸರಿನಲ್ಲಿ ಹೋರಿ, ಆಕಳನ್ನೂ ಬಿಟ್ಟು ಬಿಡುವ ಸಂಪ್ರದಾಯವಿತ್ತು. ಅವುಗಳನ್ನು ಕ್ರಮವಾಗಿ 'ಗೂಳಿ' 'ಕಪಲಿ' ಎಂದು ಗುರುತಿಸಲಾಗುತ್ತಿತ್ತು. ಹೀಗೆ ಗುರುತಿಸಲು ಅವುಗಳ ಹಿಂಗಾಲಿನ ಪಚ್ಚೆಯ ಮೇಲೆ ಲಿಂಗದ ಗುರುತಿನ ಬರೆ ಹಾಕುತ್ತಿದ್ದರು. ಈ ಸಂಕೇತದ ದನ, ಅದು ಊರಿನ ದೇವರಿಗೆ ಸೇರಿದ್ದೆಂದು, ಊರಿನ ಪವಿತ್ರ ಆಸ್ತಿ ಎಂದು ಪರಿಗಣಿಸುತ್ತಿದ್ದರು. ಅದನ್ನು ಯಾರೂ ಹೊಡೆಯುತ್ತಿರಲಿಲ್ಲ. ಅದಕ್ಕೆ ತಿನ್ನಲು ಏನನ್ನಾದರೂ ಕೊಡುವುದು ರೂಢಿ. ಮುಖ್ಯವಾಗಿ ಅದನ್ನು ಮಾರುವ, ಕೊಳ್ಳುವ ಹಕ್ಕು ಆ 'ಲಿಂಗ' ಸಂಕೇತದಿಂದಾಗಿ ಯಾರಿಗೂ ಇರುತ್ತಿರಲಿಲ್ಲ. ಅದನ್ನು ಕಳವು ಮಾಡಿ ಮಾರಲು ಹೋದರೆ, ಸಮಾಜ ಅಂಥವರಿಗೆ ಶಿಕ್ಷೆ ವಿಧಿಸುತ್ತಿತ್ತು.

ಊರಲ್ಲಿ ಗೌಡ, ದೇಸಾಯಿ ಮೊದಲಾದವರ ಮನೆಗಳನ್ನು ತಟ್ಟನೆ ಗುರುತಿಸಲೆಂದು ಮನೆಯ ತಲೆ ಬಾಗಿಲದ ಹಣೆ ಪಟ್ಟಿಯಲ್ಲಿ ಎರಡೂ ಕಡೆ' ಕಟ್ಟಿಗೆಯ ಕುದುರೆ ಮುಖದ ಕೆತ್ತನೆಗಳಿರುತ್ತಿದ್ದುವು. ಈ ಕುದುರೆ ಮುಖಗಳು ಪ್ರತಿಷ್ಠೆಯ ಸಂಕೇತಗಳಾಗಿದ್ದವು. ಅನ್ಯರು ಈ ಸಂಕೇತಗಳನ್ನು ಬಳಸುವಂತಿರಲಿಲ್ಲ. ಅಂಥ ಪ್ರತಿಷ್ಠಿತರ ಮನೆಯನ್ನು ಸಹಜವಾಗಿ ಗುರುತಿಸಲು ಈ ಸಂಕೇತಗಳು ಸಹಾಯಕಾರಿಯಾಗುತ್ತಿದ್ದವು.

ರಾಸೀ ಮಾಡಲು ಹೊಲದಲ್ಲಿ 'ಖಣ' ಕಡಿಯುತ್ತಾ ಆ ಕಣದ ಒಂದೆರಡು ಬುಟ್ಟಿ ಮಣ್ಣನ್ನು ಸಮೀಪದ, ಜನ ಹಾಯ್ದಾಡುವ ದಾರಿಗೆ ಅಡ್ಡಲಾಗಿ ಹಾಕುತ್ತಿದ್ದರು. ಊರಿನ ಎಲ್ಲ ಆಯಗಾರರಿಗೆ ಇಲ್ಲೇ ಸಮೀಪದಲ್ಲೊಂದು ರಾಸಿ' ನಡೆದಿದೆ ಎಂಬುದನ್ನು ತಿಳಿಸುವುದರ ಸಂಕೇತ ಇದಾಗಿತ್ತು. ಅದನ್ನರಿತ ಆಯಗಾರರು 'ಖಣ'ಕ್ಕೆ ಬಂದು ತಮ್ಮ ಪಾಲಿನ ಆಯ ತೆಗೆದುಕೊಂಡು ಹೋಗಲು ಸಾಂಕೇತಿಕ ಆಮಂತ್ರಣ ಇದಾಗಿತ್ತು.

ಒಂದು ಭಾಗದ ಖ್ಯಾತ ಕುಸ್ತಿ ಪಟುವೆಂಬುದನ್ನು ಸಾರುವ ಸಂಕೇತವಾಗಿ, ಬಲಗೈಗೆ ಕರಿಯ ಕಾಶೀದಾರದ ಬಿರುದು ಕಟ್ಟುವ ಸಂಪ್ರದಾಯವಿತ್ತು. ಅದರಂತೆ ಕುಸ್ತಿ ಗಡಿಗಳು, ದೈಹಿಕ ಸಾಮರ್ಥ್ಯ ಸಾಧಕರು, ತಾವು ಬ್ರಹ್ಮಚಾರಿಗಳು ಎಂಬುದನ್ನು ಸಾರುವ ಸಂಕೇತಕ್ಕೆ ಕೊರಳಲ್ಲಿ ಕರಿದಾರದಿಂದ ಹಣಮಂತನ ತಾಯತ ಕಟ್ಟಿಕೊಳ್ಳುತ್ತಿದ್ದರು. ಅವರು ಹೆಣ್ಣಿನ ಕಡೆ ಕಣ್ಣು ಹಾಯಿಸಬಾರದು, ಹಾಗೆ ಮಾಡದಂತೆ ಸಮಾಜವೂ ಅವರ ಮೇಲೆ ಕಣ್ಣಿರಿಸಲು ಈ ತಾಯತ ಸಂಕೇತವಾಗಿತ್ತು.

ಊರಿನ ಮದುವೆಯ ಮನೆಯನ್ನು ಹೊರಗಿನವರು ತಟ್ಟನೆ ಗುರುತಿಸಲೆಂದು ಮದುವೆಯ ಮನೆಗೆ ಸುಣ್ಣ–ಬಣ್ಣ (ಹುರಮಂಜ)ದ ಚೋರು ಬಿಡುತ್ತಿದ್ದರು. ಊರಲ್ಲಿ ಊದಿಸುವ ಬಾರಿಸುವ ಭಜಂತ್ರಿಯವರು, ಕಾರ್ಯಕ್ರಮದ ಸ್ವರೂಪ ತಿಳಿಸಿಕೊಡಲು ಬೇರೆ ಬೇರೆ ಸ್ವರ–ಧಾಟಿ–ಗತ್ತುಗಳನ್ನು ಸಾಂಕೇತಿಕವಾಗಿ ಅನುಸರಿಸುತ್ತಿದ್ದರು. ಅದನ್ನು ಕೇಳಿದೊಡನೆ ಇದು ಮಂಗಳಕಾರ್ಯವೋ, ದುಃಖದ ಸಂದರ್ಭವೋ ಎಂಬುದು ತಟ್ಟನೆ ಹೊಳೆಯುತ್ತಿತ್ತು. ಹೀಗೆ, ಜನಪದ ಸಂಸ್ಕೃತಿಯ ಬೀಜಗಳಂತಿದ್ದ ಸಹಸ್ರಾರು ಸಂಕೇತಗಳು ಅಧ್ಯಯನ ಯೋಗ್ಯವಾಗಿವೆ. ಇದರಿಂದಾಗಿ ಜಾನಪದ ಸಂಸ್ಕೃತಿಯ ಆಳ–ಅಗಲವನ್ನು ಇನ್ನೂ ಚೆನ್ನಾಗಿ ಅರಿಯಲು ಸಾಧ್ಯವಿದೆ. ಸಾಮಾಜಿಕ ಸಾಂಸ್ಕೃತಿಕ ಸಂದೇಶ ವಾಹಕವಾಗಿ, ಸಮೂಹ ಮಾಧ್ಯಮಗಳಂತೆ ಕಾರ್ಯನಿರ್ವಹಿಸುವ ಈ ಸಂಕೇತಗಳ ಸಂಶೋಧನಾತ್ಮಕ ಅಧ್ಯಯನದ ಅವಶ್ಯಕತೆಯಿದೆ.

(ಎಂಜಿಬಿ)

ಜನಪದ ಸಂಗೀತ: ಜನಪದ ಸಂಗೀತ ಶಾಸ್ತ್ರೀಯ ಸಂಗೀತಕ್ಕಿಂತ ತುಂಬಾ ಭಿನ್ನವಾಗಿದೆ. ಇತ್ತೀಚೆಗೆ ಜನಪದ ಕಲೆ–ಸಾಹಿತ್ಯ–ಸಂಗೀತಗಳ ಮಹತ್ವದ ಅರಿವು ಆಗುತ್ತಿದ್ದಂತೆ ಜಾನಪದ ಪರಂಪರೆಗೂ ಶಿಷ್ಟ ಪರಂಪರೆಗೂ ತೌಲನಿಕ ಅಭ್ಯಾಸ ಪ್ರಾರಂಭಗೊಂಡಿತು. ಈ ಹಿನ್ನೆಲೆಯಲ್ಲಿ ಕೆಲವರು ಜನಪದದ ಅನೇಕ ರಾಗಗಳು ಶಿಷ್ಟರಾಗದೊಂದಿಗೆ ಹೋಲಿಕೆ ಪಡೆಯುವುದಾಗಿ ಗುರುತಿಸಿದ್ದಾರೆ. ಜನಪದದ ಒಂದು ಹಾಡು ಕಿವಿಗೆ ಬೀಳುತ್ತಿರುವಂತೆ ಅದರಲ್ಲಿ ಶಿಷ್ಟಮಾರ್ಗಕ್ಕನುಸಾರವಾಗಿ ರಾಗವೊಂದನ್ನು ಗುರುತಿಸಬಹುದು. ಆದರೆ ಅವರೆಡೂ ಬೀರುವ ಪರಿಣಾಮದಲ್ಲಿ ಬಹಳ ಅಂತರವಿತ್ತದೆ. ಜನಪದ ಸಂಗೀತಕ್ಕೆ ಯಾವುದೇ ಕಟ್ಟುಪಾಡುಗಳಿಲ್ಲದಿರುವುದೇ ಈ ವ್ಯತ್ಯಾಸಕ್ಕೆ ಮೊದಲ ಕಾರಣವಾಗುತ್ತದೆ.

ಜನಪದ ಗೀತ ಸಾಹಿತ್ಯವನ್ನು ಮುಂದಿಟ್ಟುಕೊಂಡು, ಇಲ್ಲಿಯ ಹಾಡುಗಳಿಗೆ ಸ್ವರ ಪ್ರಸ್ತಾರ ನಿರ್ದೇಶಿಸಿ ಜನಪದ ಸಂಗೀತ ಹುಟ್ಟಲಿಲ್ಲ. ಇವರು ಹಾಡುತ್ತಲೇ ಸಾಹಿತ್ಯ ಸೃಷ್ಟಿಸಿದರು. ಇಲ್ಲಿ ಸಾಹಿತ್ಯ ಮತ್ತು ಸಂಗೀತಗಳೆರಡೂ ಏಕಕಾಲಕ್ಕೆ ಜನ್ಮತಾಳಿದವು. ಇಂದಿಗೂ ಜನಪದ ಸಾಹಿತ್ಯ ಮೌಖಿಕ ಪರಂಪರೆಯಲ್ಲಿ ಉಳಿದು ಬಂದಿರುವ ಗುಟ್ಟು ಇಲ್ಲಿಯೇ ದೊರೆಯುತ್ತದೆ. ತಲೆಮಾರಿನಿಂದ ತಲೆಮಾರಿಗೆ, ಕಿವಿಯಿಂದ ಕಿವಿಗೆ ಹಾಡುತ್ತಲೇ ನಮ್ಮವರು ಅಪಾರವಾದ ಗೀತಸಾಹಿತ್ಯ ಉಳಿಸಿಕೊಂಡು ಬಂದರು. ಜನಪದರಿಗೆ ಗೀತೆಯೊಂದರ ಶಬ್ದಾರ್ಥದ ಸುಖಕ್ಕಿಂತ ಸಂಗೀತದ ಸವಿ ಮುಖ್ಯವೆನಿಸುತ್ತದೆ. ಈ ಪ್ರಸಾರದಲ್ಲಿ ಹಾಡುವವರು ಕೇಳುವವರು ಇಬ್ಬರೂ ಶಾಸ್ತ್ರೀಯ ಸಂಗೀತ ಬಲ್ಲವರಲ್ಲ, ಆದರೆ ಸಂಗೀತದ ಸವಿಗಾರರು. ಒಂದು ಹಾಡು ಸಾಗುತ್ತಿದ್ದಂತೆ ರಾಗ–ತಾಳ ಇಬ್ಬರಿಗೂ ಗೊತ್ತಿರಲಿಕ್ಕಿಲ್ಲ, ಆದರೆ ಸಂಗೀತದ ಸುಖ ಪಡೆಯುತ್ತಾರೆ.

ಜನಪದ ಹಾಡುಗಾರರಿಗೆ ಶಾಸ್ತ್ರಬದ್ಧ ರಾಗದ ಮಾಹಿತಿ ಇರಲಿಕ್ಕಿಲ್ಲ, ಆದರೆ ದನಿ ಮತ್ತು ದಾಟಿಗಳ ಅರಿವು ಇವರಿಗೆ ಚೆನ್ನಾಗಿ ಗೊತ್ತಿದೆ. ಹಾಡಲು ಸ್ವರವೆತ್ತುವುದಕ್ಕೆ ಜನಪದರು ದನಿಯೆನ್ನುತ್ತಾರೆ.

ಹಾಡುಗರಿಗೆ ಸಾಮಾನ್ಯವಾಗಿ ತಮ್ಮ ದನಿಯ ಮಟ್ಟ (Pitch) ಗೊತ್ತಿರುತ್ತದೆ. ಶ್ರುತಿ-ಸಾಧನಗಳಿಲ್ಲದಿರುವಾಗ ಇದು ಒಮ್ಮೊಮ್ಮೆ ಏರಾಗಬಹುದು, ಇಳುವಾಗಬಹುದು. ಹಾಡುವವರಿಗೆ ಹಾಡಿನ ಆರಂಭಕ್ಕೆ ಇದು ಗೊತ್ತಾಗಿ ಬಿಡುತ್ತದೆ. ಇನ್ನೂ ಪಲ್ಲವಿಯ ಮಟ್ಟದಲ್ಲಿಯೇ ಇದ್ದರೆ 'ದನಿ ಏರಾಯಿತು' ಎಂದೋ 'ಇಳುವಾಯಿತು' ಎಂದೋ ಹಾಡುವುದನ್ನು ನಿಲ್ಲಿಸಿ ಗುನುಗುನು ಮಾಡಿ ತನ್ನ ಅಳವಿಗೆ ನಿಲುಕುವ ಮಟ್ಟದಲ್ಲಿ ದನಿಹಿಡಿದು ಪುನರಾರಂಭಿಸುತ್ತಾರೆ. ಇದೇ ಸಂದರ್ಭದಲ್ಲಿ ಹಾಡುವ ವ್ಯಕ್ತಿಯ ದನಿಯ ಗುಣಮಟ್ಟ ಗೊತ್ತಾಗುತ್ತದೆ.

ಸಂದರ್ಭವನ್ನು ಅವಲಂಬಿಸಿ ದನಿಯ ಮಟ್ಟ ಏರಿಳಿತವನ್ನು ಪಡೆಯುತ್ತದೆ. ಮನೆಯ ನಾಲ್ಕು ಗೋಡೆಗಳ ಮಧ್ಯದಲ್ಲಿ ಕುಳಿತು ಹಾಡುವ ಸೋಬಾನ ಹಾಡುವವರ ಕೆಳಮಟ್ಟದಲ್ಲಿರುತ್ತದೆ. ಮನೆಯ ಕಟ್ಟೆಯ ಮೇಲೆ ಹಾಡುವ ಕೋಲಾಟದ ಹಾಡು, ಗುಡಿಯ ಪೌಳಿಯಲ್ಲಿ ಹಾಡುವ ಡೊಳ್ಳಿನ ಹಾಡುವವರ ದನಿಮಟ್ಟ ಸೋಬಾನ ಹಾಡುವವರಿಗಿಂತ ಸ್ವಲ್ಪ ಎತ್ತರದಲ್ಲಿರುತ್ತದೆ. ಹೊಲದ ಬಯಲಲ್ಲಿ ನಿಂತು ಹಂತಿ ಹಾಡು ಹಾಡುವವರ ದನಿ ಅತಿ ಎತ್ತರದಲ್ಲಿರುತ್ತದೆ. ಅಲ್ಲಿ ದಿಕ್ಕೇ ಮೇರೆಯಾಗಿರುವುದರಿಂದ ಎಷ್ಟು ಎತ್ತರದ ದನಿಯಲ್ಲಿ ಹಾಡಿದರೂ ಕಡಿಮೆಯೆನ್ನಿಸುತ್ತದೆ. ಬಯಲಾಟದ ಹಾಡುಗಳನ್ನು ಹಾಡುವವರೂ ಅಷ್ಟೇ ತೀರ ಎತ್ತರದ ದನಿಯಲ್ಲಿ ಹಾಡುತ್ತಾರೆ. ಬಯಲಿನಲ್ಲಿ ಕುಳಿತಿರುವ ಸಾವಿರಾರು ಪ್ರೇಕ್ಷಕರಿಗೆ ಹಾಡು ಮಾತು ತಲುಪುವ ಆವಶ್ಯಕತೆಯಿರುವುದರಿಂದ ಎತ್ತರದ ದನಿ ಅನಿವಾರ್ಯ ಆಗುತ್ತದೆ. ದನಿಯನ್ನು ಎತ್ತರಿಸುವಲ್ಲಿ ಯಾವುದೇ ಬಗೆಯ ಸಂಕೋಚ ಇವರನ್ನು ಕಾಡುವುದಿಲ್ಲ. ತಾನು ಇಷ್ಟು ಎತ್ತರದ ದನಿಯಲ್ಲಿ ಹಾಡುತ್ತೇನೆ, ತನ್ನದು ಇಷ್ಟು ದೊಡ್ಡದು ಎಂಬುದು ಅವರಿಗೆ ಅಭಿಮಾನದ ವಿಷಯವೇ ಆಗಿದೆ.

ಜನಪದರು ಹೇಳುವ 'ಧಾಟಿ' ಎಂಬುದನ್ನು ಕೆಲವರು 'ರಾಗ' ಎಂದು ಭಾವಿಸುವುದುಂಟು. ಆದರೆ ವಾಸ್ತವವಾಗಿ ಧಾಟಿ ಎಂಬುದು ಹಾಡನ್ನು ಹಾಡುವ ರೀತಿ; ತನ್ನದೇ ಆದ ವೈಶಿಷ್ಟ್ಯವನ್ನು ಪಡೆದುಕೊಂಡಿರುವುದು ಒಂದೇ ರಾಗದಲ್ಲಿ ಎರಡು ಮೂರು ದಾಟಿಗಳನ್ನು ಸೃಷ್ಟಿಸಬಹುದು ಎಂದರೆ, ದಾಟಿಗೂ-ರಾಗಕ್ಕೂ ಇರುವ ಅಂತರ ಸೃಷ್ಟಿಯಾಯಿತು. ಜನಪದರು ಹಾಡಿನ ಸಾಹಿತ್ಯದೊಂದಿಗೆ ತಾವು ಎಂದೋ ಕಲಿತ ದಾಟಿಯನ್ನೂ ಉಳಿಸಿಕೊಂಡು ಬಂದಿದ್ದಾರೆ. ಕಿವಿಯಿಂದ ಕಿವಿಗೆ ಈ ದಾಟಿಗಳು ಮುಂಚಿನ ರೀತಿಯಲ್ಲೇ ಉಳಿದುಕೊಂಡು ಬಂದಿರುವುದು ಜನಪದ ಸಂಗೀತದ ಒಂದು ವಿಶೇಷತೆ ಎಂದು ಹೇಳಬೇಕು. ಜನಪದ ಗೀತೆಗಳ ಬೇರೆ ಬೇರೆ ಪ್ರಕಾರಗಳಿಗೆ ಬೇರೆ ಬೇರೆ ಧಾಟಿಗಳಿವೆ. ಗೀಗೀಪದ, ಹಂತಿಪದ, ಬೋಲೋರಿ, ಭಜನಾಪದ, ಕೋಲಾಟದ ಹಾಡು, ಬೀಸುಕಲ್ಲಿನ ಹಾಡು, ಮದುವೆಯ ಹಾಡು, ಕುಬಸದ ಹಾಡು ಮೊದಲಾದ ಪ್ರತಿಯೊಂದು ಪ್ರಕಾರದ ಹಾಡುಗಳೂ ಪ್ರತ್ಯೇಕ ದಾಟಿಗಳನ್ನು ಪಡೆದಿವೆ. ಯಾವುದೇ ಜನಪದ ಹಾಡೊಂದನ್ನು ದೂರದಿಂದ ಕೇಳಿದರೆ ಸಾಕು, ಅದರ ದಾಟಿಯ ಆಧಾರದಿಂದ ಇದು ಇಂಥದೇ ಪ್ರಕಾರಕ್ಕೆ ಸೇರಿದುದು ಎಂದು ಹೇಳಿ ಬಿಡಬಹುದು. ಜನಪದದ ಎಲ್ಲಾ ಪ್ರಕಾರದ ಹಾಡುಗಳ ದಾಟಿಯಲ್ಲಿ ಅಷ್ಟೊಂದು ವಿನ್ಯಾಸ ವೈವಿಧ್ಯ ಇರುತ್ತದೆ. ಇನ್ನೊಂದು ಗಮನಾರ್ಹ ಅಂಶ ಎಂದರೆ ಒಂದೇ ಪ್ರಕಾರಕ್ಕೆ ಸೇರಿದ ಹಾಡುಗಳಿಗೆ ಹಲವಾರು ದಾಟಿ ಹಚ್ಚಿ ಹೇಳುವುದೂ ರೂಢಿಯಲ್ಲಿದೆ. ಡೊಳ್ಳಿನ ಹಾಡುಗಳನ್ನೂ ಕೋಲಾಟದ ಹಾಡುಗಳನ್ನೂ 3-4 ದಾಟಿಗಳಲ್ಲಿ ಹಾಡಬಹುದು. ಹಂತಿಯ ಹಾಡುಗಳಿಗೂ ಅನೇಕ ದಾಟಿಗಳುಂಟು. ಈ ದುಟಿಗಳು ಪ್ರಾದೇಶಿಕವಾಗಿಯೂ ಸಾಕಷ್ಟು ಭಿನ್ನತೆ ಪಡೆಯುತ್ತವೆ.

ಜನಪದ ಸಂಗೀತಕ್ಕೆ ಸಾಂದರ್ಭಿಕ ಸೊಗಸುಂಟು. ಯಾವುದೇ ಪ್ರಸಂಗದ ಹಾಡುಗಳನ್ನು ಅದೇ ಪ್ರಸಂಗದಲ್ಲಿ ಹಾಡಬೇಕು. ಆಯಾ ಪ್ರಸಂಗಕ್ಕೂ ಹಾಡಿನ ಸಾಹಿತ್ಯ ಧಾಟಿಗಳಿಗೂ ಆಂತರಿಕ ಸಂಬಧವುಂಟು. ಇವನ್ನು ಅಗಲಿಸಿ ಹಾಡಿದರೆ ಅಭಾಸವಾಗುವುದು. ಕೋಲಾಟದ ಹಾಡುಗಳನ್ನು ಹಂತಿ ಸಂದರ್ಭದಲ್ಲೂ, ಹಂತಿ ಹಾಡುಗಳನ್ನು ಬೀಸುಕಲ್ಲಿನ ಪ್ರಸಂಗದಲ್ಲೂ ಹಾಡಿದರೆ ಜನಪದ ಸಂಗೀತವನ್ನೇ ಹಾಳು ಮಾಡದಂತಾಗುತ್ತದೆ.

ಜನಪದ ಹಾಡುಗಳ ಸಮಾರು ಅರ್ಧದಷ್ಟನ್ನು ವಾದ್ಯವಿಲ್ಲದೆ ಹಾಡಲಾಗುತ್ತದೆ. ಹಂತಿ ಹಾಡು, ಬೋಲೋರಿ ಹಾಡು, ಮದುವೆ ಹಾಡು, ಬೀಸುಕಲ್ಲಿನ ಹಾಡು, ಜೋಗುಳ ಹಾಡು-ಎಲ್ಲ ಈ ಬಗೆಯವು. ಗೀಗೀ ಪದ, ಡೊಳ್ಳಿನ ಹಾಡು, ಗೊಂದಲಿಗರ ಹಾಡು, ಚೌಡಿಕೆ ಹಾಡು ಮೊದಲಾದವುಗಳು ವಾದ್ಯದೊಂದಿಗೆ ಹಾಡಲ್ಪಡುತ್ತವೆ. ಜನಪದ ಹಾಡುಗಳನ್ನು ಒಂಟಿಯಾಗಿ ಹಾಡುವುದು ಅಪರೂಪ. ಸಾಮೂಹಿಕವಾಗಿ ಹಾಡುವುದೇ ಹೆಚ್ಚು. ಸಾಮೂಹಿಕವಾಗಿ ಹಾಡುವಲ್ಲಿ ಮುಮ್ಮೇಳ, ಹಿಮ್ಮೇಳಗಳಿರುತ್ತವೆ. ಹಿಮ್ಮೇಳದವರ ಸಂಖ್ಯೆ ಮುಮ್ಮೇಳದವರಷ್ಟಿರಬಹುದು. ಅಥವಾ ಅದಕ್ಕಿಂತ ಹೆಚ್ಚಿರಬಹುದು. ಮುಮ್ಮೇಳದವರು ಹಾಡಿದ್ದನ್ನು ಹಿಮ್ಮೇಳದವರು ಪುನರುಚ್ಚರಿಸುತ್ತಾರೆ. ವಾದ್ಯ ಬಳಕೆಯ ಗೀತ ಸಂಪ್ರದಾಯದಲ್ಲಿ ಬಹುಪಾಲು ವಾದ್ಯಗಳನ್ನು ಬಾರಿಸುತ್ತಾರೆ. ವಾದ್ಯ ಬಳಕೆಯಲ್ಲಿ ಏಕತಾನತೆಯಿರುವುದಿಲ್ಲ. ಮುಮ್ಮೇಳದವರು ಹಾಡುವಾಗ ಇಳುವಾಗಿ, ಸೌಮ್ಯವಾಗಿರುವ ವಾದ್ಯಗಳು ಹಿಮ್ಮೇಳದವರು ಹಾಡುವಾಗ ಏರುಮಟ್ಟದಲ್ಲಿರುತ್ತವೆ. ಈ ಹೊಂದಾಣಿಕೆಯಲ್ಲಿ ಮುಮ್ಮೇಳದವರು ಹಾಡುವಾಗ ಸಾಹಿತ್ಯದ ಅರ್ಥ ಸ್ಪಷ್ಟತೆಗೆ ಅವಕಾಶ ದೊರೆಯುತ್ತದೆ. ಹಿಮ್ಮೇಳದವರು ಹಾಡುವಾಗ ವಾದ್ಯಗಳ ಕಲಾಪರಿಣತೆಯ ಪ್ರದರ್ಶನಕ್ಕೆ ಅವಕಾಶ ದೊರೆಯುತ್ತದೆ.

ಬಯಲಾಟವೆಂಬುದು ಅಭಿನಯ ಕುಣಿತ, ಮಾತುಗಾರಿಕೆ, ಸಂಗೀತಗಳನ್ನು ಒಳಗೊಂಡಿರುವ ಒಂದು ಸಂಕೀರ್ಣ ಕಲಾಕ್ಷೇತ್ರ. ಮುಮ್ಮೇಳ ಹಿಮ್ಮೇಳಗಳ ಮುಖಾಂತರವೇ ಇಲ್ಲಿಯ ಸಂಗೀತ ಸಾಗುತ್ತದೆ. ಬಯಲಾಟದ ಕಲಾವಿದರೂ ಅಷ್ಟೇ, ತಾವು ಹಾಡುವ ಹಾಡಿನ ರಾಗ-ತಾಳಗಳ ಹೆಸರನ್ನು ಅರಿಯದವರು. ಕೆಲವರಿಗೆ ಈ ತಿಳುವಳಿಕೆ ಅಷ್ಟಿಷ್ಟು ಇರಬಹುದು. ಈ ತಿಳುವಳಿಕೆಯೂ ಪರಂಪರಾಗತ ಕೇಳಿಕೆಯಿಂದ ಬಂದದ್ದೇ ಹೊರತು ಶಾಸ್ತ್ರೀಯವಾಗಿ ಕಲಿತದ್ದಲ್ಲ. ಅಪರೂಪಕ್ಕೆ ಬಯಲಾಟಕ್ಕಾಗಿ ಸಂಗೀತವನ್ನು ಪ್ರತ್ಯೇಕವಾಗಿ ಕಲಿತವರು ಎಲ್ಲೋ ಒಬ್ಬಿಬ್ಬರು

ಸಿಗಬಹುದು. ಶ್ರೀಕೃಷ್ಣ ಪಾರಿಜಾತ, ಯಕ್ಷಗಾನಗಳಲ್ಲಿ ಇದು ಇಂಥದೇ ರಾಗದ ಹಾಡು ಎಂದು ಗುರುತಿಸಬಹುದು. ಆದರೆ ಅದೇ ಹಾಡನ್ನು ರಂಗಕಲಾವಿದ ಹಾಡುವುದಕ್ಕೂ ಒಬ್ಬ ಶಾಸ್ತ್ರೀಯ ಸಂಗೀತಗಾರ ಹಾಡುವುದಕ್ಕೂ ಮಹದಂತರವಿದೆ. ದೊಡ್ಡಾಟ, ಸಣ್ಣಾಟದ ಅನೇಕ ದಾಟಿಗಳು, ರಾಗಗಳನ್ನು ಸ್ಪಷ್ಟವಾಗಿ ಗುರುತಿಸಲಾರದಷ್ಟು ಜಾನಪದೀಯವಾಗಿರುತ್ತವೆ. ಜನಪದ ಸಂಗೀತದ ಮೂಲ ಗುಣವಾಗಿರುವ ಸ್ವಚ್ಛಂದತೆ ಬಯಲಾಟ ರಂಗಭೂಮಿಯಲ್ಲೂ ಕೆಲಸ ಮಾಡಿದೆ. ಈ ಸ್ವಚ್ಛಂದತೆಯೇ ಕಾರಣವಾಗಿ ಶಾಸ್ತ್ರೀಯ ಸಂಗೀತಕ್ಕೆ ಹೊರತಾದ ಒಂದು ವಿಶಿಷ್ಟ ಸವಿ ಜನಪದ ಸಂಗೀತಕ್ಕಿದೆಯೆಂಬುದನ್ನು ಜನಪದ ಸಂಗೀತದ ಸಂಸ್ಕಾರವಿರುವ ಎಲ್ಲರೂ ಒಪ್ಪಿಕೊಳ್ಳುತ್ತಾರೆ.

ಪ್ರಸ್ತುತ ಜನಪದ ಸಂಗೀತದ ರೂಪ ಮೂಲವಾಸಿಯ ಸಂಗೀತ ಹಾಗೂ ಶಾಸ್ತ್ರವೇತ್ತರ ಸಂಗೀತಕ್ಕೆ ಮಧ್ಯವರ್ತಿಯಾದದ್ದೆಂದೂ ಜನಪದ ರಾಗಗಳಲ್ಲಿ ಐದಕ್ಕಿಂತ ಹೆಚ್ಚು ಉಪಯೋಗಿಸಲ್ಪಡುವುದಿಲ್ಲವೆಂದೂ ಈ ಮಿತಿಯೇ ಅದಕ್ಕೊಂದು ಅಪರೂಪದ ಮಾಧುರ್ಯ ತಂದುಕೊಟ್ಟಿದೆಯೆಂದೂ ವಿದ್ವಾಂಸರು ಹೇಳುತ್ತಾರೆ.

ನಮ್ಮಲ್ಲಿ ಜನಪದ ಗೀತ ಸಾಹಿತ್ಯ ಸಂಗ್ರಹ ತಕ್ಕಮಟ್ಟಿಗಾಗಿದೆ. ಆದರೆ ಈ ಸಾಹಿತ್ಯದ ಸಂಗೀತದ ಬಗ್ಗೆ ಬಹಳಷ್ಟು ಜನ ಆಲೋಚಿಸಲಿಲ್ಲ. ಇಂದು ಟಿ.ವಿ. ಸಿನೇಮಾಗಳ ಪ್ರಭಾವಕ್ಕೆ ಒಳಗಾಗಿ ಜನಪದ ಮೂಲಧಾಟಿಗಳು ಮರೆಯಾಗುತ್ತಿವೆ.

(ಎಸ್‌ಆರ್‌ಐ)

ಜನಪದ ಸಾಹಿತ್ಯ: ಬೀದರ ಜಿಲ್ಲೆಯ ಜನಪದ ಸಾಹಿತ್ಯದ ಸಂಗ್ರಹ ಕಾರ್ಯ ನೋಡಿದಾಗ, ಇಲ್ಲಿನವರು ಅನಂತರದಲ್ಲಿ ಸಂಗ್ರಹ ಸಂಪಾದನೆಗೆ ತೊಡಗಿದ್ದು ಕಂಡುಬರುತ್ತದೆ. ಆರಂಭದಲ್ಲಿ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯವರು, ಅನಂತರದಲ್ಲಿ ಧಾರವಾಡ ಪರಿಸರದ ವಿದ್ವಾಂಸರುಗಳು ಸಂಗ್ರಹಿಸಿದ್ದನ್ನು ನೋಡುತ್ತೇವೆ.

ಕರ್ನಾಟಕದಲ್ಲಿಯೇ ಬೀದರ ಜಿಲ್ಲೆ ತನ್ನದೇ ಆದ ಭಾಷಾ ವೈಶಿಷ್ಟ್ಯ ಹೊಂದಿದೆ. "ಶತಶತಮಾನಗಳ ಐತಿಹ್ಯ ಪಡೆದ ಬೀದರ ವಿವಿಧ ಜನಾಂಗ, ಸಂಸ್ಕೃತಿಗಳ ಸಮ್ಮಿಲನದ ಸಂಕೇತ. ಹಿಂದು, ಮುಸ್ಲಿಂ ಬಾಂಧವ್ಯದ ಕೇಂದ್ರ." ಅದರಲ್ಲೂ ಗಡಿನಾಡಾದುದರಿಂದ ಮರಾಠಿ, ತೆಲುಗು, ಉರ್ದು, ಹಿಂದಿ ಭಾಷೆಗಳಿಂದ ಮಿಶ್ರ ಸ್ವೀಕರಣಕ್ಕೊಳಗಾಗಿದೆ. ಕ್ಯಾತನಹಳ್ಳಿ ರಾಮಣ್ಣ, ಜೀ.ಶಂ. ಪರಮಶಿವಯ್ಯ ಮೊದಲಾದ ವಿದ್ವಾಂಸರು ಬೀದರ ಜಿಲ್ಲೆಯ ಜನಪದ ಸಾಹಿತ್ಯ ಸಂಕಲನವನ್ನು ಹೊರತಂದಿದ್ದು ಸ್ತುತ್ಯಾರ್ಹವಾಗಿದೆ. ಅದರಂತೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ವಿದ್ವಾಂಶರು ಪ್ರಮುಖರಾಗಿ ಬಿ.ಬಿ. ಹೆಂಡಿ, ಎಂ.ಜಿ. ಬಿರಾದಾರ, ಎಂ.ಎಸ್. ಲಠ್ಠೆ, ಡಿ.ಬಿ. ನಾಯಕ ಮತ್ತು ಬಿ.ಎಸ್. ಪೊಲೀಸ ಪಾಟೀಲ ಮೊದಲಾದವರು ಬೀದರಿನ ಜನಪದ ಸಾಹಿತ್ಯ ಸಂಗ್ರಹಿಸಿದ್ದಾರೆ. ಸಾಕಷ್ಟು ಸಂಕಲನಗಳಲ್ಲಿ ಪ್ರಕಟಿಸಿರುತ್ತಾರೆ. ಇತ್ತಿತ್ತಲಾಗಿ ಹೆಚ್. ಕಾಶೀನಾಥ ರೆಡ್ಡಿಯವರು, ದೇಶಾಂತ ಹುಡುಗಿಯವರು, ಜಿ.ಬಿ. ವಿಸಾಜಿಯವರು, ಸೋಮನಾಥ ನುಚ್ಚಾ, ಪ್ರೇಮಾ ಶಿರ್ಶೆ, ವೈಜನಾಥ ಭಂಡೆ, ಜಗನ್ನಾಥ ಹೆಬ್ಬಾಳೆ, ರಾಜೇಂದ್ರ ಯರನಾಳೆ ಅವರು, ಮ.ಮಾ. ಬೋರಾಳಕರ ಮೊದಲಾದವರು ಬೀದರ ಜಿಲ್ಲೆಯ ಜನಪದ ಸಾಹಿತ್ಯದ ಮೇಲೆ ಬೆಳಕನ್ನು ಚೆಲ್ಲಿದ್ದಾರೆ.

"ಬೀದರ ಜಿಲ್ಲೆಯ ಕಲೆಗೆ ತವರಾಗಿದ್ದಂತೆ ಜನಪದ ಸಾಹಿತ್ಯದ ಭಂಡಾರವಾಗಿದೆ. ಉಳಿದ ಜಿಲ್ಲೆಗಳಲ್ಲಿ ಲಭ್ಯವಿರುವ ಜನಪದ ಸಾಹಿತ್ಯ ಪ್ರಕಾರಗಳಾದ ಗೀತೆ, ಕಥೆ, ಗಾದೆ, ಒಗಟು, ಒಡಪು-ಮುಂತಾದವುಗಳೆಲ್ಲವೂ ಬೀದರ ಜಿಲ್ಲೆಯಲ್ಲಿ ಲಭ್ಯವಿದೆ. ಇಲ್ಲಿಯವೇ ವಿಶೇಷವಾದ ಬುಲಾಯಿ ಹಾಡುಗಳು ಸೀಗಿ ಹಾಡುಗಳು, ಪೀಡೆಯ ಹಾಡುಗಳು ತಮ್ಮ ವೈಶಿಷ್ಟ್ಯತೆ, ಸ್ವಂತಿಕೆ ಮೆರೆದಿವೆ. ತತ್ತ್ವಪದಗಳ ಪ್ರವಾಹವನ್ನೇ ಇಲ್ಲಿ ಕಾಣಬಹುದು".

ಗೀತ ಸಾಹಿತ್ಯ: ಬೀದರ ಜಿಲ್ಲೆಯ ಲಾವಣಿ ಹಾಗೂ ಗೀತೆಗಳ ಒಂದು ಕ್ರಮಬದ್ಧವಾದ ಅಭ್ಯಾಸವನ್ನು ನಡೆಸುವ ಮೊದಲ ಪ್ರಯತ್ನವನ್ನು ಕ್ಯಾತನಹಳ್ಳಿ ರಾಮಣ್ಣನವರು ಮಾಡಿರುತ್ತಾರೆ. "ಬೀದರ ಜಿಲ್ಲೆಯ ಜನಪದ ಗೀತೆಗಳು" ಶೀರ್ಷಿಕೆಯಡಿಯಲ್ಲಿ ಮೈಸೂರಿನ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ಮಾಲೆ ಅಡಿಯಲ್ಲಿ ಪ್ರಕಟಿಸಲಾಗಿದೆ (1976). ಬೀದರ ಜಿಲ್ಲೆಯಲ್ಲಿ ಮಾತ್ರ ರೂಢಿಯಲ್ಲಿರುವ ಬುಲಾಯಿ ಹಾಡುಗಳ ಸಂಗ್ರಹಣೆ ಪ್ರಕಟಣೆ ಆಗಿದೆ. ಗೋರಟಾದ ವಿರೂಪಾಕ್ಷ ಸ್ವಾಮಿಯವರು ತಮ್ಮ ಶ್ರೀ ಪಂಡಿತರುದ್ರ ಸಂಘ ಗೋರಟಾದಿಂದ "ಬುಲಾಯಿ ಪದ" ಎಂದು ಪ್ರಕಟಿಸಿದ್ದಾರೆ (1982). ಆ ನಂತರ ಈ ಭಾಗದವರೆ ಆಗಿರವ ಜಗನ್ನಾಥ ಹೆಬ್ಬಾಳೆಯವರು "ಬೀದರ ಜಿಲ್ಲೆಯ ಬುಲಾಯಿ ಹಾಡುಗಳು" ಎಂದು 30 ಹಾಡುಗಳ ಸಂಕಲನವನ್ನು ಸೂಕ್ತ ಪ್ರಸ್ತಾವನೆಯೊಂದಿಗೆ ಪ್ರಕಟಿಸಿದ್ದಾರೆ (1996). ಅಲ್ಲದೆ ತಮ್ಮ ಎಂ. ಫಿಲ್ ಅಧ್ಯಯನವನ್ನು "ಜನಪದ ಗೀತೆಗಳು (ಬೀದರ ಜಿಲ್ಲೆಯ) ಒಂದು ಸಾಂಸ್ಕೃತಿಕ ಅಧ್ಯಯನ" ಎಂದೇ ಮಾಡಿದ್ದಾರೆ. 2001ರಲ್ಲಿ ಡಿ.ಬಿ. ನಾಯಕರವರು ಪ್ರಕಟಿಸಿದ 'ಬುಲಾಯಿ ಹಾಡುಗಳು' ಬೀದರಿನ ಬುಲಾಯಿ ಹಾಡುಗಳ ಸಮಾಜೋ-ಸಾಂಸ್ಕೃತಿಕ ಅಧ್ಯಯನ ಕುರಿತಾದು ದಾಗಿದೆ. ಇಲ್ಲಿಯೂ ದೀರ್ಘವಾದ ಪ್ರಸ್ತಾವನೆ ಇದ್ದು ಓದುಗರಿಗೆ ಸಹಾಯಕಾರಿಯಾಗಿದೆ. ರಾಜೇಂದ್ರ ಯರನಾಳೆಯವರು "ಶೀಗಿ ಹಾಡುಗಳು" ಎಂದು ಪ್ರಕಟಿಸಿದ್ದಾರೆ. ಔರಾದ್‌ನ ಜಯದೇವಿ ತೇಲಿಯವರು 'ಬೀದರ ಜಿಲ್ಲೆ ಸಂಪ್ರದಾಯದ ಹಾಡುಗಳ'ನ್ನು ಸಂಗ್ರಹಿಸಿದ್ದಾರೆ.

ಸಂಪ್ರದಾಯದ ಹಾಡುಗಳಲ್ಲಿ ಹೆಣ್ಣುಮಕ್ಕಳ ಹಾಡುಗಳೇ ಹೆಚ್ಚಾಗಿದ್ದು, ಅವುಗಳಲ್ಲಿ ಬೀಸುವ ಪದಗಳು, ಶೀಗಿ ಪದಗಳು, ಪಂಚಮಿ, ಸೋಬಾನೆ ಪದಗಳು, ಭಾಸಣಗಿ ಪದ, ಹಾಲಗುಗ್ಗಳ ಪದ, ಎಣ್ಣಿ ಹಚ್ಚುವ ಪದ, ಭೂಮದ ಪದ, ಮದುಮಗಳನ್ನು ಮನೆತುಂಬಿಸುವ ಪದ, ಕುಬುಸದ ಪದ, ಜೋಗುಳ ಪದ, ದೇವರ ಪದ, ಸಾಲಗಿರಾ ಪದ (ಹುಟ್ಟು ಹಬ್ಬದ ಪದ) ಬುಟ್ಟಿ ಪದ, ಐರಣಿ ಪದ-ಹೀಗೆ ಅನೇಕ ಸಂಪ್ರದಾಯಗಳನ್ನೆಲ್ಲ ಹೇಳುವ ಹಾಡುಗಳಿವೆ. ಬುಲಾಯಿ ಪದಗಳ ಗುಂಪಿನಲ್ಲಿ ಹಾಡುವ ಪದಗಳಾಗಿವೆ. ಒಬ್ಬಳು ಹಾಡಿದ್ದಕ್ಕೆ ಹಿಂದಿನವೂ ದನಿಗೂಡಿಸುತ್ತಾರೆ. ಬುಲಾಯಿ ಹಾಡಿನ ಸಂಗ್ರಹಗಳಲ್ಲಿ ಒಂದು ಪದ ಹೀಗಿದೆ.

ಗೌಡರ ಕಟ್ಟಿಮ್ಯಾಲ ಔಡಲ ಬಿತ್ತಿದಂಗ
ವಡ್ಡರ ನಾಗಮ್ಮ ನನ್ನ ಗೆಳದೆಕ್ಕಾ
ಹೊಯಿಂದಲ್ಯೆಕಾ

ಕೊನೆಯ ಹೊಯಿಂದಲ್ಯೇಕಾ ಎನ್ನುವುದನ್ನು ಹಿಂದಿನವರು ಹೇಳುತ್ತಾರೆ. ಇದನ್ನು "ಹೊಯಿಂದಲೇ ಎಕ್ಕಾ" (ಹೌದಲೆ ಅಕ್ಕಾ) ಎಂಬಂತೆ ಬರೆದಿದ್ದರೆ ಅರ್ಥಪೂರ್ಣವಾಗುತ್ತದೆ. ಇಂದಿನ ಸಿಮೆಂಟ ಕಾಂಕ್ರಿಟ ಮಾಳಿಗೆ ಬರುವ ಮುಂಚಿನ ಹಳೆಕಾಲದ ಗಚ್ಚಿನಮಾಳಿಗೆ ಸಿದ್ಧಪಡಿಸುವಲ್ಲಿನ "ಸೆಡಿ" (ಸೇಡಿ) ಕಟ್ಟುವ ಪದಗಳು (ಧಮ್ಮಸದ ಪದಗಳು) ಕೆಲಸದ ಆಯಾಸವನ್ನು ತಣಿಸುತ್ತಲೇ ಕೇಳುಗರ ಮನಸ್ಸನ್ನು ಉಲ್ಲಸಿತಗೊಳಿಸುತ್ತವೆ.

ಕೋಲಾಟದ ಪದಗಳು ಸವಾಲ –ಜವಾಬ ಮಾದರಿಯಲ್ಲಿದ್ದು ದಿನಗಟ್ಟಲೇ ನಡೆಯುತ್ತಿದ್ದವು. ರಾತ್ರಿ ಇಡೀ ಆಡುವ ಆಶುಕವಿತೆ ಮಾದರಿಯ ಕೋಲಾಟದ ಪದಗಳು ಸಣ್ಣ ಹಳ್ಳಿಖೇಡ ಪ್ರದೇಶದಲ್ಲಿ ಪ್ರಸಿದ್ಧಿ ಪಡೆದುಕೊಂಡಿದ್ದು, ಸೋಲಿಲ್ಲದ ಸರದಾರರೆನಿಸಿಕೊಂಡಿದ್ದರು. 'ಭೂತೇರ ಪದಗಳು' ಅಂಬಾಭವಾನಿ ಭಕ್ತರು ಹಾಡುವ ಎಲ್ಲಮ್ಮನ ಕಾವ್ಯವನ್ನೇ ಹೆಚ್ಚಾಗಿ ಹೇಳುವ ಹಾಡುಗಳಾಗಿವೆ.

ಮೊಹರಂ ಹಾಡುಗಳಲ್ಲಿನ ರಿವಾಯತ್ ಪದಗಳು ಕನ್ನಡ ಲಾವಣಿ ಸಾಹಿತ್ಯಕ್ಕೆ ಒಂದು ಹೊಸ ಕೊಡುಗೆ. ಇಲ್ಲಿನ ಲಾವಣಿಗಳಲ್ಲಿ ಹಿಂದು ಮಹಮದೀಯರ ನಡುವಿನ ಮಧುರ ಸಾಮರಸ್ಯವನ್ನು ಕಾಣಬಹುದು. ಇಲ್ಲಿನ ಹಾಡುಗಳಲ್ಲಿ ಎಲ್ಲ ಧರ್ಮದವರೂ ಆದರಿಸಬಹುದಾದ ಲೌಕಿಕ ಗುಣವನ್ನು ಉಳ್ಳ ರಚನೆಗಳು ಕಂಡುಬರುತ್ತವೆ. 'ಕುರುಡ ಯಾಕ ಬಂದು ಕುಂತಾನ', 'ಮನಿಯೆಲ್ಲ ನೆತ್ತರ' ಅತ್ಯಪೂರ್ವ ಕಥಾ ವಸ್ತುವಿನಿಂದ ಕೂಡಿದ್ದು, ನಿಷ್ಕಪಟ ಸ್ನೇಹದ ಪರಾಕಾಷ್ಠೆಯನ್ನು ಚಿತ್ರಿಸುತ್ತದೆ. ಇಲ್ಲಿ ಪೋಲೇ ಅಥವಾ ಅಲಾಯಿ ಕುಣಿತದ ಹಾಡುಗಳೆಂದು ಕರೆಯುತ್ತಾರೆ.

ಬೀದರ ಜಿಲ್ಲೆಯ ಗೀತ–ಸಾಹಿತ್ಯದಲ್ಲಿ ಪ್ರಮುಖವಾದುದು. "ತತ್ತ್ವಪದ ಸಾಹಿತ್ಯ". 18 ನೆಯ ಶತಮಾನದಿಂದ ಈಚೆಗೆ ಈ ಜಿಲ್ಲೆಯಲ್ಲಿ ಖ್ಯಾತಿಗೊಂಡ ಮದನೂರಿನ ಸಿದ್ದಲಿಂಗದೇವರು, ನಾವದಗಿ ರೇವಪ್ಪಯ್ಯ, ಕರ್ಕನಳ್ಳಿಯ ಬಕ್ಕಪ್ರಭು, ಮಾಣಿಕನಗರದ ಮಾಣಿಕಪ್ರಭು, ಉದಗೀರ ರಾಚೋಟಪ್ಪ, ಹುಡುಗಿಯ ಕರಬಸಪ್ಪ, ಹಾರಕೂಡದ ಚೆನ್ನಬಸವ ಶಿವಯೋಗಿಗಳು ಕಾವ್ಯ ರಚನೆಯ ಪ್ರೇರಕ ಶಕ್ತಿಯಾದರು. ಅದರಿಂದಾಗಿ 19 ನೇಯ ಶತಮಾನದಿಂದ ಈಚೆಗೆ ಬೀದರ ಜಿಲ್ಲೆಯಲ್ಲಿ ಭಜನೆ ಮತ್ತು ತತ್ತ್ವಪದಗಳ ಮಹಾಪೂರವೇ ಹರಿದುಬಂದಿತು.

ಮಾಣಿಕಪ್ರಭು ಮಹಾರಾಜರು, ನಿಜಲಿಂಗ ಭದ್ರೇಶ್ವರರು, ಮಡಿವಾಳಶೆಟ್ಟಿ ಕೆಂಚಾ, ಲಾಡ ಮದನಸಾ ಕೊಳ್ಳೂರು, ವೀರಭದ್ರಪ್ಪಾ, ಕೊಳ್ಳೂರು ಹುಸನಾಸಾಬ, ಮಂಗಲಗಿ ನನ್ನಾಸಾಬ, ಮರಕುಂದಿ ಬಸವಣ್ಣೆಪ್ಪ, ಆಣದೂರಿನ ಜವರಸಾಬ, ಬೋರಗಿಯ ರೆಹಮಾನ್‌ಸಾಬ, ಧುಮ್ಮನಸೂರಿನ ಸಿದ್ಧಪ್ರಭು, ಶಿಲ್ಲಪ್ಪಕವಿ ಚಿಡಗುಪ್ಪ, ಮಂಕಾಳ ಹಣಮಂತಪ್ಪಾ, ಪಂಚಶೀಲಗವಾಯಿ ಕಾಶಿನಾಥ, ಪಂಚಾಕ್ಷರಿ ಗೌಡಗಾಂವ, ಬಾಬಶೆಟ್ಟಿ ಮಂಡಾಳಕರ, ಹುಡುಗಿ ಗುರುಪಾದಪ್ಪಾ, ಶಿವರೆಡ್ಡಿ, ಹಾರಕೂಡದ ಬಸಣ್ಣಪ್ಪ ಮತ್ತು ಶಾಂತಣ್ಣ, ಗುಂಡಮ್ಮಜ್ಜಿ (ಮಹಿಳಾ ತತ್ತ್ವಪದಗಾರ್ತಿ) ಅಷ್ಟೂರಿನ ನರಸಪ್ಪ ಕವಿ ನಾವದ–ಗಿಯ ನಾಗಲಿಂಗ ಕವಿಗಳು ತತ್ತ್ವಪದ ಸಾಹಿತ್ಯ ರಚಿಸಿದ ಪ್ರಮುಖರು.

ಮುಸ್ಲಿಂ ಕವಿಗಳು ಅಚ್ಚ ಕನ್ನಡದಲ್ಲಿ ಬೀದರಿನ ಆಡುನುಡಿ ಬಳಸಿ, ತತ್ತ್ವಪದಗಳನ್ನು ಹೇರಳವಾಗಿ ರಚಿಸಿ ಹಾಡಿದ್ದು ಈ ಜಿಲ್ಲೆಯ ಗೌರವ ಹಾಗೂ ವೈಶಿಷ್ಟ್ಯವಾಗಿದೆ. ಉರ್ದುವನ್ನು ಶ್ಲೋಕ ರೀತಿಯಲ್ಲಿ, ತಮ್ಮ ಹಾಡುಗಳಲ್ಲಿ ಬಳಸಿ ಅಂದಿನ ರಾಜಭಾಷೆಗೆ ಗೌರವ ತೋರಿಸಿದ್ದು ಧುಮ್ಮನಸೂರಿನ ಸಿದ್ಧಪ್ರಭು ಮತ್ತು ನಿಡವಂಚಿಯ ನಿಜಲಿಂಗ ಭದ್ರೇಶ್ವರರ ರಚನೆಗಳಲ್ಲಿ ಕಂಡುಬರುತ್ತದೆ.

ಇಂದಿಗೂ ತತ್ತ್ವಪದಗಳನ್ನು ಹಾಡುತ್ತ ಕಾಪಾಡಿಕೊಂಡು ಬಂದವರಲ್ಲಿ ಲಾಲಪ್ಪ ಗುಂಡಪ್ಪ ಚಟ್ನಳ್ಳಿ, ಮಚ್ಛೇಂದ್ರನಾಥ ಸೋನಕಾಂಬಳೆ, ಪರೇಗಬಾಯಿ ಸೋನಕಾಂಬಳೆ, ಮಲ್ಲಯ್ಯಸ್ವಾಮಿ ಚಂದಾಪೂರ, ಸಂಗಪ್ಪ ಕರಡ್ಯಾಳ ಮೊದಲಾದವರನ್ನು ಹೆಸರಿಸಬಹುದು.

ಹರದೇಶಿ–ನಾಗೇಶಿ ಮಾದರಿಯ ಕಲ್ಗಿ–ತುರಾಯಿ ಅಥವಾ 'ಲಾವಣಿಗಳು' ಬೀದರನಲ್ಲಿ ಸಾಕಷ್ಟು ಜನಪ್ರಿಯವಾಗಿವೆ. ಪುರಾಣ, ಇತಿಹಾಸದ ಅಂಶಗಳೊಂದಿಗೆ ಲಾವಣಿಗಳು ಕಥನಗೀತೆಗಳಾಗಿವೆ. ಹರಿಶ್ಚಂದ್ರ ರಾಜನ ಸಂಪೂರ್ಣ ಕತೆಯುಳ್ಳ ದೀರ್ಘ ಲಾವಣಿಗಳು ಇಲ್ಲಿವೆ.

ಗದ್ಯ ಸಾಹಿತ್ಯ: ಗದ್ಯ ಸಾಹಿತ್ಯದಲ್ಲಿ ಮುಖ್ಯವಾದುದು ಕತೆ. ಜನಪದರ ಕತೆಗಳು ಕೇಳಲು ಅದ್ಭುತವಾಗಿದ್ದು ನೀತಿಮಾತುಗಳನ್ನು, ಬದುಕಿನ ಸತ್ಯವನ್ನು ಹೇಳುವುದೇ ಕತೆಗಳ ಆಶಯವನ್ನಾಗಿಟ್ಟುಕೊಂಡಿರುತ್ತದೆ. ಬೀದರ ಜಿಲ್ಲೆಯ ಜನಪದ ಕತೆಗಳ ಸಂಗ್ರಹವಾಗಿದ್ದು ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾದಿಂದ ಪ್ರಕಟವಾಗಿರುತ್ತದೆ. ಇಲ್ಲಿನ ಭಾಷೆ ಗೊತ್ತಿಲ್ಲದವರಿಗೆ ಕತೆಗಳು ಥಟ್ಟನೇ ಅರ್ಥವಾಗುವುದಿಲ್ಲ. ಉದಾ: ಮೂಗಾರು, ರಗಡ, ವಾರಗೇರು, ಶೆಟಗೋ, ಚುಕ್ಕೋಳ, ನುಚ್ಚ ಅಂಬ್ಲಿ, ಹುಳಬಾನ, ಖ್ಯಾಲ, ಎಕದಂ, ನಸೀಬ, ಗರೀಬ, ಮಸ್ತ, ಪ್ಯಾಲಿ, ಬೋಳಿ, ಮುಂಡಾಮೋಚು– ಹೀಗೆ ಹಿಂದಿ, ಉರ್ದು, ತೆಲುಗು, ಮರಾಠಿ ಭಾಷೆಯ ಪದಗಳೆಲ್ಲವೂ ಕನ್ನಡದಲ್ಲಿ ಸೇರಿದ್ದು ಕತೆಗಳುದ್ದಕ್ಕೂ ಬಳಕೆಯಾಗಿವೆ.

ಕತೆಗಳಲ್ಲದೆ ಗಾದೆ, ಒಗಟು, ಒಡಪುಗಳಿಗೂ ಕೊರತೆಯಿಲ್ಲ. ಗಾದೆಗಳ ಭಾಷೆ ಬಹಳ ಸ್ವಾರಸ್ಯಕರವಾಗಿದೆ. 'ಕತ್ತಿಗಿ ಲತ್ತಿ ಪೆಟ್ಟು', 'ಮನುಷ್ಯಾಗ ಮಾತಿನ ಪೆಟ್ಟು', 'ಕರದು ಮಗಳ ಕೊಟ್ರ ಅಳ್ಯಾಗ ಮಳ್ಳ ರೋಗ ಎದ್ದೀತು', 'ಖೌಟ ಖೊಬ್ರಿ ಜಿಗುಟ ಬೆಲ್ಲ', 'ಕುಣಿಲಾಕ್ ಬರಲ್ದರೆ ಅಂಗಳ ವಂಕ ಅಂದೀಲಂತ' ಇತ್ಯಾದಿ. 'ಒಗಟುಗಳು ವೈಶಿಷ್ಟ್ಯ' ಪೂರ್ಣವಾಗಿವೆ. 'ಬೆನ್ನೀಲೆ ತಿಂತದ ಸುತ್ತ ಸುರಸತದ' (ಬೀಸಕಲ್ಲು) 'ಇಟೀಟೆ ಪಾರಾ ಕುಂಡ್ಯಾಗದಾರ' (ಸಜಿದಾರ), 'ಕಂಚಕ ಮಾನ, ಬೆಳ್ಳಿ ವಿಮಾನ ಅದರಾಗ ಕುಂತಾನ ಕರಿ ಜವಾನ' (ಚಿತಾಫಲಹಣ್ಣು)

ಒಡಪುಗಳು: ಹಗ್ಗದಲೆ ಹೊಡದ್ರ ಮಗ್ಗಲಕ್ ಬರ್ತಾಳ,

ನಮ್ಮಾರೆ ಥಡೀ ಥೋತರ ಜರಿರುಮಾಲ ಹತ್ತ ಬಳ್ಳಾಗ (ಬೆರಳಲ್ಲಿ) ಹತ್ತ ಉಂಗುರ ಧರಿಸ್ಯಾರ/ನ, ನಕನ್ನ.... ಧೊರಿ/ಸೆಟ್ಟಿ/ರಾಯ ಇತ್ಯಾದಿ ಗಂಡ ಅಥವಾ ಹೆಂಡತಿಯ ಹೆಸರು ಹೇಳಲು ಬಳಸುವ ಒಡಪುಗಳು ನಗಿಸುವಂತೆ ಇವೆ.

ದೃಶ್ಯ ಕಲೆಯ ಸಾಹಿತ್ಯ: ಬೀದರ ಜನಪದ ಸಾಹಿತ್ಯದಲ್ಲಿ ಅತ್ಯಮೂಲ್ಯ ಭಾಗ ದೊಡ್ಡಾಟ ಸಣ್ಣಾಟಗಳದು. ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಬಯಲಾಟಗಳಿಗೆ ಪರಂಪರೆ ಇದೆ. ಹಳ್ಳಿಗಳಲ್ಲಿ ಇವುಗಳ ಪ್ರಯೋಗ ನಡೆದು ಜನಪದರ ಜ್ಞಾನದ ಮಟ್ಟವನ್ನು, ಕಲೆಯ ರುಚಿಯನ್ನು ಉಳಿಸಿ ಬೆಳೆಸಿವೆ.

ದೊಡ್ಡಾಟದ ಸಣ್ಣ ರೂಪವೇ ಸಣ್ಣಾಟ. ಹೆಸರಿಗೆ ತಕ್ಕಂತೆ ಎಲ್ಲ ಅರ್ಥದಲ್ಲೂ ಇದು ಸಣ್ಣಾಟ. ಕಥಾವಸ್ತು, ಸಂಗೀತ, ನೃತ್ಯ, ವೇಷಭೂಷಣ, ರಂಗದ ರಚನೆ ಇತ್ಯಾದಿ ಎಲ್ಲ ರೀತಿಯಿಂದ ಸರಳವಾಗಿರುತ್ತದೆ. ಹೆಚ್ಚು ಆಡಂಬರವಿಲ್ಲದೆ, ಖರ್ಚಿಲ್ಲದೆ ಮು–ಗಿಯುವ ಆಟವಾಗಿದೆ. ದೊಡ್ಡಾಟಗಳಲ್ಲಿ ವೀರರಸ ಪ್ರಧಾನವಾಗಿದ್ದರೆ ಸಣ್ಣಾಟಗಳಲ್ಲಿ ಭಕ್ತಿ, ಶೃಂಗಾರ, ಹಾಸ್ಯರಸಗಳು ಪ್ರಧಾನವಾಗಿದೆ.

ಸಣ್ಣಾಟಗಳಲ್ಲಿ 'ಡಪ್ಪು' (ಒಂದು ಚರ್ಮವಾದ್ಯ) ಬಳಸುವುದ ರಿಂದ ಡಪ್ಪಿನಾಟಗಳೆಂದು ಇವುಗಳನ್ನು ಕರೆಯಲಾಗುತ್ತದೆ.

ಬೀದರ ಜಿಲ್ಲೆಯಲ್ಲಿ ಸಣ್ಣಾಟಗಳನ್ನು ರಚಿಸಿದವರಲ್ಲಿ ಮುಖ್ಯರುಗಳು ಕಾಲಕ್ರಮವಾಗಿ ಹೀಗಿರುತ್ತಾರೆ.

1) ಅಂಬಲಗಿ ಜಗದೇವಪ್ಪ 19 ನೇ ಶತಮಾನದ ಪೂರ್ವಾರ್ಧದಲ್ಲಿದ್ದು 'ಚಿತರಂಗಿ', ಶುಕಮುನಿ' ಮತ್ತು 'ಪ್ರಭುಲಿಂಗ' ಎಂಬ ಮೂರು ಸಣ್ಣಾಟಗಳನ್ನು ರಚಿಸಿದ್ದಾರೆ. ಇವರ ಅಂಕಿತನಾಮ 'ಅಂಬಲಗಿ ಶಂಭ'. 2) ಇದೇ ಕಾಲದ ಧಮ್ಮಣಸೂರಿನ ಸಿದ್ಧಪ್ರಭುಗಳು ಭೂಕೈಲಾಸ ಮತ್ತು 'ಚಂದ್ರ ಶಿರೋಮಣಿ' ಎಂಬ ಎರಡು ಸಣ್ಣಾಟಗಳನ್ನು ರಚಿಸಿರುತ್ತಾರೆ. ಇದನ್ನು ಎಂ.ಎಸ್. ಲಠ್ಠೆಯವರು 1983 ರಲ್ಲಿ ಸಂಪಾದಿಸಿ ಪ್ರಕಟಿರುತ್ತಾರೆ. 3) ಬೆಳಕೇರಿ ತುಕಾರಾಮ, ನಂದಿಕೇಶ್ವರ ಅಂಕಿತದಿಂದ 'ಸಾರಂಗವಾರ' ರಚಿಸಿದ್ದಾರೆ. ಇವರ ಕಾಲ 1893 ರಿಂದ 1964. 4) 1896–1979 ರವರೆಗಿದ್ದ ಖೇಡ ತುಕಾರಾಮ ಅವರು 'ಪಾರ್ವತಿ' ಅಂಕಿತದಿಂದ ಕಬೀರದಾಸ, ವಾಲ್ಮೀಕಿ ಋಷಿ ಎಂಬ ಸಣ್ಣಾಟಗಳನ್ನು ರಚಿಸಿದ್ದಾರೆ. *(ಸಿಜೆಎಂ)*

ಜನವಾಡ: ಒಂದು ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರ. ಬೀದರ ನಗರದಿಂದ 12 ಕಿ.ಮೀ. ದೂರದಲ್ಲಿರುವ ಮಹತ್ವದ ಊರು. ಮೊದಲು ತಾಲ್ಲೂಕಾ ಸ್ಥಳವಾಗಿತ್ತು. ಎತ್ತಿನ ಮಾರಾಟದ ಸಂತೆ ಸೇರುವುದರಿಂದ ಜನವಾಡ ಎಂಬ ಹೆಸರು ಬರಲು ಕಾರಣವಾಗಿದೆ ಎಂದು ಅಲ್ಲಿನ ಜನ ಹೇಳುತ್ತಾರೆ.

ಸಾಂಸ್ಕೃತಿಕ ಚಟುವಟಿಕೆಗಳು: ಹೋಳಿ ಹುಣ್ಣಿಮೆ, ಯುಗಾದಿ ಹಬ್ಬಗಳಲ್ಲಿ ಕೋಲಾಟ ಆಡುವುದು ಇದೆ, ರಾಮಾಯಣ, ಮಹಾಭಾರತ, ಪುರಾಣಗಳುಳ್ಳ ಕತೆಗಳು ಒಳಗೊಂಡು ಬಣ್ಣ ಬಳಿದುಕೊಂಡು ಕೋಲಾಟ ಆಡುವುದರಲ್ಲಿ ತುಂಬಾ ನಿಪುಣರು. ಮೋಹರಂ ಹಬ್ಬವು ತುಂಬಾ ವಿಜೃಂಭಣೆಯಿಂದ ಆಚರಿಸುತ್ತಾರೆ. ಹಲಗೆ ಜೋರಾಗಿ ಬಾರಿಸಿದಷ್ಟು ಫೀರ್ ಮೈಯಲ್ಲಿ ಆರ್ಭಟಿಸುತ್ತಿರುತ್ತಾನೆ. ಆ ಸಮಯದಲ್ಲಿ ಊರಿನ ಜನ ತಮ್ಮ ಸಮಸ್ಯೆ, ಊರಿನ ಸಮಸ್ಯೆ ಕೇಳಿಕೊಂಡು ನಿವಾರಣೆ ಮಾಡಿಕೊಳ್ಳುತ್ತಾರೆ. ಕಾರ ಹುಣ್ಣಿಮೆ ಲಿಂಗಾಯತರು ಆಚರಿಸಿದರೆ ಹ್ವಾಳ ಮರಾಠಾ ಜನ ಆಚರಿಸುತ್ತಾರೆ. ಎತ್ತು, ಆಕಳ, ಹೋರಿ, ಕರುಗಳಿಗೆ ಸ್ನಾನ ಮಾಡಿಸಿ ಬಣ್ಣ ಹಚ್ಚಿ ಬೆಲ್ಲ ತಿನಿಸಿ ಝುಲಾ ಹಾಕಿ ಶೃಂಗಾರಗೊಳಿಸಿ ಮೆರೆವಣಿಗೆ ಮಾಡುತ್ತಾರೆ. ದನದ ಕೊಟ್ಟಿಗೆ ಕೂಡಾ ಸಾರಿಸಿ ಸೂರ್ಯ, ಚಂದ್ರ ಬರೆದು ತೋರಣ ಕಟ್ಟಿ ಈ ಕಾರ ಹುಣ್ಣಿಮೆ ತುಂಬಾ ಚೆನ್ನಾಗಿ ಆಚರಿಸುತ್ತಾರೆ. ಹೋಳಿ ಹಬ್ಬಕ್ಕೆ ಹೆಣಮಾಡಿ ಬಂಡಿಯೊಳಗೆ ಕುಳಿತು ಅಳುಕೋಂತ, ಬಾಜಾ ಹಚ್ಚಿಕೊಂಡು ಬೊಬ್ಬೆ ಹಾಕುತ್ತ ಹಬ್ಬ ಆಚರಿಸುತ್ತಾರೆ. ಕಾರ್ಯ ಹಬ್ಬ ಎಂತಲೂ ಮಾಡುತ್ತಾರೆ. ಅವತ್ತಿನ ದಿವಸ ಕುರಿ, ಕೋಣ, ಕಡಿಯುವುದು ಮಾಡುತ್ತಾರೆ ಮೂರು ವರ್ಷಕ್ಕೆ ಒಂದು ಸಲ ಈ ಹಬ್ಬ ಮಾಡುತ್ತಾರೆ. ಈ ಹಬ್ಬ ಮಾಡಿದ ವರ್ಷ ಎಳ್ಳ ಅಮವಾಸ್ಯೆ ಮಾಡುವುದಿಲ್ಲ.

18ನೆಯ ಶತಮಾನದಲ್ಲಿ ಬಾಳಾರಾಯ ಮತ್ತು ರುಸ್ತುಮ್‌ರಾಯ್ ಜಾಗೀರದಾರರು ಎಂಬವರನ್ನು ಮರಾಠಿಗರು ಬಂಧನದಲ್ಲಿಟ್ಟಿದ್ದರು. ಇವರನ್ನು ಹತ್ತನೆಯ ಸಿಖ್‌ರ ಗುರು ಗುರುಗೋವಿಂದ ಸಿಂಗ್ ಬಿಡುಗಡೆ ಮಾಡಿಸಿದರು. ಈ ಗುರುವಿನ ಜೊತೆಗೆ ಮೈ ಭಾಗೋಜಿ ಎಂಬ ಸಿಖ್ ಮಹಿಳೆಯು ಬಂದಿದ್ದಳು. ಆಕೆಯ ಅಂತ್ಯಕ್ರಿಯೆ ಆದನಂತರ ಅವಳ ಇಚ್ಚೆಯಂತೆ ಚಿತಾಭಸ್ಮವನ್ನು ನಾಂದೇಡಿಗೆ ಒಯ್ದು ಗುರು ಗೋವಿಂದರ ಗುರು ದ್ವಾರದಲ್ಲಿ ಇರಿಸಲಾಯಿತು. ಗುರು ದ್ವಾರದಲ್ಲಿ ದಿನಾಲು ಪಠಣ ಮಾಡುತ್ತಿದ್ದಾರೆ. ಜನವಾಡದಲ್ಲಿಯ ಗುರುದ್ವಾರಕ್ಕೆ ಭಾಗುಮಾತಾ ಮಂದಿರವೆಂತಲೂ ಕರೆಯುತ್ತಾರೆ.

ಶಿವಾ ಪಾರ್ವತಿ ಮಂದಿರ ಕೂಡಾ ಇವೆ. ಗರ್ಭ ಗುಡಿಯಲ್ಲಿ ತುಂಬಾ ತಗ್ಗು ಇದೆ. ಮಳೆ ಬಾರದಿದ್ದಾಗ ಬುಟ್ಟಿ ಜಾತ್ರೆ ಮಾಡಿದಾಗ ಈ ಗುಡಿ ಒಳಗೆ ಊರಿನ ಜನ ಕೂಡಿ ನೀರು ತುಂಬುತ್ತಾರೆ. ಶಿವಲಿಂಗದ ಮೇಲೆ ನೀರು ಬಂದಕೂಡಲೇ ನೈವೇದ್ಯ ಹಿಡಿದು ನೀರು ಹೋಗಲು ದಾರಿ ಮಾಡಿ ಕೊಡುತ್ತಾರೆ. ವರ್ಷಕ್ಕೊಮ್ಮೆ ಖಾಂಡ ಕೂಡಾ ಮಾಡುತ್ತಾರೆ.

ಇಲ್ಲಿ ಬಸವೇಶ್ವರ, ಪಾಂಡುರಂಗ, ಮಾಣಿಕ ಪ್ರಭು, ಮೌನೇಶ್ವರ ಮಂದಿರಗಳು ಇವೆ. ಮಾಣಿಕ ಪ್ರಭು ಮಂದಿರ ವಿಶ್ವಕರ್ಮದವರು ಕಟ್ಟಿದ್ದಾರೆ. ವಿಠಲ ರುಕ್ಮಿಣಿ ದಂಡಿ (ಪಲ್ಲಕ್ಕಿ ಮೆರವಣಿಗೆ) ಆಷಾಢ ಹುಣ್ಣಿಮೆ ದಿವಸ ಈ ಮೆರವಣಿಗೆ ಮಾಡುತ್ತಾರೆ. ಗಡಿಗೆ ಒಳಗೆ ಮೊಸರು ತುಂಬಿ, ಅಳ್ಳು, ನಾಬತ್ತು (ಕಲ್ಲು ಸಕ್ಕರೆ) ಅದರೊಳಗೆ ಹಾಕಿ ಅಗಸಿದ್ದಾರಕ್ಕೆ ಕಟ್ಟಿ ಒಡೆಯುತ್ತಾರೆ. ಹಾಗು ಎಲ್ಲಾ ಜನರಿಗೂ ಆ ಪ್ರಸಾದ ಹಂಚುತ್ತಾರೆ.

ಇಲ್ಲಿ ಎರಡು ಭಾರಂಬಾವಿ ಇವೆ. ಈಗಲೂ ಅಲ್ಲಿಂದ ನೀರು ತರುತ್ತಾರೆ. ಮಂಕಣಿ ಹಾಕಿ ನೀರು ತರುತ್ತಾರೆ ಲಿಂಗಾಯತ, ಮರಾಠ, ಕುರುಬರು ಮಾದಿಗರು, ಹೊಲೇರು, ಮೀನುಗಾರರು, ಕೋಳಿ ಜನಾಂಗ (ಕಬ್ಬಿಗೇರ್), ಕ್ರಿಶ್ಚನ್‌ರು ಎಲ್ಲ ಜಾತಿ ಜನರು

ಇಲ್ಲಿದ್ದಾರೆ. ಭೇದ ಭಾವವಿಲ್ಲದೆ ಬಸವಣ್ಣನ ಗುಡಿಯೊಳಗೆ ಸೋಮವಾರಕ್ಕೊಮ್ಮೆ ಭಜನೆಮಾಡುತ್ತಾರೆ. ಬಸವ ಜಯಂತಿ ತುಂಬಾ ವಿಜೃಂಭಣೆಯಿಂದ ಆಚರಿಸುತ್ತಾರೆ. ಪೂರ್ವದಲ್ಲಿ ಸಿದ್ಧತಾಲೀಮು, ಮನಿಯಾರ್ ತಾಲೀಮ್ ಇವರು ಮೊದಲು ಮಕ್ಕಳಿಗೆ ವಿದ್ಯಾಭ್ಯಾಸಮಾಡಿಸುತ್ತಿದ್ದರು. ಮುಸ್ಲೀಮರ ಪವಿತ್ರ ಸಂತರು ಹಸೇನ್ ಹುಸೇನ್ ಪೀರ್ ಕೂಡಿಸುತ್ತಾರೆ. ಸರ್ಜಾ ಮೆರವಣಿಗೆ, ಝುಲ್ಫೇಕರ ಮೆರವಣಿಗೆ ಎಂತಲೂ ಕರೆಯುತ್ತಾರೆ. ಅಂದರೆ ಹುಲಿ ಪಂಜೆ ಹಾಕಿಕೊಂಡು, ಬಾಣಿನ ತಂಡ ಆಯುಧ ಬಟ್ಟೆಹಾಕಿ ಸಜಾಯಿಸುತ್ತಾರೆ ಇದೇ ಸರ್ಜಾ ಮೆರವಣಿಗೆ.

(ಎಸ್‌ಬಿಎಂ)

ಜಲದುರ್ಗ: ನಿಸರ್ಗ ನಿರ್ಮಿತ ರಮಣೀಯ ಸ್ಥಳ. ಲಿಂಗಸೂಗೂರಿನಿಂದ ವಾಯುವ್ಯಕ್ಕೆ 27 ಕಿ.ಮೀ ದೂರದಲ್ಲಿದೆ. ಇಲ್ಲಿ ಕೃಷ್ಣಾ ನದಿ ಎರಡು ಟಿಸಿಲುಗಳಾಗಿ ಹರಿದು. ಒಂದು ದೊಡ್ಡ ನಡುಗಡ್ಡೆಯನ್ನು ಉಂಟುಮಾಡಿದೆ. ಆ ದೊಡ್ಡ ನಡುಗಡ್ಡೆಯೇ ಜಲದುರ್ಗ. ಇದು ಈ ಎರಡೂ ಟಿಸಿಲುಗಳ ನೀರಿನಿಂದ ಸುತ್ತಲೂ ಆವೃತವಾಗಿದೆ. ಇಲ್ಲಿ ಏಳು ಸುತ್ತಿನ ಕೋಟೆ ಗೋಡೆಯೂ, ಅದರ ಏಳು ಅಗಸೆ ಬಾಗಿಲುಗಳು ಇವೆ. ಕೋಟೆ ಗೋಡೆ ದುಃಸ್ಥಿತಿಯಲ್ಲಿದ್ದರೂ ಏಳು ಕೋಟೆ ಗೋಡೆಗಳ ಅವಶೇಷಗಳು ಜೀವಂತವಾಗಿವೆ.

ಈ ಕೋಟೆಯನ್ನು 12ನೆಯ ಶತಮಾನದಲ್ಲಿ ನಿರ್ಮಿಸಲಾಯಿತು. ದೇವಗಿರಿಯ ಯಾದವರಾಜ (ದೌಲತಾಬಾದ್) ಇದನ್ನು ಕಟ್ಟಿಸಿದನು. ಮೆಡೋಸ್ ಟೇಲರ್ ಎಂಬ ಸಂಶೋಧಕನು ತನ್ನ ನೋಬಲ್ ಕ್ವೀನ್ (1871) ಎಂಬ ಗ್ರಂಥದಲ್ಲಿ ಈ ಕೋಟೆಯನ್ನು ಪ್ರಶಂಸಿಸಿದ್ದಾನೆ.

ಈ ಪ್ರದೇಶ ಕೆಲದಿನ ಬಿಜಾಪುರದ ಆದಿಲ್ ಶಾಹಿಗಳ ಆಡಳಿತದಲ್ಲಿತ್ತು. ಅನಂತರ ವಿಜಯನಗರದ ಅರಸರ ಆಡಳಿತಕ್ಕೆ ಬಂತು. ಆ ಕಾಲದಲ್ಲಿ ಇದೊಂದು ಆಯಕಟ್ಟಿನ ಸೈನಿಕ ಠಾಣೆ, ಏಕೆಂದರೆ ಪೂರ್ವದಿಂದಾಗಲೀ, ಪಶ್ಚಿಮದಿಂದಾಗಲೀ, ಬಿಜಾಪುರದ ಆದಿಲ್ ಶಾಹಿಯಾಗಲಿ, ವಿಜಯ ನಗರದ ಅರಸರಾಗಲೀ ಇಲ್ಲಿಗೆ ಬರಬೇಕೆಂದರೆ ಟಿಸಿಲಾಗಿ ಹರಿಯುವ ಕೃಷ್ಣಾ ನದಿಯನ್ನು ದಾಟಿಯೇ ಬರಬೇಕಾಗಿತ್ತು. ಕಾರಣ ಇದು ಇಬ್ಬರಿಗೂ ಆಯ ಕಟ್ಟಿನದಾಗಿತ್ತು. ಅದಕ್ಕಾಗಿ ಈ ದುರ್ಗವನ್ನೂ ತಮ್ಮ ಅಂಕಿತದಲ್ಲಿಟ್ಟುಕೊಳ್ಳಲು ಇಬ್ಬರೂ ಪ್ರಯತ್ನಿಸುತ್ತಿದ್ದರು.

ಇಲ್ಲಿರುವ ಎತ್ತರವಾದ ಒಂದು ಬತೇರಿಯ ಮೇಲಿನಿಂದ ವೀಕ್ಷಿಸಿದರೆ, ನಾಲ್ಕು ದಿಕ್ಕೂಗಳಲ್ಲಿ ಸುಮಾರು 10–20 ಕಿಲೋಮೀಟರುಗಳ ದೂರದಿಂದ ವೈರಿಗಳ ಚಲನ ವಲನಗಳನ್ನು ನಿರೀಕ್ಷಿಸಬಹುದಾಗಿತ್ತು. ಈ ಪ್ರದೇಶ ತೀರ ಎತ್ತರದಲ್ಲಿದೆ. ಹೀಗಾಗಿ ಎಲ್ಲರಿಗೂ ಇದೊಂದು ಆಯಕಟ್ಟಿನ ಸ್ಥಳವಾಗಿತ್ತು. ಇಲ್ಲಿ ಗಲ್ಲುಕಂಬದ ಸ್ಥಳವಿದೆ. ವಿಜಯನಗರದ ಅರಸರ ಕಾಲದಲ್ಲಿ ಗಲ್ಲು ಶಿಕ್ಷೆಗೆ ಗುರಿಮಾಡಿದವರನ್ನು ಇಲ್ಲಿ ತಂದು ಅತ್ಯಂತ ಎತ್ತರವಾಗಿರುವ ಈ ವಧಾಸ್ಥಾನದಿಂದ ಕೆಳಕ್ಕೆ ನೂಕುತ್ತಿದ್ದರಂತೆ, 400–500 ಅಡಿಗಳ ಆಳದಲ್ಲಿರುವ ಕೃಷ್ಣಾ ನದಿಯ ಕಮರಿಯಲ್ಲಿ ಆತ ಸತ್ತು ಹೋಗಬೇಕಾಗಿತ್ತು.

ಇದೊಂದು ಕಾಡು ಪ್ರಾಣಿಗಳ ವಾಸದ ದಟ್ಟಾರಣ್ಯವಾಗಿತ್ತು. ಕೃಷ್ಣಾನದಿಯನ್ನು ದಾಟಿ ಹೋಗುವುದು ದುಸ್ತರವೇ ಆಗಿತ್ತು. ಈಗ ಲೋಕೋಪಯೋಗಿ ಇಲಾಖೆಯವರಿಂದ ಒಂದು ಸೇತುವೆ ನಿರ್ಮಾಣವಾಗಿದೆ. ಇಲ್ಲಿ ಹರಿಯುವ ಕೃಷ್ಣಾ ನದಿಯಲ್ಲಿ ಸಣ್ಣ ಸಣ್ಣ ಜಲಪಾತಗಳಿವೆ. ಮಳೆಗಾಲದ ತುಂಬುನೀರಿನ ಸಮಯದಲ್ಲಿ ಅವು ಕಣ್ಮನಗಳನ್ನು ಸೆಳೆಯುತ್ತವೆ. ಈ ಜಲಪಾತಗಳಿಗೆ 'ಛಾಯಾ ಜಲಪಾತಗಳು' ಎಂದು ಹೆಸರು. ಇಲ್ಲಿ ಹದಿನೆಂಟು ತೀರ್ಥಗಳಿವೆ. ಎಂದೂ, ಆ ತೀರ್ಥಗಳಲ್ಲಿ ಸ್ನಾನ ಮಾಡುವುದು ಒಂದು ಮಹಾಭಾಗ್ಯವೆಂದೂ ಈ ಭಾಗದ ಜನರ ನಂಬಿಕೆ. ಉತ್ತರವಾಹಿನಿ, ಸೂರ್ಯ, ಚಂದ್ರ, ಗೋ–ಗರ್ಭ, ಸ್ವರ್ಗ, ನರಕ, ಬ್ರಹ್ಮವೇಣಿ, ರುದ್ರವೇಣಿ, ವಿಷ್ಣು ವೇಣಿ, ಗದಾ–ಪದ್ಮಾ, ರಾಮತೀರ್ಥ, ಧನುಷ್ಕೋಟಿ, ಕನ್ಯಾಕುಬ್ಬ ಎಂದು ಮುಂತಾಗಿ ಈ ತೀರ್ಥಗಳ ಹೆಸರುಗಳು, ಪ್ರತಿವರುಷ ಅಕ್ಷಯ ತೃತೀಯದ ದಿನ, ಅದರ ಮರುದಿನಗಳಂದು ಸಾವಿರಾರು ಜನ ಇಲ್ಲಿ ಸ್ನಾನಮಾಡಿ ಪುಣ್ಯ ಭಾಗಿಗಳಾಗುತ್ತಾರೆ.

(ಜಿಎಚ್)

ಜಾ

ಜಾತ್ರೋತ್ಸವಗಳು: ಜನಪದ ಸಾಂಸ್ಕೃತಿಕ ಪರಂಪರೆಯ ಪ್ರಮುಖ ಆಧಾರಸ್ತಂಭಗಳಾದ ಇವು ಗ್ರಾಮೀಣ ಬದುಕಿನ ಜೀವಂತ ನಾಡಿಮಿಡಿತಗಳಾಗಿವೆ. ಸಾಮಾಜಿಕ ಧಾರ್ಮಿಕ ಹಾಗೂ ಕಲಾತ್ಮಕ ಬದುಕಿನ ಜೀವಸತ್ತ್ವ ಇಲ್ಲಿ ಹಲವು ಮುಖಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ. ಜಾತ್ರೆ ಕೇವಲ ಜನ–ದನಗಳ, ವ್ಯಾಪಾರ ವಹಿವಾಟುಗಳ, ಕೇಂದ್ರವಷ್ಟೇ ಅಲ್ಲ, ಅದೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗಮ. ಒಂದೊಂದು ಜಾತ್ರೆಯೂ, ಒಂದೊಂದು ಗ್ರಾಮದ ಗ್ರಾಮದೇವತೆಯ ಹಿನ್ನೆಲೆಯನ್ನೂ ಅಲ್ಲಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನೂ ಒಳಗೊಂಡಿರುತ್ತದೆ. ಜಾತ್ರೆಯ ಅಧ್ಯಯನವೆಂದರೆ, ಅದೊಂದು ಸಂಸ್ಕೃತಿಯ ಅಧ್ಯಯನವಿದ್ದಂತೆ. ಅದರ ಹುಟ್ಟು, ಬೆಳೆವಣಿಗೆ, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯಗಳು, ಇವೆಲ್ಲವನ್ನೂ ಮೈಗೂಡಿಸಿಕೊಂಡಿರುತ್ತದೆ. ಜಾತ್ರೆಗಳು ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದಿರುವಂತೆಯೇ ಸಾಮಾಜಿಕ ಮಹತ್ವವನ್ನು ಪಡೆದುಕೊಂಡಿವೆ.

ಜಾತ್ರೆ ಹಲವಾರು ದೃಷ್ಟಿಯಿಂದ ಹಳ್ಳಿಗರ ಜೀವನದಲ್ಲಿ ಮಹತ್ವದ ಪಾತ್ರವಹಿಸಿದೆ. ಸಾಂಸ್ಕೃತಿಕ ಹಿನ್ನೆಲೆ ಇದಕ್ಕಿದೆ. ಪ್ರತಿಯೊಂದು ಜಾತ್ರೆ ಎಲ್ಲರಿಗೂ ಬಲು ಪ್ರೀತಿ. ಬಹಳ

ಆಕರ್ಷಕವಾದ ವಿಷಯ. ಅದು ಎಲ್ಲ ಕಡೆಗೂ ಕಂಡು ಬರುವ ಎಲ್ಲರನ್ನು ರಂಜಿಸುವ ಸಮಷ್ಟಿ ಬದುಕಿನ ಒಂದು ಸಂಕೀರ್ಣ ಮತ್ತು ಸಾಮಾಜಿಕ ಧಾರ್ಮಿಕ ಸಂಗತಿಗಳಿಂದ ಸಮನ್ವಿತವಾದ ಸಾಂಸ್ಕೃತಿಕ ಮೊತ್ತವಾಗಿದೆ.

ಹಿಂದೆ ಜಾತ್ರೆ ಜರುಗುವಾಗ, ತೇರು ಎಳೆಯುವಾಗ ವೈಭವ ಎದ್ದು ಕಾಣುತ್ತಿತ್ತು. ಎಲ್ಲ ಜಾತಿಯ ಜನರು ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದರು. ಹಿಂದೂ-ಮುಸ್ಲಿಂ ಕ್ರೈಸ್ತರೆಂಬ ಅಳುಕು ಅವರಲ್ಲಿರಲಿಲ್ಲ. ನಾವೆಲ್ಲರೂ ಒಂದೇ ಎನ್ನುವ ಮನೋಭಾವವ ಅವರದಾಗಿತ್ತು. ಆದರೆ ಜನಪದ ಸಂಸ್ಕೃತಿಯ ಮೇಲೆ ರಾಜಕೀಯ ಹಾಗೂ ವಿದೇಶೀ ಪ್ರಭಾವವುಂಟಾಗಿ ಜಾತ್ರೆಗಳ ಆಚರಣೆ ಕಡಿಮೆಯಾಗಿದೆ. ಹಳ್ಳಿ ಪಟ್ಟಣದಲ್ಲಿರುವ ದೇವರ ಮೂರ್ತಿಗಳು ಮೂಲೆ ಸೇರಿವೆ. ದೇವರ ಮೆರವಣಿಗೆ ಬದಲಿಗೆ ಜನರ ಮೆರವಣಿಗೆಯೇ ಹೆಚ್ಚಾಗಿದೆ.

ಉತ್ಸವಗಳಲ್ಲಿ ಹುಲಿ ವೇಷದ ಕುಣಿತ, ವಾದ್ಯ, ಬಾರಿಸುವವರು, ಹಾಡು ಹೇಳುವವರು ಪ್ರೋತ್ಸಾಹವಿಲ್ಲದ್ದಕ್ಕೆ ಕೂಲಿ-ನಾಲಿ ಕೆಲಸ ಮಾಡಿ ಉಪಜೀವನ ನಡೆಸುತ್ತಿದ್ದಾರೆ. ಪೂಜೆ ಉಪಾಸನೆ. ಹಿಂದಿನ ಭಾವೈಕ್ಯತೆ, ಹಳ್ಳಿ-ಪಟ್ಟಣಿಗರೆಂಬ ಜಾತಿ ಮತಗಳೆಂಬ ಭೇದ ಭಾವವಿಲ್ಲದಿರುವಿಕೆ ಮುಂತಾದ ಸನ್ನಿವೇಶಗಳು ಹಿಂತಿರುಗಿ ನೋಡಬೇಕದರೆ ನಮ್ಮ ಬದುಕಿನಲ್ಲಿ ಅವುಗಳನ್ನು ಅಳವಡಿಸಿಕೊಂಡು ಸನ್ಮಾರ್ಗದ ದಾರಿ ಹಿಡಿಯಬೇಕಾದರೆ, ಜಾತ್ರೆಗಳ ಆಚರಣೆ ತೀರ ಅಗತ್ಯವೆನಿಸುತ್ತದೆ.

"ಹಿಂದಿನಿಂದಲೂ ದೇಶ ವಿದೇಶಗಳಲ್ಲಿ ಜಾತ್ರೆಗಳು ಜರುಗುತ್ತ ಬಂದಿವೆ. ಈಗಲೂ ಜರುಗುತ್ತವೆ" ಆದರೆ ಆಯಾ ಜನಾಂಗದ ರೀತಿ-ನೀತಿ ರಿವಾಜುಗಳಿಗನುಗುಣವಾಗಿ ಪ್ರತಿಬಿಂಬಿಸುತ್ತಾ ಬಂದಿರುತ್ತವೆ. ಪ್ರತಿಯೊಂದು ಜನಾಂಗದ ಜಾತ್ರೆಗಳ ಉದ್ದೇಶ ಒಂದೇ ಆಗಿದೆ. ಸಾಮೂಹಿಕವಾಗಿ ದೇವರನ್ನು ಆರಾಧಿಸುವುದು. ಬಂಧು ಬಳಗದವರನ್ನು ಭೇಟಿಯಾಗುವುದು, ತಮಗೆ ಇಷ್ಟವಾದ ವಸ್ತುಗಳನ್ನು ಜಾತ್ರೆಯಲ್ಲಿ ಕೊಳ್ಳುವುದು ಇನ್ನೂ ನಡೆಯುತ್ತಲೇ ಇದೆ. "ಜಾತ್ರೆಗಳ ಕಾಲಕ್ಕೆ ದೂರದ ಊರಿನ ವ್ಯಾಪಾರಿಗಳು ಪರಡಿ, ಬಟ್ಟೆ, ಬರೆ, ಬಳೆ ಮುಂತಾದ ವಸ್ತುಗಳನ್ನು ಮಾರಲು ತರುತ್ತಿದ್ದು, ಹೊಸದಾಗಿ ತಯಾರಾದ ವಸ್ತುಗಳನ್ನು ಪ್ರದರ್ಶಿಸಿ ಹಳ್ಳಿಯ ಜನಕ್ಕೆ ಮಾರಲು ಜಾತ್ರೆಗಳು ಅವಕಾಶ ಒದಗಿಸುತ್ತವೆ"

ದೇವಾಲಯವಿದ್ದಲ್ಲಿ ಜಾತ್ರೆ ಇರುತ್ತದೆ. ಕೆಲವೊಂದು ಕಡೆ ನಡೆಯಲಿಕ್ಕಿಲ್ಲ. ಇಂದಿನ ಕಾಲದಲ್ಲಿ ಜರುಗುವ ಜಾತ್ರೆಗಳಲ್ಲಂತೂ ಜನಪದ ಕಲೆಗಳಿಗೆ, ಕಲಾವಿದರಿಗೆ ಉತ್ತಮವಾದ ಅವಕಾಶ ದೊರೆಯುತ್ತಿದೆ. ಜಾತ್ರೆಗಳಲ್ಲಿ ಹಿಂದೆ ನರಬಲಿ, ಪಶುಬಲಿ, ಕೊಡುತ್ತಿದ್ದರು. ಇಂದು ಕಡಿಮೆಯಾಗಿದೆ. ಹೈದ್ರಾಬಾದ ಕರ್ನಾಟಕದ ಜಾತ್ರೆಗಳ ಆಚರಣೆ ಒಟ್ಟಾರೆ ಸಂಕೀರ್ಣ ಮಯವಾಗಿದೆ.

(ಜೆಎಚ್)

ಜೀ

ಜೀವನಸಾಬ ವಾಲೀಕಾರ: ಜನಪದ ಕಲಾವಿದ. ತವರೂರು ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ಬಿನ್ನಾಳ ಗ್ರಾಮದಲ್ಲಿ 1985 ಜೂನ್ 6 ರಂದು ಜನಿಸಿದರು. ಮಹಬೂಬಸಾಬ ತಂದೆ, ತಾಯಿ ಅಲ್ಲಾಬಿ ಮಹಾಬೂಬ ಪ್ರಾಥಮಿಕ ಶಿಕ್ಷಣವನ್ನು ತನ್ನ ಸ್ವಗ್ರಾಮದಲ್ಲಿ ಪೂರೈಸಿ, ಮುಂದೆ ಹೈಸ್ಕೂಲು ವಿದ್ಯಾಭ್ಯಾಸವನ್ನು ಮಂಗಳೂರಿನಲ್ಲಿ, ಪದವಿಪೂರ್ವ ಶಿಕ್ಷಣವನ್ನು ಚಿಕ್ಕಮಂಗಳೂರು ಜಿಲ್ಲೆಯ ಪಂಚನಹಳ್ಳಿಯಲ್ಲಿ ಹಾಗೂ ಡಿ.ಇಡಿಯನ್ನು ಕೊಪ್ಪಳದ ರಾಜೀವ ಗಾಂಧಿ ಕಾಲೇಜಿನಲ್ಲಿ ಪೂರೈಸಿದರು.

ಇವರದು ತೀರ ಬಡಕುಟುಂಬ. ಇವರ ಮನೆಯಲ್ಲಿ ಶಾಲೆಗೆ ಕಳುಹಿಸಲು ಹಿಂದೆ ಮುಂದೆ ನೋಡುವ ಪರಿಸ್ಥಿತಿ ಒದಗಿ ಬಂದಿತ್ತು. ಇಂತಹ ಪರಿಸ್ಥಿತಿಯಲ್ಲಿ ಇವರಿಗೆ ಸಹಾಯ ಮಾಡಿದವರು ನಾರಾಯಣಪ್ಪ ಬಸನಳ್ಳಿ ಮಾಸ್ತರರು. ಇವರ ಹಾಡು ಕುಣಿತಕ್ಕೆ ಮಾರುಹೋದ ಜೀವನಸಾಬ, ತಾನೂ ಅವರಂತೆ ಹಾಡಬೇಕು. ಕುಣಿಯಬೇಕೆಂಬ ಆಸೆ ಇಮ್ಮಡಿಸಿತು. ಇದಕ್ಕೆ ಪೂರಕರಾಗಿ ಅವರು ಹಾಡೂ ಕುಣಿತಗಳಲ್ಲಿ ಆಸಕ್ತಿ ವಹಿಸಿ ನಿರಂತರ ಪರಿಶ್ರಮ ಪಡುತ್ತಾ ಜನಪದ ಕಲೆಗಳ ಪ್ರಕಾರಗಳನ್ನು ಕರಗತ ಮಾಡಿಕೊಂಡರು.

ಜೀವನಸಾಬರ ವಿಶಿಷ್ಟ ಹವ್ಯಾಸವೆಂದರೆ ಪ್ರಸ್ತುತ ಸಮಾಜದಿಂದ ದೂರವಾಗುತ್ತಿರುವ ಗೀಗೀಪದ, ಸುಗ್ಗಿಪದ, ಲಾವಣಿ ಪದ, ಸೋಬಾನೆಪದ, ಹಂತಿಪದ, ಬೀಸೊಕಲ್ಲಿನ ಪದಗಳನ್ನು ಹಾಡುವುದು, ಪ್ರಾರಂಭದ ದಿನಗಳಲ್ಲಿ ಹಾಡು ಹಾಡುವುದನ್ನು ಕೇವಲ ಹವ್ಯಾಸಕ್ಕಾಗಿ ಹಾಡುತ್ತಿದ್ದ ಇವರು, ತಾವು ಒಂದು ದಿನ ಇದರಿಂದ ಖ್ಯಾತಿಗಳಿಸುತ್ತೇನೆ ಎಂದು ಭಾವಿಸಿರಲಿಲ್ಲ. ಇಂದು ನಾಡಿನ ಉದ್ದಗಲಕ್ಕೂ ಜಾನಪದ ಕಾರ್ಯಕ್ರಮಗಳನ್ನು ನೀಡುತ್ತ ಮನೆಮಾತಾಗಿದ್ದಾರೆ.

2003ರಲ್ಲಿ ಆಂಧ್ರ ಪ್ರದೇಶದ ಕುಪ್ಪಂನಲ್ಲಿ ಜರುಗಿದ ರಾಷ್ಟ್ರೀಯ ಭಾವೈಕ್ಯತೆ ಶಿಬಿರ, 2004ರಲ್ಲಿ ಹರ್ಯಾಣದಲ್ಲಿ ಜರುಗಿದ ರಾಷ್ಟ್ರೀಯ ಭ್ಯಾವೈಕ್ಯತೆ ಶಿಬಿರ ಹಾಗೂ 2007ರಲ್ಲಿ ಜರುಗಿದ ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಜಾನಪದ ವಿಭಾಗದಲ್ಲಿ ಭಾಗವಹಿಸಿ, ಪ್ರಶಸ್ತಿಗಳನ್ನು ಪಡೆಯುವುದರ ಮೂಲಕ ನಾಡಿನ ಕೀರ್ತಿಯನ್ನು ಮೆರೆದಿದ್ದಾರೆ. ಜೊತೆಗೆ ವಿಭಾಗ ಮಟ್ಟದ ಯುವಜನೋತ್ಸವ ಕೊಪ್ಪಳ ಜಿಲ್ಲಾ ದ್ವಿತೀಯ ಹಾಗೂ ತೃತೀಯ ಕನ್ನಡ ಸಾಹಿತ್ಯ ಸಮ್ಮೇಳನ, ಸುವರ್ಣ ಸಂಸ್ಕೃತಿ ಉತ್ಸವ, ಅಖಿಲ ಕರ್ನಾಟಕ ಸಮಗ್ರ ಯಕ್ಷಗಾನ ಬಯಲಾಟ ಸಮ್ಮೇಳನ, ರಾಜ್ಯ ಮಟ್ಟದ ಇಟಗಿ ಉತ್ಸವಗಳಲ್ಲಿ ಜಾನಪದ ಕಾರ್ಯಕ್ರಮಗಳನ್ನು ನೀಡಿ ತಮ್ಮ ಕಲಾ ಪ್ರೌಢಿಮೆ ಮೆರೆದಿದ್ದಾರೆ. ಇದಲ್ಲದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಯುವ ಸೌರಭ ಕನ್ನಡ ಸಾಹಿತ್ಯ ಪರಿಷತ್ತನಿಂದ ಜಾನಪದ ಜಾಗೃತಿ ಕಾರ್ಯಕ್ರಮ ಚಿಗುರು ಕಾರ್ಯಕ್ರಮ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಮೂಲಕ ಜಿಲ್ಲೆಯ ಬಹುತೇಕ ಶಾಲಾ ಕಾಲೇಜುಗಳಲ್ಲಿ ಜಾನಪದ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಜೀವನ ಸಾಬರಿಗೆ ಕೇವಲ ಜಾನಪದ ಹಾಡುಗಾರಿಕೆಯ ಆಸಕ್ತಿ ಮಾತ್ರವಲ್ಲ ಬೀದಿನಾಟಕ, ಕ್ರಾಂತಿ ಗೀತೆಗಳ ರಚನೆ, ಹಾಡುಗಾರಿಕೆ, ಜಾಗೃತಿ ಗೀತೆಗಳನ್ನು ಹಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಇವರು ತಮ್ಮ ವಿಶೇಷವಾದ ಜನಪದ ಹಾಡಿನ ರಚನೆಯ ಮೂಲಕ ನಾಡಿನ ಲೋಪದೋಷಗಳನ್ನು ಕುರಿತು, ಸಮಾಜಿಕ ಪಿಡುಗುಗಳಾದ ವರದಕ್ಷಿಣೆ, ಧೂಮಪಾನ, ಮದ್ಯಪಾನ, ಬಾಲ್ಯವಿವಾಹ, ಅತಿ ಸಂತಾನ, ಮಟ್ಕಾ, ಜೂಜಾಟ ಮುಂತಾದ ದುಷ್ಪರಿಣಾಮಗಳ ಕುರಿತು ವಿವಿಧ ಜಾನಪದ ಶೈಲಿಯ ಗೀತೆಗಳನ್ನು ಹಾಡುವುದರ ಮೂಲಕ ಅವುಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿದ್ದಾರೆ. ಇವರು ತಮ್ಮೊಂದಿಗೆ ಸಣ್ಣದೊಂದು ತಂಡ ಕಟ್ಟಿಕೊಂಡು ಶಾಲಾ ಕಾಲೇಜುಗಳಲ್ಲಿ, ಬೀದಿಗಳಲ್ಲಿ, ಬೀದಿ ನಾಟಕಗಳನ್ನು ಹಾಗೂ ಜಾನಪದ ಹಾಡುಗಳ ಮೂಲಕ ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡುವ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ.

(ಡಿಸಿವೈ)

ಜೇ

ಜೇವರ್ಗಿ: ಗುಲಬರ್ಗಾ ಜಿಲ್ಲೆಯ 'ಜೇವರ್ಗಿ' ತಾಲ್ಲೂಕಾ ಕೇಂದ್ರವಾಗಿದೆ. ಇಲ್ಲಿ 11–12ನೆಯ ಶತಮಾನಕ್ಕೆ ಸೇರಿದ ಜೈನ ಬಸದಿ ಇದೆ. ಕಲ್ಯಾಣ ಚಾಲುಕ್ಯ ಕಾಲದ ಈಶ್ವರ ಗುಡಿಯು ಇಲ್ಲಿದ್ದು, ಗರ್ಭಗುಡಿಯಲ್ಲಿ ಶಿವಲಿಂಗ ಹಾಗೂ ನಂದಿಗಳಿವೆ. ಈ ಊರಲ್ಲಿ ಅಖಂಡೇಶ್ವರ ಜಾತ್ರೆಯು ವೈಶಾಖ ಬಹುಳ ಪಂಚಮಿಯಂದು ಜರಗುತ್ತದೆ. ಉಳಿದಂತೆ ಊರಲ್ಲಿ ನರಸಿಂಹ, ಲಕ್ಷ್ಮೀ ವೆಂಕಟೇಶ್ವರ, ವಿಶ್ವಾರಾಧ್ಯ, ವೀರಭದ್ರ, ಹನುಮ, ಲಕ್ಷ್ಮೀ ಪಾಲ್ಕಮ್ಮ, ಪೋಚಮ್ಮ, ಎಲ್ಲಮ್ಮ ಉಂತಾದ ಈಚಿನ ಗುಡಿಗಳಿವೆ. ಮೆಹಬೂಬ ಸುಬಾನಿ ದರ್ಗಾ ಮತ್ತು ಕ್ರೈಸ್ತ ಇಗರ್ಜಿಗಳೂ ಕೂಡ ಇಲ್ಲಿರುವುದು ಸೌಹಾರ್ದತೆಯ ಸಂಕೇತವಾಗಿದೆ.

(ಪಿಕೆಕೆ)

ಜೋ

ಜೋಕಾಲಿ: ಜನಪದರ ಮನರಂಜನೆ ಆಟಗಳಲ್ಲಿ ಒಂದು. ನಾಗಪಂಚಮಿ ವಿಶಿಷ್ಟ ಆಚರಣೆ ಸಂಪ್ರದಾಯಗಳ ಭಾಗವಾಗಿ ಜೋಕಾಲಿ ಆಡುವ ಪರಿಪಾಠ ಬೀದರ ಜಿಲ್ಲೆಯಲ್ಲಿ ಇಂದಿಗೂ ಜೀವಂತವಾಗಿದೆ. ಜೋಕಾಲಿ ಇಲ್ಲದಿದ್ದರೆ ಮಕ್ಕಳ ಪಾಲಿಗೆ ಪಂಚಮಿ ಅಪೂರ್ಣವೆಂದೇ ಹೇಳಬೇಕು. ಇನ್ನೂ ಎಳ್ಳಮಾಸೆ, ಯುಗಾದಿ ಹಬ್ಬಗಳಲ್ಲೂ ಸಹ ಜೋಕಾಲಿ ಆಡುವ ಪರಿಪಾಠವಿದೆ.

ಜೋಕಾಲಿ ಮರದ (ಗಟ್ಟಿಯಾದ) ಟೊಂಗೆಗೆ ಹಗ್ಗ ಅಥವಾ ಮಿಳಕಿಯಿಂದ ಕಟ್ಟುವರು. ಅದು ಹೆಚ್ಚು ಭಾರ ತಾಳುವ ಮತ್ತು ಅತಿ ಎತ್ತರಕ್ಕೆ ಏರುವ ಗುಣಧರ್ಮ ಹೊಂದಿರಬೇಕಾಗುತ್ತದೆ. ಕಟ್ಟಿದ ಹಗ್ಗ ಏರಿಳಿತ ಕಂಡರೆ ಅದು ಜೋಕಾಲಿ ಎನಿಸುತ್ತದೆ. ಬದುಕು ಸರಳ ರೇಖೆ ಅಲ್ಲ. ಅದರಲ್ಲಿ ಸೋಲು–ಗೆಲುವು, ಸುಖ–ದುಃಖ ಇದ್ದೇ ಇರುತ್ತದೆ. ಆದ್ದರಿಂದಲೇ ಬದುಕು ತೂಗುಯ್ಯಾಲೆಯಂತೆ ಎಂಬ ನಾಣ್ಣುಡಿ ಜನಪ್ರಿಯವಾಗಿದೆ.

ತೂಗಿಕೊಳ್ಳುವ ವಿಧಾನ: ಜೋಕಾಲಿ ಆಡುವ ವಿಧಾನ ಒಂದು ಸಮತಳದಲ್ಲಿ ಪದಕೋಲು ಕಟ್ಟಿ, ಅದರ ಮೇಲೆ ನಿಂತು ಅಥವಾ ಕುಳಿತು ಹಾಗೇ ಸಾಲು ಕೆಳಕ್ಕೆ ಬಂದು ಮ್ಯಾಲಕ್ಕೆ ಹೋಗುತ್ತದೆ. ಹೀಗೆ ಅನುಕೂಲಕ್ಕೆ ತಕ್ಕಂತೆ ಆಡುತ್ತಾರೆ. 1. ಒಬ್ಬರೆ ಕುಳಿತು ತೂಗಿಕೊಳ್ಳುವುದು, 2. ಒಬ್ಬರೆ ನಿಂತು ತೂಗಿ ಕೊಳ್ಳುವುದು, 3. ಇಬ್ಬರು ಜೊತೆಯಾಗಿ ನಿಂತು ತೂಗಿ ಕೊಳ್ಳುವುದು, 4. ಒಬ್ಬರು ನಿಂತು ಇನ್ನೊಬ್ಬರು ಕುಳಿತು ತೂಗಿ ಕೊಳ್ಳುವುದು, 5. ಒಬ್ಬರೆ ನಿಂತು ಕೈಬಿಟ್ಟು ತೂಗಿಕೊಳ್ಳುವುದು. ಹೀಗೆ ಜೋಕಾಲಿ ಆಡುವ ಆಂದರ್ಭದಲ್ಲಿ ಹಲವಾರು ರೀತಿಯ ಮೋಜು ಮಾಡಿ ಸಂಭ್ರಮಿಸುವುದು ಜೋಕಾಲಿಯ ವಿಶೇಷತೆಯಾಗಿದೆ.

ಸ್ಪರ್ಧೆ: ಜೋಕಾಲಿಯಲ್ಲಿ ಪಂದ್ಯ ಕಟ್ಟುತ್ತಾರೆ. ಯಾರು ಹೆಚ್ಚು ಮೇಲ ಮೇಲಕ್ಕೆ ಏರಿಸುತ್ತಾರೋ ಎಂಬುದರ ಮೇಲೆ ಪಂದ್ಯದ ಗೆಲುವು ನಿರ್ಧರಿಸುತ್ತದೆ. ಎತ್ತರಕ್ಕೆ ಏರಿಸಿ ಎದುರಿನ ಮರದ ಎಲೆ, ಹೂ, ಕಾಯಿ ತರುವ ಪಂದ್ಯ ಮಾಡುತ್ತಾರೆ. ಅಥವಾ ನಿಲುಕದ ರೀತಿಯಲ್ಲಿ ಮರದ ಟೊಂಗೆಗೆ ಏನಾದರೂ ಹಣ್ಣು ಅಥವಾ ಕೊಬ್ಬರಿ ಕಟ್ಟಿ ಕೈಯಿಂದಲೋ ಅಥವಾ ಬಾಯಿಂದಲೋ ತರುವ ಪಂದ್ಯ ಇಡುತ್ತಾರೆ. ಬಾಗಿಲಿಗೆ ಲಡ್ಡು ಕಟ್ಟಿ ಬಾಯಿಂದ ತರುವ ಪಂದ್ಯ ಕಟ್ಟುತ್ತಾರೆ.

ಸಾಮಾನ್ಯವಾಗಿ ಪಂಚಮಿ ಸಂದರ್ಭದಲ್ಲಿ ಮನೆಯಲ್ಲಿ ತೊಲೆಗೆ (ಜಂತಿಗೆ) ಜೋಕಾಲಿ ಕಟ್ಟುವರು, ಗೌಡರ ಮನೆಯ ಪಡಸಾಲೆಯಲ್ಲಿ ಹಾಕುವರು, ಮನೆಯ ಹಿತ್ತಲಲ್ಲಿ ಗಿಡವಿದ್ದರೆ ಅಲ್ಲಿಯೂ ಜೋಕಾಲಿ ಹಾಕುವರು ಎಳ್ಳಮಾಸ್ಯೆ ಹಬ್ಬಕ್ಕೆ ಹೋದಲ್ಲಿಯೂ ದೊಡ್ಡ ದೊಡ್ಡ ಮರಗಳಿಗೆ ಜೋಕಾಲಿ ಹಾಕುವರು.

ಕೆಲವರಿಗೆ ಜೋಕಾಲಿ ಹತ್ತಿದರೆ ಮೈ ತಿರುಗುವುದು, ತಲೆ ಸುತ್ತುವುದು ಆಗುವುದುಂಟು. ಕೆಲವರು ಜೋಕಾಲಿ ಎತ್ತರಕ್ಕೇರಿದರೆ ಭಯ ಪಡುತ್ತಾರೆ. ಹಾಗಾಗಿ ಜೋಕಾಲಿ ಆಡುವುದು ಒಂದು ಕಲೆ ಮತ್ತು ಧೈರ್ಯ ಸಾಹಸದ ಪ್ರತೀಕವೂ ಹೌದು. ಹೆಣ್ಣು ಮಕ್ಕಳು ಕಡ್ಡಾಯವಾಗಿ ಜೋಕಾಲಿ ಆಡಬೇಕು ಆಡದಿದ್ದರೆ ಆಶುಭ ಎಂಬ ಭಾವನೆಯೂ ಇದೆ. ಹೀಗೆ ಜನಪದರಲ್ಲಿ ಜೋಕಾಲಿಗೆ ವಿಶಿಷ್ಟವಾದ ಒಂದು ಸ್ಥಾನವಿದೆ. *(ಜಿಕೆಪಿ)*

ಜೋಕುಮಾರ: ಒಬ್ಬ ಜನಪದ ದೇವತೆ. ಇವನಿಗಾಗಿ ಎಲ್ಲಿಯೂ ದೇವಸ್ಥಾನಗಳಿಲ್ಲ. ಕಬ್ಬಲಿಗ ಜಾತಿಯ ಜನರು ಮಾತ್ರ ಹೊತ್ತು

ತಿರುಗುವುದು ಒಂದು ವಿಶೇಷವಾಗಿದೆ. ಬಹು ಪ್ರಾಚೀನ ಕಾಲದಿಂದಲೂ ಜೋಕುಮಾರನ ಆಚರಣೆ ರೂಢಿಯಲ್ಲಿದ್ದಂತೆ ತಿಳಿದುಬರುತ್ತದೆ. ಇವನ ಬಗ್ಗೆ ಹಲವಾರು ಕಥೆಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳು ಇಂತಿವೆ.

ಸಪ್ತರ್ಷಿಗಳ ನಂಬುಗೆಯ ಸೇವಕ "ಜೋಕ" ಎಂಬುವವನಿದ್ದ. ಸಪ್ತರ್ಷಿಗಳು ಒಂದು ದಿನ ತಮ್ಮ ತಮ್ಮಲ್ಲೆ ಭೂಲೋಕದ ಜನರ ಕುರಿತು ಮಾತನಾಡುತ್ತಿದ್ದಾಗ ಇವನಿಗೆ ಏನೇನ್ನಿಸಿತೋ "ನನಗೆ ಭೂಮಿಗೆ ಹೋಗಬೇಕೆನ್ನಿಸಿದೆ ಅಪ್ಪಣೆ ಕೊಡಿರಿ" ಎಂದು ಕೈಜೋಡಿಸಿ ನಿಂತ. ಆಗ ಅವರು ಭೂಮಿಗೆ ಹೋದರೂ ಮೃಷ್ಟಾನ್ನ ಭೋಜನ ಊಟ ಮಾಡಬಾರದು. ಎಂಥ ಸುಂದರ ಹೆಣ್ಣಿಗೂ ಮನ ಸೋಲಬಾರದೆಂದು ಹೇಳಿ, ಹೋಗಲು ಅನುಮತಿ ಕೊಟ್ಟರು. ಜೋಕನು ಬಂದು ಮಾರಿದೇವತೆಯ ಗುಡಿಯಲ್ಲಿ ಇಳಿದ. ಮಾರಿಗೆ ಇವನಲ್ಲಿ ಮೋಹವುಂಟಾಯಿತು. ಚಿನ್ನದ ಹರಿವಾಣದಲ್ಲಿ ಮೃಷ್ಟಾನ್ನ ಭೋಜನವಿಟ್ಟು, ವಿಶೇಷವಾದ ಹಾವ ಭಾವಗಳಿಂದ ನೋಡಿದಾಗ ಮನಸೋತು ಮೃಷ್ಟಾನ್ನ ಭೋಜನ ಉಂಡು ಅವಳಿಗೆ ಮಾರು ಹೋದ. ಇವರಿಗೆ ಹುಟ್ಟಿದ ಮಗನೇ ಜೋಕುಮಾರ. ಜೋಕುಮಾರ ತನ್ನ ತಂದೆಯನ್ನು ಹುಡುಕುತ್ತಾ ಬರುತ್ತಿರುವಾಗ ಸುಕರ್ಣಿಕ ಎಂಬ ಸುಂದರಿಯನ್ನು ನೋಡಿದ. ಅವಳನ್ನು ಪೀಡಿಸತೊಡಗಿದಾಗ ಅವಳು ಹೆದರಿಕೊಂಡು ಚೀರಿದಳು. ಆಗ ಅಲ್ಲಿಯೇ ಬಟ್ಟೆ ಒಗೆಯುತ್ತಿದ್ದ ಅಗಸರು ಓಡಿಬಂದು ಅವನನ್ನು ಹೊಡೆದು ಕೊಂದು ಬಟ್ಟೆ ಒಗೆಯುವ ಕಲ್ಲಿನ ಕೆಳಗೆ ಮುಚ್ಚಿಟ್ಟರು. ಮೂರು ದಿನಗಳವರೆಗೂ ಒಗೆಯಲು ಹೋಗಲಿಲ್ಲ ಎಂಬುದೊಂದು ಕಥೆ.

ಎರಡನೆಯ ಕಥೆಯ ಪ್ರಕಾರ ಶ್ರೀಕೃಷ್ಣ ಅಷ್ಟಮಿಯ ದಿನ ಹುಟ್ಟಿದ್ದ. ಬೆಣ್ಣೆ ತಿಂದಿದ್ದ. ಹೆಣ್ಣುಗಳ ಜೊತೆ ಆಟವಾಡಿದ್ದ. ಈತನೂ ಕೂಡ ಭಾದ್ರಪದ ಅಷ್ಟಮಿಯಂದು ಹುಟ್ಟಿದ, ಬೆಣ್ಣೆಯನ್ನೂ ತಿಂದ. ಚಿಕ್ಕವನಾಗಿರುವಾಗಲೇ ಪುಂಡಾಟ ಮಾಡುತ್ತ ಕಂಡ ಕಂಡ ಹೆಣ್ಣುಗಳ ಬೆನ್ನು ಹತ್ತಿ ಕಾಡಿಸತೊಡಗಿದಾಗ ಬೇಸತ್ತು ಅಗಸರು ಹೊಡೆದು ಒಗೆಯುವ ಕಲ್ಲಿನ ಕೆಳಗೆ ಮುಚ್ಚಿಟ್ಟರು.

ಇನ್ನೊಂದು ಕಥೆಯ ಪ್ರಕಾರ ಚಿಕ್ಕವನಾಗಿರುವಾಗಲೇ ಈತ ತುಂಬ ಕಾಮುಕನಾಗಿದ್ದ. ಕಂಡವರ ಮನೆಯಲ್ಲೆಲ್ಲ ಇಣುಕಿ ನೋಡುತ್ತಿದ್ದ. ಒಂದು ದಿನ ಬ್ರಾಹ್ಮಣ ಸ್ತ್ರೀ ಸ್ನಾನ ಮಾಡುವಾಗ ಬಚ್ಚಲ ಮೋರೆಯಿಂದ ಇಣುಕಿ ನೋಡುತ್ತಿದ್ದನಂತೆ. ಆಗ ಅವಳು ಅತ್ತ ಆಕಸ್ಮಾತ್ತಾಗಿ ನೋಡಿ ಸೀರೆ ಉಟ್ಟುಕೊಂಡು ಕಚ್ಚೆ ಬಿಗಿದುಕೊಂಡು ಓಡಿದಳು. ಆಗಿನಿಂದಲೂ ಬ್ರಾಹ್ಮಣ ಸ್ತ್ರೀಯರು ಕಚ್ಚೆ ಹಾಕಿಯೇ ಸೀರೆ ಉಡಲು ಪ್ರಾರಂಭಿಸಿದರೆಂದು ಹೇಳುತ್ತಾರೆ. ಹೆಣ್ಣುಗಳೆಲ್ಲ ಇವನ ದೂರು ಹೇಳತೊಡಗಿದಾಗ ಹೊಲೆಯರ ಓಣಿಯಲ್ಲಿ ತಲೆ ಕತ್ತರಿಸಿ ಅಗಸರ ಬಂಡೆಯ ಕೆಳಗೆ ಮುಚ್ಚಿಟ್ಟರು ಎಂಬುದೊಂದು ಕಥೆ ಇದೆ.

ಈ ಕಥೆಗಳಿಂದ ಭಿನ್ನವಾದ ಇನ್ನೊಂದು ಕಥೆಯ ಪ್ರಕಾರ ಈತ ಮಳೆ ಬೆಳೆ ತರುವ ಸಮೃದ್ಧ ದೇವತೆ. ಗಣಪತಿಯು ಮೃಷ್ಟಾನ್ನ, ಮೋದಕ ಉಂಡು ಜನರೆಲ್ಲ ಅತ್ಯಂತ ಸುಖವಾಗಿಯೇ ಇದ್ದಾರೆಂದು ಶಿವನ ಮುಂದೆ ಹೇಳಿದ. ಅವನು ಹೋದ ಕೆಲವೇ ದಿನಗಳಲ್ಲಿ ಜೋಕುಮಾರನು ಹೋಗಿ, ನಾನು ಓಣಿ ಓಣಿಯಲ್ಲೆಲ್ಲ ತಿರುಗಾಡಿ ಬಂದಿದ್ದೇನೆ. ಮಳೆ ಬೆಳೆ ಇಲ್ಲದೆ ಜನರೆಲ್ಲ ಕಂಗಾಲಾಗಿದ್ದಾರೆ, ದುಃಖದಲ್ಲಿದ್ದಾರೆಂದು ಶಿವನಿಗೆ ಹೇಳಿದಾಗ ಶಿವ ಇವನ ಮಾತಿಗೆ ಕಣ್ತೆರೆದು ನೋಡಿದ. ಆಗ ಮಳೆ ಬಂದಿತು. ಬೆಳೆಗಳು ಸಮೃದ್ಧಿಯಾಗಿ ಬಂದವು. ಇವನು ಜನರ ಕಷ್ಟಗಳನ್ನು ಶಿವನ ಹತ್ತಿರ ಹೋಗಿ ಹೇಳುತ್ತಾನೆ ಎಂದು ಜನ ನಂಬುತ್ತಾರೆ. ಜೋಕುಮಾರ ಇರುವುದು ಕೇವಲ ಏಳು ದಿನವಾದರೂ ಅವನು ಹೋದ ಮೇಲೆ ಮಳೆ ಬಂದೇ ಬರುತ್ತದೆ ಎಂಬುದು ಜನಪದರ ನಂಬುಗೆ.

ಈ ಕಥೆಗಳಿಂದ ಜೋಕುಮಾರನ ಕುರಿತ ಎರಡು ಪ್ರಮುಖ ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಅವನೊಬ್ಬ ಕಾಮುಕ, ಪುಂಡ, ಹುಟ್ಟಿದ ಏಳು ದಿನಗಳಲ್ಲೆ ಅತಿ ದುಷ್ಟತನದಿಂದ ನಡೆದುಕೊಂಡದ್ದಕ್ಕಾಗಿ ಅವನನ್ನು ಹೊಲೆಯರ ಓಣಿಯಲ್ಲಿ ಹೊಡೆದು ಸಾಯಿಸಿ ಅಗಸರ ಕಲ್ಲಿನ ಕೆಳಗೆ ಮುಚ್ಚಿಟ್ಟರು. ಹೆಣ್ಣಿನ ಗೌರವಕ್ಕೆ ಹೆಚ್ಚಿನ ಮರ್ಯಾದೆ ಕೊಡುವ ಹಿಂದೂ ಸಂಪ್ರದಾಯದಲ್ಲಿ ಯಾರ ಮನೆಯ ಸ್ತ್ರೀಯೇ ಇರಲಿ ಅವಳ ಮಾನ, ಗೌರವ ಕಾಪಾಡುವುದು ಸುಸಂಸ್ಕೃತಿ. ಸೀತೆಯನ್ನು ಕದ್ದೊಯ್ದ ರಾವಣನಿಗೇ ದುರ್ಗತಿ ಬಂದೊದಗಿತು. ಇನ್ನು ಸಾಮಾನ್ಯರು ಬದುಕಿ ಉಳಿಯುವರೆ, ನೀತಿಗೆಟ್ಟು ನಡೆದವರಿಗೆ ಉಳಿಗಾಲವಿಲ್ಲವೆಂಬ ಆಶಯ ಜೋಕುಮಾರನ ಕಥೆಯಿಂದ ವ್ಯಕ್ತವಾದಂತಿದೆ. ಇದರ ಜೊತೆ ಜೊತೆಗೆ ಅವನೊಬ್ಬ ದುಷ್ಟನಾಗಿದ್ದರೂ ಕೆಲವು ಜನರಿಗಾದರೂ ಒಳ್ಳೆಯದನ್ನು ಮಾಡಿದಂತಿದೆ. ಅವನು ಬಂದು ಹೋದ ಮೇಲೆ ಗೊಡ್ಡುಗಳೂ ಹಯನು ಕೊಡಲು ಆರಂಭಿಸಿದವು. ಅವನನ್ನು ಬೇಡಿಕೊಂಡರೆ, ಕುಂಚಿಗಿ ಕುಲಾಯಿ ಹೊಲಿಸಿಕೊಟ್ಟರೆ, ಬಂಜೆಯರಿಗೆ ಮಕ್ಕಳಾಗುತ್ತವೆ. ಹೊಲಗಳಲ್ಲಿ ಸಮೃದ್ಧ ಬೆಳೆ ಬರುತ್ತದೆ ಎಂಬ ಕಥೆಯಲ್ಲಿ ಅವನು ಕೆಲವರಿಗಾದರೂ ಉಪಕಾರಿಯಾಗಿದ್ದ ಎಂದು ಹೇಳಬಹುದು.

ಇಂತಹ ಹಲವಾರು ಕಥೆ ಹಿನ್ನೆಲೆಗಳಿರುವ ಜೋಕುಮಾರನ ಆಚರಣೆ ಗುಲಬರ್ಗಾ ಜಿಲ್ಲೆಯಾದ್ಯಂತ ಚಿಕ್ಕಪುಟ್ಟ ವ್ಯತ್ಯಾಸಗಳನ್ನು ಬಿಟ್ಟರೆ ಒಂದೇ ರೀತಿಯಾಗಿದೆ. ಭಾದ್ರಪದ ಅಷ್ಟಮಿಯ ದಿನ ಕುಂಬಾರನ ಮನೆಯಲ್ಲಿ ಜೋಕುಮಾರನನ್ನು ತಯ್ಯಾರಿಸುವರು. ಗಂಗಾಮತದ ಜೋಕುಮಾರನನ್ನು ಹೊತ್ತು ತಿರುಗುವ ಭಾಜದ ಮನೆಯವರು ಸ್ನಾನ ಮಾಡಿ ಮಡಿಯಿಂದ ಕುಂಬಾರನ ಮನೆಗೆ ಹೋಗಿ ಹತ್ತು ಸೇರು ಜೋಳ ಇಲ್ಲವೆ ಇಪ್ಪತ್ತೈದು ರೂಪಾಯಿ ಕೊಟ್ಟು ಪೂಜಿಸಿ ತಮ್ಮ ಮನೆಗೆ ತರುತ್ತಾರೆ. ತಂದ ಮೇಲೆ ಪಡಸಾಲೆಯಲ್ಲಿಟ್ಟು ಪೂಜಿಸುತ್ತಾರೆ. ಜೋಕುಮಾರನ ತಲೆಗೆ ಕುಲಾಯಿ ಕಟ್ಟಿ, ಸಣ್ಣ ಶಲ್ಯ ಹೊದಿಸಿ ಬಾಯಿಗೆ ಬೆಣ್ಣೆ ಹಚ್ಚುತ್ತಾರೆ. ಮುಖಕ್ಕೆ, ಹಣೆಗೆ ಭಂಡಾರ (ಅರಿಶಿನ) ಹಚ್ಚುತ್ತಾರೆ. ಸುತ್ತೆಲ್ಲ ಬೇವಿನ ತೊಪ್ಪಲು ಇಟ್ಟು ಪೂಜಿಸಿ ಊದಿನ ಕಡ್ಡಿಯಿಂದ ಬೆಳಗಿ ಕಡಬು ಹಿಂಡಿ ಪಲ್ಯ ಅಥವಾ ರೊಟ್ಟಿ ಅನ್ನ ಮುಂತಾದ ನೈವೇದ್ಯ ತೋರಿಸಿ, ಹಾಗೆಯೇ ಮುಚ್ಚಿ ಇಡುವರು. ಮರುದಿನ ಗೌಡರ

ಮನೆಗೆ ಹೊತ್ತುಕೊಂಡು ಹೋಗುತ್ತಾರೆ. ಅಲ್ಲಿ ಒಂದು ಶಲ್ಯ ಹೊದಿಸಿ ಮೊರದಲ್ಲಿ ಜೋಳ ಹಾಕಿ ಕೊಡುವರು. ಮೊರವನ್ನು ಹಿಂತಿರುಗಿ ಕೊಡುವಾಗ ನಾಲ್ಕಾರು ಕಾಳು ಜೋಳ, ಎರಡು ಬೇವಿನ ಎಲೆ, ಭಂಡಾರ ಹಾಕಿ ಕೊಡುವರು. ಆನಂತರ ಉಳಿದ ಮನೆಗಳಿಗೆ ಹೋಗುತ್ತಾರೆ. ಮನೆಮನೆಗೆ ಹೊತ್ತು ತಿರುಗುವಾಗ ಎರಡೆರಡು ನುಡಿಗಳನ್ನು ಹಾಡಿ, ಅವರು ಕೊಟ್ಟ ಜೋಳ ರೊಟ್ಟಿ ತೆಗೆದುಕೊಂಡು ಬರುತ್ತಾರೆ. ಕೆಲವರು ಜೋಕುಮಾರನ ಬುಟ್ಟಿ ಎತ್ತಿ ತಮ್ಮ ಮನಸ್ಸಿನಲ್ಲಿರುವ ಆಸೆ ಕೈಗೂಡುತ್ತದೆಯೋ ಎಂದು ಕೇಳುವುದೂ ಇದೆ. ಅವರ ಮನಸ್ಸಿನಲ್ಲಿರುವ ಆಸೆಗಳು ಕೈಗೂಡುವಂತಿದ್ದರೆ ಬುಟ್ಟಿ ಹಗುರವಾಗಿ ಎತ್ತುತ್ತದೆಯಂತೆ. ಆಗದಿದ್ದರೆ ಬುಟ್ಟಿ ಏಳುವುದೇ ಇಲ್ಲವೆಂದು ಹೇಳುತ್ತಾರೆ. ಮಕ್ಕಳಾಗದೆ ಇರುವ ಹೆಣ್ಣು ಮಕ್ಕಳು ಜೋಕುಮಾರನಿಗೆ ಹರಕೆ ಬೇಡಿಕೊಳ್ಳುವುದೂ ಇದೆ. ಮುಂದಿನ ವರ್ಷ ಜೋಕುಮಾರ ಬರುವುದರೊಳಗೆ ಮಕ್ಕಳಾದರೆ ಜೋಕುಮಾರನಿಗೆ ಬೆಳ್ಳಿಯ ಉಡದಾರ ಕುಂಚಿಗಿ ಕುಲಾವಿ ಮುಂತಾದವನ್ನು ಕೊಡುವರು. ಹೀಗೆ ಏಳು ದಿನಗಳವರೆಗೆ ಬೇರೆ ಬೇರೆ ಓಣಿಯಲ್ಲಿ ಹೋಗುತ್ತ ಊರೆಲ್ಲ ತಿರುಗಾಡುವರು. ಈ ದಿನಗಳಲ್ಲಿ ಗಣಪತಿಯೂ ಇರುವುದರಿಂದ, ಜೋಕುಮಾರ ಬಂದಾಗ ಗಣೇಶನನ್ನು ಬಟ್ಟೆಯಿಂದ ಹೊದಿಸಿ ಮುಚ್ಚುವರು. ಗಣಪತಿ ವಿಘ್ನೇಶ್ವರ, ವಿದ್ಯಾದೇವತೆ. ಜೋಕುಮಾರನಾದರೋ ಪುಂಡಾಟದವ, ಬೀದಿಯಲ್ಲಿ ತಿರುಗುವವ. ಅದಕ್ಕಾಗಿ ಒಬ್ಬರನ್ನೊಬ್ಬರು ನೋಡಬಾರದೆಂದು ಗಣಪತಿಯನ್ನೇ ಮುಚ್ಚಿ ಇಡುತ್ತಿರಬಹುದೆ? ಹುಣ್ಣಿಮೆಯಂದು ಎಂಟನೆಯ ದಿನ ಪೂಜಿಸಿ ರಾತ್ರಿಯಾದ ಮೇಲೆ ಹೊಲೆಯರ ಓಣಿಯಲ್ಲಿ ಜೋಕುಮಾರನನ್ನು ಇಟ್ಟು ಬರುವರು. ಪಟ್ಟಣದಲ್ಲಿ ನಿರ್ದಿಷ್ಟವಾದ ಸ್ಥಳದಲ್ಲಿಟ್ಟು ಬರುವರು. ಹೊಲೆಯರ ಓಣಿಯಲ್ಲಿ ಅವನ ತಲೆ ಹೊಡೆಯುವರು. ಮತ್ತೆ ಕೆರೆಗೋ ಹಳ್ಳಕ್ಕೋ ಒಯ್ದು ಅಗಸರ ಕಲ್ಲಿನ ಕೆಳಗೆ ಹೂತಿಡುವರಂತೆ. ಜೋಕುಮಾರನ ರುಂಡ ಮುಂಡಗಳು ಅಂಗಾತ ಬಿದ್ದರೆ ಮಳೆ ಬೆಳೆ ಚೆನ್ನಾಗಿ ಬರುತ್ತದೆ. ಬೋರಲು ಬಿದ್ದರೆ ಅನಾವೃಷ್ಟಿಯಿಂದ ಬರಗಾಲ ಬರುತ್ತದೆ ಎಂದು ಒಕ್ಕಲಿಗರ ನಂಬುಗೆಗಳಿವೆ. ಜೋಕುಮಾರನ ಆಚರಣೆ ಹೀಗೆ ಮುಗಿಯುತ್ತದೆ. ಅವನ ಕುರಿತಾದ ಹಾಡುಗಳಲ್ಲಿಯೂ ಈ ಎಲ್ಲ ಕಥೆಗಳಿಗೆ ಆಧಾರ ಒದಗಿಸುವಂಥ ಎಳೆಗಳಿವೆ.

ಜೋಕುಮಾರನ ಕಥೆಯಲ್ಲಿ ಒಬ್ಬ ವ್ಯಕ್ತಿ ದುಷ್ಟತನಕ್ಕಿಳಿದರೆ ಅವನಿಗೆ ಉಳಿಗಾಲವಿಲ್ಲವೆಂಬ ಸಂಕೇತವಿದೆ. ಹೈದ್ರಾಬಾದ ಕರ್ನಾಟಕ ಭಾಗದೆಲ್ಲೆಡೆ ಅತ್ಯಂತ ವಿಜೃಂಬಣೆಯಿಂದ ಜೋಕುಮಾರನ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬವನ್ನು ಕೆಲವೊಂದು ಕಡೆ 'ಜೋಕ್ಯಾನ ಹಬ್ಬ'ವೆಂತಲೂ ಕರೆಯುತ್ತಾರೆ. ಜೋಕುಮಾರನ ಹಬ್ಬವನ್ನಾಚಾರಿಸುವುದರಿಂದ ಮಳೆ ಬೆಳೆಯು ಚೆನ್ನಾಗಿ ಆಗುತ್ತದೆ. ಸಕಲ ದವಸ, ಧಾನ್ಯಗಳು ಬೆಳೆದು ಉತ್ತಮ ಫಸಲು ಬರುತ್ತದೆ ಎಂಬ ಸದುದ್ದೇಶದಿಂದ ರೈತರು ಈ ಹಬ್ಬವನ್ನು ವೈಭವದಿಂದ ಆಚರಿಸುತ್ತಾರೆ. ಹೀಗಾಗಿ ಜೋಕುಮಾರನ ಸುಂದರವಾದ ಮೂರ್ತಿಯನ್ನು ತಯಾರಿಸಿ, ಬಾಯಿಯಲ್ಲಿ ಬೆಣ್ಣೆ ಇಟ್ಟಿರುತ್ತಾರೆ, ಹೆಂಗಳೆಯರು ಬುಟ್ಟಿಯಲ್ಲಿ ಜೋಕುಮಾರನ ಮೂರ್ತಿ, ಬೇವಿನ ತಪ್ಪಲು ಬೆರೆಸಿದ್ದು ಪ್ರತಿ ಮನೆ ಮನೆಗೂ ಹೊಗಿ ಭೀಕ್ಷೆ ಬೇಡುತ್ತಾರೆ.

ಜೋಕುಮಾರನ ಮೆರವಣಿಗಾರ್ತಿಯರು ರೈತರ ಮನೆಗಳಿಂದ ಕಾಣಿಕೆ ಪಡೆದು ಜೋಕುಮಾರನ ಪ್ರಸಾದವಾಗಿ ಅಳ್ಳಂಬಲಿಯನ್ನು ನೀಡುವರು. ಅಳ್ಳಂಬಲಿ ಎಂದರೆ ಬೂದಿ ಮತ್ತು ಬೇವಿನ ಎಲೆಗಳನ್ನು ಬೆರೆಸಿದ ಜೋಳದ ನುಚ್ಚು ಪ್ರಸಾದ ನೀಡುವರು. ಇದನ್ನು ರೈತನು ಸೀಗೆ ಹುಣ್ಣಿಮೆಯವರೆಗೆ ಹಾಗೆಯೇ ಇಡುವರು. ಸೀಗೆ ಹುಣ್ಣಿಮೆಯಂದು ಚರಗ ಚೆಲ್ಲುತ್ತದೆ. ಇದರಿಂದ ಬೆಳೆಯು ಚೆನ್ನಾಗಿ ಬರುತ್ತದೆಂಬ ಅಚಲವಾದ ನಂಬಿಕೆಯಿದೆ.

ಜೋಕುಮಾರನ 'ಕಾಮುಕತನಕ್ಕೆ' ಹೆಣ್ಣು ಮಕ್ಕಳು ಭಯ ಭೀತರಾಗಿದ್ದರು. ಆದುದರಿಂದ ಏಳು ದಿನಗಳವರೆಗೆ ಇವನನ್ನೂ ಮರೆಸಿ, ಪೂಜಿಸಿ ತಲೆ ಒಡೆಯುವರು. ನೋಡುಗರಿಗೆ ಭಯ, ಭೀತಿ ಮತ್ತು ವಿಚಿತ್ರವಾಯವಾದ ಮೂರ್ತಿಯನ್ನು ತಯಾರಿಸಿ. ಜೋಕುಮಾರನ ಪುಂಡತನಕ್ಕೆ ಇದು ಸಾಕ್ಷಿಯಾಗಿರುವುದು ಅವನ ಕಾಮು ತೃಷೆ ಮತ್ತು ನಾಲಿಗೆಯ ರುಚಿಯಿಂದ ಮನುಷ್ಯ ವಿನಾಶಕ್ಕೆ ಕಾರಣವೆಂಬುದು ಈ ಹಬ್ಬದ ವೈಶಿಷ್ಟ್ಯತೆಯೆಂದು ತೋರುತ್ತದೆ. *(ವಾಯ್‌ಎಸ್)*

ಜೋಗತಿ: ಎಲ್ಲಮ್ಮ ದೇವಿಯ ಮಹಿಮೆ, ಆಶಯ ಸಂಪ್ರದಾಯವನ್ನು ಪ್ರಚಾರ ಮಾಡುವುದಕ್ಕಾಗಿ ಕಂಕಣ ಬದ್ಧರಾಗಿ ತಮ್ಮನ್ನು ತಾವು ಆ ಸೇವೆಗೆ ಅರ್ಪಿಸಿಕೊಂಡವರು. ದೀಕ್ಷೆ– ನೀಡುವುದಕ್ಕೆ ಮತ್ತು ಸ್ವೀಕರಿಸುವುದಕ್ಕೆ ಹಲವಾರು ಕಟ್ಟು ಕಟ್ಟಳೆಗಳಿವೆ. ಅದನ್ನು ಪೂಜಾರಿಯ ಮನೆಯಲ್ಲಿ ವಿಧಿ ಬದ್ಧವಾಗಿ ನೆರವೇರಿಸಲಾಗುತ್ತದೆ.

ಜೋಗತಿಯರಲ್ಲಿ ಗರತಿ ಮುತ್ತು ಧರಿಸುವವರು, ಸೂಳೆ ಮುತ್ತು ಧರಿಸುವವರು ಮತ್ತು ಜೋಗತಿ ಮುತ್ತು ಧರಿಸುವವರು ಎಂದು ಮೂರು ವಿಧಗಳಿವೆ. ಮೊದಲನೆಯ ವಿಧದವರು ಬಿಳಿಯ ಬಣ್ಣದ ಮುತ್ತು ಧರಿಸುತ್ತಾರೆ. ಇವರು ಮದುವೆ ಮಾಡಿಕೊಳ್ಳಲು ಅವಕಾಶವಿದೆ. ಈ ಮುತ್ತು ಧರಿಸಲು ಜಾತಿ ನಿರ್ಬಂಧವಿಲ್ಲ. ಯಾರು ಬೇಕಾದರೂ ಧರಿಸಬಹುದು. ಎರಡನೆಯ ಪ್ರಕಾರದ ಜೋಗತಿಯರು ಕೆಂಪು ಬಣ್ಣದ ಮುತ್ತು ಧರಿಸುತ್ತಾರೆ. ಇವರು ಬಸವಿಯರಾಗುತ್ತಾರೆ. ಹಿಂದುಳಿದ ಜಾತಿಗಳಲ್ಲಿ ಈ ಪದ್ಧತಿ ರೂಢಿಯಲ್ಲಿದೆ. ಮೂರನೇ ಪ್ರಕಾರದ ಜೋಗತಿಯರು ಬಿಳಿ ಬಣ್ಣದ ಮತ್ತು ಕೆಂಪು ಬಣ್ಣದ ಮಿಶ್ರ ಮುತ್ತುಗಳನ್ನು ಧರಿಸುತ್ತಾರೆ. ಪುರುಷರು, ನಪುಂಸಕರು, ವೇಶ್ಯೆಯರು, ವಿಧವೆಯರು ಜೋಗತಿ ಮುತ್ತುಗಳನ್ನು ಧರಿಸುತ್ತಾರೆ. ಇವರಲ್ಲದೆ ದೇವಾಲಯದಲ್ಲಿ ಮಂಗಳಾರತಿ ಹಿಡಿಯುವ ಮತ್ತು ಅಲ್ಲಿಯೇ ವಾಸಿಸುವ 'ಮಂಗಳಾರತಿ ಜೋಗತೇರು' ಇದ್ದಾರೆ.

ಉತ್ತರ ಕರ್ನಾಟಕದ ಎಲ್ಲಮ್ಮನ ಜೋಗಿಗಳಲ್ಲಿ 'ಜಗಹೊತ್ತ ಜೋಗಿಗಳು' ಮತ್ತು 'ಕೊಡದ ಜೋಗಿ'ಗಳೆಂಬ ಎರಡು ಪಂಥಗಳಿವೆ. 'ಜಗ' ಎಂದರೆ 'ಹಡ್ಲಗೆ' ಅಥವಾ ದುಂಡನೆಯ ಬಿದಿರು ಬುಟ್ಟಿ. ಅದಕ್ಕೆ ಬಳೆ ಮತ್ತು ನಾಗರ ಹೆಡೆಗಳನ್ನು



ಜೋಗತಿ

ಸಿಕ್ಕಿಸಿರುತ್ತಾರೆ. ಇದನ್ನು ಹೊತ್ತುಕೊಂಡು ತುಂತುಣಿ ನುಡಿಸುತ್ತಾ ಭಿಕ್ಷೆಗೆ ಹೋಗುತ್ತಾರೆ. ಇವರನ್ನು ಜಗಹೊತ್ತ ಜೋಗಿಗಳೆನ್ನುತ್ತಾರೆ.

ತಾಮ್ರದ ಕೊಡದ ತುಂಬ ನೀರು ತುಂಬಿಸಿ, ಅದರ ಕಂಠಕ್ಕೆ ಯಲ್ಲಮ್ಮನ ಮೂರ್ತಿಯನ್ನು ಕಟ್ಟಿ ನವಿಲು ಗರಿಯಿಂದ ಅಲಂಕರಿಸುತ್ತಾರೆ. ಇದನ್ನು ಹೊತ್ತು ಕೊಂಡು ಹಾಡು ಮತ್ತು ತುಂತುಣಿಯ ನುಡಿತಕ್ಕನುಗುಣವಾಗಿ ಕುಣಿಯುವವರೇ ಕೊಡ ಹೊತ್ತ ಜೋಗಿಗಳು. ಈ ಜೋಗತಿಯರ ಕುಣಿತ ಅತ್ಯಂತ ರಭಸವಾಗಿರುತ್ತದೆ. ಒಬ್ಬರೇ ಕುಣಿಯಲಿ, ಇಲ್ಲವೇ ಗುಂಪಾಗಿ ಕುಣಿಯಲಿ ಮೈದುಂಬಿ ಕುಣಿಯುತ್ತಾ ದೇವಿಯೊಂದಿಗೆ ಮಾತನಾಡುತ್ತಾ ಆಕೆಯೊಂದಿಗೆ ಅವಿನಾಭಾವ ಸಂಬಂಧ ಬೆಳಸಿಕೊಳ್ಳುತ್ತಾರೆ. ಇದನ್ನು ನೋಡುವುದೇ ಒಂದು ವಿಶಿಷ್ಟ ಅನುಭವ. *(ಎಸ್‌ಎಸ್)*

ಜೋಗತಿ ಕುಣಿತ: ಜನಪದ ಧಾರ್ಮಿಕ ವೃತ್ತಿಗಾಯಕರಲ್ಲಿ ಎಲ್ಲಮ್ಮನ ಜೋಗತಿಯರು ಒಬ್ಬರು. ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರದ ಕೆಲ ಪ್ರದೇಶಗಳಲ್ಲಿ ಪರಂಪರಾಗತವಾಗಿ ಈ ಜೋಗತಿ ಸಂಪ್ರದಾಯ ಬೆಳೆದು ಬಂದಿದೆ. ಬೆಳಗಾವಿ ಜಿಲ್ಲೆಯ ಸವದತ್ತಿ ಎಲ್ಲಮ್ಮ ಈ ಜೋಗತಿ ಸಂಪ್ರದಾಯದ ಮಹತ್ವದ ತಾಣ. ಸಾಮಾನ್ಯವಾಗಿ ಕೆಳವರ್ಗದ ಸಮುದಾಯದಲ್ಲಿ ಮಾತ್ರ ಜೋಗತಿ ಬಿಡುವ ಸಂಪ್ರದಾಯವಿದೆ. ಎಲ್ಲರ ಅಮ್ಮ ಎಲ್ಲಮ್ಮನಾದರೂ ಜೋಗತಿ ಕೆಳವರ್ಗದವಳು. ಹೀಗೆ ಎಲ್ಲಮ್ಮನಿಗೆ ಜೋಗತಿ ಬಿಡುವುದು ಅಪರಾಧವೆಂದಾಗಲಿ; ಅನ್ಯಾಯ ಎಂದಾಗಲಿ ಭಾವಿಸದೆ, ಅದೊಂದು ಪವಿತ್ರ ಧಾರ್ಮಿಕ ಕಾರ್ಯವೆಂದು ಭಾವಿಸಲಾಗಿದೆ. ಅದು ತಮ್ಮ ಪಾಲಿನ ಕರ್ತವ್ಯವೆಂದೇ ಎಲ್ಲಮ್ಮನ ಆರಾಧಕರ ಭಾವನೆಯಾಗಿದೆ. ಕುಲಧರ್ಮ, ಕುಲಪರಂಪರೆಯನ್ನು ಪಾಲಿಸದಿದ್ದರೆ ಎಲ್ಲಮ್ಮ ಕಷ್ಟ ಕೋಟಲೆಗಳನ್ನು ಕೊಡುತ್ತಾಳೆಂದು ಜನ ಭಯಪಟ್ಟುಕೊಳ್ಳುತ್ತಾರೆ. ಚಿಕ್ಕಪ್ರಾಯದ ಋತುಮತಿಯಾಗದ ಮುಗ್ಧ ಕನ್ಯೆಯರನ್ನು ಮಾತ್ರ ಎಲ್ಲಮ್ಮನಿಗೆ ಜೋಗತಿ ಬಿಡುತ್ತಾರೆ. ಜೋಗತಿ ಸತಿ ಎಲ್ಲಮ್ಮ ಪತಿ ಎನ್ನುವ ಕಲ್ಪನೆ ಇದೆ. ಜೋಗತಿಯನ್ನು ಎಲ್ಲಮ್ಮನಿಗೆ ಲಗ್ನ ಮಾಡಿಕೊಡುತ್ತಾರೆಂದೇ ಜನಪದರ ಭಾವನೆಯಾಗಿದೆ. ಎಲ್ಲಮ್ಮ ದೇವಿಯ ಕಾರ್ಯಕ್ಕೆಂದೇ ಮೀಸಲಾದ ಜೋಗತಿಯನ್ನು ಎಲ್ಲರೂ ಗೌರವಿಸುತ್ತಾರೆ. ಜೋಗತಿಯಾದ ಹೆಂಗಸು ಎಲ್ಲಮ್ಮನ ಸತಿಯಾಗುವುದರಿಂದ ಅವಳು ಇತರರಂತೆ ಶಾಸ್ತ್ರೀಯವಾಗಿ ಮದುವೆಯಾಗುವಂತಿಲ್ಲ. ಜೋಗತಿಯಲ್ಲಿ ಹೆಣ್ಣು ಜೋಗತಿ, ಗಂಡು ಜೋಗಪ್ಪ ಎಂದು ಎರಡು ಪಂಥ.

'ಜೋಗತಿ'ಯರು ಸಾಮಾನ್ಯವಾಗಿ, ಜಗ ಹೊತ್ತು ಇಲ್ಲವೆ ಕೊಡ ಹೊತ್ತು ಕುಣಿಯುತ್ತಾರೆ. 'ಜೋಗತಿ ಕುಣಿತ'ವನ್ನು 'ಕುಣಿತ' ಎನ್ನಲಾಗುವುದಿಲ್ಲ. ಅದು ಮನರಂಜನೆಯ ಕುಣಿತವಾಗಿರದೆ, ಈ ಕುಣಿತ ಎಲ್ಲಮ್ಮನನ್ನು ಆರಾಧಿಸುವ ಆಚರಣೆಯ ಒಂದು ಆಟವಾಗಿರುತ್ತದೆ. ಅದನ್ನು ಅವರು 'ಜೋಗಾಡುವುದು' ಎನ್ನುತ್ತಾರೆ. ಎಲ್ಲಮ್ಮ ತಮ್ಮನ್ನು ಕುಣಿತದ ರೂಪದಲ್ಲಿ ಆಡಿಸುತ್ತಾಳೆ, ಅದು ಅವಳ ಲೀಲೆಯೆಂದೇ ಅವರು ಭಾವಿಸುತ್ತಾರೆ.

ಜೋಗತಿ ಕುಣಿತ (ಆಟ) ಹೆಚ್ಚು ರಭಸವಾಗಿರುತ್ತದೆ. ಕುಣಿಯುವಾಗ ಅವರ ಹೆಜ್ಜೆಗಳು ಬದಲಾಗುತ್ತಿರುತ್ತವೆ. ಬಾರಿಕೆ ಚೌಡಿಕೆಯ ಶೃತಿ ಮತ್ತು ಸಂಬಳದ ಗತಿ ಇವರ ಕುಣಿತಕ್ಕೆ ಹಿನ್ನೆಲೆಯಾಗಿರುತ್ತದೆ. ಜೋಗತಿಯರು ಕುಣಿಯುವಾಗಿನ ಭಕ್ತಿ, ಭಾವ ಮತ್ತು ತನ್ಮಯತೆ ಅವರು ಕಲಾವಿದರಲ್ಲ; ಎಲ್ಲಮ್ಮನ ಆರಾಧಕರೆಂಬುದನ್ನು ಸ್ಪಷ್ಟಪಡಿಸುತ್ತವೆ. ಈ ಕುಣಿತದ ಜೊತೆಗೆ ಎಲ್ಲಮ್ಮನನ್ನು ಕುರಿತ ಸ್ತುತಿ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಾರೆ.

ಬಾರಿಕೆ ಚೌಡಿಕೆಯ ತಾಳಗತ್ತಿನೊಂದಿಗೆ ಹೆಜ್ಜೆ ಹಾಕುತ್ತ ಎಲ್ಲಮ್ಮನ ಹೆಸರಿನಲ್ಲಿ ಕುಣಿಯುತ್ತಾರೆ. ಕುಣಿತದ ಭಂಗಿಗಳಲ್ಲಿ ವಿಶೇಷತೆಗಳೇನಿಲ್ಲವಾದರೂ ಗಂಡು ಜೋಗಪ್ಪಗಳು ಹೆಣ್ಣಿನ ಹಾವ ಭಾವಗಳನ್ನು ಅನುಕರಣೆ ಮಾಡುತ್ತ, ನಿಂತಲ್ಲಿಯೇ ಹೆಜ್ಜೆ ಹಾಕುತ್ತ, ಹುಬ್ಬೇರಿಸುತ್ತ, ಸೀರೆ ಸರಿಪಡಿಸುತ್ತ ಕೈ ಬೀಸಿ ಕುಣಿಯುತ್ತಾರೆ. ಕುಣಿಯುತ್ತ ಕುಣಿಯುತ್ತ ಮೈದುಂಬುವ ಜೋಗತಿಯರು ಆವೇಷಭರಿತರಾಗಿ ಕುಣಿತವನ್ನು ಗೌಣವಾಗಿಸಿ ದೇವಿಯ ಜೊತೆಗೆ ಸಂಭಾಷಿಸುತ್ತ ತನ್ಮಯರಾಗುತ್ತಾರೆ. ಜೋಗತಿ ಕುಣಿತ ಸಾಮಾನ್ಯವಾಗಿ ಮಂಡಲಾಕಾರವಾಗಿರುತ್ತದೆ.

ಬಾರಿಕೆ ವಾದ್ಯದ ನಾದ ಅನುಪಮವಾದುದು. ಇದನ್ನು ಒಂದು ಬಗೆಯ ಗಂಡು ದನಿಯಲ್ಲಿ ವಿಶಿಷ್ಟಗತ್ತಿನಲ್ಲಿ ನುಡಿಸುತ್ತ ಕುಣಿಯುತ್ತಾರೆ. ಈ ಚೌಡಿಕೆವಾದ್ಯ ಶಕ್ತಿದೇವತೆಯ ಸಂಕೇತ.


ಜಗವನ್ನು ಹೊತ್ತು ಹಾಡಿ ಕುಣಿಯುವ ಜೋಗಪ್ಪ-ಜೋಗತಿಯರ ಕುಣಿತ, ಬಾರಿಕೆ-ಚೌಡಿಕೆಯ ನಾದ ಹಾಗೂ ಅಪೂರ್ವವಾದ ಎಲ್ಲಮ್ಮನ ಮಹಿಮೆಯ ಗೀತೆಗಳು ಆಕರ್ಷಕವಾಗಿರುತ್ತದೆ. ಎಲ್ಲಮ್ಮನ ಮಹಿಮೆಯನ್ನು ಹಾಡಿ ಕುಣಿದು ಪ್ರಸಾರ ಮಾಡುವ, ಜೋತಾಡುವ ಈ ಭಕ್ತರ ಕುಣಿತ ರೋಮಾಂಚನವನ್ನುಂಟು ಮಾಡುತ್ತದೆ.

ಜೋಗಮ್ಮ-ಜೋಗಪ್ಪ ಒಂಟಿಯಾಗಿ ಅಥವಾ ಮೇಳಗಳನ್ನು ಕಟ್ಟಿಕೊಂಡು ಶ್ರುತಿ ಚೌಡಿಕೆಗಳನ್ನು ಹಿಡಿದು, ಎಲ್ಲಮ್ಮನ ಗುಣಗಾನ ಮಾಡುತ್ತಾ, ಅವಳ ಪವಾಡ, ಮಹಾತ್ಮೆಗಳನ್ನು ಹಾಡಿ-ಕುಣಿದು ಜನರನ್ನು ಭಕ್ತಿಪಂಥದತ್ತ ಆಕರ್ಷಿಸುತ್ತಾರೆ. ದೇವದಾಸಿ ಸಂಪ್ರದಾಯ ಎಲ್ಲಮ್ಮದೇವಿಯ ಮಹಿಮೆಯನ್ನು ಪ್ರಸಾರ ಮಾಡಲೆಂದೇ ಹುಟ್ಟಿಕೊಂಡಿದೆ. ಅವಳ ಉಗ್ರ ರೂಪವನ್ನು ಪ್ರಚಾರಪಡಿಸಲೆಂದೇ ಹಲವು ಪವಾಡಗಳನ್ನು, ಕಥೆಗಳನ್ನು ಲೀಲಾಜಾಲವಾಗಿ ಸೃಷ್ಟಿಸಿ ಹಾಡುತ್ತಾರೆ. ಎಲ್ಲಮ್ಮನ ಭಕ್ತರಿಗೆ ಜೋಗತಿಯರ ಬಗ್ಗೆ ಅಪಾರ ಪ್ರೀತಿ-ಭಕ್ತಿ ಗೌರವಗಳಿವೆ. *(ಪಿಕೆಕೆ)*

ಜೋಗಿಗಳು: ಮೂಲತಃ ಉತ್ತರ ಭಾರತದಿಂದ ವಲಸೆ ಬಂದ ಒಂದು ಅಲೆಮಾರಿ ಬುಡಕಟ್ಟು ಸಮುದಾಯ. ಕರ್ನಾಟಕದ ಶಿವಮೊಗ್ಗಾ, ಚಿತ್ರದುರ್ಗ, ಬೆಳಗಾವಿ, ಬಾಗಲಕೋಟೆ, ರಾಯಚೂರ, ಗುಲಬರ್ಗಾ, ಬಳ್ಳಾರಿ, ಧಾರವಾಡ, ಹಾವೇರಿ, ಮಂಡ್ಯ, ದಕ್ಷಿಣ ಕನ್ನಡ ಜಿಲ್ಲೆ ಮುಂತಾದ ಜಿಲ್ಲೆಗಳಲ್ಲಿ ಈಗ ನೆಲೆಯೂರಿದ್ದಾರೆ. ಇವರಲ್ಲಿ ಹಂದಿ ಜೋಗಿ, ಶಿವಜೋಗಿ, ಕಿನ್ನರಿ ಜೋಗಿ, ಬಾಲಜೋಗಿ, ಹಾಲಕ್ಕಿ ಜೋಗಿ, ದಬ್ಬಾ ಜೋಗಿ, ಮಣಿಗಾರ ಜೋಗಿ, ಬಳೆಗಾರ ಜೋಗಿ, ತಾವರಜೋಗಿ, ಸ್ಮಶಾನ ಜೋಗಿ, ಕುಂಬಾರ ಜೋಗಿ, ಟಗರು ಜೋಗಿ, ಎಣ್ಣೆ ಜೋಗಿ, ಕುಣಬೇರ ಜೋಗಿ, ಚಿಪ್ಪಣ ಜೋಗಿ ಹೀಗೆ ಮುಂತಾದ ಪ್ರಭೇಧಗಳುಂಟು ಪ್ರಾಯಶಃ ಇಲ್ಲಿ ಜೋಗಿಗಳು ಕೈಕೊಂಡ ವೃತ್ತಿ, ಮಾತನಾಡುವ ಭಾಷೆ, ಕೆಲವು ಜನಾಂಗಗಳ ಸಂಪರ್ಕದಿಂದ ಮತ್ತು ಪುರಾಣ ವ್ಯಕ್ತಿಗಳ ಪ್ರಭಾವಗಳಿಂದ ಹೀಗೆ ಭಿನ್ನ ಭಿನ್ನ ಹೆಸರುಗಳನ್ನು ಪಡೆದಂತಿದೆ.

ಜೋಗಿ ಶೈವ ಮತದ ಒಂದು ಪ್ರಬೇಧವಾಗಿ ಬೆಳೆದು ಬಂದಿದೆ. ಭೈರವನ ಆರಾಧಕರಾದ ಜೋಗಿಗಳು "ನಾಥ ಪಂಥದ ಅನುಯಾಯಿಗಳು, ಮಂಗಳೂರಿನ ಕದ್ರಿ, ಮಂಡ್ಯದ ಆದಿಚುಂಚನಗಿರಿ, ಉತ್ತರ ಕನ್ನಡದ ಯಾಣ ಇತ್ಯಾದಿ ಶೈವ ಕೇಂದ್ರಗಳ ಜೊತೆಗೆ ಜೋಗಿಗಳ ಸಂಬಂಧವಿದೆ. ಇವರ ಹುಟ್ಟು-ಸಾವಿನ ನಡುವಿನ ಆಚರಣೆಗಳು ಕಾಪಾಲಿಕ ಅಥವಾ ಕಾಳ ಮುಖದಂಥ ಮಧ್ಯಕಾಲೀನ ರಸಹ್ಯ ಪಂಥಗಳ ಜೊತೆಗಿನ ಸಂಬಂಧಗಳನ್ನು ಕುರಿತು ಬೆಳಕು ಚೆಲ್ಲುತ್ತವೆ. ಮೈಲಾರನ ಭಕ್ತರಾದ ಗೊರವರು, ಯಲ್ಲಮ್ಮನ ಭಕ್ತರಾದ ಜೋಗ-ಜೋ-ಗಿಯರು, ಆದಿಚುಂಚನಗಿರಿ ಭಕ್ತರಾದ ಜೋಗಪ್ಪಗಳು ಇಂಥ ರಹಸ್ಯ ತಾಂತ್ರಿಕವೆನ್ನಬಹುದಾದ ಶೈವ ಹಾಗೂ ಶಕ್ತಿ ಪಂಥದ ಪಳಿಯುಳಿಕೆಗಳಾಗಿ ಇಂದಿಗೂ ನಮ್ಮ ಮುಂದೆ ಉಳಿದುಕೊಂಡಿವೆ." ಜೋಗಿಗಳು ಕೂಡ ಈ ಪಂಥದ ಒಂದು ಭಾಗವೆಂದು ಕಂಡುಬರುತ್ತದೆ.

ಅಧಿಕೃತವಾಗಿ ಕಿನ್ನರಿ ವಾದ್ಯ ಅಥವಾ ಅದನ್ನು ನುಡಿಸುವ ಜೋಗಿಗಳ ಇತಿಹಾಸ 12ನೆಯ ಶತಮಾನದಲ್ಲಿ ಕಾಣಬರುತ್ತದೆ. ಅದಕ್ಕೆ 12ನೆಯ ಶತಮಾನದ ಕಿನ್ನರಿ ಬೊಮ್ಮಯ್ಯ ಶರಣ ಸಾಕ್ಷಿಯಾಗಿದ್ದಾನೆ. ಸ್ವತಃ ಜೋಗಿಗಳು ತಮ್ಮ ಪ್ರಾಚೀನತೆಯನ್ನು ಮಹಾಭಾರತದಷ್ಟು ಹಿಂದಕ್ಕೆ ತೆಗೆದುಕೊಂಡು ಹೋಗುತ್ತಾರೆ. ಮಾಹಾಭಾರತದ ಅರ್ಜುನನೇ ತಮ್ಮ ಮೂಲ ಪುರುಷ ಎಂದು ಹೇಳುತ್ತಾರೆ. ಅರ್ಜುನ ತೀರ್ಥಯಾತ್ರೆ ಮುಗಿಸಿ ತನ್ನ ತಾಯಿಯನ್ನು ನೋಡಲು ಬಂದಾಗ ಜೋಗಿಯ ವೇಷದಲ್ಲಿದ್ದನಂತೆ. ಅವಳಿಗೆ ತನ್ನ ನೀಜರೂಪ ತಿಳಿದ ಮೇಲೆ ತಾನು ಧರಿಸಿದ ವೇಷಭೂಷಣ, ಬಿರುದು ಬಾವಲಿ, ಕಿನ್ನರಿಗಳನ್ನು ತನ್ನ ಜೊತೆಯಲ್ಲಿದ್ದ ಶಿಷ್ಯನೊಬ್ಬನಿಗೆ ಕೊಟ್ಟು, ಲೋಕದಲ್ಲಿ ಪಾಂಡವರ ಕಥೆ ಹೇಳಿಕೊಂಡು ಜೀವಿಸು ಎಂದು ಸೂಚಿಸಿದನಂತೆ. ಅಲ್ಲಿಂದ ಜೋಗಿಗಳ ವಂಶ ಬೆಳೆಯಿತಂತೆ. ಇಂಥ ಅನೇಕ ಭಿನ್ನ ಭಿನ್ನ ಕಥೆಗಳು ಅರ್ಜುನನ್ನೇ ಜೋಗಿಗಳ ಮೂಲ ಪುರುಷ ಎಂದು ಬಿಂಬಿಸುತ್ತವೆ. ಜೋಗಿಗಳು ಸಹ ಅರ್ಜುನನಿಂದಲೇ ನಮ್ಮ ಮೂಲ ಪುರುಷನಿಗೆ ದೀಕ್ಷೆಯಾಗಿದೆ. ಎನ್ನುತ್ತಾರೆ.



ಜೋಗಿ

ಕಾಲ ಬದಲಾದಂತೆ ಜೋಗಿಗಳು ಸಾಮಾನ್ಯರಂತೆ ವೇಷಭೂಷಣಗಳನ್ನು ಧರಿಸುತ್ತಿದ್ದಾರೆ. ಅವರ ಸಂಪ್ರದಾಯಿಕ ವೇಷಭೂಷಣ ವಿಶೇಷವಾಗಿತ್ತು. ಇನ್ನು ಜೋಗಿ ಗುರುಗಳು ಸಂಪ್ರದಾಯಿಕ ಉಡುಗೆ-ತೊಡುಗೆಗಳನ್ನು ಧರಿಸುತ್ತಲೇ ಇರುವರು. ಸಂಪ್ರದಾಯಿಕವಾಗಿ ಜೋಗಿಗಳು ತಲೆಗೆ ಬಣ್ಣದ ಮುಂಡಾಸು, ಮುಂಡಾಸಿಗೊಂದು ತ್ರಿಶೂಲ, ಕಚ್ಚೆ ಪಂಜೆ, ಕ-ರಿಯ ಕೋಟು, ಅದರ ಮೇಲೆ ಅಡ್ಡ ಶಲ್ಯ, ಕೊರಳಿಗೆ ಉದ್ದನೆಯ ಮುತ್ತಿನ ಸರಗಳು, ಕಿವಿಗೆ ಕರ್ಣಕುಂಡಲ ಧರಿಸುತ್ತಿದ್ದರು. ಜೊತೆಗೆ ಕಿನ್ನರಿ ಜೋಗಿಗಳ ಕೈಯಲ್ಲಿ ಕಿನ್ನರಿ, ಕಾಲಿಗೆ ಗೆಜ್ಜೆ, ಹೆಗಲಿಗೆ ಜೋಳಿಗೆ ಇರುತ್ತಿತ್ತು. ಈ ಉಡಿಗೆ ತೊಡಗೆಗಳಿಂದಲೇ ಕಿನ್ನರಿ ಜೋಗಿಗಳೆಂದು ಗುರುತಿಸಬಹುದಾಗಿತ್ತು.

ಸಾಮಾನ್ಯವಾಗಿ ಜೋಗಿಗಳು ಮಾಂಸಾಹಾರಿಗರು. ಸಾಮಾಜಿಕ, ಸಂಸ್ಕೃತಿಕ ಆಚರಣೆಗಳಲ್ಲಿ ಮಾಂಸದೂಟಕ್ಕೆ ಪ್ರಾಶಸ್ತ ವಿತ್ತವರು. ಆದರೆ ಇಂದು ಜೋಗಿ ಯುವಕರು ಸಂಪ್ರದಾಯಿಕವಾಗಿ ಬಂದ ಮಧ್ಯಪಾನ, ಭಂಗಿ ಸೇವನೆಯನ್ನು ವಿರೋಧಿಸುತ್ತಿದ್ದಾರೆಂಬುದು ಸಂತೋಷಕರವಾದ ಸಂಗತಿ. ಅನೇಕ ವಲ್ಲು (ಬಳಿ)ಗಳಿಂದ ಕೂಡಿದ ಜೋಗಿಗಳು ವಲ್ಲು ಸಮಪರ್ಕ ವಾಗಿರುವುದನ್ನು ಗಮನಿಸಿ ಹೆಣ್ಣು ಗಂಡಿಗೆ ಮದುವೆಯನ್ನು ಮಾಡುವರು. ಧಾರಾ ಮುಹೋರ್ತಕ್ಕೆ ಮುನ್ನ ಕುಲದೇವತೆಯಾದ ಭೈರನಿಗೆ ಪೂಜೆ ಸಲ್ಲಿಸಿ, ಹಾಲಿನಲ್ಲಿ ಸೋದರಮಾವ ಧಾರೆ ಎರದುಕೊಡುತ್ತಾನೆ. ಮದುವೆಯಲ್ಲಿ ತಾಳಿ ಕುಟ್ಟುವ ಪದ್ಧತಿಯುಂಟು. ವಿಧವೆ, ವಿಧುರರಿಗೆ ಪುನರ್ವಿವಾಹಕ್ಕೆ ಅವಕಾಶವುಂಟು. ಹೆಣ್ಣು ಸತ್ತರೆ ಆಕೆಯ ತಂಗಿಯನ್ನು ಮದುವೆಯಾಗಬಹುದು. ಆದರೆ ತಮ್ಮನನ್ನು ಮದುವೆ ಆಗಕೂಡದು. ಹಿಂದೆ ಮದುವೆಯಲ್ಲಿ ತೆರಕೊಡುವ ಪದ್ಧತಿ ಇತ್ತು. ವಿವಾಹಪೂರ್ವದಲ್ಲಿ ಒಬ್ಬಳು ಗರ್ಭಿಣಿಯಾದರೆ ಅದಕ್ಕೆ ಉಗ್ರ ಶಿಕ್ಷೆಯೇನು ಇಲ್ಲ. ಜೋಗಿಗಳು ಲೈಂಗಿಕ ಪಾವಿತ್ರವನ್ನು ಮಾನ್ಯ ಮಾಡುವುದಿಲ್ಲ. ಸಂಭೋಗ ಅವರ ಧಾರ್ಮಿಕ ಆಚರಣೆಗಳಲ್ಲಿ ಒಂದು. ಈ ದೃಷ್ಟಿಯಿಂದ ನೋಡಿದರೆ ಜೋಗಿಗಳಲ್ಲಿ ಮಹಿಳೆ ಮೂಲತಃ ಶೋಷಿತೆಯಲ್ಲ.

ಜೋಗಿಗಳು ತಮ್ಮ ಒಳಾಡಳಿತವನ್ನು ಇನ್ನು ಬಲಿಷ್ಠವಾಗಿಯೇ ಇಟ್ಟುಕೊಂಡಿದ್ದಾರೆ. 'ಗುರುಮಠಗಳೇ' ಅವರ ಉಚ್ಚನ್ಯಾಯಲಯ. ಆಡಳಿತದ ಸಹಾಯಕ್ಕಾಗಿ ಗುರುಮಠದ ಕೆಳಗೆ ಕ್ರಮವಾಗಿ ಯಜಮಾನರು. ಬುದ್ಧಿವಂತರು, ಕೋಲ್ಕಾರರು ಇರುವುದುಂಟು. ಇವರು ಅಪಾರವಾದ ಜನಪದ ಹಾಡು, ಕಥೆ, ಒಗಟು, ಹೇಳುವುದುಂಟು. ಅರ್ಜುನ ಜೋಗಿ ಹಾಡಿಗೆ ಮಾತ್ರ ಸೀಮಿತವಾಗದೆ ಮಹಾಭಾರತದ ವಿವಿಧ ಪರ್ವವನ್ನು ಅನೇಕ ರಾತ್ರಿಗಳವರೆಗೆ ಹಾಡಬಲ್ಲರು. ಶಿವ ಪಾರ್ವತಿ, ಗಂಗೆ-ಗೌರಿ, ಭೈರವ-ಮಾಳವ್ವ, ಭೈರವ-ಕಾಳಿ, ರಾಜಹಂಸ, ಶಿವಪುರಾಣ, ಚಿತ್ರಶೇಖರ ಸೋಮಶೇಖರ, ಸತ್ಯಶೀಲಾವತಿ ಹೀಗೆ ಅನೇಕ ಹಾಡುಗಳನ್ನು ರುದ್ರಸೇನರಾಜ, ಜಗತ್ಕರ್ತರಾಜ, ಅರಣ್ಯಕೊಮರ, ಅಸಾವತಿ ಮುಂತಾದ ಕಥೆಗಳನ್ನು ಹೇಳಬಲ್ಲವರಾಗಿದ್ದಾರೆ. ಜೋಗಿ ಮೇಳಗಳನ್ನು ನಡೆಸುವ ಇವರು ಕಿನ್ನರಿ, ದಂಬರಿಗೆ, ಪಿಳ್ಳಂಗೋವಿ, ತಾಳ, ಟಟಗೆ, ಗಗ್ಗರ, ಕಿರುಗೆಜ್ಜೆ ಇಂಥ ವಾದ್ಯಗಳನ್ನು ಬಳಸುವುದುಂಟು.

ಜೋಗಿಗಳು ಮೂಲತಃ ಭೀಕ್ಷೆ ಬೇಡಿ ಜೀವನ ಸಾಗಿಸುವವರು. ಕಿನ್ನರಿ ಜೋಗಿಗಳು ಮಾತ್ರ ಹಾಡು ಹೇಳುತ್ತಾ ಮನೆ ಮನೆ ಸುತ್ತಾಡುವುದುಂಟು. ಈಗ ಸಾಮಾನ್ಯವಾಗಿ ಭಿಕ್ಷಾಟಣೆಯನ್ನು ನಿಲ್ಲಿಸಿ ಅಲ್ಪ ಸ್ವಲ್ಪ ಜಮೀನು, ಉದ್ಯೋಗ, ವ್ಯಾಪಾರ, ದಿನಕೂಲಿ, ಕೈಗಾರಿಕೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಅವರ ಸ್ತ್ರೀಯರು ಸಹ ಗಂಡಸರೊಂದಿಗೆ ದುಡಿಯುವುದುಂಟು. *(ವಿಎಲ್‌ಪಿ)*

ಜೋಗುಳ: ಜನಪದ ಹಾಡುಗಳಲ್ಲಿ ಒಂದು ಪ್ರಕಾರ. ಮಗುವನ್ನು ಲಾಲಿಸಲು, ಸಂತೈಸಿ ಮಲಗಿಸಲು ತಾಯಂದಿರು ಮನೆಯ ಹೆಣ್ಣು ಮಕ್ಕಳು ಹಾಡುತ್ತಾರೆ. ಮಗುವಿನ ಆಟ-ಪಾಠ, ಅಂದ-ಚಂದ, ಸಂಸಾರ ಸುಖ, ಪುರಣ-ಇತಿಹಾಸಕ್ಕೆ ಸಂಬಂಧಿಸಿದ ಸಂಗತಿಗಳು ಈ ಹಾಡುಗಳ ವಸ್ತು. ಮಗುವನ್ನು ತೊಟ್ಟಿಲಲ್ಲಿ ಅಥವಾ ಜೋಳಿಗೆಯಲ್ಲಿ ಮಲಗಿಸಿ ತೂಗುತ್ತ ಹಾಡುವ ಹಾಡುಗಳಿವು. ಇವನ್ನು ಲಾಲಿ ಹಾಡುಗಳೆಂದೂ ಕರೆಯುತ್ತಾರೆ. ಇವುಗಳ ಛಂದಸ್ಸು ಸಾಮಾನ್ಯವಾಗಿ ತ್ರಿಪದಿ. ವಾತ್ಸಲ್ಯದಿಂದ ತುಂಬಿ ತುಳುಕುವ ಈ ಹಾಡುಗಳು ಮಧುರ ಭಾವವನ್ನು ಸೂಸುವಂಥವು. ತಾಯಿಗೆ ತನ್ನ ಮಗುವನ್ನು ಎಷ್ಟು ನೋಡಿದರೂ ಸಾಲದು, ಎಷ್ಟು ಬಣ್ಣಿಸಿದರೂ ತೀರದು. ತಾಯಿಯ ಇಂಪಾದ ಕಂಠಕ್ಕೆ ಮಾರು ಹೋಗಿ ಮಗು ಅಳುವುದನ್ನು ನಿಲ್ಲಿಸಿ, ಹಾಲು ಕುಡಿಯುವುದನ್ನು ಮರೆತು ಮಲಗುತ್ತದೆ. ತೂಗುವ ತೊಟ್ಟಿಲು, ಹಾಡುವ ಜೋಗುಳ ಎರಡೂ ಮಗುವಿಗೆ ಹಿತಾನುಭವವನ್ನು ಕೊಡುತ್ತವೆ. ಜೋಗುಳದ ಪ್ರಭಾವ ಎಷ್ಟು ಎಂಬುದನ್ನು ಈ ಕೆಳಗಿನ ತ್ರಿಪದಿಗಳು ಮನಗಾಣಿಸುತ್ತವೆ.

ತೂಗು, ತೊಟ್ಟಿಲಿಗೊಂದು ಪಾಗು ಪಟ್ಟಿಯ ಹಾಸಿ
ಮಾಗಾಯಿ ಮಗನ ಮಲಗೀಸಿ। ಅವರಮ್ಮ
ಜೋಗುಳ ಹಾಡಿ ಹಿಗ್ಯಾಳ॥
ಜೋಗುಳ ಹಾಡಿದರ ಆಗಲೇ ಕೇಳ್ಯಾನ
ಹಾಲ ಹಂಬಲ ಮೆರತಾನ। ಕಂದೈಗ
ಜೋಗುಳದಾಗ ಅತಿ ಮುದ್ದ

ಜೋಗುಳ ಕೇಳಿ ಅಳುವುದನ್ನು ಮರೆಯುವ ಮಗು ಕೆಲವೊಮ್ಮೆ ಚಂಡಿ ಹಿಡಿದಂತೆ ಅಳುತ್ತಲೇ ಇರುತ್ತದೆ. ಅಂಥ ಸಂದರ್ಭದಲ್ಲೂ ತಾಳ್ಮೆ ಕಳೆದುಕೊಳ್ಳದೆ, ಬೇಸರಗೊಳ್ಳದೆ ಅಳುವ ಕಾಡುವ-ಮಗುವಾದರೂ ಸರಿ ಅದು ತನಗಿರಲಿ ಎಂದು ಮಾತ್ರವಲ್ಲ ಅಂಥ ಮಕ್ಕಳು ಮನೆತುಂಬ ಇರಲೆಂದು ಆಶಿಸುತ್ತಾಳೆ ತಾಯಿ.

ಜೋಗುಳ ಹಾಡುಗಳು ಯಾವುದೇ ಒಂದು ಜನಾಂಗದ ವೈಶಿಷ್ಟ್ಯವಲ್ಲ. ಜಗತ್ತಿನ ಎಲ್ಲ ಜನಾಂಗಗಳಲ್ಲೂ ಇರುವಂಥವು. ಕೂಸು ಕಿರಿ ಕಿರಿ ಮಾಡಿ ಕಾಡುವಾಗ ತಾಯಂದಿರು ತಮ್ಮ ಕೆಲಸಗಳನ್ನು ಬದಿಗೊತ್ತಿ ಎತ್ತರದ ಧ್ವನಿಯಲ್ಲಿ ಹಾಡಿ ರಮಿಸುತ್ತಾರೆ. ಮಗುವನ್ನು ಲಾಲಿಸುವ, ಪಾಲಿಸುವ ಕೆಲಸದಲ್ಲಿ ಎಲ್ಲವನ್ನು ಮರೆತು ತನ್ಮಯರಾಗುವ ತಾಯಂದಿರು ಸಾರ್ಥಕತೆಯನ್ನು ಅನುಭವಿಸುತ್ತಾರೆ. ತಮ್ಮ ಕಣ್ಣ ರೆಪ್ಪೆಗಳಂತೆ ಕಂದಮ್ಮಗಳನ್ನು ಕಾಪಾಡುತ್ತಾರೆ.

ಜೋಗುಳ ಹಾಡುತ್ತ ನಡು ನಡುವೆ ತುಟಿಗಳ ನಡುವೆ ನಾಲಿಗೆಯನ್ನಾಡಿಸುತ್ತ ಒಂದು ವಿಶಿಷ್ಟ ಧ್ವನಿಯನ್ನು ಹೊರಡಿಸುತ್ತಾರೆ. ಅಳ್ಳಳ್ಳಾಯೀ ಎಂದೂ ಮಗುವನ್ನು ರಮಿಸುತ್ತಾರೆ. ಅದನ್ನು ವಿಸ್ಮಯದಿಂದ ನೋಡುವ ಮಗುವನ್ನು ಕಂಡು ಸಂತಸ ಪಡುತ್ತಾರೆ. ಮಕ್ಕಳು ಹೆಣ್ತನದ ಪೂರ್ಣತೆಯ ಸಂಕೇತವೆನ್ನಲಾಗಿದೆ. ಅಂಥ ಮಕ್ಕಳಿಗೆ ನಮ್ಮ ಹೆಣ್ಣು ಮಕ್ಕಳು ಪ್ರಥಮ ಪ್ರಾಶಸ್ತ್ಯವಿತ್ತಿದ್ದಾರೆ. ತಂದೆ-ತಾಯಿ, ಗಂಡಿನಿಗಿಂತಲೂ ಮಕ್ಕಳ ಸ್ಥಾನ ಹಿರಿದು ಎಂದಿದ್ದಾರೆ. *(ಸಿಜಿಐ)*

ಜೋಳಿಗೆ: ಭಿಕ್ಷೆಯ ಚೀಲ. ಕನ್ನಡ ಜನಪದ ಬದುಕಿನಲ್ಲಿ ವಿಶೇಷ ಸ್ಥಾನ ಪಡೆದಿದೆ ಜೋಳಿಗೆ ಶಬ್ದ. 'ಝೋಲಿಕಾ' ಎಂಬ ಸಂಸ್ಕೃತ ಶಬ್ದದಿಂದ ಇದರ ಕನ್ನಡ ರೂಪ ಸಿದ್ಧವಾಗಿರುವಂತೆ ತೋರುತ್ತದೆ. ಸಂನ್ಯಾಸಿಗಳು, ಸಾಧು-ಸಂತರು, ಋಷಿ-ಮುನಿಗಳು, ಬೌದ್ಧ ಭಿಕ್ಕುಗಳು ಇದನ್ನು ಬಗಲಲ್ಲಿ ಹಾಕಿಕೊಂಡು 'ಭವತಿ ಭಿಕ್ಷಾಂದೇಹಿ' ಎಂದು ಭಿಕ್ಷೆ ಕೇಳುವ ಪರಿಪಾಠ ಹಿಂದಿನಿಂದಲೂ ಬಂದುದಾಗಿದೆ. ಬ್ರಾಹ್ಮಣರಲ್ಲಿ ಮುಂಜಿ ಅಥವಾ ಉಪನಯನ ಮತ್ತು ಕಾಶಿಯಾತ್ರೆಯ ಸಂದರ್ಭದಲ್ಲಿ ಜೋಳಿಗೆಯ ಬಳಕೆ ಇದೆ. ಮುಂಜಿವೆಯಾದ ವಟು, ನೆರೆದ ಬಂಧುಬಾಂಧವರಿಂದ ಭಿಕ್ಷೆ ಬೇಡುವನು. ಕಾಶಿಯಾತ್ರೆಯ ಸಂದರ್ಭದಲ್ಲಿ ಹೆಣ್ಣು ಕೊಡದಿದ್ದರೆ ತಾನು ಕಾಶಿಯಾತ್ರೆಗೆ ಹೋಗುವುದಾಗಿ ಹೇಳುವ ಅಣಕು ಪ್ರದರ್ಶನ ನಡೆಯುತ್ತದೆ. ಆಗ ಮದುಮಗ ಜೋಳಿಗೆ ಹಿಡಿದಿರುತ್ತಾನೆ. ವೀರಶೈವರಲ್ಲಿ ಗುರುಸ್ಥಾನದಲ್ಲಿರುವ ಅಯ್ಯನವರ (ಜಂಗಮರು) ಗಂಡು ಮಕ್ಕಳಿಗೆ ಅಯ್ಯಾಚಾರ ಸಂಸ್ಕಾರ ಕೊಡುವಾಗಲೂ ಜೋಳಿಗೆ ಹಿಡಿದು ಭಿಕ್ಷೆ ಕೇಳುವ ಪದ್ಧತಿ ಜಾ-ರಿಯಲ್ಲಿದೆ. ಸ್ವಾಮಿಗಳ ಅಧಿಕಾರ ಸ್ವೀಕಾರದಲ್ಲೂ ಜೋಳಿಗೆ ನೀಡಲಾಗುತ್ತದೆ. ಬೇಡುವುದು ವಿನಯದ ಸಂಕೇತ. ಅಹಂಕಾರ ನಿರಸನ ಇದರ ಉದ್ದೇಶ. ಒಂದು ವಿಶಾಲವಾದ ಬಟ್ಟೆಯ ನಾಲ್ಕು ತುದಿಗಳನ್ನು ಕೂಡಿಸಿ ಗಂಟು ಹಾಕುವ ಮೂಲಕ ಈ ಜೋಳಿಗೆಯನ್ನು ತಯಾರಿಸ ಲಾಗುತ್ತದೆ. ಹೊಲಿದು ಕೂಡ ಜೋಳಿಗೆಯನ್ನು ತಯಾರಿಸ ಲಾಗುತ್ತದೆ. ಜೋಗಿಗಳು ಭಿಕ್ಷೆಗಾಗಿ ಜೋಳಿಗೆಯನ್ನು ಬಳಸು ತ್ತಾರೆ. ಸುಡುಗಾಡು ಸಿದ್ಧರ ಬಗಲಲ್ಲೂ ಜೋಳಿಗೆ ಇರುತ್ತದೆ. ಜೋಳಿಗೆಗೆ ಕೈ ಹಾಕಿ ಏನೆಲ್ಲ ವಸ್ತುಗಳನ್ನು ತೋರಿಸುವ ಕಣ್ಕಟ್ಟು ವಿದ್ಯೆಯನ್ನು ಅವರು ಪ್ರದರ್ಶಿಸುತ್ತಿದ್ದರು.

ಕೆಲವೊಮ್ಮೆ ಈ ಜೋಳಿಗೆ ಆವಶ್ಯಕ ವಸ್ತುಗಳನ್ನೆಲ್ಲ ತುಂಬಿ ಕೊಂಡು ಪಯಣಿಸಲೂ ಸಹಾಯಕ ವಾಗುತ್ತದೆ. ಅದಕ್ಕೆ ನಮ್ಮ ಜನಪದರು ಜೋಳಿಗೆ ಹಾಕಿಕೊಂಡು ಸದಾ ಅಲೆಯುವ ಜೋಗಿಗಳನ್ನು ಕುರಿತು 'ಎದ್ದೆನೊ ಜೋಗಿ ಎಂದರೆ ಜೋಳಿಗೆ ಬಗಲಲ್ಲಿ ಎಂದನಂತೆ' ಎಂದರೆ ಜೋಳಿಗೆ ಧರಿಸಿದರೆ ಹೊರಡಲು ಸಿದ್ಧರಾದಂತೆ. ವಿಳಂಬ ಇಲ್ಲದೆ ನಡೆಯುವ ಸಿದ್ಧತೆಯ ವಿಧಾನವನ್ನದು ತಿಳಿಸುತ್ತದೆ. ಜನಪದ ಬದುಕಿನಲ್ಲಿ ಮಗುವನ್ನು ಮಲಗಿಸಲು ಜೋಳಿಗೆಯನ್ನು ರೂಪಿಸುತ್ತಾರೆ. ತೊಟ್ಟಿಲಿಗಿಂತಲೂ ಇದು ಮಗುವಿಗೆ ಹಿತವಾಗಿರುತ್ತದೆ. ತಾಯಿಯ ಮಡಿಲ ಅನುಭವವನ್ನು ಕೊಡುತ್ತಿರುತ್ತದೆ. ಹೆಣ್ಣು ಮಕ್ಕಳ ಹಳೆ ಸೀರೆಯನ್ನು ಜೋಳಿಗೆಯಂತೆ ಕಟ್ಟಿ ತೂಗುವ ಪರಿಪಾಠ ಅನೇಕ ಕಡೆಗಳಲ್ಲಿದೆ. 'ಜೋಳಿಗಿ ಜಾಪಟ್ಟಿ ಮನೆಯಲ್ಲಿ ಚಿಪ್ಪಾಟಿ ಮಗುವಿನ ಅತ್ತಿ ಆಯಗೊಟ್ಟಿ ಎಂಬ ಪ್ರಾಸ ಪದ್ಯ ಹಾಸ್ಯವನ್ನು ಸೂಸುವಂಥದು.

ರಾಶಿಯ ಸಂದರ್ಭದಲ್ಲಿ ಜಂಗಮರು ಹೊಲಗಳಿಗೆ ಹೋಗಿ ಧಾನ್ಯಗಳನ್ನು ಪಡೆಯಲು ಜೋಳಿಗೆ ಚಾಚುತ್ತಾರೆ. ಇತ್ತೀಚಿನ ದಿನಗಳಲ್ಲಿ ಇಲಕಲ್ ಮಹಂತ ಅಪ್ಪಗಳು ಊರೂರು ಸುತ್ತಿ ಜನರ ದುಶ್ಚಟ ಬಿಡಿಸಲು ಜೋಳಿಗೆ ಬಳಸಿದರು. ಅದು 'ಮಹಂತ ಜೋಳಿಗೆ' ಎಂದು ಹೆಸರಾಯಿತು. *(ಸಿಜಿಐ)*

ಜ್ಯೋತಿಷ್ಯ: ಜನಪದರು ತಮ್ಮ ಜೀವನದಲ್ಲಿ ಮಾಡಬೇಕಾದ ಯಾವುದೇ ಕೆಲಸ ಅಂದರೆ ಬಿತ್ತುವಾಗ, ಮದುವೆ ಮಾಡುವಾಗ, ವ್ಯಾಪಾರ ಮಾಡುವಾಗ ಮನೆ ಪೂಜೆ-ಅಂಗಡಿ ಪೂಜೆ ಮಾಡುವಾಗ, ಆಕಸ್ಮಿಕವಾಗಿ ಅವಘಡಗಳುಂಟಾದಾಗ ಆತಂಕಗೊಂಡು ಮುಂದೊದಗುವುದನ್ನು ತಿಳಿಯಲು, ತೊಂದರೆಗಳನ್ನು ನಿವಾರಿಸಲು, ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಜೋಯಿಸರನ್ನು, ಪೂಜಾರಿಗಳನ್ನು, ಸ್ವಾಮಿಗಳನ್ನು ಕಂಡು ವಿಚಾರಿಸುವುದು. ಜನಪದ ಜ್ಯೋತಿಷ್ಯವೆನಿಸದು. ಜನಪದ ಜ್ಯೋತಿಷ್ಯವನ್ನು ಕವಡೆ ಶಾಸ್ತ್ರ, ಓಲೆಗರಿ ಶಾಸ್ತ್ರ, ಗಿಣಿ ಶಾಸ್ತ್ರ, ಕೊರವಂಜಿ, ಕುರುಮಾಮ ಮೊದಲಾದುವನ್ನು ಕರೆಯತ್ತಾರೆ.

ಕವಡೆ ಶಾಸ್ತ್ರ: ಇದನ್ನು ಹೇಳುವವರು ಕೇಳಲು ಬಂದವರ ಕೈಯಿಂದಲೇ ಕವಡೆಗಳನ್ನು ಹಾಕಿಸುತ್ತಾರೆ. ಬಿದ್ದ ಕವಡೆಗಳನ್ನು



ಜ್ಯೋತಿಷ್ಯಗಾರ

ಎಣಿಸಿ ಸರಿ–ಬೆಸಗಳ ಆಧಾರದಿಂದ ಲೆಕ್ಕಾಚಾರ ಹಾಕಿ ಅದಕ್ಕನುಗುಣವಾಗಿ ಒಳ್ಳೆಯದು ಕೆಟ್ಟದ್ದರ ವಿವರ ಹೇಳುತ್ತಾರೆ.

ಓಲೆಗರಿ ಶಾಸ್ತ್ರ: ಜ್ಯೋತಿಷಿಯ ಹತ್ತಿರ ಓಲೆಗರಿ ಅಥವಾ ತಾಳೆಗರಿಯ ಕಟ್ಟಿರುತ್ತದೆ. ಒಂದೊಂದು ಗರಿಯಲ್ಲಿ ಒಂದೊಂದು ವಿಷಯವನ್ನು ಕುರಿತು ಬರೆಯಲಾಗಿರುತ್ತದೆ. ಭವಿಷ್ಯ ಕೇಳಲು ಬಂದವರ ಮುಂದೆ ಈ ಗರಿಗಳ ಕಟ್ಟನ್ನಿಟ್ಟು, ಅವರ ಕೈಗೆ ಒಂದು ಕಡ್ಡಿಯನ್ನು ಕೊಟ್ಟು ಕಟ್ಟಿನ ನಡುವೆ ಸೇರಿಸಲು ಹೇಳುತ್ತಾರೆ. ಆ ಕಡ್ಡಿ ಎಲ್ಲಿರುತ್ತದೋ ಅಲ್ಲಿಯ ಗರಿಯನ್ನು ತೆಗೆದುಕೊಂಡು ಜೋಯಿಸರು ಅದರಲ್ಲಿ ಬರೆದಿರುವ ವಿಚಾರವನ್ನು ಓದಿ ವಿವರಿಸಿ ಶುಭಾಶುಭಗಳನ್ನು ಕುರಿತು ಹೇಳುತ್ತಾರೆ.

ಗಿಣಿ ಶಾಸ್ತ್ರ ಅಥವಾ ಭವಿಷ್ಯ: ಇದೂ ಕೂಡ ಮೇಲಿನ ವಿಧಾನದಂತೆಯೆ ಇದೆ. ಇಲ್ಲಿ ಗಿಣಿ ಪ್ರಮುಖ ಪಾತ್ರವಹಿಸುತ್ತದೆ. ಭವಿಷ್ಯ ಹೇಳುವವ ತನ್ನೊಂದಿಗೆ ಪಂಜರದಲ್ಲಿ ಗಿಣಿಯನ್ನಿರಿಸಿಕೊಂಡು ಕುಳಿತಿರುತ್ತಾನೆ. ಅವನ ಬಳಿ ಹತ್ತಾರು ಲಕೋಟೆಗಳಲ್ಲಿ ಬರೆದಿಟ್ಟ ದಪ್ಪ ಕಾಗದದ ಹಾಳೆಗಳು ಮತ್ತು ಒಂದೊಂದು ಲಕೋಟೆಯಲ್ಲಿ ಒಂದೊಂದು ದೇವರ ಪಟವಿರುತ್ತದೆ. ಕೆಲವೊಮ್ಮೆ ಹಾಳೆಗೆ ಬದಲಾಗಿ ಓಲೆಗರಿಗಳಿರುತ್ತವೆ. ಭವಿಷ್ಯ ಹೇಳಬೇಕಾದಾಗ ಇವನ್ನು ಕೇಳುಗರ ಮುಂದೆ ಹರಡಿ ಗಿಣಿಯಿಂದ ಎತ್ತಿಸುತ್ತಾರೆ. ಹಾಗೆ ಎತ್ತಿದ ಲಕೋಟೆಯಲ್ಲಿ ಬರೆದದ್ದರೆ ಮೇಲಿಂದ ಮುಂದಾಗುವುದನ್ನು ಹೇಳುತ್ತಾರೆ.

ಮೇಲೆ ವಿವರಿಸಿದ ಮೂರು ಬಗೆಯ ಭವಿಷ್ಯಕಾರರು ಸಾಮಾನ್ಯವಾಗಿ ಜಾತ್ರೆ, ಸಂತೆ, ಮಾರುಕಟ್ಟೆ, ಚೌಕ ಮೊದಲಾದ ಜನ ಸೇರುವ ಸ್ಥಳಗಳಲ್ಲಿ ಕುಳಿತಿರುತ್ತಾರೆ. ಕೆಲವೊಮ್ಮೆ ಗಿಣಿ ಶಾಸ್ತ್ರದವರು ಊರಲ್ಲಿ ಗಿಣಿಶಾಸ್ತ್ರ ಕೇಳ್ತಿರೇನು? ಎಂದು ಕೇಳುತ್ತ ಅಲೆಯುತ್ತಾರೆ. ಹಿಂದೆ ಇವರೆಲ್ಲ ರೊಟ್ಟಿ, ದವಸ ಪಡೆದು ಶಾಸ್ತ್ರ ಹೇಳುತ್ತಿದ್ದರು. ಹಳೆ ಬಟ್ಟೆಗಳನ್ನು ಕೇಳಿ ಪಡೆಯುತ್ತಿದ್ದರು.

ಕೊರವಂಜಿ: ಇವರು ಸಾಮಾನ್ಯ ವಾಗಿ ಹಳ್ಳಿ–ಹಳ್ಳಿ ಓಡಾಡುತ್ತ ಕಣಿ ಕೇಳ್ತಿರೇನಮ್ಮ ಕಣಿ ಎಂದು ಕೇಳುತ್ತ ಬೀದಿ ಬೀದಿ ಸುತ್ತುತ್ತಾರೆ. ಕೇಳಲು ಬಂದವರ ಅಂಗೈಯ್ಯ ಗೆರೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಅದರಂತೆ ಅವರ ಜೀವನದಲ್ಲಿ ಹಿಂದೆ ನಡೆದ ಮುಂದೆ ನಡೆಯುವ ವಿಚಾರಗಳನ್ನು ಕುರಿತು ಹೇಳುತ್ತಾರೆ.

ಕುರುಮಾಮ: ಕೊರವಂಜಿಯರಂತೆ ಇವರೂ ಅಲೆಮಾರಿ ಗಳು. ಏಕತಾರಿ ಹಿಡಿದು 'ರಾಮಾನಂದಂ, ರಾಮಾನಂದಂ, ಮಸ್ತಾನನ್ನು ಗುರುನಾದನ್ನೆ ಕೊಂಡದೇವತೆ' ಎಂದು ಹಾಡುತ್ತ ಬೀದಿ ಸುತ್ತುತ್ತಾರೆ. ಇವರಿಗೆ ರಾಮ ಕೊಂಡದಿ' ಎಂದೂ ಕರೆಯುತ್ತಾರೆ. ಇವರೂ ಹಸ್ತರೇಖೆ ನೋಡಿಯೆ ಭವಿಷ್ಯ ನುಡಿಯುತ್ತಾರೆ. ನಮ್ಮ ಮನಸ್ಸಿನಲ್ಲಿ ಇರುವುದನ್ನು ಅರಿತು ಹೇಳುವ ಬುದ್ಧಿವಂತಿಕೆ ಜಾಣ್ಮೆ ಅವರದು.

ಹೀಗಿಯೇ ನಸುಕಿನ ಜಾವದಲ್ಲಿ ಹಕ್ಕಿ ಶಕುನ ಹೇಳುವವರು 'ಹಕ್ಕಿ ನುಡಿಯತ್ತೈತಿ, ಹಕ್ಕಿ ನುಡಿಯತ್ತೈತಿ' ಎಂದು ಬುಡ ಬುಡಿ–ಕೆಯನ್ನು ನುಡಿಸುತ್ತ ತಾವು ಹಕ್ಕಿ ನುಡಿಯಿಂದ ಕಂಡು ಕೊಂಡವನ್ನು ಸಾರುತ್ತ ಹೊಗುತ್ತಾರೆ. ಈ ಮಾತುಗಳು ವ್ಯಕ್ತಿ ಸಂಬಂಧಿಯಾಗಿರದೆ ಸಾಮಾನ್ಯವೆಂಬಂತಿರುತ್ತವೆ. ಹೆಚ್ಚಾಗಿ ಸಾವನ್ನು ಸೂಚಿಸುವಂಥವು ಆಗಿರುತ್ತವೆ. ಬುಡ ಬುಡಕಿ ಮಾತು ಬುಡತನ ಸುಳ್ಳು' ಎಂಬ ಗಾದೆಯೊಂದಿದೆ. ಇವರ ಮಾತು ಕೇಳಿದ ಜನ ಯಾವ ಜೀವಕ್ಕೆ ಕಂಟಕ ಬಂತೊ ಎಂದು ಆತಂಕಪಡುತ್ತಾರೆ. ಇವರಂತೆ ಸಾರುವ ಅಯ್ಯಗಳೂ ಕಾಲಜ್ಞಾನದ ಭವಿಷ್ಯ ಹೇಳುತ್ತ ಮನೆ ಮನೆಯಲ್ಲಿ ಭಿಕ್ಷೆ ಪಡೆಯುತ್ತಾರೆ. 'ಬೆಳ್ಳಿ ಬಟ್ಟಿಲಾಗಲಿ ತೂಗು ತೊಟ್ಟಿಲಾಗಲಿ' ಎಂದು ಹರಸಿ ಹೋಗುತ್ತಾರೆ.

ಇವೆಲ್ಲ ಜನಪದ ಜ್ಯೋತಿಷ್ಯದ ಪ್ರಮುಖ ಪ್ರಕಾರಗಳು. ಇವರಲ್ಲದೆ ಕಾಡುಸಿದ್ಧರು, ಗೊರವರು ಮೊದಲಾದವರು ಕೂಡ ಭಿಕ್ಷಾಟನೆಯ ಸಂದರ್ಭದಲ್ಲಿ ಆ ಊರಿಗೆ ಇಲ್ಲವೆ ಆ ಊರಲ್ಲಿಯ ಯಾವುದೋ ಮನೆಗೆ ಬಂದೊದಗುವ ಗಂಡಾಂತರ ಅಥವಾ ಶುಭವನ್ನು ಕುರಿತು ಹೇಳುತ್ತಾರೆ. ಕಾಡು ಗೊಲ್ಲರು, ಗಣೆ ಊದಿ ಕಣಿ ಹೇಳುತ್ತಾರೆ. ಮೈ ಮೇಲೆ ದೇವರು ಬಂದವರು ಶುಭಾಶಭಗಳನ್ನು ಹೇಳುತ್ತಾರೆ. ಹಳ್ಳಿಗಳಲ್ಲಿ ಇದು ವ್ಯಾಪಕವಾಗಿ ಕಂಡು ಬರುತ್ತದೆ.

(ಸಿಜಿಐ)

ಟ

ಟಗರಿನ ಕಾಳಗ: ಟಗರುಗಳನ್ನು ಹುರಿದುಂಬಿಸಿ ಹೋರಾಟ ಮಾಡಿಸುವ ಒಂದು ಮನರಂಜನಾ ಪಂದ್ಯ. 'ತಗರ್' ಎಂದರೆ ತಡೆ, ಅಡ್ಡಗಟ್ಟು, ಅಡ್ಡಿಪಡಿಸು, ನಿರೋಧಿಸು ಎಂಬ ಅರ್ಥಗಳಲ್ಲಿ ಬಳಕೆಯಾಗುತ್ತದೆ. ಗ್ರಾಮೀಣ ಮನರಂಜನಾ ಕ್ರೀಡೆಗಳಲ್ಲಿ ಟಗರಿನ ಕಾಳಗವೂ ಒಂದಾಗಿದೆ. ಗಂಡುಕುರಿಯನ್ನು ಟಗರು ಎಂದು ಕರೆಯುತ್ತಾರೆ. ಶ್ರಮ ಪರಿಹಾರಾರ್ಥವಾಗಿ ಗ್ರಾಮೀಣ ಮತ್ತು ಗುಡ್ಡಗಾಡಿನ ಜನರು ಹುಂಜ, ಕುರಿ ಮೊದಲಾದವುಗಳನ್ನು ಕ್ರೀಡೆಗೆ ಆಹ್ವಾನಿಸಿ ಸಂತೋಷಪಡುತ್ತಾರೆ.

ಸಾಮಾನ್ಯವಾಗಿ ಬುಡಕಟ್ಟು ಮತ್ತು ಗ್ರಾಮೀಣ ಜನರು ದಿನವಿಡೀ ಹೊಲಮನೆ ಕೆಲಸ ಇಲ್ಲವೆ ಹೊಟ್ಟೆಪಾಡಿಗಾಗಿ ದುಡಿಯಲು ಹೋಗುವುದರಿಂದ, ಸಮಯ ಸಂದರ್ಭ ದೊರೆತಾಗ ಮಾತ್ರ ಕೆಲವು ಕ್ರೀಡೆಗಳಿಂದ ಮನದಣಿಯುತ್ತಾರೆ. ಗಂಡಸರು ಕೋಳಿ ಕಾಳಗ, ಟಗರಿನ ಕಾಳಗ, ಬೇಟೆ ಆಟಗಳು, ಹಾಗೂ 'ಶಕ್ತಿ ಪ್ರದರ್ಶನ' ಮೊದಲಾದ ಕೆಲವು ಪ್ರಮುಖ ಆಟಗಳನ್ನು ಆಡುತ್ತಾರೆ.

ವಿಶೇಷವಾಗಿ ಜಾತ್ರೆ, ಉತ್ಸವ, ಹಬ್ಬದಾಚರಣೆಯ ಸಂದರ್ಭದಲ್ಲಿ ಅನೇಕ ಬಗೆಯ ಕಸರತ್ತಿನ ಆಟಗಳನ್ನು ಪ್ರದರ್ಶಿಸುವುದು ಕಂಡು ಬರುತ್ತದೆ. ದೈಹಿಕ ಹಾಗೂ ಮಾನಸಿಕ ನೆಮ್ಮದಿಗಾಗಿ ಈ ಬಗೆಯ ಶಕ್ತಿ ಪ್ರದರ್ಶನಗಳನ್ನು ನೀಡಿ ಮನೋರಂಜನೆಯನ್ನು ಪಡೆಯುವುದೇ ಟಗರಿನ ಕಾಳಗದ ಹಿಂದಿನ ಉದ್ದೇಶವಾಗಿದೆ.

ಟಗರಿನ ಕಾಳಗ ಜೂಜಿನಂತೆ, ಮದಿಸಿದ ಬಲಿಷ್ಠ ಗಂಡು

ಕುರಿಗಳನ್ನು ಆಯ್ಕೆ ಮಾಡಿಕೊಂಡು ಜೂಜಾಡುವುದನ್ನು ಕಾಣುತ್ತೇವೆ. "ತಗರ್ ತಗರೊಳ್ ಮಲ್ಲರ್ ಮಲ್ಲರೊಳ್ ತಾಗುವಂತೆ ಕಿಚ್ಚಂ ಕಿಡಿಯುಮಾಗಿ ತಮ್ಮೊಳ್ ತಾಗಿ" (ಧರ್ಮಾಮೃತ 3–86) 'ಪುರಾಣವೆಂಬುದು ಪುಂಡರಗೋಷ್ಠಿ ತರ್ಕವೆಂಬುದು ಟಗರ ಹೋರಟೆ' (ಅವಚಂ 103–465) 'ತಗರಿನ ಬಲಿದ ಕೊಂಬಂ ತನ್ನೆಡದ ಕೈಯಲ್ಲಿ ಪಿಡಿದುಕೊಂಡು (ಬಸವಪುರಾಣ 29–4)' ತೊಗರೆಯ ತೊಗೆ ಲೇಸು, ತಿಗರಿಗೆ ಮೊಳೆ ಲೇಸು ತಗರ ಹಿಂಗಾಲ ಸತುಲೇಸು (ಸರ್ವಜ್ಞ–722) ಎಂದು ಕನ್ನಡ ಕಾವ್ಯಗಳಲ್ಲಿ ಟಗರ ಕಾಳಗದ ಮೂಲ ಅರ್ಥವನ್ನು ಬಳಸಿಕೊಂಡ ಹೋಲಿಕೆಗಳನ್ನು ಕಾಣುತ್ತೇವೆ.

(ಎಸ್‌ಎಲ್‌ಜೆ)

ಟೇ

ಟೇಂಗಳಿ: ಕಲಬುರ್ಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಐತಿಹಾಸಿಕ ಗ್ರಾಮ. ಮೂರನೆಯ ತೈಲಪನ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಿಶ. 973 ರಿಂದ 1156ರ ವರೆಗೆ ಅಧಿಕಾರದಲ್ಲಿ ಇದ್ದ ಕಲ್ಯಾಣ ಚಾಲುಕ್ಯರು ಮೂಲತಃ ಬಾದಾಮಿ ಚಾಲುಕ್ಯರ ವಂಶಜರು ಎಂದು ನಂಬಲಾಗಿದೆ. ಕ್ರಿಶ. 753 ರಿಂದ 973ರ ವರೆಗೆ ಈ ಪ್ರಾಂತ್ಯವು ರಾಷ್ಟ್ರಕೂಟರ ಆಡಳಿತಕ್ಕೆ ಒಳಪಟ್ಟಿತ್ತು. ರಾಷ್ಟ್ರಕೂಟರ ರಾಜಧಾನಿ (ಮಾನ್ಯಖೇಟ) ಮಳಖೇಡನ್ನು, ರಾಷ್ಟ್ರಕೂಟರ ಅವನತಿಯ ಕೊನೆಯಲ್ಲಿ ಪ್ರಾಂತೀಯ ಅಧಿಕಾರಿಯಾಗಿದ್ದ ಬಾದಾಮಿ ಚಾಲುಕ್ಯರ ಎರಡನೆಯ ತೈಲಪ, ರಾಷ್ಟ್ರಕೂಟರ ಎರಡನೆಯ ಕರ್ಕನನ್ನು ಸದೆ ಬಡೆದು, ರಾಷ್ಟ್ರಕೂಟರ ರಾಜಧಾನಿಯಾದ ಮಳಖೇಡವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಎರಡನೆಯ ತೈಲಪನು ಕಲ್ಯಾಣ ಚಾಲುಕ್ಯರ ಪ್ರಥಮ ದೊರೆಯಾಗಿ, ಕ್ರಿಶ. 973 ರಲ್ಲಿ ಚಾಲುಕ್ಯರು ಸ್ವಾತಂತ್ರ್ಯ ಆಡಳಿತವನ್ನು ಆರಂಭಿಸಿದರು. ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ದೊಡ್ಡ ಹಳ್ಳಿಯಾದ ಟೇಂಗಳಿ ಗ್ರಾಮವು ಆ ಕಾಲದ ಈ ಬಗ್ಗೆ ಅನೇಕ ಐತಿಹಾಸಿಕ ಪುರಾವೆಗಳನ್ನು ಹೊತ್ತು, ತನ್ನ ಇತಿಹಾಸ ಹೇಳುತ್ತದೆ.

ಕ್ರಿಶ. 12 ನೆಯ ಶತಮಾನದ ಕೊನೆಯಲ್ಲಿ ಕಲ್ಯಾಣ ಚಾಲುಕ್ಯರ ಮೂರನೆ ತೈಲಪನ ಆಡಳಿತಕ್ಕೆ ಈ ಗ್ರಾಮವು ಒಳಪಟ್ಟಿತ್ತೆಂದು ಹೇಳಲಾಗುತ್ತದೆ. ಕಲ್ಯಾಣ ಚಾಲುಕ್ಯರ ಅರಸರ ಪ್ರಭಾವದಿಂದ ಹಿಂದು ದೇವಾಲಯಗಳು, ಬೌದ್ಧ ದೇವಾಲಯಗಳು, ಜೈನ ಬಸದಿಗಳು ನಿರ್ಮಾಣವಾದವು. 11 ಮತ್ತು 12 ಶತಮಾನಗಳು ಚಾಲುಕ್ಯ ರಾಜವಂಶಜರಿಗೆ ಸಿರಿ ಸಂಪತ್ತಿನಿಂದ ಕೂಡಿದ ಸಮೃದ್ಧಿ ತುಂಬಿದ ನಾಡಾಗಿತ್ತೆಂದು ಇತಿಹಾಸಕಾರರು ಹೇಳುತ್ತಾರೆ.

ರಾಜವಂಶಜರು ಮಾತ್ರವಲ್ಲದೆ, ಕಲಾಪ್ರೇಮಿಗಳು, ಶ್ರೀಮಂತ ಭಕ್ತರು, ಕೃಷಿಕರು, ಬಡ ಭಕ್ತರಿಂದ ಚಾಲುಕ್ಯರ ಅವಧಿಯಲ್ಲಿ ಸುಂದರ ಶಿಲ್ಪ ಕಲಾಕೃತಿಗಳ ದೇವಸ್ಥಾನಗಳು ನಿರ್ಮಾಣವಾದವು. ಟೇಂಗಳಿ ಗ್ರಾಮಕ್ಕೆ ತನ್ನದೇ ಆದ ವೈಶಿಷ್ಟ್ಯಪೂರ್ಣ ಇತಿಹಾಸವಿದ್ದು, ಗ್ರಾಮದ ಮೂಲ ಹೆಸರು ತೆಂಕಣ್ಣ ಗಾಳಿ. ತೆಂಕ+ಗಾಳಿ=ತೇಂಗಳಿಯಾಗಿ ಮಾರ್ಪಟ್ಟಿದೆ. ಪ್ರತಿ 3 ಗ್ರಾಮಕ್ಕೆ ಹೊಂದಿಕೊಂಡು ನದಿ ಹರಿಯುತ್ತಿರುವುದರಿಂದಾಗಿ ತೇಂಗನ ಈ ಸ್ಮಾರಕದಲ್ಲಿ ಗಾಳಿ (ತೆಂಗಳಿ) ಎಂದು ಕರೆಯುತ್ತಿರಬಹುದೆಂದು ಕಲ್ಪಿಸಿಕೊಳ್ಳಬಹುದು.

ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ಎರಡು ಪ್ರತ್ಯೇಕ ದೇವಸ್ಥಾನಗಳು ಗ್ರಾಮ ಹೊಂದಿದ್ದು, ಶ್ರೀ ಭೋಗೇಶ್ವರ ಮತ್ತು ಶ್ರೀ ನಾಚೇಶ್ವರ ದೇವಾಲಯಗಳು ಕಾಲ ಕಳೆದಂತೆ ತಮ್ಮ ಮೂಲ ಹೆಸರು ಕಳೆದುಕೊಂಡವು. ಗ್ರಾಮಕ್ಕೆ ಹೊಂದಿಕೊಂಡ ಬೆಣ್ಣತೊರೆ ನದಿಯ ಪಕ್ಕದಲ್ಲಿ ತನ್ನ ಮೂಲ ಹೆಸರು ಕಳೆದುಕೊಂಡು ದೇವಾಲಯವು, ಕಲಿಯುಗದಲ್ಲಿ ಕರೀಬಸವಣ್ಣ ದೇವಸ್ಥಾನವಾಗಿ ನಾಮಾಂಕಿತವಾಗಿದೆ.

ಕ್ರಿಶ. 18 ಮತ್ತು 19 ನೇ ಶತಮಾನ ಸಮೀಪಿಸಿದಂತೆ ದೇವಸ್ಥಾನಕ್ಕೆ ಅನೇಕ ಹೆಸರುಗಳು ಬದಲಾವಣೆಯಾದವು. ಕಲ್ಯಾಣ ಚಾಲುಕ್ಯರ ನಂತರ ರಾಜ್ಯವಾಳಿದ ಹೊಯ್ಸಳರು, ಕಳಚೂರ್ಯರು, ಯಾದವರು ಹಾಗೂ ಕಾಕತೀಯರ ಕಾಲ ಮುಗಿಯುತ್ತಿದ್ದಂತೆ ರಜಾಕರ ಕಾಲ ಪ್ರಾರಂಭವಾಯಿತು.

ಕ್ರಿಶ. 18 ಮತ್ತು 19 ಶತಮಾನದಲ್ಲಿ ರಜಾಕರ ಕಪಿಮುಷ್ಠಿಗೆ ಈ ದೇವಾಲಯಗಳು ನಾಶವಾದವು. ನಂತರ ದೇವಾಲಯಕ್ಕೆ ಕಾಲಿಮಜೀದ ಎಂದು ನಾಮಕರಣ ಮಾಡಿದರು. ಮುಸ್ಲಿಮರು ಕಾಲಿ ಮಜೀದ ಎಂದು ಹಿಂದುಗಳು ಕರ ಮಸ್ತಿ ಎಂತಲೂ ಕರೆಯಲು ಪ್ರಾರಂಭಿಸಿದರು. ನಿಜಾಮ ಶಾಹಿ ಅಧಿಕಾರ ಅವಧಿ ಮುಗಿಯುತ್ತಿದ್ದಂತೆ ದೇವಸ್ಥಾನಗಳು ಮತ್ತೆ ಹಿಂದುಗಳ ವಶವಾದವು. ಕಾಲೀಮಜೀದ ಎಂಬ ಹೆಸರು, ಕರೀಬಸವಣ್ಣನ ದೇವಸ್ಥಾನ ಎಂದು ಕರೆಯಲು ಪ್ರಾರಂಭಿಸಿದರು. ಈ ಸ್ಮಾರಕದಲ್ಲಿ ಈಗಲೂ ಕರಿಬಸವಣ್ಣನ ಮೂರ್ತಿ ನೋಡಲು ಸಿಗುತ್ತದೆ.

ಬಾದಾಮಿಯ ಚಾಲುಕ್ಯರು ಚೌಕಾಕಾರದ ಸ್ಥಂಬಗಳನ್ನು ನಿರ್ಮಿಸಿದರೆ, ಕಲ್ಯಾಣ ಚಾಲುಕ್ಯರು ಚರಕಿ ಯಂತ್ರವನ್ನು ಬಳಸಿ ದುಂಡಗಿನ ಕಂಬಗಳ ಮೇಲೆ ಚಿತ್ರಿಸಿದ ಚಿತ್ರಗಳು ಇಲ್ಲಿ ನೋಡಲು ಸಿಗುತ್ತವೆ. ದೇವಾಲಯವು ಕದಂಬನಾಗರ ಶೈಲಿಯಲ್ಲಿ ನಿರ್ಮಿಸಲಾಗಿದೆ. ಕಲ್ಯಾಣ ಚಾಲುಕ್ಯ ಕಾಲದ ದೇವಾಲಯಗಳು ಸಮೀಕ್ಷೆ ನಡೆಸಿದಾಗ, ಹಲವು ದೇವಾಲಯಗಳು ಪುರಾಣೋಕ್ತ ಶೈವಸಂಘ ಅನುಸರಿಸಿದರೆ, ಇನ್ನು ಹಲವು ದೇವಾಲಯಗಳು ಲಾಕುಳೀಶ, ಕಾಳಾಮುಖ, ಶೈವ ಪಂಥಗಳನ್ನು ಅನುಸರಿಸಿವೆ.

ಟೇಂಗಳಿ ಗ್ರಾಮದ ಕರೀಬಸವಣ್ಣ ದೇವಸ್ಥಾನ ಕಲಿಯುಗದ ಆಶ್ರಯ ದಾತರಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುತ್ತದೆ. ದನಗಳ ಕೊಟ್ಟಿಗೆಯಾಗಿ, ಜೂಜುಕೋರರ ಅಡಗುದಾಣವಾಗಿ, ನಿದ್ದೆ ಬಡುಕರ ಆಶ್ರಮವಾಗಿ, ನದಿ ನೀರಿನ ತಂಗಾಳಿಗೆ ದೇವಸ್ಥಾನವು ತನ್ನನ್ನು ತಾ ಮೈ ಮರೆತು ಕಕ್ಕಾಬಿಕ್ಕಿಯಾಗಿ, ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು, ಮೂಕ ರೋದನವನ್ನು ಪ್ರಕೃತಿಗೆ ಸಮರ್ಪಿಸಿಕೊಂಡು ರೋಧಿಸುತ್ತಿದೆ. *(ಎಸ್‌ಬಿವೈ)*

ಠಾ

ಠಾಣ್ಯೆ: ಸ್ಥಳ, ಬೀಡಾರ, ವಸತಿ, ಸೈನ್ಯದ ನಿಲುವು ಹಾಗೂ ಕಾವಲು ಕಟ್ಟೆ. ಠಾಣೆಯ ತತ್ಸಮ ಪದ ಸ್ಥಾನ ಎಂದಾಗುತ್ತದೆ. ಠಾಣೆ ಪದ ಕನ್ನಡ ಸಾಹಿತ್ಯದಲ್ಲಿ ಪ್ರಚಲಿತ ಪದವಾಗಿದೆ. ಕುಮಾರವ್ಯಾಸನ ಭಾರತ ಕಥಾ ಮಂಜರಿಯಲ್ಲಿ ಹೀಗೆ ಠಾಣೆ ಪದ ಬಳಕೆಯಾಗಿದೆ.

ಸಾಮಾನ್ಯವಾಗಿ ಠಾಣೆ ಎಂದರೆ ನಮಗೆ ಪೋಲಿಸ್ ಸ್ಟೇಷನ್ ಎಂದು ಅರ್ಥವಾಗುತ್ತದೆ. ಪತ್ರಕರ್ತರು ಕೂಡ ದಿನಪತ್ರಿಕೆಗಳಲ್ಲಿ ಅಪರಾಧ ಸುದ್ಧಿಗಳು ಬರೆಯುವಾಗ ಕೊನೆಯಲ್ಲಿ.....ಪೋಲಿಸ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು; ಮುಂದಿನ ತನಿಖೆ ಕೈಗೊಳ್ಳಲಾಗಿದೆ ಎಂದು ಬರೆಯುತ್ತಾರೆ. ಬೀದರ ಜಿಲ್ಲೆ ಔರಾದ ತಾಲ್ಲೂಕಿನಲ್ಲಿ ಠಾಣಾ ಕುಸನೂರ ಎಂಬ ಒಂದು ಊರೇ ಇದೆ. ಈ ಗ್ರಾಮ ಬೀದರ ಜಿಲ್ಲೆ ಗಡಿಭಾಗದಲ್ಲಿದ್ದು; ಅಲ್ಲಿಯ ಜನರ ಸುರಕ್ಷತೆಗಾಗಿ ಪೋಲಿಸ ಠಾಣ್ಯವನ್ನು ಸ್ಥಾಪಿಸಲಾಯಿತು. ಅಂದಿನಿಂದ ಇಂದಿನವರೆಗೆ ಆ ಊರಿಗೆ ಠಾಣಾ ಕುಸನೂರ ಎಂದೇ ಕರೆಯುತ್ತಾರೆ. *(ಹೆಚ್‌ಕೆ)*

ಡ

ಡಂಗುರ: ಸಾರ್ವತ್ರಿಕವಾಗಿ ಊರಿನ ಯಾವುದೇ ಸುದ್ಧಿಯನ್ನು ಮುಟ್ಟಿಸುವಾಗ ಹಲಿಗೆಯನ್ನು ಬಡೆಯುತ್ತಾ, ಸುದ್ಧಿಯನ್ನು ಪುಕಾರಿಸುತ್ತಾ ಹೋಗುವುದು. ಡಂಗುರ ಸಾರುವ ಪ್ರಕ್ರಿಯೆ ಬಹುಪ್ರಾಚೀನವಾದದ್ದು. ರಾಜಮಹಾರಾಜರ ಕಾಲದಿಂದಲೂ ಯಾವುದೇ ವಿಷಯವನ್ನು ಊರಿನ ಜನರಿಗೆ ತಿಳಿಸಬೇಕಾದಾಗ ಡಂಗುರ ಸಾರುವ ಕ್ರಿಯೆ ನಡೆಯುತ್ತಿತ್ತು. ಈ ಡಂಗುರ ಸಾರಬೇಕಾದರೆ ಆ ಊರಿನ ಮುಖಂಡನ ಅನುಮತಿ ಬೇಕಾಗಿತ್ತು. ಇದು ಅಲಿಖಿತ ಶಾಸನ. ಈ ಹಿಂದೆ ಗ್ರಾಮಗಳಲ್ಲಿ ಗೌಡನು ಡಂಗುರ ಸಾರಲು ಆದೇಶಿಸುತ್ತಿದ್ದರೆ, ಇಂದು ಪಂಚಾಯಿತಿಗೆ ಚುನಾಯಿತರಾದ ಮುಖಂಡರ ಆದೇಶವಿರುತ್ತದೆ. ಡಂಗುರ ಸಾರುವ ತಂಡದಲ್ಲಿ ಚರ್ಮವಾದ್ಯವಾದ ಹಲಗೆ ಅಥವಾ ದಿಮ್ಮು ಬಡಿಯಲು ಹರಿಜನ ಒಬ್ಬ ವ್ಯಕ್ತಿ, ವಿಷಯವನ್ನು ಚೀರು ಧ್ವನಿಯಲ್ಲಿ ಜನರಿಗೆ ಕೇಳುವ ಹಾಗೆ ಹೇಳಲು ತಳವಾರ ಹೀಗೆ ಸಾಮಾನ್ಯವಾಗಿ ಇಬ್ಬರು ಇರುವುದುಂಟು. ಹಲಿಗೆ ಬಡಿಯುವವ ಊರಿನ ದಾರಿಗಳಲ್ಲಿ ಹಲಿಗೆ ಬಡಿಯುತ್ತಾ ಸಾಗುತ್ತಾನೆ. ಆತನ ಜೊತೆ ಇರುವ ತಳವಾರ ಊರಿನ ಪ್ರಮುಖ ಸ್ಥಳಗಳಲ್ಲಿ ನಿಲ್ಲುತ್ತಾ ಏರುಧ್ವನಿಯಲ್ಲಿ ಜನರಿಗೆ ತಿಳಿಸುವ ವಿಷಯವನ್ನು ಎಲ್ಲರಿಗೂ ಕೇಳುವಂತೆ ಎರಡು ಸಲ ಅಥವಾ ಮೂರುಸಲ ಹೇಳುತ್ತಾನೆ. ತಳವಾರ ಹೀಗೆ ಹೇಳುವಾಗ ಹಲಿಗೆಯ ಸದ್ದು ನಿಂತಿರುತ್ತದೆ. ಆತ ಹೇಳಿ ಬಿಟ್ಟ ನಂತರ ಮತ್ತೆ ಹಲಿಗೆ ಬಡಿಯುತ್ತಾ ಮುಂದೆ ಹೋಗುತ್ತಾರೆ. ಹೀಗೆ ಊರೆಲ್ಲ ತಿರುಗಿ ಜನರಿಗೆ ಸುದ್ಧಿಯನ್ನು ಮುಟ್ಟಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಹಲಿಗೆ ಬಡಿಯುವವನೇ ವಿಷಯವನ್ನು ಪುಕಾರಸುತ್ತಾ ಒಬ್ಬನೆ ಡಂಗುರ ಸಾರುತ್ತಿರುವುದು ಸಾಮಾನ್ಯವಾಗಿ ಕಂಡುಬರುವ ಸಂಗತಿಯಾಗಿದೆ.

ಸಾಮಾನ್ಯವಾಗಿ ಸಾರ್ವತ್ರಿಕ ವಿಷಯಗಳಾದ ಊರಿನಲ್ಲಿಯ ಹಬ್ಬದ ಸುದ್ಧಿಯಾಲಿ, ಅಧಿಕಾರಿಗಳು ಬರುವ ಸುದ್ಧಿಯಾಗಲಿ, ಕರವಸುಲಿಯ ಮುನ್ನೆಚ್ಚರಿಕೆಯ ಸುದ್ಧಿಯಾಗಲಿ ಹೀಗೆ ಮುಂತಾದ ವಿಷಯಗಳನ್ನು ಜನರ ಗಮನಕ್ಕೆ ತರುವಾಗ ಡಂಗುರವನ್ನು ಸಾರುತ್ತಾರೆ. ಹಿಂದೆ ರಾಜರು ತಮ್ಮ ಆದೇಶಗಳನ್ನು ಪ್ರತಿ ಹಳ್ಳಿಯಲ್ಲು ಡಂಗುರ ಸಾರುವುದರ ಮೂಲಕ ಜನರಿಗೆ ತಿಳಿಸುತ್ತಿದ್ದರು. ಅನೇಕ ಜನಪದ ಕಥೆಗಳಲ್ಲಿಯೂ ರಾಜ ತನ್ನ ಮಗಳ ಪ್ರಾಣ ಉಳಿಸಿದವರಿಗೆ ಅರ್ಧ ರಾಜ್ಯ ಕೊಡುತ್ತೇನೆಂದು ಡಂಗುರ ಸಾರಿ ಜನರಿಗೆ ವಿಷಯ ತಿಳಿಸಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. *(ವಿಎಲ್‌ಪಿ)*

ಡಪಗಾರ ಕಾಶಪ್ಪ: ಡಪ್ಪಿನಾಟದ ಕಲಾವಿದ. ಕಾಶಪ್ಪ ಹಾಲು ಮಂದೆ, ಇವರ ಪೂರ್ತಿ ಹೆಸರು ಡಪಗಾರ ಕಾಶಪ್ಪನೆಂದೇ ಹೆಸರುವಾಸಿಯಾಗಿದ್ದಾರೆ.

ಇವರು ಇಂದಿಗೂ ಡಪ್ಪಿನಾಟದ ಕಲೆಯನ್ನೂ ಜೀವಂತ ಇರಿಸಿಕೊಂಡು ಬಂದಿದ್ದಾರೆ. ಸದಾ ಚಟುವಟಿಕೆಯಲ್ಲಿರುವ ಇವರು ಸಂಘ ಕಟ್ಟಿಕೊಂಡು ಹಳ್ಳಿಹಳ್ಳಿಗೆ ಹೋಗಿ ಡಪ್ಪಿನಾಟ ಪ್ರದರ್ಶಿಸುತ್ತಾ ಗ್ರಾಮೀಣ ಭಾಗದ ಜನರಿಗೆ ಚಿರಪರಿಚಿತರಾಗಿದ್ದಾರೆ. ಜಾತ್ರೆ ಬಂದರೆ ಮುಗಿಯಿತು, ಡಪಗಾರ ಕಾಶಪ್ಪರ ನೆನಪು ಎಲ್ಲರಲ್ಲಿ ಬಂದು ಬಿಡುತ್ತದೆ. ಡಪ್ಪಿನಾಟಕ ಜೊತೆಗೆ, ಗೀಗೀಪದಗಳನ್ನು ಸ್ವತಃ ರಚಿಸಿ ಹಾಡುವ ಎದೆಗಾರಿಕೆ ಇವರಿಗಿದೆ. ಕಮಲಾಪೂರದ ಇವರ ಗೆಳೆಯರ ಬಳಗದ ಜೊತೆ ಸದಾ ಹಾಡು, ನಾಟಕದ ಗುಂಗಿನಲ್ಲಿರುವ ಇವರು ಲೋಕೋಪಯೊಗಿ ಇಲಾಖೆಯಲ್ಲಿ ಗ್ಯಾಂಗ್‌ಮನ್ ಕೆಲಸಮಾಡುತ್ತಲೇ ಇಂತಹ ಚಟುವಟಿಕೆಯಲ್ಲಿ ನಿರತರಾಗಿದ್ದಾರೆ.

16ನೆಯ ವಯಸ್ಸಿನಲ್ಲಿಯೇ ನಾಟಕ, ದೊಡ್ಡಾಟದ ಗೀಳು ಹಿಡಿಸಿಕೊಂಡು ಅಂದಿನಿಂದ ಇಲ್ಲಿಯವರೆಗೆ 80 ವರ್ಷದ ವೃದ್ಧನಾದರೂ ಡಪ್ಪು ಹಿಡಿದು ಕುಣಿಯುತ್ತ, ಒಂದೊಂದು ಹಾಡು, ನಾಟಕದ ಸಂಭಾಷಣೆ ಹೇಳುವದನ್ನು ಕೇಳಿದರೆ, ನೋಡಿದರೇ ಕಾಶಪ್ಪ ಇಪ್ಪತ್ತರ ಹರೆಯದವರ ಹಾಗೆ ಕಾಣಿಸುತ್ತಾರೆ. ಅವರ ಮಕ್ಕಳು ಮರಿ ಮೊಮ್ಮಕ್ಕಳು ಕೂಡಾ ಇವರ ಸಾಹಸಕ್ಕೆ ಪ್ರೋತ್ಸಾಹಿಸುತ್ತಿದ್ದಾರೆ.

ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಡಪ್ಪಿನಾಟ ಪ್ರದರ್ಶಿಸಿರುವ ಕಾಶಪ್ಪನವರು, ಕುಸ್ತಿಯಾಡುವುದರಲ್ಲೂ ಎತ್ತಿದ ಕೈ, ಕೋಲಾಟ, ಕೋಲಕ ಬಾರಿಸುವ ಇವರು ಡಪ್ಪು ಹಿಡದರೆಂದರೆ ಮುಗಿಯಿತು. ಅವರ ಮೈಯಲ್ಲಿ ವಿದ್ಯುತ್ ಬಂದಂತೇ, ಒಂದೇ ಸಮನೆ ಕುಣಿಯುತ್ತಾ

ಡಪ್ಪು ಬಾರಿಸುವ ಇವರು, ಅನೇಕ ಹಿರಿಯ ಸಾಹಿತಿಗಳ ಮನ ಗೆದ್ದಿದ್ದಾರೆ.

ರಾಜಾ ಹರಿಶ್ಚಂದ್ರ, ರಾಮ ಲಕ್ಷ್ಮಣ, ಮದನ ಮಂಜರಿ, ಅಮೃತ ರಾಜ, ಪಶ್ಚಾತಾಪ, ಗುಣಲೋಪ, ಗಂಡನ ಮಾವ, ಬಾಲಚಂದ್ರ ಸತ್ಯವಾನ ಸಾವಿತ್ರಿ, ಕವಡಿಮಟ್ಟಿ ಕಾಶಿಬಾಯಿ, ರೇಣುಕಾ ಮಹಾತ್ಮೇ, ಪ್ರೇಮಕುಮಾರ, ಪ್ರಭುಲಿಂಗ, ರಾಧಾಕೃಷ್ಣ ಇಂದ್ರ ಸೇನ ರಾಜಾ, ಹೀಗೆ ಅನೇಕ ಪೌರಾಣಿಕ ಕಥೆಯುಳ್ಳ, ಡಪ್ಪಿನಾಟದ ಮೂಲಕ ಇತಿಹಾಸ ತಿಳಿಸುವ ಇವರು, ನಿಜವಾಗಿಯೂ ದೊಡ್ಡಸಾಧನೆ ಮಾಡಿದ್ದಾರೆ.ವಿರೇಂದ್ರ ಪಾಟೀಲರು ಕರ್ನಾಟಕದ ಮುಖ್ಯಮಂತ್ರಿ ಇದ್ದಾಗ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಶಾಲು ಹೊದಿಸಿ, ಬಂಗಾರದ ಪದಕ ಪ್ರಶಸ್ತಿ ಪತ್ರ ನೀಡಿ ಗೌರವಿಸಿದ್ದಾರೆ. ಇವರು ಕಲಿಸಿದ ಆಟಗಳು ಆಕಾಶವಾಣಿ ಕೇಂದ್ರದಲ್ಲಿ ಪ್ರಸಾರವಾಗಿ ಜನರಿಗೆ ಆನಂದ ನೀಡಿದೆ. *(ಪಿಎಂ)*

ಡೊ

ಡೊಳ್ಳಿನ ಹಾಡುಗಳು: ಕುರುಬರ ಬದುಕಿನಲ್ಲಿ ಅರಳಿಬಂದ ಸಾಹಿತ್ಯ ಸಂಪತ್ತು, ಜನಮನವನ್ನಾಕರ್ಷಿಸಿ ಕೇಳಬೇಕೆನ್ನುವ ಕುತೂಹಲ ಕೆರಳಿಸಿ ಮಹದಾನಂದ ನೀಡುವ ಹಾಡುಗಳು. ಹುಚ್ಚ ಕುರುಬರ ಸೃಷ್ಟಿಯಲ್ಲ; ಪ್ರತಿಭಾನ್ವಿತ ಕುರುಬರ ಭಾವಗೀತೆಗಳಾಗಿವೆ. ಹಾಡಿನ ಮಧ್ಯ ಚರ್ಮವಾದ್ಯ ಬಳಸುವುದರಿಂದಾಗಿ ಇವುಗಳಿಗೆ ಡೊಳ್ಳಿಗೆ ಹಾಡುಗಳೆಂದು ಕರೆಯುವರು. ಜನಪದರ ಉಳಿದೆಲ್ಲ ವಾದ್ಯಗಳಿಗಿಂತ ಇದಕ್ಕೆ ತೀರ ಪ್ರಾಚೀನ ಪರಂಪರೆಯಿದೆ.

ಡೊಳ್ಳಿನ ಹಾಡು ಎಂಬ ಹೆಸರು ಬಂದದ್ದು ಹಾಡು ಹೇಳುವಾಗ ಬಳಸುವ ವಾದ್ಯೋಪಕರಣದ ಬಳಕೆಯಿಂದಾಗಿ. ಬಹು ದೊಡ್ಡ ಗಾತ್ರದ ವಾದ್ಯ ಇದಾದುದರಿಂದ ಡೊಳ್ಳನ್ನು ಚರ್ಮವಾದ್ಯಗಳ ಚಕ್ರವರ್ತಿ ಎಂದು ಕರೆಯಬಹುದು. ಇಂತಹ ದೊಡ್ಡ ಗಾತ್ರದ ವಾದ್ಯದ ಬಳಕೆಯ ಆವಶ್ಯಕತೆ ಅವರಿಗೆ ಇರಲು ಕಾರಣವೆಂದರೆ, ಅವರು ಗುಡ್ಡ-ಕಾಡಿನಲ್ಲಿ ಏಕಾಂಗಿಯಾಗಿ ಕುರಿಗಳನ್ನು ಕಾಯುವವರು. ಆಗ ದುಷ್ಟ ಪ್ರಾಣಿಗಳು ಕುರಿಗಳನ್ನು ಹಿಡಿದು ತಿನ್ನುತ್ತವೆ. ಜಪ್ಪಿಸಿ ಕುಳಿತು ಕುರಿಗಳ ಬೇಟೆಯಾಡುತ್ತವೆ. ಆದ್ದರಿಂದ ಕುರುಬರು ಡೊಳ್ಳು ಬಾರಿಸುತ್ತ, ಸದ್ದು ಹುಟ್ಟಿಸುತ್ತ ಕುರಿಗಳನ್ನು ಕಾದಿರಬೇಕು. ಹಾಗೂ ಅದರ ನಾದಮಾಧುರ್ಯಕ್ಕೆ ಮನಸೋತು ತನ್ನ ಹಾಡುಗಳಿಗೆ ತಕ್ಕ ಹಿನ್ನೆಲೆ ವಾದ್ಯವಾಗಲು ಉಪಯುಕ್ತವೆಂದೆನಿಸಿ ಇದು ಬಳಕೆಯಲ್ಲಿ ತಂದಂತಿದೆ.

ಇದರ ರಚನಾ ಕ್ರಮದಲ್ಲೂ ವಿಶಿಷ್ಟತೆ ಇದೆ. ಒಳಗೆ ಪೊಳ್ಳಾಗಿ ಕೊರೆದ ಸಿಲಿಂಡರಾಕಾರದ ಸುಮಾರು ಅರ್ಧಂಗುಲ ಡಪ್ಪಗಿನ ಅಂದುಳ್ಳ ಕಟ್ಟಿಗೆಯ ಪಡಗದ ಎರಡೂ ಮಗ್ಗಲಿಗೆ ಚರ್ಮದ ಹೊದಿಕೆ ಹಾಕಿ ತಯಾರಿಸಲಾಗಿರುತ್ತದೆ. ಪಡಗದ ಕಟ್ಟಿಗೆ ಮಾವು ಅಥವಾ ಬೇವಿನ ಮರದ್ದು ಇರಬಹುದು. ಇಬ್ಬದಿಗೆ ಚರ್ಮದ ಹೊದಿಕೆಗಳಲ್ಲಿ ಒಂದು ಬದಿಯದು ಹೋತಿನ ಚರ್ಮದ್ದಾದರೆ, ಇನ್ನೊಂದು ಬದಿಯದು ಆಡಿನ ಚರ್ಮದ್ದು – ಹೀಗೆ ತಯಾರಿಸಿದ ಡೊಳ್ಳಿನ ಎರಡೂ ಬದಿಗೆ ಕಟ್ಟಿಗೆಯ ಗುಣಿಯಿಂದ ಬಾರಿಸುತ್ತ ನಾದ ಹೊರಡಿಸುವರು. ಇದರ ಜೊತೆಗೆ ಹಾಡುಗಳ ಸುರಿಮಳೆಯಾಗುವುದು.

ಹಾಡುಗಳು ಮುಮ್ಮೇಳ ಹಿಮ್ಮೇಳವಾಗಿ ಸಾಗುತ್ತವೆ. ಪ್ರಧಾನ ಗಾಯಕ ಡೊಳ್ಳು ಬಾರಿಸಿದರೆ, ಹಿನ್ನೆಲೆ ಗಾಯಕರು ಅದರದೇ ಆದ ಗತ್ತಿನಲ್ಲಿ ತಾಳ, ಝುಂಗಟಿ ಗೆಜ್ಜೆಗಳನ್ನು ಬಾರಿಸುತ್ತಾರೆ. ಟೊಂಕಕ್ಕೆ ಅಥವಾ ಕೊರಳಿಗೆ ಡೊಳ್ಳುಗಳನ್ನು ಕಟ್ಟಿಕೊಂಡು ವ್ಯಕ್ತಿಗತವಾಗಿಯೂ ಸಾಮೂಹಿಕವಾಗಿಯೂ ಬಾರಿಸಲ್ಪಡುತ್ತವೆ. ಡೊಳ್ಳು ಸಂಗೀತದ ಜೊತೆಗೆ ನೃತ್ಯ ಕಲೆಯೂ ಇದರ ಜೊತೆ ಬೆಳೆದುಕೊಂಡು ಬಂದುದು ಡೊಳ್ಳಿನ ಹಾಡುಗಳ ವೈಶಿಷ್ಟ್ಯ. ವೀರಾವೇಶದಿಂದ ಹೆಜ್ಜೆಯ ಗತ್ತಿನೊಂದಿಗೆ ಕುಣಿಯುವ ಕಲೆಗಾರಿಕೆ ನೋಡುಗರ ಹೃದಯ ಮನವನ್ನು ತಣಿಸುತ್ತದೆ. ದೊಡ್ಡ ಗಾತ್ರದ ಡೊಳ್ಳು ಹೊತ್ತು ಕುಣಿಯುವ ಕುರುಬರ ಸಾಮಾರ್ಥ್ಯಕ್ಕೆ ಕುರಿಯ ಹಾಲು ತುಂಬಾ ಪುಷ್ಟಿ ನೀಡಿದಂತಿದೆ.



ಡೊಳ್ಳು ಮೇಳ

ಕುರುಬರ ಡೊಳ್ಳಿನ ಸೇವೆಗಳಲ್ಲೂ ಕೆಲ ಸಂದರ್ಭಗಳಿವೆ. ಬೀರಲಿಂಗನ ಜಾತ್ರೆಯ ದಿನ ಎಲ್ಲೆಡೆ ಇರುವ ಕುರುಬರು ತಮ್ಮ ಡೊಳ್ಳಿನ ಸಮೇತ ಅಲ್ಲಿಗೆ ಬಂದು ಭಕ್ತಿಯಿಂದ ಸೇವೆ ಸಲ್ಲಿಸುವರು. ಹಬ್ಬ ಹುಣ್ಣಿಮೆ ಅಮಾವಾಸ್ಯೆ ಶ್ರಾವಣ ಸೋಮವಾರ, ಯುಗಾದಿಯ ಪಲ್ಲಕ್ಕಿ, ಲಕ್ಷ್ಮೀ ಮಾಡುವಾಗ, ದಂಡನಮಸ್ಕಾರ ಹಾಕುವಾಗ, ದಂಡಿ ಕಾರ್ಯ ಮಾಡುವಾಗ, ಕೂರಿಗೆ ಸಾಗುಮಾಡುವಾಗ, ಮಳೆಬಾರದಿದ್ದಾಗ, ಕುಂಭ ಹೊತ್ತಾಗ, ಆರತಿ ಹೊರುವಾಗ ಇಂತಹ ಹಲವು ಮಂಗಳ ಪ್ರಸಂಗಗಳಲ್ಲಿ ಇವರ ಸೇವೆಯ ಸಂದರ್ಭ ಜನಪದರಿಗೆ ಸಾಕಷ್ಟು ಇರುತ್ತದೆ.

ಇವರು ಡೊಳ್ಳಿನ ಭಾಜಗಳನ್ನು ಮೊದಲು ಸಲ್ಲಿಸಿಯೇ ತಮ್ಮ ಮಂಗಲ ಕಾರ್ಯಗಳನ್ನು ಮುಂದುವರಿಸಬೇಕಾಗುತ್ತದೆ. ಇದು ಪವಿತ್ರ ಹಾಗೂ ಧಾರ್ಮಿಕ ಮನೋಭಾವನೆ ಜನರಲ್ಲಿ ಕುದುರಿಸುವ ವಾದ್ಯವೆಂದು ಪರಿಗಣಿಸಲ್ಪಟ್ಟಿದೆ. ಡೊಳ್ಳು ಸೇವೆಗೆ ಬರುತ್ತೇವೆಂದು ಒಮ್ಮೆ ಭಾಷೆ ಕೊಟ್ಟು ವಿಳ್ಯಾ ಹಿಡಿದರೆಂದರೆ, ದೇವರಾಣೆಗೂ ಬಂದು ಸೇವೆ ಸಲ್ಲಿಸುತ್ತಾರೆ. ಯಾವ ಅಮಿಷಕ್ಕೂ ಒಳಗಾಗದೆ ಧರ್ಮಾರ್ಥವಾಗಿ ಕಾರ್ಯವನ್ನು ಪೂರೈಸಿ ಕೊಡುತ್ತಾರೆ. ಹಣಕ್ಕೆ ಆಶೆಪಟ್ಟರೆ ಹಾಲುಮತಕ್ಕೆ ಎರಡು ಬಗೆದಂತೆ ಭಾವಿಸಿ, ಕಟ್ಟುನಿಟ್ಟಾಗಿ ವ್ಯವಹರಿಸುತ್ತಾರೆ. ಅಂತೆಯೇ ಜನಪದರು ಕುರುಬರಲ್ಲಿ ಅತ್ಯಂತ ವಿಶ್ವಾಸ ಹೊಂದಿದವರಾಗಿದ್ದಾರೆ.

ಕುರುಬರು ಭಕ್ತಿಗೆ ಹೆಸರಾದವರಾದ್ದರಿಂದ ಡೊಳ್ಳಿನ ಹಾಡುಗಳ ತುಂಬೆಲ್ಲ ಭಯ-ಭಕ್ತಿ, ದೇವರು-ಧರ್ಮ-ದೈವ ಮನೆಮಾಡಿಕೊಂಡಿವೆ. ಅವರ ಮುಗ್ಧ ಭಕ್ತಿಯ ದ್ಯೋತಕ ವೆಂಬಂತೆ ಹಾಡುಗಳ ರಚನೆಯಾಗಿವೆ. ಇವರ ಭಕ್ತಿಯಲ್ಲಿ ಕಾಣುವದು ನಿಷ್ಕಪಟ ಗುಣ, ನಿಸ್ವಾರ್ಥಭಾವ, ದೇವರ ಮೇಲಿನ ಗಾಢನಿಷ್ಠೆ. ಪ್ರತಿ ಹಾಡಿನ ಆದಿ ಮತ್ತು ಅಂತ್ಯದಲ್ಲಿ ತಮ್ಮ ದೇವರ ಬರುವಿಕೆಯನ್ನು ಸಾರುವ ಎರಡು ಸಾಲಿನ ಪಲ್ಲವಿಯನ್ನು ಹೇಳಿಯೇ ಹಾಡು ಮುಂದುವರಿಸುತ್ತಾರೆ. *(ಬಿಪಿಪಿ)*

ಡೊಳ್ಳು: ಡೊಳ್ಳು ಎರಡು ಮೂರು ರೀತಿಯಲ್ಲಿ ಬಾರಿಸಲ್ಪಡುವ ಒಂದು ವಾದ್ಯ. ಡೊಳ್ಳಿನ ಹಾಡಿನೊಂದಿಗೆ ಬರುವ ಡೊಳ್ಳುವಾದನ ಬೇರೆ, ಡೊಳ್ಳಿನ ಕೈಪೆಟ್ಟು ಬೇರೆ, ಡೊಳ್ಳಿನ ವಾಲಗ ಬೇರೆ. ಡೊಳ್ಳಿನ ಹಾಡು ನಡೆದಿರುವಲ್ಲಿ ಡೊಳ್ಳು, ತಾಳಗಳು ಪಕ್ಕವಾದ್ಯಗಳಾಗುತ್ತವೆ. ಕೊಳಲು ಇರಬಹುದು, ಇರಲಿಕ್ಕಿಲ್ಲ. ಹಾಡಿಗೆ ಮೊದಲು ಒಂದು ಸುತ್ತು ಬಾರಿಸಿದ ಮೇಲೆ ಹಾಡು ಪ್ರಾರಂಭವಾಗುತ್ತದೆ. ಹಾಡು ನಡೆದಿರುವಾಗ ಡೊಳ್ಳು ಬಾರಿಸುವಿಕೆ ಒಂದೇ ಗತಿಯಲ್ಲಿದ್ದು ಹೆಚ್ಚಿನ ವೈವಿಧ್ಯಕ್ಕೆ ಅವಕಾಶವಿರುವುದಿಲ್ಲ. ಡೊಳ್ಳಿನ ಕೈಪಟ್ಟಿನಲ್ಲಿ ಸನಾದಿಯವರು ಸಹಯೋಗ ಕೊಡುತ್ತಾರೆ ಬಾರಿಸುವವನ ಕಲೆಗಾರಿಕೆಗೆ ಇಲ್ಲಿ ಹೆಚ್ಚಿನ ಅವಕಾಶವಿದೆ. 'ವಾಲಗ' ದಲ್ಲಿ ಹತ್ತು ಹದಿನೈದು, ಒಮ್ಮೊಮ್ಮೆ ನೂರಕ್ಕೂ ಮೇಲ್ಪಟ್ಟು ಡೊಳ್ಳುಗಳು ಕೂಡಿ ಒಂದೇ ಸಮನೆ ತಾಸುಗಟ್ಟಲೆ ಬಾರಿಸುತ್ತಾರೆ. ಇದು ಒಮ್ಮೊಮ್ಮೆ ಹಗಲು ರಾತ್ರಿ ಕೂಡಿಯೇ ನಡೆಯುವುದುಂಟು. ಇದು ಕುರುಬರಿಗೆ ಸಂಬಂಧಿಸಿದ ವಾದ್ಯವಾದರೂ ಎಲ್ಲ ಜಾತಿಯವರ ದೇವರ ಬಗೆ ಬಗೆಯ ಉತ್ಸವಗಳಲ್ಲಿ, ಕೌಟುಂಬಿಕ ಆಚರಣೆಗಳಲ್ಲಿ ಡೊಳ್ಳುವಾದನಕ್ಕೆ ಅವಕಾಶವಿದೆ.

ಸನಾದಿ ಮೇಳ: ಭಜಂತ್ರಿಯವರೇ ನಡೆಸಿಕೊಂಡು ಬರುವ ಮೇಳ. ಎಲ್ಲ ಮಂಗಳ ಕಾರ್ಯಕ್ರಮಗಳಿಗೂ ಇದು ಅನಿವಾರ್ಯ, ಕೊನೆಗೆ ಮರಣ ಸಂದರ್ಭದಲ್ಲೂ ಬೇಕು. ಸನಾದಿ, ಸಣ್ಣ ಡೊಳ್ಳು, ತಾಸೆ, ಸುತಿ ಇವು ಈ ಮೇಳದ ವಾದ್ಯಗಳು. ಸನಾದಿಯನ್ನು ಅಪ್ಪಟ ಶಾಸ್ತ್ರೀಯವಾಗಿ ಸುಗಮವಾಗಿ ಎರಡು ರೀತಿಯಲ್ಲಿ ಬಾರಿಸುವುದಿದೆ. ಗುಡಿಯ ಪೌಳಿಯಲ್ಲಿ ಸಂಜೆ-ಮುಂಜಾವು ಕುಳಿತುಕೊಂಡು 'ಸೇವೆ'ಯೆಂದು ವಾದನ ನಡೆಸುವಲ್ಲಿ ಅಪ್ಪಟ ಶಾಸ್ತ್ರೀಯವಾಗಿಯೇ ಸನಾದಿಯವ ಊದುತ್ತಾನೆ. ಸುತಿಯವ ಭಂವ್...ಎಂದು ಒಂದೇ ಬಗೆಯಾಗಿ ಶ್ರುತಿ ಹಿಡಿಯುತ್ತಾನೆ. ತಾಸೆ, ಡೊಳ್ಳಿನವರು ಸನಾದಿಯವನ ತಾಳಿಗಾಸರೆಯಾಗುತ್ತಾರೆ. ಉತ್ಸವ ಮೆರವಣಿಗೆಗಳ ಮುಂದೆ ಇವರು ಬಾರಿಸುತ್ತ ಹೊರಟಾಗ ಸಿನೀಮಾ ಚೀಜ್ ಊದುತ್ತಾರೆ. ಇವರು ಮುಂಚೆ ಹೇಳಿದಂತೆ ಹಲಗೆ ಮಜಲಿನವರಿಗೆ, ಕರಡೆಯವರಿಗೆ, ಡೊಳ್ಳಿನ ಕೈಪೆಟ್ಟಿನವರಿಗೆ ಸಾಥ ನೀಡುತ್ತಾರೆ.

(ಎಸ್‌ಆರ್‌ಐ)

ತ

ತಂತೀವಾದ್ಯ: ತಂತಿಗಳನ್ನು ಬಿಗಿದು ಮಾಡಿದ ವಾದ್ಯಗಳು. ಇವುಗಳನ್ನು ತತವಾದ್ಯಗಳೆಂದು ಪ್ರಾಚೀನ ಲಾಕ್ಷಣಿಕರು ಕರೆದಿದ್ದಾರೆ. ಆದಿಮಾನವರು ಆಹಾರ ಸಂಗ್ರಹಣೆಗಾಗಿ ಬಳಸುವ ಬಿಲ್ಲಿನಿಂದ ಹೊರಟ ನಾದವು ತಂತಿವಾದ್ಯಗಳ ಉಗಮಕ್ಕೆ ಕಾರಣವಾಗಿ ಇರಬಹುದೆಂದು ವಿದ್ವಾಂಸರು ಗುರುತಿಸುತ್ತಾರೆ. ನಮ್ಮ ಪ್ರಾಚೀನರು ಶಿವನ ಕೈಯ ಪಿನಾಕವೇ ತಂತಿವಾದ್ಯಗಳ ಮೂಲವೆಂದು ನಂಬಿದ್ದರು. ಎರಡನೆಯ ನಾಗವರ್ಮ, ರನ್ನ, ಸುರಂಗಕವಿ ಮುಂತಾದವರು 'ಪಿನಾಕ' ವೆಂಬ ಪದವನ್ನು ಬಿಲ್ಲಿಗೆ ಪರ್ಯಾಯವಾಗಿಯೇ ಬಳಸಿದ್ದಾರೆ. 1180ರ ಚಿಕ್ಕಮಗಳೂರಿನ ಶಾಸನವೊಂದು ಪಿನಾಕವೆಂದರೆ ಬಿಲ್ಲು ಎಂಬರ್ಥದಲ್ಲಿ ಬಳಸಿದೆ. ಶಿಷ್ಟ ವಾದ್ಯಗಳಾದ ಮೂವತ್ತೆರಡು ವೀಣೆಗಳಲ್ಲಿ ಪಿನಾಕ ವೀಣೆಯೂ ಒಂದು.

ಜನಪದ ತಂತೀವಾದ್ಯಗಳನ್ನು ನರ (ಕರುಳಿನ ಹುರಿ) ದಾರ, ಲೋಹದ ತಂತಿ, ಜವಿ ಮುಂತಾದವುಗಳನ್ನು ಬಳಸಿ ತಯಾರಿಸುತ್ತಿದ್ದರು. ವೃತ್ತಿಗಾಯಕರು ಹೆಚ್ಚಾಗಿ ಇವುಗಳನ್ನು ಬಳಸುತ್ತಾರೆ.

ತಂತೀವಾದ್ಯಗಳಲ್ಲಿ ಎರಡು ವಿಧ. ಬೆರಳಿನಿಂದ ಮೀಟಿನಾದ ಹೊರಡಿಸುವಂತಹವು. ಗಜ ಇಲ್ಲವೆ ಕಮಾನಿನಿಂದ ತೀಡುವ ವಾದ್ಯಗಳು. ತಾಳ, ಲಯ, ಶ್ರುತಿಗಳೆಲ್ಲವನ್ನೂ ಏಕಕಾಲಕ್ಕೆ ಒದಗಿಸುವ ಹೆಗ್ಗಳಿಕೆ ತಂತೀ ವಾದ್ಯಗಳದಾಗಿದೆ. ಇವುಗಳ ಮೂಲ ಉದ್ದೇಶ ಹಾಡಿಗೆ ಶ್ರುತಿಯನ್ನು ಒದಗಿಸುವುದಾಗಿದೆ.

ಒಂದರ್ಥದಲ್ಲಿ ತಂತೀವಾದ್ಯಗಳನ್ನು ಶ್ರುತಿವಾದ್ಯಗಳೆಂದೂ ಕರೆಯಬಹುದಾಗಿದೆ.

ಏಕತಾರಿ: ಏಕತಾರಿ ಒಂದೇ (ಏಕ) ತಂತಿ (ತಾರು)ಯನ್ನು ಬಳಸಿ ತಯಾರಿಸಿದ್ದು ಇದು. ಜನಪದ ತಂತಿವಾದ್ಯಗಳಲ್ಲಿ ಅತ್ಯಂತ ಜನಪ್ರಿಯವಾದದ್ದು. ಸೋರೆ ಕಾಯಿಯನ್ನು ಚನ್ನಾಗಿ ಒಣಗಿಸಿ ಅದರ ತುದಿಯನ್ನು ಗುಂಡಾಗಿ ಕೊರೆದು ಒಳಗಿನ ತಿರುಳು ತೆಗೆಯುತ್ತಾರೆ. ಸುಮಾರು ಮೂರರಿಂದ ನಾಲ್ಕು ಅಡಿ ಉದ್ದನೆಯ ಬಿದಿರು ಕೋಲನ್ನು ಅದರಲ್ಲಿ ಸೇರಿಸುತ್ತಾರೆ. ಎರಡೂ ತುದಿಗಳಿಂದ ಆ ಬೊಂಬು ಹೊರಚಾಚಿರುತ್ತದೆ. ಕಾಯಿಯ ತಳಭಾಗಕ್ಕೆ ಅಂಟಿನಲ್ಲಿ ಅದ್ದಿದ ಬಟ್ಟೆ ಸುತ್ತುತ್ತಾರೆ. ಒಂದು ಅಂಚಿನ ಜೀರುಬಿಲ್ಲೆ ಇಟ್ಟು ಅದು ಗಟ್ಟಿಯಾಗಿರಲು ಎರಡೂ ತುದಿಗಳಿಗೆ ಜೇನು ಮೇಣ ಅಥವಾ ಇಂಗಳಕಾಯಿಯ ಮೇಣ ಮೆತ್ತುತ್ತಾರೆ. ಕೆಳಭಾಗದಲ್ಲಿರುವ ಕೋಲಿನ ಬೊಂಬೆಗೆ ತಂತಿ ಕಟ್ಟಿ ಅದನ್ನು ಮೇಲ್ಭಾಗಕ್ಕೆ ತಂದು, ಮೇಲ್ಭಾಗದ ಕೋಲಿನ ತುದಿಯಿಂದ ನಾಲ್ಕೈದು ಇಂಚು ಕೆಳಗೆ ಹೆಬ್ಬೆರಳು ಗಾತ್ರದ ಕಟ್ಟಿಗೆಯ ತುಂಡನ್ನು ಸಿಕ್ಕಿಸಿ ಅದಕ್ಕೆ ತಂತಿಯನ್ನು ಬಿಗಿಯುತ್ತಾರೆ. ಇದಕ್ಕೆ ಬಿರಡೆ ಅಥವಾ ಬೆಣಕು ಎನ್ನುತ್ತಾರೆ. ತಂತಿಯು ಸೋರೆಯಕಾಯಿಗೆ ತಾಗದಂತೆ ಎರಡಿಂಚು ಕಟ್ಟಿಗೆಯ ತುಂಡನ್ನು ನಡುವೆ ಇಡುತ್ತಾರೆ. ಇದಕ್ಕೆ ಮೆಟ್ಟು ಎನ್ನುತ್ತಾರೆ. ಸೋರೆ ಕಾಯಿಯ ಮೇಲ್ಭಾಗವನ್ನು ಬಲ ಅಂಗೈಯಲ್ಲಿ ಹಿಡಿದುಕೊಂಡು ಮಧ್ಯದ ಅಥವಾ ತೋರು ಬೆರಳಿನಿಂದ ಮೀಟಿ ಶ್ರುತಿ ನೀಡುತ್ತಾರೆ. ಎಡಗೈ ಬೆರಳಿಂದ ಕಾಯಿ ಮೇಲೆ ನಾದಕ್ಕೆ ತಕ್ಕಂತೆ ಬಡಿಯುತ್ತಾರೆ. ತೆಲುಗು ಜಂಗಮರು, ದೊಂಬಿದಾಸರು, ಭಜನಾ ಮೇಳದವರು, ಹೆಚ್ಚಾಗಿ ಇದನ್ನು ಬಳಸುತ್ತಾರೆ. ಲೌಕಿಕ ಮತ್ತು ಧಾರ್ಮಿಕ ವಿಷಯಗಳನ್ನು ಕುರಿತು ಈ ಹಾಡುಗಳಿರುತ್ತವೆ. ಇದರ ಟೀಂವ್ ಟೀಂವ್ ನಾದವು ಮನಸ್ಸಿನ ಏಕಾಗ್ರತೆಗೆ ಪೂರಕವೆಂದು ನಂಬಲಾಗಿದೆ.

ಕಿನ್ನರಿ: ಜನಪದ ತಂತೀವಾದ್ಯಗಳಲ್ಲಿ ಅತ್ಯಂತ ಮಧುರವಾದ ನಾದವನ್ನು ಹೊಮ್ಮಿಸುವ ಕೀರ್ತಿ ಇದಕ್ಕಿದೆ. ಪ್ರಾಚೀನ ಕಾಲದಲ್ಲಿ ಶಿಷ್ಟವಾದ್ಯವಾಗಿರಬಹುದಾದ ಕಿನ್ನರಿ ಇಂದು ಅಪ್ಪಟ ಜನಪದ ವಾದ್ಯವೆನಿಸಿದೆ. ಕಿನ್ನರಿ ಜೋಗಿಗಳೆಂಬ ವೃತ್ತಿಕಲಾವಿದರು ಇದನ್ನು ನುಡಿಸುತ್ತಾರೆ. ಮೂರು ಅಥವಾ ಐದು ಕುಂಬಳ ಬುರುಡೆಗಳನ್ನು ಸುಮಾರು ಮೂರು ಅಡಿ ಉದ್ದದ ಬಿದಿರುಗಳಕ್ಕೆ ಜೋಡಿಸುತ್ತಾರೆ. ಇವುಗಳ ಮೇಲೆ ಎರಡು ಅಥವಾ ನಾಲ್ಕು ತಂತಿಗಳನ್ನು ಬಿಗಿಯುತ್ತಾರೆ. ಗಳದ ತುದಿಯನ್ನು ಗಿಣಿಯ ಮುಖದಂತೆ ಕೆತ್ತಿರುತ್ತಾರೆ. ಆದ್ದರಿಂದಲೇ ಕಿನ್ನರಿ ಹಾಡುಗಳಿಗೆ ಗಿಣಿಹಾಡು ಎಂದು ಕರೆಯುತ್ತಾರೆ. ಕಿನ್ನರಿ ಜೋಗಿಗಳ ಕಥಾಮೇಳದಲ್ಲಿ ಮುಖ್ಯ ಹಾಡುಗಾರನು ಇದನ್ನು ತನ್ನ ಕೊರಳಲ್ಲಿ ನೇತುಹಾಕಿ ಕೊಂಡಿರುತ್ತಾನೆ. ಬಲಗೈಯಲ್ಲಿ ಕಿನ್ನರಿ ಹಿಡಿದು ಎಡಗೈಯಿಂದ ನುಡಿಸುತ್ತಾನೆ.

12ನೆಯ ಶತಮಾನಕ್ಕಿಂತ ಪೂರ್ವದಲ್ಲಿ ಕಿನ್ನರಿಯನ್ನು ನಾಥಪಂಥದ ಆರಾಧಕರು, ಭೈರವನ ಭಕ್ತರು ನುಡಿಸುತ್ತಿದ್ದುದು ತಿಳಿದುಬರುತ್ತದೆ. ಬಸವಾದಿ ಶರಣರಲ್ಲಿ ಒಬ್ಬನಾದ ಕಿನ್ನರಿ ಬೊಮ್ಮಯ್ಯ ಕೂಡ ಕಿನ್ನರಿಯ ಮೂಲಕ ಶರಣ ತತ್ತ್ವಗಳನ್ನು ಪ್ರಸಾರ ಮಾಡಿದ್ದು ತಿಳಿದು ಬರುತ್ತದೆ. ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಸಣ್ಣ ಹಳ್ಳಿಖೇಡದಲ್ಲಿಯೂ ಕಿನ್ನರಿ ಜೋಗಿಗಳಿದ್ದಾರೆ.

ತುಂತುಣಿ: ಇದೊಂದು ಶ್ರುತಿ ವಾದ್ಯವಾಗಿದೆ. ಗೀಗೀ ತಂಡಕ್ಕಾಗಿ ನಿಂತುಕೊಂಡು ಹಾಡಲು ಅನುಕೂಲವಾಗುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ. ಶ್ರುತಿವಾದ್ಯವಾಗಿರುವ ಇದನ್ನು ಹೈದ್ರಾಬಾದ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿರುವ ಲಾವಣಿಗಾರರು, ಗೀಗೀ ಹಾಡುಗಾರರು, ಗೊಂದಲಿಗರು ಬಳಸುತ್ತಾರೆ.

ಚೌಡಿಕೆ: ತುಂತುಣಿಯ ಮುಂದುವರಿದ ರೂಪ. ಶಕ್ತಿದೇವತೆ ಆದ ಎಲ್ಲಮ್ಮನ ಭಕ್ತರು ಇದನ್ನು ಹೆಚ್ಚಾಗಿ ಬಳಸುತ್ತಾರೆ. ಗೋಲಾಕಾರದ ಕಟ್ಟಿಗೆಯ ತಿರುಳು ತೆಗೆದು ಅದಕ್ಕೆ ಮೇಕೆಯ ಚರ್ಮವನ್ನು ಅಂಟಿಸುತ್ತಾರೆ. ನಡುವೆ ಒಂದು ರಂಧ್ರ ಕೊರೆದು ಅದರ ಮೂಲಕ ಕರುಳ ಹುರಿಯನ್ನು ಎಳೆದು ಮುಂದಿರುವ ಚಿಣಿಗೆ ಜೋಡಿಸಿ ಸುತ್ತುತ್ತಾರೆ. ಇದನ್ನು ಕಂಕುಳಲ್ಲಿ ಹಿಡಿದು ಎಡಗೈಯಿಂದ ಚಿಣಿಯನ್ನು ಜಗ್ಗಿ ಬಲಗೈ ಬೆರಳುಗಳಿಂದ ಇದನ್ನು ನುಡಿಸುತ್ತಾರೆ. ಇದರಲ್ಲಿ ಧಾರ್ಮಿಕ ಹಾಗೂ ಲೌಕಿಕ ಸಂಪ್ರದಾಯವೆಂದು ಎರಡು ರೀತಿಯ ಚೌಡಿಕೆ ಮೇಳಗಳಿರುತ್ತವೆ. ಧಾರ್ಮಿಕವಾಗಿರುವ ಮೇಳದವರು ಎಲ್ಲಮ್ಮನ ದೀಕ್ಷೆ ಪಡೆದು ದೇವಿಯ ಕಥೆಯನ್ನು ಹಾಡುತ್ತಾ ಊರೂರು ತಿರುಗುತ್ತಾರೆ. ಲೌಕಿಕ ಸಂಪ್ರದಾಯದ ಮೇಳದವರೆ ಹೆಚ್ಚಾಗಿದ್ದಾರೆ. ಗುಲಬರ್ಗಾ ಮತ್ತು ರಾಯಚೂರಿನಲ್ಲಿ ಹೆಚ್ಚು ಜನರಿದ್ದಾರೆ.

ತಂಬೂರಿ: ತಂಬೂರಿ ಏಕತಾರಿಯ ಸುಧಾರಿತ ರೂಪ. ನಾರದ ಮಹರ್ಷಿಯಿಂದ ತಂಬೂರಿಯು ಬಂದಿತೆಂದು ಜನಪದರು ನಂಬಿದ್ದಾರೆ. ತಂಬೂರಿಯನ್ನು ಹೆಚ್ಚಾಗಿ ಹಲಸು, ಕಣಗಿಲೆ, ತೇಗದ ಮರಗಳಿಂದ ತಯಾರಿಸುತ್ತಾರೆ. ಬುರ್ರ ಕಥಾಮೇಳದವರು. ನೀಲಗಾರರು, ಚಲವಾದಿಗಳು ಇದನ್ನು ಬಳಸುತ್ತಾರೆ. ಬುರ್ರಕಥಾ ಪರಂಪರೆಗಳು ಪೌರಾಣಿಕ, ಐತಿಹಾಸಿಕ ಕಥೆಗಳನ್ನು ಹಾಡಿದರೆ ನೀಲಗಾರರು ಮಂಟೇಸ್ವಾಮಿಯ ಕಥೆಯನ್ನು ಹಾಡುತ್ತಾರೆ. (ವಿವರಗಳಿಗೆ ನೋಡಿ ತಂಬೂರಿಯವರು).

ಕಾಮಾಕ್ಷಿ: ಪ್ರಾಚೀನ ಜನಪದ ತಂತೀವಾದ್ಯ. ಬೆಳುವಲ ಕಾಯಿ ಚಿಪ್ಪನ್ನು ಖಾಲಿ ಮಾಡಿ ಅದಕ್ಕೆ ಒಂದೂವರೆ ಅಡಿಯ ಕೋಲನ್ನು ಕಟ್ಟುವರು. ಕುದುರೆ ಬಾಲದ ಜವಿಯನ್ನು ಜಗ್ಗಿ ಇದಕ್ಕೆ ಬಿಗಿಯುವರು. ಇದಕ್ಕೆ ಕಮಾನಿನಿಂದ ನುಡಿಸುವರು. ಮಹಾರಾಷ್ಟ್ರದ ಪ್ರಭಾವವಿರುವ ಬೀದರ ಜಿಲ್ಲೆಯಲ್ಲಿ ಇದು ಅಲ್ಲಲ್ಲಿ ಬಳಕೆಯಲ್ಲಿದೆ. ಭಿಕ್ಷುಕ ವೃತ್ತಿಯ ಕಲಾವಿದರು ಅನುಭವ ಗೀತೆಗಳನ್ನು ಹಾಡಲು ಇದನ್ನು ಬಳಸುತ್ತಾರೆ. *(ಎಸ್‌ಆರ್)*

ತಂಬೂರಿಯವರು: ತಂಬೂರಿಯನ್ನೆ ಮುಖ್ಯ ವಾದ್ಯವನ್ನಾಗಿ ಬಳಸುವವರು. ಏಕತಾರಿಯ ಸುಧಾರಿತ ರೂಪ ತಂಬೂರಿ. ಏಕತಾರಿಯಲ್ಲಿ ಒಂದೇ ತಂತಿ ಇದ್ದರೆ ತಂಬೂರಿಗೆ ನಾಲ್ಕರಿಂದ ಏಳು ತಂತಿಗಳಿರುತ್ತವೆ. ಕರ್ನಾಟಕದ ಬೇರೆ ಬೇರೆ ಪ್ರದೇಶದ ಜನ ತಂಬೂರಿಯನ್ನು ಕಣಗಿಲೆ, ಕೂಳಿ, ತೇಗ, ಹಲಸು ಮುಂತಾದ ಮರಗಳಿಂದ ಮಾಡುತ್ತಾರೆ. ಇದರ ಮೇಲಿನ ತುದಿಯಲ್ಲಿ ಕಲಾತ್ಮಕವಾದ ನಾಗರ ಹೆಡೆ ಇಲ್ಲವೆ ಸಿಂಹದ ಮುಖ ಕೆತ್ತಿರುತ್ತಾರೆ. ತಂತಿಗಳನ್ನು ಎತ್ತಿ ಹಿಡಿಯುವುದಕ್ಕಾಗಿ ದುಡ್ಡಿನ ಬಿಲ್ಲೆ

ಅಥವಾ ಒಡೆದ ಮಡಕೆಯ ಗುಂಡನೆಯ ಬಿಲ್ಲೆಯನ್ನು ಬಳಸುತ್ತಾರೆ. ತಾನ್‌ಪುರಾದಿಂದ ತಂಬೂರಿ ಬಂದಿತೆಂದು ಹೇಳುತ್ತಾರೆ. ಇದರ ಬಳಕೆ ಶಾಸ್ತ್ರೀಯ ಸಂಗೀತದಲ್ಲಿ ಹೆಚ್ಚಾಗಿರುತ್ತದೆ. ಆದರೆ ದಕ್ಷಿಣ ಭಾರತದ ಆಂಧ್ರದವರು ತಂತ್ರಿ ಮತ್ತು ಬುರ್ರಿ, ಸೇರಿ ತಂಬೂರಿಯಾಯಿತೆಂದು ಹೇಳುತ್ತಾರೆ. ಏಕತಾರಿಯಿಂದ ಜನಪದ ತಂಬೂರಿ, ಜನಪದ ತಂಬೂರಿಯಿಂದ ಶಿಷ್ಟ ತಂಬೂರಿ (ಸಿತಾರ)ಯ ಉಗಮವಾಯಿತು ಎನ್ನಬಹುದು. ಹಾಡಿನ ಪರಿಣಾಮ ಹೆಚ್ಚಿಸಲು ತಂಬೂರಿಯ ಜೊತೆಗೆ ತಾಳ, ಗುಮ್ಮಿ (ಗುಮ್ಮಿ) ತಪ್ಪಡಿ ಮುಂತಾದವನ್ನು ಬಳಸುತ್ತಾರೆ. ಇದು ಶ್ರುತಿ ವಾದ್ಯವಾಗಿರುವುದರಿಂದ ಹಾಡು ಅನಿವಾರ್ಯ.

ಕರ್ನಾಟದಾದ್ಯಂತ ತಂಬೂರಿಯನ್ನು ಬೇರೆ ಬೇರೆ ವೃತ್ತಿ ಗಾಯಕರು ಬಳಸಿದ್ದನ್ನು ಕಾಣುತ್ತೇವೆ. ಎಲ್ಲರೂ ತಂಬೂರಿಯನ್ನೇ ಬಳಸಿದರೂ ಹಾಡುಗಾರಿಕೆ ಕಥಾವಸ್ತು, ವೃತ್ತಿ ಭೇದ, ಲೌಕಿಕ ಮತ್ತು ಧಾರ್ಮಿಕ ವ್ಯತ್ಯಾಸಗಳನ್ನು ಕಾಣುತ್ತೇವೆ. ಕರ್ನಾಟಕದ ತಂಬೂರಿಯವರು ಎಂದು ಗುರುತಿಸುವಾಗ ಬುರ್ರಕಥಾ ಮೇಳದವರು, ಕುರ್ರಮಾಮಾಗಳು ಸಾರುವ ಅಯ್ಯನವರು, ಬಾಲ ಬಸವರು, ದೊಂಬಿದಾಸರು, ಭಜನಾ ಮೇಳದವರು. ಚಲವಾದಿಗಳು, ಹಣತರು, ಮುಂತಾದವರು ಉಲ್ಲೇಖನೀಯರಾಗಿದ್ದಾರೆ.

ಹೈದ್ರಾಬಾದ ಕರ್ನಾಟಕದಲ್ಲಿ ತಂಬೂರಿಯನ್ನು ಬಳಸುವವರೆಂದರೆ ಬಹುರೂಪಿಗಳು. ಕೆಲವೆಡೆ ಇವರನ್ನೆ ಜಾತಿಕಾರರೆಂದು ಕರೆಯುತ್ತಾರೆ. ಬೀದರ ಜಿಲ್ಲೆಯ ನಿರ್ಣಾವಾಡಿ, ಹಿಲಾಲಪುರ, ತೂಗಾಂವ (ಕಟ್ಟಿ) ಮುಂತಾದ ಊರುಗಳಲ್ಲಿ ಇವರು ನೆಲೆಸಿದ್ದಾರೆ. ವರ್ಷವೆಲ್ಲಾ ವಲಸೆಗಾರರಾಗಿ ತಿರುಗುವ ಇವರು ಪೌರಾಣಿಕ, ಸಾಮಾಜಿಕ ವಸ್ತುವನ್ನಿಟ್ಟುಕೊಂಡು ವೇಷ ಹಾಕಿ ರಂಜಿಸುತ್ತಾರೆ. ಕೆಲವು ಸಲ ಸ್ತ್ರೀ ಪಾತ್ರಗಳನ್ನು ಕೂಡ ಪುರುಷರೇ ನಿಭಾಯಿಸುತ್ತಾರೆ.

ಇವರನ್ನು ಬಿಟ್ಟರೆ ಗಡಿಭಾಗಗಳಾದ ರಾಯಚೂರು, ಕೊಪ್ಪಳ, ಬೀದರ ಜಿಲ್ಲೆಯ ಬುರ್ರಕಥಾ ಮೇಳದವರು ಇದನ್ನು ಬಳಸುತ್ತಿದ್ದರು. ಬುರ್ರ ಎಂದರೆ ಬುರುಡೆ ಎಂದರ್ಥ. ತಂಬೂರಿಯ ಬುಡದ ಅರ್ಧಭಾಗ ಟೊಳ್ಳಾಗಿರುವುದರಿಂದ ಈ ಹೆಸರು ಬಂದಿರಬಹುದು. ಇದು ಮುಖ್ಯವಾಗಿ 3 ರಿಂದ 7 ಕಲಾವಿದ'ರಿರುವ ಮೇಳ ಮುಖ್ಯ ಗಾಯಕ ತಂಬೂರಿಯನ್ನು ನೇತು ಹಾಕಿಕೊಂಡು ಹಾಡು ಹೇಳುತ್ತಾನೆ. ಉಳಿದವರು ಹಾಡಿ ಹಿಮ್ಮೇಳವಾಗಿ ಕಾಲಿಗೆ ಗೆಜ್ಜೆ ಹಾಗೂ ಎಡಗೈ ಮತ್ತು ತೋರು ಬೆರಳಿಗೆ ಗಗ್ಗುರಿಯನ್ನು ಧರಸಿ ಅದನ್ನು ಮೀಟುತ್ತ ಕುಣಿಯುವರು. ವೃತ್ತಿಗಾಯಕರಾಗಿ ಊರೂರು ಅಲೆದು ಹೊಟ್ಟೆ ತುಂಬಿಸಿಕೊಳ್ಳುವ ಇವರು ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಪೌರಾಣಿಕ ಕಥೆಗಳನ್ನು ಹಾಡುತ್ತಾರೆ. ಕೆಲವೆಡೆ ಇವರನ್ನು ದೊಂಬಿದಾಸರೆಂದೂ ಕರೆಯುತ್ತಾರೆ. ಕಥೆಗೆ ವ್ಯಂಗ್ಯ, ವಿಡಂಬನೆ ವಿನೋದಗಳನ್ನು ಸೇರಿಸುವುದರಿಂದ ಅವರ ಹಾಡುಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ.


ಇವರಲ್ಲದೆ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ತಂಬೂರಿಯನ್ನು ಮುಖ್ಯ ವಾದ್ಯವವನ್ನಾಗಿ ಬಳಸಿ ಹಾಡುವವರು ಎಂದರೆ ಸ್ವರವಚನಕಾರರು. ಭಜನಾ ಮಂಡಳಿಯವರು. 12ನೆಯ ಶತಮಾನದಿಂದ ಇವರ ಪರಂಪರೆಯನ್ನು ಗುರುತಿಸಬಹುದು. ಅಲ್ಲಮ್ಮಪ್ರಭು, ಬಹುರೂಪಿ ಚೌಡಯ್ಯ, ಢಕ್ಕೆಯ ಮಾರಯ್ಯ ಮೊದಲಾದವರು ತಮ್ಮ ತಂಡಗಳೊಂದಿಗೆ ಶರಣರ ಸಿದ್ಧಾಂತವನ್ನು ತಿಳಿಸಲು ಪ್ರಚಾರ ಕೈಗೊಂಡಿದ್ದು ತಿಳಿದು ಬರುತ್ತದೆ. ಇವರನ್ನೇ ಅನುಕರಿಸಿದವವರನ್ನು ಬಾಲ ಬಸವರೆಂದು ಕರೆಯುತ್ತೇವೆ. ಸಾರುವ ಅಯ್ಯನವರು ಇವರಂತೆ ತಂಬೂರಿಯನ್ನು ಬಳಸುವುದರ ಜೊತೆಗೆ ದಮ್ಮಡಿ, ತಾಳಗಳನ್ನು ಬಳಸುತ್ತಿದ್ದರು. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಕಡಕೋಳ ಮಡಿವಾಳಪ್ಪ, ಬಾಲಲೀಲಾ ಮಹಾಂತ ಶಿವಯೋಗಿಗಳು, ನೀರಲಕೇರಿ ಬಸವಲಿಂಗ ಶರಣರು, ಷರೀಫರ ಹಾಡುಗಳನ್ನು ಇವರು ಹಾಡುತ್ತಿದ್ದರು. ಈ ಭಾಗದ ತತ್ತ್ವಪದಕಾರರು ಕೂಡ ತಂಬೂರಿಯನ್ನು ಬಳಸಿ ನೀತಿಬೋಧೆ, ಆತ್ಮಶುದ್ಧಿ, ಭಕ್ತಿಯ ಸ್ಫುರಣ, ಸಂಸಾರದ ಅನಿತ್ಯತೆ, ಅಜ್ಞಾನ, ಗುರುಬೋಧೆ ಮುಂತಾದ ಸಂಗತಿಗಳನ್ನು ಕುರಿತು ಹಾಡುತ್ತಿದ್ದದ್ದು ಕಂಡು ಬರುತ್ತದೆ.

ದಾಸ ಪರಂಪರೆಯನ್ನು ಪ್ರತಿನಿಧಿಸಿ ಊರೂರು ತಿರುಗಿ ಹಾಡುವ ವೃತ್ತಿಗಾಯಕರು ತಂಬೂರಿಯವರು. ಇವರನ್ನು ಹೊಲೆದಾಸರು, ಮತ್ತು ಮಾದಿಗದಾಸರೆಂದು ಕರೆಯುತ್ತಾರೆ. ರಾಯಚೂರು, ಕೊಪ್ಪಳ, ಬೀದರಿನ ಗಡಿಭಾಗಗಳಲ್ಲಿ ಇವರ ಅಸ್ತಿತ್ವವಿದೆ. 'ತಂಬೂರಿ ಹೆಳವ'ರೆಂಬ ಇನ್ನೊಂದು ಜಾತಿಯ ವೃತ್ತಿಗಾಯಕರು ಕೂಡ ಈ ಭಾಗದಲ್ಲಿದ್ದಾರೆ. ತಂಬೂರಿಯೊಂದಿಗೆ ಹಾಡುತ್ತಾ ಕುಲಕೊಂಡಾಡಿ ಹೊಟ್ಟೆತುಂಬಿಕೊಳ್ಳುವ ಇವರು ಪೌರಾಣಿಕ ಮತ್ತು ಸಾಮಾಜಿಕ ಕಥೆಗಳನ್ನು ಹಾಡುತ್ತಾರೆ.

ಹೈದ್ರಾಬಾದ ಕರ್ನಾಟಕದ ತಂಬೂರಿಯವರು ನೀಲಗಾರರಂತೆಯೂ ಅಲ್ಲದೆ, ಹಾಸನ, ಚಿಕ್ಕಮಗಳೂರು ಕಡೆಯ ಚಲವಾದಿಗಳಂತೆಯೂ ಅಲ್ಲದೆ ವಿಶಿಷ್ಟ ರೀತಿಯವರಾಗಿದ್ದಾರೆ. ಈ ಭಾಗದ ತಂಬೂರಿಯವರಲ್ಲಿ ಮೇಲ್ಜಾತಿಯವರೂ ಕೆಳಜಾತಿಯವರೂ ಇರುವುದು ಗಮನಿಸಬೇಕಾದ ವಿಶೇಷ ಸಂಗತಿಯಾಗಿದೆ.

(ಎಸ್‌ಆರ್)

ತತ್ರಾಣಿ: ಮಣ್ಣಿನಿಂದ ತಯಾರಿಸಿದ ನೀರಿನ ಪಾತ್ರೆ. ನೋಡಲು ಆಮೆಯಂತೆ ಕಾಣುತ್ತದೆ. ಗ್ರಾಮೀಣ ಪ್ರದೇಶದಲ್ಲಿ ನೀರು ಸಂಗ್ರಹಿಸಿಟ್ಟುಕೊಳ್ಳಲು ಹರಬಿ (ಪಡಗ) ಗಡಗಿ, ಕೊಳಗ, ಬಾನಿ, ಡೋಣಿ ಇತ್ಯಾದಿ ಪಾತ್ರೆಗಳನ್ನು ಬಳಸುತ್ತಿದ್ದರು. ಇವು ಒಂದುರೀತಿ ಗೃಹೋಪಯೋಗಿ ಸ್ಥಿರಜಲಸಂಗ್ರಹಾಲಯಗಳು ಆಗಿದ್ದುವು. ಭೂಮಿ ಸೀಮೆಯಲ್ಲಿ ದುಡಿಯಲು ಹೋಗುವವರು, ದನ-ಕರು, ಎತ್ತು-ಎಮ್ಮೆ, ಆಡು-ಕುರಿ, ಮೇಯಿಸಲು ಅಡವಿಗೆ ಹೋಗುವವರು ನೀರು ತುಂಬಿದ ಇಂಥ ಚಿಕ್ಕ ಚಿಕ್ಕ ತತ್ರಾಣಿಗಳನ್ನು ಬಗಲಲ್ಲಿ ಹಾಕಿಕೊಂಡು ಹೋಗುತ್ತಿದ್ದರು. ಇವು ಒಂದು ಚರಿಗೆಯಿಂದ (ತಂಬಿಗೆ) ಹಿಡಿದು ಐದು ಚರಿಗೆ ನೀರು ಹಿಡಿಯುವಷ್ಟು ದೊಡ್ಡದಾಗಿರುತ್ತಿದ್ದುವು. ಸರಳೀಕರಿಸಿ ಹೇಳಬಹುದಾದರೆ ಇಂದಿನ ಬೇರೆ ಬೇರೆ ಅಳತೆಯ (ಲೀಟರ್) ವಾಟರ್ ಕ್ಯಾನ್‌ಗಳಂತೆ ಮಣ್ಣಿನ ಈ ತತ್ರಾಣಿಗಳನ್ನು



ತತ್ರಾಣಿ

ಬಳಸುತ್ತಿದ್ದರು. ಒಡಲು ದಪ್ಪವಾಗಿ ಅಂದರೆ ಉಬ್ಬಿದ ಪೂರಿಯಂತೆ ಇರುತ್ತಿತ್ತು. ಬಾಯಿ ಸಣ್ಣದಾಗಿರುತ್ತಿತ್ತು. ಎರಡು ಬದಿಗಳಿಗೆ ಹಗ್ಗದಿಂದ ಬಿಗಿದು ಬಗಲಿಗೆ ಏರಿಸಿಕೊಳ್ಳಲು ಅನುವಾಗುವಂತೆ ಮಗ್ಗುಲಲ್ಲಿ ಹರಿ ಇರುತಿತ್ತು. ಈ ಹಗ್ಗ ಇಂದಿನ ವಾಟರ್ ಕ್ಯಾನಿನ ಬೆಲ್ಟಿನಂತೆ ಬಗಲಿಗೆ ಹಾಕಿಕೊಳ್ಳಲು ಸಹಾಯ ಮಾಡುತ್ತಿತ್ತು. ಇಡೀ ದಿವಸ ಬಿಸಿಲಲ್ಲಿ ಹೊತ್ತು ತಿರುಗಿದರು ತತ್ರಾಣಿಯೊಳಗಿನ ನೀರು ಬಿಸಿಯಾಗುತ್ತಿರಲಿಲ್ಲ. ಕುಂಬಾರನ ತಿಗುರಿಯಲ್ಲಿ ಕಲಾತ್ಮಕವಾಗಿ ಅರಳುತ್ತಿದ್ದ ತತ್ರಾಣಿ ನೋಡಲು ಬಲು ಚಂದ. ಇದರ ಆಕಾರ ಕಂಡೇ ಜನಪದರು ಅದರ ಮೇಲೊಂದು ಗಾದೆ ಕಟ್ಟಿದ್ದರು. 'ಗಬ್ಬದ ಚೇಳು ಗುಡ್ಡಾ ಏರತೈತಿ' ಏನು ಹೇಳು ಎಂದಾಗ ಎದುರಿಗಿದ್ದವರು ತಕ್ಷಣ ಹೇಳುತ್ತಿದ್ದ ಉತ್ತರ, ತತ್ರಾಣಿ ಎಂದು. ಬಗಲಿಗೆ ಹಾಕಿಕೊಂಡು ಮನುಷ್ಯರು ದನಕರ ಮೇಯಿಸಲು ಗುಡ್ಡ ಏರುತ್ತಿದ್ದರೆ ಗಬ್ಬಾದ ಚೇಳು (ಗರ್ಭಧರಿಸಿದ ಚೇಳು) ಗುಡ್ಡ ಏರುತ್ತಿದ್ದಂತೆ ಅದು ಭಾಸವಾಗುತ್ತಿತ್ತು.

ಚರ ಸ್ವರೂಪದ ಕೆಲಸಗಳಿಗೆ ಹೊರ ಹೋಗುವ ಗ್ರಾಮೀಣ ಪ್ರದೇಶದ ಶ್ರಮಿಕ ಸಮುದಾಯಗಳು ಬಾಯಾರಿಕೆ ತೀರಿಸಿಕೊಳ್ಳಲು ತತ್ರಾಣಿಯನ್ನು ಬಳಸಿಕೊಳ್ಳುತ್ತಿದ್ದರು. ಆಗ ನೀರು ಒಯ್ಯಲು ಈಗಿನಂತೆ ಬಾಟಲಿ ಅಥವಾ ವಾಟರ್ ಬ್ಯಾಗ್ ಸೌಲಭ್ಯಗಳಿರಲಿಲ್ಲ. ತತ್ರಾಣಿ ಒಂದೇ ಅನಿವಾರ್ಯವಾಗಿತ್ತು. ಮೇಲ್ವರ್ಗದವರು ಹಾಗೂ ಶ್ರೀಮಂತರು ಹಿತ್ತಾಳೆಯ ತಿರುಗಿಣಿ ತಂಬಿಗೆಯನ್ನು ಬಳಸಿದಂತೆ, ಋಷಿಮುನಿಗಳು ಕಮಂಡಲ ಬಳಸಿದಂತೆ ದುಡಿಯುವ ಜನ ತತ್ರಾಣಿಯನ್ನು ನೀರಿನ ಮೂಲವಾಗಿ ಕಂಡುಕೊಂಡಿದ್ದು ಗಮನಾರ್ಹ. ತತ್ರಾಣಿ ತಯಾರಿಕೆ ವಿಶೇಷ ಪರಿಣಿತಿಯಿದ್ದ ಕುಂಬಾರನಿಂದ ಮಾತ್ರ ಸಾಧ್ಯವಾಗುತ್ತಿತ್ತು ಎನ್ನುವುದು ವಿಶೇಷ. *(ಫ್ಲಿಜಿ)*

ತತ್ವಪದಕಾರರು: ಬೀದರ ಜಿಲ್ಲೆ ತತ್ವಪದಕಾರರ ಪರಂಪರೆ 18ನೆಯ ಶತಮಾನದಿಂದ ಪ್ರಾರಂಭವಾಗುತ್ತದೆ. ಈಗ ದೊರೆತಿರುವ ಅಧಿಕೃತ ಮಾಹಿತಿಗಳ ಪ್ರಕಾರ ಈ ಶತಮಾನದ ಮರಕುಂದಿ ಬಸವಣ್ಣಪ್ಪ ಈ ಜಿಲ್ಲೆಯ ಪ್ರಥಮ ತತ್ವಪದಕಾರ. ಇವನಿಂದ ಪ್ರಾರಂಭವಾಗುವ ಬೀದರ ಜಿಲ್ಲೆಯ ತತ್ವಪದಕಾರರ ಪರಂಪರೆ ಇದುವರೆಗೂ ಮುಂದುವರೆದಿದೆ. ಬೀದರಿನ ರಘುನಾಥ ಹಡಪದ, ಹುಲಸೂರಿನ ಶಿವಾನಂದ ಸ್ವಾಮೀಜಿ, ಗೌಡಗಾಂವದ ಪಂಚಾಕ್ಷರಿ ಹಿರೇಮಠ, ಕಲಖೋರಾದ ರೇವಣಸಿದ್ಧಪ್ಪ ನಾಟೀಕಾರ, ಭಾಗಹಿಪ್ಪರಗಾದ ನಬಿಲಾಲ ಮೊದಲಾದ ತತ್ವಪದಕಾರರು ಈ ಪರಂಪರೆಯನ್ನು ಇಲ್ಲಿ ಇಂದಿಗೂ ಜೀವಂತವಾಗಿರಿಸಿದ್ದಾರೆ. ಕೊಹಿನೂರು ಭದ್ರಪ್ಪ ಹಾಗೂ ಕೊಳ್ಳೂರ ಹುಸೇನನ ಗುರು ಪರಂಪರೆಯಲ್ಲಿ ಬರುವ ಬಸವಕಲ್ಯಾಣ ತಾಲ್ಲೂಕಿನ ಕೊಹಿನೂರ ಗ್ರಾಮದ ರೇವಣಸಿದ್ಧಪ್ಪ ಸೂಗುರೆ ಎಂಬ ತತ್ವಪದಕಾರನಿಗೆ ಈಗ ಕೇವಲ 31ರ ಹರೆಯ. 'ರೇವಣಸಿದ್ಧಪ್ಪ-ಶ್ರೀಮಂತ' ಎಂಬ ಅಂಕಿತದಲ್ಲಿ ಅನೇಕ ತತ್ವಪದಗಳನ್ನು ರಚಿಸಿರುವ ಈತ, ಬೀದರ ಜಿಲ್ಲೆಯಲ್ಲಿ ತತ್ವಪದ ಸಾಹಿತ್ಯ ಸೃಷ್ಟಿ ಇನ್ನೂ ಬತ್ತಿಲ್ಲ ಎನ್ನುವುದಕ್ಕೆ ದಟ್ಟ ಸಾಕ್ಷಿಯಾಗಿದ್ದಾನೆ.

ಬೀದರ ಜಿಲ್ಲೆ ತತ್ವಪದಕಾರರ ಪರಂಪರೆ ತುಂಬ ಬೆಳೆದಿದೆ. ಇದುವರೆಗೆ ಇಲ್ಲಿ 70ಕ್ಕೂ ಹೆಚ್ಚು ತತ್ವಪದಕಾರರು ಕಾಣಿಸಿಕೊಂಡಿದ್ದಾರೆ. ಆದರೆ ಇವರಲ್ಲಿ ಬಹುತೇಕರು ಇನ್ನೂ ಎಲೆಮರೆಯ ಕಾಯಿಯ ಹಾಗೆ ಅಜ್ಞಾತವಾಗಿಯೇ ಉಳಿದಿದ್ದಾರೆ. ಅವರ ಹೆಸರಾಗಲಿ ಅಥವಾ ತತ್ವಪದಗಳಾಗಲಿ ಎಲ್ಲೂ ಪ್ರಕಟವಾಗಿಲ್ಲ.

ಬೀದರ ಜಿಲ್ಲೆ ತತ್ವಪದಕಾರರ ಹೆಸರುಗಳು ಹೀಗಿವೆ:

1. ಮರಕುಂದಿ ಬಸವಣ್ಣಪ್ಪ, 2. ನಿಡವಂಚಿ ನಿಜಲಿಂಗಭದ್ರೇಶ್ವರ, 3. ಆಣದೂರದ ಜಹೂರ ಅಲಿಶಾ, 4. ಅಷ್ಟೂರಿನ ಲಕ್ಷ್ಮಣ ಸಾಧು, 5. ಅಣದೂರದ ಮೋನಪ್ಪ ಕೊಂಡಾರ, 6. ಬೀದರಿನ ಕಾಶೀನಾಥ ಸಿಂಧೆ (ಪಂಷಶೀಲ ಗವಾಯಿ), 7. ಕಂಗಟಿಯ ಶರಣಪ್ಪಶಾಸ್ತ್ರಿ, 8. ಬೀದರಿನ ರಘುನಾಥ ಹಡಪದ, 9. ಆಣದೂರಿನ ಶಂಭಣ್ಣ, 10. ನೆಮ್ಮಾಬಾದದ ಶಿವರಾಮ ಹರಿಜನ 11. ಬೀದರಿನ ಸಿದ್ರಾಮಪ್ಪ ಹೊಸಮನಿ, 12. ಅಷ್ಟೂರಿನ ನರಸಪ್ಪ ಮಾಸ್ತರ, 13. ಚಿದ್ರಿಯ ಬಸಲಿಂಗಸ್ವಾಮಿ, 14. ನವಲಸಪುರದ ದೇವೇಂದ್ರಪ್ಪ, 15. ಮಿರ್ಜಾಪುರದ ಕಲ್ಲಪ್ಪ, 16. ಇಸ್ಲಾಂಪುರದ ಅಣ್ಣೆಪ್ಪ, 17. ಆಣದೂರಿನ ಮಾರುತಿ ಸಿಂಧೋಲ, 18. ಕೋಹಿನೂರಿನ ಭದ್ರಪ್ಪ ಪಾಟೀಲ, 19. ಖಿನಾಪುರದ ರಾಣಪ್ಪ ಜಮಾದಾರ, 20. ಗೋಕುಲದ ಶಿವಾರ್ ಸಾಬ ಶೇಖ್, 21. ಕೊಳ್ಳೂರಿನ ಹುಸನಾ, 22. ಮುಡಬಿಯ ಮಸ್ತ ಅಲಿಶಾಖಾದರಿ, 23. ಬಾಗಹಪ್ಪರಗಾದ ನಬಿಲಾಲ, 24. ಖೇರವಾಡದ ಲಕ್ಷ್ಮಣರಾವ ಕಮಲಾಪುರೆ, 25.

ಕೋಹಿನೂರಿನ ವೀರಣ್ಣಾ ಸಂತಾಜಿ, 26. ಸಿರಗಾಪುರದ ನಾಗೇಂದ್ರಪ್ಪ ಬಿರಾದಾರ, 27. ಬಸವಕಲ್ಯಾಣದ ಮಾಣಿಕಪ್ಪ ಮೀನಕೇರಿ, 28. ಹಾರಕೂಡದ ಶಂಕರ ಶೀಲವಂತ, 29. ಹುಲಸೂರಿನ ಶಿವಾನಂದ ಸ್ವಾಮೀಜಿ, 30. ಕಲಖೋರಾದ ರೇವಣಸಿದ್ಧಪ್ಪ ನಾಡಿಕಾರ, 31. ಹಾರಕೂಡದ ಬಸವಣ್ಣಪ್ಪ, 32. ಶಾಂತಣ್ಣ ಶೀಲವಂತ, 33. ಗೋರ್ಟಾದ ವಿರೂಪಾಕ್ಷಯ್ಯ ಮಠಪತಿ, 34. ಗದಲೇಗಾಂವದ ಅಣ್ಣಾರಾವ ಮಾಸ್ತರ, 35. ಏಕಲೂರದ ಸಿರಿಮಲ್ಲಪ್ಪ ಪಾಟೀಲ, 36. ಕೋಹಿನೂರಿನ ರೇವಣಸಿದ್ಧಪ್ಪ ಸೂಗುರೆ, 37. ಚಿಕ್ಕ ಆಲೂರಿನ ಮಡಿವಾಳಪ್ಪ ಕೆಂಚಾ, 38ಕಾಳಗಾಪುರದ ಸಿದ್ರಾಮಪ್ಪ ಬಿರಾದಾರ, 39.ಲಾದಾದ ಶಿವರಾಮ ಮುಚಳಂಬೆ, 40. ಬೋರಗಿಯ ರೆಹಮಾನಸಾಬ ಪಟೇಲ್, 41. ಶೆಂಭೆಳ್ಳಿಯ ಬಾಬಣ್ಣ, 42. ಹೆಡಗಾಪುರದ ಸಿದ್ಧರಾಮ ಮಕರಂಬೆ, 43. ಜೀರ್ಗಾದ ರತ್ನಪ್ಪ ಮಾನಕಾರಿ, 44. ನಾಗೂರದ ಝುರೆಪ್ಪ ಭಂಗಾರೆ, 45. ಏಕಲಾರದ ಶಂಕರರಾವ ಪಾಂಚಾಳ, 46. ಶರಣಯ್ಯಸ್ವಾಮಿ, 47. ಜೊನ್ನಿಕೇರಿಯ ಗುಂಡಪ್ಪ, 48. ಕಾಶೇಂಪೂರದ ನಾಗಪ್ಪ ಹರಿಜನ, 49. ಖಟಕ್ ಚಿಂಚೋಳಿಯ ಮಲ್ಲಿಕಾರ್ಜುನ ಚಾಮರೆಡ್ಡಿ, 50. ಅಪ್ಪಾರಾವ ಕುಲಕರ್ಣಿ, 51. ಬ್ಯಾಹಳ್ಳಿಯ ಮಲ್ಲಿಕಾರ್ಜುನ ಚಾಮರೆಡ್ಡಿ, 52. ಸಿಕಿಂದ್ರಾಬಾದವಾಡಿಯ ಕಲ್ಲಪ್ಪ ಗೋರಚಿಂಚೋಳ್ಳಾ, 53. ಕರಡ್ಯಾಳದ ನಾಗಪ್ಪ ಬಿರಾದಾರ, 54. ದಾಡ್ಗಿಯ ಭೀಮಾಶಂಕರ ವಳಸಂಗೆ, 55. ಕಣಜಿಯ ಮನೋಹರ ಮುಲಗೆ, 56. ಗೌಡಗಾಂವದ ಪಂಚಾಕ್ಷರಿ ಸ್ವಾಮಿ, 57. ನಾವದಗಿಯ ನಾಗಲಿಂಗ ಕವಿ, 58. ಕೋಸಮ್‌ದ ಕಲ್ಲಪ್ಪ ಮ್ಯಾಲದೊಡ್ಡಿ, 59. ಹಜನಾಲದ ದೇವೇಂದ್ರಪ್ಪ, 60. ಹಪ್ಪಳಗಾಂವದ ಬಾಬುರಾವ, 61. ಮಾಣಿಕ ನಗರದ ಮಾಣಿಕಪ್ರಭು, 62. ಧುಮ್ಮನಸೂರಿನ ಸಿದ್ಧಪ್ರಭು, 63. ಮಂಗಲಿಗೆಯ ನನ್ನೇಸಾಬ, 64. ಬೆಳಕೇರೆಯ ತುಕಾರಾಮ ಉಪ್ಪಾರ, 65. ಚಿಟಗುಪ್ಪಾದ ಹಣಮಂತಪ್ಪ ಮಂಕಾಲ್, 66. ಶಿಲ್ಲಪ್ಪ ಭೂತಾಳೆ, 67. ಹುಡಗಿಯ ಶಾಂತಪ್ಪ ದೇವರಾಯ, 68. ಮದ್ದಿನವಾಡಿಯ ಅಜೀಜ್ ಪೇಲ್, 69. ಹುಡಗಿಯ ಗುರಪಾದಪ್ಪ ಶಿವರೆಡ್ಡಿ, 70. ಡಾಕುಳಗಿಯ ಮಲ್ಲಪ್ಪ ಹರಿಜನ, 71. ಮಾಣಿಕ ನಗರದ ಮನೋಹರ ಮಾಣಿಕ ಪ್ರಭು, 72. ಮಾರ್ತಂಡ ಮಾಣಿಕ ಪ್ರಭು, 73. ಸಿದ್ಧರಾಜ ಮಾಣಿಕ ಪ್ರಭು, 74. ಘಾಟಿಬೋರಾಳದ ಸಂತರಾಮ ಮಹಾರಾಜ ಹೀಗೆ ಬೀದರ ಜಿಲ್ಲೆಯು 74 ಜನ ತತ್ವಪದಕಾರಿಗೆ ಜನ್ಮ ನೀಡಿರುವುದು ಗಮನಕ್ಕೆ ಬಂದಿದೆ. ಈ ನಿಟ್ಟಿನಲ್ಲಿ ಹುಡುಕಿದರೆ ಇನ್ನೂ ಹೆಚ್ಚಿನ ತತ್ವಪದಕಾರರು ಇಲ್ಲಿ ಸಿಗುವ ಸಾಧ್ಯತೆ ಇದೆ.

ಬೀದರ ಜಿಲ್ಲೆಯ ಈ 74 ತತ್ವಪದಕಾರರಲ್ಲಿ ಮೊದಲಿನ 17 ತತ್ವಪದಕಾರರು ಬೀದರ ತಾಲ್ಲೂಕಿಗೆ ಸೇರಿದವರಾದರೆ, 18ರಿಂದ 36ರವರೆಗಿನ 19 ಜನ ತತ್ವಪದಕಾರರು ಬಸವಕಲ್ಯಾಣ ತಾಲ್ಲೂಕಿಗೆ ಸೇರಿದವರಾಗಿದ್ದಾರೆ. 37 ರಿಂದ 48ರ ವರೆಗಿನ 12 ಜನ ತತ್ವಪದಕಾರರು ಭಾಲ್ಕಿ ತಾಲ್ಲೂಕಿನವರಾಗಿದ್ದಾರೆ, ಕೊನೆಯ 61 ರಿಂದ 74ರ ವರೆಗಿನ 14 ಜನ ತತ್ವಪದಕಾರರು ಹುಮನಾಬಾದ ತಾಲ್ಲೂಕಿಗೆ ಸೇರಿದವರು.

ಬೀದರ ಜಿಲ್ಲೆಯ ತತ್ವಪದಕಾರರ ಈ ಸಂಖ್ಯೆಯನ್ನು ಗಮನಿಸಿದಾಗ, 18ನೆಯ ಶತಮಾನದಿಂದ ಇದುವರೆಗಿನ ಕಡಿಮೆ ಅವಧಿಯಲ್ಲಿ ಇಂದು ಯುಗವನ್ನೇ ನಿರ್ಮಿಸುವಷ್ಟು ತತ್ವಪದಕಾರರು ಇಲ್ಲಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಇದೇ ಅವಧಿಯಲ್ಲಿ ಕನ್ನಡ ನಾಡಿನ ಬೇರೆ ಬೇರೆ ಜಿಲ್ಲೆಗಳಲ್ಲೂ ಇಂಥ ತತ್ವಪದಕಾರರು ಕಂಡುಬರುತ್ತಾರಾದರೂ, ಆ ಸಂಖ್ಯೆ ಈ ಜಿಲ್ಲೆಯಲ್ಲಿಯೇ ಅಧಿಕವಾಗಿದೆ. ಹೀಗಾಗಿ 18, 19ನೆಯ ಶತಮಾನದ ಕನ್ನಡ ಸಾಹಿತ್ಯದ ಕೊರತೆಯನ್ನು ತುಂಬಿರುವ ಶ್ರೇಯಸ್ಸಿನಲ್ಲಿ ಬೀದರ ಜಿಲ್ಲೆಯದೇ ಹೆಚ್ಚಿನ ಪಾಲಿದೆ, ಎಂದೆನಿಸುತ್ತದೆ.

ಬೀದರ ಜಿಲ್ಲೆಯ ಮೇಲಿನ ತತ್ವಪದಕಾರರ ಪಟ್ಟಿಯಲ್ಲಿ ಎಲ್ಲಾ ತತ್ವಪದಕಾರರು ಪುರುಷರೇ ಆಗಿದ್ದಾರೆ. 12ನೆಯ ಶತಮಾನದಲ್ಲಿ ಅನೇಕ ವಚನಕಾರ್ತಿಯರನ್ನು ಕಂಡ ಈ ಜಿಲ್ಲೆಯಲ್ಲಿ ಇಂದು ಒಬ್ಬಳಾದರೂ ತತ್ವಪದಕಾರ್ತಿ ಇಲ್ಲದಿರುವುದು ಸೋಜಿಗದ ಸಂಗತಿ.

ಬೀದರ ಜಿಲ್ಲೆಯ ತತ್ವಪದಕಾರರು ಬೇರೆಬೇರೆ ಜಾತಿ, ಮತ, ಪಂಗಡಗಳಿಗೆ ಸೇರಿದವರಾಗಿದ್ದಾರೆ.ಇಲ್ಲಿಯ ತತ್ವ ಪದಕಾರರು 12ನೆಯ ಶತಮಾನದ ಶರಣರಂತೆ ಸಮಾಜದ ವಿವಿಧ ಜಾತಿ–ಜನಾಂಗಗಳಿಂದ ಬಂದವರಾಗಿದ್ದಾರೆ.ಬೀದರ ಜಿಲ್ಲೆಯ ತತ್ವಪದಕಾರರು ತಮ್ಮ ಉಪಜೀವನಕ್ಕಾಗಿ ವಿವಿಧ ವೃತ್ತಿಗಳನ್ನು ಅವಲಂಬಿಸಿದವರಾಗಿದ್ದಾರೆ. ಗುಮಾಸ್ತ, ಶಿಕ್ಷಕ, ಕೂಲಿ, ವ್ಯಾಪಾರ, ಒಕ್ಕಲುತನ, ಉಪ್ಪಾರ, ಕ್ಷೌರ, ಚಿನಿವಾರ, ಪಟವಾರಿ, ಭಿಕ್ಷೆ–ಇವು ಇವರು ಕೈಕೊಂಡಿರುವ ವಿಭಿನ್ನ ಉದ್ಯೋಗಗಳಾಗಿವೆ. ಈ ತತ್ವಪದಕಾರರಲ್ಲಿ ಮಾಣಿಕನಗರದ ಮಾಣಿಕಪ್ರಭು, ಮಾರ್ತಂಡ ಮಾಣಿಕಪ್ರಭು, ಮನೋಹರ ಮಾಣಿಕಪ್ರಭು, ಸಿದ್ಧರಾಜ ಮಾಣಿಕಪ್ರಭು ಇವರು ಮರಾಠಿ ಭಾಷೆಯ ತತ್ವಪದಕಾರರು. ಧುಮ್ಮನಸೂರಿನ ಸಿದ್ಧಪ್ರಭು, ನಿಡವಂಚಿಯ ಭದ್ರೇಶ್ವರ, ಮುಡಬಿಯ ಮಸ್ತಾ ಅಲಿಶಾ, ಚಿಟಗುಪ್ಪಾದ ಹಣಮಂತಪ್ಪ, ಶಿಲ್ಲಪ್ಪ ಭೂತಾಳೆ– ಬಹುಭಾಷಾ ತತ್ವಪದಕಾರರು. ಕನ್ನಡದ ಜಗೆತೆ ಮರಾಠಿ, ಹಿಂದಿ, ಉರ್ದು, ತೆಲಗು ಭಾಷೆಗಳಲ್ಲೂ ಇವರು ತತ್ವಪದಗಳನ್ನು ಬರೆದಿದ್ದಾರೆ. ಮುಡಬಿಯ ಮಸ್ತ ಅಲಿಶಾ ಮತ್ತು ಧುಮ್ಮನಸೂರಿನ ಸಿದ್ಧಪ್ರಭುವಿನಂಥವರು ಕನ್ನಡ, ಮರಾಠಿ, ತೆಲಗು, ಉರ್ದು, ಹಿಂದಿ, ಭಾಷೆಗಳನ್ನು ಬೆರೆಸಿ ತತ್ವಪದಗಳನ್ನು ರಚಿಸುವುದರ ಮೂಲಕ ಬೀದರ ಭಾಗದಲ್ಲಿ ಭಾಷಾ ಸಾಮರಸ್ಯತೆ ಹಾಗೂ ಮತೀಯ ಸೌಹಾರ್ದತೆಗಳ ನಿರ್ಮಾಣಕ್ಕೆ ಕಾರಣ–ರಾಗಿದ್ದಾರೆ.ಬೀದರ ಜಿಲ್ಲೆಯ ದಲಿತ ತತ್ವಪದಕಾರರಲ್ಲಿ ಔರಾದ ತಾಲ್ಲೂಕಿನ ಶೆಂಬೆಳ್ಳಿ ಗ್ರಾಮದ ಬಾಬಣ್ಣ ಮೊದಲಿಗರು. ಆತ 1905ರಲ್ಲಿ ಜನಿಸಿದ.

ಬೀದರ ತಾಲ್ಲೂಕಿನ ಆಣದೂರ ಗ್ರಾಮದ ಜಹೂರ ಅಲಿಶಾ ಬೀದರ ಜಿಲ್ಲೆಯ ಪ್ರಥಮ ಮುಸ್ಲೀಮ್ ತತ್ವಪದಕಾರ. ಇಲ್ಲಿಯ ಮುಸ್ಲಿಂ ತತ್ವಪದಕಾರರು ಇಸ್ಲಾಂ ಧರ್ಮದಲ್ಲಿ ಜನಿಸಿ ವೀರಶೈವ ಸಂಸ್ಕೃತಿಯನ್ನು ತೀವ್ರವಾಗಿ ಅಳವಡಿಸಿಕೊಂಡಿದ್ದಾರೆ. ಮುಡಬಿಯ ಮಸ್ತ ಅಲಿಶಾಖಾದರಿ ಗುರು ಆನಂದಯ್ಯನ ಶಿಷ್ಯನಾಗಿದ್ದು, ತನ್ನ ತತ್ವಪದಗಳಿಗೆ ಆತನ ಹೆಸರನ್ನೇ ಅಂಕಿತವಾಗಿರಿಸಿಕೊಂಡಿದ್ದಾನೆ.

ಟೊಂಕದಲ್ಲಿ ಉಡುದಾರ ಕಟ್ಟುವ ಈ ಶತವೃದ್ಧ ಈಗಲೂ ಹಣೆಗೆ ವಿಭೂತಿ ಧರಿಸಿ ಪ್ರತಿನಿತ್ಯ 108 ಸಲ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತಾನೆ. ಮಾತ್ರವಲ್ಲದೆ ಸ್ವತ: ಗುರುವಿನ ಸ್ಥಾನದಲ್ಲಿ ನಿಂತು ಅನೇಕ ಶಿಷ್ಯರಿಗೆ ಲಿಂಗದೀಕ್ಷೆ ನೀಡಿದ್ದಾನೆ. ಅದೇರೀತಿ ಕೋಹಿನೂರಿನ ಚನ್ನಮಲ್ಲದೇವರ ಭಕ್ತನಾದ ಕೊಳ್ಳೂರ ಹುಸನಾ ಹಾರಕೂಡದ ಚನ್ನಬಸವ ಶಿವಯೋಗಿಗಳಿಂದ ಲಿಂಗದೀಕ್ಷೆ ಪಡೆದು, ಅವರನ್ನು ಕುರಿತು ಅನೇಕ ಹಾಡುಗಳನ್ನು ರಚಿಸಿದ್ದಾನೆ. ಮುದ್ದಿನವಾಡಿಯ ಅಜೀಜ್ಪಟೇಲ, ಬಾಗಹಪ್ಪರಗಾದ ನಬಿಲಾಲ, ಆಣದೂರದ ಜಹೂರ ಅಲಿಶಾ ಕೂಡಾ ವೀರಶೈವ ದೇವತೆಗಳನ್ನೇ ತಮ್ಮ ಆರಾಧ್ಯದೈವಗಳನ್ನಾಗಿ ಮಾಡಿಕೊಂಡು, ಆ ಧರ್ಮದ ಗುರುಗಳ ಮಾರ್ಗದಲ್ಲಿ ಲೋಕವನ್ನು ಬೆಳಗಿದ್ದಾರೆ. ಈ ಎಲ್ಲಾ ಮುಸ್ಲೀಂ ತತ್ವಪದಕಾರರು ಕನ್ನಡದಲ್ಲಿ ಅನೇಕ ತತ್ವಪದಗಳನ್ನು ರಚಿಸಿ, ಶಿವಶರಣರ ಸಂದೇಶಗಳನ್ನು ಜಗತ್ತಿಗೆ ಸಾರಿದ್ದಾರೆ. ಹೀಗೆ ಬೀದರ ಜಿಲ್ಲೆಯ ಮುಸ್ಲೀಂ ತತ್ವಪದಕಾರರು ತಮ್ಮ ಮಾತೃಭಾಷೆ–ಸಂಸ್ಕೃತಿ–ಧರ್ಮಕ್ಕಿಂತಲೂ ತಾವು ಹುಟ್ಟಿ ಬೆಳೆದ ನೆಲದ ಭಾಷೆ–ಸಂಸ್ಕೃತಿ–ಧರ್ಮಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ನಿಜಾಂ ಶಾಹಿಗಳ ಕಾಲದಲ್ಲಿ ನಲುಗಿ ಹೋಗಿದ್ದ ಈ ಭಾಗದ ಕನ್ನಡ ಭಾಷೆ–ಸಂಸ್ಕೃತಿ–ಧರ್ಮಕ್ಕೆ ಸ್ವತ: ಮುಸ್ಲಿಮ್‌ರೇ ತತ್ವಪದಗಳ ಮೂಲಕ ಹೊಸ ಜೀವ ನೀಡಿರುವುದು ವಿಶೇಷವಾಗಿದೆ.

ಜಾನಪದ ನೆಲೆಯಿಂದ ಈ ತತ್ವಪದಕಾರರು ತತ್ವಪದಗಳ ಜತೆಗೆ ಜಾನಪದ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಸಾಹಿತ್ಯವನ್ನು ರಚಿಸಿದ್ದಾರೆ. ಮೊಹರಂ, ಗೀಗೀ, ಕುಟ್ಟುವ, ಬೀಸುವ, ಸೋಬಾನ, ಮದುವೆ, ಜೋಗುಳ, ಹಂತೀ, ಕೋಲಾಟ, ಭುಲಾಯಿ, ಆರತಿ, ಸೀಗಿ, ಕುಟುಂಬ ಯೋಜನಾ, ಸಾಕ್ಷರತಾ, ನಾಟಕ, ಪುರಾಣ ಈ ಮೊದಲಾದ ರೂಪಗಳಲ್ಲಿ ಅವರು ಬೀದರ ನೆಲದಿಂದ ಕನ್ನಡ ನಾಡಿನ ಸಾಹಿತ್ಯ ಲೋಕಕ್ಕೆ ಅಪಾರವಾದ ಕೊಡಿಗೆ ನೀಡಿದ್ದಾರೆ.

ತತ್ವಪದಕಾರರಿಗೆ ಬಹುಮುಖ್ಯವಾದ ತತ್ವವೆಂದರೆ ಅನುಭಾವ. ಬೀದರ ಜಿಲ್ಲೆಯ ತತ್ವಪದಕಾರರು ಈ ಅನುಭವದ ಅಭಿವ್ಯಕ್ತಿಗಾಗಿ ತತ್ವಪದಗಳನ್ನಷ್ಟೇ ಅಲ್ಲದೆ, ಮೇಲೆ ಹೇಳಿದ ಜನಪದ ಸಾಹಿತ್ಯದ ಎಲ್ಲಾ ಪ್ರಕಾರಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ತತ್ವಪದಗಳಂತೆ ಭುಲಾಯಿ, ಗೀಗೀ, ಮೊಹರಂ–ಎಲ್ಲದರಲ್ಲೂ ಅವರು ಅನುಭಾವವನ್ನು ದಟ್ಟವಾಗಿ ತುಂಬಿದ್ದಾರೆ.

> ಗರ್ವ ಅಹಂ ಅಹಂಕಾರ ಸೊಕ್ಕಿತೊ
> ಆರು ಮಂದಿ ಕಳ್ಳರ ಕುಲ
> ಜ್ಞಾನ ಕೊರಡಿಲ್ಲೇ ಘಟಕುಡಿದು
> ಸುಟ್ಟು ಸಪ್ಪೆಮಾಡಿದರು ನಿರ್ಬಯಲ

ಇದೊಂದು ಮೊಹರಂ ಹಾಡು. ಬೋರಗಿ ರೆಹಮಾನ ಸಾಬನ ಈ ಮೊಹರಂ ಹಾಡಿನಲ್ಲಿ ಅನುಭಾವ ಸಾಧಕರಾದವರು ತಮ್ಮ ಶರೀರದಲ್ಲಿ ಭಯಂಕರವಾಗಿರುವ 'ಗರ್ವ–ಅಹಂಕಾರ' 'ಆತ್ಮಜ್ಞಾನ' ಎಂಬ ಕಿಡಿ–ಕೊರಡಿನಿಂದ ಕಡಿದು, ಸುಟ್ಟು ಶರೀರವನ್ನು 'ಬಯಲು–ನಿರ್ಬಯಲು ಮಾಡಿದರೆಂಬ ವಿಚಾರ ತುಂಬ ಮಾರ್ಮಿಕವಾಗಿದೆ. ಹೀಗೆ ಇಲ್ಲಿಯ ತತ್ವಪದಕಾರರು ತಮ್ಮ ಪ್ರತಿಯೊಂದು ರಚನೆಯಲ್ಲಿ (...) ಅನುಭಾವದ ಎತ್ತರವನ್ನು ಬಿತ್ತರಿಸಿದ್ದಾರೆ. ಇದನ್ನೆಲ್ಲಾ ಗಮನಿಸಿದಾಗ ಅನುಭಾವ ವನ್ನೇ ಅವರ ಸಾಹಿತ್ಯ ಸೃಷ್ಟಿಯ ಮೂಲ ಆಶಯವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಹೀಗಾಗಿ ಅವರನ್ನು 'ತತ್ವಪದಕಾರು' ಎಂದು ಸೀಮಿತಗೊಳಿಸುವುದಕ್ಕಿಂತಲೂ, ವಿಶಾಲವಾಗಿ 'ಅನುಭಾವಿ ಕವಿ'ಗಳು ಎಂದು ಕರೆಯುವುದು ಸೂಕ್ತವೆನಿಸುತ್ತದೆ.

ಬೀದರ ಜಿಲ್ಲೆಯ ತತ್ವಪದಕಾರರು ಅಧ್ಯಾತ್ಮದ ಜತೆಗೆ ಸಮಾಜದ ಕಡೆಗೂ ಗಮನ ಹರಿಸಿದ್ದಾರೆ. ಧಾರ್ಮಿಕ ಔದಾರ್ಯತೆ, ಧರ್ಮಸಮನ್ವಯತೆ, ಮಾನವೀಯ ತುಡಿತ ಇಲ್ಲಿಯ ಪ್ರತಿಯೊಬ್ಬ ತತ್ವಪದಕಾರರ ಕಾಳಜಿ ಪರ ವಿಷಯವಾಗಿದೆ. ಬದುಕಿನ ಅನ್ಯೋನ್ಯತೆ, ಜೀವಪರ ನಿಲವು ಎಲ್ಲರ ಮನೋಧೋರಣೆ ಯಾಗಿದೆ. ಅಂತೆಯೇ ಅವರು ಜಾತಿ–ಮತ–ಪಂಥಗಳನ್ನು ಮೀರಿ ನಿಂತಿದ್ದಾರೆ.

ಬೀದರ ಜಿಲ್ಲೆ ತತ್ವಪದಕಾರರು ಸಮಕಾಲೀನ ಸಮಸ್ಯೆಗಳಿಗೂ ಸ್ಪಂದಿಸಿದ್ದಾರೆ. ಜನಸಂಖ್ಯಾ ಸಮಸ್ಯೆ, ಸಾಕ್ಷರ ಆಂದೋಲನ, ಸ್ವಾತಂತ್ರ್ಯ ಪ್ರೇಮ–ಇವುಗಳನ್ನು ಕುರಿತು ಪದಕಟ್ಟಿ ಹಾಡಿ ಜನಮನದ ಮೇಲೆ ಪ್ರಭಾವ ಬಿರಿದ್ದಾರೆ.

ಈ ತತ್ವಪದಕಾರರ ಮೇಲೆ ಕಲ್ಯಾಣ ಶರಣರ ಹಾಗೂ ಮರಾಠಿ ಸಂತರ ಪ್ರಭಾವ ದಟ್ಟವಾಗಿದೆ. ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಅಲ್ಲಮ ಮೊದಲಾದ ಕನ್ನಡ ಶರಣರನ್ನು ಹೇಗೋ ಹಾಗಿಯೇ ಜ್ಞಾನೇಶ್ವರ, ತುಕಾರಾಮ, ದಾಮಾಜಿ ಪಂತ, ಸಕೂಬಾಯಿ ಮುಂತಾದ ಮರಾಠಿ ಸಂತರನ್ನು ಕುರಿತಾಗಿಯೂ ಇವರು ಪದಕಟ್ಟಿ ಹಾಡಿದ್ದಾರೆ. ಪ್ರವಾದಿಗಳು ಸಾರಿದ ತತ್ವಗಳನ್ನು ತಮ್ಮ ಪದಗಳಲ್ಲಿ ಪ್ರತಿಬಿಂಬಿಸಿದ್ದಾರೆ. ಮಾತ್ರವಲ್ಲದೆ ಇವರಲ್ಲಿ ಎಷ್ಟೋ ಜನ ತತ್ವಪದಕಾರರು ಪಂಢರಪುರ ವಿಠಲ, ತುಳಜಾಪುರ ಅಂಬಾಭವಾನಿಯ ಭಕ್ತರಾಗಿದ್ದಾರೆ. ಶಿವಭಕ್ತಿಯೊಂದಿಗೆ ಹರಿಭಕ್ತಿಯನ್ನೂ ಅನುಸರಿಸಿದ ಈ ತತ್ವಪದಕಾರರು ಎರಡು ನಾಡು–ನುಡಿ–ಧರ್ಮಗಳ ಮಧ್ಯೆ ಸುಮಧುರವಾದ ಬಾಂಧವ್ಯದ ನಿರ್ಮಾಣಕ್ಕೆ ಒಳ್ಳೆಯ ನಿದರ್ಶನರಾಗಿದ್ದರೆ. *(ಬಿಎಸ್‌ಎ)*

ತಮಟೆ ಮೇಳ: ಕರ್ನಾಟಕದುದ್ದಕ್ಕೂ ಬಳಕೆಯಾಗುತ್ತಿರುವ ಒಂದು ಜನಪದ ವಾದ್ಯ. ಪ್ರಾದೇಶಿಕವಾಗಿ ಇದನ್ನು ಹಲಿಗೆ, ತಪ್ಪಡೆ, ಪಟಹ, ಹರೆ ಎಂಬ ವಿವಿಧ ಹೆಸರುಗಳಿಂದ ಕರೆಯುವುದುಂಟು. ಅತ್ಯಂತ ಪ್ರಾಚೀನ ವಾದ್ಯವಾದ ತಮಟೆಯ ಉಲ್ಲೇಖ ಪ್ರಾಚೀನ ಗದ್ಯ ಗ್ರಂಥವಾದ ವಡ್ಡಾರಾಧನೆ ಆನಂತರ ಕೃತಿಗಳಲ್ಲುಂಟು. ಹರಿಜನ ಸಮುದಾಯಗಳು ನುಡಿಸುವ ಈ ವಾದ್ಯ ಹಳ್ಳಿಯ ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ. ತಮಟೆ ಕೆಲವೊಮ್ಮೆ ಡಂಗೂರ ಸಾರುವಂತಹ ಕಾರ್ಯಗಳಲ್ಲಿ ಒಂಟಿಯಾಗಿ ಬಳಕೆಗೊಂಡರೆ ಇನ್ನುಳಿದ ಸಾಂಸ್ಕೃತಿಕ ಸಂದರ್ಭಗಳಲ್ಲಿ ಮೇಳದೊಂದಿಗೆ ಬಳಕೆಗೊಳ್ಳುತ್ತಿದೆ. ತಮಟೆ ಮೇಳವನ್ನು ಹಲಗೆ ಮೇಳ, ಹಲಗೆ ಮಜಲು, ಹಲಗೆ ಬಾಜಿ, ಹಲಗೆ ಮದಾಲಸಿ ಎಂಬ ಹೆಸರುಗಳಿಂದ ಕರೆಯು ವುದುಂಟು. ಈ ಮೇಳದಲ್ಲಿ ಹಲಿಗೆ ಪ್ರಧಾನ ವಾದ್ಯ ಅದಕ್ಕೆ ಸಾಥಿಯಾಗಿ ದಿಮ್ಮು, ಸನಾದಿ, ಜಾಗಟೆ, ಟಕೂರಿ, ಕಾಳೆ ಮುಂತಾದ ವಾದ್ಯಗಳಿರುವುದುಂಟು. ಪ್ರಾದೇಶಿಕ ವ್ಯತ್ಯಾಸಕ್ಕೆ ಅನುಗುಣವಾಗಿ ಹಲಗೆ ಮೇಳದ ಸ್ವರೂಪದಲ್ಲಿ

ಬದಲಾವಣೆಯನ್ನು ಕಾಣುತ್ತೇವೆ. ಬಳ್ಳಾರಿ, ಗುಲಬರ್ಗಾ ಪ್ರದೇಶದಲ್ಲಿ ಕೇವಲ ಹತ್ತಾರು ಹಲಿಗೆಗಳಿಂದ ಕೂಡಿರುವ ಮೇಳವನ್ನು ಹಲಗೆ ಮೇಳವೆಂದು ಕರೆಯುತ್ತಾರೆ. ಇತರ ಪ್ರದೇಶಗಳಲ್ಲಿ ಹಲಿಗೆ ಜೊತೆಗೆ ದಿಮ್ಮು, ಸನಾದಿ ತಾಸೆಗಳನ್ನು ಸೇರಿಸಿಕೊಂಡ ಮೇಳವನ್ನು ಸೃಷ್ಟಿಸುತ್ತಾರೆ.

ಹಳ್ಳಿಯ ಪ್ರತಿಯೊಂದು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಬಳಕೆಗೊಳ್ಳುತ್ತಿರುವ ಹಲಿಗೆಯನ್ನು ಸಾಮಾನ್ಯವಾಗಿ ಹೊಲೆ ಮಾದಿಗರು ನುಡಿಸುವ ಮುನ್ನ ಬೆಂಕಿಯ ಕಾವಿಗೆ ಹದವರಿತು ಕಾಸಿ, ಹೆಗಲಿಗೆ ಜೋತು ಹಾಕಿಕೊಂಡು, ಹೊಟ್ಟೆಗೆ ಅದುಮಿ ಹಿಡಿದು, ಎಡಗೈಯಿಂದ ಚಿಟುಕಿ (ಚಿಕ್ಕ ಕೋಲು) ಮತ್ತು ಬಲಗೈಯಿಂದ ಗಣಿ (ದಪ್ಪಕೋಲು) ಹಿಡಿದು ಎರಡು ಕೋಲುಗಳಿಂದ ಹಲಿಗೆಯನ್ನು ಭಾರಿಸುತ್ತಾರೆ. ಹತಾರು ಜನ ಸೇರಿದ ಈ ಮೇಳದಲ್ಲಿ ಹುರುಪು, ಹುಮ್ಮಸಗಳಿಂದ ಕುಣಿಯುತ್ತ ಸ್ಪರ್ಧೆಗಳ ಮೂಲಕ ಬಾರಿಸುವುದುಂಟು. ಕೆಲವರು ಎರಡು ಹಲಗೆಗಳನ್ನು ಕಟ್ಟಿಕೊಂಡು ಭಾರಿಸುತ್ತಾರೆ. ಹದವರಿತ ಕಲಾವಿದರು ಹಲಿಗೆಯನ್ನು ಹಲವಾರು ರೀತಿಯಲ್ಲಿ ನುಡಿಸುವರು. ಮುಂದಕ್ಕೆ ಉರುಳಿ, ಅಕ್ಕ ಪಕ್ಕಕ್ಕೆ ತಿರುಗಿ, ಅಂಗಾತ ಮಲಗಿ ವೈವಿಧ್ಯಮಯವಾಗಿ ತಮಟೆ ನುಡಿಸುವುದುಂಟು. ಕೆಲವೊಮ್ಮೆ ನುರಿತ ಕಲಾವಿದರು ಹಲಿಗೆ ಬಡಿಯುತ್ತಾ ನೆಲದ ಮೇಲೆ ಇಟ್ಟಿರುವ ನೋಟು, ಸೂಜಿ ಇತ್ಯಾದಿಗಳನ್ನು ಕಣ್ಣು ರೆಪ್ಪೆಯ ಮೂಲಕ ತೆಗೆಯುವ ಕಾರ್ಯವನ್ನು ಮಾಡುತ್ತಾರೆ. ಇನ್ನು ಬಿಚ್ಚಿಟ್ಟ ನಾಣ್ಯವನ್ನು ಹಲಗೆಯ ಗತ್ತು ಸಂಕೇತಗಳನ್ನು ಅರ್ಥಯಿಸಿಕೊಂಡು ಶೋಧಿಸುತ್ತಾರೆ. ಒಮ್ಮೆ ಹಲಿಗೆ ವಾದಕ ಮನೆಯ ಮಾಳಿಗೆಯ ಮೇಲೆ ಧೋತರ ಹಾಕಿ ಬಂದಿರುವುದನ್ನು ತನ್ನ ಹೆಂಡತಿಗೆ ತಾನಿದ್ದಲ್ಲಿಂದಲೇ ಹಲಿಗೆ ವಾದ್ಯ ಬಡಿದು, ಅದರ ಗತ್ತಿನ ಮೂಲಕ ತಿಳಿಸಿದನೆಂಬ ಕಥೆ ಜನಜನಿತವಾಗಿದೆ. ಅದು ಹಲುಗೆ ವಾದಕನ ಜಾಣ್ಮೆಯನ್ನು ತಿಳಿಸುವಂತಹದ್ದಾಗಿದೆ.

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಹೆಚ್ಚು ಹೆಚ್ಚು ಪ್ರಚಲಿತವಿರುವ ಈ ಮೇಳಗಳು ಮದುವೆ, ಸೋಬಾನ, ಜಾತ್ರೆ, ಉತ್ಸವ, ಮೆರವಣಿಗೆ, ಹುಟ್ಟು, ಸಾವು ಮುಂತಾದ ಸಂದರ್ಭ ಸನ್ನಿವೇಶಗಳಲ್ಲಿ ಬಳಕೆಯಾಗುತ್ತಲಿವೆ. ಈ ವಾದ್ಯ ಮೇಳಗಳು ಮಂಗಲ ಹಾಗೂ ಅಮಂಗಲ ಎರಡು ಕಾರ್ಯದಲ್ಲೂ ಬಳಕೆಯಾಗುವುದುಂಟು. ಆದರೆ ಮಂಗಲ ಕಾರ್ಯದ ಗತ್ತಿಗೂ, ಅಮಂಗಲ ಕಾರ್ಯದ ಗತ್ತಿಗೂ ಭಿನ್ನತೆವುಂಟು. ಹೀಗಾಗಿ ಜನರು ಸಾಮಾನ್ಯವಾಗಿ ಹಲಿಗೆ ಬಡಿಯುವವನ ಗತ್ತಿನ ಮೂಲಕ ಹಲಿಗೆ ಯಾವ ಉದ್ದೇಶಕ್ಕೆ ನುಡಿಯುತ್ತಿದೆ ಎಂದು ಗುರುತಿಸಬಲ್ಲರು. ಈ ಹಲಿಗೆ ಗತ್ತಿನಲ್ಲಿ ಕುದರೆ ಗತ್ತು, ಹಣಮಂತನ ಗತ್ತು, ಗವಾರ ಹಜ್ಜೆ, ದೇವರ ಗತ್ತು, ಗೂಳಿಯ ಗತ್ತು, ಚಿತ್ರಾಟ, ಭೂತಾಲ ಹೀಗೆ ಮುಂತಾದ ಗತ್ತುಗಳುಂಟು. ಯಾವುದೇ ಸಮಾಚಾರವನ್ನು ಸಹಜವಾಗಿ ಸಾರ್ವಜನಿಕರಿಗೆ ತಿಳಿಸುವ ಹಲಿಗೆ ಹಳ್ಳಿಯ ಬದುಕಿನಲ್ಲಿ ಮಹತ್ವದ್ದಾಗಿದೆ. ಆದ್ದರಿಂದಲೇ 'ಒಲೆಯಿಲ್ಲದ ಒಕ್ಕಲಿಲ್ಲ, ಹಲಿಗೆಯಿಲ್ಲದ ಊರಿಲ್ಲ' ಎಂಬ ಗಾದೆ ಪ್ರಚಲಿತದಲ್ಲಿದೆ. *(ಫ಼ಿ.ಎಲ್‌ಪಿ)*

ತಮಾಶಾ: ನೃತ್ಯ ಮತ್ತು ಸಂಗೀತದೊಂದಿಗೆ ಪ್ರದರ್ಶನ ಮಾಡುವ ಒಂದು ಮನರಂಜನೆಯ ಆಟ. ಇದು ಮಹಾರಾಷ್ಟ್ರದ ಜನಪದ ರಂಗಭೂಮಿಯ ಒಂದು ಪ್ರಕಾರವು ಹೌದು. 'ತಮಾಶಾ' ಎಂಬ ಪದ ಅರಬ್ಬೀ ಭಾಷೆಯಿಂದ ಬಂದದ್ದು, ಹಾಡುಕಟ್ಟಿ ಹಾಡುವವನಿಗೆ 'ಶಾಹೀರ' ಅನ್ನುವುದರಿಂದ, ತಮಾಶೆಯ ಹಾಡುಗಳು ಉರ್ದು ಭಾಷೆಯ ಗಜಲಗಳನ್ನು ಹೋಲುವುದರಿಂದ ಈ ರಂಗಪ್ರಯೋಗ ಮೊಗಲರ ಆಳ್ವಿಕೆಯ ಪ್ರಭಾವದಿಂದ ಬಂದಿರಬಹುದು ಎನ್ನುವುದು ವಿದ್ವಾಂಸರ ಅಭಿಮತ.

ತಮಾಶಾದಲ್ಲಿ ನೃತ್ಯ ಮತ್ತು ಸಂಗೀತ ಎರಡೂ ಪ್ರಧಾನ. ಈ ತಂಡದಲ್ಲಿ ಎಂಟು–ಹತ್ತು ಕಲಾವಿದರಿರುತ್ತಾರೆ. ಕಲಾವಿದರ ತಂಡಕ್ಕೆ 'ಫಡ' ಎಂದೂ ತಂಡದ ಪ್ರಯೋಗವನ್ನು ಮೊದಲಿನಿಂದ ಕೊನೆಯವರೆಗೆ ನಡೆಸಿಕೊಂಡು ಹೋಗುವವನಿಗೆ ಸರದಾರ ಎಂದು ಕರೆಯುತ್ತಾರೆ. ಈತ ವಾದ್ಯ ನುಡಿಸುವಲ್ಲಿ, ಹಾಡು ಸಂವಾದದಲ್ಲಿ ಕುಶಲನಾಗಿರುತ್ತಾನೆ. ತಂಡದಲ್ಲಿ ಸ್ವರಕ್ಕೆ ಸ್ವರ ಕೂಡಿಸಿ ಹಾಡಲು ಗಂಡು ಅಥವಾ ಹೆಣ್ಣು ನೃತ್ಯಗಾರರಿರುತ್ತಾರೆ. ಈ ತಮಾಶಾ ಅಥವಾ ಆಟಜಾತ್ರೆ, ಉತ್ಸವ, ಹೋಳಿ ಹಬ್ಬದ ದಿನಗಳಲ್ಲಿ ನಡೆಯುತ್ತದೆ. ಇದಕ್ಕೆ ವೇದಿಕೆ, ಪರದೆ, ನೇಪಥ್ಯಗಳು ಬೇಕಿಲ್ಲ. ಊರಿನ ಎತ್ತರದ ಸ್ಥಳದಲ್ಲಿ, ಮೈದಾನದಲ್ಲಿ ಸಲೀಸಾಗಿ ನಡೆಯುತ್ತದೆ.

ತಮಾಶಾ ಸಾಹಿತ್ಯಕ್ಕೆ ಮರಾಠ ಸಂತವಾಙ್ಮಯದ ಪ್ರೇರಣೆ ದೊರೆತಿದೆ. ಸಂತ ನಾಮದೇವ, ಏಕನಾಥರು ರಚಿಸಿದ 'ಭಾರೂಢ' ಲಾವಣಿಗಳೇ ಇದಕ್ಕೆ ಸ್ಫೂರ್ತಿ ನೀಡಿವೆ. ಪೇಶ್ವೆ ಕಾಲದಲ್ಲಿ ಇದಕ್ಕೆ 'ಡೋಲಕಿಯ ತಮಾಶಾ' ಎಂದು ಕರೆಯುತ್ತಿದ್ದರು. ಆ ಕಾಲದಲ್ಲಿ ನೃತ್ಯ ಪ್ರಧಾನ ತಮಾಶಾ ಚಾಲ್ತಿಯಲ್ಲಿತ್ತು. ತಮಾಶಾದ ಕೊನೆಯಲ್ಲಿ 'ಮುಜರಾ' (ವಂದನ) ಮಾಡುತ್ತಾರೆ. ಇದರಲ್ಲಿ ಬೇರೆ ಬೇರೆ ಸಾಧು ಸಂತರಿಗೆ, ಸಿದ್ಧ ಪುರುಷರಿಗೆ ಗೌರವದಿಂದ ವಂದನೆ ಸಲ್ಲಿಸಿ ಆಶೀರ್ವಾದ ಬೇಡುವ ವಾಡಿಕೆಯಿದೆ. *(ಎಸ್‌ಎಲ್‌ಜೆ)*

ತೆರು (ಕನ್ಯಾಶುಲ್ಕ): ಹೆಣ್ಣಿನ ತಾಯಿ–ತಂದೆಗಳಿಗೆ ಕನ್ಯಾಶುಲ್ಕ ಕೊಟ್ಟು ಮದುವೆ ಮಾಡಿಕೊಳ್ಳುವ ಪದ್ಧತಿ. ಪೂರ್ವದಿಂದಲೂ ಬೇರೆ ಬೇರೆ ಜನಾಂಗಗಳಲ್ಲಿ ಮತ್ತು ವಿಶೇಷವಾಗಿ ಬುಡಕಟ್ಟು ಜನಾಂಗಗಳಲ್ಲಿ ವಾಡಿಕೆಯಲ್ಲಿ ಇದ್ದು ಈಗಲೂ ಅವರಲ್ಲಿ ಉಳಿದು ಬಂದಿದೆ. ಈ ಪದ್ಧತಿಗೆ, 'ಕರಾರ್' ಎನ್ನುತ್ತಾರೆ. ಇದನ್ನು ಪಶುವಿನ ರೂಪದಿಂದ ಹಾಗೂ ಹಣದ ರೂಪದಿಂದಲೂ ಕೊಡುವರು. ಗೋವುಗಳನ್ನು ಕೊಟ್ಟರೆ 'ರಾಂಸಡೀಕರಾರ್' ಎಂದೂ ಹಣವನ್ನು ಕೊಟ್ಟರೆ 'ಪಾಂಸಡಿಕರಾರ್' ಎಂದು ಕರೆಯುತ್ತಾರೆ. ಲಂಬಾಣಿಗರು ಸಾಮಾನ್ಯವಾಗಿ ಈ ಬಗೆಯ 'ತೆರ' ಕೊಡದೆ ಮದುವೆಯಾಗಲು ಬಯಸುವುದಿಲ್ಲ. ಎಂತಹ ಪರಿಸ್ಥಿತಿಯಲ್ಲೂ ಮೊದಲು ಅವರು 'ಕರಾರ್' ಕೊಟ್ಟ ಮೇಲೆಯೇ ಮುಂದಿನ ಕಾರ್ಯಕ್ಕೆ ತೊಡಗುತ್ತಾರೆ. ಇಲ್ಲವಾದರೆ ಸಮಾಜದಲ್ಲಿ ಅವರು ಒಂದು ಬಗೆಯ ಅವಮಾನಕ್ಕೆ ಗುರಿಯಾಗಬೇಕಾಗುತ್ತದೆ. ಅಲ್ಲದೆ ಮುಂದೆ ಸಂಸಾರದಲ್ಲಿ ಯಾವುದೇ ಕಾರಣದಿಂದ ವೈಷಮ್ಯಗಳು ಉದ್ಭವವಾದರೆ ಹೆಣ್ಣು ತವರು ಮನೆ ಸೇರಿಕೊಂಡರೆ ಗಂಡನಿಗೆ ಅವಳ ಮೇಲೆ ಯಾವ ಅಧಿಕಾರವೂ ಉಳಿಯುವುದಿಲ್ಲವಾದ್ದರಿಂದ ಅವರಲ್ಲಿ ಇಂದಿಗೂ ಈ 'ಕರಾರ್' ಕೊಡುವ ಪದ್ಧತಿ ಜಾರಿಯಲ್ಲಿದೆ.

ಇದು ಸಾಮಾನ್ಯವಾಗಿ 'ಜಾತ್' ಬೆಡಗಿನವರಿಗೆ ಹೆಚ್ಚು 'ಭುಕ್ಯಾ' ಬೆಡಗಿನವರಿಗೆ ಕಡಿಮೆಯಿರುತ್ತದೆ ಈ ಕನ್ಯಾ ಶುಲ್ಕ ಇದರಲ್ಲಿ ಪ್ರಾದೇಶಿಕ ಭಿನ್ನತೆಗಳನ್ನು ಕಾಣಬಹುದು. *(ಪಿಕೆಕೆ)*

ತಾ

ತಾಂಬೂಲ: ಭಾರತೀಯರ ಪ್ರಸಾಧನ ಸಾಮಾಗ್ರಿಗಳ ಪ್ರಮುಖ ಅಂಗ. ದೇವರ ಪೂಜೆಗೂ, ಮಂಗಳಕಾರ್ಯಕ್ಕೂ, ಶೃಂಗಾರಕ್ಕೂ ತಾಂಬೂಲವನ್ನು ಬಳಸುವ ರೂಢಿ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿತ್ತು. ಕ್ರಿ.ಪೂ. 600ರಲ್ಲಿ ರಚಿತವಾದ ಸಂಸ್ಕೃತ ಸಂಹಿತೆಯೆಂಬ ಆಯುರ್ವೇದ ಗ್ರಂಥದಲ್ಲಿ, ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ ಇದರ ಪ್ರಸ್ತಾಪವಿದೆ. ಚರಕ ಸುಶ್ರುತರು ಇದನ್ನು ಉಲ್ಲೇಖಿಸುತ್ತಾರೆ. ಪಾಣಿನಿಯ ಅಷ್ಟಾಧ್ಯಾಯಿ, ಸ್ಕಂದ ಪುರಾಣ, ಅಮರು ಶತಕ, ಬಾಣ ಕಾದಂಬರಿ, ಕಾಳಿದಾಸರ ಕೃತಿಗಳಲ್ಲಿ ತಾಂಬೂಲದ ಉಲ್ಲೇಖವಿದೆ. ವರಾಹಮಿಹಿರನು ಇದರ ಉಪಯೋಗಗಳ ಪಟ್ಟಿಯನ್ನೇ ನೀಡುತ್ತಾನೆ. ಹೆಚ್ಚಾಗಿ ಆರ್ಯರು ಇದನ್ನು ಬಳಸುತ್ತಿದ್ದ ದಾಖಲೆಗಳಿರುವುದರಿಂದ ಇದು ಮಲಯ (ಇಂದಿನ ಮಲೇಷಿಯ)ದಿಂದ ಬಂದಿರ ಬಹುದೆಂಬ ಊಹೆಯೂ ಚಾಲ್ತಿಯಲ್ಲಿದೆ. ಆದರೆ ಆರ್ಯರು ಭಾರತಕ್ಕೆ ಬಂದ ಮೇಲೆ ನಾಗಜಾತಿಯವರಿಂದ ಇದರ ಉಪಯೋಗವನ್ನು ತಿಳಿದರೆಂದು ಗೊತ್ತಾಗುತ್ತದೆ. ಆದ್ದರಿಂದಲೇ ಇದರ ತಯಾರಿಕೆಯ ಬಹುಮುಖ್ಯ ವಸ್ತುವಾದ ವೀಳೆಯದೆಲೆಗೆ ನಾಗವಲ್ಲಿಯೆಂದೇ ಪೂರ್ವನಾಮವಿದೆ. ತಾಂಬೂಲವೆಂಬ ಪದ ಮರಾಠಿಯಿಂದ ಬಂದಿರಬಹುದು.

ತಾಂಬೂಲ ಎಂದರೆ ವೀಳೆಯದೆಲೆ, ಅಡಿಕೆ, ಸುಣ್ಣ, ಕಾಚು, ಪಚ್ಚಕರ್ಪೂರ, ಬಾದಾಮಿ, ಏಲಕ್ಕಿ, ಲವಂಗ, ಕೊಬ್ಬರಿ, ಜಾಕಾಯಿ, ಜಾಪತ್ರೆ, ಸೋಂಪು, ಗುಲಗುಂಜಿ ಎಲೆ ಇತ್ಯಾದಿ ಮಸಾಲೆ ದ್ರವ್ಯಗಳನ್ನು ಪ್ರಮಾಣಾನುಸಾರ ಬಳಸಿ ತಯಾರಿಸಿದ ಸಂಯುಕ್ತ ವಸ್ತು. ಹೀಗೆ ತಯಾರಿಸಿದ ಎಲೆಯ ಮಡಿಕೆಯನ್ನು ಹಿಂದೆ ರಾಜರ ಆಸ್ಥಾನಗಳಲ್ಲಿ, ಕೋಠಿಗಳಲ್ಲೂ ತಾಂಬಾಣದಲ್ಲಿಟ್ಟು (ಇಂದಿನ ಟ್ರೇ) ಕೊಡುತ್ತಿದ್ದರಿಂದ ಇದಕ್ಕೆ ತಾಂಬೂಲವೆಂಬ ಹೆಸರು ಬಂದಿರಬಹುದು. ತಾಮ್ರದ ತಟ್ಟೆಯಲ್ಲಿಟ್ಟು ಕೊಡುವ ಎಲೆ ತಾಂಬೂಲವಾಗಿರಬಹುದು.

ತಾಂಬೂಲ ಸೇವನೆಯಿಂದ ಜೀರ್ಣಶಕ್ತಿ ಹೆಚ್ಚಾಗುತ್ತದೆ, ಆಮ್ಲತೆಯನ್ನು ಕಡಿಮೆಗೊಳಿಸುತ್ತದೆ. ತಾಂಬೂಲಕ್ಕೆ ಮಧುರ, ಕ್ಷಾರ, ಕಷಾಯ, ವಾತಪರಿಹಾರ, ಕ್ರಿಮಿನಾಶಕ, ಕಫಹರ, ದುರ್ಗಂಧ ನಾಶಕ ಇತ್ಯಾದಿ ಗುಣಗಳಿವೆ. ಇಷ್ಟೇ ಅಲ್ಲದೆ ನರಗಳನ್ನು ಉತ್ತೇಜಿಸುವ, ಗಂಟಲು ಮತ್ತು ಎದೆಯ ರೋಗಗಳನ್ನು ಶಮನಗೊಳಿಸುವ, ಕಾಮೋತ್ತೇಜಕಗೊಳಿಸುವ ಗುಣಗಳನ್ನು ವಿದ್ವಾಂಸರು ಪಟ್ಟಿ ಮಾಡುತ್ತಾರೆ. ಲಿಪ್‌ಸ್ಟಿಕ್ ಇಲ್ಲದ ದಿನಗಳಲ್ಲಿ ಬಾಯಿ ಮತ್ತು ತುಟಿಗಳನ್ನು ಕೆಂಪಾಗಿಸುವ ಕೆಲಸವನ್ನು ಇದು ಮಾಡುತ್ತಿತ್ತು. ಮನಸ್ಸನ್ನು ಉಲ್ಲಸಿತಗೊಳಿಸುವ, ಮುಖಕ್ಕೆ ಕಾಂತಿತರುವ, ವಾಣಿಗೆ ಮಾಧುರ್ಯ ತುಂಬುವ ಕೆಲಸವನ್ನು ತಾಂಬೂಲ ಮಾಡುತ್ತದೆ. ಇದರ ಅತಿಯಾದ ಸೇವನೆಯಿಂದ ಬಾಯಿರುಚಿಗೆಟ್ಟು, ಕ್ಯಾನ್ಸರ್ ಕೂಡ ಬರುವ ಸಂಭವವಿದೆ. ಪೋರ್ಚುಗೀಸರ ಆಗಮನದಿಂದ ತಾಂಬೂಲಕ್ಕೆ ಹೊಗೆಸೊಪ್ಪನ್ನು ಬಳಸುವ ರೂಢಿ ಚಾಲ್ತಿಗೆ ಬಂದಿತೆಂಬುದು ತಿಳಿದುಬರುತ್ತದೆ. ತಾಂಬೂಲವನ್ನು ತಯಾರಿಸುವುದು ಕೂಡ ಒಂದು ಕಲೆಯೆಂದು ಭಾವಿಸಲಾಗಿದೆ. ರಾಜರ ಆಸ್ಥಾನಗಳಲ್ಲಿ ಶ್ರೀಮಂತರ ಮನೆಗಳಲ್ಲಿ ತಾಂಬೂಲ ಕಟ್ಟುವವರನ್ನು ತಾಂಬೂಲಿಗ, ತಾಂಬೂಲಿ ಎಂದು ಕರೆಯುತ್ತಿದ್ದರು. 12ನೆಯ ಶತಮಾನದಲ್ಲಿದ್ದ ಹಡಪದ ಅಪ್ಪಣ್ಣ, ಸಂಚಿ ಹೊನ್ನಮ್ಮ ಈ ವೃತ್ತಿಯವರೆಂದು ತಿಳಿಯುತ್ತದೆ. ಬೀದರನಲ್ಲಿ ತಾಂಬೂಲ ಕಟ್ಟುವ ಶರ್ಮಾ ಅವರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. ತಾಂಬೂಲ ರಸವನ್ನು ಉಗಿಯುವುದರಲ್ಲಿಯು ಚಿತ್ರಕಲಾ ಕೌಶಲ್ಯವನ್ನು ಪ್ರದರ್ಶಿಸುತ್ತಿದ್ದರೆಂದು ದಶಕುಮಾರ ಚರಿತೆ ಹೇಳುತ್ತದೆ.

ಜನಪದದಲ್ಲಿ 'ತಾಂಬೂಲ'ಕ್ಕೆ ಅನೇಕ ಸಂಕೇತ ನಂಬಿಕೆಗಳು ರೂಢಿಯಲ್ಲಿವೆ. ಅದನ್ನು ಸ್ನೇಹಕ್ಕೆ ಪ್ರತೀಕವಾಗಿ ಅತಿಥಿ ಸತ್ಕಾರಕ್ಕಾಗಿ, ಗೌರವದ ಸಂಕೇತವಾಗಿ, ಮರ್ಯಾದೆಯ ಕುರುಹಾಗಿ, ವಚನ ಕೊಡುವುದಕ್ಕೆ, ತೆಗೆದುಕೊಳ್ಳುವುದಕ್ಕೆ ಪ್ರಮಾಣವಾಗಿ ಬಳಸುತ್ತಿದ್ದರು. ಆಗದೇ ಇರುವಂತಹ ಕೆಲಸಗಳನ್ನು ಮಾಡುವ ಪ್ರತಿಜ್ಞೆಯೂ ಕೂಡ ತಾಂಬೂಲವನ್ನು ಎತ್ತಿಕೊಳ್ಳುವ ಮುಖಾಂತರ ನಡೆಯುತ್ತಿತ್ತು. ಯೋಧರನ್ನು ಯುದ್ಧಕ್ಕೆ, ಗೋರಕ್ಷಣೆ ಇತ್ಯಾದಿ ಪ್ರಸಂಗಗಳಿಗೆ ಕಳಿಸುವಾಗ ರಣವೀಳ್ಯ ನೀಡಿ ಕಳಿಸುವುದು ರೂಢಿಯಲ್ಲಿತ್ತು. ಅಷ್ಟೇ ಏಕೆ 'ಸುಪಾರಿ' ಎಂದು ಕರೆಸಿಕೊಳ್ಳುವ ಇದು ಹೈದ್ರಾಬಾದ ಕರ್ನಾಟಕದಲ್ಲಿ 'ಕೊಲೆಯನ್ನು ಮಾಡಿ ಬರುವ ಒಪ್ಪಂದಕ್ಕೂ' ಬಳಕೆಯಾಗುತ್ತದೆ.

ಭಾರತೀಯ ತಾಂತ್ರಿಕ ಪಂಥಗಳಲ್ಲಿ ಹೆಚ್ಚಾಗಿ ಬಳಕೆಯಿರುವ ತಾಂಬೂಲವನ್ನು ಸ್ತ್ರೀಯರನ್ನು ವಶೀಕರಿಸಲು ಬಳಸುತ್ತಿದ್ದರು. ನಮ್ಮ ಹಿರಿಯರು ಶುಭ ಮತ್ತು ಅಶುಭ ಸಂದರ್ಭಗಳೆರಡರಲ್ಲೂ ತಾಂಬೂಲ ಬಳಸುತ್ತಿದ್ದುದ್ದು ಕಂಡು ಬರುತ್ತದೆ. ಹೈದ್ರಾಬಾದ ಕರ್ನಾಟಕದ ಲಿಂಗಾಯತರಲ್ಲಿ ವ್ಯಕ್ತಿಯು ತನ್ನ ಮರಣವನ್ನು ಗೌರವದಿಂದ ಬರಮಾಡಕೊಳ್ಳಲಿ ಎನ್ನುವ ಆಶಯದಿಂದ ಅವನು ಸಾಯುವ ಹಂತದಲ್ಲಿದ್ದರೆ ಅವನ ಕೈಯಿಂದ ಭಸ್ಮ ಮತ್ತು ತಾಂಬೂಲವನ್ನು ಕೊಟ್ಟು ಅಂತಿಮ ವಿದಾಯ ಹೇಳುವ ಪದ್ಧತಿಯಿಂದೆ. ಹೀಗೆ ತಾಂಬೂಲ ಒಪ್ಪಂದ, ಆದೇಶ, ವಿನಿಮಯ, ಗೌರವ ಸ್ನೇಹ, ಸವಾಲು, ಬಿಡುಗಡೆ ಇತ್ಯಾದಿಗಳ ಸಂಕೇತವಾಗಿ ಬಳಕೆಯಲ್ಲಿದೆ. *(ಎಸ್‌ಆರ್)*

ತಾಳವಾದ್ಯ: ಲೋಹವನ್ನು ಕಂಡು ಹಿಡಿದ ಬಳಿಕ ಹುಟ್ಟಿದ ವಾದ್ಯಗಳು. ಹಿತ್ತಾಳೆ, ಕಂಚು, ಬೆಳ್ಳಿ, ತಾಮ್ರ ಇತ್ಯಾದಿ ಲೋಹಗಳಿಂದ ತಾಳವಾದ್ಯಗಳನ್ನು ತಯರಿಸುತ್ತಾರೆ. ನಾದವು ಸಂಗೀತಕ್ಕೆ ಉಸಿರಾದರೆ ತಾಳವು ದೇಹದಂತೆ. ಆದ್ದರಿಂದಲೇ ಬಹುತೇಕ ಜನಪದ ಕಲೆಗಳೆಲ್ಲ ತಾಳದ ಜೊತೆಗೇ ಇವೆ.

ತಾಳ: ಲಯಬದ್ಧವಾದ ನಿರ್ದಿಷ್ಟ ಕಾಲಾವಧಿಯ ಒಂದು ಪ್ರಮಾಣವನ್ನೇ ತಾಳವೆಂದು ಕರೆಯುತ್ತಾರೆ. ಈ ಕ್ರಿಯಾಸೂಚಕ ಪದವೇ ಅದರ ನಾಮಪದವಾಯಿತು. ಭರತನ ನಾಟ್ಯಶಾಸ್ತ್ರ

ದಿಂದಲೇ ಇದರ ಪ್ರಾಚೀನತೆಯನ್ನು ಗುರುತಿಸಲಾಗುತ್ತದೆ. ತಾಳವಾದ್ಯ ಕಂಚು, ಹಿತ್ತಾಳೆ ಇಲ್ಲವೆ ಮಿಶ್ರಲೋಹಗಳಿಂದ ಸಿದ್ಧಪಡಿಸುತ್ತಾರೆ. ಇದು ಆರೇಳು ಇಂಚು ವ್ಯಾಸದ ಸುತ್ತಳತೆ ಯಿದ್ದು ದುಂಡಗಿರುತ್ತದೆ. ಎರಡೂ ಭಾಗಗಳು ಒಂದಕ್ಕೊಂದು ತಾಗಿದಾಗ ವಿಶಿಷ್ಟ ರೀತಿಯ ಧ್ವನಿ ಹೊರಡುತ್ತದೆ. ಎರಡೂ ತಾಳಗಳನ್ನು ಗಂಡು ಹೆಣ್ಣಿಗೆ ಹೋಲಿಸುತ್ತಾರೆ. ಗಂಡು ತಾಳವನ್ನು ಪಂಚಮಸ್ವರಕ್ಕೆ ಹೆಣ್ಣು ತಾಳವನ್ನು ಷಡ್ಜಕ್ಕೆ ಹೊಂದುವಂತೆ ತಯಾರಿಸಲಾಗುತ್ತದೆ. ಯಕ್ಷಗಾನ, ಬಯಲಾಟ, ಭಜನೆ, ಕರಪಾಲಮೇಳ, ಭಾಗವಂತಿಕೆ, ಗೊಂಬೆಯಾಟ, ತಾಳಮದ್ದಲೆ, ಉಮ್ಮತ್ತಾಟ, ಹರಿಕಥೆ, ಡೊಳ್ಳಿನ ಮೇಳ, ದೊಡ್ಡಾಟ, ಬಯಲಾಟ, ಪಾರಿಜಾತಮೇಳ, ಆಲಾವಿ ಹಾಡುಗಳಿಗೆ, ಗೀಗೀ ಹಾಡುಗಳಿಗೆ ಹೀಗೆ ಬಹುತೇಕ ಜನಪದ ಹಾಡುಗಾರಿಕೆಯಲ್ಲಿ ತಾಳದ ಪ್ರಮುಖ ಪಾತ್ರವಿದೆ.

ಝುಲ್ಲರಿ: ಸಣ್ಣ ತಾಳದ ವಿಸ್ತೃತ ರೂಪ. ಹಿತ್ತಾಳೆಯಿಂದ ಮಾಡುತ್ತಾರೆ. ಡೊಳ್ಳುಕುಣಿತ, ಚಿಟ್ಮೇಳ, ಹಲಗೆಮೇಳ, ಕರಡಿಮಜಲು, ಮುಂತಾದ ಜನಪದ ಕಲೆಗಳಲ್ಲಿ ಇದರ ಬಳಕೆಯಿದೆ. ಝುಲ್ ಝುಲ್ ಶಬ್ದ ಹೊಮ್ಮಿಸುವುದರಿಂದ ಇದಕ್ಕೆ ಝುಲ್ಲರಿಯೆನ್ನುತ್ತಾರೆ. ಆಧುನಿಕ ಸಂಗೀತ ಮೇಳಗಳಲ್ಲೂ ಇದನ್ನು ಬಳಸುವುದುಂಟು.

ಗಂಟೆ: ನಮ್ಮ ಜನಪದರು ಅನಿಷ್ಟ ನಿವಾರಣೆಗಾಗಿ, ಫಲವಂತಿಕೆಯ ಸಂಕೇತವಾಗಿ ಇಷ್ಟ ದೇವರ ಆವಾಹನೆಗಾಗಿ ಇದನ್ನು ಬಳಸುತ್ತಿದ್ದರು. ಲೌಕಿಕ ಜನಪದ ವೃತ್ತಿಗಾಯಕರು. ಸುಡುಗಾಡುಸಿದ್ದರು, ಬಾಲ ಜೋಗಪ್ಪಗಳು, ಗಂಟೆ ಹೆಳವರು, ಭಜನೆ ಮೇಳದವರು, ಡೊಳ್ಳಿನ ಮೇಳದವರು ಗಂಟೆಯನ್ನು ಬಳಸುತ್ತಾರೆ. ನಾಲ್ಕು ಭಾಗ ತಾಮ್ರ ಅಥವಾ ಹಿತ್ತಾಳೆಗೆ ಒಂದು ಭಾಗ ತವರನ್ನು ಸೇರಿಸಿ ಗಂಟೆ ತಯಾರಿಸುತ್ತಾರೆ. ಇದು ತಾಳವಾದ್ಯಗಳಲ್ಲಿಯೇ ಅತ್ಯಂತ ಗೌರವಾನ್ವಿತ ವಾದ್ಯವಾಗಿದೆ.

ಕಿರುಗೆಜ್ಜೆ: ರುದ್ರಾಕ್ಷಿಯಷ್ಟು ಗುಂಡಾಗಿರುವ ಇವುಗಳನ್ನು ಕಂಚಿನಿಂದ ತಯಾರಿಸುತ್ತಾರೆ. ಒಂದಿಷ್ಟು ಮುಚ್ಚಿ ತೆರೆದ ಕಿರುಬಾಯಿಯಲ್ಲಿ ಎರಕದ ಗುಂಡುಗಳನ್ನು ಹಾಕಿರುತ್ತಾರೆ. ಗೊಂಚಲು ಗೊಂಚಲಾಗಿರುವ ಇವುಗಳನ್ನು ಕಾಲಲ್ಲಿ ಕಟ್ಟುತ್ತಾರೆ. ಅವುಗಳ ಘಲ್ ಘಲ್ ತಾಲದಿಂದ ಹಾಡಿಗೆ ಮೆರುಗು ಬರುತ್ತದೆ. ವೀರಗಾಸೆ, ಕೋಲಾಟ, ಪಟ ಕುಣಿತ, ಪುರವಂತಿಕೆ, ಡೊಳ್ಳು, ಯಕ್ಷಗಾನ, ಬಯಲಾಟದ, ಕಲಾವಿದರು ಇದನ್ನು ಬಳಸುತ್ತಾರೆ. ಕೆಲವೊಮ್ಮೆ ಮುಂಗೈಗೂ ಕಟ್ಟಿಕೊಂಡು ಡಪ್ಪು ಡೋಲು ಬಡಿಯುವುದುಂಟು.

ಗಗ್ಗರ: ಕಂಚಿನ ಉಂಗುರದಂತಿರುವ ಇದು ಒಂದೂವರೆ ಅಂಗುಲವಿದ್ದು ಗುಂಡಾಗಿದೆ. ಟೊಳ್ಳಾಗಿರುವ ಇದರ ಒಳಭಾಗಕ್ಕೆ ಎರಕದ ಸಣ್ಣ ಗುಂಡುಗಳನ್ನು ತುಂಬಿರುತ್ತಾರೆ. ಕೈಯಿಂದಲೂ ಕಾಲಲ್ಲಿ ಕಟ್ಟಿಯೂ ಇದನ್ನು ಬಳಸುವುದುಂಟು. ನಂದಿಕೋಲು ಕೊಂಬುಗಳಿಗೂ ಇದನ್ನು ಕಟ್ಟುತ್ತಾರೆ.

ಜಾಗಟೆ: ಕಂಚು ಬೆಳ್ಳಿಯಿಂದ ಇದನ್ನು ತಯಾರಿಸುತ್ತಾರೆ. ಇದು ತಣಿಗೆಯಾಕಾರದಲ್ಲಿರುತ್ತದೆ. ಇದರಲ್ಲಿ ಎರಡು ವಿಧ 1. ಸಾದಾ ಜಾಗಟೆ 2. ಜಗನ್ನಾಥ ಜಾಗಟೆ. ಸಾದಾ ಜಾಗಟೆಯನ್ನು ತಿರುಪತಿ ತಿಮ್ಮಪ್ಪನ ಭಕ್ತರು ಬಳಸುತ್ತಾರೆ. ಇದಕ್ಕೆ ಅಂಚಿರುವುದಿಲ್ಲ. ಭಿಕ್ಷೆಗೆ ಬಂದಾಗ ಜಾಗಟೆಯನ್ನು ಮರದ ಕೋಲಿನಿಂದ ಬಡಿಯುವುದರ ಮೂಲಕ ಸೂಚನೆ ನೀಡುತ್ತಾರೆ. ಜಗನ್ನಾಥ ಜಾಗಟೆಯನ್ನು ಪೂಜೆಯ ಸಮಯದಲ್ಲಿ ಬಳಸುತ್ತಾರೆ. ಶಂಖ ತತ್ತೂರಿಗಳು ಇದಕ್ಕೆ ಪೂರಕವಾಗಿರುತ್ತವೆ. ಸಾದಾ ಜಾಗಟೆಗಿಂತ ತೆಳ್ಳಗಿರುತ್ತದೆ. *(ಎಸ್‌ಆರ್)*

ತಾಳಿ: ವಿವಾಹದ ಸಂಕೇತ. ಇದು ದ್ರಾವಿಡ ಪದವಾಗಿದೆ. ಇದು ತಾಳೆಯಿಂದ ಬಂದಿದೆ. ಪ್ರಾಚೀನ ಕಾಲದಲ್ಲಿ ಹೆಣ್ಣಿನ ಅಂಗವನ್ನು ಹೋಲುವ ತಾಳೆ ಮರದ ಗರಿಗಳನ್ನು ಅಥವಾ ತಾಳಿಯನ್ನು ಹೆಣ್ಣು ಮಕ್ಕಳಿಗೂ ಗಂಡುಮಕ್ಕಳಿಗೂ ತುಣಿಮಣಿಗಳನ್ನು ಕಟ್ಟುತ್ತಿದ್ದರು. ಫಲವಂತಿಕೆಯ ಸಂಕೇತಗಳಾಗಿರುವ ಗುಪ್ತಾಂಗಗಳಿಗೆ ದೃಷ್ಟಿಯಾಗಬಾರದೆಂದು 'ತಾಯಿತ' ದ ರೂಪದಲ್ಲಿ ಇವುಗಳ ಬಳಕೆಯಿತ್ತು. ಸಂಸ್ಕೃತದಲ್ಲಿ 'ತಾಳಿ' ಉಲ್ಲೇಖವಿಲ್ಲ. 10ನೆಯ ಶತಮಾನಕ್ಕಿಂತ ಮೊದಲು ಸಿಗುವ ತಮಿಳಿನ ಸಂಗಂ ಸಾಹಿತ್ಯದ ತೊಲ್ಕಾಪ್ಪಿಯಂ, ಸಿಲಪ್ಪದಿಗಾರಂ ನಲ್ಲಿ, ಕನ್ನಡದ ಪಂಪ ಭಾರತದಲ್ಲಿ 'ತಾಳಿ' ಯನ್ನು ಮದುವೆಗೆ ಮುಂಚೆಯೇ ಕಟ್ಟುತ್ತಿದ್ದ ಉಲ್ಲೇಖಗಳು ಸಿಗುತ್ತವೆ. ದಕ್ಷಿಣ ಭಾರತದ ವಿವಿಧ ಪಂಗಡಗಳಲ್ಲಿ ಅವರ ಮುಖಂಡ ಅಥವಾ ಯಾರಾದರೂ ಸುಮಂಗಲಿಯರು ಮದುವೆಗೆ ಮುಂಚೆಯೇ ಹೆಣ್ಣಿಗೆ ಕಟ್ಟುತ್ತಿದ್ದರು. ಕೇರಳದ ಅತ್ತಪಾಡಿ ಇರುಳರಲ್ಲಿ ಹುಡುಗಿ ಮೈನೆರೆದಾಗ ತಂದೆಯ ಸೋದರಿಯ ಮಗ ತಾಳಿಯನ್ನು ಕಟ್ಟುತ್ತಿದ್ದ. ಮಾದಿಗರಲ್ಲಿ ಮೊದಲು ಮುಖ್ಯಸ್ಥನಿಂದ ಕಟ್ಟಲಾಗುತ್ತಿತ್ತು. ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ಬುಡಕಟ್ಟಿಗೆ ಸೇರಿರುವ ವಡ್ಡರಲ್ಲಿ ಮದುವೆಯ ಸಮಯದಲ್ಲಿ ಗಂಡು ಹೆಣ್ಣಿಗೆ ತಾಳೆಗರಿಯನ್ನೇ ಕಟ್ಟುತ್ತಾನೆ.

ದಕ್ಷಿಣ ಭಾರತದಲ್ಲಿ ದ್ರಾವಿಡರ ಮೇಲೆ ಊಳಿಗ ಮಾನ್ಯ ಪದ್ಧತಿ ಗಟ್ಟಿಗೊಂಡ ಕಾಲಕ್ಕೂ 'ತಾಳಿ'ಯು ಮದುವೆಯಲ್ಲಿ ಕಟ್ಟುವ ಸಂಕೇತವಾಗಿ ಬಳಕೆ ಆಗಿದ್ದಕ್ಕೂ ಸಾಮಾಜಿಕ ಅಂತರ್ ಸಂಬಂಧವಿದೆ. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಿಂದ ಪಿತೃ ಪ್ರಧಾನ ವ್ಯವಸ್ಥೆಗೆ ಬದಲಾವಣೆಗೊಂಡ ಕಾಲ ಘಟ್ಟದಲ್ಲಿ 'ತಾಳಿ'ಯು ಗಂಡಿನ ಖಾಸಗಿ ಆಸ್ತಿಯಾದ ಹೆಣ್ಣಿನ ಮೇಲಿನ ಅಧಿಕಾರದ ಸಂಕೇತವಾಗಿ ಬಳಕೆಯಾಯಿತು. ಹೈದರಾಬಾದ ಕರ್ನಾಟಕದಲ್ಲಿ ಇಂದಿಗೂ ತವರುಮನೆಯಲ್ಲಿ ಮದುವೆಯಾದರೆ ತಾಯಿ ಮನೆಯ ತಾಳಿ ಮತ್ತು ಗಂಡನ ಮನೆಯ ತಾಳಿ ಎಂದು ಎರಡು ತಾಳಿಗಳನ್ನು ಕಟ್ಟುತ್ತಾರೆ. ಮದುವೆಯು ಗಂಡಿನ ಮನೆಯಲ್ಲೇ ನಡೆದರೆ ಒಂದೇ ತಾಳಿಯನ್ನು ಕಟ್ಟುತ್ತಿದ್ದರು.

ಉತ್ತರ ಕರ್ನಾಟಕದಲ್ಲಿ ತಾಳಿಗೆ 'ಗುಳದಾಳಿ' ಎಂದೂ ಕರೆಯುತ್ತಾರೆ. ಗುಳ ಪದವು ಕುಳ ಅಥವಾ ಕುಳದಿಂದ ಬಂದಿದೆ. ಕುಳು ಎಂದರೆ ನೇಗಿಲಿನ ಬಾಯಿಗೆ ಹಾಕುವ ಕಬ್ಬಿಣದ ಬಿರಡೆ ಎಂದೂ ಅರ್ಥವಾಗುತ್ತದೆ. ತಾಳಿಗೂ ಮಂಗಳಸೂತ್ರಕ್ಕೂ ಸ್ವಲ್ಪ ವ್ಯತ್ಯಾಸವಿದೆ. ತಾಳಿಯು ಚಿನ್ನದಿಂದ ಮಾಡಿರುವ ಬಹುತೇಕ ಬಟ್ಟಲಿನಾಕಾರದಲ್ಲಿರುವ ಆಭರಣ. ಇದನ್ನು ಸೇರಿಸಿ ಕಟ್ಟುವ

ದಾರಕ್ಕೆ ಮಂಗಳಸೂತ್ರವೆನ್ನುವರು. ಹಿಂದೆ ಹೆಣ್ಣನ್ನು ಅಪಹರಿಸಿಕೊಂಡು ಬರುವಾಗ ಅವಳ ಕೊರಳಿಗೆ ಹಗ್ಗ ಬಿಗಿದು ಪಶುಗಳನ್ನು ಎಳೆದು ತಂದಂತೆ ತರುತ್ತಿದ್ದರಂತೆ. ಈ 'ಗಳ' ಸೂತ್ರವೇ ಮಂಗಳಸೂತ್ರವಾಯಿತು.


ಹೈದರಾಬಾದ ಕರ್ನಾಟಕದಲ್ಲಿ ತಾಳಿ ಅಂಗಾತಬಿದ್ದರೆ ಗಂಡನಿಗೆ ಹಸಿವೆಯಾಗಿದೆಯೆಂದು ನಂಬುತ್ತಾರೆ. ಕರಿಮಣಿ ಸರಗಳು ಒಂದಕ್ಕೊಂದು ಹುರಿಬಿದ್ದರೆ ಗಂಡ ಹೆಂಡಿರಲ್ಲಿ ಜಗಳವಾಗುತ್ತದೆಂಬ ನಂಬಿಕೆಯಿದೆ. ಮುತ್ತೈದೆಯ ಸಂಕೇತವಾಗಿರುವ ತಾಳಿ ದೇಹದ ಮೇಲೆ ಇಲ್ಲದಿದ್ದಾಗ ಊಟಮಾಡುವುದಿಲ್ಲ. 'ತಾಳಿ'ಯನ್ನು 'ಕಡಿ'ಯಿತು ಎಂದು ಹೇಳುವುದಿಲ್ಲ. ಇಳಿಯಿತು ಎನ್ನುತ್ತಾರೆ.

(ಎಸ್ಆರ್)

ತಿ

ತಿಂಥಿಣಿ ಮೌನೇಶ್ವರ: ಸಮಾನತೆಯ ಹರಿಕಾರ, ಜಗದೋದ್ಧಾರಕ ಎಂದು ಪ್ರಸಿದ್ಧಿ ಪಡೆದ ಶರಣರು. ಇವರು ಜನಿಸಿದ್ದು 16ನೆಯ ಶತಮಾನದಲ್ಲಿ, ಇಂದಿನ ಯಾದಗೀರ ಜಿಲ್ಲೆಯ ಸುರಪುರ ತಾಲ್ಲೂಕಿನ ಗೋನಾಳ ಎಂಬ ಗ್ರಾಮದಲ್ಲಿ. ಅಲ್ಲಿ ಶೇಷಮ್ಮಳೆಂಬ ಸಾಧ್ವಿಯ ಅದ್ಭುತ ಭಕ್ತಿಗೆ ಒಲಿದು, ಪ್ರಕೃತಿ ನಿಯಮ ಮೀರಿ ಅವಳಿಗೆ ಮಗನಾಗಿ ಅವತರಿಸಿ ಬಂದವರೆಂದು ಹೇಳಲಾಗಿದೆ. ಪರಮಾತ್ಮ ನನ್ನೇ ಪುತ್ರರನನ್ನಾಗಿ ಪಡೆದ ಸಾಧ್ವಿ ಗೋನಾಳದ ಶೇಷಮ್ಮ.

ಪೂರ್ವಕಾಲದಲ್ಲಿ ಪರಮೇಶ್ವರನ ಕಂಠದಲ್ಲಿರುವ ನಾಗನೇ ಶಾಪಗ್ರಸ್ತನಾಗಿ ಗೋನಾಳದಲ್ಲಿ ಶೇಷಪ್ಪನೆಂಬ ನಾಮದಿಂದ ಹಾಗೂ ಕೊಟ್ರಿಕಿಯಲ್ಲಿ ಶೇಷಮ್ಮನೆಂಬ ನಾಮದಿಂದ ಮಗಳ ಜನ್ಮ ಪಡೆದರಂತೆ. ಮುಂದೆ ಪೂರ್ವಯೋಜಿತ ನಿಯಮದಂತೆ ಇವರಿಬ್ಬರೂ ಸತಿಪತಿಗಳಾದರು. ಇವರ ದಾಂಪತ್ಯ ಚೆನ್ನಾಗಿಯೇ ಇತ್ತಾದರೂ, ದಶಕವೇ ಕಳೆದರೂ ಮಕ್ಕಳಾಗಲಿಲ್ಲ. ಬಂಜೆ ಎನ್ನುವ ಕಿರುಕುಳ ಪ್ರಾರಂಭವಾಯಿತು.



ತಿಂಥಿಣಿ ಮೌನೇಶ್ವರ ದೇವಸ್ಥಾನ

ಮಹಾ ಸಾಧ್ವಿಯಾದ ಶೇಷಮ್ಮ ಎಲ್ಲ ಕಿರುಕುಳಗಳನ್ನು ಸಹಿಸುತ್ತಲೇ ಗೋನಾಳದ ಅಧಿದೈವವಾಗಿರುವ ಆದಿಲಿಂಗೇಶ್ವರ ನಲ್ಲಿ ಅನನ್ಯ ಭಕ್ತಿಯಿಂದ ಸೇವೆ ಮಾಡಿ ಪುತ್ರ ಸಂತಾನಕ್ಕಾಗಿ ಮೊರಯಿಡುವಳು. ಶೇಷಮ್ಮ ಸೂರ್ಯೋದಯಕ್ಕೆ ಮೊದಲೇ ಎದ್ದು ಸ್ನಾನ ಮಾಡಿ, ಮಡಿ ಬಟ್ಟೆಯನ್ನುಟ್ಟುಕೊಂಡು ಪಕ್ಕದ ಜಲಾಶಯದಿಂದ ಕೊಡದಲ್ಲಿ ಜಲವನ್ನು ತುಂಬಿಕೊಂಡು ಅಕ್ಕಪಕ್ಕದ ಗಿಡಗಳಿಂದ ಹೂಗಳನ್ನು ಸಂಗ್ರಹಿಸಿ, ಆದಿಲಿಂಗೇಶ್ವರನ ಗುಡಿಗೆ ಬಂದು ಲಿಂಗಕ್ಕೆ ಜಲಾಭಿಷೇಕ ಮಾಡಿ ಹೂಗಳನ್ನೇರಿಸಿ ಭಕ್ತಿಯಿಂದ ಸತತ ಹನ್ನೆರಡು ವರ್ಷಗಳ ಕಾಲ ಅರ್ಚನೆ ಮಾಡಿದಳು. ಪುತ್ರ ಪ್ರಾಪ್ತಿಗಾಗಿ ಪ್ರಾರ್ಥನೆ ಗೈದಳು.

ಹೀಗೆ ನಿರಂತರವಾಗಿ ಅವಳ ಶ್ರದ್ಧಾ ಭಕ್ತಿಯ ಪೂಜಾರ್ಚನೆಗೆ ಒಲಿದ ಭಗವಂತ ಒಂದು ದಿನ ತಾನೇ ಅವಳ ಕೋರಿಕೆಯಂತೆ ಮಗನಾಗಿ ಹುಟ್ಟಿ ಬಂದ. ಹಾಗೆ ನೋಡಿದರೆ ಶೇಷಮ್ಮ ತನ್ನ ಭಕ್ತಿಯ ಬಲದಿಂದ ವಂಶೋದ್ಧಾರಕ ವರಪುತ್ರನನ್ನು ಪಡೆಯಬಹುದಾಗಿತ್ತು. ಆದರೆ, ಶೇಷಮ್ಮ ಹಾಗೆ ಮಾಡಲಿಲ್ಲ. ಕೇವಲ ವಂಶೋದ್ಧಾರಕ ಪುತ್ರನನ್ನು ಪಡೆಯುವ ಬದಲು ಜಗದೋದ್ಧಾರಕ ಪರಶಿವನನ್ನೇ ಪುತ್ರನನ್ನಾಗಿ ಪಡೆದು, ಸಮಷ್ಠಿ ಭಾವದಿಂದ ಜಗತ್ಕಲ್ಯಾಣ ಬಯಸಿದ್ದಳು ಶೇಷಮ್ಮ.

ಮೌನೇಶ್ವರರ ಜನನ ಸಾಮಾನ್ಯರಂತಿರಲಿಲ್ಲ. ಅವರು ಅಯೋನಿಜರು. ಅಂದರೆ ಅವರು ತಾಯಿಯ ಗರ್ಭದಿಂದ ಎಲ್ಲರಂತೆ ಹುಟ್ಟಿ ಬಂದವರಲ್ಲ. ಬ್ರಾಹ್ಮೀ ಮುಹೂರ್ತದಲ್ಲಿ ಅತ್ಯಂತ ಮೋಹಕ ಹಾಗೂ ಪ್ರಕಾಶಮಾನವಾದ ಬೆಳಕಿನಂತೆ ಶೇಷಮ್ಮಳ ಮಡಲಿಗೆ ನೇರವಾಗಿ ಬಂದವರು ಮೌನೇಶ್ವರರು. ಎಚ್ಚರಗೊಂಡ ಶೇಷಮ್ಮ ಆನಂದಾಶ್ಚರ್ಯದಿಂದ ಮಗುವನ್ನು ಎತ್ತಿಕೊಂಡಾಕ್ಷಣವೇ ಶೇಷಮ್ಮಳ ಎದೆಯಿಂದ ಹಾಲು ತೊಟ್ಟಿಕ್ಕಲಾರಂಭಿಸಿದಂತೆ. ಜಗದೊಡೆಯನಾದ ಭಗವಂತನೇ ಮಗುವಾಗಿ ಮಡಿಲಿಗೆ ಬಂದ.

ತಿಂಥಣಿಯ ಮೌನೇಶ್ವರರು ಕನ್ನಡ ನಾಡಿನ ಶರಣರ ಪರಂಪರೆಯಲ್ಲಿ ಅತ್ಯಂತ ಸ್ಮರಣೀಯರು, ಭಾರತೀಯ ಭಾವೈಕ್ಯಕ ಸಂಸ್ಕೃತಿಗೆ ಹೆಚ್ಚಿನ ಮೆರಗು ನೀಡಿದವರು. ಇವರು ಅತ್ಯಂತ ನಿರ್ಭಿಡೆಯಿಂದ

ನಿಷ್ಠುರವಾದ ತಮ್ಮ ವಚನಗಳ ಮೂಲಕ ತಮ್ಮ ಖಚಿತ ನಿಲುವನ್ನು ವ್ಯಕ್ತಪಡಿಸಿ, ಸಮಾಜದ ಅಂಕುಡೊಂಕುಗಳನ್ನು ತಿದ್ದಿದವರು. 'ಕೂಳಿದ್ದ ಕಾಲಕ್ಕೆ ಕುಲಾಚಾರ, ನೀರಿದ್ದ ಕಾಲಕ್ಕೆ ನೇಮ ನಿತ್ಯ, ಕೂಳು-ನೀರು ಎರಡೂ ಕಡಿಮೆ ಯಾದ ದಾರಿದ್ರದ್ಯರಿಗೆ ಅರಮನೆಯಾದರೇನು ಬಸವಣ್ಣ" ಎಂದು ಹೇಳುವಲ್ಲಿ ಸುಳ್ಳು ಪ್ರತಿಷ್ಠೆ, ಡಾಂಭಿಕ ತೆಯನ್ನು ಖಂಡಿಸಿದ್ದಾರೆ. ಹಾಗೆಯೇ ಕನಕವು, ಕಟ್ಟಿಗೆಯೊಳಗಿನ ಬೆಂಕಿಯು, ಎಲ್ಲರ ಮನೆಯ ದೀವಿಗೆಯು ಒಂದೇ-ಅಲ್ಲವೆಂದವರಾಯ ಅಪರಾಧ ಬಸವಣ್ಣ" ಎಂದು ಹೇಳುವಲ್ಲಿ ಮನಕುಲವೆಲ್ಲಾ ಒಂದೇ ಎನ್ನುವ ತತ್ವವನ್ನು ಪ್ರತಿಪಾದಿಸಿದ್ದಾರೆ.

"ಹಲವು ಮೂರುತಿ ಮಾಡಿದ ಉಳಿಯೊಂದೇ ಕೊಡತಿಯೊಂದೇ, ಶಿಲೆಯೆಲ್ಲ ಒಂದೇ ಶಿಲ್ಪಿ ಒಂದೇ ನೋಡಿದ ಮೇಲೆ ಕೆಲದಾಡಬೇಡಿ ಶರಣರಿರ್ರ್ಯಾ ಬಸವಣ್ಣ" ಎಂದು ಹೇಳಿದ ಅವರು, ಹಿಂದು ತುರುಕರಿಗೆ ಚಂದ್ರಮನೊಬ್ಬನೆ, ನಿಂದಿಸಿದವನೇ ಅಧಮನು ಎಂದಿರುವರು. ಹೀಗೆ ಸಮಾನತೆಯ ಹರಿಕಾರರಾಗಿ ಸಕಲ ಜೀವಾತ್ಮರ ಕಲ್ಯಾಣವನ್ನೇ ಬಯಸಿದ ಅವರು ಏಕೇಶ್ವರ ಸಿದ್ಧಾಂತವನ್ನು ಬೋಧಿಸಿರುವರು. "ಆಶಯನಳಿದರೇನು, ಸನ್ಯಾಸಿಯಾದರೇನು, ದೇಶಾಂತರ ತಿರುಗಿದರೇನು ದುಷ್ಕರ್ಮದ ದೋಷ ತಪ್ಪುವುದೇ ಬಸವಣ್ಣ" ಎಂದು ಹೇಳುವಲ್ಲಿ ಕರ್ಮ ಸಿದ್ಧಾಂತವನ್ನು ಬಹು ಗಟ್ಟಿಯಾಗಿ ಪ್ರತಿಪಾದಿಸಿದ್ದಾರೆ ಮೌನೇಶ್ವರರು.

ಮಹಾಮಾನವತಾವಾದಿ ಮೌನೇಶ್ವರರು ಇಡೀ ಮನುಕುಲದ ಉದ್ಧಾರಕ್ಕಕಾಗಿ ಹಗಲಿರುಳು ಚಿಂತಿಸಿದವರು. 'ಗಂಧವನಿಟ್ಟ ಮೇಲೆ ಅಂದದಲ್ಲಿರಬೇಕು, ನಿಂದೆ ಕುಂದುಗಳ ಸುಡಬೇಕು' ಎಂದು ಹೇಳಿರುವ ಮೌನೇಶ್ವರರು, ಬಹಿರಂಗ ಶುದ್ಧಿಯ ಜೊತೆಯಲ್ಲಿ ಅಂತರಂಗದ ಶುದ್ಧಿಗೂ ಒತ್ತುಕೊಟ್ಟಿರುವರು. ನಡೆ,ನುಡಿ ಒಂದಾಗಿರಬೇಕೆಂದು ಅರುಹಿರುವರು. ಮನುಷ್ಯನಿಗೆ ಹುಟ್ಟು ಮುಖ್ಯವಲ್ಲ, ಬದುಕು ಮುಖ್ಯ. ಯಾರು ಎಷ್ಟು ಕಾಲ ಬದುಕಿದರು ಎನ್ನುವುಕ್ಕಿಂತ ಹೇಗೆ ಬದುಕಿದರು ಎನ್ನುವುದೇ ಗಮನಾರ್ಹ ಎನ್ನುವ ವಿಚಾರವಾಗಿ ಮೌನೇಶ್ವರರು ಒಂದೆಡೆ ಹೇಳುತ್ತಾರೆ. "ಮುತ್ತು ಚಿಪ್ಪಿನೊಳು ಹುಟ್ಟುವುದು, ರತ್ನ ಪಾಷಾಣದೊಳು ಹುಟ್ಟುವುದು, ಉತ್ತಮ ಶರಣರು ಹೊಲೆಯಲ್ಲಿ ಹುಟ್ಟಿದ ಮೇಲೆ ನನ್ನ ಕುಲ-ತನ್ನ ಕುಲ ಹೆಚ್ಚೆನ್ನಬಹುದೆ ಬಸವಣ್ಣ" ಎಂದಿದ್ದಾರೆ.

'ದಕ್ಷಿಣದ ಕಾಶಿ' ಎಂದೇ ಹೆಸರಾಗಿರುವ ಕೃಷ್ಣಾ ತೀರದ ತಿಂಥಣಿ ಕ್ಷೇತ್ರ ಬಹು ರಮ್ಯವಾದ ತಾಣ. ಸುತ್ತುವರಿದ ಸುಂದರವಾದ ಬೆಟ್ಟಗಳು, ಮಧ್ಯದಲ್ಲಿ ಶಾಂತ ರೀತಿಯಿಂದ ಹರಿಯುವ ಕೃಷ್ಣೆ. ರಾಜ್ಯ ಹೆದ್ದಾರಿಯಿಂದ ಸುಮಾರು ಒಂದು ಕಿ.ಮೀ. ಅಂತರದಲ್ಲಿರುವ ಶ್ರೀ ಮೌನೇಶ್ವರ ಮಂದಿರವಿದೆ. ನಿಃಶಬ್ದವಾಗಿ ಹರಿಯುವ ಕೃಷ್ಣಾ ನದಿಯ ದಂಡೆಯ ಮೇಲೆ. ಮಂದಿರದ ಹೊರಗಡೆ ಮಹಾದ್ವಾರದ ಎದುರಿನಲ್ಲಿಯೇ ದೊಡ್ಡದಾದ ದೀಪಸ್ತಂಭ, ಮಂದಿರ ಪ್ರವೇಶಕ್ಕೆ ಗ್ರಾನೈಟ ಕಲ್ಲುಗಳಿಂದ ಅಲಂಕರಿಸಿ ನವೀನವಾಗಿ ನಿರ್ಮಾಣಗೊಂಡಿರುವ ಬೃಹದಾಕಾರದ ಬಹುಸುಂದರವಾದ ಮಹಾದ್ವಾರ.

ವಿಶಾಲವಾದ ಪ್ರಾಂಗಣದ ಮಧ್ಯದಲ್ಲಿ ಶ್ರೀ ಮೌನೇಶ್ವರರ ಮುಖ್ಯ ಮಂದಿರ. ಕೆಳಗಡೆ ಗುಹೆ. ಗುಹೆಯಲ್ಲಿ ಸಶರೀರಿಯಾಗಿ ಅದೃಶ್ಯಗೊಂಡು ಶಾಶ್ವತವಾಗಿ ನೆಲೆಸಿರುವ ಮೌನೇಶ್ವರರ ಗುದ್ದುಗೆ ಮೇಲ್ಭಾಗದಲ್ಲಿ ಮಜಾರ, ಮೌನೇಶ್ವರ ಮಂದಿರದ ಬಲಭಾಗದಲ್ಲಿರುವದು ಈಶ್ವರ ದೇವಾಲಯ. ಉತ್ತರ ದಿಕ್ಕಿನಲ್ಲಿ ಇರುವದು ಮೌನೇಶ್ವರರು ಶಿಷ್ಯನಾದ ಗಗನಾಪುರದ ಗಂಗಪ್ಪಯ್ಯನ ಗುಡಿ. ಹತ್ತಿರದಲ್ಲಿಯೇ ಬೆಟ್ಟದ ಬದಿಯಲ್ಲಿ ವಿಶಾಲ ವೃಕ್ಷಗಳ ಮಧ್ಯದಲ್ಲಿರುವದೇ ಕೈಲಾಸ ಕಟ್ಟಿ, ಈ ಸ್ಥಳಕ್ಕೆ ಕೈಲಾಸಕಟ್ಟಿ ಎಂದು ಹೆಸರು ಬರಲು ಕಾರಣವೇನೆಂದರೆ, ಇದೇ ಸ್ಥಳದಲ್ಲಿ ಶ್ರೀ ಮೌನೇಶ್ವರರು ತಮ್ಮ ಪರಮಶಿಷ್ಯನಾದ ಗಂಗಪ್ಪಯ್ಯನಿಗೆ ಆತನ ಇಚ್ಛೆಯಂತೆ ತಮ್ಮ ಅಂಗೈಯಲ್ಲಿಯೇ ಕೈಲಾಸ ದರ್ಶನ ಮಾಡಿಸಿದರೆನ್ನುವ ಪ್ರತೀತಿ ಇದೆ.

ಪ್ರತಿ ವರ್ಷ ಜಾತ್ರೆಯ ಸಂದರ್ಭದಲ್ಲಿ ಈ ಕೈಲಾಸ ಕಟ್ಟೆಯಲ್ಲಿ ಅಸಂಖ್ಯಾತ ಸಾಧುಗಳ ಸಮೂಹವೇ ನೆರೆದಿರುತ್ತದೆ. ಪ್ರವಚನದ ಜಂಜಡದಿಂದ ದೂರ ಸರಿದು ಭಗವಂತನ ಧ್ಯಾನದಲ್ಲಿಯೇ ಇವರೆಲ್ಲ ನಿಮಗ್ನರಾಗಿರುವ ವಿಲಕ್ಷಣ ಮನಸ್ಥಿತಿ ಅವರು ಬೀರುವ ಶೂನ್ಯ ನೋಟ, ಗುಂಪು ಗುಂಪಾಗಿ ಅವರನ್ನು ಸುತ್ತುವರಿದು ಜನರಿಗೆ ತಿರುಗಾಡುವದಕ್ಕೂ ಜಾಗವಿರದಂತೆ ಕುಳಿತುಕೊಂಡು ತಾರಕ ಸ್ವರದಲ್ಲಿ ಭಜನೆಗೈಯುವ ಅಪಾರ ಭಕ್ತ ಸಮೂಹ. ಹೀಗೆ ಇವೆಲ್ಲವೂ ತುಂಬಾ ಆಕರ್ಷಣೀಯ ಹಾಗೂ ಅವಿಸ್ಮರಣೀಯ.

ಕೈಲಾಸ ಕಟ್ಟೆಯ ಪೂರ್ವಕ್ಕೆ ರಸ್ತೆಯಾಚೆಗೆ ಸ್ವಲ್ಪ ಸಾಗಿದರೆ, ಅಲ್ಲಿ ಕೋಣನ ಗವಿ. ಗ್ರಾಮ ದೇವತೆಗೆ ಬಲಿಯಾಗಬೇಕಾಗಿದ್ದ ಕೋಣ. ಪ್ರಾಣ ಭಯದಿಂದ ಓಡಿಬಂದು ಶ್ರೀಮೌನೇಶ್ವರರ ಅನುಗ್ರಹದಿಂದ ಈ ಗವಿಯಲ್ಲಿಯೇ ಪ್ರವೇಶ ಮಾಡಿ ಅದೃಶ್ಯವಾಗಿ ಸದ್ಗತಿ ಪಡೆಯಿತೆಂದು ಹೇಳಲಾಗುತ್ತದೆ.

ಪ್ರತಿವರ್ಷ ಮಾಘ ಶುದ್ಧ ದಶಮಿಯಿಂದ ಭಾರತ ಹುಣ್ಣಿಮೆಯವರೆಗೆ ಜರುಗುವ ತಿಂಥಣಿಯ ಶ್ರೀಮೌನೇಶ್ವರರ ಜಾತ್ರಾ ಮಹೋತ್ಸವ ಸಗರ ನಾಡಿನಲ್ಲಿಯೇ ದೊಡ್ಡ ಜಾತ್ರೆಯಾಗಿ ನಡೆಯುತ್ತದೆ. ಐದು ದಿನಗಳ ಕಾಲ ಜರುಗುವ ಈ ಜಾತ್ರೆಗೆ ಕರ್ನಾಟಕದಿಂದ ಮಾತ್ರವಲ್ಲದೇ ನೆರೆಯ ರಾಜ್ಯಗಳಾದ ಆಂಧ್ರ ಪ್ರದೇಶ ಹಾಗೂ ಮಹಾರಾಷ್ಟ್ರದಿಂದಲೂ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸುತ್ತಾರೆ.

ಪುರವಂತರ ಸೇವೆ ತಿಂಥಣಿ ಜಾತ್ರೆಯ ಇನ್ನೊಂದು ಬಹು ದೊಡ್ಡ ಆಕರ್ಷಣೆ, ಇಲ್ಲಿ ಕೂಡುವಷ್ಟು ಪುರವಂತರು ಬಹುಶಃ ಕರ್ನಾಟಕದ ಯಾವ ಕ್ಷೇತ್ರದಲ್ಲಿಯೂ ಕೂಡಲಾರರು ಎನ್ನುವುದು ವಾಸ್ತವ ಸತ್ಯ. ಅಹೋರಾತ್ರಿ ಸೇವೆ ಸಲ್ಲಿಸುವ ಪುರವಂತರ ಅದಮ್ಯ ನಿಷ್ಠೆ, ಕೊರೆಯುವ ಚಳಿಯಲ್ಲಿಯೂ ಕುಗ್ಗದ ಅವರ ಉತ್ಸಾಹ, ಆರ್ಭಟದಿಂದ ಒಡಪುಗಳನ್ನು ಹೇಳುವ ಅವರ ವಿಶಿಷ್ಟ ಶೈಲಿ, ತಾರಕ ಸ್ವರದಲ್ಲಿ ನಿರಂತರ ಮೊಳಗುವ ಶಹನಾಯಿ ವಾದನ, ಡೋಲಿನ ತಾಳಕ್ಕೆ ತಕ್ಕಂತೆ ಲಯಬದ್ಧವಾಗಿ ರಂಜಿಸುವ ಅವರ ಕುಣಿತ, ಎತ್ತ ನೋಡಿದರತ್ತ ಝಗ ಝಗಿಸಿ ಮಿಂಚಿನಂತೆ ಹೊಳೆಯುವ ಸಹಸ್ರಾರು ಶಸ್ತ್ರಗಳು. ಹೀಗೆ... ಹೀಗೆ... ಎಲ್ಲವೂ ಅಮೋಘ, ಅನುಪಮ, ಅವಿಸ್ಮರಣೀಯ.

ಮೌನೇಶ್ವರರು ನಾಡಿನ ಉದ್ದಗಲಕ್ಕೂ ಸಂಚರಿಸಿ, ತಮ್ಮ ಅಮೂಲ್ಯವಾದ ಹರಿತ ವಚನಗಳ ಮೂಲಕ ಧರ್ಮ ಬೋಧೆಗೈದು, ಈ ಭೌತಿಕ ದೇಹಕ್ಕೆ ವಿದಾಯ ಹೇಳುವ ಕಾಲ ಸಮೀಪವಾಗುತ್ತಿದ್ದಂತೆಯೇ ತಮ್ಮ ಅಪಾರ ಶಿಷ್ಯ ವೃಂದವನ್ನು ಕರೆದು ಒಂದು ದಿನ ಹೀಗೆ ಹೇಳುತ್ತಾರೆ. ಇಂದು ಈ ನಶ್ವರ ದೇಹ ತ್ಯಜಿಸಿ ಶಾಶ್ವತ ಅಗೋಚರ ಶಕ್ತಿಯಾಗಿ ಈ ತಿಂಥಣಿ ಕ್ಷೇತ್ರದಲ್ಲಿ ನೆಲೆಗೊಳ್ಳುತ್ತೇನೆ. ನಾನು ಪ್ರಧಾನವಾಗಿ ಸಂಚರಿಸಿದ ಗೋನಾಳ, ವರವಿ, ಲಿಂಗನಖಂಡಿ ಹಾಗೂ ತಿಂಥಣಿಯಲ್ಲಿ ನನ್ನ ವಿಶೇಷ ಅಸ್ತಿತ್ವವಿರುತ್ತದೆ. ಈ ಎಲ್ಲಾ ಕ್ಷೇತ್ರಗಳಿಗೆ ಅದರಲ್ಲೂ ಮುಖ್ಯವಾಗಿ ಮುಕ್ತಿ ಧಾಮವಾಗಿರುವ ತಿಂಥಣಿಗೆ ಆಗಮಿಸಿ, ಭಕ್ತಿ ಶ್ರದ್ಧೆಯಿಂದ ಸೇವೆಗೈದು ದರುಶನ ಪಡೆಯುವ ಸರ್ವರ ಸಾತ್ವಿಕ ಇಷ್ಟಾರ್ಥಗಳು ಪೂರ್ತಿಯಾಗುತ್ತವೆ. ಇದು ನನ್ನ ಅಭಯವೆಂದು ಹೇಳುತ್ತ ಶ್ರೀ ಮೌನೇಶ್ವರರು ಮಾಘ ಶುದ್ಧ ಪೌರ್ಣಿಮೆಯಂದು ತಿಂಥಣಿಯ ಗುಹೆಯಲ್ಲಿ ಪ್ರವೇಶ ಮಾಡಿ ತಮ್ಮ ಅವತಾರವನ್ನು ಸಮಾಪ್ತಿಗೊಳಿಸಿರುವರು. ಸರ್ವ ಧರ್ಮ ಸಮನ್ವಯ ಕ್ಷೇತ್ರವೆನಿಸಿದ ಹಿಂದು–ಮುಸ್ಲಿಂ ಭಾವೈಕ್ಯತಾ ಕ್ಷೇತ್ರವಾಗಿರುವ ತಿಂಥಣಿಗೆ ಎಲ್ಲಾ ಮತಿಯರು, ಎಲ್ಲ ಧರ್ಮಿಯರೂ ಭಾವಪೂರ್ಣವಾಗಿ ಬರುತ್ತಾರೆ. ಶ್ರೀ ಮೌನೇಶ್ವರರ ಚೇತನಕ್ಕೆ ಮಣಿದು ತಮ್ಮ ಇಷ್ಟಾರ್ಥಗಳನ್ನು ಪಡೆಯುತ್ತಾರೆ.

(ಆರ್‌ಜಿಬಿ)

ತೊ

ತೊಟ್ಟಿಲ ಶಾಸ್ತ್ರ: ಮಗು ಹುಟ್ಟಿದ ಮೇಲೆ ಮಾಡುವ ಷೋಡಶ ಸಂಸ್ಕಾರಗಳಲ್ಲಿ ನಾಮಕರಣೋತ್ಸವ ಒಂದು. ಗಂಡು ಮಗುವಿಗೆ ಹನ್ನೆರಡು ದಿವಸಕ್ಕೆ, ಹೆಣ್ಣು ಮಗುವಿಗೆ ಹದಿಮೂರು ದಿವಸಕ್ಕೆ ತೊಟ್ಟಿಲಲ್ಲಿ ಹಾಕುವ ಶಾಸ್ತ್ರ ಮಾಡುತ್ತಾರೆ. ಈ ದಿನಗಳಲ್ಲಿ ಅನುಕೂಲವಾಗದಿದ್ದರೆ ಒಂದು ತಿಂಗಳೊಳಗಾಗಿ ಪ್ರಶಸ್ತ ದಿನ ನೋಡಿ ತೊಟ್ಟಿಲ ಪೂಜೆ ಮಾಡುವರು. ಅಂದು ಬೆಳಗ್ಗೆ ಮಗುವಿಗೆ, ಬಾಣಂತಿಗೆ ನೀರು ಹಾಕಿ ಒಳ್ಳೆಯ ಮುಹೂರ್ತದಲ್ಲಿ ತೊಟ್ಟಿಲು ಪೂಜೆ ಮಾಡಿ ಇಬ್ಬರು ಮುತ್ತೈದೆಯರಿಗೆ ಊಟ ಮಾಡಿಸಿ, ತಮ್ಮ ಆಪ್ತರಿಗೆ, ಬಂಧುಗಳಿಗೆ, ಊಟಕ್ಕೆ ಕರೆಯುವರು. ಸಾಯಂಕಾಲ ಮಗುವಿಗೆ ತೊಟ್ಟಿಲಲ್ಲಿ ಹಾಕುವ ಕಾರ್ಯಕ್ರಮವಿರುತ್ತದೆ.

ತೊಟ್ಟಿಲನ್ನು ಹೂಗಳಿಂದ ಸಿಂಗರಿಸಿ ನಡು ಮನೆಯಲ್ಲಿ ಕಟ್ಟುತ್ತಾರೆ. ಕೂಸು ಬಾಣಂತಿಯನ್ನು ಅದರ ಪಕ್ಕದಲ್ಲಿ ಕೂಡಿಸುವರು. ತೊಟ್ಟಿಲ ಕೆಳಗೆ ಒಂದು ತಂಬಿಗೆಯನ್ನು ತಳದಲ್ಲಿ ಸ್ವಲ್ಪ ಜೋಳ ಹಾಕಿ ಇಡುವರು. ಅದರ ಮೇಲೊಂದು ಕಣಕದಿಂದ ಮಾಡಿದ ಅಂಗೈ ಅಗಲದ ಬಿಲ್ಲೆ (ಪೂರಿ) ಮಾಡಿಟ್ಟು, ಗೋದಿ ಹಿಟ್ಟಿನಿಂದ ಬೇಯಿಸಿ ಮಾಡಿರುವ ಹಣತೆ (ಆರತಿ) ಇಡುವರು. ಅದರಲ್ಲಿ ಎಣ್ಣೆ ಹಾಕಿ ದೀಪ ಹಚ್ಚುವರು, ಮಗುವಿಗೆ ಹೊಸ ಬಟ್ಟೆ ತೊಡಿಸುವರು. ತಾಯಿಗೆ ದಂಡಿಕಟ್ಟಿ, ಕುಬಸದ ಕಣಗಳನ್ನು ಉಡಿಯಲ್ಲಿ ಹಾಕಿ ಉಡಿಯಕ್ಕಿ ಹಾಕುವರು. ತೊಟ್ಟಿಲಲ್ಲಿ ಹಾಕಲು ಬಂದ ಹೆಂಗಳೆಯರು ತಾವು ತಂದ ಉಡುಗೊರೆ ಕೊಡುವರು. ಉಡುಗೊರೆಗಳ ಜೊತೆಗೆ ಒಂದು ಬಟ್ಟಲಲ್ಲಿ ಜೋಳ, ಅಕ್ಕಿ, ಗೋದಿ ಮುಂತಾದ ಧಾನ್ಯಗಳು ತುಂಬಿಕೊಂಡು ಅದರ ಮೇಲೊಂದು ಬೆಳ್ಳುಳ್ಳಿ ಇಟ್ಟು ತರುವರು. ತೊಟ್ಟಿಲಲ್ಲಿ ಮೊದಲೇ ಒಂದು ರುಬ್ಬುವ ಗುಂಡುಕಲ್ಲು ಇಟ್ಟಿರುತ್ತಾರೆ. ಗುಂಡಪ್ಪ ಎಂದು ಅದಕ್ಕೆ ಹೆಸರು. ಬಹುಶಃ ಮಗುವಿನ ಮೇಲೆ ಕೆಟ್ಟ ಕಣ್ಣಿನವರ ದೃಷ್ಟಿ ಬೀಳದಿರಲಿ, ಅವರ ಮೊದಲ ನೋಟ ಕಲ್ಲಿನ ಮೇಲೆ ಬೀಳಲಿ ಎಂಬ ವಿಚಾರವಿದೆ. ಅದರ ಜೊತೆಗೆ ಮಗು ಗಟ್ಟಿ ಮುಟ್ಟಾಗಿ ಕಲ್ಲಿನಂತಿರಲಿ ಎಂಬ ಅಪೇಕ್ಷೆ ಇದ್ದಿರಬೇಕು. ಉಡುಗೊರೆಗಳೆಲ್ಲ ಕೊಟ್ಟಾದ ಮೇಲೆ, ಕಲ್ಲನ್ನು ತೆಗೆದು ಮಗುವನ್ನು ಮಲಗಿಸುತ್ತಾರೆ, ತೊಟ್ಟಿಲಲ್ಲಿ ಹಾಕಿ ತೊಟ್ಟಿಲಿನ ನಾಲ್ಕು ಕೊನೆಗಳಲ್ಲಿ ಮಕ್ಕಳು, ಹಿರಿಯ ಹೆಂಗಸರು ಹಿಡಿದು ಮೆಲ್ಲನೆ ತೂಗುತ್ತಾರೆ. ಮಗುವಿಗೆ ತೊಟ್ಟಿಲಲ್ಲಿ ಮಲಗಿಸಿ ಜೋಗುಳದ ಹಾಡುಗಳನ್ನು ಮುಮ್ಮೇಳ ಹಿಮ್ಮೇಳದಲ್ಲಿ ಹಾಡುವರು.

(ವೈ.ಸ್)

ಥ

ಥಂಡಿ ಮಾಡುವುದು: ಪೀಡೆ, ಕಷ್ಟ, ರೋಗ– ಎನ್ನುವ ಅರ್ಥದಲ್ಲಿ ಜನಪದರು ಇದನ್ನು ಬಳಸುತ್ತಾರೆ. ಜನ ಮತ್ತು ದನಗಳಿಗೆ ಬಂದಿರುವ ಅಥವಾ ಮುಂದೆ ಬರಬಹುದಾದ ಅನಿಷ್ಟ, ಪೀಡೆ, ರೋಗ ನಿವಾರಣೆ ಮಾಡುವಂತೆ ದೇವರ ಕುರಿತು ಪ್ರಾರ್ಥನೆ ಮಾಡುವ ಸಂಪ್ರದಾಯ 'ಥಂಡಿ ಮಾಡುವುದು' ಈ ಸಂಪ್ರದಾಯ ಹೈದ್ರಾಬಾದ ಕರ್ನಾಟಕ ಭಾಗದ ವ್ಯಾಪ್ತಿಗೊಳಪಟ್ಟ ಎಲ್ಲ ಹಳ್ಳಿಗಳಲ್ಲೂ ಆಚರಿಸುತ್ತಾರೆ.

ಥಂಡಿ ಮಾಡಬೇಕೆನ್ನುವವರು ಮೊಟ್ಟಮೊದಲು 'ಪೋತ್ಯಾ'ನಿಗೆ ವೀಳ್ಯೆ ಕೊಟ್ಟು, ಬರಲಿಕ್ಕೆ ತಿಳಿಸಿಬರುವರು. ಇಲ್ಲಿ ಪೋತ್ಯಾನ ಪಾತ್ರ ಬಹು ಮುಖ್ಯವಾದುದು. ಇವನಿಗೆ ಪೋತರಾಜನೆಂದೂ ಜನ ಕರೆಯುವರು. ಅನಂತರ ಊರಿನ ಬಡಿಗ ಡೊಳ್ಳಿನ ಸಂಗಡ ಹೋಗಿ 'ಭಾಜದ ಮನಿ' ಗಳಿಗೆ ಆರತಿ ತರಲು ಹೇಳಿ ಬರುತ್ತಾನೆ. ಹೆಣ್ಣು ಮಕ್ಕಳೆಲ್ಲಾ ಸಿಂಗರಿಸಿಕೊಂಡು ಆರತಿ ತೆಗೆದುಕೊಂಡು ಬರುವ ದೃಶ್ಯ ಕಣ್ಣಿಗೆ ಸುಂದರವಾಗಿರುತ್ತದೆ. ಪಾವಿತ್ರ್ಯತೆಯ ಬೆಳಕು ಎಲ್ಲೆಡೆ ಚೆಲ್ಲವರಿದಿರುತ್ತದೆ. ಅನಂತರ ಎಲ್ಲವೂ ಒಂದೆಡೆ ಸೇರಿದ ಮೇಲೆ ಮಾಲೀಗೌಡನ ಮನೆಯಿಂದ ಹುಳಬಾನದ

ಕುಂಭ ಲಕ್ಷ್ಮೀ ಗುಡಿಗೆ ಹೋಗುವುದು. 'ಘಟಕಾ' (ಕಂಟಕ) ಹತ್ತಿದಲ್ಲಿ ಪೋತರಾಜ ಲಿಂಬಿ ಹಣ್ಣು ಹಲ್ಲಿನಿಂದ ಹರಿದು, ಆಚೆ-ಈಚೆ ಒಗೆದು ದಾರಿ ಸುಗಮಗೊಳಿಸುವನು. ಆವೇಶಭರಿತನಾಗಿ ಬರಿಮೈಗೆ ಛಟ್‌ಛಟ್ ಎಂದು ಬಾರಕೋಲಿನಿಂದ ಬಾರಿಸಿ ಕೊಳ್ಳುವನು ಹಾಗೂ ಹಾ ಹಾ ಎಂದು ಜನ ಬೆಚ್ಚುವಂತೆ ಚೀರುವನು. ಇದರಿಂದ ದಾರಿಗೆ ಅಡ್ಡಬಂದ ಭೂತ-ಪಿಶಾಪಿಗಳು ಓಡಿಹೋಗುವವು ಎಂಬುದು ಜನರ ನಂಬಿಕೆ.

ಗುಡಿಗೆ ಬಂದನಂತರ ಗುಡಿಯ ಮುಂದೆ 'ಹಂದರ' ಹಾಕಿ ಬಲಿಗಾಗಿ ತಂದ ಗಬ್ಬದ ಕುರಿ ಅಥವಾ ಕೋಣವನ್ನು ದೇವಿಗೆ ಐದು ಸುತ್ತ ತಿರುಗಿಸಿ 'ಗೌಡ ಗಣಚಾರಿ'ಗಳು ತಮ್ಮ ತಲವಾರದಿಂದ ಅದರ ಕುತ್ತಿಗೆಗೆ ಸ್ವಲ್ಪ ಕೈ ಹಚ್ಚಿ ಬಿಡುವರು. ಪೋತರಾಜ ಅದನ್ನು ಆಡಿಸಿ ಆಡಿಸಿ, ಸುಸ್ತಾಗಿಸಿ ಕೊಂದು ಬಿಡುವನು. ಕಡಿಯುವಾಗ ಅದು ಒದರದಂತೆ ಎಚ್ಚರಿಕೆ ವಹಿಸುವರು. ತಪ್ಪಿ ಒದರಿದರೆ ಊರಿಗೆ ಕೇಡು ಎಂಬುದು ಜನರ ಅಂಧಕಲ್ಪನೆ. ಹೊಟ್ಟೆಯೊಳಗಿನ ಮರಿಯನ್ನು ತೆಗೆದು ಹಂದರದ ಬುಡಕ್ಕೆ ಗುಂಡಿತೋಡಿ ಹೂಳುವರು. ಬಲಿಯನ್ನು ಅಡುಗೆ ಮಾಡಿ ಹಿಂದುಳಿದ ಜನಾಂಗದ ಐದು ಮಂದಿ ಮುತ್ತೈದೆಯರು ಊಟ ಮಾಡಿ ಆನಂತರ ಎಲ್ಲರೂ ಸೇರಿ 'ಮರಗಮ್ಮನ' ಗುಡಿಗೆ ಬರುವರು. ಮುಂದೆ ಬರುವ ಗುರುವಾರ ಮತ್ತು ಶುಕ್ರವಾರ ಎರಡು ದಿವಸ ಊರ ದೇವತೆಗಳಾದ 'ಶೆಟಿಗೆವ್ವ', 'ಮರಗಮ್ಮ', 'ಲಕ್ಷ್ಮಿ', 'ಹಿರೋಡ್ಯಾ' ಮುಂತಾದವರಿಗೆ ತಲಾ ಎರಡೆರಡು ತಂಬಿಗೆ ನೀರು ನೀಡಿ, ಜೋಳದ ಹಸಿ ಹಿಟ್ಟಿನಿಂದ ತಯಾರಿಸಿದ 'ತನುಂಡಿ' ಇಟ್ಟು ಬರುವರು. ಮನೆಯಲ್ಲಿ 'ಕಮರ' ಮಾಡುವರು. ಹಿಂದಿನ ಕಾಲದಲ್ಲಿ ದೊಡ್ಡ ರೋಗಗಳೆನಿಸಿದ್ದ ಕಾಲರಾ, ಪ್ಲೇಗ, ಸಿಡುಬು ಮುಂತಾದವುಗಳನ್ನು ದೇವರುಗಳಿಗೆಲ್ಲಾ ಶಾಂತಿಮಾಡಿದರೆ ತಮಗೆ ಸುಖವಾಗುವದೆಂದು ನಂಬಿದ ಜನರ ಅಂಧ ಸಂಪ್ರದಾಯವಿದು.


(ಬಿಪಿಪಿ)

ದ

ದಂಡಗುಂಡ ಬಸವಣ್ಣ: ಸಾಮಾನ್ಯವಾಗಿ ಈಶ್ವರ ದೇವಸ್ಥಾನದಲ್ಲಿ ಈಶ್ವರ ಲಿಂಗದ ಎದುರಲ್ಲಿ ಬಸವಣ್ಣ (ನಂದಿ)ನ ವಿಗ್ರಹ ಪೂಜೆಗೊಳ್ಳುತ್ತದೆ. ಪ್ರತ್ಯೇಕವಾಗಿ ಬಸವಣ್ಣನ ಮಂದಿರವಿರುವುದು ವಿರಳ. ಅಂಥ ವಿರಳ ದೇವಸ್ಥಾನಗಳಲ್ಲಿ ಕಲಬುರ್ಗಿ ಜಿಲ್ಲೆಯ ದಂಡಗುಂಡ ಬಸವಣ್ಣನ ದೇವಸ್ಥಾನ ಈ ಭಾಗದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದಿದೆ.

ಚಿತ್ತಾಪುರ ತಾಲ್ಲೂಕಿನ ಒಂದು ಗ್ರಾಮದ ಹೆಸರು ದಂಡಗುಂಡ. ಈ ದೇವಸ್ಥಾನದಿಂದಲೇ ಗ್ರಾಮಕ್ಕೂ ದಂಡಗುಂಡ ಎಂಬ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಈ ಹೆಸರು ಬರಲು ಕಾರಣ, ಏನೂ ಅರಿಯದ ದನಕಾಯುವ ಹುಡುಗರು ಆಟವಾಡುತ್ತ, ದಂಡ ಮತ್ತು ಗುಂಡು ತೆಗೆದುಕೊಂಡು ಹೋಗಿ ಬಸವಣ್ಣನಿಗೆ ಹೊಡೆಯಲು ಬಸವನ ಬೆನ್ನ ಮೇಲೆ ಹತ್ತಿದರಂತೆ. ಆಗ ಬಸವಣ್ಣ ಓಡುತ್ತ ಹೋಗಿ ದೊಡ್ಡ ಗುಡ್ಡದ ಮೇಲೆ ಬಂದು ಕೂಡುತ್ತಾನೆ. ಆದ್ದರಿಂದ ದಂಡಗುಂಡ ಬಸವಣ್ಣನೆಂದೇ ಪ್ರಸಿದ್ಧಿ ಪಡೆದಿದೆ.

ಬಸವಣ್ಣನ ದೇವಸ್ಥಾನವನ್ನು ತುಂಬ ಸುಂದರವಾಗಿ ನಿರ್ಮಿಸಲಾಗಿದೆ. ಗುಡ್ಡದ ಮೇಲಿರುವುದರಿಂದ ಪ್ರಶಾಂತ ವಾತಾವರಣದ ದೇವಸ್ಥಾನದಲ್ಲಿ ಬಸವಣ್ಣನ ದರ್ಶನ ಪಡೆದು ಒಂದು ಕ್ಷಣ ಹೊರಗೆ ಬಂದು ನಿಂತರೆ, ತಂಗಾಳಿಯಿಂದ ಆಯಾಸವೆಲ್ಲ ಪರಿಹಾರವಾಗುತ್ತದೆ. ಮನಸ್ಸು ಹಗುರಾಗುತ್ತದೆ. ಸುತ್ತಲೂ ಅರಣ್ಯ ಪ್ರದೇಶವಿರುವುದರಿಂದ ಶುದ್ಧವಾದ ಗಾಳಿಗೆ ಇಲ್ಲಿ ಕೊರತೆಯಿಲ್ಲ. ಮುಖ್ಯ ರಸ್ತೆ ಸಮೀಪದಲ್ಲೇ ಇರುವುದರಿಂದ ಭಕ್ತಜನರು ಬಂದು ಹೋಗಲೂ ಸಾಕಷ್ಟು ಅನುಕೂಲಗಳಿವೆ.



ಬಸವಣ್ಣನ ದೇವಾಲಯ, ದಂಡಗುಂಡ

ದಂಡಗುಂಡ ಬಸವಣ್ಣನಲ್ಲಿ ಹರಕೆ ಹೊರುವ ಭಕ್ತರ ಸಂಖ್ಯೆ ಹೆಚ್ಚು. ಅಪರೂಪದ ಬಸವಣ್ಣನ ದೇವಾಲಯ ಜಿಲ್ಲೆಯಲ್ಲಿ ಇದೊಂದೇ ಇರುವುದರಿಂದ ಬಸವಣ್ಣನ ಭಕ್ತರು ದಂಡಗುಂಡಕ್ಕೇ

ಬರುತ್ತಾರೆ. ತಮ್ಮ ಹರಕೆಗಳನ್ನು ಸಲ್ಲಿಸುತ್ತಾರೆ. ಬಸವಣ್ಣ ರೈತರ ಆರಾಧ್ಯ ದೈವವಾಗಿರುವುದರಿಂದ ಹಾಗೂ ಜಿಲ್ಲೆ ಕೃಷಿ ಪ್ರಧಾನ ವಾಗಿರುವುದರಿಂದ ಅಪಾರ ಸಂಖ್ಯೆ ಯಲ್ಲಿ ರೈತ ಭಕ್ತರು ಬಂದು ದಂಡ ಗುಂಡ ಬಸವಣ್ಣನಿಗೆ ದಿಂಡಿ ನಮಸ್ಕಾರ ಹಾಕಿ ತಮ್ಮ ಹರಕೆ ಸಲ್ಲಿಸುತ್ತಾರೆ.

ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಮೂರನೆಯ ಸೋಮವಾರ ದಂಡ ಗುಂಡ ಬಸವಣ್ಣನ ಜಾತ್ರೆ ಅತ್ಯಂತ ವೈಭವದಿಂದ ನಡೆಯುತ್ತದೆ. ಈ ಸಂದರ್ಭದಲ್ಲಿ ಬೆಳಗ್ಗೆಯಿಂದ ಸಂಜೆಯ ವರೆಗೂ ಅನೇಕ ಧಾರ್ಮಿಕ ಕಾರ್ಯ ಕ್ರಮಗಳು ನಡೆಯುತ್ತವೆ. ಸಂಜೆ ರಥೋತ್ಸವ ನಡೆಯುತ್ತದೆ.

ರಥೋತ್ಸವ ಕಾರ್ಯಕ್ರಮಕ್ಕೆ ಸುತ್ತ ಮುತ್ತಲಿನ ಗ್ರಾಮಸ್ಥರು ಮಾತ್ರವಲ್ಲದೇ, ನೆರೆಯ ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರಗಳಿಂದಲೂ ಅಪಾರ ಸಂಖ್ಯೆಯಲ್ಲಿ ಆಗಮಿಸುತ್ತಾರೆ.

ಈ ಬಸವಣ್ಣನ ಗುರು ಸಂಗಮನಾಥ. ಗುಡ್ಡದ ಮೇಲೆ ಹೋದರೆ ಗುರುವಿನ ಮೂರ್ತಿ ಕಾಣುತ್ತದೆ. ದಂಡಗುಂಡ ಬಸವಣ್ಣನ ಜಾತ್ರೆಯ ಸಂದರ್ಭದಲ್ಲಿ ವಿವಿಧ ಜನಪದೀಯ ಸಾಂಸ್ಕೃತಿಕ ಕಾರ್ಯಕ್ರಮಗಳೂ ಕೂಡ ನಾಲ್ಕು ದಿನಗಳವರೆಗೆ ನಡೆಯುತ್ತವೆ. ಕೆಲವು ಸ್ಪರ್ಧೆಗಳೂ ನಡೆಯುವುದರಿಂದ ವಿವಿಧೆಡೆಯಿಂದ ಸ್ಪರ್ಧಾಳುಗಳೂ ಇಲ್ಲಿಗೆ ಆಗಮಿಸುತ್ತಾರೆ. ನಾಲ್ಕು ದಿನಗಳ ಕಾಲ ಜಾತ್ರೆ ಹಾಗೂ ಸಾಂಸ್ಕೃತಿಕ ಉತ್ಸವವಾಗಿ ದಂಡಗುಂಡ ಬೆಟ್ಟ ವಿಜೃಂಭಿಸುತ್ತದೆ. *(ಎಎಂಕೆ)*

ದಂಡ ನಮಸ್ಕಾರ: ದೇವರಿಗೆ ಉದ್ದಂಡ ನಮಸ್ಕಾರ ಹಾಕುವ ಒಂದು ಸಂಪ್ರದಾಯ ಸಾಮಾನ್ಯವಾಗಿ ಪ್ರತಿಯೊಬ್ಬರು ಮೇಲು–ಕೀಳೆಂಬ ಜಾತಿಯವರೆನ್ನದೆ ಆಚರಿಸುವುದು ಪ್ರಚಲಿತದಲ್ಲಿದೆ. ದಂಡ ನಮಸ್ಕಾರ ಹಾಕುವವರು, ಒದ್ದೆ ಬಟ್ಟೆಯನ್ನುಟ್ಟುಕೊಂಡು ದೇವರ ಧ್ಯಾನ ಮಾಡುತ್ತ, ತಮ್ಮ ಮನೆ ಅಥವಾ ತಂಗಿದ (ಫರಸಿ ಬಿಟ್ಟುರುವ) ಸ್ಥಳದಿಂದ ದಂಡ ನಮಸ್ಕಾರ ಹಾಕಲು ಪ್ರಾರಂಭಿಸುತ್ತಾರೆ. ಕೈ–ಕಾಲುಗಳನ್ನು ಜೋಡಿಸಿ ಬೋರಲಾಗಿ ಕೆಳಗೆ ಬಿದ್ದು, ನೆಲಕ್ಕೆ ತಲೆ ಹಚ್ಚಿ ತಮ್ಮ ಕೈಯಲ್ಲಿರುವ ಜೋಳದ



ದಂಡನಮಸ್ಕಾರ ಹಾಕುವುದು

ಗಣಕಿಯಿಂದ ಗೆರೆಯೆಳೆದು ದೇವರಿಗೆ ನಮಸ್ಕಾರ ಮಾಡುತ್ತಾರೆ. ತಮ್ಮ ಸಂಬಂಧಿಕರಲ್ಲೊಬ್ಬರು ನೀರಿನ ತಂಬಿಗೆಯಿಂದ ಧೂಳಕಂಪ ಹೊಡೆಯುವರು. ಈ ರೀತಿ ಮಾಡುತ್ತ ಗುಡಿಗೆ ತಲಪಿದಾಗ ತಮ್ಮ ಸಂಬಂಧಿಕರು ಆಯೇರಿ ಮಾಡುವರು. ಇದು ಚುಂಚೂರು ಮಾಮರತಾಯಿ ನೋಡಿ ಜಾತ್ರೆಯಲ್ಲಿ ನಡೆಯುವ ವಾರ್ಷಿಕೋತ್ಸವ ಸಂಪ್ರದಾಯವಾಗಿದೆ. ಇಂಥ ಅತೀತ ಶಕ್ತಿಯಲ್ಲಿ ನಂಬಿಕೆ ಹುಟ್ಟಿ, ಶ್ರದ್ಧೆ ಗಟ್ಟಿಗೊಂಡು ಮಾನವನ ಕಲ್ಯಾಣಕ್ಕೆ ಸಾಧನೆಯ ಪ್ರತೀಕವಾಗಿದೆ. ಆಚರಣೆಯು ಸಂಪ್ರದಾಯಗಳಲ್ಲಿ ಮುಂದುವರೆದು ಅದೇ ಒಂದು ಜಾತ್ರೆಯಾಯಿತು. ಪ್ರಕೃತಿಯ ಆರಾಧನೆ ದೇವತಾ ಪೂಜೆ, ದೇವರ ಕೃಪೆ, ಮಂತ್ರ, ಮಾಟ, ಸ್ತುತಿ, ಪಠನ, ನೃತ್ಯ, ಭಜನೆ, ಕಾಣಿಕೆ ಮತ್ತು ಬಲಿ ಸಮರ್ಪಣೆ ಮುಂತಾದವುಗಳನ್ನು ಒಳಗೊಂಡು ಒಂದು ಜನಾಂಗದ ವಿವಿಧ ಮುಖದ ಬದುಕಿನ ಸಮಾರಾಧನೆಯಾಗಿರುವುದು. ಜಾತ್ರೆ ವಾರ್ಷಿಕೋತ್ಸವದ ಸಂಪ್ರದಾಯ ಒಂದು ಸಂಕೀರ್ಣ ಸಾಂಸ್ಕೃತಿಕ ಘಟಕವಾಗಿದೆ. ಸಾಮಾನ್ಯವಾಗಿ ಪ್ರತಿ ಕ್ಷೇಮಕ್ಕಾಗಿ ವಿಶೇಷ ಸಂದರ್ಭದಲ್ಲಿ ಆಚರಿಸುವರು. *(ಎಚ್‌ಡಿ)*

ದಂಡಿ: ವಿಶೇಷವಾಗಿ ಹೆಣ್ಣುಮಕ್ಕಳಿಗೆ ಮತ್ತು ದೇವತೆಗಳಿಗೆ ತಲೆ ತುಂಬಾ ಹೂವಿನಿಂದ ಹೆಣೆದು ಮಾಡುವ ಮಾಲೆ. ಮುತ್ತೈದೆಗೆ ಹಾಗೂ ಮುತ್ತೈದೆ ಪ್ರಧಾನವಾದ ಆಚರಣೆಗಳಿಗೆ, ಧಾರ್ಮಿಕ ಕಾರ್ಯಕ್ರಮಗಳಿಗೆ, ದೇವರಿಗೆ, ಮದುವೆ ಮುಂಜಿವೆಯಂಥ ಕಾರ್ಯಗಳಿಗೆ ದಂಡಿ ಬಹುಮುಖ್ಯ ಸಾಧನವಾಗಿದೆ. ಮದುವೆಯನ್ನು ಹಳ್ಳಿಗಳಲ್ಲಿ ದಂಡಿ ಬಲ ಎಂದೇ ಕರೆಯುವುದು ವಾಡಿಕೆ. ದಂಡಿ ಬಲ ಬರುವುದು. ದಂಡಿ ಬಲ ಗಟ್ಟಿಯಾಗಿ ಉಳಿಯುವುದು ಒಬ್ಬೊಬ್ಬ ಹೂಗಾರನ ಕೈಗುಣದಿಂದ ಎನ್ನುವ ನಂಬಿಕೆ ಜನರಲ್ಲಿದೆ. ಇದರಿಂದ ಎಷ್ಟೋ ಹೂಗಾರರು ಪ್ರಸಿದ್ಧಿಯಾಗಿರುವುದು ಇದೆ. 'ಕೊಟ್ಟು ಕೊಂಡರ ಖೊಟ್ಟಿ ಅನುಸೂದು ಕೆಟ್ಟತನಾ ಆತನ ಸುತ್ತ'. ಅಂದರೆ ದಂಡಿಯನ್ನು ವಸ್ತುರೂಪದಂತೆ ವ್ಯಾವಹಾರಿಕವಾಗಿ ಹಣ ಕೊಟ್ಟು ಕೊಳ್ಳಬಾರದು. 'ಖುಷಿ' ಕೊಟ್ಟು ಕೊಳ್ಳಬೇಕು. ಖುಷಿ ಅಂದರೆ ಪ್ರೀತಿಯಿಂದ ತಿಳಿದಷ್ಟು (ಅದರ ಮುಖ್ಯ ಬೆಲೆಗಿಂತ ಸ್ವಲ್ಪ ಜಾಸ್ತಿ) 'ಕೊಡುವುದು' ಅದು ಹಣ, ಅಥವಾ ಕಾಳುಕಡಿ, ಬಟ್ಟೆ ಆಯೇರಿ, ಮುಯ್ಯಿ ಹೀಗೆ ಪ್ರೀತಿ ರೂಪದ ಕಾಣಿಕೆಯಾಗಿರುತ್ತದೆ. ಇದಕ್ಕೆ ಚಾಜ ಎಂದು ಕರೆಯುತ್ತಾರೆ. ಹೀಗೆ ದಂಡಿ ತಂದ ಹೂಗಾರವನ್ನು ಯೋಗ್ಯತಾನುಸಾರ ಬಾಬು ಕೊಟ್ಟು ಗೌರವಿಸಲಾಗುತ್ತದೆ. ಹಣಕೊಟ್ಟು ಖರೀದಿಸಿ ಕಟ್ಟುವ ದಂಡಿಯವರ ಹಣೆಬರಹ ಖೊಟ್ಟಿ ಆಗುತ್ತದೆನ್ನುವುದು ಪ್ರಚಲಿತ ನಂಬಿಕೆ.

ಹೈದ್ರಾಬಾದ್ ಕರ್ನಾಟಕದಲ್ಲಿ ದಂಡಿಯಿಲ್ಲದೆ ಯಾವ ಶುಭಕಾರ್ಯ ಗಳು ನಡೆಯುವುದಿಲ್ಲ. ಗಂಡಸರಿಗೆ ಹಾರ ಹಾಕಿದರೆ ಹೆಂಗಸರಿಗೆ ದಂಡಿ ಕಟ್ಟುವುದು ನೇಮ. ದಂಡಿಯ ಆಕಾರ ನೋಡಲು ಚೇಳಿನಂತೆ ಕಾಣುತ್ತದೆ. ತಲೆಯ ಮುಂಭಾಗಕ್ಕೆ ಬರುವ ಭಾಗ ಅಗಲವಾಗಿ ಇದ್ದು ಹಿಂದಲೆಗೆ ಹೋದಂತೆ ಅದು ಕಿರಿದಾಗುತ್ತ ಬಾಲದಂತೆ ಬೆಳೆಯುತ್ತಾ

ಹೋಗುತ್ತದೆ. ಮುಂದೆ ಕಪಾಳದ ಮೇಲೆ ಜೋತಾಡುವಂತೆ ತೊಂಡಲ (ಗೊಂಡೆ) ಕಟ್ಟಿರುತ್ತಾರೆ. ಮನೆಯಲ್ಲಿ ಮಗಳು ಋತುಮತಿಯಾದಾಗ 16 ರಿಂದ 20 ದಿನಗಳವರೆಗೆ 'ನೆನೆದಂಡೆ' ಎಂದು ಕಟ್ಟುತ್ತಾರೆ. ಮೈನೆರೆದ ಹುಡಿಗಿಗೆ 20 ದಿನ ಸೂತಕ ಮುಗಿದ ಮೇಲೆ ಅವಳನ್ನು ಎಬ್ಬಿಸುವ ದಿನ ಮೊದಲಿಗೆ ಕಟ್ಟುವುದೆ ಸೋದರಮಾವನ ದಂಡಿ. ಲಗ್ನ ಮೂಹೂರ್ತಗಳಲ್ಲಿ ಹೂಗಾರರ ಮನೆಯಿಂದ ತರುವ ಬಾಸಿಂಗ ದಂಡೆಗಳನ್ನು ಗೌರವ ಭಾವನೆಯಿಂದ ಊದಿಸುತ್ತಾ ಬಾರಿಸುತ್ತಾ ತರಲಾಗುತ್ತದೆ. ಹೀಗೆ ತರುವಾಗ ಹೂಗಾರರಿಗೆ ಉಲುಪಿ ನೀಡಲಾಗುತ್ತದೆ. ಹೆಣ್ಣು ದೇವರ ಕಾರ್ಯಗಳಲ್ಲಿ ಮುತ್ತೈದೆಯರಿಗೆ ಉಡಿ ತುಂಬುವ ಸಂದರ್ಭದಲ್ಲಿ ಮದುವೆ, ಮುಂಜಿವೆ, ಸೀಮಂತ, ಇತ್ಯಾದಿ ಸಂದರ್ಭಗಳಲ್ಲಿ ಆರತಿ ಹಿಡಿಯುವ ಕಳಸಗಿತ್ತಿಗೆ ದಂಡಿ ಬೇಕೆಬೇಕು. ಮದುವೆ ಮಂಜಿವೆಯಲ್ಲಿ ಅಕ್ಕ ತಂಗಿಯರು ಕಳಸಗಿತ್ತಿಯರು ಆಗುವುದು ವಾಡಿಕೆ. ಕೆಲವು ಸಮುದಾಯಗಳಲ್ಲಿ ಕಳಸ ಹಿಡಿಯುವವರ 'ದಂಡಿಬಲ'ವನ್ನು ಸ್ವಾಮಿಗಳಿಂದ, ಹೊತ್ತಿಗೆ ಹೇಳುವವರಿಂದ ತೆಗೆಸಿ ಕೇಳಿಸಿ ನೋಡುತ್ತಾರೆ. ದಂಡಿ ಬಲ ಬಂದ ಹೆಣ್ಣು ಮಗಳು ಸಂಬಂಧಿಕರ ಮನೆಯ ಮಂಗಳ ಕಾರ್ಯಗಳಲ್ಲಿ ಆರತಿ ಹಿಡಿಯಲು ಅರ್ಹತೆ ಪಡೆಯುತ್ತಾಳೆ. ಆಕೆ ಮನೆಯಲ್ಲಿ ಎಲ್ಲರ ಗೌರವಗಳಿಗೂ ಪಾತ್ರಳಾಗುತ್ತಾಳೆ. ಪ್ರತಿಯೊಂದು ಮಂಗಳ ಕೆಲಸಗಳನ್ನು ಪೂಜೆ ಪುನಸ್ಕಾರಗಳನ್ನು ಅವಳಿಂದಲೇ ಅವಳ ಕಣ್ಗಾವಲಿನಲ್ಲೇ ಮಾಡಲಾಗುತ್ತದೆ. ಇದು ಅಲ್ಲದೇ ಹೈದ್ರಾಬಾದ ಕರ್ನಾಟದಲ್ಲಿ ವಿಶೇಷವಾಗಿ ಸೀಗೆ ಹುಣ್ಣಿಮೆ, ಗೌರಿಹುಣ್ಣಿಮೆ ಬಾಲಮುತ್ತೈದೆಯರ ಹಬ್ಬವಾಗಿದೆ. ಸೀಗೆ–ಗೌರಿಗೆ ಆರತಿ ಬೆಳಗಲು ಹೋಗುವ ಹುಡಿಗೆಯರು ವಿವಿಧ ಆಕಾರದ ದಂಡಿಗಳನ್ನು ಕಟ್ಟಿಕೊಂಡಿರುತ್ತಾರೆ. ದಂಡಿಯೆ ಇಂಥ ಹಬ್ಬದ ಜೀವಾಳ. ಚುರುಮುರಿಯಿಂದ ಪೋಣಿಸಿ ಮಾಡಿದ ದಂಡಿ ಬಹಳ ದಿನಗಳವರೆಗೆ ಬರುತ್ತದೆಂದು ಈ ಹಬ್ಬಗಳಲ್ಲಿ ಚುರುಮುರಿ ದಂಡಿಗಳನ್ನು ಮಾಡುತ್ತಾರೆ. ದಂಡಿಗಳಲ್ಲಿ ದೇವರ ದಂಡಿ (ಲಕ್ಷ್ಮೀದಂಡಿ) ಮುತ್ತೈದೆಯರ ದಂಡಿ, ಕಳಸಗಿತ್ತಿ ದಂಡಿ, ಸೀಗೆ–ಗೌರಿ ದಂಡಿ, ಎಂದು ಇತ್ಯಾದಿ ಹೆಸರುಗಳಿವೆ. ಈ ಎಲ್ಲವುಗಳಲ್ಲಿ ಕಳಸಗಿತ್ತಿ ದಂಡೆಗೆ ಹೆಚ್ಚಿನ ಪ್ರಾಮುಖ್ಯತೆ ಇರುವುದು ವಿಶೇಷ. ಆಕಾಶದಲ್ಲಿ ರಾತ್ರಿವೇಳೆ ಕಾಣುವ ನಕ್ಷತ್ರಗಳ ಸಮೂಹವೊಂದನ್ನು ಚನ್ನವ್ವನ ದಂಡಿ, ಚನಮೀರಿ ದಂಡೆ ಎಂದು ಕರೆಯಲಾಗುತ್ತದೆ.

ಮದುವೆಗೆ ಬಳಸುವ ದಂಡಿಗಳಲ್ಲಿ ಎರಡು ವಿಧ ಒಂದು ತಲೆದಂಡಿ ಇನ್ನೊಂದು ಹಣೆದಂಡಿ. ಮದುಮಗಳಿಗೆ ಹಾಕುವುದು ತಲೆದಂಡಿ. ಇದರಲ್ಲಿ ಹಣೆಯ ಎರಡು ಬದಿಗೆ ತೊಂಡಲುಗಳು ಬರುತ್ತವೆ. ತಲೆ ತುಂಬ ಹೂ ಹೆಣೆದಿರುತ್ತಾರೆ ಮದುಮಗಳ ಹಿಂದೆ ಸುರಗಿಯಲ್ಲಿ ಕೂಡುವವರಿಗೆ ಹಣೆ ದಂಡೆ ಹಾಕುತ್ತಾರೆ. ಹಾಗೆ ಸತ್ತ ಹೆಣ್ಣು ಮಕ್ಕಳಿಗೆ ಹಾಕುವ ದಂಡಿಗೆ ಮನೆದಂಡೆ' ಎಂದು ಕರೆಯುತ್ತಾರೆ.

(ಶ್ರೀಜಿ)

ದನಗಾಹಿ: ಪಶುಪಾಲನೆ ನಮ್ಮ ಪೂರ್ವಜರ ಆರ್ಥಿಕಾಭಿವೃದ್ಧಿಯ ಪ್ರಮುಖ ಭಾಗವಾಗಿತ್ತು. ಆಹಾರ ಸಂಗ್ರಹಣೆಗಾಗಿ ಅಲೆಮಾರಿಗಳಾಗಿ ತಿರುಗುವ ಹಂತದ ಆನಂತರ ಮತ್ತು ಕೃಷಿಯನ್ನು ಕಂಡು ಹಿಡಿಯುವ ಹಂತಕ್ಕಿಂತ ಮೊದಲೇ ಪಶುಪಾಲನೆಯನ್ನು ಅವರು ಅರಿತಿದ್ದರು. ಸಿಂಧೂ ನಾಗರೀಕತೆಯಿಂದಲೇ ಇದಕ್ಕೆ ಪುರಾವೆಗಳು ಸಿಕ್ಕುತ್ತವೆ. 'ದನ' ದಿಂದಲೇ ಧನ ಎಂಬ ಪದದ ವ್ಯುತ್ಪತ್ತಿಯಾಯಿತೆಂದು ಭಾಷಾ ವಿಜ್ಞಾನಿಗಳು ಕೂಡ ಒಪ್ಪುತ್ತಾರೆ.

ತಮ್ಮಂತೆಯೇ ಇರುವ ಸಸ್ತನಿಯ ಹಾಲು ಮತ್ತದರ ಉಪ ಉತ್ಪಾದನೆಗಳು ಜೊತೆಗೆ ಬೇಕೆಂದಾಗ ಸಿಗುವ ಸುಲಭ ರೀತಿಯ ಮಾಂಸದ ಬಳಕೆಗಾಗಿ ಅವರು ದನ ಸಾಕುವುದನ್ನು ರೂಢಿಸಿಕೊಂಡರು.

ಕ್ರಿ.ಶ. ಮೊದಲ ಅಥವಾ ಎರಡನೆಯ ಶತಮಾನದ್ದೆಂದು ಗುರುತಿಸಲಾದ. ಚಂದ್ರವಳ್ಳಿಯಲ್ಲಿ ದೊರೆತ ಶಾತವಹನರ ಕಾಲದ ನಾಣ್ಯವೊಂದರ ಮುಂಭಾಗದಲ್ಲಿ ಎತ್ತಿನ ಚಿತ್ರವಿದ್ದು ಹಿಂಭಾಗದಲ್ಲಿ ನಂದಿಯ ಚಿತ್ರವಿದೆ. ಪ್ರಾಚೀನ ಕರ್ನಾಟಕದಲ್ಲಿ ದನಗಳು ರಾಜ್ಯದ ಮೂಲಾದಾಯವಾಗಿದ್ದುವೆಂದು ಇದು ತಿಳಿಸುತ್ತದೆ. ಪ್ರತಿಯೊಬ್ಬ ರಾಜರಲ್ಲೂ ಗೋಮಂಡಲವೆಂಬ ಪ್ರತ್ಯೇಕ ಇಲಾಖೆಯಿರುವುದು ಕಂಡು ಬರುತ್ತದೆ. ವಡ್ಡಾರಾಧನೆಯಲ್ಲಿ ಗೋಮಂಡಲವೆಂಬುದು ರಾಜ್ಯದ ಪ್ರಮುಖ ಭಾಗವಾಗಿತ್ತೆಂದು ತಿಳಿದು ಬರುತ್ತದೆ. ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಅರಮನೆಯ ಗೋಶಾಲೆಯ ಮುಖ್ಯಸ್ಥನನ್ನು ಗೋಮಂಡಲಾಧ್ಯಕ್ಷ ಎಂದು ಕರೆಯಲಾಗಿದೆ. ವಿಜ್ಞಾನೇಶ್ವರ ಮಿತಾಕ್ಷರದಲ್ಲಿ ಗ್ರಾಮಗಳಲ್ಲಿ ಶಾತವಾಹನರು, ಶಕ ಕ್ಷತ್ರಪರು, ಕದಂಬರ ದಾಖಲೆಗಳಲ್ಲಿ 'ಗೋಸಾಸ' ಶಿಲ್ಪ (ಗೋ ಸಹಸ್ರ ದಾನಶಿಲ್ಪ) ಗಳು ದಕ್ಷಿಣ ಭಾರತದಾದ್ಯಂತ ಕಂಡುಬಂದಿವೆ. ಗೋಸಾನಿ ಶಿಲ್ಪಗಳಿರುವ ಕಡೆಗಳಲ್ಲೆಲ್ಲ 'ತುರುಗೋಳ್' ಕಾಳಗದ ವೀರಗಲ್ಲುಗಳು ದೊರಕುತ್ತವೆ. ಅಂದರೆ ದನಗಳು ನಮ್ಮ ಪೂರ್ವಜರ ಚರಾಸ್ತಿಯ ಮುಖ್ಯ ಭಾಗವಾಗಿದ್ದವೆಂಬುದು ಗಮನೀಯವಾಗುತ್ತದೆ.

ದನಗಾಹಿಗಳಲ್ಲಿ ಎರಡು ವಿಧ. ಪರಂಪರಾಗತವಾಗಿ ದನಗಳನ್ನು ಸಾಕಿ ಅವುಗಳ ಉತ್ಪನ್ನದಿಂದಲೇ ಬದುಕು ಸಾಗಿಸುವವರು. ಇವರನ್ನು ಗೌಳಿಗರೆಂದು ಕರೆಯುತ್ತಾರೆ. ಇವರಲ್ಲದೆ ಕೃಷಿಗೆ ಪೂರಕವಾಗಿ ರೈತರು ತಮ್ಮ ಮನೆಯಲ್ಲಿ ಸಾಕಿದ ದನಗಳನ್ನು ಮೇಯಿಸಿ ಅದರ ಬದಲಿಗೆ ಕೂಲಿ ಪಡೆದು ಬದುಕುವವರದು ಇನ್ನೊಂದು ರೀತಿ. ಇವರನ್ನೇ ದನಗಾಹಿಗಳೆಂದು ಕರೆಯುತ್ತಾರೆ. ಹೀಗೆ ಪಡೆಯುವ ಕೂಲಿಗೆ 'ಕಾಕೂಲಿ' ಎಂದು ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ. 12ನೆಯ ಶತಮಾನದ ವಚನಕಾರ ತುರುಗಾಹಿ ರಾಮಣ್ಣ ಇದೇ ವೃತ್ತಿಯವನು. ದನಕಾಯುವುದಕ್ಕಾಗಿ ನಿಗದಿಪಡಿಸಿದ ಕೂಲಿಯನ್ನು ತನ್ನ ವಚನಗಳಲ್ಲಿ ಉಲ್ಲೇಖಿಸಿದ್ದಾನೆ. ಹಸುವಿಗೆ ಒಂದು ಭಾಗ (ಒಂದು ಹಣದ ಕಾಲುಭಾಗ), ಎತ್ತಿಂಗ ಹಣವಡ್ಡ (ಏಳು ಆಣೆ), ಕರುವಿಂಗೆ ಮೂರು ಹಣ (ಒಂದು ಹಣ=ನಾಲ್ಕು ಹಾಗ) ಕೂಲಿಯಿತ್ತೆಂದು ಹೇಳುತ್ತಾನೆ.

ದನಗಳನ್ನು ನೋಡಿಕೊಳ್ಳಲು ಇರುವ ಗೋಪಾಲಕನಿಗೆ ಹಾಲು ನೀಡುವ ಹತ್ತು ಹಸು ಮತ್ತು 3000 ಖಂಡುಗ ಭತ್ತವನ್ನು ವೇತನವಾಗಿ ನೀಡಲಾಗುತ್ತಿತ್ತೆಂದು ವಡ್ಡಾರಾಧನೆ ತಿಳಿಸುತ್ತದೆ. ಹಾಲು ಕೊಡುವ ಹಸುವಿನ ಮೇಲೆ 'ಹಾಲಾವು' ಎಂಬ

ತೆರಿಗೆಯನ್ನು ಪ್ರಭುತ್ವ ವಿಧಿಸುತ್ತಿತ್ತೆಂದು ತಿಳಿದುಬರುತ್ತದೆ. ದನಗಳನ್ನು ಕಟ್ಟುವ ಸ್ಥಳದ ಮೇಲಿನ ತೆರಿಗೆಗೆ 'ನೆಲಮೆಟ್ಟು' ಎಂದು ಕರೆಯುತ್ತಿದ್ದರು.

ದನಗಾಹಿಗಳು ಗುಡ್ಡಗಾಡುಗಳಲ್ಲಿ ಮೇಯುವ ದನಗಳನ್ನು ಹದ್ದುಬಸ್ತಿನಲ್ಲಿಡಲು 'ಕಾವಕಟ್ಟಿಗೆ' ಯನ್ನು ಬಳಸುತ್ತಿದ್ದರು. ಅಲ್ಲದೆ ಅವುಗಳು ಅತ್ತಿತ್ತ ಹೋಗದಂತೆ 'ಪಿಳ್ಳಂಗೋವಿ' ಯನ್ನು ನುಡಿಸಿ ಇಂದು ಆಧುನಿಕರು ಸಾಕು ಪ್ರಾಣಿಗಳಿಗೆ ನೀಡುವ ಸಂಗೀತ ಚಿಕಿತ್ಸೆ ನೀಡುತ್ತಿದ್ದರು. ದನಗಳನ್ನು ಕಾಯುವಾಗ ಅವುಗಳನ್ನು ಹುಲಿ, ತೋಳ, ನರಿ, ಕಿರುಬ ಮುಂತಾದ ಪ್ರಾಣಿಗಳು, ದನಗಳನ್ನು ಎಳದೊಯ್ಯದಂತೆ ಜಾಗ್ರತೆ ವಹಿಸಬೇಕಾಗುವುದರಿಂದ ದನಗಾಹಿಗಳು ಗುಂಪು ಗುಂಪಾಗಿ ಜೊತೆ ಜೊತೆಯಾಗಿ ದನಗಳನ್ನು ಮೇಯಿಸುತ್ತಿದ್ದರು.

12ನೆಯ ಶತಮಾನದ ತೆಲುಗೇಶ ಮಸಣಯ್ಯನೆಂಬ ಶರಣನು ದನಕಾಯುವವರ ಚಿತ್ರವನ್ನು ನೀಡುತ್ತಾನೆ. ಅವನು ಹಳದಿ ವಸ್ತ್ರವನ್ನು ಧರಿಸುತ್ತಿದ್ದನು. ಕಿವಿಗೆ ಬಳಪದ ಓಲೆ, ಕೈಯಲ್ಲಿ ದಂಡ, ತಲೆಗೆ ಗುಲಗುಂಜಿ ದಂಡೆ ಕಟ್ಟಿ, ತುತ್ತುರಿತುರಿಯೆಂದು ಕೊಳಲು ನುಡಿಸುತ್ತಿದ್ದನೆಂದು ಹೇಳುತ್ತಾನೆ. ಬೇರೆ ಬೇರೆ ಬಣ್ಣದ ದನಗಳನ್ನು ಗುರುತಿಸುವುದಷ್ಟೇ ಅಲ್ಲದೆ ಅವುಗಳನ್ನು ಗುರುತಿಸಲು ದನಗಾಹಿಗಳು ತಮಗಿಷ್ಟವಾದ ಹೆಸರಿನಿಂದ ಕರೆಯುತ್ತಿದ್ದರು. ಮತ್ತು ಅವು ಆ ಹೆಸರು ಕೇಳಿದೊಡನೆ ಒಡೆಯನ ಆಜ್ಞೆಯನ್ನು ಪಾಲಿಸುತ್ತಿದ್ದುವು.

ಇನ್ನು ಪರಂಪರಾಗತವಾಗಿ ದನಗಳನ್ನು ಕಾಯ್ದು ಅವುಗಳ ಉತ್ಪನ್ನದಿಂದಲೇ ಬದುಕುವವರನ್ನು ಗೌಳಿಗರೆಂದು, ಗೊಲ್ಲರೆಂದು ಕರೆಯುತ್ತಾರೆ. ಗೌಳಿಗರಲ್ಲಿ ಧಂಗಾ ಗೌಳಿ ಮತ್ತು ಕಟ್ಟೆ ಗೌಳಿಗರೆಂದು ಎರಡು ವಿಧ. ಮಹಾರಾಷ್ಟ್ರ ಮೂಲಕ ಇವರು ಕರ್ನಾಟಕದ ಬೇರೆ ಬೇರೆ ಭಾಗಗಳಿಗೆ ಒಂದೆರಡು ಶತಮಾನಗಳ ಹಿಂದೆ ಬಂದು ನೆಲೆಸಿದವರೆಂದು ತಿಳಿದುಬರುತ್ತದೆ. ಇವರ ಕುಲ ಗೋತ್ರಗಳನ್ನು ಕುಳಿಗಳೆಂದು ಕರೆಯುತ್ತಾರೆ. 28ಕ್ಕೂ ಹೆಚ್ಚು ಕುಳಿಗಳನ್ನು ಇದುವರೆಗೆ ಗುರುತಿಸಲಾಗಿದೆ. ಮಹಾರಾಷ್ಟ್ರದ 'ಧನಗರ'ರ ಸಂಪ್ರದಾಯಗಳಿಗೂ ಇವರ ಸಂಪ್ರದಾಯಗಳಿಗೂ ಹೆಚ್ಚು ಸಾಮ್ಯವಿದೆ. ಹೈದ್ರಾಬಾದ ಕರ್ನಾಟಕದ ಗಡಿಭಾಗಗಳಲ್ಲಿ ಇವರು ಹೆಚ್ಚಾಗಿದ್ದಾರೆ. *(ಎಸ್‌ಆರ್)*

ದಲ್ಲಾಳಿಗಳು: ವ್ಯಾಪಾರ ವಹಿವಾಟು ಮಾಡುವಾಗ ಒಬ್ಬರಿಂದ ಪಡೆದು ಮತ್ತೊಬ್ಬರಿಗೆ ಕೊಡುವಾಗ ಕೊಡು–ಕೊಳ್ಳುವಿಕೆಯ ನಡುವೆ ಲಾಭ ಪಡೆಯುವ ಮಧ್ಯವರ್ತಿ ವರ್ತಕ. ದಲಾಲ>ದಲಾಳಿ>ದಲ್ಲಾಳಿ ಎಂದು ಕರೆಯುವುದುಂಟು. ಹಳ್ಳಿಗಳಲ್ಲಿ ಒಕ್ಕಲಿಗರ ದವಸ–ಧಾನ್ಯಗಳನ್ನು ಮಾರುವಾಗ, ಕಾಯಿಪಲ್ಯಾ ತರಕಾರಿಗಳನ್ನು ವಿತರಿಸುವಾಗ, ದನ–ಕರು, ಕುರಿ–ಕೋಳಿಗಳನ್ನು ಮಾರುವಾಗ ಮತ್ತು ಪಟ್ಟಣಗಳಲ್ಲಿ ವ್ಯಾಪಾರಿ ಕ್ಷೇತ್ರದಲ್ಲಿ ಪ್ರತಿಯೊಂದು ಸರಕು–ಸಾಮಾನುಗಳನ್ನು ತರಿಸಿ ಕೊಡುವಾಗ ತಮ್ಮ ಚಾಲಾಕಿತನದಿಂದ ಪ್ರತಿಫಲ ಪಡೆಯುವ ವ್ಯಕ್ತಿಗಳೇ ಇವರಾಗಿರುತ್ತಾರೆ. ಇವರಿಗೆ ಇತ್ತೀಚೆಗೆ ಕಮಿಶನ್ ಏಜೆಂಟರೆಂದು, ಬ್ರೋಕರ್ ಎಂದು ಕರೆಯಲಾಗುತ್ತಿದೆ. *(ಕೆಜಿಪಿ)*


ದಾವಣಿ [ದವಣ]: ಹೈದ್ರಾಬಾದ್ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಸ್ತ್ರೀಯರು, ತಲೆಯ ಮೇಲೆ ಹೊದ್ದುಕೊಳ್ಳಲು ಬಳಸುವ ವಸ್ತ್ರ. ಉತ್ತರ ಭಾರತದ ರಾಜ್ಯಗಳಾದ ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರದ ಸ್ತ್ರೀಯರು ತಲೆಯಿಂದ ಪಾದದವರೆಗೂ ಇಳಿಬೀಳುವಂತೆ ಹಾಕಿಕೊಳ್ಳುವ ವಸ್ತ್ರವಾಗಿದ್ದು, 'ದಾವಣಿ' ಉತ್ತರದ ಕಡೆಯಿಂದ ದಕ್ಷಿಣಕ್ಕೆ ಬಂದಿರಬಹುದಾಗಿದೆ. ದಾವಣಿಗೆ ಲಂಬಾಣಿ ಭಾಷೆಯಲ್ಲಿ ಛಾಂಟಿಯಾ ಎಂದು ಕರೆಯಲಾಗಿದೆ. ಲಂಬಾಣಿ ಸ್ತ್ರೀಯರಲ್ಲಿ ದಾವಣಿ ಅತ್ಯಂತ ಮಹತ್ವವನ್ನು ಹೊಂದಿದೆ. ಲಂಬಾಣಿ ಸ್ತ್ರೀಯರು ದಿನ ಪೂರ್ತಿ ಬಹಳ ಜಾಗರೂಕತೆಯಿಂದ ದಾವಣಿ ಹೊದ್ದುಕೊಂಡಿರಬೇಕು.

ಲಂಬಾಣಿ ಜನಾಂಗದಲ್ಲಿ ಹಿರಿಯರಿದ್ದಾಗ ಯಾವುದೇ ಕಾರಣಕ್ಕೂ ತಲೆಯ ಮೇಲಿನ ಸೆರಗು ಜಾರುವಂತಿಲ್ಲ. ದಾವಣಿ ಏನಾದರೂ ಜಾರಿದರೆ ದಂಡ ತೆರಬೇಕಾಗುತ್ತದೆ. ಈ ವಸ್ತ್ರವಿಲ್ಲದಿದ್ದರೆ ಸ್ತ್ರೀಯರಿಗೆ ಇವರಲ್ಲಿ ಪ್ರಾಶಸ್ತ್ಯ ಕೊಡುವುದಿಲ್ಲ. ಲಗ್ನ ನಿಶ್ಚಯವಾದ ಮಹಿಳೆ ಗಂಡಿನ ಮನೆಯವರು ಬಂದಾಗ ತಲೆಯ ಮೇಲು ಮುಖ ಮುಚ್ಚುವಂತೆ ದಾವಣಿ ಮುಸುಕು ಹಾಕಿಕೊಂಡಿರಬೇಕು. ಲಂಬಾಣಿ ಸಮುದಾಯದ ವಧು ತನ್ನ ಸಮಾಜ ಮತ್ತು ಹಿರಿಯರು ಕಿರಿಯರಿಗೆ ನೀಡುವ ಗೌರವವಾಗಿರುತ್ತದೆ. ಇದರ ಪ್ರಯೋಜನ ಅಂದರೆ ಮುಂದು ಭಾಗವನ್ನು ಮಾತ್ರ ಮುಚ್ಚಿದಂತಿರುವ ಕುಪ್ಪಸದಿಂದ ತೆರವಾಗಿರುವ ಬೆನ್ನಿನ ಭಾಗವನ್ನು ಸಂಪೂರ್ಣ ಮರೆಮಾಚಿರುತ್ತದೆ. ಒಟ್ಟಾರೆಯಾಗಿ ಲಂಬಾಣಿ ಸಮುದಾಯದ ಸ್ತ್ರೀಯರಲ್ಲಿ ಇದೊಂದು ಅಲಂಕರಣ ವಸ್ತ್ರವಾಗಿ, ಮಾನಮುಚ್ಚುವ ಅರಿವೆಯಾಗಿ, ಹಿರಿಯರಿಗೆ ತೋರುವ ಗೌರವದ ಸಂಕೇತವಾಗಿ ಇಡೀ ಸಮುದಾಯದವರನ್ನು ಪ್ರತಿನಿಧಿಸುತ್ತದೆ.

(ಎಚ್‌ಕೆಎಸ್)

ದಾ

ದಾಸ ಸಂಪ್ರದಾಯ: ತಮ್ಮನ್ನು ಶ್ರೀಹರಿಯ ದಾಸ, ಕಿಂಕರ ಎಂದು ಸರ್ವಾರ್ಪಣ ಮನೋಭಾವ ಹೊಂದಿದ ಹರಿಭಕ್ತರು ತಮ್ಮ ಜೀವನ ಶೈಲಿಯಲ್ಲಿ ಹೊಂದಿದ ವಿಧಿ–ವಿಧಾನಗಳನ್ನು ದಾಸ ಸಂಪ್ರದಾಯದಲ್ಲಿ ಹರಿ ಸರ್ವೋತ್ತಮ ವಾಯು ಜೀವೋತ್ತಮ, ದಾಸೋಹಂ ಭಾವ, ಕರ್ಮ ಸಮರ್ಪಣೆ, ಫಲ ತ್ಯಾಗ, ಅಲಂಭಾವ, ಸಹನೆ, ಈಶ–ಜೀವ ಮುಂತಾದ ದ್ವೈತ ಭಾವದ ಉಪಾಸನೆಯಿರುತ್ತದೆ. ಶ್ರೀ ಮಧ್ವಾಚಾರ್ಯರು ಪುನಃ ಪ್ರತಿಷ್ಠಾಪಿಸಿದ ದ್ವೈತ ಸಿದ್ಧಾಂತಗಳನ್ನು ಅಚಲವಾದ ವಿಶ್ವಾಸದೊಡನೆ ಅನುಸಂಧಾನ ಗೈಯುತ್ತಾರೆ. ದ್ವೈತ ಎಂದರೆ ಎರಡು ಎಂದರ್ಥ. ಈಶನಲ್ಲಿ ಜೀವ ಐಕ್ಯನಾಗುವುದಿಲ್ಲ. ಅನಾದಿ ಕಾಲದಿಂದ ಅನಾದಿ ಕಾಲದವರೆಗೆ ಈಶ ಈಶನೆ; ಜೀವ ಜೀವನೆ. ದಾಸನಾದವನ ಜೀವನ ಧ್ಯೇಯ ಆತ್ಮ ಸಾಕ್ಷಾತ್ಕಾರ ಮತ್ತು



ದಾಸಯ್ಯ

ಪರಮಾತ್ಮನ ಸಾಕ್ಷಾತ್ಕಾರ. ಇದಕ್ಕಾಗಿ ದಾಸ ದೀಕ್ಷೆ ಪಡೆದು, ಅಂಕಿತವನ್ನು ಹೊಂದಿ, ನವ ವಿಧ ಭಕ್ತಿ ಪ್ರಕಾರಗಳನ್ನು ತಿಳಿದು, ಜ್ಞಾನ, ಭಕ್ತಿ, ವೈರಾಗ್ಯಗಳಿಂದ, ಶ್ರವಣ, ಮನನ, ನಿಧಿಧ್ಯಾಸನಗಳಿಂದ ಪರಮಾತ್ಮನ ಮಹಾತ್ಮ್ಯೆಯ ಜ್ಞಾನದೊಡನೆ ಭಕ್ತಿಯೋಗದ ಅನುಸರಣೆ ಈ ಸಂಪ್ರದಾಯದಲ್ಲಿದೆ. ಅಸ್ವತಂತ್ರನಾದ, ಅಲ್ಪನೆನಿಸಿದ, ಅಣುವಾದ ಜೀವನ ಅಮರ ರೂಪಿಯಾದ, ಆನಂದ ರೂಪಿಯಾದ ಆತ್ಮನನ್ನು ಹೊಂದಿದ್ದಾನೆ. ಪುನರ್ಜನ್ಮಕ್ಕೆ, ಜನನ-ಮರಣಕ್ಕೆ, ಸುಖ ದುಃಖಗಳಿಗೆ ಬದ್ಧನಾಗಿದ್ದಾನೆ. ಆದರೆ ಪರಮಾತ್ಮನು ಸರ್ವಶಕ್ತ. ಸಕಲ ದೇವತೆಗಳಲ್ಲಿ ಆಯಾ ನಾಮದಿಂದ ಕರೆಯಿಸಿಕೊಂಡು ತಾನೇ ಅವರವರ ಕಾರ್ಯವನ್ನು ಗೈಯುವವ. ಶ್ರೀಹರಿ ಸಾಕಾರರೂಪಿ. ಅನಂತರೂಪಗಳಿಂದ ಆಗುವಂತೆ ಪರಮಾತ್ಮನ ಮೂಲ ರೂಪಕ್ಕೂ ಅವತಾರ ರೂಪಗಳಿಗೆ ಶಕ್ತಿ, ಸ್ವರೂಪದಲ್ಲಿ ವ್ಯತ್ಯಾಸವಿಲ್ಲ. ವೈಷಮ್ಯ, ನೈರ್ಘಣ್ಯಗಳು ಆತನಲ್ಲಿಲ್ಲ. ತ್ರಿವಿಧ ಜೀವರ (ಸಾತ್ವಿಕ, ರಾಜಸ, ತಾಮಸ) ಸಾಧನೆಯಂತೆ ಗತಿ ನೀಡುತ್ತಾನೆಯೆ ಹೊರತು ಯಾರಲ್ಲಿಯೂ ಪಕ್ಷಪಾತ ಅಥವಾ ದ್ವೇಷವಿಲ್ಲ. ಪರಮಾತ್ಮ ಮೋಕ್ಷ ನೀಡುವವ. ಸ್ವಗತ ಭೇದ ವಿವರ್ಜಿತ ಅಂದರೆ ಆತನಲ್ಲಿರುವ ಗುಣ, ಕ್ರಿಯಾದಿಗಳಲ್ಲಿ ಭೇದವಿಲ್ಲ. ಸರ್ವತ್ರ ವ್ಯಾಪಿಯಾಗಿ ಬ್ರಹ್ಮಾಂಡದ ಒಳಹೊರಗೆ ವ್ಯಾಪಿಸಿ ಸೃಷ್ಟಿ ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ ಮತ್ತು ಮೋಕ್ಷಗಳೆಂಬ ಎಂಟು ವಿಧದ ಕರ್ತುತ್ವವುಳ್ಳವನು. ಸಕಲ ಜೀವಿಗಳಲ್ಲಿ ಬಿಂಬ ರೂಪದಿಂದಿರುವವನು. ಹೀಗೆ ಪರಮಾತ್ಮನನ್ನು, ಜೀವನನ್ನು, ಜಗತ್ತನ್ನು ಕುರಿತ ತತ್ವಜ್ಞಾನದ ಅರಿವಿನೊಡನೆ ದಾಸನು ಸಾಧನೆಗೆ ತೊಡಗಿರುತ್ತಾನೆ. ದಾಸ ಸಂಪ್ರದಾಯದಲ್ಲಿ ಅನುಸರಿಸುವ ಪ್ರಮುಖ ಪ್ರಮೇಯಗಳನ್ನು ನವರತ್ನ ಮಾಲೆಯೆಂದು ಕರೆಯಲಾಗುತ್ತದೆ. ಅವುಗಳೆಂದರೆ: 1. ಶ್ರೀ ಹರಿಯು ಸರ್ವೋತ್ತಮ, 2. ಜಗತ್ತು ಸತ್ಯ, 3. ಪಂಚ ಭೇದಗಳು, 4. ಜೀವರು ಹರಿಯ ಅನುಚರರು, 5. ತಾರತಮ್ಯ, 6. ಮೋಕ್ಷ, 7. ಮೋಕ್ಷಸಾಧನೆಯಲ್ಲಿ ಜ್ಞಾನ, ಭಕ್ತಿ, ವೈರಾಗ್ಯಗಳು, 8. ಪ್ರತ್ಯಕ್ಷ, ಅನುಮಾನ, ಆಗಮಗಳೆಂದು ಪ್ರಮಾಣಗಳು ಮೂರು ವಿಧ, 9. ಶ್ರೀಹರಿ ವೇದಗಳಿಂದ ಮಾತ್ರ ತಿಳಿಯಲ್ಪಡುವವನು.

ಈ ಸಂಪ್ರದಾಯದಲ್ಲಿ ಕಂಡುಬರುವ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ, ಆಯಾಮಗಳು ಭಾರತದ ಸನಾತನ, ಆರ್ಷೇಯ ಸಂಸ್ಕೃತಿಯ ಸಾರವನ್ನು ಒಳಗೊಂಡಿವೆ.

(ಬಿಎಂ)

ದಾಸರಾಟ: ಜಾತಿ ಹಾಗೂ ವೃತ್ತಿಯಿಂದ ದಾಸರಾಗಿದ್ದವರಲ್ಲಿ ಬಾಳಿ ಬಂದಂತಹ ಕಲೆ ಒಂದು ಜನಪದ ರೂಪಕ. ದಾಸರೆಂದರೆ ಸಾಮಾನ್ಯವಾಗಿ ಎಲ್ಲರಿಗೂ ನೆನಪಿಗೆ ಬರುವುದು ಕನಕ-ಪುರಂದರಾದಿ ಹರಿಕೀರ್ತನೆಗಳನ್ನು ಹಾಡಿದವರು. ಕನ್ನಡದಲ್ಲಿ ಭಕ್ತಿಗೀತೆಗಳನ್ನು ಹುಲುಸಾಗಿ ಬೆಳೆಸಿ, ಹರಿಭಕ್ತಿಸುಧೆಯನ್ನು ಮನೆ ಮನೆಗೂ ಮನಮನಕ್ಕೂ ಮುಟ್ಟಿಸಿದ ಈ ಸಂತರಿಗೆ 'ದಾಸ' ಎಂಬ ಹೆಸರು ಆಧ್ಯಾತ್ಮಿಕ ಅರ್ಥದಲ್ಲಿ ಬಂದಂತಹದು. ಇವರಿಗೂ 'ದಾಸರ ಆಟ'ಕ್ಕೂ ನೇರ ಸಂಬಂಧವಿಲ್ಲ. ಪರೋಕ್ಷವಾಗಿ ದಾಸರ ಹಾಡುಗಳಲ್ಲಿರುವ ಮಧುರ ಭಕ್ತಿ ವೈಷ್ಣವ ಪರ ಆಟಗಳನ್ನು ಪುಷ್ಟಿಗೊಳಿಸಿದೆ. ಕೃಷ್ಣ ಪಾರಿಜಾತದಲ್ಲಿ ಪುರಂದರ ದಾಸರ ಹಾಡುಗಳನ್ನು ನೇರವಾಗಿಯೇ ಬಳಸಿಕೊಳ್ಳುತ್ತಿದ್ದುದು ಸರ್ವವಿದಿತ. ಆದರೆ ಪುರಂದರಾದಿ ದಾಸರಾಗಲಿ ಆ ಪಂಗಡದವರಾಗಲಿ ವೇಷ ತೊಟ್ಟು ಆಟವಾಡಿದ ನಿದರ್ಶನವಿಲ್ಲ. ಹಾಡುಗಳಂತೆ ಆಟದ ಒಂದು ಪರಂಪರೆಯನ್ನು ಅವರು ಬೆಳೆಸಿಕೊಂಡು ಬಂದರೆನ್ನಲು ಪ್ರಮಾಣಗಳಿಲ್ಲ.

ಉತ್ತರ ಕರ್ನಾಟಕದಲ್ಲಿ ದಾಸರೆಂಬವರು ಬ್ರಾಹ್ಮಣರಲ್ಲಿದ್ದಂತೆ ಕ್ಷತ್ರಿಯ ಶೂದ್ರರಲ್ಲೂ ಇದ್ದಾರೆ. ಈ ಬ್ರಾಹ್ಮಣೇತರ ವರ್ಣದ ದಾಸರೇ ಆಟವನ್ನು ಆಡುವ ದಾಸರು. ಏಕತಾರಿ, ದಮ್ಮಡಿ, ಕೈಚಿಟಿಕಿಗಳನ್ನು ಹಿಡಿದು ಹಾಡುತ್ತ ಮನೆ ಮನೆ ತಿರುಗಿ, ಸುಗ್ಗಿಯಲ್ಲಿ ಕಣಗಳಿಗೆ ಅಡ್ಡಾಡಿ, ಗೋಪಾಳ ಬುಟ್ಟಿಯಲ್ಲಿ ಭಿಕ್ಷೆ ಎತ್ತಿ ಉಪಜೀವನ ಸಾಗಿಸುವ ದಾಸ ಪಂಗಡವನ್ನು ಗೋಪಾಳ ಬುಟ್ಟಿಯ ದಾಸರು.

ದಾಸ ಜನಾಂಗದ ಮತ್ತು ಅವರ ಆಟದ ಚರಿತ್ರೆ ಎಷ್ಟು ಹಿಂದೆ ಹೋಗುತ್ತದೆಂದು ಖಚಿತವಾಗಿ ಹೇಳಲು ಆಧಾರ ಸಾಮಗ್ರಿ ಇನ್ನೂ ಒದಗಿ ಬರಬೇಕಾಗಿದೆ. ದೇವದಾಸಿ ಜನ ಬಹುಕಾಲದಿಂದ ವೈಷ್ಣವ ದೇವಾಲಯಗಳ ಪರಿಚಾಲಕ ವರ್ಗಕ್ಕೆ ಸೇರಿದವರಾಗಿರಲು

ಸಾಕು. ನಮ್ಮ ಪ್ರಾಚೀನ ಶಾಸನಗಳಲ್ಲಿ ದೇವರುಗಳ 'ಅಂಗಭೋಗ' ಹಾಗೂ 'ರಂಗಭೋಗ'ಕ್ಕಾಗಿ ನಿಯುಕ್ತರಾದ ಜನರಿದ್ದಂತೆಯೂ ಆ ಉದ್ದೇಶಕ್ಕಾಗಿ ದತ್ತಿಗಳನ್ನು ಬಿಟ್ಟಂತೆಯೂ ಉಲ್ಲೇಖಗಳು ಹೇರಳವಾಗಿ ದೊರೆಯುತ್ತವೆ. ವೈಷ್ಣವ ದೇವಾಲಯಗಳಲ್ಲಿ ರಂಗಭೋಗದ ಸೇವೆ ಸಲ್ಲುಸುತ್ತಿದ್ದ ಜನ ಈಗಿರುವ ದಾಸರ ಮೂಲದವರಾಗಿದ್ದರೆನ್ನಬೇಕು. ಶೈವ ದೇವಾಲಯಗಳ ಪಾತ್ರದ ವಿಳಾಸಿನಿಯರ ಪ್ರಸ್ತಾಪ ವೀರಶೈವ ಕಾವ್ಯಗಳಲ್ಲಿ ಕಂಡುಬರುತ್ತದೆ: ಮಲುಹಣಿ ಮತ್ತು ಆಕೆಯ ತಾಯಿ ಪದ್ಮಾವತಿ ವಿಜಯಕೇಶ್ವರ ದೇವರ ರಂಗಭೋಗಕ್ಕೆ ಸೇರಿದ ಪಾತ್ರದ ವಿಳಾಸಿನಿಯರು. ಹೀಗೆಯೇ ವೈಷ್ಣವ ದೇವಾಲಯಗಳ ರಂಗಭೋಗದ ವಿಳಾಸಿನಿಯರೂ ಇದ್ದರು. ದೇವಾಲಯದ ರಂಗಮಂಟಪದಲ್ಲಿ ನೃತ್ಯ ಹಾಗೂ ಸಂಗೀತದ ಸೇವೆ ಸಲ್ಲಿಸುತ್ತಿದ್ದ ಈ ದೇವದಾಸಿ ವರ್ಗ ಆಯಾ ದೇವರ ಲೀಲೆಗಳನ್ನು ಮೊದಮೊದಲು ನೃತ್ಯ ಹಾಗೂ ಹಾಡಿನ ರೂಪದಲ್ಲಿ ಅಭಿವ್ಯಕ್ತ ಗೊಳಿಸುತ್ತಿದ್ದರೆನ್ನಬಹುದು. ಇದ-ರಿಂದಾಗಿ ಶೈವ ಸಂಪ್ರದಾಯದಲ್ಲಿ ಶಿವನ ಪಂಚವಿಂಶತಿ ಲೀಲೆಗಳನ್ನು, ವೈಷ್ಣವ ದೇವಾಲಯಗಳಲ್ಲಿ ವಿಷ್ಣುವಿನ ದಶಾವತಾರ ಲೀಲೆಯನ್ನು ಪ್ರದರ್ಶಿಸುವ ನೃತ್ಯಗೀತಗಳು ಪ್ರಚುರವಾದುವು. ಹನ್ನೆರಡನೆಯ ಶತಮಾನದಲ್ಲಿ ಬಹುರೂಪಿ ಚೌಡಯ್ಯನ ಜೊತೆಗೆ ಸ್ಪರ್ಧಿಸಿ ವೈಷ್ಣವ ದಶಾವತಾರದ ಲೀಲೆಗಳನ್ನು ನರ್ತಿಸಿದ ಅಚ್ಚುತನೆಂಬವನ ಉಲ್ಲೇಖ 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ'ದಲ್ಲಿ ಬರುತ್ತದೆ.

ವೈಷ್ಣವ ದಾಸರು ನೃತ್ಯಸೇವೆಯಿಂದ ಹೀಗೆ ದೇವಾಲಯದಿಂದ ರಂಗಭೂಮಿಗೆ ಪ್ರವೇಶಿಸಿ ಮುಂದೆ ಗುಡಿಯ ಹೊರಗೂ ವಿಷ್ಣು ಲೀಲಾ ಪ್ರದರ್ಶಕ ಕಥೆಗಳಲ್ಲಿ ಅಭಿನಯಿಸಲು ಆರಂಭಿಸಿದರೆನ್ನಬೇಕು. ಈ ದಶಾವತಾರದ ನೃತ್ಯಗೀತಗಳು ಆಟಗಳಾಗಿ ರಂಗ ಭೂಮಿಯ ಮೇಲೆ ಬಂದ ಸ್ಥಿತ್ಯಂತರಗಳಾವವು. ಕಾಲವಾವುದು, ಕಥಾನಕಗಳಾವವು ಲಭ್ಯವಿಲ್ಲ. ಆಟದ ದಾಸರಿಗೆ 'ದಶಂತ' ರೆಂದು ನಾಮಾಂತರವಿರುವುದು. ಅವರ ಆಟದ ಮೂಲ ವಸ್ತು 'ದಶಾವತಾರ' ಲೀಲೆಯಾಗಿದ್ದಿತೆಂದು ಊಹಿಸಬಹುದು.

ಕರ್ನಾಟಕದಲ್ಲಿ ವೈಷ್ಣವ ಭಕ್ತಿಯ ಚರಿತ್ರೆ ಸಾಕಷ್ಟು ಪ್ರಾಚೀನವಾಗಿಯೇ ಇದೆ. ಕದಂಬರ ಕಾಲದಿಂದ ಸ್ಪಷ್ಟವಾಗಿ ಅದರ ಬೇರುಗಳನ್ನು ಕಾಣಬಹುದಾಗಿದೆ. ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಮಂಗಳೇಶ ವೈಷ್ಣವ ಗುಹೆಯನ್ನು ಕೊರೆಯಿಸಿದುದು ಪ್ರಸಿದ್ಧವೇ ಇದೆ. ಅವನನ್ನು 'ಪರಮ ಭಾಗವತ'ನೆಂದು ವಿಶ್ಲೇಷಿಸಲಾಗಿದೆ. ವೈಷ್ಣವ ಗುಹೆಯಲ್ಲಿ ಶೇಷಾಸನಸ್ಥ ಹಾಗೂ ತ್ರಿವಿಕ್ರಮ ಭಂಗಿಯ ವಿಷ್ಣುಲೀಲೆಯ ವಿಗ್ರಹಗಳನ್ನು ಕೆತ್ತಲಾಗಿದೆ. ವೈಷ್ಣವ ಭಕ್ತಿ ಪಂಥವು ತಮಿಳು ಆಳ್ವಾರರ ಪ್ರಭಾವದಿಂದ (ಕಿ.ಶ.7–9ನೆಯ ಶ.ದ ವರೆಗೆ) ಕನ್ನಡ ಜನತೆಯಲ್ಲಿ ಪ್ರಚಾರಗೊಂಡಿರಬೇಕೆಂದು ನಂಬಲಾಗುತ್ತಿದೆ. ರಾಮಾನುಜ ಮಾಧ್ವ ಪಂಥಗಳಿಂದ, ದಾಸರಿಂದ ಅದು ಬೃಹದಾಕಾರವಾಗಿ ಬೆಳೆಯಿತು.

ದಾಸರ ಆಟದಲ್ಲಿ 'ಮಧುರ ಭಕ್ತಿ' ಸ್ಥಾಯಿಯಾಗಿದೆ. ವಿಷ್ಣುವನ್ನು ಭಕ್ತರು ತಮ್ಮ ಪತಿಯೆಂಬ ಭಾವದಲ್ಲಿ ಅರ್ಚಿಸಿದ ಕುರುಹು ತಮಿಳು ಆಳ್ವಾರರಲ್ಲೊಬ್ಬಳಾದ 'ಗೋದಾ' ಅಥವಾ 'ಆಂಡಾಳ್'ಳಲ್ಲಿಯೇ ಗೋಚರಕ್ಕೆ ಬರುತ್ತದೆ. ಆಕೆ ಶ್ರೀರಂಗದ ರಂಗನಾಥ ಸ್ವಾಮಿಯನ್ನೆ ತನ್ನ ಪತಿಯೆಂದು ಭಾವಿಸಿದ್ದವಳು. ಗೋಪೀ ಪ್ರಣಯದ ಹೊಳಹು ಆಂಡಾಳ್‌ಳ ಜೀವನ ಮತ್ತು ಕಾವ್ಯಗಳಲ್ಲಿ ಗೋಚರಕ್ಕೆ ಬರುತ್ತದೆ. 15ನೆಯ ಶತಮಾನದ ಕೊನೆ ಹಾಗೂ 16ನೆಯ ಶತಮಾನದ ಆರಂಭದಿಂದ ಬಂಗಾಳದಲ್ಲಿ ಪ್ರಚಾರಗೊಂಡು ಚೈತನ್ಯ ಪಂಥವು ಕರ್ನಾಟಕದ ವೈಷ್ಣದ ಆಟಗಳ ಮೇಲೆ ದಟ್ಟವಾದ ಪ್ರಭಾವ ಬೀರಿರಲು ಸಾಕು. ಚೈತನ್ಯ ದೇವನ ಶಿಷ್ಯರಲ್ಲೊಬ್ಬನಾದ ಶ್ರೀರೂಪ ಗೋಸ್ವಾಮಿಯು 'ದಾನಕೇಲೀ ಕೌಮುದೀ', 'ಲಲಿತ ಮಾಧವ' ಹಾಗೂ 'ವಿದಗ್ಧ ಮಾಧವ' ಎಂಬ ನಾಟಕಗಳಲ್ಲಿ ಶ್ರೀಕೃಷ್ಣನ ವೃಂದಾವನ ಲೀಲೆಗಳನ್ನು ರಸವತ್ತಾಗಿ ಚಿತ್ರಿಸಿರುವುದೂ ತನ್ನ 'ಉಜ್ವಲ ನೀಲ ಮಣಿ' ಹಾಗೂ ಭಕ್ತಿ ರಸಾಮೃತಸಿಂಧು' ಎಂಬ ಗ್ರಂಥಗಳಲ್ಲಿ ಭಕ್ತಿರಸದ ಸಮಗ್ರ ಸ್ವರೂಪದ ಪರಾಮರ್ಶೆ ಮಾಡಿದುದೂ ವೈಷ್ಣವ ಭಕ್ತಿಯ ಒಂದು ಮಹಾಪರ್ವವೆನ್ನಬೇಕು. ಅಂದಿನಿಂದ ಬಂಗಾಲ ವೈಷ್ಣವದ್ದೇ ಎನ್ನಬಹುದಾದ ವಿಶಿಷ್ಟ ಭಕ್ತಿರಸ ಶಾಸ್ತ್ರವೊಂದು ಬೆಳೆದುಬಂದಿತು. ಅದು ಕರ್ನಾಟಕದ ಜನಪದ ಜೀವನದ ಮೇಲೂ ಪ್ರಭಾವ ಬೀರಿದೆಯೆಂಬುದರಲ್ಲಿ ಸಂದೇಹವಿಲ್ಲ. ದಾಸರಾಟದಲ್ಲಿಯೇ ಬರುವ ಬಾವಾನ ಪಾತ್ರ ಮತ್ತು 'ಬಂಗಾಲಿ ದೇಶದಿಂದ ಬಾವಾ ಬಂದಾನವ್ವಾ ತಂಗಿ ಬಾವಾ ಬಂದಾ' ಎಂಬ ಹಾಡೂ ಈ ಸಂಬಂಧವನ್ನು ಸೂಚಿಸುವಂತಿವೆ. ಎಲ್ಲಿ ಬಂಗಾಲ, ಎಲ್ಲಿ ಕರ್ನಾಟಕ; ಎಲ್ಲಿಂದ ಎಲ್ಲಿಗೆ ಸಂಬಂಧ, ಎನ್ನಲಾಗದು. ಜನಪದ ಸಾಮಗ್ರಿ ಪ್ರಸಾರವಾಗಲು ಭಾಷಾ ಸಂಬಂಧಿಯಾದ ಸೀಮಾರೇಖೆ ಎಂದೂ ಅಡ್ಡಬಾರದು. ಉಚ್ಚ ಸಾಂಸ್ಕೃತಿಕ ವಲಯದಿಂದ ನಿಮ್ನ ಇಲ್ಲವೆ ಸಮಾನ ಸಾಂಸ್ಕೃತಿಕ ವಲಯಕ್ಕೆ ಜನಪದ ಸಾಮಗ್ರಿ ಸಹಜವಾಗಿ ಹರಿದು ಬರುತ್ತದೆಂಬುದು ಜಾನಪದ ಶಾಸ್ತ್ರದಲ್ಲಿ ಮಾನ್ಯತೆ ಪಡೆದ ತತ್ತ್ವ. ಆದುದರಿಂದ ನಮ್ಮಲ್ಲಿರುವ ವೈಷ್ಣವ ಸಣ್ಣಾಟಗಳಿಗೆ ಮೂಲಸಾಮಗ್ರಿಯಾದ ಕೃಷ್ಣನ ರಾಸ ಲೀಲೆ ಚೈತನ್ಯ ಪಂಥದಿಂದ ಪ್ರೇರಿತವಾದುದೆನ್ನುವುದು ಸೂಕ್ತವಾಗಿದೆ. ಚಾರಿತ್ರಿಕ ಭೌಗೋಲಿಕ ಅಧ್ಯಯನದಿಂದ ಈ ಸಂಗತಿಯ ಸತ್ಯಾಸತ್ಯತೆಯನ್ನು ಕಂಡುಕೊಳ್ಳಬೇಕು.

ದಶಾವತಾರದ ಚರಿತೆಯಂತೂ ತೀರಾ ಪ್ರಾಚೀತನದಿಂದಲೂ ನಮ್ಮಲ್ಲಿ ಪ್ರಚಾರದಲ್ಲಿದ್ದಂತಹುದು. ಕೃಷ್ಣಗೋಪಿ ಅಥವಾ ಕೃಷ್ಣರಾಧೆಯರ ಮಧುರ ಪ್ರೇಮ–ಭಕ್ತಿ ಹಾಗೂ ದಶಾವತಾರಲೀಲೆ ಎರಡೂ ಸೇರಿಕೊಂಡು ವೈಷ್ಣವ ಆಟದ ಹೊಸಿಗೆಯಾಯಿತೆಂದು ಹೇಳಬೇಕು. ಇದರ ಜೊತೆಗೆ ಬಂಗಾಲದಲ್ಲಿಯೇ ಇದ್ದ ಶಾಕ್ತಸಂಪ್ರದಾಯದ ಅಂಶ ಈ ಮೂಲಸಾಮಗ್ರಿಯಲ್ಲಿ ಸೇರಿಕೊಂಡು ವೈಷ್ಣವ ಆಟಗಳು ವೈಷ್ಣವ ಶಾಕ್ತಸಂಪ್ರದಾಯ ಗಳೆರಡನ್ನೂ ಸಮರಸಗೊಳಿಸಿಕೊಂಡು ಬೆಳೆಯಲನುವಾದುವು ಉತ್ತರ ಕರ್ನಾಟಕದ 'ಶ್ರೀಕೃಷ್ಣ ಪಾರಿಜಾತ' ಮತ್ತು ಅದಕ್ಕೂ ಹಿಂದೆಯೇ ಹುಟ್ಟಿ ಪ್ರಚಾರದಲ್ಲಿದ್ದ 'ರಾಧಾನ ಆಟ' ಗಳಲ್ಲಿ ಈ ಎರಡೂ ಸಂಪ್ರದಾಯದ ಅಂಶಗಳನ್ನು ಕಾಣುತ್ತೇವೆ.

ಈಗ ಮತ್ತು ಸುಮಾರು 25–30 ವರುಷಗಳ ಹಿಂದೆ ಪ್ರಯೋಗವಾಗುತ್ತ ಬಂದಿರುವ ದಾಸರ ಆಟದ ಸ್ವರೂಪದ ಮೇಲಿಂದ ಅದು ಹಿಂದೆ ಹೇಗಿದ್ದಿತೆಂಬುದು ಊಹಿಸುವುದು

ಕಷ್ಟ. ಈಗಲೂ ಜಾತ್ರೆ ಉತ್ಸವಗಳ ಕಾಲದಲ್ಲಿ ಈ ಆಟವನ್ನು ಆಡಿಸುವುದುಂಟು. ಈ ಆಟದ ಬಗೆಗೆ ಅಡಿಸುವವರಿಗಾಗಲಿ ನೋಟಕರಿಗಾಗಲಿ ಇರುವ ಆಸ್ಥೆಗೆ ಮುಖ್ಯ ಕಾರಣ ಅದರ ಕಲೆ ಅಥವಾ ಗುಣಮಟ್ಟವಲ್ಲ. ಅದರಲ್ಲಿ ಪಾತ್ರಧಾರಿಗಳೆಲ್ಲ ಹೆಂಗಸರಾಗಿರುವುದು. ಪುರುಷರು ಇದ್ದರೆ ತಬಲಾ ಬಾರಿಸುವ ಪಕ್ಕವಾದ್ಯದವನಾಗಿ ಮಾತ್ರ. ಬಣ್ಣ ವೇಷ ತೊಟ್ಟು ಆಡುವ ರೂಢಿ ಈಗ ಇಲ್ಲ. ತಮ್ಮ ನಿತ್ಯದ ಉಡುಪಿನಲ್ಲಿಯೇ ಮುಖವರ್ಣಿಕೆ ಇತ್ಯಾದಿ ಏನೂ ಇಲ್ಲದೆ ಈ ಪ್ರಯೋಗ ನಡೆಯುತ್ತದೆ. ಗುಡಿಯ ಎದುರಿನ ಒಂದು ಕಟ್ಟೆಯೆ ರಂಗಭೂಮಿ. ಪರದೆ, ಮಂಟಪ, ಛತ್ತು ಯಾವುದೂ ಇರದಿದ್ದರೂ ನಡೆಯುತ್ತದೆ. ಈಗ ಸುಮಾರು ಮೂವತ್ತು ವರುಷಗಳಿಂದ ಪ್ರಯೋಗವಾಗುತ್ತಿರುವ ಆಟದ ಸ್ವರೂಪದ ಮೇಲಿಂದ ಹೇಳುವುದಾದರೆ ಅದನ್ನು ಒಂದು ಮೋಜಿನ ಕಾಲಯಾಪನೆ ಮಾತ್ರವೆನ್ನಬೇಕು. ಅಲ್ಲಿ ನಿಶ್ಚಿತ ಕಥಾನಕವೇನೂ ಇರುವುದಿಲ್ಲ. ರಾತ್ರಿಯೆಲ್ಲ ಕೃಷ್ಣಲೀಲೆಯ ಶೃಂಗಾರಪದ, ಹೆಣ್ಣು ಗಂಡಿನ ವಾದೀಹಾಡು, ಹಾಸ್ಯ, ಅಡ್ಡ ಸೋಗು ಬಂದು ಬೆಳಗು ಮಾಡುವ ಹಳ್ಳಿಯ ತರುಣ ರಸಿಕರ ಅಸಭ್ಯರುಚಿಗೆ ಚಾಲನೆ ನೀಡುವ ಒಂದು ಮೇಳ ಅದು. ತಮ್ಮ ಬಾಯಿ ಚಟ ತೀರಿಸಿಕೊಳ್ಳಲು ಪ್ರೇಕ್ಷಕರಾದ ರಸಿಕ ತರುಣರೂ ನಡುನಡುವೆ ಅಡ್ಡ ಸೋಗು ಹಾಕಿ ಭಾಗವಹಿಸುದುಂಟು. ಇದೆಲ್ಲ ಮಹಾರಾಷ್ಟ್ರದಿಂದ ಬಂದ 'ತಮಾಷಾದ ಪ್ರಭಾವವೆಂದು ತೋರುತ್ತದೆ. ಆಟದ ಶೃಂಗಾರ ಅಶ್ಲೀಲದ ಅಂಚಿಗೆ ಮುಟ್ಟಿದಷ್ಟು ಅದರ ಹಾಗೂ ಪ್ರೇಕ್ಷಕರ ಮುಖದ ಕಳೆ ಹೆಚ್ಚುತ್ತ ಹೋಗುವುದು.

ದಾಸರಾಟವೆಂಬುದಕ್ಕೆ ಈಗ ನಿಶ್ಚಿತ ವಸ್ತುವೆಂಬುದೇ ಇಲ್ಲ; ಅದು ಅನೇಕ ತೇಪೆಗಳ ಬೊಂತೆ. ಮೂಲದಲ್ಲಿಯೆ ಅದು ಹೀಗೆ ಬೆಳೆದು ಬಂದಿತ್ತೇ ಅಥವಾ ಈಗಿನ ಅದರ ಅವಸ್ಥೆ ಪೂರ್ಣರೂಪದ ಸವಕಳಿಯಾದ ಉಳಿಕೆಯೇ ಎಂಬುದಕ್ಕ ನಿರ್ಣಯಾತ್ಮಕವಾದ ಉತ್ತರ ಹೇಳುವುದು ಈಗ ಸಾಧ್ಯವಿಲ್ಲ ದಾಗಿದೆ. ದಾಸರು ಹಿಂದೆ ಕೂಡ ಪರಿಪೂರ್ಣ ಆಟವನ್ನು ರೂಪಿಸಿಕೊಂಡಿರಲಿಕ್ಕಿಲ್ಲ. ಹಾಗೊಂದು ವೇಳೆ ಇದ್ದರೆ ದೊಡ್ಡಾಟ ಯಕ್ಷಗಾನಗಳಂತೆ ಅವರ ಸಂಪ್ರದಾಯದ ಆಟಗಳೂ ಉಳಿದು ಬರಬಹುದಾಗಿದ್ದಿತು. ಈಗಿನ ದಾಸರಾಟ ಕೃಷ್ಣ ಗೊಲ್ಲತಿಯರ ಪ್ರವೇಶದಿಂದ ಪ್ರಾರಂಭವಾಗುತ್ತದೆ. ಹಾಲು ಮಾರಲು ಬಂದ ಗೊಲ್ಲತಿಯನ್ನು ಪೀಡಿಸಿ ಕೃಷ್ಣ ಸುಂಕ ಬೇಡುತ್ತಾನೆ. ಆಕೆ ಕೊಡಲು ನಿರಾಕರಿಸುತ್ತಾಳೆ. ಕೆಲಹೊತ್ತು ಅವರಲ್ಲಿ ವಾದ ವಿವಾದ ನಡೆದು ಕೊನೆಗೆ ಆ ಪಾತ್ರ ಸಂಧಾನದಿಂದ ತೆರೆದು ಮರೆಗೆ ಸರಿಯುತ್ತವೆ. ಉತ್ತರ ಭಾಗದಲ್ಲಿ ಸಖಾರಾಮ, ಗಲ್ಲೋಜಿ, ಚಿಮಣಾ ಪ್ರವೇಶಿಸಿ ಲೌಕಿಕ ಪ್ರಪಂಚದ ಪ್ರಣಯ, ಕಾಮದ ವೃತ್ತಾಂತ ಬಳಸಿಕೊಂಡು ಆಟ ಸಾಗುತ್ತದೆ. ಆಟದ ಬೇರೆ ಅವತಾರಗಳಲ್ಲಿ ಇಡೀ ರಾತ್ರಿಯೆಲ್ಲ ಕೃಷ್ಣ ಗೋಪಿಯರದೇ ವಾದ ನಡೆಯುವುದುಂಟು. ಆಗ ಕೃಷ್ಣ ತನ್ನ ದಶಾವತಾರದ ಮಹಿಮೆಯನ್ನೆಲ್ಲ ಬಿಚ್ಚಿ ಹೇಳುತ್ತಾನೆ. ಗೋಪಿ ಅದನ್ನೆಲ್ಲ ಅಸಡ್ಡೆ ಮಾಡುತ್ತಾಳೆ. ಕೊನೆಗೆ ಗೋಪಿ ಶಾಕ್ತ ಪ್ರತಿನಿಧಿಯಾಗಿ ಗೋಪಾಲನಿಗೆ ವೈರಾಗ್ಯವನ್ನು ಬೋಧಿಸುತ್ತಾಳೆ. ಕೃಷ್ಣ ಬೈರಾಗಿಯ ವೇಷಧರಿಸಿ ತಾನು ಆ ಮುಂದೆ ಶಿವೋಪಾಸಕನಾಗಿ ಉದ್ಧಾರವಾಗುವೆನೆಂದು ಸಾರಿ ಮರೆಯಾಗುತ್ತಾನೆ. ವೈಷ್ಣವ ರಾಸ ಲೀಲೆಯೇ ಜೀವನದ ಅಂತಿಮ ನಿರ್ಲ್ದಾಣವಲ್ಲ, ನಿಷ್ಕಾಮವಾದ, ರಾಗದ್ವೇಷ ವಿಮುಕ್ತವಾದ ಶಿವಭಕ್ತಿಯೇ ಜೀವನದ ಅಂತಿಮ ನಿಲುಗಡೆಯೆಂದು ಸಾರಿ ವೈಷ್ಣವ ಭಕ್ತಿಯ ಮೇಲೆ ಶಿವಭಕ್ತಿಯ ಪಾರಮ್ಯವನ್ನು ಸಾಧಿಸಿ ಆಟ ಮುಕ್ತಾಯವಾಗುತ್ತದೆ. ಇದು ಇಂಗಳಗಿ ಹಸನ ಆಡುತ್ತಿದ್ದ ರಾಧಾನ ಆಟದ ಅವತಾರ. ಬೇರೆ ರಾಧಾ ಆಟಗಳಲ್ಲಿ ರಾಸಲೀಲೆ ದಶಾವತಾರಗಳೇ ವಸ್ತುವಾಗಿ ಕೊನೆಯವರೆಗೆ ನಿಲ್ಲುತ್ತವೆ.

ದಾಸರಾಟದ ವಸ್ತುವಿನ 'ನ್ಯೂಕ್ಲಿಯಸ್' ಈ ರಾಧಾ ಆಟ ಎನ್ನಬೇಕು. ಆದರೆ ಚಿಮಣಾ ಗಲ್ಲೋಜಿ ಸಂದರ್ಭ ಎತ್ತಿಕೊಂಡು ಆಡುತ್ತಿದ್ದ ರಾಧಾನಾಟದ ಅವತಾರವೇ ಕೆಲಕಾಲ ಹೆಚ್ಚು ಪ್ರಚಾರದಲ್ಲಿ ಬಂದು ಬಿಟ್ಟಿತು. ಇದು ಮಹಾರಾಷ್ಟ್ರದ 'ತಮಾಷಾ' ದ ಪ್ರಭಾವವೆಂದು ತೋರುತ್ತದೆ. ತಳೇವಾಡ ನಬಿ ಅಂತಹ ಒಬ್ಬ ಪ್ರಸಿದ್ಧ ಆಟಗಾರ. 'ನಬಿ ಆಟ' 'ತಳೇವಾಡಿ ಆಟ' ಎಂದು ಅವನ ಹೆಸರಿನಿಂದಲೇ ಆಟದ ಈ ಅವತಾರ ಪ್ರಸಿದ್ಧವಾಗಿದೆ. ಇಂಗಳಗಿ ಹಸನ ಆಡಿದ ರಾಧಾನಾಟ, ಮುತನಾಳ ಜ್ಯಾಡರ ಮಲ್ಲಪ್ಪ ಬರೆದ ಆಟ ಹಾಗೂ ಹೊನಕೇರಿ ಮೊದಲಾದ ಆಟಗಳೂ ಪ್ರಸಿದ್ಧವಿವೆ. ಅಲ್ಲಲ್ಲಿ ಈಗಲೂ ಅವುಗಳ ಪ್ರಯೋಗ ನಡೆಯುತ್ತದೆ. ಸಖಾರಾಮ ಗಲ್ಲೋಜಿ, ಚಿಮಣಾ ಆಟದಲ್ಲಿಯೂ ಎರಡು ಪ್ರಕಾರಗಳಿದ್ದವೆಂದು ಹೇಳಲಾಗುತ್ತಿದೆ. ಒಂದು ಗಂಡನ್ನು ಹೆಚ್ಚು ಮಾಡಿ ಆಡುವುದು ಇನ್ನೊಂದು ಹೆಣ್ಣನ್ನು ಹೆಚ್ಚು ಮಾಡಿ ಆಡುವುದು. ತನ್ನನ್ನು ಕಾಮಿಸಿ ಬಂದ ಹೆಣ್ಣಿನ ಮೋಹವನ್ನು ಪರಿಹರಿಸಿ, ಗಂಡು ಗುರುವಾಗಿ ನಿಲ್ಲುವ ಆಟ ಒಂದಾದರೆ, ಹೆಣ್ಣಿನ ಬೆನ್ನು ಹತ್ತಿ ಲಂಪಟನಾದ ಗಂಡಿನ ಭ್ರಾಂತಿಯನ್ನು ಪರಿಹರಿಸಿ ವೈರಾಗ್ಯ ಬೋಧನೆ ಮಾಡಿ ಹೆಣ್ಣೇ ಗಂಡಿಗೆ ಗುರುವಾದಂತೆ ಮುಕ್ತಾಯವಾಗುವ ಆಟ ಇನ್ನೊಂದು. ಹರದೇಶಿ ಸಂಪ್ರದಾಯ ಇಲ್ಲಿಯೂ ಸೇರಿಕೊಂಡಿರುವುದನ್ನು ಗುರುತಿಸಬಹುದಾಗಿದೆ.

ದಾಸರಾಟವೆಂಬುದು ರಾಧಾನಾಟದ ಅನುಕರಣೆಯಾಗಿ ಇತ್ತೀಚೆ ಉಳಿದು ಬಂದಿದೆ. ಶ್ರೀಕೃಷ್ಣ ಪಾರಿಜಾತದ ಹಾಡುಗಾರಿಕೆ ಸಂಭಾಷಣೆಯೂ ಹಣಕಿ ಹಾಕಿದೆ. ಪಾರಿಜಾತವನ್ನೇ ಆಡುವ ದಾಸರ ಮೇಳಗಳೂ ಇವೆ. ಆದರೆ ದಾಸರಾಟ ಹೆಚ್ಚಾಗಿ ಬೆಳಗು ಮಾಡುವುದು ಶೃಂಗಾರದ ಹಾಡು ಸಂಭಾಷಣೆ ಮತ್ತು ಅಡ್ಡ ಸೋಗುಗಳಿಂದಲೇ. ಅಂತೆಯೇ 'ದಾಸರಾಟಲ್ಲ, ದೋಸೆ ಊಟಲ್ಲ' ಎಂಬ ಗಾದೆ ಪ್ರಸಿದ್ಧವಾಗಿದೆ.

(ಐಚಿಎಚ್)

ದಿ

ದಿಂಡಿಮ್ಯಾಳ ಉತ್ಸವ: ಇದು ಮೂಲತಃ ಹೈದ್ರಾಬಾದ ಕರ್ನಾಟಕ ಭಾಗದ ರೈತರ ಪೂಜೆಯ ವಿಧಾನ. ವಿಶೇಷವಾಗಿ ಚಿತ್ತಾಪೂರ ಸಮೀಪದ ದಿಗ್ಗಾಂವನಲ್ಲಿ ಈ ಆಚರಣೆ ಬಹಳ ಪ್ರಸಿದ್ಧವಾಗಿದೆ.

ಹಸ್ತಿ ಮತ್ತು ಉತ್ತರಿ ಮಳೆಗಳು ಅಥವಾ ಹಿಂಗಾರಿ ಮಳೆ ಬಂದ ತಕ್ಷಣ ಬಿಳಿ ಜೋಳ, ಕಡಲೆ, ಗೋದಿ, ಬಿತ್ತುವ ಪೂರ್ವದಲ್ಲಿ ಕೂರಿಗೆಗೆ ಮಾಡುವ ಪೂಜೆಯೇ 'ದಿಂಡಿಮ್ಯಾಳ'. ಆ ಕೂರಿಗೆಯನ್ನೇ 'ಲಕ್ಷ್ಮೀ' ಎಂದು ಸೀರೆ ಉಡಿಸಿ, ಅದರ ಉಡಿಯಲ್ಲಿ ಬಿತ್ತಬೇಕಾದ ದವಸ–ಧಾನ್ಯಗಳ ಬೀಜಗಳನ್ನು ಕಟ್ಟಿ ಗೋದಿ ಹುಗ್ಗಿ, ಕಡಬು, ಹದಿನಾರು ದಿನಸಿನ ಪಲ್ಯಾ (ಭಜ್ಜಿ) ಮಾಡಿ ನೈವೇದ್ಯ ಕೊಟ್ಟು ತಮ್ಮ ಭಕ್ತಿ ಶ್ರದ್ಧೆಯಿಂದ ಭೂತಾಯಿಗೆ ಮತ್ತು ತಮ್ಮ ಒಕ್ಕಲುತನದ ಸಾಮಗ್ರಿಗಳಿಗೆ ಗೌರವ ಸಲ್ಲಿಸುವುದೇ ದಿಂಡಿಮ್ಯಾಳವಾಗಿದೆ.

ಪರೋಕ್ಷವಾಗಿ ರೈತರ ಮತ್ತು ರೈತ ಸಂಬಂಧಿ ಕರಕುಶಲ ಕಸುಬುದಾರರೆಲ್ಲರೂ ಸೇರಿ ಒಟ್ಟಾಗಿ ಸಮರಸ್ಯ ಮತ್ತು ಸಂಭ್ರಮದಿಂದ ಪರಸ್ಪರ ಊಟೋಪಚಾರಗಳಿಂದ ವಿಶ್ವಾಸದಿಂದ ಕೈಗೊಳ್ಳುವ ಗ್ರಾಮೀಣ ಉತ್ಸವ ಇದಾಗಿದೆ. *(ಕೆಜಿಪಿ)*

ದಿಗಂಬರ ಕರಿಬಸವೇಶ್ವರ: ಹಠ ಯೋಗಿಗಳು. ಲೋಕಕಲ್ಯಾಣಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಇವರು ಬೀದರ ಜಿಲ್ಲೆ ಹುಮನಾಬಾದ ತಾಲೂಕಿನ ಹುಡಗಿಯವರು ಹದಿನೆಂಟನೆಯ ಶತಮಾನದ ಅವಧಿಯಲ್ಲಿ ಆಗಿಹೋದ ಕಾಯಕ ಯೋಗಿಗಳಾದ ದಿಗಂಬರ ಕರಿಬಸವೇಶ್ವರರು, ತಮ್ಮ ತಪಃಶಕ್ತಿಯಿಂದ ಭಕ್ತರನ್ನುದ್ಧರಿಸಿದ ಪರ್ವ ಕಾಲವೆನಿಸಿತು.

ಧಾರವಾಡದ ಶ್ರೀ ಸಿದ್ಧಾರೂಢ ಸ್ವಾಮಿಗಳು ಜನಿಸಿದ ಪುಣ್ಯ ಭೂಮಿ ಚಳಕಾಪುರ, ಇದೇ ಚಳಕಾರದಲ್ಲಿ ಜಂಗಮ ವಂಶದ ಚೆನ್ನಬಸವ ಶಿವಾಚಾರ್ಯರು, ಜ್ಯೋತೆಮ್ಮ ಎಂಬ ಮಠಪತಿಗಳ ಮನೆತನದಲ್ಲಿ ಇವರು ಜನಿಸಿದರು.

ಶಿವನ ಆಶೀರ್ವಾದ ಪಡೆದ ಚೆನ್ನಬಸವರು ಚಿಂಚೋಳಿಯ ಸಂಗಮ ಬೆಟ್ಟದ ಮೇಲೆ ಒಂದು ಗುಡಿಸಲು ಕಟ್ಟಿಕೊಂಡಿದ್ದರು. ಪತಿಯನ್ನು ಹುಡುಕಿಕೊಂಡು ಬಂದು ಜ್ಯೋತೆಮ್ಮ ಬಂದು ಇದೇ ಬೆಟ್ಟದಲ್ಲಿರುವಾಗಲೇ 1737ರಲ್ಲಿ ಜೇಷ್ಠ ಮಾಸದ ಒಂದು ಸೋಮವಾರ ಪ್ರಾತಃಕಾಲದಲ್ಲಿ ದಿಗಂಬರ ಕರಿ ಬಸವೇಶ್ವರ ಜನ್ಮವಾಯಿತು.

ಇವರು ಬಾಲ್ಯದಲ್ಲಿ ಯಾರೊಂದಿಗೂ ಬೆರೆಯದೇ ಅಂತರ್ಮುಖಿಗಳಾಗಿ, ನಿಸರ್ಗದಲ್ಲಿ ಹಕ್ಕಿಗಳ ಇಂಚರ ಕೇಳುತ್ತ ಪ್ರಕೃತಿ ಸೌಂದರ್ಯದ ಆನಂದ ಪಡೆಯುತ್ತ ಸುರ್ಯೋದಯ ಮತ್ತು ಸೂರ್ಯಾಸ್ತಗಳನ್ನು ಎವೆಯಿಕ್ಕದೇ ನೋಡುತ್ತಿದ್ದರು. ಹೊರಗಿನ ಪ್ರಪಂಚ ಈ ದಿಗಂಬರ ಮರೆತು ಬಿಡುತ್ತಿದ್ದ.

ಮುಂದೆ ಕರಿಬಸವ ದಿಗಂಬರ ಅವಸ್ಥೆ ಕೈಗೊಂಡರು. ಜನರೆಲ್ಲ ಹುಚ್ಚು ಮಗುವೆಂದು ಭಾವಿಸಿದರೆ, ಶಿವಾಚಾರ್ಯರು ಮಾತ್ರ ಮಗನ ಮುಂದಿನ ಭವಿಷ್ಯದ ಕನಸು ಕಾಣುತ್ತಿದ್ದರು. ಮಗನ ಚಟುವಟಿ–ಕೆಗಳಿಗೆ ಅವರೆಂದೂ ಅಡ್ಡಿ ಮಾಡಲಿಲ್ಲ. ತಾಯಿ ಜ್ಯೋತೆಮ್ಮಳಿಗೆ ಮಗನಿಗೆ ತಿಳಿಹೇಳಿ ಎಂದು ಗೋಗರೆಯುತ್ತಿದ್ದಳು. ಆಗ ಶಿವಾಚಾರ್ಯರು, ಕರಿಬಸವ ಶಿವನ ವರಪುತ್ರ, ದಿಗಂಬರ ಕಂದನನ್ನು ನೋಡುತ್ತ ಶಿವನ ಉಪದೇಶ ಸ್ಮರಿಸಿಕೊಂಡರು.

ಈ ದಿಗಂಬರ ಹುಡಗಿಯ ಹಿರೇಮಠದ ಮುಂದೆ ಅಲೆಯುತ್ತಿದ್ದಾಗ, ಅಲ್ಲಿಯ ಪರಮ ವೈರಾಗ್ಯ ಪುರುಷ ಚರಮೂರ್ತಿ ಮಹಾಲಿಂಗ ಶಿವಯೋಗಿಗಳ ಕಣ್ಣಿಗೆ ಬಿದ್ದ. ಶಿವಯೋಗಿಗಳು ದಿಗಂಬರ ಹುಡುಗನನ್ನು ದಿಟ್ಟಿಸಿ ನೋಡಿ, ಅವನ ಮುಖದಲ್ಲಿ ನಲಿಯುತ್ತಿದ್ದ ವೈರಾಗ್ಯದ ಹೊಂಬೆಳಕು ಕಂಡು ಅಚ್ಚರಿಯಿಂದ ಓ...ಈತನೇ ತನಗೆ ತಕ್ಕ ಶಿಷ್ಯನಾಗಬಲ್ಲ ಎಂದು ಹೆಮ್ಮೆ ಪಟ್ಟುಕೊಂಡು, 1746 ರ ಒಂದು ಸೋಮವಾರ ಶಿಷ್ಯನನ್ನಾಗಿ ಸ್ವೀಕರಿಸಿದರು.

ಮಹಾಲಿಂಗ ಶಿವಯೋಗಿಗಳು ಹುಡುಗನ ತೀಕ್ಷ್ಣ ಬುದ್ಧಿಗೆ ಅವನ ವೈರಾಗ್ಯದ ಒಲುಮೆಗೆ ಅತ್ಯಂತ ಸಂತಸ ಪಟ್ಟು, ಧರ್ಮ ಭೋದೆ ಹಾಗೂ ಯೋಗ, ಧ್ಯಾನ ಕಲಿಸಿದರು. ಮೂರು ವರ್ಷಗಳಲ್ಲಿ ಎಲ್ಲ ವಿದ್ಯೆಗಳಲ್ಲಿ ಪಾರಂಗತನಾಗಿ, ಶಿವನೇ ನಾನು ನಾನೇ ಶಿವ ಎಂದು ಮನದ ಭಾವನೆಗಳನ್ನು ಗುರುಗಳಿಗೆ ತಿಳಿಸಿದಾಗ, ಶಿವಾಚಾರ್ಯರು ಸಂತೋಷದಿಂದ ತಾನೆಣಿಸಲಾಗದ ಮಟ್ಟಕ್ಕೆ ಬಂದ ತಮ್ಮ ಶಿಷ್ಯನ ಬಗ್ಗೆ ಹೆಮ್ಮೆ ಪಟ್ಟರು.

ಇವರೊಮ್ಮೆ ನಂದಿಯ ಮೇಲೆ ಕುಳಿತಾಗ, ದಾರಿಯಲ್ಲಿ ಹೋಗುತ್ತಿದ್ದವರು ಹುಚ್ಚನೆಂದು ಸುತ್ತಲೂ ನೆರೆದರು. ನಂದಿಯ ಶಾಪ ತಗಲಿತೆಂದರೆ, ಕುರುಡನಾಗುತ್ತಿ ಕೆಳಗಿಳಿ ಎಂದು ಬೆದರಿಸಿದಾಗ, ಕರಿಬಸವರು ನಕ್ಕು ನಾನು ಹುಚ್ಚನಲ್ಲ. ನೀವೇ ಹುಚ್ಚರು. ಒಂದು ಕಲ್ಲು ಬಂಡೆಗೆ ದೇವನಂದಿ ಎಂದು ಕರೆಯುವದೇ ಎಂದು ಶಿಲಾ ಮೂರ್ತಿಯ ಮೇಲೆ ಕುಣಿಯತೊಡಗಿದರು. ಹುಚ್ಚನ ಈ ಕುಣಿತ ಕಂಡು ಕೆಳಗಿಳಿಯುವಂತೆ ದೊಣ್ಣೆಯಿಂದ ಬೆದರಿಕೆ ಹಾಕಿದರು. ಆಗ ಒಮ್ಮಿಂದೊಮ್ಮೇಲೆ ನಂದಿಯು ಆಕಾಶದೆತ್ತರಕ್ಕೆ ವಿರಾಟ್‌ರೂಪ ತಾಳಿ ಗರ್ಜನೆ ಮಾಡಿದಾಗ, ಜನ ಬೆಚ್ಚಿದರು. ಇವನು ಹುಚ್ಚನಲ್ಲ, ಮಹಾಪುರುಷನೆಂದು ಊರೆಲ್ಲ ನಡೆದ ಘಟನೆ ಹೇಳತೊಡಗಿದರು. ಆ ನಂತರ ಈ ವಿಷಯ ಯೋಗಿಯೊಬ್ಬರಿಗೆ ತಿಳಿದು ಕುತೂಹಲದಿಂದ ಹುಚ್ಚನಿದ್ದ ನಂದಿಮೂರ್ತಿಯೆಡೆ ಬಂದರು. ನಂದಿಯ ಮೇಲೆ ದಿಗಂತಕ್ಕೆ ಮುಖ ಮಾಡಿಕೊಂಡು ಮಲಗಿದ್ದ ಯುವಕನನ್ನು ಕಂಡು ಅಚ್ಚರಿಯಿಂದ ಮಗು ನೀನು ಯಾರು ಎಂದು ಆತ್ಮೀಯತೆಯಿಂದ ಕೇಳಿದರು. ಈ ಶಬ್ದ ಕರಿಬಸವರನ್ನು ದಿಗ್ಭ್ರಮೆಗೊಳಿಸಿತು. ಇದುವರೆಗೂ ಎಲ್ಲರೂ ತನ್ನನ್ನು ಹುಚ್ಚನೆಂದು ಕಿರುಕುಳ ನೀಡುತ್ತಿದ್ದರು. ಆತ್ಮೀಯತೆಯಿಂದ ಕೇಳಿದ್ದಕ್ಕೆ ನಂದಿಯ ಕೆಳಗಡೆ ನಿಂತ ವ್ಯಕ್ತಿಯನ್ನು ದಿಟ್ಟಿಸಿದರು.

ಕಾವಿಯ ಜುಬ್ಬಾ ಧರಿಸಿದ ವಯೋವೃದ್ಧ ಕೈಯಲ್ಲಿ ಕಮಂಡಲ, ಯೋಗ, ದಂಡ, ಹಿಡಿದು ನಿಂತಿದ್ದರು. ಅವರ

ನೊಸಲಿನ ತುಂಬಾ ವಿಭೂತಿ. ಶುಭ್ರ ಬೆಳ್ಳಿಯ ಜಡೆ. ಗಡ್ಡದಲ್ಲಿ ಸುಕ್ಕುಗೊಂಡ ಕಾಂತಿಯುಕ್ತ ಮುಖ, ಯೋಗ ನೇತ್ರಗಳು ಕರಿಬಸವರ ಶರೀರವನ್ನು ದಿಟ್ಟಿಸುತ್ತಿದ್ದವು. ದಿಗಂಬರ ಕರಿಬಸವರಿಗೆ ಪ್ರಥಮ ಬಾರಿಗೆ ತಾನು ದಿಗಂಬರನೆಂದು ತಿಳಿದು ತಲೆ ತಗ್ಗಿಸಿದರು. ಮಗು ಕೆಳಗಿಳಿದು ಬಾ ಎಂದು ಮುಗುಳ ನಗೆಯೊಂದಿಗೆ ಕರೆದರು. ಕರಿಬಸವರು ಕೆಳಗೆ ಜಿಗಿದು, ಗುರುಗಳೇ ನಾನೂ ಇದೇ ರಹಸ್ಯವನ್ನರಿಯಲು ತಮ್ಮನ್ನು ಹುಡುಕುತ್ತಿದ್ದೆ ಎನ್ನುತ್ತಾ ಗುರುಗಳಿಗೆ ಪಾದಗಳಿಗೆರಗಿದರು.

ಯೋಗಿಗಳು ಆಶೀರ್ವಾದ ಮಾಡಿ ಮನಪೂರ್ವಕ ತಬ್ಬಿಕೊಂಡು ಕರಿಬಸವರನ್ನು ಶಿಷ್ಯನನ್ನಾಗಿ ಸ್ವೀಕರಿಸಿ, ಜೀವ ಶಿವೈಕ್ಯದ ರಹಸ್ಯ, ಸಕಲ ಯೋಗ ಜ್ಞಾನ ನಿರ್ವಿಕಲ್ಪ ಸಮಾಧಿಯ ಕುರಿತು ಬೋಧಿಸಿದರು. ಈ ಮಹಾ ಪುರಷರು, ಗುರು ಗಜದಂಡ ಮಹಾ ಸ್ವಾಮಿಗಳು. ಸಿದ್ಧಾರೂಢ ಮಹಾಸ್ವಾಮಿಗಳ ಗುರುವರ್ಯರೂ ಆಗಿದ್ದರು. ಮುಂದೆ ಕರಿಬಸವನರು ಗುರು ಗಜದಂಡ ಮಹಾಸ್ವಾಮಿಗಳಿಂದ ತಮ್ಮ ಅಪೂರ್ಣ ಜ್ಞಾನ ದಾಹವನ್ನು ಈ ಗುರುಗಳಲ್ಲಿ ತೀರಿಸಿಕೊಂಡು, ಹಂಪೆಯ ಹೇಮಕೂಟ ಕರಸ್ಥಲ ನಾಗಲಿಂಗ ಗುಹೆಯಲ್ಲಿ ಮೂರು ತಿಂಗಳ ಸಗುಣ ಸಿವಿಕಲ್ಪ ಸಮಾಧಿಯಲ್ಲಿ ಉಗ್ರ ತಪಸ್ಸು ಆಚರಿಸಿ, ಜ್ಞಾನೋದಯ ಪಡೆದುಕೊಂಡರು. ಆನಂತರ ತಮ್ಮ ಹುಟ್ಟೂರು ಹುಡುಗಿಗೆ ಬಂದು ಊರ ಮಧ್ಯದ ರಾಮಲಿಂಗೇಶ್ವರ ದೇವಾಲಯದಲ್ಲಿ ತಂಗಿದರು. ಈ ಭವ್ಯ ದೇವಾಲಯವನ್ನು ಕರಿಬಸವರು ತಮ್ಮ ತಪೋಭೂಮಿಯನ್ನಾಗಿ ಮಾಡಿಕೊಂಡರು.

ಇವರು ಮುಸಲ್ಮಾನರ ಮನೆಯ ಮಾಂಸದ ತುಂಡನ್ನು ತಮ್ಮ ದೈವೀ ಶಕ್ತಿಯಿಂದ ಮಿಠಾಯಿ ತುಣುಕನ್ನಾಗಿ ಮಾಡಿದರು ಎನ್ನಲಾಗಿದೆ.

ಹಲವು ಅಜ್ಞಾತ ಪವಾಡಗಳನ್ನು ಪ್ರತ್ಯಕ್ಷ ಕಂಡ ಜನ ಇವರ ಶಿಷ್ಯರಾದರು. ಅಂಥವರಲ್ಲೊಬ್ಬನು, ಪೂಜ್ಯರೆ ನೀವು ಹುಮನಾಬಾದ ರಾಜಯೋಗಿ ಮಾಣಿಕ ಪ್ರಭುಗಳ ಭೇಟಿಗೆ ಹೋಗುವಾಗ ಲಂಗೋಟಿ ಧರಿಸಿ ಹೋಗುವಿರಿ ಆದರೆ ನಮ್ಮೆದುರು ದಿಗಂಬರರಾಗಿರುತ್ತೀರಿ? ಎಂದಾಗ, ಮಾಣಿಕ ಪ್ರಭುಗಳು ಮನುಷ್ಯರಿದ್ದಾರೆ. ಆದರೆ ನೀವೆಲ್ಲ ಪ್ರಾಣಿಗಳು. ಪ್ರಾಣಿಗಳೆದುರು ಬೆತ್ತಲೆಯಾಗಿ ನಿಲ್ಲಲು ನಾಚಿಕೆ ಯಾಕೆ? ಎಂದಾಗ, ಶಿಷ್ಯವೃಂದ ತಲೆದೂಗಿತು.

ರಾಮಕೃಷ್ಣ ಪರಮ ಹಂಸರಂತೆ ಹಿರಿಯರ ಒತ್ತಾಯಕ್ಕೆ ಮದುವೆ ಮಾಡಿಕೊಂಡು, ತಮ್ಮ ಹೆಂಡತಿಯನ್ನು ಅಂತರಂಗದಲ್ಲಿ ತನ್ನ ಆಧ್ಯಾತ್ಮ ಒಲವಿನ ತಾಯಿಯಾಗಿರಲು ಅಪೇಕ್ಷಿಸುತ್ತಿದ್ದರು. ಆದರೆ ಇವರು ಮದುವೆಯಾದ ಇಬ್ಬರೂ ಹೆಂಡಂದಿರಿಗೂ ಕೂಡಾ ಅವರ ಅಧ್ಯಾತ್ಮಿಕ ಜೀವನದಲ್ಲಿ ಪಾಲ್ಗೊಳ್ಳದೇ ದೂರವಾದಾಗ ತಂದೆ-ತಾಯಿಯವರು ಪುನಃ ಮದುವೆಗೆ ಒತ್ತಾಯಿಸಲಿಲ್ಲ.

ಗದಗಯ್ಯನವರು 90 ವರ್ಷಗಳ ಕಾಲ ಬ್ರಹ್ಮಚರ್ಯ ಜೀವನ ಪರಿಪಾಲಿಸಿ, ಲಿಂಗಪೂಜೆ ಮಾಡುತ್ತಲೇ ಲಿಂಗೈಕ್ಯರಾದರು. ವರ್ಷದ ನಂತರ ಇವರ ಸಮಾಧಿ ಕಟ್ಟಲು ನೆಲ ಅಗೆದಾಗ, ಇವರ ಪಾರ್ಥಿವ ಶರೀರ ಇನ್ನೂ ಕಂಗೊಳಿಸುತ್ತಿತ್ತು. *(ಜಿಎಂಕೆ)*

ದಿಗ್ಗಾಂವ: ಪ್ರಾಚೀನ ಅಗ್ರಹಾರ. ಕಲಬುರ್ಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಸಮೀಪದ ಗ್ರಾಮ. ಇಲ್ಲಿಯವರೆಗೆ ಇಲ್ಲಿ ಸಿಕ್ಕಿರುವ ನಾಲ್ಕು ಶಾಸನಗಳು ಈ ಊರಿನ ಬಗ್ಗೆ ಮಾಹಿತಿ ನೀಡುತ್ತವೆ.

ಕಲ್ಯಾಣ ಚಾಳುಕ್ಯರ 1ನೆಯ ಸೋಮೇಶ್ವರನ ಕಾಲದಲ್ಲಿ ಈ ಊರು ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ. ಇಲ್ಲಿನ ಒಂದು ಶಾಸನದ ಆಧಾರದಿಂದ ಈ ಗ್ರಾಮವು ಹಿಂದೆ 300 ಮಹಾಜನರನ್ನು ಒಳಗೊಂಡಿದ್ದ ಅಗ್ರಹಾರವಾಗಿತ್ತೆಂದು ತಿಳಿದು ಬರುತ್ತದೆ.

ಮಹಾಮಂಡಳೇಶ್ವರ ಬೊಮ್ಮಯರಸನು ಮತ್ತು ಇತರರು ಇಲ್ಲಿ ಸೋಮೇಶ್ವರ ದೇವರ ಪೂಜಾ ವಿಧಿಯೊಂದು ಕ್ರಿ.ಶ. 1053ರಲ್ಲಿ 300 ಮತ್ತರ ಹೊಲ, 6 ಮತ್ತರ ತೋಟ, 6 ಮನೆ ನಿವೇಶನ ಹಾಗೂ 2 ಗಾಣಗಳನ್ನು ದಾನಕೊಟ್ಟ ದಾಖಲೆಯು ಇಲ್ಲಿ ಸಿಗುತ್ತದೆ. ಮತ್ತೊಂದು ಶಾಸನದಲ್ಲಿ ದಂಡನಾಯಕ ರನ್ನಪ್ಪಯ್ಯನ ತ್ರಿಭುವನ ಮಲ್ಲನಿಂದ ಈ ದೀಗ್ಘವಿಗೆ ಅಗ್ರಹಾರದ 300 ಮಹಾಜನರಿಗೆ ದಾನಕೊಟ್ಟ ದಾಖಲೆ ಇದೆ.

ಈ ಊರಿನಲ್ಲಿ ಪ್ರಾಚೀನ ಸೋಮೇಶ್ವರ, ಶಂಭುಲಿಂಗ, ನಾರಾಯಣ, ಜನಾರ್ಧನ, ರಾಮಲಿಂಗ, ಶಾಂತಲಿಂಗೇಶ್ವರ ಮುಂತಾದ ಮತ್ತು ಇತ್ತೀಚಿನ ಕಾಳಿಕಾ ದೇವಾಲಯಗಳಿವೆ. ಇವೆಲ್ಲವು ಕರ್ನಾಟಕದ ಸಾಂಸ್ಕೃತಿಕ ಪರಂಪರೆ, ಇತಿಹಾಸ ಹಾಗೂ ವಾಸ್ತುಶಿಲ್ಪಕ್ಕೆ ಸಾಕ್ಷಿಯಾಗಿವೆ. *(ಕೆಜಿಪಿ)*

ದಿಟ್ಟಿ: ದೃಷ್ಟಿ ತತ್ಸಮದ ತದ್ಭವ ರೂಪ. ಜನಪದರು ಆಯಾಯ ಸಮುದಾಯದವರು ಪ್ರಾದೇಶಿಕತೆಗೆ ಅನುಗುಣವಾಗಿ ಕರೆಯುವುದು ಕಂಡುಬರುತ್ತದೆ. ಅಂದರೆ ದಿಟ್ಟಿ, ದೃಷ್ಟಿ, ನೋಟ, ಕಣ್ಣಾದೂಳು ಹೀಗೆ ಇನ್ನೂ ಬೇರೆ ಬೇರೆ ಪದಗಳನ್ನು ಬಳಸುವರು.

ಜನಪದರು ನಂಬಿಕೆಗಳನ್ನೇ ಆಧರಿಸಿ ಬದುಕನ್ನು ಸಾಗಿಸುತ್ತಿದ್ದಾರೆ. ವ್ಯಕ್ತಿಯಿಂದ ವ್ಯಕ್ತಿಗೆ, ಜನಾಂಗದಿಂದ ಜನಾಂಗಕ್ಕೆ ಕೆಲಸ ಮಾಡುವ ವಿಧಾನ, ಗ್ರಹಿಕೆ, ಆಲೋಚನಾಕ್ರಮಗಳ ಮೇಲೆ ವೈವಿಧ್ಯಮಯವಾದ ನಂಬಿಕೆಗಳು ಜನಪದರಲ್ಲಿ ಆಚರಣೆ ಯಲ್ಲಿವೆ. ಆದುದರಿಂದ ಇಂದಿಗೂ ಗ್ರಾಮೀಣ ಜನಪದರಲ್ಲಿ, ಪಟ್ಟಣಗಳಲ್ಲಿ ವಾಸಿಸುತ್ತಿರುವವರಲ್ಲಿ ದಿಟ್ಟಿ, ದೃಷ್ಟಿ ನೋಟ ಹೀಗೆ ಬೇರೆ ಬೇರೆ ರೀತಿಯಲ್ಲಿ ಕರೆದು, ನಂಬಿಕೆ ಇಟ್ಟು ಆಚರಿಸುತ್ತಾ ಬಂದಿದ್ದು ಮುಂದುವರೆಸಿಕೊಂಡು ಹೋಗುತ್ತಿರುವುದನ್ನು ಕಾಣಬಹುದು. ಉದಾಹರಣೆಗೆಗೆ. ಬಾಲ್ಯದಲ್ಲಿ ಮಗು ಮುದ್ದಾಗಿರುತ್ತದೆ. ಅಂತಹ ಮಗುವನ್ನು ನೋಡಿದ ಬೇರೆ ಹೆಂಗಸು ಅಥವಾ ಗಂಡಸು ಎಷ್ಟು ಮುದ್ದಾಗಿದೆ ಅಪ್ಪಾ..... ಎಂದು ಹೇಳಿ ನಿರ್ಗಮಿಸುವನು/ಳು ಸ್ವಲ್ಪ ಹೊತ್ತು ಕಳೆದಮೇಲೆ ಆ ಮಗು ಇದ್ದಕ್ಕಿದ್ದ ಹಾಗೆ ರಚ್ಚೆ ಹಿಡಿಯುತ್ತಿದ್ದರೆ ಅಥವಾ ಹಾಲು, ಕುಡಿಯದೇ ಇದ್ದರೆ ಆಗ ದೃಷ್ಟಿ ತೆಗೆಸಲಾಗುತ್ತದೆ. ಅಂದರೆ ಅನುಭವ ಉಳ್ಳ ಹೆಂಗಸು ಸ್ನಾನ ಮಾಡಿದ್ದು, ರೊಚ್ಚಿ

ಹಿಡಿದು ಅಳುತ್ತಿದ್ದ ಮಗುವನ್ನು ಅಂಗಾತ ಮಲಗಿಸಿ ಅವಳು ತನ್ನ ಕೂದಲನ್ನು ಎಡಗೈಯಲ್ಲಿ ಹಿಡಿದು ಬಾಗಿ ಮಗುವಿನ ಮುಖದಿಂದ ಕಾಲಿನವರೆಗೂ ನೀವಳಿಸುವಳು. ಅಂಥ ಸಂದರ್ಭದಲ್ಲಿ ತನ್ನ ಇಷ್ಟ ದೈವವನ್ನು ಜ್ಞಾಪಿಸಿಕೊಂಡು ಈ ರೀತಿ ಮಾಡುತ್ತಾಳೆ. ಅನಂತರ ಎಲ್ಲಾ ಸರಿಹೋಯಿತೀಗ ಎಂದು ಹೇಳುವಳು. ಹೀಗೇ ಬೇರೆ ಬೇರೆ ರೀತಿಯಾಗಿ ದೃಷ್ಟಿ ತೆಗೆಯುವುದನ್ನು ಜನಪದರಲ್ಲಿ ಇಂದಿಗೂ ಕಾಣಬಹುದಾಗಿದೆ.

(ಎಚ್‌ಕೆಮಿನ್)

ದಿಡ್ಡಿ ಬಾಗಿಲು: ಭದ್ರತೆಯ ಉದ್ದೇಶದಿಂದ ಮಾಡಿಸಿದ ಗುಪ್ತದ್ವಾರ, ಉಪದ್ವಾರ, ಸಣ್ಣ ಬಾಗಿಲು, ಮನೆ. ಗುಹೆಯಲ್ಲಿದ್ದ ಮಾನವ ಸಂಸ್ಕಾರಗೊಂಡಂತೆ ಭವ್ಯ ಸೌಧಗಳನ್ನು ನಿರ್ಮಿಸಿದ ಭದ್ರತೆಗಾಗಿ ನಾನಾ ಮಾರ್ಗಗಳನ್ನು ಅನುಸರಿಸಿದ, ಅನಿರೀಕ್ಷಿತವಾಗಿ ಆಕ್ರಮಣಗಳು ನಡೆದರೆ ಸುಲಭವಾಗಿ ಪಾರಾಗಲು ಮಾರ್ಗಗಳನ್ನು ಕಂಡುಕೊಂಡ, ದಿಡ್ಡಿ ಬಾಗಿಲು ಅಂಥದೊಂದು ಸಾಧನವಾಗಿದೆ. 'ಊರೆಲ್ಲ ಕೊಳ್ಳೆ ಹೊಡ್ದಾಗ ದಿಡ್ಡಿ ಬಾಗಿಲು ಹಾಕಿದರಂತೆ' ಎಂಬ ಜನಪದ ಮಾತಿನಲ್ಲಿ ದಿಡ್ಡಿ ಬಾಗಿಲು ಸುರಕ್ಷತೆಗಾಗಿ ಮಾಡಿಸಿರುವ ಬಾಗಿಲು ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಬಾಗಿಲು ಎಂದರೆ 'ಪ್ರವೇಶಿಸುವ ಮಾರ್ಗ' ವಾಯಕಿಲ್>ವಾಗಿಲು>ಬಾಗಿಲು ಮನೆಯಬಾಯಿ ಎಂಬುದಾಗಿ ತಮಿಳಿನಲ್ಲಿ ಅರ್ಥ ಕಲ್ಪಿಸಲಾಗಿದೆ. ರಾಜಗೃಹಗಳಲ್ಲಿ, ಕಾರಾಗೃಹಗಳಲ್ಲಿ, ಭದ್ರತೆಯ ಮಹಲುಗಳಲ್ಲಿ ಮುಖ್ಯದ್ವಾರ (ಬಾಗಿಲು)ಗಳಿದ್ದಂತೆ ರಹಸ್ಯವಾಗಿ ಹೊರಹೋಗುವ ಮಾರ್ಗಗಳು ಇದ್ದವು. ಹೈದ್ರಾಬಾದ ಕರ್ನಾಟಕಕ್ಕೆ ಸಂಬಂಧಿಸಿದಂತೆ ರಕ್ಷಣಾ ಕೋಟೆಗಳಲ್ಲಿ, ಗುಂಬಜಗಳಲ್ಲಿ ಇಂಥ ಬಾಗಿಲುಗಳನ್ನು ಕಾಣಬಹುದಾಗಿದೆ 'ದಿಡ್ಡಿ' ದಿಡ್ಡ>ಗಿಡ್ಡ, ಕಿರಿದಾದ ಬಾಗಿಲು ಎಂಬರ್ಥದಲ್ಲಿ ಬಳಕೆಯಾಗುತ್ತದೆ. *(ಎಸ್‌ಎಲ್‌ಜೆ)*

ದೀಡ ದುಪ್ಪಟ: ಒಂದರ ಮೇಲೆ ಅರ್ಧ (1½). ದುಪ್ಪಟ್ಟು ಎಂದರೆ ಎರಡು ಪಟ್ಟು, ಇಮ್ಮಡಿ. ಈ ಪದ ಹಿಂದಿ ಭಾಷೆಯದು. ಬೀದರ ಜಿಲ್ಲೆ ಬಹಮನಿ ಹಾಗೂ ಹೈದ್ರಾಬಾದ ನಿಜಾಮರ ಆಡಳಿತಕ್ಕೆ ಒಳಗಾದ ಕಾರಣ ಹಿಂದಿ, ಉರ್ದು ಪದಗಳು ಕನ್ನಡ ಪದಗಳೊಂದಿಗೆ ಕೂಡಿಕೊಂಡು ಸಂಯುಕ್ತ ಪದಗಳಾಗಿವೆ. ದೀಡ ಖಂಡುಗ, ದೀಡ ಮಣ, ದೀಡ ಸೇರು, ದೀಡ ರೊಟ್ಟಿ, ದೀಡಸೇ ರೂಪಾಯಿ, ದೀಡ ರೂಪಾಯಿ, ದೀಡ ಬುಟ್ಟಿ ಹೀಗೆ ಈ ಪದ ಬಳಕೆಯಲ್ಲಿದೆ. ಸಾಲಕೊಟ್ಟ ಸಾಹುಕಾರ ಒಂದಕ್ಕೆ ದೀಡಪಟ್ಟು, ದೀಡಕ್ಕೆ ದೀಡದುಪ್ಪಟ್ಟು ವಸೂಲಿ ಮಾಡಿದ್ದಾನೆ ಎಂದು ಹಲವರು ಮಾತಾಡುವದು ಕೇಳಿರುತ್ತೇವೆ. 'ದೀಡ ದುಗನಿ ರಾತ ಚೌಗುನಿ' ಎಂಬ ಹಿಂದಿ ಗಾದೆ ಮಾತು ಇದನ್ನೇ ತಿಳಿಸುತ್ತದೆ.

ಹಲವರ ಅಭಿಪ್ರಾಯದಂತೆ ಹಿಂದಿಯ ದೋಪಟ್ಟ ಎಂಬ ಶಬ್ದವೇ ದುಪ್ಪಟ್ಟು ಎಂದು ಆಗಿರುತ್ತದೆ ಎನ್ನುವಲ್ಲಿ ಸತ್ಯಾಂಶವಿದೆ. ದೀಡ ದುಪ್ಪಟ್ಟ ಎಂದರೆ ಮೂರುಪಟ್ಟು ಎಂದು ಅರ್ಥವಾಗುತ್ತದೆ. ಒಂದುವರಿ+ಒಂದುವರಿ=ಮೂರು. ಅಂದರೆ ದೀಡ ಎಂಬುದರ ಎರಡು ಪಟ್ಟು ಎಂದರ್ಥ. ಹಣದ ಲೇವಾದೇವಿ ಸಂಸ್ಥೆಗಳಲ್ಲಿ ಅಸಲು ಹಣಕ್ಕೆ ಹೆಚ್ಚು ಹಣ ವಸೂಲಿ ಮಾಡಿದಾಗ ಕೊಟ್ಟವನು ಈ ಮಾತು ಹೇಳುತ್ತಾನೆ. ಆ ಸಂಸ್ಥೆ ನನ್ನ ಹತ್ತಿರ ದೀಡ ದುಪ್ಪಟ್ಟು ಹಣ ವಸೂಲಿ ಮಾಡಿತು ಎಂದು ಹಿಡಿ ಶಾಪ ಹಾಕುತ್ತಾನೆ.

ದೈಹಿಕ ಸಾಮರ್ಥ್ಯವನ್ನು ಹೆಚ್ಚು ಬೆಳಸಿದವನಿಗೆ ಅವನು ಬೆಳವಣಿಗೆಯಲ್ಲಿ ಇವನಿಗಿಂತ ದೀಡದುಪ್ಪಟ್ಟ ಆಗಿದ್ದಾನೆ ಎನ್ನುತ್ತಾರೆ. ಆದರೆ ಇಂದಿನ ಶಿಷ್ಟ ಸಾಹಿತ್ಯದಲ್ಲಿ ಇಂತಹ ಜನಪದ ಶಬ್ದಗಳು ಕಣ್ಮರೆಯಾಗುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಜನಪದರ ಆಡು ಮಾತಿನಲ್ಲಿ ಜಾನಪದ ಸಾಹಿತ್ಯದಲ್ಲಿ ಈ ಪದಗಳು ಇನ್ನೂ ಜೀವಂತವಾಗಿವೆ. *(ಹೆಚ್‌ಕೆ)*

ದೀಡ ಪಂಡಿತ: ಪೂರ್ಣ ತಿಳಿವಳಿಕೆ ಇಲ್ಲದವ ಮೂಢ, ಅಪೂರ್ಣ ಎಂಬ ಅರ್ಥವನ್ನು ಸ್ಫುರಿಸುವ ಪದ. ಇದು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಬಳಕೆಯಲ್ಲಿದ್ದು ಉರ್ದು ಪ್ರಭಾವದ ಹಿಂದುಸ್ಥಾನಿ ಪದವಾಗಿದೆ. ದೀಡ ಪಂಡಿತನೆಂದರೆ ಪಾಂಡಿತ್ಯವಿಲ್ಲದ, ಪ್ರಚಾರ ಬಯಸುವ ಮೂಢ. ಅವನನ್ನು ಗೇಲಿ ಮಾಡಲು ಬಳಸುವ, ಲಘುವಾಗಿ ಮಾತನಾಡುವ ಶಬ್ದ. ಆ ವ್ಯಕ್ತಿಯ ಅಜ್ಞಾನದ ಬಗ್ಗೆ ಸೂಚಿಸುವ ಪದವಾಗಿ ಬಳಕೆಯಲ್ಲಿದೆ. ಪಾಂಡಿತ್ಯವು ಪ್ರತಿಭೆಯ ಸಂಕೇತ, ಭೂತ, ವರ್ತಮಾನ, ಭವಿಷತ್ತಿನ ಆಗು ಹೋಗುಗಳ ಬಗೆಗಿನ ಚಿಂತನೆಯನ್ನು ವ್ಯಕ್ತಪಡಿಸುವುದು ಪಾಂಡಿತ್ಯದ ಕುರುಹಾಗಿದೆ. ಕಲೆಗಳ ಆರಾಧನೆಯಲ್ಲಿ, ಶಾಸ್ತ್ರ ಕೃತಿಗಳ ರಚನೆಗಳಲ್ಲಿ ಪಂಡಿತನಾದವ ಮಾತ್ರ ಅದರ ಮಹತ್ವವನ್ನು ಮನಗಾಣುತ್ತಾನೆ. ಆದರೆ ಯಾವುದೇ ಜ್ಞಾನವಿಲ್ಲದೆ ಪ್ರತಿಯೊಂದು ವಿಷಯದಲ್ಲಿ ಮೂಗು ತೂರಿಸುವ, ಸಮಯದ ಲಾಭ ಪಡೆಯಲು ಎಲ್ಲರ ಗಮನ ಸೆಳೆಯಲು ತನಗೆ ಗೊತ್ತಿರದ ವಿಷಯವನ್ನು ಗೊತ್ತಿದೆ ಎಂದು ಸಾಧಿಸ ಹೊರಟ ವ್ಯಕ್ತಿಯನ್ನು ವ್ಯಂಗ್ಯವಾಗಿ ಸಂಬೋಧಿಸಲು ದೀಡ ಪಂಡಿತನೆಂದು ಕರೆಯಲಾಗುತ್ತದೆ. *(ಎಸ್‌ಎಲ್‌ಜೆ)*

ದೀಪ ಸ್ತಂಬ: ದೇವಾಲಯಗಳ ಎದುರಿಗಿರುವ ಬೆಳಗುವ ದೀಪ. ಜಾತ್ರೆ, ಉತ್ಸವ ದಿನಗಳಲ್ಲಿ ಬಳಸಲಾಗುವ ದೇವಾಲಯಗಳ ಎದುರಿಗೆ ಇರುವ ಸ್ತಂಬದ ಮೇಲಿರುವ ದೀಪವಾಗಿದೆ. ಇದು ಅಪರಿಚಿತರಿಗೆ ದಾರಿ ತೋರುವ ಹಾಗೂ ಹಬ್ಬ ಹರಿದಿನಗಳಲ್ಲಿ ಉತ್ಸವದ ಕುರುಹಾಗಿ ಬೆಳಕು ತೋರುವ, ಮಾರ್ಗದರ್ಶನ ಮತ್ತು ಸಂಭ್ರಮದ ಸಂಕೇತವಾಗಿ ಬಳಸಲಾಗುತ್ತದೆ. ಇನ್ನೊಂದು ಅರ್ಥದಲ್ಲಿ ದೀಪ ಸ್ತಂಬವೆಂದರೆ ಸಮುದ್ರದಲ್ಲಿ ಚಲಿಸುವ ಹಾಡಗುಗಳಿಗೆ ದಾರಿ ತೋರಿಸುವ ಅಂದರೆ ದಿಗ್‌ದರ್ಶಿಸುವ ಸಮುದ್ರ ಮಧ್ಯದಲ್ಲಿ ಕಂಬಗಳ ಮೇಲಿರುವ ದೀಪವಾಗಿದೆ.



ದೀಪ ಸ್ತಂಬ

ದೀಪ ಸ್ತಂಬ ಗುಡಿಗುಂಡಾರಗಳಲ್ಲಿ ನಡೆಯುವ ಸುಸಂಸ್ಕೃತ ಕಾರ್ಯಾಚರಣೆಗಳಿಗೆ ಸಂಕೇತವಾಗಿ ನಿಂತಿದೆ. ಇಂತಹ ದೀಪ ಸ್ತಂಬಗಳು ಸರ್ವಕಾಲದಲ್ಲಿಯೂ ವಿಶೇಷ ದಿನಗಳಲ್ಲಿ ಬೆಳಕಿನ ಕಿರಣ ಸೂಸಿ ಜನಮನದ ಸಂಭ್ರಮಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

(ಎಸ್‌ಎಲ್‌ಜೆ)

ದೀ

ದೀಪಾವಳಿ: ಹಿಂದೂಗಳ ಪ್ರಮುಖ ಹಬ್ಬ. ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ. ಕತ್ತಲೆಯನ್ನು ದೂರಮಾಡಿ ಬೆಳಕನ್ನು ಪಡೆಯುವದು ಈ ಹಬ್ಬದ ವಿಶೇಷತೆಯಾಗಿದೆ. ದೀಪಗಳಿಂದ ಅಲಂಕರಿಸುವ ದೀಪಾರಾಧನೆಗೆ ಹೆಸರಾದ ಹಬ್ಬವಾದ್ದರಿಂದ ಇದಕ್ಕೆ 'ದೀಪಾವಳಿ' ಎಂಬ ಹೆಸರು ಬಂದಿದೆ. ಈ ಹಬ್ಬ ಆಶ್ವಿನ ಮಾಸದ ಕೃಷ್ಣ ಪಕ್ಷದ ಚತುರ್ದಶಿಯೆಂದು ಆರಂಭವಾಗುತ್ತದೆ. ಕಾರ್ತಿಕ ಮಾಸದ ಶುಕ್ಲ ಪಕ್ಷದ ಪ್ರತಿಪದೆಯಂದು ಮುಗಿಯುತ್ತದೆ.

ಮೊದಲನೆಯ ದಿನವನ್ನು 'ನರಕ ಚತುರ್ದಶಿ' ಎಂದು, ಎರಡನೆಯ ದಿನವನ್ನು ಲಕ್ಷ್ಮೀ ಪೂಜೆಗಾಗಿ ಮತ್ತು ಮೂರನೆಯ ದಿನವನ್ನು 'ಬಲಿಪಾಡ್ಯ' ಎಂದು ಆಚರಿಸಲಾಗುತ್ತದೆ.

ಹಿಂದೂ ಪೌರಾಣಿಕ ಹಿನ್ನೆಯ ಪ್ರಕಾರ ಭೂದೇವಿಯ ಮಗನಾದ ನರಕಾಸುರನು ಎಲ್ಲಾ ದೇವತೆಗಳನ್ನು ಎದುರಿಸಿ, ಯಕ್ಷ-ಕಿನ್ನರ, ವಿದ್ಯಾಧರ ಮೊದಲಾದ ಹದಿನಾರು ಸಾವಿರ ಮಂದಿ ಸ್ತ್ರೀಯರನ್ನು ಸೆರೆಯಲ್ಲಿಟ್ಟು ಕಿರುಕುಳ ಕೊಡತೊಡಗಿದನಂತೆ. ಆಗ ಕೃಷ್ಣನು ನರಕಾಸುರನನ್ನು ಕೊಂದು ಎಲ್ಲರನ್ನು ಪಾರು ಮಾಡಿದನು. ತನ್ನ ಮಗನ ಸಾವನ್ನು ತಿಳಿದ ಭೂದೇವಿಯ ಅವತಾರವಾದ ಸತ್ಯಭಾಮೆಯು ತನ್ನ ಮಗ ಸತ್ತ ಈ ಚತುರ್ದಶಿಯ ದಿನವನ್ನು ತನ್ನ ಮಗನ ಹೆಸರಿನಲ್ಲಿ ಬೆಳಕಿನ ಹಬ್ಬವನ್ನು ಆಚರಿಸುವಂತೆ ಕೃಷ್ಣನನ್ನು ಪ್ರಾರ್ಥಿಸಿದಳಂತೆ ಅಂದಿನಿಂದ ಆ ದಿನವನ್ನು 'ನರಕ ಚುತುರ್ದಶಿ ಎಂದು ಆಚರಿಸುವ ಸಂಪ್ರದಾಯ ಬೆಳೆದು ಬಂದಿದೆ.

ದೀಪಾವಳಿ ಹಬ್ಬದ ಎರಡನೆಯ ದಿನವು ಅಶ್ವಿನ ಮಾಸದ ಅಮಾವಾಸ್ಯೆಯಾಗಿರುತ್ತದೆ. ಅಂದು ಜನಪದರು, ಕರಕುಶಲ ಗಾರರು, ರೈತರು ತಮ್ಮ ತಮ್ಮ ಕಾಯಕದ ಸಾಮಗ್ರಿಗಳನ್ನು ಪೂಜಿಸುತ್ತಾರೆ ವರ್ತಕರು ಲಕ್ಷ್ಮೀಯನ್ನು ಪೂಜಿಸುತ್ತಾರೆ.

ಮೂರನೆಯ ದಿನ ಅಂದರೆ ಕಾರ್ತೀಕ ಮಾಸದ ಪ್ರತಿಪದೆಯನ್ನು 'ಬಲಿಪಾಡ್ಯ' ಎಂದು ಆಚರಿಸುತ್ತಾರೆ. ಇದೇ ದಿನದಂದು ರಾಮಾಯಣದಲ್ಲಿ ಶ್ರೀರಾಮನು ಪಟ್ಟಾಭಿಷೇಕ ಗೊಂಡುದಕ್ಕೆ, ಮಹಾಭಾರತದಲ್ಲಿ ಪಾಂಡವರು ಅಜ್ಞಾತವಾಸ ಮುಗಿಸಿದಾದಕ್ಕೆ ಮತ್ತು ಶ್ರೀ ಹರಿಯು ವಾಮನವತಾರ ತಾಳಿ ಬಲಿಚಕ್ರವರ್ತಿಯನ್ನು ಪಾಳಾಳಕ್ಕೆ ತಳ್ಳಿದುದಕ್ಕೆ ಸಂಕೇತವಾಗಿ, ಪ್ರಾದೇಶಿಕವಾಗಿ ವಿವಿಧ ಪೂಜಾಪದ್ಧತಿಗಳು ದೀಪಾರಾಧನೆಯ ಸಂಪ್ರದಾಯಗಳು ಉಳಿದು ಬೆಳೆದು ಬಂದಿವೆ.

(ಕೆಜಿಪಿ)

ದು

ದುಂದುಮಿ ಮೇಳ: ಹೋಳಿ ಹುಣ್ಣಿಮೆ ಮತ್ತು ಕಾಮದಹನದ ದಿನ ಹಳ್ಳಿಗಳಲ್ಲಿ ಜನಪದರು ಹಾಡುತ್ತಾ, ಕುಣಿಯುತ್ತಾ, ಕೇಕೆ ಹಾಕುತ್ತಾ, ಬಣ್ಣದೋಕುಳಿ ಆಡುತ್ತಾ ಹಾಡುವ ಹಾಡು. ಹೈದ್ರಾಬಾದ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಜನಸಾಮಾನ್ಯರು ವರ್ಷದ ಉದ್ದಗಲಕ್ಕೂ ದುಡಿದು ದಣಿವು ಆರಿಸಿಕೊಳ್ಳುವ ಸಂತಸ ಹಂಚಿಕೊಳ್ಳುವ ಸಂಭ್ರಮದ ಆಚರಣೆಯೇ ಹೋಳಿ ಹುಣ್ಣಿಮೆ.



ದುಂದುಮಿ ಮೇಳ

ಹಿಂದೂ ಪುರಾಣಗಳಲ್ಲಿ ಬರುವ ಶಿವನ ತಪಸ್ಸನ್ನು ಭಂಗ ಮಾಡುವಾಗ ಮನ್ಮಥ ಬಿಟ್ಟ ಹೂ ಬಾಣಗಳಿಗೆ ವಿಚಲಿತನಾದ ಶಿವ ಕಣ್ಣು ತೆರದಾಗ ಅವನ ಕಡೆಗಣ್ಣಿನ ಉರಿಯಿಂದ ಮನ್ಮಥನ ದಹನವಾಗುತ್ತದೆ. ಇದನ್ನೇ ಆಧಾರವಾಗಿಟ್ಟುಕೊಂಡು ಜನಪದರು ಮನ್ಮಥನ (ಕಾಮನ) ಶವಸಂಸ್ಕಾರ ಮಾಡುವುದನ್ನು ಅನುಕರಿಸಲು ತಮ್ಮ ತಮ್ಮಲ್ಲೇ ಯಾರಾದರೊಬ್ಬರು ಹೆಣವಾಗಿ ಅವನ ಹೆಣದ ಮೆರವಣಿಗೆ ಮಾಡಿ ಆ ಮೆರವಣಿಗೆಯಲ್ಲಿ ಅಳುತ್ತಾ ಕರೆಯುತ್ತಾ, ಕೇಕೆ ಹಾಕುತ್ತಾ, ಕುಣಿಯುತ್ತಾ, ಹಾಡುವಾಗ ಈ ದುಂದುಮಿ ಮೇಳ ಗೀತೆಗಳು ಹುಟ್ಟಿಕೊಂಡಿವೆ.

ಇಲ್ಲಿಯ ಜನರು ಆ ಸಂದರ್ಭದ ಗುಂಗಿನಲ್ಲಿ ಕೋಲಾಟ ಮಾಡುತ್ತಾ ಕಾಮದಹನದ ಜಾಗದ ಸುತ್ತ-ಮುತ್ತ ಕುಣಿಯುತ್ತಾ ಜನರನ್ನು ರಂಜಿಸುತ್ತಾ ಪೌರಾಣಿಕ ಘಟನೆಯನ್ನು ನೆನೆಯುತ್ತಾ ಆಚರಿಸುವ ಸಂಪ್ರದಾಯವೇ ದುಂದುಬಿ ಮೇಳವಾಗಿದೆ.

(ಕೆಜಿಪಿ)

ದುಮ್ಮಾಲಿ: ಒಂದು ಬಗೆಯ ಚರ್ಮವಾದ್ಯ. ದೇವಿ ಆರಾಧನೆಯ ಸಂದರ್ಭದಲ್ಲಿ ಈ ಚರ್ಮವಾದ್ಯವನ್ನು ಸಾಮೂಹಿಕವಾಗಿ ಕಲಾವಿದರು ಬಳಸಿ ಕುಣಿಯುವುದರಿಂದ ದುಮ್ಮಿ-ದಿಮ್ಮಿ-ದುಮ್ಮಾಲಿ ಮೇಳ ಎಂದು ಕರೆಯುತ್ತಾರೆ. ದುಮ್ಮಾಲಿ ಮೇಳದ ಆರಾಧ್ಯ ಗ್ರಾಮದೇವತೆ ಮರಗಮ್ಮ. ಸಂಜೆಗೆ ಮರಗಮ್ಮ ತಾಯಿಯ ಸಮ್ಮುಖದಲ್ಲಿ ಪ್ರತಿಯೊಬ್ಬರು ಚರ್ಮವಾದ್ಯ ದಿಮ್ಮಿ ಹಿಡಿದು 10–15 ಜನ ಹಾಡುತ್ತ ಕುಣಿಯುತ್ತಾರೆ. ತಂಡದ ಮುಖ್ಯಸ್ಥನ ವೇಷ ಭೂಷಣಗಳು ಕೂಡ ವಿಶೇಷವಾಗಿರುತ್ತದೆ. ತಮಾಷೆಗಾಗಿ ಒಬ್ಬಿಬ್ಬರೂ ಹೆಣ್ಣಿನವೇಷ ಹಾಕಿ ಕುಣಿಯುವುದುಂಟು. ತಂಡದ ನಾಯಕ ಕೃಷ್ಣನಾದರೆ ಹೆಣ್ಣು ವೇಷಧಾರಿ ರಾಧೆಯಾಗಿರುತ್ತಾಳೆ.

ದುಮ್ಮಾಲಿ ಮೇಳ ವರ್ತುಲಾಕಾರದಲ್ಲಿರುತ್ತದೆ. ಮುಖ್ಯಸ್ಥ ದಿಮ್ಮಿಯನ್ನು ಹೊಟ್ಟೆಗೆ ಕಟ್ಟಿಕೊಂಡು ಬಾರಿಸುತ್ತಾನೆ. ಉಳಿದ ಸಹಕಲಾವಿದರು ಅವನ ನಿರ್ದೇಶನದಂತೆ ಬಾರಿಸುತ್ತ ಹೆಜ್ಜೆ ಹಾಕುತ್ತಾ ಕುಣಿದಾಡುತ್ತಾರೆ. ಹಾಡುಗಳು ಮರಗಮ್ಮ ಕುರಿತಾಗಿರುತ್ತವೆ. ಮರಗಮ್ಮ ದೇವಿಯೇ ಗ್ರಾಮದ ಸಮಸ್ಥರನ್ನೆಲ್ಲ ರಕ್ಷಿಸುವವಳು. ಅವಳಿಂದ ಎಲ್ಲ ರೋಗ ರುಜಿನಗಳು ಮಾಯವಾಗಿ ಹೋಗುತ್ತವೆಂದು ಹಾಡಿ ಹೊಗಳುತ್ತಾರೆ.

(ಎಂಎಸ್‌ಬಿ)

ದುರುಗ ಮುರುಗಿ: ವಿಶಿಷ್ಟ ಜನಪದ ಕಲೆ. ಮಾರಮ್ಮನ ರೂಪದ ಈ ದೇವತೆ ಒಂದು ಕಡೆ ನೆಲೆ ನಿಲ್ಲುವವಳಲ್ಲ. ಊರೂರು ಸುತ್ತುವವಳು. 'ದುರುಗ ಮುರುಗಿಯವರು' ಅಥವಾ 'ಮರಗಮ್ಮದವರು' ಎಂದೇ ಕರೆಯಲಾಗುವ ಒಂದು ವಿಶೇಷ ಜನಾಂಗ ತಮ್ಮ ದೇವತೆಯನ್ನು ಪೆಟ್ಟಿಗೆಯಲ್ಲಿಟ್ಟು, ಅದನ್ನು ಹೊತ್ತುಕೊಂಡು ಊರಾಡುತ್ತಾರೆ. ಊರಾಡುವ ಸಂದರ್ಭದಲ್ಲಿ ಪೆಟ್ಟಿಗೆಯನ್ನು ಹೊತ್ತು 'ಉರುಮೆ' ಅಥವಾ 'ಅರೆ' ವಾದ್ಯದ ಬಡಿತಕ್ಕೆ ತಕ್ಕಂತೆ ಕುಣಿಯುವುದಲ್ಲದೆ, ಪೋತುರಾಜನ ವೇಷ ಹಾಗೂ ಸೋಮನ ಮುಖವಾಡದ ಪ್ರದರ್ಶನ ಕೂಡ ನೀಡುತ್ತಾರೆ. ಇವರಲ್ಲಿ ಪೆಟ್ಟಿಗೆ ದುರುಗಮುರುಗಿಯವರು ಹಾಗೂ ಬುಟ್ಟಿ ದುರುಗಮುರುಗಿಯುವರೆಂದು ಎರಡು ವಿಧ. ಬುಟ್ಟಿ ದುರುಗಮುರುಗಿಯವರು ಬುಟ್ಟಿಯಲ್ಲಿ ತಮ್ಮ ದೇವರನ್ನಿಟ್ಟು ಹೊತ್ತು ಊರಾಡುತ್ತಾರೆ.

ಆಚರಣೆ: ಮೊದಲು ಊರಿನ ಒಂದು ಬೀದಿಯ ವಿಶಾಲ ಸ್ಥಳದಲ್ಲಿ ಪೆಟ್ಟಿಗೆಯನ್ನು ಪ್ರತಿಷ್ಠಾಪಿಸಿ, ಗಂಟೆ ಸದ್ದು ಮಾಡಲಾಗುತ್ತದೆ. ಹೆಂಗಸು ಉರುಮೆ ಸದ್ದು ಮಾಡುತ್ತಾ ಮರಗಮ್ಮನ ಸ್ತುತಿ ಮಾಡುತ್ತಾಳೆ. ಗಂಡಸು ಒಂದೆರಡು ಬಾರಿ ಚಾವಟಿಯಿಂದ ತನ್ನ ಬರಿಮೈಗೆ ಹೊಡೆದುಕೊಂಡು ದೇವರನ್ನು ಹೊಗಳುತ್ತಾನೆ.

ಸ್ತುತಿ ಮಾಡುತ್ತಾ ಚಾವಟಿ ಏಟು ಹೊಡೆದುಕೊಳ್ಳುವ ಈ 'ಪೋತರಾಜ' ತನ್ನ ಪೆಟ್ಟಿಗೆ ಇಟ್ಟಲ್ಲಿಂದ ಆ ಬೀದಿಯ ಅಂತ್ಯದವರೆಗೆ ತನ್ನ ವೇಷವನ್ನು ಮೆರೆಯುತ್ತಾನೆ. ಅಂದರೆ ಉರುಮೆ ವಾದ್ಯದ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾ, ಕೈಲಿ ಹಿಡಿದ ಚಾವಟಿಯನ್ನು ಎತ್ತಿ ತಿರುಗಿಸುತ್ತಾ, ಕೆಲವೊಮ್ಮೆ ಆ ಚಾವಟಿಯನ್ನು ಎರಡೂ ಕೈಯಿಂದ ಹಿಡಿದು ಹಿಂಡುತ್ತಾ ಲಘುವಾಗಿ ನರ್ತಿಸುತ್ತಾನೆ. ಮಧ್ಯೆ ಮಧ್ಯೆ ಆವೇಷ ಬಂದವನಂತೆ ಚಾವಟಿಯಿಂದ ಪಟಪಟನೆ ಮೈಯ್ಯಿಗೆ ಹೊಡೆದುಕೊಳ್ಳುತ್ತಾನೆ. ಕೆಲವೊಮ್ಮೆ ರಕ್ತ ಕೂಡ ಒಸರುತ್ತದೆ. ಈ ರೀರಿಯ ಒಂದು ವೇಷ ಆದಮೇಲೆ ಮುಖಕ್ಕೆ ಮುಖವಾಡ ಹಾಕಿಕೊಂಡು ಉರುಮೆ ಗತಿಗೆ ತಕ್ಕಂತೆ ನರ್ತಿಸುತ್ತಾನೆ. ಹೈದ್ರಾಬಾದ ಕರ್ನಾಟಕ ಭಾಗಗಳಲ್ಲಿ ಚೌಡಿಯ ಮುಖವಾಡವನ್ನು, ದಕ್ಷಿಣದ ಭಾಗಗಳಲ್ಲಿ ಸೋಮನ ಮುಖವಾಡವನ್ನು ಹಾಕಿಕೊಂಡು 'ದೈಯ್ಯದಪ್ಪ.... ದೈಯಪ್ಪಾ' ಎನ್ನುತ್ತಾ ಅಭಿನಯಿಸುತ್ತಾನೆ. ಊರ ಜನ ಈ ವೇಷ ನೋಡಲು





ದುರುಗ ಮುರುಗಿಯವರು

ಸೇರುತ್ತಾರೆ. ಹೆಣ್ಣುಮಕ್ಕಳು ಮೊರದಲ್ಲಿ ರಾಗಿ, ಜೋಳ, ಕಾಳು ಮುಂತಾದ ದವಸ ಧಾನ್ಯಗಳನ್ನು ತುಂಬಿತಂದು ದೇವತೆಗೆ ಅರ್ಪಿಸುತ್ತಾರೆ. ಪೋತರಾಜ ಅವರ ಮೊರಕ್ಕೆ ಭಂಡಾರ ಹಚ್ಚಿ ಹಿಂದೆ ಕೊಡುತ್ತಾನೆ. ಆ ಭಂಡಾರವನ್ನು ಅನಂತರ ಮನೆಮಕ್ಕಳಿಗೆಲ್ಲಾ ಹಚ್ಚಲಾಗುತ್ತದೆ.

ಹೀಗೆ ಆಗಾಗ ಬರುವ ದೇವತೆಗೆ ಕೆಲವರು ಹರಕೆ ಹೊರುವುದೂ ಉಂಟು. ಅಂಥವರು ಆ ಮಾರಮ್ಮನಿಗೆ ಕಾಲು ಕಡಗ, ಗೆಜ್ಜೆ, ಚೈನು, ಅಟಿಗೆ ಸರ, ಬೆಳ್ಳಿಯ ಕಾಸಿನ ಸರ, ಡಾಬು, ತೋಳಬಂದಿ ಮುಂತಾದ ಒಡವೆಗಳನ್ನು ಅರ್ಪಿಸುವುದೂ ಉಂಟು. ಸಾಮಾನ್ಯವಾಗಿ ಆ ಪೂಜಾರಿ ತನ್ನ ಪೆಟ್ಟಿಗೆಯ ಮುಂಭಾಗದಲ್ಲಿ ನೇತುಬಿಟ್ಟು ಅಲಂಕರಿಸಿರುತ್ತಾನೆ. ಪ್ರತಿ ಊರಿಗೆ ಹೋದಾಗಲೂ ಇಂತಿಂಥ ಒಡವೆಗಳನ್ನು ಇಂತಿಂಥಾ ಊರವರು ಕೊಟ್ಟರು ಎಂದು ಹೇಳಿ, ಅವರವರಿಗೆ ಒದಗಿದ್ದ ಕಷ್ಟ ಪರಿಹಾರವಾದ ಬಗೆಯನ್ನು ಹೊಗಳುತ್ತಾನೆ. ಅವನಿಗೆ ಬರುವ ಭಿಕ್ಷೆ, ಹರಕೆ ಬಂದ ಮೇಲೆ ಮತ್ತೆ ಪೆಟ್ಟಿಗೆಯನ್ನು ಹೊತ್ತು ಮುಂದಿನ ಬೀದಿಗೆ ಹೋಗುತ್ತಾನೆ. ಈ ದೇವತೆ ಆಗಾಗ ಊರಿಗೆ ಬಂದು ಹೋಗುವುದರಿಂದ ರೋಗ ರುಜಿನ ದೂರವಾಗುತ್ತವೆ ಎಂದೇ ಜನ ನಂಬುತ್ತಾರೆ. ಇದಲ್ಲದೆ ಇತರ ಗ್ರಾಮದೇವತೆಯರ ಹಬ್ಬ, ಜಾತ್ರೆಗಳಲ್ಲೂ ಉರಿಮಾರಮ್ಮ ಅಥವಾ ಮರಗಮ್ಮನನ್ನು ಒಂದು ಗೊತ್ತಾದ ಸ್ಥಳದಲ್ಲಿಟ್ಟು ಮೇಲ್ಕಾಣಿಸಿದಂತೆಯೇ ಪ್ರದರ್ಶಿಸುವ ಪದ್ಧತಿಯೂ ಇದೆ.

ವೇಷಭೂಷಣ, ವಾದ್ಯ: ಇವರ ವೇಷಭೂಷಣಗಳೂ ವಿಚಿತ್ರವಾಗಿವೆ. ಮುಖಕ್ಕೆ ಅರಿಶಿಣ, ಹಣೆಗೆ ದೊಡ್ಡ ಬೊಟ್ಟಿನಾಕಾರದ ಕುಂಕುಮ, ಕಣ್ಣಟ್ಟುಗಳಿಗೆ ಕಾಡಿಗೆ, ಪೊದೆ ಮೀಸೆ, ಎದೆಗೂ ಅರಿಶಿಣ ಕುಂಕುಮ ಭಂಡಾರದ ಲೇಪನ, ಕೈ ರಟ್ಟೆಗೆ ಬೆಳ್ಳಿಯ ಕಡಗ, ನಡುವಿಗೆ ದಪ್ಪ ಗೆಜ್ಜೆಯ ಸರ, ಕಾಲಿಗೆ ಪೊದೆಗೆಜ್ಜೆ, ಸಾಮಾನ್ಯವಾಗಿ ಕೆಂಪು ಸೀರೆಯನ್ನೇ ನೀರಿಗೆಯಾಗಿ ಕಚ್ಚೆಯ ರೀತಿ ಕಟ್ಟಿದ ಕಾಸೆ, ಕೈಯಲ್ಲಿ ಚಾವಟಿ ಅಥವಾ ಛಡಿ– ಇವು ಪೆಟ್ಟಿಗೆ ಹೊತ್ತ ಪೂಜಾರಿಯ ವೇಷ. ಅವನ ಜೊತೆ ಬರುವ ಹೆಣ್ಣಿನದು (ಸಾಮಾನ್ಯವಾಗಿ ಹೆಂಡತಿ) ಬೇರೆಯದೇ ಚಿತ್ರ. ಮಾಮೂಲಿ ಹೆಂಗಸಿನ ವೇಷವಾದರೂ ಕೈಗೆ ಕಡಗ, ನಡುವಿಗೆ ಡಾಬು, ಮೂಗುತಿ ಹಾಗೂ ವಿವಿಧ ಬೆಳ್ಳಿಯ ಒಡವೆಗಳಿರುತ್ತವೆ. ನಡುವಿನ ಒಂದು ಕಡೆ ಬಟ್ಟೆಯಲ್ಲಿ ತೂಗು ಹಾಕಿಕೊಂಡ ಮಗು, ಇನ್ನೊಂದು ಕಡೆ ಭಿಕ್ಷೆ ಸಂಗ್ರಹಿಸುವ ಅಸುಬೆ ಚೀಲ, ಕುತ್ತಿಗೆಗೆ ನೇತುಹಾಕಿಕೊಂಡ ಅರೆ ಅಥವಾ ಉರುಮೆ ವಾದ್ಯ. ಎರಡೂ ಕಡೆ ತೆಳುವಾದ ಚರ್ಮವನ್ನು ಹೊಂದಿದ ಉರುಮೆ ವಾದ್ಯವನ್ನು ಒಂದು ಕಡೆಯಿಂದ ಬಡಿಯುತ್ತ ಇನ್ನೊಂದು ಕಡೆಯಿಂದ ಉಜ್ಜುತ್ತಾರೆ. ಉಜ್ಜುವ ಕಡೆಯಿಂದ 'ದರ್‍ರಬುರ್‍ರ' ಎಂಬ ಶಬ್ದ ಬಂದರೆ ಬಡಿಯುವ ಕಡೆಯಿಂದ 'ಢಮ ಢಮ್ಮಿ ಢಮಢಮ್ಮಿ' ಎಂಬ ಶಬ್ದ ಬರುತ್ತದೆ. ಈ ಶಬ್ದ ಕೇಳಿಬಂತೆಂದರೆ ಊರುಮಾರಮ್ಮ ಅಥವಾ ಮರುಗಮ್ಮ ಬಂದಳೆಂದೇ ಜನ ಗೊತ್ತು ಹಿಡಿಯುತ್ತಾರೆ.

ಪಶುಪಾಲನಾ ಹಂತದ ಹಲವು ಜನವರ್ಗಗಳು ತಾವು ಒಂದು ಕಡೆ ಖಾಯಂ ಆಗಿ ನೆಲೆ ನಿಲ್ಲುವುದಕ್ಕೆ ಮೊದಲು ಅಲೆಮಾರಿ ಗಳಾಗಿದ್ದರು. ಅಂಥ ಸಂದರ್ಭಗಳಲ್ಲಿ ತಾವು ನಂಬಿದ ದೈವದ ಪ್ರತಿರೂಪವನ್ನು ಪೆಟ್ಟಿಗೆಯಲ್ಲಿಟ್ಟು ತಮ್ಮ ಜೊತೆ ಹೊತ್ತು ಹೋಗುತ್ತಿದ್ದರು. ಅನೇಕ ಅಲೆಮಾರಿ ಜನವರ್ಗ ಒಂದಾನೊಂದು ಕಾಲಕ್ಕೆ ಈ ಪದ್ಧತಿ ಅನುಸರಿಸಿರುವುದನ್ನು ಕೆಲವು ವಿದ್ವಾಂಸರು ದೃಢಪಡಿಸುತ್ತಾರೆ. ಆದರೆ ಈಗ ಇಂಥ ವಲಸೆ ಜನವರ್ಗ ಕೂಡ ಖಾಯಂ ವಾಸಿಗಳಾಗಿ ಮಾರ್ಪಟ್ಟಿರುವುದರಿಂದ ಹೊತ್ತು ತಿರುಗುವ ಪೆಟ್ಟಿಗೆ ದೇವತೆಗಳನ್ನು ನಾವು ಕಾಣಲಾಗುತ್ತಿಲ್ಲ. ಆದರೆ ಕಾಡುಗೊಲ್ಲರು ಮತ್ತು ಮ್ಯಾಸ ಬೇಡರಲ್ಲಿ ಈಗಲೂ ನೆಲೆಗೊಂಡ ಆದರೆ ಪೆಟ್ಟಿಗೆಯಲ್ಲೇ ಇಟ್ಟು ಪೂಜಿಸುವ ದೇವತೆಗಳನ್ನು ಕಾಣಬಹುದು. ಅಂಥ ಜನವರ್ಗದ ಕವಲುಗಳಾಗಿ ಪೆಟ್ಟಿಗೆ ದೇವರನ್ನು ಹೊತ್ತು, ಜನವಿರುವ ಕಡೆಗೇ ಹೋಗಿ ಆರಾಧನೆಗೆ ಒಳಪಡಿಸುತ್ತಿದ್ದ ಒಂದು ಗುಂಪು ಹೀಗೆ ಒಂದು ಜನಾಂಗವಾಗಿ ಮಾರ್ಪಟ್ಟಿತೇ ಎಂಬ ಬಗ್ಗೆ ಚಿಂತಿಸುವ ಆವಶ್ಯಕತೆ ಇದೆ.

(ಆರ್.ಜಿ.)

ದುರ್ಗಮ್ಮ ಬ್ಯಾಡರ: ಜನಪದ ಹಾಡುಗಾರರು. ರಾಯಚೂರು ಜಿಲ್ಲೆ ಕೊತ್ತಾದೊಡ್ಡಿಯ ದುರ್ಗಮ್ಮ ಬ್ಯಾಡರ ಕೂಲಿ ಮಾಡುತ್ತಲೇ 40 ವರ್ಷಗಳ ಕಾಲ ಹಾಡುಗಳೊಡನೆ ಕಾಲ ದೂಡಿದ್ದಾರೆ. ಮದುವೆ, ಮುಂಜಿ, ಹಬ್ಬ ಹುಣ್ಣಿಮೆಗಳಲ್ಲಿನ ಅವಿಭಾಜ್ಯ ಅಂಗ. ಅಕ್ಕ ಹನುಮವ್ವನಿಂದ ಹಾಡು ಕಲಿತ ದುರ್ಗಮ್ಮ ಅರ್ಥಪೂರ್ಣ ಕಲಾವಿದೆ. ಹುಟ್ಟು ಮೂಕ ಹಾಗೂ ಕಿವುಡ ಗಂಡನ ಜೊತೆ ಸಂತೋಷವಾಗಿಯೇ ಕಾಲ ನೂಕಿದ ಈಕೆ ತನ್ನೆಲ್ಲ ನೋವನ್ನು ಮರೆತು ತನ್ನನ್ನು ಕಲೆಗೆ ಅರ್ಪಿಸಿಕೊಂಡವಳು.

ರಾಯಚೂರು ಜಿಲ್ಲೆಯ ಕೊತ್ತಾದೊಡ್ಡಿಯ ದುರ್ಗಮ್ಮನ ಹಾಡುಗಳಿಲ್ಲದೆ ಯಾವ ಮದುವೆ ಮುಂಜಿಗಳಿಗೂ ಕಳೆಯಿರುತ್ತಿರಲಿಲ್ಲ. ಹೀಗೆ ಮದುವೆ ಮುಂಜಿವೆಗಳಲ್ಲಿ ತಮ್ಮ ಕಂಠ ಸಿರಿಯ ಮೂಲಕ ಇತರರನ್ನು ಸಂತೋಷಪಡಿಸುತ್ತಿರುವ ದುರ್ಗಮ್ಮ ಬ್ಯಾಡರ ಮೂಕ ಗಂಡನೊಂದಿಗೆ ಬದುಕು ಸಾಗಿಸಿ ಮೂಕನೊಂದಿಗೂ ಮಾತನಾಡಬಲ್ಲಳು. ಕಿವುಡನಿಗೂ ತನ್ನ ನೋವನ್ನು ಕೇಳಿಸುವಂತೆ ಮಾಡಬಲ್ಲ ಹೆಣ್ಣು, ಎಂಬುದನ್ನು ಜೀವನದಲ್ಲಿ ಸಾಬೀತು ಪಡಿಸಿದ ವ್ಯಕ್ತಿ. *(ಜಿ.ಆರ್.ಟಿ.)*

ದೆವ್ವ: ಅಶರೀರ ಹಾಗೂ ಅಭೌತಿಕ ರೂಪದ ಅತಿಮಾನುಷ ಶಕ್ತಿಗಳು. ದೆವ್ವ, ಭೂತ, ಪಿಶಾಚಿ, ಗಾಳಿ ಎಂಬಿತ್ಯಾದಿ ಹೆಸರಿನಿಂದ ದೆವ್ವವನ್ನು ಕರೆಯಲಾಗುತ್ತದೆ. ಭೂತ ಚೇಷ್ಟೆಗೆ ಅತೀ ಮಹತ್ವದ ಸ್ಥಾನವಿದೆ. ಗಾಳಿಕಾಟ, ಭೂತಚೇಷ್ಟೆ ದೆವ್ವ ಬಡಿಯುವುದು, ಗಾಳೀಶಕಾ ಇತ್ಯಾದಿ ಹೆಸರುಗಳಿಂದ ಕರೆಯುವ ಜಾಡ್ಯ ಬಹುತೇಕ ಹಳ್ಳಿಗಳಲ್ಲಿ ಕಂಡುಬರುವ ಮನೋರೋಗವಾಗಿದೆ. ದೇವರಿಗಿಂತ ಹೆಚ್ಚಾಗಿ ದೆವ್ವದ ಕಾಟವೇ ಹೆಚ್ಚು ಪ್ರಚಲಿತ. ದೆವ್ವಗಳು ಹೆಣ್ಣು ಮಕ್ಕಳಿಗೆ ಹೆಚ್ಚಾಗಿ ಬಡುಕೊಳ್ಳುತ್ತವೆ. ಅದರಲ್ಲಿಯೂ ಮೈನೆರೆದವರಿಗೆ, ಮದುಮಕ್ಕಳಿಗೆ ಹಸಿಮೈ ಬಾಣಂತಿಯರಿಗೆ ದೆವ್ವದ ಕಾಟ ಬೇಗ ತಟ್ಟುತ್ತದೆ.

ಸಾಮಾನ್ಯವಾಗಿ ದೆವ್ವ ಹಿಡಿದವರಿಗೆ ಗಾಳಿ ಬಡಿದಿದೆ ಎಂದು ಹೇಳುವುದುಂಟು. ದೆವ್ವ ಎನ್ನುವ ಶಬ್ದದಲ್ಲಿನ ಭಯಾನಕವಾದ ಅರ್ಥ ರೋಗಿಗಳ ಎದೆ ಝಲ್ ಎನಿಸಬಾರದೆಂದು ಅದನ್ನು

'ಗಾಳಿ' ಎಂದು ಕರೆಯುತ್ತಾರೆ. ದೆವ್ವ ಬಡಿದವರನ್ನು ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಬಾಗಲಕೋಟೆ ಜಿಲ್ಲೆಯ ಆಚನೂರು, ಸಂಗಾಪುರ, ಅಡವಿಸ್ವಾಮಿಮಠ; ಬೆಳಗಾವಿ ಜಿಲ್ಲೆಯ ಹೂಲಿಕಟ್ಟಿ, ಬಾಬಬುಡನ್ ಗಿರಿ, (ಸಿರಸಂಗಿ) ಬಸಾಪುರ; ಧಾರವಾಡ ಜಿಲ್ಲೆಯ ಯಮನೂರು-ನವಲಗುಂದ; ಬಳ್ಳಾರಿ ಜಿಲ್ಲೆಯ ಕುಡುತಿನಿ, ಧರ್ಮಸಾಗರ, ಕೆರೆ ಮಾವಿನಹಳ್ಳಿ; ಗುಲಬರ್ಗಾದ ಬಂದೇನವಾಜ್; ರಾಯಚೂರು ಜಿಲ್ಲೆ ವಿರುಪಾಪುರ, ತಿಂಥಿಣಿ ಇವು ಪ್ರಮುಖವಾದ ಸ್ಥಳಗಳು. ಇವೆಲ್ಲವೂ ಸಾಧುಸಂತರ, ಫಕೀರರ ಗದ್ದಿಗೆ, ದರ್ಗಾಗಳೇ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ರೀತಿಯ ದೆವ್ವ ಬಿಡಿಸುವ ಕ್ರಮಗಳಿವೆ. ಅಚನೂರಿನ ಹನುಮಂತ ದೇವರ ದೇವಸ್ಥಾನದಲ್ಲಿ ದೆವ್ವ ಬಂದವರು ಹೊತ್ತ ಕಲ್ಲಿನಿಂದಲೇ ಹನುಮಂತ ದೇವರ ನಿರ್ಮಿತವಾಗಿದೆ ಎಂದು ಪ್ರತೀತಿ. ಬಾಗಲಕೋಟೆಯ ಅಡಿವೀಸ್ವಾಮಿ ಮಠದಲ್ಲಿ ದನದ ಸಗಣಿ ತಿನಿಸುತ್ತಾರೆ. ಕೆಲವು ಕಡೆಗೆ ಬೆರಳುಗಳ ಸಂಧಿಗಳಲ್ಲಿ ಕಬ್ಬಿಣದ ಮೊಳೆ ಬಡಿಯುತ್ತಾರೆ. ದರ್ಗಾಗಳಲ್ಲಿ ನವಿಲುಗರಿ ಮತ್ತು ಬೆತ್ತದಿಂದ ಬಡಿದು ದೆವ್ವ ಬಿಡಿಸುವುದುಂಟು. ಇನ್ನೂ ಕೆಲವು ಕಡೆ ಗದ್ದಿಗೆ ಪ್ರದರ್ಶನದಿಂದಲೇ ದೆವ್ವ ಬಿಟ್ಟು ಓಡುತ್ತದೆ.

ದೆವ್ವ ಬಿಡಿಸುವವರು ಸಾಮಾನ್ಯವಾಗಿ ಮೊದಲು ದೆವ್ವ ಹಿಡಿದವರಿಗೆ ಅಷ್ಟಬಂಧನ, ಹಾಕುವರು. ಆನಂತರ ದೆವ್ವದ ವಿವರಗಳನ್ನು ಕೇಳಿ ತಿಳಿದುಕೊಳ್ಳುವರು. ಬಳಿಕ ದೆವ್ವವನ್ನು ಒಡನುಡಿಸುತ್ತಾರೆ. 'ಒಡನುಡಿಸುವುದು' ಇಲ್ಲಿ ಬಹಳ ಪ್ರಮುಖವಾದದ್ದು. ಇದರಿಂದ ದೆವ್ವದ ಕುಲ, ಜಾತಿ, ಉದ್ದೇಶಗಳಂತಹ ಎಲ್ಲ ಸಂಗತಿಗಳನ್ನು ಅರಿಯಬಹುದು. ಒಳನುಡಿಸುವಾಗ ಅಂಟಾಳ ಕಾಯಿ ಗಂಧವನ್ನು ಹಿರಣ್ಯ ಕಶ್ಯಪ ಮಂತ್ರದೊಂದಿಗೆ ದೆವ್ವ ಬಡಿದವರ ಹೊಟ್ಟೆ, ಕಣ್ಣುಗಳಿಗೆ ಹಚ್ಚಿ ಲೋಬಾನ ಹಾಕುತ್ತಾರೆ. ಒಂದು ವೇಳೆ ಇಷ್ಟಕ್ಕೆ ದೆವ್ವ ಜಗ್ಗದಿದ್ದರೆ ಮಂತ್ರ ದಂಡದಿಂದ ಬಡಿದು ಬೂದಿಯನ್ನು ಮುಖಕ್ಕೆರಚಿ ಕೂದಲು ಹಿಡಿದು ಎಳೆದಾಡಿ ಹಿಂಸಿಸಿ ದೆವ್ವದ ಇಚ್ಛೆಯನ್ನು ತಿಳಿದುಕೊಳ್ಳುವುದು ಕಂಡುಬರುತ್ತದೆ.

ಭೂತಗಳಿಂದ ಬಾವಿ ತೋಡಿಸುವುದು: ಕೆಲವೊಂದು ಮೊಂಡ ದೆವ್ವಗಳು ಮಾಂತ್ರಿಕರ ಕಣ್ಣು ತಪ್ಪಿಸಿ ದಾರಿ ಮಧ್ಯದ ಗಿಡದಲ್ಲಿಯೇ ಅವಿತುಕೊಳ್ಳುತ್ತವಂತೆ. ಅಂಥ ಸಂದರ್ಭದಲ್ಲಿ ಮಂತ್ರವಾದಿ "ರಕ್ಷಾ ರಕ್ಷಾ ಕಾಲಿ ಕುಂಡಲಿ ಓಂ ಹಿರಣ್ಯ ಕಶ್ಯಪ ಅಕ್ಷರಂ" ಎನ್ನುವ ಮಂತ್ರ ಹಾಗೂ ಕಬ್ಬಿಣದ ಕೀಲುಗಳ ಸಹಾಯದಿಂದ ದೆವ್ವ ಎಲ್ಲೇ ಅಡಗಿರಲಿ ಅದನ್ನು ತನ್ನ ಹತ್ತಿರ ಕರೆಸಿಕೊಳ್ಳುತ್ತಾನೆ. ಆನಂತರ ಬಿಡಿಸುವ ಕ್ರಿಯೆ ನಡೆಯುತ್ತದೆ. ಇಂತಹ ಮಂಡ ದೆವ್ವಗಳಿಂದ ಈ ಮಾಟಗಾರರು ಬಾವಿ ತೋಡಿಸುವ, ಮನೆಕಟ್ಟಿಸುವ, ಬೆಳೆ ಕೊಯ್ಲು ಮಾಡುವ, ರಾಶಿ ಮಾಡಿಸುವ, ಹೊಲಕ್ಕೆ ಒಡ್ಡು ಹಾಕಿಸುವ, ಕೆಲಸಗಳನ್ನು ಮಾಡಿಸುತ್ತಾರಂತೆ. ಇಂದಿಗೂ ಹೈದ್ರಾಬಾದ ಕರ್ನಾಟಕದಲ್ಲಿ ಭೂತಬಾವಿಗಳೆಂದು ಅಥವಾ ಯಾತಾಳಬಾವಿಗಳೆಂದು ಕರೆಸಿಕೊಳ್ಳುವ ಬಾವಿಗಳು ಸಿಗುತ್ತವೆ. ಎಲ್ಲ ಊರುಗಳಲ್ಲೂ ದೆವ್ವಗಳಿಂದ ಕೆಲಸ ಮಾಡಿಸಿಕೊಂಡ ಬಗ್ಗೆ ಕಥೆಗಳು ಇದ್ದೇ ಇರುತ್ತವೆ. *(ವಿ.ಜಿ.)*

ದೇ

ದೇಗಲಮಡಿ: ಅತಿ ಹೆಚ್ಚಿನ ದೇಗುಲಗಳಿರುವ ಗ್ರಾಮ ಕಲಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿದೆ. ವಿಶ್ವದಲ್ಲೇ ಇಲ್ಲಿ ಅತ್ಯಧಿಕ ಪ್ರಮಾಣದಲ್ಲಿ ವೀಳ್ಯದೆಲೆ ಬೆಳೆಯುವ ಗ್ರಾಮವಿದು, ವಿವಿಧ ಮಾದರಿಯ ತರಾವರಿ ವೀಳ್ಯೆದೆಲೆಗಳನ್ನು ರೈತರು ಬೆಳೆಯುತ್ತಾರೆ. ಇಲ್ಲಿ ಬೆಳೆಯುವ ಹೆಚ್ಚಿನ ವೀಳ್ಯೆದೆಲೆ ಹೈದರಾಬಾದ ಮಾರುಕಟ್ಟೆಗೆ ಹೋಗುತ್ತದೆ. ಫಲವತ್ತಾದ ಭೂ ಸಂಪತ್ತು ಹೊಂದಿರುವ ಈ ಗ್ರಾಮ ದೇಗುಲಗಳ ಸಂಗಮವಾಗಿದೆ. ಆದ್ದರಿಂದಲೇ ಈ ಗ್ರಾಮಕ್ಕೆ ದೇಗಲಮಡಿ ಎಂದು ಹೆಸರು ಬಂದಿದೆ.

ದೇಗಲಮಡಿ ಗ್ರಾಮದಲ್ಲಿ ಸಂಗಮೇಶ್ವರ, ಮಲ್ಲಿಕಾರ್ಜುನ, ವೀರಭದ್ರೇಶ್ವರ, ಬಸವಣ್ಣನ ದೇವಾಲಯಗಳಿವೆ. ಜೈನ ಬಸದಿಗಳು ಅಪಾರವಾಗಿವೆ.

ಬಹುತೇಕ ದೇವಾಲಯಗಳು ಪುರಾತನ ಕಾಲದವುಗಳಾಗಿವೆ. ಪ್ರತಿಯೊಂದು ದೇವಸ್ಥಾನಗಳೂ ಐತಿಹಾಸಿಕ ಮತ್ತು ಪೌರಾಣಿಕ ಹಿನ್ನೆಲೆಯಿಂದ ಪ್ರಾಮುಖ್ಯತೆ ಪಡೆದವುಗಳಾಗಿವೆ. ಮೇಲೆ ಹೆಸರಿಸಿದ ದೇವಾಲಯಗಳಲ್ಲಿ ಗರ್ಭಗುಡಿಯಲ್ಲಿ ಮೂರ್ತಿಗಳು ಇರುವುದರಿಂದ ಸದ್ಯ ಪೂಜಿಸಲ್ಪಡುತ್ತಿವೆ. ಆದ್ದರಿಂದ ಈ ದೇವಸ್ಥಾನಗಳಿಗೆ ಹೆಸರಿಸಲು ಸುಲಭವಾಗುತ್ತದೆ. ಇನ್ನುಳಿದವುಗಳು ದೇವಾಲಯಗಳ ಪಳೆಯುಳಿಕೆಗಳು ಮಾತ್ರ, ಅವು ಯಾವ ಕಾಲದ್ದು, ಯಾರು ನಿರ್ಮಿಸಿದರು ಎಂಬುದು ತಿಳಿಯುವುದಿಲ್ಲ. ಸಂಪೂರ್ಣ ಕುಸಿದ ಸ್ಥಿತಿಯಲ್ಲಿದ್ದು, ಅಳಿದುಳಿದವುಗಳು ಜೀರ್ಣಾವಸ್ಥೆಯಲ್ಲಿವೆ. ಸಾರ್ವಜನಿಕರಿಗೂ ಈ ಐತಿಹಾಸಿಕ ದೇವಾಲಯಗಳ ಬಗ್ಗೆ ಇತಿಹಾಸದ ಮಹತ್ವದ ಅರಿವಿಲ್ಲದೇ, ಅವು ಕುಸಿದು ಬಿದ್ದರೂ ಯಾರೂ ಹಳಹಳಿಪಡುವವರಿಲ್ಲ ಎನ್ನುವ ಸ್ಥಿತಿಗತಿಯಿದೆ.

ಊರಿನ ಮಧ್ಯಭಾಗದಲ್ಲಿ ತ್ರಿಕೂಟ ದೇವಾಲಯವಿದ್ದು, ಅದನ್ನು ಸಂಗಮೇಶ್ವರ ದೇವಾಲಯ ಎಂದು ಸಾರ್ವಜನಿಕರು ರೂಢಿಯಲ್ಲಿ ಕರೆಯುತ್ತ ಬಂದಿದ್ದಾರೆ. ದೇಗುಲ ಈ ಹಿಂದೆ ಮೂರು ಗರ್ಭಗೃಹಗಳಿಂದ ಕೂಡಿತ್ತೆಂದು, ಗರ್ಭಗೃಹ ಕುಸಿದು ಬಿದ್ದಾಗ, ಅದನ್ನು ತೆಗೆದು ಹಾಕಿ, ಎರಡು ಗರ್ಭ ಗೃಹದಿಂದಲೇ ದೇವಾಲಯದ ಜೀರ್ಣೋದ್ಧಾರ ಕೈಕೊಳ್ಳಲಾಯಿತೆಂದು, ಮೊದಲು ಭಾಳ ಸುಂದರವಾಗಿದ್ದವು ಎಂದು ಹಿರಿಯ ತಲೆ ಮಾರಿನವರು, ದೇವಾಲಯದ ಸೌಂದರ್ಯವನ್ನು ನೆನಪಿಸಿಕೊಂಡು ವರ್ಣನೆ ಮಾಡುತ್ತ ಹೇಳುತ್ತಾರೆ.

ತ್ರಿಕೂಟ ದೇವಾಲಯದ ಉಳಿದಿರುವ ಎರಡು ಗರ್ಭ ಗೃಹಗಳಲ್ಲಿ ಶಿವಲಿಂಗಗಳಿದ್ದು, ಬಾಗಿಲವಾಡಗಳು ಪಂಚ ಶಾಖಾಲಂಕೃತವಾಗಿದ್ದು, ಲಲಾಟಗಳಲ್ಲಿ ಗಜಲಕ್ಷ್ಮೀ ಮುಂತಾದ ಶಿಲ್ಪಗಳಿವೆ. ಮೂರ್ತಿಗಳ ಕೆತ್ತನೆಯನ್ನು ಅತ್ಯಂತ ನಾಜೂಕಾಗಿ,

ಸುಂದರವಾಗಿ ಕೆತ್ತಿರುವದನ್ನು ಕಂಡಾಗ, ಮೂಲ ದೇವಾಲಯ ಹೇಗಿರಬಹುದು, ಎಷ್ಟೊಂದು ಸುಂದರವಾಗಿರಬಹುದೆಂಬ ಕಲ್ಪನೆ ಮಾಡಬಹುದು.

ದೇವಾಲಯದ ನವರಂಗದಲ್ಲಿ ನಾಲ್ಕು ದೇವಕೋಷ್ಠೋನಗಳಿದ್ದು ಅವುಗಳಲ್ಲಿ ಸಪ್ತ ಮಾತೃಕಾ, ಮಹಿಷ ಮರ್ದಿನಿ ಹಾಗೂ ಬ್ರಹ್ಮನ ಶಿಲ್ಪಗಳಿವೆ. ನವರಂಗದ ಸ್ಥಂಭಗಳು ಸುಂದರವಾಗಿದ್ದು, ನಡುವಣ ಭಾವಣಿಯನ್ನು ಶಿಲೆಯಲ್ಲಿ ಕಮಲದ ಕೆತ್ತನೆಯಿಂದ ಅತಂಕೃತಗೊಂಡಿದೆ. ದೇವಾಲಯದ ಹೊರಗೋಡೆಗಳಲ್ಲಿ ಸ್ವರ್ಗದಲ್ಲಿನ ದೇವಾನು ದೇವತೆಗಳು, ಯಕ್ಷ ಕಿನ್ನರ, ನರ್ತಿಸುವ ಸುಂದರಿಯರು, ಸಾಲು ಆನೆಗಳು, ಅಂಬಾರಿ, ಯೋಧರು, ವಾದ್ಯ ವೃಂದದವರು ನರ್ತಿಸುತ್ತ ಮೆರವಣಿಗೆ ಹೊರಟಿರುವ ಸುಂದರ ಶಿಲ್ಪಗಳನ್ನು ಕೆತ್ತಲಾಗಿದೆ. ದೇವಾಲಯದ ಹೊರಭಾಗದ ಆಲದ ಮರದ ಹತ್ತಿರ ಶಿಲಾಶಾಸನವೊಂದಿತ್ತು. ಇತ್ತೀಚೆಗೆ ಅದೂ ಭಗ್ನವಾಗಿ ಈ ದೇವಾಲಯ ಯಾವ ಕಾಲದ್ದು, ಯಾರು ಕಟ್ಟಿಸಿದರು, ಯಾಕೆ ಕಟ್ಟಿಸಿದ್ದರು ಎಂಬಿತ್ಯಾದಿ ವಿವರಗಳು ದೊರೆಯದಂತೆ, ದೇವಾಲಯದ ಇತಿಹಾಸವೇ ಅಳಿಸಿಹೋಗಿದೆ.

ಈ ದೇಗುಲದ ಮುಂಭಾಗದಲ್ಲೇ ಒಂದು ಜೈನ ಬಸದಿ ಇದೆ. ಇಲ್ಲಿ ಪಾರ್ಶ್ವನಾಥ, ಪದ್ಮಾವತಿಯರ ಶಿಲ್ಪಗಳಿದ್ದು, ದೇಗುಲದ ಒಳಗಡೆ ಇನ್ನಿತರ ಶಿಲ್ಪಗಳನ್ನು ಕೆತ್ತುವ ಮೂಲಕ ಅಲಂಕರಿಸಲಾಗಿದೆ. ದೇವಾಲಯದ ಬಹುಭಾಗ ಬಿದ್ದು ಹೋಗಿರುವುದರಿಂದ ಗರ್ಭಗುಡಿಯಲ್ಲಿ ಜಿನ ಮೂರ್ತಿಯ ಹೊರತಾಗಿ ಬೇರೇನೂ ಅವಶೇಷಗಳಾಗಲಿ ಶಿಲಾ ಶಾಸನಗಳಾಗಲಿ ಇಲ್ಲಿ ಸಿಕ್ಕುವುದಿಲ್ಲ. ಈ ದೇವಾಲಯದ ಕಾಲದ ಬಗ್ಗೆ ಯಾವುದೇ ವಿವರಗಳು ದೊರೆಯುವುದಿಲ್ಲ. *(ಎನ್.ಡಿ.ಎಂ.)*

ದೇವದಾಸಿ: ದೇವರ ಸೇವೆಗಾಗಿ ತನ್ನನ್ನು ಅರ್ಪಿಸಿಕೊಂಡ ಹೆಣ್ಣು. ಹಿಂದೆ ಇವರು ದೇವಾಲಯದಲ್ಲಿ ನೃತ್ಯ ಮಾಡುತ್ತಿದ್ದರು. ರಾಜಪ್ರಭುತ್ವದ ಕಾಲದಲ್ಲಿ ದೇವಾಲಯವು ಪ್ರಬಲವಾದ ಸಾಮಾಜಿಕ ಸಂಸ್ಥೆಯಾಗಿತ್ತು. ಅರಸನಿಗೆ ಸಲ್ಲುತ್ತಿದ್ದ ಗೌರವಗಳೆಲ್ಲವೂ ದೇವರಿಗೂ ಸಲ್ಲುತ್ತಿದ್ದುವು. ರಾಜನ ಸಂತೃಪ್ತಿಗಾಗಿ ನರ್ತನೆ, ಕುಣಿತ ಮತ್ತು ಹಾಡುಗಳು ಎಷ್ಟು ಮುಖ್ಯವೋ, ದೇವರ ಕಾರ್ಯದಲ್ಲಿಯೂ ಇವು ಪ್ರಾಮುಖ್ಯತೆ ಪಡೆದುಕೊಂಡಿದ್ದವು. ಆದುದರಿಂದ ದೇವರ ಮೆರವಣಿಗೆಗಳಿ ಆದರೆ ದೇವದಾಸಿಯರು ಬಂದು ಕುಣಿಯಬೇಕಾಗಿತ್ತು. ಕೆಲವು ದೇವದಾಸಿಯರಂತೂ ಸದಾಕಾಲ ದೇವರ ಸೇವೆಯಲ್ಲಿಯೇ ಇರುತ್ತಾರೆ. ದೇವದಾಸಿಯರು ದೇವಸ್ಥಾನದ ಆಡಳಿತಕ್ಕೆ ಸೇರಿದವರಾದುದರಿಂದ ಅದರ ಆದಾಯದಲ್ಲಿ ಅವರಿಗೆ ಪಾಲಿದೆ.

ಪ್ರಾಚೀನ ಹಿಂದೂ ಗ್ರಂಥಗಳಲ್ಲಿ ಏಳು ಬಗೆಯ ದೇವದಾಸಿಯರ ಉಲ್ಲೇಖವಿದೆ. 1. **ದತ್ತ** (ದೇವಾಲಯಕ್ಕೆ ತನ್ನನ್ನು ತಾನೇ ಅರ್ಪಿಸಿಕೊಂಡ ಹೆಣ್ಣು), 2. **ವಿಕೃತ** (ಇದೇ ಉದ್ದೇಶಕ್ಕಾಗಿ ತನ್ನನ್ನು ಮಾರಿಕೊಂಡವಳು). 3. **ಭೃತ** (ತನ್ನ ಕುಟುಂಬದ ಒಳಿತಿಗಾಗಿ ದೇವಾಲಯದ ಸೇವಕಿ ಎಂದು ಅರ್ಪಿಸಿಕೊಳ್ಳುವವಳು). 4. **ಭಕ್ತೆ** (ಭಕ್ತಿ ಭಾವದಿಂದ ದೇವಾಲಯದ ಸೇವೆ ಸಲ್ಲಿಸುವವಳು). 5. **ಹೃತ** 6. **ಅಲಂಕಾರ** (ಅಲಂಕರಣ ಪ್ರಸಾದನ ಕಾರ್ಯದಲ್ಲಿ ನಿಪುಣೆಯಾದವಳು. ರಾಜರು–ಪಾಳೇಗಾರರು ಇಂಥವರನ್ನೂ ದೇವರ ಸೇವೆಗೆ ಒಪ್ಪಿಸುತ್ತಿದ್ದರು). 7. **ಗೋಪಿಕಾ** (ಸಂಗೀತ, ನೃತ್ಯಕ್ಕಾಗಿಯೇ ದೇವಾಲಯದಲ್ಲಿ ನೇಮಕಗೊಂಡಿದ್ದು ಪ್ರತಿ ತಿಂಗಳೂ ನಿಶ್ಚಿತ ವೇತನ ಪಡೆಯುವವರು). ಇದನ್ನು ಗಮನಿಸಿದಾಗ ದೇವದಾಸಿ ಪದ್ಧತಿ ಭಾರತದ ಪ್ರಾಚೀನ ಸಮಾಜ (ಧರ್ಮ)ವು ಒಪ್ಪಿತವಾದ ಸಂಪ್ರದಾಯವಿದ್ದಂತೆ ತೋರುತ್ತದೆ. ಕೆಲ ಶಾಸನಗಳಲ್ಲಿಯೂ ದೇವದಾಸಿಯರ ಉಲ್ಲೇಖವಿರುವುದನ್ನು ನೋಡಿದರೆ ದೇವದಾಸಿ ಪದ್ಧತಿಯು ಪ್ರಾಚೀನವಾದುದೆಂಬುದರ ಅರಿವಾಗುತ್ತದೆ.

ದೇವದಾಸಿಯರನ್ನು ಬಿಡುವ ಸಂಪ್ರದಾಯ ಕೆಲ ಮನೆತನಗಳಲ್ಲಿ ವಂಶಪಾರಂಪರ್ಯವಾಗಿ ಬಂದಿದೆ. ದೇವದಾಸಿಯರಿಗೆ ಹೆಣ್ಣುಮಕ್ಕಳು ಹುಟ್ಟಿದರೆ ಅವರನ್ನೂ ದೇವದಾಸಿಯರನ್ನಾಗಿ ಮಾಡಲಾಗುತ್ತಿತ್ತು. ದೇವರ ಮಾಲೆಯನ್ನು ಹುಡುಗಿಯ ಕುತ್ತಿಗೆಗೆ ಹಾಕುವ ಮೂಲಕ ಹುಡುಗಿಗೆ ವಿದ್ಯುಕ್ತವಾಗಿ ಮದುವೆ ಮಾಡಲಾಗುತ್ತದೆ. ಮದುವೆಯಾದ ಐದು ದಿನಕ್ಕೆ ಶೋಭನ ಕಾರ್ಯ ಮಾಡುತ್ತಾರೆ. ಆ ದಿನ ಅವಳು ತೆಂಗಿನಕಾಯಿಯನ್ನು ಪಕ್ಕದಲ್ಲಿ ಇಟ್ಟುಕೊಂಡು ಮಲಗಬೇಕು. ಅಂದಿನಿಂದಲೇ ಅವಳು ದೇವರ ಸ್ವತ್ತು. ಕನ್ಯತ್ವವನ್ನು ದೇವರಿಗೆ ಅರ್ಪಿಸುವುದು ಶ್ರೇಷ್ಠ ಎಂಬ ನಂಬಿಕೆಯಿಂದ ಈ ರೀತಿ ಮಾಡಲಾಗುತ್ತದೆ. ಆನಂತರ ಆಕೆ ಲೌಕಿಕ ಪುರುಷರೊಂದಿಗೆ ತಾಳಿಯನ್ನು ಕಟ್ಟಿಸಿಕೊಳ್ಳುವಂತಿಲ್ಲ. ಆದರೆ ಅವಳನ್ನು ಯಾರು ಬೇಕಾದರೂ ಸಾಕಬಹುದು. ಅದಕ್ಕೆ ಇಂಥವರೇ ಇರಬೇಕೆಂಬ



ದೇವದಾಸಿಯರು

ನಿಯಮವೇನೂ ಇಲ್ಲ. ಒಟ್ಟಿನಲ್ಲಿ ಅವಳನ್ನು ಸಾಕುವ ತಾಕತ್ತು ಇರಬೇಕಷ್ಟೇ. ಇವರಿಗೆ ಹುಟ್ಟಿದ ಮಕ್ಕಳನ್ನು ಸಮಾಜವು ನಿಸ್ಸಂಕೋಚವಾಗಿ ಸ್ವೀಕರಿಸುತ್ತದೆ. ಕೆಲ ಪ್ರದೇಶಗಳಲ್ಲಿ ಇವರೊಂದಿಗೆ ಸಂಬಂಧವಿರಿಸಕೊಳ್ಳುವುದು ಪುಣ್ಯವೆಂದು ಭಾವಿಸಲಾಗುತ್ತದೆ. ಇವರು ದೇವರಿಗೆ ಬಿಟ್ಟವರಾದುದರಿಂದ ಎಂದಿಗೂ ವಿಧವೆಯರಾಗುವುದಿಲ್ಲ. ಆದರೆ ದೇವದಾಸಿಯರು ಮುದುಕಿಯಾದರೆ ಅಥವಾ ಯಾವುದಾದರೂ ಕಾಯಿಲೆಗೆ ತುತ್ತಾದರೆ ನಿವೃತ್ತಿಯನ್ನು ಪಡೆಯಬಹುದಾಗಿತ್ತು. ಇವರು ತೀರಿಕೊಂಡಾಗ ದೇವರ ವಿಗ್ರಹಕ್ಕೆ ತೊಡಿಸಿದ ಬಟ್ಟೆಯನ್ನು ಇವರಿಗೆ ಹಾಕುತ್ತಾರೆ. ದೇವಸ್ಥಾನದಲ್ಲಿ ಕೊಟ್ಟ ಬೆಂಕಿಯಿಂದ ಸುಡುವ ಪದ್ಧತಿಯಿತ್ತು. ಈ ಪದ್ಧತಿ ಇಂದು ಕಡಿಮೆಯಾಗಿದೆಯಾದರೂ ಕಣ್ಮರೆಯಾಗಿಲ್ಲ. ಕರ್ನಾಟಕದಲ್ಲಿ ಸವದತ್ತಿ ಎಲ್ಲಮ್ಮನಿಗೆ ದೇವದಾಸಿಯರನ್ನು ಬಿಡುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಇವರನ್ನು ಜೋಗತಿಯರೆಂದು ಕರೆಯಲಾಗುತ್ತದೆ. ಇವರ ಬಹುತೇಕ ಜೀವನ ವೈಶ್ಯಾವೃತ್ತಿಯಿಂದಲೇ ಸಾಗುತ್ತಿದೆ. *(ಕೆ.ಎಸ್.)*

ದೇವಪುತ್ರ: ಹಿರಿಯ ಕಲಾವಿದ. 'ಹುಟ್ಟಿ ಸಾರ್ಥಕವಾಯಿತು ನರಜನ್ಮ, ನಮ್ಮ ಜನ್ಮ' ಎಂದು ತತ್ವ ಪದ ಹಾಡನ್ನು ಹಾಡುತ್ತ ಜನರ ಗಮನ ಸೆಳೆದವರು. ಡೋಲಕ್, ತಬಲಾದ ಸಾಥಿಯನ್ನು ಸಮುದಾಯದಂತಹ ನಾಟಕಗಳಿಗಷ್ಟೇ ಅಲ್ಲ, ಸಾಮಾಜಿಕ ನಾಟಕ, ಸಂಗೀತ ಕಾರ್ಯಕ್ರಮಗಳಿಗೂ ಸಾಥಿ ನೀಡಿದವರು, ಬಡನದಲ್ಲಿ ಹುಟ್ಟಿ; ಕಲೆಯನ್ನೇ ನೆಚ್ಚಿಕೊಂಡು ಬದುಕುತ್ತಿರುವ ದೇವಪುತ್ರಪ್ಪನವರ ತುಂಬು ಕುಟುಂಬ ಸ್ಥಿತಿ ಇಂದಿಗೂ ಶೋಚನೀಯ.

ಸುಗಮ ಸಂಗೀತ, ನಾಟಕಗಳು ನಡೆಯುವ ಸಂದರ್ಭದಲ್ಲಿ ಬಿಡದೇ ಕಾಣಿಸಿಕೊಳ್ಳುವ ದೇವಪುತ್ರಪ್ಪ ಈಗಾಗಲೇ ಅನೇಕ ಹಿರಿಯ ಕಲಾವಿದರಿಗೆ ಸಾಥಿ ನೀಡಿದ್ದಾರೆ. ನೂರಾರು ಸಾಮಾಜಿಕ ನಾಟಕಗಳಿಗೆ ಹೋಗಿ ಬಂದಿರುವ ಅವರು ರಂಗಭೂಮಿಯ ಬಗೆಗೆ ಒಳ್ಳೆಯ ಮನೋಭಾವವನ್ನಿಟ್ಟುಕೊಂಡವರು. ಅರವತ್ತೈದರ ಈ ಇಳಿಯವಯಸ್ಸಿನಲ್ಲೂ ಹಾಡುತ್ತ, ತಬಲಾದ ನಾದದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಕಲಾವಿದರಿಗೆ ಜಾನಪದ ಅಕಾಡೆಮಿ ಪ್ರಶಸ್ತಿಯೊಂದಿಗೆ ರಾಜ್ಯೋತ್ಸವ ಪ್ರಶಸ್ತಿ ಕೂಡ ಲಭಿಸಿದೆ. *(ಡಿ.ಡಿ.)*

ದೇವಪುರ: 'ಚಂಪೂ' ಕಾವ್ಯದಲ್ಲಿ ರಚಿತವಾದ 'ಜೈಮಿನಿ ಭಾರತದ' ಕರ್ತೃ ಮಹಾಕವಿ ಲಕ್ಷ್ಮೀಶನ ಜನ್ಮ ಸ್ಥಳ. ಈ ರಸಕವಿ ಉತ್ತರ ಕರ್ನಾಟಕದ ಸಗರನಾಡಿನ ಜಿಲ್ಲೆ ಸುರಪುರ ತಾಲ್ಲೂಕಿನ ದೇವಾಪುರದವನು ಎಂಬುದು ಒಂದು ವಾದವಾದರೆ, ಚಿಕ್ಕಮಗಳೂರು ಜಿಲ್ಲೆ ಕಡೂರ ತಾಲ್ಲೂಕಿನ ದೇವನೂರ ಗ್ರಾಮದವನೆಂಬ ವಾದವೂ ಇದೆ. ಮಹಾಕವಿ ಲಕ್ಷ್ಮೀಶನ ಜನ್ಮಸ್ಥಳದ ಬಗ್ಗೆ ಖ್ಯಾತ ಇತಿಹಾಸ ಸಂಶೋಧಕ ಸೀತಾರಾಮ್ ಜಹಾಗೀರದಾರರು ಸಾದ್ಯಂತವಾಗಿ ಕ್ಷೇತ್ರಕಾರ್ಯ ಮಾಡಿ, ಬಲವಾದ ಅನೇಕ ಸಾಕ್ಷಾಧಾರಗಳ ಸಹಿತ ಲಕ್ಷ್ಮೀಶನ ಜನ್ಮಸ್ಥಳ, ಸುರಪುರ ತಾಲ್ಲೂಕಿನ ದೇವಪುರ ಎಂದು ಸಾಬೀತು ಪಡಿಸಿದರು. ಸಾರ್ವತ್ರಿಕ ಮಾನದಂಡವನ್ನಿಟ್ಟುಕೊಂಡು ಪ್ರಾಂಜಲ ಮನಸ್ಸಿನಿಂದ ಅವಲೋಕಿಸಿದಲ್ಲಿ ಕವಿಯ ಜನ್ಮಸ್ಥಳ ದೇವಪುರವೆ ಹೊರತು, ಚಿಕ್ಕಮಗಳೂರು ಜಿಲ್ಲೆಯ ದೇವನೂರು ಅಲ್ಲ ಎಂದು ಅವರು ವಾದ ಮಂಡಿಸಿದ್ದಾರೆ. *(ಎಸ್.ಎಸ್.)*

ದೇವರ ಗಾಣಗಾಪುರ: ಅಫಜಲಪೂರ ತಾಲ್ಲೂಕಿನ ಗಾಣಗಾಪುರ ಭೀಮಾನದಿಯ ಎಡದಂಡೆಯ ಮೇಲೆ ಇರುವ ಪ್ರಸಿದ್ಧ ಯಾತ್ರಾಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ ಗಾಣಗಾಪುರ ಬಂದರವಾಡುವೆಂದೇ ಉಲ್ಲೇಖಿತವಾಗಿರುವ ಈ ಊರು ಹಿಂದೆ ಆತನೂರು 80ಕ್ಕೆ ಸೇರಿತ್ತು. ಇದು ಭೀಮಾ ಅಮರ್ಜಾ ನದಿಗಳ ಸಂಗಮವಾಗಿದೆ. ಇಲ್ಲಿ ಸಂಗಮೇಶ್ವರ ಹಾಗೂ ನರಸಿಂಹ ಪವಿತ್ರ ದೇವಾಲಯಗಳಿದ್ದು, ಭಸ್ಮದ ಗುಡ್ಡವು ಇದೆ. ಊರಲ್ಲಿ ನರಸಿಂಹ, ಸರಸ್ವತಿ, ದತ್ತು ಮಹಾರಾಜರ ದತ್ತಾತ್ರೆಯ ದೇವಸ್ಥಾನಗಳಿವೆ. ಮಹಾರಾಷ್ಟ್ರದ ನರಸಿಂಹ, ಸರಸ್ವತಿ, ಮಹಾರಾಜರು ಇಲ್ಲಿ 23 ವರ್ಷ ನೆಲೆಸಿದ್ದು, ಶ್ರೀಶೈಲಕ್ಕೆಂದು ಹೊರಡುವಾಗ ಭಕ್ತರಿಗೆಂದು ಇಲ್ಲಿ ನಿರ್ಗುಣ ಪಾದುಕೆ ಬಿಟ್ಟಿದ್ದಾರೆ. ಈ ಪಾದುಕೆಗಳೇ ಇಲ್ಲಿಗೆ ಆಗಮಿಸುವ ಭಕ್ತರಿಗೆ ದೈವವಾಗಿದ್ದು, ಐದು ದಿನಗಳ ದೊಡ್ಡ ಜಾತ್ರೆ ನಡೆಯುತ್ತದೆ. ಲಕ್ಷಾಂತರ ಜನ ಇಲ್ಲಿ ಪಾಲ್ಗೊಳ್ಳುತ್ತಾರೆ. ಪ್ರತಿ ಗುರುವಾರ ಮತ್ತು ಅಮಾವಾಸ್ಯೆ ದಿನಗಳಂದು ಯಾತ್ರಿಕರನ್ನು ಆಕರ್ಷಿಸುವ ಈ ಪುಣ್ಯ ಕ್ಷೇತ್ರಕ್ಕೆ ವಿಶೇಷವಾಗಿ ಮಹಾರಾಷ್ಟ್ರದಿಂದ ಜನ ಬಂದು ಸಾಗರೋಪಾದಿಯಲ್ಲಿ ಸೇರುತ್ತಾರೆ. *(ಪಿ.ಕೆ.ಶೆ.)*

ದೇವರ ಗೋನಾಲ: ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಐತಿಹಾಸಿಕ ಮತ್ತು ಚಾರಿತ್ರಿಕ ಮಹತ್ವ ಹೊಂದಿರುವ ಗ್ರಾಮ. ಈ ಗ್ರಾಮ ಸುರಪುರ ಕೆಂಭಾವಿ ಮುಖ್ಯ ರಸ್ತೆಯ ಸುರಪುರದಿಂದ ಪಶ್ಚಿಮಕ್ಕೆ 7 ಕಿ.ಮೀ. ಸಮೀಪದಲ್ಲಿ ಕೆಂಭಾವಿಯಿಂದ ಪೂರ್ವಕ್ಕೆ 23 ಕಿ.ಮೀ. ದೂರದಲ್ಲಿದೆ. ದೇವರ ಗೋನಾಲ ಎಂದರೆ ತಕ್ಷಣ ನೆನಪಿಗೆ ಬರುವದು ಈ ಭಾಗದ ಜನರಿಗೆ ಮಹಾತ್ಮ (ತಿಂಥಣಿ) ಮೌನೇಶ್ವರ. ಕಾರಣ ಮೌನೇಶ್ವರನ ಜನ್ಮಸ್ಥಳ ಇದೇ ಗ್ರಾಮವಾಗಿದ್ದರಿಂದ ಈ ಗ್ರಾಮಕ್ಕೆ ಮತ್ತಷ್ಟು ಮೆರಗು ಬಂದಿದೆ. ಆದರೆ ಈ ಗ್ರಾಮದಲ್ಲಿ ಸುಮಾರು 12ನೆಯ ಶತಮಾನಕ್ಕೆ ಸಂಬಂಧಿಸಿದ ದೇವಾಲಯ ಮತ್ತು ಶಿಲ್ಪಗಳು ಇವೆ.

ಈ ಗ್ರಾಮವನ್ನು ಕ್ರಿ.ಶ. 1106ರ ಕಲ್ಯಾಣಿ ಚಾಲುಕ್ಯರ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಈ ಶಾಸನದ ಆಧಾರದ ಮೇರೆಗೆ ದೇವರ ಗೋನಾಲ ಗ್ರಾಮ, ಸುಮಾರು 12 ನೇ ಶತಮಾನದ ಆರಂಭದ ಕಾಲದಲ್ಲಿ ಮಹತ್ವದ ಗ್ರಾಮವಾಗಿತ್ತೆಂದು ಸ್ಪಷ್ಟವಾಗುತ್ತದೆ. ಈ ಗ್ರಾಮದಲ್ಲಿ ಐತಿಹಾಸಿಕವಾಗಿ ನಮಗೆ ನೋಡಲು ಅದಿಲಿಂಗೇಶ್ವರ ದೇವಾಲಯ ಮತ್ತು ಮೌನೇಶ್ವರ ಗುಡಿಯ ಮುಂದಿರುವ ಕಟ್ಟೆಯ ಮೇಲಿರುವ ಎರಡು ಭೈರವ ವಿಗ್ರಹಗಳು ಅತಿ ಮಹತ್ವದ್ದಾಗಿದೆ.

ಆದಿಲಿಂಗೇಶ್ವರ: ದೇವಾಲಯ ಪೂರ್ವಕ್ಕೆ ಮುಖ ಮಾಡಿದ್ದು, ಗರ್ಭಗೃಹ ಅಂತರಾಳ ಹಾಗೂ ತೆರೆದ ನವರಂಗ ಹೊಂದಿದೆ. ಸಂಪೂರ್ಣ ಅವನತಿಯ ಸ್ಥಿತಿಯಲ್ಲಿರುವ ಈ ದೇವಾಲಯಕ್ಕೆ ಜೀರ್ಣೋದ್ದಾರ ಕೆಲಸ ಸ್ವಲ್ಪ ಆಗಿದೆ. ಇದು

ಗ್ರಾಮಸ್ಥರು ಮಾಡಿರುವ ಮೆಚ್ಚುವಂಥ ಕಾರ್ಯ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅಂತರಾಳದಲ್ಲಿ ಇತ್ತೀಚಿನ ವೀರಭದ್ರ ಶಿಲ್ಪಸ್ಥಾಪನೆ ಮಾಡಿದ್ದಾರೆ. ನವರಂಗದಲ್ಲಿ ನಂದಿ ವಿಗ್ರಹವಿದೆ. ಸುಮಾರು 12 ಕಂಬಗಳನ್ನು ಹೊಂದಿರುವ ಈ ದೇವಾಲಯ ಸುಂದರವಾಗಿದೆ. ನವರಂಗದ ಬಲಗಡೆ ಒಂದು ಬಿಂಬದಲ್ಲಿ ಈಶ್ವರನ ಚಿಕ್ಕ ಶಿಲ್ಪ ಹಾಗೂ ನಂದಿಯ ಕಿರು ಕೆತ್ತನೆಯ ಶಿಲ್ಪಗಳು ಮೋಹಕವಾಗಿವೆ. ನವರಂಗದ ಭುವನೇಶ್ವರಿಯಲ್ಲಿ ಕಮಲದ ಹೂವಿನ ಕೆತ್ತನೆ ಕಲಾತ್ಮಕವಾಗಿದೆ. ಈ ದೇವಾಲಯದ ಗೋಪುರ ಇತ್ತೀಚೆಗೆ ನಿರ್ಮಿಸಿದ್ದಾರೆ. ದೇವಾಲಯ 12ನೆಯ ಶತಮಾನದ ಆರಂಭಕಾಲದಲ್ಲಿ ನಿರ್ಮಾಣವಾಗಿದೆ ಎಂದು ಶಾಸನಗಳು ಹೇಳುತ್ತವೆ. ಈ ದೇವಾಲಯ ನೋಡಲು ಸಾಧಾರಣವೆನಿಸಿದರೂ ಅದಕ್ಕಿರುವ ಇತಿಹಾಸ ಮಾತ್ರ ಪ್ರಾಚೀನವಾದುದು.

ಶಿಲ್ಪ ಶಾಸ್ತ್ರ ತಿಳಿಸುವ ಪ್ರಕಾರ ಭೈರವ ಶಿವನ ಭಯಂಕರ ರೂಪ ಅಂತಹ ಎರಡು ಭೈರವ ವಿಗ್ರಹಗಳು ಈ ಗ್ರಾಮದ ಮೌನೇಶ್ವರ ದೇವಾಲಯದ ಮುಂದೆ ಇವೆ. ಇವುಗಳಲ್ಲಿ ಒಂದು ಸ್ಥಾನಿಕ ಮತ್ತೊಂದು ಆಸೀನ ಭೈರವ ವಿಗ್ರಹಗಳಿವೆ.

ಸ್ಥಾನಿಕ ಭೈರವ ವಿಗ್ರಹ: ಸುಮಾರು 2½ ಅಡಿ ಅಗಲವಿರುವ ಕಪ್ಪುಕಲ್ಲಿನಲ್ಲಿ ಕೆತ್ತಿರುವ ವಿಗ್ರಹ. ಸ್ಥಾನಿಕ ತ್ರಿಭಂಗಿಯಲ್ಲಿದೆ. ಈ ವಿಗ್ರಹದ ಕೊರಳಲ್ಲಿ ಹಾರ ರುಂಡ ಮಾಲೆ ಇದೆ. ಕಾಲಲ್ಲಿ ಕಾಲ್ಗಡದ ಕಿವಿಯಲ್ಲಿ ದೊಡ್ಡ ಕಿವಿಯೋಲೆಗಳಿವೆ. ಸೊಂಟಕ್ಕೆ ಆಭರಣವಿದೆ. ವಿಗ್ರಹದ ಬಲಗಾಲ ತೊಡೆಯ ಬಳಿ ಹೆಡೆ ಎತ್ತಿದ ನಾಗಶಿಲ್ಪ, ಇದೆ. ವಿಗ್ರಹ ನಗ್ನವಾಗಿದೆ. ವಿಗ್ರಹದ ತಲೆಯ ಮೇಲೆ ಗುಂಗುರ ಗುಂಗುರ ಕೂದಲು ಇದ್ದು ಹಿಂದೆ ಜಟಾ ಇದೆ. ತಲೆ ಹಣೆಯ ಭಾಗಕ್ಕೆ ಕೆತ್ತನಾ ರುಂಡ ಶಿಲ್ಪಗಳಿವೆ. ಮುಖ ಹಾಗೂ ನಾಸಿಕ ಸ್ವಲ್ಪ ತೃಟಿತಗೊಂಡಿದೆ. ವಿಗ್ರಹದ ಕಣ್ಣುಗಳು ಅಂತರ್ಮುಖಿಯಾಗಿವೆ. ಈ ವಿಗ್ರಹಕ್ಕೆ ನಾಲ್ಕು ಕೈಗಳಿದ್ದು, ಕ್ರಮವಾಗಿ ಬಲಗೈಗಳಲ್ಲಿ ಢಮರು, ಖಡ್ಗವಿದ್ದು, ಎಡಗೈಯಲ್ಲಿ ತ್ರಿಶೂಲ ಹಾಗೂ ಪಾನಪಾತ್ರೆಗಳಿವೆ. ಶಾಂತಮುಖ ಮುದ್ರೆ ಹೊಂದಿದ್ದು, ಪಾನ ಪಾತ್ರೆ ಹಿಡಿದು ಬಿಕ್ಷಾಟನೆಗೆ ಹೋಗುವ ಭಂಗಿಯ ಕೆತ್ತನೆಯಾಗಿದೆ.

ಆಸೀನ ಭೈರವ: ಈ ಭೈರವ ವಿಗ್ರಹ ಆಸೀನ ಭಂಗಿಯಲ್ಲಿದ್ದು ಸುಮಾರು 3 ಅಡಿ ಎತ್ತರ 2 ಅಡಿ ಅಗಲದಿಂದ ಕೂಡಿದೆ. ಕಿವಿಯಲ್ಲಿ ಕಿವಿಯೋಲೆಗಳು, ಕಾಲಲ್ಲಿ ಕಾಲ್ಗೆಜ್ಜೆ, ಕೊರಳಲ್ಲಿ ಆಭರಣಗಳಿವೆ. ಎದೆ ಅಗಲವಾಗಿದೆ. ತಲೆಗೆ ಗುಂಗುರ ಗುಂಗುರ ಕೂದಲ ಇದ್ದು, ಹಿಂದೆ ಜಡೆ ಇದೆ. ವಿಶೇಷವೆಂದರೆ ಈ ವಿಗ್ರಹಕ್ಕೆ ರುಂಡಮಾಲೆ ಇಲ್ಲದಿರುವುದು. ಭುಜದಲ್ಲಿ ಯಜ್ಞೋಪವೀತವಿದೆ. ಮುಖ ಭಗ್ನಗೊಂಡಿದೆ. ಕಣ್ಣುಗಳು ಮುಚ್ಚಿ ಶಾಂತರೂಪದಲ್ಲಿದೆ. ವಿಗ್ರಹದ ತೋಳಿಗೆ ತೋಳ್ಬಂದಿ, ಎದೆಭಾಗದ ಕೆಳಗೆ ಉದರ ಬಂದಿ ಕೆತ್ತಲಾಗಿದೆ. ವಿಗ್ರಹಕ್ಕೆ ಎರಡು ಕೈಗಳಿದ್ದು, ಬಲಗೈಯಲ್ಲಿ ಖಡ್ಗ ಎಡಗೈಯಲ್ಲಿ ಪಾನ ಪಾತ್ರೆ, ಎಡಗಾಲ ಮಡಚಿ ಕುಳಿತಿರುವ ಈ ವಿಗ್ರಹವನ್ನು ಸ್ಥಳೀಯರು ಚೌಡಮ್ಮ ಎಂದು ತಪ್ಪಾಗಿ ಕರೆಯುತ್ತಾರೆ. ಸ್ತ್ರೀ ವಿಗ್ರಹವಾಗಿದ್ದರೆ, ಸ್ತನಗಳು ಇರುತ್ತಿದ್ದುವು ಎನ್ನುವುದನ್ನು ಅರಿತ ಜನರು ಭೈರವ ಎಂದು ಕರೆಯಲು ಪ್ರಾರಂಭಿಸಿದರು. ಈ ವಿಗ್ರಹ ಕೂಡ ಕಪ್ಪು ಶಿಲೆಯ ಕಲ್ಲಲ್ಲಿ ಕೆತ್ತಲಾಗಿದೆ.

ವಿಷ್ಣು: ಗ್ರಾಮದಲ್ಲಿ ಆಂಜನೇಯ ದೇವಾಲಯದ ಬಳಿ ಇರುವ ಚಿಕ್ಕ ನಾರಾಯಣ ದೇವಾಲಯದಲ್ಲಿ ವಿಷ್ಣು ಶಿಲ್ಪವಿದೆ. ವಿಗ್ರಹಕ್ಕೆ ನಾಲ್ಕು ಕೈಗಳಿದ್ದು ಕ್ರಮವಾಗಿ ಬಲಗೈಗಳಲ್ಲಿ ಶಂಖ ಹಾಗೂ ಎಡಗೈಗಳಲ್ಲಿ ಚಕ್ರ, ಗದೆ ಕೆತ್ತಲಾಗಿದೆ ಮುಂದಿನ ಬಲಗೈ ತೃಟಿ-ತಗೊಂಡಿದೆ. ಈ ವಿಗ್ರಹ ಸ್ಥಾನಿಕ ಸಮ ಭಂಗಿಯಲ್ಲಿದ್ದು ಕೊರಳಲ್ಲಿ ಹಾರ ಕಿವಿಯಲ್ಲಿ ಕಿವಿಯೋಲೆ, ಕಾಲಲ್ಲಿ ಕಾಲ್ಗಡಗ ಮೇಲೆ ಕೀರಿಟ ಮುಕುಟವಿದೆ. ವಿಗ್ರಹದ ಕೆಳಗಡೆ ವಾಹನ (ಬಲಗಡೆ) ಗರುಡ ಅಂಜಲಿ ಮುದ್ರೆಯಲ್ಲಿ ಕುಳಿತ ಶಿಲ್ಪವಿದೆವಿಗ್ರಹದ ಎಡ ಮತ್ತು ಬಲಕ್ಕೆ ಚೌರಿ ಶಿಲ್ಪಗಳಿವೆ.

ದೇವರ ಗೋನಾಲ ಗ್ರಾಮದಲ್ಲಿ ದೊರೆತಿರುವ ಭೈರವ ವಿಗ್ರಹಗಳು ಹಾಗೂ ಆದಿಲಿಂಗೇಶ್ವರ ದೇವಾಲಯ ವಿಷ್ಣು ವಿಗ್ರಹ ಹಾಗೂ ಶಾಸನಗಳಿಂದ ಈ ಗ್ರಾಮಕ್ಕೆ ಸುಮಾರು 800 ವರ್ಷಗಳ ಇತಿಹಾಸವಿರುವುದು ಸ್ಪಷ್ಟವಾಗುತ್ತದೆ. ಈ ಗ್ರಾಮದಲ್ಲಿ ಜನಪ್ರಿಯ ಮಹಾತಪಸ್ವಿ ಮೌನೇಶ್ವರ ದೇವಾಲಯದ ಕಟ್ಟಡ ಕೂಡ ಸುಂದರವಾಗಿದೆ. ಮುಸ್ಲಿಂ ವಾಸ್ತು ಶೈಲಿಯ ಗುಮ್ಮಟವನ್ನು ಹೊಂದಿರುವ ಈ ದೇವಾಲಯವನ್ನು 18ನೆಯ ಶತಮಾನದಲ್ಲಿ ಸುರಪುರದ ನಾಯಕರ ಮಂತ್ರಿಗಳಾದ ನಿಷ್ಠೆಯ ಕಡಲಪ್ಪ ಹಾಗೂ ವೀರಪ್ಪ ಕಟ್ಟಿಸಿದ್ದಾರೆ ಎಂಬುದು ಇತಿಹಾಸದಿಂದ ತಿಳಿಯುತ್ತದೆ. ಇದಲ್ಲದೆ ಈ ಗ್ರಾಮದಲ್ಲಿ ಐತಿಹಾಸಿಕ ಸಂಬಂಧಿಸಿದ ಬಾಗಗಳು ಕಾಣುತ್ತವೆ. ಅಲ್ಲದೆ ಹಯ್ಯಾಳಪ್ಪ ಎನ್ನುವ ದೇವಾಲಯವಿದೆ.

ದೇವರ ಗೋನಾಲ ಗ್ರಾಮವು 12ನೆಯ ಶತಮಾನದಲ್ಲಿ ಮಹತ್ವದ ಗ್ರಾಮವಾಗಿತ್ತಲ್ಲದೆ, ಶೈವ, ವೈಷ್ಣವ ಧರ್ಮಗಳು ಆಚರಣೆಯಲ್ಲಿದ್ದವು ಎಂದು ಹೇಳಲು ಶಿಲ್ಪಗಳೇ ಆಧಾರ. ಈ ಗ್ರಾಮದ ಮೌನಪ್ಪಯ್ಯನ (ಮೌನೇಶ್ವರ) ದೇವಾಲಯ ಹಿಂದೂ ಮುಸ್ಲಿಂ ಭಾವೈಕ್ಯದ ಪ್ರತೀಕವಾಗಿದೆ. *(ಎನ್.ಎಚ್.ಡಿ.)*

ದೇವರಗಡ್ಡಿಯ ಗದ್ದೆಮ್ಮದೇವಿ: ಯಾದಗೀರ ಜಿಲ್ಲೆ ಸುರಪುರ ತಾಲ್ಲೂಕಿನ ನಾರಾಯಣಪುರದಿಂದ 8 ಕಿ.ಮೀ. ದೂರದಲ್ಲಿರುವ ದೇವಿ. ಈ ದೇವಿಯ ಹಿಂದೊಂದು ಪೌರಾಣಿಕ ಕಥೆಯೇ ಇದೆ. ತಿಂಥಿಣಿ ಮೌನೇಶ್ವರರು, ಮಳಿಯಪ್ಪನವರು, ಗಂಗಾಧರರು ಮತ್ತು ಬಡೇಮಿಯಾ ಎಂಬ ನಾಲ್ವರು ಪವಾಡ ಪುರುಷರು ಕೃಷ್ಣಾ ನಡುಗಡ್ಡೆಯಲ್ಲಿ ಕುಳಿತಿರುವಾಗ, ನದಿಯಲ್ಲಿ ಮರದ ದಿಮ್ಮೆಯೊಂದು ತೇಲಿ ಹೋಗುತ್ತಿರುವದನ್ನು ಕಂಡರು.

ಮಳಿಯಪ್ಪನವರು ಹಾಗೂ ಬಡೇಮಿಯಾ ಅವರು ಆ ದಿಮ್ಮಿಯನ್ನು ದಡಕ್ಕೆ ತರುತ್ತಾರೆ. ಮೌನೇಶ್ವರರಿಗೆ ಈ ದಿಮ್ಮೆಯಲ್ಲಿ ದೇವಿಯ ಅವತಾರ ಕಂಡು ಬರುತ್ತದೆಯಂತೆ. ಮುಂದೆ ಹೋಗಬೇಡ ತಾಯಿ, ನಿನಗೆ ಇದಕ್ಕಿಂತ ಒಳ್ಳೇಯ ಸ್ಥಾನ ಇಲ್ಲವೆಂದು ಪ್ರಾರ್ಥಿಸಿ, ಕುಲದಿಂದ ಬಡಿಗರಾದ ಮೌನೇಶ್ವರರು, ಈ ಮರದ ದಿಮ್ಮೆಯೊಳಗಿಂದ ದೇವಿ ಮೂರ್ತಿಯನ್ನು ಹೊರತೆಗೆಯುತ್ತಾರೆ. ಇಂಥ ಮಹಾಪುರುಷರಿಂದಾಗಿ ರೂಪು ಗೊಂಡ ದೇವಿ ದೇವರಗಡ್ಡಿಯಲ್ಲಿ ಸ್ಥಾಪಿಸಲ್ಪಡುತ್ತಾಳೆಂದು ಹೇಳಲಾಗುತ್ತದೆ.

ದೇವಿಗೆ ಪ್ರತಿ ವರ್ಷ ಸಂಭ್ರಮದ ಕಾರ್ತಿಕೋತ್ಸವ ನಡೆಯುತ್ತದೆ. ಈ ಸಂದರ್ಭದಲ್ಲಿ ಸುತ್ತಲಿನ ಭಕ್ತರು ತಮ್ಮ ಮನೆಯಿಂದಲೇ ಎಣ್ಣೆ, ಬತ್ತಿ ಹಾಗೂ ಪ್ರಣತಿಯನ್ನು ತಂದು

ವೈಭವದ ದೀಪಾರಾಧನೆ ನೆರವೇರಿಸುತ್ತಾರೆ. ಆನಂತರ ದೇವಿಯ ಜಾತ್ರೆ ನಡೆಯುತ್ತದೆ. ಈ ಜಾತ್ರೆಯ ಸಂದರ್ಭದಲ್ಲಿ ಅಕ್ಕಿ ಪಾಯಸ ವಿಶೇಷ. ಉಪ್ಪಾರ ಸಮಾಜದವರು ಮಡಿಯಿಂದ ಒಲೆ ಮಾಡಿ ಅಗ್ನಿ ಹೊತ್ತಿಸುತ್ತಾರೆ. ಪೂಜಾರಿಗಳು ಹೊಸ ಗಡಿಗೆಯಲ್ಲಿ ಅಕ್ಕಿ, ಹಾಲು, ಕಲ್ಲುಸಕ್ಕರೆ, ತುಪ್ಪ ಹಾಕಿ ಮಾಡಿ, ಬೆಳ್ಳಿ ತಟ್ಟೆಯಲ್ಲಿ ದೇವಿಗೆ ನೈವೇದ್ಯ ಮಾಡುತ್ತಾರೆ.

ಈ ಜಾತ್ರೆಯ ಸಂದರ್ಭದಲ್ಲಿ ಅಗ್ನಿ ಪ್ರವೇಶ ಸೇವೆ ಅದ್ಭುತವಾಗಿರುತ್ತದೆ. ಈ ಸಂದರ್ಭದಲ್ಲಿ ವಿಶಾಲವಾದ ಅಗ್ನಿ ಹೊತ್ತಿಸಿ, ಅದಕ್ಕೆ ತುಪ್ಪ ಸುರಿಯುತ್ತಾರೆ. ಹರಕೆ ಹೊತ್ತ ಮಕ್ಕಳು, ಹಿರಿಯರೂ ದೇವಿಯನ್ನು ಸ್ಮರಿಸುತ್ತ, ಸುತ್ತಲಿನವರ ಜಯಕಾರ ದೊಂದಿಗೆ ಅಗ್ನಿ ದಾಟಿಕೊಂಡು ಬರುತ್ತಾರೆ. ಈ ಸಂದರ್ಭದಲ್ಲಿ ದೇವಿಗೆ ಬಲಿಕೊಡಲು ಬೇಡಿಕೊಂಡ ಭಕ್ತರು ಸುತ್ತಲೂ ನೆರೆದು, ಕೋಳಿ ಹುಂಜಗಳನ್ನು ಬೆಂಕಿಗೆ ಎಸೆಯುತ್ತಾರೆ. ಪರಪರನೆ ರೆಕ್ಕೆ ಬಡಿದು ಅವು ದೇವಿಗೆ ಆಹುತಿಯಾಗುತ್ತವೆ.

ಆನಂತರ ಹೂವಿನಿಂದ ಅಲಂಕೃತ ದೇವಿಯ ರಥೋತ್ಸವ ಸಾಯಂಕಾಲ ಅತ್ಯಂತ ಸಂಭ್ರಮದಿಂದ ನಡೆಯುತ್ತದೆ. ಸುತ್ತಲಿನ ನೂರಾರು ಹಳ್ಳಿಗಳ ಹಾಗೂ ನೆರೆ ಜಿಲ್ಲೆಗಳಿಂದಲೂ ರಥೋತ್ಸವಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ, ಬೆಂಡು, ಬತ್ತಾಸು, ಉತ್ತತ್ತಿಗಳನ್ನು ಸಲ್ಲಿಸಿ ಪುನೀತರಾಗುತ್ತಾರೆ. ನಂತರ ಕುಂಭಾಭಿಷೇಕ ನಡೆಯುತ್ತದೆ. ಭಕ್ತರು ಬೆಳಿಗ್ಗೆ ಕೃಷ್ಣಾ ನದಿಗೆ ಹೋಗಿ, ಮಿಂದು ಮಡಿಯಿಂದ ಪೂರ್ಣ ಕುಂಭಗಳೊಂದಿಗೆ ರಾತ್ರಿಯ ದೀವಟಿಗೆಯ ದೀಪದಲ್ಲಿ ಮೆರವಣಿಗೆಯಲ್ಲಿ ಬರುವದನ್ನು ನೋಡುವುದೇ ಒಂದು ಭಾಗ್ಯವೆನಿಸುತ್ತದೆ. *(ಎಂ.ಎಸ್.)*

ದೇವರು ಬರುವುದು: ಜನಪದರಲ್ಲಿ ವಿವಿಧ ಹಬ್ಬ–ಹುಣ್ಣಿಮೆ ರೂಢಿ ಸಂಪ್ರದಾಯಗಳಲ್ಲಿ ದೇವರನ್ನು ಪೂಜಿಸುವುದರೊಂದಿಗೆ ಕೆಲವರನ್ನು ದೇವರ ಪ್ರತಿನಿಧಿಗಳೆಂದು, ಅವತಾರಿಗಳೆಂದು ದೇವರೇ ಇವರ ಮೈಯಲ್ಲಿ ಬಂದಿದ್ದಾರೆಂದು ನಂಬುವ ಪದ್ಧತಿ ಬೆಳೆದು ಬಂದಿದೆ. ವಿಶೇಷವಾಗಿ ಎಲ್ಲಮ್ಮ, ಅಂಬಾಭವಾನಿ, ಚಿಂಚನಸೂರು ಮಹಾಪೂರತಾಯಿ, ಘತ್ತರಗಿ ಭಾಗ್ಯವಂತಿ ಮುಂತಾದ ಹೆಣ್ಣು ದೇವತೆಗಳು ಕೆಲವರ ಮೈಮೇಲೆ ಬಂದು ಅವರು ಹೇಳಿಕೆಗಳನ್ನು ಪೂಜಾ ವಿಧಿ ವಿಧಾನಗಳನ್ನು ಆಚರಣೆಗಳನ್ನು ಮಾಡಲು ಸೂಚಿಸುವುದುಂಟು.

ವೀರಭದ್ರೇಶ್ವರ, ಮೈಲಾರಲಿಂಗೇಶ್ವರ, ಸುಗೂರೇಶ್ವರ ಮುಂತಾದ ಪುರುಷ ದೇವತೆಗಳು ಸಹ ಪ್ರಾದೇಶಿಕವಾಗಿ ಈ ಭಾಗದ ಕೆಲವರ ಮೈಮೇಲೆ ಬರುವುದುಂಟು ಆಯಾ ದೇವರುಗಳ ಜಾತ್ರೆ–ಉತ್ಸವಗಳಲ್ಲಿ ಆಯಾ ಗುಡಿಗಳ ಪೂಜಾರಿಗಳ ಮೈಮೇಲೆ ಈ ದೇವರು ಬಂದು ಅಲ್ಲಿನ ಜನಪದರಿಗೆ ಅತಿ ಅವಶ್ಯಕವಾಗಿರುವ ಮಳೆ, ಬೆಳೆ, ಋತುಮಾನ, ಕಾಲಮಾನ ರೋಗ–ರುಜಿನ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ನೀಡುತ್ತದೆ. ಸಾಮಾನ್ಯ ಜನರಿಗೆ ದಿಗ್ಭ್ರಮೆಯಾಗುವಂತಹ ನಡುವಳಿಕೆಗಳನ್ನು ಮಾಡಿ ಆ ಪವಾಡ ಲೀಲೆಗಳಿಂದ ಬೆರಗುಗೊಳಿಸಿ ತಮ್ಮ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತವೆ. *(ಕೆ.ಜಿ.ಪಿ.)*

ದೇವಾಂಗ: ಇವರ ವೃತ್ತಿ ನೇಯ್ಗೆ. ನೇಕಾರರಲ್ಲಿ ವಿವಿಧ ಪಂಗಡಗಳಿವೆ. ಕರ್ನಾಟಕದಲ್ಲಿ ಪ್ರಧಾನವಾಗಿ ಕರ್ನಾಟಕ ದೇವಾಂಗದವರು, ಕುರುಹೀನಶೆಟ್ಟರು ಮತ್ತು ಪದ್ಮ ಸಾಲಿಗರು ಎಂದು ಮೂರು ಪಂಗಡಗಳಿವೆ. ಈ ಮೂರು ಪಂಗಡಗಳಿಗೂ ಆಚಾರ ವಿಚಾರಗಳಲ್ಲಿ ವ್ಯತ್ಯಾಸವಿದೆ. ಈ ಮೂರು ಪಂಗಡಗಳಿಗೂ ಪ್ರಧಾನ ವೃತ್ತಿ ನೇಯ್ಗೆ. ಆದರೆ ಪರಸ್ಪರ ಕೊಳುಕೊಡುಗೆ, ಊಟೋಪಚಾರ, ಮದುವೆ ಇನ್ನಿತರ ಯಾವುದೇ ಅನ್ಯೋನ್ಯವಾದ ಸಂಬಂಧಗಳಿರುವುದಿಲ್ಲ. ಕರ್ನಾಟಕದಲ್ಲಿ ದೇವಾಂಗದವರ ಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿ ಇರುವುದನ್ನು ಕಾಣಬಹುದು. ದೇವಾಂಗದವರು ಏಕದೇವತಾ ಆರಾಧಕರಲ್ಲ. ಇವರು ಯಾವ ಶೃತಿ ಅಥವಾ ಸ್ಮೃತಿಯ ನಿಯಂತ್ರಣಕ್ಕೆ ಒಳಪಟ್ಟವರಲ್ಲ.

ಯಾವುದೇ ಒಂದು ನಿರ್ದಿಷ್ಟವಾದ ಆಗಮದ ಕಟ್ಟಿಗೆ ಒಳಪಟ್ಟವರಲ್ಲ. ಮೂಲತಃ ಯಾವಶಾಸ್ತ್ರ ಹಿಡಿತಕ್ಕೂ ಸಿಕ್ಕದ, ಆದರೆ ಧಾರ್ಮಿಕ ಕ್ರಿಯೆಗಳಿಗೆ ಒಳಪಟ್ಟ ಜನಾಂಗವೆನ್ನಬಹುದು. ಇವರು ಶಕ್ತಿ ದೇವತೆಯ ಆರಾದಕರು. ಚೌಡೇಶ್ವರಿಯನ್ನು ಬನಶಂಕರಿ ಎಂದು ಕರೆಯುವರು. ಆದುದರಿಂದ ಇವರದು ಮಾತೃಪ್ರಧಾನ ಕುಟುಂಬ. ದೇವಾಂಗ ಸಮಾಜದವರಲ್ಲಿ ಕಳಸ ಪೂಜೆ ಪ್ರಧಾನವಾಗಿದೆ. ಅದಿಲ್ಲದೆ ಯಾವ ಧಾರ್ಮಿಕ ಕೆಲಸಕಾರ್ಯಗಳು ಮಂಗಳ ಕಾರ್ಯವಿರಲಿ ಇಲ್ಲಾ ಅಮಂಗಳ ಕಾರ್ಯವಿರಲಿ ಕಳಸವನ್ನೇ ಪೂಜಿಸುವರು. ಕಳಸ ಶಕ್ತಿಯ ಸಂಕೇತ. ಶುಭ ಅಶುಭ ಎರಡು ಒಂದೇ. ಕಳಸ ಸ್ತ್ರೀಯ ಗರ್ಭದ ಸಂಕೇತ. ಅದು ಫಲವಂತಿಕೆಯನ್ನು ಸೂಚಿಸುತ್ತದೆ. ಅದರ ಪೂಜೆಯ ಅಭಿವೃದ್ಧಿಯ, ಉತ್ಪತ್ತಿಯ ಸಾಧನ, ಆದ್ದರಿಂದ ದೇವಾಂಗ ಸಮಾಜದವರಿಗೆ ಕಳಸ ಹೂಡುವುದು, ಧಾರ್ಮಿಕ ನಿಧಿಯಲ್ಲಿ ಬಹಳ ಮೌಲ್ಯಯುತವಾದುದು.

ಇವರಲ್ಲಿ ಬೇರೆ ಬೇರೆ ಬೆಡಗುಗಳು ಮತ್ತು ಗೋತ್ರಗಳು ಇರುತ್ತವೆ. ಉತ್ತರ ಕರ್ನಾಟಕದಲ್ಲಿ ದೇವಾಂಗದವರಲ್ಲಿ ಕುಲಾಚಾರ ಮತ್ತು ಶಿವಾಚಾರ ಪದ್ಧತಿಗಳಿವೆ. ಶಿವಾಚಾರದಲ್ಲಿ ಸುರಗಿ ರೂಢಿಯಲ್ಲಿಲ್ಲ. ಕುಲಾಚಾರದಲ್ಲಿ ದೀಕ್ಷೆ ಇಲ್ಲ ಅದರ ಜೊತೆಗೆ ವಾರಕಾರಿ, ಕುಂಕುಮ ಮತ್ತು ಭಂಡಾರ ಬಕ್ತರೂ ಇದ್ದಾರೆ. ಕುಂಕುಮದವರು ಅಂದರೆ ಬನಶಂಕರಿ ಭಕ್ತರು. ಸೌಮ್ಯದೇವಿ ಭಕ್ತರು, ಭಂಡಾರದವರು ಅಂದರೆ ಹುಲಗಮ್ಮ ಭಕ್ತರು, ಉಗ್ರದೇವಿ ಭಕ್ತರು, ಬಂಡಾರಿ ಭಕ್ತರು ಮನೆಯಲ್ಲಿ ಹೆಣ್ಣು ತರುವುದಿಲ್ಲ. ಒಟ್ಟಾರೆಯಾಗಿ ಆಧುನಿಕತೆಯ ಭರದಲ್ಲಿ ದೇವಾಂಗದವರು ಬೇರೆ ಬೇರೆ ವೃತ್ತಿಗಳನ್ನೂ ಕೂಡ ಅವಲಂಬಿಸಿರುವರು. *(ಎಚ್.ಕೆ.ಎನ್.)*

ದೇವೇಂದ್ರಕುಮಾರ ಹಕಾರಿ: (1931–2007) ಜಾನಪದ ತಜ್ಞ. ಇವರದು ಪ್ರಮುಖವಾಗಿ ಸೃಜನಶೀಲ ಪ್ರತಿಭೆ. ರಾಯಚೂರು ಜಿಲ್ಲೆಯ



ಚಿಕ್ಕೇನ ಕೊಪ್ಪದಲ್ಲಿ 1931ರಲ್ಲಿ ಜನಿಸಿದರು. ಹೈದರಾಬಾದು ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಉರ್ದು ಶಿಕ್ಷಣ ಮಾಧ್ಯಮದಲ್ಲಿ ಓದಿ ಬಿ.ಎ., ಎಂ.ಎ., ಪದವಿಗಳನ್ನು ಪಡೆದವರು. ಅನಂತರ ಕಲಬುರ್ಗಿಯ ಶರಣ ಬಸವೇಶ್ವರ ಕಾಲೇಜಿನಲ್ಲಿ ಎರಡು ವರ್ಷಗಳ ಕಾಲ ಅಧ್ಯಾಪಕರಾಗಿದ್ದರು. ಆ ಮೇಲೆ ಮೂರು ದಶಕಗಳ ಕಾಲ ಅವ್ಯಾಹತವಾಗಿ ಧಾರವಾಡದ ಕರ್ನಾಟಕ ಕಾಲೇಜು ಮತ್ತು

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಅಧ್ಯಾಪಕರಾಗಿ, ಪ್ರವಾಚಕರಾಗಿ ಸೇವೆ ಸಲ್ಲಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಹನಿರ್ದೇಶಕ ಪ್ರಾಧ್ಯಾಪಕರಾಗಿದ್ದರು. ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಇವರು ಮಹತ್ವದ ಕೆಲಸ ಮಾಡಿದ್ದಾರೆ. ಕಾದಂಬರಿ, ಕಾವ್ಯ, ವಿಮರ್ಶೆ, ಸಣ್ಣಕತೆ, ನಾಟಕ–ಗೀತ ನಾಟಕ, ಜೀವನ ಚರಿತ್ರೆ, ಜಾನಪದ, ಸಂಪಾದನೆ, ಅನುವಾದ– ಹೀಗೆ ಬಹುತೇಕ ಎಲ್ಲ ಪ್ರಮುಖ ಶಾಖೆಗಳಲ್ಲಿ ದುಡಿದು ಹೆಸರು ಮಾಡಿದ್ದಾರೆ. ನಲವತ್ತಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ.

ಸಾಹಿತ್ಯಕ ಸಾಧನೆ ಒಂದು ತೂಕದ್ದಾದರೆ ಇವರ ಜಾನಪದ ಕೃಷಿಯದೇ ಒಂದು ಅನನ್ಯ ತೂಕ. ಜಾನಪದ ಅವರ ಅತ್ಯಂತ ಪ್ರೀತಿ ಪಾತ್ರ ವಿಷಯಗಳಲ್ಲೊಂದು. ಹೀಗಾಗಿಯೇ ತಮ್ಮ ಪಿಎಚ್.ಡಿ. ಪದವಿಯನ್ನು ಈ ಕ್ಷೇತ್ರದಲ್ಲಿ ಸಂಶೋಧನೆ ಮಾಡಿ ಗಳಿಸಿದರು. 'ಜಾನಪದ ಸಾಮಾಜಿಕ ದುಃಖಾಂತ ಕಥನಗೀತೆಗಳು– ಒಂದು ಸಾಂಸ್ಕೃತಿಕ ಅಧ್ಯಯನ' ಇವರ ಡಾಕ್ಟರೇಟ್ ಪದವಿಯ ನಿಬಂಧ, ಇದೇ ಅಲ್ಲದೆ 'ಜಾನಪದೀಯ', ಗರತಿಯ ಹಾಡುಗಳಲ್ಲಿ ಕೌಟುಂಬಿಕ ಜೀವನ ಚಿತ್ರಣ', 'ಜಾನಪದ ಮೂಲಭೂತ ತತ್ವಗಳು', 'ಜಾನಪದ ಸಮ್ಮುಖ', ಹಾಗೂ 'ಜಾನಪದ ಭಂಡಾರ' ಇವು ಅವರ ಇತರ ಜಾನಪದ ಕೃತಿಗಳು.

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಸಮ್ಮೇಳನಗಳಲ್ಲಿ ಪಾಲ್ಗೊಂಡು ಪ್ರಬುದ್ಧಪ್ರಬಂಧಗಳನ್ನು ಮಂಡಿಸಿ, ಉಪನ್ಯಾಸ, ಭಾಷಣಗಳನ್ನು ಮಾಡಿ ಕೀರ್ತಿ ಸಂಪಾದಿಸಿದ್ದಾರೆ. ತಾವೇ ನೇತೃತ್ವ ವಹಿಸಿ ಕಮ್ಮಟಗಳನ್ನು, ವಿಚಾರ ಸಂಕಿರಣಗಳನ್ನು ಏರ್ಪಡಿಸಿದ್ದಾರೆ. ಜಾನಪದ ಅಕಾಡೆಮಿಯ ಸದಸ್ಯರಾಗಿ, ಆಕಾಶವಾಣಿ ಸಲಹೆಗಾರರಾಗಿ, ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷರಾಗಿ, ಕರ್ನಾಟಕ ಗೆಝೆಟಿಯರ್‌ನ ಸಲಹಾ ಸಮಿತಿ ಸದಸ್ಯರಾಗಿ, ದ್ರಾವಿಡ ಭಾಷಾ ವಿಜ್ಞಾನ ಸಂಸ್ಥೆ, ದಕ್ಷಿಣ ಭಾರತೀಯ ಭಾಷಾ ಜಾನಪದ ಸಂಸ್ಥೆಗಳೊಡನೆ ಸಂಸ್ಥಾಪಕ ಸದಸ್ಯರಾಗಿ ನಿಕಟ ಸಂಬಂಧ ಹೊಂದಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಇವರಿಗೆ ಜಾನಪದ ಮತ್ತು ಯಕ್ಷಗಾನ ಅಕಾಡಿಮಿಯ ಪ್ರಶಸ್ತಿ ದೊರೆತಿದೆ. 7 ಏಪ್ರಿಲ್ 2007 ರಂದು ಇವರು ಧಾರವಾಡದಲ್ಲಿ ನಿಧನ ಹೊಂದಿದರು.

(ಜಿ.ಆರ್.ಟಿ.)

ದೈ

ದೈವದವರು: ಬುಡಕಟ್ಟು ಸಮಾಜದಲ್ಲಿ ಕೆಲವು ಒಳಗುಂಪುಗಳಿವೆ. ಅವುಗಳ ಒಳಗೆ ಯಾವುದೋ ಒಂದು ಕಾರಣಕ್ಕೆ ಜಗಳ, ಘರ್ಷಣೆಗಳು ಜರುಗುವುದುಂಟು. ಅಥವಾ ನೆರೆಕೆರೆಯವರಿಂದ ಭಯಭೀತರಾಗಬಹುದು. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವ, ಆಲೋಚಿಸುವ, ತಪ್ಪಿಸುವ, ಪರಿಹರಿಸುವ ಸಲುವಾಗಿ ಒಂದು ಸಂಸ್ಥೆಬೇಕು. ಆದುದರಿಂದಲೇ ಬುಡಕಟ್ಟುಗಳಲ್ಲಿ ನ್ಯಾಯ ಪಡೆಯಲು ಒಂದು ನ್ಯಾಯ ಸಂಸ್ಥೆಯನ್ನು ತಮ್ಮ ಗುಂಪಿನಲ್ಲಿ ಹಿರಿಯರು ಕೂಡಿಕೊಂಡು ತಾವೇ ರಚಿಸಿಕೊಳ್ಳುವರು. ಇಂಥ ಒಂದು ನ್ಯಾಯ ಸಂಸ್ಥೆಯಲ್ಲಿ ಐದು ಇಲ್ಲ ಏಳು ಜನರಿರುವರು ಇವರನ್ನೇ ದೈವದವರು ಅಥವಾ ಪಂಚರು ಎಂದು ಕರೆಯುವುದು ವಾಡಿಕೆ. ಈ ನ್ಯಾಯದಲ್ಲಿ 1. ನಾಯಕ. 2. ಕಾರಬಾರಿ (ಕಾರ್ಯದರ್ಶಿ) 3. ಸಹ ನಿರ್ದೇಶಕ 4. ಪಂಚರು (ಸದಸ್ಯರು). 5. ವಾಲೀಕಾರ 6. ವೃತ್ತಿಗಾಯಕ. 7. ಕ್ಷೌರಿಕ.

1. ನಾಯಕ: ಒಂದು ನಿರ್ದಿಷ್ಟ ಸಮುದಾಯದಲ್ಲಿದ್ದು ಗುರುತಿಸಿಕೊಂಡ ಹಿರಿಯ ವ್ಯಕ್ತಿ. ಈತ ಅನುಭವಿ, ನಿಪುಣ, ಪ್ರತಿಭಾವಂತ, ನೀತಿವಂತ, ಗಂಭೀರ ಪರಾಕ್ರಮಿ, ಪ್ರಾಮಾಣಿಕ, ಅಲ್ಲದೆ ಅಸಾಧ್ಯವಾದುದನ್ನು ಸಾಧ್ಯವಾಗಿಸುವಂಥ ಕನಸುಗಾರಿಕೆ ಉಳ್ಳವನಾಗಿರುವನು. ಇವನೊಳಗೆ ಸಮೂಹಪ್ರಜ್ಞೆ ಇದ್ದು, ಅದರೊಳಗಿರುವ ವ್ಯಕ್ತಿಯ ಸೂಕ್ಷ್ಮಗಳನ್ನು ಸಾಧಿಸಬಲ್ಲ ಅಚಲವಾದ ಮನೋಧರ್ಮ, ಜೊತೆಗೆ ಸಿಂಹಾಸನ ಪಡೆದಿದ್ದು ಅಧಿಕಾರದ ಅಹಂನ್ನು ಮೀರಿದ ಅಂತಃಕರಣ ಹೊಂದಿರುವಂತವನಾಗಿರಬೇಕು. ಛಲ ಮತ್ತು ಚಾಣಾಕ್ಷನಾಗಿರಬೇಕು. ದರ್ಪ, ಮೋಹ, ಅಹಂ ಮತ್ತು ಗರ್ವಕ್ಕೆ ಅವಕಾಶ ಮಾಡಿಕೊಂಡುವಂತಿಲ್ಲ. ಒಂದು ಸಮುದಾಯದ ಪಂಚಾಯತಿಗೆ ಇವನೇ ನ್ಯಾಯಾಧೀಶ. ಇಡೀ ಪಂಚಾಯತಿಯ ಐಕ್ಯತೆ, ಸಂಘಟನೆಯನ್ನು ಈ ನಾಯಕನೇ ನೋಡಿಕೊಳ್ಳುವನು.

2. ಕಾರಭಾರಿ ಅಥವಾ ಕಾರ್ಯದರ್ಶಿ: ಚುನಾಯಿತನಾದ ನಾಯಕನ ಪ್ರತಿಯೊಂದು ಕೆಲಸ ಕಾರ್ಯಗಳಲ್ಲಿ ಸಹಾಯಕ್ಕಾಗಿ, ಆತ್ಮೀಯ, ಸಲಹೆಗಾರನಾಗಿ, ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವನು. ವಕೀಲನಷ್ಟೇ ಜಾಣ್ಮೆ ಇವನಲ್ಲಿರುತ್ತದೆ. ಇಂದಿನ ನ್ಯಾಯಾಲಯದಲ್ಲಿ ವಾದಿ ಪ್ರತಿವಾದಿಗಳನ್ನು ಪ್ರಶ್ನಿಸುವಂತೆ ಕಾರ್ಯದರ್ಶಿ ಸಂಸ್ಥೆಯ ಕೆಲಸವನ್ನು ನಿರ್ವಹಿಸುವನು. ಕೆಲವು ಸಂದರ್ಭದಲ್ಲಿ ಕಾರಬಾರಿಯ ಸೂಚನೆ, ಸಲಹೆಗಳನ್ನು ಪಡೆದು, ನಾಯಕ ನ್ಯಾಯ ತೀರ್ಪನ್ನೂ ಕೊಡಬೇಕಾಗುತ್ತದೆ. ನಾಯಕನಿಗಿರುವ ಸ್ಥಾನಮಾನವನ್ನೂ ಈ ಕಾರಿಭಾರಿಯು ಪಡೆಯುತ್ತಾನೆ.

3. ಸಹನಿರ್ದೇಶಕ: ಈತ ಒಂದು ಸಮುದಾಯದ ಹಿರಿಯ ವ್ಯಕ್ತಿ. ಅಲ್ಲದೆ ಅನುಭವವುಳ್ಳವನಾಗಿರುವನು. ನಾಯಕನ ಅನುಪಸ್ಥಿತಿಯಲ್ಲಿ ಸಹ ನಿರ್ದೇಶಕ ನಾಯಕನ ಸ್ಥಾನವನ್ನು ಅಲಂಕರಿಸಿ ಅಲಾವಧಿಯ ನಾಯಕನಾಗಿ ಕಾರ್ಯವನ್ನು ನಿರ್ವಹಿಸುತ್ತಾನೆ. ನಾಯಕನ ಇಬ್ಬರು ಪ್ರಮುಖ ಸಹಾಯಕರಲ್ಲಿ ಈತನೂ ಒಬ್ಬ. ಒಟ್ಟಾರೆ ನಾಯಕನಿಗೆ ಸಹಾಯಕನಾಗಿ ಸೂಕ್ತ ಸಲಹೆಗಾರನಾಗಿ ಪ್ರಾಮಾಣಿಕನಾಗಿರುವನು.

4. ಪಂಚರು: ಸಹ ನಿರ್ದೇಶಕರಿಗೆ ಸಹಾಯಕರಾಗಿ ಪಂಚರು ಇರುವರು. ಯಾವುದೇ ನ್ಯಾಯ ನಿರ್ಣಯ ಮಾಡುವಾಗ ಈ

ಪಂಚರು ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸುವು ದರೊಂದಿಗೆ ನಾಯಕನಿಗೆ ಸಹಾಯಮಾಡುವರು. ಈ ನ್ಯಾಯ ನೀಡುವಾಗ ಪಂಚರ ಅಭಿಪ್ರಾಯವನ್ನು ಆಲಿಸುವ ನಂತರವೇ ನಾಯಕ ಅಂತಿಮ ತೀರ್ಪು ಕೊಡುವನು. ಒಟ್ಟಾರೆಯಾಗಿ ಒಂದು ಪಂಚಾಯತಿಯಲ್ಲಿ ನಾಯಕ ಕಾರಭಾರಿ ಸಹ ನಿರ್ದೇಶಕರ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸುವಲ್ಲಿ ಇವರೇ ಪ್ರಧಾನವಾಗಿರುವರು.

5. ವಾಲೀಕಾರ: ಪಂಚಾಯತಿಯನ್ನು ಸಂಘಟಿಸುವ ಕೆಲಸ ಇವನದಾಗಿರುತ್ತದೆ. ಅಂದರೆ ನಾಯಕನ ಅಜ್ಞಾನುಸಾರ ಕಾರಭಾರಿ, ಸಹ ನಿರ್ದೇಶಕರು, ಪಂಚರು ಮತ್ತು ಇನ್ನಿತರ ವ್ಯಕ್ತಿಗಳನ್ನು ಕರೆಯುವುದು, ಆರೋಪಿಗಳನ್ನು ಕರೆತರುವುದು, ಓಲೆಗಳನ್ನು ಹಂಚುವುದು, ಮುಟ್ಟಿಸುವುದು, ಈತನ ಮುಖ್ಯ ಕೆಲಸ. ಪಂಚಾಯತಿಯ ಪ್ರತಿಯೊಂದು ಕಾರ್ಯ ಚಟುವಟಿಕೆಗಳಲ್ಲಿ ಹಾಜ–ರಿರುವನು. ಇವರ ಕಾರ್ಯ ವೈಖರಿ ಆಯಾಯ ಬುಡಕಟ್ಟು, ಇನ್ನಿತರ ಜನವರ್ಗಗಳ ಪ್ರಾದೇಶಿಕ ಮತ್ತು ಭೌಗೋಳಿಕ ಅನುಗುಣವಾಗಿ ಕೆಲಸವನ್ನು ನಿರ್ವಹಿಸುವರು. ಅಲ್ಲದೆ ಸವಲತ್ತುಗಳನ್ನು ಪಡೆಯುವರು.

6. ವೃತ್ತಿಗಾಯಕ: ಈತ ಅನುಭವಿ ಮತ್ತು ಜ್ಞಾನಿ, ಅತ್ಯುತ್ತಮ ಕಲಾವಿದ. ಪಂಚಾಯತ್‌ನಲ್ಲಿ ಕೆಲವು ಸಂದರ್ಭ, ಸನ್ನಿವೇಶಗಳಲ್ಲಿ ನಾಯಕನಿಗೆ ಸಹಾಯಕನಾಗಿರುವನು. ಸಾಮಾನ್ಯವಾಗಿ ಲಂಬಾಣಿ ಸಮುದಾಯದಲ್ಲಿ ಈ ವೃತ್ತಿಗಾಯಕನಿರುವನು. ಇವನನ್ನು ಸಾಮಾನ್ಯವಾಗಿ **'ಢಾಡಿ'** ಅಂತ ಕರೆಯುವರು. ಇವನು ವೀರಗಾಥೆ, ಲಂಬಾಣಿಗರ ಪೂರ್ವ ಇತಿಹಾಸದ ಕಥನಗಳನ್ನು ಅಲ್ಲದೆ ಮದುವೆ ಇನ್ನಿತರ ಸಭೆ ಸಮಾರಂಭಗಳಲ್ಲಿ ಹಾಡಿ ಜನರಿಗೆ ಸಂತಸವನ್ನುಂಟುಮಾಡುವನು.

7. ಕ್ಷೌರಿಕ: ಪ್ರಧಾನವಾಗಿ ಒಂದು ಸಮುದಾಯದಲ್ಲಿ ತಪ್ಪು ಎಸಗಿ ಪಂಚಾಯತಿಯಿಂದ ಶಿಕ್ಷೆಗೆ ಒಳಗಾದ ವ್ಯಕ್ತಿಯ ತಲೆ ಬೋಳಿಸ ಬೇಕಾದಾಗ ಈತನಿಂದ ಮಾಡಿಸುವರು. ಅಲ್ಲದೆ ಪಂಚಾಯತಿಯಲ್ಲಿರುವ ಎಲ್ಲಾ ಸದಸ್ಯರುಗಳಿಗೆ ಅವಶ್ಯಕವೆನಿಸುವ ಸೇವೆಯನ್ನು ಒದಗಿಸುವ ಕೆಲಸ ಈತನಿಗೆ ಸೇರಿರುತ್ತದೆ. ಜನಪದರಲ್ಲಿ ಪಂಚಾಯತಿಗಳು ತಮ್ಮದೇ ಆದ ನ್ಯಾಯ ಪದ್ಧತಿಯನ್ನು ಹಳ್ಳಿಗಳಲ್ಲಿ ಇಂದಿಗೂ ಹೊಂದಿರುವರು. ಆದುದರಿಂದ ನಾಯಕ, ಕಾರಬಾರಿ, ಸಹ ನಿರ್ದೇಶಕರು ಮುಖ್ಯವಾಗಿದ್ದು, ಇವರಿಗೆ ಪೂರಕವಾಗಿ ಅಂದರೆ ಸಹಾಯಕರಾಗಿ ಪಂಚರು, ವಾಲೀಕಾರ, ವೃತ್ತಿಗಾಯಕ, ಕ್ಷೌರಿಕ ಸಮುದಾಯದ ಹಿರಿಯರು, ಬುದ್ಧಿಜೀವಿಗಳೂ ಕೂಡ ಇರುವರು. ಇವರೆಲ್ಲ ಕೂಡಿಕೊಂಡು ಸಮುದಾಯ, ಬುಡಕಟ್ಟು ಅಥವಾ ಇನ್ನೂ ಬೇರೆ ಸಮುದಾಯದವರಲ್ಲಿ ಅವರದೇ ಆದ ದೈವದವರಿದ್ದು, ಆಯಾ ಸಮುದಾಯದ ಬುಡಕಟ್ಟುಗಳ ಸಂಸ್ಥೆಗಳನ್ನು ಪರಿಹಾರಮಾಡುವುದಾಗಲಿ, ನಿರ್ಣಯಗಳನ್ನು ತೆಗೆದುಕೊಳ್ಳುವುದಾಗಲಿ ಅವೆಲ್ಲವು ಮುಖ್ಯಸ್ಥನ ಸಮಿತಿಗೆ ಸೇರಿರುತ್ತದೆ. ಯಾವುದೇ ವಿಷಯಗಳನ್ನು ಇತ್ಯರ್ಥ ಮಾಡುವ ಮೊದಲು ಸಭೆ ಸೇರದೆ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಕುವುದಿಲ್ಲ. ಬುಡಕಟ್ಟು ಸಮುದಾಯದ ಜನ ಸಭೆಯು ನೀಡುವ ತೀರ್ಪಿಗೆ ಬದ್ಧರಾಗಿರುವರು.

(ಎಚ್.ಕೆ.ಎನ್)

ದೊ

ದೊಂಬರು: ಕರ್ನಾಟಕದ ಎಲ್ಲ ಕಡೆಗಳಲ್ಲಿಯೂ ಕಾಣಬರುವ ಅಲೆಮಾರಿ ಜನಾಗ. ಇವರು ಊರಿಂದ ಊರಿಗೆ ತಲೆ ಮೇಲೆ ಸಾಮಾನುಗಳನ್ನು ಹೊತ್ತೋ ಇಲ್ಲವೆ ಕತ್ತೆಯ ಮೇಲೆ ಹೇರಿಕೊಂಡೋ ಇಲ್ಲವೆ ಅಡ್ಡೆಗಳಲ್ಲಿ ಇಟ್ಟುಕೊಂಡೋ ವರ್ಷವೆಲ್ಲ ತಿರುಗುತ್ತಾ ಅನಂತರ ತಮ್ಮ ಮೂಲ ಊರುಗಳಿಗೆ ಬಂದು ಅಲ್ಲಿ ಮನೆದೇವರ ಹಬ್ಬ ಆಚರಿಸುತ್ತಾರೆ. ಶಕ್ತಿ ದೇವತೆಗಳು, ಹನುಮಂತ ಇವರ ಮನೆದೇವರುಗಳು. ಶಕ್ತಿಯುತ ವ್ಯಾಯಾಮ ಪ್ರದರ್ಶನಗಳನ್ನು ಮಾಡುವುದು ಇವರ ಒಂದು ವೈಶಿಷ್ಟ್ಯ. ಇದಕ್ಕೆ ದೊಂಬರಾಟ ಎನ್ನುತ್ತಾರೆ. ಇವರು ತಮ್ಮ ಚಾತುರ್ಯ ಹಾಗೂ ಕೈಚಳಕವನ್ನು ಪ್ರದರ್ಶಿಸಿ ತಮ್ಮ ವೃತ್ತಿಗೆ ಮಹತ್ವವನ್ನು ತಂದು ಕೊಂಡಿದ್ದಾರೆ. ಇವರು ತಮ್ಮ ಆಟಗಳನ್ನು ಮಧ್ಯಾಹ್ನದ ವೇಳೆಯಲ್ಲಿ ನಗರದ ಪ್ರಮುಖ ಬೀದಿಗಳ ಮಧ್ಯದಲ್ಲಿ ಪ್ರಮುಖರ ಅಪ್ಪಣೆ ಪಡೆದು ನಡೆಸುತ್ತಾರೆ. ಆಟವನ್ನು ಪ್ರದರ್ಶಿಸುವಾಗ ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರನ್ನು ಆಕರ್ಷಣೆ ಮಾಡುವ ಉದ್ದೇಶದಿಂದ ಇವರ ತಂಡದಲ್ಲಿನ ಹೆಂಗಸೊಬ್ಬಳು ಡೋಲು ಬಡಿಯುತ್ತಿರುತ್ತಾಳೆ. ಗಂಡಸು ಶಿಳ್ಳೆ, ಕೇಕೆಗಳನ್ನು ಹಾಕುತ್ತ ಊರಿನ ಪ್ರಮುಖರನ್ನು ಹೊಗಳುತ್ತಿರುತ್ತಾನೆ. ಕೆಲವೊಮ್ಮೆ ಚಾಟಿಯನ್ನು ನೆಲಕ್ಕೆ ಬಡಿದು ಶಬ್ದಮಾಡುವುದೂ ಉಂಟು. ಆಟಗಾರ ಆಟದ ಸಮಯದಲ್ಲಿ ಬೇರೆ ಯಾವ ಬಟ್ಟೆಯನ್ನೂ ಧರಿಸದೆ ಹನುಮಂತನ ಚಡ್ಡಿಯೊಂದನ್ನು ಹಾಕಿಕೊಂಡಿರುತ್ತಾನೆ. ಈತ ಕೂದಲಿನಿಂದ ಅಥವಾ ಕಪ್ಪು ಉಣ್ಣೆಯಿಂದ ಮಾಡಿದ ಮಧ್ಯಮ ಗಾತ್ರದ ದಾರವನ್ನು ಬಲತೋಳಿಗೆ ಇಲ್ಲವೆ ಕತ್ತಿಗೆ ಕಟ್ಟಿಕೊಂಡಿರುತ್ತಾನೆ. ಅನಂತರ ಲಾಗ ಹಾಕುವುದು, ಹಿಂಗಣ್ಣು ಮುಂಗಣ್ಣು ಎಸೆಯುವುದು, ಮರಗಾಲು ಕಟ್ಟಿಕೊಂಡು ನಡೆಯುವುದು, ಚಕ್ರ ಬಾಣ ನಿರ್ಮಿಸುವುದು, ಮರದ ತೊಲೆಗೆ ಮಧ್ಯದಲ್ಲಿ ಹಗ್ಗ ಕಟ್ಟಿ ಅದನ್ನು ಹಲ್ಲಿನಲ್ಲಿ ಕಚ್ಚಿಕೊಂಡು ತೊಲೆಯನ್ನು ಮೇಲೆ ಎತ್ತುವುದು. ಇಲ್ಲವೆ ಅದನ್ನು ತನ್ನ ಜುಟ್ಟಿಗೆ ಕಟ್ಟಿ ಮೇಲೆಕ್ಕೆತ್ತುವುದು ಮುಂತಾದ ಶಕ್ತಿ ಪ್ರದರ್ಶನ ಕೆಲಸಗಳನ್ನು ಮಾಡುತ್ತಾನೆ. ಈ ಮಧ್ಯೆ ಸಣ್ಣಪುಟ್ಟ ಹುಡುಗರು ತಂತಿಯ ಮೇಲೆ ನಡೆಯುವುದು, ಕಬ್ಬಿಣದ ಬಳೆಯೊಳಗಡೆ ನುಗ್ಗುವುದು ಮುಂತಾದ ಚಮತ್ಕಾರಗಳನ್ನು ನಡೆಸುತ್ತಾರೆ. ಅನಂತರ ಆಟಗಾರ ನುರುಜು ಕಲ್ಲಿನ ಮೇಲೆ ಮಲಗಿ ಹೊಟ್ಟೆಯ ಮೆಲೆ ಚಪ್ಪಡಿ ಕಲ್ಲೊಂದನ್ನು ಇರಿಸಿಕೊಂಡು ಮೊಡ್ಡಸುತ್ತಿಗೆಯಿಂದ ಬಡಿಸಿ ಕೊಳ್ಳುತ್ತಾನೆ. ಜನಗಳಿಂದ ತುಂಬಿದ ಗಾಡಿಯನ್ನು ಒಬ್ಬನೇ ಸಾಕಷ್ಟು ದೂರ ಎಳೆಯುತ್ತಾಳೆ. ಗಣೆಯ ಮೇಲೆ ಹತ್ತಿ ಸಮಾನಾಂತರವಾಗಿ ಮಲಗಿ ಅಲ್ಲಿಯೇ ಅನೇಕ ಸೂಕ್ಷ್ಮತರವಾದ ಚಮತ್ಕಾರದ ಪ್ರದರ್ಶನಗಳನ್ನು ಮಾಡುತ್ತಾನೆ. ಈತ ನಡೆಸುವ ಎಲ್ಲ ಆಟಗಳೂ ಕಷ್ಟ ಸಾಧ್ಯವಾಗಿದ್ದು ಪ್ರೇಕ್ಷಕರನ್ನು ಆಕರ್ಷಿಸುವಂಥವಾಗಿರುತ್ತವೆ.



ದೊಂಬರಾಟ

ಸಾಮಾನ್ಯವಾಗಿ ದೊಂಬರದು ಅವಿಭಕ್ತ ಕುಟುಂಬ. ಎಲ್ಲರೂ ನಿಷ್ಣಾತರಾಗಿರುತ್ತಾರೆ. ತರುಣರು ಹಾಗೂ ಮಕ್ಕಳು ಆಟದಲ್ಲಿ ಹೆಚ್ಚಾಗಿ ಭಾಗವಹಿಸುತ್ತಾರೆ. ಕೆಲವರು ಸಣ್ಣ ಪುಟ್ಟ ಮಾಟಮಂತ್ರದ ಕೆಲಸ, ಕೈಚಳಕದ ಕೆಲಸ ಮಾಡುವುದೂ ಉಂಟು. ಆಟ ಮುಗಿದ ಅನಂತರ ಆ ತಂಡದಲ್ಲಿನ ಸುಂದರವಾದ ಹೆಣ್ಣೊಬ್ಬಳು ತಟ್ಟೆ ಹಿಡಿದು ಪ್ರೇಕ್ಷಕರಿಂದ ಹಣ ಸಂಗ್ರಹಿಸುತ್ತಾಳೆ. ಆದಾಯ ಆಟಕ್ಕೆ ತಕ್ಕಂತಿರುತ್ತದೆ. ಕೆಲವೊಮ್ಮೆ ಆಟದ ಸಮಯದಲ್ಲಿ ಸರ್ಕಸ್ಸಿನಲ್ಲಿ ಮಾಡುವಂತೆ ನಕಲಿ ಮತ್ತು ಕೋಡಂಗಿ ಚೇಷ್ಟೆಗಳನ್ನು ಮಾಡಿ ಪ್ರೇಕ್ಷಕರನ್ನು ಸಂತೋಷ ಪಡಿಸಿ ಅವರಿಂದ ಹೆಚ್ಚು ಹಣವನ್ನು ಪಡೆಯುವುದೂ ಉಂಟು. ಆಟದ ಸಮಯದಲ್ಲಿ ಇವರು ಒಂದು ಕಡೆ ಬಟ್ಟೆ ಹಾಸಿ ಅದರ ಮೇಲೆ ತಮ್ಮ ಪೂರ್ವಿಕರ ಕಠಾರಿ, ಖಡ್ಗ ಮುಂತಾದ ಕೆಲವು ಹಳೆಯಕಾಲದ ಆಯುಧಗಳನ್ನು ಪ್ರದರ್ಶಿಸುತ್ತಾರೆ.

ದೊಂಬರ ಹೆಂಗಸರು ಬಿಡುವಿನ ವೇಳೆಯಲ್ಲಿ ಮರದ ಬಾಚಣಿಗೆಗಳನ್ನು ಮಾಡಿ ಮಾರುತ್ತಾರೆ. ಮನೆ ಮನೆಗೂ ಹೋಗಿ ಕೈಯಲ್ಲಿ ಗೊಂಬೆ ಹಿಡಿದು (ಸೂತ್ರದ ಗೊಂಬೆಯಂಥದು) ಹಾಡು ಹೇಳಿಕೊಂಡು ಅದನ್ನು ಅವರ ಮುಂದೆ ಕುಣಿಸಿ ದವಸ ಧಾನ್ಯಗಳನ್ನು ಸಂಗ್ರಹಿಸುವುದೂ ಉಂಟು. *(ಆರ್.ಜಿ.)*

ದೊಡ್ಡ ಬಾಳೆಪ್ಪ ಕಿಳ್ಳೇಕ್ಯಾತರ: ತೊಗಲು ಗೊಂಬೆ ಆಟದ ಕಲಾವಿದ. ಕೇವಲ 4 ನೆಯ ತರಗತಿಯವರೆಗೆ ಮಾತ್ರ ವಿದ್ಯಾಭ್ಯಾಸ ಪಡೆದಿರುವ ಇವರು ಸುಮಾರು 20 ಆಟಗಳನ್ನು ಆಡಿಸಬಲ್ಲ ನಿಷ್ಣಾತರು. ಅಖಿಲ ಕರ್ನಾಟಕ ಜಾನಪದ ಸಮಾವೇಶ, ಉಡುಪಿಯ ಎಂ.ಜಿ.ಎಂ. ಕಾಲೇಜು ಮುಂತಾದ ಕಡೆಗಳಲ್ಲಿ ಕೂಡ ತಮ್ಮ ಪ್ರದರ್ಶನ ನೀಡಿ ಹೆಸರುವಾಸಿಯಾಗಿರುವ ಇವರು ರಾಯಚೂರು, ಗುಲ್ಬರ್ಗ, ಬೀದರ್, ಬಳ್ಳಾರಿ ಮುಂತಾದ ಜಿಲ್ಲೆಗಳಲ್ಲಿ ನೂರಾರು ಪ್ರದರ್ಶನಗಳನ್ನು ನೀಡಿದ್ದಾರೆ. ಬೊಂಬೆಗಳನ್ನು ಸ್ವಂತ ತಯಾರಿಸುವ ಕಲೆಯನ್ನೂ ಮೈಗೂಡಿಸಿಕೊಂಡಿರುವ ಇವರು ತಮ್ಮ ಮಕ್ಕಳ ಮೂಲಕ ಈ ಕಲೆಯನ್ನು ಮುಂದುವರಿಸುತ್ತಿದ್ದಾರೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. *(ಜಿ.ಆರ್.ಟಿ.)*

ದೊಡ್ಡಾಟ: ಮೂಡಲ ದಿಕ್ಕಿಗೆ ಆಡುವ ಮೂಡಲಪಾಯ ಬಯಲಾಟಗಳಿಗೆ "ದೊಡ್ಡಾಟ" ಗಳೆಂದು ಕರೆಯುತ್ತಾರೆ. ಗುಲಬರ್ಗಾ ಜಿಲ್ಲೆಯಲ್ಲಿ 'ದೊಡ್ಡಾಟ' ಎನ್ನುವ ಹೆಸರೆ ಪ್ರಚಲಿತದಲ್ಲಿದೆ. ರಾಯಚೂರು ಜಿಲ್ಲೆಯಲ್ಲಿ ಇವುಗಳಿಗೆ 'ಹಿರೇ' ಆಟ ಎಂದು ಕರೆಯುವರು. ದಕ್ಷಿಣೋತ್ತರ ದಾವಣಗೆರೆಯಿಂದ ಬೀದರವರೆಗೆ ಪೂರ್ವ–ಪಶ್ಚಿಮ ಬೆಳಗಾವಿಯಿಂದ ರಾಯಚೂರವರೆಗಿನ ಕರ್ನಾಟಕ ಪ್ರದೇಶದಲ್ಲೆಲ್ಲ ದೊಡ್ಡಾಟಗಳು ರಚನೆಯಾಗುತ್ತ ಪ್ರಯೋಗವಾಗುತ್ತ ಬಂದಿವೆ. ದೊಡ್ಡಾಟವು ದೊಡ್ಡ ಕಥಾವಸ್ತುವಿನಿಂದ ಕೂಡಿದ ಈ ಆಟಗಳನ್ನು ಸಾಮಾನ್ಯವಾಗಿ ಮೂಡಲ ಹರಿದು, ಹೊತ್ತೇರುವವರೆಗೂ ಆಡುತ್ತಿದ್ದರು. ಇದು ಹೊತ್ತು ಹೊರಡುವವರೆಗೆ ಅಭಿನಯಿಸುವುದರಿಂದ ಅದಕ್ಕೆ ದೊಡ್ಡಾಟವೆಂತಲೂ ಅನ್ನುತ್ತಾರೆ.

ದೊಡ್ಡಾಟದ ಕಥಾವಸ್ತು, ರಂಗಸಜ್ಜಿಕೆ, ರಸ, ವೇಷ, ಭೂಷಣ ಮುಂತಾದವಗಳ ದೃಷ್ಟಿಯಿಂದಲೂ ಇವು ದೊಡ್ಡ ಪ್ರಮಾಣದಲ್ಲಿರುತ್ತವೆ. ಈ ಆಟವು ಆಡಲಿಕ್ಕೆ ಖರ್ಚಿನದು ಹಾಗೂ ತುಂಬಾ ಪರಿಶ್ರಮದಿಂದ ಕೂಡಿದ ಆಟವಾಗಿದೆ. ಇದರ ಉದ್ದುದ್ದನೆಯ ಮಾತುಗಳನ್ನು ನೆನಪಿಡಲು ಸಾಕಷ್ಟು ಕಷ್ಟಪಡಬೇಕಾಗುತ್ತದೆ.

ದೊಡ್ಡಾಟಗಳು ಪೌರಾಣಿಕ ಕಥಾವಸ್ತುವನ್ನು ಒಳಗೊಂಡಿರುತ್ತದೆ. ರೌದ್ರತೆ ಈ ಆಟದ ಕಡಲು, ವೀರ ರಸವೇ ಪ್ರಾಣ. ವೀರ, ರೌದ್ರರಸಗಳು ದೊಡ್ಡಾಟದ ಜೀವಾಳವಾಗಿದೆ, ಇಲ್ಲಿ ಯುದ್ಧ, ಹೋರಾಟಗಳು ನಡೆಯದೆ ದೊಡ್ಡಾಟ ರಚಿಸುವುದೇ ಇಲ್ಲ. ಪ್ರಾಚೀನ ಅರಸರ ಆಳಿಕೆಯ ಪ್ರಭಾವ ಹಾಗೂ ಪೌರಾಣಿಕ ಘಟನೆಗಳು ಜನಪದರ ಅಭಿರುಚಿಗೆ ಕರಣವಾಗಿವೆ. ಯುದ್ಧದ ಸನ್ನಿವೇಶ ಹಲಗೆ ಮುರಿಯುವಂತೆ ಕುಣಿತ, ಕೂಗಳತೆಯವರೆಗೂ ಕೇಳುವಂಥ ಹಾಡು–ಮಾತುಗಳು ಇದ್ದಾಗಲೇ ದೊಡ್ಡಾಟಕ್ಕೆ ಕಳೆಕಟ್ಟಿ ಭವ್ಯತೆ ಮೆರೆಯುವುದು. ಪಾತ್ರಗಳಿಗೆ ಜನಪದರು 'ಸೋಂಗ' ಎನ್ನುವ ಔಚಿತ್ಯಪೂರ್ಣ ಹೆಸರಿನಿಂದ ಕರೆಯುತ್ತಾರೆ. ಜನಪದರು

ಅನಕ್ಷರಸ್ಥರಾದರೂ ಜ್ಞಾಪಕ ಶಕ್ತಿಯನ್ನು ಎತ್ತಿ ತೋರಿಸುತ್ತದೆ. ಇಲ್ಲಿ ದೇಹದ ಗಾತ್ರ ಅಭಿನಯ, ಕಂಠ ಮುಖಗಳನ್ನು ನೋಡಿ ಪಾತ್ರಗಳ ಹಂಚುವಲ್ಲಿ ಔಚಿತ್ಯವನ್ನು ಮೆರೆಯುತ್ತಾರೆ.

ಜನಪದರು ಈ ಆಟವನ್ನು ಕಲಿಯಲು ನುರಿತ 'ಆಟದ ಮಾಸ್ತರ'ನನ್ನು ನೇಮಿಸಿ ಶುಭದಿನದಂದು ಭೈತಕಿ ಪ್ರಾರಂಭಿಸಿ, ತರಬೇತಿಯನ್ನು ಪಡೆಯುವರು. ಮಾಸ್ತರರು ತರಬೇತು ನೀಡಿದ ನಂತರ ಯಾವುದೊ ಒಂದು ಹಬ್ಬ-ಜಾತ್ರೆಯಲ್ಲಿ ಬಯಲು ಪ್ರದೇಶದಲ್ಲಿ ಭವ್ಯವಾದ ರಂಗಮಂಟಪವನ್ನು ಹಾಕಿ ಇದಕ್ಕೆ ಜನಪದರು 'ಆಟ್ಟವೆಂದು' ಅಟ್ಟದಾಟವೆಂದು ಕರೆಯುತ್ತಾರೆ. ಕುಣಿದು ಹಾಡಿ ಅಭಿನಯಿಸುತ್ತಾರೆ. ಇಲ್ಲಿ ಸಂಗೀವೂ, ಹಲಗೆಯ ನಾದವೂ, ಬೆಳಕೂ ಕೂಡ ಅವರ ಅಭಿನಯಕ್ಕೆ ತಕ್ಕಂತೆ ನಡೆಯುತ್ತದೆ. ನೋಡುವವರು ಕೂಡ ಭಾವುಕರಾಗಿರುತ್ತಾರೆ.

ದೊಡ್ಡಾಟದ ವೇಷ-ಭೂಷಣಗಳು ಭರ್ಜರಿಯಾಗಿರುತ್ತವೆ. ಮುಖ ಕೈ-ಕಾಲುಗಳಿಗೆಲ್ಲ ಕೆಂಪು, ನೀಲಿ ಮಿಶ್ರಿತ ಬಣ್ಣಗಳಿದ್ದು ಸೌಂದರ್ಯ ಹೆಚ್ಚಿಸುತ್ತಾರೆ. ಪ್ರೇಕ್ಷಕರು ಪಾತ್ರಗಳು ರಂಗ ಪ್ರವೇಶಿಸುತ್ತಲೆ ಲಿಂಬೆ, ತೆಂಗು, ಬಾಳೆಗಳನ್ನು ನಿವಾಳಿಸಿ ದೃಷ್ಟಿ ತೆಗೆಯುವರು. ಗಂಡು ಪಾತ್ರಗಳು ಕೈಯಲ್ಲಿ ಗದೆ, ಬಿಲ್ಲು ಬಾಣ, ಖಡ್ಗ ಇನ್ನು ಕೆಲವು ಸಂದರ್ಭಕ್ಕೆ ತಕ್ಕಂತೆ ಹಿಡಿದಿರುತ್ತಾರೆ. ಇವೆಲ್ಲವೂ ಇಲ್ಲಿ ಮೆರಗು ಬರುವಂತೆ ಮಾಡುತ್ತವೆ. ವೇಷ-ಭೂಷಣಗಳಲ್ಲಿ ಜನರಲ್ಲಿ ಹಾಸ್ಯವನ್ನುಂಟು ಮಾಡುವ ವಿಚಿತ್ರ ವೇಷ ಧರಿಸಿ ಜನರಿಗೆ ರಂಜಿಸುತ್ತಾರೆ. ಹಾಗೂ ಮುಮ್ಮೇಳದವರು ಹಾಡಿದ ನಂತರ ಹಿಮ್ಮೇಳದವರೂ ಹಾಡನ್ನು ಹಾಡುವರು ಕುಣಿಯುವರು. ಹೀಗೆ ಜಾನಪದ ಬಯಲಾಟಗಳು ಒಂದು ಸಂಯುಕ್ತಕಲೆ. ಸಾಹಿತ್ಯ ಗಾಯನ, ವಾದ್ಯ, ವಾದನ, ನೃತ್ಯ ಅಲಂಕರಣಗಳ ಸಂಗಮವೇ ಆಗಿದೆ. ಹಾಡಿನ ಕೊನೆಯಲ್ಲಿ ಕವಿಯ ಅಂಕಿತ ಮತ್ತು ಊರುಗಳಿರುತ್ತವೆ. *(ಬಿ.ಪಿ.ಪಿ.)*

ದೊಡ್ಡಾಟಗಳ ಭಾಷೆ: ಬಯಲಾಟದ ಕೃತಿಗಳು ಲಿಖಿತ ರೂಪಕ್ಕೆ ಬರದ ಮುನ್ನಿನ ಸ್ಥಿತಿಯಲ್ಲಿ, ತನ್ನ ಮೌಖಿಕ ಪರಂಪರೆಯ ಒಂದು ಹಂತದಲ್ಲಿ ಅದು ಹೇಗಿದ್ದಿರಬೇಕೆಂದು ಗ್ರಹಿಸಲು ಬೀದಿ ಬಯಲಾಟಗಳ ರೂಪಗಳು ಸ್ವಲ್ಪ ಮಟ್ಟಿಗೆ ಸಹಾಯ ಮಾಡುತ್ತವೆ. ಬಯಲಾಟಗಳು ಲಿಖಿತ ಪರಂಪರೆಗೂ ಮುನ್ನ ಮೌಖಿಕ ಪರಂಪರೆಯೊಂದನ್ನು ಹೊಂದಿದ್ದವು ಎಂಬ ಪ್ರಮುಖ ಅಂಶಕ್ಕೆ ಈ 'ಬೀದಿ ಬಯಲಾಟ'ಗಳು ಸಾಕ್ಷಿಯಾಗಿವೆ. ಬೀದಿ ಬಯಲಾಟಗಳ ಎರಡು ಗೀತರೂಪಕಗಳಲ್ಲಿ ಒಂದನೆಯದು 'ಕೃಷ್ಣ ಗೊಲ್ಲತಿ' ಈಗಿನ ಸಣ್ಣಾಟ (ರಾಧಾನಾಟ ಮತ್ತು ಶ್ರೀಕೃಷ್ಣ ಪಾರಿಜಾತ) ದ ವಸ್ತು (ಇದೇ ವಸ್ತುವಿನ 'ಗೌಳಗಿತ್ತಿ' ಎಂಬ ಸಣ್ಣಾಟವೊಂದು ಕಲಬುರ್ಗಿ ಜಿಲ್ಲೆಯಲ್ಲಿ ಪ್ರಚಲಿತದಲ್ಲಿದೆ ಎಂದು ಕೇಳಿದ್ದೇನೆ). ಇನ್ನೊಂದು ಗೀತರೂಪಕ 'ರಾಮಲಕ್ಷ್ಮಣ' (ಸೀತಾಪಹರಣದ ಪ್ರಸಂಗ) ದೊಡ್ಡಾಟ ಮತ್ತು ಯಕ್ಷಗಾನ ಮಾದರಿಗೆ ಒಗ್ಗಬಹುದಾದ ವಸ್ತುವನ್ನು ಹೊಂದಿದೆ. ಆದರೆ ಇವು ಗೀತರೂಪದಲ್ಲಿರುವುದರಿಂದ ಭಾಷೆ ಸರಳವಾಗಿದೆ. ರಂಗ ಸಜ್ಜಿಕೆ ಇಲ್ಲದೆ ಬೀದಿ ಮೇಲೆ ಬಯಲಿನಲ್ಲಿ ಇವುಗಳ ಪ್ರಯೋಗ, ಸಾಮಾನ್ಯವಾದ ಕುಣಿತ, ವೇಷಭೂಷಣ, ಇವೆಲ್ಲ ನೋಡಿದಾಗ 'ಬಯಲಾಟ' ಮೌಖಿಕ ಪರಂಪರೆಯಲ್ಲಿರುವಾಗಿನ (ಸಣ್ಣಾಟ, ದೊಡ್ಡಾಟ, ಯಕ್ಷಗಾನಗಳಾಗಿ ಬೆಳೆಯುವ ಮುನ್ನಿನ ಸ್ಥಿತಿ) ರೂಪಗಳೆಂಬಂತೆ ತೋರುತ್ತವೆ. ಇವುಗಳ ಸರಳತೆಯನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಇವುಗಳ ಮುಂದುವರೆದ ಬೆಳವಣಿಗೆಯ ರೂಪವೇ ಸಣ್ಣಾಟವಾಗುತ್ತದೆ.

ಈಗಲೂ ಪ್ರಚಲಿತದಲ್ಲಿರುವ ಬಹುತೇಕ ಸಣ್ಣಾಟಗಳು ಕೇವಲ ಹಾಡಿನ ರೂಪದಲ್ಲಿರುವುದನ್ನೇ ನಾವು ಕಾಣುತ್ತೇವೆ. ಇದು ಬೀದಿ ಬಯಲಾಟಗಳಿಂದ ಸಣ್ಣಾಟ ಬೆಳೆದು ನಿಂತಾಗಿನ ಸ್ಥಿತಿ. ಸರಳವಾದ ರಂಗಸಜ್ಜಿಕೆ, ವೇಷಭೂಷಣ, ಗೊತ್ತಾದ ವಾದ್ಯವೃಂದ (ಮುಖ್ಯವಾಗಿ ಡಪ್ಪು ತಾಳು) ಹೊಂದಿ ಮಾತುಗಳಿಲ್ಲದ ಪ್ರಯೋಗದ ಮಾದರಿ ಸಣ್ಣಾಟಗಳ ಮೊದಲ ಹಂತವೆನಿಸುತ್ತದೆ. ಮುಂದೆ ಪಾತ್ರಧಾರಿಗಳು ಹಾಡಿನ ರೂಪದಲ್ಲಿರುವ ಸಣ್ಣಾಟಗಳ ಪ್ರಯೋಗದಲ್ಲಿ ಮಾತುಗಳನ್ನು ಬಳಸುತ್ತಿದ್ದು, ಅವಾವೂ ಲಿಖಿತ ರೂಪದಲ್ಲಿರದೇ ಕೇವಲ ಆಟದ ಮಾಸ್ತರನು ಮೌಖಿಕವಾಗಿ ಹೇಳಿಕೊಟ್ಟ ಹಾಡಿನ ಸಾರಾಂಶಗಳೇ ಆಗಿರುತ್ತವೆ. ಇದು ಸಣ್ಣಾಟದ ಎರಡನೇ ಹಂತ. ಈ ಹಂತದಲ್ಲಿ ಇನ್ನೂ ಸಣ್ಣಾಟದ ಪಠ್ಯ ಹಾಡಿನ ರೂಪದಲ್ಲಿರುವುದು ಗಮನಾರ್ಹ. ಇಲ್ಲಿಯವರೆಗೆ ಸಣ್ಣಾಟ ಮೌಖಿಕ ಪರಂಪರೆಗೇ ಸೇರಿರುತ್ತದೆ. ಅದರ ಮೂರನೇ ಹಂತದಲ್ಲಿ ಸಣ್ಣಾಟಗಳ ಹಾಡುಗಳ ಸಂಖ್ಯೆ ಕಡಿಮೆಯಾಗಿ, ಖಚಿತವಾಗಿ ಲಿಖಿತರೂಪದ ಮಾತುಗಳೊಂದಿಗೆ ಗೊತ್ತಾದ ಕವಿಯಿಂದ ಸೃಷ್ಟಿಗೊಂಡುದು ಕಂಡುಬರುತ್ತದೆ.

ಹೀಗೆ ಬೀದಿಯ ಬಯಲಾಟದಿಂದ ಸಣ್ಣಾಟವು ಹಲವು ಮಜಲುಗಳಲ್ಲಿ ಬೆಳೆಯುವಾಗ, ಬಹುಶಃ ಈ ನಡುವೆ ಅಕ್ಷರಸ್ಥರ ಹಸ್ತಕ್ಷೇಪದಿಂದಾಗಿ ಮಾತು ಪ್ರಧಾನವಾದ, ಆಡಂಬರ ಪ್ರಯೋಗದ ದೊಡ್ಡಾಟ ರೂಪು ಪಡೆದಿರುವ ಸಾಧ್ಯತೆಯಿದೆ. ಸಣ್ಣಾಟವು ಬೀದಿ ಬಯಲಾಟ ರೂಪದಿಂದ ಬೆಳೆದ ಮೇಲೂ ತನ್ನ ಮೌಖಿಕ ಪರಂಪರೆಯೊಂದು ಹೊಂದಿದ್ದು ಖಚಿತವಾಗಿದ್ದು ಅದು ಗೀತ ರೂಪದಲ್ಲಿತ್ತು ಎಂಬುದು ಗಮನಾರ್ಹ ಸಂಗತಿ. ಹೀಗೆಯೇ ದೊಡ್ಡಾಟ ಕೂಡ ಒಂದು ಮೌಖಿಕ ಅವಸ್ಥೆಯನ್ನು ಹೊಂದಿತ್ತೆ? ಎಂಬುದು ನಮಗಿನ್ನೂ ಖಚಿತವಾಗಬೇಕಾಗಿದೆ. ಸಂಪೂರ್ಣವಾಗಿ ಮಾತುಗಳ ಮೇಲೆಯೇ ಅವಲಂಬಿತ ವಾಗಿರುವ ದೊಡ್ಡಾಟ ನಮಗೆ ಕೇವಲ ಲಿಖಿತ ಪರಂಪರೆಯಲ್ಲಿ ಮಾತ್ರ ಕಾಣಿಸುವುದರಿಂದ ಅದರ ಈಗಿನ ರೂಪ ಇತ್ತೀಚಿನದೆನಿಸುತ್ತದೆ. ಹೀಗಾಗಿ ಸಣ್ಣಾಟವೇ ಹಳೆಯ ರೂಪವೆಂದೆನಿಸುತ್ತದೆ. ಸರಳತೆಯಿಂದಲೇ ಆಡಂಬರದ ಪ್ರದರ್ಶನಕ್ಕೆಡೆಯಾಗಿರಬೇಕೆಂಬುದು ಕೂಡ ಸರಿಯಾದ ಕ್ರಮವೇ. ಏಕೆಂದರೆ ವೈಭವೋಪೇತವಾದ ಆಡಂಬರದ ಪ್ರದರ್ಶನ ಕೂಡಲೇ ಪ್ರಯೋಗದಲ್ಲಿ ಕಾಣಿಸಿಕೊಳ್ಳಲು ಮತ್ತು ಅದರಿಂದ ಸರಳ ಪ್ರಯೋಗ ಒಡಮೂಡಿ ಬರಲು ಅಸಾಧ್ಯವೆಂದೇ ಹೇಳಬೇಕು. ಸಣ್ಣಾಟಗಳ ಸಂಪೂರ್ಣ ನಾಟಕ ಕಲ್ಪನೆಯ ಜೊತೆಗೆ ವೇಷಗಾರರ ಐತಿಹಾಸಿಕ. ಪೌರಾಣಿಕ ವಸ್ತುಗಳ ಬೀದಿ ಪ್ರಯೋಗಗಳು ಧಾರ್ಮಿಕ ಆಚರಣೆಯ ಮೂಲದ ದೇವತೆಗಳ ವೇಷ ತೊಡುವ ಕಲ್ಪನೆಗಳು, ದೊಡ್ಡಾಟದ ಅದ್ಭುತ ಬಣ್ಣಗಾರಿಕೆ, ವೇಷಭೂಷಣ ಹಾಗೂ ಪೌರಾಣಿಕ ಐತಿಹಾಸಿಕ ವಸ್ತುವಿನಂತಹ ಆಯ್ಕೆಗೆ ಪುಟಕೊಟ್ಟಿರಬಹುದೆನಿಸುತ್ತದೆ.



ಬಯಲಾಟದ ದೃಶ್ಯ

ಅದೊಂದು ವೇಳೆ ಲಿಖಿತರೂಪದಲ್ಲಿಯೇ (ಮಾತುಪ್ರಧಾನ) ದೊಡ್ಡಾಟ ಹುಟ್ಟಿಕೊಂಡಿದ್ದರೆ, ಇದರ ಕರ್ತೃಗಳೆಲ್ಲ ಓದುಬರೆಹ ಬಲ್ಲವರಾಗುತ್ತಾರೆ. ಈ ವಿದ್ಯಾವಂತರು ಕನಿಷ್ಟ ಪಕ್ಷ ಜನಪ್ರಿಯ ಸಾಹಿತ್ಯವೆನ್ನಬಹುದಾದ ಪುರಾಣ ಪುಣ್ಯಕಥೆಗಳನ್ನು ಓದಿಕೊಂಡವರು, ತಿಳಿದುಕೊಂಡವರು. ಕೆಲವರು ಸಂಸ್ಕೃತವನ್ನೂ ಬಲ್ಲವರಾಗಿದ್ದಾರೆ. ಹೀಗಾಗಿ ಇವರು ಹಳ್ಳಿಗಾಡಿನಲ್ಲಿ ತಮ್ಮ ಸಾಧಾರಣ ಪಾಂಡಿತ್ಯದಿಂದಲೇ ಭಿನ್ನವಾಗಿ ಗುರುತಿಸಿ ಕೊಂಡವರು. ಈ ಭಿನ್ನತೆಯಿಂದಲೇ ಸಾಮಾನ್ಯ ಜನರ ನಡುವೆ ವಿಶಿಷ್ಟ ಸ್ಥಾನ ಗಿಟ್ಟಿಸಿಕೊಂಡವರು ಮತ್ತು ಈ ಮರ್ಯಾದೆಯನ್ನು ಕಾಪಾಡಿ-ಕೊಂಡು ಹೋಗಲು ಬಯಸಿದವರು. ಒಂದು ಕಡೆ ಅನಕ್ಷರಸ್ಥರು ಗೀತರೂಪದ ಸಣ್ಣಾಟಗಳನ್ನು ಪ್ರದರ್ಶಿಸುತ್ತಿದ್ದರೆ, ಹಳ್ಳಿಯ ಬದುಕಿನೊಂದಿಗೆ ಹೊಂದಿಕೊಂಡಿದ್ದ ಮಧ್ಯಮ ವರ್ಗದ ಈ ವಿದ್ಯಾವಂತರು, ಅವರಿಗಿಂತಲೂ ಪಾಂಡಿತ್ಯಪೂರ್ಣ ಕೃತಿ ರಚಿಸಿ, ಅನಕ್ಷರಸ್ಥ ಕಲಾವಿದ ರಿಂದಲೇ ಅದನ್ನು ಪ್ರಯೋಗಿಸಿ ತೋರಿಸಲು ಮುಂದಾಗಿರಬೇಕು ಎನಿಸುತ್ತದೆ. ಇವರು ಹಳ್ಳಿಯ ಜನಪದ ರಂಗಭೂಮಿಯನ್ನು ಸರಿಯಾಗಿ ಬಲ್ಲವರು. ಜೊತೆಗೆ ಹಳಗನ್ನಡ ಸಂಸ್ಕೃತಗಳ ಪರಿಚಯ ವುಳ್ಳವರು. ಇಂತಹ ಒಂದು ಸಮ್ಮಿಶ್ರ ತಿಳುವಳಿಕೆಯುಳ್ಳವರಿಂದಲೇ ದೊಡ್ಡಾಟ ರಚಿತವಾಗಿ, ಅಲ್ಪಮಟ್ಟಿಗೆ ಶಾಸ್ತ್ರೀಯ ಸಂಗೀತದ ಜ್ಞಾನವುಳ್ಳವರ (ಮೃದಂಗ, ತಬಲಾ, ಪಿಟೀಲು, ಹಾರ್ಮೋನಿಯಂ ಬಳಕೆಯನ್ನು ಲಕ್ಷಿಸಿ) ಸಹಾಯದೊಂದಿಗೆ ಸಣ್ಣಾಟಕ್ಕಿಂತ ವೈಭವದ ಪ್ರದರ್ಶನವಾಗಿ ದೊಡ್ಡಾಟ ಬಂದಿರಬೇಕೆನಿಸುತ್ತದೆ.

ದೊಡ್ಡಾಟದ ವಸ್ತು ಉಪದೇಶ ಪರವಲ್ಲ ವೀರಪರ ವಸ್ತು. ಕದನ ಪ್ರಮುಖ ಸನ್ನಿವೇಶಗಳು. ದೊಡ್ಡಾಟಗಳಿಗಾಗಿ ಇಂತಹ ವಸ್ತುವನ್ನು ಆಯ್ದುಕೊಳ್ಳುವಾಗ ಅವರ ವೀರತನ ಬಹುಮಟ್ಟಿಗೆ ಕೆಲಸಮಾಡಿದೆ. ರಾಮಹಾರಾಜರ ಆಳ್ವಿಕೆಯನ್ನು ನೆನಪು ತರಿಸುವ ಐತಿಹಾಸಿಕ ಮತ್ತು ಪೌರಾಣಿಕ ವಾತಾವರಣ, ಕದನ ಪ್ರಮುಖವಾದ್ದರಿಂದ ವೀರರಸ ಪ್ರಧಾನ. ಗಂಭೀರ ವಸ್ತುವಾದ್ದರಿಂದ ಗ್ರೀಕರ ರುದ್ರನಾಟಕಗಳ ನೆನಪು ತರಿಸುವಂತಹವು. ಖಳನಾಯಕರ ಆರ್ಭಟ ಮಾಡಿದ ತಪ್ಪಿಗೆ ಯುದ್ಧದಲ್ಲಿ ಮರಣ.

ಈ ಎಲ್ಲ ಕಾರಣಗಳು (ಕೃತಿಕಾರರ ಪಾಂಡಿತ್ಯ, ಮರ್ಯಾದೆ ಮತ್ತು ಐತಿಹಾಸಿಕ ಪೌರಾಣಿಕ ವಸ್ತುವಿನ ಬಳಕೆ) ದೊಡ್ಡಾಟದ ಭಾಷೆಯಲ್ಲಿ ಒಂದು ರೀತಿಯ ವಿಶೇಷತೆ ಬರಲು ಕಾರಣವಾಗಿರಬೇಕೆನಿಸುತ್ತದೆ. ಹಾಡುಗಳ ಸರಳವಾದ ಭಾಷೆಯ ಚಿಕ್ಕ ಚಿಕ್ಕ ನುಡಿಗಳು. ಮಾತುಗಳೋ ಶಬ್ದಾಡಂಬರದ ಗುಮ್ಮಜಗಳು. ಮಾತು ಮಾತಿಗೆ ಪ್ರಾಸಾನುಪ್ರಾಸಗಳು, ಶಬ್ದಾ ಲಂಕಾರಗಳು, ಹಳಗನ್ನಡ ಸಂಸ್ಕೃತ ಪದಗಳ ಪ್ರಯೋಗಗಳು, ಇವೆಲ್ಲ ಪ್ರೇಕ್ಷಕರನ್ನು ದಂಗುಬಡಿಸುವ ಸಂಗತಿಗಳು. ಆದರೆ ಈ ಬಗೆಯ ಕ್ಲಿಷ್ಟವಾದ ಮತ್ತು ಸುಧಾರಿತ ಭಾಷೆ ಬಳಸಿಯೂ ಅದನ್ನು ಜನಪದವನ್ನಾಗಿಸಿದ ಕೀರ್ತಿ ಈ ದೊಡ್ಡಾಟದ ರಚನೆಕಾರರಿಗೆ ಸಲ್ಲುತ್ತದೆ. ಲಿಖಿತರೂಪ, ಗೊತ್ತಾದ ಕೃತಿಕಾರ, ಸುಧಾರಿತ ಭಾಷೆ ಇಷ್ಟನ್ನು ಬಿಟ್ಟರೆ ಇವುಗಳ ಜೀವಾಳವೆಲ್ಲ ಜಾನಪದವೇ. ಸೃಷ್ಟಿಕರ್ತ ಸಹೃದಯ ಪ್ರೇಕ್ಷಕ ಪ್ರದರ್ಶನದ ರೀತಿ ನಟನಟಿಯರ ವೇಷಭೂಷಣ ರಂಗಮಂಚ ವಾದ್ಯಮೇಳ ಎಲ್ಲವೂ ಅಚ್ಚ ಜಾನಪದವೇ.

ದೊಡ್ಡಾಟದಲ್ಲಿ ಮಾತುಗಳೇ ಮುಖ್ಯ. ಅಲ್ಲಿಯ ಭಾಷೆಯನ್ನು ಕುರಿತು ಬರೆಯುವುದೆಂದರೆ ಅಲ್ಲಿಯ ಮಾತುಗಳನ್ನು ಕುರಿತು ಬರೆದಂತೆಯೇ ಸರಿ. ಇದರ ಲಿಖಿತ ಪರಂಪರೆಯನ್ನಷ್ಟೇ ಗಮನಿಸಿ ಹೇಳುವುದಾದರೆ, ಇವುಗಳ ಮಾತು ಖಚಿತ. ನಟರಿಗೆ ಯಾವ ಸ್ವಾತಂತ್ರ್ಯವೂ ಇಲ್ಲ. ದೊಡ್ಡಾಟಗಾರ ಬರೆದುದನ್ನೇ ಬಾಯಿಪಾಠ ಮಾಡಿ ಹೇಳಬೇಕು. ದೊಡ್ಡಾಟದ ವೇಷಭೂಷಣ ಮತ್ತು ಕುಣಿತಗಳ ಮಧ್ಯ ನಟರಿಗೆ ಅಭಿವ್ಯಕ್ತಿಗೆ ಅವಕಾಶ ಕಡಿಮೆ. ಹೀಗಾಗಿ ಕಥೆಯ ಸಂಪೂರ್ಣ ಪರಿಣಾಮವನ್ನು ಮಾತಿನ ಮೂಲಕ ವಾಗಿಯೇ ತೋರಿಸಿ ಕೊಡಬೇಕಾಗಿರುವುದರಿಂದ ದೊಡ್ಡಾಟಗಳ ಮಾತು ಪ್ರಧಾನವೆನಿಸುತ್ತವೆ.

ದೊಡ್ಡಾಟದ ಭಾಷೆ ಸಂಸ್ಕೃತ ಬೆರೆಸಿದ ಹಳಗನ್ನಡ ಪದಗಳಿಂದ ಕೂಡಿದ 'ಸುಧಾರಿಸಿದ ಕನ್ನಡ ಭಾಷೆ'. ಗ್ರಾಂಥಿಕ ವಲ್ಲದ್ದು. ಶಿಷ್ಟಕ್ಕೆ ಏರದ, ಆಡುಮಾತಿನ ಜಾಲದಿಂದ ದೂರ ಸರಿದ ಭಾಷೆ. ಇದು ಪ್ರಜ್ಞಾಪೂರ್ವಕವಾಗಿ ಸುಧಾರಿಸಿ ಬರೆಯಲಾದ ಭಾಷೆ ಎನಿಸುತ್ತದೆ. ಉದಾ: 'ಹೇ ಮಡದಿ ಮಣಿಯೇ ಇವಳ ಕೂಡ ಬಿಡಿದಾಟವ್ಯಾತಕ್ಕೆ ನಡೆ ನಮ್ಮ ಅರಮನೆಗೆ ಹೋಗುವಾ' ಎಂಬಂತಹ ಮಾತುಗಳನ್ನು; ದಾವ, ಪೋಗು, ಬರೋಣವಾಯಿತು, ಅಂಬೋಣವಾಯಿತು, ಹೋಗೋಣ ವಾಯಿತು ಮುಂತಾದ ಪದಗಳನ್ನು ಗಮನಿಸಬಹುದು.

ಸಂಸ್ಕೃತ ಬಿಟ್ಟರೆ ದೊಡ್ಡಾಟಗಳಲ್ಲಿ ಅನ್ಯಭಾಷಾ ಪದಗಳನ್ನು ಹುಡುಕಾಡಿ ತೆಗೆಯಬೇಕಾಗುತ್ತದೆ. ಹೈದರಾಬಾದ ಕರ್ನಾಟಕದ ಪ್ರದೇಶದಲ್ಲಿ ಹುಟ್ಟಿದ ದೊಡ್ಡಾಟಗಳ ಮೇಲೆ ಉರ್ದು ಮತ್ತು ಮರಾಠಿಗಳ, ಬಾಂಬೆ ಕರ್ನಾಟಕದಲ್ಲಿ ಮರಾಠಿ ಮತ್ತು ಇಂಗ್ಲಿಷಿನ ಪ್ರಭಾವ ಏನೇನೂ ಕಂಡುಬರುವುದಿಲ್ಲ. ಅಷ್ಟೇ ಅಲ್ಲದೆ ಪ್ರಾದೇಶಿಕ ಭಾಷೆಯ ವೈವಿಧ್ಯತೆ ಕೂಡ ಅಷ್ಟೊಂದು ಕಾಣಿಸದು. ಹೀಗಾಗಿ ಹೈದರಾಬಾದ ಕರ್ನಾಟಕದಲ್ಲಿ ಉರ್ದು, ಮರಾಠಿಗಳ ಹೊಡೆತದಿಂದ, ಉತ್ತರ ಕರ್ನಾಟಕದಲ್ಲಿ ಮರಾಠಿಯ ಹೊಡೆತದಿಂದ ಹಾಳಾಗಿ ಹೋಗಲಿದ್ದ ಕನ್ನಡವನ್ನು ಉಳಿಸಿದ ಕೀರ್ತಿ ಜನಪದ

ಇತರ ಪ್ರಕಾರಗಳ ಜೊತೆಗೆ ಲಿಖಿತ ರೂಪದ ದೊಡ್ಡಾಟಗಳಿಗೂ ಸಲ್ಲುತ್ತದೆ.

ಸಂಬೋಧನಾ ಪ್ರಾಸಗಳು ದೊಡ್ಡಾಟದ ಭಾಷೆಗೊಂದು ಸೌಂದರ್ಯವನ್ನು ತಂದು ಕೊಡುತ್ತವೆ. ಇಂತಹ ಪ್ರಯೋಗಗಳು ಬೇರೆ ಯಾವ ನಾಟಕಗಳ ಪ್ರಯೋಗದಲ್ಲೂ ಕಾಣಿಸಲಾರವು. ಅದಕ್ಕಾಗಿ ಸಂಬೋಧನಾ ಪ್ರಾಸಗಳು ಕೇವಲ ದೊಡ್ಡಾಟಗಳ ಸಂಭಾಷಣೆಗಾ–ಗಿಯೇ ರೂಪು ತಳೆದವುಗಳು ಎಂಬುದು ಗಮನಾರ್ಹ. ಇದು ದೊಡ್ಡಾಟದ ಭಾಷೆಯ ಒಂದು ಕೊಡುಗೆಯೂ ಹೌದು.

ದೊಡ್ಡಾಟಗಳಲ್ಲಿ ಮಾತುಗಳ ಪುನರಾವರ್ತನೆಯು ಒಂದು ದೋಷದಂತೆ ಕಂಡುಬರುವುದು. ಪ್ರತಿ ಪಾತ್ರ ಬಂದಾಗಲೆಲ್ಲ ಸಾರಥಿಯ ಪ್ರವೇಶ, ನಾಮಾಂಕಿತದ ಮಾತು, ಸಭಾದ ಮಾತು ಇದರಿಂದಾಗಿ ನಾಟಕದ ಕ್ರಿಯೆಯ ಪ್ರಕ್ರಿಯೆಗೆ ಹೊಡೆತ ಬೀಳುತ್ತದೆ. ಈ ತಂತ್ರದೋಷ ಭಾಷೆಯ ಪರಿಣಾಮದ ಮೇಲೂ ಉಂಟಾಗುತ್ತದೆ. ನಾಮಾಂಕಿತದ ಮಾತುಗಳು ವ್ಯಕ್ತಿ ಪರಿಚಯದ ವೈವಿಧ್ಯತೆ ಹೊಂದಿಯೂ ಸಾರಥಿಯು ಪಾತ್ರಗಳನ್ನು ಮಾತ ನಾಡಿಸುವ ರೀತಿ ಮತ್ತು ಔಪಚಾರಿಕವಾಗಿ ಪಾತ್ರಧಾರಿ ಮಾತಿಗೆ ತೊಡಗುವ ರೀತಿಗಳು ಪುನರಾವರ್ತನೆಗೊಂಡು ಪರಿಣಾಮ ಒಮ್ಮೊಮ್ಮೆ ತೆಳುವಾಗುತ್ತದೆ.

(ಎಂ.ಎಸ್.ಎಲ್.)

ದೊ

ದೊಡ್ಡಿ: ಭೌಗೋಳಿಕ ಪರಿಸರ ಮತ್ತು ಋತುಮಾನಕ್ಕೆ ತಕ್ಕಂತೆ ನಿರ್ಮಿಸಲಾಗುವ ದನಗಳ ವಾಸ ಸ್ಥಾನ. **'ಕೊಟ್ಟಿಗೆ'** ಪರ್ಯಾಯನಾಮ. ದನದ ದೊಡ್ಡಿಯ ವಿನ್ಯಾಸ ಸಾಮಾನ್ಯವಾಗಿ ಎರಡು ರೀತಿ ಯಲ್ಲಿರುತ್ತದೆ. ಹೆಚ್ಚು ದನಗಳಿರುವಾಗ ಇದನ್ನು ಅನುಸರಿಸುತ್ತಾರೆ. ಅದೆಂದರೆ ದನಗಳ ಮುಖ ಒಂದಕ್ಕೊಂದು ಎದಿರುಬದಿರು ಆಗಿರುವ ರೀತಿ. ಈ ವ್ಯವಸ್ಥೆಯಲ್ಲಿ ಎರಡೂ ಬದಿಯ ದನಗಳು ಒಂದೇ ಗೋದಲಿಯಲ್ಲಿ ಆಹಾರ ತಿನ್ನುವುದು ಸಾಧ್ಯವಾಗುತ್ತದೆ. ಇನ್ನೊಂದು ಇದರ ವಿರುದ್ಧ ರೀತಿಯದು. ಇಲ್ಲಿ ಎಲ್ಲ ದನಗಳ ಬಾಲಕ್ಕೆ ಬಾಲ ಎದುರಾಗುವ ರೀತಿಯಲ್ಲಿರುತ್ತದೆ. ಇಲ್ಲಿ ಎಲ್ಲ ದನಗಳ ಗಂಜಲು ಒಂದೇ ಕಡೆ ಹರಿದು ಹೋಗುವುದು ಸರಳ ಆಗುತ್ತದೆ. ಬೆರಣಿಯೂ ಕೂಡ ಒಂದೇ ಕಡೆಯಲ್ಲಿ ಬೀಳುವುದರಿಂದ ಬೇಗ ಸ್ವಚ್ಛಗೊಳಿಸಲು ಅನುಕೂಲವಾಗುತ್ತದೆ.

ಕಡಿಮೆ ದನಗಳಿರುವ ರೈತರು ಒಂದೇ ಸಾಲಿನಲ್ಲಿ ಕಟ್ಟುತ್ತಾರೆ. ಆದರೆ ಎತ್ತು, ಎಮ್ಮೆ, ಆಕಳು, ಕೋಣ, ಕರುಗಳನ್ನು ಬೇರೆ ಬೇರೆಯಾಗಿ ಅಥವಾ ಸಾಲಿನಲ್ಲಿದ್ದರೂ ಆಯಾ ಗುಂಪಿನ ದನ ಗಳನ್ನು ಆಯಾ ಗುಂಪಿನಲ್ಲಿಯೇ ಇರುವಂತೆ ನೋಡಿಕೊಳ್ಳುತ್ತಾರೆ.

ರಂಧ್ರವಿರುವ ಎರಡು ಕಲ್ಲುಗಳಿಗೆ ಹಗ್ಗವನ್ನು ಕಟ್ಟಿ ಅದಕ್ಕೆ ಸ್ವಲ್ಪ ಸ್ವಲ್ಪ ಸ್ಥಳಬಿಟ್ಟು ದನಗಳಿಗೆ ಕಟ್ಟುವ ಕಣ್ಣಿಯಿರುತ್ತದೆ. ಇದಕ್ಕೆ ಮುಗತಗಲ್ಲು ಎಂದು ಹೆಸರು. ಈ ಹಗ್ಗದ ಆಚೆಗೆ ಮೇವು ಹಾಕಲು ಅನುಕೂಲ ವಾಗುವಂತೆ ಮತ್ತು ತಿಂದ ಮೇವು ದನಗಳ ಕಾಲಕಡೆಗೆ ಬರದಿರಲು ಸ್ವಲ್ಪ ಎತ್ತರದ ತಡೆಗೋಡೆಯಿರುತ್ತದೆ. ಮನೆಯ ಎಲ್ಲಾ ಮುಸುರೆಯನ್ನು ಹಾಕಲು ಕಲ್ಲಿನ ಚೌಕಾಕಾರದ ಅಥವಾ ಗುಂಡಾಕಾರದ ಕಲಗಚ್ಚು ಇರುತ್ತದೆ. ಇದಕ್ಕೆ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಮಂತಣಿ ಎಂದೂ ಕರೆಯುತ್ತಾರೆ. ಕೆಲವೊಮ್ಮೆ ಈ ಮುಸುರೆಗೆ ನೀರು ಮತ್ತು ಉಪ್ಪು ಹಾಕಿ ದನಗಳಿಗೆ ಕುಡಿಸುವುದುಂಟು.

ಹಳೆಯ ಕಾಲದ ಕೊಟ್ಟಿಗೆಗಳಲ್ಲಿ ಗಂಜಲವೆಲ್ಲ ಬಂದು ಒಂದೇಕಡೆ ಸೇರಲು ಇಳಿಜಾರಾದ ಕಲ್ಲು ಹಾಸು ಹಾಸುತ್ತಿದ್ದರು. ಈ ಹಾಸು ಒರಟಾಗಿದ್ದು ದನಗಳ ಗೊರಸುಗಳನ್ನು ಜಾರದೆ ಹಿಡಿದುಕೊಂಡು ನಿಲ್ಲಲು ಅನುಕೂಲವಾಗುವಂತಿರುತ್ತಿತ್ತು. ಕಲ್ಲು ಹಾಸಿನ ಕೊನೆಯಲ್ಲಿರುವ ತೊಟ್ಟಿಗೆ ಎಲ್ಲ ಗಂಜಲವೂ ತಂತಾನೆ ಬಂದು ಶೇಖರಗೊಳ್ಳುವುದರಿಂದ ಅದನ್ನು ಸ್ವಚ್ಛಗೊಳಿಸಲು ಸರಳವಾಗುತ್ತಿತ್ತು. ಈ ಗಂಜಲನ್ನು ಸಾವಯವ ಗೊಬ್ಬರಕ್ಕಾಗಿ ಎರೆಗೊಬ್ಬರಕ್ಕಾಗಿ, ಬೆಳೆಗಳಿಗೆ ಸಿಂಪರಣೆಗಾಗಿ ಬಳಸುತ್ತಿದ್ದರು.

ಸಾಮಾನ್ಯವಾಗಿ ದನದ ದೊಡ್ಡಿಯನ್ನು ತಮ್ಮ ವಾಸದ ಮನೆಯ ಪಕ್ಕದಲ್ಲಿಯೇ ಕಟ್ಟುತ್ತಿದ್ದರು. ರಾತ್ರಿಯೆಲ್ಲಾ ಮೇವು ನೀರಿನ ವ್ಯವಸ್ಥೆ ಮಾಡಬೇಕಾದುದರಿಂದ ಕಳ್ಳಕಾಕರಿಂದ ರಕ್ಷಣೆ ಬೇಕಾಗಿರುವುದರಿಂದ ಇದು ಅವರಿಗೆ ಅವಶ್ಯವಾಗಿತ್ತು. ದನದ ಆಹಾರವಾದ ಹೊಟ್ಟು, ಹಿಂಡಿ ಕಣಕಿ ಮುಂತಾದುವನ್ನು ಶೇಖರಿಸಲು ಅಲ್ಲಿಯೇ ಅಟ್ಟಣಿಗಳನ್ನು ನಿರ್ಮಿಸುತ್ತಿದ್ದರು.

ದನದ ದೊಡ್ಡಿಯನ್ನು ವರ್ಷಕ್ಕೊಂದು ಸಲ ಸಂದಿಗೊಂದಿ ಯನ್ನೂ ಬಿಡದೆ ಸ್ವಚ್ಛ ಮಾಡಿ, ಅದಕ್ಕಾಗಿಯೇ ಹಬ್ಬವನ್ನು ಆಚರಿಸುತ್ತಿದ್ದರು. ಕೊಟ್ಟಿಗೆಗೆ ಸುಣ್ಣ ಜಾಜದಿಂದ ಅಲಂಕಾರ ಮಾಡುತ್ತಿದ್ದರು. ಈ ಹಬ್ಬಕ್ಕೆ ಕೊಟಗ್ಹುಣ್ಣಿ ಎಂದು ಕರೆಯುತ್ತಾರೆ. ಇದಲ್ಲದೆ ಪ್ರತಿ ದೀಪಾವಳಿಗೂ ದನದ ದೊಡ್ಡಿಯನ್ನು ಸ್ವಚ್ಛ ಮಾಡಿ ದನಗಳ ಸ್ವಾಸ್ಥ್ಯ ಕಾಪಾಡುತ್ತಿದ್ದರು.

ಆಧುನಿಕ ಕೊಟ್ಟಿಗೆಗಳಲ್ಲಿ ಸ್ವಚ್ಛತೆಗೆ ಮತ್ತು ವೈರಾಣು ದಾಳಿಯನ್ನು ತಡೆಯಲು ಕ್ರಮ ಕೈಗೊಂಡಿರುತ್ತಾರೆ. ನೀರಿನ ಹಾಸಿಗೆಗಳನ್ನು ಹಾಸಿರುತ್ತಾರೆ. ಒಂದು ಅಥವಾ ಎರಡು ಭಾಗಗಳು ತುಂಬಿರುವ ಈ ನೀರಿನ ಚೀಲದ ಮೇಲೆ ದನಗಳು ವಿಶ್ರಮಿಸು ವುದರಿಂದ ಕೊಟ್ಟಿಗೆಯಲ್ಲಿನ ವೈರಾಣುಗಳಿಂದ ದನಗಳಿಗೆ ರಕ್ಷಣೆ ಸಿಗುತ್ತದೆ. ಇನ್ನು ಕೆಲವರು ಕೊಟ್ಟಿಗೆಗೆ ಆಗಾಗ ಫಾರ್ಮಾಲಿನ್ ದ್ರಾವಣವನ್ನು ಸಿಂಪಡಿಸುತ್ತಾರೆ.

(ಎಸ್.ಆರ್.)

ದೋ

ದೋರನಹಳ್ಳಿ: ಸರಪಳಿ ಹರಿಯುವ ವಿಶೇಷ ಉತ್ಸವ ಜರುಗುವ ಗ್ರಾಮ. ದೋರನಹಳ್ಳಿ, ಕಲಬುರ್ಗಿ ಜಿಲ್ಲೆಯ ಶಹಾಪುರ ತಾಲೂಕಿನ ಒಂದು ದೊಡ್ಡ ಹಳ್ಳಿ. ಶಹಾಪುರದಿಂದ 10 ಕಿ.ಮೀ. ದೂರದ ಈ ಗ್ರಾಮ, ಯಾದಗಿರಿಗೆ ಹೋಗುವ ಮಾರ್ಗದಲ್ಲಿದೆ. ಹಾಗೆ ನೋಡಿದರೆ, ಈ ಗ್ರಾಮ ಹಳ್ಳಿಯ ಸೊಗಡನ್ನೆಂದೋ ಕಳೆದುಕೊಂಡಿದೆ ಎಂಬಷ್ಟು ಪಟ್ಟಣದ ಗಾಳಿ ಎಲ್ಲೆಡೆ ಸುಳಿದಿದೆ. ಆದರೂ, ವಿವಿಧ ಉತ್ಸವಗಳ ಸಂದರ್ಭಗಳಲ್ಲಿ ಈ ಹಳ್ಳಿ ಮತ್ತೆ ತನ್ನ ಸೊಗಡಿನ ಎಲ್ಲ ಸಿರಿಯನ್ನು ಮೈದುಂಬಿಕೊಂಡು ಹೊರಹೊಮ್ಮಿಸುತ್ತಿದೆ.

ಮಾದಿಗರ ಓಣಿಯಲ್ಲಿರುವ ಮಲ್ಲಯ್ಯನ ಕಟ್ಟೆ (ಸಿಬಾರಿ ಕಟ್ಟೆ) ಮೇಲೆ ಸರಪಳಿ ಹರಿಯುವ ಈ ಉತ್ಸವ, ಈ ಊರಿನ ಪ್ರಮುಖ ಹಬ್ಬ. ಪ್ರತಿ ವಿಜಯ ದಶಮಿ ಸಂದರ್ಭದಲ್ಲಿ ಉತ್ಸವ ಆಚರಿಸುತ್ತಿದ್ದಂತೆ ಇತ್ತೀಚೆಗೆ ದಸರೆ ಹಬ್ಬದಂದು ನೆರವೇರಿಸುವರು. ದಸರಾ ಅಂಗವಾಗಿ ಇಲ್ಲಿ ಮೂರು ದಿನಗಳ ಉತ್ಸವ ಅಂದರೆ, ಖಂಡೇಪೂಜೆ, ವಿಜಯದಶಮಿ, ಮೂರನೇ ದಿನವೇ ಸರಪಳಿ ಹರಿಯುವ ಸಂಭ್ರಮ. ಮಲ್ಲಯ್ಯನ ಕಟ್ಟೆಯ ಮೇಲೊಂದು ಕಲ್ಲಿನ ಗೂಟವಿದೆ ಅದು 2.5 ಅಡಿ ಎತ್ತರ, ಒಂದು ಅಡಿ ಅಗಲವಾದದ್ದು. ಈ ಕಲ್ಲಿಗೆ ಅಂದು ವಿಶೇಷ ಪೂಜೆ. ಆರಷಿಣ ಭಂಡಾರ ಅರ್ಪಿಸುವುದೇ ವಿಶೇಷ. ಕಾಯಿ ಒಡೆಯಬೇಕೆಂದರೆ, ಸ್ವಲ್ಪ ದೂರದಲ್ಲಿಟ್ಟಿರುವ ಪಲ್ಲಕ್ಕಿ ಬಳಿ ಹೋಗಬೇಕು.

ಚುಮು ಚುಮು ನಸುಕು ಹರಿಯುತ್ತಿದ್ದಂತೆ ಸರಪಳಿ ಹರಿಯುವ ಸಂಭ್ರಮಕ್ಕಾಗಿ ಭರದ ಸಿದ್ಧತೆ ಸರುವಾಗುತ್ತದೆ. ಮೈಲಾರಲಿಂಗನನ್ನು ಸ್ಮರಿಸುವ ಹಾಡುಗಳೊಂದಿಗೆ ಡೊಳ್ಳು ಕುಣಿತದಲ್ಲಿ ಒಂದು ಗುಂಪು ಮಗ್ನವಾಗಿದ್ದರೆ, ಇನ್ನೊಂದು ಗುಂಪು ಕೋಲಾಟವಾಡುತ್ತಿರುತ್ತದೆ. ಹೆಣ್ಣುಮಕ್ಕಳು ಲಯಬದ್ಧವಾಗಿ ಚಪ್ಪಾಳೆ ತಟ್ಟುತ್ತಾ ಜಾನಪದ ಹಾಡುಗಳನ್ನು ಹಾಡುತ್ತಿರುತ್ತಾರೆ. ಪೂಜೆ ತಯಾರಿಯ ಒಂದು ವಾದ್ಯ ಮೇಳವೂ ಸಂಭ್ರಮ ಭರಿತ ಉತ್ಸವಕ್ಕೆ ವಿಶಿಷ್ಟ ರೀತಿಯ ದೈವಿ ಪರಿಸರ ಸೃಷ್ಟಿಸಿರುತ್ತದೆ. ಇಡೀ ಊರಿಗೇ ಊರೇ ಅಲ್ಲಿ ನೆರೆದಿರುತ್ತದೆ. ಯಾರ ಮಾತು ಯಾರಿಗೂ ಕೇಳದಷ್ಟು ಡೊಳ್ಳಿನ, ಹಾಡಿನ, ಜನರ ಗದ್ದಲವೋ ಗದ್ದಲ. ಆದರೂ, ವೈಯಕ್ತಿಕ ಜೀವನ ಒಳಗೊಂಡಂತೆ ಊರಿಗೆ ಸೌಖ್ಯವೂ ಸಿಗಲಿ ಎಂದು ಜನ ಮೌನವಾಗೇ ಪ್ರಾರ್ಥಿಸುತ್ತಿರುತ್ತಾರೆ. ದೇವರಿಗೆ ತಮ್ಮ ಈ ಮೊರೆ ಕೇಳಿಸೀತೆ ಎಂಬ ಆತಂಕವೂ ಇಲ್ಲಿರುತ್ತದೆ. ಇದನ್ನು ತಿಳಿಯಲು ಕೆಲವೆಡೆ 'ದೇವರ ಹೇಳಿಕೆ'ಗೆ ಕಾಯುತ್ತಿರುತ್ತಾರೆ. ಆದರೆ, ಇಲ್ಲಿ ಸರಪಳಿ ಬೇಗ ಹರಿದರೆ 'ಶುಭ' ಎಂತಲೂ, ತಡವಾಗಿ ಹರಿದರೆ ಭವಿಷ್ಯದಲ್ಲಿ 'ಅಶುಭ' ಎಂತಲೂ ಭಾವಿಸುತ್ತಾರೆ. ದೇವರ ಗೂಟಕ್ಕೆ ಎರಡು ಸಲ ಸುತ್ತಿದ್ದ 4–5 ಅಡಿ ಉದ್ದದ ದಪ್ಪವಾದ ಸರಪಳಿಯ ಮೇಲೆ ಎಲ್ಲ ಭಕ್ತರ ಕಣ್ಣು ನೆಟ್ಟಿರುತ್ತದೆ. ಈ ಉತ್ಸವದ ಪ್ರಮುಖ ಆಕರ್ಷಣೆ ಎಂದರೆ ಹೀರಕರ್. ಮಲ್ಲಯ್ಯನ ಅವತಾರವಾದ 'ನಾಯಿ'ಯನ್ನು ಇವರು ಪ್ರತಿನಿಧಿಸುತ್ತಾರೆ. ಇಡೀ ಉತ್ಸವಕ್ಕೆ 5 ಜನ ಹೀರಕರ್ ಮಾತ್ರ. ಸಿದ್ದಪ್ಪ ಗಣೇರ, ರಾಯಪ್ಪ ಮಕಡಿ, ಮಲ್ಲಪ್ಪ ಪಡದಳ್ಳಿ, ಮಲ್ಲಪ್ಪ ಟೋಕಾಪುರ, ಯಲ್ಲಪ್ಪ ಭರನಳ್ಳಿ ಅವರು ಈ ರೀತಿಯ ವೇಷ ಹಾಕುವುದು ಪರಂಪರಾಗತವಾಗಿ ಬಂದ ಬಳುವಳಿ.

ಕೊರಳಲ್ಲಿ ರುದ್ರಾಕ್ಷಿ ಸರ, ಟೊಂಕಕ್ಕೆ– ಕಾಲಿಗೆ ಗೆಜ್ಜೆ ಸರ, ತಲೆ ಮೇಲೆ ಬಣ್ಣದ ರುಮಾಲು, ಕೈಗೆ ಕಡಗ, ಎರಡೂ ತೋಳಿಗೆ ಕೂದಲು ಗುಚ್ಛ, ಅಲ್ಲಿಯೇ ಮಲ್ಲಯ್ಯನ ಫೋಟೋ ಕಟ್ಟಿಕೊಂಡಿರುವುದು, ಬಲಗೈ ಬೆರಳುಗಳಿಗೆ ಬೆಳ್ಳಿಯ ಉಂಗುರಗಳು ಹೀಗೆ ತನ್ನದೇ ಆದ ಅಲಂಕಾರದ ವಿಶಿಷ್ಟ ವಿನ್ಯಾಸದೊಂದಿಗೆ ಬೀಗುವ ಇವರ ಉಡುಗೆ–ತೊಡುಗೆ ನೋಡಿಯೇ ಆನಂದಿಸಬೇಕು. ಇವರು 'ನಾಯಿ' ಅವತಾರವನ್ನು ಪ್ರತಿನಿಧಿಸುವುದರಿಂದ ಆಗಾಗ 'ಹೌ! ಹೌ! ಹೌ!' ಎಂದು ಕೂಗುತ್ತಿರುತ್ತಾರೆ.

ಡೊಳ್ಳು ಕುಣಿತ, ಕೋಲಾಟ, ಲಯಬದ್ಧವಾಗಿ ಬೆರೆಯುವ ಹೆಣ್ಣುಮಕ್ಕಳ ಚಪ್ಪಾಳೆ, ಪೂಜೆಯ ವಾದ್ಯಮೇಳ, ಜನರಿಂದ 'ಏಳುಕೋಟಿ ಏಳುಕೋಟಿಗೆ' ಎಂಬ ಹರ್ಷೋದ್ಗಾರದ ಮಧ್ಯೆಯೇ ಮಲ್ಲಯ್ಯನ ಪೂಜಾರಿ ಎಂದೇ ಹೆಸರಾದ ರೇವಣಸಿದ್ದಪ್ಪ ಪೂಜಾರಿ ಪ್ರತಿವರ್ಷ ಸರಪಳಿ ಹರಿಯುವವರು. ವಯಸ್ಸು ಮಾಗಿ ಕಾಲು ನೋವೂ ಕಾಣಿಸಿಕೊಂಡಿದ್ದರಿಂದ ಸಧ್ಯ ಇವರ ಮಗ ಜಟ್ಟೆಪ್ಪ ಪೂಜಾರಿ ಸರಪಳಿ ಹರಿಯುವ ಧಾರ್ಮಿಕ ವಿಧಿ ನೆರವೇರಿಸುತ್ತಾರೆ. 'ಏಳುಕೋಟಿ ಏಳುಕೋಟಿಗೆ' ಎನ್ನುತ್ತಾ ಮೂರು ಬಾರಿ ನಮಸ್ಕರಿಸುವ ಜಟ್ಟೆಪ್ಪ ಪೂಜಾರಿ ಗೂಟಕ್ಕೆ ಸುತ್ತಿದ ಸರಪಳಿಯನ್ನು ಹಿಡಿದು ಜಟಿಗೆ ಹೊಡೆದಾಗ, ಸರಪಳಿಯ ಕೊಂಡಿ 'ಚಟ್ಟನೆ' ಕಳಚಿಕೊಳ್ಳುತ್ತದೆ. ಸರಪಳಿ ಎಷ್ಟು ಬೇಗ ಕಳಚಿಕೊಂಡಿತು ಎನ್ನುವುದರ ಮೇಲೆ ಭವಿಷ್ಯದ ಸ್ವರೂಪ ಹೇಗಿರಬಹುದೆಂಬ ಕುರಿತು ಸಂದೇಶ ಎಲ್ಲ ಕಡೆಯೂ ರವಾನೆಯಾಗುತ್ತದೆ.

ದೋರನಹಳ್ಳಿಯ ಮಾಲಿಗೌಡರ ಮನೆತನವೇ ಈ ಉತ್ಸವದ ಉಸ್ತುವಾರಿ ವಹಿಸುತ್ತದೆ. ಮೋಹನಕುಮಾರ ಗೌಡ ಹಾಗೂ ವಿನೋದಕುಮಾರ ಗೌಡ ಈ ಪರಂಪರಾಗತವಾಗಿ ಬಂದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಇವರ ಮನೆಯಲ್ಲಿ ವಿಜಯ ದಶಮಿಯ 9 ದಿನಗಳವರೆಗೆ ನಂದಾದೀಪ, 3 ದಿನ ವಿಶೇಷ ಪೂಜೆಗಳು ನೆರವೇರುತ್ತವೆ. ಪೂಜಾ ಸಾಮಗ್ರಿಗಳು ಸೇರಿದಂತೆ ಪಲ್ಲಕ್ಕಿ, ನಂದಿಕೋಲ, ಸರಪಳಿ ಎಲ್ಲವೂ ಇಲ್ಲಿಂದಲೇ ಮಾದಿಗರ ಓಣಿಯಲ್ಲಿರುವ ಮಲ್ಲಯ್ಯನ ಕಟ್ಟೆಗೆ ಹೊರಡಬೇಕು– ಹೀರಕರ್ ಅವರ ಉಡುಗೆ–ತೊಡುಗೆಗಳೂ ಸಹ. ಉತ್ಸವದ ಬಹುಪಾಲು ಉಸ್ತುವಾರಿ ಕುರುಬರದ್ದೇ ಆಗಿದ್ದರೂ ವಿವಿಧ ಜನಾಂಗದವರೂ ಉತ್ಸಾಹದಿಂದಲೇ ಉತ್ಸವದಲ್ಲಿ ಭಾಗವಹಿಸುತ್ತಾರೆ.

ಉತ್ಸವದಲ್ಲಿ ಹಲಿಗೆ ಬಾರಿಸುವವರಿಗೆ, ಪಲ್ಲಕ್ಕಿ ಹೊರುವವರಿಗೆ, ನಂದಿಕೋಲು ಹಿಡಿದವರಿಗೆ ಗೌಡರ ಮನೆತನ ಈ ಹಿಂದೆ ಜಮೀನು ಕೊಟ್ಟಿದ್ದಿದೆ. ಹೀಗಾಗಿ, ಉತ್ಸವದಲ್ಲಿ ನಿರ್ವಹಿಸಬೇಕಾದ ಅವರವರ ಜವಾಬ್ದಾರಿಗಳನ್ನು ಚಾಚೂ ತಪ್ಪದೇ ನಿರ್ವಹಿಸುತ್ತಾ ಬಂದಿದ್ದಾರೆ. *(ಎಂ.ಜಿ.ಪಿ)*

ದ್ಯಾಮವ್ವ: ಗ್ರಾಮದೇವತೆ. ಊರ ದೇವತೆಯಾಗಿ ಪೂಜಿತವಾಗುತ್ತಿದ್ದಾಳೆ. ದ್ಯಾಮವ್ವನಿಲ್ಲದ ಊರುಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗದು. ದ್ಯಾಮವ್ವ, ದೇವಮ್ಮ, ದ್ಯಾವಮ್ಮ ಎಂದು ಹಲವು ಹೆಸರಿನಿಂದ ಇವಳನ್ನು ಕರೆಯಲಾಗುತ್ತದೆ. ಇದು ಭೌಗೋಳಿಕ ವೈವಿಧ್ಯವಾದಂತೆ ಅಕ್ಷರ ಪಲ್ಲಟದ ವೈವಿಧ್ಯವೂ ಆಗಿದೆ. ದ್ಯಾಮವ್ವನ ಪೂಜಕರು ಮುಖ್ಯವಾಗಿ ವಿಶ್ವಕರ್ಮರು. ದೇವಿಯ ಮೂರ್ತಿ ಕಟ್ಟಿಗೆಯದು. ಇದನ್ನು ತಯಾರಿಸುವವರು ಬಡಿಗರು.

ದ್ಯಾಮವ್ವ–ದುರುಗವ್ವನ ಜೋಡಿ ಕದಂಬರ ಕಾಲದಿಂದ ಕರ್ನಾಟಕದಲ್ಲಿ ಹೆಸರಾಗಿದೆ. ದುರ್ಗವ್ವ ಕಾಲರಾಬೇನೆಗೆ ಕಾರಣಳಾದರೆ ದ್ಯಾಮವ್ವ ಗಣಜಲಿ, ಗೊಬ್ಬರ, ಮೈಲಿ ಬೇನೆ ಯಂಥ ರೋಗಗಳಿಗೆ ಕಾರಣಳಾಗುತ್ತಾಳೆ. ಈ ದೇವತೆಗಳ ಅತೃಪ್ತಿ ಭೂಮಿಯಲ್ಲಿ ಬೆಳೆನಾಶ, ದನಕರುಗಳಿಗೆ ಪೀಡೆ, ಊರಿಗೆ ರೋಗಾದಿಗಳ ಬರುವಿಕೆಗೆ ಕಾರಣವೆಂದು ಇಂದಿಗೂ ಭಾವಿಸುತ್ತಾರೆ. ಮಂಗಳವಾರ ದ್ಯಾಮವ್ವನ ವಾರ. ರೋಗ ರುಜಿನಗಳು ಬಂದಾಗ ಮಂಗಳವಾರ ಕೆಲಸ ಬೊಗಸೆ ಬಿಟ್ಟು ದೇವರ ವಾರವೆಂದು ಪರಿಗಣಿಸಿ ದೇವತೆಗೆ ನೀರೆರದು ಭಕ್ತಿಯಿಂದ ದೀಪ, ನೈವೇದ್ಯ ಕೊಡುವರು. ಅಕ್ಕಿ ಬಾಳೆಹಣ್ಣು, ಮೊಸರನ್ನದಂತ ತನುಬಾನಗಳ ನೈವೇದ್ಯ ಮಾಡುವರು ಕಡೆಯ ವಾರದಲ್ಲಿ ದೇವಿಯ ಉಡಿತುಂಬಿ ರಥೋತ್ಸವ ಮಾಡುವ ಸಂಪ್ರದಾಯವೂ ಇದೆ.

ದ್ಯಾಮವ್ವ ಸಾತ್ವಿಕ ಆಹಾರದ ದೇವತೆ. ಆಕೆಯ ಪೂಜಾರಿಗಳಾದ ಪಾಂಚಾಳರು ಸಾತ್ವಿಕ ಆಹಾರಿಗಳು ಎಂಬುದು ಗಮನಾರ್ಹ. ಆದರೆ ದ್ಯಾಮವ್ವನ ಜಾತ್ರೆಗಳಲ್ಲಿ ಕೋಣ ಹಾಗೂ ಟಗರು, ಹೋತ ಬಲಿ ಕೊಡುವ ಪದ್ಧತಿಗಳು ಇದಕ್ಕೆ ವಿರುದ್ಧವಾದ ಸಂಗತಿಯಾಗಿದೆ. ರೂಪವತಿಯಾದ ದ್ಯಾಮವ್ವನನ್ನು ಶೂದ್ರ ರಾಣಿಗ್ಯಾ ಮದುವೆಯಾಗುತ್ತಾನೆ. ಇವರಿಗೆ ಇಂಗಳೋಬಾ ಎನ್ನುವ ಮಗ ಹುಟ್ಟುತ್ತಾನೆ. ಮಗ ಒಂದು ದಿನ ತಂದೆ ಯಾರೆಂದು ಕೇಳುತ್ತಾನೆ. ದೇವಿ ಮಗನಿಗೆ ತಂದೆಯ ಪರಿಚಯ ಹೇಳಿ ಕಳಿಸುತ್ತಾಳೆ. ತಂದೆಯನ್ನು ನೋಡಿ ಹೊಡಿಮಳ್ಳಿ ಬಂದ ಮಗನ ಕಿಸೆಯಲ್ಲಿ ಚರ್ಮದ ಚೂರುಗಳಿರುವುದನ್ನು ನೋಡಿ ಕೋಪಗೊಂಡ ದೇವಿ ಗಂಡ ತನಗೆ ಮೋಸಮಾಡಿದನೆಂದು ತಿಳಿದು ಆತನನ್ನು ಕೊಲ್ಲಲ್ಲು ಓಡಿಸಿಕೊಂಡು ಹೋಗುತ್ತಾಳೆ. ಹೆದರಿದ ಆತ ಕೋಣದ ದೇಹದಲ್ಲಿ ಪ್ರವೇಶ ಮಾಡುತ್ತಾನೆ. ಸಿಟ್ಟೇರಿದ ದೇವತೆ ಆ ಕೋಣವನ್ನೇ ಸಂಹಾರ ಮಾಡುತ್ತಾಳೆ. ಆ ಪ್ರಯುಕ್ತ ಇಂದಿಗೂ ದ್ಯಾಮವ್ವನ ಜಾತ್ರೆಗಳಲ್ಲಿ ಕೋಣಬಲಿ ಪ್ರಚಲಿತದಲ್ಲಿದೆ ಎಂದು ಹೇಳಲಾಗುತ್ತದೆ.


ಸಾಮಾನ್ಯವಾಗಿ ದ್ಯಾಮವ್ವನ ಜಾತ್ರೆಗಳು ಪ್ರತಿವರ್ಷ ನಡೆಯುವುದು ಕಡಿಮೆ. ಅವು ಮೂರು, ಐದು, ಒಂಬತ್ತು, ಹನ್ನೊಂದು, ಹದಿನೈದು ವರ್ಷಗಳಿಗೊಮ್ಮೆ ನಡೆಯುತ್ತವೆ. ಆದರೆ ಸವದತ್ತಿ ದ್ಯಾಮವ್ವನ ಜಾತ್ರೆ 60 ವರ್ಷಕ್ಕೊಮ್ಮೆ ಗುಡಿಗೇರಿ (ಗೋಕಾಕ ತಾಲ್ಲೂಕು) ದ್ಯಾಮವ್ವನ ಜಾತ್ರೆ 35 ವರ್ಷಕ್ಕೊಮ್ಮೆ ನಡಿಯಿತೆಂದು ಹಿರಿಯರೊಬ್ಬರು ಹೇಳಿದ್ದು ನೆನಪಿದೆ. ಕಾರಣ ದ್ಯಾಮವ್ವ ಭಾರಿ ಉಗ್ರದೇವತೆ. ಅವಳ ಜಾತ್ರೆ ಮಾಡಲು ಜನ ಹೆದರುತ್ತಾರೆ. ದೇವಿ ಕಟ್ಟಿಗೆ ಮೂರ್ತಿಯಾಗಿರುವ ಕಾರಣ ಅದಕ್ಕೆ ಬಣ್ಣ ಮಾಡಿಸಬೇಕಾಗುತ್ತದೆ. ಜಾತ್ರೆಗೆ ಹಲವು ಸಿದ್ಧತೆಗಳು, ಬಲಿಗಳು ಬೇಕಾಗುವ ಕಾರಣ ಖರ್ಚುದಾಯಕವಾದದ್ದು. ಭಕ್ತರ ಭೀತಿ ಹಾಗೂ ಪ್ರೀತಿ ಇಲ್ಲಿ ಎದ್ದು ಕಾಣುತ್ತದೆ. ಮೂಲಸ್ಥಾನ ಬಿಟ್ಟರೆ ದ್ಯಾಮವ್ವ ಹೆಜ್ಜೆಗೊಂದು ಬಲಿ ಕೇಳುತ್ತಾಳೆ. ವಾರ ಗಟ್ಟಲೆ ಜಾತ್ರೆ ಮಾಡಬೇಕಾಗುತ್ತದೆ. ಮಡಿ–ಮೈಲಿಗೆ ಅಗತ್ಯ ಹೀಗಾಗಿ ಶ್ರಮ ಹಾಗೂ ಕಷ್ಟದಾಯಕವಾದ ಕಾರಣ ಪ್ರತಿವರ್ಷ ಜಾತ್ರೆ ನಡೆಯುವುದು ಕಡಿಮೆಯೇ ಎಂದು ಹೇಳಬೇಕು. ಶಕ್ತಿ ದೇವತೆಯಾದ ದ್ಯಾಮವ್ವ ಗ್ರಾಮೀಣ ಬದುಕಿನಲ್ಲಿ ಪ್ರಧಾನ ದೇವತೆ ಎಂಬುದು ಗಮನಾರ್ಹ.

ಫ಼ಿ.ಜಿ.)

ಧಾ

ಧಾನ್ಯ ಸಂಗ್ರಾಹಕಗಳು: ಧಾನ್ಯಗಳು ಕೆಡದಂತೆ ಮತ್ತು ಇಲಿ, ಪಶುಪಕ್ಷಿಗಳಿಂದ ಅವನ್ನು ಸಂರಕ್ಷಿಸಲು ಕೈಗೊಳ್ಳುತ್ತಿದ್ದ ವಿಶಿಷ್ಟ ವಿಧಿ ವಿಧಾನಗಳು. ಕೃಷಿಕರಿಗೆ ಈ ಧಾನ್ಯ ಸಂಗ್ರಾಹಕಗಳು ಅಕ್ಷಯ ಪಾತ್ರಗಳೆನಿಸಿವೆ. ಹೈದ್ರಾಬಾದ ಕರ್ನಾಟಕದ ಹಿಡುವಳಿದಾರರ ಮನೆಗಳಲ್ಲಿ ಧಾನ್ಯ ಸಂಗ್ರಾಹಕಗಳು ಇಂದಿಗೂ ಪಳೆಯುಳಿಕೆಗಳಾಗಿ ಉಳಿದಿವೆ.

ಸಸ್ಯ ಸಂರಕ್ಷಣೆ: ಜನಪದರು ಸಸ್ಯ ಸಂರಕ್ಷಣೆಗೆ ಕೀಟನಾಶಕಗಳನ್ನು ಬಳಸುತ್ತಿರಲಿಲ್ಲ. ಆದರೆ ನರಿ, ಕೊಕ್ಯಾಟಿ ಮತ್ತು ಪಶುಪಕ್ಷಿಗಳಿಂದ ಬೆಳೆಗಳನ್ನು ರಕ್ಷಿಸಲು 'ವ್ಯಕ್ತಿಕಾವಲು' ಒಂದೇ ಮಾರ್ಗವಾಗಿತ್ತು. ಜೋಳದ ಬೆಳೆ ಕಾಳಾದಾಗ ಅಟ್ಟಹಾಕಿ, ಕವಣೆಗಲ್ಲು ಬೀಸಿ ಹಕ್ಕಿ ಹೊಡೆಯುತ್ತಿದ್ದರು. ಬೆದರು ಗೊಂಬೆ (ಬೆಚ್ಚ) ನಿಲ್ಲಿಸುತ್ತಿದ್ದರು. ಆದರೆ ರೋಗ ರುಜಿನಗಳಿಗೆ ಯಾವ ಕ್ರಮವೂ ಅವರಲ್ಲಿರಲಿಲ್ಲ. ಆದರೆ ರೋಗ ಬರಬಾರದೆಂದೇ ಕಾಲ್ಶೈ ಮಾಡುತ್ತಿದ್ದರು. ಒಂದು ವರ್ಷ ಬೆಳೆದ ಬೆಳೆಯನ್ನು ಮರುವರ್ಷ ಅದೆ ನೆಲದಲ್ಲಿ ಬೆಳೆಯುತ್ತಿರಲಿಲ್ಲ. ಅಲ್ಲದೆ ಕೆಲವು ಬೆಳೆಗಳನ್ನು ಮಿಶ್ರಬೆಳೆಯಾಗಿ ಬೆಳೆಯುತ್ತಿದ್ದರು. ಇದರಿಂದಾಗಿ ಒಂದು ಬೆಳೆ ಹೋದರೂ. ಇನ್ನೊಂದು ಬರುತ್ತಿತ್ತು. ಅಲ್ಲದೆ ಒಂದಕ್ಕೆ ಬರುವ ರೋಗವನ್ನು ಇನ್ನೊಂದು ತಡೆಯುತ್ತಿತ್ತು. ಮುಖ್ಯ ಬೆಳೆಯ ದಂಡೆಗುಂಟ ಮತ್ತೊಂದು ಬೆಳೆಯ ಬೀಜ ಬಿತ್ತುತ್ತಿದ್ದರು. ದಂಡೆಗೆ ಪುಂಡೀ ಬಿತ್ತು. ದಂಡೆಗೆ



ಧಾನ್ಯ ಸಂಗ್ರಹಣೆಯ ಕಣಜಗಳು

ಚಂಡ ಹೂ ಬಿತ್ತು ಎನ್ನುವ ಗಾದೆಗಳೂ ಇವೆ. ಇದರಿಂದಾಗಿ ಮುಖ್ಯ ಬೆಳೆಗೆ ರಕ್ಷಣೆ ಸಿಗುತ್ತಿತ್ತು. ಇದರ ಸತ್ಯತೆಯನ್ನು ಕೃಷಿ ತಜ್ಞರು ಇಂದು ಮನಗಂಡಿದ್ದಾರೆ.

ಅದರಂತೆ ಜನಪದರು ಬೆಳೆದ ಆಹಾರ ಧಾನ್ಯಗಳನ್ನು ಸಂಗ್ರಹಿಸಿಡಲು ಹಲವಾರು ನೈಸರ್ಗಿಕ ವಿಧಾನಗಳನ್ನು ಅನುಸರಿಸುತ್ತಿದ್ದರು. ಅವು ಅಪಾಯಕಾರಿ ಮಾತ್ರ ಆಗಿರಲಿಲ್ಲ. ಯಾವ ವಿಷಕಾರಕ ಲೇಪನವಿಲ್ಲದೆ, ತಮ್ಮದೆ ಆದ ಸಂಗ್ರಹ ವಿಧಾನಗಳನ್ನು ಬಳಸಿ ಆಹಾರಧಾನ್ಯ ಮುಂದಿನ ವರ್ಷ ಬಿತ್ತನೆಗೆ ಬೇಕಾಗುವ ಬೀಜಗಳನ್ನು ತಾವೇ ಆರಿಸಿ, ಸಂಗ್ರಹಿಸಿ ಕಾದಿಡುತ್ತಿದ್ದರು.

ಬೆಳೆದ ಧಾನ್ಯ ಸಂಗ್ರಹಿಸಿಡಲು ಇಂದಿನಂತೆ ಸಾಕಷ್ಟು ಸೆಣಬಿನ ಚೀಲಗಳಾಗಲಿ, ಸಾರ್ವಜನಿಕ ಗೋದಾಮುಗಳಾಗಲಿ ಇರಲಿಲ್ಲ. ಸೆಣಬಿನ ಚೀಲಗಳನ್ನು ಸಾಕಷ್ಟು ಕೊಳ್ಳಲು ಸಾಮಾನ್ಯರಿಗೆ ಸಾಧ್ಯವೂ ಇರಲಿಲ್ಲ ಅವುಗಳಿಗೆ ಇಲಿಗಳ ಕಾಟ ತಪ್ಪಿದ್ದಲ್ಲ. ಇದಕ್ಕಾಗಿಯೇ ಪ್ರತಿಯೊಬ್ಬ ಒಕ್ಕಲಿಗ ಬೆಕ್ಕು ಸಾಕುತ್ತಿದ್ದ. ಇದರಿಂದಾಗಿ ಧಾನ್ಯ ಹಾಳಾಗದಂತೆ ನೋಡಿಕೊಳ್ಳಲು ತಕ್ಕ ಮಟ್ಟಿಗೆ ಸಹಾಯವಾಗುತ್ತಿತ್ತು. ರಾಸಿ ಮಾಡಿ ತಂದ ಚೀಲಗಳನ್ನು ನಿಟ್ಟಿಲು ಹಚ್ಚಿ ಗಾಳಿಗೆ ಪಡಸಾಲೆಯಲ್ಲಿ ಇಡುವುದು ರೂಢಿ.

ಅಂದಿನ ದಿನಗಳಲ್ಲಿ ಆಹಾರ ಧಾನ್ಯಗಳನ್ನು ಕೊಳ್ಳುವವರು ಇರಲಿಲ್ಲ. ಹಳ್ಳಿಗಳಲ್ಲಿ ಕೂಲಿ ಕುಂಬಳಿಗಳನ್ನೆಲ್ಲ, ಬೆಳೆದ ಧಾನ್ಯದ ರೂಪದಲ್ಲಿಯೆ ಸಲ್ಲಿಸುತ್ತಿದ್ದರು. ಊರಿನ ಆಯಗಾರರು ಒಂದು ವರ್ಷಕ್ಕೆ ತಮಗೆ ಬೇಕಾಗುವಷ್ಟು ಸಂಗ್ರಹಿಸಿಕೊಂಡಿರುತ್ತಿದ್ದರು. ಕಿರಾಣಿ ಸಾಮಾನು ಕೊಳ್ಳಲೂ ಜೋಳ, ಗೋದಿ, ಸಜ್ಜೆ, ಮೊದಲಾದ ಧಾನ್ಯಗಳನ್ನೆ ಪ್ರತಿಯಾಗಿ ಕೊಡಲಾಗುತ್ತಿತ್ತು. ಹೀಗಾಗಿ ತಾವು ಬೆಳೆದ ಧಾನ್ಯಗಳನ್ನು ಹಣದಂತೆ ಬಳಸುತ್ತಿದ್ದರು. ಎತ್ತಿನ ಗಾಡಿಯಲ್ಲಿ ಹೊತ್ತೊಯ್ದು ದೂರದ ಪಟ್ಟಣಗಳಲ್ಲಿ ಮಾರಿ ಬರುವುದು ತೀರ ಕಷ್ಟದ ಕೆಲಸವಾಗಿತ್ತು.

ವಾಹನ ಸೌಲಭ್ಯಗಳಿಲ್ಲದ ಹಳ್ಳಿಗಳಲ್ಲಿ ಬೆಳೆದ ಆಹಾರ ಧಾನ್ಯವನ್ನು ಒಂದು ವರ್ಷ ಬರಗಾಲ ಬಂದರೂ ಸಾಲುವಂತೆ ಕಾಯ್ದಿಟ್ಟುಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಪಟ್ಟಣದಿಂದ ಬಂದ ವ್ಯಾಪಾರಿಗಳು ತೀರ ಅಗ್ಗದ ದರದಲ್ಲಿ ಆಹಾರ ಧಾನ್ಯ ಖರೀದಿಸುತ್ತಿದ್ದರು. ಅದೂ ಪಟ್ಟಣಕ್ಕೆ ಸಂಪರ್ಕಮಾರ್ಗವಿರುವ ಹಳ್ಳಿಗಳಿಗೆ ಮಾತ್ರ ಸಾಧ್ಯವಿತ್ತು. ಮೂರುವರೆ ರೂಪಾಯಿಗೆ ಇಂದಿನ ಒಂದು ಕ್ವಿಂಟಲ್ ದಪ್ಪ ಜೋಳ ಮಾರಿದ್ದನ್ನು ನಾನೇ ನೋಡಿದ್ದೇನೆ. ಸಂತೆಯಲ್ಲಿ ರೂಪಾಯಿಗೆ ನಾಲ್ಕು ಮನ ಸುಮಾರು ಮೂವತ್ತು ಕೆ.ಜಿ. ಮಾರಾಟವಾಗುತ್ತಿತ್ತು. ಅದನ್ನು ಅಳೆದು ಹಾಕುವ ಅವಟಿಗನಿಗೇ ಅವನ ಮಾಪಿನ ತುಂಬ ಜೋಳ ಕೊಡಬೇಕಾಗುತ್ತಿತ್ತು. ಕಾಯಿಪಲ್ಲೆ, ಎಣ್ಣೆ, ಬೆಲ್ಲ ಮೊದಲಾದ ದೈನಂದಿನ ಅವಶ್ಯಕತೆಯ ಸಾಮಾನುಗಳನ್ನು, ಆಹಾರಧಾನ್ಯ ಕೊಟ್ಟೇ ಪಡೆಯುತ್ತಿದ್ದರು. ಇವೆಲ್ಲ ಕೆಡದಂತೆ ಎಚ್ಚರವಹಿಸುವುದು ಅನಿವಾರ್ಯವಾಗಿತ್ತು. ಅದರಂತೆ ಬಿತ್ತುವ ಬೀಜಗಳನ್ನಂತೂ ಹುಳ ಹತ್ತದಂತೆ ಕಾಯ್ದಿಡುವ ಜವಾಬ್ದಾರಿ ಬಹಳ ದೊಡ್ಡದಾಗಿತ್ತು. ಹೀಗಾಗಿ ಧಾನ್ಯ ಸಂಗ್ರಹಕ್ಕೆ ಮತ್ತು ಬೀಜ ಕಾಪಾಡುವುದಕ್ಕೆ ಬೇರೆ ಬೇರೆ ವಿಧಾನಗಳಿದ್ದವು.

ಹಗೆ: ಮಧ್ಯಮ ವರ್ಗದ ಒಕ್ಕಲಿಗನೂ ತನ್ನ ಹೊಲದ ಕಾಳಿನ ಆದಾಯಕ್ಕನುಗುಣವಾಗಿ ಮನೆಯಲ್ಲಿ ಒಂದು ಹಗೆ ಕಟ್ಟಿಸಿಡುತ್ತಿದ್ದ. ಸಾಮಾನ್ಯವಾಗಿ ಹಳ್ಳಿಯ ಮನೆಯ ತಲೆಬಾಗಿಲ ಹೊರಗಡೆ ಎಡಬಲಕ್ಕೆ ಕೂಡ್ರಲು ಎರಡು ಕಟ್ಟೆಗಳು. ಅದರಂತೆ ಒಳಹೊಕ್ಕೊಡನೆ ಎಡಕ್ಕೊಂದು ವಿಸ್ತಾರವಾದ ಕಟ್ಟೆ. ಅದನ್ನು 'ಜೋಳಜಿ' ಎಂದು ಉತ್ತರ ಕರ್ನಾಟಕದಲ್ಲಿ ಕರೆಯುತ್ತಾರೆ. ಜೋಳಜಿ ಕಟ್ಟೆಯ ಎದುರುಗಡೆ ದನಗಳ ದಾವಣಿ. ಅದನ್ನು 'ಗೋದಲಿ' ಎಂದು ಕರೆಯುತ್ತಾರೆ. ಇವು ಒಕ್ಕಲುತನದ ಮನೆಯ ವಾಸ್ತುಶಿಲ್ಪದ ಅಂಗಗಳು. ಜೋಳಜಿಯ ಬದಿಗೆ ದನಗಳಿಗೆ ಒಂದೆರಡು ಮೇಲೆ ಕುಳಿತರೆ ದನಗಳೆಲ್ಲ ಕಣ್ಮುಂದೆ. ಇದೆಲ್ಲ ಕೂಡಿಯೆ ಅಂಗಳ.

ಈ ಜೋಳಜಿ ಕಟ್ಟೆ ನೆಲದಿಂದ ಮೂರುವರೆ ಅಡಿಯಷ್ಟು ಎತ್ತರವಾಗಿರುತ್ತದೆ. ಇದರ ಮಧ್ಯದಲ್ಲೇ ಹಗೆ ಕಟ್ಟಿಸುವುದು ರೂಢಿ. ಎರಡು ಎರಡೂವರೆ ಅಡಿ ವ್ಯಾಸದ ವರ್ತುಲಾಕಾರ, ಇಲ್ಲದೆ ಚೌಕಾಕಾರದ ಬಾಯಿ ಇಟ್ಟು, ಹಾಗೆ ವರ್ತುಲಾಕಾರವಾಗಿ ಒಳಗೆ ಅಗಲವಾಗಿಸುತ್ತ ಅಗೆದು, ಎಂಟು ಹತ್ತು ಅಡಿ ಆಳಕ್ಕಿಳಿದು, ಐದಾರು ಅಡಿ ವ್ಯಾಸದ ನೆಲಗಟ್ಟು ನಿರ್ಮಿಸುತ್ತಿದ್ದರು. ಇದು ತೀರ ಚಿಕ್ಕ ಹಗೆ. ಗರಸು (ಮುರಮು) ನೆಲವಿದ್ದಲ್ಲಿ ಸಾಮಾನ್ಯವಾಗಿ ಗಟ್ಟಣಿಮಾಡಿ ಗೋಡೆಯನ್ನು ಮಣ್ಣು ಮೆತ್ತಿ ಸಾರಿಸುತ್ತಿದ್ದರು. ಕುಸಿವ ಮಣ್ಣಿದ್ದಲ್ಲಿ ಗೋಡೆಗೂಟ ಕಣಿಕಿಯಿಂದ 'ಅಡಸಿ' ಕಟ್ಟುತ್ತಿದ್ದರು, ಕಾಳು ಮಣ್ಣಿಗೆ ತಗುಲಬಾರದೆಂಬುದು ಇದರ ಉದ್ದೇಶ. ಅದರ ಬಾಯಿಗೆ ಹಾಳತವಾದ ಒಂದು ಕಟೆಗಲ್ಲನ್ನು ಮುಚ್ಚಲಾಗುತ್ತಿತ್ತು. ಇದಕ್ಕೆ 'ಬಾಯ್ಗಲ್' ಎಂದು ಹೆಸರು. ಇದು ಸಾಮಾನ್ಯವಾಗಿ ಹಗೆ ನಿರ್ಮಿಸುವ ವಿಧಾನ. ಇದರ ಮೇಲೆ ಜಾಡಿ, ಜಮಖಾನಿ ಇಲ್ಲವೆ ಗುಡಾರು ಹಾಸಿ ಬಂದ ಅತಿಥಿಗಳಿಗೆ ಕೂಡ್ರಲು ಅವಕಾಶ ಕಲ್ಪಿಸುತ್ತಿದ್ದರು. ಕೆಳಗೆ ಧಾನ್ಯದ ಸಂಗ್ರಹವಿದ್ದುದೆ ಗೊತ್ತಾಗುತ್ತಿರಲಿಲ್ಲ. ಹೀಗೆ ತಮ್ಮ ತಮ್ಮ ಅವಶ್ಯಕತೆಗೆ ತಕ್ಕಂತೆ ಐವತ್ತು, ನೂರು ಚೀಲಳತೆಯ ಕಾಳಿನ ಕಣಜ ನಿರ್ಮಿಸುತ್ತಿದ್ದರು.

ಅಂಬಾರಿ: ದೊಡ್ಡ ಒಕ್ಕಲಿಗರು ತಾವು ಬೆಳೆದ ಅಧಿಕ ಕಾಳಿನ ಸಂಗ್ರಹಕ್ಕೆ ಮನೆಯ ವಿಸ್ತಾರಕ್ಕನುಗುಣವಾಗಿ ಇಲ್ಲವೆ ಅದಕ್ಕಾಗಿಯೇ

ಕೋಣೆಕಟ್ಟಿಸಿ, ಅದರಲ್ಲಿ 'ಅಂಬಾರಿ' ನಿರ್ಮಿಸುತ್ತಿದ್ದರು. ಅದಕ್ಕೆ ಅಂಬಾರಿ ಕೋಣೆಯೆಂದೆ ಹೆಸರು. ಅಂಬಾರಿ ಹಗೆಯ ದೊಡ್ಡ ರೂಪವಾದರೂ ಇದು ಆಳಕ್ಕಿಂತ ಹೆಚ್ಚು ಅಗಲವಾಗಿರುತ್ತದೆ. ಇದನ್ನು ಇಂದಿನ ನೀರಿನ ಹೌಜಿನಂತೆ ಚೌಕಾಕಾರವಾಗಿ ಕಟ್ಟಿದ ಕಲ್ಲಿನಿಂದ ಕಟ್ಟಿಸುತ್ತಿದ್ದರು. ನೆಲಗಟ್ಟಿಗೂ ಹಾಸುಗಲ್ಲು ಹಾಕುತ್ತಿದ್ದರು. ಇದನ್ನು ಕಟ್ಟಿಗೆಯ ಹಲಗೆಗಳಿಂದ ಮುಚ್ಚುತ್ತಿದ್ದರು. ಇದರಿಂದಾಗಿ ಇಲಿಗಳಿಂದ ರಕ್ಷಣೆ ಸಿಗುತ್ತಿತ್ತು. ಹಲಗೆಗಳಿಗೆ ಕೀಲ ಹಾಕುತ್ತಿದ್ದರು.

ಕೆಲವು ಊರುಗಳಲ್ಲಿ ಧಾನ್ಯ ಸಂಗ್ರಹಕ್ಕೆ ಸಾರ್ವಜನಿಕ ಹಗೆಗಳನ್ನು ನಿರ್ಮಿಸುತ್ತಿದ್ದರು. ಊರಿನ ಒಂದು ಭಾಗದ ಎತ್ತರವಾದ ಸ್ಥಳದಲ್ಲಿ ಹಲವಾರು ಹಗೆಗಳನ್ನು ಸಾರ್ವಜನಿಕರ ಸಹಕಾರದಿಂದ ಅಥವಾ ಪಂಚಾಯತಿಯ ವತಿಯಿಂದ ಈ ಕೆಲಸ ಪೂರೈಸುತ್ತಿದ್ದರು. ಮಳೆಯ ನೀರು ಸುತ್ತಲೆಲ್ಲೂ ನಿಲ್ಲದ ಸ್ಥಳ ಆಯ್ಕೆ ಮಾಡುತ್ತಿದ್ದರು. ಈ ಹಗೆಗಳನ್ನು ಕಾಯಲು ಒಬ್ಬ ವ್ಯಕ್ತಿಯನ್ನು ಗೊತ್ತು ಮಾಡುತ್ತಿದ್ದರು. ಅವನಿಗೆ ಹಗೆಯಲ್ಲಿ ಧಾನ್ಯ ಹಾಕುವಾಗ ಮತ್ತು ಹಾಕಿದ ಕಾಳು ತೆಗೆಯುವಾಗ ಎಲ್ಲರೂ ತಕ್ಕಮಟ್ಟಿನ ಪ್ರತಿಫಲವಾಗಿ ಕಾಳು ಕೊಡುತ್ತಿದ್ದರು.

ಬರಗಾಲ ಬಿದ್ದಾಗ ಊರ ಗೌಡರು ಹಗೆಯಲ್ಲಿ ಧಾನ್ಯ ಸಂಗ್ರಹಿಸಿದವರನ್ನೆಲ್ಲ ಕರೆದು, ಇಡಿ ಊರಲ್ಲಿರುವ ಕಾಳಿನ ಸಂಗ್ರಹ, ಊರಿನ ಜನ ಸಂಖ್ಯೆಗೆ ಅದು ಸಾಲುವ ಅವಧಿಯ ಲೆಕ್ಕ ಹಾಕಿ, ದುಡಿಯುವವರಿಗೆ ಕೂಲಿಯ ಮುಖಾಂತರ ಹೊಲ ಇದ್ದವರಿಗೆ ಕಡವಾಗಿ, ಉಳಿದವರಿಗೆ 'ಲಾಗಿ' 'ಸವಕ್ಕಿ' ಪದ್ಧತಿಯಂತೆ ಕಾಳು ಕೊಡಲು ಹೇಳುತ್ತಿದ್ದರು. ಊರಲ್ಲಿ ಯಾರೂ ಉಪವಾಸವಿರದಂತೆ ನೋಡಿಕೊಳ್ಳಲು ಆದೇಶ ನೀಡುತ್ತಿದ್ದರು. ಇದಕ್ಕೆ ಒಪ್ಪದವರ ಹಗೆ ತೆಗೆಯಿಸಿ ಗೌಡರೇ ಜನರಿಗೆ ಹಂಚಿ, ಮತ್ತೆ ಬೆಳೆ ಬಂದಾಗ ಅವುಗಳನ್ನು ಮರಳಿ ಕೊಡಿಸಿದ ಉದಾಹರಣೆಗಳು ಉಂಟು

ಆದರೆ ಸ್ವಾತಂತ್ರ್ಯಾನಂತರ ಈ ಹಗೆಗಳೆಲ್ಲ ಹಾಳು ಬಿದ್ದವು. ಅವುಗಳನ್ನು ಸತ್ತ ಪ್ರಾಣಿಗಳನ್ನು ಒಗೆಯಲೋ, ಹೊಲಸನ್ನು ಚೆಲ್ಲಲೊ ಬಳಸಹತ್ತಿದರು. ಎಷ್ಟೋ ಸಾರಿ ಮೇಯಲು ಹೋದ ದನ-ಕರುಗಳು ಅದರಲ್ಲಿ ಬಿದ್ದದನ್ನೂ ಅವುಗಳನ್ನು ಪ್ರಯಾಸದಿಂದ ಹಲವರು ಕೂಡಿ ಮೇಲೆತ್ತಿ ಬದುಕಿಸುವಲ್ಲಿ ಕೈಗೂಡಿಸಿದ ಅನುಭವೂ ನನಗಿದೆ. ಈ ವ್ಯವಸ್ಥೆ ಎರೆಭೂಮಿ, ಹಾಳುಮಣ್ಣು ಇದ್ದ ಊರುಗಳಲ್ಲಿ ಸಾಧ್ಯವಿರಲಿಲ್ಲ. ಮರಡಿ ಜಮೀನು ಇದ್ದಲ್ಲಿ ಈ ರೀತಿಯ ಸಾಮೂಹಿಕ ಹಗೆಗಳಿದ್ದವು. ಜನಪದ ಕಥೆಗಳಲ್ಲಿ ಹಾಲು ಹಗೆಯ ಉಲ್ಲೇಖಗಳಿವೆ.

ಉತ್ತರ ಕರ್ನಾಟಕದಲ್ಲಿ ಜೋಳ, ಗೋಧಿ, ಅಗಸಿ, ಕುಸುಬಿ, ಹಗೆ ಹಾಕುವ ಧಾನ್ಯಗಳಾಗಿದ್ದವು. ಮುಖ್ಯ ಬೆಳೆ ಜೋಳದ ಹಗೆಗಳೇ ಅಧಿಕ. ಅದಕ್ಕಾಗಿಯೇ ಜೋಳದ ಹಗೆ ಇದ್ದ ಕಟ್ಟೆಗೆ 'ಜೋಳಜಿ' ಎಂದು ಹೆಸರು ಬಂದಿರಬಹುದೇನೋ!

ಹಗೆ ಹಾಕುವ ರೀತಿ: ರಾಸೀ ಮಾಡಿ ಕಾಳು ತರುವ ಮೊದಲು ಹಗೆಯನ್ನು ಸ್ವಚ್ಛಗೊಳಿಸಿ ಮಣ್ಣಿನದಿದ್ದರೆ ಸಾರಿಸಿ ಗಾಳಿಯಾಡಲು ತೆರೆದಿಡುತ್ತಿದ್ದರು. ತಳಕ್ಕೆ ಮೂರು ಅಂಗುಲದಷ್ಟು ದಪ್ಪಾಗಿ ಹೊಟ್ಟು ಹರವುತ್ತಿದ್ದರು. ಗೋಡೆ ತೇವವಾಗಿದ್ದರೆ ಅದರ ಗುಂಟ ದುಂಡಾಗಿ ಕಣಿಕೆಯ ಸೂಡುಗಳನ್ನು ತಳದಿಂದ ಮೇಲಿನವರೆಗೆ ಹೊಂದಿಸುತ್ತಿದ್ದರು. ಇದಕ್ಕೆ 'ಅಡಿಸಿ' ಕಟ್ಟುವುದು ಎನ್ನುತ್ತಾರೆ. ಕಾಳು ತೇವಾದ ಗೋಡೆಗೆ ಹತ್ತಿ ಹಾಳಾಗ ಬಾರದೆಂಬುದೇ ಇದರ ಉದ್ದೇಶ. ಗೋಡೆಗೆ ತೇವಂಶವಿರದಿದ್ದರೆ ನೇರವಾಗಿ ಹಾಗೇ ಕಾಳು ತುಂಬುತ್ತಿದ್ದರು. ಇಷ್ಟಾಗಿಯೂ ಮಳೆ ಅಧಿಕವಾಗಿದ್ದಾಗ ಹಗೆಗಳಲ್ಲಿ ನೀರು ಸೇರಿ ಧಾನ್ಯ ಹಾಳಾದ ಹಲವಾರು ಉದಾಹರಣೆ ಇವೆ. ಕಾಳು ಸಂಪೂರ್ಣ ತುಂಬಿದಾಗ ಹಗೆದ ಬಾಯಿಗೆ ಮತ್ತೆ ಹೊಟ್ಟು ಹರವಿ ಬಾಯ್ಗಲ್ಲನ್ನು ಮುಚ್ಚಿ, ಮಣ್ಣು ಮೆತ್ತಿ ಮೇಲೆ ಹೆಂಡಿಯ ರಾಡಿಯಿಂದ ಸಾರಿಸಿ ಬಿಡುತ್ತಿದ್ದರು. ತಮ್ಮಲ್ಲಿ ಹಗೆ ಇದ್ದುದು ಅದರಲ್ಲಿದ್ದ ಕಾಳಿನ ಪ್ರಮಾಣ ಅನ್ಯರಿಗೆ ತಿಳಿದಿರಬಾರದೆಂಬುದು ಬಹಳ ಜನರ ಇಂಗಿತ. ಯಾರಾದರೂ ಕಡ-ಕಟ್ಟು ಕಾಳು ಕೇಳಿದಾಗ, ಹಗೆ ತೆಗೆದಾಗ ನೋಡೋಣ ಎನ್ನುತ್ತಿದ್ದರು.

ಹಗೆ ತೆಗೆಯುವುದು: ಹಗೆಗೆ ಹಾಕಿದ ಕಾಳು ತೆಗೆಯುವುದು ಅಜಾಗರೂಕರ ಕೆಲಸವಾಗಿರಲಿಲ್ಲ. ಬಾಯಿಯವರೆಗೆ ಕಾಳು ತುಂಬಿದ ಹಗೆ ತೆಗೆಯುವುದನ್ನು ಯಾರೂ ಮಾಡಬಹುದಿತ್ತು. ಆದರೆ ಕಾಳು ತೀರ ಆಳದಲ್ಲಿದ್ದಾಗ ಅವುಗಳನ್ನು ತೆಗೆಯುವುದು ಮತ್ತು ಖಾಲಿ ಹಗೆಯಲ್ಲಿ ಇಳಿದು ಕೆಲಸ ಮಾಡುವುದು ತೀರ ಎಚ್ಚರ ವಹಿಸಬೇಕಾದ ಕೆಲಸವಾಗಿತ್ತು.

ಹಗೆಯ ಬಾಯಿ ತೆರೆದು ಹವೆಯಾಡಲು ಬಿಡುತ್ತಿದ್ದರು. ಅನಂತರ ಚಿಮಣಿ ಹಚ್ಚಿ ಹಗ್ಗಕಟ್ಟಿ ತಳದವರೆಗೆ ಬಿಡುತ್ತಿದ್ದರು. ಒಂದ ವೇಳೆ ಚಿಮಣಿ ಆರಿದರೆ ಒಳಗೆ ಯಾರನ್ನು ಇಳಿಗೊಡುತ್ತಿರಲಿಲ್ಲ. ಒಳಗೆ ಪ್ರಾಣವಾಯು ಇರುವುದನ್ನು ಪರೀಕ್ಷಿಸುವ ವಿಧಾನವಿದು.

ಅಗಸಿ ಹಗೆಯಲ್ಲಿ ನೇರವಾಗಿ ಇಳಿಯುತ್ತಿರಲಿಲ್ಲ. ಕಾರಣ ಜಾರುವ ಈ ಕಾಳುಗಳಲ್ಲಿ ವ್ಯಕ್ತಿ ಮುಳುಗಿ ಹೋಗುವ ಸಾಧ್ಯತೆಯನ್ನು ಅರಿತಿದ್ದರು. ಆದರೂ ಕೆಲವರು ಅಗಸಿಯ ಹಗೆಯಲ್ಲಿ ಮುಳುಗಿ ಸತ್ತ ಉದಾಹರಣೆಗಳೂ ಇವೆ. ಒಂದು ಮಣೆ ಅಥವಾ ಹಲಗೆಯ ಮೇಲೆ ವ್ಯಕ್ತಿಯನ್ನು ಕೂಡ್ರಿಸಿ ಒಳಗೆ ಬಿಡುತ್ತಿದ್ದರು.

ಹಗೆಯಲ್ಲಿ ಹಾಕಿದ ಕಾಳುಗಳು ಬಿತ್ತಲು ಬರುತ್ತಿರಲಿಲ್ಲ. ತೇವಾಂಶ ಕಳೆದುಕೊಂಡು ಕಾಳು ತನ್ನ ಬೀಜಗುಣವನ್ನು ಕಳೆದುಕೊಳ್ಳುತ್ತಿತ್ತು. ಕೇವಲ ಆಹಾರಕ್ಕಾಗಿ ಮಾತ್ರ ಈ ರೀತಿಯ ಸಂಗ್ರಹ ನಡೆಯುತ್ತಿತ್ತು. ಇಲಿ, ಹೆಗ್ಗಣ, ನುಸಿ ಮೊದಲಾದ ಕ್ರಿಮಿಗಳಿಂದ ರಕ್ಷಿಸುವುದು ಮತ್ತು ಧಾನ್ಯ ತುಂಬಿಡಲು ಬೇಕಾದ ಚೀಲ ಮತ್ತು ಸ್ಥಳದ ಅಭಾವ ನೀಗಿಸಲು ಈ ವಿಧಾನ ಅನುಸರಿಸುತ್ತಿದ್ದರು. ಬೆಂಕಿಯಿಂದಲೂ ರಕ್ಷಣೆಯಾಗುತ್ತಿತ್ತು.

ದ್ವಿದಳ ಧಾನ್ಯ ಸಂಗ್ರಹ: ದ್ವಿದಳ ಧಾನ್ಯಗಳಾದ ಬೇಳೆಕಾಳು, ಶೇಂಗಾಗಳನ್ನು ಹಗೆಯಲ್ಲಿ ಹಾಕುತ್ತಿರಲಿಲ್ಲ. ಇವುಗಳನ್ನು ಸಂಗ್ರಹಿಸಿಡುವ ವಿಧಾನಗಳೆ ಬೇರೆಯಾಗಿದ್ದವು. ಆಗ ಇವುಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರಲಿಲ್ಲ. ಅಕ್ಕಡಿ ಕಾಳುಗಳಾಗಿ ಬೆಳೆದ ಬೇಳೇಕಾಳುಗಳು ಹೆಚ್ಚು ಕಡಿಮೆ ಹಳ್ಳಿಗರ ಅವಶ್ಯಕತೆಗಳಿಗೆ ಪೂರೈಕೆಯಾಗುತ್ತಿದ್ದವು. ಹೆಚ್ಚು ಬೆಳೆದವರು ಕಡಲೆಯನ್ನು ಕುದುರೆಗೆ, ಮೂಕಣಿ, ಹುರುಳಿಯನ್ನು ದನಗಳಿಗೆ ಆಹಾರವಾಗಿ ಬಳಸುತ್ತಿದ್ದರು. ಶೇಂಗಾಕಾಯಿಗಳನ್ನು ದನಗಳಿಗೆ ಹಾಕುವುದನ್ನು ನಾನು ನೋಡಿರುವೆ. ಶೇಂಗಾ ಎಣ್ಣೆಯ ಕಾಳಾಗಿ ಆಗಿನ್ನೂ ಗುರುತಿಸಲ್ಪಟ್ಟಿರಲಿಲ್ಲ. ಅವಕ್ಕೆಲ್ಲ ಬೇಡಿಕೆ ಇರಲಿಲ್ಲ. ಇವುಗಳನ್ನು ದಿನ

ಬಳಕೆಗೆ ಗಡಿಗೆ ಮಡಿಕೆಗಳಲ್ಲಿ ಸಂಗ್ರಹಿಸಿಡಲಾಗುತ್ತಿತ್ತು.

ಬೀಜಕ್ಕೆ ಬೇಕಾದ ಶೇಂಗಾ ಕಾಯಿಗಳನ್ನು ಒಣಗಿಸಿ, ಎತ್ತರವಾದ ದೀವಟಿಗೆ ಮಂದಾಲಗಳ ಮೇಲೆ ಸೆಣಬಿನ ಚೀಲ ತುಂಬಿ ಇಡುತ್ತಿದ್ದರು. ಇಲ್ಲವೆ ಇಲಿಗಳಿಗೆ ನಿಲುಕದಂತೆ ಗೋಡೆಯ ಗೂಟಕ್ಕೆ ಜಂತಿ ತೊಲೆಗೂ ಹಗ್ಗಕಟ್ಟಿ ಚೀಲಗಳನ್ನು ಜೋತು ಬಿಡುತ್ತಿದ್ದರು. ಬಿತ್ತನೆಯ ದಿನ ಬಂದಾಗ ಕಾಯಿ ಒಡೆದು ಕಾಳು ಸಿದ್ಧಪಡಿಸುತ್ತಿದ್ದರು.

ಬೀಜ ಸಂಗ್ರಹ: ಹಗೆ ಹಾಕಿದ ಕಾಳುಗಳಂತೆ ಗಡಿಗೆ ಹರವಿನಲ್ಲಿರಿಸಿದ ಕಾಳುಗಳು ಮೊಳಕೆಯೊಡೆಯುತ್ತಿರಲಿಲ್ಲ. ಬಿತ್ತಲು ಬೇಕಾದ ಬೀಜಗಳನ್ನು ಹುಳು ಹತ್ತದಂತೆ ರಕ್ಷಿಸುವುದು ದೊಡ್ಡ ಸಮಸ್ಯೆಯಾಗಿತ್ತು. ಒಂದು ವರ್ಷ ಮಳೆಯಾಗದಿದ್ದರಂತೂ ಬೀಜ ಸಿಕ್ಕುವುದೇ ದುಸ್ತರವಾಗುತ್ತಿತ್ತು. ಇಂದಿನಂತೆ ಬೀಜ ನಿಗಮಗಳಾಗಲೀ, ಬೀಜೋತ್ಪಾದನ ಕಂಪನಿಗಳಾಗಲೀ ಇರಲಿಲ್ಲ. ತಮ ತಮಗೆ ಬೇಕಾದ ಬೀಜಗಳನ್ನು ಮುಂದಿನ ವರ್ಷಕ್ಕಾಗಿ ತಾವೇ ಕಾಯ್ದಿರಿಸಿ ಕೊಳ್ಳುತ್ತಿದ್ದರು. ತಮಗೆ ಸಾಕಾಗಿ ಮಿಕ್ಕುಳಿದವನ್ನು ಮಾತ್ರ ಮಾರುವುದಾಗಲಿ ಇಲ್ಲವೆ ಬೇರೆ ಬೀಜಗಳ ಜೊತೆ ಬದಲಾಯಿಸಿಕೊಳ್ಳುವುದಾಗಲಿ ನಡೆಯುತ್ತಿತ್ತು.

ರಾಸೀ ಮಾಡುವಾಗಲೇ ಬೀಜಕ್ಕಾಗಿ ಚೆನ್ನಾಗಿ ಕಾಳು ತುಂಬಿದ ದೊಡ್ಡ ದೊಡ್ಡ ಜೋಳದ ತೆನೆಗಳನ್ನು ಆಯ್ದಿಡುತ್ತಿದ್ದರು. ಅವುಗಳಿಗೆ 'ಹಿಡಿದೆನೆ' ಎನ್ನುತ್ತಿದ್ದರು. ಸ್ವಲ್ಪ ಬೀಜ ಬೇಕಾದವರು ಹಾಗೇ ತೆನೆಗಳನ್ನು ಬಿತ್ತನೆಯ ದಿನಗಳ ತನಕ ಜಂತಿಗೆ ಕಟ್ಟಿಡುತ್ತಿದ್ದರು. ಬಹಳ ಬೀಜ ಬೇಕಾದವರು ಆಯ್ದ ತೆನೆಗಳನ್ನು ಮೆತ್ತಗೆ ಬಡಿದು, ತೂರಲಾರದೆ ಹೊಟ್ಟು ಸಹಿತ ಚೀಲದಲ್ಲಿ ತುಂಬಿಡುತ್ತಿದ್ದರು. ಬಿತ್ತುವ ದಿನ ಬಂದಾಗ ತೂರಿ, ಕೇರಿ ಉತ್ತಮ ಬೀಜಗಳನ್ನು ಸಿದ್ಧಪಡಿಸುತ್ತಿದ್ದರು. ಕೆಲವರು ಬಿತ್ತುವ ಒಂದೆರಡು ದಿನ ಮೊದಲು ದನಗಳ ಮೂತ್ರದಲ್ಲಿ ಸಂಸ್ಕರಿಸಿ ನೆರಳಲ್ಲಿ ಆರಿಸಿ, ಬಿತ್ತುವುದನ್ನು ನೋಡಿದ್ದೇನೆ. ಮನೆಯಲ್ಲೇ ಅರೆದ ಹತ್ತಿಯ ಬೀಜಗಳನ್ನು ಹೆಂಡಿಯ ರಾಡಿಯಿಂದ ಸಂಸ್ಕರಿಸಿ ಬಿತ್ತಲಾಗುತ್ತಿತ್ತು. ಜೋಳದ ಬೀಜಕ್ಕೆ ಗಂಧಕ್ಕೆ ಹಚ್ಚಿ ಬಿತ್ತುತ್ತಿದ್ದರು. ಇದರಿಂದ ಕಾಡಿಗೆ ರೋಗ ಬರುತ್ತಿರಲಿಲ್ಲ.

ಮೆತ್ತು ಹಾಕುವುದು: ಅಕ್ಕಡಿ ಕಾಳು, ಬೇಳೆ ಕಾಳುಗಳನ್ನು ಬೀಜ–ಕ್ಕಾಗಿ ಕಾಯ್ದಿರಿಸಲು 'ಬುರಬುರಿ' (ಹುಳು) ಆಗದಂತೆ ನೋಡಿಕೊಳ್ಳಲು 'ಮೆತ್ತು' ಹಾಕಿಡುವ ಪದ್ಧತಿಯೊಂದಿತ್ತು. ಎರಡು ಸೊಲಿಗೆಯಿಂದ ಇಮ್ಮನ ಅಳತೆಯ ಲಕ್ಕಿ, ಅಥವಾ ಹೂಲೀ ಜಬರಿಗಳಿಂದ ಹೆಣೆದ ಬುಟ್ಟಿಗಳನ್ನು ಹೆಂಡೀ ರಾಡಿಯಿಂದ ಸಾರಿಸಿ ಅದರಲ್ಲಿ ಕಾಳು ತುಂಬುತ್ತಿದ್ದರು. ಬುಟ್ಟಿಯ ತಳಕ್ಕೆ ಮತ್ತು ಕಾಳಿನ ಮೇಲೆ ಬೇವು, ಬ್ಯಾಲ, ಇಲ್ಲವೆ ಲಕ್ಕಿಯ ತೊಪ್ಪಲನ್ನು ಹಾಕುತ್ತಿದ್ದರು. ಮೇಲೆ ಹಾಳುಮಣ್ಣು ಮೆತ್ತಿ ಹೆಂಡೀ ರಾಡಿಯಿಂದ ಸಾರಿಸುತ್ತಿದ್ದರು. ಆ ಬುಟ್ಟಿಗಳನ್ನು ಆ ಈ ಕಡೆ ಸರಿದಾಡಿಸುತ್ತಿರಲಿಲ್ಲ. ಬಿತ್ತುವ ದಿನ ಸಮೀಪಿಸಿದಾಗ ಮೆತ್ತು ತೆಗೆದು ಕಾಳುಗಳನ್ನು ಪರೀಕ್ಷಿಸಿ ಬಿತ್ತುತ್ತಿದ್ದರು.

ಗುಮ್ಮಿ ಮತ್ತು ಗಳಿಗೆ: ಹೆಚ್ಚಿನ ಪ್ರಮಾಣದಲ್ಲಿ ಬೀಜ ಸಂಗ್ರಹಿಸುವವರು 'ಬುಟ್ಟಿ'ಗಳ ಬದಲಾಗಿ 'ಗುಮ್ಮಿ' 'ಗಳಿಗೆ'ಗಳನ್ನು ಬಳಸುತ್ತಿದ್ದರು. ಬುಟ್ಟಿಯ ತಳವನ್ನೇ ಹೋಲುವ ಗುಮ್ಮಿ, ಎರಡು ಎರಡೂವರೆ ಅಡಿ ಎತ್ತರವಾಗಿರುತ್ತದೆ. ಮೇಲೆ ಬಂದಂತೆ ಅಗಲ ಕಡಮೆಯಾಗಿರುತ್ತದೆ. ಇದಕ್ಕೂ ತಳದಲ್ಲಿ ಮತ್ತು ಬಾಯಿಗೆ ಬೇವು ಮೊದಲಾದ ತೊಪ್ಪಲನ್ನು ಹಾಕಿ ಮಣ್ಣಿನಿಂದ ಬಾಯಿಗೆ ಮೆತ್ತು ಹಾಕುತ್ತಾರೆ.

'ಗಳಿಗೆ' ಇನ್ನೂ ದೊಡ್ಡದು. 'ಗುಮ್ಮಿ' ಆಕಾರದ್ದೇ ಆದರೂ ಐದಾರು ಚೀಲ ಕಾಳು ಹಿಡಿಯುತ್ತಿರುತ್ತದೆ. ಇದನ್ನು ಸಿಂದಿಯ ಜಬರಿಗಳಿಂದಲೂ ಮಾಡುತ್ತಾರೆ. ಧಾನ್ಯದಲ್ಲಿ ಬೇವು ಮೊದಲಾದ ಎಲೆ ಬೆರಸಿ ಗಳಗಿಯನ್ನು ತುಂಬುತ್ತಾರೆ. ಇದನ್ನು ಧಾನ್ಯ ಸಂಗ್ರಹಕ್ಕೆ ಹಗೆ ಇಲ್ಲದವರು ಬಳಸುತ್ತಾರೆ.

ಸಾಮಾನ್ಯವಾಗಿ 'ಬುಟ್ಟಿ' 'ಗುಮ್ಮಿ'ಗಳಲ್ಲಿ ಬೀಜಕ್ಕಾಗಿ ಬೂದಿ, ಬೇವು, ಬ್ಯಾಲ ಇಲ್ಲವೆ ಲಕ್ಕಿ ಎಲೆಗಳನ್ನು ಬೆರಸಿ ಇಡುವುದರಿಂದ ಮತ್ತು ಮೇಲೆ ಹೆಂಡಿಯ ರಾಡಿಯ ಸಾರಣೆ ಮಾಡುವುದರಿಂದ, ಬೀಜಗಳು ಹುಳು ಹತ್ತದೆ ರೋಗಮುಕ್ತವಾಗಿರುತ್ತಿದ್ದವು. ಇವುಗಳಲ್ಲಿ ಹೆಚ್ಚಾಗಿ ಹೆಸರು, ನವಣಿ, ಸಜ್ಜೆ, ಮೊದಲಾದ ಧಾನ್ಯಗಳನ್ನು ಸಂಗ್ರಹಿಸಲು ಉಪಯೋಗಿಸುತ್ತಿದ್ದರು.

ಒಡೆವು ವಾಡೇವು: ಕುಂಬಾರರು ಸಿದ್ಧಪಡಿಸಿದ ಮಣ್ಣಿನ ಗುಡಾಣಿಗಳನ್ನು ಮನೆಗಳಲ್ಲಿಯ ಗೋಡೆ ಅಥವಾ ಮೂಲೆಗಳಲ್ಲಿ ಹೂತಿದಿಡಲಾಗುತ್ತಿತ್ತು. ಇವುಗಳಲ್ಲಿ ದಿನಬಳಕೆಯ ಕಾಳುಗಳನ್ನು ಸಂಗ್ರಹಿಸಲಾಗುತ್ತಿತ್ತು. ಗುಡಾಣವನ್ನು ಮುಚ್ಚಿಟ್ಟು ಕೆಳಗಿರುವ ಅಥವಾ ಮಧ್ಯದ ರಂಧ್ರದ ಮೂಲಕ ಬೇಕಾದಷ್ಟು ತೆಗೆದುಕೊಂಡು ಅನಂತರ ಬಟ್ಟೆಯಿಂದ ಬಿಗಿಯಾಗಿ ಮುಚ್ಚಿಡುವುದು ಪದ್ಧತಿಯಾಗಿತ್ತು.

ಮೆಕ್ಕೆಜೋಳ, ಬೆಳ್ಳುಳ್ಳಿ ಸಂಗ್ರಹ: ಮೆಕ್ಕಜೋಳವನ್ನು ಹಿಂದೆ, ತೆನೆಸುಟ್ಟು ತಿನ್ನಲು ಮತ್ತು ದನಗಳಿಗೆ ಹಾಕಲು ಮಾತ್ರ ಬೆಳೆಯುತ್ತಿದ್ದರು. ಇದಕ್ಕೆ ಉತ್ತರ ಕರ್ನಾಟಕದಲ್ಲಿ ಗೊಂಜೋಳ (ಗೋವಿನ ಜೋಳ) ಎಂತಲೂ ಹೆಸರು, ತೆನೆಗಳ ಮೇಲಿನ ಸೊಪ್ಪೆಯನ್ನು ಒಂದೆಡೆಯಿಂದ ಸುಲಿದು ಹಕ್ಕಿಯ ರೆಕ್ಕೆಯಂತೆ ಒಂದಕ್ಕೊಂದು ತಳಕು ಹಾಕಿ ಪಡಸಾಲೆ ಗೋದಲೆಗಳಲ್ಲಿ ಗಾಳಿಯಾಡುವಲ್ಲಿ ಒಂದು ಗಳಕ್ಕೆ ನೇತು ಹಾಕುತ್ತಿದ್ದರು. ಇದರಿಂದಾಗಿ ಹುಳುಗಳ ಬಾಧೆಯಿಂದ ಅವು ಮುಕ್ತವಾಗಿರುತ್ತಿದ್ದವು. ಬೆಳ್ಳುಳ್ಳಿಯ ಸೂಡುಗಳನ್ನು ಇದರಂತೆ ಒಂದಕ್ಕೊಂದು ಅದರ ಸೊಪ್ಪಿನಿಂದಲೇ ಗಂಟುಹಾಕಿ ಗಳಕ್ಕೆ ನೇತುಹಾಕುತ್ತಾರೆ. ಇಂದೂ ಈ ದೃಶ್ಯ ಹಳ್ಳಿಯ ಮನೆಗಳಲ್ಲಿ ಕಾಣ ದೊರೆಯುತ್ತದೆ. ಗಡ್ಡೆಗಳನ್ನು ಸದೆ (ತೊಪ್ಪಲು)ಯಿಂದ ಬೇರ್ಪಡಿಸದೆ ಇಟ್ಟರೆ ಅವು ಕೆಡದೆ ಬಹಳ ದಿನಗಳ ಕಾಲ ಬಾಳುತ್ತಿರುವುದನ್ನು ಗಮನಿಸಿ ಹೀಗೆ ಮಾಡುತ್ತಾರೆ.

ಇಲಾರಿಗೆ: ಉಳ್ಳೇಗಡ್ಡೆ (ಈರುಳ್ಳಿ)ಗಳು ಬೇಗ ಕೆಡದಂತೆ ಸಂಗ್ರಹಿಸಿಡುವ ವಿಧಾನವು ಬಹಳ ವೈಜ್ಞಾನಿಕವಾಗಿತ್ತು. ಅದಕ್ಕೆ ನೀರು ತಗುಲದಂತೆ ಬಿಸಿಲು ಹತ್ತದಂತೆ, ಹವೆ ಬಡಿಯುವಂತೆ ವಿಶೇಷವಾದ 'ಇಲಾರಿಗೆ'ಗಳನ್ನು ತೋಟದಲ್ಲೇ ಗಿಡಗಳ ನೆರಳಲ್ಲಿ ನಿರ್ಮಿಸುತ್ತಿದ್ದರು.

ಹಿಡಿ ಗಾತ್ರ, ದಪ್ಪಾದ, ನಾಲ್ಕೈದು ಅಡಿ ಉದ್ದದ ಹಾರಿವಾಳ ಇಲ್ಲವೆ ಹೊನ್ನವರೆಯ ಕಟ್ಟಿಗೆಗಳನ್ನು ನಾಲ್ಕೈದು ಅಡಿ ವ್ಯಾಸದ ವರ್ತುಲಾಕಾದಲ್ಲಿ ಹೂಳುತ್ತಾರೆ. ಎರಡು ಕಟ್ಟಿಗೆಗಳನ್ನು ನಡುವೆ ಅರ್ಧ ಅಂಗುಲ ಸ್ಥಳಾವಕಾಶವಿಡುತ್ತಿದ್ದರು. ಅದರ ತಳದಲ್ಲಿ ಹುಲ್ಲು ಇಲ್ಲವೆ ಉಳ್ಳಾಗಡ್ಡಿಯ ಸೊಪ್ಪನ್ನು ಹರವಿ ಚೆನ್ನಾಗಿ ನೆರಳಲ್ಲಿ

ಒಣಗಿಸಿದ ಗಡ್ಡಿಗಳನ್ನು ಅದರಲ್ಲಿ ತುಂಬುತ್ತಾರೆ. ಮೇಲೆ ಮತ್ತೆ ಸೊಪ್ಪು ಹಾಕಿ ಮುಚ್ಚುತ್ತಾರೆ. ಮಧ್ಯದಲ್ಲಿದ್ದ ಉದ್ದಾದ ಕಟ್ಟಿಗೆಯ ಆಧಾರದಿಂದ, ಪಿರಮಿಡ್ ಆಕಾರದ ಮುಚ್ಚಳಿಕೆಯನ್ನು, ಅಂಥ ಕಟ್ಟಿಗೆಯಿಂದಲೇ ನಿರ್ಮಿಸಿ ಅದರ ಮೇಲಿನಿಂದ ಕೆಳಗಿನವರೆಗೆ ಹುಲ್ಲು ಹರವುತ್ತಾರೆ. ಮಧ್ಯೆದ ಕಟ್ಟಿಗೆಯ ಮೇಲೊಂದು ಸುಣ್ಣ ಹಚ್ಚಿದ ಗಡಿಗೆ ಡಬ್ಬ ಹಾಕುತ್ತಾರೆ. ಇದರಿಂದಾಗಿ ಮಳೆಯ ನೀರು ಒಳಗೆ ಇಳಿಯಲು ಸಾಧ್ಯವಾಗದು. ಸುತ್ತಲೆಲ್ಲಾ ಕಟ್ಟಿಗೆ ಸಂದುಗಳಿಂದ ಹವೆಯಾಡುತ್ತಿರುತ್ತದೆ. ಹೀಗೆ ವರ್ಷಾನುಗಟ್ಟಲೆ ಉಳ್ಳೇಗಡ್ಡಿಯನ್ನು ಕೆಡದಂತೆ ಸಂಗ್ರಹಿಸಲಾಗುತ್ತಿತ್ತು.

ದನಗಳ ಆಹಾರ ಸಂಗ್ರಹ: ದನಗಳಿಗಾಗಿ ಜೋಳದ ಕಣಿಕೆ, ಹೊಟ್ಟು, ಸಂಗ್ರಹಿಸಿ ಎರಡು ಮೂರು ವರ್ಷ ಇಡುತ್ತಾರೆ. ಇದು ಬರಗಾಲದ ಬುತ್ತಿ. ಪ್ರಸಂಗ ಬಂದಾಗ ಊರಲ್ಲೇ ಮಾರಾಟ. ಕಣಿಕೆಯ ಬಣವಿ ಒಟ್ಟುವುದು ಒಂದು ಕಲೆ. ಉತ್ತರ ಕರ್ನಾಟಕದಲ್ಲಿ ವಿವಿಧಾಕಾರದ ಒಟ್ಟಿದ ಬಣಮೆಗಳನ್ನು ಇಂದೂ ಕಾಣಬಹುದು. ಇದೊಂದು ಜನಪದ ಕಲೆ ಎಂಬುದನ್ನು ಬಹಳ ಜನ ಗುರುತಿಸಿಲ್ಲ. ಜೋಳದ ದಂಟಿನ ಬೇರು (ಬುಡಚಿ) ಹೊರಗಿದ್ದು ಸುತ್ತಲೆಲ್ಲಾ ಅವೇ ಕಾಣುತ್ತವೆ. ಒಳಗೆ ಕಣಿಕೆ ಇದೆ ಎಂಬುದನ್ನು ತರ್ಕಿಸುವುದು ಕಷ್ಟ. ಆ ಬೇರುಗಳನ್ನು ಮಣೆಯಿಂದ ಬಡಿದ ನುಣುಪಾದ ಆಕಾರ ಮಾತ್ರ ಕಾಣುತ್ತದೆ. ಕುದುರೆ ಆಕಾರದ ಬಣಿಮೆಗಳು ಅಧಿಕವಾದರೂ ಹಲವು ಆಕಾರಗಳಲ್ಲಿ ಅವುಗಳನ್ನು ನಿರ್ಮಿಸುತ್ತಾರೆ. ಬಿಸಿಲು, ಮಳೆಗೆ ದನಗಳು ತಿನ್ನದ ಬೇರು ಮಾತ್ರ ಹಾಳಾಗಿ, ಉಳಿದ ಭಾಗ ಹಾಗೇ ಇರುತ್ತದೆ. ಒಳಗೆ ಒಂದು ಹನಿ ನೀರೂ ಹೋಗದಂತೆ, ಮೇಲೆ ಕೆಸರು ಮೆತ್ತಿರುತ್ತಾರೆ. ಪ್ರಸಂಗ ಬಂದರೆ ಬೆಂಕಿಯೂ ಬೇಗ ಹತ್ತದು. ಅಷ್ಟೇ ಬಿಗುವಾಗಿ ಒತ್ತಿ ಬಿಟ್ಟಿರುತ್ತಾರೆ. ಕಳ್ಳರಾಗಲೀ ದನಗಳಾಗಲಿ ಒಂದು ದಂಟನ್ನೂ ಹೊರ ತೆಗೆಯಲು ಬಾರದು. ಕೆಲವು ಕಡೆ ಹೊಲದಲ್ಲಿಯೇ ಕಣಿಕೆ ಒಟ್ಟಿ ಹೆಂಟಿ ಏರಿಸುತ್ತಾರೆ. ಒಳಗಿನದು ಏನೂ ಕಾಣದು.

ಜೋಳ, ಗೋದಿ, ಶೇಂಗಾ, ತೊಗರಿ ಮೊದಲಾದ ಬೆಳೆಗಳ ಹೊಟ್ಟನ್ನೂ ಇಲಾರಿಗೆ ಆಕಾರದಂತೆ ಸುತ್ತೆಲ್ಲ ಕಣಿಕೆ ಕಟ್ಟಿ ಮೇಲೆ ಮಣ್ಣಿನ ಮೆತ್ತು ಹಾಕುತ್ತಾರೆ. ಬೇಕಾದಾಗ ಒಂದೆಡೆ ಬಾಯಿ ಮಾಡಿ ಅದರ ಮುಖಾಂತರ ಬೇಕಾದಷ್ಟನ್ನು ತೆಗೆದುಕೊಳ್ಳುತ್ತಾರೆ.

ಕಾಯಿ ಪಲ್ಯ ಬಾಳಕ: ಕಾಯಿಪಲ್ಯ, ಹಣ್ಣು ಹಂಪಲು, ಬಾಡದಂತೆ, ಕೆಡದಂತೆ ಇಡಲು ಇಂದು ರೆಫ್ರಿಜಿರೇಟರ್, ಶೈತ್ಯಾಗಾರ ಪಟ್ಟಣಗಳಲ್ಲಿ ಅನಿವಾರ್ಯವಾಗಿವೆ. ನಿತ್ಯ ದೂರ ಹೋಗಿ ಕೊಂಡು ತರುವ ಅಸಾಧ್ಯತೆ ಮತ್ತು ರಸಗೊಬ್ಬರ ಬಳಕೆಯಿಂದ ಬೆಳೆದ ಕಾಯಿಪಲ್ಯ ಬೇಗ ಬಾಡುವ, ಕೆಡುವ ಗುಣಧರ್ಮ ಹೊಂದಿರುವುದು ಇದಕ್ಕೆ ಕಾರಣ.

ಹಳ್ಳಿಗಳಲ್ಲಿ ನಿತ್ಯ ತಾಜಾ ಕಾಯಿಪಲ್ಯ ಸಿಗುತ್ತಿತ್ತಾದ್ದರಿಂದ ಅದನ್ನು ಕಾಯ್ದಿಡುವ ಪ್ರಮೇಯವಿರಲಿಲ್ಲ. ಅದರೆ ಕೆಲವು ಕಾಯಿಪಲ್ಯಗಳು ಕೆಲವು ಋತುಮಾನದಲ್ಲಿ ಮಾತ್ರ ಬೆಳೆಯುತ್ತಿದ್ದರು. ಉದಾ: ಬದನೆಕಾಯಿ, ಹಸಿಮೆಣಸಿನಕಾಯಿ, ಮೆಂತೇಪಲ್ಯ, ಕಡಲೀಪಲ್ಯ ಮುಂತಾದವು (ಈಗ ಬೇಕಾದ್ದನ್ನು ಬೇಕಾದಾಗ ಬೆಳೆಯ ಬಲ್ಲೆವು) ಅದಕ್ಕಾಗಿ ಒಂದು ಋತುವಿನಲ್ಲಿ ಬೆಳೆದುದನ್ನು ನೆರಳಲ್ಲಿ ಒಣಗಿಸಿಟ್ಟು ಮತ್ತೊಂದು ಋತುವಿನಲ್ಲಿ ಉಪಯೋಗಿಸಲಾಗುತ್ತಿತ್ತು. ಇದಕ್ಕೆ 'ಬಾಳಕ' ಮಾಡುವುದು ಎನ್ನುತ್ತಾರೆ. ಹಲವಾರು ಸೊಪ್ಪುಗಳನ್ನು ನೆರಳಲ್ಲಿ ಒಣಗಿಸಿ ಮಣ್ಣಿನ ಗಡಿಗೆಯಲ್ಲಿ ಕಾಯ್ದಿಡುತ್ತಿದ್ದರು. ಮುಂದೆ ಅದನ್ನು ಬೇಳೆಕಾಳುಗಳಲ್ಲಿ ಬೆರಸಿ ಪಲ್ಯ ಮಾಡುತ್ತಿದ್ದರು. ಬದನೆಕಾಯಿ ಹಸಿಮೆಣಸಿನಕಾಯಿಗಳನ್ನು ಹೋಳಿ, ನೆರಳಲ್ಲಿ ಒಣಗಿಸಿ ಇಡುತ್ತಿದ್ದರು. ಅದರಂತೆ ಕಗ್ಗು (ಹಸಿ) ಮಾವಿನಕಾಯಿ, ಲಿಂಬೀಕಾಯಿ, ಮೆಕ್ಕೇಕಾಯಿ, ಕಡಗಾಯಿ ಗಜ್ಜರಿ, ಮೊದಲಾದವುಗಳನ್ನು ಹೋಳಿ, ಅರಿಸಿಣ ಉಪ್ಪುಹಾಕಿ ಉಪ್ಪಿನಕಾಯಿಯಾಗಿ ಕಾದಿಡುತ್ತಾರೆ. ಉಪ್ಪಿನ ಕಾಯಿಯ ಪದ್ಧತಿಯಿಂತೂ ಇಂದು ಒಂದು ಉದ್ಯೋಗವಾಗಿ ಪರಿಣಮಿಸಿದೆ. ಹೀಗೆ 'ಬಾಳಿಕ', ಉಪ್ಪಿನಕಾಯಿ ಮಾಡುವ ವಿಧಾನದಿಂದ ಹೊಸ ಬೆಳೆ ಬರುವವರೆಗೂ ಅವುಗಳನ್ನು ಆಗಾಗ ಬಳಸುತ್ತಿದ್ದರು. ಇದರಿಂದಾಗಿ ರುಚಿಯಲ್ಲಿ ಸ್ವಲ್ಪ ವ್ಯತ್ಯಾಸವೆನಿಸಿದರೂ ಸತ್ವಾಂಶದಲ್ಲಿ ವಿಶೇಷ ಬದಲಾವಣೆಯಾಗುತ್ತಿರಲಿಲ್ಲ. ತೇವಾಂಶ ಹೋದರೂ ಲವಣಾಂಶಗಳು ಅದರಲ್ಲಿ ಉಳಿದುಕೊಂಡಿರುತ್ತಿದ್ದವು. ಮತ್ತೆ ಕುದಿಸಿದಾಗ ವಿಶೇಷ ಸ್ವಾದ ಪ್ರಾಪ್ತವಾಗುತ್ತಿತ್ತು.

ನೀರು: ನೀರನ್ನು ಸಹ ಮಣ್ಣಿನಿಂದ ತಯಾರಿಸಿದ ರಂಜಣಿಗೆ, ಕೊಡ, ಬಿಂದಿಗೆ, ತತ್ರಾಣಿ, ಮಗಿ, ಮೊದಲಾದವುಗಳಲ್ಲಿಡುವುದರಿಂದ ಕೆಲವು ದಿನಗಳವರೆಗೆ ಅವು ಕೆಡದೆ ನಿಸರ್ಗದಲ್ಲಿರುವಂತೆ ಇರುತ್ತಿದ್ದವು. ಇದರಿಂದಾಗಿ ನೀರು ತನ್ನ ಸ್ವಾಭಾವಿಕ ಉಷ್ಣಾಂಶವನ್ನು ಕಾಯ್ದುಕೊಂಡಿರುತ್ತಿತ್ತು.

(ಎಂ.ಜಿ.ಬಿ.)

ಧು

ಧುತ್ತರಗಾಂವ: ಆಳಂದ ತಾಲ್ಲೂಕಿನ ಧುತ್ತರಗಾಂವ ಎಂಬ ಊರು ಸಾಂಸ್ಕೃತಿಕ ಹಾಗೂ ಚಾರಿತ್ರಿಕ ಮಹತ್ವದ ಕೇಂದ್ರವಾಗಿದೆ. ಪ್ರಾಚೀನ ಶಾಸನಗಳಲ್ಲಿ ಧುತ್ತರಗಾಂವ ಎಂದೇ ಉಲ್ಲೇಖಿತಗೊಂಡಿರುವ ಇದೊಂದು ಅಗ್ರಹಾರವಾಗಿದೆ. ಊರಲ್ಲಿರುವ ಭೋಗಲಿಂಗೇಶ್ವರ ಗುಡಿಯು ಕಲ್ಯಾಣ ಚಾಲುಕ್ಯರ ಆರನೇ ವಿಕ್ರಮಾದಿತ್ಯನ ಕಾಲದ್ದಾಗಿದೆ. ಊರ ಹೊರಗಿರುವ ಸಿದ್ದಯ್ಯನ ದೇಗುಲವು ಪ್ರಾಚೀನ ದೇವಾಲಯವಾಗಿದೆ. ಊರಲ್ಲಿ ಬೀರದೇವ, ಅಮರೇಶ್ವರ, ಮಾಣಿಕೇಶ್ವರ, ಗಜಾನನ, ಹನುಮಂತ, ಚೌಡೇಶ್ವರಿ, ಲಕ್ಷ್ಮೀದೇವಿ, ಹಾಗೂ ಮರಗಮ್ಮನ ಗುಡಿಗಳಿದ್ದು ಶಾಂತೇಶ್ವರ ಮಠವು ಇದೆ.

(ಪಿ.ಕೆ.ಕೆ.)

ನ

ನಂಬಿಕೆಗಳು ಮತ್ತು ಆಚರಣೆಗಳು: ಸಂಪ್ರದಾಯವು ನಮ್ಮ ಜನಪದ ಸಂಸ್ಕೃತಿಯ ಬೆನ್ನೆಲುಬಾಗಿದೆ. ಸಮಾಜದ ಎಲ್ಲಾ ವರ್ಗದ, ಗುಂಪಿನ ಜನಾಂಗದಲ್ಲಿಯೂ ಸಂಪ್ರದಾಯಗಳು ಕಂಡುಬರುತ್ತವೆ. ಈ ದೇಶದಲ್ಲಷ್ಟೇ ಅಲ್ಲ. ತೀರ ಮುಂದುವರಿದಿರುವ ದೇಶಗಳಲ್ಲೂ ಕೂಡಾ ನಂಬಿಕೆ ಆಚರಣೆಗಳು ತಳಕು ಹಾಕಿ ನಿಂತಿವೆ. ಜನ ನಾಗರಿಕತೆಯಲ್ಲಿ ಮುಂದುವರೆದಂತೆ ಸಂಪ್ರದಾಯ ಕಳಚುತ್ತ ಬರಬಹುದು, ಆದರೆ ಸಂಪೂರ್ಣ ಆದರಿಂದ ಮುಕ್ತಿ ಪಡೆಯುವುದು ಮಾತ್ರ ಅಸಾಧ್ಯ. 'ಹಳೆಯ ಸಂಪ್ರದಾಯಗಳೆಲ್ಲವೂ ಜನಪದ ನಂಬಿಕೆಗಳಿಂದಲೇ ಕವಲೊಡೆದು ಬಂದವು. ಆದ್ದರಿಂದ ಸಂಪ್ರದಾಯಗಳನ್ನುಳಿದು ನಂಬಿಕೆಗಳಿಲ್ಲ, ನಂಬಿಕೆಗಳನ್ನುಳಿದು ಸಂಪ್ರದಾಯಗಳಿಲ್ಲ. ಅವೆರಡೂ ಪರಸ್ಪರ ಪೂರಕವಾಗಿವೆ.

ಜನರಲ್ಲಿ ಶಿಸ್ತು, ಸಂಯಮ ವಿಶ್ವಾಸ, ಪ್ರೇಮ ಮುಂತಾದ ಸದ್ಗುಣಗಳು ಹುಟ್ಟಲು ಇವು ಕಾರಣೀಭೂತವಾಗಿವೆ. ಸರಕಾರದ ಕಾಯ್ದೆ ಕಾನೂನುಗಳನ್ನು ಉಲ್ಲಂಘಿಸಬಹುದು ಆದರೆ ಈ ಸಂಪ್ರದಾಯಗಳನ್ನು ಮರೆಯದಂತೆ ಪಾಲಿಸುತ್ತಾರೆ. ಒಮ್ಮೊಮ್ಮೆ ಜನರು ಧರ್ಮವನ್ನು ಮರೆಯಬಹುದು, ಆದರೆ ಸಂಪ್ರದಾಯವನ್ನು ಮರೆಯುವುದು ಕಠಿಣವಾಗುತ್ತದೆ. ಜನ ಸಾಮೂಹಿಕವಾಗಿ ಇವುಗಳ ರಕ್ಷಣೆ ಮಾಡುತ್ತಾರೆ.


ಮೂಢ ನಂಬಿಕೆಗಳಲ್ಲಿ ಜನಪದರ ಭವಿಷ್ಯತ್ತನ್ನು ರೂಪಿಸುವ ಅನೇಕ ಸಂಪ್ರದಾಯಗಳು ಸಮಾಜದಲ್ಲಿ ಕಂಡು ಬರುತ್ತವೆ. ತಮ್ಮ ಜೀವನ ಒಳ್ಳೆಯದಾಗಬೇಕೆಂದು ಬಯಸುವಲ್ಲಿ ಒಳ್ಳೆಯ ಆಚಾರ–ವಿಚಾರಗಳಿಂದ ಕೂಡಿದ ಸಂಪ್ರದಾಯಗಳ ರೂಪ ತೋರುತ್ತವೆ. ತಮಗೆ ಆದ ಆಪತ್ತು, ದುಃಖ ದೇವರಲ್ಲಿ ತೋಡಿಕೊಂಡು ತಮ್ಮ 'ಹರಕೆ' ಈಡೇರಿಸುವಂತೆ ಕಠಿಣವಾದ ಆಚರಣೆಗಳನ್ನು ಹಾಕಿಕೊಳ್ಳುತ್ತಾರೆ. ಅವರ ಹರಕೆ ಈಡೇರಿದಾಗ ಮೂಢ ನಂಬಿಕೆಯ ಫಲವಾಗಿ ಸಂಪ್ರದಾಯಗಳನ್ನು ಆಚರಿಸುತ್ತಾರೆ. ಇಷ್ಟ ದೇವರೊಡನೆ ಮಾಡಿಕೊಂಡ ಒಪ್ಪಂದವೇ ಹರಕೆಯಾಗಿದೆ. ಉಪವಾಸ ತಲೆಗೂದಲು ಬಿಡುವದು, ದೇವರ ಹೆಸರಲ್ಲಿ ಗಡ್ಡ ಬಿಡುವುದು ದಾನ ಮಾಡುವುದು ಮುಂತಾದವುಗಳೂ ಹರಕೆ ಸೇವೆ ಸೇವೆ ಸಲ್ಲಿಸುವ ವಿಧಾನಗಳಾಗಿವೆ. ಸಂಪ್ರದಾಯ ಬಿಟ್ಟು ಕಾನೂನು ಕೂಡಾ ಬೇರ್ಪಡುವಂತಿಲ್ಲ ಎನ್ನಬಹುದಾಗಿದೆ.

(ಬಿ.ಪಿ.ಪಿ.)

ನಬೀಲಾಲ: ಜನಪದ ಕವಿ. ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಬಾಗಹಿಪ್ಪರಗಾ ಗ್ರಾಮದವರು. ಹುಟ್ಟಿದ್ದು 1935ರಲ್ಲಿ ತಂದೆ ಗುಡುಸಾಬ. ತಾಯಿ ಮಹಬೂಬಿ. ಇವರು ಕೇವಲ ಕರ್ತೃಗಳು, ಭಜನೆಯ ಹಾಡುಗಳನ್ನು ಹೇಳುತ್ತಾರೆ. ಓದು ಬರೆಹ ಬಲ್ಲವರಲ್ಲ. ಬಾಲ್ಯದಲ್ಲಿ ಅಭ್ಯಾಸಮಾಡಿದ್ದು ಮೋಡಿ ಭಾಷೆ. ಮಾತ್ರಭಾಷೆ ಉರ್ದು, ಕುಳಿತಲ್ಲಿಯೇ ಹಾಡುಗಳನ್ನು ರಚಿಸುತ್ತಾರೆ. ಬೇರೆಯವರು ಅವುಗಳನ್ನು ಲಿಪಿಮಾಡಿಕೊಳ್ಳುತ್ತಾರೆ.

ತಮ್ಮ 16ನೆಯ ವಯಸ್ಸಿನಿಂದಲೇ ಜನಪದ ಹಾಡುಗಳನ್ನು ಬರೆಯುತ್ತಿದ್ದಾರೆ. ಗುಲ್ಬರ್ಗಾ ತಾಲ್ಲೂಕಿನ ಹಿರೇಸಾವಳಗಿಯ ಶಾಂತಲಿಂಗೇಶ್ವರರ ಆಶೀರ್ವಾದದಿಂದ ತಾನು ಹಾಡು ರಚಿಸುತ್ತಿರುವುದಾಗಿ ಹೇಳುತ್ತಾರೆ. ಇವರ ಜನಪದ ಹಾಡುಗಳಲ್ಲಿ 'ಬಾಗಹಿಪ್ಪರಗಿ ನಬೀಶ' ಎಂದು ಅಂಕಿತ ಹಾಕುತ್ತಾರೆ ಸುಮಾರು ಐದು ಸಾವಿರಕ್ಕೂ ಮೇಲ್ಪಟು ಹಾಡುಗಳನ್ನು ತಾವು ರಚಿಸಿದ್ದಾಗಿ ಇವರು ಹೇಳುತ್ತಾರೆ. ಅವುಗಳ ಸಂಗ್ರಹ ಈಗ ಅವರ ಬಳಿ ಇಲ್ಲ. ಅವರು ಯಾರನ್ನು ಕುರಿತು ಹಾಡು ಸೃಷ್ಟಿಸಿದ್ದಾರೋ ಆ ಮತ ಮಂದಿರಗಳು ಅವರ ಹಾಡುಗಳನ್ನು ಮುದ್ರಿಸಿವೆ. ಅಚ್ಚಾದ ಹಾಡುಗಳೂ ಸಾಕಷ್ಟಿವೆ.

ಇವರು ಮೊಹರಂ ಪದಗಳು, ಅಧ್ಯಾತ್ಮ ಪದಗಳು, ತತ್ವಪದಗಳು, ಸಾಕ್ಷರತೆ ಪದಗಳು, ಹಂತಿ ಪದಗಳು, ಭಕ್ತಿಪದಗಳು, ಅಂಬೇಡ್ಕರ ಪದಗಳು, ಅಕ್ಕಾಮಹಾದೇವಿ, ಬಸವಣ್ಣನವರ ಹಾಗೂ ರೇಣುಕಾಂಬೆಯರನ್ನು ಕುರಿತು



ನಬಿಲಾಲ್ ಜನಪದ ಕವಿ

ಪದಗಳನ್ನು ರಚಿಸಿದ್ದಾರೆ. ಇವರು ರಚಿಸಿದ ಪದಗಳೆಲ್ಲವೂ ಹೆಚ್ಚಾಗಿ ಭಜನೆ ಪದಗಳು. ಹಬ್ಬ ಹರಿದಿನಗಳು ಜಾತ್ರೆ ಹತ್ತಿರವಾದ ಕೂಡಲೆ ಜನ ಇವರ ಹತ್ತಿರ ಬಂದು ಹಾಡುಗಳನ್ನು ಹೇಳಿಸಿ ಬರೆದುಕೊಂಡು ಹೋಗುತ್ತಾರೆ.

ಬಸವಕಲ್ಯಾಣ ತಾಲ್ಲೂಕಿನ ಶ್ರೀ ಹಾರಕೂಡ ಚೆನ್ನಬಸವೇಶ್ವರರನ್ನು ಕುರಿತು ನೂರು, ಗುಲ್ಬರ್ಗಾ ತಾಲ್ಲೂಕಿನ ಬಬಲಾದಿ ಮುತ್ತ್ಯಾ ಅವರನ್ನು ಕುರಿತು 100, ಖರ್ಜೂರಿ ಮಠವನ್ನು ಕುರಿತು 40 ಪದ್ಯಗಳನ್ನು ರಚಿಸಿದ್ದಾರೆ. 2004ರಲ್ಲಿ ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕ್ಯಾಡಮಿಯಿಂದ ಪ್ರಶಸ್ತಿ ಲಭಿಸಿದೆ. *(ಜಿ.ಕೆ.)*

ನರೋಣಾ ಕ್ಷೇಮಲಿಂಗ: ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕಿನರುವ ಪುರಾತನ ಮತ್ತು ಇತಿಹಾಸ ಪ್ರಸಿದ್ಧ ಸ್ಥಳ. ಇಲ್ಲಿ ಕೃತಯುಗದಿಂದಲೂ ಶಿವ ವಾಸವಾಗಿದ್ದಾನೆಂದು ಪುರಾಣಗಳು ಸಾರುತ್ತಿವೆ. ತ್ರೇತಾಯುಗದಲ್ಲಿ ರಾಮ ತನ್ನ ಮನಶಾಂತಿಗಾಗಿ ಈ ಕ್ಷೇತ್ರಕ್ಕೆ ಬಂದು ನೆಲಸಿದ್ದನೆಂಬ ಪ್ರತೀತಿ ಇದೆ. ರಾಮಾಯಣಕ್ಕಿಂತಲೂ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಕ್ಷೇಮಲಿಂಗದ ದರ್ಶನಕ್ಕಾಗಿಯೇ ರಾಮ ನರೋಣಾ ಗ್ರಾಮಕ್ಕೆ ಬಂದಿರುವ ಸಂಭವವಿದೆ. ಕ್ಷೇಮಲಿಂಗನ ದರ್ಶನದಿಂದ ರಾವಣ ಹತ್ಯೆಯ ಪಾಪವನ್ನು ಕಳೆದುಕೊಂಡ ರಾಮ ಆ ಸ್ಮರಣೆಗಾಗಿ 'ರಾಮಲಿಂಗ'ವೊಂದನ್ನು ಸ್ಥಾಪಿಸಿದನೆಂದು ಹೇಳಲಾಗುತ್ತದೆ. ಅದರಂತೆ ನರೋಣಾದಲ್ಲಿ ಇಂದು ಕ್ಷೇಮಲಿಂಗ, ರಾಮಲಿಂಗಗಳೆರಡನ್ನು ಕಾಣಬಹುದಾಗಿದೆ.

ಈ ಕ್ಷೇತ್ರಮಹಿಮೆ ಅಪಾರವಾಗಿದೆ. ಸಕಲರಿಗೂ ಲೇಸಾಗುವುದಕ್ಕಾಗಿ ಜನರ ಯೋಗಕ್ಷೇಮಕ್ಕಾಗಿ ಶಿವ ಇಲ್ಲಿ ಕ್ಷೇಮಲಿಂಗೇಶ್ವರನಾಗಿ ಮೆರೆಯುತ್ತಿರುವನು. ಇಲ್ಲಿ ಅಷ್ಟ ತೀರ್ಥಗಳು ನೆಲೆಸಿವೆ. ನರಸಿಂಹ ತೀರ್ಥ ಲಕ್ಷ್ಮೀತೀರ್ಥ, ಭವನಶನ ತೀರ್ಥ, ಸರ್ವ ದುಃಖ ನಿವಾರಕ ತೀರ್ಥ, ಇಂದ್ರ ತೀರ್ಥ ರಾಮಸರೋವರ ತೀರ್ಥ ರುದ್ರತೀರ್ಥ ಮತ್ತು ಅಗಸ್ತ್ಯ ತೀರ್ಥ, ಇವೆಲ್ಲವು ಇಂದಿಗೂ ಕ್ಷೇತ್ರದಲ್ಲಿ ಬತ್ತದೆ ಶಾಶ್ವತವಾಗಿ ಉಳಿದಿವೆ.


ನರೋಣಾ ಪಕ್ಕದ ಹಳ್ಳಿ 'ಗೋಳಾ' ಗ್ರಾಮದ ಕಬ್ಬಲಿಗರ ತೀರ್ಥಪ್ಪ ಎಂಬವರು ಶ್ರೀ ಕ್ಷೇತ್ರಕ್ಕೆ ಬಂದು ಸಾಧುಗಳಾಗಿ ನೆಲೆನಿಂತರು. ಅವರು ಕ್ಷೇತ್ರದಲ್ಲಿ ಎಲ್ಲೆಲ್ಲೂ ತೆಂಗಿನಗಿಡ ಮತ್ತು ಮಾವಿನಮರಗಳನ್ನು ಬೆಳೆಸಿದರಂತೆ ಅಂತೆಯೇ ಇಂದು ಪ್ರಕೃತಿ ಸೌಂದರ್ಯದ ಬೀಡಾಗಿ ಕ್ಷೇತ್ರ ಕಂಗೊಳಿಸುತ್ತಿದೆ. ಆದ್ದರಿಂದ ಅವರಿಗೆ ಸೇವಾದುರಂಧರ ತೀರ್ಥಪ್ಪ ಎಂದೇ ಜನರು ಗುರುತಿಸುತ್ತಾರೆ.

ನರೋಣಾ ಕ್ಷೇತ್ರದಲ್ಲಿ ಗಣಪತಿ, ಪಾರ್ವತಿ ಪರಮೇಶ್ವರ ವಿಗ್ರಹ, ಕಾಳಿಕಾ ಭವಾನಿ ಗುಹಾಮಂದಿರ, ಕಾಲಭೈರವೇಶ್ವರನ ಮೂರ್ತಿ, ಸಪ್ತಋಷಿಗಳ ಪಾದಗಳ ಪಾದಗಟ್ಟಿ, ಮಲ್ಲಿಕಾರ್ಜುನ ಸ್ವಾಮಿ ಷಣ್ಮುಖ ಸ್ವಾಮಿ ಮಹಾಮಂದಿರ, ರಾಮ ಸ್ಥಾಪಿತ ರಾಮಲಿಂಗೇಶ್ವರ, ಅಕ್ಕಮಹಾದೇವಿ ಮತ್ತು ಮಲ್ಲಿಕಾರ್ಜುನ ಲಿಂಗ, ವಾಯುಪುತ್ರ ಆಂಜನೇಯನ ವಿಗ್ರಹ, ಗುಡ್ಡದಲ್ಲಿ ಎಳೆಯುವ ಕಟ್ಟಿಗೆಯ ಮಹಾರಥಗಳೆಲ್ಲವೂ ಇವೆ.

ಈ ಕ್ಷೇತ್ರದಲ್ಲಿ ಪ್ರತಿ ವೈಶಾಖಮಾಸದ ಶುದ್ಧಪೂರ್ಣಿಮೆ 'ಅಗಿ' ಹುಣ್ಣಿಮೆಯ ದಿನದಂದು ಕ್ಷೇಮಲಿಂಗೇಶ್ವರನ ದಿವ್ಯ ರಥೋತ್ಸವ ನಡೆಯುವುದು ಪ್ರತಿ ಅಧಿಕಮಾಸ (ಮೂರು ವರ್ಷಕ್ಕೊಮ್ಮೆ) ಕೃತ್ತಿಕಾ ನಕ್ಷತ್ರದಲ್ಲಿ ಷಣ್ಮುಖಸ್ವಾಮಿಯ ಜಾತ್ರೆ ವಿಶೇಷವಾಗಿ ನಡೆಯುವುದು. ಆಗ ಆಂಧ್ರ, ಮಹಾರಾಷ್ಟ್ರದಿಂದ ಸಾವಿರಾರು ಭಕ್ತರು ದರ್ಶನಕ್ಕೆ ಬಂದು ಹೋಗುತ್ತಾರೆ.

ಈ ಕ್ಷೇತ್ರ ಮಹಿಮೆ ಕುರಿತು ಸಾಕಷ್ಟು ಐತಿಹ್ಯಗಳು ದಂತಕತೆಗಳು ಪ್ರಚಲಿತದಲ್ಲಿವೆ. ಅದರಂತೆ ರಾಮಚಂದ್ರ ರಾವಣನನ್ನು ಕೊಂದು ದಕ್ಷಿಣಾಪಥದಿಂದ ಉತ್ತರಾಭಿಮುಖ ವಾಗಿ ಅಯೋಧ್ಯೆಗೆ ತೆರಳುತ್ತಿರುವಾಗ ಜೊತೆಯಲ್ಲಿ ಲಕ್ಷ್ಮಣ, ಸೀತೆಯರೂ ಇದ್ದರು. ಮಾರ್ಗಮಧ್ಯದಲ್ಲಿ ಆಕಾಶದಲ್ಲಿ ರಾವಣನ ಭಯಂಕರವಾದ ಸ್ವರೂಪ ಕಂಡುಬಂದಿತು. ರಾಮಚಂದ್ರ ಬ್ರಹ್ಮಹತ್ಯೆ ಪಾಪ ಒದಗಿತೆಂದು ಮನದಲ್ಲಿ ನಿಶ್ಚಿಸಿದ. ಆ ದೋಷ ನಿವಾರಣೆಗಾಗಿ ಸಮುದ್ರ ತೀರದಲ್ಲಿ ಲಿಂಗ ಸ್ಥಾಪಿಸಿ ಪೂಜೆಗೈದನು. ಅದುವೆ ರಾಮೇಶ್ವರ ಲಿಂಗವೆಂದು, ರಾಮೇಶ್ವರ ಕ್ಷೇತ್ರವೆಂದು ಪ್ರಸಿದ್ಧಿಯಾಯಿತು.

ಮುಂದೆ ರಾಮ ಎಲ್ಲಾ ಪುಣ್ಯಕ್ಷೇತ್ರಗಳಲ್ಲಿಯೂ ಲಿಂಗಸ್ಥಾಪನೆ ಮಾಡುತ್ತ ಹೊರಟ. ಆಗ ರಾವಣ ಬ್ರಹ್ಮ ಪಿಶಾಚಿ ರೂಪ ಧರಿಸಿ,



ಕ್ಷೇಮಲಿಂಗೇಶ್ವರ – ನರೋಣಾ


ರಾಮ–ಲಕ್ಷ್ಮಣ–ಸೀತೆಯರ ಕನಸಿನಲ್ಲಿ ಬಂದು ಕಾಡತೊಡಗಿದ. ಈ ಪೀಡನೆಯಿಂದ ಅವರು ಸುಖನಿದ್ರೆಯನ್ನು ಕಳೆದುಕೊಂಡರು. ಎಲ್ಲ ಪುಣ್ಯಕ್ಷೇತ್ರ ಅಲೆದರೂ ರಾವಣನ ವಧೆಯಿಂದ ಉಂಟಾದ ದೋಷ ನಿವಾರಣೆಯಾಗಲೇ ಇಲ್ಲ. ಆಗ ಪರಶಿವ ರಾಮಚಂದ್ರನ ಕನಸಿನಲ್ಲಿ ಬಂದು ಕ್ಷೇತ್ರಪಾಲ ತೀರ್ಥಕ್ಕೆ ಹೋಗಿ ದರ್ಶನ ಪಡೆಯುವುದರಿಂದ ನಿನ್ನ ಬ್ರಹ್ಮಹತ್ಯೆಯು ಹೋಗುವುದೆಂದು ಹೇಳಿದ. ಅದರಂತೆ ಸೀತಾ ಲಕ್ಷ್ಮಣರೊಡಗೂಡಿ ರಾಮ ಕ್ಷೇತ್ರಪಾಳಕ್ಕೆ ಬಂದು ಸ್ನಾನ–ಪೂಜಾದಿಗಳನ್ನು ಮಾಡಿ ದರ್ಶನಲಾಭ ಪಡೆದರು. ಕೂಡಲೇ ಮನಸ್ಸಿಗೆ ನೆಮ್ಮದಿ, ಹೃದಯಕ್ಕೆ ಆನಂದ ಉಂಟಾಯಿತು. ಆ ದಿನ ರಾತ್ರಿ ಪ್ರಸಿದ್ಧಿಯಾಯಿತು. ಕಾಲಾಂತರದಲ್ಲಿ ಈ ಕ್ಷೇತ್ರಕ್ಕೆ ಕ್ಷೇತ್ರಪಾಲವೆಂಬ ಹೆಸರು ಇತ್ತು. (ಇಂದಿಗೂ ದೇವಸ್ಥಾನದ ಸುತ್ತ ಕ್ಷೇತ್ರಪಾಳ ಎಂದೇ ಕರೆಯುವ ರೂಢಿಯಿದೆ). ಇದಕ್ಕೊಂದು ಐತಿಹ್ಯ ಹೀಗಿದೆ:

ಅಗಸ್ತ್ಯ ಋಷಿಗಳು ಕಾಶಿಗೆ ಹೋಗಿ ವಿಶ್ವೇಶ್ವರನನ್ನು ಪೂಜಿಸಿ ಅಲ್ಲಿಯೇ ನೆಲೆನಿಂತಿದ್ದರು. ಅದೇ ಸಮಯದಲ್ಲಿ ಎಲ್ಲ ಮಹರ್ಷಿಗಳು ಶಿವನ ಸಾಕ್ಷಾತ್ಕಾರಕ್ಕಾಗಿ ಬೇಡಿಕೊಂಡರು. ಆಗ ಶಿವನು ಅಗಸ್ತ್ಯರಿಗೆ ದಕ್ಷಿಣದಲ್ಲಿರುವ ಕ್ಷೇತ್ರಪಾಳ ಸ್ಥಳವು ದೇವತಾ ನಿವಾಸವಾಗಿದ್ದು, ಅನೇಕ ತೀರ್ಥಗಳ ಉತ್ತಮ ತಾಣವಾಗಿದೆ. ಅಲ್ಲಿ ಹೋಗಿ ಇರಿ ಎಂದು ಅಪ್ಪಣೆ ಕೊಟ್ಟ, ಅದರಂತೆ ಅಗಸ್ತ್ಯರು ಇಲ್ಲಿಗೆ ಬಂದು ನೆಲೆನಿಂತರು. ಇಂದಿಗೂ ಕ್ಷೇತ್ರದಲ್ಲಿ ಅಗಸ್ತ್ಯ ತೀರ್ಥವೆಂಬ ತೀರ್ಥ ಗುಂಡವಿದೆ. ಸ್ವತಃ ಅಗಸ್ತ್ಯರೇ ರಾಮನಿಗೆ ಈ ಕ್ಷೇತ್ರಮಹಿಮೆಯನ್ನು ಸಾರಿದರೆಂದು ಪ್ರತೀತಿ ಹಬ್ಬಿರುತ್ತದೆ.

(ಸಿ.ಜೆ.ಎಂ.)

ನಸೋಕ ದಾಸ: ನಾಟಿವೈದ್ಯರು. ಇವರು ಬೀದರನಲ್ಲಿ ಐವತ್ತು ವರ್ಷಗಳಿಂದ ನೆಲೆಸಿದ್ದಾರೆ. ಮೂಲತಃ ಇವರು ಮಹಾರಾಷ್ಟ್ರದ ನಾಗಪುರದವರು. ರಾಜಗೊಂಡ ಜನಾಂಗಕ್ಕೆ ಸೇರಿದವರು. ನಾಟಿವೈದ್ಯ ನಸೋಕದಾಸರ ಮಾವ ಬುನ್ನೂಸಿಂಗ ಠೇಕೆದಾರ ಕೂಡ ಪ್ರಸಿದ್ಧ ನಾಟೀ ವೈದ್ಯರಾಗಿದ್ದರು. ಮೊದಲು ಅವರು ತಮ್ಮ ವೈದ್ಯ ಪದ್ಧತಿಯ ವಿಷಯಗಳನ್ನು ಗುಟ್ಟಾಗಿಡುತ್ತಿದ್ದರು. ಈಗಲೂ ಕೂಡ ಅವರು ಅದೇ ಪ್ರವೃತ್ತಿಯನ್ನು ಮುಂದುವರಿಸಿದ್ದರೂ ಮೊದಲಿನಷ್ಟು ಗುಟ್ಟಾಗಿ ಇಡುವುದಿಲ್ಲ. ಹೊರಗಿನವರು ಬಂದು ಏನೇ ಕೇಳಿದರೂ–ಹಿರಿಯರ ಅಪ್ಪಣೆಯಿಲ್ಲದೆ ಏನನ್ನೂ ಹೇಳುವದಿಲ್ಲ, ತಮ್ಮ ಜನಾಂಗದವರನ್ನು ಬಿಟ್ಟು ಬೇರೆ ಯಾರಿಗೂ ವೈದ್ಯಪದ್ಧತಿಯ ರೀತಿಯನ್ನು ಹೇಳುವದಿಲ್ಲ.

ನಸೋಕ ದಾಸರೇ ರಾಜಗೊಂಡ ಜನಾಂಗದ ಮುಖ್ಯಸ್ಥ. ಅವರ ಮಾರ್ಗದರ್ಶನದಲ್ಲಿಯೇ ರಾಜಗೊಂಡ ಕಾಲನಿಯಲ್ಲಿರುವ 127 ಕುಟುಂಬಗಳು ನಡೆಯುತ್ತವೆ. ಇವರು ಅಲೆಮಾರಿ ಜನಾಂಗದವರು. ಇಲ್ಲಿನ ಹವಾಗುಣ, ನೆಲ ಅವರನ್ನು ಆಕರ್ಷಿಸಿದ್ದಕ್ಕಾಗಿ ಇಲ್ಲಿ ನೆಲೆಸಿರುವುದಾಗಿ ಹೇಳುತ್ತಾರೆ. ಸುಮಾರು 400 ಜನ ನಸೋಕದಾಸರ ವೈದ್ಯಪದ್ಧತಿಯನ್ನು ಮುಂದುವರೆಸಿದ್ದಾರೆ. ಜನರೇ ಅವರ ಹತ್ತಿರ ಚಿಕಿತ್ಸೆಗಾಗಿ ಹೋಗುತ್ತಾರೆ. ರೋಗಿಯನ್ನು ಕರೆತರಲು ಸಾಧ್ಯವಾಗದಿದ್ದ ಪಕ್ಷದಲ್ಲಿ ರೋಗಿಯ ಮನೆಗೆ ಹೋಗಿ ಚಿಕಿತ್ಸೆ ಮಾಡುತ್ತಾರೆ.



ನಾಟೀ ವೈದ್ಯ ನಸೋಕದಾಸರು

ಲಕ್ವ, ದಮ್ಮು, ನೆಗಡಿ, ಅಲರ್ಜಿ, ಕೀಲು ನೋವು, ಹಾವು–ಚೇಳು ಕಡಿದವರಿಗೆ ಚಿಕಿತ್ಸೆ ನೀಡುತ್ತಾರೆ. ಇವರು ವಿಶೇಷವಾಗಿ ಚಿಕಿತ್ಸೆ ನೀಡುವದು ಕಾಮಣಿ ರೋಗಕ್ಕೆ ಅವರು ಉಚಿತ ಚಿಕಿತ್ಸೆ ನೀಡುತ್ತಾರೆ. ಚಿಕಿತ್ಸೆ ನೀಡಿದ ಆನಂತರ ಹಣಕೇಳುವುದಿಲ್ಲ. ಚಿಕಿತ್ಸೆ ಪಡೆದವರು ತಾವಾಗಿಯೇ ಏನಾದರೂ ಕೊಟ್ಟರೆ ಪಡೆಯುತ್ತಾರೆ. ಮಕ್ಕಳಿಲ್ಲದ ಸ್ತ್ರೀ–ಪುರುಷರಿಗೆ ಔಷಧಿ ಕೊಡುತ್ತಾರೆ. ಮಕ್ಕಳಾದ ಆನಂತರ ಅವರು ಬಂದು ಕಾಣಿಕೆ ಕೊಡುತ್ತಾರೆ. ಸಂತಾನ ನಿಯಂತ್ರಣ ಚಿಕಿತ್ಸೆಯೂ ಇವರಲ್ಲಿ ಉಂಟು. ಆದರೆ ಜನ ಈಗೀಗ ಸಂತಾನ ನಿಯಂತ್ರಣ ಶಸ್ತ್ರ ಚಿಕಿತ್ಸೆಗೆ ಒಳಗಾಗುತ್ತಿದ್ದಾರೆ. ಏಕೆಂದರೆ ಆ ಔಷಧಿ ಇಲ್ಲಿ ಸಿಗುವದಿಲ್ಲ. ಹೋಗಿ ಔಷಧಿ ತರುವಷ್ಟರಲ್ಲಿ ಸಮಯ ಬಹಳ ಬೇಕಾಗುವದರಿಂದ ಶಸ್ತ್ರಚಿಕಿತ್ಸೆಗೆ ಮನಸ್ಸು ಮಾಡುತ್ತಿದ್ದಾರೆ.

ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡುಗಳಲ್ಲಿ ತಮ್ಮ ಜನಾಂಗದವರು ವಾಸಿಸಿರುವುದಾಗಿ ನಸೋಕದಾಸರು ಹೇಳುತ್ತಾರೆ ಅವರು ಹೆಚ್ಚಾಗಿ ರೈಲು ನಿಲ್ದಾಣಗಳ ಹತ್ತಿರದಲ್ಲಿಯೇ ತಮ್ಮ ನಿವಾಸಗಳನ್ನು ಕಟ್ಟಿಕೊಳ್ಳುತ್ತಾರೆ. ಅವು ತಾತ್ಕಾಲಿಕವಾಗಿರುವುದರಿಂದ ಪ್ರಕೃತಿ ವಿಕೋಪಗಳಾದರೆ ಆಶ್ರಯ ಪಡೆಯಲು ರೈಲು ನಿಲ್ದಾಣ ಸುರಕ್ಷಿತ ಸ್ಥಳ ಎನ್ನುವದು ಅವರ ಭಾವನೆ.

ಸಾಮಾಜಿಕ ವ್ಯಾಜ್ಯಗಳಿಗಾಗಿ ಎಂದೂ ಅವರು ನ್ಯಾಯಾಲಯಗಳಿಗೆ ಹೋಗುವುದಿಲ್ಲ. ನಸೋಕದಾಸರೇ ನ್ಯಾಯವಾದಿಗಳು. ಜತೆಯಲ್ಲಿ ಪಂಚರೂ ಇರುತ್ತಾರೆ. ಬೇರೆ ಜಾತಿಯವರೊಂದಿಗೆ ವಿವಾಹ ನಿಷಿದ್ಧ. ಇಲ್ಲಿಯವರೆಗೆ ಒಂದೂ ಅಂತರ್ಜಾತಿಯ ವಿವಾಹಗಳಾದ ಉದಾಹರಣೆಯಿಲ್ಲ, ನಸೋಕದಾಸರ ಭಾಷೆ ಗೋಂಡ, ಹಿಂದಿ ಅರ್ಥಮಾಡಿ ಕೊಳ್ಳುತ್ತಾರೆ. ಸೋದರ ಮಾವನನ್ನು ಹಾಗೂ ಸೋದರ ಸೊಸೆಯನ್ನು ಮದುವೆಯಾಗುವ ಪದ್ಧತಿ ಈ ಜನರಲ್ಲಿದೆ.

ಬೀದರನಲ್ಲಿ ನಸೋಕದಾಸರ ನೇತೃತ್ವದಲ್ಲಿ ವಾಸಿಸಿದ ಜನಕೂಡ ಗೋಂಡಿ ಭಾಷೆ ಮಾತನಾಡುತ್ತಾರೆ. ಆ ಭಾಷೆಗೆ ಲಿಪಿಯಿಲ್ಲ, ಹಿಂದಿ ಭಾಷೆಯ ಲಿಪಿಯನ್ನೇ ಅವರು ಬಳಸುತ್ತಾರೆ. ಮಹಾಋಷಿ ಬರೆದ ನಿಘಂಟು ಪುಸ್ತಕವೇ ಅವರ ವೃತ್ತಿಗೆ ಮೂಲ. ಅದನ್ನನುಸರಿಸಿ ಅವರು ವೈದ್ಯವೃತ್ತಿ ಮಾಡುತ್ತಾರೆ, ಈ ವೃತ್ತಿ ವಂಶಪಾರಂಪರ್ಯ.

ಅಶ್ವಗಂಧಾ, ಸತಾರು, ಗಳ್ಕರ್ ಎಂಬ ಔಷಧಿಗಳನ್ನು ಸಾಮಾನ್ಯವಾಗಿ ಬಳಸುತ್ತಾರೆ ಮಾವಿನಗಿಡದ ಬೊಡ್ಡೆ ಹಾಗೂ ಬಬಲಿಗಿಡದ ಬೊಡ್ಡೆಯ ತಿರುಳನ್ನು ತೆಗೆದು 24 ಗಂಟೆ ನೀರಿನಲ್ಲಿ ನೆನೆಸಿ ರಸತೆಗೆದು ಸೇವಿಸಿದರೆ ಪಿತ್ತ ಕೋಶದ ಮೇಲಾದ ಗಂಟುಗಳು ಕರಗುತ್ತವೆ. ಇದು ಅವರ ವೈದ್ಯಪದ್ಧತಿಯ ಒಂದು ಸ್ವರೂಪ.

ಚಿಕಿತ್ಸೆ ನೀಡಲು ಇವರು ಯಾವಾಗಲೂ ಅಲೆದಾಡುತ್ತ ಇರುತ್ತಾರೆ. ಚಿಕಿತ್ಸೆ ನೀಡಲು ಎಲ್ಲಿಯೇ ಹೋಗಿರಲಿ ಹೋಳಿ, ದಸರ, ದೀಪಾವಳಿಯ ಸಮಯದಲ್ಲಿ ತಿರುಗಿ ಬಂದು ಕುಟುಂಬದವರೊಂದಿಗೆ ಹಬ್ಬ ಆಚರಿಸುತ್ತಾರೆ. ಔಷಧಿಗಳನ್ನು ಅವರು ಹೈದ್ರಾಬಾದ್, ಮಂಗಳೂರು, ನಾಗಪೂರಗಳಿಂದ ತರುತ್ತಾರೆ. ಇತ್ತೀಚೆಗೆ ಇಲ್ಲಿಯೇ ಕೆಲವು ರೀತಿಯ ಔಷಧೀಯ ಗಿಡಗಳನ್ನು ತಂದು ಬೆಳೆಯುತ್ತಿದ್ದಾರೆ.

ಹೆಚ್ಚು ಪ್ರಸಿದ್ಧಿ ಬಯಸದ, ಪ್ರತಿಫಲಾಪೇಕ್ಷೆ ನಿರೀಕ್ಷಿಸದ ವೃತ್ತಿ ಇವರದು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 1998ರಲ್ಲಿ ನಸೋಕದಾಸರಿಗೆ ಜಾನಪದ ಪ್ರಶಸ್ತಿಯನ್ನು ಇತ್ತು ಗೌರವಿಸಿದೆ. ಕಾಮಣ್ಣಾ ಮೈತ್ರಿಯವರು ಈ ನಾಟಿವೈದ್ಯ ಶಾಸ್ತ್ರವನ್ನು ಕುರಿತು ಪಿಎಚ್.ಡಿ ಮಾಡಿದ್ದಾರೆ.

(ಬಿ.ಕೆ.)

ನಾ

ನಾಗಮ್ಮ: ಸೋಬಾನೆ ಹಾಗೂ ಗೀಗೀ ಹಾಡುಗಳ ಗಾಯಕಿ. ಈಕೆ ಅವರಿವರ ಮನೆ ಕೆಲಸ ಮಾಡಿಕೊಂಡೇ ಜೀವನ ಸಾಗಿಸಬೇಕಾಗಿದೆ. ಕಮಲಮ್ಮ, ನೀಲಮ್ಮ, ಚಂದ್ರಮ್ಮ, ಮಹಾದೇವಿ, ಸರಸ್ವತಿ, ವಿದ್ಯಾವತಿ ಮುಂತಾದವರಿಗೆ ಸೋಬಾನೆ ಪದಗಳನ್ನು ಕಲಿಸಿದ ಈಕೆಯ ಕಂಠವಿಲ್ಲದೆ ಆಳಂದಿ ಗ್ರಾಮದಲ್ಲಿ ಯಾವುದೇ ಮಂಗಳ ಕಾರ್ಯಗಳು ನಡೆಯುವುದಿಲ್ಲ. ನಾಗಮ್ಮ ಹಾಡಲು ಆರಂಭಿಸಿದರೆ ಸರಸ್ವತಿಯೇ ಅವಳ ನಾಲಗೆಯ ಮೇಲೆ ನರ್ತಿಸುತ್ತಾಳೆ. ಅವಳ ಕಂಠಶ್ರೀ ಎಂಥವರನ್ನೂ ಮೂಕಗೊಳಿಸುತ್ತದೆ. ಹಳ್ಳಿಯ ಮೂಲೆಯಲ್ಲಿದ್ದುಕೊಂಡು ಅಪಾರ ವೈವಿಧ್ಯದ ಜನಪದ ಗೀತ ಸಾಹಿತ್ಯದ ಗಣಿಯೆನಿಸಿ ಎಲ್ಲರ ಮೆಚ್ಚುಗೆಯನ್ನೂ ಪಡೆದ ಭಾಗ್ಯವಂತೆ ಇವರು. ನಮ್ಮ ಜನಪದರಲ್ಲಿ ಅಕ್ಷರ ಸಂಪತ್ತಿನಿಂದ ದೂರವಾದವರು. ಆದರೂ ಅವರಿಗೆ ತಿಳಿವಳಿಕೆ, ಜ್ಞಾನ ಎಲ್ಲವು ಇತ್ತು. ಅವರು ಕುರಿತೋದದೆಯೂ ಕಾವ್ಯ ಪ್ರಯೋಗ ಪರಿಣಿತರು. ಅಂಥವರಲ್ಲಿ ಒಬ್ಬರೆನ್ನಬಹುದು. ಅಕ್ಷರದ ಗಂಧಗಾಳಿಯಿಲ್ಲದೆ ಸಾಕಷ್ಟು ಹಾಡುಗಳನ್ನು ತಮ್ಮ ನೆನಪಿನಂಗಳದಿಂದ ಹಾಡಬಲ್ಲ ಶಕ್ತಿ ಹೊಂದಿದ್ದಾಳೆ.


(ಜಿ.ಆರ್.ಟಿ.)

ನಾಗಾಯಿ ವಿಶ್ವವಿದ್ಯಾಲಯ: ಪ್ರಾಚೀನ ಶೈಕ್ಷಣಿಕ ಕೇಂದ್ರ ಅಗ್ರಹಾರ. ಶೈಕ್ಷಣಿಕ ಕ್ಷೇತ್ರದ 'ದಕ್ಷಿಣದ ತಕ್ಷಶಿಲೆ' ಎಂದೇ ಖ್ಯಾತಿ ಪಡೆದಿರುವ ಕಲಬುರ್ಗಿ ಜಿಲ್ಲೆಯ ನಾಗಾಯಿ, ಮಳಖೇಡದ ರಾಷ್ಟ್ರಕೂಟರ ಮೂರನೆಯ ಕೃಷ್ಣನ ಆಳ್ವಿಕೆಯಲ್ಲಿ (ಕ್ರಿ.ಶ. 929–970) ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಈ ಶಿಕ್ಷಣ ಕೇಂದ್ರ ಎಷ್ಟು ಪ್ರಸಿದ್ಧವಾಗಿತ್ತೆಂದರೆ, 'ನಾಗಾಯಿ ಘಟಿಕಾಸ್ಥಳ' ವೆಂದು ಒಂದು ವಿಶ್ವವಿದ್ಯಾಲಯದ ಸ್ಥಾನಮಾನ ಪಡೆದಿತ್ತು.

ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ಪಟ್ಟಣದಿಂದ ಐದು ಕಿ.ಮೀ. ದೂರದಲ್ಲಿರುವ ನಾಗಾಯಿ, ಇಂದಿನ ಸರ್ಕಾರಿ ದಾಖಲೆಗಳ ಪ್ರಕಾರ ಬೇಚಿರಾಗ (ದೀಪವಿಲ್ಲದ) ಗ್ರಾಮ. ಅಂದರೆ, ಜನವಸತಿ ಇಲ್ಲದ ಗ್ರಾಮ. ಎಲ್ಲಿ ನೋಡಿದರಲ್ಲಿ ಹಾಳು ಸು–ರಿಯುವ ಐತಿಹಾಸಿಕ ಮಂಟಪಗಳು, ಅವುಗಳ ಸುತ್ತ ಬೆಳೆದಿರುವ ಮುಳ್ಳು ಗಿಡಗಳ ಮಧ್ಯೆ ಇತಿಹಾಸದ ಗತ ವೈಭವವನ್ನು ನೆನಪಿಸಿಕೊಡುತ್ತವೆ.

ನಾಗಾಯಿ ಪ್ರದೇಶ ರಾಷ್ಟ್ರಕೂಟರ ಆಳ್ವಿಕೆಯ ವ್ಯಾಪ್ತಿಯಲ್ಲಿದ್ದರೂ, ಶೈಕ್ಷಣಿಕ ಅಗ್ರಹಾರವಾಗಿ ಬೆಳೆದಿರುವ ಈ ಕೇಂದ್ರಕ್ಕೆ ಕ್ರಿ.ಶ. 992ರಲ್ಲಿ ಹೈಹಯ ವಂಶದ ಶಿರಸರಸನು ಜ್ಞಾನದಾನ ಅಖಂಡವಾಗಿ ನಡೆಯಬೇಕೆಂದು ನಾಗಾಯಿ ಅಗ್ರಹಾರಕ್ಕೆ ಭೂಮಿ ದಾನ ನೀಡಿರುವ ಶಾಸನಗಳು ದೊರೆಯುತ್ತವೆ. 400 ಮಹಾರಾಜರುಗಳು ಯಾವುದೇ ಭೇದವಿಲ್ಲದೇ ಮೇಲುಸ್ತುವಾರಿ ವಹಿಸಿ, ವಿದ್ಯಾದಾನಕ್ಕಾಗಿ ಇದರ ಎಲ್ಲ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದರು.

ಚಾಲುಕ್ಯರ ಮೊದಲನೆಯ ಸೋಮೇಶ್ವರನು ಕಾಳಗಿಯಲ್ಲಿ ಬೀಡುಬಿಟ್ಟಾಗ, ದಂಡನಾಯಕನಾದ ಕಾಳಿದಾಸಯ್ಯನು, ನಾಗಾಯಿ ವಿಶ್ವವಿಖ್ಯಾತ ವಿದ್ಯಾ ಕೇಂದ್ರವಾಗಲಿ ಎಂದು ಭೂಮಿದಾನ ಮಾಡಿದ. ಆ ಕಾಲದಲ್ಲಿ ಕಾಳಿದಾಸಯ್ಯನ ಮಗ ಮಾಧವರಸನು, ನಾಗಾಯಿಯಲ್ಲಿ ಅರವತ್ತು ಕಂಬಗಳ ಭವ್ಯವಾದ



ನಾಗಾವಿ ವಿಶ್ವವಿದ್ಯಾಲಯ

ಮಧುಸೂದನ ದೇವಾಲಯವನ್ನು ಕಟ್ಟಿಸಿದ.

ಈ ದೇವಾಲಯ ಇಂದು ಭಗ್ನಾವಸ್ಥೆಯಲ್ಲಿದ್ದರೂ, ಅದರ ಮೊದಲಿನ ಭವ್ಯತೆಯನ್ನು ಈ ದೇವಸ್ಥಾನದ ಶಿಲ್ಪಕಲಾ ವೈಭವದಿಂದ ಊಹಿಸಬಹುದಾಗಿದೆ. ದೇವಾಲಯಕ್ಕೆ ಚಿನ್ನದ ಕಳಸವಿದ್ದು, ಆಕಾಶದೊಂದಿಗೆ ಸ್ಪರ್ಧಿಸುವುದೋ ಎಂಬಂತಿದ್ದಿತು. ದೇವಾಲಯದ ಗೋಪುರ ಮೂರು ಅಂತಸ್ತಿನದಾಗಿದ್ದು, ದೇವೇಂದ್ರನ ವಿಮಾನದಂತೆ ಕಾಣುತ್ತಿತ್ತು. ಅದನ್ನು ಶಿಲ್ಪಕಲಾಕೃತಿಗಳಿಂದ ಮುಚ್ಚಿ ಬಿಟ್ಟಿರುವವೋ ಎಂಬಂತೆ ಭಾಸವಾಗುತ್ತಿತ್ತು ಎಂದು ವರ್ಣಿಸಿರುವ ಶಾಸನಗಳಿವೆ.

ದಂಡನಾಯಕ ಕಾಳಿದಾಸಯ್ಯನು ನಾಗಾಯಿ ಘಟಿಕಾ ಸ್ಥಾನದಲ್ಲಿ ಲಕ್ಷ್ಮೀಶ್ವರ ದೇವಾಲಯ ಕಟ್ಟಿಸಿ, ಆಲೂರು ಮತ್ತು ರಾವೂರುಗಳಲ್ಲಿಯ ಭೂಮಿಯನ್ನು ಈ ದೇವಸ್ಥಾನಕ್ಕೆ ಉಂಬಳಿಯಾಗಿ ನೀಡಿದ್ದ. ಈ ದೇವಾಲಯಕ್ಕೆ ಹೊಂದಿಕೊಂಡು ರಾಮೇಶ್ವರ ಹಾಗೂ ಸಿದ್ದೇಶ್ವರ ದೇವಾಲಯಗಳಿದ್ದುದನ್ನು ಶಿಲಾಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಈ ರಾವೂರು, ಆಲೂರು ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನಲ್ಲೇ ಇವೆ.

ಮಧುಸೂದನ ದೇವಾಲಯಕ್ಕೆ ಹೊಂದಿಕೊಂಡಿರುವ ಮಠದಲ್ಲಿ ವೇದ ಪಾರಂಗತರಾದ ಇನ್ನೂರು ವಿದ್ಯಾರ್ಥಿಗಳ ಉನ್ನತ ಮಟ್ಟದ ವಿದ್ಯಾಭ್ಯಾಸ ನಡೆಯುತ್ತಿತ್ತು. ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳ ಅಧ್ಯಯನಕ್ಕೆ ನಾಗಾಯಿ ವಿಶ್ವದಲ್ಲೇ ಪ್ರಸಿದ್ಧವಾಗಿದ್ದು, ವೇದಾಧ್ಯಯನ ಪಾಠ ಹೇಳಲು ವೇದ ಪಾರಂಗತರಾದ ಮೂವರು ಅಧ್ಯಾಪಕರಿದ್ದು, ಪ್ರತಿಯೊಬ್ಬರಿಗೂ 35 ಮತ್ತರ (150 ಎಕರೆ) ಭೂಮಿಯನ್ನು ಅಧ್ಯಾಪಕರ ಉದರ ನಿರ್ವಹಣೆಗೆ ನೀಡಿರುವದು ತಿಳಿದು ಬರುತ್ತದೆ.

ವೇದಾಧ್ಯಯನ ಘಟಿಕಾಸ್ಥಳ: ಭಟ್ಟ, ನ್ಯಾಯ, ಪ್ರಭಾಕರ ವಿಷಯಗಳ ಸಾಂಗೋಪಾಂಗ ಶಿಕ್ಷಣವೇತ್ತ ಪ್ರಸಿದ್ಧ ಅಧ್ಯಾಪಕರ ಮಾರ್ಗದರ್ಶನದಲ್ಲಿ ಅಧ್ಯಯನ ನಡೆಯುತ್ತಿತ್ತು. ಅವರ ಯೋಗಕ್ಷೇಮಕ್ಕೆಂದು ಅನುಕ್ರಮವಾಗಿ ಭಟ್ಟರಿಗೆ 35 ಮತ್ತರ, ನ್ಯಾಯಕ್ಕೆ 20 ಮತ್ತರ ಮತ್ತು ಪ್ರಭಾಕರರಿಗೆ 45 ಮತ್ತರ ಭೂಮಿಯನ್ನು ಕೊಡಲಾಗಿತ್ತು. ಸಿದ್ದೇಶ್ವರ ಮಠದಲ್ಲಿ ಯೋಗಿಗಳು, ಸನ್ಯಾಸಿಗಳು, ಏಕದಂಡಿ, ತ್ರಿದಂಡಿ, ಹಂಸ-ಪರಮಹಂಸರು ಮುಂತಾದವರು ಬರುತ್ತ ಹೋಗುತ್ತಲಿದ್ದರು. ಅವರ ಯೋಗಕ್ಷೇಮಕ್ಕಾಗಿ ಪ್ರತ್ಯೇಕ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಆ ಹೊಣೆಯನ್ನು ಮಾಹಾರಾಜರು ಹೊತ್ತಿದ್ದರು. ಪಾತಂಜಲ (ಯೋಗ), ಯೋಗವಾಶಿಷ್ಠಗಳ ಮೇಲೆ ಪ್ರಭುತ್ವ ಸಂಪಾದಿಸಿದ ಯೋಗಿಗಳು ಆ ಸ್ಥಳದಲ್ಲಿ ಇರುತ್ತಿದ್ದರು.

ರಾಮೇಶ್ವರ ದೇವಾಲಯದಲ್ಲಿ ಪುರಾಣ ನಡೆಯುತ್ತಿದ್ದು, ಪುರಾಣಿಕರಿಗೆ 40 ಮತ್ತರ ಭೂಮಿ ಕೊಡಲಾಗುತ್ತಿತ್ತು. ಮಧುಕೇಶ್ವರ, ರಾಮೇಶ್ವರ, ಲಕ್ಷ್ಮೇಶ್ವರ ಮತ್ತು ಸಿದ್ದೇಶ್ವರ ದೇವಾಲಯಗಳಲ್ಲಿ ಆರು ಜನ ಚಾಮರ ಬೀಸುವವರಿರುತ್ತಿದ್ದರು. ಅವರಲ್ಲಿ ಪ್ರತಿಯೊಬ್ಬರಿಗೂ ಹತ್ತು ಮತ್ತರ ಭೂಮಿ ಕೊಡಮಾಡಲಾಗಿತ್ತು.

ನಾಗಾಯಿ ವಿಶ್ವವಿದ್ಯಾಲಯದ ಘಟಿಕಾಸ್ಥಾನದಲ್ಲಿ ಕಟ್ಟಡಗಳಿದ್ದುವೆಂಬುದಕ್ಕೆ ಇಂದಿನ ಅವಶೇಷಗಳೇ ಸಾಕ್ಷಿ. ನಾಗಾಯಿಯಲ್ಲಿ ಉದ್ವಂಸ್ತವಾದ ಕಟ್ಟಡಗಳ ಕಡೆಗೆ ದೃಷ್ಟಿ ಹಾಯಿಸಿದರೆ, ವಿಜಯ ನಗರದದಲ್ಲಿನ ಹಾಳು ಹಂಪೆ ನೋಡಿದಂತೆ ಮನಸ್ಸು ಭಾರವಾಗುತ್ತದೆ.

ವಸತಿ ಸಹಿತ ಪಾಠ-ಪ್ರವಚನ: ನಾಗಾಯಿ ಘಟಿಕಾ ಸ್ಥಾನದಲ್ಲಿ ಕಟ್ಟಡಗಳು ಸಾಕಷ್ಟಿದ್ದುವು ಎಂಬುದಕ್ಕೆ ಅಪಾರ ಸಂಖ್ಯೆಯಲ್ಲಿನ ಅವಶೇಷಗಳು ದೊರೆಯುತ್ತವೆ. ಎಷ್ಟು ಕಟ್ಟಡಗಳಿದ್ದುವು ವಿದ್ಯಾರ್ಥಿಗಳು ಎಷ್ಟಿದ್ದರು ಎಂಬದು ನಿಖರವಾಗಿ ಗೊತ್ತಾಗುವುದಿಲ್ಲ. ಆದರೆ ವಿದ್ಯಾರ್ಥಿಗಳಿಗೆ ವಸತಿ ಗೃಹಗಳು ಮತ್ತು ಎಲ್ಲ ಸೌಲತ್ತುಗಳಿದ್ದುವು. ಸಾಲೊಟಗಿಯಲ್ಲಿ ಮಾತ್ರ ಇನ್ನೂರು ವಿದ್ಯಾರ್ಥಿಗಳಿಗಾಗಿ 27 ವಸತಿಗೃಹಗಳಿದ್ದವೆಂಬುದು ತಿಳಿದು ಬರುತ್ತದೆ. ನಾಗಾಯಿಯಲ್ಲಿ ಇದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಸತಿಗೃಹಗಳಿದ್ದವೆಂಬುದು ಅವಶೇಷಗಳಿಂದ ತಿಳಿದು ಬರುತ್ತದೆ. ಹಾಳು ಬಿದ್ದಿರುವ ವಿಶಾಲವಾದ ಕೋಣೆಗಳು ಭೋಜನ ಶಾಲೆಗಳಾಗಿರಬಹುದು. ಅಲ್ಲಿ ಒಂದು ಬಾರಿಗೆ ಕನಿಷ್ಠ 200 ಜನ ವಿದ್ಯಾರ್ಥಿಗಳು ಕುಳಿತು ಊಟ ಮಾಡಬಹುದಾದಷ್ಟು ವಿಶಾಲ ಅವಶೇಷಗಳು ಕಾಣುತ್ತವೆ.

ನಾಗಾಯಿಯಲ್ಲಿ ಎರಡು ಬಾವಿಗಳಿವೆ. ಒಂದು ರಾಮತೀರ್ಥ ಕುಂಡ. ರಾಷ್ಟ್ರಕೂಟ, ಚಾಲುಕ್ಯ ಹಾಗೂ ಯಾದವರ ಕಾಲದಲ್ಲಿ ಅವು ಬಳಕೆಯಲ್ಲಿದ್ದಿತು. ಅದರ ನೀರು ಇಂದಿಗೂ ಸಿಹಿಯಾಗಿದೆ. ಎರಡನೆಯದು ಬಾವಿಯ ನೀರನ್ನು ಬಳಕೆಗಾಗಿ ಕಾಲುವೆಗಳ ಮೂಲಕ ಘಟಿಕಾ ಸ್ಥಾನಕ್ಕೆ ಬರುವಂತೆ ಕಾಲುವೆ ಮಾಡಿದ್ದು, ವಿದ್ಯಾರ್ಥಿಗಳ ಕೋಣೆಗಳ ಬಳಿಯೇ ಸ್ನಾನಕ್ಕೆ ಮತ್ತು ಬಟ್ಟೆ ಸ್ವಚ್ಛಗೊಳಿಸಲು ಅನುಕೂಲವಾಗುವಂತೆ ನಿರ್ಮಿಸಲಾಗಿದೆ. ಈ ಕಾಲುವೆಯಲ್ಲಿ ಸದಾಕಾಲ ನೀರು ಹರಿದು,

ಮುಂದೆ ಹೊಲಗಳಿಗೆ ಹೋಗುತ್ತಿತ್ತು.

ಅದರಾಚೆ ತೋಟವಿತ್ತು. ಇಂದಿಗೂ ಆ ಭಾಗದಲ್ಲಿ ಕಾಲುವೆಗಳಿದ್ದು, ಆ ಕಾಲುವೆಯ ಮೂಲಕ ನಿರಂತರವಾಗಿ ನೀರು ಹರಿಯುತ್ತದೆ. ಹಿಂದೆ ತೋಟವಿದ್ದ ಜಾಗದಲ್ಲಿ ಕೇದಗಿಯ ಬನವಿದೆ. ಹಿಂದಿನ ತೋಟದ ಹೂವುಗಳನ್ನು ದೇವಾಲಯದ ಉಪಯೋಗಕ್ಕಾಗಿ ಬಳಸುತ್ತಿದ್ದಿರಬೇಕು.

400 ಮಹಾರಾಜರ ನೇತೃತ್ವ: ಈ ಘಟಿಕಾ ಸ್ಥಾನ 400 ಮಹಾರಾಜರ ನೇತೃತ್ವದಲ್ಲಿ ನಡೆಯುತ್ತಿತ್ತು. ಇದರ ಮೇಲಿಂದ ಅಲ್ಲಿ ಸುಮಾರು 400 ಬ್ರಾಹ್ಮಣರ ಮನೆಗಳಿದ್ದಿರಬೇಕು. ಕಾಳಿದಾಸಯ್ಯನ ತರುವಾಯ ಆತನ ಮಗನೂ ಚಾಲುಕ್ಯರ ದಂಡನಾಯಕನಾಗಿದ್ದರಿಂದ ಹಾಗೂ ಅವರು ನಾಗಾಯಿಯಲ್ಲಿಯೇ ವಾಸಿಸುತ್ತಿದ್ದುದರಿಂದ ಅವರ ರಕ್ಷಣೆಗಾ-ಗಿಯೂ, ಮಧುಸೂದನ, ರಾಮೇಶ್ವರ, ಸಿದ್ದೇಶ್ವರ ಮತ್ತು ಲಕ್ಷ್ಮಣೇಶ್ವರ ದೇವಾಲಯಗಳಲ್ಲಿಯ ಸಂಪತ್ತಿನ ರಕ್ಷಣೆಗಾಗಿಯೂ ಕಾವಲು ಭಟರ ವ್ಯವಸ್ಥೆ ಇರುವ ಬಗ್ಗೆ ಉಲ್ಲೇಖಗಳು ಸಿಗುತ್ತವೆ. ಆದರೆ ಎಷ್ಟು ಜನ ಭಟರ ವ್ಯವಸ್ಥೆ ಇದ್ದಿತೆಂಬುಮಾಹಿತಿ ದೊರೆಯುವುದಿಲ್ಲ. ಆದರೆ ಸೈನಿಕರ ಒಂದು ದೊಡ್ಡ ತಂಡ ಮಾತ್ರ ಇಲ್ಲಿರುವುದು ಖಚಿತವಾಗುತ್ತದೆ.

ವಿಶ್ವವಿಖ್ಯಾತ ಗ್ರಂಥಾಲಯ: ಇಂದಿನ ಯಾವುದೇ ವಿಶ್ವವಿದ್ಯಾಲಯದಲ್ಲಿಲ್ಲದಂಥ ಅಮೂಲ್ಯ ಹಾಗೂ ಅಮೋಘ ಗ್ರಂಥಗಳನ್ನು ಹೊಂದಿರುವ ಗ್ರಂಥಾಲಯ ನಾಗಾಯಿ ವಿಶ್ವವಿದ್ಯಾಲಯದಲ್ಲಿ ಇತ್ತೆಂದು ಇಲ್ಲಿನ ಶಾಸನಗಳಿಂದ ತಿಳಿದು ಬರುತ್ತದೆ. ಈ ಅಮೂಲ್ಯ ಗ್ರಂಥಾಲಯದಿಂದಾಗಿಯೇ ದೇಶ ವಿದೇಶಗಳಿಂದ ವಿದ್ಯಾರ್ಥಿ-ಅಧ್ಯಾಪಕರಿಗೆ ಈ ನಾಗಾಯಿ ಅಕರ್ಷಿತವಾಗಿತ್ತು.

ಈ ವಿಶ್ವವಿದ್ಯಾಲಯದಲ್ಲಿ ಭಂಡಾರಕ (ಗ್ರಂಥಪಾಲಕರು) ಬಹುದೊಡ್ಡ ವಿದ್ವಾಂಸರಾಗಿದ್ದರು. ಯಾವುದಾದರೊಂದು ಗ್ರಂಥದ ಪ್ರತಿಯನ್ನು ಮಾಡಿಕೊಳ್ಳಲು ಸುಂದರ ಅಕ್ಷರಗಳನ್ನು ಬರೆಯಬಲ್ಲ ಲಿಪಿಕಾರರನ್ನೂ ನೇಮಕಮಾಡಿಕೊಂಡು, ಅಗತ್ಯವಿದ್ದವರಿಗೆ ಕೊಡಲಾಗುತ್ತಿತ್ತು. ಇಂಥ ಒಂದು ವ್ಯವಸ್ಥೆ ನಾಗಾಯಿ ಗ್ರಂಥಾಲಯದಲ್ಲಿ ಮಾತ್ರ ಇರುವುದರಿಂದ ಇಲ್ಲಿನ ಅಮೂಲ್ಯ ಗ್ರಂಥಗಳ ಉಲ್ಲೇಖಗಳನ್ನು ಪಡೆಯಲು ಬೇರೆ ಬೇರೆ ವಿಶ್ವವಿದ್ಯಾಲಯಗಳಿಂದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದರು. ಅಷ್ಟೇ ಅಲ್ಲ ಇಲ್ಲಿನ ಭಂಡಾರಕರು ಸುಂದರ ಅಕ್ಷರಗಳ ನಕಲುಗಳನ್ನು ಮಾಡಿಸಿ, ಅಗ್ರಹಾರಗಳಿಗೆ, ಬ್ರಾಹ್ಮಣರಿಗೆ, ಉಪಾಧ್ಯಾಯರಿಗೆ ಹಾಗೂ ಮಠಗಳಿಗೂ ದಾನವಾಗಿ ನೀಡುತ್ತಿದ್ದರು.

ಈ ಗ್ರಂಥಗಳೆಲ್ಲ ಭಂಡಾರಕನ ಸ್ವಾಧೀನದಲ್ಲಿರುತ್ತಿದ್ದುವು. ಅಂತಲೇ ಅವುಗಳ ವ್ಯವಸ್ಥೆಗಾಗಿ ಘಟಿಕಾ ಸ್ಥಾನದಲ್ಲೇ ಭಂಡಾಕರು ಇರುತ್ತಿದ್ದರು. ಅವರ ವಾಸ ಸ್ಥಾನವೂ ಅಲ್ಲಿಯೇ ಮಾಡಲಾಗಿತ್ತು. ನಾಗಾಯಿ ಘಟಿಕಾ ಸ್ಥಾನದಲ್ಲಿ ಪ್ರತಿಯೊಬ್ಬ ವಿಭಾಗಕ್ಕೆ ವಿಷಯಗಳಿಗನುಗುಣವಾಗಿ ಆರು ಜನ ಗ್ರಂಥಪಾಲರಿದ್ದರು. ಪ್ರತಿಯೊಬ್ಬ ಗ್ರಂಥಪಾಲನಿಗೆ 30 ಮತ್ತರ ಭೂಮಿಯನ್ನು ಕೊಡಲಾಗಿತ್ತೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ವಾಸ್ತುಶಾಸ್ತ್ರ ಅಧ್ಯಯನ ಪ್ರಸಿದ್ಧ: ನಾಗಾಯಿ ವಿಶ್ವವಿದ್ಯಾಲಯದಲ್ಲಿ ವಾಸ್ತು ಶಾಸ್ತ್ರವನ್ನೂ ಹೇಳಿ ಕೊಡಲಾಗುತ್ತಿತ್ತು. 'ಅಗಸ್ತ ಸಂಹಿತಾ', 'ಭೃಗುಸಂಹಿತಾ' ಮತ್ತು 'ಮಯಿಸಂಹಿತಾ'ಗಳನ್ನು ಆಧರಿಸಿ ಕಟ್ಟಡಗಳನ್ನು ನಿರ್ಮಿಸುವ ಬಗ್ಗೆ ಇಲ್ಲಿ ಹೇರಳವಾದ ಗ್ರಂಥಗಳಿದ್ದವು ಮತ್ತು ಈ ಕುರಿತು ಈ ಘಟಿಕಾ ಸ್ಥಾನದಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ಪಾಠ ಮಾಡಲಾಗುತ್ತಿತ್ತು. ಕಟ್ಟಡ ನಿರ್ಮಾಣ ಕುರಿತು ನಾಗಾಯಿ ಯಲ್ಲಿರುವಂಥ ಶಿಕ್ಷಣ ಬೇರೆಲ್ಲೂ ಇರಲಿಲ್ಲವೆಂದು ಹೇಳಲಾಗುತ್ತಿದೆ. ದೇವಾಲಯ, ಅರಮನೆ, ಪಾಠಶಾಲೆ, ಮಠ, ವಿದ್ಯಾರ್ಥಿ ನಿಲಯ, ಧರ್ಮಶಾಲೆ, ಮಹಾದ್ವಾರ, ಭವ್ಯತೆ, ಸೌಂದರ್ಯ, ಶಿಲ್ಪಕಲೆ, ಕಟ್ಟಡದ ಗಟ್ಟಿತನ, ಶೋಭಾಯಮಾನವಾದ ಸೌಂಧರ್ಯ, ಅಂತರ್ ಸೌಂದರ್ಯ, ಬಾಹ್ಯ ಸೌಂದರ್ಯ ಮುಂತಾದವುಗಳ ಬಗ್ಗೆ ಗ್ರಂಥಗಳು ಹೊಂದಿದ್ದು, ಅಧ್ಯಯನ ಕೂಡ ನಡೆಯುತ್ತಿತ್ತು.

ಭಾರತದ ಬಹುತೇಕ ಭಾಗದಲ್ಲಿ ಮಯಸಂಹಿತೆಯ ದೇಗುಲಗಳ ನಿರ್ಮಾಣದಲ್ಲಿ ಭವ್ಯತೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದು, ಶಿಲ್ಪದ ಅಂತರ್ಭಾವವಿದೆ. ಉತ್ತರ ಭಾರತದಲ್ಲಿ 'ಆಗಸ್ತಸಂಹಿತೆ'ಯ ಪ್ರಕಾರ ವಾಸ್ತು ರಚನೆಯಾಗುತ್ತಿತ್ತು. ನರ್ಮದಾ ನದಿಯಿಂದ ತುಂಗಭದ್ರೆಯವರೆಗೂ 'ಭೃಗುಸಂಹಿತೆ'ಯ ವಾಸ್ತುರಚನೆ ಕಂಡು ಬರುತ್ತದೆ. ತುಂಗಭದ್ರೆಯಿಂದ ಕನ್ಯಾಕುಮಾರಿವರೆಗೂ 'ಮಯಸಂಹಿತೆ'ಯನ್ನಾಧರಿಸಿ ವಾಸ್ತು ರಚನೆಗಳು ಕಂಡು ಬರುತ್ತವೆ. ಇವೆಲ್ಲವುಗಳ ಅಧ್ಯಯನ ಮತ್ತು ಅಧ್ಯಾಪನ ದಕ್ಷಿಣದ ಏಕಮಾತ್ರ ಸ್ಥಾನ ನಾಗಾಯಿ ಆಗಿತ್ತೆಂಬುದು ಈ ಘಟಕಾ ಸ್ಥಳದ ವಿಶೇಷವಾಗಿದೆ.

ನಾಗಾಯಿ ಘಟಿಕಾಸ್ಥಾನದಲ್ಲಿಯ ವ್ಯವಸ್ಥೆ 400 ಮಹಾರಾಜರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದರೂ, ದಂಡನಾಯಕ ಕಾಳಿದಾಸಯ್ಯ ಮಾಧವರನ್ನು ಮತ್ತು ಇಮ್ಮಡಿ ಕಾಳಿದಾಸಯ್ಯ ಇವರು ಆ ವ್ಯವಸ್ಥೆಯ ಮುಖ್ಯಸ್ಥರಾಗಿದ್ದರು. ಕ್ರಿ.ಶ. 1092 ರಲ್ಲಿ ಘಟಿಕಾ ಸ್ಥಾನದಲ್ಲಿ ಆರ್ಥಿಕ ತೊಂದರೆ ತಲೆದೋರಿದಾಗ, ರಾಮೇಶ್ವರ ದೇವಾಲಯದಲ್ಲಿ 400 ಮಹಾರಾಜರುಗಳು ಸಭೆ ನಡೆಸಿ, ಆರ್ಥಿಕ ಬಿಕ್ಕಟ್ಟನ್ನು ಬಿಡಿಸಲು ವಿಚಾರ ವಿನಿಮಯ ನಡೆಸಿ, ಬಟ್ಟೆ ಮಾರಾಟದ ಮೇಲೆ ತೆರಿಗೆ ಹಾಕುವ ಮೂಲಕ ಘಟಿಕಾಸ್ಥಾನದಲ್ಲಿ ಯಾವುದೇ ಕಾರಣಕ್ಕೂ ಅಧ್ಯಯನ ಮತ್ತು ಅಧ್ಯಾಪನ ನಿಲ್ಲದಂತೆ ವ್ಯವಸ್ಥೆ ಮಾಡಿರುವ ಬಗ್ಗೆ ಇಲ್ಲಿ ದೊರೆಯುವ ಶಿಲಾ ಶಾಸನದಲ್ಲಿ ಉಲ್ಲೇಖಗಳು ಕಂಡು ಬರುತ್ತವೆ.

ದಾಳಿಯಿಂದ ಧ್ವಂಸ: ಆನಂತರ ಆರಂಭವಾದ ಯವನರ ಆಳ್ವಿಕೆ ಹಾಗೂ ದಾಳಿಯಿಂದ ನಾಗಾಯಿ ವಿಶ್ವವಿದ್ಯಾಲಯಕ್ಕೆ ಅನುದಾನ ಮತ್ತು ದಾನಾದಿಗಳ ಬಗ್ಗೆ ಯಾವುದೇ ಉಲ್ಲೇಖ ದೊರೆಯುವುದಿಲ್ಲ. ವಿಜಯ ನಗರ ಧ್ವಂಸದ ದಾಳಿಯ ನಂತರ, ಧರ್ಮಾಂಧರ ವಕ್ರದೃಷ್ಟಿ ಈ ಘಟಿಕಾಸ್ಥಾನದ ಮೇಲೆ ಬಿದ್ದಾಗ, ಇಲ್ಲಿರುವ ವಿದ್ಯಾರ್ಥಿಗಳು, ಅಧ್ಯಾಪಕರು ಘಟಿಕಾ ಸ್ಥಾನ ಬಿಟ್ಟು ತೆರಳಿದರು. ನಂತರ ಅವರ ಭೂಮಿ ಕಾಣಿಗಳನ್ನೆಲ್ಲ ಸ್ವಾಧೀನ ಪಡಿಸಿಕೊಂಡು ದೇವಸ್ಥಾನ, ಮಠಗಳನ್ನು ಧ್ವಂಸಗೊಳಿಸಲಾಯಿತು.

ಈಗ ಉಳಿದಿರುವುದು ಘಟಿಕಾಸ್ಥಾನದ ಗ್ರಂಥಾಲಯ ಭಾಗದ ಅವಶೇಷಗಳು ಮತ್ತು ಮಧುಸೂದನ ದೇವಸ್ಥಾನದ ಒಂದು ಭಾಗ ಮಾತ್ರ. ಅಲ್ಲಿಯೂ ಕೂಡ ಇಸ್ಲಾಮಿಕ್ ವಾಸ್ತುಗಳ ಮೂಲಕ ನವೀಕರಣದ ಪ್ರಯತ್ನಗಳೂ ನಡೆದಿರುವುದು ಕಂಡು ಬರುತ್ತದೆ. ವಿದ್ಯಾರ್ಥಿ ವಸತಿಗೃಹಗಳು, ಭೋಜನಶಾಲೆ, ಇನ್ನುಳಿದ ದೇವಸ್ಥಾನ ಮಠಗಳ ನೆಲಸಮವಾಗಿರುವ ಕಲ್ಲುಗಳು ಹರಡಿಕೊಂಡು ಬಿದ್ದಿರುವದು ಮಾತ್ರ ಕಾಣಸಿಗುತ್ತವೆ. ಒಂದು ಕಾಲಕ್ಕೆ ವಿಶ್ವಪ್ರಸಿದ್ಧ ವಿಶ್ವವಿದ್ಯಾಲಯ, ದಕ್ಷಿಣದ ತಕ್ಷಶಿಲೆ ಎಂದು ಖ್ಯಾತಿ ಪಡೆದಿರುವ ನಾಗಾಯಿ ಉಳಿದಿರುವದು ಕೇವಲ ಇತಿಹಾಸದ ಪುಟಗಳಲ್ಲಿ ಮಾತ್ರ.

(ಎಸ್.ಆರ್.ಎಂ.)

ನಾಗಾವಿ: ಕರ್ನಾಟಕದ ಪ್ರಾಚೀನ ಅಗ್ರಹಾರಗಳಲ್ಲೊಂದು. ದಕ್ಷಿಣದ ತಕ್ಷ ಶಿಲೆ ಎಂದೇ ಪ್ರಸಿದ್ಧವಾಗಿದೆ. ವಿದ್ಯಾಕೇಂದ್ರ, ಪುಣ್ಯಕ್ಷೇತ್ರ, ಕಲೆಯಬೀಡು, ನಾಗರಿಕತೆಯ ಹಾಗೂ ಸಾಂಸ್ಕೃತಿಕ ತಳಹದಿ ಮೇಲೆ ನಿರ್ಮಾಣಗೊಂಡ ಪ್ರದೇಶ. ಇದು ಗುಲಬರ್ಗಾ ಜಿಲ್ಲೆ ಚಿತ್ತಾಪೂರದ ಪೂರ್ವ ದಿಕ್ಕಿನಲ್ಲಿದೆ. ಚಿತ್ತಾಪೂರ ಬಸ್ ನಿಲ್ದಾಣದಿಂದ ಕೇವಲ ಮೂರು ಕಿ.ಮೀ ಅಂತರದಲ್ಲಿದೆ. ಈ ಅಗ್ರಹಾರಕ್ಕೆ ಐತಿಹಾಸಿಕ ಹಿನ್ನೆಲೆಯಿದೆ. ಧಾರ್ಮಿಕ ಪರಂಪರೆಯಿದೆ. ಸಂಶೋಧಕರಿಗೆ ಇಲ್ಲಿ ಹೇರಳವಾದ ಆಕರ ದೊರೆಯಬಲ್ಲದು. ಇಂದು ನಾಗಾವಿ ಪ್ರದೇಶವನ್ನು ಹೆಚ್ಚಾಗಿ ಗುರುತಿಸಲಾತ್ತಿರುವುದು. ಎಲ್ಲಮ್ಮ ದೇವಿಯ ಪುಣ್ಯಕ್ಷೇತ್ರವೆಂದೇ ಆದರೆ ಹಿಂದೊಮ್ಮೆ ಈ ಪ್ರದೇಶ ಪ್ರಸಿದ್ಧ ವಿದ್ಯಾಕೇಂದ್ರವಾಗಿ ತನ್ನ ಘನತೆ-ಗೌರವಗಳಿಂದ ಲೋಕ ವಿಖ್ಯಾತಿಯನ್ನು ಹೊಂದಿತ್ತು

ನಾಗಾವಿಯನ್ನು 'ನಾಗಾವಾಪಿ' 'ನಾಗವಾವಿ' ಎಂಬ ವಿಭಿನ್ನ ಹೆಸರುಗಳಿಂದ ಕರೆಯುವದುಂಟು. ನಾಗವಾಪಿ ಎನ್ನುವ ಪದ 'ನಾಗ' ಮತ್ತು 'ವಾಪಿ' ಎಂಬ ಎರಡು ಪದಗಳಿಂದ ಕೂಡಿದೆ. ನಾಗಾವಿಯ ಶಾಸನಗಳಲ್ಲಿ 'ಅಗ್ರಹಾರ ನಾಗಾವಿ' ಎಂದೆಲ್ಲ ಉಲ್ಲೇಖಿಸಲಾಗಿದೆ. ಈ ನಾಗಾವಾಪಿ ನಾಗವಾವಿ ಹಾಗೂ ನಾಗಾವಿ ಎಂಬ ಹೆಸರುಗಳು ಹೇಗೆ ಬಂದಿರಬಹುದೆಂದು ಪೌರಾಣಿಕ ಹಿನ್ನೆಲೆಗಳಿಂದಲೂ ಮತ್ತು ಸ್ಥಳ ಪುರಾಣಗಳಿಂದಲೂ ತಿಳಿದುಕೊಳ್ಳಬಹುದಾಗಿದೆ. ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಳಚೂರ್ಯರು ಈ ಪ್ರದೇಶದಲ್ಲಿ ಆಳ್ವಿಕೆಯನ್ನು ನಡೆಸಿದ್ದಾರೆ. ಆನಂತರ ಈ ಪ್ರದೇಶ ಮಹಮ್ಮದೀಯರ (ಬಹುಮನಿ, ಹೈದರಾಬಾದ ನಿಜಾಮ) ಆಳ್ವಿಕೆಗೆ ಒಳಪಟ್ಟಿತ್ತು. ಕಂಪನಿ ಸರಕಾರಗಳೂ ಇಲ್ಲಿ ತಮ್ಮ ಪ್ರಭುತ್ವದ ಪ್ರಾಬಲ್ಯವನ್ನು ಬೀರಿವೆ. ರಾಷ್ಟ್ರಕೂಟರು ಈ ಭಾಗದ ಮಳಖೇಡನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಸಮೀಪದ ಸೇಡಂನಲ್ಲಿ ರಾಣಿವಾಸ, ನೀಲಹಳ್ಳಿಯಲ್ಲಿ ಖಜಾನೆಯು ಇದ್ದರೆ, ದಂಡೋತಿಯಲ್ಲಿ ಸೈನ್ಯದ ವಾಸಸ್ಥಳವಿತ್ತು. ಈ ಅವಧಿಯಲ್ಲಿಯೇ ನಾಗಲಾವಿ ಸುಪ್ರಸಿದ್ಧ ಅಗ್ರಹಾರವಾಗಿತ್ತು ಎಂಬುದು ವಿದ್ವಾಂಸರ ಅಭಿಮತ.

ಪ್ರಾಚೀನ ಕಾಲದಲ್ಲಿ ಸಾಮ್ರಾಟರು, ಮಹಾ ಮಂಡಳೇಶ್ವರರು, ದಂಡನಾಯಕರು ಜ್ಞಾನಯಜ್ಞ ಅವ್ಯಾಹತವಾಗಿ ನಡೆಸಲೆಂದು ವಿದ್ವಾಂಸ ಬ್ರಾಹ್ಮಣರ ವಸತಿಯನ್ನು ಒಂದೆಡೆ ಮಾಡಿಸುತ್ತಿದ್ದರು. ಈ ಬ್ರಾಹ್ಮಣೋತ್ತಮರು ಒಂದೆಡೆ ಇರುವ ಪ್ರದೇಶಕ್ಕೆ ಅಗ್ರಹಾರವೆಂದು ಕರೆಯಲಾಗುತ್ತಿತ್ತು. ಈ ಅಗ್ರಹಾರದಲ್ಲಿ ವಾಸಿಸುವ ಬ್ರಾಹ್ಮಣರನ್ನು ಮಹಾಜನರೆಂದು ಕರೆಯಲಾಗುತ್ತಿತ್ತು. ನಾಗಲಾವಿಯಲ್ಲಿ ನಾಲ್ಕನೂರು ಮಹಾಜನರಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಈ ಸಂಖ್ಯೆಯನ್ನು ನೋಡಿದರೆ ನಾಗಲಾವಿ ಅತ್ಯಂತ ದೊಡ್ಡದಾದ ಅಗ್ರಹಾರವೆಂದು ಹೇಳಬಹುದು. ಏಕೆಂದರೆ ಮಹಾ ಜನರ ಸಂಖ್ಯೆಯು ಆಯಾ ಅಗ್ರಹಾರಗಳ ವ್ಯಾಪ್ತಿಯ ಮೇಲೆ ಅವಲಂಬಿಸಿರುತ್ತದೆ. ಅಗ್ರಹಾರದ ವ್ಯವಸ್ಥೆಯನ್ನು ಅಲ್ಲಿನ ಮಹಾಜನರೇ ನೋಡಿಕೊಳ್ಳುತ್ತಿದ್ದರು. ಈ ವಿದ್ವಾಂಸ ಬ್ರಾಹ್ಮಣರು ವೇದ, ಶಾಸ್ತ್ರ, ಜ್ಯೋತಿಷ್ಯ, ಗಣಿತ ಮತ್ತು ಯೋಗಶಾಸ್ತ್ರಗಳಂತಹ ಮಹತ್ವದ ವಿಷಯಗಳನ್ನು ಬಲ್ಲವರಾಗಿದ್ದರು. ಈ ಬ್ರಾಹ್ಮಣರಿಗೆ ವಿಶಿಷ್ಟ ಭೂಭಾಗಗಳನ್ನು ನೀಡಲಾಗುತ್ತಿತ್ತು. ಈ ರೀತಿಯ ಸುವ್ಯವಸ್ಥಿತವಾದ ವಸತಿಗೆ ಅಗ್ರಹಾರವೆಂದು ಕರೆಯುತ್ತಿದ್ದರು. ಈ ಅಗ್ರಹಾರದ ಅಧಿಕಾರಿ ಆ ನಾಡಿನ ದಂಡನಾಯಕನೇ ಆಗಿರುತ್ತಿದ್ದ. ನಾಗಾವಿಯ ಶಾಸನವೊಂದರಲ್ಲಿ "ಚತುರ್ವೇದ ಪಾರಾವಾರ ಪಾರಗರಪ್ಪ ನಾಲ್ಕನೂರು ವಿಪ್ರತ್ತೋತ್ತಮರಿಂದ ಅಭಿನವ ಬ್ರಹ್ಮಲೋಕವೆಂಬಂತೆ ವಸುಮತೀ ತಳಕ್ಕೆ ತಲೆಯಂಬಂತೆ ಕುಂತಳ ಮಹಿತಳಕ್ಕೆ ತಿಳಕವೆಂಬಂತೆ ಮಹಾಅಗ್ರಹಾರ ನಾಗವಾವಿ" ಎಂದು ವರ್ಣಿಸಲಾಗಿದೆ. ಇಲ್ಲಿ 'ಕುಂತಳ'ವೆಂದರೆ ಕರ್ನಾಟಕವೆಂದರ್ಥ. ಕರ್ನಾಟಕ ಮಾತೆಯ ಹಣೆಯ ತಿಳಕವೆಂಬಂತೆ 'ನಾಗಾ



ಗ್ರಂಥಾಲಯ ಮಧುಸೂಧನಾಲಯ, ನಾಗಾವಿ

ವಾವಿ' ವಿರಾಜಮಾನವಾಗಿ ರಾರಾಜಿಸುತ್ತಿತ್ತೆಂದು ಶಾಸನಕವಿ ಬಹು ಸೊಗಸಾಗಿ ವರ್ಣಿಸಿದ್ದಾನೆ.

ಘಟಿಕಾಸ್ಥಾನ: ಘಟಿಕ ಎಂದರೆ ಗಳಿಗೆ–ಗಳಿಗೆಗೊಮ್ಮೆ ಬೇರೆ ಬೇರೆ ಉಪಾಧ್ಯಾಯರು ಬಂದು ಬೋಧಿಸುವ ವಿದ್ಯಾಲಯವೆಂದು ಹೇಳಲಾಗುತ್ತದೆ. ಅಗ್ರಹಾರ, ಬ್ರಹ್ಮಪುರಿ, ದೇವಾಲಯಗಳಂತೆ ಘಟಿಕಾಸ್ಥಾನಗಳು ವಿದ್ಯಾಕೇಂದ್ರಗಳು ಆಗಿದ್ದುವು. ಘಟಿಕಾಸ್ಥಾನವೆಂದರೆ ಧಾರ್ಮಿಕ ಕೇಂದ್ರ ಎಂಬುದು ಕೆ.ಬಿ. ಪಾಠಕ್ ಅವರ ಅಭಿಪ್ರಾಯ. ಕ್ರಿ.ಶ. 6–8 ನೆಯ ಶತಮಾನದ ವೇಳೆ ದಕ್ಷಿಣ ಭಾರತದ 'ಕಾಂಚಿ'ಯ ಘಟಿಕೆ ಶ್ರೇಷ್ಠ ಹಾಗೂ ಉಚ್ಚ ಶೈಕ್ಷಣೀಕ ಕೇಂದ್ರವಾಗಿದ್ದರೆ, ಕ್ರಿ.ಶ.11–12 ನೆಯ ಶತಮಾನದಲ್ಲಿ ನಾಗಾವಿ ಶ್ರೇಷ್ಠ ಘಟಿಕಾಸ್ಥಾನವಾಗಿತ್ತು.

ರಾಷ್ಟ್ರಕೂಟರ ಕಾಲದಲ್ಲಿ ಸುಪ್ರಸಿದ್ಧ ಅಗ್ರಹಾರವಾಗಿದ್ದ ನಾಗಾವಿ ಚಾಲುಕ್ಯರಸ ಒಂದನೆಯ ಸೋಮೇಶ್ವರನ ಕಾಲಕ್ಕೆ ಘಟಿಕಾಸ್ಥಾನವನ್ನು ನಿರ್ಮಿಸಿ ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ತನ್ನ ಹೆಸರನ್ನು ಶಾಶ್ವತವಾಗಿ ಉಳಿಯುವಂತೆ ಮಾಡಿಕೊಂಡಿದ್ದಾನೆ. ನಾಗಾವಿ ಘಟಿಕಾಸ್ಥಾನದಲ್ಲಿ ಪ್ರಾಚೀನ ಭಾರತೀಯ ಪ್ರೌಢವಿದ್ಯೆಯ ಮಹತ್ವದ ಶಾಖೆಗಳಾದ ವೇದ, ಶಾಸ್ತ್ರ, ಯೋಗ ಮೊದಲಾದ ವಿದ್ಯೆಯನ್ನು ಹೇಳಿಕೊಡಲಾಗುತ್ತಿತ್ತು. ಈ ವಿಷಯಗಳನ್ನು ಕಲಿಸುವ ಉಪಾಧ್ಯಾಯರು ಮತ್ತು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿತ್ತೆಂದು ಶಾಸನಗಳಲ್ಲಿ ವರ್ಣಿಸಲಾಗಿದೆ.

ಉಪಾಧ್ಯಾಯರು: ಭಟ್ಟದರ್ಶನ, ನ್ಯಾಸ, ಪ್ರಭಾಕರ ವ್ಯಾಖಾನ ವೇತ್ರಗಳು ಮೂರು ಜನ. ವೇದಗಳನ್ನು ಓದಿಸುವವರು ಮೂರು ಜನ; ಅಲ್ಲದೆ ಒಬ್ಬ ಗ್ರಂಥಪಾಲಕ ಇರುವುದಾಗಿಯೂ ಶಾಸನಗಳಿಲ್ಲಿ ಉಲ್ಲೇಖಿಸಿದೆ.


ವಿದ್ಯಾರ್ಥಿಗಳು: ವೇದಾಧ್ಯಾಯಿಗಳು 50 ಶಾಸ್ತ್ರಾಧ್ಯಾಯಿಗಳು 50 ಜನ ಮತ್ತು 7 ವಿದ್ಯಾರ್ಥಿಗಳು ವಿವಿಧ ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಿದ್ದರು. ಸುಮಾರು ಒಂದು ಸಾವಿರ ಮತ್ತರಿನಷ್ಟು ಭೂಮಿ ನಾಗಾವಿ ಪ್ರದೇಶದ ವ್ಯಾಪ್ತಿಗೊಳಪಟ್ಟಿದ್ದು, ಈ ಭೂಮಿಯನ್ನು ವಿವಿಧ ಶಾಸ್ತ್ರಗಳನ್ನು ಬೋಧಿಸುವವರಿಗೆ ವಿನಿಯೋಗಿಸಲಾಗುತ್ತಿತ್ತು. ಶಾಸನವೊಂದರಲ್ಲಿ ಉಲ್ಲೇಖಿಸಲ್ಪಟ್ಟಂತೆ; 35 ಮತ್ತರು ಭಟ್ಟದರ್ಶನ ವ್ಯಾಖ್ಯಾತೃವಿಗೆ, 30 ಮತ್ತರು ನ್ಯಾಸ ವ್ಯಾಖ್ಯಾತೃವಿಗೆ, 45 ಮತ್ತರು ಭಟ್ಟರು ಪ್ರಭಾಕರ ವ್ಯಾಖ್ಯಾತೃವಿಗೆ, 30 ಮತ್ತರು ಗ್ರಂಥಭಂಡಾರಿಗೆ, 30 ಮತ್ತರು ಘಟಿಕಾ ಪ್ರಹಾರಿಗೆ ಹೀಗೆ ಬಹು ವಿಶಿಷ್ಟ ರೀತಿಯಲ್ಲಿ ಭೂಮಿಗಳನ್ನು ನೀಡಲಾಗಿತ್ತು. ಉಳಿದ ಭೂಭಾಗಗಳನ್ನು ಇತರ ಸೇವಿಕಾ ವೃತ್ತಿಗೂ, ಜೀರ್ಣೋದ್ಧಾರಕ್ಕೂ ವಿನಿಯೋಗಿಸಲಾಗುತ್ತಿತ್ತು. ನಾಗಾವಿಯು ನಿವಾಸ ಸಹಿತ ವಿದ್ಯಾಕೇಂದ್ರವಾಗಿತ್ತು.

ನಾಗಾವಿ ನಿಸರ್ಗಸಂಪತ್ತು ವರ್ಣನೀಯ. ಇಲ್ಲಿನ ಫಲವತ್ತಾದ ಭೂಮಿ ಸರ್ವಕಾಲದಲ್ಲೂ ಹಸಿರಿನಿಂದ ಕಂಗೊಳಿಸುತ್ತಿತ್ತು. ಸಂಪಿಗೆ, ಎಲೆವಳ್ಳಿ, ಲವಂಗ, ತೆಂಗು, ಬಾಳೆ, ಕರ್ಪೂರ, ಅರಿಶಿನ ಮುಂತಾದ ಬೆಲೆಬಾಳುವ ಬೆಳೆಗಳನ್ನು ಬೆಳೆಯುತ್ತಿದ್ದರೆಂದು ನಾಗಾವಿಯ ಲಕ್ಷಣೇಶ್ವರ ದೇವಾಲಯದ ಗೋಡೆಯೊಂದರಲ್ಲಿರುವ ಕ್ರಿ.ಶ. 1092ರ ಗದ್ಯಶಾಸನದಿಂದ ತಿಳಿದು ಬರುತ್ತದೆ. ಈ ಶಾಸನದಲ್ಲಿ "ನಾಗಾವಿ ಸಂತೆಯಲ್ಲಿ ಮಾರಾಟ ಮಾಡುವ ಅನೇಕ ಬೆಲೆಯುಳ್ಳ ವಸ್ತುಗಳ ಬೆಲೆಯ ಹದಿನಾರನೆಯ ಒಂದು ಭಾಗವನ್ನು ದೇವಾಲಯಗಳ ಜೀರ್ಣೋದ್ಧಾರಕ್ಕೆ ನೀಡಲು ವರ್ತಕರು ನಿರ್ಧರಿಸಿದ್ದರೆಂದೂ, ಈ ಆದಾಯ ವೆಚ್ಚಗಳ ಉಸ್ತುವಾರಿ ನೋಡಿಕೊಳ್ಳಲು ಸಂಭಾವಿತರಪ್ಪ ಶೆಟ್ಟಿಯವರ ಧರ್ಮದರ್ಶಿ ಸಮಿತಿಯೊಂದನ್ನು ಮಹಾದಂಡನಾಯಕ ಕಾಲಿಮರಸನ ಸಮಕ್ಷಮದಲ್ಲಿ ರಚಿಸಲಾಯಿತೆಂದೂ" ಈ ಶಾಸನ ತಿಳಿಸುತ್ತದೆ.

ಅರಲು ಮುನ್ನೂರನ್ನಾಳುತ್ತಿದ್ದ ದಂಡನಾಯಕರುಗಳು ನಾಗಾವಿ ಪರಿಸರದಲ್ಲಿ ಅನೇಕ ದೇವಾಲಯಗಳನ್ನು, ಕೆರೆ–ಕುಂಡಗಳನ್ನು ಕಟ್ಟಿಸಿದ್ದಾರೆ. ನಾಗಾವಿ ಪ್ರದೇಶದಲ್ಲಿ ಕಂಡುಬರುವ ಹಲವಾರು ದೇವಾಲಯಗಳು ವಿಭಿನ್ನ ರೀತಿಯ ಕಲಾ ಕೌಶಲ್ಯದಿಂದ ಕೂಡಿವೆ. ಇಲ್ಲಿನ ಒಂದೆರಡು ದೇವಾಲಯಗಳು ವಿಶಿಷ್ಟ ವಿನ್ಯಾಸದ ಗೋಪುರಗಳಿಂದ ಕೂಡಿದ್ದವೆಂದು ಶಾಸನ ತಿಳಿಸುತ್ತವೆ. ಆದರೆ ಇಂದು ಆ ಗೋಪುರಗಳು ಉಳಿದಿರುವುದಿಲ್ಲ. ಎಲ್ಲವೂ ಕಾಲಗರ್ಭದಲ್ಲಿ ನಶಿಸಿಹೋಗಿವೆ.

ನಾಗಾವಿ ಪರಿಸರದ ತ್ರೈಪುರುಷ ದೇವಾಲಯ ಹಾಗೂ ಮಧುಸೂಧನಾಲಯಗಳ ಅಧಿಷ್ಠಾನ ಭಾಗವು ಸುಂದರವಾದ ವಿನ್ಯಾಸದಲ್ಲಿದ್ದು, ನಕ್ಷತ್ರಾಕಾರವನ್ನು ಹೋಲುತ್ತದೆ. ಸ್ಥಳೀಯ ಬಿಳಿ ಕಲ್ಲನ್ನು ಬಳಸಿಕೊಂಡೇ ಈ ಅಧಿಷ್ಠಾನಗಳನ್ನು ನಿರ್ಮಿಸಿದೆ. ಇಲ್ಲಿನ ಪರಿಸರದಲ್ಲಿನ ಬಹುಪಾಲು ದೇವಾಲಯಗಳು ಜೀರ್ಣಾವಸ್ಥೆಯಲ್ಲಿದ್ದು, ಕಾಯಕಲ್ಪಕ್ಕೆ ಕಾದು ಕುಳಿತಿವೆ.

ಇಂದಿನ ಪಾಳು ಬಿದ್ದಿರುವ ನಾಗಾವಿಯಲ್ಲಿ ತ್ರೈಪುರುಷ ವೇಳಾಂಬ ರಾಮೇಶ್ವರ, ಲಕ್ಷ್ಮಣೇಶ್ವರ, ಸಿದ್ಧೇಶ್ವರ, ಆಂಜನೇಯ ದೇವಾಲಯಗಳಿವೆ. ಈರಪ್ಪಯ್ಯನ ಗದ್ದುಗೆ ಮಧುಸೂಧನಾಲಯ ಮಹಮ್ಮದೀಯರ ಆಳ್ವಿಕೆಯಲ್ಲಿ ಪರಿವರ್ತನೆಗೊಂಡಿರುವ ಕರಿಮಸೀದಿ, ಜುಮ್ಮಾ ಮಸೀದಿ ಇವು ಪ್ರಮುಖವಾದ ವಾಸ್ತು ರಚನೆಗಳಾಗಿವೆ. *(ಎಂ.ಕಿ.ಜಿ.)*




ನೃತ್ಯ ಶಾಲೆಯ ಮಹಾದ್ವಾರ ನಾಗಾವಿ

ನಾಗೋರಾ: ಬೀದರ್ ಜಿಲ್ಲೆಯ ಪ್ರಾಚೀನ ಗ್ರಾಮ. ಇಲ್ಲಿ ಅಧ್ಯಯನ ನಡೆಸಿದ ಪುರಾತತ್ವಜ್ಞರು ಗ್ರಾಮದ ಪರಿಸರದಲ್ಲಿ ನೂತನ ಶಿಲಾಯುಗದ–ತಾಮ್ರ ಯುಗದ ಸಂಸ್ಕೃತಿಗೆ ಸಂಬಂಧಿಸಿದ ಅವಶೇಷಗಳನ್ನು ಪತ್ತೆ ಹಚ್ಚಿದ್ದಾರೆ. ಇಲ್ಲಿ ಲಕ್ಷ್ಮೀ, ಹನುಮಾನ ಹಾಗೂ ಮರಗೆಮ್ಮ ಗುಡಿಗಳಿವೆ.

ನಾಗೋರಾ ಗ್ರಾಮದ ಒಂದು ಕಿ.ಮೀ. ದೂರದಲ್ಲಿ ದಕ್ಷಿಣ ಪೂರ್ವದೆಡೆಗೆ 'ಸಾಧು ಘಾಟ' ಎನ್ನುವ ರಮಣೀಯ ಹಾಗೂ ಪವಿತ್ರ ಸ್ಥಾನವೊಂದಿದೆ. ಅಲ್ಲಿ ಪಾಂಡುರಂಗ ಗುಡಿ ಹಾಗೂ ಹನುಮಾನ ಗುಡಿಗಳಿವೆ. ಅಲ್ಲದೆ ಏಕನಾಥ ಮಹಾರಾಜ ಮತ್ತು ಸಿದ್ಧು ಪಂತ ಮಹಾರಾಜರುಗಳ ಸಮಾಧಿಗಳಿವೆ. ಈ ಪರಿಸರದಲ್ಲಿ ಮಾರ್ಚ್ ತಿಂಗಳಿನಲ್ಲಿ ಏಳು ದಿವಸಗಳ ಜಾತ್ರೆ ನಡೆಯುತ್ತದೆ. ಸಿದ್ಧು ಪಂತ ಮಹಾರಾಜರ ಗೌರವಾರ್ಥ ಪ್ರತಿ ವರ್ಷ ಅಕ್ಟೋಬರ ತಿಂಗಳಿನಲ್ಲಿ ವಾರ್ಷಿಕ ಆರಾಧನೆ ಜರುಗುತ್ತದೆ. ಈ ಗ್ರಾಮದಲ್ಲಿ ಔಷಧಿ ಸಸ್ಯಗಳಿಂದ ಔಷಧ ತಯಾರಿಸಿ ಕೆಲ ರೋಗಗಳನ್ನು ಗುಣಪಡಿಸಲು ಉಪಚರಿಸುವ ನಾಟಿ ವೈದ್ಯರಿದ್ದಾರೆ. *(ಜಿ.ಆರ್.ಕೆ.)*

ನಾಗೋಲಿ ಚೌಗೋಲಿ: ಮುದ್ದುಮಕ್ಕಳ ಕೈಯಲ್ಲಿ ಗೊಂಬೆ ಕೊಟ್ಟು ಅದನ್ನು ಒಬ್ಬರ ಕೈಯಿಂದ ಇನ್ನೊಬ್ಬರಿಗೆ ಕೊಡುವ ಸಂಪ್ರದಾಯ. ಮುಂದಿನ ದಾಂಪತ್ಯ ಜೀವನದ ಅಣಕು ಇದ್ದಂತೆ ಈ ಕಾರ್ಯಕ್ರಮವಿದೆ. ಈ ಸಂದರ್ಭದಲ್ಲಿ ಹೇಳುವ ಹಾಡು ಗಂಡ ಹೆಂಡತಿಯರು ಯಾವ ರೀತಿ ಕೆಲಸ ಮಾಡಬೇಕು, ಸಹಕಾರ ತೋರಿಸಬೇಕೆಂದು ಹೇಳುವಂತಿದೆ. ನಾನು ಗಳೇಕ ಹೋಗತಿನಿ ಹಿಡಿಹಿಡಿಯೆ ಕೂಸಿನ ಎಂದರೆ, ಅವಳು ನೀರು ತರುತ್ತೀನಿ ಅಡುಗೆ ಮಾಡುತೀನಿ, ರೊಟ್ಟಿ ಮಾಡುತ್ತೀನಿ ಎಂದು ಗಂಡನ ಕೈಗೆ ಕೂಸನ್ನು ಕೊಡವಂತೆ ಗೊಂಬೆ ಕೊಡುವಳು. ಅವನು ಹೊಲದ ಕೆಲಸವಿದೆ ನೀನು ಮಗುವನ್ನು ನೋಡಿಕೊಳ್ಳು ಎಂಬಂತೆ ಗೊಂಬೆಯನ್ನು ಅವಳ ಕೈಗೆ ಕೊಡುತ್ತಾನೆ. ಈ ರೀತಿ ಅವರು ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಮಗುವನ್ನು (ಗೊಂಬೆಯನ್ನು) ವರ್ಗಾಯಿಸುತ್ತಿರುವಂತೆಯೇ ಅವರ ಸುತ್ತ ಮುತ್ತ ನೆರೆದ ಹೆಂಗಸರು ನಾಗೋಲಿ ಚೌಗೋಲಿ ಹಾಡು ಹೇಳುತ್ತಾರೆ.



ಮಧುಸೂದನ ದೇವಾಲಯ

ಹೆಂಡಿಗೆ ಹೊಯ್ತಿನಿ, ನೀರಿಗೆ ಹೊಯ್ತಿನಿ ಎಂದು ಅವಳು ಮನೆಯ ಕೆಲಸಗಳಿವೆ ಎಂದು ಹೇಳುವಳು. ಮುಂದೆ ಹುಟ್ಟುವ ಮಗುವನ್ನು ಅವರಿಬ್ಬರೂ ಅನ್ಯೋನ್ಯತೆಯಿಂದ ಒಬ್ಬರಾದ ಮೇಲೊಬ್ಬರು ಎತ್ತಿಕೊಂಡು ಸಾಕಿ ಸಲುಹಬೇಕೆಂಬ ಭಾವ ಈ ಹಾಡಿನಲ್ಲಿದೆ. ಈ ಸಂಪ್ರದಾಯ ಲಿಂಗಾಯತರಲ್ಲಿ ಕಂಡುಬರುವುದಿಲ್ಲ. ಕಬ್ಬಲಿಗ ಮುಂತಾದ ಕೆಳಜಾತಿಯವರಲ್ಲಿದೆ. ಬ್ರಾಹ್ಮಣರಲ್ಲಿ, ಕೋಮಟಿಗರಲ್ಲಿ "ನಾಗೋಲಿ" ಎಂದು ಕರೆಯಲಾಗುವ ಸಂಪ್ರದಾಯ ಭಿನ್ನವಾದದ್ದು. *(ವೈ.ಎಸ್.)*

ನಾಚ ಮಲ್ಲಿಯರು: ಕನ್ನಡ ನಾಡು ಆಳಿದ ಅನೇಕ ಅರಸರ ಆಸ್ಥಾನಗಳಲ್ಲಿ ದೀಪ ಮಲ್ಲಿಯರು, ನಾಚಮಲ್ಲಿಯರು, ಸಂಗೀತಗಾರರು ಹಾಜರಿದ್ದು ರಾಜನಿಗೆ ತಮ್ಮ ಸೇವೆ ಸಲ್ಲಿಸುತ್ತಿದ್ದರು. ದೀಪಮಲ್ಲಿಯರಿಂದ ಬೆಳಕು ದೊರೆತರೆ ನಾಚಮಲ್ಲಿಯರಿಂದ ನೃತ್ಯದ ಸೊಬಗು ದೊರೆಯುತ್ತಿತ್ತು. ನಾಚಮಲ್ಲಿಯರಿಗೆ ಹಳ್ಳಿಗಾಡಿನಲ್ಲಿ ಪಾತರದವರು ಎಂದು ಕರೆಯುತ್ತಾರೆ. ಸುಮಾರು ನಲವತ್ತು ವರ್ಷಗಳ ಹಿಂದೆ ಶ್ರೀಮಂತರ ಮದುವೆ ಸಮಾರಂಭದಲ್ಲಿ 'ಪಾತರನಾಚ' ಏರ್ಪಡಿಸುತ್ತಿದ್ದರು. 'ಪಾತರನಾಚ' ನೋಡಲು ಜನರು ಕಿಕ್ಕಿರಿದು ಸೇರುತ್ತಿದ್ದರು. ನಾಚ ಮಾಡುವ 16 ವರ್ಷದ ಬಾಲೆ ಆಕರ್ಷಿಕ ಉಡುಪುಗಳಿಂದ, ಹಾವಭಾವಗಳಿಂದ, ಒನಪು ವೈಯಾರದಿಂದ ಹಾಗೂ ಇಂಪಾದ ಹಾಡುಗಳಿಂದ ಜನರನ್ನು ಮೋಡಿ ಮಾಡುತ್ತಿದ್ದಳು. ಈಗ ಈ 'ಪಾತರನಾಚ' ಇಲ್ಲದಂತಾಗಿದೆ. ನಾಚಮಲ್ಲಿಯರು ಕಾಣೆಯಾಗಿದ್ದಾರೆ. ಅವರ ಮನೆತನಗಳು ಹಾಳಾಗಿ ಹೋಗಿವೆ. ಹುಮನಾಬಾದನಲ್ಲಿ ಪಾತರ ಅಮ್ಮಾಸಾಬ ಎಂಬ ಮುಸ್ಲಿಂ ಮನೆತನವಿತ್ತು. ಬೀದರ ನಗರದ ಮಂಗಲ ಪೇಟನಲ್ಲಿ ನಾಚ ಮಲ್ಲಿಯರ 5–6 ಮನೆತನಗಳಿದ್ದುವು. ಈ ನಾಚಮಲ್ಲಿಯರು ಎಲ್ಲಾ ಜಾತಿ ಜನಾಂಗದವರಾಗಿರುತ್ತಿದ್ದರು. ಅವರನ್ನು ಅನೇಕ ಶ್ರೀಮಂತ ಜನರು ಉಪ ಪತ್ನಿಯರನ್ನಾಗಿ ಇಟ್ಟುಕೊಳ್ಳುತ್ತಿದ್ದರು. ಅದು ಸಮಾಜದಲ್ಲಿ ಗೌರವದ ವಿಷಯವಾಗಿತ್ತು.

ನಾಚಮಲ್ಲಿಯರು ನಾಚ (ನೃತ್ಯ) ಮಾಡುತ್ತ ಮಾಡುತ್ತ ತಮ್ಮ ಹಾವಭಾವಗಳಿಂದ ಸಭಿಕರಿಗೆ ಮೋಹಗೊಳಿಸಿ ಅವರ ಹತ್ತಿರ ಹೋಗಿ ಅವರ ತೊಡೆಯ ಮೇಲೆ ಕೊಡುತ್ತಿದ್ದರು. ಆ ವ್ಯಕ್ತಿ 50–100 ರೂಪಾಯಿ ನೋಟು ಕೊಟ್ಟರೆ ಬಾಯಿಯಲ್ಲಿ ಹಿಡಿದುಕೊಂಡು ಎದ್ದು ಬರುತ್ತಿದ್ದರು. ತಮ್ಮ ತೊಡೆಯ ಮೇಲೆ ಕೂಡಿಸಿಕೊಳ್ಳುವದಕ್ಕೆ ಯುವಕರು, ಹಾತೊರೆಯುತ್ತಿದ್ದರು. ಅನೇಕರು ಅವರ ಸೌಂದರ್ಯಕ್ಕೆ ಮನಸೋತು ಅವರ ದೈಹಿಕ ಸಂಪರ್ಕ ಬಯಸುತ್ತಿದ್ದರು. ನಾಚಮಲ್ಲಿಯರ ಹವ್ಯಾಸಕ್ಕೆ ಒಳಗಾದವರು ತಮ್ಮ ಮನೆ–ಮಾರು, ಆಸ್ತಿ ಅಂತಸ್ತುಗಳು ಕಳೆದುಕೊಂಡು ಬೀದಿ ಪಾಲಾದ ಉದಾಹರಣೆಗಳು ಸಾಕಷ್ಟು ಇವೆ. ಇಂದು ಯರಾದರೂ ಜಗಳವಾಡುತ್ತಿದ್ದರೆ ಜನರು ಬಂದು ಸೇರಿದರೆ ಜಗಳವಾಡುವ ಹೆಣ್ಣು ಬಂದವರಿಗೆ 'ಇಲ್ಲಿ ಏನ್ ಪಾತರನಾಚ ಹಚ್ಯಾರಾ? ಬಂದ ಸೇರಲಕ' ಎಂದು ಗದರಿಸುತ್ತಾಳೆ. ಹುಡುಗಿಯು ನೋಡಲು ಸುಂದವಾಗಿದ್ದರೆ 'ಅಕಿನಾ ಪಾತರದವರ ಹೆಣ್ಣ ಇದ್ಧಂಗ ಹಳ' ಎಂದು ವರ್ಣಿಸುತ್ತಾಳೆ.

ನಾಚಮಲ್ಲಿಯರು ಅರಸ ಆಸ್ಥಾನದಲ್ಲಿದ್ದು ತಮ್ಮ ಶುಶ್ರಾವ್ಯ ಕಂಠದಿಂದ ಹಾಡಿ ಮನರಂಜನೆ ನೀಡುತ್ತಿದ್ದವರು. ಅವರ ಹಾಡಿಗೆ, ನೃತ್ಯಕ್ಕೆ ಮನಸೋತು ಸಭಿಕರು ಅವರ ಮೇಲೆ ನಾಣ್ಯಗಳು, ನೋಟುಗಳು ಹಾರಿಸುತ್ತಿದ್ದರು. ಅಕಬರನ ಆಸ್ಥಾನದಲ್ಲಿದ್ದ 'ಲವಂಗಿ' ಎಂಬ ನಾಚಮಲ್ಲಿಯನ್ನು ಪಂಡಿತ ಜಗನ್ನಾಥ ಕವಿ ಪ್ರೀತಿಸಿ ವಿವಾಹವಾದ ವಿಷಯ ಇತಿಹಾಸ ಹೇಳುತ್ತದೆ. ಪ್ರಾಚೀನ ಕಾಲದಲ್ಲಿ ಅನೇಕ ನಾಚಮಲ್ಲಿಯರು ಅತ್ಯಂತ ಶ್ರೀಮಂತಿಕೆಯನ್ನು ಅನುಭವಿಸುತ್ತಿದ್ದರು. *(ಎಚ್.ಕೆ.)*

ನಾಚವಾರ ಪಂಪಯ್ಯಸ್ವಾಮಿ: ಬಯಲಾಟದ ಕಲಾವಿದ. ಪ್ರಸಾದನಕಾರ–ಬಯಲಾಟದ ವೇಷಭೂಷಣ ಆಭರಣ ಗಳನ್ನು ಬಾಡಿಗಿಗೆ ನೀಡುತ್ತಾರೆ. ಇವರು ಗುಲಬರ್ಗಾ ಜಿಲ್ಲೆ ಸೇಡಮ್ ತಾಲ್ಲೂಕಿನ ನಾಚವಾರದವರು. ಜನಿಸಿದ್ದು 1966 ಮೇ 8 ರಂದು. ತಂದೆ ಮಲ್ಕಯ್ಯ ಸ್ವಾಮಿ ತಾಯಿ ಬನ್ನಮ್ಮ ವಂಶ ಪಾರಂಪರ್ಯ ವೃತ್ತಿ ಬಯಲಾಟದ ರಂಗಕರ್ಮ. ದೀಪವಾಳಿ ಯಿಂದ ಆರಂಭ ವಾಗುತ್ತಿದ್ದ ಬಯಲಾಟ ಪ್ರದರ್ಶನ ಮಳೆಗಾಲದ ನಾಲ್ಕು ತಿಂಗಳು ಮಾತ್ರ ಸ್ಥಗಿತಗೊಳ್ಳುತ್ತವೆ. ಬಿಡುವಿನ ವೇಳೆ, ಹಬ್ಬ–ಹರಿದಿನ, ಜಾತ್ರೆ–ಉತ್ಸವಗಳಲ್ಲಿ ನಡೆಯುವ ಬಯಲಾಟ ಪ್ರದರ್ಶನಗಳು ಪಂಪಯ್ಯನವರ ಬದುಕಿನ ಆಧಾರ. ಕನಕಾಂಗಿಯಂಥ ಚಿಕ್ಕ ಆಟದಿಂದ ದೇವಿ ಆಟದಂಥ ದೊಡ್ಡ ಆಟಗಳಿಗೆ ಪ್ರಸಾಧನಕಾರರಾಗಿ ಇವರು ಅನುಭಾವಗಳಿಸಿದ್ದಾರೆ. ಮನೆಯ ಹೆಣ್ಣು ಮಕ್ಕಳು ಅವರ ಕೆಲಸಕ್ಕೆ ಸಹಕರಿಸುತ್ತಾರೆ. ತಮ್ಮ 13 ನೇ ವಯಸ್ಸಿನಿಂದಲೇ ತಂದೆಗೆ ಸಹಾಯ ಮಾಡುತ್ತ ಪ್ರಸಾಧನ ಕಲೆಯನ್ನು ಕರಗತವಾಗಿಸಿಕೊಂಡರು. ಹಿಂದಿನಿಂದಲೂ ಬಯಲಾಟ ನಾಟಕ ಪ್ರದರ್ಶನಕ್ಕೆ ಪ್ರಸಿದ್ಧ ವಾಗಿದ್ದ ನಾಚವಾರ ಗ್ರಾಮದ ವಾತಾವರಣದಲ್ಲಿ ಬೆಳೆದ ಪಂಪಯ್ಯ ಅವುಗಳ ಬೇಡಿಕೆ ಪೂರೈಸುವ ನಿಟ್ಟಿನಲ್ಲಿ ಶ್ರಮಿಸು ತ್ತಿದ್ದಾರೆ. ಪ್ರತಿ ವರ್ಷ 50 ರಿಂದ 60 ಬಯಲಾಟ ಗಳಿಗೆ ಸಾಮಗ್ರಿಗಳನ್ನು ಬಾಡಿಗೆಗೆ ಕೊಡುತ್ತಾರೆ.



ವಸ್ತ್ರಾಲಂಕಾರ ಮುಖವರ್ಣಿಕೆಗಳನ್ನು ತಂದೆ ಮಲ್ಕಯ್ಯ ಸ್ವಾಮಿಯವರಿಂದ ಕರಗತ ಮಾಡಿಕೊಂಡಿರುವ ಪಂಪಯ್ಯ ಇದುವರೆಗೆ ನಾಲ್ಕು ನೂರಕ್ಕಿಂತ ಹೆಚ್ಚು ನಾಟಕ ಹಾಗೂ ಬಯಲಾಟಗಳಿಗೆ ಮೇಕಪ್ ಮಾಸ್ತರ ಆಗಿ ಕೆಲಸ ನಿರ್ವಹಿಸಿದ್ದಾರೆ. ಕಟ್ಟಿಗೆಯ ಪರಿಕರಗಳನ್ನು ಕೊಪ್ಪಳದ ಬಳಿಯ ಕಿನ್ನಾಳದಿಂದ ಕೊಂಡು ತಂದು ವಿವಿಧ ಬಣ್ಣದ ಬಿಂಗು ಬ್ಯಾಂಗಡಿ, ಮಣಿ ಹಾಗೂ ಗಾಜಿನ ಕೊಳವೆಗಳಿಂದ ಅಲಂಕರಿಸುತ್ತಾರೆ. ಪ್ರತಿ ಆಟ ಮುಗಿದಾಗ ಅವುಗಳು ಅಂದಗೆಡದಂತೆ ಮನಃ ಅವುಗಳನ್ನೇ ತಿದ್ದಿ ನವೀಕರಿಸುತ್ತಾರೆ. ಅವನ್ನೇ ಸಿದ್ಧಪಡಿಸಲು ಬಳಸುವ ಕಟ್ಟಿಗೆ ಅತ್ಯಂತ ಹಗುರವಾಗಿದ್ದು ಅಷ್ಟೇ ಗಟ್ಟಿಯಾಗಿರುತ್ತದೆ. ನಯಗಾರಿಕೆಗೆ ನಾಜೂಕಿನ ಕೆಲಸಕ್ಕೆ ಸೂಕ್ಷ್ಮವಾಗಿರುತ್ತವೆ.

ಇವರ ಕಲೆ ಹಾಗೂ ಪರಿಶ್ರಮವನ್ನು ಗುರುತಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆರ್ಥಿಕ ನರವಿನೊಂದಿಗೆ ಗಡಿನಾಡು ಉತ್ಸವದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. *(ಸಿ.ಜಿ.ಐ.)*

ನಾಯಕ ಡಿ.ಬಿ.: ಜಾನಪದ ತಜ್ಞ, ಇವರ ಪೂರ್ಣ ಹೆಸರು ಧನಸಿಂಗ ಭೀಮಲು ನಾಯಕ. ಗುಲಬರ್ಗಾ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಬದನಿಹಾಳ ಗ್ರಾಮದ ತಾಂಡಾದಲ್ಲಿ 1956 ಡಿಸೆಂಬರ 15ರಂದು ಜನಿಸಿದರು. ತಂದೆ ಭೀಮುಲು ತಾಯಿ ಮೈತ್ರಾಬಾಯಿ. ಕಲಬುರ್ಗಿ, ವಿಜಾಪುರಗಳಲ್ಲಿ ವಿದ್ಯಾಭ್ಯಾಸ ಕೈಗೊಂಡು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ, ಜಾನಪದ ಮತ್ತು ಸಮೂಹ ಮಾಧ್ಯಮ ಸಾಹಿತ್ಯದಲ್ಲಿ ಗಂಭೀರ ಅಧ್ಯಯನ ಕೈಗೊಂಡರು.



ನಾಯಕರ ಆಸಕ್ತಿ ಬುಡಕಟ್ಟು ಅಧ್ಯಯನ. ಉತ್ತರ ಕರ್ನಾಟಕ ಲಂಬಾಣಿ ಜನಪದ ಸಾಹಿತ್ಯ ವಿಷಯದ ಮೇಲೆ ಸಂಶೋಧನೆ, ಕೈಗೊಂಡು ಡಾಕ್ಟರೇಟ್ ಪಡೆದುಕೊಂಡಿದ್ದಾರೆ. 'ಲಂಬಾಣಿ ಜನಪದ ಸಾಹಿತ್ಯ' ಎಂಬ ಕೃತಿ ಕನ್ನಡ–ಇಂಗ್ಲಿಷ್–ಹಿಂದಿ ಮೂರು ಭಾಷೆಗಳಲ್ಲಿ ಪ್ರಕಟವಾಗಿದೆ. ವಿದೇಶ ಯಾತ್ರೆ ಕೈಗೊಂಡು ಅಮೇರಿಕಕ್ಕೆ (1993) ಭೇಟಿ ನೀಡಿ, ಲಂಬಾಣಿ ಹಾಗೂ ರೋಮ್ ಜೆಪ್ಸಿ ಸಂಬಂಧ ಕುರಿತು ಉಪನ್ಯಾಸ ನೀಡಿದ್ದಾರೆ.

'ಲಂಬಾಣಿ ಸಂಸ್ಕೃತಿ' ಉಪಸಂಸ್ಕೃತಿಯ ಮಾಲೆಯಡಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ಜನಪದ ಸಾಹಿತ್ಯದಲ್ಲಿ ಲಂಬಾಣಿ ಜನಪದ ಸಾಹಿತ್ಯ ಶ್ರೀಮಂತವಾದುದು ಎಂಬುದನ್ನು ವಿದ್ವಾಂಸರ ಗಮನ ಸೆಳೆದಿದ್ದಾರೆ.

ತಂತ್ರಜ್ಞಾನ ಯುಗದಿಂದ ದೇಸಿ ಸಂಸ್ಕೃತಿಯ ಸೊಗಡು ಹೇಗೆ ಕಳೆದು ಹೋಗಿದೆ. ಮತ್ತೆ ಹೇಗೆ ಉಳಿಸಿಕೊಂಡಿದೆ. ಎಂಬುದರ ಕುರಿತು ಹದಿನೈದು ಸಂಶೋಧನಾತ್ಮಕ ವಿಶ್ಲೇಷಣಾತ್ಮಕ ಕೃತಿ 'ದೇಸಿ ಸಂಸ್ಕೃತಿ'. ಸಮೂಹ ಮಾಧ್ಯಮಗಳು ಪ್ರಸಾರಾಂಗ ಪ್ರಕಟ ಮಾಡಿದೆ. ಸಂವಹನ ಮಾಧ್ಯಮಗಳು (ಡಾ. ಎಸ್.ಎಂ. ಹಿರೇಮಠರೊಂದಿಗೆ), ಅನುಭಾವ ಸಾಹಿತ್ಯ (ಡಾ. ಎಂ.ಎಸ್. ಪಾಟೀಲರೊಂದಿಗೆ) ಸಂಪಾದಿಸಿದ್ದಾರೆ.

ಕನ್ನಡದಲ್ಲಿ ಅನುಭಾವ ಸಾಹಿತ್ಯದ ಸೂಕ್ಷ್ಮ ಒಳ ಹೊರ ನೋಟಗಳ ವಿಶ್ಲೇಷಣೆ ಪ್ರಖ್ಯಾತ ವಿದ್ವಾಂಸರು ಮಾಡಿದ್ದಾರೆ. ಸಮೂಹ ಮಾಧ್ಯಮಗಳು ಹಾಗೂ ಸಮಾಜ ಕೃತಿ ಆಕಾಶವಾಣಿ ಪತ್ರಿಕೆ ಟಿ.ವಿ. ಚಲನ ಚಿತ್ರಗಳ ಮಾಧ್ಯಮದ ಮೂಲಕ ಸಮಾಜ ಹೇಗೆ ಸಾಗಿದೆ ಎಂಬ ತಲಸ್ಪರ್ಶಿಯಾದ ವಿಶ್ಲೇಷಣೆ ಮಾಡಿದ್ದಾರೆ.

'ಸಾಹಿತ್ಯ ಲೋಕ' ಪ್ರಾಚೀನ ನುಡುಗನ್ನಡ–ಹೊಸಗನ್ನಡ ಸಾಹಿತ್ಯದ ವಿಮರ್ಶಾ ಲೇಖನಗಳ ಸಂಕಲನವಾಗಿದೆ.

'ಬುಲಾಯಿ ಹಾಡುಗಳು' ಕರ್ನಾಟಕದ ಜನಪದ ಕಲೆ–ಸಾಹಿತ್ಯದಲ್ಲಿ ಸಿಗದ ವಿಶಿಷ್ಟ ಪ್ರಕಾರ. ಇಲ್ಲಿ ವೈವಿಧ್ಯಮಯವಾದ ಹಾಡುಗಳ ಸಂಗ್ರಹವಿದೆ. ಅದಕ್ಕೆ ನಾಯಕರು ವಿದ್ಯುತ್ಪೂರ್ಣವಾದ ಪ್ರಸ್ತಾವನೆ ಬರೆದಿದ್ದಾರೆ. *(ಜಿ.ಎಚ್.ಪಿ.)*

ನಾಯಿಂದ: ಹಳ್ಳಿಯ ಆಯಗಾರರಲ್ಲಿ ಒಬ್ಬರು. ನಾಪಿತ, ಕ್ಷೌರಿಕ, ಕೆಲಸಿಗ ಎಂಬ ಅರ್ಥಗಳೂ ಇವೆ. ಹಳ್ಳಿಗಳಲ್ಲಿ ನಾಯಿಂದರಿಗೆ ಹಜಾಮ, ಕ್ಷೌರಿಕ ಎಂದು ಕರೆಯುತ್ತಾರೆ. ಹಳ್ಳಿಯ ಜನರಿಗೆ ಕ್ಷೌರ ಮಾಡಿ ಅವರಿಂದ ಸುಗ್ಗಿಯ ಕಾಲದಲ್ಲಿ ಕಾಳು ಸಂಗ್ರಹಿಸಿ ಉಪಜೀವನ ಸಾಗಿಸುತ್ತಾರೆ. ಕ್ಷೌರಿಕರಿಗೆ ಹಳ್ಳಿಗಳಲ್ಲಿ ಜಮೀನ (ಹೊಲ)ಗಳು ಇವೆ. ಅವರ ಉಪಜೀನಕ್ಕೆ ಅದರಿಂದ ಸಹಾಯ ಆಗಿದೆ. ಮಾನವನ ಹುಟ್ಟಿನಿಂದ ಚಟ್ಟದವರೆಗೆ ನಾಯಿಂದನ ಆವಶ್ಯಕತೆ ಇದ್ದೇ ಇದೆ. ಹುಟ್ಟಿದ ಕೂಸಿಗೆ ಜಾವಳ ತೆಗೆಯುವ ಕಾರ್ಯಕ್ರಮಕ್ಕೆ ನಾಯಿಂದ ಬೇಕೇ ಬೇಕು. ಹಾಗೆಯೇ ಮಾನವ ಸತ್ತಾಗ ಕೂಡಾ ನಾಯಿಂದ ಬೇಕು. ಸತ್ತವನ ವಾರಸುದಾರ ಬೆಂಕಿ ಹಿಡಿದರೆ ಅವನ ಕೇಶ ಮುಂಡನ ಮಾಡಬೇಕು. ಹೀಗೆ ನಾಯಿಂದನ ಆವಶ್ಯಕತೆ ಹೆಜ್ಜೆ ಹೆಜ್ಜೆಗೂ ಅಗತ್ಯ.

(ಎಚ್.ಕೆ.)

ನಾರಾಯಣಪುರ: ಐತಿಹಾಸಿಕವಾಗಿ ಪ್ರಸಿದ್ಧಿ ಪಡೆದ ಗ್ರಾಮ. ಬಸವಕಲ್ಯಾಣದ ಪೂರ್ವ ದಿಕ್ಕಿನಲ್ಲಿ ಮೂರು ಕಿ.ಮೀ. ಅಂತರದಲ್ಲಿದೆ. ಇಂದು ಕುಗ್ರಾಮದಂತಿರುವ ಈ ನಾರಾಯಣಪುರ ಗತಕಾಲದಲ್ಲಿ ಎಂಥ ವೈಭವದಿಂದ ಮೆರೆದಿದೆ ಎಂಬುದು ಇತಿಹಾಸದ ಪುಟಗಳನ್ನು ಓದಿದ ಮಾತ್ರಕ್ಕೆ ಅರ್ಥವಾಗುವಂಥದ್ದಲ್ಲ. ಅಲ್ಲಿನ ಅದ್ಭುತವಾದ ವಾಸ್ತು ಶಿಲ್ಪಕಲೆಗಳ ನಿರ್ಮಾಣ ಹಾಗೂ ರಚನೆಗಳನ್ನು ಕಣ್ಣಾರೆ ನೋಡಿದರೆ ಮಾತ್ರ ಇದರ ಅರಿವಾಗುತ್ತದೆ. ಪ್ರತಿಯೊಂದು ಕಲ್ಲುಗಳೂ ಇಲ್ಲಿನ ಇತಿಹಾಸ ಹಾಗೂ ಶಿಲ್ಪಕಲೆಗಳ ಶ್ರೀಮಂತಿ–ಕೆಯ, ವೈಭವದ ಕಥೆಯನ್ನು ಹೇಳುತ್ತವೆ.

ನಾರಾಯಣಪುರ, ಕಲ್ಯಾಣ ಚಾಲುಕ್ಯರ ಶಿಲ್ಪಕಲೆಗಳ ತವರೂರು, ಈ ಗ್ರಾಮದ ಶಿಲಾಶಾಸನದಲ್ಲಿ ತ್ರಿಭುವನ ತಿಲಕ ಶ್ರೀರಾಯ ನಾರಾಯಣ ಮತ್ತು ರಾಯನಾರಾಯಣಪುರ ಎಂಬ ಉಲ್ಲೇಖವಿದೆ. ರಾಯನಾರಾಯಣ ಎಂಬುದು ಚಾಲುಕ್ಯರ ಒಂದು ಬಿರುದು ಎಂಬುದು ಸಂಶೋಧಕರ ಅಭಿಪ್ರಾಯ. ಚಾಲುಕ್ಯರು ಇಲ್ಲಿ ಕೊರೆದಿರುವ ಕೆಲವು ಶಿಲ್ಪಗಳನ್ನು ಬೇರೆ ಬೇರೆ ಗ್ರಾಮ ಪಟ್ಟಣಗಳಿಗೆ ಸ್ಥಳಾಂತರಿಸುತ್ತಿದ್ದರು ಎಂದು ಹೇಳಲಾಗುತ್ತದೆ.

ಇಲ್ಲಿನ ಕೆರೆಯ ತುಂಬ ಮತ್ತು ಕೆರೆಯ ದಡದ ಸುತ್ತಮುತ್ತ, ಗ್ರಾಮದ ತುಂಬೆಲ್ಲ ಎಲ್ಲೆಂದರಲ್ಲಿ ಚೆಲ್ಲಾಪಿಲ್ಲಿಯಾಗಿ ಅನಾಥವಾಗಿ ಬಿದ್ದಿರುವ ಶಿಲ್ಪಕಲಾ ಕೃತಿಗಳು, ವಾಸ್ತು ಶಿಲ್ಪದ ಅವಶೇಷಗಳನ್ನು ಇಲ್ಲಿ ಕಾಣಬಹುದು. ಪ್ರತಿಯೊಂದು ಕಲ್ಲಿನಲ್ಲೂ ಕಲಾಕೃತಿಯನ್ನು ಕಾಣಬಹುದಾದರೆ, ಇಲ್ಲಿನ ಶಿಲ್ಪಕಲೆ ಎಷ್ಟು ಶ್ರೀಮಂತಿಕೆಯಿಂದ ಮೆರೆದಿರಬಹುದು ಎಂಬುದು ಕಲ್ಪನೆಗೆ ಬರುತ್ತದೆ.

ಗ್ರಾಮದ ದಕ್ಷಿಣಕ್ಕೆ ಶ್ರೀಮನ್ ನಾರಾಯಣ (ವಿಷ್ಣು) ದೇವಾಲಯವಿದೆ. ಈಗಿದು ಪೂರ್ತಿ ಶಿಥಿಲಗೊಂಡಿದೆ. ಒಂದು ಮಸೀದೆಯೂ ಆಗಿದೆ. ಬಹುಶಃ ಈ ದೇವಾಲಯದಿಂದ ಊರಿಗೆ ನಾರಾಯಣಪುರ ಎಂಬ ಹೆಸರು ಬಂದಿರುವ ಸಾಧ್ಯತೆ ಕಂಡು ಬರುತ್ತದೆ.

ನಾರಾಯಣಪುರದಲ್ಲಿ ಆಕಾಶ ರಾಜ ವಾಸವಾಗಿದ್ದನೆಂದು, ಶ್ರೀಮನ್ ನಾರಾಯಣ (ಶ್ರೀನಿವಾಸ) ಪದ್ಮಾವತಿಯನ್ನು ಮದುವೆಯಾಗಿದ್ದು ಇದೇ ಸ್ಥಳದಲ್ಲಿ. ಇವರ ಮದುವೆಗೆ ಬ್ರಹ್ಮ ಈಶ್ವರ ಸೇರಿದಂತೆ ಮೂವತ್ಮೂರು ಕೋಟಿ ದೇವತೆಗಳು, ಮಹರ್ಷಿಗಳು ಆಗಮಿಸಿ ವಾದ್ಯಗಳು ಮೊಳಗುತ್ತಾ ಮದುಮಗನ ದಿಬ್ಬಣ ನಾರಾಯಣಪುರ ಪ್ರವೇಶಿಸಿಸತು. ಭೂಲೋಕ ದೇವಲೋಕವಾಯಿತು ಎಂದು ಶ್ರೀ ಲಕ್ಷ್ಮಿ ವೆಂಕಟೇಶ್ವರ ಚರಿತ್ರೆ, ಪುರಾಣದಲ್ಲಿ ಈ ಬಗ್ಗೆ ವರ್ಣನೆ ಬರುತ್ತದೆ. ಶ್ರೀಮನ್ ನಾರಾಯಣನ ಮದುವೆ ಈ ಸ್ಥಳದಲ್ಲಿ ನಡೆದಿರುವುದರಿಂದಲೇ ಇದು ನಾರಾಯಣಪುರ ಆಯಿತ್ತೆಂದೂ ಹೇಳಲಾಗುತ್ತದೆ.

ನಾರಾಯಣನ ದೇವಸ್ಥಾನದಲ್ಲಿ ನಾಲ್ಕು ಅಡಿ ಎತ್ತರದ ತಿಳಿಕಪ್ಪು ಕಲ್ಲಿನಲ್ಲಿ ಕೆತ್ತಿರುವ ಪದ್ಮಾವತಿಯ ಶಿಲ್ಪ ತುಂಬ ಸುಂದರವಾಗಿದೆ. ಸೊಂಟದಲ್ಲಿನ ಆಭರಣಗಳು ತೊಡೆಯವರೆಗೂ ಜೋತು ಬಿದ್ದಿದ್ದು, ಕೈಕಾಲುಗಳಲ್ಲಿ ಕಡಗ, ಚೈನುಗಳು, ಎಡಗೈಯಲ್ಲಿ ಗಿಣಿಯು ಕುಳಿತು ಅವಳ ಮುಖದ ಸಮೀಪ ಹೋಗಿ ಏನೋ ಸಂದೇಶ ಹೇಳುವಂತಿದೆ. ಈ ಗಿಳಿಯು ಶುಕ ಮಹರ್ಷಿಯನ್ನು ಸೂಚಿಸುತ್ತದೆಯಂತೆ. ಕೈಬೆರಳಿನಲ್ಲಿ ಸುಂದರವಾದ ಉಂಗುರಗಳು, ಬಲಗೈಯಲ್ಲಿ ನಾದ ಹೊರಡಿಸುವ ಒಂದು ವಾದ್ಯ, ಕಿವಿಯಲ್ಲಿ ಸೂಕ್ಷ್ಮ ಕೆತ್ತನೆಯ ಓಲೆಗಳು, ಕೊರಳ ಹಾರ, ನೀಳ ಕೇಶರಾಶಿ ಪ್ರತಿಯೊಂದೂ ಈ ಮೂರ್ತಿಯಲ್ಲಿ ಅತ್ಯಂತ ಸೂಕ್ಷ್ಮವಾಗಿ ಕೆತ್ತನೆ ಮಾಡಿರುವುದು ಕಂಡು ಬರುತ್ತದೆ.

ಶಿವ ದೇವಾಲಯ: ಹದಿನಾಲ್ಕು ಅರ್ಧ ಕಂಬಗಳಿಂದ ಕೂಡಿದ ಸಭಾ ಮಂಟಪವಿದ್ದು, ಮಂಟಪದ ಮಧ್ಯೆ ನಾಲ್ಕು ಕಂಬಗಳಿಂದ ಕೂಡಿದ ಮತ್ತೊಂದು ರಂಗ ಮಂಟಪ, ಮಧ್ಯದಲ್ಲಿ ಗರ್ಭಗೃಹದ ದ್ವಾರಕ್ಕೆ ಮುಖ ಮಾಡಿ ಕುಳಿತಿರುವ ನಂದಿ ಸ್ಥಾಪನೆ ಮಾಡಲಾಗಿದೆ. ಕಂಬಗಳು ಮೂರು ತಲವಿನ್ಯಾಸಗಳು ಒಂದರ ಮೇಲೆ ಒಂದು ಬಿದ್ದಂತೆ ಇದ್ದು, ಮಧ್ಯದಲ್ಲಿ ಗೋಪುರದಂತೆ ಕೆತ್ತಲಾಗಿದೆ. ವರ್ತುಲಾಕಾರದ ಈ ಕಂಬಗಳ ಮೇಲೆ ನೃತ್ಯ ಭಂಗಿಯ ಸ್ತ್ರೀ ಶಿಲ್ಪಗಳನ್ನು ಮನಮೋಹಕವಾಗಿ ಕೆತ್ತಲಾಗಿದೆ. ಈ ಸ್ತ್ರೀಯರು ಡೊಳ್ಳು, ಢೋಲಕ್‌ಗಳನ್ನು ಹಿಡಿದು ನರ್ತಿಸುತ್ತಿದ್ದಾರೆ. ಕೆಳಭಾಗದಲ್ಲಿ ಸಿಂಹದ ಮುಖ, ಕೀರ್ತಿ ಮುಖ, ನವಿಲುಗಳು, ಗಣಪ ಮತ್ತು ಆನೆಗಳ ವಿವಿಧ ಭಂಗಿಯ ಶಿಲ್ಪಗಳಿವೆ.

ಮಹಾನಂದ ಶಿಲ್ಪ: ಇಲ್ಲಿರುವ ಮಹಾನಂದ ಶಿಲ್ಪದ ಬಗ್ಗೆಯೇ ಒಂದು ಕಥೆ ಹೇಳಲಾಗುತ್ತದೆ. ಮದನಿಕೆ ಎಂಬಾಕೆ ವೇಶ್ಯಾವೃತ್ತಿಯಿಂದ ಹಣ ಸಂಪಾದನೆ ಮಾಡುತ್ತಿದ್ದಳು. ಮಹಾ ಕಾಳೇಶ್ವರ ಮಂದಿರದಲ್ಲಿ ಇವಳಿಗೊಂದು ಹೆಣ್ಣು ಮಗು ದೊರಕಿ, ಅದನ್ನು ಮನೆಗೆ ತಂದು 'ಮಹಾನಂದ' ಎಂದು ನಾಮರಣ

ಮಾಡಿದಳು. ಮಹಾನಂದೆಯು ಮಹಾದೇವನ ಶಾಪದಿಂದ ಭೂಮಿಗೆ ಬಂದ ಜಗನ್ಮಾತೆ ಪಾರ್ವತಿ ಎಂದು ಹೇಳಲಾಗುತ್ತದೆ. ಮುಂದೆ ಶಿವನನ್ನು ಪೂಜಿಸಿ ಶಾಪವಿಮೋಚನೆ ಪಡೆಯುತ್ತಾಳೆಂದು ಪುರಾಣಗಳಲ್ಲಿ ಹೇಳಲಾಗುತ್ತದೆ.

ಮಹಾನಂದೆಯ ಮೂರು ಅಡಿ ಎತ್ತರದ ಕಲ್ಲು ಶಿಲೆಯಲ್ಲಿ ಸುಂದರವಾದ ಮೂರ್ತಿಯನ್ನು ಕೆತ್ತಲಾಗಿದೆ. ಮೊಳಕಾಲು ಊರಿ ತಾಂಡವ ನೃತ್ಯ ಮಾಡುತ್ತಿರುವ ಸುಂದರ ಕೆತ್ತನೆಯ ಈ ಮೂರ್ತಿ, ಕೊರಳಲ್ಲಿನ ರುದ್ರಾಕ್ಷಿಯಿಂದಾಗಿ ಧ್ಯಾನದಲ್ಲಿ ಅತ್ಯಂತ ಭಾವಪರವಶವಾಗಿರುವಂತೆ ಕಂಡು ಬರುತ್ತದೆ.

ಈ ಗುಡಿಯನ್ನು ಸಂಪೂರ್ಣ ಪರಿಶೀಲಿಸಿದಾಗ ಇದೊಂದು ವಿಷ್ಣು ದೇವಾಲಯವಾಗಿರಬಹುದೆಂದು ಶಂಕರ ಡಿ. ಮೂಗಿ ಅವರು ಅಭಿಪ್ರಾಯ ಪಡುತ್ತಾರೆ. ವಿಷ್ಣು, ವರಾಹ, ವಿಷ್ಣುವಿನ ವಿವಿಧ ಅವತಾರಗಳು, ದೇಗುಲದಿಂದ ತಂದಿಡಲಾಗಿದೆ. ನಾರಾಯಣಪುರ ದೇವಿ ಆರಾಧನೆಯ ಕೇಂದ್ರವಾಗಿತ್ತು. ಆರನೆಯ ವಿಕ್ರಮಾದಿತ್ಯನ ರಾಣಿ ಮಲಯಮತಿ ಮಹಾದೇವಿಯ ದೇಗುಲ ಕಲ್ಯಾಣದಲ್ಲಿತ್ತು. ಆ ದೇಗುಲ ಶಿವದೇವಾಲಯ ಇರಬಹುದೇ ಮುಂತಾದ ಸಂಶಯಗಳಿಗೆ ಎಡೆಮಾಡಿ ಕೊಡುತ್ತದೆ ಎಂದು ರು.ಮ. ಷಡಕ್ಷರ ಅವರು ಅಭಿಪ್ರಾಯ ಪಡುತ್ತಾರೆ. ಮಲಯಮತಿ ಮಹಾದೇವಿಯ ದೇಗುಲ ಇದೇ ಇದ್ದಿದ್ದರೆ ಅವಳ ಮೂರ್ತಿ ಇಲ್ಲೇಕಿಲ್ಲ? ಇವಳೊಂದಿಗೆ ಆರನೆಯ ವಿಕ್ರಮಾದಿತ್ಯನ ಮೂರ್ತಿಯೂ ಇರಬೇಕಿತ್ತು. ಅಥವಾ ಅವರಿಬ್ಬರ ಆಳ್ವಿಕೆಯ ಚಿತ್ರಗಳ ಕೆತ್ತನೆ ಇರಬೇಕಿತ್ತು. ಈ ಬಗ್ಗೆ ಇನ್ನೂ ಸಂಶೋಧನೆಯ ಆಗತ್ಯವಿದೆ.

ಈ ಶಿವದೇವಾಲಯದಂತೆ ಒಂಭತ್ತು ದೇವಾಲಯಗಳು ಕಲ್ಯಾಣದಲ್ಲಿರಬೇಕಿತ್ತು. ಅವುಗಳಲ್ಲಿ ಇಂದಿನವರೆಗೂ ಒಂದೂ ಕೂಡ ಅವುಗಳ ಮೂಲ ಸ್ಥಳ ಎಲ್ಲಿರುವುವು ಎಂದು ಅರ್ಥವಾಗುವುದಿಲ್ಲ. ಮಹಾರಾಷ್ಟ್ರದ ಉಮರ್ಗಾದಲ್ಲಿದ್ದು, ಅಲ್ಲಿನ ಸರ್ಕಾರ ಇತ್ತೀಚೆಗೆ ಜೀರ್ಣೋದ್ಧಾರ ಮಾಡಿದೆ ಎಂದು ನೀಲಾಂಬಿಕ ಶೇರಿಕಾರ ಅವರ ಅಭಿಪ್ರಾಯವಾಗಿದೆ.

ಇತ್ತೀಚೆಗೆ ದೊರೆತಿರುವ ಶಿಲಾಶಾಸನಗಳ ಆಧಾರದಿಂದ ನಾರಾಯಣಪುರದಲ್ಲಿ 108 ದೇವಾಲಯಗಳು ನಿರ್ಮಾಣ ಆಗಿದ್ದುವು. ಇಲ್ಲಿನ ಎಲ್ಲಾ ವಾಸ್ತು ಶಿಲ್ಪಗಳು ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ನಿರ್ಮಾಣವಾದವುಗಳು ಎಂದು ಕಲ್ಯಾಣರಾವ ಪಾಟೀಲ ಅವರ ಲೇಖನದಿಂದ ತಿಳಿದು ಬರುತ್ತದೆ. ಆದರೆ ಬಸವಕಲ್ಯಾಣ ಭಾಗದಲ್ಲಿ ಆರನೆಯ ವಿಕ್ರಮಾದಿತ್ಯನ ಕಾಲದ ಯಾವುದೇ ಶಿಲಾಶಾಸನವು ಯಾವುದೇ ದೇವಾಲಯಕ್ಕೆ ದತ್ತಿದಾನ ಕೊಟ್ಟಿದ್ದು ಮತ್ತು ನೆನಪಿಗಾಗಿ ನಿರ್ಮಿಸಿರುವ ನಿರೂಪಣೆಗಳನ್ನು ಹೇಳುವದಿಲ್ಲ.

ನಾರಾಯಣಪುರದಲ್ಲಿ ಮದುವೆ ಹಂದರ ಗಟ್ಟಿವಾಳಯ್ಯನ ದೇವಾಲಯ, ಮೃತ್ಯುಂಜಯ ಮಂದಿರ, ಭವರಯ್ಯನ ದೇವಾಲಯ, ಮುದ್ದಯ್ಯನ ಮಂದಿರ, ಕಾಶಿಪತಿ ರಾಜದಂಪತಿ ಮಂದಿರ ಸಕಳೇಶ ಮಾದವರಸ ದೇವಾಲಯ, ಮೀನ ಮಂಟಪ, ಹನುಮಾನ ದೇವಾಲಯ, ಭವಾನಿ ದೇವಾಲಯ, ಹಾಲ ಬಸವಣ್ಣ ದೇವಾಲಯ, ನವನಾಥ ಕೆರೆ ಮುಂತಾದ ಅಪಾರ ಸಂಖ್ಯೆಯಲ್ಲಿ ಪ್ರತಿಯೊಂದೂ ಐತಿಹಾಸಿಕ ಕಥೆಗಳನ್ನು ಹೇಳುತ್ತವೆ. *(ವಿ.ಎಂ.ಪಿ.)*

ನಾಲವಾರ ಕೋರಿಸಿದ್ದೇಶ್ವರ ಜಾತ್ರೆ: ಚಿತ್ತಾಪುರ ತಾಲ್ಲೂಕಿನ ನಾಲವಾರದಲ್ಲಿ ಜರುಗುವ ಪ್ರಸಿದ್ಧ ಜಾತ್ರೆ. ಇಲ್ಲಿನ ಸಂಸ್ಥಾನ ಮಠ ಸುಕ್ಷೇತ್ರ ಕೇಂದ್ರ ಬಿಂದುವಾಗಿ, ಚೇತನ ಶಕ್ತಿಯಾಗಿ, ದೀನದಲಿತರ ಕಲ್ಪತರುವಾಗಿ ಬೆಳೆದಿದೆ. 1126ರಲ್ಲಿ ಕಲ್ಯಾಣದ ಚಾಳುಕ್ಯ ಅರಸ 6ನೆಯ ವಿಕ್ರಮಾದಿತ್ಯನ ಕಾಲದಲ್ಲಿ ಗಾಣದ ಮಲ್ಲಶೆಟ್ಟಿಯು ಇಲ್ಲಿ ಮೂಲಸ್ಥಾನ ದೇವರ ದೇಗುಲವನ್ನು ಮಾಡಿಸಿದನಲ್ಲದೆ ಸತ್ರಕ್ಕೆ ನಿವೇಶನ, ಹಾಗೂ ಅನ್ನದಾನಕ್ಕೆಂದು ಎರಡು ಮತ್ತರು ಭೂಮಿಯನ್ನು ದಾನವಾಗಿ ಬಿಟ್ಟ ಬಗ್ಗೆ ಶಾಸನಗಳಿಂದ ತಿಳಿದುಬರುತ್ತದೆ.

ಈಗಿನ ಸಂಸ್ಥಾನ ಮಠದ ಅಧ್ಯಕ್ಷರು ಷ.ಬ್ರ. ತೋಟೇಂದ್ರ ಶಿವಚಾರ್ಯ ಸ್ವಾಮಿಗಳು. ಶ್ರೀಯವರು 'ಬಾಲತಪಸ್ವಿ'ಯೆಂಬ ಬಿರುದು ಪಡೆದವರು. ಮಠದಲ್ಲಿ ಪ್ರತಿದಿನ ಕರ್ತೃ ಗದ್ದುಗೆಗೆ ರುದ್ರಾಭಿಷೇಕ, ಪೂಜೆಗಳು, ನಡೆದು ಕೋರೆ ಮೀಸೆ ಸಿದ್ದೇಶ್ವರ ಮೂರ್ತಿ ಗಂಭೀರವಾಗಿ ಪುಷ್ಪ, ಬಿಲ್ವ ಪತ್ರಿಗಳಿಂದ ಅಲಂಕೃತಗೊಂಡು ಶೋಭಾಯ ಮಾನವಾಗಿ ಎದ್ದು ಕಾಣುವದು. ಗರ್ಭಗುಡಿಯಲ್ಲಿ ಯಾವಾಗಲು ಪಣತಿ, ಸಮೆಯ ದೀಪಗಳು ಉರಿಯುತ್ತ ಮಠವನ್ನು ಪ್ರಜ್ವಲಗೊಳಿಸುತ್ತದೆ. ಈ ಮಠದಲ್ಲಿ ಪ್ರತಿವರ್ಷ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಅಲ್ಲದೆ ಅನಾದಿ ಕಾಲದಿಂದಲೂ ಇಲ್ಲಿ ದಾಸೋಹ ಸಹ



ಕೋರಿಸಿದ್ಧೇಶ್ವರ ದೇವಾಲಯ – ನಾಲವಾರ

ಯಾವಾಗಲು ನಡೆಯುತ್ತ ಬಂದಿದೆ. ಪ್ರತಿ ಅಮವಾಸ್ಯೆ ದಿನದಂದು ಶಿವಾನುಭವ ಚಿಂತನೆ ನಡೆಯುತ್ತಲೆಯಿರುತ್ತದೆ.

ಕೋರಿಸಿದ್ದೇಶ್ವರ ಜಾತ್ರೆ ಪ್ರತಿವರ್ಷ ಅವರಾತ್ರಿ ಅಮವಾಸ್ಯೆ ವೇಳೆಯಲ್ಲಿ ಜರುಗುತ್ತದೆ. ಜಾತ್ರೆಯಲ್ಲಿ ಪಲ್ಲಕ್ಕಿ, ರಥೋತ್ಸವ (ತೇರು), ಭಜನೆ, ಗೀಗಿ ಪದ, ಜಾನಪದ ನೃತ್ಯ, ನಾಟಕಗಳು, ಕುಸ್ತಿಗಳು ಮತ್ತು ದನಗಳ (ಎತ್ತು) ಪ್ರದರ್ಶನ ಇತ್ಯಾದಿಗಳು ನಡೆದು ಭಕ್ತರಿಗೆಲ್ಲರಿಗೂ ಮನರಂಜನೆ ನೀಡುತ್ತವೆ. ಈ ಜಾತ್ರೆಯ ಇನ್ನೊಂದು ಪ್ರಮುಖ ವೈಶಿಷ್ಟ್ಯವೇನೆಂದರೆ ತನಾರತಿ ಉತ್ಸವ. ಈ ಉತ್ಸವವು ಜಾತ್ರೆಯ ಹಿಂದಿನ ರಾತ್ರಿಯಲ್ಲಿ ಪ್ರಾರಂಭವಾಗಿ ಬೆಳಗಿನ ಜಾವದಲ್ಲಿ ಮುಕ್ತಾಯವಾಗುತ್ತದೆ. ಉತ್ಸವದಲ್ಲಿ ಶ್ರೀಗಳು ವಿಶೇಷ ಉಡುಪು ತೊಟ್ಟು ಬರಿಗಾಲಿನಿಂದ ಕರ್ತೃ ಗದ್ದುಗೆಗೆ ಐದು ಸುತ್ತು ಹಾಕುತ್ತಾರೆ. ಭಕ್ತರು ಅದರಲ್ಲಿ ವಿಶೇಷವಾಗಿ ಹೆಂಗಳೆಯರು ಗೋದಿ ಹಿಟ್ಟಿನ ಕಣಕದಿಂದ ಮಾಡಿದ ಪಣತಿಯಲ್ಲಿ ತೈಲಹಾಕಿ ದೀಪವನ್ನು ಪ್ರಜ್ವಲಿಸಿ ತಲೆಯ ಮೇಲೆ ಇಟ್ಟುಕೊಂಡು ಶ್ರೀಗಳ ಹಿಂದೆ ನಡೆದು ಬರುತ್ತಾರೆ. ಬಾಜಾ–ಭಜಂತ್ರಿ, ಡೊಳ್ಳು, ಹಲಗೆ, ಮದ್ದಲೆ, ಪುರವಂತರ ಕುಣಿತ ದೊಂದಿಗೆ ಶ್ರೀಗಳಿಗೆ ಜೈಕಾರ ಹಾಕುತ್ತ ತನು–ಮನ ದೇವರಿಗೆ ಅರ್ಪಿಸುತ್ತ ತನಾರತಿ ಬೆಳಗಿ ಸಂತೃಪ್ತ ರಾಗುತ್ತಾರೆ. ತನಾರತಿ ಉತ್ಸವವು ವರ್ಷದಲ್ಲಿ ಮೂರು ಸಲ ನಡೆಯುತ್ತದೆ. ಅವರಾತ್ರಿ ಅಮವಾಸ್ಯೆ, ಅಕ್ಷತದಿಗೆ ಅಮವಾಸ್ಯೆ ಮತ್ತು ಮಣ್ಣೆತ್ತಿನ ಅಮವಾಸ್ಯೆ ದಿನಗಳಂದು ಜರುಗುವುದು.

(ಆರ್.ಸಿ.ಎನ್.)

ನಿ

ನಿಪ್ಪಾಣಿ: ಚಿತ್ತಾಪುರ ತಾಲ್ಲೂಕಿನ ನಿಪ್ಪಾಣಿ ಎಂಬ ಊರು ಚಾರಿತ್ರಿಕ ಹಾಗೂ ಸಾಂಸ್ಕೃತಿಕವಾಗಿ ಮಹತ್ವದ ಸ್ಥಳವಾಗಿದೆ. ಶಾಸನಗಳಲ್ಲಿ 'ಸುಪಾಣಿ' ಎಂದೇ ಈ ಊರು ದಾಖಲಾಗಿದ್ದು. ಮುಂದೆ ಈ ಊರಿನ ಹೆಸರು ನಿಪ್ಪಾಣಿಯಾಗಿ ಪರಿವರ್ತಿತಗೊಂಡಿದೆ. ಊರಲ್ಲಿ ಮಲ್ಲಿಕಾರ್ಜುನ ಗುಡಿ ಎಂದು ಹೇಳುವ ಆಯತಾಕಾರದ ಪ್ರಾಚೀನ ಮಂಟಪವಿದೆ. ಊರಲ್ಲಿ ರೇವಣಸಿದ್ದೇಶ್ವರ, ಹನುಮಂತ, ಸಿದ್ಧಲಿಂಗ, ಬೀರದೇವರು, ಅಂಬಾ, ಭವಾನಿ, ಲಕ್ಷ್ಮೀ, ದ್ಯಾವಮ್ಮ, ವಿಠಲ, ಮರಗಮ್ಮ, ಮುಂತಾದ ಈಚಿನ ಗುಡಿಗಳಿದ್ದು, 'ನಂದೇಸಾಬ' ದರ್ಗಾ ಕೂಡವಿದೆ. *(ಪಿ.ಕೆ.ಕೆ.)*

ನೀಲಾಂಬಿಕೆ ಗವಿ: ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು, ಸಾಮಾಜಿಕ ಹಾಗೂ ವೈಚಾರಿಕ ಕ್ರಾಂತಿ ನಡೆಸಿದ ಐತಿಹಾಸಿಕ ಬಸವ ಕಲ್ಯಾಣದ ಸುತ್ತ, ಈ ಶರಣರ ತಪೋನುಷ್ಠಾನದ ಅವಶೇಷಗಳಿನ್ನೂ ಜೀವಂತವಾಗಿವೆ. ಪ್ರಶಾಂತ ವಾತಾವರಣ, ಶುದ್ಧವಾದ ನೀರು, ನದಿ–ಬೆಟ್ಟಗಳು, ಗವಿಗಳಿಂದ ಮನುಷ್ಯನ ಮೈಮನವನ್ನು ಮುದಗೊಳಿಸುವ ತಾಣಗಳು. ಇಂಥ ಪರಿಶುದ್ಧ ವಾತಾವರಣದಲ್ಲಿ ತಪಗೈದ ಮಹಾನುಭಾವರೆಲ್ಲ, ಸಮಾಜಕ್ಕೆ ಪರಿಶುದ್ಧ ಮಾರ್ಗದರ್ಶನ ಮಾಡಿದ ಪುಣ್ಯಭೂಮಿ ಇದು.

ಹನ್ನೆರಡನೆಯ ಶತಮಾನದ ಶಿವಶರಣರು ತಮ್ಮ ಮನೆದೇವನ ಆರಾಧನೆ; ಶಿವಯೋಗ ಹಾಗೂ ಪೂಜಾನುಷ್ಠಾನಕ್ಕೆ ಗವಿಗಳನ್ನು ಆರಿಸಿಕೊಂಡು ಪುಣ್ಯ ಸ್ಥಳಗಳನ್ನಾಗಿ ಪರಿವರ್ತಿಸಿದರು. ಬಸವೇಶ್ವರರ ದ್ವಿತೀಯ ಪತ್ನಿ ನೀಲಾಂಬಿಕೆ ತಾಯಿ ಅವರು, ತಮ್ಮ ಇಷ್ಟಲಿಂಗಾರ್ಚನೆ ಹಾಗೂ ಶಿವಧ್ಯಾನಕ್ಕೆ ಆರಿಸಿಕೊಂಡ ಪವಿತ್ರ ಗವಿ, ಐತಿಹಾಸಿಕ ಕ್ರಾಂತಿನಗರ ಬಸವಕಲ್ಯಾಣದಲ್ಲಿ ಇಂದಿಗೂ ಸಾಕ್ಷಿಯಾಗಿ ನಿಂತಿದೆ. ಬಸವೇಶ್ವರರ ಅರಿವಿನ ಮನೆ ಗವಿಯ ಒಂದು ಕಿ.ಮೀ. ಅಂತರದಲ್ಲಿ ಜಗನ್ಮಾಯೆ ನೀಲಾಂಬಿಕೆ ತಾಯಿಯವರ ಗವಿ ಇದೆ.

ಪ್ರಶಾಂತ ಹಾಗೂ ನಿಶ್ಯಬ್ಧ ಪರಿಸರದಿಂದ ಕೂಡಿದ ಗವಿ, ಇಂದಿಗೂ 12 ನೆಯ ಶತಮಾನದ ಶರಣರ ಕ್ರಾಂತಿಯ ಸಂಗೀತವನ್ನು ಗುನುಗುನಿಸುತ್ತದೆ. ತನ್ನನ್ನು ತಾನು ಪೂಜಿಸಿಕೊಳ್ಳುವುದೇ ನಿಜವಾದ ಪೂಜೆ ಎಂಬ ವಿಶ್ವವಿನೂತನ ತತ್ವ ಪ್ರತಿಪಾಲಿಸಿದ ಶರಣರು, ತಮ್ಮನ್ನು ತಾವು ಪೂಜಿಸಿಕೊಳ್ಳಲು ತಮ್ಮ ಪ್ರತಿರೂಪವಾದ ಇಷ್ಟಲಿಂಗವನ್ನು ತಮ್ಮ ಹೃದಯ ಕಮಲದ ಮೇಲೆ ಹರಿಸಿ, ಪ್ರತಿನಿತ್ಯ ಪೂಜಿಸುತ್ತಿದ್ದರು. ಏಕಾಗ್ರತೆಯಿಂದ ಪೂಜಿಸುವ ಇಷ್ಟಲಿಂಗವೇ ಶರಣರ ಮನದೈವ ಹಾಗೂ ಕುಲದೈವವೂ ಆಗಿತ್ತು. ಇಷ್ಟಲಿಂಗವೇ ಲೋಕಕ್ಕೆ ಬೆಳಕು ನೀಡಿ ಆದರ್ಶ ಬದುಕು ರೂಪಿಸಿರುವ ತಾರಕ ಮಂತ್ರವಾಗಿತ್ತು.

ಬಸವೇಶ್ವರರ ಸಮಾಜದ ಸಮಗ್ರ ವಿಕಾಸದ ಕ್ರಾಂತಿಯ ತತ್ವ ಕಂಬವಾಗಿ ನಿಂತ ನೀಲಾಂಬಿಕೆ ತಾಯಿ ಅವರು, ಬಸವಣ್ಣನವರ ಕಾಯಕ ದಾಸೋಹ, ಶರಣರ ಸಾಮೂಹಿಕ ಇಷ್ಟಲಿಂಗಾರ್ಚನೆ, ಅನುಭಾವ ಚಿಂತನೆ ಮುಂತಾದ ಕ್ರಿಯೆ ಪ್ರಕ್ರಿಯೆಗಳಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡಿರುತ್ತಿದ್ದರು. 'ಶರಣರ ತೊತ್ತಿನ ಮಗಳು ನಾನು' ಎಂಬ ಮಾತನ್ನೇ ತಮ್ಮ ವಚನದಲ್ಲಿ ಹೇಳಿಕೊಂಡ ತಾಯಿ, ಶರಣರ ಸೇವೆಯೇ ನನ್ನ ಪರಮಗುರು ಎಂದು ಸಾರಿದರು.

ಬಸವಣ್ಣನವರು ಮೌಖಿಕ ದೃಷ್ಟಿಯಿಂದ ತಮಗೆ ಪತಿಯಾದರು. ಆಧ್ಯಾತ್ಮಿಕವಾಗಿ ಅವರು ನನ್ನ ಮೇರು ಗುರು, ಲೋಕ ಗುರು ಎಂದು ಸಾರಿದರು. ಶರಣರ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಕ್ರಾಂತಿಗೆ ತಮ್ಮನ್ನು ತಾವು ತೊಡಗಿಸಿಕೊಂಡರು. ಜಾತಿರಹಿತ, ವರ್ಣರಹಿತ, ವರ್ಗರಹಿತ ಸಮಾಜ ನಿರ್ಮಾಣ ಆಂದೋಲನದಲ್ಲಿ ನೀಲಾಂಬಿಕೆ ತಾಯಿ ಅವರೂ ಪ್ರಮುಖ ಪಾತ್ರ ವಹಿಸಿದ್ದರು.

ತಮ್ಮ ಆಧ್ಯಾತ್ಮ ಸಾಧನೆಯ ಪ್ರಮುಖ ಪುಣ್ಯ ನೆಲೆ ಮಾಡಿ–ಕೊಂಡಿದ್ದ ನೀಲಮ್ಮ ತಾಯಿಯವರ ಗವಿ ಇಂದು ಬಸವಕಲ್ಯಾಣದಲ್ಲಿ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸಾಕ್ಷಿಯಾಗಿದೆ. ಗವಿಯ ಒಳಗೆ ನಿಂತರೆ, ಕುಳಿತರೆ 12 ನೆಯ ಶತಮಾನದ ಕ್ರಾಂತಿಯ ಬೆಳಗು, ನೆನಪಾಗುತ್ತದೆ. ಆದರೆ, ಇಂದು ಈ ಮಹಾನ್ ಮಾತೆಯ ಗವಿಯ ಸುತ್ತಮುತ್ತಲೂ ದಟ್ಟ ಮುಳ್ಳು ಗಿಡಗಳ ಕಾಡು ಬೆಳೆದಿದೆ. ಗವಿಯಸ್ಥಿತಿಯೂ ತುಂಬ ದುರವಸ್ಥೆಯಲ್ಲಿದೆ. ಶರಣ–ರಕ್ರಾಂತಿ ಕೇಂದ್ರ ತಪಸ್ಸಿನ ತಾಣವಾದ ಈ ಗವಿಯ ಸುತ್ತಲೂ ಅಭಿವೃದ್ಧಿಗೊಳಿಸಿ, ರಕ್ಷಿಸುವದು ಅಗತ್ಯವಾಗಿದೆ.

(ಡಿ.ಪಿ.)

ನು

ನುಲಿಯ ಚಂದಯ್ಯನ ಗವಿ: ಕಾಯಕದ ಪರಿಭಾಷೆಗೆ ಅರ್ಥಪೂರ್ಣ ಮೌಲ್ಯವನ್ನೊದಗಿಸಿದ ನುಲಿಯ ಚಂದಯ್ಯ. ಈತ 12ನೆಯ ಶತಮಾನದ ಶಿವಶರಣ. ತ್ರಿಪುರಾಂತಕ ಕೆರೆಯ ದಂಡೆಯಲ್ಲಿ ಈತನ ಗವಿ ಇದೆ. ಇಲ್ಲಿಯೇ ಆತ ವಾಸಿಸುತ್ತಿದ್ದನೆಂದು ಹೇಳಲಾಗುತ್ತಿದೆ. ಮೆದೆಹುಲ್ಲಿನಿಂದ ಕಣ್ಣಿ, ನೆಲು, ನುಲಿ ಹೊಸೆದು ಮಾರಾಟ ಮಾಡುತ್ತಿದ್ದ. ಚಂದಯ್ಯ ನುಲಿಯ ಕಾಯಕಜೀವಿಯಾಗಿದ್ದ. ತನ್ನ ನಿತ್ಯದ ಕಾಯಕ ಕೈಗೊಂಡು ಬಸವಕಲ್ಯಾಣದಲ್ಲಿ ಜಂಗಮ ದಾಸೋಹ ಮಾಡಿ–ಕೊಂಡಿದ್ದ. ಜೊತೆಗೆ ಅನುಭವ ಮಂಟಪದಲ್ಲಿ ನಡೆಯುವ ಆಧ್ಯಾತ್ಮಿಕ ಚರ್ಚೆ, ವಿಚಾರ ಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದ. ಅಲ್ಲಮಪ್ರಭು, ಬಸವಣ್ಣ, ಮಡಿವಾಳ ಮಾಚಿದೇವ ಮುಂತಾದವರ ಜೊತೆ ಚರ್ಚೆ ನಡೆಸಿದ್ದುದಕ್ಕೆ ನಮಗಿಂದು ಆತನ ವಚನಗಳೇ ಸಾಕ್ಷಿಯಾಗಿವೆ.

ನುಲಿಯ ಕಾಯಕದಲ್ಲಿಯೇ ಕೈಲಾಸ ಕಾಣುವ, ಜಂಗಮ ದಾಸೋಹವೇ ಪರಮಪದವೆಂದು ಬಾವಿಸಿದ ಈತ ಆದರ್ಶ ಶಿವಶರಣ. ಲಿಂಗವನ್ನೇ ತೊತ್ತಾಗಿಸಿಕೊಂಡ ಅಪರೂಪದ ಶಿವಶರಣ. ಗಂಜೀಕೆರೆ ಮತ್ತು ಬತ್ತದ ಬಾವಿಯ ನಿರ್ಮಾತೃ. ಲಿಂಗಕ್ಕಿಂತ ಜಂಗಮಕ್ಕೆ ಮನ್ನಿಸಿದ ದಾಸೋಹಿ. ಅಂತರಂಗದ ವೈರಿಗಳನ್ನು ಸದೆ ಬಡಿದ ಕಾಯಕಯೋಗಿ, ಬಹಿರಂಗದ ವೈರಿಗಳನ್ನು ಹೊಡೆದಟ್ಟಿದ ಕಲ್ಯಾಣ ಕ್ರಾಂತಿಯ ವೀರ ಶಿವಶರಣ.

ಶೂನ್ಯ ಸಂಪಾದನೆಯಲ್ಲಿ ಸಿದ್ಧವೀರಣ್ಣೊಡೆಯರು ನಿರೂಪಿಸಿದಂತೆ 'ಬಸವಣ್ಣನ ಭಕ್ತಿ, ಮಡಿವಾಳನ ನಿಷ್ಠೆ, ಚೆನ್ನಬಸವಣ್ಣನ ಸಾವಧಾನ ಜ್ಞಾನ, ಸತ್ಯಣ್ಣನ ಸ್ವಾನುಭಾವಪ್ರಭೆ, ಪ್ರಭುದೇವರ ಸದಾನಂದ ಪರಮಕಾಷ್ಠೆ, ಅಜಗಣ್ಣನ ಸಮರಸದೈಕ್ಯತ್ವ ಇವೆಲ್ಲ ಒಂದುಗೂಡಿ ಒಂದು ಆಕಾರವಾದಂತೆ ಇದ್ದಾನೆ ನುಲಿಯ ಚಂದಯ್ಯ' ಎಂಬುವಲ್ಲಿ ಚಂದಯ್ಯನ ಪರಿಪೂರ್ಣ ವ್ಯಕ್ತಿತ್ವವನ್ನು ಮನಗಾಣಬಹುದು. ಆತನ ಬದುಕಿನಲ್ಲಿ ನಡೆದ ಲಿಂಗ ಪ್ರಕರಣವು ಕಾಯಕ ಸಿದ್ಧಾಂತಕ್ಕೆ ಹಿಡಿದ ಕನ್ನಡಿಯಾಗಿದೆ. "ಕಾಯಕದಿಂದಲೇ ಜೀವನ್ಮುಕ್ತಿ" ಎಂದು ಸಾರಿದ ಕಾಯಕಜೀವಿ.

ನುಲಿಯ ಚಂದಯ್ಯನ ಅಪರೂಪದ ಮೂರ್ತಿಯನ್ನು ಬಸವಕಲ್ಯಾಣದ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಇದನ್ನು 13ನೆಯ ಶತಮಾನದಲ್ಲಿ ಕೆತ್ತಿರಬಹುದೆಂದು ಊಹಿಸಬಹುದಾಗಿದೆ. ನುಲಿಯ ಚಂದಯ್ಯ ಮುಂದಡಿ ಇಟ್ಟು ನಿಂತ ಭಾವ ಭಂಗಿಯ, ಸಮರ್ಪಣಾ ಶೈಲಿಯ ಈ ಉಬ್ಬು ಶಿಲ್ಪ ತುಂಬಾ ಆಕರ್ಷಕವಾಗಿದೆ. ಕೊರಳಲ್ಲಿ ರುದ್ರಾಕ್ಷಿ ಮಾಲೆ, ತೋಳಿನಲ್ಲಿ ರುದ್ರಾಕ್ಷಿ ಕಟ್ಟುಗಳಿವೆ. ಬಲಗೈಯಲ್ಲಿ ಖಡ್ಗ ಹಿಡಿದುಕೊಂಡು ಎಡಗೈಯ ತೋಳಿನಿಂದ ರಕ್ತ ಕೊಡುವಂತೆ ಇರುವ ಶಿಲ್ಪವು ಜನಪದ ಐತಿಹ್ಯವೊಂದನ್ನು ಹೇಳುತ್ತದೆ; ಒಮ್ಮೆ ಸಾಧುವೇಷದಲ್ಲಿ ಮಲ್ಲಿಕಾರ್ಜುನ ದೇವರು ಆಕಳೊಂದನ್ನು ಹೊಡೆದುಕೊಂಡು ಹೋಗುತ್ತಿದ್ದುದನ್ನು ಕಂಡ ನುಲಿಯ ಚಂದಯ್ಯ 'ಎಲ್ಲಿಗೆ ಒಯ್ಯುತ್ತಿದ್ದೀರಿ ಈ ಆಕಳನ್ನು' ಎಂದು ಪ್ರಶ್ನಿಸುತ್ತಾನೆ. ಇದನ್ನು ಕೊಂದು ರಕ್ತ ತರಬೇಕಾಗಿದೆ ಎಂದು ಅವರಿಂದ ಉತ್ತರ ಬರುತ್ತದೆ. ಆಗ ಚಂದಯ್ಯ 'ನಿಮಗೆ ನನ್ನ ರಕ್ತ ಕೊಟ್ಟರೆ ಈ ಆಕಳನ್ನು ಬಿಟ್ಟು ಬಿಡುತ್ತೀರಾ' ಎಂದು ಹೇಳಿದಾಗ 'ಆಗಬಹುದು' ಎಂಬ ಉತ್ತರ ಬರುತ್ತದೆ. ಹೀಗೆ ತನ್ನ ರಕ್ತವನ್ನು ಕೊಟ್ಟು ಆಕಳನ್ನು ರಕ್ಷಿಸಿದ ಚಂದಯ್ಯನ ಬಗೆಗೆ ಜನಪದರಲ್ಲಿ ಅಪಾರ ಗೌರವವಿದೆ.

ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರವು ಇದನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಿದೆ. ಗವಿಯ ಮುಂದೆ ಸಭಾಮಂಟಪ ಮತ್ತು ಸುಂದರವಾದ ಪ್ರವೇಶದ್ವಾರವನ್ನು ನಿರ್ಮಿಸಿದೆ. ಚಂದಯ್ಯನ ಎದುರುಗಡೆ ಚಿಕ್ಕ ಬಾವಿಯೊಂದಿದೆ. ಅದರ ನೀರು ತುಂಬಾ ಸಿಹಿ. ಬಾವಿಯ ಪಕ್ಕದಲ್ಲೊಂದು ಬೇವಿನ ಮರವಿದ್ದು ಅದರ ಎಲೆಗಳು ಕಹಿಯಾಗದಿರುವುದು ಆಶ್ಚರ್ಯದ ಸಂಗತಿ.

(ಆರ್.ಜಿ.)

ನೂ

ನೂರೊಂದಪ್ಪ ಹೆರೂರ: ಬಲಾಯಟದ ಕಲಾವಿದ. ಈ ಕಲೆಯ ಹವ್ಯಾಸವನ್ನು ಚಿಕ್ಕವಯಸ್ಸಿನಲ್ಲಿಯೇ ರೂಢಿಸಿಕೊಂಡರು. ಆಗ ಅವರಿಗೆ ಹನ್ನೆರಡರ ಪ್ರಾಯ. ಬಯಲಾಟದಲ್ಲಿ ಗಣಪತಿ, ಸಾರಥಿ ಮತ್ತಿತರ ಪಾತ್ರ ಮಾಡಿದ್ದು, ಹಿಮ್ಮೇಳಕ್ಕೆ ಸೇರಿ ಹಾಡಿದ್ದು ಎಲ್ಲವೂ ಜನಪ್ರಿಯ. ಸಾರಥಿಯ ದೀರ್ಘ ಮಾತುಗಳನ್ನು ಆಡಲು ಹೆಸರುವಾಸಿಯಾಗಿದ್ದರು. ಬಯಲಾಟದ ಪಾತ್ರಾಭಿನಯದೊಂದಿಗೆ ಏಕತಾರಿ ಪದ ಹಾಡುವುದರಲ್ಲೂ ಇವರು ಪ್ರಸಿದ್ಧರು. ಆಸಕ್ತರಿಗೆ ಬಯಲಾಟದ ಕುಣಿತ ಕಲಿಸುತ್ತಿರುವ ಅವರು ಈಗ ಕಣ್ಣು ಕಾಣದೇ ಮಗನ ಬಳಿ ಕಲಬುರ್ಗಿಯಲ್ಲಿ ನೆಲೆಸಿದ್ದಾರೆ.

(ಜಿ.ಆರ್.ಟಿ.)

ನೆ

ನೆಲಕ್ಕಿ ಸಾರಿಸುವುದು: ಮಾನವ ಬದುಕಿನ ವಿಶಿಷ್ಟ ಕಲಾಚರಣೆಗಳಲ್ಲಿ ಒಂದು. ಭಕ್ತಿ ಭಾವದಿಂದ ಮೂಡಿ ಬಂದ ಅನೇಕ ಆಚರಣೆಗಳಲ್ಲಿ, ಇಂದಿಗೂ ಪ್ರಚಲಿತದಲ್ಲಿರುವ ಈ ಪದ್ಧತಿ ಧಾರ್ಮಿಕ ಆಚರಣೆಗಳಲ್ಲಿ ಸೇರಿಕೊಂಡಿದೆ. ಸಾರಿಸು ಎಂಬ ಪದ 'ಬಳಿ, ಲೇಪಿಸು, ಹಚ್ಚು, ಸವರು, ನಯಗೊಳಿಸು, ನೀರಿನಿಂದ ನೆಲವನ್ನು ಸ್ವಚ್ಛಗೊಳಿಸು' ಎಂಬಂತಹ ಅನೇಕ ಅರ್ಥಗಳನ್ನು ಒಳಗೊಂಡಿದೆ.

ಧಾರ್ಮಿಕ ಹಬ್ಬ-ಹರಿದಿನಗಳಲ್ಲಿ, ಮದುವೆ, ಮುಂಜಿ, ತೊಟ್ಟಿಲು ಸಮಾರಂಭದಂತಹ ಮಂಗಳಮಯ ಸನ್ನಿವೇಶಗಳಲ್ಲಿ, ದೀಕ್ಷೆ- ಸಂಸ್ಕಾರ-ಗುರು ಬೋಧನೆಗಳನ್ನು ಪಡೆದುಕೊಳ್ಳುವಂತಹ ಧರ್ಮ ಸಂಸ್ಕಾರ ಕ್ರಿಯಾಚರಣೆಗಳ ಸಂದರ್ಭದಲ್ಲಿ, ಯೋಗಿ-ಸಂತ-ಸಾಧು-ಸತ್ಪುರುಷ-ಸ್ವಾಮಿ-ಮಠಾಧೀಶ ಮುಂತಾದ ವಿಭೂತಿ ಪುರುಷರು ಮನೆಗೆ ಆಗಮಿಸುವಲ್ಲಿ, ತೆನೆಗಳನ್ನು ತುಳಿಸಿ ರಾಶಿ ಧಾನ್ಯಗಳನ್ನು ಸಂಗ್ರಹಿಸುವ ಕಣದಲ್ಲಿ, ಶುಭ ವಿವಾಹಕ್ಕೆಂದು ಹಾಕುವ ಹಂದರದ ಜಾಗದಲ್ಲಿ, ದೀಪಗಳನ್ನು ಹಚ್ಚಿಡುವ ವಿಶೇಷ ಸ್ಥಳದಲ್ಲಿ ಮುಂತಾದ ಶುಭ ಮಂಗಳೋತ್ಸವದಲ್ಲಿ ಭಕ್ತಿಯಿಂದ ನೆಲ ಸಾರಿಸುವ ಆಚರಣೆಯು ಪ್ರಚಲಿತದಲ್ಲುಂಟು.

ನೆಲಕ್ಕೆ ಸಾರಿಸುವ ನಿತ್ಯ ಪದ್ಧತಿಗಳು: ಹೆಬ್ಬಾಗಿಲಿನ ಮುಂದಿನ ಭಾಗವನ್ನು ನಿತ್ಯ ಸಾರಿಸಲೇಬೇಕು ಎಂಬುದು ಸತ್ಸಂಪ್ರದಾಯ ಆಗಿದೆ, ಒಲೆ ಹಾಗೂ ಒಲೆ ಮುಂದಿನ ಮತ್ತು ಅಂಗಳದ ಮುಂದಿನ ಭಾಗವನ್ನು ಮರೆಯದೇ ಸಾರಿಸುವುದು, ವಾಸಿಸುವ ಮನೆಯ ಎಲ್ಲಾ ಕೋಣೆಗಳನ್ನು ಸಾರಿಸುವುದು, ಪ್ರತಿ ಸೋಮವಾರ, ಮಂಗಳವಾದ, ಗುರುವಾರ, ಶುಕ್ರವಾರ ಹಾಗೂ ಶನಿವಾರ ಈ ವಾರಗಳನ್ನು ಆಚರಿಸುವವರು ವಾರಕ್ಕನುಗುಣ ವಾಗಿ ಸಾರಿಸುವುದು, ಊರ ದೇವರ ಜಾತ್ರೆ, ಸಾಧು-ಶರಣ-ಸತ್ಪುರುಷರ ಆರಾಧನೆಯ ದಿನದಂದು ಉಪಾಸನಾ ನಿಮಿತ್ಯ ಮನೆಯ ನೆಲವನ್ನು ಧಾರ್ಮಿಕ ಆಚರಣೆಯಿಂದ ಸಾರಿಸುವುದು, ಊರ ಪ್ರಮುಖರ ಮನೆಯಲ್ಲಿ ಗಂಡು ಮಗುವಿನ ಜನನವಾದರೆ, ತಮ್ಮ ತಮ್ಮ ಮನೆ ಹಾಗೂ ಅಂಗಳವನ್ನು ಸಾರಿಸಿ, ಜನನದ ಸಂತೋಷವನ್ನು ಮಂಗಳಮಯವಾಗಿ ಸಾರಿಸುವುದರ ಮೂಲಕ ತೋರಿಸುವುದು, ಸೂತಕ, ಮುಡಿಚಟ್ಟು, ಮಾಟ-ಮಂತ್ರ ಗ್ರಹಚೇಷ್ಟೆ-ಪೀಡಾ- ಪಿಶಾಚಿ ಮುಂತಾದ ಅನಿಷ್ಟತೆಗಳ ನಿವಾರಣೆಗೋಸ್ಕರ ನೆಲಕ್ಕೆ ಸಾರಿಸುವುದು, ಕ್ಷೌರ ಮಾಡಿಸಿಕೊಂಡ ಸ್ಥಳದ ಪಾವಿತ್ರತೆಗಾಗಿ ನೆಲಕ್ಕೆ ಸಾರಿಸುವುದು ಇಂದಿಗೂ ಚಾಲ್ತಿಯಲ್ಲಿದೆ.

ಜನಪದರ ನಿತ್ಯ ಜೀವನದಲ್ಲಿ ದೇವರ ಮನೆ, ದೇವರುಗಳ ನ್ನಿಡುವ ಜಗಲಿ ಮತ್ತು ಅಡುಗೆ ಮಾಡುವ ಒಲೆ ಈ ಮೂರು ಸ್ಥಳಗಳನ್ನು ಸಾರಿಸಲೇಬೇಕೆಂಬ ನಿಯಮವಿದೆ. ಎಂಡೆಯಿಂದ ನೆಲವನ್ನು ಸಾರಿಸುವ ಪದ್ಧತಿ ಹಿಂದಿನ ಕಾಲದಿಂದಲೂ ರೂಢಿಯಲ್ಲಿದೆ. ನೆಲವನ್ನು ಸಾರಿಸುವುದಕ್ಕೆ ಪ್ರಥಮವಾಗಿ ಆಕಳ ಹೆಂಡಿ ನಂತರದಲ್ಲಿ ಎತ್ತಿನ ಹೆಂಡಿ, ಇವು ಎರಡೂ ಸಿಗದೇ ಹೋದಾಗ ಕೊನೆ ಪ್ರಸಂಗದಲ್ಲಿ ಎಮ್ಮೆಯ ಹೆಂಡಿಯಿಂದ ನೆಲವನ್ನು ಸಾರಿಸುವುದು. ಎತ್ತು-ಆಕಳು-ಎಮ್ಮೆ ಇವುಗಳ ಮೂತ್ರದೊಂದಿಗೆ ಹೆಂಡಿಯನ್ನು ಸೇರಿಸಿ, ರಾಡಿಯಂತೆ ಮಾಡಿ-ಕೊಂಡು ಅಂಗಳದ ತುಂಬ ಚಳ್ಳು ಹೊಡೆಯುವುದು. ಇದೂ ಸಹ ಸಾರಿಸಿದಂತೆ ಕಾಣುತ್ತದೆ.

ಗೋಮಯದಿಂದ ನೆಲವನ್ನು ಸಾರಿಸಿ, ರಂಗೋಲಿ ಹಾಕಿ, ಅರಿಶಿಣ-ಕುಂಕುಮವಿಟ್ಟು ದೈನಂದಿನ ಕೆಲಸಕ್ಕೆ ಶುಭಾರಂಭ ಮಾಡುವ ಈ ಸಾರಣೆ-ಕಾರಣೆಯು ಗರತಿಯೊಬ್ಬರ ದೈನಂದಿನ ಕಾರ್ಯಕ್ಕೆ ಚಾಲನೆಯನ್ನು ನೀಡುತ್ತದೆ. ಜನಪದರ ದೈನಂದಿನ ಬದುಕು ಪ್ರಾರಂಭವಾಗುವುದೇ ದೇವರ ಸ್ಮರಣೆ ಆಚರಣೆ ಯೊಂದಿಗೆ, ಬೆಳಗಾದೊಡನೆ ದೇವರ ಪೂಜೆಗಾಗಿ ಸಾರಿಸುವುದು. ಅರಿಶಿಣ-ಕುಂಕುಮ ಹಚ್ಚುವುದು, ಸುಣ್ಣ-ಜಾಜು-ಕೆಮ್ಮಣ್ಣಿನಿಂದ ಕೂಡಿದ ಪಟ್ಟಿಯನ್ನು ತೆಗೆಯುವುದು ಇವು ಅವರ ನಿತ್ಯದ ಕಾರ್ಯಗಳಾಗಿವೆ. ಇದು ಅವರ ಪಾವಿತ್ರತೆಯ ಸಂಕೇತವೂ ಹೌದು.

ಆಧುನಿಕತೆಯ ತಂತ್ರಜ್ಞಾನ ಮುಂದುವರೆಯದಿದ್ದ ಕಾಲದಲ್ಲಿ, ಸಂಪೂರ್ಣವಾಗಿ ಮನೆಗಳನ್ನು ಗೋಮಯದಿಂದಲೇ ಸಾರಿಸುತ್ತಿದ್ದುದೆಂಬುದು ವಿದಿತ. ಮನೆಯ ನೆಲವಷ್ಟೇ ಅಲ್ಲದೆ ಮನೆಯ ಗೋಡೆಗಳು, ಹೊಸ್ತಿಲು ಮುಂಭಾಗ, ಹೆಬ್ಬಾಗಿಲಿನ ಮುಂಭಾಗಗಳೆಲ್ಲವನ್ನೂ ಅಚ್ಚುಕಟ್ಟಾಗಿ ಗೋಮಯ ಇಲ್ಲವೆ ಎತ್ತುಗಳ ಹೆಂಡಿಯಿಂದಲೋ ಸಾರಿಸಿ ಶುಭ್ರಗೊಳಿಸುತ್ತಿದ್ದರು ಎಂಬುದು ತಿಳಿದು ಬರುತ್ತದೆ. ಸಾರಿಸಲು ಮೊದ ಮೊದಲು ಮಟ್ಟಿಯನ್ನು, ಕೆಂಪು ಮಣ್ಣನ್ನು, ನುಣುಪಾದ ಜೇಡಿ ಮಣ್ಣನ್ನು ಇಲ್ಲವೇ ಇವೆಲ್ಲಗಳ ಮಿಶ್ರಣವನ್ನು ಸಾರಣೆಗಾಗಿ ಬಳಸುತ್ತಿದ್ದರು. ಬರುಬರುತ್ತಾ, ಹೆಂಡೆಯಿಂದ ಮಾತ್ರ ಸಾರಿಸುವುದಕ್ಕೆ ಸೀಮಿತಮಾಡಿ, ಮಧ್ಯೆ ಮಧ್ಯೆ ಪಟ್ಟಿಗಳನ್ನು ಕೊಡುವುದಕ್ಕಾಗಿ ಸುಣ್ಣ, ಜಾಜು, ಕೆಮ್ಮಣ್ಣು ಮುಂತಾದ ಇತರ ವಸ್ತುಗಳನ್ನು ಬಳಸುತ್ತಿದ್ದರು.

ಜನಪದರ ನಂಬಿಕೆಯಂತೆ, ಶಕ್ತಿ ದೇವತೆಗಳಿಗೆ ಬಲಿಕೊಂಡು ವಾಗ ಅಲ್ಲಿ ಚನ್ನಾಗಿ ಸಾರಿಸಿ, ಅರಿಶಿಣ-ಕುಂಕುಮಗಳಿಂದ ಮಂಡಲ ರಚಿಸಿ, ಅದರೊಳಗೆ ವಿವಿಧ ರೀತಿಯ ಬಣ್ಣಗಳನ್ನು ಚೆಲ್ಲಿ ಭಯಾನಕ ವಾತಾವರಣವನ್ನು ಉಂಟು ಮಾಡುವ ಪದ್ಧತಿ ಇಂದಿಗೂ ಜಾರಿಯಲ್ಲಿದೆ.

ಸಾರಿಸುವುದರಿಂದಾಗುವ ಪ್ರಯೋಜನಗಳು: ಹೊಸ್ತಿಲು, ಜಗಲಿ, ಜ್ಯೋತಿ ತಾಣ, ನೆಲ ಮುಂತಾದವುಗಳಲ್ಲಿ ಸಾರಿಸುವುದು ಶ್ರದ್ಧೆ, ಭಕ್ತಿ ಹಾಗೂ ಪಾವಿತ್ರತೆಯ ಸಂಕೇತ. ಆಕಳ ಹೊಟ್ಟೆಯಲ್ಲಿ ಅನೇಕ ದೇವರುಗಳು ನೆಲೆಸಿದ್ದಾರೆನ್ನುವುದು ಜನಪದರ ನಂಬಿಕೆ. ಆಕಳ ಸೆಗಣಿಯಿಂದ ಸಾರಿಸಿದರೆ ಲಕ್ಷ್ಮೀ ಶಾಶ್ವತವಾಗಿ ಮನೆಯಲ್ಲಿ ನೆಲೆಸುತ್ತಾಳೆನ್ನುವ ಹೃದಯ ಪೂರ್ಣವಿಶ್ವಾಸ, ಸೆಗಣಿಯನ್ನು ಕೈಯ್ಯಿಂದ ಕಲಿಸಿ ಸಾರಿಸುತ್ತಿರಲು ಕೈಗೆ ಯಾವ ಚರ್ಮರೋಗಗಳು ಬರುವುದಿಲ್ಲವೆಂಬುದು, ಸಾರಣೆಯಿಂದಾಗಿ

ಮನೆಯೊಳಗೆ ಯಾವ ಕ್ರಿಮಿ–ಕೀಟಗಳು ಸುಳಿಯವು ಎಂಬ ಬಲವಾದ ನಂಬಿಕೆ, ಹೆಂಡೆಯಿಂದ ನೆಲವನ್ನು ಸಾರಿಸುವುದರಿಂದ ಮಣ್ಣು ಗಟ್ಟಿಯಾಗುವುದು, ಸೆಗಣಿಯ ಸಾರಣೆಯು ಶ್ವಾಸೋಚ್ಛ್ವಾಸಕ್ಕೆ ಬಹುಪಯೋಗಿಯು, ಸಾರಣೆ ನೆಲದ ಅಂದ–ಚೆಂದವನ್ನು ಇಮ್ಮಡಿಗೊಳಿಸುವುದು, ಭಕ್ತಿ–ಜ್ಞಾನ–ವೈರಾಗ್ಯಕ್ಕೆ ಸಾರಣೆ ಮೊದಲನೆಯ ಸೋಪಾನ, ಮನ–ಮನೆಯ ಚೊಕ್ಕತನಕ್ಕೆ ಸಾರಣೆ ಅನಿವಾರ್ಯ.

(ಪಿ.)

ನೈ

ನೈವೇದ್ಯ: ದೇವನಿಂದ ಸೃಷ್ಟಿಸಲ್ಪಟ್ಟ ಜಗತ್ತಿನ ಪದಾರ್ಥಗಳು, ದೇವನಿಗೆ ಮೊದಲು ಅರ್ಪಿಸುವ ಪದ್ಧತಿ. ಸಿದ್ಧ ಪಡಿಸಿದ ಪ್ರಸಾದವನ್ನು ನೈವೇದ್ಯದ ಮೂಲಕ ಮೊದಲು ದೇವನಿಗರ್ಪಿಸಿ, ಆನಂತರ ತಾನು ಸೇವಿಸಲು ಮನುಷ್ಯ ಆರಂಭಿಸಿದ. ಅಂದಿನಿಂದ ಮೀಸಲು ಪದ್ಧತಿ ನೈವೇದ್ಯದ ಮೂಲಕ ಜಾರಿಯಲ್ಲಿ ಬಂತು.

ನೈವೇದ್ಯ ಎಂದರೆ, "ದೇವರಿಗೆ ಮಾಡುವ ಹಣ್ಣು–ಕಾಯಿ ಭಕ್ಷ–ಭೋಜಾದಿಗಳ ಸಮರ್ಪಣೆ, ಎಡೆ ಮಾಡುವುದು, ಅರ್ಪಿಸಿದ ವಸ್ತು, ದೇವರಿಗೆ ನಿವೇದಿಸಿದ ಹಣ್ಣು–ಕಾಯಿ–ಹವಿಸ್ಸು ಮೊದಲಾದ ದ್ರವ್ಯ" ಎಂಬ ನಾನಾರ್ಥಗಳು ಇವೆ. ದೇವರಿಗೆ ಅರ್ಪಿಸಿದ ಮೀಸಲು ಅಡುಗೆ ಎಂದೂ ಅರ್ಥೈಸಲಾಗಿದೆ.

ನೈವೇದ್ಯ ಪದಕ್ಕೆ ಎಡೆ, ಮೀಸಲು, ಅರ್ಪಿಸಿದ ವಸ್ತು ಎಂಬ ಸಂವಾದಿ ಪದಗಳೂ ಇವೆಯೆಂಬುದು ಹಿರಿಯರ ಮತ. ನೈವೇದ್ಯ ಭಕ್ತಿಯ ಪ್ರತೀಕ, ಅರ್ಪಣಾ ಮನೋಭಾವ, ದೇವರ ಮೇಲಿರುವ ನಿಷ್ಠೆ ಪಡೆದುದನ್ನು ಕೊಡಬೇಕೆನ್ನುವ ಧರ್ಮ–ಎಂಬಂತೆ ವಿವಿಧಾರ್ಥಗಳನ್ನು ಇದು ಒಳಗೊಂಡಿದೆ.

ನೈವೇದ್ಯದ ಪ್ರಕಾರಗಳು: ಶ್ರದ್ಧಾ, ನಿಷ್ಠಾ, ಅವಧಾನ, ಅನುಭಾವ, ಸುಜ್ಞಾನ, ಸಮರಸ ಭಕ್ತಿಗಳ ಮೂಲಕ ಜನಪದರು ವಿಭಿನ್ನ ರೂಪದಲ್ಲಿ ನೈವೇದ್ಯವನ್ನು ಮಾಡುವರು. ದೈವ ಪ್ರೇರಿತ ನೈವೇದ್ಯ, ಹರಕೆಯ ನೈವೇದ್ಯ, ಮುಡುಪು ನೈವೇದ್ಯ, ಸಂಕಲ್ಪ ನೈವೇದ್ಯ, ಕಾಣಿಕೆ ನೈವೇದ್ಯ, ಪ್ರಸಾದ ನೈವೇದ್ಯ, ಪದಾರ್ಥ ನೈವೇದ್ಯ, ಜನ್ನಿಗೆ ನೈವೇದ್ಯ, ಆಸುರೀ ಪ್ರೇರಿತ ನೈವೇದ್ಯ, ಅಂಧ ವಿಶ್ವಾಸ ನೈವೇದ್ಯ, ನಿವಾಳಿಕೆ ನೈವೇದ್ಯ– ಹೀಗೆ ಹತ್ತು ಹಲವು ತರಹದ ಪ್ರಾದೇಶಿಕ ಭಿನ್ನತೆಯಲ್ಲಿ ಇಂದಿಗೂ ಪ್ರಚಲಿತದಲ್ಲಿರುವ ನೈವೇದ್ಯಗಳನ್ನು ಕಾಣಬಹುದು. ಇದಲ್ಲದೆ ನಿತ್ಯ ನೈವೇದ್ಯ, ಮೀಸಲು ನೈವೇದ್ಯ, ಪ್ರಾಸಂಗಿಕ ನೈವೇದ್ಯಗಳೆಂಬವೂ ಜನಪದರ ಬದುಕಿನಲ್ಲಿ ನಿತ್ಯ ನಿರಂಜನವಾಗಿ ಆಚರಣೆಯಲ್ಲಿವೆ.

ನೈವೇದ್ಯಾರ್ಪಣೆಯ ಪರ್ವಕಾಲ: ಕೈಕೊಂಡ ಕಾರ್ಯಕೈಗೂಡಿದಾಗ ಅರ್ಪಿಸುವುದು ಹರಕೆಯ ನೈವೇದ್ಯ. **ಉದಾ:** 101 ಕಾಯಿ ಒಡೆಸುವುದು, ದೀಡ ನಮಸ್ಕಾರ ಹಾಕುವುದು. ಅಭೀಷ್ಟಗಳು ನೆರವೇರಿದಾಗ ಕಟ್ಟಿಟ್ಟ ಮುಡುಪನ್ನು ಗುಟ್ಟಾಗಿ ಅರ್ಪಿಸುವುದು ಮುಡುಪು ನೈವೇದ್ಯ. ಮನೋಪೇಕ್ಷೆಯಂತೆ ಸ್ವತಃ ತಾವೇ ಹೋಗಿ ಹಣ–ವಸ್ತು–ಒಡವೆಗಳನ್ನು ಅರ್ಪಿಸುವುದು ಸಂಕಲ್ಪ ನೈವೇದ್ಯ. ತನ್ನದೂ ಒಂದಿಷ್ಟು ಭಕ್ತಿ ಸೇವೆ ಸಲ್ಲಲಿ ಎಂದು ಅರ್ಪಿಸುವುದು ಕಾಣಿಕೆ ನೈವೇದ್ಯ. ಸಿದ್ಧ ಪಡಿಸಿದ ಆಹಾರವನ್ನು ಅರ್ಪಿಸುವುದು ಪ್ರಸಾದ ನೈವೇದ್ಯ. ಕಚ್ಚಾ ಆಹಾರ ಸಮಗ್ರಿಗಳನ್ನರ್ಪಿಸುವುದು ಪದಾರ್ಥ ನೈವೇದ್ಯ. **ಉದಾ:** ಅಕ್ಕಿ, ಬೇಳೆ, ಬೆಲ್ಲ, ಗೋದಿ, ಜೋಳ ಮುಂತಾದವಗಳು. ದೇವರ ನೈವೇದ್ಯದ ಹಾಲಿಗಾಗಿ ಮೀಸಲು ಬಿಟ್ಟ ಗೋವಿನದು ಜನ್ನಿಗೆ ನೈವೇದ್ಯ. ಶಕ್ತಿ ದೇವತೆಗಳಿಗೆ ಕುರಿ, ಕೋಣ, ಕೋಳಿ ಮುಂತಾದ ಪ್ರಾಣಿಗಳನ್ನು ಬಲಿ ಕೊಡುವುದು ಆಸುರೀ ಪ್ರೇರಿತ ನೈವೇದ್ಯ. ಬಯಕೆ ಈಡೇರಿದರೆ ಅಂದಂತೆ ಅರ್ಪಿಸುವುದು ಅಂಧ ವಿಶ್ವಾಸ ನೈವೇದ್ಯ. **ಉದಾ:** ಬೆರಳು ಕತ್ತರಿಸಿಕೊಳ್ಳುವುದು, ರಕ್ತ ಅರ್ಪಿಸುವುದು, ಕಣ್ಣು ಕಿತ್ತುಕೊಳ್ಳುವುದು ಮುಂತಾದವುಗಳು. ಮಂಗಳ ಕಾರ್ಯಗಳಲ್ಲಿ ಭೂತ–ಪ್ರೇತಗಳ ಕೆಟ್ಟ ದೃಷ್ಟಿ ತಾಗಬಾರದೆಂದು ತೆಗೆದುಹಾಕುವುದು ನಿವಾಳಿಕೆ ನೈವೇದ್ಯ. **ಉದಾ:** ಹಂದರದಲ್ಲಿ ಮದುಮಕ್ಕಳ ಮೇಲೆ ಅರಿಶಿಣ–ಕುಂಕುಮ–ಕಾಡಿಗೆಯನ್ನು ಕಲಿಸಿದ ಅನ್ನವನ್ನು ನಿವಾಳಿಕೆಯಿಂದ ತೆಗೆದುಹಾಕುವುದು. ಮನೆಯಲ್ಲಿದ್ದ ಬಳಕೆಯ ಪದಾರ್ಥಗಳನ್ನು ಅರ್ಪಿಸುವುದು ನಿತ್ಯ ನೈವೇದ್ಯ ಉದಾ: ಬೆಲ್ಲ, ಹಾಲು–ಸಕ್ಕರೆ, ಸಕ್ಕರೆ–ಪುಟಾಣಿ, ಬೆಲ್ಲ, ಮಂಡಾಳು, ಮುಂತಾದವುಗಳು. ಆಕಳು ಈದ ಮೇಲೆ ಅದರ ತುಪ್ಪವನ್ನು ದೇವರಿಗೆ ಅರ್ಪಿಸುವವರಿಗೆ ಯಾರೂ ಅದನ್ನು ಉಣ್ಣಬಾರದೆಂಬುದು ಮೀಸಲು ನೈವೇದ್ಯ. ಋತುಮಾನದಲ್ಲಿ ಬಂದ ಪ್ರಥಮತಃ ಹಣ್ಣನ್ನು ದೇವರಿಗೆ ನೈವೇದ್ಯ ಮಾಡುವವರೆಗೆ ಯಾರೂ ಅದನ್ನು ತಿನ್ನಬಾರದೆಂಬುದು ಪ್ರಾಸಂಗಿಕ ನೈವೇದ್ಯ. ಉದಾ: ಮಾವಿನಹಣ್ಣುಗಳ ಕಾಲ ಬಂದಾಗ ಮೊದಲು ಹಣ್ಣುಗಳನ್ನು ದೇವರ ಮುಂದೆ ಇಡುವುದು. ಋತುಮಾನ, ಆಯಾ ಹಬ್ಬ–ಹರಿದಿನ, ಉತ್ಸವ ಮಂಗಳ ಕಾರ್ಯಗಳಿಗೆ ತಕ್ಕಂತೆ ನೈವೇದ್ಯದ ಪದಾರ್ಥಗಳೂ ವಿಭಿನ್ನವಾಗಿರುತ್ತವೆ.

ಚಾಂದ್ರಮಾನ ಯುಗಾದಿಯಂದು :ಬೇವು+ಬೆಲ್ಲ, ಶ್ಯಾವಿಗಿ, ಹೂರಣದ ಹೋಳಿಗೆ ತುಪ್ಪದ ನೈವೇದ್ಯ; ಡೋಲಾ ಗೌರೀ ಪೂಜೆಗೆ: ಸಜ್ಜಕ+ತುಪ್ಪದ ನೈವೇದ್ಯ; ಕಾರ ಹುಣ್ಣಿಮೆಯಂದು: ಕುಟ್ಟಿದ ಜೋಳದ ಕಿಚಿಡಿ+ಬೆಲ್ಲ+ಹಾಲು+ತುಪ್ಪದ ನೈವೇದ್ಯ;, ಮಣ್ಣೆತ್ತಿನ ಅಮವಾಸ್ಯೆಯಂದು: ಜೋಳದದೋಸೆ+ಬೆಲ್ಲದ ಹಾಲು ನೈವೇದ್ಯ; ನಾಗರ ಅಮವಾಸ್ಯೆಯಂದು: ಗೌಳಿ+ತುಪ್ಪ ನೈವೇದ್ಯ; ನಾಗ ಚೌತಿಯಂದು: ಬಿಳಿಹಾಲು+ ಎಳ್ಳುಚಿಗಳಿ + ತಂಬಿಟ್ಟು+ ನೆನೆಗಡಲೆ+ ಅಳ್ಳು ಇವುಗಳ ನೈವೇದ್ಯ; ನಾಗ ಪಂಚಮಿಯಂದು: ಕುದಿಸಿದ ಸಿಹಿಕಡಬು + ನವಣೆ ಅನ್ನ+ ಹಾಲು + ನೆನೆಗಡಲೆ ನೈವೇದ್ಯ; ಗೌರೀಗಣೇಶ ಚತುರ್ಥಿ ಯಂದು: ಕುದಿಸಿದ ಕೊಬ್ಬರಿಯ ಸಿಹಿಕಡಬು+ ಮೋದಕದ ನೈವೇದ್ಯ; ನವರಾತ್ರಿ ಮತ್ತು ವಿಜಯದಶಮಿಯಂದು: ಈ ಹತ್ತೂದಿನ ಹೂರಣದ ಹೋಳಿಗೆ + ತುಪ್ಪ+ಅನ್ನ+ ಸಾರು ಒಂದು; ಪಲ್ಯದ ನೈವೇದ್ಯ; ಶಕ್ತಿ ಮಾತೆಗೆ ಕುಂಬಳಕಾಯಿ ಒಡೆದು ಅದರ ನೈವೇದ್ಯಾರ್ಪಣೆ; ಶ್ರಾವಣಮಾಸದ ವರಲಕ್ಷ್ಮೀ: ಬಿಳಿ ಅನ್ನ+ಚಿತ್ರಾನ್ನ+ಪಡುವಲಕಾಯ ಪುಗ್ಗಿ+

ಕರ್ಚಿಕಾಯಿ+ ಪೂಜೆಯಂದು ಕಡಬು+ಹೋಳಿಗೆ+ಚಕ್ಕುಲಿ+ಪೂರಿ ಮುಂತಾದ ವಿಶೇಷ ಭಕ್ಷಗಳ ನೈವೇದ್ಯ; ಶ್ರಾವಣ ಮಾಸದ ಸಂಪತ್ತು ಲಕ್ಷ್ಮಿಯ: ಜೋಳದ ಕಡಬು+ಅಂಬಲಿ+ಮಂಡೇಪಲ್ಲೆ+ಹಿಂಡೇ ಪೂಜೆ ಯಂದು ಪಲ್ಲೆ+ಉದುರುಬೇಳೆ +ರಾಜಗಿರಿ ಪಲ್ಲೆ+ಗೋಳಿಪಲ್ಲೆ +ಬಿಳಿ ಅನ್ನ+ ಸಾರು ಈ ಭಕ್ಷಗಳ ನೈವೇದ್ಯ; ಛಟ್ಟಿ ಮತ್ತು ಎಳ್ಳಮವಾಸ್ಯೆಯಂದು: ಜೋಳದ ಕಡುಬು+ಸಜ್ಜೆಯ ಕಡುಬು+ ಕಣಕದ ಜೋಳದ ಕಡುಬು+ಬೆಲ್ಲಕ್ಕಿ ಬೇಳೆ+ಎಳ್ಳು ಹೋಳಿಗೆ+ ಸಜ್ಜೆ ಹಾಗೂ ಜೋಳದ ರೊಟ್ಟಿ+ಗಟ್ಟಿ ಬೇಳೆ+ಹಿಂಡೆ ಹಾಗೂ ಪುಂಡೆಪಲ್ಲೆ ಬಿಳಿ ಹಾಗೂ ಚಿತ್ರನ್ನ+ಸಾರು_ಒಂದೆರಡು ಪಲ್ಲೆಗಳ ನೈವೇದ್ಯ; ಶಿವರಾತ್ರಿಯಂದು: ಎಲ್ಲಾತರಹದ ಹಣ್ಣುಗಳು +ಹುರಿದಶೇಂಗಾ+ಗಾರಿಗೆ+ಗುಗ್ಗರಿ ಕಾಳು ನೈವೇದ್ಯ; ಸಂಕ್ರಾಂತಿಯಂದು: ಎಳ್ಳು ಹಚ್ಚಿದ ಸಜ್ಜೆ ರೊಟ್ಟಿ+ಎಣ್ಣೆ ಬದನೆಕಾಯಿ +ಬರ್ತಾ+ಶೇಂಗಾ ಹೋಳಿಗೆ+ ಚಿತ್ರನ್ನ+ಬಿಳಿ ಅನ್ನ+ಸಾರು ನೈವೇದ್ಯ;

ಹೀಗೆ ಹಬ್ಬ–ಹರಿದಿನಗಳಂದು ಮಾಡುವ ನೈವೇದ್ಯ ಪದಾರ್ಥಗಳಾದರೆ, ಸಾಧು–ಸಂತ–ಶರಣರ–ಮಠಾಧೀಶ ಮುಂತಾದ ವಿಭೂತಿ ಪುರುಷರ ಪುಣ್ಯಸ್ಮರಣೆಯಂದು, ಊರದೇವರ ಜಾತ್ರೆಯಂದು, ಪರ್ವ, ಆರಾಧನೆ ಮುಂತಾದ ಧಾರ್ಮಿಕ ಆಚರಣೆಗಳಲ್ಲಿ ಮಾಲ್ದಿ, ಗೋದಿಹುಗ್ಗಿ, ಸಜ್ಜಕದ ಉಂಡೆ, ಜೋಳದ ಬಾನ, ಬಿಳಿ ಅನ್ನ+ ತುಪ್ಪ+ಸಾರು+ಹಪ್ಪಳ ಸಂಡಿಗೆಗಳ ನೈವೇದ್ಯವು ಕ್ರಮಬದ್ಧವಾಗಿ ಅರ್ಪಿತವಾಗುತ್ತದೆ. ಇದಲ್ಲದೆ ತೇರು ಎಳೆಯುವಾಗ ಉತ್ತುತ್ತಿ+ಬಾಳೆಹಣ್ಣು+ ಮಂಡಾಳು+ ಪುಟಾಣಿಗಳನ್ನು ಒಗೆಯುವುದರ ಮೂಲಕ ನೈವೇದ್ಯಾರ್ಪಣೆ, ಮೊದಲ ಸಲ ಆಕಳು ಅಥವಾ ಎಮ್ಮೆ ಈದಾಗ ಗಿಣ್ಣದ ನೈವೇದ್ಯ, ಊರ ದೇವತೆಗೆ ಉಡಿತುಂಬುವ ಕಾಳು ನೈವೇದ್ಯ, ಮಂಗಲ ಕಾರ್ಯಗಳಲ್ಲಿ ಅಕ್ಕಿ+ಬೇಳೆ+ಬೆಲ್ಲ+ಹಿಟ್ಟು ಮುಂತಾದ ಪದಾರ್ಥಗಳ ಪಡಿನೈವೇದ್ಯ, ಮದುವೆಯಲ್ಲಿ ಹೂಡುವ ಪಂಚ ಕಳಸಗಳಿಗೆ ಕೊಬ್ಬರಿ+ ಉತ್ತುತ್ತಿ+ ಕಲ್ಲುಸಕ್ಕರೆ+ ಅಡಿಕೆ+ದಕ್ಷಿಣೆಯ ಪಂಚ ನೈವೇದ್ಯಗಳು ಜನಪದರ ಬದುಕಿನಲ್ಲಿ ಯಥಾವತ್ತಾಗಿ ಅರ್ಪಿತವಾಗುತ್ತವೆ.

ಇದರೊಂದಿಗೆ ನಿತ್ಯ ಪೂಜೆಯಲ್ಲಿ ಬೆಲ್ಲದ, ಸಕ್ಕರೆ ಹಾಲು ನೈವೇದ್ಯ, ಪುಟಾಣಿ ಬೆಲ್ಲದ ನೈವೇದ್ಯ, ಉತ್ತುತ್ತಿ ಕಲ್ಲು ಸಕ್ಕರೆಯ ನೈವೇದ್ಯ, ಮಂಡಾಳು ಕೆಂಪು ಸಕ್ಕರೆಯ ನೈವೇದ್ಯ, ಪೂಜೆಗಾಗಿ ಹೊಡೆದ ಕಾಯಿಯೇ ನೈವೇದ್ಯ, ಮಡಿಯಿಂದ ಮಾಡಿದ ಹಪ್ಪಳ ಸಂಡಿಗೆಗಳ ನೈವೇದ್ಯ, ಹಂದರ, ಗದ್ದುಗೆ, ಹಾಗೂ ಗದ್ದಿಗೆಗಾಗಿ ಹೋಳಿಗೆ+ತುಪ್ಪದ ನೈವೇದ್ಯ, ಪ್ರಾದೇಶಿಕ ಭಿನ್ನತೆಯಲ್ಲಿ ಮೊಸರನ್ನು ಬುತ್ತಿಯ ನೈವೇದ್ಯಗಳು ಆಚರಣೆಗನುಗುಣವಾಗಿ ಅರ್ಪಿತವಾಗುತ್ತವೆ. ಭಕ್ತಿ–ಭಾವದಿಂದ ಕೂಡಿದ ಜನಪದರು ತಮ್ಮ ನಿತ್ಯ ಬದುಕಿನಲ್ಲಿ ಮಾಡಿದ ಪದಾರ್ಥವನ್ನು ದೇವರಿಗೆ ನೈವೇದ್ಯ ಮಾಡಿ ತಾವು ಧನ್ಯರಾಗಬೇಕೆಂಬುದು ಅವರ ಹೆಬ್ಬಯಕೆ.

(ಪಿ.)

ಪ

ಪಂಚಮುಖಿ ಕಾಶಿ ವಿಶ್ವನಾಥ ಕ್ಷೇತ್ರ: ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ತಲ್ಲೂರ ಗ್ರಾಮದ ಕಾಶಿ ವಿಶ್ವನಾಥ ಮಂದಿರದಲ್ಲಿ ಅತ್ಯಂತ ವಿರಳವಾಗಿರುವ ಹಾಗೂ ಬೆರಳಣಿಕೆಯಷ್ಟೇ ಇರುವ ಪಂಚಮುಖಿಗಳನ್ನು ಹೊಂದಿರುವ ಶಿವಲಿಂಗ ಇಲ್ಲಿರುವುದರಿಂದ ಈ ಗ್ರಾಮ ಪೌರಾಣಿಕವಾಗಿ ಪ್ರಸಿದ್ಧಿ ಪಡೆದಿದೆ.

ಉತ್ತರ ಪ್ರದೇಶದಲ್ಲಿರುವ ಕಾಶಿಗೂ, ತಲ್ಲೂರಿಗೂ ಎತ್ತಿಂದತ್ತಣ ಸಂಬಂಧ? ಎಂಬ ಈ ಪ್ರಶ್ನೆಗೆ ಈ ದೇವಸ್ಥಾನದ ಐತಿಹಾಸಿಕ ಹಿನ್ನೆಲೆಯನ್ನು ಹಾಗೂ ಕೆಲವು ನೈಜ ಘಟನೆಗಳನ್ನು ಕೆದಕಿದಾಗ ಅತ್ಯಂತ ನಿಕಟ ಸಂಬಂಧವಿರುವುದು ಖಚಿತವಾಗುತ್ತದೆ. ತಲ್ಲೂರ ಗ್ರಾಮವು ಎರಡನೆಯ ಕಾಶಿ ಎಂಬ ಬಿರುದನ್ನು ಪಡೆಯುವಲ್ಲಿ ಒಂದು ಪುರಾತನ ಘಟನೆ ಕಾರಣವೆಂದು ಹೇಳಲಾಗುತ್ತದೆ.

ಸುಮಾರು 16–17ನೆಯ ಶತಮಾನದಲ್ಲಿ ಆಗಿನ ದೊರೆಯು ಕಾಶಿಯಿಂದ ತಂದು, ಪ್ರತಿಷ್ಠಾಪನೆ ಮಾಡಲು ಪಾನಬಟ್ಟಲು ಸಿಗದ ಕಾರಣ ಚಿಂತಾಕ್ರಾಂತನಾಗುತ್ತಾನೆ. ಒಂದು ದಿನ ರಾಜನ ಕನಸಿನಲ್ಲಿ 'ತಲ್ಲೂರ' ಎಂಬ ಗ್ರಾಮದ ದೇಸಾಯರ ಹೊಲದಲ್ಲಿ ಪಾನಬಟ್ಟಲು ಇದೆ ಎಂದು ಅಂತರ್ವಾಣಿಯಾಗುತ್ತದೆ. ಕೂಡಲೇ ರಾಜ ತನ್ನ ದಂಡು–ದೌಲತ್ತುಗಳೊಂದಿಗೆ ಇಲ್ಲಿಗೆ ಬಂದು ಪಾನಬಟ್ಟಲನ್ನು ಹುಡುಕಿ, ತಾನು ತಂದಿದ್ದ ಕಾಶಿ ವಿಶ್ವನಾಥನ ಮೂರ್ತಿಯನ್ನು ಅದಕ್ಕೆ ಜೋಡಿಸಲಾಗಿ, ಒಂದಕ್ಕೊಂದು ಕೂದಲೆಳೆಯಷ್ಟು ವ್ಯತ್ಯಾಸವಿಲ್ಲದೆ ಹೊಂದಿಕೊಂಡವೆಂದು ಹೇಳಲಾಗುತ್ತದೆ. ಅವುಗಳ ಬಣ್ಣವೂ ಕೂಡ ಒಂದೇ ತೆರನಾಗಿತ್ತು!! ಕೂಡಲೇ ರಾಜ ಇಲ್ಲಿಯೇ ಶ್ರೀ ಕಾಶಿ ವಿಶ್ವನಾಥ ದೇವರನ್ನು ಪ್ರತಿಷ್ಠಾಪನೆ ಮಾಡಿದನೆಂದು, ಆ ಪ್ರಯುಕ್ತ ಇಲ್ಲಿ ಪ್ರತಿವರ್ಷವೂ ಈ ದೇವರ ಜಾತ್ರೆಯು ಅತ್ಯಂತ ವೈಶಿಷ್ಟ್ಯಪೂರ್ಣವಾಗಿ, ಸೊಗಸಾಗಿ ನಿರಾತಂಕವಾಗಿ ಸಾಗುತ್ತಿರುವುದೆಂದು ಸ್ಥಳೀಯ ಪುರಾಣ ಕಥೆಗಳಿಂದ ತಿಳಿದು ಬರುತ್ತದೆ.

ಇತ್ತೀಚೆಗೆ ಪುರಾಣ ಪಠಣ ಕಾರ್ಯಕ್ರಮ ನಡೆಯುತ್ತಿದ್ದು, ಜನರು ತಂಡೋಪತಂಡವಾಗಿ ತಲ್ಲೂರಿಗೆ ಆಗಮಿಸುತ್ತಿದ್ದಾರೆ. ಶಿವರಾತ್ರಿಯ ಶುಭ ದಿನದಂದು ಭಯ–ಭಕ್ತಿಯಿಂದ ಜಾಗರಣೆ, ನಂತರ ಬೆಳಿಗ್ಗೆಯೇ ಅಭಿಷೇಕ ನಡೆಯುತ್ತದೆ. ಅನಂತರ ಷ.ಬ್ರ. ಶ್ರೀ ಸಿದ್ಧರಾಮ ಶಿವಾಚಾರ್ಯ ಮಹಾಸ್ವಾಮಿಗಳು ಯಲಬರ್ಗಾ, ಇವರ ದಿವ್ಯ ಸಾನಿಧ್ಯದಲ್ಲಿ ಪುರಾಣ ಮಂಗಲೋತ್ಸವ ಮುಂತಾದ ಧಾರ್ಮಿಕ ಕಾರ್ಯಕ್ರಮ, ನಂತರ ಅತ್ಯಂತ ವಿಜೃಂಭಣೆಯಿಂದ ನಡೆಯುವ ಕುಂಭ ಮೇಳ ನೋಡಲು ಎರಡು ಕಣ್ಣು ಸಾಲದು.

ಅಂದೇ ಸಾಮೂಹಿಕ ವಿವಾಹಗಳನ್ನು ಶ್ರೀಗಳ ಸಮ್ಮುಖದಲ್ಲಿ ಮಾಡಿಕೊಡುವ ಪುಣ್ಯದ ಕೆಲಸವು ಇಲ್ಲಿನ ಜನತೆಯಿಂದ ನಡೆದುಕೊಂಡು ಬಂದಿದೆ. ಅದೇ ದಿನ ಸಾಯಂಕಾಲ ಉತ್ಸವ

ಜರುಗುತ್ತದೆ. ಇದರಲ್ಲಿ ಸುತ್ತಮುತ್ತಲಿನ ಗ್ರಾಮಗಳಿಂದ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಸಾಗರೋಪಾದಿಯಲ್ಲಿ ಬಂದು ಪಾಲ್ಗೊಂಡು, ಶ್ರೀ ಕಾಶಿ ವಿಶ್ವನಾಥನ ದರ್ಶನಾಶೀರ್ವಾದ ಪಡೆದು ಪುನೀತರಾಗುತ್ತಾರೆ. ಭಕ್ತರ ಎಲ್ಲ ಇಷ್ಟಾರ್ಥಗಳನ್ನು ಈಡೇರಿಸುವುದರಿಂದಲೇ ಈ ಗ್ರಾಮವು ಎರಡನೆಯ ಕಾಶಿ ಎಂದು ಪ್ರಸಿದ್ಧಿ ಪಡೆದಿದೆ. *(ಎಸ್.ಎನ್.ಡಿ.)*

ಪಂಚಲಿಂಗೇಶ್ವರ ದೇವಾಲಯ: ಸೇಡಮ್ ಪಟ್ಟಣದ ದಕ್ಷಿಣದ ತುದಿಯಲ್ಲಿರುವ ದೇವಾವಲಯ. ಚಾಲುಕ್ಯರ ಕಾಲದಲ್ಲಿ ನಿರ್ಮಿತಗೊಂಡ ಇದು ಆಕರ್ಷಕ ಸ್ಮಾರಕಗಳಲ್ಲಿ ಒಂದಾಗಿದೆ. ಸಾವಿರಾರು ವರ್ಷಗಳು ಗತಿಸಿದರೂ ಗತ ವೈಭವದ ಸಾಕ್ಷಿಯಾಗಿ ಭಕ್ತರನ್ನು ಇತಿಹಾಸ ಪ್ರೇಮಿಗಳನ್ನು ಗಮನ ಸೆಳೆಯುತ್ತಿದೆ. ವಿಶಿಷ್ಟ ವಾಸ್ತು ಹಾಗೂ ಮೂರ್ತಿ ಶಿಲ್ಪದಿಂದ ಕೂಡಿದ್ದ ಗರ್ಭಗೃಹ, ಸುಖನಾಸಿ, ಪ್ರದಕ್ಷಿಣಾಪಥ, ಕುಸುರಿ ಕಂಭಗಳು ಮೇಲ್ಛಾವಣಿಗಳಲ್ಲಿ ಅದ್ಭುತವಾದ ಶಿಲ್ಪಕಲೆಯಿದೆ.


ಸುಮಾರು 8 ಅಡಿ ಎತ್ತರದ ಜಗುಲಿಯ ಮೇಲೆ ನಿರ್ಮಾ-ಣಗೊಂಡು ಪಶ್ಚಿಮಾಭಿಮುಖವಾಗಿರುವ ಈ ದೇವಾಲಯ ಸಮುಚ್ಚಯದಲ್ಲಿ ಐದು ಲಿಂಗಗಳಿರುವ ಐದು ದೇವಾಲಯ ಗಳನ್ನು ನಿರ್ಮಿಸಿರುವುದರಿಂದ ಇದೊಂದು ಕೂಟ ದೇವಾಲಯ. ಒಳಾವರಣದಲ್ಲಿ ಪ್ರತ್ಯೇಕವಾಗಿ ಐದು ಲಿಂಗಗಳಿಗೆ ಐದು ದೇವಾಲಯಗಳಿರುವುದರಿಂದ ಪಂಚಲಿಂಗೇಶ್ವರ ಎಂಬ ಹೆಸರು ಇದಕ್ಕಿದೆ.

ದೇವಾಲಯವು ದೊಡ್ಡ ಅಗಸೆಯ ಸಮೀಪದಲ್ಲಿದೆ. ಅದರ ಮೆಟ್ಟಿಲುಗಳನ್ನು ಏರುವಾಗ ಎಡ, ಬಲ (ಬಾಗಿಲಿನ ಪ್ರವೇಶ ದ್ವಾರದ ಇಬ್ಬದಿ) ಗಳಲ್ಲಿ ದ್ವಾರಪಾಲಕ ಮೂರ್ತಿಗಳು ಕೈಯಲ್ಲಿ ತ್ರಿಶೂಲ, ಆದಿಶೇಷ ಢಮರುಗ, ಕಪಾಲ, ಹಿಡಿದು ನಿಂತದ್ದು ಆಕರ್ಷಕ ಭಂಗಿಗಳಲ್ಲಿವೆ. ದೇವಾಲಯವನ್ನು ಪ್ರವೇಶಿಸಿದರೆ, ತ್ರಿಭಂಗಿಗಳಲ್ಲಿ ನಿಂತ ಶಿಲಾಬಾಲಿಕೆಯರು ಪ್ರೇಕ್ಷಕರನ್ನು ಸ್ವಾಗತಿಸುವಂತೆ ಕಂಗೊಳಿಸುತ್ತಾರೆ. ಇಲ್ಲಿನ ಮೇಲ್ಛಾವಣಿಯು (ಭುವನೇಶ್ವರಿ) ಅತ್ಯಂತ ಸುಂದರವಾಗಿ ಕೆತ್ತಲ್ಪಟ್ಟಿದೆ. ಇಲ್ಲಿನ ಅಷ್ಟದಿಕ್ಪಾಲಕರು ಮತ್ತು ಅವರ ವಾಹನಗಳು ಮನೋಜ್ಞವಾಗಿವೆ. ಪೂರ್ವ ದಿಕ್ಕಿನಲ್ಲಿ ಇಂದ್ರ–ಐರಾವತ, ಆಗ್ನೇಯಕ್ಕೆ ಅಗ್ನಿ–ಟಗರು, ದಕ್ಷಿಣಕ್ಕೆ ಯಮ ಕೋಣ, ನೈರುತ್ಯಕೆ ನಿರುತ–ಮನುಷ್ಯ, ಪಶ್ಚಿಮಕ್ಕೆ ವರುಣ–ಮೊಸಳೆ, ವಾಯುವ್ಯಕ್ಕೆ ವಾಯು–ಜಿಂಕೆ, ಉತ್ತರಕ್ಕೆ ಕುಬೇರ–ಕುದುರೆ, ಈಶಾನ್ಯಕ್ಕೆ ಈಶ–ನಂದಿ ಹೀಗೆ ಶಿಲ್ಪಿಯು ತನ್ನ ಕೈಚಳಕವನ್ನೆಲ್ಲಾ ಇಲ್ಲಿ ಧಾರೆ ಎರೆದಂತಿದೆ.

ಪ್ರದಕ್ಷಿಣಾ ಪಥದ ಗೋಡೆಯ ಮೇಲೆನ ಪಟ್ಟಿಕೆಯೊಂದರಲ್ಲಿ ವಿವಿಧ ಚಿತ್ರಗಳ ಸರಮಾಲೆಯೇ ಇದೆ. ಅದರಲ್ಲಿನ ಜಟ್ಟಿಗಳ ಮಲ್ಲಯುದ್ಧ, ವೀರರ ಸಾಹಸಗಾಥೆಗಳು, ಪ್ರಾಣಿ–ಪಕ್ಷಿಗಳ ಕಾಳಗಗಳು ನಯನ ಮನೋಹರವಾಗಿವೆ. ಈ ಶಿಲ್ಪ ಕಲೆಯು ಅಂದಿನ ಸಾಮಾಜಿಕ, ಧಾರ್ಮಿಕ ಅಂಶಗಳ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ. ಇದರೊಂದಿಗೆ ಸಪ್ತ ಮಾತೃಕೆಯರ ಸಾಲು ತುಂಬಾ ವಿಶಿಷ್ಟವಾಗಿದೆ. ಶಕ್ತಿಯ ಆರಾಧನೆಯ ಪ್ರತೀಕವಾಗಿ ಇವುಗಳನ್ನು ಕೆತ್ತಲಾಗಿದೆ.

ದೇವಾಲಯದ ಪ್ರವೇಶ ದ್ವಾರದ ಮೇಲ್ಗಡೆ ಚಿಕ್ಕದಾಗಿ ಆದರೆ ಬೇರೆ ಬೇರೆ ವಿನ್ಯಾಸ ದಲ್ಲಿ ಐದು ಗೋಪುರ ಗಳನ್ನು ಒಂದು ಸಾಲಿನಲ್ಲಿ ಕೆತ್ತಲಾಗಿದೆ. ಇವು ಆ ಪಂಚದೇವಾಲ ಯಗಳು ಮಹಾ ಶಿಖರ (ಗೋಪುರ) ಗಳನ್ನು ಪ್ರತಿನಿಧಿಸುವ ವಿನ್ಯಾಸಗಳಾಗಿವೆ. ಅರ್ಥಾತ್ ಇದೇ ಮಾದರಿಯ ಐದು ಗೋಪುರಗಳು ಅಂದು ಶಿಖರದ ಮೇಲೆ ಶೋಭಿಸು ತ್ತಿದ್ದವೆಂದೂ ಸ್ಥಳೀಯ ವಯೋವೃದ್ಧರು ತಮ್ಮ ಪೂರ್ವಿಕರಿಂದ ತಿಳಿದ ಮಾಹಿ ತಿಯನ್ನು ನೀಡುತ್ತಾರೆ. ಆದರೆ ಇಂದು ಆ ಗೋಪುರಗಳೆಲ್ಲವೂ ನಿರ್ನಾಮಗೊಂಡಿವೆ.

ಪ್ರದಕ್ಷಿಣಾ ಪಥದ ಹಿಂಬದಿಯ ಗೋಡೆ ಯೊಂದರಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಶಾಸನ



ಶ್ರೀ ಪಂಚಲಿಂಗೇಶ್ವರ ದೇವಾಲಯ, ಸೇಡಮ್

ಪೊಂದಿದ್ದು ಇತ್ತೀಚೆಗೆ ಕಟ್ಟಿಸಿದ ಕಟ್ಟೆಯ ಒಳಗಡೆ ಅರ್ಧದಷ್ಟು ಹೂತು ಹೋಗಿದೆ. ಪುರಾತತ್ವ ಇಲಾಖೆ, ಪ್ರಾಚ್ಯ ಸಂಶೋಧನೆಗಳು ಈ ನಿಟ್ಟಿನಲ್ಲಿ ಕಾರ್ಯ ಕೈಗೊಂಡರೆ ಐತಿಹಾಸಿಕವಾಗಿ ಇನ್ನಷ್ಟು ಅಧಿಕೃತ ಮಾಹಿತಿಗಳು ಲಭಿಸಬಹುದಾಗಿದೆ. ಒಳ ಭಾಗದಲ್ಲಿ ಒಂದೆಡೆ ಅಂಬಾ ಭವಾನಿಯ ಚಿಕ್ಕ ಒಳ ಮಾಡು ಇದೆ. ನಾಡ ಹಬ್ಬವಾದ ದಸರೆಯ ಅದರಲ್ಲೂ ಶರನ್ನವರಾತ್ರಿಯನ್ನು ಇಲ್ಲಿ ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿತ್ತು. ಅದನ್ನು ಇಂದಿಗೂ ಅನೂಚಾನವಾಗಿ ಆಚರಿಸುವ ಸಂಪ್ರದಾಯಗಳು ದೇಗುಲದ ಒಳಾವರಣದಲ್ಲಿ ನಡೆಯುತ್ತವೆ. ಇಲ್ಲಿನ ಪಂಚಲಿಂಗಗಳನ್ನು ಕಾಶಿಯಿಂದ ತಂದು ಪ್ರತಿಷ್ಠಾಪಿಸಲಾಗಿದೆ ಎನ್ನಲಾಗುತ್ತದೆ.

ಸೇಡಮ್‌ನ ಸಮೀಪದ 'ಹಂದರಿಕೆ' ಎಂಬ ಗ್ರಾಮದಲ್ಲಿ ಲೋಕೇಶ್ವರ ಮತ್ತು ಆನಮೇಶ್ವರ ದೇವಾಲಯಗಳು ಇದೇ ರೀತಿಯ ತದ್ರೂಪ ವಾಸ್ತುಶಿಲ್ಪ ಹಾಗೂ ಪಂಚಲಿಂಗಗಳ ಸಮುಚ್ಚಯವನ್ನು ಹೊಂದಿದ ನಂತರದ ದೇವಾಲಯಗಳಾಗಿವೆ. ಇವು 5ನೇ ಲೋಕರಸಿ (ಹೈಹಯ) ಕಾಲದಲ್ಲಿ ನಿರ್ಮಾಣಗೊಂಡಿವೆ. ಪಂಚಲಿಂಗೇಶ್ವರ ದೇವಾಲಯ ಕಲೆಯ ಬಲೆಯಾಗಿದೆ. ಸಾಂಸ್ಕೃತಿಕ ಕಲಾ–ಕೃತಿಯಾಗಿ ವೀಕ್ಷಕರ ಗಮನ ಸೆಳೆಯುತ್ತದೆ. ಪರಕೀಯರ ಆಕ್ರಮಣಕ್ಕೆ ಈ ದೇವಾಲಯವೂ ಒಳಗಾದುದರಿಂದ ಸುಂದರವಾಗಿದ್ದ ದ್ವಾರಪಾಲಕರು, ಶಿಲಾಬಾಲಿಕೆಯರ ಮೂರ್ತಿಗಳು, ಸೂರ್ಯ ಶಿಲ್ಪಗಳು ಭಗ್ನಗೊಂಡಿವೆ. ಭುವನೇಶ್ವರಿಯು ಅಚ್ಚಳಿಯದೇ ಹಾಗೇ ಉಳಿದದ್ದು ಈ ನೆಲದ ಅದೃಷ್ಟವೇ ಆಗಿದೆ.

(ಶ್ವಿ.ಎ.)

ಪಟಕ: ಪಟಕ ಎಂದರೆ ಗಂಡಸರು ತಲೆಗೆ ಸುತ್ತುವ ರುಮಾಲು. ಮುಂಡಾಸ ಎನ್ನುವ ಇನ್ನೊಂದು ಹೆಸರೂ ಇದಕ್ಕಿದೆ. ಈ ಪಟಕ ಅಥವಾ ಮುಂಡಾಸಿಗೆ ಜನಪದ ಬದುಕಿನಲ್ಲಿ ಬಹಳ ಪ್ರಾಮುಖ್ಯತೆ ಇದೆ. ಉಡುಗೆಯ ಅವಿಭಾಜ್ಯ ಅಂಗವೆಂಬಂತೆ ಬೆಳೆದು ಬಂದಿತ್ತು. ಶರೀರದ ಮೇಲಸ್ತರದಲ್ಲಿರುವುದು ತಲೆ, ಶರೀರವನ್ನು ನಿಯಂತ್ರಿಸುವ ಮಿದುಳಿರುವುದು ತಲೆಯಲ್ಲಿ. ಗಾಳಿ, ಮಳೆ, ಬಿಸಿಲುಗಳಿಂದ ತಲೆಯನ್ನು ರಕ್ಷಿಸುವ ಪಟಕ ಸುತ್ತುವುದು ರೂಢಿಗೆ ಬಂದಿರಬಹುದು. ಅನಂತರ ಅದು ಧಾರ್ಮಿಕ–ಸಾಮಾಜಿಕ ಪ್ರಾಮುಖ್ಯತೆ ಪಡೆದಂತೆ ತೋರುತ್ತದೆ. ಗುರು ಹಿರಿಯರಿಗೆ ನಮಸ್ಕರಿಸುವಾಗ, ಆರತಿ ಬೆಳಗುವಾಗ ತಲೆ ಮೇಲೆ ಗಂಡಸರು ಪಟಕ ಸುತ್ತಿದರೆ ಹೆಣ್ಣು ಮಕ್ಕಳು ಸೆರಗು ಹೊದ್ದುಕೊಳ್ಳುತ್ತಾರೆ. ಹಿಂದೆ ಇದು ಯಾವಾಗಲೂ ಅನುಸರಿಸುವಂಥದಾಗಿತ್ತು. ಇದು ಜನಪದ ಸಂಸ್ಕೃತಿಯ ಭಾಗವಾಗಿತ್ತು. ಮದುವೆ ನಿಶ್ಚಯವಾದಾಗ ವಧುವಿಗೆ ಹೊನ್ನುಂಗುರವಿಟ್ಟು ಸೀರೆ ಉಡಿಸಿದ ಬಳಿಕ, ಹೆಣ್ಣಿನವರು ಗಂಡಿನವರಿಗೆ ಶಲ್ಯೆ ಮುಂಡಾಸು ಸುತ್ತುವ ಕಾರ್ಯಕ್ರಮವಿರುತ್ತದೆ. ಹೀಗೆ ಮದುವೆಯ ಆರಂಭಿಕ ವಿಧಿಗಳು ನಡೆದು ಮದುವೆಗೆ ನಾಂದಿಯಾಗುತ್ತದೆ. ಹಿಂದೆ ಮೇಲ್ವರ್ಗಗಳಲ್ಲಿ ಒಮ್ಮೆ ನಿಶ್ಚಯವಾದ ಮದುವೆ ಯಾವುದೇ ಕಾರಣಕ್ಕೆ ನಿಂತರೆ ಹೆಣ್ಣು ಆ ಗಂಡಿನ ಹೆಸರಲ್ಲೇ ಜೀವನ ಕಳೆಯಬೇಕಾಗಿತ್ತು. ಈಗ ನಿಯಮಗಳು ಸಡಿಲಗೊಂಡಿವೆ. ಸಮಾಜದಲ್ಲಿ ಮರ್ಯಾದೆಯನ್ನು ಹೆಣ್ಣು ಮಕ್ಕಳಿಗೆ ತಳುಕು ಹಾಕಲಾಗಿದೆ. ಹೆಣ್ಣು ಮಕ್ಕಳಿಂದ ತಂದೆಗೊದಗುವ ಅವಮಾನ ಅವರ ಮುಂಡಾಸ ಕೆಳಗಿಳಿಸಿದಂತೆ ಮನೆಯವರಿಂದಾದ ಸಮಸ್ಯೆಯನ್ನು ನಿವಾರಿಸಕೊಳ್ಳಲು ಕೂಡ ತಂದೆಯಾದವನು ತನ್ನ ಮುಂಡಾಸ, ಕೆಳಗಿಟ್ಟು ಬೇಡಿದ ಪ್ರಸಂಗಗಳಿವೆ. ಒಟ್ಟಾರೆ ಮುಂಡಾಸ, ಪಟಕ ಅಥವಾ ಪಗಡಿ ಎನ್ನುವುದು ಗೌರವ, ಘನತೆ, ಮರ್ಯಾದೆಯ ಸಂಕೇತವಾಗಿರುವಂತೆ ಮುಂಡಾಸ ತೆಗೆದಿಡುವುದು ದೈನ್ಯದ ಸಂಕೇತವಾಗಿ ಭಾವಿತವಾಗಿದೆ.

ಶ್ರೀಮಂತರು ರೇಶ್ಮೆ ಪಟಕ ಸುತ್ತಿದರೆ ಬಡವರು ಹತ್ತಿಯ ಪಟಕ ಸುತ್ತುತ್ತಾರೆ. ಪಟಕಗಳು ಸಾಮಾನ್ಯವಾಗಿ ಎರಡು ಮೊಳ ಅಗಲ 10ರಿಂದ 12ಮೊಳ ಉದ್ದವಿರುತ್ತವೆ. ರೇಶ್ಮೆ ಪಟಕ ಗಾಢ ಹಳದಿ ಇಲ್ಲವೆ ಗುಲಾಬಿ ಬಣ್ಣದ್ದಾಗಿರುತ್ತದೆ. ಹತ್ತಿ ಪಟಕ ಬಿಳಿ ಬಣ್ಣದ್ದಾಗಿರುತ್ತದೆ. ಅಪರೂಪಕ್ಕೆ ಹಸಿರು ಬಣ್ಣದ್ದಾಗಿರುತ್ತವೆ. ಕರ್ನಾಟಕ, ಮಹಾರಾಷ್ಟ್ರ, ಗುಜರಾತ, ರಾಜಸ್ಥಾನಗಳಲ್ಲಿ ಇದರ ಬಳಕೆ ಹೆಚ್ಚಾಗಿರುವುದು ಕಂಡು ಬರುತ್ತದೆ. ಗಾಂಧೀಜಿಯವರು ಬ್ಯಾರಿಸ್ಟರಾಗಿ ವಿಲಾಯಿತಿಗೆ ಹೋದಾಗ ಅಲ್ಲಿಯ ಜನ ಅವರಿಗೆ ಪಟಕ ತೆಗೆಯಲು ಸೂಚಿಸುತ್ತಾರೆ. ಅದನ್ನೊಪ್ಪದ ಗಾಂಧೀಜಿ ಉಡುಪು ಅವರವರ ಸ್ವಾಭಿಮಾನದ ಸಂಕೇತವೆಂದು ಸಾಧಿಸುತ್ತಾರೆ. ಇಂದಿಗೂ ದುಡಿಯುವ ಜನ ಪಟಕ ಸುತ್ತುತ್ತಾರೆ. ಆದರೆ ಕಾಲ ಬದಲಾದಂತೆ ಇದರ ಮಹತ್ವ ಕಡಿಮೆಯಾಗುತ್ತಿದೆ. ಪಟಕದ ಜಾಗವನ್ನು ಗಾಂಧಿ ಟೊಪ್ಪಿಗೆ ಆವರಿಸಿತ್ತು. ಇತ್ತೀಚೆಗೆ ಅದೇ ಕಾಣೆಯಾಗುತ್ತದೆ. ಮದುವೆ ಸಮಾರಂಭದ ಶಲ್ಯ ಮುಂಡಾಸು, ಟಾವೆಲ್ಲು, ಟೊಪ್ಪಿಗೆ ಕಾರ್ಯಕ್ರಮವಾಗಿ ಮಾರ್ಪಟ್ಟಿದೆ. ಹಿಂದೆ ಮದುವೆ ಗಂಡಿನ ಅನುಪಸ್ಥಿತಿಯಲ್ಲಿ ಅವನ ಮುಂಡಾಸದೊಂದಿಗೆ ಮದುವೆ ಮಾಡಿದ ಉದಾಹರಣೆಗಳಿವೆ. ಗುಡದೂರ ದೊಡ್ಡ ಬಸವಾರ್ಯರು ಮದುವೆ ಒಲ್ಲೆನೆಂದು ಊರು ಬಿಟ್ಟು ಹೋದಾಗ ಅವರ ಮುಂಡಾಸಿನೊಂದಿಗೆ ವಧುವಿನ ಮದುವೆ ಮಾಡಿದರಂತೆ. ವಿಧಿಯಿಲ್ಲದೆ ಅವರು ಸಂಸಾರಿಯಾದರಂತೆ ಅರಸರಿಗೆ ಮುಕುಟ ಹೇಗೊ ಸಾಮಾನ್ಯರಿಗೆ ಪಟಕ ಎಂಬಂತಿತ್ತು. ಇಂದು ಆ ಸ್ಥಾನವನ್ನು ಇಂಗ್ಲಿಷ ಮಾದರಿಯ ಕ್ಯಾಪಗಳು ಆವರಿಸಿವೆ. ಅದೂ ಬಿಸಿಲ ದಿನಗಳಲ್ಲಿ ಮಾತ್ರ.

(ಜಿ.ಕಿ.)

ಪಟೇಗಾರರು: ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಜನಾಂಗಕ್ಕೆ ಸೇರಿದವರು. ಪಟ್ಟೇಗಾರರು ಅಥವಾ ಪಟೇಗಾರರು ಎಂದು ಕರೆಯುವುದುಂಟು. ಕರ್ನಾಟಕದಲ್ಲಿ ನೆಲೆಸಿರುವ ಈ ಜನಾಂಗದವರನ್ನು ಪಟ್ಟೇಗಾರರು ಎಂದು ಗುರುತಿಸಿದರೆ, ಇತರ ಬೇರೆ ಬೇರೆ ರಾಜ್ಯಗಳಲ್ಲಿ ನೆಲೆಸಿರುವ ಇವರನ್ನು ಸೋ, ಸ, ಕ್ಷತ್ರಿಯರೆಂಬ ಹೆಸರಿನಿಂದಲೂ ಕರೆಯಲ್ಪಡುತ್ತಾರೆ. ಈ ಸಮಾಜದ ಜನರನ್ನು ಸಾವಜಿಗಳು ಎಂಬ ಹೆಸರಿನಿಂದಲೂ ಗುರುತಿಸುವುದುಂಟು. ಈ ಜನರ ಹೆಸರು 'ಸಾ' ಎಂಬ ಪ್ರತ್ಯಯದಿಂದಲೇ ಕೊನೆಗೊಳ್ಳುವುದೊಂದು ವಿಶೇಷ. ಪೌರಾಣಿಕವಾಗಿ ಈ ಜನಾಂಗದವರು ಕಾರ್ತವೀರ್ಯಾಜುನನ ಸಂತತಿಯವರೆಂದು ನಂಬಲಾಗಿದೆ. ಯಾವಾಗಲೂ ಪಟ್ಟಕ್ಕಾಗಿ ಹೋರಾಡುತ್ತಿದ್ದುದರಿಂದ ಇವರಿಗೆ ಪಟ್ಟೇಗಾರರು ಎಂಬ ಹೆಸರು ಬಂದಿತೆಂಬುದು ಹಿರಿಯರ ಹೇಳಿಕೆ.

ಈ ಜನಾಂಗದ ಇತಿಹಾಸ ಕ್ರಿ.ಶ. 900ರಿಂದ ಈಚೆಗೆ ದಾಖಲಾಗಿದೆ. ಇವರ ವಂಶಾವಳಿಯನ್ನು ತಿಳಿಸುವ ಭಾಟರಲ್ಲಿ ಇವರ ಪ್ರಾಚೀನತೆಗೆ ಸಾಕ್ಷಿಯಾಗುವ ಅನೇಕ ವಿವರಗಳು ದೊರೆಯುತ್ತವೆ. ಇಂದಿನ ಮಧ್ಯಪ್ರದೇಶದಲ್ಲಿರುವ ಮಾಂಡವಗಡ ಅಥವಾ ಮಾಂಡೂ ಎಂಬ ಸ್ಥಳದಿಂದ ಇವರು ಬಂದಿದ್ದು, ಅಂದಿನ ಸಾಮಾಜಿಕ ಸ್ಥಿತ್ಯಂತರಗಳಿಂದಾಗಿ ದೇಶದ ಉದ್ದಗಲಕ್ಕೂ ಹರಿದು ಹಂಚಿಹೋಗಿದ್ದಾರೆ. ಜೊತೆಗೆ ಮೂಲ ತಾಣವಾದ ಮಾಂಡವಗಡದಲ್ಲಿಯೂ ಸಹ ಇನ್ನೂ ಈ ಜನಾಂಗದವರು ಉಳಿದುಕೊಂಡಿದ್ದಾರೆ.

ಪಟೇಗಾರ ಜನಾಂಗದವರು ಕರ್ನಾಟಕ ರಾಜ್ಯದ ಗದಗ, ಹುಬ್ಬಳ್ಳಿ, ಇಲಕಲ್, ಗಜೇಂದ್ರಗಡ, ಗುಡೂರು, ಗುಳೇದಗುಡ್ಡ, ಗುಲ್ಬರ್ಗ, ಹರಿಹರ, ರಾಣೆಬೆನ್ನೂರು, ಭಾಗ್ಯನಗರ, ಹನುಮಸಾಗರ, ಶಹಪೂರ, ಚಿತ್ತಾಪೂರ, ಮುಧೋಳ, ಬೆಂಗಳೂರು- ಹೀಗೆ ಬೇರೆ ಬೇರೆ ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ನೆಲೆ ನಿಂತಿರುವುದಲ್ಲದೆ, ಗುಜರಾತ, ಮಹಾರಾಷ್ಟ್ರ, ಆಂಧ್ರಪ್ರದೇಶ, ಉತ್ತರ ಪ್ರದೇಶ, ತಮಿಳುನಾಡು, ರಾಜಸ್ಥಾನ, ಮಧ್ಯಪ್ರದೇಶ, ಪಂಜಾಬ ಮೊದಲಾದ ವಿವಿಧ ರಾಜ್ಯಗಳಲ್ಲಿಯೂ ದಟ್ಟವಾಗಿ ಕಾಣಸಿಗುತ್ತಾರೆ.

ಕ್ಷಾತ್ರ ವಂಶಕ್ಕೆ ಸೇರಿರುವ ಈ ಜನಾಂಗದವರ ಎತ್ತರ ನಿಲುವು, ಕೆಂಪುವರ್ಣ, ಉದ್ದಮೂಗು ವಿಶಾಲ ಎದೆಯುಳ್ಳವರು. ಹೆಚ್ಚಾಗಿ ಶಕ್ತಿ, ಸಾಹಸ, ಸಾಮರ್ಥ್ಯಗಳ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವರು. ಈ ಜನಾಂಗ ವಿಶೇಷವಾಗಿ ಸೈನ್ಯ ಹಾಗೂ ರಕ್ಷಣಾ ಕ್ಷೇತ್ರಕಾರ್ಯವನ್ನೇ ಪ್ರಧಾನ ವೃತ್ತಿಯನ್ನಾಗಿ ಮಾಡಿ-ಕೊಂಡಿದೆ.

ಈ ಜನಾಂಗದ ಮೂಲ ವೃತ್ತಿ ನೇಕಾರಿಕೆ. ಈ ವೃತ್ತಿಯನ್ನು ಸುಮಾರು ಮುನ್ನೂರು ವರ್ಷಗಳಿಂದಲೂ ಮುಂದುವರಿಸಿ ಕೊಂಡು ಬಂದಿದ್ದಾರೆ. ಬಹುತೇಕ ಸಮಾಜದ ಎಲ್ಲ ಸ್ತರದ ಜನರು ತಮ್ಮ ಬಟ್ಟೆಗಳಿಗಾಗಿ ನೇಕಾರರನ್ನೇ ಅವರು ನಂಬಿದ್ದರಿಂದ 1960 ರ ಸುಮಾರಿಗೆ ನೇಕಾರಿಕಾ ವೃತ್ತಿ ಅತ್ಯಂತ ಬೇಡಿಕೆಯಿಂದ ಕೂಡಿತ್ತು. ಈ ವೃತ್ತಿ ಹೆಚ್ಚು ಆದಾಯ ತರುತ್ತಿರುವುದರಿಂದ ಪಟೇಗಾರರು ಅಂದು ವೈಭವದ ಜೀವನವನ್ನು ನಡೆಸುತ್ತಿದ್ದರು. ಬಟ್ಟೆಗಳ ಉತ್ಪಾದನೆಯು ಯಾಂತ್ರೀಕರಣಗೊಂಡಾಗಿನಿಂದ ಇವರ ವೃತ್ತಿ ಕುಂಠಿತವಾಗತೊಡಗಿತು.

ಪಟೇಗಾರರು ಮೂಲತಃ ದೇವೀ ಆರಾಧಕರು. ಇವರಲ್ಲಿ ಕೆಲವರು ಪುರುಷ ಹಾಗೂ ಸ್ತ್ರೀ ದೇವರ ಆರಾಧಕರೂ ಇದ್ದಾರೆ. ತುಳಜಾಪುರದ ತುಳಜಾಭವಾನಿ, ಮುನಿರಾಬಾದಿನ ಹುಲಿಗೆಮ್ಮ, ನಾಗಾವಿ ಯಲ್ಲಮ್ಮ, ಸವದತ್ತಿ ಯಲ್ಲಮ್ಮ, ಮಯಸೂರಿನ ಚಾಮುಂಡೇಶ್ವರಿ, ಗದ್ವಾಲದ ಜಮುಲಮ್ಮ ಮುಂತಾದ ಶಕ್ತಿ ದೇವತೆಗಳಿಗೆ ನಡೆದುಕೊಳ್ಳುತ್ತಾರೆ. ತಮ್ಮ ವಾಸಸ್ಥಳದಲ್ಲಿ ಅಂಬಾದೇವಿಯ ದೇವಸ್ಥಾನವನ್ನು ನಿರ್ಮಿಸಿ ಕೊಂಡು ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸುವುದು ಇವರ ನಿತ್ಯ ವೈಶಿಷ್ಟ್ಯ. ಪೂಜೆ-ಪುನಸ್ಕಾರಗಳಲ್ಲಿ ಪಾಲಿಸುವುದು. ವೈದಿಕ ಸಂಪ್ರದಾಯವನ್ನೇ ಇವರು ಪಾಲಿಸುವುದು. ಪೌರೋಹಿತ್ಯಕ್ಕಾಗಿ ಬ್ರಾಹ್ಮಣರನ್ನು ಕರೆಯುವ ವಾಡಿಕೆ ಇವರಲ್ಲುಂಟು.

ವರದಕ್ಷಿಣೆಯನ್ನು ಪಡೆಯದೆ ಸಂಪ್ರದಾಯಬದ್ಧ ರೀತಿಯಲ್ಲಿ ವಿವಾಹ ಮಾಡಬೇಕು. ಸಗೋತ್ರ ವಿವಾಹ ಪದ್ಧತಿ ಇವರಲ್ಲಿ ನಿಷೇಧ. ಹೆಚ್ಚಾಗಿ ಅವಿಭಕ್ತ ಕುಟುಂಬದಲ್ಲಿ ಕಾಣಸಿಗುವ ಈ ಜನಾಂಗದವರ ಮನೆಯಲ್ಲಿಯ ಮಂಗಲಕಾರ್ಯ ಮುಂತಾದುವುಗಳ ಸುದ್ದಿಯನ್ನು ಮುಟ್ಟಿಸುವ ಪದ್ಧತಿ ಬಿದರಿ ಎಂಬ ಒಬ್ಬ ಮನುಷ್ಯನ ಮೇಲಿರುತ್ತದೆ. ಪರಂಪರೆ ಹಾಗೂ ಸಂಪ್ರದಾಯದಕ್ಕನುಗುಣವಾಗಿ ಧಾರ್ಮಿಕ ಆಚರಣೆಗಳನ್ನು ಮಾಡುವ ಪಟೇಗಾರರು, ತಮ್ಮ ಜನಾಂಗದಲ್ಲಿ ಮರಣ ಹೊಂದಿದವರ ಅಂತ್ಯ ಸಂಸ್ಕಾರವನ್ನು ದಹನದ ಮೂಲಕ ನಡೆಸುತ್ತಾರೆ.

ಆಶ್ವೀಜ ಮಾಸದ ನವರಾತ್ರಿ ಹಾಗೂ ವಿಜಯದಶಮಿಯು ಈ ಜನಾಂಗಕ್ಕೆ ವಿಶೇಷ ಹಬ್ಬ. ಹಬ್ಬದ ನಿಮಿತ್ತ ಘಟಸ್ಥಾಪನೆ, ಆಯುಧ ಪೂಜೆ, ಕೆಲವು ಮನೆಗಳ ಆಚರಣೆಯಲ್ಲಿ ಶಕ್ತಿ ದೇವತೆಗೆ ಪ್ರಾಣಿ ಬಲಿಯೊಂದಿಗೆ ಪೂಜಾ ಕೈಂಕರ್ಯ ನೆರವೇರುವುದು. ಅಂದು ಶಕ್ತಿ ಮಾತೆಗೆ ಮಾಂಸ ಮತ್ತು ಮಧ್ಯದ ನೈವೇದ್ಯಾರ್ಪಣೆ 'ಗರಂ ಬೋಟಿ ದಾರೂನ್ ವಾಟ' ಅಂದರೆ ಮಾಂಸದ ಬಿಸಿ ತುಣುಕು ಮತ್ತು ಸರಾಯಿಯ ಲೋಟ, ಇವು ದೇವರಿಗೆ ಭಕ್ತಿ ಪೂರ್ವಕ ಅರ್ಪಣೆಯಾಗುವ ಪದಾರ್ಥಗಳು ಅನಂತರ ಲಿಂಗ ಭೇದವಿಲ್ಲದೆ ಮಾಂಸ-ಮಧ್ಯವನ್ನು ಸೇವಿಸುತ್ತಾರೆ. ಮನಸ್ಸಿನ ಭಾವನೆಯನ್ನು ವ್ಯಕ್ತ ಪಡಿಸಲು ಸಂಪರ್ಕ ಸಾಧನೆಗಾಗಿ ಇವರಲ್ಲಿ ತಮ್ಮದೇ ಆದ ವಿಶಿಷ್ಟ ಭಾಷೆ ಇದೆ. ಆದರೆ ಲಿಪಿ ಇಲ್ಲ. ಗುಜರಾತಿ ಮತ್ತು ಮರಾಠಿಯನ್ನು ಹೋಲುವಂತಹ ಶಬ್ದಗಳನ್ನು ತಮ್ಮ ಮಾತುಗಳಲ್ಲಿ ಬಳಸುತ್ತಾರೆ.

ಇವರು ಮೂಲತಃ ಉದ್ಯೋಗ ಶೀಲರು. ನೇಕಾರಿಕೆಯಿಂದ ವಿಮುಖವಾದ ಮೇಲೆ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಹಳ ತೊಂದರೆಗೊಳಗಾಗಿದ್ದಾರೆ. ಸ್ವಾಭಿಮಾನಿಗಳಾದ ಈ ಜನಾಂಗ ದುಡಿದು ಬದುಕಬೇಕು ಎಂಬ ಹುಮ್ಮಸ್ಸುಳ್ಳವರು. ತಾವಿರುವ ಸ್ಥಳಗಳಲ್ಲಿ ಅಚ್ಚಳಿಯದೊಂದು ಗುರುತು ಉಳಿಸುವುದು ಇವರ ಜಾಯಮಾನ. *(ಪಿ.)*

ಪಣ ತೊಡುವುದು: ಪಣ ತೊಡುವುದು ಎಂದರೆ ಪ್ರತಿಜ್ಞೆ ಗೈಯ್ಯುವುದು. ಸಾಮಾನ್ಯವಾಗಿ ಜೀವನದಲ್ಲಿ ಯಾರಿಂದಲಾದರೂ ಅವಮಾನಿತರಾದವರು, ನೋವುಂಡವರು ಪ್ರತೀಕಾರ ತೀರಿಸಿಕೊಳ್ಳುವ ಮನೋಭಾವ ತಾಳುತ್ತಾರೆ. ಕೆಲವೊಮ್ಮೆ ವಚನಕೊಟ್ಟು ಭರವಸೆ ಮೂಡಿಸಲು ಪಣ ತೊಟ್ಟ ಪ್ರಸಂಗಗಳೂ ಇತಿಹಾಸದಲ್ಲಿ ನಡೆದಿವೆ. ಅಂಥ ಸಂದರ್ಭಗಳಲ್ಲಿ ವ್ಯಕ್ತಿಗತವಾಗಿ ಇಲ್ಲವೆ ಸಾರ್ವಜನಿಕರ ಸಮ್ಮುಖದಲ್ಲಿ ಪಣ ತೊಡುತ್ತಾರೆ. ಭೀಷ್ಮ ಪ್ರತಿಜ್ಞೆ, ಭೀಮ ಪ್ರತಿಜ್ಞೆ, ಅಶ್ವತ್ಥಾಮ ಪ್ರತಿಜ್ಞೆ, ಕರ್ಣ ಪ್ರತಿಜ್ಞೆ, ಚಾಣಕ್ಯ ಪ್ರತಿಜ್ಞೆ, ಗಾಂಧೀಜಿ ಪ್ರತಿಜ್ಞೆ ಮುಂತಾದವು ಪ್ರಸಿದ್ಧವಾದವುಗಳು.

ಪಣಕ್ಕಿಡು, ಪಣಕ್ಕೊಡು ಎಂಬ ನುಡಿಗಟ್ಟುಗಳೂ ಬಳಕೆಯಲ್ಲಿವೆ. ಪಾಂಡವರು ದ್ರೌಪದಿಯನ್ನು ಜೂಜಿನಲ್ಲಿ ಪಣಕ್ಕಿಟ್ಟರು. ದೇಶಕ್ಕಾಗಿ ಸೈನಿಕರು ತಮ್ಮ ಪ್ರಾಣವನ್ನು ಪಣಕ್ಕೊಡ್ಡಿ ಹೋರಾಡುತ್ತಾರೆ.

ಪರಶುರಾಮನಲ್ಲಿ ಭೀಷ್ಮ ತನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ಬಂದೊಡನೆ ಅವನಿಗೆ ಯುವರಾಜ್ಯಾಭಿಷೇಕ ಆಗುತ್ತದೆ. ಅವನ ತಂದೆ ಶಂತನು ದಾಶರಾಜನ ಸಾಕು ಮಗಳು ಸತ್ಯವತಿಯನ್ನು ಕಂಡು ಮಾರು ಹೋಗುತ್ತಾನೆ. ವಿವಾಹಕ್ಕಾಗಿ ದಾಶರಾಜನನ್ನು ಕೇಳಿದಾಗ ಸತ್ಯವತಿಯ ಮಗನಿಗೆ, ರಾಜ್ಯಾಧಿಕಾರ ದೊರೆಯುವುದಾದರೆ ಮಾತ್ರ ಮಗಳನ್ನು ಕೊಡುವೆನೆನ್ನುತ್ತಾನೆ. ಶಂತನು ಚಿಂತಾಕ್ರಾಂತನಾಗಿ ಮರಳುತ್ತಾನೆ. ಆಗ ಭೀಷ್ಮ ತಾನು ಮದುವೆಯಾಗುವುದಿಲ್ಲವೆಂದು ಪಣ ತೊಡುತ್ತಾನೆ. ಮಾತಿನಂತೆ ನಡೆದು ಸತ್ಯವ್ರತ, ದೇವವ್ರತ ಎಂದು ಹೆಸರಾಗುತ್ತಾನೆ.

ಭೀಮ, ಕೌರವರಿಂದ ದ್ರೌಪದಿಯ ವಸ್ತ್ರಾಪಹರಣವಾದ ಸಂದರ್ಭದಲ್ಲಿ ದುರ್ಯೋಧನನ ತೊಡೆಗಳನ್ನು ಮುರಿಯುವುದಾಗಿ ಪ್ರತಿಜ್ಞೆ ಮಾಡುತ್ತಾನೆ.

ದುರ್ಯೋಧನ, ಅಶ್ವತ್ಥಾಮನಿಗೆ ಸೇನಾಧಿಪತಿ ಪಟ್ಟಗಟ್ಟಿದಾಗ ಅಶ್ವತ್ಥಾಮನು ಪಾಂಡವರನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಆದರೆ ತಪ್ಪು ಕಲ್ಪನೆಯಿಂದ ಉಪಪಾಂಡವರನ್ನು ಕೊಲ್ಲುತ್ತಾನೆ. ಕರ್ಣನೂ ಪಾಂಡವರನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಆದರೆ ಯುದ್ಧದಲ್ಲಿ ತಾನೇ ಬಲಿಯಾಗುತ್ತಾನೆ.

ನಂದರಾಜರಿಂದ ಅವಮಾನಿತನಾದ ಚಾಣಕ್ಯ ಅವರನ್ನು ರಾಜ್ಯಹೀನರನ್ನಾಗಿ ಮಾಡುವ ಪಣ ತೊಡುತ್ತಾನೆ. ಅಂತೆಯೆ ಚಂದ್ರಗುಪ್ತ ಮೌರ್ಯನನ್ನು ರಾಜನನ್ನಾಗಿಸಿ ಗುಪ್ತ ಸಾಮ್ರಾಜ್ಯ ಸ್ಥಾಪನೆಗೆ ಕಾರಣನಾಗುತ್ತಾನೆ.

ಗಾಂಧೀಜಿಯವರು ವೃದ್ಧೆಯೊಬ್ಬಳು ಅರ್ಧ ಸೀರೆ ಉಟ್ಟು ಇನ್ನರ್ಧ ಸೀರೆಯನ್ನು ಒಣಗಲು ಹಾಕಿದ್ದನ್ನು ಕಂಡು ದೇಶದ ಪ್ರಜೆಗಳಿಗೆಲ್ಲ ಹೊಟ್ಟೆ ತುಂಬ ಊಟ, ಮೈತುಂಬ ಬಟ್ಟೆ ಸಿಗುವವರೆಗೆ ತಾವೂ ಹೊಟ್ಟೆ ತುಂಬ ಉಣ್ಣದ ಹಾಗೂ ಮೈ ತುಂಬ ಬಟ್ಟೆ ತೊಡದಿರುವ ಪಣ ತೊಡುತ್ತಾರೆ. ಜೀವನ ಪರ್ಯಂತ ಅದನ್ನು ನಿಭಾಯಿಸುತ್ತಾನೆ.

ಹೀಗೆ ಪ್ರತೀಕಾರ ಹಾಗೂ ತ್ಯಾಗ ಮನೋಭಾವದಿಂದ ಪ್ರತಿಜ್ಞೆಗೈದ ಸಂದರ್ಭಗಳು ಚರಿತ್ರೆಯಲ್ಲಿ ಸಾಕಷ್ಟಿವೆ. ಪಣ ತೊಡುವುದು ಆವೇಶದ ಸಂದರ್ಭದಲ್ಲಿ ಹೆಚ್ಚಾಗಿ ನಡೆಯುತ್ತದೆ. ತೊಟ್ಟ ಪಣಗಳೆಲ್ಲ ಪೂರ್ಣವಾದದ್ದು ಅಪರೂಪ, ಭೀಷ್ಮ, ಭೀಮ, ಚಾಣಕ್ಯ, ಗಾಂಧೀಜಿ ಪಣ ತೊಟ್ಟಂತೆ ನಡೆದುಕೊಳ್ಳುತ್ತಾರೆ. ಆದರೆ ಕರ್ಣ ಹಾಗೂ ಅಶ್ವತ್ಥಾಮರು ಸೋಲುತ್ತಾರೆ.

ಪಗಡಿ ಆಟ: ಮಹಾಭಾರತ ಕಾಲದಷ್ಟು ಹಳೆಯದು. ಬಟ್ಟೆಯಿಂದ ಮಾಡಿದ ಚೌಕಾಕಾರದ ಮನೆಗಳಿಂದ ಆಟದ ಹಾಸು ಸಿದ್ಧವಾಗಿರುತ್ತದೆ. ಈ ಆಟದ ರಚನೆ ಅಧಿಕ ಚಿಹ್ನೆಯಂತೆ ಇರುತ್ತದೆ. ಈ ಹಾಸಿನ ಎದುರು ಮೇಲೆ ನಡೆಸಲು ಕಟ್ಟಿಗೆಯ ಗುಮ್ಮಚೌಕಾರದ ಕಾಯಿಗಳಿರುತ್ತವೆ. ಒಂದೊಂದು ತಂಡದವರು ಎಂಟೆಂಟು ಕಾಯಿಗಳನ್ನಿಟ್ಟುಕೊಂಡು ಆಡುತ್ತಾರೆ. ಕನಿಷ್ಟ ನಾಲ್ಕು ಗರಿಷ್ಟ ಹದಿನಾರು ಜನ ಒಂದು ಗುಂಪಿನಲ್ಲಿ ಇರಬಹುದು. ಸಾಮಾನ್ಯವಾಗಿ ನಾಲ್ಕು-ನಾಲ್ಕು ಇಲ್ಲವೆ ಆರು-ಆರು ಜನರು ಇರುವುದು ವಾಡಿಕೆ. ಪ್ರತಿ ಗುಂಪಿನಲ್ಲಿ ಸಮ ಆಟಗಾರರಿರುತ್ತಾರೆ. ಎರಡೂ ಗುಂಪಿನ ಕಾಯಿಗಳ ಬಣ್ಣ ಬೇರೆ ಬೇರೆಯಾಗಿರುತ್ತದೆ. ಪಗಡಿ ಕಾಯಿಗಳು ನಾಲ್ಕು ಬಣ್ಣಗಳಲ್ಲಿರುತ್ತವೆ. ಕರಿಕಾಯಿ ಆನೆ, ಕೆಂಪುಕಾಯಿ ಕುದುರೆ, ಹಸಿರು ಕಾಯಿ ಕತ್ತೆ. ಹಳದಿಕಾಯಿ ಆಕಳು ಎಂದು ಕರೆಯುತ್ತಾರೆ. ಎರಡೆರಡು ಬಣ್ಣದ ಕಾಯಿಗಳನ್ನು ಇಟ್ಟುಕೊಂಡು ಆಡುತ್ತಾರೆ. ಆರು ಕವಡೆಗಳನ್ನು ಆಟಕ್ಕೆ ಬಳಸುತ್ತಾರೆ. ಕವಡೆಯ ಚಿತ್ತ ಅಥವಾ ಪಟ್ಟ ಬೀಳುವಿಕೆಯಿಂದ ಸಂಖ್ಯೆಯನ್ನು ಗುರುತಿಸಿ ಕಾಯಿಗಳನ್ನು ಚೌಕಾಕಾರದ ಮನೆಗಳಲ್ಲಿ ಬಿಡುತ್ತಾರೆ.

ಆಟದ ನಿಯಮ: ಆರಂಭದಲ್ಲಿ ಕಾಯಿಗಳನ್ನು ಹಾಸಿನ ಪಕ್ಕದಲ್ಲಿರಿಸುತ್ತಾರೆ. ಕಾಯಿ ಪಗಡಿಮನೆಯನ್ನು ಪ್ರವೇಶಿಸಲು ಹತ್ತು ಅಥವಾ ಇಪ್ಪತ್ತೈದು ಸಂಖ್ಯೆ ಬೀಳುವುದು ಅವಶ್ಯ. ಎದುರಾಳಿಯ ಕಾಯಿ ಕಡಿಯಲು ಕೂಡ ಇದೆ ನಿಯಮ ಬಳಕೆಯಾಗುತ್ತದೆ. ಅಷ್ಟೇ ಅಲ್ಲ ಪ್ರತಿ ಆಟಗಾರರು ಎದುರಾಳಿಯ ಕಾಯಿ ಕಡಿಯಬೇಕೆಂದರೂ ಇದೇ ನಿಯಮ ಅನ್ವಯಿಸುತ್ತದೆ. ಆರು ಕವಡೆಗಳಲ್ಲಿ ಒಂದು ಕವಡೆ ಚಿತ್ತವಿದ್ದು, ಉಳಿದವು ಪಟ್ಟವಿದ್ದರೆ ಹತ್ತು, ಒಂದು ಪಟ್ಟವಿದ್ದು ಐದು ಚಿತ್ತವಿದ್ದರೆ ಇಪ್ಪತ್ತೈದು, ಮೂರು ಚಿತ್ತ ಮೂರು ಪಟ್ಟವಿದ್ದರೆ ತೀನಿ (ಮೂರು) ಎರಡು ಚಿತ್ತವಿದ್ದರೆ ದೋನಿ (ಎರಡು) ನಾಲ್ಕು ಚಿತ್ತವಿದ್ದರೆ ಚಾರಿ (ನಾಲ್ಕು), ಆರೂ ಪಟ್ಟವಿದ್ದರೆ ಬಾರಾ (ಹನ್ನೆರಡು) ಆರೂ ಚಿತ್ತ ಬಿದ್ದರೆ ಚಕ್ಕಾ (ಆರು) ಎಂದು ಸಂಖ್ಯೆ ಗುರುತಿಸುತ್ತಾರೆ.

ಕಟ್ಟೆಯಲ್ಲಿರುವ ಕಾಯಿಯನ್ನು ಕಡಿಯಲು ಬರುವುದಿಲ್ಲ. ಒಂದು ಕಟ್ಟೆಯಲ್ಲಿ ಒಬ್ಬರದೇ ಕಾಯಿ ಕೂಡಬೇಕು. ಕಡಿತ ಸಿಕ್ಕ ಮೇಲೆ ಬೀಳುವ ಹತ್ತು ಮತ್ತು ಇಪ್ಪತ್ತೈದು ಸಂಖ್ಯೆಗೆ ಹೆಚ್ಚುವರಿಯಾಗಿ ಒಂದು ಸಂಖ್ಯೆ ಸೇರುತ್ತದೆ. ಹತ್ತು ಬಿದ್ದರೆ ಹನ್ನೊಂದು ಮನೆ ಇಪ್ಪತ್ತೈದು ಬಿದ್ದರೆ ಇಪ್ಪತ್ತಾರು, ಮನೆ ಬಿಡುತ್ತಾರೆ. ಈ ಹೆಚ್ಚಿನ ಸಂಖ್ಯೆಯನ್ನು ಪಾವು ಎನ್ನುತ್ತಾರೆ. ಆಟಕ್ಕಿರಿಸಿದ ಎಂಟು ಕಾಯಿಗಳೂ ಪಗಡಿಮನೆ ಪ್ರವೇಶಿಸಿದ ಮೇಲೆಯೆ ಕಡಿಯಲು ಅರ್ಹತೆ ಸಿಕ್ಕಂತೆ. ಇದನ್ನು ಪರ್ಜ ಹಾರಿತು ಎನ್ನುತ್ತಾರೆ. ಕಾಯಿಗಳು ಮನೆಯಿಂದ ಹೊರಟು ಮನೆಗೆ ಮರಳುತ್ತವೆ. ಅದನ್ನು ಕಾಯಿ ಮಲಗಿತು ಎನ್ನುತ್ತಾರೆ. ಕಾಯಿಯನ್ನು ಅಡ್ಡ ಬೀಳಿಸುತ್ತಾರೆ. ಎಲ್ಲ ಕಾಯಿಗಳು ಮನೆಗೆ ಬಂದರೂ ಎದುರಾಳಿಗೆ ಕಡಿತ ಸಿಗದಿದ್ದರೆ ಅವರು ಸೋತಂತೆ, ಎರಡೂ ಗುಂಪುಗಳಿಗೆ ಕಡಿತ ಸಿಕ್ಕರೆ ಆಟ ಸಮ (ಡ್ರಾ) ಆದಂತೆ.

ಮಹಾಭಾರತದ ದ್ಯೂತದಲ್ಲಿ ಮಾಯಾವಿಯಾದ ಶಕುನಿಯ ಇಚ್ಛೆಯಂತೆ ದಾಳಗಳು ಬೀಳುತ್ತಿದ್ದವಂತೆ. ನಳ ಮಹಾರಾಜನು ದ್ಯೂತದಲ್ಲಿ ಸೋತು ಕಾಡು ಸೇರುತ್ತಾನೆ. ಮೂಲತಃ ಗಂಡಸರ ಆಟವಾಗಿ ಜೂಜಾಗಿ ಆಡಲ್ಪಡುತ್ತಿದ್ದ ಈ ಆಟ ಸದ್ಯ ದೀಪಾವಳಿಯಲ್ಲಿ ಒಂದು ತಿಂಗಳವರೆಗೆ ಅಂದರೆ ಸೀಗಿ ಹುಣ್ಣಿಮೆಯಿಂದ ಗೌರಿಹುಣ್ಣಿಮೆವರೆಗೆ ಆಡುವ ಪರಿಪಾಠವನ್ನು ಬ್ರಾಹ್ಮಣ ಹೆಣ್ಣುಮಕ್ಕಳು ನಡೆಸಿಕೊಂಡು ಬಂದಿದ್ದಾರೆ. ಪರಂಪರೆಯ ಪಳೆಯುಳಿಕೆಯಾಗಿ ರಕ್ಷಿಸಿಕೊಂಡು ಬರುತ್ತಿದ್ದಾರೆ. ದೀಪಾವಳಿಯಿಂದ ಕಡೆ ಪಂಚಮಿವರೆಗೆ ಆಡುವ ಪದ್ಧತಿ

ಕೆಲವೆಡೆ ಇದೆ. ಕೊನೆ ದಿನ ಓಣಿಯ ಪ್ರಮುಖರ ಮನೆಯಲ್ಲಿ ಫಲಾಹಾರದ ನಂತರ ಆಟ ನಿಲ್ಲಿಸುತ್ತಾರೆ. *(ಬಿ.ಸಿ.)*

ಪತ್ತಾರ: ಬಂಗಾರ, ಬೆಳ್ಳಿ ಆಭರಣಗಳನ್ನು ತಯಾರಿಸುವ ಕುಶಲ ಕರ್ಮಿಗಳಿಗೆ ಅಕ್ಕಸಾಲಿ, ರಥಕಾರರು, ಚಿನಿತಾರರು, ಸೊನೆಗಾರರು, ಆಚಾರಿ, ವಿಶ್ವಕರ್ಮ ಪತ್ತಾರ ಎಂಬ ಹೆಸರುಗಳಿವೆ. 'ಅಕ್ಕಸಾಲಿ'ಗ 'ಅರ್ಕಸಾಲೆ'ಯೇ ಮೂಲಪದ. ಅರ್ಕ ಎಂದರೆ ಅರಗು. ಅಂದರೆ ಅರಗು ಕೂಡಿಸುವ, ಕರಗಿಸುವ ಅಥವಾ ಭಟ್ಟಿ ಇಳಿಸಿ ಆಭರಣಗಳಿಗೆ ತುಂಬುವ ಸಾಲೆಯೇ 'ಅರ್ಕಸಾಲೆ' ಎಂದಿಟ್ಟುಕೊಳ್ಳಬಹುದು. ಮೂಲತಃ ಪತ್ತಾರ, ಬಡಗಿ, ಕಮ್ಮಾರ, ಶಿಲ್ಪಿ (ಒಡ್ಡ) ಇವರು ಒಂದೇ ಮೂಲದವರಾದರೂ ಹಳ್ಳಿಯ ಜಾತಿವ್ಯವಸ್ಥೆ ಹಾಗೂ ಸಾಮಾಜಿಕವಾದ ಸ್ಥಾನಮಾನಗಳಿಂದ ಇತರರಂತೆ ತಮ್ಮ ಜಾತಿಯಲ್ಲಿಯೇ ಅಂತರವನ್ನು ಸಾಧಿಸಿಕೊಂಡಿರುವುದು ಗಮನಾರ್ಹವಾಗಿದೆ. ಉದಾಹರಣೆಗೆ ವಾಸ್ತು ಶಿಲ್ಪದಲ್ಲಿ ಸುಪ್ರತೀತಿಯನ್ನು ಪಡೆದ ವಾಸ್ತುಶಿಲ್ಪಿ ಅಂದರೆ ಒಡ್ಡರೊಂದಿಗೆ ಪತ್ತಾರ, ಬಡಗಿ, ಕಮ್ಮಾರರು ಈಗ ಸಾಮಾಜಿಕವಾಗಿ ಯಾವ ಸಂಬಂಧವನ್ನು ಇಟ್ಟುಕೊಂಡಿಲ್ಲವೆಂಬುದು ಸ್ಪಷ್ಟ. ಅಷ್ಟೇ ಅಲ್ಲ, ವಿಶ್ವಕರ್ಮ ಬ್ರಾಹ್ಮಣ ಮೂಲದವರೆಂದುಕೊಳ್ಳುವ ಪತ್ತಾರ, ಬಡಗಿ, ಕಮ್ಮಾರ ಇವರಲ್ಲಿಯೇ ಪರಸ್ಪರವಾದ ಜಾತಿ-ಶ್ರೇಣಿಗಳು ಏರ್ಪಟ್ಟಿವೆ. ಹೀಗೆ ಬಣಜಿಗ, ಕ್ಷೌರಿಕ, ಕುಂಬಾರ ಎಲ್ಲರೂ ವೀರಶೈವರಾದರೂ ಬಣಜಿಗನು ತನ್ನ ವ್ಯಾಪಾರ ಸಂಪತ್ತಿನಿಂದ ಕೀಳು ಕಸಬಿನವರೆಂದು ಪರಿಗಣಿಸಲಾಗುವ ಕ್ಷೌರಿಕ, ಕುಂಬಾರರಿ-ಗಿಂತ ಸಾಮಾಜಿಕ ವ್ಯವಸ್ಥೆಯಲ್ಲಿ ಮಿಗಿಲೆನಿಸುತ್ತಾನೆಯೋ ಹಾಗೆ ಕಮ್ಮಾರನೇ ವಿಶ್ವಕರ್ಮ ಬ್ರಾಹ್ಮಣ ಸಹೋದರರಲ್ಲಿ ಹಿರಿಯನಾದರೂ ಕಬ್ಬಿಣ ಕಾಸಿ ಬಡಿವ ಆತನು ಕಷ್ಟದ ಕೆಲಸದಿಂದಾಗಿ ಅಕ್ಕಸಾಲಿ, ಬಡಿಗನಿಗಿಂತಲೂ ಕೀಳರಿಮೆಯನ್ನು ಹೊಂದಿದ್ದಾನೆ. ಹಾಗೆಯೇ ಅಕ್ಕಸಾಲಿಗಿಂತ ಬಡಿಗನು ಹೆಚ್ಚಿನವನೆಂದರೂ ಪತ್ತಾರ ಚಿನ್ನ ಬೆಳ್ಳಿಯ ಕೆಲಸ ಮಾಡುವನಾದ್ದರಿಂದ ಸಮಾಜದ ಮೇಲುವರ್ಗದವರೊಂದಿಗೆ ನೇರ ಸಂಪರ್ಕ ಹೊಂದಿರುವುದರಿಂದ ಸಾಮಾಜಿಕವಾಗಿ ಇತರರಿಗಿಂತ ಮೇಲ್ದರ್ಜೆಯವನೆಂದು ಪರಿಗಣಿಸಲ್ಪಟ್ಟಿದ್ದಾನೆ. ವೃತ್ತಿ ಪ್ರಭೇದದಿಂದ ಸಾಮಾಜಿಕವಾದ ಸ್ಥಾನಮಾನಗಳು ಬೇರೆ ಬೇರೆಯಾದರೂ ಇವರೆಲ್ಲರೂ ತಮ್ಮನ್ನು ವಿಶ್ವಕರ್ಮ ಬ್ರಾಹ್ಮಣ-ರೆಂದು ಕರೆದುಕೊಳ್ಳುತ್ತಾರೆ. ಜನಿವಾರ ಧರಿಸುವ ಇವರು ಜಾತಿ ಶ್ರೇಷ್ಠವೆಂದು ಹೇಳಿಕೊಳ್ಳುವ ಬ್ರಾಹ್ಮಣನಗಿಂತಲೂ ಅಭ್ಯಸಿಸದೇ ಅನುಷ್ಠಾನ, ತಪಸ್ಸುಗಳಿಂದ ಕಲಾರಾಧನೆ ಮಾಡಿ ಸಿದ್ಧಿ ಪಡೆಯದೇ ಇರುವನೋ ಅವನು ಬ್ರಾಹ್ಮಣನಲ್ಲವಂತೆ. ಬ್ರಾಹ್ಮಣ-ರು ಕೇವಲ ಲೋಕಕಲ್ಯಾಣಕ್ಕಾಗಿ ಚಿಂತನೆ ಮಾಡಿದರೆ, ವಿಶ್ವಕರ್ಮ ಬ್ರಾಹ್ಮಣರು ಆ ಚಿಂತನೆಯನ್ನು ಕ್ರಿಯಾಶೀಲಗೊಳಿಸಿ ಲೋಕದ ಶಾಶ್ವತಸುಖಕ್ಕೆ ಕಾರಣೀಭೂತರಾಗುತ್ತಾರೆ. ಎಂಬ ಪ್ರೌಢವಾದ ತಿಳುವಳಿಕೆ ಇದ್ದು, ಅದನ್ನು ಪೌರಾಣಿಕ ಐತಿಹ್ಯ, ಶಾಸ್ತ್ರ, ಪುರಾಣ, ವೇದ, ಉಪನಿಷತ್ತು ಮುಂತಾದವುಗಳ ಆಧಾರಗಳಿಂದ ಪುಷ್ಟೀಕರಿಸುತ್ತಾರೆ.

ಸನಾತನ ವಿಶ್ವಬ್ರಾಹ್ಮಣ ಧರ್ಮದ ಮೂಲ ಅಧಿದೇವನೇ ವಿಶ್ವಕರ್ಮ. ಸಕಲ ಚರಾಚರಗಳನ್ನು ಸೃಷ್ಟಿಸಿ ಲೀಲಾವಿನೋದದಲ್ಲಿ ನಿರತನಾದ ಈತನೇ ಸರ್ವದೇವತೆಗಳಿಗೂ ತಂದೆ ಹಾಗೂ ನಿರ್ಮಾಪಕ. ಈ ಜಗತ್ತಿನಲ್ಲಿ ಚಲಿಸುವುದೆಲ್ಲವೂ ಸರ್ವರೂಪಧರನಾದ ವಿಶ್ವಕರ್ಮರಿಂದ ತುಂಬಿದೆ. ವಿಶ್ವಕರ್ಮ ತತ್ವವೆಂದರೆ ಆತ್ಮಯಜ್ಞ, ಒಟ್ಟಿನಲ್ಲಿ ವಿಶ್ವದ ಸೃಜನೆ, ರಕ್ಷಣೆ, ಕ್ರಿಯೆ, ಆಗುಹೋಗುಗಳು ಯಾವನಿಂದ ಆಗುವವೋ ಅವನು ವಿಶ್ವಕರ್ಮನೆಂದು ಪಾಣಿನಿಯು ತನ್ನ ಅಷ್ಟಾಧ್ಯಾಯಿಯಲ್ಲಿ ವರ್ಣಿಸಿದ್ದಾನೆ. ಮನುಸ್ಮೃತಿಯಲ್ಲಿ "ಯಾವನು ವೇದಗಳಿಂದಲೇ ತಿಳಿಯಲು ಸಾಧ್ಯನೋ, ವಾಕ್‌ಕ್ರಿಯೆಗಳಿಗೆ ಒಡೆಯನೋ, ಶಾಶ್ವತನೋ ಆ ವಿಶ್ವಕರ್ಮನಿಗೆ ನಮಸ್ಕರಿಸುತ್ತೇನೆ" ಎಂದು ಸ್ತುತಿಸಿದ್ದಾನೆ. ಇವೇ ಮುಂತಾದ ಶಾಸ್ತ್ರ, ವೇದೋಕ್ತ ಆಕರಗಳಿಂದ ವಿಶ್ವಕರ್ಮನ ಮಹತ್ವವನ್ನು ಸಾರುವ ಈ ಮತದ ವಿದ್ವಾಂಸರು, ವಿಶ್ವಕರ್ಮನ ವಂಶ ವಿಕಾಸ ಕ್ರಮವನ್ನು ಸ್ಪಷ್ಟಗೊಳಿಸುವುದನ್ನಿಲ್ಲಿ ಅವಲೋಕಿಸಬಹುದು.

ವಿಶ್ವಕರ್ಮನಿಗೆ ಪಂಚಬ್ರಹ್ಮರೆನಿಸಿಕೊಂಡ ಶಿವ, ವಿಷ್ಣು, ಬ್ರಹ್ಮ, ಇಂದ್ರ, ಸೂರ್ಯರೆಂಬ ಐದುಮಕ್ಕಳು. ಇವರನ್ನು ಕ್ರಮವಾಗಿ ಮನು (ಶಿವ), ಮಯ (ವಿಷ್ಣು), ತ್ವಷ್ಟಾ (ಬ್ರಹ್ಮ), ಶಿಲ್ಪಿ (ಇಂದ್ರ), ದೈವಜ್ಞ (ಸೂರ್ಯ) ಎಂಬ ಪರ್ಯಾಯ ಹೆಸರುಗಳಿಂದ ಕರೆಯುತ್ತಾರೆ. (ಇವರೇ ಪಂಚ ಬ್ರಹ್ಮರು. ಇವರ ವಂಶಜರೆ 125 ಗೋತ್ರ ಋಷಿಗಳಾಗಿ ಲೋಕವನ್ನೇ ಶಿಲ್ಪಮಯವನ್ನಾಗಿಸಿ ದರಂತೆ). ಶಿವನೇ ಮನುವಾದ ಕಮ್ಮಾರ, ವಿಷ್ಣುವೇ ಮಯನಾದ ಬಡಿಗ, ಬ್ರಹ್ಮನೆ ತ್ವಷ್ಟ್ರನಾದ ಕಂಚುಗಾರ, ಇಂದ್ರನೇ ಶಿಲಾಕರ್ಮಿಯಾದ ಶಿಲ್ಪಿ ಹಾಗೂ ಸೂರ್ಯನೇ ವಿಶ್ವಜ್ಞನಾದ ಪತ್ತಾರ. ಹೀಗೆ ವಿಶ್ವಕರ್ಮನು ಆಯಃಶಿಲ್ಪ ದಾರುಶಿಲ್ಪ, ತಾಮ್ರಶಿಲ್ಪ, ಶಿಲಾಶಿಲ್ಪ, ಸುವರ್ಣಶಿಲ್ಪ ಎಂಬ ಪಂಚವಿದ್ಯೆಗಳನ್ನು ತನ್ನ ಪಂಚ ಮಕ್ಕಳಿಗೂ ಬೋಧಿಸಿ ಲೋಕ ಕಲ್ಯಾಣಕ್ಕೆ ಅಣಿಗೊಳಿಸಿದನಂತೆ. ಹೀಗೆ ಪಂಚಶಿಲ್ಪಕಾಯ ಕನಿಷ್ಠರು ಆದ್ದ-ರಿಂದಲೇ ಇವರಿಗೆ ಪಂಚಾಳರೆಂದು ಕರೆಯಲ್ಪಡುತ್ತಾರೆ.

ಪಂಚಶಿಲ್ಪನಿರತರಾದ ಈ ವಿಶ್ವಕರ್ಮ ವಿಶ್ವಬ್ರಾಹ್ಮಣ ಪಂಚಾಳರಿಗೆ ಪಂಚ ಗೋತ್ರಋಷಿಗಳನ್ನು ಕಲ್ಪಿಸಲಾಗಿದೆ, ಸಾನಗ ಗೋತ್ರದಲ್ಲಿ ಕಮ್ಮಾರನೂ, ಸನಾತನ ಗೋತ್ರದಲ್ಲಿ ಬಡಿಗನೂ, ಅಹೋಭೂನ ಗೋತ್ರದಲ್ಲಿ ಕಂಚುಗಾರನೂ, ಪತ್ನಗೋತ್ರದಲ್ಲಿ ಶಿಲ್ಪಿಯೂ ಮತ್ತು ಸುಪರ್ಣಸ ಗೋತ್ರದಲ್ಲಿ ಪತ್ತಾರನೂ ಬರುತ್ತಾನೆ.

ಬೆಳ್ಳಿ ಹಾಗೂ ಬಂಗಾರದ ಒಡವೆಗಳನ್ನು ತಯಾರಿಸುವಲ್ಲಿ ಕುಶಲಕರ್ಮಿಗಳೆನಿಸಿಕೊಂಡ ಸಪರ್ಣಸ ಗೋತ್ರದವರಾದ ದೈವಜ್ಞ ಪತ್ತಾರರು ಚಿನವಾಲರು, ರಥಕಾರರು, ನಾಡಿಂದವರು, ಸೋನೆಗಾರರು, ಇತ್ಯಾದಿ ಹೆಸರುಗಳಿಂದ ಕರೆವ ರೂಢಿ. ಅಲ್ಲದೇ ಅರ್ಕಸಾಲಿ, ಮನ್ವಾಚಾರಿ, ಮಾನಾಚಾರಿ, ಮಾಯಾಚಾರಿ, ಆಚಾರಿ, ಪಂಚಾಳ, ಪತ್ತಾರ ಇತ್ಯಾದಿ ಅಡ್ಡ ಹೆಸರುಗಳು ಇವರಿಗೆ ಸಾಮಾನ್ಯವಾದವುಗಳು ವಿಶೇಷವಾಗಿ ಮಕ್ಕಳಿಗೆ ತಮ್ಮ ಧರ್ಮದ ದೇವದೇವತೆಗಳ ಹೆಸರುಗಳನ್ನೇ ಇಡುವ ವಾಡಿಕೆ. ಉದಾ: ಕಾಳವ್ವ, ದ್ಯಾಮವ್ವ, ಕಾಳಾಚಾರಿ, ಮಾನಪ್ಪ, ವೀರಭದ್ರಾಚಾರಿ ಇಲ್ಲಿ ವೀರಭದ್ರನು ಶಕ್ತಿಯ ಮಗನಾದ್ದರಿಂದ ಸಾಕ್ಷಾತ್

ಭದ್ರಕಾಳೀರಮಣನೇ ಆದುದರಿಂದ, ಈ ಹೆಸರು ಇಡುವ ಪರಿಪಾಠ.

ಗತಿಸಿಹೋದ ನಾಗರಿಕತೆಯನ್ನು, ಪ್ರಾಚೀನ ಕಲಾ ವಿನ್ಯಾಸವನ್ನು ಗುರುತಿಸಲು ಈ ಹಿಂದೆ ಆಗಿಹೋದ ಪತ್ತಾರರಿಗೆ ನಿರ್ಮಿಸಿದ ಕಲಾಕುಸುರಿನ ವಸ್ತ್ರ ಒಡವೆಗಳು ಮಹತ್ವದ ಸಾಮಗ್ರಿಗಳಾಗಿರುತ್ತವೆ. ಬಂಗಾರ, ಬೆಳ್ಳಿ, ವಜ್ರ, ರತ್ನ, ಮಣಿಗಳಿಂದ ಖಚಿತವಾದ ಸುಂದರ ಕುಸುರಿ ಕೆಲಸಗಳಲ್ಲಿ ಇವರು ಪರಿಣಿತರು. ವಿಶ್ವಕರ್ಮ ಬ್ರಾಹ್ಮಣರನ್ನು ಕುರಿತಂತೆ ಹಾಗೆಯೇ ಪತ್ತಾರರ ಕುರಿತಂತೆ ಅದೆಷ್ಟೋ ಸಂಗತಿಗಳು ಶಾಸನೋಕ್ತವಾಗಿವೆ.

ಇಂದಿನ ಪತ್ತಾರರ ಸ್ಥಿತಿ ದಾರುಣವಾಗಿದೆ. ಅಂತೆಯೇ ಹಳ್ಳಿಯಿಂದ ನಗರಗಳಿಗೆ ವಲಸೆಹೋದ ಪತ್ತಾರ ಇದ್ದ ಮಟ್ಟಿಗೆ ಹೇಗೋ ಕಾಯಕ ನಡೆಸಿ ಉಪಜೀವಿಸಿದ್ದಾರೆ. ಅವರಲ್ಲಿ ಕೆಲವರು ಆಗರ್ಭ ಶ್ರೀಮಂತರೂ ಆಗಿದ್ದಾರೆ.

ಪತ್ತಾರರು ಬಂಗಾರದ ಗುಣಮಟ್ಟವನ್ನು ನಿರ್ಧರಿಸುವಲ್ಲಿ ಅತ್ಯಂತ ನಿಪುಣರು, ಬಂಗಾರದ ನ್ಯಾಯಬದ್ಧ ಮಟ್ಟವನ್ನು ಬರಿಗಣ್ಣಿನಿಂದಲೇ ಹೇಳಬಹುದಾದಷ್ಟು ನಿಸ್ಸೀಮರು. ಆದರೂ ಸಾಮಾನ್ಯವಾಗಿ ಲೋಹಗಳನ್ನು ಒರೆಗಲ್ಲಿಗೆ ತಿಕ್ಕಿನೋಡುವುದು ವಾಡಿಕೆ. ಒರೆಗಲ್ಲಿನ ಮೇಲೆ ಗೀಚಿದ ಶುದ್ಧ ಲೋಹದ ಗೆರೆ, ಹಾಗೂ ಉಳಿದ ಲೋಹಗಳಿಗೂ ಇರುವ ಅಂತರ ತಿಳಿದು ಗುಣಮಟ್ಟ ನಿರ್ಧರಿಸುತ್ತಾರೆ. ಆಗ ಲೋಹದ ಜತೆಗೆ ಮಿಶ್ರಿತವಾದದ್ದು ತಾಮ್ರ ಇಲ್ಲವೆ ಬೆಳ್ಳಿ ಎಂಬುದೂ ಖಚಿತವಾಗುತ್ತದೆ. ಪತ್ತಾರರು ಆಭರಣಗಳಿಗಾಗಿ ವಜ್ರ, ಕೆಂಪು, ನೀಲಮಣಿ, ಪಚ್ಚೆ, ಹಸಿರು, ರತ್ನ, ಪದ್ಮರಾಗ, ರಕ್ತಶಿಲೆ, ವೈಢೂರ್ಯ, ಹವಳ, ತೈಲಸ್ಫಟಿಕ, ಕ್ಷೀರಸ್ಫಟಿಕ ಇತ್ಯಾದಿಗಳನ್ನು ಬಳಸುತ್ತಾರೆ. ಸ್ತ್ರೀ-ಪುರುಷರ ಹಾಗೂ ಮಕ್ಕಳ ವೈವಿಧ್ಯಪೂರ್ಣ ವಸ್ತು ಒಡವೆಗಳಲ್ಲದೆ, ಬೆಳ್ಳಿಯ ವಾಟೆ, ಚಮಚೆ, ಬಟ್ಟಲು, ಭರಣಿ. ತಾಯತ ಮುಂತಾದವುಗಳನ್ನು, ಶಾಸ್ತ್ರೋಕ್ತವಾಗಿ ದೇವರ ವಿಗ್ರಹಗಳು ಪ್ರಭಾವಳಿಗಳು, ಲಾಂಛನ ಇತ್ಯಾದಿಗಳನ್ನು ತಾಯಾರಿಸುತ್ತಾರೆ. ಅಲ್ಲದೆ ಹೆಣ್ಣು ಮಕ್ಕಳ ಮೂಗು, ಕಿವಿಗಳನ್ನು ಚುಚ್ಚಲು ಅಕ್ಕಸಾಲಿಯೇ ಬೇಕು. ಅದು ಶಾಸ್ತ್ರೋಕ್ತವಾಗಿರುತ್ತದೆ. ಆತಂಗೆ ನೋವಾಗದಂತೆ ಏನೇನೋ ಹಾಸ್ಯಪೂರ್ಣವಾಗಿ ಮಾತಾಡಿಸುತ್ತ ಚುಚ್ಚುವ ಜಾಣ್ಮೆ ರಕ್ತಗತ. ಅಂತೆಯೇ ಅಕ್ಕಸಾಲಿ ಚುಚ್ಚಿದರೆ ನೋವಾಗುವುದಿಲ್ಲ ಎಂಬ ಗಾದೆ ಪ್ರಚಲಿತವಾಗಿದೆ.

ಪತ್ತಾರರು ತಮ್ಮ ಕುಶಲಕರ್ಮಕ್ಕೆ ಬಳಸುವ ಉಪಕರಣಗಳೆಂದರೆ– ಕುಪ್ಪಡಿಗೆ (ಅಗ್ಗಿಷ್ಟಿಗೆ), ಊದುಗೊಳವೆ, ತಿದಿ, ಮೂಸೆ, ಅಡಿಗಲ್ಲು, ಸುತ್ತಿಗೆ, ಉಳಿ, ಚಿಮ್ಮಟಿಗೆ, ಇಕ್ಕಳ, ಕತ್ತರಿ, ತ್ರಿಜ್ಯಮಾಪಕ, ಅರ, ಕುಂಚ ಮತ್ತು ಹಲವಾರು ರೀತಿಯ ಅಚ್ಚುಗಳು ಇತ್ಯಾದಿ. ಇವೆಲ್ಲ ಉಪಕರಣಗಳು ಅವರಿಗೆ ದೈವಕ್ಕೆ ಸಮಾನವಾದವುಗಳು. ಹಬ್ಬಹರಿದಿನಗಳಲ್ಲಿ ಆಯುಧಪೂಜೆ ನಡೆಸುತ್ತಾರೆ. ಅಗ್ಗಿಷ್ಟಿಗೆ ಅಂದರೆ ಕುಪ್ಪಡಿಗೆ ದಿನವೂ ಪೂಜೆಗೊಳ್ಳುವುದುಂಟು. ಅಕ್ಕಸಾಲಿಗೆ ಈ ಕುಪ್ಪಡಿಗೆಯೇ ಪರಮ ಮತ್ತು ಪ್ರಧಾನವಾದುದು. ಅದು ಆತನ ಕಾರ್ಯದ ಕುಲಮೆ. ಆತನಿಗೂ ಅದಕ್ಕೂ ಇರುವ ಅನ್ಯೋನ್ಯ ಸಂಬಂಧದ ಮೇಲೆಯೇ ಹಳ್ಳಿಗಳಲ್ಲಿ ಅಕ್ಕಸಾಲಿಯನ್ನು 'ಕುಪ್ಪಡಿಗಾ' ಎಂದು ಬಯುವುದುಂಟು.

ಅಲ್ಲದೆ ಸಮುದ್ರದ ಉಪ್ಪು, ಪೊಟ್ಯಾಸಿಯಂ ನೈಟ್ರೇಟ್, ಸಣ್ಣದಾದ ಕೆಂಪು ಉಸುಕು, ಪಟಕ ರಸಕರ್ಪೂರ, ಗಂಧಕಾಮ್ಲ, ನೈಟ್ರಿಕ್ ಆಮ್ಲ, ಬೋರಾಕ್ಸ್ ಇವುಗಳನ್ನು ತಮ್ಮ ಕಸುಬಿನಲ್ಲಿ ಬಳಸುತ್ತಾರೆ.

ಈ ಸಮಾಜ ಹಿಂದೂ ಸಂಸ್ಕೃತಿಗೇ ಬದ್ಧವಾಗಿರುವುದರಿಂದ ಮದುವೆ, ಮುಂಜಿವೆ, ಹಬ್ಬಹರಿದಿನಗಳು, ನಂಬಿಕೆ, ಆಚರಣೆಗಳಲ್ಲಿ ಅಂಥ ವ್ಯತ್ಯಾಸವೇನೂ ಕಾಣುವುದಿಲ್ಲ. ಮೌನೇಶ್ವರ ಜಯಂತಿ, ವಿಶ್ವಕರ್ಮ ಜಯಂತಿ ಆಚರಿಸುವ ಮಹತ್ವದ ಹಬ್ಬಗಳು. ಈಗಾಗಲೇ ಹೇಳಿದಂತೆ ಈ ಪಂಚಗೋತ್ರದವರು ಯಾರಾದರೂ ಸರಿ, ಸ್ವಗೋತ್ರದ ಹೆಣ್ಣು ಗಂಡಿನ ಕೊಡುಕೊಳೆಯನ್ನು ಮಾಡುವುದಿಲ್ಲ. ಬ್ರಹ್ಮಚರ್ಯ, ಗೃಹಸ್ಥಾಶ್ರಮ, ವಾನಪ್ರಸ್ಥ ಹಾಗೂ ಸನ್ಯಾಸ ಈ ನಾಲ್ಕು ಆಶ್ರಮಗಳೂ ಆಚರಣೆಯಲ್ಲಿವೆ. ಯಜ್ಞೋಪವೀತ (ಜನಿವಾರ) ತಲೆಯ ಮೇಲೆ ಜುಟ್ಟು ಹಾಗೂ ಗಾಯತ್ರಿ ಪಠಣ, ತುಳಸಿ ಪೂಜೆ ಪ್ರತಿಯೊಬ್ಬ ವಿಶ್ವಕರ್ಮನಿಗೆ ವಿಶಿಷ್ಟವಾಗಿರುವಂತೆ ಪತ್ತಾರನೂ ಅದಕ್ಕೆ ಹೊರತಾಗಿಲ್ಲ. ಜನಿವಾರವನ್ನು ಬಿಟ್ಟವನು ವಿಶ್ವಬ್ರಾಹ್ಮಣನೇ ಅಲ್ಲವಂತೆ. ಮಗುವಿನ ಜನನ ಕ್ರಮದಲ್ಲಿ ಹಿಂದುಗಳಂತೆ ಸಾಮಾನ್ಯ ಆಚರಣೆ. ಆದರೆ ಮರಣ ಕ್ರಿಯೆಗಳಲ್ಲಿಯ ವಿಶಿಷ್ಟ ವಿಧಾನಗಳೆಂದರೆ–ಸ್ತ್ರೀ ಪುರಷರು ಸತ್ತರೆ ಸುಡುತ್ತಾರೆ. ಸುಟ್ಟ ಮೂರನೆಯ ದಿನ ಅಸ್ತಿ-ಬೂದಿಗಳನ್ನು ಪವಿತ್ರವಾದ ಜಲಾಶಯಗಳಿಗೆ ಬಿಡುತ್ತಾರೆ. ಹಿಂದುಗಳಂತೆ ಸತ್ತವರ ಶ್ರಾದ್ಧ ಇಲ್ಲವೆ ದಿನಕರ್ಮ ನಡೆಯುತ್ತದೆ. ಪುನರ್ವಿವಾಹಕ್ಕೆ ನಿರ್ಬಂಧವಿದೆ. ಅವರು ಯಾವಾಗ ಸತ್ತರೂ ಬಂಗಾರ ಅವರನ್ನು ಶುದ್ಧಗೊಳಿಸುತ್ತದೆಯಂತೆ. ವಿಶ್ವಕರ್ಮನ ಮಕ್ಕಳಾದ ಶಿವ, ವಿಷ್ಣು, ಬ್ರಹ್ಮ, ಇಂದ್ರ, ಸೂರ್ಯರನ್ನು ಪೂಜಿಸುತ್ತಾರೆ. ಆದರೆ ಗಾಯತ್ರಿ ಪರಮ ದೈವ ಹಾಗೂ ಸರ್ವಸ್ವವೆಂದು ನಂಬುತ್ತಾರೆ. ಈ ಭಾಗದಲ್ಲಿ ಯುಗಾದಿಗೆ ಸಿರಸಂಗಿ ಕಾಳಮ್ಮನ ಜಾತ್ರೆ ಬಹಳ ದೊಡ್ಡದು. ಪ್ರಸಿದ್ಧವಾದುದು. ಸಾಮಾನ್ಯವಾಗಿ ಈ ಸಮಾಜದವರೆಲ್ಲರೂ ಜಾತ್ರೆಗೆ ಹೋಗಿ ತಮ್ಮ ಇಷ್ಟಾನಿಷ್ಟ ಸಿದ್ಧಿಗಳನ್ನು ಪೂರೈಸಿಕೊಳ್ಳುತ್ತಾರೆ. ಈ ಸಮಾಜದ ಹೆಣ್ಣುಮಕ್ಕಳ ಹಾಡುಗಳಲ್ಲಿ ಹೆಚ್ಚಾಗಿ ಕಾಳಮ್ಮ, ದುರ್ಗಿಯ ಪವಾಡ ಮಹಿಮೆಗಳನ್ನು ಕೊಂಡಾಡುವ ಸ್ತುತಿಗಳೇ ಹೆಚ್ಚು. ಅಂಥವುಗಳನ್ನೇ ಜಾನಪದದ ಇತರ ಹಾಡುಗಳೊಂದಿಗೆ ಮದುವೆ, ಮುಂಜಿವೆ ಮುಂತಾದ ಮಂಗಲ ಪ್ರಸಂಗಗಳಲ್ಲಿ ಹಾಡುತ್ತಾರೆ. ಈ ಸಮಾಜಕ್ಕೆ ಬ್ರಾಹ್ಮಣರೇ ಪುರೋಹಿತತ್ವ ವಹಿಸುತ್ತಿದ್ದರು. ಕಾಲಾಂತರದಲ್ಲಿ ಬ್ರಾಹ್ಮಣರಿಗಿಂತ ವಿಶ್ವಕರ್ಮ ಬ್ರಾಹ್ಮಣರೇ ಶ್ರೇಷ್ಠರೆಂಬ 'ಚಿತ್ತೂರ' ಅದಾಲತ್ ತೀರ್ಪಿನ ನಂತರ ತಮಗೆ ತಾವೇ ಪುರೋಹಿತರಾಗಿದ್ದಾರೆ. ಬ್ರಾಹ್ಮಣ ಹೆಣ್ಣು ಮಕ್ಕಳ ಹಾಗೆ ಜನಿವಾರ ಹಾಕಬೇಕೆಂಬ ನಿಯಮವೇನೂ ಈ ಸಮಾಜದ ಹೆಣ್ಣು ಮಕ್ಕಳಿಗೆಲ್ಲ, ಆದರೆ ಕಚ್ಚೆಯನ್ನು ಮಾತ್ರ ಹಾಕಬೇಕು.

ಈ ಸಮಾಜದವರೂ ಕೂಡ ಗಂಧ, ಕುಂಕುಮ, ವಿಭೂತಿಗಳನ್ನು ಧರಿಸುತ್ತಾರೆ. ಆದರೆ ಅವುಗಳನ್ನು ಧರಿಸುವ

ಪದ್ಧತಿ ಭಿನ್ನವಾಗಿರುವುದು ಗಮನಾರ್ಹ. ಗಂಧ ಹಚ್ಚಿಕೊಳ್ಳುವಾಗ ಜೊತೆಯಾದ ಅರ್ಧ ಚಂದ್ರನಂತೆ ಊರ್ಧ್ವಮುಖಿವಾಗಿರಬೇಕು. ವಿಭೂತಿ ಮೂರು ಕಂಸಗಳಂತೆ ಕ್ರಮಬದ್ಧವಾಗಿ ಮೇಲೆ ಹೋಗಬೇಕು ( ) (U) ಕುಂಕುಮ ಸಾಮಾನ್ಯ ಒಂದು ಬಿಲ್ಲೆಯಷ್ಟು ದೊಡ್ಡದು ಮತ್ತು ಹೆಚ್ಚು ಶಾಸ್ತ್ರೋಕ್ತವಾದದ್ದೆಂದರೆ ಸಮಾಂತರ ಭುಜ ಕಿರುಚೌಕೋನದಂತಿರಬೇಕು.

ಪತ್ತಾರ ತನ್ನ ಮುಖ್ಯ ವೃತ್ತಿಯೊಂದಿಗೆ ಮಾಡಬಹುದಾದ ಸಾಮಾಜಿಕವಾದ ಮಹತ್ವದ ಕೆಲಸವೆಂದರೆ ಮಂತ್ರ, ತಂತ್ರ, ವೈದ್ಯ. ಮಧ್ಯಕಾಲದ ಯುರೋಪದಲ್ಲಿ ಒಳ್ಳೆಯ ಆರೋಗ್ಯಕ್ಕಾಗಿ ಬಂಗಾರದ ನೀರನ್ನು ಔಷಧಿಯಂತೆ ಕುಡಿಯಲಾಗುತ್ತಿತ್ತು. ಅದಲ್ಲದೆ ಕಾಳಮ್ಮ, ದ್ಯಾಮವ್ವ, ಉಡಚವ್ವ, ಲಕ್ಕವ್ವ ಮುಂತಾದ ದೇವತೆಗಳ ಹೆಸರಿನಲ್ಲಿ ಮಂತ್ರಿಸಲಾದ ವಸ್ತು ಸೇವನೆಯಿಂದ ರೋಗ ರುಜಿನಗಳು ಬಯಲಾಗುವಲ್ಲಿ, ತಾಯತ ಮಾಡಿ ಕಟ್ಟುವಲ್ಲಿ ಅಕ್ಕಸಾಲಿಯೇ ಪ್ರವೀಣ. ಉದಾಹರಣೆ ಗದಗದ ಉಡಚವ್ವ ದೇವರಿಗೆ ಹೋದರೆ ಅಲ್ಲಿಯ ಅಕ್ಕಸಾಲಿಗರು ಕೊಡುವ ಉಂಗುರದಿಂದ ಮೂಲವ್ಯಾಧಿ, ತೊಲಗುತ್ತದೆಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಗಳು ಸಾಕಷ್ಟಿವೆ. ಆದರೆ ಇದು ಆತನು ಕೈಕೊಂಡ ಧರ್ಮದ ಕೆಲಸವೇ ಹೊರತು ಯಾವ ಹಣದ ಲಾಲಸೆಗಳೂ ಇಲ್ಲ.

'ಅಕ್ಕಸಾಲಿ ಅಕ್ಕನ ಬಂಗಾರವನ್ನು ಕದಿಯದೇ ಬಿಡನು' ಎಂಬ ಗಾದೆಯೂ ಲೋಕ ಪ್ರಸಿದ್ಧವಾಗಿದೆ. ಅಕ್ಕಸಾಲಿಗನ ಭಕ್ತಿ ಅಗ್ಗಿಷ್ಟಿಗೆಯಲ್ಲಿ ಹೋಯಿತ್ತು ಎಂದು ಚೆನ್ನ ಬಸವಣ್ಣನವರು ಸಾರಿದ್ದು ಇದಕ್ಕಾಗಿಯೇ. *(ಎಸ್.ಜಿ.ಐ.)*

ಪವಾಡಗಳು: ಅಘಟಿತ ಘಟನೆಗೆ ಭಾರತೀಯ ದಾರ್ಶನಿಕ ಪಾರಿಭಾಷಿಕ ಶಬ್ದ. ಬಳಕೆಯ ಮಾತಿನಲ್ಲಿ ಪವಾಡವೆಂದರೆ ಒಂದು ಅದ್ಭುತ ಕ್ರಿಯೆ, ಆಶ್ಚರ್ಯಕರ ಘಟನೆ, ಅತಿಮಾನುಷಕಾರ್ಯ, ಹೊಗಳಿಕೆ, ಸ್ತುತಿಪಾಠ, ಮಹಿಮೆ, ನಿಸರ್ಗಕ್ಕೆ ವಿರುದ್ಧವಾದ ಪ್ರಕ್ರಿಯೆ, ಪ್ರಪಂಚದಲ್ಲಿ ಸಾಮಾನ್ಯ ಜನರ ದಿನಗಟ್ಟಳೆಯ ಅನುಭವಕ್ಕಿಂತ ಬೇರೆಯಾದ, ವಿಲಕ್ಷಣವಾದ ಸಂಗತಿಯೆಂತಲೂ ಕರೆಯಬಹುದು.

ಪವಾಡಗಳು ಯುಗ ಯುಗಾಂತರಗಳಿಂದಲೂ ಪ್ರಚಲಿತದಲ್ಲಿವೆ. ಭಾರತದಲ್ಲಿ ಬಾಳಿ ಬೆಳಗಿದ ಮಹಾತ್ಮರು, ಯೋಗಿಗಳು, ಸಾಧು–ಸತ್ಪುರುಷರು, ಶರಣರು, ಪ್ರವಾದಿಗಳು, ಸಂತರು ಗಣನೆಗೂ ಎಟುಕಲಾರದಷ್ಟು ಪವಾಡಗಳನ್ನು ಎಸಗಿದರೆಂದು ವರ್ಣಿಸಿದುದನ್ನು ಪುರಾಣಗಳಲ್ಲಿ ಕಾಣುತ್ತೇವೆ. ಆದರೆ ಇಂಥ ವಿಸ್ಮಯಕಾರಿ ಸಂಗತಿಗಳು ಇಂದು ನಮ್ಮ ವಿಚಾರದ ಹಿಡಿತಕ್ಕೆ ಸಿಗದಾಗಿವೆ. ವಿಮರ್ಶೆಗೆ ನಿಲುಕದಾಗಿವೆ. ಅವು ನಮ್ಮ ಪಾಲಿಗೆ ನಂಬಲಾರದ ಸಂಗತಿಗಳಾಗಿವೆ. ಈ ಮಾತು ಒಂದು ದೃಷ್ಟಿಯಿಂದ ನಿಜ. ಆದರೂ ಪವಾಡಗಳೆಲ್ಲವೂ ಸುಳ್ಳಿನ ಕಂತೆಯೆಂದೂ, ಅರ್ಥವಿಲ್ಲದುವು ಎಂದೂ ತಳ್ಳಿ ಹಾಕಲು ಬರುವಂತಿಲ್ಲ. ಕುಂಡಲಿನಿಯೋಗವನ್ನು ಸಾಧಿಸಿಕೊಂಡ ಕೆಲವು ಯೋಗಿಗಳು ಅಲೌಕಿಕ, ಅದ್ಭುತ– ಘಟನೆಗಳನ್ನು ಮರೆಯುತ್ತಾರೆಂದು ಯೋಗ ಶಾಸ್ತ್ರಜ್ಞರು ಹೇಳುತ್ತಾರೆ. ಅಷ್ಟಾಂಗ ಯೋಗ ಸಿದ್ಧ ಪಡೆದವರು ಅತಿಮಾನುಷಶಕ್ತಿ ಹೊಂದಿರುತ್ತಾರೆಂದೂ ಜನರ ನಂಬುಗೆ. ಯೋಗಿಗಳು, ಧಾರ್ಮಿಕ ಮಹಾಪುರುಷರು ಸಹಜವಾಗಿ ಮಾಡಿದ ಕಾರ್ಯಗಳೆಲ್ಲವೂ ಸಮಾನ್ಯರಾದ ನಮಗೆ ಪವಾಡಗಳಾಗಿ ಕಾಣಿಸುವವು. ಏಕೆಂದರೆ ಪವಾಡಗಳು ಕೇವಲ ಭಾರತೀಯ ಸಾಹಿತ್ಯವಲ್ಲದೆ ಜಾಗತಿಕ ಸಾಹಿತ್ಯದಲ್ಲೂ ಕಾಣಸಿಗುವವು.

ರಾಮಾಯಣ, ಮಹಾಭಾರತ, ಭಾಗವತ, ಅಷ್ಟಾದಶ ಪುರಾಣಗಳು ವೀರಶೈವ ಪುರಾಣಗಳು, ಬೈಬಲ್ ಹಾಗೂ ಕುರಾನ್ ಮುಂತಾದವುಗಳಲ್ಲಿ ಪವಾಡಗಳು ಹೇರಳವಾಗಿ ವರ್ಣನೆಗೊಂಡಿವೆ. **ಉದಾ:** ದಶರಥ ಪುತ್ರ ಕಾಮೇಷ್ಠಿ ನಡೆಸಿ, ಯಜ್ಞದಲ್ಲಿ ದೊರೆತ ಪಾಯಸ ಪ್ರಸಾದವನ್ನು ತನ್ನ ಮೂವರು ಪತ್ನಿಯರಿಗೆ ಹಂಚಿದ ನಿಮಿತ್ತ ನಾಲ್ವರು ಪುತ್ರರಾದರು, ಅಕ್ಷಯ ಪಾತ್ರೆಯಲ್ಲಿ ಉಳಿದ ಒಂದಗುಳು ಅನ್ನದಿಂದ ಸಹಸ್ರಾರು ಮಂದಿ ದುರ್ವಾಸ ಶಿಷ್ಯರನ್ನು ದ್ರೌಪದಿ ಸಂತೈಸಿದ್ದು, ಮೇರಿ ಇನ್ನೂ ಕನ್ಯೆಯಿರುವಾಗಲೇ ಯೇಸು ಜನಿಸಿದುದು. ಕೃಷ್ಣನ ಸ್ಮರಣೆ ಮಾತ್ರದಿಂದ ದ್ರೌಪದಿಯ ಸೀರೆ ಅಕ್ಷಯವಾದುದು. ವಿದ್ಯಾರಣ್ಯರ ಸುವರ್ಣ ವೃಷ್ಟಿ, ಶಂಕರಾಚಾರ್ಯರ ಪರಕಾಯ ಪ್ರವೇಶ, ಬಸವಣ್ಣ ಬದನೇಕಾಯಿ ಲಿಂಗ ಮಾಡಿದುದು ವೇದಾಂತ ದೇಶಿಕರ ಗರುಡ ಸ್ತೋತ್ರ, ಇಂಥ ಸಾವಿರಾರು ಪವಾಡಗಳು ಕಾವ್ಯ ಪುರಾಣಗಳಲ್ಲಿ ವರ್ಣನೆಗೊಂಡಿವೆ.

ಪವಾಡಗಳು ಸತ್ಯವೋ ಮಿಥ್ಯವೋ ಎಂಬುದು ಮುಖ್ಯವಲ್ಲ. ಆದರೆ ಇಂಥ ಘಟನೆಗಳು ಜಗತ್ತಿನಾದ್ಯಂತ ಕಾವ್ಯ ಪುರಾಣಗಳಲ್ಲಿ ವರ್ಣಿತವಾಗಿರಬೇಕಾದರೆ ಇವುಗಳ ಹಿನ್ನೆಲೆಯಲ್ಲಿ ಒಂದು ತತ್ವ ಅಡಕವಾಗಿರಲೇಬೇಕು ಎನಿಸುತ್ತದೆ. *(ವಿ.ಜಿ.ಪಿ.)*

ಪಂಚಾಯಿತಿ ಕಟ್ಟೆ: ಪಂಚಾಯಿತಿಯ ನ್ಯಾಯ ನಿರ್ಣಯಕ್ಕೆ ರಚಿತವಾದ ಐದು ಜನರ ಸಮಿತಿ, ಅನಾವಶ್ಯಕ ಗಲಾಟೆ, ಗ್ರಾಮಾಡಳಿತ ನಿರ್ವಹಿಸಲು ಆಯ್ಕೆಯಾದ ಸಮಿತಿ ಇದು, ಈ ಸಮಿತಿಯು ನ್ಯಾಯ ಕೇಳಿ ಬಂದವರಿಗೆ ನಿಷ್ಪಕ್ಷಪಾತವಾಗಿ ನ್ಯಾಯ ನೀಡುವ ಐದು ಜನರಿಂದ ಕೂಡಿರುತ್ತಿತ್ತು. ಹೀಗೆ ನ್ಯಾಯ ನೀಡುವವರನ್ನು ಪಂಚರೆಂದು ಕರೆಯುತ್ತಿದ್ದರು. ನ್ಯಾಯ ನಿರ್ಣಯಕ್ಕೆಂದೇ ಒಂದು ಸ್ಥಳವನ್ನು ನಿಗದಿ ಪಡಿಸಲಾಗಿರುತ್ತಿತ್ತು. ಅದನ್ನು ಪಂಚಾಯ್ತಿ ಕಟ್ಟೆ ಎಂದು ಕರೆಯುತ್ತಿದ್ದರು. ಈ ಪಂಚರ ಮೇಲೆ ಗ್ರಾಮಸ್ಥರಿಗೆ ಪೂರ್ಣ ವಿಶ್ವಾಸವಿರುತ್ತಿತ್ತು. ಪಂಚರನ್ನು ಪರಮೇಶ್ವರನೆಂದು ಭಾವಿಸುತ್ತಿದ್ದರು. ದೇವರ ಸಮಾನವಾಗಿ ಕಾಣುತ್ತಿದ್ದರು. ಪಂಚರು ಕೂಡ ಅಪರಾಧಿಗೆ ಶಿಕ್ಷೆಯಾಗದಿದ್ದರೂ ಸರಿ ಆದರೆ ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದೆಂದು ನಂಬಿದವರಾಗಿದ್ದರು. ಕುಟುಂಬ, ಸಮಾಜ, ಆಸ್ತಿ ಪಾಲು, ಹೆಣ್ಣು–ಗಂಡಿನ ಸಂಬಂಧ, ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಒಟ್ಟಾರೆ ಊರಿನ ಒಳಿತು–ಕೆಡುಕುಗಳ ಸಂದರ್ಭಗಳಲ್ಲೆಲ್ಲ ಪಂಚರು ಪ್ರಮುಖ ಪಾತ್ರವಹಿಸುತ್ತಿದ್ದರು. ಊರ ಪ್ರಮುಖರಾಗಿದ್ದು ಜನರ ವಿಶ್ವಾಸ ಗಳಿಸಿದವರು ಪಂಚರಾಗಿರುತ್ತಿದ್ದರು.. ಜಾತಿ ಪಂಚಾಯ್ತಿಗಳೂ ಚಾಲನೆಯಲ್ಲಿ ಇದ್ದಂತೆ ತಿಳಿದು ಬರುತ್ತದೆ. ಇವರನ್ನು ದೈವದವರು ಎಂದು ಕರೆಯುತ್ತಾರೆ. ಸಣ್ಣ–ಪುಟ್ಟ ವ್ಯಾಜ್ಯಗಳನ್ನು ಇಂದಿಗೂ ಜನ ಇಂಥ

ಪಂಚಾಯ್ತಿಗಳೆದುರಲ್ಲಿ ಕೊಂಡೊಯ್ಯುತ್ತಾರೆ. ಇಲ್ಲಿ ತಮಗೆ ನ್ಯಾಯ ಸಿಗುವುದಿಲ್ಲವೆನಿಸಿದಾಗ ಮಾತ್ರ ಕೋರ್ಟ್ ಮೆಟ್ಟಿಲೇರುತ್ತಾರೆ. ಈಗ ಪಂಚಾಯಿತಿ ಎಂಬುದು ಗ್ರಾಮ ಪಂಚಾಯಿತ, ಜಿಲ್ಲಾ ಪಂಚಾಯಿತಿ ಎಂದು ಮತದಾನದ ಮೂಲಕ ಆಯ್ಕೆಯಾದ ಸದಸ್ಯರ ಸಮೂಹವನ್ನು ಒಳಗೊಂಡದ್ದಾಗಿದ್ದು ಆಡಳಿತಕ್ಕೆ ಸಂಬಂಧ ಪಟ್ಟಿದ್ದಾಗಿದೆ. ನ್ಯಾಯ ನಿರ್ಣಯದಂಥ ಯಾವ ಜವಾಬ್ದಾರಿ ಈ ಸಮಿಯತಿಯಾದಾಗಿಲ್ಲ.

ಪಂಚಾಯ್ತಿಯಲ್ಲಿ ಎರಡು ಪ್ರಭೇದಗಳುಂಟು. ಒಂದು ಕಡ್ಡಾಯ ಪಂಚಾಯ್ತಿ; ಇನ್ನೊಂದು ಸ್ವ–ಇಚ್ಚೆಯ ಪಂಚಾಯಿತಿ. ಕಡ್ಡಾಯ ಪಂಚಾಯಿತಿಯ ತೀರ್ಮಗಳು ತಡವಾಗುವುದರಿಂದ ಸ್ವ–ಇಚ್ಚೆಯ ಪಂಚಾಯಿತಿಯ ಸೂಕ್ತವೆಂದು ವಿ.ವಿ ಗಿರಿಯವರು ಎತ್ತಿ ಹಿಡಿದರು. ಇದನ್ನು ಗಿರಿ ನಿಲುವು ಎಂದು ಕರೆಯಲಾಗಿದೆ.

(ಸಿ.ಜಿ.ಐ)

ಪಾ

ಪಾನೀಯ: ಕುಡಿಯಬಹುದಾದ ದ್ರವರೂಪದಲ್ಲಿರುವ ವಸ್ತು. ಪೇಯವೆಂತಲೂ ಕರೆಯಲಾಗಿದೆ. ನೀರು, ಕೀರು, ಎಳನೀರು, ಪಾನಕ, ಹಣ್ಣಿನ ರಸ, ಮುಂತಾದವುಗಳು. ಹಣ್ಣು, ಕಾಯಿ, ಎಲೆ, ಬೇರು (ಸುಗಂಧಿಬೇರು) ಇನ್ನಿತರ ನೈಸರ್ಗಿಕ ಸಂಪತ್ತನ್ನು ಬಳಸಿಕೊಂಡು ನಮ್ಮ ಜನರು ತಮ್ಮದೇ ಶೈಲಿಯ ರುಚಿ ಕಟ್ಟಾದ ಪಾನೀಯಗಳನ್ನು ತಯಾರಿಸುತ್ತಾರೆ. ಅಲ್ಲದೇ ಕೆಲವು ನೈಸರ್ಗಿಕವಾಗಿಯೇ ಇರುವುದನ್ನು ರುಚಿರುಚಿಯಾಗಿ ಹೀರಿ ಬಾಯಿ ಚಪ್ಪರಿಸುತ್ತಾ, ಅಗಿಯದೇ ಸರಳವಾಗಿ ಜೀರ್ಣವಾಗುವ, ಕುಡಿಯುವ ಇಲ್ಲವೆ ಹೀರುವ ದ್ರವರೂಪದ ಆಹಾರ ಪಾನೀಯ ಎನಿಸಿಕೊಳ್ಳುತ್ತದೆ. ಇದು ಶತಮಾನಗಳಿಂದ ಜನರ ಜೀವಿತದ ಜೊತೆಯಲ್ಲಿ ಬಳಕೆಗೊಳ್ಳುತ್ತಾ ಬಂದಿದೆ. ಇಂತಹ ಕುಡಿಯಲು ಯೋಗ್ಯವಾದ ಪಾನೀಯಗಳಲ್ಲಿ ಆಧುನಿಕ ತಂಪು ಪಾನೀಯ. ನೈಸರ್ಗಿಕ ಪಾನೀಯ, ಬಿಸಿ ಪಾನೀಯ, ಮತ್ತು ಮಿಶ್ರಿತ ಪಾನೀಯಗಳೆಂದು ನಾಲ್ಕು ಪ್ರಕಾರಗಳಲ್ಲಿವೆ.

ನೈಸರ್ಗಿಕ ಪಾನೀಯ: ಮಜ್ಜಿಗೆ, ಎಳೆನೀರು ನೈಸರ್ಗಿಕ ಪಾನೀಯಗಳಾಗಿ ಬಳಕೆಯಲ್ಲಿವೆ. ಪ್ರತಿಯೊಬ್ಬರು ಕುಡಿಯಬಹುದಾದ ಎಳೆನೀರು ಬಾಯಾರಿಕೆಯನ್ನು ಹೋಗಲಾಡಿಸುತ್ತದಲ್ಲದೆ ಪೌಷ್ಠಿಕಾಂಶದ, ಶಕ್ತಿದಾಯಕವಾದ ನಿಸರ್ಗದತ್ತವಾದ ಔಷಧಿಯಗುಣಗಳನ್ನು ಹೊಂದಿದ್ದು ಆರೋಗ್ಯದ ದೃಷ್ಟಿಯಿಂದಲಂತೂ ಭಾರತೀಯರಿಗೆ ಅತ್ಯುತ್ತಮ. ಎಳೆನೀರನ್ನು ಆರೋಗ್ಯವರ್ಧಕ ಪಾನೀಯ, ಪೋಷಕಾಂಶಗಳ ಗಣಿ ಎಂದು ಕರೆಯುತ್ತಾರೆ ಬೇಸಿಗೆಯಲ್ಲಿ ಇದರ ಬಳಕೆ ಹೆಚ್ಚು.

ಮಜ್ಜಿಗೆ ಭಾರತೀಯ ರೈತಾಪಿವರ್ಗದ ಕೊಡುಗೆಯಾಗಿ, ಉಪ್ಪು ಪಾನೀಯವಾಗಿ ಬಳಕೆಯಲ್ಲಿದೆ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಬೇಸಿಗೆಯಲ್ಲಿ ಬಿಸಿಲಿನ ತಾಪ ಹೆಚ್ಚಾದಾಗ ಎಳೆನೀರಿನಂತೆ ಇದರ ಸೇವನೆ ಮಾಡುತ್ತಾರೆ. ಹಿಂದೆ ಹೊಸ ಗಡಿಗೆಯಲ್ಲಿಟ್ಟು ತಣ್ಣನೆಯ ಮಜ್ಜಿಗೆ ಕುಡಿಯುತ್ತಿದ್ದರು. ಸಹಜ ಮಜ್ಜಿಗೆಗೆ ಸ್ವಲ್ಪ ಉಪ್ಪು ಸೇರಿಸಿದರೆ ಸಾದಾ ಮಜ್ಜಿಗೆಯಾಗಿ ಜೀರಿಗೆ, ಕೊತ್ತಂಬರಿ, ಕರಿಬೇವು, ಶುಂಠಿ ತಕ್ಕಷ್ಟು ಉಪ್ಪು ಸೇರಿಸಿದರೆ ಮಸಾಲಾ ಮಜ್ಜಿಗೆಯಾಗಿ ಕುಡಿವ ಜನರ ಬಾಯಿಗೆ ರುಚಿಯಾಗಿ, ಶಕ್ತಿದಾಯಕವಾಗಿ, ಬಾಯಾರಿಕೆ ಹಿಂಗಿಸಿ ದೇಹವನ್ನು ತಂಪುಗೊಳಿಸುತ್ತದೆ.

ಬಿಸಿಪಾನೀಯ: ಚಹ, ಕಾಫಿ, ಹಾಲು, ಬಾದಾಮಿಹಾಲು ಮುಂತಾದವು ಬಿಸಿ ಪಾನೀಯಗಳಾಗಿದ್ದು, ಹಿಂದಿನ ಕಾಲದಲ್ಲಿ ಇವುಗಳ ಬಳಕೆ ಅಷ್ಟಕ್ಕಷ್ಟೇ. ಇಂದು ಮನೆಗೆ ಬರುವ ಅತಿಥಿ. ಭೇ–ಟಿಯಾದ ಬಂಧುಬಳಗ, ಗೆಳೆಯರ ಗುಂಪು ಕಾಯಿಲೆ ಬಿದ್ದವರ ಉಪಚಾರದಂತಹ ಸನ್ನಿವೇಶಗಳಲ್ಲಿ. ಅನಿವಾರ್ಯ ವಾದ ಬಳಕೆಯ ಪಾನೀಯಗಳಾಗಿ ಬಳಕೆಯಲ್ಲಿವೆ.

ಮಿಶ್ರಿತ ಪಾನೀಯ: ನಿಂಬು–ನೀರು–ಸಕ್ಕರೆ ಮಿಶ್ರಣದಿಂದ ಮಾಡುವ ಪಾನೀಯವು ನಿಂಬುಸೋಡವೆಂಬ ಹೆಸರಿನಿಂದ ಪ್ರಚಲಿತದಲ್ಲಿದ್ದು ಇದು ಬೇಸಿಗೆಯಲ್ಲಿ ಮನೆಗೆ ಬರುವ ಅತಿಥಿ ಸತ್ಕಾರದ ಸಂದರ್ಭದಲ್ಲಿ ಹೆಚ್ಚು ಬಳಕೆಗೊಳ್ಳುತ್ತದೆ.

(ಜಿ.ಪಿ.)

ಪಿ

ಪಿತೃಪೂಜೆ: ಹಿರಿಯರು, ಸ್ವರ್ಗಸ್ಥರಾದ ಪೂರ್ವಜರುಗಳಿಗೆ ಸದ್ಗತಿ ದೊರೆಯಲಿ, ಮುಕ್ತಿ ಸಿಗಲಿ, ಅವರು ಸ್ವರ್ಗದಲ್ಲಿ ಸುಖವಾಗಿರಲಿ ಮತ್ತು ಭೂತಗಳಾಗಿ ಕಾಡದೆ ಇರಲಿ ಎಂದು ನೈವೇದ್ಯ ಅರ್ಪಿಸಿ ಪ್ರಾರ್ಥಿಸುವ ಪದ್ಧತಿ. ಬದುಕಿರುವವರು ಮಾಡುವ ಪಿತೃ ಪೂಜೆಯ ಕ್ರಿಯಾ ಕರ್ಮಗಳ ಆಧಾರದ ಮೇಲೆ ಪಿತೃ ಪೂಜೆಗೆ ತಿಥಿಯೆಂದು, ಶ್ರಾದ್ಧ, ಹಿರಿಯರ ದಿನವೆಂದು ಕರೆಯುತ್ತಾರೆ. ಪಿತೃ ಪೂಜೆಯ ದಿನ ಇಬ್ಬರು ಬ್ರಾಹ್ಮಣರನ್ನು ಪತ್ನಿ ಸಮೇತ ಆಹ್ವಾನಿಸಿ ಅರ್ಘ್ಯ, ಪಾದ್ಯ, ಭೋಜನ, ವಸ್ತ್ರ, ದಕ್ಷಿಣೆ, ತಾಂಬೂಲಾದಿಗಳಿಂದ ಉಪಚರಿಸಿ ಪಿತೃವಿಗೆ ಪಿಂಡ ಪ್ರಧಾನ ಮಾಡಿ ತಿಲೋದಕ ತರ್ಪಣ ಬಿಡುತ್ತಾರೆ. ಗೋಗ್ರಾಸವಿತ್ತು, ಕಾಗೆಗೆ ಅನ್ನವನ್ನು ಅರ್ಪಿಸಿ ಅನಂತರ ಯಜಮಾನ, ಕುಟುಂಬ ಮತ್ತು ಬಂಧು–ಮಿತ್ರರೊಂದಿಗೆ ಊಟಮಾಡುತ್ತಾರೆ. ಶ್ರಾದ್ಧ ಮಾಡಲು ಬಂದ ಬ್ರಾಹ್ಮಣ (ಪುರೋಹಿತ) ಮತ್ತು ಪಿತೃವಿನ ಮಕ್ಕಳು ಶ್ರಾದ್ಧದ ಹಿಂದಿನ ದಿವಸ ಮತ್ತು ಶ್ರಾದ್ಧದ ದಿವಸ ಒಪ್ಪೊತ್ತು ಮಾಡುತ್ತಾರೆ. (ರಾತ್ರಿ ಉಪವಾಸವಿರುತ್ತಾರೆ) ಮಹಾಲಯದ ವೇಳೆ ಮಾತೃ–ಪಿತೃ ಎಂಬ ಉಭಯಕುಲದ ಪೂರ್ವಪಿತೃಗಳಿಗೂ ಪಿಂಡ ಪ್ರಧಾನ ಮಾಡುವ 'ಅಷ್ಟಗೆ' ಎಂಬ ಶ್ರಾದ್ಧ ವಿಧಿಯೂ ಉಂಟು.

ಜೈನರಲ್ಲಿ ಶ್ರಾದ್ಧವಿಲ್ಲದಿದ್ದರೂ ವೈದಿಕ ಪ್ರಭಾವದ ವಿಶಿಷ್ಟ

ರೀತಿಯ ಆಚರಣೆಯೊಂದಿದೆ. ವೀರಶೈವರು 'ತಿಥಿ' ಆಚರಿಸುತ್ತಾರೆ. ತಿಥಿಯ ದಿನ ಲಿಂಗೈಕ್ಯರಾದವರ ಫೋಟೋ, ರುಮಾಲು ಅಥವಾ ಟೋಪಿಯನ್ನಿಟ್ಟು ಅದಕ್ಕೆ ಸ್ವಾಮಿಗಳನ್ನು ಕರೆಸಿ ಪೂಜೆ ಮಾಡಿ, ನೈವೇದ್ಯ ಅರ್ಪಿಸಿ ಬಂಧು–ಬಳಗದೊಂದಿಗೆ ಊಟ ಮಾಡುತ್ತಾರೆ. ಬ್ರಾಹ್ಮಣರಂತೆ ಇತರ ಹಿಂದುಗಳ ಸಮುದಾಯದಲ್ಲಿಯೂ ಶ್ರಾದ್ಧವನ್ನು ಪಿತೃಗಳ ಅನುಗ್ರಹಕ್ಕಾಗಿ ಅವರ ಸ್ವರ್ಗಸುಖಕ್ಕಾಗಿ ವಿಶಿಷ್ಟ ರೀತಿಯಿಂದ ಆಚರಿಸುತ್ತಾರೆ. ಮುಸ್ಲಿಂ ಮತ್ತು ಕ್ರಿಶ್ಚಿಯನ್‌ರಲ್ಲೂ ಮೃತರ ಆತ್ಮಕ್ಕೆ ಶಾಂತಿ ಕೋರುವ ವಿಶಿಷ್ಟ ಆಚಾರಣೆಗಳಿವೆ.

ಮೃತ ವ್ಯಕ್ತಿಯ ಪೂಜೆಯನ್ನು (ಶ್ರಾದ್ಧ) ನದಿಯ ದಂಡೆಯ ಮೇಲೆ ಅಥವಾ ಮನೆಯಲ್ಲಿ ಮಾಡುತ್ತಾರೆ. ಪ್ರತಿ ವರ್ಷ ಆ ವ್ಯಕ್ತಿ ಸತ್ತ ತಿಥಿಗೆ ಅನುಗುಣವಾಗಿ ಪಿಂಡಾದಿ ಕರ್ಮಗಳನ್ನು ಮಾಡುವುದಕ್ಕೆ 'ಕಾಲ ತಿಥಿ'ಯೆಂದು ಹೆಸರು ಭಾದ್ರಪದ ಮಾಸದ ಕೃಷ್ಣ ಪಕ್ಷದಲ್ಲಿನ ಮಹಾಲಯ ಅಮವಾಸ್ಯೆ ಅವಧಿಯೊಳಗೆ ಬರುವ ತಿಥಿಗೆ ಅನುಗುಣವಾಗಿ ಮಾಡುವ ಕ್ರಿಯೆಗಳಿಗೆ 'ಪಕ್ಷ'ವೆಂದು ಹೆಸರು. ಪಿಂಡಾದಿಯೊಂದಿಗೆ, ಸತ್ತ ವ್ಯಕ್ತಿ ತಂದೆಯಾದಲ್ಲಿ ಅವನು ಸತ್ತ ತಿಥಿಗೆ ಅನುಗುಣವಾಗಿ ಮೊದಲನೇ ವರ್ಷ ಪ್ರತಿ ತಿಂಗಳು ಪಿಂಡಗಳನ್ನು ಮಾಡಿ ಪುರೋಹಿತರಿಗೆ ಭೋಜನ ದಕ್ಷಿಣಾಧಿಗಳನ್ನು ಕೊಡುವುದಕ್ಕೆ 'ಮಾಸಿಕ' ವೆಂದು ಹೆಸರು. ಈ ವರ್ಷದ ಶ್ರಾದ್ಧವಾದ ನಂತರ ಪ್ರತಿವರ್ಷ ತಿಥಿಗೆ ಅನುಗುಣವಾಗಿ ಕರ್ಮಗಳನ್ನು ಮಾಡಲಾಗುತ್ತದೆ. ಪಿಂಡವೆಂದರೆ, ಅನ್ನದ ಉಂಡೆ. ಶುದ್ಧ, ಮನಸ್ಸಿನಿಂದ ಅನ್ನವನ್ನು ಬೇಯಿಸಿ, ಎಲೆಯ ಮೇಲೆ ಹಾಕಿ ದರ್ಭೆ ಕಡ್ಡಿಯ ತುಂಡುಗಳು, ಎಳ್ಳು, ಅಕ್ಕಿ, ಜೇನು ತುಪ್ಪ, ತುಳಸಿ, ತೀರ್ಥ ಹಾಕಿ, ಕಲಸಿ, ಉಂಡೆ ಆಕಾರ ಮಾಡುವುದು. ಸತ್ತ ತಂದೆಗೆ ಒಂದು ಪಿಂಡ, ತಂದೆಯ ತಂದೆಗೆ ಒಂದು ಪಿಂಡ, ಮುತ್ತಾತನಿಗೆ ಒಂದು ಪಿಂಡ– ಹೀಗೆ ಮೂರು ಪಿಂಡಗಳನ್ನು ಮಂಡಲ ರಚಿಸಿ, ಮಂಡಲದ ಮೇಲೆ ದರ್ಭದ ಕಡ್ಡಿಗಳನ್ನಿರಿಸಿ, ಮೇಲೆ ವಿಷ್ಣು ಪಾದಗಳನ್ನಿರಿಸಿ ಕರ್ಮಮಾಡುವವ (ಮಗ) ತನ್ನ ಗೋತ್ರ, ತಂದೆಯ ಹೆಸರು ಹೇಳಿ ಒಂದು ಪಿಂಡ ಮೊದಲಿಗೆ ಇಡುವನು, ಮತ್ತೆ ತನ್ನ ಗೋತ್ರ ಹೇಳಿ ತಂದೆಯ ತಂದೆಯ ಹೆಸರು ಹೇಳಿ ಎರಡನೆ ಪಿಂಡವನ್ನಿಡುವನು, ಅದರಂತೆ ತನ್ನ ಗೋತ್ರ ಹೇಳಿ, ಮುತ್ತಾತನ ಹೆಸರನ್ನೂ ಹೇಳಿ, ಮೂರನೆ ಪಿಂಡವನ್ನಿಡುವನು. ಹಲ್ಲು ಬರುವವರೆಗೆ ಸತ್ತ ಮಕ್ಕಳಿಗಾಗಿ 'ಮುಟಕಿ' (ಧರ್ಮಪಿಂಡ) (ಹಿಡಿಯಲ್ಲಿ ಮಾಡಿದ ಸಣ್ಣ ಹಿಡಿ ಆಕಾರದ ಉಂಡೆ) ಮಾಡಿ, ಅದನ್ನು, ಇನ್ನೊಂದು ಮಂಡಲ ಮಾಡಿ ಅದರ ಮೇಲೆ ವಿಷ್ಣುಪಾದ ರಚಿಸಿ ಅದರ ಹತ್ತಿರವಿಡುತ್ತಾರೆ. ಈ ಕ್ರಿಯೆಗಳನ್ನು ಭಾದ್ರಪದ ಮಾಸದಲ್ಲಿ ಬರುವ ಕೃಷ್ಣ ಪಕ್ಷದ ಅವಧಿಯೊಳಗೆ ತಿಥಿಗೆ ಅನುಗುಣವಾಗಿ ಮಾಡಬೇಕು. ಸತ್ತ ವ್ಯಕ್ತಿಯ ತಿಥಿ ತಿಳಿಯದ ಪಕ್ಷದಲ್ಲಿ ಮಹಾಲಯ ಅಮವಾಸ್ಯೆ ದಿನದಂದು ಮಾಡಲೇಬೇಕು.

(ಎಂ.ಎಸ್.ಜಿ.)

ಪು

ಪುಟಗಮರಿ: ಜಗಜ್ಯೋತಿ ಬಸವೇಶ್ವರ ಪುರಾಣ ನಡೆಯುವ ಗ್ರಾಮ. ಪ್ರತಿವರ್ಷವೂ ಶ್ರಾವಣ ಮಾಸದಲ್ಲಿ ಪುರಾಣ ಪ್ರತಿಜನ ವಿಜೃಂಭಣೆಯಿಂದ ನಡೆಯುತ್ತದೆ. ಈ ಗ್ರಾಮ ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ಗಡಿ ಅಂಚಿನಲ್ಲಿದೆ. ಕಳೆದ 23 ವರ್ಷಗಳಿಂದಲೂ ಪುರಾಣ ಪ್ರವಚನಗಳನ್ನು ಆಚರಿಸಿಕೊಂಡು ಬಂದ ಕೀರ್ತಿಗೆ ಪಾತ್ರರಾಗಿದ್ದಾರೆ ಪುಟಗಮರಿ ಗ್ರಾಮಸ್ಥರು.

ಪ್ರತಿವರ್ಷದ ಶ್ರಾವಣ ಶುದ್ಧ ಷಷ್ಠಿ ದಿವಸ ಮಹಾಪುರಾಣವು ಪ್ರಾರಂಭವಾಗುತ್ತದೆ. ಗುಡದೂರ ಮಹಾಮಹಿಮರಾದ ದೊಡ್ಡ ಬಸವಾರ್ಯರ ಶಿಷ್ಯರಾದ ವೇದಮೂರ್ತಿ ಮಲ್ಲಿಕಾರ್ಜುನಯ್ಯ ಶಾಸ್ತ್ರಿ ಹಿರೇಮಠ ಚಿಕ್ಕಬೊಮ್ಮನಾಳ ಸಾಕಿನ ಸೋಮನಾಳ ಇವರು ನಿಸ್ವಾರ್ಥ ಸೇವಾ ಭಾವನೆಯಿಂದ ಪುರಾಣ ಪ್ರವಚನ ಮಾಡುತ್ತಿರುವದು ಒಂದು ವಿಶೇಷ.

ಶ್ರಾವಣ ಬಹುಳ 11 ರಂದು ಮಹಾಪುರಾಣ ಮಂಗಲಗೊಳ್ಳುವುದು. ಶ್ರಾವಣ ಬಹುಳ 21 ರಂದು ಉದಯ 6ರಿಂದ 8ಗಂಟೆಯ ವರೆಗೆ ಬಸವಲಿಂಗೇಶ್ವರ ಮೂರ್ತಿಗೆ ಅಭೀಷೇಕ ಆನಂತರ ಕುಂಭಾಭಿಷೇಕ ನಡೆಯುತ್ತದೆ. ಪ್ರತಿ ವರ್ಷವು ಪುರಾಣ ಮಂಗಲ ದಿನದಂದು ಶುಭಮುಹೂರ್ತದಲ್ಲಿ 25 ಜೋಡಿ ಸಾಮೂಹಿಕ ವಿವಾಹಗಳನ್ನು ನಡೆಸಿಕೊಂಡು ಬಂದಿರುವದು ಒಂದು ವಿಶೇಷತೆ. ಮಹಾಗಣಾರಾಧನೆಯೊಂದಿಗೆ ಸಾವಿರಾರು ಜನ ಪ್ರಸಾದ ಸ್ವೀಕರಿಸಿ ಪುನೀತರಾಗುವರು. ಮೂವತ್ತು ವರ್ಷಗಳಿಂದ ಗ್ರಾಮದಲ್ಲಿ ವೇದಮೂರ್ತಿ ವೀರಯ್ಯ ಬೆನಕನಾಳಮಠದ ಸ್ವಾಮಿಗಳು ನೆಲೆಯಾಗಿ ನಿಂತು ದೇವಸ್ಥಾನದ ಪೂಜೆ ಮಾಡುತ್ತಾ ಬಂದಿದ್ದಾರೆ. ಈ ಗ್ರಾಮದ ಸುತ್ತಲೂ ಬಿಲ್ವಪತ್ರಿಯ ವನವಿರುವುದೇ ಇಲ್ಲಿನ ವಿಶೇಷತೆ.

(ಎಸ್.ಕೆ.ಎಂ.)

ಪುರ: ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಪುಟ್ಟ ಗ್ರಾಮ. ಇಲ್ಲಿಯ 'ಸೋಮನಾಥ ದೇವಾಲಯ ಅತ್ಯಂತ ಪುರಾತನ ಇತಿಹಾಸ ಹೊಂದಿರುವಂಥ ವಿಶೇಷತೆ ಇರುವ ದೇವಸ್ಥಾನ. ಹಂಪೆಯ ವಿಜಯನಗರ ಕಾಲಕ್ಕಿಂತಲೂ ಅಂದರೆ, 12ನೆಯ ಶತಮಾನಕ್ಕಿಂತಲೂ ಪುರಾತನವಾದ ಪುರ ಗ್ರಾಮ ಕೋಟಿ ಶಿವಲಿಂಗಗಳ ಸಂಗಮದಿಂದ ಪ್ರಸಿದ್ಧಿ ಪಡೆದಿದೆ.

ಈ ಐತಿಹಾಸಿಕ ಪುರ ಗ್ರಾಮದ ಸೋಮನಾಥ ದೇವಾಲಯವು ಹಲ ಹತ್ತು ವೈಶಿಷ್ಟ್ಯಗಳನ್ನು ಹೊಂದಿದೆ. ದೇವಸ್ಥಾನದ ಸಮೀಪ ಬರುವವರೆಗೂ ಒಳಭಾಗದ ವಿಶಿಷ್ಟತೆಗಳೇನೂ ಕಾಣುವುದಿಲ್ಲ. ಮೊದಲ ಮಹಾದ್ವಾರ ಪ್ರವೇಶಿಸಿದ ತಕ್ಷಣ ದೊಡ್ಡ ಪ್ರಾಂಗಣ, ಅಲ್ಲೊಂದು ಶಿಲಾಶಾಸನ ಕಣ್ಣಿಗೆ ಬೀಳುತ್ತದೆ. ಹಳೆಗನ್ನಡ ಮತ್ತು ಸಂಸ್ಕೃತ ಲಿಪಿಯ ಶಾಸನದ ಕನ್ನಡ ಭಾಷಾಂತರವನ್ನು ಮೈಸೂರಿನ ಶಿಲಾಶಾಸನ ತಜ್ಞರಿಂದ ಮಾಡಿಸಿದ ಕೀರ್ತಿ ಕುಷ್ಟಗಿ ತಹಶೀಲ್ದಾರರಿಗೆ ಸಲ್ಲುತ್ತದೆ. ಶಾಸನಾಧಾರದ ಪ್ರಕಾರ, ಶಿಲೆಯಲ್ಲಿ ನಿರ್ಮಿಸಿರುವ 15ನೆಯ ಶತಮಾನದಲ್ಲಿ ವಿಜಯನಗರದ ಅರಸರು ಎರಡನೆಯ

ವೀರಪ್ರತಾಪ ಸದಾಶಿವರಾಯನಿಗೆ ಧರ್ಮವಾಗಬೇಕೆಂದು ಆತನ ರಾಣೀವಾಸದ ಓರ್ವ ವ್ಯಕ್ತಿ ಸೋಮೇಶ್ವರ ದೇವರಿಗೆ ನಿತ್ಯಪೂಜೆ, ನೈವೇದ್ಯ, ಕಲ್ಯಾಣ ಕಾರ್ಯಗಳಿಗೆ ಕೊಟ್ಟಂತಹ ಭೂದಾನದ ವಿವರಣೆಗಳನ್ನು ಬರೆಯಲಾಗಿದೆ.

ಸುರಂಗಮಲ್ಲ ಬಿರುದನ್ನು ಪಡೆದ ಸೋಮಯಿದೇವನೆಂಬ ಮಾಂಡಲೀಕ, 13ನೆಯ ಶತಮಾನದಲ್ಲಿ ಇಲ್ಲಿದ್ದನೆಂದೂ, ಪುರ ಗ್ರಾಮಕ್ಕೆ ದೊಡ್ಡದಾದ ಕೆರೆ, ಕಾಲುವೆಗಳು, ತೂಬುಗಳನ್ನು ಮಾಡಿಸಿದ್ದನೆಂದು ತಿಳಿದು ಬರುತ್ತದೆ. ಈ ಶಾಸನವನ್ನು ಶಾಲಿವಾಹನ ಶಕೆ 1469ನೆಯ ಪ್ಲವಂಗನಾಮ ಸಂವತ್ಸರದ ಪುಷ್ಯ ಬಹುಳ ಬಿದಿಗೆಯಂದು ಬರೆಯಿಸಲ್ಪಟ್ಟಿದೆ. ವಿಜಯನಗರದ ತುಳುವ ಮನೆತನದ ಅರಸು ಎರನೆಯ ವೀರಪ್ರತಾಪ ಸದಾಶಿವರಾಯ ಮಹಾರಾಯನು 1442 ರಿಂದ 1476ರ ವರೆಗೆ ಇಲ್ಲಿ ನೆಲೆಸಿದ್ದು, ಈತನು ರಾಜಕೀಯವಾಗಿ ಬಹಳ ದುರ್ಬಲನೂ, ಹಿತಶತ್ರುಗಳಿಂದ ಕೂಡಿದವನೂ ಆಗಿದ್ದನೆಂದು ಅವನ ನಿಷ್ಠಾವಂತನಾದ ಕೃಷ್ಣಪ್ಪ ನಾಯಕ ಎಂಬ ವ್ಯಕ್ತಿ, ದೊರೆಗೆ ಆಯುಷ್ಯಾಭಿವೃದ್ಧಿ ಮತ್ತು ಪುಣ್ಯ ಪ್ರಾಪ್ತಿಯಾಗಬೇಕೆಂದು ಪುರದ ಸೋಮನಾಥನಿಗೆ ಭೂದಾನ ಮಾಡಿದ ವಿವರಣೆ ಶಾಸನದಿಂದ ತಿಳಿದುಬರುತ್ತದೆ.

ಮಹಾದ್ವಾರದ ಮುಂದೆಯೇ ಬಲಭಾಗದಲ್ಲಿರುವ ಒಡೆದ ಶಾಸನ ಮತ್ತು ಸಂಗಮೇಶ್ವರ ಲಿಂಗದ ಹಿಂಭಾಗದಲ್ಲಿರುವ ಶಾಸನದಲ್ಲಿ ತಿಳಿಸಿದ ಪ್ರಕಾರ, ಪುರದ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿರುವ ಒಂದು ಕೋಟಿ ಲಿಂಗಗಳನ್ನು ಶಿವಶರಣನೂ ಹಾಗೂ ಶಿಲ್ಪಿಯೂ ಆದ ಓಹಿಲಯ್ಯ ಎಂಬುವನು ಪ್ರತಿಷ್ಠಾಪಿಸಿ ರುವುದಾಗಿಯೂ, ನಿರ್ಮಾಣ ಜವಾಬ್ದಾರಿಯನ್ನು ಮಾಂಡಲೀಕ ವಿಜಯ ಭೂಷಣಪ್ಪ ಮತ್ತು ಸೇರಪ್ಪ ಎಂಬುವರು ವಹಿಸಿಕೊಂಡಿದ್ದರೆಂದೂ, ಅಲ್ಲದೇ ಶಿಲ್ಪಿ ಓಹಿಲಯ್ಯ ಶರಣ ಕೂಡ ಭೂದಾನವನ್ನು ಮತ್ತು ಲಿಂಗಗಳ ತ್ರಿಕಾಲ ಪೂಜಾದಿಗಳಿಗೆ ಭೂದಾನ ಕೊಟ್ಟ ಬಗ್ಗೆ ಉಲ್ಲೇಖಿಸಲಾಗಿದೆ.

ಮಹಾದ್ವಾರದ ಪ್ರಾಂಗಣದೊಳಗೆ ಪ್ರವೇಶಿಸಿದ ತಕ್ಷಣ ಎದುರಿಗೆ ವೀರಭದ್ರದೇವರ ದೇವಸ್ಥಾನವಿದೆ. ಈ ದೇವಸ್ಥಾನದ ಎದುರಿಗೆ ಕೈಲಾಸ ನಿಚ್ಚಣಿಕೆ ಶಿಲಾ ಶಾಸನದ ಹಿಂಭಾಗದಲ್ಲಿ ತ್ರಿಪುರಸಂಹಾರ ಮಾಡಿದ ಸನ್ನಿವೇಶ. ಅಂದರೆ ದೇವತೆಗಳು, ರಾಕ್ಷಸರು, ಆದಿಶೇಷ ನನ್ನು ಗುಡ್ಡಕ್ಕೆ ಸುತ್ತುವರಿದು ಮಂಥನ ಮಾಡಿದ ಸನ್ನಿವೇಶ ತಿಳಿಸುವ ಸ್ವಾರಸ್ಯಕರವಾದ ಚಿತ್ರಗಳು, ಮೂರ್ತಿಗಳು ಇವೆ. ಎರಡನೆಯ ದ್ವಾರ ಚಿಕ್ಕದಾಗಿದ್ದು, ಪೂರ್ಣಬಾಗಿಯೇ ಒಳಹೋಗಬೇಕು.

ಎರಡನೆಯ ದ್ವಾರದ ಎದುರಿಗೆ ಪಾರ್ವತಿ ಪರಮೇಶ್ವರರು, ಗಣಪತಿ, ನವಿಲನ್ನೇರಿ ಹೊರಟಿರುವ ಷಣ್ಮುಖನ ಕೆತ್ತನೆಯ ಶಿಲಾಮೂರ್ತಿಗಳಿವೆ. ಮುಂದೆ ಇಬ್ಬರು ಮಹಿಳೆಯರ ಮೂರ್ತಿ ಗಳಿದ್ದು, ಅವರಿಬ್ಬರೂ ಹಾಲು ಮೊಸರು ಮಾರುವ ನಾರಿಯರು ಎಂದು ಇಲ್ಲಿಯ ಗ್ರಾಮಸ್ಥರ ಅಭಿಪ್ರಾಯ. ಗಣಪತಿಯ ಮೂರ್ತಿ ಯ ಎಡಭಾಗದ ಮಂಟಪದದಲ್ಲಿ ಕೃಷ್ಣ ಗೋವರ್ಧನಗಿರಿ, ಕೃಷ್ಣ ಗೋವುಗಳನ್ನು ಕಾಯುತ್ತಿರುವ ದೃಶ್ಯ ಸ್ವಾರಸ್ಯಕರವಾಗಿ ಮೂಡಿಸ ಲಾಗಿದೆ. ಚಿತ್ರಕಲಾ ಚಾತುರ್ಯಕ್ಕೆ ಸಾಕ್ಷಿ ಅಲ್ಲದೆ ನೋಡುಗರನ್ನು, ಅವರ ಹೃದಯವನ್ನು ಭಕ್ತಿ ಭಾವವದೆಡೆಗೆ ಧಾವಿಸುವಂತೆ ಮಾಡುವುದು.

ಎರಡನೇ ದ್ವಾರದ ಬಲಕ್ಕೆ ಮೂರು ಕಾಲಿನ ಮಂಚ ಒಳ ಪ್ರಾಂಗಣದಲ್ಲಿದೆ. ಒಳ ಪ್ರಾಂಗಣಕ್ಕೆ ಕಮೇಲೆ ಛತ್ತನ್ನು ಹಾಕಲಾಗಿದೆ. ಮೂರು ಕಾಲುಗಳು ನಿಂತಿವೆ. ಮಂಚಕ್ಕೆ ಅಂಚಿನ ಸುತ್ತಲೂ ಸರ್ಪಗಳ ಚಿತ್ರ ಕೆತ್ತಲಾಗಿದೆ.

ಇಲ್ಲಿ ನಿತ್ಯವೂ ಘಟಸರ್ಪವೊಂದು ರಾತ್ರಿ ವೇಳೆ ಈ ಮಂಚದ ಮೇಲೆ ಮಲಗುವದೆಂಬ ಪ್ರತೀತಿ ಇದೆ. ಹೀಗಾಗಿ ಸಂಜೆಯಾದರೆ, ಈ ದೇವಸ್ಥಾನದ ಒಳಗಡೆ ಯಾರೂ ಹೋಗುವಂತಿಲ್ಲ. ಈ ಮಂಚದ ಎದುರಿಗೆ ಒಳಪ್ರಾಂಗಣವಿದ್ದು, ಚತುರ್ಮುಖ ಬಸವಣ್ಣಗಳು, ಆದರೆ ಎಡಬಲಗಳಲ್ಲಿ ಶಿವಲಿಂಗಗಳನ್ನು ಹೊತ್ತ ಆನೆಗಳು ಬಹಳ ಮೋಹಕವಾಗಿವೆ.

ಮೂರನೆಯ ದ್ವಾರದ ಎಡಭಾಗದ ಗೋಡೆಗೆ ನಾರಾಯಣ ಮೂರ್ತಿ ಇದೆ. ಬಲಭಾಗಕ್ಕೆ ಮಹಿಷಾಸುರ ಮರ್ದಿನಿಯ ಭವ್ಯ ಶಿಲಾಮೂರ್ತಿ ಇದೆ. ಮೂರನೆಯ ದ್ವಾರದ ಎದುರಿಗೆ ಹಂಪೆಯ ವಿರೂಪಾಕ್ಷದೇವರ ಮೂರ್ತಿ ಇದ್ದು, ಅದರ ಅಕ್ಕಪಕ್ಕದಲ್ಲಿ ಸಿದ್ಧರಾಮೇಶ್ವರಲಿಂಗ. ಅದರ ಪಕ್ಕ ಕಾಶೀ ವಿಶ್ವನಾಥ ಲಿಂಗಗಳಿವೆ. ಈ ದ್ವಾರದ ಬಲಭಾಗದಲ್ಲಿ ಅಮೃತಬಾವಿ ಇದ್ದು, ಬಹುಷಃ ಈ ಬಾವಿಯ ನೀರನ್ನು ಹಿಂದೆ ಪೂಜಾದಿಗಳಿಗೆ ಉಪಯೋಗಿಸುತ್ತಿರಬಹುದು. ಒಂದೇ ಬಾವಿಯಲ್ಲಿ ದೇವಸ್ಥಾನದ ಒಳಗಡೆಯೇ ಸದ್ಯ ಐದು ಬಾವಿಗಳಿವೆ. ಒಟ್ಟಾರೆ ಏಳು ಬಾವಿಗಳು, 7 ಹನುಮಂತ ದೇವರುಗಳು ಇಲ್ಲಿವೆ. ಅವನ್ನೆಲ್ಲ ನೋಡಿದರಿಗೆ ಮುಕ್ತಿ ಎಂಬ ಮೂಢನಂಬಿಕೆಯೂ ಇಲ್ಲಿಮೂಡುತ್ತದೆ. ಈಗ ಅಲ್ಲಿ ಐದು ಹನುಮಂತ ದೇವರುಗಳು ಮಾತ್ರ ನೋಡಸಿಗುತ್ತವೆ.

ಅಮೃತಬಾವಿಯ ಅಕ್ಕಪಕ್ಕದಲ್ಲಿ ಕಾಮಧೇನು, ಕಲ್ಪವೃಕ್ಷ, ಕಾಲಕಾಲೇಶ್ವರ ಮೂರ್ತಿ, ರಾಘವೇಂದ್ರ ಸ್ವಾಮಿಗಳ ವೃಂದಾವನ, ಸುಮಾರು ಮೂರೂವರೆ ಅಡಿ ಎತ್ತಿರವಾಗಿದ್ದು, ಏಕಶಿಲೆಯಲ್ಲಿ ನಿರ್ಮಿಸಲಾದ ನೋಡಲು ನವಗಿರಿ ಪರ್ವತದಂತೆ ಕಾಣುವುದು. ಒಳಗಡೆ ಮಂಟಪದಲ್ಲಿ ಸುಮಾರು ನಾಲ್ಕೂವರೆ ಅಡಿ ಎತ್ತರದ ಕಾಳಭೈರರನ ಉಗ್ರರೂಪದ ವಿಗ್ರಹವಿದೆ. ಅದನ್ನು ಕೃತಕ ಬೆಳಕಿನ ಸಹಾಯದಿಂದಲೇ ನೋಡಬೇಕು. ದಕ್ಷಿಣ ಭಾಗದ ಪ್ರದಕ್ಷಿಣೆಯ ದ್ವಾರದ ಎಡಭಾಗದಲ್ಲಿ ಶಿವರಾತ್ರಿಯ ಕಥೆಯನ್ನು ಸಾರುವ ಬಿಲ್ವಪತ್ರಿ ಗಿಡ, ಈಶ್ವರಲಿಂಗ, ಬಿಲ್ಲನ್ನು ಹಿಡಿದ ಬೇಡರ ಕಣ್ಣಪ್ಪ, ಚಿಗರೇಗಳು, ನೀರಿನ ಹೊಂಡದ ಚಿತ್ರಗಳನ್ನು ನಯವಾಗಿ ಬಿಡಿಸಲಾಗಿದೆ. ಈ ಶಿಲೆಯ ಹಿಂದೆ ನಂದಿ ವಾಹನನ ಶಿಗ್ರಹ, ಅದರ ಬಲಭಾಗಕ್ಕೆ ಉಗ್ರನರಸಿಂಹನ ರೌದ್ರಮೂರ್ತಿ, ಲಕ್ಷ್ಮೀನಾರಾಯಣ, ವಿಷ್ಣು, ಲಕ್ಷ್ಮಿ ಗಜಲಕ್ಷ್ಮಿ, ದುರ್ಗಾ, ಶಂಕರ, ಪಾರ್ವತಿ, ಷಣ್ಮುಖ, ಸಪ್ತ ಅಶ್ವಾರೂಢ ಸೂರ್ಯದೇವನ ಮೂರ್ತಿ, ಚಂದ್ರನ ಮೂರ್ತಿ ಮುಂತಾದ ದೇವಾನು ದೇವತೆಗಳ ಮತ್ತು ರಾಕ್ಷಸರ ಚಿತ್ರಗಳು ಹಂತ ಹಂತವಾಗಿ ಕೆತ್ತಿರಬಹುದಾದ ಅಂಶ ಮನವರಿಕೆಯಾಗುತ್ತದೆ.

ಅಮೃತಬಾವಿಯ ಪಶ್ಚಿಮ ದಿಕ್ಕಿನ ಮೂಲೆಯಲ್ಲಿ, ಏಕ ಶಿಲೆಯಲ್ಲಿ ಬಿಡಿಸಿದ ಸೂರ್ಯ, ಚಂದ್ರ, ಶಿರಹಟ್ಟಿ ಫಕೀರಸಾಬರ ಮೂರ್ತಿ, ಅದರ ಪಕ್ಕದಲ್ಲಿ ಲಕ್ಷ್ಮೀ ನರಸಿಂಹ ಮೂರ್ತಿ, ಇದರ ಪಕ್ಕ ಕೈಲಾಸ ರಥವಿದೆ. ಪ್ರದಕ್ಷಿಣೆಯ ಪ್ರವೇಶದ್ವಾದ ನಂತರ, ಎಡ–ಬಲ ಮಂಟಪಗಳಲ್ಲಿ ಪ್ರತ್ಯೇಕ ದೇವರುಗಳ ಮೂರ್ತಿಗಳಿವೆ. ಈ

ದೇವಾಲಯದ ದಕ್ಷಿಣ ಮತ್ತು ಉತ್ತರದಲ್ಲಿ ಎರಡೂ ಬದಿಗಳಲ್ಲಿರುವ ಎರಡೂ ಬದಿಗಳಲ್ಲಿರುವ ಸಾಲು ಮಂಟಪಗಳಲ್ಲಿ ಸುಮಾರು ಮೂರು ಅಡಿಗಳಷ್ಟು ಎತ್ತರವಾದ ಸಂಗಮೇಶ್ವರ ಮೂರ್ತಿ ವರದ ಶಂಕರಲಿಂಗ, ಕೆಲ ಮಂಟಪಗಳಲ್ಲಿ 81 ಲಿಂಗಗಳಂತೆ, 31 ಮಂಟಪಗಳಲ್ಲಿ ಲಿಂಗಗಳನ್ನು ನೋಡ ಬಹುದಾಗಿದೆ. ಪ್ರದಕ್ಷಿಣೆಯ ಪೂರ್ವದಿಂದ ಪಶ್ಚಿಮಕ್ಕೆ ಬರುವ ದಾರಿಯಲ್ಲಿ 63 ಲಿಂಗಗಳ ಒಂದು ಸಾಲನ್ನೇ ನಿರ್ಮಿಸಿದೆ. ನಂತರ ಪಂಚಲಿಂಗ, ನವಗ್ರಹ ಲಿಂಗಗಳಿವೆ. ಈ ರೀತಿ ನವಗ್ರಹ ಲಿಂಗವಿರುವದು ತುಂಬಾ ವಿರಳ. ಇಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಈ ನವಗ್ರಹ ಲಿಂಗ ಆರಾಧನೆಯಿಂದ ಮನುಷ್ಯನ ಇಷ್ಟಾರ್ಥ ಸಿದ್ಧಯಾಗುವುದೆಂಬ ನಂಬಿಕೆ ಇದೆ. ಇಲ್ಲಿನ ಲಿಂಗಗಳ ಜಲಧಾರೆ ಬಲಕ್ಕೆ ಇದ್ದುದು ವಿಶೇಷವಿದೆ.

ಪ್ರದಕ್ಷಿಣೆಯ ಸಾಲಿನಲ್ಲಿ ದಕ್ಷಿಣದಿಂದ ಉತ್ತರಕ್ಕೆ ಬರುವಾಗ ಗೌಶಂಕರಲಿಂಗ. ಮತ್ಸಕನ್ಯೆ, ಆದಿಶೇಷ, ಹರಿ , ಬ್ರಹ್ಮ, ರುದ್ರರ ಮೂರ್ತಿಗಳಿವೆ. ಅದೇ ಮಂಟಪದೆದುರಲ್ಲಿ 3 ಸಾಲುಗಳಲಲ್ಲಿ ಪ್ರತಿಯೊಂದು ಸಾಲಿನಲ್ಲಿ 101 ರಂತೆ ಪ್ರತ್ಯೇಕ ಲಿಂಗಗಳನ್ನು ಕಾಣಬಹುದು. ಈ ಸಾಲುಗಳ ಎದುರಿನ ಮಂಟಪದಲ್ಲಿ ಶಿರಿಯಾಳ, ಚಾಂಗುಣಿಯರ ಶಿಲಾಮೂರ್ತಿಗಳು ಆಕರ್ಷಕ ವಾಗಿವೆ. ಇವುಗಳ ಪಕ್ಕದಲ್ಲಿಯೇ ಖಜಾನೆ ಕೋಣೆ, ಇದಕ್ಕೂ ಒಂದು ಸುಂದರವಾದ ಐತಿಹಾಸಿಕ ಕಥಾರೂಪವಿದೆ.

ಹಿಂದಿನ ಕಾಲಕ್ಕೆ ಶ್ರಮದ ಬೆಲೆಯ ಫಲಾಪೇಕ್ಷೆಗಾಗಿ ಆ ಖಜಾನೆಯ ಕೆಳಭಾಗದಲ್ಲಿರುವ ಪ್ರತಿಫಲದ ಚಿಕ್ಕ ಕಿಂಡಿಯಲ್ಲಿ ಕೈ ಇರಿಸಿದಾಗ, ದುಡಿಮೆಗೆ ತಕ್ಕ ಫಲ ಸಿಗುತ್ತಿತ್ತು ಎಂಬ ದಂತಕಥೆಯಿದೆ. ಅದರ ಪಕ್ಕದ ಮಂಟಪಗಳಲ್ಲಿ ಒಂದು ದೊಡ್ಡ ಲಿಂಗವಿದ್ದು, ಅದು ಸುಮಾರು 500 ಸಣ್ಣ ಸಣ್ಣ ಲೀಮಗಗಳಿಂದಾವೃತಗೊಂಡ ಏಕಲಿಂಗವಾಗಿ ರೂಪಿಸಲ್ಪಟ್ಟಿದೆ. ಇದು ಅಂದಿನ ಶಿಲ್ಪಿಯ ಕಲಾತ್ಮಕತೆ, ಚಾತುರ್ಯ, ಅಚ್ಚುಕಟ್ಟುತನ, ಜಾಣ್ಮೆಗೆ ಹಿಡಿದ ಕನ್ನಡಿಯಾಗಿದೆ. ಅದಕ್ಕೆ ಪ್ರತಿಸ್ಪರ್ಧಿ ಎಂಬಂತೆ ಇನ್ನೊಂದು ಬೃಹತ್ ಗಾತ್ರದ ಏಕಶಿಲಾಲಿಂಗವಿದ್ದು, ಅದೂ ಕೂಡ 1000 ಕ್ಕೂ ಹೆಚ್ಚಿನ ಚಿಕ್ಕ ಚಿಕ್ಕ ಲಿಂಗಗಳಿಂದ ಕೂಡಿದೆ. ಇಂಥ ಲಿಂಗಗಳು, ಈ ಪ್ರದಕ್ಷಿಣೆಯ ಸಾಲು ಮಂಟಪಗಳಲ್ಲಿ ಕಾಣಸಿಗುತ್ತವೆ. ಕೊನೆಯ ಮೂಲೆಯಲ್ಲಿ ಗರುಡ ಕಂಬವೊಂದಿದ್ದು ಅಲ್ಲಿ ರುಂಡಮಾಲೆ, ಲಿಂಗಗಳಿಂದ ಕೂಡಿದ ಕೊಡಲಿ, ಗಂಟೆಯಾಕಾರದ ಬಾಗಿದ ಎರಡು ಕಮಾನುಗಳು ಹೊಂದಿದ ಲಾಂಛನಗಳುಳ್ಳ ಚಿತ್ರಗಳು ಕಂತುಬರುತ್ತವೆ

ಇಂಥ ಲಾಂಛನಗಳು ದೇವಸ್ಥಾನದಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಇವುಗಳನ್ನೆಲ್ಲ ಗಮನಿಸಲಾಗಿ ಬಹುಶಃ ವಿಜಯನಗರ ತುಳುವರಸರ, ಶೈವಮತ ಅನುಯಾಯಿಗಳ ಲಾಂಛನಗಳಿರಬಹುದೆಂದು ಊಹಿಸಬಹುದಾಗಿದೆ. ಮೂರನೇ ದ್ವಾರದಿಂದ ಪ್ರದಕ್ಷಿಣೆಯ ಮಂಟಪಗಳನ್ನು ನೋಡುತ್ತ, ಪುನಃ ಮೂರನೇ ದ್ವಾರವನ್ನು ಪ್ರವೇಶಿಸಿ ಒಳಹೋದಾಗ ಮೂರನೇ ದ್ವಾರದ ಹೊಸ್ತಿಲು ದಾಟಿದ ಕೂಡಲೇ ಎಡಭಾಗದ ಗೋಡೆಯ ಮೇಲೆ ಅನೇಕ ಶಿಲಾಚಿತ್ರಗಳಿದ್ದು, ಕಲ್ಲುಕೋಳಿ, ಕಲ್ಲುಮುಲ್ಲಾ, ಕಲ್ಲುಚೂರಿ ಚಿತ್ರಗಳು ಎದ್ದು ಕಾಣುತ್ತವೆ. ಈ ರೀತಿಯ ಚಿತ್ರಗಳನ್ನು ನಾವು ಹಂಪೆಯ ವಿಜಯ ವಿಠ್ಠಲ ಮಂದಿರದಲ್ಲಿ ಕಾಣಬಹುದಾಗಿದೆ.

ಜಮದಗ್ನಿ ಮಹರ್ಷಿಗೆ ಪೂಜೆಗೆ ಉಸುಕಿನ ಕೊಡ ಮಾಡಿ–ಕೊಂಡು ಹಾವಿನ ಶಿಂಬೆ ಮಾಡಿ ನೀರು ತರುವ ರೇಣುಕಾಳ ವೃತ್ತಾಂತವನ್ನು ತಿಳಿಯಪಡಿಸುವ ಕಥೆಯ ರೂಪಕದ ಚಿತ್ರವನ್ನು ಇಲ್ಲಿ ಕೆತ್ತಲಾಗಿದೆ. ಮೂರನೇ ದ್ವಾರದ ನಂತರ ಪ್ರದಕ್ಷಿಣೆಯ ಸಾಲಿನಲ್ಲಿ ಏಕಾದಶ ಲಿಂಗಗಳಿವೆ. ಒಟ್ಟು 363 ಲಿಂಗಗಳಿರುವುದು ಗೋಚರಿಸುತ್ತದೆ. ಮೂರನೇ ದ್ವಾರದ ಒಳಗಡೆ ಗರ್ಭಗುಡಿ ಪ್ರವೇಶಿಸುವ ಮುಂಚೆ ಒಂದು ಕಲ್ಲಿನ ಹರಿವಾಣ ಇದೆ. ಆಗಿನ ಕಾಲದಲ್ಲಿ ಲಿಂಗಗಳಿಗೆ ನೈವೇದ್ಯ ಮಾಡಬೇಕಾದಾಗ ಹರಿವಾಣದಲ್ಲಿ ಹಾಕಿ ಸುತ್ತಲೂ ತಿರುಗಿಸಿದಾಗ, ಎಲ್ಲ ಲಿಂಗುಗಳಿಗೆ ತಲುಪುತ್ತಿತ್ತೆಂದು ಹೇಳಲಾಗುತ್ತಿದೆ.


ಒಮ್ಮೆ ನೈವೇದ್ಯದ ಸಲುವಾಗಿ ಒಂದು ಚೀಲ ಅವರೇಕಾಳುಗಳನ್ನು ಕುದಿಯಲಿಕ್ಕೆ ಇಟ್ಟು ಅವರೇ ಕಾಳು ಕುದಿದೆಯೋ ಇಲ್ಲವೋ ಎಂದು ನೋಡಲಿಕ್ಕೆ ಒಂದು ಕಾಳನ್ನು ಹಿಸುಕಿ ನೋಡಿದರಂತೆ. ಮುಂದೆ ನೈವೇದ್ಯ ಮಾಡುವಾಗ ಲಿಂಗವೊಂದಕ್ಕೆ ಒಂದರಂತೆ ನೈವೇದ್ಯ ಇಟ್ಟಾಗ ಕುದ್ದಿದಿರುವುದನ್ನು ಖಾತ್ರಿ ಪಡಿಸಿಕೊಳ್ಳಲು ಹಿಸುಕಿದ ಒಂದು ಕಾಳು ಕಡಿಮೆಬಿತ್ತಂತೆ. ಆ ಕಾರಣಕ್ಕಾಗಿ ಕೋಪಗೊಂಡ ಒಂದು ಲಿಂಗ ದೇವಸ್ಥಾನ ಬಿಟ್ಟು ಸ್ವಲ್ಪ ದೂರದಲ್ಲಿ ಒಂದು ಗಿಡದ ಕೆಳಗೆ ಇದೆ. ಅದಕ್ಕೆ ಮುನಿಸು ಲಿಂಗ ಎಂದು ಕರೆಯುವರು.

ಈ ಹರಿವಾಣದಿಂದ ಕೆಳಗೆ ಒಂದೆರಡು ಮೆಟ್ಟಲು ಇಳಿದಾಗ, ಕತ್ತಲಲ್ಲಿ ಹೋಗಬೇಕಾಗುವದು. ಎಡಬಲಕ್ಕೆ ಮಂಟಪಗಳಿದ್ದು, ಬಲಭಾಗದ ಛಾವಣಿಗೆ ಹಾಕಿದ ಬಂಡೆಗಲ್ಲಿಗೆ ಸುಮಾರು 5 ಅಡಿ ಉದ್ದದ ಹನುಮಂತ ದೇವರ ವಿಗ್ರಹವನ್ನು ಕೆತ್ತಿರುವದು, ಬೆಳಕಿನ ಸಹಾಯದಿಂದ ನೋಡಿದಾಗ ಗೋಚರಿಸುತ್ತದೆ. ಮುಂದೆ ನಾಲ್ಕು ಹೆಜ್ಜೆಗೆ ಮಂದುವರಿದಾಗ, ಗರ್ಭಗುಡಿಯ ಮುಂದೆಯೇ ಮಂಟಪವಿದ್ದು, ನಡುವೆ ಒಂದು ಬಾವಿ ಇದೆ. ಮುಂದೆ ತೀರಾ ಚಿಕ್ಕ ಬಾಗಿಲಿನಿಂದ ಒಳಗೆ ಲಿಂಗುವಿನ ಆಕಾರದಲ್ಲಿ ಸೋಮನಾಥನ ದರ್ಶನವಾಗುವದು. ಈ ಲಿಂಗದ ಮೇಲೆ ಜಲಧಾರೆಯು ಕೂಡ ಬಲಗಡೆ ಇರುವುದು ವಿಶೇಷವಾಗಿದೆ.

ಸೋಮನಾಥನ ದೇವಸ್ಥಾನದ ಹಿಂಬದಿಯಲ್ಲಿ ಬನಶಂಕರಿದೇವಿ ದೇವಸ್ಥಾನವಿದೆ. ಸೋಮನಾಥನ ದೇವಾಲಯದಲ್ಲಿ ಹಗಲಿನಲ್ಲಿ ಇಬ್ಬರು ಒಳಗೆ ಹೋಗಲೂ ಭಯವೆನಿಸುವದು. ಇಂದಿನ ಪರಿಸ್ಥಿತಿಯಲ್ಲಿ ಗರ್ಭಗುಡಿಯ ಸೋಮನಾಥ ಲಿಂಗವೊಂದೇ ದಿನಾಲೂ ಪೂಜೆ ಕಾಣುವದು. ಉಳಿದ ದೇವರ ಮೂರ್ತಿಗಳಿಗೆ ವರ್ಷದಲ್ಲಿ ನಾಲ್ಕಾರು ಸಾರೆ ಪೂಜೆ ಕಂಡರೆ ಪುಣ್ಯ. ತಹಶೀಲ ಕಾರ್ಯಲಯದವರು ದೇವಸ್ಥಾನದ ಜೀರ್ಣೋದ್ಧಾರ ಮಾಡಿಸಿದ್ದರಿಂದ ದೇವಸ್ಥಾನ ಉಳಿದುಕೊಂಡಿದೆ. ಪ್ರತಿವರ್ಷ ಶ್ರಾವಣ ಮಾಸದ ಕೊನೆಯ ಸೋಮವಾರದಂದು ಇಲ್ಲಿ ರಥೋತ್ಸವ ಮತ್ತು ಜಾತ್ರೆ ಜರುಗುವದು. ಇಲ್ಲಿನ ಕಥದ ಕಳಶವು ಉಮಲೂಟಿ ಸಂಸ್ಥಾನಿಕರಾದ ಅನ್ನದಾನ ರಾಜ ನಾಡಗೌಡರ ಮನೆಯಿಂದ ವಾದ್ಯ ವೈಭವಗಳೊಂದಿಗೆ ಆಗಮಿಸುವುದು ವಾಡಿಕೆ. ಪ್ರತಿವರ್ಷ ನೂರರಿಂದ ನೂರೈವತ್ತು ವಿವಾಹಗಳು ಇಲ್ಲಿ ಜರುಗುತ್ತವೆ.

(ಎಸ್.ಬಿ.ಕೆ.)

ಪೋ



ಪೋತೆ ಎಚ್.ಟಿ.: ಕರ್ನಾಟಕದ ಜಾನಪದ ವಿದ್ವಾಂಸರಲ್ಲಿ ಡಾ. ಎಚ್.ಟಿ. ಪೋತೆಯವರು ಒಬ್ಬರು. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಹಂಜಗಿ ಗ್ರಾಮದವರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ, ಗುಲ್ಬರ್ಗಾ ವಿಶ್ವ ವಿದ್ಯಾಲಯದಿಂದ ಎಂ.ಎ; ಎಂ.ಫಿಲ್ ಹಾಗೂ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಪ್ರಸ್ತುತ. ಗುಲ್ಬರ್ಗಾ ವಿಶ್ವವಿದ್ಯಾಲಯದ, ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಹ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಂಪಾದನೆ, ಜೀವನ ಚರಿತ್ರೆ, ಸಣ್ಣಕಥೆ, ಅನುವಾದ ವಿಚಾರ–ವಿಮರ್ಶೆ ಕ್ಷೇತ್ರದಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ.

ಹೈದ್ರಾಬಾದ ಕರ್ನಾಟಕದ ಗದ್ಯ–ಪದ್ಯ, ಜನಪದ ಸಾಹಿತ್ಯ ಹಾಗೂ ಕಲಾಕ್ಷೇತ್ರಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದಾರೆ. ಡಾ. ಪೋತೆಯವರು ಸಂಪ್ರದಾಯಸ್ಥ ಕೃಷಿಕ ಮನೆತನದವರು. ಗ್ರಾಮೀಣ ಸಂಸ್ಕೃತಿ ಹಿನ್ನೆಲೆಯಿಂದ ಬಂದ ಇವರು ಬಾಲ್ಯದಿಂದಲೂ ಹೊಲ–ಮನೆ ಕೆಲಸದಲ್ಲಿ ತೊಡಗಿದಾಗ ಅನೇಕ ಹಾಡು, ಕತೆ, ಒಗಟು, ಒಡಬು ಗಾದೆ ಇವುಗಳು ಸಹಜವಾಗಿ ಅವರ ಅರಿವಿಗೆ ಬಂದವು. ಸ್ನಾತಕೋತ್ತರ ಪದವಿಯಿಂದ ಪಿಎಚ್.ಡಿ. ಅಧ್ಯಯನದವರೆಗೂ ಜಾನಪದವನ್ನೇ ಅಧ್ಯಯನ ಮಾಡಿದ್ದಾರೆ. ಎಂ.ಫಿಲ್ ಪದವಿಗಾಗಿ "ಹೈದ್ರಾಬಾದ ಕರ್ನಾಟಕದ ಜನಪದ ವಾದ್ಯಗಳು" "ಹೈದ್ರಾಬಾದ ಕರ್ನಾಟಕದ ಜನಪದ ಪ್ರದರ್ಶನ ಕಲೆಗಳು" ಇದು ಇವರ ಪಿಎಚ್.ಡಿ. ಪ್ರಬಂಧವಾಗಿದೆ. ರಾಯಚೂರು ಜಿಲ್ಲೆಯ ಜನಪದ ಕಲೆಗಳು, ಜಾನಪದ ಸಿಂಗಾರ, ಸಮಾಜೋ ಜಾನಪದ, ಮಾಂಗರುಡಿಗರ ಸಂಸ್ಕೃತಿ, ಜನಪದ ಕಲೆಗಳ ಗೀತ ಸಂಗ್ರಹ (ಪತ್ಯ) ಜಾನಪದ ಆಯಾಮಗಳು (ಸಂ) ದೊಡ್ಡಾಟ (ಸಂ) ಹೀಗೆ ಎಂಟು ಕೃತಿಗಳನ್ನು ಹೊರತಂದಿದ್ದಾರೆ. 'ಸಮಾಜೋ ಜಾನಪದ' ಕೃತಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ವತಿಯಿಂದ 2006ನೇ ಸಾಲಿನ ಪ್ರಶಸ್ತಿ ಲಭಿಸಿದೆ.

ಅನೇಕ ಸಂಘ–ಸಂಸ್ಥೆಗಳ ಸದಸ್ಯರಾಗಿ, ಸಂಚಾಲಕರಾಗಿ, ಕಾರ್ಯ ನಿರ್ವಹಿಸಿದ್ದಾರೆ. ಇಷ್ಟೆಲ್ಲ ಸಾಹಿತ್ಯ ಮತ್ತು ಸಾಮಾಜಿಕ ಸೇವೆಯನ್ನು ಗುರುತಿಸಿ, ಅನೇಕ ಪ್ರಶಸ್ತಿ, ಬಹುಮಾನಗಳು ಬಂದಿವೆ. ಡಾ. ಪೋತೆಯವರು ದಲಿತ ಬರಹಗಾರರಾಗಿ ಹಾಗೂ ಜಾನಪದ ವಿದ್ವಾಂಸರಾಗಿ ಅನೇಕ ಕೃತಿಗಳನ್ನು ಹೊರತಂದಿದ್ದಾರೆ. *(ಸಿ.ಪಿ.ಕೆ.)*

ಪ್ರಭಾವಳಿ ಉತ್ಸವ: ಪ್ರಭಾವಳಿ ಉತ್ಸವ ಚಿಂಚೋಳಿ ತಾಲ್ಲೂಕಿನ ಸುಲೇಪೇಟ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಪ್ರಮುಖ ಆಕರ್ಷಣೆ. ಬೃಹತ್ ಗ್ರಾತದ ಎರಡು ಮರದ ದಿನ್ನೆ, ಬಿದಿರು ಬಂಬು, ಹೂವು, ಮಿಚಿಚಿನ ಕಾಗದದಿಂದ ಅಲಂಕರಿಸಿದ ಪ್ರಭಾವಳಿಯಲ್ಲಿ ನಂದಿದೇವರ ಮೂರ್ತಿ ಪ್ರತಿಷ್ಠಾಪಿಸಿ ಭಕ್ತರು ಸಾಂಪ್ರದಾಯಿಕ ಉತ್ಸವವನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸುವರು.

ಶ್ವೇತ ವರ್ಣದ ಹೊಸ ಲುಂಗಿ, ಬನಿಯನ್ನ್ ಧರಿಸಿದ್ದ ಸಾವಿರಾರು ಯುವಕರು, ಹಳೆ ಮತ್ತು ಹೊಸ ಊರಿನ ಎರಡು ತಂಡವಾಗಿ ಪ್ರಭಾವಳಿಯ ಒಂದೊಂದು ದಿನ್ನೆ ಹಿಡಿದು ಮೆರವಣಿಗೆ ನಡೆಸುತ್ತಾರೆ. ಮೆರವಣಿಗೆಯುದ್ದಕ್ಕೂ ಪ್ರಭಾವಳಿ ಎಡಕ್ಕೆ ಬಲಕ್ಕೆ ತಳ್ಳುತ್ತಾ, ಮೇಲಕ್ಕೆ ಕೆಳಕ್ಕೆ ಎತ್ತಿ ಇಳಿಸುವ ಭೂಸ್ಪರ್ಶ ಮಾಡಿದಂತೆ ಎಚ್ಚರಿಕೆ ವಹಿಸಿ ಸಾಹಸ ಮೆರೆಯುವುದು ವಿಶೇಷ.

ಪ್ರಭಾವಳಿ ವೈಭವ ನೋಡಲು ಸುತ್ತಮುತ್ತಲೂ ನೂರಾರು ಹಳ್ಳಿಗಳ ಭಕ್ತರು ಆಗಮಿಸಿ ಜಯಘೋಷ ಹಾಕಿ ತೆಂಗಿನಕಾಯಿ ಅರ್ಪಿಸಿ ಅಗ್ನಿ ತುಳಿಯುತ್ತಾರೆ.

ದೇವಾಲಯದಿಂದ ಜೋಡಿ ಪಲ್ಲಕ್ಕಿ ಹಾಗೂ ವಾದ್ಯ ಮೇಳದೊಂದಿಗೆ ಹೊರಟ ಪ್ರಭಾವಳಿ ಖಟ್ವಾಂಗೇಶ್ವರ ಮಠದ ಬಳಿಯಿರುವ ತೇರ್ ಮೈದಾನಕ್ಕೆ ಆಗಮಿಸಿ ಅಗ್ನಿಕುಂಡಕ್ಕೆ ಐದು ಸುತ್ತು ಹಾಕಿ ಭೂಸ್ಪರ್ಶ ಮಾಡುತ್ತದೆ. ಸಂಜೆ ರಥೋತ್ಸವ ನಡೆಯುತ್ತದೆ.

(ಪಿ.ಕೆ.ಕೆ.)

ಫ

ಫಕೀರಪ್ಪ ಎನ್: ಬಯಲಾಟದ ಬ್ರಹ್ಮ ಎಂದೇ ಖ್ಯಾತರಾಗಿದ್ದ ಕಲಾವಿದರು. ಪರಿಮಿತ ವಿದ್ಯೆಯನ್ನು ಪಡೆದುಕೊಂಡು, ತಮ್ಮ ಅಗಾಧ ಪ್ರತಿಭೆ ಪಾಂಡಿತ್ಯ ಹಾಗೂ ಸ್ವ ಸಾಮರ್ಥ್ಯಗಳಿಂದ, ಬಹು ಎತ್ತರಕ್ಕೆ ಬೆಳೆದರು. ಮೂಲತಃ ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ಕರಡಿಗುಡ್ಡ ಗ್ರಾಮದವರಾದ ನರಸಪ್ಪ–ನರಸಮ್ಮ ಎಂಬ ದಂಪತಿಗಳಿಗೆ ಜನಿಸಿದರು (1914). ಕಟ್ಟಡದ ಕಾಲೇಗಾರ ವೃತ್ತಿ ಇವರ ಮನೆತನದ ಕಸಬು. ಈ ಕಸಬಿನಲ್ಲಿಯೇ ಕೌಶಲ್ಯ ಕಂಡುಕೊಂಡು ವೃತ್ತಿಯ ಮೇಲೆ ಭರವಸೆನ್ನಿಟ್ಟುಕೊಂಡ ಇವರ ಕೌಟುಂಬಿಕ ಜೀವನ ಸಮೃದ್ಧ ಹಾಗೂ ಸಂತೃಪ್ತವಾಗಿತ್ತು.

ಕಿಶನ್‌ರಾವ್ ಗುರೂಜಿಯವರಲ್ಲಿ ವಿದ್ಯಾಭ್ಯಾಸಕ್ಕೆಂದು ಸೇರಿಸಿದರು. ಬಾಲಕ ಫಕೀರಪ್ಪನವರಲ್ಲಿ ಅಡಗಿದ್ದ, ಸುಪ್ತ ಚೇತನದ ಪ್ರತಿಭೆ ಅರಳಿ ವಿಕಾಸಗೊಳ್ಳಲು ಗುರೂಜಿ ಕಾರಣರಾದರು. ಫಕೀರಪ್ಪನವರಿಗೆ ತರಗತಿಯ ಪಾಠ ಅತ್ಯಂತ ಆನಂದ ನೀಡುತ್ತಿತ್ತು. ತನ್ಮಯತೆಯಿಂದ ವಿದ್ಯೆಯನ್ನು ಕಲಿತು, ಗುರುಗಳ ನೆಚ್ಚಿನ ಶಿಷ್ಯರಾಗಿ ಮುಂದೆ ಅವರಿಗೆ ಅಪಾರ ಕೀರ್ತಿಯನ್ನು ತಂದುಕೊಟ್ಟರು. ಅದರ ಫಲವೇ ರಾಯಚೂರಿನಲ್ಲಿ ಸದ್ಯ ಮುಂದುವರಿದ, ಶಿಕ್ಷಣ

ಸಂಸ್ಥೆಗಳೆನಿಸಿದ ಮಂಗಳವಾರ ಪೇಟೆ ಶಾಲೆ, ಬಾಪೂಜಿ ಪಾಠ ಶಾಲೆ, ಮುನ್ನೂರುವಾಡಿ ಶಾಲೆ, ಸಿಯಾತಲಾಬ ಶಾಲೆಗಳು ಸ್ಥಾಪಿತಗೊಂಡವು.

ಮನೆತನದ ಕಸಬು ಕಟ್ಟಡದ ಕಾಲೇಗಾರ ವೃತ್ತಿಯನ್ನೇ ಇವರು ಮುಂದುವರಿಸಿದರಾದರೂ, ಉತ್ತರ ಕರ್ನಾಟಕದ ಬಯಲಾಟಗಳ ಬಗ್ಗೆ ಆಕರ್ಷಕರಾದರು. ತಮ್ಮ ಹದಿವಯ ದಲ್ಲಿಯೇ ಬಯಲಾಟದ ಸಂಗೀತವನ್ನು ಕರಗತ ಮಾಡಿಕೊಂಡರು. ಇವರ ಆಸಕ್ತಿ ಕೇವಲ ಬಯಲಾಟಕ್ಕೆ ಮಾತ್ರ ಸೀಮಿತವಾಗಿರದೇ, ಸಮಕಾಲೀನ ಆಧುನಿಕ ಸಾಹಿತ್ಯ ಕೃತಿಗಳನ್ನೂ, ವಿವಿಧ ಪತ್ರಿಕೆಗಳನ್ನೂ ಹಾಗೂ ಇತರ ಸಾಹಿತ್ಯ ಪ್ರಕಾರಗಳನ್ನು ಅತ್ಯಂತ ಆಸಕ್ತಿಯಿಂದ ಓದುತ್ತಿದ್ದರು. ಮತ್ತು ಮಹತ್ವವೆನಿಸಿದವುಗಳನ್ನು ಬರೆದಿಟ್ಟುಕೊಳ್ಳುತ್ತಿದ್ದರು.

ಇವರಿಗೆ ಬಯಲಾಟ ರಚನಾ ಕರ್ತೃ ರಾಮಾಚಾರಿ ಎನ್ನುವರು ಪರಿಚಯವಾದರು. ಪರಿಚಯ ಬಯಲಾಟದ ಸಹವಾಸಕ್ಕೆಳಸಿತು. ಬಯಲಾಯದ ಅಭಿರುಚಿ ಹೆಚ್ಚಾಗಿ ಅದು ಬೆಳೆಯಲು ಅವರ ಸ್ನೇಹ ಕಾರಣವಾಯಿತು. ಬಯಲಾಟದ ಗುಂಗಿನಲ್ಲಿರುತ್ತಿದ್ದ ಇವರನ್ನು, ಮತ್ತೆ ಮೊದಲಿನ ನಿಯಂತ್ರಣಕ್ಕೆ ತರುವ ಉದ್ದೇಶದಿಂದ, ತಂದೆ–ತಾಯಿಗಳು ಫಕೀರಪ್ಪನವರಿಗೆ ವಿವಾಹವನ್ನು ಮಾಡಿದರು. ಆದರೂ ಬಯಲಾಟದ ಗುಂಗು ಕಡಿಮೆಯಾಗಲಿಲ್ಲ. ಬಯಲಾಟದ ಬಗ್ಗೆ ಎಷ್ಟು ಆಸಕ್ತಿ ಮತ್ತು ಉತ್ಸಾಹ ಇತ್ತೆಂದರೆ ಮದುವೆಯಾದ ಹೊಸತರಲ್ಲಿ, ಮಾಡಿಕೊಂಡ ಹೆಂಡತಿಯನ್ನು ಮರೆಯುವಷ್ಟು, ಆಟದ ಅಮಲು ಅವರ ತಲೆಗೇರಿತ್ತಂತೆ. ಹಿರಿಯರ ಅಭಿನಯ ದೀಕ್ಷೆಯಿಂದ ಬಯಲಾಟದ ಕಲೆಯನ್ನು ಜೀವಂತವಾಗಿಡಲು ತಮ್ಮ ಜೀವನವನ್ನು ಮುಡಿಪಾಗಿಟ್ಟವರು. ಜಿಲ್ಲೆಯಾದ್ಯಂತ ವಿವಿಧ ಬಗೆಯ ಬಯಲಾಟಗಳನ್ನು ಆಡಿಸಿ, ಆಡಿ, ಕುಣಿದು, ಕುಪ್ಪಳಿಸುತ್ತಾ ಆನಂದದ ಜೀವನವನ್ನು ಅನುಭವಿಸಿದವರು.

ಫಕೀರಪ್ಪನವರು ಹೈದರಾಬಾದ ಕರ್ನಾಟಕ ಪ್ರದೇಶ ಬಯಲಾಟ ರಂಗಭೂಮಿ ಕಂಡ ಅಪರೂಪದ ನಟ, ನಿರ್ದೇಶಕ, ಬಯಲಾಟದ ನಿರ್ದೇಶನಕ್ಕಾಗಿ ದೇವಿ ಕಥೆ, ವೀರೋಚನ ಕಥೆ, ಕನಕಾಂಗಿ ಕಲ್ಯಾಣ, ಕರ್ಣಾರ್ಜುನರ ಕಾಳಗ, ತಾಮ್ರಧ್ವಜ, ಶಂಬರಾಸುರ ಕಥೆ, ಭಕ್ತ ಮಾರ್ಕಂಡೇಯ, ಮುಂತಾದ ಇಪ್ಪತ್ತಕ್ಕೂ ಮೇಲ್ಪಟ್ಟು ಬಯಲಾಟಗಳನ್ನು ಆಡಿದವರು ಮತ್ತು ಆಡಿಸಿದವರು. ರಂಗಭೂಮಿ ಕಲಾ ಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟದ್ದ ಇವರು ರಾಜಕೀಯ ರಂಗ ಪ್ರವೇಶಮಾಡಿದ್ದೂ ಉಂಟು. ರಾಯಚೂರು ನಗರದ ಮಂಗಳವಾರ ಪೇಟೆಯಿಂದ ಸದಸ್ಯರಾಗಿ ನಗರ ಸಭೆಗೆ ಅವಿರೋಧವಾಗಿ ಆಯ್ಕೆಯಾದರು. ಇವರು ರಂಗಭೂಮಿಗೆ ಸಲ್ಲಿಸಿದ ಅಪಾರ ಕಲಾ ಸೇವೆಯನ್ನು ಗುರುತಿಸಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿದೆ (1980), ಇವರು ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ನಿಧನರಾದರು.

(ಪಿ.)

ಬ

ಬಂಡೆಗುಡ್ಡ ತಾಂಡಾ: 'ದೇವತೆಗಳ ಮನೆ' ಎಂದೇ ಬಿಂಬಿತವಾಗಿರುವ ದೇವದುರ್ಗ ತಾಲ್ಲೂಕಿನಲ್ಲಿ ಜಾನಪದ, ತತ್ವಪದ ಜತೆಗೆ ದಾಸ ಸಾಹಿತ್ಯಕ್ಕೂ ಹೆಸರು ಪಡೆದಿದೆ. ಮೂವತ್ತೊಂದು ವರ್ಷಗಳ ಇತಿಹಾಸ ಹೊಂದಿರುವ ಬಂಡೆಗುಡ್ಡ 'ಲಂಬಾಣಿ ಕಲಾ ತಂಡ'ಕ್ಕೆ ಹತ್ತಾರು ಪ್ರಶಸ್ತಿಗಳು ಲಭಿಸಿರುವುದು ಹೆಮ್ಮೆಯ ವಿಷಯ.

ತಾಲ್ಲೂಕಿನ ಅರಕೇರಾ ಹೋಬಳಿಯಲ್ಲಿ ಬರುವ ಬಂಡೆಗುಡ್ಡ ತಾಂಡಾ ಒಂದು ಕಾಲದಲ್ಲಿ ಕುಗ್ರಾಮವಾಗಿದ್ದರೆ ಈಗ ಬಹಳಷ್ಟು ಬದಲಾವಣೆ ಕಂಡಿದೆ. ಶ್ರಮವೇ ಇವರ ದೈವ; ಬಡತನ ಇವರ ಸಂಸ್ಕೃತಿ ಎಂಬಷ್ಟರ ಮಟ್ಟಿಗೆ ಇವರು ಕಷ್ಟ ಸಹಿಷ್ಣುಗಳಾಗಿ ಛಲದ ಜೀವನ ನಡೆಸುತ್ತಿದ್ದಾರೆ. ಆರ್ಥಿಕವಾಗಿ ಎಷ್ಟೇ ಹಿಂದುಳಿದಿದ್ದರೂ ಸಂಸ್ಕೃತಿ ಮತ್ತು ಸ್ವಾಭಿಮಾನದಿಂದ ಅತ್ಯಂತ ಸಿರಿವಂತರಾದ ಈ ಜನವರ್ಗ ಕರ್ನಾಟಕದ ಬಹುಮುಖ್ಯ ಬುಡಕಟ್ಟುಗಳಲ್ಲಿ ಒಂದಾಗಿದೆ. ದಶಕದ ಹಿಂದೆ ಶೇ. 2ರಷ್ಟು ಇದ್ದ ಅಕ್ಷರಸ್ಥರ ಸಂಖ್ಯೆ ಈಗ ಅಕ್ಷರ ಗ್ರಾಮವಾಗಿ ಮಾರ್ಪಡುವಷ್ಟು ಬೆಳೆದಿದೆ. ಉನ್ನತ ಹುದ್ದೆಗಳು ಸೇರಿದಂತೆ ತಾಂಡಾದ 60ಕ್ಕೂ ಹೆಚ್ಚು ಜನರು ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಲಂಬಾಣಿ ಮಹಿಳೆಯರ ವೇಷಭೂಷಣಗಳು ಬುಡಕಟ್ಟೊಂದರ ವೈಶಿಷ್ಟ್ಯವನ್ನು ಬಿಂಬಿಸುತ್ತದೆ. ಕಸೂತಿಯೇ ಪ್ರಧಾನವಾಗಿರುವ 'ಫೇಟಿಯಾ' ಎಂಬ ಕೆಂಪು ಲಂಗ, ಅದರ ಮೇಲೆಲ್ಲ ಗಾಜಿನ ಬಿಲ್ಲೆಗಳು, 'ಕಾಂಚಳಿ' ಎಂಬ ಕಸೂತಿಯ ಕುಪ್ಪಸ, ತಲೆಯ ಮೇಲಿಂದ ಇಳಿ ಬಿಟ್ಟ ರಂಗು–ರಂಗಿನ ಮೇಲುವಸ್ತ್ರ, ಭಲ್ಯ ಅಥವಾ ಚೂಡಿ ಎಂಬ ದಂತದ ಬಳೆಗಳು, ಬೆರಳುಗಳಿಗೆ ಉಂಗುರ, ಕೊರಳಿಗೆ 'ರಫಿಯಾಹಾರ್' ಎಂಬ ಹಾರ, ಮುತ್ತಿನ ಮೂಗುತಿ ಇವು ಇದರ ವಿಶೇಷ ಭೂಷಣಗಳು, ತಲೆಯನ್ನು ಹಲವು ಲೋಹದ ಒಡವೆಗಳಿಂದ ಶೃಂಗರಿಸಿಕೊಳ್ಳುತ್ತಾರೆ.

ಗ್ರಾಮ ಪಂಚಾಯಿತಿಯಿಂದ ಹಿಡಿದು ರಾಷ್ಟ್ರಪತಿ ಭವನದ ಕಟ್ಟೆ ಹತ್ತಿ ಬಂದಿರುವ ತಾಂಡಾದ ಕಲಾವಿದರು ಈಗ ರಾಷ್ಟ್ರ ಮಟ್ಟದಲ್ಲಿ ಹೆಸರು ಪಡೆದಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಕುರಿತು 'ಮೂಕಾಂಬಿಕ ಲಂಬಾಣಿ ನೃತ್ಯ ಕಲಾ ಸಂಘ' ಎಂಬ ಹೆಸರಿನಲ್ಲಿ ನೋಂದಾಯಿಸಿಕೊಂಡಿರುವ ಕಲಾ ತಂಡಕ್ಕೆ ಬೆನ್ನೆಲುಬಾಗಿ ನಿಂತುಕೊಂಡವರು ತಮ್ಮಣ್ಣ ರಾಠೋಡ್. 1976ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಿಂದ ಹಿಡಿದು ಮೈಸೂರು ದಸರಾ, ಹಂಪಿ ಉತ್ಸವ, ಗಡಿನಾಡು ಉತ್ಸವ ಸೇರಿದಂತೆ 30 ವರ್ಷಗಳಿಂದ ರಾಜ್ಯ ಮತ್ತು ರಾಷ್ಟ್ರದ ಯಾವುದೇ ಸ್ಥಳದಲ್ಲಿ ಕಾರ್ಯಕ್ರಮಗಳು ನಡೆದರೂ ಅದರ ಮಾಹಿತಿ ತಮ್ಮಣ್ಣ ರಾಠೋಡ್ ಅವರ ಮನೆಗೆ ಬರುವುದು ಮಾತ್ರ ತಪ್ಪಿಲ್ಲ.

ಆಸ್ಸಾಂ ರಾಜ್ಯವನ್ನು ಹೊರತುಪಡಿಸಿದರೆ ಇಡೀ ರಾಷ್ಟ್ರದ ಉದ್ದಗಲಕ್ಕೂ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಲಾ ಪ್ರದರ್ಶನವನ್ನು ನೀಡಿ ಜನರ ಮೆಚ್ಚುಗೆ ಪಡೆದಿರುವ ಕಲಾ ತಂಡದ ಬಗ್ಗೆ ಅಂತರಾಷ್ಟ್ರೀಯ ಗಣ್ಯಾತಿಗಣ್ಯರು ಮನಬಿಚ್ಚಿ ಶ್ಲಾಘಿಸಿರುವುದು ಗಮನಾರ್ಹ. ತಂಡದಲ್ಲಿ 20ಕ್ಕೂ ಹೆಚ್ಚು ಕಲಾವಿದರಿದ್ದಾರೆ. ಗ್ರಾಮೀಣ ಮಟ್ಟದಿಂದ ರಾಷ್ಟ್ರ ಮಟ್ಟದವರೆಗೂ ಹೆಸರು ಪಡೆದಿರುವ ಈ ತಂಡಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳು ಅವಶ್ಯಕ ಸೌಲಭ್ಯಗಳನ್ನು ದೊರಕಿಸಿಕೊಡುವುದು ಮಾತ್ರ ಬಾಕಿ ಇದೆ. *(ವಿ.ಎನ್.)*

ಬಕ್ಕಪ್ರಭುಗಳು: ಹುಮನಾಬಾದ ತಾಲ್ಲೂಕಿನ ಗಡಿಭಾಗದಲ್ಲಿ ನೆಲೆಸಿರುವ ಕರಕನಳ್ಳಿ ಗ್ರಾಮವು 9ನೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಂಗೂರಿದಿಂದ ದಕ್ಷಿಣ ದಿಕ್ಕಿಗಿರುವ ಬೇಮಲಖೇಡದಿಂದ 5 ಕಿ.ಮೀ. ಅಂತರದಲ್ಲಿ ಕರಕನಳ್ಳಿ ಗ್ರಾಮಸಿಗುತ್ತದೆ. ಈ ಪುಣ್ಯಕ್ಷೇತ್ರವು, 17 ನೆಯ ಶತಮಾನದಲ್ಲಿ ಸಾಕ್ಷಾತ್ ಮಹೇಶ್ವರ ಅವತಾರವೆಂದೇ ಕರೆಯುವ ಬಕ್ಕಪ್ರಭುಗಳು ಅವತರಿಸಿ ಭೂಮಿಗೆ ಬಂದರು.

ಕರಕನಳ್ಳಿಯು ಅಂದಿನ ಹೈದರಾಬಾದ ನಿಜಾಂ ಬಾದಶಾಹನ ಆಳ್ವಿಕೆಯಲ್ಲಿತ್ತು. ಈ ಗ್ರಾಮ ಸುತ್ತಲೂ ಗುಡ್ಡ-ಬೆಟ್ಟದಿಂದ ಆವರಿಸಿದ ದಟ್ಟ ಅರಣ್ಯ ಪ್ರದೇಶ. ಪ್ರಕೃತಿಯ ಹಚ್ಚ ಹಸುರಿನ



ಶ್ರೀ ಗಂಗಾಧರ ಬಕ್ಕಪ್ರಭುಗಳು

ನಿತ್ಯ ಹರಿದ್ವರ್ಣದ ರಮಣೀಯ ತಾಣ. ಅನತಿ ದೂರದಲ್ಲಿ ಸೈದಾಪುರ, ಅಕ್ಕಂಪೇಟ ಎಂಬ ಹಾಳುಕೊಂಪೆಯ ಅವಶೇಷಗಳು ಇಂದಿಗೂ ಇಲ್ಲಿ ನೋಡಲು ಸಿಕ್ಕುತ್ತವೆ. ಒಡೆದುಹೋದ ಕೆರೆ, ಕಾಲುವೆ, ಭವನಗಳು ಹಾಗೂ ಹಾಳು ಬಿದ್ದಿರುವ ಮಂದಿರಗಳು ಇಲ್ಲಿವೆ.

ಪೂರ್ವ ದಿಕ್ಕಿನಲ್ಲೊಂದು ಚಿಕ್ಕ ದ್ವಾರ. ಮಹಾದ್ವಾರದ ಮೇಲ್ಭಾಗದಲ್ಲಿ ವಿವಿಧ ಭಾವಭಂಗಿಗಳಲ್ಲಿ ನರದ, ಬ್ರಹ್ಮ ವಿಷ್ಣು, ಶಿವ-ಪಾರ್ವತಿ, ಗಣೇಶನ ವಿಗ್ರಹಗಳು ನಯನ ಮನೋಹರವಾಗಿವೆ. ಮಧ್ಯಭಾಗದ ಕಮಾನಿನಲ್ಲಿ ತಪೋನಿರತ ಪರಶಿವನ ಮೂರ್ತಿ ವಿಶೇಷ ಕಳೆಯನ್ನು ನೀಡುತ್ತದೆ.

ಮುಂಭಾಗದಲ್ಲಿ ಪ್ರಭುಗಳ ವಂಶಸ್ಥರ ಸಮಾಧಿಗಳಿವೆ. ನಿಂಗಯ್ಯನ ಚಿಕ್ಕದೇವಾಲಯ ಹಾಗೂ ವಿಶಾಲವಾದ ತೆರೆದ ಬಾವಿ, ಕಲ್ಯಾಣ ಮಂಟಪ, ಅಂಗಡಿಗಳು ಇವೆ. ಇಲ್ಲಿ ದಿನವೂ ತ್ರಿಕಾಲ ಪೂಜಾ ಕೈಂಕರ್ಯಗಳು ನಿರಂತರವಾಗಿ ನಡೆದುಕೊಂಡು ಬಂದಿವೆ. ಪ್ರತಿ ತಿಂಗಳ ಚತುರ್ಥಿ ಭಜನೆ, ಶ್ರಾವಣ ಮಾಸದ ಸಪ್ತಾಹ, ಕೀರ್ತನೆ, ಅನ್ನ ಸಂತರ್ಪಣೆ ನಡೆದು ಭಕ್ತರು ಜಾವಳ, ಮದುವೆ, ಗೂಳಿ ಬಿಡುವುದು, ನೆರವೇದ್ಯ ಅವ್ಯಾಹತವಾಗಿ ನಡೆದುಕೊಂಡು ಬಂದಿವೆ.

ಮೂಲತಃ ಮೇದಕ ಜಿಲ್ಲೆಯ ಸದಾಶಿವಪೇಟದಿಂದ ಅನತಿ ದೂರದಲ್ಲಿರುವ ಅತ್ಮಕೂರ ಎಂಬ ಗ್ರಾಮ. ಅಲ್ಲಿ ದೈವೀಭಕ್ತರಾದ ಬೋರಮ್ಮ -ಭೋಜಪ್ಪ ದಂಪತಿಗಳ ಉದರದಲ್ಲಿ ಬಕ್ಕಪ್ರಭುಗಳು ಜನಿಸಿಕರು. ಬಾಲ್ಯದಲ್ಲೇ ತಮ್ಮ ಲೀಲೆಗಳನ್ನು ತೋರಿದರು. ದೈವಿಸಂಭೂತರಾದ ಪ್ರಭುಗಳು, ಚಿಕ್ಕ ವಯಸ್ಸಿನಲ್ಲೇ ತಂದೆ-ತಾಯಿಗಳನ್ನು ತೊರೆದು, ಗ್ರಾಮದ ಸಮೀಪದಲ್ಲಿಯೇ ಇರುವ ಗಂಗಾಕತ್ವವೆಂಬ ನದಿಯ ದಡದಲ್ಲಿ ಕುಟಿರ ನಿರ್ಮಿಸಿಕೊಂಡಿದ್ದ ಶ್ರೀಗುರು ಗಂಗಾಧರ ಗುರುಗಳಿಂದ ಗುರುದೀಕ್ಷೆ ಪಡೆದರು.

ಗಂಗಾಧರ ಗುರುಗಳಲ್ಲಿ ಅನೇಕ ಶಿಷ್ಯರಿದ್ದರು. ಅವರಲ್ಲಿ ಬಕ್ಕಪ್ರಭುಗಳು ನೆಚ್ಚಿನ ಶಿಷ್ಯರಾಗಿದ್ದರು. ಪಾರಮಾರ್ಥದೆಡೆಗೆ ಒಲವು ತೋರಿದ ಪ್ರಭುಗಳ ತಾಯಿ-ತಂದೆಗಳಿಗೆ ಚಿಂತೆಯಾಯಿತು. ಪ್ರಭುಗಳ, ಗುರುವಿನಾಜ್ಞೆಯಂತೆ ಲೋಕೋದ್ಧಾರಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಡುವೆ ಎಂದು ಖಂಡತುಂಡವಾಗಿ ಹೇಳಿ, ರುದ್ರಾಕ್ಷಿಯನ್ನು ನೀಡಿ, ನೀವು ನನ್ನ ದರ್ಶನ ಪಡೆಯಬೇಕಾದರೆ ಇದರಲ್ಲಿ ನೋಡಿ ಎಂದು ಹೇಳಿದರು.

ಅನಂತ ದಿನಗಳಿಂದ ಗುರು ಸಾನಿಧ್ಯದಲ್ಲಿದ್ದು, ಘೋರ ಅರಣ್ಯ ಪ್ರದೇಶವಾಗಿರುವ ಗೊಟ್ಟಂಗೊಟ್ಟಿಯಲ್ಲಿ ಅನುಷ್ಠಾನ ಗೈಯ್ಯುವಂತೆ, ಅನಂತರ ಸಂಸಾರಿಯಾಗಿ ಕರಕನಳ್ಳಿಯಲ್ಲಿ ಇದ್ದುಕೊಂಡು ಲೋಕ ಕಲ್ಯಾಣಕ್ಕಾಗಿ ಅಹೋರಾತ್ರಿ ಶ್ರಮಿಸೆಂದು ಗುರುಗಳು ಹೇಳಿದರು. ಗುರುವಾಜ್ಞೆಯಂತೆ ಸತಿ-ಪತಿಗಳೀರ್ವರೂ ಅಭಯಾರಣ್ಯದಲ್ಲಿ ಕ್ರೂರ ಮೃಗಗಳ ಜೊತೆಯಲ್ಲಿದ್ದು, ಅಖಂಡ ಅನಷ್ಠಾನಗೈದು ಪಾರಮಾರ್ಥದೆಡೆಗೆ ಪಂಚಮಹಾಭೂತಗಳಿಂದ ಸ್ನೇಹಿಯಾದರು.

ಹೈದರಾಬಾದಿನ ನಿಜಾಂ ನಾಸೀರ ದೌಲನು ವಾಸಿಯಾಗದ

ರೋಗದಿಂದ ಬಳಲುತ್ತಿದ್ದ. ಅನೇಕ ವೈದ್ಯರು, ಹಕೀಂರಿಗೂ ತೋರಿಸಿದರೂ ರೋಗ ಗುಣಮುಖವಾಗಲಿಲ್ಲ. ಇವರ ಪ್ರಸಿದ್ಧಿಯನ್ನು ಕೇಳಿ, ಪ್ರಭುಗಳಿಗೆ ಹೈದ್ರಾಬಾದಕ್ಕೆ ಆಗಮಿಸಲು ದೂತರನ್ನು ಕಳುಹಿಸಿದನು. ಪ್ರಭುಗಳು ನಿಜಾಂ ಬಾದಶಾಹನ ಹತ್ತಿರ ಹೋಗಿ ತಮ್ಮ ತಪೋ ಬಲದಿಂದ ಕಮಂಡಲದಲ್ಲಿಯ ಭಸ್ಮವನ್ನು ಪ್ರೋಕ್ಷಿಸಿದರು. ನಿಜಾಮನು ಕ್ರಮೇಣ ರೋಗದಿಂದ ಗುಣಮುಖ ಹೊಂದಿದ.

ಇದರಿಂದ ಸಂತುಷ್ಟನಾದ ಬಾದಶಾಹ ಇಂದಿನ ಕರಕನಳ್ಳಿಯಲ್ಲಿದ್ದ ಭೂಮಿಯನ್ನು ಪ್ರಭುಗಳಿಗೆ ಉಂಬಳಿಯಾಗಿ ನೀಡಿದ. ಕಾಲಕ್ರಮೇಣ ಪ್ರಭುಗಳು ಕರಕನಳ್ಳಿಯಲ್ಲಿ ಕುಟೀರ ಒಂದನ್ನು ನಿರ್ಮಿಸಿಕೊಂಡು ವಾಸವಾಗಿದ್ದು, ಸುತ್ತಮುತ್ತಲಿನ ಭಕ್ತರಿಗೆ ಉಪದೇಶ ನೀಡಿ ಸತ್ಪ್ರಜೆಯಾಗಲು ಆಶೀರ್ವದಿಸುತ್ತಿದ್ದರು.

ಪ್ರಭುಗಳ ಖ್ಯಾತಿ ನಾಲ್ಕೂ ದೆಸೆಗಳಲ್ಲಿ ಪಸರಿಸಿತು. ಅನೇಕ ಶಿಷ್ಯರು ಇವರ ಸಾನಿಧ್ಯದಲ್ಲಿದ್ದು, ತಮ್ಮ ಜೀವನ ಸಾರ್ಥಕಗೊಳಿಸಿಕೊಂಡರು. ಇವರಲ್ಲಿ ಪರಮಭಕ್ತರಾದ ಕಾವಮ್ಮ ಪಂ.ಕಾಶೀನಾಥ ಹಾಗೂ ಭಾಸ್ಕರ ಪ್ರಮುಖರು. ಇವರ ಸಮಕಾಲೀನರಾದ ಕಲಬುರ್ಗಿಯ ಶರಣಬಸವೇಶ್ವರರು, ಸೂಫಿ ಸಂತ ಹಜ್ರತ್ ಖಾಜಾ ಬಂದೇನವಾಜರು. ಇವರ ಒಡನಾಡಿಯಾಗಿದ್ದರು. ಶರಣ ಬಸವೇಶ್ವರರ ಶಿಷ್ಯರಿಗೆ ಲಿಂಗಪೂಜೆಯ ಮರ್ಮವನ್ನು ಅರುಹಿದರು.

ಚಿಂಚೋಳಿಯ ಹಿರೇಮಠದಿಂದ ವೃಷಭನಿಂದ ಪೂಜಾ ಸಾಮಗ್ರಿಗಳನ್ನು ತರಿಸಿ ತತ್ಕಾಲ ಪೂಜೆ ನೆರವೇರಿಸಿದರು. ಮೋಗಡಂಪಳ್ಳಿಯ ಭಕ್ತರೊಬ್ಬರ ಮನೆಯಲ್ಲಿದ್ದ ಬ್ರಹ್ಮರಾಕ್ಷಸನನ್ನು ಮನೆಯಿಂದ ಹೊರಗಟ್ಟಿದರು. ಚಿಟಗುಪ್ಪಿಯ ಸಂಗ್ರಾಮಖಾನ್ ಎಂಬುವ, ಪ್ರಭುಗಳನ್ನು ಕರೆದು ಗಂಟು-ಮೂಟೆ ಕಟ್ಟಿ ಹೊರಲು ಆಜ್ಞಾಪಿಸಿದ. ವಿಧಿಯಿಲ್ಲದೆ ಪ್ರಭುಗಳು ಗಂಟುಮೂಟೆಗಳನ್ನು ತಲೆ ಮೇಲೆ ಹೊರಲಾರದೆ ಆ ಗಂಟು ಅಂತರದಲ್ಲಿಯೇ ನಡೆಯುತ್ತಿತ್ತು. ಇದನ್ನರಿತ ಸಂಗ್ರಾಮಖಾನ್ ಬೆಚ್ಚಿ, ಪ್ರಭುಗಳು ಅಸಾಮಾನ್ಯರೆಂದು ತಿಳಿದು ಪಾದ ಹಿಡಿದು ಕ್ಷಮೆ ಕೋರಿದ. ಅಂದಿನಿಂದ ಅಹಂಕಾರದಿಂದ ದೂರವಾಗಿ ಪ್ರಭುಗಳ ಶಿಷ್ಯತ್ವ ಪಡೆದ.

ರೇಕುಳಗಿಯ ಭಕ್ತ ವೆಂಕಣ್ಣ ಕಾಶೀಯಾತ್ರೆ ಮಾಡುವ ಉದ್ದೇಶದಿಂದ ಕರಕನಳ್ಳಿ ಮಾರ್ಗವಾಗಿ ಹೋಗುತ್ತಿರುವಾಗ, ಪ್ರಭುಗಳ ಸನ್ನಿಧಿಯಲ್ಲಿಯೇ ತೋರಿಸಿದ. ಹೀಗೆ ಸಹಸ್ರಾರು ಪವಾಡಗಳನ್ನು ತೋರಿದ ಪ್ರಭುಗಳು, ಇಡೀ ಆಂಧ್ರಪ್ರದೇಶ, ಮಹಾರಾಷ್ಟ್ರ, ಕರ್ನಾಟಕದಾದ್ಯಂತ ಅಪಾರ ಭಕ್ತರನ್ನು ಹೊಂದಿದರು. ಭಕ್ತರು ಇವರಲ್ಲಿ ಆಗಮಿಸಿ ಕೃಷಿಕಾಯಕ, ವ್ಯಾಪಾರ-ವ್ಯವಹಾರ, ಭೂತ ಬಾಧೆ, ಮಾಟ, ಮಂತ್ರ-ತಂತ್ರಗಳು ಇವರ ದರ್ಶನದಿಂದಲೇ ಮಾಯವಾಗುತಿದ್ದುವು. ಮಾಟ-ಮಂತ್ರಗಳಂಥ ನೀಚ ಕೃತ್ಯ ಮಾಡುವವರಿಗೆ ತಿಳಿಹೇಳಿ ಸನ್ಮಾರ್ಗಕ್ಕೆ ತರುತ್ತಿದ್ದರು. ಈ ಅಖಂಡ ಅನುಷ್ಠಾನ ಮಹಾಯೋಗಿವರ್ಯರ ಖ್ಯಾತಿ ಉತ್ತುಂಗ ಶಿಖರಕ್ಕೇರಿತ್ತು. ಭಕ್ತರ ಜನ ಸಾಗರ ಹರಿದು ಬರತೊಡಗಿತ್ತು. ಇವರಿಂದಾಗಿ ಅಂದು ಕರಕನಳ್ಳಿಯು ಭೂಕೈಲಾಸದಂತೆ ಕಾಣಿಸುತ್ತಿತ್ತು. ತಮ್ಮ ಆಯುಷ್ಯದ ಅಂತ್ಯ ಸಮೀಪಿಸಿದಂತೆ, ಭಕ್ತರ ಸಮ್ಮುಖದಲ್ಲಿ ಇನ್ನು ತಾವು ಇಹಲೋಕದ ಯಾತ್ರೆ ಮಾಡುವುದಾಗಿ ಹೇಳಿದರು.

ನಿರ್ದಿಷ್ಟ ದಿನದಂದು ಜೀವಂತ ಸಮಾಧಿ ಹೊಂದುವುದಾಗಿ ಹೇಳಿದ ಅವರು, ಅದರಂತೆ ಫಾಲ್ಗುಣ ಶುಕ್ಲ, ಚತುರ್ಥಿ ಸೋಮವಾರ ಜೀವಂತ ಸಮಾಧಿ ಹೊಂದಿದರು. ಭಕ್ತಕೋಟಿ ಪ್ರಭುಗಳ ಅಂತಿಮ ದರ್ಶನ ಪಡೆದು ಧನ್ಯರಾದರು. ಅಂದಿನಿಂದ ಇಂದಿನವರೆಗೆ ಪ್ರತಿವರ್ಷ ಹೋಳಿ ಹುಣ್ಣಿಮೆಯ ಮರುದಿನದಿಂದ ಜಾತ್ರೆ ಆರಂಭವಾಗುತ್ತದೆ. *(ಬಿ.ಎನ್.ಕೆ.)*

ಬಗದಲ್: ಐತಿಹಾಸಿಕ ಸ್ಥಳ. ಇದನ್ನು ವಗದಾಳ, ಬಗ್ದಲ್ ಎಂದೂ ಕರೆಯಲಾಗುತ್ತದೆ. ಕಾರಂಜಾ (ನಾರಂಜಾ) ನದಿಯ ಉತ್ತರದೆಡೆಗೆ ಬೀದರನಿಂದ 24 ಕಿ.ಮೀ. ದೂರದಲ್ಲಿದೆ. ಊರಿನ ಉತ್ತರ-ಪಶ್ಚಿಮದೆಡೆಗೆ ನೀರಿನ ಕುಂಡವೊಂದು ಕಾಣಸಿಗುತ್ತದೆ. ಅದರೊಂದಿಗೆ ಇಲ್ಲಿಯ ಜನ 'ಬಗದಾಲಭ್ಯ' ಎಂಬ ಹೆಸರಿನ ಋಷಿಯ ಸಂಬಂಧ ಕಲ್ಪಿಸುತ್ತಾರೆ. ಈ ಊರು ಐತಿಹಾಸಿಕ ಅಟ್ಟಳೆ ನಾಡಿಗೆ ಸೇರಿದ್ದಿತು.

ಈ ಊರಿನ ಮಾರುತಿ ಗುಡಿಯ ಮುಂಭಾಗದಲ್ಲಿ ಕ್ರಿ.ಶ. 1086ರಲ್ಲಿ ಕಲ್ಯಾಣಿ ಚಾಳುಕ್ಯ ತ್ರಿಭುವನ ಮಲ್ಲನ ಆಳ್ವಿಕೆ ಕಾಲದ ಶಿಲಾ ಶಾಸನವೊಂದಿದೆ. ಅದರಲ್ಲಿ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ರಾಣಿಯೊಬ್ಬಳಾದ ಶ್ರೀಯಾದೇವಿ ಬಗದಾಳವನ್ನು ತ್ರಿಭೋಗಾಭ್ಯಂತರ ಸಹಿತ ಆಳುತ್ತಿದ್ದಳೆಂದು ತಿಳಿಸಲಾಗಿದೆ.

ಈ ಊರಿಗೆ ಹೊಂದಿಕೊಂಡಂತೆ ಶ್ರೀಪತಾನಂದ (ಆತ್ಮಾನಂದ) ಮಹಾರಾಜರಿಗೆ ಸಂಬಂಧಿಸಿದ ಧಾರ್ಮಿಕ ಸಾಂಸ್ಕೃತಿಕ ಸ್ಥಳವೊಂದಿದೆ. ಗ್ರಾಮದ ಹಾಗೂ ಸುತ್ತಣ ಜನ ಅಲ್ಲಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಅಲ್ಲಿ, ಜರುಗುತ್ತಿರುತ್ತವೆ. ವಿವಿಧ ಭಾಷೆಗಳಲ್ಲಿ ಪ್ರಾವೀಣ್ಯತೆ ಹೊಂದಿದ್ದ ಶ್ರೀಪತಾನಂದರು ತತ್ವಪದ ಹಾಗೂ ಗೌಳಣಿಗಳನ್ನು ರಚಿಸಿದ್ದಾರೆ. ಗ್ರಾಮದ ದಕ್ಷಿಣದೆಡೆಗೆ ಎತ್ತರದ ದಿಬ್ಬವೊಂದರ ಮೇಲೆ ಸೂಫಿ ಸಂತನೋರ್ವನ ಭವ್ಯ ದರ್ಗಾ ನಿರ್ಮಾಣಗೊಂಡಿದೆ. ಇಲ್ಲಿ ವರ್ಷಕ್ಕೊಮ್ಮೆ ಉರಸ ಜರುಗುತ್ತದೆ. ಅದರಲ್ಲಿ ಪಾಲ್ಗೊಳ್ಳಲು ವಿವಿದೆಡೆಗಳಿಂದ ಜನ ಇಲ್ಲಿಗೆ ಆಗಮಿಸುತ್ತಾರೆ. ಈ ಊರಿನ ಮಾಣಿಕಪ್ಪ ಪೋತದಾರ ಎನ್ನುವವರು 'ಗೀಗೀ' ಪದಗಳನ್ನು ರಚಿಸಿ ಹಾಡುತ್ತಿದ್ದರು.

ಬಗದಲ್ ಗ್ರಾಮದವರಾಗಿದ್ದ ಬಸವರಾಜ ಹುಡಗಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅಂದಿನ ನೈಜಾಂ (ಹೈದರಾಬಾದ) ರಾಜ್ಯವನ್ನು ಭಾರತದ ಒಕ್ಕೂಟದೊಂದಿಗೆ ಸೇರಿಸಲು ನಡೆದ ವಿಮುಕ್ತಿ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರಲ್ಲದೆ 1948ರಲ್ಲಿ ಗೋವಾದ ವಿಮೋಚನೆಗಾಗಿ ಆರಂಭಗೊಂಡ ಸತ್ಯಾಗ್ರಹ ಚಳವಳಿಯಲ್ಲಿ ಪಾಲ್ಗೊಂಡು ಪೋರ್ಚುಗೀಜ ಸೈನಿಕರು ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಗೋವಾದ ಪತ್ರಾದೇವಿ ಎಂಬ ಸ್ಥಳದಲ್ಲಿರುವ ರಾಷ್ಟ್ರೀಯ ಸ್ಮಾರಕದ ಮೇಲೆ ಬರೆಸಲಾಗಿರುವ ಹತ್ತು ಜನ ಹುತಾತ್ಮರ ಸಾಲಿನಲ್ಲಿ ಬಸವರಾಜ ಹುಡಗಿ ಇವರ ಹೆಸರೂ ಇದೆ.

(ಬಿ.ಆರ್.ಕೆ.)

ಬಗದುರಿ ಎಲ್ಲಮ್ಮ: ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಬಗದುರಿಯ ಗ್ರಾಮದೇವತೆ. ಈಕೆ ಹುಲಿಯನ್ನೇರಿದ್ದರಿಂದ ಸವಾರೆಮ್ಮನೆಂದು ಕರೆಯುತ್ತಾರೆ. ಇವಳು ಸೀಮೆ ದೇವತೆ ಆಗಿದ್ದಾಳೆ. ಘಾಟಹಿಪ್ಪರಗಿ ಮತ್ತು ಬಗದುರಿ ಸೀಮೆಗಳು ಕೂಡಿದಲ್ಲಿ ಈ ದೇವಿ ನೆಲೆಯೂರಿದ್ದಾಳೆ. ದೇವಿಯ ಜಾತ್ರೆ ಮಕರ ಸಂಕ್ರಮಣ ಸಮಯದಲ್ಲಿ ನಡೆಯುತ್ತದೆ. ಈ ದೇವಿ ಬೆಂಕಿಯಂಥಾಕಿ ಅದಾಳ ಎಂದು ಜನಪದರ ನಂಬಿಕೆ.

ಈ ದೇವಿಯ ಮೂಲಸ್ಥಾನ ನೆರೆಹಳ್ಳಿಯಾದ ಘಾಟಹಿಪ್ಪರಗಿ. ಈ ಊರಿನಲ್ಲಿ ರಾಮಲಿಂಗ ಮತ್ತು ವೀರಭದ್ರ ಅಣ್ಣತಮ್ಮಂದಿರಿದ್ದರು. ಅದಕ್ಕೆ ಪುರಾವೆ ಒದಗಿಸುವ ಅವರ ಜೋಡಿ ಗುಡಿಗಳು ಇನ್ನೂ ಇವೆ. ರಾಮಲಿಂಗ ಅಣ್ಣ ವೀರಭದ್ರ ತಮ್ಮನಂತೆ ಅವರಿಬ್ಬರ ಗುಡಿಮುಂದೆ ಎಲ್ಲಮ್ಮನ ಗುಡಿಯಿದೆ. ಅಲ್ಲಿದ್ದ ಎಲ್ಲಮ್ಮ ದೇವಿ ಮಾಂಸಾಹಾರಿ ದೇವತೆಯಾಗಿದ್ದು ಕುರಿ–ಕೋಳಿ ತಿನ್ನುವುದರಿಂದ ಸಸ್ಯಾಹಾರಿಗಳಾದ ರಾಮಲಿಂಗನಿಗೆ ಸಿಟ್ಟುಬಂದು. ತನ್ನ ತಮ್ಮನಾದ ವೀರಭದ್ರನಿಗೆ ತಮ್ಮ ಈಕೆ ನಮ್ಮೆದುರಿನಲ್ಲಿದ್ದು ಕುರಿ-ಕೋಳಿ ತಿನ್ನುತ್ತಿದ್ದಾಳೆ. ಇವಳನ್ನು ಈ ಸ್ಥಳ ಬಿಡಿಸಿ ಕಳಿಸಬೇಕೆಂದು ತಿಳಿಸಿದನಂತೆ, ಅಣ್ಣನ ಮಾತು ಕೇಳಿದ ವೀರಭದ್ರ ಎಲ್ಲಮ್ಮನಿಗೆ ಬೆನ್ನು ಹತ್ತಿದನಂತೆ, ವೀರಭದ್ರನ ಭಯದಿಂದ ಎಲ್ಲಮ್ಮ ಓಡೋಡಿ ಹೋಗಿ ಎದುರಿಗಿದ್ದ ಗುಡ್ಡ ಸೀಳಿಕೊಂಡು ಬಗದುರಿ ಸೀಮೆಗೆ ಓಡಿಬಂದಳು, ಅಲ್ಲಿರುವ ಗುಡ್ಡ ಹೊಕ್ಕು ಒಂದು ದೊಡ್ಡ ಅರಳಿಗಿಡದೊಳಗೆ ಅಡಗಿಕೊಂಡಳಂತೆ. ಎಲ್ಲಮ್ಮ ಕಾಣದಾದಾಗ ವೀರಭದ್ರ ಹಿಂದುರುಗಿ ಬಂದನಂತೆ. ಮಾಂಸಾಹಾರಿಯಾದ ಎಲ್ಲಮ್ಮಳಿಗೆ ಬರಬೇಡವೆಂದು ಹೇಳಿದನಂತೆ. ಅದಕ್ಕಾಗಿ ಇಂದಿಗೂ ವೀರಭದ್ರನ ಮೂರ್ತಿಯೂ ಘಾಟಹಿಪ್ಪರಗಿ ಊರಲ್ಲಿರುವ ರಾಮಲಿಂಗನ ಗುಡಿಯೊಳಗೆ ಹೋಗದೆ, ಬಯಲಿನಲ್ಲಿರುವುದು ಕಂಡು ಬರುತ್ತದೆ. ರಾಮಲಿಂಗ ವೀರಭದ್ರರಿಗೆ ತುಕ್ಕಮ್ಮ ತಂಗಿ ಇದ್ದಳೆಂದು ಅಲ್ಲಿಯ ಜನರು ಹೇಳುವರು.

ಊರ ಸಮೀಪ ಗುಡ್ಡದ ಮೇಲೆ ಮೊದಲು ಎಲ್ಲಮ್ಮನ ವಾಸ ಸ್ಥಳವಿತ್ತಂತೆ. ಹಿಂದೆ ಜನಪದ ಗರತಿಯರು ಬೆಳಗ್ಗೆ ಎದ್ದು ಬೀಸುಕಲ್ಲನ್ನು ಹಿಡಿದು ಜೋರಾಗಿ ಹಾಡು ಹೇಳಿ, ತಮ್ಮ ಕಾರ್ಯ ಪೂರೈಸುತ್ತಿರುವುದರಿಂದ ಎಲ್ಲಮ್ಮಳ ತಪಸ್ಸಿಗೆ ಭಂಗ ಬರುವುದೆಂಬ ಕಾರಣಕ್ಕೆ ಆ ಜಾಗಬಿಟ್ಟು ಈಗಿರುವ ಸ್ಥಳಕ್ಕೆ ಬಂದಳೆಂದು ಪ್ರತೀತಿಯಿದೆ. ಇಲ್ಲಿ ಜರುಗುವ ಜಾತ್ರೆಗೆ ದೂರ ದೂರದ ಸ್ಥಳಗಳಿಂದ ಜೋಗಪ್ಪ ಜೋಗತಿಯರು ಬರುವರು. ಇವರೆಲ್ಲರು ತಮ್ಮ ತಮ್ಮ ಸಾಮಾನುಗಳನ್ನು ಒಂದು ಗಿಡದ ಕೆಳಗಿರಿಸುವರು. ಈ ಗಿಡವೆ ಅಲ್ಲಿಂದ ಹೋಗುವವರೆಗೆ ಇವರಿಗೆ ತಂಗುದಾಣವಾಗುವುದು. ಈ ಸ್ಥಳದಿಂದ ಮಾತಂಗಿಗೂ ಮತ್ತು ಎಲ್ಲಮ್ಮಳಿಗೂ ಹಡಗಿಲು ಸಿದ್ಧಪಡಿಸಿಕೊಳ್ಳವವರು. ಆ ಹಡಲಿಗೆಯಲ್ಲಿ ಎಣ್ಣಿ ಹೋಳಿಗೆ ಸಜ್ಜಕುದ ಹೋಳಿಗೆ ಉಚಿಡಿ, ಹಿಂಡಿಪಲ್ಯ, ಭರ್ತಾ, ಭಜ್ಜಿ, ಪುಂಡಿಪಲ್ಯ, ಎಣ್ಣಿ ಹಾಕುವರು. ಇಲ್ಲಿಗೆ ಬರುವ ಎಲ್ಲಾ ಜೋಗತಿಯರು ತಮ್ಮ ತಮ್ಮ ಹಣೆಗೆ ಭಂಡಾರ ಹಚ್ಚಿಕೊಳ್ಳುವರು. ರೇಣುಕಾ ಎಲ್ಲಮ್ಮನ ಕಥೆಯಲ್ಲಿರುವಂತೆ ಮಾತಂಗಿಗೆ ಮೊದಲು ಜೋಗ ಹಾಕಿ ನೈವೇದ್ಯ ಒಪ್ಪಿಸುವರು. ಬಳಿಕ ಗಿಡದೊಳಗೆ ಅಡಗಿಕೊಂಡಿರುವ ಅಥವಾ ಗಿಡವಾಗಿರುವ ಬಗದುರಿ ಎಲ್ಲಮ್ಮ ದೇವಿಗೆ ಪೂಜೆ ಸಲ್ಲಿಸುವರು. ಅಲ್ಲಿ ಚಂದ್ರ ಅಬೀರ–ಗುಲಾಲ, ಹಚ್ಚಿ ದಂಡಿ ಕಟ್ಟುವರು. ಮಾತಂಗಿಗೆ ಅರ್ಪಿಸಿರುವ ಹಡಲಿಗೆಯಲ್ಲಿರುವ ನೈವೇದ್ಯ ದೇವಿಗೆ ಅರ್ಪಿಸಿ ಪೂಜಿಸುವರು. ಅಲ್ಲಿ ಚಂದ್ರ ಅಬೀರ ಗುಲಾಲ ಹಚ್ಚಿ ದಂಡಿ ಕಟ್ಟುವರು, ಮಾತಂಗಿಗೆ ಅರ್ಪಿಸಿರುವ ಹಡಲಿಗೆಯಲ್ಲಿರುವ ನೈವೇದ್ಯ ಎಲ್ಲಮ್ಮ ದೇವಿಗೆ ಅರ್ಪಿಸಿ, ಜೋಗ ಹಾಕಿ ತೆಂಗಿನಕಾಯಿ ಒಡೆಯುವರು ದೇವಿಗೆ ಹರಕೆ ಪೂರೈಸಿ ತಾವು ಇಳಿದಿರುವ ಜಾಗಕ್ಕೆ ಹೋಗುವರು. ಅಲ್ಲಿ ತಮ್ಮೊಂದಿಗೆ ಬಂದಿರುವವರಿಗೆ ಊಟ ಬಡಿಸಿ ತಾವೂ ಊಟ ಮಾಡಿ ದೇವಿಯ ಪ್ರಸಾದವೆಂದು ಜಾತ್ರೆಯಲ್ಲಿರುವ ಬೆಂಡು–ಭತ್ತಾಸ ಫಳಹಾರ ಖರೀದಿಸಿ ತಮ್ಮ ತಮ್ಮ ಊರಿಗೆ ಹಿಂದಿರುಗುತ್ತಾರೆ. ಬಗದುರಿ ಎಲ್ಲಮ್ಮ ದೇವಿ ದಟ್ಟವಾದ ಗಿಡಗಳಿಂದ ತುಂಬಿದ, ಅದರಲ್ಲೂ ಮನುಷ್ಯರಿಗೆ ಏರಲು ಬಾರದ ಗುಡ್ಡದಲ್ಲಿ ನೆಲೆಸಿದ್ದ–ರಿಂದ ಇಲ್ಲಿಯ ತನಕ ಈಕೆಗೆ ಗುಡಿ ಕಟ್ಟಲಿಕ್ಕೆ ಸಾಧ್ಯವಾಗಿಲ್ಲವೆಂಬುದು ಅಲ್ಲಿಯ ಜನರ ಅಭಿಪ್ರಾಯ.

(ಎಚ್.ಡಿ.)

ಬಣಕಾರರು: ಬಟ್ಟೆಗೆ ಬಣ್ಣ ಹಾಕುವವರು. ಬಣಕಾರ, ಬಣಗಾರ, ರಂಗಾರಿ, ಎಂದು ಕರೆಯುವುದುಂಟು. ಕೆಲವು ಕಡೆ ಸಿಂಪಿ, ಪಟಗಾರ, ನೇಕಾರ ಎಂದೂ ಕರೆಯುತ್ತಾರೆ. ಹತ್ತಿಯಿಂದ ನೂಲನ್ನು ತಯಾರಿಸಿ ಅದಕ್ಕೆ ಬಣ್ಣ ಹಾಕುವವರಿಗೂ, ದಾರವನ್ನು ಕೊಂಡು ತಂದು ಅದಕ್ಕೆ ಬಣ್ಣ ಹಾಕುವವರಿಗೂ ಬಟ್ಟೆ ನೇಯ್ದಾದ ಮೇಲೆ ಅದಕ್ಕೆ ಬಣ್ಣ ಹಾಕುವವರಿಗೂ, ಹಾಗೆ ನೇಯ್ದ ಬಟ್ಟೆಯನ್ನು ಮಾರಾಟ ಮಾಡುವವರಿಗೂ ಬಣಕಾರ ಎಂದೇ ಕರೆಯುತ್ತಾರೆ ಹಿಂದಿನ ಕಾಲದಲ್ಲಿ ಕೇವಲ ನೂಲಿಗೆ ಅಥವಾ ನೇಯ್ದ ಬಟ್ಟೆಗೆ ಬಣ್ಣ ಹಾಕುವವರಿಗೆ ಮಾತ್ರ ಬಣಕಾರ ಎಂದು ಕರೆಯುತ್ತಿದ್ದು, ಆ ಜನಾಂಗ ತಮ್ಮ ವ್ಯವಹಾರದ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಾಗಲೂ ಅವರಿಗೆ ಇದೇ ಹೆಸರು ರೂಢಿಯಾಗಿ ಉಳಿದಿರಬೇಕು.

ಮರದ ಸಾಮಾನುಗಳಿಗೆ, ಊರಲ್ಲಿಯ ದೇವ–ದೇವಿಯರ ಮಕಗಳಿಗೆ (ಮುಖವಾಡ) ಬಣ್ಣ ಹಚ್ಚುವವರಿಗೂ ಬಣಕಾರ ಎಂದು ಕರೆಯುತ್ತಾರೆ. ಮುಖ್ಯವಾಗಿ ಹಳ್ಳಿಗಳಲ್ಲಿ ಮನೆಗಳಿಗೆ ಬಣ್ಣ ಹಚ್ಚುವವರಿಗೂ, ಮನೆಯಲ್ಲಿ ಬಣ್ಣಗಳಿಂದ ಸುಂದರ ಪಟ್ಟಿಕೆಗಳು, ಕಲಾಕೃತಿಗಳನ್ನು ಬಿಡಿಸುವವರಿಗೂ, ಮನೆಯಲ್ಲಿ ದೇವ–ದೇವಿಯರ ಚಿತ್ರಗಳನ್ನು ಬಿಡಿಸುವವರಿಗೂ ಬಣಕಾರ ಎಂದೂ ಕರೆಯಲಾಗುತ್ತದೆ. ಹಿಂದಿನಿಂದಲೂ, ಬಟ್ಟೆಗೆ ಬಣ್ಣ ಹಾಕುವ ಕುಲದವರಿಗೆ ಮಾತ್ರ ಬಣಕಾರ ಎಂದು ಕರೆಯುತ್ತಿದ್ದು, ಅದರ ಪ್ರಭಾವದಿಂದ ಬಣ್ಣದ ಕೆಲಸ ಮಾಡುವ ಬೇರೆ ಕುಲದವರಿಗೂ ಇಂದು ಬಣಕಾರ ಅಡ್ಡ ಹೆಸರು ಬಳಕೆಯಾಗುತ್ತಿರುವಂತೆ ಕಂಡು ಬರುತ್ತದೆ.

(ಎಂ.ಎಸ್.ಬಿ.)

ಬಣ್ಣದ ವೇಷ: ದೊಡ್ಡಾಟಗಳಲ್ಲಿ ಘೋರ ರಾಕ್ಷಸ ಪಾತ್ರಧಾರಿಗಳ ಭುಜಕಟ್ಟು, ಕಿರೀಟಗಳು ಭಾರಿ ಗಾತ್ರದವುಗಳಾಗಿರುತ್ತವೆ. ಬಣ್ಣ ಹಚ್ಚುವವರು, ಬಣ್ಣದ ವೇಷಗಾರರು ಎಂದು ಕರೆಯಿಸಿಕೊಳ್ಳುವ

ಜನರು ದೊಡ್ಡಾಟ ಮಾಡುವವರಿಗೆ ಒಂದು ರಾತ್ರಿಗೆ ಇಂತಿಷ್ಟು ಎಂದು ಹಣನಿಗದಿ ಮಾಡಿ ಬಣ್ಣ ಮತ್ತು ಬಣ್ಣದ ವೇಷಗಳನ್ನು ಬಾಡಿಗೆಗೆ ಕೊಡುತ್ತಾರೆ ಇಂಗಳಿಕ, ಕುಂಕುಮ, ವಿಭೂತಿ, ರಟ್ಟು, ಅರಗು, ಕೃತಕ ಕೂದಲು, ಬ್ಯಾಂಗಡಿ, ಗೆಜ್ಜೆ, ಆಯುಧಗಳು, ತೆಳುವಾದ ಫಳಿ, ವಿವಿಧ ಬಗೆಯ ಬಣ್ಣಗಳಿಂದ ಬಣ್ಣದ ವೇಷಗಳನ್ನು ತಯಾರು ಮಾಡಿಕೊಳ್ಳುತ್ತಾರೆ ಕೆಲವು ಪಟ್ಟಣಗಳಲ್ಲಿ ಬಣ್ಣದ ವೇಷಗಳನ್ನು ಮಾರುವ ಅಂಗಡಿಗಳೂ ಇವೆ. ದೊಡ್ಡಾಟಗಳಿಗಲ್ಲದೆ ಸಣ್ಣಾಟ, ಡಪ್ಪಿನಾಟ, ನಾಟಕಗಳಿಗೂ ತಕ್ಕುದಾದ ಬಣ್ಣದ ವೇಷಗಳು ಬಾಡಿಗೆಗೆ ಅಥವಾ ಖರೀದಿಗೆ ದೊರೆಯುತ್ತವೆ. *(ಎಂ.ಎಸ್.ಐ.)*

ಬಂದರವಾಡ: ಚಾರಿತ್ರಿಕ ಮಹತ್ವದ ಊರು. ಗುಲಬರ್ಗಾದಿಂದ ನೈಋತ್ಯಕ್ಕೆ 40 ಕಿ.ಮೀ. ದೂರದಲ್ಲಿ ಚಿನ್ಮಳ್ಳಿ ರಸ್ತೆಯಲ್ಲಿ ಭೀಮಾ ನದಿ ಎಡದಂಡೆಯ ಮೇಲಿದೆ. ಪ್ರಾಚೀನ ಶಾಸನಗಳಲ್ಲಿ 'ಮಹಾಗ್ರಹಾರ ಬೊನ್ದರವಾಡ', 'ಸರ್ವನಮಸ್ಯದ ಅಗ್ರಹಾರ ಬೊಂದರವಾಡ' ಎಂದೇ ಉಲ್ಲೇಖಿತವಾಗಿದೆ. ಇದು ಹಿಂದೆ ಅತ್ತಿನೂರು 80ಕ್ಕೆ ಸೇರಿತ್ತು. ಇಲ್ಲಿಯವರೆಗೆ ಮೂರು ಶಾಸನಗಳು ದೊರಕಿವೆ. ಅವುಗಳಲ್ಲಿ ಊರ ಶಾಲೆಯ ಬಳಿಯಿರುವ ಸೋಮೇಶ್ವರ ದೇವಾಲಯದ ಬಾಗಿಲಲ್ಲಿರುವ 1113ರ ಶಾಸನ ಕಲ್ಯಾಣದ ಚಾಳುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಯುವರಾಜ ಮಲ್ಲಿಕಾರ್ಜುನನ ಒಪ್ಪಿಗೆಯಂತೆ, ಕಮ್ಮೆ ಕುಲದ ನೀಲಕಂಠ ದಂಡನಾಯ್ಕನು ಅಗ್ರಹಾರ ಬೊಂದರವಾಡದಲ್ಲಿ ತನ್ನ ತಂದೆ–ತಾಯಿಗಳ ಸ್ಮರಣೆಗಾಗಿ ಸೋಮೇಶ್ವರ ದೇವಾಲಯವನ್ನು ನಿರ್ಮಿಸಿ ನಿಧನ ಹೊಂದಿದ್ದು, ಆ ದೇವಾಲಯಕ್ಕೆ ಯುವರಾಜ ದಂಡನಾಯಕನಾದ ಲಕ್ಷ್ಮರಸನ ಬೇಡಿಕೆಯಂತೆ 50 ಮತ್ತರು ಭೂಮಿಯನ್ನು, ಅಲ್ಲಿಯ ಮಹಾಜನರು 12 ಮತ್ತರು ಭೂಮಿಯನ್ನು ಹಾಗೂ ಇತರ ಅಧಿಕಾರಿಗಳು ವಿವಿಧ ಸುಂಕಗಳನ್ನು ದಾನ ಕೊಟ್ಟ ವಿಷಯವನ್ನು ಹೇಳುತ್ತ ಸಾಂದರ್ಭಿಕವಾಗಿ ನೆರೆಯ ಊರುಗಳಾದ ಬಿದ್ದನೂರು, ಗೊಬ್ಬೂರು ಹಾಗೂ ಗೋದುಲೆವಾಡಗಳನ್ನು ದಾಖಲಿಸಿದೆ. ಅದೇ ಕಲ್ಲಿನ ಮೇಲಿರುವ 1118ರ ಇನ್ನೊಂದು ಶಾಸನ ಮಹಾಜನಗಳು ದೇವರ್ಗೆ 15 ಮತ್ತರು ಭೂಮಿಯನ್ನು ದಾನ ಕೊಟ್ಟಿದ್ದನ್ನು ದಾಖಲಿಸಿದರೆ, ಕಳಚೂರಿ ಸೋವಿದೇವನ ಕಾಲಕ್ಕೆ ಸೇರಿದ 1174ರ ಇನ್ನೊಂದು ಶಾಸನ ಅದೇ ದೇವಾಲಯಕ್ಕೆ ಅತ್ತಿನೂರು – 80ರ ಹೆಗ್ಗಡೆ ಗೋವಿಂದದೇವರಸನು 60 ಮತ್ತರು ಭೂಮಿಯನ್ನು ದಾನ ಕೊಟ್ಟ ಅಂಶವನ್ನು ತಿಳಿಸುತ್ತ ಸಾಂದರ್ಭಿಕವಾಗಿ ಅಲ್ಲಿಯ ಬಸದಿಯ ಬಗ್ಗೆ ಉಲ್ಲೇಖಿಸುತ್ತದೆ. ಈ ಶಾಸನ ಕಲ್ಲಿರುವ ದೇವಾಲಯವೇ ಶಾಸನೋಕ್ತ ಸೋಮೇಶ್ವರ ದೇವಾಲಯವಾಗಿದೆ.

ಊರಿನಲ್ಲಿಂದು ಚಾರಿತ್ರಿಕ ಮಹತ್ವದ ನಾಲ್ಕು ಪ್ರಾಚೀನ ದೇವಾಲಯಗಳು ಶಿಥಿಲಾವಸ್ಥೆಯಲ್ಲಿವೆ. ಉಳಿದೆರಡು ಪಾಳು ಬಿದ್ದಿವೆ. ಇವುಗಳಲ್ಲಿ ಸೋಮೇಶ್ವರ ದೇವಾಲಯ ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಭಾಗಶಃ ಹಾಳಾಗಿವೆ. ಪೂರ್ವಾಭಿಮುಖವಾಗಿರುವ ಈ ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ದ್ವಾರಬಂಧವು ಸಪ್ತಶಾಖಾಲಂಕೃತವಾಗಿದ್ದು, ನಿರಾಡಂಬರ ಆಗಿದೆ. ನವರಂಗದಲ್ಲಿ ಸಪ್ತಮಾತೃಕಾ ಶಿಲ್ಪ ಹಾಗೂ ಸೂರ್ಯಪೀಠಗಳಿವೆ. ಗೌಡರ ವಾಡೆಗೆ ಸೇರಿದಂತೆ ಇರುವ ಇನ್ನೊಂದನ್ನು 'ದೇಗುಲ' ಎಂದು ಕರೆಯುತ್ತಿದ್ದು, ಇದು ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಪಾರ್ಶ್ವದ್ವಾರ ಮಂಟಪಗಳನ್ನು ಹೊಂದಿದೆ. ದ್ವಾರಬಂಧವು ಆಕರ್ಷಕವಾಗಿದ್ದು ಕಕ್ಷಾಸನವಿದೆ. ನವರಂಗದ ಛತ್ತು ಕಮಲಗಳಿಂದ ಅಲಂಕರಿಸಲ್ಪಟ್ಟಿದೆ. ಈ ದೇಗುಲದ ಕಂಬಗಳು ವೈವಿಧ್ಯಮಯ ಆಗಿದ್ದು, ಸುಂದರವಾಗಿವೆ. ಇಲ್ಲಿಯ ಭೋಗಲಿಂಗೇಶ್ವರ ದೇವಾಲಯ ಪೂರ್ಣ ಜೀರ್ಣೋದ್ಧಾರ ಗೊಂಡಿದ್ದರೂ, ಮೂಲ ವಿನ್ಯಾಸವನ್ನು ಉಳಿಸಿಕೊಂಡಿರುವ ಪ್ರಾಚೀನ ದೇವಾಲಯವಾಗಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ಶಿವಲಿಂಗ, ನಂದಿ, ಗಣಪತಿ, ಭೈರವ, ಮಹಿಷ ಮರ್ದಿನಿ, ಸರ್ಪ ಆವೃತ್ತ ಭೈರವ ಪಾದಗಟ್ಟಿ ಮುಂತಾದ ಅವಶೇಷಗಳನ್ನು ಎಲ್ಲಿ ಕಾಣಬಹುದಾಗಿದೆ. ಕುರುಬರ ಓಣಿಯಲ್ಲಿ ಹಿಂದೆ ಭವ್ಯವಾಗಿದ್ದು ಈಗ ಪಾಳು ಬಿದ್ದಿರುವ ದೇಗುಲದ ಭಿತ್ತಿ ಭಾಗ ಸ್ವಲ್ಪ ಮಾತ್ರ ಉಳಿದಿದ್ದರೂ ಆಕರ್ಷಕವಾದ ಶಿಲಾಬಾಲಿಕೆಯರು, ವಿಷ್ಣು ಮುಂತಾದ ಸುಂದರ ಕೆತ್ತನೆಗಳಿಂದ ಅಲಂಕೃತಗೊಂಡಿರುವ ಈ ಭಿತ್ತಿ ನಿಜಕ್ಕೂ ಅದ್ಭುತವಾಗಿದೆ. ಅಲ್ಲೇ ಬಿದ್ದಿರುವ ಉಗ್ರ ನರಸಿಂಹನ ಕೆತ್ತನೆಯುಳ್ಳ ಭಿತ್ತಿ ಫಲಕವೂ ಉಗ್ರವಾಗಿದೆ. ಊರ ಹೊರಗೆ ಸುರಗಿ ಶಾಂತೇಶ್ವರ ಮಠವಿದ್ದು, ಕಲ್ಯಾಣದ ಚಾಳುಕ್ಯರ ಕಾಲದ ಮುಕ್ಕಾದ ಶಾಸನವೂ ಸೇರಿದಂತೆ ಶಿಲ್ಪಾವಶೇಷಗಳನ್ನು ಇಲ್ಲಿ ನೋಡಬಹುದಾಗಿದೆ. ಉಳಿದಂತೆ ಊರಿನಲ್ಲಿ ಮಲ್ಲಿಕಾರ್ಜುನ, ಲಕ್ಷ್ಮಿ, ಹನುಮಂತ, ಈಶ್ವರ ಹಾಗೂ ಮರಗಮ್ಮನ ಗುಡಿಗಳಿದ್ದು, ಶಾಂತೇಶ್ವರರ ಜಾತ್ರೆಯು ಗೌರಿ ಹುಣ್ಣಿಮೆಯಾದ ಐದು ದಿನಕ್ಕೆ ನಡೆಯುತ್ತದೆ. *(ಆರ್.ಕೆ.)*

ಬನ್ನಿಮರ: ಒಂದು ಪವಿತ್ರ ವೃಕ್ಷ. ಭಾರತೀಯ ಪರಂಪರೆ ಮತ್ತು ಸಂಸ್ಕೃತಿಯಲ್ಲಿ ಈ ಮರಕ್ಕೆ ವಿಶಿಷ್ಟ ಸ್ಥಾನವಿದೆ. ಸಾಮಾನ್ಯವಾಗಿ ನಲವತ್ತರಿಂದ ಐವತ್ತು ಅಡಿ ಎತ್ತರವಾಗಿರುವ ಸಣ್ಣ ಸಣ್ಣ ಹಸಿರು ಎಲೆಗಳು ಹಾಗೂ ಮುಳ್ಳುಗಳಿಂದ ಕೂಡಿದ ಬನ್ನಿ ಮರದಲ್ಲಿ ದುರ್ಗೆ, ಲಕ್ಷ್ಮೀ, ಮಹಾಕಾಳಿ ವಾಸವಾಗಿದ್ದಾಳೆಂಬ ನಂಬುಗೆ ಇದೆ. ಅದಕ್ಕಾಗಿಯೇ ಬನ್ನಿ ಮರಕ್ಕೆ ಸೀರೆ ಉಡಿಸಿ, ಪೂಜೆ ಮಾಡಿ, ನೈವೇದ್ಯ ಅರ್ಪಿಸುತ್ತಾರೆ. ಬನ್ನಿ ಮರವನ್ನು ಹೊಲ, ತೋಟಗಳ ಮಧ್ಯ ಭಾಗದಲ್ಲಿ ಬೆಳೆಸುತ್ತಾರೆ.

ಬನ್ನಿ ಮಹಾಕಾಳಿ ವಾಸವಾಗಿರುವುದರಿಂದ ಅದನ್ನು ಕಡಿಯುವುದಾಗಲಿ, ಅದರ ಕಟ್ಟಿಗೆ ಒಲೆಗೆ ಉಪಯೋಗಿಸು ವುದಾಗಲಿ, ಮಾಡುವುದಿಲ್ಲ. ಕೆಲವರು ಬನ್ನಿ ಎಲೆಯನ್ನು ತಿನ್ನುತ್ತಾರೆ. ತಲೆಗೆ, ಕಿವಿಗೆ ಮುಡಿಯುತ್ತಾರೆ. ಬನ್ನಿ ಮರದ ಹಾಲು ಕೆಂಪಾಗಿದ್ದು ಅದನ್ನು ಕಡಿದರೆ ಬಲಿ ಅರ್ಪಿಸಿದಂತೆ ಎಂಬ ನಂಬುಗೆ ಇದೆ. ಆರ್ಯರು ಇದನ್ನು ಬೆಂಕಿ ಮಾಡಲು ಉಪಯೋಗಿಸುತ್ತಿದ್ದರಂತೆ ಬನ್ನಿ ಮರದಿಂದ ಉತ್ತಮವಾದ ಅಂಟು ದೊರೆಯುತ್ತದೆ. ಕೆಲವು ಕಡೆ ಸಾರಾಯಿ ಭಟ್ಟಿಗೆ ಇದರ ತೊಗಟೆಯನ್ನು ಉಪಯೋಗಿಸುತ್ತಾರೆ. ಋತುಮತಿಯಾದ ಹೆಣ್ಣು ಐದು ದಿನ ಊರ ಹೊರಗೆ ಇದ್ದು ಐದನೇ ದಿನ ಸ್ನಾನ ಮಾಡಿ

ಬನ್ನಿ ಗಿಡ ಮುಟ್ಟಿ ನಮಸ್ಕಾರ ಮಾಡಿ ಮನೆ ಪ್ರವೇಶ ಮಾಡುವ ಸಂಪ್ರದಾಯವೂ ಉಂಟು.

ಬನ್ನಿ ಮರವನ್ನು ಶಮ್ಮಿ, ವನ್ನಿ ಎಂದು ಕರೆಯುವರು. ಈ ಮರ ಶನಿ ದೇವರಿಗೂ ಪ್ರಿಯವಾದುದು. ರಘು ಮಹಾರಾಜನಿಗೆ ಈ ಮರದ ಬುಡದಲ್ಲಿ ದ್ರವ್ಯ ವರ್ಷವಾದುದರಿಂದ ಇದಕ್ಕೆ ಬಂಗಾರದ ಬೆಲೆಯಿದೆ. ಅದಕ್ಕೆಂದೆ ಬನ್ನಿ ಹಬ್ಬದಲ್ಲಿ ಬನ್ನಿಯನ್ನು ಬಂಗಾರವೆಂದು ಜನರು ವಿನಿಮಯ ಮಾಡಿಕೊಳ್ಳುತ್ತಾರೆ. ಈ ಮರ ವಿಜಯದ ಸಂಕೇತವೂ ಆಗಿದೆ. ರಾಮ, ರಾವಣನ ಮೇಲೆ ಯುದ್ಧಕ್ಕೆ ಹೋಗುವ ಪೂರ್ವ; ಅರ್ಜುನನು, ವಿರಾಟರಾಜನ ಗೋಗ್ರಹಣ ಸಂದರ್ಭದಲ್ಲಿ ಬನ್ನಿ ಮರವನ್ನು ಪೂಜಿಸಿದ್ದಾರೆ. ಪಾಂಡವರು ಅಜ್ಞಾತವಾಸಕ್ಕೆ ಹೋಗುವ ಪೂರ್ವ ತಮ್ಮ ಆಯುಧಗಳನ್ನು, ತಾವು ಬರುವವರೆಗೆ ಸುರಕ್ಷಿತವಾಗಿರುವವೆಂದು ತಿಳಿದು ಬನ್ನಿ ಮರದಲ್ಲಿಯೇ ಇಟ್ಟು ಹೋಗಿದ್ದರಂತೆ, ರಾಜ ಮಹಾರಾಜಗಳು ವಿಜಯದಶಮಿಯನ್ನು (ವಿಜಯದ+ಶಮಿ) ಬನ್ನಿ ಹಬ್ಬ ದಿಗ್ವಿಜಯ ಕೈಗೊಳ್ಳುವ ಶುಭ ದಿನವೆಂದು ನಂಬಿದ್ದರು. ದಿಗ್ವಿಜಯಕ್ಕೆ ಮುನ್ನ ಯುದ್ಧ ಸಾಮಗ್ರಿಗಳಿಗೆ ಪೂಜೆ ಮಾಡಿ ಊರ ಮುಂದಿನ ಬನ್ನಿ ದಿಬ್ಬಕ್ಕೆ ಸೇರುತ್ತಿದ್ದರು. ಅಲ್ಲಿಂದ ಬನ್ನಿ ಮುಡಿದು ವಾಪಸ್ಸಾಗುತ್ತಿದ್ದರು. ಖಂಡೇಯ ಪೂಜೆ (ಆಯುಧ ಪೂಜೆ) ಮಾಡಿ ಬನ್ನಿ ಸಸಿಯನ್ನು ನೆಡುತ್ತಿದ್ದರು. ಅಶ್ವೀಜ ಶುದ್ಧ ನವಮಿಯಂದು ವ್ಯಾಪಾರಿಗಳು, ರೈತರು ಆಯುಧ ಪೂಜೆ ಮಾಡಿ ದೇವರ ಮುಂದೆ ಬನ್ನಿಯ ಸಸಿಯನ್ನು ಬೆಳೆಸುತ್ತಾರೆ. ವಿಜಯನಗರದ ಅರಸರು, ಮೈಸೂರು ಅರಸರು ಈ ಹಬ್ಬವನ್ನು ಸಡಗರ-ಸಂಭ್ರಮಗಳಿಂದ ಆಚರಿಸುತ್ತ ಬಂದಿದ್ದಾರೆ. ಸರ್ವ ಶಕ್ತನಾದ ಶ್ರೀಮನ್ ನಾರಾಯಣನಿಗೂ ಬನ್ನಿ ಮರ ಪ್ರಿಯವಾದುದು. ವಿಜಯ ದಶಮಿಯಂದು ಸರ್ವ ವಿಜಯಕ್ಕಾಗಿ ನಾರಾಯಣನ ಪೂಜೆ ಮಾಡುತ್ತಾರೆ.

ಬನ್ನಿ ಮರದ ಸುತ್ತ ಪುರಾಣ, ಇತಿಹಾಸ, ಜನಪದ ನಂಬುಗೆಗಳು ಸುತ್ತುವರೆದಿವೆ. ಬನ್ನಿ ಹಬ್ಬಕ್ಕೆ ವಿಜಯದಶಮಿ, ದಸರಾ ಹಬ್ಬವೆಂದೂ ಕರೆಯುತ್ತಾರೆ. ಈ ದಿನದಂದು ಊರ ಸೀಮೆಯಲ್ಲಿ ಬನ್ನಿ ಗಿಡದ ಎಲೆ ಇರುವ ಟೊಂಗೆಗಳನ್ನು ಮತ್ತು ಅಬಟಿ ಗಿಡದ ಎಲೆ ಇರುವ ಟೊಂಗೆಗಳನ್ನು ಕಡಿದು ಕಟ್ಟೆಯಾಕಾರದಲ್ಲಿ, ಶಂಕುವಿನ ಆಕಾರದಲ್ಲಿ ಜೋಡಿಸುತ್ತಾರೆ. ಊರಜನರು ಊರ ಮುಖಂಡರಾದ ಗೌಡ ಅಥವಾ ಜಹಾಗೀರದಾರರ ನೇತೃತ್ವದಲ್ಲಿ ಬಾಜಾ-ಭೃಜಂತ್ರಿಯೊಂದಿಗೆ ಅಲ್ಲಿಗೆ ಹೋಗಿ ಭಡಜಿಯ (ಆಚಾರಿ) ನೇತೃತ್ವದಲ್ಲಿ ಅದಕ್ಕೆ ಪೂಜೆ ಸಲ್ಲಿಸುತ್ತಾರೆ. ಆಗ ಮುಖಂಡನು ಆ ಬನ್ನಿ ಕಟ್ಟೆಗೆ ಸುತ್ತು ಹಾಕಿ ಒಂದು ಹಿಡಿ ಎಲೆಯನ್ನು ಎತ್ತಿಕೊಳ್ಳುತ್ತಾನೆ. ಅವನ ಕೈಯಲ್ಲಿ ಕತ್ತಿಯೋ, ಕೊಡಲಿಯೋ ಇರುತ್ತದೆ. ಆನಂತರ ಊರವರು ಅಷ್ಟಿಷ್ಟು ತೆಗೆದುಕೊಂಡು ಊರ ಹನುಮಂತ ದೇವರಿಗೆ ನಮಸ್ಕರಿಸಿ ತಮ್ಮ ತಮ್ಮ ಮನೆಗೆ ತೆರಳುತ್ತಾರೆ. ಅವರವರ ಮನೆ ಮುಂದೆ ಆಯಾ ಮನೆಗಳ ಸ್ತ್ರೀಯರು ಕಾಲಿಗೆ ನೀರು ಹಾಕಿ ಆರತಿ ಬೆಳಗುತ್ತಾರೆ. ಅಲ್ಲಿಂದ ಅವರುಗಳು ತಮ್ಮ ಮನೆ ಜಗುಲಿಯಲ್ಲಿರುವ ದೇವರಿಗೆ ಬನ್ನಿಯನ್ನು ಅರ್ಪಿಸುತ್ತಾರೆ ನಂತರ ಪರಸ್ಪರರ ಬನ್ನಿ ವಿನಿಮಯ ಪ್ರಾರಂಭವಾಗುತ್ತದೆ ಇಡೀ ಊರಿಗೆ ಊರೇ ಸರಿ ರಾತ್ರಿವರೆಗೂ ಈ ಬನ್ನಿ ವಿನಿಮಯದಲ್ಲಿ ಪಾಲ್ಗೊಳ್ಳುತ್ತದೆ. ಬನ್ನಿ ಎಲೆ ಬಂಗಾರವಾಗಿ ಅದರ ಜೊತೆ ಅಬಟಿಗಿಡದ ಎಲೆಗಳು 'ಬೆಳ್ಳಿ'ಯಾಗಿ ವಿನಿಮಯಗೊಳ್ಳುತ್ತವೆ. ಬನ್ನಿ ವಿನಿಮಯ ಪದ್ಧತಿಯು, ಪರಸ್ಪರರಲ್ಲಿ ಸೌಹಾರ್ದ ಭಾವನೆಯನ್ನುಂಟು ಮಾಡಲು ಜನಪದರು ಕಂಡು ಹಿಡಿದ ಅದ್ಭುತ ಕಲ್ಪನೆಯಾಗಿದೆ.

(ಎಂ.ಎಸ್.ಬಿ.)

ಬಯಕೆಯ ಬುತ್ತಿ: ಚೊಚ್ಚಲ ಬಸುರಿಯ ಆಸೆ ಆಕಾಂಕ್ಷೆಗಳಿಗೆ ಆಕೆಯ ತವರು ಮನೆಯವರು ತಂದು ಕೊಡುವ ಹೂವು ಹಣ್ಣು, ತಿಂಡಿ ತಿನಿಸುಗಳು. ಬಸುರಿಯಾದ ಮೂರು ತಿಂಗಳಿಗೆ ಹಣ್ಣು ತಂದುಕೊಡುವ ಸಂಪ್ರದಾಯವಿದೆ. ಇದನ್ನು ಕಳ್ಳಕುಬಸ ಎಂದು ಕರೆಯುತ್ತಾರೆ. ಗರ್ಭಧಾರಣೆಯಾದ ಮೂರು ತಿಂಗಳಿನಲ್ಲಿ ಏನಾದರೂ ಸಂಭವಿಸಬಹುದು. ಪೂರ್ಣ ಖಾತ್ರಿಯಾಗುವ ವೇಳೆಯಲ್ಲಿ ಮನೆಯವರು ಮತ್ತು ಸುತ್ತಲಿನ ಕೆಲವೊಂದು ಕುಟುಂಬದವರು ಸೇರಿ ಸರಳವಾಗಿ ಈ ಸಮಾರಂಭವನ್ನು ಮಾಡುವುದರಿಂದ ಈ ಹೆಸರು ಬಂದಿರಬೇಕು. ಆ ಸಂದರ್ಭದಲ್ಲಿ ಬಸರಿಗೆ ಹಸಿರು ಬಳೆ, ಕುಪ್ಪಸ ತೊಡಿಸುತ್ತಾರೆ. ಬಸುರಿಯ ಜೊತೆಗೆ ಐದು ಜನ ಮುತ್ತೈದೆಯರಿಗೂ ಹಸಿರು ಬಳೆ, ಕುಪ್ಪಸ ತೊಡಿಸುವರು. ಕುದಿಸಿ ಮಾಡಿದ ಹೂರಣದ ಕಡುಬು, ಮೊಸರನ್ನ ಊಟಕ್ಕೆ ಕೊಡುತ್ತಾರೆ.

ಇದಾದ ಮೇಲೆ ಐದು ಅಥವಾ ಏಳನೆಯ ತಿಂಗಳಿನಲ್ಲಿ ಕುಪ್ಪಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾರೆ. ಇದನ್ನು ಹೂ ಮೂಡಿಸುವ, ಸೀಮಂತ, ಬಯಕೆ ಊಟದ ಸಮಾರಂಭ ಎಂದೂ ಕರೆಯುತ್ತಾರೆ. ಮುತ್ತೈದೆಯ ಸಂಕೇತಗಳಲ್ಲಿ ಒಂದಾಗಿರುವ ಕುಪ್ಪಸ ಕೊಡುವುದರಿಂದ ಇದಕ್ಕೆ ಕುಪ್ಪಸ ಕಾರ್ಯಕ್ರಮ ಎನ್ನಬಹುದು. ಬಸುರಿ ಮಹಿಳೆ ಮತ್ತು ಆಕೆಯ ಗರ್ಭದಲ್ಲಿರುವ ಮಗುವಿಗೆ ಶುಭ ಹಾರೈಸುವುದು, ಎಲ್ಲ ರೀತಿಯ ಅಮಂಗಳ ನಿವಾರಣೆಯಾಗಲಿ ಮತ್ತು ಗರ್ಭಿಣಿ ಸಂತೋಷದಿಂದ ಪ್ರಸನ್ನಳಾಗಲಿ ಎಂಬ ಘನವಾದ ಉದ್ದೇಶ ಕುಪ್ಪಸ ಮಾಡುವ ಕಾರ್ಯಕ್ರಮದ ಹಿಂದೆ ಅಡಗಿದೆ. ಈ ಅವಧಿಯಲ್ಲಿ ಮಲ್ಲಿಗೆ ಹೂ ಮುಡಿಯಬೇಕೆಂಬುವುದು, ರಕ್ತ ಸಂಬಂಧಿಗಳನ್ನು ನೋಡಬೇಕೆನ್ನುವುದು, ಖಾರ-ಹುಳಿಯ ಪದಾರ್ಥಗಳನ್ನು, ಹುಣಸೆ ಮರದ ಚಿಗುರು, ಮಣ್ಣು ತಿನ್ನಬೇಕೆನ್ನುವುದು ಆಕೆಯ ಸಹಜ ಬಯಕೆಗಳಾಗಿರುತ್ತವೆ. ಬಸುರಿಯ ಮನಸ್ಸು ನೋಯಬಾರದು, ಆಕೆ ಪಡುವ ಸಂಕಟದಿಂದ ಮಗುವಿಗೆ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಆಕೆಯ ಬಯಕೆಗಳನ್ನೆಲ್ಲ ತೀರಿಸಲು ಗಂಡನ ಮನೆಯವರು, ಅದರಲ್ಲೂ ಮುಖ್ಯವಾಗಿ ತವರು ಮನೆಯವರು ಬಹಳಷ್ಟು ಉತ್ಸುಕರಾಗಿರುತ್ತಾರೆ.

ಬಸುರಿಗೆ ಆಕೆಯ ತವರು ಮನೆಯವರು ಹೂ, ಬಳೆ, ಸೀರೆ, ಕುಪ್ಪಸ ಅಳಿಯನಿಗೆ ಬಟ್ಟೆ, ಬಂಗಾರ ಕೊಟ್ಟು ಶುಭ ಹಾರೈಸುತ್ತಾರೆ. ಈ ಸಂದರ್ಭದಲ್ಲಿ ಊಟದ ವ್ಯವಸ್ಥೆಯನ್ನು ಮಾಡಿರುತ್ತಾರೆ. ಊಟದಲ್ಲಿ ವಿವಿಧ ನಮೂನೆಯ ಹಣ್ಣುಗಳ ಜೊತೆಗೆ ಕರಜಿಕಾಯಿ, ಕೊಡುಬಳೆ, ಸಜ್ಜಿರೊಟ್ಟಿ, ಬಿಳಿ ಜೋಳದ ರೊಟ್ಟಿ, ಕೆನಿ ಮೊಸರು, ಮಾದ್ಲಿ, ಧಪಾಟಿ, ಶೇಂಗಾ ಹಿಂಡಿ, ಶೇಂಗಾ ಹೋಳಿಗೆ, ಚುಡವಾ,

ಜೋಳದ ಬಾನ, ಬದನೆಕಾಯಿ ಪಲ್ಯ, ರವಾ ಉಂಡೆ, ಘುಂಡಿಪಲ್ಯೆ, ಚಿತ್ರಾನ್ನ ಮೊದಲಾದ ಆಹಾರ ಪದಾರ್ಥಗಳನ್ನು ತಂದಿರುತ್ತಾರೆ. ಹೀಗೆ ತಂದ ಆಹಾರ ಪದಾರ್ಥಗಳನ್ನು ಸಾಯಂಕಾಲ ಗ್ರಾಮದಲ್ಲಿ ತಮಗೆ ಬೇಕಾದವರ ಮನೆಗೆ ಮುಟ್ಟಿಸುತ್ತಾರೆ. ಊಟಕ್ಕೂ ಆಹ್ವಾನಿಸುತ್ತಾರೆ. ಅಂದು ಚಿಕ್ಕ ಸಮಾರಂಭ ಏರ್ಪಡಿಸಿ ಬಟ್ಟೆ ಮಾಡಿ ಉಡಿಯಕ್ಕಿ ಹಾಕುತ್ತಾರೆ. ನೆನೆಹಾಕಿದ ಗೋದಿ ಮತ್ತು ಅತ್ತಿಕಾಯಿಯ ಮಾಲೆ ಮಾಡಿ ಗರ್ಭಿಣಿಯ ಕೊರಳಿನಲ್ಲಿ ಹಾಕುತ್ತಾರೆ. ನೆರೆದ ಮತ್ತೈದೆಯರು ಆಕೆಯನ್ನು ಶುಭ ಹಾರೈಸುತ್ತಾರೆ.

ಅನಂತರ ಹಾಡುವ ಹಾಡಿನಲ್ಲಿ ಗರ್ಭಿಣಿಯ ಒಂಭತ್ತು ತಿಂಗಳ ಮಾನಸಿಕ ಸ್ಥಿತಿ, ವರ್ತನೆಗಳು ವ್ಯಕ್ತವಾಗಿವೆ. ಇವುಗಳಲ್ಲದೆ ಹುಳಿ ಮಾವು, ಎಳ ಬಿಸಿಲು, ಸೀರೆ ಕುಪ್ಪಸ, ಬಯಸಿದವಳ ಮನಸ್ಥಿತಿಯನ್ನು ವರ್ಣಿಸುತ್ತ ಹಾಡುವರು. ಕೊನೆಗೆ ಆರತಿ ಮಾಡಿ ತಮ್ಮ ಗಂಡನ ಹೆಸರು ಹೇಳಿ ಕುಳಿತುಕೊಳ್ಳುವರು.

(ಆರ್.ಜಿ.)

ಬಯಲಾಟಗಳು: ಇದೊಂದು ದ್ರಾವಿಡಮೂಲ ಜನಪದ ಕಲೆ. ಶ್ರೀಸಾಮಾನ್ಯರು ತಮ್ಮ ಅನಿಸಿಕೆಗಳನ್ನು ಅಭಿವ್ಯಕ್ತಗೊಳಿಸುವಲ್ಲಿ 'ಬಯಲಾಟ' ಮಾಧ್ಯಮವನ್ನು ಸಮರ್ಥ ರೀತಿಯಲ್ಲಿ ಬಳಸಿಕೊಂಡು ಬಂದಿದ್ದಾರೆ. ಬಯಲಾಟಗಳಲ್ಲಿ ಮೊದ-ಮೊದಲು ಹಾಡುಗಳ ರಚನೆ, ಆ ಹಾಡುಗಳಲ್ಲಿಯ ಅರ್ಥವನ್ನು ಜನಸಾಮಾನ್ಯರಿಗೆ ತಿಳಿಯುವ ರೀತಿಯಲ್ಲಿ ಸಹಜ, ಆಡುಭಾಷೆಯಲ್ಲಿ, ಮಾತುಗಳ ಮೂಲಕ ಹೇಳುತ್ತ ಬಂದರು. ಹೀಗೆಯೇ ಮೌಖಿಕವಾಗಿ ಹೇಳುತ್ತ ಬಂದ ಈ ಗದ್ಯದ ಮಾತುಗಳು ಹಾಡುಗಳೊಂದಿಗೆ ಸೇರಿಕೊಂಡು 'ಬಯಲಾಟ' ಎನ್ನುವ ಗದ್ಯ-ಪದ್ಯ ಮಿಶ್ರ ಜನಪದ ರಂಗಕಲಾ ಪ್ರಕಾರವಾಗಿ ರೂಪ ತಾಳಿತು. ಸಾರಥಿ ಮತ್ತು ಹುನುಮನಾಯಕರ ಪಾತ್ರಗಳು ಬಯಲಾಟಗಳಲ್ಲಿ ಬರುವ ಹಾಸ್ಯ ಪಾತ್ರಗಳಾಗಿವೆ. ಈ ಪಾತ್ರಗಳ ಮಾತುಗಳು ಕಥಾಪುಸ್ತಕದಲ್ಲಿ ಮೊದಲು ಇರುತ್ತಿರಲಿಲ್ಲ. ಅವು ಆ ಪಾತ್ರ ಧರಿಸುವವರ ಅನುಭವದ ಮೇಲಿಂದ ಕಥೆಯ ಮುನ್ನಡೆಗೆ ಸಹಾಯಕವಾಗಿದೆ. ಬಯಲಾಟದ ಪ್ರಾಚೀನತೆಯನ್ನು 'ಪಗರಣ' ನಾಟ್ಟಿಗರಣ ಮೊದಲಾದ ಶಬ್ದಗಳ ಉಲ್ಲೇಖಗಳನ್ನು ಆಧರಿಸಿ, ಕ್ರಿ.ಶ. 12ನೆಯ ಶತಮಾನದಿಂದಲೇ ಬಯಲಾಟಗಳು ಒಂದಿಲ್ಲೊಂದು ರೀತಿಯಲ್ಲಿ ಪ್ರಯೋಗದಲ್ಲಿದ್ದುವೆಂಬುದನ್ನು ತಿಳಿಯಬಹುದಾಗಿದೆ.

'ಬಯಲಾಟ' ಹೆಸರೇ ಸೂಚಿಸುವಂತೆ ಬಯಲಿನಲ್ಲಿ ಆಡುವ ಆಟವಾಗಿದೆ. ದೈವೀ ಆರಾಧನೆಗೆಂದು ಹುಟ್ಟಿಕೊಂಡು ಬಂದ ಬಯಲಾಟಗಳಿಗೆ ಮೂಲ ಗೊಂಬೆಯಾಟಗಳೆಂದೂ, ಅನಂತರ ಬಹುರೂಪಿಗಳ, ವೇಷಗಾರರ ಆಟಗಳೆಂದೂ ಹೇಳಬಹುದಾಗಿದೆ. ಮಕ್ಕಳಾಗದವರು ಮಕ್ಕಳನ್ನು ಬೇಡಿಕೊಂಡು, ರೋಗರುಜಿಗಳ ನಿವಾರಣೆಗೆಂದು, ಮಳೆ-ಬೆಳೆ ಸರಿಯಾಗಿ ಬರಬೇಕೆಂದು ಪ್ರಾರ್ಥಿಸುವ ಸಲುವಾಗಿ ಗೊಂಬೆಯಾಟಗಳನ್ನು ಬರಬರುತ್ತ ಬಯಲಾಟಗಳನ್ನೂ ಆಡುವ, ಆಡಿಸುವ ಪರಿಪಾಠ ಬೆಳೆದು ಬಂದಿರುತ್ತದೆ. ಈಗಲೂ ಕರಾವಳಿ ಪ್ರದೇಶಗಳಲ್ಲಿ ಯಕ್ಷಗಾನ ಕಲೆ ಹೀಗೆಯೇ ಬೆಳೆಯುತ್ತ ಬಂದಿದೆ.

'ಬಯಲಾಟ'ವನ್ನು ಮೊದಲು ಯಕ್ಷಗಾನ ಬಯಲಾಟ ಎಂದೇ ಕರೆಯಲಾತ್ತಿತ್ತು. ಹಾಡುಗಾರಿಕೆ, ವಾದ್ಯವಾದನ, ಕಥಾನಕಗಳು, ವೇಷಭೂಷಣ ಇವು ಎಲ್ಲ ಕಡೆಗೂ ಒಂದೇ ರೀತಿಯಲ್ಲಿದ್ದುವು. ಬರಬರುತ್ತ ಪ್ರಾದೇಶಿಕ ಭೇದದಿಂದಾಗಿ, ಸಂಸ್ಕೃತಿಯ ಭಿನ್ನತೆಯಿಂದಾಗಿ ಕರಾವಳಿ ಪ್ರದೇಶದ ಮತ್ತು ಬಯಲು ಸೀಮೆಯ ಬಯಲಾಟಗಳಲ್ಲಿ ಭೇದಗಳು ಕಾಣಿಸಿಕೊಂಡವು. ಆಗ ಕರಾವಳಿ ಪ್ರದೇಶದ ಬಯಲಾಟವು ಯಕ್ಷಗಾನ ಬಯಲಾಟವಾಗಿಯೂ, ಉತ್ತರ ಕರ್ನಾಟಕ ದಕ್ಷಿಣ ಕರ್ನಾಟಕದ ಬಯಲಾಟಗಳು ದೊಡ್ಡಾಟಗಳೆಂಬ ಹೆಸರಿನಲ್ಲಿಯೂ ಕರಯಲ್ಪಡತೊಡಗಿದವು.

'ಯಕ್ಷಗಾನ ದೇಶೀ ಗಾನದಿಂದ ಬಂದದ್ದು. ಇದರ ಧಾಟಿ ದೊಡ್ಡಾಟಗಳಲ್ಲಿ ಬೇರೆ ರೂಪ ತಾಳಿತು. ಹಾಡಿನ ಧಾಟಿ, ತಾಳ ಲಯಗಳು, ವಾದ್ಯ ವಾದನಗಳು ಬೇರೆ ಬೇರೆಯಾದವು. ಭಾಷೆ ಬದಲಾಯಿತು. ಕುಣಿತದಲ್ಲಿ ಬದಲಾಣೆಗಳಾದವು. ಹೀಗಾಗಿ ಯಕ್ಷಗಾನ ಕರಾವಳಿ ಪ್ರದೇಶಕ್ಕೂ ದೊಡ್ಡಾಟ ಬಯಲು ಸೀಮೆಗೂ ಪ್ರಚಾರದಲ್ಲುಳಿದವು. ಇವುಗಳನ್ನೇ ಪಡುವಲ ಪಾಯವೆಂದೂ ಮೂಡಲಪಾಯವೆಂದೂ ಗುರುತಿಸಿದರು. ಇವು ಹಾಡಿನ ಪದ್ಧತಿ ಮೇಲಿಂದ ಬಂದ ಹೆಸರುಗಳಾಗಿವೆ. ಕರಾವಳಿ ಪ್ರದೇಶದ ಪಡುವಲುಪಾಯದಲ್ಲಿ (ಯಕ್ಷಗಾನ) ತಾಳಮದ್ದಲೆ, ಬ್ಯಾಲೆ ಎಂಬ ಬಗೆಗಳೂ; ಮೂಡಲಪಯದಲ್ಲಿ ದೊಡ್ಡಾಟ, ಸಣ್ಣಾಟವೆಂದೂ ಈ ಸಣ್ಣಾಟದಲ್ಲಿ ಪಾರಿಜಾತ ಮತ್ತು ಡಪ್ಪಿನಾಟಗಳೆಂಬ ಕವಲುಗಳಾದುದನ್ನು ಗುರುತಿಸಬಹುದಾಗಿದೆ.

ನೂರಿನ್ನೂರು ವರುಷಗಳ ಇತ್ತೀಚಿನ ಜನಪದ ಬಯಲಾಟಗಳ ಚಿತ್ರ ನಮಗೆ ಲಭ್ಯವಾಗಬಹುದಾಗಿದೆ. ಈಗ ಸಂಶೋಧನೆಗೆ ನಿಲುಕಿದಂತೆ ಕರ್ನಾಟಕದಲ್ಲಿ ಸಾವಿರಾರು ಯಕ್ಷಗಾನ ಬಯಲಾಟಗಳು ಸೃಷ್ಟಿಯಾಗಿವೆ. ಅವುಗಳನ್ನು ರಚಿಸಿದ ನೂರಾರು ಜನಪದ ಕವಿಗಳೂ ನಮಗೆ ದೊರಕುತ್ತಾರೆ. ಹೈದ್ರಾಬಾದ ಕರ್ನಾಟಕದಲ್ಲಿಯ ಬಯಲಾಟ ಕಲೆ ವೈಶಿಷ್ಟ್ಯಪೂರ್ಣವಾಗಿರುತ್ತದೆ. ಈ ಪ್ರದೇಶಕ್ಕೆ ಒಂದು ಕಡೆ ಆಂಧ್ರಪ್ರದೇಶ, ಇನ್ನೊಂದು ಕಡೆ ಮಹಾರಾಷ್ಟ್ರ ರಾಜ್ಯಗಳ ಸೀಮೆಗಳಿರುವುದರಿಂದ ಈ ಪ್ರದೇಶದ ಜನರ ಮೇಲೆ ಮರಾಠಿ, ತೆಲುಗು ಭಾಷೆಗಳ ಪ್ರಭಾವ ಬಿದ್ದಂತೆ ಹಲವಾರು ವರುಷ ಮುಸಲ್ಮಾನರು ಆಳಿದ ಪ್ರದೇಶವಾದುದರಿಂದ ಉರ್ದು ಭಾಷೆಯ ಪ್ರಭಾವವೂ ಈ ಪ್ರದೇಶದ ಮೇಲಾಗಿದೆ. ಹೀಗಿದ್ದೂ ಕನ್ನಡದ ಬಯಲಾಟಗಳು ಈ ಭಾಗದಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಂಡು ಬಂದಿರುತ್ತವೆ. ನೂರಿನ್ನೂರು ವರುಷಗಳ ಈ ಅವಧಿಯಲ್ಲಿ ದೊಡ್ಡಾಟ ಮತ್ತು ಸಣ್ಣಾಟದ ಕಥೆಗಳು ರಚಿಸಿ ಕೀರ್ತಿ ಶೇಷರಾದವರಲ್ಲಿ ಕಾಳಗಿ ವೀರಣ್ಣ, ಮಾಡ್ಯಾಳ ಕೃಷ್ಣಾಜಿ, ಅಪರಾಳ ತಮ್ಮಣ್ಣ, ದೇಗಾವಿ ಮಹಾಲಿಂಗ, ಗುಂಡಪ್ಪ, ಹಜರತಸಾಹೇಬ, ಸಾವಳಗಿ ಮಹಮ್ಮದ ಸಾಹೇಬ, ಕೊಳೂರ ಹುಸನಾ, ಮಹಾಗಾಂವದ ಮೀರಾ, ನರೋಣಾದ ಹೈದರಸಾಬ, ಬೇನೂರ ಭವಾನಸಿಂಗ, ಖೇಳಗಿ ಪೀರಪ್ಪ, ಮತ್ತಿಮೂಡ ಗಿರಿಯಪ್ಪ, ಐನಾಪೂರ ಮಾರುತಿ, ಧುಮ್ಮನಸೂರದ ಸಿದ್ಧಪ್ರಭು, ಧಂಗಾಪುರದ ಬಸವಣ್ಣೆಪ್ಪ, ಅಂಬಲಗಿ ಜಗದೇವಪ್ಪ, ಗಬ್ಬೂರ ಹಂಪಣ್ಣ, ಓಕಳಿ ಭೀಮರಾವ, ಕಾಳಗಿ ರಾಮಭಟ್ಟ, ಬಳಗಾನೂರ ಮರಿಸ್ವಾಮಿ,

ತಳವಾರಗೇರಿ ಬಸನಗೌಡ, ಹಡಗಿಲ ಗುಂಡಪ್ಪ, ಮಹಾಗಾಂವದ ಗುರುಲಿಂಗಸಿದ್ಧ, ನೆಲವಗಿ ತತ್ಯಾಸಾಹೇಬ, ರಾವೂರ ರಾಚಪ್ಪ, ಭಟ್ಟರಕಿ ಕೃಷ್ಣಪ್ಪ, ನಾಗೂರ ಶಿವಪ್ಪ, ಕೊಳಾರ (ಬಿ) ಇಮಾಮ, ಸಲಗರದ ಸಿದ್ರಾಮಪ್ಪ, ಓಕಳಿ ಚೆನ್ನಬಸಯ್ಯ ಸ್ವಾಮಿ, ಮಾನವಿ ಗುಂಡಾಚಾರಿ, ಕುಕನೂರ ಸಿದ್ರಾಮಪ್ಪ, ಹೆಬ್ಬಾಳ ಚೇಂಗಟೆ, ಓಕಳಿ ಹೂಗಾರ, ಇಂಥ ನೂರಾರು ಜನಪದ ಕವಿಗಳು ಬಯಲಾಟಗಳನ್ನು ಬರೆದದ್ದು ಇತ್ತೀಚಿನ ಸಂಶೋಧನೆ ಯಿಂದ ತಿಳಿದುಬರುತ್ತದೆ. ಬಾಲಘಟೋದ್ಗಜ, ಸತ್ಯಪ್ರಕಾಶ, ಗುಣಶೀಲ, ದಕ್ಷಬ್ರಹ್ಮ, ಗಿರಿಜಾಕಲ್ಯಾಣ, ಈಶ ಅಣಿದೇವರ, ಭುವನಸುಂದರಿ, ಚಂದ್ರಪ್ರಭೆ ಸ್ವಯಂವರ, ಲವ–ಕುಶ, ರಾಮಲಿಂಗೇಶ, ಹರಿಶ್ಚಂದ್ರ, ಚಂದ್ರಹಾಸ, ಗೋಪಿಚಂದ್ರ, ಬಾಣಾಸುರ, ಸುಭದ್ರಾಕಲ್ಯಾಣ, ಕರ್ಣಾರ್ಜುನರ ಕಾಳಗ, ರಂಭಾವಿಲಾಸ, ಐರಾವಣ–ಮೈರಾವಣ, ಮಾರ್ಕಂಡೇಯ, ಲಂಕಾದಹನ, ಸೈಂಧವರಾಜ, ಬಸವೇಶ್ವರ, ಭೀಮವಿಲಾಸ, ಕಲಿಧರ್ಮ, ಶಿವಜಲಂಧರ, ವೀರ ಅಭಿಮನ್ಯು, ದೇವೀ ಆಟ, ಗಂಗೀಗೌರಿ, ಭದ್ರಾಯುರಾಜ, ವಮಹಿಷಾಸುರ ಮರ್ದಿನಿ, ಪ್ರಮೀಲೆ, ಬಭ್ರುವಾಹನ, ದ್ರೌಪದಿ ವಸ್ತ್ರಾಪಹರಣ, ಶಂಭರಾಸುರ, ಕನಕಾಂಗಿ ಕಲ್ಯಾಣ, ಮೊದಲಾದ ದೊಡ್ಡಾಟಗಳು ಸೃಷ್ಟಿ ಆಗಿರುತ್ತವೆ. ಅದೇ ರೀತಿ ಅರಬರಾಟ, ಭೂಕೈಲಾಸ, ಚಂದ್ರಶಿರೋಮಣಿ, ಚಿತ್ರಕೇತು, ಪುರಂದರ, ಬಸವೇಶ್ವರ, ತಿಥಿಮತಿ, ರಾಧಾನಾಟ, ನಂದಗೋಪಾಲ, ಶ್ರೀಕೃಷ್ಣ ಪಾರಿಜಾತ, ಮೈದುನ ಮಾಯಾ, ಉಪದ್ಯಾನ ಸಂಗೀತ, ಪ್ರಭುಲಿಂಗ, ಚಿತರಂಗಿ, ಶುಕಮುನಿ, ತಾರಾಮತಿ, ಮದನಮಂಜರಿ, ಕಬೀರ, ವಾಲ್ಮೀಕಿ, ಶಿವಶಂಕರ, ಗುಣವಂತಿ–ಗುಣಲೋಪ, ಹೇಮರಡ್ಡಿ ಮಲ್ಲಮ್ಮ, ಗುಣಶೇಖರ ರಾಜಾ, ನೀಲಕಂತರಾಜಾ– ಇಂಥಾ ನೂರಾರು ಸಣ್ಣಾಟಗಳನ್ನು ಸೃಷ್ಟಿಸಿ ಹೈದ್ರಾಬಾದ ಕರ್ನಾಟಕದ ಜನಪದ ಬಯಲಾಟ ಕಲೆಯ ಅಭಿವೃದ್ಧಿಗಾಗಿ ಶ್ರೀಸಾಮಾನ್ಯರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾಗಿದೆ.

(ಎಂ.ಎಸ್.ಎಲ್.)

ಬರಡು (ಗೊಡ್ಡು): ಬರಿದು, ಶೂನ್ಯತೆ, ನಿರುಪಯುಕ್ತವಾದುದು. ಕೆಲಸಕ್ಕೆ ಬಾರದ್ದು, ಪೊಳ್ಳು, ನಿಸ್ಸಾರವಾದುದು ಫಲವೀಯದ, ನಿಷ್ಫಲವಾದ, ಅಂತಸ್ಸಾರವಿಲ್ಲದ, ವ್ಯರ್ಥವಾದ ಎಂಬ ನಾನಾರ್ಥಗಳನ್ನು ಹೊಂದಿದೆ. ಗೊಡ್ಡು ಎಂಬುದು ಬರಡು ಎಂಬುದಕ್ಕೆ ಸಮನಾಗಿ ಬಳಕೆಯಾಗುತ್ತಿದ್ದರೂ ಸಂದರ್ಭ ಯೋಚಿತವಾಗಿ ಬಳಕೆಯಾಗುವ ಸನ್ನಿವೇಶ ಬೇರೆಯೆನಿಸುತ್ತದೆ.

ಗೊಡ್ಡು –ಬರಡು ಬಳಕೆಗೆ ಕೆಲವು ಉದಾಹರಣೆಗಳು: ಗೊಡ್ಡು ಬೆದರಿಕೆ: ಹುಸಿಯಾದ ಬೆದರಿಕೆ, ಪೊಳ್ಳು ಬೆದರಿಕೆ, ಗೊಡ್ಡೆಮ್ಮೆ: ಗಬ್ಬವಾಗದ ಎಮ್ಮೆ, ಈಯದಎಮ್ಮೆ, ಕರುಹಾಕದ ಎಮ್ಮೆ, (ಗೊಡ್ಡೆಮ್ಮೆಗಳಿಂದ ಕೆಲ ರೈತರು ಉಳುಮೆ ಮಾಡುತ್ತಿದ್ದರು), ಗೊಡ್ಡು ಸಂಪ್ರದಾಯ: ಮೌಢ್ಯತೆಯಿಂದ ಕೂಡಿದ ಸಂಪ್ರದಾಯ, ಮೂಢನಂಬಿಕೆಯಿಂದ ಮಾಡುವ ಆಚರಣೆ, ಗೊಡ್ಡು ಹಸು: ಗೊಡ್ಡಾಕಳ್, ಗಬ್ಬಧರಿಸದ ಹಸು, (ಗೊಡ್ಡು ಆಕಳುಗಳನ್ನು ಕೆಲ ರೈತರು ಉಳುಮೆಗೆ ಬಳಸುತ್ತಿದ್ದರು), ಗೊಡ್ಡು ಆಚಾರಕ: ನಿಷ್ಫಲವಾದ ಆಚರಣೆಗಳನ್ನು ಮಾಡುವ ವ್ಯಕ್ತಿ, ಸಂಪ್ರದಾಯ ಶರಣ, ಕಂದಾಚಾರಿ.

(ಬಿ.ಪಿ.)

ಬಲೋರಿ ಹಾಡುಗಳು: ಕಣಿಕೆ ರಾಸೀ ಮಾಡಿದ ಕಾಳು ತುಂಬಿದ ಚೀಲಗಳನ್ನು ಹೊಲದಿಂದ ಮನೆಗೆ ತರುವಾಗ, ಚಕ್ಕಡಿ ಹೊಡೆಯುವಾಗ ಹಾಡುವ ಹಾಡುಗಳು. ಹಂತೀ ಹಾಡುಗಳಿಗೂ ಬಲೋರಿ ಹಾಡುಗಳಿಗೂ ವಸ್ತು, ಛಂದಸ್ಸುಗಳಲ್ಲಿ ವ್ಯತ್ಯಾಸಸವೇನೂ ಇಲ್ಲ. ಇವೂ ತ್ರಿಪದಿಯಲ್ಲೇ ಇವೆ. ಆದರೆ ತಾಳ, ಲಯ, ಧಾಟಿಯಲ್ಲಿ ಎರಡೂ ತೀರ ಭಿನ್ನ. ಮೊದಲಿನ ಸಾಲಿನ ಧ್ವನಿಯನ್ನು ತೀರ ಎತ್ತರಕ್ಕೆ ಎಳೆದು ದೀರ್ಘ ಸ್ವರಾಲಾಪ ಮಾಡುವುದು ಇದರ ವೈಶಿಷ್ಟ್ಯ. ಎತ್ತಿನ ಹೆಜ್ಜೆಗಳ ಲಯ ಅವುಗಳ ಕೊರಳ ಗೆಜ್ಜೆಯ ತಾಲ, ಗಾಡಿಯ ಗಾಲಿಯ ಹೊಯ್ದಾಟದ ಗತಿಗೆ ತಕ್ಕಂತೆ ಈ ಹಾಡುಗಳು ಸಹಜಹೊನಲಾಗಿ ಹರಿಯುತ್ತದೆ. ಅದೂ ಈ ಕ್ರಿಯೆ ಮೂರು ಸಂಜೆ ಹೊತ್ತು ವಿಶೇಷವಾಗಿ ಬೆಳ್ಳೀ ಚುಕ್ಕೆ ಮೂಡುವ ನಸುಕಿನಲ್ಲಿ ನಡೆಯುತ್ತದೆ. ಬಲೋರಿ ಹಾಡು ಕೇಳಿಯೇ ನಮ್ಮ ಗಾಡಿ ಬಂತೆಂದು ಹೊಲದಲ್ಲಿಯ ಉಳಿದವರು ಗುರುತಿಸಿ, ಗಾಡಿ ಬರುತ್ತಲೂ ಕಾಳೋ, ಕಣಿಕಿಯನ್ನೇ ತುಂಬಲು ಸಿದ್ಧತೆ ಮಾಡುತ್ತಿದ್ದರು, ನಸುಕಿನ ಆ ವಾತಾರವಣದಲ್ಲಿ ಈ ಹಾಡುಗಳು ಹರದಾರಿದೂರ ಕೇಳಿಸುತ್ತವೆ. ಗಾಡೀ ಹೊಡೆವ ಒಕ್ಕಲಿಗ ತನ್ನ ಆಯಾಸವನ್ನು ಏಕಾಳಿತನವನ್ನು ಮರೆಯಲು ಈ ಹಾಡುಗಳನ್ನು ಹಾಡುತ್ತಾನೆ. ಸ್ವರ ತೀರ ಏರುಗತಿಯಲ್ಲಿದ್ದರೂ, ಹಾಡಿನ ಗತಿ ಮಾತ್ರ ಮಂದಗತಿ.

(ಎಂ.ಜಿ.ಬಿ.)

ಬಲ್ಲೋರಿ ಪದಗಳು: ದನಕಾಯುವ ಹುಡುಗರು ದೀಪಾವಳಿ ಹಬ್ಬದ ಸಂದರ್ಭದಲ್ಲಿ ದನಕರುಗಳಿಗೆ ದೀಪದಿಂದ ಬೆಳಗುವ ಸಂಪ್ರದಾಯವಿದ್ದು. ಆ ಸಂದರ್ಭದಲ್ಲಿ ಹಾಡಲಾಗುವ ಪದಗಳು ಪ್ರಾದೇಶಿಕವಾಗಿ ಆಣೀ–ಪೀಣೀ ಹಾಡುಗಳು, ಅಂಟಿಗೆ–ಪಂಟಿಗೆ ಹಾಡುಗಳು ಮತ್ತು ದನ ಬೆಳಗುವ ಹಾಡುಗಳೆಂತಲೂ ಕರೆಯುವ ಪದ್ಧತಿ ಇದೆ. ಈ ಪ್ರದೇಶದಲ್ಲಿ ಆಣೀ–ಪೀಣಿ ಮತ್ತು ದನಬೆಳಗುವ ಪದಗಳೆಂದೇ ಪ್ರಸಿದ್ಧಿ.

ಚತುರ್ಥಿ ಮತ್ತು ಪಾಡ್ಯದ ದಿನಗಳಂದು ಮನೆಯ ಹೆಂಗಸರು ಗಂಡಸರಿಗೆ ಆರತಿ ಬೆಳಗಿದರೆ, ದನಕಾಯುವ ಹುಡುಗರು ದೀಪಾವಳಿ ಹಬ್ಬದ ದಿನಗಳಂದು ಸಾಯಂಕಾಲ ದನಗಳಿಗೆ ದೀಪದಿಂದ ಬೆಳಗುತ್ತಾರೆ. ದನಕಾಯುವ ಹುಡುಗರು ಹಸಿ ಹುಲ್ಲಿನಿಂದ ನೇಯ್ದು, ಹಾವಿನ ಹೆಡೆ ಆಕಾರದ, ಹಣತೆಗೆ ಗಾಳಿಯಿಂದ ಸಂರಕ್ಷಣೆ ಸಿಗುವಷ್ಟು ಬುಟ್ಟಿಯನ್ನು ಸಿದ್ಧ ಪಡಿಸುತ್ತಾರೆ. ಅದರೊಳಗೆ ಹಣತೆ ಇಟ್ಟು ಎಣ್ಣೆ ಬತ್ತಿ ಹಾಕಿಕೊಂಡು ಆಯಾ ಗ್ರಾಮದ ದೇವಾಲಯಕ್ಕೆ ಹೋಗುತ್ತಾರೆ. ಅಲ್ಲಿ ದೀಪವನ್ನು ಹೊತ್ತಿಸಿಕೊಂಡು ಮನೆ ಮನೆಗೆ ಹೋಗಿ ದನಕರುಗಳನ್ನು ಬೆಳಗುವ ಮತ್ತು ಹಾಡುವ ಪದ್ಧತಿ ಇನ್ನೂ ಇದೆ.

ದೀಪಾವಳಿ ಹಬ್ಬದಲ್ಲಿ ಬಲ್ಲೋರಿ ಪದಗಳನ್ನು ಹಾಡುವುದ–ರಿಂದ ದನಕರುಗಳು ಆರೋಗ್ಯದಿಂದಿರುತ್ತವೆ. ಯಾವ ಪೀಡೆಗಳು ಬರುವುದಿಲ್ಲವೆಂಬ ನಂಬಿಕೆ ಜನಪದರಲ್ಲಿದೆ. ಈ ಹಾಡುಗಳು ನಾಲ್ಕು, ಆರು, ಎಂಟು, ಹತ್ತು ಮತ್ತು ಹನ್ನೆರಡು ಸಾಲುಗಳಿಂದ ಕೂಡಿರುತ್ತವೆ. ಕೆಲವೊಂದು ಹಾಡಿನ ಸಾಲುಗಳು ದೀರ್ಘವಾಗಿರುತ್ತವೆ. ಮನೆಯ ಯಜಮಾನರಿಂದ ನಗನಾಣ್ಯ

ಇಲ್ಲವೇ ಕೊಬ್ಬರಿ ಪಡೆದುಕೊಂಡು ನೆರೆಮನೆಗೆ ಹೋಗುವ ಸಂಪ್ರದಾಯ ಇದೆ. *(ಜೆ.ಎಚ್.)*

ಬಸಪ್ಪ ಚೌಡಕಿ: ಚೌಡಿಕೆ ಕಲಾವಿದ. ಉತ್ತರ ಕರ್ನಾಟಕದಲ್ಲಿ ಸವದತ್ತಿ ಎಲ್ಲಮ್ಮ ಪ್ರಸಿದ್ಧ ದೇವತೆ. ಎಲ್ಲಮ್ಮ ದೇವಿಯ ಬೆಳ್ಳಿ ಮುಖದ ಕೊಡ ಹೊತ್ತು ಹಾಡಿ ಕುಣಿಯುವ ಗಂಡು ಹೆಣ್ಣು ಜೋಗತಿಯರು ಬಹಳಷ್ಟು ಜನರು. ಕೊರಳಲ್ಲಿ ಕವಡೆ ತಲೆಯಲ್ಲಿ ಜಡೆ, ಕಾಲಲ್ಲಿ ಗೆಜ್ಜೆ ಕೈಯಲ್ಲಿ ಚೌಡಕಿ ಇರುವ ಇವರೆಲ್ಲ ಎಲ್ಲಮ್ಮನ ಭಕ್ತರು (ಜೋಗಿಣಿಯರು).

ಬಸಪ್ಪ ಈ ಎಲ್ಲ ಸಂಪ್ರದಾಯದಿಂದ ನಿತ್ಯ ಹಳ್ಳಿ ಹಳ್ಳಿಗೆ ಹಾಡುತ್ತ (ಮಗನೊಂದಿಗೆ) ಭಿಕ್ಷಾಟನೆ ಮಾಡಿಕೊಂಡು ಬರುವುದು ಸಂಪ್ರದಾಯ. ಹಳ್ಳಿಯಲ್ಲಿ ಒಂದು ಚಿಕ್ಕಮನೆ; ಸ್ವಲ್ಪ ಹೊಲವಿದ್ದರೂ ದೇವಿಯ ಭಕ್ತಿಸೇವೆಯೆಂದು ಭಿಕ್ಷಾಟನೆ ನಡೆಸಿಕೊಂಡು ಬಂದಿದ್ದಾನೆ. ಬಸಪ್ಪನ ಕೈಯಲ್ಲಿ ಚೌಡಕಿ ಇದ್ದರೆ ಮಗನ ಕೈಯಲ್ಲಿ ತುಂತುನಿ ಇರುತ್ತದೆ. ಇವರ ಹಾಡುಗಳು ಬಹುಪಾಲು ಎಲ್ಲಮ್ಮನ ಮಹಾತ್ಮೆಯನ್ನೇ ಸಾರುತ್ತವೆ. ಅವಳಿಗೆ ಆದಿಶಕ್ತಿ, ಮಹಾಮಾಯೆ ಎಂದು ಕೊಂಡಾಡುತ್ತಾರೆ. ಚೌಡಕಿಯೊಂದಿಗೆ ಬೇರೆ ಬೇರೆ ಕಥನಗಳು ಹಾಡನ್ನೂ ಈತ ಹಾಡುತ್ತಾನೆ. ಬಸಪ್ಪನ ಸರಳ ಹಾಗೂ ಪ್ರಮುಖ ವಾದ್ಯ ಚೌಡಕಿ. ಇದನ್ನು ನುಡಿಸುತ್ತ ಊರೂರು ಅಲೆಯುವ ಈತ ದೇವಿಯ ಆರಾಧನೆಗೈಯುತ್ತ ತಾಸುಗಟ್ಟಲೆ ಹಾಡುತ್ತಾನೆ. ಎಲ್ಲಮ್ಮನ ಅನೇಕ ಪ್ರಸಂಗಗಳ ಹಾಡಿನೊಂದಿಗೆ ಬಸಪ್ಪ ಭಕ್ತಿಯ ಆಧ್ಯಾತ್ಮದ ಹಾಡುಗಳನ್ನು ಹಾಡುತ್ತ ತನ್ನ ವೃತ್ತಿಯ ಜೊತೆ ಚೌಡಕಿ ಹಾಡುಗಳನ್ನು ಕಲೆಯನ್ನಾಗಿ ಮಾಡಿಕೊಂಡ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದುಂಟು.

ಈ ಕಾಯಕ ಇವನಿಗೆ ಪರಂಪರೆಯಿಂದ ಬಂದುದು. ತಂದೆ, ಅಜ್ಜ ಇದೇ ಉದ್ಯೋಗದಲ್ಲಿ ಬಂದವರು. ಚೌಡಕಿ ನುಡಿಸುವುದನ್ನು ತಂದೆಯಿಂದಲೇ ಕಲಿತಿದ್ದು. ಈಗ ಮಗನಿಗೆ ಕಲಿಸಿದ್ದಾನೆ. 10–12ರ ಬಾಲ್ಯದಲ್ಲಿಯೇ ತಂದೆಯಿಂದ ಬಂದ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದ.


ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜರುಗಿದ ಆನೆಗುಂದಿ ಉತ್ಸವ, ಹನುಮಸಾಗರದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನ, ಕೊಪ್ಪಳದಲ್ಲಿ ಜರುಗಿದ ಜಾನಪದ ಉತ್ಸವಗಳಲ್ಲಿ ಬಸಪ್ಪ ಚೌಡಕಿ ಅವರಿಗೆ ವೇದಿಕೆ ದೊರೆತಿದೆ. ಈ ವೇದಿಕೆಗಳಿಗಿಂತ ಎಲ್ಲಮ್ಮನ ಗುಡ್ಡಕ್ಕೆ ಹೋಗಿ ಮುನಿರಾಬಾದ ಹತ್ತಿರದ ಹುಲಿಗೆಮ್ಮನ ದೇವಸ್ಥಾನಕ್ಕೆ ಹೋಗಿ ಸಲ್ಲಿಸುವ ಭಕ್ತಿಸೇವೆಯೇ ಈತನಿಗೆ ಖುಷಿ ಕೊಡುತ್ತಿದೆ, ತೃಪ್ತಿ ನೀಡುತ್ತಿದೆ. ಇವನಲ್ಲಿ ಚೌಡಕಿ ಪದಗಳು ರಾತ್ರಿ–ಹಗಲು ನಿರಂತರ ಹಾಡುವಷ್ಟು ಸಂಗ್ರಹಗಳಿವೆ. ಕುಷ್ಟಗಿ ತಾಲ್ಲೂಕಿನ ತೆಗ್ಗಿನಹಾಳ ಗ್ರಾಮದ ಭರಮಪ್ಪ ಬುಡ್ಡಮ್ಮ ದಂಪತಿಗಳ ಮಗನಾಗಿ ಜನಿಸಿದ. ಈತನಿಗೆ ಶಿಕ್ಷಣವಿಲ್ಲ. ಒಬ್ಬ ಸಹೋದರ ಇಬ್ಬರು ಸಹೋದರಿಯರು. ಬೇಸಾಯಗಾರರ ಮನೆತನ. ಜೊತೆಗೆ ಚೌಡಕಿ ಸಂಪ್ರದಾಯ, ದೇವಿಯ ಆರಾಧನೆ. *(ಜಿ.ಎಚ್.)*

ಬಸರೀಗಿಡದ ಶಿವಪ್ಪ: ದೊಡ್ಡಾಟದ ಹಿರಿಯ ಕಲಾವಿದ. ರಾಯಚೂರು ಜಿಲ್ಲೆ ಕುಷ್ಟಗಿಯವರು. ಇವರು 18ರ ಹರೆಯದಲ್ಲೇ 'ಕನಕಾಂಗಿ ಕಲ್ಯಾಣ' ಎಂಬ ದೊಡ್ಡಾಟದಲ್ಲಿ ವೇಷ ತೊಟ್ಟರು. ಆಗ ದೊಡ್ಡಾಟದಲ್ಲಿ ಹೆಸರು ಮಾಡಿದ್ದ ಬೆದವಟ್ಟಿ ಮರೇಗೌಡರು ಶಿವಪ್ಪನವರ ಗುರುಗಳು ಸಂಪೂರ್ಣ ಗುರುವನ್ನೇ ಅವಲಂಬಿಸದೆ ಸ್ವಂತ ಪ್ರತಿಭೆಯಿಂದ ಮೆರೆದ ಇವರು ದೊಡ್ಡಾಟದಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಜನಮನದಲ್ಲಿ ಬೇರೂರಿ ನಿಂತರು, ಕಂಚಿನ ಕಂಠ, ಮನಮೋಹಕ ಕುಣಿತ. ಪಾತ್ರಕ್ಕೆ ತಕ್ಕ ಹಾವ ಭಾವ ಇವುಗಳಿಂದ ಪ್ರೇಕ್ಷಕರ ಕುತೂಹಲ ಕೆರಳಿಸುವಂತೆ ಮಾಡಬಲ್ಲ ನಟನಾಸಾಮರ್ಥ್ಯವುಳ್ಳವರು.

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಬಳಕೆಯಲ್ಲಿರುವ ಬಯಲಾಟ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಮಷ್ಟಿ ಕಲೆ. ಜನರು ಬಯಲಿನಲ್ಲಿ ಒಂದು ವೇದಿಕೆಯನ್ನು ನಿರ್ಮಿಸಿಕೊಂಡು ಧಾರ್ಮಿಕ ಅಥವಾ ಇತರ ಸಮಯದಲ್ಲಿ ಮನರಂಜನೆಗಾಗಿ ಬಯಲಾಟವನ್ನು ಪ್ರದರ್ಶಿಸುತ್ತಿದ್ದರು. ದೊಡ್ಡಾಟದಲ್ಲಿ ಕಥಾವಸ್ತು ಪೌರಾಣಿಕ ಹಾಗೂ ಕಾಲ್ಪನಿಕ ಕಥೆಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ ರೌದ್ರ, ವೀರ, ಭಕ್ತಿ, ಹಾಸ್ಯ, ಭಯಾನಕ ರಸಗಳು ಬರುತ್ತವೆ. ದೊಡ್ಡಾಟ ಮಾತ್ರ ಸಂಸ್ಕೃತ ಮಿಶ್ರಿತ ಪ್ರಾಸಬದ್ಧ ಬಿಗುವಿನ ಶೈಲಿ. ಉ.ಕರ್ನಾಟಕದಲ್ಲಿ ಪ್ರಧಾನವಾಗಿರುವ ದೊಡ್ಡಾಟ ರಾತ್ರಿಯಿಡೀ ಜರುಗುತ್ತದೆ. ದೊಡ್ಡಾಟ ವಿಜಯನಗರದ ಸಾಮ್ರಾಜ್ಯದ ಕಾಲದಿಂದಲೂ ಮುಖ್ಯ ಕಲೆಯಾಗಿ ಇಂದಿಗೂ ಉಳಿದು ಬಂದಿದೆ. ಇಂಥ ಕಲೆಯಲ್ಲಿ ಶಿವಪ್ಪ ನೈಪುಣ್ಯತೆಯನ್ನು ಪಡೆದಿದ್ದಾರೆ. *(ಜಿ.ಆರ್.ಟಿ.)*

ಬಸವಕಲ್ಯಾಣ: ಬೀದರ ಜಿಲ್ಲೆಯ ಒಂದು ತಾಲ್ಲೂಕು ಕಲ್ಯಾಣ ಚಾಳುಕ್ಯರ ರಾಜಧಾನಿಯಾಗಿತ್ತು. ಶರಣ–ಶರಣೆಯರ ಬೀಡಾಗಿದ್ದ, ಅಂದಿನ ಕಲ್ಯಾಣವೇ ಇಂದಿನ ಬಸವಕಲ್ಯಾಣ. ಚಿಕ್ಕದಾದರೂ ಸುಂದರ ಅರಮನೆಯನ್ನು ಇಲ್ಲಿ ಕಾಣಬಹುದು. ಇದು ಅಂದಿನ ಮೂಲ ಸ್ಥಿತಿಯಲ್ಲಿಲ್ಲ. ಬಸವೇಶ್ವರರು ಧ್ಯಾನ ಮಾಡಲು ಬಳಸುತ್ತಿದ್ದ ಸ್ಥಳ ಅಂದಿನ ಮನೆ, ಅಕ್ಕನಾಗಮ್ಮನ ಗವಿ, ಪ್ರಭುದೇವರ ಗದ್ದುಗೆ, ರುದ್ರಮುನಿ ಶಿವಾಚಾರ್ಯ ಗದ್ದುಗೆ, ಮಡಿವಾಳ ಮಾಚಯ್ಯನಿಗೆ ಸಂಬಂಧಿತ ಸ್ಥಳ, ತ್ರಿಪುರಾಂತ ಕೆರೆ, ಪುರುಷ ಕಟ್ಟೆಯಲ್ಲದೆ ಬಸವೇಶ್ವರ ದೇವಸ್ಥಾನಗಳು ಪ್ರವಾಸಿಗರ ಆಕರ್ಷಣೀಯ ಕೇಂದ್ರವಾಗಳಾಗಿವೆ. ಅನುಭವ ಮಂಟಪದ ನೂತನ ಕಟ್ಟಡವೂ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಅಲ್ಲದೆ ಕೆಲ ದರ್ಗಾ ಮತ್ತು ಮಠಗಳು ಬಸವಕಲ್ಯಾಣದಲ್ಲಿವೆ. ಶಿವಶರಣರ ಅನೇಕ ಗವಿಗಳಿವೆ. ಸಮೀಪದ ನಾರಾಯಣಪುರ, ಪ್ರತಾಪಪುರ ಮತ್ತು ಶಿವಪುರಗಳಲ್ಲಿ ಅಂದಿನ ಕಾಲದ ಸುಂದರ ಶಿಲ್ಪಕಲೆಯ ಕೃತಿಗಳನ್ನು ಕಾಣಬಹುದಾಗಿದೆ. ಬಸವಕಲ್ಯಾಣ ತಾಲ್ಲೂಕಿನ ಉಮಾಪುರದಲ್ಲಿ ಹಳೆಯ ದೇವಾಲಯವಿದೆ. ಮೋರಬಂಡಿ, ಮೋಳಕೇರಾ ಮುಂತಾದ ಗ್ರಾಮಗಳಲ್ಲಿಯೂ ಕೆಲ ಅವಶೇಷಗಳಿವೆ. *(ಹೆಚ್.ಕೆ)*

ಬಸವಕಲ್ಯಾಣ ಕೋಟೆ: 'ಕಲ್ಯಾಣಪುರದಂತಹ ಪಟ್ಟಣವು ಈ ಭೂಮಿಯ ಮೇಲೆ ಹಿಂದೆ ಇರಲಿಲ್ಲ. ಈಗ ಇಲ್ಲ. ಮುಂದೆಯೂ ಇರುವುದಿಲ್ಲ' ಎಂಬ ಉತ್ಪ್ರೇಕ್ಷೆಯ ಮಾತನ್ನು 6ನೆಯ ವಿಕ್ರಮಾದಿತ್ಯನ (1076–1127) ಆಸ್ಥಾನದ ಕಾನೂನು ಪಂಡಿತ ವಿಜ್ಞಾನೇಶ್ವರ ಆಡಿದ್ದಾರೆ. "ಕಲ್ಯಾಣ ಪಟ್ಟಣವು ಬ್ರಹ್ಮಲೋಕ



ಬಸವಕಲ್ಯಾಣ ಕೋಟೆ

ದೇವಲೋಕಗಳಿಗೆ ಸಾಟಿ" ಎಂದು ಬಿಲ್ಹಣ ಹೊಗಳಿದ್ದಾನೆ. ಇವರಿಬ್ಬರ ಹೇಳಿಕೆಯ ಪೂರ್ವದಲ್ಲಿಯೂ ಕಲ್ಯಾಣದ ಕೋಟೆ ಅಸ್ತಿತ್ವದಲ್ಲಿದ್ದಿರಬೇಕು. ಏಕೆಂದರೆ ಹಳೆಯದರ ಮೇಲೆ ಹೊಸದರ ನಿರ್ಮಾಣವಾಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಈ ಬಗ್ಗೆ ಚರಿತ್ರೆಯ ಪುಟಗಳನ್ನು ತಿರುವಿಹಾಕಿದಾಗ ಹಲವಾರು ಮಾಹಿತಿಗಳು ಲಭಿಸುತ್ತವೆ.

ಕೋಟೆ: ಒಂದನೆಯ ಸೋಮೇಶ್ವರ ಕಲ್ಯಾಣಪುರವನ್ನು ವ್ಯವಸ್ಥಿತವಾಗಿ ನಿರ್ಮಿಸಿ ರಾಜ್ಯಭಾರಕ್ಕೆ ಅಡಿಪಾಯ ಹಾಕಿದ. ತರುವಾಯ ಬಂದಂತಹ ಅರಸರು ತಮಗಿಷ್ಟ ಬಂದಂತೆ ಕಲ್ಯಾಣ ಕೋಟೆಯನ್ನು ವಿಸ್ತರಿಸಿಕೊಂಡರು. ಚಾಲುಕ್ಯರು ಕಟ್ಟಿಸಿದ ಕೋಟೆಯನ್ನು ಬಹಮನಿ, ಆದಿಲ್ ಶಾಹಿಗಳು ಬಲಪಡಿಸಿದರು. ಹಾಗಾಗಿ ಸಮ್ಮಿಶ್ರ ಶೈಲಿಯ ಕೋಟೆ ನೋಡಿದ ಅನುಭವಾಗುತ್ತದೆ. ಪ್ರತಿ ಪ್ರವೇಶ ದ್ವಾರದ ತರುವಾಯ ಕಾಣ ಸಿಗುವ ಸಭಾಂಗಣಗಳೇ ಈ ಮಾತಿಗೆ ಸಾಕ್ಷಿಯಾಗಿವೆ.


ಒಂದೂವರೆ ಕಿ.ಮೀ. ಸುತ್ತಳತೆಯ ಮೂರು ಸುತ್ತಿನ ವಿಸ್ತಾರವುಳ್ಳ ವೃತ್ತಕಾರದ ಕೋಟೆ. ಸುಮಾರು ಹತ್ತು ಎಕರೆ ಭೂಪ್ರದೇಶ ಹೊಂದಿದೆ. ಹೊರ ಸುತ್ತು ಹಾಗೂ ಮಧ್ಯದ ಸುತ್ತಿನ ನಡುವೆ ಆಳವಾದ ಎತ್ತರವಾದ ಕಂದಕವಿದೆ. ಕಂದಕದ ಕೈಪಿಡಿ ಗೋಡೆಯಲ್ಲಿ ತೂಫಾಕಿ-ಬಂದೂಕಿನಿಂದ ಗುಂಡು ಹಾರಿಸಲು ಅನುಕೂಲ ಮಾಡಿಕೊಳ್ಳುವ ಉದ್ದೇಶದಿಂದ ಸುರಕ್ಷಾ ಕಿಂಡಿಗಳನ್ನು ಬಿಡಲಾಗಿದೆ. ಚಾಂದನಿ ಚಬೂತರ ಸಮೀಪದ ಬುರ್ಜಿನ ಮೇಲಿರುವ ಕ್ರಿ.ಶ. 1580 ರ ಏಪ್ರಿಲ್ 20 ರ ಪರ್ಷಿಯನ್ ಶಾಸನ ಅಲಿ ಆದಿಲ್‌ಷಾ ದೊರೆಯ ಕಾಲದಲ್ಲಿ ಮಲಿಖುಷ್ ಷರ್ಬ ಮಲಿಕ್ ಇಸ್ಮಾಯಿಲ್ ಎಂಬ ವ್ಯಕ್ತಿಯು ನಾಯಿಬ್-ಇ-ಷೆಬತ್ ಮಾಮ್ಲಾ (ಜಿಲ್ಲೆಗೆ ರಾಜಪ್ರತಿನಿಧಿ) ಹುದ್ದೆಯಲ್ಲಿರುವಾಗ ಕಲ್ಯಾಣ ನಗರದ ಕೋಟೆ ಗೋಡೆಯನ್ನು ಖಾನ್ ದಿಲಾವರ್ ಖಾನ್ ಎಂಬವನು 6000 ಹೊನ್ನುಗಳ ಖರ್ಚಿನಲ್ಲಿ ಕಟ್ಟಿಸಿದುದನ್ನು ದಾಖಲಿಸಿದೆ.

ಕೋಟೆಯ ಅಖಂಡ ಬಾಗಿಲಿನ ಮೇಲಿರುವ ಪರ್ಷಿಯನ್ ಶಾಸನದ ಪ್ರಕಾರ ಸಮಾ ಸಾಪಿರಿ ಅವರ ಪುತ್ರ ಬರ್ಹಾನ್ ಮಸೀದೆ ಕಟ್ಟಿಸಿದನೆಂದು ಗೊತ್ತಾಗುತ್ತದೆ. ಮೊಹಮ್ಮದ್-ಬಿನ್ ತುಘಲಖ್‌ನ ಆಳ್ವಿಕೆಯಲ್ಲಿ ಕ್ರಿ.ಶ. 1333 ರ ಸಪ್ಟೆಮಬರ್ 16 ರಂದು ಈ ಮಸೀದೆ ಪೂರ್ಣಗೊಳಿಸಲಾಯಿತೆಂದು ಶಾಸನದ ವಕ್ತಾರ ಖುತುಬ್ ಹೇಳಿದ್ದಾನೆ. ಪ್ರಸ್ತುತ ಕೋಟೆಗೆ ಏಳು ದ್ವಾರಗಳಿದ್ದು; ಅವು ವಿವಿಧ ಕಾಲ ಘಟ್ಟಗಳ ನಿರ್ಮಿಸಲ್ಪಟ್ಟಿವೆ. ಒಂದು ಇನ್ನೊಂದಕ್ಕಿಂತ ಭಿನ್ನವಾಗಿವೆ. ಕೋಟೆ ಗೋಡೆ ಕಟ್ಟಲು ಉಪಯೋಗಿಸಲಾದ ಬೃಹತ್ ಗಾತ್ರದ ಕಪ್ಪುಕಲ್ಲುಗಳು ಒಂದೇ ರೀತಿಯಲ್ಲಿ ಕಟೆದವುಗಳಲ್ಲ. ಹಳೆ ಮಹಲು ದೇವಾಲಯದ ತೋಳು, ಹೊಸ್ತಿಲು ಪಟ್ಟಿಕೆ, ನೆಡುಗಂಬಗಳನ್ನು ಕೋಟೆಗೆ ಬಳಸಿದ್ದನ್ನು ಗಮನಿಸಬಹುದಾಗಿದೆ. ಅವುಗಳಲ್ಲಿನ ಬಹಳಷ್ಟು ಕಲ್ಲುಗಳು ಚಾಳುಕ್ಯ ಶಿಲ್ಪವನ್ನೊಳಗೊಂಡಿವೆ. ಹಿಂದೆ ಕಟ್ಟಲಾದ ದೇವಾಲಯ, ಬಸದಿಗಳು ಮುಸ್ಲಿಂರ ಆಳ್ವಿಕೆಯಲ್ಲಿ ನೆಲಸಮವಾದವು. ಆದರೆ ಕಲ್ಲು ಕೋಟೆ ಕೊತ್ತಲುಗಳಿಗೆ ಆಧಾರವಾಗಿ ನಿಂತವು.

ಕೋಟೆಯ ಹೆಬ್ಬಾಗಿಲು ಎರಡಂತಸ್ತಿನಲ್ಲಿದ್ದು ಶಾಹ ಬಾಬರ್ ಮೀರಕಲಾನೆಂಬ ರಾಜಾ ಹಜರತ ಹುಸೇನ್‌ರ ನೆನಪಿಗಾಗಿ ನಿರ್ಮಿಸಿದ್ದಾನೆ. ಇದನ್ನು "ದರ್ಗಾ ಎ ಹುಸೇನಿ" ಎಂದು ಕರೆಯುತ್ತಾರೆ. ಹೆಬ್ಬಾಗಿಲು ಪ್ರವೇಶಿಸಿದ ಮೇಲೆ ಆಯತಾಕಾರದ ವಿಶಾಲ ಆವರಣದಲ್ಲಿ ಮೂರು ಮುಖ ಮಂಟಪಗಳ ಸಭಾಂಗಣವಿದೆ. ಎಡಬಲದಲ್ಲಿ ಗಜಾಶ್ವ ಶಾಲೆಗಳಿವೆ. ಈ ಆವರಣದ ದಕ್ಷಿಣಾಭಿಮುಖವಾದರೆ ಮತ್ತೊಂದು ಪ್ರವೇಶದ್ವಾರ ಸಿಗುತ್ತದೆ. ಎತ್ತರವಾದ ಕಮಾನಿನ ಬಾಗಿಲುವುಳ್ಳ ಇದು ಮುಂದೆ ಚಾಚಿದ ಕಿಟಕಿ, ಮೂರು ಕಮಾನು, ಎರಡು ಮಿನರೇಟ್ ತೆನೆಗಳನ್ನು ಹೊಂದಿದೆ. ಇದನ್ನು ಕ್ರಿ.ಶ. 1795 ರಲ್ಲಿ ನಿಜಾಮನ ಕಾಲದಲ್ಲಿ ಕಟ್ಟಲಾಗಿಯೆಂದು ಬಾಗಿಲ ಮೇಲಿರುವ ಶಾಸನದಿಂದ ತಿಳಿದುಬರುತ್ತದೆ.

ರಾಜಮಹಲಿನ ದಕ್ಷಿಣ ಕಮಾನಿನ ಮೇಲೆ ಬರೆದಿರುವ ಪರ್ಷಿಯನ್ ಶಾಸನದ ಪ್ರಕಾರದ 2ನೆಯ ಇಬ್ರಾಹಿಮ್ ಆದಿಲ್ ಶಾಹನ ಆಜ್ಞೆಯ ಮೇರೆಗೆ ನಿಜಾಮುದ್ದೀನ್ ಖಾನ್ ಎಂಬುವವನು ಕ್ರಿ.ಶ. 1592 ರಲ್ಲಿ ಈ ಕಟ್ಟಡ ಕಟ್ಟಿಸಿದ್ದನ್ನು ತಿಳಿಸುತ್ತದೆ. ರಾಜ ಮಹಲಿನ ದಕ್ಷಿಣ ಗೋಡೆಯ ಹೊರಬದಿಯ ಪರ್ಷಿಯನ್ ಶಾಸನದಂತೆ ಕೋಟೆಯ ಬುರುಜಗಳನ್ನು ಖವಾಸ್ ಖಾನನ ಆಳ್ವಿಕೆಯಲ್ಲಿ ಕಟ್ಟಲಾಯಿತು.

ಸುಂದರವಾದ ಮಹಲಿನ ನಾಲ್ಕು ಕಮಾನುಗಳಿಗೆ ಕಟ್ಟಿಗೆಯ ಬಾಗಿಲುಗಳನ್ನು ಅಳವಡಿಸಲಾಗಿದೆ. ಇದಕ್ಕೆ ಒಂಬತ್ತು ಕಿಟಕಿಗಳಿವೆ. ಹಲವಾರು ಹೂವು, ಹೂಜಿ, ಹಣತೆ ಆಕಾರದ ಚಿಕ್ಕ ಗಾತ್ರದ ಮಾಡುಗಳಿವೆ. ಗಾರೆ ಸುಣ್ಣದಿಂದ ಮಹಲಿನ ಒಳ ಆವರಣದಲ್ಲಿ ಕಮಲದ ಹೂವು, ವಿವಿಧ ವಿನ್ಯಾಸದ ಹೂ ಬಳ್ಳಿಗಳ ಸುಂದರ ಚಿತ್ರ ಬಿಡಿಸಲಾಗಿದೆ. ಗೋಡೆ, ಒಳ ಮಾಳಿಗೆಯ ಮೇಲೆಲ್ಲ ಬಿಡಿಸಲಾದ ವೃತ್ತಾಕಾರದ ಅಲಂಕಾರಿಕ ವಿನ್ಯಾಸಗಳು ಎಲ್ಲರ ಗಮನ ಸೆಳೆಯುತ್ತವೆ. ರಾಜ್ ಮಹಲಿನ ಮುಂಭಾಗದಲ್ಲಿ ಸಣ್ಣದಾದ 13 ಅಡಿ ಆಳದ ನೀರಿನ



ನೃತ್ಯ ಸಭಾಂಗಣ – ಬಸವಕಲ್ಯಾಣ

ಹೊಂಡವಿದೆ. ಕುತುಬ್ ಶಾಹಿ, ಆದಿಲ್ ಶಾಹಿ, ಬರೀದ್ ಶಾಹಿ, ನಿಜಾಮರು ಈ ಕೋಟೆಯನ್ನು ಆಗಾಗ ನವೀಕರಿಸಿ ಆಳಿದ್ದಾರೆಂದು ಮಹಲಿನ ಮುಂಭಾಗದ ಗೋಡೆಯ ಮೇಲಿನ ಅರಬ್ಬಿ ಶಿಲಾಶಾಸನದಿಂದ ತಿಳಿದು ಬರುತ್ತದೆ.

ರಾಜ್ ಮಹಲಿನ ಬಲ ಭಾಗದಲ್ಲಿನ ಚಾಳುಕ್ಯರ ಕಾಲದ ಲಕ್ಷ್ಮಿ ದೇವಾಲಯದ ಬಾಗಿಲ ಚೌಕಟ್ಟಿನ ಮೇಲೆ ವೈವಿಧ್ಯಮಯ ಶಾಖೆಗಳಿದ್ದು; ವಾಸ್ತುಶಿಲ್ಪದ ದೃಷ್ಟಿಯಿಂದ ಅವು ಗಮನಾರ್ಹವಾಗಿವೆ. ಬಾಗಿಲ ಮೇಲ್ತೋಳಿನ ಲಲಾಟದಲ್ಲಿ ಗಣೇಶನ ಉಬ್ಬು ಶಿಲ್ಪವಿದೆ. ಕೆಳಗಿದ್ದ ದ್ವಾರಪಾಲಕರ ಶಿಲ್ಪಗಳನ್ನು ನಾಶ ಮಾಡಲಾಗಿದೆ. ದೇವಾಲಯದ ಒಂದು ಭಾಗವು ನೆರೆಯ ಕಟ್ಟಡದೊಂದಿಗೆ ಬೆರೆತುಹೋಗಿದೆ. ದೇವಾಲಯದಲ್ಲಿ ಗರ್ಭಗೃಹ ಮಾತ್ರವಿದ್ದು; ಅದರಲ್ಲಿ ದೇವರಿಲ್ಲ. ಮುಸ್ಲಿಂ ಅರಸರ ಕಾಲದಲ್ಲೂ ಆ ದೇವಾಲಯ ಉಳಿದುಕೊಂಡು ಬಂದಿರುವುದು ಕುತೂಹಲದ ಸಂಗತಿಯಾಗಿದೆ.

ಹೈದರ್ ಮಹಲಿನಲ್ಲಿ ವಿಶಾಲವಾದ ತೆರೆದ ನೃತ್ಯ ಸಭಾಂಗಣವಿದೆ. ಅದಕ್ಕೆ ಮೂರು ಕಮಾನುಗಳಿವೆ. ಹಿಂಭಾಗದ ಎಡಬದಿಯಲ್ಲಿರುವ ದಾರಿ ರಂಗೀನ್ ಮಹಲ್ ಕಡೆಗೆ ಸಾಗುತ್ತದೆ. ಹೈದರ ಮಹಲಿನ ಉತ್ತರ ದಿಕ್ಕಿನ ಗೋಡೆಯ ಮೇಲಿನಿಂದ ಕೆಳಗೆ ನೀರು ಬೀಳುವಂತೆ ಮಾಡಲಾಗಿದೆ. ಮೆದುವಾದ ಗಾರೆ ಸುಣ್ಣದಿಂದ ಮಾಡಲಾದ ಮಾದರಿ ಪಟ್ಟಿಯಿಂದ ನೀರು ಹರಿದು ಬರುತ್ತಿದ್ದಾಗ ಮೋಹಕವಾಗಿ ಕಾಣಿಸುತ್ತದೆ. ಸಭಾಂಗಣದ ಮಧ್ಯದಲ್ಲಿನ ನೀರಿನ ತೊಟ್ಟಿಯ ಬದಿಯಲ್ಲಿ ರಾಜ ರಾಣಿಯರು ಕುಳಿತುಕೊಳ್ಳುತ್ತಿದ್ದ ಆಸನಗಳಿವೆ. ನೃತ್ಯ ಸಭಾಂಗಣದ ಮಧ್ಯದಲ್ಲಿ ಅಷ್ಟಭುಜಾಕೃತಿಯ ತೊಟ್ಟಿಯಿದೆ. ತೊಟ್ಟಿಯ ಪಕ್ಕದಲ್ಲಿ ಗಾರೆ ಸುಣ್ಣದಿಂದ ಅಲಂಕರಿಸಿದ ಆಸನಗಳು, ಕಂಬಗಳ ಮೇಲಿನ ಗಾರೆಯ ಅಲಂಕಾರಿಕ ವಿನ್ಯಾಸಗಳು ಸುಂದರವಾಗಿವೆ. ನೃತ್ಯಗಾರನು ಶೃಂಗರಿಸಿಕೊಳ್ಳುತ್ತಿದ್ದ ಕೋಣೆಗಳು ಇಲ್ಲಿದ್ದಂತೆ ತೋರುತ್ತದೆ. ಕೋಟೆಯಲ್ಲಿನ ಜನರಿಗೆ ಕುಡಿಯಲು ಜಲ ವ್ಯವಸ್ಥೆಗಾಗಿ ನಿರ್ಮಿಸಲಾದ ಬಾವಿ, ಕಾಲುವೆಗಳನ್ನು ಇಂದಿಗೂ ಕಾಣಬಹುದಾಗಿದೆ.

ರಂಗೀನ್ ಮಹಲ್, ಸ್ನಾನ ಗೃಹ, ದಾಖಲೆಗಳ ಕೊಠಡಿ, ಬಾರೂದ್‌ಖಾನಾ, ತಾಲಿಮ್‌ಖಾನಾ, ಕಾರಂಜಿ ತೊಟ್ಟಿಗಳು, ಕಡಕ್‌ಬಿಜಲಿ ತೋಫು, ನೌಗಜ ತೋಫು, ಸೈನಿಕರ ನಿವಾಸ, ಕಾವಲು ಗೋಪುರ, ಸುರಂಗ ಮಾರ್ಗ, ಬಾವಿ ಮೊದಲಾದವು ಕೋಟೆಯಲ್ಲಿನ ಪ್ರಮುಖ ಆಕರ್ಷಕ ಸ್ಮಾರಕಗಳಾಗಿವೆ. ಜೈನ ತೀರ್ಥಂಕರರ, ನಾಗ ನಾಗಿಣಿಯರ, ಗರುಡ ವಿಗ್ರಹ, ಸರ್ಪಶಯನ ವಿಷ್ಣು, ಮಹಿಷಾಸುರ ಮರ್ದನಿ, ಗಜಾಸೂರನ ವಧೆ, ನಟರಾಜ, ಲಕ್ಷ್ಮೀ–ನಾರಾಯಣ, ಶಿವ ಪಾರ್ವತಿ, ಗಣಪತಿ, ಯಕ್ಷ–ಯಕ್ಷಿಣಿಯರು, ಶಿಲಾಬಾಲಕಿಯರ, ದ್ವಾರ ಪಾಲಕರ ವಿಗ್ರಹಗಳು, ಶಿಲಾ ಪಟ್ಟಿಕೆಗಳು ಆಕರ್ಷಣೀಯವಾಗಿವೆ.

ಬುರ್ಜ್‌ಗಳು: ಕೋಟೆಯ ಕೈಪಿಡಿ ಗೋಡೆಯಲ್ಲಿ ತೋಫುಗಳಿಗಾಗಿ ಬಿಟ್ಟ ಅಗಲವಾದ ಸಂದಿಗಳಿಗೆ ಲೆಕ್ಕವಿಲ್ಲ. ಬುರುಜುಗಳ ಮೇಲ್ಭಾಗದಲ್ಲಿ ತೋಫುಗಳನ್ನಿಡಲು ಎತ್ತರವಾದ ವೇದಿಕೆಗಳನ್ನು ಕಟ್ಟಲಾಗಿದೆ. ಪ್ರತಿಯೊಂದು ಬುರುಜಿನ ಮೇಲೂ ತೋಫುಗಳಿದ್ದುವು. ವೈರಿಗಳನ್ನು ನಿಯಂತ್ರಿಸಲು ಈ ಬುರುಜುಗಳು ಸಹಾಯಕವಾಗುತ್ತಿದ್ದವು. ಬುರುಜ್‌ಗಳ ಕಡೆಗೆ ಹೋಗಬೇಕಾದರೆ ಮೆಟ್ಟಿಲುಬೇಕು. ಅವುಗಳನ್ನು ಅವರು ನಿರ್ಮಿಸಿಕೊಂಡದ್ದುಂಟು. ಪ್ರತಿ ಮೆಟ್ಟಲು ಒಂದು ಅಡಿಗಿಂತಲೂ ಎತ್ತರವಾಗಿವೆ. ಇದರಿಂದ ಗೊತ್ತಾಗುವ ಸಂಗತಿ ಏನೆಂದರೆ ಅಂದಿನವರ ಸಾಮಾನ್ಯ ಎತ್ತರ ಆರು ಅಡಿಗಳಿಗಿಂತಲೂ ಹೆಚ್ಚು ಎಂದು ಹೇಳಬಹುದು.

ಎರಡನೆಯ ಅಥವಾ ಮಧ್ಯದ ಸುತ್ತಿನ ಎತ್ತರವಾದ ಗೋಡೆಯ ಮೇಲೆ ಅರ್ಧ ವೃತ್ತಾಕಾರದ ಮತ್ತು ಬಹುಭುಜಾಕೃತಿಯ ನಾಲ್ಕು ಬುರುಜುಗಳಿವೆ. ಅವುಗಳಲ್ಲಿನ ನಾಲ್ಕು ಬುರುಜುಗಳನ್ನು ಕ್ರಿ.ಶ. 1562;67;68 ಹಾಗೂ 1573 ರಲ್ಲಿ ಕಟ್ಟಲಾಯಿತು. ಮೊಹಮ್ಮದ್ ಆದಿಲ್‌ಶಾಹನ ಆಳ್ವಿಕೆಯಲ್ಲಿ ಸೈನ್ಯಾಧಿಕಾರಿಯಾಗಿದ್ದ ಸಿದ್ದಿ ದಿಲಾವರ ಈಗಾಗಲೇ ಅಸ್ತಿತ್ವದಲ್ಲಿದ್ದ ಕೋಟೆಯನ್ನು ಭದ್ರಪಡಿಸಿದ ಕ್ರಿ.ಶ. 1646 ಅದಕ್ಕೆ ಬುರುಜುಗಳನ್ನು; ಮೂರು ಆಳ್ವೇರಿ (Ramparts) ಗಳನ್ನು ಜೋಡಿಸಿದ. ಕಡೆಗಾಪಿನ ಗೋಪುರಗಳನ್ನು ನಿರ್ಮಿಸಿ, ಅವುಗಳ ಮೇಲೆ ತೋಪುಗಳನ್ನು ಇರಿಸಿದ. ಇದರಿಂದ ಸಂತೋಷಗೊಂಡ ಮೊಹಮೂದ್ ಶಾಹ ಕಲ್ಯಾಣದ ಅಧಿಕಾರಿ (Governer) ಹುದ್ದೆ ಇತ್ತುದನ್ನು ಬಾರೂದ್‌ಖಾನಾ ಗೋಡೆಯ ಮೇಲಿರುವ ಕ್ರಿ.ಶ. 1646 ರ ಜನವರಿ–ಫೆಬ್ರವರಿ ತಿಂಗಳಿನ ಪರ್ಷಿಯನ್ ಶಾಸನ ವಿವರಿಸುತ್ತದೆ. ಅಲಿ ಆದಿಲ್ ಶಾಹನ ಆಳ್ವಿಕೆಯಲ್ಲಿ ರುಸ್ತುಂಖಾನ್, ಸೈಯದ್ ಮುಹಮ್ಮದ್, ಮಲಿಕುಷ್ ಸದ್ರುದ್ದೀನ್, ಮಲಿಕ್ ಇಸ್ಮಾಯಿಲ್‌ರು ಕಲ್ಯಾಣದ ಪ್ರಾಂತಾಧಿಕಾರಿಗಳಾಗಿದ್ದರು.

ಕ್ರಿ.ಶ. 1563–64 ಪರ್ಷಿಯನ್ ಶಾಸನವು ನಾಯಿಬ್–ಇ–ಪೈಬತ್ ಖಾನ್–ಇ–ಆಜಮ್ ರುಸ್ತುಂ ಖಾನನ ಅಧಿಕಾರಾವಧಿಯಲ್ಲಿ ಘನತೆವೆತ್ತ ಖಾನ್ ಕಾಮಿಲ್ ಖಾನ್ ಎಂಬಾತನು ಸಿದ್ದಿ ಬುರುಜ್ ಕಟ್ಟಿಸಿದನೆಂದು ಹೇಳುತ್ತದೆ. ಕ್ರಿ.ಶ. 1567ರ ಪರ್ಶಿಯನ್ ಶಾಸನವು ಖಾನ್ ಕಾಮಿಲ್ ಖಾನ್ ಎಂಬಾತನು ನಾಮಿಬ್–ಇ–ಪೈಬತ್ ಸಯ್ಯಿದ್ ಮುಹಮ್ಮದನ ಆಡಳಿತಾವಧಿಯಲ್ಲಿ ಮಂಗನಿ ಬುರ್ಜ್ ಕಟ್ಟಿಸಿದನೆಂದು ಗೊತ್ತಾಗುತ್ತದೆ. ಶರ್ಖ್ ಆದಿಲ್ ಶಾಹ ಆಳುತ್ತಿರುವಾಗ ನಾಯಿಬ್

–ಇ–ಫೈಬತ್ ಮಲಿಖಿಷ್ ಖರ್ಬ್ ಮಲಿಕ್ ಸದ್ರುದ್ದೀನನ ಆಡಳಿತ ಕಾಲದಲ್ಲಿ (ಕ್ರಿ.ಶ. 1568)ರಲ್ಲಿ ಖಾನ್ ಕಾಮಿಲ್ ಖಾನ್‌ನು ಹುಸೈನಿ ಬುರ್ಜ್ ಕಟ್ಟಿಸಿದನೆಂದು ಶಾಸನವೊಂದು ತಿಳಿಸುತ್ತದೆ. ಅಲಿ ಆದಿಲ್ ಶಾಹ ದೊರೆಯ ಕಾಲದಲ್ಲಿ ಖಾನ್ ಕಾಮಿಲ್ ಖನ ಎಂಬುವನು ನಾಯಿಬ್–ಇ–ಫೈಬರ್ತ (ರಾಜಪ್ರತಿನಿಧಿ) ಸಯ್ಯಿದ್ ಮುಹಮ್ಮದ್‌ನ ಕಾಲದಲ್ಲಿ 1573 ಮಾರ್ಚ್ 23 ರಂದು ಬಲ್ಲಮ್ ಬುರ್ಜ್ ಕಟ್ಟಿಸಿದನೆಂದು ಬಲ್ಲಮ್ ಬುರ್ಜಿನ ಮೇಲಿರುವ ಪರ್ಷಿಯನ್ ಶಾಸನ ತಿಳಿಸುತ್ತದೆ.

ಕೋಟೆಯಲ್ಲಿ ದೊರೆತಿರುವ ತೋಫಿನ ಶಾಸನದ ಪ್ರಕಾರ ಆದಿಲ್ ಷಾಹನ ಪುತ್ರ ಮುಬಾರಕ್ ಷಾ ಕ್ರಿ.ಶ. 1533–65 ದೊರೆಯ ಆಳ್ವಿಕೆಗೆ ಸಂಬಂಧಿಸಿದೆ. ಈತ ಖಾನ್ ದೇಶದ ಫಾರುಖಿ ವಂಶಕ್ಕೆ ಸಂಬಂಧಿಸಿದ ವ್ಯಕ್ತಿ ಎಂದು ಹೇಳುವುದುರ ಜೊತೆಗೆ ರಾಜಾಜ್ಞೆಯ ಮೇರೆಗೆ ಹಲವಾರು ತೋಫುಗಳನ್ನು ನಿರ್ಮಾಣ ಮಾಡಲಾಯಿತೆಂದು ತಿಳಿಸುತ್ತದೆ. ಕೈ ತುಫಾಕಿಯಿಂದ ಹಿಡಿದು ಕಡಕ್ ಬಿಜಲಿ, ನೌಗಜ್‌ವರೆಗೆ ಹಲವಾರು ತೋಫುಗಳು ಕೋಟೆಯಲ್ಲಿದ್ದವು. ಈಗಲೂ ಹಲವಾರು ತೋಫುಗಳನ್ನು ಕಾಣಬಹುದಾಗಿದೆ.

ನೌಗಜ ತೋಪು 27 ಅಡಿ ಉದ್ದವಾಗಿದೆ. ಇದರ ಹಿಂಭಾಗ 69 ಅಂಗುಲ ಸುತ್ತಳತೆ ಹೊಂದಿದೆ. ಪ್ರತಿಯೊಂದು ಪಟ್ಟಿಗಳಿಗೆ ಮೇಲ್ಭಾಗದಲ್ಲಿ ಎರಡೆರಡು ಬಳೆಗಳಿದ್ದವು. ಈಗ ಒಂಬತ್ತು ಬಳೆಗಳು ಮಾತ್ರ ಉಳಿದಿವೆ. ಕಡಕ್ ಬಿಜಲಿ ತೋಪು ಕೋಟೆಯ ಎತ್ತರದ ಕಟ್ಟಡದ ಮೇಲಿದೆ. 12 ಅಡಿ ಉದ್ದವಾಗಿರುವ ಈ ತೋಫು ತುಂಬ ನುಣುಪಾಗಿದೆ. ಇದರ ಹಿಂಬಾಗವು 42, ಮುಂಭಾಗವು 37 ಅಂಗುಲ ಸುತ್ತಳತೆಯಲ್ಲಿದೆ. ಪಂಚ ಧಾತುವಿನಿಂದ ನಿರ್ಮಿಸಲಾದ ಈ ತೋಪಿನ ಮೇಲೆ ಹೂ–ಬಳ್ಳಿಗಳನ್ನು ಚಿತ್ರಿಸಲಾಗಿದೆ. ಮುಂಭಾಗ ಪಕ್ಷಿಯ ದೇಹದಂತೆ ಗೋಚರಿಸಿದರೆ, ಕೆಳಭಾಗವು ಮೊಸಳೆಯ ಹಲ್ಲು ಆನೆಯ ಸೊಂಡಲಿನಂತೆ ಭಾಸವಾಗುತ್ತದೆ. ಕೋಟೆಯ ಆವರಣದಲ್ಲಿ ಸಾವಿರಾರು ಕಲ್ಲು ಹಾಗೂ ಕಬ್ಬಿಣದ ಚಿಕ್ಕ ದೊಡ್ಡ ಬಂದೂಕಿನ ಗುಂಡುಗಳಿವೆ. ಗರಡಿಮನೆಯಲ್ಲಿ ಬಳಸುತ್ತಿದ್ದ ವೃತ್ತಾಕಾರದ ಕಲ್ಲು ಗುಂಡುಗಳು ಕೋಟೆಯ ಆವರಣದಲ್ಲೆಲ್ಲ ಸಿಗುತ್ತವೆ. ಈ ಗುಂಡುಗಳನ್ನು ಅವಲೋಕಿಸಿದರೆ ಅಂದಿನ ಸೈನಿಕರ ಅಥವಾ ಪೈಲ್ವಾನ್‌ರ ಶಕ್ತಿ ಸಾಮರ್ಥ್ಯ ಎಷ್ಟೆಂಬುದು ಅರಿವಿಗೆ ಬರುತ್ತದೆ.

ತೋಫುಗಳ ನಿರ್ಮಾಣದಲ್ಲಿ ಹಲವು ತಂತ್ರಜ್ಞಾನ, ಮಾದರಿ ಅನುಸರಿಸಿದ್ದನ್ನು ಗಮನಿಸಬಹುದಾಗಿದೆ. ಮದ್ದು ಅರೆಯಲು ಬಾರೂದ ಖಾನಾ ಎದುರು ಬೀಸುವ ಕಲ್ಲುಗಳಿದ್ದವು ಎನಿಸುತ್ತದೆ. ಅವುಗಳಲ್ಲಿನ ಎರಡು ಬೀಸುವ ಕಲ್ಲುಗಳನ್ನು ಈಗಲೂ ನೋಡಬಹುದಾಗಿದೆ. ಕಲ್ಯಾಣ ಕೋಟೆಯ ಕಟ್ಟಡ ರಚನಾ ವಿನ್ಯಾಸ, ಶೈಲಿ, ವಾಸ್ತು, ಸುರಕ್ಷಾ ವಿಧಾನ, ಮುಂಜಾಗ್ರತಾ ಕ್ರಮ ಇತ್ಯಾದಿ ಸಂಕೀರ್ಣಗಳನ್ನು ಒಳಗೊಂಡಿದೆ.

(ಆರ್.ಬಿ.)

ಬಸವರಾಜ ಪೋಲಿಸ ಪಾಟೀಲ: ಡಾ. ಬಸವರಾಜ ಪೋಲಿಸ ಪಾಟೀಲ ಅವರು ಗುಲ್ಬರ್ಗಾ ಜಿಲ್ಲೆಯ ಅಫಜಲ ಪುರ ತಾಲ್ಲೂಕಿನ ದಿಕ್ಸಂಗಾ (ಬಿ) ಗ್ರಾಮದಲ್ಲಿ 01.08.1954 ರಂದು ಜನಿಸಿದರು.



ತಂದೆ ಶಾಮರಾವ ಪೋಲಿಸ ಪಾಟೀಲ ತಾಯಿ ಸೋನು ಬಾಯಿ. ಪಾಟೀಲರದು ಊರಿನಲ್ಲಿ ಪ್ರತಿಷ್ಠಿತ ಗೌಡರ ಮನೆತನ, ಊರಿನ ಎಲ್ಲ ಸಮಾಜಗಳ ಜನರೊಂದಿಗೆ ಅವರ ಹಬ್ಬ, ಉತ್ಸವ, ಜಾತ್ರೆ, ಸಂಪ್ರದಾಯ, ಆಚರಣೆಗಳಲ್ಲಿ ಭಾಗವಹಿಸುತ್ತ ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು. ಅಲ್ಲದೆ ಬಾಲ್ಯದಲ್ಲಿ ಊರಲ್ಲಿ ಅಮವಾಸ್ಯೆ, ಹುಣ್ಣಿಮೆಗಳಲ್ಲಿ ನಡೆಯುತ್ತಿದ್ದ ಭಜನೆಗಳಲ್ಲಿ, ಜಾತ್ರೆಗಳಲ್ಲಿ ಆಡುತ್ತಿದ್ದ ಬಯಲಾಟ, ಕೋಲಾಟ, ಸುಗ್ಗಿಯ ಕಾಲದಲ್ಲಿ ರಾಶಿ ಹಂತಿ ಮುಂತಾದವುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತ ಜಾನಪದವನ್ನು ಉಸಿರಾಗಿಸಿಕೊಂಡು ಬೆಳೆದರು.

1978ರಲ್ಲಿ 'ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ' ಪ್ರಬಂಧಕ್ಕೆ 1984ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದರು.

ಡಾ. ಪಾಟೀಲರ ಜಾನಪದ ಕಾರ್ಯವು ಸಂಶೋಧನಾ ಮುಖಿ, ಅಧ್ಯಯನಮುಖಿ ಹಾಗೂ ಪ್ರಕಟಣಾಮುಖಿಯಾಗಿ ವಿಸ್ತಾರಗೊಂಡಿರುವುದು. ಅವರ ಜಾನಪದ ಭಾರತಿ (1985) ಜಾನಪದ ಸಿರಿ (1990) ಸಂವೇದನ (1993) ಜಾನಪದ ಸೌರಭ (1994) ಜಾನಪದ ವ್ಯಾಸಂಗ (1998) ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ (2001) ಜಾನಪದ ಚಿಂತನ (2001) ಅಮರ ಜಾನಪದ (2004) ಅಮೂಲ್ಯ ಜಾನಪದ (2006) ಜನಪದ ಸಾಹಿತ್ಯ ಮತ್ತು ಶರಣರು (2008) ಹಾಗೂ ಜಾನಪದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಸು. 40ಕ್ಕೂ ಹೆಚ್ಚಿನ ಸಂಶೋಧನಾ ಲೇಖನಗಳಲ್ಲಿ ಕಾಣುತ್ತೇವೆ.

ಗುಲಬರ್ಗಾ ವಿಶ್ವವಿದ್ಯಾಲಯ ರಾಜ್ಯೋತ್ಸವ ಪ್ರಶಸ್ತಿ. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿಗಳಲ್ಲದೆ; ಅವರ ಅನೇಕ ಜಾನಪದ ಕೃತಿಗಳಿಗೆ ಕರ್ನಾಟಕ, ಕೇರಳ ಮುಂತಾದ ರಾಜ್ಯಗಳ ದತ್ತಿ ಪುರಸ್ಕಾರ, ಪ್ರಶಸ್ತಿಗಳು ಶಿರೋಮುಡಿಗೇರಿವೆ. ಸಧ್ಯಕ್ಕೆ ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾಗಿದ್ದಾರೆ. ಅಲ್ಲದೆ ಕರ್ನಾಟಕ ಜಾನಪದ ಪರಿಷತ್ತಿನ ಕಲಬುರ್ಗಿ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದರ ಮೂಲಕ ತಾವೊಬ್ಬ ಸಮರ್ಥ ಸಂಘಟಕರೆನ್ನುವುದನ್ನು ತೋರಿಸಿಕೊಟ್ಟಿದ್ದಾರೆ.


ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೊಸ ಹೊಸ ವಿಷಯಗಳನ್ನು ಆಯ್ದುಕೊಂಡು ವಿಸ್ತಾರವಾಗಿ, ವಿವರವಾಗಿ ವಿಶ್ಲೇಷಿಸುವುದರ ಮೂಲಕ ಡಾ. ಪೋಲಿಸ ಪಾಟೀಲರು ವೈಜ್ಞಾನಿಕ ಅಧ್ಯಯನ ಧೋರಣೆಯನ್ನು ಮೆರೆದ ಪರಿಪೂರ್ಣ ವಿದ್ವಾಂಸರಾಗಿದ್ದಾರೆ.

(ಎಸ್.ಎನ್.)

ಬಸವರಾಜ ಬಾಳಪ್ಪ ಹೂಗಾರ ತಾಳಕೇರಿ: ಭಾವಗೀತೆಗಳ ಕರ್ತೃ. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ ತಾಳಕೇರಿಯಲ್ಲಿ ಜನಿಸಿದರು (1930). ತಾಯಿ ಸಾವಿತ್ರಮ್ಮ, ತಂದೆ ಬಾಳಪ್ಪ ಹೂಗಾರ. ತಂದೆ, ಅಜ್ಜ–ಮುತ್ತಜ್ಜರು ಸಣ್ಣಾಟ–ದೊಡ್ಡಾಟಗಳ ಕಲಾವಿದರು. ಸಣ್ಣಾಟದಲ್ಲಿ ಡಪ್ಪು, ದೊಡ್ಡಾಟದಲ್ಲಿ ಮುದ್ದಲೆ ತಾಳ, ನಾಟಕದಲ್ಲಿ ತಬಲಾ, ಭಜನೆಯಲ್ಲಿ ತಪ್ಪಡಿ ಹಾಗೂ ಕರಡಿ ಮಜಲಿನಲ್ಲಿ ಕಣಿ ಬಾರಿಸುತ್ತಿದ್ದರು. ಹಾಡುಗಾರರೂ ಆಗಿದ್ದರು.

ಓದಿದ್ದು ಕೇವಲ ಎರಡನೆಯ ತರಗತಿ; ಪ್ರತಿಭೆ ಅಗಾಧವಾದದ್ದು. 40 ಕೃತಿಗಳು ರಚನೆಗೊಂಡಿದ್ದು 35 ಕೃತಿಗಳು ಮುದ್ರಣಗೊಂಡಿವೆ. ದನಕಾಯುತ್ತಿದ್ದ ಹುಡುಗ ಊರಿನ ಅಕ್ಷಯಾಂಬರ ನಾಟಕದಲ್ಲಿ ದ್ರೌಪದಿ ಪಾತ್ರ ಮಾಡಿದ ಮೇಲೆ, ಮಂಗಳೂರು ಶಾಖಾಮಠದ ಚೆನ್ನಮಲ್ಲಸ್ವಾಮಿಗಳ ಎದುರಿಗೆ ಹಾಡಿದಾಗ ಮೆಚ್ಚಿಕೊಂಡು ಸಂಚಾರಿ ಸಂಗೀತ ಶಾಲೆ ನಡೆಸುತ್ತಿದ್ದ ಪಂ. ಪಂಚಾಕ್ಷರಿ ಗವಾಯಿಗಳ ಹತ್ತಿರ ತಂದು ಬಿಟ್ಟರು. ಪಂ. ಪುಟ್ಟರಾಜರು ಸ್ವತಃ ಪಾಠ ಹೇಳುತ್ತಿದ್ದರು. ನಾಟಕದ ಹುಚ್ಚಿನಿಂದ ವಿಜಯಕುಮಾರ ಸಂಘಕಟ್ಟಿ ಕಲಾವಿದ, ವ್ಯವಸ್ಥಾಪಕರಾದರು, ಮುಂದೆ ಪಂಚಾಕ್ಷರಿ ಗವಾಯಿಗಳು ಸ್ಥಾಪಿಸಿದ ಕುಮಾರೇಶ್ವರ ನಾಟ್ಯ ಸಂಘದ ನೇತೃತ್ವ ವಹಿಸಿ ರಂಗಭೂಮಿಯಲ್ಲಿ ಪಳಗಿದರು. ಸಂಗೀತ, ನೃತದಲ್ಲಿ ತರಬೇತಿ ಪಡೆದರು. ಈಗಲೂ ಪುರುಷರೇ ಸ್ತ್ರೀ ಪಾತ್ರ ಮಾಡುವ ಗವಾಯಿಗಳ ಕಂಪನಿ ಜೀವಂತವಾಗಿದೆ. 1965 ರಲ್ಲಿ ಭಾರತ ಸರಕಾರದ ಪ್ರಚಾರ ಶಾಖೆ ಸೇರಿ ಪ್ರಚಾರ ಕಲಾವಿದರಾಗಿ ತಮಿಳುನಾಡು, ಆಂಧ್ರ ಪ್ರದೇಶ ಅಸ್ಸಾಂ, ಕೇರಳ, ಉತ್ತರ ಪ್ರದೇಶ ಹಾಗೂ ಕಾಶ್ಮೀರಗಳಲ್ಲಿ ಪ್ರಚಾರ ಮಾಡಿದ್ದಾರೆ. ಶ್ರೀಲಂಕಾ ಹಾಗೂ ನೇಪಾಳಗಳಲ್ಲಿ ಗೌರವ ಕಲಾವಿದರಾಗಿ ಭಾಗವಹಿಸಿದ್ದಾರೆ. ಆಶು ಕವಿ, ಶಿವ ಕವಿರತ್ನ, ಜನಪದ ಸಂಗೀತ ಶಿಖಾಮಣಿ, ಜನಪದ ಸಂಗೀತ ವಿಭೂಷಣ ಪ್ರಶಸ್ತಿ ದೊರಕಿವೆ. 1983 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳ ಜೊತೆಗೆ ಸಾಹಿತಿ ಕಲಾವಿದರಿಗೆ ದೊರಕುವ ಗೌರವಧನ ಪಡೆದರು. ಎಸ್.ಪಿ. ಬಾಲಸುಬ್ರಹ್ಮಣ್ಯಂ, ಬಿ.ಆರ್. ಛಾಯಾ, ಬಿ.ಕೆ. ಸುಮಿತ್ರಾ, ಪಿ.ಬಿ. ಶ್ರೀನಿವಾಸ ಇವರ ಹಾಡಗಳ ಧ್ವನಿ ಸುರಳಿಗೆ ಧ್ವನಿ ನೀಡಿದ್ದು, ಇಂಗ್ಲೆಂಡ್, ಅಮೆರಿಕಾ ಹಾಗೂ ಶ್ರೀಲಂಕಾವರೆಗೆ ಧ್ವನಿ ಸುರುಳಿ ತಲುಪಿವೆ. ಜಾತ್ರೆ, ಹಬ್ಬ, ಉರಸು ಹಾಗೂ ಮಠ ಮಾನ್ಯಗಳಲ್ಲಿ ಸಂಗೀತ ಹಾಗೂ ಪ್ರವಚನ ಕಾರ್ಯಕ್ರಮ ನೀಡಿದ್ದಾರೆ. ಕೆಲವು ವರ್ಷ ಕೀರ್ತನ ಪ್ರರಾಣ ಪ್ರವಚನ ಕಾಯಕ ಮಾಡಿ ತಮ್ಮ 74 ನೆಯ ವಯಸ್ಸಿನಲ್ಲಿ 26.01.2004 ರಲ್ಲಿ ನಿಧನರಾಗಿ ಜಾನಪದ ಲೋಕವನ್ನು ತಪ್ತಗೊಳಿಸಿದರು. *(ಎಚ್.ಎಸ್.ಪಿ.)*

ಬಸವರಾಜ ಸಬರದ: ಕೊಪ್ಪಳ ಜಿಲ್ಲೆಯ ಕೂಕನೂರಿನಲ್ಲಿ 1953ರಲ್ಲಿ ಜನಿಸಿದ ಡಾ. ಸಬರದರವರು, ತಮ್ಮ ಮಾಧ್ಯಮಿಕ ಶಿಕ್ಷಣವನ್ನು ಶ್ರೀಗವಿಸಿದ್ದೇಶ್ವರ ಹೈಸ್ಕೂಲಿನಲ್ಲಿ ಪೂರೈಸಿ ಪದವಿ ಶಿಕ್ಷಣವನ್ನು ಜಿ.ಟಿ. ಕಾಲೇಜು ಗದಗಿನಲ್ಲಿ ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ದಿಂದ 'ಎಂ.ಎ. ಕನ್ನಡ' ಸ್ನಾತಕೋತ್ತರ ಪದವಿ ಹೊಂದಿದರು. 1982ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಯಿಂದ ತಮ್ಮ ಪಿಎಚ್.ಡಿ. ಪದವಿಯನ್ನು ಪೂರೈಸಿಕೊಂಡು ಶಿಸ್ತಿನ ಅಧ್ಯಯನ, ಅಧ್ಯಾಪನಕ್ಕೆ ಹೆಸರಾಗಿದ್ದಾರೆ.



1987ರಿಂದ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇರಿ, ಆಡಳಿತಾತ್ಮಕ ವಾಗಿ ಹಂತ ಹಂತವಾಗಿ ಮೇಲೇರಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕಲಾನಿಕಾಯದ ಡೀನರಾಗಿ ಸೇವೆ ಸಲ್ಲಿಸಿದ್ದಾರೆ.

ವಿಶಿಷ್ಟ ಚಿಂತನೆ; ಜನಪರ ಆಲೋಚನೆಗಳಿಂದಾಗಿ ಗಮನ ಸೆಳೆದುಕೊಳ್ಳುವ ಸಬರದರವರು ಸಾಮಾಜಿಕ ಸಂಘಟನೆ; ಹೋರಾಟ; ಅರಿವನ್ನುಂಟು ಮಾಡುವ ಸಂದರ್ಭಗಳಲ್ಲಿ ಸದಾ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ತಮ್ಮ ಹೈಸ್ಕೂಲು ಜೀವನದಲ್ಲಿಯೇ ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಟ, 1984ರಲ್ಲಿ ಕುದುರೆ ಮೋತಿ ಪ್ರಕರಣದಲ್ಲಿ ನಡೆಸಿದ ಹೋರಾಟ, ಹುಲಗಿಯ ದೇವದಾಸಿ ವಿಮೋಚನಾ ಹೋರಾಟ, ದೇವರಾಜ ಅರಸು ಸ್ಮರಣಾರ್ಥ ಶೋಷಿತ ಸಮಾವೇಶದ ಸಂಘಟನೆ, ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ; ಗೋಕಾಕ ಚಳವಳಿ ಸೇರಿದಂತೆ ಹತ್ತು ಹಲವು ಸಂದರ್ಭಗಳಲ್ಲಿ ಸಬರದರವರು ಜನಪರ ಕಾಳಜಿಯನ್ನು ಮೆರೆದಿದ್ದಾರೆ.

ಕಾವ್ಯ, ನಾಟಕ, ವಿಮರ್ಶೆ, ಸಂಪಾದನೆ, ಸಂಶೋಧನೆ, ಪ್ರಬಂಧ: ವೈಚಾರಿಕ ಲೇಖನಗಳಿಗೆ ಸಂಬಂಧಿಸಿ ಡಾ. ಬಸವರಾಜ ಸಬರದರವರು ಹಲವಾರು ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ.

2008ನೇ ಸಾಲಿನ ಜಾನಪದ ಅಕಾಡೆಮಿ ಪ್ರಶಸ್ತಿಗೆ ಅರ್ಹವಾದ ಡಾ. ಬಸವರಾಜ ಸಬರದರವರ 'ಬಹುಮುಖಿ ಜಾನಪದ' ಕೃತಿ ಲೇಖಕರನ್ನು ಜಾನಪದ ವಿದ್ವಾಂಸರ ಸಾಲಿನಲ್ಲೂ ಬಹುಮುಖ್ಯವಾದ ಸ್ಥಾನವನ್ನು ದೊರಕಿಸಿಕೊಟ್ಟಿದೆ.

ಡಾ.ಸಬರದರವರು ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರಕಟಿಸಿದ ಕೃತಿಗಳಲ್ಲಿ ಜಾನಪದ ಕಾವ್ಯದಲ್ಲಿ ಪ್ರಣಯ ಚಿತ್ರಣ, ಜನಪದ ದೇವತೆಗಳು, ಶಿಷ್ಟದೇವತೆಗಳು ಬಂಡಾಯ ಕಾವ್ಯ ಮತ್ತು ಜಾನಪದ ಬಂಡಾಯ ಜಾನಪದ ಹಾಗೂ ಬಹುಮುಖಿ ಜಾನಪದ ಕೃತಿಗಳು ಸೇರಿವೆ. ಬರಿ ಸಂಗ್ರಹ; ಸಂಪಾದನೆಗಳಿಗಷ್ಟೇ ಸೀಮಿತವಾಗದೆ; ತೌಲನಿಕ ವಿವೇಚನೆ ಹೊಸ ಹೊಳಹುಗಳಿಂದ ಮಹತ್ವ ಪಡೆದುಕೊಂಡಿವೆ.

ಪಾಶ್ಚಾತ್ಯ ವಿದ್ವಾಂಸರಿಂದ ಪ್ರೇರಣೆ ಪಡೆದು ಜಾನಪದ ಕೃತಿ ಸಂಗ್ರಹ; ಸಂಪಾದನೆ; ವಿಶ್ಲೇಷಣೆಗೆ ತೊಡಗಿದ ನಮ್ಮವರು ದೇಸೀಯತೆಗೆ ಮಾದರಿಯಾಗಿ; ಸ್ವಂತಿಕೆಗೆ ಹೆಸರಾಗಿ, ಸಮಷ್ಟಿಯ ಕುರುಹಾಗಿ, ಸಮುದಾಯದ ಪ್ರತಿನಿಧಿಯಾಗಿ, ಶಿಷ್ಟ ಸಾಹಿತ್ಯಕ್ಕಿಂತ ಜಾನಪದ ಸಾಹಿತ್ಯಕ್ಕೆ ಪ್ರಾಧಾನ್ಯತೆ ನೀಡಿದ್ದಾರೆ.

'ಬಹುಮುಖಿ ಜಾನಪದ' ಕೃತಿ ಡಾ.ಸಬರದರವರ ಬಹುಮುಖಿ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ. ಆಳವಾದ ಅಧ್ಯಯನ;

ಕ್ಷೇತ್ರಕಾರ್ಯ; ಸಂಗ್ರಹಾಸಕ್ತಿಯ ಫಲವಾಗಿ ಇಲ್ಲಿ ಸಂಚಯಗೊಂಡ ಲೇಖನಗಳು ಸಬರದರವರ ಕರ್ತೃತ್ವ ಶಕ್ತಿ ಹಾಗೂ ವಿಶ್ಲೇಷಣಾ ಸಮರ್ಥ್ಯವನ್ನು ಒರೆಗೆ ಹಚ್ಚಿವೆ.

(ಎಸ್.ಕೆ.)

ಬಸವಿ: ದೇವತೆಗಳಿಗೆ ಬಿಟ್ಟ ಹೆಣ್ಣು. ಇಂತಹ ಹೆಣ್ಣಿನ ಜೀವನ ದೇವರ ಸೇವೆಗಾಗಿಯೇ ಮುಡುಪಾಗಿರುತ್ತದೆ. ಹುಡುಗಿ ಋತುಮತಿಯಾದ ಒಂದೆರಡು ವರ್ಷಗಳಲ್ಲಿ ಅಥವಾ ಅದಕ್ಕಿಂತಲೂ ಮುಂಚಿತವಾಗಿಯೂ ಬಸವಿಗೆ ಬಿಡುವುದುಂಟು. ಬಸವಿಗೆ ಬಿಡುವ ಸಂದರ್ಭದಲ್ಲಿ ಮನೆಯನ್ನು ಗುಡಿಸಿ ಸಾರಿಸಿ ಹುಡುಗಿಗೆ ಸ್ನಾನ ಮಾಡಿಸಿ ಮಡಿ ಬಟ್ಟೆ ಉಡುಸಿ ಕಳಸ, ಐದು ತೆಂಗಿನ ಕಾಯಿ, ಐದು ಹೂಮಾಲೆ ಮುಂತಾದ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಹನುಮಂತನ ದೇವಸ್ಥಾನಕ್ಕೆ ಹೋಗುತ್ತಾರೆ. ಗರ್ಭಗುಡಿಯ ಮುಂಭಾಗದಲ್ಲಿ ಕಂಬಳಿಯನ್ನು ಹಾಸಿ ಅದರ ಮೇಲೆ ಬಸವಿಯಾಗಲಿರುವ ಹುಡುಗಿಯನ್ನು ಕೂಡಿಸುತ್ತಾರೆ. ಆನಂತರ ಶಂಖ ಮತ್ತು ಚಕ್ರಗಳನ್ನು ಕಾಯಿಸಿ ಅವಳ ಭುಜಗಳಿಗೆ ಮುದ್ರೆ ಒತ್ತುತ್ತಾರೆ. ಇದಾದ ಮೇಲೆ ಪೂಜಾರಿ ತಾಳಿಯನ್ನು ತಂದು ಹನುಮಂತ ದೇವರ ಪಾದಗಳಿಗೆ ಮುಟ್ಟಿಸಿ ಅವಳ ಕೊರಳಿಗೆ ಕಟ್ಟುತ್ತಾನೆ. ತಾಳಿ ಕಟ್ಟಿದ ಮೇಲೆ ಆಕೆ ಮೂರು ಸುತ್ತು ದೇವಸ್ಥಾನವನ್ನು ಪ್ರದಕ್ಷಿಣೆ ಹಾಕುವಳು. ಅಲ್ಲಿಂದ ನೇರವಾಗಿ ಮನೆಗೆ ಬಂದು ನೆಂಟರಿಷ್ಟರೆಲ್ಲರಿಗೆ ಊಟ ಬಡಿಸುತ್ತಾಳೆ. ಅಂದಿನಿಂದ ಆಕೆ ಬಸವಿ ಎಂದು ಕರೆಯಿಸಿಕೊಳ್ಳುತ್ತಾಳೆ.

ಬಸವಿ ಬಿಡುವ ಪದ್ಧತಿ ಪ್ರದೇಶಕ್ಕನುಗುಣವಾಗಿ ಭಿನ್ನವಾಗಿದೆ. ಆದರೆ ಬಸವಿಗೆ ಬಿಡುವ ಉದ್ದೇಶ ಮಾತ್ರ ಒಂದೇ ಆಗಿದೆ. ಬಸವಿಗೆ ಬಿಟ್ಟ ಹೆಣ್ಣುಮಗಳಿಗೆ ತಂದೆಯ ಆಸ್ತಿಯಲ್ಲಿ ಪಾಲಿದೆ. ಏಕೆಂದರೆ ಬಸವಿಗೆ ಬಿಟ್ಟ ಅನಂತರ ಅವಳನ್ನು ಯಾರೂ ಮದುವೆ ಆಗುವುದಿಲ್ಲ. ಆದರೆ ಯಾವುದೇ ಪುರುಷನೊಂದಿಗೆ ಆಕೆ ದೈಹಿಕ ಸಂಬಂಧವನ್ನು ಇಟ್ಟುಕೊಳ್ಳಬಹುದು. ಸಂಬಂಧ ಇಟ್ಟುಕೊಳ್ಳುವವನು ಒಬ್ಬನೇ ಇರಬೇಕೆಂದೇನಿಲ್ಲ. ಆದರೆ ಅವಳ ಜೊತೆಗೆ ಸಂಬಂಧ ಹೊಂದಿದವನು ಅವಳ ಸಂಸಾರದ ಭಾರವನ್ನು ಹೊರಬೇಕಾಗುತ್ತದೆ. ಬಹುತೇಕ ಊರಿನ ಆಸ್ತಿವಂತರು, ಗೌಡರುಗಳೇ ಇವರಿಗೆ ಆಶ್ರಯದಾತರು.

ಬಸವಿಗೆ ಬಿಟ್ಟ ಹೆಣ್ಣಿನೊಂದಿಗೆ ಮೊದಲು ಕೂಡುವವನು ಅವಳಿಗೆ ಸೀರೆ ಕುಪ್ಪಸಗಳನ್ನು ತಂದು ಕೊಡಬೇಕು. ಅಲ್ಲಿಂದ ಅವಳು ಅವನ ಜೊತೆಯೇ ಸಂಬಂಧ ಇರಿಸಿಕೊಳ್ಳುತ್ತಾಳೆ. ಅವರಿಬ್ಬರಿಗೆ ಬೇಡವಾದಾಗ ಅವರು ಸಂಬಂಧವನ್ನು ಕಡಿದುಕೊಳ್ಳಬಹುದು. ಅನಂತರ ಮತ್ತೊಬ್ಬ ವ್ಯಕ್ತಿಯ ಜೊತೆಗೆ ಆಕೆ ಸಂಬಂಧ ಇಟ್ಟುಕೊಳ್ಳಬಹುದು. ಇದಕ್ಕೆ ಯಾರ ಅಭ್ಯಂತರವೂ ಇಲ್ಲ. ಈ ಸಂಬಂಧವನ್ನು ಇಟ್ಟುಕೊಳ್ಳುವುದು ಎನ್ನಲಾಗುತ್ತದೆ. ಗ್ರಾಮೀಣ ಜೀವನದಲ್ಲಿ ಕೆಲ ಪುರುಷರಿಗೆ ಬಸವಿಯನ್ನು ಇಟ್ಟುಕೊಳ್ಳುವುದು ಒಂದು ಬಗೆಯ ಪ್ರತಿಷ್ಠೆಯ ವಿಷಯ. ಆದರೆ ಬಸವಿಯರ ಜೀವನ ವಯಸ್ಸು ಇರುವವರೆಗೆ ಮಾತ್ರ ಸುಖದಿಂದ ಕೂಡಿರುತ್ತದೆ. ವಯಸ್ಸಾದ ಮೇಲೆ ಯಾರೂ ಅವಳನ್ನು ಸಾಕುವ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಒಬ್ಬರಿಗಿಂತ ಹೆಚ್ಚು ಜನ ಗಂಡಸರೊಂದಿಗೆ ಸಂಬಂಧವನ್ನು ಇವರು ಇಟ್ಟುಕೊಳ್ಳುವುದರಿಂದ ಇವರಿಗೆ ವೇಶ್ಯೆ, ಸೂಳೆ ಎಂತಲೂ ಕರೆಯಲಾಗುತ್ತದೆ. ಹಾಗಂತ ಎಲ್ಲಾ ಬಸವಿಯರು ಅನೇಕ ಗಂಡಸರೊಂದಿಗೆ ಇರುತ್ತಾರೆಂದೇನಲ್ಲ. ಅನೇಕ ಬಸವಿಯರು ಒಬ್ಬನೇ ಪುರುಷನೊಂದಿಗೆ ಸಂಬಂಧವಿರಿಸಿಕೊಂಡ ಉದಾಹರಣೆಗಳೂ ಇವೆ.

ಇವರು ನಿತ್ಯಸುಮಂಗಲೆಯರಾಗಿರುವುದರಿಂದ ಇವರನ್ನು ಮದುವೆ, ಉತ್ಸವ ಮುಂತಾದ ಶುಭ ಸಂದರ್ಭಗಳಿಗೆ ಆಹ್ವಾನಿಸ ಲಾಗುತ್ತದೆ. ಊರಿನಲ್ಲಿ ಯಾವುದೇ ಕಾರ್ಯಕ್ರಮ ನಡೆದರೂ ಅಲ್ಲಿ ಬಸವಿಯರು ಹಾಜರಿರುತ್ತಾರೆ. ಕೆಲ ಸಂದರ್ಭಗಳಲ್ಲಿ ಇವರು ಜೋಗತಿಯರೂ ಆಗುತ್ತಾರೆ. ಬಹುಪಾಲು ಬಸವಿಯರು ಪಂಚಮ ವರ್ಗಕ್ಕೆ ಸೇರಿದವ ರಾಗಿರುತ್ತಾರೆ. ಇವರ ಆರಾಧ್ಯ ದೇವತೆಗಳೂ ಸಹ ಗ್ರಾಮೀಣ ದೇವತೆಗಳೇ ಆಗಿವೆ. ಆಧುನಿಕ ಸಂದರ್ಭದಲ್ಲಿ ನೈತಿಕ ಮೌಲ್ಯಗಳ ದೃಷ್ಟಿಯಿಂದ ಅತ್ಯಂತ ಅಮಾನವೀಯವೆನಿಸುವ 'ಬಸವಿ'ಯ ಸ್ವರೂಪ, ಪರಿಕಲ್ಪನೆ ಮತ್ತು ಸಂಬಂಧಗಳು ಒಂದು ಕಾಲದಲ್ಲಿ ಸಮಾಜದಲ್ಲಿ ಎಲ್ಲ ವರ್ಗದಿಂದ ಮಾನ್ಯತೆಯನ್ನು ಪಡೆದಿದ್ದವು.

(ಕೆ.ಎಸ್.)

ಬಳಗಾನೂರು: ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿಗೆ 42 ಕಿ.ಮೀ. ಅಂತರಲ್ಲಿರುವ ಪ್ರಸಿದ್ಧ ಹನುಮಾನ ಕ್ಷೇತ್ರ ಇಲ್ಲಿದೆ.

ಹಲವು ನಾಮ ನಡೆಯಿಂದ ಖ್ಯಾತಿಯಾದ ಮಾರುತಿ ದೇವಸ್ಥಾನ, ಬಳಗಾನೂರಿನಲ್ಲಿ ಕಟ್ಟಲ್ಪಟ್ಟ ಭವ್ಯತೆಗೆ ಸಾಕ್ಷಿ. 'ಅಂದು ಹೇಗೆ ಬಂದನೋ ಹನುಮ, ಇಂದು ಹೇಗಾದನೋ ಹನುಮ' ಎಂಬುದಕ್ಕೆ ಕೆಳಗಿನ ಕಥಾ ಲೇಖನವೇ ಸಾಕ್ಷಿ.

ಅಂದು ಗ್ರಾಮದ ಎಡಭಾಗದಲ್ಲಿ ಜುಳು ಜುಳ ಗಂಗೆಯು ತುಂಬಿ ಹರಿಯುತ್ತಿರುವ ಫಜೀತಿ ಗ್ರಾಮದವರಿಗಿತ್ತಂತೆ. ಗ್ರಾಮಸ್ಥರು ಹರಿಯುವ ಗಂಗೆಯನ್ನು ದಾಟಿ ಪಯಣಿಸ ಬೇಕಾಗಿದರೆ ಕಷ್ಟ ಸಾಧ್ಯವಾಗಿತ್ತು. ಇದರ ಸಮಸ್ಯೆ ಪರಿಹಾರಕ್ಕೆಂದು ಏನೆಲ್ಲಾ ಸಾಧಿಸಿದರೂ ಫಲಕಾರಿಯಾಗಲಿಲ್ಲ. ಹರಿಯುವ ನೀರು ನಿಧಾನವಾಗದೆ ಭೋರ್ಗರೆಯುತ್ತಿತ್ತು. ಜೋರಾಗಿ ಹರಿಯುವ ಜುಳು ಜುಳು ನೀರಿನಲ್ಲಿ ಏನೆಲ್ಲಾ ಹರಿದು ಬರುತ್ತಿದ್ದರೂ, ಗ್ರಾಮದವರು ಲಕ್ಷಿಸಿದ್ದಿಲ್ಲ. ಆಗ ಗ್ರಾಮ ದೇವರನ್ನು ನಂಬಿ ಪೂಜಿಸಿದ ಪೂಜಾರಿಯ ಕನಸಿನಲ್ಲಿ ಪ್ರಜ್ವಲಿಸಿದ ಅಶರೀರವಾಣಿಯು ಹೀಗೆ ನುಡಿಯಿತಂತೆ.

ಎಲೈ ಪೂಜಾರಿಯೇ ನಿಮ್ಮೆಲ್ಲರಿಗೊಂದು ಪುಣ್ಯದ ಹೆಬ್ಬಾಗಿಲು ತೆರೆದಿದೆ. ಎಲ್ಲೋ ಪೂಜಿಸಿಕೊಂಡು, ಎಲ್ಲೊ ಪವಾಡಗೈದು ಪುನಃ ನಿಮ್ಮೂರಿಗೆ ರಭಸವಾಗಿ ಹರಿಯುವ ಹಳ್ಳದಲ್ಲಿ ನಾನು ಹರಿದು ಬಂದು, ದಂಡೆಯ ಮೇಲಿರುವ ಬಂಡೆಯಂತಿದ್ದರೂ ಬೋರಲಾಗಿರುತ್ತೇನೆ. ನೀನು ಅದನ್ನು ಬಂಡೆ ಎಂದು ಭಾವಿಸದೇ ನನ್ನನ್ನು ಭಕ್ತಿಯಿಂದ ಪೂಜಿಸಿ, ನಿಮ್ಮ ಗ್ರಾಮದವರಿಗೆಲ್ಲಾ ತಿಳಿಸಿದರೆ, ನಿಮ್ಮೂರಿನ ಹರಿಯುವ ವೇಗದ

ಹರಿನೀರಿಗೆ (ಹಳ್ಳಕ್ಕೆ) ಅಡ್ಡಗಟ್ಟಿ, ಬೇಕಾದ ಹರಿನೀರಿಗೆ ಸವಾಲಾಗುತ್ತೇನೆಂದು ಈ ಅಶರೀರವಾಣಿ ನುಡಿಯಿತಂತೆ.

ತತ್‌ಕ್ಷಣ ಎಚ್ಚತ್ತ ಆ ಸೇವಕ (ಪೂಜಾರಿ) ನೇರ ನುಡಿದ ವಾಣಿಗೆ ಗೌರವಿಸಿ ಬೆಳಗಿನ ಜಾವದಲ್ಲಿ ಹರಿಯುತ್ತಿರುವ ಹಳ್ಳದ ದಂಡೆಗೆ ತೆರಳಿ, ಉಸುಕಿನಲ್ಲಿ ಹುದುಗಿದ ಬಂಡೆಯ ಮೇಲೆ ಇದ್ಯಾವುದೋ ಗಟ್ಟಿ ಕಲ್ಲೆಂದು ಅರಿತು ಅದರ ಮೇಲೆ ಕುಳಿತು ಮಲ ವಿಸರ್ಜಿಸುವಾಗ, ಆ ಬಂಡೆಯು ಅವನನ್ನು ಎತ್ತಿ ಬೀಸಾಡಿತಂತೆ. ಅಷ್ಟಲ್ಲದೆಯೇ ಆ ಸ್ಥಳವೆಲ್ಲ ಒಂದು ತಾಸು ಭೂಕಂಪವಾದಂತೆ ಗೋಚರಿಸಿದಾಗ, ಅವನು ನಲುಗಿ ನಡುಗಿ ಪಕ್ಕದಲ್ಲಿ ನೆಲಕ್ಕೆ ಬಿದ್ದನಂತೆ.

ತತ್‌ಕ್ಷಣದಲ್ಲೇ ರಾತ್ರಿಯ ಅಶರೀರವಾಣಿಯು ಈತನಿಗೆ ನೆನಪಾಗಿ, ಇದು ನಿಜಕ್ಕೂ ಸತ್ಯವಾಣಿ. ಸಾಮಾನ್ಯವಾದು ಅಲ್ಲವೆಂದು ಭಾವಿಸಿ, ನಿಧಾನವಾಗಿ ಮೇಲೆದ್ದು, ನೇರ ಮನೆಗೆ ತೆರಳಿ ನಡೆದ ಸತ್ಯ ಘಟನೆ ವಿವರಿಸಿದನಂತೆ. ಆಗ ಗ್ರಾಮದ ಜನತೆ ಬೆಚ್ಚಿಬಿದ್ದು ಹಳ್ಳ ಕಟ್ಟುವ ಸಮಸ್ಯೆ ಪರಿಹಾರಕ್ಕೆ ದೇವರು ನಮ್ಮ ಗ್ರಾಮಕ್ಕೆ ಆಗಮಿಸುವನೆಂದರೆ, ನಿಜಕ್ಕೂ ನಾವೆಲ್ಲಾ ಭಾಗ್ಯವಂತರೆಂದು ಬಾವಿಸಿ, ತತ್‌ಕ್ಷಣವೇ ರಭಸವಾಗಿ ಹರಿಯುವ ನೀರಿನ ಮೇಲೆ ಬೋರಲಾಗಿ ಬಂಡೆಯಂತಿದ್ದೂ ಮುಳುಗದೇ ಮಂಡಾಳಿನಂತೆ ಹಗುರವಾದಂತಹ ವಸ್ತುವಿನಂತೆ ವೀರ ಹನುಮಾನ ತೇಲಿ ಅಲುಗಾಡುತ್ತಾ ನಂಬಿದವರಿಗೆ ಇಷ್ಟಾರ್ಥ ಸಿದ್ದಿಯಾಗುವೆ ಎಂಬಂತೆ ತೇಲುತ್ತ ಪಯಾಣಿಸುವಾಗ, ಗ್ರಾಮದ ಭಕ್ತರು, ಪೂಜಾರಿಯ ವಾಣಿಯಂತೆ ಪೂಜಾ ಸಾಮಗ್ರಿಗಳೊಂದಿಗೆ ಹಳ್ಳದ ದಂಡೆಗೆ ಬಂದರಂತೆ, ತೇಲಿ ಅಲುಗಾಡುತ್ತಿರುವ ಬೋರಲಾಗಿದ್ದ ಬಂಡೆಯನ್ನು ತಿರುಗಿಸಿದಾಗ, ಸಾಕ್ಷಾತ್ ವೀರ ಹನುಮಾನ್ ಶಿಲಾಮೂರ್ತಿ ಅದಾಗಿತ್ತು.

ನೆರೆದ ಭಕ್ತರ ಸಂತೋಷಕ್ಕೆ ಪಾರವೇ ಇಲ್ಲದಾಗಿತ್ತು ಅಂದಿನಿಂದ ಇಂದಿಗೂ ಹಳ್ಳ ಕಟ್ಟಿದರೆ, ಅಡ್ಡಗಟ್ಟಿ ನಿಲ್ಲುವ ಮಹಾಸ್ಥಾಧನೆ ವೀರಾಂಜನೇಯನದಾಗಿದೆ. ಊರು ಬಿಟ್ಟು ಬಂದಂತಹ ಹನುಮಾನ ಮೂರ್ತಿ ಊರಿನಲ್ಲಿ ನೆಲೆಗೊಂಡು, ಇಷ್ಟಾರ್ಥಗಳೆಲ್ಲ ಪೂಜಾ ನಮಸ್ಕಾರಗಳ ಸಾಕಾರ ಮೂರ್ತಿಯಾಗಿ, ಮೂರ್ತಿಯಾಗಿ, ಅಂದು ದಂಡೆಗೆ ಬೋರಲಾಗಿ ಬಂದರೆ, ಇಂದು ನೆಲಕ್ಕೆ ನಿಲ್ಲುವಂತೆ ಹನುಮಂತನಾಗಿ ದೇವಾಲಯದ ಭವ್ಯತೆಯ ಮೇರುಗಿಗೆ ಸಾಕ್ಷಾತ್ಕಾರವಾಗಿದ್ದಾನೆ. ಅಂದು ಗ್ರಾಮದವರ ಪೂಜಾ ಮೂರ್ತಿಯಾದರೆ, ಇಂದು ಭಕ್ತರ ಸಂರಕ್ಷಕನಾಗಿ ಪವಾಡ ಭಕ್ತಿಗಾಗಿ ಅಲ್ಲ. 'ಬಾಬತ್ತಿಗುಂಟು' ಎಂಬ ವಾಣಿಗೆ ಸಾಮಿಪ್ಯವಾಗಿದ್ದಾನೆ.

ವಿಶೇಷವೆಂಬಂತೆ ಗ್ರಾಮ ಬಯಸಿದವರಿಗೆ ಕೇಡಿಲ್ಲ. ಗ್ರಾಮದವನಾದ ನಾನು ಊರ ಹೊರಗುಳಿದು ಫಲಗೈಯಲ್ಲವೆ ಎಂದು ಅಂದಿನಿಂದ ಇಂದಿಗೂ ಗ್ರಾಮ ಪುರಾಧೀಶ ಊರ ಹೊರಗಿನ ಮುಂಭಾಗದಲ್ಲಿ ಪೂಜೆಗೊಳ್ಳುತ್ತಲಿದ್ದಾನೆ. ಗ್ರಾಮ ಪುರಾಧಿಶನ ಸಾಮಿಪ್ಯಕ್ಕೆ ರಥೋತ್ಸವವು ಜರುಗಿ ಪುನಃ ಹಳ್ಳದ ದಂಡೆ ಮೇಲಿನ ಹನುಮಾನ ಮಂದಿರಕ್ಕೆ ವಾಪಾಸಾಗುವಂತಹ ನಿಯಮ ಅಳಿದಿಲ್ಲ. *(ಕೆ.ಎ.ಎಚ್.)*

ಬಳೆಗಾರ: ಬಳೆಗಳನ್ನು ಮಾರುವವರು. ಇದು ವೃತ್ತಿಗೆ ಸಂಬಂಧಿಸಿದ ಪದ. ಪ್ರಾಚೀನ ಕಾಲದಿಂದಲೂ ಈ ವೃತ್ತಿಯನ್ನು ಜೈನರೇ ಹೆಚ್ಚಾಗಿ ಮಾಡಿಕೊಂಡು ಬಂದಿದ್ದಾರೆ. ಆದ್ದರಿಂದ ಕೆಲವುಕಡೆ ಜೈನರಿಗೆ ಪರ್ಯಾಯವಾಗಿ ಬಳೆಗಾರ ಎಂದೂ ಕರೆಯುತ್ತಾರೆ. ಇಂದು ವಿವಿಧ ಸಮುದಾಯದ ಜನ ಬಳೆಗಳ ವ್ಯಾಪಾರದಲ್ಲಿ ತೊಡಗಿದ್ದು ಅವರಿಗೂ ಬಳೆಗಾರರೆಂದೇ ಕರೆಯುತ್ತಿದ್ದಾರೆ. ಕೆಲವರಿಗೆ ಜೈನರಿಗಿರುವಂತೆ ಬಳೆಗಾರ ಎಂಬ ಅಡ್ಡ ಹೆಸರು ಖಾಯಮ್ಮಾಗುತ್ತಿದೆ.

ಬಳೆಗಳನ್ನು ತಯಾರು ಮಾಡುವುದು, ಸಾಗಣೆ ಮಾಡುವುದು, ಮಾರಾಟ ಮಾಡುವುದು ಇವರ ಉದ್ಯೋಗವಾಗಿದೆ. ಹಿಂದೆ, ಬಳೆಗಳನ್ನು ಜೋಳಿಗೆಯಲ್ಲಿ ಅಥವಾ ಬುಟ್ಟಿಯಲ್ಲಿ ಹಾಕಿಕೊಂಡು ಊರಿನಿಂದ ಊರಿಗೆ ಸಂಚರಿಸುತ್ತ ಮಾರಾಟ ಮಾಡುತ್ತಿದ್ದರು. ಈಗ ಅವರಿರುವ ಹಳ್ಳಿಗಳ ಮನೆಯಲ್ಲಿಯೇ ಬಳೆಗಳ ಅಂಗಡಿಗಳನ್ನು ತೆರೆದು ವ್ಯಾಪಾರ ಮಾಡುತ್ತಿದ್ದಾರೆ.

(ಎಂ.ಎಸ್.ಜಿ.)

ಬಾ

ಬಾಜಿ ಕಟ್ಟು: ಜನಪದರು ಆಟ ಮುಂತಾದ ಸ್ಪರ್ಧೆಗಳನ್ನು ಹಮ್ಮಿಕೊಳ್ಳುವಾಗ ಬಳಸುವ ಪದ ಹೈದ್ರಾಬಾದ ಕರ್ನಾಟಕದ ವಿವಿಧ ಆಟೋಟಗಳ ಸ್ಪರ್ಧೆ ಇದ್ದಾಗ ಈ ಬಳಕೆಯಲ್ಲಿದೆ. 'ಬಾಜಿ ಕಟ್ಟು' ಎಂಬ ಪದ ಹಿಂದಿ ಅರೆಬಿಕ ಭಾಷೆಯಿಂದ ಬಂದಿದೆ. ಬಾಜಿ ಎಂದರೆ ಪಂದ್ಯವೆಂದರ್ಥ. ಪ್ರಾಚೀನ ಕಾಲದಲ್ಲಿ ದೊಡ್ಡ ದೊಡ್ಡ ಯುದ್ಧಗಳು ನಡೆಯುತ್ತಿದ್ದಾಗ ವಿವಿಧ ರಾಜವಂಶಗಳು ಎದುರಾಳಿಗಳ ಜೊತೆ ಹೋರಾಡಲು ಇಲ್ಲವೆ ವಿವಿಧ ಪಂದ್ಯಗಳ ಸ್ಪರ್ಧೆ ಇಟ್ಟುಕೊಳ್ಳುತ್ತಿದ್ದರು. ಅವೆಲ್ಲವುಗಳಿಗೆ ಬಾಜಿ ಎಂಬ ಪದ ಬಳುಸುತ್ತಿದ್ದುದುಂಟು.

ಈ ಭಾಗದ ವಿವಿಧ ಪಂದ್ಯಗಳ ಸ್ಪರ್ಧೆ ನಡೆಸುವುದಕ್ಕೆ ಬಾಜಿ ಕಟ್ಟುವುದು ಎಂದು ಕರೆಯುತ್ತಾರೆ. ಅಲ್ಪ ಸ್ವಲ್ಪ ಕಲಿತವರು ಸುಶಿಕ್ಷಿತರು ಕ್ರೀಡಾ ಸ್ಪರ್ಧೆಯೆಂದು ಸುಚಿಯಾಗಿ ಬಳಸುತ್ತಾರೆ.

ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಜನಪದರು. ಬಾಜಿ ಕಟ್ಟುವುದಕ್ಕೆ ಸಜ್ಜುಗೊಂಡಿರುವ ಆಟಗಳೆಂದರೆ ಕುಸ್ತಿ, ಆಟ, ಕಬ್ಬಡ್ಡಿ, ಚಿಣ್ಣಿದಾಂಡು, ಕ್ರಿಕೆಟ್ ಕಣ್ಣುಮುಚ್ಚಾಲೆ, ಮುಂತಾದ ಆಟಗಳಿಗೆ ಸ್ಪರ್ಧೆ (ಬಾಜಿ) ಕಟ್ಟುತ್ತಾರೆ. ಹೀಗೆ ಬಾಜಿ ಎನ್ನುವ ಪದವು ನಾನಾ ಅರ್ಥವನ್ನೊಳಗೊಂಡಿದ್ದು, ವಿವಿಧ ಆಟಗಳಿಗೆ ಸಮ್ಮಿಳಿತವಾಗಿದೆ. ಜನಪದರು ಬಾಜಿ ಕಟ್ಟುವಾಗ ಎರಡು ಗುಂಪನ್ನಾಗಿ ಮಾಡಿಕೊಂಡು ಬಾಜಿಯನ್ನೇರ್ಪಡಿಸುತ್ತಾರೆ.

ಸ್ಪರ್ಧೆಗೆ ಇಂತಿಷ್ಟು ಹಣವೆಂದು ಎರಡು ಗುಂಪಿನವರು ಕೂಡಿಟ್ಟು (ಬಾಜಿ ಜಿತ) ಪಂದ್ಯ ಗೆದ್ದವರು ಆ ಹಣವನ್ನು ತೆಗೆದುಕೊಳ್ಳುತ್ತಾರೆ. ಹೊರತು ಯಾವುದೇ ತಕರಾರು ಮಾಡುವುದಿಲ್ಲ. ಬಾಜಿ ಕಟ್ಟುವಿಕೆಯಿಂದ ಸ್ಪರ್ಧಾ ಮನೋಭಾವನೆ ಬೆಳೆಯುವುದರ ಜೊತೆ ಜೊತೆಯಲ್ಲಿ ಮನೋರಂಜನೆಯು ಸಹ ಸಿಗುತ್ತದೆ. *(ಪಿ.ಕೆ.ಕೆ.)*

ಬಾನ: ಜೋಳದಿಂದ ಮಾಡಿದ ಅನ್ನ. ಸಂಸ್ಕೃತದಿಂದ ಕನ್ನಡಕ್ಕೆ ಬಂದ ಶಬ್ದ. ಭೋಜನ ಎಂಬುದರ ತದ್ಭವ ರೂಪ ಇದಕ್ಕೆ ಆಹಾರ, ಅನ್ನ ಎಂದು ಕರೆಯುವುದುಂಟು. ಜೋಳದಬಾನ, ನವಣಕ್ಕಿಬಾನ, ನುಚ್ಚಿನಬಾನ ಎಂಬಲ್ಲಿಯೂ ಬಾನ ಶಬ್ದದ ಬಳಕೆ ಇದೆ. ಹೈದ್ರಾಬಾದ್ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಅನ್ನಕ್ಕೂ ಬಾನ ಶಬ್ದವು ಬಳಕೆಗೊಳ್ಳುತ್ತಿದೆ. ಅಮ್ಮಾ ಹೊಟ್ಟೆ ಸುಡಾಕತ್ತಾದ ಬಾನ ನೀಡಮ್ಮ ಎಂಬ ಮಾತು ರಾಯಚೂರು ಭಾಗದಲ್ಲಿದೆ. ಬಾನವನ್ನು ಜೋಳದಿಂದ ಮಾಡುತ್ತಿದ್ದು ಬಡವರ, ಕೃಷಿಕರ, ಕೂಲಿಕಾರ್ಮಿಕರ ಸಣ್ಣ ಹಿಡುವಳಿದಾರರ ಕುಟುಂಬಗಳು ದಿನನಿತ್ಯ ಬಳಸುವ ಸಾಮಾನ್ಯ ಅಡುಗೆಯಾಗಿದೆ.

ಆ ದಿನದ ದುಡಿತವೇ ಅ ದಿನದ ಹೊಟ್ಟೆಗೆ ಎಂಬಂತಹ ದುಡಿವ ವರ್ಗಗಳ ಹೊಟ್ಟೆಯ ಬಲವೇ ಬಾನ. ಕೂಲಿ ಕೃಷಿಕ ಆಳುಗಳು ದೂರದ ಹೊಲಗಳ ಕೆಲಸಕ್ಕೆ ಬೆಳಗಿನಹೊತ್ತು ಹೊರಟು ಸಂಜೆಹೊತ್ತು ಮುಳುಗುವ ಸಮಯಕ್ಕೆ ಮನೆ ಸೇರಿ, ಉಣ್ಣುವ ಹೊತ್ತಿಗೆಲ್ಲಾ ರಾತ್ರಿಯಾಗಿ ಬಿಡುತ್ತಿತ್ತು. ಆಕಾಶದಲ್ಲಿ ಚುಕ್ಕೆಗಳು ಕಾಣುತ್ತಿದ್ದುವು. ಹೀಗಿರುವಾಗ ಮನೆಗೆಬಂದು ಬೀಸಿ. ಕಾಸಿ, ಒಲೆ ಊದಿ, ಅಡುಗೆ ಮಾಡಿ ಉಣ್ಣುವ ಪರಿಸ್ಥಿತಿಯಿಂದ ಪಾರಾಗಲು ಈ ಜನರು ಹುಡುಕಿದ ಉಪಾಯವೇ ಬಾನ, ಇದನ್ನು ಒಂದು ಸಲ ಮಾಡಿ ನಾಲ್ಕೈದು ದಿನಗಳವರೆಗೆ ಉಣ್ಣುತ್ತಿದ್ದರು. ಕೆಡದೆ ಇರುವದು ಇದರ ವಿಶೇಷ.

ಒಂದಳತೆಯ ಜೋಳವನ್ನು ಒಂದೆರಡು ಗಂಟೆಗಳ ಕಾಲ ನೀರಿನಲ್ಲಿ ನೆನೆಯಿಟ್ಟು ತೆಗೆದು, ವಳ್ಳಿನಲ್ಲಿ ಹಾಕಿ ಒನಕೆಯಿಂದ ಜೋಳದ ಮೇಲಿನ ಪೊರೆ ಹೋಗುವವರೆಗೆ ಕುಟ್ಟಬೇಕು. ಜೋಳ ಬಿಳಿಯ ಆಕಾರಕ್ಕೆ ಬಂದಾಗ ಗಡಿಗೆಯೊಳಗೆ ಹಾಕಿ ಒಲೆಯ ಮೇಲಿಟ್ಟು ಜೋಳದ ಅಳತೆಯ ದುಪ್ಪಟ್ಟಿನಷ್ಟು ನೀರನ್ನು, ರುಚಿಗೆ ತಕ್ಕಷ್ಟು ಉಪ್ಪನ್ನು ಹಾಕಿ ಕುದಿಸಬೇಕು. ಜೋಳದ ಕಾಳು ಮೆತ್ತಗಾದದ್ದನ್ನು ನೋಡಿ ಉರಿಯುವ ಒಲೆಯನ್ನು ಆರಿಸಿ ಒಂದಿಷ್ಟು ಹೊತ್ತಿನವರೆಗೆ ಬೆಂಕಿಯ ಕಿಚ್ಚಿನಲ್ಲಿ ಅರಳಲು ಬಿಟ್ಟು, ಕೂಡಲೇ ನೆಲದ ಮೇಲೆ ದುಂಡಗಿನ ಸಿಂಬೆಯನ್ನು ಇಟ್ಟು ಬಾನದ ಗಡಿಗೆಯನ್ನು ಅದರ ಮೇಲಿಟ್ಟು ಅದರ ಮೂತಿಗೆ ಸ್ತ್ರೀಯರ ತುರುಬಿನಾಕಾರದ ಬಟ್ಟೆಯನ್ನು ಕಟ್ಟಬೇಕು.

ಬಾನವು ಕೆಲ ದಿನಗಳವರೆಗೆ ಕೆಡದಂತೆ ಇಡಲು ಹುಳಿಯಾದ ಮಜ್ಜಿಗೆಯನ್ನು ಬಾನದ ಗಡಿಗೆಯೊಳಗೆ ಹಾಕಬೇಕು. ಬಾನವು ಬಳಕೆಗೊಂಡಂತೆ ತಕ್ಕಷ್ಟು ಹುಳಿಮಜ್ಜಿಗೆಯನ್ನು ಗಡಿಗೆಗೆ ಹಾಕುತ್ತಿರಬೇಕು. ಬಾನ ಮತ್ತು ಸಪ್ಪನೆ ಬ್ಯಾಳಿ, ಹಾಲು, ಮಜ್ಜಿಗೆ, ಹುಣಸೆಚಟ್ನಿ, ಮಾಂಸದ ಸಾರುಗಳಿಂದ ಕೂಡಿದ ಯಾವುದಾದರೂ ಒಂದರ ಜೊತೆಯಲ್ಲಿ ಬಾನದಭೋಜನ ಬಲುಜೋರು. ಇವುಗಳಿಲ್ಲದಿದ್ದರು ಬಾನದೊಳಗೆ ಉಳ್ಳಗಡ್ಡೆ, ಬೆಳ್ಳೊಳ್ಳಿ, ಬೆಲ್ಲದ ಚೂರುಗಳಲ್ಲಿ ಒಂದನ್ನು ಮತ್ತು ಒಂದಿಷ್ಟು ಉಪ್ಪಿನ ಚೂರುಗಳನ್ನು ಕಲಸಿ ಎರಡೂ ಕೈಗಳಿಗಾಗುವಷ್ಟು ಗಾತ್ರದ ಉಂಡೆಗಳನ್ನು ಮಾಡಿಟ್ಟುಕೊಳ್ಳುವುದು. ಸಂದರ್ಭ ಬಂದಾಗ ಹೊಲಕ್ಕೆ ಬುತ್ತಿಯಾಗಿಯೂ ಒಯ್ದು ಉಣ್ಣುವುದು ಪದ್ಧತಿ ಇದೆ.

ಅನ್ನವು ಉಳ್ಳವರ ಸೊತ್ತಾಗಿತ್ತು, ಬಾನವು ದುಡಿವ ವರ್ಗದ ಸತ್ವವಾಗಿತ್ತು. ಆರೋಗ್ಯವಂತ ದೇಹಕ್ಕೆ ಆರೋಗ್ಯಯುತ ಆಹಾರ ಎಂಬುದು ಹಳ್ಳಿಗರ ಆಶಯ. *(ಐ.ಪಿ.)*

ಬಾರ ಅಗಸಿ: ಬಾರ ಅಗಸಿ ಪದದಲ್ಲಿ ದ್ವಿರುಕ್ತಿಯಿದೆ ಒಂದೇ ವಸ್ತುವನ್ನು ಅದಕ್ಕೆ ಅನ್ವಯಿಸುವ ಎರಡು ಪದಗಳಿಂದ ಎಚ್ಚರಿಸಿದರೆ ಅದು ದ್ವಿರುಕ್ತಿಯಾಗುತ್ತದೆ. ನಮ್ಮ ಗ್ರಾಮೀಣ ಜನರು ತಿಳಿದೋ, ತಿಳಿಯದೆಯೋ ಒಂದು ವಸ್ತುವನ್ನು ದ್ವಿರುಕ್ತಿಯಿಂದ ಕರೆಯುವುದು ಸಾಮಾನ್ಯ ವಾಡಿಕೆ. ದ್ವಿರುಕ್ತಿಯಿಂದ ಒಂದು ವಸ್ತುವಿನ ಅರ್ಥ ಬೇರೆಯಾಗದಿದ್ದರೂ ಒಂದನ್ನು ಎರಡು ಸಲ ನುಡಿದರೆ ಜೋಡು ಪದದ ಸೊಬಗು ಅದು ಭವ್ಯವಾಗುತ್ತದೆ. ಆದ್ದರಿಂದ ದ್ವಿರುಕ್ತಿ ಪದ ಉಚ್ಚರಣೆ ಜನಪದರಿಗೆ ಖುಷಿ ತರುತ್ತಿರಬೇಕು.

ಬಾರ ಪದಕ್ಕೆ ಬಾಗಿಲು ಎಂದು ಅರ್ಥ. ದರ, ದಾರ, ಬಾರ, ಕನ್ನಡ ಪದಗಳು ಸಂಸ್ಕೃತ ಪದದ ತದ್ಭವ ಶಬ್ದಗಳೆಂದು ಕೇಶಿರಾಜ ತನ್ನ ವ್ಯಾಕರಣ ಗ್ರಂಥದಲ್ಲಿ ವಿವರಿಸಿದ್ದಾನೆ. ಬಾರ ಎಂಬುದು ಕನ್ನಡ ಪದವೆಂಬುದು ನಿಸ್ಸಂಶಯ. ಬಾಗಿಲು ಎಂದು ಅರ್ಥ. ಉರ್ದುವಿನಲ್ಲಿ ಬಾರ ಶಬ್ದ ಹನ್ನೆರಡರ ಸಂಖ್ಯೆ, ಆದರೆ ಈ ಪದ ಇಲ್ಲಿ ಸರಿಹೋಗುವುದಿಲ್ಲ. ಕನ್ನಡದ ಬಾರ ಪದವೇ ಅರ್ಥ ಪೂರ್ಣ. ಅಗಸಿ ಪದ ಬಾಗಲ ಆರ್ಥ ಕೊಡುತ್ತದೆ. ಅಗಸಿ ಎಂದರೆ ಹೆಬ್ಬಾಗಿಲು ಎಂದು. ಊರು ಪ್ರವೇಶದ ಮಹಾದ್ವಾರ ಈ ಅಗಸಿ ಎಂಬುದು ವಾಡಿಕೆಯಲ್ಲಿದೆ.

ಬಾರ ಅಗಸಿಯಲ್ಲಿಯ ಈ ಎರಡು ಪದಗಳು ಬಾಗಿಲು ಪದವನ್ನು ಪ್ರತಿನಿಧಿಸುತ್ತವೆ. ಇದರಿಂದ ಬಾಗಿಲನ್ನು ಎರಡು ಬಾರಿ ಉಚ್ಚರಿಸಿದಂತಾಗುತ್ತದೆ. ಎರಡು ಬಾರಿ ಉಚ್ಚರಿಸುವ ದ್ವಿರುಕ್ತಿಯೆಂದೆನಿಸಿದೆ. ಗ್ರಾಮೀಣ ಜನರು ಇಂಥ ದ್ವಿರುಕ್ತಿಯನ್ನು ದಿನನಿತ್ಯದ ಬದುಕಿನಲ್ಲಿ ನುಡಿಯುತ್ತಿರುವುದು ತಿಳಿಯುತ್ತದೆ. ಆಕಳಗೋಮೂತ್ರ, ನರಮಾನವ, ಕಡೆಅಂತ (ಅಂತ್ಯ) ಮೊದಲಾದವು ದಿನ ಬಳಕೆಯ ದ್ವಿರುಕ್ತಿಗೆ ಉದಾಹರಣೆಗಳು.


(ಎಸ್.ಎಂ.)

ಬಾರಕೋಲು: ಜನಪದರ ಸಾಧನ ಮತ್ತು ಸಲಕರಣೆಗಳಲ್ಲಿ ಒಂದು. ಇದು ಹೈದ್ರಾಬಾದ ಕರ್ನಾಟಕದ ಭಾಗದೆಲ್ಲೆಡೆಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ. ರೈತ ಕೃಷಿಕ ಸಾಮಾನುಗಳಲ್ಲಿ ಇದನ್ನು ಪ್ರಮುಖವಾಗಿ ಉಪಯೋಗಿಸುತ್ತಾರೆ. ಮುಖ್ಯವಾಗಿ ಇದನ್ನು ಬಳಸುವುದು ಎತ್ತಿಗೆ ಹೊಡೆಯಲು. ರೈತರು ಹೊಲದಲ್ಲಿ ರಂಟೆ ಕುಂಟೆ ಹೊಡೆಯುವಾಗ ಇದನ್ನು ತಪ್ಪದೇ ಬಳಸುತ್ತಾರೆ. ಬಾರಕೋಲು ಬಾರಿಸುವುದರಿಂದ ಎತ್ತುಗಳು ಸರಿಯಾಗಿ ನಡೆಯುತ್ತವೆ ಎಂದು ಪ್ರತಿಯೊಬ್ಬ ರೈತರ ಬಳಿಯಲ್ಲಿ ಇದು ಇರುತ್ತದೆ. ಎತ್ತುಗಳನ್ನು ಬೆದರಿಸಲು ಇದು ಅಗತ್ಯ.

ಸಾಮಾನ್ಯವಾಗಿ ಬಾರಕೋಲಿನ ಉದ್ದ 5 ರಿಂದ 6 ಅಡಿ ಎರಡು ಅಡಿ ತೆಳ್ಳನೆಯ ಬಡಿಗೆಗೆ ಒಂದು ತೂತು ಮಾಡಿ ಸೇರಿಸಿರುತ್ತಾರೆ. ವಿವಿಧ ಕಲಾತ್ಮಕವಾಗಿ ರಚನೆಯಾದ ಬಾರಕೋಲು 3 ಅಡಿಯವರೆಗೆ ಸ್ವಲ್ಪ ದಪ್ಪವಿದ್ದು ಚರ್ಮಚಾದಿತವಾಗಿರುತ್ತದೆ. ಮುಂದುಗಡೆ ಮೂರು ಅಡಿಯ ತೆಳ್ಳನೆಯ ಚರ್ಮದ ಬಾರುಗಳು ಇರುತ್ತವೆ. ಇದರಿಂದ ಎತ್ತುಗಳಿಗೆ ಅಧಿಕ ಪೆಟ್ಟು ಹತ್ತುತ್ತದೆ. ಹಾಗೂ ಶಬ್ದ ಕೂಡ ಆಗುತ್ತದೆ ಮತ್ತು ಸಾಲುಗಳು ನೇರವಾಗಿ ಸಾಗಲು ಅನತ್ಯವಾಗುತ್ತದೆ. ರಂಟೆ ಕುಂಟೆ ಹೊಡೆಯುವಾಗ ರೈತನು ಎತ್ತುಗಳಿಗೆ ಗದರಿಸಿ ಸರಿಯಾದ ದಾರಿಗೆ ತರುತ್ತಾನೆ.

ಬಾರಕೋಲು ಮನೆಯಲ್ಲಿಯೂ ತಯಾರಿಸಬಹುದು ಇಲ್ಲವೆ ಸಂತೆಯಲ್ಲೂ ಕೂಡ ತಯಾರಿಸಿ ಮಾರುತ್ತಾರೆ. ಪ್ರಸ್ತುತ ಚರ್ಮದ ಬೆಲೆ ಹೆಚ್ಚಾಗಿರುವುದರಿಂದ ಅದರಿಂದ ತಯಾರಿಸಲ್ಪಟ್ಟ ಬಾರಕೋಲಿನ ಬೆಲೆ ಕೂಡ ಅಧಿಕವಾಗಿದೆ. ಆದುದರಿಂದ ರೈತಾಪಿಗಳು ಪುಂಡಿ ಕಟ್ಟಿಗೆಯಿಂದ ನಾರು ತಯಾರಿಸಿ, ಅದ-ರಿಂದಲೂ ಕೂಡ ಬಾರಕೋಲು ತಯಾರಿಸಬಹುದು. ಇಲ್ಲವೆ ಸಿಮೆಂಟ ಚೀಲ ಹರಿದು ಅದರಿಂದಲೂ ತಯಾರಿಸಬಹುದು. ಅದರ ಮುಂದಿನ ತುದಿಗೆ ಚರ್ಮದ ತಳ್ಳನೆಯ ಎರಡು ಬಾರಗಳನ್ನು ಜೋಡಿಸುತ್ತಾರೆ. ಇದರಿಂದ ಶಬ್ದವು ಜೋರಾಗಿ ಬರುವುದಲ್ಲದೆ ಬೇಗ ಸವೆಯುವುದಿಲ್ಲ ಆದರೆ ಹೆಚ್ಚು ತಾಳಿಕೆಗೆ ಬರುವುದು ಸಂಪೂರ್ಣವಾಗಿ ಚರ್ಮದಿಂದ ತಯಾರಿಸ್ಪಟ್ಟ ಬಾರಕೋಲು ನಾರಿನಿಂದ ತಯಾರಿಸಲ್ಪಟ್ಟ ಬಾರಕೋಲು ಹೆಚ್ಚು ತಾಳಿಕೆಗೆ ಬರುವುದಿಲ್ಲ. ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ರೈತನು ಭೂಮಿ ಉಳುಮೆ, ಮಾಡುವಾಗ, ರಂಟೆ ಕುಂಟೆ ಹೊಡೆಯುವಾಗ ದನಗಳಿಗೆ ಮೇಯಿಸಲಿಕ್ಕೆ ಹೋಗುವಾಗ ಬಾರಕೋಲಿನ ಅವಶ್ಯಕತೆಯು ತುಂಬಾ ಇದೆ. *(ಪಿ.ಕೆ.ಕೆ.)*

ಬಾವಿಗಳು: ಹೈದರಾಬಾದ ಕರ್ನಾಟಕ ಪ್ರದೇಶವನ್ನು ಆಳಿದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಬಹುಮನಿ ಸುಲ್ತಾನರು, ಹೈದರಾಬಾದ ಆಸಿಫ್ ಜಾಹಿ ನಿಜಾಮ ಮುಂತಾದ ಪ್ರಮುಖ ಮನೆತನಗಳು ಆಳಿದ ನಾಡಿದು. ಈ ಪ್ರಸಿದ್ಧಿ ಮನೆತನದ ಅರಸರು ತಮ್ಮ ಪ್ರಸಿದ್ಧ ಮನೆತನದ ಅರಸರು ತಮ್ಮ ಆಡಳಿತಾವಧಿಯಲ್ಲಿ ಕಲೆ-ಸಂಸ್ಕೃತಿಯ ಅಭಿವೃದ್ಧಿಗಾಗಿ, ಅನೇಕ ಗುಡಿ ಗುಂಡಾರಗಳು-ಗುಮ್ಮಟಗಳನ್ನು ಈ ಭಾಗದಲ್ಲಿ ನಿರ್ಮಿಸಿ ಬಿಟ್ಟು ಹೋಗಿರುವುದು ಈಗ ಇತಿಹಾಸ. ಈ ಇತಿಹಾಸದ ಬಗ್ಗೆ ಅನೇಕ ಗ್ರಂಥಗಳಲ್ಲಿ ದಾಖಲೆಗಳು ದೊರೆತಿದ್ದು, ಇವುಗಳಿಗೆ ಸಾಕ್ಷಿಯಾಗಿ ಪ್ರತಿಯೊಂದು ಗ್ರಾಮ, ನಗರ-ಪಟ್ಟಣಗಳಲ್ಲಿ ಅವಸಾನದ ಅಂಚಿನಲ್ಲಿರುವ ಸ್ಮಾರಕಗಳು ಇನ್ನೂ ಕಾಣಬಹುದಾಗಿದೆ.



ಭಾವಿಗಳು

ಕಲಬುರ್ಗಿ ಜಿಲ್ಲೆಯ ಗುರುಮಠಕಲ್ ಪಟ್ಟಣ ಹಿಂದೆ ಕಾಕಲವಾರ ಸಂಸ್ಥಾನದ ಆಧೀನದಲ್ಲಿತ್ತು. ಇಂದು ಅಭಿವೃದ್ಧಿಯ ಮುಂಚೂಣೆಯಲ್ಲಿರುವ ಗುರುಮಠಕಲ್ ಪಟ್ಟಣದಲ್ಲಿ, ಸುಮಾರು ನಾಲ್ಕುನೂರು ವರ್ಷಗಳ ಹಿಂದೆ ನಿರ್ಮಿಸಿರುವ ಅನೇಕ ಐತಿಹಾಸಕ ಸ್ಮಾರಕಗಳು, ಮಠಗಳು ಯಾರ ಗಮನವೂ ಸೆಳೆಯದೇ ದಿವ್ಯ ನಿರ್ಲಕ್ಷಕೊಳಗಾಗಿವೆ.

ಈ ಪಟ್ಟಣದಲ್ಲಿರುವ ಕಲಾತ್ಮಕ ಐತಿಹಾಸಿಕ ಬಾವಿಗಳು ಪ್ರಸಿದ್ಧಿ ಪಡೆದವುಗಳಾಗಿವೆ. ಒಂದು ಕಾಲದಲ್ಲಿ ದೇವಾಲಯ ಮುಂದಿನ ಪುಷ್ಕರಣಿ ಪವಿತ್ರ ತೀರ್ಥವಾಗಿದ್ದುವು. ನೀರಾವರಿಗಾಗಿ ಹಾಗೂ ಕುಡಿಯುವ ನೀರಿಗಾಗಿಯೂ ನಿರ್ಮಿಸಿರುವ ಬಾವಿಗಳು ಅತ್ಯಂತ ಕಲಾತ್ಮಕ ರೀತಿಯಲ್ಲಿ ನಿರ್ಮಿಸಿದ್ದು, ಆಸಕ್ತರ ಮನಸೂರೆಗೊಳ್ಳುತ್ತವೆ.

ಗುರುಮಠಕಲ್ ಪಟ್ಟಣದಲ್ಲಿ ಒಟ್ಟು ಆರು ಐತಿಹಾಸಿಕ ಕಲಾತ್ಮಕ ಬಾವಿಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳು ಯಲ್ಲಮ್ಮ ಬಾವಿ, ರಾಮತೀರ್ಥ, ಯಲ್ಲಕ್ಕನ ಬಾವಿ, ಕೋಟಿ ಬಾವಿ ಮುಂತಾದವುಗಳು ವಿಜಾಪುರ ಆದಿಲ್ ಶಾಹಿ ಕಾಲದಲ್ಲಿ ನಿರ್ಮಿಸಿದ ತಾಸಬಾವಡಿಯನ್ನು ಮೀರಿಸುವಂತಿವೆ.

ಯಲ್ಲಮ್ಮ ಬಾವಿ: ಗುರುಮಠಕಲ್ ಪಟ್ಟಣದ ಪಶ್ಚಿಮ ದಿಕ್ಕಿನಲ್ಲಿರುವ ಯಲ್ಲಮ್ಮ ಬಾವಿಯ ಮುಖ್ಯದ್ವಾರ ದಕ್ಷಿಣ ದಿಕ್ಕಿಗಿದೆ. ಮುಖ್ಯದ್ವಾರದಲ್ಲೇ ಕರಿಕಲ್ಲಿನಲ್ಲಿ ಬಾವಿ ಎಂಟು ಕಮಾನುಗಳಿಂದ ಸಿಂಗರಿಸಲ್ಪಟ್ಟಿದೆ. ಸುಮಾರು 300 ಅಡಿ ಉದ್ದ 120 ಅಡಿ ಅಗಲ ವಿಶಾಲವಾಗಿರುವ ಈ ಬಾವಿಯಿಂದ ಹಿಂದೆ ಸುಮಾರು 50 ಎಕರೆ ಭೂಮಿಗೆ ನೀರಾವತಿ ಮಾಡಲಾಗುತ್ತಿತ್ತೆಂದು ಹೇಳಲಾಗುತ್ತದೆ.

ಹಿಂದಿನ ಕಾಲದಲ್ಲಿ ವಿದ್ಯುತ್ ಮತ್ತು ಪಂಪಸೆಟ್ ಇಲ್ಲದೆ ಇಂಥ ಬಾವಿಯಿಂದ 'ಮೋಟ' ಪದ್ಧತಿಯಿಂದ ನೀರೆತ್ತಿ ಸಾಗುವಳಿ ಮಾಡುತ್ತಿದ್ದರು. ಇಲ್ಲಿರುವ ಪ್ರತಿಯೊಂದು ಬಾವಿಗಳಿಗೂ 'ಮೋಟ'ಕಟ್ಟಲು ಪ್ರತ್ಯೇಕ ಕೆತ್ತನೆಯ ಕಲ್ಲುಗಳು ಇಂದಿಗೂ ಇಲ್ಲಿ ಕಾಣಬಹುದು. ದೊಡ್ಡದಾದ ತೊಟ್ಟಿ, ಅದರ ಮುಖಭಾಗಕ್ಕೆ ಆನೆ ಸೊಂಡಿಲಿನಂತೆ ನೀರು ಹರಿದು ಹೋಗಲು ದಾರಿ, ಎತ್ತುಗಳ ಸಹಾಯದಿಂದ ನೀರೆತ್ತುವ 'ಮಟ್ಟಿ' ಪದ್ಧತಿ ಇಂದಿನ ಆಧುನಿಕತೆಯಲ್ಲಿ ಮರೆಯಾಗಿದೆ. ಆದರೆ, ಹಿಂದೆ ಈ ಬಾವಿಯಿಂದ ಐವತ್ತಕ್ಕೂ ಹೆಚ್ಚು ಎಕರೆ ಜಮೀನಿಗೆ ನೀರಾವರಿಯಾಗುತ್ತಿತ್ತು. ಅಂಥ ಬಾವಿಯಲ್ಲಿಂದು ಹೂಳು ತುಂಬಿ ನೀರಿಲ್ಲದೇ ಹನಿ ನೀರಿಗಾಗಿ ಬಾಯಿಡುವ ಪರಿಸ್ಥಿತಿ ನಿರ್ಮಾಣವಾಗಿದೆ. 80 ರ ದಶಕದಲ್ಲಿ ಅಷ್ಟಿಷ್ಟು ನೀರಿದ್ದುವು. ಆಗ ಅಲ್ಪ-ಸ್ವಲ್ಪ ಹೂಳು ತೆಗೆಯಲಾಯಿತು. ಆದರೂ ನೀರು ಬರಲಿಲ್ಲ. ತಳದವರೆಗೆ ಹೂಳೆತ್ತಿದ್ದರೆ ನೀರು ಖಂಡಿತ ಬರುತ್ತಿತ್ತು ಎಂದು ಹಿರಿಯರು ಹೇಳುತ್ತಾರೆ. ಆದರೆ ಯಾರೂ ಆಸಕ್ತಿ ವಹಿಸಲಿಲ್ಲ. ಸೂಕ್ತ ನಿರ್ವಹಣೆಯಿಲ್ಲದೇ, ಸರ್ಕಾರದ ಹಾಗೂ ಸಾರ್ವಜನಿಕರ ಅಲಕ್ಷದಿಂದಾಗಿ ಈ ಬಾವಿಯ

ಗೋಡೆಗಳು ಕುಸಿಯುತ್ತಿವೆ. ಅಪಾರ ಹಣ ವಿನಿಯೋಗಿಸಿ, ಪರಿಶ್ರಮದಿಂದ ನಿರ್ಮಿಸಲಾದ ಈ ಪುರಾತನ ಬಾವಿಯನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳದೇ ಬಿಟ್ಟಿರುವುದರಿಂದ ಈ ಐತಿಹಾಸಿಕ ಬಾವಿಯ ಸ್ಥಿತಿ ಶೋಚಯನೀಯವಾಗಿದೆ.

ಯಲ್ಲಕ್ಕನ ಬಾವಿ: ಇನ್ನೊಂದು ಪ್ರಸಿದ್ಧವಾದ ಬಾವಿ ಪಟ್ಟಣದ ಮಧ್ಯ ಭಾಗದ ನಗರೇಶ್ವರ ದೇವಸ್ಥಾನದ ಮುಂದಿದೆ. ಹಿಂದೆ ಇದನ್ನು ಭಕ್ತರಿಗಾಗಿ ನಿರ್ಮಿಸಿರಬಹುದು ಎಂದು ಹೇಳಲಾಗುತ್ತದೆ. ಕರಿಕಲ್ಲಿನಿಂದ ನಿರ್ಮಿಸಿರುವ ಈ ಬಾವಿಗೆ ತಳಮಟ್ಟದವರೆಗೂ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಮಧ್ಯಭಾಗದಲ್ಲಿರುವ ದೊಡ್ಡ ಕಮಾನು ಬಾವಿಯನ್ನು ಎರಡು ಭಾಗಗಳಲ್ಲಿ ವಿಂಗಡಿಸುತ್ತದೆ. ಸುಮಾರು 60ಥ40 ಅಳತೆಯ ಬಾವಿಯ ಕೆಳಮಟ್ಟದಲ್ಲಿ ಎರಡು ಭಾಗಗಳಲ್ಲಿ ಗುಹೆಯಂತೆ ಸುಂದರವಾದ ಎರಡು ಕೋಣೆಗಳಿವೆ. ಭಕ್ತಾದಿಗಳು ಸ್ನಾನದ ನಂತರ ಬಟ್ಟೆ ಬದಲಾಯಿಸಲು ಇವುಗಳನ್ನು ನಿರ್ಮಿಸಿರಬಹುದು. ಈ ಬಾವಿ ಮುಖ್ಯ ಬೀದಿಯಲ್ಲಿರುವದರಿಂದ ಸಾರ್ವಜನಿಕರ ಕಸಕಡ್ಡಿ, ಪ್ರತಿ ವರ್ಷ ಗಣೇಶ ವಿಸರ್ಜನೆಯಿಂದಾಗಿ ಹೂಳುತುಂಬಿತ್ತು. ದೇವಸ್ಥಾನ ಸಮಿತಿಯ ಕಾಳಜಿಯಿಂದಾಗಿ ಅಲ್ಪ ಸ್ವಲ್ಪ ಹೂಳೆತ್ತಿ ಬಾವಿಯ ಜೀರ್ಣೋದ್ಧಾರ ಮಾಡಿ, ಕಸಕಡ್ಡಿ ಹಾಕದಂತೆ ಎಚ್ಚರಿಕೆ ವಹಿಸಿದ್ದಾರೆ.

ರಾಮತೀರ್ಥ: ಪಟ್ಟಣದ ಪೂರ್ವ ಭಾಗದಲ್ಲಿರುವ ಸುಂದರ ಹಾಗೂ ಕಲಾತ್ಮಕ ರೀತಿಯಲ್ಲಿ ನಿರ್ಮಿಸಲಾದ ಬಾವಿ. ಸುಮಾರು 100ಥ80 ಉದ್ದಗಲ ಆಯತ ಆಕಾರದಲ್ಲಿ ತಳದವರೆಗೆ ಮೆಟ್ಟಿಲುಗಳಿವೆ. ಈಜು ಕಲಿಯಲು ಈ ಬಾವಿ ಬಹಳಷ್ಟು ಅನುಕೂಲವಾಗಿದೆ. ಬಾವಿಯ ಸುತ್ತ ಮುತ್ತಲು 30 ಚೌಕಾಕಾರದ ಕಮಾನುಗಳು, ಮೇಲ್ಭಾವಣಿ, ಭಾವಣಿಯ ಕೆಳಭಾಗದ ಮಧ್ಯದಲ್ಲಿ ಪ್ರತಿಯೊಂದರಲ್ಲಿಯೂ ಗಚ್ಚಿನಿಂದ ಸುಂದರ ಕಲಾಕೃತಿಗಳನ್ನು ನಿರ್ಮಿಸಲಾಗಿದೆ. ಪೂರ್ವಾಭಿಮುಖವಾಗಿ ಕಲ್ಲಿನ ಬಸವಣ್ಣ ಹಾಗೂ ಕಲ್ಲಿನಲ್ಲಿ ಕೆತ್ತಲಾದ ಕಟ್ಟೆಗಳಿವೆ.

ಈ ಬಾವಿಯಲ್ಲಿರುವ ಒಟ್ಟು ಕಮಾನುಗಳ ಸಂಖ್ಯೆ 116 ಬಾವಿಯ ನೀರನ್ನು ಮೂಲೆಯೊಂದರಿಂದ ಹೊರಕ್ಕೆ ಸಾಗಿಸಿ, ನಾಲೆಗೆ ಹೋಗುವಂತೆ ವ್ಯವಸ್ಥೆ ಮಾಡಲಾಗಿದೆ. ಮೂಲೆಯಿಂದ ನೀರು ಯಾವಾಗಲೂ ಹೊರಗೆ ಹೋಗುತ್ತಲೇ ಇರುತ್ತದೆ. 1972–73 ರ ಭೀಕರ ಬರಗಾಲದಲ್ಲೂ ಕೂಡ ಈ ಬಾವಿಯಲ್ಲಿ ಇಂಚು ಸಹ ನೀರಿನ ಮಟ್ಟ ಕಡಿಮೆ ಯಾಗದಿರುವದು ಈ ಬಾವಿಯ ವಿಶೇಷತೆಯಾಗಿದೆ.

ಪಟ್ಟಣದ ನಾಗರಿಕರು ಚಳಿ, ಮಳೆ ಎನ್ನದೆ ಪ್ರತಿದಿನ ಈ ಬಾವಿಗೆ ಸ್ನಾನಕ್ಕೆ ಬರುತ್ತಾರೆ. 6–7 ವರ್ಷದಿಂದ ಬಾವಿ ಇದೀಗ ಕುಸಿಯಲಾರಂಭಿಸಿದ್ದು, ಸ್ಥಳೀಯ ಆಗಸರು, ಸಾರ್ವಜನಿಕರು ಬಟ್ಟೆಗಳನ್ನು ಈ ಬಾವಿಯಲ್ಲೇ ಒಗೆಯುತ್ತಿರುವುದರಿಂದ ನೀರು ಅಶುದ್ಧವಾಗುತ್ತಿದೆ.

ತಿಮ್ಮನ ಬಾವಿ: ಈ ಬಾವಿಯ ಕಥೆಯೂ ಇನ್ನುಳಿದವುಗಳಿಗಿಂತ ಭಿನ್ನವಾಗಿಲ್ಲ. ಬಸ್ ನಿಲ್ದಾಣಕ್ಕೆ ಸಮೀಪದಲ್ಲಿರುವ ಈ ಬಾವಿ ಚೆನ್ನಾರಿಗೆ ಈಜಾಡಲು ನೀರಿನ ಸಮಸ್ಯೆಯಿರುವ ನಾಗರಿಕರ ಪಾಲಿಗೆ ವರವಾಗಿದೆ. ಕೋಟೆಯ ಒಳಗೊಂದು ಬಾವಿಯಿದೆ. ಅದರ ಹೆಸರು ಗೊತ್ತಿಲ್ಲವಾದರೂ, ಇಂದು ಕಸದ ತೊಟ್ಟಿಯಾಗಿ ಮಾರ್ಪಟ್ಟಿದೆ. ನೋಡಲು ಯಲ್ಲಮ್ಮನ ಬಾವಿಗೆ ಹೋಲುತ್ತದೆ.

ರಾಜಮಹಾರಾಜರ, ಸಂಸ್ಥಾನಿಕರ ಕಾಲದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಿರುವ ಈ ಕಲಾತ್ಮಕ ಬಾವಿಗಳನ್ನು ಶುದ್ಧಗೊಳಿಸಿ ರಕ್ಷಿಸಿಕೊಂಡರೆ, ಇಡೀ ಗುರುಮಠಕಲ್ ಪಟ್ಟಣಕ್ಕೆ ಸಮೃದ್ಧ ನೀರು ಪೂರೈಕೆ ಸಾಧ್ಯವಿದೆ. ತಮ್ಮ ಖಜಾನೆಯಿಂದ ಸಂಪತ್ತು ಸುರಿದು, ಸದಾಕಾಲ ನೀರಿರುವಂಥ ಸ್ಥಳಗಳನ್ನು ಹುಡುಕಿ ನೂರಾರು ವರ್ಷಗಳವರೆಗೂ ಬಾಳುವಂಥ ಬಾವಿಗಳನ್ನು ಪೂರ್ವಜರು ನಿರ್ಮಿಸಿದ್ದಾರೆ. ಇಷ್ಟೊಂದು ಜಲಸಂಪತ್ತು ಹೊಂದಿರುವ ಈ ಕಲಾತ್ಮಕ ಬಾವಿಗಳನ್ನು ಉಳಿಸಿಕೊಂಡರೆ, ನೀರೂ ದೊರೆಯುತ್ತದೆ. ಪುರಾತನ ಐತಿಹಾಸಿಕ ಸ್ಮಾರಕಗಳನ್ನೂ ಉಳಿಸಿಕೊಂಡ ಹೆಮ್ಮೆಯೂ ಇರುತ್ತದೆ. *(ಡಿ.ಎಸ್.)*

ಬಾಸಿಂಗ: ಮದುವೆಯಲ್ಲಿ ಮದುಮಕ್ಕಳು ಧರಿಸುವ ಮಂಗಲ ವಸ್ತು. ಅದು ಲಗ್ನದ ಶುಭದ ಸಂಕೇತ. ಮದುವೆಯ ಶುಭಕಾರ್ಯಗಳಲ್ಲಿ ಬಾಸಿಂಗಕ್ಕೆ ಪವಿತ್ರ ಸ್ಥಾನವಿದೆ. ಮದುಮಗನ ಹಣೆಗೆ ಕಟ್ಟುವ ಈ ಬಾಸಿಂಗದ ರಚನೆ ಹಿಂದೂ ಜನಾಂಗದ ಬೇರೆ ಬೇರೆ ಪಂಗಡದಲ್ಲಿ ಸಂಪ್ರದಾಯಕ್ಕೆ ತಕ್ಕಂತೆ ಭಿನ್ನವಾಗಿರುತ್ತದೆ. ಮಾಲೆಗಾರ ಅಥವಾ ಹೂಗಾರ ಬಾಸಿಂಗವನ್ನು ಕಟ್ಟುತ್ತಾರೆ. ರಟ್ಟಿನಲ್ಲಿ ಅಥವಾ ಬಿದಿರಿನಲ್ಲಿ ರಚಿಸಿದ ಪಟ್ಟಕೆಗೆ ಸುನಾರಿ ರಂಗಿನ ಕಾಗದ ಅಂಟಿಸಿ ಹೂವಿನಿಂದ ಅಲಂಕರಿಸುತ್ತಾನೆ. ಬಿದುರಿನ ಎರಡೂ ತುದಿಗೆ ಹೂವಿನ ಗೊಂಡೆ ಇಳಿಡುತ್ತಾನೆ. ಅದರ ಮೇಲಿನ ತುದಿಗಳಿಗೆ ಹೂವಿನಿಂದ ಶೃಂಗರಿಸುತ್ತಾನೆ. ಆಗ ಬಾಸಿಂಗ ಸಿದ್ಧವಾಗುತ್ತದೆ. ಮತ್ತೊಂದು ಬಾಸಿಂಗ, ಹೂ ಮತ್ತು ಮಣಿಗಳನ್ನು ಪೋಣಿಸಿದ ದಾರದ ಎರಡು ಸಾಲುಗಳು, ಅದರ ಎರಡು ತುದಿಗೆ ಕಟ್ಟಿದ ಗೊಂಡೆಗಳು ತೂಗುತ್ತಿರುವಂತೆ ಅಲಂಕೃತವಾಗಿರುತ್ತದೆ.

ಮಾಂಗಲ್ಯ ಧಾರಣೆಗೆ ಮೊದಲು ಮದುಮಕ್ಕಳಿಗೆ ಮದುವೆ ಚಪ್ಪರದಲ್ಲಿ ಎಣ್ಣೆ–ಅರಿಷಿಣದ ನೀರೆರೆದು ಸ್ನಾನಮಾಡಿಸಿ ಹೊಸ ಬಟ್ಟೆಗಳನ್ನು ತೊಡಿಸುತ್ತಾರೆ. ಆನಂತರ ದೇವರ ಮನೆಯಲ್ಲಿ ಕೂಡಿಸಿ ಮದುಮಗನ ತಲೆಗೆ ರುಮಾಲು (ಪೇಟಾ) ಸುತ್ತಿ ಬಾಸಿಂಗವನ್ನು ಕಟ್ಟುತ್ತಾರೆ. ರುಮಾಲದ ಬದಲು ಟೊಪ್ಪಿಗೆ ಇಟ್ಟು ಹೂ ಮಣಿಗಳಿಂದ ಅಲಂಕರಿಸಿದ ಬಾಸಿಂಗವನ್ನು ಕಟ್ಟುತ್ತಾರೆ. ಮದುವಣಗಿತ್ತಿಗೆ ತಲೆತುಂಬ ಹೂವಿನ ದಂಡೆಯನ್ನು ಮುಡಿಸುತ್ತಾರೆ. ಈಗ ಅವರು ಮಾಂಗಲ್ಯಧಾರಣೆಗೆ ಅರ್ಹರಾಗುತ್ತಾರೆ. ವಧು–ವರರನ್ನು ಲಗ್ನ ಮಂಟಪಕ್ಕೆ ಕರೆತಂದು ಗುರುಹಿರಿಯರ, ಬಂಧು–ಬಾಂಧವರ ಸಮಕ್ಷಮದಲ್ಲಿ ವರ ಕನ್ಯೆಗೆ ಮಾಂಗಲ್ಯ (ತಾಳಿ) ಕಟ್ಟುತ್ತಾನೆ. ಆಗ ಗಟ್ಟಿಮೇಳ ಮೊಳಗುತ್ತಿದ್ದಂತೆ ನೆರದ ಜನರು ಅಕ್ಷತೆ (ಅಕ್ಕಿ ಕಾಳು) ಹಾಕುತ್ತಾರೆ. ಆ ಘಳಿಗೆಯಿಂದಕ ವಧು–ವರರು ದಂಪತಿಗಳಾಗುತ್ತಾರೆ.

ಬಾಸಿಂಗ ಮದುವೆ ಭಾಗ್ಯದ ಪವಿತ್ರ ಸಂಕೇತ. ಅಂತೆಯೇ, 'ಬಾಸಿಂಗ ಬಲ ಕೂಡಿಬಂದರೆ ಮದುವೆಯಾಗುತ್ತದೆ', 'ಬಾಸಿಂಗದ ಯೋಗಬೇಕು' ಎಂಬ ರೂಢಿಯ ಮಾತು ಬಾಸಿಂಗದ ಮಹತ್ವವನ್ನು ಹೇಳುತ್ತದೆ.


(ಎಸ್.ಎಂ.)

ಬಿ

ಬಿದರಿ ಕಲೆ: ಒಂದು ಕರಕುಶಲ ಕಲೆ. ಬಹಮನಿ ಸುಲ್ತಾನರು, ಬರೀದಷಾಹಿ, ಮೊಘಲರು ಅಲ್ಲದೇ ಹೈದರಾಬಾದ ನಿಜಾಮರ ಆಳ್ವಿಕೆಗೆ ಒಳಪಟ್ಟ ಪ್ರಾಚೀನ ನಗರ ಬೀದರ. ಅಂದಿನ ದಿನಗಳಲ್ಲಿ ಈ ಸುಲ್ತಾನರು ಪರ್ಷಿಯಾ ದೇಶದೊಡನೆ ವ್ಯಾಪಾರ ಸಂಬಂಧವನ್ನು ಹೊಂದಿದ್ದರ ಫಲವಾಗಿ ಪರ್ಷಿಯಾದ ಅನೇಕ ಕಲಾವಿದರು ಈ ರಾಜಮನೆತನಗಳ ಆಶ್ರಯವನ್ನು ಪಡೆದರು. ಅಲಂಕಾರಿಕ ವಿನ್ಯಾಸದ ಪರ್ಷಿಯನ್ ಕಲೆಯೊಂದಿಗೆ ಬಿದರಿ ಕಲೆಯೂ ಅಂದು ಹೆಚ್ಚು ಪ್ರಸಿದ್ಧಿಯನ್ನು ಪಡೆದಿತ್ತು.

ಉಗಮ ಮತ್ತು ವಿಕಾಸ: ಬಿದರಿ ಕಲೆ ಅತ್ಯಂತ ಪ್ರಾಚೀನವಾದದ್ದು. ಈ ಕಲೆಗೆ ಬಳಸುವ ತಂತ್ರವಿಧಾನವನ್ನು ನಾವು ಶಿಲಾಯುಗದಿಂದಲೇ ಗುರುತಿಸಬಹುದಾಗಿದೆ. ಪ್ರಾಚೀನ ಶಿಲಾಯುಗದ ಮೃತ್ಪಾತ್ರೆಗಳ ಮೇಲೆ ವಿನ್ಯಾಸಸಗೊಳಿಸಿದ ಕುಶಲಕಲೆಯು ಬಹಳ ಹಿಂದಿನಿಂದಲೇ ರೂಢಿಯಲ್ಲಿದ್ದುದು ಕಂಡುಬರುತ್ತದೆ. ಕಾಲಕ್ರಮೇಣ ಈ ವಿಧಾನ ರಾಜಾಶ್ರಯ ಪಡೆಯುವುದರ ಮೂಲಕ ಬದಲಾವಣೆ ಹಗೂ ಅಭಿವೃದ್ಧಿಯತ್ತ ಸಾಗಿತು. ಕಲ್ಯಾಣ ಚಾಲುಕ್ಯರ ಆನಂತರ ಕಳಚೂರಿ ಅರಸರ ಕಾಲದಲ್ಲಿ ವಿವಿಧ ಪರಿಕರಗಳ ಮೇಲೆ ಬೆಳ್ಳಿ ಬಂಗಾರದಿಂದ ಲೇಪಿಸುವ ಹಾಗೂ ಚಿತ್ತಾರ ಕೆತ್ತಿ ಅದರಲ್ಲಿ ಬೆಳ್ಳಿ-ಬಂಗಾರ ಕೂಡಿಸುವ ಕಲೆ ರೂಢಿಯಲ್ಲಿತ್ತು. ಇದು ಈಗಿನ ಬಿದರಿ ಕಲೆಯ ತಂತ್ರ ವಿಧಾನವನ್ನು ಹೋಲುತ್ತದೆ.

ಬಿದರಿ ಕಲೆ ಇರಾಕ್, ಇರಾನ್‌ನಿಂದ ಬೀದರ ನಗರಕ್ಕೆ ಬಂದಿರಬಹುದೆಂದು ಊಹಿಸಲಾಗುತ್ತದೆ. ಈ ಕಲೆಯ ಮೂಲಸ್ಥಾನ ಪರ್ಷಿಯಾ ಎಂದೂ ಹೇಳಲಾಗುತ್ತದೆ. ಭಾರತದಲ್ಲಿ ಮುಘಲರು ಮತ್ತು ದಖನ್ ಸುಲ್ತಾನರು ಈ ಕಲೆಗೆ ಆಶ್ರಯವನ್ನು ನೀಡಿದರೆ, ಬೀದರನಲ್ಲಿ ಬಹಮನಿ ಸುಲ್ತಾನರು ಮತ್ತು ಬರೀದಷಾಹಿಗಳು ಈ ಕಲೆಯನ್ನು ಬೆಳೆಸಿದರು. ಸುಲ್ತಾನ ಅಹ್ಮದ್ ಷಾವಲಿ ಬಹಮನಿ (1422-36)ಯ ಆಳ್ವಿಕೆಯ ಕಾಲದಲ್ಲಿ ಈ ಕಲೆಯು ಬೀದರ ನಗರಕ್ಕೆ ಪರಿಚಯವಾಯಿತು. ಈ ಸುಲ್ತಾನನು ಕ್ರಿ.ಶ. 1422-23 ರಲ್ಲಿ ತನ್ನ ರಾಜಧಾನಿಯನ್ನು ಗುಲ್ಬರ್ಗಾದಿಂದ ಬೀದರಗೆ ಸ್ಥಳಾಂತರಿಸಿದನಲ್ಲದೇ ಬೀದರ ಕೋಟೆಯಲ್ಲಿನ ರಂಗೀನ್ ಮಹಲ್ ಹಾಗೂ ಇತರ ಕಲಾತ್ಮಕ ಕಟ್ಟಡಗಳನ್ನು ನಿರ್ಮಿಸಲು ಇರಾನ್‌ನಿಂದ ಅನೇಕ ವಾಸ್ತು ಶಿಲ್ಪಿಗಳನ್ನು, ಕಲಾವಿದರನ್ನು ಆಮಂತ್ರಿಸಿದ. ಬೀದರ ಕೋಟೆಯೊಳಗಿನ ಕಟ್ಟಡಗಳನ್ನು ಅಲಂಕರಿಸುತ್ತಿದ್ದ ಕಲಾವಿದರೇ ಬಿದರಿ ಕಲೆಯನ್ನು ರಚಿಸುತ್ತಿದ್ದರು. 14ನೆಯ ಶತಮಾನದಲ್ಲೇ ರಾಮಣ್ಣ, ಹೇಮಣ್ಣ ಎಂಬುವವರು ಬಿದರಿ ಕಲೆಯಲ್ಲಿ ಮುತ್ತು, ರತ್ನ, ಹವಳಗಳ ಜೋಡಣೆ ಮಾಡುತ್ತಿದ್ದರೆಂದು ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ'ಯಲ್ಲಿ ಹೇಳಲಾಗಿದೆ. ಆದರೆ ಬಿದರಿ ಕರಕುಶಲ ಕಲೆಗೆ ಸಂಬಂಧಿಸಿದ ಮೊದಲ ಲಿಖಿತ ಉಲ್ಲೇಖ 1759 ರಲ್ಲಿ ಪರ್ಷಿಯನ್ ಭಾಷೆಯಲ್ಲಿ ಬರೆಯಲಾದ 'ಚಾರ್ ಗುಲ್‌ಶಾನ್' ಗ್ರಂಥದಲ್ಲಿ ದೊರೆಯುತ್ತದೆ.



ಮೇಲೆ ಉಲ್ಲೇಖಿಸಿದ ಎಲ್ಲ ಸಾಹಿತ್ಯಾಧಾರಗಳಿಂದಲೂ ಬಿದರಿ ಕಲೆ ಅತ್ಯಂತ ಪ್ರಾಚೀನ ಕಲಾಪ್ರಕಾರವೆಂಬುದು ಸ್ಪಷ್ಟವಾಗುತ್ತದೆ. ಸುಮಾರು 600 ವರ್ಷಗಳ ಪ್ರಾಚೀನತೆಯನ್ನು ಹೊಂದಿದ ಈ ಕಲೆ ಇಂದಿಗೂ ಬಳಕೆಯಲ್ಲಿದೆ. ಅಂದಿನ ಆಳರಸರುಗಳ ಪ್ರೇರಣೆಯಿಂದ ಬೀದರ ನಗರಕ್ಕೆ ಪ್ರವೇಶ ಮಾಡಿದ್ದಲ್ಲದೇ, ಬೀದರ ನಗರವನ್ನು ಪ್ರಮುಖ ಸ್ಥಾನಗಳಲ್ಲಿ ಒಂದಾಗಿರಿಸಿಕೊಂಡಿದೆ. ಇಂದು ನೂರಾರು ಕುಟುಂಬಗಳು ಈ ಕಲೆಯನ್ನು ಅವಲಂಬಿಸಿವೆ. ಈ ಕುಟುಂಬಗಳಿಗೆ ಇದೊಂದು ಪಿತ್ರಾರ್ಜಿತ ಕಲೆ. ಬಿದರಿ ಕರಕುಶಲ ವಸ್ತುಗಳು ನೋಡಲು ಮನಮೋಹಕವಾಗಿರುತ್ತವೆ. ಈ ಕಲೆಯಲ್ಲಿ ದಿನನಿತ್ಯ ಬಳಸುವ ವಸ್ತುಗಳು ಮತ್ತು ಮನೆಯಲ್ಲಿ ಅಲಂಕರಿಸುವ ಚಿತ್ತಾಕರ್ಷಕ ವಸ್ತುಗಳನ್ನು ನಿರ್ಮಿಸಲಾಗುತ್ತದೆ. ಒಂದು ಕಾಲದಲ್ಲಿ ಈ ವಸ್ತುಗಳು ಅರಮನೆಯಲ್ಲಿ ಶೋಭೆ ಮತ್ತು ವೈಭವವನ್ನು ಹೆಚ್ಚಿಸುತ್ತಿದ್ದವು.

18 ನೆಯ ಶತಮಾನದ ಆರಂಭದಲ್ಲಿ ಬಿಹಾರದ ಪೂರ್ಣಿಯಾ ಎಂಬಲ್ಲಿ ಕರಕುಶಲ ಕಾರ್ಮಿಕರ ಒಂದು ಸಣ್ಣ ಹಳ್ಳಿ ನಿರ್ಮಾಣಗೊಂಡಿತ್ತು. ಆನಂತರ ಈ ಕುಶಲಕರ್ಮಿಗಳಿಗೆ ಆಂಗ್ಲರ ಸಹಯೋಗ ದೊರತುದರಿಂದ ಬಿದರಿ ಕಲಾತ್ಮಕ ವಸ್ತುಗಳನ್ನು ವಿದೇಶಗಳಿಗೆ ಕಳುಹಿಸುವ ಅವಕಾಶ ಒದಗಿಬಂತು. ಅಂದು ಬೀದರ, ಪೂರ್ಣಿಯಾ, ಲಖ್ನೋ ಮತ್ತು ಮುರ್ಷಿದಾಬಾದ ಬಿದರಿ ಕಲೆಯ ಮುಖ್ಯ ಕೇಂದ್ರಗಳಾಗಿದ್ದು. ಈ ಕಲೆಯಲ್ಲಿ ನಿರ್ಮಾ-ಣಗೊಂಡ ವಸ್ತುಗಳನ್ನು ಕಲ್ಕತ್ತಾ, ಹೈದರಾಬಾದ, ಢಾಕಾ ಮತ್ತು ಇಂಗ್ಲೆಂಡಗೆ ಕಳುಹಿಸಲಾಗುತ್ತಿತ್ತು. ಇದರಿಂದಾಗಿ ದೇಶ-ವಿದೇಶಗಳಲ್ಲಿ ಬಿದರಿ ಕಲೆಯ ಹೆಚ್ಚು ಜನಪ್ರಿಯತೆಯನ್ನು ಪಡೆಯಿತು.

ಅಲಂಕಾರಿಕ ವಿನ್ಯಾಸ: ಭಾರತದಲ್ಲಿ ಬಿದರಿ ಕಲೆಯು ಬೆಳೆದು ಬಂದದ್ದೇ ಮುಸ್ಲಿಂ ಅರಸರ ಕಾಲದಲ್ಲಿ. ಇಸ್ಲಾಂ ಧರ್ಮದಲ್ಲಿ ಮೂರ್ತಿಪೂಜೆಗೆ ಮಾನ್ಯತೆ ಇರದ ಕಾರಣ ಇವರ ಕಲೆಯಲ್ಲಿ ನಿಸರ್ಗದೃಶ್ಯವಲ್ಲದೇ ಎಲೆ, ಹೂ ಬಳ್ಳಿ ಮುಂತಾದ ಅಲಂಕಾರಿಕ ವಿನ್ಯಾಸದ ಚಿತ್ರಗಳನ್ನು ನಾವು ಕಾಣುತ್ತೇವೆ.



ಎಲ್ಲಮ್ಮನ ಜೋಗತಿಯರು

ಬೆರೆಸಲಾಗುತ್ತದೆ. ಈ ಮಿಶ್ರಣವನ್ನು ವಸ್ತುವಿನ ಮೇಲೆ ಲೇಪಿಸಿ; ವಸ್ತುವನ್ನು ಒಂದು ಹಂತದವರೆಗೆ ಕಾಯಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಬೆಳ್ಳಿಯಲ್ಲಿ ಬೆಳ್ಳಿಯನ್ನುಳಿದೆಲ್ಲ ಭಾಗ ಕಪ್ಪಾಗುತ್ತದೆ. ಅಂತ್ಯದಲ್ಲಿ ಈ ಕಪ್ಪು ಬಣ್ಣವನ್ನು ಮ್ಯಾಟ್‌ಕಪ್ಪು ಬಣ್ಣವನ್ನಾಗಿಸಲು ಕೊಬ್ಬರಿ ಎಣ್ಣೆಯಿಂದ ಚೆನ್ನಾಗಿ ಉಜ್ಜಲಾಗುತ್ತದೆ.

ಬಿದರಿ ಕಲೆಯಲ್ಲಿ ಸಿದ್ಧಗೊಳ್ಳುವ ವಸ್ತುಗಳು: ಬಿದರಿ ಕರಕುಶಲ ಕಲೆಯಲ್ಲಿ ಮುಖ್ಯವಾಗಿ ಹುಕ್ಕಾ, ಹೂದಾನಿ, ಜಲಪಾತ್ರೆ, ಬೆಲೆಬಾಳುವ ವಸ್ತುಗಳನ್ನಿಡಲು ಬಳಸುವ ಚಿಕ್ಕಗಾತ್ರದ ಪೆಟ್ಟಿಗೆಗಳು, ಪಾನ್‌ದಾನ್, ಬಳೆಗಳು, ಉಂಗುರ, ಕುಂಕುಮ ಭರಣಿ ಮುಂತಾದ ವಸ್ತುಗಳನ್ನು ತಯಾರಿಸಲಾಗುತ್ತಿತ್ತು. 1980ರ ದಶಕದಿಂದೀಚೆಗೆ ಬಿದರಿ ವಸ್ತುವಿನ ರಚನೆ ಮತ್ತು ನಕ್ಷೆಯಲ್ಲಿ ಬದಲಾಣೆಗಳು ಕಂಡುಬರುತ್ತಿವೆ. ಇಂದಿನ ಆಧುನಿಕ ಜನರ ದಿನನಿತ್ಯದ ಬಳಕೆಯ ಮತ್ತು ಆಪೇಕ್ಷೆಯ ವಸ್ತುಗಳನ್ನು ನಿರ್ಮಿಸಲಾಗುತ್ತಿದೆ. ಇದರಲ್ಲಿ ಅನೇಕ ಪ್ರಕಾರದ ಬಳೆಗಳು, ಸಿಗರೇಟ್ ಪೆಟ್ಟಿಗೆ, ಆಸ್ಟ್ರೇ, ಫೋಟೋ ಫ್ರೇಮ್, ಸುಗಂಧ ದ್ರವ್ಯದ ಡಬ್ಬಿ, ಕೊರಳ ಹಾರ ಮೊದಲಾದ ನವ್ಯ ಪ್ರಕಾರದ ವಸ್ತುಗಳು ನಿರ್ಮಾಣಗೊಳ್ಳುತ್ತಿವೆ.

ಬಿದರಿ ಕಲೆ ಮತ್ತು ಕಲಾವಿದರ ಇಂದಿನ ಸ್ಥಿತಿ–ಗತಿ: ಕಾಲಕ್ಕೆ ತಕ್ಕಂತೆ ಎಲ್ಲ ಕರಕುಶಲ ಕಲೆಗಳ ಹಾಗೆಯೇ ಬಿದರಿ ಕುಶಲಕರ್ಮಿಗಳು ಈ ಕಲೆಗೆ ಸೃಜನಾತ್ಮಕ ರೂಪ ನೀಡುತ್ತಿದ್ದಾರೆ. ದೇಶ–ವಿದೇಶಗಳಲ್ಲಿ ಈ ಕಲಾಕೃತಿಗಳ ಪ್ರದರ್ಶನ ಏರ್ಪಡಿಸುವುದರ ಮೂಲಕ ಬಿದರಿ ಕಲೆಯನ್ನು ಜನಪ್ರಿಯ ಗೊಳಿಸಿದ್ದಾರೆ. ಗುಲಾಮ್ ಸತ್ತಾರ, ಬಸಪ್ಪ, ಶೇಖ್ ಅಹಮ್ಮದ್ ಸಾಹೇಬ್, ಗುಲಾಮ್ ಖುದ್ದುಸ್, ಮಾಣಿಕಪ್ಪ, ಮಹಮ್ಮದ ಷರೀಫ್, ಸಯ್ಯದ ರಫೀಕ್, ಅಹ್ಮದ ಖಾದ್ರಿ, ಅಬ್ದುಲ್ ರವೂಫ್ ಮೊದಲಾದ ಕುಶಲಕರ್ಮಿಗಳು ಈ ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹಲವರಿಗೆ ರಾಷ್ಟ್ರ ಮತ್ತು ಅಂತಾರರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳು ಲಭಿಸಿವೆ. ಭಾರತ ಸರಕಾರದಿಂದ ಈ ಕುಶಲಕರ್ಮಿಗಳಿಗೆ ಅನೇಕ ರೀತಿಯ ಸಹಕಾರ ದೊರೆತಿದೆ. ಬೀದರನಲ್ಲಿ ಸರಕಾರದ ಯೋಜನೆಯಡಿ 'ಬಿದರಿ ಕಾಲೋನಿ'ಯೂ ನಿರ್ಮಾಣಗೊಂಡಿದೆ. ಬಿದರಿ ಕಲೆಯ ವಸ್ತುಗಳ ತಯಾರಿಕೆಗೆ ಬೇಕಾಗುವ ಕಚ್ಚಾ ಸಾಮಗ್ರಿಗಳನ್ನು ಸರಕಾರ ಒದಗಿಸುತ್ತಿದೆಯಲ್ಲದೇ ಅಲ್ಲಿ ನಿರ್ಮಾಣಗೊಂಡ ವಸ್ತುಗಳನ್ನು ದೇಶವಿದೇಶಗಳಲ್ಲಿ ಪ್ರದರ್ಶಿಸವುದರ ಜೊತೆಗೆ ಮಾರಾಟ ಮಾಡುವ ವ್ಯವಸ್ಥೆಯನ್ನು ಮಾಡಿಕೊಟ್ಟಿದೆ. ಇಷ್ಟೆಲ್ಲಾ ಅನುವು ಸರಕಾರದಿಂದ ದೊರೆಯುತ್ತಿದೆಯಾದರೂ ಇಂದಿನ ಆಧುನಿಕ ಯುಗದಲ್ಲಿ ಈ ಪ್ರಾಚೀನ ಪದ್ಧತಿಯ ಕಲಾ ಪ್ರಕಾರವು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಬಹಳ ಶ್ರಮಪಡುತ್ತಿದೆ.

ಬೀದರ ಚಿಕ್ಕ ನಗರವಾಗಿದ್ದರಿಂದ ಸ್ಥಳೀಯ ಕುಶಲ ಕರ್ಮಿಗಳು ಹೈದರಾಬಾದಿಗೆ ವಲಸೆ ಹೋದರು. ಇದರ ಪರಿಣಾಮವಾಗಿ ಬೀದರನಲ್ಲಿ ಕೆಲವೇ ಕಾರ್ಮಿಕರು ಉಳಿದು ಕೊಂಡರು. ಇದರಿಂದಾಗಿ ಪರಂಪರಾಗತವಾಗಿ ನಿರ್ಮಿಸಿ ಕೊಂಡು ಬರಲಾಗುತ್ತಿದ್ದ ಬಿದರಿ ಕಲೆಯ ಖ್ಯಾತಿ 1980ರ ದಶಕದಿಂದ ಕಡಿಮೆಯಾಗುತ್ತ ಬಂತು. ಈ ಕಲೆಯ ಕುಶಲ ಕರ್ಮಿಗಳಿಗೆ ಜೀವನ ಸಾಗಿಸುವುದು ಕಷ್ಟದ ಕೆಲಸವಾಯಿತು. ಬೀದರನಂತಹ ಚಿಕ್ಕ ನಗರದಲ್ಲಿ ಈ ಕಲೆಗೆ ಸ್ಥಳೀಯ ವ್ಯಾಪಾರಿ ಮಳಿಗೆ ಇಲ್ಲವಾದರೂ ಹೈದರಾಬಾದ ಮಾರುಕಟ್ಟೆಯಲ್ಲಿ ಬಿದರಿ ವಸ್ತುಗಳು ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿವೆ. ಇದರಿಂದ ಕಾರ್ಮಿಕರಿಗಿಂತ ವ್ಯಾಪಾರಿ ಗಳಿಗೆ ಹೆಚ್ಚಿನ ಲಾಭ ದೊರೆಯುತ್ತಿದೆ. ಹಾಗಾಗಿ ಸಾಕಷ್ಟು ಪ್ರಮಾಣದ ಕುಶಲಕರ್ಮಿಗಳು ಈ ಕಲೆಯನ್ನು ಬಿಟ್ಟು ಬೇರೆ ಉದ್ಯೋಗವನ್ನರಸಿ ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದರೆ, ಇನ್ನೂ ಕೆಲವರು ತಮ್ಮ ವಂಶ ಪರಂಪರೆಯಿಂದ ಬಂದ ಕಲೆಯೆಂದು ಈ ಕೃಷಿಯನ್ನೇ ನಂಬಿ ಜೀವನ ನಡೆಸುತ್ತಿದ್ದಾರೆ. ಪರಂಪರಾಗತ ಈ ಬಿದರಿ ಕಲೆಯನ್ನು ವಿಶ್ವ ವಿಖ್ಯಾತಿಯನ್ನಾಗಿಸಿದ ಶ್ರೇಯಸ್ಸಂತೂ ಈ ಕುಶಲಕರ್ಮಿಗಳಿಗೆ ಸಲ್ಲುತ್ತದೆ. *(ಎಂ.ಸಿ.ಐ.)*




ಬಿರಾದಾರ ಮ. ಗು.: ಡಾ. ಮ.ಗು. ಬಿರಾದಾರರು. ನಾಡಿನ ಪ್ರಮುಖ ಜಾನಪದ ವಿದ್ವಾಂಸರಲ್ಲೊಬ್ಬರು. ಪ್ರತಿಭಾನ್ವಿತ ಪ್ರಾಧ್ಯಾಪಕರು, ದಕ್ಷ ಆಡಳಿತಗಾರರು, ಚತುರ ಮಾತುಗಾರರು ಜೊತೆಗೆ ಕವಿ, ಕತೆಗಾರರು, ಸಂಶೋಧಕರು, ವಿಮರ್ಶಕರು, ನಾಟಕಕಾರರು, ಸಂಪಾದಕರು ಹಾಗೂ ಸಮರ್ಥ ನಟರು. ಹೀಗೆ ಇವರ ಸಾಧನೆಯ ಶ್ರಮ ಅಷ್ಟಿಷ್ಟಲ್ಲ. ಇವೆಲ್ಲಕ್ಕೂ ಮಿಗಿಲಾಗಿ ಅವರದು ಅಂತಃಕರಣದ ಹೃದಯ. ಸ್ನೇಹಜೀವಿಗಳು, ಹಾಸ್ಯಪ್ರವೃತ್ತಿಯವರು.

ಮೂವತ್ತಕ್ಕೂ ಮಿಕ್ಕಿ ಕೃತಿಗಳನ್ನು ನೂರಕ್ಕೂ ಮೀರಿ ವಿದ್ವತ್ಪೂರ್ಣ ಲೇಖನಗಳನ್ನು, ಇನ್ನೂರಕ್ಕೂ ಮೀರಿ ಸಾಹಿತ್ಯ ಸಂಸ್ಕೃತಿ ಕುರಿತಂತೆ ಉಪನ್ಯಾಸಗಳನ್ನು ನೀಡಿ ಕನ್ನಡ ಸಾರಸ್ವತ ಲೋಕದಲ್ಲಿ ಪ್ರಸಿದ್ಧರೆನಿಸಿದ್ದಾರೆ.

ಕಂಚಿನ ಕಂಠ, ಎತ್ತರದ ನಿಲುವು, ಸದೃಢ ಶರೀರ, ಆರೋಗ್ಯಕರ ಮನಸ್ಸು, ಅಪಾರ ಜ್ಞಾನ ಹೊಂದಿದ ಇವರ ಸಾಧನೆಯ ಗುಟ್ಟು ಇವರ ಕೌಟುಂಬಿಕ ಹಿನ್ನೆಲೆಯಲ್ಲಿ ಅಡಗಿದೆ. ಡಾ. ಬಿರಾದಾರ ಅವರ ಸೃಜನಶೀಲ ಕೃತಿಗಳಿಗಿಂತ ಅವರ ಜಾನಪದೀಯ ಕೃತಿಗಳ ಜೀವಸತ್ವ ಹೆಚ್ಚು ಪರಿಣಾಮಕಾ-ರಿಯಾಗಿದೆ.

ಮೂಲತಃ ಬಿಜಾಪುರ ಜಿಲ್ಲೆಯ ಬಬಲೇಶ್ವರದವರು. ಅಪ್ಪ ಗುರುಗೌಡರು. ಅವ್ವ ರುದ್ರಮ್ಮನವರು. ಸುಸಂಸ್ಕೃತ ಗೌಡ ಮನೆತನದಲ್ಲಿ ಹುಟ್ಟಿದ್ದು ದಿನಾಂಕ 15.03.1933ರಲ್ಲಿ. ಒಕ್ಕಲುತನ ಕುಟುಂಬದಿಂದ ಬಂದವರಾದ್ದರಿಂದ ಜಾನಪದಕ್ಕೂ ಅವರಿಗೂ ಹುಟ್ಟಿನ ನಂಟು. ನೇಗಿಲು ಹಿಡಿದು, ಕುಂಟೆ ಹರಿಸಿ, ಕೂರಿಗೆ ಹಿಡಿದು ಬಿತ್ತಿ ಬೆಳೆದ ಜೀವ ಅದು. ಹಂತಿ ಹೊಡೆದು ರಾಶಿಮಾಡಿ ಚೀಲತುಂಬಿ ಚಕ್ಕಡಿ ಹೇರಿ ಮನೆಗೆ ತಂದಂತೆ



ಬಿದರಿ ಕಲೆ

ಪರ್ಷಿಯಾ ಮತ್ತು ಗ್ರೀಕ್ ದೇಶಗಳಲ್ಲಿ ಈ ಅಲಂಕಾರಿಕ ವಿನ್ಯಾಸದ ಬಳಕೆಯು ಹೆಚ್ಚು ಕಂಡುಬರುತ್ತದೆ. ಪರ್ಷಿಯನ್ ಕಲೆಯನ್ನು ಭಾರತದಲ್ಲಿ ಮೊಘಲರು ಬಳಕೆಗೆ ತಂದರು. ಪರ್ಷಿಯನ್ ಮತ್ತು ಮಂಗೋಲಿಯನ್ ಸಮ್ಮಿಶ್ರ ಶೈಲಿಯೇ ಮುಘಲ್ ಕಲೆಯಾಗಿದೆ. ಮೊಘಲ್ ಸಾಮ್ರಾಟ್ ಅಕ್ಬರನ ಕಾಲದಲ್ಲಿ ಅನೇಕ ಪರ್ಷಿಯನ್ ಕಲಾವಿದರು ಭಾರತಕ್ಕೆ ಬಂದರು. ಮೊಘಲ್ ಮತ್ತು ದಖನ್ ಸುಲ್ತಾನರ ಕಾಲದಲ್ಲಿ ಇತರ ಕಲೆಗಳೊಂದಿಗೆ ಬಿದರಿ ಕಲೆಯ ಹೆಚ್ಚಿನ ಕಲಾತ್ಮಕತೆಯನ್ನು ಪಡೆಯಿತು.


ರಚನಾವಿಧಾನ ಮತ್ತು ರಚನಾಹಂತ: ಜಟಿಲ ನಕ್ಷೆಗಳಿಂದ ಸುತ್ತುವರೆದಿರುವ ಬಿದರಿ ವಸ್ತುಗಳನ್ನು ನಿರ್ಮಿಸಲು ಕನಿಷ್ಠ ಎಂಟ್ಹತ್ತು ದಿನಗಳಾದರೂ ಬೇಕು. ಇಂದಿಗೂ ಈ ವಸ್ತುಗಳ ರಚನೆ ಪರಂಪರಾಗತ ಪದ್ಧತಿಯಲ್ಲೇ ನಡೆಯುತ್ತಿದೆ. ಒಂದು ವಸ್ತು ಪೂರ್ಣಗೊಳ್ಳುವ ಮೊದಲು ಅದು ಅನೇಕ ಕಾರ್ಮಿಕರ ಕೈಯಿಂದ ಸಾಗುತ್ತ ಅಂತಿಮ ರೂಪವನ್ನು ತಳೆಯುತ್ತದೆ. ನಕ್ಷೆ ಕೆತ್ತುವ ಮತ್ತು ಬೆಳ್ಳಿಯನ್ನು ತುಂಬುವ ಕೆಲಸ ನುರಿತ ಕುಶಲಕರ್ಮಿಗಳೇ ಮಾಡುತ್ತಾರೆ. ಬೀದರ ಕೋಟೆಯ ಮಣ್ಣು, ತವರ, ರಾಳ, ಸತು, ತಾಮ್ರ, ಬೆಳ್ಳಿ, ಬಂಗಾರ, ತಾಮ್ರದ ಸಲ್ಫೇಟ್, ಅಮೋನಿಯಮ್ ಕ್ಲೋರೈಡ್, ಮೇಣ, ಕಡಲೆಕಾಯಿ ಎಣ್ಣೆ, ಹರಳೆಣ್ಣೆ ಮತ್ತು ಸಂಜೀರಾಪುಡಿ ಇವು ಬಿದರಿ ಕಲಾಕೃತಿಯ ತಯಾರಿಕೆಗೆ ಉಪಯೋಗವಾಗುವ ಕಚ್ಚಾ ವಸ್ತುಗಳು. ಈ ತಂತ್ರ ಭಾರತದಲ್ಲಿ ಹೆಚ್ಚು ಬಳಕೆಯಲ್ಲಿದೆ. ಬಿದರಿ ವಸ್ತುಗಳನ್ನು ತಯಾರಿಸುವಲ್ಲಿ ನಾಲ್ಕು ಪ್ರಮುಖ ಹಂತಗಳಿವೆ.

ಮೊದಲನೆಯ ಹಂತ: ಈ ಹಂತದಲ್ಲಿ ತಾಮ್ರ ಮತ್ತು ಸತುವಿನ ಧಾತುಗಳನ್ನು ಟಿನ್‌ನ ಸಹಾಯದೊಂದಿಗೆ 1/16 ಪ್ರಮಾಣದಲ್ಲಿ ಬೆರೆಸಲಾಗುತ್ತದೆ. ಕಾವು ನೀಡುವ ಮೂಲಕ ಈ ಧಾತುಗಳನ್ನು ಕರಗಿಸಿ ದ್ರವ ರೂಪದಲ್ಲಿ ಮಾಡಲಾಗುತ್ತದೆ. ಮರದ ಅಚ್ಚಿನ ಪೆಟ್ಟಿಗೆಯೊಳಗೆ ಮಣ್ಣಿನ ಪುಡಿಯನ್ನು ಸಿಂಪಡಿಸಲಾಗುತ್ತದೆ. ಇದರಿಂದ ಮಿಶ್ರಿತ ಧಾತು ಕಟ್ಟಿಗೆಯ ಅಚ್ಚಿಯೊಳಗೆ ಹಾಕಿದಾಗ ಅದು ಕಟ್ಟಿಗೆಗೆ ಅಂಟಿಕೊಳ್ಳುವುದಿಲ್ಲ. ವಸ್ತುಗಳನ್ನು ಪೊಳ್ಳಾಗಿ ಮಾಡಲು ಅಚ್ಚಿನ ಕಟ್ಟಿಗೆಗಿಂತ ಆಕಾರದಲ್ಲಿ ಸ್ವಲ್ಪ ಚಿಕ್ಕದಾದ ಕಟ್ಟಿಗೆಯನ್ನು ತೆಗೆದುಕೊಂಡು ಅದನ್ನು ಕಟ್ಟಿಗೆಯ ಮೇಲೆ ಇಡಲಾಗುತ್ತದೆ. ಇದರಿಂದ ಮಣ್ಣಿನ ಅಚ್ಚು ಮತ್ತು ಮೇಲಿಟ್ಟ ಕಟ್ಟಿಗೆಯ ಮಧ್ಯದಲ್ಲಿ ಅಂತರ ಉಳಿದುಕೊಳ್ಳುತ್ತದೆ. ಈ ಅಂತರದಲ್ಲಿ ತಯಾರಾದ ಧಾತುವಿನ ತೆಳು ಮಿಶ್ರಣವನ್ನು ನಳಿಕೆಯಿಂದ ಬಿಡಲಾಗುತ್ತದೆ. ಈ ರೀತಿಯಾಗಿ ಆಯಾ ವಸ್ತುವಿನ ಪರಿಧಿಯ ಅವಶ್ಯಕತೆಗಳಿಗೆ ಅನುಗಣವಾಗಿ ದಪ್ಪ ಮತ್ತು ತೆಳುವನ್ನು ಪಡೆಯಲಾಗುತ್ತದೆ. ವಿಶೇಷವಾಗಿ ಹೂದಾನಿ ಅಥವಾ ಸುರಾಯಿಯನ್ನು ತಯಾರಿಸಬೇಕಾದರೆ ಆ ವಸ್ತುವಿನ ಕುತ್ತಿಗೆಯ ಭಾಗ ಮತ್ತು ಇತರ ಭಾಗಗಳನ್ನು ಎರಡು ಪ್ರತ್ಯೇಕ ಅಚ್ಚಿನಲ್ಲಿ ತಯಾರಿಸಿ ನಂತರ ಎರಡನ್ನೂ ಜೋಡಿಸಲಾಗುತ್ತದೆ.


ಎರಡನೆಯ ಹಂತ: ಈ ಹಂತದಲ್ಲಿ ಅಚ್ಚಾದ ವಸ್ತುವಿನ ಹೊರಮೈಯನ್ನು ಸಮನಾಗಿ ಮಾಡಿಕೊಳ್ಳಲಾಗುತ್ತದೆ. ನಕ್ಷೆಯ ಕೆತ್ತನೆಗಾಗಿ ಅದರ ಮೇಲೆ ತಾತ್ಕಾಲಿಕ ಕಪ್ಪು ಬಣ್ಣವನ್ನು ಲೇಪಿಸಲಾಗುತ್ತದೆ. ಇದಾದ ಮೇಲೆ ನುರಿತ ಕಾರ್ಮಿಕರು ನಕ್ಷೆಯನ್ನು ಬಿಡಿಸುತ್ತಾರೆ. ನಕ್ಷೆಯು ಸಾಮಾನ್ಯವಾಗಿ ಹೂ ಬಳ್ಳಿ, ಎಲೆಗಳಿಂದ ಕೂಡಿರುತ್ತದೆ.

ಮೂರನೆಯ ಹಂತ: ಈ ಹಂತದಲ್ಲಿ ಕೆತ್ತಿದ ನಕ್ಷೆಯನ್ನು ಬೆಳ್ಳಿಯಿಂದ ತುಂಬುವ ಕೆಲಸವಾಗಿರುತ್ತದೆ. ಒಂದುವೇಳೆ ಬೆಳ್ಳಿಯು ಅಶುದ್ಧವಾಗಿದ್ದರೆ ಕೆತ್ತಿದ ನಕ್ಷೆಯಲ್ಲಿ ಅದು ಕುಳಿತುಕೊಳ್ಳುವುದಿಲ್ಲ. ಕೆಲವೇ ದಿನಗಳಲ್ಲಿ ಅಂತಹ ಬೆಳ್ಳಿಯು ವಸ್ತುವಿನಿಂದ ಹೊರಬರುವ ಸಾಧ್ಯತೆಯಿರುತ್ತದೆ. ರೇಖೆಗಳ ನಕ್ಷೆಯಲ್ಲಿ ಬೆಳ್ಳಿಯ ತಂತಿಯನ್ನು ಉಪಯೋಗಿಸಲಾಗುತ್ತದೆ. ಹೂ ಮತ್ತು ಎಲೆಗಳಂತಹ ಚಪ್ಪಟೆ ಮತ್ತು ದೊಡ್ಡ ನಕ್ಷೆಗಳಲ್ಲಿ ಬೆಳ್ಳಿಯ ತೆಳುವಾದ ಹಾಳೆಯನ್ನು ಬಳಸಲಾಗುತ್ತದೆ.

ನಾಲ್ಕನೆಯ ಹಂತ: ಬಿದರಿ ಕಲೆಯ ರಚನಾ ಹಂತಗಳಲ್ಲೇ ಇದು ಮಹತ್ವದ್ದು. ಈ ಹಂತದಲ್ಲಿ ನಿರ್ಮಾಣಗೊಂಡ ವಸ್ತುಗಳ ಮೇಲೆ ಕಪ್ಪುಬಣ್ಣ ಲೇಪಿಸಲಾಗುತ್ತದೆ. ಈ ಕೆಲಸವು ಪರಂಪರಾಗತ ಪದ್ಧತಿಯಲ್ಲೇ ಸಾಗುತ್ತದೆ. ವಸ್ತುವನ್ನು ಕಪ್ಪಾಗಿಸುವಲ್ಲಿ ಸ್ಥಳೀಯ ಕೋಟೆಯಲ್ಲಿರುವ ಮಣ್ಣು ಪ್ರಮುಖ ಪಾತ್ರ ವಹಿಸುತ್ತದೆ. ಈ ಮಣ್ಣಿನ ಜೊತೆಗೆ ಕ್ಲೋರೈಡ್, ಪೋಟ್ಯಾಸಿಯಂ ನೈಟ್ರೇಟ್, ಸೋಡಿಯಂ ಕ್ಲೋರೈಡ್ ಮತ್ತು ಕಾಪರ್ ಸಲ್ಫೇಟ್



ಬುಡಬುಡಿಕೆ



ಸುಡಗಾಡು ಸಿದ್ಧ

ಜಾನಪದ ಜ್ಞಾನವನ್ನು ಜೀವನದ ಜೋಳಿಗೆಯಲ್ಲಿ ತುಂಬಿಕೊಂಡವರು. ಅವರೇ ಹೇಳುವಂತೆ 'ನಿಸರ್ಗದ ಜೊತೆಗೂಡಿ ಆಡದ ಆಟವಿಲ್ಲ, ಹಾಡದ ಹಾಡಿಲ್ಲ, ಬಯಲಾಟ, ಲಾವಣಿ, ಹೋಳಿ, ಹಂತಿ, ಬುಲೇರಿ ಹಾಡುಗಳನ್ನು, ವಾದಕ್ಕಿಳಿದು ಹಾಡಿದವರು'. ನಿತ್ಯ ಒಮ್ಮನ ಜೋಳ ಬೀಸುವ ಅಮ್ಮನ ಹಾಡಿಗೆ ಧ್ವನಿಗೂಡಿಸಿದವರು.

1964ರಲ್ಲಿ ಅವರು ಪಿಎಚ್.ಡಿ. ಪದವಿ ಪಡೆದುಕೊಂಡರು. ಕಲ್ಬುರ್ಗಿಯ ಶ್ರೀಶರಣಬಸವೇಶ್ವರ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರೆಂದು ಸೇವೆಗೆ ತೊಡಗಿಕೊಂಡರು. ತಮ್ಮ ವಾಕ್‌ಚಾತುರ್ಯ, ಅಭಿನಯ ಚಾತುರ್ಯ, ಜನಪದ ಹಾಡುಗಾರಿಕೆ, ಸೃಜನಶೀಲ ಸಂಸ್ಕೃತಿಗಳೆಲ್ಲದರಿಂದ ಕಲ್ಬುರ್ಗಿ ಪರಿಸರದಲ್ಲಿ ಅತ್ಯುತ್ತಮ ಪ್ರಾಧ್ಯಾಪಕರೆಂದು ಪ್ರಸಿದ್ಧರಾದರು. ಮುಂದೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯನ್ನು ಬೃಹದಾಕಾರವಾಗಿ ಬೆಳೆಸುವಲ್ಲಿ ಅವರ ಪಾತ್ರ ಹಿರಿದಾಗಿದೆ. ವಿಭಾಗದ ಮುಖ್ಯಸ್ಥರಾಗಿ, ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್, ಸೆನೆಟ್, ಸಿಂಡಿಕೇಟ ಸದಸ್ಯರಾಗಿ, ಪ್ರಸಾರಾಂಗದ ನಿರ್ದೇಶಕರಾಗಿ, ಕಲಾನಿಕಾಯದ ಡೀನರಾಗಿ ಕಾರ್ಯನಿರ್ವಹಿಸಿದ್ದಾರೆ. ವಿಶೇಷವಾಗಿ ವಿಶ್ವವಿದ್ಯಾಲಯದಲ್ಲಿ ಸಂಪಾದನಾ, ಸಂಶೋಧನಾ ಪ್ರಕಟಣಾ ವಿಭಾಗದ ಹಿರಿಯ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಕನ್ನಡ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಹೀಗೆ ಬೆಂಗಳೂರು, ಮೈಸೂರಿನವರೆಗೂ ಇವರ ಕಾರ್ಯವ್ಯಾಪ್ತಿ ಹಬ್ಬಿತ್ತು. ನಿತ್ಯದ ಪಾಠಪ್ರವಚನಗಳ ಮಧ್ಯೆ ವಿಶೇಷವಾಗಿ ಸಂಶೋಧನಾ ಕ್ಷೇತ್ರದಲ್ಲಿಯೂ ತೊಡಗಿಸಿಕೊಂಡರು. ಹತ್ತು ಹಲವು ಕಡೆ ಸುತ್ತಿ ಕ್ಷೇತ್ರಕಾರ್ಯ ಮಾಡಿದರು.

ಡಾ. ಬಿರಾದಾರ ಅವರ ಜಾನಪದ ಕುರಿತಾದ 'ಜಾನಪದ ಸಮಾಲೋಕನ', 'ಜಾನಪದ ಜೀವಾಳ' ಮತ್ತು 'ಪಳೆಯುಳಿಕೆಗಳು' ಎಂಬ ಮೂರು ಕೃತಿಗಳಲ್ಲಿ ಜಾನಪದ ಸಂಬಂಧಿತ ಸಂಶೋಧನಾ ಲೇಖನಗಳಿವೆ. 'ಪಳೆಯುಳಿಕೆ'ಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಪ್ರಕಟಿಸಿದೆ. ಜಾನಪದ ಜೀವಾಳಕ್ಕೆ ಪುಸ್ತಕ ಪ್ರಶಸ್ತಿ ದೊರೆತಿದೆ. 1994ರಲ್ಲಿಯೇ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 'ಜಾನಪದ ತಜ್ಞ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಇವರು ಸಂಶೋಧನಾ ಲೇಖನಗಳನ್ನೆಲ್ಲ ಸೇರಿಸಿ 2008ರಲ್ಲಿ 'ಬೆಳೆ–1' ಎಂಬ ಗ್ರಂಥವೊಂದನ್ನು ಪ್ರಕಟಿಸಿದ್ದಾರೆ. ಇದು ಜಾನಪದೀಯ ಕ್ಷೇತ್ರಕ್ಕೆ ಒಂದು ಮೌಲಿಕ ಕೊಡುಗೆಯಾಗಿದೆ.

(ಸಿ.ಎಂ.)

ಬಿರಾಳ–ಬಿ: ಐತಿಹಾಸಿಕ ಗ್ರಾಮ. ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ಕೇಂದ್ರದಿಂದ 24 ಕಿ.ಮೀ. ಅಂತರದಲ್ಲಿದ್ದು, ಮುಖ್ಯ ರಸ್ತೆಯ ಕೆಲ್ಲೂರ ಕ್ರಾಸದಿಂದ 16 ಕಿ.ಮೀ. ಪೂರ್ವದಲ್ಲಿದೆ. 'ಬಿರಾಳ ಎಂದರೆ 'ವೀರ' ಎಂದು ಅರ್ಥೈಸಲಾಗುತ್ತದೆ. ಹಿಂದೆ ಈ ನೆಲೆ ವೀರರಿಗೆ ಆಶ್ರಯ ತಾಣವಾಗಿತ್ತು. ಇಲ್ಲವೇ ಸೈನ್ಯ ತರಬೇತಿ ಕೇಂದ್ರವಾಗಿರಬಹುದು. ಇದೇ ಊರಿನ ಪಕ್ಕದಲ್ಲಿ ಅರ್ಧ ಕಿ.ಮೀ. ದೂರದಲ್ಲಿ ಬಿರಾಳ–ಕೆ ಗ್ರಾಮವೊಂದಿದೆ. 'ಸಣ್ಣಬೀರಾ–ದೊಡ್ಡಬೀರಾ' ಎಂಬ ವೀರಯೋಧರ ನೆನಪಿಗಾಗಿ ಈ ಎರಡು ಹಳ್ಳಿಗಳು ಹುಟ್ಟಿಕೊಂಡಿವೆ ಎಂದು ಹೇಳಲಾಗುತ್ತದೆ. ಇಲ್ಲಿ ಬೀರಪ್ಪನ ಗುಡಿಯೊಂದು ಇರುವುದರಿಂದಲೂ ಬಿರಾಳ ಎಂದು ಕರೆದಿರುವ ಸಾಧ್ಯತೆ ಇದೆ ಎಂದೂ ಹೇಳುವುದುಂಟು.

ರಾಮಲಿಂಗೇಶ್ವರ ದೇವಾಲಯ: ಗ್ರಾಮದಲ್ಲಿ ಅನೇಕ ಪ್ರಾಚೀನ ಅವಶೇಷಗಳಿದ್ದು, ಅದರಲ್ಲಿ 'ರಾಮಲಿಂಗೇಶ್ವರ' ಅತಿ ಪ್ರಾಚೀನ ದೇವಾಲಯಗಳಲ್ಲಿ ಒಂದಾಗಿದೆ. ನೆಲಕ್ಕೆ ಸಮವಾಗಿ ಗರ್ಭಗುಡಿಯ ಛಾವಣಿ ಇದ್ದು, ನವರಂಗ, ಗರ್ಭಗೃಹ ನೆಲದಾಳದಲ್ಲಿದ್ದು, ಗುಡಿಯ ಬಹುಭಾಗ ಬಿದ್ದು ಹೋಗಿದೆ. ಗರ್ಭಗೃಹ ಮಾತ್ರ ಸುರಕ್ಷಿತವಾಗಿದ್ದು, ಈ ಗುಡಿಯ ನವರಂಗ, ಕರಿಕಲ್ಲಿನಲ್ಲಿ ಕಂಬಗಳ ಕೆತ್ತನೆ ಮಾಡಿದ್ದು, ಈಗ ಅದು ಸಂಪೂರ್ಣ ಬಿದ್ದು ಕಂಬಗಳು ಅರ್ಧ ನೆಲದಲ್ಲಿ ಹೂತು ಹೋಗಿವೆ. ಈ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಕರಿಕಲ್ಲಿನ ನಾಜೂಕು ಕೆತ್ತನೆಯಿಂದ ಅಲಂಕೃತಗೊಂಡಿದೆ. ಈ ನವರಂಗದ ಛಾವಣಿಯ ಮಧ್ಯ ಇರಬೇಕಾದ ಕಮಲಾಕೃತಿಯ ಕೆತ್ತನೆಯ ಕರಿ ಕಲ್ಲು, ಇತ್ತೀಚೆಗೆ ಊರಿನ ಹನುಮನ ಗುಡಿಯ ಮುಂದೆ ಜೋಡಿಸಲಾಗಿದೆ.

ಸಪ್ತ ಮಾತೃಕಾ ವಿಗ್ರಹ: ಗ್ರಾಮದ ರವಿಗೌಡ ಮಾ. ಪಾಟೀಲರ ಮನೆಯ ಮುಂದೆ ಇದ್ದು, ಕರಿ ಕಲ್ಲಿನ ಏಕಶಿಲೆಯಲ್ಲಿ ಇದನ್ನು ಕೆತ್ತಲಾಗಿದೆ. ಈ ವಿಗ್ರಹಗಳ ವಿವಿಧ ಭಂಗಿಗಳನ್ನು ನೋಡಲಾಗಿ, ಮೊದಲ ವಿಗ್ರಹ ಸುಂದರತೆಯಿಂದ ಚತುರ್ಭುಜ, ತ್ರಿಮುಖ ಭಂಗಿಯಲ್ಲಿದೆ. ವಿಗ್ರಹದ ಹಿಂಬದಿಯ ಎಡಗೈಯಲ್ಲಿ ಚಕ್ರವಿದ್ದು ಬಲಗೈ ಮುಕ್ಕಾಗಿದೆ. ಎಡಗಾಲು ಮಡಚಿ ಬಲಗಾಲು ಊರಿನ ಭಂಗಿಯಲ್ಲಿದೆ. ನಾಲ್ಕನೇ ಮಧ್ಯದ ವಿಗ್ರಹ ಸ್ವಲ್ಪ ಭಯಾನಕವಾಗಿದ್ದು, ನಾಲ್ಕು ಬಾಹುಗಳೊಂದಿಗೆ ಹಿಂದಿನ ಬಲಗೈಯಲ್ಲಿರುವ ವಸ್ತು ಭಯಾನಕವಾಗಿದೆ. ಐದನೆಯದು ನರಸಿಂಹನ ಮುಖದಂತೆ ತೋರುತ್ತದೆ. ಈ ವಿಗ್ರಹಗಳನ್ನು ಗಮನಿಸಿದಾಗ, 11–12 ನೆಯ ಶತಮಾನದ ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪ ಲಕ್ಷಣಗಳು ಕಂಡು ಬರುತ್ತವೆ.

ನವ ವಿಗ್ರಹ: ಬಿರಾಳ–ಬಿ ಗ್ರಾಮದಿಂದ ಪಶ್ಚಿಮಕ್ಕೆ ಸಿದ್ಧಲಿಂಗ ರೆಡ್ಡಿ ಗೌಡ ಇಟಗಿಯವರ ಬಾವಿಯ ಮೆಟ್ಟಿಭಾರಿಗೆ ಜೋಡಿಸಿ ಇಡಲಾದ, ಕಲ್ಯಾಣ ಚಾಲುಕ್ಯರ ಕಾಲದ್ದು ಎನ್ನಲಾದ ಈ ನವ ವಿಗ್ರಹ ಕರಿಕಲ್ಲಿನಲ್ಲಿ ಕೆತ್ತಿದ್ದು, 2.5 ಅಡಿ ಉದ್ದ, 1.5 ಅಡಿ ಅಗಲ, 6 ಇಂಚು ದಪ್ಪಗಿರುವ ಬಲದಿಂದ ಸರಸ್ವತಿ, ಕಾಮಾರಿ, ಬ್ರಾಹ್ಮಿ ಮಹೇಶ್ವರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡಿ ಹಾಗೂ ಗಣೇಶ ಪ್ರತಿಮೆಗಳಿವೆ. ಈ ಕರಿಕಲ್ಲಿನ ಉಬ್ಬು ಕೆತ್ತನೆಗಳು ತುಂಬ ನಾಜುಕಿನಿಂದ ನಿರ್ಮಿಸಿದ್ದು, ಸಹಜ ಸುಂದರತೆಯಿಂದ ಕೂಡಿವೆ. ಬಹುಶಃ ರಾಮಲಿಂಗೇಶ್ವರ ದೇವಾಲಯದ್ದಾಗಿರಬಹುದು.

ಚಿಟ್ಟಿಯರ ಬಾವಿ: ಸುರಪುರದ ಅರಸರು ಕೊಡಗೈ ದೊರೆಗಳು. ಈ ಬೇಡ ನಾಯಕರಂತೆ ದಾನ ಧರ್ಮ ಮಾಡುವದರಲ್ಲಿ ಇನ್ನೊಂದು ಅರಸು ಮನೆತನ ಸಿಗಲಾರರು. ತಮ್ಮ ಅವರಲ್ಲಿನ

ದೇಸಾಯಿ, ಸುಬೇದಾರ, ಇನಾಮದಾರ, ಜಾಗಿರದಾರ, ಕುಲಕರ್ಣಿ, ಜೆಟ್ಟಿಗಳು, ವಾಲಿಕಾರ, ತಳವಾರ, ನಾಯ್ಕೋಡಿ, ಪಟೇಲರಿಗೆ ಇನಾಮಿ ಭೂಮಿಗಳನ್ನು ಕೊಟ್ಟಿದ್ದಾರೆ. ಈ ದೊರೆಗಳು ಬೇಟೆಗೆ ಹೋದಲ್ಲಿ, ನೀರು ಕೊಟ್ಟವರಿಗೂ ಇನಾಮಿ ಭೂಮಿ ನೀಡಿದ ಕೊಡುಗೈ ಹೆಗ್ಗಳಿಕೆ ಇವರದು. ಇಂತಹ ಇನಾಮಿ ಭೂಮಿ ಬಿರಾಳದಲ್ಲಿರುವ ಜೆಟ್ಟಿಗಳಿಗೆ ಅಗತೀರ್ಥ, ಅರಕೇರಿ, ಕೆರೆ ಹಯ್ಯಾಳ, ನಾಗನಟಗಿ, ರಾಂಪೂರ ಮತ್ತು ಬಿರಾಳ–ಬಿ ಯಲ್ಲಿ ನೀಡಿದ್ದಾರೆ. ಈ ಜೆಟ್ಟಿಗಳು ಸುರಪೂರ ಅರಸರ ಪಟ್ಟಿದ ಜೆಟ್ಟಿಗಳೆಂದು ಹೇಳಲಾಗುತ್ತದೆ. ಈಗ ಬಿರಾಳದಲ್ಲಿ ಮಾತ್ರ ಭೂಮಿ ಉಳಿದಿದ್ದು, ಉಳಿದಂತೆ ಎಲ್ಲಾ ಭೂಮಿಗಳು ಭೂಸುಧಾರಣೆ ಕಾನೂನಿನಲ್ಲಿ ಹೋಗಿವೆ ಎಂದು ಜೆಟ್ಟಿಯ ಮನೆತನದ ಹಿರಿಯರಾದ ರಾಮಕೃಷ್ಣ ಜೆಟ್ಟಿ ಅವರು ತಮ್ಮ ಮನೆತನದ ಕಥೆ ಹೇಳುತ್ತಾರೆ.

ಈ 'ಜೆಟ್ಟಿಯರ ಬಾವಿ'ಯ ಚಂದಾಜೆಟ್ಟಿ ಎಂಬವರು, ತಮ್ಮ ತಂದೆ–ತಾಯಿಯ ನೆನಪಿಗಾಗಿ ಜೆಟ್ಟಿಯರ ಹೆಸರಿಟ್ಟು, ಸೂರ್ಯ–ಚಂದ್ರರು ಇರುವವರೆಗೂ ಉಳಿಯಲೆಂದು ಈ ಬಾವಿ ಕಟ್ಟಿಸಿದರೆಂದು ಹೇಳುತ್ತಾರೆ. ಪೂರ್ವಾಭಿಮುಖವಾಗಿ ಮೆಟ್ಟಿಲುಗಳಿರುವ ಈ ಬಾವಿಗೆ, ಪಶ್ಚಿಮಾಭಿಮುಖವಾಗಿ ನೀರೆತ್ತುವ ದೊಡ್ಡ ಮಟ್ಟಿ ಭಾರಿಯಿದೆ. ಉತ್ತರ ಮತ್ತು ದಕ್ಷಿಣ ದಿಕ್ಕಿನಿಂದಲೂ ಇಳಿಯಲು ಸಣ್ಣ ಮೆಟ್ಟಿಲುಗಳು ತಳದವರೆಗೂ ಇರುವುದನ್ನು ಕಂಡರೆ, ಇದೊಂದು ಅಪರೂಪದ ಬಾವಿ ಎಂದೇ ಹೇಳಬಹುದು.

ಬಾವಿಯ ಪೂರ್ವದ ಮೆಟ್ಟಿಲುಗಳ ಅಕ್ಕ ಪಕ್ಕದಲ್ಲಿ, ಅಂದರೆ ಉತ್ತರ–ದಕ್ಷಿಣ ದಿಕ್ಕಿಗೆ ಮುಖ ಮಾಡಿದ ಎರಡು ಮಂದಿರಗಳನ್ನು ನಿರ್ಮಿಸಲಾಗಿದೆ. ದಕ್ಷಿಣಕ್ಕೆ ಮುಖ ಮಾಡಿರುವುದು ಹನುಮನ ಮಂದಿರ, ಉತ್ತರಕ್ಕೆ ಮುಖ ಮಾಡಿರುವದು ಆಯಿ–ಮುತ್ತ್ಯಾನ ಮಂದಿರ (ಯಂಕಾ ಜೆಟ್ಟಿ–ಯಂಕವ್ವ ಜೆಟ್ಟಿ)ಗಳಿವೆ. ಈ ಬಾವಿ ಸುರಪೂರದ ದೇವರ ಬಾವಿಯನ್ನು ಹೋಲುತ್ತಿರುವುದರಿಂದ, ಅವರ ಮನೆತನದವರದೇ ಎಂದು ಸಾಬೀತುಪಡಿಸುತ್ತದೆ. ಈಗಲೂ ಈ ಬಾವಿ ಸ್ವಚ್ಛವಾಗಿದ್ದು, ಕೆಲವರು ಕಿಡಿಗೇಡಿಗಳಿಂದ ಬಾವಿ ಅಳುವಿನಂಚಿನಲ್ಲಿದೆ. *(ಎಲ್.ಜಿ.ಎ.)*

ಬಿಲ್ವ ಪತ್ರೆ: ವಿಶೇಷ ದೈವಸ್ವರೂಪವನ್ನು ಹೊಂದಿದ ಗಿಡ. ವೈದ್ಯಶಾಸ್ತ್ರದಲ್ಲಿ ಕೂಡ ಇದರ ಬಳಕೆ ಇದೆ. ಇದರ ಎಲೆಗಳ ರಚನೆಯು ಕೂಡ ಮೂರು ಎಲೆಗಳಿಂದ ರಚಿಸಲ್ಪಟ್ಟು ಶಿವನಿಗೆ ತುಂಬಾ ಪ್ರಿಯವಾದ ಪತ್ರಿ ಎಂದು ಪುರಾಣಗಳಿಂದ ತಿಳಿದುಬಂದಿದೆ. ಮೂರು ಎಲೆಗಳಲ್ಲಿ ಮೇಲ್ಭಾಗದ ಎಲೆಯಲ್ಲಿ ಶಿವ, ಅಕ್ಕಪಕ್ಕದ ಎಲೆಗಳಲ್ಲಿ ಬ್ರಹ್ಮ, ವಿಷ್ಣು ದೇವರುಗಳು ನೆಲೆಸಿರುತ್ತಾರೆ ಎಂಬ ನಂಬಿಕೆಯಿದೆ.

ಬಿಲ್ವ ಪತ್ರೆಗೆ ಕೆಲವರು ಶ್ರೀಪತ್ರಿ ಎಂದು ಕರೆಯುವುದುಂಟು. ಕಾರಣ ಮಹಾಲಕ್ಷ್ಮೀಗೆ ಒಮ್ಮೆ ಸಂಕಟ ಬಂದಾಗ ಶಿವನಿಗೆ ಈ ಬಿಲ್ವ ಪತ್ರೆಯನ್ನು ಏರಿಸಿ ಪೂಜಿಸಿದಳಂತೆ. ಆಗ ಪರಶಿವ ಈಕೆಯ ಪೂಜೆಯನ್ನು ಮೆಚ್ಚಿ ಅನುಗ್ರಹಿಸಿದನಂತೆ. ಅಂದಿನಿಂದ ಅದನ್ನು ಶ್ರೀಪತ್ರಿ ಎಂದು ಕರೆಯಲಾಯಿತು. ಆದರೂ ಹೆಚ್ಚಾಗಿ ಬಿಲ್ವ ಪತ್ರೆ ಎಂದೇ ಸಾಮಾನ್ಯವಾಗಿ ಎಲ್ಲರೂ ಕರೆಯುತ್ತಾರೆ. ಈ ಮೂರು ಎಲೆಗಳು ಮನುಷ್ಯನ ಮೂರು ಗುಣಗಳಾದ ಸತ್ವ, ರಾಜಸ, ತಾಮಸ ಗುಣಗಳು ಮೂರು ಎಲೆಗಳ ಪ್ರತೀಕವಾಗಿದೆ, ಅಲ್ಲದೇ ಶಿವನ ತ್ರಿಶೂಲದ ಸಂಕೇತವಾಗಿದೆ ಎಂದು ಪ್ರಾಚೀನರಿಂದ, ಪುರಾಣಗಳಿಂದ ತಿಳಿದುಬರುತ್ತದೆ. ಬಿಲ್ವ ಪತ್ರೆ ಗಿಡ ಮನೆಯ ಮುಂದೆ ಇರುವುದರಿಂದ ಸಂಪತ್ತು, ಸಮೃದ್ಧಿಯ ಜೊತೆಗೆ ದೈವತ್ವವು ಲಭಿಸುತ್ತದೆ ಎಂಬ ನಂಬಿಕೆಯಿದೆ.

ವೈದ್ಯಶಾಸ್ತ್ರದಲ್ಲಿ ಬಿಲ್ವ ಪತ್ರೆ ಔಷಧೀಯ ಗುಣ ಹೊಂದಿದೆ. ಈ ಎಲೆಯನ್ನು ಬೆಳಗಿನ ಜಾವದಲ್ಲಿ ಏನೂ ತಿನ್ನದೆ, ಕುಡಿಯದೆ ಸೇವಿಸಿದರೆ ವಾಕ್‌ಸಿದ್ಧಿ ಲಭಿಸುವುದು. ಹೃದಯ ಬೇನೆ ನಿವಾರಣೆ, ರಕ್ತದೊತ್ತಡ ನಿಯಂತ್ರಿಸುವ ಶಕ್ತಿ ಮತ್ತು ರಕ್ತ ಶುದ್ಧಿ ಮಾಡುವ ಶಕ್ತಿ ಇದಕ್ಕಿದೆ. ಬಿಲ್ವ ಪತ್ರೆಯ ಕಾಯಿಯನ್ನು ಸುಟ್ಟು ಗಾಯಗಳಿಗೆ ಸವರಿದರೆ ಗಾಯ ಮಾದು ಹೋಗುತ್ತದೆ. ಔಷಧಿಯ ಗುಣವನ್ನು ಹೊಂದಿರುವುದರಿಂದ ಈ ಗಿಡದ ಬುಡದಲ್ಲಿ ಸತತವಾಗಿ ಕುಳಿತುಕೊಂಡರೆ, ದೈಹಿಕ ಆರೋಗ್ಯ ವೃದ್ಧಿ ಆಗುವುದರ ಜೊತೆಗೆ ಮಾನಸಿಕವಾಗಿ ಸ್ವಸ್ಥತೆ ಹಾಗೂ ಶಾಂತಿ, ಸಮಾಧಾನ, ಸಮತೋಲನವನ್ನು ಪಡೆದು ಸಾತ್ವಿಕತೆ ಮೈಗೂಡುತ್ತದೆ ಎನ್ನಲಾಗಿದೆ. *(ಎಸ್.ಜಿ.ಡಿ.)*

ಬಿಳಿ ಪಾವಡ: ಧಾರ್ಮಿಕ ವಿಧಿ ವಿಧಾನಗಳಲ್ಲಿ ಬಳಸುವ ಒಂದು ತೆಳ್ಳನೆಯ ಬಿಳಿ ಬಟ್ಟೆ. ಸಾಮಾನ್ಯವಾಗಿ ಸಾಮಾಜಿಕರು ಗದ್ದುಗೆಗೆ ಮೇಲೆ ಹಾಸುವ ಬಿಳಿ ಬಟ್ಟೆಗೆ 'ಬಿಳಿ ಪಾವಡ' ಎಂದು ಕರೆಯುವುದು ರೂಢಿಯಲ್ಲಿದೆ. ವಿಶೇಷವಾಗಿ ಲಿಂಗಾಯಿತರ ಮನೆಯಲ್ಲಿ ಅವರ ಮನೆಯ ಗುರುಗಳಿಗೆ ಹಾಗೂ ತಾವು ನಡೆದುಕೊಳ್ಳುವ ಗುರುಗಳಿಗೆ, ಗುರುಪೀಠದವರಿಗೆ, ಮಠಾಧೀಶರಿಗೆ ಪೂಜೆಗೆ ಕುಳಿತುಕೊಳ್ಳುವುದಕ್ಕಾಗಿ ಒಂದು ಆಸನ ಅಥವಾ ಒಂದು ಗದ್ದುಗೆ ಸಿದ್ಧಪಡಿಸುತ್ತಾರೆ. ಮೊದಲು ಕೆಳಗೆ ಬಿಳಿ ಕಂಬಳಿಯನ್ನು ಪೀಠದಷ್ಟು ಅಗಲದಲ್ಲಿ ಮಡಚಿ ಪೀಠದ ಮೇಲೆ ಹಾಸುವರು. ಅದರ ಮೇಲೆ ಬಿಳಿಯಾದ ತೆಳುವಾದ ಬಟ್ಟೆಯನ್ನು ಹಾಸುತ್ತಾರೆ. ಜಂಗಮರ ಪಾದ ಪೂಜೆ ಮಾಡಲು ಕರಣ ತೆಗೆದುಗೊಳ್ಳುವ ಪ್ರಕ್ರಿಯೆಯಲ್ಲಿ ಜಂಗಮನು ತನ್ನ ಪಾದಗಳನ್ನು ಬಿಳಿ ಪಾವಡದ ಮುಂದೆ ತಟ್ಟೆಯಲ್ಲಿಡುವನು. ಆ ಪಾದಗಳನ್ನು ತೊಳೆದು ಭಕ್ತ ಕುಂಕುಮ, ವಿಭೂತಿ, ದೀಪ ಧೂಪಗಳಿಂದ ಪೂಜಿಸುವನು. ಕಳಸ ಬೆಳಗಿದ ಆನಂತರ ತೊಳೆದ ನೀರನ್ನು ಕಣ್ಣಿಗೆ ಸವರಿಕೊಂಡು ಸ್ವಲ್ಪ ನೀರನ್ನು ಕೈಯಿಂದ ಸೇವಿಸಿ ಉಳಿದುದನ್ನು ಮನೆಯ ತುಂಬಾ ಸಿಂಪಡಿಸುವನು.

ಬಿಳಿ ಪಾವಡ ಗದ್ದುಗೆಗೆ ಹಾಕುವಾಗ ಕೆಲವೊಂದು ಸಂದರ್ಭಗಳಲ್ಲಿ ಅಂದರೆ ಮನೆಯ ಹಿರಿಯರನ್ನು ಪೂಜೆ ಮಾಡುವಾಗ, ಸತ್ತವರ ನೆನಪಿನಲ್ಲಿ ಅವರಿಗೆ ಗೌರವ ಸೂಚಕವಾಗಿ ಮಾಡುವ ಪೂಜಾದಿನ, ಮನೆಯ ಗುರುಗಳನ್ನು ಅಥವಾ ತಾವು ನಡೆದುಕೊಳ್ಳುವ ಗುರುಗಳನ್ನು ಕರೆಯಿಸಿದಾಗ ಅವರಿಗೆ ಗದ್ದುಗೆಯ ಕೆಳಗೆ ಕೆಂಪು, ಹಸಿರು, ಹಳದಿ, ನೀಲಿ, ಬಿಳಿ ಬಣ್ಣಗಳ ಬಟ್ಟೆಗಳನ್ನು ಕೆಳಗಿಟ್ಟು ಮೇಲೆ ಬಿಳಿ ಪಾವಡ ಹಾಕುತ್ತಾರೆ. ಈ ಬಣ್ಣದ ಬಟ್ಟೆಗಳು ಸಾಮಾನ್ಯವಾಗಿ, ಸೀರೆ, ಕುಬುಸ, ಅಂಗಸ್ತ್ರ, ಅಂಗಿ, ಪಂಚೆ ಆಗಿರುತ್ತವೆ. ಅವುಗಳನ್ನು ಕೆಳಗಿಟ್ಟು ಮೇಲ್ಪದರು ಬಿಳಿ

ಪಾವಡವಿರುತ್ತದೆ. ಪೂಜೆಯ ನಂತರ ಜಂಗಮನು ಅರೋಗಿಸಿದ ನಂತರ ಮರುದಿನ ಆ ಗದ್ದುಗೆಗೆ ಸಂಕ್ಷಿಪ್ತವಾಗಿ ಪೂಜಿಸಿ ಬಿಳಿ ಪಾವಡವನ್ನು ಪುನಃ ಪೂಜಾ ಸಾಮಾನುಗಳನ್ನು ಪೆಟ್ಟಿಗೆಯಲ್ಲಿರಿಸುತ್ತಾರೆ. ಬಿಳಿ ಪಾವಡದಂತೆ ಮತ್ತೊಂದು ಪಾವಡವು ಬಳಕೆಯಲ್ಲಿದೆ. ಅದು ದೇವರಿಗೆ ನೈವೇದ್ಯ ಒಯ್ಯುವಾಗ ತಟ್ಟೆಯ ಮೇಲೆ ತೆಳ್ಳನೆಯ ಬಿಳಿ ಪಾವಡ ಮುಚ್ಚಿಕೊಂಡು ಹೋಗುತ್ತಾರೆ. ಏಕೆಂದರೆ, ನೈವೇದ್ಯ ಒಯ್ಯುವಾಗ ಹೊರಗಿನ ವಾತಾವರಣದಲ್ಲಿ ಧೂಳಿನ ಕಣಗಳು ಸೋಂಕು ಬಾರದೆಂದು ಅಲ್ಲದೆ ಬಿಳಿ ಬಣ್ಣದ್ದು ಪರಿಶುದ್ಧವಾಗಿರುವುದರ ಜೊತೆಗೆ ಆಹಾರ ಪದಾರ್ಥಗಳಿಗೆ ಗಾಳಿಯಾಡುವುದರಿಂದ ಅದು ಪರಿಶುದ್ಧವಾಗಿರುತ್ತದೆ. ಆದರೆ, ನೈವೇದ್ಯ ಪಾವಡ ಇಂದಿನ ಆಧುನಿಕರು ಫ್ಯಾಷನ್‌ಗಾಗಿ ಬಣ್ಣ ಬಣ್ಣದ ಕಲಾಕುಸುರಿನಿಂದ ಸಿದ್ಧ ಮಾಡಿದ ಬಟ್ಟೆಗಳನ್ನು ಹೊದಿಕೆ ಮಾಡಿಕೊಂಡು ಹೋಗುತ್ತಾರೆ. ಸಾಮಾನ್ಯವಾಗಿ ಸಾಂಸ್ಕೃತಿಕ ಬದುಕಿನಲ್ಲಿ ಪ್ರತಿಯೊಂದು ವಿಧಿ ವಿಧಾನಗಳು ವೈಜ್ಞಾನಿಕವಾಗಿ, ಸರಳವಾದ ಉಪಯುಕ್ತತೆಯನ್ನು ಪಾಲಿಸಿಕೊಂಡು ಬಂದಿದ್ದಾರೆ.


(ಎಸ್.ಜಿ.ಡಿ.)

ಬೀ

ಬೀದರ: ಕರ್ನಾಟಕದ ಗುಲಬರ್ಗಾ ವಿಭಾಗಕ್ಕೆ ಸೇರಿದ ಒಂದು ಜಿಲ್ಲೆ. 11ನೆಯ ಶತಮಾನದಿಂದ 20ನೆಯ ಶತಮಾನದವರೆಗೆ ಕಲ್ಯಾಣ ಚಾಲುಕ್ಯರು, ಶಿವಶರಣರು, ಸಂತರು, ಬಹುಮನಿ ಅರಸರು ಬೀದರ ಜಿಲ್ಲೆಯ ಸಂಸ್ಕೃತಿಕ ಕ್ಷೇತ್ರಕ್ಕೆ ಅನುನ್ಯ ಕೊಡುಗೆ ನೀಡಿದ್ದಾರೆ ಈ ಪ್ರದೇಶ ಮಹಾಭಾರತದಲ್ಲಿನ ವಿದುರ ನಗರ ಎಂದೂ, ನಳ ದಮಯಂತಿಯ ಪುಷ್ಪೋದ್ಯಾನವೆಂತಲೂ, ಬಿದಿರು ಬೆಳೆಯುವ ಪ್ರವೇಶವಾದ್ದರಿಂದ ಬಿದಿರೂರು ಪುರ ಎಂದೂ ಸ್ಥಳ ಪುರಾಣಗಳು ಹೇಳುತ್ತವೆ. ಶಿಶುಮಾಯಣನು ತನ್ನ ಅಂಜನಾ ಚರಿತ್ರೆಯಲ್ಲಿ ಉತ್ತರ ದೇಶದೊಳಗೆ ಸುರತ್ರಾಣನ ಪತ್ತಣವನು ಬಿದಿರೆಯೊಳು ಕರ್ತಾರನಲ್ಲದುಳಿದ ದೈವವಿಲ್ಲೆಂದು ಮತ್ತರಾಗಿರುತಿಹರಲ್ಲಿ ಎಂದು ಕ್ರಿ.ಶ. 1500ರ ಕಾಲದಲ್ಲಿಯೂ ಬೀದರನ್ನು ಬಿದಿರೆ ಎಂದು ಕರೆದಿರುವುದು ಗಮನಾರ್ಹವಾಗಿದೆ.

ಕ್ರಿ.ಶ. 1424ರ ವೇಳೆಯ ಬೀದರಿನ ಸೋಲಾಕಂಬ ಮಸೀದಿಯಲ್ಲಿ ದೊರೆತಿರುವ ಶಶಾಸನದಲ್ಲಿ ಬೀದರ ಎಂದು ಉಲ್ಲೇಖಿಸಲ್ಪಟ್ಟಿದೆ. ಮುಸ್ಲಿಂ ಅರಸರ ಕಾಲದಲ್ಲಿ ಮೊಹಮ್ಮದಾಬಾದ ಬೀದರ, ಜಾಫರಾಬಾದ ಬೀದರ ಎಂದು ಕರೆಯಲ್ಪಟ್ಟರೂ ಜನಪದೀಯರ ದೃಷ್ಟಿಯಲ್ಲಿ ಇದು ಕ್ವಾಟಿ.

ಬೀದರ ಕೋಟೆ ಇಲ್ಲಿನ ಐತಿಹಾಸಿಕ ಸ್ಥಳಗಳಲ್ಲಿ ಆಗ್ರಸ್ಥಾನ ಪಡೆದಿದೆ. ಕ್ರಿ.ಶ. 1429ರಲ್ಲಿ ಬಹುಮನಿ ಮನೆತನದ 9ನೆಯ



ಬೀದರ್ ಕೋಟೆ

ಸುಲ್ತಾನ ಅಹಮ್ಮದ–ಶಾಹನಿಂದ ನಿರ್ಮಿಸಲಾಗಿದೆ. ಈ ಕೋಟೆಯು ಎರಡು ಸುತ್ತಿನ ಗೋಡೆಯನ್ನು ಹೊಂದಿದೆ. ಕೋಟೆಯ ಪ್ರಮುಖ ಮಹಾದ್ವಾರ ಶಾರ್ಜಾ ದರವಾಜಾ. ದ್ವಾರದ ಕಮಾನಿನ ಮೇಲೆ ಎಡ ಬಲಕ್ಕೆ ಕಲ್ಲಿನಲ್ಲಿ ಕೆತ್ತಿದ ಹುಲಿಗಳ ಶಿಲ್ಪಗಳಿವೆ. ಇದರ ನಿರ್ಮಾಣದ ಕಾಲ 1503, ಗೋಡೆಯ ಮೇಲ್ಭಾಗದಲ್ಲಿ ಬಣ್ಣದ ಹಂಚುಗಳ ಅಲಂಕಾರವನ್ನು ಕಾಣಬಹುದು. ಈ ದರವಾಜದ ಮೇಲೆ ಸುಂದರ ಹಜಾರ ಇದೆ. ಇದರ ಇನ್ನೊಂದು ಹೆಸರು 'ನೌಬಾತ ಖಾನಾ. ಅರಸರ ಕಾಲದಲ್ಲಿ ನಿಗದಿತ ಸಮಯದಲ್ಲಿ ಕುಳಿತು ವಾದ್ಯ ಸಂಗೀತ ನುಡಿಸುತ್ತಿದ್ದರು. ಹಜಾರದ ಕಿಟಕಿಯಿಂದ ಪಶ್ಚಿಮ ದಿಕ್ಕಿನೆಡೆ ವೀಕ್ಷಿಸಿದಾಗ ಕಂಡು ಬರುವ ದ್ವಾರವೇ ಗುಂಬಜ ದರವಾಜಾ.

ರಂಗೀನ ಮಹಲ್: ಇದು ಪರ್ಷಿಯನ್ ಮತ್ತು ಬಿದ್ರಿ ಕಲೆಯನ್ನು ಬಳಸಿ ಸುಲ್ತಾನ ಅಲಿ ಬರೀದ ಶಾಹನಿಂದ ಕ್ರಿ.ಶ. 1543–80ರ ಕಾಲಾವಧಿಯಲ್ಲಿ ನಿರ್ಮಾಣವಾಯಿತು. ಗುಂಬಜ ದರವಾಜಾಕ್ಕೆ ಹೊಂದಿಕೊಂಡಂತೆ ಒಳಗಡೆ ಎಡಬದಿಗೆ ಚಿಕ್ಕದಾದ ಮಹಲೊಂದಿದ್ದು ಅದಕ್ಕೆ 'ರಂಗೀನ ಮಹಲ್' ಎಂದು ಕರೆಯುತ್ತಾರೆ. ಬಣ್ಣದ ಹಂಚು ಜೋಡಣೆಯನ್ನು ಹೊಂದಿರುವ ಸುಂದರ ಕಟ್ಟಡವಾಗಿದೆ. ಅಲ್ಲಲ್ಲಿ ಕಪ್ಪು ಶಿಲೆಯ ಕುಸುರಿ ಕಲೆಗಾರಿಕೆ ಕಾಣಬಹುದಾಗಿದೆ. ಟೀಕ್‌ವುಡ್‌ನಿಂದ ಮಾಳಿಗೆ ಹಾಕಲಾಗಿದೆ. ಕಲ್ಲಿನ ಮೇಲಿನ ಕೆತ್ತನೆಯಲ್ಲಿ ಮುತ್ತುಗಳ ಜಡಿಕೆ ಕಾರ್ಯ ಅಪೂರ್ವವಾಗಿದೆ. ಅಂದಿನ ಅತಿಥಿ ಗೃಹವಾಗಿತ್ತು.

ಬೊಮ್ಮಗೊಂಡ ಕೆರೆ: ಕೋಟೆಯ ಒಳ ಭಾಗದಲ್ಲಿರುವ ಆ ಕೆರೆಯೇ ಬೊಮ್ಮಗೊಂಡ ಕೆರೆ ಎಂದು ಪ್ರಸಿದ್ಧವಾಗಿದೆ. ವೀರ ಸಂಗಯ್ಯನ ಗುಡ್ಡದ ಪಕ್ಕದಲ್ಲಿದೆ.

ಗಗನ ಮಹಲ್: ಗಗನಕ್ಕೆ ಕೈಚಾಚಿ ನಿಲ್ಲುವಂತೆ ಎತ್ತರವಾಗಿದೆ. ಹಾಗಾಗಿ ಇದಕ್ಕೆ ಗಗನ ಮಹಲ್ ಎಂಬ ಹೆಸರು ಬಂದಿದೆ. ಅರಸನ ವಾಸದ ಮನೆಯೇ ಗಗನ ಮಹಲ ಬಹುಮಹಡಿ ಕಟ್ಟಡವನ್ನೊಳಗೊಂಡಿದೆ.

ತುರ್ಕಿ ದೇಶದಿಂದ ಬಂದ ರಾಣಿಯ ವಾಸದ ಉದ್ದೇಶದಿಂದ ನಿರ್ಮಿಸಲಾಗಿತ್ತು. ಹೀಗಾಗಿ ಇದಕ್ಕೆ ತರ್ಕಶ ಮಹಲ್ ಎಂದು ಸಹ ಕರೆಯುವುದುಂಟು. ರಾಣಿವಾಸ ಇದಾಗಿದ್ದರಿಂದ ಅದನ್ನು ಝುನಾನಾ ಎಂದು ಕರೆಯಲಾಗುತ್ತದೆ.

ಬು

ಬುಟ್ಟಿಜಾತ್ರೆ ಮತ್ತು ಮೂರ್ತಿ ತಿರುಗಿಸುವುದು: ಮಳೆ ಬಾರದಿದ್ದಾಗ ಗುರ್ಚಿ ಆಡುವ ಸಂಪ್ರದಾಯದಂತೆ ಇರುವ ಜನಪದರ ಅಚರಣೆ. ಮಳೆಬಾರದಿದ್ದಾಗ ಊರಲ್ಲಿ ಡಂಗುರ ಸಾರಿ 'ಬುಟ್ಟಿಜಾತ್ರೆ' ನಡೆಯುವಂತೆ ಆಜ್ಞಾಪಿಸುತ್ತಾರೆ. ಊರಿನ ಗಂಡು ಹೆಣ್ಣುಗಳೆಲ್ಲ ಸೇರಿ ಅಡಿಗೆ ತೆಗೆದುಕೊಂಡು ವಾದ್ಯಗಳ ಜೊತೆ ಮೆರವಣಿಗೆ ಹೊರಡುತ್ತಾರೆ. ಜೊತೆಗೆ ತುಂಬಿದ ಕೊಡಗಳನ್ನೂ ಹೊತ್ತಿರುತ್ತಾರೆ. ಊರ ಸಮೀಪದಲ್ಲಿರುವ ದೇವರ ಗುಡಿಗೆ ಬಂದು ಕೊಡಗಳಲ್ಲಿಯ ನೀರು ದೇವರಿಗೆ ನೀಡುವರು. ಪೂಜೆ ಸಲ್ಲಿಸಿ, ಜಂಗಮರಿಗೆ ಊಟಕ್ಕೆ ಹಾಕಿದರೆ ಶಾಂತಿ ಸಿಗುವದೆನ್ನುವ ನಂಬಿಕೆ ಜನಪದರದು. ಅನಂತರ ಎಲ್ಲರೂ ಸೇರಿ ಅಲ್ಲಿಯೇ ಊಟ ಮಾಡಿ ಸಾಯಂಕಾಲಕ್ಕೆ ಮನೆಗೆ ಮರಳುವರು.

ಮೂರ್ತಿ ತಿರುಗಿಸಿಡುವ ಸಂಪ್ರದಾಯದಲ್ಲೂ ಇದೇ ರೀತಿ ನಡೆದು, ಗುಡ್ಡದ ಮೇಲಿರುವ ಬಸವಣ್ಣನ ಮೂರ್ತಿಯ ಹತ್ತಿರ ಜನರೆಲ್ಲ ಬಂದು ಸೇರುತ್ತಾರೆ. ಭಜನೆ ಮಾಡಿ, ದೇವರಿಗೆ ಕಾಯಿ ಕರ್ಪೂರ ಸಲ್ಲಿಸಿ, ಬಸವಣ್ಣನ ಮೊದಲಿದ್ದ ಮುಖದ ವಿರುದ್ಧ ದಿಕ್ಕಿಗೆ ತಿರುಗಿಸಿ, ಶಾಂತಿ ಮಾಡಿ ಊರಿಗೆ ತಿರುಗುವರು. ಇವೆರಡೂ ಸಂಪ್ರದಾಯ ಮಾಡುವುದರಿಂದ ಮನೆಗೆ ಮರಳುವಷ್ಟರಲ್ಲಿಯೇ ಮಳೆ ಬಂದೇ ತೀರುತ್ತದೆ ಎನ್ನುವುದು ಜನಪದರ ನಂಬಿಕೆ. ಈ ಸಂಪ್ರದಾಯ ಔರಾದ ತಲ್ಲೂಕಿನ ಭಾತಾಂಬ್ರಾ ಮತ್ತು ಯಾದಗಿರಿ ತಾಲ್ಲೂಕಿನ ಗಾಜರಕೋಟ ಮುಂತಾದೆಡೆ ಪ್ರಚಲಿತದಲ್ಲಿವೆ. *(ಬಿ.ಎಸ್.)*

ಬುಡಬುಡಕಿಯವರು: ಶಕುನ ಹೇಳಿಕೊಂಡು ಜೀವನ ಸಾಗಿಸುವ ಒಂದು ಜನಾಂಗ. ಬುಡಬುಡಕಿ ಸಮುದಾಯದಲ್ಲಿ ಹಲವಾರು ಒಳಪಂಗಡಗಳಿವೆ. ಅವರನ್ನು ಗೊಂದಲಿಗರು, ಗೊಂದಲ ಹಾಕುವವರು, ಜೋಷಿ ಅಥವಾ ಜೋಯಿಷ, ಭಟ್ಟಂಗಿ, ವಾಸುದೇವ, ಭೂತೇರು ಮುಂತಾಗಿ ಕರೆಯಲಾಗುತ್ತದೆ. ಆದರೆ ಇವರೆಲ್ಲರನ್ನು ಇಂದು ಗೋಂಧಳಿ ಸಮುದಾಯದಲ್ಲಿ ಗಣಿಸುವರು. ಈ ಎಲ್ಲಾ ಹೆಸರುಗಳು ಅವರ ವೃತ್ತಿ ಮೂಲದ ಹಿನ್ನೆಲೆಯಲ್ಲಿ ಬಂದವುಗಳಾಗಿವೆ ಎಂದು ಹೇಳಬಹುದು.



ಬುಡಬುಡಕಿಯವರು

ಬುಡಬುಡಕಿ, ಭಟ್ಟಂಗಿ ಜೋಯಿಸರು ಮಾತ್ರ ಕರ್ನಾಟಕದಲ್ಲಿ ಕಂಡುಬರುತ್ತಾರೆ. ಬುಡಬುಡಕೆಯವರು, ಜೋತಿಷ್ಯ ಹೇಳುವವರು, ಗಿಳಿ ಶಕುನದ ಜೋತಿಷ್ಯ ಹೇಳುವವರೂ ಗೊಂದಲಿಗರ ಸಮುದಾಯದವರಾಗಿದ್ದು ವೃತ್ತಿ, ಮಾತ್ರ ಬೇರೆ ಬೇರೆ ಇರಬಹುದು. ಇವರೆಲ್ಲರೂ ಸಮುದಾಯದ ಕುಲಪದ್ಧತಿಯಂತೆಯೆ ನಡೆಯುತ್ತಾರೆ. ಜನಸಾಮಾನ್ಯರು. ಮಾತ್ರ ಇವರು ಮಾಡುತ್ತಿರುವ, ಕಸಬಿನಿಂದಲೇ ಇವರನ್ನು, ಗೊಂದಲ ಹಾಕುವ ಗೊಂದಲಿಗರು, ಬುಡಬುಡಕೆರು, ಜೋತಿಷರು, ಎಂದು ಕರೆಯುತ್ತಾರೆ. ಇವರೆಲ್ಲರ ಆರಾಧ್ಯ ದೇವತೆ ಅಂಬಾಭವಾನಿ, ರೇಣುಕೆ ಎಲ್ಲಮ್ಮ ಆಗಿದ್ಧಾಳೆ. ಇವರೆಲ್ಲರೂ ಅಲೆಮಾರಿ ಬುಡಕಟ್ಟಿನವರಾಗಿದ್ದಾರೆ.

ಬುಡಬುಡಕಿ ಎನ್ನುವುದು ಗೋಂಧಳಿಗರಲ್ಲಿರುವ ಒಂದು ಪಂಗಡ, ಗೋಂಧಳಿಯವರೇ ಬುಡಬುಡಕೆಯನ್ನು ಒಂದು ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಅಯ್ಯರ್‌ರವರು ಬುಡಬುಡಕೆಗಳ ಮೂಲ, ಮದುವೆ ಕ್ರಮ, ದೇವದಾಸಿ ಪದ್ಧತಿ (ಬಸವಿ) ಸಾಮಾಜಿಕ, ಹಾಗೂ ಧಾರ್ಮಿಕ ರೀತಿಗಳು, ಮುಂತಾದ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಬುಡಬುಡಕಿಯವರು ಅಲೆಮಾರಿ ಭಿಕ್ಷುಕ (Gipsy beggers) ಬುಡಕಟ್ಟು ಎಂದು ತಿಳಿಸುತ್ತಾರೆ.

ಗೋಂಧಳಿ ಸಮುದಾಯದ ಬಗ್ಗೆ ಹಾಗೂ ಇದರಲ್ಲಿ ಬರುವ ಪಂಗಡಗಳಾದ ಬುಡಬುಡಕಿಯವರು, ಜೋತಿಷ ಹೇಳುವವರು, ವಾಸುದೇವರು, ಭಟ್ಟಂಗಿಯವರು, ಸುಂಗದವರ ಕಲೆ ಕಸುಬುಗಳ ಬಗ್ಗೆ ಹಲವಾರು ಲೇಖಕರು ಬರೆದಿರುತ್ತಾರೆ. ಗೋಂಧಳಿ ಸಮುದಾಯದ ಉಪಪಂಗಡಗಳಾದ ಬುಡಬುಡಕೆಯರು, ಭಟ್ಟಂಗಿ, ಜೋತಿಷ್ಯ ಮತ್ತು ಗಿಳಿ ಶಕುನ ಹೇಳುವವರು ಮತ್ತು ಸಿಂಗದವರು ಎಲ್ಲರ ಆಚಾರ, ವಿಚಾರ ಸಂಪ್ರದಾಯ ಸಂಸ್ಕೃತಿ, ನ್ಯಾಯ ನಿರ್ಣಯ, ಮದುವೆ, ಬೆಡಗುಗಳು ಹಾಗೂ ಇತರೆಲ್ಲ ಕಾರ್ಯಗಳು ಒಂದೇ ಆಗಿರುತ್ತವೆ. ಹೀಗಾಗಿ ಇವರೆಲ್ಲರನ್ನು ಗೋಂಧಳಿ ಸಮುದಾಯವರೆಂದು ಹೇಳಲಾಗುತ್ತದೆ.

(ಕೆ.ಎಂ.ಎಂ)

ಬುರ್‍ರ ಕಥಾ: ಲೌಕಿಕ ಸಂಪ್ರದಾಯದ ಒಂದು ಜನಪದ ಕಲೆ. ಬುರುಡೆ ಆಕಾರದ ವಾದ್ಯವನ್ನು ಬಳಸಿ ಕಥಾಗಾನ ಮಾಡುವವರು. ಅದ್ದರಿಂದಲೇ ಈ ಕಲೆಗೆ ಬುರ್‍ರಕಥಾ ಎಂದು ಹೆಸರು. ಈ ಮೇಳದವರು ಕರ್ನಾಟಕ ಮತ್ತು ಆಂಧ್ರದ ಗಡಿ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಈ ಕಥೆಯ ಮೂಲ



ಬುರ್ರಾ ಕಥಾ ಮೇಳ

ಉತ್ತರದಿಂದ ಬಂದಿದೆಯೆಂದು ಹೇಳಲಾಗುತ್ತಿದೆಯಾದರೂ, ಈಗ ಇದರ ಮೂಲ ಆಂಧ್ರದ ಉತ್ತರಭಾಗದಲ್ಲಿ ಎಂದು ಊಹಿಸಲಾಗಿದೆ. ಕರ್ನಾಟಕದ ಕೆಲ ವಿದ್ವಾಂಸರು 'ಕರ್ನಾಟಕ ಆಂಧ್ರ ಭಾಗದ ಗಡಿ ಭಾಗಗಳಲ್ಲಿ ಕಂಡುಬರುವ 'ಬುರ್ರಕಥಾ' ಸಂಪ್ರದಾಯಕ್ಕೂ, ದಕ್ಷಿಣ ಕರ್ನಾಟಕದ 'ಕರಪಾಲಮೇಳಕ್ಕೂ ಮೂಲ ಉತ್ತರ ಕರ್ನಾಟಕದ 'ಜಂಗಮಕಥೆ'ಯೇ ಎನ್ನಲಾಗಿದೆ. ಜಂಗಮಕಥೆಯ ಮುಂದುವರಿಕೆಯಾಗಿಯೇ ಬುರ್ರಕಥೆಯ ರೂಪ ಪಡೆದುಕೊಂಡಿದೆ ಎಂದು ಹೇಳಿದ್ದಾರೆ. ಬುರ್ರಕಥೆಯನ್ನು ತಂಬೂರಿ ಕಥೆ ಎಂತಲೂ ಕರೆಯುತ್ತಾರೆ.

ಈ ಮೇಳದಲ್ಲಿ ಮೂರು ಕಲಾವಿದರಿರುತ್ತಾರೆ. ಮುಖ್ಯ ಹಾಡುಗಾರ ಮಧ್ಯದಲ್ಲಿ ನಿಂತು ತನ್ನ ಕೊರಳಲ್ಲಿನ ತಂಬೂರಿ ನುಡಿಸುತ್ತಾ ಕಥೆ ಹಾಡುತ್ತಾನೆ. ಅಕ್ಕಪಕ್ಕದ ಇಬ್ಬರು ಗುಮಟೆಯನ್ನು ನುಡಿಸುತ್ತಾ ಹಿಮ್ಮೇಳದಲ್ಲಿದ್ದು ಹಾಡುತ್ತಾರೆ. ಕೆಲ ಸಂದರ್ಭದಲ್ಲಿ ಮುಖ್ಯ ಹಾಡುಗಾರ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ತಂಬೂರಿ ನುಡಿಸುತ್ತಾ ಕುಣಿಯುವುದುಂಟು. ಈತ ಸುಂದರವಾಗಿ ಅಲಂಕಾರ ಮಾಡಿಕೊಂಡಿರುತ್ತಾನೆ. ತಲೆಗೆ ಝರಿ ರುಮಾಲು, ನಿಲುವಂಗಿ, ಕರಿ ಕೋಟು, ಝರಿ ಶಲ್ಯ, ಬಿಳಿ ಪಂಜೆ, ಎಡಗೈ ತೋರು ಬೆರಳು ಮತ್ತು ಹೆಬ್ಬರಳಿಗೆ ಗಗ್ಗುರಿಗಳು, ಕಾಲಲ್ಲಿ ಗೆಜ್ಜೆ, ಬಲಗೈಯಲ್ಲಿ ತಂಬೂರಿ ಹಿಡಿದುಕೊಂಡಿರುವನು. ಹಣೆಗೆ ವಿಭೂತಿ ಕುಂಕುಮಗಳನ್ನು ಹಚ್ಚಿಕೊಂಡಿರುತ್ತಾನೆ. ಉಳಿದ ಕಲಾವಿದರು ಧರಿಸುವುದು ಸಾಮಾನ್ಯ ಮಡಿವಸ್ತ್ರ. ತಂಬೂರಿ, ಗುಮ್ಮಟೆ ಮತ್ತು ತಾಳ ಇವು ಬುರ್ರಕತೆಯಲ್ಲಿನ ಮೂರು ಮುಖ್ಯ ವಾದ್ಯಗಳು.

ಮುಖ್ಯ ಹಾಡುಗಾರ ಕತೆ ಹಾಡಿದಂತೆ ಹಿಮ್ಮೇಳದವರು ಅದಕ್ಕೆ ತಕ್ಕಂತೆ ಸೊಲ್ಲನ್ನು ಕೂಡಿಸುತ್ತಾರೆ. ಕಥೆಯ ಸಂದರ್ಭಕ್ಕನುಸಾರವಾಗಿ ಹಾಡಿನ ಸೊಲ್ಲು ಹಾಗೂ ಲಯಗಳು ಬದಲಾಗುತ್ತವೆ. ಕಥೆಯ ಮಧ್ಯೆ ಹಾಸ್ಯಮಯವಾದ ಅನೇಕ ಉಪಕಥೆಗಳನ್ನು ಹೇಳುವುದರ ಮೂಲಕ ಕೇಳುಗರನ್ನು ರಂಜಿಸುತ್ತಾರೆ. ಹೀಗಾಗಿ ಕಥೆಯನ್ನು ದೀರ್ಘವಾಗುವಂತೆ ಮಾಡುತ್ತಾರೆ.

ಬುರ್ರಕಥೆಯನ್ನು ಹಾಡುವ ಸಂದರ್ಭದಲ್ಲಿ ನಡು ನಡುವೆ ಹರಹರ ಮಹಾದೇವ, ಗೋವಿಂದ ಮುಂತಾದ ದೇವರ ನಾಮಗಳನ್ನು ಸ್ಮರಿಸುತ್ತಾ ಕತೆ ನಿರೂಪಿಸುತ್ತಾರೆ. ಇವರು ಹೆಚ್ಚಾಗಿ ಮುಗ್ಗುರು ಮರಾಟಿಲು, ಕಾಂಭೋಜರಾಜು ಕಥಾ, ಪೆದ್ದ ಬೊಟ್ಟಿಲ ರಾಜು, ಬಾಲನಾಗಮ್ಮ, ಕುಮಾರರಾಮ, ಕಾಮಮ್ಮ ಕಥಾ, ಕಾಟಮರಾಜು ಕಥಾ, ಬಲ್ಲಾಲ ರಾಜನಿ ಕಥಾ ಮುಂತಾದವುಗಳನ್ನು ಹಾಡುತ್ತಾರೆ.

ಬುರ್ರಕಥೆಯವರು ಹೆಚ್ಚಾಗಿ ತಮ್ಮ ಹೊಟ್ಟೆಪಾಡಿಗಾಗಿ ಈ ಕಲೆಯನ್ನು ಬಳಸುತ್ತಾರೆ. ಊರಿಂದೂರಿಗೆ ಇವರ ಪಯಣ ಸಾಗುವುದರಿಂದ ಇವರಿಗೆ ನಿರ್ದಿಷ್ಟವಾದ ರಂಗಸಜ್ಜಿಕೆ ಇಲ್ಲ. ಕೆಲ ಸಂದರ್ಭದಲ್ಲಿ ಇವರನ್ನು ವಿಶೇಷವಾಗಿ ಕರೆಯಿಸಿ ಹಾಡಿಸುತ್ತಾರೆ. ಇವರು ಹಾಡಿದರೆ ಮಳೆ ಬರುತ್ತದೆ. ಊರಿಗೆ ಒಳ್ಳೆಯದಗುತ್ತದೆ ಎನ್ನುವುದು ಜನಪದರ ನಂಬಿಕೆ. ಆಂಧ್ರದಲ್ಲಿ ಅತ್ಯಂತ ಪ್ರಸಿದ್ಧವಾದ ಬುರ್ರಕಥಾ ಮೇಳದವರು ಕರ್ನಾಟಕದ ಕೋಲಾರ, ತುಮಕೂರು, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ.

(ಕೆ.ಎಸ್.)

ಬೇ

ಬೇಡನಾಯಕರು: ಬೇಟೆ ವೃತ್ತಿಯಿಂದ ಬದುಕುವ ಜನಾಂಗ. ಈ ಜನಾಂಗ ಕರ್ನಾಟಕ ರಾಜ್ಯದಲ್ಲಿ ಸುಮಾರು 60 ಲಕ್ಷದಷ್ಟಿದೆ. ದೊಡ್ಡ ಜನಸಂಖ್ಯೆಯನ್ನು ಹೊಂದಿರುವ ಈ ಸಮಾಜ ವೇದ ಕಾಲದಿಂದ ಹುಟ್ಟಿಬಂದಿದೆ ಎನ್ನಲಾಗಿದೆ. ಬೇಡರು ಎಂಬುದು ಉರ್ದು ಶಬ್ದ. ಉರ್ದು ಭಾಷೆಯಲ್ಲಿ ಬೇಡರ ಎಂದರೆ ಯಾರಿಗೂ ಹೆದರದವನು ಎಂದ ಅರ್ಥ. ಬೇಡರ ಸಮಾಜದವರು ಯಾರಿಗೂ ಹೆದರದೇ ಇದ್ದ ಶೂರ ಜನಾಂಗ, ಜೀವನದಲ್ಲಿ ಸುಖವಿರಲಿ, ದುಃಖವಿರಲಿ ಭಾವಾವೇಶಕ್ಕೆ ಒಳಗಾಗದೇ ನಗು–ನಗುತ್ತಾ ಇರುವ ಜನ ಸಮೂಹ.

ಈ ಜನಾಂಗಕ್ಕೆ ಪರ್ಯಾಯವಾಗಿ ನಾಯಕ; ತಲವಾರ, ಬೇಡರ, ಬೇಡರ್, ಕಿರಾತ, ಕಣ್ಣಪ್ಪನ ಮಕ್ಕಳು ಬೇಂಟೆಕಾರ, ಬಿಲ್ಲ, ವ್ಯಾಧ, ವೇನ್, ಶಬರ, ಸಂಚಲು, ಗುರಿಕಾರ, ರಾಮೋಶಿ, ದೊರೆನಾಯಕ, ಪುಳಿಂದ ಎಂಬ ಹೆಸರುಗಳಿಂದ ಕರೆಯುತ್ತಾರೆ. ಬೇಟೆಯೇ ಬದುಕಿನ ಭಾಗವಾಗಿಸಿಕೊಂಡ ಬುಡಕಟ್ಟು ಜನಾಂಗವು ಬೇಡರೆಂದು ಗುರುತಿಸಿಕೊಂಡ ಬಗ್ಗೆ ಒಂದು ವರ್ಣರಂಜಿತ ಇತಿಹಾಸವೇ ಇದೆ. ಕಾಡು ಕಣಿವೆ. ಬೆಟ್ಟಗುಡ್ಡಗಳನ್ನೇ ತಮ್ಮ ವಾಸಸ್ಥಳ ಮಾಡಿಕೊಂಡ ಇವರು ಚರ್ಮ ತೊಟಿಗಳನ್ನೇ ಉಡುಪಾಗಿ ಧರಿಸಿದ್ದರು. ಆದಿ

ಮಾನವನ ಎಲ್ಲ ಅವಸ್ಥೆಗಳನ್ನು ಹೊತ್ತುಕೊಂಡ ಇವರು ಕ್ರೂರ ಪ್ರಾಣಿಗಳ ಮಧ್ಯೆ ಬಾಳಿದವರು. ಅಧರ್ಮ, ಅಕೃತ್ಯಗಳ ವಿರುದ್ಧ ಬಿಚ್ಚು ಗತ್ತಿ ಹಿಡಿದು ಹೋರಾಡಿದ ಜನಾಂಗವಿದು. ಬೇಡರ ಗುಂಪಿನಲ್ಲಿ ಶೂರನಾದ ವ್ಯಕ್ತಿ ಪಾಳೆಪಟ್ಟುಗಳನ್ನು ಕಟ್ಟಿಕೊಂಡು ಪಾಳೆಯಗಾರನೆನಿಸಿದ. ಆತನೆ ಮುಂದೆ ಮುಖಂಡನಾದ. ನೇತೃತ್ವವಹಿಸಿದ ಈತನಿಗೆ ನಾಯಕವೆಂದೇ ಗೌರವ ಸೂಚಕ ಅಭಿದಾನವಿದೆ. ನಾಯಕನೆಂದರೆ ಸೇನಾಪತಿ, ಪಡೆಗಳ ಮುಂದಾಳು ಮುಖ್ಯಸ್ಥನೆಂಬ ಅರ್ಥಗಳಲ್ಲೇ ಬಳಕೆಯಾಗಿದೆ. ವಿಜಯನಗರ ಸೈನ್ಯದ ಬಹುಭಾಗ ಈ ಬೇಡ ಕಾಲಾಳುಗಳ ಪಡೆಯಿಂದ ವ್ಯಾಪಿಸಿದ್ದಿತು. ನಾಯಕ ಎನ್ನುವ ಹೆಸರಿನಿಂದ ಗುರುತಿಸಲ್ಪಡುವ ಇನ್ನೊಂದು ಉಪಜಾತಿ ಮ್ಯಾಸನಾಯಕರು. ಮ್ಯಾಸನಾಯಕರಿಂದ ಕವಲೊಡೆದ ನಾಯಕರೇ ಊರುನಾಯಕರು ಊರಿಗೆ ಕೂಡಿಕೊಂಡವರು. ಕರ್ನಾಟಕದಲ್ಲಿ ಊರ ನಾಯಕರ ಮಾತೃಭಾಷೆ ಕನ್ನಡ. ಇನ್ನೂ ಮ್ಯಾಸನಾಯಕರು ದ್ರಾವಿಡ ಮೂಲದ ತೆಲುಗು ಭಾಷೆಯನ್ನು ಮಾತೃಭಾಷೆಯನ್ನಾಗಿ ಮಾಡಿಕೊಂಡಿದ್ದಾರೆ.

ಸರಕಾರವು ಇವರನ್ನು ಪರಿಶಿಷ್ಟ ಪಂಗಡವೆಂದು ಗುರುತಿಸಿದೆ. ಕರ್ನಾಟಕದಲ್ಲಿ ನಾಯಕ ಜನಾಂಗಕ್ಕೆ ತನ್ನದೇ ಆದ ಸಂಸ್ಕೃತಿ ಇತಿಹಾಸವಿದೆ. ಅನೇಕ ವೀರ ಸಾಹಿಸಿಗಳು ಪಾಳೆಯಗಾರರಾಗಿ ರಾಜರೆನಿಸಿಕೊಂಡು ಅಧಿಕಾರದಲ್ಲಿ ಮೆರೆದು ಧೀಮಂತರೆನಿಸಿಕೊಂಡು ನಾಡಿನ ಉದ್ದಗಲಕ್ಕೂ ನಮ್ಮ ಪ್ರಭುತ್ವವನ್ನು ಸ್ಥಾಪಿಸಿ ಧರ್ಮ ಪ್ರಭುಗಳಾಗಿ ರಾಷ್ಟ್ರಪ್ರೇಮಕ್ಕೆ ಧೈರ್ಯಕ್ಕೆ ಸಾಹಸ ಶೌರ್ಯ ಪರಾಕ್ರಮಗಳಿಗೆ ಹೆಸರುವಾಸಿಯಾಗಿದ್ದಾರೆ. ಕಂಪಿಲರಾಯ, ಗಂಡುಗಲಿ ಕುಮಾರರಾಮ, ರಾಷ್ಟ್ರವೀರ ಎಚ್ಚಮ್ಮ ನಾಯಕ, ಚಿತ್ರದುರ್ಗದ ರಾಜವೀರ ಮದಕರಿನಾಯಕ, ಧರ್ಮವ್ಯಾದ, ಬೇಡರಕಣ್ಣಪ್ಪ, ಏಕಲವ್ಯ, ಗುಹ, ಶಬರಿ, ಸುರಪುರದ ರಾಜ ಚಿಕ್ಕವೆಂಕಟಪ್ಪ ನಾಯಕ, ವೀರ ಸಿಂಧೂರ ಲಕ್ಷ್ಮಣ ಹೀಗೆ ಹಲವಾರು ಕಲಿಗಳು ಈ ಸಮುದಾಯದಲ್ಲಿ ಜನಿಸಿದ್ದಾರೆ. ನಾಯಕ ಜನಾಂಗದ ಅನೇಕ ವೀರರು ತೋಪಿನ ಬಾಯಿಗೆ ಗುಂಡಿನ ಮಳೆಗೆ ಕತ್ತಿ ಬಲ್ಲೆಗಳ ಹೊಡೆತಕ್ಕೆ ಜಗ್ಗದೆ ಎದೆಕೊಟ್ಟು ಮುಂದೆ ನಿಲ್ಲುತ್ತಿದುದ್ದರಿಂದಲೇ ನಾಯಕ ಎಂಬ ಹೆಸರಿಗೆ ಪಾತ್ರರಾರಗಿದ್ದಾರೆ. ಬುಡಕಟ್ಟು ಲಕ್ಷಣಗಳನ್ನು ಹೊಂದಿರುವ ಈ ಜನಾಂಗ ಇಂದು ಹೆಚ್ಚಾಗಿ ಬಳ್ಳಾರಿ, ಗುಲಬರ್ಗಾ, ಕೊಪ್ಪಳ, ರಾಯಚೂರು, ಚಿತ್ರದದುರ್ಗ, ದಾವಣಗೆರೆ, ಮೈಸೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ವಿಪುಲವಾಗಿ ನೆಲೆಸಿದೆ. ಕರ್ನಾಟಕದಲ್ಲಿ ಈ ಜನಾಂಗ ತಮ್ಮ ಜೀವನದ ಮೂಲ ವೃತ್ತಿಯನ್ನಾಗಿ ಕೃಷಿಯನ್ನು ಅವಲಂಬಿಸಿದೆ. ಇಂದಿನ ಪರಿವರ್ತನೆಯ ಕಾಲದಲ್ಲಿ ಈ ಸಮುದಾಯ ತಮ್ಮ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

(ಟಿ.ಎಚ್.)


ಬೈ

ಬೈಗುಳಗಳು: ಕೋಪಗೊಂಡಾಗ ಅದಕ್ಕೆ ಕಾರಣವಾದವರನ್ನು ನಿಂದಿಸಲು ದೂಷಿಸಲು ಬಳಸುವ ಪದಗಳು. ಬಯ್ಗುಳಗಳಿಗಾಗಿ ಉಪಯೋಗಿಸುವ ಶಬ್ದಗಳು ನಮ್ಮ ಸಂಸ್ಕೃತಿಯ ಒಂದು ಮುಖವನ್ನು ತೋರಿಸುತ್ತವೆ. ನಾಲಗೆ ಕುಲವನ್ನು ನಿರ್ಧರಿಸುತ್ತದೆ ಎನ್ನುವ ಮಾತು ಮನೆ ಮಾತಾಗಿದೆ. ಹೀಗಿದ್ದರೂ ಬೈಗುಳ ಶಬ್ದಗಳನ್ನು ಕಿವಿಯ ಮೇಲೆ ಹಾಕಿಕೊಳ್ಳದ ಮಡಿವಂತರು ಸಾಕಷ್ಟಿದ್ದಾರೆ. ಬೈಗುಳಗಳನ್ನು ಸಂಗ್ರಹಿಸಿ ಪ್ರಕಟಿಸಿದವರು ಒಬ್ಬಿಬ್ಬರು ಇದ್ದರೆ ಇವುಗಳನ್ನು ಅಮೂಲಾಗ್ರವಾಗಿ ವಿಮರ್ಶೆ ಮಾಡಿದವರು ಕಡಿಮೆ ಒಬ್ಬಿಬ್ಬರು ಇದ್ದರೆ ಹೆಚ್ಚು. ಕನ್ನಡ ಜನಪದರ ಪ್ರಯೋಗದಲ್ಲಿದ್ದ ಬೈಗುಳಗಳ ಭಾಷೆ, ರಚನೆ ಹಾಗೂ ಆಶಯ ಮನೋಭಾವಗಳ ಬಗೆಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ.


ಬಯ್ಗುಳಗಳ ಭಾಷಾಮೂಲ: ಕನ್ನಡ ನಾಡಿನಲ್ಲಿ ಪ್ರಚಲಿತವಿರುವ ಬೈಗುಳಗಳು ಕೇವಲ ಕನ್ನಡ ಭಾಷೆಯವಲ್ಲ. ವಿವಿಧ ಭಾಷೆಗಳಿಂದ ಬಂದಂಥವೂ ಅಲ್ಲಿ ಸೇರಿಕೊಂಡಿವೆ. ದೇಸೀಯ ಬೈಗುಳಗಳು ಸಾಕಷ್ಟು ಸಂಖ್ಯೆಯಲ್ಲಿದ್ದರೂ ಅನ್ಯಭಾಷಾ ಬೈಗುಳಗಳನ್ನು ನಮ್ಮವರು ಸ್ವಾಗತಿಸಿದ್ದಾರೆ. ಉರ್ದು, ಫಾರಸಿ, ಹಿಂದೀ ಮೂಲದ ಬೈಗುಳಗಳೇ ಹೆಚ್ಚು. ಇಂಗ್ಲಿಷ ಹಾಗೂ ಸಂಸ್ಕೃತ ಭಾಷೆಗಳಿಂದ ಅನಾಮತ್ತಾಗಿ ಎತ್ತಿಕೊಂಡ ಬೈಗುಳಗಳೂ ಸಾಕಷ್ಟಿವೆ. ಹೀಗಿರುವುದಕ್ಕೆ ಮೂಲ ಕಾರಣ ಭಾಷೆ ಭಾಷೆಗಳ ಸಂಪರ್ಕ. ಒಂದು ಭಾಷೆ ಇನ್ನೊಂದರ ಮೇಲೆ ಎಷ್ಟೆಷ್ಟು ಪ್ರಭಾವ ಬೀರಿದೆ ಎನ್ನುವುದನ್ನು ಇದರಿಂದ ಅರಿಯಬಹುದು. ಈ ಭಾಷಾಮೂಲ ಆಯಾ ಬೈಗುಳಗಳ ತವರನ್ನೂ ಸೂಚಿಸುತ್ತದೆ. ಕೆಲ **ಉದಾ:**

- ಹಿಂದಿಯಿಂದ – ಸುವ್ವರ್ , ಪರದೇಶಿ, ನಾಮರ್ದ ಇತ್ಯಾದಿ.
- ಉರ್ದು – ಫಾರಸಿಯಿಂದ ಮಾದರಚೋದ, ಬಾಂಚೋದ, ಹಲಾಲ್‌ಖೋರ ಇತ್ಯಾದಿ.
- ಇಂಗ್ಲಿಷಿನಿಂದ ಈಡಿಯಟ್, ರಾಸ್ಕಲ್, ಫೂಲ್, ಡಾಂಕಿ ಇತ್ಯಾದಿ.
- ಸಂಸ್ಕೃತದಿಂದ ಕುಲಕಂಟಕ, ಕುಲಪಾತಕ, ಗಾರ್ದಭ ಇತ್ಯಾದಿ.
- ಶುದ್ಧ ಕನ್ನಡದಿಂದ ಕತ್ತೆ, ಮನೆಹಾಳಾಗ, ತಾಯಿಗಂಡ, ಹರಕ ಇತ್ಯಾದಿ.

ಒಂದು ಭಾಷೆಯ ಶಬ್ದಗಳು ಬೇರೊಂದು ಭಾಷೆಗೆ ಹೋಗಿ, ಅನಂತರ ಮತ್ತೊಂದು ಭಾಷೆಗೆ ಬಂದ ಉದಾಹರಣೆಗಳು ಭಾಷಾಶಾಸ್ತ್ರದಲ್ಲಿ ಅಪರೂಪವೇನಲ್ಲ. ಈ ಮಾತು ಬೈಗುಳ ಶಬ್ದಗಳಿಗೂ ಸರಿಯಾಗಿ ಅನ್ವಯಿಸುವುದು. ಉರ್ದು, ಫಾರಸಿ, ಅರಬ್ಬೀ ಭಾಷೆಯ ಕೆಲವು ಬೈಗುಳಗಳು ಮೊದಲು ಹಿಂದೀ ಭಾಷೆಗೆ ಸೇರಿ, ಅನಂತರ ಕನ್ನಡಕ್ಕೆ ಬಂದಿರುವುದೂ ಉಂಟು. ಈ ದೀರ್ಘಪ್ರಯಾಣದಲ್ಲಿ ಅವು ಬದಲಾವಣೆ ಹೊಂದುವುದು



ಸಾರುವ ಅಯ್ಯ



ಮುಳ್ಳಾವಿಗೆ ಅಯ್ಯ

ಸಾಧ್ಯವಿದೆ. ಬೇರೆಬೇರೆ ಭಾಷೆಗಳ ಸಂಕರದಿಂದ ಉತ್ಪತ್ತಿಯಾದ ಬೈಗುಳಗಳೂ ಇವೆ– ಕಳ್ಳ ಸುವರ್, ನಮಕ್ ಹರಾಂ ಇತ್ಯಾದಿ.

ರಚನೆ: ಚಿದಾನಂದ ಮೂರ್ತಿಯವರು ಬೈಗುಳಗಳನ್ನು ಸರಳ ಮತ್ತು ಸಂಕೀರ್ಣ–ಎಂದು ಎರಡು ವಿಧವಾಗಿ ವಿಂಗಡಿಸಿದ್ದಾರೆ. ಆದರೆ ವರ್ಗೀಕರಣದಲ್ಲಿ ಹೆಚ್ಚಿನ ಸ್ಪಷ್ಟತೆ ಕಂಡುಬರುವುದಿಲ್ಲ. ಬೈಗುಳಗಳ ರಚನೆಯನ್ನು ಸೂಚಿಸುವದಕ್ಕಾಗಿ ಅವನ್ನು ಮೂರು ವಿಧವಾಗಿ ವಿಂಗಡಿಸಬಹುದೆಂದು ಭಾವಿಸಿದ್ದೇನೆ.

1. ಮೂಲ (Original) 2. ಜನ್ಯ (Derived) 3. ಸಂಯುಕ್ತ (Compound)

1. ಮೂಲ ಬೈಗುಳಗಳು: ಒಂದೇ ಘಟಕ ಹೊಂದಿದ ದೂಷಣೆಯ ಆಶಯವನ್ನು ಪಡೆದ ಬೈಗುಳಗಳನ್ನು ಮೂಲ ಬೈಗುಳಗಳೆಂದು ಕರೆಯಬಹುದು. ಇವು ತಮ್ಮ ಮೂಲ ರೂಪದಲ್ಲಿಯೇ ಇರುತ್ತವೆ. ಕತ್ತೆ, ನಾಯಿ, ಸುವರ್, ಕಳ್ಳ ಮೊದಲಾದುವು ಇದಕ್ಕೆ ಉದಾಹರಣೆಗಳು. ಆದರೆ ಇವು ಒಂದೇ ಚಿಕ್ಕ ಶಬ್ದವನ್ನು ಒಳಗೊಂಡಿರಬೇಕೆಂಬ ನಿಯಮವಿಲ್ಲ. ಒಂದಕ್ಕಿಂತ ಹೆಚ್ಚು ಶಬ್ದಗಳನ್ನು ಒಳಗೊಂಡ ಒಂದು ಶಬ್ದ ಸಮುಚ್ಚಯವೂ ಆಗಿರಬಹುದು. ಆದರೆ ಅದರ ದೂಷಣೆಯ ಆಶಯ ಮಾತ್ರ ಒಂದೇ ಆಗಿರುವುದು. ಉದಾಹರಣೆಗೆ ಕತ್ತೆಮಗನೆ, ಹೆಸರುಗಳ್ಳ ಮುಂತಾದವುಗಳನ್ನು ಹೇಳಬಹುದು. ಈ ಆಧಾರದ ಮೇಲೆ ಮೂಲ ಬೈಗುಳನ್ನು ಪುನಃ ಹ್ರಸ್ವ, ದೀರ್ಘ ಎಂದು ಎರಡು ಗುಂಪು ಮಾಡಬಹುದಾಗಿದೆ.

1. **ಹ್ರಸ್ವಮೂಲ ಬೈಗುಳ:** ಕತ್ತೆ, ನಾಯಿ, ನಿನ ತಲೆ– ಇತ್ಯಾದಿ.

2. **ದೀರ್ಘಮೂಲ ಬೈಗುಳ:** ನಿನ್ಹೆಂಡತಿ ಮುಂಡ್ಯಾಗ, ನಿನ್'ಮನೆ ಹಾಳಾಗ, ನಿನ್'ತಲೆಬೋಳಿಸ್ತು– ಇವೇ ಮೊದಲಾದುವನ್ನು ಉದಾಹರಣೆಗಾಗಿ ಹೇಳಬಹುದು. ಕೆಲವು ಮೂಲ ಬೈಗುಳಗಳು ಅಪೂರ್ಣ ಶಬ್ದಗಳಾಗಿದ್ದರೂ ಪೂರ್ಣಾರ್ಥ ಅದರಲ್ಲಿ ಹುದುಗಿರುವದನ್ನು ಕಾಣುತ್ತೇವೆ. **ಉದಾ:** ನಿನ್ನಪ್ಪನ್ನ.......ನಿನ್ನವ್ವನ್ನ........ಬೋಸಡಿಕೇನ......ಇವು ಪೂರ್ಣ ಬೈಗುಳವಾಗಲು ಬೇಕಾದ ಶೇಷಶಬ್ದಗಳು ಅಧ್ಯಾಹಾರವಾಗಿರುತ್ತವೆ. ಶೇಷ ಭಾಗವು ಅಶ್ಲೀಲವೆಂದು ಅಧ್ಯಾಹಾರ ಮಾಡಿರುವರೋ ಏನೋ ತಿಳಿಯದು.

2. ಜನ್ಯ ಬೈಗುಳಗಳು: ಇವು ಮೂಲ ಬೈಗುಳಗಳೊಂದಿಗೆ ಇತರ ಶಬ್ದಗಳನ್ನು ಸೇರಿಸಿದಾಗ ಹುಟ್ಟುತ್ತವೆ. ಇಲ್ಲಿ ಸೇರ್ಪಡೆಯಾಗುವ ಶಬ್ದಗಳು ತಮ್ಮಷ್ಟಕ್ಕೆ ತಾವೇ ಸ್ವತಂತ್ರ ಬೈಗುಳಗಳಾಗಿರುವುದಿಲ್ಲ. ಉದಾಹರಣೆಗೆ ಮೂಲ ಬೈಗುಳಗಳಾದ ಕತ್ತೆ, ನಾಯಿ ಮುಂತಾದ ಬೈಗುಳಗಳಿಗೆ 'ಮುಂಡೇದು' ಶಬ್ದವನ್ನು ಸೇರಿಸಿದಾಗ ಉಂಟಾಗುವ ಜನ್ಯಬೈಗುಳೆಂದು ಕರೆಯಲಾಗುವುದು. ಹೀಗೆಯೇ ಮೂಲದ ಬೈಗುಳಕ್ಕೆ ಮುಂದೆ 'ಮಗನೇ' ಎಂಬ ಶಬ್ದ ಸೇರಿಸಿದಾಗ ಜನ್ಯಬೈಗುಳದ ಜನನವಾಗುವದುಂಟು. ಮೂಲ ಬೈಗುಳದ ಮುಂದೆ ಶಬ್ದ ಸೇರಿಸಿದರೆ ಅಪರಾಂಶ (Suffix) ಎನ್ನುವುದುಂಟು; ಹಿಂದೆ ಸೇರಿಸಿದರೆ ಪೂರ್ವಾಂಶ (Prefix) ಎನ್ನಬಹುದು. ಜನ್ಯಬೈಗುಳಗಳಲ್ಲಿ ಅಪರಾಂಶವನ್ನು ಹೊಂದಿರುವ ಬೈಗುಳಗಳೆ ಹೆಚ್ಚು. ಮೂಲ ಬೈಗುಳ ಪ್ರಕೃತಿಯಾದರೆ ಮುಂದೆ ಇಲ್ಲವೆ ಹಿಂದೆ ಬರುವ ಶಬ್ದಗಳನ್ನು ಪ್ರತ್ಯಯವೆಂದು ಕರೆಯಬಹುದು. ಈ ನಿಯಮಕ್ಕೆ ಅಪವಾದಗಳು ಹೆಚ್ಚಾಗಿ ಇರುತ್ತದೆ.

3. ಸಂಯುಕ್ತ ಬೈಗುಳಗಳು: ಎರಡು ಇಲ್ಲವೆ ಎರಡಕ್ಕಿಂತ ಹೆಚ್ಚಾಗಿ ಮೂಲ/ಜನ್ಯ ಬೈಗುಳಗಳು ಕೂಡಿಕೊಂಡ ಬೈಗುಳ ಸಮೂಹಕ್ಕೆ ಸಂಯುಕ್ತ ಬೈಗುಳೆಂದು ಹೆಸರು. **ಅವು ಎರಡು ತೆರ:**

1. **ಕೇವಲ ಮೂಲಬೈಗುಳ ಸಮೂಹ:** ಉದಾ– ಕಳ್ಳ+ಭಡವೆ, ಹೊಲಸ ನನ ಮಗ ಇತ್ಯಾದಿ.

2. **ಮೂಲ ಮತ್ತು ಜನ್ಯಬೈಗುಳ ಸಮೂಹ:** ಉದಾ– ನಾಯಿ+ಮುಂಡೆ ಮಗ, ಹಲ್ಕಾ+ರಂಡೆಗಂಡ ಇತ್ಯಾದಿ.

ಬೈಗುಳಗಳ ಆಶಯಗಳು: ಬೈಗುಳಗಳಲ್ಲಿನ ಮುಖ್ಯ ಆಶಯಗಳಲ್ಲಿ ವ್ಯಭಿಚಾರ ಹಾಗೂ ಅದರ ಬಗೆಗಿನ ತಿರಸ್ಕಾರಗಳು, ವಿಶ್ವಾಸದ್ರೋಹ, ಸೋಮಾರಿತನ, ದಡ್ಡತನ, ಕಳ್ಳತನ ಇವುಗಳ ಬಗೆಗಿರುವ ಅಸಹನೆ ಹಾಗೂ ತೀವ್ರ ಹೊಟ್ಟೆಕಿಚ್ಚು ಸೇರಿಕೊಂಡಿವೆ. ಲೈಂಗಿಕ ವ್ಯಭಿಚಾರವೆ ಬಹುಪಾಲು ಬೈಗುಳಗಳ ಮುಖ್ಯ ಆಶಯವೆನ್ನಬಹುದು. ಚಿದಾನಂಮೂರ್ತಿಯವರು ತಮ್ಮ 'ಬೈಗುಳಗಳು' ಲೇಖನದಲ್ಲಿ ಈ ವಿಷಯವನ್ನು ಸಕಾರಣವಾಗಿ ವಿವರಿಸಿದ್ದಾರೆ.

ಬೈಗುಳಗಳ ಸಂಗ್ರಹ ಕಾರ್ಯ ಬೆಳೆಯುತ್ತ ಹೋದಂತೆ ಅಭ್ಯಾಸಕ್ಕೆ ಅನುಕೂಲತೆ ಆಗುತ್ತದೆ. ಆ ಶಬ್ದಗಳು ದೊರೆತ ಪ್ರದೇಶದ ಜನತೆಯ ಮನೋಭೂಮಿಕೆಯನ್ನು ಪರಿಪೂರ್ಣ ಆಗಿ ಅರಿಯಲು ಅನುಕೂಲವಾಗುವದು. ಆ ಜನತೆಯ ಸಂಸ್ಕಾರವನ್ನೂ ಸಂಸ್ಕೃತಿಯನ್ನೂ ಅರಿಯಲು ಸಾಧ್ಯವಾಗುವದು. ಬೈಗುಳಗಳನ್ನು ಆಡುವವರ ಧ್ವನಿಯಲ್ಲಿ ಇರುವ ಕಾಕು, ಧ್ವನಿ ಮುಖ್ಯವಾದವು. ಬೈಗುಳ ಶಬ್ದಗಳನ್ನು ಸಂಗ್ರಹಿಸುವದರ ಜೊತೆಗೆ ಬಯ್ಯುವವನ ಧ್ವನಿವ್ಯತ್ಯಾಸವನ್ನೂ ಗುರುತುಹಾಕಿಕೊಳ್ಳ ಬೇಕಾದುದು ಅಗತ್ಯ. ಧ್ವನಿಯ ಧಾಟಿಯನ್ನು ಅವಲಂಬಿಸಿ ಆಡಿದ ಸಾದಾ ಮಾತು ಬೈಗಳ ಆಗುವದುಂಟು; ಬೈಗುಳ ಪ್ರೀತಿಯ ದ್ಯೋತಕವಾಗಿಯೂ ಹೊಂದಿಕೊಳ್ಳಲು ಸಾಧ್ಯ. ಒಟ್ಟಿನಲ್ಲಿ, ಬೈಗುಳ ಶಬ್ದಗಳ ಸಂಗ್ರಹ, ಅರ್ಥವಿವರಣೆ, ಅವುಗಳ ಪರಿಣಾಮ ಸರಿಯಾಗಿ ಆಗಬೇಕಾದರೆ ಇದ್ದುದೆಲ್ಲ ಅಚ್ಚಾಗಬೇಕು. ಇಂತಹ ಸಂಗ್ರಹಕಾರನಿಗೆ ಕೆಚ್ಚೂ ಇರಬೇಕು. ಆ ಕಾಲ ಬರುವದನ್ನು ಕಾಯಬೇಕಾಗಿದೆ.

(ಕೆ.ಜ.)

ಮಂಟಪವಿತ್ತೆಂಬುದಕ್ಕೆ ಕುರುಹುಗಳಿವೆ. ರಂಗಮಹಲಿನ ದಕ್ಷಿಣ ದಿಕ್ಕಿನಲ್ಲಿ ಭವ್ಯವಾದ ಸಭಾ ಭವನವಿದ್ದು, ಪ್ರತಿ ಆಸನದ ಹಿಂಬದಿಯಲ್ಲಿ ಕಮಾನುಗಳಿವೆ.

ಕೋಟೆಗೆ ಒಟ್ಟು ಏಳು ಬುರುಜುಗಳಿವೆ. ಪ್ರತಿ ಬುರುಜಿನ ಮೇಲೆ ತೋಪುಗಳನ್ನಿಡಲು ವ್ಯವಸ್ಥೆ ಮಾಡಲಾಗಿದೆ. ಮಧ್ಯದ ಬುರುಜು ಗಗನಚುಂಬಿಯಾಗಿದೆ. ನಾಲ್ಕೈದು ಜನರು ಕುಳಿತುಕೊಳ್ಳಬಹುದಾದಷ್ಟು ಸಿಂಹಾಸನ ಮಾದರಿಯ ಈ ಬುರುಜು ಆಕರ್ಷಕವಾಗಿದೆ. ಈ ಬುರುಜಿನ ವಿಶೇಷತೆ ಇರುವುದು ಒಂದು ಕಿಲೋಮೀಟರ್ ದೂರದಲ್ಲಿರುವ ಅಗಸಿ ಹನುಮಾನ್ ದೇವರ ವಿಗ್ರಹ, ದೇವಾಲಯದಲ್ಲಿರುವ ನಂದಾದೀಪವನ್ನು ನೇರವಾಗಿ ಕಾಣುವಲ್ಲಿ 25x 25 ಅಡಿಗಳ ವಿಸ್ತೀರ್ಣದ ಏಳು ಕೊತ್ತಲುಗಳಿಗೂ ಹಲವಾರು ತೆನೆಗಳಿವೆ. ಪ್ರತಿ ಕೊತ್ತಲುಗಳ ಮೇಲೆ ತೋಫುಗಳನ್ನಿಡಲು, ಸೈನಿಕರು ಪ್ರತಿದಾಳಿಕಾರರಿಂದ ರಕ್ಷಣೆ ಪಡೆಯಲು ಅನುಕೂಲವಾಗುವಂತೆ, ಮದ್ದುಗುಂಡುಗಳನ್ನು ಸಂಗ್ರಹಿಸಿಡಲು ವ್ಯವಸ್ಥೆ ಮಾಡಲಾಗಿದೆ. ತೋಫು, ಮದ್ದುಗುಂಡುಗಳ ಸಾಗಾಣಿಕೆಗಾಗಿ ಕೊತ್ತಲುಗಳ ಒಳ ಆವರಣದಲ್ಲಿ ಕೈಗಾಡಿ, ಬಂಡಿಗಳ ಸುಗಮ ಸಂಚಾರಕ್ಕಾಗಿ ಸಾಕಷ್ಟು ಸ್ಥಳವಕಾಶವಿದೆ.

ಪ್ರಾಚೀನ ಸ್ಮಾರಕಗಳು: ಗ್ರಾಮದ ಮಧ್ಯದಲ್ಲಿರುವ ಹನುಮಾನ್ ದೇವಾಲಯದ ಬಳಿ 10ನೆಯ ಶತಮಾನದಷ್ಟು ಪ್ರಾಚೀನವಾದ ಎರಡು ಮಾಸ್ತಿಕಲ್ಲುಗಳಿವೆ. ಮರಾಠ ಸಾಮಂತರಸ ರಾಜ ರಾಮಚಂದ್ರ ಜಾಧವನ ಪತ್ನಿ ಭಾಗೀರಥಿ ಹಾಗೂ ರಣಭೂಮಿಯಲ್ಲಿ ಆತ್ಮ ಸಮರ್ಪಣೆ ಮಾಡಿದ ಸೈನಿಕರ ಅರ್ಧಾಂಗಿಯರು ಸತಿ ಸಹಗಮನ ಮಾಡಿದವರ ನೆನಪಿಗಾಗಿ ನಿರ್ಮಿಸಲಾದ ಸತಿಭಾವಿ, ಸತಿ ದೇವಾಲಯಗಳು ಭಾತಂಬ್ರಾದಿಂದ ಎರಡು ಕಿಲೋಮೀಟರ್ ಅಂತರದಲ್ಲಿವೆ. ಪ್ರಾಚೀನನತೆಯ ಕುರುಹುಗಳಾಗಿರುವ ಇವುಗಳನ್ನು ಭಾಲ್ಕಿ ಲಾತೂರ್ ರಸ್ತೆಯ ಪಕ್ಕದಲ್ಲಿಯೇ ಕಾಣಬಹುದಾಗಿದೆ. ವಿಶಿಷ್ಟ ಸಾಂಸ್ಕೃತಿಕ ಅಸ್ತಿತ್ವವನ್ನು ಹೊಂದಿರುವ ಸತಿ ದೇವಾಲಯ, ಸತಿ ಬಾವಿಗಳಿಂದ ಬತ್ತಲೆಯ ಬಯಲಿನಲ್ಲಿ ತನ್ನ ಅವಶೇಷಗಳನ್ನು ಕಳಚಿಕೊಳ್ಳುತ್ತಾ ನಿಂತಿವೆ. ನಮ್ಮಿಂದ ಜೀಣೋದ್ಧಾರವನ್ನು ಬಯಸುತ್ತಿವೆ.

ದೇವಾಲಯಗಳು: ಅಗಸಿ ಹನುಮಾನ್ ದೇವಾಲಯವನ್ನು ರಾಮಚಂದ್ರಸೇನ ಜಾಧವನು ತನ್ನ ಗುರು ಅಣ್ಣಾಜಿ ಪಂಥನ ಸ್ಮರಣಾರ್ಥವಾಗಿ ಕಟ್ಟಿಸಿದ್ದಾನೆಂದು ನಂಬಲಾಗುತ್ತಿದೆ. ದೇವಾಲಯದ ಪೂಜೆಗೆ 32 ಎಕರೆ ಭೂಮಿಯನ್ನು ಉಂಬಳಿ ಬಿಟ್ಟಿರುವ, ಪೂಜಾರಿಗಳ ವಸತಿಗಾಗಿ ಮನೆ ನಿರ್ಮಿಸಿರುವ ಐತಿಹ್ಯಗಳಿವೆ. ಈ ಕೋಟೆಯ ವೈಶಿಷ್ಟ್ಯವೆಂದರೆ ಕೋಟೆಯ ಬುರುಜಿನ ಮೇಲಿನಿಂದ ನೋಡಿದಾಗ ದೇವಾಲಯದೊಳಗಿನ ಹನುಮಾನನ ಮುಖ, ನಂದಾದೀವಿಗೆ ಗೋಚರಿಸುತ್ತದೆ. ಅರಸ ಬುರುಜಿನ ಮೇಲಿನಿಂದಲೇ ನಿತ್ಯವೂ ನಮಿಸುತ್ತಿದ್ದನಂತೆ! ಕೋಟೆಯ ದಕ್ಷಿಣ ಭಾಗದಲ್ಲಿ ಮಹಾದೇವ ಮಂದಿರ, ರಾಮ ಮಂದಿರಗಳಿವೆ. ಪುರಾತನ ಕಲಾವಂತಿಕೆಯನ್ನು ಪ್ರತಿಬಿಂಬಿಸುವ ಶ್ರೀ ವೀರಭದ್ರೇಶ್ವರ ದೇವಾಲಯವು ನೋಡಲು ಆಕರ್ಷಕ ವಾಗಿದೆ. ವೀರಭದ್ರೇಶ್ವರ ವಿಗ್ರಹ, ಕುಳಿತ ಭಂಗಿಯ ನಂದಿಯ ಮೂರ್ತಿ, ಆಳೆತ್ತರದ ಗಜಲಕ್ಷ್ಮಿಯ ಭಿತ್ತಿಶಿಲ್ಪ ಇಲ್ಲಿಯ ವಿಶೇಷ ಕಲಾಕೃತಿಗಳಾಗಿವೆ.

ಕೋಲಾಟದ ಪ್ರದರ್ಶನ ನೀಡುವಲ್ಲಿ ಗ್ರಾಮದ ಕಲಾವಿದರು ಬೀದರ ಜಿಲ್ಲೆಯಲ್ಲೇ ಪ್ರಸಿದ್ಧಿ ಪಡೆದಿದ್ದಾರೆ. ನಾಲ್ಕೈದು ಹವ್ಯಾಸಿ ಕಲಾ ಮೇಳಗಳಿದ್ದು, ಪರ ಊರಿನ ಭಜನಾ ಮಂಡಳಿಗಳೊಂದಿಗೆ ಸ್ಪರ್ಧೆಗಿಳಿದು, ಕಲೆಯನ್ನು ಪ್ರದರ್ಶಿಸಿ ಸೌಹಾರ್ದತೆಯನ್ನು ಮೆರೆಯುವ ಜಾಯಮಾನ ಇಲ್ಲಿಯವರ ನರನಾಡಿಗಳಲ್ಲಿ ರಕ್ತಗತವಾಗಿದೆ. ಜಾತ್ರೆ, ಉತ್ಸವಗಳಲ್ಲಿ ಹವ್ಯಾಸಿ ಪುರವಂತರು ಭಾಗವಹಿಸಿ ಮೆರವಣಿಗೆಗೆ ರಂಗೇರುವಂತೆ ಮಾಡುತ್ತಾರೆ. ಪ್ರತಿವರ್ಷ ವೀರಭದ್ರೇಶ್ವರ ಜಾತ್ರಾ ಮಹೋತ್ಸವದಲ್ಲಿ ಹವ್ಯಾಸಿ ನಾಟಕ ಕಲಾವಿದರು ತಪ್ಪದೆ ನಾಟಕವೊಂದನ್ನು ಪ್ರದರ್ಶಿಸುತ್ತಾರೆ. ಜೊತೆಗೆ ಜಾನಪದಗೀತೆ, ಕಥೆ, ಸವಾಲ್–ಜವಾಬ್, ಭುಲಾಯಿ, ಕಲ್ಗಿ ತುರಾಯಿ ಹಾಡು ಹೇಳುವಲ್ಲಿ ಅತ್ಯಂತ ನಿಷ್ಣಾತರು. ವೃತ್ತಿ ಕಲಾವಿದರಾದ ವಿಠಲರಾವ, ಗುಣವಂತರಾವ ರಾಮಚಂದ್ರರಾವ ಗೋಂಧುಳಿಯವರು ಗೋಂಧುಳ್ ಹಾಕುವಲ್ಲಿ ಪ್ರಸಿದ್ಧರಾಗಿದ್ದರು.

ಗ್ರಾಮ ಮಧ್ಯದಲ್ಲಿ ವಿರಕ್ತಮಠವಿದೆ. ಪ್ರಸ್ತುತ ಪೀಠಾಧಿಪತಿಗಳಾದ ಮ.ನಿ.ಪ್ರ. ಶ್ರೀ ಶಿವಯೋಗೀಶ್ವರಮಹಾ ಸ್ವಾಮಿಗಳು ಕಾಲ್ನಡಿಗೆಯಲ್ಲಿ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ಮುಂತಾದ ಕಡೆಗಳಲ್ಲಿ ಸಂಚಾರ ಕೈಕೊಂಡು ಜನಮನದ ಕತ್ತಲೆ ಕಳೆಯುವಲ್ಲಿ ಯಶಸ್ವಿಯಾಗಿದ್ದಾರೆ. *(ಆರ್.ಐ.)*



ಭಾಸ್ಕರ ಟಿ.ಎಂ.: ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವ ಡಾ. ಭಾಸ್ಕರ್ ತಿಪ್ಪಣ್ಣ ಅವರು ಮೂಲತಃ ಗುಲಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ವ್ಹಿ.ಕೆ. ಸಲಗರ ಗ್ರಾಮದವರು. ದಿ. 04.01.1963 ರಂದು ತಂದೆ ಮರೆಪ್ಪ ತಾಯಿ ಮರೆಮ್ಮ ಇವರ ಉದರದಲ್ಲಿ ಜನಿಸಿದ್ದಾರೆ.

ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ಅವರು ತಮ್ಮ ಸ್ವ ಗ್ರಾಮದಲ್ಲಿಯೇ ಮುಗಿಸಿ ಮುಂದೆ ಕಾಲೇಜು ಶಿಕ್ಷಣವನ್ನು ಗುಲಬರ್ಗಾ ಸರಕಾರಿ ಪದವಿ ಮಹಾವಿದ್ಯಾಲಯದಲ್ಲಿ ಪೂರೈಸಿದ್ದಾರೆ. 1987ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ದಿಂದ ಎಂ.ಎ. ಕನ್ನಡ ಪದವಿ ಯನ್ನು ಪಡೆದರು. 1989ರಲ್ಲಿ ಎಂ.ಫಿಲ್ ಪದವಿಯನ್ನು ಮೊದಲ ರ್‍ಯಾಂಕ್‌ನ ಜೊತೆಗೆ ಚಿನ್ನದ ಪದಕದೊಂದಿಗೆ ಪಡೆದುಕೊಂಡರು. ಬೀದರ ಜಿಲ್ಲೆಯ ದಲಿತರ ಸಂಪ್ರದಾಯ ಆಚರಣೆಗಳೆಂಬ ಎಂ.ಫಿಲ್ ಪ್ರಬಂಧವನ್ನು ಹಾಗೂ ಸುಡಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಪಿಎಚ್.ಡಿ. ಪದವಿಯನ್ನು 1995ರಲ್ಲಿ ಪಡೆದುಕೊಂಡಿದ್ದಾರೆ.

ಮೂಲತಃ ಗ್ರಾಮೀಣ ಪ್ರದೇಶದಿಂದ ಬಂದವರಾದ ಇವರು ಜನಪದ ಸಾಹಿತ್ಯದಲ್ಲಿ ತುಂಬ ಆಸಕ್ತಿಯನ್ನಿಟ್ಟುಕೊಂಡವರು.

ಭಾ

ಭಾತಂಬ್ರಾ: ಪುರಾತನ ಕಾಲದಿಂದಲೂ 'ಮಾವಿನಹಣ್ಣಿನ ಗಣಿ' ಎಂದು ಪ್ರಖ್ಯಾತಿ ಪಡೆದ ಗ್ರಾಮ. ಗತಕಾಲದ ಆಳರಸರಿಗೆ, ಮಂತ್ರಿಗಳಿಗೆ, ಆಸ್ಥಾನ ಪಂಡಿತರಿಗೆ, ಅಧಿಕಾರಿಗಳಿಗೆ ಗೌರವ ರೂಪದಲ್ಲಿ ರಸಭರಿತ ಮಾವಿನಹಣ್ಣುಗಳನ್ನು ಈ ಗ್ರಾಮದಿಂದಲೇ ಕಳುಹಿಸಲಾಗುತ್ತಿತ್ತಂತೆ!

ಈ ನೆಲ ಕಲ್ಯಾಣ ಚಾಳುಕ್ಯರ, ಬರೀದಶಾಹಿಗಳ, ಬಿಜಾಪುರ ಸುಲ್ತಾನರ, ಮರಾಠರ, ಮತ್ತು ನಿಜಾಮರ ಆಳ್ವಿಕೆಗೆ ಒಳಪಟ್ಟಿತ್ತು. ಚಾಳುಕ್ಯರ ಕಾಲದಲ್ಲಿ ಈ ಭಾಗದ ಜನ ಸೈನ್ಯದಲ್ಲಿ ಸೇರಿ ನಾಡಿನ ರಕ್ಷಣೆ, ಸ್ವಾಭಿಮಾನದ ಪ್ರತಿಷ್ಠೆ ಬೆಳೆಸಿಕೊಳ್ಳುವಲ್ಲಿ ಮಹತ್ವದ ಪಾತ್ರವಹಿಸಿದ್ದರಂತೆ! ರಾಜ್ಯಾಡಳಿತದ ಅಧಿಕಾರಿಗಳು ಬದಲಾದಂತೆ ಈ ಗ್ರಾಮದ ನಾಮಾವೇಶಗಳು ಬದಲಾಗಿವೆ. ಸ್ಥಳೀಯ ಅಶಿಕ್ಷಿತ ಕನ್ನಡ ಭಾಷಿಕರು ಇದನ್ನು ಮೌಖಿಕ ಪರಂಪರೆಯ ಮೇರೆಗೆ 'ಭತ್ತಮುರಗಿ' ಎಂದು ಉಚ್ಚರಿಸುತ್ತಾರೆ. ಮೋರಿಗೆಯ ಸಂಸ್ಕೃತ ಮೂಲ ಮಯೂರಿಕಾ. ಅಂದರೆ ನವಿಲುಗಳನ್ನು ಹೊಂದಿರುವ ಭೂದೇವಿ ಎಂದರ್ಥ. ಇದು ಪ್ರಾಕೃತಿಕ ಅಂಶವನ್ನು ಎತ್ತಿ ಹಿಡಿಯುತ್ತದೆ. ಸೌಲಭ್ಯಾಕಾಂಕ್ಷೆ ಹಾಗೂ ಅನ್ಯ ಭಾಷೆಗಳ ಪ್ರಭಾವದಿಂದ ಭಟ್ಟ ಮಯೂರಿಕಾ > ಭಟ್ಟ ಮೋರಿಗೆ > ಭತ್ತ ಮುರಗಿ > ಭಾಟುಂಬ್ರಾ (ಅಟ್ಲಾಸ್‌ನಲ್ಲಿದ್ದಂತೆ) > ಭಾತಮರಾ > ಪ್ರಸ್ತುತದಲ್ಲಿ ಭಾತಂಬ್ರಾ ಎಂದಾಗಿದೆ. ಇಲ್ಲಿಗೆ ಸಮೀಪದ 'ಭಟ್ಟ ಸಾಂಗವಿ > ಭಾಟಸಂಗವಿ' ಯಲ್ಲಿ ಪ್ರಾಚೀನ ಕಾಲದಲ್ಲಿ ಬ್ರಾಹ್ಮಣರ ವೇದಾಧ್ಯಯನ ಕೇಂದ್ರವಿತ್ತು. ಅದರಿಂದ ಎರವಲು ಪಡೆದಿರುವ ಪೂರ್ವಾರ್ಧ ಸ್ಥಳನಾಮವೇ ಭಟ್ಟ > ಭತ್ತ; ಉತ್ತರರ್ಧವೇ ಮೋರಿಗೆ > ಮುರಗಿ.

ಇಲ್ಲಿನ ಕೋಟೆ ನಿರ್ಮಾಣದ ಬಗ್ಗೆ ಖಚಿತವಾದ ದಾಖಲೆಗಳು ಸಿಗದಿದ್ದರೂ 12ನೆಯ ಶತಮಾನದ ಪೂರ್ವದಲ್ಲೇ ಭಾತಂಬ್ರಾದಲ್ಲಿ ಕೋಟೆ ಇತ್ತೆಂಬುದರ ಬಗ್ಗೆ ಉಲ್ಲೇಖವಿದೆ. ಚಾಳುಕ್ಯ 6ನೆಯ ವಿಕ್ರಮಾದಿತ್ಯನ ಕಾಲದ ಗೋರ್ಟಾದ ದಿಣ್ಣೆ ಕುಂಬೇಶ್ವರ ಹಾಗೂ ರುದ್ರೇಶ್ವರ ದೇವರ ದತ್ತಿ ಶಾಸನದ ಕಾಲ ಡಿಸೆಂಬರ್ 24.1112ರ ಸೋಮವಾರದಂದು "ಭಟ್ಟ ಮೋರಿಗೆಯ ದಂಡನಾಯಕಂ ಸಾವಾಸಿ ಪೊಮ್ಮಯ್ಯ ಮತ್ತವನ ಪೆರ್ಗಡೆ ಸಾವಾಸಿ ಮಾಣಿಕ ಭಟ್ಟನುಂ ಮತ್ತು ಸೇನಬೋವ ಗಂಗರಸನಿದ್ದು ರುದ್ರೇಶ್ವರ ಗಂಧಾಕ್ಷತೆಗೆ......." ಎಂದು ಹೇಳಲಾಗಿದೆ.

1711ರಲ್ಲಿ ಪೇಶ್ವೆ ಬಾಲಾಜಿ ವಿಶ್ವನಾಥ ಮತ್ತು ಮರಾಠ ಸರದಾರ ಚಂದ್ರಸೇನ ಜಾಧವನ ನಡುವೆ ವೈಮನಸ್ಸು ಉಂಟಾಯಿತು. ಅದರ ಲಾಭವನ್ನು ಪಡೆಯಲು ನಿಜಾಮರು ನಿರ್ಧರಿಸಿ ಮೊಗಲ ರಾಜನಾದ ಬಹಾದೂರ ಶಾಹನ ಪ್ರತಿನಿಧಿ ಹಾಗೂ ಔರಂಗಾಬಾದನ ಸುಬೇದಾರನ ನವಾಬನಾಗಿದ್ದ ದಾವೂದ್ ಖಾನ್ ಪನ್ನಿ ಮುಖಾಂತರ ಚಂದ್ರಸೇನ ಜಾಧವನನ್ನು 1714ರಲ್ಲಿ ಭಾಲ್ಕಿಯ ಸಾಮಂತನಾಗಿ ನೇಮಿಸಲಾಗುತ್ತದೆ. ಈ ನಡುವೆ ನಿಜಾಮನು ಮರಾಠಿಗರಿಗೆ ಕೊಡುತ್ತಿದ್ದ ಚೌತ್ ಮತ್ತು ಸರದೇಶಮುಖಿ ತೆರಿಗೆಯನ್ನು ಕೊಡುವ ಬದಲು ಕೆಲವು ಪ್ರದೇಶಗಳನ್ನು ಬಿಟ್ಟು ಕೊಟ್ಟನು. ಇದರಿಂದ ಈ ಭಾಗದಲ್ಲಿ ಮರಾಠರ ಪ್ರಾಬಲ್ಯ ಹೆಚ್ಚಾಯಿತು.

ಚಂದ್ರಸೇನ ಜಾಧವನ ಆಳ್ವಿಕೆಯಲ್ಲಿ ಪ್ರಸ್ತುತ ಸ್ಥಿತಿಯಲ್ಲಿರುವ ಕೋಟೆಯನ್ನು ಪುನರ್‌ನಿರ್ಮಾಣ ಮಾಡಲಾಗಿದೆ. ಎಂದು; ಅದರ ಕಾಲಾವಧಿ 1714 ರಿಂದ 1724 ಎಂದು ಗುರುತಿಸಲಾಗುತ್ತಿದೆ. ರಂಗಮಹಲಿನ ಪ್ರವೇಶ ದ್ವಾರದ ಮೇಲ್ಭಾಗದ ಲಲಾಟ ಬಿಂದು, ಮತ್ತೆರಡು ಕಡೆಗಳಲ್ಲಿರುವ ಚಂದ್ರನ ಉಬ್ಬು ಶಿಲ್ಪವೇ ಈ ಕೋಟೆಯ ನಿರ್ಮಾತೃ ಚಂದ್ರಸೇನ ಎಂದು ಹೇಳಲು ಮತ್ತೊಂದು ಆಧಾರವಾಗಿದೆ. ಚಂದ್ರಸೇನ ಜಾಧವನ ಮಗ ರಾಮಚಂದ್ರ ಜಾಧವನು ಕೆಲವು ವರ್ಷಗಳ ಕಾಲ ಈ ಭಾಗದಲ್ಲಿ ಆಳ್ವಿಕೆಯನ್ನು ಮುಂದುವರೆಸಿದಂತೆ ಕಾಣುತ್ತದೆ.

ನಿಜಾಮನ ಸೈನ್ಯಾಧಿಕಾರಿಗಳು ರಾಮಚಂದ್ರಸೇನ ಜಾಧವನನ್ನು ಕರಕನಳ್ಳಿ ಘಟ್ಟಕ್ಕೆ ನಂಬಿಸಿ ಕರೆದೊಯ್ದು ಕೊಲೆ ಮಾಡಿದ ಮೇಲೆ ಈ ಕೋಟೆ ನಿಜಾಮನ ವಶವಾಯಿತು. 1724 ರಲ್ಲಿ ನಿಜಾಮ ಅರಸರು ಈ ಕೋಟೆಗೊಬ್ಬ ಅಧಿಕಾರಿಯನ್ನು ನೇಮಿಸಿದ್ದರು. ಆತನನ್ನು ನಮ್ಮ ಹಿರಿಯ ತಲೆಮಾರಿನವರು ಕೋಟೆಯಲ್ಲಿ ಕಂಡಿದ್ದೇವೆ ಎಂದು ಹೇಳುತ್ತಾರೆ.

ಎಂಟು ಎಕರೆ ಭೂ ಪ್ರದೇಶದಲ್ಲಿ ಕರಿಕಲ್ಲಿನಿಂದ ಕಟ್ಟಲಾದ ಈ ಭದ್ರವಾದ ಕೋಟೆ ಚೌಕಾಕಾರದ ಮಾದರಿಯಲ್ಲಿದೆ. ಇದು ಆಳವಾದ ಒಂದು ಸುತ್ತಿನ ಕಂದಕ, ಭವ್ಯವಾದ ಪ್ರವೇಶ ದ್ವಾರ, ವಿಶಾಲವಾದ ಪ್ರಾಂಗಣ, ಜಳಜ ಹಾಗೂ ಹಲವಾರು ಅಂತರ್‌ಗೋಪುರಗಳನ್ನು ಹೊಂದಿದೆ. ಸುಮಾರು 150 ಅಡಿಗಳಷ್ಟು ಎತ್ತರವಾಗಿದೆ. ಭದ್ರತೆಯ ದೃಷ್ಟಿಯಿಂದ ಈ ಕೋಟೆಯನ್ನು ಬಹಳಷ್ಟು ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಕೋಟೆಯ ಪ್ರಾಂಗಣದ ಕೆಳಗಡೆ ಸಾವಿರಾರು ಜನರು ನಿಲ್ಲಬಹುದಾದ ತಳಮಾಳಿಗೆ ಇದೆ.

ಕೋಟೆ ಪ್ರಮುಖ ಆಕರ್ಷಣೆ ರಂಗಮಹಲ್. ಇದನ್ನು ರಾಜ ರಾಣಿಯರ ರಂಗಮಂಚವೆಂದು ಕರೆಯುತ್ತಾರೆ. ರಂಗಮಹಲಿನ ಒಳಗೋಡೆ, ಗೂಡುಗಳಿಗೆ ವಿವಿಧ ಬಣ್ಣಗಳನ್ನು ಉಪಯೋಗಿಸಿ, ಅಲಂಕಾರಿಕವಾಗಿ, ಶೃಂಗಾರಮಯವಾಗಿ, ಪ್ರಮಾಣಬದ್ಧವಾಗಿ ವಿವಿಧ ವಿನ್ಯಾಸಗಳಲ್ಲಿ ಸುಳುವು, ಎಲೆ, ಹೂಗಳನ್ನು ಚಿತ್ರಿಸಲಾಗಿದೆ. ಇವು ನೋಡುಗರ ಕಣ್ಮನ ಸೆಳೆಯುತ್ತವೆ. ರಂಗಮಹಲಿನ ನಾಲ್ಕು ಕಡೆಗಳಲ್ಲಿ ವೀಕ್ಷಕ ದ್ವಾರಗಳಿದ್ದು, ರಂಗಮಹಲಿಗೆ ಸಾಗಮನಿ ಕಟ್ಟಿಗೆ, ಗಾರೆಸುಣ್ಣದಿಂದ ಮಾಳಿಗೆ ಹಾಕಲಾಗಿತ್ತು. ಆದರೆ ಎರಡು ದಶಕಗಳ ಹಿಂದೆ ದುಷ್ಕರ್ಮಿಗಳು ಬೆಂಕಿ ಇಟ್ಟು, ಮಾಳಿಗೆ ಸುಟ್ಟಿದ್ದು ತುಂಬಾ ದುರ್ದೈವದ ಸಂಗತಿಯಾಗಿದೆ. ಕೋಟೆಯ ಒಳಾಂಗಣದಲ್ಲಿ ಕಲ್ಯಾಣ

ಭ

ಭಂಕೂರು: ಐತಿಹಾಸಿಕ ಪುಣ್ಯ ಕ್ಷೇತ್ರ. ಗುಲಬರ್ಗಾ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಪ್ರಸಿದ್ಧ ಜಾತ್ರೆಗಳಲ್ಲಿ ಇಲ್ಲಿನ ತಾಯಿ ಕೇರೆಮ್ಮ ಜಾತ್ರೆ ಒಂದಾಗಿದೆ. ಇದು ಹಿಂದೆ ಬಮೂಕುರು ಎಂದು ಕರೆಯಲ್ಪಡುತ್ತಿತ್ತು. ಹಾಗೂ ಬೆಂಕಿ ಉಂಡ ಊರು ಭಂಕೂರು ಎನ್ನುತ್ತಾರೆ. ರಾಷ್ಟ್ರಕೂಟರ ಕಾಲದಲ್ಲಿ ಇದೊಂದು ಪಾಳೆಗಾರಿಕೆ ಹೊಂದಿತ್ತು. ಇಲ್ಲಿ ಒಂದು ಪ್ರಾಚೀನ ವೀರಗಲ್ಲು ಇದೆ. 1108ರ ಶಾಸನವಿಲ್ಲಿ ದೊರಕಿದೆ. ರಾಮಲಿಂಗೇಶ್ವರ, ಅಂಕಲಮ್ಮ ದೇವರ ಗುಡಿಗಳಿದ್ದು, ನೆಲ ಮಟ್ಟದಿಂದ ಸುಮಾರು ಮೂರು ಅಡಿ ತಗ್ಗಿನಲ್ಲಿ ದಕ್ಷಿಣಭಿಮುಖವಾಗಿ ಸುಂದರವಾದ ತ್ರಿಕೂಟ ಬಸದಿಯಿದೆ. ಇದಕ್ಕೆ 'ಬಸ್ತಿ ಗುಡಿ' ಎಂದು ಹೇಳುತ್ತಾರೆ. ಈ ಪ್ರಾಚೀನ ಜೈನ ಬಸದಿಯಲ್ಲಿ ಚೌವೀಸ್ ತೀರ್ಥಂಕರ ಹಾಗೂ ನಿಷಧಿ ಶಿಲ್ಪಗಳಿವೆ.

ಭಂಕೂರಿನಿಂದ ಶಹಾಬಾದಿಗೆ ಹೋಗುವ ಹಳೇ ದಾರಿಯಲ್ಲಿ 12 ಅಡಿ ಎತ್ತರವಿರುವ ಏಕಶಿಲಾ ಗಣಪತಿ ವಿಗ್ರಹ ಇದೆ. ಭಂಕೂರಿನ ಹೊರ ಭಾಗದ ಸಣ್ಣೂರ ರಸ್ತೆಯಲ್ಲಿ ಉದ್ಭವ ಗಣಪತಿ ಮೂರ್ತಿಗಳಿವೆ. ಇಂತಹ ಗ್ರಾಮದ ಅಧಿದೇವತೆಯಾಗಿ ಕಂಗೊಳಿಸುತ್ತಿರುವ ತಾಯಿಯೇ 'ಕೆರಿಯಮ್ಮ ದೇವಿ' ಈ ಊರಿನ ಸಿರಿದೇವಿ. ತಾಯಿ ತನ್ನ ಎಲ್ಲಾ ಭಕ್ತರ ಸಂಕಷ್ಟಗಳನ್ನು ನಿವಾರಿಸಿ ಭಂಕೂರು ಗ್ರಾಮವನ್ನು ಪುಣ್ಯ ಕ್ಷೇತ್ರವಾಗಿಸಿದ್ದಾಳೆ.

ಸುಪ್ರಸಿದ್ಧವಾದ ಜಾತ್ರೆಗಳಾದ ಸನ್ನತಿ ಚಂದ್ರಾಲಾಂಬೆ, ನಾಗಾಯಿ ಎಲ್ಲಮ್ಮ, ಶಹಾಬಾದನ ರಮಣಾದೇವಿ ಜಾತ್ರೆಯಂತೆ ಭಂಕೂರಿನ ಕೇರಿಯಮ್ಮ ಜಾತ್ರೆ ಕಾರ ಹುಣ್ಣಿಮೆ ಮೂಲ ನಕ್ಷತ್ರದ ದಿನ ಜರುಗುತ್ತದೆ. ಕರಿಯ ಕಡಿಯದವನ ಶಿರ ಕಡಿದರೆಂಬ ಪ್ರತೀತಿಯೂ ಇದೆ.



ಕೇರಿಯಮ್ಮ – ಭಂಕುರ

ತಾಯಿ ಕೇರಿಯಮ್ಮ ಮೂಲ ಆಳಂದ ತಾಲ್ಲೂಕಿನ ಕೆರಿ ಅಂಬಲಗಾ ಗ್ರಾಮದ ಬ್ರಾಹ್ಮಣರ ಮನೆತನದಲ್ಲಿ ಹುಟ್ಟಿದಳು. ಇವಳು ಮುಪ್ಪಿನಲ್ಲಿ ಭಂಕೂರು ಗ್ರಾಮದ ಕಡೆ ನಡೆದುಕೊಂಡು ಬರುವಾಗ ಒಬ್ಬ ಹರಿಜನ ಯುವಕನನ್ನು ಕಂಡು ಭಂಕೂರು ಗ್ರಾಮ ಎಲ್ಲಿದೆ ಅಲ್ಲಿಗೆ ತನ್ನನ್ನು ಕರೆದುಕೊಂಡು ಹೋಗು ಎಂದಾಗ ಆತ ತಾಯಿಯನ್ನು ಹೆಗಲ ಮೇಲೆ ಕೂಡಿಸಿಕೊಂಡು ಊರಿನ ಗುಡ್ಡದ ಕಡೆ ತರುವಾಗ ಇದು ಒಳ್ಳೆಯ ಜಾಗ ತನ್ನನ್ನು ಇಲ್ಲಿಯೇ ಬಿಡುಲು ಹೇಳಿ ತಾಯಿಯು ತಾನು ಬಂದ ವಿಷಯ ಊರಿನ ಮಾಲೀಗೌಡರಿಗೆ ತಿಳಿಸು, ಅಲ್ಲದೇ ನೀನು ಹೋಗುವಾಗ ತಿರುಗಿ ಹಿಂದಕ್ಕೆ ನೋಡಬೇಡಾ, ನೋಡಿದರೆ ತಾನು ಅವನಿಗೆ ಕಾಣಿಸುವುದಿಲ್ಲ ಎಂದಳು. ಚಂಚಲನಾದ ಯುವಕ ತಿರುಗಿ ನೋಡುತ್ತಾನೆ. ತಾಯಿ ಗುಡ್ಡದ ಮೇಲೆ ಕುಳಿತ ಸ್ಥಳದಲ್ಲಿ ಶಿಲಾ ಮೂರ್ತಿಯಾಗುತ್ತಾಳೆ ಆ ಯುವಕನೂ ಶಿಲೆಯಾಗುತ್ತಾನೆ.

ತಾಯಿ ಕೇರಿಯಮ್ಮ ಮುಂದೆ ಮಾಲೀಗೌಡನ ಕನಸಿನಲ್ಲಿ ಬಂದು ಪ್ರತಿ ವರ್ಷದ ಕಾರ ಹುಣ್ಣಿಮೆ ಹಿಂದಿನ ದಿನದಂದು ರಾತ್ರಿ ಮೂಲಾ ನಕ್ಷತ್ರದಲ್ಲಿ ತನ್ನನ್ನು ಅಕ್ಕನಾದ ಕಾಗಿಣಿ (ನದಿ) ಹತ್ತಿರ ಕರೆದುಕೊಂಡು ಹೋಗಿ ಗಂಗಾ ಸ್ನಾನ ಮಾಡಿ ಊರಿನ ಎಲ್ಲಾ ಜಾತಿಯವರು ಒಳಗೊಂಡು 'ಮೀಸಲು ಕರಿ ಜಾತ್ರೆ' ಮಾಡಿದರೆ ಊರಿಗೆ ಯಾವುದೇ ಕಷ್ಟ-ನಷ್ಟ ಬರದಂತೆ ಕಾಪಾಡುತ್ತೇನೆ ಎಂದು ಹೇಳಿ ಮಾಯವಾದಳು. ಅದರಂತೆ ಜಾತ್ರೆ ಪ್ರತಿ ವರ್ಷ ನಡೆಯುತ್ತದೆ.

ಈ ಜಾತ್ರೆಯು ವಿಭಿನ್ನವಾದ ರೀತಿಯಲ್ಲಿ ಆಚರಣೆ ಮಾಡುತ್ತಾರೆ. ಹರಿಜನರು ತಾಯಿ ಕೇರಿಯಮ್ಮನ ಪೂಜಾರಿಗಳು, ಅಕ್ಕಸಾಲಿಗದವರು ದೇವಿಗೆ ಒಡವೆ-ಅಲಂಕಾರ ಮಾಡುವರು, ಬಡಿಗೇರ ಜನಾಂಗದವರು ದೇವಿ ಪೂಜೆಗಾಗಿ ಕಟ್ಟಿಗೆಯಿಂದ ಬಂಡಿಯನ್ನು ಮಾಡುವವರು, ಬ್ರಾಹ್ಮಣರು ಕರಿ ಕಡಿಯುವರು, ಒಕ್ಕಲಿಗರು, ಬಾರಕೊಲು ಹಾಕುವುದು ರೂಢಿ, ಸಾಹುಕಾರ ಜನಾಂಗದವರು ಮೀಸಲು ಕರಿ ತರುವರು, ಕುರುಬರು ಡೊಳ್ಳು ಬಾರಿಸುವರು ಮತ್ತೆ ಹರಕೆಯ ಕುರಿ ತರುವರು, ತಳವಾರದವರು ಕರಿ ಕಡಿಯಲು ಖಗ್ಗ ಮನೆಯಿಂದ ತರುವರು, ಸಮಗಾರರು ದೀವಟಿಗೆ ತರುವರು, ಮಾದಿಗ ಜನಾಂಗದವರು ಹಲಗೆ ಬಡಿಯುವರು ಹೀಗೆ ಊರಿನ ಎಲ್ಲಾ ಜಾತಿ-ಜನಾಂಗದವರು ಕೂಡಿ ಮನೋರಂಜನೆ ಜೊತೆಗೆ ಸಂತೋಷದಿಂದ ಜಾತ್ರೆಯನ್ನು ನೇರವೇರಿಸುವರು.

(ಆರ್.ಸಿ.ಎನ್.)

ಸುಡುಗಾಡು ಸಿದ್ಧರು ಮತ್ತು ಮಹಿಳಾ ಸಂವೇದನೆಗಳನ್ನು ಕುರಿತು ಆಳವಾಗಿ ಸಂಶೋಧನಾಧ್ಯಯನ ಮಾಡಿದ್ದಾರೆ ಹಾಗೂ ಶ್ವಾನಳ್ಳಿ ಹೊನ್ನಪ್ಪ ಮಹಾರಾಜರ ತತ್ವಪದಗಳು, ಮಹಾಗಾಂವ್ ವೀರಾಸಾಬನ ತತ್ವಪದಗಳು, ನಮ್ಮ ಸುತ್ತಿನ ಒಗಟುಗಳು, ಅಲೆಮಾರಿ ಹಾಗೂ ಜಾಗತೀಕರಣ ಎಂಬ ಮಹತ್ವದ ಕೃತಿಗಳನ್ನು ಜಾನಪದ ಲೋಕಕ್ಕೆ ನೀಡಿದ್ದಾರೆ.

ಪ್ರತಿಭಾವಂತರಾದ ಪ್ರೊ. ಟಿ.ಎಂ. ಭಾಸ್ಕರ್ ಅವರು ಜಾನಪದದ ಜೊತೆಗೆ ಕಾವ್ಯ, ನಾಟಕ, ಹಾಗೂ ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸಧ್ಯ ಈಗ ಇವರು ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಮತ್ತು ಕೇಂದ್ರದ ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಹಿಂದೆ ಅವರು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕೆಲಕಾಲ ಪ್ರವಾಚಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

(ಪಿ.ಕೆ.ಕೆ.)

ಭೀ


ಭೀಮವ್ವ ದೊಡ್ಡಬಾಳಪ್ಪ ಕಿಳ್ಳಿಕ್ಯಾತರ: ತೊಗಲುಗೊಂಬೆ ಆಟದ ಕಲಾವಿದೆ. ಒಂದೇ ಕುಟುಂಬದ ಮೂವರು ಕಲಾವಿದರಿಗೆ ಜಾನಪದ ಅಕಾಡೆಮಿ ಗೌರವ ಪ್ರಶಸ್ತಿ ದೊರಕಿರುವುದು ಹೆಮ್ಮೆಯ ಸಂಗತಿ. ಕೊಪ್ಪಳ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಕಿಳ್ಳೇಕ್ಯಾತರ ಕುಟುಂಬಗಳಿದ್ದು, ಉತ್ತಮ ಮಟ್ಟದ ಕಲಾವಿದರಾಗಿದ್ದಾರೆ. ಇವರೆಲ್ಲ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಗೌರವ ಪ್ರಶಸ್ತಿ ಪಡೆದವರಾಗಿದ್ದಾರೆ. ಮೋರನಾಳ ಗ್ರಾಮದ ದೊಡ್ಡಬಾಳಪ್ಪ ಕಿಳ್ಳೇಕ್ಯಾತರರಿಗೆ 1987 ರಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ ನೀಡಿ, 1992 ರಲ್ಲಿ ತೆಹರಾನಿಗೆ ಕರೆದುಕೊಂಡು ಹೋಯಿತು. ಅಲ್ಲಿ ಮೋರನಾಳ ಗ್ರಾಮದ ದೊಡ್ಡಬಾಳಪ್ಪನವರ ಕುಟುಂಬ ತೊಗಲು ಗೊಂಬೆಯ ಪ್ರದರ್ಶನ ನೀಡಿ, ಅಂತರರಾಷ್ಟ್ರೀಯ ಜಾನಪದ ಕಲಾ ಪ್ರೇಮಿಗಳ ಮೆಚ್ಚಿಗೆಗೆ ಪಾತ್ರವಾಯಿತು. ದೊಡ್ಡಬಾಳಪ್ಪನವರಿಗೆ ಶ್ರೀಮತಿ ಭೀಮವ್ವ ಪತ್ನಿ. ಇವರ ಕುಟುಂಬದ ಸದಸ್ಯರೆಲ್ಲ ತೊಗಲುಗೊಂಬೆಯಾಟದ ಪ್ರಖ್ಯಾತ ಕಲಾವಿದರಾಗಿದ್ದಾರೆ. ಹಿರಿಯ ಮಗ ವಿರೂಪಾಕ್ಷಪ್ಪನಿಗೆ 1990 ರಲ್ಲಿ ಅಕಾಡೆಮಿ ಗೌರವ ಪ್ರಶಸ್ತಿ ಬಂದಿದೆ. ಇವರ ಪತ್ನಿ ರೇಣವ್ವ, 2004 ರಿಂದ 2007 ರವರೆಗೆ ಜಾನಪದ ಅಕಾಡೆಮಿ ಸದಸ್ಯರಾಗಿದ್ದರು. 2007 ರಲ್ಲಿ ಶ್ರೀಮತಿ ಭೀಮವ್ವ ದೊಡ್ಡಬಾಳಪ್ಪನವರಿಗೆ ಜಾನಪದ ಅಕಾಡೆಮಿ ಗೌರವ ಪ್ರಶಸ್ತಿ ದೊರಕಿದೆ.

ಇವರ ತವರು ಮನೆ ಕೊಪ್ಪಳ ಜಿಲ್ಲೆ ಹನುಮನ ಹಟ್ಟಿ. ಸಂಜೀವಪ್ಪ ಹಾಗೂ ಹೊಳೆಯಮ್ಮ ಇವರ ಐದನೆಯ ಮಗಳು. ವಂಶ ಪಾರಂಪರ್ಯವಾಗಿ ಬಂದ ತೊಗಲು ಗೊಂಬೆಯಾಟದ ಕಲಾವಿದರಾಗಿದ್ದರು. ಆ ಕಾಲದಲ್ಲಿ ಕುಟುಂಬದವರು ಊರೂರು ಸುತ್ತಿ ಪ್ರದರ್ಶನ ನೀಡುತ್ತಿದ್ದುದರಿಂದ ತಂದೆ-ತಾಯಿ ಸೋದರ-ಸೋದರಿಯರೊಡನೆ ತರಬೇತಿ ಪಡೆದರು. ಸ್ತ್ರೀ ಪಾತ್ರ, ಸೇವಕ, ಸಾರಥಿ ಪಾತ್ರಗಳಿಗೆ ಧ್ವನಿ ನೀಡುತ್ತಿದ್ದರು. ಅಲ್ಲದೆ ಹಿಮ್ಮೇಳದಲ್ಲಿ ಕಂಚಿನ ಕಂಠದಿಂದ ಹಾಡುತ್ತಿದ್ದರು. ಮೋರನಾಳಿನ ದೊಡ್ಡ ಬಾಳಪ್ಪ ಕಿಳ್ಳಿಕ್ಯಾತರನ್ನು ಮದುವೆಯಾದ ಮೇಲೆ ಮತ್ತಷ್ಟು ಆಟದಲ್ಲಿ ಪಳಗಿದರು. ಪತಿ ಬಹುದೊಡ್ಡ ಕಲಾವಿದನಾಗಿದ್ದು, ಬಹಳಷ್ಟು ಕಡೆಗೆ ಪ್ರದರ್ಶನ ನೀಡುತ್ತಿದ್ದ. ಮಕ್ಕಳಿನ್ನೂ ಚಿಕ್ಕವರಿದ್ದು ಭೀಮವ್ವನೇ ಆಟದಲ್ಲಿ ಹೆಚ್ಚು ಭಾಗವಹಿಸುತ್ತಿದ್ದರು. ಅಸ್ತಮಾ ರೋಗಿಯಾಗಿದ್ದ ಗಂಡನಿಗೆ ಸ್ತ್ರೀ ಪುರುಷರ ಮಾತು ಹೇಳುವಾಗ ತಾನೆ ಹೇಳಿ ಆಟ ತುಂಬಿಸುತ್ತಿದ್ದಳು. ಇವರು ಹೆಚ್ಚಾಗಿ ಮಹಾ ಭಾರತದ ದ್ರೋಣಪರ್ವ, ಕರ್ಣಪರ್ವ, ಅರಣ್ಯಪರ್ವ ಹಾಗೂ ವಿರಾಟ ಪರ್ವಗಳನ್ನು ಪ್ರದರ್ಶಿಸುತ್ತಿದ್ದರು. ವಿರಾಟ ಪರ್ವದ ಸುದೇಷ್ಣಿ, ಸೈರೇಂಧ್ರಿ, ಉತ್ತರಿ ಹಾಗೂ ದಾಸಿಯರ ಸಂಭಾಷಣೆ ಹೇಳುವುದರಲ್ಲಿ ನಿಸ್ಸೀಮಳಾಗಿದ್ದಾರೆ. ವಿರಾಟ ಪರ್ವದ ಉತ್ತರೆ ಉತ್ತರ ಕುಮಾರರಾಗಿ ನೀಡುತ್ತಿದ್ದ ಹಾಸ್ಯ, ಭೀಮ-ದ್ರೌಪದಿ, ಕೀಚಕ-ಸೈರೇಂಧ್ರಿ ಪ್ರಸಂಗಗಳಲ್ಲಿ ದಂಪತಿಗಳಿಬ್ಬರು ಮಿಂಚುತ್ತಿದ್ದರು. 1985 ರಲ್ಲಿ ರಾಯಚೂರಲ್ಲಿ ನಡೆದ ಜಾನಪದ ಸಮಾವೇಶ, ಅಲ್ಲಿ ಕಾಶಿ ಹರಿದಾಸ ಭಟ್ಟರು ಇವರ ಪ್ರದರ್ಶನ ಕಂಡು ಮೆಚ್ಚಿ ಗದಗದಲ್ಲಿ ಪ್ರದರ್ಶನ ಕೊಡಿಸಿದರು. ಉಡುಪಿಯ ಜಾನಪದ ರಂಗಕಲೆಗಳ ಕೇಂದ್ರ (ಆರ್‌ಆರ್‌ಸಿ) ಕ್ಕೆ ಬರಮಾಡಿ-ಕೊಂಡು ಆಡಿಯೋ ವೀಡಿಯೋ ಚಿತ್ರೀಕರಣ ಮಾಡಿ-ಕೊಂಡಿದ್ದಾರೆ.

(ಎಚ್.ಎಸ್.ಪಿ.)



ಸುರಪುರ ಕೋಟೆ



ತಿಂಥಿಣಿ ಮೌನೇಶ್ವರ ಜಾತ್ರೆ, (ಯಾದಗೀರ)

ಭೂ

ಭೂತೇರ ಹಾಡುಗಳು: ಕನ್ನಡ ಜಾನಪದದ ಒಂದು ವೃತ್ತಿಗಾಯಕ ಸಂಪ್ರದಾಯ. ಕರ್ನಾಟಕದ ಯಾವುದೇ ವೃತ್ತಿಗಾಯಕರು ತಮ್ಮ ಪ್ರಧಾನ ಕಾವ್ಯದೊಡನೆ ಇತರ ಕೆಲವು ಕಾವ್ಯಗಳನ್ನೂ ಹಾಡುವುದು ವಾಡಿಕೆ. ಆದರೆ ವೃತ್ತಿಗಾಯಕರ ಈ ಬಗೆಯ ಜಾಯಮಾನದಿಂದ ಭೂತೇರು ಭಿನ್ನವಾಗಿ ನಿಲ್ಲುತ್ತಾರೆ. ಯಾಕೆಂದರೆ ಇವರು ಎಲ್ಲಮ್ಮನನ್ನು ಕುರಿತು ಹಾಡುವುದೇ ಪ್ರಧಾನ ಮತ್ತು ಏಕೈಕ ಕಾವ್ಯ. ಇತರ ಗಾಯಕರಲ್ಲಿ ದೊರೆಯುವಷ್ಟು ದೀರ್ಘವೂ ಅಲ್ಲದ 'ಸಾಮಾನ್ಯ'ವೂ ಅಲ್ಲದ ಕಾವ್ಯ ಇವರದು. ಎಲ್ಲಮ್ಮನ ಹುಟ್ಟಿನ ಪವಾಡವಾಗಲಿ, ಅವಳ ಪ್ರಧಾನ ಪವಾಡವೆನ್ನಿಸಿಕೊಳ್ಳುವ ಓರಂಗಲ್ಲು ದೊರೆಯಾದ ಪ್ರತಾಪರುದ್ರನ ಹಮ್ಮನ್ನೂ ಗಂಡಸುತನವನ್ನೂ ಮುರಿದು ತನ್ನ ಅನುಯಾಯಿಯನ್ನಾಗಿ ಮಾಡಿಕೊಳ್ಳುವುದಾಗಲಿ, ಏಳಮಂದಿ ರಾಕ್ಷಸರನ್ನು ಅತ್ಯಂತ ಜಾಣ್ಮೆಯಿಂದ ಕೊಂದು ಆ ಮೂಲಕ ಸವದತ್ತಿಯ ಬಳಿಯ ಪ್ರಕೃತಿರಮ್ಯವೂ ಕೆಲಮಟ್ಟಿಗೆ ರೌದ್ರವೂ ಆದ ಗುಡ್ಡದಲ್ಲಿ ನೆಲೆಸುವುದಾಗಲಿ, ನಾರದನ ಕುಟಿಲೋಪಾಯದಿಂದ ಕೆರಳಿ ತನ್ನ ಮಹಿಮೆಯಿಂದ ಅವನಿಗೆ ಬುದ್ಧಿ ಕಲಿಸುವುದಾಗಲಿ, ಅಥವಾ ಇನ್ನಿತರ ಮಹಿಮೆಗಳಾಗಲಿ ಪವಾಡಗಳಾಗಲಿ ಭೂತೇರ ಕಾವ್ಯದಲ್ಲಿ ಕಂಡುಬರುವುದಿಲ್ಲ. ಆದರೆ ಭೂತೇರು ಹಾಡು ಎಲ್ಲಮ್ಮ ಕಾವ್ಯ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿರುವುದನ್ನೂ ಅವರ ಇತರ ಬಿಡಿ ಹಾಡುಗಳ ಮಹತ್ವವನ್ನೂ ಅವುಗಳ ಹಿನ್ನೆಲೆಯಲ್ಲಿನ ಉದ್ದೇಶವನ್ನೂ ಇಲ್ಲಿ ನೋಡಬಹುದು.

ಕುಟ್ಟಿಸುವವರ ಮನೆಗೆ ಕುಟ್ಟಲು ಹೋದಾಗ, ಬೀಸಿಸುವವರ ಮನೆಗೆ ಬೀಸಲು ಹೋದಾಗ, ನೀರು ತರಲೆಂದು ಬಾವಿಗೆ ಹೋದಾಗ – ಹೀಗೆ ಅನೇಕ ಸಂದರ್ಭಗಳಲ್ಲಿ ಓರಗೆಯ ನಾರಿಯರಿಂದ ಬಂಜೆ ಎಂಬ ಹೀನಾಯಕ್ಕೊಳಗಾದ ಎಲ್ಲಮ್ಮ ಮಕ್ಕಳ ಫಲಕ್ಕಾಗಿ ತಂದೆ ಶಿವರಾಯನ್ನು ಮೊರೆಹೋಗುತ್ತಾಳೆ. ಶಿವ ಏನು ಕಾರಣ ಹೇಳಿದರೂ ಬಿಡದೆ ಫಲವನ್ನು ಪಡೆಯುತ್ತಾಳೆ. ಅದರ ಪರಿಣಾಮವಾಗಿ ಪರಶುರಾಮ ಹುಟ್ಟುವನು. ತಂದೆಯಿಲ್ಲದೆ ಹುಟ್ಟಿದವನೆಂಬ ಅಪವಾದಕ್ಕೆ ಗುರಿಯಾಗುತ್ತಾನೆ. ತಂದೆ ಯಾರು, ಎಲ್ಲಿದ್ದಾನೆ, ಎಂದು ತಾಯಿಯನ್ನು ಪೀಡಿಸುತ್ತಾನೆ. 'ನಿನ್ನ ತಂದೆಯನ್ನು ಹುಲಿ ನುಂಗಿದೆ ಎಂದು ಹೇಳುತ್ತಾಳೆ ಎಲ್ಲಮ್ಮ, ಘಟ್ಟಕ್ಕೆ ಹೋಗಿ ಹುಲಿಯನ್ನು ಕೊಂದು ತಂದು ರಾಶಿ ಹಾಕಿ, 'ಇದರಲ್ಲಿ ಯಾವ ಹುಲಿ ನನ್ನ ತಂದೆಯನ್ನು ನುಂಗಿದೆ ಹೇಳು' ಎಂದು ಕೇಳುತ್ತಾನೆ. 'ಹುಲಿಯಲ್ಲ, ಹಾವು' ಎನ್ನುತ್ತಾಳೆ ಮಗನ ಹೊಡೆತ ತಾಳಲಾರದೆ. ಮತ್ತೆ ಘಟ್ಟಕ್ಕೆ ಹೋಗಿ ಹಾವುಗಳನ್ನೆಲ್ಲ ಹಿಡಿದು ಗಾಡಿ ತುಂಬಿ ತಂದು 'ಯಾವ ಹಾವು ನನ್ನ ತಂದೆಯನ್ನು ನುಂಗಿರುವುದು?' ಎಂದು ಕೇಳುತ್ತಾನೆ. 'ಹಾವು ನುಂಗಿಲ್ಲ, ಮುದಿಯಾಗಿ ಮಡಿದಿದ್ದಾನೆ' ಎನ್ನುತ್ತಾಳೆ. 'ಹೂಳಿದ ಜಾಗವನ್ನು ತೋರಿಸು' ಎಂದು ಅವನು ಕೇಳಿದಾಗ 'ಕಿಚ್ಚಿಗೆ ಕೊಟ್ಟಿದ್ದೇನೆ' ಎನ್ನುತ್ತಾಳೆ. ಅಷ್ಟಕ್ಕೂ ಅವನು ಬಿಡುವುದಿಲ್ಲ. 'ಆ ಜಾಗವನ್ನೇ ತೋರಿಸು' ಎಂದು ಹಟ ಮಾಡುತ್ತಾನೆ. 'ಗುರುತು ಸಿಗದಂತೆ ಗರಿಕೆ ಬೆಳೆದಿದೆ' ಎನ್ನುತ್ತಾಳೆ. ಎಷ್ಟು ಹೇಳಿದರೂ ತನ್ನ ಮಾತನ್ನು ಕೇಳದ ತಾಯಿಯ ಮೇಲೆ ಅಪಾರ ಸಿಟ್ಟು ಬರುತ್ತದೆ. ಘಟ್ಟದ ಮೇಲಕ್ಕೆ ಎಳೆದುಕೊಂಡು ಹೋಗಿ ತಾಯಿಯನ್ನು ಕೆಡವಿ ಕಡಿದು ಹಾಕಿ ಕಿಚ್ಚುಕೊಡುತ್ತಾನೆ. ಪೀಡೆ ಕಳೆಯಿತು ಎಂದುಕೊಂಡು ಮನೆಗೆ ಹೊರಡುತ್ತಾನೆ. ಮಗ ಹಸಿದು ನೀರಡಿಸಿ ಬರುವುದರೊಳಗೆ ಪಂಚಾಮೃತದ ಅಡುಗೆ ಮಾಡಬೇಕೆಂದು ಎಲ್ಲಮ್ಮ ಬೆಂಕಿಯಿಂದೀಚೆಗೆ ಬಂದು ಮನೆಯ ಹಾದಿ ಹಿಡಿಯುತ್ತಾಳೆ. ಮನೆಗೆ ಬಂದ ಪರಶುರಾಮ ಅಲ್ಲಿ ತಾಯಿಯನ್ನು ಕಂಡು ದಿಗ್ಭ್ರಾಂತನಾಗುತ್ತಾನೆ. 'ನಿನ್ನ ಮಹಿಮೆ ನನಗೆ ತಿಳದಿಲ್ಲ ತಾಯಿ. ನನ್ನನ್ನು ಮಾಫು ಮಾಡು' ಎಂದು ಹೇಳಿ ಪಾದಕ್ಕೆರಗುತ್ತಾನೆ. ಅಲ್ಲಿಂದ ಇಬ್ಬರೂ ಗುಡ್ಡದ ಹಾದಿ ಹಿಡಿಯುತ್ತಾರೆ.

ಇದಿಷ್ಟು ಭೂತೇರು ಹಾಡುವ ಎಲ್ಲಮ್ಮನನ್ನು ಕುರಿತ ಕಾವ್ಯ. ಸಾಮಾನ್ಯವಾಗಿ ಜನಪದ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ವಕ್ತೃಗಳ ಪರಿಸರವೇ ಮೂಡಿಬರುವುದು ವಾಡಿಕೆ. ಭೂತೇರು ಹಾಡಿರುವ ಈ ಎಲ್ಲಮ್ಮ ಕಾವ್ಯವೂ ಅದಕ್ಕೆ ಹೊರತಾಗಿಲ್ಲ. ಬಂಜೆ ಎಂಬ ಶಬ್ದವನ್ನು ಹೊರಲಾರದ ಹೆಣ್ಣಿನ ಬವಣೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ಜನಪದ ಸಾಹಿತ್ಯ ಅಂಥವೇ ಒಂದು ಕೆಲಸವನ್ನು ಇಲ್ಲಿಯೂ ಎಸಗಿದೆ. ಇಲ್ಲಿನ ಚಿತ್ರಣದ ಪರಿಣಾಮ ತೀವ್ರತೆ ಎಲ್ಲಿಯವರೆಗೂ ಚಾಚಬಲ್ಲುದೆಂದರೆ, ತನಗೆ ಫಲಸಂತಾನವನ್ನು ನೀಡದೆ ನುಣುಚಿಕೊಳ್ಳಲು ಯತ್ನಿಸುವ ಶಿವನಿಗೇ 'ಫಲಸಂತಾನವನ್ನು ನಿನ್ನಿಂದಲೇ ಪಡೆಯುತ್ತೇನೆ' ಎಂದು ಸವಾಲು ಹಾಕುವವರೆಗೆ, ತಪೋನಿರತನಾಗಿದ್ದ ಶಿವನ ಹಿಂದೆ ಹೋಗಿ ನಿಂತು. 'ಒಳ್ಳೆಯ ಮಾತಿನಿಂದ ಫಲಸಂತಾನ ಕೊಟ್ಟೆಯೋ ಒಳಿತಾಯ್ತು. ಇಲ್ಲದಿದ್ದರೆ ನಿನ್ನ ಗದ್ದಿಗೆಯನ್ನೂ ಮಾನಾಡ ದೈವಗಳೆಲ್ಲವನ್ನೂ ನುಂಗುತ್ತೇನೆ' ಎಂದು ಹೆದರಿಸುತ್ತಾಳೆ.

ಭಾರತೀಯ ನಾರಿ ತಾಯಿಯಾಗಲು ಹಂಬಲಿಸುವ ಮನಸ್ಥಿತಿಯ ಉತ್ಕಟತೆಯನ್ನು ಉನ್ಮತ್ತತೆಯನ್ನೂ ಇಲ್ಲಿ ಕಾಣಬಹುದು. ತಾಯಿಯಾಗುವ ಬಯಕೆಯ ಇಂಥ ಉತ್ಕಟತೆ ಉನ್ಮತ್ತತೆಗಳ ಹಿಂದೆ ಲೈಂಗಿಕ ತೃಷೆಯ ಅದಮ್ಯ ಆಕಾಂಕ್ಷೆ ಕೆಲಸ ಮಾಡಿರಬಹುದೆ?– ಎಂಬುದು ಆಲೋಚಿಸಬೇಕಾದ ವಿಚಾರ. ಮುಂದೆ ಶಿವ ಬಾಳೆಹಣ್ಣಿನಿಂದ, ಅನಂತರ ಉತ್ತುತ್ತಿ ಹಣ್ಣಿನಿಂದ, ಅವಳ ಉಡಿ ತುಂಬುವಿಕೆ ಈ ದೃಷ್ಟಿಯಿಂದ ಅರ್ಥಪೂರ್ಣ ಆಗುತ್ತದೆ.

ಎಲ್ಲಮ್ಮನ ಆ ಆರ್ಭಟಕ್ಕೆ ಶಿವ ನಿಜಕ್ಕೂ ಹೆದರಿಬಿಡುತ್ತಾನೆ. ಶಿವನ ಗದ್ದಿಗೆ ಥರಥರ ನಡುಗಿಹೋಗುತ್ತದೆ. ಅಲ್ಲಿಂದ ಶಿವ ಅವಳನ್ನು ಬಾಳೆಯ ವನಕ್ಕೆ ಕರೆದುಕೊಂಡು ಹೋಗಿ ಬಾಳೆಹಣ್ಣಿನಿಂದ, ಉತ್ತುತ್ತಿ ವನದಲ್ಲಿ ಉತ್ತುತ್ತಿ ಹಣ್ಣಿನಿಂದ, 'ಮಿತ್ರಿ' ಎಲ್ಲಮ್ಮನ ಉಡಿ ತುಂಬಿ ಫಲಸಂತಾನ ಕೊಟ್ಟು ಕಳಿಸುತ್ತಾನೆ.

ತನ್ನ ಬಹುಪಾಲು ಆಯುಷ್ಯವನ್ನೆಲ್ಲ ಸೂಲಗಿತ್ತಿತನದಲ್ಲೇ

ಕಳೆದ ಸಂಗವ್ವನಿಗೆ, ಎಲ್ಲಮ್ಮನ ಬಾಣಂತನಕ್ಕಾಗಿ ಬಂದಾಗ ಪರಶುರಾಮ ಹೊಟ್ಟೆಯಲ್ಲೆ ಮಾತಾಡುತ್ತಿರುವ ಸೋಜಿಗ ಎದುರಾಗುತ್ತದೆ. ಇದೇನು ದೆವ್ವ ಇರಬಹುದೋ ಏನೋ ಎಂದುಕೊಂಡು ಸಂಗವ್ವನ ಮೇಲೆ ಪರಶುರಾಮನಿಗೆ ಮಹಾ ಸಿಟ್ಟು ಬರುತ್ತದೆ.

ಮುಂದೆ ಪರಶುರಾಮ 'ತಂದೆಯಿಲ್ಲದೆ ಹುಟ್ಟಿದವನು' ಎಂಬ ಅಪವಾದಕ್ಕೆ ಗುರಿಯಾದಾಗ ಎಷ್ಟು ಹಟ ಮಾಡಿದರೂ ತನ್ನ ತಂದೆಯ ರಹಸ್ಯವನ್ನು ತಿಳಿಸದೆಹೋದ ತಾಯಿಯನ್ನು ಕಡಿದುಹಾಕುವ ಪ್ರಸಂಗ ಹಿಂದೆ ಪ್ರಸ್ತಾಪಿಸಲ್ಪಟ್ಟಿದೆ. 'ಪರಶುರಾಮ ತಾಯಿಯನ್ನೇ ಕೊಂದ' ಎಂಬ ಆಶಯವೊಂದು ಮಾತ್ರ ಇಲ್ಲಿ ಸ್ಪಷ್ಟವಾಗಿ ಉಳಿದುಕೊಂಡಿದೆ. ಎಲ್ಲಮ್ಮ ರೇಣುಕೆ ಎಂಬುದಾಗಲಿ ಪರಶುರಾಮನ ತಂದೆ ಜಮದಗ್ನಿ ಎಂಬುದಾಗಲಿ ಈ ಕಾವ್ಯದಲ್ಲಿ ಕಾಣಿಸಿಕೊಂಡಿಲ್ಲ.

ಹೀಗೆ ಭೂತೇರು ತಮಗೆ ಎಷ್ಟು ಅಗತ್ಯವೋ ಅಥವಾ ಎಲ್ಲಮ್ಮನ ಪವಾಡಗಳಲ್ಲಿ ಅತಿ ಎತ್ತರದ್ದು ಎಂದು ತಮಗೆ ಅನ್ನಿಸಿದ ಕಡೆಯೋ ಕಾವ್ಯದ ನಿಲುಗಡೆಯನ್ನು ಕಂಡು ಕೊಂಡಿದ್ದಾರೆ. ತನ್ನನ್ನು ಕೊಂದು ಕಿಚ್ಚುಕೊಟ್ಟರೂ ಬದುಕಿ ಬರುವುದೂ, ಕೊಂದಂಥ ಮಗ ಹಸಿದು ನೀರಡಿಸಿ ಮನೆಗೆ ಬರುತ್ತಾನೆ ಎಂಬ ಕಳಕಳಿಯಿಂದ ಅವನಿಗೆ ಪಂಚಾಮೃತದ ಅಡುಗೆ ಮಾಡಿ ಉಣ್ಣಲಿಕ್ಕುವುದೂ ಇವು ಇಲ್ಲಿ ಎಲ್ಲಮ್ಮನ ಪವಾಡಗಳಲ್ಲಿ ಅತ್ಯುಚ್ಚ ಸ್ತರಗಳಾಗುತ್ತವೆ. ಸಾವೂ ಕೂಡ ತೃಣಸಮಾನವಾಗಿ ಪರಿಣಮಿಸಿದ ಶಕ್ತಿಯಾಗಿ, ವಿಶಾಲ ಹೃದಯದ ತಾಯಿಯಾಗಿ, ಕರುಣಾಮಯಿಯಾಗಿ, ಪ್ರೇಮ ಮಯಿಯಾಗಿ, ಎಲ್ಲಮ್ಮ ಕಾಣಿಸಿಕೊಳ್ಳುವಲ್ಲಿಗೆ ಕಾವ್ಯ ಕೊನೆಗೊಳ್ಳುವುದು ಒಂದು ದೃಷ್ಟಿಯಿಂದ ಅತ್ಯುತ್ತಮ ಕಾವ್ಯಾಂಶ ಎನ್ನಿಸಿದರೂ, ಕಾವ್ಯದೃಷ್ಟಿಯಿಂದ ಪವಾಡದೃಷ್ಟಿಗೆ ಜಿಗಿದು ನೋಡಿದಾಗ, ಎಲ್ಲಮ್ಮನ ಪವಾಡಗಳ ಅತ್ಯಂತ ಸೀಮಿತ ಪ್ರಪಂಚವೊಂದನ್ನು ಕಾಣುತ್ತೇವೆ.

ಭೂತೇರು ಹಾಡುವ ಬಿಡಿ ಗೀತೆಗಳಲ್ಲಿ ಬಹುಪಾಲು ಎಲ್ಲಮ್ಮನ ಮಹಿಮೆಗಳನ್ನೂ ಸಾಹಸಗಳನ್ನೂ ಕಾಣಬಹುದು. ಶಿವನನ್ನು ಎಷ್ಟು ಗೋಗರೆದರೂ ಶಿವ ಫಲಸಂತಾನವನ್ನು ಕೊಡದೆ ಹೋದಾಗ, ಕಡೆಗೆ ಶಿವನನ್ನು ಹೆದರಿಸಿಯಾದರೂ ಫಲವನ್ನು ಪಡೆಯಲು ಎಲ್ಲಮ್ಮ ಹೊರಡುತ್ತಾಳೆ.

ಓರಗಲ್ಲು ದೊರೆಯ ಪ್ರಸಂಗದಲ್ಲಿ ಎಲ್ಲಮ್ಮನೋ ಆಕೆಯ ಭಕ್ತರೋ ಓರಗಲ್ಲನಿಗೆ ಬುದ್ಧಿ ಹೇಳಿರಬಹುದಾದ 'ಮಡದಾನು ರವಣಸೂರ ಹೆಣ್ಣಿಗಾಗಿ' ಎಂಬ ಮಾತಾಗಲಿ. 'ವಾಸುಳ್ಳ ಹುಡುಗಾನ ಮೀಸೆಲ್ಲ ತಗುದಾಳ' 'ಭಾಳ ಮಂದಿಗಿ ಬತ್ತಲೆ ಮಾಡಿದೆ' 'ಒಬ್ಬಾಳಾಡ್ಯಾಳ ಹುಲಿಬ್ಯಾಟಿ' 'ಹಾಕೀದ ಹಗಯ ಮದಲಿಡುವೆ' 'ನಕ್ಕವರ ಹಲ್ಲ ಮುರಸೀದೆ' ಇತ್ಯಾದಿ ಮಾತುಗಳಾಗಲಿ ಎಲ್ಲಮ್ಮನ ಶೌರ್ಯವನ್ನೂ ಪ್ರತಾಪವನ್ನೂ ಮಹಿಮೆಗಳನ್ನೂ ಸಾರುವಂಥವೇ ಆಗಿವೆ. ಭಿಕ್ಷಾಟನೆಯ ಸಮಯದಲ್ಲಿ ಪ್ರತಿ ಮನೆಯ ಮುಂದೆಯೂ ಅಷ್ಟಷ್ಟು ಹಾಡಿ ಹಾಡಿ ನಿಲ್ಲಿಸಬೇಕಾದುದು ಸಹಜ ರೀತಿ, ಎಲ್ಲಮ್ಮನ ಕಥೆಯನ್ನು ನಡುವೆ ನಿಲ್ಲಿಸಿದರೆ ಅಥವಾ ಹರಿದು ಹಂಚಿದಂತೆ ಅವರಿಗಿಷ್ಟು ಇವರಿಗಿಷ್ಟು ಹಂಚಿದರೆ ಹೇಳಿದವರಿಗೂ ಕೇಳಿದವರಿಗೂ ಅಮಂಗಳ ಎಂಬ ನಂಬಿಕೆ ಭೂತೇರಲ್ಲೂ ಎಲ್ಲಮ್ಮನ ಇತರ ಭಕ್ತರಲ್ಲೂ ಇದ್ದಂತೆ ತೋರುತ್ತದೆ. ಈ ನಂಬಿಕೆಯ ಪ್ರತೀಕವೇ ಭೂತೇರು ಹಾಡುವ ಬಿಡಿ ಗೀತೆಗಳು

(ಆರ್.ಜಿ.)

ಭೂಮ: ನವ ದಂಪತಿ ಮುಂದಿನ ಜೀವನದಲ್ಲಿ ಸಿಹಿ ಕಹಿಗಳೆದುರಾದರೂ ಸಮಭಾವದಿಂದ ಸ್ವೀಕರಿಸಬೇಕೆಂದು ಷಡ್ರಸ್ನಾನಗಳನ್ನು ಒಳಗೊಂಡಿರುವ ಊಟ. ಮದುವೆಯ ಮುಖ್ಯ ಪ್ರಕ್ರಿಯೆಗಳೆಲ್ಲ ಮುಗಿದ ಮೇಲೆ ಒಂದೆರಡು ತಾಸುಗಳ ಅನಂತರ ಹೆಣ್ಣಿನವರು ತಾವು ಇಳಿದುಕೊಂಡಿರುವ ಬಿಡಕಿಯ ಮನೆಯಿಂದ ಬಗೆ ಬಗೆಯ ಅಡುಗೆ ಮಾಡಿ ತಂದು ಕೊಡುವರು. ಭೂಮಿಯ ಪೂಜೆಯೇ ಭೂಮವಾಗಿದೆ. ಇದೊಂದು ರೀತಿಯ ಮದುವೆಯ ಶಾಂತಿ ಎಂದೇ ಹೇಳಬಹುದು. ಈವರೆಗೂ ಸಾಂಗವಾಗಿ ಜರುಗಿದ ಮದುವೆಯ ಕೊನೆಗೆ, ಬೀಗರು ಊರ ಹಿರಿಯರು ಒಂದುಗೂಡಿ ಊಟ ಮಾಡುವುದರಿಂದ ಸಾಮರಸ್ಯದ ಜೊತೆಗೆ ನವದಂಪತಿಗಳ ಮುಂದಿನ ಜೀವನ ಸುಖಮಯವಾಗಿ ಸಾಗಲಿ ಎಂದು ಹರಸುವ ಧೋರಣೆ ಇದ್ದಂತಿದೆ.

ಭೂಮಕೊಡುವುದರಲ್ಲೂ ಹಲವಾರು ವಿಧಗಳಿವೆ. ಎರಡೆರಡು ಸಲ ಭೂಮ ಕೊಡುವುದೂ ಉಂಟು. ಶಾಸಿ ಭೂಮ, ಮೆರವಣಿಗೆ ಭೂಮವೆಂದು ಎರಡು ಸಲ ಭೂಮ ಕೊಡುವ ಪದ್ಧತಿಯೂ ಇದೆ. ನೆಲ ಭೂಮ, ಬುಟ್ಟಿ ಭೂಮವೆಂದು ಇನ್ನೊಂದು ರೀತಿಯಾಗಿಯೂ ಕೊಡುವರು. ಬುಟ್ಟಿ ಭೂಮವೆಂದಾಗ ಬುಟ್ಟಿಯಲ್ಲಿ ಹೋಳಿಗೆ, ಹಪ್ಪಳ, ಸಂಡಿಗೆ, ತುಪ್ಪ, ಅನ್ನ ಮೊದಲಾದವುಗಳನ್ನು ಇಟ್ಟುಕೊಂಡು ತರುವರು. ನೆಲ ಭೂಮದಲ್ಲಿ ಮದುವೆ ಮನೆಯ ದೇವರ ಕೋಣೆಯಲ್ಲಿ ಒಂದು ಕಂಬಳಿ ಹಾಸಿ, ಅದರ ಮೇಲೆ ಶುಭ್ರ ವಸ್ತ್ರ ಹರಡಿ, ಹೋಳಿಗೆ, ತುಪ್ಪ, ಹಪ್ಪಳ ಮುಂತಾದವುಗಳನ್ನು ಇಟ್ಟಿರುವರು. ಊರ ಅಥವಾ ಜಾತಿಯ ಪ್ರಮುಖರು, ಬಂಧುಗಳು ಊಟಮಾಡಿದ ಮೇಲೆಯೇ ಉಳಿದವರು ಭೂಮದ ಊಟ ಮಾಡಬೇಕು. ಅಲ್ಲಿಯವರೆಗೆ ಇತರರು ಊಟ ಮಾಡುವಂತಿಲ್ಲ. ಕೆಲವು ಪ್ರದೇಶದಲ್ಲಿ ಅಡುಗೆ ಮಾಡದೆ ಒಣಭತ್ತ ಕೊಡುವ ಸಂಪ್ರದಾಯವಿದೆ. ಚಿಂಚೋಳಿ ತಾಲ್ಲೂಕಿನಲ್ಲಿ ಬುಟ್ಟಿ ಭೂಮವಿದ್ದರೆ ಯಾದಗಿರ ತಾಲ್ಲೂಕಿನಲ್ಲಿ ನೆಲಭೂಮವಿದೆ.

ಭೂಮ ತಂದಿಟ್ಟ ಮೇಲೆ ಪ್ರಮುಖರು, ಹಿರಿಯರು ಊಟಮಾಡುವ ಮೊದಲು ಹಾಡು ಹೇಳುತ್ತಾರೆ. ಅಪ್ಪ, ದೊಡ್ಡಪ್ಪ, ಅವ್ವ, ಅಣ್ಣ, ಎಲ್ಲರೂ ಬರಬೇಕು ಎಂದು ಹಾಡು ಮುಂದುವರೆಯುತ್ತದೆ. ಕಮಲದ ಹೂ, ನಿಂಬಿಕಾಯಿ, ಮದರಾಸ ಮಾವಿನ ಹಣ್ಣ ತರಬೇಕು ಎನ್ನುವರು.

(ವೈ.ಎಸ್.)

ಮ

ಮಟ್ಟೀ ಹಾಡುಗಳು: ತೆರೆದ ಬಾವಿಯಿಂದ ನೀರೆತ್ತುವ ಸಾಧನ 'ಮಟ್ಟಿ'. ಇದನ್ನು ತೊಗಲಿನಿಂದ ಮಾಡಲಾಗಿದ್ದು ಅದು ಒಂದು ಕಡೆ ಅಗಲವಾದ ಹಂಡೆ ಆಕಾರದಲ್ಲಿದ್ದರೆ ಇನ್ನೊಂದು ಕಡೆ, ನೀರು ಹೊರಹೋಗದಂತೆ ಚೀಲದ ಆಕಾರದಲ್ಲಿರುತ್ತದೆ. ಅದರಲ್ಲಿ ಹಂಡೆ ಆಕಾರದ ಬಾಯಿಯು ನೀರು ತುಂಬಿಕೊಂಡೊಡನೆ ಕಡಿಯ ತೆರೆದಬಾಯಿಗಳು ಮೇಲಾಗಿ ನೀರು ಚಲ್ಲಿಹೋಗದಂತೆ ವ್ಯವಸ್ಥೆಗೊಳಿಸಲಾಗಿರುತ್ತದೆ. ಹಂಡೆಯಾಕಾರದ ಬಾಯಿಗೆ ಕಬ್ಬಿಣದ ಕಂಟ ಇರುತ್ತದೆ. ಇದಕ್ಕೆ ಕಟ್ಟುವ ಹಗ್ಗ 'ಮಿಣಿ' ತೀರ ದಪ್ಪವಾಗಿರುತ್ತದೆ. ಮಟ್ಟಿ ಮೇಲೆ ಬಂದಾಗ ನೀರು ಹೊರಹೋಗಲು ಮಾಡಿದ ಚೀಲದಾಕಾರದ ಬಾಯಿಗೆ ಅದಕ್ಕಿಂತಲೂ ಸಣ್ಣಗಾತ್ರದ ಮಿಣಿಯನ್ನು ಕಟ್ಟಿರುತ್ತಾರೆ. ಕೊಂಬರ ಗಾಲಿಯಸಹಾಯದಿಂದ (ಪುಲಿ) ಎತ್ತುಗಳು ಎಳೆದಾಗ ನೀರು ತುಂಬಿ ಮಟ್ಟಿ ಮೇಲೆ ಬಂದು ಸಣ್ಣ ಬಾಯಿಯಿಂದ ನೀರನ್ನು ಬಚ್ಚಲಿಗೆ ಬಿಡುತ್ತದೆ. ಈ ಎರಡೂ ಹಗ್ಗಗಳನ್ನು ನೊಗಕ್ಕೆ ಎತ್ತುಗಳ ಹೆಜ್ಜೆ ತಾಳವಾಗುತ್ತವೆ. ಇದು ಬಹಳ ಎಚ್ಚರವಹಿಸಿ ಮಾಡುವ ಕೆಲಸ, ಒಂದು ರೀತಿಯ ಸರ್ಕಸ್. ಅಘಾತಕ್ಕೆ ಅವಕಾಶ ಬಹಳ. ಅದಕ್ಕಾಗಿಯೇ ಮಟ್ಟಿ ಹೋಡಿವವನ ಹೆಂಡ್ತಿ ಮಧ್ಯಾಣಕ ರಂಡಿ ಎಂಬ ಗಾದೆ ಇದೆ.

ಇದೊಂದು ರೀತಿಯ ಧ್ಯಾನ. ತಲ್ಲೀನತೆ ತಪ್ಪಿದರೆ ಅನಾಹುತ ತಪ್ಪಿದ್ದಲ್ಲ. ಅದಕ್ಕಾಗಿಯೇ ಈ ಹಾಡಿನ ತಲ್ಲೀನತೆ ಅವನಿಗೆ ಬೇಕು. ಸಾಮಾನ್ಯವಾಗಿ ಮರದ ನೆರಳು, ಹಕ್ಕಿಯ ಹಾಡು, ಕಾಲುವೆಯಲ್ಲಿ ಹರಿವ ಮಟ್ಟಿ ನೀರಲ್ಲಿ ಬಟ್ಟೆ ಒಗೆಯಲು ಬಂದ, ಸೀರೆ ಸೊಂಟಕ್ಕೆ ಸುತ್ತಿದ ಚೆಲುವೆಯರು ಅವನಿಗೆ ಒಂದು ರೀತಿಯ ಸ್ಫೂರ್ತಿ ತನ್ಮಯತೆ ತಂದಿರುತ್ತವೆ.

ತ್ರಿಪದಿ ಛಂದದ ಈ ಹಾಡುಗಳಿಗೆ ರಸಿಕತೆ, ಹಾಡುಗಳಿಗೆ ರಸಿಕತೆ ಪಕೃತಿಯ ಚೆಲುವಿನ ಸ್ಪರ್ಶವಿರುತ್ತದೆ. ಭವಗೀತೆಯ ಮಿಂಚು ಈ ಹಾಡುಗಳಲ್ಲಿದೆ. ಆದರೆ ಈ ಹಾಡುಗಳು ಸಂಖ್ಯೆಯಲ್ಲಿ ಕಡಿಮೆ. ಈ ಮಟ್ಟಿ ನೀರ್ಗಾಲುವೆಗಳಿಲ್ಲದ, ಗುಲಬರ್ಗಾ, ಬೀದರ, ಭಾಗದಲ್ಲಿ ಪ್ರಚಲಿತದಲ್ಲಿದೆ.

ಜಾಣ್ಮೆ ಬಿಂಬಿಸುವ ತಂತ್ರಜ್ಞಾನಕ್ಕೊಂದು ಸಾಕ್ಷಿ. ಎಳೆವ ಎತ್ತುಗಳ ದಾರಿ ಸ್ವಲ್ಪ ಇಳಿಜಾರಾಗಿರುತ್ತದೆ. ಮಟ್ಟಿಯ ಎತ್ತುಗಳು ಶಕ್ತಿಯುತವಾಗಿರುತ್ತವೆ. ಅದು ಸಾವಧಾನವಾಗಿ ಮಟ್ಟಿಯ ಭಾರ ಎಳೆಯುತ್ತವೆ ಮಟ್ಟಿಯ ನೀರು ಖಾಲಿ ಆದೊಡನೆ ಎತ್ತುಗಳನ್ನು ಸಾವಕಾಶವಾಗಿ ಹಿಂದೆ ಹಿಂದೆ ಹೆಜ್ಜೆ ಹಾಕಿ ಬಾವಿಯ ಕಡೆಗೆ ಬರಬೇಕಾಗುತ್ತದೆ. ಮಟ್ಟಿ ಹೊಡೆಯುವವ ಮಟ್ಟಿಗ ನೀರು ತುಂಬಲು ಮಿಣಿಯನ್ನು ಮೇಲೆ ಕೆಳಗೆ ಮಾಡುವ ತಂತ್ರಬಲ್ಲವ, ಅದಕ್ಕಾಗಿ ಎಲ್ಲರಿಗೂ ಮಟ್ಟಿ ಹೊಡೆಯಲು ಬರುವುದಿಲ್ಲ, ಆಳು, ಎತ್ತು ಎರಡೂ ಒಂದು ರೀತಿಯ ಕಸರತ್ತನ್ನೇ ಮಾಡ ಬೇಕಾಗುತ್ತದೆ. ಮಟ್ಟಿ ನೀರು ತುಂಬುತ್ತಲೂ ಮಿಣಿಯನ್ನು ಕೆಳಗೆ ಎತ್ತುಗಳಿಗೆ ಎಳೆಯಲು ಸಂಕೇತ ಕೊಡುತ್ತಾನೆ. ತಾನು ಮಿಣಿಯ ಮೇಲೆ ಕೂಡ್ರುವದರಿಂದ ಎತ್ತುಗಳಿಗೆ ಎಳೆಯಲು ಇನ್ನಷ್ಟು ಹಗುರಾಗುತ್ತದೆ.

ತುಂಬಿದ ಮಟ್ಟಿಯ ಭಾರಕ್ಕೆ ಕೊಂಬರ ಗಾಲಿ ಕಿರುಗುಡುತ್ತ ಒಂದು ರೀತಿಯ ಸ್ವರವನ್ನು ಹುಟ್ಟಿಸುತ್ತದೆ. ಅದೇ ಲಯದಲ್ಲಿ ಮಟ್ಟಿ ಹೊಡೆಯುವವ ಒಂದು ರೀತಿಯ ಸ್ವರಾಲಾಪ ಮಾಡುತ್ತಾನೆ. ನೀರು ಬರಿದಾದೊಡನೆ ಎತ್ತುಗಳನ್ನು ಹಿಂದಕ್ಕೆ ಎಳೆಯುತ್ತ, ರಾಗ ಸಹಿತ ಹಾಡು ಹೇಳುತ್ತಾನೆ. ಒಂದು ತ್ರಿಪದಿಯನ್ನು ಎರಡು ಮಟ್ಟಿಯ ಅವಧಿಗೆ ಸಾವಕಾಶ ಹಾಡುತ್ತಾನೆ ಕೊಂಬರಗಾಲಿಯ ಚಿಂವ್ ಗುಡುವಿಕೆ ಅದರಂತೆ ಹಂತಿಯ ಹಾಡುಗಳೂ ಜೋಳ ಬೆಳೆವ ಮೇಲೆ ಉಲ್ಲೇಖಿಸಿದ ಭಾಗಗಳಲ್ಲೇ ರೂಢಿಯಲ್ಲಿವೆ. ಭತ್ತ ಬೆಳೆವ ಕರ್ನಾಟಕದ ಭಾಗದಲ್ಲಿ ಇಲ್ಲವೇ ಇಲ್ಲ.

ಈ ಹಾಡುಗಳನ್ನು ಒಕ್ಕಲಿಗರ ಹಾಡುಗಳೆಂದು ಹೇಳಬಹುದಾಗಿದೆ. ಆದರೆ ಇವು ವೃತ್ತಿಗೆ ಸಂಬಂಧಪಟ್ಟವಾದರೂ ಇವುಗಳನ್ನು ವೃತ್ತಿ ಹಾಡುಗಳೆಂದು ಹೇಳಲಾಗದು ಯಾಕೆಂದರೆ ಇವನ್ನು ಹಾಡುವುದೇ ಒಕ್ಕಲಿಗರ ವೃತ್ತಿಯಲ್ಲ. ಇವುಗಳನ್ನು ಅನ್ಯ ಮನರಂಜನೆಗೆ ಹಾಡುವುದಿಲ್ಲ. ಶ್ರಮ ಮರೆತು ವೃತ್ತಿತಲ್ಲೀನತೆ ಪಡೆಯುವುದೇ ಇವುಗಳ ಉದ್ದೇಶ. ಮಟ್ಟಿಯ ಹಾಡುಗಳನ್ನು ನಿತ್ಯ ಹಾಡುತ್ತಿದ್ದರೂ ಹಾಡುವವ ಏಕಾಕಿ. ಅದು ಸರ್ಕಸ್ ಮಾಡುವವನಿಗೆ ನೆರವಿದ್ದ ಹಾಗೆ ಹಂತಿ ಮತ್ತು ಬಲೋರಿ ಹಾಡುಗಳು ವರ್ಷದಲ್ಲಿ ಒಮ್ಮೆ ಮಾತ್ರ ಹಾಡುವಂಥವು, ಇವುಗಳಲ್ಲಿ ವ್ಯಾಪಕ ಸಂಸ್ಕೃತಿ ಮಡುಗಟ್ಟಿದೆ. *(ಎಂ.ಜಿ.ಬಿ.)*

ಮಠ: ಮೂಲತಃ ಸಂಸ್ಕೃತ ಮೂಲದ ಶಬ್ದ. ಇದರ ಅರ್ಥ ವಾಸಿಸು ಎಂದು. ಶರಣರು ಅನುಭವ ಮಂಟಪವನ್ನು 'ಮಹಾಮಠ' ಎಂದು ಕರೆದಿದ್ದಾರೆ. ವಿದ್ಯಾರ್ಥಿಗಳ ಗುರುಗಳ ವಾಸಸ್ಥಾನ, ವಿದ್ಯಾಕೇಂದ್ರ, ಪವಿತ್ರಸ್ಥಳ ಎಂದು ಅರ್ಥಗಳಿವೆ. ಲಿಂಗಾಯಿತರು ಮಠವೆಂದೂ, ಜೈನರು ಬಸದಿಯೆಂದೂ, ಬೌದ್ಧರು ಚೈತ್ಯಾಲಯವೆಂದೂ, ಕ್ರೈಸ್ತರು ಚರ್ಚುಗಳೆಂದೂ, ಮುಸ್ಲಿಮರು ಮಸೀದಿಗಳೆಂದೂ, ಬ್ರಾಹ್ಮಣರು ಮಠ, ಬ್ರಹ್ಮಪುರಿ, ಅಗ್ರಹಾರ ಮತ್ತು ಘಟಿಕಾಸ್ಥಾನವೆಂದೂ ಕರೆಯುತ್ತಾರೆ. ಮಠ–ಮಾನ್ಯಗಳು ಇಂದು ಶೈಕ್ಷಣಿಕ, ಸಾಮಾಜಿಕ ಕ್ಷೇತ್ರದಲ್ಲಿ ನಿರತವಾಗಿ ಜನತಾ ವಿಶ್ವವಿದ್ಯಾಲಯಗಳಾಗಿವೆ. ಲಿಂಗಾಯತ ಮಠಗಳಲ್ಲಿ ಸಾಲಿಮಠ, ಓದಿಸೋಮಠ, ವಿರಕ್ತಮಠ ಎಂಬ ಪ್ರಕಾರಗಳಿವೆ. ಇಲ್ಲಿ ಬರೆಹದ ಜೊತೆಗೆ ಉಪಜೀವನಕ್ಕಾಗಿ ವೃತ್ತಿನಿರತ ಶಿಕ್ಷಣಗಳೆನಿಸುವ ಕಂಬಳಿ ನೇಯ್ಗೆ, ಕಾಗದ ತಯಾರಿಕೆ, ಕಂಥೆ ಹಿಡಿಸುವುದು ಇತ್ಯಾದಿ ಕಾಯಕಗಳನ್ನು ಕಲಿಸಿಕೊಡಲಾಗುತ್ತಿತ್ತು.

ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಲಿಂಗಾಯತ ಮಠಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಕಲಬುರ್ಗಿ ಶರಣಬಸವೇಶ್ವರ ಮಠ, ಭಾಲ್ಕಿ ಚನ್ನಬಸವೇಶ್ವರರ ಪಟ್ಟದ್ದೇವರಮಠ, ರಟಗಲ್ಲು ವಿರಕ್ತಮಠ, ಹುಲುಸೂರು, ಭಾತಂಬ್ರಾ ಕಲಬುರ್ಗಿಯ ಗುರುಬಸವ ಬೃಹನ್ಮಠ, ಮಾದನಹಿಪ್ಪರಗಾದ ಶಿವಲಿಂಗೇಶ್ವರ ಮಠ, ಜೇವರ್ಗಿಯ ಷಣ್ಮುಖಿಸ್ವಾಮಿಮಠ. ಸುರಪುರದ ನಿಷ್ಠಿ

ಕಡಲಪ್ಪ–ವೀರಪ್ಪನವರು ಕಟ್ಟಿಸಿದ 101 ದಾಸೋಹ ಮಠಗಳು, ಹಾರಕೂಡ ಬೃಹನ್ಮಠ, ಕೊಪ್ಪಳದ ಗವಿಮಠ, ಸಂತೆಕೇಲೂರಿನ ನಾಗಭೂಷಣಮಠ, ಕನಕಗಿರಿಯ ವಿರಕ್ತಮಠ, ಗಂಗಾವತಿಯ ಕಲ್ಮಠಗಳು, ಹೈದ್ರಾಬಾದ್ ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳಾಗಿ ದುಡಿದಿವೆ; ದುಡಿಯುತ್ತಲಿವೆ.

ಹೈದ್ರಾಬಾದ ಕರ್ನಾಟಕದಲ್ಲಿ ಊರಿಗೊಂದು ಓಣಿಗೊಂದು ಮಠಗಳಿವೆ. ಅಲ್ಲಿ ಭಜನೆ, ಸಂಗೀತ, ಸಾಹಿತ್ಯ ಗೋಷ್ಠಿಗಳು ನಡೆಯುತ್ತವೆ. ಇತ್ತೀಚಿಗೆ ಗುಲಬರ್ಗಾ, ರಾಯಚೂರು ಭಾಗಗಳಲ್ಲಿಯ ಜೈನ ಬಂಧುಗಳು ತೀರ್ಥಂಕರ ದೇವಾಲಯ ಗಳನ್ನು ಸ್ಥಾಪಿಸಿದ್ದಾರೆಯೇ ಹೊರತು, ಅವು ಹುಂಚ, ಶ್ರವಣಬೆಳ್ಗೊಳ ಮಠಗಳಂತೆ ಪ್ರಾಚೀನ ಇತಿಹಾಸ ಹೊಂದಿಲ್ಲ. ಇನ್ನು ಬ್ರಾಹ್ಮಣ ಮಠಗಳು ಲಿಂಗಸೂಗೂರು, ರಾಯಚೂರು ಭಾಗಗಳಲ್ಲಿ ಕಂಡುಬರುತ್ತವೆ. ಯಾಕೆಂದರೆ ಹರಿದಾಸ ಪಂಥದ ಕೊನೆಯ ಘಟ್ಟದ ಚಳುವಳಿಯಿಂದ ಈ ಭಾಗದಲ್ಲಿ ವೈದಿಕ ಮಠಗಳು ಸ್ಥಾಪನೆಯಾಗಿವೆ. ಬಹುಸಂಖ್ಯೆಯಲ್ಲಿ ಲಿಂಗಾಯಿತ ಮಠಗಳು ಇರುವುದು ವಿಶೇಷ. ಇದಕ್ಕೆ ಕಾರಣ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಶರಣ ಚಳವಳಿ ಹುಟ್ಟಿದ್ದರ ಪರಿಣಾಮವಿರಬಹುದು.

ಹೈದ್ರಾಬಾದ್ ಕರ್ನಾಟಕ ಭಾಗದ ಮಠಗಳಲ್ಲಿ ಗಡಿಭಾಗದ ಸಮಸ್ಯೆಗಳಾದ ಭಾಷೆ, ಬದುಕು, ಸದಾ ಸವಾಲಾಗಿ ಪರಿಣಮಿಸಿದೆ. ಈ ಸಮಸ್ಯೆಗಳನ್ನು ಸಮರ್ಥವಾಗಿ ನಿಭಾಯಿಸಿದ ಈ ಭಾಗದ ಮಠ–ಮಾನ್ಯಗಳು ಭಾಷಿಕ ಮತ್ತು ಸಾಹಿತ್ಯಿಕ ಸಂಗೋಪನೆ ಮತ್ತು ಸಂವರ್ಧನೆಗೆ ಚರಿತ್ರಾರ್ಹ ಕೆಲಸವನ್ನು ಮಾಡಿದೆ. ಉರ್ದು ಪ್ರಭಾವದ ನಡುವೆ ಕನ್ನಡತನವನ್ನು ಮೆರೆದು ಭಾಲ್ಕಿ ಹಿರೇಮಠದ ಚರಿತ್ರೆ ಸುವರ್ಣಾಕ್ಷರಗಳಿಂದ ಬರೆಯುವುಂಥದು. ದಾಸೋಹಮಠ, ವಿರಕ್ತಮಠ, ಗದ್ದಿಗೆ ಮಠ, ಮುಂತಾದ ಸ್ವರೂಪಗಳಲಲ್ಲಿರುವ ಈ ಭಾಗದ ಮಠಗಳು ಅಧ್ಯಯನಯೋಗ್ಯ ಕೇಂದ್ರಗಳಾಗಿವೆ. ರಾವೂರಿನ ಸಿದ್ದೇಶ್ವರ ಮಠ ಸಂ.ಶಿ. ಭೂಸನೂರುಮಠರು ಸಂಪಾದನೆಯ ಶೂನ್ಯ ಸಂಪಾದನೆಯನ್ನು ಮೊದಲ ಬಾರಿಗೆ ಪ್ರಕಟಿಸಿದ ಕೀರ್ತಿಗೆ ಪಾತ್ರವಾಗಿದೆ. ಇಂಥ ಸಾಹಿತ್ಯಿಕ ಸೇವೆಯ ನೂರಾರು ಉದಾಹರಣೆಗಳನ್ನು ನೋಡಬಹುದು. ಉತ್ತರಕರ್ನಾಟಕದ ಮಠ ಮಾನ್ಯಗಳ ಅಧ್ಯಯನ ಎಂದರೆ ಅದು ಲಿಂಗಾಯತ ಮಠ–ಮಾನ್ಯಗಳ ಅಧ್ಯಯನವಾಗಿದೆ ಎಂಬ ಮಾತು ಹೈದ್ರಾಬಾದ್ ಕರ್ನಾಟಕ ಭಾಗಕ್ಕೂ ಅನ್ವಯಿಸುತ್ತದೆ. *(ಕೆ.ಆರ್.)*

ಮಣೂರು: ಅಫಲಪೂರ ತಾಲ್ಲೂಕಿನ ಐತಿಹಾಸಿಕ ಸ್ಥಳ, ಧಾರ್ಮಿಕ ಕೇಂದ್ರ, ಭೀಮಾ ನದಿ ಎಡದಂಡೆಯ ಮೇಲಿದೆ. ಈ ಊರು ಮಣಿಯೂರು–12' ಎಂದೇ ಉಲ್ಲೇಖಿಸಲ್ಪಟ್ಟಿದೆ. ಮತ್ತು ಅಲಂದೆ–1000ಕ್ಕೆ ಸೇರಿದ ಅಣಂದೂರು 3000 ಕಂಪಣವಾಗಿದ್ದು 12 ಹಳ್ಳಿಗಳಿಗೆ ಆಡಳಿತ ಕೇಂದ್ರವಾಗಿತ್ತು.

ಕ್ರಿ.ಶ. ಸುಮಾರು 1126ರ 'ಮಣೂರ' ಶಾಸನ ತಾಲ್ಲೂಕಿನ ಅತ್ಯಂತ ಪ್ರಾಚೀನ ಶಾಸನ. ಇದು ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿದೆ. ಇದರಲ್ಲಿ 'ಗಂಗಾರಾಸಿಜೀಯ'ರ ಆತ್ಮ ಬಲಿದಾನ, ಧರ್ಮನಿಷ್ಠೆ, ಕೈದು ಶಿವಾಲಯಗಳಿಯಲು ಧರ್ಮದ ಹೆಸರಿನಲ್ಲಿ ಇರಿದುಕೊಂಡು ಸಾಯುವ ಚಿತ್ರವಿದೆ. ಈತನ ಧರ್ಮ ನಿಷ್ಠೆ ಕಂಡು ಆದಿತ್ಯ ನಾಯಕನು ಹಾಗೂ ಮಣಿಯೂರು (ಮಣೂರು) 33 ಮಹಾಜನಗಳು ನೆರೆದು 32 ಮತ್ತರು ಭೂಮಿ ದಾನವಾಗಿತ್ತು. ಈ ಶಾಸನವು ಶಿವಾಲಯಗಳ ಸಂರಕ್ಷಣೆ, ಕಾಳಜಿ ಮನುಷ್ಯನ ಜೀವಕ್ಕಿಂತಲೂ ಮೇಲು ಎಂಬ ಹೆಗ್ಗಳಿಕೆಗೆ ಸಾಕ್ಷಿ ನುಡಿಯುತ್ತದೆ.

ಈ ಗ್ರಾಮದಲ್ಲಿ ಗವಿಸಿದ್ದೇಶ್ವರ, ಕಲ್ಲಾಲಿಂಗೇಶ್ವರ, ಎಲ್ಲಮ್ಮನ ಪ್ರಾಚೀನ ಗುಡಿಗಳಿವೆ. ಹೊಳೆದಂಡೆಯ ಮೇಲೆ ಚೆನ್ನಕೇಶವ ಗುಡಿ ಇದೆ. ಈ ದೇವಾಲಯದ ಗರ್ಭಗುಡಿಯಲ್ಲಿ ಎಂಟು ಅಡಿ ಎತ್ತರವಾದ ದೇವರ ಮೂರ್ತಿಯಿದೆ. ಅಲ್ಲದೆ ಮಾಧ್ವಾಚಾರ್ಯರ 3ನೆಯ ಶಿಷ್ಯ ಮಾಧವತೀರ್ಥರು, ರಘೋತ್ತಮತೀರ್ಥರು ಮತ್ತು ಅವರ ಶಿಷ್ಯಂದಿರ ಕರ್ಮಭೂಮಿ ಈ ಊರಾಗಿತ್ತು. ಮಾಧವತೀರ್ಥರ ಮಾಧವ ತೀರ್ಥ ಸ್ಮೃತಿ ಮತ್ತು ನಾಲ್ಕು ವೇದಗಳ ಟೀಕೆ, ವೇದೇಶತೀರ್ಥರ 'ಛಾಂದೋಗ್ಯ ಭಾಷಾ ಟೀಕಾ' ಮುಂತಾದ ಗ್ರಂಥಗಳು ಇಲ್ಲಿಯೇ ರಚನೆಗೊಂಡಿವೆ. ಜೈನರಿಗೆ ಸಂಬಂಧಿಸಿದ 'ಪದ್ಮಾವತಿಯಕ್ಷಿಯ' ದೇವಾಲಯ ಇದೆ. ಇದರಲ್ಲಿ ಮಹಾವೀರ, ಕಂಚಿನ ಮೂರ್ತಿಗಳು ಕಂಡು ಬರುತ್ತವೆ. ಹೀಗಾಗಿ ಮಣೂರು ಗ್ರಾಮವು ವೈಷ್ಣವ ಮತ್ತು ಜೈನರಿಬ್ಬರ ಸಂಸ್ಕೃತಿ, ಧಾರ್ಮಿಕ ಕ್ಷೇತ್ರಗಳಾಗಿದ್ದಿತ್ತು. *(ಆರ್.ಸಿ.ಎನ್.)*

ಮಣ್ಣೆತ್ತಿನ ಅಮವಾಸ್ಯೆ: ಕೆಸರಿನಿಂದ ತಯಾರಿಸಿದ, ಎತ್ತು, ಆಕಳು, ಹೋರಿ, ಕರು ಹೀಗೆ ವಿವಿಧ ತೆರನಾದ ಜಾನುವಾರು ಗಳನ್ನು ತಯಾರಿಸಿ ಅವುಗಳಿಗೆ ವಿಶೇಷ ಪೂಜೆ, ಕೈಗೊಳ್ಳುವ ವಿಶಿಷ್ಟ ಆಚಣೆ ಮತ್ತು ಸಂಪ್ರದಾಯ.

ಹುತ್ತದ ಮಣ್ಣು, ಗುಡ್ಡದ ಕೆಂಪು ಮಣ್ಣಿನಿಂದ ಕೂಡಿದ ಕೆಸರು ತಂದು ಎತ್ತು ಆಕಳು, ತಯಾರಿಸು ತ್ತಿದ್ದರು. ಕಾಲಮಾನ ಬದಲಾದಂತೆ ಮನೆಯಲ್ಲಿ ತಯಾರಿಸುವುದು ಕಡಿಮೆ ಯಾಗಿ ಅನೇಕರು ಮಾರು ಕಟ್ಟೆಯನ್ನೇ ಅವಲಂಬಿಸಿದ ಪರಿಣಾಮ ಕಲಾವಿದರು ಇವುಗಳನ್ನು ಹೆಚ್ಚು ಹೆಚ್ಚಾಗಿ ತಯಾರಿಸಿ ಜನರಿಗೆ ಪೂರೈಸುವಲ್ಲಿ ತೊಡಗಿ ದ್ದಾರೆ. ಅಮವಾಸ್ಯೆಯಂದು ಬೆಳಗ್ಗೆ ಎತ್ತುಗಳಿಗೆ ಪೂಜೆ ಸಲ್ಲಿಸಿದರೆ, ಸಂಜೆ ಅವುಗಳಿಗೆ ಮಣೆಯ ಮೇಲಿಟ್ಟಿಕೊಂಡು ಮಕ್ಕಳು ಯುವಕರು ಆಕರ್ಷಕ ಮೆರವಣಿಗೆ ಮಾಡುತ್ತಾರೆ.

ಈ ಭಾಗದಲ್ಲಿ ಮಣ್ಣೆತ್ತಿನ ಅಮವಾಸ್ಯೆಯು ವಾರ್ಷಿಕ ಆಚರಣೆ



ಮಣ್ಣೆತ್ತಿನ ಮೂರ್ತಿಗಳು

ಆಗಿದ್ದು, ತನ್ನದೇ ಆದ ಸ್ಥಾನಮಾನವನ್ನು ಪಡೆದುಕೊಂಡಿದ್ದು, ವಿಶಿಷ್ಟ ರೀತಿಯಿಂದ ಆಚರಿಸಲ್ಪಡುತ್ತದೆ. ಮಣ್ಣೆತ್ತಿನ ಅಮವಾಸ್ಯೆಯು ಒಂದು ಆಚರಣೆಯ ಜೊತೆ ಕಲಾತ್ಮಕ ಶೈಲಿಯನ್ನು ಬೆಳೆಸಿಕೊಳ್ಳಲು ಯೋಗ್ಯವಾಗಿದೆ. ವಿವಿಧ ಕರಕುಶಲ ಕಲೆಯ ಬೆಳವಣಿಗೆಗೆ ಇದೊಂದು ಪೂರಕವಾಗಿದೆ.

(ಪಿ.ಕೆ.ಕೆ.)

ಮದುವೆ ಆಚರಣೆಗಳು: ಹಲವು ಜಾತಿ, ಜನಾಂಗ, ಧರ್ಮಗಳಿರುವ ಭಾರತದಲ್ಲಿ ಒಬ್ಬೊಬ್ಬರು ಒಂದೊಂದು ವಿಭಿನ್ನ ಆಚರಣೆಗಳನ್ನು ಅನುಸರಿಸುತ್ತಾರೆ. ಈ ಭಾಗದಲ್ಲಿ ಸಾಮಾನ್ಯವಾಗಿ ಲಿಂಗಾಯತ ಜನಾಂಗ ಮತ್ತು ಅದರ ಪ್ರಭಾವದಲ್ಲಿರುವ ಇತರ ಜಾತಿಯ ಜನಪದರು ಮದುವೆ ಆಚರಣೆಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿ ಮಾಡುತ್ತಾರೆ.

ಹೆಣ್ಣು ನೋಡಿ ನಿಶ್ಚಯಿಸುವುದು, ಕುಂಕುಮ ಹಚ್ಚುವುದು (ಉಡಿ ತುಂಬುವ ಕಾರಣ) ಆನಂತರ ಹಂದರ ಹಾಕುವರು, ಒಳಕಲ್ ಪೂಜೆ ಮಾಡುವರು, ಬೀಗರನ್ನು ಎದುರುಗೊಳ್ಳುವರು, ಎಣ್ಣೆ ಹಚ್ಚುವರು, ಹಾಲುಗಂಬ ತರುವರು, ಬಾಸಿಂಗ ತರುವರು. ಐರಾಣಿ ತರುತ್ತಾರೆ. ಎದುರು ನೀರು ತರುತ್ತಾರೆ, ಹಂದರಲ್ಲಿ ಸಂಡಿಗೆ ಕಡಿಯುತ್ತಾರೆ. ಗುಗ್ಗುಳ ಹೊರುವುದು, ಸುರಗಿ ಸುತ್ತುವದು, ಮದುಮಕ್ಕಳಿಗೆ ಅರಿಶಿಣ ಹಚ್ಚಿ ನೀರು ಎರೆಯುವದು ಅಕ್ಕಿ ಕಾಳು ಹಾಕುವದು, ಧಾರೆ ಎರೆಯುವದು ಮುಂತಾದ ಮುಖ್ಯ ಘಟ್ಟಗಳಾದ ಮೇಲೆ ಸರಿಬೆಸ ಆಡಲು ತೊಡಗಿಸುತ್ತಾರೆ. ಭೂಮ ಕೊಡುತ್ತಾರೆ. ಕೂಸೊಪ್ಪಿಸುತ್ತಾರೆ. ಮೆರವಣಿಗೆ ಮಾಡುತ್ತಾರೆ. ಆರತಿಮಾಡಿ ಮನೆ ತುಂಬಿಸಿಕೊಳ್ಳುತ್ತಾರೆ. ಇವು ಮದುವೆಯ ಪ್ರಮುಖ ಆಚರಣೆಗಳು. ಈ ಸಂದರ್ಭಗಳಲ್ಲಿ ಆಚರಣೆಗೆ (ಚಾಜಕ್ಕೆ) ತೊಡಗುವವರು ಕೆಲವೆ ಜನ ಮುತ್ತೈದೆಯರು, ಇಲ್ಲೆಲ್ಲ ಹೆಚ್ಚು ಕ್ರಿಯಾ ಶೀಲರಾಗಿರುವವರು ಹೆಣ್ಣು ಮಕ್ಕಳು ಬಹಳಷ್ಟು ಸಂದರ್ಭಗಳಲ್ಲಿ ಹಾಡು ಹೇಳುತ್ತಾರೆ. *(ವೈ.ಎಸ್.)*

ಮದುವೆ ಸಂಪ್ರದಾಯಗಳು: ಹೈದ್ರಾಬಾದ ಕರ್ನಾಟಕ ಭಾಗದ ಮದುವೆ ಸಂಪ್ರದಾಯಗಳು ಅತ್ಯಂತ ವೈಶಿಷ್ಟ್ಯತೆಯಿಂದ ಕೂಡಿದುದಾಗಿವೆ. ಮದುವೆ ಸಂಪ್ರದಾಯಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಒಂದು ಸಮುದಾಯದಿಂದ ಇನ್ನೊಂದು ಸಮುದಾಯದಲ್ಲಿ ಆಚರಿಸುವ ಪದ್ಧತಿಗಳು ಭಿನ್ನವಾಗಿವೆ. ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಮದುವೆಗಳು ಸುಗ್ಗಿಯು ಮುಗಿದ ಆನಂತರ ಮೇ ತಿಂಗಳಿನಿಂದ ಜೂನ್‌ವರೆಗೆ ಬಿಡುವಿನ ವೇಳೆಯಲ್ಲಿ ನಡೆಯುತ್ತವೆ. ಮದುವೆಗೆ ಒಂದೆರಡು ತಿಂಗಳಿರುವಾಗಲೇ ಮನೆಯಲ್ಲಿ ಸಂಭ್ರಮದ ವಾತಾವರಣ ಇರುತ್ತದೆ. ಮದುವೆ ಎನ್ನುವ ಪವಿತ್ರವಾದ ಬಂಧನ ಹುಡುಗ ಹುಡುಗಿಯ ಒಪ್ಪಿಗೆಯ ಮೇರೆಗೆ ನಡೆಯುತ್ತವೆ. ಈ ಭಾಗದ ಮದುವೆಗಳು ವಿಶೇಷತೆಯನ್ನು ಹೊಂದಿದ್ದು, ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದ ಜನರು ಕೈಗೊಳ್ಳುವ ರೀತಿ ರಿವಾಜುಗಳನ್ನು ಈ ಭಾಗದ ಜನರು ಅನುಸರಿಸುತ್ತಾರೆ. ಹೀಗಾಗಿ ಮಿಶ್ರ ಸಂಸ್ಕೃತಿ ವೈಶಿಷ್ಟ್ಯತೆಯನ್ನು ಹೊಂದಿದುದಾಗಿದೆ.



ನೀರೆರೆವುದು

ಮದುವೆ ಸಂಪ್ರದಾಯ ಮೊದಲಿಗೆ ಕನ್ಯೆ ನೋಡುವುದರಿಂದ ಪ್ರಾರಂಭವಾಗುತ್ತದೆ. ಹುಡುಗನ ಕಡೆಯವರು ಇಂತಿಂಥ ಊರಲ್ಲಿ ಹೆಣ್ಣು ಇರುವ ಸುದ್ದಿಯನ್ನು ಪತ್ತೆ ಹಚ್ಚಿ ಕನ್ಯೆ ನೋಡಲು ಹೋಗುತ್ತಾರೆ. ಹುಡುಗ ಹುಡುಗಿ ಒಪ್ಪಿತವಾದರೆ ಅಂದು ನಿಶ್ಚಯ ಕಾರ್ಯವನ್ನು ಮಾಡಿ ಬಿಡುತ್ತಾರೆ. ನಿಶ್ಚಯ ಕಾರ್ಯವು ಬೇರೆ ಬೇರೆ ಭಾಗದಲ್ಲಿ ಭಿನ್ನವಾಗಿವೆ.

ಕನ್ಯಾ ನಿಶ್ಚಯ: ಈ ಕಾರ್ಯವು ಮಹತ್ವದ ಘಟ್ಟ. ಈ ಕಾರ್ಯಕ್ರಮವು ಎಲ್ಲ ಸಂಸ್ಕೃತಿಯಲ್ಲಿ ಒಂದೇ ತೆರನಾಗಿದೆ. ವಧುವರರು ಒಪ್ಪಿಗೆಯಾದ ಮೇಲೆ ನಿಶ್ಚಯ ಕಾರ್ಯವು ಸುಲಭವಾಗುತ್ತದೆ. ವಧು ವರ ಒಳ ಸಂಬಂಧಿಕನಾಗಿದ್ದರೆ ಹೆಚ್ಚು ವಿಚಾರಣೆ ನಡೆಸುವುದಿಲ್ಲ ಒಂದು ವೇಳೆ ಹೊಸ ಸಂಬಂಧ ಬೆಳೆಸಬೇಕಾದರೆ ಮುರ್ನಾಲ್ಕು ತಲೆ ಮಾರುಗಳ ಬಗೆಗೆ ವಿಚಾರಣೆ ನಡೆಸಿ ಸಂಬಂಧ ಗಟ್ಟಿಗೊಳ್ಳುತ್ತದೆ ಪ್ರಸ್ತುತವಾಗಿ ಹುಡುಗನ ಗುಣ, ಸ್ವಭಾವ, ಆಸ್ತಿ ಅಂತಸ್ತನ್ನು ವಿಚಾರಿಸಿ, ಸಂಬಂಧ ಬೆಳೆಸುತ್ತಾರೆ.

ಕುಂಕುಮ ಕಾರಣ: ಮದುವೆಯ ಪ್ರಮುಖ ಕಾರಣವೆಂದೇ ಬಿಂಬಿತವಾದ ಈ ಕಾರ್ಯಕ್ರಮವನ್ನು ಮದುವೆಯಾಗುವುದಕ್ಕಿಂತ ಮುಂಚಿತವಾಗಿ ಇಲ್ಲವೆ ಮದುವೆಯ ದಿನ ನೆರವೇರುತ್ತದೆ. ಕುಂಕುಮ ಹಚ್ಚುವ ಕಾರ್ಯಕ್ರಮವನ್ನು 'ಸಕ್ಕರಿ' ಕಾರ್ಯವೆಂದು ಕರೆಯುತ್ತಾರೆ. ಬೀದರ ಭಾಗದವರು 'ಭಾಸಣಕಿ' ಎಂದು ಕರೆಯುವರು. ಈ ಕಾರ್ಯಕ್ರಮದಲ್ಲಿ ಊರಿನ ಹಿರಿ ಕಿರಿಯರೆಲ್ಲರು ಪಾಲ್ಗೊಳ್ಳುವರು, ಪ್ರತಿಯೊಬ್ಬರಿಗೂ ಸಕ್ಕರಿ ಹಂಚುವರು. ಸಂತೋಷ ಕೂಟದಲ್ಲಿ ಎಲ್ಲರೂ ಸಂಭ್ರಮಿಸಿ ಖುಷಿ ಪಡುವರು. ವಧುವಿಗೆ ಹೊಸ ಸೀರೆಯುಡಿಸಿ, ವರನಿಗೆ ಕೈಯಲ್ಲಿ ಉಂಗುರ ಹಾಕಿ ಬಟ್ಟೆ ಬರೆಯನ್ನು ಆಯೇರಿ ಮಾಡುವರು.

ಬೀಗರು ಎದುರುಗೊಳ್ಳುವುದು: ಮದುವೆ ಸಂಪ್ರದಾಯದಲ್ಲಿ ಬೀಗರು ಪರಸ್ಪರ ಎದುರುಗೊಂಡು ಒಂದುಗೂಡುವ ಪದ್ಧತಿಯನ್ನು ಈ ಭಾಗದಲ್ಲಿ ಎಲ್ಲಾ ಜಾತಿ, ಜನಾಂಗದವರು ಅನುಸರಿಸುತ್ತಾರೆ. ಮದುವೆಯಲ್ಲಿ ಬೀಗರು ಎದುರುಗೊಳ್ಳುವುದು ಸಂತೋಷ ಮತ್ತು ಸಂಭ್ರಮದ ಆಚರಣೆಯಾಗಿದೆ. ಹುಡುಗಿ ಕಡೆಯವರು ಮದುವೆಗೆ ಬಂದಾಗ ಅತ್ಯಂತ ಆತ್ಮೀಯವಾಗಿ

ಬರಮಾಡಿಕೊಳ್ಳುವರು. ಬೀಗರನ್ನು ಊರಿನ ದೇವಸ್ಥಾನ, ಇಲ್ಲವೆ, ಕಟ್ಟೆಯ ಮೇಲೆ ನಡೆಯುತ್ತದೆ. ಸಕ್ಕರಿ ಹಾಕುವ ಮೂಲಕ ಸಿಹಿಯಾದ ಸಂಬಂಧಕ್ಕೆ ಅಣಿಹಾಕುವರು.

ಒಬ್ಬರಿಗೊಬ್ಬರು ಕುಚೇಷ್ಠೆ ಮಾಡುತ್ತ 'ಹೆಣ್ಣಿನವರು' ಗಂಡಿನವರಿಗೆ ಅವರ ಜಿಪುಣತನದ ಬಗೆಗೆ ಹಾಡುಗಳಲ್ಲಿ ವಿಶದಪಡಿಸುವರು. ಮತ್ತು ಅಳಿಯನವರು ಮಾವನ ಕಡೆಯಿಂದ ಬರಬೇಕಾಗಿದ್ದ, ವರದಕ್ಷಿಣೆಯನ್ನು ಬರುವವರೆಗೂ ಹಾಡುಗಳ ಸುರಿಮಳೆಯು ಜೀಕುವರು, ಹೀಗೆ ನೆಂಟರು–ಬೀಗರು ಹೊಸದಾಗಿ ಕುಡುವಿಕೆಯಿಂದ ಸಂತೋಷದ ಸಂಭ್ರಮವೆ, ಸಂಭ್ರಮ. ಇವರಿಬ್ಬರ ನಡುವೆ ಆದ ತಪ್ಪು ಒಪ್ಪುಗಳನ್ನು ತಿದ್ದಿಕೊಂಡು ನಡೆಯುವರು. ಹೊಸ ಮದುಮಕ್ಕಳ ಪ್ರೇಮ ಸಮ್ಮಿಲನವದು. ಇದನ್ನರಿತ ಎರಡು ಕಡೆಯ ಜನರು ಮದುಮಗ ಮದುಮಗಳಿಗೆ ಹಾಸ್ಯದ ಹೊನಲನ್ನು ಬೀರುವರು.

ಐರಾಣಿ ಹೊರುವದು: ವರ್ಣರಂಜಿತವಾದ ಮಡಿಕೆಗಳನ್ನು ತಯಾರಿಸಿದ ಕುಂಬಾರನಿಗೆ ಅವನ ಭಾಜವನ್ನು ನೀಡಿ ಮದುವೆಯಾದ ಮುತ್ತೈದೆಯರು ಗಂಡಹೆಂಡಿರ ಎರಡು ಮಡಿ–ಕೆಗಳನ್ನು ಬಾವಿಗೆ ಒಯ್ದು ಪೂಜಿಸಿ, ಅರಬಿ ಕಟ್ಟಿ ಮದುವೆ ಮನೆಗೆ ಬಂದು ದೇವರ ಮುಂದೆ ಇಡುವ ಸಂಪ್ರದಾಯವಿದು. ಮನೆಯ ದೇವರು ವೀರಭದ್ರನಾಗಿದ್ದರೆ ಗುಗ್ಗಳ ಹೊರುವ ಇನ್ನೊಂದು ಸಂಪ್ರದಾಯ ಜರಗುತ್ತದೆ. ಆನಂತರ ಮದುಮಗ ಮದುಮಗಳಿಗೆ ಸ್ನಾನ ಮಾಡಿಸುವುದಕ್ಕಿಂತ ಪೂರ್ವದಲ್ಲಿ ದೇವರಿಗೂ ಅಭ್ಯಂಜನ ಸ್ನಾನ ಮಾಡಿಸಿ, ಎಣ್ಣೆ ಇಟ್ಟು ಅಕ್ಷತೆ ಹಾಕಿ 'ದೇವಲಗ್ನ' ಮಾಡುವರು. ಬಡಿಗನ ಮನೆಯಿಂದ ತಯಾರಿಸಿ ತಂದ ಹಸೆಮಣೆಯ ಮೇಲೆ ವಧೂವರರನ್ನು ಕೂಡಿಸಿ, ಸ್ನಾನ ಮಾಡಿಸುವರು. ಹೆಣ್ಣಿನ ಮತ್ತು ಗಂಡಿನ ಕಡೆಯವರು ಸುರಗಿ ನಡುವೆ ಕುಳಿತಿರುತ್ತಾರೆ. ಇದಕ್ಕೆ 'ತಾಯಿ ಮಕ್ಕಳು ಮೀಯುವುದು ಎಂದರ್ಥ. ಮೊದಲು ವರನ ತಲೆಗೆ ಎಣ್ಣೆ ಹಚ್ಚಿ ನಂತರ ವಧುವಿಗೆ ಎಣ್ಣೆ ಹಚ್ಚುವರು. ಮದುವೆಯ ಪವಿತ್ರವಾದ ಬಂಧನಕ್ಕೆ ಸುರಗಿ ಸುತ್ತುವ ಕಾರ್ಯಕ್ರಮವು ಪ್ರಮುಖವಾಗಿದೆ. ಮುತ್ತೈದೆಯರು ಜೋಳದ ಧಂಟಿನಿಂದ ವಧುವರರಿಗೆ ಕೊಬ್ಬರಿ ಎಣ್ಣೆ ಹಚ್ಚಿ ಸ್ನಾನ ಮಾಡಿಸುವರು.

ಕೂಸು ಒಪ್ಪಿಸುವುದು: ಈ ಸಂಪ್ರದಾಯ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಎಲ್ಲ ಜಾತಿ ಜನಾಂಗಗಳು, ಆಚರಿಸುವ ರೀತಿ, ರಿವಾಜುಗಳು, ಒಂದೇ ರೀತಿಯದು. ಹೆಣ್ಣುಮಗಳು ದೊಡ್ಡವಳಾದನಂತರ ತವರು ಮನೆಯನ್ನು ತೊರೆದು ಗಂಡನ ಮನೆಗೆ ಹೋಗುವಾಗ' ಕರುಳು ಕಿತ್ತತಾಗುತ್ತದೆ. ತಂದೆ ತಾಯಿಗಳಿಗೆ ದುಃಖವು ಉಮ್ಮಳಿಸಿ ಬರುತ್ತದೆ. ಆ ಊರನ್ನು ತೊರೆದು ಬೇರೆ ಊರಿಗೆ ಹೋಗುತ್ತಿರುವುದರಿಂದ ಆ ಊರಿನವರಿಗೂ ಸಹ ಹಳ ಹಳಿಯುಂಟಾಗುತ್ತದೆ. ಆದರೂ ತಂದೆ ತಾಯಿಗಳ ತವರು ಮನೆಯು ಸ್ಥಿರವಲ್ಲ ಕೊಟ್ಟ ಮನೆಯೇ ಶಾಶ್ವತವೆಂದು ಹೇಳಿ ಬರುವರು.

ಉಡಿ ತುಂಬುವದು: ಮದುವೆಯ ಕೊನೆಯಲ್ಲಿ ಜರಗುವ ಸಂಪ್ರದಾಯ. ಇದಕ್ಕೆ 'ಫಲಶೋಬಾನ' ಕಾರಣವೆಂತಲೂ ಸಹ ಕರೆಯುತ್ತಾರೆ. ಗಂಡು ಹೆಣ್ಣಿನ ಸಮ್ಮಿಲನಕ್ಕೆ ಸಮಾಜದ ಸುಮಂಗಲೆಯರು ಒಂದುಗೂಡಿಸುತ್ತಾರೆ. *(ವೈ.ಎಸ್.)*

ಮದ್ದರಕಿ: ಐತಿಹಾಸಿಕವಾದ ಮಹತ್ವದ ತಾಣ. ಯಾದಗೀರ ಜಿಲ್ಲೆ ಶಹಾಪುರದಿಂದ ಸುಮಾರು 15 ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಚಾಲುಕ್ಯರ ಕಾಲದ ಶೈವ ದೇವಾಲಯವನ್ನು ಕಾಣಬಹುದು ಅಲ್ಲದೆ ಹಲವು ಶಾಸನಗಳು ಸಹ ಈ ಗ್ರಾಮದಲ್ಲಿ ದೊರೆತಿವೆ. ಶೈವ ಮತ್ತು ಜೈನ ಸಂಸ್ಕೃತಿಯ ಮೇಲೆ ಇಲ್ಲಿನ ಹಲವು ಶಾಸನಗಳು ಬೆಳಕು ಚೆಲ್ಲುತ್ತವೆಂದು ಸಂಶೋಧಕ ಡಿ.ಎನ್. ಅಕ್ಕಿಯವರ ಅಭಿಪ್ರಾಯವಾಗಿದೆ.

ಮದ್ದರಕಿ ಗ್ರಾಮದಲ್ಲಿಯು ಸಹ ಇತರೆ ಗ್ರಾಮಗಳಲ್ಲಿ ಕಂಡುಬರುವಂತೆ ಡೊಳ್ಳಿನ ಪದ, ಹಂತಿ ಪದ, ಹಲಗೆ ಮಜಲು ಹಾಗೂ ಮಲ್ಲಮ್ಮ, ಕಾಳಮ್ಮ, ಮರೆಮ್ಮ, ಬಸವಣ್ಣ ದೇವ ದೇವತೆಗಳ ಆರಾಧನೆ ಕಾಣಬಹುದು. ಇಂದಿನ ನಗರೀಕರಣದಿಂದ ವಿಭಕ್ತ ಕುಟುಂಬಗಳಾಗಿ ಛಿದ್ರ ಛಿದ್ರವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಮುದ್ದರಕಿ ಗ್ರಾಮದ ಎಸ್.ಎಮ್. ಜುನ್ನರವರ ಕುಟುಂಬದಲ್ಲಿ 40 ಜನ ಒಂದೇ ಮನೆಯಲ್ಲಿ ವಾಸ ಮಾಡುತ್ತಿದ್ದು, ಎರಡದಿಂದ ಮೂರು ತಲೆಮಾರಿನ ಸದಸ್ಯರಿದ್ದಾರೆ. ಇವತ್ತಿಗೂ ಸಹ ಆ ಕುಟುಂಬದಲ್ಲಿ ಯಾವುದೇ ರೀತಿ ಭೇದ ಬರದೆ ಒಗ್ಗಟ್ಟಿನಿಂದ ಹೊಂದಾಣಿಕೆಯಿಂದ ಪರಸ್ಪರ ಸಹಾಯ– ಸಹಕಾರದಿಂದ ಆ ಕುಟುಂಬದ ಸದಸ್ಯರು ಜೀವನ ಸಾಗಿಸುತ್ತಿದ್ದಾರೆ.

ಮಕ್ಕಳ ದೇವತೆಗೆ ಪಾಲ್ಕಮ್ಮ ಎನ್ನುವರು. ಮಕ್ಕಳನ್ನು ಥಟ್ಟು, ಹೊಟ್ಟು, ಗಣಜಲು ಮುಂದಾದವುಗಳು ಬಂದರೆ ಪಾಲ್ಕಮ್ಮ ದೇವತೆಗೆ ಪೂಜಿಸುವುದರ ಮುಖಾಂತರ ಮಕ್ಕಳನ್ನು ಕಾಪಾಡುವಂತೆ ಬೇಡಿಕೊಳ್ಳುವರು. ಭಜನೆ ಸಂಪ್ರದಾಯವು ಗ್ರಾಮಗಳಲ್ಲಿ ಅತೀ ಹೆಚ್ಚು ಕಾಣುತ್ತೇವೆ. ವಿವಿಧ ದೇವಸ್ಥಾನಗಳಲ್ಲಿ ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ಭಜನೆಗಳನ್ನು ಮಾಡುವ ಸಂಪ್ರದಾಯ ಇಂದಿಗೂ ಬೆಳೆದುಕೊಂಡು ಬಂದಿದೆ. ತಾಳ, ದಮ್ಮಿಡಿ ಮುಂತಾದ ಪರಿಕರಗಳೊಂದಿಗೆ ಭಕ್ತಿಯಿಂದ ಹಾಡುತ್ತಾರೆ. ಗ್ರಾಮದಲ್ಲಿ ಉಗ್ರ ದೇವತೆಗಳಿಗೆ ಕುರಿ, ಕೋಣ ವಿಶೇಷ ಸಂದರ್ಭದಲ್ಲಿ ಬಲಿ ಕೊಡುವುದನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ.

ಬೇವಿನ ಉಡುಗೆ ಗ್ರಾಮೀಣ ಸಮುದಾಯದಲ್ಲಿ ಕಂಡುಬರುವ ಹರಕೆಯ ಆಚರಣೆ. ಮದ್ದರಕಿ ಗ್ರಾಮದ ಉಟ್ಟಿಗುಡುವುದು ಒಂದು ವ್ರತವಾಗಿದೆ. ತಮ್ಮ ಆಸೆಗಳನ್ನು ಈಡೇರಿಸಿಕೊಳ್ಳಲು ಹಾಗೂ ಮಗನ ಮದುವೆ ಸಂದರ್ಭದಲ್ಲಿ ಕುಟುಂಬದ ಹಿರಿಯ ಹೆಣ್ಣು ಮಗಳು ಅಥವಾ ತಾಯಿ ಈ ಉಟ್ಟಿಗುಡುತ್ತಾಳೆ. ಉಟ್ಟಿಗುಡುವಾಗ ಬೇವಿನ ತಪ್ಪಲು ಮತ್ತು ಲಕ್ಕಿ ತಪ್ಪಲಿನಿಂದ ಆ ಹೆಣ್ಣಿನ ಮುಂಬದಿ ಹಾಗೂ ಹಿಂಬದಿ ಮುಚ್ಚುವಷ್ಟು ಉಡಿಗೆ ಉಡಿಸುತ್ತಾರೆ. ಪಾದ ಕಟ್ಟಿಕೊಂಡ ಸ್ತ್ರೀಯರು ಅಡ್ಡ ಸೀರೆ ಹಿಡಿದು ಒಳಗಿನ ಸೀರೆ ಬಿಚ್ಚಿ ಉಟ್ಟಿಗೆ ಉಡಿಸಿಕೊಂಡು ಆ ಸ್ತ್ರೀಯ ಬಾಯಿಯಲ್ಲಿ ಬೇವಿನ ತಪ್ಪಲು ಇಟ್ಟು ಹಣೆಗೆ ಕುಂಕುಮ ಭಂಡಾರ ಹಚ್ಚಿ ತಲೆಯ ಮೇಲೆ ಕಳಸವನ್ನಿಟ್ಟು ಎಲ್ಲಮ್ಮನ ದೇವಸ್ಥಾನಕ್ಕೆ ಬಾಜಿ ಭಜಂತ್ರಿ ಹಾಗೂ ಡೊಳ್ಳಿನ ವಾಲಗಗಳ ಮುಖಾಂತರ ಕರೆದುಕೊಂಡು ಬಂದು ದೇವಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿಸುತ್ತಾರೆ. ಉಟ್ಟಂತಹ ಸ್ತ್ರೀಯ

ಜೊತೆಗೆ ಎಲ್ಲಮ್ಮನ ಬಲಿಗಾಗಿ ಬೆಳೆಯಿಸಿದ ಕುರಿ ಅಥವಾ ಹೋತ, ಬಂಧು ಬಳಗದವರು, ಅವರ ಹಿಂದೆ ಕೊಡ ಹೊತ್ತ ಮದುಮಗ, ನೆರೆ ಹೊರೆಯವರು ಬರುತ್ತಾರೆ. ಪ್ರದಕ್ಷಿಣೆಯ ನಂತರ ಉಟ್ಟಿಗೆ ಉಟ್ಟ ಸ್ತ್ರೀಗೆ ಬಂದು ಬಳಗದವರು ತಂದ ಹೊಸ ಬಟ್ಟೆಗಳನ್ನು ತೊಡಿಸುವರು. ನಂತರ ಮಾತಂಗಿಯರು, ಪಾದ ಕಟ್ಟಿಸಿಕೊಂಡವರು ಮುತ್ತೈದೆಯರಿಂದ ತಮ್ಮ ಹಡ್ಡಲ್ಲಗೆಯನ್ನು ತುಂಬಿಸಿಕೊಳ್ಳುವರು. ಈ ಹಡ್ಡಲಗೆಯಲ್ಲಿ ಹೋಳಿಗೆ, ಸಜ್ಜೆ ಕಡುಬು, ಹಿಂಡಿ, ಪಲ್ಯೆ ಮುಂತಾದವು ಹಾಕುವರು. ನಂತರ ಮಾತಂಗಿಯರ ಆದೇಶದ ಮೇರೆಗೆ ಎಲ್ಲರೂ ಎದ್ದು ನಿಂತು 'ಯಾಕಲಿಗೆ ಜೋಗಯಾಕಲಿಗೆ ಜೋ ಜೋ' ಎಂದು ನಾಲ್ಕೂ ದಿಕ್ಕುಗಳಿಗೆ ತಿರುಗುತ್ತಾ ಹಾಡುವರು. ಇಲ್ಲಿ ಬರುವ ಮಾತಂಗಿಯರು ದಲಿತ ಸ್ತ್ರೀಯರಾಗಿರುತ್ತಾರೆ. ಇಂದಿಗೂ ಕೂಡಾ ಈ ಮಾತಂಗಿ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. *(ಎಸ್.ಎಂ.ಡಿ.)*

ಮನರಂಜಕರು: ತಮ್ಮ ಕಲೆಗಳನ್ನು ಪ್ರದರ್ಶಿಸಿ ಜನಪದ ಕಲಾವಿದರು ಜನರನ್ನು ಸಂತೋಷ ಪಡಿಸುವ ಮಾನವನ ಸುಪ್ತ ಬಯಕೆಗಳನ್ನು ಹೊರ ಹಾಕುವ, ಮನರಂಜನೆಯನ್ನು ಒದಗಿಸುವರು. ಜನಪದ ಕಲೆಗಳಲ್ಲಿ ಬಹುತೇಕ ಕಲೆಗಳು ಮೂಲತಃ ಮನೋರಂಜನೆಯ ನೆಪದಲ್ಲಿ ಹುಟ್ಟಿ ಬಂದಿವೆ. ಇದರ ನಂತರದ ಹಂತವೇ ಆರಾಧನೆಯ ಹಿನ್ನೆಲೆಯಾಗಿದೆ. ಕಾಲಕ್ರಮೇಣವಾಗಿ ಶ್ರಮದ ಹಿನ್ನೆಲೆಯಲ್ಲಿ ಇವು ವೃತ್ತಿ ಕಲೆಗಳಾಗಿ ಪರಿವರ್ತಿಸಿದ್ದವು. ಆಧುನಿಕತೆಯ ಭರಾಟೆಯಲ್ಲಿಯೂ ಇವು ಮಹತ್ವದ, ವಿಶಿಷ್ಟ ಸ್ಥಾನವನ್ನು ಹೊಂದಿವೆ. ಅಲ್ಲದೆ ಇಂದಿಗೂ ಪ್ರದರ್ಶನಗೊಳ್ಳುತ್ತವೆ.

ಜನಪದ ಕಲೆಗಳು ಇಡೀ ಜನಪದ ಸಮುದಾಯಗಳ ಅನುಭವ, ಭಾವನೆ, ಸ್ಫೂರ್ತಿಗಳಿಂದ ಹುಟ್ಟಿಕೊಂಡಿವೆ ಎಂಬುದು ಶಿವರಾಮ ಕಾರಂತರ ಅಭಿಮತ. ಈ ಕಲೆಗಳು ವ್ಯಷ್ಟಿಯಿಂದ ಸಮಷ್ಟಿಗೆ ತಿರುಗಿವೆ. ಇದರ ಪರಿಣಾಮವಾಗಿ ಜನಪದ ಕಲಾ ಮೇಳಗಳು ಹುಟ್ಟಿ ಪ್ರಸಾರಗೊಂಡವು. ಕ್ರಮೇಣ ಅವರಲ್ಲಿಯೂ ಸ್ಪರ್ಧೆಗಳು ಬೆಳೆದು ಹೊಸತನ ಕಂಡು ಬಂದು ಅದರೊಂದಿಗೆ ಜನರನ್ನು ರಂಜಿಸುವ ವಿಷಯಗಳನ್ನು ಹೆಣೆದು ಸಾಮಾನ್ಯರನ್ನು ತಣಿಸುವಂತೆ ಮಾಡಿವೆ. ಈ ನಿಟ್ಟಿನಲ್ಲಿ ಮನರಂಜಕರ ಪಾತ್ರ ಹಿರಿದಾದದು. ಇಂಥ ಮೇಳಗಳಲ್ಲಿ ಗೀತ ಪ್ರಧಾನ, ನೃತ್ಯ, ಪ್ರಧಾನ, ವಾದ್ಯ ಪ್ರಧಾನ ಎಂಬ ಹಲವಾರು ವಿದಗಳಿವೆ.

ಮಾನವ ತಾನು ನಕ್ಕು ಇತರರನ್ನೂ ನಗಿಸಿ ಕುಣಿಸಿದ್ದಾನೆ. ಹಾಗೆಯೇ ಪ್ರಾಣಿ ಪಕ್ಷಿಗಳನ್ನೂ ಪಳಗಿಸಿ ಕುಣಿಸಿ ಆಡಿಸುತ್ತಾನೆ. ಇದರ ಮೂಲಕ ಮನರಂಜನೆಯನ್ನು ಒದಗಿಸಿದ್ದಾನೆ. ಮನರಂಜಕರಲ್ಲಿ 1. ಪ್ರಾಣಿಗಳನ್ನು ಬಳಸುವ ಮತ್ತು ಪ್ರಾಣಿಗಳ ವೇಷ ಹಾಕುವ ಎರಡು ಬಗೆಗಳಿವೆ.

ಒಂದನೆಯ ರೀತಿಯ ಮನರಂಜಕರಲ್ಲಿ ಮಂಗನಾಟ (ಕೋತಿಯಾಟ), ಕವಲೆತ್ತಿನವರು (ಕೋಲೆ ಬಸವ), ಹಾವಾಡಿಗರು, ಕರಡಿ ಕುಣಿತದವರು, ದೊಂಬರಾಟದವರು, ಮೋಡಿಗಾರರು ಕಣ್ಕಟ್ಟು ಮಾಡುವವರು ಪ್ರಮುಖರಾಗಿದ್ದಾರೆ.

ಎರಡನೆ ಬಗೆಯ ಮನರಂಜಕರಲ್ಲಿ ಹುಲಿವೇಷ, ಕರಡಿ ವೇಷ, ಹನುಮನ ವೇಷ, ಬಹುರೂಪಿಗಳು ಪ್ರಮುಖರು. ಇಲ್ಲಿ ನಿಜವಾದ ಅರ್ಥದಲ್ಲಿ ಮನೋರಂಜಕರೆಂದರೆ ಬಹುರೂಪಿಗಳೇ. ಅಪ್ಪಟ ಅಲೆಮಾರಿಗಳಾದ ಇವರು ಊರಿಂದೂರಿಗೆ ತಿರುಗಿ ತಮ್ಮ ಕಲಾ ಚಾತುರ್ಯದಿಂದ ಜನಮಾನಸವನ್ನು ಸೂರೆಗೊಳ್ಳುತ್ತಾರೆ. ಇವರನ್ನು ಬೈರೂಪಿಗಳು, ಭೈರೂಪಿಗಳು, ಭೈರೂಪಗ್ಯಾರು, ಸೋಗುಗಾರರು, ವೇಷಗಾರರು ಎಂದೆಲ್ಲಾ ಕರೆಯುತ್ತಾರೆ. ಪಂಪ, ಕುಮಾರವ್ಯಾಸ, ಚಾಮರಸರ ಕಾವ್ಯಗಳಲ್ಲೆಲ್ಲ ಇವರನ್ನು ವೇಷಗಾರರು, ನಟ್ಟುವರರು ಎಂದಿದೆ. ಹೊಟ್ಟೆ ಪಾಡಿಗಾಗಿ ವೇಷ ಹಾಕುವ ಕಾರಣದಿಂದಾಗಿ ಇವರಿಗೆ ವೇಷಗಾರರು ಎನ್ನುತ್ತಾರೆ. ಬಹುತೇಕವಾಗಿ ಕಬ್ಬಲಿಗರಲ್ಲಿ ವೇಷ ಹಾಕುವುದು ಪ್ರಚಲಿತವಿದೆ. ಈ ಬಹುರೂಪಿಗಳು ಪ್ರದೇಶಕ್ಕನುಗುಣವಾಗಿ ಅಲ್ಲಿನ ಭಾಷೆಯನ್ನು ರೂಢಿಸಿಕೊಳ್ಳುತ್ತಾರೆ. ಮೂಲತಃ ಇವರು ಹಿಂದೂ ಧರ್ಮಿಯರಾದರೂ ಮುಸ್ಲಿಂ ಧರ್ಮದ ಹಬ್ಬಗಳನ್ನೂ ಆಚರಿಸುತ್ತಾರೆ. ಐತಿಹಾಸಿಕ, ಪೌರಾಣಿಕ ಪಾತ್ರಗಳನ್ನು ಲೀಲಾಜಾಲವಾಗಿ ಅಭಿನಯಿಸುವ ಇವರನ್ನು ಜಾತಿಗಾರರು, ಹಾಸ್ಯಗಾರರು, ರಂಜಕರು ಎಂದು ಗುರುತಿಸಲಾಗಿದೆ. ಪುರುಷರು ನೀಳ ಕೇಶಗಳನ್ನು ಬಿಟ್ಟಿರುವುದೇ ವಿಶೇಷ. ಅವರೇ ಸ್ತ್ರೀ ಪಾತ್ರವನ್ನು ನಿರ್ವಹಿಸುತ್ತರೆ. ಎಷ್ಟೇ ಕಷ್ಟ ಕಾರ್ಪಣ್ಯಗಳಿದ್ದರೂ ಹೆಣ್ಣು ಮಕ್ಕಳು ಮಾತ್ರ ವೇಷ ಹಾಕುವುದಿಲ್ಲ, ವೀರ ಹನುಮ, ಹಿಡಂಬ, ಅರ್ಧನಾರೀಶ್ವರ ಈ ಪಾತ್ರಗಳು ಮನೋರಂಜನೆ ಯನ್ನುಂಟು ಮಾಡುತ್ತವೆ. ಇವರು ವೇಷದಲ್ಲಿ ಹಾಕುವ ಬಟ್ಟೆ ಬರೆಗಳೂ ದಾನವಾಗಿ ನೀಡಿದ ಬಟ್ಟೆಗಳೇ ಕೆಲವರು ಎರಡೆರಡು ಪಾತ್ರವನ್ನು ಹಾಕುತ್ತಾರೆ. ಮುಖಕ್ಕೆ ಬಣ್ಣ ಹಾಕುವುದನ್ನು ತಾವೇ ರೂಢಿಸಿಕೊಂಡಿರುತ್ತಾರೆ. ತಬಲಾ, ದಮ್ಮಡಿ ಡಪ್ಪು, ಕೈಪೇಟಿ (ಹಾರ್ಮೋನಿಯಂ) ತಾಳ, ತಂಬೂರಿ, ಕಾಲ್ಗೆಜ್ಜೆಗಳನ್ನು ಬಳಸುತ್ತಾರೆ. ಆಧುನಿಕ ಸಿನೇಮಾ, ಟಿ.ವಿಯ ಪ್ರಭಾವದಿಂದ ಅವರಲ್ಲೂ ಬದಲಾವಣೆಗಳಾಗಿವೆ ತಮ್ಮ ಹಾಡಿನ ಧಾಟಿ, ಹಾಡುಗಳನ್ನು ಬದಲಾಯಿಸಿಕೊಂಡಿದ್ದಾರೆ. *(ಪ್ಪಿ.ಎ.)*

ಮನೆ ಕಟ್ಟಡ ವಸ್ತುಗಳು: ಗಿಡದ ಪೊಟರೆಗಳಲ್ಲಿ, ಗವಿಗಳಲ್ಲಿ ವಾಸಿಸುತ್ತಿದ್ದ ಮಾನವ ಸಾಮಾಜಿಕ ಬದುಕನ್ನು ಕಟ್ಟಿಕೊಂಡಾಗಿನಿಂದ ಮನೆ ಕಟ್ಟಲು ಆರಂಭಿಸಿದ. ಚಳಿ–ಮಳೆ–ಬಿಸಿಲು ಮತ್ತು ಕ್ರೂರ ಮೃಗಗಳಿಂದ ರಕ್ಷಣೆ ಪಡೆಯಲು ಗುಡಿಸಲಿನಿಂದ ಅರಮನೆಯವರೆಗೆ ವೈವಿಧ್ಯಮಯ ಮನೆ ನಿರ್ಮಾಣದ ಕೌಶಲ್ಯ ಮಾನವ ಜೀವಿಯ ಪರಿಶ್ರಮದಿಂದ ಸಾಧ್ಯವಾಗಿದೆ. ವೈಜ್ಞಾನಿಕ ಪ್ರಗತಿಯಿಂದಾಗಿ ಸಂಪರ್ಕ ಸಾಧನಗಳ ಸೌಕರ್ಯ, ವಸ್ತುಗಳ ಸಾಗಾಣಿಕೆ ಸುಲಭವಾಗಿ ಮನೆ ಕಟ್ಟಲು ಅನೇಕ ವಸ್ತುಗಳನ್ನು ಬಳಸಲು ಅನುಕೂಲವಾಗಿದೆ.

ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಕರಾವಳಿಯವರಂತೆ ಹೆಂಚಿನ ಮನೆ ಬೇಕಿಲ್ಲ. ಮಳೆ ಕಡಿಮೆ ಬಿಸಿಲು ಜಾಸ್ತಿ ಇರುವ ಈ ಭಾಗದಲ್ಲಿ ಇಲ್ಲಿಯ ಖನಿಜ ಸಂಪನ್ಮೂಲವನ್ನಾಧರಿಸಿ ಅಲ್ಪಾಯುಷಿ/ಬಹುಕಾಲ ಬಾಳಿಕೆಯ ಮನೆಗಳನ್ನು ಕಟ್ಟಲಾಗುತ್ತದೆ. ಇಂಥ ಮನೆಯ ಕಟ್ಟಡಕ್ಕೆ ಬೇಕಾಗುವ ವಸ್ತುಗಳನ್ನು ಹೀಗೆ ಪಟ್ಟಿ ಮಾಡಬಹುದು. ಕಲ್ಲು, ಮಣ್ಣು, ಉಸುಕು (ಮರಳು/ರೇತಿ) ಸುಣ್ಣ,

ಇಟ್ಟಿಗೆ, (ಇಟ್ಟಂಗಿ) ಮರ (ಕಟ್ಟಿಗೆ), ಸೆಗಣಿ, ಹುಲ್ಲು, ಬಿದಿರು, ತೊಗರಿಕಟ್ಟಿಗೆ ಪತ್ರಾ (ಪತ್ರಾಸ), ಫರಶಿ (ಬಂಡೆ ಹಾಸುಗಲ್ಲು) ಝೂಂಗಡ (ಸುರಕಿ), ಸಿಮೆಂಟ್ ಕಬ್ಬಿಣ.

ದುಡಿಯುವ ಜನ, ಕಡಿಮೆ ಆದಾಯದವರು ಅಲ್ಪ ಖರ್ಚಿನಲ್ಲಿ ಬಿದಿರಿನಿಂದ ಮಾಡಿದ ಚಾಪೆಯಂತಹ ತಡಸಿಗೆ ಮಣ್ಣು ಮತ್ತು ಸೆಗಣಿ ಬೆರೆಸಿ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾರೆ. ಅದರ ಮೇಲೆ ಸುಣ್ಣವನ್ನು ಬಳಿದಿರುತ್ತಾರೆ. ಕಲ್ಲಿನ ತುಂಡುಗಳಿಂದ ಗೋಡೆ ಕಟ್ಟುವಾಗ ಅವುಗಳ ಜೋಡಣೆಗಾಗಿ ಮಣ್ಣನ್ನು ಕೆಲವೊಮ್ಮೆ ಮಣ್ಣಿನ (ಜೋಡಿ) ಮುದ್ದೆಗಳನ್ನು ಒಂದರ ಮೇಲೊಂದು ಪೇರಿಸಿಡುತ್ತ ಗೋಡೆಯಾಕಾರ ಮಾಡಿ ಮೇಲೆ ಸೆಗಣಿ ಅಥವಾ ಸುಣ್ಣದಿಂದ ಸಾರಿಸಿರುತ್ತಾರೆ. ಕೆಲವರು ತೊಗರಿ ರಾಶಿಯ ನಂತರ ಒಣಗಿದ ಆ ಗಿಡಗಳನ್ನು ಕಿತ್ತು ತಂದು ದಟ್ಟವಾಗಿ ಒಂದರ ಪಕ್ಕದಲ್ಲೊಂದು ಇಟ್ಟು ಹಗ್ಗದಿಂದ ಕಟ್ಟಿ ಆಳೆತ್ತರದ ಗೋಡೆಗಳಂತೆ ಮಾಡಿ ನಿಲ್ಲಿಸಿ ಮೇಲೆ ನಾಲ್ಕಾರು ಕಟ್ಟಿಗೆಯ ಬೆಲಗಗಳನ್ನಿಟ್ಟು ಹುಲ್ಲು ಹೊದಿಸಿ ಗುಡಿಸಲು ನಿರ್ಮಿಸುತ್ತಾರೆ. ಮತ್ತೆ ಕೆಲವರು ಚಾವಣಿಗಾಗಿ ಕಬ್ಬಿಣದ ತಗಡುಗಳಂತಿರುವ ಪತ್ರಾ (ಪತ್ರಾಸ)ಗಳನ್ನು ಹೊದಿಸುತ್ತಾರೆ.

ಶಾಶ್ವತವಾದ ಮನೆಗಳ ನಿರ್ಮಾಣ ಮಾಡುವಾಗ ಬುನಾದಿ (ಪಾಯಾ) ಕಟ್ಟಲು ಕಲ್ಲು ಅತ್ಯಂತ ಆವಶ್ಯಕ. ಇಂಥ ಕಲ್ಲು ಯಾವ ಗಾತ್ರದಲ್ಲಾದರೂ ಇರಬಹುದು. ಇದಕ್ಕೆ ರಬ್ಬಲ್ ಎಂತಲೂ ಕರೆಯುವ ವಾಡಿಕೆಯಿದೆ. ಉಳ್ಳವರು ಇಲ್ಲವೆ ಶೋಕಿಯಿಂದ ಮನೆ ಕಟ್ಟಿಸುವವರು ಇಡೀ ಮನೆಯನ್ನೇ ಕಲ್ಲಿನಿಂದ ಕಟ್ಟುತ್ತಾರೆ. ಕರಿಕಲ್ಲು ಸಮಾನ ಆಕಾರದಲ್ಲಿ ಕತ್ತರಿಸಿದ್ದು, ಒಂದೇ ಅಳತೆಯಲ್ಲಿದ್ದು ಗೋಡೆಯ ಹೊರಮೈ ನೋಡಲು ಸುಂದರವಾಗಿರುತ್ತದೆ. ಕೆಲವರು ಕೆಂಪುಕಲ್ಲಿನ, ಬಿಳಿಕಲ್ಲಿನ, ಬೂದುಗಲ್ಲಿನ ಮನೆಗಳನ್ನು ಕಟ್ಟಿಸುತ್ತಾರೆ. ಸಿಮೆಂಟ ಇಲ್ಲದ ಕಾಲದಲ್ಲಿ ಬಾಗಿಲು ಕೂಡಿಸುವಾಗ ಅದರ ಕೆಳಗೆ ಹಾಸಲು ಮತ್ತು ಬಾಗಿಲ ತಲೆಯ ಮೇಲೆ ಹೊದಿಸಲು ಚಪ್ಪಡಿಕಲ್ಲನ್ನು ಬಳಸುತ್ತಿದ್ದರು. ಕಿಟಕಿಗಳಿಗೂ ಇದೇ ರೀತಿಯಲ್ಲಿ ದಪ್ಪ ಗಾತ್ರದ ಕಲ್ಲು ಬೇಕಾಗಿತ್ತು ಗೋಡೆಯೊಳಗೆ ಮಾಡು (ಗೂಡು) ಕಟ್ಟುವಾಗಲೂ ಇದೇ ಪದ್ಧತಿ ಅನುಸರಿಸುತ್ತಿದ್ದರು.

ಹಿಂದಿನವರು ಇಂದಿನ ಸಿಮೆಂಟ್‌ಗಿಂತ ನೂರು ಪಟ್ಟು ಬಲಶಾಲಿಯಾದ ಗಚ್ಚು ತಯಾರಿಸಿ ಗೋಡೆ ಕುಟ್ಟುತ್ತಿದ್ದರು. ಅಂತಹ ಗಚ್ಚಿಗೆ ಉಸುಕು ಮತ್ತು ಸುಣ್ಣ ಬೆರೆಸಿ ವಾರಗಟ್ಟಲೆ ನೆನೆಸಿ (ಕೆಲವರು ಬೆಲ್ಲವನ್ನು ಸೇರಿಸಿ) ಗಾಣದಲ್ಲಿ ನುರಿಸಿ, ಆ ಗಚ್ಚನ್ನು ಕಲ್ಲಿನ ಗೋಡೆ ಕಟ್ಟುವಾಗ ಸಿಮೆಂಟನಂತೆ ಬಳಸುತ್ತಿದ್ದರು. ಗೋಡೆ ಕಟ್ಟಿದ ನಂತರ ಸಾರಣೆ (ಪ್ಲಾಸ್ಟರ್ ತರಹ) ಮಾಡಲು ಗಾರೆಯನ್ನು ಬಳಸಲಾಗುತ್ತಿತ್ತು. ಕೆಲವರು ನೆಲವನ್ನು ಗಾರೆಯಿಂದ ಗಟ್ಟಿ ಮಾಡುತ್ತಿದ್ದರು. ಹಾಗೇ ವರ್ಷಕ್ಕೊಮ್ಮೆ ಗೋಡೆಗಳಿಗೆ ಸುಣ್ಣ ಬಳಿಯಲಾಗುತ್ತದೆ. ಇತ್ತೀಚಿನ ಮನೆಗಳಿಗೆ ಸಿಮೆಂಟನೊಂದಿಗೆ ಉಸುಕು, ನೀರು ಸೇರಿಸಿ ಗೋಡೆ ಕಟ್ಟಲಾಗುತ್ತದೆ. ಉಸುಕಿಗೆ ಮರಳು ಅಥವಾ ರೇತಿ ಎಂತಲೂ ಕರೆಯುವ ವಾಡಿಕೆಯಿದೆ.

ಸುಣ್ಣದ ಕಲ್ಲನ್ನು ಮೂಲ ಧಾತುವಾಗಿ ಬಳಸಿ ಯಂತ್ರದಲ್ಲಿ ಮಾಡಲಾಗುವ ಒಂದು ಬಗೆಯ ರಾಸಾಯನಿಕ ಪುಡಿ. ಆಧುನಿಕ ಕಟ್ಟಡಗಳಲ್ಲಿ ಇದರ ಬಳಕೆ ತಳಮಟ್ಟದಿಂದಲೇ ಆರಂಭ ಆಗುತ್ತದೆ. ನೇರವಾಗಿ ಬುನಾದಿ ಕಟ್ಟುವಾಗಲೂ ನೆಲ ಸ್ತರದಿಂದ ಕಂಬ (ಪಿಲ್ಲರ್) ಎಬ್ಬಿಸುವಾಗಲೂ ಸಿಮೆಂಟ್ ಅತ್ಯಾವಶ್ಯಕ. ಬುನಾದಿಯ ನಂತರ ಬೆಡ್ ಹಾಕಲು, ಗೋಡೆ ಕಟ್ಟಲು, ಪ್ಲಾಸ್ಟರ್ (ಸಮಾನ್ ಮೇಲ್ಮೈ) ಮಾಡಲು, ಚಾವಣಿ ಹಾಕಲು ಎಲ್ಲದಕ್ಕೂ ಸಿಮೆಂಟ್ ಬೇಕೇ ಬೇಕು.

ಮಣ್ಣಿನಿಂದ ತಯಾರಿಸಿ ಸುಟ್ಟಿರುವಂತಹ ಆಯತಾಕಾರದ ಭಟ್ಟಿ ಭಟ್ಟಿಯಲ್ಲಿ ಸುಟ್ಟು ಕೆಂಬಣ್ಣ ಪಡೆದ ಇಟ್ಟಂಗಿಯು ಗೋಡೆ ಕಟ್ಟಲು ಅದರಲ್ಲೂ ಸ್ವಲ್ಪ ಜಾಗದಲ್ಲಿ ಕಟ್ಟಲು ಸಹಕಾರಿ, ಹಿಂದಿನ ಕಾಲದ ಕಲ್ಲಿಗೆ ಬದಲಾಗಿ ಇಂದು ಇಟ್ಟಿಗೆಯು ಮನೆ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಗೋಡೆಗಳು ಕಲ್ಲಿನಷ್ಟು ಗಟ್ಟಿ ಅಲ್ಲದಿದ್ದರೂ ಸ್ಥಳಾಭಾವದ ಇಂದಿನ ಬದುಕಿಗೆ ಇದು ಅಗತ್ಯ.

ಮನೆಗೆ ಬೇಕಾದ ಬಾಗಿಲು ಕಿಟಕಿಗಳಿಗಾಗಿ ಮರದ ಬಳಕೆ ಆಗಲೇಬೇಕು. ಅಲ್ಲದೆ ಚಾವಣಿ ಹೊದಿಸುವ ಮೊದಲು ಗೋಡೆಗಳ ಮೇಲೆ ತೊಲೆ (ಉದ್ದೆಯ ಸಮಗಾತ್ರದ ಕಟ್ಟಿಗೆ)ಗಳನ್ನಿಡಲು ಮರವು ಬಳಕೆಯಾಗುತ್ತಿತ್ತು. ಮೇಲ್ಮಾಳಿಗೆಗೆ ಬಂಡೆ ಹಾಸಲಿ ಅಥವಾ ಪತ್ರಾ ಹಾಕಲಿ ಇಲ್ಲವೆ ಧುಮ್ಮಸ್ಸು ಬಡಿಯಲಿ ಎಲ್ಲದಕ್ಕೂ ತೊಲೆ ಮಾತ್ರ ಅಗತ್ಯವಾಗಿತ್ತು. ಪೀಠೋಪಕರಣಗಳಿಗೆ ಮತ್ತು ಗೋಡೆಯಲ್ಲಿ ಕಟ್ಟಿಗೆ ಕೆಲಸ ಮಾಡಲು ಕಟ್ಟಿಗೆ ಬೇಕು.

ಮನೆಯ ಒಳಗೆ ನೆಲದ ಮೇಲೆ ಹಾಸುವುದಕ್ಕೆ ಮತ್ತು ಮನೆಯ ಚಾವಣಿಗೆ ಹೊದಿಸಲಿಕ್ಕೆ ಈ ಭಾಗದಲ್ಲಿ ಸುಣ್ಣದ ಕಲ್ಲಿನ ಫರಶಿಯನ್ನು ಬಳಸುವರು. ಶಹಾಬಾದ್ ಪಟ್ಟಣ ಹಾಗೂ ಸುತ್ತಲಿನ ಪರಿಸರದಲ್ಲಿ ಈ ಫರಶಿಗಳನ್ನೇ ಒಂದರ ಮೇಲೊಂದು ಏರಿಸುತ್ತ (ಪೇರಿಸಿಡುತ್ತ) ಗೋಡೆಯನ್ನಾಗಿಸುತ್ತಾರೆ. ಮಾಳಿಗೆಗೆ ಹೊದಿಸಿದರೆ ಅದಕ್ಕೆ ಅರೆಜಾಪುರ (ಅರಝಾಪುರ) ಎನ್ನುವರು. ನಾಲ್ಕು ಗೋಡೆಗಳ ಮೇಲೆ ತೊಲೆ ಇಟ್ಟು ಒಂದರ ಸಂದಿನೊಳಗೊಂದು ವಿಭಿನ್ನ ಗಾತ್ರದ ಫರಶಿ (ಬಂಡೆ) ಸೇರಿಸುತ್ತ ಹಾಸುವರು. ಒಂದು ಶೈಲಿಯಾದರೆ ಇನ್ನೊಂದಕ್ಕೆ ಡೈಮಂಡ್ ಎನ್ನುವರು ಅದರಲ್ಲಿ ಒಂದೇ ಗಾತ್ರದಲ್ಲಿ ಕತ್ತರಿಸಿದ ಬಂಡೆಗಳನ್ನು ಬಳಸಿ ಹಾಸಿರುತ್ತಾರೆ. ನೋಡಲು ಅಂದವಾಗಿರುತ್ತದೆ. ನೆಲಕ್ಕೆ ಹಾಸುವುದಕ್ಕೆ ಇತ್ತೀಚೆಗೆ ನುಣುಪಾಗಿಸಿ ಮಾಟವಾಗಿ ಕತ್ತರಿಸಿದ ಪಾಲಿಶ್ ಫರ್ಶಿಗಳನ್ನು ಬಳಸುವರು. ಇಟ್ಟಂಗಿಯ ಭಟ್ಟಿಯಲ್ಲಿ ಸುಟ್ಟು ಪುಡಿಯಾಗಿ ಬಿದ್ದ ಸುರಕಿ ಅಥವಾ ಝೂಂಗಡವನ್ನು ಸುಣ್ಣದೊಂದಿಗೆ ಬೆರೆಸಿ ಚಾವಣಿ ಮೇಲೆ ಹಾಕಿ ಹೆಣ್ಣು ಮಕ್ಕಳು ಒಂದೇ ಹದದಲ್ಲಿ ಕಟ್ಟಿಗೆಯ ಚೌಕಕ್ಕೆ ಕಟ್ಟಿದ ಕೋಲಿನಿಂದ ಹೀಗೆ ಧುಮ್ಮಸ್ಸು ಬಡಿದ ಮನೆ ಸದಾಕಾಲ ತಂಪಾಗಿರುತ್ತದೆ.

ಅಂದಿನವರು ಬಾಗಿಲಿನ ಕೊಂಡಿಗಾಗಿ, ಬಾಗಿಲು ಕೂಡಿಸುವುದಕ್ಕಾಗಿ, ಕಿಟಕಿಯ ಸರಳಿಗಾಗಿ ಕಬ್ಬಿಣ ಬಳಸಿದರೆ ಇಂದು ಕಾಂಕ್ರೀಟ್ ಕಾಡುಗಳಾಗುತ್ತಿರುವ ಮನೆಗಳ ನಿರ್ಮಾಣಕ್ಕೆ ಕಬ್ಬಿಣ ಮೂಲಭೂತ ವಸ್ತುವಾಗಿದೆ. ಆರ್‌ಸಿಸಿ ಚಾವಣಿಗಂತೂ ಬೇಕೇ ಬೇಕು. ಕಂಪೌಂಡ್ ಗೇಟಿಗೆ ಗ್ರೀಲ್ಸಗಳಿಗೆ ಕಬ್ಬಿಣ ಬೇಕು. ಇತ್ತೀಚೆಗಂತೂ ಫ್ರೀ ಫ್ಯಾಬ್ರಿಕೇಟೆಡ್ ಮನೆ ಎಂದರೆ ಪೂರ್ವರಚಿತ ಮನೆಗಳನ್ನು (ರೆಡಿಮೇಡ್ ಮನೆ) ನಿರ್ಮಿಸಲಾಗುತ್ತಿದೆ. ಗೋಡೆ, ತಾರಸಿ (ಚಾವಣಿ) ಎಲ್ಲವೂ ಮೊದಲೇ ತಯಾರಿಸಿ ಆನಂತರ

ಒಂದೊಂದು ಭಾಗಗಳನ್ನು ಜೋಡಿಸಿ ಮನೆ ಪೂರ್ತಿಗೊಳಿಸಲಾಗುತ್ತದೆ. *(ಎ.ಆರ್.ಕೆ.)*

ಮನೆ ತುಂಬಿಸಿಕೊಳ್ಳುವುದು: ಮದುಮಗಳನ್ನು ಮನೆಯಲ್ಲಿ ಬರಮಾಡಿಕೊಳ್ಳುವ ಆಚರಣೆ. ಮದುವೆಯ ಅನಂತರ ಸೊಸೆ ಮೊದಲ ಸಲ ಗಂಡನ ಮನೆ ಪ್ರವೇಶ ಪ್ರಕ್ರಿಯೆ ಇದಾಗಿರುತ್ತದೆ. ಹೀಗೆ ಸಾಮಾನ್ಯವಾಗಿ ಮದುಮಗನ ಮನೆಯಲ್ಲಿ ಮದುವೆಗಳು ನಡೆಯುತ್ತಿದ್ದುವು. ಹಾಗಾಗಿ ಮದುವೆಯ ನಾಲ್ಕಾರು ದಿನ ಮುಂಚಿತವಾಗಿ ಮನೆದೇವರುಗಳ ಪೂಜಾ ಕಾರ್ಯಕ್ರಮಕ್ಕೆ ಮದುಮಗಳನ್ನು ಕರೆತರುತ್ತಾರೆ. ಗಂಡಿನ ಕಡೆಯಿಂದ ನಾಲ್ಕೈದು ಅಥವಾ ಇಬ್ಬರು ಹೆಣ್ಣುಮಕ್ಕಳು ಹೋಗುತ್ತಿದ್ದು, ಹೋಗುವಾಗ (ಸುಬದಬುಟ್ಟಿ/ಶುಭದಬುಟ್ಟಿಯಲ್ಲಿ) ಒಂದು ಬಿದಿರು ಬುಟ್ಟಿಯ ತುಂಬ ಎಣ್ಣೋಳಗಿ (ಕರಿದ ಸಿಹಿ ತಿಂಡಿ) ಸೂರ್ಯ ಚಂದ್ರಮ ಮೊದಲಾದ ಪದಾರ್ಥಗಳನ್ನು ಹಾಗೂ ಪೂರಿಯಂತೆ ದುಂಡಾಗಿರುವ (ಕರಚಿಕಾಯಿಯ ಮಸಾಲೆ ತುಂಬಿದ) ಸಿಹಿ ತಿಂಡಿಯನ್ನು ತುಂಬಿಕೊಂಡು ಒಯ್ಯುತ್ತಾರೆ. ಹೀಗೆ ಬಂದ ಬೀಗರನ್ನು ಹೆಣ್ಣಿನ ಮನೆಯವರು ಬ್ಯಾಂಡು ಬಾಜಿಯೊಂದಿಗೆ ಊರ ಮುಂದಿನ ಹನುಮಪ್ಪನ ಗುಡಿಯಲ್ಲಿ ಎದುರುಗೊಂಡು ಮನೆಗೆ ಕರೆದೊಯ್ಯುವರು. ಬಂದವರಿಗೆ ಹೊಸಬಟ್ಟೆ ಮಾಡಿ ಸಿಹಿ ಊಟ ಉಣಿಸಿ ಮದುಮಗಳಿಗೆ ಹೊಸ ಸೀರೆಯುಡಿಸಿ ಅಂದರೆ ಹೆಣ್ಣಿಗೆ 'ಮದುಮಗಳು' ಮಾಡಿ ಕಳಿಸಿಕೊಡುತ್ತಾರೆ. ಹಾಗೆ ಕಳಿಸುವಾಗ ಹೆಣ್ಣಿನ ಮನೆಯವರು ಗಂಡಿನವರು ತಂದುದಕ್ಕಿಂತ ಒಂದು ಸಂಖ್ಯೆ ಹೆಚ್ಚಿರುವಂತೆ ಹಾಕಿ ಸಿಹಿ ತಿಂಡಿಯ ಬುಟ್ಟಿಯನ್ನು ಕಳಿಸುವರು. ಮದುಮಗಳು ವರನ ಮನೆಯಲ್ಲಿ ಒಳಗೆ ಪ್ರವೇಶ ಮಾಡುವಾಗ ತಲೆಬಾಗಿಲ ಹೊರಗೆ ನಿಲ್ಲಿಸಿ ಅನ್ನದ ಮುದ್ದೆಯನ್ನೋ ಎಣ್ಣೆ ಮತ್ತು ಅರಿಸಿಣ ಹಚ್ಚಿದ ರೊಟ್ಟಿಯನ್ನೋ ನಿವಾಳಿಸಿ ಆರತಿ ಬೆಳಗುವರು. ಹೊಸ್ತಿಲ ಮೇಲೆ ಅಕ್ಕಿ ತುಂಬಿದ ಸೇರಿನ ಮೇಲೆ ಬೆಲ್ಲವನ್ನಿಡುವರು ಮದುಮಗಳು ಆ ಸೇರಿಗೆ ಬಲಗಾಲಲ್ಲಿ ಒದ್ದು ಒಳಗೆ ಬರುವಳು. ಹೀಗೆ ಒಳಗೆ ಬರಮಾಡಿಕೊಳ್ಳುವ ಸಂಪ್ರದಾಯಕ್ಕೆ ಮನೆ ತುಂಬಿಸಿಕೊಳ್ಳುವುದು ಎನ್ನುತ್ತಾರೆ. ಆ ರಾತ್ರಿ ಗಂಡಿನ ಮನ ಯಲ್ಲಿರುವ ಮನೆದೇವರ ಹೆಸರಿನಲ್ಲಿ ಗೊಂದಲ ಹಾಕುವರು. ಮದುಮಕ್ಕಳು ಈ ಗೊಂದಲ ಸಮಾರಂಭದಲ್ಲಿ ಹಾಜರಿರುವುದು ಕಡ್ಡಾಯವಾಗಿರುತ್ತದೆ. ಇದು ಸೊಸೆಗೆ ಸಂಬಂಧಿಸಿದರೆ ಅಳಿಯನು ಮೊದಲ ಸಲ ಮಾವನ ಮನೆಗೆ ಹೋದಾಗ ಮನೆ ಹೊಗಿಸಿ ಕೊಳ್ಳುವ ಕಾರ್ಯಕ್ರಮವೂ ಇರುತ್ತದೆ. ಆಧುನಿಕ ಸಂದರ್ಭದಲ್ಲಿ ಸಿನಿಮಾ ಪ್ರಭಾವ ಹೆಚ್ಚಾಗಿ ಪ್ರಾದೇಶಿಕ ಸಂಸ್ಕೃತಿಯ ಸಾಂಪ್ರದಾಯಿಕ ಆಚರಣೆಗಳಲ್ಲಿ ಅನೇಕ ಪರಿವರ್ತನೆಗಳಾಗಿವೆ. *(ಎ.ಆರ್.ಕೆ.)*

ಮನೆ ಬಳಕೆಯ ವಸ್ತುಗಳು: ಅನಾಗರಿಕ ಅಲೆಮಾರಿತನದಿಂದ ಆಧುನಿಕ ನಾಗರಿಕತೆಯ ಬೆಳವಣಿಗೆಯಲ್ಲಿ ಮನುಷ್ಯ ಸಮಾಜ ಅನೇಕ ಬದಲಾವಣೆಗಳನ್ನು ಹೊಂದುತ್ತ ಸಾಗಿದೆ. ತನ್ನ ಸುತ್ತಲಿನ ಪರಿಸರದಲ್ಲಿ ಸುಲಭವಾಗಿ ಸಿಗುವ ಕಲ್ಲು, ಮಣ್ಣು, ಮರ, ಲೋಹಾದಿ ಧಾತುಗಳಿಂದ ತನ್ನ ದೈನಂದಿನ ಅವಶ್ಯಕತೆಗೆ ತಕ್ಕ ವಸ್ತುಗಳ ತಯಾರಿಕೆಯು ಸಾಮಾನ್ಯ. ಮನೆ ಬಳಕೆಯ ವಸ್ತುಗಳಲ್ಲಿ ಮೂಲಭೂತವಾಗಿ ಅಡಿಗೆ ಮಾಡಲು, ಧಾನ್ಯ ಸಂಗ್ರಹಿಸಲು, ನೀರು ಶೇಖರಿಸಲು ಕಲ್ಲು ಮಣ್ಣಿನ ವಸ್ತುಗಳ ಅಗತ್ಯ ಹೆಚ್ಚಾಗಿತ್ತು. ಆದ್ದರಿಂದ ಈ ವಸ್ತುಗಳನ್ನು ಅವುಗಳ ತಯಾರಿಕೆಯ ಧಾತುಗಳನ್ನಾಧರಿಸಿ ಹೀಗೆ ವಿಂಗಡಿಸಬಹುದು.

ಮಣ್ಣಿನ ವಸ್ತುಗಳು: ಹೊಳೆ, ಹಳ್ಳ, ಕೆರೆಗಳಿಂದ ನೀರು ತರಲು ಮಣ್ಣಿನ ಮಡಕೆ (ಗಡಿಗೆ)ಗಳನ್ನು ಬಳಸುತ್ತಿದ್ದರು. ಅಲ್ಲಿಂದ ಹೊತ್ತು ತಂದ ನೀರನ್ನು ಶೇಖರಿಸಿ ಇಡಲು ನೆಲದಲ್ಲಿ ಅರ್ಧಭಾಗ ಹೂಳಿಟ್ಟ ರಂಜಣಿಗೆ (ಮಣ್ಣಿನ ಅಗಲ ನೆಲದಲ್ಲಿ ಮಾಡಿದ ತಗ್ಗು ಬಾಯಿಯ ಪಾತ್ರೆ)ಗಳನ್ನು ಅಥವಾ ಬಾನಿಗಳನ್ನು ಮತ್ತು ಗಡಿಗೆಗಳನ್ನು ಬಳಸುತ್ತಿದ್ದರು. ಧಾನ್ಯಗಳ ಸಂಗ್ರಹಣೆಗೆ ಗುಮ್ಮಿ ದೊಡ್ಡ ಗಾತ್ರದ ಮಡಕೆಗಳನ್ನು ಉಪಯೋಗಿಸುತ್ತಿದ್ದರು. ಇವುಗಳನ್ನು ದೊಡ್ಡ ಗಾತ್ರದಿಂದ ಚಿಕ್ಕ ಗಾತ್ರದವರೆಗೆ ಒಂದರ ಮೇಲೊಂದು ಜೋಡಿಸಿಡುತ್ತಿದ್ದು ಇದಕ್ಕೆ ಅಡಕಿಲು ಎನ್ನುತ್ತಾರೆ. ಕೆಲವು ಕಡೆಗಳಲ್ಲಿ ರಂಜಣಿಗೆಗಳಲ್ಲಿಯೂ ದವಸ ಧಾನ್ಯ (ಕಾಳು–ಕಡ್ಡಿ)ಗಳನ್ನು



ರಂಜಣಗಿ

ತುಂಬಿಸಿಡುತ್ತಿದ್ದರು. ಹೀಗೆ ಕಾಳುಕಡಿ ಹಪ್ಪಳ ಸಂಡಿಗೆ, ಶ್ಯಾವಿಗೆಗಳನ್ನು ತುಂಬಿಸಿಟ್ಟ ಅಡಕಿಲನ್ನು ಪೂಜಿಸುವ ಪದ್ಧತಿ ಇದೆ. ಹಾಲು, ಮೊಸರು ಬೆಣ್ಣೆ, ತುಪ್ಪಕ್ಕಾಗಿ ಪ್ರತ್ಯೇಕವಾದ ಗಡಿಗೆಗಳನ್ನು ಬಳಸುವರು. ಈ ಗಡಿಗೆಗಳನ್ನು ಕ್ರಿಮಿಕೀಟಗಳಿಂದ, ಬೆಕ್ಕು, ಇಲಿಗಳಿಂದ ರಕ್ಷಿಸಲು ನೆಲುವುಗಳನ್ನು ಬಳಸುವರು. ಹಗ್ಗದಿಂದ ಮಾಡಿದ ನೆಲುವುಗಳನ್ನು ಮನೆಯ ಭಾವಣಿಗೆ ಹೊಂದಿಕೊಂಡಿರುವ ತೊಲೆಗಳಿಗೆ ಕಟ್ಟಿರುತ್ತಾರೆ. ಇದಕ್ಕೆ ನೆಲು, ನೆಲುವು ಅಥವಾ ಸೀಕಾ ಎಂತಲೂ ಕರೆಯುವರು. ಅಡಿಗೆ ಮಾಡಲು ವಿವಿಧ ಆಕಾರದ ಬಾಯಿಗಳಿರುವ ಪಾತ್ರೆಗಳನ್ನು, ಎಣ್ಣೆಗಾಗಿ ಕುಡಿಕೆಗಳನ್ನು ಬಳಸುವರು. ದೇವರ ಮುಂದೆ ದೀಪ ಉರಿಸಲು ಹಣತೆ/ಪಣತಿಗಳನ್ನು ಮತ್ತು ಅಡಿಗೆ ಮಾಡಲು ಮಣ್ಣಿನಿಂದ ತಯಾರಿಸಿದ ಒಲೆಗಳನ್ನು ಬಳಸುವುದು ಸಾಮಾನ್ಯ ಮೀನಿನ ಸಾರು, ಮಾಂಸದಡಿಗೆ ಮಾಡಲು ಮುಚ್ಚಳವಿರುವ ಅಗಲ ಬಾಯಿಯ ಪಾತ್ರೆ (ಪಳ್ಳು)ಯ ಬಳಕೆಯಿತ್ತು. ರೊಟ್ಟಿ ಸುಡಲು ಕಾವಲಿ/ಹಂಚನ್ನು ಬಳಸುವರು ಮಣ್ಣು, ಮಣ್ಣಿನ ಪಾತ್ರೆಯಲ್ಲಿ


ಬೇಯಿಸಿದ ಆಹಾರ ಆರೋಗ್ಯಕ್ಕೆ ಹಿತಕರ, ಆದ್ದರಿಂದಲೇ ಇಂದು ಮಣ್ಣಿನ ಸ್ನಾನ, ಮಣ್ಣುಲೇಪನ ಮೊದಲಾದ ಚಿಕಿತ್ಸಾ ವಿಧಾನಗಳು ಮತ್ತೆ ಮರುಕಳಿಸಿವೆ ಹಾಗೂ ಜನಪ್ರಿಯವಾಗಿದೆ.

ಕಟ್ಟಿಗೆ/ಬಿದಿರಿನಿಂದ ತಯಾರಿಸಿದ ವಸ್ತುಗಳು: ರೊಟ್ಟಿ ಮಾಡುವಾಗ ಹಿಟ್ಟು ನಾದಲು (ಕಲಸಲು) ಮರದಿಂದ ಮಾಡಿದ ಪರಾತ (ಕಾಟವಟ, ತಮರಿ)ವನ್ನು, ಮಾಡಿದ ರೊಟ್ಟಿಯನ್ನು ಹಾಕಲು ಬಿದಿರಿನ ಬುಟ್ಟಿಯನ್ನು ಮತ್ತು ಅದರ ಮೇಲೆ ಮುಚ್ಚಲು ದಿರಡಿಯನ್ನು ಬಳಸುವರು. ಅನ್ನದ ಗಂಜಿ ಬಸಿಯಲು ಜಿಬಲಿಯನ್ನು ಹೋಳಿಗೆ ಮತ್ತು ಕರಿದ ಹಪ್ಪಳ ಸಂಡಿಗೆ ಹಾಕಲು ತಾಸಬುಟ್ಟಿಯನ್ನು ಬಳಸಿದರೆ, ಹಬ್ಬ–ಹರಿದಿನಗಳಲ್ಲಿ ಮಾಡಿದ ಕರಿದ ತಿಂಡಿಗಳನ್ನು ಸುರಕ್ಷಿತವಾಗಿಡಲು ಬಿದಿರಿನ ಕರಂಡಿಗೆ ಹಣ್ಣು ಹಂಪಲು ಹಾಕಿ ಹೊತ್ತೊಯ್ಯಲು ಬಿದಿರಿನ ಬುಟ್ಟಿ.

ಕುಳಿತುಕೊಳ್ಳಲು, ಮಲಗಲು ಈಚಲು ಗರಿಯ ಚಾಪೆಯನ್ನು, ಹುಲ್ಲಿನ ಚಾಪೆಯನ್ನು ಬಳಸುವರು. ನೆಂಟರಿಷ್ಟರು ಬಂದಾಗ ವಿರಾಮವಾಗಿ ಕುಳಿತುಕೊಳ್ಳಲು ಬೆತ್ತದಿಂದ ಮಾಡಿದ ಆಸನಗಳು, ಸೆಣಬಿನ ಹಗ್ಗದಿಂದ ತಯಾರಿಸಿದ ಹೊರಸಿನಂತಿರುವ ಸಣ್ಣ ಚೌಕಿಗಳು, ಕಟ್ಟಿಗೆಯಿಂದ ಮಾಡಿದ ಮಣೆಗಳು, ಬಾಣಂತಿಯರಿಗೆ ಮಲಗಲು ಮತ್ತು ವಿಶ್ರಾಂತಿಯ ಕಾಲದಲ್ಲಿ ಅಡ್ಡಾಗಲು ಹೊರಸುಗಳು, ಪೂಜಾ ಸಂದರ್ಭದಲ್ಲಿ ಜಗಲಿಯ ಮೇಲಿಡಲು ಚೌರಂಗ, ಮಣಿಚೌಕ, ಮಂಟಪ; ಬೆತ್ತ ಇಲ್ಲವೆ ಕಟ್ಟಿಗೆಯಿಂದ ಕೂಸಿಗಾಗಿ ಮಾಡಿದ ತೊಟ್ಟಿಲು; ವಿದ್ಯುತ್ ಯಂತ್ರಗಳಿಲ್ಲದ ಕಾಲದಲ್ಲಿ ಭತ್ತಕುಟ್ಟಿ ಅಕ್ಕಿ ಬೇರ್ಪಡಿಸಲು ಬಳಸುವ ಒನಕೆಗಳು, ಕಾಳು ಅಳೆಯಲು ಸೇರು, ಪಾವು ಮೊದಲಾದ ಮಾಪಕಗಳು, ಶಾವಿಗೆ, ಚಕ್ಕಲಿ ಮಾಡುವ ಒರಳು, ಸೌಟು, (ಸೌಂಟು) ಉಪ್ಪಿನ ಕಾಯಿ ತೆಗೆಯಲು ಉದ್ದನೆಯ ಚಮಚ ಮಜ್ಜಿಗೆ ಮಾಡಲು ರ್‍ಯಾಂವಿ (ರೇವಿಗೆ), ಮಜ್ಜಿಗೆ ಕಂಬ, ಪೆಟ್ಟಿಗೆಗಳು–ಶ್ರೀಮಂತರು ನಗನಾಣ್ಯಗಳನ್ನಿಡಲು ಬಳಸಿದರೆ, ಬಡವರು ಬಟ್ಟೆ ಇತ್ಯಾದಿ ಬೆಲೆಬಾಳುವ ವಸ್ತುಗಳನ್ನು ಇಡಲು ಉಪಯೋಗಿಸುತ್ತಿದ್ದರು. ರೊಕ್ಕ ರೂಪಾಯಿ ಇಡುವಂಥ ಉಳ್ಳವರ ಮನೆಗಳಲ್ಲಿ ಈಗಲೂ ದೀಪಾವಳಿಯ ಲಕ್ಷ್ಮೀ ಪೂಜೆಯಲ್ಲಿ ಇಂಥ ಪೆಟ್ಟಿಗೆಯನ್ನು ಪೂಜಿಸುವ ವಾಡಿಕೆಯಿದೆ. ಈ ಪೆಟ್ಟಿಗೆಗಳು ತುಂಬಾ ಕಲಾತ್ಮಕವಾಗಿ ಹೊರಮೈ ಸೌಂದರ್ಯವನ್ನು ಹೊಂದಿದ್ದರೆ ಒಳಗಡೆ ಕಳ್ಳರಿಗೆ ಬೇಗನೆ ಗೊತ್ತಾಗದಂಥ ಕೌಶಲ್ಯದಿಂದ ಖಾನೆ (ಭಾಗ)ಗಳನ್ನು ನಿರ್ಮಿಸಿರುತ್ತಾರೆ.

ಚಪಾತಿ ಲಟ್ಟಿಸಲು ಕಟ್ಟಿಗೆಯ ಪೋಳಪಾಟ ಮತ್ತು ಲಟ್ಟಣಿಗೆ, ಕಡಚಿಗೆ, ಬ್ಯಾಳಿ ಮುಗುಚಲು ಗೋಟಣಿ ಕಾಳುಕಡಿ ಹಸನು ಮಾಡಲು ಕೇರಲು ಬಿದಿರಿನ ಮೊರ, ಬೇಸಿಗೆಯಲ್ಲಿ ಗಾಳಿ ಹಾಕಿಕೊಳ್ಳಲು ಬಿದಿರಿನ ಬೀಸಣಿಗೆ (ಪಂಖಾ), ಹೂ–ಹಣ್ಣುಗಳನ್ನಿಡಲು ಸುಂದರ ಪಾತ್ರೆಗಳು ಇತ್ಯಾದಿ.

ಕಲ್ಲು/ಕಲ್ಲಿನಿಂದ ಮಾಡಿದ ವಸ್ತುಗಳು: ಜನಪದ ಗರತಿ ಬೆಳಕು ಹರಿಯುವ ಮುಂಚೆಯೇ ಅಂದಿನ ಅಡುಗೆಗೆ ಬೇಕಾದ ಹಿಟ್ಟು ಬೀಸುವ ಸಂಪ್ರದಾಯವಿತ್ತು. ಬೀಸುವ ಕಲ್ಲು ಇಂದು ಮದುವೆ ಮೊದಲಾದ ಸಂದರ್ಭದಲ್ಲಿ ಪೂಜೆಗೊಳ್ಳುವುದಕ್ಕೆ ಮಾತ್ರ ಮೀಸಲಾಗಿವೆ. ಇಂದಿನ ವಿದ್ಯುತ್ ಗಿರಣಿಯಲ್ಲಿ ಬೃಹದಾಕಾರದ ಬೀಸುವ ಕಲ್ಲಿದ್ದರೆ ಅಂದು ಕೈಯಿಂದಲೇ ಬೀಸುವುದಕ್ಕಾಗಿ ಹಲವು ಗಾತ್ರದ ಸುಂದರ ಕೆತ್ತನೆಯ ಬೀಸುಕಲ್ಲುಗಳಿದ್ದುವು.



ಬೀಸುವಕಲು

ಗೋಲಾಕರದ ಚಪ್ಪಟೆಯ ಎರಡು ಕಲ್ಲುಗಳು ಒಂದರ ಮೇಲೊಂದು ಇದ್ದು ನಡುವೆ ಕಾಳು ಹಾಕಲು ಬಾಯಿ ಇರುತ್ತದೆ. ಮೇಲಿನ ಕಲ್ಲಿಗೆ ಕಟ್ಟಿಗೆಯ ಗೂಟವಿರುತ್ತದೆ. ಈ ಗೂಟವನ್ನು ಹಿಡಿದು ತಿರುಗಿಸಿದಾಗಲೇ ಕಾಳೆಲ್ಲ ಹಿಟ್ಟಾಗಿ ಹೊರಚೆಲ್ಲುತ್ತದೆ. ಒರಳು ಸಹ ಕಲ್ಲಿನಲ್ಲಿಯೇ ಕಟೆಯಲಾಗಿದ್ದು, ಧಾನ್ಯ ಕುಟ್ಟಲು, ಮೆಣಿಸಿನಕಾಯಿ ಖಾರಪುಡಿ ಮಾಡಲು ಹಿಂಡಿ ಕುಟ್ಟಲು, ಹೂರಣ ರುಬ್ಬಲು ಇನ್ನೂ ಹತ್ತಾರು ಸಂದರ್ಭಗಳಲ್ಲಿ ಬಳಕೆಯಾಗುತ್ತದೆ. ಇಡ್ಲಿ, ದೋಸೆಗಾಗಿ ಹಿಟ್ಟು ರುಬ್ಬಲು ಕಲ್ಲಿನ ರುಬ್ಬಗುಂಡು ಅತ್ಯವಶ್ಯಕ. ಖಲಬತ್ತು/ಖಲಗಲ್ಲು ದೋಣಿ ಆಕಾರದಲ್ಲಿ ಕಲ್ಲಿನಿಂದ ಮಾಡಿದ ವಸ್ತು ಇದರಲ್ಲಿ ಸಣ್ಣ ಪ್ರಮಾಣದಲ್ಲಿ ಅಡಿಗೆಗೆ ಬೇಕಾದ ಏನನ್ನಾದರೂ ಕುಟ್ಟಬಹುದು, ಚಟ್ನಿ ರುಬ್ಬಬಹುದು ಹೀಗೆ ಕುಟ್ಟಲು ರುಬ್ಬಗುಂಡಿಗಿಂತ ಚಿಕ್ಕದಾದ ಶಂಕುವಿನಾಕಾರದ ಕುಟ್ಟುವ ಕಲ್ಲು ಇರುತ್ತದೆ. ರೊಟ್ಟಿ ಬಡಿಯಲು ಮೊದಲು ಕಟ್ಟಿಗೆಯ ಪರಾತ ಬಳಸಿದರೆ ಇತ್ತೀಚಿನವರು ಒಂದು ಬಂಡೆಯನ್ನು ದುಂಡಾಕಾರದಲ್ಲಿ ಕತ್ತರಿಸಿ (ಕಟೆಯಿಸಿ) ರೊಡ್ಡಿ ಬಂಡಿಯಾಗಿಸಿ ಅದನ್ನು ಬಳಸುತ್ತಾರೆ. ಇಂದಿನ ಪೀಳಿಗೆಯವರು ಗ್ಯಾಸ್ ಒಲೆಯ ಕಟ್ಟೆಯನ್ನೇ ರೊಟ್ಟಿ ಕಲ್ಲನ್ನಾಗಿಸಿದ್ದಾರೆ. ಎಲೆಯಡಿಕೆ ಪುಡಿ ಇಲ್ಲವೆ ಗರಂ ಮಸಾಲೆಗಳನ್ನು ಅರೆಯಲು ಕುಟ್ಟಾಣಿಗಳು. ದನಕರುಗಳಿಗೆ ನೀರು ಕುಡಿಸಲು ಕಲ್ಲಿನ ಡೋಣಿಗಳಿದ್ದವು. ನೀರು ಶೇಖರಿಸಿಡಲು ಆರು ಬಂಡೆಗಲ್ಲುಗಳಿಂದ ಹಾಸುಗಲ್ಲಿನಿಂದ ಮಾಡಿದ ಕೇಲು/ಕೇಲ್‌ನ ಬಳಕೆಯಿದೆ.

ಲೋಹದಿಂದ ತಯಾರಿಸಿದ ವಸ್ತುಗಳು: ಕಾಲಬದಲಾದಂತೆ ಬುದ್ಧಿಯ ಬಳಕೆಯಿಂದ ಅನೇಕ ಆವಿಷ್ಕಾರಗಳಾಗಿ ವಸ್ತುಗಳನ್ನು ತಯಾರಿಸುವ ಮೂಲಧಾತುಗಳು ಬದಲಾಗುತ್ತಾ ಬಂದಿವೆ. ಹಣವುಳ್ಳವರು ಮಡಿಕೆ ಕುಡಿಕೆಯ ಬದಲಾಗಿ ಕಂಚಿನ, ತಾಮ್ರದ,

ಹಿತ್ತಾಳೆಯ ಇಲ್ಲವೆ ಕಬ್ಬಿಣದ ವಸ್ತುಗಳನ್ನು ಬಳಸಲು ಆರಂಭಿಸಿದರು. ಇತ್ತೀಚಿಗೆ ಸ್ಟೀಲ್ ಇಂಡಾಲಿಯಂ (ಜರ್ಮನ್) ಪ್ಲಾಸ್ಟಿಕ್, ಫೈಬರ್ ಮತ್ತು ನಾನ್‌ಸ್ಟಿಕ್‌ಗಳ ಯುಗ ಆರಂಭವಾಗಿದೆ.

ತಾಮ್ರ ಇಲ್ಲವೆ ಹಿತ್ತಾಳೆಯ ತಟ್ಟೆ, (ತಾಟು) ಲೋಟ (ಗ್ಲಾಸು) ತಂಬಿಗೆ (ಚರಗಿ) ಕೊಡ, ಹಾಂಡೆ, ಬುಟ್ಟಿ, ಪರಾತ (ತಾಬಂಡಿ) ನಳಪಾತ್ರೆ, ತಪ್ಪೇಲಿ, ವಾಟಗಾ, ಡಬ್ಬಿ, ಚಮಚ, ಬೋಗುಣಿ ಮೊದಲಾದ ಪಾತ್ರೆ ಪಗಡಗಳನ್ನು ದೊಡ್ಡಗಾತ್ರದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಬಳಸುವವರು ಶ್ರೀಮಂತರೆನಿಸಿಕೊಳ್ಳುತ್ತಿದ್ದರು. ತಾಮ್ರದ ಪಾತ್ರೆಯಲ್ಲಿ ನೀರು ತುಂಬಿಸಿಟ್ಟು ಬಳಸುವುದು ಇವತ್ತಿಗೂ ದೇಹದ ಆರೋಗ್ಯಕ್ಕೆ ಹಿತಕರವಾಗಿದೆ. ಮಗಳ ಮದುವೆಯಲ್ಲಿ ತವರಿನವರು ಕನಿಷ್ಠ ಪಕ್ಷ ಐದು ಹಿತ್ತಾಳೆಯ ಪಾತ್ರೆಗಳನ್ನು ಸೋದರ ಮಾವ ಒಂದು ತಾಮ್ರದ ಕೊಡವನ್ನು ಕೊಡುವ ಪರಿಪಾಠ ಇಂದಿಗೂ ರೂಢಿಯಲ್ಲಿದೆ. ಅಡುಗೆ ಮಾಡಲು ಅಗಲ ಬಾಯಿಯ ಬೋಗುಣಿಯಂತಿರುವ ಹಂಡೆಗಳನ್ನು (ಒಳಗೆಡೆ ಕಲಾಯಿ ಮಾಡಿರುತ್ತಾರೆ) ಈಗಲೂ ಈ ಭಾಗದಲ್ಲಿ ಬಳಸುತ್ತಾರೆ. ಎಲೆಯಡಿಕೆ ತಿನ್ನುವವರ ಪೆಟ್ಟಿಗೆ ಹಾಗೂ ಪೀಕದಾನಿಗಳು ಹಿತ್ತಾಳೆಯಿಂದ ಮಾಡಿದ್ದಿರುತ್ತದೆ. ಸ್ನಾನಕ್ಕಾಗಿ ನೀರು ಕಾಯಿಸಲು ತಾಮ್ರದ ಬಂಬ್‌ನ್ನು ಬಳಸುವರು. ಇವತ್ತಿನ ಗುಜರಾತ್‌ಗ್ಯಾಸ್ ಒಲೆಯ ರಚನೆಗೆ ಅಂದಿನ ಬಂಬ್ ಮಾದರಿಯಾಗಿರಬೇಕು. ಬಚ್ಚಲು ಮನೆಯಲ್ಲಿ ಕಬ್ಬಿಣದ/ಸ್ಟೀಲಿನ ಹಿತ್ತಾಳೆಯ/ಬಕೆಟ್ ಇತ್ತು ಈ ಪ್ಲಾಸ್ಟಿಕ್ ಬಕೆಟಗಳೇ ತುಂಬಿ ಹೋಗಿವೆ. ತಂಬಿಗೆಯ ಜಾಗವನ್ನು ಮಗ್‌ಗಳು ಆಕ್ರಮಿಸಿಕೊಂಡಿವೆ.

ಪೂಜೆಯ ಪಾತ್ರೆಗಳಾದ ದೀಪ, ಧೂಪಾರತಿ, ಕಳಸ, (ಘಂಟಿ) ಗಂಟೆ, ನೇವದಿ ತಾಟು. ಕಳಸದ ತಾಟು (ಕಂಚಿಕಳಸ) ಹೂಬುಟ್ಟಿ, ಈಬತ್ತಿ ಬುಟ್ಟಿ ಹಿತ್ತಾಳೆಯವೇ ಆಗಿರುತ್ತವೆ. ಸಿರಿವಂತರಲ್ಲಿ ಬೆಳ್ಳಿಯದಾಗಿರುತ್ತವೆ. ದೇವರ ಮೂರ್ತಿಗಳು, ಹಿತ್ತಾಳೆಯದಾದರೆ, ಮನೆತನದಲ್ಲಿ ಸತ್ತ ಹಿರಿಯರ ನೆನಪಿನಲ್ಲಿ ಮಾಡಿಸಿದ ರೂಪಗಳು ಬೆಳ್ಳಿಯದಾಗಿರುತ್ತವೆ. ವೈದಿಕರಲ್ಲಿ ವರಪೂಜೆಯದಿನ ವರನಿಗೆ ಉಣಬಡಿಸಲು ಬೆಳ್ಳಿತಾಟು ಬಟ್ಟಲು ಗ್ಲಾಸು ಇತ್ಯಾದಿ ಬಳಸುವರು. ಶ್ರಾವಣ ಶುಕ್ರವಾರ ಲಕ್ಷ್ಮೀಪೂಜೆಗೆ ದೇವಿ ಮುಖವಾಡವನ್ನು, ತೆಂಗಿನಕಾಯಿ ಇಡಲು ತಾಮ್ರದ ತಂಬಿಗೆಯನ್ನು ಮಾಡಿದ್ದಿರುತ್ತದೆ. ಕಬ್ಬಿಣದಲ್ಲಿ ಮಾಡಿದ ರೊಟ್ಟಿ ಹಂಚು, ಕಡಾಯಿ, ಈಳಿಗೆ ಮಣೆ, ಝಾರಿ ಹೋಳಿಗೆ ಹಂಚು, ಕಡಚಿ ಚಿಮ್ಮಟಿಗೆ ಇತ್ಯಾದಿ ಬಳಸುವರು. ಆಯಾ ಜನಸಮುದಾಯ, ಹಾಗೂ ಅವರವರ ಅಂತಸ್ತನ್ನು ತಿಳಿಸಲು, ಸಂಸ್ಕೃತಿಯನ್ನು ಬಿಂಬಿಸುವ ಅವರು ಬಳಸುವ ವಸ್ತುಗಳು ಸಹಾಯ ಮಾಡುತ್ತವೆ. *(ಎ.ಆರ್.ಕೆ.)*

ಮನೆಯ ಭಾಗಗಳು: ಜಗತ್ತಿನಲ್ಲಿ ಮನುಷ್ಯನಿಗೆ 7000 ವರ್ಷಗಳ ಹಿಂದೆ ಕ್ರಿ.ಪೂ. 5000ದ ಸುಮಾರಿಗೆ ಮನೆ ಕಟ್ಟುವ ಕಲ್ಪನೆ ಬಂದಿತು. ಭಾರತದಲ್ಲಿ ಕ್ರಿ.ಪೂ. 300ಕ್ಕೂ ಹಿಂದೆ ವಸತಿಯಿತ್ತೆಂದು ತಿಳಿದು ಬಂದಿದೆ. ಕ್ರಿ.ಪೂ. 1000–300ರಲ್ಲಿ ಸಂಹಿತೆಗಳ ಕಾಲದಲ್ಲಿ ಹರ್ಮ್ಯ ಎಂಬುದಿತ್ತು. ಹರ್ಮ್ಯ ಎಂದರೆ ಹಲವಾರು ಕೊಠಡಿಗಳಿರುವ ದೊಡ್ಡಮನೆ. 'ವೇಶ್ಮ' ಎಂದರೆ ಸಾಮಾನ್ಯ ಜನರ ಬಳಕೆಗಾಗಿ ಕಟ್ಟಿದ ಸಣ್ಣ ಮನೆ. 'ಪತ್ನೀ ಸದನ' ಸ್ತ್ರೀಯರ ವಾಸ ಗೃಹವೆಂದು, ಪ್ರಾಣಿ ದನಕರುಗಳಿಗಾಗಿ ದೊಡ್ಡಿಗಳನ್ನು ಕಟ್ಟುತ್ತಿದ್ದರು. ಬೌದ್ಧ ಸಾಹಿತ್ಯದ ಪ್ರಕಾರ ಬೌದ್ಧರ ಕಾಲದಲ್ಲಿ (ಕ್ರಿ.ಪೂ. 6ನೆಯ ಶತಮಾನ) ಆಗಿನ ಮನೆಗಳಲ್ಲಿ ಹಲವಾರು ಕೋಣೆಗಳಿದ್ದುವು. ಮಲಗುವ ಕೋಣೆ, ಪೂಜಾ ಗೃಹ, ಉಗ್ರಾಣ, ಪಡಸಾಲೆ. ಊಟದ ಕೋಣೆ ಅಲ್ಲದೆ ಉಪ್ಪರಿಗೆಗಳಿರುವ ಬಹುಮಹಡಿಯ ಗೃಹಗಳಿದ್ದವು. ಮರಮುಟ್ಟುಗಳಿಂದ ನಿರ್ಮಿಸಿದ ಮನೆಗಳೇ ಹೆಚ್ಚಾಗಿದ್ದುವು.

ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಅತ್ಯಂತ ಎತ್ತರದ ಗೋಡೆಗಳಿರುವ ವಿಶಾಲ ಗಾತ್ರದ ಮನೆಗಳು ಕಂಡು ಬರುತ್ತವೆ. ಸರ್ವೇ ಸಾಮಾನ್ಯವಾಗಿ ಮನೆಯೊಂದರ ಸ್ವರೂಪ ಹಾಗೂ ಅದರ ಭಾಗಗಳನ್ನು ಹೀಗೆ ಗುರುತಿಸಬಹುದು.

ತಲ್‌ಬಾಗಲಾ (ತಲೆಬಾಗಿಲು): ಮನೆಯ ಮುಖ್ಯದ್ವಾರ. ಈಗ ಇರುವಂತೆ ಕಂಪೌಂಡ್ ಗೇಟ್ ಇತ್ಯಾದಿ ಇರುತ್ತಿರಲಿಲ್ಲ. ಈ ಬಾಗಿಲಿನ ಮೇಲ್ಭಾಗದಲ್ಲಿ ಎಡಕ್ಕೂ ಬಲಕ್ಕೂ ಗೋಡೆಯಲ್ಲಿಂದ ಎದ್ದು ಬರುವಂತಿರುವ ಕಟ್ಟಿಗೆಯ ಅಥವಾ ಕಲ್ಲಿನ ಕುದುರೆಯ ಮುಖಗಳನ್ನು ಕೂಡಿಸುತ್ತಿದ್ದರು. ಒಳ ಭಾಗದಲ್ಲಿ ಅಗುಳಿ (ಗುಳಿ) ಹಾಕುತ್ತಿದ್ದರು.

ಕಟ್ಟೆ: ತಲೆಬಾಗಿಲ ಎರಡೂ ಬದಿಗೆ ಕಲ್ಲು, ಮಣ್ಣು, ಬಂಡೆಗಳಿಂದ ನಿರ್ಮಿಸಲ್ಪಟ್ಟ ಎತ್ತರದ ಜಾಗವಿದ್ದು ಅದಕ್ಕೆ ಕಟ್ಟೆ ಎನ್ನುವರು.

ಹೊಸ್ತಿಲು: ಬಾಗಿಲಿನ ಕೆಳ ಭಾಗದಲ್ಲಿ ನೆಲಕ್ಕೆ ಹೊಂದಿಕೊಂಡಂತಿರುವ ಮರದ ಪಟ್ಟಿ ಬಾಗಿಲ ತಳಪಟ್ಟಿ ಹೊಸಮನೆ ಪ್ರಾರಂಭವಾಗುವ ಸ್ಥಳ ಎಂಬ ಅರ್ಥದಲ್ಲಿ ಹೊಸತಿಲು, ಹೊಸಿಲು, ಹೊಸ್ತಿಲು, ಇತ್ಯಾದಿ ಪದಗಳಿಂದ ಇದನ್ನು ಗುರುತಿಸುವರು. ಮನೆಯ ಹೆಣ್ಣುಮಕ್ಕಳು ಪ್ರತಿನಿತ್ಯ ಹೊಸ್ತಿಲನ್ನು ಸಾರಿಸಿ ರಂಗೋಲಿ ಇಡುವರು, ಅರಿಶಿಣ ಕುಂಕುಮದಿಂದ ಅಲಂಕರಿಸುವರು. ಹೊಸತಿಲು ಪವಿತ್ರ ಸ್ಥಾನವೆಂದು ಭಾವಿಸಲಾಗಿದೆ.

ಜೇಳಜಿ (ಬಂಕ): ತಲೆಬಾಗಿಲಿನಿಂದ ಒಳಗೆ ಪ್ರವೇಶಿಸಿದ ಕೂಡಲೇ ಎರಡೂ ಬದಿಗಳಲ್ಲಿ ಎತ್ತರದ ಕಟ್ಟೆಗಳನ್ನು ಕಟ್ಟಿರುತ್ತಾರೆ. ಅದಕ್ಕೆ ಜೇಳಜಿ 'ಝುಳಜಿ' ಅಥವಾ 'ಬಂಕ' ಎನ್ನುವರು.

ಅಂಗಳ: ಜೇಳಜಿಯನ್ನು ದಾಟಿದ ನಂತರ ಅಂಗಳ ಬರುತ್ತದೆ. ಇದು ಮನೆಯೊಳಗೆ ಗಾಳಿ ಬೆಳಕು ಸರಾಗವಾಗಿ ಪ್ರವೇಶಿಸಲು ಅನುಕೂಲ ಮಾಡಿಕೊಡುವ ಜಾಗವಾಗಿರುತ್ತದೆ.

ಪಡಸಾಲಿ: ಅಂಗಳದಿಂದ ಒಂದೆರಡು ಮೆಟ್ಟಿಲು ಹತ್ತಿದ ಮೇಲೆ ಉದ್ದನೆಯ ಪಡಸಾಲಿ ಅಥವಾ ಪಡಶಾಲೆಯಿರುತ್ತದೆ. ಮನೆಯ ಉದ್ದಗಲಕ್ಕೂ ಹೊಂದಿಕೊಂಡಿರುವ ಈ ಜಾಗಕ್ಕೆ ಪಟ್ಟಶಾಲಾ, ಮೊಗಸಾಲೆ, ಹಜಾರ, ಚಾವಡಿ, ಹೀಗೆ ಒಂದೊಂದು ಪ್ರದೇಶದಲ್ಲಿ ಒಂದೊಂದು ಹೆಸರಿನಿಂದ ಕರೆಯುತ್ತಾರೆ. ಉತ್ತರ ಕರ್ನಾಟಕವನ್ನು ಹೊರತುಪಡಿಸಿ ಇತರ ಭಾಗಗಳಲ್ಲಿ ಇದಕ್ಕೆ 'ಜಗಲಿ' ಎಂಬ ಹೆಸರಿನಿಂದಲೂ ಗುರುತಿಸುತ್ತಾರೆ. ಇದೊಂದು ಬಹು ಉಪಯೋಗಿ ಸ್ಥಳವೆನ್ನಬಹುದು.

ಅಡುಗೆಮನೆ: ಪಡಸಾಲಿಯ ಮುಂದಕ್ಕೆ ಮೂಲೆಯಲ್ಲಿ ಅಡುಗೆ

ಮನೆ ಇರುತ್ತದೆ. ಅಲ್ಲಿ ಒಲೆಗಳನ್ನು ಹಾಕಿದ್ದು, ಅದೇ ಕೋಣೆಯ ಒಂದು ಮೂಲೆಯಲ್ಲಿ ಬಚ್ಚಲು ಅಥವಾ ಬಚ್ಚಲ ಮನೆ ಇರುತ್ತದೆ. ಈ ಅಡುಗೆ ಮನೆಯೇ ಊಟದ ಕೋಣೆಯೂ ಆಗಿರಬಹುದಾಗಿದೆ. ಒಲೆಯ ಹೊಗೆ ಹೊರ ಹೋಗಲು ಚಿಮಣಿ, ಬೆಳಕು ಒಳಬರಲು ಬೆಳಕಿಂಡಿ ಇರುತ್ತವೆ.

ಬಚ್ಚಲಮನಿ: ಬಚ್ಚಲುಮನೆಯಲ್ಲಿ ನೀರೊಲಿ (ನೀರು ಕಾಯಿಸಲು ಹಾಕಿದ ಒಲೆ) ಇರುತ್ತದೆ. ಒಂದು ಬದಿಯಲ್ಲಿ ತಣ್ಣೀರು ಸಂಗ್ರಹಿಸಿಟ್ಟ ಪರಿಶಿಯಿಂದ ಕಟ್ಟಲಾದ ಕೀಲು ಇರುತ್ತದೆ. ಅದು ಕೆಲವೆಡೆ ಗೋಡೆಯಲ್ಲಿಯೇ ನಿರ್ಮಿಸಿರುತ್ತಾರೆ.

ನಡುವಿನ ಮನೆ: ನಡುವಿನ ಮನೆಯ ಇನ್ನೊಂದು ಬದಿಯಲ್ಲಿ ದೇವರಮನಿ ಇರುತ್ತದೆ. ಇದಕ್ಕೆ ಹಿರಮನಿ ಅಂತಲೂ ಕರೆಯುವರು. ಈ ಮನೆಯಲ್ಲಿ ಧನ-ಧಾನ್ಯಾದಿ ಸಂಗ್ರಹಣೆಗಾಗಿ ಅಡಕಿಲು, ಪೆಟ್ಟಿಗೆ, ಇತ್ಯಾದಿಗಳಿದ್ದು ಒಂದು ಮೂಲೆಯಲ್ಲಿ ಜಗಲಿ ಎಂದರೆ ದೇವರ ಜಗಲಿ ಇರುತ್ತದೆ. ದೇವರುಗಳನ್ನು ಕೂಡಿಸಿ ಪೂಜಿಸುವ ಕಟ್ಟೆ. ಮನೆ ಆದ ನಂತರ ಒಳ್ಳೆ ಮುಹೂರ್ತದಲ್ಲಿ 'ಜಗಲಿ'ಯನ್ನು ಕಟ್ಟಿಸುವರು ಸಾಮಾನ್ಯವಾಗಿ ಜಗಲಿಯು ನೆಲದಿಂದ ಸ್ವಲ್ಪ ಎತ್ತರದಲ್ಲಿರುತ್ತದೆ. ಇದನ್ನು ಕಟ್ಟುವಾಗ ತಳದಲ್ಲಿ ಸಂಪತ್ತಿನ ರೂಪದಲ್ಲಿರುವ ಹಣ, ಬೆಳ್ಳಿ, ಬಂಗಾರ ಮತ್ತು ಏನನ್ನಾದರೂ ಸಣ್ಣ ಮಣ್ಣಿನ ಕುಡಿಕೆಯಲ್ಲಿಟ್ಟು ಮುಚ್ಚುವರು. ಕಟ್ಟೆ ಕಟ್ಟಿ ಮೇಲೆ ಪರಸಿ ಹಾಸುವರು ಹಣವುಳ್ಳವರು ಇತ್ತೀಚಿಗೆ ಅಮೃತಶಿಲೆಯಲ್ಲಿ ಜಗಲಿ ಕಟ್ಟಿಸುತ್ತಾರೆ. ತಮ್ಮಿಷ್ಟದಂತೆ ಅದಕ್ಕೆ ಸಿಂಗರಿಸುತ್ತಾರೆ. ಈ ಜಗಲಿಮನಿ/ದೇವರಮನಿ ಪವಿತ್ರವಾದ ಸ್ಥಳ ಇಲ್ಲಿ ತಮ್ಮ ಪೂರ್ವಿಕರಿಂದ ಪೂಜಿತವಾಗುತ್ತಿರುವ ದೇವರುಗಳನ್ನು, ಪ್ರತಿಮೆ, ಪಟಗಳನ್ನು ಮತ್ತು ತಮ್ಮ ಮನೆತನದಲ್ಲಿ ಸತ್ತ ಹಿರಿಯರನ್ನು 'ರೂಪ' ದಲ್ಲಿ ಕೂಡಿಸಿ ಪೂಜಿಸುವರು.

ಹಿತ್ತಿಲು: ಅಡಿಗೆಮನೆಯ ಹಿಂಭಾಗದಲ್ಲಿ ಖಾಲಿಯಿರುವ ಜಾಗದಲ್ಲಿ ಹಿತ್ತಿಲು ಇರುತ್ತದೆ. ಇಲ್ಲಿ ಮನೆಗೆ ಬೇಕಾದಂಥ ಹೂ, ಕಾಯಿ ಪಲ್ಲೆಗಳನ್ನು ಬೆಳೆಸಿರುತ್ತಾರೆ.

ಕೊಟ್ಟಿಗೆ: ದನಕರುಗಳನ್ನು ಕಟ್ಟಲು ತೌತ್ಕಾಲಿಕ ಹುಲ್ಲುಹಾಸಿನ ಚಾವಣಿಯಿರುವ ಜಾಗ. ಇದರಲ್ಲಿ ರಾಸುಗಳಿಗೆ ಬೇಕಾಗುವ ಕಣಕಿ, ಹುಲ್ಲು ಸಂಗ್ರಹಿಸಿರುತ್ತಾರೆ. ದನಕರುಗಳ ವಾಸಕ್ಕಾಗಿರುವ ಈ ಸ್ಥಳಕ್ಕೆ ದೊಡ್ಡಿ, ಹಟ್ಟಿ ಕೊಂಡವಾಡೆ ಇತ್ಯಾದಿ ಹೆಸರುಗಳಿವೆ.

ಅಂಟಾ: ಹಿಂದಿನ ಮನೆಗಳು ಬಹಳಷ್ಟು ಎತ್ತರವಾಗಿರುತ್ತಿದ್ದವು. ಅಡಿಗೆ ಮನೆಯ ಒಂದು ಮೂಲೆಯಲ್ಲಿ ನಿಚ್ಚಣಿಕೆಯಂಥ ಮೆಟ್ಟಿಲುಗಳನ್ನು ಆಳೆತ್ತರದ ಜಾಗದಲ್ಲಿ ಅಂಟಾ (ಅಟ್ಟಾ) ಕಟ್ಟುತ್ತಿದ್ದರು. ಈ ಅಂಟಾದಲ್ಲಿ ಮಲಗುವ ಕೋಣೆಗಳು, ಓದುವ ಕೋಣೆ, ಸಂಗ್ರಹ (ಸ್ಟೋರ್ ರೂಮು) ಕೋಣೆ ಏನೆಲ್ಲ ಇರುತ್ತವೆ.

ಪಾವುಂಟಣಗಿ: ಧುಮ್ಮಸ್ಸು ಬಡಿದ ಚಾವಣಿ ಇದ್ದರೆ ಆ ಮನೆಯ ಮೇಲೇರಲು ಪಕ್ಕದಲ್ಲಿ ಮೆಟ್ಟಿಲು ಇದ್ದು ಅದಕ್ಕೆ ಪಾವುಂಟಣಿಗೆ, ಸೋಪಾನ, ಮೆಟ್ಟಿಲು ಎನ್ನುವರು.

ಅಂಕಣದ ಮನೆ: ಮನೆಯೊಳಗಿನ ಒಂದು ಕಂಬದಿಂದ ಅಥವಾ ತೊಲಿಯಿಂದ ಇನ್ನೊಂದು ತೊಲಿಗೆ ಇರುವ ಅಳತೆಗೆ ಅಂಕಣವೆನ್ನುವರು. ಇಂಥ ಐದಂಕಣದ ಮನೆಯಿಂದ ಹನ್ನೆರಡಂಕಣದ ಮನೆಯವರೆಗೆ ಅಂತಸ್ತಿಗೆ ತಕ್ಕಂತೆ ಮನೆಗಳನ್ನು ಕಟ್ಟುವರು.

ಭಾಂಯಿ: ದೊಡ್ಡಮನೆಗಳಲ್ಲಿ ತಮ್ಮ ಅನುಕೂಲಕ್ಕಾಗಿ ಬಾವಿಗಳನ್ನು ಕಟ್ಟಿಸುತ್ತಿದ್ದರು. ಸಿಹಿ ನೀರಿನ ಬಾವಿ, ಉಪ್ಪ ನೀರಿನ ಬಾವಿಗಳಿರುತ್ತಿದ್ದವು. *(ಎ.ಆರ್.ಕೆ.)*

ಮರಗಾಲು ಕುಣಿತ: ಮರದ ಕಾಲುಗಳನ್ನು ಕಟ್ಟಿಕೊಂಡು ಕುಣಿಯುವುದು ಮರ ಗಾಲು ಕುಣಿತ. ಗಟ್ಟಿಯಾಡ ಮರ ಗಳಿಂದ ಹಗುರವಾದ ಮರಗಾಲುಗಳನ್ನು ಮಾಡಿರುತ್ತಾರೆ. 3 ಮೂರು 4 ನಾಲ್ಕು ಅಡಿ ಉದ್ದವಾದ ನಾಲ್ಕೈದು ಅಡಿ ಸುತ್ತಳತೆ ಯ ಎರಡು ಮರದ ತುಂಡು ಗಳನ್ನು ತೆಗೆದುಕೊಂಡು ಮೇಲ್ಭಾ ಗದಲ್ಲಿ ಹೆಜ್ಜೆ ಇಡಲು ಅನುಕೂಲ ವಾಗುವಂತೆ ಮೆಟ್ಟಿಲಿನಂತೆ 'ಕಂಡು' ಮಾಡಿ ಮರದ ಕಾಲು ಗಳನ್ನು ಹೆಜ್ಜೆ ಇಡುವ ಎಡೆಯಲ್ಲಿ ನಯ ಗೊಳಿಸಿರುತ್ತಾರೆ. ಸಣ್ಣಗೆ ಇರುವ ಕೆಳಗಿನ ಭಾಗವನ್ನು ಗೆಜ್ಜೆ ಕಟ್ಟಲು ಇನ್ನೊಂದು 'ಕಂಡು' ಮಾಡಿರುತ್ತಾರೆ. ಕಲಾವಿದರು ಈ ಮರಗಾಲು ಗಳನ್ನು ಕಟ್ಟಿಕೊಂಡು ನಿಂತು ಸಮಭಾರದ ಹಿಡಿತ ಸಿಕ್ಕುವವರೆಗೂ ಕೈ ಆಸರೆಗೆ ಉದ್ದ ಕೋಲು ಅಥವಾ ಸಹಾಯಕರ ಆಸರೆ ಪಡೆದು ತರುವಾಯ ಯಾರ ಆಸರೆಯೂ ಇಲ್ಲದಂತೆ ಹೆಜ್ಜೆ ಹಾಕುತ್ತಾ ತಮಟೆಯ ಗತ್ತಿಗೆ ವಿವಿಧ ಭಂಗಿಗಳಲ್ಲಿ ಕುಣಿಯುತ್ತಾರೆ.




ಮರಗಾಲು ಕುಣಿತ

ಹೆಜ್ಜೆ ಹಾಕುವಾಗ ಸ್ವಲ್ಪ ಸಮತೂಕ ತಪ್ಪಿದರೂ ಕುಣಿಯುವವನಿಗೆ ಅಪಾಯ ತಪ್ಪಿದ್ದಲ್ಲ. ಆದರೂ ಮರಗಾಲು ಕಟ್ಟಿಕೊಂಡು ವೇಗವಾಗಿ ಕುಣಿಯುವ ಕಲಾವಿದರು ಉಂಟು. ವೇಷ ಭೂಷಣ ದಿನದ ಉಡಿಗೆ ತೊಡಿಗೆಯೇ ಕೆಲವರು ಆಕರ್ಷಣೆಗಾಗಿ ಬೇಕಾದ ವೇಷ ಹಾಕುತ್ತಾರೆ.

ಕುಣಿಯುವವನ ಎದುರಿಗೆ ಒಬ್ಬ ವ್ಯಕ್ತಿಯನ್ನು ನಿಲ್ಲಿಸಿ ಅವನ ತಲೆಯ ಮೇಲೆ ಕರವಸ್ತ್ರ ಅಥವಾ ರೂಪಾಯಿ ನೋಟನ್ನು ಇಟ್ಟರೆ ಮರಗಾಲಿನವರು ಕುಣಿಯುತ್ತಲೇ ಕೆಳಕ್ಕೆ ಬಾಗಿ ಬಾಯಿ ಅಥವಾ ಕಣ್ಣಿನ ರೆಪ್ಪೆಯಿಂದ ಆ ವಸ್ತುವನ್ನು ಮೇಲೆತ್ತಿ ಚಮತ್ಕಾರಗಳನ್ನು ತೋರಿಸಿ ಪ್ರೇಕ್ಷಕರನ್ನು ರಂಜಿಸುವರು. *(ಎಂ.ಜಿ.ಜಿ.)*

ಮರತೂರು: ಬೌದ್ಧ ಧರ್ಮದ ಪ್ರಾಚೀನ ಕೇಂದ್ರ. ಗುಲಬರ್ಗಾದಿಂದ ಆಗ್ನೇಯಕ್ಕೆ 16 ಕಿ.ಮೀ. ಚಿತ್ತಾಪೂರದಿಂದ ವಾಯುವ್ಯಕ್ಕೆ ಸುಮಾರು 28 ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಮಹತ್ವದ ಸ್ಥಳ ಇದಾಗಿದೆ. ಇದು ಪ್ರಾಚೀನ ಶಾಸನಗಳಲ್ಲಿ 'ಮರತೂರು' ಎಂದೇ ಉಲ್ಲೇಖನಗೊಂಡಿದೆ. ಚೀನದ ಪ್ರವಾಸಿ ಹ್ಯೂಯೆನ್‌ತ್ಸಾಂಗನು ಭೇಟಿ ಕೊಟ್ಟ 'ಮರಿತೂರು' ಇದು ಅಗ್ರಹಾರಗಳಲ್ಲಿ ಒಂದಾಗಿತ್ತು.

ಆರನೆಯ ವಿಕ್ರಮಾದಿತ್ಯ ಕಲ್ಯಾಣವನ್ನು ರಾಜಧಾನಿಯಾಗಿ ಮಾಡಿಕೊಂಡ ಸಂದರ್ಭದಲ್ಲಿ ಮರತೂರು ಈತನ ಆಳ್ವಿಕೆಗೆ ಒಳಪಟ್ಟಿತ್ತು. 6ನೆಯ ವಿಕ್ರಮಾದಿತ್ಯನ (1026–1126) ಗುರು, ಆಸ್ಥಾನ



ದೇಶಮುಖ್ ವಾಡೆ – ಮರತೂರ

ಪಂಡಿತ ಹಾಗೂ ಹಿಂದೂ 'ಕಾನೂನು ಪಿತಾಮಹಾ' ಎನಿಸಿಕೊಂಡಿರುವ ವಿಜ್ಞಾನೇಶ್ವರನು 'ಮಿತಾಕ್ಷರ' ಎಂಬ ಹಿಂದೂ ಕಾನೂನು ಗ್ರಂಥವನ್ನು ರಚಿಸಿದ. ಯಜ್ಞವಲ್ಕ್ಯ ಸ್ಮೃತಿಗೆ ವ್ಯಾಖ್ಯಾನ ಬರೆದ 'ಮಿತಾಕ್ಷರ' ನ್ಯಾಯಶಾಸ್ತ್ರವು ಇಡೀ ರಾಷ್ಟ್ರಕ್ಕೆ ಇಂದಿಗೂ ಪ್ರಮಾಣ ಗ್ರಂಥವಾಗಿರುವುದೊಂದು ಹೆಮ್ಮೆಯ ವಿಷಯ ಅಲ್ಲದೆ ಆಗಿನ ಕಾಲದ ಸ್ಥಿತಿ–ಗತಿ, ಆಸ್ತಿ, ಅಧಿಕಾರ ದತ್ತು ಸ್ವಿಕಾರ, ಉತ್ತಾರಾಧಿಕಾರದ ವಿಷಯಗಳು ಕುರಿತು 2000 ವರ್ಷಗಳ ಇತಿಹಾಸ ಒದಗಿಸುವ ಗ್ರಂಥ ಇದಾಗಿದೆ. ಇದು ಕಾನೂನು ಶಾಸ್ತ್ರವಲ್ಲದೆ ಧರ್ಮಶಾಸ್ತ್ರವೂ ಸಹ ಆಗಿದೆ.

ಸೂರ್ಯನಾಥ ಕಾಮತರು 'ಪ್ರಾಚೀನ ಭಾರತದ ಕಾನೂನುಶಾಸ್ತ್ರ' ಕೃತಿ ರಚನೆಯಲ್ಲಿ ಮಿತಾಕ್ಷರದ ಉಲ್ಲೇಖ ಮಾಡಿದ್ದಾರೆ. ಇದರಿಂದ ವಿಜ್ಞಾನೇಶ್ವರ ಬೀದರ ಜಿಲ್ಲೆಯ ಅಟ್ಟಳ ನಾಡಿನವನೆಂದು 'ಮಾನೇವಾಡು' ಎಂಬ ಸ್ಥಳದಲ್ಲಿಯೇ ಹುಟ್ಟಿದನೆಂದು ಇತಿಹಾಸ–ಶಾಸನ ತಜ್ಞರ ಅಭಿಪ್ರಾಯ ಇದಕ್ಕಿಂತ ಮುಖ್ಯವಾದದ್ದು ವಿಜ್ಞಾನೇಶ್ವರ ಅಚ್ಚ ಕನ್ನಡಿಗನೆಂಬುದು ಕುತೂಹಲಕಾರಿ ಸಂಗತಿಯಾಗಿದೆ.

ಪ್ರಾಚೀನ ಶಾಸನಗಳಲ್ಲಿ ಇದು ಹಿಂದೆ ಗೊಂಕ–120ಕ್ಕೆ ಸೇರಿದ್ದು ಇಲ್ಲಿಯವರೆಗೆ ವರದಿಯಾಗಿರುವ ಎರಡು ಶಾಸನಗಳಲ್ಲಿ ಒಂದು 6ನೆಯ ವಿಕ್ರಮಾದಿತ್ಯನ ಗುರು, ಆಸ್ಥಾನ ಪಂಡಿತ ವಿಜ್ಞಾನೇಶ್ವರ ಇನ್ನೊಂದು ನಾಯಕನೊಬ್ಬ ಭೂದಾನ ಮಾಡಿದ ಅಂಶವನ್ನು ದಾಖಾಲಿಸಿದ್ದು, ಅಸ್ಪಷ್ಟವಾಗಿದೆ 'ಮಿತಾಕ್ಷರ' ಎಂಬ ಅಭಿಪ್ರಾಯವಿದೆ. ವಿಜ್ಞಾನೇಶ್ವರರ ಮಗ ಹೆಗ್ಗಡೆ, ಬೀಚಿರಾಜ ಮತ್ತು ಅವನ ಸತಿ ಚಾಮಲದೇವಿಯರು ಮರತೂರಿನಲ್ಲಿ ಮಹಾದೇವ, ಕೇಶವದೇವ ಹಾಗೂ ಬಿಚ್ಚೇಶ್ವರ ದೇವರುಗಳನ್ನು ತ್ರಿಕೂಟ ದೇವಾಲಯವನ್ನು 1123ರಲ್ಲಿ ನಿರ್ಮಿಸಿದ ಅಂಶ ತಿಳಿದು ಬರುತ್ತದೆ. ಅಲ್ಲದೆ ಪ್ರಾಚೀನ ಕಾಲದ ಕಾಶಿ ವಿಶ್ವನಾಥ, ಕಾಳಿಂಗೇಶ್ವರ, ಗುಬ್ಬಿನಾಥ, ಪಂಚಲಿಂಗ ಮತ್ತು ಈಶ್ವರಲಿಂಗ (ಕುಂಬಾರಸಾಲಿ) ದೇವಾಲಯಗಳಿವೆ. ಅದಕ್ಕಾಗಿಯೇ ಮರತೂರಿಗೆ ದಕ್ಷಿಣ ಕಾಶಿ ಎಂದು ಕರೆಯುತ್ತಾರೆ.

(ಆರ್.ಸಿ.ಎನ್.)

ಮರಮಕಲ್: ಇದು ಐತಿಹಾಸಿಕ ಮಹತ್ವ ಹೊಂದಿರುವ ಗ್ರಾಮ. ಇಲ್ಲಿ ಮಾಸ್ತಿಗಲ್ಲು ಮತ್ತು ವೀರಗಲ್ಲು ದೊರಕಿವೆ. ಪರಿಶಿಷ್ಟ ಪಂಗಡದ ಜನ ಹೆಚ್ಚು ವಾಸಿಸುವ ಮರಮಕಲ್ ಗ್ರಾಮದ ಪರಿಸರದಲ್ಲಿ ಸಾಂಸ್ಕೃತಿಕ ಆಚರಣೆಗಳು ಬಹಳ ವೈವಿಧ್ಯತೆಯಿಂದ ಕೂಡಿವೆ.

ಪರಿಶಿಷ್ಟ ಪಂಗಡದ ಜನರ ಆರಾಧ್ಯ ದೈವ ವೆಂಕಟೇಶ್ವರನ ಹಬ್ಬದ ಆಚರಣೆಯಲ್ಲಿ ಮಕ್ಕಳ ಪಾದ ತೊಳೆಯುವ ಸಂಪ್ರದಾಯವಿದೆ. ಈ ಮಕ್ಕಳು 6–12 ವರ್ಷದವರೆಗೂ ಇರುತ್ತಾರೆ. ಈ ಮಕ್ಕಳು ಹಲವು ಮನೆಗಳಿಗೆ ಹೋಗಿ ಗೋವಿಂದ ಪದ್ಮಾವತಿ ಗೋವಿಂದ ಎಂದು ಹೇಳುತ್ತಾರೆ. ಆ ಮಕ್ಕಳಿಗೆ ದವಸ ಧಾನ್ಯಗಳನ್ನು ನೀಡಿ ಕಳಿಸುತ್ತಾರೆ. ಗ್ರಾಮ ದೇವತೆಯಾದ ಮ–ರಿಯಮ್ಮ ದೇವತೆಯ ಆಚರಣೆ 5 ವರ್ಷಕ್ಕೊಮ್ಮೆ ನಡೆಯುವ ಈ ಉತ್ಸವದಲ್ಲಿ ಮರಿಯಮ್ಮ ದೇವಿಗೆ ಕುರಿ, ಕೋಣ ಬಲಿ ಕೊಡುತ್ತಾರೆ.

ಗ್ರಾಮದಲ್ಲಿ ಮಲ್ಲಿಕಾರ್ಜುನ ದೇವರ ಆಚರಣೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ದೇವರ ಪಲ್ಲಕ್ಕಿಯನ್ನು ಕೃಷ್ಣಾ ನದಿಗೆ ತೆಗೆದುಕೊಂಡು ಹೋಗಿ ಪಲ್ಲಕ್ಕಿಯಲ್ಲಿರುವ ವಿಗ್ರಹಕ್ಕೆ ಸ್ನಾನ ಮಾಡಿಸಿ, ಪೂಜೆ

ಪುನಸ್ಕಾರಗಳನ್ನು ಮಾಡಿ ಊರಿಗೆ ತೆಗೆದುಕೊಂಡು ಬರುತ್ತಾರೆ. ಊರಿನಲ್ಲಿ ಬಾಜಾ–ಭಜಂತ್ರಿಗಳೊಂದಿಗೆ ಮೆರವಣಿಗೆ ಮಾಡುತ್ತಾ ದೇವಸ್ಥಾನಕ್ಕೆ ತೆಗೆದುಕೊಂಡು ಹೋಗುತ್ತಾರೆ. ಈ ಹೊಳೆಗೆ ಹೋಗುವ ಸಂಪ್ರದಾಯವನ್ನು ಹೈದ್ರಾಬಾದ ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಕಾಣುತ್ತೇವೆ.

ಕೃಷಿಕ ಸಮಾಜದಲ್ಲಿ ರಾಶಿ ಪೂಜೆ ಬಹಳ ಮಹತ್ವ ಪಡೆದುಕೊಂಡಿದೆ. ರಾಶಿಯ ದಿನ ತಾವು ಬೆಳೆದ ಧಾನ್ಯವನ್ನು ಪರಿಶುದ್ಧಗೊಳಿಸಿ ಒಂದುಕಡೆ ಕೂಡಿಹಾಕಿ ಅದರ ಮುಂದುಗಡೆ ಕುಬಸ ಅಥವಾ ಸೀರೆಯನ್ನಿಟ್ಟು ಅದಕ್ಕೆ ದಂಡಿ ಕಟ್ಟಿ ಪೂಜೆ ಮತ್ತು ನೈವೇದ್ಯ ಸಲ್ಲಿಸುತ್ತಾರೆ. ನಂತರ ಸುತ್ತಮುತ್ತಲಿನ ಹೊಲಗಳಲ್ಲಿನ ಜನರನ್ನು ಹಾಗೂ ಮನೆ ಅಥವಾ ಓಣಿಯ ಜನರನ್ನು ಕರೆದುಕೊಂಡು ಬಂದು ಸಹಿ ಸಜ್ಜಕ, ಅನ್ನ, ಸಾರು ಊಟ ಮಾಡಿಸುತ್ತಾರೆ. ಇಂದು ಯಂತ್ರೋಪಕರಣಗಳು ಬಂದಿರುವುದರಿಂದ ನಿಧಾನವಾಗಿ ಈ ರಾಶಿ ಪೂಜೆಯು ಮಾಯವಾಗುತ್ತಿದೆ.

ಜನಪದ ಗೀತ ಪ್ರಕಾರಗಳಲ್ಲಿ ಭಜನೆ ಒಂದು ವಿಶಿಷ್ಟ ಪ್ರಕಾರ. ಈ ಹಳ್ಳಿಯಲ್ಲಿ ತಮ್ಮ ಭಜನೆ ಪದದ ಮುಖಾಂತರ ವಚನ, ಗೀಗಿ ಪದ, ಮಾಡುವುದನ್ನು ಬಳಸುವುದುಂಟು. *(ಎಸ್.ಎಂ.ಡಿ.)*

ಮರಾಠ: ಮಹಾರಾಷ್ಟ್ರ ರಾಜ್ಯಕ್ಕೆ ಸಂಬಂಧಿಸಿದ ಮರಾಠಿ ಮಾತನಾಡುವ ಜನ. ಕರ್ನಾಟಕದ ಉದ್ದಗಲಕ್ಕೂ ವ್ಯಾಪಿಸಿಕೊಂಡಿರುವ ಇವರ ಮಾತೃಭಾಷೆ ಮರಾಠಿ. ಸಂಸ್ಕಾರ ಆಚರಣೆಗಳೆಲ್ಲ ಮರಾಠರಂತೆಯೇ ಇರುತ್ತವೆ. ಮರಾಠರಲ್ಲಿ ಐತಿಹಾಸಿಕವಾಗಿ ಪೇಶ್ವೆ ಮನೆತನ ಪ್ರಸಿದ್ಧವಾದುದು. ನರ್ಮದಾ ಗೋದಾವರಿಯ ಪರಿಸರದವರೆಗೂ ಅಲ್ಲಲ್ಲಿ ಈ ಜನ ನೆಲೆಸಿರಬೇಕೆಂಬುದನ್ನು ಸೂಚಿಸುವ ವಿದರ್ಭದ 'ಮರಹಟ್ಟ' ಎಂಬ ದೇಶೀಯ ಪರ್ಯಾಯನಾಮವು ಐತಿಹಾಸಿಕ ಮಹತ್ವ ಪಡೆದಿದೆ.

ಮರಾಠಾ ಎಂಬುದು ಮಹಾರಾಷ್ಟ್ರದಲ್ಲಿಯ ಒಂದು ದೊಡ್ಡ ಜಾತಿ. ಕ್ರಿ.ಪೂ. 2ನೆಯ ಶತಮಾನದ ಶಾಸನಗಳ ಉಲ್ಲೇಖದಂತೆ ಮಹಾರಠಿ ಎಂಬ ಜನಾಂಗ ವಾಚಕ ಶಬ್ದವಿದೆ. ಕ್ರಿ.ಪೂ. 3ನೆಯ ಶತಮಾನದಲ್ಲಿ ಮಹಾರಟ್ಟ ಪ್ರದೇಶಕ್ಕೆ ಧರ್ಮೋಪದೇಶಕರನ್ನು ಕಳುಹಿಸಲಾಯಿತೆಂಬ ದಾಖಲೆ ಸಿಗುತ್ತದೆ. ಸಾಮ್ರಾಟ ಅಶೋಕನ ಕಾಲಕ್ಕೆ ದಕ್ಷಿಣ ಭಾರತದಲ್ಲಿರುವ ರಟ್ಟ ಜನರು ಕಾಲಾಂತರದಲ್ಲಿ ತಮ್ಮನ್ನು ಮಹಾರಟ್ಟ, ಮರಾಠಾ ಎಂಬ ಹೆಸರನಿಂದ ಕರೆಯಲ್ಪಟ್ಟರು.

ಇವರಲ್ಲಿ ಅಸಲಿ ಮರಾಠರು, ಕುಣಬಿ, ಹಾಗೂ ಇನ್ನಿತರ ಮೂರು ವರ್ಗಗಳಿವೆ. ಅಸಲಿ ಮರಾಠರು ತಮ್ಮನ್ನು ಕ್ಷತ್ರಿಯರು ಎಂದು ಭಾವಿಸುತ್ತಾರೆ. ರಾಜರು ಸರದಾರರು, ಜಮೀನ್ದಾರರು, ಯೋಧರು ಈ ಗುಂಪಿಗೆ ಸೇರುತ್ತಾರೆ. ರೈತಾಪಿ ಕಸಬು ಮಾಡುವವರು ಕುಣಬಿ ಎನಿಸಿದರೆ, ಮೂರನೆಯ ವರ್ಗದಲ್ಲಿ ಕುಶಲಕರ್ಮಿ ಕುಲ ಕಸುಬು ಮಾಡುವವರೆಲ್ಲ ಸೇರುತ್ತಾರೆ.

ಮರಾಠರು ಮಧ್ಯಮ ಎತ್ತರದ ಸದೃಢಕಾಯದ ಗೌರವರ್ಣದ ಸುಂದರ ಸ್ವರೂಪದವರು. ಹಿಂದಿನ ಕಾಲದಲ್ಲಿ ಈ ಪುರುಷರು ಮುಖಕ್ಷೌರ ಮಾಡಿಕೊಂಡು ಉದ್ದನೆಯ ಮೀಸೆ ಬಿಟ್ಟು ತಲೆಗೆ ಪಟಕಾ (ರುಮಾಲು) ಸೊಂಟಕ್ಕೆ ಚೊಣ್ಣ ಇಲ್ಲವೆ ಧೋತರ, ಮೈಮೇಲೆ ಬಾರಾಬಂದಿ ಅಂಗಿ, ಅದರ ಮೇಲೆ ಸೆಲ್ಲೆ, ಕಾಲಲ್ಲಿ ಖಡಾವು/ಮೆಟ್ಟು ಧರಿಸುತ್ತಿದ್ದರು. ಮಹಿಳೆಯರು ಖಣದ ಕುಪ್ಪಸ, 9 ಮೊಳದ ಸೀರೆ ಉಟ್ಟು ತಲೆ ಮೇಲೆ ಸೆರಗು ಹೊದ್ದುಕೊಳ್ಳುತ್ತಿದ್ದರು. ಈಗಲೂ ಈ ಪದ್ಧತಿ ರೂಢಿಯಲ್ಲಿದೆ. ಹಣೆ ಮೇಲೆ ಕಾಸನಗಲ ಕುಂಕುಮ; ಮುಖ, ಕೈ ಕಾಲುಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಅಸಲಿ ಮರಾಠಾದಲ್ಲಿ 3 ಒಳ ಪಂಗಡಗಳಿದ್ದು, ಕುಲೀನ, ಲೇಕಾವಳೆ, ಅಕರಮಾಸೆ ಎಂದು ಗುರುತಿಸಲಾಗಿದೆ.

ಇವರಲ್ಲಿ ಸಗೋತ್ರ ವಿವಾಹಕ್ಕೆ ಅನುಮತಿಯಿದೆ. ಶ್ರೀಮಂತ ಮತ್ತು ಮಧ್ಯಮ ವರ್ಗಗಳಲ್ಲಿ ಹುಂಡಾ (ವರದಕ್ಷಿಣೆ) ಕೊಡುವ ಪಡೆಯುವ ವಿಧಾನವಿದೆ. ಬಡ ಮರಾಠಾಗಳಲ್ಲಿ ತೆರ (ವಧುದಕ್ಷಿಣೆ) ಪದ್ಧತಿ ಇದೆ. ತಂದೆತಾಯಿ ಮಕ್ಕಳ ಮದುವೆ ನಿಶ್ಚಯಿಸುತ್ತಾರೆ. ಜಾತಕ ನೋಡುವ ಪದ್ಧತಿ ಇದೆ. ಲಗ್ನಪತ್ರಿಕೆ ಪೂಜೆ, ಅಕ್ಷತೆ, ಅರಿಶಿಣ, ಎಣ್ಣೆ, ದೇವರ ಕಟ್ಟುವುದು. ವಾಗ್ದಾನ, ಸೀಮಂತ ಪೂಜೆ, ಗೌರಿಹರಪೂಜೆ, ಕನ್ಯಾದಾನ, ಹೋಮ, ಸಪ್ತಪದಿ, ಕಂಕಣ ಬಂಧನ, ರುಖವತ, (ಭೂಮ) ಧ್ರುವದರ್ಶನ, ಮೆರವಣಿಗೆ, ಲಕ್ಷ್ಮಿಪೂಜೆ, ಸುರಗಿ ಮುಖ ತೊಳೆಯುವುದು, ಸೋಬನ ಇತ್ಯಾದಿ ಕಾರ್ಯಕ್ರಮಗಳಿರುತ್ತವೆ.

ಮರಾಠರು ಶಿವನ ಉಪಾಸಕರು ಹಾಗೂ ದೇವಿಯನ್ನು ಆರಾಧಿಸುತ್ತಾರೆ. ಖಂಡೋಬಾ, ಭೈರವ, ರವಳೋಬಾ, ರೋಕಡೋಬಾ, ಮೊದಲಾದ ಶಿವನ ರೂಪಗಳನ್ನು ಹಾಗೂ ಅಂಬೆ, ಭವಾನಿ, ದುರ್ಗಾ, ಲಕ್ಷ್ಮಿ, ಜೋಗಾಯಿ ಮೊದಲಾದ ದೇವಿ ರೂಪಗಳನ್ನು ಹಾಗೂ ರಾಮ, ಮಾರುತಿ, ವಿಠೋಬಾ, ಗಣಪತಿ ದೇವರ ಪೂಜೆ ಮಾಡುತ್ತಾರೆ. ಗೋದಿ ಅಕ್ಕಿ ಪ್ರಮುಖ ಧಾನ್ಯಗಳು ಅಲ್ಲದೆ ಮಾಂಸಾಹಾರ, ಮೀನು ಇವರ ಆಹಾರ ಕ್ರಮದಲ್ಲಿರುತ್ತವೆ.

ಇವರು ಹೆಣಗಳನ್ನು ಸುಡುತ್ತಾರೆ. ಹತ್ತನೆಯ ದಿನ ಪಿಂಡದಾನವನ್ನು 11ನೆಯ ದಿನ ಸೂತಕ ಸಮಾಪ್ತಿಯನ್ನು ಮಾಡುತ್ತಾರೆ. 13ನೇ ದಿನ ಶ್ರಾದ್ಧ ಮಾಡಿ ಬಂಧುಗಳಿಗೆ ಊಟ ಹಾಕುತ್ತಾರೆ.

ಇವರು ಸರದಾರ, ಜಹಾಗೀರದಾರ, ದೇಶಮುಖರಾಗಿದ್ದರು. ಜಮೀನ್ದಾರಿಕೆ ಇಲ್ಲವೆ ಪಾಟೀಲ ವೃತ್ತಿ ಕೈಗೊಂಡಿದ್ರು. ಕೆಲವರು ಸೈನ್ಯದಲ್ಲಿ ಸೇರಿದರು. ಯಾರು ಜಮೀನು ಕಳೆದುಕೊಂಡರೋ ಅವರು ವ್ಯಾಪಾರ ಅಥವಾ ನೌಕರಿ ಮಾಡಲಾರಂಭಿಸಿದರು. ಶಹಾಜಿ ರಾಜರು ದಕ್ಷಿಣಭಾರತದಲ್ಲಿ ರಾಜ್ಯಸ್ಥಾಪಿಸಿದ ಕಾರಣ ಮಾರಾಠರು ಕರ್ನಾಟಕದಲ್ಲಿಯೂ ನೆಲೆ ನಿಂತರೆಂದು ತಿಳಿದುಬರುತ್ತದೆ.
(ಎ.ಆರ್.ಕೆ.)

ಮರೆಪ್ಪ ಮೇತ್ರೆ: ಜನಪದ ವೈದ್ಯ: ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಹಿಲಾಲಪುರ ಗ್ರಾಮದವರು. 1947ರಲ್ಲಿ ಜನಿಸಿದರು. ತಂದೆ ಬನಗೆಪ್ಪ. ತಾಯಿ ದ್ಯಾಮವ್ವ. ಕಡು ಬಡತನದಿಂದ ಬೆಳೆದು ಬಂದವರಾದ ಇವರಿಗೆ ಜನಪದ ವೈದ್ಯ ಪದ್ಧತಿ ಬಾಲ್ಯದಿಂದಲೇ ಕರಗತವಾಗಿ ಅದುವೆ ಜೀವನಕ್ಕೆ ಬೆನ್ನೆಲುಬಾಗಿ ಉಪಜೀವನ ನಿರ್ವಹಿಸುವಂತಾಗಿದೆ.

ಇವರು ಆಧುನಿಕ ಶೈಲಿಯಲ್ಲಿ ವೈದ್ಯ ಪದ್ಧತಿಯನ್ನು ಉಪಚರಿಸುವ ವಿಧಾನವನ್ನು ಅಳವಡಿಸಿಕೊಂಡು ನೂರಾರು ಜನರಿಗೆ ಚಿಕಿತ್ಸೆ ನೀಡಿ ಗುಣಮುಖರಾದುದು ಅಚ್ಚರಿ ಪಡುವ ಸಂಗತಿ. ಬಿಳಿ ತೊನ್ನು ರೋಗ ಬಂದಾಗ ಊರಿನ ಪೊಲೀಸ ಅಧಿಕಾರಿಯಿಂದ ಚರ್ಮ ರೋಗಕ್ಕೆ ಗಿಡ ಮೂಲಿಕೆಯಿಂದ ಔಷಧ ನೀಡುವ ಪದ್ಧತಿಯನ್ನು ಕಲಿತುಕೊಂಡರಂತೆ; ಬಾಲ್ಯದಿಂದಲೇ ತಂದೆಗೆ ಔಷಧಿ ನೀಡುವಲ್ಲಿ ಸಹಾಯಕನಾಗಿದ್ದ ಇವರು ನಿತ್ಯಜೀವನದಲ್ಲಿ ಕರಗತ ಮಾಡಿಕೊಂಡಿದ್ದಾರೆ. ತಂದೆಯ ಮರಣಾನಂತರ ಈ ಜನಪದ ವೈದ್ಯ ಕಲೆ ಅವಸಾನವನ್ನು ಕಾಣದೆ ವಂಶಪಾರಂಪರ್ಯವಾಗಿ ಮರೆಪ್ಪ ಮೇತ್ರೆಯವರು ನಿರ್ವಹಿಸಿಕೊಂಡು ಸಾಗುತ್ತಿದ್ದಾರೆ.

ಸಂಪೂರ್ಣವಾಗಿ ಗಿಡಮೂಲಿಕೆಯಿಂದಲೇ ಗುಣ ಮುಖವಾಗುವ ಬಿಳಿ ತೊನ್ನು ರೋಗಕ್ಕೆ ಇವರು ಬಾವಂಚಿ ಬೀಜದೊಂದಿಗೆ ಇನ್ನಿತರ ಕೆಲವು ಗಿಡ ಮೂಲಿಕೆಗಳನ್ನು ಸೇರಿಸಿ ತಯಾರಾದ ಔಷಧಿಯಿಂದ ಚಿಕಿತ್ಸೆ ನೀಡುವರು. 200 ಜನರಿಗೆ ಮೇಲ್ಪಟ್ಟು ಔಷಧ ನೀಡಿ ಗುಣಪಡಿಸಿದ್ದಾರೆ. ಅಲ್ಲದೆ ಇವರು ಔಷಧ ನೀಡುವಾಗ ರೋಗಿಗಳಿಗೆ ಕೆಲವು ಕಟ್ಟು ನಿಟ್ಟಿನ ಕ್ರಮವನ್ನು ಅನುಸರಿಸುವಂತೆ ಹೇಳುತ್ತಾರೆ. ಔಷಧವನ್ನು ಚಾಚು ತಪ್ಪದೇ ತೆಗೆದುಕೊಳ್ಳಬೇಕು. ರೋಗಕ್ಕೆ ಸಂಬಂಧಿಸಿದಂತೆ ಕೆಲವು ಪಥ್ಯವನ್ನು ಮಾಡಲು ಹೇಳುತ್ತಾರೆ. ರೋಗವು ಹಳೆಯದಾದರೆ ಗುಣಮುಖವಾಗುವುದಿಲ್ಲವೆಂದು ಹೇಳುತ್ತಾರೆ. ಆದಷ್ಟು ಬೇಗನೆ ಈ ಚರ್ಮ ರೋಗಕ್ಕೆ ಚಿಕಿತ್ಸೆ ಪಡೆದರೆ ಒಳಿತಾಗುವುದೆಂದು ಹೇಳುತ್ತಾರೆ.

ಈ ಜನಪದ ವೈದ್ಯರು ಇನ್ನೂ ಬೇರೆ ಬೇರೆ ರೋಗಗಳಿಗೂ ಗುಣಪಡಿಸುವ ಪ್ರಖ್ಯಾತಿಯನ್ನು ಪಡೆದುಕೊಂಡಿದ್ದಾನೆ. ಸಕ್ಕರಿ ಬ್ಯಾನಿ, ಮೂಲವ್ಯಾದಿ, ದಮ್ಮು-ಕೆಮ್ಮು, ನಾಪುರ ಹುಣ್ಣು, ಬಂಜೆತನ ನಿರ್ಮೂಲನೆ, ಗಂಡಮಲಗಿ, ಮುಂತಾದವುಗಳಿಗೆ ಗಿಡ ಮೂಲಿಕೆಯಿಂದ ಉಪಚರಿಸುವುದಾಗಿ ಹೇಳುತ್ತಾರೆ. ಹೀಗೆ ಆಸ್ಪತ್ರೆಗಿಂತ ಕಡಿಮೆ ಖರ್ಚಿನಲ್ಲಿ ಗುಣಪಡುಸುವುದಾಗಿ ಭರವಸೆ ನೀಡಿ ಸುತ್ತ ಮುತ್ತಲಿನ ಪ್ರದೇಶದಲ್ಲೆಡೆ ಪ್ರಖ್ಯಾತ ಜನಪದ ವೈದ್ಯರೆಂದು ಹೆಸರು ಗಳಿಸಿಕೊಂಡಿದ್ದಾರೆ. *(ಪಿ.ಕೆ.ಕೆ.)*

ಮಲಗಿರುವ ಬುದ್ಧ: ಕಲಬುರ್ಗಿ ಭಾಗದಲ್ಲಿ ಹಿಂದೆ ಎರಡನೇ ಶತಮಾನದಲ್ಲಿ ಬೌದ್ಧ ಧರ್ಮ ಪ್ರಚಲಿತವಿತ್ತೆಂದು ಇತಿಹಾಸ ಹೇಳುತ್ತದೆ. ಅದಕ್ಕೆ ಪುಷ್ಟಿ ನೀಡುವಂತೆ ಬೌದ್ಧ ವಿಹಾರದ ಸುಂದರ ಕೆತ್ತನೆಯ ಸ್ತೂಪ, ವಿಹಾರದ ಪ್ರತಿಮೆಗಳು, ಕಮಾನುಗಳ ಅವಶೇಷಗಳೂ ದೊರತಿವೆ.

ಇವೆಲ್ಲ ಮಾನವ ನಿರ್ಮಿತ ಅವಶೇಷಗಳು. ಈ ಪ್ರದೇಶದ ವೈವಿಧ್ಯತೆಯ ಸಂಸ್ಕೃತಿಯಂತೆ ಪ್ರಕೃತಿಯೇ ನಿರ್ಮಿಸಿರುವ, ವಿಶ್ವದಲ್ಲೇ ಅತ್ಯಂತ ದೊಡ್ಡದಾದ ಬೃಹದಾಕಾರದ ಪ್ರತಿಮೆ ಕಲಬುರ್ಗಿಯಲ್ಲಿರುವದು ವಿಶೇಷವಾಗಿದೆ. ಕಲಬುರ್ಗಿಯನ್ನು ಬಲ್ಲ ಯಾವುದೇ ಇತಿಹಾಸಕಾರರಿಗೂ ಈ ಬಗ್ಗೆ ಗೊತ್ತಿಲ್ಲ. ಅಲ್ಲದೇ ಇದು ಯಾವುದೇ ಇತಿಹಾಸದಲ್ಲೂ ಬರುವಂಥದ್ದೂ ಅಲ್ಲ. ಅದೇ ಶಹಾಪುರದ ಬೆಟ್ಟದ ಮೇಲೆ ಸುಮಾರು 400 ಅಡಿಗಳಿಗೂ ಹೆಚ್ಚು ಉದ್ದಕ್ಕೆ ಕಾಲು ಚಾಚಿ ಪವಡಿಸಿರುವ 'ಮಲಗಿರುವ ಬುದ್ಧ' ಪ್ರತಿಮೆ. ಕಲಬುರ್ಗಿಯಲ್ಲಿ ಇಂಥದೊಂದು ನಿಸರ್ಗ ನಿರ್ಮಿತ ಬೃಹದಾಕಾರದ ಮಲಗಿರುವ ಬುದ್ಧ ಪ್ರತಿಮೆ ಇರುವದು ಬೆಳಕಿಗೂ ಬಂದಿಲ್ಲ.



ಮಲಗಿದ ಬುದ್ಧ – ಶಹಾಪೂರ

ಕಲಬುರ್ಗಿಯಿಂದ ಬೆಂಗಳೂರಿಗೆ ಹೋಗುವ ಮಾರ್ಗದಲ್ಲಿ ಭೀಮರಾಯನಗುಡಿ ಬರುತ್ತಲೇ ಎದುರುಗಡೆ ಸಾಲು ಸಾಲು ಕಲ್ಲು ಬಂಡೆಗಳ ಗುಡ್ಡ ಕಾಣುತ್ತದೆ. ಶಹಾಪುರ ಸಮೀಪಿಸುತ್ತಿರುವಂತೆಯೇ ಬಲಭಾಗದಲ್ಲಿ ಕಾಣುವ ಗುಡ್ಡದ ಕಡೆ ಕಣ್ಣು ಹಾಯಿಸಿದರೆ, ಮಲಗಿರುವ ಬುದ್ಧನ ತಲೆ, ಹಣೆ, ಹುಬ್ಬುಗಳು, ಲಲಾಟ, ಚೂಪಾದ ಮೂಗು, ಅರಳಿಕೊಂಡಿರುವ ತುಟಿಗಳು, ಗದ್ದ, ವಿಶಾಲವಾದ ಎದೆ, ಎರಡೂ ಕೈಗಳನ್ನೂ ಜೋಡಿಸಿ ಎದೆಯ ಮೇಲಿಟ್ಟು, ಉದ್ದಕ್ಕೆ ಕಾಲು ಚಾಚಿ ಪಶ್ಚಿಮಕ್ಕೆ ತಲೆ ಮಾಡಿ ಮಲಗಿರುವ ದೃಶ್ಯ ಕಂಡು ಬರುತ್ತದೆ.

ಸೂರ್ಯೋದಯವಾದ ನಂತರ ಹಗಲು ಹೊತ್ತು ಈ ದೃಶ್ಯ ನೋಡಬೇಕಾದರೆ, ಸ್ವಲ್ಪ ಕಷ್ಟಪಡಬೇಕಾಗುತ್ತದೆ. ನಮ್ಮ ಮನದಲ್ಲಿ ಈ ದೃಶ್ಯವನ್ನು ಹುಡುಕಿ, ದೃಷ್ಟಿ ಬೆಟ್ಟದ ಮೇಲೆ ಕೇಂದ್ರೀಕೃತವಾದ ನಂತರ ಈ ದೃಶ್ಯ ಕಂಡು ಬರುತ್ತದೆ. ಆದರೆ, ಮುಸ್ಸಂಜೆಯ ಹೊತ್ತು ಸೂರ್ಯಾಸ್ತ ಸಮಯದಲ್ಲಿ, ಈ ದೃಶ್ಯ ಕಾಣುವ ನಿರ್ದಿಷ್ಟವಾದ ಜಾಗದಲ್ಲಿ ನಿಂತು ಗಮನಿಸಿ, ಬೆಟ್ಟದ ಹಿಂದೆ ಸೂರ್ಯ ಮರೆಯಾದಾಗ, ನಿಸರ್ಗವೇ ಸೃಷ್ಟಿಸಿರುವ ಬೃಹದಾಕಾರದಲ್ಲಿ ಕಾಲು ಚಾಚಿ, ನಿಶ್ಚಿಂತೆಯ ಸೌಮ್ಯ ಮುಖಮುದ್ರೆಯೊಂದಿಗೆ ಮಲಗಿರುವ ಬುದ್ಧ ಕಾಣುತ್ತಾನೆ.

(ಎಸ್‌ಯು.ಜಿ.)

ಮಲ್ಲಪ್ಪ ಮುರ್ಲಾಪೂರ: ಜನಪದ ಹಾಡುಗಾರ. ಕೊಪ್ಪಳ ತಾಲ್ಲೂಕಿನ ಹಲಗೇರಿ ಗ್ರಾಮದವರು. ವೃತ್ತಿಯಿಂದ ರೈತರು. ಕೃಷಿಕ ಜೀವನದ ಬಿತ್ತನೆ, ಹಂತಿ ಹೊಡೆಯುವದು, ರಾಶಿ ಮಾಡುವುದು ಮುಂತಾದ ಸಂದರ್ಭಗಳಲ್ಲಿ ಹಾಡು ಹಾಡುತ್ತ ಬದುಕಿಗೆ ಹೊಸ ಕಳೆ ತುಂಬಬಲ್ಲವರು. ಮನದುಂಬಿ ಹಾಡಬಲ್ಲರು. ನವಲಗುಂದದ ದ್ಯಾವಮ್ಮ ತಾಯಿಯ ಚರಿತ್ರೆಯನ್ನು ಅತ್ಯಂತ ಸುಶ್ರಾವ್ಯವಾಗಿ ಹಾಗೂ ಸ್ಪಷ್ಟವಾಗಿ ಮನವರಿಕೆಯಾಗುವಂತೆ ಹಾಡುತ್ತಾರೆ. ಅನುಭಾವ ಕವಿ ಸಂತ

ಶಿಶುನಾಳ ಶರೀಫರ ತತ್ವಪದಗಳನ್ನೂ ಇವರು ಭಾವ ತುಂಬಿ ಹಾಡುತ್ತಾರೆ. ಇವರು ಸುಮಾರು 9–10 ತಾಸುಗಳವರೆಗೆ ಸರಾಗವಾಗಿ ಹಾಡುವದನ್ನು ಕಂಡರೆ ಅಚ್ಚರಿಯಾಗುತ್ತದೆ.

ಅದ್ಭುತ ಕಂಠಸಿರಿ ಮಲ್ಲಪ್ಪನವರದು. ತಮ್ಮದೇ ಆದ ಧ್ವನಿ, ಲಯ, ರಾಗ, ತಾಳದ ಮೂಲಕ ಹಾಡಿದಾಗ ಬದುಕಿನ ವೈರುಧ್ಯಗಳೇ ಕಣ್ಮುಂದೆ ನಿಲ್ಲುತ್ತವೆ. ಭಜನೆಯಲ್ಲಿ ಮಲ್ಲಪ್ಪನವರು ಹಾಡುವಾಗ, ಏರು ಧ್ವನಿಯುಳ್ಳ ಅವರ ಕಂಠಸಿರಿ ಸುತ್ತಲಿನ ಪರಿಸರವನ್ನೇ ಬದಲಾಯಿಸುತ್ತದೆ. ಊರಿನಲ್ಲಿ ಯಾರೇ ಮರಣ ಹೊಂದಿದಾಗ ನಡೆಯುವ ಭಜನೆಯ ತಂಡದೊಂದಿಗೆ ಬರುವ ಇವರು, ಈ ಸಂದರ್ಭದಲ್ಲಿ ತತ್ವಪದಗಳ ಹೊಳೆಯನ್ನೇ ಹರಿಸಿ, ನೆರೆದವರ ಮನಸ್ಸನ್ನೇ ಕಲಕಿ ಬಿಡುತ್ತಾರೆ. ಇವರು ಹಾಡಿನ ಇನ್ನೊಂದು ಮುಖ ಹಂತಿ ಪದಗಳು ಮತ್ತು ಸುಗ್ಗಿ ಪದಗಳು. ಆ ಹಾಡಿನ ಮೋಜು, ಸಂತೋಷವನ್ನು ಅಕ್ಷರಗಳಲ್ಲಿ ಬರಯುವಂತಿಲ್ಲ. ಅನುಭವಿಸಿಯೇ ಆನಂದಿಸಬೇಕು.

ಮಂಗಳ ಕಾರ್ಯಗಳಲ್ಲಿ ಹಾಡುವ ಸೋಬಾನ ಪದಗಳನ್ನು ನಿರರ್ಗಳವಾಗಿ ಇವರು ಹಾಡಬಲ್ಲರು. ಹೆಣ್ಣು ಮಕ್ಕಳಿಗೆ ಹೂ ಮುಡಿಸುವ, ಸೀರೆ ಮಾಡುವ ಕಾರಣ, ತೊಟ್ಟಿಲು ಕಾರಣದಲ್ಲಿ ಹೆಂಗಳೆಯರ ಗುಂಪಿನಲ್ಲಿ ಹೆಂಗಳೆಯರಂತೆ ಕುಳಿತು ಯಾವುದೇ ಸಂಕೋಚ–ಬಿಗುಮಾನವಿಲ್ಲದೆ ಹಾಡುವುದನ್ನು ಕಂಡರೆ, ಈ ಮನುಷ್ಯನಿಗೆ ಹಾಡು ಮತ್ತು ಕಂಠಸಿರಿಯು ದೇವರು ಕೊಟ್ಟ ವರವೆಂದೇ ಹೇಳಬೇಕು.

ಭಾರತ ಸ್ವಾತಂತ್ರ್ಯ ಪಡೆದ ಬಗೆಯನ್ನು, ನೆಹರು, ಗಾಂಧೀಜಿ, ರಾಜೀವ ಗಾಂಧಿ, ಇಂದಿರಾಗಾಂಧಿ, ಲಾಲ ಬಹದ್ದೂರ ಶಾಸ್ತ್ರೀಯವರ ಜೀವನ ಯಶೋಗಾಥೆಯನ್ನು ತಮ್ಮ ಜನಪದದ ಮೂಲಕ ಹಾಡುವದನ್ನು ಕೇಳಿದರೆ ಇತಿಹಾಸವನ್ನೇ ತೆರೆದಿಟ್ಟಂತೆ ರೋಮಾಂಚನವಾಗುತ್ತದೆ. *(ಆರ್.ಪಿ.ಬಿ.)*

ಮಸಿಯೂಟ: ವಿವಾಹ ಸಂದರ್ಭದಲ್ಲಿ ಆಚರಿಸುವ ಒಂದು ಪದ್ಧತಿ. ಮದುವೆ ಸಂದರ್ಭದಲ್ಲಿ ವಧು–ವರರನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಬರುವಾಗ ವಧುವಿನ ಕಡೆಯವರು ಬಗೆ–ಬಗೆಯ ಸಿಹಿ–ತಿಂಡಿ ತಿನಿಸುಗಳನ್ನು, ಮತ್ತು ಆಹಾರ, ವಸ್ತುಗಳನ್ನು ಬುಟ್ಟಿಯಲ್ಲಿಟ್ಟು, ಮೇಲೆ ಮುಸುಕು ಹಾಕಿ ಮುಚ್ಚಿಕೊಂಡು ತರುತ್ತಾರೆ. ಕೆಲವು ಪ್ರದೇಶಗಳಲ್ಲಿ, ಹೊಸದಾದ ಮಣ್ಣಿನ–ಮಡಕೆಗಳಲ್ಲಿ ಹುಗ್ಗಿಯನ್ನು ಮತ್ತು ಬೆಲ್ಲವನ್ನು ಮುಸುಕಿನಿಂದ ಮುಚ್ಚಿ, ಬೇರೆ ಮನೆಯಲ್ಲಿ ಇಟ್ಟಿರುತ್ತಾರೆ. ಹೀಗೆ ಮುಚ್ಚಿ ಇಟ್ಟಿರುವ ತಿಂಡಿ–ತಿನಿಸುಗಳನ್ನೇ ಮದು–ಮಗನಿಗೆ ಊಟವನ್ನು ಮಾಡಿಸುವುದು ಪರಂಪರಾಗತ ಸಂಪ್ರದಾಯ ಆಗಿದೆ. ಕೆಲವು ಕಡೆಗಳಲ್ಲಿ ವರ, ಮತ್ತು ವರನ ತಂದೆ–ತಾಯಿಗಳಿಗೆ, ಊಟವನ್ನು ಬೀಗರ ಮನೆಯಿಂದಲೇ ತೆಗೆದುಕೊಂಡು ಬರುತ್ತಾರೆ. ಮದುವೆಯಲ್ಲಿ ಮೊದಲ ಊಟವನ್ನು ಬೀಗರ ಮನೆಯಲ್ಲಿ ಮಾಡುವ ಹಾಗಿಲ್ಲ ಆದುದ–ರಿಂದಲೇ ಈ ಊಟವನ್ನು ಮುಸುಕಿನಲ್ಲಿ ಮುಚ್ಚಿಕೊಂಡು ತರುವ ಊಟವಾಗಿದೆ. ಇದನ್ನು ಮುಸುಕಿನ ಊಟವೆಂದು ಕರೆಯುತ್ತಾರೆ. ಇದು ಕ್ರಮೇಣ ಮಸಿಯೂಟವೆಂದು ಬದಲಾಗಿದೆ.

ಅದೇಪ್ರಕಾರವಾಗಿ ಮದುವೆಯಾದ ಅನಂತರ, ಬೀಗರನ್ನು ಕಳುಹಿಸಿಕೊಡುವಾಗ, ಕೊಡುವ ಊಟಕ್ಕೆ ಕಳೂಟವೆನ್ನುತ್ತಾರೆ. ಬೀಗರನ್ನು ಮದುವೆಯ ನಂತರ, ಮನೆಗೆ ಕಳುಹಿಸುವಾಗ ಕೊಡುವ ಊಟ ಕಳೂಟವಾದರೆ (ಕಳುಹು ಊಟ) ಮೊದಲು ಕೊಡುವ ಊಟವೇ ಮಸಿಯೂಟವಾಗಿದೆ (ಮಸೂಟ).

(ಪಿ.ಪಿ.)

ಮಸೀದಿ: ಮುಸ್ಲಿಮ್ ಜನಾಂಗ ಪ್ರಾರ್ಥನೆ ಸಲ್ಲಿಸುವ ಧಾರ್ಮಿಕ ಮಂದಿರ. ಅರಬ್ಬೀ ಭಾಷೆಯಲ್ಲಿ ಇದಕ್ಕೆ 'ಮಜಿದ್' ಎಂದು ಹೆಸರು. ಭಾರತೀಯ ಭಾಷೆಗಳಲ್ಲಿ ಅದು ಮಸೀದಿ ಎಂದಾಯಿತು. ಕನ್ನಡದಲ್ಲಿಯೂ 'ಮಸೀದಿ' ಎಂದು ಕರೆಯುತ್ತಾರೆ. ಮುಸ್ಲಿಮ್ ಜನಾಂಗ ವಾಸಿಸುವ ದೇಶಗಳಲ್ಲಿ ಮಸೀದಿಗಳು ನಿರ್ಮಾಣವಾಗಿವೆ. ಭಾರತದಲ್ಲಿಯೂ ಬಹು ದೊಡ್ಡ ಮಸೀದಿಗಳು ನಿರ್ಮಾಣವಾಗಿವೆ. ದೆಹಲಿ, ಗುಲಬರ್ಗಾ, ಬೀದರ, ಬಿಜಾಪುರ, ಔರಂಗಾಬಾದ ಪಟ್ಟಣಗಳಲ್ಲಿ ಐತಿಹಾಸಿಕ ಬೃಹದ್ ಮಸೀದಿಗಳಿವೆ. ಸಣ್ಣ ಪುಟ್ಟ ಲೆಕ್ಕವಿಲ್ಲದಷ್ಟು ಮಸೀದಿಗಳು ಭಾರತದಲ್ಲಿ ಕಾಣಸಿಕ್ಕುತ್ತವೆ.

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿರುವ ಗುಲಬರ್ಗಾದ ಜಾಮೆ ಮಸೀದಿ ವಿಶ್ವದಲ್ಲಿಯೇ ಎರಡನೆಯ ಅತ್ಯಂತ ದೊಡ್ಡ ಮಸೀದಿ. ಬೀದರದಲ್ಲಿರುವ ಮಸೀದಿ ಅಷ್ಟೇ ಪ್ರಸಿದ್ಧವಾಗಿದೆ. ಮಸೀದಿಗಳನ್ನು ಇಟ್ಟಿಗಿ, ಗಚ್ಚುಗಾರಿಗಳಿಂದ ನಿರ್ಮಿಸಲಾಗಿದೆ. ದೊಡ್ಡ ದೊಡ್ಡ ಕಂಬಗಳು, ಎತ್ತರ ಮತ್ತು ಮೇಲೆ ಗುಮ್ಮಟಾಕಾರದ ಗುಮ್ಮಜ್ ಮತ್ತು ನಾಲ್ಕು ಮೂಲೆಯಲ್ಲಿ ಮಿನಾರ್ ಇವು ಮಸೀದಿಯ ರಚನೆಯ ಲಕ್ಷಣಗಳು. ಒಳಗೆ ಸಾವಿರಾರು ಜನ ಕುಳಿತುಕೊಳ್ಳಲು, ಪ್ರಾರ್ಥನೆ ಸಲ್ಲಿಸಲು ವಿಶಾಲವಾದ ಹಜಾರ. ಅವುಗಳ ಹತ್ತಿರ ನೀರಿನ ಕೊಳಗಳು ಮಸೀದಿಗಳ ಒಳಗಿನ ಲಕ್ಷಣ.

ಮುಸ್ಲಿಮ್‌ರು ರಾಜ್ಯಭಾರ ಮಾಡಿದ ಪ್ರದೇಶಗಳ ಊರುಗಳಲ್ಲಿ ಮಸೀದಿಗಳಿವೆ. ಪ್ರತಿ ಶುಕ್ರವಾರ ಇಲ್ಲಿ ನಮಾಜ ನಡೆಯುತ್ತದೆ. ಮುಸ್ಲಿಮ್‌ರು ಶುಭ್ರ ವಸ್ತ್ರಗಳನ್ನು ಧರಿಸಿ, ಸಾಲಾಗಿ ಶಿಸ್ತಿನಿಂದ ನಮಾಜ್‌ನ್ನು ಸಲ್ಲಿಸುತ್ತಾರೆ. ಮಸೀದಿಯ ಧರ್ಮಾಧಿಕಾರಿ ಪೇಷ್ ಇಮಾಮ್‌ರು ಪವಿತ್ರ ಕುರಾನ್ ಬೋಧನೆ ಮಾಡುತ್ತಾರೆ. ಹೀಗೆ ನಮಾಜ್ ಮಾಡುವ ಮಸೀದಿಗಳನ್ನು ಜಾಮೆ ಮಸೀದಿಯೆಂದು ಕರೆಯುತ್ತಾರೆ. ಶುಕ್ರವಾರದ ನಮಾಜ್ ಮುಸ್ಲಿಮ್‌ರಿಗೆ ಪವಿತ್ರ, ಜಾಮೆ ಮಸೀದಿ ಅತ್ಯಂತ ಪವಿತ್ರ ಸ್ಥಳವೆಂದು ಭಾವಿಸಲಾಗುತ್ತದೆ. *(ಎಸ್.ಎಂ.)*

ಮಸ್ಕಿ: ಐತಿಹಾಸಿಕ ಸ್ಥಳ. ಲಿಂಗಸುಗೂರಿನಿಂದ ಅಗ್ನೆಯಕ್ಕೆ 27 ಕಿ.ಮೀ. ಅಂತರದಲ್ಲಿ ರಾಯಚೂರಿಗೆ 115 ಕಿ.ಮೀ. ದೂರದಲ್ಲಿ ತುಂಗಭದ್ರೆಯ ಉಪನದಿಯಾದ ಮಸ್ಕಿ ಹೊಳೆಯ ಬಲದಂಡೆಯ ಮೇಲಿರುವ ಸಣ್ಣ ಪಟ್ಟಣ, ಈಗ ವ್ಯಾಪಾರದ ಕೇಂದ್ರವಾಗಿದೆ. ಕ್ರಿ.ಶ. 1888ರಲ್ಲಿ ಬ್ರೂಸ್ ಫೂಟ್ ಎಂಬವನ್ನು ಇಲ್ಲಿ ನವಶಿಲಾಯುಗದ ಅವಶೇಷದ ವಸ್ತುಗಳನ್ನು ಸಂಶೋಧಿಸಿ, ಸಂಗ್ರಹಿಸಿದ. ಇಂದು ಇವು ಚೆನ್ನೈನ ವಸ್ತುಸಂಗ್ರಹಾಲಯದಲ್ಲಿವೆ.

ಇಲ್ಲಿ ದೊರೆತ ಮಣಿ ಸರಗಳು, ಕರ್ಣಾಭರಣಗಳು, ಬೆರಳುಂಗುರುಗಳು, ಕೈ ಬಳೆಗಳು, ಕೊರಳ ಹಾರಗಳು ಶಂಖದ ಸರಗಳು, ಮುಂತಾಗಿ ಇಲ್ಲಿ ದೊರೆತ ವಸ್ತುಗಳ ಬಗೆಗೆ ಸಂಶೋಧಕರು ವಿಶ್ಲೇಷಿಸಿದ್ದಾರೆ. ಕಿ.ಪೂ. 300ದಿಂದ– 500ರ ಕಾಲದಲ್ಲಿ ಮಸ್ಕಿಯು ಮಣಿಸರಗಳ ತಯಾರಿಕೆಯ ಒಂದು ಪ್ರಮುಖ ಸ್ಥಳವಾಗಿತ್ತು ಎಂದು ಹೇಳಲಾಗಿದೆ. ಅಲ್ಲದೆ ಮಣಿಸರಗಳ ತಯಾರಿಕೆ ಹಾಗೂ ಅವುಗಳ ವ್ಯಾಪಾರದಲ್ಲಿ ಮಸ್ಕಿ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿತ್ತು ಎಂದು ಹೇಳಲಾಗಿದೆ.

1915ರಲ್ಲಿ ಚಿನ್ನದ ಗಣಿಯ ಇಂಜಿನೀಯರರಾಗಿದ್ದ' ಬಿಡನ್ ಎಂಬುವವನು ಮಸ್ಕಿಯಲ್ಲಿರುವ ಅಶೋಕನ ಶಿಲಾಶಾಸನ ಒಂದನ್ನು ಪತ್ತೆಹಚ್ಚಿದ. ಈ ಶಾಸನದ ವೈಶಿಷ್ಟ್ಯವೆಂದರೆ ಅಶೋಕನ ಹೆಸರನ್ನು ಒಳಗೊಂಡ ಮೊದಲ ಶಾಸನ ಇದಾಗಿದೆ. ಇದು ಕ್ರಿಸ್ತಪೂರ್ವ 256ರಲ್ಲಿ ಬ್ರಾಹ್ಮೀ ಲಿಪಿಯಲ್ಲಿ ಬರೆಯಲ್ಪಟ್ಟಿದ್ದು, ಅದರ ಕನ್ನಡ ಅನುವಾದ ಹೀಗಿದೆ.

ಇದು ದೇವರಿಗೆ ಪ್ರಿಯನಾದ ಅಶೋಕ ರಾಜನ ಘೋಷಣೆ. ಈಗ ಎರಡೂವರೆ ಸಂವತ್ಸರಗಳ ಆಚೆಯ ಕಾಲದಿಂದ ನನು ಬುದ್ಧ ದೇವನ ಅನುಯಾಯಿಯಾಗಿದ್ದೇನೆ, ಈಗ ಒಂದು ಸಂವತ್ಸರಕ್ಕೆ ಅಧಿಕ ಕಾಲದಿಂದ ನಾನು ಬೌದ್ಧ ಸಂಘದಲ್ಲಿ ಆಸಕ್ತಿಯುಳ್ಳವನಾಗಿ ಶ್ರದ್ಧೆಯಿಂದ ಶ್ರಮಿಸುತ್ತಿದ್ದೇನೆ. ಇದರ ಫಲವಾಗಿ ಈ ಜಂಬೂ ದ್ವೀಪದಲ್ಲಿ ಹಿಂದೆ ದೇವರುಗಳು ಮಾನವರೊಡನೆ ಮಿಳಿತರಾಗಿರಲಿಲ್ಲ. ಈಗ ಮಿಳಿತರಾಗಿದ್ದಾರೆ.

ನಾನು ಸಾಧಿಸಿದ ಈ ಕಾರ್ಯವನ್ನು ಬಡವನಾದರ ಸಾಧಿಸಬಹುದು. ಆದರೆ ಆತನಿಗೆ ಧರ್ಮದಲ್ಲಿ ಶ್ರದ್ಧೆ ಮಾತ್ರ ಆವಶ್ಯಕ. ಈ ಕಾರ್ಯ ಬಲ್ಲಿದವರಿಗೆ ಮಾತ್ರ ಸಾಧ್ಯವೆಂದು ಯಾರು ತಿಳಿಯಲಾಗದು, ಬಡವರಾಗಲೀ ಬಲ್ಲಿದವರಾಗಲೀ ಈ ಮಾತನ್ನು ನೆನೆಯಬೇಕಾದುದು. ನೀವೂ ಈ ಮಾರ್ಗವನ್ನು ಅನುಸರಿಸುವಿರಾದರೆ ಈ ಘನ ಸಾಧನೆ ಬಹುಕಾಲ ಬಾಳೀತು, ಒಬ್ಬ ವ್ಯಕ್ತಿ ಎಷ್ಟು ಅಭಿವೃದ್ಧಿಯಾದಾನು.

ಮಸ್ಕಿಯ ಪ್ರಾಚೀನತೆಗೆ ಇಲ್ಲಿ ದೊರೆತ ಈ ಅಶೋಕನ ಶಿಲಾ ಶಾಸನವಲ್ಲದೆ, ಇಲ್ಲಿಯ ಉತ್ಖನನದಲ್ಲಿ ಪ್ರಾಚೀನ ಮಾನವರ ಅಸ್ಥಿ ಪಂಬರಗಳು, ನಾಣ್ಯಗಳು, ಉಪಯೋಗಿಸಿದ ವಸ್ತುಗಳು ದೊರೆತಿವೆ. ಅಗೆತದ ಸಂಶೋಧನೆಯ ಪರಿಣಾಮವಾಗಿ ಇಂದು ಮಸ್ಕಿ ಇತಿಹಾಸ ಪೂರ್ವಕಾಲದ ನಿವೇಶನವೆಂದು ಗೊತ್ತಾಗಿದೆ.

ಉತ್ಖನನ ಕಾಲದಲ್ಲಿ ಇಲ್ಲಿ ದೊರೆತ ಎಲುವುಗಳು ಚಕಮಕಿ ಕಲ್ಲುಗಳು, ಇತರ ವಸ್ತುಗಳು, ಮಸ್ಕಿಯು ಕಿ.ಪೂ. 200ರಿಂದ 300 ವರ್ಷಗಳ ಹಳೆಯ ಊರು ಎಂದು ತೋರಿಸಿಕೊಡುತ್ತಿವೆ. ಅಲ್ಲಿ ದೊರೆತ ನಾಣ್ಯಗಳು ಶಾತವಾಹನರ (ಕ್ರಿ.ಶ. 186ರಲ್ಲಿಯ) ಗೌತಮಿ ಪುತ್ರನ ಬಗೆಗಿನ ಸಾಕ್ಷಿಗಳಾಗಿವೆ. ಕ್ರಿ.ಪೂ. ಕಾಲದ ಬಂಗಾರದ ಆಭರಣಗಳು ಇಲ್ಲಿ ದೊರೆತ ಈ ಮಣಿಗಳಿಗೆ ಒಂದು ತರದ ಬಿಳಿ ಬಣ್ಣವನ್ನು ಬಳಿದಿದ್ದಾರೆ.

ಮಸ್ಕಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಹಾಗೂ ಅವರ ಶಾಸನಗಳಲ್ಲಿ 'ಹಿರಿಯ ಮೊಸಂಗಿ' ಎಂದೂ, ಯಾದವರ ರಾಜ ಸಿಂಘಣನ 13ನೆಯ ಶತಮಾನದ ಶಾಸನದಲ್ಲೂ ರಾಜಧಾನಿ ಮೊಸಂಗಿ ಎಂದೂ ವಿಜಯನಗರದ ಅರಸ ಅಚ್ಯುತರಾಯ ಸದಾಶಿವರಾಯರ ಕಾಲದಲ್ಲಿ 'ಮೊಸಗೆ' ಎಂದು ಕರೆಯಿಸಿ ಕೊಂಡಿದೆ. ಇಲ್ಲಿ ದೊರೆತ ಎಲ್ಲ ಪ್ರಾಚೀನ ಅವಶೇಷಗಳನ್ನು ಹೈದರಾಬಾದದ ನಿಜಾಮ ಮೀರ್ ಉಸ್ಮಾನ್ ಅಲಿಖಾನರು ಸಂಗ್ರಹಿಸಿದ್ದರು, ಈಗ ಈ ಎಲ್ಲ ಅವಶೇಷಗಳು ಹೈದ್ರಾಬಾದ, ದೆಹಲಿ ಮತ್ತು ಚೆನ್ನೈ ವಸ್ತುಸಂಗ್ರಹಾಲಯದಲ್ಲಿವೆ.

(ಜಿ.ಎಚ್.ಪಿ)

ಮಸ್ಕಿ ಬೆಟ್ಟ: ಇಂದಿನ ಮಸ್ಕಿಯು ರಾಯಚೂರು ಜಿಲ್ಲೆಯ ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು, ಅಶೋಕನ ಶಿಲಾಶಾಸನ ಇರುವ ಒಂದು ಐತಿಹಾಸಿಕ ಪಟ್ಟಣ ಎನಿಸಿದೆ. ಇಲ್ಲಿಂದ ನಾಲ್ಕೈದು ಕಿ.ಮೀ. ದೂರ ಬೆಲ್ಲದಮರಡಿ ಎಂಬ ಪುಟ್ಟಹಳ್ಳಿ ದೇಸಾಯಿ ಎಂಬುವರ ಒಂದು ಮನೆತನವಿತ್ತು. ಈ ಕುಟುಂಬದ ಸದಸ್ಯರಲ್ಲಿ ದೈವಾಂಶ ಸಂಭೂತಳೂ, ಪರಮ ಭಕ್ತಳೂ ಆದ ಮಹಾ ಶಿವಭಕ್ತೆ ದೇವಮ್ಮ (ದೇವಕೆಮ್ಮ) ಶಿವನನ್ನು ಪೂಜಿಸಿ ಒಲಿಸಿಕೊಳ್ಳುವ ಗುಪ್ತಭಕ್ತಿ ಈ ಶಿವಶರಣೆಯ ಅಂತರಾತ್ಮದಲ್ಲಿ ತುಂಬಿದ ಕೊಡದಂತಿತ್ತು.

ಶ್ರೀಶೈಲ ಮಲ್ಲಿಕಾರ್ಜುನ ದೇವರನ್ನು ದೈನಂದಿನ ಜೀವನದಲ್ಲಿ ಮನಮುಟ್ಟಿ ಆರಾಧಿಸಿ ಆತನಿಗೆ ಪರಮ



ಮುದ್ದು ಮಲ್ಲಿಕಾರ್ಜುನ ದೇವಾಲಯ, ಮಸ್ಕಿ

ಭಕ್ತಳಾಗಿದ್ದಳು. 'ಯೋಗ' ದಿಂದ ಎಲ್ಲಿಗೆ ಬೇಕಾದರೂ ಹೋಗಿರಬಹುದೆಂದು ಆ ಮಾರ್ಗದಲ್ಲಿದ್ದ ಸಾಧಕರು ಹೇಳುತ್ತಾರೆ. ಅಂತೆಯೇ ಶಿವಭಕ್ತೆ ಸದಾಕಾಲ ಶ್ರೀಶೈಲಕ್ಕೆ ಹೋಗಿ ದರ್ಶನ ಪಡೆದು ಬರುತ್ತಿದ್ದಳೆಂದು ಹೇಳಲಾಗುತ್ತದೆ.

ಈ ಮಹಾಮಾತೆಯು ಅತ್ತೆ-ಮಾವಂದಿರ ಕೈಯಲ್ಲಿ ನಡೆಯುವ ಸೊಸೆಯಾಗಿದ್ದಳು. ಅದಕ್ಕಾಗಿ ಒಂದು ದಿನ ಶ್ರೀಶೈಲಕ್ಕೆ ಹೋಗಿದ್ದಾಗ 'ಅಮ್ಮಾ' ನಿನ್ನ ಭಕ್ತಿಗೆ ನಾನು ಮೆಚ್ಚಿದ್ದೇನೆ ನೀನು ಇಲ್ಲಿಗೆ ಬರುವ ಕಷ್ಟ ಸಾಕು. ನೀನಿದ್ದಲ್ಲಿಗೆ ನಾನೇ ಬರುತ್ತೇನೆ. ಆದರೆ ನೀನು ತಿರುಗಿ ನೋಡಬೇಡ ನೋಡಿದರೆ ಆ ಸ್ಥಳದಲ್ಲಿಯೇ ನಾನು ನೆಲೆಸುತ್ತೇನೆ ಎಂದು ಶ್ರೀ ಮಲ್ಲಿಕಾರ್ಜುನನು ದೇವವಾಣಿ ನುಡಿದನು.

ಶಿವಭಕ್ತಳು ಆನಂದಭರಿತಳಾಗಿ, ಭಕ್ತಿಯಲ್ಲಿ ಮೈಮರೆತು ಪ್ರಯಾಣ ಬೆಳೆಸಿದಳು. ಭಕ್ತವತ್ಸಲನಾದ ಸಾಕ್ಷಾತ್ ಪರಶಿವನೇ ಮಾತುಕೊಟ್ಟಂತೇ ಭಕ್ತಳು ಹಿಂದೇ ಬರತೊಡಗಿದನು. ದಾರಿ ಹೇಗೆ ಸಾಗಿತೋ ಶಿವಲೀಲೆಯನ್ನು ಬಲ್ಲವರಾರು? ಬೆಳ್ಳಿಚುಕ್ಕಿ ಮೂಡುವಷ್ಟರಲ್ಲಿ ಮಸ್ಕಿ ಗ್ರಾಮವು ಸಮೀಪಿಸಿತು. ಇಷ್ಟು ದೂರ ಬಂದಿದ್ದೇನೆ. ದೇವರು ತನ್ನ ಹಿಂದೇ ಬರುತ್ತಿದ್ದಾನೋ ಇಲ್ಲವೊ ಎಂದು ಭಕ್ತಳ ಮನಸ್ಸಿನಲ್ಲಿನ ಸಂಶಯ ಉಂಟಾಗಿ ಹಿಂದೆ ನೋಡಬೇಕೆನಿಸಿತು, ನೋಡಿಯೇ ಬಿಟ್ಟಳು. ನಕ್ಷತ್ರಗಳು ಮಿನುಗುತ್ತಿದ್ದು ಆಕಾಶ ಮೌನ ಧರಿಸಿತ್ತು, ಶಿವಭಕ್ತಳ ಮನಸ್ಸು ಅಲ್ಲೋಲ ಕಲ್ಲೋಲವಾಯಿತು.

ಅಯ್ಯೋ ಶಿವನೆ! ಹಿಂದಿರುಗಿ ನೋಡಿದೆನಲ್ಲ. ತಂದೆ ಮಲ್ಲಿಕಾರ್ಜುನ, ನನ್ನ ಸ್ವಾಮಿ ನನ್ನ ದೇವರೆ, ನನ್ನ ಪರಮಾತ್ಮ ಎಲ್ಲಿದ್ದಿಯಪ್ಪ ಮಾತಾಡು ತಂದೆ ಎಲ್ಲಿ ಮರೆಯಾದೆ ಕಾಣಿಸಪ್ಪ ಎಂದು ದುಃಖಿತಪ್ತಳಾಗಿ ದೇವರನ್ನು ಬೇಡಿಕೊಂಡಳು. ದೇವರು ಕಾಣಲಿಲ್ಲ. ತಲ್ಲಣಗೊಂಡ ಭಕ್ತಳು, ಎಂಥ ದುರ್ದೈವಿ ನಾನು. ನಿನ್ನ ಬಿಟ್ಟು ಬದುಕಿರಲಾರೆ. ನಿನ್ನಲ್ಲಿ ನನ್ನನ್ನು ಐಕ್ಯಳಾಗಿಸಿಕೊ ಎಂದು ಹೃದಯ ಕಿತ್ತು ಬರುವಂತೆ ದೇವರಲ್ಲಿ ಮೊರೆಯಿಟ್ಟಳು.

ಭಕ್ತಳನ್ನು ಸಂತೈಸುವುದಕ್ಕಾಗಿ ಶ್ರೀ ಮಲ್ಲಿಕಾರ್ಜುನ 'ಅಮ್ಮಾ' ನನ್ನ ವಾಗ್ದಾನ ತಪ್ಪಿ ನಡೆದಿರುವೆ. ಇದಕ್ಕೆ ನೀನು ಚಿಂತಿಸಬೇಕಿಲ್ಲ ಈ ಹಳ್ಳದ ದಂಡೆಯ ಮೇಲಿರುವ ಎರಡು ಗುಂಡುಗಳ (ಬಂಡೆಗಲ್ಲು) ಮಧ್ಯದಲ್ಲಿ ನಾನು ಉದ್ಭವಿಸಿರುತ್ತೇನೆ, ಇಲ್ಲಿಗೆ ಬಂದು ದರ್ಶನ ಪಡೆ ಎಂಬ ಆಶೀರ್ವಾಣಿಯಾಯಿತು. ಶಿವಭಕ್ತಳ ಮನಸ್ಸು ಸಂತಸಗೊಂಡಿತು. ಗ್ರಾಮಕ್ಕೆ ತೆರಳಿ ಮನೆಯವರಿಗೆ ನಡೆದ ಘಟನೆಯನ್ನು ತಿಳಿಸಿದಳು. ಅವಳ ಭಕ್ತಿ ಹೊರಗೆ ಬಿದ್ದುದ್ದರಿಂದ ಮನೆಯವರು ಊರಿನವರು ಪರಿವರ್ತನೆಗೊಂಡರು. ಮಸ್ಕಿಗೆ ಬಂದು ದೇವರು ನೆಲೆಸಿದ ಆ ಪುಣ್ಯ ಸ್ಥಳವನ್ನು ಗುರುತಿಸಿ, ಅದಕ್ಕೆ "ಮುದ್ದು ಮಲ್ಲಿಕಾರ್ಜುನ" ಬೆಟ್ಟ ಎಂದು ಹೆಸರಿಟ್ಟು ಪೂಜಿಸತೊಡಗಿದರು.

ಕೆಲವು ವರ್ಷಗಳ ತರುವಾಯ ದೇವರು ಸ್ವಪ್ನಾವಸ್ಥೆಯಲ್ಲಿ ಪುನಃ ಗೋಚರಿಸಿ "ಅಮ್ಮಾ ಇನ್ನೂ ಮುಂದೆ ನಾನು ಪಟ್ಟಣದ ದಕ್ಷಿಣ ದಿಕ್ಕಿಗೆ ಇರುವ ಎತ್ತರವಾದ ಬೆಟ್ಟದಲ್ಲಿ ನೆಲೆಸುತ್ತೇನೆ. ಮನೆಯಲ್ಲಿರುವ ನವಮಾಸ ತುಂಬಿದ ಗೋಮಾತೆಯನ್ನು ಯಾವ ಬಂಧನಕ್ಕೊಳಪಡಿಸದೇ ಬಿಡಿ, ಯಾವ ಸ್ಥಳದಲ್ಲಿ ಅದು ಕರುವನ್ನು ಹಾಕಿಕೊಂಡು ಮಲಗಿರುವದೋ ಆ ಸ್ಥಳದಲ್ಲಿ ನಾನು ಉದ್ಭವಿಸುತ್ತೇನೆ. ಅಲ್ಲಿ ನನ್ನ ದೇವಸ್ಥಾನ ಕಟ್ಟಿಸಿರಿ. ನಿನ್ನ ಕೀರ್ತಿ ಬೆಳಗುತ್ತದೆ ಎಂದು ದೇವವಾಣಿ ನುಡಿದು ಅದೃಶ್ಯವಾದನು.

ಬೆಳಗ್ಗೆ ಶಿವಭಕ್ತೆ ತನ್ನ ಮನೆಯವರಿಗೆ ಇದನ್ನು ತಿಳಿಸಿದಳು. ಅದರಂತೆ ಅವರು ಮನೆಯಲ್ಲಿದ ನವಮಾಸ ತುಂಬಿದ ಆಕಳನ್ನು ಕಣ್ಣಿ ಬಿಚ್ಚಿ ಹೊರಗೆ ಬಿಟ್ಟರು. ಅದು ನೇರವಾಗಿ ಮಸ್ಕಿಯ ಬೆಟ್ಟದ ಸಾಲಿನ ಕಡೇ ಹೊರಟು ಬಂದಿತು. ಬೆಟ್ಟದಲ್ಲಿ ಗಿಡಗಂಟಿಗಳು ದಟ್ಟವಾಗಿ ಬೆಳೆದಿದ್ದು ಭಯಾನಕ ವಾತಾವರಣವಿತ್ತು. ಇವುಗಳ ಪೊದೆಗಳಲ್ಲಿ ಗುಡ್ಡದ ಗುಹೆಗಳಲ್ಲಿ ಹುಲಿ, ಚಿರತೆ, ಜಿಂಕೆ ಮುಂತಾದ ಕಾಡು ಪ್ರಾಣಿಗಳು ಮನೆ ಮಾಡಿಕೊಂಡಿದ್ದವು. ದೇವರ ಕೃಪೆಯಿಂದ ಮೃಗಗಳು ಸೌಜನ್ಯದಿಂದ ವರ್ತಿಸಿ ಗೋಮಾತೆಗೆ ಕಿರುಕುಳ ಕೊಡಲಿಲ್ಲ.

ಹಸುವನ್ನು ಹಿಂಬಾಲಿಸಿ ಬಂದ ಗ್ರಾಮಸ್ಥರು, ಶಿವಭಕ್ತೆಯು ಮಸ್ಕಿಯಲ್ಲಿದ್ದುಕೊಂಡು ಆಕಳನ್ನು ಬೆಟ್ಟದ ತುತ್ತ ತುದಿಯಲ್ಲಿರುವ ದೊಡ್ಡ ಹಾಸು ಬಂಡೆಯ ಮೇಲೆ ಕರುವನ್ನು ಹಾಕಿಕೊಂಡು ಮಲಗಿದ್ದು ಕಾಣಿಸಿತು. ಆತುರದಿಂದ ಹತ್ತಿರಕ್ಕೆ ಬಂದರು. ಕೂಡಲೇ ಹಸುವು ಎದ್ದುನಿಂತು ಕಾಮಧೇನುವಿನಂತೆ ಅಲ್ಲಿ ಉದ್ಭವಿಸಿದ ಶ್ರೀಶೈಲ ಮಲ್ಲಿಕಾರ್ಜುನ ಲಿಂಗಕ್ಕೆ ತನ್ನ ಕೆಚ್ಚಲಿನಿಂದ ಕ್ಷೀರಾಭಿಷೇಕ ಮಾಡಿತು.

ಶಿವಲೀಲೆಯನ್ನು ಪ್ರತ್ಯಕ್ಷ ಕಂಡ ಗ್ರಾಮಸ್ಥರು ದೇವರ ನಾಮವನ್ನು ಭಕ್ತಿಯಿಂದ ಜಯ-ಜಯಕಾರ ಮಾಡಿದರು. ಶ್ರೀ ಮಲ್ಲಿಕಾರ್ಜುನನು ಈ ಬೆಟ್ಟದಲ್ಲಿ ಉದ್ಭವಿಸಿದ ಘಟನೆ ಎಲ್ಲಡೆಗೂ ಪಸರಿಸಿತು. ಈ ಪುಣ್ಯ ಸ್ಥಳ ಕಣ್ಣಾರೆ ಕಾಣಲು ಹಳ್ಳಿ ನಗರ, ಪಟ್ಟಣ ಬೇರೆ ರಾಜ್ಯಗಳಿಂದ, ಭಕ್ತರು ಕುತೂಹಲದಿಂದ ಬರತೊಡಗಿದರು. ದರ್ಶನ ಪಡೆದು ಪುನೀತರಾದರು. ನಂತರ ಭಕ್ತಾದಿಗಳೆಲ್ಲ ಸೇರಿಕೊಂಡು ಶಿಖರದಲ್ಲಿ ಶಿಲ್ಪಕಲೆಗಳಿಂದ ಕೆತ್ತಲ್ಪಟ್ಟ ಭವ್ಯವಾದ ದೇವಾಲಯ ಕಟ್ಟಿಸಿದರು. ಈ ದೇವಾಲಯದ ನಿರ್ಮಾಣ ಅಮರ ಶಿಲ್ಪಿ ಜಕಣಾಚಾರಿ ಕಾಲದಲ್ಲಿ ಆಗಿರುವುದೆಂದು ಹೇಳುವರು.

ಶ್ರೀಶೈಲದಲ್ಲಿದ್ದಂತೆ ಪೂರ್ವದ ಮತ್ತು ದಕ್ಷಿಣೋತ್ತರವಾಗಿ ಬಾಗಿಲುಗಳಿವೆ. ದೇವಾಲಯದ ಒಳಗೆ ಮತ್ತು ಹೊರ ಗೋಡೆಗಳಿಗೆ ಇತಿಹಾಸ ಪ್ರಸಿದ್ಧವಾದ ಹಾಗೂ ಪುರಾಣ ಪ್ರಸಿದ್ಧವಾದ, ಶಿಲಾಮೂರ್ತಿಗಳು ಕೆತ್ತಲ್ಪಟ್ಟಿವೆ. ಈ ಘಟನೆಗೆ ಸಂಬಂಧಪಟ್ಟಂತೆ ಗೋಮಾತೆಯು ಶ್ರೀ ಮಲ್ಲಿಕಾರ್ಜುನ ದೇವರಿಗೆ (ಲಿಂಗಕ್ಕೆ) ಕ್ಷೀರಾಮೃತ ಅಭಿಷೇಕ ಮಾಡುವ ಶಿಲ್ಪಕಲೆಯ ಚಿತ್ರಗಳು ಕೆತ್ತಲ್ಪಟ್ಟಿವೆ.

ದರ್ಶನಕ್ಕೆಂದು ಬರುವವರಿಗಾಗಿ ಕೆಳಗಿನಿಂದ ಬೆಟ್ಟದ ತುದಿಯವರೆಗೆ ಮೆಟ್ಟಿಲುಗಳನ್ನು ಕಟ್ಟಿಸಿರುತ್ತಾರೆ. ಇಲ್ಲಿ ಪ್ರತಿವರ್ಷ ಶ್ರಾವಣ ಮಾಸದಲ್ಲಿ ನಿತ್ಯ ಬೆಟ್ಟವನ್ನು ಹತ್ತುತ್ತಾರೆ. ಕಡೇ ಸೋಮವಾರರಂದು ಪಲ್ಲಕ್ಕಿ ಉತ್ಸವ ಜರುಗುತ್ತದೆ. ಶ್ರಾವಣ ಮಾಸದ ಸೋಮವಾರದಂದು ಬೆಳಗಿನಿಂದ ಸಂಜೆಯವರೆಗೆ ಬೆಟ್ಟ ಹತ್ತಿ ಇಳಿಯುತ್ತಿರುವ ಸಹಸ್ರ ಸಹಸ್ರ ಭಕ್ತರನ್ನು ನೋಡುತ್ತಿದ್ದರೇ ಸಮಯ ಹೋಗುವುದೇ ಗೊತ್ತಾಗುವುದಿಲ್ಲ.

ಪ್ರತಿವರ್ಷ ಭಾರತ ಹುಣ್ಣಿಮೆ ದಿನಂದು ಈ ದೇವರ ರಥವನ್ನು ಸಹಸ್ರಾರು ಭಕ್ತರು ಎಳೆದು ಪುನೀತರಾಗುತ್ತಾರೆ. ಈ ಜಾತ್ರಾ ಮಹೋತ್ಸವದಲ್ಲಿ ಅಪಾರ ಭಕ್ತರು ಆಗಮಿಸುತ್ತಾರೆ. ಈ ಘಟನೆಗಳನ್ನಾಧರಿಸಿ ಮಸ್ಕಿಯನ್ನು ಎರಡನೇ ಶ್ರೀಶೈಲವೆಂದು ಭಕ್ತರು ಹೆಮ್ಮೆಯಿಂದ ಕರೆಯುತ್ತಾರೆ. *(ಎಂ.ಪಿ.)*

ಮಹಾಂತ ಸುತಾರ: ಕಾಷ್ಠ ಶಿಲ್ಪ ಕಲಾವಿದ. ಅಫಜಲಪೂರ ತಾಲ್ಲೂಕಿನ ಭೋಗನಳ್ಳಿ ಗ್ರಾಮದಲ್ಲಿ ಕಡುಬಡತನದ ಕುಟುಂಬದಲ್ಲಿ ಜನಿಸಿದರು. ತಂದೆ ಶರಣಪ್ಪ ಸುತಾರ. ತಂದೆ ಬಡಗಿತನವನ್ನೇ ಮೂಲ ಉದ್ಯೋಗವನ್ನಾಗಿ ಮಾಡಿಕೊಂಡು, ಕೃಷಿ ಉಪಕರಣಗಳನ್ನು ತಯಾರಿಸಿ, ಜೀವನ ನಡೆಸುತ್ತಿದ್ದರು. ಮಹಾಂತ ಕೂಡ ಇದೇ ಉದ್ಯೋಗವನ್ನು ಮುಂದುವರಿಸಿ ಕೊಂಡು, ಅದನ್ನು ಕಲಾತ್ಮಕವಾಗಿ ಬದಲಾವಣೆ ಮಾಡಿಕೊಂಡು ತಮ್ಮ ಕೌಶಲ್ಯವನ್ನು ಮೆರೆದಿದ್ದಾರೆ. ಇವರು ಓದಿದ್ದು, ಏಳನೆಯ ತರಗತಿವರೆಗೆ ಮಾತ್ರ. ಪ್ರಾಥಮಿಕ ಹಂತದಲ್ಲೇ ಚಿತ್ರ ಬರೆಯುವ ಗೀಳು ಹುಟ್ಟಿಸಿಕೊಂಡು ಚಿತ್ರ ಬಿಡಿಸಿ ಹಿರಿಯರಿಗೆ ತೋರಿಸಿ ಭೇಶ್ ಎನಿಸಿಕೊಂಡು ಮನೆಯಲ್ಲಿದ್ದ ಅಳಿದುಳಿದ ಕಟ್ಟಿಗೆ ತುಂಡುಗಳಲ್ಲಿ ಹೂ–ಬಳ್ಳಿ, ಪ್ರಾಣಿ, ಪಕ್ಷಿಗಳ ಚಿತ್ರ ಬಿಡಿಸಿ, ಕುಸುರಿ ಕೆಲಸಕ್ಕೆ ಜೀವ ತುಂಬುವ ಕಾಯಕ ಆರಂಭಿಸಿದರು. ವಂಶಪಾರಂಪರ್ಯವಾಗಿ ಬಂದ ವೃತ್ತಿಗೆ ಗುರುವಿನ ಇಲ್ಲವೇ ಯಾರ ಮಾರ್ಗದರ್ಶನವಿಲ್ಲದೇ ಕಾಷ್ಠ ಶಿಲ್ಪ ಕೆತ್ತನೆಯನ್ನು ಕರಗತ ಮಾಡಿಕೊಂಡರು.

ಇವರು ತಲೆಬಾಗಿಲು, ತೋಳುಗಳ ಮೇಲೆ ಗಣಪತಿ, ಗೌರಿ, ಲಕ್ಷ್ಮಿ ಹಾಗೂ ಸರಸ್ವತಿ ಮುಂತಾದ ಚಿತ್ರಗಳ ಕೆತ್ತನೆ ಮಾಡುವರು. ದೇವರ ಚಿತ್ರವಲ್ಲದೇ ಕುಸುರಿ ಕಲಾಕೃತಿಗಳನ್ನು ಚಿತ್ರಿಸಿ, ಗ್ರಾಹಕರಿಗೆ ಸಂತೃಪ್ತಿಯನ್ನುಂಟು ಮಾಡುತ್ತಾರೆ. ಇವರ ಕೈಯಲ್ಲಿ ಕಟ್ಟಿಗೆ ಮೇಣದಂತೆ ನುಣುಪಾಗಿ ಚಿತ್ರಗಳನ್ನು ಮೂಡಿಸುತ್ತದೆ. ಸಾಗವಾನಿ ಕಟ್ಟಿಗೆಯ ಬಾಗಿಲುಗಳು ಪಟ್ಟುಗಳ ಮೇಲೆ ಲೆಕ್ಕವಿಲ್ಲದಷ್ಟು ವಿವಿಧ ದೇವರುಗಳ ಚಿತ್ರಗಳು, ಫ್ರೀ ಹ್ಯಾಂಡ್ ಚಿತ್ರಗಳು, ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ಅಂದವಾಗಿ ಮೂಡಿಸಿ ಹೆಸರು ಮಾಡಿದ್ದಾರೆ. ಕಾಡು ಕಟ್ಟಿಗೆಯಲ್ಲಿ ಕಲೆ ಮೂಡಿಸಲು ಸಾಧ್ಯವಿಲ್ಲವೆನ್ನುವದನ್ನು ಹುಸಿಗೊಳಿಸಿ, ಅದರಲ್ಲೂ ಚಿತ್ರ ಮೂಡಿಸಿದ ಕೀರ್ತಿ ಇವರದು.

ಕೇವಲ ಹತ್ತು ನಿಮಿಷಗಳಲ್ಲಿ ಬಾಗಿಲು ತೋಳ (ಚೌಕಟ್ಟು) ಗಳ ಮೇಲೆ ಹಾಗೂ ಗಣಪತಿ ಮಾಡಗಳ ಮೇಲೆ, ಹೂ, ಬಳ್ಳಿ ರುದ್ರಾಕ್ಷಿ ಮಣಿ ಚಿತ್ರಗಳನ್ನು ಕೆತ್ತುವುದು ಇವರ ಕಲಾ ಪ್ರೌಢಿಮೆಗೆ ಸಾಕ್ಷಿಯಾಗಿದೆ. ದೇವರ ಪಲ್ಲಕ್ಕಿ ಸಿಂಹಾಸನಗಳ ಮೇಲೆ ವಿವಿಧ ಬಗೆಯ ಚಿತ್ರಗಳನ್ನು ಕೆತ್ತಿದ ಕಲಾವಿದರಾಗಿದ್ದು, ಇವರು ತಯಾರಿಸುವ ದೇವರ ಪಲ್ಲಕ್ಕಿಗಳಿಗೆ ಬಹಳಷ್ಟು ಬೇಡಿಕೆ ಇದೆ.

(ಎಸ್.ಎ.ಜಿ.)

ಮಹಾದೇವ ಮಂದಿರ: ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಪ್ರಸಿದ್ಧ ಐತಿಹಾಸಿಕ ಸ್ಥಳ ಇಲ್ಲಿನ ಮಹಾದೇವ ಮಂದಿರ. ಸುಮಾರು 500 ವರ್ಷಗಳ ಇತಿಹಾಸ ಹೊಂದಿದೆ. ಕೇವಲ ಕರಿಕಲ್ಲು ಶಿಲೆಯಿಂದ ನಿರ್ಮಿಸಲಾಗಿದೆ. ಮಂದಿರವು ಐತಿಹಾಸಿಕ ಶಿವ ಪೀಠವಾಗಿದ್ದು, ಬ್ರಹ್ಮ, ವಿಷ್ಣು, ಮಹೇಶ್ವರರ ಮಹಾದ್ವಾರ ಮಂದಿರದಲ್ಲಿದೆ ಎಂದು ಪೂಜಾರಿ ನಾಗನಾಥ ಅವರು ಹೇಳುತ್ತಾರೆ.

ಗಟ್ಟಿ ಕರಿಶಿಲೆಯಿಂದ ನಿರ್ಮಿತವಾದ ಮಹಾದೇವ ಮಂದಿರದ ಮೇಲೆ ದೇವಾಲಿಂಗ ಕನ್ನಿಕೆಯರ, ಪರಿಗಳ ರಂಬೆಯರ, ಕಿನ್ನರಿ, ಕಿಂಪುರುಷ ಮುಂತಾದವರ ಕಲಾತ್ಮಕ ಶಿಲ್ಪಕಲೆಗಳಿವೆ. ಮಹಾದೇವ ಮಂದಿರದ 4–5 ಕಡೆಯ ಗರ್ಭಗುಡಿಗಳಿದ್ದು; ಅಲ್ಲಲ್ಲಿ ಸ್ಥಾವರ ಲಿಂಗಗಳ ಸ್ಥಾಪನೆ ಮಾಡಲಾಗಿದೆ. ಮಂದಿರದ ಸಮೀಪದಲ್ಲಿ ಐತಿಹಾಸಿಕ ಭಾವಿಯಿದ್ದು, ಆ ಭಾವಿಯಲ್ಲಿ ಅಗಸ್ತ್ಯ ಮುನಿಗಳ ಪ್ರತಿಮೆ ಇದೆ. ಭಾವಿಯಲ್ಲಿಯೇ ಶ್ರೀ ವಿಷ್ಣು ದೇವರು ಮಲಗಿದ್ದ ಬೃಹತ್ ಪ್ರತಿಮೆ ಇದೆ. ನಾಗಪ್ರತಿಮೆ, ನಂದಿಕೇಶ್ವರ ಇತ್ಯಾದಿ ಪ್ರತಿಮೆಗಳು ಸಹ ಈ ದೇವಾಲಯ ಸಮುಚ್ಚಯದಲ್ಲಿವೆ. ಭಾವಿ ಈಗ ಸಂಪೂರ್ಣವಾಗಿ ಬತ್ತಿ ಹೋಗಿದ್ದು, ನೀರು ಬಳಸಲಾರದೇ ಹಾಳು ಬಿದ್ದಿದೆ.

ಔರಂಗಜೇಬನ ಕಾಲದಲ್ಲಿ ತನ್ನ ಸೈನ್ಯದೊಂದಿಗೆ ಆ ಭಾಗದಿಂದ ಹಾದುಹೋಗುವಾಗ, ಮಂದಿರದ ಕೆಲ ಭಾಗಕ್ಕೆ ಧಕ್ಕೆಯುಂಟು ಮಾಡಿದರೆಂದು ಹೇಳಲಾಗಿದೆ. ಅದಾದ ನಂತರ ಇತ್ತೀಚಿನ ರಜಾಕಾರ ಚಳವಳಿ ಸಂದರ್ಭದಲ್ಲಿ (ನೀಜಾಂ ಆಡಳಿತ ಸಂದರ್ಭ) ರಜಾಕಾರರ ನಾಯಕ ಖಾಸಿಂ ರಜವಿ ನೇತೃತ್ವದಲ್ಲಿ ಸುಂದರ ಮಂದಿರದ ಸುಂದರವಾದ ಶಿಲಾ ಬಾಲಿಕೆಗಳನ್ನು ಒಡೆದು ಹಾಕಲಾಗಿದೆ. ಮಂದಿರದ ಮೇಲಿನ ಛಾವಣಿಯನ್ನೂ ಒಡೆದು ಹಾಕಲಾಗಿದೆ ಎಂದು ಈಗಿನ ಹಿರಿಯ ಪೂಜಾರಿ ನಾಗನಾಥ ಅವರು ತಿಳಿಸಿದರು.

ಹೇಮಡ ಪಂಥೀಯ ಜನರು ಈ ಮಂದಿರವನ್ನು ಒಂದೇ ರಾತ್ರಿಯಲ್ಲಿ ಕಟ್ಟಿಸಿದರೆಂಬ ಪ್ರತೀತಿ ಹಿಂದಿನಿಂದಲೂ ಬಂದಿದೆ ಎಂದು ಪೂಜಾರಿ ಭಾವುಕ ಭಕ್ತಿಯಿಂದ ವಿವರಣೆ ನೀಡುತ್ತಾರೆ. ಪ್ರತಿ ಸೋಮವಾರ ಮಹಾದೇವ ಮಂದಿರದ ಮಹಾದೇವ ಪಿಂಡಕ್ಕೆ ರುದ್ರಾಭಿಷೇಕ ಮಜ್ಜನೆ ನಡೆಯುತ್ತದೆ.

ಪ್ರತಿ ವರ್ಷ ಯುಗಾದಿ–ಬಾರ್ಸಿ ಸಂದರ್ಭದಲ್ಲಿ ಬೃಹತ್ ಜಾತ್ರೆ ಆಗುತ್ತದೆ. ಜಾತ್ರಾ ನಿಮಿತ್ತ ಪಲ್ಲಕ್ಕಿ ಉತ್ಸವ ಭಕ್ತಿಯ ಮೆರವಣಿಗೆ ಕಾಶಿ ಮೆರವಣಿಗೆ, ಕುಸ್ತಿ ಪ್ರದರ್ಶನ ಮುಂತಾದ ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳು ನಡೆಯುತ್ತದೆ.

(ಡಿ.ಪಿ.)

ಮಾ

ಮಾಟದಾಟಗಳು: ಮಾಟ-ಮಂತ್ರ-ತಂತ್ರಗಳು ಮುಗ್ಧ ಜನರ ಜೀವನದೊಂದಿಗೆ ಆಟವಾಡುತ್ತವೆ. ಇವುಗಳಿಗೆ ದೈವದ ಭಯ ಹುಟ್ಟಿಸಿ ಅಮಾಯಕರನ್ನು ಬೇಗ ಮೋಸಗೊಳಿಸುತ್ತವೆ. ಮಾಟ-ಮಂತ್ರಗಳು ಇಂದ್ರಜಾಲ, ಕಣ್ಕಟ್ಟಿನ ಆಟಗಳು, ಅದ್ಭುತ ಚಮತ್ಕಾರಗಳು ಈ ಆಟದ ಮುಖ್ಯ ಸೂತ್ರಗಳು. ಈ ಆಟಗಳು ಹೆಚ್ಚಾಗಿ ಗ್ರಾಮೀಣ ಜನರ ಮೇಲೆ ಪ್ರಭಾವ ಬೀರುತ್ತವೆ. ಸಾತ್ವಿಕ ಸ್ವಭಾವದ ಜನರು ಮಾಟ-ಮಂತ್ರಗಳಿಗೆ ಬಹು ಸುಲಭವಾಗಿ ಮರುಳಾಗುತ್ತಾರೆ. ಹೆದರುವವರ ಮೇಲೆ ಕಪ್ಪೆ ಎಸೆದಂತೆ ಈ ಮಾಟದಾಟಗಳು ಅಮಾಯಕ ಮುಗ್ಧರ ಮೇಲೆ ಸವಾರಿ ಮಾಡುತ್ತವೆ. ಇದೊಂದು ಸಾಮೂಹಿಕ ಸನ್ನಿಪಾತ.

ಮಾಟ-ಮಂತ್ರ ಮಾಡುವವರು ಕ್ಷುದ್ರ ದೈವೀಶಕ್ತಿಯುಳ್ಳವರು. ಅವರು ಅಮಾವಾಸ್ಯೆ, ಸೂರ್ಯ ಗ್ರಹಣದಂಥ ವಿಶೇಷ ದಿನಗಳಲ್ಲಿ ತಮ್ಮ ವಿದ್ಯೆಯನ್ನು ಸಿದ್ಧಿಗೊಳಿಸಿಕೊಳ್ಳುತ್ತಾರೆ. ಇವರನ್ನು ಜನರು ಮಾಟಗಾರ, ಮಂತ್ರವಾದಿಗಳೆಂದು ಗುರಿತಿಸುತ್ತಾರೆ. ಇವರ ವೇಷ, ಭಾಷೆ, ವರ್ತನೆಗಳು ಭಯ ಮೂಡಿಸುವಂತೆ ವಿಚಿತ್ರವಾಗಿರುತ್ತವೆ. ತಮ್ಮ ಆಟಗಳಿಂದ ಜನರನ್ನು ಬೆರಗುಗೊಳಿಸುತ್ತಾರೆ.

ಮಾಟದಾಟಗಳಲ್ಲಿ ಮೋಡಿಕಾರರು ಒಂದು ಪಂಗಡ. ಇವರು ಚಿತ್ರ ವಿಚಿತ್ರವಾದ ಮಾಯದಾಟವಾಡಿ ಜನರಿಗೆ ಅದ್ಭುತ ಮನರಂಜನೆ ನೀಡುತ್ತಾರೆ. ಮೋಡಿಕಾರರು ಹಾಕುವ ಚಮತ್ಕಾರ ಆಟಗಳಿಗೆ ಪ್ರತಿಯಾಗಿ ಮೋಡಿ ಹಾಕುವ ಪರಿಣಿತ ವಿದ್ಯೆಬಲ್ಲ ಗ್ರಾಮೀಣ ಜನರು ಪ್ರತಿಮೋಡಿ ಹಾಕಿ ಮೋಡಿಕಾರರಿಗೆ ಸವಾಲು ಹಾಕುತ್ತಾರೆ.

ಆದರೆ ಕೆಲವು ಮಾಟ-ಮಂತ್ರವಾದಿಗಳು ಸಜ್ಜನರಿಗೆ ಕೆಟ್ಟದ್ದನ್ನು ಮಾಡುವ ಅಪಾಯಕಾರಿಗಳಿದ್ದಾರೆ. ಮತ್ತೊಬ್ಬರಿಗೆ ಕೆಟ್ಟದ್ದು ಮಾಡಿ ಸಂತೋಷ ಪಡುವುದು ಅವರ ಕೆಲಸ. ಇತ್ತೀಚೆಗೆ ಬಾನಾಮತಿ ಎಷ್ಟು ಜನರ ಬದುಕನ್ನು ಹಾಳು ಮಾಡಿರುವುದು ತಿಳಿದ ವಿಷಯ. ಇಂಥ ದುಷ್ಟ ಮಾಟಗಾರರನ್ನು ಜನರು ಮಟ್ಟಹಾಕಿ ಬುದ್ಧಿ ಕಲಿಸಬೇಕು. *(ಎಸ್.ಎಂ.)*

ಮಾಡಿಯಾಳ (1159): ಚಾರಿತ್ರಿಕ ಮಹತ್ವದ ಸ್ಥಳ. ಆಳಂದದಿಂದ ನೈಋತ್ಯಕ್ಕೆ 24 ಕಿ.ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಮಾಡಿಫಳ, ಅಗ್ರಹಾರ ಮಾಡಿಫಲ' ಎಂದೇ ಉಲ್ಲೇಖಿತ ಗೊಂಡಿರುವ ಈ ಊರು ಹಿಂದೆ ಆಳಂದೆ -1000ಕ್ಕೆ ಸೇರಿದ ಗೊಂಕ 120ರಲ್ಲಿತ್ತು ಇಲ್ಲಿಯವರೆಗೆ ಎಂಟು ಶಾಸನಗಳು ದೊರೆತಿವೆ.

ಊರ ಪ್ರವೇಶದಲ್ಲಿರುವ ಶಂಕರಲಿಂಗ ದೇವಾಲಯ ಆಕರ್ಷಕವಾಗಿವೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಮುಖ ಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಇದರ ದ್ವಾರಬಂಧ ಪಂಚ ಶಾಖಾಲಂಕೃತ ವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ಈ ಬಾಗಿಲವಾಡದ ಎಡ ಭಾಗದಲ್ಲಿ ಒಂದೆರಡು ಮಿಥುನ ಶಿಲ್ಪಗಳಿರುವುದು ವಿಶಿಷ್ಟವಾಗಿದೆ. ಅಂತರಾಳದಲ್ಲಿ ಸುಂದರವಾದ ಚಂದ್ರ ಶಿಲೆಯಿದೆ. ನವರಂಗದ ನಡುವಣ ಕಂಬಗಳಲ್ಲಿ ಒಂದರ ಪೀಠ ಭಾಗದಲ್ಲಿ ಸೂರ್ಯ, ಗಣಪತಿ, ಸರಸ್ವತಿ ಹಾಗೂ ಅನಂತ ಪದ್ಮನಾಭನ ಉಬ್ಬು ಕೆತ್ತನೆಗಳಿದ್ದು ಸುಂದರವಾಗಿವೆ. ನವರಂಗವನ್ನು ಪ್ರವೇಶಿಸಲು ಮೂರು ಕಡೆಯಿಂದಲೂ ಪ್ರವೇಶವಿದ್ದು ದಕ್ಷಿಣ ದ್ವಾರಕ್ಕೆ ಮಂಟಪವಿದ್ದು ಇದರ ಹಾಗೂ ಉತ್ತರ ದ್ವಾರದ ಬಾಗಿಲವಾಡಗಳು ಪಂಚ ಶಾಖಾಲಂಕೃತ ಆಗಿದ್ದರೆ, ಪ್ರಧಾನ ದ್ವಾರದ ಬಾಗಿಲವಾಡ ಚತುರ್ ಶಾಖಾಲಂಕೃತವಾಗಿದ್ದು ಆಕರ್ಷಕವಾಗಿವೆ. ಈ ದೇವಾಲಯದ ಬಿತ್ತಿಯು ನಿರಾಡಂಬರವಾಗಿದ್ದು ದಕ್ಷಿಣ ದ್ವಾರದ ಬಳಿ ಪ್ರಾಚೀನ ಬಾವಿಯಿದೆ. ಈ ಗುಡಿಯಲ್ಲಿ ಸುಮಾರು 40 ಅಡಿ ಅಂತರದಲ್ಲಿ ಎದುರು ಮುಖನಾಗಿ ಬಸವಣ್ಣನ ಗುಡಿ ಇದ್ದು, ಶಾಸನೋಕ್ತ ಭೋಗೇಶ್ವರ ಗುಡಿ ಇದೇ ಇರಬೇಕೆಂದು ತೋರುತ್ತದೆ. ಈ ನಂದಿ ಮಂಟಪಕ್ಕೆ ಪೂರ್ವ ಪಶ್ಚಿಮಗಳಿಂದ ದ್ವಾರಗಳಿದ್ದು ತ್ರಿಶಾಖ ಅಲಂಕೃತ ಬಾಗಿಲವಾಡಗಳಿಂದ ಅಲಂಕರಿಸಲ್ಪಟ್ಟಿದ್ದು ಲಲಾಟದಲ್ಲಿ ಸರಸ್ವತಿ ಹಾಗೂ ಗಣಪತಿಯ ಕೆತ್ತನೆ ಇವೆ.

ಈ ನಂದಿ ಮಂಟಪದ ಪೂರ್ವ-ಪಶ್ಚಿಮ ದ್ವಾರಕ್ಕೆ ಹೊಂದಿಕೊಂಡಂತೆ ಅರ್ಧ ಮಂಟಪಗಳಿದ್ದು ಇವುಗಳ ಕಂಬಗಳು ಸರಳವಾಗಿದ್ದರೂ ಆಕರ್ಷಕವಾಗಿವೆ. ಇಲ್ಲಿಯ ಶಂಕರಲಿಂಗ ಗುಡಿಯ ಬಲ ಭಾಗಕ್ಕಿರುವ ಕಲ್ಯಾಣ ಮಂಟಪ (ಕಲ್ಯಾಣಮಠ)ವು ಚೌಕಾಕಾರದ ವಿನ್ಯಾಸದಿಂದ ಕೂಡಿದೆ. ಊರಿಂದ ಪಶ್ಚಿಮಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿರುವ 'ರಾಮತೀರ್ಥ' ಹೊಂಡವಿದ್ದು, ಅದರ ಬಳಿಯಲ್ಲೇ ಉತ್ತರಾಭಿಮುಖವಾಗಿರುವ ಸುಮಾರು 12ನೆಯ ಶತಮಾನಕ್ಕೆ ಸೇರಿದ ರಾಮಲಿಂಗ ದೇವಾಲಯವಿದೆ.

ಇಲ್ಲಿಯ ಅಲ್ಲಮಪ್ರಭು ಗುಡಿ-ದರ್ಗಾವು ಶಿವಲಿಂಗ ಹಾಗೂ ಮಜಾರಗಳನ್ನು ಹೊಂದಿದ್ದು ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿದೆ. ಹೋಳಿ ಹುಣ್ಣಿಮೆಯ ದಿನ ಇದರ ಪೂಜಾರಿಯು ಮುಸ್ಲಿಮ ಫಕೀರನಂತೆ ವೇಷ ಧರಿಸಿ ಕಾಲು ನಡಿಗೆಯಲ್ಲಿ ಅಷ್ಟೂರು (ಬೀದರ್ ಜಿಲ್ಲೆ) ಗ್ರಾಮಕ್ಕೆ ಹೋಗಿ ಅಲ್ಲಿ ಜರುಗುವ ಅಹಮ್ಮದ ಶಾವಲಿ ದರ್ಗಾದ ಉರುಸನ್ನು ಪ್ರಾರಂಭಸುತ್ತಾನೆ. ಅಲ್ಲಿಂದ ಹಿಂದಕ್ಕೆ ಬಂದ ನಂತರ ಉಗಾದಿ ಅಮಾವಾಸ್ಯೆಗೆ ಇಲ್ಲಿ ಜಾತ್ರೆ ನಡೆಯುತ್ತದೆ. ಉಳಿದಂತೆ ಊರಲ್ಲಿ ಮಲ್ಲಿಕಾರ್ಜುನ, ಬೀರಲಿಂಗ, ಜಟ್ಟಿಂಗರಾಯ, ವೀರಭದ್ರ, ಮಾಲಿಂಗರಾಯ, ಅಮೋಘಸಿದ್ಧ, ಪರಮಲಿಂಗ, ವಿಠೋಬ, ಸಂಗಮೇಶ್ವರ, ಹನುಮಂತ, ಚೌಡಮ್ಮ, ಲಕ್ಷ್ಮಿ, ಅಂಬಾಭವಾನಿ ಹಾಗೂ ಮರಗಮ್ಮನ ನವೀನ ಗುಡಿಗಳಿದ್ದು ಎರಡು ಮಸೀದಿ ಹಾಗೂ ಒಂದು ದರ್ಗಾ ಕೂಡ ಇವೆ. ಹನುಮಂತನ ಗುಡಿಯ ಬಳಿ ಗಣಪತಿ, ಕೇಶವ, ಶಿವಲಿಂಗ, ನಂದಿ ಹಾಗೂ ನಾಲ್ಕು ಮುಖದ ಭರಮಪ್ಪ (ಪೀಠಸ್ಥ ಚತುರ್ಮುಖ ಬ್ರಹ್ಮ)ನ ಶಿಲ್ಪಗಳಿವೆ.

(ಆರ್.ಕೆ.)

ಮಾಣಿಕ ನಗರ: ಪ್ರಸಿದ್ಧ ಯಾತ್ರಾಸ್ಥಳ, ಸಾಂಸ್ಕೃತಿಕ ಕೇಂದ್ರ. ಮಣಿಚೂಲ ಪರ್ವತದ ತಪ್ಪಲು ಪ್ರದೇಶದಲ್ಲಿದೆ. ಈ ಪ್ರದೇಶಕ್ಕೆ ವೃಷಭಾದ್ರಿ ಎಂದೂ ಕರೆಯುತ್ತಿದ್ದರು. ಇಲ್ಲಿ ವಿರಜಾ ಮತ್ತು ಗುರುಗಂಗಾ ನದಿಗಳು ಹರಿದು ಪವಿತ್ರ ಸಂಗಮವುಂಟಾಗಿದೆ. ಮಾಣಿಕಪ್ರಭುಗಳು ದೇಶ ಸಂಚಾರ ಮಾಡುತ್ತ ಮಾಡುತ್ತ ಈ ಪ್ರದೇಶಕ್ಕೆ ಬಂದು ತಲಪಿದರು. ಇಲ್ಲಿಯ ಪವಿತ್ರ ನದಿಗಳ ಸಂಗಮ ಹಾಗೂ ಸುತ್ತಲೂ ಘನ ನಿಬಿಡವಾದ ಅರಣ್ಯ ಅವರ ಮನಸನ್ನು ಆಕರ್ಷಿಸಿತು. ಅವರು ಒಂದು ಔದಂಬುರ ವೃಕ್ಷದ ಕೆಳಗೆ ಹಲವು ವರ್ಷಗಳು ತಪಸ್ಸು ಮಾಡಿದರು. ಅವರು ತಪಸ್ಸು ಮಾಡಿದ ಸ್ಥಳದಲ್ಲಿ ಭಕ್ತಜನರು ಒಂದು ಕಟ್ಟೆ ಕಟ್ಟಿ ಅದಕ್ಕೆ ಪ್ರಭುವಿನ ಕಟ್ಟೆ ಎಂದು ಕರೆಯಲಾರಂಭಿಸಿದರು. ಮಾಣಿಕ ಪ್ರಭುಗಳು ಪ್ರತಿದಿನ ಆ ಕಟ್ಟೆಯ ಮೇಲೆ ಕುಳಿತು ಭಕ್ತರಿಗೆ ದರ್ಶನ ಕೊಡುತ್ತಿದ್ದರು. ಮಾಣಿಕ ಪ್ರಭುಗಳ ಮರಣಾನಂತರ ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಭವ್ಯವಾದ ಜಾತ್ರೆ ನಡೆಯುತ್ತದೆ. ಅದಕ್ಕೆ ಮೊದಲು ಕಟ್ಟಿ ಜಾತ್ರೆ ಎಂದು ಗ್ರಾಮೀಣರು ಕರೆಯುತ್ತಿದ್ದರು. ನಂತರ ಮಾಣಿಕ ನಗರ ಎಂಬ ಹೊಸ ನಾಮಕರಣವಾದ ಮೇಲೆ ಮಾಣಿಕ ನಗರ ಜಾತ್ರೆ ಎಂದು ಈಗ ಪ್ರಚಲಿತ ರೂಢಿಯಲ್ಲಿದೆ. ಸುಮಾರು 400 ವರ್ಷಗಳ ಹಿಂದೆ ಕರ್ನಾಟಕದ ಬಂಡಾಯ ಕವಿ ಸರ್ವಜ್ಞನು ತನ್ನ ಕಾಲಜ್ಞಾನ ವಚನ ಒಂದರಲ್ಲಿ ಮಾಣಿಕ ನಗರದ ನಿರ್ಮಾಣದ ಬಗ್ಗೆ ಭವಿಷ್ಯ ನುಡಿದಿದ್ದ.


ಹುಮನಾಬಾದ ಮತ್ತು ಗಡವಂತಿಯ ದಾರಿಯಲ್ಲಿ ಮಾಣಿಕ ನಗರ ನಿರ್ಮಿಸಿ ಪ್ರಭುಗಳ ಗಾದಿ ಸ್ಥಾಪಿಸಲಾಯಿತು. ಪ್ರಭುವಿನ ದರ್ಶನಕ್ಕೆ ಬರುವ ಜನ ಸಮುದಾಯವು ಹೆಚ್ಚಾದಂತೆ ಸುತ್ತಮುತ್ತಲೂ ವ್ಯಾಪಾರ ವಹಿವಾಟುಗಳು ಪ್ರಾರಂಭವಾದವು. ಅವರ ನಿವಾಸಕ್ಕೆ ಮನೆಗಳು ಸಿದ್ಧವಾದವು. ಪ್ರಭುಗಳ ಗಾದಿಯ ಮೇಲೆ ಸುಂದರವಾದ ಭವನ ನಿರ್ಮಾವಾಯಿತು. ಅವರು ಸಜೀವ ಸಮಾಧಿಗೊಂಡ ಮೇಲೆ ಸಮಾಧಿಯ ಮೆಲೆ ಕಪ್ಪು ಶಿಲೆಗಳಿಂದ ದೇವಾಲಯ ಕಟ್ಟಲಾಯಿತು. ಮಾಣಿಕ ನಗರವು ವ್ಯಾಪಾರಿಗಳ, ಸಂಗೀತ ವಿದ್ವಾಂಸರ, ಸಾಧು ಸಂತರ, ಕವಿಗಳ, ಕಲಾವಿದರ ಆವಾಸ ಸ್ಥಾನವಾಯಿತು. ಮಾಣಿಕ ನಗರದಲ್ಲಿ ಅನೇಕ ಮಂದಿರಗಳು, ಮಸಜೀದಗಳು, ದರ್ಗಾಗಳು ನಿರ್ಮಾಣ ವಾದವು. ಮಾಣಿಕ ನಗರ ಸಕಲ ಮತಗಳ ಸಮನ್ವಯ ತಾಣವಾಯಿತು. ಎಲ್ಲಾ ಜಾತಿ ಜನರು ಅಲ್ಲಿ ವಾಸ ಮಾಡತೊಡಗಿದರು.

ಇಂದು ಮಾಣಿಕನಗರ ತನ್ನ ಸಂಗೀತ ದರ್ಬಾರದಿಂದ ದೇಶದ ನಾನಾ ಭಾಗಗಳಿಂದ ಸಂಗೀತಗಾರರನ್ನು ಆಕರ್ಷಿಸುತ್ತಿದೆ. ದತ್ತಾ ವತಾರಿಗಳಾದ ಮಾಣಿಕ ಪ್ರಭುಗಳ ಜಾತ್ರೆ ದತ್ತಪೂರ್ಣಿಮೆಯಂದು ನಡೆಯುತ್ತದೆ. ಆಗ ಸಂಗೀತ ದರ್ಬಾರ ನಡೆದು ಭಾರತ ದೇಶದ ಖ್ಯಾತಿವೆತ್ತ ಸಂಗೀತಗಾರರು ಇಲ್ಲಿಗೆ ಆಗಮಿಸುತ್ತಾರೆ. ಅವರಲ್ಲಿ ಪ್ರಾಮುಖರಾಥವರೆಂದರೆ ಲತಾ ಮಂಗೇಶಕರ್, ಉಷಾ ಮಂಗೇಶಕರ್, ಮೊಹಮ್ಮದ ರಫಿ, ಕಿರಾಣೆ ಘರಾಣೆಯ ಜನಕ ಉಸ್ತಾದ್ ಕರೀಮಖಾನ್, ಬಡೇಗುಲಾಂ ಅಲಿಖಾನ್, ವಿ.ಡಿ. ಪಲುಸ್ಕುರ್, ಹೀರಾಬಾಯಿ ಬಡೋದೇಕರ್, ಪಂಡಿತ ಮಲ್ಲಿಕಾರ್ಜುನ ಮನ್ಸೂರ್, ರಾಜನ್‌ಸಜನ್ ಮಿಶ್ರಾ, ಪಂಡಿತ ಹರಿಪ್ರಸಾದ ಚೌರಸಿಯಾ, ಉಸ್ತಾದ ಜಾಕೀರ ಹುಸೇನ್, ಪಂಡಿತ ಯಶವಂತ ಬುವಾ ಜೋಷಿ ಹಾಗೂ ಪಂಡಿತ ಜಸರಾಜ್ ಮೊದಲಾದವರ ಇಲ್ಲಿಗೆ ಬಂದು ಸೇವೆ ಸಲ್ಲಿಸಿ ಹೋಗಿದ್ದಾರೆ.

(ಎಚ್.ಕೆ.)

ಮಾಣಿಕಪ್ರಭು ಸಂಸ್ಥಾನ: ಬೀದರ ಜಿಲ್ಲೆ ಹುಮನಾಬಾದಿನಿಂದ ಐದು ಕಿ.ಮೀ. ಅಂತರದಲ್ಲಿರುವ ಕ್ಷೇತ್ರ. ಮಾಣಿಕಪ್ರಭುಗಳು ಶ್ರೀ ದತ್ತಾತ್ರೇಯನ ನಾಲ್ಕನೆಯ ಅವತಾರ ಎನ್ನಲಾಗಿದೆ. ಅವರು ಸಮಾಧಿಯಾಗಿದ್ದು ಇದೇ ಸ್ಥಳದಲ್ಲಿ. ಆದ್ದರಿಂದಲೇ ಈ ಗ್ರಾಮದ ಹೆಸರು ಮಾಣಿಕನಗರ. ಸಕಲಮತ ಸಂಪ್ರದಾಯ ಅನುಸರಿಸುವ ಈ ಪುಣ್ಯ ಕ್ಷೇತ್ರ ಇಂದು ಜಗದ ಗಮನ ಸೆಳೆದಿದೆ. ಉತ್ಸವ ಸಂದರ್ಭದಲ್ಲಿ ಇಲ್ಲಿ ನಡೆಯುವ ಸಂಗೀತ ದರ್ಬಾರನಲ್ಲಿ ವಿಶ್ವವಿಖ್ಯಾತ ಗಾಯಕರೆಲ್ಲ ಭಾಗವಹಿಸಿ ಮಾಣಿಕಪ್ರಭುವಿನ ಸೇವೆಸಲ್ಲಿಸಿ ಪುನೀತರಾಗುತ್ತಾರೆ.

ಕಲ್ಯಾಣ ನಾಡಿನ ಲಾಡವಂತಿಯಲ್ಲಿ ಮಾಣಿಕಪ್ರಭುಗಳು ಕ್ರಿ.ಶ. 1817ರಲ್ಲಿ ಜನಿಸಿ, ಸಕಲಮತ ಸಂಪ್ರದಾಯ ಸ್ಥಾಪಿಸಿದರು. ಪ್ರಭುಗಳು 1845ರಲ್ಲಿ ಶ್ರೀ ಮಾಣಿಕ ಪ್ರಭು ಸಂಸ್ಥಾನದ ಸ್ಥಾಪನೆ ಮಾಡಿ, ಅದೇ ವರ್ಷ ಶ್ರೀ ದತ್ತ ಜಯಂತಿ ಮಹೋತ್ಸವಕ್ಕೆ



ಮಾಣಿಕ ಪ್ರಭು

ಚಾಲನೆ ನೀಡಿದರು.

ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಅನೇಕ ಪವಾಡಗಳನ್ನು ತೋರಿಸಿದ್ದರು. ಸಂಸ್ಕೃತದಲ್ಲಿರುವ ವೇದ ಗ್ರಂಥಗಳನ್ನು ಅವರು ಕಂಠಪಾಠವಾಗಿ ನಿರ್ರ್ಗಳವಾಗಿ ಹೇಳುವ ರೀತಿ ಕಂಡು ಪಂಡಿತೋತ್ತಮರೂ ಅಚ್ಚರಿ ಪಡುವಂತೆ ಮಾಡುತ್ತಿದ್ದರು. ಅಲ್ಲದೇ ವಿವಿಧ ಗ್ರಂಥಗಳ ಬಗ್ಗೆ ವ್ಯಾಖ್ಯಾನಿಸುತ್ತಿದ್ದರು. ಆಗಲೇ ಇವರು ಸಾಮಾನ್ಯರಲ್ಲ. ಅವತಾರಿ ಪುರುಷರೆಂಬ ಅರಿವಾಯಿತು. ಮುಂದೆ ಇವರು ತಮ್ಮ ಕರ್ಮಭೂಮಿ ಮಾಣಿಕ ನಗರಕ್ಕೆ ಬಂದರು. ಇವರ ತಪೋಶಕ್ತಿಯಿಂದ ಅನೇಕ ಪವಾಡಗಳನ್ನು ಮೆರೆದರು. ತಮ್ಮಲ್ಲಿ ಬರುವ ಭಕ್ತರನ್ನುದ್ಧರಿಸಿದರು. ಇವರ ವಿಶೇಷವೆಂದರೆ ಸಕಲ ಮತಸ್ಥರನ್ನೂ ಉದ್ಧರಿಸುವ ಮೂಲಕ ಅವರು ಸಕಲಮತಾಚಾರ್ಯರೆಂದೇ ಖ್ಯಾತಿ ಪಡೆದರು. ಅವರು ಮಾಣಿಕನಗರದಲ್ಲಿ ಆರಂಭಿಸಿದ ದತ್ತ ಜಯಂತಿ ಅಂದಿನಿಂದ ಇಂದಿನವರೆಗೂ ಸಕಲಮತ ಸಂಪ್ರದಾಯದಂತೆ ಮಾಣಿಕಪ್ರಭು ಸಂಸ್ಥಾನದಲ್ಲಿ ಇಂದಿನ ಪೀಠಾಧಿಪತಿ ಸಿದ್ಧರಾಜ ಮಾಣಿಕಪ್ರಭು ಮಹಾರಾಜರೂ ಮುಂದುವರೆಸಿಕೊಂಡು ಬಂದಿದ್ದಾರೆ.

ಮಾಣಿಕಪ್ರಭು ಸಂಸ್ಥಾನ ಇಂದು ಕೇಲವ ಧಾರ್ಮಿಕ ಸಂಸ್ಥೆಯಾಗಿ ಉಳಿದಿಲ್ಲ. ಈ ಭಾಗದ ಶೈಕ್ಷಣಿಕ ಕ್ಷೇತ್ರವಾಗಿದೆ. ಸಾಮಾಜಿಕ ಬದ್ಧತೆಯನ್ನು ಹೊಂದಿರುವ ಹಾಗೂ ಸಮಾಜದಲ್ಲಿ ಕಡೆಗಣಿಸಲ್ಪಟ್ಟವರಿಗೆ ನೆಲೆ ನಿಲ್ಲುವಂತೆ ಮಾಡುವ ಕ್ಷೇತ್ರವಾಗಿದೆ. ಮಾಣಿಕಪ್ರಭುಗಳ ಆಶಯ ಇಂದಿನ ಗುರುಗಳು ಸಾಕಾರ ಗೊಳಿಸುತ್ತಿದ್ದಾರೆ.

ಸ್ಥಳೀಯರು ಮಾಣಿಕಪ್ರಭು ಸನ್ನಿಧಾನವೆಂದೇ ಕರೆಯುವ ಮಾಣಿಕನಗರದಲ್ಲಿ ದತ್ತಾತ್ರೇಯ ಜಯಂತಿ ಈ ಸಂದರ್ಭದಲ್ಲಿ ನಡೆಯುವ ಆಧ್ಯಾತ್ಮಿಕ, ಧಾರ್ಮಿಕ, ಸಾಹಿತ್ಯ, ಸಂಸ್ಕೃತಿ, ಸಂಗೀತ, ಸಂಸ್ಕೃತ ವಿದ್ವತ್ ಗೋಷ್ಠಿಗಳಲ್ಲಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ರಾಷ್ಟ್ರಮಟ್ಟದ ವಿದ್ವಾಂಸರು, ಪಂಡಿತರು, ಕಲಾವಿದರು ಭಾಗವಹಿಸುವುದರಿಂದ ಮಾಣಿಕನಗರ ಇಡೀ ರಾಷ್ಟ್ರದ ಗಮನ ಸೆಳೆಯುತ್ತಿದೆ. ಮಾಣಿಕನಗರ ಜಾತ್ರೆಯ ವಿಶೇಷವೆಂದರೆ ಊರಿನ ಪ್ರತಿಯೊಬ್ಬ ಭಕ್ತರೂ ಜಾತಿ ಮತಭೇದ ಮರೆತು ಒಂದಾಗಿ ಇಲ್ಲಿಗೆ ಆಗಮಿಸುವ ಯಾತ್ರಾರ್ಥಿ ಭಕ್ತಾದಿಗಳಿಗೆ ಸಹಕರಿಸುತ್ತಾರೆ. ಮಾರ್ತಂಡ ಮಾಣಿಕಪ್ರಭು ಮಹಾರಾಜ, ಶಂಕರ ಮಾಣಿಕಪ್ರಭು ಮಹಾರಾಜ ಅವರುಗಳ ಸಂಚಾಲಕತ್ವದಲ್ಲಿ ಹಾಗೂ ಮಾಣಿಕಪ್ರಭು ಸಂಸ್ಥಾನದ ಸದ್ಯದ ಪೀಠಾಧಿಪತಿಗಳಾದ ಪೂಜ್ಯ ಸಿದ್ಧರಾಜ ಮಾಣಿಕಪ್ರಭು ಮಹಾರಾಜರ ನೇತೃತ್ವದಲ್ಲಿ ನಡೆಯುವ ಈ ಉತ್ಸವಕ್ಕೆ ಕರ್ನಾಟಕ ಮಾತ್ರವಲ್ಲದೇ, ವಿಶೇಷವಾಗಿ ಮಹಾರಾಷ್ಟ್ರ, ಆಂಧ್ರ ಪ್ರದೇಶ, ಕೇರಳ, ತಮಿಳುನಾಡು, ಉತ್ತರಪ್ರದೇಶ ಮತ್ತು ಮಧ್ಯಪ್ರದೇಶ ಮುಂತಾದ ಕಡೆಗಳಿಂದ ಅಪಾರ ಸಂಖ್ಯೆಯಲ್ಲಿ ಆಗಮಿಸುತ್ತಾರೆ.

ಈ ಜಾತ್ರಾ ಸಂದರ್ಭದಲ್ಲಿ ಸಿದ್ಧರಾಜ ಮಾಣಿಕಪ್ರಭು ಮಹಾರಾಜರ ಭವ್ಯ ಮೆರವಣಿಗೆ ಮಾಣಿಕನಗರದ ಪ್ರಮುಖ ಬೀದಿಗಳಲ್ಲಿ ನಡೆಯುತ್ತವೆ. ಮೆರವಣಿಗೆ ಬರುವ ಮಾರ್ಗದಲ್ಲಿ ರಂಗು ರಂಗಿನ ರಂಗೋಲಿ ಹಾಕಿ ಇಡೀ ಗ್ರಾಮವೇ ಮಹಾರಾಜ–ರಿಗೆ ಸ್ವಾಗತಿಸುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ನಡೆಯುವ ಪ್ರವಚನ, ಭಜನೆ, ಆರತಿ ಮುಂತಾದ ಕಾರ್ಯಕ್ರಮಗಳು ಸಂಸ್ಥೆಯ ಕಾರ್ಯದರ್ಶಿ ಜ್ಞಾನರಾಜ ಮಹಾರಾಜ ಹಾಗೂ ಆನಂದರಾಜ ಮಹಾರಾಜರ ನೇತೃತ್ವದಲ್ಲಿ ನಡೆಯುತ್ತದೆ.

ದತ್ತ ಜಯಂತಿಯ ಮರುದಿನ ಅಂದರೆ ಸಿದ್ಧರಾಜ ಮಾಣಿಕಪ್ರಭು ಮಹಾರಾಜರ ಅಧ್ಯಕ್ಷತೆಯಲ್ಲಿ ದರ್ಬಾರ ನಡೆಯುತ್ತದೆ. ಇಡೀ ಜಾತ್ರೆಯ ಆಕರ್ಷಣೆ ಈ ದರಬಾರ, ದರಬಾರಿನಲ್ಲಿ ರಾಷ್ಟ್ರದ ವಿವಿಧ ಮೂಲೆ ಮೂಲೆಗಳಿಂದ ಖ್ಯಾತ ಸಾಹಿತಿಗಳು, ಸಂಗೀತಕಾರರು, ಕಲಾವಿದರು, ಸಂಸ್ಕೃತ ಪಂಡಿತರು ಭಾಗವಹಿಸಿ ಪ್ರಭುಗಳ ಆಶೀರ್ವಾದ ಪಡೆದು ಪುನೀತರಾಗುತ್ತಾರೆ.

ಮಾಣಿಕನಗರ ಮಹಾರಾಜರು ದಾಸೋಹ ಪ್ರಿಯರು. ಬಂದ ಭಕ್ತಾಧಿಗಳಿಗೆ ಪ್ರತಿನಿತ್ಯ ಆರತಿ ಆ ನಂತರ ಮಧ್ಯಾಹ್ನ 1.30 ಕ್ಕೆ ಮಹಾದಾಸೋಹ ಪರಂಪರೆ ನಡೆದುಕೊಂಡು ಬಂದಿದೆ. ಜಾತ್ರೆಗೆ ಬರುವ ಲಕ್ಷ ಲಕ್ಷ ಭಕ್ತಾಧಿಗಳಿಗೆ ವಿಶೇಷವಾಗಿ ದಾಸೋಹ ವ್ಯವಸ್ಥೆ ಮಾಡಲಾಗುತ್ತದೆ. ಅತ್ಯಂತ ವೈಭವದಿಂದ ಜಾತ್ರೆ ನಡೆಯುವುದು.

(ಬಿ.ಪಿ.ಎಸ್.)

ಮಾತಂಗಿ: ಚಾಂಡಾಲ ಸ್ತ್ರೀ. ಜೋಗಿತಿಯರಂತೆ ಇವರು ದೇವರಿಗೆ ಬಿಟ್ಟ ಹೆಣ್ಣುಗಳು. ವರ್ಣ ವ್ಯವಸ್ಥೆಯಲ್ಲಿ ಇವರು ತೀರಾ ನಿಕೃಷ್ಟರೆಂದು ಪರಿಗಣಿಸಲ್ಪಟ್ಟಿದ್ದರು. ಹರಿಶ್ಚಂದ್ರ ಕಾವ್ಯದಲ್ಲಿ ವಿಶ್ವಾಮಿತ್ರ ಹರಿಶ್ಚಂದ್ರನನ್ನು ಸತ್ಯ ವಿಮುಖನನ್ನಾಗಿ ಮಾಡಲು ಯತ್ನಿಸುತ್ತಾನೆ. ಇಬ್ಬರು ಸುಂದರ ಕನ್ಯೆಯರನ್ನು ಸೃಷ್ಟಿಸಿ ಮರಳುಗೊಳಿಸಲು ಯತ್ನಿಸಿ ವಿಫಲನಾಗುತ್ತಾನೆ. ಇಲ್ಲಿ ಬರುವ ಕನ್ಯೆಯರು ಚಾಂಡಾಲ ಸ್ತ್ರೀಯರೆಂದು ಸಂಬೋಧಿಸಲಾಗಿದೆ. ಅಂದರೆ ಇಕ್ಷ್ವಾಕು ವಂಶದ ಕಾಲದಲ್ಲಿಯೂ ಈ ಜಾತಿಪದ್ಧತಿ ಇತ್ತೆಂಬುದಕ್ಕೆ ಇದು ನಿದರ್ಶನ.

ರೇಣುಕ ಎಲ್ಲಮ್ಮನಿಗೆ ಸಂಬಂಧಿಸಿದ ಜನಪದ ಐತಿಹ್ಯಗಳಲ್ಲಿ ಆಕೆಗೆ ಚರ್ಮರೋಗವುಂಟಾಗುತ್ತದೆ. ಅದು ಏನು ಮಾಡಿದರೂ ಗುಣವಾಗುವುದೇ ಇಲ್ಲ. ಆಗ ಚಾಂಡಾಲ (ಸಮಗಾರ)ನ ಬಳಕೆಯ ನೀರನ್ನು ತಂದು ಚಿಮುಕಿಸಿದಾಗ ಆಕೆ ಗುಣಮುಖ ಆಗುತ್ತಾಳೆ. ಇಂದಿಗೂ ಆಕೆಯ ವಿಶಿಷ್ಟ ಪೂಜೆಯೊಂದರಲ್ಲಿ ಇದೇ ಕ್ರಮವನ್ನು ಯಥಾವತ್ತಾಗಿ ಅನುಕರಿಸಲಾಗುತ್ತದೆ. ಆ ಬಳಿಕವೇ ಪೂಜಾ ವಿಧಿಗಳು ಪರಿಪೂರ್ಣಗೊಳ್ಳುತ್ತವೆ.

ಕುಮಾರರಾಮ ಸಾಂಗತ್ಯದಲ್ಲಿ ಆತನನ್ನು ಅಪಹರಿಸಲು ಬಂದ ಕನ್ಯೆ ದೊಂಬರ ಜನಾಂಗರವಳಾದ ಮಾತಂಗಿಯ ಪಾತ್ರವೇ ಆಗಿದೆ. ಅಂದರೆ ತೀರ ಕೆಳಜಾತಿ ಇವರದೆನ್ನಲಾಗಿದೆ. ಬಸವಣ್ಣನವರ ವಚನವೊಂದರಲ್ಲಿ

> ಮಾರ್ಕಂಡೇಯ ಮಾತಂಗಿಯ ಮಗ
>
> ಮಂಡೋದರಿ ಕಪ್ಪೆಯ ಮಗಳು
>
> ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ......

ಎಂಬ ವಿವರಗಳನ್ನು ಕಾಣುತ್ತೇವೆ.

ಮತಂಗ ಋಷಿಗಳಿಂದಾಗಿ ಇವರಿಗೆ ಈ ಹೆಸರು ಬಂದಿದೆ. ಇವರು ಅವನ ವಂಶಜರೆಂದೂ ಪ್ರತೀತಿ ಮುಂಬಯಿಯ 'ಮಾಟುಂಗ' ಪ್ರದೇಶವು ಈ ಜನಾಂಗದ ಹೆಸರಿನ ಹಿನ್ನೆಲೆಯಲ್ಲಿಯೇ ಮಾತುಂಗಬೆಟ್ಟ' ವೆಂದು ಕರೆಯಲ್ಪಟ್ಟಿದೆ.

(ಜ್ಞಿ.ಎ.)

ಮಾತೆ ಮಾಣಿಕೇಶ್ವರಿ: ಜಗತ್ತೇ ವಿಸ್ಮಯಗೊಳ್ಳುವಂತೆ ನೀರು–ಆಹಾರವಿಲ್ಲದೇ ಎಪ್ಪತ್ತಾರು ವರ್ಷಗಳನ್ನು ಕಳೆದಿರುವ ಮಾತೆ. ಇವರದು ಪವಾಡ ಸದೃಶ ಜೀವನ. ಹತ್ತು ಹಲವು ಸತ್ವ ಪರೀಕ್ಷೆಗಳಿಗೆ ಒಳಗಾದರೂ ಸತ್ವಶಾಲಿಯಾಗಿ ಸಾಬೀತಾದವರು. ಜೀವಂತ ದೇವರಾಗಿ ಜನಮನದಲ್ಲಿ ನೆಲೆಸಿದ್ದಾರೆ.



ಮಾತೆ ಮಾಣಿಕೇಶ್ವರಿ

1934ರಲ್ಲಿ ಗುಲಬರ್ಗಾ ಜಿಲ್ಲೆ ಸೇಡಮ್ ತಾಲ್ಲೂಕಿನ ಮಲ್ಲಾಬಾದದ ಆಶಮ್ಮ ಬುಗ್ಗಪ್ಪ ಅವರ ಪುತ್ರಿಯಾಗಿ ಜನಿಸಿದಳು. ಸಾಮಾನ್ಯ ಮಕ್ಕಳಂತೆ ಆಟ ಪಾಠದಲ್ಲಿ ಮೈಮರೆಯದೆ ಸದಾ ಅಂತರ್ ಮುಖಿಯಾಗಿ ಇರುತ್ತಿದ್ದರು. ಮಾಣಿಕಮ್ಮ ದನ ಕಾಯಲು ಹೊಲಕ್ಕೆ ಹೋದಾಗ ಕಲ್ಲುಗಳನ್ನು ಕೂಡಿಸಿಟ್ಟುಕೊಂಡು ಪೂಜಿಸುತ್ತಿದ್ದರು. ಎಲ್ಲದರಲ್ಲೂ ದೇವರನ್ನೇ ಕಾಣುತ್ತಿದ್ದರು.

ಇವರು ಒಲ್ಲೆನೆಂದರೂ ಕೇಳದೆ ಇವರ ತಂದೆ–ತಾಯಿಗಳು ಮದುವೆ ಮಾಡುತ್ತಾರೆ. ಒತ್ತಾಯದಿಂದ ಅತ್ತೆಮನೆಗೆ ಕಳಿಸುತ್ತಾರೆ. ಆಗ ಅವರು ಬೇರೆ ದಾರಿ ಕಾಣದೆ ತಂದೆ–ತಾಯಿಗಳನ್ನು ವಿರೋಧಿಸಲೂ ಆಗದೆ ತನ್ನ ಭವ ಬಂಧನ ಬಿಡಿಸೆಂದು ಶಿವನನ್ನು ಪ್ರಾರ್ಥಿಸುತ್ತಾರೆ.

ಸಂಸಾರ ವಿಮುಖರಾಗಿರುತ್ತಿದ್ದ ಇವರ ವರ್ತನೆಯನ್ನು ಕಂಡು ಅತ್ತೆ ಮನೆಯವರು ಇವರಿಗೆ ದೆವ್ವ ಬಡಿದಿದೆಯೆಂದು ಭಾವಿಸಿ ತವರಿಗೆ ಹೇಳಿ ಕಳಿಸುತ್ತಾರೆ. ಅವರು ದೆವ್ವ ಬಿಡಿಸುವ ಮುಲ್ಲಾನ ಬಳಿ ಕರೆದೊಯ್ಯುತ್ತಾರೆ. ಅವನು ಹುಣಸಿ ಬರಲಿನಿಂದ ಮಾಣಿಕಮ್ಮನವರನ್ನು ಹೊಡೆಯುತ್ತಾನೆ. ಆಗ ಅವರು ಮರದ ಮೇಲೇರಿ ಕುಳಿತುಕೊಳ್ಳುತ್ತಾರೆ.

ಹೀಗೆ ಮುಲ್ಲಾನ ಅಜ್ಞಾನಕ್ಕೆ ಉತ್ತರಿಸುತ್ತಾರೆ. ಅಲ್ಲಾಖುದಾ ಅರ್ಥ ತಿಳಿಯದ ನೀನು ಹೊಟ್ಟೆ ಪಾಡಿಗೆ ಹಾಕಿದ ವೇಶ ಬಿಟ್ಟು ಜ್ಞಾನದ ಹಾದಿ ಹಿಡಿ ಎಂದು ಹೇಳುವರು. ತನ್ನ ತಪ್ಪನ್ನರಿತ ಮುಲ್ಲಾ ಕ್ಷಮೆಯಾಚಿಸುವನು. ಆನಂತರ ನರಸಪ್ಪನ ಗುಡಿಯನ್ನು ಆಶ್ರಯಿಸಿ ತಾವು ಕಾಯಕ ಮಾಡಿ ಗಳಿಸಿದ ಹಣದಿಂದ ದೇವಸ್ಥಾನವನ್ನು ವಿಶಾಲವಾಗಿ ಕಟ್ಟಿಸುತ್ತಾರೆ. ಅತ್ತೆ–ಮಾವ, ತಂದೆ–ತಾಯಿ ಮರಳಿ ಮನೆಗೆ ಕರೆದೊಯ್ಯುತ್ತಾರೆ. ಸಂಸಾರಕ್ಕೆ ಎಳಸಲು ಯತ್ನಿಸುತ್ತಾರೆ. ಕಾಡಿಸುತ್ತಾರೆ–ಪೀಡಿಸುತ್ತಾರೆ. ಆಗ ಅತ್ತೆ ಮನೆಯನ್ನು ತೊರೆದ ಮಾಣಿಕಮ್ಮ ಏಕಾಂಬರೇಶ್ವರ ಬೆಟ್ಟಕ್ಕೆ ಬಂದು ಅಲ್ಲಿಯ ಪ್ರಶಾಂತ ವಾತಾವರಣ ಏಳು ಗುಂಡಗಳಲ್ಲಿ ತುಂಬಿದ್ದ ತಿಳಿ ನೀರು ಗಿಡ ಮರ ಬಳ್ಳಿಗಳಿಂದ ತುಂಬಿದ್ದ ಹಸಿರ ವನ ಸಿರಿಯನ್ನು ಕಂಡು ಕೆಲ ದಿನ ಅಲ್ಲಿ ನೆಲೆಸಿದರು. ಅಲ್ಲಿಗೆ ಬಂದ ಜನ ನೀವಾರು? ನಿಮ್ಮೂರು ಯಾವುದು ಎಂದು ಕೇಳಿದರೆ ಅದರ ಹುಡುಕಾಟದಲ್ಲೇ ಇದ್ದೇನೆ ಎಂದು ಉತ್ತರಿಸುತ್ತಿದ್ದರು. ಪತಿ ಮಾಣಿಕಪ್ಪನಿಗೆ ಹುಚ್ಚು ಹಿಡಿದಿದೆ ಮರಳಬೇಕೆಂದು ಭಾವ ಬಂದು ಕೇಳಿದಾಗ ಹೋಗಿ ಹುಚ್ಚು ಬಿಡಿಸುತ್ತಾರೆ. ಅವನಿಗೆ ತಾವೇ ನಿಂತು ಬೇರೆ ಮದುವೆ ಮಾಡಿ ಅಲ್ಲಿಂದ ಯಾನಾಗುಂದಿಗೆ ಬರುತ್ತಾರೆ. ಅಲ್ಲಿಯ ರಾಮದೇವರ ಗುಡಿಯಲ್ಲಿ ವಾಸಿಸುತ್ತ ಹಲವು ಪವಾಡ ಮಾಡಿದರು. ಆಹಾರವಿಲ್ಲದೆ ಹೇಗೆ ಬದುಕುವಿರಿ ಎಂದು ಪ್ರಶ್ನಿಸಿದವರಿಗೆ ದೇವರಂತೆ ಎಂದುತ್ತರಿಸಿದರು. ಸಾರ್ವಜನಿಕವಾಗಿ ಪರೀಕ್ಷೆಯನ್ನು ಒಪ್ಪಿ ಕೋಣೆಯೊಂದನ್ನು ಪ್ರವೇಶಿಸಿ ಗೋಡೆ ಕಟ್ಟಿಸಿಕೊಂಡು ಮೂರು ತಿಂಗಳು ಒಳಗಿದ್ದು ಶಿವರಾತ್ರಿಯಂದು ಗೋಡೆ ಸೀಳಿ ಹೊರ ಬಂದರು. ಅಹಿಂಸೆಯನ್ನು ಪ್ರತಿಪಾದಿಸುತ್ತ ರಾಜ ಮಾರ್ಗದಲ್ಲಿ ನಡೆದು ನಡೆಯಲು ಬೋಧಿಸಿದರು.

ಸಾಮಾನ್ಯರಂತೆ ಜನಿಸಿ ಅಸಾಮಾನ್ಯ ವ್ಯಕ್ತಿತ್ವವನ್ನು ಸಾಧಿಸಿದ ಮಾಣಿಕಮ್ಮನವರು 'ಹುಟ್ಟಿಸುವ ಶಕ್ತಿ ಇಲ್ಲದವರು ಕೊಲ್ಲುವ ಶಕ್ತಿಯವರಾಗಬಾರದೆಂಬ ಸಂದೇಶ' ಸಾರಿದರು. ಅಸಂಗ್ರಹ, ಬ್ರಹ್ಮಚರ್ಯ ಪಾಲನೆ, ಮಿತಾಹಾರ, ಮಿತ ಭಾಷೆ, ಸೇವಾ ಭಾವ, ಗುರು ಹಿರಿಯರಲ್ಲಿ ಗೌರವ, ಏಕದೇವೋಪಾಸನೆ, ಸಜ್ಜನರ ಸಹವಾಸ ಮುಂತಾದ ಜೀವನ ಮೌಲ್ಯಗಳನ್ನು ರೂಢಿಸಿ ಕೊಳ್ಳುವಂತೆ ಕರೆ ನೀಡಿದರು. ಅವರಿಂದಾಗಿ ಯಾನಾಗುಂದಿ ಪುಣ್ಯ ಕ್ಷೇತ್ರವೆನಿಸಿದೆ. ಅವರ ದರ್ಶನಕ್ಕಾಗಿ ದೇಶದ ಹಲವು ಕಡೆಗಳಿಂದ ಭಕ್ತಾದಿಗಳು ಹರಿದು ಬರುತ್ತಾರೆ. ಶಿವರಾತ್ರಿ ದಿನವಂತೂ ನಾಲ್ಕೈದು ಲಕ್ಷ ಜನ ದರ್ಶನ ಪಡೆದು ಧನ್ಯತೆಯನ್ನು ಅನುಭವಿಸುತ್ತಾರೆ. ಅಲ್ಲಿ ನಿತ್ಯ ದಾಸೋಹ ನಡೆಯುತ್ತದೆ. *(ಸಿ.ಜಿ.ಐ.)*

ಮಾದಕ ದ್ರವ್ಯಗಳು: ನಿಶೆ ತರಿಸುವ ಶರೆ, ಸಾರಾಯಿ, ಕಳ್ಳಭಟ್ಟಿ, ಹೆಂಡ. ಮನೆ–ಮಠ–ಮರ್ಯಾದೆಗಳನ್ನು ಮೋಜಿಗಾಗಿ ಕುಡಿಯದೆ ಗ್ರಾಮೀಣರು ಕುಡಿಯುವ ಮಾದಕ ದ್ರವ್ಯಗಳು ಕಳಪೆಗುಣಮಟ್ಟದಾಗಿದ್ದು ಆರೋಗ್ಯಕ್ಕೆ ಹಾನಿಕರವಾಗಿವೆ. ಗ್ರಾಮೀಣರು ವಿಶೇಷವಾಗಿ ಕೆಳಸ್ತರದ ಬಡ ಜನರು ಇಂಥ ಮಾದಕ ದ್ರವ್ಯಗಳಿಗೆ ದಾಸಾನು ದಾಸರಾಗಿ ಆರೋಗ್ಯವನ್ನು ಕಳೆದುಕೊಂಡು ರೋಗ ರುಜಿನಗಳಿಗೆ ಗುರಿಯಾಗಿದ್ದಾರೆ. ಕುಡಿತದಿಂದ ಹಣ, ಆರೋಗ್ಯ, ಕುಟುಂಬದ ನೆಮ್ಮದಿ ಕೆಟ್ಟು ಹೋಗುತ್ತಿದ್ದರೂ ಕುಡಿತದ ಚಟದಿಂದ ದೂರವಾಗುತ್ತಿಲ್ಲ. ಕುಡಿತದ ಚಟಕ್ಕೆ ಬಲಿಯಾದ ಮನುಷ್ಯ ಹೊಲ, ಮನೆಗಳನ್ನು ಮಾರಿ, ನಂಬಿದ ಹೆಂಡರು–ಮಕ್ಕಳನ್ನು ಬೀದಿಪಾಲು ಮಾಡಿ, ಒಂದು ದಿನ ಅವನು ರೋಗಕ್ಕೆ ಬಲಿಯಾಗಿ ಹೆಣವಾಗುತ್ತಾನೆ. ಗ್ರಾಮೀಣ ಜನರ ಬದುಕಿನಲ್ಲಿ ನುಸುಳಿ ಬಂದ ಮಾದಕ ದ್ರವ್ಯಗಳ ಕೆಟ್ಟ ಚಟ ಅವನನ್ನು ಹಾಳು ಮಾಡುತ್ತದೆ. *(ಎಸ್.ಎಂ.)*

ಮಾದಿನೂರು: ಕೊಪ್ಪಳ ತಾಲ್ಲೂಕಿನ ಪ್ರಾಚೀನ ಅಗ್ರಹಾರ. ಈ ಗ್ರಾಮವನ್ನು ಶಿಲಾ ಶಾಸನಗಳು 'ಮೋದನೂರ್' 'ಮೊದೆಯನೂರ್' 'ಮೋದಿತ ಗ್ರಾಮ' ವೆಂಬ ಬೇರೆ ಬೇರೆ ಹೆಸರುಗಳಿಂದ ಸಂಬೋಧಿಸುತ್ತವೆ. ಹತ್ತನೆಯ ಶತಮಾನದ ವೇಳೆಗೆ ಚಾಲುಕ್ಯ ಅರಸ ಅಹವಮಲ್ಲದೇವನಿಂದ ಇದು ಅಗ್ರಹಾರವಾಗಿ ಮಾರ್ಪಟ್ಟಿತು. "ಎಡದೊರೆಯಿರ್ಚ್ಛಾಸಿರದ ಬಳಿಯ ಕೇದವಾಡಿ ಮೂನೂರಕ್ಕಂ ತಿಳಕ" ಪ್ರಾಯವಾಗಿದ್ದ ಈ

ಅಗ್ರಹಾರದ ಗದ್ದೆ, ತೋಟ, ಮೊದಲಾದ ನಿಸರ್ಗ ಸೌಂದರ್ಯದ ವರ್ಣನೆ, ಅಗ್ರಹಾರದ ಬ್ರಾಹ್ಮಣರ ಬಣ್ಣನೆ ಕ್ರಿ.ಶ.ಸು.1136 ಕ್ಕೆ ಸೇರಿದ ಸರ್ವಜ್ಞ ಚಕ್ರವರ್ತಿ ಭೂಲೋಕ ಮಲ್ಲನ ಕಾಲದ ಶಾಸನದಲ್ಲಿ ಬರುತ್ತದೆ. ಅಂದರೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಇದು ಪ್ರಸಿದ್ಧವಾದ ಅಗ್ರಹಾರವಾಗಿರಬೇಕು. ಇಲ್ಲಿ ನೆಲೆಯಾಗಿದ್ದ ವೇದವಿದ್ಯಾಪಾರಂಗತರಾಗಿದ್ದ ಮಹಾಜನಗಳ ಸಂಖ್ಯೆ ಇಪ್ಪತ್ತು.

ಇಲ್ಲಿರುವ ಕಲ್ಯಾಣದ ಚಾಲುಕ್ಯರ ಕಾಲದ ಒಂದೇ ಶಾಸನದಲ್ಲಿ ಮೂವರು ಅರಸರು ಬೇರೆ ಬೇರೆ ಕಾಲದಲ್ಲಿ ಕೊರೆಯಿಸಿದ ಮೂರು ಒಕ್ಕಣಿಕೆಗಳಿವೆ. ಈ ಒಕ್ಕಣಿಕೆಗಳು ಕ್ರಮವಾಗಿ ಕ್ರಿ.ಶ.ಸು. 973 (ಶೈಲಪ ಆಹವಮಲ್ಲ).ಕ್ರಿ.ಶ.1136 (ಭೂಲೋಕಮಲ್ಲ) ಮತ್ತು ಕ್ರಿ.ಶ.ಸು 1185 (ತ್ರಿಭುವನ ಮಲ್ಲ ಸೋಮೇಶ್ವರನ ಪತ್ನಿ ರೆಬ್ಬಲದೇವಿ) ಕಾಲಾವಧಿಗೆ ಸೇರಿವೆ. ಅಂದರೆ ಕ್ರಿ.ಶ. 10ನೆಯ ಶತಮಾನದಿಂದ ಕ್ರಿ.ಶ 12ನೆಯ ಶತಮಾನದ ಅವಧಿಯಲ್ಲಿ ಇದು ಪ್ರಸಿದ್ಧವಾದ ಒಂದು ಅಗ್ರಹಾರವಾಗಿರಬೇಕು.

ಈ ಶಾಸನ ತುಂಬ ಹಾಳಾಗಿದೆ. ಅಕ್ಷರಪಾತ ಮೂಲಕ ಪದ್ಯಗಳ ಪಾಠವನ್ನು ಕಂಡು ಹಿಡಿಯುವದು ಅಸಾಧ್ಯವಾಗಿದೆ. ಆದರೂ ಈ ಶಾಸನದಲ್ಲಿ ಸೃಷ್ಟಿಯ ಸೊಬಗಿನ ವರ್ಣನೆಯನ್ನು ಗುರುತಿಸಬಹುದು.

ಕುಕನೂರಿನ ಮಹಾಮಾಯಾ ದೇವಾಲಯದಲ್ಲಿರುವ ಕ್ರಿ.ಶ. 1179 ಕ್ಕೆ ಸೇರಿದ ಕಳಚೂರ್ಯ ಅರಸರು ಸಂಕಮದೇವನ ಕಾಲದ ಶಾಸನದಲ್ಲಿ, ಹಾಗೂ ಇನ್ನೂ ಅನೇಕ ಶಾಸನಗಳಲ್ಲಿ "ಚಕ್ರವರ್ತಿ ಸಂಕಮದೇವರಸರು ಮೊದೆಗನೂರು ನೆಲವೀಡಿ ನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತುಮಿರೆ" ಎಂಬ ಉಲ್ಲೇಖಗಳು ಬರುವುದರಿಂದ ಇದು ಕಳಚೂರ್ಯ ಅರಸರ ರಾಜಧಾನಿಯೋ ಅಥವಾ ಅಷ್ಟೇ ಮಹತ್ವದ ಪಟ್ಟಣವೋ ಆಗಿರಬೇಕು.

(ಎಲ್.ಎ.)

ಮಾನೇದ ಹೊಲ: ಉಂಬಳಿ, ದಾನ, ದತ್ತಿ ಮಾನೇದ ಎಂಬ ಪದವು ಮಾನ್ಯ ಮಾಡಿದ (ಗೌರವಕ್ಕೆ ಪಾತ್ರನಾದ ಮುಖಂಡ) ಎಂಬ ಅರ್ಥವನ್ನು ನೀಡುತ್ತದೆ. ಇಂತಹ ಭೂಮಿಯನ್ನು ರಾಜ–ಮಹಾರಾಜರುಗಳು ತಮ್ಮ ಆಡಳಿತದಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದವರಿಗೆ ನೀಡುವ ವಾಡಿಕೆ ಇತ್ತು. ಕಾಲಾಂತರದಲ್ಲಿ ಇದನ್ನು 'ಇನಾಮು', 'ಬಕ್ಷೀಸು' ಎಂದು ಕರೆಯಲಾಯಿತು. ಅಂಥ ಮಾನ್ಯತೆಗಳಿಗೆ ಕೆಲವು ಕಾರಣಗಳು ಕೆಳಗಿಕಂಡಂತಿವೆ.

1. **ಶೌರ್ಯ ಪ್ರತಾಪ, 2. ದಕ್ಷ–ಪ್ರಾಮಾಣಿಕ ಸೇವೆ,**
3. **ಆಡಳಿತದಲ್ಲಿ ಶಿಸ್ತು–ಶಾಂತಿ ಪಾಲನೆ, 4. ಧಾರ್ಮಿಕ ಸೇವೆ ಇತ್ಯಾದಿ.**

ಕನ್ನಡದಲ್ಲಿ ಮೊದಲು ದೊರೆತ ಹಲ್ಮಿಡಿ ಶಾಸನ (ಕ್ರಿ.ಶ.450)ದಲ್ಲಿ ಶೌರ್ಯ ಪ್ರತಾಪಗಳಿಗೆ ಮೆಚ್ಚಿ 'ಪಲ್ಮಿಡಿ' (ಹಲ್ಮಿಡಿ) ಮಜಿಖವಳ್ಳಿ ಎಂಬ ಗ್ರಾಮಗಳನ್ನು ಬಾಳ್ಗಚ್ಚು ಸಮಾರಂಭದಲ್ಲಿ ದತ್ತಿಯಾಗಿ ನೀಡಿದ ಉಲ್ಲೇಖವಿದೆ.

ರಾಜ್ಯಾಡಳಿತದ ಸೈನಿಕ ಸೇವೆಯಲ್ಲಿ ದಕ್ಷತೆಯನ್ನು ಮೆರೆದ ಕರ್ತವ್ಯ ನಿಷ್ಠ ಅಧಿಕಾರಿಗಳಿಗೆ ಅರಸರು ಪ್ರೋತ್ಸಾಹ, ಪುರಸ್ಕಾರವಾಗಿ ಒಂದಿಷ್ಟು ಜಮೀನನ್ನು ಮಾನ್ಯ ಮಾಡಿ ಉಂಬಳಿಯಾಗಿ ನೀಡುತ್ತಿದ್ದರು. ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಳಖೇಡ (ಮಾನ್ಯಖೇಡ)ದ ಸುತ್ತಲಿನ ಪರಿಸರ ಸೇಡಂ, ಆಂತಕಿ ಇನ್ನಿತರ ಕಡೆಗಳಲ್ಲಿ 'ಮನ್ನೆ' (ಮಾನ್ಯ) ಎಂಬ ಅಡ್ಡ ಹೆಸರಿನ ಮನೆತನಗಳು ಇಂದಿಗೂ ಇವೆ. ಹಳ್ಳದ ದಂಡೆಗಿರುವಂತಹ ಅವರ ಹೊಲಗಳಿಗೆ ತೆಲುಗಿನಲ್ಲಿ 'ಮನ್ನೇದ ಗುಡ್ಡಲು' ಎಂದೇ ಹೆಸರು 'ಮನ್ನೇದ' ಎಂದರೆ ಮಾನ್ಯ ಮಾಡಿದ ಎಂದೂ ಗುಡ್ಡಲು ಎಂದರೆ ಹೊಲವೆಂದೂ ಅರ್ಥಗಳಿವೆ. ಆ ಮನೆತನದವರಲ್ಲಿ ಬಹು ಹಿಂದೆ ಅಜ್ಜ–ಮುತ್ತಜ್ಜರ ಕಾಲದಲ್ಲಿ 'ಖಡ್ಗ' ಢಾಲುಗಳು ಇದ್ದವು ಎಂಬ ಮಾತುಗಳು ಇದಕ್ಕೆ ಪೂರಕವಾಗಿವೆ. ಮಹರಾಷ್ಟ್ರದಲ್ಲಿ ಮರಾಠಾ ಪೇಶ್ವೆಗಳ ಕಾಲದಿಂದಲೂ 'ಮಾನೇ' (ಮಾನ್ಯ) ಎಂಬ ಹೆಸರಿನ ಮನೆತನಗಳಿವೆ. ಮಾನ್ಯತೆ ಹೊಂದಿ ಜಹಗೀರುಗಳನ್ನು ಪಡೆದ ಸಂದರ್ಭಗಳೂ ಇಲ್ಲಿ ಮುಖ್ಯವಾಗಿವೆ.

ವಿಸ್ತಾರವಾದ ನಾಡಿನಲ್ಲಿ ರಾಜ ಮಹಾರಾಜರು ನಿಯಂತ್ರಣ ಹೊಂದಲು, ಪ್ರಜೆಗಳಲ್ಲಿ ಶಾಂತಿ ಸುವ್ಯವಸ್ಥೆ ಸ್ಥಾಪಿಸಲು ಭೂಮಿಯನ್ನು ಹಲವು ರೀತಿಯಲ್ಲಿ ವಿಭಾಗಿಸುತ್ತಿದ್ದರು. ಹಾಗೂ ಅಲ್ಲಿನ ಉಸ್ತುವಾರಿಗಾಗಿ ಕೆಲವು ಅಧಿಕಾರಿಗಳನ್ನು ನೇಮಿಸುತ್ತಿದ್ದರು. ಇವರಿಗೆ ನೀಡಿದ ಜಮೀನುಗಳು ಕಾನೂನು ರೀತ್ಯಾ ಅಂಗೀಕೃತಗೊಂಡವುಗಳು ಇಂದಿನ ದೇಸಾಯಿ, ದೇಶಪಾಂಡೆ, ಸರದೇಸಾಯಿ, ದೇಶಮುಖ, ಇನಾಂದಾರ, ಜಹಗೀರುದಾರರು ಆ ಆಡಳಿತಗಾರರು. ಇಂಥ ಜಮೀನನ್ನು ವಂಶಪಾರಂಪರ್ಯವಾಗಿ ಇವರು ಅನುಭವಿಸುವ ಅಧಿಕಾರವನ್ನು ಹೊಂದಿದ್ದಾರೆ.

ಧಾರ್ಮಿಕ ಹಿನ್ನೆಲೆಯಲ್ಲಿ ಹಲವೆಡೆ ಆಯಾ ಗ್ರಾಮಗಳ ಪ್ರಮುಖ ದೇವಾಲಯಗಳ ಸ್ವಚ್ಛತೆ, ಪೂಜೆ, ಅರ್ಚನೆ, ಸೇವೆಗೆಂದು ಶಾಶ್ವತವಾಗಿ ಒಂದಿಷ್ಟು ಭೂಮಿಯನ್ನು ಅರ್ಚಕ ವರ್ಗದವರಿಗೆ ನೀಡಿದ ಉದಾಹರಣೆಗಳಿವೆ. ಅಂಥ ಹೊಲಗಳಿಗೆ 'ಪಟ್ಟಿ' ಎಂದೂ ಕರೆಯುತ್ತಾರೆ. 'ಅನಂತ ಶಯನ ಪಟ್ಟಿ', 'ಹನುಮಂತನ ಪಟ್ಟಿ' ಎಂಬ ಹೆಸರಿನಲ್ಲಿ ಆ ದೇವಸ್ಥಾನದ ಆಗುಹೋಗುಗಳನ್ನು ನೋಡಿಕೊಳ್ಳುವುದಕ್ಕಾಗಿ ನೀಡಿದ ಹೊಲಗಳೇ ಇವು. ಒಂದು ಕಾಲಕ್ಕೆ ಪ್ರಸಿದ್ಧ ವಿಶ್ವವಿದ್ಯಾಲಯವಾಗಿದ್ದ ನಾಗಾಯಿ (ನಾಗಾವಿ) ಶಾಸನದಲ್ಲಿ ವಿದ್ಯಾಲಯಕ್ಕೆ ಗ್ರಂಥ ಭಂಡಾರಕ್ಕೆ ವಿದ್ಯಾರ್ಜನೆಗೆ, ಅಗ್ರಹಾರಕ್ಕೆ ಧರ್ಮಕಾರ್ಯಗಳಿಗೆ, ದೇವಾಲಯಕ್ಕೆ ಹೀಗೆ ಇಂತಿಷ್ಟು ಮತ್ತರು ಎಂದು ಭೂಮಿಯನ್ನು ಮಾನ್ಯ ಮಾಡಿ ಕೊಟ್ಟ ವಿವರಗಳಿವೆ.

(ಫ್ಲಿ.ಎ.)

ಮಾನೋಮಿ (ಮಹಾನವಮಿ) ಪದ: ಮಹಾನವಮಿಯ ಹಬ್ಬದ ಆಚರಣೆಯ ಕಾಲದಲ್ಲಿ ಹಾಡುವ ಚೌಪದಿ ರೂಪದ ಹಾಡುಗಳು, ಹರಕೆಯ ಹಾಡುಗಳು. ದಸರಾ ಹಬ್ಬ ಕರ್ನಾಟಕದ ನಾಡಹಬ್ಬ. ಆಶ್ವಯುಜ ಶುದ್ಧ ನವಮಿಯಂದು ನಡೆಸುವ ಹಬ್ಬವೇ ಮಹಾನವಮಿ (ಮೌನೌಮಿ). ಮರುದಿನವೇ ಪಾಂಡವರ ಗೆಲುವಿನ ಪ್ರತೀಕವಾದ ವಿಜಯ ದಶಮಿ. ಇತ್ತೀಚೆಗೆ ಈ

ಹಾಡುಗಳು ಮರೆಯಾಗುತ್ತಿವೆ. ನವರಾತ್ರಿಯ ಕಾಲದಲ್ಲಿ ಕೂಲಿಯ ಮಠದ ಮಕ್ಕಳು ಅಥವಾ ಯಕ್ಷಗಾನ ತಂಡದ ಉತ್ಸಾಹಿಗಳು ತಮ್ಮ ಅಯ್ಯಗಳ ಜೊತೆ ಊರಾಡಲು ಹೋಗುತ್ತಿದ್ದರು. ಈ ಸಂದರ್ಭದಲ್ಲಿ ಶುಭ ಕಾಮನೆ (ಹರಕೆ)ಗಳಿಂದ ಕೂಡಿದ ಚೌಪದಿಗಳನ್ನು ಹಾಡುತ್ತಾರೆ. ತಮಗೆ ಕಡಲೆ ಬೆಲ್ಲವನ್ನು ತಮ್ಮಯ್ಯಗಳಿಗೆ ಉಡುಗೊರೆಗಳನ್ನು ಕಾಣಿಕೆಯಾಗಿ ಪಡೆಯುತ್ತಿದ್ದರು. ಇದು ಅಂದಿನ ಆಚರಣೆಯಾಗಿತ್ತು. ಈ ಹರಕೆ ಪದ ಹಾಡುವ ಸಂಪ್ರದಾಯ ಹಿಂದಿನ ಕಾಲದಿಂದಲೂ ಬಂದಿದೆ.

ಮಾನವಮಿ ಪದ:

ಅಶ್ವೀಜ ಶುದ್ಧ ಮಾನವಮಿ ಬರಲೆಂದು
ಲೇಸಾಗಿ ಹರಸಿದೆವು ಬಾಲಕರು ಬಂದು.
ಈಶ ನಿಮಗಧಿಕ ಸೌಖ್ಯ ಕೊಡಲೆಂದು
ಶಾಶ್ವತದಿ ಹರಸಿದೆವು ನಾವಿಂದು ಬಂದು
ಮಳೆ ಹೊಯ್ದು ಬೆಳೆ ಬೆಳೆದು ಇಳಿ ತಣಿಯಲೆಂದು
ತಿಳಿಗೊಳಗಳುಕ್ಕಿ ಗೋಗಳು ಕರೆಯಲೆಂದು
ನಳನ ಮುಖಿಯರು ಸುಪುತ್ರರ ಪಡೆಯಲೆಂದು
ಇಳೆಯೊಳಗೆ ಹರಿಸಿದೆವು ಬಾಲಕರು ಬಂದು

ಹೀಗೆ ಹಬ್ಬದ ಹರ್ಷೋಲ್ಲಾಸ ಹಾಗೂ ಶುಭ ಕಾಮನೆಗಳ ಹಿನ್ನೆಲೆಯಲ್ಲಿ ಈ ಹಾಡುಗಳು ರಚನೆಗೊಂಡಿವೆ. *(ಫ್ಲಿ.ಎ.)*

ಮಾಪುರತಾಯಿ: ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಒಂದು ಹಳ್ಳಿ, ಚಿಂಚನಸೂರ. ಕಲಬುರ್ಗಿಯಿಂದ ಸುಮಾರು 21 ಕಿ.ಮೀ. ದೂರದಲ್ಲಿ ಈ ಊರಿದೆ. ಹರಿಜನ ಕೇರಿಯಲ್ಲಿ ಮಾಪುರ ತಾಯಿಯ ಸಣ್ಣ ಗುಡಿಯಿದೆ. ಊರಿಂದ ಐದು ಮೈಲುಗಳ ಮೇಲೆ ದೊಡ್ಡ ಗುಡಿಯಿದೆ. ಊರಿನ ಪ್ರಮುಖದೇವತೆ ಇವಳಾಗಿದ್ದಾಳೆ. ಇವಳ ಜಾತ್ರೆ ಅಕ್ಷತದಿಗೆ ಅಮವಾಸ್ಯೆಗೆ ಪ್ರಾರಂಭವಾಗಿ, ಬಾದಾಮಿ ಅಮವಾಸ್ಯೆಗೆ ಮುಕ್ತಾಯವಾಗುವುದು. ಈ ಒಂದು ತಿಂಗಳ ಅವಧಿಯಲ್ಲಿ ಬರುವ ಮಂಗಳವಾರ ಮತ್ತು ಶುಕ್ರವಾರ ದಿವಸ ಮಾತ್ರವೇ ಅಲ್ಲಿ ಜಾತ್ರೆ ಜರುಗುತ್ತದೆ. ಉಳಿದ ದಿನಗಳಲ್ಲಿ ಅಲ್ಲಿ ಯಾವ ಸಂಭ್ರಮವೂ ಇರುವುದಿಲ್ಲ. ದೇವಿಗೆ ಹರಕೆಹೊತ್ತು ಬಂದ ಸ್ತ್ರೀ ಪುರುಷರು ಸೇವೆ ಸಲ್ಲಿಸುವ ಬಗೆಯಲ್ಲಿ ಒಂದು ವಿಶಿಷ್ಟತೆಯನ್ನೂ ಕಾಣುತ್ತೇವೆ.

ಮಾಪುರ ತಾಯಿಯ ಸೇವೆ ಸಲ್ಲಿಸುವ ಬಗೆಯಲ್ಲಿ ಎರಡು ವಿಧ. ಬೇವಿನಗಿಡದ ಅಥವಾ ಲಕ್ಕಿಯ ತಪ್ಪಲನ್ನು ನಯವಾಗಿ ಜೋಡಿಸಿ ದಾರದಿಂದ ಕಟ್ಟಿ, ಅಂಗಾಂಗಗಳನ್ನು ಮರೆಮಾಚಲು ಅನುಕೂಲಕರ ವಸ್ತ್ರದ ಸಾಧನೆಯನ್ನಾಗಿ ಮಾಡಿಕೊಂಡು ಸಲ್ಲಿಸುವ ಸೇವೆಗೆ ಉಟಗಿ ಸೇವೆ ಎಂದು ಕರೆಯುವರು. ಮೈಮೇಲೆ ಒಂದು ಚೂರು ಬಟ್ಟೆ ಇಡದೆ ದಿಟ್ಟ ದಿಗಂಬರವಾಗಿ, ಮೈತುಂಬ ಭಂಡಾರ ಬಳಿದುಕೊಂಡು ಸಲ್ಲಿಸುವ ಸೇವೆಗೆ 'ಬೆತ್ತಲೆ ಸೇವೆ' ಎಂದು ಹೆಸರು. ಇದು ಅವರವರ ಇಚ್ಛೆ ಅಭಿರುಚಿಗಳಿಗೆ ಅನುಸಾರವಾಗಿ ಸಲ್ಲಿಸಲ್ಪಡುತ್ತದೆ. ಪ್ರತಿ ಶುಕ್ರವಾರ, ಮಂಗಳವಾರ ಮೂರರಿಂದ ನಾಲ್ಕು ಜನ ಬೆತ್ತಲು ಸೇವೆ ಸಲ್ಲಿಸುವವರೂ ಹಾಗೂ ಎಂಟರಿಂದ ಹತ್ತು ಜನ ಉಟಗಿ ಸೇವೆ ಸಲ್ಲಿಸುವವರೂ



ಮಾಪೂರತಾಯಿ – ಚಿಂಚನಸೂರ

ಇರುತ್ತಾರೆ. ಸುಮಾರು ಮೂವತ್ತು ವರ್ಷಗಳ ಹಿಂದೆ ಇದಕ್ಕೂ ಹೆಚ್ಚು ಜನ ಸೇವೆ ಸಲ್ಲಿಸುತ್ತಿದ್ದರು. ಈಗ ಅವರ ಸಂಖ್ಯೆ ಕಡಿಮೆಯಾಗಿದೆ. ಸೇವೆ ಸಲ್ಲಿಸುವ ಸಂಪ್ರದಾಯವನ್ನು ನೋಡಲು ಸಾವಿರಾರು ಜನ ಬಂದಿರುತ್ತಾರೆ. ಹರಕೆಯವರು ಕುರಿ, ಕೋಳಿಯ ಬಲಿಯನ್ನು ಅರ್ಪಿಸುತ್ತಾರೆ. ಸೇವೆ ಸಲ್ಲಿಸುವವರು ಇದೇ ಜಾತಿಯವರು ಇರಬೇಕೆಂಬ ನಿಯಮವಿಲ್ಲ. ಎಲ್ಲರದೂ ಇದರಲ್ಲಿ ಸಮಪಾಲು, ಸಮಭಾಗ.

ದೇವಿಯ ಪೂಜಾರಿಗಳು ಹರಿಜನರಾದುದರಿಂದ ಅಲ್ಲಿಯ ವ್ಯವಸ್ಥೆಯೆಲ್ಲವೂ ಅವರ ಹಿತಚಿಂತನೆಯಲ್ಲಿಯೇ ನಡೆಯುತ್ತದೆ. ಪ್ರೀತಿಯಿಂದ ಸಲ್ಲಿಸಿದ ಜನರ ಕಾಣಿಕೆ ಬಂಗಾರ, ಬೆಳ್ಳಿ, ಹಣ, ವಸ್ತ್ರ, ಬಳಿ, ಗೊಂಬಿ ಮುಂತಾದ ರೂಪಗಳಲ್ಲಿ ಸಂದಾಯ ವಾಗುತ್ತದೆ. ದೇವಿಗೆಂದು ಮಾಡಿಸಿ ತಂದ ಪಾದರಕ್ಷೆಗಳ ರಾಶಿಯನ್ನು ಗುಡಿಯ ಮಗ್ಗುಲಲ್ಲಿ ತೋಡಿದ ಗುಂಡಿಯಲ್ಲಿ ಸಂಗ್ರಹಿಸಿ, ಮುಚ್ಚಿ ಇಡುವ ಸಂಪ್ರದಾಯ ನಡೆದುಕೊಂಡು ಬಂದಿದೆ.

ಮಾಪುರ ತಾಯಿಗೆ 'ಜೋಗಿತಿ ಬಿಡುವ ಸಂಪ್ರದಾಯ' ಬೆಳೆದುಕೊಂಡು ಬಂದಿದೆ. ಇವರಿಗೆ 'ಜೋಗಿಣಿ'ಯರೆಂದೂ ಜನ ಕರೆಯುತ್ತಾರೆ ಜೋಗತಿಯರಲ್ಲಿ ಗಂಡು ಜೋಗತಿ, ಹೆಣ್ಣು

ಜೋಗತಿ ಎಂದು ಎರಡು ವಿಧ. ತುಳಜಾಪುರ ಅಂಬಾಭವಾನಿಗೆ ಗಂಡು ಮತ್ತು ಹೆಣ್ಣು ಜೋಗತಿಯ ಸಂಪ್ರದಾಯವಿದ್ದರೆ ಮಾಪುರತಾಯಿಗೆ ಕೇವಲ ಹೆಣ್ಣು ಜೋಗತಿಯ ಸಂಪ್ರದಾಯ ಇದೆ. ಇವರು ಎಲ್ಲೆಲ್ಲಿಯೋ ಹುಟ್ಟಿ ಬೆಳೆದವರಾಗಿ ಇರುತ್ತಾರೆ. ಇನ್ನೂ ಲಗ್ನವಾಗದ ಹದಿಹರೆಯದ ವಯಸ್ಸಿನವರನ್ನೂ ಲಗ್ನವಾದವರನ್ನೂ ದೇವತೆಯ ಹೆಸರಿನ ಮೇಲೆ ಪಟ್ಟಗಟ್ಟಿ ಬಿಟ್ಟಿರುತ್ತಾರೆ. ಇವರು ಹೆಚ್ಚಾಗಿ ಹಿಂದುಳಿದ ಜನಾಂಗಗಳಲ್ಲಿ ಜನಿಸಿದವರು. ಜೋಗತಿಯರು ಸೀರೆ–ಕುಪ್ಪಸಗಳನ್ನು ಧರಿಸುತ್ತಾರೆ. ಕೊರಳಲ್ಲಿ ಕವಡಿಯ ಸರ, ಹಣೆಯಲ್ಲಿ ಭಂಡಾರ, ಬಿಚ್ಚಿ ಬಿಟ್ಟ ಕೂದಲು, ತಲೆಯ ಮೇಲೆ ಪರಡಿ, ಕೈಯಲ್ಲಿ ದೀವಟಿಗೆ, ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು ಒಬ್ಬರು ಅಥವಾ ಹಲವರು ಕೂಡಿ ತುಂತುಣಿ ವಾದ್ಯದ ಜೊತೆಗೆ ಸುಂದರವಾಗಿ ಹಾಡುತ್ತ, ನರ್ತಿಸುತ್ತ, ದೇವಿಯ ಹೆಸರಿನಲ್ಲಿ ಮನೆಮನೆಗೆ ತಿರುಗಿ ಭಿಕ್ಷೆ ಬೇಡುವರು. ಹೊಟ್ಟೆ ಹೊರೆಯಲು ಅಲ್ಲಲ್ಲಿ ಚದುರಿ ಹೋದ ಜೋಗತಿಯರು ಜಾತ್ರೆಯ ಕಾಲಕ್ಕೆ ತಪ್ಪದೆ ಇಲ್ಲಿ ಬಂದು ಸೇರಿ ತಮ್ಮ ಸೇವೆ ಸಲ್ಲಿಸುತ್ತಾರೆ. *(ಜಿ.ಪಿ.ಪಿ)*

ಮಾರೆಪ್ಪ ಮಾರೆಪ್ಪ ದಾಸರ: ತತ್ವಪದ ಗಾಯಕ. ಇವರ ಹಾಡು ಕಿವಿಯ ಮೇಲೆ ಬಿದ್ದರೆ ಸಾಕು ಆ ನಾದ ಹೃದಯಕ್ಕೆ ಮುಟ್ಟಿ, ಅಭೂತಪೂರ್ವವಾದ ಆನಂದವನ್ನುಂಟು ಮಾಡುತ್ತದೆ. ಇವರು ಹಾಡುವ ತತ್ವಪದದ ಅರ್ಥ ಗಾಂಭೀರ್ಯ, ನಾದ ಮಾಧುರ್ಯದ ಆಕರ್ಷಣೆಯೊಂದಿಗೆ ಬೇರೊಂದು ಲೋಕಕ್ಕೆ ಕೇಳುಗನನ್ನು ಕೊಂಡೊಯ್ದು ಬಿಡುತ್ತದೆ. ಅಂತೆಯೇ ಮಹಾನ್ ಹಿಂದುಸ್ತಾನಿ ಗಾಯಕರಾದ ಪಂ. ಮಲ್ಲಿಕಾರ್ಜುನ ಮನಸೂರರು ಒಂದು ಬೆಳಗ್ಗೆ ಈ ಬೀದಿ ಹಾಡುಗಾರನ ಹಾಡನ್ನು ಆಲಿಸಿ, ನಾದ ಮಾಧುರ್ಯಕ್ಕೆ ಮಾರು ಹೋಗಿ, ಧಾರವಾಡದ ಆಕಾಶವಾಣಿ ಕೇಂದ್ರಕ್ಕೆ ಕರೆದುಕೊಂಡು ಹೋಗಿ ಹಾಡಿಸಿದರು. ಆ ಹಾಡುಗಳು ಆಕಾಶವಾಣಿಯ ಅಲೆಯೊಂದಿಗೆ ಸಂಗೀತ ಪ್ರೇಮಿಗಳ ಕಿವಿಗೆ, ಹೃದಯಕ್ಕೆ ಲಗ್ಗೆಯಿಟ್ಟವು. ಹೀಗೆ ಅಲೆಮಾರಿ ಜನಾಂಗದ ಬೀದಿ ಗಾಯಕನೊಬ್ಬ ಕನ್ನಡಿಗರ ಮನೆ ಮಾತಾಗಿರುವುದು ಒಂದು ಅಚ್ಚರಿಯ ಹಾಗೂ ಮೆಚ್ಚಿಗೆಯ ಸಂಗತಿ. ನೆರೆಯ ಆಂಧ್ರಪ್ರದೇಶದಿಂದ ಹಾಡುತ್ತ ಕರ್ನಾಟಕಕ್ಕೆ ಕಾಲಿಟ್ಟ ಅಲೆಮಾರಿ ದಾಸರ ಕುಟುಂಬದಿಂದ ಬಂದ ಇವರ ಮನೆಮಾತು ತೆಲುಗು, ಹಿಂದುಳಿದ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ತುಮರಗುದ್ದಿಯಲ್ಲಿ ಮಾರೆಪ್ಪ ದುರಗಮ್ಮ ದಂಪತಿಗಳ ಮಗನಾಗಿ ಜನಿಸಿದರು. ಕುಲ ಕಸಬಾದ ದೇವರ ನಾಮ ಸಂಕೀರ್ತನೆಯನ್ನು ಏಕತಾರಿ ಮೂಲಕ ಹಾಡುತ್ತ ಕರ್ನಾಟಕವನ್ನು ಸುತ್ತಿದರು. ಜಾನಪದಕ್ಕೆ ಹೊರತಾದ ಪಿಟೀಲನ್ನು ತಮ್ಮವರೇ ಆದ ರಾಮಣ್ಣ ಮಾಸ್ತರಿಂದ ಕಲಿತು, ತತ್ವ ಪದಗಳಿಗೆ ಏಕತಾರಿಯ ಓಂಕಾರ ನಾದಕ್ಕೆ ಒಗ್ಗಿಸಿಕೊಂಡರು. ಹಿರಿಯ ಮಗ ಸಣ್ಣ ಯಂಕಪ್ಪನೊಂದಿಗೆ ಹಾಡುತ್ತ ಹಳ್ಳಿಯಿಂದ ದಿಲ್ಲಿಯವರೆಗೆ ಹೆಸರು ಮಾಡಿದ್ದಾರೆ. ಬಬಲಾದಿ ಚಿಕ್ಕಯ್ಯ, ಕಡಕೋಳ ಮಡಿವಾಳಪ್ಪ, ಸಪ್ಪಣ್ಣಾರ್ಯರು, ಶಿಶುನಾಳ ಶರೀಫರು, ತಾಳಕೇರಿ ಬಸವರಾಜ ಮುಂತಾದವರ ತತ್ವ ಪದಗಳನ್ನು, ಶರಣರ ವಚನಗಳು ಹಾಗೂ ದಾಸರ ಕೀರ್ತನಗಳನ್ನು ಹಾಡುತ್ತಾರೆ.

ನಾಡಿನ ಸಂಘ ಸಂಸ್ಥೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಜಾನಪದ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು 2007 ಜುಲೈ 20, ರಂದು ದೆಹಲಿಯ ಕನ್ನಡ ಸಂಘ ಹಾಡಿಸಿ, ಮೆಚ್ಚಿ ಪ್ರೋತ್ಸಾಹಿಸಿವೆ. 1985ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ ನೀಡಿದೆ. ಇದೇ ವರ್ಷ ಯಲಬುರ್ಗಾ ಸಿದ್ಧರಾಮೇಶ್ವರ ಸಂಸ್ಥಾನದಿಂದ 'ಕರುನಾಡ ಕೋಗಿಲೆ' ಬಿರುದು ನೀಡಿದೆ. ಇದಲ್ಲದೆ ಜಾನಪದ ಟ್ರಸ್ಟ್ ಗೌರವಿಸಿದೆ. ಕರ್ನಾಟಕ ಸರಕಾರ ರಾಜ್ಯ ಪ್ರಶಸ್ತಿ ನೀಡಿದೆ. 1989ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ 20ನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದಲ್ಲಿ ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ. 1989ರಲ್ಲಿ ಎಚ್.ಎಲ್. ನಾಗೇಗೌಡರು ಏಕತಾರಿ ಹಾಡುಗಳನ್ನು ಸಂಗ್ರಹಿಸಿ ಧ್ವನಿ ಮುದ್ರಣ ಮಾಡಿದ್ದಾರೆ.

(ಎಚ್.ಎಸ್.ಪಿ.)

ಮಾಶಾಳ: ಗುಲಬರ್ಗಾ ಜಿಲ್ಲೆ ಅಫಜಲ್‌ಪುರದಿಂದ ವಾಯುವ್ಯಕ್ಕೆ 27 ಕಿ.ಮೀ. ದೂರದಲ್ಲಿರುವ ಗಡಿಗ್ರಾಮ. ಪ್ರಾಚೀನ ಶಾಸನಗಳಲ್ಲಿ 'ಮಾಸಿವಳ' ಎಂದೇ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಆಲಂದೆ 1000ಕ್ಕೆ ಒಳಪಟ್ಟಿದ್ದ ಆಣಂದೂರು 300ಕ್ಕೆ ಸೇರಿದ ಸರ್ವನಮಸ್ಯದ ಅಗ್ರಹಾರವಾಗಿದ್ದು, ಇಲ್ಲಿಂದ ಈವರೆಗೆ ಮೂರು ಶಾಸನಗಳು ದೊರೆತಿವೆ. ಇವುಗಳಲ್ಲಿ ಯಾಳಭಾವಿ ತೋಟದ ದೇಗುಲ (ಕೇಸವ)ದಲ್ಲಿರುವ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ 1115ರ ಶಾಸನವು ಯುವರಾಜ ಮಲ್ಲಿಕಾರ್ಜುನನು ಆಳಂದೆ 1000 ವನ್ನು ಆಳುತ್ತಿದ್ದಾಗ ಮನೆವರ್ಗಡೆ ದಂಡನಾಯಕ ಗೋವಿಂದಮಯ್ಯನು ಮಾಸಿವಳದಲ್ಲಿ ನಿರ್ಮಿಸಿದ ಮಹದೇವ, ಕೇಶವ ಹಗೂ ಆದಿತ್ಯ ದೇವರುಗಳ ತ್ರಿಕೂಟ ದೇವಾಲಯದ ಪೂಜಾವಿಧಿಗೆಂದು ಗೋದಾವರಿ–ಬಂಜೇರಾ ಕೂಡಲ ತೀರ್ಥದಲ್ಲಿ ಯುವರಾಜನು ಸಾಯಬ್ಬೆಯ ಕರ್ಜಗಿಯಲ್ಲಿ ಬೆಂಕೊಳ್ವನ ಕೋಲಲ್ಲಿ 100 ಮತ್ತರು ಹೊಲ, ಒಂದು ಮತ್ತರು ತೋಟವನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಅದೇ ಕಲ್ಲಿನ ಮೇಲಿರುವ 119ರ ಇನ್ನೊಂದು ಶಾಸನವು ತೊಳಗನೂರಿನಲ್ಲಿ ಬಿಟ್ಟ 200 ಮತ್ತರು ಭೂದಾನದ ಬಗ್ಗೆ ಹೇಳುತ್ತ ಈ ದಾನ ಭೂಮಿಗಳನ್ನು ಯಾವ ಯಾವ ಉದ್ದೇಶಕ್ಕೆ ಎಷ್ಟೆಷ್ಟು ವಿನಿಯೋಗಿಸಬೇಕೆಂದೂ ಕೂಡ ತಿಳಿಸುತ್ತದೆ. ಈ ಶಾಸನದಿಂದ ಹಿಂದೆ ಇದು ವೇದ, ಶಾಸ್ತ್ರ, ಅಧ್ಯಯನದ ಪ್ರಮುಖ ಕೇಂದ್ರವಾಗಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ. ಜೊತೆಗೆ ಇದು ಸಾಂದರ್ಭಿಕವಾಗಿ ಅಲ್ಲಿಯ ಪನ್ನಗನಾಥ (ನಾಗದೇವ) ದೇವರ ಬಗ್ಗೆ ಉಲ್ಲೇಖಿಸುತ್ತದೆ. ಇದೇ ಕಲ್ಲಿನ ಎಡಬದಿಯಲ್ಲಿ ಇರುವ ಶಾಸನವು ಗೋವಿಂದೇಶ್ವರ ದೇವರಿಗೆ ಬಿಟ್ಟ ದಾನವನ್ನು ದಾಖಲಿಸುತ್ತದೆ. ಇಲ್ಲಿಯ ಕಲ್ಲು ಕಂಬದ ಭಾವಿ ಬಳಿ ಇರುವ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಇನ್ನೊಂದು ಶಾಸನ ಅಗ್ರಹಾರ ಮಾಸಿವಳದಲ್ಲಿ ತಿಪ್ಪಣ್ಣನು ಪುಷ್ಕರಣಿಯನ್ನು ವಿಸ್ತರಿಸಿ ಸೋಪಾನವನ್ನು ನಿರ್ಮಿಸಿ ಸುಂದರಗೊಳಿಸುವುದರ ಜೊತೆಗೆ ತಿಪ್ಪಣೇಶ್ವರ ದೇಗುಲವನ್ನು ಕಟ್ಟಿಸಿ ನಾಲ್ಕು ಧರ್ಮೋತಗಳಿಗೆಂದು ಹತ್ತು ಮತ್ತರು ಭೂಮಿಯನ್ನು ದಾನ ಬಿಟ್ಟ ವಿಷಯವನ್ನು ತಿಳಿಸುತ್ತದೆ.

ಹಿಂದೆ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದ ಈ ಊರಲ್ಲಿಂದು ಗತವೈಭವವನ್ನು ಸಾರುವ ಪ್ರಾಚೀನ ದೇವಾಲಯಗಳು ನಾಲ್ಕಾರು ಸಂಖ್ಯೆಯಲ್ಲಿವೆ. ಇವುಗಳಲ್ಲಿ ಊರ ಪಂಚಾಯತಿ ಬಳಿ ಇರುವ ರಾಮಲಿಂಗ ದೇವಾಲಯವು ಸುಮಾರು 12ನೆಯ ಶತಮಾನಕ್ಕೇ ಸೇರಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದ್ದು, ನವರಂಗವನ್ನು ಪ್ರವೇಶಿಸಲು ಮೂರು ದಿಕ್ಕಿನಿಂದಲೂ ಸೌಕರ್ಯವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ತ್ರಿಶಾಖಾಲಂಕೃತ ಬಾಗಿಲವಾಡವಿದೆ. ನವರಂಗದ ಅಂಚಲ್ಲಿ ಕಕ್ಷಾಸನವಿದ್ದು, ಇಲ್ಲಿರುವ ಎರಡು ದೇವ ಕೋಷ್ಠಗಳು ಸುಂದರವಾದ ಬಾಗಿಲ ವಾಡಗಳನ್ನು ಹೊಂದಿವೆ.

ಇಲ್ಲಿಯ ಇನ್ನೊಂದು ಆಕರ್ಷಕ ದೇವಾಲಯವೆಂದರೆ ಭಾಗಶಃ ಶಿಥಿಲಗೊಂಡಿರುವ ನರಸಿಂಹ ಈಶ್ವರ ದೇಗುಲವಾಗಿದ್ದು ಇದೊಂದು ದ್ವಿಕೂಟವಾಗಿದೆ. ಇದರ ಗರ್ಭಗೃಹಗಳಲ್ಲಿ ನರಸಿಂಹ ಹಾಗೂ ಶಿವಲಿಂಗಗಳಿದ್ದು ಇವುಗಳ ಬಾಗಿಲ ವಾಡಗಳು ತ್ರಿಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಣಪತಿ ಇದೆ. ನವರಂಗವನ್ನು ಪ್ರವೇಶಿಸಲು ದಕ್ಷಿಣದಲ್ಲಿ ಪ್ರವೇಶದ್ವಾರವಿದ್ದು, ನವರಂಗ ಭಾಗ ಸಂಪೂರ್ಣ ನಾಶವಾಗಿದೆ. ಈ ದೇಗುಲದ ಗರ್ಭಗೃಹಗಳಿಗೆ ಕದಂಬ ನಾಗರ ಶಿಖರಗಳಿದ್ದು, ಇಂದು ಜೀರ್ಣಾವಸ್ಥೆಯಲ್ಲಿವೆ. ಈ ಗುಡಿಯ ಆವರಣದಲ್ಲಿ ಕೇಶವ ಹಾಗೂ ಗಣಪತಿಯ ಶಿಲ್ಪಗಳಿವೆ. ಊರ ಉತ್ತರಕ್ಕೆ ಇರುವ ಯಾಳಭಾವಿ ತೋಟದ ದೇಗುಲವೇ ಶಾಸನೋಕ್ತ ತ್ರಿಕೂಟ ದೇವಾಲಯವಾಗಿದೆ. ಇದನ್ನು ಗೋವಿಂದಮಯ್ಯನು 1115ರಲ್ಲಿ ನಿರ್ಮಿಸಿ ದಾನ ಬಿಟ್ಟ ವಿಷಯ ಅಲ್ಲೇ ಇರುವ ಶಾಸನದಿಂದ ಗೊತ್ತಾಗುತ್ತದೆ. ಪೂರ್ವಾಭಿ ಮುಖವಾಗಿರುವ ಈ ತ್ರಿಕೂಟವು ಮೂರು ಪ್ರತ್ಯೇಕ ಗರ್ಭಹೃಹಗಳನ್ನು ಹೊಂದಿದ್ದು, ಪ್ರಧಾನ ಗರ್ಭಗೃಹ ಹಾಗೂ ಉತ್ತರ ಗರ್ಭಗೃಹಗಳು ಬರಿದಾಗಿದ್ದು ದಕ್ಷಿಣದ ಗರ್ಭಗೃಹದಲ್ಲಷ್ಟೆ ಬಲಹರಿ ಶಿವಲಿಂಗವಿದ್ದು, ಶಾಸನೋಕ್ತ ಮಹಾದೇವ ಇದಾಗಿದ್ದು ಉಳಿದೆರಡರಲ್ಲಿ ಕ್ರಮವಾಗಿ ಕೇಶವ ಹಾಗೂ ಆದಿತ್ಯನ ಮೂರ್ತಿಗಳು ಹಿಂದೆ ಇದ್ದು ಈಗ ಕಣ್ಮರೆಯಾಗಿವೆ. ಇವುಗಳ ಬಾಗಿಲವಾಡಗಳು ತ್ರಿಶಾಖಾಲಂಕೃತ ವಾಗಿದ್ದು ಸುಂದರವಾಗಿವೆ. ನವರಂಗದಲ್ಲಿ ಒಟ್ಟು ನಾಲ್ಕು ದೇವಕೋಷ್ಠಗಳಿದ್ದು, ಒಂದು ಇನ್ನೊಂದಕ್ಕಿಂತ ಸುಂದರ ಆಗಿವೆಯಾದರೂ ಎಲ್ಲವೂ ಬರಿದಾಗಿವೆ. ನವರಂಗದ ಮುಂಬದಿಯಲ್ಲಿ ಮುಖಮಂಟಪವಿದ್ದು ಕಕ್ಷಾಸನವಿದೆ. ಈ ದೇವಾಲಯದ ಭಿತ್ತಿಯ ನಿರಾಡಂಬರವಾಗಿದ್ದು, ಶಿಖರಗಳು ನಾಶಗೊಂಡಿವೆ. ಈ ದೇವಾಲಯದ ಮುಂದೆ ವಿಶಾಲವಾದ (100x80ಅಡಿ) ಸೋಪಾನ ಬಾವಿಯಿದ್ದು ಸುಂದರವಾಗಿದೆ. ಈ ದೇವಾಲಯವು ಹಿಂದೆ ಶಿಕ್ಷಣ ನೀಡುವ ಶಾಲೆಯು ಆಗಿತ್ತೆಂಬ ಅಂಶ ಅಲ್ಲೇ ಇರುವ ಶಾಸನದಿಂದ ಗೊತ್ತಾಗುತ್ತದೆ. ಊರ ಹೊರಗೆ ಇರುವ ಮಲಖಾನ್ ಗುಡಿಯ ಪೂರ್ಣ ಜೀರ್ಣೋದ್ಧಾರಗೊಂಡಿರುವ ಪ್ರಾಚೀನ ದೇಗುಲವಾಗಿದ್ದು ಕಲ್ಯಾಣದ ಚಾಳುಕ್ಯರ ಕಾಲದ ಶಿವಲಿಂಗ, ನಂದಿ, ಹಗೂ ಕಂಬಗಳನ್ನು ಇಲ್ಲಿ ನೋಡಬಹುದಾಗಿದೆ. ಊರ ಹೊರಗೆ ಗೌಡರ ಹೊಲದಲ್ಲಿರುವ ಕಲ್ಲುಕಂಬ ಬಾವಿ ದೇಗುಲವು ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಕಟ್ಟಿದ ದೇವಾಲಯ ಆಗಿದ್ದು, ಅಲ್ಲೇ ಇರುವ ಶಾಸನದಿಂದ ಇದನ್ನು ತಿಪ್ಪಣ್ಣನು ನಿರ್ಮಿಸಿ ಮುಂದಿರುವ ಸೋಪಾನ ಮಷ್ಕರಣಿಯನ್ನು ವಿಸ್ತರಿಸಿದ ಅಂಶ ಗೊತ್ತಾಗುತ್ತದೆ. ಇದೊಂದು ಈಶ್ವರ (ಶಾಸನೋಕ್ತ ತಿಪ್ಪೇಶ್ವರ) ಗುಡಿಯಾಗಿದ್ದು, ಗರ್ಭಗೃಹ ಅಂತರಾಳ ಹಾಗೂ ತೆರೆದ ನವರಂಗಗಳನ್ನು ಹೊಂದಿದ್ದು ಪೂರ್ವಾಭಿಮುಖವಾಗಿದೆ. ಈ ದೇವಾಲಯದ ನವರಂಗದ ಬಲಭಾಗವು ಜೀರ್ಣಾವಸ್ಥೆಯಲ್ಲಿದ್ದು ಶಿಖರಗಳು ನಶಿಸಿ ಹೋಗಿವೆ. ಈ ದೇವಾಲಯದ ಬಲಭಾಗದಲ್ಲಿರುವ, ಗುಡಿಯಷ್ಟೇ ಪ್ರಾಚೀನವಾದ ಸುಮಾರು 15 ಅಡಿ ಎತ್ತರದ ದೀಪಮಾಲೆ ಕಂಬವು ಬಹಳ ಆಕರ್ಷಕವಾಗಿದೆ. *(ಆರ್.ಕೆ.)*

ಮಾಸ್ತಮ್ಮ: 'ಮಾಸ್ತಮ್ಮ' ಎಂಬ ಪದ ಮಹಾಸತಿ+ಅಮ್ಮ ಎನ್ನುವ ರೂಪದಿಂದ ಕೂಡಿದ್ದಾಗಿದೆ. ಯಾವುದೋ ಒಂದು ಸಂದರ್ಭದಲ್ಲಿ ಯಾವುದೋ ಕಾರಣಕ್ಕಾಗಿ ಹೆಣ್ಣೊಬ್ಬಳು ತನ್ನ ಜೀವನವನ್ನೇ ತ್ಯಾಗ ಮಾಡಿ ಕಾಲಾನಂತರದಲ್ಲಿ ಜನರ ದೃಷ್ಟಿಯಲ್ಲಿ ಆಕೆಯು ದೇವತೆಯಾಗುತ್ತಾಳೆ. ಇದಕ್ಕೆ ಸಂಬಂಧಿಸಿ ದಂತೆ ಕತೆಯೊಂದು ಜನ ಜನಿತವಾಗಿದೆ. "ಮಾಸ್ತಮ್ಮನದು ಹುಟ್ಟೂರು ಒಂದಾದರೆ ಬೆಳೆದದ್ದು ಮತ್ತೊಂದು. ಊರಲ್ಲಿ ಅದೂ ಆಕೆ ದತ್ತು ಮಗಳಾಗಿ ಬೆಳೆಯುತ್ತಾಳೆ ಆನಂತರ ಆಕೆಯನ್ನು ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಲಾಗುತ್ತದೆ. ಆ ಊರಿನಲ್ಲಿದ್ದ ಕ್ಷೌರಿಕನ ಕಣ್ಣು ಇವಳ ಮೇಲೆ ಬೀಳುತ್ತದೆ. ಹೇಗಾದರೂ ಮಾಡಿ ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳ ಬೇಕೆಂದು ಹೊಂಚು ಹಾಕುತ್ತಿರುತ್ತಾನೆ. ಒಂದು ಸಲ ಅವಳು ಸ್ನಾನ ಮಾಡುವಾಗ ಎಮ್ಮೆ ಕರುಗಳನ್ನು ಬಿಡಿಸುತ್ತಾನೆ. ಅವಳು ತಲೆಗೆ ಸೀಗೆಕಾಯಿ ಹಚ್ಚಿಕೊಂಡಿದ್ದರಿಂದ ಬೆತ್ತಲೆಯಾಗಿಯೇ ಬಂದು ಕರುಗಳನ್ನು ಕಟ್ಟುತ್ತಾಳೆ ಎಂದು ಅಂದುಕೊಂಡಿರುತ್ತಾನೆ. ಆದರೆ ಆತನ ಉಪಾಯವು ವಿಫಲವಾಗುತ್ತದೆ. ಮಾಸ್ತಮ್ಮನು ಒದ್ದೆಯಾದ ಸೀರೆಯಲ್ಲಿಯೇ ಬಂದು ಕರುಗಳನ್ನು ಕಟ್ಟಿ ಹಾಕುತ್ತಾಳೆ. ಈ ವಿಷಯವನ್ನು ಗಂಡನಿಗೂ ತಿಳಿಸುತ್ತಾಳೆ.

ಇದಾದ ನಂತರ ಮತ್ತೊಮ್ಮೆ ಆ ಕ್ಷೌರಿಕ ಗೌಡರ ಮನೆಗೆ ಊಟಕ್ಕೆ ಬರುವ ಸಂಚೊಂದನ್ನು ಹೂಡುತ್ತಾನೆ. 'ಅಗ್ನಿ ಇಲ್ದೆ ಅಡುಗೆ ಮಾಡ್ಬೇಕು, ಸೆಗ್ಣಿ ಇಲ್ದೆ ನೆಲ ಸಾರಿಸ್ಬೇಕು' ಹಾಗಾದರೆ ಊಟಕ್ಕೆ ಬರುವುದಾಗಿ ಅವಳ ಮಾವನ ಹತ್ತಿರ ಹೇಳುತ್ತಾನೆ. ಮಾವ ಚಿಂತಾಕ್ರಾಂತನಾಗುತ್ತಾನೆ. ಆಗ ಸೊಸೆ ಬಂದು ಅವನು ಹೇಳಿದ ಹಾಗೆ ಮಾಡುತ್ತೇನೆಂದು ಮಾವನಿಗೆ ತಿಳಿಸುತ್ತಾಳೆ. ತರಿಸಿದ್ದ ಮೂಗಳ ಸುಣ್ಣವನ್ನು ಒಲೆ ಮೇಲೆ ಸುರಿದು ಪಾತ್ರೆ ಇಟ್ಟು ಅಡುಗೆ ಮಾಡುತ್ತಾಳೆ. ಲೋಕರಸದ ಪಟ್ಟೆಯನ್ನು ತಂದು ನೆಲವನ್ನು ಸಾರಿಸುತ್ತಾಳೆ ಆನಂತರ ಕ್ಷೌರಿಕನನ್ನು ಕರೆತರಲು ಮಾವನಿಗೆ ತಿಳಿಸುತ್ತಾಳೆ. ಅವನು ಬರುತ್ತಾನೆ. ಆಗ ಇಬ್ಬರಿಗೆ ನೀರು ಕೊಡುತ್ತಾಳೆ. ಮಾವ ಇನ್ನು ಅಲ್ಲೇ ನಿಂತಿರುತ್ತಾನೆ. ಕ್ಷೌರಿಕನು ಮಾತ್ರ ಆತುರದಿಂದ ಒಳಗೆ ಬರುತ್ತಾನೆ. ಲೋಕರಸದ ಪಟ್ಟೆಯಿಂದ ಸಾರಿಸಿದ ನೆಲದ ಮೇಲೆ ಕಾಲಿಟ್ಟು ಜಾರಿ ಬಿದ್ದು, ತಿರುಗಿ ನೋಡದೆ ಅಲ್ಲಿಂದ ಹೊರಟು ಹೋಗುತ್ತಾನೆ.

ಅನಂತರ ಗಂಡ ಮತ್ತು ಮಾವನಿಗೆ ಊಟಕ್ಕೆ ಬಡಿಸಿದ ಮೇಲೆ ತಾನು ಒಂದು ಕ್ಷಣವೂ ಅಲ್ಲಿರುವುದಿಲ್ಲ ಎಂದು ಹೇಳಿ,

ಮಾವನಿಗೆ ನಮಸ್ಕರಿಸಿ ಅಗ್ನಿ ಪ್ರವೇಶ ಮಾಡುತ್ತಾಳೆ. ಅಗ್ನಿ ಪ್ರವೇಶಕ್ಕೆ ಮುನ್ನ ಆಕೆಯು ಶಾಪವನ್ನು ಹಾಕುತ್ತಾಳೆ. 'ಹುಣಸೆ ಹೂವಾಗ ಬೇಡ, ಮಾವು ಫಲವಾಗಬೇಡ, ಹೊಸಕೆರೆಗೆ ಹುಟ್ಟಿದ ಹೆಣ್ಣುಮಕ್ಕಳಿಗೆ ಗಂಡ ಇದ್ದರೆ ಮಕ್ಕಳಿಲ್ಲ, ಮಕ್ಕಳಿದ್ದರೆ ಗಂಡ ಇಲ್ಲ. ಹೊರಗೆ ಕೊಟ್ಟವು ಬದುಕುವ ಹಾಗಿಲ್ಲ. ಈರೇಗೌಡನ ದೊಡ್ಡಿಗೂ ಹೊಸಕೆರೆಗೂ ತಗೋಳಿ ಕೊಡೋಳಿ ಇರುವುದಿಲ್ಲ'. ಅಗ್ನಿ ಪ್ರವೇಶವಾದ ಬಳಿಕ ಅಲ್ಲಿಯೇ ಆಕೆ ಒಡಮೂಡುತ್ತಾಳೆ. ಆ ಸ್ಥಳದಲ್ಲಿಯೇ ಆಕೆಯ ಮಾವ ದೇವಸ್ಥಾನ ಕಟ್ಟಿಸುತ್ತಾನೆ. ಹೊಸಕೆರೆಯಲ್ಲಿ ಇಂದಿಗೂ ಮಾಸ್ತಮ್ಮನ ದೇವಸ್ಥಾನವಿದೆ. ಈರೇಗೌಡನದೊಡ್ಡಿಗೂ ಹೊಸಕೆರೆಗೂ ವೈವಾಹಿಕ ಸಂಬಂಧಗಳು ಇಂದಿಗೂ ನಡೆಯುತ್ತಿಲ್ಲವಂತೆ.

ಸಮಾಜದಲ್ಲಿನ ಕಾಮುಕರ ವಕ್ರದೃಷ್ಟಿಗೆ ಬಿದ್ದ ಹೆಣ್ಣೊಬ್ಬಳು ಸಂಪ್ರದಾಯ, ಮನೆತನದ ಗೌರವಗಳಿಗಾಗಿ ತನ್ನ ಜೀವನವನ್ನೇ ತ್ಯಾಗ ಮಾಡಿದ್ದರಿಂದಾಗಿಯೇ ಈಕೆಗೆ ಮಾಸ್ತಮ್ಮ ಎನ್ನುವ ಹೆಸರು ಬಂದಂತಿದೆ. ಇಂದಿಗೂ ಆ ಭಾಗದಲ್ಲಿ ಮದುವೆ ಮುಂತಾದ ಶುಭ ಸಮಯದಲ್ಲಿ ಮಾಸ್ತಮ್ಮನನ್ನು ಪೂಜಿಸುತ್ತಾರೆ. ಬೇರೆ ಬೇರೆ ಪ್ರದೇಶಗಳಲ್ಲಿ ಈ ಕಥೆಯ ರೂಪ ಭಿನ್ನವಾಗಿದ್ದರೂ ಸಹಿತ ಇದರ ಮೂಲ ಆಶಯ ಮಾತ್ರ ಒಂದೇಯಾಗಿದೆ ಎಂದು ಹೇಳಬಹುದು. ಮೂಲತಃ ಇದು ಪ್ರಾಚೀನ ವೀರನಾದ ಗಂಡನ ಸಾವನ್ನು ಕೇಳಿ ಸತಿ ಹೋದ ಮಹಿಳೆಯ ಪರಿಕಲ್ಪನೆಯಿಂದ ದೂರವುಳಿದಿದ್ದರೂ ಕಥೆಯ ಮೂಲ ಇದೆ ಇರಬಹುದೇನೊ.

(ಕೆ.ಎಸ್)

ಮಾಸ್ತಿಗಲ್ಲು: 'ಮಾಸ್ತಿ' ಎನ್ನುವುದು 'ಮಹಾಸತಿ' ಎನ್ನುವ ಸಂಸ್ಕೃತ ಪದದ ತದ್ಭವೀಕರಣ. ಪತಿಯು ವೀರಮರಣವನ್ನು ಹೊಂದಿದಾಗ ಅಥವಾ ಅಕಾಲ ಮರಣಕ್ಕೆ ತುತ್ತಾದಾಗ ಅವನೊಡನೆ ಚಿತೆಯೇರಿ ಸಾವನ್ನಪ್ಪುವುದೇ ಮಹಾಸತಿ. ಹೀಗೆ ಮರಣ ಹೊಂದಿದವರ ಸ್ಮರಣಾರ್ಥ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಗಲ್ಲುಗಳು ಎಂದೆನಿಸಿವೆ.

ಸಹಗಮನ ಮಾಡುವ ಮೊದಲು ಆ ವಿಷಯವನ್ನು ರಾಜ್ಯದ ಆಡಳಿತಕ್ಕೆ ತಿಳಿಸಬೇಕಾಗಿತ್ತು. ಆಡಳಿತದ ಪರವಾಗಿ ಕುಂಕುಮ, ಅರಿಷಿಣ, ತಾಂಬೂಲ, ಹೂ, ಸೀರೆ ಮುಂತಾದವು ಗಳನ್ನು ಆ ಸುಮಂಗಲಿಗೆ ಕಳುಹಿಸಲಾಗುತ್ತಿತ್ತು. ಆ ದಿನ ಅವಳು ಸ್ನಾನ ಮಾಡಿ ಮೈತುಂಬಾ ಅರಿಷಿಣವನ್ನು ಹಚ್ಚಿಕೊಂಡು ಹಳದಿ ಬಣ್ಣದ ಸೀರೆ ಉಟ್ಟು ಕುಂಕುಮಾದಿಗಳನ್ನು ಧರಿಸಿ, ಬ್ರಾಹ್ಮಣರಿಗೆ, ಮುತ್ತೈದೆಯರಿಗೆ ದಾನ ಮಾಡಿ ಎಲ್ಲರ ಅಪ್ಪಣೆಯನ್ನು ಪಡೆದು, ಕೈಯಲ್ಲಿ ಲಿಂಬೆ ಹಣ್ಣುಗಳನ್ನು ಹಿಡಿದು, ಅವುಗಳನ್ನು ಮೇಲೆ ಎಸೆದು ಹಿಡಿಯುತ್ತಾ ಬರುತ್ತಿದ್ದಳು. ಆಗ ಅಗ್ನಿಕುಂಡವನ್ನು ಸಿದ್ಧಪಡಿಸಲಾಗುತ್ತಿತ್ತು. ಅವಳು ತಲೆಯ ಮೇಲೆ ಎಣ್ಣೆಯ ಮಡಿಕೆಯನ್ನಿಟ್ಟುಕೊಂಡು ಚಿತೆಯೇರಿ ಸಾವನ್ನಪ್ಪುತ್ತಾಳೆ. ಸುತ್ತಲು ಇದ್ದವರು ಕೊರಡುಗಳನ್ನು, ಎಣ್ಣೆಯನ್ನು ಸುರಿದು ಬೇಗ ಸುಟ್ಟುಹೋಗುವಂತೆ ನೋಡಿಕೊಳ್ಳುತ್ತಾರೆ.

ಸತಿ ಗಂಡನ ಜೊತೆಯೇ ಚಿತೆಯೇರಿ ಸಾವನ್ನಪ್ಪಿದರೆ ಅದನ್ನು 'ಸಹಗಮನ'ವೆಂದು, ಪತಿಯು ದೂರದ ಯಾವುದೋ ಸ್ಥಳದಲ್ಲಿ ಯುದ್ಧ ಮಾಡುತ್ತಲೋ ಅಥವಾ ಇನ್ಯಾವ ಕಾರಣದಿಂದಲೋ ಸತ್ತರೆ, ತನ್ನ ಪತಿಗೆ ಪ್ರಿಯವಾದ ಯಾವುದಾದರೊಂದು ಪದಾರ್ಥದೊಂದಿಗೆ ಸಾವನ್ನಪ್ಪಿದರೆ ಅದನ್ನು 'ಅನುಗಮನ'ವೆಂದೂ ಕರೆಯಲಾಗಿದೆ.

ಪತಿಯ ಸಾವಿನ ಅನಂತರ ಸತಿಯಾದವಳು ಅವನ ಜೊತೆ ಸಾವನ್ನಪ್ಪಿದರೆ ಅವರಿಬ್ಬರೂ ಪಾಪಗಳಿಂದ ಮುಕ್ತರಾಗುತ್ತಾರೆ ಎನ್ನುವದಷ್ಟೇ ಅಲ್ಲದೆ, ಮೂರುವರೆ ಕೋಟಿ ವರ್ಷ ಸ್ವರ್ಗದಲ್ಲಿ ಸುಖವಾಗಿರುತ್ತಾರೆ ಎನ್ನುವ ನಂಬಿಕೆಯಿದೆ.

ವಿದೇಶೀ ಪ್ರವಾಸಿಗರು ಇಲ್ಲಿನ ಸತಿಪದ್ಧತಿಯನ್ನು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ. ಅವರ ಪ್ರಕಾರ ಹೆಣ್ಣುಮಕ್ಕಳು ಸಹಗಮನ ಮಾಡುವುದು ಇಲ್ಲಿಯ ನಡವಳಿಕೆ ಮತ್ತು ಅದನ್ನು ಇಲ್ಲಿನ ಜನ ಗೌರವವೆಂದು ತಿಳಿಯುತ್ತಾರೆ ಎಂದಿದ್ದಾರೆ. ಅಂದರೆ ಸಹಗಮನ ಮಾಡುವುದು ಇಲ್ಲಿನ ಸಂಪ್ರದಾಯದಲ್ಲಿ ಸೇರಿಕೊಂಡು ಅದೊಂದು ಪರಂಪರೆಯಾಗಿ ಮುಂದುವರೆದಿತ್ತು ಎನ್ನುವ ಅಂಶವನ್ನು ಅವರು ಗುರುತಿಸಿದ್ದಾರೆ. ಕರ್ನಾಟಕದ ಅನೇಕ ಶಾಸನಗಳು ಮಾಸ್ತಿಗಲ್ಲುಗಳ ರೂಪದಲ್ಲಿ ಪೂಜನೀಯವಾಗಿದ್ದು, ಇಂತಹ ಸತಿ ಹೋದ ಮಹಿಳೆಯರ ಸಾವನ್ನು ದಾಖಲಿಸಿವೆ. ಒಕ್ಕೈಮಾಸ್ತಿ, ಇಕ್ಕೈಮಾಸ್ತಿಗಳು ಸಹ ಕರ್ನಾಟಕದಲ್ಲಿ ಕಂಡುಬರುತ್ತವೆ. ನಿಂಬೇ ಹಣ್ಣನ್ನು ಹಿಡಿದ, ಕನ್ನಡಿ ಹಿಡಿದ ಮಹಿಳೆಯ ಚಿತ್ರವನ್ನು ಒಳಗೊಂಡ ಮಾಸ್ತಿಗಲ್ಲುಗಳು, ಹೆಣ್ಣಿನ ಜಡೆಯನ್ನು (ಸುಮಂಗಲಿಯಾಗಿ ಹೋದ) ಕೆತ್ತಿರುವ ಮಾಸ್ತಿಗಲ್ಲುಗಳೂ ಸಹ ಕರ್ನಾಟಕದಲ್ಲಿ ಹೇರಳವಾಗಿ ಕಂಡುಬರುತ್ತವೆ.

(ಕೆ.ಎಸ್.)

ಮು

ಮುಡಬೂಳ: ಇಂದೊಂದು ಐತಿಹಾಸಿಕ ಸ್ಥಳ. ಸುರಪುರ ಸಂಸ್ಥಾನದ ಆರಾಧ್ಯ ದೈವ ಗೋಪಾಲಸ್ವಾಮಿ ದೇವಸ್ಥಾನ ಈ ಗ್ರಾಮದಲ್ಲಿದೆ. ರಾಜ ವಂಶಸ್ಥರಾದ ಆಗಿನ ರಾಜಾ ವೆಂಕಟಪ್ಪನಾಯಕ ಹಾಗೂ ಅವರ ಮನೆತನದ ಸದಸ್ಯರು ಪ್ರತಿ ವರ್ಷ ಪೂಜೆ ಸಲ್ಲಿಸಿ ಹೋಗುತ್ತಿದ್ದರು. ಗ್ರಾಮದಲ್ಲಿರುವ ಸಿದ್ಧಲಿಂಗೇಶ್ವರ ದೇವಸ್ಥಾನ ಅತ್ಯಂತ ಪ್ರಾಚೀನ ಕಾಲದ ದೇವಾಲಯ. ಹಲವು ಜನ ಇತಿಹಾಸ ಸಂಶೋಧಕರು ಗ್ರಾಮಕ್ಕೆ ಭೇಟಿ ನೀಡಿ ಈ ದೇವಸ್ಥಾನವನ್ನು ಪರಿಶೀಲಿಸಿ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದಾರೆ. ಹಬ್ಬ ಹರಿದಿನಗಳಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತವೆ.

ಈ ಗ್ರಾಮದಲ್ಲಿ ಮೊಹರಂ ಆಚರಣೆ ಬಹಳಷ್ಟು ವಿಶಿಷ್ಟತೆಯಿಂದ ಕೂಡಿದೆ. ಈ ಹಬ್ಬದಲ್ಲಿ ಬರುವ ಮೊಹರಂ ಹಾಡುಗಳು ಜನಪದ ಗಾನ ಸಂಪ್ರದಾಯದ ಒಂದು ವಿಶೇಷ ಪ್ರಕಾರವಾಗಿದೆ. ಇವುಗಳನ್ನು ಅಲಾವಿ ಹಾಡುಗಳು, ಕರ್ಬಲ್

ಹಾಡುಗಳು, ರಿವಾಯತ್ ಪದಗಳೆಂದು ಕರೆಯುತ್ತಾರೆ. ಈ ಹಬ್ಬವನ್ನು ಹಿಂದೂ–ಮುಸ್ಲಿಮರು ಕೂಡಿ ಭಾವೈಕ್ಯತೆಯಿಂದ ಆಚರಿಸುತ್ತಾರೆ. ಮೊಹರಂ ಪದಗಳಲ್ಲಿ ಪೀರ್, ಪೈಗಂಬರ್, ಹಸನ್, ಹುಸೇನ್, ಶಿವಶರಣರ ತ್ಯಾಗ ವೀರಗೀತೆಗಳಿಂದ ಕೂಡಿರುತ್ತದೆ. ಹಲಿಗೆ, ಸನಾದಿ, ಕಣಿ ಇವು ಮೊಹರಂ ಹಾಡು ಮತ್ತು ಕುಣಿತಗಳಿಗೆ ಬಳಕೆಯಾಗುವ ವಾದ್ಯಗಳಾಗಿವೆ. ಮೊಹರಂ ಆರಾಧನೆಯಲ್ಲಿ ಹಾಡಿಗಿಂತ ಕುಣಿತಕ್ಕೆ ಹೆಚ್ಚು ಪ್ರಾಧಾನ್ಯತೆಯಿದೆ.

ಗ್ರಾಮದಲ್ಲಿ ಹೆಣ್ಣು ಮಕ್ಕಳು ಹಾಡುವ ಜನಪದ ಹಾಡುಗಳಲ್ಲಿ ತಾಯಿ ಮತ್ತು ಮಗಳ ಸಂಬಂಧಕ್ಕೆ, ತವರು ಮನೆ, ಸೋಬಾನ, ಹರಕೆ, ಬಂಜೆತನ, ಬಡತನ, ವ್ಯವಹಾರ ಮುಂತಾದವುಗಳಿಗೆ ಸಂಬಂಧಪಟ್ಟವುಗಳಾಗಿವೆ. ಈ ಗ್ರಾಮದಲ್ಲಿ ಮಡಿವಾಳೇಶ್ವರ, ಗೋಪಾಲಸ್ವಾಮಿ, ದುರ್ಗಾದೇವಿ, ಪಾಲ್ಕಮ್ಮ, ಉಡಚಮ್ಮ, ಬೀರಲಿಂಗೇಶ್ವರ ಹೀಗೆ ಹಲವು ದೇವ–ದೇವತೆಗಳನ್ನು ಆಚರಿಸುವ ಪದ್ಧತಿಯಿದೆ. ಮುಡಬೂಳ ಗ್ರಾಮದಲ್ಲಿ ಗ್ರಾಮದೇವತೆಯ ಉತ್ಸವದ ಸಂದರ್ಭದಲ್ಲಿ ಗ್ರಾಮ ದೈವದಲ್ಲಿ ಪ್ರಮುಖ ಪಾತ್ರ ವಹಿಸುವ ಪೋತರಾಜನ ಆಚರಣೆ ವಿಶಿಷ್ಟವಾಗಿದ್ದು, ಅಂದು ಆ ವ್ಯಕ್ತಿಯು ಮುಖಕ್ಕೆ ಬಣ್ಣ ಹಚ್ಚಿಕೊಂಡು ಅರಿಶಿಣ ಅಥವಾ ಕೆಂಪು ಬಣ್ಣದ ಧೋತ್ರ ಉಟ್ಟು ಮೈಮೇಲೆ ಬಾರಕೋಲು ಹಾಕಿಕೊಂಡು ದೇವಿಯ ಉತ್ಸವದ ಮುಂದೆ ಕುಣಿಯುತ್ತಾನೆ.

ಕುರುಬ ಜನಾಂಗದಲ್ಲಿ ಕಂಡುಬರುವ ಬಹುಮುಖ್ಯ ಕಲೆ ಡೊಳ್ಳು ಬಾರಿಸುವ ಸಂಪ್ರದಾಯ. ಗ್ರಾಮದ ಹಬ್ಬ ಹರಿದಿನಗಳಲ್ಲಿ, ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ಹಾಡಿನೊಂದಿಗೆ ಬಹಳಷ್ಟು ವಿಶಿಷ್ಟತೆಯನ್ನು ಮೆರೆಯುತ್ತಾರೆ. ಬೀರಲಿಂಗ ಮಾಲಿಂಗ ರಾಯ, ರೇವಣ ಸಿದ್ದೇಶ್ವರ, ಕರಿಸಿದ್ಧ ಮುಂತಾದ ಪ್ರಮುಖ ದೇವ–ದೇವತೆಗಳನ್ನು ಕುರಿತು ಹಾಡುಗಳನ್ನು ಹಾಡುತ್ತಾರೆ. ಧಾರ್ಮಿಕತೆಯನ್ನು ನೀಡಿದ ಲೌಕಿಕತೆಯಲ್ಲಿ ಡೊಳ್ಳಿನ ಹಾಡುಗಳಲ್ಲಿ ಗುಣಾತ್ಮಕತೆ ಅಡಗಿದೆ. ಈ ಡೊಳ್ಳಿನ ಗತ್ತಿಗೆ ಹೊಂದಿಕೊಂಡಂತೆ ಹಿಮ್ಮೇಳ, ಮುಮ್ಮೇಳದಲ್ಲಿ ತಮ್ಮ ಮೂಲ ಪುರುಷರು ದೇವ–ದೇವತೆಯರು ಕಂಬಳಿ, ಭಂಡಾರ, ಡೊಳ್ಳು ಇತ್ಯಾದಿಯಾದ ಹಾಡುಗಳನ್ನು ಹಾಡಿ ಕುಣಿಯುತ್ತಾರೆ.

(ಎಸ್.ಎಂ.ಡಿ.)

ಮುದಗಲ್ಲು: ಪ್ರಸಿದ್ಧ ಐತಿಹಾಸಿಕ ಸ್ಥಳ. ಲಿಂಗಸೂಗುರ ತಾಲ್ಲೂಕಿನಿಂದ 16 ಕಿ.ಮೀ. ದೂರದಲ್ಲಿದೆ. ರಾಯಚೂರನ್ನು ಬಿಟ್ಟರೆ ಇಲ್ಲಿನ ಕೋಟೆ ಅತ್ಯಂತ ದೊಡ್ಡದು. ಈ ಊರು ವಿಜಯನಗರ ಕಾಲದಿಂದಲೂ ಖ್ಯಾತಿ ಪಡೆದಿದೆ. ಈ ಊರನ್ನು 'ಟಾಲೆಮಿ' ಎಂಬ ಪ್ರವಾಸಿಗ ಮುದಗಲ್ಲನ್ನು ಉಲ್ಲೇಖಿಸಿದ್ದಾನೆ. ಮುದಗಲ್ಲು ಕೋಟೆಯ ಬಹಳಷ್ಟು ಭಾಗವು ಇನ್ನೂ ನೋಡುವಂತಿದೆ. ಒಂದೊಂದು ಕಲ್ಲು ಎಂಟರಿಂದ ಹತ್ತು ಅಡಿ ಉದ್ದ ನಾಲ್ಕರಿಂದ ಐದು ಅಡಿ ಅಗಲ ಮೂರರಿಂದ ನಾಲ್ಕು ಅಡಿ ದಪ್ಪವಾಗಿವೆ. ಮುದಗಲ್ಲು ಕೋಟೆಯ ಪೂರ್ವದ ಮಹಾದ್ವಾರ 'ಮುಳ್ಳಗಸಿ' ಇಂದಿಗೂ ನೋಡುವಂತಿದೆ.

ಈ ಊರಿನಲ್ಲಿ ಆಚರಿಸುವ ದೊಡ್ಡ ಹಬ್ಬ 'ಮೊಹರಂ'. ಇದು ಹಿಂದು ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾಗಿದೆ. 'ಮುದಗಲ



ಮುದಗಲ್ಲು ಕೋಟೆ

ಮೊಹರಂ' ಎಂದೇ ಕರೆಯಿಸಿಕೊಂಡಿರುವ ಈ ಹಬ್ಬವು ರಾಜ್ಯದಲ್ಲೇ ಪ್ರಸಿದ್ಧಿ ಪಡೆದಿದೆ. ಈ ಆಚರಣೆಯಲ್ಲಿ ರಾಜ್ಯದ ಮತ್ತು ಹೊರ ರಾಜ್ಯದ ಜನರು ಆಚರಣೆಯಲ್ಲಿ ಭಾವಹಿಸುತ್ತಾರೆ. ಕಾಣಿಕೆ ಹರಕೆಗಳನ್ನು ಸಲ್ಲಿಸುತ್ತಾರೆ. ಹಾಗೂ ಈ ಊರಿನಲ್ಲಿ ಮೊಹರಂ ಹಬ್ಬ ಕುರಿತು ಇತಿಹಾಸ ಪ್ರಸಿದ್ಧವಾದ ಧರ್ಮಕ್ಕಾಗಿ ಹೋರಾಡಿದ ಪೈಗಂಬರ ವಂಶಜರ ತ್ಯಾಗ ಬಲಿದಾನಗಳನ್ನು ನೆನಪಿಸಿಕೊಂಡು ದುಃಖ ವ್ಯಕ್ತಪಡಿಸುವಂತ ಹಾಡುಗಳನ್ನು ಮೊಹರಂ ಪದ, ರಿವಾಯತ್, ಕರ್ಬಲಾ ಹಾಡುಗಳು ಪ್ರಸಿದ್ಧವಾಗಿದ್ದು, 5 ರಿಂದ 10 ಜನರ ಗುಂಪಿನಿಂದ ಕೂಡಿದ ತಂಡವು ವಿಶೇಷವಾದ ವೇಷಭೂಷಣಗಳನ್ನು ಧರಿಸಿ, ಸಾಮಾನ್ಯ ಉಡುಪುಗಳೊಂದಿಗೆ ಹಾಡು ಹೇಳುತ್ತಾರೆ. ತಪ್ಪಡಿಯ ಸಹಯದಿಂದ ಅಲಾವಿ ಕುಣಿತ, ಕುಣಿದು ಕುಪ್ಪಳಿಸುತ್ತಾರೆ.

(ಪಿ.ಕೆ.ಕೆ.)

ಮುಧೋಳ್: ಯಲಬುರ್ಗಾ ತಾಲೂಕಿನ ಒಂದು ಪ್ರಾಚೀನ ಅಗ್ರಹಾರ. ಈ ಗ್ರಾಮಕ್ಕೆ ಹಿಂದೆ 'ಮುದವೊಳಲ' ಎಂಬ ಹೆಸರಿದ್ದಿತೆಂದು ಇಲ್ಲಿರುವ ಕಲ್ಯಾಣದ ಚಾಲುಕ್ಯ ಅರಸರ ಕಾಲದ ಶಾಸನವೊಂದರಿಂದ ತಿಳಿದು ಬರುತ್ತದೆ. ಇದೇ ಶಾಸನ ಈ ಗ್ರಾಮವನ್ನು "ಶ್ರೀಮನ್ಮಹಾಗ್ರಹಾರಂ" ಎಂದೂ ಕೂಡ ಉಲ್ಲೇಖಿಸುತ್ತದೆ.

ಈ ಅಗ್ರಹಾರದಲ್ಲಿ ವಾಸಿಸುತ್ತಿದ್ದ ಮಹಾಜನಗಳ ಸಂಖ್ಯೆ ಒಂದು ಸಾವಿರ. ಇವರು "ಆಶ್ರಿತಕಲ್ಪವೃಕ್ಷರು ಶರಣಾ (ಗತ) ವಜ್ರಪಂಜರರು" ಆಗಿದ್ದರು. ಈ ಮಹಾಗ್ರಹಾರದ ಮಹಾಜನಗಳ ಸಂಖ್ಯೆ ಇತರ ಮಹಾಗ್ರಹಾರಗಳಾಗಿದ್ದ ಅಳವಂಡಿ, ಕವಲೂರು, ಇಟ್ಟಿಗೆಗಳಿಗಿಂತ ಹೆಚ್ಚಾಗಿದ್ದುದು, ಕುಕನೂರು ಅಗ್ರಹಾರಕ್ಕೆ ಸಮನಾಗಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ.

(ಎಲ್.ಎ.)

ಮುನಿರಾಬಾದ ಹುಲಿಗೆಮ್ಮ: ಕೊಪ್ಪಳ ಜಿಲ್ಲೆ ಮುನಿರಾಬಾದ ಹತ್ತಿರವಿರುವ ಹಿರಿಹುಲಿಗೆಯ ಹುಲಿಗೆಮ್ಮ ಮುನಿರಾಬಾದ ಹುಲಿಗೆಮ್ಮನಾಗಿದ್ದಾಳೆ. ಈ ದೇವಿಯ ಉತ್ಸವ ನಡೆಯುವುದು ಭಾರತ ಹುಣ್ಣಿಮೆಯಂದು. ರಾಯಚೂರು ಜಿಲ್ಲೆಯ ಆರೋಲಿ ಹುಲಿಗೆಮ್ಮ ಚಿಕ್ಕ ಹುಲಿಗೆಮ್ಮನಾದರೆ, ಈಕೆ ಹಿರಿಹುಲಿಗೆಮ್ಮನೆಂದೆ ಪ್ರಸಿದ್ಧಿ ಹೊಂದಿದ್ದಾಳೆ.

ಈ ದೇವಿಸುತ್ತ ಹೆಣೆದಿರುವ ಕಥೆಗಳು ಹೀಗಿವೆ: ಎಲ್ಲಮ್ಮ ದೇವಿಯೇ ಹುಲಿಸವಾರಿ ಮಾಡಿ ಬಂದುದ್ದಕ್ಕಾಗಿ, ಮುನಿರಾಬಾದಿನ



ಹರಕೆ ತೀರಿಸುವ ಕಲ್ಲು, ಮುನಿರಾಬಾದ

ಹಿರಿಹುಲಿಗಿಯಲ್ಲಿ ಬಂದು ನೆಲೆಸಿದ್ದರಿಂದ ಆಕೆಗೆ ಹಿರಿಹುಲಿಗೆಮ್ಮ ಎಂದು ಹೆಸರು ಬಂದಿರುವುದು. ಎಲ್ಲಮ್ಮನೆ ಹುಲಿಗೆಮ್ಮನೆಂದು ಎಲ್ಲಮ್ಮನ ಹೆಸರಿನಲ್ಲಿರುವ ಜೋಗತಿಯರು ಬಸವಿಯರು ಪೂಜಿಸುವರು.

ಈ ದೇವಿ ತನ್ನ ಅದ್ಭುತವಾದ ಶಕ್ತಿಯಿಂದ ಹೊಸಪೇಟೆಗೆ ಹೋಗುವ ರೈಲು ಗಾಡಿಯನ್ನು ತರುಬಿದಳೆಂಬುದು ಅಲ್ಲಿಯ ಜನರಲ್ಲಿ ಗಾಢವಾದ ನಂಬಿಕೆ. ಜನಪದರು ಹೇಳುವ ಕಥೆಯೊಂದು ಸ್ವಾರಸ್ಯ ಹೀಗಿದೆ.

ಹಿಂದಿನ ಕಾಲದಲ್ಲಿ ನಾಗಜೋಗಿ, ಬಸವ ಜೋಗಿ ಎಂಬ ಅಂಬಿಗರ ಜನಾಂಗಕ್ಕೆ ಸೇರಿದ ಅಣ್ಣ-ತಮ್ಮಂದಿರು ಇದ್ದರಂತೆ. ಅವರು ತುಂಗಭದ್ರೆ ನದಿಯ ದಡದಲ್ಲಿ ವಾಸಿಸುತ್ತಿದ್ದ ರಂತೆ. ಒಮ್ಮೆ ಸವದತ್ತಿಯ ಎಲ್ಲಮ್ಮ ದೇವಿಗೆ ಹೋಗುವಾಗ ಮಲಪ್ರಭ ನದಿ ತುಂಬಿ ನಿಂತಿದ್ದರಿಂದ, ಅವರಿಗೆ ದೇವಿ ದರ್ಶನಕ್ಕೆ ಹೋಗದಂತೆ ಆಯಿತು. ಆಗ ಅವರಿಬ್ಬರು ಎಲ್ಲಮ್ಮ ದೇವತೆಯ ಕುರಿತು ಸ್ತುತಿಮಾಡಿ ದರಂತೆ, ಆಗ ತುಂಬಿ ಹರಿಯುವ ಮಲಪ್ರಭ ನದಿ ಎರಡು ಭಾಗವಾಗಿ ಇವರಿಗೆ ದಾರಿಮಾಡಿತಂತೆ. ದಾರಿ ಸಿಕ್ಕಾಗ ತಾಯಿಯ ಹತ್ತಿರ ಹೋಗಿ ದರ್ಶನ ಪಡೆದುಕೊಂಡು ಬಂದರಂತೆ. ಹೀಗೆಯೇ ಅವರು ತಮ್ಮ ಆಯುಷ್ಯದುದಕ್ಕೂ ಮೈಯಲ್ಲಿ ಶಕ್ತಿ ಇರುವತನಕ ದೇವಿಯ ದರ್ಶನಕ್ಕೆ ನಡೆದುಕೊಂಡೆ ಹೋಗಿ ಬಂದರಂತೆ. ಕ್ರಮೇಣ ಕೆಲವು ವರುಷಗಳು ಗತಿಸಿದ ಮೇಲೆ ಮುಪ್ಪು ಅವರಿಸಿತು. ಆ ಸಮಯದಲ್ಲಿ ಸವದತ್ತಿ ಎಲ್ಲಮ್ಮನ ದರ್ಶನ ಪಡೆಯುವುದು ಅಸಾಧ್ಯವಾಯಿತು. ಆಗ ದೇವಿಯನ್ನು ಶ್ರದ್ಧೆ ಭಕ್ತಿಯಿಂದ ಪ್ರಾರ್ಥಿಸಿದರು. ಇವರ ಸ್ತುತಿಯಿಂದ ಪ್ರಸನ್ನಳಾದ ದೇವಿ ಕನಸಿನಲ್ಲಿ ಬಂದು ನೀವು ಕಷ್ಟಪಟ್ಟು ಇಲ್ಲಿಗೆ ಬರುವುದು ಬೇಡ, ನಾನು ನಾಳೆ ಹುಲಗಿಯಲ್ಲಿಯೇ ನೆಲೆಸುವುದಾಗಿ ಹೇಳಿದಳಂತೆ. ಮರುದಿವಸ ಎದ್ದು ನೋಡುವುದರಲ್ಲಿ ತಾವಿದ್ದಸ್ಥಳದಲ್ಲಿ ಭೂಮಿಯೊಳಗಿನಿಂದ ಒಂದು ಕಲ್ಲು ಉದ್ಭವಿಸಿ ನಿಂತಿತಂತೆ. ಅದೇ ಕಲ್ಲಿಗೆ ಸವದತ್ತಿ ಎಲ್ಲಮ್ಮ ದೇವಿಯೆಂದು ಪೂಜಿಸಲು ಆರಂಭಿಸಿದರಂತೆ. ಈ ಕಥೆಯ ಮೂಲಕ ಸವದತ್ತಿ ಎಲ್ಲಮ್ಮ ಹುಲಿಗಿಯಲ್ಲಿ ಬಂದು ನೆಲೆಸಿದ್ದರಿಂದ ಹುಲಿಗೆಮ್ಮ ಆದಳಂತೆ. ನಾಗಜೋಗಿ-ಬಸವಜೋಗಿಯರು ತಮ್ಮ ಜೀವಮಾನ ಇರುವತನಕ ದೇವಿ ಸೇವೆ ಮಾಡಿಕೊಂಡು, ಪರಸ್ಪರರು ಒಂದು ತೀರ್ಮಾನಕ್ಕೆ ಬಂದಾಗ ಗುಡಿಯಾಯಿತಂತೆ. ಅವರೆಲ್ಲರ ಆಚಾರ-ವಿಚಾರಗಳು ಪೂಜೆ-ಉತ್ಸವ ವಿಧಿ-ವಿಧಾನಗಳು ಬೆಳೆದುಕೊಂಡು ಬಂತೆಂದು ಕಥೆ ಹೇಳುವರು.

ಮುನಿರಾಬಾದ ಹಿರಿ ಹುಲಿಗಿ ಹತ್ತಿರ ಇರುವುದರಿಂದ ಆ ದೇವಿ ಹೆಸರಿನಿಂದ ಮುನಿರಾ ಬಾದ ಹುಲಿಗೆಮ್ಮನೆಂಬುದು ವಾಡಿಕೆ. ಹಿಂದೆ ಹುಲಿಗೆ ಮ್ಮನ ಗುಡಿ ಚಿಕ್ಕದ್ದಿತ್ತೆಂದು, ಈಗ ಅದನ್ನು ವೇಸರ ರೀತಿ ಯಲ್ಲಿ ದೊಡ್ಡದಾಗಿ ಇರುವ ಮನೆಯಂತೆ ಕಟ್ಟಿಸಿದ್ದಾರೆಂದು ಮತ್ತು ಹಂಪೆಯಲ್ಲಿರುವ ಗೋಪುರಗಳಂತೆ ಮಾಡ ಲಾಗಿದೆ ಎಂದು ಚೆನ್ನಣ್ಣಾ ವಾಲೀಕಾರ ಅವರು ಉಲ್ಲೇಖಿ ಮಾಡಿದ್ದಾರೆ. ಮುನಿರಾಬಾದ ಹುಲಿಗೆಮ್ಮ "ದೇವಿಯ ಬಲಬದಿಗೆ ಮಗ ಪರಶುರಾಮನ ಗುಡಿ ಇದೆ. ಎದುರಿಗೆ ಕಾರ್ತೀಕದಲ್ಲಿ ತುಪ್ಪದ ದೀಪ ಉರಿಸುವ ದೀಪದ ಗರುಡಗಂಭವಿದೆ. ಹಿಂದೆ ಬತ್ತಲ ಸಿಡಿಕಂಭ, ಮಾತಂಗೆಮ್ಮ, ಮುದ್ದಮ್ಮರ ಗುಡಿಗಳಿವೆ. ಸುತ್ತಮುತ್ತಲೂ ಜಾತ್ರೆಗೆ ಬಂದ ಭಕ್ತರು ಇಳಿದುಕೊಳ್ಳಲು ಕೋಣೆಗಳಿವೆ. ದ್ವಾರಬಾಗಿಲು ಪಶ್ಚಿಮಕ್ಕಿದೆ." ಈ ದೇವಿಯ ಬಾಗಿಲು ವಿಶಿಷ್ಟತೆ ಕಂಡು ಹಿಡಿಯುವ ಕಾರ್ಯ ಇನ್ನೂ ಆಗಬೇಕಾಗಿದೆ. ಸಾಮಾನ್ಯವಾಗಿ ಎಲ್ಲಮ್ಮ ಸಂಪ್ರದಾಯ ಎಲ್ಲ ದೇವತೆಗಳ ಗುಡಿಯ ಬಾಗಿಲು ಪೂರ್ವ ದಿಕ್ಕಿಗಿರುವುದನ್ನು ಕಂಡಿದ್ದೇವೆ. ಪ್ರಥಮವಾಗಿ ದೇವಿ ಗುಡಿ ಸ್ಥಾಪನೆಯಾದಾಗ ಗುಡಿ ಬಾಗಿಲು ಪೂರ್ವ ದಿಕ್ಕಿನೆಡೆಗೆ ಇತ್ತೆಂದು ಹೇಳುವರು. ಈ ಗುಡಿಯಲ್ಲಿರುವ ದೇವರು ಗುಂಡುಗಲ್ಲಿತ್ತು. ಆ ಗುಂಡುಕಲ್ಲಿಗೆ ಮೊದಲು ಪೂಜೆ ಮಾಡುತ್ತಿದ್ದರು. ಅನಂತರ ಶ್ರೀಗಂಧದ ಕಟ್ಟಿಗೆಗೆ ಮೊದಲು ಪೂಜೆ ಮಾಡುತ್ತಿದ್ದರು. ಆದರೀಗ ಎರಡು ಮೂರ್ತಿಗಳಿವೆ. 1. ನಿತ್ಯಪೂಜಿಸುವ ವಿಗ್ರಹ 2. ಉತ್ಸವ ನಡೆಸುವ ಸಂದರ್ಭದಲ್ಲಿ ಪೂಜಿಸುವ ವಿಗ್ರಹ. ಇವೆರಡು ಮೂರ್ತಿಗಳು ಆಸನ ರೂಪದಲ್ಲಿರುವುದರಿಂದ ಸರ್ವ ಶಾರೀರಿಕ ಅಂಗಗ ಳಿಂದ ಪರಿಪೂರ್ಣವಾಗಿವೆ ಎಂದು ಹೇಳುತ್ತಾರೆ.

ಎಚ್.ಡಿ.)



ತಿರುಗಿಸಿ ಹರಕೆ ತೀರಿಸುವ ಕಲ್ಲು, ಮುನಿರಾಬಾದ

ಮುಯ್ ಮತ್ತು ಕಡ: ಜೀವನ ಪರಸ್ಪರಾವಲಂಬಿ ಎಂಬುದನ್ನು ಬಿಂಬಿಸುವ ಬಾಳಿನ ಸೂತ್ರಗಳಿವು.

'ಮುಯ್ ಮತ್ತು ಕಡ' ವ್ಯವಸ್ಥೆಗಳು ಗ್ರಾಮೀಣ ಜನರ ಸಹಕಾರ ಸಂಸ್ಕೃತಿಯ ಬೇರುಗಳು.

'ಮುಯ್‌ಗೆ ಮುಯ್' ಎನ್ನುವ ಗಾದೆಯೊಂದಿದೆ. ಅನ್ಯರು ನಮಗೆ ಮಾಡಿದ ಒಳಿತನ್ನು ಅದೇ ರೀತಿ ನಾವು ಅವರಿಗೆ ಮಾಡಿ ತೀರಿಸುವುದು. ಕೆಡುಕಿಗೆ ಇದು ಅನ್ವಯಿಸುವುದಿಲ್ಲ. ಜನಪದ ಬದುಕು ಪರಸ್ಪರ ಕೊಡ–ಕೊಳ್ಳುವ ಮನೋಭಾವದ್ದು. ಸಿರಿವಂತರೂ ಬಡವರ ಬಾಗಿಲಿಗೂ ಹೋಗುವ ಪ್ರಸಂಗಗಳೂ ಬರದೇ ಇರುವುದಿಲ್ಲ. ಕೃಷಿ ಅವಲಂಬಿತ ಬದುಕಿನಲ್ಲಂತೂ ಸಂಪೂರ್ಣ ಸ್ವಾವಲಂಬನೆ ಅಸಾಧ್ಯ. ವಿಶೇಷವಾಗಿ ಬಿತ್ತಿಗೆ ಮತ್ತು ರಾಶೀ ಮಾಡುವ ಸಮಯದಲ್ಲಿ ಒಬ್ಬರಿಗೊಬ್ಬರು ಸಹಕರಿಸಿ ಕಾರ್ಯಮಾಡಬೇಕಾಗುತ್ತದೆ.

ಸಮಯಕ್ಕನುಸಾರ ಬಿತ್ತಿಗೆಯಾಗಬೇಕು ಬಿತ್ತಿಗೆಗೆ ಕೂರಿಗೆ, ಕುಂಟಿ ಎರಡೂ ಬೇಕು. ಅವಕ್ಕೆ ಬೇಕಾಗುವ ನಾಲ್ಕು ಎತ್ತುಗಳನ್ನು ಸಲಹುವ ಶಕ್ತಿ ಎಲ್ಲರಿಗೂ ಇರುವುದಿಲ್ಲ. ಮುಂದೆ ಕೂರಿಗೆಯಿಂದ ಬಿತ್ತುತ್ತ ಹೋದಂತೆ ಹಿಂದೆ ಬೀಜ ಮುಚ್ಚಲು ಕುಂಟಿಯಿಂದ ಬೆಳೆಸಾಲು ಕೂಡಲೇ ಹೊಡೆಯಬೇಕು. ಇಲ್ಲದಿದ್ದಲ್ಲಿ ಆ ಬೀಜಗಳನ್ನು ಪಕ್ಷಿಗಳು ಆಯ್ದು ತಿನ್ನುವ ಸಾಧ್ಯತೆ ಇರುತ್ತದೆ. ಅದಕ್ಕಾಗಿ ಸಣ್ಣ ಜಮೀನಿನವರು ಹೆಚ್ಚು ಕಡಿಮೆ ಎರಡೆತ್ತಿರುವ ಅಷ್ಟೇ ಹಿಡುವಳಿದಾರರ ಜೊತೆ ಮುಯ್ ಕೂಡುತ್ತಾರೆ. ಹೀಗಾಗಿ ನಾಲ್ಕು ಎತ್ತುಗಳ ನೆರವಿನಿಂದ ಏಕಕಾಲಕ್ಕೆ ಕೂರಿಗೆ ಹಿಂದಿನಿಂದ ಕುಂಟಿ ಹೊಡೆದು ಬಿತ್ತುವ ಕಾರ್ಯವನ್ನು ಒಬ್ಬರಾದೊಡನೆ ಒಬ್ಬರ ಹೊಲದಲ್ಲಿ ಪೂರ್ತಿಗೊಳಿಸುತ್ತಿದ್ದರು. ಇದಕ್ಕಾಗಿ ಮಳೆಗಾಲ ಬರುವ ಮೊದಲೇ ತಮ್ಮ ಸರಿಸಮಾನ ಜಮೀನಿದ್ದ ಎರಡೆತ್ತಿನ ರೈತನ ಜೊತೆ 'ಮುಯ್' ನಿರ್ಧರಿಸಿಕೊಳ್ಳುತ್ತಿದ್ದರು. ಇಲ್ಲಿ ನಾಲ್ಕಾರು ಎಕರೆ ಭೂಮಿ ಹೆಚ್ಚು ಕಡಿಮೆ ಲೆಕ್ಕಕ್ಕೆ ಬರುತ್ತಿರಲಿಲ್ಲ. ಈ 'ಮುಯ್' ಸಂಬಂಧದಿಂದಾಗಿ ಎರಡೂ ಮನೆಗಳಲ್ಲಿ ಪರಸ್ಪರ ಆತ್ಮೀಯ ಸಂಬಂಧವೂ ಬೆಳೆಯುತ್ತಿತ್ತು.

ಜನಪದ ಜೀವನದ ಇನ್ನೊಂದು ಘಟ್ಟ ಮದುವೆ. ಒಬ್ಬರ ಮನೆಯಲ್ಲಿ ಮದುವೆ ನಿಶ್ಚಯವಾದರೆ ಇಡೀ ಊರಿಗೆ ಊರೇ ಅವರಿಗೆ ನೆರವು ನೀಡಿ ಅದರಲ್ಲಿ ಪಾಲ್ಗೊಳ್ಳುತ್ತಿತ್ತು. ಮದುವೆ ಅಂದರೆ ದೊಡ್ಡ ಖರ್ಚಿನ ಕೆಲಸ. ಸಾಲ ಮಾಡಿ ಮದುವೆ ಮಾಡುವವರೇ ಜಾಸ್ತಿ. ಮದುವೆ ಮಾಡಿ, ಆ ಸಾಲ ತೀರಿಸಲು ಮದುಮಗನನ್ನು ಅನ್ಯರಲ್ಲಿ ಜೀತವಿಟ್ಟ ಉದಾಹರಣೆಗಳೂ ಸಾಕಷ್ಟು, ಇದನ್ನಾರಿತ ಸಮಾಜ ಮದುವೆಯಲ್ಲಿ 'ಮುಯ್' ಮಾಡುವ, ಅಂದರೆ ತಮ್ಮ ಕೈಲಾದಷ್ಟು ಹಣವನ್ನು 'ಮುಯ್' 'ಆಹೇರಿ' ಎಂದು ಕೊಡುವ ಪದ್ಧತಿ ರೂಢಿಗೆ ಬಂದಿತು. ಇದು ಕಡ್ಡಾಯ ಕೊಡುಗೆ ಅಲ್ಲ, ತಮಗೆ ತಿಳದಷ್ಟನ್ನು ನೀಡುವ ಪರೋಕ್ಷ ನೆರವು. ಹೀಗೆ ಮದುವೆಗೆ ಬಂದ ಆಪ್ತಮಿತ್ರ ಅಭಿಮಾನಿಗಳೆಲ್ಲ ಮಾಡಿದ 'ಮುಯ್' ಹನಿ–ಹನಿ ಕೂಡಿ ಹಳ್ಳವೆನ್ನುವಂತೆ ಮದುವೆ ಮಾಡಿದವರಿಗೆ ದೊಡ್ಡ ನೆರವಾಗುತ್ತದೆ. ಈ ಪದ್ಧತಿ ಇಂದೂ ಜೀವಂತವಾಗಿರುವುದರ ಜೊತೆಗೆ ಕಾಣಿಕೆ ರೂಪ ತಳೆದು ಅನ್ಯ ಮಂಗಲಕಾರ್ಯಗಳಿಗೂ ಹಬ್ಬಿದೆ. ಮುಯ್ ಮಾಡಿಸಿಕೊಂಡವರು, ಮಾಡಿದವರ ಮನೆಯಲ್ಲಿ ಲಗ್ನವಾದಾಗ ಅಷ್ಟೇ ಹಣವನ್ನು ಮರಳಿ ಅವರಿಗೆ ಮುಯ್ ಮಾಡಿ ಮುಯ್ ತೀರಿಸುತ್ತಾರೆ. ಒಬ್ಬರ ದೊಡ್ಡ ಮೊತ್ತದ ಆರ್ಥಿಕ ಹೊರೆಯನ್ನು ಎಲ್ಲರೂ ಹಂಚಿಕೊಂಡು ಅವರಿಗೆ ನೀಡುವ ಗೌರವ ಪೂರ್ಣ ನೆರವು ಈ ಮುಯ್.

'ಕಡ' ಸಾಮಾಜಿಕರು ಮಾಡಿಕೊಂಡ ಇನ್ನೊಂದು ವ್ಯವಸ್ಥೆ. ದೈನಂದಿನ ಸಂಸಾರಕ್ಕೆ ಬೇಕಾಗುವ ಎಲ್ಲ ವಸ್ತುಗಳು, ಎಲ್ಲರಲ್ಲಿ ಇರುವುದು ಅಸಾಧ್ಯವಾದ ಕಾಲವೊಂದಿತ್ತು. ಹಿಟ್ಟು, ಎಣ್ಣೆ, ಬೇಳೆಯಂಥ ಪದಾರ್ಥಗಳು ಕೊಂಡುಕೊಳ್ಳಲು ತಟ್ಟನೆ ಸಿಗುತ್ತಿರಲಿಲ್ಲ. ಕೂಡಲೇ ಬೇಕಾದ ಅಂಥ ವಸ್ತುಗಳನ್ನು ನೆರೆಹೊರೆಯವರಲ್ಲಿ, ಅಳೆದು ತಂದು ಮತ್ತೆ ಒಂದೆರಡು ದಿನದಲ್ಲಿ ತಿರುಗಿ ಕೊಡುವ ಕ್ರಿಯೆಯೇ ಕಡ. ತುರ್ತು ಅವಶ್ಯಕತೆಯನ್ನು ಅನ್ಯರಲ್ಲಿ ಕಡತಂದು ಆದಷ್ಟು ಬೇಗ ಅದನ್ನು ಮರಳಿ ಕೊಡಲಾಗುತ್ತಿತ್ತು. ಆದರೆ ಈ ಬೇಡಿಕೆ, ತುರ್ತು ಅಗತ್ಯ ವಸ್ತುಗಳನ್ನುಳಿದು ಅನ್ಯವಸ್ತುಗಳಿಗೂ ಕಡ ಕೇಳಲು ಜನ ಆರಂಭಿಸಿದರು. ಜೋಳದ ಹಿಟ್ಟಿಲ್ಲ ಎಂದು ಕಡ ಕೇಳುವವರು ಜೋಳವನ್ನೇ ಕಡ ಕೇಳಿ ಒಯ್ದು ಬೇಗ ಮರಳಿಸಲಾಗದ ಸ್ಥಿತಿ ಆರಂಭವಾಯ್ತು, ಅದಕ್ಕಾಗಿಯೇ 'ವಾತ' ಸವಕ್ಕಿಯಂತ ಹೊಸ ವ್ಯಾವಹಾರಿಕ ವ್ಯವಸ್ಥೆಗಳು ಹುಟ್ಟಿಕೊಂಡವು. ಒಯ್ದದ್ದಕ್ಕಿಂತ ಕಾಲು ಭಾಗ, ಅರ್ಧಭಾಗ ಹೆಚ್ಚು ಕೊಡಬೇಕು. ಇದಲ್ಲದೆ ಹಣವನ್ನು 'ಕೈಗಡ' ಕೇಳಿಪಡೆದು ಸಕಾಲಕ್ಕೆ ಕೊಡದಾದರು. ಆಗ 'ಬಡ್ಡಿ' ಆರಂಭವಾಯ್ತು, ಮನೆಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪ ಕಡಕೇಳುವ ಪ್ರವೃತ್ತಿ ಜನರಲ್ಲಿ ಬೆಳೆಯಹತ್ತಿತು. ಹೀಗಾಗಿ ಕೊಟ್ಟವ ಕೋಡಂಗಿ, ಕೊಂಡವ ಹಣಮಂತನಾಗುವ ಕಾಲ ಪ್ರಾಪ್ತವಾಯ್ತು, ಕಡ ಕೇಳುವ ನಾಯಿ ಎಡತಾಕಿ ಸತ್ತಿತು' ಎಂಬ ಗಾದೆ ಹುಟ್ಟಿಕೊಂಡಿತು. ಹೀಗಾಗಿ ಕಡ ವ್ಯವಸ್ಥೆ ನಂಬುಗೆ ಬುಡಸಹಿತ ಕಿತ್ತು ಹೋಯ್ತು. ಈಗ ಎಲ್ಲವಿದ್ದ ವಸ್ತುಗಳೂ ಎಲ್ಲೆಲ್ಲೊ ಸಿಗುವಲ್ಲಿ 'ಕಡ' ಕೇಳುವುದು ಕಳ್ಳರ ಕೆಲಸ ಅನ್ನಸದಿರದು. *(ಎಂ.ಜಿ.ಬಿ.)*

ಮೃತ್ಯುಂಜಯ ಹೊರಕೇರಿ: 1950–2007 ಜಾನಪದ ವಿದ್ವಾಂಸ, ಲೇಖಕ. ಬಾಗಲ ಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಢಾಣಕಶಿರೂರಿ ನಲ್ಲಿ 1ನೆಯ ಫೆಬ್ರವರಿ 1950ರಲ್ಲಿ ಜನಿಸಿದರು. ಇವರ ತಂದೆ ಮಾಜಿ ಶಾಸಕ ಬಸಪ್ಪ ಹೊರಕೇರಿ. ತಾಯಿ ಶಿವಬಸಮ್ಮ.



ಮೃತ್ಯುಂಜಯ ಹೊರಕೇರಿಯವರು ಬಾದಾಮಿ–ಧಾರವಾಡಗಳಲ್ಲಿ ತಮ್ಮ ವಿದ್ಯಾರ್ಥಿ ಜೀವನವನ್ನು ನಡೆಸಿದರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ., ಪಿಎಚ್.ಡಿ. ಪದವಿಯನ್ನು ಪಡೆದರು. "ನಲವಡಿ ಶ್ರೀಕಂಠ ಶಾಸ್ತ್ರಿಗಳ ಬದುಕು–ಬರಹ"– ಎಂಬ ಮಹಾಪ್ರಬಂಧವನ್ನು ರಚಿಸಿ ಡಾಕ್ಟರೇಟ್ ಪದವಿ ಪಡೆದರು. ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಸೊಂಡೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ಕನ್ನಡ ಅಧ್ಯಾಪಕರಾಗಿ,

ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದರು. ಮುಂದೆ ರಾಯಚೂರಿನ ಸ್ನಾತಕೋತ್ತರ ಕೇಂದ್ರದಲ್ಲಿ ವಿಶೇಷ ಅಧಿಕಾರಿಯಾಗಿ ಸೇವೆಸಲ್ಲಿಸಿದರು.

ಗೀತಾವಾತಾಪಿ, ಜಿರಕಿಜೋಡು, ವಚನವಂಚನೆ ಎಂಬ ಕವನ ಸಂಕಲನ, ಇಮ್ಮಡಿ ಪುಲಿಕೇಶಿ, ಜಯವಂಶಿ, ಕನಸಿನರಾಣಿ, ರುದ್ರಭೂಮಿ, ಗಂಡುಗಲಿ ಕುಮಾರರಾಮ ಎಂಬ ನಾಟಕಗಳನ್ನು, ಬಾದಾಮಿ ಬಂಡಾಯ ಎಂಬ ಪ್ರಬಂಧವನ್ನು ವಿಜಯನಗರದ ಉಕ್ಕುಕಾರ್ಖಾನೆ: ಒಂದು ವಿವೇಚನೆ ಎಂಬ ಅನುವಾದ, ಚದುರಜಾನಪದ, ಮಧುರಜಾನಪದ, ನಲವಡಿ ಶ್ರೀಕಂಠಶಾಸ್ತ್ರಿಗಳ ಲಾವಣಿಗಳು, ಜಾನಪದ ಸಾಹಿತ್ಯದಲ್ಲಿ ಹಾಸ್ಯ, ಉತ್ತರ ಕರ್ನಾಟಕದ ಬೈಗುಳಗಳು ಎಂಬ ಜಾನಪದ ಕೃತಿಗಳನ್ನು ಸ್ಕಂದ ಶ್ರೀಗಂಧ, ಪ್ರಭುಪ್ರಕಾಶ ಸಂಕಲನವನ್ನು ರಚಿಸಿದ್ದಾರೆ. ಇವೆಲ್ಲ ಹೊರಕೇ-ರಿಯವರು ತಮ್ಮ ಬದುಕಿನ ಅನುಭವ, ಕ್ಷೇತ್ರಕಾರ್ಯಗಳಿಂದ ರಚಿತವಾದ ಗಮನಾರ್ಹ ಕೃತಿಗಳಾಗಿವೆ.

ಇವರು ಪ್ರಾಧ್ಯಾಪಕರಾಗಿದ್ದಂತೆ, ಉತ್ತಮ ನಟರು, ನಾಟಕಕಾರರು ಆಗಿದ್ದರು. ವಿಶೇಷವೆಂದರೆ ಇವರು ಒಬ್ಬ ಸಂಘಟನಕಾರರು. ಸ್ನಾತಕೋತ್ತರ ಕೇಂದ್ರ ಸೊಂಡೂರನ್ನು ಸಾಂಸ್ಕೃತಿಕ ಕೇಂದ್ರವನ್ನಾಗಿ ರೂಪಿಸಿದ ಹೊರಕೇರಿಯವರು ಅನೇಕ ಸಂಘ ಸಂಸ್ಥೆಗಳ ಜೊತೆಗೆ ಭಾವನಾತ್ಮಕ ಸಂಬಂಧವನ್ನು ಇರಿಸಿಕೊಂಡವರು. ಹತ್ತಾರು ವಿದ್ಯಾರ್ಥಿಗಳಿಗೆ ಸಂಶೋಧನ ಮಾರ್ಗದರ್ಶಕರಾಗಿದ್ದವರು. 15.9.2007ರಂದು ಹೊರಕೇರಿ ಅಕಾಲಿಕ ನಿಧನ ಹೊಂದಿದರು.

(ಕೆ.ಆರ್.)

ಮೆ

ಮೆಹೆಬೂಬ ಸಾಹೇಬ: ಕನ್ನಡ ಖವಾಲಿ ಕಲಾವಿದ. ಇವರ ಪೂರ್ಣ ಹೆಸರು ಮೆಹೆಬೂಬ ಇಮಾಮ ಸಾಹೀಬ ತಟಗಾರ. ತಂದೆ ಬುಡ್ನೇಸಾಹೇಬ. ತಾಯಿ ನಬೂಮಾ ಮುದಗಲ್ಲ (ಹಳೇಪೇಟೆ) ಇವರ ಉದರದಿಂದ ಜನಿಸಿದರು. ಇವರು ಮೂರನೆಯ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಖವ್ವಾಲಿಯನ್ನು ಇವರು ಕಲಿತದ್ದು ಸ್ವಪ್ರೇರಣೆಯಿಂದ ಕಲಿತುಕೊಂಡಿದ್ದಾರೆ.

ಜಾತ್ರೆ, ಉತ್ಸವಗಳಲ್ಲಿ, ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಿದಾಗ. ಮದುವೆ ಮುಂಜಿ ಮತ್ತಿತರ ವಿಶೇಷ ಸಂದರ್ಭ ಮತ್ತು ಸವಾಲಿನ ಸಂದರ್ಭದಲ್ಲಿ ಪಂತ ಆಹ್ವಾನದಲ್ಲಿ ಸವಾಲು ಸ್ವೀಕರಿಸಿ ಹಾಡಿದ್ದಾರೆ. ಕೂಲಿ, ಕೃಷಿ ಚಟುವಟಿಕೆ ಮಾಡುವುದು ಇವರ ಉದ್ಯೋಗ. ಇವರಿಗೆ ಖವಾಲಿ ಸರದಾರ ಮತ್ತು ಖವಾಲಿ ಮಹಬೂಬ ಎಂಬ ಬಿರುದುಗಳನ್ನು ಅಭಿಮಾನಿಗಳು ನೀಡಿ ಸನ್ಮಾನಿಸಿದ್ದಾರೆ.

(ಪಿ.ಎಸ್.ಪಿ.)

ಮೇ

ಮೇದ: ಒಂದು ಬುಡಕಟ್ಟು, ಮೇದರಿಗೆ ಪರ್ಯಾಯವಾಗಿ ಮೇದರ್, ಮೇದರಿ, ಗೌರಿಗ, ಬುರುಡ ಮತ್ತು ಬುಡ್ಡರ್ ಎಂಬೀ ಪದಗಳು ಬಳಕೆಯಲ್ಲಿವೆ.

ಮೇದರ ಐತಿಹ್ಯಗಳ ಪ್ರಕಾರ ಮಹೇಂದ್ರ ಚಲದ ಮೂಲಿಗರೇ ಮಹೇಂದ್ರರಾಗಿ ಮೇದರಾಗುವರು. ಶಿವ–ಗೌರಿಯ ಸಂತಾನವೇ ಗೌರಿಗರಾಗುವರು. ಆದರೆ ಗೌರಿಗರು ಮೂಲತಃ ಕವರಿಗರು. ಕವರಿಗರೆಂದರೆ ಬಿದಿರಿನ ಕಾಯಕದವರೆಂದು ಅರ್ಥ. ಮಹಾಭಾರತದ ವಿದುರನ ವಂಶಜರು ತಾವು ಎಂದು ಹೇಳುವರು. ಕನ್ನಡದ ಬಿದರು ಪದ ಈ ಸಂಶಯಕ್ಕೆಡೆಮಾಡುವುದು ಬಿದಿರಿನ ಉದ್ಯೋಗಿಗಳನ್ನೇ ಬುರುಡ ಮಿಯಾದಾರ, ಮ್ಯಾದಾರ, ಮೇದರೆ, ಮೇದ, ಬೀದರು, ಮಿದರು, ಮೇದರ್, ಮೇದರಿ, ಗೌರಿಗ, ಬುಡ್ಡರ್ ಎಂಬೀ ಹೆಸರುಗಳಿಂದಲೂ ಕರೆಯಲಾಗುತ್ತಿದೆ.

ಬೀದರ್ ಜಿಲ್ಲೆ ಬಸವಕಲ್ಯಾಣ (7), ಗೋರ್ಟಾ (1), ಹುಲಸೂರು (3), ಕೋಟಮಾಳ (3), ಮಟಾಲಾ (2), ರಾಜೇಶ್ವರ (1), ಬೀದರ (33), ಮನ್ನಾ ಏಖೇಳಿ (2), ಭಾಲ್ಕಿ (7), ಹುಮನಾಬಾದ (8), ಚಿಟಗುಪ್ಪ (7), ಹಳ್ಳಿಖೇಡ (1), ರೇಕುಳಗಿ (1) ಇತ್ಯಾದಿ ನಗರ ಗ್ರಾಮಗಳಲ್ಲಿ ಮೇದರ 76 ಕುಟುಂಬಗಳು ವಾಸಿಸುತ್ತವೆ. ಸುಮಾರು 500 ಜನಸಂಖ್ಯೆಯನ್ನು ಹೊಂದಿದ ಬೀದರ ಜಿಲ್ಲೆಯ ಮೇದರಲ್ಲಿ ಹಲವಾರು ಬೆಡಗುಗಳಿವೆ. ಉದಾ:



ಬುಟ್ಟಿ ಹೆಣೆಯುವುದು

ಬನ್ನಿ, ಆಲ, ಬೆಳ್ಳಿ, ನಾಗ, ಕೋಳಿ, ವಾಗೆ, ಪಳಸೆ, ಪಾರಸೆ, ಸೂರ್ಯವಂಶಿ, ವಾಘಮಾರೆ, ಚಂದನ್‌ಮಾರು, ತೊಕಲಲ್ಲ, ಮುತ್ತೊಲ, ಪುತುಲು, ತುಕುಲು, ಉಲ್ಲಿಯಾರ್, ಪೂಜಾರಿ ಇತ್ಯಾದಿ ಇವರು ಮೇದಾರ ಕೇತಯ್ಯ, ನಾಗೇಶ್ವರ, ದತ್ತಾತ್ರಿ, ನರಸಿಂಹ, ರೇವಣ್ಣಸಿದ್ಧ, ವೀರಭದ್ರೇಶ್ವರ, ಸಿದ್ಧರಾಮೇಶ್ವರ, ಬಸವೇಶ್ವರ, ಮೈಲಾರ, ಖಂಡೋಬ, ಅಂಬಾ ಭವಾನಿ, ಮೌಲಾನಸಾಬ್ ಇತ್ಯಾದಿ ದೈವಗಳನ್ನು ಆರಾಧಿಸುವರು. ಬೀದರಿನ ಮೇದರಲ್ಲಿ ಹಲವರು ವಿಶ್ವವಿಖ್ಯಾತ ಬಿದ್ರಿ ಕಲೆ ತಯಾರಿಕೆಯಲ್ಲಿ ನಿಪುಣರಾಗಿರುವರು. ಉಳಿದ ಕಡೆಯವರು ಬಿದಿರಿನ ವಸ್ತುಗಳನ್ನು ತಯಾರಿಸುವವರು ಹಾಗೂ ಮಾರುವವರಾಗಿರುವರು (ಕ್ಷೇತ್ರಕಾರ್ಯ:2001).

ಮೇದರು ದುರ್ಗಮ್ಮ, ಕುಕ್ಕವಾಡದಮ್ಮ, ಮಲಾಲಮ್ಮ, ಚೌಡಮ್ಮ, ಗಿಡದ ಮುತ್ತಯ್ಯ, ಶಿವ, ವಿಷ್ಣು, ಮಾರಮ್ಮ ದೈವಗಳ ಜೊತೆಗೆ ಗ್ರಾಮ ದೇವತೆಗಳನ್ನು ಪೂಜಿಸುವರು. ಹಾಗೂ ಆಯಾ ಪ್ರಾದೇಶಿಕ ದೈವಗಳನ್ನು ಆರಾಧಿಸುವರು. ಇವರಲ್ಲಿಯ ವ್ಯಾಜ್ಯಗಳನ್ನು ಜಾತಿ ಪಂಚಾಯಿತಿಯ ಅಂದರೆ ಕಟ್ಟೆಮನೆಯ ಗೌಡ ಅಥವಾ ಯಜಮಾನ ನಿರ್ವಹಿಸುವನು. ಹಿಂದೂ ಹಬ್ಬಾಚರಣೆಗಳನ್ನು ಆಚರಿಸುವರು. ಮಾಂಸ ಹಾರಿಗಳು ದಿನನಿತ್ಯದ ಆಹಾರ ಅಕ್ಕಿ, ರೊಟ್ಟಿ ಮಾತೃಭಾಷೆ ಕನ್ನಡ.

ಮೇದರು ಪಾರಂಪರಿಕವಾಗಿ ಗೃಹ ಕರಕುಶಲ ಕಲೆಗಾರರು ಹಾಗೂ ಕೃಷಿಕರು. ಇವರು ಬಿದಿರು ಬೆತ್ತದಿಂದ ಕಲಾತ್ಮಕವಾದ ಬಹುಪಯೋಗಿ ಸಾಧನಗಳನ್ನು ತಯಾರಿಸುವರು. ಉದಾಹರಣೆಗೆ ಮೊರ, ರೊಟ್ಟಿಬುಟ್ಟಿ, ತೊಟ್ಟಿಲು, ಬೀಸಣಿಕೆ, ಹಾವಾಡಿಗರ ಬುಟ್ಟಿ, ಕಲಾತ್ಮಕ ವಸ್ತುಗಳು, ಕುರ್ಜಿ, ಸೋಫಾ, ದಿವಾನ, ಚಾಪೆ, ಬುಕ್ಕಾ (ಬೀಜ ಬಿತ್ತುವ ಸಾಧನ), ಏಣಿ ಇತ್ಯಾದಿಗಳು. ಮೇದರ ಹೆಂಗಸರು ಹಾಗೂ ಗಂಡಸರು ಬಿದಿರು ಮತ್ತು ಬೆತ್ತದ ಗೃಹಕರಕುಶಲ ಕಲೆಯ ಸಾಧನೆಯ ತಯಾರಿಕೆಯಲ್ಲಿ, ಪಶುಸಂಗೋಪನೆ ಹಾಗೂ ಕೋಳಿ ಸಾಕಾಣಿಕೆಯಲ್ಲಿ ತೊಡಗಿಕೊಳ್ಳುವರು. ಹಲವಾರು ಭೂ ಒಡೆತನ ಹೊಂದಿದ್ದು ಕೃಷಿಕರಾಗಿರುವರು. ಕೆಲವರು ಬೇಟೆ ಹಾಗೂ ಅರಣ್ಯೋತ್ಪನ್ನ ಸಂಗ್ರಹಣೆಯನ್ನು ಅವಲಂಬಿಸಿರುವರು. ಇವರು ಶ್ರಮಜೀವಿಗಳು, ಬಡವರು, ಆದರೆ ಸಾಮಾಜಿಕ ಸ್ಥಾನಮಾನವನ್ನು ಹೊಂದಿದವರಾಗಿದ್ದಾರೆ.

(ಕೆ.ಎಂ.ಎಂ)

ಮೇದಾವರಾಯನ ಕೋತಾ: ಪ್ರಾಚೀನ ಐತಿಹಾಸಿಕ ದಾಖಲೆಗಳ ಕಣಜ. ಈ ನೆಲ ಸಾವಿರಾರು ವರ್ಷಗಳಿಂದ ತನ್ನ ಮಡಿಲಲ್ಲಿ ರಕ್ಷಿಸಿಕೊಂಡು ಬಂದ ಅಮೂಲ್ಯ ಪ್ರಾಚೀನ ಅವಶೇಷಗಳು, ಕಾಲ ಕ್ರಮೇಣ ಮಾನವನ ಕುಚೇಷ್ಟೆ ಮತ್ತು ಇತಿಹಾಸಕಾರರ ಅಲಕ್ಷಕ್ಕೆ ಬಲಿಯಾಗಿ ಹಾಳು ಸುರಿಯುತ್ತಿವೆ. ಇವುಗಳ ಅವಸ್ಥೆ ಕಂಡವರಿಗೆ ನಮ್ಮ ಭವ್ಯ ಇತಿಹಾಸ ಕುಸಿದು ಹೋಗುತ್ತಿದೆಯೋ ಎಂಬಂತೆ ನೋವುಂಟು ಮಾಡುತ್ತದೆ.

ಮೇದಾವರಾಯನ ಕೋತಾ ಗ್ರಾಮ ಲಿಂಗಸುಗೂರದಿಂದ ಉತ್ತರಕ್ಕೆ 25 ಕಿ.ಮೀ. ದೂರದಲ್ಲಿದ್ದು, ಲಿಂಗಸುಗೂರ – ಸುರಪೂರ ಮುಖ್ಯ ರಸ್ತೆಯ ಗುರುಗುಂಟಾ ಕ್ರಾಸ್‌ದಿಂದ ದಕ್ಷಿಣಕ್ಕೆ 5 ಕಿ.ಮೀ. ಅಂತರದಲ್ಲಿದೆ. ತಗ್ಗಿನ ಆಯಕಟ್ಟಿನ ಸ್ಥಳದಲ್ಲಿರುವ ಈ ಗ್ರಾಮದ ಹೆಸರಿನ ಹಿನ್ನಲೆ, ಕೋಟೆ ಕ್ವಾಟಿ ಎಂದು ಜನರ ಆಡು ಮಾತಿನಲ್ಲಿ ಪರಿವರ್ತನೆಯಾಗಿ ಕೋತಾ ಆಗಿರಬೇಕು. ಇಲ್ಲವೆ ಕೋಟೆ ಎಂದರೆ ಅರಸರು ತಮ್ಮ ಹಾಗೂ ಪ್ರಜೆಗಳ ರಕ್ಷಣೆಗಾಗಿ ನಿರ್ಮಿಸಿದ ಗೋಡೆ, ಅದೇ ಕೋಟೆ ಆಡುಮಾತಿನಲ್ಲಿ ಕ್ವಾಟಿ ಎಂದು ಆಗಿರಬೇಕು. 'ಕ್ವಾಟಿ' ಎಂದರೆ ಊರ ಸುತ್ತಲು ಕಲ್ಲಿನಿಂದ ನಿರ್ಮಿಸಿದ ಗೋಡೆ. ಇನ್ನೊಂದು ಅರ್ಥದಲ್ಲಿ 'ಕೋತಾ' ಎಂದರೆ 'ವಖಾರ' ಎಂದು, 'ವಖಾರ' ವೆಂದರೆ 'ಉಗ್ರಾಣ' ಅಥವಾ 'ಸರಕು ಸಾಮಗ್ರಿಗಳನ್ನು ಸಂಗ್ರಹಿಸಿಡುವದು' ಎಂದಾಗುತ್ತದೆ. ಹಿಂದೆ ಇಲ್ಲಿಯ ಅರಸರು ಪ್ರಜೆಗಳಿಗಾಗಿ ಬೇಕಾಗುವ ಸಾಮಗ್ರಿಗಳನ್ನು ಇಲ್ಲವೆ ರಕ್ಷಣೆಗೆ ಬೇಕಾಗುವ ಮದ್ದು ಗುಂಡಿನ ಸರಕುಗಳನ್ನು ಸಂಗ್ರಹಿಸಿಡುವ ಉಗ್ರಾಣ ಇರುವ ಸಾಧ್ಯತೆಗಳಿವೆ.

ಇದೇ ಊರಿನ ಹೊರಗೆ ಪೇಠಿ– ಪ್ಯಾಟಿ ಎಂಬ ನಗರದ ಹೆಸರು ಕೇಳಿ ಬರುವದರಿಂದ ಇದೊಂದು ವಾಣಿಜ್ಯ ಕೇಂದ್ರವೂ ಆಗಿರಬೇಕು. ಈ ಮಾರುಕಟ್ಟೆಗೆ ಬಂದ ಕಾಳು–ಕಡಿ, ಸಲಕರಣಿ ಗಳನ್ನು ಇಲ್ಲಿ ಸಂಗ್ರಹಿಸಿಡುವ ಉಗ್ರಾಣ ಇದಾಗಿರ ಬೇಕು. ಗ್ರಾಮದ ಹಿಂದೆ ಬರುವ 'ಮೇದಾವರಾಯ' ಯಾರು ಎಂಬುವದು ಸಂಶೋಧನೆಯಾಗಬೇಕಿದೆ.

ಕೋತಾ ಇದೊಂದು ಪ್ರಾಚೀನ ಐತಿಹಾಸಿಕ ದಾಖಲೆ ಬಿಂಬಿಸುವ ಇತಿಹಾಸದ ಕೈಗನ್ನಡಿ. ಇಲ್ಲಿ ಪ್ರತಿಯೊಂದು ಕಲ್ಲುಗಳಿಗೂ ತನ್ನದೆಯಾದ ಇತಿಹಾಸವಿದೆ. ಅಂತೆಯೇ ಈ ಗ್ರಾಮದಿಂದ ಪಶ್ಚಿಮಕ್ಕೆ 6 ನೂರು ಮೀಟರ ದೂರದಲ್ಲಿ ಪೂರ್ವಾಭಿಮುಖವಾಗಿ ಹರಿಯುವ ಹಳ್ಳದ ಎಡದಂಡೆಯ ಮೇಲೆ, ಕಲ್ಯಾಣ ಚಾಲುಕ್ಯರ ಕಾಲದ್ದೆಂದು ಹೇಳಲಾಗುವ 11–12 ನೇ ಶತಮಾನದ ಪ್ರಾಚೀನ 'ರಾಮಲಿಂಗೇಶ್ವರ' ದೇವಾಲಯ ಕಲಾತ್ಮಕವಾಗಿ ನಿರ್ಮಿಸಲಾಗಿದೆ.

ಕಲ್ಯಾಣ ಚಾಲುಕ್ಯರ ಕಾಲಕ್ಕೆ ಹಸಿರು ಅಥವಾ ನೀಲಿ ಛಾಯೆಯ ಕಪ್ಪು ಕಲ್ಲನ್ನೂ ಕಟ್ಟಡಗಳಿಗೆ ಉಪಯೋಗಿಸು ತ್ತಿದ್ದುದುಂಟು. ಈ ದೇವಾಲಯ ಗರ್ಭಗುಡಿ, ಮುಂಭಾಗದಲ್ಲಿ ತೆರೆದ ರಂಗಮಂಟಪ, ನವರಂಗಶಾಲೆ ಹೊಂದಿದ್ದು, ಗರ್ಭ ಗುಡಿಯ ಗೋಡೆ ನೀಲಿ ಛಾಯೆಯ ಕರಿಕಲ್ಲಿನಲ್ಲಿ ಸುಂದರವಾದ ಉಬ್ಬು ಕೆತ್ತನೆಯಿಂದ ಕೂಡಿದೆ. ತೆರೆದ ನವರಂಗದ ಕಂಬಗಳು ಆಕರ್ಷಕವಾಗಿದ್ದು, ಈ ಮೃದು ಕಲ್ಲಿನಲ್ಲಿ ಕೆತ್ತಲ್ಪಟ್ಟಿದೆ. ಗುಡಿಯ ಗರ್ಭಗೃಹದ ಬಾಗಿಲಲ್ಲಿ ಯಾವುದೇ ಕೆತ್ತನೆ ಕಂಡು ಬರುವುದಿಲ್ಲ. ಮೇಲು ಛಾವಣಿ ಸರಳವಾಗಿದ್ದು, ನವರಂಗದ ನಡುವಣ ಛಾವಣಿಯ ಮಧ್ಯದಲ್ಲಿ ಮಂಡಲಾಕಾರದ ಚಕ್ರವಿದೆ. ತೆರೆದ ನವರಂಗಕ್ಕೆ ಮೂರು ಕಡೆಯಿಂದಲೂ ಪ್ರವೇಶ ದ್ವಾರಗಳಿದ್ದು, ಎಡಗಡೆಯ ದ್ವಾರ ಪೂರ್ವಾಭಿಮುಖವಾಗಿ ಹರಿಯುವ ಹಳ್ಳದೊಳಗೆ ಇಳಿಯುವಂತೆ ನಿರ್ಮಿಸಲಾಗಿದೆ. ಈ ಹಳ್ಳಕ್ಕೆ ಅಡ್ಡಗೋಡೆ ನಿರ್ಮಿಸಿ, ನೀರು ಸಂಗ್ರಹಿಸುವ ವ್ಯವಸ್ಥೆ ಕಂಡು ಬರುತ್ತದೆ.

ಗರ್ಭಗುಡಿಯಲ್ಲಿರುವ ಲಿಂಗದ ಅಡಿಪಾಯದಲ್ಲಿನ ನಿಧಿ ಆಸೆಗಾಗಿ ಕಳ್ಳರು ಲಿಂಗವನ್ನು ಹಾಳು ಬಾವಿ ಕಾಣಿಸಿದ್ದಾರೆ. ಲಿಂಗಕ್ಕೆ

ಎದುರಾಗಿ ಇರುವ ನಂದಿ ಮಾತ್ರ ನವರಂಗದಲ್ಲಿ ಸುರಕ್ಷಿತವಾಗಿದೆ. ಈ ಗುಡಿಯ ಛಾಣಿಗೆ ಸೂರು ಕಲ್ಲು ಬಳಸಿರುವದು ಅವರ ಕಲಾತ್ಮಕತೆಯನ್ನು ಎತ್ತಿ ತೋರಿಸುತ್ತದೆ. ಈ ಗುಡಿಯನ್ನು ಯಾರು ಕಟ್ಟಿಸಿದರು ಎಂಬ ಬಗ್ಗೆ ಇನ್ನೂ ಶೋಧವಾಗಬೇಕಿದೆ. ಗುಡಿಯ ಮುಂದೆ ದೊರೆತ ಶಾಸನ ಬರಹ ಅಸ್ಪಷ್ಟವಾಗಿದೆ. ಗುಡಿಯ ಮಗ್ಗಲಲ್ಲಿ ಎರಡು ಪಾದಗಳ ಉಬ್ಬು ಚಿತ್ರ, ಈ ಗುಡಿ ಜೈನರ ಕಾಲದ ಜಿನಾಲಯವಾಗಿರಬಹುದೆಂದು ಹೇಳಬಹುದು.

ಭೈರವಿ ವಿಗ್ರಹವೊಂದನ್ನು ಕೋತಾದಿಂದ ಹಟ್ಟಿಗೆ ಹೋಗುವ ರಸ್ತೆಯಲ್ಲಿ 1 ಕಿ.ಮೀ. ದೂರದ ಎಡಭಾಗದಲ್ಲಿ ರಸ್ತೆಗೆ ಹೊಂದಿಕೊಂಡಂತೆ ಬೇವಿನಗಿಡಕ್ಕೆ ಒರಗಿಸಿ ಇಡಲಾಗಿದೆ. ಮೂರು ಅಡಿ ಎತ್ತರದ, ಎರಡು ಅಡಿ ಅಗಲವುಳ್ಳ ಕಪ್ಪು ಶಿಲೆಯ ತಪಸ್ವಿ ಭಂಗಿಯಲ್ಲಿ ಕುಳಿತ ಭೈರವಿ ಪ್ರತಿಮೆ ಇದಾಗಿದೆ. ಅಷ್ಟೊಂದು ಸೂಕ್ಷ್ಮ ಕೆತ್ತನೆಯಿಂದ ಕೂಡಿರದಿದ್ದರೂ ಈ ಪ್ರತಿಮೆ ಗಮನಾರ್ಹವಾದದ್ದು, ಗೋಪುರಾಕಾರದ ಕಿರೀಟವಿದೆ. ಎರಡು ಕೈಗಳು ಧ್ಯಾನ ಭಂಗಿಯಲ್ಲಿ, ಮೊಳಕಾಲ ಮೇಲೆತ್ತಿದ್ದು, ಎಡಗಾಲು ಮಡಚಿದ್ದರೆ, ಬಲಗಾಲಿನಿಂದ ಅಸುರರನ್ನು ತುಳಿದ ನೋಟ ಎದ್ದು ಕಾಣುತ್ತದೆ. ಮುಖ ಮಾತ್ರ ಮುಕ್ಕಾಗಿದ್ದು, ಊರಿನ ಜನರು ಈ ವಿಗ್ರಹವನ್ನು ಚೌಡಮ್ಮ ದೇವತೆಯೆಂದು ಪೂಜಿಸುತ್ತಿದ್ದಾರೆ.

ಊರಿನ ಮಧ್ಯದಲ್ಲಿರುವ ಬಸವಣ್ಣ ದೇವರ ಗುಡಿಯ ಎಡಭಾಗದಲ್ಲಿ, ಕಪ್ಪು ಶಿಲೆಯ ವೀರಭದ್ರ ವಿಗ್ರಹ ಚತುರ್ಭುಜ ಹೊಂದಿದ್ದು, ಹಿಂಬದಿಯ ಬಲಗೈಯಲ್ಲಿ ಡಮರುಗ, ಎಡಗೈಯಲ್ಲಿ ಚಕ್ರವಿರಬಹುದು. ಅದೂ ಮುಕ್ಕಾಗಿದೆ. ಮುಂದಿನ ಬಲಗೈಯಲ್ಲಿ ಶಂಖ, ಎಡಗೈ ನೇರವಾಗಿ ಇಳಿ ಬಿಡಲಾಗಿದೆ. ಮುಖದಲ್ಲಿ ಗಿರಿಜಾ ಮೀಸೆ, ಈ ಎರಡು ವಿಗ್ರಹಗಳು ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದವು ಎನ್ನಲಾಗಿದೆ.

ಊರಿನ ಮುಂದೆ ಇರುವ ಹನುಮನ ದೇವಾಲಯದ ಕಂಪೌಡಿನ ದ್ವಾರದಲ್ಲಿ ಎರಡು ಶಾಸನಗಳಿದ್ದು, ಅವುಗಳಿಗೆ ಬಣ್ಣ ಬಡಿದದ್ದರಿಂದ ಶಾಸನ ಪಾಠದ ಪಡೆಅಚ್ಚು ತೆಗೆಯುವದು ಕಷ್ಟ ಆಗಿದೆ. ಇದೇ ರೀತಿಯ ಹಲವಾರು ಶಾಸನಗಳಿದ್ದು. ಅವುಗಳ ಶೋಧನೆಯಿಂದಲೇ ಇಲ್ಲಿನ ಇತಿಹಾಸವನ್ನು ಕೆದಕಿ ಬೆಳಕಿಗೆ ತರಬೇಕಾಗಿದೆ. ಇಲ್ಲಿಯ ಮಲ್ಲಯ್ಯನ ಗುಡಿ, ವೆಂಕಟರಮಣ ಗುಡಿ, ಅಲ್ಲಲ್ಲಿ ಚದುರಿ ಬಿದ್ದಿರುವ ಶಿಲಾಕೃತಿಗಳು ಇತಿಹಾಸ ಪುಟ ಸೇರುತ್ತಿವೆ.

ಮೇದಾವರಾಯನ ಕೋತದ 'ಕೋಟಿ' ತುಂಬ ಆಯಕಟ್ಟಿನ ಸ್ಥಳದಲ್ಲಿ ಕಟ್ಟಿದ ಈ ಕೋಟೆಗೆ ನಾಲ್ಕು ಕಡೆ ಭವ್ಯ ಬುರುಜು (ಕಾವಲು ಗೋಪುರ) ಗಳಿರಬಹುದು. ಮೂರು ಬುರುಜುಗಳು ಸಂಪೂರ್ಣ ನೆಲಸಮವಾಗಿದ್ದರೆ, ಒಂದು ಬದಿಗೆ ಮಾತ್ರ ಸುರಕ್ಷಿತ ಆಗಿದ್ದು ಕಂಡು ಬರುತ್ತದೆ. ಈಗ ಅದನ್ನು ಈರಣ್ಣ ದೇವರ ಕೊತ್ತಲು ಎಂದು ಕರೆಯುತ್ತಾರೆ. ಊರಿನ ಮೇಲ್ಭಾಗದಲ್ಲಿ ದಿಬ್ಬವಿದ್ದು, ಅಂದಿನ ಅರಸರ ಅರಮನೆ, ಪೂಜಾ ಸ್ಥಳ ಮತ್ತು ವಾಸಸ್ಥಳಗಳಿರುವ ಪಳೆಯುಳಿಕೆಗಳು ಕಂಡು ಬರುತ್ತವೆ. ಅವು ನೆಲ ಸಮವಾಗಿದ್ದು ಪ್ರಾಚ್ಯ ವಸ್ತು ಇಲಾಖೆಯವರು ಉತ್ಖನನ ಕೈ ಕೊಂಡಿದ್ದಾರೆ.

(ಎಲ್.ಜಿ.ಎ.)

ಮೈ

ಮೈಂದರ್ಗಿ ಬಯಲಾಟ: ರಂಗಭೂಮಿ ಕಲೆಯ ಇತಿಹಾಸ ಇರುವಂತೆ ಮೈಂದರ್ಗಿಯ ಬಯಲಾಟ ಕಲೆಯೂ ಕೂಡ ತನ್ನದೇ ಆದ ಮಹತ್ವ ಹೊಂದಿದೆ. 1950ರಲ್ಲಿ ಮೈಂದರ್ಗಿಯ ಶ್ರೀ ಶಿವಚಲೇಶ್ವರ ಬಯಲಾಟ ಸಂಘ, ಐರಾವಣ–ಮೈರಾವಣ ಎಂಬ ಕನ್ನಡ ದೊಡ್ಡಾಟ ಅಭಿನಯಿಸಿದರು. ಅಂದು ಚಂದಪ್ಪ ಜಾವಳಕೋಟೆ ಎಂಬ ಕಲಾವಿದ ಮೈಂದರ್ಗಿಯಲ್ಲಿ ಬಯಲಾಟದ ಗುರುವಿನಂತೆ ಎಲ್ಲ ಕಲಾವಿದರಿಗೂ ಮಾರ್ಗ ದರ್ಶನ ಮಾಡುವದರೊಂದಿಗೆ, ಮೃದಂಗ, ತಬಲಾ ಬಾರಿಸುವ ಒಬ್ಬ ಪ್ರತಿಭಾವಂತ ಕಲಾವಿದರಾಗಿದ್ದರು.

1952ರಲ್ಲಿ ಚಂದಪ್ಪಾ ಜಾವಳಕೋಟೆ ಅವರು ಬಾರಿಸುವ ಮೃದಂಗವನ್ನು, ಸಿದ್ಧರಾಮ ಸಾತಲಗಾಂವ ಅವರು ಕಲಿತರು. ಮೃದಂಗ ಬಾರಿಸುವ ಈ ಕಲೆಯನ್ನು ಪ್ರಥಮ ಬಾರಿಗೆ ಕಲಿಯಬೇಕಾದರೆ, ಸಿದ್ಧರಾಮ ಸಾತಲಗಾಂವ ಅವರು ತಮ್ಮ ಎರಡು ಮೊಳಕಾಲುಗಳ ಮೇಲೆ ಬಾರಿಸುವ ಪಾಠ ಚಂದಪ್ಪಾ ಜಾವಳಕೋಟೆ ಅವರಿಂದ ಕಲಿತರು. ಸಿದ್ಧರಾಮ ಅವರು ಮೃದಂಗ ಬಾರಿಸುವದನ್ನು ತಮ್ಮ 11ನೆಯ ವಯಸ್ಸಿನಲ್ಲೇ ಕಲಿತಿದ್ದರು. ಶ್ರೀ ಶಿವಚಲೇಶ್ವರ ಶಾಲೆಯಲ್ಲಿ ಹಿರಿಯ ಲಿಪಿಗಾರ ರಾಗಿ ಸರಕಾರಿ ಸೇವೆ ಸಲ್ಲಿಸುತ್ತಿದ್ದರು. ಮೃದಂಗ ಕಲೆ ಕಲಿತ ಆನಂತರ ಅವರ ಮಾರ್ಗದರ್ಶನದಲ್ಲಿ ಶಿವಶಕ್ತಿ, ಮಲ್ಲಿಕಾರ್ಜುನ, ಜಯಭವಾನಿ, ಸಂಗಮೇಶ್ವರ, ಸುಭಾಷ, ಮಹಾದೇವ, ಶಿವ ಚಲೇಶ್ವರ ಎಂಬ ಹಲವಾರು ಬಯಲಾಟಗಳು ಪ್ರದರ್ಶಿಸಲ್ಪಟ್ಟವು. 1952 ರಿಂದ 2002 ವರೆಗೆ ಸುಮಾರು 300 ಕ್ಕೂ ಹೆಚ್ಚಿನ ಸಂಖ್ಯೆಯ ಬಯಲಾಟಗಳನ್ನು ಮೈಂದರ್ಗಿಯಲ್ಲಿ ಅಭಿನಯಿಸಲಾಗಿದೆ.

ಕನ್ನಡದ ಪ್ರಸಿದ್ಧ ಬಯಲಾಟಗಳಾದ ಐರಾವಣ–ಮೈರಾವಣ, ಇಂದ್ರಜಿತ್, ರಾಮ–ಲಕ್ಷ್ಮಣ, ಕೋಡಲಿಕ ರಾಜಾ, ಬಭ್ರುವಾಹನ, ದೇವಿ ಮಹಾತ್ಮೆ, ಶ್ರೀಕೃಷ್ಣ ಪಾರಿಜಾತ, ವೀರ ಅಭಿಮನ್ಯು, ದಕ್ಷಬ್ರಹ್ಮ ಮುಂತಾದ ಬಯಲಾಟಗಳು ಮೃದಂಗ ಕಲಾವಿದ ಸಿದ್ಧರಾಮ ಸಾತಲಗಾಂವ ಅವರ ಮಾರ್ಗದಲ್ಲಿ ಅಭಿನಯಿಸಲಾಗಿದೆ.

ಅನೇಕ ಬಯಲಾಟಗಳು ಯಶಸ್ವಿಯಾಗುವಲ್ಲಿ ಮುಮ್ಮೇಳ–ಹಿಮ್ಮೇಳ ಗಾಯಕರಾದ ಭೀಮಶಾ ನಂದರ್ಗಿ, ಸಿದ್ಧಾ ಭೋರಾಮಣ, ನೀಲಪ್ಪಾ ಸೇರಿ, ರಾಮಣ್ಣಾ ಸಾತ ಧುದನಿ, ಸಿದ್ಧರಾಮ ಕಾಳಿ, ಚಂದ್ರಕಾಂತ ಕರಜಗಿ ಅವರ ಸೇವೆಯನ್ನು ಯಾರೂ ಮರೆಯುವಂತಿಲ್ಲ, ಮೈಂದರ್ಗಿಯಲ್ಲಿ ಇಂಥ ಅನುಭವ ಹೊಂದಿದ ಕಲೆಯ ಹಿಮ್ಮೇಳ ಗಾಯಕರ ತಂಡ ಇರುವದರಿಂದ

ಬಯಲಾಟಗಳು ನಿರಂತರವಾಗಿ ನಡೆಯುತ್ತ ಬಂದಿವೆ. ಹಿಮ್ಮೇಳ ಗಾಯಕರು, ಮೃದಂಗ ಬಾರಿಸುವರು, ಸಾರಥಿಗಳು ಇಲ್ಲದೆ ಬಯಲಾಟಗಳು ನಡೆಯುವದಿಲ್ಲ.

ಸಿದ್ಧರಾಮ ಅವರು ಮೃದಂಗ ಬಾರಿಸುವದರೊಂದಿಗೆ ಹಾರ್ಮೋನಿಯಂ, ತಬಲಾ, ಇತರ ವಾದ್ಯಗಳನ್ನು ನುಡಿಸುತ್ತಾರೆ. ಬಯಲಾಟಗಳಲ್ಲಿ ಪಾತ್ರಗಳನ್ನು ಮಾಡುವುದರಲ್ಲಿ ಶುಂಭಾಸುರ ಪಾತ್ರದಲ್ಲಿ ಕಲ್ಯಾಣಿ ಕಾಳಿ, ದೇವಿಯ ಪಾತ್ರದಲ್ಲಿ ಸಿದ್ಧಯ್ಯ ಸ್ವಾಮಿ, ಮಲಕಣಾ ಮಲಾರಿ, ದಕ್ಷಬ್ರಹ್ಮ ಪಾತ್ರದಲ್ಲಿ ಶಿವರಾಯ ಬಿರಾದಾರ ಇವರೆಲ್ಲ ಅತ್ಯಂತ ಜನ ಮೆಚ್ಚುಗೆ ಪಡೆದ ಕಲಾವಿದರಾಗಿದ್ದಾರೆ.


(ಜಿ.ಸಿ.ಎಂ.)

ಮೋ

ಮೋಘ: ಕಲಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕು ಕಲೆ, ಸಾಹಿತ್ಯ ಸಂಸ್ಕೃತಿ ಹಾಗೂ ಕೃಷಿಯಲ್ಲಿ ಮುಂಚೂಣಿಯಲ್ಲಿದೆ. ಈ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಅತ್ಯಂತ ಪುರಾತನವಾದ ದೇವಾಲಯಗಳಿವೆ. ಎರಡನೆಯ ಶತಮಾನದ ಕಾಲದಿಂದಲೂ ಅಂದಿನ ಅರಸರು ನಿರ್ಮಿಸಿರುವ ದೇವಸ್ಥಾನಗಳ ಶಿಲ್ಪಕಲಾ ವೈಭವ ಇಂದಿಗೂ ನೋಡ ಸಿಗುತ್ತವೆ.

ಇಂಥ ದೇವಾಯಲಗಳಲ್ಲಿ ಮೋಘಾ (ಮಗ್ಗಿ) ಗ್ರಾಮದ ಕಲ್ಯಾಣ ಚಾಲುಕ್ಯರ ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿ ಯಲ್ಲಿ, ಶಿವದೇವಯ್ಯ ನಾಗಿಯಣ್ಣ ಕೂಲಿಯಯ್ಯಗಳು ಎಂಬ ಉಲ್ಲೇಖವಿದ್ದು, ಇಲ್ಲಿ ಅತ್ಯಂತ ಉತ್ಕೃಷ್ಟವಾದ ಹಾಗೂ ಬೇಲೂರು, ಹಳೇಬೀಡು, ಹಂಪಿ ಮುಂತಾದ ಸ್ಥಳಗಳ ಶಿಲ್ಪಕಲೆಗಳಿಗೆ ಸರಿಸಾಟಿ ಯಾಗುವಂಥ ದೇವಾಲಯಗಳಿವೆ.

ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿದ್ದೆಂದು ಹೇಳಲಾದ ರಾಮಲಿಂಗೇಶ್ವರ ದೇವಾಲಯ ಅತ್ಯಂತ ಶ್ರೀಮಂತ ಸ್ಮಾರಕವಾಗಿದೆ. ದೇವಾಲಯದ ಸುತ್ತಲೂ ಹಳೇಬೀಡು ಬೇಲೂರಿನ ಶಿಲಾಬಾಲಿಕೆಯಂತೆ, ಇಲ್ಲಿಯೂ ಕೂಡ ದೇವಾಲಯದ ಗೋಡೆಗಳನ್ನು ಸೇವಂತಿಗೆ ಹೂವಿನ ಸುಂದರ ಕೆತ್ತನೆಯಿಂದ ಚಿತ್ರಿತವಾಗಿದೆ. ಎರಡನೆಯ ಸಾಲಿನಲ್ಲಿ ಶಿಲಾಬಾಲಿಕೆಯರು ಕೈಮುಗಿದು ಕುಳಿತಿರುವುದು, ಶಿವನ ಧ್ಯಾನದಲ್ಲಿ ತೊಡಗಿರುವ ದೃಶ್ಯ ನೋಡಲು ಎರಡು ಕಣ್ಣುಗಳು ಸಾಲದು. ಗೋಡೆಯ ಹೊರಮೈ ಮಂಟಪದಲ್ಲಿ ಸುಂದರವಾದ ಕೆತ್ತನೆಯ ವೀರಭದ್ರನ ವಿಗ್ರಹ, ಆತನ ಮುಖಭಾವ ಬೆಳಿಗ್ಗೆಯಿಂದ ಸಂಜೆಯವರೆಗೂ ಪ್ರತಿ ಬಾರಿ ನೋಡಿದಾಗಲೊಮ್ಮೆ ಬದಲಾದಂತೆ ಕಂಡು ಬರುವದು ವಿಶೇಷವಾಗಿದೆ.



ರಾಮಲಿಂಗೇಶ್ವರ ದೇವಾಲಯ

ದೇವಾಲಯದ ಮುಂದೆ ಬಸವಣ್ಣ (ನಂದಿ)ನ ನಾಲ್ಕು ಅಡಿ ಎತ್ತರದ ವಿಗ್ರಹ. ಒಂದೊಮ್ಮೆ ಈ ಬಸವಣ್ಣ ಜೀವಂತವಾಗಿ ಕುಳಿತಿರುವ ಹಾಗೆಯೇ ಕಾಣುತ್ತದೆ. ಇನ್ನೊಂದು ನಂದಿ ವಿಗ್ರಹ ಭಗ್ನಗೊಂಡಿದೆ. ದೇವಾಲಯದ ಮುಂದೆ ಪರಿಶುದ್ಧವಾದ ನೀರಿನ ಪುಷ್ಕರಣಿ ಗಮನ ಸೆಳೆಯುತ್ತದೆ. ಈ ನೀರು ಸೇವಿಸಿದರೆ, ಸರ್ವ ರೋಗಗಳು ನಿವಾರಣೆಯಾಗುತ್ತವೆ ಎಂಬ ಪ್ರತೀತಿ ಇದೆ. ಈ ಪುಷ್ಕರಣಿಯಲ್ಲಿನ ನೀರು ಬೇಸಿಗೆಯಲ್ಲೂ ಬತ್ತುವುದಿಲ್ಲ. ಕಲಬುರ್ಗಿ ಜಿಲ್ಲೆಯ ಕಡು ಬಿಸಿಲಲ್ಲೂ ತಂಪಾಗಿರುವದೊಂದು ವಿಶೇಷವೆನ್ನಬಹುದು. ಇಲ್ಲಿಗೆ ಬರುವ ಭಕ್ತರು ಈ ನೀರಲ್ಲಿ ಸ್ನಾನ ಮಾಡಿ ಪುನೀತರಾಗುತ್ತಾರೆ.

ಈ ದೇವಾಲಯದ ಇನ್ನೊಂದು ವಿಶೇಷವೆಂದರೆ, ದೇವಾಲಯದ ಗೋಪುರ ಈ ಭಾಗದ ದೇವಾಲಯಗಳಂತಿಲ್ಲ. ಓಡಿಸ್ಸಾ ಹಾಗೂ ಖಜುರಾಹೋ ಮಾದರಿಯಲ್ಲಿ ನಿರ್ಮಾಣಗೊಂಡಿರುವುದು. ಅಂದರೆ, ದೇವಾಲಯದ ಶಿಲ್ಪಕಾರರು ಆ ಭಾಗದವರಾಗಿರಬಹುದು. ಅಥವಾ ಇಲ್ಲಿನ ಅರಸರು ಆ ದೇವಾಲಯಗಳಿಂದ ಪ್ರಭಾವಿತರಾಗಿ ಈ ರೀತಿ ಗೋಪುರ ನಿರ್ಮಿಸಿರುವ ಸಾಧ್ಯತೆಗಳಿವೆ. ಈ ಗೋಪುರದ ಬಗ್ಗೆ ಯಾವುದೇ ನಿಖರವಾದ ಮಾಹಿತಿ ಲಭ್ಯವಾಗುವುದಿಲ್ಲ. ಇತಿಹಾಸಜ್ಞರಿಗೆ ಸಂಶೋಧನೆಗೆ ಸಾಕಷ್ಟು ವಿಷಯಗಳನ್ನು ಒದಗಿಸಬಲ್ಲ ಇಂಥ ದೇವಾಲಯಗಳು ಚಿಂಚೋಳಿ ತಾಲ್ಲೂಕಿನಲ್ಲಿ ವ್ಯಾಪಕವಾಗಿ ಕಂಡು ಬರುತ್ತವೆ.

ಮೋಘ ಗ್ರಾಮದ ಸಮೀಪದಲ್ಲೇ ರುಮ್ಮನಗೂಡ ಗ್ರಾಮದಲ್ಲಿಯೂ ಅನೇಕ ದೇವಾಲಯ ಹಾಗೂ ವಿಗ್ರಹಗಳು ರಕ್ಷಣೆಯಿಲ್ಲದೇ ಹಾಳಾಗುತ್ತಿವೆ. ದೇಗಲಮಡಿ, ಮಿರಿಯಾಣ ಮುಂತಾದ ಗ್ರಾಮಗಳಲ್ಲಿಯೂ ಕಲ್ಯಾಣ ಚಾಲುಕ್ಯರ ಕಾಲದ ಅನೇಕ ದೇವಾಲಯಗಳಿವೆ. ನಮ್ಮ ದೇಶದ ಈ ಸಾಂಸ್ಕೃತಿಕ ಶಿಲ್ಪಕಲಾ ಸಂಪತ್ತು ನಮ್ಮ ಸರ್ಕಾರಕ್ಕೆ ಕಾಲುಕಸವಾಗಿದೆ. ವಿದೇಶಿಯರು ಇಲ್ಲಿಗೆ ಬಂದು ಆಸಕ್ತಿಯಿಂದ ಅಧ್ಯಯನ ಮಾಡುತ್ತಾರೆ. ಶಿಲ್ಪಗಳನ್ನು ಚಿತ್ರೀಕರಿಸಿಕೊಂಡು ಹೋಗುತ್ತಾರೆ. ಆದರೆ, ನಮ್ಮವರಿಂದಲೇ ಈ ದೇವಾಲಯಗಳ ರಕ್ಷಣೆಯಿಲ್ಲದೇ ಹಾಳಾಗತ್ತಿವೆ. ನಮ್ಮ ಸಾಂಸ್ಕೃತಿಕ ಭವ್ಯ ಇತಿಹಾಸದ ಇಂತಹ ದೇವಾಲಯಗಳ ಉಳಿವು, ಇವುಗಳ ಇತಿಹಾಸ ರಕ್ಷಿಸದೇ ಹೋದರೆ, ಮುಂಬರುವ ಪೀಳಿಗೆಗೆ ಇವುಗಳ ಮಹತ್ವವೇ ಗೊತ್ತಿಲ್ಲದಂತಾಗುತ್ತದೆ. ಸ್ಮಾರಕಗಳೂ ಮಳೆ-ಗಾಳಿಗೆ ಹಾಳಾಗಿ ಇತಿಹಾಸವೇ ಮುಳುಗಿ ಹೋಗುವ ಭೀತಿ ಉಂಟು.

(ಡಿ.ಎಸ್.ಆರ್.)

ಮೋಹರಂ ಹಾಡುಗಳು: ಮೊಹರಂ ಹಬ್ಬದಂದು ಹಾಡುವ ಪದಗಳು ಅಲಾವಿ ಮತ್ತು ಕರ್ಬಲಾ ಪದಗಳೆಂದೂ ಕರೆಯುತ್ತಾರೆ. ಈ ಹಾಡುಗಳು ಹಿಂದೂ–ಮುಸ್ಲಿಂ ಸಂಸ್ಕೃತಿಯ ಭಾವೈಕ್ಯತೆಯ ಸಂಕೇತಗಳ ಶಾಂತಿ ಹಾಗೂ ಧರ್ಮಕ್ಕಾಗಿ ಬಲಿಯಾದ ಹಜರತ್ ಹಸನ್ ಹುಸೇನರ ವೀರ ಚರಿತ್ರೆಯನ್ನೊಳಗೊಂಡಿವೆ. ಹೊರದೇಶದಿಂದ ಬಂದ ಸಂಸ್ಕೃತಿ ಇದೆಂದು ತುಚ್ಛೀಕರಿಸದೆ, ಅದಕ್ಕೆ ಬೆನ್ನೆಲುಬಾಗಿ ನಿಂತು ಟೊಂಕ ಹಿಡಿದು ಸಹಕರಿಸಿ ನಡೆಸುತ್ತಿರುವದನ್ನು ನೋಡಿದಾಗ ಮುಸಲ್ಮಾನ ಸಂಸ್ಕೃತಿಯನ್ನು ಹಿಂದೂಗಳು ತಮ್ಮ ಸಂಸ್ಕೃತಿ ಯೊಂದಿಗೆ ಒಪ್ಪಿಸಿಕೊಂಡ ಹೆಗ್ಗಳಿಕೆಗೆ ಸಾಕ್ಷಿಯಾಗಿದೆ. ಮುಸಲ್ಮಾನರು ಹಳ್ಳಿಗಳಲ್ಲಿ ಕಡಿಮೆ ಸಂಖ್ಯೆಯಲ್ಲಿದ್ದರೂ ಹಿಂದೂಗಳೇ ಇದಕ್ಕೆ ಪ್ರೇರಣೆ ನೀಡಿ ಸಹಕರಿಸಿಕೊಂಡು ಬಂದಿದ್ದಾರೆ. ಹಿಂದೂಗಳ ಜಾತ್ಯಾತೀತ ಭಾವನೆ, ನೈತಿಕ ಗುಣಮಟ್ಟಗಳ ಪರಿಸರ ಪ್ರಭಾವ ಇಲ್ಲಿನ ನಡಾವಳಿಕೆಗೆ ಮುಖ್ಯ ಕಾರಣವಾದಂತಿದೆ. ಬೇರೆ ದೇಶವೊಂದರ ಇತಿಹಾಸವನ್ನು ನಮ್ಮ ಹಬ್ಬವೆಂದು ಆಚರಿಸುವ ಕನ್ನಡ ನಾಡಿನ ಜನತೆಯ ಔದಾರ್ಯ ಹಿರಿದಾದುದು.

ಮುಸಲ್ಮಾನ ಅರಸರ ದಬ್ಬಾಳಿಕೆಯ ಆಡಳಿತ, ಹಿಂದೂ ಧರ್ಮ ವಿರೋಧಿ ನಡತೆ, ರಜಾಕಾರರ ಹಾವಳಿ ಮುಂತಾದ ದುರಂತ ಘಟನೆಗಳಲ್ಲಿ ಸಿಲುಕಿಯೂ ಜನ ಅಚಲರಾಗದೆ, ತಮ್ಮತನವನ್ನು ಮರೆಯದೆ, ಮುಸಲ್ಮಾನರನ್ನ ದೂಷಿಸದೆ ಬಂಧುಗಳೆಂದೇ ಒಪ್ಪಿ ಜೀವನ ಸಾಗಿಸಿಕೊಂಡು ಬಂದಿದ್ದಾರೆ ಹೈದ್ರಾಬಾದ ಕರ್ನಾಟಕದ ಜನ. ಎಲ್ಲರೂ ಒಂದೆಡೆ ಸೇರಿ ಹಬ್ಬಗಳನ್ನು ಆಚರಿಸುವುದರಿಂದ ಅವರಲ್ಲಿಯ ಅಂತರ ದೂರವಾಗಿ ಸಾಮಾಜಿಕ ಭಾವೈಕ್ಯ ಬೆಳೆಯುವುದು. ಇದರಿಂದ ಪರಸ್ಪರ ತಿಳಿವಳಿಕೆ ಬೆಳೆಯಲು ಸಹಾಯಕವಾಗುವುದು. ಮಾನವನ ಉದಯೋನ್ಮುಖ ಬೆಳವಣಿಗೆಗೆ ಜಾಗೃತ ಮನೋ ಭಾವನೆಗೆ ಇಂತಹ ಆಚರಣೆಗಳು ಅವಶ್ಯವೆನಿಸುತ್ತವೆ. ಅದೇ ರೀತಿ ಹಳ್ಳಿಗಳಲ್ಲಿ ವಾಸಿಸುವ ಮುಸಲ್ಮಾನರ ನಡಾವಳಿಯಲ್ಲಿ ಹಿಂದೂ ಸಂಸ್ಕೃತಿಯ ಅನೇಕ ಗುಣಲಕ್ಷಣಗಳನ್ನು ಕಾಣಬಹುದಾಗಿದೆ.

ಮುಸಲ್ಮಾನರ ಪವಿತ್ರಗ್ರಂಥ 'ಕುರಾನ'ದ ಅನೇಕ ತತ್ತ್ವಗಳನ್ನು ಮೋಹರಂ ಹಾಡುಗಳನ್ನು ರಚಿಸಿದ ಹಿಂದೂ ಕವಿಗಳು ಬಳಸಿಕೊಂಡಿದ್ದನ್ನು ನೋಡಿದಾಗ, ಜನಪದ ಸಂಸ್ಕೃತಿಯ ಹಿರಿಮೆ ವ್ಯಕ್ತವಾಗುತ್ತದೆ. ಮುಸಲ್ಮಾನರ ಅನೇಕ ಮಸೀದಿಗಳಿಗೆ ಹಿಂದೂಗಳು, ಹಿಂದೂಗಳ ಅನೇಕ ದೇವಾಲಯಗಳಿಗೆ ಮುಸಲ್ಮಾನರು ನಡೆದುಕೊಂಡು ಹರಕೆ ಹೊರುವುದು ಧಾರ್ಮಿಕ ಐಕ್ಯತೆಯ ಸಂಕೇತವೆನಿಸಿದೆ. ಕೊಡೇಕಲ್ಲ, ತಿಂಥಿಣಿ, ದುಮ್ಮದ್ರಿ ಮುಂತಾದ ದೇವಾಲಯಗಳ ಶಿಲ್ಪಗಳು ದರ್ಗಾದಂತೆ ರಚಿಸಲ್ಪಟ್ಟಿವೆ. ಕಟ್ಟಡ ಮುಸಲ್ಮಾನ ಪದ್ಧತಿಯಾದರೆ, ಪೂಜೆ ಪುನಸ್ಕಾರಗಳು ಹಿಂದೂ ಪದ್ಧತಿಯಲ್ಲಿ ನಡೆಯುವುದುಂಟು. ಪಲ್ಲಕ್ಕಿ ಹೊರಡುವಾಗ ದೀನ್ ಹೊಡೆದು ಕುರಾನದ ಶ್ಲೋಕ ಪಠಿಸುವರು. ದೇವಾಲಯಗಳಲ್ಲಿ ಎಲ್ಲ ಜಾತಿಯವರಿಗೂ ಪ್ರವೇಶ, ಇವೆಲ್ಲವುಗಳನ್ನು ನೋಡಿದಾಗ ಹಿಂದೂ ಮುಸ್ಲೀಂ ಭಾವೈಕ್ಯತೆಯ ದಟ್ಟಕಲ್ಪನೆ ಮನದಲ್ಲಿ ಗಟ್ಟಿಯಾಗುತ್ತದೆ.

ಈ ಧರ್ಮದ ಅನೇಕ ಆಚಾರ–ವಿಚಾರ, ಹಬ್ಬ––ಹರಿದಿನಗಳು ಭಾರತಕ್ಕೆ ಕೊಡುಗೆಯಾಗಿ ಸಂದಿದೆ. ಅವುಗಳಲ್ಲಿ ಮೋಹರಂ ಪ್ರಮುಖವಾದುದು ಕೊಡುಗೆ. 'ಇಸ್ಲಾಂ' ಧರ್ಮದ ಸಫರ, ರಬೀ ಉಲಅವ್ವರಿ, ರಬೀಉಸ್ಸಾನಿ, ಜುಮಾದಿ ಉಲ್ ಅವ್ವಲ್ ಜುಮಾದಿ ಉಸ್ಸಾನಿ, ರಜಬ್, ಶಾಬಾನ್, ರಮಜಾನ, ಶವ್ವಾಲ್, ಬೀಕಾದ, ಜಲಹಜ್ಜ. ಹೀಗೆ ಮುಸಲ್ಮಾನರ ಹನ್ನೆರಡು ಮಾಸಗಳಲ್ಲಿ ಮೋಹರಂ ವರ್ಷದ ಪ್ರಥಮ ತಿಂಗಳು.


ಹಿಜರಿ ಶಕೆ 61 ಮೋಹರಂ ತಿಂಗಳ ಹತ್ತನೆಯ ದಿನಕ್ಕೆ ಧರ್ಮದುರಂತ ಕರ್ಬಲಾ ಕಾಳಗ ಕೊನೆಗೊಂಡಿದ್ದರ ಸಂಕೇತವಾಗಿ ಪ್ರತಿವರ್ಷ ಈ ಘಟನೆಯನ್ನು ಸಂಪ್ರದಾಯ ಬದ್ಧವಾಗಿ ಚಾಚೂತಪ್ಪದೆ ಮುಸಲ್ಮಾನರು ಆಚರಿಸಿಕೊಂಡು ಬರುತ್ತಿದ್ದಾರೆ. ಇಂಥ ಧರ್ಮದುರಂತದ ಕಥೆ, ಹುತಾತ್ಮ ಇಮಾಮ ಹುಸೇನರ ಆತ್ಮಬಲಿದಾನದ ಆದರ್ಶ–ಜನಮನದಲ್ಲಿ ಹಸಿರಾಗಿ ಉಳಿಯುವಂತೆ ಮಾಡಿದ ಒಂದು ಪ್ರಯತ್ನವೇ 'ಮೋಹರಂ' ಆಚರಣೆ. ತನ್ನ ದುರಂತದ ಛಾಯೆಯನ್ನು ಕಳೆದುಕೊಂಡು 'ಹಬ್ಬ'ವಾಗಿ ಮಾರ್ಪಟ್ಟಿದೆ.

ಕದನದ ಹಿನ್ನೆಲೆ: ಹಿಂದೂ ಸಂಸ್ಕೃತಿಯಲ್ಲಿ ನಡೆದ ಅಣ್ಣ–ತಮ್ಮಂದಿರ ಕುರುಕ್ಷೇತ್ರ ಕದನ ಮಹಾಭಾರತಕ್ಕೆ ನಾಂದಿಯಾದಂತೆ, ಮುಸಲ್ಮಾನ ಸಂಸ್ಕೃತಿಯ ಕರ್ಬಲ ಕಾಳಗದಲ್ಲಿಯೂ ಇಂಥದೇ ಒಂದು ತತ್ತ್ವ ಅಡಕವಾಗಿದೆ. ಇದುವೇ ಮೋಹರಂ ಆಚರಣೆಯ ಮೂಲ. ಸತ್ಯ–ಅಸತ್ಯದ ನಡುವೆ, ನ್ಯಾಯ–ಅನ್ಯಾಯಗಳ ನಡುವೆ, ಧರ್ಮ–ಅಧರ್ಮದ ನಡುವೆ, ಹಿಂಸೆ–ಅಹಿಂಸೆಯ ನಡುವೆ ನಡೆದ ಭೀಕರ ಕದನವೆ ಮೊಹರಂ ಸಾವಿರಾರು ಜನ ಮಡಿದು ರಕ್ತದ ಕಾಲುವೆ ಹರಿದು ಹೆಣಗಳ ಬಣವೆ ಒಟ್ಟಲು ಕಾರಣವಾಯಿತು. ಈ ಘಟನೆ ಹೈದ್ರಾಬಾದ ಕರ್ನಾಟಕದ ಮೋಹರಂ ಹಾಡುಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಆಕರವೆನಿಸಿತು.

ಮಹಮ್ಮದ ಪೈಗಂಬರರಿಗೆ ಹನ್ನೊಂದು ಜನ ಹೆಂಡತಿಯರಿದ್ದರು. ಇವರಲ್ಲಿ ಒಬ್ಬರಿಗೆ ಮಾತ್ರ ಮಕ್ಕಳಿದ್ದುವು. ಬೀಬಿಖತಿಜಾ ಎನ್ನುವವಳಿಗೆ ಆರು ಮಕ್ಕಳು. ಅದರಲ್ಲಿ ನಾಲ್ಕು ಹೆಣ್ಣು ಎರಡು ಗಂಡು. 'ಮಾರಿಯಾ ಖಿಪ್ತಿಯಾ' ಎನ್ನುವವಳಿಗೆ ಒಂದು ಗಂಡು ಮಗುವಿತ್ತು. ಚಿಕ್ಕಂದಿನಲ್ಲಿಯೇ ಮೂರು ಮಕ್ಕಳು ತೀರಿಕೊಂಡವು. ಉಳಿದ ನಾಲ್ಕು ಜನ ಹೆಣ್ಣು ಮಕ್ಕಳಲ್ಲಿ ಬೀಬಿ ಜೈನಬ್,ಬೀಬಿ ರುಖಿಯಾ, ಉಮಖುಲ್ಸುಮ ಹಾಗೂ ಬೀಬಿ ಫಾತಿಮಾ ಎಂಬುವರು. ಮಹಮ್ಮದರ ಚಿಕ್ಕಪ್ಪ 'ಅಬೂ ತಾಲಿಬ'ಎನ್ನುವವರಿಗೆ 'ಹಜರತ ಅಲಿ' ಎಂಬ ಮಗನಿದ್ದ. ಇವನು ಧರ್ಮದಲ್ಲಿ ಬಹು ನಿಷ್ಠಾವಂತನಾಗಿ ಮಹಮ್ಮದರ ಧಾರ್ಮಿಕ ಕಾರ್ಯಗಳಲೆಲ್ಲಾ ಭಾಗವಹಿಸುತ್ತಿದ್ದನು. ಅಲ್ಲದೆ ವೀರನೂ, ಶೂರನು ಆಗಿದ್ದನು.

ಇಂಥವರಿಗೆ ಮಹಮ್ಮದರ ನಾಲ್ಕನೆಯ ಮಗಳು ಬೀಬಿ ಫಾತಿಮಾಳಿಗೆ ಕೊಟ್ಟು ಲಗ್ನ ಮಾಡಿದ್ದರು. ಇವರ ಹೊಟ್ಟೆಯಿಂದ 'ಹಸನ' 'ಹುಸೇನ' ಎಂಬ ಎರಡು ಗಂಡು ಮಕ್ಕಳು, 'ಬೀಬಿಜೈನಾಬಿ' ಎನ್ನುವ ಒಬ್ಬಳು ಹೆಣ್ಣು ಮಗಳಿದ್ದಳು.

ಇಸ್ಲಾಂ ಧರ್ಮಕ್ಕೆ 'ಖಲೀಫ'ರನ್ನು ಆರಿಸುವುದು ಪದ್ಧತಿ. ಖಲೀಫನಾಗುವವ ಧರ್ಮಗುರು, ರಾಜಕೀಯ ನಾಯಕ ಆಗಿರಬೇಕಾಗುತ್ತಿತ್ತು. ಅಲ್ಲದೆ 'ಕುರಾನ'ದ ಪ್ರಕಾರ ಅದು ವಂಶ



ಮೋಹರಂ ಆಚರಣೆ

ಪರಂಪರೆಗಿಂತ ಯೋಗ್ಯತೆಯ ತಳಹದಿಯ ಮೇಲೆ ಆರಿಸಬೇಕಾಗುತ್ತಿತ್ತು. ಇದೇ ಆಧಾರದ ಮೇಲೆ ಮಹಮ್ಮದರ ತರುವಾಯ ಬಂದ, ಅಬುಬಬಕರ, ಹಜರತ ಉಮರ, ಉಸ್ಮಾನಗನಿ–ಈ ಮೂವರು ಖಲೀಫರಾಗುತ್ತಾರೆ. ನಾಲ್ಕನೆಯ ಖಲೀಫರೆಂದು 'ಹಜರತ ಅಲಿ' ಯವರನ್ನು ನೇಮಿಸಿದಾಗ, ಆ ಕಾಲದ ಶೂರ ಬಲಿಷ್ಠ 'ಸಿರಿಯಾದ ಗವ್ಹರ್ನರ ಅಮೀರ ಮಾವಿಯ' ಇದಕ್ಕೆ ಒಪ್ಪಿಗೆ ನೀಡದೆ ತಾನೇ ಖಲೀಫನೆಂದು ಸಾರಿಕೊಳ್ಳುತ್ತಾನೆ. ಹಜರತ ಅಲಿ ಒಂದು ದಿನ ನಮಾಜು ಮಾಡುತ್ತಿದ್ದಾಗ 'ಇಬ್ನೆಮುಂಜೀಮ' ಎನ್ನುವವ ಅವರ ಕೊಲೆ ಮಾಡುತ್ತಾನೆ. ಇದು ಧರ್ಮದುರಂತದ ಕಾಳಗಕ್ಕೆ ಬೀಜವಾಗಿ ಪರಿಣಮಿಸುತ್ತದೆ. ಇತ್ತ ಹಜರತ ಅಲಿಯ ಹಿರಿಯ ಮಗ ಹಸನನ್ನು ಖಲೀಫನೆಂದು ಸಾರುತ್ತಾನೆ. ಅತ್ತ ಅಮೀರ ಮಾಮಿಯಾನ ಮಗ 'ಯಜೀದ' ತಾನು ಖಲೀಫನೆಂದು ಪ್ರಚುರಪಡಿಸುತ್ತಾನೆ. ದುಷ್ಟ ಕ್ರೂರಿಯಾದ ಯಜೀದನ ನಡಾವಳಿಕೆಗೆ ಜನ ಈಗಾಗಲೇ ಬೇಸತ್ತು ಹೋಗಿರುತ್ತಾರೆ. ತನ್ನೊಡನೆ ಒಪ್ಪಂದ ಮಾಡಿಕೊಳ್ಳಬೇಕು ಇಲ್ಲವೆ ಯುದ್ಧಕ್ಕೆ ಸಿದ್ಧರಾಗಬೇಕು, ಎಂದು ಒತ್ತಾಯಿಸಿ ಹಸನನಿಗೆ ಪತ್ರ ಬರೆಯುತ್ತಾನೆ. ಹುಸೇನರು ಧರ್ಮದ ಉಳಿವಿಗಾಗಿ ಪ್ರಾಣ ಹೋದರೂ ಅಡ್ಡಿಯಿಲ್ಲೆಂದು ಭಾವಿಸಿ ಯುದ್ಧಕ್ಕೆ ಸಿದ್ಧರಾಗುತ್ತಾರೆ. 'ಮದೀನಾ' ಪಟ್ಟಣದಿಂದ ಇರಾಕಿನ ಕರ್ಬಲಾ ರಣರಂಗಕ್ಕೆ ಬರುತ್ತಾರೆ. ಇದು ಬಗದಾದಿನ ದಕ್ಷಿಣ ಪಶ್ಚಿಮ ದಿಕ್ಕಿನಲ್ಲಿ ಐವತ್ತು ಮೈಲು ದೂರದಲ್ಲಿದೆ.

ಕರ್ಬಲಾ ಕದನ: ಕರ್ಬಲಾ ರಣರಂಗಕ್ಕೆ ಹುಸೇನರ ಸೈನ್ಯ ಬಂದಿಳಿಯುತ್ತದೆ. ಕರ್ಬಲಾ ರಣರಂಗ ಹಾಡು ಹೀಗೆ ವರ್ಣಿಸುತ್ತದೆ.

ಕರಬಲ ಅಂಬುದು ನೋಡ್ರಿ ಘೋರಕಾನನ
ಪಕ್ಷಿಗಳು ಶೂನ್ಯ ಉಸುಗು ರೇತಿಮಣ್ಣ
ಕಲ್ಲುಗಳು ಅಲ್ಲಿ ಇರುವವು ಘನ
ನೆರಳಿಗಿ ಹೋಗಿ ಕುಂತೇನಂದ್ರ ಇಲ್ರಿ ಗಿಡಗಳ
ಖೂನ

ಮೋಹರಂ ಕವಿ ಪ್ರತ್ಯಕ್ಷ ಕಂಡಷ್ಟೇ ಅನುಭವಿಸಿ ವರ್ಣಿಸಿದ್ದಾನೆ. ಇಲ್ಲಿ ಜನಪದ ಕವಿಗಳಿಗೆ ಹೊರದೇಶದ ಜ್ಞಾನ ಇತ್ತು ಎನ್ನುವದಕ್ಕೆ ಇಲ್ಲಿನ ಹಾಡುಗಳು ಸ್ಪಷ್ಟಪಡಿಸುತ್ತವೆ. ಕರ್ಬಲ ರಣರಂಗಕ್ಕೆ ಯಜೀದನು ಬಲವಾದ ಕಾವಲಿಡುತ್ತಾನೆ. ಎಲ್ಲಿಯೂ ನೀರು ಸಿಗದಂತೆ 'ಪರಹುತ' ಎಂಬ ನದಿಗೆ ಪೈರೆ ಇಡಿಸ್ಯಾನ. ಜನ ಬಾಯಾರಿ, ಕಂಗಾಲಾಗಿ ನೀರಿಗಾಗಿ ಪರದಾಡುವ ದೃಶ್ಯ ಕರುಣಾಜನಕವಾದುದು.

ತುಟಿ ಒಣಗಿ, ಬಾಯಾರಿ ಅಳುವ, 'ಬೀಬಿ ಸಕಿನಾಳ ರೋದನ' ತಂದೆಯ ಕರುಳು ಹಿಂಡುತ್ತದೆ. ದಮ್ಮುಡಿ ಹಿಡಿ ಇನ್ನು ಒಂದು ಕ್ಷಣ ಸಾವುದು ಉಂಟು ನಾವು ಒಂದು ದಿನ ಎಂದು ತಮ್ಮ ಅವಸಾನ ಕಾಲ ಸಮೀಪಿಸುತ್ತಿದೆ ಎಂದು ಸಮಾಧಾನ ಪಡಲೆತ್ನಿಸುತ್ತಾನೆ. ನೀರು ತರುತ್ತೇನೆಂದು ಮಗಳಿಗೆ ವಚನ ಕೊಟ್ಟು ಯಜಿದನ ಸೈನಿಕ ಅಧಿಕಾರಿ 'ಉಮರಸಾದ'ನಲ್ಲಿಗೆ ಬಂದು ನೀರು ಕೇಳುತ್ತಾನೆ. ಅಧಿಕಾರಿ ನೀರು ಕೊಡಲು ಒಪ್ಪುವದಿಲ್ಲ. ಕೊನೆಗೆ 'ಭಾರಮಾಡಿ ಹೊಳಿಮ್ಯಾಲ ಹೋಗ್ಯಾನ ವಸೇಕ ತುಂಬ ನೀರ ತಕ್ಕೊಂಡಾನ। ಇದನ್ನು ನೋಡಿದ ಅಧಿಕಾರಿ ನೀರು ಕಸಿದುಕೊಂಡು ಬಿಡುತ್ತಾನೆ. ನೀರು ತರುತ್ತೇನೆಂದು ವಚನ ಕೊಟ್ಟು ಬಂದ ತಂದೆ ಅಸಹಯಕವಾಗಿ "ಎಷ್ಟು ದಾರಿ ನೋಡಿ ಅಳತಾಳೊ ಮಗಳು ಸಕೀನಾ। ನನ್ನ ಕಡಿ ಇಟ್ಟಿದಾಳೊ ಕಣ್ಣ। ಕುಡಿಯಲಿಲ್ಲೊ ಒಂದ ಹನಿ ನೀರ ಎಂದು ದುಃಖಿಸುತ್ತಾ ತಿರುಗಿ ಬರುತ್ತಾನೆ.

'ಇಮಾಮ ಹುಸೇನರ ಮಗ ಇದ್ದ ಅಕ್ಬರ ಮೋಹದರತನ' ತನ್ನ ತಂದೆಯ ಸರಿದೊರೆಯಾಗಿ ರಣರಂಗದಲ್ಲಿ ವೈರಿಗಳ ಜೊತೆ ಹೋರಾಡಬೇಕೆಂದು ಬಯಸಿ ತನ್ನ ಬಯಕೆಯನ್ನು ತಾಯಿ ಶಹರಬಾನೂಳ ಮುಂದೆ ಇಟ್ಟಾಗ 'ಖುಸಿಲಿಂದ ಉಂಡಾಡೊ ಚೆಂಡಗೋಲಿ– ತುಮದು ಕ್ಯಾ ಹೋನಾ' ಎಂದು ತಾಯಿ ಅವನ ಬಯಕೆಯನ್ನು ಒತ್ತಿಡುತ್ತಾಳೆ. ಆಗ ಅಲಿ ಅಕ್ಬರ 'ಮುತ್ಯಾ ಮಾಡಿದ ಕವಲ ಹ್ಯಾಂಗ ಮಿರಲಿ ಹೋದರ ಹೋಗಲಿ ನನ್ನ ತಲಿ' ಎಂದು ಕೆಚ್ಚೆದೆಯಿಂದ ರಣರಂಗವನ್ನು ಹೋಗುತ್ತಾನೆ.

ಮುನ್ನುರದ ಎಪ್ಪತ್ತೈದು ಕೊಯ್ದಾನ ತಲಿ
ಹಿಂದ ಬಂದು ಘಾಸಿಲಿಂದೆ ಹೊಡ್ದಾರ ಜೋಲಿ
ಆಕರ ನಫಡತೊ

ಯಜೀದನ ಸೈನ್ಯ ಮೋಸದಿಂದ ಆತನ ಸುತ್ತ ಆವರಿಸಿ,

ಬಿಟ್ಟಾರೊ ಬಾಣ ಕೂಸಿನ ಕುತ್ತಿಗಿಗಿ. ಗುರಿ ಇಟ್ಟು ಹೊಡೆದಾಗ ಪ್ರಾಣ ಹರಣವಾಗುತ್ತದೆ. ಸುದ್ದಿ ಮನೆಯಲ್ಲಿದ್ದ ತಾಯಿಗೆ ಮುಟ್ಟುತ್ತದೆ. ಅದುಮಿಟ್ಟ ಅವಳ ದುಃಖ ಒತ್ತರಿಸಿ ಬಂದು,

ಹೊರಗೆ ಹೋಗಿ ಮಗ ಬೇಗ ಆಡಿ ಬರತಾನೇನ।
ಎಷ್ಟಂತ ಮನಸಿಗಿ ಹಾಯಕೊಲಿ ಸಹನ।
ಬೀಳವಲ್ಲದು ಚೈನ। ಹೊತ್ತಾಂಗ ಕಳಿಯಲಿ ಒಬ್ಬಾಕಿ ನಾನ

ಎಂದು ರೋಧಿಸುತ್ತಾಳೆ. ಮಲಗಿದಾಗ ಕನಸಿನಲ್ಲಿ ಮಗ ಬಂದು ಕಾಡಿದಂತಾಗುತ್ತದೆ. 'ಕಳಿಸಿ ಸುದ್ದ ನಿನ್ನ ಚೆಲುವಿಕಿ ಸೂರ್ಯ, ಚಂದ್ರಮನ್ಹಂಗ'। ಎಂದು ಮಗನ ಮೇಲಿನ ವ್ಯಾಮೋಹ ಕರುಣೆಯ ಕಡಲಾಗಿ ಹರಿದಿದೆ. ಲೋಹಿತ ಸತ್ತಾಗ ತಾಯಿ ಚಂದ್ರಮತಿ ಪ್ರಲಾಪಿಸಿದ, ಶಂಕರ ಸತ್ತಾಗ ತಾಯಿ ತಿರುಕೊಳವಿನಾಚಿ ಪ್ರಲಾಪಿಸಿದ ಪ್ರಸಂಗಗಳು ಇಲ್ಲಿ ನೆನಪಿಗೆ ಬರುತ್ತವೆ.

ಘನಘೋರ ಯುದ್ಧ ನಡೆದ ಇಂಥ ಪ್ರಸಂಗದಲ್ಲಿಯೂ ಇಮಾಮ ಹುಸೇನರು ತಮ್ಮ ಅಣ್ಣನಿಗೆ ಕೊಟ್ಟ ವಚನದಂತೆ ಕಾಶೀಮನಿಗೆ ತನ್ನ ಮಗಳು 'ಸಕೀನಾಬಾನೂ'ಳನ್ನು ಕೊಟ್ಟು ಲಗ್ನ ಮಾಡುತ್ತಾನೆ. ಲಗ್ನವಾದ ಮುಂದೆ ಮೂರನೇ ದಿನಕ್ಕೆ ಕಾಶೀಮನಿಗೆ ಯುದ್ಧಕ್ಕೆ ಕರೆಬರುತ್ತದೆ.

ಮದವಿನೆ ಆಗಿ ಮೂರು ದಿವ್ಸ ಆಗಿಲ್ರಿ
ಬಿಚ್ಚಿಲ್ರಿ ಕೈಯಾನ ಕಂಕಣ। ತೊಳದಿಲ್ರಿ
ಮೈಯಾನ ಅರಿಷಿಣ ಸೈ ಸೈ।
ಶೊರದ ಭಾಸಿಂಗ ಇನ್ನು ಉಚ್ಚಿಲ್ಲಣ್ಣ। ॥ 1 ॥
ಯಜೀದ ಪೀರ ಲಡಾಯ್ಗಿ ಬಾ ಅಂತೆ।
ಮ್ಯಾಳೆ ಮ್ಯಾಲೆ ಪತ್ರ ಕಳವ್ಯಾರಣ್ಣ।
ಹಸನ ಹುಸೇನ ಸ್ವಾಮಿಗಿ ತಿಳಸ್ಯಾರಣ್ಣ ಸೈ ಸೈ ॥ 2 ॥
ತಯ್ಯಾರಾಗ್ಯಾರೊ ಸ್ವಾಮಿ ಅದೇ ದಿನಾ।

ಪ್ರಿಯ ಪತ್ನಿಯ ಒಲುಮೆ ಒಂದೆಡೆ, ರಣರಂಗದ ಕರ್ತವ್ಯದ ಕರೆ ಇನ್ನೊಂದೆಡೆ ಸಂಕುಚಿತ ಬಯಕೆಗಿಂತ ಸಾರ್ವತ್ರಿಕ ಹಿತಕ್ಕೆ ಓಗೊಟ್ಟು ಕಾಶೀಮ ರಣರಂಗಕ್ಕೆ ಧಾವಿಸುತ್ತಾನೆ.

ಕಾಶೀಮನ ನೋಡಿ ಕಡಕೊಂಡ ದೌಡ।
ಓಡಿ ಬಂದಾನೊಬ್ಬ ಪೈಲವಾನ।
ಹಿಂದೆ ಬಂದು ಕಡ್ತಾ ಮಾಡ್ಯಾನಣ್ಣ ಸೈ ಸೈ
ಕಡ್ತಹತ್ತಿ ಬಿದ್ದ ಕಾಶೀಮ ಶರಣ ॥ 2 ॥

ಅರೇಬಿಯಾದ ಅಭಿಮನ್ಯುವಾಗಿ ಹೋರಾಟ ನಡೆಸಿ, ವೈರಿಸೈನ್ಯವನ್ನು ತುಂಡರಿಸುತ್ತಾನೆ. ಕಾಶೀಮನ ಕುರಿತು ದಿ.ಪಿ. ಧೂಲಾಸಾಹೇಬರು,

ರಣವೆ ಹಂದರ ಭಲ್ಲೆಯೇ ಕಠಾರಿ।
ರಣಗರ್ಜನೆಯೇ ವಾದ್ಯ ಘೋಷ ಭೇರಿ।

ಎಂದು ವರ್ಣಿಸಿದ್ದಾರೆ. ತನ್ನ ಪತಿಯ ಶವವನ್ನು ತೊಡೆಯ ಮೇಲೆ ಹಾಕಿಕೊಂಡು 'ಸಕೀನಾಬಾನೂ' ಗದ್ದ ತುಟಿ ಹಿಡಿದು ತನ್ನ ಪುರುಷನ ಕುರಿತು, ಯಾರ ಕೈಯಲ್ಲಿ ಕೊಟ್ಟು ನಡದಿರಿ ನಮ್ಮನ್ನ ಎಂದು ಹಲಬುವ ಸಕೀನಾಬಾನೂಳ ದುಃಖದ ಸನ್ನಿವೇಶ ಹಾಡು ಹೇಳುವವರ ಜೊತೆಗೆ ಹಾಡು ಕೇಳುವವರ ಕಣ್ಣಿನಲ್ಲಿ ನೀರು ಹರಿಯುತ್ತದೆ.

ಏನು ಸವಿಸುಖ ಕಾಣಲಿಲ್ಲೊ॥ ನಾನ।
ಕುಂತ ಮಾತಾಡಿ ದಣಿಯಲಿಲ್ಲ ನಾನ।
ಒಂದು ಕ್ಷಣ ಹೊತ್ತು ಮುತ್ತೈದಿತನ।
ಶಿವನಲ್ಲಿ ಬೇಡಿ ಬಂದಿದ್ದೆ ನಾನಾ।
'ಬಳಿ' 'ಕರಿಮಣಿ' ಸೌಭಾಗ್ಯ ಸಾಮಾನ"
ಮುತ್ತೈದಿತನ ಕೈಯಲಿರತನ।
ಇವೆಲ್ಲ ಇದ್ದರೆ ಸ್ತ್ರೀಯರ ಲಕ್ಷಣ।
ಎಲ್ಲ ತಗಿದ ಬಳಿಕ ಬಾತಿಗೆ ಬಾರದಂಗ ॥ ನಾನ ॥
ಬಿಳಿದುಟ್ಟು ಬಿಳಿದು ಹೊತಗೊಂಡು ನಾನ
।ರಂಡಿತನ ಭೋಗಿಸಾದು ಬಂದಿತೇನ।

ದುಃಖಿಸುವ ಸನ್ನಿವೇಶ ಎಂಥವರ ಕರುಳು ಹಿಂಡುತ್ತದೆ. ಸಕೀನಾಳ ಯೌವ್ವನ, ರೂಪ, ಶೃಂಗಾರಗಳೆಲ್ಲ ಮಿಂಚಿನಂತೆ ಮಾಯವಾಗಿ ದುರ್ದೈವಿ ಸ್ತ್ರೀಯಾಗಿ ಎಲ್ಲರ ಕರುಣೆಗೆ ಪಾತ್ರಳಾಗುತ್ತಾಳೆ.

ಕರ್ಬಲಾದ ರಾಣಿಯಾಗಿ ಹೋರಾಡಿದ ಇನ್ನೊಬ್ಬಳು ವೀರ ಕನ್ಯಾಮಣಿ ಜೈನಬಿ. ಬ್ರಿಟೀಷರ ವಿರುದ್ಧ ಸಮರ ಸಾರಿದ ಕಿತ್ತೂರ ಚೆನ್ನಮ್ಮಳನ್ನು ಇವಳು ಹೋಲುತ್ತಾಳೆ. ಅಷ್ಟೇ ಶೌರ್ಯ ಕಲಿತನ, ಎದೆಗಾರಿಕೆ ಪಡೆದ ಜೈನಬಿ ಯಜೀದನ ಸೈನಿಕ ಜೊತೆ ಹೋರಾಡುವ ಹಾಡು ಹೀಗೆ ವರ್ಣಿಸುತ್ತದೆ;

ತನ್ನ ಹದ್ದಿನೊಳಗ ಸಿಕ್ರ ಯಾರ್ಯಾರ ಮಾಡ್ಯಾಳ ಸಂಹಾರ
ಎಷ್ಟೋ ಮಂದಿಗೆ ಹಾಕ್ಯಾಳ ಕೊಂದ।
ಹರಿಸ್ಯಾಳೊ ನೆತ್ತರ ದರದಿಲ್ದೆ ಗಂಡಸರದ। ॥ 1 ॥
ಯಾರು ಇದ್ದಿದಿಲ್ರಿ ಆಕಿಗಿ ಇದರ।
ಅಂಜಿ ಓಡಿಹೋಗ್ಯಾರ ಎಲ್ಲರ।
ಹೆಂಗಸ ಜಾತಿ ಮಾಡ್ಯಾಳ ಕೀರ್ತಿ

ತನ್ನ ಜನರಿಗೆ ವಿಜಯ ತರಲು ಅವಿರತ ಹೋರಾಡಿ ಸ್ತ್ರೀಪ್ರಪಂಚಕ್ಕೆ ಶೌರ್ಯದ ಸಂಕೇತವಾಗಿದ್ದಾಳೆ.

ಇವರಲ್ಲದೆ ಕರ್ಬಲಾ ರಣರಂಗದಲ್ಲಿ ಹುಸೇನರೊಡನೆ ಧಮುಕಿದ ಪತ್ನಿ ಬಾನೂ ಮತ್ತು ಕವಡಿಪೀರ, ಅಬ್ಬಾಸಲಿ, ಮದರಸಾಬ ಮುಂತಾದವರ ಸಾಹಸ ಕುರಿತು ರಿವಾಯ್ತ ಹಾಡುಗಳು ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ದೊರೆಯುತ್ತವೆ. ಅನೇಕ ದಿನಗಳವರೆಗೆ ನಡೆದ ಕರ್ಬಲಾದ ಕದನ ಹುಸೇನರ ಮರಣದೊಂದಿಗೆ ಮುಕ್ತಾಯವಾಗುತ್ತದೆ. ಯಜೀದನ ಜನ ಆಸಗರಲಿಯಂಥ ಬಾಲಕರನ್ನು ಬರ್ಚಿಗೆ ಚುಚ್ಚಿ ತಿರುಗಿಸಿ ನಲಿದಾಡಿದ ದೃಶ್ಯ ಇನ್ನೂ ಭೀಕರವಾದುದು.

ಕರ್ಬಲಾ ರಣ ರಂಗದ ದುರಂತವನ್ನು ಕುರಿತು ಈ ಹಾಡು

ಹೀಗೆ ಹೇಳುತ್ತದೆ.

ಅರಬಸ್ತಾನದ ವರ್ತಮಾನ ಕೇಳಿರಿ ದೈವ ಇನ್ನ।
ಪಶ್ಚಿಮ ದಿಕ್ಕಿಗೆ ಸಮುದ್ರದಾಚಿಗೆ ಘನವಾದ ಪಟ್ಟಣ।
ಹೆಸರಾದ ಮುಕ್ಕಾಮದೀನ ಅದರಲ್ಲಿ ಅರಬರ ದಣಿಲ್ಹಾನ। ॥1॥

ಹಿಂದೂ ಜನರಲ್ಲಿ ಕೌರವ-ಪಾಂಡವರು ಮಾಡಿದ್ಹಂಗ ಕದನ।
ಹಸೇನ-ಹುಸೇನ ಪ್ರತಿವಾದಿಯಾಗಿದ್ದ ಯಜೀದ ಬೇಮಾನ।
ಅವನ ರಾಜಧಾನಿ 'ಡಮಸ್ಕ' ಊರು ಪಟ್ಟಣ।

ಮೋಹರಂ ತಿಂಗಳು ಆರಂಭವಾಯಿತು ಕರ್ಬಲದಲ್ಲಿ ಕದನ।
ಹತ್ತೆಂಟು ದಿವಸ ದುಮಸಾಲಿ ಆದಿತ್ತೊ ಕದನ।
ಕತ್ತಲದಾಗ ಯದ್ಧ ಆ ಎರಡು ದಿನ।
ಮಡಿದಾರೋ ಸ್ವಾಮಿ ಹುಸೇನ ಸೈನಾ।

ಕರ್ಬಲಾ ಕದನ ತೊಂಬತ್ತೆರಡು ನುಡಿಗಳಲ್ಲಿ ರಚನೆಯಾದ ದೀರ್ಘ ರಿವಾಯ್ತು ಪದವನ್ನು ರಾಯಚೂರ ಜಿಲ್ಲೆಯ ಯಲಬರ್ಗಾ ತಾಲ್ಲೂಕಿನ ಬನ್ನಿಕೊಪ್ಪದ ಶ್ರೀಮಹಬೂಬಸಾಬ ಫಾತಿಮ ಸಾಬ ಯಲಿಗಾರ ಅವರು ಹಾಡಿದ್ದಾರೆ. ರಿವಾಯ್ತು ಹಾಡುಗಳಲ್ಲಿಯೇ ಇದು ಅತ್ಯಂತ ಧೀರ್ಘ ಪ್ರಮಾಣದ್ದಾಗಿದೆ.

ಇಮಾಮ ಹುಸೇನರು ರಣರಂಗದಲ್ಲಿ ಮಡಿದ ಸುದ್ದಿಯನ್ನು ಇವರ ಮಲತಾಯಿ ಮಗ 'ಹನೀಪ'ನು ಕರಬಲಾದ ಪತ್ರ ಓದಿ ತಿಳಿದು 'ಕಣ್ಣಿಗೆ ನೀರು ತಂದು ದುಃಖ ಮಾಡ್ಯಾನ। ಲಗೂಲಿಂದೆ ಹಾಕ್ಯಾನೊ ಕುದರಿಗಿ ಜೀನ। ತಲವಾರ ತಕ್ಕೊಂಡು ತಯಾರಾಗ್ಯಾನ।' ಇವನಾದರೂ ಮಹಾವೀರ, ಶೂರ, ಪರಾಕ್ರಮಿ ಯೋಧನಾಗಿದ್ದ. ತನ್ನ ಸಹೋದರರನ್ನು ಅನ್ಯಾಯವಾಗಿ ಕೊಂದ ದುಷ್ಟ ಶಕ್ತಿಗಳ ಕೈವಾಡವನ್ನಡಗಿಸಲು ಕೆಚ್ಚಿನಿಂದ ಕರ್ಬಲಾ ರಣ-ರಂಗಕ್ಕೆ ಧಾವಿಸುತ್ತಾನೆ.

ಎನ್ನ ಕುದುರಿ ನೆತ್ತರದಲ್ಲಿ ಈಸುತಾನ।
ಎಂದಿಗಿ ಬಿಡಾದಿಲ್ಲ ಯಜೀದನ।
ನಮ್ಮ ಅಣ್ಣನ ತೆಲಿ ಏನುಕಾರಣ।
ಕರಿಸಿ ಕೊಯದಾನೊಬೇಮಾನ।
ಹನಿ ನೀರ ಇಲ್ಲದ್ಹಾಂಗ ಏಳುದಿನ।
ಮನಿ ಮಾರ ಬಿಡಿಸಿ ನಡು ಆರ್‍ಯಾಣ।
ಮಹ್ಮದ ಹನಿಪ ಹುಲಿ ಸಮಾನ।
ಹೋದನೊ ದಂಡಿನ ಪೈಲವಾನ।
ಕೂಗು ಹೊಡಿದು ಕಡದ ಸಾವಿರಾರು ಜನ।
ದೀನ ದೀನ ಬಾಯಿಲಿಂದ ನುಡಿದ ವಚನ।
ಆವಾಗ ಸಿಡಿಲ ಮಿಂಚ ಗದ್ದರಿಸೋಣ।
ಕತ್ತರಿಸಿ ಬಿದ್ದಾವರಿ ಆ ಕ್ಷಣ।
ಈಸತಾದ ಕುದರಿ ಹನೀಪಶಾಹನ।
ಇಳದಾದೊ ಸಿಟ್ಟ ಸಮಜಾಯಿತೊ ಮನ।
ಇಡಲಿಲ್ಲೊ ಯಜೀದನ ಮಂದಿನ।
ಸಂಹಾರ ಮಾಡ್ಯಾನ ಸಣ್ಣ ದೊಡ್ಡವರನ।
ಸೀಳಿ ಒಗದಾನೊ ಹಸಿ ಪಿಂಡಾಣ।

ಯಜೀದನ ಸೈನ್ಯವನ್ನೆಲ್ಲಾ ಧ್ವಂಸ ಮಾಡುತ್ತಾನೆ. ಇವನ ಸೇಡಿನ ತೀವ್ರತೆ ಹೇಗಿತ್ತೆಂದರೆ ವೈರಿಗಳ ಹುಗಿದ ಹೆಣಗಳನ್ನು ಕೆದರಿ, ಬರ್ಚಿಗೆ ಚುಚ್ಚಿ, ತಿರುಗಿಸಿ ಬೆಂಕಿ ಹಚ್ಚಿ ಸುಟ್ಟು ಆನಂದಪಡೆಯುತ್ತಾನೆ. ಇಲ್ಲಿಗೆ ಕರ್ಬಲಾದ ಕಾಳಗ ಕೊನೆಗೊಳ್ಳುತ್ತದೆ.

ಮೊದ ಮೊದಲು ಹಿಂಸೆ, ಅನ್ಯಾಯ, ಅಸತ್ಯಗಳಿಗೆ ಜಯ ದೊರೆತಂತೆ ಅನಿಸಿದರು ಕೊನೆಯಲ್ಲಿ ಅಹಿಂಸೆ, ನ್ಯಾಯ, ಸತ್ಯಗಳಿಗೆ ಯಶ ಲಭಿಸುತ್ತದೆ. ಇದೇ ಘಟನೆಯನ್ನು ಜನಪದರು ವರ್ಷಂಪ್ರತಿ ಹಬ್ಬವಾಗಿ ಆಚರಿಸುತ್ತ ಬದುಕಿನುದ್ದಕ್ಕೂ ಆ ಸಂಸ್ಕೃತಿಯನ್ನು ಹಾಡುಗಳ ಮೂಲಕ ಉಳಿಸಿಕೊಂಡು ಬಂದಿದ್ದಾರೆ

ಆಚರಿಸುವ ಪದ್ಧತಿ: ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಮೋಹರಂ ಆಚರಣೆಯನ್ನು ಜನಪದರು ಸಡಗರ-ಸಂಭ್ರಮದಿಂದ ಆಚರಿಸುತ್ತಾರೆ. ಕರ್ಬಲದಲ್ಲಿ ನಡೆದು ಹೋದ ಘಟನೆಯನ್ನು ಯಥಾವತ್ತಾಗಿ ಜನಮನಕ್ಕೆ ತಟ್ಟುವಂತೆ ಹೇಳುತ್ತಾರೆ.

ಅಲಾವಿಯ ಚಂದನ ನೋಡಿ!
ಗುದ್ದಲಿ ಹಾಕ್ಕಾರ ದೀನಮಾಡಿ!

ಚಾಂದ ಕಂಡ ತಕ್ಷಣ ಮಸೂತಿಯ ಮುಂದೆ ಇರುವ ಗೋ-ರಿಯ ಗುದ್ದಲಿ ಪೂಜೆ ನೆರವೇರಿಸುತ್ತಾರೆ. ಮಸೂತಿ ಮುಲ್ಲಾ ಅದಕ್ಕೆ ಪೂಜಿಸಿ 'ಕುಣಿ' ಕೆದರಿ ತೆರದಿಡುತ್ತಾನೆ. ಹುತಾತ್ಮರು ಆದವರನ್ನು ತಿರುಗಿ ಆ ಮೂಲಕ ಪ್ರತ್ಯಕ್ಷ ಕಾಣುವ ಸಂಕೇತ ಇದು. ಆ ದಿನ ರಾತ್ರಿ 'ಅಲೈಪೀರಗಳನ್ನು' ಮಸೀದಿಯಲ್ಲಿ ಸ್ಥಾಪಿಸುತ್ತಾರೆ.

ಇವು ಯಾವ ರೂಪ ನಿಶಿಷ್ಟತೆಯನ್ನೂ ಹೊಂದಿರದೆ ಹಸ್ತದ ಸಂಕೇತ ಮಾತ್ರ ಹೊಂದಿರುತ್ತದೆ. ಇವುಗಳಿಗೆ 'ಪಂಜಾ' ಎಂದು ಕರೆಯುವರು. ಪಂಜಾ ಪರ್ಷಿಯನ ಶಬ್ದ. ಇದರರ್ಥ ಐದು ಎಂದು. ಒಂದೊಂದು ಬೆರಳಿಗೆ ಒಂದೊಂದು ವ್ಯಕ್ತಿಯ ಹೆಸರಿಟ್ಟು ಗುರುತಿಸುತ್ತಾರೆ. ಮಹಮ್ಮದ ಪೈಗಂಬರ, ಬೀಬಿ ಫಾತಿಮಾ, ಹಜರತ ಅಲಿ, ಹಸನ, ಹುಸೇನ ಇವರುಗಳ ಹೆಸರಿನಲ್ಲಿ ಪಂಜಾಗಳಿಗೆ 'ಪಾಕಪಂಜತನ' ಎಂದೆನ್ನುತ್ತಾರೆ. ಇದರರ್ಥ ಪವಿತ್ರರಾದ, ಪಕ್ವವಾದ ಐದು ಜನ ಎಂದು. ಇವರಲ್ಲದೆ ಕಾಳಗದಲ್ಲಿ ಹೋರಾಡಿ ಮಡಿದ ಮದರಸಾಬ, ಅಬ್ಬಾಸಲಿ, ಕಾಸೀಮ, ಗೆಜ್ಜಿದೇವರು, ಕವಡಿಪೀರ, ಇವರ ಹೆಸರಿನಲ್ಲಿಯೂ ಪಂಜಾಗಳನ್ನು ಇಟ್ಟಿರುತ್ತಾರೆ.

ಪಂಜಾಗಳನ್ನು ಮೊದಮೊದಲು ಬಂಗಾರದ ತಗಡಿನಿಂದ ತಯಾರಿಸುತ್ತಿದ್ದರಂತೆ. ಬರಬರುತ್ತಾ ಜನ ಅವುಗಳ ಕಳವು ಮಾಡತೊಡಗಿದ್ದರಿಂದಾಗಿ ಅದರ ಬದಲಾಗಿ ಬೆಳ್ಳಿ,ತಾಮ್ರ, ತವರ, ಹಿತ್ತಾಳಿ, ತಗಡಿನಿಂದ ತಯಾರಿಸತೊಡಗಿದರು. ಉದ್ದನೆಯ ಕಟ್ಟಿಗೆಗೆ ಪಂಜಾಗಳನ್ನು ಸಿಕ್ಕಿಸಿ, ಅದಕ್ಕೆ 'ಧಟ್ಟಿ' ಉಡಿಸಿ 'ಶೇರ್‍ಯಾಗಳನ್ನು' ಹಾಕುವರು. ಎದೆಗೆ 'ಉಡಿಯಕ್ಕಿ' ಕಟ್ಟುವರು. ವಿವಿಧ ಅಲಂಕಾರ

ವಸ್ತುಗಳಿಂದ ಅದರ ಸೊಬಗನ್ನು ಇಮ್ಮಡಿಸುವರು. ಛತ್ರಿ–ಚಾಮರ, ನವಿಲುಗಿಗಳನ್ನಿಟ್ಟು ಗೌರವ ವ್ಯಕ್ತಪಡಿಸುವರು.ಪೀರಗಳ ಹೆಸರಿನಲ್ಲಿ ಹತ್ತು ದಿನಗಳವರೆಗೆ 'ರೋಜಾ' ಕೈಕೊಳ್ಳುವರು. ಹಸನ–ಹುಸೇನರು ಅನ್ನ ನೀರಿಲ್ಲದೆ ರಣರಂಗದಲ್ಲಿ ಹೋರಾಡಿದ್ದರ ಆಚರಣೆ ಇದು. ಹೆಣ್ಣುಮಕ್ಕಳು ತಲೆಗೂದಲು ಬಿಚ್ಚಿಕೊಂಡು ಅಳುತ್ತಾ ಕೂಡುವರು. ರಣರಂಗದಲ್ಲಿ ಮಡಿದ ವೀರರ ಹೆಂಡಂದಿರರ ದು:ಖವನ್ನು ಪ್ರಕಟಿಸುವ ಭಾವ ಇಲ್ಲಿಯದು. ಪೀರಗಳಿಗೆ ಹರಕೆ ಹೊತ್ತು ಈಡೇರಿದ ಮುಗ್ಧ ಜನ ಈ ಸಂದರ್ಭದಲ್ಲಿ 'ಕಂದುರಿ' ಮಾಡಿ ಫಕೀರಿಗೆ ಊಟ ಮಾಡಿಸುವರು. ಬಡ–ಬಗ್ಗರಿಗೆ ಧನ–ಧಾನ್ಯ–ವಸ್ತ್ರಾದಿಗಳನ್ನು ದಾನಗೈಯ್ಯುವರು. ಯನೀದನ ಜನ ಭಿಕ್ಷೆ ಬೇಡಲು ಹಚ್ಚಿದ್ದರ ನೆನಪಿಗಾಗಿ ಮುಸಲ್ಮಾನ ಹಿರಿಯರು, ಹುಡುಗರು ಹೊಸ ಬಟ್ಟೆ ಧರಿಸಿ, ಕೊರಳಲ್ಲಿ 'ದಾರ' ಹಾಕಿಕೊಂಡು ಮನೆ ತಿರುಗಿ ಭಿಕ್ಷೆ ಎತ್ತಿ, ಅದನ್ನೇ ಊಟ ಮಾಡುವರು. ದಿನಾಲೂ ಊರ ನಜ ಪೀರಗಳಿಗೆ ನೈವೇದ್ಯ ಕಳಿಸುವರು.

ಮಸೀದಿಯ ಮುಲ್ಲಾ ಫಾತ್ಯಾ ಕೊಟ್ಟು 'ದೋಸ್ತರಾ ಹೋದ್ದೀನ್' ಜೈ ಷೋಷ ಹೊಡೆಯುವನು. ದೇವರುಗಳಿಗೆಂದು ಹೊಸಬಟ್ಟೆ, ಗದ್ದಿಗೆಗೆ ಹಸಿರು ಬಟ್ಟೆ ಹೂವಿನ ಚಾದರಛತ್ರಿ ಮುಲ್ಲಾಗಳಿಗೆ ಆಹೇರಿ, ಹೊಸ ಪಂಜೆ ಮಾಡಿಸುವ ಮುಂತಾದ ವಿವಿಧ ರೀತಿಯಲ್ಲಿ ಜನ ಹರಕೆ ಸಲ್ಲಿಸುವರು.

ಮುಸಲ್ಮಾನರು ಫಾತ್ಯಾ ಓದಿಸುವರು. ಹಿಂದೂಗಳು ಸತ್ಯ ನಾರಾಯಣ, ವರದಶಂಕರ ಕಥೆ, ಓದಿಸುವಂತೆ ಮುಸಲ್ಮಾನರು ಫಾತ್ಯಾ ಓದಿಸುವರು. ಈ ಸಂದರ್ಭದಲ್ಲಿ ಸಜ್ಜೆ ಅಥವಾ ಗೋದಿಯ 'ಮಾಲ್ದಿ' ಹಾಗೂ ನವಣೆ ಅಕ್ಕಿಯ ಮುಲ್ಲಾಗಳ ಊಟಕ್ಕೂ, ದೇವರ ನೈವೇದ್ಯಕ್ಕೂ ತಯಾರಿಸುವರು. ಹೊಸ ಧಾನ್ಯದಿಂದ ತಯಾರಿಸಿದ ಅಡುಗೆ ಮೊದಲು ದೇವರಿಗೆ ಸಲ್ಲಿಸಿ, ಅನಂತರ ತಾವು ಉಪಯೋಗಿಸುವರು. ತಮ್ಮೂರಿನಿಂದ ಬೇರೆ ಊರುಗಳಿಗೆ ಹೋಗಿ ಹರಕೆ ಸಲ್ಲಿಸಿ ಬರುವರು.

ಹತ್ತುದಿನಗಳ ಅವಧಿಯಲ್ಲಿ ಪ್ರತಿದಿನ ಒಂದೊಂದು ಪೀರಗಳ ಉತ್ಸವ ಜರಗುವುದು. ಒಂಬತ್ತನೆಯ ದಿನದ ನಸುಕಿನ ಜಾವಕ್ಕೆ ಹಸನ–ಹುಸೇನರ ದೊಡ್ಡಪಂಜೆಗಳ ಮೆರವಣಿಗೆಯಾಗುತ್ತದೆ. ಇದಕ್ಕೆ 'ಖತಲರಾತ್ರಿ' ಎಂದು ಕರೆಯುವರು. ದೇವರುಗಳನ್ನು ಪ್ರತಿವರ್ಷವೂ ಪಟ್ಟಕ್ಕೆ ಹಾಕಿದವನೊಬ್ಬನೇ ಹಿಡಿಯುತ್ತಾನೆ. ಬೆಳಕಿಗಾಗಿ 'ದೀವಟಿ'ಗೆಗಳನ್ನು ಉಪಯೋಗಿಸುವರು. ಪೀರ ಹಿಡಿದ ಮುಸಲ್ಮಾನನಲ್ಲಿ ಆವೇಶ ತುಂಬಿ ಬರುತ್ತದೆ. ಮೋಹರ್‍ರಂದ ಪವಿತ್ರ ಸಂದೇಶವನ್ನು ಜನಮನದಲ್ಲಿ ಬೀರಲು ದೇವರುಗಳು ಊರೊಳಗೆ ಓಡಿಬಿಡುತ್ತವೆ. ಜನ ಹಾಯ ದೋಷ ಶಹೀ ದೋಷ ಎಂದು ನುಡಿಸುತ್ತಿರುತ್ತಾರೆ.

ಮನೆಯ ಬಾಗಿಲಿಗೆ ಬಂದ ಪೀರಗಳಿಗೆ ಜನ ನೀರು ನೀಡಿ ನೈವೇದ್ಯ ಸಲ್ಲಿಸುವರು. ಅಣ್ಣ ತಮ್ಮರ ಭೇಟಿಯೆಂದು ತಮ್ಮೂರಿನಿಂದ ಬೇರೆ ಊರಿಗೂ ಹೋಗಿ ಇದಿರು ಭೆಟ್ಟಿಯಾಗಿ ಬರುತ್ತಾರೆ. ಪಂಜೆಗಳೊಡನೆ 'ಮಿಲಾಪಿಸಿ' ಕುಶಲ ವ್ಯಕ್ತಪಡಿಸುತ್ತಾರೆ. ಹತ್ತನೆಯ ದಿನ ಸೂರ್ಯಾಸ್ತಕ್ಕೆ ಪೀರಗಳ 'ದಪನ್' ಕಾರ್ಯನಡೆಯುವುದು ಮಸೂತಿಯ ಮುಂದೆ ಇರುವ ಅಗ್ಗಿ ಯೊಳಗಿನಿಂದ ಪೀರಗಳನ್ನು ದಾಟಿಸಿಕೊಂಡು ಮೆರೆವಣಿಗೆ ಹೊರಡುವರು.

ಊರಿನ ಜನ ದೇವರುಗಳಿಗೆ ಭವಿಷ್ಯ ಕೇಳುವರು, ಭೂತ ಬಡಿದ ಜನ ಇಲ್ಲಿಗೆ ಬಂದು ಭೂತ ಬಿಡಿಸಿಕೊಳ್ಳುವರು. ಇವೆಲ್ಲವುಗಳ ತರುವಾಯ ಲಕ್ಕೆ, ಅವರಿ, ಬೇವಿನ ಗಿಡಗಳ ತಪ್ಪಲ ತೆಗೆದುಕೊಂಡು ಊರಿನ ನದಿ ಅಥವಾ ಬಾವಿಗೆ ಬರುವರು.

ಕರ್ಬಲಾ ರಣರಂಗದ ಸಮೀಪದಲ್ಲಿರುವ ಫ್ರಾತ್ ನದಿಯಲ್ಲಿಯೇ ಯಜೀದನ ಜನ ಇವರನ್ನು ಕೊಲೆಗೈದುದ್ದರ ಸಂಕೇತವಾಗಿ ಪಂಜಾಗಳ 'ದಫನ್' ಕಾರ್ಯ ನೀರಿನ ಹತ್ತಿರ ನಡೆಯುವಂತಿದೆ. ಆನಂತರ ಪಂಜಾ ಕಟ್ಟಿಗಿ ಸುತ್ತಿದ ಅರಿವೆಗಳನ್ನೆಲ್ಲಾ ಬಿಚ್ಚಿ ಕಟ್ಟುತ್ತಾರೆ. ಸ್ಮಾರಕವಾಗಿ 'ಡೋಲಿ' ಅಥವಾ 'ತಾಜಿಯಾ' ತಲೆಯ ಮೇಲಿಟ್ಟುಕೊಂಡು ಹಿಂತಿರುಗುವರು. ಸುಪ್ರಸಿದ್ಧ ಬಾದಶಾಹ ತೈಮೂರ ಲಂಗ ಮೊಟ್ಟಮೊದಲು ತಾಜಿಯ ಪದ್ಧತಿಯನ್ನು ಪ್ರಾರಂಭಿಸಿದನಂತೆ. ಹಜರತರ ಇಮಾಮ ಸಾಹೇಬರ ಗೋರಿಯ ಪ್ರತೀಕವೇ ತಜಿಯಾ. ಅದು ಅರಬ್ಬೀ ಭಾಷೆಯ ಶಬ್ದ. ಇದರ ಅರ್ಥ ದು:ಖ, ಶೋಕ. ಇದಕ್ಕೆ ಇನ್ನೊಂದು ಹೆಸರು ಬಳಕೆಯಲ್ಲಿದೆ'ತಾಭೂತ'ಎಂದರೆ ಹೆಣವನ್ನು ಹೂಳುವುದಕ್ಕಾಗಿ ಉಪಯೋಗಿಸುವ 'ಪೆಟ್ಟಿಗೆ' ಡೋಲಿಯ ಉತ್ಪತ್ತಿ ಮತ್ತು ಅರ್ಥಕುರಿತು ವಿವರಣೆ ಇದಾಗಿದೆ.

ಆನಂತರ 'ಅಲಬಿದಾಯೋ ಅಲಬಿದಾಯೋ ಹಾಸೈದಾ ಏ ಹುಸೇನಿ ಏ ಹುಸೇನಿ' ಎಂದು ಶೋಕಗೀತವನ್ನು ಹಾಡುತ್ತ ಮಸೀದಿಗೆ ಮರಳುವರು. 'ಪೀರಗಳ ಜಾರತ' ಮಾಡುವವರೆಗೆ ಡೋಲಿಯನ್ನು ಮಸೀದಿಯಲ್ಲಿಟ್ಟು ಆನಂತರ ತೆಗೆದು ಬಿಡುವರು. ಹಿಂದೂಗಳ ಗಣೇಶನ ಪ್ರಭಾವ ಮೊಹರಮ್ಮಿನ ಮೇಲೆ ಬಿದ್ದಿರಬಹುದೇನೂ ಎಂದೆನಿಸುತ್ತದೆ. ಹೊರದೇಶದಿಂದ ಬಂದ ಮುಸ್ಲೀಮರು ಈ ಹಬ್ಬವನ್ನು ಕಂಡುಕೊಂಡು ತಮ್ಮ ಮೋಹರಂ ಆಚರಣೆಯನ್ನೂ ಇದೇ ಜಾಡಿನಲ್ಲಿ ಆಚರಿಸಿಕೊಂಡು ಬಂದಂತಿದೆ. ಗಣೇಶನಿಗೆ 'ವಿದ್ಯೆ'ಯ ಚಿನ್ಹೆ ನಮ್ಮಲ್ಲಿದ್ದರೆ, ಹಜರತ ಅಲಿಯವರಿಗೆ 'ವಿದ್ಯೆಯ' ಚಿನ್ಹೆ ಮುಸ್ಲೀಮರಲ್ಲಿರುವದು ಆಧಾರವೆನಿಸುತ್ತದೆ.

ಮೋಹರಂ ಆಚರಣೆಯಿಂದಾಗಿ 'ಸುನ್ನಿ' ಮತ್ತು 'ಸಿಯಾ' ಎಂದು ಎರಡು ಪಂಗಡಗಳಾದುವು. ಮಹಮ್ಮದರ ತರುವಾಯ ಬಂದ ನಾಲ್ಕು ಜನ ಖಲೀಫರನ್ನು ಗೌರವಿಸುವವರಿಗೆ 'ಸುನ್ನಿ' ಯವರೆಂದು, ಹಜರತ ಅಲಿಯವರೊಬ್ಬರನ್ನೇ ಪೂಜಿಸುವವರಿಗೆ ಸಿಯಾ ಪಂಗಡದವರೆಂದೂ ಗುರುತಿಸುತ್ತಾರೆ. ಹೀಗಾಗಿ ಅನೇಕ ಜನ ಮುಸಲ್ಮಾನರು ಮೋಹರಂ ಆಚರಣೆಯನ್ನು ಮಾಡಿದರೆ ಇನ್ನು ಕೆಲವರು ಆಚರಿಸುವದಿಲ್ಲಾ.

ಧೂಲಾ ಆಡುವದು: ಮೋಹರಂ ಸಂದರ್ಭದಲ್ಲಿ ಜನಮನವನ್ನು ರಂಜಿಸುವ ಇನ್ನೊಂದು ವಿಶೇಷ 'ಧೂಲಾ' ಆಡುವದು. ಮಸೀದೆಯೊಳಗಿನ ಪೀರಗಳ ಮುಂದೆ ಹಾಡುತ್ತಾ ಹಲಗೆಯ ಕಡತದೊಂದಿಗೆ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು, ಸುಂದರವಾಗಿ ಕುಣಿಯುತ್ತಾರೆ. ಇದಕ್ಕೆ 'ಹೆಜ್ಜೆ ಕುಣಿತ', 'ಅಲಾಯಿ ಕುಣಿತ' ಎಂದು ಕರೆಯುವುದುಂಟು. ಇದರಲ್ಲಿ ಎಂಟರಿಂದ ಹತ್ತು ಜನ ಅಥವಾ ಇದಕ್ಕಿಂತಲೂ ಹೆಚ್ಚು ಜನ ಭಾಗವಹಿಸಬಹುದು. ಕೈಯಲ್ಲಿ ಬಡಿಗೆ, ಹತಿಯಾರ, ಕೆಂಪುವಸ್ತ್ರ ಮುಂತಾದವುಗಳನ್ನು ಹಿಡಿದು ದುಂಡಾಗಿಯೊ ಅಥವಾ ಒಬ್ಬರ ನಡುವೆ ಒಬ್ಬರು ಹೋಗುತ್ತಾ ಧೂಲಾ ಆಡುವರು.

ದು:ಖದ ಸನ್ನಿವೇಶದಲ್ಲಿ ಈ ಕುಣಿತವೇಕೆ ಬರಬೇಕಿತ್ತು ಎನ್ನುವುದಕ್ಕೆ ಹಲವರು ಯಜೀದನ ಜನ ಅವರನ್ನು ಸಂಹರಿಸುತ್ತಾ ಕುಣಿದದ್ದರ ಸಂಕೇತ ಎಂದು ಅಭಿಪ್ರಾಯ ಪಡುತ್ತಾರೆ. ಆದರೆ ಈ ಅಭಿಪ್ರಾಯ ಅಷ್ಟೊಂದು ಸಮಂಜಸವೆನಿಸದು. ಆನಂದಾಭಿವ್ಯಕ್ತಿಯ ಸಂಕೇತವಾಗಿದೆ. ಯಾಕೆಂದರೆ ಮೋಹರಂ ಹಬ್ಬವೇ ಒಂದು ದುರಂತ ಚರಿತ್ರೆಯ ಧಾರ್ಮಿಕ ಸಂಕೇತವಾಗಿದೆ. ತಮ್ಮ ಹಾಡುಗಳಿಗೆ ಬಣ್ಣ ಬರಲೆಂಬ ಉದ್ದೇಶದಿಂದ ಮಾತ್ರ ಈ ಶೋಕಗೀತೆಗಳೊಡನೆ ಲೋಕ ನೃತ್ಯದ ಗತಿಯೂ ಬೆರೆತುಕೊಂಡಿದೆ.

ಜನಪದ ಹಾಡುಗಳ ವಿವಿಧ ಪ್ರಕಾರಗಳನ್ನು ನಾವು ಅವಲೋಕಿಸಿದರೆ ಇಲ್ಲಿನ ಅರ್ಥ ಗೋಚರಿಸುತ್ತದೆ. ಕೋಲಾಟ ಹಾಡು–ನೃತ್ಯ, ಡೊಳ್ಳು–ಹಾಡು ನೃತ್ಯ, ಭಜನೆಹಾಡು ನೃತ್ಯ, ಬಯಲಾಟ ಹಾಡು–ನೃತ್ಯ, ಪುರವಂತಹಾಡು–ನೃತ್ಯ ಹೀಗೆ ಇದೇ ಜಾಡಿನಲ್ಲಿ ರಿಯಾಯ್ತ ಹಾಡು–ನೃತ್ಯ ಉಂಟಾಗಿರಲು ಸಾಕು. ಏಕೆಂದರೆ ನಮ್ಮ ಹಾಡಿನ ಜೊತೆ ಕುಣಿತ ಯಾವಾಗಲೂ ಜತೆಗೂಡಿಯೇಬಂದಿದೆ. ಕುಣಿತವಿಲ್ಲದ ಹಾಡು ಸಪ್ಪೆ ಎನ್ನುವ ಮನೋಭಾವ ಜನಪದರದು. ಅಂತೆಯೆ ಧೂಲಾ ಆಡುವ ಕಲೆ ಬೆಳೆದುಕೊಂಡು ಬಂದಂತಿದೆ. ಆದರೆ ಇತ್ತಿತ್ತಲಾಗಿ ಕುಣಿತ ತನ್ನ ಮೂಲ ಸತ್ವವನ್ನು ಕಳೆದುಕೊಂಡಿದೆ. ಇದೊಂದು ಅವಕಾಶ ಎನ್ನುವಂತೆ ಸುರಾಪಾನ ಮಾಡಿ ಮದೋನ್ಮತ್ತರಾಗಿ ಕುಣಿಯುವಸ್ಥಿತಿಗೆ ಬಂದಿದೆ. ಮನರಂಜನೆ ಮಾಡುವ ಭರದಲ್ಲಿ ಹಾಸ್ಯದತ್ತ ತಿರುಗಿ ಗೇಲಿ ಮಾಡುತ್ತ, ದು:ಖದ ಪ್ರಸಂಗವನ್ನೇ ಮರೆತಂತಿವೆ. ದು:ಖದ ಸನ್ನೀವೇಶದಲ್ಲಿ ಹಾಸ್ಯ ಬಂದು ಅಭಾಸಕ್ಕೆಡೆಯುಂಟು ಮಾಡಿದೆ.

ಸಾಮಾಜಿಕ ಚಿತ್ರಣ: ರಿವಾಯ್ತ ಕವಿಗಳು ತಮ್ಮ ಹಾಡುಗಳ ಮೂಲಕ ಮುಸ್ಲೀಂ ಸಂಸ್ಕೃತಿಯ ದರ್ಶನ ಮಾಡಿ ಕೊಡುವುದರ ಜೊತೆಗೆ ನಮ್ಮ ಸಂಸ್ಕೃತಿಯ ಸಾಮಾಜಿಕ ಚಿತ್ರಣವನ್ನು ನೀಡಿದ್ದಾರೆ. ಅಲ್ಲದೆ ಕರ್ಬಲ ಕಾಳಗದ ಘಟನೆ, ದು:ಖವನ್ನೇ ಕೇಳಿ ಬೇಸತ್ತ ಜನರಿಗೆ ಅವುಗಳ ಹೊರತಾಗಿ ಬೇರೆ ಹಾಡುಗಳನ್ನು ಕೇಳಬೇಕೆನ್ನುವ ಕಾತುರಕ್ಕೊಳಗಾಗಿ ಸಾಮಾಜಿಕ ಚಿತ್ರಣದ ಹಾಡುಗಳಿಂದ ಹೈದ್ರಾಬಾದ ಕರ್ನಾಟಕದ ಜನಪದ ಸಂಸ್ಕೃತಿಯ ಅರಿವು ಆಗುವುದು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, 'ಮಲತಾಯಿ ಮತ್ಸರ', 'ಅತ್ತೆ ಸೊಸೆಯರ ಕದನ' ಮುಂತಾದ ಹಾಡುಗಳು ಕೌಟುಂಬಿಕ ಜೀವನದಲ್ಲಿ ಕಂಡು ಬರುವ ಮತ್ಸರ ಮನೋಭಾವನೆಗೆ ಸಂಬಂಧಿಸಿದವುಗಳು. ಭೀಮಾನದಿ ತುಂಬಿ ಬಂದು ಪ್ಯಾರಸಾಬಾದಿ ಹರಿದು ಹೋದದ್ದು ಭಾರತದಲ್ಲಿ ಇಂಗ್ರೇಜಿಯರ ದಬ್ಬಾಳಿಕೆ, 1972 ರ ಭೀಕರ ಬರಗಾಲ, 'ರಜಾಕರ ಹಾವಳಿ' ಮುಂತಾದವುಗಳು ಹೈದ್ರಾಬಾದ ಕರ್ನಾಟಕದಲ್ಲಿ ಹಿಂದೆ ಆಗಿ ಹೋದ ಸಾಮಾಜಿಕ ದುರಂತದ ಕಥನ ಕವನಗಳೆನಿಸಿವೆ.

ಮರ್ಸಿಯಾ ಕವಿಗಳು: ಮೋಹರಂ ಘಟನೆಯನ್ನು ಕುರಿತು ಅನೇಕ 'ಮರ್ಸಿಯಾ' ಹಾಡುಗಳು ರಚನೆಯಾಗಿವೆ. ಕರ್ಬಲ ಕಾಳಗದಲ್ಲಿ ಮಡಿದ ವೀರರ ಕುರಿತು ಶೋಕ ವ್ಯಕ್ತಪಡಿಸಿ ರಚಿಸಿದ ಚರಮಗೀತೆಗಳು ಇವಾಗಿವೆ. ಪ್ರತಿಯೊಂದು ದೇಶ–ಭಾಷೆಗಳಲ್ಲಿಯೂ ಇಂಥ ಶೋಕಗೀತೆಗಳು ಇದ್ದೇ ಇವೆ. ಮರ್ಸಿಯಾ ರಚಿಸಿದ ಯಾವ ಕವಿಯೇ ಆಗಿರಲಿ ಮೊದಲು ಹಸನ, ಹುಸೇನರ ಕುರಿತಾದ ಹಾಡುಗಳನ್ನು ರಚಿಸಿ ಶೋಕವ್ಯಕ್ತಪಡಿಸಿ ಮುಂದುವರಿಯಬೇಕಾಗುತ್ತದೆ. ಪರ್ಷಿಯನ್, ಅರಬ್ಬೀ, ಉರ್ದು, ಭಾಷೆಗಳಲ್ಲಿ ಇವುಗಳ ರಚನೆ ಕಂಡು ಬರುತ್ತವೆ.

(ಬಿ.ಪಿ.ಪಿ.)

ಯ

ಯಡ್ರಾಮಿ: ಚಾರಿತ್ರಿಕ ಮಹತ್ವದ ಸ್ಥಳ. ಜೇವರ್ಗಿಯಿಂದ ನೈಋತ್ಯಕ್ಕೆ ಸುಮಾರು 50 ಕಿ.ಮೀ. ಸಿಂದಗಿಯಿಂದ ಆಗ್ನೇಯಕ್ಕೆ 35 ಕಿ.ಮೀ. ದೂರದಲ್ಲಿದೆ. 'ಪ್ರಾಚೀನ ಶಾಸನಗಳಲ್ಲಿ ಎಳರಾಮೆ, ಎಳರಾವೆ, 'ಸರ್ವನಮಸ್ಯದ ಅಗ್ರಹಾರ ದಕ್ಷಿಣ ವಾರಣಾಸಿ ಎಳರಾಮೆ' ಎಂದೆಲ್ಲಾ ಉಲ್ಲೇಖಿತಗೊಂಡಿರುವ ಈ ಊರು ಹಿಂದೆ ಸಗರ 500 ಕ್ಕೆ ಸೇರಿದ್ದು ಎಳರಾಮೆ 500 ಆಡಳಿತ ಕೇಂದ್ರವಾಗಿದ್ದಂತೆ–ತೋರುತ್ತದೆ.

ಗಾಣಿಗರು, ಬಣಜಿಗರು, ಕುರುಬರು, ಕಬ್ಬಲಿಗರು, ಒಡ್ಡರು, ವೇಷಗಾರರು, ಮೀನುಗಾರರು, ಬೇಡರು, ಮರಾಠರು, ಮುಸ್ಲಿಮರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರು, ಕೊರವ ಜನಾಂಗದವರೂ ಇಲ್ಲಿದ್ದಾರೆ.

ಇಲ್ಲಿಯವರೆಗೆ 15 ಶಾಸನಗಳು ವರದಿಯಾಗಿದ್ದು ಇದೊಂದು ಪ್ರಮುಖ ಧಾರ್ಮಿಕ, ವಾಣಿಜ್ಯ ಮತ್ತು ವಿದ್ಯಾ ಕೇಂದ್ರವಾಗಿ ಮೆರೆದದ್ದರ ಬಗೆಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. ಸರಕಾರಿ ಪ್ರಾಥಮಿಕ, ಪ್ರೌಢಶಾಲೆ, ಉರ್ದು ಹೈಸ್ಕೂಲ್, ಸರಕಾರಿ ಕನ್ಯಾ ಪ್ರೌಢಶಾಲೆ, ಕಡಿಕೋಳ ಮಡಿವಾಳೇಶ್ವರ ವಿದ್ಯಾ ಸಂಸ್ಥೆ, ಜ್ಞಾನ ಜ್ಯೋತಿ ವಿದ್ಯಾ ಸಂಸ್ಥೆ, ಧರ್ಮಸಿಂಗ್; ಶರಣಗೌಡ ಇನಾಮದಾರರ ಐಟಿಐ ಕಾಲೇಜುಗಳೂ ಸೇರಿದಂತೆ ಯಡ್ರಾಮಿಯಲ್ಲಿ ಸಂಪ್ರದಾಯಕ ತಾಂತ್ರಿಕ ಶಿಕ್ಷಣಕ್ಕೂ ಅವಕಾಶ ಕಲ್ಪಿಸಲಾಗಿದೆ. ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಪಶು ವೈದ್ಯಕೀಯ ಚಿಕಿತ್ಸಾಲಯ ಹಾಗೂ ಧರ್ಮಸಿಂಗ್ ಫೌಂಡೇಶನ್‌ನಿಂದ ಸಂಚಾರಿ ತುರ್ತು ಚಿಕಿತ್ಸಾ ವಾಹನ ಸೌಲಭ್ಯವಿದೆ. ವಿರಕ್ತಮಠ, ವಿಶ್ವಾರಾಧ್ಯರ ಮಠಗಳಿಂದ ಕಂಗೊಳಿಸುವ ಯಡ್ರಾಮಿ ಹನುಮಾನ ದೇವಾಲಯ, ಬಸವೇಶ್ವರ ದೇವಾಲಯ, ಯಲ್ಲಮ್ಮ ದೇವಿಯ ದೇವಾಲಯಗಳಿಂದ ಖ್ಯಾತಿ ಪಡೆದಿದೆ.

(ಎಂ.ಬಿ.ಪಿ.)

ಯಮನಪ್ಪ ರಾಜಪ್ಪ ಭಜಂತ್ರಿ: ಶಹಾನಾಯಿ ವಾದಕರು. ಇವರು ರಾಯಚೂರು ಜಿಲ್ಲೆ ಲಿಂಗಸೂಗೂರಿನ ಆಮದಿಹಾಳ ಗ್ರಾಮದಲ್ಲಿ ಹುಟ್ಟಿ ಬೆಳೆದವರು. ತಾಯಿ ಯಮನಮ್ಮ, ತಂದೆ ರಾಜಪ್ಪ, ಶಹಾನಾಯಿ ಕಲೆ ಇವರಿಗೆ ವಂಶ ಪಾರಂಪರ್ಯವಾಗಿ ಬಂದಿದೆ. ಇವರ ಗುರು ತಿಮ್ಮಣ್ಣ ಭಜಂತ್ರಿಯವರು. ಹಿರೇಶಿವನಗುತ್ತಿ ಬಾಗಲಕೋಟ ಜಿಲ್ಲೆಯವರಾಗಿದ್ದು ಅಲ್ಲಿ ಶಹನಾಯಿ ವಾದನವನ್ನು

ಕಲಿತರು. ಇವರು ಗ್ರಾಮೀಣ ಭಾಗದಲ್ಲಿ ಮದುವೆ, ಮುಂಜಿ, ಶರಣರ ಜಾತ್ರೆಗಳು ಹಾಗೂ ಸರಕಾರದಿಂದ ನಡೆಯುವ. ಕಾರ್ಯಕ್ರಮ ಹಾಗೂ ರಾಜ್ಯ ರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿ ಜನರ ಮೆಚ್ಚುಗೆ ಗಳಿಸಿದ್ದಾರೆ. ಜಾನಪದ ಅಕಾಡಮಿ ಪ್ರಶಸ್ತಿ ನೀಡಿ ಗೌರವಿಸಿದೆ. (2003) ಶಹಾನಾಯಿ ವಾದನದಲ್ಲಿ ಸ–ರಿ–ಗ–ಮ ದಿಂದ ಹಿಡಿದು ಸ್ವರಸಾಹಿತ್ಯ ಸ್ಪಷ್ಟಮಾಡಿಕೊಂಡು ಆ ಸ್ವರಕ್ಕೆ ತಕ್ಕಂತೆ ರಾಗಬದ್ಧವಾಗಿ ಆ ರಾಗದ ವರ್ಣ ಬಿಳಿವರ್ಣ ದುರ್ಗಾರಾಗ ಮಾಲಕೂಸರಾಗ, ದೀಪರಾಗ, ತಾಡಿರಾಗ, ಭೀಮಪಲಾಸ, ಯಮನರಾಗ ಹೀಗೆ 32 ರಾಗಗಳು ಈ ಎಲ್ಲ ಕಲೆಗಳಲ್ಲಿ ಪಾರಂಗತರಾಗಿದ್ದಾರೆ. *(ಪಿ.ಎಸ್.ಪಿ.)*

ಯಲ್ಲಮ್ಮ ಜಾತ್ರೆ: ಯಾದಗೀರ ಜಿಲ್ಲೆ ಶಹಾಪೂರ ತಾಲ್ಲೂಕಿನ ಸಗರದ ಈ ಜಾತ್ರೆಯು ಪ್ರತಿವರ್ಷ ಭಾರತ ಹುಣ್ಣಿಮೆಯ ದಿನದಂದು ಅತಿ ವಿಜೃಂಭಣೆಯಿಂದ ಜರುಗುತ್ತದೆ. ಈ ಜಾತ್ರೆಯನ್ನು ನೋಡಲು ಗುಲಬರ್ಗಾ, ಜೇವರ್ಗಿ, ಶಹಾಪೂರು ಸುರಪುರ, ಯಾದಗಿರಿ ಚಿತ್ತಾಪೂರು, ಬಿಜಾಪೂರು, ರಾಯಚೂರು, ಲಿಂಗಸುಗೂರು, ಸಿಂದಗಿ ಹಾಗೂ ದೇವದುರ್ಗಾ ಮುಂತಾದ ಭಾಗಗಳಿಂದ ಲಕ್ಷಾಂತರ ಭಕ್ತರು ಬಂದು ಭಕ್ತಿಯ ಮಹಾಪೂರವನ್ನೇ ಹರಿಸುತ್ತಾರೆ.

ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಸಗರ ಯಲ್ಲಮ್ಮ ದೇವಿಯ ಮಹಿಮೆಯನ್ನು ಈ ಭಾಗದ ಜನತೆ ಭಕ್ತಿ ಭಾವದಿಂದ ಕೊಂಡಾಡುತ್ತಾರೆ. ವಿಶೇಷವಾಗಿ ಗ್ರಾಮೀಣ ಭಾಗದ ಭಕ್ತರು ಇಲ್ಲಿಗೆ ಬಂದು ಹರಕೆ ಸಲ್ಲಿಸುವರು. ಪ್ರತಿ ಮಂಗಳವಾರ ಮತ್ತು ಶುಕ್ರವಾರ ಗಳಂದು ಭಕ್ತರ ವಿಶೇಷ ಪೂಜೆ ಇರುತ್ತದೆ.

ಈ ದೇವಿಗೆ ನಂಬಿಕೊಂಡರೆ ಯಾವುದೇ ಚರ್ಮರೋಗ ಬರುವುದಿಲ್ಲವೆಂದು ನಂಬಿಕೆ ಇದೆ. ಆದ್ದರಿಂದ ಇಲ್ಲಿ ಸೇವೆ ಸಲ್ಲಿಸುವ ಭಕ್ತರ ಮೈಗೆ ಅರಿಷಿಣಹಚ್ಚಿ ಕೊಂಡು ಸೇವೆ ಸಲ್ಲಿಸುವುದನ್ನು ಕಾಣಬಹುದು. ಜಾತ್ರೆಯ ಅಂಗವಾಗಿ ಪಲ್ಲಕ್ಕಿ ಉತ್ಸವ, ಗೀಗಿ ಪದಗಳ ಮೇಳಗಳು ತಮ್ಮಟೆ ಬಾರಿಸುವ ಸ್ಪರ್ಧೆಗಳು ಭಜನೆ, ಕುಸ್ತಿ ಹಾಗೂ ಶಕ್ತಿಯ ಸ್ಪರ್ಧೆಗಳು ಜಾತ್ರೆಯ ಆಕರ್ಷಣೆಯಾಗಿವೆ. ಜಾನಪದದ ಆಟಗಳು ಮರೆಯಾಗುತ್ತಿರುವ ಸಂದರ್ಭದಲ್ಲಿ ಜಾತ್ರೆಗಳು ಅವುಗಳಿಗೆ ಜೀವ ತುಂಬುವ ಕೆಲಸ ಮಾಡುತ್ತವೆ.

ಭಾರತದಲ್ಲಿ ಶಕ್ತಿಪೂಜೆ, ಆರಾಧನೆ ಹಿಂದಿನಿಂದಲೂ ನಡೆದು ಬಂದಿರುವ ಸಂಪ್ರದಾಯ. ಅದಕ್ಕೆ ಹೈದ್ರಾಬಾದ ಕರ್ನಾಟಕ ಪ್ರದೇಶವು ಹೊರತಾಗಿಲ್ಲ. ಗ್ರಾಮೀಣ ಪ್ರದೇಶದ ಜನತೆ ಶಕ್ತಿಪೂಜೆ ಮತ್ತು ಹರಕೆ ಮುಂತಾದವುಗಳನ್ನು ಅಳವಡಿಸಿಕೊಂಡಿದ್ದಾರೆ.

(ಜಿ.ಪಿ.ಎ.)


ಯಾ

ಯಾದಗಿರಿ ಕೋಟೆ: ಐತಿಹಾಸಿಕ ಪಟ್ಟಣ. ಯಾದಗಿರಿಗೆ ಏತಗಿರಿ ಎಂಬ ಹೆಸರಿತ್ತು. ಯಾದಗಿರಿ ಕಲ್ಯಾಣದ ಚಾಲುಕ್ಯರು, ಯಾದವರು, ಚೋಳರು, ಬಹಮನಿ ಸುಲ್ತಾನರು, ಅದಿಲ್‌ಶಾಹಿ ಹಾಗೂ ನಿಜಾಮರ ಆಡಳಿತಕ್ಕೆ ಒಳಪಟ್ಟಿತ್ತು.

ಬಾದಾಮಿ ಚಾಲುಕ್ಯರ ಅವನತಿಯ ಆನಂತರ ಅದೇ ವಂಶಜರೆಂದು ಹೇಳಲಾದ ಕಲ್ಯಾಣ ಚಾಲುಕ್ಯರ ಎರಡನೇ ತೈಲಪನು ರಾಷ್ಟ್ರಕೂಟರನ್ನು ಸದೆಬಡಿದು ಕ್ರಿ.ಶ. 973ರಲ್ಲಿ ಮಳಖೇಡ (ಸೇಡಂ ತಾಲ್ಲೂಕು)ದಲ್ಲಿ ತನ್ನ ಪ್ರಭುತ್ವ ಸ್ಥಾಪಿಸಿದ. ಚಾಲುಕ್ಯ ದೊರೆ ಎರಡನೆಯ ಜಯಸಿಂಹ, ಒಂದನೆಯ ಸೋಮೇಶ್ವರನ ಕಾಲದಲ್ಲಿ ಮಳಖೇಡದ ಜೊತೆಗೆ ಯಾದಗಿರಿ, ಕೊಳ್ಳಿಪಾಕ, ಪೊಟ್ಟಲಗೆರೆ ಪ್ರದೇಶಗಳೂ ರಾಜಧಾನಿ ಆಗಿದ್ದುವು. ಒಂದನೆಯ ಸೋಮೇಶ್ವರ ತನ್ನ ಅಧಿಕಾರಾವಧಿಯಲ್ಲಿ ರಾಜಧಾನಿಯನ್ನು ಬೀದರ್‌ನ ಕಲ್ಯಾಣ ಪಟ್ಟಣಕ್ಕೆ ಸ್ಥಳಾಂತರಿಸಿದ. ಬಹುಶಃ ತಂಜಾವೂರಿನ ಚೋಳ ರಾಜನ ಆಕ್ರಮಣ ಎದುರಿಸುತ್ತಿದ್ದ ಚಾಲುಕ್ಯರು ರಾಜಧಾನಿಯನ್ನು ಮಳಖೇಡದಿಂದ ಕಲ್ಯಾಣಕ್ಕೆ ಸ್ಥಳಾಂತರಿಸಿರಬಹುದು.

ಕಲ್ಯಾಣದ ಚಾಲಕ್ಯರ ಪ್ರಸಿದ್ಧ ದೊರೆ ಆರನೆಯ ವಿಕ್ರಮಾದಿತ್ಯನು ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿ–ಕೊಂಡಿದ್ದರೂ ಬನವಾಸಿ, ಬಳ್ಳಿಗಾವಿ, ವಿಜಯಪುರಿ, ಏತಗಿರಿ (ಯಾದಗಿರಿ) ಮುನ್ನೇಯ ಕೇರಿಗಳಲ್ಲಿ ರಾಜ್ಯಭಾರ ಮಾಡಿದ್ದನು ಎಂದು ಹೇಳಲಾಗಿದೆ. ಆರನೆಯ ವಿಕ್ರಮಾದಿತ್ಯನು ಪರಾಕ್ರಮಿಯಷ್ಟೇ ಅಲ್ಲದೆ ಕಲೆ, ಸಾಹಿತ್ಯ, ಶಿಕ್ಷಣ ಪ್ರೇಮಿಯೂ ಆಗಿದ್ದ. ಕಾಶ್ಮೀರ ಕವಿ ಬಿಲ್ಹಣ, ಮಿತಾಕ್ಷರ ಕೃತಿಯ ಕರ್ತೃ ಕಲಬುರ್ಗಿ (ಗುಲಬರ್ಗಾ) ಸಮೀಪದ ಮರತೂರಿನ ವಿಜ್ಞಾನೇಶ್ವರ, ನಯಸೇನ ಮುಂತಾದ ವಿದ್ವಾಂಸರಿಗೆ ಆಶ್ರಯದಾತನಾಗಿದ್ದ.

ಯಾದಗಿರಿ ಕೋಟೆಯಲ್ಲಿ ಐದು ಶಾಸನಗಳು ಪತ್ತೆಯಾಗಿವೆ. ಕೋಟೆಯ ದ್ವಾರದ ಮೇಲಿರುವ ಒಂದು ಸಾಲಿನ ಶಾಸನವು ಕೋಟೆ



ಯಾದಗಿರಿ ಕೋಟೆ

ಸಗರದ ಜಗನ್ನಾಥನ ನಿರ್ಮಾಣವೆಂದು ಹೇಳುತ್ತವೆ. ತೀರ್ಥಂಕರ ಗುಹೆಯ ಎಡಬದಿಯಲ್ಲಿರುವ ಎರಡು ಪ್ರತ್ಯೇಕ ಶಾಸನಗಳು ಬಸದಿಗೆ ಸಂಬಂಧಿಸಿದವು. ಇವು 10–11ನೆಯ ಶತಮಾನಕ್ಕೆ ಸೇರಿದವು. ಕೋಟೆಯೊಳಗೆ ಮೋತಿ ತಲಾಬಿನ ಗೋಡೆ ಮೇಲಿರುವ 1546ರ ಶಾಸನ ಒಂದನೇ ಇಬ್ರಾಹಿಂ ಆದಿಲ್ ಷಾ ಕಾಲಕ್ಕೆ ಸೇರಿದೆ. ಅಥಾರ್ ಮಸೀದಿಯ ದ್ವಾರದ ಮೇಲಿರುವ 1573ರ ಶಾಸನವು 1ನೆಯ ಅಲಿ ಆದಿಲ್‌ಷಾನ ಆಡಳಿತ ಕಾಲದ್ದು. ಮಿರ್ಜಾ ಅಲಿಯ ಮಗ ಖ್ವಾಜಾ ಹಸನ್ ಕಿರ್ಮಾನಿ ಈ ಮಸೀದಿಯನ್ನು ನಿರ್ಮಿಸಿದ ವಿಷಯವನ್ನು ಅದು ತಿಳಿಸುತ್ತದೆ. ಈ ಕೋಟೆ ಕಲ್ಯಾಣದ ಚಾಲುಕ್ಯರ ಕಾಲದ ರಚನೆ ಆನಂತರದಲ್ಲಿ ಇದನ್ನು ಯಾದವರು ಬಲಪಡಿಸಿದರು. ಬಹಮನಿ, ಆದಿಲ್‌ಶಾಹಿ ಹಾಗೂ ನಿಜಾಮರ ಕಾಲದಲ್ಲೂ ಸಾಕಷ್ಟು ಅಭಿವೃದ್ಧಿಯಾಗಿ ವಿಸ್ತರಿಸಲ್ಪಟ್ಟಿದೆ. ಈ ಕೋಟೆಯನ್ನು ಇತಿಹಾಸಕಾರ ಗುಲಾಮ್ ಯಜ್ದಾನಿ 1929–30ರಲ್ಲಿ ಸಮೀಕ್ಷೆ ಮಾಡಿದ್ದರೆಂದು ತಿಳಿದು ಬರುತ್ತದೆ.

ಯಾದಗಿರಿ ಕೋಟೆಯಲ್ಲಿ ಹಿಂದೂ, ಜೈನ, ಮುಸ್ಲಿಂ ಹಾಗೂ ಶೈವ ಧರ್ಮದ ಕುರುಹುಗಳಿವೆ. ತೀರ್ಥಂಕರರ ಗವಿಗಳು, ಕೂಷ್ಮಾಂಡಿನಿ (ಅಂಬಿಕಾ, ಆಮ್ರಾ) ದೇವಿಯ ಉಬ್ಬುಶಿಲ್ಪವಿರುವ ದೇವಸ್ಥಾನ ಈಗ ಭುವನೇಶ್ವರಿ ದೇವಿ ಎಂದು ಪೂಜೆಗೊಳ್ಳುತ್ತಿದೆ. ರಾಮಲಿಂಗೇಶ್ವರ ಎಂಬ ಶೈವ ದೇವಸ್ಥಾನ, ಈಶ್ವರ, ಕಾಳಿಕಾ ಹಾಗೂ ಆಂಜನೇಯರ ದೇವಸ್ಥಾನಗಳು, ಮಸೀದಿ, ಅಕ್ಕ–ತಂಗಿಯರ ಬಾವಿ, ಸಿಡಿಲು ಬಾವಿ, ತೋಪುಗಳು, ಕೋಟೆ ಗೋಡೆಗಳು, ಮಳೆ ನೀರಿನಿಂದ ತುಂಬಿದ ಡೋಣಿಗಳು ಹಾಗೂ ಸುತ್ತಲಿನ ಹಸಿರಿನ ಪರಿಸರದಿಂದ ಕಂಗೊಳಿಸುವ ಕೋಟೆ ಪ್ರವಾಸಿಗರನ್ನು ಆಕರ್ಷಿಸುತ್ತಿವೆ.(

ಪಿ.ಜಿ.ಎಸ್.)

ಯು

ಯುಗಾದಿ: ಹಿಂದೂಗಳಿಗೆ ವರ್ಷದ ಮೊದಲ ಹಬ್ಬ. ವರ್ಷದ (ಯುಗದ) ಆದಿ, ವರ್ಷದ ಮೂರೂವರೆ ಉತ್ತಮ ಮುಹೂರ್ತಗಳಲ್ಲಿ ಯುಗಾದಿ ಒಂದು. ಅಂದು ದಿನವಿಡಿ ಕೆಲಸಗಳ ಆರಂಭಕ್ಕೆ ಶುಭದಿನವೆಂದು ಪರಿಗಣಿಸುತ್ತಾರೆ. ಯುಗಾದಿಯಂದು ಮನೆಯನ್ನು ಸಾರಣೆ ಕಾರಣೆಗಳಿಂದ ಸ್ವಚ್ಛಗೊಳಿಸಿ, ಬಾಗಿಲುಗಳನ್ನು ಮಾವಿನ ತೋರಣದಿಂದ ಸಿಂಗರಿಸುವರು. ಅಭ್ಯಂಗ ಸ್ನಾನ ಮಾಡುವರು. ಸ್ನಾನ ಮಾಡುವ ನೀರಿನಲ್ಲಿ ಬೇವಿನ ಎಲೆಗಳನ್ನು ಹಾಕುವ ಪದ್ಧತಿ ಇದೆ. ಕಾಲ ಕೆಳಗೆ ಬೇವಿನ ಎಲೆಗಳಿಟ್ಟು ಸ್ನಾನ ಮಾಡುವ ರೂಢಿಯೂ ಇದೆ. ಇದು ಕಹಿ ಎಲ್ಲ ಕಳೆಯಿತು ಎಂಬ ನಂಬಿಕೆ ಇರಬೇಕು. ಹೋಳಿಗೆ, ಶಾವಿಗೆ ಊಟದ ಜೊತೆಗೆ "ಬೇವು ಬೆಲ್ಲ" ವಿಶೇಷವಾಗಿರುತ್ತದೆ. ಬೇವಿನ ಹೂಗಳು, ಒಣದ್ರಾಕ್ಷಿ, ಗೋಡಂಬಿ, ಕಲ್ಲು ಸಕ್ಕರೆ, ಕೊಬ್ಬರಿ, ಮಾವು, ಬೆಲ್ಲಗಳಲ್ಲದೆ ಹಣ್ಣಿನ ತಿರುಳುಗಳನ್ನು ಹಾಕಿ ಹೊಸ ಗಡಿಗೆಯಲ್ಲಿ ಬೇವು ಮಾಡಿರುತ್ತಾರೆ. ಯಾದಗೀರ, ಸುರಪೂರ, ಶಹಾಪೂರ ತಾಲ್ಲೂಕುಗಳಲ್ಲಿ ವಿಶೇಷವಾಗಿ ಮನೆ ಮನೆಗೆ ಬೇವು ಕುಡಿಯಲು ಕರೆದು ಬರುತ್ತಾರೆ. ಅದರಂತೆ ಮನೆಗೆ ಬಂದವರನ್ನು ಬೇವು ಕೊಟ್ಟು ಸತ್ಕರಿಸುತ್ತಾರೆ. ಸಾಯಂಕಾಲ ಹನುಮಂತ ದೇವರ ಗುಡಿಯಲ್ಲಿ ಅಯ್ಯನವರಿಂದ ಅಥವಾ ಪುರೋಹಿತರಿಂದ ಪಂಚಾಂಗ ಓದಿಸಿ ಮಳೆ ಬೆಳೆಗಳ ವಿಚಾರ ಕೇಳುವ ರೂಢಿ ಇದೆ. ಮಹಾರಾಷ್ಟ್ರದ ಗಡಿಪ್ರದೇಶದಲ್ಲಿ (ಆಳಂದ, ಅಫಜಲಪೂರ ತಾಲ್ಲೂಕುಗಳು) "ಗುಡಿಪಾಡುವಾ" ಎಂದು ಮನೆಯ ಮುಂಭಾಗದ ಮೇಲೆ ಒಂದು ಉದ್ದನೆಯ ಗಳುವಿಗೆ ಒಂದು ಸೀರೆ ಮತ್ತು ಬೇವಿನ ಎಲೆ, ಸಕ್ಕರೆ ಸರಗಳನ್ನು ಕಟ್ಟಿ ಅದರ ಮೇಲೊಂದು ತಂಬಿಗೆ ಬೋರಲು ಹಾಕಿ ಇಟ್ಟು ಸಾಯಂಕಾಲ ಅದನ್ನು ತೆಗೆದು ಬಿಡುತ್ತಾರೆ. ಮಹಾರಾಷ್ಟ್ರದಲ್ಲಿ ವಿಶೇಷವಾಗಿ ಆಚರಣೆಯಲ್ಲಿರುವ 'ಗುಡಿಪಾಡುವಾ' ಗಡಿನಾಡಿನಲ್ಲಿ ಪ್ರಭಾವ ಬೀರಿದೆ. ಆದರೆ ಉಳಿದೆಡೆ ಈ ಪದ್ಧತಿ ಇಲ್ಲ.

ಯುಗಾದಿ ಅಮಾವಾಸ್ಯೆಯಾದ ಮೇಲೆ ಮುಂದಿನ ಹದಿನೈದು ದಿನಕ್ಕೆ ಬರುವ ಹುಣ್ಣಿಮೆ, ದವನದ ಹುಣ್ಣಿಮೆ. ಅಂದು ಕೆಲವರು ಉಪವಾಸ ವ್ರತ ಮಾಡುವರು. ಅಲ್ಲದೆ ಹನುಮ ಜಯಂತಿಯನ್ನು ಅಂದೇ ಆಚರಿಸುತ್ತಾರೆ. ಹನುಮಂತ ಸೂರ್ಯನನ್ನು ನುಂಗಿ ಸತ್ತು ಮತ್ತೆ ಹುಟ್ಟಿ ಬಂದುದು ಈ ಹುಣ್ಣಿಮೆಯಂದು. ಅದಕ್ಕಾಗಿ ಹನುಮ ಜಯಂತಿ ಆಚರಿಸಲಾಗುತ್ತದೆ ಎಂಬ ನಂಬಿಕೆ ಜನಪದರದು. ಪ್ರತಿ ಹಳ್ಳಿಗಳಲ್ಲಿ ಹನುಮಂತದೇವರ ಪೂಜೆ, ಜಾತ್ರೆ, ರಥೋತ್ಸವ ಗಳನ್ನು ಉತ್ಸಾಹ ವೈಭವಗಳಿಂದ ಆಚರಿಸುವರು.

ಅಕ್ಷತದಿಗೆ ಅಮವಾಸ್ಯೆಯಾದ ದಿನಗಳಿಗೆ ಬರುವುದು ಬಸವ ಜಯಂತಿ. ಮೂರೂವರೆ ಅಮೃತ ಮುಹೂರ್ತಗಳಲ್ಲಿ ಇದೂ ಒಂದು ದಿನ. ಹಳ್ಳಿಗಳಲ್ಲಿ ಎತ್ತುಗಳನ್ನು ಪೂಜಿಸಿ, ಹೋಳಿಗೆ ತಿನ್ನಿಸಿ ಬಸವಣ್ಣ (ಎತ್ತಿ)ನ ಹಬ್ಬವೆಂದು ಆಚರಿಸುವರು. ಪಟ್ಟಣಗಳಲ್ಲಿ ಬಸವ ಜಯಂತಿಯನ್ನು ಬಸವಣ್ಣನ ಹುಟ್ಟಿದ ದಿನವೆಂದು ಪರಿಗಣಿಸಿ ಮೆರವಣಿಗೆ, ಬಸವಣ್ಣನ ವಚನಗಳ ಚರ್ಚೆ, ವಿಚಾರ ಸಂಕಿರಣ ಉತ್ಸವಗಳು ಏರ್ಪಡಿಸುವರು.

ವೈಶಾಖದಲ್ಲಿ ಬರುವ ಹುಣ್ಣಿಮೆ, ಆಗಿಹುಣ್ಣಿಮೆ. ಇದು "ಆಗಿ" "ಸಸಿ" ಗಳನ್ನು ತಯ್ಯಾರು ಮಾಡಿಕೊಳ್ಳುವ ಬಿತ್ತನೆಗಾಗಿ ಅಣಿಮಾಡಿಕೊಳ್ಳುವ ಹುಣ್ಣಿಮೆ. ಇದಕ್ಕೆ ವಿಶೇಷವಾದ ಆಚರಣೆ ಏನೂ ಇಲ್ಲ.

ಕಾರಹುಣ್ಣಿಮೆ ಜನಪದರಿಗೆ ವಿಶೇಷವಾದುದು. ಕಾರ ಎಂದರೆ ಮಳೆ, ಮಳೆಗಾಲದ ಆರಂಭದಲ್ಲಿಯೇ ಇದು ಬರುವುದರಿಂದ ಕಾರ ಹುಣ್ಣಿಮೆ ಎಂದು ಅರ್ಥವತ್ತಾದ ಹೆಸರು ಪಡೆದಿದೆ. ಕಾರ ಹುಣ್ಣಿಮೆ ಕರಕೊಂಡು ಬಂದಿತು, ಉಗಾದಿ ಉಡುಗಿಕೊಂಡು ಹೋಯಿತು ಎಂಬ ಗಾದೆ ಪ್ರಚಲಿತವಾಗಿದೆ. ಕಾರ ಹುಣ್ಣಿಮೆಯಿಂದ ಹಬ್ಬಗಳು ಮೇಲಿಂದ ಮೇಲೆ ಬರುತ್ತವೆ.

ಕಾರಹುಣ್ಣಿಮೆಯ ಹಿಂದಿನ ದಿನವೆ ಹೊನ್ನುಗ್ಗಿ. ಅಂದು ಎತ್ತಿನ ಕೊಟ್ಟಿಗೆ ಸಾರಿಸಿ ಸ್ವಚ್ಛಗೊಳಿಸುವರು. ಜೋಳ ಕುಟ್ಟಿ ಹದಮಾಡಿದ

ಕಿಚಡಿ ಮಾಡಿ ಎತ್ತುಗಳಿಗೆ ನೈವೇದ್ಯ ಕೊಡುವರು. ತತ್ತಿ ಮತ್ತು ಜೋಳದ ಹಿಟ್ಟಿನ ಎಂಜಲ ದನಗಳಿಗೆ ಕುಡಿಸುತ್ತಾರೆ. ಹೊನ್ನುಗ್ಗಿಯ ದಿನ ಶುಭಕಾರ್ಯಗಳಿಗೆ ಒಳ್ಳೆಯ ದಿನವೆಂಬುದು ಜನಪದರ ನಂಬುಗೆ.

ಹೊನ್ನುಗ್ಗಿ ಎಂದು ಕರೆಯಲಾಗುವ ಇಂದಿನ ದಿನಕ್ಕೆ ಒಂದು ಪೌರಾಣಿಕ ಕಥೆಯೂ ಇದೆ. ದೇವತೆಗಳಿಗೆ ತಾರಕಾಸುರನ ಹಾವಳಿ ಹೆಚ್ಚಾಗಿತ್ತು. ಶಿವ ಸಭೆಸೇರಿಸಿ ಎಲ್ಲ ದೇವರುಗಳನ್ನು ತಾರಕಾಸುರನಿಗೆ ಸಂಹರಿಸಲು ಕೇಳಿದನಂತೆ. ಅದಕ್ಕೆ ಯರೂ ಸಮ್ಮತಿಸಲಿಲ್ಲ. ಆಗ ಒಂದು ಕೊಪ್ಪರಿಗೆ ತುಂಬ ಹುಗ್ಗಿ ಮಾಡಿಸಿ ಅದರಲ್ಲಿ ಒಂದು ಬಂಗಾರದ ಉಂಗುರ ಹಾಕಿ ಎಲ್ಲ ದೇವತೆಗಳಿಗೆ ಉಣಬಡಿಸಿ ಅದು ಯಾರಿಗೆ ಬರುವುದೋ ಅವರು ತಾರಕಾಸುರನನ್ನು ಸಂಹರಿಸಬೇಕೆಂದು ಹೇಳಿದನಂತೆ. ನಂದೀಶ್ವರನ ತಟ್ಟೆಯಲ್ಲಿ ಆ ಉಂಗುರ ಬಂದಿತಂತೆ. ಶಿವನ ಹೆಸರನ್ನು ಸ್ಮರಿಸುತ್ತ ಅವನು ತಾರಕಾಸುರನನ್ನು ಸಂಹರಿಸಲು ಹೋದನಂತೆ. ತಾಕಾರಸುರನ ವಧೆಯಾದದ್ದು ಕಾರಹುಣ್ಣಿಮೆ ಯಂದು, ಹುಗ್ಗಿ ಉಣ ಬಡಿಸಿದುದು ಅದಕ್ಕಿಂತ ಒಂದು ದಿನ ಮೊದಲು. ಅದಕ್ಕೆ ಹೊನ್ನುಗ್ಗಿ ಎಂದು ಕರೆಯಲಾಗುತ್ತದೆ ಎಂಬ ಕಥೆ ಇದೆ.

ಹೊನ್ನುಗ್ಗಿಯ ದಿನ ಎತ್ತುಗಳ ಮದುವೆಯ ಆರಂಭ ಎಂದು ಜನಪದರ ನಂಬುಗೆಯಾಗಿದೆ. ಅಂದು ಒಂದು ಆಕಳಿಗೂ ಮತ್ತು ಎತ್ತಿಗೂ ಬಾಸಿಂಗ ಕಟ್ಟುವರು. ಕುಸುಬಿಯ ಹಾಲು ಕಿಚಡಿ ಮಾಡಿ ಅವುಗಳಿಗೆ ತಿನ್ನಲು ಕೊಡುವರು.

ಕಾರಹುಣ್ಣಿಮೆಯಂದು ಎತ್ತುಗಳನ್ನು ತೊಳೆದು ಬಣ್ಣ ಬಣ್ಣಗಳಿಂದ ಸಿಂಗರಿಸಿ ಹಣೆಗೆ ಬಾಸಿಂಗ ಕಟ್ಟುತ್ತಾರೆ. ಬಣ್ಣ ಬಣ್ಣದ ಹಣೆಕಟ್ಟು, ಮಗಡ ಹಾಕುವರು. ಕೊಂಬುಗಳಿಗೆ ವಾರ್ನಿಸು, ಗೊಂಡ್ಯಗಳಿಂದ ಸಿಂಗರಿಸಿ, ಕೊರಳಲ್ಲಿ ಗಂಟೆ, ಸರ–ಜಂಗಗಳನ್ನು ಹಾಕಿ ಅಲಂಕರಿಸುವರು. ಉಳ್ಳವರು ಝೂಲಗಳನ್ನು ಹಾಕಿ ಶೃಂಗರಿಸಿ ಮೆರವಣಿಗೆಯಲ್ಲಿ ಊರ ಅಗಸೆಯವರೆಗೆ ಒಯ್ಯುತ್ತಾರೆ. ಸಣ್ಣ ಕರುಗಳು ಮತ್ತು ಎತ್ತುಗಳನ್ನು ಕರಿ ಹರಿಯುವ ಪ್ರಮುಖ ಬೀದಿಯಲ್ಲಿ ಓಡಾಡಿಸುವರು. ಊರಿನ ಅಗಸೆಯ ಹೊರಗೆ ಹೋರಿ ಎತ್ತುಗಳನ್ನು ಅಡ್ಡಲಾಗಿ ನಿಲ್ಲಿಸಿ ನಾರಿನಿಂದ ಕಟ್ಟಿದ ಬೇವಿನ ತೋರಣ ಹಿಡಿದುಕೊಂಡು ಅತ್ತಲೊಬ್ಬ ನಿಂತಿರುವರು. ಊರಿನ ಗೌಡ ಕುಲಕರಣಿ ಮುಂತಾದ ಪ್ರಮುಖರು ವಾದ್ಯ ವೈಭವಗಳೊಂದಿಗೆ ಬರಲು ಅವರು ನೋಡುತ್ತಿರುವಂತೆಯೇ ತೋರಣದ ಹಿಂದೆ ಇರುವ ಎತ್ತುಗಳನ್ನು ಊರತ್ತ ಓಡಿಸುವರು. ಮೊದಲು ತೋರಣ ಹರಿದ ಎತ್ತು ಕರಿ ಹರಿದಂತೆ. ಬಿಳಿ ಎತ್ತು ಕರಿ ಹರಿದರೆ ಬಿಳಿಜೋಳ ಹೆಚ್ಚು ಬೆಳೆಯುತ್ತದೆ. ಕಂದು ಬಣ್ಣದ್ದು ಅಥವಾ ಕೆಂಪು ಎತ್ತು ಕರಿ ಹರಿದರೆ ತೊಗರಿ ಮುಂತಾದವು ಹೆಚ್ಚು ಬೆಳೆಯುತ್ತವೆ ಎಂದು ಜನರ ನಂಬುಗೆ ಇದೆ. ಅದೇ ವರ್ಷ ಮದುವೆ ಆಗಿರುವವರು ಕರಿಹರಿಯುವದು ನೋಡಬಾರದು ಎಂಬ ನಂಬುಗೆ ಇದೆ.

ಚಿತ್ತಾಪೂರ ತಾಲ್ಲೂಕಿನ ಭಂಕೂರಿನಲ್ಲಿ ಕಾರಹುಣ್ಣಿಮೆಯನ್ನು ಅತ್ಯಂತ ವಿಶಿಷ್ಟವಾಗಿ ಆಚರಿಸುತ್ತಾರೆ. ಅಂದು ಬೆಳಿಗ್ಗೆ ಎತ್ತುಗಳ ಪೂಜೆ ನಡೆಯುತ್ತದೆ. ಸಾಯಂಕಾಲ ಊರ ಪ್ರಮುಖರಾದ ಮಾಲಿಗೌಡ, ಪೊಲೀಸಗೌಡ, ಕುಲಕರಣಿಯರನ್ನು ಒಂದು ಬಂಡಿಯಲ್ಲಿ ಕೂಡಿಸಿ ಮೆರವಣಿಗೆಯಲ್ಲಿ ಊರ ಹೊರಗಿರುವ ಕರಿಯಮ್ಮನ ದೇವಸ್ಥಾನವಿರುವ ಗುಡ್ಡದವರೆಗೂ ಬರುತ್ತಾರೆ. ಇಳುಕಲಿಗೆ ರಸ್ತೆಗೆ ಅಡ್ಡವಾಗಿ ತೋರಣ ಹಿಡಿದು ನಿಂತಿರುತ್ತಾರೆ. ಅಕ್ಕಪಕ್ಕದ ರಸ್ತೆಯಲ್ಲಿ ಜನರು ಕಿಕ್ಕಿರಿದು ನಿಂತಿರುತ್ತಾರೆ. ಗೌಡರು ಕುಳಿತ ಬಂಡಿಯನ್ನು ರಭಸವಾಗಿ ಓಡಿಸಲಾಗುತ್ತದೆ. ಓಡುವ ರಭಸದಲ್ಲಿಯೇ ಗೌಡ ತನ್ನ ಕೈಯಲ್ಲಿರುವ ಖಡ್ಗದಂಥ ಆಯುಧದಿಂದ ಒಂದೇ ಏಟಿಗೆ ಕರಿಯ ಹಗ್ಗ ಕಡಿಯುವಂತೆ ಹೊಡೆಯುಬೇಕು. ಇಲ್ಲದಿದ್ದರೆ ಅವನನ್ನೇ ಹೊಡೆಯುತ್ತಾರೆಂದು ಹೇಳಲಾಗುತ್ತದೆ. ತಾನು ತಿರುಗಿ ಬರುವನೋ ಇಲ್ಲವೋ ಎಂದು ಹೆಂಡತಿಯ ಕೊರಳಲ್ಲಿರುವ ತಾಳಿ ತೆಗೆದಿಟ್ಟು ಬರುತ್ತಾನಂತೆ. ಕರಿ ಹರಿದು ಬಂದ ಮೇಲೆ ಅವಳು ಪುನಃ ತಾಳಿ ಧರಿಸುತ್ತಾಳೆಂದು ಹೇಳುತ್ತಾರೆ. ಜಾತ್ರೆಯೋಪದಿಯಲ್ಲಿ ಜನ ನೆರೆದಿರುತ್ತಾರೆ. ಮಕ್ಕಳು ಕೊಳ್ಳುವಂಥ ಬಲೂನ, ತಿಂಡಿ ತಿನಿಸುಗಳೂ ಮಾರಾಟಕ್ಕೆ ಬಂದಿರುತ್ತವೆ. ಭಂಕೂರಿನ "ಕರಿ" ಸುತ್ತಲೆಲ್ಲ ಬಹು ಪ್ರಸಿದ್ಧವಾಗಿದೆ. ಕಾರಹುಣ್ಣಿಮೆ ಹೀಗೆ ಎತ್ತುಗಳನ್ನು ಪೂಜಿಸುವ ಹಬ್ಬವಾದರೂ ಸಾಹಸದ ಭಾವನಾತ್ಮಕವಾದ ಮಹತ್ವ ಪಡೆದಿದೆ.

ಕಾರಹುಣ್ಣಿಯಾದ ಮೇಲೆ ಬರುವ ಅಮವಾಸ್ಯೆ ಮಣ್ಣೆತ್ತಿನ ಅಮವಾಸ್ಯೆ. ಹೆಸರೇ ಸೂಚಿಸುವಂತೆ ಮಣ್ಣಿನ ಎತ್ತು ಮಾಡಿ ಪೂಜಿಸುವರು. ಕಾರಹುಣ್ಣಿಮೆಯಂದು ಜೀವಂತ ಎತ್ತುಗಳನ್ನು ಪೂಜಿಸಿದ ಜನಪದರು, ಮಣ್ಣಿನಿಂದ ಎತ್ತುಗಳನ್ನು ಮಾಡಿ ಪೂಜಿಸುವ ಹಬ್ಬವಿದು.

ಬೆಳಗ್ಗೆ ಜಿಗುಟಾದ ಮಣ್ಣನ್ನು ತಂದು ಹದ ಮಾಡಿ ಎರಡು ಎತ್ತು ಮತ್ತು ನೀರು ಕುಡಿಯುವ ಮಂಥಣಿ ಮಾಡುವರು. ಎತ್ತುಗಳನ್ನು ಗುಲಗಂಜಿ, ಜೋಳದ ಕಾಳುಗಳನ್ನು ಮೆತ್ತಿ ಸಿಂಗರಿಸುವರು. ಬೆಳಗ್ಗೆ ಜಗುಲಿಯ ಮೇಲಿಟ್ಟು ಹೋಳಿಗೆ ನೈವೇದ್ಯ ಮಾಡಿ ಪೂಜಿಸುವರು. ಮರುದಿನ ಹೊಲದಲ್ಲಿ ಇಟ್ಟು ಬರುವರು. ಅವುಗಳನ್ನು ಮುರಿಯದೇ ಹಾಗೆಯೇ ಮಳೆಯಿಂದ ಕರಗಿ ಹೋಗುವಂತೆ ನೋಡಿಕೊಳ್ಳುತ್ತಾರೆ. ಒಕ್ಕಲಿಗರಿಗೆ ಬೆಳೆಯುವ ಭೂಮಿ ಎಷ್ಟು ಮುಖ್ಯವೋ ದುಡಿಯುವ ಎತ್ತುಗಳೂ ಅಷ್ಟೇ ಮುಖ್ಯವಾಗಿರುತ್ತವೆ. ಎತ್ತುಗಳಿಗೆ ಪೂಜಿಸಿ ಕೃತಜ್ಞತೆ ತೋರಿದ ರೈತರು ಮಣ್ಣನ್ನು (ಭೂಮಿಯನ್ನು) ಎತ್ತುಗಳ ರೂಪದಲ್ಲಿ ಪೂಜಿಸಿದುದು ಕಂಡುಬರುತ್ತದೆ.

ಮಣ್ಣೆತ್ತಿನ ಅಮವಾಸ್ಯೆಯಿಂದ ಒಂದು ತಿಂಗಳ ಪರ್ಯಂತ ಆಷಾಢದಲ್ಲಿ ವಿಶೇಷ ಪೂಜೆಗಳು ನಡೆಯುವವು. ಹೆಣ್ಣು ಮಕ್ಕಳು ಪ್ರತಿ ಮಂಗಳವಾರ ಗುಳ್ಳವ್ವ ಮಾಡಿ ಬನದೂಟ ಮಾಡುವರು.

ಆಷಾಢದಲ್ಲಿ ಬರುವ ಹುಣ್ಣಿಮೆ ಕಡಲೆಗಡಬು ಹುಣ್ಣಿಮೆ. ನದಿ ಹಳ್ಳಿಗಳೆಲ್ಲ ತುಂಬಿ ಹರಿಯುತ್ತಿದ್ದು ಕಡಲಗರ್ಭ ಸೇರುವ ಸಮಯವೆಂಬುದೇ "ಕಡಲೇಗಡಬು" ಎಂದಾಗಿರಬೇಕು. ಅಂದು ಕಡಲೇ ಕಾಳುಗಳಿಟ್ಟು ಕಡುಬು ಮಾಡುವರು. ಐದು ಸಜ್ಜಕದ ಹೋಳಿಗೆ, ಅನ್ನ ಮುಂತಾದವು ತೆಪ್ಪದ ಮೇಲಿಟ್ಟು, ಕಣಕದ ಐದು ಆರತಿ ಹಚ್ಚಿ ಊದು ಹಾಕಿ ಹರಿವ ಹಳ್ಳ ನದಿಗಳ ನೀರ ಮೇಲೆ ಬಿಟ್ಟು ಪೂಜಿಸುವರು. ಕೆಲವು ಭಾಗಗಳಲ್ಲಿ ಕಡಲೆ ಹಾಕಿ ಜೋಳದ ಕಡುಬು ಮಾಡಿ ಮೊಸರು, ಅನ್ನ, ಕಡುಬು ಒಯ್ದು,

ಒಂದು ತಂಬಿಗೆ ನೀರು ತೆಗೆದುಕೊಂಡು ಹಳ್ಳಕ್ಕೆ ಹೋಗುತ್ತಾರೆ. ಐದು ಹರಳು ಇಟ್ಟು ತೊಳೆದು ಕುಂಕುಮದಿಂದ ಪೂಜಿಸಿ ಅಂಬಿಗರಿಗೆ ನೈವೇದ್ಯ ಕೊಡುತ್ತಾರೆ. ತಾವು ಒಯ್ದ ಬುತ್ತಿಯನ್ನು ಹಳ್ಳದ ದಂಡೆಯಲ್ಲಿ ಊಟ ಮಾಡುವರು. ತುಂಬಿ ಹರಿವ ಹಳ್ಳ ಕೊಳ್ಳಗಳನ್ನು ಪೂಜಿಸಿ, ಗಂಗೆಯನ್ನೆ ಪೂಜಿಸಿದೆವೆಂದು ಭಾವಿಸುವರು. ಹರಿವ ನೀರಿನ, ನದಿ ಪೂಜೆ ಮಾಡಿದ ಮೇಲೆಯೇ ಹಳ್ಳ ನದಿ ದಾಟಲು ಹರಿಗೋಲು ಹಾಕುವರು. ಒಟ್ಟಿನಲ್ಲಿ ಹರಿಯುವ ನೀರಿನ ಪೂಜೆ ಮಾಡಿದರೆ ಮಹಾಪೂರ ಅತಿವೃಷ್ಟಿಗಳಿಂದ ತೊಂದರೆಯಾಗದು ಎಂಬ ನಂಬುಗೆ ಪ್ರಾಚೀನರಲ್ಲಿರಬೇಕು.

ಆಷಾಢದ ಎರಡು ಮಂಗಳವಾರ, ಶುಕ್ರವಾರದಂದು ಮರಗಮ್ಮ ದೇವಿಗೆ ಪೂಜಿಸುವರು. ಒಂದು ತಂಬಿಗೆ ನೀರು, ಎರಡು ಎಸಳು ಬೇವಿನ ಎಲೆ ಒಯ್ದು ನೀರು ಹಾಕಿ, ಬೇವಿನ ಎಲೆಗಳನ್ನು ಅಲ್ಲಿಯೇ ಇಟ್ಟು, ಜೋಳದ ಹಿಟ್ಟಿನಿಂದ ಮಾಡಿದ ಎರಡು ಉಂಡೆಗಳನ್ನು ಮೊದಲ ವಾರ ನೈವೇದ್ಯ ಕೊಡುವರು. ಎರಡನೆಯ ವಾರ ಮೊಸರನ್ನ ಇಲ್ಲವೆ ಹೋಳಿಗೆ ನೈವೇದ್ಯ ಕೊಡುವರು. ಇದರಿಂದ ಮಕ್ಕಳಿಗೆ ದಡಾರ (ಗೊಬ್ಬರ), ಗಣಜಲ (ಮೈಲಿಬೇನೆ) ಬರುವುದಿಲ್ಲವೆಂಬ ನಂಬುಗೆ ಹೆಂಗಸರಲ್ಲಿದೆ.

ನಾಗರ ಅಮವಾಸ್ಯೆಯಾದ ನಾಲ್ಕನೆಯ ದಿನ ಚವುತಿಯಂದು ಹೆಣ್ಣು ಮಕ್ಕಳು ಉಪವಾಸ ಮಾಡುವರು. ದೇವರ ಜಗುಲಿಯ ಮೇಲೆ ಬೆಲ್ಲದ ಅಳ್ಳಿಟ್ಟಿನ ಇಲ್ಲವೆ ಬೆಳ್ಳಿಯ ನಾಗರಮಾಡಿ ಕೊಬ್ಬರಿಯಲ್ಲಿಟ್ಟು ಬೆಲ್ಲದ ಹಾಲು ಎರೆಯವರು. ಹತ್ತಿಯನ್ನು ಅಳ್ಳಕವಾಗಿ ಉದ್ದವಾಗಿ ತೆಗೆದುಕೊಂಡು ಅಲ್ಲಲ್ಲಿ ಹೊಸೆದು ಸರದಂತೆ ಮಾಡಿ ಆ ನಾಗಪ್ಪನಿಗೆ ಹಾಕುವರು. ಅಳ್ಳಿಟ್ಟ ಗುಗ್ಗರಿ ನೈವೇದ್ಯ ಕೊಡುವರು. ತಮ್ಮ ಆಪ್ತರಿಗೆ ಬಂಧುಗಳಿಗೆ ಕುಪ್ಪಸ ಕೊಬ್ಬರಿ, ಅಳ್ಳಿಟ್ಟು ಉಚಿಡಿ ಮತ್ತು ಗುಗ್ಗರಿ ಕೊಟ್ಟು ಬರುವರು. ಮರುದಿನ ಪಂಚಮಿಯಂದು ನವಣಿ ಅಕ್ಕಿಯ ಅನ್ನ, ಜೊತೆಗೆ ಕುದಿಸಿದ ಹೂರಣ ಗಡಬು ನೈವೇದ್ಯ ಮಾಡಿ, ಹುತ್ತಿಗೇ ಅಥವಾ ದೇವಸ್ಥಾನದಲ್ಲಿರುವ ನಾಗರಕಟ್ಟಿಗೆ ಹಾಲು ಎರೆದು ಅಂಗನೂಲು ಹಾಕಿಕೊಳ್ಳುವರು. ಬರುವಾಗ ತಾವು ಒಯ್ದ ಜೋಳದ ಅಳ್ಳುಗಳ ಒಂದೊಂದೇ ಕಾಳುಗಳನ್ನು ಚೆಲ್ಲುತ್ತ ಬರುವರು. ಒಂದು ತಂಬಿಗೆ ನೀರು ತಂದು ಐದು ಹರಳು ಹೊರ ಬಾಗಿಲಿನ ಹತ್ತಿರ ಇಟ್ಟು ಪೂಜಿಸಿ ಮನೆಯ ಒಳಗೆ ಬರುತ್ತಾರೆ. ಹೀಗೆ ಏಕೆ ಮಾಡುತ್ತಾರೆಂಬುದು ತಿಳಿದುಬಂದಿಲ್ಲ. ಇದಕ್ಕೆ ಯಾವ ಪೌರಾಣಿಕ ಕಥೆಗಳಿಲ್ಲ. ಕಲ್ಲು ಹರಳುಗಳನ್ನು ಇಟ್ಟು ಪೂಜಿಸುವ ಸಂಪ್ರದಾಯ ಹಲವು ಸಂದರ್ಭಗಳಲ್ಲಿ ಬರುತ್ತದೆ. ತಾವು ಹಾಲೆರೆದು ಬಂದುದರ ಗುರುತಿಗಾಗಿ ಹೊರಗೆ ಈ ರೀತಿ ಪೂಜಿಸಿ, ದುಷ್ಟ ಶಕ್ತಿಗಳು, ಪೀಡೆಗಳೂ ಏನಿದ್ದರೂ ಹೊರಬಾಗಿಲ ಹೊರಗಿರಲಿ ಎಂಬ ನಂಬುಗೆ ಇದ್ದಿರಬೇಕು.

ಪಂಚಮಿ ಹೆಣ್ಣು ಮಕ್ಕಳಿಗೆ ಉತ್ಸಾಹದ ಹಬ್ಬ. ಚಿಕ್ಕವರು ದೊಡ್ಡವರು ಎಲ್ಲರೂ ಜೋಕಾಲಿ ಜೀಕಿ ಸಂತಸ ಪಡುವರು. ಗಂಡನ ಮನೆಯಲ್ಲಿರುವ ಹೆಣ್ಣು ಮಕ್ಕಳನ್ನು ತವರಿಗೆ ಕರದುಕೊಂಡು ಬರುವರು. ಸಂಭ್ರಮದಿಂದ ಗೆಳತಿಯರೆಲ್ಲ ಕೂಡಿ ನಲಿಯುವ ಹಬ್ಬವಿದು.

ನಾಗರ ಪಂಚಮಿಯಾದ ಮೇಲೆ ಬರುವ ನೂಲ ಹುಣ್ಣಿಮೆಯಂದು ಜನಿವಾರ ಇರುವವರು ಅಂದು ಹೊಸ ಜನಿವಾರಗಳನ್ನು ಧರಿಸುತ್ತಾರೆ. ಅಕ್ಕ ತಂಗಿಯರು ಅಣ್ಣ ತಮ್ಮಂದಿರರಿಗೆ ರಾಖಿ ಕಟ್ಟುವ ಸಂಪ್ರದಾಯವನ್ನು ಈ ಭಾಗದಲ್ಲಿ ಮೊದಲು ರಜಪೂತರು, ಮಾರವಾಡಿಗಳು ವಿಶೇಷವಾಗಿ ಆಚರಿಸುತ್ತಿದ್ದರು. ಆದರೆ ಈಗ ಎಲ್ಲರೂ ಆಚರಿಸುತ್ತಾರೆ.

ನಾಗರ ಅಮವಾಸ್ಯೆಯಿಂದ ಮುಂದಿನ ಚವುತಿಯ ಅಮವಾಸ್ಯೆಯವರೆಗೆ ಶ್ರಾವಣವು ವರ್ಷದ ಪವಿತ್ರ ತಿಂಗಳೆಂದು ನಂಬಲಾಗುತ್ತದೆ. ಶ್ರಾವಣಾ ಬಂತು ಕಾಡಿಗೆ, ನಾಡಿಗೆ ಎಂದು ಕವಿ ಬೇಂದ್ರೆ ಹಾಡಿರುವಂತೆ ಜಿಟಿಜಿಟಿ ಮಳೆಗಾಲವಿದ್ದರೂ ಪ್ರತಿದಿನವೂ ಒಂದೊಂದು ವಿಶೇಷ ಪೂಜೆ, ವ್ರತಗಳನ್ನು ಆಚರಿಸುವರು. ಶ್ರಾವಣದ ಶುಕ್ರವಾರ ಮದುವೆಯಾದ ಹೆಂಗಸರು ಮುತ್ತೈದೆಯರು "ಸಂಪತ್ ಶುಕ್ರವಾರ" ವ್ರತವನ್ನು ಆಚರಿಸಿ ಮುತ್ತೈದೆಯರಿಗೆ ಅರಿಶಿನ ಕುಂಕುಮಕ್ಕೆ ಕರೆಯುವರು.

(ವೈ.ಎಸ್.)

ರ

ರಂಗೀನ್ ಮಹಲ್: ಬೀದರ್ ಕೋಟೆ ಆವರಣದಲ್ಲಿರುವ ಅರಮನೆ. ಈ ಮಹಲ್ ನಿರ್ಮಾಣ ಆದದ್ದು ಬರೀದ್‌ಷಾಹಿ ಅರಸು ಮನೆತನದ ಮೊದಲ ಅರಸು ಮನೆತನದ ಮೊದಲ ಅರಸ ಅಲಿ ಬರೀದ್ (ಕ್ರಿ.ಶ. 1542–1580) ಕಾಲದಲ್ಲಿ ಪರ್ಶಿಯ್ ಕಾವ್ಯ ಮತ್ತು ಕಲೆಯಲ್ಲಿ ಆಸಕ್ತಿ ಹೊಂದಿದವನಾಗಿದ್ದ ಅಲಿಯ ಕಲಾಸಕ್ತಿ ಮತ್ತು ರಸಿಕತೆಗಳು 'ರಂಗೀನ್ ಮಹಲ್' ನಿರ್ಮಾಣಕ್ಕೆ ಇಂಬು ನೀಡಿದುವು. ಮಹಲ್‌ನ ಆವರಣದಲ್ಲಿ ಇದ್ದ ಸುಂದರ ಉದ್ಯಾನವನ ಮತ್ತು ಕಾರಂಜಿಗಳು ಅದಕ್ಕಾಗಿ ಮಾಡಿದ್ದ ನೀರಿನ ವ್ಯವಸ್ಥೆ ಸೋಜಿಗ ಉಂಟು ಮಾಡುವಂತಿವೆ.

ಬಹಮನಿ ಅರಸರ ಬೃಹತ್ ಕೋಟೆಯ ಉಸ್ತುವಾರಿ ನೋಡಿಕೊಳ್ಳಲು ಸಾಧ್ಯವಿಲ್ಲದಿರುವಾಗ ಬರೀದ್‌ಷಾಹಿ ಅರಸರು ಸುರಕ್ಷಿತವಾದ ಪ್ರದೇಶದಲ್ಲಿ ವಾಸ ಆರಂಭಿಸಿದರು. ಆಗ ನಿರ್ಮಾಣವಾದದ್ದು ರಂಗೀನ್ ಮಹಲ್. ಹೆಸರಿನಲ್ಲಿ 'ಮಹಲ್' ಇದೆಯಾದರೂ ಅಂತಹ ಬೃಹತ್ ಕಟ್ಟಡವೇನಲ್ಲ. ಆದರೆ, ಮನಸೂರೆಗೊಳ್ಳುವ ಸುಂದರ ಮತ್ತು ಪುಟ್ಟ 'ಅರಮನೆ' ಇದಾಗಿದೆ.

ಅಕ್ಷರಶಃ ಗೋಡೆ ಗೋಡೆಗಳಲ್ಲಿಯೂ ಬಣ್ಣ ಚೆಲ್ಲಾಡಿದ ಅನುಭವ. ಇದು ಹೋಳಿಯ ಸಂದರ್ಭದಲ್ಲಿ ಗೋಡೆಯ ಮೇಲೆ ಚೆಲ್ಲಿದ ಬಣ್ಣ ಅಲ್ಲ. ಬೀದರಿನ ಕೋಟೆಯ ಆವರಣದಲ್ಲಿ ಇರುವ 'ರಂಗೀನ್ ಮಹಲ್' ಎಂಬ ಅರಮನೆಯಲ್ಲಿ ಕಾಣಸಿಗುವ



ವರ್ಣವೈಭವ. ಇದು ಐತಿಹಾಸಿಕ ಮಹತ್ವದ ಬಹಮನಿ ಕೋಟೆಯ ಆವರಣದಲ್ಲಿಯೇ ಇದ್ದರೂ ಹೆಚ್ಚು ಬೆಳಕಿಗೆ ಬಂದಿಲ್ಲ. ಕೋಟೆಯಲ್ಲಿ ಇರುವ ಕಾರಣದಿಂದ ಮಹತ್ವ ಹಂಚಿಹೋಗಿ ಸಿಗಬೇಕಾದ ಸ್ಥಾನ-ಮನ್ನಣೆ ದೊರೆತಿಲ್ಲ. ಅದೆಲ್ಲ ಇರಲಿ, ಕಣ್ಮನ ತಣಿಸುವ ಇಂತಹ ಅಪರೂಪದ ಅರಮನೆಯನ್ನು ನೋಡುವುದೇ ಒಂದು ಸೊಬಗು ಸೊಗಸು.

ಗುಂಬಜ್ ದರ್ವಾಜದ ಮೂಲಕ ಕೋಟೆಯನ್ನು ಪ್ರವೇಶಿಸುತ್ತಿದ್ದಂತೆಯೇ ಬೋರ್ಡ್‌ನಲ್ಲಿ 'ರಂಗೀನ್ ಮಹಲ್' ಎಂದು ಬರೆಯಲಾಗಿದೆ. ಮೆಟ್ಟಿಲು ಹತ್ತಿ ಆವರಣ ಪ್ರವೇಶಿಸಿದರೆ ಬಣ್ಣದ ಲೋಕ ತೆರೆದುಕೊಳ್ಳುತ್ತದೆ. ಇಡೀ ಕೋಟೆಯ ಅತ್ಯಂತ ಮಹತ್ವದ ಮತ್ತು ಸುಂದರ ಭಾಗ ಎಂದರೆ ರಂಗೀನ್ ಮಹಲ್. ಮಧ್ಯಕಾಲೀನ ದಖನ್ನಿನಲ್ಲಿ ಮುಸ್ಲಿಮ್ ದೊರೆಗಳ ಅರಮನೆಗಳು ಹೇಗಿದ್ದಿರಬಹುದು ಎಂಬ ಅಂದಾಜು ಈಗ ದೊರೆಯಬೇಕಾದರೆ ರಂಗೀನ್ ಮಹಲ್ ನೋಡಬೇಕು.

ಟರ್ಕಿ ಟವಲ್ ಮಾದರಿಯ ಬಣ್ಣದ ಟೈಲುಗಳು ಬಹುತೇಕ ಗೋಡೆಗಳನ್ನು ಆವರಿಸಿರುವ ಕಾರಣಕ್ಕಾಗಿ 'ರಂಗೀನ್ ಮಹಲ್' ಎಂದು ಕರೆಯಲಾಗುತ್ತದೆ. ಹಳದಿ, ನೀಲಿ, ಹಸಿರು ಮತ್ತು ಬಿಳಿಬಣ್ಣದ ತುಣುಕುಗಳನ್ನು ಗೋಡೆಗಳ ಮೇಲೆ ಡಿಸೈನು ಮಾಡಿ ಲಗತ್ತಿಸಲಾಗಿದೆ. ಹೂದಾನಿಗಳು, ನವಿಲುಗಳು, ವೃತ್ತ, ಆಯತ, ಚೌಕಗಳ ವೈವಿಧ್ಯಮಯ ಡಿಸೈನ್‌ಗಳು ಗಮನ ಸೆಳೆಯುತ್ತವೆ. ಕಣ್ಣಿನ ನೋಟ-ದೃಷ್ಟಿ ಹರಿದಲ್ಲೆಲ್ಲ ಚಿತ್ರಗಳು, ಕಲಾಕೃತಿಗಳು. ಅಷ್ಟೇ ಅಲ್ಲ. ಕಲಾತ್ಮಕವಾಗಿ ಬರೆದ (ಕ್ಯಾಲಿಗ್ರಫಿ) ಕಾವ್ಯದ ಸಾಲುಗಳು ನೋಡುಗನಿಗೆ ದಿವ್ಯ ಅನುಭೂತಿ ಉಂಟು ಮಾಡುತ್ತವೆ.

ಬಣ್ಣ ಬಣ್ಣದ ಟೈಲುಗಳನ್ನು ಕೂಡಿಸುವ ವರ್ಣರಂಜಿತ ಲೋಕ ಒಂದೆಡೆ ತೆರೆದುಕೊಂಡರೆ ಅಲ್ಲಿಯೇ ಕಟ್ಟಿಗೆಯ ಕುಸುರಿ ಕೆಲಸ ಇರುವ 'ಅರಮನೆ'ಯ ಸೊಬಗು ಹೇಳತೀರದು. ಪರ್ಷಿಯನ್ ಮತ್ತು ಭಾರತೀಯ ಕಲಾವಿದರಿಬ್ಬರೂ ಸೇರಿ ಮಾಡಿದ ಕಟ್ಟಿಗೆ ಕೆಲಸ ಇಬ್ಬರೂ ತಮ್ಮ ತಮ್ಮ ಕಸುಬುಗಾರಿಕೆಯನ್ನು ಬಿಟ್ಟುಕೊಡದೇ ಹೊಸ ಸೃಷ್ಟಿಗೆ ಕಾರಣರಾದದ್ದನ್ನು ಸೂಚಿಸುತ್ತದೆ. ಪರ್ಶಿಯನ್ ಕಲಾವಿದರ ಕಲ್ಪನೆ-ಯೋಜನೆಗಳನ್ನು 'ಜಾರಿ'ಗೆ ತಂದವರು ಭಾರತೀಯ ಕಲಾವಿದರು. ಅದೇ ಕಾರಣಕ್ಕಾಗಿಯೇ ದೂರದ ಇರಾನ್‌ನ ಡಿಸೈನ್ ಜೊತೆಯಲ್ಲಿ ಚಾಲುಕ್ಯ ವಾಸ್ತುಶಿಲ್ಪ ಮತ್ತು ಜಾನಪದೀಯ ಅಂಶಗಳಿರುವ ಕಟ್ಟಿಗೆ ಕೆತ್ತನೆಗಳು ಕಾಣಸಿಗುತ್ತವೆ. ಕಟ್ಟಿಗೆಯ ಕೆತ್ತನೆಯ ನಡುವೆ ಚಿನ್ನದ ಮುಲಾಮು ಸವರುವುದರ ಜೊತೆಗೆ ಬಣ್ಣಗಳನ್ನು ಹಚ್ಚಿ ಸೌಂದರ್ಯ ಇಮ್ಮಡಿಯಾಗುವಂತೆ ಮಾಡಲಾಗಿದೆ. ಅಲ್ಲಿದ್ದ ಪುಟ್ಟ ಕೋಣೆಯೊಳಕ್ಕೆ ಪ್ರವೇಶಿಸಿದರೆ ಕಾಣಸಿಗುವುದು ಅಪೂರ್ವ ಕಲಾಲೋಕ. ಚಿಪ್ಪುಗಳೇ ಮುತ್ತುಗಳಿಗಿಂತ ಹೆಚ್ಚು ಕಲಾತ್ಮಕವಾಗಿ ಕಾಣಿಸಿಕೊಂಡ ಅಪರೂಪದ ಉದಾಹರಣೆ. ವ್ಯಾವಹಾರಿಕ ಜಗತ್ತಿನಲ್ಲಿ ಸಹಜ ವಾಗಿಯೇ ಮುತ್ತಿಗಿರುವ ಬೆಲೆ ಚಿಪ್ಪಿಗಿಲ್ಲ. ಬಹುತೇಕರು ಅನುಪಯುಕ್ತ ಎಂದು ಎಸೆದು ಬಿಡುವ ಚಿಪ್ಪುಗಳನ್ನು ಬಳಸಿಕೊಂಡ ಜಾಣ್ಮೆ, ಕಲಾವಿದನ ಕುಸುರಿತನ ಗೋಚರವಾಗುತ್ತದೆ.

ಇಲ್ಲಿನ ಗೋಡೆಯ ಮೇಲೆ ನೋಡಬಹುದು ಮಹಲ್‌ನ ಎಡಭಾಗದಲ್ಲಿ ಇರುವ ಕೋಣೆಗಳ ಪ್ರವೇಶಕ್ಕೆ ಮುನ್ನವೇ ಇರುವ ಪಡಸಾಲೆಯಲ್ಲಿ ಈ 'ರಿಲೀಫ್' ಗಳು ಕಾಣಿಸುತ್ತವೆ. ನವಿಲು, ವೃತ್ತಗಳ ವೈವಿಧ್ಯಮಯ ಡಿಸೈನ್‌ಗಳ ಲೋಕ ಬೆರಗುಗೊಳಿಸದೇ ಇರದು. ಅಲ್ಲಿಂದ ಒಳಗಡೆ ಇರುವ ಕೋಣೆ ಪ್ರವೇಶಿಸಿ ತಲೆಎತ್ತಿ ನೋಡಿದಾಗ ಕಡುನೀಲಿ ಬಣ್ಣದಲ್ಲಿ ದಾಖಲಿಸಿದ ಕಲಾಕೃತಿ ಬೆರಗುಗೊಳಿಸುವುದು. *(ಡಿ.ಪಿ.ಎ.)*

ರಂಜೋಳ ಖೇಣಿ: ಬೀದರ ತಾಲ್ಲೂಕಿನ ಪ್ರಾಚೀನ ಗ್ರಾಮ. ಕಾರಂಜಾ (ನಾರಂಜಾ) ನದಿ ತೀರದಲ್ಲಿದೆ. ಈ ಗ್ರಾಮ ಶಾಸನಗಳಲ್ಲಿ ರೆಂಜೇರು ಎಂದಾಗಿ ದಾಖಲಿಸಲ್ಪಟ್ಟದ್ದು, ಹಿಂದೆ ಅಟ್ಟಳೆ ನಾಡಿನ ರಾಜಧಾನಿ ಆಗಿದ್ದಿತು. ನಾಗವಂಶದ ಸಿಂದ ಮನೆತನದವರು ಬಹುಕಾಲ ಇಲ್ಲಿಂದ ಮಾಂಡಲೀಕರಾಗಿ ಆಳಿದರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಅಂದಿನ ಅಟ್ಟಳೆನಾಡು ಸುತ್ತಣ 300 ಗ್ರಾಮಗಳನ್ನು ಒಳಗೊಂಡಿದ್ದಿತು. ಇದರಲ್ಲಿ ಭಲ್ಲುಂಕೆ (ಭಾಲ್ಕಿ) 84 ಗ್ರಾಮಗಳನ್ನು ಹೊಂದಿ ಉಪವಿಭಾಗ (ಕಂಪಣ) ಆಗಿದ್ದಿತು. ಉಳಿದ 216 ಗ್ರಾಮಗಳು ಕಾರಂಜಾ ನದಿಯ ದಕ್ಷಿಣ ಭಾಗದಲ್ಲಿದ್ದುವು.

ಕಲ್ಯಾಣಿ ಚಾಳುಕ್ಯ ಆರನೆಯ ವಿಕ್ರಮಾದಿತ್ಯ ಆಳುತ್ತಿದ್ದಾಗ ಹಜ್ಜರಸ ಎಂಬಾತ ರೆಂಜೇರುವಿನಿಂದ ಮಾಂಡಲೀಕನಾಗಿ ಆಳುತ್ತಿದ್ದ. ಸಿಂದ ಮನೆತನದ ಶಾಖೆಯೊಂದು ರಂಜೇರುವಿನಿಂದ ಬನವಾಸಿಯ ಕದಂಬರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟ-ರು, ಕಲ್ಯಾಣಿ ಚಾಳುಕ್ಯರು, ಕಳಚೂರಿ ಹಾಗೂ ಸೇವುಣರ ಮಾಂಡಲೀಕರಾಗಿ ಆಳಿದ ವಿಷಯ ಸಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಕೊನೆಯಲ್ಲಿ ಈ ಮನೆತನ ಸಿಂದ ಭೈರವ ಕಾಕತೀಯ ರುದ್ರಮದೇವಿಯ ಪರವಹಿಸಿದನೆಂದು ಶಾಸನಗಳು ತಿಳಿಸುತ್ತವೆ. ಮುಂದೆ ಖೇಣಿ ಮನೆತನದಿಂದಾಗಿ ಈ ಗ್ರಾಮಕ್ಕೆ ರಂಜೋಳ ಖೇಣಿ ಎಂಬ ಹೆಸರು ಬಂತು.

ಇಲ್ಲಿ ಕೋಟೆ, ಅನೇಕ ದೇವಾಲಯಗಳು ಇದ್ದುವೆಂದು ಶಾಸನಗಳಿಂದ ತಿಳಿದು ಬರುತ್ತದೆ. ಆದರೆ ಇಂದು ಕೆಲ ಶಿಲ್ಪಗಳು, ಮೂರ್ತಿಗಳು, ವೀರಗಲ್ಲುಗಳು, ಶಾಸನಗಳು ಮಾತ್ರ ನೋಡ

ಸಿಗುತ್ತವೆ. ಶಿಲಾಯುಗ ಸಂಸ್ಕೃತಿಯ ಕೆಲ ಕುರುಹುಗಳು ಈ ಊರಿನಲ್ಲಿ ದೊರೆತಿವೆಯಾದ್ದರಿಂದ ಇದೊಂದು ಅತಿ ಪ್ರಾಚೀನ ಜನವಸತಿಯೆಂಬ ಹೆಗ್ಗಳಿಕೆ ಪಡೆದಿದೆ.

ಶಾಸನಗಳಲ್ಲಿ ಉಲ್ಲೇಖಿಸಿದಂತೆ ಈ ಗ್ರಾಮದಲ್ಲಿ ಹಜ್ಜೇಶ್ವರ, ಹೇಮೇಶ್ವರ, ಬಿಬ್ಬೇಶ್ವರ ಮತ್ತು ಬ್ರಹ್ಮೇಶ್ವರ ದೇವಾಲಯಗಳಿದ್ದುವು. ಇಂದು ಕೆಲ ಗುಡಿಗಳು ಹಾಗೂ ಸ್ಮಾರಕಗಳು ಮಾತ್ರ ಉಳಿದುಕೊಂಡಿವೆ. ಊರಿನಲ್ಲಿರುವ ಐದು ಮಹತ್ವದ ಶಾಸನಗಳು ಸಿಂದ ಮನೆತನದ ಶಾಖೆಯೊಂದರ ಬಗೆಗೆ ಮಹತ್ವದ ಮಾಹಿತಿ ಒದಗಿಸುತ್ತವೆ.

ಪ್ರಸಿದ್ಧ ಖೇಣಿ ಮನೆತನದ ಮಹಾರುದ್ರಪ್ಪ ಖೇಣಿ ಅವರ ಸಮಾಧಿ ಸ್ಮಾರಕ ಊರಿನ ಹೊರ ವಲಯದಲ್ಲಿದೆ. ಮಹಾರುದ್ರಪ್ಪ ಖೇಣಿಯವರು ಸಿರಿವಂತಿಗೆಗಾಗಿ ಪ್ರಸಿದ್ಧರಾಗಿದ್ದರು. ದಾನ–ದಾಸೋಹಕ್ಕಾಗಿ ಸಿದ್ಧ ಹಸ್ತರು. ಅಂದಿನ ಹೈದ್ರಾಬಾದಿನ ನಿಜಾಮರ ಆಸ್ಥಾನದಲ್ಲಿ ಅವರಿಗೆ ಮನ್ನಣೆ ಇತ್ತು. ಪ್ರತಿ ವರ್ಷ ಅವರ ಗೌರವಾರ್ಥ ಊರಿನಲ್ಲಿ ಜಾತ್ರೆ ಜರುಗುತ್ತದೆ. ಆ ಜಾತ್ರೆಯಲ್ಲಿ ಕಟ್ಟಿಗೆಯಲ್ಲಿ ಕೆತ್ತಿ ಮಾಡಿದ ಅವರ ಕೈ ಸಂಕೇತದ ಮೆರವಣಿಗೆ ಜರುಗುತ್ತದೆ. ಇದೊಂದು ಸಾಂಸ್ಕೃತಿಕ ಸಂಪನ್ನತೆ ತಳೆದ ಗ್ರಾಮ. *(ಬಿ.ಆರ್.ಕೆ.)*

ರಟಕಲ: ಚಿತ್ತಾಪೂರ ತಾಲ್ಲೂಕಿನ ಪುಣ್ಯಕ್ಷೇತ್ರ, ರೇವಣ ಸಿದ್ದೇಶ್ವರರು ಆಂಧ್ರ ಪ್ರದೇಶ ಕೋಲನಪಾಕ (ಕೊಲ್ಲಿಪಾಕಿ) ಸೋಮೇಶ್ವರ ಲಿಂಗದಿಂದ ಉದ್ಭವಿಸಿ ಬಂದ ಅವತಾರ ಪುರುಷರೇ ರೇಣುಕಾಚಾರ್ಯರು. ಅವರು ಚಿತ್ತಾಪೂರ ತಾಲ್ಲೂಕಿನ ರೇವಗ್ಗಿ (ರಟಕಲ್) ಸುಕ್ಷೇತ್ರಕ್ಕೆ ಬಂದು ತಪಸ್ಸು ಕೈಗೊಂಡಿದ್ದರಿಂದ ರಟಕಲ್‌ದ ರೇವಣಸಿದ್ದೇಶ್ವರರು ನೆಲಸಿರುವ ಪವಿತ್ರ ತಾಣವಾಗಿದೆ.



ಶ್ರೀ ರೇವಣಸಿದ್ಧೇಶ್ವರ ಮುಖ್ಯದ್ವಾರ ಮತ್ತು ರಥ – ರೇವಗಿ (ರಟಕಲ್)

ರೇವಗ್ಗಿ ರೇವಣಸಿದ್ಧೇಶ್ವರ ದೇವಾಲಯ ಎತ್ತರವಾದ ಗುಡ್ಡದ ಮೇಲಿದೆ. ಪುರಾತನ ಶೈಲಿಯಲ್ಲಿ ಈ ದೇವಾಲಯ ನಿರ್ಮಾಣವಾಗಿದೆ. ಗರ್ಭಗುಡಿಯ ಒಳ ಭಾಗದಲ್ಲಿ ರೇವಣ ಸಿದ್ದೇಶ್ವರರು ತಪಸ್ಸು ಗೈದ ಮೂಲ ಗದ್ದುಗೆ ಇದೆ. ಪರ್ವತವಿಳಿದು ಮುಂದೆ ಹೋದರೆ ಭಾರಂಬಾವಿ ಎಂಬ ತೀರ್ಥ ಕುಂಡವಿದೆ. ದೇವಾಲಯದ ಹಿಂದೆ ಶಿವನ ಹಂದರ, ಬಲಭಾಗದಲ್ಲಿ ಕಾಡಾಕಳ ಬಂಡಿ ಇದೆ. ಭಾರಂಬಾವಿಯಲ್ಲಿ ಮಿಂದರೆ ಸಾಕು ಮನದ ಮೈಲಿಗೆ ಕಳೆದು ಇಷ್ಟಾರ್ಥ ಪೂರೈಸುತ್ತದೆ ಎಂಬುದು ಜನಪದರ ನಂಬಿಕೆ. ಐದು ಅಮವಾಸ್ಯೆಗಳ ಕಾಲ ತಪ್ಪದೆ ಬಾವಿಯಲ್ಲಿ ಮಿಂದು ಮಡಿಯಿಂದ ರೇವಣಸಿದ್ದೇಶ್ವರ ತಪೋಸ್ಥಾನದ ದರ್ಶನ ಪಡೆದರೆ, ದುಃಖ, ರೋಗಗಳು ಮಾಯವಾಗಿ ಇಷ್ಟಾರ್ಥ ಸಿದ್ಧಿಸುವುದು ಎಂಬ ನಂಬಿಕೆ ಇದೆ.

ರೇವಣಸಿದ್ದೇಶ್ವರ ದೇವಾಲಯದಲ್ಲಿ ಇನ್ನೊಂದು ಕಮರಿಮಠ ಇದ್ದು ಸಿದ್ಧ–ಸಾಧುಗಳ ಆಶ್ರಯ ತಾಣವಾಗಿದೆ. ದೇವಾಲಯದಲ್ಲಿ ಕಾಡಾಕಳ ಬಂಡಿಯಿದೆ ಹಸು ಹಾಲು ಕೊಡದಿದ್ದರೆ, ಜ್ವರ ಬಂದು ಕಾಡುತ್ತಿರುವ ಹಸುಗಳ ಬಾಯಿಯಲ್ಲಿ ಮೇವು ಇಟ್ಟರೆ ಹಸುವಿನ ಪೀಡೆ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇದೆ. ಅದರ ಪಕ್ಕದಲ್ಲಿ ಗುಪ್ತ ಲಿಂಗವಿದೆ ಇಲ್ಲಿ ರೇವಣಸಿದ್ದೇಶ್ವರರು ಭವಿಷ್ಯ ಹೇಳುತ್ತಿದ್ದರೆಂದು ಪ್ರತೀತಿ ಇದೆ. ಇಲ್ಲಿನ ಸಂಸ್ಥಾನಿಕ ಮನೆತನದವರು ಹಿಂದಿನಿಂದಲೂ ದೇವಸ್ಥಾನದ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮ ನಿರ್ವಹಿಸುತ್ತಿದ್ದಾರೆ.

ಶ್ರಾವಣ ಮಾಸದಲ್ಲಿ ಪಲ್ಲಕ್ಕಿ ಉತ್ಸವ ಹಾಗೂ ನಡುವಿನ ಸೋಮವಾರದಂದು ವೈಭವದಿಂದ ಜಾತ್ರೆ ನಡೆಯುತ್ತದೆ ನಾಡಿನ ತುಂಬೆಲ್ಲ ಬೇರೆ ಬೇರೆ ರಾಜ್ಯಗಳಿಂದ ಜಾತ್ರೆಯಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆಯುವರು. *(ಆರ್.ಸಿ.ಎನ್.)*

ರತ್ನಮ್ಮ ತಂಬಾಕಿ: ಬೀದರಿನ ಹೆಸರಾಂತ ಕಲಾವಿದೆ. ಹೆಣ್ಣು ಮಕ್ಕಳ ಸಂಪ್ರದಾಯಕ್ಕೆ ಸೇರಿದ ಬುಲಾಯಿ ಪದಗಳಲ್ಲಿ ವಿಶೇಷ ಪರಿಣತಿ ಪಡೆದವರು. ಇದರ ಜೊತೆಗೆ ಸೋಬಾನೆ ಪದಗಳನ್ನೂ, ಗೀಗೀ ಪದಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲರು. ಇವರು ಹಾಡಲು ತೊಡಗಿದರೆ ಸರಸ್ವತಿಯೇ ಅವರ ನಾಲಗೆಯ ಮೇಲೆ ನಾಟ್ಯವಾಡುತ್ತಾಳೆ. ಅಪಾರ ಸಾಹಿತ್ಯರಾಶಿಯ ದೊಡ್ಡ ಕಣಜವೇ ಆಗಿರುವ ಇವರು ಸರಸ್ವತಿ, ಗೆದ್ದಮ್ಮೆ, ಲಕ್ಷ್ಮೀ, ಈಶ್ವರಿ, ಪದ್ಮಾವತಿ, ಕಲಾವತಿ, ಪಾಪಮ್ಮ ಚಂದ್ರಮ್ಮ ಮುಂತಾದ ಶಿಷ್ಯೆಯರನ್ನು ತಯಾರಿಸಿ ಪರಂಪರೆಯನ್ನು ಮುಂದುವರಿಸಿದ್ದಾರೆ. ಈ ಕಲಾವಿದೆ ಹುಟ್ಟು ಕುರುಡಿ. ಜನಪದ ಸಾಹಿತ್ಯ ಬಾಯಿಂದ ಬಾಯಿಗೆ ಕಿವಿಯ ಮೂಲಕ ಹರಿದು ಬಂದದ್ದು ಎಂಬುದಕ್ಕೆ ಸಾಕ್ಷಿಯಂತೆ ಈ ಕುರುಡು ಹಾಡುಗಾರ್ತಿ ಕಂಡು ಬರುತ್ತಾಳೆ. ದೃಷ್ಟಿ ಭಾಗ್ಯ ಇಲ್ಲದಿದ್ದರೂ, ಬಾಳನ್ನು ಕಳೆದು ಕೊಂಡವರಲ್ಲ, ಬದುಕಿನ ಆಸಕ್ತಿಯನ್ನು ಕುಗ್ಗಿಸಿಕೊಂಡವರಲ್ಲ. ಹಾಡುತ್ತಲೇ ತನ್ನ ಹೃದಯ ಶ್ರೀಮಂತಿಕೆಯನ್ನು ಮೆರೆಸುತ್ತ ಬಂದ ರತ್ನಮ್ಮ 'ಸಾಹಿತ್ಯ ರತ್ನದ' ಒಡತಿಯೂ ಆದರು.

ಹಾಡನ್ನೇ ಬದುಕಿನ ಊರುಗೋಲಾಗಿಸಿಕೊಂಡವರು.

ಯಾವುದೇ ಶುಭಕಾರ್ಯಗಳಲ್ಲಿ ಇವರ ಶ್ರೀಮಂತಧ್ವನಿ ಮೆರೆಯಬೇಕು. ಭಜನೆ ಮೇಳದಲ್ಲಿಯೂ ಇವರ ಪಾತ್ರ ಹಿರಿದು. ಉತ್ತರ ಕರ್ನಾಟಕದ ಬಹುಭಾಗದಲ್ಲಿ ಇವರ ಕಾರ್ಯಕ್ರಮಗಳು ನಡೆದಿವೆ. ತಮಗೆ ಪ್ರಿಯವಾದ ಹಾಡಿನ ಪರಂಪರೆಯನ್ನು ಮುಂದುವರೆಸಲು ಹಲವು ಶಿಷ್ಯರನ್ನು ಇವರು ತಯಾರು ಮಾಡಿ ಅವರ ನಿರಂತರತೆಗೆ ಶ್ರಮಿಸಿದ್ದಾರೆ. *(ಜಿ.ಆರ್.ಟಿ.)*

ರಸ್ತಾಪೂರ: ಒಂದು ಆಧ್ಯಾತ್ಮಿಕ ಕ್ಷೇತ್ರ, ಕಲಬುರ್ಗಿ ಬೆಂಗಳೂರು ಹೆದ್ದಾರಿಯಲ್ಲಿ ಶಹಾಪುರದಿಂದ 8 ಕಿ.ಮೀ. ಇದೆ. ಸುಮಾರು 10 ನೆಯ ಶತಮಾನದಲ್ಲಿ ಭೀಮಕವಿ ಇಲ್ಲಿ ಇದ್ದು, ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಿ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಗಮ್ಮ ಸ್ಥಾನವನ್ನು ನೀಡಿದ ಅಂತಹ ನೆಲದಲ್ಲಿ ಶರಭಲಿಂಗೇಶ್ವರ ಶರಣರು, ಸುಮಾರು 12ನೆಯ ಶತಮಾನದಲ್ಲಿ ಮದರಕಲ್ ಗ್ರಾಮದಲ್ಲಿ ಜನಿಸಿ, ಸಂಚರಿಸುತ್ತಾ ರಸ್ತಾಪೂರ ಗ್ರಾಮದಲ್ಲಿ ತಪೋಗೈದು, ಸಿದ್ಧಿಸಾಧಿಸಿ ಇಲ್ಲಿಯೇ ನೆಲೆಸಿ ಜನಸಾಮಾನ್ಯರಿಗೆ ಅನುಕೂಲವಾದ ಅನೇಕ ಪವಾಡ ಮಾಡಿ ಹೋಗಿದ್ದು ಜನ ಜನಿತವಾಗಿದೆ.

ಇಂದಿಗೂ ಶರಭಲಿಂಗೇಶ್ವರರ ಆಶ್ರಮಕ್ಕೆ ಬರುವ ಭಕ್ತರಿಗೆ ಮನಃಶಾಂತಿ ದೊರೆಯುವುದಲ್ಲದೆ, ಈ ಭಾಗದ ಮಾತ್ರವಲ್ಲ ದಕ್ಷಿಣ ಭಾರತದ ಅನೇಕ ಭಾಗಗಳಿಂದ ಪಾರ್ಶ್ವವಾಯು ರೋಗ ಪೀಡಿತರಿಗೆ ಶರಣರ ಪ್ರಸಾದ ಹಾಗೂ ವಚನ ಸಿದ್ಧಿಯ ಮುಖಾಂತರ ಅವರು ರೋಗ ಮುಕ್ತರಾಗುತ್ತಿದ್ದಾರೆ. ಮನೋವಿಕಲ್ಪ (ಮೆಂಟಲ್) ಗೊಂಡವರಿಗೆ ಶರಣರ ವರಪ್ರಸಾದವು ನಿವಾರಣೆ ಮಾಡುತ್ತಿರುವುದ ವೈದ್ಯಕೀಯ ಕ್ಷೇತ್ರಕ್ಕೂ ಅಚ್ಚರಿಯನ್ನುಂಟು ಮಾಡುವ ಸಂಗತಿ. ಶರಣರ ಮಹಿಮೆ ಜನಸಾಮಾನ್ಯರ ವಿಚಾರ ಧಾರೆಯಾಗಿದೆ. ಇಂತಹ ಶರಣರ ಶರಣ ಸಂತರಾದ ಶರಭಲಿಂಗೇಶ್ವರರ ಆಶ್ರಮಕ್ಕೆ ಬರುವ ಭಕ್ತರಿಗೆ ಪ್ರತಿ ಅಮಾವಾಸ್ಯೆಯ ದಿವಸ ಅನ್ನದಾಸೋಹ, ಜೊತೆಗೆ ಶಿವಾನುಭವ ಚಿಂತನೆಯೊಂದಿಗೆ ಜ್ಞಾನ ದಾಸೋಹವನ್ನು ನಡೆಸುತ್ತಾ ಬಂದು ಸಿದ್ಧಿಸಾಧಿಸಿದ್ದಾರೆ. ಇಂದಿನ ಈ ಆಶ್ರಮದ ಶರಣರು ಯುವಕರಾಗಿದ್ದು, ಚೇತನ ಮೂರ್ತಿಯಾಗಿ, ಬಂದ ಭಕ್ತರ ಮನಃಶಾಂತಿಗೆ ದಾರಿದೀಪವಾಗಿ ಗೋಚರಿಸುತ್ತಿದ್ದಾರೆ.

ಈ ಶರಣರ ಜಾತ್ರಾ ಮಹೋತ್ಸವ ಪ್ರತಿ ವರ್ಷ ಜರಗುವುದು. ರಥೋತ್ಸವದೊಂದಿಗೆ ಪ್ರಾರಂಭವಾಗಿ ಒಂದು ವಾರದವರೆಗೆ ರಾಯಚೂರು, ಕಲಬುರ್ಗಿ, ಬಿಜಾಪೂರ ಜಿಲ್ಲೆಗಳಿಂದ ಬರುವ ಎಲ್ಲ ಬಗೆಯ ದನಗಳ ಜಾತ್ರೆ ನಡೆಯುತ್ತಿದೆ. ಈ ಜಾತ್ರಾ ಸಂದರ್ಭದಲ್ಲಿ ಉತ್ತಮ ರಾಸುಗಳಿಗೆ ದೇವಸ್ಥಾನದ ಸಮಿತಿ ವತಿಯಿಂದ ಪಾರಿತೋಷಕ ನೀಡಿ, ಪ್ರೋತ್ಸಾಹಿಸುವ ವಾಡಿಕೆಯುಂಟು. ಉತ್ತಮ 'ಪಾರಿತೋಷಕ' ಪಡೆದ ಎತ್ತುಗಳ ಮೆರವಣಿಗೆಯನ್ನು ನೋಡಲು ಸಂಭ್ರಮದ ವಾತಾವರಣವಿರುವುದು. ಇದರ ಜೊತೆಗೆ ಈ ಜಾತ್ರೆ ಸಮಯದಲ್ಲಿ ಗ್ರಾಮೀಣ ಜನತೆಗೆ ಬೇಕಾಗುವ ಎಲ್ಲಾ ರೀತಿಯ ವಸ್ತುಗಳ ಮೇಳ ಈ ಜಾತ್ರೆಯ ಸಡಗರದ ಸಂಭ್ರಮವಾಗಿದೆ.

ಮರೆಯಾಗುತ್ತಿರುವ ಜಾನಪದ ಆಟಗಳಾದ ಕಡುಬಿನ ಕಾಳಗ, ಜಂಗಿ–ಕುಸ್ತಿ, ಗೀಗೀ ಪದಗಳು, ಭಜನೆ, ವಚಾನಾಮೃತ, ನಾಟಕ, ಮಲ್ಲಾ–ಮಲ್ಲಿಯರ ಕಾಳಗ, ಶಕ್ತಿಯ ಸ್ಪರ್ಧೆಗಳು, ಅಹುದೋ ಎದೆಗಾರ ಮುಂತಾದ ಭಾರತೀಯ ಗ್ರಾಮೀಣ ಸಾಂಸ್ಕೃತಿಕ ಪರಂಪರೆಯ ಸಿರಿಯನ್ನು ಹೆಚ್ಚಿಸುವ ಜನಸಾಮಾನ್ಯರ ಈ ಜನಪದ ಸಾಹಿತ್ಯ ಈ ಜಾತ್ರೆಯಲ್ಲಿ ತನ್ನದೆಯಾದ ರಥೋತ್ಸವ ಸಂದರ್ಭದಲ್ಲಿ 'ಸುಮಂಗಲೆಯರ ಸಂಭ್ರಮ' ನೋಡಬಹುದು.

(ಜಿ.ಪಿ.ಎ.)

ರಾ

ರಾಜಗೊಂಡ: ಬಹು ಹಿಂದೆಯೇ ಗೊಂಡರಿಂದ ಕವಲೊಡೆದ ಒಂದು ಬುಡಕಟ್ಟು, ಕರ್ನಾಟಕದ ಬೀದರ, ಹರಿಹರ ಹಾಗೂ ಬೆಂಗಳೂರಿನಲ್ಲಿ ಇತ್ತೀಚೆಗೆ ನೆಲೆನಿಂತಿರುವ ಅಲೆಮಾರಿ ಆದಿವಾಸಿ ರಾಜವೈದ್ಯರು ತಮ್ಮನ್ನು ರಾಜಗೊಂಡರೆಂದು ಮತ್ತು ಕೊಯ್ತೂರ್ ಗೊಂಡರೆಂದು ಹೇಳಿಕೊಳ್ಳುವರು. ಗೊಂಡ ಹಾಗೂ ರಾಜಪುತರ ಸಂಗಮವೇ ರಾಜಗೊಂಡರೆಂಬುದು ಇತಿಹಾಸದ ಪುಟಗಳಿಂದ ವೇದ್ಯವಾಗುವುದು. ರಾಜಗೊಂಡರಿಗೆ ವೈದ್ಯಕೀಯ ಉಪಚಾರ ನೀಡಲು ಮುಂದೆ ಬಂದ ಒಂದು ಅನುಭವಿ ಗೊಂಡರ ಗುಂಪೇ ಕಾಲಾಂತರದಲ್ಲಿ ರಾಜ ವೈದ್ಯರಾಗಿ ರಾಜಗೊಂಡರೆನಿಸಿ ಕೊಂಡಿರುವ ಸಾಧ್ಯತೆಗಳಿವೆ. ಮುಸ್ಲಿಂ ಆಳರಸರ ಆಕ್ರಮಣ ದಿಂದಾಗಿ ಇವರು ಅನಾಥರಾಗಿ ತಮ್ಮ ಉದರ ಪೋಷಣೆಗಾಗಿ ಆಯುರ್ವೇದದ ವ್ಯಾಪಾರದೊಂದಿಗೆ ತಮ್ಮ ಅಲೆಮಾರಿ ಜೀವನ ದೇಶಾಂತರ ಗೊಳಿಸಿದ್ದಾರೆ. ಅಲೆಮಾರಿ ರಾಜಗೊಂಡರು ಸಾಮಾನ್ಯ ವಾಗಿ ರೈಲ್ವೆ ರಹದಾರಿಗಳಲ್ಲಿ ಕಾಲಾಂತರದಲ್ಲಿ ಪಸರಿಸಿ ರುವರು. ಬೀದರ ನಗರದ ಹೊರವಲಯದ ಹಳ್ಳದಕೇರಿಯ ರಾಜಗೊಂಡ ಕಾಲನಿ ಯಲ್ಲಿ 120 ಅಲೆಮಾರಿ ರಾಜಗೊಂಡರ ಕುಟುಂಬಗಳು ವಾಸವಾಗಿವೆ.

ಕುಲ, ಬಳಿ, ಬೆಡಗುಗಳಿಗೆ ರಾಜಗೊಂಡರು ಖೋಮ ಗಳೆಂದು ಕರೆಯುವರು. ಖೋಮ ಎಂದರೆ ಒಂದರ್ಥದಲ್ಲಿ ಮೂಲ ವಂಶಜನು ಎಂದೇ ಅರ್ಥ. ರಾಜಗೊಂಡರ ಇಡೀ ಜನ ಸಮುದಾಯವನ್ನು ನಾಲ್ಕು ಸಮೂಹಗಳಲ್ಲಿ ಗುರುತಿಸಬಹುದು. ಅವರು ತಮ್ಮ ಸಮೂಹಗಳಿಗೆ ದೇವಗಳೆಂದು ಕರೆಯುವರು. ಅವುಗಳೆಂದರೆ ಚಾರದೇವ, ಪಾಂಚದೇವ, ಸಾದೇವ ಹಾಗೂ ಸಾತದೇವ, ಈ ದೇವಗಳು ರಾಜಗೊಂಡರ ಮೂಲ ಬಂಧುತ್ವದ ಸಂಕೇತಗಳಾಗಿವೆ. ಮೂಲದಲ್ಲಿ 12 ದೇವಗಳಿದ್ದು ಅನಂತರದಲ್ಲಿ ಕೇವಲ 4 ದೇವಗಳುಳಿದ ಬಗ್ಗೆ ಗೊಂಡಿ ಧರ್ಮಗ್ರಂಥದಲ್ಲಿ ಉಲ್ಲೇಖವಿದೆ. ಚಾರದೇವರಲ್ಲಿ 4; ಪಾಂಚದೇವರಲ್ಲಿ 5; ಸಾದೇವರಲ್ಲಿ 6; ಸಾತದೇವರಲ್ಲಿ 7 ಮೂಲ ಪುರುಷರಿದ್ದು ಅವರೇ ಆ ದೇವರುಗಳಲ್ಲಿಯ ರಾಜಗೊಂಡರಿಗೆ ಮೂಲದೈವರಾಗಿದ್ದಾರೆ. ಅವರ ವಂಶಜರೇ ಈ ರಾಜಗೊಂಡರೆನ್ನಲು ಇಂದಿಗೂ ಅವರು ತಮ್ಮ ಬಂಧುತ್ವವನ್ನು ತಮ್ಮ ದೇವಗಳಿಂದಲೂ ಹಾಗೂ ಖೋಮಗಳಿಂದಲೂ ಗುರುತಿಸಿಕೊಳ್ಳುವುದು ಸಾಕ್ಷಿಯಾಗಿದೆ.

ರಾಜಗೊಂಡರು ಶಿವರಾತ್ರಿ, ದಸರಾ, ಹೋಳಿ ಇತ್ಯಾದಿ

ಹಬ್ಬಗಳನ್ನು ಆಚರಿಸುವರು, ಬೀದರಿನ ರಾಜಗೊಂಡರು ಶಿವರಾತ್ರಿಯಿಡಿ ಉಪವಾಸ, ಭಜನೆ, ಕೀರ್ತನೆ, ಗೊಂಡಿ ನೃತ್ಯ ಮಾಡಿ ಮರುದಿನ ಸಾಮೂಹಿಕ ಭೋಜನ ಮಾಡುವರು. ಶಿವನನ್ನು ಪ್ರತಿಷ್ಠಾಪಿಸಿ ಶ್ರದ್ಧಾ ಭಕ್ತಿಯಿಂದ ಮಹಾದೇವನನ್ನು ಫೆರಸಾಪೆನೆಂದು ಆರಾಧಿಸುವರು.

ಕರ್ನಾಟಕದಲ್ಲಿಯ ರಾಜಗೊಂಡ ಅಲೆಮಾರಿ ಆದಿವಾಸಿಗಳು ಆರ್ಥಿಕವಾಗಿ ಬಹಳ ಬಡವರು. ಇವರ ವೇಷಭೂಷಣಗಳನ್ನು ನೋಡಿದೊಡನೆಯೋ ಇವರ ಆರ್ಥಿಕ ಪರಿಸ್ಥಿತಿಯ ಅರಿವಾಗುತ್ತದೆ. ಇವರು ಕೃಷಿ, ಕೃಷಿಕೂಲಿ ಹಾಗೂ ಪಶುಪಾಲನೆಯಲ್ಲಿ ತೊಡಿಗಿಸಿಕೊಂಡವರಲ್ಲ. ಇವರಿಗೆ ಇವರದ್ದೆ ಎಂಬ ಒಂದಿಂಚೂ ಭೂಮಿ ಇದ್ದಿಲ್ಲ. ಮೋಸದ ವ್ಯವಹಾರ ಇವರು ತಿಳಿದಿಲ್ಲ. ಜೀವನಕ್ಕಾಗಿ ಅಲೆದಾಟ ತಪ್ಪಿಲ್ಲ. ಇವರಲ್ಲಿಯ ಸಾಂಪ್ರಾದಾಯಿಕ ಆಯುರ್ವೇದ ಕಸುಬಿನಲ್ಲಿ ಜಾತಿ ಪಂಚಾಯತಿಯ ಕಾನೂನುಗಳಲ್ಲಿ ಹಾಗೂ ನಂಬಿಕೆಗಳಲ್ಲಿ ಪರಿವರ್ತನೆ ತರುವವರೆಗೆ ಇವರಲ್ಲಿ ಆರ್ಥಿಕ ಸುಧಾರಣೆ ಕಷ್ಟ ಸಾಧ್ಯ.

ಗಿಡಮೂಲಿಕೆಗಳೇ ರಾಜಗೊಂಡರಿಗೆ ಜೀವನಾಧಾರ. ಅದಕ್ಕೆ ಇವರು 'ಜಡಿಬೂಟಿ' ಎಂದು ಕರೆಯುವರು. ಅಂದರೆ ಔಷಧ, ಗಿಡ ಮೂಲಿಕೆಗಳ ನಾರು ಬೇರುಗಳೆಂದು ಅರ್ಥ. ವಿಂಧ್ಯ, ಸಾತಪುರ, ನರ್ಮದಾ, ಗೋದಾವರಿ, ಇತ್ಯಾದಿ ನದಿ ಜಲಾನಯನ ಪ್ರದೇಶಗಳಿಂದ ಗಿಡ ಮೂಲಿಕೆಗಳನ್ನು ಇವರು ಸಂಗ್ರಹಿಸುತ್ತಾರೆ. ಅದು ಸಾಧ್ಯವಾಗದಿದ್ದಾಗ ಸ್ಥಳೀಯ ಆಯುರ್ವೇದಿಕ ಅಂಗಡಿಗಳಿಂದ ಖರೀದಿಸಿ ಔಷಧ ತಯಾರಿಸುವರು ಮತ್ತು ಸುತ್ತಮುತ್ತ ಮಾರಾಟ ಮಾಡುವರು. ರಸ್ತೆಯ ಬದಿಯಲ್ಲಿ ಮಾರಾಟ ಮಾಡುವುದರಿಂದ ಈ ವ್ಯಾಪಾರಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. ಸರಕಾರಿ ಆಯುರ್ವೇದಿಕ ಚಿಕಿತ್ಸಾಲಯಗಳು ಆರಂಭಗೊಂಡಿವೆ. ಹೀಗಾಗಿ ಆಯುರ್ವೇದ ವ್ಯಾಪಾರದ ಮೇಲೆ ಅವಲಂಬಿಸಿರುವ ಇವರ ಕುಟುಂಬಗಳು ಕ್ಷೀಣಿಸುತ್ತಿವೆ. *(ಕೆ.ಎಂ.ಎಂ.)*

ರಾಜಾನಾಟ: ಕರ್ನಾಟಕ ಜನಪದ ರಂಗ ಭೂಮಿಯ ಒಂದು ಪ್ರಕಾರ. ಸಣ್ಣಾಟದ ಗುಂಪಿಗೆ ಸೇರಿದೆ. ದೊಡ್ಡಾಟದ ಸಾಂಪ್ರದಾಯಕವಾದ ಮುಖವರ್ಣಿಕೆ ವರ್ಣಾಲಂಕಾರಗಳು ಇಲ್ಲಿವೆ. ಅಷ್ಟು ಕಟ್ಟುನಿಟ್ಟಾದ ರಂಗ ತಯಾರಿಕೆ ಇಲ್ಲ. ದೊಡ್ಡಾಟದ ಅಜಾನುಬಾಹು ಕಲಾವಿದರು ಕಂಚಿನ ಗಂಟೆಯನ್ನು ನಾಚಿಸುವಂತಹ ಮುಮ್ಮೇಳ ಹಿಮ್ಮೇಳಗಳ ಧ್ವನಿಗಳೂ ಇಲ್ಲಿಲ್ಲ. ಶಾರೀರಿಕ ದುರ್ಬಲತೆ ಬೆಳೆದಂತೆ ದೊಡ್ಡಾಟದ ಪಾತ್ರ ನಿರ್ವಹಣೆಯು ಸುಲಭ ಸಾಧ್ಯವಾಗದಾಗ ಸಣ್ಣಾಟ ಹೆಚ್ಚು ಜನಪ್ರಿಯವಾಯಿತು.

ರಾಜಾನಾಟ ಆಡಲು ಒಂದು ಅಟ್ಟ ಬೇಕು. ಊರ ಹೊರಗಿನ ಬಯಲಿನಲ್ಲಿ ಅಥವಾ ಹನುಮಂತನ ಗುಡಿ ಅಥವಾ ಗ್ರಾಮದೇವತೆ ಪಕ್ಕದ ಜಾಗದಲ್ಲಿ 20'x 15' x 12' ಸುಮಾರು ಈ ಅಳತೆ ಹೊಂದಿದ ಅಟ್ಟ ಹಾಕುತ್ತಾರೆ. ಎಣ್ಣೆಯ ಡ್ರಮ್ಮುಗಳನ್ನಿಟ್ಟು ಅದರ ಮೇಲೆ ಮರದ ಹಲಿಗೆಗಳನ್ನಿಡುತ್ತಾರೆ. ಮೂರು ಬದಿಗಳಿಗೂ ಮತ್ತು ಮೇಲ್ಭಾಗವನ್ನು ಗುಡಾರದಿಂದ ಮುಚ್ಚುವರು. ರಂಗದ ಎರಡೂ ಬದಿಗೆ ಪಂಜುಗಳನ್ನುರಿಸಿ ಬೆಳಕನ್ನುಂಟು ಮಾಡುತ್ತಿದ್ದರು. ಕೆಲವು ಬಾರಿ ರಂಗಮಂದಿರದ ಇಕ್ಕೆಲಗಳಲ್ಲಿ ಎತ್ತಿನ ಬಂಡಿಯ ನೊಗಗಳನ್ನು ಭೂಮಿಯಲ್ಲಿ ಹೂತು ಬೋರಲು ಮಾಡಿದ ಮಣ್ಣಿನ ಗಡಿಗೆಯ ಅರ್ಧ ಗೋಳಗಳನ್ನಿಟ್ಟು, ಕಲ್ಲೆಣ್ಣೆಯಲ್ಲಿ ಅದ್ದಿದ ಕುಳ್ಳನ್ನು ಉರಿಸುತ್ತಾ ಬೆಳಕನ್ನುಂಟು ಮಾಡುತ್ತಿದ್ದರೆಂಬ ಮಾತೂ ಕೇಳಿ ಬಂದಿದೆ. ಕೆಲವು ಪಾತ್ರಗಳ ಆಗಮನವನ್ನು ರಮ್ಯಗೊಳಿಸಲು ರಾಳ ಉಗ್ಗಿ ಬೆಳಕನ್ನು ಹೆಚ್ಚಿಸುತ್ತಿದ್ದರು.

ರಾಜಾನಾಟದಲ್ಲಿ ಉಪಯೋಗಿಸುತ್ತಿದ್ದ ವಾದ್ಯಗಳು ದಪ್ಪು, ಗುಂಡದಾಳಿ ಮತ್ತು ಪುಂಗಿ. ದಪ್ಪು ಇಲ್ಲಿ ಪ್ರಾಧಾನ್ಯವಾಗಿತ್ತಾದ್ದ-ರಿಂದ ರಾಜಾನಾಟವನ್ನು ದಪ್ಪಿನಾಟವೆಂದೂ ಕರೆಯುತ್ತಾರೆ. ಪುಂಗಿಯ ನಾಳದ ಮೂರು ರಂಧ್ರಗಳನ್ನು ಜೇನು ಮೇಣದಿಂದ ಮುಚ್ಚಿ ಕೇವಲ ಒಂದೇ ರೀತಿಯ ಗತಿಯ ಶ್ರುತಿಯನ್ನಾಗಿ ಇಲ್ಲಿ ಉಪಯೋಗಿಸಲಾಗುತ್ತದೆ. ದಿನಗಳೆದಂತೆ ದಪ್ಪಿನ ಬದಲಾಗಿ ತಬಲಾ, ಪುಂಗಿಯ ಬದಲಾಗಿ ಹಾರ್ಮೋನಿಯಂ ಬಳಕೆಯಲ್ಲಿ ಬಂದುವು.

ವೇಷಭೂಷಣ ಮತ್ತು ವರ್ಣಾಲಂಕಾರ: ರಾಜಾನಾಟದ ಪಾತ್ರಗಳು ತಮ್ಮ ವರ್ಣಾಲಂಕಾರದ ಹಿಂದಿನ ಭವ್ಯತೆಯನ್ನು, ಸಾಂಪ್ರದಾಯಕ ವೇಷಭೂಷಣಗಳಲ್ಲಿಯ ರೌದ್ರ ಗಂಭೀರತೆಯನ್ನು ತೊರೆದಿವೆ. ಇಲ್ಲಿ ವೇಷಭೂಷಣಗಳಿಗಿಂತ ಪಾತ್ರಗಳ ಮಾತುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದು ಕಂಡು ಬಂದಿದೆ. ಮುಖ್ಯ ಪಾತ್ರ ಧಾರಿಯಾದ ಗೋಕುಲರಾಜನ-ವೇಷಭೂಷಣವೆಂದರೆ ಭರ್ಜರಿಯಾದ ಜರದ ಪಟಗ, ಚುಂಗು ಬಿಟ್ಟು ಕಟ್ಟಿ ಸಿರಿಪೇಚು ತುರಿಸಿಕೊಂಡು ಕೆಂಪು ದಡಿ ಧೋತ್ರವನ್ನು ಪಂಚಕಚ್ಚೆ ಹಾಕಿ ಉಟ್ಟು ಜರಿ ಶೆಲ್ಲೆಯನ್ನು ಎರಡೂ ಭುಜಗಳ ಮೇಲಿಂದ ಇಳಿಬಿಟ್ಟು ಮಣಿಹಾರಗಳನ್ನು ಧರಿಸಿ, ಕೈಯಲ್ಲಿ ಬಂಗಾರದ ಕಡೆಗಳು, ಊದದ ಕೊಳಲು, ತುಟಿಗೆ ಇಂಗ್ಲೀಕ ಮುಖಕ್ಕೆ ಕೃಷ್ಣನ ವರ್ಣ. ಪ್ರೇಕ್ಷಕರಿಗೆ ಕಾಣುವ ಕೈ ಮತ್ತು ಕುತ್ತಿಗೆಗೂ ಬಣ್ಣ, ಕಾಲಲ್ಲಿ ಗೆಜ್ಜೆ. ಕಿರೀಟ, ಭುಜಕಿರೀಟಗಳು ಇಲ್ಲಿಲ್ಲ. ಕೆಲವು ಬಾರಿ ಉದ್ದನೆಯ ಕರಿ ಗೌನು ಕಟ್ಟಿ ಕೊಳ್ಳುತ್ತಿದ್ದುದೂ ಉಂಟು. ಸ್ತ್ರೀ ಪಾತ್ರಗಳೆಂದರೆ ಗೌಳಗಿತ್ತಿಯರು. ಅವಳಲ್ಲೊಬ್ಬಳು ರಾಧೆ. ಇಬ್ಬರ ವರ್ಣಾಲಂಕಾರ ಗಮನಾರ್ಹ. ತೆಳುವಾದ ಗುಲಾಬಿ ವರ್ಣ. ಹುಬ್ಬು ಮತ್ತು ಕಣ್ಣುಗಳಿಗೆ ದೀಪದ ಕಾಡಿಗೆ, ನೀಳವಾಗಿ ಬಾಚಿದ ಜಡೆ, ಜಡೆಬಿಲ್ಲೆಗಳು, ತೋಳುಗಳವರೆಗೆ ಕೈ ತುಂಬಾ ರಂಗು, ಅಂಗೈಯಲ್ಲಿ ಚಿತ್ರ ವಿಚಿತ್ರ ನಕ್ಷೆಗಳು, ಪೀತಾಂಬರವಲ್ಲದಿದ್ದರೂ ಬೆಲೆಯುಳ್ಳ ಜರತಾರಿ ಸೀರೆ, ಮೈತುಂಬಾ ಹೊದೆಯಂತಹ ಸೆರಗು, ಕೊರಳಲ್ಲಿ ಒಂದೆರಡು ಎಳೆಗಳು, ಕಾಲಲ್ಲಿ ಗೆಜ್ಜೆಗಳು, ಮೂಗಿನಲ್ಲಿ ಗಾಡಿನತ್ತು, ಕಿವಿಯಲ್ಲಿ ಬೆಂಡೋಲೆ, ಕೈತುಂಬಾ ಸಡಿಲವಾದ ಗಾಜಿನ ಬಳೆಗಳು. ನರ್ತಿಸುವಾಗ್ಗೆ ಈ ಬಳೆಗಳು ನಿನಾದವೂ ಗೆಜ್ಜೆಗಳ ಝೇಂಕಾರವೂ ಕೇಳಿ ಬರುತ್ತಿದೆ. ದೂತಿ: ವಿಚಿತ್ರ ವೇಷಧಾರಿ. ಈತ ಧೋತ್ರವನ್ನು ಸೀರೆಯನ್ನುಡುವ ರೀತಿಯಲ್ಲಿ ಉಟ್ಟಿರುತ್ತಾನೆ. ಸರಳ ಉಡುಗೆ ತೊಡುಗೆ, ಮುಖ ಬಣ್ಣವಿಲ್ಲ. ರಂಗ ಮಂದಿರದ ಬಲಭಾಗದಲ್ಲಿ ಪುಂಗಿ ಊದುವವನು, ದಪ್ಪು ಬಾರಿಸುವವನು, ಗುಂಡದಾಳಗಳನ್ನು ಹಿಡಿದು ಹಾಡಿಕೆಯವನೂ ಆಟದ ಇಡೀ ವೇಳೆಯನ್ನು ನಿಂತೇ ಕಳೆಯುತ್ತಾರೆ. ಹಾಡುಗಳಲ್ಲಿ ತ್ರಿತಾಳ ಮತ್ತು

ಝುಂಪೆ ತಾಳವನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಹಾಡಿ-ಕೆಯವನು ಹಾಡುವಾಗ ಪಾತ್ರಗಳೂ ಆತನೊಂದಿಗೆ ಪೂರ್ತಿ ಅಥವಾ ಒಂದೆರಡು ಚರಣಗಳನ್ನು ಹಾಡಿ ನರ್ತಿಸುತ್ತವೆ. ಕೆಲವು ಹಾಡುಗಳಲ್ಲಿ ಎರಡೂ ಪಾತ್ರಗಳು ಕುಣಿಯುತ್ತಾ ನಿಂತ ಸ್ಥಳದಿಂದ ಸುಮಾರು 7-8 ಅಡಿಗಳಷ್ಟು ಮುಂದಕ್ಕೆ ಬಂದು ನರ್ತಿಸಿ ಪದ್ಯದ ಕೊನೆಗೆ ತಾವಿದ್ದ ಮೊದಲಿನ ಸ್ಥಾನಕ್ಕೆ ತೆರಳುವರು. ನಿಂತಲ್ಲಿಂದ ಪ್ರೇಕ್ಷಕರಿಗೆ ನೇರವಾಗಿ ಬರದ ಓರೆಯಾಗಿ ಮುಂದೆ ಬಂದು, ಬಂದ ದಿಶೆಯಲ್ಲಿಯೇ ಹಿಂದಿರುಗುತ್ತಾರೆ; ತ್ರಾಪಿಜ್ಯದ ಸಮಾಂತರವಲ್ಲದ ಬಾಹುಗಳಂತೆ. ದೊಡ್ಡಾಟದಲ್ಲಿ ಕಂಡು ಬರುವ ಥಕಥೈ ಕುಣಿತ: ಇಲ್ಲಿ ಕಂಡು ಬಂದಿಲ್ಲ. ಜಾನಪದ ಕಲಾವಿದ ಯಾವುದೇ ನೃತ್ಯಶಾಲೆ ಕಲಾ ಶಾಲೆಗೆ ಹೋಗಿ ಯಾವುದೇ ರೀತಿಯ ನೃತ್ಯವನ್ನು ತಿಳಿದಿಲ್ಲ. ತನ್ನ ಕಲ್ಪನೆಯಂತೆ, ಭಾವ ಹೊರಹೊಮ್ಮಲು ಅವಶ್ಯವಾದ ಶರೀರದ ಅಂಗಗಳ ಚಲನೆಯನ್ನು ಮಾಡುತ್ತಾ ಒಂದು ರೀತಿ ತನ್ನದೇ ಆದ ಸಂಪ್ರದಾಯವನ್ನು ಹುಟ್ಟಿಸಿದ. ಇದು ಆಟದ ಸೋಗುಗಳ ತಿಳುವಳಿಕೆ, ಆಟದ ಅರ್ಥ ಪದ್ಯದ ಅರ್ಥ ಹೆಚ್ಚು ತಿಳಿಯಾದಂತೆ ಕುಣಿತವು ಹೆಚ್ಚಿತು. ನಾಟ್ಯ ಶಾಸ್ತ್ರದ ಅಂಗಹಾರವಾಗಲೀ ಅಥವಾ ಕರಣಗಳಾಗಲೀ ಇವರಿಗೆ ಅನ್ವಯಿಸುವುದಿಲ್ಲ. ಹಾಗೆ ಅನ್ವಯವಾದಲ್ಲಿ ಅದು ಆಕಸ್ಮಿಕವಾದುದು ಮಾತ್ರ. ಸಾಮಾನ್ಯವಾಗಿ ಕುಣಿತವು ಗೀತ ಮತ್ತು ಸಂಗೀತದೊಂದಿಗೆ ಸಾಗುತ್ತದೆ. ರಾಜಾನಾಟದಲ್ಲಿ ಕುಣಿಯಲೆಂದೇ ಉದ್ಭವಿಸಿದ ದೃಶ್ಯಗಳುಂಟು. ರಾಧೆ ಮತ್ತು ರಾಜ, ಗೋಕುಲದ ರಾಜ, ಉಚಿತವಾದ ಕುಣಿತ ಮಾಡುತ್ತಾರೆ. ಜನತೆ ಹುಚ್ಚೆದ್ದು ಹರ್ಷಪಟ್ಟು, ಕೋರಿದ ಕುಣಿತಗಳ ಮತ್ತು ಹಾಡುಗಳ ಪುನರಾವರ್ತನೆಯೂ ಅಸಂಭವ ವಾಗಿರಲಿಲ್ಲ. ಅಂದು ರಾಜಾನಾಟದಲ್ಲಿ ಉಪಯೋಗಿಸುತ್ತಿದ್ದ ಕುಣಿತಗಳ ಬಗ್ಗೆ ಹೆಚ್ಚಿಗೆ ಹೇಳುವುದು ಕಷ್ಟಸಾಧ್ಯ. ಏಕೆಂದರೆ ತುಲನೆ ಮಾಡಿ ವಿಷಯ ತಿಳಿಯೋಣವೆಂದರೆ ನಾಲ್ಕಾರು ಮೇಳಗಳಿಲ್ಲ. ಇಂದು ಹೇಳುವವರ ಮಾತಿನಿಂದಲೇ ಹಾಗೆ ಕುಣಿಯುತ್ತಿದ್ದರೆಂದು ಹೇಳಬಹುದೇ ವಿನಾ, ಇಂದಿನ ಕುಣಿತವೇ ಅಂದಿನದು ಎನ್ನುವಂತಿಲ್ಲ. ವೃತ್ತಿ ನಾಟಕದ ಚಲನ ಚಿತ್ರದ ಆಘಾತದಿಂದ ಪೂರ್ವದಲ್ಲಿ ಕುಣಿತದ ರೂಪರೇಷಗಳು ಏನಿರಬಹುದೆಂಬುದರ ಪಳೆಯುಳಿಕೆಗಳೂ ಸಹ ಉಳಿದಿಲ್ಲ. ಎಷ್ಟೋ ಸ್ತ್ರೀ ಪಾತ್ರ ಧಾರಿಗಳು ತಮ್ಮ ಹಾಡನ್ನು ಪೂರ್ತಿ ಹಾಡುತ್ತಾ ಕುಣಿಯುವರು. ರಾಜಾನಾಟದ ಸ್ತ್ರೀಪಾತ್ರ ಧಾರಿಣಿ ಚಿಮಣಾ, ಚಿಮಣಿ, ಚಿಮಣಾ ಎಂದರೆ ಹಳ್ಳಿಯ ಪ್ರತಿ ಮನೆಯಲ್ಲಿ ಕಂಡು ಬರುವ ಸೀಮೆ ಎಣ್ಣೆಯ ದೀಪ. ಮನೆಯನ್ನು ಬೆಳಗುವ ಚಿಮಣಿ ರಂಗಭೂಮಿಯನ್ನು ಬೆಳಗುವ ದೀಪವಾಗಲಿ ಎಂಬ ಜನತೆಯ ಕಲ್ಪನೆಯ ಉನ್ನತೆಯನ್ನು ಈ ಸಾದೃಶ್ಯ ಸಂಪತ್ತಿನಲ್ಲಿ ಕಾಣಬಹುದು. ರಾಜಾನಾಟವನ್ನು ಕೆಲವು ಬಾರಿ ಚಿಮಣಾ ಆಟ ಎಂದು ಕರೆಯುವರು.

ರಾತ್ರಿ 10 ಗಂಟೆ ದಪ್ಪಿನ ಗುಂಡದಾಳಿಗಳ ಸದ್ದಿನೊಂದಿಗೆ ತೆರೆ ಅಂದರೆ ಅಡ್ಡ ಹಿಡಿದ ಕೆಂಪು ಸಾಲು ಸರಿಯಲು 10-12 ವರ್ಷದ ಹುಡುಗನಿಗೆ ಗಣೇಶನ ಮುಖವಾಡ ಹಾಕಿದ್ದು ಕಂಡು ಬರುತ್ತದೆ. ಹಾಡಿಕೆಯವ 'ಗಜವದನ ಮಂದಿರಕೆ ಬಾರೋ' ಎಂದು ಗಣೇಶನನ್ನು ಆಹ್ವಾನಿಸಿ ಸ್ತುತಿಸಿ ಅಂದಿನ ರಾಜಾನಾಟವು ಸುಸೂತ್ರವಾಗಿ ನಡೆಯುವಂತೆ ಅನುಗ್ರಹಿಸು ಎಂದು ಬೇಡಿಕೊಳ್ಳುವನು. ಗಣೇಶನು ಆಶೀರ್ವದಿಸುತ್ತಿರುವಂತೆಯೇ ಶಾಲು ಅಡ್ಡ ಹಿಡಿಯುವರು. 'ಎಷ್ಟು ದೂರ-ಎಷ್ಟು ದೂರ ಗೋಕುಲನಗರ' ಎಂಬ ಹಾಡಿನೊಂದಿಗೆ ನೃತ್ತಿಸುವ ಗೊಲ್ಲತಿ ತಲೆಯ ಮೇಲೊಂದು ಗಡಿಗೆ ಹೊತ್ತು ರಂಗ ಪ್ರವೇಶಿಸುತ್ತಾಳೆ. ಸುಮಾರು ಐದು ನಿಮಿಷದ ಹಾಡು, ನೃತ್ಯದ ಅನಂತರ ದೂತಿಯೊಂದಿಗೆ ತಾನು ಬಂದ ಕಾರ್ಯವನ್ನು ತಿಳಿಸುತ್ತಾಳೆ. "ನನಗ ದಾರಿ ತೋರಸ ಗೋಕುಲ ನಗರಕ" ಎಂದು ಇಬ್ಬರೂ ಸಾಗುತ್ತಿರುವಾಗ್ಗೆ ಸುಂಕದವ ದಾರಿಕಟ್ಟಿ ಸುಂಕ ಕೊಡುವ ತನಕ ಊರಾಗ ಬಿಡುದಿಲ್ಲ ಹಾಲು ಮಾರಾಕ.... 'ಅವ್ವಯ್ಯಾ ದೂತಿ! ಏನ ತಾಯಿ ಇದು ಸುಂಕ ಅಂತ ಸುಂಕ ಇದೆಲ್ಲಿಂದ ಬಂತೇ ದೂತಿ..." ಆಗ್ಗೆ ಗಲಘೂಜಿಯು 'ಹಸರು ನಾಮದ ಗೊಲ್ಲತೀ... ಹಸರು ನಾಮದ ಗೊಲ್ಲತೀ... ಹಾಲಿನ ಸುಂಕ ಕೇಳಿದ್ರ ನೀ... ದೂರ ದೂರ ಹಾರುತೀ..." ಎಂದು ತೀವ್ರಗತಿಯಲ್ಲಿ ಅವಳತ್ತ ಸಾಗುವನು. ದೂತಿ, ಗೊಲ್ಲತಿ, ಸುಂಕ ಬೇಡುವ ಗಲಘೂಜಿ ಇವರ ಹಾಸ್ಯ ನಡೆದಿರಲು ಬೆಣ್ಣೆ ಮತ್ತು ಮೊಸರು ಮಾರುವ ಗೊಲ್ಲತಿಯರ ಪ್ರವೇಶ. ಮತ್ತೆ ಹಾಡು, ಕುಣಿತ, ಆಗ್ಗೆ ಹೆಣ್ಣು ಹೆಚ್ಚು, ಗಂಡು ಕಡಿಮೆ, ಅವನಿಂದ ನಾಕ ನರಕ, ಅವಳಿಂದ ನಾಕ, ನರಕ ಇತ್ಯಾದಿ ಸಂವಾದಿ ಪದಗಳು ಕೇಳಿ ಬರುತ್ತವೆ. ಈ ತಾಕಲಾಟ ಪ್ರೇಕ್ಷಕರಲ್ಲಿ ಆಹ್ಲಾದವನ್ನುಂಟು ಮಾಡುತ್ತದೆ. ಸುಂಕ ಕೊಡದೇ ಗೋಕುಲ ನಗರಕ್ಕೆ ಹೋಗುವಂತೆ ನೀನು ಸಹಾಯ ಮಾಡೆಂದು ದೂತಿಯನ್ನು ಹಿರಿತನಕ್ಕಾಗಿ ಮಾತಿಗೆ ಎಳೆದು ಹಾಸ್ಯದ ಹೊನಲು ಹರಿಯುತ್ತಿರಲು ಮಧ್ಯರಾತ್ರಿಯ ಸಮಯವಾಗುತ್ತದೆ. ಗೊಲ್ಲತಿಯರಿಗೆ ರಾಜನಲ್ಲಿ ಅನುರಾಗ ಉಂಟಾಗುತ್ತದೆ. ಅವರಲ್ಲಿ ಉದಯಿಸಿದ್ದು ಕಾಮ, ಮೋಹವೇ, ವಿನಾ, ಪ್ರೇಮವಲ್ಲವೆಂದು ರಾಜನು ಅವರಿಗೆ ತಿಳಿ ಹೇಳಲು, ಅವರು ಆತನನ್ನು ಹಿಡಿದೆಳೆಯಲು, ಸಮೀಪಿಸಲು ಆತ ಮಂತ್ರ ಉಪದೇಶಿಸಿದರೂ ವ್ಯರ್ಥವಾಗಲು ಟಣ್ಣನೆ ಅಟ್ಟದಿಂದ ಕೆಳಕ್ಕೆ ಹಾರಿ ನಿಲ್ಲುವನು. ಸರಿ, ಗೊಲ್ಲತಿಯರ ಪ್ರಲಾಪ, ಹಾಡು, ಕುಣಿತ, ಕೆಳಗೆ ನಿಂತ ರಾಜ ಕಾಮ, ಪ್ರೇಮ, ಮೋಹಗಳ ಅಂತರವನ್ನು ಪುರಾಣಗಳ ದೃಷ್ಟಾಂತದಿಂದ ತಿಳಿ ಹೇಳುವನು ಅವರು ತ್ರಾಹಿ ಎಂದು ಕಿವಿಹಿಡಿದುಕೊಂಡು ಗಲ್ಲಗಲ್ಲ ಬಡಿದುಕೊಂಡನಂತರ ರಾಜ ಸುಪ್ರೀತನಾಗುತ್ತಾನೆ. ಗಲ ಘೂಜಿಯು ಅಟ್ಟದ ಮೇಲೇರಿ ಸರ್ವೆಜನಾಃ ಸುಖಿನೋ ಭವಂತು ಎಂದು ಹೇಳಲು ಮಂಗಳಾರತಿ ನಡೆಯುತ್ತದೆ. ಅನಂತರ ಬಣ್ಣ, ವೇಷಗಳೊಂದಿಗೆ ಎಲ್ಲರೂ ಊರ ಗ್ರಾಮದೇವತೆ ಅಥವಾ ಹನುಮಂತನ ಗುಡಿಗೆ ಹೋಗಿ ಕಾಯಿ ಕರ್ಪೂರ ಹಚ್ಚಿದ ಅನಂತರ ಅಲ್ಲಿಂದ ಚದರುತ್ತಾರೆ. ಹೀಗೆ ಸೋಗುಗಳು ಹಾಡುತ್ತಾ ನಡೆದು ದೇವಸ್ಥಾನಕ್ಕೆ ಹೋಗುವುದರಿಂದ ಜನತೆಗೆ ಸಮೀಪದಿಂದ ಕಲಾವಿದರನ್ನು ನೋಡುವ ಸದವಕಾಶ ದೊರೆಯುತ್ತದೆ.

ರಾಜಾನಾಟ ಹೈದ್ರಾಬಾದ್ ಕರ್ನಾಟಕದ ಹಳ್ಳಿಗಳಲ್ಲಿ ಶೀಘ್ರವಾಗಿ ಜನಪ್ರಿಯವಾಯಿತು. ಇಡೀ ಆಟವನ್ನು ನೋಡಿ ಹರ್ಷಿಸಿದ ಜನ ಅದರಲ್ಲಿಯ ತತ್ತ್ವಜ್ಞಾನದ ಛಾಯೆಯಿಂದಲೂ

ಜನಪ್ರಿಯವಾದ ಸಂಗೀತದಿಂದಲೂ ಮೋಹಿತರಾದಂತೆ. ಈ ಜಾನಪದ ಆಟದ ಜನಪ್ರಿಯತೆ ಹೆಚ್ಚಿತು.

ರಾಜಾನಾಟದ ತಂಡಗಳು: ಜಾನಪದದ ಇತರ ಪ್ರಕಾರಗಳಲ್ಲಿ ತಂಡಗಳು ಒಂದು ಊರಿಂದ ಇನ್ನೊಂದು ಊರಿಗೆ ಹೋಗಿ ಆಟವನ್ನು ಪ್ರದರ್ಶಿಸುವ ಗುಂಪುಗಳಿಲ್ಲ. ಹೀಗೆ ಊರಿಂದ ಊರಿಗೆ ಹೋಗುವ ತಂಡಗಳಲ್ಲಿ ರಾಜಾನಾಟದ ತಂಡವೇ ಮೊದಲನೆಯದಾಗಿರಬೇಕೆಂದು ಊಹಿಸಲಾಗಿದೆ. ದಾಸರಾಟದ, ಕೃಷ್ಣ ಪಾರಿಜಾತಗಳ ತಂಡಗಳ ಚಲನೆ ನಂತರದ್ದಿರಬೇಕು. ದಾಸರಾಟದಲ್ಲಿ ಹಾರ್ಮೋನಿಯಂ, ಉತ್ತರಾದಿ ಲಘು ಸಂಗೀತ ಇತ್ಯಾದಿಗಳಿಲ್ಲದೆ ಮರಾಠಿ ರಂಗಭೂಮಿಯ ಹೊಳವನ್ನೊಳ ಗೊಂಡಿದ್ದರಿಂದ ಕೇವಲ ದಪ್ಪೇ ಪ್ರಧಾನವಾಗಿರುವ ರಾಜಾನಾಟ ಇದಕ್ಕಿಂತ ಪೂರ್ವದ್ದೆನ್ನಲು ಅಡ್ಡಿಯಿಲ್ಲ. ದೂತಿ ಪಾತ್ರದವರನ್ನು ಚಿಮಣಾಗಳಾಗುತ್ತಿದ್ದ ಸ್ತ್ರೀ ಕಲಾವಿದರು ಮೊನ್ನೆ ಮೊನ್ನೆಯ ವರೆಗೂ ಬೆರಳೆಣಿಕೆ ಮಾಡುವಷ್ಟಾದರೂ ಜೀವಿಸಿದ್ದು ಕಂಡು ಬರುತ್ತದೆ. ಈ ರೀತಿಯ ತಂಡಗಳಲ್ಲಿ ವಿಶೇಷವಾಗಿ ಹೆಸರಿಸಬೇಕಾದ ತಂಡ ತಳೆವಾಡಿ ನಬೀ ಸಾಹೇಬನದು. ಆತ ತನ್ನ ಜೀವನವನ್ನೇ ಈ ಆಟವನ್ನು ಆಡುತ್ತಾ ಅದರ ಸಂಭಾಷಣೆಗಳನ್ನು ತತ್ತ್ವಜ್ಞಾನದೊಂದಿಗೆ ಬೆಸೆದು ಜನಾನುರಾ-ಗಿಯಾಗಿ ರಾಧೆಯ ಪಾತ್ರವನ್ನು ಯಾವ ಸ್ತ್ರೀಯೂ ನಿರ್ವಹಿಸದಷ್ಟು ಪರಿಣಾಮಕಾರಿಯಾಗಿ ನಟಿಸುತ್ತಿದ್ದ. ಆತನ ರಾಧೆಯ ಪಾತ್ರದ ನಟನಾ ಸಾಮರ್ಥ್ಯ ಎಲ್ಲ ಪ್ರೇಕ್ಷಕರನ್ನು ಮುಗ್ಧರನ್ನಾಗಿ ಮಾಡಿ ಬಿಡುತ್ತಿತ್ತು. ಸಂಭಾಷಣೆಯನ್ನು ತನ್ನ ಕಲ್ಪನಾಸಾಮರ್ಥ್ಯದಿಂದ ನಯವಾಗಿ ಜನರಂಜನೆಯಾಗಿ ಈ ಆಟವನ್ನು ಉತ್ತರ ಕರ್ನಾಟಕದಲ್ಲಿ 'ನಬೀ ಆಟ' ಎಂದು ಕರೆಯುವಷ್ಟು ಜನಪ್ರಿಯವಾಯಿತು. ಜೀವನದುದ್ದಕ್ಕೂ ಒಂದೇ ಜಾನಪದ ಆಟ ಆಡಿದವನಿವನು. ಸಿನಿಮಾ ಯುಗದಲ್ಲಿಯೂ ನಬೀ ಆಟದ ಜನಪ್ರಿಯತೆ ಕುಂದಲಿಲ್ಲ. ಸುಮಾರು ಮೂರು ಸಾವಿರ ಜನಸಂಖ್ಯೆಯುಳ್ಳ ಒಂದು ಚಿಕ್ಕ ಹಳ್ಳಿಯಲ್ಲಿಯೂ ಜನ ಒತ್ತಾಯದಿಂದ ನಬಿಯು ಎಂಟು ಅಥವಾ ಹತ್ತು ಪ್ರಯೋಗಗಳನ್ನು ಆಡಿದ್ದು ಆತನ ಆಟದ ಜನಾದರಣೆಯ ಗುರುತಾಗಿದೆ. ಉತ್ತರ ಕರ್ನಾಟಕದ ಬಹುಶಃ ಮುಕ್ಕಾಲು ಭಾಗ ಹಳ್ಳಿಗಳನ್ನೆಲ್ಲ ಈ ತಂಡ ಸುತ್ತಿದೆ. ರಾಜಾನಾಟದ ಪೂರ್ವ ರಂಗದಲ್ಲಿ ಗೊಲ್ಲತಿಯನ್ನು ಸುಂಕಕ್ಕಾಗಿ ಗಲಘೂಜಿ ಪೀಡಿಸಿದ್ದನ್ನು ನಬಿ ತನ್ನ ಕಲ್ಪನಾ ಸಾಮರ್ಥ್ಯದಿಂದ ಭಕ್ತ ಸತಿ-ದೇವ ಪತಿ ಎಂಬ ಭಕ್ತಿ ಮಾರ್ಗದ ಸಂಬಂಧ ಕಲ್ಪಿಸಿದ. ಧಾರ್ಮಿಕ ಮನೋಭಾವನೆಯ ಜನಸಮುದಾಯಕ್ಕೆ ಬಹು ಹೊಂದಾಣಿಕೆ ಯಾಗಿ ಕಂಡು ಬಂದಿತು. ಹದಿನಾರು ಸಹಸ್ರ ಹೆಂಡಂದಿರನ್ನು ಅರವತ್ತ ನಾಲ್ಕು ಸಹಸ್ರ ಮಕ್ಕಳನ್ನು ಹೊಂದಿದ ಕೃಷ್ಣ ಬ್ರಹ್ಮಚಾರಿ ಎಂದು ಭಾಗವತದಲ್ಲಿರುವ ನಿರೂಪಣೆಯನ್ನು ಜನಸಾಮಾನ್ಯರ ಭಾಷೆಯಲ್ಲಿ ತಿಳಿಸಿ ಗೊಲ್ಲತಿಯನ್ನು ಪೀಡಿಸುವುದು ಸಾಮಾನ್ಯ ಅರ್ಥದಲ್ಲಿ ಅಲ್ಲ. ಆ ಪ್ರೇಮ ದಿನಬಳಕೆಯಲ್ಲಿಯ ಮಟ್ಟದ್ದಲ್ಲ, ಅದರ ಆರ್ಥ ಅವಳು ಊಹಿಸುವಂತೆಯೂ ಅಲ್ಲ. ಅದರ ಅರ್ಥ ಮೇಲ್ಪಟ್ಟದ್ದು ಮತ್ತು ಅವಳಿಗೆ 'ನೀನು ಜಗತ್ತಿನ ಜಂಜಡದೊಂದಿಗೆ ಇದ್ದರೂ ನೀನು ಜೊಂಜಾಟದಲ್ಲಿರದೆ ನನ್ನಲ್ಲಿರು ಎಂದು' 'ನಾ ಹೋದರೆ ಕೈಲಾಸಕ್ಕೆ ನಾನು ಹೋದೆನು' ಎಂಬ ಕನಕದಾಸರ ಉಕ್ತಿಯಂತೆ ಇದು ಅಂದು ಇದ್ದ ಕೇಳಿ ತಿಳಿದ ರಾಜಾನಾಟ.

ಇಂದಿನದು ಇಂತಿದೆ: "ಗಲಘೂಜಿಯು ತನ್ನ ಗೆಳೆಯ ಸಖಾರಾಮ ತಾತ್ಯಾಗೆ ತಾನು ಕಂಡು ಮೋಹಿಸಿದ ಗೃಹಿಣಿಯ ಮನೆಗೆ ಹೋಗಿ ಕರೆತರುವಂತ ಅಂಗಲಾಚುತ್ತಾನೆ. ಮನೆಯ ವಿಳಾಸವನ್ನು ರಸ್ತೆ ಮರ ಇತ್ಯಾದಿಗಳಿಂದ ಸೂಚಿಸುತ್ತಾನೆ. ಸರಿ ಈತ ಹೋಗಲು ರಾಧೆ, ಅತಿಥಿ ಸತ್ಕಾರದ ರೀತಿಯಲ್ಲಿ 'ನೀರು ಕಾಯ್ದಿದೆ, ಸ್ನಾನಾ ಮಾಡಪ್ಪ, ಶ್ಯಾವಿಗೆ ಪಾಯಸಾ ಕರಿಗಡಬು ಮಾಡೇನಿ ಊಟಾ ಮಾಡಪ್ಪಾ ಎಂದು ಎಲ್ಲವನ್ನೂ ಹಾಡುತ್ತಾ ನರ್ತಿಸಿ ಅದನ್ನೇ ಗದ್ಯದಲ್ಲಿ ಹೇಳಲು ಸ್ನಾನವಾಗಿದೆ, ಊಟವಾಗಿದೆ ಎನ್ನಲು ಬಂದ ಕಾರಣವೇನೆಂದು ಕೇಳುತ್ತಾಳೆ. ತನ್ನ ಗೆಳೆಯನ ಸಿರಿತನವನ್ನು ಬಣ್ಣಿಸುತ್ತಾ ಅವನ ಮನದ ಇಚ್ಛೆಯನ್ನು ತಿಳಿಸುತ್ತಾನೆ. 'ನಾಚಿಕೆಬಾರದೆ ಏನೋ ನಿನಗೆ... ಗುಂಡುಳ್ಳ ಗರತಿ ನಾನು' ಎಂದು ಚೆನ್ನಾಗಿ ಥಳಿಸಿ ಕಳಿಸುತ್ತಾಳೆ. ಪೆಟ್ಟು ತಿಂದು ಬಂದ ತಾತ್ಯಾರಾಮ ಗಲಘೂಜಿಗೆ ಅವಳನ್ನು ಎಷ್ಟು ವರ್ಣಿಸಿದರೂ ಸಾಲದು. ಹೊಂಚು ಹಾಕುತ್ತಾರೆ. ಅವಳನ್ನು ಪಡೆಯಲು ದೇವಸ್ಥಾನಕ್ಕೆ ಹೋಗಬೇಕಾದ ದೀಪದ ಕುಡಿಯಂತಹ ಚಿಮಣಾ ತನ್ನ ಮನೆಯ ಮುಂದೆಯೇ ಹಾಯ್ದು ಹೋಗಬೇಕಾದ್ದರಿಂದ ಅವಳನ್ನು ತಡವಿ ಮನದಣಿಯೆ ವಾದ ನಡೆದು 'ನಿನ್ನ ಮೊದಲಿನ ಹೆಂಡತಿಯ ಸೋಡಚೀಟಿ ತಂದರೆ ನಾ ನಿನ್ನ ಲಗ್ನವಾಗುವೆ ಎಂದು ಅನ್ನುವುದೇ ತಡ ಗಲಘೂಜಿ ಅದರಂತೆ ಮಾಡಿ ಮುಗಿಸಲು, ಸೋಡಚೀಟಿಯನ್ನು ಸುಡುತ್ತಾ "ನಾ ನಿನ್ನ ಕೂಡ ಇರಲಾರೆ. ಪತಂಗದ ಬುದ್ಧಿ ನಿನ್ನದು... ನನಗಿಂತ ಚಲುವಿ ಸಿಕ್ಕಾಗ ನನಗೂ ನೀನು ಸೋಡಚೀಟಿ ಕೊಡಾವ" ಎಂದು ಹೊರಟು ಹೋಗುತ್ತಾಳೆ. ಗಲಘೂಜಿಗೆ ನಿರಾಶೆ. ಅತ್ತ ಇಲ್ಲ; ಇತ್ತೂ ಇಲ್ಲ. ಮನೆಯ ತೊರೆದು ಸನ್ಯಾಸಿಯಾಗಿ ಹೋಗುತ್ತಾನೆ. ತನ್ನಿಂದಾಗಿ ಒಬ್ಬ ವ್ಯಕ್ತಿ ಹೀಗ ಆದನಲ್ಲಾ ಎಂಬ ಕೊರಗಿನಿಂದ ಚಿಮಣಾ ಸಖಾ ರಾಮನೊಡಗೂಡಿ ಆತನನ್ನು ಹುಡುಕುತ್ತಾ ಬೂದಿಬುಕ್ಕ ಬೈರಾಗಿಗಳ ಸಾಲಿನಲ್ಲಿ ಆತನನ್ನು ಗುರುತಿಸಿ ಅವನನ್ನು ಕೂಡಿ-ಕೊಂಡು ಬಾಳುತ್ತಾಳೆ - ಸ್ಥೂಲವಾಗಿ ಹೀಗಿರುವ ಈ ಕಥೆ ಸಾಗುವ ರೀತಿ ಅತ್ಯಂತ ಸರಳ. ದಿನ ಬಳಕೆಯ ಮಾತು. ಅದನ್ನೇ ಹಾಡಿ ನರ್ತಿಸುವ ಚಿಮಣಾ... ದಾಂಪತ್ಯ ಜೀವನದ ಅತೃಪ್ತ ಜೀವಿಗಳ ಕಥೆಯಿದು ಎಂದು ಜನತೆ ಹುಚ್ಚೆದ್ದು ಇದನ್ನು ಇಂದೂ ಪ್ರೋತ್ಸಾಹಿಸುತ್ತಾರೆ. ಇಲ್ಲಿ ಪುಂಗಿಯ ಬದಲು ಪಿಟೀಲು, ದಪ್ಪಿನ ಬದಲಾಗಿ ತಬಲಾ ಕಂಡು ಬರುತ್ತದೆ. ದೂತಿಯ ಬದಲಾಗಿ ಸಖಾರಾಮ ತಾತ್ಯಾ ಇರುವುದನ್ನು ನಾವು ನೋಡಬಹುದು. ಹಾಡಿನ ಚಾಲುಗಳಲ್ಲಿ ವೈವಿಧ್ಯತೆಯಿಲ್ಲ. ಪೂರ್ವದ ಹಾಡುಗಳು, ಭಾವಸಂಬಂಧ ಎಷ್ಟೊಂದು ಬದಲಾಗಿವೆ! ದೇವತಾ ಪುರುಷ ಭಾಗವತದ ಕಥೆಯಾಗಿ ಜನ್ಮ ತಾಳಿದ ರಾಜಾನಾಟ, ಸಮಾಜದ ಸಾಮಾನ್ಯ ಹೆಣ್ಣು-ಗಂಡು ನಡುವಿನ ಕಾಮ ಸಂಬಂಧದ ಕಥೆಯಾಗಿ ರಾಜಾನಾಟ ಚಿಮಣಾನಾಟವಾಯಿತು. ಜನಪದ ಆಟಗಳು, ಕಥೆಗಳು ಇಲ್ಲಿಯವರೆಗೆ ಪುರಾಣ ಪುಣ್ಯ ಕಥೆಗಳಿಂದ

ಕಂಡು ಬಂದರೆ, ಇಲ್ಲಿಯ ಕಥೆ ಜನಜೀವನದದಿಂದ ಆಯ್ದದ್ದು.

ರಾಜಾನಾಟ, ದಪ್ಪಿನಾಟ, ನಬಿಆಟ ಹೆಸರು ಯಾವದೇ ಆದರೂ ಪ್ರೇಮ ಈ ಆಟದ ಕೇಂದ್ರ–ಬಿಂದು. ಆಕರ್ಷಣೆಯ ಕೇಂದ್ರ–ನಟಿ. ನೃತ್ಯ, ಹಾಡು ಅನಂತರದ ಸ್ಥಾನ ಪಡೆದಿವೆ. ಹಿಮ್ಮೇಳದಲ್ಲಿ ಸುಧಾರಣೆ ಹಾಸ್ಯಮಯವಾದ ಪದ್ಯರೂಪಗಳ ಸಂವಾದಗಳು, ಅಲ್ಲಲ್ಲಿ ಗದ್ಯರೂಪದಲ್ಲಿ ಬಿಡಿಸಿ ಹೇಳುವುದು, ಹಾಡಿನೊಂದಿಗೆ ಗಂಡು, ಹೆಣ್ಣು ಎರಡೂ ಕುಣಿಯುವುದು ಇದರ ಲಕ್ಷಣಗಳು. ಇಂದು ರಾಜಾನಾಟದ ಹೇಳಿ ಕೊಳ್ಳುವಂತಹ ತಂಡಗಳಿಲ್ಲ.

(ಎಂ.ಬಿ.ಡಿ.)

ರಾಜೇಂದ್ರ ಯರನಾಳೆ: ಜನಪದ ಸಾಹಿತಿ ನಾಟಕಕಾರ. ಬೀದರ ಜಿಲ್ಲೆ ಔರಾದ ತಾಲ್ಲೂಕಿನ (ಠಾಣಾ) ಕುಶನೂರ ಗ್ರಾಮದಲ್ಲಿ 1966 ಅಕ್ಟೋಬರ್ 15 ರಂದು ಜನಿಸಿದರು. ತಂದೆ ವೀರ ಶೆಟ್ಟೆಪ್ಪ ತಾಯಿ ಕಲಾವತಿ. ಸದ್ಯ 'ಕನ್ನಡ ಮತ್ತು ಸಂಸ್ಕೃತಿ' ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಕನ್ನಡ ಸಾಹಿತ್ಯ ಮತ್ತು ಜನಪದ ಸಾಹಿತ್ಯದಲ್ಲಿ ಒಲವು ಇರಿಸಿಕೊಂಡು ತುಂಬ ಶ್ರದ್ಧೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ. 1987ರಲ್ಲಿ ಹೊರ ಬಂದ "ಬಯಕೆ ಒಲವು ನೆನೆಯುತ" ಕವನ ಸಂಕಲನ ಕನ್ನಡಿಗರ ಕೈ ಸೇರಿ ಒಳ್ಳೆಯ ಹೆಸರು ತಂದು ಕೊಟ್ಟಿತು. 'ಗೌಡನ ತಂತ್ರ ರಾಣಿಗೆ ಮಂತ್ರ' ಏಕಾಂಕ ನಾಟಕ "ಮೊಮ್ಮಕ್ಕಳ ಭಾಗ್ಯ ಸಂಗವ್ವಜ್ಜಿಗ್ಯಾಕಿಲ್ಲ?" ಕಾದಂಬರಿ "ಮರೆಯದ ಚಿತ್ರಗಳು" ವ್ಯಕ್ತಿ ಚಿತ್ರ, ಶೀಗೆ ಹಾಡುಗಳು "ಜಾನಪದ ಸಂಪಾದನೆ" ಜಾನಪದ ಬಯ್ಗುಳ ಪದಗಳು" ಕೃತಿಗಳನ್ನು ರಚಿಸಿದ್ದಾರೆ.

ಶ್ರೀಯುತರಿಗೆ ಸಂಘ–ಸಂಸ್ಥೆಗಳಿಂದ ಅನೇಕ ಪ್ರಶಸ್ತಿಗಳು ಬಂದು ಇವರ ಸಾಹಿತ್ಯ ಸೇವೆಗೆ ನೆರವು ನೀಡಿವೆ. ಅದರಂತೆ ಅನೇಕ ಸಂಘ–ಸಂಸ್ಥೆಗಳ ಸದಸ್ಯರಾಗಿ ಸೇವೆ ಸಲ್ಲಿಸಿ ಉತ್ತಮ ಸಮಾಜ ಸುಧಾರಕರು ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಒಳ್ಳೆಯ ಚಿಂತಕರು ವಿಚಾರ ವಾದಿಗಳೂ ಆಗಿದ್ದಾರೆ.

(ಎ.ಕೆ.ಆರ್.)

ರಾಧಾನಾಟ: ಸಣ್ಣಾಟದ ಒಂದು ಪ್ರಕಾರ. ಈ ಆಟದಲ್ಲಿ ಮೂರೇ ಮೂರು ಪಾತ್ರಗಳು 'ನಾಯಕ', 'ನಾಯಕಿ' ಒಬ್ಬ ಹಾಸ್ಯಗಾರ. ರಾಧಾನ ಆಟದ ನಾಯಕನ ಹೆಸರು 'ಗಲ್ಲೋಜಿ'. ಎಂದರೆ ಕತೆಗಾರ. ಈ ಕತೆಗಾರನೇ ಗೊಟ್ಟಿಗಾರ ಇವನೇ ಈ ಆಟದ ಸೂತ್ರದಾರ. 'ಚಿಮಣಾ' ಎಂಬ ಹೆಣ್ಣು ಮಗಳು ತುಂಬ ಹಾಸ್ಯ ಪ್ರವೃತ್ತಿಯುಳ್ಳ ಒಂದು ಆಕರ್ಷಕ ಪಾತ್ರ. 'ಸಖಾರಾಮ ತಾತ್ಯಾ' ಅಷ್ಟೇ ಹಾಸ್ಯ ಪ್ರವೃತಿಯುಳ್ಳ ಪಾತ್ರ.

ರಾಧಾನಾಟದಲ್ಲಿ 'ಡಪ್ಪು' ಎಂಬ ಚರ್ಮ ವಾದ್ಯ ಅದಕ್ಕೆ ಸಾಥಿಯಾಗಿ 'ಸಾರಂಗಿ' ಎಂಬ ಇನ್ನೊಂದು ವಾದ್ಯ ರಾಧಾನಾಟಕ್ಕೆ ಅತ್ಯಂತ ಮೆರಗು ನೀಡುತ್ತದೆ. ರಾಧಾನಾಟದಲ್ಲಿ ಶೃಂಗಾರ ರಸವೇ ಪ್ರಮುಖವಾದದ್ದು. ಈ ಆಟದ ಮಾತು, ಅಭಿನಯ, ನೃತ್ಯಗಳು ಜನಮನವನ್ನು ಸಹಜವಾಗಿಯೇ ಸೂರೆಗೊಳ್ಳುತ್ತವೆ. ರಾಧಾನಾಟದಲ್ಲಿ ಹೆಣ್ಣಿನ ಸಂಯಮ ಗಂಡನ್ನು ಕಾತರಗೊಳಿಸಿ ಕೋಪಿಷ್ಟನನ್ನಾಗಿ ಮಾಡುತ್ತದೆ. ಗಂಡಿನ ಕೋಪ, ಹೆಣ್ಣಿನ ಕರಳನ್ನು ಕರಗಿಸುತ್ತದೆ. ಸಂಯಮ ಯುಕ್ತವಾದ ಪ್ರಣಯ ಭಾವವನ್ನೂ ನಡೆಸುತ್ತಲೇ ಗಂಡನ್ನು ಹೆಣ್ಣು ತನ್ನವನನ್ನಾಗಿ ಮಾಡಿಕೊಳ್ಳುತ್ತದೆ. ಈ ಆಟದಲ್ಲಿ ಹೆಣ್ಣು ಗಂಡುಗಳ ಪ್ರಣಯ ಲೀಲೆಯ ಸಹಜ ಚಿತ್ರಣ ತುಂಬ ಆಕರ್ಷಕವಾಗಿ ಮೂಡಿ ಬರುತ್ತದೆ. ಮಾನವರು ಹುಟ್ಟಿ ಬೆಳೆದ ಪರಿಸರದ ಸಂಸ್ಕೃತಿಯನ್ನು ಅವಲಂಬಿಸುತ್ತದೆ.

'ರಾಧಾನಾಟ' ದಾಸರಾಟದಂತೆಯೇ ಇದ್ದು. ಹಾಸ್ಯ ವಿನೋದಗಳಿಂದ ತುಂಬಿಕೊಂಡಿರುತ್ತದೆ. ರಾಧಾನಾಟವನ್ನು ಹವ್ಯಾಸಿ ರಂಗ ಕಲಾವಿದರೂ ಮಾತ್ರ ರೂಢಿ ಮಾಡಿ ರಂಗದ ಮೇಲೆ ತರುತ್ತಾರೆ. ದಾಸರಾಟ ಹಾಗಲ್ಲ ದಾಸರೇ ಆಡುತ್ತಾರೆ. ಈ ಆಟದಲ್ಲಿ ಮೃದಂಗ, ಪಿಟೀಲು ಬಳಕೆಯಾಗುತ್ತವೆ. ಈ ಎರಡೂ ಆಟಗಳ ಅಭಿರುಚಿ ಒಂದೇ ಆಗಿರುತ್ತದೆ.

(ಎ.ಕೆ.ಆರ್.)

ರಾಮಗೊಂಡ ಖಂಡಗೊಂಡ ಹಳ್ಳಿಖೇಡೆ: ಜನಪದ ವೈದ್ಯ. ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಬಾಜೊಳಗಾ ಒಂದು ಚಿಕ್ಕ ಗ್ರಾಮ. ಇಲ್ಲಿಯ ಗೊಂಡ ಬುಡಕಟ್ಟಿನ ರಾಮಗೊಂಡರು. 25 ವರ್ಷದವರಾದಾಗಿನಿಂದಲೂ ಹಾವು ಕಡಿದು ಪ್ರಾಣಾಪಾಯದಲ್ಲಿ ಇರುವವರನ್ನು ಗಿಡಮೂಲಿಕೆಗಳ ಸಹಾಯದಿಂದ ಜೀವ ಉಳಿಸುವ ಸೇವೆಯನ್ನು ಆರಂಭಿಸಿದವರು. ಕಳೆದ 65 ವರ್ಷಗಳಿಂದ ಸತತವಾಗಿ ಸಾವಿರಾರು ಜನರಿಗೆ ಜೀವದಾನ ನೀಡುವುದರ ಮೂಲಕ ಇವರು ಪವಾಡ ಸದೃಷ ಕಾರ್ಯವೆಸಗಿದ್ದಾರೆ.

ರಾಮಗೊಂಡರು ದೈವಿಭಕ್ತರು ಹೌದು. ಇವರ ಕುಲ ಚಿನ್ಹೆಯಾದ ನಾಗರ ಹಾವಿಗೆ ಜಟಿಂಗೀಶ್ವರನ ಹೆಸರಿನಲ್ಲಿ ಪೂಜಿಸುವರು. ಹೀಗಾಗಿ ನಾಗರ ಹಾವು ಕಡಿಸಿ ಕೊಂಡ ವ್ಯಕ್ತಿಗಳಿಗೆ ಜಟಿಂಗೀಶ್ವರನ ಹೆಸರಿ ನಲ್ಲಿ ನಾಟಿ ಔಷಧಿ ಯನ್ನು ನೀಡಿ ಗುಣ ಪಡಿಸುವರು. ಇವರು ಗಿಡಮೂಲಿಕೆ ನೀಡುವ ಸ್ಥಳವು ಬಾಜೊಳಗಾ ಗ್ರಾಮದಿಂದ 2 ಕಿ.ಮೀ. ದೂರದ ಅಡವಿಯಲ್ಲಿದ್ದು ಇಂದು ಅದೊಂದು ಧರ್ಮ ಕ್ಷೇತ್ರವಾಗಿ ಮಾರ್ಪಡುತ್ತಿದೆ. ರಾಮಗೊಂಡರ ಹೊಲದಲ್ಲಿಯೇ ಜಟಿಂಗೀಶ್ವರ ದೇವಸ್ಥಾನಗಳು ಉಗಮಗೊಂಡಿದೆ. ಪ್ರತಿ ವರ್ಷ ಬಸವ ಜಯಂತಿಯ ಅಮವಾಸ್ಯೆಯಂದು ಈ ದೈವಗಳ ಜಾತ್ರೆಗಳು ಜರುಗುತ್ತಲಿವೆ. ಜಾತ್ರೆಯಲ್ಲಿ ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಕರ್ನಾಟಕದ ಸಾವಿರಾರು ಭಕ್ತರು ಭಾಗವಹಿಸಿ ದರ್ಶನ ಪಡೆಯುವರು.

ರಾಮಗೊಂಡರು ಈ ಭಕ್ತರ ಹಾಗೂ ಹಾವು ಕಡಿಸಿಕೊಂಡವರ ಸೇವೆಗೆಂದೇ ಅಡವಿಯಲ್ಲಿಯ ತಮ್ಮ ಹೊಲದಲ್ಲಿಯೇ ಗುಡಿಸಲು ಕಟ್ಟಿಕೊಂಡು ಹಗಲಿರುಳಿರುವರು. ಇವರೊಂದಿಗೆ ಇವರ ಕುಟುಂಬ ವರ್ಗವು ಸಹಕಾರಿಯಾಗಿರುವುದು.

ಹಾವು, ಚೇಳು ಅಥವಾ ಇಲಿ ಕಚ್ಚಿದೆ ಎಂದು ಧಾವಿಸಿ ಬಂದವರನ್ನು ರಾಮಗೊಂಡರು ಪರೀಕ್ಷಿಸಿ ಖಚಿತ ಪಡಿಸಿಕೊಂಡ ಮೇಲೆಯೇ ಔಷಧೋಪಚಾರವನ್ನು ಜಟಿಂಗೀಶ್ವರ ನಾಗೇಶ್ವರ ದೇವಸ್ಥಾನದಲ್ಲಿ ಆರಂಭಿಸುವರು. ಗಿಡಮೂಲಿಕೆಯನ್ನು ಪುಡಿ ಮಾಡಿ ನೀರಿನಲ್ಲಿ ಬೆರೆಸಿ ಹಾವು ಕಚ್ಚಿದ ವ್ಯಕ್ತಿಗೆ ಕುಡಿಸಿ ವಾಂತಿ ಮಾಡಿಸುವುದರ ಜೊತೆಗೆ ಕಣ್ಣಿಗೆ ಕಾಡಿಗೆ ರೂಪದ ದಿವ್ಯೌಷಧಿ ಹಚ್ಚಿ ಗುಣಪಡಿಸುವರು. ಜಾತಿ, ಮತ, ಲಿಂಗ ಬೇಧರಹಿತ ಹಾಗೂ ಯಾವುದೇ ಶುಲ್ಕರಹಿತ ಸರ್ವಕಾಲಿಕ ಮತ್ತು ಸಕಾಲಿಕ ಇವರ ಸೇವೆ ಅನುಪಮವಾದದ್ದು.

ನಾಟಿ ವೈದ್ಯರಾದ ರಾಮಗೊಂಡರ ಅನುಪಮ ಸೇವೆಯನ್ನು ಮನಗಂಡು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಇವರಿಗೆ 2000ನೆಯ ಸಾಲಿನ ಜಾನಪದ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. *(ಕೆ.ಎಂ.ಎಂ)*

ರಾಮಣ್ಣ ಮಾಡ್ಲಗೇರಿ: ನಾಡಿ ವೈದ್ಯ. ಕೈ ಕಾಲು, ನಡದ ಎಲುಬುಗಳೇನಾದರೂ ಮುರಿದರೆ ಮತ್ತು ಬಿರುಕು ಉಂಟಾಗಿದ್ದರೆ, ಆಸ್ಪತ್ರೆಯಲ್ಲಿ ಪ್ಲಾಸ್ಟರ ಹಾಕಿಕೊಂಡು ತಿಂಗಳು ಗಟ್ಟಲೆ ನರಳಬೇಕಾಗುತ್ತದೆ. ಆದರೆ, ನಾಟಿ ಚಿಕಿತ್ಸೆ ನೀಡುವಲ್ಲಿ ಪರಿಣತಿ ಸಾಧಿಸಿರುವ ವೈದ್ಯರು ರಾಮಣ್ಣ ಮಾಡ್ಲಗೇರಿ ಅವರು.

ಕೊಪ್ಪಳ ಜಿಲ್ಲೆಯ ಯಲಬುರ್ಗಾದಿಂದ ಸಂಕನೂರ ಕ್ರಾಸ್‌ಗೆ ಪ್ರಯಾಣ ಮಾಡುವಾಗ ಹಿರೇಮ್ಯಾಗೇರಿ ಗ್ರಾಮ ಬರುತ್ತದೆ. ಅಲ್ಲಿ ಬಲಗಡೆ ಸರಕಾರಿ ಕಟ್ಟಡದ ಮೇಲೆ (ಶ್ರೀ ಚಂದಾಲಿಂಗೇಶ್ವರ) ಮುರಿದ ಎಲುಬು ಚಿಕಿತ್ಸಾಲಯ ಹೀರೇಮ್ಯಾಗೇರಿ ಎಂಬ ಫಲಕ ಕಾಣಿಸುತ್ತದೆ.

ನುರಿತ ಅನುಭವಿ ಡ್ರಾಕ್ಟರಗಳಿಂದ ಗುಣಮುಖವಾಗದೆ ಹಿಂದಿರುಗಿ ತಮ್ಮ ಊರಿಗೆ ಬಂದಿರುವ ಜನರನ್ನು ರಾಮಣ್ಣನವರಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗುತ್ತಿದ್ದಾರೆ. ಸುಮಾರು ಮೂರು ಸಾವಿರ ಜನರು ಇವರಲ್ಲಿ ಚಿಕಿತ್ಸೆ ಪಡೆದು ಗುಣ ಹೊಂದಿದ್ದಾರೆ. ಎಲ್ಲರ ಬಾಯಲ್ಲೂ ಇವರ ಹೆಸರು. ಸಾವಿರಾರು ರೂ ಖರ್ಚು ಮಾಡಿದರೂ ಗುಣಮುಖರಾಗಲಿಲ್ಲ. ಇವರಲ್ಲಿ ಚಿಕಿತ್ಸೆ ಪಡೆಯುವವರ ಖರ್ಚು ಕಡಿಮೆ. ಕಾಣಿಗೆ ರೂಪದಲ್ಲಿ ಕೇವಲ 25 ರೂ. ಕೊಟ್ಟರೆ ಅದನ್ನೇ ಸಂತೋಷದಿಂದ ತೆಗೆದುಕೊಳ್ಳುತ್ತಾರೆ. ಇವರಲ್ಲಿ ಚಿಕಿತ್ಸೆ ಪಡೆಯುವವರಿಗೆ ವಯಸ್ಸಿನ ನಿರ್ಬಂಧವಿಲ್ಲ. ಎಲ್ಲ ವಯಸ್ಸಿನವರೂ ಗುಣ ಹೊಂದುವದು ವಿಶೇಷ. ಇವರಲ್ಲಿ ಎಕ್ಸರೇ ತೆಗೆಸಬೇಕೆಂದಿಲ್ಲ. ಏಕೆಂದರೆ ಇವರೆ ಎಕ್ಸರೆಯಂತೆ ಪರೀಕ್ಷೆ ಮಾಡುತ್ತಾರೆ. ಕಾಲು ನೋಡಿ ಮುರಿದ ಬಗ್ಗೆ ಖಚಿತ ಪಡಿಸಿಕೊಂಡು ತಡಮಾಡದೆ ಹೇಳಿ ಬಿಡುತ್ತಾರೆ.

ಇವರು ಅನುಸರಿಸುವ ವಿಧಾನಗಳು ಅತ್ಯಂತ ಸರಳ. ಮೊದಲು ಕಾಲು ಮುರಿದ ಜಾಗದಲ್ಲಿ ಕೊಬ್ರಿ ಎಣ್ಣೆ ಹಚ್ಚಿ, ಒಂದು ತಾಸಿನವರೆಗೆ ಎಣ್ಣೆ ಉಣಿಸುವುವದು. ಆನಂತರ 5–6 ಬಿದಿರುಗಳನ್ನು ಸೆಣಬುಗಳನ್ನು, ಬಿಳಿ ಬಟ್ಟೆಯನ್ನು ನೀರಿನಲ್ಲಿ ಒದ್ದೆ ಮಾಡಿ, ಹಿಂಡಿ ಕಾಲನ್ನು ನೆಟ್ಟಗೆ ಮಾಡಿ ಸುತ್ತುವರು. ಹೀಗೆ 8–10 ಬಾರಿ ಕಟ್ಟನ್ನು ಹಾಕುವರು. ಇದರ ಜೊತೆಗೆ ಇವರು ಹೇಳುವ ಪಥ್ಯವನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕು ಅಂದಾಗ ಮಾತ್ರ ಬೇಗ ಗುಣಮುಖವಾಗುತ್ತದೆ ಎಂದು ಹೇಳುವರು. ಇವರು ಹೇಳುವ ಪಥ್ಯ ಗೋದಿ, ಸಕ್ಕರಿ, ಬೆಲ್ಲ, ತುಪ್ಪ, ಖರ್ಜುರ, ಕಲ್ಲು–ಸಕ್ಕರೆ, ಉತ್ತತ್ತಿ, ಒಣ ದ್ರಾಕ್ಷಿ, ಮೋಸಂಬಿ, ಬೆಳ್ಳುಳ್ಳಿ, ಕರಿಬೇವು, ಸೈಂದಲವಣ, ಲವಂಗ, ಶುಂಠಿ, ಮೇಣಸು, ಜೀರಗಿ, ಕಬ್ಬು ರಾಗಿಮುದ್ದೆಯನ್ನು ತೆಗೆದುಕೊಳ್ಳಬೇಕು. ರೂಢಿ ಇದ್ದವರು ಕೋಳಿ ಮೊಟ್ಟೆ ಉಪಯೋಗಿಸುವದು ಉತ್ತಮ ಎಂದು ಹೇಳುವರು. ಅಲ್ಲದೆ ಪ್ರತಿನಿತ್ಯ ಬೆಳಿಗ್ಗೆ ಆಡಿನ ಹಾಲಿನಲ್ಲಿ ಗುಳಿಗೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. *(ಎಸ್.ಕೆ.ಡಿ.)*

ರಾಮಪುರದ ಬಕ್ಕಪ್ಪಯ್ಯ: ಒಬ್ಬ ಶರಣ. ವಚನಕಾರ. ಜೇವರ್ಗಿ ತಾಲ್ಲೂಕಿನ ರಾಮಪುರದಲ್ಲಿ ಹದಿನೇಳನೆಯ ಶತಮಾನದಲ್ಲಿ ಜನಿಸಿದ ಎಂದು ಜಾನಪದ ಕವಿ ಚರಿತ್ರೆಕಾರರು ಅಭಿಪ್ರಾಯ ಪಡುತ್ತಾರೆ. ಬಕ್ಕಪ್ಪನ ತಂದೆ–ತಾಯಿಗಳ ಬಗ್ಗೆ ಖಚಿತವಾದ ಮಾಹಿತಿ ದೊರಕುವುದಿಲ್ಲ.

ರಾಮಪುರ ಬಕ್ಕಪ್ಪನನ್ನು 'ಬಕ್ಕ', ಬಕ್ಕಪ್ಪಯ್ಯ 'ಬಕ್ಕ ಪ್ರಭು', 'ಬೊಕ್ಕಯ್ಯ', ನೆಂದು ಜನ ಕರೆಯುತ್ತಾರೆ. ಈ ಬಕ್ಕಪ್ಪಯ್ಯ ಸಣ್ಣ ಹಳ್ಳಿ ರಾಮಪುರದ ವಿರಕ್ತ ಮಠದಲ್ಲಿ ಒಬ್ಬ ಸ್ವಾಮಿಯಾಗಿ ಇರುತ್ತಿದ್ದನೆಂದು ಜನರು ಅಭಿಪ್ರಾಯ ಪಡುತ್ತಾರೆ. ಅತ್ಯಂತ ಸರಳ ಜೀವಿ, ಸನ್ಯಾಸಿಯಾಗಿದ್ದ 'ಬಕ್ಕಪ್ರಭು'.

ಬಕ್ಕಪ್ಪಯ್ಯ 'ನಿಜ ಶರಣ ತ್ರಿವಿಧಿ' ಎಂಬ ಕೃತಿಯಲ್ಲಿ ಅನೇಕ ವಚನಗಳನ್ನು ರಚಿಸಿದ್ದಾನೆ. ಅವನ ವಚನಾಂಕಿತ 'ಬೊಕ್ಕ' ಎಂದು ಉಲ್ಲೇಖಿಸಿದ್ದಾನೆ. ಅದೆಷ್ಟೋ ತತ್ವ ಪದಗಳನ್ನು ಇವನು ರಚಿಸಿದ್ದಾನೆ. ತತ್ವ ಪದಗಳ ಕೊನೆಯಲ್ಲಿ "ರಾಮಪುರದದ ಬಕ್ಕ" ನೆಂದೇ ಹಾಡಿದ್ದಾನೆ. ಹಲವಾರು ತತ್ವ ಪದಗಳನ್ನು ಬೆಡಗಿನ ವಚನಗಳನ್ನು ಬರೆದು ಅಂದಿನ ನೈಜಾಂ ಪ್ರಾಂತದಲ್ಲಿ ತುಂಬ ಪ್ರಖ್ಯಾತನಾಗಿದ್ದ.

ಬಕ್ಕಪ್ಪಯ್ಯನ ಗುರು 'ಕೊಲ್ಲೂರಿನ ಕೊಟ್ರಬಸವ" ಎಂದು ಹೇಳುತ್ತಾರೆ. ಬಕ್ಕಪ್ಪಯ್ಯ ನಿಜವಾದ ಅರ್ಥದಲ್ಲಿ ಸನ್ಯಾಸಿಯೇ ಆಗಿದ್ದ. ಅವನು ಒಂದು ಕಡೆ ಇರುತ್ತಿರಲಿಲ್ಲ. ಎಲ್ಲ ಕಡೆಗೂ ಅಲೆದಾಡಿ ಜ್ಞಾನ ಪ್ರಸಾರ ಮಾಡುತ್ತಿದ್ದ. ಅತ್ಯಂತ ಸರಳ ಜೀವಿಯಾಗಿದ್ದ ಇವನಿಗೆ ಜನ ಹುಚ್ಚನೆಂದೂ ಕರೆಯುತ್ತಿದ್ದರು.

ಗುರು ಕರುಣಿಸಿದಂತೆ ಬಕ್ಕಪ್ಪಯ್ಯ ಇಷ್ಟಲಿಂಗದಲ್ಲಿ ನಿಷ್ಠೆ ಇಟ್ಟು ಶರಣ ಮಾರ್ಗದಲ್ಲಿ ಅನುದಿನವೂ ನಡೆದು ನಿಸಂಗನಾದ. 'ಅಂಗ–ಲಿಂಗ' ದಲ್ಲಿ ಬೆರೆಯಲು ಹಾತೊರೆಯಿತು 'ಶರಣರಿಗೆ ಮರಣವೇ ಮಹಾನೋಮಿ' ಎಂದು ಹೇಳಿದಂತೆ 'ಲಿಂಗ' ನಿರೀಕ್ಷೆಯಲ್ಲಿದ್ದಾಗಲೇ ಬಕ್ಕಪ್ಪಯ್ಯ ಕರ್ಪುರದ ಉರಿಯಂತೆ ಉರಿದು ಉರಿದು ಹೋದರು ಎಂದು ಹೇಳುತ್ತಾರೆ. ಇವನು 1855 ರಲ್ಲಿ ಲಿಂಗದಲ್ಲಿ ಲೀನವಾದರೆಂದು ಜನರು ಹೇಳುತ್ತಾರೆ.

(ಎ.ಕೆ.ಆರ್.)

ರಾಮಪ್ಪ ಭೀಮಪ್ಪ ಕಿಳ್ಳೇಕ್ಯಾತರ: ತೊಗಲು ಗೊಂಬೆಯಾಟದ ಕಲಾವಿದ. ತಂದೆ ಆಟದ ಪ್ರದರ್ಶನ ಕೊಡುವಾಗ ಹಾಡುವುದು, ಡೋಲ್ ಬಾರಿಸುವುದು, ಮಕ್ಕಳಗೊಂಬೆ ಕುಣಿಸುವುದರಲ್ಲಿ ತರಬೇತಿ ಪಡೆಯುತ್ತಲೇ ಬೆಳೆದ ಈ ಕಲಾವಿದ ಇಂದು ಬೇರೆಯವರಿಗೆ ತರಬೇತಿ ಕೊಡುವಷ್ಟು ಪ್ರಬುದ್ಧರಾಗಿದ್ದಾರೆ. ರಾಯಚೂರು ಜಿಲ್ಲೆಯ ನೀರಲಗಿ, ಉತ್ತೂರು, ಅನುಕಂಟೆ ತಿಗರಿ, ನೆಲುಗಿ, ಅಲುವಾಗಿಲಿ, ಕ್ಯಾಸಲಾಪುರ, ಹೆಸರೂರು, ತಕ್ಕೂರುಗಳಲ್ಲಿ ವರ್ಷಕ್ಕೊಮ್ಮೆ ಆಟವನ್ನು ಕಡ್ಡಾಯವಾಗಿ ಪ್ರದರ್ಶಿಸುತ್ತಲೇ ಬೇರೆ ಕಡೆಯೂ ಪ್ರದರ್ಶಿಸಿ ಪ್ರಖ್ಯಾತರಾಗಿದ್ದಾರೆ. ರಾಮಾಯಣ, ಮಹಾಭಾರತದ ಕಥೆಗಳನ್ನು ನಿರರ್ಗಳವಾಗಿ ಹಾಡುತ್ತಾ, ಆಡುತ್ತಾ ಪರದೆಯ ಮೇಲೆ ತಮ್ಮ ನಾಜೂಕು ಶೈಲಿಯಿಂದ ಮಾಯಾ ಲೋಕವನ್ನೇ ಸೃಷ್ಟಿಸುತ್ತಾರೆ. ವಂಶಪಾರಂಪರ್ಯವಾಗಿ ಬಂದ ಅಪೂರ್ವ ತೊಗಲು ಗೊಂಬೆಗಳನ್ನು ಕುಣಿಸಿ ವರ್ಣಮಯ ಪ್ರಪಂಚವನ್ನು ಸೃಷ್ಟಿಸುವುದರಲ್ಲಿ ಇವರು ಹೇಗೆ ನಿಷ್ಣಾತರೋ, ಕಥಾ ನಿರೂಪಣೆಯಲ್ಲಿಯೂ ಅಷ್ಟೇ ಪ್ರತಿಭಾವಂತರು.

(ಜಿ.ಆರ್.ಟಿ.)

ರಾಮಯ್ಯ ಕುಸುನಯ್ಯ ದಾಸರ: ದೊಡ್ಡಾಟದ ಕಲಾವಿದರು. ಹುಟ್ಟು ಕಲಾವಿದರಾದ ಅವರು ತಂದೆ ಕುಶಲಯ್ಯ ಅವರಿಂದ ದೊಡ್ಡಾಟವನ್ನು ಅಭ್ಯಾಸ ಮಾಡಿದರು. ದೊಡ್ಡಾಟಕ್ಕೆ ಪಿಟೀಲು ನುಡಿಸುವುದನ್ನು ಕಲಿತರು. ಪರಿಶಿಷ್ಟ ಜನಾಂಗಕ್ಕೆ ಸೇರಿದ ಇವರು ತಮ್ಮ ಕಲಾರಾಧನೆಯ ಮೂಲಕ ರಾಯಚೂರು ಭಾಗದಲ್ಲೆಲ್ಲಾ ಹೆಸರುವಾಸಿಯಾಗಿದ್ದಾರೆ. ದೊಡ್ಡಾಟಗಳಲ್ಲಿ ಇವರು ಹಿಮ್ಮೇಳ ಹಾಡಿದರೆಂದರೆ ಜನ ರೋಮಾಂಚನದಲ್ಲಿ ತೇಲಿಹೋಗುತ್ತಾರೆ. ರಾಮಾಯಣ ಮಹಾಭಾರತಗಳ ಅನೇಕ ಪ್ರಸಂಗಗಳನ್ನು ಕಂಠಗತ ಮಾಡಿಕೊಂಡಿರುವ ರಾಮಯ್ಯದಾಸರು ನಮ್ಮ ದೊಡ್ಡಾಟ ಕ್ಷೇತ್ರದ ಒಂದು ಅಪೂರ್ವ ರತ್ನ.

(ಜಿ.ಆರ್.ಟಿ.)

ರಾಮಲಿಂಗೇಶ್ವರ ದೇವಾಲಯ: ಕಲಬುರ್ಗಿ ಜಿಲ್ಲೆಯ ಚರಿತ್ರೆಯ ಪುಟಗಳನ್ನು ತಿರುವಿದಾಗ ಅನೇಕ ಅದ್ಭುತ ಹಾಗೂ ಆಶ್ಚರ್ಯ ಪಡುವ ನಿದರ್ಶನಗಳು ದಾಖಲೆಗಳೊಂದಿಗೆ ದೊರೆಯುತ್ತವೆ. ಉತ್ತರ ಭಾರತದಲ್ಲಿ ಶ್ರೀರಾಮ ದೇವರ ಸ್ಪರ್ಶ ಭೂಮಿ ದೊರೆಯುತ್ತವೆ. ಈ ಭಾಗದಲ್ಲಿ ಶ್ರೀಕೃಷ್ಣ ಪರಮಾತ್ಮನ ಪಾದದ ದರ್ಶನಗೊಂಡ ಭೂಮಿ ಎಂದೇ ಹೆಸರು ವಾಸಿಯಾಗಿದೆ.

ಅಂದರೆ ಆಯಾ ಯುಗಗಳಲ್ಲಿ ಇಡೀ ಭಾರತ ದೇಶ, ಒಳ್ಳೆಯ ಸಂಸ್ಕೃತಿಯ ಪುಣ್ಯ ಭೂಮಿ ಯೆಂದೇ ಭಾವಿಸಲಾಗಿದೆ. ರಾಮಾಯಣದ ಪ್ರಕಾರ ಮಾತೆ ಸೀತಾನ್ವೇಷಣೆಗೆ ಎಂದು ಹೊರಟ ಭಗವಾನ್ ಶ್ರೀರಾಮನು ಕಲಬುರ್ಗಿ ಜಿಲ್ಲೆಯ ಮುಖಾಂತರವಾಗಿ ಪಯಣಿಸುವಾಗ, ಚಿಂಚೋಳಿ ತಾಲ್ಲೂಕಿನ "ಮೋಘಾ" ಗ್ರಾಮದ ಹತ್ತಿರ ಬಿಡಾರ ಬಿಟ್ಟಾಗ, ದಟ್ಟಡವಿಯಾಗಿದ್ದ ಕಲಕಲ ಹರಿಯುವ ನದಿಯ ದಂಡೆಯ ಮೇಲೆ ಶ್ರೀರಾಮ ಲಿಂಗೇಶ್ವರನನ್ನು ಸ್ಥಾಪಿಸಿ ಪೂಜೆ ಮಾಡಿದನೆಂದು ಸ್ಥಳೀಯ ಪುರಾಣಗಳು ಹೇಳುತ್ತವೆ. ಅಂದಿನಿಂದ ಈ ಪುಣ್ಯಕ್ಷೇತ್ರಕ್ಕೆ ಪರಮಾಧಿಕಾರದ ರಾಜರು ತಮ್ಮ ಗಮನಕ್ಕೆ ತಂದಕೊಂಡರು. ಈ ಪೈಕಿ ಬಾದಾಮಿಯ ಚಾಲುಕ್ಯ ಅರಸರಿಂದ ಅತ್ಯುತ್ತಮವಾದ ಶಿಲ್ಪ ಕಲಾಕಾರರಿಂದ ಕಪ್ಪುಕಲ್ಲು ಬಂಡೆಗಳಿಂದ ಅದ್ಭುತವಾದ, ಮಂದಿರದ ನಿರ್ಮಾಣ ಮಾಡಿದರು.

ಮಂದಿರದ ಉತ್ತರ ದಿಕ್ಕಿಗೆ ಅಮೃತ ಕುಂಡ, ಪೂರ್ವ ದಿಕ್ಕಿಗೆ ತೀರ್ಥ ಕೇಶವ ಕುಂಡವೆಂಬ 3 ತರಹದ ನೀರಿನ ಸೌಕರ್ಯಕ್ಕಾಗಿ ಅನುಕೂಲ ಮಾಡಲಾಗಿದೆ. ವರ್ಷವಿಡೀ ಅನಾದಿ ಕಾಲ ದಿಂದಲೂ ಈ ಮಂದಿರದಲ್ಲಿ ರಾಮಲಿಂಗೇಶ್ವರ ಆರಾಧನೆ ರಾಮ ನವಮಿಯಂದು ವಿಜೃಂಭಣೆಯಿಂದ ಜಾತ್ರಾ ಮಹೋತ್ಸವದ ರೂಪದಲ್ಲಿ ಆಚರಿಸಲಾಗುತ್ತಿದೆ. ಆಷಾಢ, ಶ್ರಾವಣ, ಮಾಸಗಳಲ್ಲೂ ಸಹ ಆಂಧ್ರ, ಮಹಾರಾಷ್ಟ್ರ, ತಮಿಳುನಾಡಿನ ಅನೇಕ ಭಕ್ತಾದಿಗಳು ಬಂದು ಭಗವಾನ್ ರಾಮಲಿಂಗೇಶ್ವರ ದರ್ಶನ ಪಡೆಯುತ್ತಾರೆ.

ಈ ದೇವಾಲಯದಲ್ಲಿ ಪ್ರತಿಯೊಂದು ಕಂಬದಲ್ಲಿ ಅದ್ಭುತ ಶಿಲ್ಪ ಕಲೆಯ ಕೆತ್ತನೆಯನ್ನು ಕಾಣಬಹುದಾಗಿದೆ. ನರಸಿಂಹ ಮೂರ್ತಿ, ಆದಿಕೇಶವಮೂರ್ತಿ, ಶೈವ–ವೈಷ್ಣವ ಸಾಂಪ್ರದಾಯದ ಕೆತ್ತನೆಯನ್ನು ಇಲ್ಲಿ ಅಳವಡಿಸಲಾಗಿದೆ.

ಈ ದೇವಾಲಯದ ಪರಿಮಿತಿಯಲ್ಲಿ ಸುಮಾರು 1200 ಎಕರೆ ಗೈರಾಣಿ ಜಮೀನು ಇದ್ದು, ಮಂದಿರದ ಜೀರ್ಣೋದ್ಧಾರಕ್ಕಾಗಿ 14 ಎಕರೆ ಸಾಗುವಳಿ ಜಮೀನು ಇದೆ. ದೇವಾಲಯದ ಸುತ್ತಮುತ್ತಲಿನ ವಾತಾವರಣದಲ್ಲಿ ಸುಮಾರು 1000 ಕ್ಕಿಂತ ಹೆಚ್ಚು ಮಾವಿನ, ಹುಣಸೆ ಮರಗಳು ಹಚ್ಚ ಹಸುರಿನಿಂದ ಹುಲುಸಾಗಿ ಸೊಗಸಾಗಿ ಬೆಳೆದಿವೆ.

ಈ ಒಂದು ಒಳ್ಳೆಯ ರಮ್ಯ ಹಾಗೂ ಗಿಡಮರಗಳ ಬಯಲು ಪ್ರದೇಶದಲ್ಲಿ ರಾಮಲಿಂಗೇಶ್ವರ ಮಂದಿರ ಇಂದು ಅನಾಥವಾಗಿ ನಿಂತಿದೆ. ರಾಜರ ಕಾಲದಲ್ಲಿ ಸಕಲ ವೈಭವದಿಂದ, ಧರ್ಮ ಸಾಂಪ್ರದಾಯಗಳಿಗೆ ಅತೀವ ಮಹತ್ವ ಕೊಡಲಾಗುತ್ತಿದ್ದು, ಈ ತರಹದ ಒಳ್ಳೆಯ ಚರಿತ್ರೆಯನ್ನು ಬಿಂಬಿಸುವ ಮಂದಿರದ ಜೀರ್ಣೋದ್ಧಾರವಾಗುತ್ತಿದ್ದವು. ಇಂದು ಪ್ರಜಾಪ್ರಭುತ್ವದ ರಾಜ್ಯದಲ್ಲಿ ಈ ಪುರಾತನ ಇತಿಹಾಸ ಸಾರುವ ದೇವಾಲಯಗಳು ಜೀರ್ಣೋದ್ಧಾರಗೊಳ್ಳದೇ, ವಿನಾಶದ ಅಂಚಿನಲ್ಲಿವೆ.

(ಎಂ.ಪಿ.ಆರ್.)

ರಾಮೇಶ್ವರ ಎ.ಕೆ.: ಎ.ಕೆ. ರಾಮೇಶ್ವರರು ವಿಜಾಪುರ ಜಿಲ್ಲೆಯ ದದಾಮಹಟ್ಟಿಯಲ್ಲಿ ಅಗಸರ ಕುಟುಂಬದಲ್ಲಿ 02.ನೆಯ ಮೇ 1934ರಲ್ಲಿ ಜನಿಸಿದರು. ತಂದೆ ಕೃಷ್ಣಪ್ಪ, ತಾಯಿ ಕಾಶೀಬಾಯಿ.

ಎ.ಕೆ. ರಾಮೇಶ್ವರ ಹುಟ್ಟೂರು ದದಾಮಹಟ್ಟಿಯ ಸಮೀಪದ ಸಾರವಾಡದಲ್ಲಿ ಶಿಕ್ಷಣ ಮುಗಿಸಿ ಕಲಬುರ್ಗಿ ಜಿಲ್ಲೆಗೆ ಬಂದು ಪ್ರಾಥಮಿಕ ಶಿಕ್ಷಕನ ಬಾಳನ್ನು ಅಪ್ಪಿದರು. ಪ್ರಾಥಮಿಕ ಶಾಲಾ ಶಿಕ್ಷಕರಾದ ರಾಮೇಶ್ವರ ತಮಗೆ ದೊರೆತ ಶಿಕ್ಷಣದ ಕೊರತೆಯನ್ನು ನೀಗಿಸಲು ಮಕ್ಕಳ ಅಭ್ಯಾಸದ ಜೊತೆಗೆ ತಾವು ಅಭ್ಯಾಸ ಮಾಡುತ್ತ ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿಸಿ, ಟಿ.ಸಿ.ಹೆಚ್. ತರಬೇತಿ ಪಡೆದರು. ನಂತರ ಬಡತನದ ಕಾಲ್ತೊಡಕಿನಲ್ಲಿ ಶಿಕ್ಷಣ



ಮುಂದುವರಿಸುವುದು ಸಾಧ್ಯವೇ ಆಗಲಿಲ್ಲ. ಶ್ರೀಯುತರು ನಿರಾಶರಾಗದೆ ಸಾಹಿತ್ಯ ಅಭ್ಯಾಸಿಯಾಗಿ ಶ್ರೇಷ್ಠ ಸಾಹಿತ್ಯ, ಮಕ್ಕಳ ಸಾಹಿತ್ಯದಲ್ಲಿ ಕೃಷಿಗೈದು ಸುಮಾರು ಐವತ್ತು ಕೃತಿಗಳನ್ನು ರಚಿಸಿ ನಾಡಿನ ಶ್ರೇಷ್ಠ ಕವಿಗಳ ಸಾಲಿನಲ್ಲಿ, ಜಾನಪದ ತಜ್ಞರ ಶ್ರೇಣಿಯಲ್ಲಿ, ವಚನ ಸಾಹಿತ್ಯದ ಮಾಲೆಯಲ್ಲಿ ಒಬ್ಬರಾಗಿ ಕಂಡರೂ ಮಕ್ಕಳ ಸಾಹಿತ್ಯದಲ್ಲಿ ತಮ್ಮದೇ ಆದ ಸ್ಥಾನ-ಮಾನ ಪಡೆದುಕೊಂಡ ಎ.ಕೆ. ರಾಮೇಶ್ವರರು ಶರಣು ಶರಣಾರ್ಥಿ ಕೃತಿಯೊಂದಿಗೆ ಜಾನಪದ ಲೋಕಕ್ಕೆ ಕಾಲಿರಿಸಿದರು.

ಎ.ಕೆ. ರಾಮೇಶ್ವರರು ಜಾನಪದ ಕ್ಷೇತ್ರಕ್ಕೆ ನೀಡಿದ ಕೊಡುಗೆ ವೈವಿಧ್ಯಮಯವಾಗಿದೆ. ಹಣಚಿ ಬಟ್ಟಿನ ಕೈ ಹಾಗೂ ಅಚ್ಚಮಲ್ಲಿಗೆ ಹೂ ಇವೆರಡು ಜಾನಪದ ಪ್ರಬಂಧಗಳ ಸಂಕಲನವಾಗಿವೆ. ಸಕ್ಕರೆಯ ಮಳಲು ಎಂಬುದು ಅವರ ಮತ್ತೊಂದು ಜಾನಪದ ಕೃತಿಯಾಗಿದೆ. ಗೆಜ್ಜೆ ನುಡಿದಾವ ಗಿಲಿಗಲಿ ಎಂಬುದು ಎ.ಕೆ. ರಾಮೇಶ್ವರರ ಸಂಪಾದಿತ ಕೃತಿ. ಇದಲ್ಲದೆ ಗ್ರಾಮದೇವತೆಗಳು, ಜಾನಪದ ಕಲೆಗಳು, ಕ್ಷೇತ್ರಕಾರ್ಯವನ್ನಾಧರಿಸಿದ ಸಂಗ್ರಹ ಕೃತಿಗಳನ್ನು ರಚಿಸಿದ್ದಾರೆ. ಸಾಹಿತ್ಯ ಅಕಾಡೆಮಿಗಾಗಿ ರಚಿಸಿದ ಬುಡ ಬುಡಕೆ ಒಂದು ಅಧ್ಯಯನವು ಅವರ ಜಾನಪದ ಕ್ಷೇತ್ರಕಾರ್ಯದ ಆಸಕ್ತಿ ಮತ್ತು ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಸಾಹಿತ್ಯ ದೃಷ್ಟಿ ಮತ್ತು ಸೃಷ್ಟಿ ಎಂಬ ಶೀರ್ಷಿಕೆಯಡಿಯಲ್ಲಿ ಅವರ ಸಮಗ್ರ ಲೇಖನಗಳನ್ನೊಳಗೊಂಡ ಕೃತಿ ಹೊರಬರುತ್ತಿದೆ. ಹೀಗೆ ಕ್ಷೇತ್ರಕಾರ್ಯ, ಸಂಗ್ರಹಣೆ, ಅಧ್ಯಯನಗಳಲ್ಲಿ ತೊಡಗಿಸಿಕೊಂಡು ಅಪಾರ ಜಾನಪದ ಸಂಪತ್ತನ್ನು ಮುಂದಿನ ಪೀಳಿಗೆಗೆ ಆಸ್ತಿಯಾಗಿ ರವಾನಿಸುವಲ್ಲಿ ನಿರತರಾಗಿದ್ದಾರೆ. *(ಎ.ಕೆ.)*

ರಾಸಣಗಿ: ಗುಲ್ಬರ್ಗ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಒಂದು ಕ್ಷೇತ್ರ. ಇಲ್ಲಿಯ ಬಲ ಭೀಮ ದೇವಸ್ಥಾನ ಪ್ರಸಿದ್ಧವಾಗಿದೆ ರಾಸಣಗಿಯ ಹನುಮಪ್ಪನ ಕಥೆ ಅತ್ಯಂತ ರೋಚಕವಾಗಿದೆ. ಸಮೀಪದ ಹರವಾಳ ಗ್ರಾಮದ ಅಗಸನೊಬ್ಬ ನಿತ್ಯ ನದಿಯಲ್ಲಿ ಬಟ್ಟೆ ಒಗೆಯುತ್ತಿದ್ದ. ಬಟ್ಟೆ ಕಲ್ಲಿಗೆ ಅಪ್ಪಳಿಸಿದಾಗಲೊಮ್ಮೆ ನರಳುವ ಸದ್ದು ಕೇಳಿಸುತ್ತಿತ್ತು. ಅಗಸನಿಗೆ ಅಚ್ಚರಿಯಾಯಿತು. ತನ್ನ ಅನುಭವವನ್ನು ಗ್ರಾಮದ ಹಿರಿಯರ ಮುಂದೆ ಹೇಳಿಕೊಂಡ. ಸಮಸ್ತ ಗ್ರಾಮಸ್ಥರ ಸಮ್ಮುಖದಲ್ಲಿ ಬಂದು, ನದೀ ತೀರದಲ್ಲಿ ಪರಿಶೀಲಿಸಿದಾಗ ಎಲ್ಲಿಯೂ ಏನೂ ಕಾಣಲಿಲ್ಲ. ಕೊನೆಗೆ ಅಗಸ ಬಟ್ಟೆಯೊಗೆಯುವ ಕಲ್ಲನ್ನೇ ತಿರುಗಿಸಿ ನೋಡಿದಾಗ, ಎಲ್ಲರಿಗೂ ಅಚ್ಚರಿ ಹಾಗೂ ರೋಮಾಂಚನವಾಯಿತು. ಬಟ್ಟೆಯೊಗೆಯುತ್ತಿದ್ದ ಈ ಕಲ್ಲಿನ ಹಿಂಭಾಗದಲ್ಲಿ ಮುಖ್ಯಪ್ರಾಣನ ಪ್ರತಿಮೆಯಿತ್ತು. ಅಗಸನಂತೂ ಕಂಗಾಲಾಗಿ, ಅಪ್ಪಾ ತಂದೆ ಕ್ಷಮಿಸು ತಿಳಿಯದೇ ತಪ್ಪು ಮಾಡಿದೆ ಎಂದು ದೀರ್ಘದಂಡ ಹಾಕಿದ. ಗ್ರಾಮಸ್ಥರು ಆತನಿಗೆ ಸಮಾಧಾನ ಹೇಳಿ, ಈ ಹನುಮಪ್ಪನಿಗೊಂದು ದೇವಸ್ಥಾನ ಕಟ್ಟಿ ಪ್ರತಿಷ್ಠಾಪಿಸಲು ನಿರ್ಧರಿಸಿ, ಪ್ರತಿಮೆಯನ್ನು ಸಕಲ ವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ಎತ್ತಿನ ಗಾಡಿಯಲ್ಲಿ ಹರವಾಳ ಗ್ರಾಮಕ್ಕೆ ಹೊರಟರು. ಆದರೆ, ಈ ಗಾಡಿ ಆಕಡೆ ಹೋಗಲು ಸಾಧ್ಯವಾಗದೇ ರಾಸಣಗಿ ಕಡೆ ಹೊರಳಿತು. ಇನ್ನೇನು ಮಾಡಲಿಕ್ಕಾಗದೇ, ಎಲ್ಲರೂ ಸೇರಿ ಉತ್ತರವಾಹಿನಿಯಾಗಿ ಹರಿಯುವ ಭೀಮಾ ತೀರದ ರಾಸಣಗಿಯಲ್ಲೇ ದೇವಸ್ಥಾನ ನಿರ್ಮಿಸಲು ನಿರ್ಧರಿಸಿದರು. ಮಾರ್ಗಶಿರ ಶುದ್ಧ ಪಂಚಮಿಯಂದು ಹೊಸ ಮಂದಿರದಲ್ಲಿ ಮುಖ್ಯಪ್ರಾಣ ಬಲಭೀಮ ಸೇನ ದೇವರ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಯಿತು.

ಕಲ್ಲಿನಲ್ಲಿ ಸ್ವಯಂ ಒಡಮೂಡಿದ ಈ ರಾಸಣಗಿ ಮುಖ್ಯಪ್ರಾಣದೇವರು, ಭಕ್ತರ ಕಾಮನೆಗಳನ್ನು ಪೂರೈಸುವ ಅಪಾರ ನಂಬಿಕೆಯನ್ನು ಭಕ್ತರು ಹೊಂದಿದ್ದಾರೆ. ಈ ನಂಬಿಕೆಯೊಂದಿಗೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಾರೆ. ಉತ್ತರ ವಾಹಿನಿ ಭೀಮಾ ನದಿಯಲ್ಲಿ ಪುಣ್ಯ ಸ್ನಾನ ಮಾಡಿ ರಾಸಣಗಿಯ ಮುಖ್ಯಪ್ರಾಣನ ದರ್ಶನ ಪಡೆಯುತ್ತಾರೆ.

ಈ ಮುಖ್ಯಪ್ರಾಣ ಅತ್ಯಂತ ಜಾಗೃತ. ಆತ ಸದಾ ಇಲ್ಲಿ ಸಂಚರಿಸುತ್ತಾನೆಂಬ ಪ್ರತೀತಿ ಇದೆ. ಆತ ಸಂಚರಿಸುವ ಈ ನೆಲ ಅತ್ಯಂತ ಪವಿತ್ರವೆಂದು ಗ್ರಾಮಸ್ಥರು ಭಾವಿಸುತ್ತಾರೆ. ಆದರೆ ಸುತ್ತಲೂ ಬರೀ ಗುಡ್ಡಗಾಡು ಇರುವುದರಿಂದ ಹನುಮಪ್ಪನ ಕಾಲಿಗೆ ನೋವಾಗಬಾರದೆಂದು ಅಲಂಕೃತ ಪಾದರಕ್ಷೆಗಳನ್ನು ಮಾಡಿ ದೇವಸ್ಥಾನದ ಮುಂದಿಡುತ್ತಾರೆ. ಈ ಪಾದರಕ್ಷೆಗಳನ್ನು ಹಿಂದಿನಿಂದಲೂ ಶಿವಪ್ಪ ತಂದೆ ಹುಲೆಪ್ಪ ಹರವಾಳ ಇವರ ಮನೆತನದವರು ಸೇವೆ ಮಾಡಿಕೊಂಡು ಬಂದಿದ್ದಾರೆ. ಪ್ರತಿ ಮೂರು ವರ್ಷಗಳಿಗೊಮ್ಮೆ ಈ ಪಾದರಕ್ಷೆಗಳು ಸವೆದಿರುತ್ತವೆ. ಮತ್ತೆ ಹೊಸತನ್ನು ಮಾಡಿ ಸೇವೆ ಸಲ್ಲಿಸುತ್ತಾರೆ. ಈ ಅನುಭವವೇ, ಇಲ್ಲಿ ಹನುಮಪ್ಪನ ಸಾನಿಧ್ಯವಿದೆ ಎಂಬುದಕ್ಕೆ ಸಾಕ್ಷಿ ಎಂದು ಭಕ್ತರು ನಂಬಿಕೊಂಡು ಬಂದಿದ್ದಾರೆ.

ಪ್ರತಿ ವರ್ಷ ಮಾರ್ಗಶಿರ ಶುದ್ಧ ಪಂಚಮಿ ಹಾಗೂ ಷಷ್ಠಿ ಎರಡು ದಿನಗಳವರೆಗೆ ಉತ್ಸವ ನಡೆಯುತ್ತದೆ. ಹರವಾಳ ಇನಾಮದಾರ ಮನೆತನದವರು ಹಾಗೂ ಕುಲಕರ್ಣಿ ಮನೆತನದವರು ಉತ್ಸವವನ್ನು ನಡೆಸಿಕೊಂಡು ಬಂದಿದ್ದಾರೆ.

(ಕೆ.ಕೆ.)


ರು

ರುದ್ರವಾಡಿ: ಪ್ರಾಚೀನ ಅಗ್ರಹಾರ. ಆಳಂದದಿಂದ ಉತ್ತರಕ್ಕೆ 16 ಕಿ.ಮೀ ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ 'ಅಗ್ರಹಾರ ರುದ್ರವಾಡಿ', 'ರುದ್ರವಾಡಿ' ಎಂದೇ ಉಲ್ಲೇಖಿತಗೊಂಡಿದೆ. ಹಿಂದೆ ಇದು ಅಲಂದ 1000ಕ್ಕೆ ಸೇರಿದ್ದ ಮೊರಂಬ–84 ಕಂಪಣಕ್ಕೆ ಒಳಪಟ್ಟಿದ್ದು, 50 ಮಹಾಜನರನ್ನು ಹೊಂದಿದ ಪ್ರಮುಖ ಅಗ್ರಹಾರವಾಗಿತ್ತು, ಶೈಕ್ಷಣಿಕ ಹಾಗೂ ಧಾರ್ಮಿಕ ಕೇಂದ್ರವಾಗಿತ್ತು. ಇಲ್ಲಿ ದೊರೆತ ಕಲ್ಯಾಣದ ಚಾಳುಕ್ಯ ಅರಸ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಗೆ ಸೇರಿದ ಎರಡು ಶಾಸನಗಳು ಇಲ್ಲಿಯ ಮಲ್ಲಿಕಾರ್ಜುನ ದೇವಾಲಯದ ನವರಂಗದಲ್ಲಿರುವ ಈ ಎರಡು ಶಾಸನಗಳಲ್ಲಿ 1103ರ ಶಾಸನ ವಿಕ್ರಮಾದಿತ್ಯನ ರಾಣಿ ಚಂದಲ ದೇವಿಯ ಬೇಡಿ–ಕೆಯಂತೆ ದಂಡನಾಯಕ ಮಲ್ಲಿ ದಂಡನಾಥ ರುದ್ರವಾಡಿಯಲ್ಲಿ ನಿರ್ಮಿಸಿದ ತ್ರಿಕೂಟ ಲಕ್ಷ್ಮೀಶನ ದೇವಾಲಯಕ್ಕೆ ಹಾಗೂ ಅಲ್ಲಿಯ 24 ವಿವಿಧ (ಚತುರ್ ವಿಂಶತಿ) ವಿಷ್ಣು ಮೂರ್ತಿಗಳ ಸೇವೆಗೆಂದು ಮಹಾಮಂಡಳೇಶ್ವರನ ಮಕ್ಕಳು ಅಗ್ರಹಾರದ ಪ್ರಭು ವಾಸುದೇವ ಭಟೋಪಾಧ್ಯಾಯರ ಕೈಯಲ್ಲಿ ಮಾಣಿಕೇಶ್ವರದ ಕೋಲಲ್ಲಿ 300 ಮತ್ತರು ಭೂಮಿಯನ್ನು 500 ಗದ್ಯಾಣಗಳಿಗೆ ಖರೀದಿಸಿ ದಾನ ಬಿಟ್ಟಿದ್ದನ್ನು ದಾಖಲಿಸುತ್ತ, ಈ ಶಾಸನವನ್ನು ರಚಿಸಿದ ವಿಷ್ಣುಭಟ್ಟನನ್ನು ಕವಿರತ್ನ ಭೂಷಣ, ಕರ್ನಾಟಕ ಸಂಸ್ಕೃತ–ಆಂಧ್ರ ಕವಿಯೆಂದು ಹೊಗಳುತ್ತದೆ. ಈ ಶಾಸನ ಸಾಂದರ್ಭಿಕವಾಗಿ ನೆರೆಯ ಖಜ್ಜುರಿ (ಖಜೂರಿ) ಹಾಗೂ ಜವಳಿಗೆ (ಜವಳಗಿ) ಗ್ರಾಮಗಳನ್ನು ದಾಖಲಿಸಿದೆ. ಅಲ್ಲೇ ಇರುವ ಇನ್ನೊಂದು ಶಾಸನ 1119ರ ದ್ದಾಗಿದ್ದು ಸೋಮಯಾಜಿ ಪಂಡಿತರ ವಿನಂತಿಯ ಮೇರೆಗೆ ರುದ್ರವಾಡಿಯ ಚೆನ್ನಕೇಶವ ದೇವರು ಹಾಗೂ ಅಲ್ಲಿಯ ಚತುರ್‌ವಿಂಶತಿ ವಿಷ್ಣುಮೂರ್ತಿಗಳ ಪೂಜಾವಿಧಿಗೆಂದು ಬ್ರಹ್ಮಪುರಿಯ 50 ಮಹಾಜನರ ಕೈಯಲ್ಲಿ ಒಟ್ಟು 900 ಮತ್ತರು ಭೂಮಿ ಇರುವ ಜವಳಿಗೆ ಹಾಗೂ ಬಬ್ಬಲೇಶ್ವರ ಗ್ರಾಮಗಳನ್ನು ದಾನ ಕೊಟ್ಟ ವಿಷಯವನ್ನು ತಿಳಿಸುತ್ತದೆ. ಜೊತೆಗೆ ಈ ಶಾಸನವೂ ಕವಿರತ್ನ ಭೂಷಣ ವಿಷ್ಣು ಭಟ್ಟನ ರಚನೆ ಎಂದು ಹೇಳುತ್ತದೆ.

ಈ ಶಾಸನಗಳಿರುವ ಮಲ್ಲಿಕಾರ್ಜುನ ದೇವಾಲಯವೇ ಶಾಸನೋಕ್ತ ತ್ರಿಕೂಟ ಚನ್ನಕೇಶವ ದೇವಾಲಯವಾಗಿದ್ದು, ಮೂರು ಪ್ರತ್ಯೇಕ ಗರ್ಭಗೃಹ ಹಾಗೂ ಅಂತರಾಳಗಳನ್ನು ಹೊಂದಿದ್ದು, ಇವುಗಳನ್ನು ನಡುವೆ ಇರುವ ನವರಂಗ ಒಗ್ಗೂಡಿಸಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಉತ್ತರದಲ್ಲಿ ನಾಲ್ಕೂವರೆ ಅಡಿ ಎತ್ತರದ ಸ್ಥಾನಕ ವಿಷ್ಣುಮೂರ್ತಿ ಇದ್ದರೆ ದಕ್ಷಿಣದಲ್ಲಿದ್ದ ಮೂರ್ತಿ ಇಂದು ಕಣ್ಮರೆಯಾಗಿದೆ. ಇವುಗಳ ಬಾಗಿಲವಾಡಗಳು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ. ನವರಂಗದಲ್ಲಿ ಮೂರು ಮಾದರಿಯ ಕಂಬಗಳಿದ್ದು ನಡುವಣ ಛತ್ತಲ್ಲಿ ಕಮಲವಿದೆ. ನವರಂಗದ ಮುಂಭಾಗ ಕಕ್ಷಾಸನವನ್ನು ಹೊಂದಿದ್ದು ಇದನ್ನು ಮುಂದಿರುವ ಪುಷ್ಕರಣಿಯವರೆಗೆ ಇತ್ತೀಚಿಗೆ ವಿಸ್ತರಿಸಲಾಗಿದೆ. ದೇವಾಲಯದ ಮುಂದೆ ಇರುವ ಪುಷ್ಕರಣಿಯು ಆಯತಾಕಾರ ದಲ್ಲಿದ್ದು ಇಳಿಯಲು ಎರಡು ಕಡೆಯಲ್ಲಿ ಸೋಪಾನಗಳಿವೆ. ಎತ್ತರವಾದ ಜಗತಿಯ ಮೇಲಿರುವ ಈ ದೇಗುಲ ಪೂರ್ವಾಭಿಮುಖವಾಗಿದ್ದು ಇದರ ಭಿತ್ತಿ ನಿರಾಡಂಬರವಾಗಿದೆ. ಈ ದೇವರ ಜಾತ್ರೆ ಚೈತ್ರಶುದ್ಧ ದ್ವಾದಶಿಯಂದು ವಿಜೃಂಭಣೆ ಯಿಂದ ಜರುಗುತ್ತದೆ. ಈ ದೇವಾಲಯದ ಹೊರಗೆ ಸುಮಾರು ನಾಲ್ಕು ಅಡಿ ಎತ್ತರದ ಕಾರ್ತಿಕೇಯ ಹಾಗೂ ಕೇಶವನ ಶಿಲ್ಪಗಳಿವೆ. ಇದರೊಂದಿಗೆ ಊರಿನ ಶಿವಲಿಂಗೇಶ್ವರ, ಹನುಮಂತ, ಲಕ್ಷ್ಮೀ ಹಾಗೂ ಮರಗಮ್ಮನ ನವೀನ ದೇವಸ್ಥಾನಗಳಿದ್ದು ಒಂದು ಮಸೀದಿ, ಸುಲೈಮಾನ್ ಪಾಷಾ ಹಾಗೂ ಹುಸೇನ್ ಪಾಷಾರ ದರ್ಗಾಗಳಿವೆ. *(ಆರ್.ಕೆ.)*

ರುದ್ರಾಕ್ಷಿ: ರುದ್ರನ ಕಣ್ಣೀರಿನ ಹನಿಗಳಿಂದ ಬಂದಿರುವುದರಿಂದ 'ರುದ್ರಾಕ್ಷಿ' ಎಂದು ಕರೆಯಲ್ಪಟ್ಟಿದೆ. ರುದ್ರನಷ್ಟೇ ಪ್ರಭಾವ ಹೊಂದಿರುವ ರುದ್ರಾಕ್ಷಿಯ ಮಹತ್ವ ಮತ್ತು ಮಹಿಮೆ ಅಪಾರವಾಗಿದೆ. ತ್ರಿಪುರಾಸುರರನ್ನು ರುದ್ರನು ಸಂಹಾರಕ್ಕಾಗಿ ಉರಿಯುವ ಕಣ್ಣುಗಳಿಂದ ದಿಟ್ಟಿಸಿ ನೋಡತೊಡಗಿದರು, ಆ ಕಾಲಕ್ಕೆ ಕಣ್ಣುಗಳಿಂದ ಉದುರಿದ ಹನಿಗಳೇ ಭೂಮಿಯಲ್ಲಿ ಬೀಜವಾಗಿ ಮೊಳಕೆಯೊಡೆದು ಮರಗಳಾದುವೆಂದು ಆ ಮರಗಳಿಂದ ಹುಟ್ಟಿದ ಕಾಯಿಗಳೆ ರುದ್ರಾಕ್ಷಿಗಳೆಂದು ಐತಿಹ್ಯವಿದೆ.

ರುದ್ರಾಕ್ಷಿಗಳನ್ನು ಲಿಂಗವಂತರು ಧರಿಸುವರು, ಕಡ್ಡಾಯದ ಅಷ್ಟಾವರಣ ಧಾರಣೆಯಲ್ಲಿ ರುದ್ರಾಕ್ಷಿಗೆ ಗಣ್ಯ ಸ್ಥಾನವಿದೆ. ರುದ್ರಾಕ್ಷಿಗಳಲ್ಲಿ ಒಂದು ಮುಖದಿಂದ ಹದಿನಾಲ್ಕು ಮುಖಗಳವರೆಗಿನ ರುದ್ರಾಕ್ಷಿಗಳಿವೆ. ಅಲ್ಲದೆ ರುದ್ರಾಕ್ಷಿಗಳಲ್ಲಿ ಮುಖ್ಯವಾಗಿ ಈ ಪ್ರಕಾರಗಳಿವೆ. 1. ಮೊದಲನೆಯ ಕಣ್ಣಾದ ಸೂರ್ಯ ನೇತ್ರದಿಂದ ಕಪಿಲ ವರ್ಣದ ಹನ್ನೆರಡು ಪ್ರಕಾರದ ರುದ್ರಾಕ್ಷಿಗಳು ಹುಟ್ಟಿದವು. 2. ಎರಡನೆಯ ಕಣ್ಣಾದ ಚಂದ್ರ ನೇತ್ರದಿಂದ ಬಿಳಿ ಬಣ್ಣದ ಹದಿನಾರು ಪ್ರಕಾರದ ರುದ್ರಾಕ್ಷಿಗಳು ಹುಟ್ಟಿದವು. 3. ಮೂರನೇಯ ಕಣ್ಣಾದ ಅಗ್ನಿ ನೇತ್ರದಿಂದ ಕಪ್ಪು



ರುದ್ರಾಕ್ಷಿ

ಬಣ್ಣದ ಹತ್ತು ಪ್ರಕಾರದ ರುದ್ರಾಕ್ಷಿಗಳು ಹುಟ್ಟಿದವು. ಒಟ್ಟಿನಲ್ಲಿ ಮೂವತ್ತೆಂಟು ಪ್ರಭೇಧದ ರುದ್ರಾಕ್ಷಿಗಳಿವೆ ಎನ್ನುವ ಐತಿಹ್ಯವಿದೆ. ಈ ಪ್ರಕಾರ ರುದ್ರನಿಂದ ಹುಟ್ಟಿದ ರುದ್ರಾಕ್ಷಿಗಳು ಸಕಲ ದೇವಗಣ ಧರಿಸಿದ್ದಾರೆ. ಇಂತಹ ರುದ್ರಾಕ್ಷಿಯನ್ನು ಯಾವ ಜಾತಿ, ಮತ, ಪಂಥವೆಂದೆಣಿಸದೆ ಮಾನವರು ನಿತ್ಯ ಧರಿಸಿದರೆ ಆಯುಷ್ಯ, ಆಯುರಾರೋಗ್ಯವನ್ನು, ಸಕಲ ಸಂಪತ್ತು ಶಾಂತಿಯನ್ನು ಪಡೆಯುತ್ತಾರೆ ಎಂದು ಶಿವಪುರಾಣಗಳಲ್ಲಿ ಉಪನಿಷತ್‌ಗಳಲ್ಲಿ, ಆಗಮಗಳಲ್ಲಿ ಕಂಡುಬರುತ್ತದೆ.

ರುದ್ರಾಕ್ಷಿಯಲ್ಲಿ ಔಷಧೀಯ ಗುಣವೂ ಇದೆ, ಇದು ವಾಯು ಶುದ್ಧಿ ಮಾಡುವುದು, ಜ್ವರ ಬಂದವರ ನಾಲಿಗೆಗೆ ರುದ್ರಾಕ್ಷಿಯನ್ನು ತೇಯ್ದು ಹಚ್ಚಿದರೆ ಬಾಯಿಯ ದುರ್ಗಂಧವನ್ನು ನಾಲಿಗೆಯ ವಿಷವನ್ನೆಲ್ಲ ಈ ಲೇಪನವು ನಾಶಗೊಳಿಸುವುದು. ಯಾರು ಈ ರುದ್ರಾಕ್ಷಿಯನ್ನು ಧಾರಣೆಯನ್ನು ಮಾಡುವರೊ ಅವರಿಗೆ ನೆಮ್ಮದಿ ಹಾಗೂ ಶಾಂತಿಯು ಲಂಭಿಸುತ್ತದೆ. ರುದ್ರಾಕ್ಷಿಯ ಮಹತ್ವವನ್ನು ಬಸವಣ್ಣ, ಅಕ್ಕಮಹಾದೇವಿ, ಷಣ್ಮುಖ ಸ್ವಾಮಿ ಮುಂತಾದವರು ಇದರ ಮಹಿಮೆ ಕೊಂಡಾಡಿದರೆ, ಸಿದ್ಧಾಂತ ಶಿಖಾಮಣಿ-ವಚನ ಪ್ರಭೆ, ವೀರಶೈವ ಚಿಂತಾಮಣಿ ರುದ್ರಾಕ್ಷಿಗಳ ಕುರಿತು ಕಾರಣ, ವರ್ಣಗಳು ವಿಭಿನ್ನ ಮುಖಗಳು, ರುದ್ರಾಕ್ಷಿಗಳ ವಿವರವನ್ನು ನೀಡಿವೆ. ಯಾರು ರುದ್ರಾಕ್ಷಿ ಧರಿಸುತ್ತಾರೊ ಅವರು ತಾಮಸ ಪದಾರ್ಥಗಳನ್ನು ಸೇವಿಸಬಾರದು. ಕಾಯ, ವಾಚ ಮನಶುದ್ಧಿಯಾಗಿರಬೇಕು ಆಗ ರುದ್ರಾಕ್ಷಿಯ ಉತ್ತಮೊತ್ತಮ ಫಲ ಲಭಿಸುವವು.

(ಎಸ್.ಜಿ.ಡಿ.)

ರೇ

ರೇಚಪ್ಪ ಮಾಸ್ತರ ಮಡಿವಾಳ: ಬಯಲಾಟದ ಪ್ರಸಿದ್ಧ ಮಾಸ್ತರ. 2006ರ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪುರಸ್ಕೃತ. ರೇಚಪ್ಪ ಸಿದ್ಧಲಿಂಗಪ್ಪ ಮಡಿವಾಳ ಇವರ ಪೂರ್ತಿ ಹೆಸರು. 80ರ ಹಿರಿಯಜೀವಿ. ಹರೆಯದ ಯುವಕರನ್ನು ಮೀರಿಸುವಷ್ಟು ಚೈತನ್ಯದಾಯಕ. ಇಂದಿಗೂ ಹಳ್ಳಿ ಹಳ್ಳಿಗಳಲ್ಲಿ ಬಯಲಾಟ ಕಲಿಸಲು ಹೋಗುತ್ತಿರುವ ಆಸಕ್ತಿ ಕಡಿಮೆಯಾಗಿಲ್ಲ.

ಇವರಿಗೆ ಮಾಸ್ತರಕಿ ಪದವಿ ಮನೆತನದಿಂದಲೇ ಬಂದುದು. ತಂದೆ, ಅಜ್ಜ ಕೂಡ ಬಯಲಾಟ ಮಾಸ್ತರರಾಗಿದ್ದರು. ಆ ಪರಂಪರೆಯಲ್ಲಿ ಬಂದವರು ರೇಚಪ್ಪ. ಮೂಲತಃ ಕೊಪ್ಪಳ ತಾಲ್ಲೂಕಿನ ಬನಾಪೂರ ಹತ್ತಿರದ ತಳಬಾಳ ಗ್ರಾಮದ ಮಡಿವಾಳ ಮನೆತನದವರು. ಈಗ ವಾಸಿಸುತ್ತಿರುವುದು ಕೊಪ್ಪಳ-ಗದಗ ರೋಡಿನ ಮಧ್ಯದ ತಳಕಲ್ ಗ್ರಾಮದಲ್ಲಿ.

ಬಾಲ್ಯದಲ್ಲಿಯೇ ನಾಟಕ, ಬಯಲಾಟದಲ್ಲಿ ಅಭಿನಯಿಸುತ್ತ ಬಂದ ರೇಚಪ್ಪ ಮಾಸ್ತರರಿಗೆ ಕಂಠವೂ ಸಾಥಿಕೊಟ್ಟಿದೆ. ಅಭಿನಯ, ಹಾಡುಗಾರಿಕೆಯ ಪ್ರೌಢಿಮೆಯಿಂದ ಆಕರ್ಷಿಸಿದ ರೇಚಪ್ಪನವರಿಗೆ ಸಂಗೀತ ಕಲಿಯುವ ಆಸಕ್ತಿ ಮೂಡಿದಾಗ ಆಕಸ್ಮಿಕವಾಗಿ ಕಮಲಾಪುರದಲ್ಲಿ ಅಕ್ಷೆಯಾಂಬರ ನಾಟಕದ ಪಾತ್ರದ ಅಭಿನಯಕ್ಕೆ ಹೋದಾಗ ಅಲ್ಲಿ ವಿರಾಟ ಪರ್ವ ತಾಲೀಮು ಹಚ್ಚಿದರು. ಅದನ್ನು ಕಲಿಸುತ್ತಿದ್ದ ಬಸಯ್ಯ ಮಾಸ್ತರರಿಗೆ ವಯಸ್ಸಾಗಿತ್ತು. ಧ್ವನಿ ಸಾಲುತ್ತಿದ್ದಿಲ್ಲ. ರೇಚಪ್ಪ ಮಡಿವಾಳ ಅವರಿಗೆ ಆ ಸ್ಥಾನ ನೀಡಿ ಅಲ್ಲೇ ಇರಿಸಿಕೊಂಡು ಎಲ್ಲ ಹೇಳಿಕೊಟ್ಟು ಅಭಿನಯಕ್ಕೆ ಇವರಿಂದಲೇ ಸಿದ್ಧಗೊಳಿಸಿದರು. ವಾದ್ಯಗಳನ್ನು ನುಡಿಸುವುದು, ಹಾಡುವುದು, ಹಾರ್ಮೋನಿಯಂ, ಮದ್ದಳೆ, ತಾಳ ಎಲ್ಲವುಗಳಿಂದ ಪಳಗಿ ರೇಚಪ್ಪ ಸ್ವತಂತ್ರವಾಗಿ ಬಯಲಾಟಗಳನ್ನು ಕಲಿಸುವಷ್ಟು ಮಾಸ್ತರರಾದರು. ಬಸಯ್ಯಸ್ವಾಮಿ ಗುರುಗಳನ್ನು ಮಾತ್ರ ಈಗಲೂ ಸ್ಮರಿಸುತ್ತಾರೆ.

ದ್ರೋಣಪರ್ವ, ಕರ್ಣಪರ್ವ, ಪ್ರಮಿಳಾ ದರ್ಬಾರ, ಬಭ್ರುವಾಹನ ಕಾಳಗ, ಇಂದ್ರಜಿತ ಕಾಳಗ, ಕಿರಾತಾರ್ಜುನ ಕಾಳಗ, ಕುರುಕ್ಷೇತ್ರ ಇವರು ಕಲಿಸಿದ ಪ್ರಸಿದ್ಧ ಬಯಲಾಟಗಳು. ನಾಲ್ಕಾರು ದಶಕಗಳಿಂದ ರೇಚಪ್ಪನವರು ಬಯಲಾಟಗಳಿಗೆ ತಮ್ಮನ್ನು ಅರ್ಪಿಸಿಕೊಂಡು ದುಡಿದಿದ್ದಾರೆ. ಬಯಲಾಟಗಳ ನಿರ್ದೇಶನದಿಂದ ನಾಡಿನಾದ್ಯಂತ ಹೆಸರು ಮಾಡಿದ್ದಾರೆ. ಕೊಪ್ಪಳ ಜಿಲ್ಲಾ ಬಯಲಾಟ ಸ್ಪರ್ಧೆಯಲ್ಲಿ (ಕರ್ನಾಟಕ ಜಾನಪದ ಅಕಾಡೆಮಿ 2007ರಲ್ಲಿ ಏರ್ಪಡಿಸಿದ್ದ ಸ್ಪರ್ಧೆ) ಇವರಿಗೆ ಉತ್ತಮ ನಿರ್ದೇಶಕ ಪ್ರಶಸ್ತಿ ಕೂಡ ಲಭಿಸಿದೆ. ಯಲಬುರ್ಗಾ, ಕೊಪ್ಪಳ, ಕುಷ್ಟಗಿ, ಗಂಗಾವತಿ ತಾಲ್ಲೂಕಿನ ಹಳ್ಳಿಗಳಲ್ಲಿ ಅಲ್ಲದೆ ಬಳ್ಳಾರಿ, ಗದಗ ರಾಯಚೂರು ಜಿಲ್ಲೆಗಳಲ್ಲಿಯೂ ಬಯಲಾಟ ಕಲಿಸಿದ ಹೆಗ್ಗಳಿಕೆ ಇವರದು.

ರೇಚಪ್ಪ ಮಾಸ್ತರರ ವೈಯಕ್ತಿಕ ಬದುಕು ಬಹಳ ಕಷ್ಟದಲ್ಲಿ ಸಾಗಿ ಬಂದಿದೆ. 25 ವರ್ಷಗಳ ಹಿಂದೆಯೇ ಪತ್ನಿ ಅಗಲಿದಾಗ ನಾಲ್ಕು ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳನ್ನು ಬೆಳೆಸಿ ಜವಾಬ್ದಾರಿ ನಿಭಾಯಿಸಿದ್ದಾರೆ. ಮನೆಯಲ್ಲಿ ಸದಾ ಬಡತನ ಕಾಡುತ್ತಿದ್ದರೂ ಅದನ್ನು ತೋರಗೊಡದೆ, ಕಲೆಯಲ್ಲಿ ತೊಡಗಿಸಿಕೊಂಡು ನಿಷ್ಠೆಯಿಂದ ದುಡಿದಿದ್ದಾರೆ. ಆ ದುಡಿಮೆಯ ಫಲದಿಂದ ಇಂದು ನಾಡು-ಸರಕಾರ ಸಂಘ ಸಂಸ್ಥೆಗಳು ಗುರುತಿಸಿ ಗೌರವಿಸಿವೆ. ಸರಕಾರದಿಂದ ಒಂದು ಸಾವಿರ ರೂಪಾಯಿ ಮಾಶಾಸನ ಬರುತ್ತಿದೆ. ಮಕ್ಕಳೆಲ್ಲ ದುಡಿಯುತ್ತಿದ್ದಾರೆ. ಈಗ ತೃಪ್ತಿಯ ಬದುಕಿದೆ.

ಇಂದಿಗೂ ರಂಗಾಸಕ್ತಿ ಕಳೆದುಕೊಳ್ಳದ ಇವರು ಬಿಡುವಿಲ್ಲದಂತೆ ದುಡಿಯುತ್ತಿದ್ದಾರೆ. ಜಾತ್ರೆ, ಉತ್ಸವ, ಉರುಸುಗಳಲ್ಲಿ ಬಯಲಾಟಗಳಿರಲೇಬೇಕು. ಬಯಲಾಟಗಳಲ್ಲಿ ರೇಚಪ್ಪನವರ ಕಂಚಿನ ಕಂಠದ ಹಾಡುಗಳು ಕೇಳಲೇಬೇಕು. ಇವರನ್ನು ಸಂಘ ಸಂಸ್ಥೆಗಳು ಸನ್ಮಾನಿಸಿವೆ.

(ಜಿ.ಎಚ್.)

ರೊಟ್ಟಿ: ಹೈದ್ರಾಬಾದ ಕರ್ನಾಟಕ ಪ್ರದೇಶದ ಬಹುಮುಖ್ಯ ಆಹಾರ. ಪ್ರತಿಯೊಂದು ದೇಶ, ಸಂಸ್ಕೃತಿ, ಹಾಗೂ ಪೀಳಿಗೆಯೂ ತನ್ನ ಅಗತ್ಯಗಳಿಗೆ ಅನುಗುಣವಾದ ಆಹಾರ ವ್ಯವಸ್ಥೆಯನ್ನು ತಾನೇ ಸೃಷ್ಟಿಸಿಕೊಳ್ಳುತ್ತದೆ. ಜನಪದ ಸಂಸ್ಕೃತಿಯ ಕ್ರಿಯಾತ್ಮಕ ಭಾಗವಾಗಿ ಆಹಾರ ವ್ಯವಸ್ಥೆ ಕಾಣಿಸಿಕೊಳ್ಳುತ್ತದೆ. ಜನಪದ ಸಂಸ್ಕೃತಿಯಲ್ಲಿ ಆಹಾರ ವ್ಯವಸ್ಥೆ ಒಂದು ಮುಖ್ಯವಾದ ಭಾಗ. ಆಹಾರ ಮತ್ತು ಅಡುಗೆಗೆ ಸಂಬಂಧಿಸಿದ ಧೋರಣೆಗಳು, ನಿಷಿದ್ಧತೆಗಳು, ಪದ್ಧತಿಗಳು, ಅಡುಗೆ ಮತ್ತು ಆಹಾರ ಸಂಬಂಧಿಯಾದ ಎಲ್ಲಾ ರೂಪಗಳು ಆಹಾರ ಸಂಸ್ಕೃತಿಯ ವ್ಯಾಪ್ತಿಯಲ್ಲಿ ಬರುತ್ತದೆ. ಹೀಗೆ ಭೌತಿಕ ಮತ್ತು ಜೈವಿಕ ಅವಶ್ಯಕತೆಯ ಈಡೇರಿಕೆಗಾಗಿ ರೂಪುತಾಳಿದ 'ಆಹಾರ' ಎನ್ನುವುದು ಜನಪದ ಸಂಸ್ಕೃತಿಯ ಒಂದು ಮುಖ್ಯ ಭಾಗವಾಗಿ ರೂಪುಗೊಂಡ ಇತಿಹಾಸ ಬಹಳ ವೈವಿಧ್ಯಮಯವಾದುದು ಮತ್ತು ಮಹತ್ವ ಪೂರ್ಣವಾದುದು. ಆಹಾರವು ಕೇವಲ ಹೊಟ್ಟೆ ತುಂಬಿಸುವ ಸಾಮಗ್ರಿಯಷ್ಟೇ ಆಗದೆ ಬೇರೆ ಬೇರೆ ಸಂದರ್ಭಗಳಲ್ಲಿ ಅವಕಾಶಗಳನ್ನು ಕೊರತೆಗಳನ್ನು ಅವಲಂಬಿಸಿಕೊಂಡು ಮನುಷ್ಯರು ರೂಪಿಸಿಕೊಂಡ ಸಾಂಸ್ಕೃತಿಕ ಬದುಕಾಗಿ ರೂಪುತಾಳಿದೆ.

ಆಹಾರ ವ್ಯವಸ್ಥೆಗೂ ಜನರ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗೂ ನೇರವಾದ ಸಂಬಂಧವಿದೆ. ಜನರ ಆರ್ಥಿಕ ಶಕ್ತಿ ನಿರ್ದಿಷ್ಟ ರೀತಿಯ ಆಹಾರ ಪದ್ಧತಿಯನ್ನು ರೂಢಿಸಿಕೊಳ್ಳಲು ಕಾರಣವಾಗುತ್ತದೆ. ಮನುಷ್ಯರು ಬದುಕುವ ಪರಿಸರಗಳು ಕೂಡಾ ಆಹಾರ ವ್ಯವಸ್ಥೆಯ ರೂಪುಗೊಳ್ಳುವಿಕೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ನಿಸರ್ಗದ ಆವರಣವು ಅಂತಹ ಪರಿಸರದಲ್ಲಿ ದೊರೆಯುವ ಉತ್ಪನ್ನಗಳನ್ನು ಆಹಾರವನ್ನಾಗಿ ಬಳಸಲು ಕಾರಣವಾಗಿದೆ. ಹೀಗಾಗಿ ಆಹಾರ ವ್ಯವಸ್ಥೆಯಲ್ಲಿಯೇ ರೂಢಿಯ ಆಹಾರ ಅಥವಾ ದೈನಂದಿನ ಆಹಾರ ಒಂದು ಮುಖ್ಯವಾದ ಘಟಕ. ಇದನ್ನೇ 'ಮುಖ್ಯ ಆಹಾರ' ಎಂದು ಕರೆಯಬಹುದು.

ಮೇಲೆ ಹೇಳಿದ ನಿಸರ್ಗದ ಆವರಣವು 'ರೊಟ್ಟಿಯ ಸಂಕಥನ'ದಲ್ಲಿ ಬಹುಮುಖ್ಯವಾದ ಪಾತ್ರವಹಿಸಿದೆ. ಇಲ್ಲಿ ವಿಶೇಷವಾಗಿ ಜೋಳದ ರೊಟ್ಟಿಯನ್ನು ಗಮನಿಸಲಾಗಿದೆ. ರೊಟ್ಟಿಯನ್ನು ಆಹಾರವಾಗಿ ಬಳಸುವ ಪ್ರದೇಶಗಳನ್ನು ಪರಿಶೀಲಿಸಿದಾಗ ಅದು ಗಮನಕ್ಕೆ ಬರುತ್ತದೆ. ರೊಟ್ಟಿಗೆ ಮೂಲವಾದ ಜೋಳವು ಕರ್ನಾಟಕದ ಪ್ರಮುಖ ಆಹಾರ ಬೆಳೆಗಳಲ್ಲಿ ಒಂದು. ಕರ್ನಾಟಕದಲ್ಲಿ ಬಿಜಾಪುರ, ಧಾರವಾಡ, ಗುಲ್ಬರ್ಗ, ರಾಯಚೂರು, ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ ಮುಂತಾದ ಜಿಲ್ಲೆಗಳಲ್ಲಿ ಜೋಳ ಬೆಳೆಯುತ್ತಾರೆ. ಇಲ್ಲಿಯ ಭೌಗೋಳಿಕ ಪರಿಸರ, ಹವಾಮಾನ, ಮಳೆ, ಮಣ್ಣು ಜೋಳದ ಬೆಳೆಗೆ ತುಂಬಾ ಸಹಾಯಕಾರಿಯಾಗಿದೆ. ಭೌಗೋಲಿಕವಾಗಿ ಹೆಚ್ಚಾಗಿ ಎರಿಭೂಮಿ (ಕಪ್ಪು) ಮತ್ತು ಮಸಾರಿ ಭೂಮಿಯನ್ನು ಹೊಂದಿದೆ. ಬಯಲು ಸೀಮೆಯಾಗಿರುವುದರಿಂದ ಇಲ್ಲಿ ಮಳೆ ಕಡಿಮೆ. ಹವೆಯು ಸಮಶೀತೋಷ್ಣ. ಈ ಮಣ್ಣು, ಮಳೆಯ ಪ್ರಮಾಣ ಹಾಗೂ ಹವೆಯ ಗುಣಕ್ಕನುಗುಣವಾಗಿ ಇಲ್ಲಿ ಜೋಳವನ್ನು ಹೆಚ್ಚಾಗಿ ಬೆಳೆಯುವರು. ಜೋಳವನ್ನು ವರ್ಷದಲ್ಲಿ ಎರಡು ಸಲ ಅಂದರೆ ಮುಂಗಾರು ಹಿಂಗಾರು ಕಾಲಗಳಲ್ಲಿ ಬೆಳೆಸಲಾಗುತ್ತದೆ. ಮುಂಗಾರು ಜೋಳವನ್ನು ಜೂನ್-ಜುಲೈ ತಿಂಗಳುಗಳಲ್ಲಿ ಬಿತ್ತಿ, ನವೆಂಬರ್-ಡಿಸೆಂಬರ್ ವೇಳೆಗೆ ಕೊಯ್ಲು ಮಾಡಲಾಗುತ್ತದೆ. ಈ ಜೋಳದ ಜೊತೆಯಲ್ಲಿ ತೊಗರಿ, ಹೆಸರು, ಉದ್ದು, ಅಲಸಂದೆ ಮುಂತಾದ ದ್ವಿದಳ ಧಾನ್ಯಗಳನ್ನು ಬೆಳೆಸುವ ಕ್ರಮವೂ ರೂಢಿಯಲ್ಲುಂಟು. ಕಪ್ಪು ಎರೆಮಣ್ಣು ಇರುವ ಪ್ರದೇಶದಲ್ಲಿ ಹಿಂಗಾರು ಜೋಳವನ್ನು ಬೆಳೆಸಲಾಗುತ್ತದೆ. ಇದರ ಬಿತ್ತನೆಯ ಕಾಲ ಅಕ್ಟೋಬರ್-ನವೆಂಬರ್; ಕೊಯ್ಲಿನ ಕಾಲ ಮಾರ್ಚ್ ತಿಂಗಳು. ಕೆಲವೆಡೆಗಳಲ್ಲಿ ಹಿಂಗಾರು ಜೋಳದೊಂದಿಗೆ ಕಡಲೆ, ಕುಸುಮೆ, ಅಗಸೆಗಳನ್ನು ಮಿಶ್ರ ಬೆಳೆಯಾಗಿ ಬೆಳೆಸುವುದಿದೆ.

ಈ ಪ್ರದೇಶದ ನಿತ್ಯದ ಊಟದಲ್ಲಿ ಜೋಳದ ರೊಟ್ಟಿಯೇ ಮುಖ್ಯವಾದುದು. ಬೇರೆ ಯಾವುದೇ ಪದಾರ್ಥವನ್ನು ಉಂಡರೂ ಊಟವಾಗಿಲ್ಲವೆಂದು ಹೇಳುವಷ್ಟರ ಮಟ್ಟಿಗೆ ಇದರ ಮಹತ್ವ ಇದೆ. ರೊಟ್ಟಿ ಶಕ್ತಿಯುತವಾದ ಆಹಾರ. "ಜ್ವಾಳ ತಿಂದಾವ ತೋಳ" ಎಂದು ಸರ್ವಜ್ಞ ಜೋಳದ ಶಕ್ತಿಯ ಗುಣಗಾನ ಮಾಡಿದ್ದಾನೆ.

ಜೋಳದಲ್ಲಿ ಹಲವಾರು ಪ್ರಕಾರಗಳುಂಟು. ಬಿಳಿಜೋಳ, ಕೆಂಪುಜೋಳ, ಮುಂಗಾರಿ ಜೋಳ, ಕಡಬಿನಜೋಳ, ಅಳ್ಳಿನಜೋಳ, ಮೆಕ್ಕೆಜೋಳ, ಕಾಡಿಗೆಜೋಳ ಮುಂತಾದವು ಮೆಕ್ಕೆಜೋಳ, ಮುಂಗಾರಿಜೋಳ, ಕಾಡಿಗೆ ಜೋಳಗಳನ್ನು ಹೆಚ್ಚಾಗಿ ಬಡವರು ಬಳಸುವರು.

ರೊಟ್ಟಿಯ ರೂಪ ವೈಶಿಷ್ಟ್ಯ: ರೊಟ್ಟಿ ಯಾವುದೇ ವಿಶಿಷ್ಟವಾದ ಆಕಾರವನ್ನು ಹೊಂದಿರದೇ ದುಂಡಾಗಿರುವಂತಹದ್ದು. ಈ ರೂಪದ ಕಾರಣಕ್ಕೆ ಬಹುಮುಖ್ಯವಾಗಿ ಸೂರ್ಯ ಹಾಗೂ ಚಂದ್ರರಿರಬಹುದು. ಇನ್ನೊಂದು ಕಾರಣ; ಜೋಳದ ತೆನೆಯಿಂದ ಕಾಳನ್ನು ಬೇರ್ಪಡಿಸುವಾಗ ಹಾಗೂ ಕಾಳನ್ನು ಹಿಟ್ಟಾಗಿ ಪರಿವರ್ತಿಸುವ ಸಂದರ್ಭಗಳ ಭೌತಿಕ ರಚನೆಯೂ ಕಾರಣವಾಗಿರಬಹುದು. ಬೀಸುವ ಕಲ್ಲು ಹಾಗೂ ಕಣದ ರಚನೆ ವೃತ್ತಾಕಾರವಾಗಿರುತ್ತದೆ. ಬೀಸುವ ಕಲ್ಲಿನಲ್ಲಿ ಕೆಳಗಿನ ಕಲ್ಲಿಗೆ ಹತ್ತಿಕೊಂಡಿರುವ ಹೊಕ್ಕುಳಗುಂಚಿ ಆಧಾರದ ಮೇಲೆ ಬೀಸುವ ಮೇಲಿನ ಕಲ್ಲು ಸಮನಾಗಿ ತಿರುಗುವುದು. ಕೆಳಗಿನ ಭೂಮಿಗೆ ನೆಟ್ಟ ಮೇಟಿ ಆಧಾರದ ಮೇಲೆಯೇ ಎತ್ತುಗಳು ಸುತ್ತಲೂ ತಿರುಗುವುದು. ಹಾಗೆಯೇ ಮೇಟಿ ಕಂಬಕ್ಕೆ ಹಾಕಿದ ಜೋಳದ ರಾಶಿಯ ಗುಂಪಿಯ ಮೇಲೆ ಸೂರ್ಯ ಚಂದ್ರರನ್ನು ಜೊತೆಗೆ ನವಗ್ರಹಗಳನ್ನು ಬಿಡಿಸಿರುತ್ತಾರೆ. ಇವೆಲ್ಲವುಗಳು ರೊಟ್ಟಿಯ ರಚನೆಗೆ ಕಾರಣವಾಗಿರಬಹುದು. ತಿಂಗಳ ಮಾವನ ಪೂಜೆಯಲ್ಲಿ ಚಂದ್ರನಿಗಾಗಿ ರೊಟ್ಟಿ ಹಾಕುತ್ತಾರೆ. ಅವುಗಳನ್ನು ಕದಿಯುವುದು ಉಂಟು. ಹಾಗೆ ಕದ್ದರೆ ಚಂದ್ರನನ್ನು ಕದ್ದಂತೆ. ಉಳಿದವರು ಆ ರೊಟ್ಟಿಗಳನ್ನು ಕದ್ದವರನ್ನು ಓಡಿಸಿಕೊಂಡು ಹೋಗಿ ತಾವೂ ಪಾಲು ಪಡೆಯಬಹುದು, ಪಡೆಯದೆಯೂ ಹೋಗಬಹುದು.

ರೊಟ್ಟಿಯ ಬೆಳವಣಿಗೆಯ ವಿಶಿಷ್ಟತೆ: ರೊಟ್ಟಿಯು ಮೂಲದಲ್ಲಿ ಒಂದು ರೂಪದಲ್ಲಿ ದೊರೆತಿದ್ದು, ಅನಂತರ ಅದು ಕಾಲ ಬದಲಾವಣೆ, ಸ್ಥಳ ಬದಲಾವಣೆ, ಅಥವಾ ಜನ ಬದಲಾವಣೆ ಇಂದ ಇನ್ನೊಂದಾಗುತ್ತದೆ. ಇದನ್ನು ಆಹಾರ ಸಂಸ್ಕೃತಿಯ ವಿಕಸನ ಎಂದು ಕರೆಯಬಹುದು. ಹಾಗೆಯೇ ಅದನ್ನು ಮುಂದುವರಿಸಲು, ಉಳಿಸಲು ಅದಕ್ಕೆ ಹೊಂದಾಣಿಕೆಯಾಗುವ ಪುಂಡಿ ಪಲ್ಯ, ಸೇಂಗಾಚಟ್ನಿ, ಚಟ್ನಿ, ಬದ್ನಿಕಾಯಿ ಎಣ್ಣೆಕಾಯಿ ಇನ್ನೂ ಮುಂತಾದ ಪದಾರ್ಥಗಳನ್ನು ಸೇರಿಸುವುದರ ಜೊತೆಗೆ ಅದನ್ನು ಪರಿಷ್ಕೃತವಾಗಿಸಿರುವುದುಂಟು. ಕೃಷಿ ಸಂಸ್ಕೃತಿಯ ಆರಂಭದಲ್ಲಿ, ಅಂದರೆ ಹೆಣ್ಣು ಗಂಡುಗಳು ಸಮಾನವಾಗಿ ದುಡಿಯುತ್ತಿದ್ದಾಗ ಅವರ ಆಹಾರ, ಅಂಬಲಿ ಅಥವಾ ಗಂಜಿ. ಮುಂದೆ ಅಂಬಲಿ ಗಟ್ಟಿಗೊಂಡು ಮುದ್ದೆಯಾಯಿತು. ಅದು ಅಗಲಗೊಂಡು ರೊಟ್ಟಿಯಾಗಿರಬಹುದು. ಈ ರೊಟ್ಟಿಯಲ್ಲಿ ಬಡದರೊಟ್ಟಿ, ಲಟ್ಟಿಸಿದ ರೊಟ್ಟಿ, ಕೈರೊಟ್ಟಿ, ಕಬರರೊಟ್ಟಿ, ಖಾರದರೊಟ್ಟಿ, ಎಳ್ಳ ಹಚ್ಚಿದ ರೊಟ್ಟಿ, ಬಾಂಡ್ಲೆರೊಟ್ಟಿ ದಪಾಟಿರೊಟ್ಟಿ ಅಥವಾ ಅರಿಷಿಣದ ರೊಟ್ಟಿ ಎಂಬ ಹಲವಾರು ಬಗೆಗಳಿವೆ. ಅವುಗಳಲ್ಲಿ ಅಂಗೈ ಹದಡದಿಂದ ಒತ್ತಿ ಒತ್ತಿ ಮಾಡುವಂತಹ ಕೈರೊಟ್ಟಿ ಕಠಿಣವಾದುದು. ಇದಕ್ಕೆ ರಟ್ಟೆಗಳು ಗಟ್ಟಿಯಾಗಿರಬೇಕು. ಬಡಿದು ಮಾಡುವುದು ಕೈರೊಟ್ಟಿ–ಗಿಂತ ಸುಲಭ. ಲಟ್ಟಿಸಿದ ರೊಟ್ಟಿ ಇದಕ್ಕಿಂತಲೂ ಸುಲಭ. ಖಾರದರೊಟ್ಟಿ ಕಬರ ರೊಟ್ಟಿಗಳನ್ನು ಬಡಿದೇ ಮಾಡುವರು. ಪರ ಊರಿಗೆ ಹೋಗುವಾಗ, ಮತ್ತು ವಿಶೇಷ ಸಂದರ್ಭಗಳಲ್ಲಿ ರೊಟ್ಟಿಗೆ ಎಳ್ಳು ಹಚ್ಚಿ ಮಾಡುವರು. ಬಾಂಡ್ಲಿ ರೊಟ್ಟಿಗೆ ಈರುಳ್ಳಿ, ಹಸಿ ಮೆಣಸಿನಕಾಯಿ, ಕೊತ್ತಂಬರಿ, ಜೀರಿಗೆ, ಕರಿಬೇವು, ಉಪ್ಪು ಹಾಕುತ್ತಾರೆ. ಈರುಳ್ಳಿ ಹಸಿಮೆಣಸಿನ ಕಾಯಿಯನ್ನು ಚಿಕ್ಕದಾಗಿ ಕತ್ತರಿಸಿಕೊಂಡು ಹಿಟ್ಟಿಗೆ ಬೆರೆಸಿಕೊಳ್ಳುತ್ತಾರೆ. ಖಾರದ ಪುಡಿಯನ್ನು ಸೇರಿಸುವುದುಂಟು. ಹಂಚಿನಲ್ಲಿ ಎಣ್ಣೆ ಹಾಕಿಕೊಂಡು ಹಂಚಿನ ತುಂಬಾ ತೊಟ್ಟಿ ಒಲೆ ಮೇಲೆ ಇಟ್ಟು ಅದಕ್ಕೆ ತಟ್ಟೆ ಮುಚ್ಚಿ ಬೇಯಿಸುತ್ತಾರೆ. ರೊಟ್ಟಿಯನ್ನು ಬೇಯಿಸುವ ಅನ್ವಯ ಕಿಚ್ಚಿನ ಮೇಲೆ ಡಬ್ಬ ಹಾಕಿದ ರೊಟ್ಟಿ (ಅಂದರೆ ಮೆತ್ತಗೆ ಬೇಯಿಸಿದ) ಹಾಗೂ ಕಟಕ ರೊಟ್ಟಿ (ಅಂದರೆ ತಂಗಳ ರೊಟ್ಟಿಯಲ್ಲ, ಬಿಸಿಯ ರೊಟ್ಟಿಯನ್ನೇ ನಿರಸಾಗಿ ಬೇಯಿಸಿದ್ದು, ಹೆಚ್ಚು ದಿನ ತಡೆಯುತ್ತದೆ) ಎಂದೂ ಕರೆಯುತ್ತಾರೆ. ಈ ರೊಟ್ಟಿ ತಂಗಳಕ್ಕೆ ಬದಲಾಗಿ ಬಂದಿರಬಹುದು. ಯಾಕೆಂದರೆ ಬೇಗ ಹಳಸಲು ಕಾರಣವಾದ ನೀರಿನ ಅಂಶ ಅದರಲ್ಲಿ ಕಡಿಮೆ ಇರುತ್ತದೆ. ಇನ್ನು ಕೆಲವರು ಮುಂದುವರಿದು 'ಪಯಣದ ರೊಟ್ಟಿ' ತಯಾರಿಸುತ್ತಾರೆ. ಇದರಲ್ಲಿ ನೀರಿನ ಪ್ರಮಾಣ ಸ್ವಲ್ಪವೂ ಇಲ್ಲದಂತೆ ಮಾಡಲಾಗುತ್ತದೆ. ಆದ್ದ–ರಿಂದ ಪಯಣದ ರೊಟ್ಟಿ ಬಹಳ ಕಾಲ ಕೆಡುವುದಿಲ್ಲ. ಕಾರದರೊಟ್ಟಿ ಬಾಯಿ ರುಚಿಗಾಗಿ, ಕೈರೊಟ್ಟಿ ಹಲ್ಲಿಲ್ಲದವರಿಗೆ, ಕಟಕ ರೊಟ್ಟಿ ಬಹಳ ದಿನ ಉಪಯೋಗಕ್ಕಾಗಿ ಅಂದರೆ ಬಳಸುವ ಸಂದರ್ಭ ಬಾಳಿಕೆಯ ಆಧಾರದ ಮೇಲೆ ರೊಟ್ಟಿ ವೈವಿಧ್ಯತೆಯನ್ನು ತಾಳುತ್ತದೆ. ರೊಟ್ಟಿಯನ್ನು ಕೆಡಿಸಬಾರದು ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ರೊಟ್ಟಿಯಿಂದ 'ಕುದಿಸಿದ ರೊಟ್ಟಿ' ಮತ್ತು 'ರೊಟ್ಟಿಯ ಒಗ್ಗರಣೆ'ಯನ್ನು ಮಾಡುವರು. ಒಣಗಿದ ರೊಟ್ಟಿಯನ್ನು ಒರಳಲ್ಲಿ ಹಾಕಿ ಕುಟ್ಟಿ ಚಿಕ್ಕ ಚಿಕ್ಕ ಚೂರುಗಳನ್ನು ಮಾಡುತ್ತಾರೆ. ಎಣ್ಣೆ ಬಿಸಿಮಾಡಿಕೊಂಡು ಅದಕ್ಕೆ ಸಾಸಿವೆ, ಈರುಳ್ಳಿ ಹಸಿ ಮೆಣಸಿನಕಾಯಿ, ಕರಿಬೇವು, ಒಗ್ಗರಣೆ ಹಾಕಿ ಅದಕ್ಕೆ ಕುಟ್ಟಿದ ಚಿಕ್ಕ ಚಿಕ್ಕ ಚೂರುಗಳನ್ನು ಹಾಕಿಕೊಂಡು ಕಲಿಸಿ ಬಿಸಿ ಮಾಡಿಕೊಂಡು ತಿನ್ನುತ್ತಾರೆ. ಹೀಗೆ ಅಂಬಲಿ ಅಥವಾ ಗಂಜಿಯಿಂದ ಮುದ್ದೆ, ಮುದ್ದೆಯಿಂದ ರೊಟ್ಟಿ, ರೊಟ್ಟಿಯಲ್ಲಿ ಹಲವಾರು ಬಗೆಗಳು ರೊಟ್ಟಿಯ ಸರಳತೆಯಿಂದ ಸಂಕೀರ್ಣತೆಯ ಕಡೆ ಹರಿದಿರುವುದು ಗೊತ್ತಾಗುತ್ತದೆ.

ಜೋಳ ಮತ್ತು ರೊಟ್ಟಿಯ ಸಾಂಸ್ಕೃತಿಕ ಮಹತ್ವ: ಕರ್ನಾಟಕದ ಬಿಜಾಪುರ, ಧಾರವಾಡ, ಗುಲಬರ್ಗಾ, ಕೊಪ್ಪಳ, ಯಾದಗೀರ, ರಾಯಚೂರು, ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ ಮುಂತಾದ ಜಿಲ್ಲೆಗಳಲ್ಲಿ ಹೆಚ್ಚಾಗಿ ಜೋಳವನ್ನು ಬೆಳೆಯುತ್ತಾರೆ. ಹಾಗೂ ಇಲ್ಲಿಯ ಬಹುಮುಖ್ಯವಾದ ಆಹಾರ ಪದ್ಧತಿಯಾಗಿದೆ. ಈ ಹಿನ್ನೆಲೆಯಲ್ಲಿ ಬೇರೆ ಬೆಳೆಯ ಬಗೆಗೆ ಇರದ ಒಂದು ರೀತಿಯ ದೈವೀ ಸಂಬಂಧ ಹಾಗೂ ಭಕ್ತಿ ಭಾವನೆಯ ಸಂಬಂಧಗಳು ಜೋಳದ ಬೆಳೆಯ ಬಗೆಗೆ ಕಾಣಿಸುವುದು ವಿಶಿಷ್ಟವಾಗಿದೆ. ವೀರಣ್ಣ ದಂಡೆ ಅವರು ಹೇಳುವಂತೆ "ಜೋಳದ ಬಿತ್ತಣಿಕೆಗೆ ಕೂರಿಗೆ ಸಜ್ಜುಗೊಳಿಸುವುದ–ರಿಂದ ಹಿಡಿದು ರಾಶಿ ಮನೆಗೆ ಬಂದು ಹತ್ತುವವರೆಗೆ ಪ್ರತಿಯೊಂದು ಹಂತದ ಕ್ರಿಯೆ ಗೈಯ್ಯುವಾಗ–ಕೂರಿಗಿ ತುಂಬಿಸಿ ಅದನ್ನು ಬಡಿಗೇರ ಅಂಗಳದಿಂದ ರೈತನ ಮನೆಗೆ ತರುವಾಗ, ಬಿತ್ತಣಿಕೆ ಸಾಗಿಸುವಾಗ, ಎಳ್ಳಾಮವಾಸ್ಯೆಗೆ ಬೆಳೆಗೆ ಚರಗ ಚೆಲ್ಲುವಾಗ, ನಂತರ ಕಣ ಮಾಡುವಾಗ, ಗೂಡು ಮುರಿಯುವ, ಹಂತಿ ತುಳಿಸುವ, ಮದನ ಮನಗಿಸುವ, ತೂರುವ, ರಾಶಿ ಮನೆಗೆ ತರುವ ಈ ಪ್ರತಿಯೊಂದು ಹಂತಗಳಲ್ಲೂ ಒಕ್ಕಲಿಗರು ಕಟ್ಟುನಿಟ್ಟಾಗಿ ಕೆಲ ನಿಯಮಗಳನ್ನು ಪಾಲಿಸುತ್ತಾರೆ– ಶುಭ ಸಮಯವನ್ನು ನೋಡುತ್ತಾರೆ. ಅಮಂಗಳ ವಾದುದನ್ನು ದೂರ ಇಡುತ್ತಾರೆ. ದೇವರಿಗೆ ಹರಕೆ ಹೊರುತ್ತಾರೆ. ಮದನ ಅರ್ಪಿಸುತ್ತಾರೆ. ಇದೆಲ್ಲವನ್ನು ಗಮನಿಸಿದಾಗ ಜೋಳದ ಹಂತಿ ಕೇವಲ ಒಂದು ಸುಗ್ಗಿಯಾಗಿ ಮಾತ್ರವಲ್ಲ ಅದೊಂದು ಸಾಂಪ್ರದಾಯಿಕ ದೈವೀಭಾವನೆಯನ್ನು ಹೊತ್ತ ಪ್ರಕ್ರಿಯೆ ಎಂಬಂತೆ ತೋರುತ್ತದೆ. ಈ ಅರ್ಥದಲ್ಲಿ ಅದೊಂದು ಸಾಂಪ್ರದಾಯಿಕ ಕ್ರಿಯೆಯೂ ಎನಿಸುತ್ತದೆ." ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಜೋಳ ಜನಪದ ಸಾಂಸ್ಕೃತಿಕ ಜೀವನದಲ್ಲಿ ಮಹತ್ವ ಪಡೆದಿದೆ.

ಜನಪದರ ಬದುಕಿನ ಆಚರಣೆಗಳಲ್ಲಿ ರೊಟ್ಟಿಯ ಬಹಳ ಮಹತ್ವವನ್ನು ಪಡೆದಿದೆ. ಹೆಣ್ಣು ಗರ್ಭಿಣಿಯಾದಾಗ ತವರು ಮನೆಯವರು 'ಬಯಕೆ (ಬಂಕಿ) ಬುತ್ತಿ' ಎಂದು ತರುತ್ತಾರೆ. ಆ ಬುತ್ತಿಯಲ್ಲಿ ಇರುವ ಪದಾರ್ಥಗಳ ಹೆಸರುಗಳನ್ನು ಜನಪದ ಗರತಿ ಹೀಗೆ ಹೇಳಿದ್ದಾಳೆ.

ಸಜ್ಜೀಯ ರೊಟ್ಟಿ ಸಜ್ಜಕದ ಹೋಳಿಗೆ;
ಗಜ್ಜರಿ ಚಟ್ನಿ ಎಣ್ಣೆಣಿ; ತಂಗೆವ್ವ
ಗುಜ್ಜನಿನ ಬಂಕಿ ತಿಳಿದಾವ;
ಎಳ್ಳ ಹಚ್ಚಿದ ರೊಟ್ಟಿ ಎಣ್ಣೆ ಬದನಿಕಾಯಿ;
ಮಸರ ಕಲಸಿದ ಬುತ್ತಿ ಬಿಸಿಯ ಬಾನ;
ಅಲ್ಲ ಮಾಗುಣ ಬೇರ, ಬೆಲ್ಲ ಬೆಳವಲದಣ್ಣ
ಮನ ಬೇಡಿ ನನ ಜೀವ ಬಗಿಸ್ಯಾವತಾಯಿ ಬಯಕಿ ಕಾಡತಾವ;

ಹೆಣ್ಣು ಮಗಳು ಮೊದಲ ಸಲ ಗಂಡನ ಮನೆಗೆ ಹೋಗುವಾಗ ಹಾಗೂ ಅಲ್ಲಿಂದ ಹಿಂದಿರುಗಿ ಬರುವಾಗ, ಅಲ್ಲದೆ ಹೆರಿಗೆಯ ತರುವಾಯ, ಮೊದಲಾದ ಪ್ರಸಂಗಗಳಲ್ಲಿ 'ಬೀರುಬುತ್ತಿ', 'ಬೀಗ ಬುತ್ತಿ ರೊಟ್ಟಿ' ಎಂದು ಕಟ್ಟಿಕೊಂಡು ಬಂದ ಬುತ್ತಿಯನ್ನು ಊರು ತುಂಬ ಅರ್ಥಾತ್ ಅಡುಗೆಯನ್ನು ಹಂಚಲು ಎಳ್ಳು ಹಚ್ಚಿದ ರೊಟ್ಟಿ, ಸಜ್ಜಕದ ಹೋಳಿಗೆ, ಕರಚಿ ಕಾಯಿ, ಅನ್ನ, ವಿವಿಧ ಪಲ್ಲೆ ಚಟ್ನಿಗಳನ್ನು ಮಾಡಿಕೊಂಡು ಹೋಗಿ ಇಡೀ ಊರಿಗೆ ಹಂಚುತ್ತಾರೆ. ಇದಕ್ಕೆ ಕೆಲವೆಡೆ 'ರೊಟ್ಟಿ ಬುತ್ತಿ' ಕೊಡುವುದು, ಕೆಲವೆಡೆ 'ಬುತರೊಟ್ಟಿ' ಎನ್ನುವರು. ಈ ಸಂದರ್ಭದಲ್ಲಿ ಗಂಡನ ಮನ ಶ್ರೇಷ್ಠ ಎಂಬುದರ ಬಗ್ಗೆ ಜನಪದ ಗರತಿ ಹಾಡು ಧ್ವನಿಸುತ್ತದೆ. 'ಗಂಜೀಯ ಕುಡಿದರೂ ಗಂಡನ ಮನಿಲೇಸು' ಹಾಗೆಯೇ ಸಂಕ್ರಮಣ, ಎಳ್ಳ ಅಮವಾಸ್ಯೆ ಮುಂತಾದ ಹಬ್ಬಗಳಲ್ಲಿ ಹಾಗೂ ಮದುವೆ, ಜಾತ್ರೆ, ಉತ್ಸವಗಳಲ್ಲಿ ಅಲ್ಲದೇ ಪರ ಊರುಗಳಿಗೆ ಹೋಗುವಾಗ ರೊಟ್ಟಿ ಬುತ್ತಿಯನ್ನು ಮಾಡುವುದೊಂದು ವಿಶೇಷ. ಕಾಯಿಲೆಗಳಾಗಿ ಗುಣಮುಖ ಹೊಂದಿದವರಿಗೂ ಆಪ್ತರು, ಬಂಧು ಬಾಂಧವರು ಕೆಲವೆಡೆ ರೊಟ್ಟಿ ಬುತ್ತಿ ಮಾಡಿಕೊಂಡು ಹೋಗುವದುಂಟು.

ಕೆಲವೆಡೆ ಪಂಚಮಿ ಮೂರು ದಿನಗಳಿರುವಾಗ 'ಪಲ್ಲೇದ ಹಬ್ಬ' ಮಾಡುತ್ತಾರೆ. ಇದಕ್ಕೆ 'ರೊಟ್ಟಿ ಪಂಚಮಿ' ಅಥವಾ 'ರೊಟ್ಟಿ ಹಬ್ಬ' ಎಂದು ಕರೆಯುವರು. ಆ ದಿನದ ಪೂಜೆಗೆ ರೊಟ್ಟಿಯೇ ವಿಶೇಷವಾಗಿರುತ್ತದೆ. ಈ ಸಂದರ್ಭದಲ್ಲಿ ವಿವಿಧ ಕಾಯಿಪಲ್ಲೆ, ತೊಪ್ಪ ಪಲ್ಲೆಗಳನ್ನು ಹೆರಚಿ ಕೋಸಂಬರಿಯಂತೆ ಮಾಡಿ, ಅದನ್ನು ಸಜ್ಜೆಯ ರೊಟ್ಟಿಯೊಂದಿಗೆ ಒಬ್ಬರಿಗೊಬ್ಬರು ಹಂಚಿ ಕೊಡುತ್ತಾರೆ.

ರೊಟ್ಟಿಯೊಂದಿಗೆ ಬಳಸುವ ಮತ್ತೊಂದು ವಸ್ತು ಚಟ್ನಿ. ಇದು ಒಮ್ಮೊಮ್ಮೆ ಪಲ್ಲೆ ಇಲ್ಲದೆಯೂ ರೊಟ್ಟಿಯೊಂದಿಗೆ ಬಳಕೆ ಆಗುತ್ತದೆ. ಕೇವಲ ರೊಟ್ಟಿ–ಚಟ್ನಿ ತಿಂದು ಬದುಕುವ ಬಡವರೇ ನಮ್ಮಲ್ಲಿ ಹೆಚ್ಚು. ಆದರೂ ರುಚಿಗಾಗಿ, ವ್ಯಂಜಕತೆಯಾಗಿ ಶ್ರೀಮಂತರಿಗೂ ಬೇಕೇ ಬೇಕು. ಚಟ್ನಿಯಲ್ಲಿ ಪ್ರಮುಖವಾಗಿ ಎರಡು ಪ್ರಕಾರಗಳಿವೆ. ಎಣ್ಣೆ ಕಾಳುಗಳಾದ ಗುರೆಳ್ಳು, ಅಗಸಿ, ಎಳ್ಳು, ಸೇಂಗಾ ಮತ್ತು ಪುಠಾಣಿ, ಒಣಕೊಬ್ಬರಿಗಳಿಂದ ಮಾಡಿದ್ದು. ಇದಕ್ಕೆ ಪುಡಿಚಟ್ನಿ ಒಣಚಟ್ನಿ ಎಂದು ಕರೆಯುತ್ತಾರೆ. ಇವುಗಳಲ್ಲಿ ಒಣಮೆಣಸಿನ ಕಾಯಿ ಪುಡಿಯನ್ನು ಬಳಸುವುದರಿಂದ ಬಹಳ ದಿನಗಳವರೆಗೆ ತಾಳುತ್ತದೆ. ಇದಕ್ಕೆ ಕೆಲವು ಪ್ರದೇಶದಲ್ಲಿ 'ಹಿಂಡಿ' ಎಂದು ಕರೆಯುತ್ತಾರೆ. ಇಂಥ ಚಟ್ನಿಗಳನ್ನು ನಿತ್ಯದ ಊಟಕ್ಕೆ ಬಳಸುವ ದಕ್ಕಿಂತ ವಿಶೇಷ ಸಂದರ್ಭಗಳಲ್ಲಿ ಹೆಚ್ಚಾಗಿ ಉಪಯೋಗಿಸುತ್ತಾರೆ. *(ಎಂ.ಜಿ.)*

ರೊಟ್ಟಿಪರ್ವ: ರೊಟ್ಟಿಗಳನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿ ಆಚರಿಸುವ ಸಂಪ್ರದಾಯ. ಈ ಸಂಪ್ರದಾಯ ಶ್ರಾವಣ ಮಾಸದ ನಡುವಿನ ಅಥವಾ ಕೊನೆಯ ಸೋಮವಾರದಂದು ಹೆಚ್ಚಾಗಿ ಆಚರಿಸಲ್ಪಡುತ್ತದೆ. ಆ ದಿನ ಊರಿನ ಪ್ರತಿಯೊಂದು ಮನೆಯವರು ಮಾಡಿದ ರೊಟ್ಟಿ ಪಲ್ಯೆಗಳನ್ನು ಸಂಗ್ರಹಿಸಿ ತರುವರು. ಆನಂತರ ಗ್ರಾಮದ ಹೆಣ್ಣು, ಗಂಡು ಎಲ್ಲರೂ ಸೇರಿ ನಂದಿ ಕೋಲುಗಳನ್ನು ಮೆರವಣಿಗೆ ಮಾಡುತ್ತ, ಆಟವಾಡುತ್ತ ದೂರದಲ್ಲಿರುವ ಸಂಗಮೇಶ್ವರ ಗುಡಿಗೋ ಅಥವಾ ಇನ್ನಾವುದೋ ಗುಡಿಗೋ ಬರುತ್ತಾರೆ. ಗುಡಿಯ ಅರ್ಚಕ ಎಲ್ಲರ ಮನೆಯ ಅಡಿಗೆಯನ್ನು ಕೂಡಿಸಿ ಬಿಡುತ್ತಾನೆ. ಬಂದವರೆಲ್ಲ ಪಂಕ್ತಿಯಲ್ಲಿ ಕುಳಿತು ಸಂತೋಷದಿಂದ ಊಟಮಾಡುವರು. ಪರ ಊರಿನಿಂದ ಬಂದವರಿಗೂ, ಭಿಕ್ಷುಕರಿಗೂ, ಅನ್ನಸಂತರ್ಪಣೆ ಮಾಡುವರು.

ಈ ಸಂಪ್ರದಾಯ ಆಚರಣೆಯ ಉದ್ದೇಶ ಗ್ರಾಮಸ್ಥರಲ್ಲಿರುವ ಒಕ್ಕಟ್ಟು, ಸಹಕಾರ ಮನೋಭಾವನೆ ಹಂಚಿ ಉಣ್ಣುವ, ಒಂದೆಡೆ ಸೇರಿ ಆನಂದಪಡುವುದಾಗಿದೆ. ಸಂಜೆಯವರೆಗೆ ವಿವಿಧ ಮನರಂಜನೆ ಮಾಡುತ್ತ ಸಂತಸ ಪಡುವರು. ಕೊನೆಗೆ ಮಂಗಳಾರತಿ ಮಾಡಿ ನಂದಿ ಕೋಲುಗಳನ್ನು ಮೆರೆಸುತ್ತ ಊರಿಗೆ ಹಿಂತಿರುಗುವರು. ರೊಟ್ಟಿಪರ್ವ ಮಾಡುವ ಈ ಸಂಪ್ರದಾಯ ಅಫಜಲಪುರ ತಾಲ್ಲೂಕಿನಲ್ಲಿ ಹೆಚ್ಚು ಪ್ರಚಲಿತದಲ್ಲಿದೆ.

(ಜಿ.ಪಿ.ಪಿ)

ಲ

ಲಂಬಾಣಿ ಕುಣಿತ: ಕರ್ನಾಟಕದ ಬುಡಕಟ್ಟಿನ ಲಂಬಾಣಿಗಳದ್ದು ಒಂದು ವಿಶಿಷ್ಟ ಸಂಸ್ಕೃತಿ. ರಂಗುರಂಗಿನ ಈ ಜನ ಶತಮಾನಗಳಿಂದ ತಮ್ಮ ವಿಶಿಷ್ಟ ಸಂಸ್ಕೃತಿ, ಪರಂಪರೆಯನ್ನು ಕಾಯ್ದುಕೊಂಡು ಬಂದಿದ್ದಾರೆ. ಕಾಡು ಮೇಡುಗಳಲ್ಲಿ ವಾಸಿಸುವ ಈ ಜನ ಅತ್ಯಂತ ವರ್ಣರಂಜಿತ ಜೀವನ ಕ್ರಮವನ್ನು ರೂಢಿಸಿಕೊಂಡು ಬಂದಿದ್ದಾರೆ. ಒಂದು ಕಾಲಕ್ಕೆ ಅಲೆಮಾರಿ ಗಳಾಗಿದ್ದು, ಈಗ ದೇಶದ ಉದ್ದಗಲಕ್ಕೂ ನೆಲೆನಿಂತಿರುವ ಲಂಬಾಣಿ ಸಮುದಾಯವು ಮೂಲತಃ ಉತ್ತರದ ರಾಜಸ್ಥಾನದಿಂದ ಬಂದವರಾಗಿದ್ದಾರೆ.

ಸುಂದರವಾದ ಮೈಕಟ್ಟು, ಮೈತುಂಬ ಆಭರಣ, ಕೈತುಂಬ ಸಾರಂಗದ ಕೋಡಿನ ಬಳೆಗಳು, ವರ್ಣರಂಜಿತ ವೇಷ ಭೂಷಣಗಳನ್ನು ಧರಿಸುವ ಲಂಬಾಣಿಗಳು ಪ್ರತಿಯೊಬ್ಬರನ್ನು ಆಕರ್ಷಿಸುತ್ತಾರೆ. ವಿಶಿಷ್ಟ ಸಂಸ್ಕೃತಿ–ಪರಂಪರೆಯನ್ನುಳ್ಳ, ಈ ಜನ ಬಂಜಾರ, ಲಂಬಾಡಿ, ಲಂಬಾಣಿ, ಲಮಾಣಿ, ಸುಕಾಲಿ ಮೊದಲಾದ ಹೆಸರುಗಳಿಂದ ಗುರುತಿಸಲ್ಪಡುತ್ತಾರೆ. ಅವರು ತಮ್ಮ ವೇಷ–ಭೂಷಣ, ಆಚಾರ–ವಿಚಾರಗಳಿಂದ ಪ್ರತ್ಯೇಕತೆಯನ್ನು ಕಾಯ್ದುಕೊಂಡು ಗುಡ್ಡಗಾಡು ಪ್ರದೇಶಗಳಲ್ಲಿ ತಮ್ಮ ತಾಂಡಗಳನ್ನು ಕಟ್ಟಿಕೊಂಡು ತಮ್ಮದೇ ಆದ ಸಂಸ್ಕೃತಿಯನ್ನು ರಕ್ಷಿಸಿಕೊಂಡು ಬಂದಿದ್ದಾರೆ. ಶತಮಾನಗಳು ಗತಿಸಿದರೂ ಈ ಜನ ಇನ್ನೂ ಯಥಾಸ್ಥಿತಿಯಲ್ಲಿದ್ದಾರೆ.

ನರ್ತನ, ಗೀತೆಗಳು ಲಂಬಾಣಿಗರ ಜೀವನದಲ್ಲಿ ಹಾಸುಹೊಕ್ಕಗಿ ಸೇರಿಕೊಂಡಿವೆ. ಅವರು ಎಷ್ಟು ಕಷ್ಟಜೀವಿಗಳೋ ಅಷ್ಟೇ ಸರಸಿಗಳು. ತಮ್ಮ ದಿನನಿತ್ಯದ ಕಷ್ಟ, ಸುಖ, ಸಮಸ್ಯೆಗಳನ್ನೆಲ್ಲ ಮರೆತು ನಗುಮುಖದಿಂದ ಹರ್ಷಚಿತ್ತರಾಗಿರುವ ದಿಟ್ಟ ಗಂಡಸರು, ಮೊದಮೊದಲು ಸ್ವಲ್ಪ ನಾಚಿಕೆ ತೋರಿದರೂ ರಸಿಕರಾದ ಹೆಂಗಸರು



ತಮ್ಮ ನೃತ್ಯ, ಗೀತೆಗಳಿಂದ ನಿತ್ಯ ತೃಪ್ತಿಯನ್ನು ಪಡೆಯುವ ಆಶಾಜೀವಿಗಳಾಗಿದ್ದಾರೆ. ವೇಷ ಭೂಷಣಕ್ಕೆ ತಕ್ಕ ಹಾಗೆ ಲಂಬಾಣಿ ಸ್ತ್ರೀಯರ ಮೈಮಾಟ, ಕುಣಿತ. ಈ ಕುಣಿತದೊಂದಿಗೆ ಗೀತೆಯೂ ಸೇರಿಕೊಂಡರೆ ಹಾಲು ಜೇನು ಬೆರೆಸಿದ ಅನುಭವ. ಒಂದೊಂದು ಹಾಡಿನಲ್ಲೂ ಜೀವನದ ಸೌಂದರ್ಯ ಅನುಭವ, ರಸಿಕತನ, ಅಭಿನಯ ಪುಟಿಯುತ್ತ ಪ್ರೇಕ್ಷಕರನ್ನು ಶ್ರೋತೃಗಳನ್ನು ತನ್ನತ್ತ ಆಕರ್ಷಸುತ್ತದೆ. ಹಾಗೆಯೇ ಕಾಣಿತದ ನಾನಾ ಭಂಗಿಗಳಿಂದ ಜೀವನದ ನೋವು–ನಿಲಿವು, ಹಿಗ್ಗು–ಉತ್ಸಾಹ, ಕೋಪ–ತಾಪ, ಮರುಕ–ಸಂತಾಪ ಮೊದಲಾದ ವುಗಳನ್ನು ಪ್ರದರ್ಶಿಸಿ ಎಂಥವರನ್ನೂ ಮಂತ್ರಮುಗ್ಧ ರನ್ನಾಗಿಸುತ್ತಾರೆ.

ಲಂಬಾಣಿ ಸ್ತ್ರೀಯರ ಕುಣಿತದ ರೀತಿ ಬಹು ಆಕರ್ಷಣೀಯ, ಮೈಯಿಂದ ಬೆವರು ಸುರಿಯುವವರೆಗೂ ಈ ಜನ ಹಾಡುತ್ತಾರೆ, ಕುಣಿಯುತ್ತಾರೆ. ಸ್ತ್ರೀಯರ ಕುಣಿತಗಳಲ್ಲಿ ಅನೇಕ ವಿಧಿ–ವಿಧಾನ ಕ್ರಮಗಳಿವೆ. ವೃತ್ತಾಕಾರವಾಗಿ ನಿಂತು ವಿವಿಧ ಭಂಗಿಗಳಲ್ಲಿ ಕುಣಿಯುತ್ತಾರೆ. ಕೆಲವೊಮ್ಮೆ ಕುಣಿಯುವಾಗ ತಾವೇ ಲಯಬದ್ಧವಾಗಿ ಹಾಡಿಕೊಳ್ಳುತ್ತಾರೆ. ಯಾವ ಹಿಮ್ಮೇಳದ ಆವಶ್ಯಕತೆಯೂ ಇಲ್ಲಿಲ್ಲ. ಸಾಮಾನ್ಯವಾಗಿ ಪ್ರಾರ್ಥನೆಯೊಂದಿಗೆ ಇವರ ಸಾಮೂಹಿಕ ಕುಣಿತ ಆರಂಭಗೊಳ್ಳುತ್ತದೆ. ಅನಂತರ ಬೇರೆ ಬೇರೆ ಪೌರಾಣಿಕಾಂಶಗಳೊಂದಿಗೆ ದೇವಾದಿ–ದೇವತೆಗಳನ್ನು ಕುರಿತು ಹಾಡುತ್ತ ಕುಣಿಯುತ್ತಾರೆ. ಕುಣಿತದಲ್ಲಿ ಕೈಕಾಲು, ಸೊಂಟಗಳಿಗೆ ಹೆಚ್ಚಿನ ಶ್ರಮವಿರುತ್ತದೆ. ಕೆಲವೊಮ್ಮೆ ಕುಣಿತಕ್ಕೆ ಹಿಮ್ಮೇಳವಾಗಿ ಹಲಗೆ, ನಗಾರಿ, ಮೊದಲಾದ ವಾದ್ಯ ಸಾಮಗ್ರಿಗಳನ್ನು ಉಪಯೋಗಿಸುತ್ತಾರೆ.

ಗೀತ, ನೃತ್ಯಗಳು ಲಂಬಾಣಿಗರಲ್ಲಿ ಹುಟ್ಟಿನೊಂದಿಗೆ ರಕ್ತಗತವಾಗಿ ಬೆಳೆದು ಬಂದಿದೆ. ಇವರಿಗೆ ಯಾವುದೇ ನಾಟ್ಯಶಾಲೆಯ ತರಬೇತಿಯ ಅಗತ್ಯವಿಲ್ಲ. ಅದು ಇವರ ಬದುಕಿನ ಪ್ರಕ್ರಿಯೆಯಾಗಿ, ಉಸಿರಾಗಿ ಬಂದಿದೆ. ಯಾವ ಲಂಬಾಣಿ ಸ್ತ್ರೀಯರಿಗೂ ಗೀತ ನರ್ತನಗಳು ಬರುವುದಿಲ್ಲವೆನ್ನಲಾಗದು. ನೃತ್ಯಕ್ಕಾಗಿ ಪೂರ್ವ ಸಿದ್ಧತೆ ಇಲ್ಲವೆ ಅಲಂಕಾರದ ಆವಶ್ಯಕತೆ ಅವರಿಗೆ ಬೇಕಿಲ್ಲ. ಯಾವುದೇ ಸಮಯ, ಸಂದರ್ಭದಲ್ಲಾದರೂ ಇವರು ಸುಲಭವಾಗಿ ಅವುಗಳನ್ನು ಪ್ರದರ್ಶಿಸಬಲ್ಲರು. ಹೀಗೆ ಕುಣಿಯುವ ಸಮಯದಲ್ಲಿ ಮೈಯ ತೂಕ ತಪ್ಪಗೊಡದೆ, ನೃತ್ಯಮಾಡುವ ಕೌಶಲ್ಯ ರಂಜನೀಯವಾಗಿರುತ್ತದೆ. ಸಾಮಾನ್ಯ ವಾಗಿ ಇವರು ತಮ್ಮ ಹಬ್ಬ–ಉತ್ಸವ, ಜಾತ್ರೆ, ಮದುವೆ, ಹಾಗೂ ಸಂತೋಷ ಸಮಾರಂಭಗಳಲ್ಲಿ ಗೀತೆ, ನೃತ್ಯಗಳನ್ನು ಮಾಡುತ್ತಾರೆ. ಲಂಬಾಣಿ ಸ್ತ್ರೀಯರ ವಿವಿಧ ಕುಣಿತಗಳನ್ನು ಸಾಮಾನ್ಯವಾಗಿ ಹೀಗೆ ಗುರುತಿಸಬಹುದು.

1. **ಮದುವೆ, ಮುಂಜಿ, ಸಂಸ್ಕಾರ ಸಂಬಂಧಿಕುಣಿತಗಳು.**
2. **ತೀಜ್ ಕುಣಿತ.**
3. **ಕೋಲಾಟದ ಕುಣಿತ.**
4. **ಲೋಟಾ ಕುಣಿತ.**
5. **ಮಳೆರಾಯನ ಕುಣಿತ.**
6. **ಜಾತ್ರೆ–ಉತ್ಸವಗಳು ಹಾಗೂ ದೇವತಾ ಸಂಬಂಧಿ ಕುಣಿತ ಇತ್ಯಾದಿ.**

ಲಂಬಾಣಿ ಸ್ತ್ರೀಯರು ಕುಣಿಯುವಾಗ ಕೈಕಾಲುಗಳಿಗೆ ಚಿಕ್ಕ ಚಿಕ್ಕ ಗೆಜ್ಜಿಸರಗಳನ್ನು ಧರಿಸಿರುತ್ತಾರೆ. ಕುಣಿತಕ್ಕೆ ಸಾಮಾನ್ಯವಾಗಿ ವೃತ್ತಾಕಾರವಾಗಿ ಸಮ ಸಂಖ್ಯೆಯಲ್ಲಿ ನಿಲ್ಲುತ್ತಾರೆ. ಈ ಕುಣಿತಗಳಲ್ಲಿ 15–20 ಜನರ ಗುಂಪುಗಳಿರುತ್ತವೆ. ಈ ಸುತ್ತು ಕುಣಿತದ ಭಂಗಿಗಳಿಗೆ ತನ್ನದೇ ಆದ ಅರ್ಥವಿದೆ. ಸಂದರ್ಭ ಸನ್ನಿವೇಶಕ್ಕೆ ತಕ್ಕ ಹಾಗೆ ವಿವಿಧ ಭಂಗಿಗಳಲ್ಲಿ ಗೀತ–ನೃತ್ಯವನ್ನು ಮಾಡುವ ಕಲೆಗಾರಿಕೆಯನ್ನು ಅವರಲ್ಲಿ ಕಾಣಬಹುದು. ಸಾಲುಸಾಲಾಗಿ ವೃತ್ತಾಕಾರವಾಗಿ ಹಲಗೆ ಇಲ್ಲವೆ ನಗಾರಿಗಳ ವಾದ್ಯ ಪರಿಕರಗಳ ಗತ್ತಿಗನುಗುಣವಾಗಿ ಬಾಗಿ, ಬಳುಕಿ, ಕೈಗಳನ್ನು ಮೇಲಕ್ಕೆ ಕೆಳಕ್ಕೆ ಮಾಡುವಲ್ಲಿ ಸೊಂಟಬಗ್ಗಿಸಿ ಹೆಜ್ಜೆಯ ಮೇಲೆ ಹೆಜ್ಜೆ ಇಡುವ ಸನ್ನಿವೇಶವನ್ನು ಅವರ ತಾಂಡಾಗಳಿಗೇ ಹೋಗಿ, ನೋಡಿ ಸವಿಯಬೇಕು. ಹಾಡಿನ ಲಯಕ್ಕೆ ಹೊಂದಿಕೊಳ್ಳುವ ಕುಣಿತದ ವಿನ್ಯಾಸಗಳು, ಕಲಾತ್ಮಕವಾಗಿ ತಿರುಗುವಿಕೆಗಳು ಅವರ ಕುಣಿತಗಳ ವೈಶಿಷ್ಟ್ಯಗಳಾಗಿವೆ. ಮದುವೆ ಮೊದಲಾದ ಸಂಸ್ಕಾರ ಸಂಬಂಧಿ ಕಾರ್ಯಗಳಲ್ಲಿ ಶೃಂಗಾರ ಹಾಗೂ ಮಂಗಲಗೀತೆಗಳೊಂದಿಗೆ ಲಯಬದ್ಧವಾಗಿ ವಿವಿಧ ಭಂಗಿಗಳಿಂದ ಕುಣಿಯುತ್ತಾರೆ.

ಲಂಬಾಣಿ ಸ್ತ್ರೀಯರು ಎಲ್ಲ ಕಡೆಗೂ ಮಳೆ ಬೆಳೆ ಸಮೃದ್ಧವಾಗಿ ಕಂಡು ಬಂದ ಸಂದರ್ಭದಲ್ಲಿ ತಮಗಾದ ಸುಖ–ಸಂತೋಷವನ್ನು ಶ್ರೀಕೃಷ್ಣನ ಹೆಸರಿನಲ್ಲಿ ತೀಜ್ (ಗೌರೀ) ಹಬ್ಬವನ್ನು ಆಚರಿಸುವುದರ ಮೂಲಕ ಗೀತ ನೃತ್ಯಗಳಿಂದ ನರ್ತನಗೈದು ಮನದಣಿಯುತ್ತಾರೆ

ಹೋಳಿ, ದೀಪಾವಳಿ, ದಸರಾ ಮೊದಲಾದ ಹಬ್ಬಾಚರಣೆಗಳ ಸಂದರ್ಭದಲ್ಲಿ ವಿಶಿಷ್ಟವಾದ ಕುಣಿತಗಳನ್ನು ಮಾಡುತ್ತಾರೆ. ಪೂಜೆ, ಪುನಸ್ಕಾರ ಹಾಗೂ ಜಾತ್ರೆ-ಉತ್ಸವಗಳಲ್ಲಿ ವಿವಿಧ ಬಗೆಯಿಂದ ಮಂಗಲಗೀತೆಗಳೊಂದಿಗೆ ನರ್ತನಗೈಯುತ್ತಾರೆ. ಮಳೆ ಸಕಾಲಕ್ಕೆ ಬಾರದೇ ಹೋದಾಗ ಉತ್ತರ ಕರ್ನಾಟಕದಲ್ಲಿ ಲಂಬಾಣಿ ಸ್ತ್ರೀಯ-ರಿಂದ ಮಳೆರಾಯನ ವಿಶಿಷ್ಟವಾದ ಕುಣಿತಗಳನ್ನು ಮಾಡಿಸುವ ಮೂಲಕ ಮಳೆರಾಯನ ಹಾಡುಗಳನ್ನು ಹಾಡಿಸುತ್ತಾರೆ. ಈ ಕುಣಿತದ ಹಾಡಿನಿಂದ ಮಳೆ ಬರುತ್ತದೆಂದು ಬಲವಾಗಿ ನಂಬಿದ್ದಾರೆ.

ಲಂಬಾಣಿ ಮಹಿಳೆಯರು ಮನದುಂಬಿ ಕುಣಿಯುವಾಗ ಕೇಳಿಬರುವ ಕಾಲುಗೆಜ್ಜೆಯ ಸದ್ದು, ಕೈಯಾಡಿಸುವಾಗ ಕೇಳಿಬರುವ ದಂತದ ಬಳೆಗಳ ಸಪ್ಪಳ, ಗುಂಪು ಹಾಡಿಕೆಯ ಇಂಪುದನಿ, ಬಾಗಿ ಕುಣಿಯುವಾಗ ಇಳಿ ಬೀಳುವ ಮುಂಗೂದಲಿನ ಕುಚ್ಚುಗಳ ಸೊಗಸು, ಕೈಬೀಸಿ ಆಡುವಾಗ ಮೇಲು ಹೊದಿಕೆ ಹಾಗೂ ಕವಡೆ ಸರಗಳ ಚೆಲ್ಲಾಟ, ಹಾಡಿನ ಸೊಲ್ಲು ತಪ್ಪಿದಾಗ ನಾಯಕಿಯ ಮುಖದಲ್ಲಿ ಕಾಣುವ ನಸುಗೋಪ, ಸೊಲ್ಲು ಸರಿಯಾದಾಗ ಎಲ್ಲರ ಮುಖದಲ್ಲೂ ಮಿಂಚುವ ನಗೆ ಇವನ್ನೆಲ್ಲ ಪ್ರತ್ಯಕ್ಷ ಕೇಳಿ, ನೋಡಿಯೇ ಆನಂದಿಸಬೇಕು.

ಲಂಬಾಣಿ ಪುರುಷರು ಜಾತ್ರೆ-ಉತ್ಸವ, ಹಬ್ಬ-ಹರಿದಿನ ಹಾಗೂ ವಿಶೇಷ ಸಂದರ್ಭಗಳಲ್ಲಿ ಮಾತ್ರ ಕುಣಿಯುತ್ತಾರೆ. ಇನ್ನುಳಿದ ಸಂದರ್ಭಗಳಲ್ಲಿ ವಿಶೇಷವಾಗಿ ಭಜನೆ, ಗೀತೆಗಳೊಂದಿಗೆ ತೃಪ್ತಿ ಪಡೆಯುತ್ತಾರೆ. ಪುರುಷರು ಹೋಳಿ ಹಬ್ಬಾಚರಣೆಯಲ್ಲಿ ಮಾತ್ರ ಲೇಂಗಿ (ಶೃಂಗಾರ) ಹಾಡುಗಳೊಂದಿಗೆ ಕುಣಿಯುವುದನ್ನು ಬಿಟ್ಟರೆ, ಉಳಿದಂತೆ ಅವರು ಹಾಡುಗಳೊಂದಿಗೆ ಕುಣಿಯುವುದು ಅಪರೂಪ. ಪುರುಷರ ಎಲ್ಲಾ ಬಗೆಯ ಕುಣಿತಗಳಿಗೆ ಪಕ್ಕ ವಾದ್ಯಗಳು ಅಗತ್ಯವಾಗಿವೆ. ಪಕ್ಕವಾದ್ಯಗಳ ತಾಳ ಗತ್ತುಗಳನ್ನು ಅನುಸರಿಸಿ ಅವರ ಕುಣಿತ, ಜಿಗಿತ, ಹಿನ್ನಡೆ, ಮುನ್ನಡೆ, ಕೈಬಳುಕು, ಮೈಬಳುಕು ನಡೆಯುತ್ತದೆ. ಇವರ ಹೋಳಿ ಕುಣಿತ, ಅಲಾವಿ ಕುಣಿತ ಹಾಗೂ ಕೋಲಾಟದ ಕುಣಿತಗಳು ತುಂಬಾ ಆಕರ್ಷಣೀಯವಾಗಿರುತ್ತವೆ. ಇವೆಲ್ಲಾ ಸಂದರ್ಭಗಳಲ್ಲಿಯ ಕುಣಿತದ ವಿನ್ಯಾಸಗಳು ತೀರಾ ಭಿನ್ನವಾಗಿವೆ. ಲಂಬಾಣಿ ಪುರುಷರ ಲೇಜಿಮ್ ಕುಣಿತ ಆಧುನಿಕ ಬೆಳವಣಿಗೆಯಾಗಿದೆ. *(ಪಿ.ಕೆ.ಕೆ.)*

ಲತ್ತೆ ಎಂ.ಎಸ್.: ಜಾನಪದ ಕ್ಷೇತ್ರದಲ್ಲಿ ಗಣನೀಯ ಸಾಧನೆ ಗೈದಿರುವ ವಿದ್ವಾಂಸರು. ಇವರ ಪೂರ್ಣ ಹೆಸರು ಮಲ್ಲಿಕಾರ್ಜುನ ಶಿವಪ್ಪ ಲತ್ತೆ. ಬೆಳಗಾವಿ ಜಿಲ್ಲೆಯಲ್ಲಿ 1932 ಏಪ್ರಿಲ್ 12ರಂದು ಹುಟ್ಟಿದರು. ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ಪ್ರಸಾರಾಂಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಮುಂಬಯಿ ಕರ್ನಾಟಕ, ಹೈದರಾಬಾದ ಕರ್ನಾಟಕ ಎರಡೂ ಭಾಗಗಳ ರಾಯಭಾರಿಯಂತೆ ಇವರ ಹರಹು ಇದೆ.



ಸಂಪಾದನೆ, ಸಂಶೋಧನೆ ಎರಡೂ ನಿಟ್ಟಿನಲ್ಲಿ ಲತ್ತೆಯವರು ಜಾನಪದವನ್ನು ಅಭ್ಯಸಿಸಿದ್ದಾರೆ. ಉತ್ತರ ಕರ್ನಾಟಕದ ಗದ್ಯ-ಪದ್ಯ ಎರಡೂ ಬಗೆಯ ಜನಪದ ಸಾಹಿತ್ಯವನ್ನು ಅಧ್ಯಯನಕ್ಕೆ ಎತ್ತಿಕೊಂಡು ಅಮೂಲ್ಯ ಕೃತಿಗಳನ್ನು ನಾಡಿಗೆ ನೀಡಿದ್ದಾರೆ. ಜಾನಪದೇತರ ಸಾಹಿತ್ಯದಲ್ಲೂ-ವಿಶೇಷವಾಗಿ ಶರಣ ಸಾಹಿತ್ಯದಲ್ಲಿ ಸಾಕಷ್ಟು ಕೃಷಿ ಮಾಡಿದ್ದಾರೆ. 1974 ರಿಂದ ಇವರು ಅನೇಕ ಜಾನಪದ ಕೃತಿಗಳು ಬೆಳಕು ಕಂಡಿವೆ. ಉತ್ತರ ಕರ್ನಾಟಕದ ಒಡಪುಗಳು, ಉತ್ತರ ಕರ್ನಾಟಕದ ಒಗಟುಗಳು, ಉತ್ತರ ಕರ್ನಾಟಕದ ಗಾದೆಗಳು, ಉತ್ತರ ಕರ್ನಾಟಕದ ಹಂತಿಯ ಹಾಡುಗಳು, ಜಾನಪದದಲ್ಲಿ ಶ್ರೀ ಶರಣ ಬಸವೇಶ್ವರ, ಬಂಡೆಪ್ಪಕವಿಯ ಭಜನೆಯ ಹಾಡುಗಳು, ಚನ್ನಮಲ್ಲಯ್ಯನ ಜಾನಪದ ಹಾಡುಗಳು, ಜಾನಪದ ದೀಪ್ತಿ, ಬಯಲಾಟದ ಸಾರಥಿ, ಉತ್ತರ ಕರ್ನಾಟಕದ ಜನಪದ ಕವಿಚರಿತ್ರೆ, ಉತ್ತರ ಕರ್ನಾಟಕದ ಜನಪದ ನಂಬಿಕೆ ಗಳು- ಇವೇ ಮುಂತಾದವು ಗಳು ಲತ್ತೆಯವರ ಕೃತಿಗಳು.

ಉತ್ತರ ಕರ್ನಾಟಕದ ಅನೇಕ ಜನಪದ ಸಾಹಿತ್ಯ ಪ್ರಕಾರಗಳು ಇವರ ಮೂಲಕ ಸಂಗ್ರಹಗೊಂಡಿವೆ, ಅರ್ಥವತ್ತಾದ ವಿವರಣೆ ಪಡೆದಿವೆ. ಇವರು ತಾವು ಸಂಗ್ರಹಿಸಿದ ಸಾಹಿತ್ಯವನ್ನೆಲ್ಲ ಬೇಸರಿಸದೆ ವಿಭಜಿಸಿದ್ದಾರೆ. ಇದರಿಂದ ಗ್ರಂಥಕ್ಕೊಂದು ಶಾಸ್ತ್ರೀಯತೆ ಒದಗಿದೆ. ಶಿಸ್ತು ಪ್ರಾಪ್ತವಾಗಿದೆ. ನಮ್ಮಲ್ಲಿ ಜಾನಪದ ವಿಷಯಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕ ದೃಷ್ಟಿ ಮೊಳೆತುದೇ ಪಾಶ್ಚಿಮಾತ್ಯಕ್ಕೆ ಹೊಂದಬಹುದಾದ ಎಲ್ಲಾ ತತ್ವಗಳನ್ನು ನಮ್ಮ ಜಾನಪದದ ಮೇಲೆ ಹೇರುವುದಿಲ್ಲ. ಎಲ್ಲವನ್ನೂ ಪಾಶ್ಚಿಮಾತ್ಯ ಕಣ್ಣಿನಿಂದ ಕಂಡು ಕುರುಡಾಗಿ ಅನುಕರಿಸುವುದಿಲ್ಲ. ತಮ್ಮದೇ ಆದ ವಿವರಣೆ ನೀಡುತ್ತಾರೆ. ಜನಪದ ನಂಬಿಕೆಗಳಿಗೆ ಲತ್ತೆಯವರು ಕೊಡುವ ವಿವರಣೆ: "ಅರಿತು ಮರೆತ, ಇಲ್ಲವೆ ಅರಿವೇ ಆಗದ ಅದೆಷ್ಟೋ ನಂಬಿಕೆಗಳು ಕ್ರಿಯೆಗಿಳಿದು, ಒಬ್ಬರಿಂದ ಇನ್ನೊಬ್ಬರಲ್ಲಿ ಪರಂಪರಾನುಗತವಾಗಿ ನಡೆದು ಬರುತ್ತದೆ. ಜಾಗ್ರತಾವಸ್ಥೆಯಲ್ಲಿ ಈಡೇರದ ಬಯಕೆಗಳು ಸ್ವಪ್ನದಲ್ಲಿ ಕಾಣಿಸಿಕೊಂಡು ಕನಸುಗಳೆನಿಸಿಸುತ್ತವೆ. ಅವುಗಳಿಗೆ ಕಾರ್ಯ ಕಾರಣ ಸಂಬಂಧವಿಲ್ಲದಿದ್ದರೂ ಹಲವಾರು ಸಂಬಂಧಗಳನ್ನು ಕಲ್ಪಿಸಿಕೊಂಡು ನೂರಾರು ನಂಬಿಕೆಗಳನ್ನು ಹೊಸೆಯುತ್ತೇವೆ. ಐತಿಹ್ಯ, ಭೂತ, ಪಿಶಾಚಿ, ಕಾಲಜ್ಞಾನ, ಮಾಟ, ಮಂತ್ರ, ನಿಮಿತ್ತ, ಶಕುನ, ದೃಷ್ಟಿ-ದೋಷ ಮೊದಲಾದ ಹಲವಾರು ನಂಬಿಕೆಗಳನ್ನು ಸೃಷ್ಟಿಸಿಕೊಳ್ಳುತ್ತೇವೆ." ಸ್ಥೂಲವಾಗಿ ಗುರುತಿಸುವ ಈ ವೈವಿಧ್ಯವನ್ನು ವರ್ಗೀಕರಣ ಸಂದರ್ಭದಲ್ಲಿ ಲೇಖಕ ಇನ್ನೂ ನಿಖರಗೊಳಿಸುತ್ತಾರೆ. ಈ ನಂಬಿಕೆಗಳನ್ನು ದೇವರು ಗೃಹಜೀವನ, ಮದುವೆ-ಮಂಗಲ, ಗರ್ಭಿಣಿ, ಕೂಸು, ಉಡಿಗೆ, ಊಟ, ವೃತ್ತಿ ಮುಂತಾದವುಗಳಿಗನ್ವಯಿಸಿ 19 ಬಗೆಯಾಗಿ ವಿಭಜಿಸಿಕೊಂಡುದು ಲತ್ತೆಯವರ ಸೂಕ್ಷ್ಮ ದೃಷ್ಟಿಯನ್ನು ಪ್ರತಿ-ನಿಧಿಸುತ್ತದೆ.

ಬಹುಶಃ ಮೊದಲಬಾರಿಗೆ ಹಂತಿಯ ಹಾಡುಗಳನ್ನು ಕುರಿತು ವ್ಯಾಪಕ ಅಧ್ಯಯನ ನಡೆಸಿ ಇವುಗಳ ಸಂಗ್ರಹವನ್ನು ಇವರು ಕೊಟ್ಟಿದ್ದಾರೆ. ಬಯಲಾಟದ ಸಾರಥಿ ವಿಶಿಷ್ಟ ಗ್ರಂಥ. ಭಕ್ತಿ ಅನುಭಾವ

ನಮ್ಮ ಜಾನಪದರ ಬದುಕನ್ನು ಆವರಿಸಿರುವ ಗುಣ ವಿಶೇಷಗಳು. ಇದನ್ನು ಚೆನ್ನಾಗಿಯೇ ಪರಿಭಾವಿಸಿರುವ ಇವರು ಅನೇಕ ಅನುಭಾವ ಕವಿಗಳ ಅಧ್ಯಾತ್ಮದ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅತ್ಯಂತ ಸರಳವಾಗಿಯೇ ಭಜನೆಯ ಹಾಡುಗಳ ಮುಖಾಂತರ ಹರಿದುಬರುವ ಇವರ ಈ ಭಾವದೀಪ್ತಿ ಲಠ್ಠೆಯವರ ಅನೇಕ ಸಂಗ್ರಹಗಳಲ್ಲಿ ಕೆನೆಗಟ್ಟಿದೆ. ಉತ್ತರ ಕರ್ನಾಟಕದ ಜನಪದ ಕವಿ ಚರಿತೆ ಇವರ ಅತ್ಯಂತ ಮಹಾತ್ವಾಕಾಂಕ್ಷೆಯ ಯೋಜನೆ. ಅಜ್ಞಾತವಾಗಿಯೇ ಕಾಲ ಗರ್ಭದಲ್ಲಿ ಹೂತುಹೋಗುತ್ತಿದ್ದ ನಮ್ಮ ಜನಪದ ಕವಿಗಳ ಜೀವನ– ಕಲೆಗಳನ್ನು ದಾಖಲಿಸುವ ರೀತಿ ಮೆಚ್ಚುವಂತಹುದು. ಭಜನೆ, ಬಯಲಾಟ, ಗೀಗೀ, – ಹೀಗೆ ಹಲವಾರು ಹಾಡುಗಳ ಸೃಷ್ಟಿಕರ್ತರ ಜೀವನ ಸಾಧನೆಯನ್ನು ಲಠ್ಠೆಯವರು ಬರೆಯುವ ಮೂಲಕ ಒಂದು ಮಾದರಿ ಕೆಲಸವನ್ನು ಮಾಡಿದ್ದಾರೆ. ಕವಿ ಪ್ರವಾಹ ನಿಲ್ಲುವುದಿಲ್ಲ, ಮತ್ತು ಮುಂದಿನ ಜಾನಪದ ಕವಿಗಳನ್ನು ಲಕ್ಷಿಸಿ ಬೇರೆಯವರು ಮುಂದುವರಿಸುತ್ತಾರೆ. ಲಠ್ಠೆಯವರು ಬಹುದೊಡ್ಡ ಪ್ರಮಾಣದಲ್ಲಿ ಕವಿಗಳನ್ನು ದಾಖಲಿಸಿ ಒಂದು ಜನಪದ ಕವಿ ಚರಿತ್ರೆಯ ಪರಂಪರೆಯನ್ನು ಹುಟ್ಟು ಹಾಕಿದವರಲ್ಲಿ ಮೊದಲಿಗರಾಗಿದ್ದಾರೆ. 'ಉತ್ತರ ಕರ್ನಾಟಕದ ಒಡಪುಗಳು' ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದೆ. ಲಠ್ಠೆಯವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿಯೂ ಸೇವೆಸಲ್ಲಿಸಿದರು. ಇವರಿಗೆ ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಜಾನಪದ ತಜ್ಞ ಪ್ರಶಸ್ತಿ ನೀಡಿದೆ (1985). ಧಾರವಾಡದಲ್ಲಿ ಜರುಗಿದ ಅಖಿಲ ಭಾರತ ಜಾನಪದ ಸಮ್ಮೇಳನದ ಅಧ್ಯಕ್ಷರಾಗಿದ್ದರು (1962). ಇವರು...19/11/2007 ರಂದು ನಿಧನ ಹೊಂದಿದರು.

(ಎಸ್.ಆರ್.ಐ.)

ಲಾ

ಲಾವಣಿ ಹಾಕುವುದು: ಜಮೀನನ್ನು ಕರಾರಿನ ಮೇಲೆ ಸಾಗುವಳಿಗೆ ಕೊಡುವ ಪದ್ಧತಿ. ಹೊಲ ಗದ್ದೆಗಳ ಸಾಗುವಳಿಗಾಗಿ ಜಮೀನ್ದಾರರು ಈ ಕ್ರಮ ಅನುಸರಿಸುತ್ತಾರೆ. ಹುಲ್ಲುಗಾವಲಿನಲ್ಲಿ ಪಶುಗಳನ್ನು ಮೇಯಿಸುವುದಕ್ಕಾಗಿ ಕೊಡುವ ಮುಂಗಡ ಹಣವೂ ಇದರ ಪರಿಧಿಯಲ್ಲಿ ಬರುತ್ತದೆ. ಲಾವಣಿ ಮರಾಠಿ ಮೂಲದ ಪದವಾಗಿದ್ದು 'ಜಮೀನನ್ನು ಬೆಳೆಯಲು ಯೋಗ್ಯವನ್ನಾಗಿ ಮಾಡುವುದು' ಎಂಬ ಅರ್ಥದಲ್ಲೂ ಬಳಕೆಯಾಗುತ್ತದೆ.

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಲಾವಣಿ ಹಾಕುವುದಕ್ಕೆ ಕಟ್‌ಗುತ್ತಿ ಕೊಡುವುದು, ಕಡೆದು ಹಾಕುವುದು ಅಥವಾ ಕೋರು ಪಾಲು ಎಂಬ ವಿವಿಧ ಅರ್ಥಗಳಿವೆ. ಈ ಭಾಗದಲ್ಲಿ ನಾಲ್ಕು ರೀತಿಯಿಂದ ಲಾವಣಿ ಹಾಕುವದನ್ನು ಕಾಣುತ್ತೇವೆ. ಭೂಮಿಯನ್ನು ಉತ್ತು–ಬಿತ್ತು ಬಂದ ಬೆಳೆಯಲ್ಲಿ ಕಾಲು, ಭಾಗ ತಾವಿರಿಸಿಕೊಂಡು ಮುಕ್ಕಾಲು ಭಾಗ ಮಾಲೀಕರಿಗೆ ಒಪ್ಪಿಸುವುದು ಒಂದು ವಿಧ, ಬೆಳೆ ಬೆಳೆಯಲು ತಗಲುವ ಖರ್ಚಿನಲ್ಲಿ ಇಬ್ಬರೂ ಸಮಭಾಗಿಗಳಾಗಬೇಕಾಗುತ್ತದೆ. ಉಳುಮೆ ಮಾಡಲು ಒಪ್ಪಿಸಿದ ಜಮೀನಿನಲ್ಲಿ ಗೇಣಿದಾರರೇ ಖರ್ಚು ವೆಚ್ಚದ ಹೊಣೆ ಹೊತ್ತು ಬಂದ ಬೆಳೆಯಲ್ಲಿ ಅರ್ಧ ಭಾಗ ಹಂಚಿಕೊಳ್ಳುವುದು ಇನ್ನೊಂದು ವಿಧ. ಒಂದು ಎಕರೆ ಜಮೀನಿಗೆ ಮೂರರಿಂದ ಐದು ಸಾವಿರದವರೆಗೆ ಹಣವನ್ನು ಕೊಟ್ಟು ನಿಗದಿತ ಅವಧಿಗೆ ಭೂಮಿ ಸಾಗುವಳಿಗೆ ಪಡೆದುಕೊಳ್ಳುವುದು ಮೂರನೆಯ ವಿಧ. ಇದರಲ್ಲಿ ಮಾಲಿಕರಿಗೆ ಬೆಳೆದ ಬೆಳೆಯಲ್ಲಿ ಪಾಲು ಸಲ್ಲುವುದಿಲ್ಲ. ನಾಲ್ಕರಿಂದ ಐದು ಲಕ್ಷಕ್ಕೆ ಜಮೀನನ್ನು ಒಂದರಿಂದ ಐದು ವರ್ಷದವರೆಗೆ ಕರಾರಿನಂತೆ–ಪಡೆದು ಬೆಳೆಯನ್ನು ಬೆಳೆಯುವುದು ನಾಲ್ಕನೆಯ ವಿಧ. ನಗರೀಕರಣದ ಪ್ರಭಾವದಿಂದಾಗಿ ಕೆಲಸದಾಳುಗಳು ದುರ್ಲಭವಾಗಿದ್ದು ಈ ಬಗೆಯ ಲಾವಣಿ ಪದ್ಧತಿಗೆ ಜಮೀನ್ದಾರರು ಬದ್ಧರಾಗುವುದು ಅನಿವಾರ್ಯವಾಗಿದೆ. ಕಬ್ಬು, 'ಬಾಳೆ, ದ್ರಾಕ್ಷಿ, ಮೊದಲಾದ ಬೆಳೆ ಬೆಳೆದ ಸಂದರ್ಭದಲ್ಲಿ ಈ ಕ್ರಮ ರೂಢಿಯಲ್ಲಿದೆ. *(ಎಸ್.ಕೆ.ಇ.)*

ಲಾವಣಿಗಳು: ವೀರ ರಸವನ್ನೂ ಮೈಗೂಡಿಸಿಕೊಂಡು ಬಂದ ಒಂದು ಗೀತ ಪ್ರಕಾರ. ಮೊಟ್ಟ ಮೊದಲು ಇದು ಮರಾಠಾ ಪೇಶ್ವೆಯವರ ಕಾಲದಲ್ಲಿ ಹುಟ್ಟಿ ಆ ಮೇಲೆ ಮಹಾರಾಷ್ಟ್ರದಿಂದ ಕರ್ನಾಟಕದಲ್ಲಿ ವೀರ ರಸವನ್ನೂ ಉಕ್ಕಿಸಲು ಲಾವಣ್ಯವನ್ನೂ ಬಿಂಬಿಸಲು ಕನ್ನಡ ನಾಡಿನಲ್ಲಿ ಪ್ರವೇಶಿಸಿತು. ಈ ಗೀತ ಪ್ರಕಾರ 'ಲಾವಣಿ' ಅಥವಾ 'ಗೀಗೀ' ಹಾಡುಗಳನ್ನು ರಚಿಸಿ ಡಪ್ಪು ನುಡಿಸಿ ತುಂತುನಿ ನಾದ, ತಾಳ ವಾದ್ಯಗಳೊಂದಿಗೆ ಅತ್ಯಂತ ರಮ್ಯವಾಗಿ ಹಾಡಿ ಜನಮನವನ್ನೂ ಸೆಳೆದರು ನಮ್ಮ ಜಾನಪದರು ಶ್ರೀ ಸಾಮಾನ್ಯರು, ಅನಕ್ಷರಸ್ಥರು. ಜನರ ಮಧ್ಯದಲ್ಲಿ ಜನಮನವನ್ನು ಆಕರ್ಷಿಸಿ 'ಲಾವಣಿ' ಅಥವಾ 'ಗೀಗೀ' ಹಾಡು ಜನ ಜಾಗೃತಿಗೊಳಿಸುವಲ್ಲಿ ಅಗ್ರ ಪಾತ್ರ ವಹಿಸಿತು.

ಇಂದು ಪ್ರಚಲಿತವಿರುವ 'ಲಾವಣಿ', 'ಲಾವಳಿ' ಪದದಿಂದ ಹುಟ್ಟಿ ಬಂದಿದೆ ಎಂದು ನಮಗೆ ಸ್ಪಷ್ಟವಾಗಿ ತಿಳಿದು ಬರುತ್ತದೆ. ಎಂ.ಎಂ. ಕಲಬುರ್ಗಿ ಅವರೂ ಸಹ ಲಾವಳಿ ಪದದಿಂದಲೇ 'ಲಾವಣಿ' ಹುಟ್ಟಿದೆಯೆಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಆಶ್ರಯ ನೀಡಿದ ಗಂಡು ಮೆಟ್ಟಿದ ತಾಣ ಕರ್ನಾಟಕ, ಅದರಲ್ಲಿಯೂ ಉತ್ತರ ಕರ್ನಾಟಕದ ಬೆಳಗಾವಿ, ವಿಜಾಪುರ, ಕಲಬುರ್ಗಿ ಜಿಲ್ಲೆಗಳು ಎಂದು ಹೇಳಬಹುದು.

ಬ್ರಿಟಿಷರು ಭಾರತದಲ್ಲಿ ಕಾಲಿರಿಸಿ ಸಣ್ಣ ದೊಡ್ಡ ಸಂಸ್ಥಾನಗಳನ್ನು ಕಬಳಿಸುತ್ತ ಬರುವ ಕಾಲದಲ್ಲಿ ಈ ಲಾವಣಿ ಸಾಹಿತ್ಯ ಜನರಲ್ಲಿದ್ದ ವೀರಶ್ರೀಯನ್ನು ಜಾಗೃತಿಗೊಳಿಸಲು ಅವರಲ್ಲಿದ್ದ ಸ್ವಾಭಿಮಾನವನ್ನೂ, ಆತ್ಮಾಭಿಮಾನವನ್ನೂ ಕುದುರಿಸಲು ಹುಟ್ಟಿ ಬಂದ ಈ ಕಥನ ಗೀತೆ– 'ಲಾವಣಿ'.

ಈ ಲಾವಣಿಗಳಲ್ಲಿ ಎರಡು ಪ್ರಕಾರ. ಒಂದು ಒಬ್ಬ ವ್ಯಕ್ತಿ ಟೊಂಕಕ್ಕೆ ವಸ್ತ್ರ ಸುತ್ತಿ ತಲೆಯ ಮೇಲೆ ಆಕರ್ಷಕವಾದ ರುಮಾಲು ಸುತ್ತಿ ಕಾಲಲ್ಲಿ ಗೆಜ್ಜೆ ಕಟ್ಟಿ ಸಣ್ಣ, ಸಣ್ಣ ಹೆಜ್ಜೆಗಳನ್ನು ಹಾಕಿ, 'ಚಿಟಗಿ' ಬಾರಿಸಿ ಹಾಡುತ್ತಾನೆ. ಇದಕ್ಕೆ ಬಯಲು ಲಾವಣಿ

ಎಂದು ಕರೆಯುತ್ತಾರೆ. ಇನ್ನೊಂದು ಪ್ರಕಾರದಲ್ಲಿ ಇದೇ 'ಲಾವಣಿ' ಹಾಡನ್ನು ಮೂರು ಜನ ಕೂಡಿ ಹಾಡುತ್ತಾರೆ. ಇದರಲ್ಲಿ ಪ್ರಮುಖ ಹಾಡುಗಾರ ಮುಂದೆ ಇದ್ದು ಡಪ್ಪು ನುಡಿಸಿ ಹಾಡಿದರೆ ಅವನ ಹಿಂದೆ ಇದ್ದ ಹಿಮ್ಮೇಳದ ಇಬ್ಬರಲ್ಲಿ ಒಬ್ಬ ತುಂತುನಿ ಬಾರಿಸಿದರೆ ಇನ್ನೊಬ್ಬ ತಾಳ ಕಟೆದು ಮೇಳಕ್ಕೆ ಸ್ಫೂರ್ತಿ ತಂದು ಕೊಡುತ್ತಾನೆ. ಹೀಗೆ ತಾಳ, ಲಯದಲ್ಲಿ ತುಂಬ ರಮ್ಯವಾಗಿ ಹರಿದು ಬರುವ ಈ ಕಲೆ ಜನಮನವನ್ನೂ ಆಕರ್ಷಿಸಿತು. ಈ ಕಲೆ ಗೆ 'ಗೀಗೀ' ಮೇಳವೆಂದು ಗುರುತಿಸಿಕೊಂಡಿತು.

'ಗೀಗೀ' ಹಾಡುಗಾರರಲ್ಲಿ ಎರಡು ಬಣ. ಒಂದು 'ಹರದೇಶಿ' ಇನ್ನೊಂದು 'ನಾಗೇಶಿ'. 'ಹರದೇಶಿ'ಗೆ ತುರಾ ಎಂದು 'ನಾಗೇಶಿ' ಗೆ 'ಕಲ್ಗಿ' ಎಂದು ಕರೆಯುತ್ತಾರೆ. ಈ 'ಕಲ್ಗಿ–ತುರಾ' ಪ್ರಕಾರಕ್ಕೆ ಮಹಾರಾಷ್ಟ್ರದಲ್ಲಿ 'ವಾಗ್ಯಾ–ಮುರುಳಿ, 'ಶಿವ ಶಕ್ತಿ' ಎಂತಲೂ ಇಂದಿಗೂ ಪ್ರಸಿದ್ಧವಾಗಿದೆ.

ಈ ಮೇಳಗಳು ಸಮಾಜದಲ್ಲಿ ತಮ್ಮ ತಮ್ಮ ಛಾಪು ಮೂಡಿಸಲು ಸ್ಪರ್ಧೆಗಿಳಿಯುತ್ತ ಸವಾಲು–ಜವಾಬು ಹಾಡುಗಳನ್ನು ಹಾಡುತ್ತಾರೆ. ಗಂಡಸರ ಪರ ಪಕ್ಷ ವಹಿಸಿ ಹಾಡುವ ಬಣಕ್ಕೆ 'ಹರದೇಶಿ' ಎಂದೂ, ಹೆಣ್ಣಿನ ಪರ ಪಕ್ಷ ವಹಿಸಿ ಹಾಡುವ ತಂಡಕ್ಕೆ 'ನಾಗೇಶಿ' ಎಂದೂ ಕರೆಯುತ್ತಾರೆ. ಇವರು ಸ್ಪರ್ಧೆಗೆ ಇಳಿದರೆ ಒಬ್ಬರನ್ನೊಬ್ಬರು ಸೋಲಿಸಲು ಹವಣಿಸುತ್ತಾರೆ. ಸೋತರೆ ಸಮಾಜದಲ್ಲಿ ಕೂಡಿದ ಸಭೆಯಲ್ಲಿ ಮುಖ ಭಂಗವಾಗುತ್ತದೆ ಎಂದು ಈ ಎರಡು ಮೇಳಗಳು ಸಂದರ್ಭಕ್ಕನುಸರಿಸಿ ಹಾಡುಗಳನ್ನು ಕಟ್ಟಿ ಸವಾಲಿಗೆ ಜವಾಬು ಕೊಟ್ಟು ಮತ್ತೊಂದು ಹೊಸ ಸವಾಲು ಹಾಕಿ ಅಟ್ಟದ ಮೇಲಿಂದ ಇಳಿದು ಕೆಳಗೆ ಬರುತ್ತಾರೆ. ಅಟ್ಟ ಏರಿ ಮೇಲೆ ಬರುವ ಮೇಳ ಹೊಸ ಸವಾಲು ಸ್ವೀಕರಿಸಿ ತಾಳ ಕಟೆಯುತ್ತ ತುಂತುನಿ ನಾದದಲ್ಲಿ ಡಪ್ಪಿನ ಮೇಲೆ ಕೈ ಹಾಕಿ ಸಭೆಯ ಚಿತ್ತವನ್ನು ತನ್ನತ್ತ ಸೆಳೆಯುತ್ತ ಸವಾಲಿಗೆ ಜವಾಬು ಕೊಟ್ಟು ಸಭಿಕರನ್ನೂ ನಗೆಯ ಕಡಲಲ್ಲಿ ತೇಲಿಸಿ ತಾನೂ ಹರ್ಷ ಪಟ್ಟು 'ತನನ' ಎಂದು ಕುಣಿಯುತ್ತಾನೆ. ಮೊದ ಮೊದಲು ಹೆಣ್ಣಿನ ಪರ ಹಾಡುವವರು ಗಂಡಸರೇ ಇದ್ದರು. ಗಂಡಸರ ಪರ ಹಾಡಲು ಗಂಡಸರೇ ಇದ್ದರು. ಬರಬರುತ್ತ ಹೆಣ್ಣು ಮಕ್ಕಳ ಪರ ಹಾಡಲು ಹೆಣ್ಣು ಮಕ್ಕಳೇ ಡಪ್ಪು ಹಿಡಿದು ಹಾಡಲು ನಿಂತರು. ಆಗ ಈ 'ಗೀಗೀ' ಹಾಡಿಗೆ ಈ ಗೀಗೀ ಮೇಳಕ್ಕೆ ಇನ್ನಷ್ಟು ಮೆರಗು ಬಂದಿತು.

ಈ ಗೀಗೀ ಹಾಡುಗಾರರು ಹರದೇಶಿ ಪರ ಹಾಡುವವರು 'ಗಣೇಶ'ನ ಸ್ತುತಿಯೊಂದಿಗೆ ತನ್ನ ಹಾಡು ಪ್ರಾರಂಭಿಸುತ್ತಿದ್ದ ಈ ಸ್ತುತಿ ಪದಕ್ಕೆ 'ಸಖಿ' ಇಲ್ಲವೇ 'ಘನ' ಎಂದು ಕರೆಯಲಾಗುತ್ತದೆ. ಈ 'ಸಖಿ' ಪದ ಮುಗಿಸಿ ತಾನೂ ಸಭೆಯಲ್ಲಿ ಸಾದರ ಪಡಿಸಬೇಕಾದ ಹಾಡಿನ ಜಾಡಿಗೆ ಇಳಿದು ಹಾಡಿ ಹಾಡು ಮು–ಗಿಯುವ ಹಂತದಲ್ಲಿ 'ಖ್ಯಾಲಿ' ಎಂಬ ಇನ್ನೊಂದು ಹಾಡುಹಾಡಿ ತನ್ನ ಕಥನ ಗೀತೆ ಮುಗಿಸುತ್ತಾನೆ. ತಾನು ಹಾಡುವ ಈ 'ಪಲ್ಲವಿ', 'ಅನುಪಲ್ಲವಿ' ಚೌಕುಗಳಿಂದ ಸುದೀರ್ಘವಾಗಿರುತ್ತದೆ.

ಗೀಗೀ ಅಥವಾ ಲಾವಣಿ ಹಾಡುಗಳಲ್ಲಿ ವೀರರಸ ಶೃಂಗಾರ ರಸ, ಹಾಸ್ಯ–ವಿಡಂಬಣೆ ರಸಗಳು ಒಡಮೂಡಿ ಬರುತ್ತವೆ. ಕರುಣ, ಭೀಭತ್ಸ ರೌದ್ರ ರಸ ಪ್ರಧಾನವಾಗಿ ಶರಣರನ್ನು ಸಂತರನ್ನು ಸಜ್ಜನರನ್ನು ಕುರಿತು ಕಥನ ಗೀತೆಗಳನ್ನು ಕಟ್ಟಿ ಹಾಡುವಾಗ ಕರುಣ ರಸ, ಶಾಂತಿರಸ ಅಲ್ಲಲ್ಲಿ ಉಕ್ಕಿ ಬಂದು ಮನುಷ್ಯನನ್ನು ಆನಂದ ರಸದಲ್ಲಿ ತೇಲಿಸುತ್ತದೆ. ಸಮಾಜದ ಹುಳುಕನ್ನೂ ಎತ್ತಿತೋರಿಸುವಾಗ ಹಾಸ್ಯ, ವಿಡಂಬಣೆ ತನ್ನಷ್ಟಕ್ಕೆ ತಾನೇ ಹಾಡುಗಳಲ್ಲಿ ಹರಿದು ಬಂದು ಜನಮನವನ್ನು ತಟ್ಟುತ್ತದೆ. ಸಮಾಜದಲ್ಲಿ ನಡೆದ ಅನ್ಯಾಯಕ್ಕೆ ಆಸ್ಪದ ಸಿಕ್ಕು ಒಳ್ಳೆಯವರಿಗೆ ಕೆಡಕುಂಟಾಗುತ್ತಿರುವಾಗ ಭೀಭತ್ಸ ರಸ ಹಣಿಕಿ ಹಾಕಿ ಮನಸ್ಸಿಗೆ ಬೇಸರವನ್ನುಂಟು ಮಾಡುತ್ತದೆ. ಹೀಗೆ 'ಲಾವಣಿ' ಅಥವಾ ಗೀಗೀ ಹಾಡುಗಳಲ್ಲಿ ನವ ರಸಗಳು ತನ್ನಷ್ಟಕ್ಕೆ ತಾನೇ ಸಹಜವಾಗಿ ಹರಿದು ಬಂದು ಏರು ಇಳುವಿನಲ್ಲಿ ಪ್ರವಹಿಸಿ ಅಂತ್ಯ ಪ್ರಾಸಗಳ ಚಮತ್ಕಾರಗಳಿಂದ ಮನುಷ್ಯನ ಮನಸ್ಸನ್ನು ಸೂರೆಗೊಳ್ಳುತ್ತವೆ. ಇಂತಹ 'ಲಾವಣಿ' ಅಥವಾ 'ಗೀಗೀ' ಹಾಡುಗಳನ್ನು ಮೊದಲು ಸಂಗ್ರಹಿಸಿ 'ಇಂಡಿಯನ್ ಎಂಟಿ ಕೂರಿ' ಪತ್ರಿಕೆಯಲ್ಲಿ ಪ್ರಕಟಿಸಿದ ಕೀರ್ತಿ ಫ್ಲೀಟರನಿಗೆ ಸಲ್ಲುತ್ತದೆ. ಇದು ನಡೆದದ್ದು 1857 ಭಾರತ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಂತರ 1885ರಲ್ಲಿ ಎಂದು ಹೇಳಬಹುದು.

ಭಾರತ ಅತ್ಯಂತ ಕಷ್ಟ ಕಾಲದಲ್ಲಿದ್ದಾಗ ನಮ್ಮ ಗೀಗೀ ಹಾಡಿನ ಜನಪದ ಕವಿಗಳು, ಗೀಗೀ ಹಾಡುಗಾರರು ಡಪ್ಪು ನುಡಿಸಿ ತುಂತುನಿ ಬಾರಿಸಿ ತಾಳ ಕಟೆದು ಈ ಗೀಗೀ ಹಾಡುಗಳನ್ನು ಜಾತ್ರೆ, ಉರುಸು, ಉತ್ಸವಗಳಂತಹ ಸಂದರ್ಭಗಳಲ್ಲಿ ಹಾಡಿ ಜನ ಜಾಗೃತಿಗೊಳಿಸುತ್ತಿದ್ದರು. ಈ ದಿಶೆಯಲ್ಲಿ ಹುಟ್ಟಿ ಬಂದ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಬೆಳವಡಿ ಮಲ್ಲಮ್ಮ, ಮುಂಡರಗಿ ಭೀಮರಾಯ, ನರಗುಂದ ಬಾಬಾ ಸಾಹೇಬ, ಹಲಗಲಿಯ ಬೇಡರು, ಸಿಂಧೂರ ಲಕ್ಷ್ಮಣ, ಸುರಪುರ ವೆಂಕಟಪ್ಪ ನಾಯಕ ಮುಂತಾದ ಸ್ವಾತಂತ್ರ್ಯ ವೀರರ ಮೇಲೆ ರಚನೆಗೊಂಡ 'ಲಾವಣಿ', ಅಥವಾ 'ಗೀಗೀ' ಹಾಡು ಕನ್ನಡ ಜಾನಪದ ಸಾಹಿತ್ಯದ ಪದ ನಿಧಿಯಂತೆ ಕಂಗೊಳಿಸುತ್ತದೆ.

ಈ ಗೀಗೀ ಮೇಳಗಳು ಸಂಸ್ಥಾನಿಕರ, ದೇಸಾಯಿ, ದೇಶಮುಖರ ಕಾಲದಲ್ಲಿ ಹುಟ್ಟಿ ಜನ ಮನ್ನಣೆಯನ್ನು ಪಡೆದು ಸ್ವಾತಂತ್ರ್ಯ ಚಳುವಳಿಯಲ್ಲಿ ವ್ಯಾಪಕ ಪ್ರಚಾರ ಪಡೆದು ಸ್ವಾತಂತ್ರ್ಯ ನಂತರ ದೇಶದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದ ದೇಶ ಭಕ್ತರನ್ನೂ ಕುರಿತು, ದೇಶದಲ್ಲಿ ಪ್ರಚಾರಕ್ಕೆ ಬಂದ ಹಲವಾರು ಯೋಜನೆಗಳನ್ನು ಕುರಿತು ಹಾಡು ರಚಿಸಿ ಜನರ ಮನ ಮುಟ್ಟಿಸುತ್ತ ಬಂದ ನಮ್ಮ ಗೀಗೀ ಹಾಡುಗಾರರು ಸುಮಾರು 1975ರ ವರೆಗೆ ತಮ್ಮ ಶಕ್ತಿ, ಸಾಮರ್ಥ್ಯಗಳಿಂದ ಮುಂದುವರಿಸಿಕೊಂಡು ಬಂದರು. ಮುಂದೆ ಅಂತಹ ಸಮರ್ಥ್ಯ ಜಾನಪದ ಕವಿಗಳು ಇಲ್ಲದ್ದಕ್ಕೆ ಸಮಾಜ ಹೊಸ ದಿಕ್ಕಿನತ್ತ ಮಾಡಿದ್ದಕ್ಕೆ ಈ ಕಲೆ ಕರಗಿ ಹೋಗಿ ಈಗ ಅಲ್ಲೊಂದು ಇಲ್ಲೊಂದು ಮೇಳ ಕಂಡು ಬಂದರೂ ಅದಕ್ಕೆ ಇದ್ದ 'ಬೆಲೆ' ಕಳೆದುಕೊಂಡು ಮೂಲೆ ಗುಂಪಾಗಿದೆ.

(ಎ.ಕೆ.ಆರ್.)

ಲಿ

ಲಿಂಗಸೂಗುರು: ಐತಿಹಾಸಿಕ ಮತ್ತು ಚಾರಿತ್ರಿಕ ಮಹತ್ವವುಳ್ಳ ಪ್ರಮುಖ ಸ್ಥಳ. ರಾಯಚೂರ ಜಿಲ್ಲೆಯಲ್ಲಿ ಪ್ರಾಚೀನ ಕಾಲದಲ್ಲಿ ಲಿಂಗಸಗೂರು ಊರಿಗೆ 'ಭಾವಣಿ' ಎಂದು ಕರೆಯುತ್ತಿದ್ದರು. ಆನಂತರ 'ಭಾವಣಿ' ಎಂಬ ಪದ ಹೋಗಿ, ಲಿಂಗಸೂಗುರು ಎಂದಾಗಿದೆ. ಈ ತಾಲ್ಲೂಕು ಪ್ರಾಚೀನವಾದ ಪರಂಪರೆಯನ್ನು ಹೊಂದಿದ್ದು, ಪಿಕಳಿಹಾಳ, ಮಸ್ಕಿ, ಕರಡಕಲ್ಲು, ಮುದಗಲ್ಲು ಹಟ್ಟಿ ಚಿನ್ನದ ಗಣಿಗಳು ಸುಮಾರು 2000 ವರ್ಷಗಳ ಪೂರ್ವ ಇತಿಹಾಸವನ್ನು ಹೊಂದಿರುವ ಪ್ರಮುಖ ಸ್ಥಳಗಳಾಗಿವೆ.

'ಲಿಂಗಸೂಗುರು' ತಾಲ್ಲೂಕಿನಲ್ಲಿ ಗಣಿ ಕೈಗಾರಿಕೆ, ಹಾಗೂ ಹಟ್ಟಿ ಚಿನ್ನದ ಗಣಿಯು ಇತಿಹಾಸ ಪ್ರಸಿದ್ಧವಾಗಿದೆ. ಇದುವರೆಗೆ ರಾಜ್ಯದಲ್ಲಿ ಎರಡು ಸ್ಥಳಗಳಲ್ಲಿ ಚಿನ್ನದ ನಿಕ್ಷೇಪಗಳಿದ್ದು, ಒಂದು ಕೋಲಾರದ ಚಿನ್ನದ ಗಣಿಯಾದರೆ ಇನ್ನೊಂದು ಲಿಂಗಸೂಗುರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ. ಈ ತಾಲ್ಲೂಕಿನಲ್ಲಿ ಹಿಂದು, ಕ್ರೈಸ್ತ, ಮುಸ್ಲಿಂ, ಜೈನ ಮುಂತಾದ ಬಹುಧರ್ಮೀಯರು ಕಂಡು ಬರುತ್ತಾರೆ. ಅಲ್ಲದೆ ವಿವಿಧ ವೃತ್ತಿಗಾರರಾದ, ಕುರಿಗಾರರು, ನೇಕಾರರು, ವೇಷಗಾರರು, ಬುಡಬುಡಕೆಯರು, ಕಿಳ್ಳೆಕ್ಯಾತರು ಹೀಗೆ ಹಲವು ವೃತ್ತಿಗಾರ ಜನರಿರುವುದು ಇಲ್ಲಿಯ ವಿಶೇಷತೆಯಾಗಿದೆ.

ಕಣಿ ಹಲಗೆ ಮತ್ತು ಡೊಳ್ಳು ಕುಣಿತ ಕಲೆಗಳು ಆಧುನಿಕ ತಾಂತ್ರಿಕತೆಯ ಕಾರಣದಿಂದ ಮರೆಯಾಗುತ್ತಿರುವಾಗಲು ಈ ಊರಲ್ಲಿ ಈ ಜನಪದ ಕಲೆಯು ಜೀವಂತವಾಗಿರುವುದು ಪ್ರಶಂಸನೀಯವಾಗಿದೆ. ಲಿಂಗಸೂರು ತಾಲ್ಲೂಕಿನಲ್ಲಿ ಭಜಂತ್ರಿ ಜನಾಂಗ ಕಣಿ ಹಲಗೆ ವಾದ್ಯವನ್ನು ಬಾರಿಸುವಲ್ಲಿ ಎತ್ತಿದ ಕೈ. ತಿಮ್ಮಪ್ಪ ಭಜಂತ್ರಿ ಅವರು ರಾಜ್ಯದಲ್ಲಿ ಪ್ರಮುಖ ಕಣಿ ಹಲಗೆವಾದಕರೆಂದು, 1994ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ದೆಹಲಿ ಜನಪದ ಪ್ರಶಸ್ತಿ, ಚಂದನದಲ್ಲಿ ಕಣಿ ಹಲಗೆ ವಾದ್ಯ ಕುರಿತು ಪ್ರದರ್ಶನ–ಸಂದರ್ಶನ ನೀಡಿ ಪ್ರಖ್ಯಾತಿ ಪಡೆದಿದ್ದಾರೆ.

ಅಲ್ಲದೆ ಡೊಳ್ಳು ವಾದ್ಯವು ಕೂಡ ಈ ಊರಿನಲ್ಲಿ ಹೆಸರುವಾಸಿಯಾಗಿದೆ. ಪ್ರಮುಖವಾಗಿ ಡೊಳ್ಳು ವಾದ್ಯವನ್ನು ನುಡಿಸುವವರು ಕುರುಬ ಜನಾಂಗದವರೇ ಆಗಿರುತ್ತಾರೆ. ಹೀಗಾಗಿ ಪ್ರತಿಯೊಂದು ಊರಿನಲ್ಲಿ ಡೊಳ್ಳು ಬಾರಿಸುವ ಕಲೆಯನ್ನು ಬಳಸುತ್ತಾ ಉಳಿಸುತ್ತಾ ಸಾಗಿದ್ದಾರೆ. ಮುಖ್ಯವಾಗಿ ಮನೆತನದಲ್ಲಿ ಪಾರಂಪರಿಕವಾಗಿ ಬಂದ ಈ ವಾದ್ಯವನ್ನು ಗೌರವವೆಂದೇ ಭಾವಿಸುತ್ತಾರೆ. *(ಪಿ.ಕೆ.ಕೆ.)*

ಲಿಂಗಾವಧೂತರು: (1886–1930) ಆಧ್ಯಾತ್ಮಿಕ ಕ್ಷೇತ್ರದಲ್ಲಿ ಹೆಸರು ಮಾಡಿದ ಶಿವಯೋಗಿ. ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಪುಟ್ಟ ಗ್ರಾಮದಲ್ಲಿ 1866ರಲ್ಲಿ ಜನಿಸಿದರು. ತಂದೆ ಗುರುಲಿಂಗಯ್ಯ ತಾಯಿ ಮಹಾದೇವಮ್ಮ, ಆನಂತರ ಮಹಾರಾಷ್ಟ್ರದಲ್ಲಿ ವಾಸವಾಗಿದ್ದರು. ತದನಂತರ ಲಿಂಗಸುಗೂರಿನ ಹಟ್ಟಿ ಗ್ರಾಮಕ್ಕೆ ಬಂದು ಗದ್ದೆಪ್ಪ ಉಪ್ಪಾರ, ಅಮರಸಿಂಗ್ ಎಂಬ ಶಿಷ್ಯಂದಿರ ಹತ್ತಿರ ಇದ್ದು, ಅನೇಕ ಪವಾಡಗಳನ್ನು ಮಾಡಿ, 1930ರಲ್ಲಿ ಐಕ್ಯರಾದರೆಂದು ಹಿರಿಯರು ಹೇಳುತ್ತಾರೆ.

ಅಂದಿನಿಂದ ಇಂದಿನವರೆಗೂ ಪ್ರತಿ ನಾಗರ ಅಮವಾಸ್ಯೆ ಮತ್ತು ಶಿವರಾತ್ರಿ ಅಮವಾಸ್ಯೆ ದಿನಗಳಂದು ಎರಡು ಬಾರಿ ಹಟ್ಟಿಯಲ್ಲಿ ಜಾತ್ರಾ ಮಹೋತ್ಸವ ಆಚರಿಸಲಾಗುತ್ತದೆ.

ಗ್ರಾಮೀಣ ಭಕ್ತರ ಬಾಯಲ್ಲಿ, ಲಿಂಗಯ್ಯ ತಾತನೆಂದೇ ಚಿರಪರಿಚಿತನಾದ ಈ ಯೋಗಿ, ಸುಮಾರು 90 ವರ್ಷಗಳ ಹಿಂದೆ ಹಟ್ಟಿಗೆ ಬಂದು ಇಲ್ಲಿ ಊರಿನ ಉತ್ತರ ಭಾಗದಲ್ಲಿ (ಈಗಿನ ಕ್ಯಾಂಪಿನ ಉತ್ತರಕ್ಕೆ) ಒಂದು ಗುಡಿಸಲಲ್ಲಿ ನೆಲೆಸಿ, ಪ್ರತಿದಿನವೂ ಶಿವಪೂಜೆ, ಶಿವಧ್ಯಾನ, ಭಜನೆ, ಕೀರ್ತನೆ, ಶಿವನಾಮ ಸ್ಮರಣೆಯಲ್ಲಿ ಕಾಲಕಳೆಯುತ್ತಿದ್ದರು. ಕೈಯಲ್ಲಿ ಕಮಂಡಲ ಹಿಡಿದು, ಕೌಪೀನಧಾರಿಯಾಗಿ, ಭಿಕ್ಷಾನ್ನದಿಂದಲೇ ಸುಂತುಷ್ಟನಾಗಿ ತನ್ನ ಅಗಾಧ ಶಿವಪೂಜೆ ಶಕ್ತಿಯಿಂದ ಅನೇಕ ಜನರ ರೋಗ ರುಜಿನಗಳನ್ನು ನಿವಾರಿಸಿ, ಅವರಲ್ಲಿ ಬರುವ ಭಕ್ತರ ಕಷ್ಟಗಳನ್ನು ಪರಿಹರಿಸಿದ್ದಾರೆ. ಸಂದರ್ಭಕ್ಕನುಸಾರವಾಗಿ ಅವರು ತೋರಿದ ಪವಾಡಗಳು ಅವಿಸ್ಮರಣೀಯ. ಅಂಥವುಗಳಲ್ಲಿ ಕೆಲವು ಪವಾಡಗಳನ್ನು ಹಿರಿಯರ ತಲೆಮಾರಿನವರು ಇಂದಿಗೂ ನೆನೆಯುತ್ತಾರೆ.

ಭಕ್ತನ ಹೆಂಡತಿಯನ್ನು ಬದಿಕಿಸಿದ್ದು: ಲಿಂಗಾವಧೂತರು ತಾಲೂಕಿನ ಕೊತ್ತದೊಡ್ಡಿಯಲ್ಲಿ ಭಿಕ್ಷಾಟನೆ ಮಾಡುತ್ತಿರುವಾಗ ಒಂದು ಮನೆಯ ಮುಂದೆ 10–20 ಜನ ಸೇರಿ, ಆ ಮನೆಯೊಡತಿ ಮೃತಪಟ್ಟಿರುವುದಕ್ಕೆ ಪ್ರಲಾಪಿಸುತ್ತಿದ್ದರು. ಶ್ರೀಗಳು ಒಳಗೆ ಹೋಗಿ ನೋಡಿದಾಗ, ಮೃತ ಮಹಿಳೆಗೆ ಎರಡು ಮಕ್ಕಳಿವೆ. ಇನ್ನೂ ಚಿಕ್ಕ ವಯಸ್ಸು. ಗಂಡನು ಹೆಂಡತಿಯ ಶವದ ಮುಂದೆ ಕುಳಿತು, ತನ್ನ ಎರಡು ಮಕ್ಕಳನ್ನು ಮುಂದೆ ಹಾಕಿಕೊಂಡು ಪರಿಪರಿಯಿಂದ ಪ್ರಲಾಪಿಸುತ್ತಿರುವದನ್ನು ಕಂಡು ಶರಣರು ಅವನಿಗೆ, ನಿನ್ನ ಹೆಂಡತಿ ಹೋದದ್ದಕ್ಕಾಗಿ ನಿನಗೆ ಬಹಳ ದುಃಖವಾಗಿದೆ. ಒಂದು ವೇಳೆ ಅವಳು ಬದುಕಿದರೆ ಪ್ರಪಂಚದಲ್ಲಿ ನಿನಗೆ ದುಃಖವೇ ಇಲ್ಲವಾ? ಎಂದು ಕೇಳಿದಾಗ, ಶರಣರ ಪಾದಗಳ ಮೇಲೆ ಬಿದ್ದು ತನ್ನ ಹೆಂಡತಿ ಬದುಕಿದರೆ ತನ್ನ ಸಂಸಾರ ಸುಖಮಯವಾಗುತ್ತದೆ. ಈ ಚಿಕ್ಕ ಮಕ್ಕಳನ್ನು ತಾನು ಜೋಪಾನ ಮಾಡಲಾರೆನೆಂದು ಶರಣರಿಗೆ ಹೇಳಿದ. ಆಗ ಶ್ರೀಗಳವರು ತಮ್ಮ ಕಮಂಡಲದಲ್ಲಿರುವ ತೀರ್ಥವನ್ನು ಶವಕ್ಕೆ ಪ್ರೋಕ್ಷಿಸಿದಾಗ ನಿದ್ದೆಯಿಮದ ಎಚ್ಚತ್ತವಳಂತೆ ಆ ತಾಯಿ ಕಣ್ತೆರೆದು ನೋಡಿದಳಂತೆ.

ಒಮ್ಮೆ ಲಿಂಗಾವಧೂತರು ರೋಡಲಬಂಡಾದಿಂದ ಹಟ್ಟಿಗೆ ಬರುವಾಗ, ನಿಜಗುಣ ಶಿವಯೋಗಿಗಳ "ಕೈವಲ್ಯ ಪದ್ಧತಿ" ಗ್ರಂಥವನ್ನು ತರುತ್ತಿದ್ದರು. ಆಗ ಸ್ವಲ್ಪ ಹೊತ್ತಿನಲ್ಲಿ ಭಾರಿ ಮಳೆ ಸುರಿಯತೊಡಗಿತು. ಸುಮಾರು 2–3 ತಾಸುಗಳವರೆಗೆ ಎಡೆ ಬಿಡದೇ ಮಳೆ ಸುರಿದರೂ ಶರಣರು ಕೈಯಲ್ಲಿ ಹಿಡಿದಿದ್ದ ಕೈವಲ್ಯ

ಗ್ರಂಥಕ್ಕೆ ಒಂದು ಹನಿ ನೀರೂ ಹತ್ತಿರಲಿಲ್ಲ. ಅದನ್ನು ನೋಡಿ ಭಕ್ತಾದಿಗಳು, ಮಳೆಯಲ್ಲಿ ಬಂದರೂ ಕೈವಲ್ಯ ಹೊತ್ತಗೆ ಮಾತ್ರ ತೊಯ್ಯದಿರುವುದು, ತಾವು ಸಾಕ್ಷಾತ್ ಪರಶಿವನ ಅವತಾರ ಎಂದು ಅವಧೂತರನ್ನು ಭಜಿಸಿದರು.

ಲಿಂಗಾವಧೂತರ ಪರಮ ಭಕ್ತನೋರ್ವ ಬ್ರಿಟಿಷ ಅಧಿಕಾರಿಯಲ್ಲಿ ವಾಹನ ಚಾಲಕನಾಗಿದ್ದ. ಶರಣರು ಅವನಲ್ಲಿನ ಸೇವೆ ಸ್ವೀಕರಿಸುತ್ತಿದ್ದರು. ಚಾಲಕನಿಗೆ ಸ್ವಲ್ಪ ತಡವಾದದ್ದರಿಂದ ಸಿಟ್ಟಿಗೆದ್ದ ಅಧಿಕಾರಿ, ತರಾಟೆಗೆ ತೆಗೆದುಕೊಂಡಾಗ ಅವನು, ಮನೆಗೆ ಲಿಂಗಾವಧೂತ ಶಿವಯೋಗಿಗಳು ಬಂದಿದ್ದರಿಂದ ತಡವಾಯಿತು ಎಂದು ಕೇಳಿಕೊಂಡ. ಪೂಜೆ ಮಾಡುವದರಿಂದೇನು ಲಾಭ? ಅವನು ದೇವರನ್ನು ನೋಡಿದ್ದಾನೆಯೇ? ಅವನನ್ನು ಕರೆದುಕೊಂಡು ಬಾ ಎಂದು ಹೇಳಿದ. ಅಧಿಕಾರಿ ಸಿಟ್ಟಿನಿಂದ ತನ್ನಲ್ಲಿರುವ ಆಳುಗಳನ್ನು ಕರೆದು ಶರಣರನ್ನು ದರದರನೆ ಎಳೆತಂದು ಲೋಹದಿಂದ ನಿರ್ಮಿಸಿದ ಒಂದು ತಗ್ಗಿನಲ್ಲಿ ದೂಡಿ, ಮೇಲೆ ತಳಮಳ ಕುದಿಯುತ್ತಿರುವ ಎರಕವನ್ನು ಅವರ ಮೇಲೆ ಹೊಯ್ದು, ಆ ಗುಂಡಿಯ ಮೇಲೆ ದೊಡ್ಡ ಕಲ್ಲುಬಂಡೆ ಎಳೆದು ಮುಚ್ಚಿದ. ನಿನ್ನ ಸ್ವಾಮಿಯಲ್ಲಿ ಅಂತಹ ಶಕ್ತಿ ಇದ್ದರೆ, ಈಗ ಹೊರಗೆ ಬರಲಿ ಎಂದು ಚಾಲಕನಿಗೆ ಹೇಳಿದ. ಶರಣರಿಗೆ ಬಂದ ಈ ಪರಿಸ್ಥಿತಿ ನೆನೆದು ಭಕ್ತ ಗೋಳಾಡುತ್ತ, ಅಧಿಕಾರಿಯನ್ನು ವಾಹನದಲ್ಲಿ ಮನೆಗೆ ಬಿಡಲು ಹೋಗುತ್ತಿದ್ದ. ಇವನ ಗಾಡಿಯ ಮುಂದೆ ಲಿಂಗಾವಧೂತರು ಹೋಗುತ್ತಿರುವದು ಕಂಡಿತು. ಭಕ್ತ ಸಂತೋಷಗೊಂಡು ಗಾಡಿ ನಿಲ್ಲಿಸಿ ಶರಣರ ಪಾದಗಳಿಗೆರಗಿದ. ಬ್ರಿಟೀಷ ಅಧಿಕಾರಿಯು, ಶರಣ ಹೇಗೆ ಹೊರಬಂದ ಎಂದು ಪಶ್ಚಾತ್ತಾಪದಿಂದ ಶರಣರನ್ನು ಗೌರವದಿಂದ ವಾಹನದಲ್ಲಿ ಮನೆಗೆ ಕರೆತಂದು, ಪರಿಶುದ್ಧನಾಗಿ ಪತ್ನಿ ಸಮೇತ ಶರಣರ ಪಾದಪೂಜೆ ಮಾಡಿ ಉದ್ಧರಿಸಬೇಕೆಂದು ಬೇಡುತ್ತಾನೆ. ಆಗ ಶರಣರು ಆಶೀರ್ವಾದ ಮಾಡಿ ಪುತ್ರಸಂತಾನ ಭಾಗ್ಯ ನೀಡಿದರು.

ಇಂದಿಗೂ ಇವರ ಶಿಸು ಮಕ್ಕಳಾದ ಗೆದ್ದೆಪ್ಪ ನಾಯಿಕೊಡಿಯವರ ಮನೆಯಿಂದ ಪಲ್ಲಕ್ಕಿ ಉತ್ಸವ ಮೊದಲಿನಿಂದ ನಡೆದು ಬರುತ್ತದೆ. ಇಲ್ಲಿ ಕೆಲವರಿಗೆ ಲಿಂಗಯ್ಯ, ಲಿಂಗಪ್ಪ, ಲಿಂಗಣ್ಣ ಲಿಂಗನಗೌಡ ಎಂದು ಸಾಮಾನ್ಯವಾಗಿ ನಾಮಕರಣ ಮಾಡಲಾಗಿದೆ. ಇವರು ಕುಳಿತ ಸ್ಥಳಗಳನ್ನು ಗದ್ದುಗೆಯನ್ನಾಗಿ ನಿರ್ಮಿಸಿ ಪೂಜೆಯನ್ನು ಇಂದಿಗೂ ಹಟ್ಟಿ ಸುತ್ತಮುತ್ತಲಿನ ಗ್ರಾಮಗಳಾದ ಯಲಗಟ್ಟಾ, ಗಾಣದಾಳ, ಅನ್ವರಿ ಇನ್ನಿತರ ಹಳ್ಳಿಗಳಲ್ಲಿ ಮಾಡುತ್ತಿದ್ದಾರೆ. ಕೊನೆಗೆ ಶರಣರು ತಮ್ಮ ಭೌತಿಕ ಶರೀರವನ್ನು ತ್ಯಜಿಸಿ ಶಿವನಲ್ಲಿ ಬೆರೆತರು, ಆಗ ಹಟ್ಟಿ ಚಿನ್ನದ ಗಣಿ ಉತ್ತರ ಭಾಗದಲ್ಲಿ ಅವರ ಗದ್ದುಗೆಯನ್ನು ಭಕ್ತರು ನಿರ್ಮಿಸಿದ್ದಾರೆ. ಇಂದಿಗೂ ಅವರ ಗದ್ದುಗೆಗೆ ನಿತ್ಯ ಪೂಜೆ ನಡೆಯುತ್ತದೆ. ಶ್ರಾವಣ ಮಾಸ (ನಾಗರ ಅವಮಾಸ್ಯೆ) ಮತ್ತು ಪಾಲ್ಗುಣ ಮಾಸದಲ್ಲಿ (ಶಿವರಾತ್ರಿ ಅಮವಾಸ್ಯೆ) ಪ್ರತಿ ವರ್ಷ ಜಾತ್ರೆ, ರಥೋತ್ಸವ ಹಾಗೂ ಸಾಮೂಹಿಕ ವಿವಾಹಗಳು ನಡೆಯುತ್ತವೆ.

ಇವರು ಹುಬ್ಬಳಿಯ ಸಿದ್ಧಾರೂಢರ ಸಮಾಕಾಲಿನವ ಎಂದು ಹೇಳಬಹುದು. ಭಕ್ತನೋರ್ವನು ಚಕ್ಕಡಿ ಮೂಲಕ ಹೊಳೆಯನ್ನು ದಾಟಿಸಿ ಮನೆಗೆ ಮರಳುವ ಹೊತ್ತಿಗೆ ಕಣ್ಣೆದುರಿಗೆ ಕಾಣಿಸಿದ್ದು ಆಶ್ಚರ್ಯ ಮೂಡಿಸಿದ್ದಾರೆ. ಇವರನ್ನು ಕೃಷ್ಣ ಅವತಾರವೆಂದು ಹೇಳಬಹುದು. ಸಂತಾನ ಭಾಗ್ಯ ನೀಡಿದ್ದಾರೆಂದು ಇವರ ಭಕ್ತರ ಹೇಳಿದ ಮಾತುಗಳಿವು. ಇವರು ಸಿದ್ದಿ ಪುರುಷರು ತಮ್ಮ ರಸ ವಿದ್ಯೆಯಿಂದ ಬಂಗಾರವನ್ನು ತಯ್ಯಾರು ಮಾಡುವ ವಿದ್ಯೆಯಿತ್ತು. ಇದರಿಂದ ಆಗಿನ ಬ್ರಿಟಿಷರು ಇವರ ರಸ ವಿದ್ಯೆಯ ಸೂತ್ರಗಳನ್ನು ಪಡೆಯಲು ಇವರ ಭಕ್ತರ ಮೂಲಕ ಅಪಹರಿಸಿ ಅನೇಕ ರೀತಿಯಲ್ಲಿ ಚಿತ್ರಹಿಂಸೆ ನೀಡಿ ಬೇಸತ್ತು ಆನಂತರ ಕ್ಷಮೆ ಕೋರಿ ಇವರು ಇರುವ ಹಟ್ಟಿಗೆ ಬಂದು ಬಿಟ್ಟಿರುವದು ಇವರು ಅದ್ವೈತ ಸಿದ್ಧಾಂತ ಪ್ರತಿಪಾದನೆ ಮಾಡಿದರು ಎಂದು ಹೇಳಬಹುದು.

ಹಿರಿಯರ ಪ್ರಕಾರ. 1982–84ರಲ್ಲಿ ಗ್ರಾಮದ ಹಿರಿಯರಾದ ಬಲವಂತಪ್ಪ, ಬಸನಗೌಡ, ಸಿದ್ರಾಮಪ್ಪಾ ಸಾವುಕಾರರವರ ಕನಸಿನಲ್ಲಿ ಬಂದು ನನ್ನ ರಥೋತ್ಸವವನ್ನು ಮಾಡಬೇಕೆಂದು ಹೇಳಿದಾಗ ಗ್ರಾಮದ ಹಿರಿಯರಾದ ಹಾಗೂ ಕಮೀಟಿಯ ಮುಖಂಡರುಗಳಾದ ಈಶ್ವರಪ್ಪಾ ಅನ್ವರಿ, ದೇವೆಂದ್ರಪ್ಪ ಸರ್ಜಾಪೂರ, ಗುಂಡಪ್ಪಗೌಡ, ಭೀಮಶಪ್ಪ ಹಾಗೂ ಯಂಕನಗೌಡ ಅನ್ವರಿ, ಸೇರಿ ಚಂದಾ ಹಣವನ್ನು ಸೇರಿಸಿ ಹಾಗೂ ಹಟ್ಟಿ ಚಿನ್ನದ ಗಣಿಯ ಕಂಪನಿಯ ಸಹಾಯದಿಂದ ರಥೋತ್ಸವವನ್ನು ಸಿದ್ಧಪಡಿಸಲಾಯಿತು. ಅಂದಿನ ಕಂಪನಿಯ ಜಾಗೃತ ಅಧಿಕಾರಿಗಳಾದ ಲಾಲಗೌಡರ ಹಾಗೂ ಊರಿನ ನಾಗರಿಕರು ಸೇರಿ 11 ಲಕ್ಷ ವೆಚ್ಚದಲ್ಲಿ ಹೊಸ ಮಂದಿರವನ್ನು 2000ದಲ್ಲಿ ಇಸ್ವಿಯಲ್ಲಿ ಪಂಚಪೀಠ ಸ್ವಾಮಿಜಿಗಳಾದ (1008 ಜಗ್ದುರುಗಳು) ಸಾನ್ನಿಧ್ಯದಲ್ಲಿ ವೀರಸೋಮೇಶ್ವರ ನೂತನ ಲಿಂಗಾವಧೂತರ ದೇವಸ್ಥಾನ ಉದ್ಘಾಟಿಸಿದರು.

ಲಿಂಗಾವಧೂತರು ಹಟ್ಟಿ ಗ್ರಾಮ ಛೋಟಾ ಬಾಂಬೆ ಪಟ್ಟಣವಾಗುತ್ತದೆ ಎಂದು ಈ ಗ್ರಾಮಕ್ಕೆ ರೈಲು ಬರುತ್ತದೆ, ತಾವು ಕೊನೆಯ ಬೋಗಿಯಲ್ಲಿ ಇರುತ್ತೇನೆ ಗುರುತಿಸಿರಿ ಎಂದು ಭಕ್ತಾದಿಗಳಿಗೆ ಕೊನೆಯಗಳಿಗೆಯಲ್ಲಿ ಹೇಳಿದ್ದಾರೆಂಬ ಪ್ರತೀತೆ ಇದೆ. ಈ ಒಂದು ಜಾತ್ರಾ ಮಹೋತ್ಸವಕ್ಕೆ ಕಮೀಟಿಯ ಕೋರಿಕೆಯ ಮೇರೆಗೆ ಹಟ್ಟಿ ಚಿನ್ನದ ಗಣಿ ಕಂಪನಿಯಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡುತ್ತದೆ. ಈ ದೇವಸ್ಥಾನವು ಗಟ್ಟಿ ಬಂಗಾರದ ಮೇಲೆ ಇದೆ ಎಂಬುವುದು ಹಿರಿಯರ ಅನಿಸಿಕೆ.

(ಎಸ್.ಎಚ್.ಪಿ.)

ಲ್ಯಾವಿಗಂಟು: ಬಣ್ಣ ಬಣ್ಣದ ಚಿತ್ತಾರದ ಕೌದಿ ಹೊಲಿಯುವ ಕ್ರಮ 'ಹಳೆಯ ಹಾಗೂ ಹೊಸ ಅರಿವೆಯ ತುಂಡುಗಳು, ಬಣ್ಣ ಬಣ್ಣದ ಅರಿವೆಗಳನ್ನು ಕೆಲಸ ಮುಗಿದ ಮೇಲೆ ಗಂಟು ಕಟ್ಟಿ ಇಡುತ್ತಾರೆ. ಇದಕ್ಕೆ ಕೌದಿ ಅರಿವೆ ಗಂಟು ಅಥವಾ ಲ್ಯಾವಿ ಗಂಟು ಎಂದು ಕರೆಯುತ್ತಾರೆ. ತಾವು ನಂಬಿದ ದೇವರು. ಪ್ರಭಾವಗೊಂಡ ನಿಸರ್ಗ, ಗೌರವಿಸುವ ಹಿರಿಯರ ಚಿತ್ರಗಳ ಚಿತ್ತಾರ ಕೌದಿಯಲ್ಲಿ ಕಾಣಬಹುದು.

ಹೈದ್ರಾಬಾದ ಕರ್ನಾಟಕದಲ್ಲಿ ಕತ್ತೆ, ಕುದುರೆ, ಒಂಟೆ, ಎತ್ತು, ಎಮ್ಮೆ, ಕೋಣ ಮುಂತಾದುವು ಸಾರಿಗೆ ಸಾಧನಗಳಾಗಿದ್ದುವು. ಯಂತ್ರಗಳ ಆವಿಷ್ಕಾರವಾದಂತೆ ಗಾಲಿಗಳ ಬಳಕೆಯಾದಂತೆ ದ್ವಿಚಕ್ರ ವಾಹನ, ಕಾರು, ಬಸ್ಸು, ಲಾರಿಗಳ ಮಧ್ಯ ಓಡಾಡುವುದನ್ನು ಕಾಣುತ್ತೇವೆ. 'ವಾಹನ–ಔಷಧಗಳನ್ನು ಕರಗಿಸಲು ಬಳಸುವ ದ್ರವ

ಮಾಧ್ಯಮ ಹಾಗೂ ಅಭಿವ್ಯಕ್ತಿ ಉಪಕರಣ ಎಂಬ ಆರ್ಥದಲ್ಲೂ ಬಳಕೆಯಲ್ಲಿದೆ. ಜನಪದರಲ್ಲಿ 'ವಾಹನ ಜಾನಪದ' ಎಂಬ ಪದ ಪಶುಗಳನ್ನು ಸಾರಿಗೆ ಸಾಧನವಾಗಿ ಬಳಸಿಕೊಂಡ ಬಗೆಗೆ ವಿವರಿಸುತ್ತದೆ.

ಹಳೆಯ ಹೊಸ ಅರಿವೆ ತುಕಡಿಗಳು ಜೋಡಣೆಯಲ್ಲಿ ಭಾವನಾತ್ಮಕ ಬೆಸುಗೆ ಹಾಗೂ ಸಮಶೀತೋಷ್ಣಕ್ಕೆ ಹೊಂದಿಕೆ ಆಗಬೇಕೆಂಬ ವಿಚಾರಗಳೂ ಮೇಳೈಸಿವೆ. ಗುಲಬರ್ಗಾ, ಬೀದರ, ರಾಯಚೂರ, ಬಳ್ಳಾರಿ ಭಾಗಗಳಲ್ಲಿ ಈ ಪದ ಚಾಲ್ತಿಯಲ್ಲಿದೆ. ಬೇಸಿಗೆಯ ದಿನದಲ್ಲಿ ಶುಭ ಗಳಿಗೆಯಲ್ಲಿ ಕೌದಿಗೆ (ನೋಡಿ) ಲ್ಯಾವಿ ಹಾಕುವ ಕ್ರಮ ಅನುಸರಿಸುತ್ತಿದ್ದು ಈ ಗಂಟಿನಲ್ಲಿ ಹಿಂದೂಸ್ತಾನಿ ರಗ್ಗಿನ ಚಿತ್ತಾರಗಳು ಅಡಗಿಕೊಂಡಿವೆ. ಹಕ್ಕಿಯ ಕಾಲು, ಪ್ರಾಣಿಗಳ ಹೆಜ್ಜೆ, ಪಗಡಿ ಬಜಾರ್ ಮೊದಲಾದ ವಿನ್ಯಾಸಗಳೂ ಅಲ್ಲಿ ಸೇರಿಕೊಳ್ಳುತ್ತವೆ.

(ಎಸ್.ಕೆ.ಇ.)

ವ

ವಜ್ಜಲ್: ಐತಿಹಾಸಿಕ ಸ್ಥಳ. ಧಾರ್ಮಿಕ ಕೇಂದ್ರ, ಇದು ಸುರಪುರದಿಂದ ಪಶ್ಚಿಮಕ್ಕೆ ಮೂವತ್ತೆರಡು ಕಿ.ಮೀ. ದೂರದಲ್ಲಿರುವ ಊರು. ಕ್ರಿ.ಶ. ಎರಡನೆಯ ಶತಮಾನದಲ್ಲಿನ ಶಾತವಾಹನರ ಕಾಲದ ಶಿಲ್ಪ ಕಲಾಕೃತಿಗಳು ಇಲ್ಲಿ ಕಂಡು ಬಂದಿವೆ. ಸಂಗಮೇಶ್ವರ ದೇವಾಲಯ ಇಲ್ಲಿನ ಖ್ಯಾತ ದೇವಾಲಯವಾಗಿದ್ದು, ಕಲ್ಯಾಣಿ ಚಾಲುಕ್ಯರ ಕಾಲದ ಶಿವಲಿಂಗ ಇಲ್ಲಿದೆ. ನಾಲ್ಕೂವರೆ ಅಡಿ ಎತ್ತರದ ಅಷ್ಟ ಭುಜ ಹರಿಹರ ಶಿಲ್ಪವನ್ನು ಈ ದೇವಾಲಯದಲ್ಲಿ ಕಾಣಬಹುದಾಗಿದೆ.

ಈ ಊರಿನಲ್ಲಿ ಒತ್ತುವ ಬುಗ್ಗೆಗಳಿದ್ದು, ಒತ್ತುವ ಜಲ>ಒಜ್ಜಲ> ವಜ್ಜಲ್ ಎಂದಾಗಿರಬೇಕೆಂದು ಗ್ರಾಮಸ್ಥರ ಅಭಿಪ್ರಾಯವಾಗಿದೆ.

ರೆಡ್ಡಿ ಜನಾಂಗ, ಕುರುಬ, ಬಣಜಿಗ, ಗಾಣಿಗ, ಮುಸ್ಲಿಂ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನ ಇಲ್ಲಿ ಒಟ್ಟಾಗಿ ಬಾಳುತ್ತಿದ್ದಾರೆ. ತಿಮ್ಮಪ್ಪಯ್ಯ ಇಲ್ಲಿನ ಪವಾಡ ಪುರುಷನಾಗಿದ್ದು, ಭಕ್ತಿಯಿಂದ ಜನ ಈತನ ಪವಾಡಗಳನ್ನು ಸ್ಮರಿಸುತ್ತಾರೆ. 'ಹಳ್ಳದಾಚೆಗೆ ಇರುವ ರಾಮಲಿಂಗ ದೇವರ ಗುಡಿ ಪ್ರಾಚೀನವಾಗಿದ್ದು ಇದರ ಬಳಿಯ ಹೊಲದಲ್ಲೇ ಶಾತವಾಹನರ ಕಾಲದ ಶಿಲಾ ಫಲಕ ಪತ್ತೆಯಾಗಿದೆ.' ತಿಮ್ಮಪ್ಪಯ್ಯ, ಚೌಡಮ್ಮ, ಹನುಮಂತ, ಮೈಲಾರ ಬೀರಲಿಂಗ ಹಾಗೂ ಮಾಳಮ್ಮನ ಗುಡಿಗಳಿದ್ದು, ಜುಮ್ಮಾ ಮಸೀದಿ ಹಾಗೂ ದರ್ಗಾಗಳು ಇಲ್ಲಿವೆ. ಇಲ್ಲಿ ಯುಗಾದಿ ಆದ ಐದು ದಿನಕ್ಕೆ ತಿಮ್ಮಪ್ಪಯ್ಯ ಜಾತ್ರೆ ನಡೆಯುತ್ತದೆ. *(ಎಂ.ಜಿ.ಪಿ.)*

ವಡಗೇರಿ: ಐತಿಹಾಸಿಕ ಗ್ರಾಮ. ಧಾರ್ಮಿಕ ಸ್ಥಳ. ಕಲಬುರ್ಗಿ ಜಿಲ್ಲೆಯ ಜೇವರಗಿ ತಾಲ್ಲೂಕಿನ ಒಂದು ಹಳ್ಳಿ. ಊರ ಹೊರ ವಲಯದಲ್ಲೊಂದು ವಿಶಾಲ ಕೆರೆ. ಅದರ ಪಕ್ಕದಲ್ಲಿ ಅರ್ಧ ಹಾಳಾಗಿ ನಿಂತ ಸುಂದರ ಶಿಲ್ಪ ವಿನ್ಯಾಸದ ದೇಗುಲ. ಇದನ್ನು ಊರವರು 'ದೇಗುಲ ಬಸವಣ್ಣನ ಗುಡಿ' ಎನ್ನುತ್ತಾರೆ. ದೇಗುಲದ ಅಂತರಾಳದ ಬಲಭಾಗದಲ್ಲಿಯೇ ಕಲ್ಯಾಣ ಚಾಳುಕ್ಯ ವಿಕ್ರಮನ ಶಾಸನವಿದೆ. ಶಾಸನದಲ್ಲಿ ಹೇಳಿ ಉಲ್ಲೇಖಿಸಿದಂತೆ ವಡಗೇರಿಯ ಹಳೆಯ ಹೆಸರು 'ಸಾಸವಿ ಒಡಂಗೆರೆ'. ದೇಗುಲದ ಹೆಸರು ಧಾಯಿಮೇಶ್ವರ ಆಲಯ.

ಆರನೆಯ ವಿಕ್ರಮಾದಿತ್ಯನ ಪಟ್ಟ ಬಂಧೋತ್ಸವ ನಿಮಿತ್ತವಾಗಿ, ಅವನ ಆಳ್ವಿಕೆಯ ಮೊದಲ ವರ್ಷದಲ್ಲಿ (ಕಿ.ಶ.1076) ದಾಯಿಮಯ್ಯನು ಸಾಸವಿ ಒಡಂಗೆರೆಯಲ್ಲಿ ತಾನು ಕಟ್ಟಿಸಿದ ಈ ಧಾಯಿಮೇಶ್ವರ ಆಲಯ, ದೇವರ ಸೇವೆಗೆಂದು ಮಠದಲ್ಲಿರುವ ತಪೋಧನರ ವಿದ್ಯಾರ್ಥಿಗಳ ಊಟ ವಸತಿಗೆಂದು, ಈ ದೇವಾಲಯದ ಆಚಾರ್ಯರಾದ ಸಿಂಹಪರ್ಷ ಪಾಶುಪತ ಶೈವ ಪಂಥದ ಮಹೇಶ್ವರ ರಾಶಿ ಪಂಡಿತರಿಗೆ ಮಾಣಿಕೇಶ್ವರ ಕೋಲಲ್ಲಿ 200 ಮತ್ತರು ಹೊಲ, 45 ಗೇಣಿನ ಗಳೆಯಲ್ಲಿ 1 ಮತ್ತರು ತೋಟ ಹಾಗೂ ಇಲ್ಲಿನ ಅಧ್ಯಾಪಕರಿಗೆ 16 ಮತ್ತರು ಭೂದಾನ ಕೊಟ್ಟಿದ್ದಾನೆ.

ದೇವಾಲಯಕ್ಕೆ ಹೊಂದಿಕೊಂಡಂತೆ ವಿದ್ಯಾಲಯವೊಂದಿತ್ತು ಎಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ವೀರಶೈವ ಉದಯಕ್ಕಿಂತ ಮೊದಲು ಕರ್ನಾಟಕದಲ್ಲಿ ಪಾಶುಪತ ಶೈವ ಪಂಥ ಪ್ರಭಾವಶಾಲಿಯಾಗಿತ್ತು. ಈ ಪಂಥದ ಆಚಾರ್ಯರು ಆಳರಸರಿಂದ ದಾನದತ್ತಿ ಸ್ವೀಕರಿಸಿ, ವಿದ್ಯಾ ಕೇಂದ್ರಗಳನ್ನು ನಡೆಸುತ್ತಿದ್ದರು. ಈ ವಡಗೇರಿ ಸಮೀಪದ ಯಡ್ರಾಮಿ ಗ್ರಾಮ ಆ ಕಾಲಕ್ಕೆ ಪ್ರಸಿದ್ಧ ಪಾಶುಪತ ಶೈವ ಕೇಂದ್ರವೆನಿಸಿತ್ತು.

ಎತ್ತರವಾದ ಜಗತಿಯ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ದೇಗುಲದ, ಗರ್ಭಗುಡಿ ಹಾಗೂ ಅಂತರಾಳ ಭಾಗ ಮಾತ್ರ ಈಗ ಉಳಿದಿವೆ. ನವರಂಗ ಮಂಟಪ ಸಂಪೂರ್ಣ ಹಾಳಾಗಿದೆ. ಗ್ರಾಮದ ಬಸವ ಸಮಿತಿ ಉತ್ಸಾಹಿ ಯುವಕರು, ನವರಂಗ ಭಾಗಕ್ಕೆ ಪತ್ರಾಸು (ತಗಡು) ಹೊದಿಸಿದ್ದಾರೆ. ಒಡೆದ ಕಕ್ಷಾಸನ ಶಿಲ್ಪ ಚಿತ್ರ ಅಲ್ಲಲ್ಲಿ ಬಿದ್ದಿವೆ. ಅಂತರಾಳದ ಮಕರ ತೋರಣ ಮೋಹಕ ಕೆತ್ತನೆಯಿಂದ ಕೂಡಿದೆ. ಎಡ–ಬಲ ಇಬ್ಬರು ಶಿಲಾ ಕನ್ನಿಕೆಯರು ನಿಂತಿದ್ದಾರೆ. ಅಂತರಾಳದ ದೇವಕೋಷ್ಠದಲ್ಲಿ ಸಪ್ತ ಮಾತೃಕೆಯರ ಸುಂದರ ಶಿಲ್ಪವಿದೆ. ಗರ್ಭಗುಡಿಯ ಬಾಗಿಲುವಾಡ ಐದು ಶಾಖೆಗಳನ್ನು ಹೊಂದಿದ್ದು, ಇಲ್ಲಿ ಉಮಾಮಹೇಶ್ವರ ದಶಾವತಾರದ ಚಿಕಣಿ ಶಿಲ್ಪಗಳಿವೆ. ಗರ್ಭಗುಡಿಯಲ್ಲಿ ಈಶ್ವರ ಲಿಂಗವಿದೆ.

ಬಾಗಿಲುವಾಡದ ಕೆಳಗೆ ಕಮಲದಿಂದ ಅಲಂಕೃತವಾದ ಚಂದ್ರಶಿಲೆಯ ಕೆತ್ತನೆ ಚಿತ್ತಾಕರ್ಷಕ. ಹೊರಭಿತ್ತಿಯಲ್ಲಿ ತರತರಹದ ಮಾದರಿಯ ಶಿಖರಾಕೃತಿಗಳ ಸೂಕ್ಷ್ಮ ಸುಂದರ ಕೆತ್ತನೆ ನೋಡುವಂತಿದೆ. ಅಲ್ಲಲ್ಲಿ ದೇವತೆಗಳ ಮಿಥುನ ದಂಪತಿಗಳ

ಕಿರುಶಿಲ್ಪಗಳು ಕಾಣಿಸುತ್ತವೆ. ಮೂರು ಕಡೆಗಳಿಂದ ದೇವಾಲಯದ ಪ್ರವೇಶಿಸಲು ಆನೆಗಳ ಕೈಪಿಡಿಗಳಿರುವ ಮೆಟ್ಟಿಲುಗಳಿವೆ. ದೇಗುಲದ ಎಡಭಾಗದಲ್ಲಿ ಎರಡು ಪಾಳು ಚಿಕ್ಕಗುಡಿಗಳಿವೆ. ಪಕ್ಕದಲ್ಲೊಂದು ಪಾಳುಬಾವಿ ಇದ್ದು, ಅದನ್ನು 'ದೇಗುಲದ ಬಾವಿ' ಎನ್ನುತ್ತಾರೆ. ಊರಲ್ಲಿರುವ 'ಮಾಣಿಕೇಶ್ವರ' ಎಂಬ ಇನ್ನೊಂದು ದೇವಾಲಯದ ಪರಿಸ್ಥಿತಿ ಇದಕ್ಕಿಂತ ಕರುಣಾಜನಕ. ಯಡ್ರಾಮಿಯಿಂದ ಇಲ್ಲಿಗೆ ಸುಮಾರು 11 ಕಿ.ಮೀ. ಅಂತರ. ಈ ಪುರಾತನ ಇತಿಹಾಸ ಮತ್ತು ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಕುರುಹುಗಳು ದಿವ್ಯ ನಿರ್ಲಕ್ಷದಿಂದಾಗಿ ಅವನತಿಯ ಅಂಚಿನಲ್ಲಿವೆ. *(ವಿ.ಕೆ.)*

ವತನದಾರರು: ಹಿರಿಯರಿಂದ ಬಂದ ಆಸ್ತಿ, ಸಂಪತ್ತು, ಕ್ಷೇತ್ರ ಸಂಪತ್ತ, ತೂಕ, ಭಾರ, ಒಜ್ಜೆ ಎಂಬುವ ಅರ್ಥಗಳನ್ನು ಹೊಂದಿದೆ. ಈ ಪದ ವೀಗ 'ಗ್ರಾಮ್ಯ ಬಳಕೆಯಲ್ಲಿದೆ. ಹೆಚ್ಚು ಆಸ್ತಿ, ಸಂಪತ್ತು, ಭೂಮಿ ಹೊಂದಿದವರನ್ನೂ 'ವತನ ದಾರ' ಎಂದು ಕರೆಯುವ ರೂಢಿ. ರೈತ ಜನರಲ್ಲಿ ಈ ಆಸ್ತಿಯ ಮಾಪನ ಮಾನದಂಡ ಮನೆಯಲ್ಲಿರುವ ದನ–ಕರು– ಮುಖ್ಯವಾಗಿ ಎತ್ತುಗಳನ್ನು ಅವಲಂಬಿಸಿದ್ದು ಕಂಡು ಬರುತ್ತಿದೆ. ಇಂದಿಗೂ ಹಳ್ಳಿಯಲ್ಲಿ ಆರೆತ್ತಿನ್ತಬವತನ, ಎಂಟೆತ್ತಿನ ವತನ, ಹದಿನಾರು ಎತ್ತಿನ ವತನ ಎಂದೇ ಕರೆಯಲಾಗುತ್ತದೆ. ಭೂಮಿ ಹೆಚ್ಚಿದಂತೆ, ಎತ್ತುಗಳ ಸಂಖ್ಯೆಯೂ ಹೆಚ್ಚಾಗುವುದರಿಂದ ಎತ್ತಿನ ಮೇಲೆ ಸಂಪತ್ತು, ಆಸ್ತಿ ಗುರುತಿಸುವುದು ರೂಢಿಯಲ್ಲಿ ಬಂದಿರಬೇಕು. ಶ್ರೀಮಂತರಿಗೆ ಹೆಚ್ಚಾಗಿ ಈ ವತನದಾರ ಬಳಸುವುದಿಲ್ಲ. ಕೃಷಿ ಕ್ಷೇತ್ರದ 'ಪಾರಿಭಾಷಿಕ' ಪದವಾಗಿ ಬಳಕೆಯಾಗಿರುವ ಸಾಧ್ಯತೆ ಹೆಚ್ಚು. ಇವತ್ತು 'ವತನ' ದಾರರೆಲ್ಲ 'ವೇತನ'ದಾರರಾಗಿದ್ದಾರೆ. ಕೃಷಿ ಪ್ರಧಾನ ವ್ಯವಸ್ಥೆಯಲ್ಲಿ ಪ್ರಯೋಗವಾಗುತ್ತಿದ್ದ ಜನಪ್ರಿಯ ಬಳಕೆಯ ಶಬ್ದ 'ವತನದಾರ'.

(ಎಸ್.ಕೆ.ಯು.)

ವರೋಪಚಾರ: 'ಮದುಮಗ ಅಂದರೆ 'ವರ' ನಿಗೆ ಮದುವೆ ಸಂದರ್ಭದಲ್ಲಿ ಕೊಡುವ ಉಡುಗೊರೆ, ಕಾಣಿಕೆ ಇದೊಂದು ಮದುವೆಯಲ್ಲಿ ನಡೆಯುವ ಆಚರಣೆ, ಸಂಪ್ರದಾಯ. ಇದು ಸಂಸ್ಕೃತ ಶಬ್ದ. 'ವರ' ಮತ್ತು 'ಉಪಚಾರ' ಎರಡು ಶಬ್ದಗಳು ಸೇರಿ ಆಗಿದೆ.

ಮದುವೆಯಾಗುವ 'ವರ' ನಿಗೆ ನಮ್ಮ ಸಮಾಜ ಗೌರವದ ಸ್ಥಾನ–ಮಾನ ನೀಡುತ್ತಾ ಬಂದಿರುವುದು ಬಹುಕಾಲದ ಸಂಪ್ರದಾಯ. ಇದಕ್ಕೆ 'ಪುರುಷ ಪ್ರಧಾನ ಕುಟುಂಬ, ಸಮಾಜ ವ್ಯವಸ್ಥೆಯೂ ಕಾರಣವಾಗಿರಬೇಕು. 'ವರ ದಕ್ಷಿಣೆ'ಯ ಪರ್ಯಾಯ ಆಚರಣೆ ಇದು. 'ವರೋಪಚಾರ'ದ ಪಟ್ಟಿಯು ಮದುವೆಯ ಮಾತು–ಕತೆ 'ನಿಶ್ಚಿತಾರ್ಥ'ದ ಸಂದರ್ಭದಲ್ಲಿ ನಿಶ್ಚಿತವಾಗುತ್ತದೆ. ಮಗಳನ್ನು ಮದುವೆಯಾಗುವವನಿಗೆ, ವಧುವಿನ ಕಡೆಯವರು ಕೊಡುವ 'ಪ್ರೀತಿ'ಯ ಉಡುಗೊರೆಯಾಗಿ ಆರಂಭವಾದ ಈ ಆಚರಣೆ ಬರು ಬರುತ್ತಾ ಕಡ್ಡಾಯ ಬೇಡಿಕೆಯೊಂದಿಗೆ ಕನ್ಯಾದವರಿಂದ ಪಡೆಯುವ ಹಣ, ವಸ್ತುಗಳ ಸಾಧನವಾಗಿ ಮಾರ್ಪಾಡು ಆದುದು ದುರ್ದೈವ.

ಪುರಾಣ ಕಾಲದಿಂದಲೂ 'ವರೋಪಚಾರ'ದ ದಾಖಲೆಗಳಿವೆ. ಧನ, ಧಾನ್ಯ, ಕುದುರೆ, ಆನೆ, ರಾಜ್ಯ, ದಾಸ, ದಾಸಿಯರು, ಬೆಳ್ಳಿ, ಬಂಗಾರ,– ಇವೆಲ್ಲ 'ವರೋಪಚಾರ'ದಲ್ಲಿದ್ದವು. ಇಂದು ಬಂಗಾರ ಉಂಗುರ, ಚೈನು, ಗಡಿಯಾರ, ಮನೆ, ನಿವೇಶನ, ಸ್ಕೂಟರ್, ಕಾರು, ಕೋಟು, ಪ್ಯಾಂಟು, ಶರ್ಟಗಳು ಹಾಗೂ ಒಂದು ಕೆಲಸ ಮನೆಗೆ ಬೇಕಾದ ಅಡುಗೆ ಸಾಮಗ್ರಿ, ಫ್ರಿಜ್, ಟಿ.ವಿಗಳು ಈ 'ವರೋಪಚಾರದಲ್ಲಿ ಸೇರುತ್ತವೆ. 'ವರದಕ್ಷಣೆ' ಮತ್ತೆ ಬೇರೆ.

(ಎಸ್.ಕೆ.ಯು.)

ವಾ

ವಾಗಣಗಿರಿ: ಇತಿಹಾಸಿಕ ಸ್ಥಳ. ಯಾದಗೀರ ಜಿಲ್ಲೆ ಸುರಪುರ ತಾಲ್ಲೂಕು ಕೇಂದ್ರದಿಂದ 6 ಕಿ.ಮೀ. ದೂರದಲ್ಲಿದೆ. ಸುರಪುರ ಅರಸರ ಮೊದಲ ರಾಜಧಾನಿಯಾಗಿದ್ದು, ಅಲ್ಲಿ ಇನ್ನೂ ಕೋಟೆ ಕೊತ್ತಲಗಳು, ಅವರ ಕುಲದೈವ ವೇಣುಗೋಪಾಲಸ್ವಾಮಿ ದೇವ ಸ್ಥಾನಗಳನ್ನು ಕಾಣಬಹುದಾಗಿದೆ. ವಾಗಣಗಿರಿಯ ಮೂಲ ಹೆಸರು 'ಕರ್ಶಿಪಳ್ಳಿ' ಇದು ಸಮತ್ (ಸರ್ಕಲ್) ಬೈಚವಾಳ ಪ್ರದೇಶಕ್ಕೆ ಒಳಪಟ್ಟಿತ್ತು.

ವಿಜಯನಗರ ಸಾಮ್ರಾಜ್ಯದ ಪತನದ ಆನಂತರ ಚದುರಿ ಬಂದ ಪಾಳೇಗಾರ ರಾಜಾ ಜುಕ್ಕೆಪ್ಪ ದೇಸಾಯರ ವರಮಗನಾದ ಗಡ್ಡಿ ಪಿಡ್ಡನಾಯಕರು ವಾಗಣಗಿರಿಯನ್ನು ಸ್ವಾಧೀನಪಡಿಸಿ ಕೊಂಡರೆಂದು ಹೇಳಲಾಗುತ್ತದೆ. ಶಿಥಿಲವಾಗಿದ್ದ ಕೋಟೆಯನ್ನು ಜೀರ್ಣೋದ್ಧಾರ ಗೊಳಿಸಿ, ಅಲ್ಲಿಯ ಸರದಾರರಿಂದ 'ಬಹೀರ ಬಲವಂತ ಬಹದ್ದೂರ' ಎಂದು ಬಿರುದು ಪಡೆದು, ರಾಜಾ ಗಡ್ಡಿ ಪಿಡ್ಡನಾಯಕರು ಈ ಸಂಸ್ಥಾನದ ಸ್ಥಾಪಕ ದೊರೆಗಳಾದರು.

ವಾಗಣಗಿರಿ ಗುಡ್ಡ 250 ಅಡಿ ಎತ್ತರದಲ್ಲಿದೆ. ಕೊರಕಲ್ಲು ಕಲ್ಲು ಬಂಡೆಗಳ ಈ ಗುಡ್ಡ ಇಳಿಜಾರಿನಿಂದ ಕೂಡಿದ್ದು, ಇಂಥ ಕಡಿದಾದ ಗುಡ್ಡದ ಮೇಲಿರುವ ಕೋಟೆಗೆ ನಿಸರ್ಗವೇ ಭದ್ರತೆ ಒದಗಿಸಿ ನಿರ್ಮಿಸಲಾಗಿದೆ. ಮೇಲ್ನೋಟಕ್ಕೆ ಅಷ್ಟೇನು ಭವ್ಯವಾಗಿ ಕಾಣದಿದ್ದರೂ ಭದ್ರವಾಗಿದೆ. ಸುಂದರವಾದ ಪ್ರವೇಶದ್ವಾರ, ಎದುರಿಗೆ ವಿಶಾಲವಾದ ಸುಂದರ ಕೆರೆ ಕೋಟೆಯ ಗೋಡೆಗಳು ಬೃಹದಾಕಾರದ ಬಂಡೆಗಲ್ಲುಗಳು ಮತ್ತು ಗಚ್ಚಿನಿಂದ ಗಟ್ಟಿಮುಟ್ಟಾಗಿ ನಿರ್ಮಿಸಲಾಗಿದೆ. ಅಲ್ಲಲ್ಲಿ ಗುಡ್ಡದ ಕಲ್ಲುಗಳನ್ನೇ ಗೋಡೆಯಂತೆ ಬಳಸಿಕೊಂಡಿರುವ, ಇವರ ತಾಂತ್ರಿಕ ಕೌಶಲ್ಯ ಅಚ್ಚರಿ ಹುಟ್ಟಿಸುವಂತಿದೆ. ಪ್ರವೇಶದಲ್ಲಿ ವಿಶಾಲವಾದ ಬಾವಿಯೊಂದಿತ್ತು. ಈಗ ಅದು ಹೂತು ಹೋಗಿದೆ. ಇದರ ಪೂರ್ವ ದಕ್ಷಿಣ ಭಾಗದಲ್ಲಿ ರಾಮನ ಅಗಸಿ ಹನ್ನೆರಡು ಪಟ್ಟು ಎತ್ತರದಲ್ಲಿರಬಹುದು. ಕೋಟೆಯ ದಕ್ಷಿಣದ ಕಡೆ ತಳವಾರ ಗೇರಾ ಎಂಬ ಗ್ರಾಮ ಪೂರ್ವ–ಉತ್ತರ ದಿಕ್ಕಿನಲ್ಲಿ ಕೆಲವೊಂದು ದಿನ್ನೆಗಳಿವೆ. ಈ ಎತ್ತರದ ದಿನ್ನೆಗಳ ಮೇಲಿಂದ ಆಕ್ರಮಣ ಕಾರರನ್ನು ಎದುರಿಸಲು ಅನುಕೂಲ ಮಾಡಿ–ಕೊಂಡಿದ್ದರು.

ಇವುಗಳಲ್ಲಿ ಪ್ರಮುಖವಾದದ್ದು "ಲಾಲ ಟೇಕಡಿ" (ಕೆಂಪು ದಿನ್ನೆ) ದೊರೆಗಳು ವಿಶೇಷ ಯುದ್ಧ ಕೌಶಲ ನೀತಿಯಾದ ಗೆರಿಲ್ಲಾ ದಾಳಿಗೆ ಹೇಳಿ ಮಾಡಿಸಿದ ತಾಣವಾಗಿದೆ. ಕೋಟೆಯ ಪಶ್ಚಿಮಕ್ಕೆ ಇಳಕಲು ಪ್ರದೇಶವಿದ್ದು, ಅಲ್ಲೇ ಹಿಂಬಾಗಿಲು (ದಿಡ್ಡಿ) ಇದೆ. ಇದರ ಜವಾಬ್ದಾರಿಯನ್ನು ಇನಾಮಿ ಕೊಟ್ಟು ಇರಿಸಿದ ಮರಾಠಾ ಸರ್ದಾರರ ಮನೆಗಳಿವೆ. ಕೋಟೆಯ ರಕ್ಷಣೆಯ ಜವಾಬ್ದಾರಿ ಈ ಮರಾಠಾ ಸರ್ದಾರರ ಮೇಲಿತ್ತು.

ಕೋಟೆಯ ಒಳಗಡೆ ದೊರೆಯ ಆರಾಧ್ಯ ಹಾಗೂ ಕುಲದೈವವಾದ ವೇಣುಗೋಪಾಲಸ್ವಾಮಿ ದೇವಸ್ಥಾನವಿತ್ತು. ರಾಜಾ ಬಹೇರ ಪಿತಾಂಬರಿ ಪಿಡ್ಡ ನಾಯಕರ ಕಾಲದಲ್ಲಿ ಸುಲ್ತಾನ ಔರಂಗಜೇಬ ಅಪಾರ ಸೈನ್ಯದೊಂದಿಗೆ ಈ ಕೋಟೆಯ ಮೇಲೆ ದಾಳಿ ಮಾಡಿ, ಅದನ್ನು ವಶಪಡಿಸಿಕೊಂಡು, ದೇವಸ್ಥಾನವನ್ನು ಕೆಡವಿ ಹಾಕಿ. ರೆಹಮಾನ ಬಶೀರ ಹೆಸರಿನ ಮಸೀದಿಯನ್ನು ಕಟ್ಟಿಸಿದನೆಂದು ಹೇಳಲಾಗುತ್ತದೆ.

ರಾಜಾ ಪಿತಾಂಬರಿ ಪಿಡ್ಡಿ ನಾಯಕರು ಆರು ವರ್ಷಗಳವರೆಗೆ ತಮ್ಮ ಸೈನ್ಯವನ್ನು ಕಟ್ಟಿ ಮತ್ತೆ ಈ ಕೋಟೆಯ ಮೇಲೆ ದಾಳಿ ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡು, ಸಹಜವಾಗಿಯೇ ಮಸೀದಿಯನ್ನು ಕೆಡವಿ, ಮತ್ತೆ ಮಂದಿರವನ್ನು ಕಟ್ಟಿಸುವ ಸಿದ್ಧತೆ ನಡೆಸಿದ್ದರು. ಇಂದಿಗೂ ಅದರ ಅವಶೇಷಗಳನ್ನು ಕಾಣಬಹುದು. ಅರ್ಧಕ್ಕೆ ನಿಂತಿರುವ ಮಂದಿರದ ಶಿಲಾಕಂಬಗಳು, ಪ್ರಾಂಗಣ ಇಂದಿಗೂ ಕಾಣುತ್ತವೆ. ಸದ್ಯಕ್ಕೆ ಸಾಂಕೇತಿಕವಾಗಿ ಇಲ್ಲಿ ಗುಡಿಯ ಅವಶೇಷಗಳಿವೆ.

ಇಂಥ ಮಹೋನ್ನತ ಇತಿಹಾಸ ಹೊಂದಿರುವ ಈ ಕೋಟೆಯ ಒಟ್ಟು ವಿಸ್ತೀರ್ಣ 17 ಎಕರೆ 14 ಗುಂಟೆ ಎಂದು ದಾಖಲೆಗಳಿಂದ ತಿಳಿದುಬರುತ್ತದೆ. ಈ ಪುರಾತನ ಕೋಟೆ ಶೂರ–ವೀರ ನಾಯಕ ದೊರೆಗಳನ್ನು ತನ್ನ ಮಡಿಲಲ್ಲಿಟ್ಟುಕೊಂಡು ಸ್ವಾಭಿಮಾನಿ ಪುಟ್ಟ ಹಿಂದೂ ರಾಷ್ಟ್ರಕ್ಕೆ ನಾಂದಿ ಹಾಡಿದ ಪ್ರಥಮ ಸಾಕ್ಷಿಯಾಗಿ ನಿಂತಿದೆ. ಭಾರತದ ಉದ್ದಗಲಕ್ಕೂ ಸಾಮ್ರಾಜ್ಯವನ್ನು ವಿಸ್ತರಿಸಿದಂತಹ ಮೊಗಲರಿಗೆ ನಿದ್ದೆಗೆಡಿಸಿದ ಅಪೂರ್ವ ಇತಿಹಾಸ ಈ ಕೋಟೆಗಿದೆ. ಸಾಮ್ರಾಟ ಔರಂಗಜೇಬ ಮತ್ತೆ ಈ ಕೋಟೆ ವಶಪಡಿಸಿಕೊಳ್ಳಲು ತನ್ನ ಅವಸಾನದವರೆಗೂ ಹೋರಾಟ ನಡೆಸಿದ್ದನ್ನು, ಇತಿಹಾಸದ ಪುಟಗಳನ್ನು ತಿರುವಿದಾಗ ರೋಚಕವಾದ ಅಂಶಗಳು ಹೊರಬೀಳುತ್ತವೆ. ಅವೆಲ್ಲವುಗಳಿಗೂ ಸಾಕ್ಷಿಯಾಗಿರುವದು ವಾಗಣಗಿರಿ ಕೋಟೆಯಾಗಿರುವದು ಒಂದು ವಿಶೇಷ.

ರಾಜಾ ಗಡ್ಡಿ ಪಿಡ್ಡನಾಯಕರಿಗೆ ಪುತ್ರ ಸಂತಾನವಿಲ್ಲದ ಕಾರಣ, ಅಣ್ಣನಾದ ದೊರೆ ಗಡ್ಡಿ ಲಿಂಗನಾಯಕ (ಗುಡುಗುಂಟಿ ಸಂಸ್ಥಾನ)ನ ಪುತ್ರ ರಾಜಾ ಪಾಮನಾಯಕನನ್ನು ದತ್ತು ಸ್ವೀಕರಿಸಿದ. ಆತ ಇತಿಹಾಸದಲ್ಲಿ ಪಸರಂಗಿ ಪಾಮನಾಯಕನೆಂದೇ ಪ್ರಸಿದ್ಧಿ ಪಡೆದ. ಆನಂತರ ಮೊರನೆಯವರಾಗಿ ಈ ಕೋಟೆ ಆಳಿದ ದೊರೆ ಪಿತಾಂಬರಿ ಬಹೀರ ಪಿಡ್ಡಿ ನಾಯಕರು.

ವಾಗಣಗಿರಿಯಿಂದ ರಾಜಾ ಪಿತಾಂಬರಿ ಬಹೀರ ಪಿಡ್ಡಿನಾಯಕರು, ತಮ್ಮ ರಾಜಧಾನಿಯನ್ನು 1708 ರಿಂದ 1710ರ ಅವಧಿಯಲ್ಲಿ ಸ್ಥಳಾಂತರಿಸಿದರು. 1727ರಲ್ಲಿ ವೇಣುಗೋಪಾಲ ಸ್ವಾಮಿ ದೇವಸ್ಥಾನವನ್ನೂ ಸುರಪುದಲ್ಲಿ ಕಟ್ಟಿಸಿದರು. ಈ ನೂತನ ಸಂಸ್ಥಾನಕ್ಕೆ ಸುರಪುರವೆಂದು ಹೆಸರಿಡುವಾಗ ಆಗಿನ ಯೋಗಿ ಗೋಣಪ್ಪನವರ ವಿಚಾರದಂತೆ ನಾಮಕರಣ ಮಾಡಲಾಯಿತೆಂದು ತಿಳಿದು ಬರುತ್ತದೆ.

ಮೊಗಲ ಸುಲ್ತಾನ ಔರಂಗಜೇಬ ಆರು ತಿಂಗಳ ಕಾಲ ದೇವಪುರದಲ್ಲಿ ಬೀಡು ಬಿಟ್ಟು, ದೇವಪುರ ಮತ್ತು ಅದರ ಸೀಮೆಯಲ್ಲಿ ಬರುವ ಗ್ರಾಮಗಳನ್ನು ಧ್ವಂಸಗೊಳಿಸಿ, ಅಲ್ಲಿರುವ ಐತಿಹಾಸಿಕ ಸ್ಮಾರಕಗಳು, ಸಾಂಸ್ಕೃತಿಕ ಕುರುಹುಗಳನ್ನು ನಾಶಪಡಿಸಿದ. ವಾಗಣಗಿರಿಯ ಪೂರ್ವ ದಿಕ್ಕಿನಲ್ಲಿರುವ ದೇವಪುರದ ಹೆಸರು ಅಳಿಸದಂತೆ ಸುರಪುರ ಸಂಸ್ಥಾನವೆಂದು ರಾಷ್ಟ್ರೀಯ ಇತಿಹಾಸದಲ್ಲಿ ಪ್ರಸಿದ್ಧಿ ಪಡೆಯಿತು.

ವಾಗಣಗಿರಿ ಸಂಸ್ಥಾನದ ಸಂಸ್ಥಾಪಕ ದೊರೆಯಾದ ರಾಜಾ ಗಡ್ಡಿ ಪಿಡ್ಡನಾಯಕರು, ವಿಜಾಪೂರ ಆದಿಲಶಾಹಿಗಳು ಕಟ್ಟಿದ ಪಂದ್ಯಕ್ಕೆ ಉತ್ತರವಾಗಿ, ಮದಿಸಿದ ಆನೆಯನ್ನು ಮಣಿಸಿದ್ದಕ್ಕೆ, ಮಹ್ಮದ ಆದಿಲ್ ಶಾಹನಿಂದ ರಾಜ ಮರ್ಯಾದೆಯ ಗೌರವ ಸೂಚಕವಾಗಿ 'ಮದಗಜ ಮಲ್ಲ'ನೆಂದು ಬಿರುದಾಂಕಿತನಾಗುತ್ತಾನೆ.

ಸುರಪುರದ ಅರಮನೆಯಲ್ಲಿ ಇಂದಿಗೂ ಈ ಬಿರುದಾಂಕಿತದ ಪತ್ರವಿದೆ. ದೇಶದ ಯಾವ ಅರಸರ ಬಳಿಯೂ ಕಾಣದ ಹೆಮ್ಮೆಯ ಪತ್ರವಿದೆ. ಇದನ್ನು ಸ್ವತಃ ಸುಲ್ತಾನ ಔರಂಗಜೇಬನು ತನ್ನ ಬಲಗೈ ಅದ್ದಿ ಮೂಡಿಸಿದ ಛಾಪವಿರುವ ಪತ್ರವಿದೆ. ಇದರಲ್ಲಿ 'ಈ ದೊರೆ ಮುಸಲ್ಮಾನನಾಗಿಲ್ಲವಲ್ಲ. ಇಂತಹ ವೀರ ಸ್ವಾಭಿಮಾನಿ ದೊರೆ ನಮ್ಮ ಧರ್ಮ ಬಂಧುವಾಗಿಲ್ಲದಿರುವುದು ನನಗೆ ಬಹಳ ಖೇದವಾಗಿದೆ' ಎನ್ನುವ ತನ್ನ ಮನದ ವಿಚಾರವನ್ನು ಸುಲ್ತಾನ ವ್ಯಕ್ತಪಡಿಸಿದ್ದಾನೆ. ಸುಲ್ತಾನನ ಹಸ್ತಾಕ್ಷರವಿರುವ ಪತ್ರ ಗಡ್ಡಿ ಪಿಡ್ಡ ನಾಯಕರ ಧೀರ ಹೆಗ್ಗಳಿಕೆಯ ಗುರುತಾಗಿದೆ.

ದೊರೆಗಳಾದ ರಾಜಾ ಪಾಮನಾಯಕರ ಆಳ್ವಿಕೆಯಲ್ಲಿ ಗೋಗಿಗೆ ಬಂದು, ಶಹಾಪುರ ಕೋಟೆಯನ್ನು 1679 ರಲ್ಲಿ ದಿಲ್ಲೇರಖಾನನ್ನು ಮುತ್ತಿಗೆ ಹಾಕಿ ಸೋಲಿಸುತ್ತಾನೆ. ಈ ಸುದ್ದಿ ತಿಳಿದ ಔರಂಗಜೇಬ "ಬೇಡರಿಗೆ ನೂರು ಧನ್ಯವಾದಗಳು, ನಮ್ಮ ಬಹಾದ್ದೂರರಿಗೆ ಸಾವಿರ ತಿರಸ್ಕಾರಗಳೆಂದು" ಉದ್ಗರಿಸುತ್ತಾನೆ. ಇಂತಹ ವೀರಾವೇಶದ ಹಲವು ಪ್ರಮುಖ ಘಟನೆಗಳು, ಈ ವೀರ ದೊರೆಗಳ ಕಾಲದಲ್ಲಿ ನಡೆದಿರುವುದನ್ನು ಇತಿಹಾಸದ ದಾಖಲೆಗಳು ಹೇಳುತ್ತವೆ.

ಫ್ರೆಂಚರ ವಶದಲ್ಲಿದ್ದ ಪಾಂಡಿಚೇರಿಯ ದುರ್ಗಮ ಕೋಟೆಯನ್ನು, ಯಾವುದೇ ಮುಸ್ಲಿಂ ಸುಲ್ತಾನರಿಂದ ಅಥವಾ ಬ್ರಿಟಿಷರಿಂದಲೂ ಗೆಲ್ಲಲು ಸಾಧ್ಯವಾಗಿರಲಿಲ್ಲ. ನಾಸರ್‌ಜಂಗ್ ಮತ್ತು ಬ್ರಿಟಿಷರ ಜೊತೆ ನಡೆದ ಒಪ್ಪಂದದಂತೆ, ಸುರಪುರದ ರಾಜಾ ಮೊಂಡುಗೈ ವೆಂಕಟಪ್ಪ ನಾಯಕರು, ಯುದ್ಧ ಮಾಡಿ ಕೋಟೆಯನ್ನು ಗೆದ್ದು ನಾಸರ್‌ಜಂಗನಿಗೆ ಕರಾರಿನಂತೆ ಒಪ್ಪಿಸಿದ.

ಈ ನಾಡಿನ ನಾಯಕರ ಏಕಮೇವ ಬೇಡರ ಸೈನ್ಯ, ಸಂಪರ್ಕ ಸಾಧನದ ಕೊರತೆ ಮುಂತಾದ ಅನಾನುಕೂಲತೆಗಳ ನಡುವೆಯೂ ಪಾಂಡಿಚೇರಿಗೆ ತೆರಳಿ ಕೇವಲ ಮೂರು ತಾಸುಗಳಲ್ಲಿ ಈ ಕೋಟೆಯನ್ನು ವಶಪಡಿಸಿಕೊಂಡ ಮಹಾ ಪರಾಕ್ರಮಿ ಈ ಬೇಡ ನಾಯಕ ದೊರೆ. ಬರುವಾಗ ಮಾರ್ಗಮಧ್ಯೆ ಕಡಪ ಮತ್ತು ಕರ್ನೂಲ ನವಾಬರನ್ನು ಸೋಲಿಸಿ, ನೂರಾರು ಹೆಣ್ಣುಮಕ್ಕಳನ್ನು

ರಕ್ಷಿಸಿದ. ಆನಂತರ ನಾಸರಜಂಗ್‌ನಿಗೆ ಪಟ್ಟಕ್ಕೆ ಕೂಡಿಸಿದ. ಹೈದರಾಬಾದ ಪ್ರಾಂತ್ಯದಲ್ಲಿ ನಡೆಯುವ ಗೋಹತ್ಯೆಯನ್ನು ನಿಲ್ಲಿಸಿದ. ಮೊಂಡುಗೈ ವೆಂಕಟಪ್ಪ ನಾಯಕರ ಕಾಲದ ಪಾಂಡಿಚೇರಿಯ ಕಾಳಗ ಜಗತ್ಪಸಿದ್ಧವಾಗಿದ್ದು, ಇತಿಹಾಸ ಪುಟದಲ್ಲಿ ಬಹುಪ್ರಮುಖವಾಗಿ ಉಲ್ಲೇಖಿಸಲಾಗಿದೆ.

ವಾಗಣಗಿರಿಯಿಂದ ಸುರಪುರ ಸಂಸ್ಥಾನಕ್ಕೆ ಬಂದ ರಾಜಾ ಪಿತಾಂಬರಿ ಪಿಡ್ಡಿ ನಾಯಕರಿಂದ 1858 ರ ಸ್ವಾತಂತ್ರ್ಯದ ಕಿಡಿ ಹೊತ್ತಿಸಿದ ಕ್ರಾಂತಿವೀರ ರಾಜಾ ವೆಂಕಟಪ್ಪ ನಾಯಕರ ಆಳ್ವಿಕೆಯವರೆಗೂ ಇತಿಹಾಸದಲ್ಲಿ ಮರೆಯದ ವೀರರನ್ನು ಕಾಣಬಹುದು. ಸಿಪಾಯಿ ದಂಗೆಯ ಕಾಲದಲ್ಲಿ ದಕ್ಷಿಣ ಭಾರತದ ಎಲ್ಲಾ ಅರಸರ ನಾಯಕನಾಗಿ, ದಕ್ಷಿಣಾಧೀಶ್ವರನೆಂದು ರಾಜಾ ವೆಂಕಟಪ್ಪ ನಾಯಕ ಹೆಸರು ಪಡೆದರು. ಇವರ ನೆನಪಿನಲ್ಲಿ ಸುರಪುರದ ಇಂದಿನ ಹಳೆ ಆಸ್ಪತ್ರೆಯ ಆವರಣದಲ್ಲಿ ಇನ್ನೂ ಸ್ಮಾರಕವೊಂದಿದೆ. ಭಾರತದಲ್ಲಿ ಹಿಂದೂ ಸಂಸ್ಕೃತಿ ಉಸಿರಾಡಲು ಛತ್ರಪತಿ ಶಿವಾಜಿ ಮಹಾರಾಜ ಹೇಗೆ ಪ್ರಮುಖ ಪಾತ್ರ ವಹಿಸಿದನೋ ಅದರಂತೆ ಸುರಪುರದ ದೊರೆಗಳೂ ಹಿಂದೂ ಸಂಸ್ಕೃತಿಯ ಉಸಿರಾಗಿ, ಸರ್ವಧರ್ಮ ಸಹಿಷ್ಣುಗಳಾಗಿ ಆಡಳಿತ ನಡೆಸಿದರು.

ಸುರಪುರ ಸಂಸ್ಥಾನ, ವಿಜಯನಗರದ ಆನಂತರ ಸ್ವತಂತ್ರ ಹಿಂದೂ ರಾಷ್ಟ್ರವಾಗಿ ಬಹುಕಾಲ ಉಳಿದು ಬೆಳೆದು ಬಂದಿರುವ ಏಕಮೇವ ಸಂಸ್ಥಾನವೆಂದರೆ ತಪ್ಪಾಗಲಿಕ್ಕಿಲ್ಲ. ಬೀದರಿನ ಬರೀದ ಶಾಹಿಗಳು ಕಲಬುರ್ಗಿಯ ಬಹಮನಿಗಳು, ಬಿಜಾಪುರದ ಆದಿಲ್ ಶಾಹಿಗಳು, ಹೈದರಾಬಾದಿನ ನಿಜಾಮರು ಮತ್ತು ಪರಕೀಯರಾದ ಫ್ರೆಂಚ, ಬ್ರಿಟೀಷರ ನಡುವೆ ಇದ್ದು, ಇಷ್ಟೆಲ್ಲದರ ಮಧ್ಯೆಯೂ ಸ್ನೇಹ ಕಲಹದೊಂದಿಗೆ ಸ್ವತಂತ್ರವಾಗಿ ಹಾಗೂ ಸ್ವಾಭಿಮಾನಿಗಳಾಗಿ ವೀರತನದಿಂದ ಆಳಿದ್ದು ಇವರ ಕೆಚ್ಚೆದೆಯ ಸಂಕೇತವಾಗಿದೆ.

(ಎನ್.ಎಸ್.ಎಸ್.)

ವಾಡೆಗಳು: ಹಳೆಯ ಕಾಲದ ಬಹು ದೊಡ್ಡ ಭವ್ಯ ಕಟ್ಟಡಕ್ಕೆ 'ವಾತ' 'ತ್ವಾತ' ದಿಂದ ತದ್ಭವವಾಗಿ ಹುಟ್ಟಿದ ಶಬ್ದಗಳು 'ವಡ', 'ವಾಡ', 'ವಾಡೆ'. ತತ್ಸಮ ಮೂಲ ಶಬ್ದ 'ವಾತ' ವೆಂದರೆ– ಉಪವನ, ಉದ್ಯಾನವನ, ತೋಟ, ಸ್ಥಳ, ದರ್ಮಶಾಲೆ, ಮನೆ, ಆವಾರ, ಪೌಳಿ, ನೀರಿನ ವಾರಿ, ಬೇಲಿಯ ಆವರಣ, ಅಂಗಳ, ಓಣಿ–ತೋಟದ ಹಿತ್ತಲು, ಎಂಬ ವಿವಿಧ ಅರ್ಥ ಹೊಂದಿದೆ. 'ವಾತ'– ಇದು ಸಂಸ್ಕೃತ ಶಬ್ದ. 'ವಸತಿ' ಎನ್ನುವ ಸಂಸ್ಕೃತ ಶಬ್ದವೂ ಮನೆ, ವಾಸಸ್ಥಳ, ನೆಲೆಸುವಿಕೆ ಎಂಬರ್ಥದಲ್ಲಿ ಬಳಕೆಯಾಗುತ್ತದೆ. 'ವಾಡಿ'–ವಾಡಾ' ಎನ್ನುವ ಸಂಸ್ಕೃತ ಶಬ್ದವು ಆವಾರ, ದೊಡ್ಡ ಆವಾರದ ಭವ್ಯಕಟ್ಟಡ, ಚಿಕ್ಕಕಾಡು, ಸಣ್ಣಕಾಡು ಎನ್ನುವ ಅರ್ಥಗಳನ್ನು ಹೊಂದಿದೆ. ಈ ಎಲ್ಲ ವಿವಿಧ ಶಬ್ದಗಳು ಹಾಗೆ, ಅಂತೆ ಎಂದು ಅರ್ಥ ಕೊಡುವ ಸಂಸ್ಕೃತದ 'ವತ್' ಪ್ರತ್ಯಯದಿಂದ ಹುಟ್ಟಿರುವ ವಿವಿಧ ಶಬ್ದಗಳಾಗಿರಬಹುದು.

ದೇಶಮುಖ, ದೇಸಾಯಿ, ಸರ್ ದೇಸಾಯಿ, ದೇಶಪಾಂಡೆ, ಪೊಲೀಸ್‌ಗೌಡ, ಮಾಲಿಗೌಡ, ಸಾಹುಕಾರ ಮುಂತಾದವರು ಬಹುದೊಡ್ಡ ಜಾಗದಲ್ಲಿ ಕಟ್ಟಿಸಿದ ಬಹುಸಂಖ್ಯಾತ ಮನೆಗಳನ್ನು ಒಳಗೊಂಡ ಭವ್ಯ ಕಟ್ಟಡಗಳೇ ವಾಡೆಗಳು. ಇವುಗಳನ್ನು ದೇಶಮುಖ ವಾಡೆ, ಗೌಡರ ವಾಡೆ– ಅಂದರೆ ವಾಸಿಸುವ ಸ್ಥಳ ಎಂದು ಕರೆಯಲಾಗುತ್ತಿತ್ತು. ಈ ವಾಡೆಗಳು ಕಟ್ಟಿಗೆಯ ಶಿಲ್ಪ, ಚಿತ್ರ, ವರ್ಣ ಚಿತ್ರ ಶಿಲೆಗಳಿಗೆ ಕಲೆಗಳಿಗೆ ಹೆಸರುವಾಸಿ, ಈ ವಾಡೆಗಳ ಕಟ್ಟಿಗೆಯ ಕುಸುರಿ ಕೈ ಚಳಕ ಕಲಾವಿದರ ನೈಪುಣ್ಯತೆಗೆ ಸಾಕ್ಷಿಯಾಗಿವೆ.

(ಎಸ್.ಕೆ.ಯು.)

ವಾರಸುದಾರರು: ಕೌಟುಂಬಿಕ ಸಂಬಂಧ ತಿಳಿಸುವ ನಾಮಪದ, ಇದೀಗ ವ್ಯಾಪಕವಾಗಿ ಬಳಕೆಗೊಳ್ಳುತ್ತಿದೆ. ಮನೆತನದ ವಾರಸುದಾರರು, ರಾಜಕೀಯ ವಾರಸುದಾರರು, ಸಾಹಿತ್ಯಿಕ–ಸಾಂಸ್ಕೃತಿಕ ವಾರಸುದಾರರು ಹಾಗೂ ಒಂದು ಪ್ರದೇಶದ ಪರಂಪರೆ ಮುಂತಾಗಿ ಗಣನೆಗೆ ಬಂದಿದೆ.

ಜಮಾದಾರ, ಕಿಲ್ಲೇದಾರ, ಬಿರಾದಾರ, ಮುಡದಾರ ಮುಂತಾದ ಪದಗಳಿರುವಂತೆ ವಾರೀಸ್> ವಾರ್ಸಾ> ವಾರ್ಸು ಆಗುತ್ತಾ ವಾರಸು ಪದಕ್ಕೆ ದಾರ ಎಂಬ ಪ್ರತ್ಯಯ ಬಂದು ವಾರಸುದಾರ ಆಗಿರುವುದು ಕಂಡು ಬರುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸಂಕ್ಷಿಪ್ತ ನಿಘಂಟುವಿನಲ್ಲಿ ವಂಶ ಪರಂಪರೆಯಿಂದ ಬರುವ ಆಸ್ತಿಯ ಹಕ್ಕು ಪಡೆಯುವವನು, ಪಿತ್ರಾರ್ಜಿತ ಹಕ್ಕುದಾರ ಎಂದು ಅರ್ಥ ಹೇಳಿದೆ. ಪೋಷಕ, ಮೇಲ್ವಿಚಾರಕನೆಂದು ವಿವರಣೆ ಕೊಟ್ಟಿದೆ. ಎಲ್.ಎಸ್. ಶೇಷಗಿರಿರಾವ್ ಕನ್ನಡ–ಕನ್ನಡ–ಇಂಗ್ಲಿಷ್, ಇಂಗ್ಲಿಷ್– ಕನ್ನಡ ನಿಘಂಟುವಿನಲ್ಲಿ ವಾರಸುದಾರ ನಾಮಪದ, ಬಾಧ್ಯಸ್ಥ, ಹಿಂದಿನವರಿಂದ ಆಸ್ತಿಮೊತ್ತಕ್ಕೆ ಹಕ್ಕು ಪಡೆದವನು (n) heir, successor ಎಂಬರ್ಥಗಳನ್ನು ನೀಡಿದ್ದಾರೆ.

'ವಾರಸುದಾರ' ಎಂದರೆ ರಕ್ತ ಹಂಚಿಕೊಂಡು ಹುಟ್ಟಿದ, ನಿಕಟ ಸಂಬಂಧವುಳ್ಳ ಸಂಬಂಧಿ ಎಂದು ಕೌಟುಂಬಿಕ ಸಂಬಂಧ ಹೇಳುವ ಪದ ಚಾಲ್ತಿಯಲ್ಲಿದೆ. ಸಂಬಂಧಿಕರಿಲ್ಲದ, ತಾಯಿ–ತಂದೆಗಳಿಲ್ಲದವರನ್ನು 'ಬೇವಾರೀಸ್' ಎಂದು ಹೇಳುಲಾಗುತ್ತದೆ. ಅಲ್ಲದೆ ದಿಕ್ಕಿಲ್ಲದ, ದಿಕ್ಕೇಡಿ, ಯಾರ ಸಂಬಂಧವಿಲ್ಲ 'ಬೇವಾರ್ಸಿ' ಎಂಬ ಬೈಗುಳ ಕೂಡ ಕನ್ನಡ, ಮರಾಠಿಗಳಲ್ಲಿದೆ. ಅನಾಥ ಶವ (ಹೆಣ) ಬೇವಾರ್ಸಿ ಹೆಣ ಪತ್ರಿಕೆಗಳಲ್ಲಿ ಪ್ರಯೋಗಗೊಳ್ಳುತ್ತಿವೆ.

(ಎಚ್.ಎಸ್.ಪಿ.)

ವಾರಾನ್ನ: ಶಿಕ್ಷಣ ಸಾಧನೆಯಲ್ಲಿ ಬಡವರೂ ಅನಾಥರು ಸರದಿಯಂತೆ ಉಚಿತವಾಗಿ ಪಡೆಯುವ ಅನ್ನ. 'ವಾರದಲ್ಲಿ ಸರದಿಯಂತೆ–ಬೇರೆ ಬೇರೆಯವರ ಮನೆಯಲ್ಲಿ' ಬಡವಿದ್ಯಾರ್ಥಿಗಳು ಊಟ ಪಡೆಯುತ್ತಾರೆ. ಅನ್ನದಾನ ಎಲ್ಲ ದಾನಗಳಲ್ಲೂ ಶ್ರೇಷ್ಠವಾದದ್ದು. ಮಠಮಾನ್ಯಗಳಲ್ಲಿ ದಾಸೋಹ ಪದ್ಧತಿ ರೂಢಿಯಲ್ಲಿದ್ದಂತೆ ಬ್ರಾಹ್ಮ

(ಎಸ್.ಕೆ.ಇ.)

ವಿ

ವಿಜ್ಞಾನೇಶ್ವರ ಗವಿ: 12ನೆಯ ಶತಮಾನದಲ್ಲಿ ನಿರ್ಮಿತವಾದ ಶರಣರ ಸ್ಮಾರಕಗಳಲ್ಲಿ ಒಂದು. ಇದು ಬಸವಕಲ್ಯಾಣ ಪಟ್ಟಣದಿಂದ 2ಕಿ.ಮೀ. ದೂರದಲ್ಲಿ ಪಟ್ಟಣದ ಪಶ್ಚಿಮ ಭಾಗದಲ್ಲಿ ನಿರ್ಮಿತವಾದ ಈ ಗವಿಯ ಮುಂದೆ ಪಡಸಾಲೆಯಂತಿದೆ. ಗವಿಗೆ ಸುತ್ತುವರಿದಂತೆ ಕೆಲವು ಕೋಣೆಗಳಿವೆ. ಗವಿಯ ಒಳಗಡೆ ಸಮಾಧಿ ಇದೆ. ಈ ಸಮಾಧಿಗೆ 'ಮರಿದೇವರ ಗುಡ್ಡವೆಂದು' ಕರೆಯುತ್ತಾರೆ. ಈಗಲೂ ನೋಡುವುದಕ್ಕೆ ತುಂಬ ಆಕರ್ಷಕ ವಾಗಿರುವ ಈ ಸ್ಥಳವು ಸುಂದರ ಮತ್ತು ಪ್ರಶಾಂತವಾದ ವಾತಾವರಣದಲ್ಲಿದೆ. ದೂರ ದೂರದಿಂದ ನೋಡಲು ಬಂದಂಥಹ ಪ್ರವಾಸಿಗರಿಗೆ 12ನೆಯ ಶತಮಾನದ ಶಿವಶರಣರ ಕುರಿತು ಹೊಸ ಕಲ್ಪನೆಯು ಮೂಡಿಸುತ್ತದೆ. 20ನೇಣ ಸಮಾಜದಲ್ಲಿ ಸ್ವಜಾತಿ ಬಡ ವಿದ್ಯಾರ್ಥಿಗಳಿಗೆ ವಾರಾನ್ನ ಕೊಡುವ ಸಂಪ್ರದಾಯವಿದೆ. ಶಿಕ್ಷಣ ಪಡೆಯುವ ಉದ್ದೇಶದಿಂದ ಗ್ರಾಮದಿಂದ ನಗರಕ್ಕೆ ಬಂದ ಬಡ ಹಾಗೂ ಅನಾಥ ವಿದ್ಯಾರ್ಥಿಗಳಿಗೆ ವಾರಾನ್ನದಿಂದ ಪೋಷಣೆ ನೀಡುವುದು. ಧರ್ಮ ಕಾರ್ಯವೆಂದೇ ಭಾವಿಸಲಾಗಿದೆ. ಸಾಧನೆಯ ಹಂಬಲವಿದ್ದೂ ಆರ್ಥಿಕ-ಸಾಮರ್ಥ್ಯವಿರದ ವಿದ್ಯಾರ್ಥಿಗಳಿಗೆ ಇದು ವರದಾನವಾಗಿದೆ. ಕೊಡುವವರಲ್ಲಿ ದಾನ ಧರ್ಮ ಮಾಡಿದ ಸಮಾಧಾನದ ಜೊತೆಗೆ ವಿದ್ಯಾರ್ಜನೆಗೆ ಸಹಾಯ ಸಲ್ಲಿಸಿದ ಧನ್ಯತೆಯೂ ಇರುತ್ತದೆ.ಯ ಶತಮಾನದಲ್ಲಿ ರಚಿತವಾದ ವಿಜ್ಞಾನೇಶ್ವರ ಗವಿಯ 'ಮಿತಾಕ್ಷರ ಸಂಹಿತೆ' ಎಂಬ ಕಲೆಯ ಪ್ರಮುಖ ವಚನಗಳ ಸಾರವನ್ನು ಕುರಿತು ಹೇಳುತ್ತದೆ. ಅಂದು ಬಾಳಿ ಬದುಕಿದ ಶಿವಶರಣರ ಮಹತ್ವ ಪೂರ್ಣವಾದ ಉದ್ದೇಶವನ್ನು ಕುರಿತು ವಿಶದಪಡಿಸುತ್ತದೆ. *(ಪಿ.ಕೆ.ಕೆ.)*

ವಿಪ್ರಗ್ರಾಮ: ಐತಿಹಾಸಿಕ ಸ್ಥಳ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕು ಐತಿಹಾಸಿಕವಾಗಿ ತನ್ನದೇ ಆದ ವಿಶಿಷ್ಠ ಸ್ಥಾನ ಹೊಂದಿದೆ. ವಿಜಯನಗರ ಅರಸರ ಕಾಲದಲ್ಲಿ ಶ್ರೀಮಂತವಾದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ್ದ ಈ ತಾಲ್ಲೂಕಿನಲ್ಲಿ ಪ್ರಾಚೀನ ದೇವಾಲಯಗಳು, ಸ್ಮಾರಕಗಳು ಅಪಾರ ಸಂಖ್ಯೆಯಲ್ಲಿ ದೊರೆಯುತ್ತವೆ. ನಿರ್ಲಕ್ಷ್ಯಕ್ಕೊಳಗಾಗಿರುವ ಹಾಗೂ ಅವಸಾನದ ಅಂಚಿನಲ್ಲಿರುವ ಹಲವು ದೇವಾಲಯಗಳು ಇಲ್ಲಿ ಅಪಾರ ಪ್ರಮಾಣದಲ್ಲಿ ಕಾಣಸಿಗುತ್ತವೆ. ಇಂತಹ ದೇವಾಲಯಗಳಲ್ಲಿ, ಗಂಗಾವತಿಯಿಂದ ಮೂರು ಕಿಲೋಮೀಟರ್ ದೂರವಿರುವ ವಿಪ್ರಗ್ರಾಮದ ಶಂಕರಲಿಂಗ ದೇವಾಲಯವೂ ಒಂದು. ಗಂಗಾವತಿಯಿಂದ ಮೂರು ಕಿ.ಮೀ. ದೂರದಲ್ಲಿ ಹಿಂದೆ ವಿಪ್ರನಾರಾಯಣ ಎಂಬ ಊರು ಅಸ್ತಿತ್ವದಲ್ಲಿತ್ತು. ನಿಧಿಗಳ್ಳರ ಆಸೆಗೆ ಬಲಿಯಾಗಿರುವ ಈ ದೇವಾಲಯದ ಚಾರಿತ್ರಿಕ ಹಿನ್ನೆಲೆ ಅಪರೂಪವಾದದ್ದು.

ವಿಪ್ರನಾರಾಯಣ ನೊಳಂಬಪಲ್ಲವರ ಎರಡನೇ ರಾಜಧಾನಿಯಾಗಿತ್ತು. ಗಂಗ, ರಾಷ್ಟ್ರಕೂಟರ ಕಾಲದಲ್ಲಿ ಹಂಚೇರು ವಿನಿಂದ ಆಳುತ್ತಿದ್ದ ನೊಳಂಬ ಪಲ್ಲವರು, ಕಿರುಕುಳದಿಂದಾಗಿ ಉತ್ತರಕ್ಕೆ ಬಂದು ಕಂಪಲಿಯನ್ನು ರಾಜಧಾನಿಯನ್ನಾಗಿ ಮಾಡಿ-ಕೊಂಡು ಕಲ್ಯಾಣ ಚಾಲುಕ್ಯರ ಸಾರ್ವಭೌಮತ್ವದ ಅಡಿಯಲ್ಲಿ ಆಳ್ವಿಕೆ ನಡೆಸುತ್ತಾರೆ.

ಈ ಮನೆತನದ ದೊರೆ ಜಗದೇಕಮಲ್ಲ. ನೊಳಂಬ ಪೆಮಾನಡಿ ಉದಯಾದಿತ್ಯನು ಕಂಪಲಿಯ ಜೊತೆಗೆ ವಿಪ್ರನಾರಾಯಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು, ಈ ಪ್ರದೇಶವನ್ನು ಆಳಿದ. ಈತನ ಕಾಲ 1044 ರಿಂದ 1071. ತುಂಗಭದ್ರಾ ನದಿಯ ದಂಡೆಯ ಮೇಲೆ ವಿಪ್ರನಾರಾಯಣ ಗ್ರಾಮವು ಕಾಲನ ತುಳಿತಕ್ಕೆ ಸಿಕ್ಕಿ ನಾಶವಾಯಿತು. ಒಂದೆರೆಡು ದೇವಾಲಯಗಳು, ವೀರಗಲ್ಲುಗಳು ಅವಸಾನದ ಅಂಚಿನಲ್ಲಿ ಉಳಿದಿವೆ.

11ನೆಯ ಶತಮಾನದ ಈ ಶಿವ ದೇವಾಲಯ, ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ಕಟ್ಟಲ್ಪಟ್ಟಿದೆ. ಬಿಳಿಕಣಶಿಲೆಯಿಂದ ನಿರ್ಮಿತವಾದ ಈ ದೇವಾಲಯ ಸಭಾಮಂಟಪ, ಅಂತರಾಳ ಹಾಗೂ ಗರ್ಭಗೃಹವನ್ನು ಹೊಂದಿದೆ. ಸಭಾಮಂಟಪದಲ್ಲಿ ರಕ್ಷಾಸ್ಥಾನವಿರುವುದು ವಿಶೇಷ. ಸಭಾಮಂಟಪದ ಅಂತರಾಳದ ಬಾಗಿಲ ಇಕ್ಕೆಲಗಳಲ್ಲಿ ದೇವ ಕೋಷ್ಠಗಳಿವೆ. ಗರ್ಭಗೃಹದಲ್ಲಿ ಪೀಠರ ಹಿತ ಶಿವಲಿಂಗವಿದೆ. ಗರ್ಭಗೃಹದ ಮೇಲೆ ಶಿಖರವಿಲ್ಲ ನಿಧಿಯ ಆಸೆಗಾಗಿ ಶಿವಲಿಂಗವಿದ್ದ ಸ್ಥಳವನ್ನು ಅಗೆದು, ಶಿವಲಿಂಗವನ್ನು ಬಿಸಾಡಲಾಗಿದೆ. ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು ಅಗೆದು ಎಸೆಯಲಾಗಿದೆ. ಸಭಾಮಂಟಪದಲ್ಲಿನ ಸುಂದರವಾದ ನಂದಿ-ಗಣೇಶನ ವಿಗ್ರಹಗಳು ನಿಧಿಗಳ್ಳರ ಆಸೆಗೆ ಬಲಿಯಾಗಿ ಶಿಥಿಲಗೊಂಡಿವೆ.

ವಿಪ್ರನಾರಾಯಣದ ಶಿವ ದೇವಾಲಯದ ಕುರಿತು ಹತ್ತಿರದ ದೇವಘಾಟದ ಶಿವ ದೇವಾಲಯದಲ್ಲಿನ ಶಿಲಾಶಾಸನವೊಂದು ಮಾಹಿತಿ ನೀಡುತ್ತದೆ. ಕ್ರಿ.ಶ. 1059ರ ಕಾಲದ ಈ ಶಾಸನದಲ್ಲಿ ಚಾಲುಕ್ಯರ ಒಂದನೇಯ ಸೋಮೇಶ್ವರನು, ವಿಪ್ರ ಶಿವದೇವಾಲಯಕ್ಕೆ ದಾನ ನೀಡಿದ ವಿವರಗಳಿವೆ. ಇದರಲ್ಲಿ ವಿಪ್ರನಾರಾಯಣ ತುಂಗಭದ್ರೆಯ ಉತ್ತರ ದಡದಲ್ಲಿನ ಕಿಷ್ಕಿಂಧಾ ಪರ್ವತದಲ್ಲಿದ್ದಿತೆಂದು ಹೇಳಿದೆ.

ಇಲ್ಲಿ ವಾಸಿಸುವ ಯತಿಗಳ ಆಶೀರ್ವಾದ ಪಡೆದು, ಅವರೊಂದಿಗೆ ಸಮಾಲೋಚನೆ ಮಾಡುವ ಮೂವತ್ತು ದೇವತೆಗಳ ಆವಾಸ ಸ್ಥಾನವಾಗಿ 30 ತೀರ್ಥಗಳನ್ನು ಹೊಂದಿದ್ದು, ಜಗತ್ತಿನ ಪಾಪನಾಶಿಯಾಗಿ ಶುಭಕರವಾಗಿತ್ತೆಂದು ಹೇಳಲಾಗಿದೆ. ಇಲ್ಲಿ ದೇವಪೂಜೆ, ನದೀಪೂಜೆ ಮಾಡಿ ದೇವರಿಗೆ ದಾನ ನೀಡುತ್ತಿದ್ದರು. ಈ ಸ್ಥಾನವು ನೈಷ್ಠಿಕ ಸ್ಥಾನವಾಗಿದ್ದು ಮೋರಖಂಡಿಯ ಜಾದಿನಮಠವಾಗಿತ್ತೆಂದು ವರ್ಣಿಸುತ್ತದೆ. ದೇವಾಲಯದ ಸುತ್ತಲಿನ ಪ್ರದೇಶವೆಲ್ಲ ಇಂದು ಭತ್ತದ ಗದ್ದೆಯಾಗಿ ಮಾರ್ಪಟ್ಟಿದೆ. ಗದ್ದೆಗೆ ಸದಾ ನೀರು ಹರಿಸುವುದರಿಂದ ದೇವಾಲಯ ದಿನೇ ದಿನೇ ಶಿಥಿಲಗೊಂಡು ಕುಸಿಯತೊಡಗಿದೆ. ಗೋಡೆಗಳಲ್ಲಿ ಈಗಾಗಲೇ



ಡೊಳ್ಳು ಕುಣಿತ



ಬಿತ್ತನೆ ಕ್ರಿಯೆ

ಬಿರುಕು ಬಿಟ್ಟು ಕಂಬಗಳು ಸಡಿಲಗೊಂಡು ಯಾವುದೇ ಸಂದರ್ಭದಲ್ಲಿ ಕುಸಿದು ನೆಲಕಚ್ಚುವ ಸ್ಥಿತಿಯಲ್ಲಿವೆ.

ಶಂಕರಲಿಂಗ ದೇವಸ್ಥಾನವೆಂದು ಕರೆಯಲಾಗುವ ಇದನ್ನು ನಾವು ಇನ್ನಷ್ಟು ನಿರ್ಲಕ್ಷಿಸಿದರೆ, ಅಪೂರ್ವವಾದ ಐತಿಹಾಸಿಕ ನೆಲೆ ಮುಳುಗಿ ಹೋಗುತ್ತದೆ. ಗತ ಇತಿಹಾಸದ ಕಥೆ ಹೇಳುವ ಸ್ಮಾರಕಗಳನ್ನು ಕಳೆದುಕೊಳ್ಳುತ್ತೇವೆ. ಬಿಳಿಕಣ ಶಿಲೆಯ ಈ ದೇವಾಲಯದ ಸುತ್ತಲಿನ ಪ್ರದೇಶ ನೀರಾವರಿ ಪ್ರದೇಶವಾಗಿರುವುದರಿಂದ ಕುಸಿಯತೊಡಗಿದೆ. ಹಿಂಬದಿಯ ಬಂಡೆಗಳು ಸಡಿಲಗೊಂಡು ದೇವಾಲಯದ ವಿನಾಶದ ಅಂಚಿನಲ್ಲಿದೆ. ಸರಿಯಾದ ದೇವಾಲಯದಲ್ಲಿ ಮುಳ್ಳು ಕಂಟಿಗಳು ಬೆಳೆದಿವೆ.

(ಜಿ.ಪಿ.ಜಿ.)

ವೀ



ವೀರಣ್ಣ ದಂಡೆ: ಜಾನಪದ ಗ್ರಂಥ ಸಂಪಾದನೆಗೆ ವೈಜ್ಞಾನಿಕ ಕ್ರಮವನ್ನು ಕಟ್ಟಿಕೊಡುವ ದಿಸೆಯಲ್ಲಿ ಡಾ. ದಂಡೆ ಅವರ 'ಜನಪದ ಹಾಲುಮತ ಮಹಾಕಾವ್ಯ' ವಿಶೇಷವಾಗಿ ಗಮನ ಸೆಳೆಯುವುದು. ಕಲಬುರ್ಗಿ ಜಿಲ್ಲೆಯಲ್ಲಿ ಹಾಲು ಮತ ಕಾವ್ಯದ ಹಾಡುಗಾರ ಸಿದ್ದಪ್ಪ ಮೇಟಿ ಅವರನ್ನು ಶೋಧಿಸಿ, 700 ಪುಟಗಳ ಸುದೀರ್ಘ ಪಠ್ಯವನ್ನು ಸಂಗ್ರಹಿಸಿದ್ದಾರೆ.

'ಆಯ್ದ ಗಾದೆಗಳು ಹಾಗೂ ಒಗಟುಗಳು' ಕಲಬುರ್ಗಿ ಜಿಲ್ಲೆಯಲ್ಲಿ ಪ್ರಚಲಿತವಿರುವ ಗಾದೆ, ಒಗಟುಗಳನ್ನು ಸಂಗ್ರಹಿಸಿ, ಗಾದೆಗಳ ಮಾದರಿ ಸೂಚಿ ಹಾಗೂ ಒಗಟುಗಳ ಆಶಯ ಸೂಚಿಗಳನ್ನು ಅನ್ವಯ ವಿಂಗಡಣೆಗಳೊಡನೆ ಪ್ರಕಟಿಸಿದ್ದಾರೆ. ಇವುಗಳಲ್ಲದೆ ಜಾನಪದ–1992 ಎಂಬ ಕೃತಿಯನ್ನು ಡಾ. ದಂಡೆ ಅವರು 1992ರ ವರ್ಷದಲ್ಲಿ ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿಗಾಗಿ ಸಂಪಾದಿಸಿದ್ದಾರೆ. ಅಷ್ಟಾವರಣ ತಿಲಕ (ನಡುಗನ್ನಡ ವೀರಶೈವ ಕಾವ್ಯ) ಚಿಂತನಶೀಲ ಪ್ರಾಧ್ಯಾಪಕ ಬಿ.ಬಿ. ಹೆಂಡಿ ಇವುಗಳಲ್ಲದೆ "ತತ್ತ್ವ ಪದಗಳು–ಪ್ರಾತಿನಿಧಿಕ ಸಂಕಲನ" (2000ವರ್ಷ) ಇತರರೊಂದಿಗೆ ಸಂಪಾದಿಸಿ ಕೊಟ್ಟಿದ್ದಾರೆ.

'ಬೀದಿ ಬಯಲಾಟಗಳು' ಎಂಬುದು ಜನಪದ ರಂಗ ಭೂಮಿ ಮೂಲ ತಿಳಿಸಿ ಕೊಡುವ ಸಂಶೋಧನಾತ್ಮಕ ಕೃತಿಯಾಗಿದೆ. ಭಾರತದಲ್ಲಿ ಬಿಹಾರ ಮತ್ತು ಗುಜರಾತಗಳಲ್ಲಿ ಅಪರೂಪವಾಗಿ ಕಾಣಿಸಿ ಕೊಳ್ಳುವ ಕಲೆ ಕರ್ನಾಟಕ ಬೀದರ ಹಾಗೂ ಗುಲಬರ್ಗಾ ದಲ್ಲಿಯೂ ದೊರೆಯುತ್ತವೆ ಎಂಬುದನ್ನು ಡಾ. ದಂಡೆ ಅವರು ಮೊದಲ ಬಾರಿಗೆ ಪರಿಚಯಿಸಿದ್ದಾರೆ.

ಸಂಶೋಧನೆ, ವಿಶ್ಲೇಷಣೆ, ವಿಮರ್ಶೆ ಜೊತೆಗೆ ಅಂಕಣ ಸಾಹಿತ್ಯದಲ್ಲಿ ಅವರ ಸಾಧನೆ ಗಮನಾರ್ಹವಾಗಿದೆ. 'ಕವಿಮಾರ್ಗ' ಎಂಬ ಸಾಹಿತ್ಯಿಕ ತ್ರೈಮಾಸಿಕ ಪತ್ರಿಕೆಯನ್ನು 1982ರ ವರೆಗೆ 9 ವರ್ಷ ಸಂಪಾದಿಸಿ ಪ್ರಕಟಿಸಿದ್ದಾರೆ.

ಡಾ. ದಂಡೆ ಅವರ ಸಾಹಿತ್ಯ ಸೇವೆಗಾಗಿ 1996ರಲ್ಲಿ ಶ್ರೀ ಬೃಹನ್ಮಠ ಚಿತ್ರದುರ್ಗದಿಂದ **'ಜಾನಪದಶ್ರೀ'** ಪ್ರಶಸ್ತಿ ನೀಡಿ ಗೌರವಿಸಿದೆ. 1981ರಲ್ಲಿ ದೇವರಾಜ ಬಹದ್ದೂರ ಪ್ರಶಸ್ತಿ, ವಿಶ್ವವಿದ್ಯಾಲಯ ಬಹುಮಾನ, 1987ರ ಕರ್ನಾಟಕ ಜಾನಪದ ಅಕಾಡೆಮಿ ಬಹುಮಾನ, ಕಾವ್ಯಾನಂದ ಪ್ರಶಸ್ತಿ. ಕು.ಶಿ. ಹರಿದಾಸ ಭಟ್ಟ ಜಾನಪದ ಪ್ರಶಸ್ತಿ (2000) ಸೇರಿದಂತೆ 2005ರ ಜಾನಪದ ತಜ್ಞ ಡಾ. ಬಿ.ಎಸ್. ಗದ್ದಗಿಮಠ ಪುರಸ್ಕಾರ ನೀಡಿ ಡಾ. ದಂಡೆ ಅವರಿಗೆ ಗೌರವಿಸಿದೆ. *(ಎಸ್.ಡಿ.)*



ವೀರಣ್ಣ ರಾಜೂರ: ಕರ್ನಾಟಕ ಸೃಜನಶೀಲ ಲೇಖಕ. ಗ್ರಂಥ ಸಂಪಾದಕ ಮತ್ತು ಜಾನಪದ ತಜ್ಞ, ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಬೆನಕನಾಳದಲ್ಲಿ ಜೂನ್ 4 ನೆಯ 1947ರಂದು ಬಸಪ್ಪ ರಾಜೂರು ಅವರ ಮಗನಾಗಿ ಜನಿಸಿದರು. ಬೆನಕನಾಳ, ಹನುಮಸಾಗರ, ಗದಗ ಹಾಗೂ ಧಾರವಾಡದಲ್ಲಿ ಕ್ರಮವಾಗಿ ಪ್ರಾಥಮಿಕ, ಪ್ರೌಢ, ಪದವಿ–ಸ್ನಾತಕೋತ್ತರ ವಿದ್ಯಾಭ್ಯಾಸ ಮಾಡಿದ್ದಾರೆ. 1971 ರಲ್ಲಿ ಎಂ.ಎ. ಪ್ರಥಮರಾಗಿ ಪಾಸಾದರು. 1977 ರಲ್ಲಿ 'ಕನ್ನಡ ಸಾಂಗತ್ಯ ಸಾಹಿತ್ಯ' ಸಂಶೋಧನೆಗೆ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಮೊದಲು 1973 ರಿಂದ 1976 ರವರೆಗೆ ಕನ್ನಡ ಅಧ್ಯಯನ ಪೀಠದಲ್ಲಿ ಸಹಾಯಕ ಸಂಶೋಧಕ, ಅಧ್ಯಾಪಕ, ಪ್ರವಾಚಕರಾಗಿ 1994 ರಿಂದ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಇವರ ಕೃತಿಗಳು ಇಂತಿವೆ: 1. ಕನ್ನಡದಲ್ಲಿ ಸಾಂತ್ಯ (ಪ್ರಚಾರೋಪನ್ಯಾಸ 1975), 2. ಕನ್ನಡ ಸಾಂಗತ್ಯ ಸಾಹಿತ್ಯ (ಪಿಎಚ್.ಡಿ. ಮಹಾ ಪ್ರಬಂಧ 1984), 3. ವಚನ ಅಧ್ಯಯನ (ಸಂಶೋಧನಾಲೇಖನಗಳು 1994), 4. ಸ್ವರವಚನಗಳು (ಪ್ರಚಾರೋಪನ್ಯಾಸ 1999), 5. ವಿಚಾರ ಪತ್ನಿಯರು (2000), ಬಸವೋತ್ತರ ಯುಗದ ವಚನಕಾರರು (2001). ನಾಟಕಗಳು:



ಶರಣಬಸವೇಶ್ವರ ದೇವಸ್ಥಾನ, ಗುಲಬರ್ಗಾ

1. ಏಕಾಂಕ ನಾಟಕಗಳು (ಮೂರು ಏಕಾಂಕಗಳು 1975), ಅವರೇ ಗಂಡ ಹೆಂಡ್ತಿ (ಏಕಾಂಕ 1980), 3. ರತ್ನಾಜಿ ಮತ್ತು ಕೆಳದಿ ಚನ್ನಮ್ಮಾಜಿ (ಎರಡು ಬಾನುಲಿ ನಾಟಕಗಳು 1980), 4. ಲವ್ ಅಂದ್ರೆ ಪ್ರೇಮ (ಏಕಾಂಕ 1984), 5. ಸುಬ್ಬಿ ನಿಬ್ಬಣ (ಏಕಾಂಕ 1984), 6. ಗೌಡ್ರ ಅಳಿಯ (ಏಕಾಂಕ 1984), 7. ಹೆಣ್ಣು ಜನ್ಮ (ಸಾಮಾಜಿಕ ಮೂರಂಕಿನ ನಾಟಕ 1996), 8. ಹೊಟ್ಟೆಯ ಮಗಳು ಮೂರಂಕಿನ ಸಾಮಾಜಿಕ ನಾಟಕ 1996), 9. ವಂಶಜ್ಯೋತಿ (ಸಾಮಾಜಿಕ ನಾಟಕ 1996), 10. ಕೊರಡು ಕೊನರುವುದೆ (ಸಾಮಾಜಿಕ ನಾಟಕ 1997), 11. ಬೆಳಗು ನುಂಗಿದ ಕತ್ತಲೆ (ಬಾನುಲಿ ನಾಟಕ 1997), 12. ಕರ್ನಾಟಕ ಕೇಸರಿ (ಐತಿಹಾಸಿಕ ನಾಟಕ 1998).

ಗ್ರಂಥಸಂಪಾದನೆ: ಉರಿಲಿಂಗದೇವರ ವಚನಗಳು 1978, ಶರಣರ ನುಡಿಮುತ್ತುಗಳು 1978, ಸಿದ್ಧಲಿಂಗ ಶತಕ 1978, ವಚನಾಮೃತಸಾರ 1979, ಗಜೇಶ ಮಸಣಯ್ಯನ ವಚನಗಳು 1980, ವಚನಶಾಸ್ತ್ರಸಾರ (ಸಂಪುಟ 1981), ಸರ್ವಜ್ಞನ ವೀರಗಣ ಸ್ತೋತ್ರದ ವಚನಗಳು 1982, ಎಳಮಲೆಯ ಗುರುಶಾಂತದೇವರ ವಚನ ಸಂಕಲನಗಳು 1982, ಶೀಲ ಸಂಪಾದನೆ 1982, ಭಕ್ತ್ಯಾನಂದ ಸುಧಾರ್ಣವ 1985, ಅರಿವಿನ ಮಾರಿತಂದೆಯ ನೂರೊಂದು ವಚನಗಳು 1986, ಸೂಕ್ಷ್ಮ ಮಿಶ್ರ ಷಟ್‌ಸ್ಥಲ– 9987, ಎಲ್ಲಾ ಪುರಾತನ ಸ್ತೋತ್ರದ ವಚನಗಳು 1988, ಪ್ರಭುದೇವರ ಷಟ್‌ಸ್ಥಲ ಜಂಗಮ ಸ್ಥಲ ನಿರ್ದೇಶ 1989, ವಚನಸಾರ 1989, ಶಿವಶರಣೆಯ ವಚನ ಸಂಪುಟ 1991, ಸಂಕೀರ್ಣ ವಚನ ಸಂಪುಟ (ಐದು) 1991, ಸಂಕೀರ್ಣ ವಚನ ಸಂಪುಟ (ಏಳು) 1991, ಸಂಕೀರ್ಣ ವಚನ ಸಂಪುಟ (ಎಂಟು) 1991, ಸಂಕೀರ್ಣ ವಚನ ಸಂಪುಟ (ಒಂಬತ್ತು) 1991, ಜ್ಞಾನ ಷಟ್‌ಸ್ಥಲಸಾರ 1991 ಬಸವಣ್ಣ ವಚನಗಳು 1996, ಶಿವಯೋಗ ಪ್ರದೀಪಿಕೆ ಸ್ವರವಚನ 1989, ಹಾಗಲವಾಡಿ ಮದ್ವೀರಸ್ವಾಮಿಯ ಸ್ವರ ವಚನಗಳು 1989 ಸ್ವರವಚನ ಸಂಪುಟ (ಒಂಬತ್ತು) 1997, ಪ್ರಭುದೇವರ ಮಂತ್ರಗೋಪ್ಯ (ಸಟೀಕು) 1984, ವೀರಶೈವ ತಾರಾವಳಿ ಸಂಪುಟ 1994, ವಚನಶಾಸ್ತ್ರಸಾರ (ಸಂಪುಟ ಎರಡು) 1999, ಕುಮಾರ ರಾಮನ ಸಾಂಗತ್ಯ 2000.

ಹಸ್ತಪ್ರತಿ ಸೂಚಿ ಸಂಪುಟಗಳು: ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ಸಂಪುಟ ಆರು, ಏಳು, ಎಂಟು, ಒಂಬತ್ತು ಹಾಗೂ ಹತ್ತು ಹೀಗೆ ಐದು ಸಂಪುಟಗಳನ್ನು 1992 ರಲ್ಲಿ ಸಿದ್ಧಪಡಿಸಿ ಸಂಪಾದಿಸಿ ಕೊಟ್ಟಿದ್ದಾರೆ.

ಜನಪದ ಸಾಹಿತ್ಯ: ಜನಪದ ಸಾಹಿತ್ಯ ದರ್ಶನ (ಸಂ 14) 1999 ಜಾನಪದ ಜಾಣ್ಮೆ (ಜನಪದ ಲೆಖ್ಖಗಳು) 1985, ತಳವಾಡಿ ಮಲ್ಲವ್ವ ಹೇಳಿದ ಪರಸಂಗಗಳು (ಜನಪದ ಕತೆಗಳು) 1982. ಸಂಸ್ಮರಣ ಹಾಗೂ ಅಭಿನಂದನ ಗ್ರಂಥಗಳು: ಮಹಾಂತ ಜ್ಯೋತಿ–1993, ತಿರುಳ್ಗನ್ನಡ. *(ಎಚ್.ಎಸ್.ಪಿ)*

ವೀರಭದ್ರಪ್ಪ ಬಳಿಗಾರ: ಬಯಲಾಟದ ಕಲಾವಿದ. ಕೊಪ್ಪಳ ತಾಲ್ಲೂಕಿನ ಹನ್ನೊಂದು ಹಳ್ಳಿ ದೇಸಗತಿಯುಳ್ಳ ಬಿಸರಳ್ಳಿಯಲ್ಲಿ 1936 ಜೂನ್ 6ರಂದು ಜನಿಸಿದರು. ತಂದೆ ಬಳಿಗಾರ ಮರಿವೀರಪ್ಪ, ತಾಯಿ ನಿಂಗವ್ವ. ತಂದೆ ಹಿರಿಯ ಬಯಲಾಟ ಹಾಗೂ ನಾಟಕ ಕಲಾವಿದ. ಇವರ ಸೋದರ ಸಂಬಂಧಿ ವಿರೂಪಾಕ್ಷಪ್ಪ ಬಳಿಗಾರ ಸಂಗೀತಗಾರ ಹಾಗೂ ಬಯಲಾಟ ಮಾಸ್ತರ ಇವರು ಊರಲ್ಲಿ ಸ್ವಂತ ಹಾಡಿಕೆಯುಳ್ಳ ಬಯಲಾಟದ ಹತ್ತಾರು ಸ್ತ್ರೀ ಪಾತ್ರಧಾರಿಗಳನ್ನು ತಯಾರು ಮಾಡಿದ್ದರು. ಮೌಲಾಸಾಬ, ಭರಮಗೌಡ ಪೂಜಾರ ಕಟಗಾಲಿ ಪ್ರಮುಖರು. ಭರಮಗೌಡರಿಗೆ ಜಾನಪದ ರಂಗಭೂಮಿ ಸೇವೆಗಾಗಿ ಕರ್ನಾಟಕ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ ನೀಡಿದೆ. ಉತ್ಸವ, ಜಾತ್ರೆ ಉರುಸು ಹಾಗೂ ಹಬ್ಬ ಹರಿದಿನಗಳಲ್ಲಿ ಬಯಲಾಟ ಪ್ರದರ್ಶನ ಸಾಮಾನ್ಯ. ಶಿವರುದ್ರಯ್ಯ ಬೃಹನ್ಮಠ, ಚೆನ್ನಪ್ಪ ದಾವಣಗೆರೆ, ವಿರೂಪಾಕ್ಷಪ್ಪ ಬಳಿಗಾರ, ದ್ಯಾಮಣ್ಣ ಕೋಮಲಾಪುರ, ಭರಮಗೌಡ ಪೂಜಾರ ಹಾಗೂ ಮೌಲಾಸಾಬರಂಥ ಹತ್ತಾರು ಹಳ್ಳಿಗೆ ಹೆಸರಾದ ಬಯಲಾಟದ ಕಥೆಗಾರರಿದ್ದರು.

ವೀರಭದ್ರಪ್ಪ ಬಳಿಗಾರ ಗಾಂವಠಿ ಶಾಲೆಯಲ್ಲಿ 5ನೆಯ ತರಗತಿವರೆಗೆ ಓದಿ, ವಚನ ರಾಮಾಯಣ, ವಚನ ಭಾರತ, ಭಾಗವತ, ವಚನ ಸಾಹಿತ್ಯ, ದಾಸ ಸಾಹಿತ್ಯಗಳ ಪರಿಚಯ ಮಾಡಿಕೊಂಡಿದ್ದಾರೆ. 5ನೆಯ ವಯಸ್ಸಿನಲ್ಲಿಯೂ ಹೆಚ್ಚಿನ ಸಮಯ ಮಂಡಲ ಗ್ರಂಥಾಲಯದಲ್ಲಿ ಕಳೆದರು. ಹದಿಹರೆಯದಲ್ಲಿ ಊರಿನಲ್ಲಿದ್ದ ಸ್ಪರ್ಧಾತ್ಮಕವಾಗಿದ್ದ ಎರಡು ಬಯಲಾಟ ತಂಡಗಳ ಆಟಗಳನ್ನು ನೋಡಿ, ಆಕರ್ಷಿತರಾಗಿ 'ಕನಕಾಂಗಿ ಕಲ್ಯಾಣ' ಬಯಲಾಟದಲ್ಲಿ ವನಪಾಲಕನ ಪಾತ್ರವಹಿಸಿದರು. ಬಯಲಾಟದ ತಾಲೀಮು ಮನೆ ಇವರ ಎರಡನೆಯ ನಿವಾಸವಾಯಿತು. ಬಯಲಾಟದ ಹುಚ್ಚು ತೆಗೆದುಕೊಂಡು ಬಿಟ್ಟಿತು. ಓದು ಬರೆಹ ಬಾರದ ನಿರಕ್ಷರಸ್ಥ ಬಯಲಾಟ ಪಾತ್ರಧಾರಿಗಳಿಗೆ ಇವರೇ ಮಾತು ಹೇಳಿಕೊಟ್ಟು, ಕಂಠ ಪಾಠ ಮಾಡಿಸಹತ್ತಿದರು. ತಾಲೀಮ ನಡೆದಾಗ ಕಥೆಗಾರ ಕೇವಲ ಹಾಡು–ಹಿಮ್ಮೇಳ–ಕುಣಿತಗಳ ಕಡೆಗೆ ಗಮನ ಹರಿಸಿದರೆ, ಸ್ತ್ರೀ–ಪುರುಷ ಪಾತ್ರಧಾರಿಗಳು ಹೇಳಬೇಕಾದ ಮಾತುಗಳನ್ನು ತಿದ್ದಿ ಹೇಳಿಕೊಡುವುದರತ್ತ ವೀರಭದ್ರಪ್ಪ ಲಕ್ಷ್ಯವಹಿಸುತ್ತಿದ್ದರು. ಬಯಲಾಟ ಪ್ರಯೋಗಗೊಂಡ ದಿನ ಪಾತ್ರಧಾರಿಗಳು ಹೇಳಬೇಕಾದ ಮಾತು (ಸಂಭಾಷಣೆ)ಗಳನ್ನು ತಡವರಿಸುವಾಗ ಮಾತು ಎತ್ತಿ ಕೊಡುತ್ತಿದ್ದರು. ಎಲ್ಲ ಪಾತ್ರಗಳ ಸಂಭಾಷಣೆ ಬಾಯಿ ಪಾಠವಾಗಿ, ಕಥೆಯ ಚೋಪಡಿ ಸಹಾಯವಿಲ್ಲದೆ ಮಾತು (ಸಂಭಾಷಣೆ) ಎತ್ತಿಕೊಡುವರು. ಮಾತು ತಪ್ಪಿವ ಪಾತ್ರಧಾರಿಗಳಿಗೆ ಇದರಿಂದ ತುಂಬ ಸಹಾಯವಾಗಿ, ಹುರುಪಿನಿಂದ ಕುಣಿದು ಕುಪ್ಪಳಿಸಿ ಮಾತು ಹೇಳಿ ಪ್ರೇಕ್ಷಕರ ಮೆಚ್ಚಿಗೆ ಪಡೆಯುವರು. ತಮ್ಮ ಹೊಲ, ಮನೆ ಬಳೆ ತೊಡಿಸುವ ವೃತ್ತಿ ಜೊತೆಗೆ ಯಾವ ಪ್ರತಿಫಲ ಬಯಸದೆ 50 ವರ್ಷಗಳ ಕಾಲ ಬಯಲಾಟ ಕಥಾನಿರ್ದೇಶನ ಕಾಯಕ ಮಾಡಿಕೊಂಡು ಬರುತ್ತಿರುವುದು ಶ್ಲಾಘನೀಯ. ಇದನ್ನು ಮೆಚ್ಚಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ (2005).

ಹಲವಾರು ಬಯಲಾಟಗಳ ಕಥೆಗಳು ಇವರಲ್ಲಿದ್ದು, ಜೀರ್ಣಗೊಂಡ ಕಥಾ ಪ್ರಸಂಗಗಳನ್ನು ಸುಂದರವಾದ ತಮ್ಮ ಅಕ್ಷರಗಳಲ್ಲಿ ಪ್ರತಿಮಾಡಿ ಕಾಯ್ದಿರಿಸಿದ್ದಾರೆ. *(ಎಚ್.ಎಸ್.ಪಿ.)*

ವೀಳ್ಯ ಸಂಪ್ರದಾಯ: ಧಾರ್ಮಿಕ, ಸಾಮಾಜಿಕ ಪದ್ಧತಿ. ಸಂಪ್ರದಾಯವಾಗಿ ಬಹು ಪುರಾತನ ಕಾಲದಿಂದಲೂ ಆಚರಣೆಯಲ್ಲಿದೆ. ಅರ್ಥಕೋಶದ ಪ್ರಕಾರ 'ವೀಳಯ', 'ವೀಳೆಯ' ಇದು ಅಪ್ಪಟ ಕನ್ನಡ ಶಬ್ದ. ವೀಳ್ಯೆ, ತಾಂಬೂಲ, ಎಲೆ–ಅಡಿಕೆ– ಎನ್ನುವ ಅರ್ಥಗಳಲ್ಲಿ ಬಳಕೆಯಲ್ಲಿದೆ. ಮದುವೆ, ಮತ್ತಿತರ, ಧಾರ್ಮಿಕ ಮಂಗಲ ಸಮಾರಂಭಗಳಲ್ಲಿ 'ವೀಳ್ಯೆ' ಸಂಪ್ರದಾಯಕ್ಕೆ ಅಗ್ರಸ್ಥಾನ. ಗೌರವ, ಸನ್ಮಾನ ಸೂಚಕದೊಂದಿಗೆ 'ವೀಳ್ಯೆ'ಯವು ಮಂಗಲಕಾರಿಯೆಂಬ ನಂಬಿಕೆಯೂ ಇದೆ.

ಮಹಿಳೆಯರ ಧಾರ್ಮಿಕ ಸಮಾರಂಭಗಳಲ್ಲಿ ಮುತ್ತೈದೆಯರಿಗೆ (ಮದುವೆಯಾಗಿ ಪತಿ ಇರುವ) ವೀಳ್ಯೆ, ತಾಂಬೂಲಕ್ಕೆ ಪ್ರಾಮುಖ್ಯತೆ ಇದೆ. ಮಹಿಳೆಯರ ವಿವಿಧ ವ್ರತ, ಹಬ್ಬಗಳಲ್ಲಿ ಎಲೆ–ಅಡಿಕೆಯ ವೀಳ್ಯೆ ನೀಡಲಾಗುತ್ತದೆ. ಪೌರಾಣಿಕ ಕಾವ್ಯಗಳಲ್ಲಿ ರಣರಂಗಕ್ಕೆ ಯುದ್ಧಕ್ಕೆ ಹೋಗುವ ವೀರರಿಗೆ ವೀಳ್ಯೆ, ನೀಡುವ ಪದ್ಧತಿಯ ಉಲ್ಲೇಖಗಳಿವೆ. ಇಂತಹ ಸಂದರ್ಭಗಳಲ್ಲಿ 'ವೀಳ್ಯೆ' ಸಂಪ್ರದಾಯವು ಕರ್ತವ್ಯ ಪಾಲನೆ, ಕರ್ತವ್ಯಕ್ಕೆ ಆದೇಶ ಎಂಬ ಅರ್ಥ ಕೊಡುತ್ತದೆ. ಕೆಲವು ಜನಾಂಗಗಳಲ್ಲಿ ಆಚಾರ್ಯರಿಗೆ, ಪಂಡಿತರಿಗೆ ದಕ್ಷಿಣೆ–ಸಂಭಾವನೆ ಕೊಡುವಾಗ 'ಎಲೆ–ಅಡಿಕೆ'ಯೊಂದಿಗೆ ಕೊಡುವ ಸಂಪ್ರದಾಯ ಈಗಲೂ ಇದೆ.

ಯುದ್ಧ, ಉತ್ತಮ ಕಾರ್ಯಗಳ ಸಾಧನೆಗೆ ಹೋಗುವಾಗ ಪಡೆಯುವ 'ವೀಳ್ಯೆ'ವು ಶಪಥ, ಪ್ರತಿಜ್ಞೆ, ಆಣೆಯ ಅರ್ಥದಲ್ಲಿಯೂ ಬಳಕೆಯಾಗುತ್ತದೆ. 'ಸುಪಾರಿ ಕೊಡುವ ತೆಗೆದುಕೊಳ್ಳುವ ಕೆಟ್ಟ ಆಚರಣೆಯೂ ಇತ್ತೀಚೆಗೆ ಕಂಡುಬರುತ್ತದೆ. ಎಲೆ–ಅಡಿಕೆಯ 'ವೀಳ್ಯೆ' – ಸಾಮಾಜಿಕ, ಧಾರ್ಮಿಕ ಕಾರ್ಯಗಳ ಹಿನ್ನೆಲೆಯಲ್ಲಿ ಶುಭದ ಸಂಕೇತ, ಸಂದೇಶವಾಗಿದೆ. ಅನೇಕ ಜನಾಂಗಗಳಲ್ಲಿ ಮದುವೆ 'ವೀಳ್ಯೆ' ಶಾಸ್ತ್ರವು ಪ್ರಸಿದ್ಧ, ಜನಪ್ರಿಯ.

(ಎಸ್.ಕೆ.ಯು.)

ವೃತ್ತಿಗಾಯಕರು: ಹೈದ್ರಾಬಾದ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ವಿವಿಧ ಬಗೆಯ ವೃತ್ತಿ ಗಾಯಕರಿದ್ದಾರೆ. ಇವರು ತಮ್ಮದೇ ಆದ ವಿಶಿಷ್ಟ ವೇಷಭೂಷಣಗಳಿಂದಲೂ, ವಿಶಿಷ್ಟ ಸ್ವರೂಪದ ವಾದ್ಯ–ಸಲಕರಣೆಗಳಿಂದಲೂ ಶೋಭಿತರಾಗಿ ಜಾತ್ರೆ–ಉತ್ಸವ, ಹಬ್ಬ–ಹರಿದಿನ ಮುಂತಾದ ಧಾರ್ಮಿಕ ಸಂದರ್ಭಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಇವರನ್ನು ಪ್ರಧಾನವಾಗಿ ಎರಡು ವರ್ಗಗಳಾಗಿ ವಿಂಗಡಿಸಿಕೊಳ್ಳಬಹುದು. ಧಾರ್ಮಿಕ ಕಥೋಪಜೀವಿಗಳು ಹಾಗೂ ಲೌಕಿಕ ಕಥೋಪಜೀವಿಗಳು. ಧಾರ್ಮಿಕ ಎಂಬ ಶಬ್ದ ಈ ಕಥೋಪಜೀವಿಗಳು ಆರಾಧಿಸುವ, ಆಚರಿಸುವ ದೈವದ ಹಿನ್ನೆಲೆಯಲ್ಲಿ ಬಳಸಲಾಗಿದೆ. ನಮ್ಮ ನಾಡಿನ ಯಾವುದೇ ಪವಿತ್ರ ಕ್ಷೇತ್ರಕ್ಕೆ ಸಂಬಂಧಪಡಬಹುದಾದ ಕಲಾವಿದರನ್ನು ಹೀಗೆ ವರ್ಗೀಕರಿಸಿಕೊಳ್ಳಲಾಗಿದೆ. ತಮ್ಮ ಮೂಲದೈವದ ಮಹಿಮೆಗಳನ್ನು ಪ್ರಸಾರಮಾಡಿ ಜನಸಮೂಹದಲ್ಲಿ ಧರ್ಮಶ್ರದ್ಧೆ, ಭಕ್ತಿ ನಿಷ್ಠೆಗಳನ್ನು ತ್ಯಾಗಶೀಲತೆಯನ್ನು ಕಾಪಾಡಿಕೊಂಡು ಬರುವುದು ಇದರ ಉದ್ದೇಶವಾಗಿದೆ. ತಮ್ಮ ಭಾಗಕ್ಕೆ ಸಂಬಂಧಪಟ್ಟ ಶ್ರೀಮಠವೊಂದರಲ್ಲಿ ದೀಕ್ಷೆಯನ್ನು ಪಡೆದು ವಂಶಪಾರಂಪರ್ಯವಾಗಿ ತಮ್ಮ ಮಠಾಧೀಶರಿಗೆ, ಸ್ವಾಮಿಗಳಿಗೆ ಗೌರವದಿಂದ ನಡೆದುಕೊಳ್ಳುವುದಲ್ಲದೇ ತಮ್ಮ ಆರಾಧ್ಯ ದೈವದ ಒಕ್ಕಲಿರುವ ಭಾಗಗಳಲ್ಲಿ ಅವರು ನಡೆಸುವ ಧಾರ್ಮಿಕ ಮುಂತಾದ ಆಚರಣೆಗಳ ನೇತೃತ್ವವನ್ನು ವಹಿಸಿ ನಡೆಸಿಕೊಡುವ ಹೊಣೆಗಾರಿಕೆಯೂ ಇವರದಾಗಿದೆ. ಆಯಾ ದೈವದ ಒಕ್ಕಲು ಹೆಚ್ಚಾಗಿರುವ ಕಡೆಗಳಲ್ಲಿ ಒಕ್ಕಲುಗಳನ್ನೋ, ಊರುಗಳನ್ನೋ ಹಂಚಿಕೊಂಡು ಈ ಕಲಾವಿದರು ದೇವರು–ದಿಂಡರ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾರೆ. ದೇವರ ಪ್ರತಿನಿಧಿಯಂತೆ, ಒರ್ವ ಪುಣ್ಯ ಪುರುಷನಂತೆ, ಗುರುವಿನಂತೆ ಈ ಧಾರ್ಮಿಕ ಪ್ರತಿನಿಧಿಗಳನ್ನು ಆಯಾ ಒಕ್ಕಲಿನವರು ಇವರನ್ನು ಗೌರವಿಸುತ್ತಾರೆ. ಎಲ್ಲ ಪ್ರಸಿದ್ಧ ದೈವಗಳಿಗೂ, ಕ್ಷೇತ್ರಗಳಿಗೂ ಇಂಥ ಗುಡ್ಡರು ಇರುತ್ತಾರಾದರೂ ಎಲ್ಲರೂ ಕಥೆ, ಗೀತೆ ಮುಂತಾದ ಸಾಹಿತ್ಯದ ಆರಾಧಕರು ಇರಬೇಕಿಲ್ಲ. ಮೂಡಲಗಿರಿಯಪ್ಪನ 'ದಾಸರು' ಚುಂಚನಗಿರಿಯಪ್ಪನ ಜೋಗಿಗಳು, ಮಾತ್ರ ಹಾಡುಗಾರರ ಪರಂಪರೆಗೆ ಸೇರಿದವರಲ್ಲ. ತಮ್ಮ ಅಧಿದೈವದ ಲಾಂಛನಗಳನ್ನು ಧರಿಸಿ ಭಕ್ತರ ಮನೆಗಳಲ್ಲಿ ಭಿಕ್ಷೆ ಬೇಡಿ ಇವರು ಜೀವಿಸುತ್ತಾರೆ. ತಮ್ಮ ಮೂಲಕ್ಷೇತ್ರಕ್ಕೆ ವರ್ಷಕ್ಕಿಷ್ಟು ಎಂದು ಕಾಳು–ಕಡಿ ಅಥವಾ ಹಣವನ್ನು ಒಪ್ಪಿಸಿದರೆ ಇವರ ಕೆಲಸ ಮುಗಿದಂತೆ. ದಾಸರು ತಮ್ಮ ಭಕ್ತರ ಮನೆಗಳಿಗೆ ಹೋಗುವ ಸಂದರ್ಭದಲ್ಲಿ ಶಂಖ, ಜಾಗಟೆ ಗರುಡಗಂಬ ಇತ್ಯಾದಿಗಳನ್ನು ಹೊಂದಿರುತ್ತಾರೆ. ಜೋಗಿಗಳು ಕೋಲು, ಸಿಂಗನಾಶಗಳನ್ನು ಧರಿಸಿರುತ್ತಾರೆ. ಇವರೆಲ್ಲರ ಹೆಗಲಿಗೆ ಜೋಳಿಗೆ ಇರುತ್ತದೆ.

ಈ ಕೆಲವು ವರ್ಗದ ದೇವರ ಮಕ್ಕಳನ್ನು ಬಿಟ್ಟರೆ, ದೇವರ ಲಾಂಛನಗಳನ್ನು ಧರಿಸಿ ತಮ್ಮ ವಾದ್ಯ ಪರಿಕರಗಳನ್ನು ಕೈಯ್ಯಲ್ಲಿ ಹಿಡಿದು ಅಪೂರ್ವ ಕಥೆಗಳನ್ನು ಹಾಡಿನ ಮುಖಾಂತರ ಅಥವಾ ಗದ್ಯ–ಪದ್ಯ ಮಿಶ್ರಿತ ಚಂಪೂ ಶೈಲಿಯಲ್ಲಿ ನಿರೂಪಿಸುತ್ತ ಶ್ರೇಷ್ಠ ಗಾಯಕರ ಪರಂಪರೆಯನ್ನು ಸ್ಥಾಪಿಸಿರುವ ಅನೇಕ ಮಂದಿ ಕಲಾವಿದರ ವರ್ಗಗಳನ್ನು ಕಾಣಬಹುದಾಗಿದೆ. ನಾಡಿನ ವಿವಿಧ ಕಡೆ ಈ ಧಾರ್ಮಿಕ ವೃತ್ತಿಗಾಯಕರು ಕಂಡುಬರುತ್ತಾರೆ. ಮೇಲುನೋಟಕ್ಕೆ ಸಾಮಾನ್ಯ ಭಿಕ್ಷುಕರಂತೆ ತೋರುವ ಇವರು ಒಂದು ಕಾಲಕ್ಕೆ ಅತ್ಯಂತ ವೈಭವದಿಂದ ನಾಡಿನಾದ್ಯಂತ ಜನಪದ ಧರ್ಮ ಪ್ರಸಾರಕರಾಗಿ ಮೆರೆದವರು. ಇಂಥ ಕಲಾವಿದರನ್ನು ಅಭ್ಯಾಸದ ದೃಷ್ಟಿಯಿಂದ ಹೀಗೆ ವಿಂಗಡಿಸಬಹುದು. ಉದಾ: ದೇವರಗುಡ್ಡರು, ನೀಲಗಾರರು, ಚೌಡಿಕೆಯವರು, ಗೊರವರು, ಢಾಡಿಯರು ಹಾಗೂ ಗಣೆಯವರು. ಇಲ್ಲಿ ಲೌಕಿಕ–ಧಾರ್ಮಿಕ ಎಂಬ ವಿಭಜನೆ ಜನಪದ ಸಾಹಿತ್ಯದಲ್ಲಿ ಅಷ್ಟೇನೂ ಉಚಿತವಲ್ಲ. ಏಕೆಂದರೆ, ಧಾರ್ಮಿಕ ಕಲಾವಿದರೆಂದು ಕರೆಸಿಕೊಳ್ಳುವವರೂ ಅನೇಕ ಲೌಕಿಕ ಕಥೆಗಳನ್ನು ಹಾಡುತ್ತಾರೆ. ಉದಾ: ಮಲೆಯ ಮದೇಶ್ವರ, ಮಂಟೆಸ್ವಾಮಿ, ಎಲ್ಲಮ್ಮ ಸೇವಾಲಾಲ, ಹೂನಾಸತಿ ಮುಂತಾದ ಕಥೆಗಳನ್ನು ಆಯಾ ಒಕ್ಕಲಿನವರಿಗೆ ಮೀಸಲಾದರೂ ಇತರ ಗುಂಪಿನವರು ಆ ಕಥೆಗಳಿಗೆ ಮನಸೋತು ಆ ದೇವರು–ದಿಂಡಿರುಗಳ ಮಹಿಮಾಶಕ್ತಿಗೆ ಮನಸೋತು ಅನನ್ಯ ಶ್ರದ್ಧೆಯಿಂದಲೇ ಎಲ್ಲ ಕತೆಗಳನ್ನು ಮನಸಾರೆ ಕೇಳುತ್ತಾರೆ. ಲಂಬಾಣಿ ವೃತ್ತಿಗಾಯಕ ಢಾಡಿಯರು ಸಾರಂಗಿ ವಾದ್ಯದ ಜೊತೆಗೆ ಲಂಬಾಣಿ ತಾಂಡಾಗಳಿಗೆ

ಹೋಗಿ ಸೇವಾಲಾಲ, ಹೂನಾಸತಿ, ಹಾಮುಭುಕ್ಯಾ, ಕೃಷ್ಣನನ್ನು ಕುರಿತು ಕಥಾನಕಗಳನ್ನು ಹಾಡುತ್ತಾರೆ. ಜನಸಾಮಾನ್ಯರ ದೃಷ್ಟಿಯಲ್ಲಿ ಎಲ್ಲ ದೇವ-ದೇವರುಗಳಿಗೂ ಸರಿಸಮವಾದ ಸ್ಥಾನಮಾನಗಳು ಇರುವುದರಿಂದ ಒಂದೊಂದು ದೈವವನ್ನು, ಕುಲದೈವ, ಆರಾಧ್ಯದೈವವೆಂದು ಒಪ್ಪಿಕೊಂಡರೂ ಸಂಕಟ ಬಂದಾಗ ವೆಂಕಟರಮಣ ಎನ್ನುವಂತೆ ಹತ್ತು-ಹಲವು ದೈವಗಳ ಮೊರೆ ಹೋಗುವುದು ಅನಿವಾರ್ಯ. ಈ ದೃಷ್ಟಿಯಿಂದ ಎಲ್ಲ ದೈವಗಳ ಕತೆಗಳನ್ನು ಮೆಚ್ಚಿ ಗೌರವಿಸುವ ಪರಿಸರ ಜನರಲ್ಲಿ ಮೊದಲಿನಿಂದಲೂ ಮೂಡಿಬಂದಿದೆ. ವೃತ್ತಿಗಾಯಕರೆಲ್ಲ ವಿಭಿನ್ನ ದೈವಗಳ ಹೆಸರಿನಲ್ಲಿ ನಡೆದುಕೊಂಡರೂ ಉಳಿದ ಸಂದರ್ಭಗಳಲ್ಲಿ ಪರಸ್ಪರ ಪ್ರಭಾವಕ್ಕೆ ಒಳಗಾಗಿ ಒಂದೇ ಪ್ರದೇಶದ ಜನಪದ ಗಾಯಕರ ಸಾಹಿತ್ಯದಲ್ಲಿ ಸಾಕಷ್ಟು ಸಾಮ್ಯವನ್ನು ಕಾಣಲು ಸಾಧ್ಯವಾಗುತ್ತದೆ. ಆದರೆ ಇಲ್ಲಿ ಈ ಗಾಯಕರು ಅವರ ಕಥೆಗಳನ್ನು ಇವರು, ಇವರ ಕಥೆಗಳನ್ನು ಅವರು ಆತ್ಮಸಾತ ಮಾಡಿಕೊಂಡು ಕಲಿಯುವುದನ್ನು ಕಾಣಬಹುದು. ಆದ್ದರಿಂದ ಪ್ರತಿಯೊಂದು ಸಂಪ್ರದಾಯದ ಕಥೆಗಾರರೂ ತಮ್ಮ ಧಾರ್ಮಿಕ ಕಥೆಯ ಜೊತೆಗೆ ಅನ್ಯದೈವಗಳಿಗೆ, ಅನ್ಯವಸ್ತುಗಳಿಗೆ ಸಂಬಂಧಿಸಿದ ಅನೇಕ ಕಥೆಗಳನ್ನು ಕಲಿತು ಕರಗತ ಮಾಡಿಕೊಳ್ಳುತ್ತಾರೆ. ನೀಲಗಾರರೂ, ದೇವರಗುಡ್ಡರೂ ತಮ್ಮ ತಮ್ಮ ಧಾರ್ಮಿಕ ಕಥೆಯ ಜೊತೆಗೆ ಉಳಿದ ಲೌಕಿಕ ಕಥೆಗಳನ್ನು ಪಠನ ಮಾಡಿಕೊಳ್ಳುತ್ತಾರೆ. ಈ ಧಾರ್ಮಿಕ ವೃತ್ತಿಗಾಯಕರು ತಮ್ಮ ಕುಲದೈವದ ಕಥೆಗಳನ್ನು ಬಲು ನಿಷ್ಠೆಯಿಂದ ಕಾಪಾಡಿಕೊಂಡು ಬಂದಿರುವುದರ ಜೊತೆಗೆ ನಂಜಯ್ಯ, ಚಾಮುಂಡಿ, ಬಿಳಿಗಿರಿರಂಗಯ್ಯ, ಅಕ್ಕನಾಗಮ್ಮ, ಮಡಿವಾಳ ಮಾಚಯ್ಯ, ಮೊದಲಾದ ಲೌಕಿಕ ಕಥೆಗಳನ್ನು ಜೀವನೋಪಾಯದ ಅನುಕೂಲತೆಯ ದೃಷ್ಟಿಯಿಂದ ಪಠನ ಮಾಡಿರುತ್ತಾರೆ.

ಯಾವ ಧರ್ಮದ, ದೈವದ ವ್ಯಾಪ್ತಿಗೂ ಒಳಪಡದೆ ಸ್ವತಂತ್ರವಾಗಿ ತಾವು ಬಯಸಿದ ಕತೆಗಳನ್ನು ಅಭ್ಯಸಿಸಿಕೊಂಡು ಬಂದ ಕಥೋಪಜೀವಿಗಳನ್ನು ಲೌಕಿಕ ವೃತ್ತಿಗಾಯಕರೆಂದು ಕರೆಯಬಹುದು. ಧಾರ್ಮಿಕ ಕಥೆಗಾರರಿಗೂ ಇವರಿಗೂ ಇರುವ ಪ್ರಧಾನ ವ್ಯತ್ಯಾಸ ಕತೆಗಾರಿಕೆಯಲ್ಲದಿದ್ದರೂ ದೈವಸಂಬಂಧ ಆದುದು. ಮೊದಲನೆಯ ವರ್ಗದವರು ತಮ್ಮ ದೈವದ ಪೂಜೆ ಉತ್ಸವ ಜಾತ್ರೆಗಳಲ್ಲಿ ಭಾಗವಹಿಸುತ್ತಾರೆ. ಆಚರಣೆಗಳಲ್ಲಿ ಪ್ರಮುಖಸ್ಥಾನವನ್ನು ಹೊಂದಿರುತ್ತಾರೆ. ಒಂದೊಂದು ಕ್ಷೇತ್ರಕ್ಕೆ ನಿರ್ದಿಷ್ಟ ವಾರ್ಷಿಕ ಕಾಣಿಕೆಯನ್ನು ನೀಡುತ್ತ ನಿಯತ ಕಾಲದಲ್ಲಿ ತಮ್ಮ ದೈವದ ಕತೆಗಳನ್ನು ಹಾಡುತ್ತಾರೆ. ಕೆಲವು ಗೊತ್ತಾದ ದಿನಗಳಲ್ಲಿ ದೇವರ ಹೆಸರಿನಲ್ಲಿ ಭಿಕ್ಷಾಟನೆಯನ್ನು ನಡೆಸುತ್ತಾರೆ. ತಮ್ಮ ವಾದ್ಯಗಳನ್ನು ದೈವದ ಪ್ರತೀಕವೆಂದು ಭಾವಿಸಿ ಗದ್ದುಗೆಯ ಮೇಲೆ ಇರಿಸಿ ನಿತ್ಯವೂ ಪೂಜಿಸುತ್ತಾರೆ. ತಮ್ಮ ದೈವದ ಪ್ರಭಾವ ವಲಯದ ಪ್ರದೇಶದಲ್ಲಿ ಮಾತ್ರ ಸಂಚರಿಸುತ್ತಾರೆ. ದೇವರ ಬಿರುದು ಬಾವಲಿಗಳನ್ನು ವೃತ್ತಿಯ ಸಂದರ್ಭದಲ್ಲಿ ನಿಯತವಾಗಿ ಧರಿಸುತ್ತಾರೆ.

ಲೌಕಿಕ ಕಥೋಪಜೀವಿಗಳಿಗೆ ಯಾವ ನಿರ್ಬಂಧವೂ ಇಲ್ಲ. ಅವರು ಯಾವ ಕಾಲದಲ್ಲಿ ಎಲ್ಲಿ ಬೇಕಾದರೂ ಸಂಚರಿಸ ಬಹುದು. ಆದರೆ ಅವರೂ ಪರಂಪರೆಯಿಂದ ಬಂದ ವಾದ್ಯಗಳನ್ನೇ ಹಿಡಿದು ಕಥೆಗಳನ್ನು ಮಾಡುತ್ತಾರೆ. ಮೇಳಗಳನ್ನು ನಡೆಸುತ್ತಾರೆ; ಉಡುಗೊರೆಗಳನ್ನು ಪಡೆದುಕೊಳ್ಳುತ್ತಾರೆ. ಹಬ್ಬ, ಹರಿದಿನ, ಪೂಜೆ ಉತ್ಸವಗಳಲ್ಲಿ ಪುಣ್ಯ ಕಥೆಗಳನ್ನು ಮೇಳರೂಪದಲ್ಲಿ ನಡೆಸುವ ಅವಕಾಶ ಇವರಿಗೆ ಇರುತ್ತದೆ.

ಹಾಡುಗಾರಿಕೆಯ 'ವೃತ್ತಿ' ದೈವ ಧರ್ಮ ಇವುಗಳಿಗೆ ಸಂಬಂಧಪಟ್ಟಿದೆ. ಬೇರೆ ಬೇರೆ ಮತದವರು ದೀಕ್ಷೆಯನ್ನು ಪಡೆದು ವಾದ್ಯವನ್ನು ಕೈಗೆತ್ತಿಕೊಳ್ಳಬಹುದು. ದೇವರ ಗುಡ್ಡರು, ನೀಲಗಾರರು, ಗೊರವರು, ಚೌಡಿಕೆಯವರು, ಥಾಡಿಯರು ಮುಂತಾದವರಲ್ಲಿ ಬೇರೆ ಬೇರೆ ಮತದವರನ್ನು ಕಾಣಬಹುದು. ಶಿಷ್ಟ ಧರ್ಮಗಳ ವ್ಯಾಪ್ತಿಗೆ ಒಳಪಡಿಸುವ ಧರ್ಮದವರನ್ನು ಉಳಿದು ನೈಸರ್ಗಿಕ ಧರ್ಮಗಳ ಭಕ್ತರು ಈ ವೃತ್ತಿಯನ್ನು ಹೆಚ್ಚಾಗಿ ಸ್ವೀಕರಿಸಿರುವುದು ಕಂಡುಬರುತ್ತದೆ. ವೀರಶೈವರು, ಬ್ರಾಹ್ಮಣರು ಈ ವೃತ್ತಿಗಳನ್ನು ಅವಲಂಬಿಸಿರುವುದು ಕಂಡುಬಂದಿಲ್ಲ. ಆದರೆ ಒಕ್ಕಲಿಗರು, ಕುರುಬರು, ಪರಿವಾರದವರು, ಹರಿಜನರು, ಮುಂತಾದ ಅನೇಕ ಜಾತಿಗಳಿಗೆ ಸೇರಿದ ಇಂಥ ಕಥೋಪಜೀವಿಗಳನ್ನು ಕಾಣಬಹುದು. ಇವರಲ್ಲಿ ಬಹು ಮಂದಿ ಸಂಪೂರ್ಣವಾಗಿ ಹಾಡುಗಾರಿಕೆಯ ವೃತ್ತಿಯನ್ನೇ ಅವಲಂಬಿಸುವುದಿಲ್ಲ. ಉಪಕಸಬುಗಳನ್ನು ಇಟ್ಟುಕೊಂಡು ಗೊತ್ತಾದ ದಿನಗಳಲ್ಲಿ ಮಾತ್ರ ವಾದ್ಯ, ಜೋಳಿಗೆ ಲಾಂಛನಗಳೊಡನೆ ಬೀದಿಯ ಮೇಲೆ ಹೊರಡುತ್ತಾರೆ. ವರ್ಷದಲ್ಲಿ ಕೆಲವು ಕಾಲ ಸಾಮಾನ್ಯವಾಗಿ ಸುಗ್ಗಿಯ ದಿನಗಳಲ್ಲಿ ವಿಶೇಷವಾಗಿ 'ಸುಗ್ಗಿಯ ಕಣಗಳಲ್ಲಿ' ಊರುಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಆದರೆ ಇವರಲ್ಲಿಯೂ ಕೆಲವರು ಅನುಕೂಲಸ್ಥರಿದ್ದಾರೆ. ರೈತರಿದ್ದಾರೆ. ಬೇರೆ ಬೇರೆ ಕಸುಬಿನ ಜನರಿದ್ದಾರೆ. ಊರುಗಳಲ್ಲಿ ವಿಶೇಷವಾದ ಸಂದರ್ಭಗಳು ಬಂದಾಗ ತಮ್ಮ ಪರಿವಾರದವರೊಡನೆ ಹೋಗಿ ಕಥೆಮಾಡಿ ಅಥವಾ ಹಾಡಿ ತಮಗೆ ಬರಬೇಕಾದ ಸಂಭಾವನೆಯನ್ನು ಉಡುಗೊರೆಯನ್ನು ಸ್ವೀಕರಿಸಿ ಮರಳುತ್ತಾರೆ. ಇವರಾರೂ ಅಲೆಮಾರಿಗಳಲ್ಲ. ಹೆಚ್ಚು ದಿನ ಹೊರಗೆ ಉಳಿಯುವವರೂ ಅಲ್ಲ. ಒಂದೆರಡು ದಿನಗಳಲ್ಲಿ ಜೋಳಿಗೆಯನ್ನು ತುಂಬಿಕೊಂಡು ಮನೆಗೆ ಮರಳುತ್ತಾರೆ.

ಜೋಗಿಗಳು, ದೊಂಬಿದಾಸರು, ತೆಲುಗು, ಜಂಗಮರು, ಇಂಥ ಕೆಲ ವರ್ಗಗಳಲ್ಲಿ ಒಂದೊಂದು ಜನಾಂಗವೇ ಪ್ರಧಾನ ವಾಗಿ ಹಾಡುಗಾರಿಕೆಯ ವೃತ್ತಿಯನ್ನು ಸ್ವೀಕರಿಸಿದ ಬಗೆಗಳನ್ನು ಕಾಣಬಹುದು. ಸಾಮಾನ್ಯವಾಗಿ ಪ್ರತ್ಯೇಕವಾದ ಹಟ್ಟಿಗಳಲ್ಲಿ ವಾಸಮಾಡುವ ಇವರು ಒಂದು ನೆಲೆಯಲ್ಲಿ ನಿಂತವರಂತೆ ಕಂಡರೂ ವರ್ಷದಲ್ಲಿ ಬಹುಪಾಲು ಹೊರಗೆ ಇರುತ್ತಾರೆ. ಹಾಗೆ ಹೊರಟಾಗ ಇವರು ಸಂಪೂರ್ಣವಾಗಿ ಹಾಡುವುದನ್ನೆ ಅವಲಂಬಿಸಿರುತ್ತಾರೆ. ತಮ್ಮ ಜೀವನೋಪಾಯಕ್ಕಾಗಿ ಜನಪದ ಕಾವ್ಯಗಳನ್ನು ಕಲಿತು ಇವರು ಹಾಡುವವರೆ ಹೊರತು ಯಾವ ದೈವದ ಸಂಬಂಧವೂ ಇವರಿಗೆ ಇರುವುದಿಲ್ಲ. ಇವರ ಮನೆದೇವರು, ಕುಲದೇವರುಗಳಿದ್ದರೂ ಆ ದೇವರಿಗೆ ಇವರ ಹಾಡಿನ ಕಾಣಿಕೆ ಏನೂ ಬೇಕಾಗುವುದಿಲ್ಲ. ಇವರ ಹಾಡನ್ನು ಕೇಳುವ ಮೆಚ್ಚಿ ಉಡುಗೊರೆಗಳನ್ನು ನೀಡುವ ಜನತೆಯೇ ಇವರ

ಆದಿದೈವ. ವೃದ್ಧರನ್ನು, ಹೆಂಗಸರು, ಮಕ್ಕಳನ್ನು ತಮ್ಮ ಹಟ್ಟಿಗಳಲ್ಲೇ ಬಿಟ್ಟು ಎಷ್ಟೋ ದಿನಗಳವರೆಗೆ ಸಂಚಾರವನ್ನು ಕೈಗೊಳ್ಳುವ ಇವರು ತಂಡ ತಂಡಗಳಲ್ಲಿ ಹೋಗುತ್ತಾರೆ. ರಾತ್ರಿ ಗ್ರಾಮದ ಚಾವಡಿಯಲ್ಲಿ ಯಾವುದೋ ಹಾಳು ಮಂಟಪದಲ್ಲಿ, ಊರ ಹೊರಗಿನ ಗುಡಿಗಳಲ್ಲಿ ಒಟ್ಟಿಗೆ ತಂಗಿದ್ದು ಬೆಳಗಾದ ಮೇಲೆ ತಮ್ಮ ತಮ್ಮ ದಾರಿಯಲ್ಲಿ ಹೊರಡುತ್ತಾರೆ. ಜೋಳಿಗೆ ತುಂಬಿದಾಗ ಹತ್ತಿರದ ಅಂಗಡಿಗೆ ದವಸ, ಧಾನ್ಯಗಳನ್ನು ಮಾರಿ ಪುಡಿಗಾಸನ್ನು ಮಾಡಿಕೊಳ್ಳುತ್ತಾರೆ. ಹೀಗೆಯೇ ಮಲೆಸೀಮೆ, ಬಯಲುಸೀಮೆಗಳನ್ನು ಅಲೆದು ಮಳೆಗಾಲ ಎಟುಕಿಸಿಕೊಳ್ಳುವುದರಲ್ಲಿ ತಮ್ಮ ಹಟ್ಟಿಗಳಿಗೆ ಮರಳುತ್ತಾರೆ. ಈ ಅರ್ಥದಲ್ಲಿ ಇವರನ್ನು ಅರ್ಧ ಅಲೆಮಾರಿ ಕಲಾವಿದರೆಂದೂ ಕರೆಯಬಹುದು.

ಒಂದು ಕಾಲಕ್ಕೆ ಗ್ರಾಮಾಂತರ ಜೀವನದ ಸಣ್ಣ ಸಣ್ಣ ಪಟ್ಟಣಗಳ ಕೆಲಮಟ್ಟಿಗೆ ನಗರಗಳ ಮನರಂಜನೆಯ ಮುಖ್ಯ ಸಾಧನ ಈ ವೃತ್ತಿಗಾಯಕರ ಮೇಳಗಳೆ ಆಗಿದ್ದವು. ಯಕ್ಷಗಾನ, ಬಯಲಾಟಗಳು, ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟ ಮುಂತಾದವು ವರ್ಷದಲ್ಲಿ ಯಾವಾಗಲೋ ಒಮ್ಮೆ ಹಳ್ಳಿಯ ರಂಗದಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ವೃತ್ತಿಗಾಯಕರ ಅನೇಕ ಸಂಪ್ರದಾಯದವರು ಆಗಾಗ ಹಳ್ಳಿಗಳ ಮೇಲೆ ಸಂಚಾರ ಮಾಡುತ್ತ ನಾಲ್ಕು ಜನ ಸೇರಿದೆಡೆ ಆಹ್ವಾನ ದೊರೆತ ಕಡೆ, ಮನೆ ಮನೆಯ ಜಗಲಿಗಳಲ್ಲಿ ಇಂಥ ಜನಪದ ಕಾವ್ಯಗಳನ್ನು ವಾದ್ಯದ ಹಿನ್ನೆಲೆಯಲ್ಲಿ ಹಾಡಿ ಜನರನ್ನು ತಣಿಸುತ್ತಿದ್ದರು. ಅನೇಕ ಪುಣ್ಯ ಪುರುಷರ ದಿವ್ಯ. ಜೀವಿಗಳ ಸಾಹಸಿಗಳ, ತಬ್ಬಲಿಗಳ, ಅಸಹಾಯಕರ, ಕ್ರೂರಿಗಳ, ಕರ್ಮಗಳ ಕತೆಗಳ ಕತೆಗಳನ್ನು ಹಾಡುತ್ತ ನೀತಿ, ಕಥೆಗಳನ್ನು ಪ್ರಸಾರ ಮಾಡುತ್ತ ಸಂಸ್ಕೃತಿಯ ಸೆಲೆ ಬತ್ತಿ ಹೋಗದಂತೆ ಕಾಯ್ದುಕೊಂಡು ಬರುತ್ತಿದ್ದರು. ಕಂಠಸ್ಥ ಸಂಪ್ರದಾಯದ ಉನ್ನತ ಕಾವ್ಯ ಪರಂಪರೆಯನ್ನು ಜನತೆಯು ಬಾಗಿಲಿಗೆ ತಂದು ರಸಸ್ವಾದನೆಯ ಸೊಗಸನ್ನು ಅವರ ಪಾಲಿಗೆ ದೊರಕಿಸುತ್ತಾರೆ. ಕರ್ನಾಟಕದಲ್ಲಿ ಈಗಾಗಲೇ ಮೂವತ್ತಕ್ಕೂ ಹೆಚ್ಚು ವೃತ್ತಿಗಾಯಕರನ್ನು ಗುರುತಿಸಲಾಗಿದೆ.

(ಎಚ್.ಪಿ.)

ವೇಷಗಾರರು: ವೇಷಗಾರಿಕೆಯನ್ನೇ ಜೀವನ ವೃತ್ತಿಯನ್ನಾಗಿ ಮಾಡಿಕೊಂಡಿರುವ ವೃತ್ತಿಕಲಾವಿದರು. ಇವರಿಗೆ ಬಹುರೂಪಿ, ವೇಷಧಾರಿ, ಜಾತಿಗಾರ ಎಂಬಿವು ಪರ್ಯಾಯ ನಾಮಗಳು. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರವು ಬಹುರೂಪಿ ಚೌಡಯ್ಯವಿಗೆ 'ಜಾತಿಗಾರ' ಎಂದು ಕರೆದು, ಅವನು 'ಹದಿನೆಂಟು ಜಾತಿಯ, ನೂರೆಂಟು ಕುಲದ ವೇಷವಂ ತೊಟ್ಟು' ನಟಿಸುತ್ತಿದ್ದನೆಂದು ಹೇಳುತ್ತದೆ. ಹೀಗೆ ಅನೇಕ ಜಾತಿಯವರನ್ನು ಅಭಿನಯಿಸಿ ತೋರುತ್ತಲಿದ್ದ, ಕಾರಣ ಇವರಿಗೆ 'ಜಾರಿಗಾರ' ಎಂಬ ಹೆಸರು ರೂಢವಾಗಿರಬೇಕು. 'ಜಾರಿಗಾರ' ಎಂಬುದರ ಪ್ರಾಚೀನ ಸಂವಾದಿಪದ 'ಜಾತಿಡಂಬ'. ದಂಭ=ಡಂಬ ಅಂದರೆ ನಟನೆ. ಇದನ್ನು ಗಮನಿಸಿದರೆ "ಮಾತಿನಂತೆ ಮನವಿಲ್ಲದ ಜಾತಿಡೊಂಬರ ಮೆಚ್ಚ ನಮ್ಮ ಕೂಡಲಸಂಗದೇವ" ಎಂಬಲ್ಲಿಯ "ಜಾತಿಡೊಂಬರ" ಪಾಠವನ್ನು "ಜಾತಿಡಂಬರ" ಎಂದು ತಿದ್ದಿಕೊಳ್ಳಬೇಕೆಂದೂ, 12ನೆಯ ಶತಮಾನದಲ್ಲಿ ಇವರಿಗೆ 'ಜಾತಿಡಂಬರು' ಎಂದು ಕರೆಯುತ್ತಿದ್ದರೆಂದೂ ಹೇಳಬೇಕಾಗುತ್ತದೆ. ಕೆಲವರು ಪದಸಾಮ್ಯದಿಂದಾಗಿ ಈ ಡಂಬರು ಮತ್ತು ಡೊಂಬರು ಪದಗಳಲ್ಲಿ ಗೊಂದಲ ಹುಟ್ಟಿಸಿಕೊಂಡು ಅಂಗಸಾಧನೆಯ ಡೊಂಬರೂ ವೇಷ ಹಾಕುತ್ತಾರೆ ಎಂದು ತಪ್ಪು ಭಾವಿಸಿದ್ದಾರೆ. ಆದರೆ ವೇಷಗಾರಿಕೆಯ ಡಂಬರೇ ಬೇರೆ, ಅಂಗಸಾಧನೆಯ ಡೊಂಬರೇ ಬೇರೆ.

ಇಂದು ಜಾತಿಡಂಬರಿಗೆ ಪರ್ಯಾಯವಾಗಿ 'ಜಾತಿಗಾರರು' ಎಂಬ ಪದವನ್ನು ಬಳಸಲಾಗುತ್ತದೆ. ಇದಲ್ಲದೆ ಬಾಣತಿ, ಕಳ್ಳ ಮೊದಲಾದ ವೇಷ ಹಾಕುವ ಮುಸಲ್ಮಾನ ವೃತ್ತಿಕಲಾವಿದರಿಗೂ ಜಾತಿಗಾರರು ಎಂಬ ಪದ ಬಳಕೆಯಲ್ಲಿದೆ. ಆದರೆ ಇತ್ತೀಚೆಗೆ ಅಸ್ತಿತ್ವಕ್ಕೆ ಬಂದ ಮುಸಲ್ಮಾನ ಜಾತಿಗಾರರದು ಅಣಕು, ಮನರಂಜನೆ ರೂಪದ ಅಭಿನಯ. ಪರಂಪರೆಯಿಂದ ಬಂದ ಈ ಜಾತಿಗಾರರು ನೈಜ ಗಂಭೀರ ವಿಷಯವುಳ್ಳ ಅಭಿನಯ. ಆದುದರಿಂದ ಮುಸಲ್ಮಾನ ಜಾತಿಗಾರರಿಂದ ನಮಗೆ ಪ್ರಸ್ತುತರಾದ ಜಾತಿಗಾರರು ಬೇರೆಯೆಂದೇ ಹೇಳಬೇಕು.

ಕರ್ನಾಟಕದ ಕೆಲವು ಜಾನಪದ ಕಲೆಗಾರರಂತೆ ವೇಷಗಾರರ ಮೂಲಸ್ಥಾನವೂ ಆಂಧ್ರಪ್ರದೇಶ. ಇವರು ನಮ್ಮ ರಾಜ್ಯದ ಯಾವುದೇ ಭಾಗದಲ್ಲಿ ನೆಲೆಸಿದ್ದರೂ ಮನೆಯಲ್ಲಿ ತೆಲುಗು ಮಾಡನಾಡುವುದು, ಕರ್ನಾಟಕಾಂಧ್ರಗಳ ಸೀಮಾರೇಖೆಯಲ್ಲಿ ದಟ್ಟವಾಗಿ ನೆಲೆಸಿರುವುದು, ಅಂಗರಚನೆ ಮತ್ತು ಬಣ್ಣ ತೆಲುಗರನ್ನು ಹೋಲುವುದು ಈ ಅಂಶವನ್ನು ಬೆಂಬಲಿಸುತ್ತವೆ. ನಮ್ಮ ಜಾನಪದ ಕಲೆಗಾರರಲ್ಲಿ ಆಂಧ್ರಮೂಲದಿಂದ ಬಂದವರ ಸಂಖ್ಯೆ ಗಣನೀಯವಾಗಿದೆಯೆಂಬುದನ್ನು ಇಲ್ಲಿ ತಪ್ಪದೇ ಸ್ಮರಿಸಬಹುದು.

ಈ ಜನಾಂಗ ವೇಷಗಾರಿಕೆಯನ್ನು ಯಾವ ಉದ್ದೇಶಕ್ಕೋಸುಗ, ಯಾವ ಕಾಲದಲ್ಲಿ ತೊಟ್ಟಿತು? ಎಂಬ ಪ್ರಶ್ನೆಗಳಿಗೆ ನಮ್ಮಲ್ಲಿ ಸ್ಪಷ್ಟ ಉತ್ತರಗಳಿಲ್ಲ. ಇಂದು ವೇಷಗಾರರನ್ನೇ ಕೇಳಿದರೆ ತಾವು ಆಂಧ್ರ ಮೂಲದವರೆಂಬುದನ್ನೇ ಮರೆತು, ಶಿವಾಜಿ ಮಹಾರಾಜನ ಕಾಲದಲ್ಲಿ ತಮ್ಮ ವೇಷಗಾರಿಕೆ ಪ್ರಾರಂಭವಾಯಿತೆಂದು ಹೇಳುತ್ತಾರೆ. ಆಂಧ್ರ ಮೂಲದ ಕಿಳ್ಳಿಕೇತಕರಂತೆ, ಕರ್ನಾಟಕ ಮೂಲದ ಗೊಂದಲಿಗರಂತೆ, ಬಹುಶಃ ಶಿವಾಜಿಯ ಗುಪ್ತವೇಷ ಮೊದಲಾದ ರೋಚಕ ಘಟನೆಗಳಿಗೆ ಹೆಸರಾಗಿರುವುದನ್ನು ಗಮನಿಸಿಯೇ ಈ ವೇಷಗಾರ ಕಲಾವಿದರನ್ನು ಶಿವಾಜಿಯು ರಾಜಕೀಯ ಗುಪ್ತ ಚಲನವಲನ ಗಳಿಗೆ ಬಳಸುತ್ತಿದ್ದುದರಿಂದಲೋ ಈ ಕಲಾವಿದರು ತಮ್ಮ ಪ್ರಾಚೀನತೆಯನ್ನು ಇಲ್ಲಿಂದಲೇ ತಪ್ಪಾಗಿ ಹೇಳುತ್ತಿರಬೇಕು.

ಶಿವಾಜಿ ರಾಜಕೀಯ ಪ್ರಚಾರಕ್ಕೆ ಈ ಕಲಾವಿದರನ್ನು ಬಳಸಿಕೊಂಡರೆ, ಬಸವಣ್ಣನವರು ಅವರವರ ಸಾಹಿತ್ಯ, ಕಲೆ, ಸಂಗೀತಗಳಿಗೆ ಕಾಯಕದ ತಿರುವು ಕೊಟ್ಟು, ಅಪ್ರತ್ಯಕ್ಷವಾಗಿ ಜಾನಪದವನ್ನೇ ಜಾನಪದ ಕಲೆಯನ್ನೇ ಪುನರುಜ್ಜೀವನಗೊಳಿಸಿದರು. ಹೀಗಾಗಿ ಕರ್ನಾಟಕದ ಜಾನಪದ ಪುನರುಜ್ಜೀವನಕ್ಕೆ ಸಂಬಂಧಪಟ್ಟಂತೆ ಇಂದಿನ ನಮ್ಮದು ಪ್ರತ್ಯಕ್ಷ ಪ್ರಯತ್ನ; ಅಂದಿನ ಬಸವಣ್ಣನದು ಅಪ್ರತ್ಯಕ್ಷ ಪ್ರಯತ್ನ. ಇದು ದ್ವಿತೀಯ ಪ್ರಯತ್ನ. ಅದು ಪ್ರಥಮ ಪ್ರಯತ್ನ. ಹೀಗೆ ಅಂದು

ಉದ್ದೀಪನಗೊಂಡ ಕಲೆಗಳಲ್ಲಿ ವೇಷಗಾರಿಕೆಯೂ ಒಂದು. ಆ ಕಾಲದ ಶರಣರಾದ ಕಲಕೇತ ಬ್ರಹ್ಮಯ್ಯ, ನಗೆಯ ಮಾರಿತಂದೆ ಮೊದಲಾದ ಜಾನಪದ ಕಲಾವಿದರಲ್ಲಿ ಬಹುರೂಪಿ ಚೌಡಯ್ಯನೂ ಒಬ್ಬ. ಆದರೆ ಶರಣ ಬಹುರೂಪಿ ಚೌಡಯ್ಯ ನೊಂದಿಗೆ ಇಂದಿನ ಬಹುರೂಪಿಗಳ ಜಾನಾಂಗಿಕ ಸಂಬಂಧ ಕಲ್ಪಿಸುವುದು ಕಷ್ಟ. ಆ ಕಾಲದಲ್ಲಿ ಶಿವನ ಪಂಚವಿಂಶತಿ ಲೀಲೆಗಳ ಪ್ರಚಾರಕ್ಕೋಸುಗ ಶೈವರು, ವಿಷ್ಣುವಿನ ದಶಾವತಾರ ಪ್ರಚಾರ ಕ್ಕೋಸುಗ ವೈಷ್ಣವರು ಆ ವೇಷ ಹಾಕುತ್ತಿರಬಹುದು. ಜನ ಮನರಂಜನೆ, ದ್ರವ್ಯ ಸಂಪಾದನೆಗಳಿಗಾಗಿಯೂ ಕೆಲವರು ವೇಷಹಾಕುತ್ತಿದ್ದ ಸಂಭವವಿದೆ. ಹೀಗಾಗಿ ಇಂದಿನ ವೇಷಗಾರ ಜನಾಂಗವನ್ನು ಮೇಲಿನವುಗಳಲ್ಲಿ ಯಾವುದೇ ಒಂದು ಮೂಲಕ್ಕೆ ಮುಟ್ಟಿಸುವುದು ಅಸಾಧ್ಯವಾಗಿದ್ದರೂ ದ್ರಾವಿಡರಾದ ಇವರನ್ನು ಶೈವಮೂಲಕ್ಕೆ ಮುಟ್ಟಿಸಬಹುದಾಗಿದೆ.

ಇನ್ನೊಬ್ಬರಂತೆ, ಇನ್ನೊಂದರಂತೆ ವೇಷ ಹಾಕುವವರೆಲ್ಲ ವೇಷಗಾರರೇ. ಇವರನ್ನು ಬೀದಿ ವೇಷಗಾರರು; ವೇದಿಕೆ ವೇಷಗಾರರು ಅಥವಾ ಬೀದಿ ಆಟಗಾರರು, ಅಟ್ಟದ ಆಟಗಾರರು ಎಂದು ವರ್ಗೀಕರಿಸುಬಹುದು. ಯಾವುದೇ ರೀತಿಯ ಬೀದಿ ವೇಷಗಾರರ ಅಥವಾ ಬೀದಿ ಆಟಗಾರರ ಕಲೆಗಳನ್ನೇ ನಮ್ಮ ಪ್ರಾಚೀನರು "ಪಗರಣ" ಎಂದು ಕರೆದುದು. ದೃಶ್ಯಪ್ರಕಾರಗಳು ಆದುದರಿಂದ ಸಂಸ್ಕೃತದ ಪ್ರಕರಣ ಮತ್ತು ನಮ್ಮ ಪಗರಣಗಳಲ್ಲಿ ಕೆಲಮಟ್ಟಿಗೆ ಹೋಲಿಕೆಯಿದ್ದರೂ ಎರಡೂ ಬೇರೆ. ಒಂದು ಬೀದಿಯ ಆಟವಾದರೆ, ಇನ್ನೊಂದು ಅಟ್ಟದ ಆಟ. ಒಂದು ಜಾನಪದವಾದರೆ ಇನ್ನೊಂದು ಶಿಷ್ಟಪದ. ಹೀಗಾಗಿ ಬೀದಿಯ ಆಟವೂ ಜಾನಪದೀಯವೂ ಆಗಿರುವ ಇಂದಿನ ಬಹುರೂಪಿಗಳ ವೇಷಗಾರಿಕೆ ಪ್ರಾಚೀನ ಕಾವ್ಯಗಳು ಉಲ್ಲೇಖಿಸುವ "ಪಗರಣ ವರ್ಗ"ಕ್ಕೆ ಸೇರುತ್ತದೆ. ಕನ್ನಡದಲ್ಲಿ ಈ ವೇಷಗಾರಿಕೆಯ "ಪಗರಣ"ದ ಉಲ್ಲೇಖ ಕವಿರಾಜಮಾರ್ಗ, ವಡ್ಡಾರಾಧನೆಗಳಷ್ಟು ಪ್ರಾಚೀನ.

ಈ ಥರ್ಸ್ಟನ್ ಅವರ "Castes and tribes of South India" ಸಂಪುಟಗಳಲ್ಲಾಗಲೀ, ಎಚ್.ವಿ. ನಂಜುಡಯ್ಯ ಮತ್ತು ಎಲ್.ಕೆ. ಅನಂತಕೃಷ್ಣ ಅಯ್ಯರ ಅವರ "The Mysore tribes and Castes" ಎಂಬ ಸಂಪುಟಗಳಲ್ಲಾಗಲೀ ಈ ವೇಷಗಾರರ ಬಗ್ಗೆ ಏನೂ ಉಲ್ಲೇಖವಿಲ್ಲ. ಎಲ್.ಜಿ ಹಾವನೂರ ಅವರ ವರದಿಯ ಮೇರೆಗೆ "Backward Caste" ದ 128 ಜಾತಿಗಳಲ್ಲಿ ಬಹುರೂಪಿಯೂ ಒಂದು.

ಸಾಮಾನ್ಯವಾಗಿ ಬಹಳಷ್ಟು ಜಾನಪದ ಕಲಾವಿದರಂತೆ ವೇಷಗಾರರೂ ತಮ್ಮದು ಕ್ಷತ್ರಿಯವಂಶವೆಂದು ಹೇಳುತ್ತಾರೆ. ನಮ್ಮ ದೇಶದಲ್ಲಿ ವರ್ಣವಾಗಿ ಹುಟ್ಟಿ, ಕುಲವಾಗಿ ಬೆಳೆದಿದ್ದ ಕ್ಷತ್ರಿಯ ಜನಾಂಗ, ಒಂದು ಕಾಲಕ್ಕೆ ಯಾವುದೋ ಕಾರಣದಿಂದ ಮಾಯವಾಗಿ ಇಂದು ಹಾವುಗಾರ, ವೇಷಗಾರ ಮೊದಲಾದ ಜಾನಪದ ಕಲಾವಿದರಾಗಿ ಅವಶೇಷರೂಪದಲ್ಲಿ ಉಳಿದು ಕೊಂಡಿರಬೇಕು. ಇದರಲ್ಲಿ ವೇಷಗಾರರು, ರಾಮಕೊಂಡರು, ಸುಡಗಾಡ ಸಿದ್ಧರು ಒಂದೇ ಮೂಲದವರಾಗಿದ್ದು, ವೃತ್ತಿ ಕಾರಣವಾಗಿ ಭಿನ್ನವೆನಿಸಿದ್ದಾರೆ. ಇವರಲ್ಲಿ ಪರಸ್ಪರ ರಕ್ತ ಸಂಬಂಧವೇರ್ಪಡುವುದು ಈ ಅಂಶವನ್ನು ಬೆಂಬಲಿಸುತ್ತದೆ.

ವೇಷಗಾರರಲ್ಲಿ ವಿಭೂತಿ; ರುದ್ರಾಕ್ಷಿ, ಗಂಟೆ, ಶಂಖ, ಪುಸ್ತಕಗಳನ್ನವಲಂಬಿಸಿ, ಈಬತೋಳು, ರುದ್ರಾಕ್ಷೋಳು, ಗಂಟ್ಯೋಳು, ಸಂಕಲೋಳು, ಪಸ್ತಲೋಳು ಎಂದು ಐದು ಬೆಡಗುಗಳಿವೆ. ವಿಭೂತಿ+ವಾಳ್ಳು (ಅವರು) = ಈಬತೋಳು. ಈ ಬೆಡಗುಗಳು ಅಡ್ಡಹೆಸರುಗಳಾಗಿಯೂ ಬಳಕೆ ಆಗುತ್ತಿದ್ದು, ಕೊಂಡುರೋಳು, ಇಷ್ಟೋಳು ಮೊದಲಾದ ಬೇರೆ ಅಡ್ಡಹೆಸರು ಗಳೂ ಆಗಾಗ ಕಂಡುಬರುತ್ತವೆ. ಇವುಗಳಲ್ಲಿ ಒಂದೇ ಬೆಡಗಕ್ಕೆ ಸಂಬಂಧಪಟ್ಟವರು ಸೋದರರೆನಿಸುವುದರಿಂದ ಇವರಲ್ಲಿ ಬೀಗತನವೇರ್ಪಡುವುದಿಲ್ಲ.

ಇಲ್ಲಿಯೂ ಗುರುವರ್ಗ-ಶಿಷ್ಯವರ್ಗ ತೋರಿ ಬರುತ್ತವೆ. ಇವರು ತಮ್ಮ ಧರ್ಮಕ್ಷೇತ್ರ ಶ್ರೀಶೈಲವೆಂದೂ ಅಲ್ಲಿಯ ವೀರ ಭಿಕ್ಷಾವೃತ್ತಿ ಮಹಾರಾಜ ತಮ್ಮ ಗುರುವೆಂದೂ ಹೇಳುತ್ತಾರೆ. ಪ್ರತಿವರ್ಷ ಈ ಗುರುಗಳ ಪ್ರತಿನಿಧಿಯು ಆಗಮಿಸಿ ಇವರಿಂದ ಕಪ್ಪಕಾಣಿಕೆಯನ್ನು ಒಯ್ಯುತ್ತಾನೆ. ಶಿಷ್ಯವರ್ಗದವರು ಮಾತ್ರ ಮಾಂಸಾಹಾರ, ಮದ್ಯಸೇವನೆ ಮಾಡುತ್ತಿದ್ದು, ಇವು ಗುರುವರ್ಗದಲ್ಲಿ ನಿಷಿದ್ಧ. ಧಾರ್ಮಿಕ ಆಚರಣೆಯಲ್ಲಿ,



ವೇಷಗಾರರು

ವಿಭೂತಿ, ರುದ್ರಾಕ್ಷಿ ಮತ್ತು ಶಿವದಾರಗಳಿಗೆ ವಿಶೇಷ ಮಹತ್ವ. ಕುಲದೈವ ಶ್ರೀಶೈಲದ ಮಲ್ಲಿಕಾರ್ಜುನನಾಗಿದ್ದುದೂ, ವೀರಶೈವಪ್ರಧಾನವಾದ ಪ್ರದೇಶದಲ್ಲಿ ಬಾಳುತ್ತಿದ್ದುದೂ ಕಾರಣವಾಗಿ ಇವರ ಆಚರಣೆಯಲ್ಲಿ ವೀರಶೈವದ ದಟ್ಟಪ್ರಭಾವ ಕಂಡುಬರುತ್ತದೆ. ಹೀಗಾಗಿ ನಾಮಕರಣ, ಮದುವೆ, ಅಂತ್ಯಯಾತ್ರೆ ಮೊದಲಾದವು ವೀರಶೈವರಂತೆ ರೂಢಿಯಲ್ಲಿವೆ. ಸತ್ತಕೂಡಲೇ ಬಾಯಲ್ಲಿ ರುದ್ರಾಕ್ಷಿ ಇಡುತ್ತಿದ್ದು, ವೀರಶೈವ ಮಸಣ ಗಟ್ಟೆಯಲ್ಲಿ ಶವ ಸಮಾಧಿಗೆ ಅವಕಾಶವಿದೆ.

ಇವರಲ್ಲಿ ಅಧಿಕಾರಿವರ್ಗ, ಅನುಯಾಯಿ ವರ್ಗಗಳೂ ಏರ್ಪಟ್ಟಿವೆ. ಹಲವು ಮನೆತನಗಳುಳ್ಳ ಪ್ರತಿಯೊಂದು ನೆಲೆಗೆ ಒಬ್ಬ ಅಧಿಕಾರಿಯಿದ್ದು ಇವನಿಗೆ 'ಕಟ್ಟಾಯಿಂಟೋಳು' ಅಂದರೆ "ಕಟ್ಟೆಮನೆಯವರು" ಎಂದು ಹೆಸರು. ಇವನ ಕೈಕೆಳಗೆ ಒಬ್ಬ ವಾಲೀಕಾರನೂ ಇರುತ್ತಾನೆ. ಜನನದಿಂದ ಮರಣದವರೆಗಿನ ಧಾರ್ಮಿಕ ಕಾರ್ಯಕಲಾಪಗಳನ್ನು, ಆಗಾಗ ಬರುವ ಶ್ರೀಶೈಲ ಗುರುವಿನ ಪ್ರತಿನಿಧಿ ಪೂರೈಸುತ್ತಿದ್ದರೂ ದೈನಂದಿಕವಾಗಿ ಈ ಕಾರ್ಯಗಳನ್ನು ಗುರುವಿನ ಪರವಾಗಿ ನಿಂತು ಕಟ್ಟೆಮನೆಯವರೇ ಪೂರೈಸುತ್ತಾರೆ. ಸಾಮಾಜಿಕ ವ್ಯವಸ್ಥೆಗಳಾದ ನ್ಯಾಯ ತೀರ್ಪು, ದಂಡನೆ ಮೊದಲಾದವು ಈ ಕಟ್ಟೆಮನೆಯವರ ನೇತೃತ್ವದಲ್ಲಿ ನಡೆಯುತ್ತವೆ. ಕಡ್ಡಾಯವಾಗಿ ಬಿಡಬೇಕಾದ ಕೂದಲನ್ನು ಕತ್ತರಿಸಿಕೊಂಡರೆ, ಇತರ ಯಾವುದೇ ತಪ್ಪುಗಳನ್ನು ಮಾಡಿದರೆ ಇವರು ದಂಡ ವಿಧಿಸುತ್ತಾರೆ.

ಈ ಜನಾಂಗ ನ್ಯಾಯದಾನಕ್ಕೋಸುಗ ಒಮ್ಮೆಯೂ ಕೋರ್ಟು ಕಟ್ಟೆ ಹತ್ತಿಲ್ಲ. ಹತ್ತಬಾರದೆಂದೂ ನಿಯಮ. ಕನ್ಯೆಗೆ ಒಂಬತ್ತು ರೂಪಾಯಿ ತೆರವು, ಅತ್ತೆಗೆ ಒಂದು ಸೀರೆ, ಮಾವನಿಗೆ ಒಂದು ಧೋತರ, ದೈವಕ್ಕೆ ಇಪ್ಪತ್ತು ರೂಪಾಯಿ ಇದು ಇವರ ಲಗ್ನ ವ್ಯವಹಾರ. ಮದುವೆ, ಹೆಣ್ಣಿನ ಡೇರೆಯ ಮುಂದೆ. ಮೂರು ದಿನದ ಲಗ್ನ ವೆಚ್ಚ ಮಾತ್ರ ಗಂಡಿನ ಕಡೆಯವರದು. ಶೋಭನಕಾರ್ಯ ಗಂಡನ ಮನೆಯಲ್ಲಿ ಮುಗಿದ ಬಳಿಕ ಅಳಿಯ ಮೂರುವರ್ಷ ಹೆಂಡತಿಯ ಜೊತೆ ಮಾವನ ಪರಿವಾರದಲ್ಲಿಯೇ ಇರಬೇಕು. ಬಹುಶಃ ಅಳಿಯ ಮಗಳನ್ನು ಸರಿಯಾಗಿ ನೋಡಿಕೊಳ್ಳುವುದನ್ನು ಮಾವ ಖಾತ್ರಿ ಮಾಡಿಕೊಳ್ಳಲು ಈ ವ್ಯವಸ್ಥೆ ರೂಢವಾದಂತಿದೆ. ಮೂರು ವರ್ಷಗಳ ತರುವಾಯ ಅಳಿಯ ಹೆಂಡತಿಯೊಂದಿಗೆ ತನ್ನ ಮನೆಗೆ ತಿರುಗಿ ಹೋಗುತ್ತಾನೆ.

ವೇಷಗಾರರ ಎರಡು–ಮೂರು ಕುಟುಂಬಗಳು ಸಂಯುಕ್ತವಾಗಿ ಬೀದಿಯಾಟ ಪ್ರದರ್ಶನಕ್ಕೋಸುಗ ಊರೂರು ಅಲೆಯುತ್ತವೆ. ಎತ್ತು ಕುದುರೆಗಳನ್ನು ವಾಹನಗಳಂತೆ ಉಪಯೋಗಿಸಿಕೊಂಡು ಹೋಗಿ ಊರ ಚಾವಡಿ, ಹಾಳುಗುಡಿ ಇಲ್ಲವೆ ತಮ್ಮದೇ ಆದ ಡೇರೆಗಳಲ್ಲಿ ಇವರು ವಾಸಮಾಡುತ್ತಾರೆ. ಒಮ್ಮೆ ಡೇರೆ ಹೊಡೆದರೆ "ಮೂರು ತಿಂಗಳ ವಾಸ, ಮೂವತ್ಮೂರು ವೇಷ" ಇವರ ಪದ್ಧತಿಯಾಗಿತ್ತು. ಈಗ ಆಯಾ ಗ್ರಾಮಗಳ ಜನತೆ ತೋರುವ ಆಸಕ್ತಿಗನುಗುಣವಾಗಿ ವೇಷ–ವಾಸಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ.

ಸೋಗು ಧರಿಸಿಕೊಂಡು, ಹೋಗುವ ಮೇಳದವರೆಲ್ಲ ಗಂಡಸರೇ. ಹೆಂಗಸರು ಪಾತ್ರ ಧರಿಸಿವುದಿಲ್ಲ. ಅವಶ್ಯವಿದ್ದರೆ ಅವರು ವಾದ್ಯಮೇಳದಲ್ಲಿ ಭಾಗವಹಿಸಬಹುದು. ಶಿವಲೀಲೆ, ರಾಮಾಯಣ, ಮಹಾಭಾರತಗಳಿಗೆ ಸಂಬಂಧಿಸಿದ ಅನೇತ ಪೌರಾಣಿಕ ಸಂದರ್ಭಗಳನ್ನೂ, ಬಸವಣ್ಣ, ಕಬೀರದಾಸ, ಪುರಂದರದಾಸ ಮೊದಲಾದವರಿಗೆ ಸಂಬಂಧಿಸಿದ ಐತಿಹಾಸಿಕ ಸಂದರ್ಭಗಳನ್ನೂ ಇವರು ಪ್ರದರ್ಶಿಸುತ್ತಾರೆ. ಮನೆ ಮನೆಯ ಮುಂದೆ ಅವಸರವಾಗಿ ಹಾಡು ಹೇಳಿ, ಕೂಟಗಳಲ್ಲಿ ಮಾತ್ರ ವೇಷಗಾರಿಕೆಯನ್ನು ಅಭಿನಯಿಸುತ್ತಾರೆ. ಹೀಗೆ ಕೆಲವುದಿನ ಪ್ರದರ್ಶನ ನಡೆಸಿ, ಕೊನೆಯ ದಿನ ಪ್ರತಿಯೊಂದು ಮನೆಯಿಂದ ಕಾಣಿಕೆಯಾಗಿ ಹಣ, ಧಾನ್ಯ, ಕುರಿ, ಆಕಳು ಪಡೆಯುವುದುಂಟು. ಕೆಲವರು ಅಭಿನಯಕ್ಕೆ ಮೆಚ್ಚಿ ಬಂಗಾರ, ಹೊಲ ಮನೆ ನೀಡಿದ ಉದಾಹರಣೆಗಳು ಉಂಟು.

ವೇಷ ಇಲ್ಲವೆ ಸೋಗು ಹಾಕುವಲ್ಲಿ ಇವರು ಬಳಸುವ ಬಣ್ಣ–ಬಟ್ಟೆ ಭೂಷಣ–ಮುಖವಾಡ ಪತ್ರೋಚಿತವಾಗಿರಬೇಕಾದುದು ಸಹಜ. ಬಡತನದಲ್ಲಿಯೇ ಇವುಗಳನ್ನು ಹೇಗೋ ಜೋಡಿಸಿಕೊಂಡಿರುತ್ತಾರೆ. ಬಟ್ಟೆ–ಭೂಷಣಗಳಲ್ಲಿ ಖರೀದಿಸಿದವು ಗಳಿಗಿಂತ ಯಾಚಿಸಿ ಪಡೆದುವೇ ಅಧಿಕ. ಮುಖವಾಡಗಳನ್ನು ಕೆಲವುವೇಳೆ ಖರೀದಿಸುತ್ತಿದ್ದರೂ ರಟ್ಟು–ಬಟ್ಟಲ ಮೊದಲಾದ ವುಗಳಿಂದ ತಾವೂ ಸಿದ್ಧಪಡಿಸಿಕೊಳ್ಳುತ್ತಾರೆ. ಬಣ್ಣವನ್ನು ಖರೀದಿಸುತ್ತಿದ್ದು ಸಪೇತ, ಇಂಗಳಿಕ, ನೀಲಿ ಮೊದಲಾದ ವುಗಳನ್ನು ಈ ಹಿಂದೆ ಬೆಣ್ಣೆಯಲ್ಲಿ, ಇಂದು ಕೊಬ್ಬರಿಎಣ್ಣೆ, ವ್ಯಾಸಲಿನ್‌ದಲ್ಲಿ ಮಿಶ್ರಮಾಡಿ ಲೇಪಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ನೇರ ಬಣ್ಣಗಳನ್ನು (Direct colour) ಉಪಯೋಗಿಸುತ್ತಿದ್ದು, ವರ್ಣಮಿಶ್ರಣದ ಗೋಜಿಗೆ ಹೋಗುವುದಿಲ್ಲ. ಮಿಕ್ಕ ಕಿರೀಟ, ಬಿಲ್ಲು–ಬಾಣ, ಗದೆ ಮೊದಲಾದ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಿದ್ದು, ನಿಲುಕದ ವಸ್ತುಗಳಾದ ರಥ, ಆನೆ, ಉದ್ಯಾನ, ಅರಮನೆ ಮೊದಲಾದವುಗಳನ್ನು ಬಾಯಲ್ಲಿ ಹೇಳಿ ಮುಗಿಸಿಬಿಡುತ್ತಾರೆ.

"ಸಾತ್ವಿಕ" ವೆನಿಸುವ ದುಃಖ, ಹರ್ಷ, ವಿಷಾದ ಮೊದಲಾದ ಭಾವ ಪ್ರಕಟನೆ ದೃಶ್ಯದ ಅಮೂಲ್ಯ ಲಕ್ಷಣ. ದೃಶ್ಯಕ್ಕೆ ಆಳವನ್ನು ಕಲ್ಪಿಸುವ ಈ ಲಕ್ಷಣವನ್ನು ನಿರ್ವಹಿಸುವಲ್ಲಿ ವೇಷಗಾರರು ಅಸಮರ್ಥರಾಗಿ ಸಾಮಾನ್ಯ ಅನುಕರಣೆ ಇಲ್ಲವೆ ನಟನೆಯ ಮಟ್ಟದಲ್ಲಿ ನಿಂತುಬಿಡುತ್ತಾರೆ.

'ಅಂಗಿಕ'ವೆನಿಸುವ ದೇಹದ ಚಲನವಲನ ಅಂದರೆ ಕುಣಿತ ಮಣಿತಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಪುರುಷಪಾತ್ರ ಕುಣಿಯುವುದೇ ಇಲ್ಲ. ಸ್ತ್ರೀ ಪಾತ್ರ ಕ್ವಚಿತ್ತಾಗಿ ಒಂದೆರಡು ನರ್ತನಗಳನ್ನು ನಿರ್ವಹಿಸುತ್ತದೆ. ಮಾತಿಗೆ ತಕ್ಕಂತೆ ಅಂಗಾಂಗದ ಚಲನೆ–ವಲನೆ ತೋರಿಬರುತ್ತಿದ್ದು, ಹನುಮಂತ ಮೊದಲಾದ ಪಾತ್ರಧಾರಿಗಳು ಮಾಳಿಗೆಯಿಂದ ಮಾಳಿಗೆಗೆ, ಕಟ್ಟೆಯಿಂದ ಕಟ್ಟೆಗೆ ಜಿಗಿಯುವ ಅಪಾಯಕಾರಿ ಸನ್ನಿವೇಶಗಳನ್ನು ನಿರ್ವಹಿಸುತ್ತಾರೆ.

ದೃಶ್ಯವನ್ನು ಆಮೇಲೆ ಸೇರಿಕೊಂಡ ಮಾತು–ಗೀತರೂಪದ "ವಾಚಿಕ"ವು ವೇಷಗಾರರಲ್ಲಿಯೂ ಪ್ರಾಧಾನ್ಯ ಪಡೆಯುತ್ತ ಬಂದಿದೆ. ಒಟ್ಟು 'ರಚನೆ' ಮಾತಿಗೆ ಪ್ರತಿಮಾತು ರೂಪದ ಸಂಭಾಷಣೆಯಾಗಿದ್ದು, ತಾತ್ವಿಕ ಮತ್ತು ಹಾಸ್ಯ ಸಂದರ್ಭಗಳಲ್ಲಿ ಕ್ರಮವಾಗಿ ಗಂಭೀರ ಸರಸ ಅಂಶಗಳನ್ನು ಕಾಣಬಹುದಾಗಿದೆ. "ಕಾವ್ಯಕ್ಕೆ ದೋಷವೆನಿಸುವ ಶ್ರುತಿದುಷ್ಟ, ಕಲ್ಪನೋಕ್ತಿ ಕಷ್ಟ ಭಾಷೆ ನಗಿಸುವುದರಿಂದ ಪಗರಣದಲ್ಲಿ ಗುಣವೆನಿಸುತ್ತದೆ." ಎಂದು

ಕವಿರಾಜಮಾರ್ಗಕಾರರ ಹೇಳುವುದು ಪಗರಣದ ಒಂದು ಅಂಗವಾದ ವೇಷಗಾರರ ಮಾತು-ಗೀತಗಳಿಗೂ ಅನ್ವಯಿಸುತ್ತದೆ. ಕನ್ನಡ ಮಾತುಗಳು ತೆಲುಗು ಧ್ವನಿಯಲ್ಲಿ ತೂರಿ ಬರುವುದೂ, ವ್ಯಾಕರಣಬದ್ಧವಾಗಿ ಮಹಾಪ್ರಾಣಯುಕ್ತವಾಗಿ ಸಂಭಾಷಣೆ ನಡೆಸುವುದೂ ಇವರ ಮಾತಿನ ರೀತಿಯಾಗಿದೆ. ಪ್ರೇಕ್ಷಕರ ಸಂತೋಷಕ್ಕಾಗಿ ಪಾತ್ರೋಚಿತವಲ್ಲದ ಹಾಸ್ಯವನ್ನೂ ಬಳಸುತ್ತಾರೆ. ಗೀತಗಳು ಸ್ವರಚಿತವಾಗಿರದೆ ಅಲ್ಲಲ್ಲಿ ಕೇಳಿದವುಗಳಾಗಿದ್ದು, ಅವುಗಳನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳುತ್ತಾರೆ. ಇದಕ್ಕೆ ಪೂರಕವಾಗಿ ಅವರು ಬಳಸುವ ವಾದ್ಯಗಳು ತಬಲಾ, ಪೇಟಿ, ದಮ್ಮಡಿ, ತಾಳ. ವೇಷ. ಒಬ್ಬನೇ ವ್ಯಕ್ತಿಯ ಎಡಭಾಗಕ್ಕೆ ಪಾರ್ವತಿಯ ವರ್ಣಭೂಷಣ, ಬಲಭಾಗಕ್ಕೆ ಪರಶಿವನ ವರ್ಣಭೂಷಣ. ತಲೆಯಿಂದ ಮೂಗಿನ ನೇರಕ್ಕೆ ಇಳಿಬಿಟ್ಟ ಪದರೆ ಒಮ್ಮೆ ಪಾರ್ವತಿ ಭಾಗವನ್ನು ಮುಚ್ಚಿ ಪರಶಿವ ಭಾಗವ್ವನು ಪ್ರಕಟಿಸಿದರೆ, ಇನ್ನೊಮ್ಮೆ ಪರಶಿವ ಭಾಗವನ್ನು ಮುಚ್ಚಿ ಪಾರ್ವತಿ ಭಾಗವನ್ನು ಪ್ರಕಟಿಸುತ್ತದೆ. ಈ ಪರದೆಯ ತಂತ್ರ ಏಕಪಾತ್ರಾ ಭಿನಯದ ಸೋಜಿಗವಾದ ಸಂಶೋಧನೆಯೇ ಸರಿ. ಇದಕ್ಕೆ ಕಳಸವಿಟ್ಟಂತೆ ಪ್ರಶ್ನೋತ್ತರಗಳಲ್ಲಿ ಒಮ್ಮೆ ಸ್ತ್ರೀಧ್ವನಿ, ಸ್ತ್ರೀ ಹಾವಭಾವ-ವಿಲಾಸ-ವಿಭ್ರಮಗಳನ್ನೂ ಇನ್ನೊಮ್ಮೆ ಪುರಷ ಧ್ವನಿ, ಪುರುಷ ಹಾವ ಭಾವಗಳನ್ನು ಪ್ರಕಟಿಸುತ್ತ ಹೋಗುವ "ಅಭಿನಯ ಚಾತುರ್ಯ" ತುಂಬ ಮೆಚ್ಚುವಂತಹದು.

ಬಹುರೂಪಿಗಳ ಪ್ರದಾನವೃತ್ತಿ ವೇಷಗಾರಿಕೆಯಾದರೆ ಉಪವೃತ್ತಿ ಹಾಡುಗಾರಿಕೆ. ಇವರು ಸಾಮೂಹಿಕವಾಗಿ ಗ್ರಾಮ ಕೂಟಗಳಲ್ಲಿ ವೇಷಗಾರಿಕೆಯನ್ನು ನಿರ್ವಹಿಸಿದರೆ, ವೈಯಕ್ತಿಕವಾಗಿ ಮನೆಮನೆಗಳ ಮುಂದೆ ಹಾಡುಹೇಳಿ ಭಿಕ್ಷೆ ಪಡೆಯುತ್ತಾರೆ. ಹೀಗೆ ಹಾಡು ಹೇಳುವವ ಪುರುಷ, ಸ್ತ್ರೀ ಇಲ್ಲವೆ ಬಾಲಕ-ಬಾಲಿಕೆಯಾಗಿರಬಹುದು. ಪುರುಷ ಪೇಟಿ ಇಲ್ಲವೆ ದಮಡಿ ಬಳಸಿದರೆ ಸ್ತ್ರೀ, ಬಾಲಕ ಕೇವಲ ದಮಡಿ ಬಳಸುತ್ತಾರೆ. ಈ ಪ್ರಸಂಗದಲ್ಲಿ ಪುರುಷ ಅನುಭಾವಗೀತೆ, ಸರ್ವಜ್ಞನ ವಚನ ಇತ್ಯಾದಿಗಳನ್ನು, ಸ್ತ್ರೀ ಬಾಲಕ-ಬಾಲಿಕೆಯರು ಕೇವಲ ಸರ್ವಜ್ಞನ ವಚನಗಳನ್ನು ಹೇಳುವುದು ರೂಢಿ. ಒಂದರ್ಥದಲ್ಲಿ ಇವರು ಸರ್ವಜ್ಞನ ಮಕ್ಕಳೆಂದು ಹೆಮ್ಮೆಯಿಂದ ಹೇಳುವುದೂ ಉಂಟು. ಕಿನ್ನರಿ ಜೋಗಿಗಳು ಹಾಡುವುದರ ಮೂಲಕ ಮಹಾಭಾರತವನ್ನು ಜನರ ಮಧ್ಯ ಜೀವಂತವಾಗಿಟ್ಟರೆ, ವೇಷಗಾರರು ಹಾಡುವುದರ ಮೂಲಕ ಸರ್ವಜ್ಞನನ್ನು ಜನರ ಮಧ್ಯ ಜೀವಂತವಾಗಿಟ್ಟವರು. ಇಷ್ಟೇ ಏಕೆ ಈ ವರೆಗೆ ಹಸ್ತಪ್ರತಿಗಳಲ್ಲಿ ಸಿಗದ ನೂರಾರು ಸರ್ವಜ್ಞ ವಚನಗಳು ಇವರ ಬಾಯಲ್ಲಿ ಕೇಳಿಬರುತ್ತವೆ. ಇವು ಮೂಲ ವಚನಗಳೋ ಇವರೇ ಮೂಲ ಮಾದರಿಯಲ್ಲಿ ಕಟ್ಟಿದುವೋ ಎಂಬ ವಿಷಯವಾಗಿ ಸಂಶೋಧನೆ ನಡೆಯಬೇಕಾಗಿದೆ.

ವೇಷಗಾರರದು ಅನೇಕ ಶತಮಾನಗಳಿಂದ ವೇಷಗಾರಿಕೆ ಮತ್ತು ಹಾಡುಗಾರಿಕೆಗಳ ಮೂಲಕ ಜಾನಪದರನ್ನು ರಂಜಿಸುತ್ತ, ಅವರಿಗೆ ತತ್ವಬೋಧೆಯನ್ನು ಸಾರುತ್ತ ಬಂದ ಜನಾಂಗವಾಗಿದೆ. ಇವರ ಕಲೆ ಇಂದು ಎಲ್ಲ ಜನಪದ ಕಲೆಗಳಂತೆ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳುತ್ತಲಿದೆ.

(ಎಂ.ಎಂ.ಕೆ.)

ವ್ರ

ವ್ರತ: ಒಂದು ಧಾರ್ಮಿಕ ಆಚರಣೆ. ಸಾಧಕನು ಗುರಿ ಮುಟ್ಟುವವರೆಗೆ ಮಾಡುವ ನಿಯಮ, ಕ್ರಮಬದ್ಧ ಆಚರಣೆ. ನೇಮವನ್ನು ಪರಿಪಾಲಿಸುವುದು ವ್ರತದ ಅರ್ಥ. ವೈದಿಕ ಧರ್ಮದಲ್ಲಿ ವ್ರತಕ್ಕೆ ಮಹತ್ವ ನೀಡಿದ್ದಾರೆ. ವ್ಯಕ್ತಿಯ ವಿಕಾಸ, ಮನಸ್ಸಿನ ದೃಢತೆ, ಧರ್ಮಶ್ರದ್ಧೆಗಳು ವ್ರತ ನಿಯಮಗಳನ್ನು ಆಚರಿಸುವ ಮೂಲಕ ಕೈಗೂಡುತ್ತವೆ. ಶ್ರದ್ಧೆ, ಭಕ್ತಿ, ಕಠಿಣ ನಿಯಮಗಳು ವ್ರತಧರ್ಮವನ್ನು ಒಲಿಸುತ್ತವೆ. ಭಾರತೀಯ ಸ್ತ್ರೀ-ಪುರುಷರು ಒಂದಿಲ್ಲ ಒಂದು ವ್ರತಧಾರಿಗಳಾಗಿರುತ್ತಾರೆ. ವ್ರತಕ್ಕೆ ಕನ್ನಡದಲ್ಲಿ 'ನೋಂಪಿ' ಎಂದು ಹೆಸರು. ಈ ನೋಂಪಿ 'ನೋಪಿ'ಯಾಗಿ ರೂಢಿಯಲ್ಲಿದೆ.

ಗ್ರಾಮೀಣ ಜನಪದರಲ್ಲಿ ವ್ರತಗಳ ಆಚರಣೆ ಬಹಳ ಧಾರ್ಮಿಕ ಹಿನ್ನೆಲೆಯ ವ್ರತಗಳಿರುವಂತೆ ಸಾಮಾಜಿಕ ಹಿನ್ನೆಲೆಯ ವ್ರತಗಳಿರುವುದು ಕಂಡು ಬರುತ್ತವೆ. ಮಹಿಳೆಯರು ಒಳ್ಳೆಯ ಪತಿ, ಮಕ್ಕಳು ಸುಖ ಸಂಸಾರ, ಕುಟುಂಬದ ನೆಮ್ಮದಿ ಪಡೆಯಲು ವ್ರತಗಳನ್ನು ಆಚರಿಸುತ್ತಿರುವುದು ಸರ್ವಸಾಮಾನ್ಯ. ಬನ್ನಿ, ಅರಳೆ ಮರಗಳಿಗೆ ಹೋಗುವುದು, ಹುತ್ತಕ್ಕೆ ಹಾಲೆರೆಯುವುದು, ವಾರಗಳ ಉಪವಾಸ ಮಾಡುವುದು ಇವುಗಳೆಲ್ಲ ವ್ರತಗಳು. ಮನಸ್ಸಿನ ಇಚ್ಛೆ ಪೂರೈಕೆಗೆ ಕಾಶಿ, ಶ್ರೀಶೈಲ, ತಿರುಪತಿ ಯಾತ್ರೆ ಕೈಕೊಳ್ಳುವುದು. ದೇವರಿಗೆ ತುಪ್ಪದ ದೀಪ ಮುಡಿಸುವುದು, ಶ್ರಾವಣ ಮಾಸದಲ್ಲಿ ಉಪವಾಸವಿರುವುದು ಮೊದಲಾದವು ವ್ರತವೆಂದೆನಿಸಿಕೊಳ್ಳುತ್ತವೆ. ಕಡಲೆ ನೇಮ, ಕಡುಬಿನ ನೇಮ, ಬೆಲ್ಲದ ನೇಮಗಳು ವ್ರತದ ಬಗೆಗಳು.

ಇವುಗಳಿಗಿಂತ ಭಿನ್ನವಾದ ಮುಜಗರ ಹುಟ್ಟಿಸುವ ಕ್ರೂರವಾದ ಕೆಲವು ವ್ರತಗಳು ನಾಗರಿಕ ಸಮಾಜದಿಂದ ದೂರದ ಆಚರಣೆಗಳು ಇಂದಿಗೂ ನಡೆಯುತ್ತವೆ. ಮಹಿಳೆಯ ಬೆತ್ತಲೆ ಸೇವೆ, ಬೆನ್ನ ಚರ್ಮಕ್ಕೆ ಕಬ್ಬಿಣದ ಹುಕ್ಕ ಸಿಕ್ಕಿಸಿಕೊಂಡು ಅಂತರದಲ್ಲಿ ನೇತಾಡುವ ಸಿಡಿ ಸೇವೆ, ಬಾಯಿ ಹಲ್ಲಿನಿಂದ ಹರಕೆ ಕುರಿಗಳನ್ನು ಸಿಗದು ಹಾಕುವ ಸೇವೆ, ಮುಳ್ಳು ಹಾಸಿಗೆಯ ಮೇಲೆ ಗಂಟೆಗಟ್ಟಲೆ ನಿಲ್ಲುವ ಕಾಯಕ ಸೇವೆಗಳು ಕಠೋರ ವ್ರತಗಳು ನಮ್ಮ ಕಣ್ಣಮುಂದೆ ನಡೆಯುತ್ತವೆ. ಇವುಗಳಿಗೆ ಧಾರ್ಮಿಕ ಕಾರಣ ನೀಡಿ ಜೀವಂತ ಉಳಿಯುವಂತೆ ಮಾಡಿರುವ ವ್ರತ ನೇಮಗಳನ್ನು ಸುಲಭವಾಗಿ ನಿರಾಕರಿಸುವಂತಿಲ್ಲ.

.(ಎಸ್.ಎಂ.)

ವ್ರತ ಮತ್ತು ಹರಕೆಗಳು: ಇಷ್ಟಾರ್ಥಸಿದ್ಧಿಗಾಗಿ ಮಾಡುವ ಆಚರಣೆಯಾಗಿದೆ. ವ್ರತ್ ಎಂಬ ಧಾತುವಿನಿಂದ ವ್ರತ ನಿಷ್ಪನ್ನವಾಗಿದೆ. ವ್ರತ ಎಂದರೆ ಮುಂದೆ ಸಾಗು, ಮಾಡು, ಕಡೆಗೆ ಹೋಗು ಎಂದರ್ಥ. ಕಠಿಣವಾದ ಧಾರ್ಮಿಕ ಆಚರಣೆ, ದೇಹ ದಂಡನೆ, ಪೂಜೆ, ಪ್ರಾರ್ಥನೆಗಳಿಂದ ಇಷ್ಟದೈವ ಉಪಾಸನೆ ಮಾಡುವುದು, ಮೋಕ್ಷ ಪ್ರಾಪ್ತಿ ಮಾಡಿಕೊಳ್ಳುವುದು ಎಂದಾಗುತ್ತದೆ.

ವ್ರತದ ಇನ್ನೊಂದು ಅರ್ಥ ಪ್ರತಿಜ್ಞೆ ಎಂದಿರುವುದರಿಂದ ಹಿಡಿದ ಕಾರ್ಯ ನೆರವೇರಿಸುವುದಕ್ಕೆ ಬದ್ಧರಾಗಿರುವುದು ಎಂಬರ್ಥವೂ ಉಂಟು.

ವ್ರತಗಳ ಆಚರಣೆ ಶಾಸ್ತ್ರೋಕ್ತವಾದ ರೀತಿಯಲ್ಲಿಯೇ ಮಾಡಬೇಕು. ಆಚರಣೆಯಲ್ಲಿ ಲೋಪವಾಗಬಾರದು. ಕಟ್ಟುನಿಟ್ಟಿನ ಕಠಿಣ ನಿಯಮ, ಸ್ನಾನ, ಪೂಜೆ, ಉಪವಾಸ, ದಾನ, ಸಮಾರಾಧನೆಗಳು ಮುಖ್ಯವಾಗಿರುತ್ತವೆ.

ವ್ರತಗಳ ಆಚರಣೆಯಿಂದ ಜೀವನದಲ್ಲಿ ತಾವು ಬಯಸಿದ ಧನ, ಕನಕ, ಸಂಪತ್ತು, ಸಂತಾನ, ಸ್ಥಾನಮಾನ ಪಡೆಯುತ್ತಾರೆಂಬ ಕಥೆಗಳಿಂದ ವ್ರತಗಳನ್ನು ಆಚರಿಸಲು ಪ್ರೇರಣೆಯನ್ನುಂಟು ಮಾಡುವುದು. ಇದಕ್ಕೆ ವ್ಯತಿರಿಕ್ತವಾಗಿ ಆಚರಣೆಯಲ್ಲಿ ಲೋಪವಾದರೆ ಅದರಿಂದ ಸಿದ್ಧಿಯಾಗುವ ಬದಲು ಕೆಡುಕಾಗುತ್ತದೆ. ಕ್ಷಣದಲ್ಲೆ ಮನೆ ಸಂಪತ್ತು ನಾಶವಾಗುವ, ಮಕ್ಕಳು ಸತ್ತು ದಟ್ಟದರಿದ್ರವಾಗುವ ಕಥೆಗಳಿಂದ ವ್ರತಗಳ ಆಚರಣೆಯಲ್ಲಿ ಕಟ್ಟುನಿಟ್ಟಿನ ನಿಯಮ ಪಾಲಿಸುವರು. ಅಶರೀರವಾಣಿಯಿಂದಲೊ, ಬ್ರಾಹ್ಮಣರ ರೂಪದಲ್ಲಿ ಸಾಧುಸಂತರ ವೇಷದಲ್ಲಿ ದೇವರು ವ್ರತಗಳನ್ನು ಆಚರಿಸಲು ಪ್ರೇರಣೆ ಕೊಡುವುದು, ಇಲ್ಲವೆ ಲೋಪ ಮಾಡಿದಲ್ಲಿ ಎಚ್ಚರಿಕೆ ಕೊಡುವುದು ವ್ರತಗಳ ಕಥೆಗಳಲ್ಲಿ ಬರುವುದು. ಇದರಿಂದ ಎಲ್ಲರೂ ವ್ರತಗಳನ್ನು ಆಚರಿಸಲು ಸಾಧ್ಯವಾಗುವುದಿಲ್ಲ. ದೃಢಸಂಕಲ್ಪದಿಂದ ಪೂರೈಸ ಬೇಕೆಂಬ ಛಲವಿದ್ದರೆ ಮಾತ್ರ ವ್ರತಗಳ ಆಚರಣೆಗಳಲ್ಲಿ ತೊಡಗುವರು. ಅನೇಕ ಅಡ್ಡಿ ಆತಂಕಗಳಿರುವಾಗಲೂ ವ್ರತವನ್ನು ಪೂರ್ಣ ಗೊಳಿಸಿದರೆ ಹೆಚ್ಚಿನ ಸಿದ್ಧಿಯಾಗುವುದೆಂದೂ ಅನೇಕ ವ್ರತ ಕಥೆಗಳಲ್ಲಿ, ದೃಷ್ಟಾಂತ ಕಥೆಗಳಿಂದ ಪುಷ್ಟಿಯೊದಗಿಸುತ್ತಾರೆ.

ವ್ರತಗಳನ್ನು ಎರಡು ವಿಧವಾಗಿ ವಿಂಗಡಿಸಬಹುದಾಗಿದೆ. ಕಾಮ್ಯಕವ್ರತ ಮತ್ತು ನಿಷ್ಕಾಮ ವ್ರತ. ಕಾಮ್ಯಕ ವ್ರತಗಳ ಆಚರಣೆಯಿಂದ ಐಹಿಕ ಸುಖ ಸಂಪತ್ತು ಪ್ರಾಪ್ತಿಯಾಗುತ್ತದೆಂಬ ನಂಬಿಕೆ ಇದೆ. ನಿರ್ದಿಷ್ಟ ಅವಧಿ ಮುಗಿದ ಮೇಲೆ ಉದ್ಯಾಪನೆ, ಸಮಾರಾಧನೆ ಮಾಡಿ ಮುಗಿಸುವರು. ಉದಾಹರಣೆಗೆ ಸಂತೋಷಿಮಾತಾ ವ್ರತ, ಹದಿನಾರು ಸೋಮವಾರ ವ್ರತ, ಸಂಕಷ್ಟಿ ವ್ರತ ಮುಂತಾದವುಗಳು. ನಿಷ್ಕಾಮ ವ್ರತಾಚರಣೆಯನ್ನು ವರ್ಷದ ಕೆಲವು ನಿರ್ದಿಷ್ಟ ದಿನಗಳಲ್ಲಿ ಆಚರಿಸಿದರೆ ಮೋಕ್ಷಪ್ರಾಪ್ತಿಯಾಗುತ್ತದೆ ಎಂಬ ನಂಬುಗೆ ಇದೆ. ಶಿವರಾತ್ರಿಯ ದಿನದಂದು ಉಪವಾಸ ಮತ್ತು ಜಾಗರಣೆ, ಆಷಾಢ ಕಾರ್ತಿಕ ಏಕಾದಶಿಗಳು ಮುಂತಾದವುಗಳು.

ವ್ರತಗಳನ್ನು ನಿರ್ದಿಷ್ಟವಾದ ಜಾತಿ ಸಮುದಾಯದವರು ಆಚರಿಸಬೇಕೆಂಬ ನಿರ್ಬಂಧವಿಲ್ಲ. ಎಲ್ಲ ಜಾತಿಯ ಜನರೂ ಹೆಂಗಸರು, ಗಂಡಸರು, ಮಕ್ಕಳು ಎಲ್ಲರೂ ಆಚರಿಸಬಹುದು. ಆದರೆ ವ್ರತಾಚರಣೆಗೆ ತೊಡಗುವವರು ಹೆಚ್ಚಿನ ಸಂದರ್ಭಗಳಲ್ಲಿ ಕಂಡು ಬರುವಂತೆ ಕಿರಿಯರೂ ಅಲ್ಲ, ಮುದುಕರೂ ಅಲ್ಲ, ಮಧ್ಯ ಮಯಸ್ಕರು. ಗಂಡಸರಿಗಿಂತ ಹೆಂಗಸರ ಸಂಖ್ಯೆಯೇ ಹೆಚ್ಚಾಗಿ ಇರುವುದು. ಪತಿಯ ಯೋಗಕ್ಷೇಮಕ್ಕಾಗಿ, ಸಂತಾನ ಪ್ರಾಪ್ತಿಗಾಗಿ, ಸುಖ ಸಂಪತ್ತು ಲಭಿಸಲು ವ್ರತಗಳನ್ನು ಆಚರಿಸುವರು. ಇವುಗಳಲ್ಲಿ ವರಲಕ್ಷ್ಮೀ ವ್ರತ, ಸಂಪತ್ ಶುಕ್ರವಾರ ವ್ರತ, ಸಂಕಷ್ಟಿ ವ್ರತ ಮುಂತಾದವುಗಳನ್ನು ಉಲ್ಲೇಖಿಸಬಹುದು. ವ್ರತಗಳ ಆಚರಣೆಯ ಸಮಯದಲ್ಲಿ ಮನೆಯನ್ನು ಶುಚಿಗೊಳಿಸುವುದು, ಉಪವಾಸ ಮಾಡುವುದು, ನಿರ್ದಿಷ್ಟವಾದ ಅಡುಗೆ ಮಾಡುವುದು, ದಾನಗಳನ್ನು ಕೊಡುವುದು ಸಂತರ್ಪಣೆ ಮಾಡುವುದು ಮುಂತಾದವುಗಳಿರುತ್ತವೆ.

ಮನೆ ಸಾರಿಸುವುದು, ತೊಳೆಯುವುದರಿಮದ ಪರಿಸರ ಶುದ್ಧಿಗೊಳ್ಳುವುದು. ಉಪವಾಸದಿಂದ ದೇಹ ಶುದ್ಧಿಯಾಗುವುದು, ಬುದ್ಧಿ ಚುರುಕಾಗುವುದು, ಮನಸ್ಸು ದೃಢವಾಗುವುದು, ಶಾಂತಿ ಲಭಿಸುವುದು. ನಿರ್ದಿಷ್ಟವಾದ ಅಡುಗೆಯನ್ನು ಮಾಡಿ ಅದರಲ್ಲಿ ಸ್ವಲ್ಪಭಾಗ ಆಕಳಿಗೆ ಕೊಡುವುದು, ಮಕ್ಕಳಿಗೆ, ಮುತ್ತೈದೆಯರಿಗೆ ಬ್ರಾಹ್ಮಣರಿಗೆ ಊಟ ಮಾಡಿಸುವುದರಿಂದ ಮನಸ್ಸು ಉದಾರವಾಗಿ ದಾನ ಬುದ್ಧಿ ಬೆಳೆಯುವುದು. ಈ ಕೆಲವು ಕಾರಣಗಳಿಂದ ವ್ರತಗಳ ಆಚರಣೆಯಿಂದ ಉತ್ತಮ ಅಂಶಗಳೇ ವ್ಯಕ್ತವಾಗುತ್ತವೆ.

ಹರಕೆಗಳೂ ವ್ರತದ ಇನ್ನೊಂದು ಭಾಗ. ಇಷ್ಟದೇವರಿಗೆ ತಮ್ಮ ಸಂಕಲ್ಪ ಸಿದ್ಧಿಗಾಗಿ ಭಕ್ತರಾದವರು ಹರಕೆ ಬೇಡಿಕೊಂಡಿರುತ್ತಾರೆ. ಇಂಥ ಹರಕೆಗಳು ಜನಪದ ಜೀವನದಲ್ಲಿ ವೈವಿಧ್ಯಮಯವಾಗಿ ದೊರಕುತ್ತವೆ. ಪ್ರಾಚೀನ ಕಾಲದಿಂದಲೂ ಹರಕೆಗಳನ್ನು ಒಪ್ಪಿಸುವುದ ನ್ನು ಕಾಣುತ್ತೇವೆ. ಬಸವಣ್ಣನವರ ವಚನಗಳಲ್ಲಿ, ಯಶೋಧರ ಚರಿತೆ ಯಲ್ಲಿ ಹರಕೆಗಳ ಪ್ರಸ್ತಾಪ ಬರುತ್ತದೆ. ಪ್ರಾಚೀನ ಕಾಲದಿಂದಲೂ ಕೋಣ, ಕುರಿ, ಕೋಳಿ, ಮನುಷ್ಯರನ್ನು ಇಷ್ಟ ದೈವಕ್ಕೆ ಹರಕೆಯಾಗಿ ಒಪ್ಪಿಸುವದು ಸಂಪ್ರದಾಯವಿದೆ. ಹರಕೆ ಒಪ್ಪಿಸುವುದು ತಮ್ಮೊಬ್ಬರ ಕ್ಷೇಮಕ್ಕಾಗಿಯಷ್ಟೆ ಅಲ್ಲ, ಇಡೀ, ಊರಿನ, ರಾಜ್ಯದ ಒಳಿತಿಗಾಗಿ ಎಂಬ ನಂಬುಗೆ ಬಲವಾಗಿತ್ತು. ಕುರಿ, ಕೋಳಿಗಳನ್ನು ಬಲಿಕೊಡು ವುದು ಇಂದೂ ಮುಂದುವರೆದಿದೆ.

ಹರಕೆ ಪೂರೈಸಲು ಕೆಲವು ಸಲ ಭಕ್ತರಿಗೆ ಸಾಧ್ಯವಾಗಲಿಕ್ಕಿಲ್ಲ. ದೇವರು ಕಾಡುತ್ತಾನೆಂಬ ಭಯ ಒಂದು ಕಡೆಗೆ. ದೇವರಲ್ಲಿ ಅಚಲವಾದ ವಿಶ್ವಾಸವಿರುವುದರಿಂದ ತಮ್ಮ ಹರಕೆ ಕೈಗೂಡುವು ದೆಂಬ ನಂಬುಗೆಯಲ್ಲಿರುವ ಜನಪದರಿಗೆ ಇಷ್ಟಾರ್ಥ ನೆರವೇರಿದ ಮೇಲೆ ಹರಕೆಯೊಪ್ಪಿಸುವ ಕಾತುರ. ಹನ್ನೆರಡು ವರುಷದ ಮೇಲಾ ದರೂ ಬೇಡಿಕೊಂಡ ಹರಕೆಯೊಪ್ಪಿಸುವರು. ಕೆಲವು ಪ್ರಮುಖ ಹರಕೆಗಳೆಂದರೆ, ಸಿಡಿ ಆಡುವುದು, ಅಗ್ಗಿ ತುಳಿಯುವದು, ತನಾರತಿ ಹೊರುವುದು, ದೀರ್ಘದಂಡ ನಮಸ್ಕಾರ ಹಾಡುವುದು, ಬೇವಿನ ಉಡಿಗೆ ಉಡುವುದು, ಗಂಧದ ಉಡಿಗೆ (ಗಂಧ ಮೈಗೆಲ್ಲ ಲೇಪಿಸಿ ಕೊಂಡು ಮೈಮೇಲೆ ವಸ್ತ್ರವಿಲ್ಲದೆ ದೇವಸ್ಥಾದವರೆಗೆ ಹೋಗುವುದು. ಇಂಥ ಹರಕೆ ಎಲ್ಲಮ್ಮ ದೇವರಿಗೆ ಮಾತ್ರ ಇದೆ.) ತಮಗೆ ಇಷ್ಟವಾದ ಆಹಾರ ಪದಾರ್ಥವನ್ನು ಹರಕೆ ನೆರವೇರಿ ಸುವವರೆಗೆ ಬಿಡುವುದು, ದೇವರಿಗೆ ಪಾದುಕೆ ಮಾಡಿಸುವುದು, ಬೆಳ್ಳಿ ತೊಟ್ಟಿಲು, ಛತ್ತರಿ, ಪಲ್ಲಕಿ ದೇವಸ್ಥಾನಕ್ಕೆ ಕೊಡುವುದು, ದೇವಸ್ಥಾನಕ್ಕೆ ಗಂಟೆ, ಕನ್ನಡಿ ಕೊಡುವುದು ಮುಂತಾದವುಗಳು. ಕೆಲವು ವಿಚಿತ್ರವಾದ ಹರಕೆಗಳೂ ಇರುವುವು. ಇದನ್ನು ಮೂಢ ನಂಬಿಕೆ, ಅಂಧಭಕ್ತಿ, ಅತಿಯಾದ ವಿಶ್ವಾಸ ಮುಂತಾದವುಗಳಿಂದ ಹೆಂಗಸರೆ ಹೆಚ್ಚಾಗಿ ಮಡುವರು.

(ವೈ.ಎಸ್.)

ಶ

ಶಕುಂತಲಾ ಭೂತೇರು: ಜನಪದ ವೃತ್ತಿಕಲಾವಿದೆ. ಮೂಲತಃ ಬೀದರ ತಾಲ್ಲೂಕಿನ ಅಷ್ಟೂರ ಗ್ರಾಮದವರು. ಕೃಷಿ ಕುಟುಂಬದ ಮಾಣಿಕ ರತ್ನಮ್ಮ ಎಂಬ ಕಬ್ಬಲಿಗ ಜಾತಿಯ ದಂಪತಿಗಳ ಮಗಳು. ಬಾಲ್ಯದಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ ಈಕೆ ಹದಿನೈದನೆಯ ಯವಸ್ಸಿಗೆ ಬಂದಾಗ ತಾನು ನಡೆದುಕೊಳ್ಳುತ್ತಿದ್ದ ತುಳಜಾ ಭವಾನಿಗೆ ಸಮರ್ಪಿಸಿಕೊಂಡವಳು.

ಭೂತೇರು ಎಂಬುದು ಜಾತಿ ಅಲ್ಲ. ಅದೊಂದು ಜನಪದ ಕಲಾಪ್ರದರ್ಶನ. ದೇವಿ ಆರಾಧಕರನ್ನು ಭೂತೇರು ಎಂದು ಕರೆವ ವಾಡಿಕೆ ಇದೆ. ಬೀದರ, ಗುಲಬರ್ಗಾದಲ್ಲಿ ಈ ಜನಾಂಗದವರು ಹೆಚ್ಚಾಗಿ ವಾಸಿಸುತ್ತಾರೆ. ದೇವರಿಗೆ ಹರಕೆ ಹೊತ್ತವರು ಗೊಂದುಳ ಹಾಕುವಾಗ ಭೂತೇರರನ್ನು ಕರೆಸಿ ಗೊಂದುಳ ಹಾಕುವುದು ಈ ಭಾಗದ ಬಹುದೊಡ್ಡ ವಾಡಿಕೆ.

ಶಕುಂತಲ ಮೈತುಂಬ ಝುಗವುಟ್ಟು ಕೊರಳಲ್ಲಿ ಕವಡಿ ಸರ ಹಾಕಿಕೊಂಡು ಎದೆಯ ಮೇಲೆ ಪರಡಿ ಕಟ್ಟಿಕೊಂಡು (ಬಟ್ಟೆಗೆ ಕವಡಿಯಿಂದ ಹೊಲಿದು ಮಧ್ಯದಲ್ಲಿ ಅವರ ಆರಾಧ್ಯ ದೇವರ ಸಣ್ಣ ಮೂರ್ತಿ ಇರುತ್ತದೆ) ಬಲಗೈಯಲ್ಲಿ ದೀವಟಿಗೆ ಹಿಡಿದುಕೊಂಡು ಹಣೆ ತುಂಬ ಅರಶಿಣ ಕುಂಕುಮದ ದೇವಿ ಆರಾಧನಾ ಪದ್ಯದ ಮೂಲಕ ನರ್ತನಕ್ಕಿಳಿದರೆ ಭಕ್ತಿಭಾವದ ಹೊಸ ಲೋಕವೇ ತೆರೆದುಕೊಳ್ಳುತ್ತದೆ. ಇವರು ಸಂಗಡಿಗರೊಂದಿಗೆ ಮತ್ತು ಒಂಟಿಯಾಗಿ ಸಹ ಹಾಡುತ್ತಾರೆ. ಸಂಗಡಿಗರೊಂದಿಗೆ ಹಾಡುವಾಗ ಸಂಗೀತ ಪರಿಕರಗಳಾದ ಸುತ್ತಿಗೆ, ಡೋಲಕ, ತುಂತುಣಿ ಇರುತ್ತದೆ. ಕೈಯಲ್ಲಿ ದೀವಟಿಗೆ (ಪಂಜು) ಸಹ ಇರುತ್ತದೆ.

ಶಕುಂತಲಾ ಭೂತೇರು ಆದಮೇಲೆ ಮತ್ತೊಬ್ಬ ಭೂತೇರರನ್ನು ವಿವಾಹವಾಗುತ್ತಾರೆ. ಎಲ್ಲಮ್ಮನ ಆರಾಧಕರು ಮದುವೆ ಆಗುವುದಿಲ್ಲ. ಅವರು ದೇವದಾಸಿ ಬಿಟ್ಟಂತೆ ಹೋಗುತ್ತಾರೆ. ಆದರೆ ಇವರು ಮದುವೆ ಮಕ್ಕಳು ಪಡೆದು ತುಂಬು ಸಂಸಾರ ನಡೆಸಬಹುದು ಎಂದು ಹೇಳುತ್ತಾರೆ.

(ಜಿ.ಕೆ.ಪಿ.)

ಶರಣಪ್ಪ ಗದ್ಲೇಗಾಂವ: ಬಸವಕಲ್ಯಾಣ ತಾಲ್ಲೂಕಿನ ಗದ್ಲೇಗಾಂವ ಗ್ರಾಮದ ಶರಣಪ್ಪ ದೇವಬಾ ಪೈಲ್ವಾನ 'ಕಡೆಯಕುಸ್ತಿ ವೀರ' ಎಂದೇ ಈ ಭಾಗದಲ್ಲಿ ಪ್ರಸಿದ್ಧಿ ಗಳಿಸಿದ್ದರು. ಯಾರನ್ನಾದರೂ ಚಿತ್ತ ಮಾಡುವ ಮನಸ್ಸು ಮಾಡಿದರೆಂದರೆ ಆ ಕೆಲಸ ಆದ ಮೇಲೆಯೇ ಅವರಿಗೆ ಸಮಾಧಾನ ಆಗುತ್ತಿತ್ತು. ಜತೆಗೆ ಜನಾನುರಾಗಿಯೂ ಆಗಿದ್ದರು. ತಮಗೆ ದೊರೆತ ಕಾಣಿಕೆ ಮತ್ತು ಬಹುಮಾನವನ್ನು ಹಲಿಗೆ ಬಾರಿಸುವವರಿಗೆ ಹಾಗೂ ಇತರರಿಗೆ ಹಂಚುತ್ತಿದ್ದರು.

ಅವರು ನಿಧನರಾಗಿ ಐದು ವರ್ಷಗಳಾಗುತ್ತಿವೆ. ನಿಧನದ ಒಂದು ವರ್ಷದಲ್ಲಿಯೇ ಅವರ ಕಂಚಿನ ಪ್ರತಿಮೆಯನ್ನು ಗದ್ಲೇಗಾಂವದಲ್ಲಿ ಸ್ಥಾಪಿಸಲಾಗಿದೆ. ಈ ಮೂಲಕ ಗ್ರಾಮಸ್ಥರು ಅವರ ಕಾರ್ಯಕ್ಕೆ ಗೌರವ ಸೂಚಿಸಿದ್ದಾರೆ. ಬೇರೆ ಬೇರೆಯವರ ಪ್ರತಿಮೆಗಳು ಎಲ್ಲೆಡೆ ಇವೆ. ಆದರೆ ಕುಸ್ತಿ ಪೈಲ್ವಾನನ ಪ್ರತಿಮೆ ಮಾತ್ರ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಇದೊಂದೇ ಸ್ಥಳದಲ್ಲಿ ಇದೆ.

ದಶಕದ ಹಿಂದೆ ಕುಸ್ತಿಗೆ ಬಹಳಷ್ಟು ಮಹತ್ವ ಇತ್ತು. ಯಾವುದೇ ಊರಿನಲ್ಲಿ ಜಾತ್ರೆ ನಡೆದರೂ ಕೊನೆಗೆ ಕುಸ್ತಿ ಸ್ಪರ್ಧೆ ಇದ್ದೇ ಇರುತ್ತಿತ್ತು. ಕುಸ್ತಿ ಪಟುಗಳಿಗೆ ಮರ್ಯಾದೆಯೂ ಜಾಸ್ತಿ. ಯಾವುದೇ ಸಣ್ಣ ಪುಟ್ಟ ಜಗಳ, ಅಥವಾ ಗ್ರಾಮದಲ್ಲಿನ ಯಾವುದೇ ವ್ಯಾಜ್ಯ ಇದ್ದರೂ ಪೈಲ್ವಾನರ ನಿರ್ಣಯವನ್ನು ಎಲ್ಲರೂ ಒಪ್ಪುತ್ತಿದ್ದರು.

ಅಂದು ಬಸವಕಲ್ಯಾಣ ಹಾಗೂ ಆಳಂದ ತಾಲ್ಲೂಕಿನ ಸೀಮೆಯಲ್ಲಿನ ಬೆಣ್ಣೆತೊರೆ ನದಿಯ ಸಮೀಪದ ಗ್ರಾಮಗಳಾದ ಗಿಲಗಿಲಿ, ಹಿಪ್ಪರ್ಗಾ, ಮುದ್ದಡಗಿ, ಗದ್ಲೇಗಾಂವ, ಹತ್ತರ್ಗಾ, ಚಿತ್ತಕೋಟಾ, ಬೆಳಮಗಿ, ಬಟಗೇರಾ, ತಡಕಲ್, ಸಲಗರ, ದೇಗಾಂವ, ಲೇಂಗಟಿ, ಬಟಗೇರಾವಾಡಿ, ಡಿಗ್ಗಿ ಕೊಹಿನೂರವಾಡಿ, ಹೊದಲೂರ, ಬೇಡಗಾ ಗ್ರಾಮಗಳಲ್ಲಿ ಕುಸ್ತಿ ಪೈಲ್ವಾನರಿದ್ದರು. ಅವರೆಲ್ಲರಲ್ಲಿ ಶರಣಪ್ಪ ಪೈಲ್ವಾನರದ್ದು ಎತ್ತಿದ ಕೈ ಆಗಿತ್ತು. ಕರ್ನಾಟಕ, ಮಹಾರಾಷ್ಟ್ರ ಒಳಗೊಂಡು ಈ ಭಾಗದಲ್ಲಿ ಎಲ್ಲಿಯೇ ಜಂಗೀಕುಸ್ತಿಗಳು ನಡೆದರೂ ಅಲ್ಲಿ ಶರಣಪ್ಪ ಅವರದ್ದು ಕಡೆಯ ಕುಸ್ತಿ ಇರುತ್ತಿತ್ತು.

ಶರಣಪ್ಪ ಅವರು ಬಡತನದಲ್ಲಿಯೇ ಬೆಳೆದಿದ್ದರು. ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರೂ ನಿತ್ಯ ವ್ಯಾಯಾಮ ಮಾಡಿ ತಾನು ಪೈಲ್ವಾನ ಆಗಬೇಕು ಎಂಬ ಕನಸಿಗೆ ನೀರೆರೆಯುತ್ತಿದ್ದರು. ಇವರ ಪ್ರಯತ್ನವನ್ನು ನೋಡಿ ಬಸವಣ್ಣೆಪ್ಪ ದೇಗಾಂವ ಎಂಬ ಪೈಲ್ವಾನರು ಕುಸ್ತಿಯ ಏಚುಪೇಚುಗಳನ್ನು ಕಲಿಸಿಕೊಟ್ಟರು. ಗ್ರಾಮದಲ್ಲಿನ ಮಾಧವರಾವ ಸಾವುಕಾರ ಎನ್ನುವವರು ಹಾಲಿನ ಎಮ್ಮೆ ಕೊಟ್ಟರು. ತಮ್ಮ ಮನೆಯಲ್ಲಿ ಊಟ ಹಾಕಿ ಸಲುಹಿದರು. ಹೀಗಾಗಿ ಶರಣಪ್ಪ ಅವರು ಕುಸ್ತಿ ಕ್ಷೇತ್ರದಲ್ಲಿ ಹೆಚ್ಚಿನ ಸಾಧನೆ ಮಾಡುವಂತಾಯಿತು.

ಅವರು ಇಳಿ ವಯಸ್ಸಿನಲ್ಲಿ ಕುಸ್ತಿ ಆಡುವುದನ್ನು ಬಿಟ್ಟಿದ್ದರು. ಆದರೆ ದ್ಯಾಗಾಯಿ ಮೌಲಾ ಎನ್ನುವ ಯುವಕ ಯಾರಿಗೂ ಹಣಿಯುತ್ತಿಲ್ಲ ಎಂಬುದನ್ನು ತಿಳಿದು ಅವನನ್ನು ಸೋಲಿಸಲು ಪಣ ತೊಟ್ಟರು. ಅದಕ್ಕಾಗಿ ಒಂದೆರಡು ತಿಂಗಳು ಸಿದ್ದತೆ ಮಾಡಿ–ಕೊಂಡು ಮೌಲಾನನ್ನು ಸೋಲಿಸಿದರು. ಈ ಕಾರಣವೂ ಅವರ ಕೀರ್ತಿ ಎಲ್ಲೆಡೆ ಹರಡಿತು.

(ಎಂ.ಬಿ.ಬಿ.)

ಶರಣಪ್ಪ ಭೂತೇರ: ಭೂತೇರ ಕುಣಿತದ ಕಲಾವಿದ. ಬೀದರ್‌ನಲ್ಲಿ ಪ್ರಸಿದ್ಧಿ ಪಡೆದಿರುವ ಇವರು ಮೈಮರೆತು ಹಾಡಬಲ್ಲ ಮತ್ತು ಕುಣಿಯಬಲ್ಲ ಒಬ್ಬ ಅಪ್ರತಿಮ ಕಲಾವಿದ. ಎಲ್ಲಮ್ಮನ ಆಟ, ನಗರ ಗಾಣಿಗನ ಆಟ, ಮಾಳವಾರ ನಾಗಶೆಟ್ಟಿ ಆಟ, ಬಡವನ ಆಟ ಮುಂತಾದ ಆಟಗಳನ್ನು ತನ್ನ ಕುಣಿತದ ಮೂಲಕ ತೋರಿಸುವ

ಈತ ಮೈಮೇಲೆ ಬಂದವರಂತೆ ಎಲ್ಲವ್ವನೇ ಆಗುತ್ತಾರೆ. ಕನ್ನಡ, ತೆಲುಗು, ಹಿಂದಿ ಬಾಷೆಗಳನ್ನು ಬಲ್ಲ ಇವರು ಅನೇಕ ಶಿಷ್ಯೆಯರಿಗೆ ಇವರ ಆಟಗಳನ್ನು ಹೇಳಿಕೊಟ್ಟಿದ್ದಾರೆ. ಸಾಹಿತ್ಯ ಪರಿಷತ್ತಿನ ಕಲಾಮೇಳದಲ್ಲಿ ಮತ್ತು ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿರುವ ಇವರು ಗೊಂದಲ ಹಾಕುವ ಕಲೆಯಲ್ಲಿಯೂ ನಿಷ್ಣಾತರು. ಇವರಿಗೆ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿದೆ. *(ಜಿ.ಆರ್.ಟಿ.)*

ಶರಣಪ್ಪ ವಡಿಗೇರಿ: ಜನಪದ ಕಲಾವಿದ. ಕೊಪ್ಪಳ ಜಿಲ್ಲೆಯ ಕುಷ್ಟಗಿಯವರು. 'ಜಾನಪದ ಗಾರುಡಿಗ'ವೆಂದೇ ಹೆಸರಾಗಿದ್ದಾರೆ.

ಜನಪದದ ಕಲಾ ಪ್ರಕಾರಗಳು ಕೇವಲ ಪುರಷರಿಗೇ ಸೀಮಿತವಾದರೆ, ಇನ್ನೂ ಕೆಲವು ಸ್ತ್ರೀಯರಿಗೆ ಸೀಮಿತವಾಗಿವೆ. ಆದರೆ, ಶರಣಪ್ಪ ವಡಿಗೇರಿಯವರ ಪಾಲಿಗೆ ಜಾನಪದ ಸೀಮಾತೀತವಾಗಿದೆ. ಹೀಗಾಗಿ ಇವರು ಲಾವಣಿ ಪದ, ಗೀಗಿ ಪದ, ಕೋಲಾಟದ ಪದ, ಡೊಳ್ಳಿನ ಪದ, ರಿವಾಯತ್ ಪದ, ಹಂತಿ ಹಾಡು, ದೊಡ್ಡಾಟದ ಹಾಡುಗಳು ಹಾಗೂ ಡಪ್ಪಿನಾಟದ ಪದ, ಬೀಸುವ, ಕುಟ್ಟುವ, ಸೋಬಾನದ ಪದಗಳ ಕಣಜವೇ ಇವರಾಗಿದ್ದಾರೆ.

ಅಳಿವಿನ ಅಂಚಿನಲ್ಲಿರುವ 4000ಕ್ಕೂ ಅಧಿಕ ಜನಪದಗಳ ಹಾಡುಗಳ ಸಂಗ್ರಹವನ್ನು ತಾತ–ಅಜ್ಜಿಯರಿಂದ ಸಂಗ್ರಹಿಸಿದ್ದಾರೆ. ಅಷ್ಟೇ ಅಲ್ಲ, ಅವೆಲ್ಲವು ಮೂಲಧಾಟಿಯಲ್ಲೇ ತಮ್ಮ ಕಂಚಿನ ಕಂಠದಲ್ಲಿ ಹೊರ ಹೊಮ್ಮುತ್ತವೆ. ಇವರು "ಜಾನಪದ ಕಂಪ್ಯೂಟರ್" ಎಂದು ಆಧುನಿಕವಾಗಿ ಕರೆದರೆ, "ಜಾನಪದ ಕಲ್ಪವೃಕ್ಷ" ಎಂದು ಗ್ರಾಮೀಣ ಜನತೆ ಕರೆಯುತ್ತಾರೆ. ಅದು ಅವರ ಜಾನಪದ ಸಿರಿಯನ್ನು ಕೇಳಿ ಕಂಡುಂಡವರಿಗೇ ಬಿಟ್ಟಿದ್ದು.

ಈಗಾಗಲೇ ಜಾನಪದ ಕಲಾ ತಂಡದ ನೇತೃತ್ವ ವಹಿಸಿಕೊಂಡು ಒಂದೂವರೆ ಸಾವಿರಕ್ಕೂ ಅಧಿಕ ಕಾರ್ಯಕ್ರಮಗಳ ಮೂಲಕ ಜಾನಪದ ಸೊಗಡಿನ ಇಂಪನ್ನು ಕೇಳಿಸಿದ್ದಾರೆ. ಮೆಚ್ಚುಗೆ ಗಳಿಸಿದ್ದಾರೆ. ಕೊಪ್ಪಳದಲ್ಲಿ ನಡೆದ 62ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಹೂವಿನ ಹಡಗಲಿಯ ರಾಜ್ಯ ಮಟ್ಟದ ಜಾನಪದ ಸಮ್ಮೇಳನ, ಉತ್ತರ ಕರ್ನಾಟಕ ಜಾನಪದ ಸಮಾವೇಶ ನವಲಗುಂದ, ರವೀಂದ್ರ ಕಲಾಕ್ಷೇತ್ರ ಬೆಂಗಳೂರುಗಳಲ್ಲಷ್ಟೇ ಅಲ್ಲದೇ, ರಾಯಚೂರಿನ ನೆಹರೂ ಯುವ ಕೇಂದ್ರದ ಆಶ್ರಯದಲ್ಲಿ ಕರ್ನಾಟಕ ಯುವಕರ ಸಾಹಸ ಕಾರ್ಯಗಳ ಯೋಜನೆಯಡಿ 'ಲಕ್ಷದ್ವೀಪ' ದಲ್ಲೂ 1993ರಲ್ಲಿ ಭಾಗವಹಿಸಿದ್ದಾರೆ. ಉತ್ತರ ಪ್ರದೇಶದ ಲಖನೌದಲ್ಲಿ ರಾಷ್ಟ್ರೀಯ ಏಕತಾ ಶಿಬಿರದಲ್ಲೂ ತಮ್ಮ ಜಾನಪದ ಸಿರಿಕಂಠದ ಹೊಳೆಯನ್ನು ಹರಿಸಿದ ಶ್ರೇಯಸ್ಸು ಇವರದು. ಎಡಗೈಯಲ್ಲಿ ಹಲಿಗೆ, ಬಲಗೈಯಿಂದ ಚಿಟಿಕೆ ಬಾರಿಸುತ್ತಾ ಜನಪದ ಗೀತೆಯನ್ನು ಹಾಡುವುದು ಇವರ ವಿಶೇಷ.

1990ರಿಂದಲೂ ಕಲಬುರ್ಗಿ ಆಕಾಶ ವಾಣಿಯಲ್ಲಿ "ಬಿ" ದರ್ಜೆ ಕಲಾವಿದರಾಗಿ ಸಾಕಷ್ಟು ಜಾನಪದ ಗೀತೆಗಳನ್ನು ಹಾಡಿದ್ದಾರೆ. ಇವರು ಕವಿ, ನಟ–ನಾಟಕಕಾರ. ಕಥೆಗಾರರು–ಲೇಖಕ. ಅನೇಕ ಸಂಘ ಸಂಸ್ಥೆಗಳು ಇವರಿಗೆ ಬಹುಮಾನ ನೀಡಿ ಸನ್ಮಾನಿಸಿವೆ. 'ಮಾಲಿಂಗ' ಮಾಯಾಕಾರತಿಯಂತಹ ಕಥೆಗಳು, 'ಅಸ್ಪೃಶ್ಯತೆ' ಯಂತಹ ನಾಟಕಗಳು ಇವರಿಗೆ ಸಾಕಷ್ಟು ಹೆಸರು ತಂದಿವೆ.

ಇವರ ಈ ಸಾಧನೆ, ಹಿ(ಗ)ರಿಮೆ ಕಂಡು ಬಾದಾಮಿಯ ಸಾಹಿತ್ಯ ಕಲಾ ಕುಂಜದವರು "ಜಾನಪದ ಗಾರುಡಿಗ" ಎಂದೂ ಕರ್ನಾಟಕದ ಸರ್ಕಾರವು ರಾಜ್ಯ ಯುವ ಜಾನಪದ ಗಾಯಕ ಬಿರುದು ನೀಡಿ ಗೌರವಿಸಿದ್ದಾರೆ. ಸುಮಾರು 25–30 ಸಂಘ ಸಂಸ್ಥೆಗಳು ಇವರನ್ನು ಗೌರವಿಸಿ ಪ್ರಶಂಸಿಸಿವೆ.

(ಕೆ.ಎಸ್.ಎನ್.ಐ.)

ಶರಣಬಸವೇಶ್ವರರು: 'ಮಹಾದಾಸೋಹಿ' ಎಂದೇ ಜನಪದರ ಹೃದಯದಲ್ಲಿ ಸ್ಥಾಯಿಯಾಗಿ ನೆಲೆ ನಿಂತಿರುವವರು. ಕಲಬುರ್ಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಅರಳಗುಂಡಿಗೆಯಲ್ಲಿ 1746ರಲ್ಲಿ ಜನಿಸಿದರು. ಸಾಲೋಕ್ಯ ಮನೆತನದ ತಂದೆ ಕೃಷಿಕಾಯಕ ನೇಮಿ ಮಲಕಪ್ಪ ತಾಯಿ ಸಂಗಮ್ಮ. ಕುಲಕೇರಿಯ ಮರುಳಸಿದ್ಧರು ಮನೆತನದ ಗುರುಗಳು ಗುಡುಗುಂಟೆ ಅಮರೇಶ್ವರ ಆರಾಧ್ಯ ದೇವ.

ಶರಣಬಸವರ ಆರಂಭದ ಶಿಕ್ಷಣವು ಮನೆಯಲ್ಲಿಯೇ ನಡೆಯಿತು. ಅವರ ದೊಡ್ಡಪ್ಪನವರಾಗಿದ್ದ ಆದಯ್ಯನವರೆ ವಿದ್ಯಾ ಗುರುಗಳಾದರು. ಆದಯ್ಯ ಮಡಿಯಮ್ಮ ದಂಪತಿಗಳು ಆಧ್ಯಾತ್ಮ ಜೀವಿಗಳಾಗಿದ್ದರು. ಮಕ್ಕಳಿಲ್ಲದ ಅಭಾವವನ್ನು ನೀಗಿಕೊಳ್ಳಲು ಅವರು ಶರಣಬಸವರನ್ನೇ ದತ್ತು ಪುತ್ರನನ್ನಾಗಿ ಸ್ವೀಕರಿಸಿದರು.



ಶರಣಬಸವೇಶ್ವರ

ಶರಣಬಸವರ ಒಲವು ಅಕ್ಷರ ಶಿಕ್ಷಣದಕ್ಕಿಂತಲೂ ಆಧ್ಯಾತ್ಮ ಶಿಕ್ಷಣದತ್ತ ಹೆಚ್ಚಾಗಿ ಒಲಿಯಿತು. ಗುರುಗಳಿಂದ ಇಷ್ಟಲಿಂಗ ದೀಕ್ಷೆ ಹೊಂದಿ ದಾಸೋಹ ಬದುಕಿನ ಸಾಧನೆನೆಗೆ ತೊಡಗಿದರು. ಮನೆತನದ ಉದ್ಯೋಗವಾಗಿದ್ದ ಕೃಷಿ ಕಾಯಕವನ್ನೇ ತಮ್ಮ ಕಾಯಕವನ್ನಾಗಿಸಿಕೊಂಡರು. ಶರಣರ ದಾಸೋಹ ಬದುಕಿನ ಸಾಧನೆಯಲ್ಲಿ ಸಹಧರ್ಮಿಣಿಯಾಗಿ ಬಂದವರು ಅಫಜಲ್‌ಪುರ ತಾಲ್ಲೂಕಿನ ಮಾಶಾಳ ಗ್ರಾಮದ ಬಾವಿಮನೆ ಮನೆತನದ ಶಾಂತಲಿಂಗಪ್ಪನವರ ಪುತ್ರಿ ಮಹಾದೇವಮ್ಮನವರ. ಶರಣದಂಪತಿಗಳಿಗೆ 'ಗುರು-ಲಿಂಗ-ಜಂಗಮ' ಎಂಬ ಮಗನು ಜನಿಸಿದ. ಆದರೆ ಅವನು ಹೆಚ್ಚು ಕಾಲ ಜೀವಿಸಲಿಲ್ಲ.

ಶರಣಬಸವರು ಭೌತಿಕ ಕೃಷಿಯೊಂದಿಗೆ ಆಧ್ಯಾತ್ಮಿಕ ಕೃತಿಯನ್ನೂ ನಡೆಯಿಸಿದರು. ಸಕಲ ಜೀವಿಗಾಗಿ ದಾಸೋಹದ ಬಾಗಿಲನ್ನು ತೆರೆದರು. ಕಳ್ಳರನ್ನೂ, ಕೊಲೆಗಡುಕನೂ, ಪಾಪಿ-ಪಾಮರರನ್ನು ಶಿವ ಜೀವರನ್ನಾಗಿ ಮಾಡಿದರು. ಸಲ್ಲದ ರೀತಿಯಿಂದ ಹುಟ್ಟಿದವನೆಂಬ ಅದೃಷ್ಟಕ್ಕೆ ಗುರಿಯಾಗಿದ್ದ ಕಡಕೊಳ ಶಿವಯೊಗಿ ಮಡಿವಾಳರಿಗೆ ಶಿವದೀಕ್ಷೆ ಕರುಣಿಸಿ 'ಮಹಾಶಿವಯೋಗಿ'ಯಾಗಿ ಬೆಳೆಯುವುದಕ್ಕೆ ಅನುವು ಮಾಡಿ-ಕೊಟ್ಟರು.

ಜೀವನದ ಉತ್ತರಾರ್ಧದಲ್ಲಿ ಶರಣಬಸವರು ಸಕಲ ಜೀವರ ಹಿತದ ಸಾಧನೆಗಾಗಿ ಅರಳಗುಂಡಿಗೆಯನ್ನು ಬಿಟ್ಟು ದಾಸೋಹ ಪಯಣ ಕೈಗೊಂಡರು. ಸವಳಹಳ್ಳ, ಬೆಳಗುಂಪಿ, ಅವರಾದಿ, ಹಾಗರಗುಂಡಿಗೆ, ಮುಖಾಂತರ ಕಲಬುರ್ಗಿಗೆ ಬಂದರು. ಬರುವ ಹಾದಿಯಲ್ಲಿ ಎದುರಾದ ಅಳಲಿದವರು, ಬಳಲಿದವರು, ದುರ್ಬಲರು, ದುಃಖಿತರು, ಅಬಲೆಯರಾದಿಗಳನ್ನು ಉದ್ಧರಿಸುತ್ತ, ಹಸಿದ ಒಡಲುಗಳಿಗೆ ಪ್ರಸಾದವನ್ನು ವಿಕಲ ಮನಸ್ಸುಗಳಿಗೆ ಸುಜ್ಞಾನವನ್ನು ನೀಡುತ್ತ ನಡೆದರು.

ಕಲಬುರ್ಗಿಯ ಆದಿ ದೊಡ್ಡಪ್ಪ ನೀಲಮ್ಮ ತಾಯಿ ದಂಪತಿಗಳ ಕರುಳಿನ ಕುಡಿಯನ್ನೇ ಅಪೇಕ್ಷಿತ ಭಕ್ತನೊಬ್ಬನಿಗೆ ನೀಡಿ, ಅವರ ದಾಸೋಹ ಭಕ್ತಿಯನ್ನು ಪರೀಕ್ಷಿಸಿ ನೋಡಿದರು. ಧೃತಿಗೆಡದ ದಂಪತಿಗಳ ದಾಸೋಹ ಭಕ್ತಿಗೆ ಪರಮ ಹರುಷಿತರಾಗಿ ಮುಂದಿನ ಪಯಣ ಬಿಟ್ಟು ಆದಿ ದೊಡ್ಡಪ್ಪನವರ ದಾಸೋಹ ಮನೆಯಲ್ಲಿಯೇ ಉಳಿದುಕೊಂಡರು. ತಮ್ಮ ಬದುಕಿನ ಕೊನೆಯವರೆಗೂ ನಡುವರೆ ಅರ್ಚನ-ಅರ್ಪಣ-ಅನುಭಾವಗಳನ್ನು ನಡೆಸುತ್ತ, ಹೈದ್ರಾಬಾದ ಕನ್ನಡ ಪ್ರದೇಶವನ್ನೆಲ್ಲ ದಾಸೋಹದ ಬೆಳಗಿನಿಂದ ಬೆಳಗಿದರು. ಭಾವೈಕ್ಯದ ಸಾಕಾರ ಮೂರ್ತಿಗಳಾಗಿ ನಿಂತು, ಈ ನೆಲದಲ್ಲಿ ನಡೆಯುತ್ತಿದ್ದ ಜನಾಂಗಿಕ ಸಂಘರ್ಷಗಳನ್ನು ತಪ್ಪಿಸಿದರು.

ಶರಣಬಸವರು ಎಪ್ಪತ್ತಾರು ವರ್ಷಗಳ ದಾಸೋಹ ಜೀವನವನ್ನು ಬದುಕಿ 1822ರಲ್ಲಿ ಲಿಂಗೈಕ್ಯರಾದರು. ಇಂದು ಕಲಬುರ್ಗಿಯಲ್ಲಿ ಕಂಗೊಳಿಸುವ ಬಂಗಾರ ಕಳಸದ ದೇವಾಲಯವು ಶರಣಬಸವರ ಸಮಾಧಿ ಮಂದಿರವೇ ಆಗಿದೆ. ಶರಣಬಸವರ ಗಾಢವಾದ ಪ್ರಭಾವ ಜನಪದರ ಮೇಲೆ ಆಗಿದೆ. ಆ ಕಾರಣದಿಂದಲೇ ಜನಪದ ಭಕ್ತರು ನಾಡಿನುದ್ದಗಲ್ಲಕ್ಕೂ ಅಲ್ಲದೆ ಅದರಾಚೆಗೂ ಐದುನೂರರ ಮೇಲ್ಪಟ್ಟು ಶರಣಬಸವರ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅಲ್ಲಲ್ಲಿ ಅವರ ದಾಸೋಹ ಸಂಸ್ಕೃತಿಯ ಬೆಳಕನ್ನು ರಕ್ಷಿಸಿಟ್ಟುಕೊಂಡು ತಮ್ಮ ಬಾಳಿನ ಕತ್ತಲೆಯನ್ನು ಕಳೆದು ಕೊಳ್ಳುತ್ತಿದ್ದಾರೆ.

ಶರಣಬಸವರ ಬಗೆಗೆ ಶಿಷ್ಟ ಸಾಹಿತ್ಯದೊಂದಿಗೆ ಜನಪದ ಸಾಹಿತ್ಯವೂ ಬೆಳೆದು ಬಂದಿದೆ. ತನ್ಮೂಲಕ ಶರಣಬಸವರ ದಾಸೋಹ ಜೀವನ ಇಂದಿಗೂ, ಎಂದಿಗೂ ಪ್ರಸ್ತುತ, ಮಾರ್ಗದರ್ಶಕವಾಗುವಂತಾಗಿದೆ. ಇದಕ್ಕೆ ಜೀವಿತ ರೂಪವೆನ್ನುವಂತೆ ಶರಣಬಸವರ ಪರಂಪರೆಯು ಎಂಟು ತಲೆಮಾರುಗಳಿಂದ ಮುಂದುವರೆದುಕೊಂಡು ಬರುತ್ತಲಿದೆ. ಎಂಟನೆಯ ಮಹಾ ದಾಸೋಹ ಪೀಠಾಧಿಪತಿಗಳಾಗಿರುವ ಪೂಜ್ಯ ಡಾ. ಶರಣಬಸವಪ್ಪ ಅಪ್ಪವರು ಶರಣಬವಸವರ ಒಟ್ಟು ಸಾಧನೆಗೆ ಸಾಂಕೇತಿಕ ಪ್ರತಿನಿಧಿಗಳಂತಿದ್ದಾರೆ.

(ಎಸ್.ಎಂ.ಎಚ್.)

ಶರಣರ ಸ್ಮಾರಕಗಳು: 12 ನೆಯ ಶರಮಾನದಲ್ಲಿ ಕರ್ನಾಟಕದಲ್ಲಿ ಜರುಗಿದ ಸಮಗ್ರ ಕ್ರಾಂತಿಯ ಕೇಂದ್ರ ಬಿಂದು ಶರಣ ಚಳವಳಿ. ಈ ಚಳವಳಿಯ ನೇತಾರ ಬಸವಣ್ಣನವರು. ಸಮಾಜೋ ಧಾರ್ಮಿಕ ಕ್ರಾಂತಿಯ ಮೂಲ ಪುರುಷ. ಸಮಾಜ ಸುಧಾರಕ ಬಸವಣ್ಣನವರ ನೇತೃತ್ವದಲ್ಲಿ ವಿನೂತನವಾದ ಆಂದೋಲನ ಜರುಗಿತು. ಇದು ಕರ್ನಾಟಕಕ್ಕೆ ಮಾತ್ರ ಸೀಮಿತವಾಗದೇ ಇಡೀ ಜಗತ್ತಿನ ಮನುಕುಲಕ್ಕೆ ಆದರ್ಶಪ್ರಾಯವಾಯಿತು. ಈ ಸುಧಾರಣೆಯ ಆಂದೋಲನದಲ್ಲಿ ಪಾಲ್ಗೊಂಡ ಶರಣ-ಶರಣೆಯರು ಅಸಂಖ್ಯ. ಅವರೆಲ್ಲರ ಜೀವನ ಸಾಧನೆಯ ವಿವರಣೆಗಳು ಸಿಕ್ಕಿದ್ದು ಅತ್ಯಲ್ಪವೆಂದೇ ಹೇಳಬೇಕು. ಸದ್ಯಕ್ಕೆ ಸಿಕ್ಕಿರುವ ಸ್ಮಾರಕಗಳು ಜ್ಞಾಪಕಾರ್ಥವಾಗಿರುವ ಕುರುಹುಗಳಾಗಿವೆ. ಮೂಲದಲ್ಲಿ ನಿರ್ಮಾಣಗೊಂಡ ಎಷ್ಟೋ ಸ್ಮಾರಕಗಳು ಕಾಲಗರ್ಭದಲ್ಲಿ ಮಾಯವಾಗಿವೆ. ಅಳಿದುಳಿದ ಕೆಲವನ್ನು ಮಾತ್ರ ಶರಣರ ವಾರಸುದಾರರು ಕಾಯ್ದುಕೊಂಡು ಬಂದಿರುವರು. ಕೆಲವನ್ನು ಮಾರ್ಪಾಟುಗೊಳಿಸಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಬಸವಣ್ಣನವರ ಅರುಹಿನ ಮನೆ: ಬಸವ ಕಲ್ಯಾಣದ ಹೊರ ವಲಯದಲ್ಲಿರುವ ಅರುಹಿನ ಮನೆ ಗುಹೆಯ ಮಾದರಿಯಲ್ಲಿದೆ. ಇದನ್ನು ಬಸವಣ್ಣನವರ ಪೂಜಾಗೃಹವೆಂದು, ಮಹಾಮನೆ ಎಂದು ಕರೆಯುತ್ತಾರೆ. ಜಂಬಿಟ್ಟಿಗೆ (Laterite) ದಿಬ್ಬದೊಳಗೆ ಇದನ್ನು ಕೊರೆಯಲಾಗಿದೆ. ಬಸವಣ್ಣನವರು ಇಲ್ಲಿಯೇ ಕುಳಿತು ಇಷ್ಟಲಿಂಗ ಪೂಜೆ ಮಾಡಿಕೊಳ್ಳುತ್ತಿದ್ದರೆಂದು, ಭಕ್ತಾದಿಗಳಿಗೆ ಹಿತೋಪದೇಶ ಹೇಳುತ್ತಿದ್ದರೆಂದು ಪ್ರತೀತಿ. ಗತ ಕಾಲದ ಘಟನೆಯನ್ನು ನೆನಪಿಸುವಂತೆ ಪ್ರಸ್ತುತ ಮನೆಯಲ್ಲಿ ಬಸವಣ್ಣನವರ ಮೂರ್ತಿ ಸ್ಥಾಪಿಸಲಾಗಿದ್ದು, ದಿನನಿತ್ಯವೂ ಪೂಜೆ ನಡೆಯುತ್ತದೆ.

ಹಡಪದ ಅಪ್ಪಣ್ಣನವರ ಗುಹೆ: ಇದು ಅರುಹಿನ ಮನೆಯ ಪಕ್ಕದಲ್ಲಿದೆ. ಅರುಹಿನ ಮನೆ ಮತ್ತು ಅಪ್ಪಣ್ಣನವರ ಗುಹೆಗಳ ರಚನೆ ಹಾಗೂ ಭೂ ವೈಜ್ಞಾನಿಕ ಮಾದರಿ ಒಂದೇ ರೀತಿಯದು. ಪ್ರಸ್ತುತ ಗುಹೆ ಸುರಂಗ ಮಾರ್ಗದಂತೆ ಕಂಡುಬರುತ್ತದೆ. ತಂಪಾದ ನೆಲೆ.

ಗವಿಯ ಕೊನೆಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಬೇಸಿಗೆ ಕಾಲದಲ್ಲಿ ಈ ಗುಹೆ ಮನಸ್ಸಿಗೆ ನೆಮ್ಮದಿಯನ್ನುಂಟು ಮಾಡುತ್ತದೆ. ಹಡಪದ ಅಪ್ಪಣ್ಣ ಹಾಗೂ ಬಸವಣ್ಣನವರು ಹೆಚ್ಚು ನಿಕಟವರ್ತಿಗಳಾಗಿರುವುದರಿಂದ ಇವರಿಬ್ಬರ ವಾಸಸ್ಥಳಗಳು ಪರಸ್ಪರ ಹತ್ತಿರದಲ್ಲಿವೆ. ಈತ ಬಸವಣ್ಣನವರಿಗೆ ಊಟವಾದ ಮೇಲೆ ತಾಂಬೂಲವನ್ನು ಸಲ್ಲಿಸುವ ಕಾಯಕ ಮಾಡುತ್ತಿದ್ದನು. ಈತನ ಪತ್ನಿ ಹಡಪದ ಲಿಂಗಮ್ಮ.

ಅಕ್ಕ ನಾಗಮ್ಮ: ನೀಲಮ್ಮನವರ ಗವಿಗಳು: ಅರುಹಿನ ಮನೆಯ ಹಿಂಭಾಗದ ದಿಬ್ಬದ ಮೇಲೆ, ತ್ರಿಪುರಾಂತಕ ಕೆರೆಯ ಇನ್ನೊಂದು ಬದಿಯಲ್ಲಿ ಇವರಿಬ್ಬರ ಗವಿಗಳಿವೆ. ಅಕ್ಕಪಕ್ಕದಲ್ಲಿರುವ ಇವೆರಡು ಗವಿಗಳನ್ನು ಜಂಬಿಟ್ಟಿಗೆಯ ದಿಬ್ಬದೊಳಗೆ ಕೊರೆಯಲಾಗಿದ್ದು, ಇವುಗಳ ಪ್ರವೇಶ ದ್ವಾರವು ಚಿಕ್ಕದಾಗಿದ್ದು ಬಲಭಾಗದ ಗವಿಯ ಪ್ರವೇಶ ದ್ವಾರವು ಇಳಿಜಾರಿಕೆಯಲ್ಲಿದೆ. ಗವಿಗಳ ಮೇಲೆ ಪಡಸಾಲೆ ಮಾದರಿಯ ಕಟ್ಟಡವಿದೆ. ಪಡಸಾಲೆ ಮಧ್ಯದಲ್ಲಿ ಚಿಕ್ಕಮಂಟಪ ಇದ್ದು ಅಲ್ಲಿ ಇಷ್ಟಲಿಂಗವನ್ನು ಪೂಜಿಸುತ್ತಿರುವ ಅಕ್ಕನಾಗಮ್ಮನ ಇತ್ತೀಚಿನ ಮೂರ್ತಿ ಇದೆ. ಕಿಡಿಗೇಡಿಗಳು ಈ ಶಿಲ್ಪವನ್ನು ಭಗ್ನಗೊಳಿಸಿದ್ದಾರೆ. ಗವಿಯ ಒಳಗಡೆಯ ಎಡಭಾಗದಲ್ಲಿ ಚಿಕ್ಕ ಕಟ್ಟೆಯಿದ್ದು, ಅದರ ಮೇಲೆ ಕೆಲವೊಂದು ಮೂರ್ತಿಗಳಿವೆ. ಅವುಗಳಿಗೆ ಪ್ರತಿನಿತ್ಯವೂ ಪೂಜೆ ಸಲ್ಲಿಸುಲಾಗುತ್ತಿದೆ. ಗವಿಯ ಇನ್ನೊಂದು ಭಾಗದ ಕಟ್ಟೆಯನ್ನು 'ಚೆನ್ನಬಸವಣ್ಣನವರ ತೊಟ್ಟಿಲ' ಎನ್ನುವುದುಂಟು. ಚೆನ್ನಬಸವಣ್ಣನವರು ತಮ್ಮ ಬಾಲ್ಯದ ದಿನಗಳಲ್ಲಿ ಇದೇ ಕಟ್ಟೆಯ ಮೇಲೆ ಕುಳಿತು ಶಿವಪೂಜೆ-ಶಿವಧ್ಯಾನ ಮಾಡುತ್ತಿದ್ದರೆಂಬುದು ಜನತೆಯ ಅಭಿಪ್ರಾಯ. ಇದು ಕಲ್ಪನೆಯು ಆಗಿರಬಹುದು. ಇವರ ಗವಿಗಳು ಪರಸ್ಪರ ಕೂಡಿಕೊಂಡಿರಲು ಬಲವಾದ ಕಾರಣ ರಕ್ತ ಸಂಬಂಧವೇ ಆಗಿದೆ.

ತ್ರಿಪುರಾಂತಕ ಕೆರೆ-ಧರ್ಮಶಾಲೆ: ಇದು ಐತಿಹಾಸಿಕ ಮಹತ್ವವನ್ನುಳ್ಳ ಕೆರೆ. ಚನ್ನಬಸವಣ್ಣನ ವಚನವೊಂದರಲ್ಲಿ ಉಲ್ಲೇಖಗೊಂಡ ತ್ರಿಪುರಾಂತಕ ದೇವಾಲಯ, ಅದರ ಅವಶೇಷಗಳು ಸದ್ಯಕ್ಕಿಲ್ಲ. ಆ ದೇವಾಲಯ ಸಂಪೂರ್ಣವಾಗಿ ನಾಮಾವಶೇಷವಾದ ಮೇಲೆ ಅದರ ನೆನಪಿಗಾಗಿ ಕೆರೆಯ ದಂಡೆಯ ಮೇಲೆ ತೀರಾ ಇತ್ತೀಚಿನ ರಚನೆಯ ಚಿಕ್ಕದಾದ ತ್ರಿಪುರಾಂತಕೇಶ್ವರನ ಮಂದಿರವನ್ನು ನಿರ್ಮಿಸಿ, ಒಳಗಡೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಕೆರೆಯ ಸುತ್ತಲೂ ಶಿವಶರಣರ ಹಲವು ನೆಲೆಗಳಿವೆ. ಈ ಕೆರೆಯಲ್ಲಿ ಸ್ನಾನ ಮಾಡಿಕೊಂಡ ಯಾತ್ರಾರ್ಥಿಗಳು, ಶಿವಶರಣರು ಧರ್ಮಶಾಲೆಯಲ್ಲಿಯೇ ಪೂಜಾದಿಗಳನ್ನು ನೆರವೇರಿಸಿಕೊಳ್ಳುತ್ತಿದ್ದರೆಂದು ಊಹಿಸಲು ಅಡ್ಡಿಯಿಲ್ಲ. ಧರ್ಮಶಾಲೆಯಿಂದ ಕೆರೆಯವರೆಗೆ ಹಲವಾರು ಮೆಟ್ಟಿಲುಗಳಿವೆ. ಸದರಿ ಧರ್ಮಶಾಲೆಯು ಎಸ್.ಎಸ್. ಖೂಬಾ ಬಸವೇಶ್ವರ ಮಹಾವಿದ್ಯಾಲಯದ ಬಡ ವಿದ್ಯಾರ್ಥಿಗಳ ವಸತಿಗೃಹವಾಗಿ ಪರಿವರ್ತನೆ ಹೊಂದಿದೆ.

ಘನಲಿಂಗ ರುದ್ರಮುನಿ ಹಾಗೂ ವಿಜ್ಞಾನೇಶ್ವರ ಗವಿ: ಜಂಬಿಟ್ಟಿಗೆಯ ದಿಬ್ಬದೊಳಗೆ ಕೊರೆಯಲಾಗಿರುವ ಈ ಗವಿಗಳು ತ್ರಿಪುರಾಂತಕ ಕೆರೆಯ ದಕ್ಷಿಣ ದಂಡೆಯಲ್ಲಿವೆ. ಇದು ಕಾಲಜ್ಞಾನ ಕರ್ತೃ, ರೇವಣಸಿದ್ಧೇಶ್ವರರ ಮಗ ಘನಲಿಂಗ ರುದ್ರಮುನಿಯ ಸ್ಥಳವಾಗಿದೆ. ಗವಿಯ ಎದರುಗಡೆ ಚಿಕ್ಕ-ಸುಂದರ ಮಂಟಪವಿದ್ದು, ಅದರಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಮತ್ತೊಂದು ಕಡೆಯಲ್ಲಿ ಕಟ್ಟಿಸಿದ ಬಾವಿ ಇದೆ. ಘನಲಿಂಗ ರುದ್ರಮುನಿಗಳ ಗವಿ ಉದ್ದ ಮತ್ತು ಅಗಲವಾಗಿದ್ದು, ವ್ಯವಸ್ಥಿತ ರೀತಿಯಲ್ಲಿದೆ. ಇದರ ಎಡಗಡೆ 'ಮಿತಾಕ್ಷರ' ಸಂಹಿತೆಯನ್ನು ರಚಿಸಿರುವ ವಿಜ್ಞಾನೇಶ್ವರನ ಗವಿ ಇದೆ. ಗವಿಯನ್ನು ಹೊಂದಿಕೊಂಡಂತೆ ಪಡಸಾಲೆಯಂತಹ ಕಟ್ಟಡವಿದೆ. ಗವಿಗೆ ಹತ್ತಿಕೊಂಡ ಕೆಲವೊಂದು ಕೋಣೆಗಳಿವೆ. ಒಟ್ಟಾರೆಯಾಗಿ ಇಲ್ಲಿಯ ಗವಿ, ಕೋಣೆ, ಸಮಾಧಿಯ ಪ್ರದೇಶವನ್ನು 'ಮರಿದೇವರ ಗುಡ್ಡ'ವೆಂದು ಕರೆಯುತ್ತಾರೆ. ಈ ಗುಡ್ಡದ ಮೇಲಿನ ಎಡಭಾಗದಲ್ಲಿ ಡಾ. ಚನ್ನಬಸವ ಪಟ್ಟದ್ದೇವರ ಸಾನಿಧ್ಯದಲ್ಲಿ ನಿರ್ಮಿಸಲಾದ ನೂತನ ಅನುಭವ ಮಂಟಪವಿದೆ. ಇದೊಂದು ಸಾಕಷ್ಟು ಮಹತ್ವ ಪಡೆದಿರುವ ಸ್ಮಾರಕ.

ನುಲಿಯ ಚಂದಯ್ಯ-ಅಂಬಿಗರ ಚೌಡಯ್ಯನವರ ಗವಿಗಳು: ತುಂಬ ನಿಷ್ಠುರವಾದಿ, ನೇರ ಸ್ವಭಾವದ ಅಂಬಿಗರ ಚೌಡಯ್ಯ ಹಾಗೂ ಕಾಯಕದ ಪರಿಭಾಷೆಗೆ ಅರ್ಥಪೂರ್ಣ ಮೌಲ್ಯವನ್ನೊದಗಿಸಿದ ನುಲಿಯ ಚಂದಯ್ಯನ ಗವಿಗಳೆರಡೂ ತ್ರಿಪುರಾಂತಕ ಕೆರೆಯ ದಂಡೆಯಲ್ಲಿವೆ. ಚಂದಯ್ಯನ ಗವಿಯ ಎದುರುಗಡೆ ಚಿಕ್ಕ ಬಾವಿಯೊಂದಿದೆ. ಅದರ ನೀರು ತುಂಬ ಸಿಹಿ. ಬಾವಿಯ ಪಕ್ಕದಲ್ಲೊಂದು ಬೇವಿನ ಮರವಿದ್ದು ಅದರ ಎಲೆಗಳು ಕಹಿ ಯಾಗದಿರುವುದು ಆಶ್ಚರ್ಯದ ವಿಷಯ.



ನೂಲಿಯಚಂದಯ್ಯನ ಮಂಟಪ

ಮಡಿವಾಳ ಮಾಚಿದೇವರ ಹೊಂಡ: ತ್ರಿಪುರಾಂತಕ ಕೆರೆಯ ಒಡ್ಡಿನ ಕೆಳಭಾಗದಲ್ಲಿರುವ ಹೊಂಡವನ್ನು ಮಡಿವಾಳ ಮಾಚಿದೇವರ ಹೊಂಡವೆಂದು ಕರೆಯುತ್ತಾರೆ. ಇಲ್ಲಿಯೇ ಅವರು ಶಿವಶರಣರ ಮಲಿನ ವಸ್ತ್ರವನ್ನು ಸ್ವಚ್ಛಗೊಳಿಸುತ್ತಿದ್ದರೆಂದು ಹೇಳಲಾಗುತ್ತದೆ. ಹೊಂಡದ ಮಧ್ಯದಲ್ಲಿರುವ ದೇವಾಲಯದಲ್ಲಿ ಮಾಚಯ್ಯ ವಾಸವಾಗಿದ್ದನಂತೆ ಇಂದು ಶಿವಲಿಂಗವನ್ನು ಸ್ಥಾಪಿಸಲಾಗಿದೆ. ಈ ದೇವಾಲಯದ ಪಕ್ಕದಲ್ಲಿ ಪ್ರವೇಶ ದ್ವಾರದ ತೋಳು ಬಿದ್ದಿದೆ. ಇದು ಬೃಹತ್ತಾಕಾರದಲ್ಲಿದೆ. ತುಂಬಾ

ಅಲಂಕಾರಿಕವಾಗಿದೆ. ಇಲ್ಲೊಂದು ಪ್ರಾಚೀನತಮ ಭವ್ಯ ದೇವಾಲಯ ಇತ್ತೆಂಬುದಕ್ಕೆ ಉತ್ತಮ ಕುರುಹು ಇದಾಗಿದ್ದು, ಹಿಂದೊಮ್ಮೆ ಪವಿತ್ರವಾಗಿದ್ದ ಪ್ರಸ್ತುತ ಹೊಂಡ ಇಂದು ಮಲಿನಗೊಂಡಿದೆ. ಹೊಂಡವು ಸಂಪೂರ್ಣವಾಗಿ ಜಾಲಿ ಮರಗಳಿಂದ ಆವೃತವಾಗಿದೆ. ಇತ್ತೀಚೆಗೆ ಬೀದರ ಜಿಲ್ಲಾ ಸರಕಾರಿ ಆಸ್ಪತ್ರೆಯ ಸಮೀಪ ಇವರ ಶಿಲೆಯಲ್ಲಿ ಕೆತ್ತಲಾದ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಬೀದರ ಸಮೀಪದ ನಾವದಗೇರಿಯ ಶುಕ್ಲ ತೀರ್ಥದಲ್ಲಿರುವ ಮಡಿವಾಳೇಶ್ವರ ಗದ್ದುಗೆ ಪವಿತ್ರ ಕ್ಷೇತ್ರವೆಂದು ಪ್ರಚಲಿತದಲ್ಲಿದೆ.

ಅಲ್ಲಮ ಪ್ರಭುದೇವರ ಗದ್ದುಗೆ: ಇದು ಅರುಹಿನ ಮನೆಯ ದಕ್ಷಿಣ ದಿಕ್ಕಿನಲ್ಲಿದೆ. ಇದನ್ನು ಅಲ್ಲಮಪ್ರಭುಗಳ ಮಠವೆಂದು; ಶೂನ್ಯ ಸಿಂಹಾಸನದ ಮೂಲಪೀಠವೆಂದು ಹೇಳಲಾಗುತ್ತದೆ. ಇದರ ರಚನಾ ವಿನ್ಯಾಸವು ಮಠದ ಮಾದರಿಯಲ್ಲಿದ್ದು, ಸುಸ್ಥಿತಿಯಲ್ಲಿದೆ. ಗದ್ದುಗೆಯ ಸ್ಥಳದಲ್ಲಿಯೇ ಪ್ರಭುದೇವರು ಕುಳಿತು ಇಷ್ಟಲಿಂಗ ಪೂಜೆ, ವಚನ ರಚನೆ ಮಾಡುತ್ತಿದ್ದರೆಂದು ಜನತೆಯ ನಂಬಿಕೆ. ಪ್ರಸ್ತುತ ಗದ್ದುಗೆಗೆ ಪ್ರತಿದಿನವೂ ಪೂಜೆ ಸಲ್ಲುವುದುಂಟು. ಗದ್ದುಗೆಯ ಮೇಲೆ ಸಕ್ಕರೆಯ ಪುಡಿ ಸಾಕಷ್ಟಿದ್ದರೂ ನೊಣ ಕೂಡದಿರುವ, ಇರುವೆ ಮುತ್ತದಿರುವ ಅಂಶವು ಕುತೂಹಲವನ್ನು ಉಂಟು ಮಾಡುತ್ತದೆ. ಇದುವೇ ಗದ್ದುಗೆಯ ಪಾವಿತ್ರ್ಯದ ಸಂಕೇತವೆಂದು, ಜಾಗೃತ ಸ್ಥಳವೆಂದು ಭಾವುಕ ಭಕ್ತಾಧಿಗಳ ಅಭಿಪ್ರಾಯ. ಗದ್ದುಗೆಯ ಮೇಲೆ ಸುಂದರವಾದ ಕಟ್ಟಡವಿದೆ. ಸುತ್ತಲೂ ಕೆಲವೊಂದು ಕೋಣೆಗಳಿವೆ. ಮಠದೊಳವಣ ಮಧ್ಯದ ಆವರಣದಲ್ಲಿನ ಮಂಟಪದಲ್ಲಿ ನಂದಿ ವಿಗ್ರಹವಿದೆ. ಅಲ್ಲಮಪ್ರಭುದೇವರ ಗದ್ದುಗೆಯ ಮುಂದಿರುವ ಬಯಲು ಪ್ರದೇಶದಲ್ಲಿಯೇ ಹರಳಯ್ಯ-ಮಧುವರಸ-ಶೀಲವಂತರನ್ನು ಎಳೆಹೂಟೆ ಶಿಕ್ಷೆಗೊಳಪಡಿಸಲಾಯಿತೆಂದು ಜನಪದರ ನಂಬುಗೆ. ಅಲ್ಲಮ ಪ್ರಭುದೇವರ ಗದ್ದುಗೆಯ ಸುತ್ತಲಿನ ಪ್ರದೇಶವಿಂದು ಸ್ಮಶಾನ ಭೂಮಿಯಾಗಿ ಬಳಕೆಯಾಗುತ್ತಿರುವುದು ತುಂಬಾ ದುರ್ದೈವದ ಸಂಗತಿಯಾಗಿದೆ. ಇದಕ್ಕೆ ಕಡಿವಾಣ ಹಾಕಬೇಕಾದದ್ದು ಪ್ರಜ್ಞಾವಂತ ನಾಗರಿಕರ ಆದ್ಯ ಕರ್ತವ್ಯವಾಗಿದೆ. ಸ್ಮಶಾನ ಭೂಮಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ಮೂಲಸ್ಥಳವನ್ನು ಉಳಿಸಿಕೊಳ್ಳಬೇಕಾದದ್ದು ಅನಿವಾರ್ಯವಾಗಿದೆ.

ಪರುಷಕಟ್ಟೆ: ಬಸವೇಶ್ವರ ದೇವಾಲಯದ ಸಮೀಪದಲ್ಲಿರುವ ಇದು ಹಲವು ಸಂದಿಗಳನ್ನು ದಾಟಿದ ತರುವಾಯ ಸಿಗುವ ಪ್ರಸಿದ್ಧ ಪವಿತ್ರ ಸ್ಮಾರಕ. ಸುಮಾರು 30 ಅಡಿ ಉದ್ದ 15 ಅಡಿ ಅಗಲವಾಗಿರುವ ಕಟ್ಟೆ. ಅಲ್ಲೊಂದು ನಂದಿಯ ಶಿಲ್ಪವಿದೆ. ಪಾವಟಿಗೆಗಳ ಪಕ್ಕದಲ್ಲಿ ಚಾಳುಕ್ಯ ಶೈಲಿಯ ಎರಡು ಕಂಬಗಳಿವೆ. ಪುರಾಣ, ಜನಪದ ಕಾವ್ಯಗಳಲ್ಲಿ ವರ್ಣಿತವಾಗಿರುವಂತೆ ಬಸವಣ್ಣನವರು ಇಲ್ಲಿಯೇ ಕುಳಿತು ಭಕ್ತಾದಿಗಳ ಇಚ್ಛೆಯನ್ನು ನೆರವೇರಿಸುವುದರಿಂದ ಸಂದೇಹ-ಸಮಸ್ಯೆಗಳಿಗೆ ಪರಿಹಾರ ಸೂಚಿಸುತ್ತಿದ್ದುದರಿಂದ ಇದಕ್ಕೆ 'ಪರುಷ ಕಟ್ಟೆ' ಎಂಬ ಅಭಿದಾನ ಬಂದಿತು. ಬಸವಾದಿ ಪ್ರಮಥರ ಜೀವನ ಸಾಧನೆಗಳ ವರ್ಣನೆಗಳಿಂದಾಗಿ ಈ ಪರುಷ ಕಟ್ಟೆಗೆ ಬಹಳಷ್ಟು ಮಹತ್ವ ಬಂದಿತು. ಮುಸ್ಲಿಂ ಪ್ರಾಬಲ್ಯವಿದ್ದಾಗ ಈ ಪ್ರದೇದವು ಕಟುಕರ ಕಟ್ಟೆಯಾಗಿದ್ದನ್ನು ನೆನಪಿಸಿಕೊಂಡರೆ ಮನಸ್ಸಿಗೆ ನೋವಾಗುತ್ತದೆ. ಬಸವೇಶ್ವರ ದೇವಸ್ಥಾನ ಪಂಚ ಕಮಿಟಿಯವರ ಹೋರಾಟ, ಬಸವ ಭಕ್ತರ ಆಗ್ರಹದಿಂದಾಗಿ ಪರುಷ ಕಟ್ಟೆಯ ಮೇಲೆ ನಡೆಯುವ ಪ್ರಾಣಿ ಹಿಂಸೆ ನಿಂತಿತು. ಶ್ರಾವಣ ಮಾಸದಲ್ಲಿ ಭಜನೆ, ಪೂಜಾದಿಗಳಿಂದಿಗೂ ಜರುಗುತ್ತವೆ.

ಕಂಬಳಿ ಮಠ: ಇದು ಶಿವಶರಣರ ಕಂಬಳಿ ನಾಗದೇವರ ಸ್ಮಾರಕ ಎಂದು ಸಿದ್ಧಣ್ಣ ಲಂಗೋಟಿಯವರ ಅಭಿಪ್ರಾಯ. ಆದರೆ ಹೆಚ್. ಚಂದ್ರಶೇಖರ ಈ ಮಾತನ್ನು ಅಲ್ಲಗಳೆದು ಸಂಬೋಳಿ ನಾಗಿದೇವರ ಮಠ ಎಂದು ಸ್ಥಿರಪಡಿಸುತ್ತಾರೆ. ಮಠದೊಳಗೆ ಸಂಬೋಳಿ ನಾಗಿದೇವರ ಗದ್ದುಗೆ ಇದೆ. ಸುತ್ತಲೂ ಬಯಲು ಪ್ರದೇಶವಿದೆ. ಕಾಲಾಂತರದಲ್ಲಿ ಮಠದೊಳಗೊಬ್ಬ ಮಹಾಪುರುಷ ವಾಸಿಸುತ್ತಿದ್ದರೆಂದು ಅವರು ಸದಾ ಕಂಬಳಿಯನ್ನು ಹೊದ್ದುಕೊಂಡಿರುತ್ತಿದ್ದುದರಿಂದ ಈ ಮಠಕ್ಕೆ 'ಕಂಬಳಿ ಮಠ' ವೆಂದು ಹೆಸರು ಬಂದಿತ್ತೆಂದು ಸೊಲ್ಲಾಪುರದ ಕುಮಾರ ಕೋತವಾಳೆಯವರು ಉಲ್ಲೇಖಿಸುತ್ತಾರೆ. ಸದ್ಯಕ್ಕೆ ಮಠದ ಸುತ್ತಲೂ ಅಂಗಡಿಗಳು ನಿರ್ಮಾಣಗೊಂಡಿವೆ. ಮಠದ ಆವರಣವು ತರಕಾರಿ ಮಾರಾಟ, ಹರಾಜಿನ ಕೇಂದ್ರವಾಗಿದೆ. ನಮ್ಮವರ ಅಲಕ್ಷ್ಯ, ವ್ಯವಹಾರಿಕ ಪ್ರವೃತ್ತಿಯಿಂದಾಗಿ ಐತಿಹಾಸಿಕ ಮಹತ್ವ ಪಡೆದಿರುವ ಈ ಸ್ಮಾರಕ ಮರೆಯಾಗುವ ಹಂತದಲ್ಲಿದೆ.

ಬಂದವರ ಓಣಿ: ಕಲ್ಯಾಣದಿಂದ ಐದು ಕಿ.ಮೀ. ದೂರದಲ್ಲಿದೆ. ನಿಸರ್ಗ ರಮಣೀಯ ಪ್ರದೇಶದಲ್ಲಿರುವ ಇದನ್ನು ಓಣಿ ಎಂತಲೂ, ಬಾಂಧವರ ವಾಡಿ ಎಂತಲೂ ಕರೆಯುವುದುಂಟು. ಭೂ ಕೊರೆತದ ಮೂಲೆಯಲ್ಲೊಂದು ನೀರಿನ ಝರಿಯಿದ್ದು, ಇಲ್ಲಿಯ ನೀರು ಶುಭ್ರ ಹಾಗೂ ಸಿಹಿ. ಈ ಝರಿಗೆ ಅಕ್ಕನತೀರ್ಥ, ಚೆನ್ನಬಸವತೀರ್ಥವೆಂದು ಹೆಸರುಗಳಿವೆ. ಝರಿಯ ಬಲಭಾಗದ ಜಂಬಿಟ್ಟಿಗೆಯ ದಿಬ್ಬದೊಳಗೆ ಕೊರೆಯಲಾದ ಗವಿ ಇದೆ. ಇದನ್ನು ಅಕ್ಕಮಹಾದೇವಿಯ ವಾಸ ಸ್ಥಳವೆಂದು ಕರೆಯುವ ವಾಡಿಕೆಯಿದೆ. ಇಲ್ಲಿರುವ ಬಯಲು ಪ್ರದೇಶದಲ್ಲಿ ದನಗಾಹಿ ರಾಮಣ್ಣ ದನಗಳನ್ನು ಮೇಯಿಸುತ್ತಿದ್ದ ಎಂದು, ಕಲ್ಯಾಣಕ್ಕೆ ಆಗಮಿಸಿದ ಭಕ್ತಾದಿಗಳೆಲ್ಲರೂ ಇಲ್ಲಿಯೇ ಸ್ನಾನ, ಪೂಜಾದಿ ಕ್ರಿಯೆಗಳನ್ನು ಪೂರೈಸಿಕೊಂಡು ಮುಂದಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರೆಂಬ ನಂಬಿಕೆಗಳಿವೆ.

ಸಿದ್ಧೇಶ್ವರ ದೇವಾಲಯ: ಬಸವ ಕಲ್ಯಾಣದಿಂದ ಎರಡು ಕಿ.ಮೀ ದೂರದಲ್ಲಿರುವ ಶಿವಪುರ ಕೆರೆಯ ದಂಡೆಯಲ್ಲಿದೆ. ಸಿದ್ಧರಾಮ ಸೊನ್ನಲಾಪೂರದಿಂದ ಕಲ್ಯಾಣಕ್ಕೆ ಆಗಮಿಸಿದ ಮೇಲೆ ಇಲ್ಲಿಯೇ ಪರ್ಣಕುಟೀರವೊಂದು ನಿರ್ಮಿಸಿಕೊಂಡು ನೆಲೆಸಿದ್ದನೆಂಬ ಹೇಳಿಕೆಗಳಿವೆ. ಪ್ರಸ್ತುತ ಸ್ಥಿತಿಯಲ್ಲಿರುವ ಸುಂದರ ದೇವಾಲಯದಲ್ಲಿ ಚಾಳುಕ್ಯ ಶೈಲಿಯ ಕಂಬ, ಮೇಲ್ಛಾವಣಿಯ ಕಟ್ಟಡದ ಪರಿಕರಗಳು, ಪ್ರವೇಶ ದ್ವಾರದ ತೋಳುಗಳಿವೆ. ಇನ್ನಿತರ ಸಾಮಗ್ರಿಗಳನ್ನು ಬಳಸಿಕೊಂಡ ದೇವಾಲಯವನ್ನು ಪುನರ್ ನಿರ್ಮಾಣ ಮಾಡಲಾಗಿದೆ. ಒಳಗಡೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ವಾಸ್ತವವಾಗಿ ಇದು ಕೊಂಡಗುಳಿ ಕೇಶಿ ರಾಜನ ದೇವಾಲಯವಾಗಿದ್ದು, ಇದಕ್ಕೆ ಕೇಶಿರಾಜ ದಣ್ಣಾಯಕರ ರಗಳೆಯು ಸಾಕಷ್ಟು ಪುಷ್ಟಿಯನ್ನೊದಗಿಸುತ್ತದೆ. ರಗಳೆಯಲ್ಲಿಯ

ವರ್ಣನೆ ಪ್ರಸ್ತುತ ಸ್ಥಿತಿಯ ಚಿತ್ರಣ ನೀಡುತ್ತದೆ. ಶಿವಪುರದ ಜನರು ಸಹ ಇದನ್ನು 'ಕೊಂಡಲೇಶ್ವರ ದೇವಾಲಯ' ಎಂದೇ ಹೇಳುವುದುಂಟು. ದೇವಾಲಯದ ಸುತ್ತಲೂ ಹಿಂದೊಮ್ಮೆ ಇದ್ದಿರಬಹುದಾದ ಭವ್ಯ ದೇವಾಲಯದ ಸಾಕಷ್ಟು ಭಗ್ನ ಅವಶೇಷಗಳಿದ್ದು, ಅವೆಲ್ಲಾ ಅನಾಥ ಸ್ಥಿತಿಯಲ್ಲಿ ಬಿದ್ದಿವೆ.

ಮುಗ್ಧ ಸಂಗಯ್ಯನ ಗವಿ: ಬಸವ ಪುರಾಣದಲ್ಲಿ ವರ್ಣಿತವಾಗಿರುವ ಮುಗ್ಧ ಸಂಗಯ್ಯನ ಗವಿಗಳು ಬಸವ ಕಲ್ಯಾಣದ ಸನಿಹದಲ್ಲಿರುವ 'ಹಳ್ಳಿ' 'ಶಿವಪುರ' ಗ್ರಾಮದಲ್ಲಿವೆ. ಹುಮನಾಬಾದ ತಾಲ್ಲೂಕಿನ ಗಡವಂತಿಯಲ್ಲಿಯೂ ಈತನ ಗವಿಯುಂಟು. ಇದನ್ನು ಜಂಬಿಟ್ಟಿಗೆಯ ಸಮತಟ್ಟಾದ ನೆಲದಲ್ಲಿ ಕೊರೆಯಲಾಗಿದ್ದು ಪ್ರಸ್ತುತ ಲೇಖನದಲ್ಲಿ ಪ್ರಸ್ತಾಪಿಸಲ್ಪಟ್ಟ ಗವಿ ಗಳಲ್ಲೇ ಇದು ಅತ್ಯಂತ ದೊಡ್ಡದು. ತಳಮಾಳಿಗೆಯಂತಿರುವ ಗವಿ ಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು ನಿತ್ಯ ಪೂಜೆ ಗೊಳ್ಳುತ್ತಿದೆ. ಗವಿಯ ಎಡಬಲದಲ್ಲಿಯೂ ಕೋಣೆ ಮಾದರಿಯ ಗವಿಗಳಿವೆ. ಗವಿಯ ಆವರಣದಲ್ಲೊಂದು ಬಾವಿ ಇದೆ. ಕೇಶಿರಾಜ ದಣ್ಣಾಯಕರ ರಗಳೆಯಲ್ಲಿ ಶಿವಪುರದಲ್ಲಿರುವ ಮುಗ್ಧ ಸಂಗಯ್ಯ ಗವಿ ವರ್ಣನೆಗೊಂಡಿದೆ. ಹಳ್ಳಿ, ಶಿವಪುರ, ಗಡವಂತಿಗಳಲ್ಲಿ ಮುಗ್ಧ ಗವಿಗಳಿರುವುದು ಈತ ಈ ಮೂರು ಸ್ಥಳಗಳಲ್ಲಿ ನೆಲೆಸಿದ್ದ ನೆಂಬುದಕ್ಕೆ ಆಧಾರಗಳಾಗುತ್ತವೆ. ಘನಲಿಂಗ ರುದ್ರ ಮುನಿಯ ಗವಿಯ ಹಿಂಭಾಗದಲ್ಲಿ ಮುಗ್ಧ ಸಂಗಯ್ಯನ ಗದ್ದುಗೆ ಇದೆ.

ಮೋಳಿಗೆ ಮಾರಯ್ಯನ ಗವಿ: ಇದು ಬಸವ ಕಲ್ಯಾಣದಿಂದ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ರಾಷ್ಟ್ರೀಯ ಹೆದ್ದಾರಿ 9 ರ ಪಕ್ಕದ ಮೋಳಕೇರಿ ಗ್ರಾಮದಲ್ಲಿದೆ. ಇದು ಭೂಮ್ಯಾಂತರ್ಗತವಾದ ಗವಿ ಮೆಟ್ಟಿಲುಗಳ ಮೂಲಕ ಇಳಿಯಬೇಕು. ಜಂಬಿಟ್ಟಿಗೆಯ ಪ್ರಸ್ಥಭೂಮಿಯೊಳಗೆ (plateau) ಈ ಗುಹೆಯನ್ನು ಕೋಣೆ ಹಾಗೂ ಸ್ಥಂಭ (Room and Pillar Method) ಎಂಬ ಗಣಿಗಾರಿಕೆ ವಿಧಾನದಲ್ಲಿ ಕೊರೆಯಲಾಗಿದೆ. ಸುಮಾರು 50 ಅಡಿಗಳಷ್ಟು ಉದ್ದಗಲವಾಗಿರುವ ಈ ಗವಿ ತುಂಬಾ ವೈಶಿಷ್ಟ್ಯ ಪೂರ್ಣವಾಗಿದೆ. ಗವಿಯ ಒಳಭಾಗದಲ್ಲಿ ಸ್ಥಾವರ ಲಿಂಗವನ್ನು ಸ್ಥಾಪಿಸಿ ಪೂಜಿಸಲಾಗುತ್ತಿದೆ. ಕಾಶ್ಮೀರದ ಸವಾಲಕ್ಷ ಪ್ರಾಂತದ ಭಕ್ತನೊಬ್ಬನು ಒಳ್ಳೆಯ ಗುಹೆಯನ್ನು ಕೊರೆದಿದ್ದಾನೆಂದು ಅನಿಸುತ್ತದೆ. ಗ್ರಾಮಸ್ಥರ ಪ್ರಯತ್ನದಿಂದಾಗಿ ಗವಿಯ ಮೇಲೆ ಸುಂದರ ದೇವಾಲಯ ನಿರ್ಮಾಣಗೊಂಡಿದೆ. ಗವಿಯ ಮೇಲ್ಭಾಗದಲ್ಲೊಂದು ಮಾರಯ್ಯ ನೆಟ್ಟನೆಂದು ಹೇಳಲಾಗುವ 'ಅನಾಮಧೇಯ' ಮರವಿದೆ.

ಇನ್ನಿತರ ಸ್ಮಾರಕಗಳು: ಉರಿಲಿಂಗ ಪೆದ್ದಿಯವರ ಮಠವು ಬಸವಕಲ್ಯಾಣದ ಹಜರತ ರಾಜಾಬಾಗ ಸವಾರ ದರ್ಗಾದ ಪಶ್ಚಿಮ ದಿಕ್ಕಿನಲ್ಲಿ, ಹರಿಜನರ ಓಣಿಯಲ್ಲಿದೆ. ಹುಮನಾಬಾದ ತಾಲ್ಲೂಕಿನ 'ಹಳ್ಳಿಖೇಡ' ಗ್ರಾಮದಲ್ಲಿ ಕಿನ್ನರಿ ಬ್ರಹ್ಮಯ್ಯನ ಮಠ ಇದೆ. ಇದು ಎತ್ತರದ ಪ್ರದೇಶದಲ್ಲಿದೆ. ಬಸವ ಕಲ್ಯಾಣದಿಂದ 20 ಕಿ.ಮೀ. ಅಂತರದಲ್ಲಿರುವ 'ಹಂದ್ರಾಳ' ಗ್ರಾಮದಲ್ಲಿ ಘಟ್ಟಿವಾಳಯ್ಯನ ಗವಿ ಇದೆ. ಬೀದರ ತಾಲ್ಲೂಕಿನ ಚಿದ್ರಿಯಲ್ಲಿ ಮೇದಾರ ಕೇತಯ್ಯನ ಹಾಗೂ ರೆಕೊಳಗಿಯಲ್ಲಿ ಬಹುರೂಪಿ ಚೌಡಯ್ಯನ ಗವಿಗಳಿವೆ. ಔರಾದ ತಾಲ್ಲೂಕಿನ ಸಂತಪೂರ ಸಮೀಪದ ಧೂಪದ್ ಮಹಾಗಾಂವದಲ್ಲಿ ಧೂಪದ ಗೊಗ್ಗವ್ವೆಯ ಸ್ಮರಣಾರ್ಥವಾಗಿ ನಿರ್ಮಿಸಲಾದ ಪ್ರಾಚೀನ ದೇವಾಲಯವಿದೆ. ಭಾಲ್ಕಿಯಲ್ಲಿ ಕುಂಬಾರ ಗುಂಡಯ್ಯನ ಗವಿ, ಘಾಟಿ ಬೋರಾಳದ ದಕ್ಷಿಣ ದಿಕ್ಕಿಗೆ ಶಂಕರ ದಾಸಿಮಯ್ಯಗಳ ಗವಿಗಳಿವೆ. 'ಶಂಕರ ತಳ'ವೆಂದು ಹೇಳಲಾಗುವ ಇಲ್ಲಿ ಎರಡು ಗದ್ದುಗೆಗಳಿವೆ. ಅವು ಶಂಕರಲಿಂಗ ಹಾಗೂ ಶಂಕರದಾಸಿಮಯ್ಯನ ಗವಿಗಳಾಗಿವೆ. ಇಲ್ಲಾಳ ಗ್ರಾಮದಲ್ಲಿ ಇಳೆಹಾಳ ಬೊಮ್ಮಯ್ಯ, ನಾರಾಯಣಪೂರದಲ್ಲಿ ಒಕ್ಕಲಿಗ ಮುದ್ದಯ್ಯ, ಸಕಲೇಶ ಮಾದರಸನ ಗವಿಗಳಿವೆ.

(ಆರ್.ಬಿ.)

ಶಶಿಕಲಾ ಮೋಳ್ದಿ: ಮಿತಭಾಷಿ, ಸರಳಸಜ್ಜನರೂ ಆಗಿರುವ ಡಾ. ಶಶಿಕಲಾ ಮೋಳ್ದಿ ಅವರು 10.07.1938ರ'ಂದ'ು ಗುಲಬರ್ಗಾ ಜಿಲ್ಲೆಯ ಮಹಾಗಾಂವ ಎನ್ನುವ ಗ್ರಾಮ ದಲ್ಲಿ ಜನಿಸಿದರು. ಆ ಗ್ರಾಮದ ಪ್ರತಿಷ್ಠಿತ ಮನೆತನ ಗೌಡರದ್ದು. ಮನೆತನದ ಶ್ರೀ ರುದ್ರಶೆಟ್ಟಿ ಪಾಟೀಲ ಮತ್ತು ಶ್ರೀಮತಿ ಕಾಶಿತಾಯಿ ಅವರಿಗೆ ಮಗಳಾಗಿ ಹುಟ್ಟಿರುವ ಇವರು, ಬೆಳೆದು ದೊಡ್ಡವರಾಗುತ್ತಿದ್ದಂತೆ ಮಹಾರಾಷ್ಟ್ರದ ಗಡಿಹಿಂಗ್ಲಜ್ ಗ್ರಾಮದ ಶ್ರೀ ಈಶ್ವರಪ್ಪಾ ಅವರಿಗೆ ಮೋಳ್ದಿಯವರು ಬಾಳ ಸಂಗಾತಿಯಾದರು.



ಹೈದ್ರಾಬಾದದ ಉಸ್ಮಾನಿಯಾ ವಿಶ್ವವದ್ಯಾಲಯದಿಂದ ಕನ್ನಡದಲ್ಲಿ ಎಂ.ಎ. ಪದವಿಯನ್ನು ಮುಗಿಸಿ 'ಡಿ.ವಿ.ಜಿ. ಸಾಹಿತ್ಯ ಹಾಗೂ ಯುಗಧರ್ಮ'–ಕುರಿತು ಪಿಎಚ್.ಡಿ. ಪದವಿಯನ್ನು ಪಡೆದುಕೊಂಡರು. ತದನಂತರ ಕನ್ನಡ ಅಧ್ಯಾಪಕರಾಗಿ ಶರಣಬಸವೇಶ್ವರ ಮಹಾವಿದ್ಯಾಲಯದಲ್ಲಿ ತಮ್ಮ ಸೇವೆಯನ್ನು ಪ್ರಾರಂಭಿಸಿದ್ದರು. ಅಲ್ಲಿ ಹತ್ತು ವರ್ಷ ಸೇವೆ ಸಲ್ಲಿಸಿ, ಅನಂತರ ಗುಲಬರ್ಗಾ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು, ಅಧ್ಯಕ್ಷರೂ, ಮತ್ತು ಕಲಾನಿಕಾಯದ ಡೀನ್‌ರಾಗಿ ಸೇವೆ ಸಲ್ಲಿಸಿ ಈಗ ವೃತ್ತಿಯಿಂದ ನಿವೃತ್ತರಾಗಿದ್ದಾರೆ.

ಡಿ.ವಿ.ಜಿ. ಸಾಹಿತ್ಯ ಹಾಗೂ ಯುಗಧರ್ಮ– 'ಸಂಶೋಧನೆ ಕೃತಿ', ಅನುಭವ ಮಂಟಪದ ಶಿವಶರಣೆಯರು, ಶಿವಶರಣೆಯರು, ಹರದೆಯರ ಹಾಡುಗಳು (ಸಂಪಾದಿತ ಕೃತಿ), ಚಾಜದ ಹಾಡುಗಳು (ಸಂಪಾದಿತ ಕೃತಿ), ಹಬ್ಬ ಹುಣ್ಣಿಮೆಗಳು (ಯು.ಜಿ.ಸಿ. ಪ್ರಾಜೆಕ್ಟ್), ಡಾ. ಬಿ.ಬಿ. ಹೆಂಡಿ ಅಭಿನಂದನಾ ಗ್ರಂಥ 'ವಂದನೆ' ಕೃತಿಯ ಸಂಪಾದಕರು– ಇವು ಅವರ ಕೆಲವು ಕೃತಿಗಳು. ಒಟ್ಟಾರೆ ಈ ಭಾಗದ ಜಾನಪದ ವಿದ್ವಾಂಸರಲ್ಲಿ ಡಾ. ಶಶಿಕಲಾ ಮೋಳ್ದಿಯವರು ಕೂಡಾ ಒಬ್ಬರಾಗಿದ್ದಾರೆ.

(ಎನ್.ಪಿ.ಪಿ.)

ಶಾ

ಶಾಂತಪ್ಪ ಶೀಲವಂತ: ಪ್ರಸಿದ್ಧ ಲಾವಣಿ ಕಲಾವಿದ. ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಹಾರಕೂಡ ಗ್ರಾಮದವ. ತಂದೆ ಶಿವಲಿಂಗಪ್ಪ, ತಾಯಿ ನೀಲಮ್ಮ. ಅಕ್ಕಸಾಲಿಗನಾದ ಈತ ತನ್ನ ಉದ್ಯೋಗದೊಂದಿಗೆ ಲಾವಣಿ ಹಾಡುವುದನ್ನು ಮೈಗೂಡಿಸಿ ಕೊಂಡು ಬೆಳೆದ. ತನ್ನ ಜೀವನದ 40 ವರ್ಷಗಳ ಕಾಲ ಜನಪದ ಹಾಡುಗಳನ್ನು ಹೇಳುತ್ತ, 'ದಪ್ಪಿನಾಟ' ಕಲಿಸುತ್ತಿದ್ದ. ಶಾಂತಪ್ಪನ ಈ ಕಲೆಗೆ ಗುರುಗಳು ಬಸವಣ್ಣೆಪ್ಪನವರು. ಮೊದಲು ಅಲ್ಪ ಸ್ವಲ್ಪ ಜನಪದ ಹಾಡುಗಳನ್ನು ಹಾಡುತ್ತ ಇದ್ದ. ಇವನಿಗೆ ಬಸವಣ್ಣೆಪ್ಪ ಲಾವಣಿ, ಕಲ್ಗಿ–ತುರಾಯಿ, ದಪ್ಪಿನ ಹಾಡು (ಗೀಗೀ)ಗಳನ್ನು ಕಲಿಸಿದರು. ಅವರ ಪ್ರಭಾವದಿಂದ ಶಾಂತಪ್ಪ ತಾನೇ ಕೆಲವು ಲಾವಣಿಗಳನ್ನು ರಚಿಸಿ ಹಾಡತೊಡಗಿದ. ಆಗ ಈ ಭಾಗದಲ್ಲಿ ಆಡುತ್ತಿದ್ದ ಸತ್ಯ ಹರಿಶ್ಚಂದ್ರ, ಮದನಮಂಜರಿ ಮೊದಲಾದ ಸಣ್ಣಾಟಗಳಲ್ಲಿ ಸ್ವತಃ ಪಾತ್ರಧಾರಿಯಾಗಿ ಜನಮನ್ನಣೆ ಗಳಿಸಿದರು.

ಬೀದರ ಜಿಲ್ಲೆಯ ತುಂಬ ತಮ್ಮ ಕಲೆಯನ್ನು ಪ್ರದರ್ಶಿಸುತ್ತ ಬಂದಿರುವ ಈತ ಬಹಳಷ್ಟು ದಪ್ಪಿನ ಪದಗಳನ್ನು ಹಾಡಿದ್ದಾನೆ. ಒಂದು ಮಳೆಗಾಲದ ಸಿಡಿಲನ ಹೊಡೆತದಿಂದ ತನ್ನ ಕಾಲುಗಳನ್ನು ಕಳೆದುಕೊಂಡಿರುವರೂ ವಿಚಲಿತನಾಗದೆ ತಮ್ಮ ಹಾಡುಗಾರಿಕೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಈತನ ಕಲೆಯನ್ನು ಗುರುತಿಸಿದ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯು 1982 ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿತು. 1985 ರಲ್ಲಿ ಇವರು ನಿಧನರಾದರು.

(ಎಸ್.ಎಸ್.ವೈ.)

ಶಿ

ಶಿರವಾಳ: ಪೌರಾಣಿಕವಾಗಿ, ಐತಿಹಾಸಿಕವಾಗಿ ತುಂಬ ಖ್ಯಾತಿವೆತ್ತಿದ್ದ ಗ್ರಾಮ. ಹಿಂದೆ ಅಗ್ರಹಾರ ಸ್ಥಳವಾಗಿತ್ತು. ಭಕ್ತಿ ಭಂಡಾರಿ ಬಸವಣ್ಣನವರಿಂದ ಬಣ್ಣಿಸಿಕೊಂಡ, ಸಿರಿಯಾಳ ಶೆಟ್ಟಿಯ ಹುಟ್ಟೂರೆಂದು ಪ್ರತೀತಿಯಿರುವ ಗ್ರಾಮ. ಶಹಾಪುರ ದಿಂದ ಉತ್ತರಕ್ಕೆ 17 ಕಿ.ಮೀ. ಅಂತರದಲ್ಲಿದೆ.

ಭೂಲೋಕಮಲ್ಲ ಬಿರುದಾಂಕಿತ ಕಲ್ಯಾಣ ಚಾಲುಕ್ಯರ ಮುಮ್ಮಡಿ ಸೋಮೇಶ್ವರನ ಕಾಲಕ್ಕೆ (ಕ್ರಿ.ಶ. 1138) ಸೇರಿದ ಇಲ್ಲಿನ ಶಾಸನವೊಂದರಲ್ಲಿ ಸಿರಿಯುಂ+ಪೊವಿಲ್>ಸಿರಿಯು ಪೊವಿಲ್> ಸಿರಿವೊಳಲ್>ಸಿರವೊಳ್ ಎಂದಿರುವ ಈ ಗ್ರಾಮದ ಹೆಸರು ಜನರ ಬಾಯಲ್ಲಿ ಸಿರವಾಳ್ ಆಗಿರಬಹುದು. ಸಿರಿವೊಳಲ್ (ಸಂಪತ್ತಿನ ಪಟ್ಟಣದ) ಶೆಟ್ಟಿಗೆ ಶಿರಿವಾಳ್ ಶೆಟ್ಟಿಯೆಂದೆನ್ನುತ್ತಿರಬಹುದು. ಈ ಗ್ರಾಮ ಹಿಂದೆ ಬೌದ್ಧ ಧರ್ಮದ ಕೇಂದ್ರ ಬಿಂದುವಾಗಿದ್ದ, ಭೀಮಾನದಿ ದಡದಾಚೆಗಿರುವ ಸನ್ನತಿಯೊಂದಿಗೆ ಸಂಬಂಧವಿರಿಸಿ ಕೊಂಡಿರಬಹುದೆಂಬುದಕ್ಕೆ ಸಿದ್ಧಲಿಂಗೇಶ್ವರ ಗುಡಿಯ ಒಂದು ಪಕ್ಕದ ಸ್ತೂಪಾಕಾರದ ಶಿಖರವೇ ಸಾಕ್ಷಿ. ಹಿಂದೆ ಇಲ್ಲಿ 365 ಲಿಂಗಗಳು ಮತ್ತು ಬಾವಿಗಳು ಇದ್ದುವೆಂದು ಪ್ರತೀತಿ, ಸದ್ಯ ಏಳೆಂಟು ಗುಡಿಗಳು ಮಾತ್ರ ಸುಸ್ಥಿತಿಯಲ್ಲಿದ್ದು ಶಿಲ್ಪ ಸೌಂದರ್ಯದ ತವನಿಧಿಗಳೆನಿಸಿವೆ. ಹಾಳು ಬಿದ್ದಿದ್ದ ಬಾದಾಮಿ ಚಾಲುಕ್ಯರ ಕಾಲದ ಮಲ್ಲಿಕಾರ್ಜುನ ದೇವಾಲಯವು ರುದ್ರಪ್ಪ ಆನೆಗುಂದಿ ಇವರ ಸಾಹಸದಿಂದ ಜೀರ್ಣೋದ್ಧಾರಗೊಂಡಿದೆ. ಕಲ್ಯಾಣ ಚಾಲುಕ್ಯರ ಕಾಲದ ಪಂಚಲಿಂಗ ಪೀಠಗಳುಳ್ಳ ಸುಂದರವಾದ ಸಿದ್ಧಲಿಂಗೇಶ್ವರ ದೇವಾಲಯವು ಕಲಾತ್ಮಕ ಕಂಬ ಬೋದುಗೆಗಳಿಂದ, ಅಷ್ಟದಿಕ್ಪಾಲಕರ ಚಿತ್ರಪಟ್ಟಿಕೆಗಳಿಂದ ಅಲಂಕೃತಗೊಂಡ ಮೇಲ್ಛಾವಣಿಯುಳ್ಳ, ಶಿಲ್ಪ ಸೌಂದರ್ಯದ ಗಣಿಯಾಗಿದೆ. ಈ ದೇವಾಲಯದಲ್ಲಿರುವ ಶಾಸನವೊಂದರಲ್ಲಿ ಶಾಲಿವಾಹನ ಶಕೆ 1110, ಪ್ಲವಂಗನಾಮ ಸಂವತ್ಸರ ಭಾದ್ರಪದ ಬಹುಳ ಅಮಾವಾಸ್ಯೆ ಸೂರ್ಯಗ್ರಹಣದ ದಿನ ಭೂಮಿಯನ್ನು ದಾನವಾಗಿತ್ತ ಬಗ್ಗೆ ಉಲ್ಲೇಖಿಸಲಾಗಿದೆ. ಈ ದೇವಾಲಯದ ಸಿದ್ಧಲಿಂಗೇಶ್ವರ, ಗ್ರಾಮದ ಆರಾಧ್ಯದೇವ.

ಪುರಾತತ್ವ ಇಲಾಖೆಯವರ ಸಂಶೋಧನೆಯಿಂದ ಬೆಳಕಿಗೆ ಬಂದ ಸೂರ್ಯ ದೇವಾಲಯ, ಅಂತರ ದೇವಾಲಯವಾಗಿದ್ದು, ಗರ್ಭಗುಡಿ–ಮುಖಮಂಟಪ, ಪ್ರದಕ್ಷಿಣ ಪಥ ಹೊಂದಿದ್ದು, ಗರ್ಭಗುಡಿಯಲ್ಲಿ ಶಿವಲಿಂಗದ ಬದಲಿಗೆ ಅರುಣನು ಸಾರಥ್ಯ ವಹಿಸಿರುವ ಸೂರ್ಯನ ರಥವಿದ್ದು, ತುಂಬಾ ಕಲಾತ್ಮಕವಾಗಿದೆ.

ಶಿರವಾಳದಿಂದ ಪಶ್ಚಿಮಕ್ಕೆ ಒಂದು ಕಿ.ಮೀ. ದೂರದಲ್ಲಿರುವ ಸುಜ್ಞಾನೇಶ್ವರ ದೇವಾಲಯ, ಅದರ ಪಕ್ಕಕ್ಕಿರುವ ಬಾವಿಯ ಗೋಡೆಗಳ ಮೇಲೆ ರಾಮಾಯಣದ ದೃಶ್ಯಾವಳಿಗಳ ಸುಂದರ ವಿಗ್ರಹಗಳಿವೆ. ಈ ದೇವಾಲಯದ ಬದಿಗಿರುವ ಅವಳಿ ದೇವಾಲಯಗಳೇ ನನ್ನಯ್ಯ–ನಾಗಯ್ಯರ ದೇವಾಲಯಗಳು. ಇಲ್ಲಿ ಬೃಹದಾಕಾರದ ಲಿಂಗವಿದ್ದು, ಬಾದಾಮಿಯ ಚಾಲುಕ್ಯರ ಕಾಲದ ಈ ದೇವಾಲಯಗಳ ಹೊರಗೋಡೆಯ ಮೇಲೆ ಸುಂದರ ಶಿಲಾ ವಿಗ್ರಹಗಳು ವಾತಾಯನದಲ್ಲಿ ಒಡಮೂಡಿರುವ ಮಿಥುನ ದಂಪತಿಗಳು, ನೆಲಗಟ್ಟಿನಿಂದ ಎರಡೂವರೆ ಅಡಿ ಅಂತರದ ಮೇಲೆ ಆನೆ ಶಾರ್ದೂಲಗಳ ಸುಂದರ ಸಾಲುಗಳು ಮನಸೆಳೆಯುತ್ತವೆ. ಶಾಂತೇಶ್ವರ ದೇವಾಲಯ, ವೀರಭದ್ರೇಶ್ವರ ಗುಡಿ, ಭಗ್ನ ಜಿನ ಬಿಂಬಗಳು, ಹಾಳು ಬಸದಿ, ಸಿರಿಯಾಳ ಶೆಟ್ಟಿಯ ಹೆಂಡತಿ ಚೆಂಗುಳಾಂಬೆಯ ಪಾದಗಳು ಮುಂತಾದವುಗಳಿದ್ದು, ಹಿಂದೆ ಪವಿತ್ರ ಯಾತ್ರಾಸ್ಥಳವಾಗಿ 'ದಕ್ಷಿಣ ಕಾಶಿ' ಎಂದು ಪ್ರಖ್ಯಾತವಾಗಿದ್ದ ಈ ಗ್ರಾಮದಲ್ಲಿ ಇನ್ನೂ ಹೆಚ್ಚಿನ ಉತ್ಖನನ ನಡೆಸಿದಲ್ಲಿ ಅನೇಕ ಮಹತ್ವದ ವಿಷಯಗಳು ಬೆಳಕಿಗೆ ಬರಬಹುದು.

(ಡಿ.ಎನ್.ಎ.)

ಶಿವಪುರ: ಒಂದು ಧಾರ್ಮಿಕ ಸ್ಥಳ. ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಒಂದು ಚಿಕ್ಕ ಗ್ರಾಮ. ಬಸವಕಲ್ಯಾಣದಿಂದ ಎರಡು ಕಿಲೋಮೀಟರ್ ದೂರದಲ್ಲಿದೆ. ಶಿವ-ಪಾರ್ವತಿಯರ ನೆಲೆ ಎಂಬುದು ನಂಬಿಕೆ. ರಾಕ್ಷಸರನ್ನು ಸಂಹಾರ ಮಾಡಲು ಶಿವ ಇಲ್ಲಿಗೆ ಬಂದಿದ್ದನೆಂದು ಪ್ರತೀತಿ ಇದೆ. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶಿವಶರಣರು ಈ ಪ್ರದೇಶದಲ್ಲಿ ನೆಲೆಸಿದ್ದರೆಂದು, ಇದು ಶಿವಭಕ್ತಿಯ ತವರೂರು ಎಂದು ಹರಿಹರನ ರಗಳೆಗಳಲ್ಲಿ ವ್ಯಕ್ತವಾಗಿದೆ.

ಬಸವಕಲ್ಯಾಣದಿಂದ ಹೊರಟಾಗ ಶಿವಪುರ ತಲಪುವ ಮುನ್ನವೇ ರಸ್ತೆಯ ಬಲಬದಿಗೆ ವಿಶಾಲವಾದ ಕೆರೆ ಕಾಣುವುದು. ಕೆರೆ ದಂಡೆಯ ಪಶ್ಚಿಮ ದಿಕ್ಕಿನಲ್ಲಿರುವ ದೇವಾಲಯವನ್ನು ಜನ ಶಿವದೇವಾಲಯ, ಕುಂಡಲೇಶ್ವರ ದೇವಾಲಯ, ಸಿದ್ಧೇಶ್ವರ ದೇವಾಲಯ ಎಂಬ ಹೆಸರಿನಿಂದ ಕರೆಯುತ್ತಾರೆ. ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಒಂದು ಶಾಸನ ಸಿದ್ಧೋಗಿ ಎಂಬ ವೈಶ್ಯನೊಬ್ಬ ಕಲ್ಯಾಣದಲ್ಲಿ ಸಿದ್ಧೇಶ್ವರ ದೇವಾಲಯ ಕಟ್ಟಿಸಿದ್ದಾನೆಂದು ಹೇಳಲಾಗಿದೆ. ಅದು ಈ ಶಿವಪುರದ ಶಿವ ದೇವಾಲಯವೇ ಇದ್ದಿರಬಹುದೆಂದು ಸಂಶೋಧಕರಾದ ಡಾ. ರು.ಮಾ. ಷಡಕ್ಷರಯ್ಯನವರ ಅಭಿಪ್ರಾಯ.

ಶಿವಯೋಗಿ ಸಿದ್ಧರಾಮೇಶ್ವರ ಅವರು ಸೊನ್ನಲಾಪುರದಿಂದ ಕಲ್ಯಾಣಕ್ಕೆ ಆಗಮಿಸಿದ ಮೇಲೆ ಇಲ್ಲಿಯೇ ಪರ್ಣ ಕುಟಿರವೊಂದನ್ನು ನಿರ್ಮಿಸಿಕೊಂಡು ಇಲ್ಲಿಯೇ ನೆಲೆಸಿದ್ದರೆಂದು ಹೇಳಲಾಗುತ್ತಿದೆ. ಸಿದ್ಧರಾಮೇಶ್ವರ ಅವರ ಸ್ಮರಣಾರ್ಥವಾಗಿ ಕಟ್ಟಲ್ಪಟ್ಟ ಈ ದೇವಾಲಯದಲ್ಲಿ ಪೂಜೆ-ಪುನಸ್ಕಾರ, ರುದ್ರಾಭಿಷೇಕ, ಹಾಗೂ ಮದುವೆ ಸಮಾರಂಭಗಳು ಇಂದಿಗೂ ಕೂಡ ನಡೆಯುತ್ತವೆ.

ಸಿದ್ಧರಾಮ ಸೊನ್ನಲಾಪುರದ ಮುದ್ದುಗೌಡ ಸುಗ್ಗವೆಯರ ಮಗ. ಕಲ್ಯಾಣಕ್ಕೆ ಬರುವ ಮುನ್ನವೆ, ಶ್ರೀಶೈಲದ ಮಲ್ಲಿಕಾರ್ಜುನನ್ನು ಒಲಿಸಿಕೊಂಡು ಸೊನ್ನಲಾಪುರದಲ್ಲಿ ಕೆರೆ ಗುಡಿಗೋಪುರಗಳನ್ನು ಕಟ್ಟಿಸಿದ್ದ ಶಿವಯೋಗಿ ಸಿದ್ಧರಾಮನನ್ನು ಅಲ್ಲಮಪ್ರಭು ಕಲ್ಯಾಣಕ್ಕೆ ಕರೆದುಕೊಂಡು ಬಂದರು. ಅವರು ಚೆನ್ನಬಸವಣ್ಣನನ್ನು ಗುರುವಾಗಿ ಸ್ವೀಕರಿಸಿದರು. ಕಪಿಲಸಿದ್ಧ ಮಲ್ಲಿಕಾರ್ಜುನ, ಯೋಗಿನಾಥ ಎಂಬ ಅಂಕಿತನಾಮದಲ್ಲಿ ವಚನಗಳನ್ನು ಬರೆದಿದ್ದಾರೆ.

ಆಯತಾಕಾರದಲ್ಲಿರುವ ಈ ದೇವಾಲಯ ಪೂರ್ವಾಭಿಮುಖವಾಗಿದೆ. ಗರ್ಭಗೃಹ, ಸಭಾಮಂಟಪ ಹೊಂದಿದೆ. ಗರ್ಭಗೃಹವು ಚೌಕಾಕಾರವಾಗಿದ್ದು ಸ್ವಲ್ಪ ಆಳದಲ್ಲಿದೆ. ಸಭಾಮಂಟಪದಿಂದ ಕೆಳಗೆ ಐದು ಮೆಟ್ಟಲು ಇಳಿದರೆ ಶಿವಲಿಂಗವಿದೆ. ಇದರ ಜಲಧಾರೆಯ ಪ್ರಾಣಾಳ ಉತ್ತರಕ್ಕಿದೆ. ಈ ಸ್ಥಳ ಆಳದಲ್ಲಿರುವುದರಿಂದ ಇಲ್ಲಿ ಶಿವನು ಧ್ಯಾನಿಸಿರಬಹುದು. ಇಲ್ಲಿಂದಲೇ ಶಿವನು ರಾಕ್ಷಸರನ್ನು ಸಂಹಾರ ಮಾಡಿದ್ದಾನೆಂದು ಹೇಳುತ್ತಾರೆ. ಇಲ್ಲಿಂದ ಪಶ್ಚಿಮಕ್ಕೆ ಒಂದೂವರೆ ಕಿ.ಮಿ. ದೂರದಲ್ಲಿ ತ್ರಿಪೂರಾಂತ ಕೆರೆ ಇದೆ. ಅಲ್ಲಿ ಮೂವರು ರಾಕ್ಷಸರನ್ನು ಶಿವನು ಕೊಂದನೆಂದು ಪ್ರತೀತಿ ಇದೆ. ಗರ್ಭಗೃಹದ ಮೇಲ್ಛಾವಣಿಯ ಮಧ್ಯದಲ್ಲಿ ಕಮಲದ ಅಲಂಕರಣವಿದೆ. ನಾಲ್ಕು ಕಡೆ ಕೀರ್ತಿಮುಖಗಳ ಚಿತ್ರಣವಿದೆ. ಸುತ್ತಲೂ ಮುತ್ತು ರತ್ನಗಳ ಕೆತ್ತನೆ ಇದೆ. ಗರ್ಭಗೃಹದ ಗೋಡೆಯ ಮಧ್ಯದಲ್ಲಿ ಮೂರು ಅರ್ಧ ಕಂಬಗಳಿವೆ. ಉತ್ತರ-ದಕ್ಷಿಣ-ಪಶ್ಚಿಮಕ್ಕೆ ಇದ್ದು ಪೂರ್ವಕ್ಕೆ ಗರ್ಭಗೃಹದ ದ್ವಾರ ಇರುವುದು. ದ್ವಾರಕ್ಕೆ ಇತ್ತೀಚೆಗೆ ತಾಮ್ರಪಟದಿಂದ ಲೇಪನವಿದೆ. ಅಕ್ಕಪಕ್ಕದಲ್ಲಿ ಶೈವದ್ವಾರಪಾಲಕರು, ಸೇವಕಿಯರು ಇದ್ದಾರೆ. ಅವರು ತ್ರಿಭಂಗಿ. ಕತ್ತರಿಗಾಲಲ್ಲಿ ನಿಂತಿರುವರು. ಕುಂಭ, ಚೌರಿ, ಹಾರ ಹಿಡಿದಿರುವರು. ತೊಡೆಗಳಿಗೆ ನಾಗಗಳು ಸುತ್ತಿಕೊಂಡಿವೆ.

ಸಭಾಮಂಟಪದಲ್ಲಿ ಒಂಭತ್ತು ಅಂಕಣಗಳಿವೆ. ಅಗಲವಾದ ಕಲ್ಲುಗಳಿಂದಲೇ ಮೇಲ್ಛಾವಣಿ ಹಾಕಲಾಗಿದೆ. ಮಧ್ಯದ ಒಂದು ಅಂಕಣದಲ್ಲಿ ಕಮಲದ ಹೂವಿನ ಅಲಂಕರಣವಿದೆ. ಅದರ ಕೆಳಗೆ ನಾಲ್ಕು ಕಡೆ ದೊಡ್ಡ ದೊಡ್ಡ ಕೀರ್ತಿಮುಖ, ತೋರಣಗಳಿವೆ. ಸಭಾಮಂಟಪದ ಮಧ್ಯ ಆರು ಸ್ತಂಭಗಳಿವೆ. ಚೌಕಾಕಾರ, ಆಯಾತಾಕಾರ, ವೃತ್ತಾಕಾರ, ನಾಲ್ಕು ಎಂಟು ಮುಖಗಳ ಪಟ್ಟಿ ಸುತ್ತುವರಿದಿವೆ. ಒಂದು ಚಿಕ್ಕ ಪಟ್ಟಿಯ ಹೂವಿನ ಚಿತ್ರಣವಿದೆ. ಸಭಾಮಂಟಪದ ಗೋಡೆಯಲ್ಲಿ ಅರ್ಧ ಕಂಬಗಳು ಶಿಖರದ ನಮೂನೆಯ ಆಕಾರಗಳಿವೆ. ಸಭಾಮಂಟಪದ ಗೋಡೆಗೆ ಅಲ್ಲಲ್ಲಿ ಶಿಲ್ಪಕಲೆಯ ಕಲ್ಲುಗಳನ್ನು ಕೂಡಿಸಿದ್ದಾರೆ. ಸಭಾಮಂಟಪಕ್ಕೆ ಎರಡು ದ್ವಾರಗಳಿವೆ. ಉತ್ತರಕ್ಕೆ ಒಂದು ಪೂರ್ವಕ್ಕೆ ಮತ್ತೊಂದು ಇದೆ. ಇಲ್ಲಿ ದ್ವಾರ ಪಾಲಕರ, ಸೇವಕಿಯರ ಅಕ್ಕಪಕ್ಕದಲ್ಲಿ ಉಮಾಮಹೇಶ್ವರ, ನಟರಾಜ ಇತ್ಯಾದಿ ಶಿಲ್ಪಕಲೆಗಳು ಇವೆ. ಹಾಗೇ ನೋಡುತ್ತ ಹೊರಗಡೆ ಬಂದರೆ, ಗರ್ಭಗೃಹದ ಶಿಖರ ಮುಸ್ಲಿಂ ಧರ್ಮದ ಶೈಲಿಯಲ್ಲಿದೆ. ನಾಲ್ಕು ಕಡೆ ತೆರೆದ ಬಾಗಿಲು. ಮೇಲೆ ಗುಮ್ಮಟ ಮತ್ತೆ ಅದರ ಮೇಲೆ ಕಳಸ ಇರುವದು. ಕೆಳಗಡೆ ನಾಲ್ಕು ಭಾಗದ ಕೊನೆಗೆ ನಾಲ್ಕು ನಂದಿಯನ್ನು ಕೂಡಿಸಿದ್ದಾರೆ. ಹಿಂದು-ಮುಸ್ಲಿಂ ಶೈಲಿಯಲ್ಲಿ ಇರುವ ಈ ಭಾಗದ ಅಪರೂಪದ ದೇವಾಲಯವಾಗಿದೆ. ಹಿಂದೆ, ಹಿಂದು ಮುಸ್ಲಿಂರು ಎಷ್ಟು ಒಗ್ಗಟಿನಿಂದ ಇದ್ದರೆಂದು ಎತ್ತಿ ತೋರಿಸುತ್ತದೆ.

ಶಿವನ ಕಿವಿಯಲ್ಲಿರುವ ಕರ್ಣಾಭರಣ/ಕುಂಡಲ ಇಲ್ಲಿ ಬಿದ್ದಿರುವದರಿಂದ ಒಂದು ಕುಂಡ ಸೃಷ್ಠಿ ಆಯಿತೆಂದು ಹೇಳಲಾಗುತ್ತದೆ. ಆದ್ದರಿಂದ ಈ ಸ್ಥಳವನ್ನು ಜನರು ಕುಂಡಲೇಶ್ವರ ಎಂಬ ಹೆಸರಿನಿಂದ ಕರೆಯುತ್ತಾರೆ. ಕೊಂಡಗುಳಿ ಕೇಶಿರಾಜ ಇಲ್ಲಿ ವಾಸಿಸುತ್ತಿದ್ದನೆಂದು ಹೇಳಲಾಗುತ್ತಿದೆ. ಇದಕ್ಕೆ ಕೇಶಿರಾಜ ದಣ್ಣಾಯಕರ ರಗಳೆ ಸಾಕಷ್ಟು ಪುಷ್ಟಿಯನ್ನೊದಗಿಸುತ್ತದೆ. ರಗಳೆಯಲ್ಲಿಯ ವರ್ಣನೆ ಪ್ರಸ್ತುತ ಸ್ಥಿತಿಯ ಚಿತ್ರಣ ನೀಡುತ್ತದೆ.

ಈ ದೇವಾಲಯದ ಬಲಬದಿಗೆ ಎರಡು ಚಿಕ್ಕಚಿಕ್ಕ ಗುಡಿಗಳಿವೆ ಒಂದು ನರಸಿಂಹನದು ಇನ್ನೊಂದು ಗಾಣಗಾಪೂರ ದತ್ತಾತ್ರೇಯನ ಪಾದರಕ್ಷೆಗಳಿವೆ. ಶಿವಪೂರ ಗ್ರಾಮವು ಹನ್ನೆರಡನೆಯ ಶತಮಾನದ ಶರಣ ಮುಗ್ಧ ಸಂಗಯ್ಯನ ಜನ್ಮಸ್ಥಳವಾಗಿದೆ. ಗ್ರಾಮದ ಮಧ್ಯದಲ್ಲಿ ಅವನ ಮನೆ-ಮಠ ಮತ್ತು ಗವಿ ಇದ್ದು; ಹಾಳು ಬಿದ್ದಿದೆ. ದೇವಾಲಯದ ಎದುರಿನಲ್ಲಿ ವಿಶಾಲವಾದ ಕೆರೆ ಇದೆ. ಸೂರ್ಯೋದಯ, ಸೂರ್ಯಸ್ತ ಸಮಯಕ್ಕೆ ಇದೊಂದು ರಮ್ಯ ತಾಣವಾಗಿ ಕಾಣಿಸುತ್ತದೆ. ದೇವಾಲಯದ ಮುಂಭಾಗದಲ್ಲಿ ಚೌಕಾಕಾರದ ಪುಷ್ಕರಿಣಿ ಇದ್ದು; ಮುಕ್ಕಾಲು ಭಾಗ ಮಣ್ಣು ಬಿದ್ದು ಮುಚ್ಚಿಕೊಂಡಿದೆ. ಮೇಲಿನಿಂದ ಕೆಳಗೆ ಇಳಿಯಲು ಮೆಟ್ಟಲುಗಳಿವೆ. ಅಕ್ಕಪಕ್ಕದಲ್ಲಿ ಗಜತೋರಣ, ವಿವಿಧ ತೋರಣಗಳಿವೆ. ಹಲವಾರು ಶಿಲಾಮೂರ್ತಿಗಳು ಭಗ್ನಗೊಂಡು ಬಿದ್ದಿವೆ. *(ಆರ್.ಬಿ.)*

ಶಿವಯೋಗಿಶ್ವರ: ದೇವನ ತೇಗನೂರಿನ ಸುಪ್ರಸಿದ್ಧ ಶಿವಯೋಗಿಶ್ವರ ಮಂದಿರ ಶಹಾಬಾದನಿಂದ ಕೇವಲ 8 ಕಿ.ಮೀ. ದೂರದಲ್ಲಿದೆ. ಇಂದಿನ ವೈಜ್ಞಾನಿಕ ಯುಗದಲ್ಲೂ ಶರಣರು, ದಾಸರು, ಸಂತರು ಸಾಮಾನ್ಯ ಜನರಿಗೆ ಹತ್ತಿರವಾದದ್ದು ಅವರ ಸರಳತೆ, ಸನ್ನಡತೆ ಹಾಗೂ ಸಾಮಾನ್ಯರಿಗೆ ತೋರುತ್ತಿದ್ದ ಪ್ರೀತಿ, ಅಂತಃಕರಣ ಹಾಗೂ ಮಾನವೀಯ ಮೌಲ್ಯ, ಆದರ್ಶಗಳಿಂದ ಗುಲಬರ್ಗಾ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ದೇವನ ತೇಗನೂರ ಗ್ರಾಮದ ಪವಾಡ ಪುರುಷ, ಮಹಾತ್ಮಾ ಶಿವಯೋಗಿಶ್ವರರೂ ಅಂತಹ ಸತ್ಪುರುಷರಲ್ಲಿ ಒಬ್ಬರು. ಶಿವಯೋಗಿಶ್ವರರ ನೆನಪಲ್ಲಿ ಪ್ರತಿವರ್ಷ ಯುಗಾದಿ ಹಿಂದಿನ ದಿನ ಭಾರಿ ಜಾತ್ರೆ ನಡೆಯುತ್ತದೆ.

'ಸಕಲರೋಗ ನಿವಾರಕ ದೇವನ ತೇಗನೂರನ ಶಿವ ಯೋಗಿಶ್ವರ' ಎಂದೇ ಖ್ಯಾತಿಯಾಗಿರುವ ಶಿವಯೋಗಿಶ್ವರರ ಜನ್ಮಸ್ಥಳ, ಮತ್ತಿತರ ವಿವರಗಳು ಸರಿಯಾಗಿ ಲಭ್ಯವಿಲ್ಲವಾದರೂ 8 ನೇ ಶತಮಾನ ಅವರ ಜೀವಿತಾವಧಿ ಇರಬಹುದೆಂದು ಸ್ಥಳೀಯರು ಹೇಳುತ್ತಾರೆ.

ಭೂಮಿಯಲ್ಲಿ ಅತಿಯಾದ ಅನಾಚಾರ, ಅನಾರೋಗ್ಯ ಹೆಚ್ಚಾದಾಗ ಶಿವ–ಪಾರ್ವತಿ ಸಾಕ್ಷಾತ್ ಗುರುಮಂತ್ರದಿಂದ ಭೂಮಿಗೆ ಅಸಾಧಾರಣ ಶಕ್ತಿಯ ಪುರುಷನನ್ನು ಸೃಷ್ಟಿಸಿ, ಬೇಡಿದ ಭಕ್ತರ ಇಷ್ಟಾರ್ಥ ಕರುಣಿಸಿ, ಕಾಮಧೇನು–ಕಲ್ಪವೃಕ್ಷವೆನಿಸಿ ಶಿವಯೋಗಿಶ್ವರನೆಂಬ ಪುಣ್ಯಪುರುಷನನ್ನು ಈ ಭೂಮಿಗೆ ಕಳಿಸಿದರು ಎಂಬುದು ಪ್ರತೀತಿ.

ಪ್ರತಿ ಅಮಾವಾಸ್ಯೆಗೆ ಇಲ್ಲಿ 15 ಸಾವಿರಕ್ಕೂ ಅಧಿಕ ಭಕ್ತಾದಿಗಳು ಸೇರುತ್ತಾರೆ. ಅಂದು ಲಕ್ಷ ಲಕ್ಷ ತೆಂಗಿನಕಾಯಿ ಒಡೆಯುವುದನ್ನು ನೋಡಿದರೆ ಜನ ದಂಗಾಗುತ್ತಾರೆ. ದೇವನತೇಗನೂರಲ್ಲಿ ನೀಡಲಾಗುವ ಶಿವಯೋಗಿಶ್ವರರ ತೀರ್ಥ ಸಕಲ ರೋಗಗಳಿಗೂ ಸಿದ್ಧೌಷಧ ಎನ್ನಲಾಗಿದ್ದು ಹಾವು ಕಚ್ಚಿದ ಸಂದರ್ಭ, ಪಾರ್ಶ್ವವಾಯು ಹೊಡೆದ ಗಳಿಗೆ, ಸಂತಾನ ಭಾಗ್ಯ ಹೀಗೆ ವಿವಿಧ ರೋಗಗಳ ನಿವಾರಣೆಗೆ ಲಕ್ಷಾಂತರ ಜನ ಶಿವಯೋಗಿಶ್ವರನಿಗೆ ನಡೆದುಕೊಳ್ಳುವುದು ವಿಶೇಷ.

(ಎಂ.ಪಿ.)

ಶಿವಲಿಂಗೇಶ್ವರರು: ಕಲ್ಯಾಣ ನಾಡಿನ ಹಲವು ಶರಣರು, ಸಂತರಲ್ಲಿ ಆಧ್ಯಾತ್ಮಿಕ ಚಿಂತಕ ಶಿವಲಿಂಗೇಶ್ವರ ಮಾದನಹಿಪ್ಪರಗಾ ಗ್ರಾಮದ ಶರಣ ಪ್ರಮುಖರು. ಆಳಂದದಿಂದ ಸುಮಾರು 35 ಕಿ.ಮೀ. ಅಂತರದಲ್ಲಿರುವ ಮಾದನಹಿಪ್ಪರಗಾ ಗ್ರಾಮ ಹಲವಾರು ವೈಶಿಷ್ಟಗಳಿಂದ ಕೂಡಿದೆ. ಇದು ಕಲೆ, ಸಾಹಿತ್ಯ, ಸಂಗೀತ ಮತ್ತು ಧಾರ್ಮಿಕ ಕಾರ್ಯಕ್ಷೇತ್ರಗಳ ತವರೂರೂ ಆಗಿದೆ. ಐತಿಹಾಸಿಕ ಹಿನ್ನೆಲೆಯಿಂದ ಗತಕಾಲದ ವೈಭವದ ಸೊಗಡನ್ನು ಪ್ರತಿಬಿಂಬಿಸುವಲ್ಲಿ ಈ ಗ್ರಾಮ ಇಂದಿಗೂ ಹಿಂದೆ ಬಿದ್ದಿಲ್ಲ. ಶರಣರು, ಸಂತರು ಬದುಕಿ ಬಾಳಿದ ಈ ಭಾಗದಲ್ಲಿ ಮಾದನಹಿಪ್ಪರಗಾ ಈ ಭಾಗದ ಒಂದು ಪುಣ್ಯಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿದೆ.

ಈ ಗ್ರಾಮದಲ್ಲಿ ಶಿವಲಿಗೇಶ್ವರ ಎಂಬ ಆಧ್ಯಾತ್ಮಿಕ ಮಹಾಸ್ವಾಮಿಗಳು ಜೀವಿಸಿ, ಸಕಲ ಜೀವಾತ್ಮರಿಗೆ ಆತ್ಮೋದ್ಧಾರ ಕಾರ್ಯ ನೆರವೇರಿಸುತ್ತಿದ್ದರು. ಇವರು ಬಸವಾದಿ ಶರಣರ ತತ್ವ ಸಿದ್ಧಾಂತಗಳಡಿ ಜನೋಪಯೋಗಿ ಕಾಯಕ ನಿಷ್ಠೆಗಳನ್ನು ಮಾಡುತ್ತಿದ್ದರೆನ್ನಲಾಗಿದೆ. ಇವರು ಜನರಿಗಾಗಿ ಮಠದ ಮುಂದೆ ನೀರಿನ ಭಾವಿ ತೋಡಿಸಿ, ಅದರ ಸುತ್ತಲು ಕಟ್ಟೆಯನ್ನು ನಿರ್ಮಿಸಿದ್ದಾರೆ. ಸರ್ವ ಜನರನ್ನು ಸಮಾನ ಗೌರವಗಳಿಂದ ಕಂಡು, ಸಾಮಾಜಿಕ ಸಮಾನತೆಯ ಮೌಲ್ಯವನ್ನು ಎತ್ತಿಹಿಡಿದವರು.

ಇಲ್ಲಿ ನಂದಿಧ್ವಜದವರ ಮನೆತನ, ಧಾರ್ಮಿಕ ಆಧ್ಯಾತ್ಮಿಕ ನಿಷ್ಠೆಗಳಿಗೆ ಹೆಸರುವಾಸಿಯಾಗಿತ್ತು. ಮಲ್ಲಿಕಾರ್ಜುನ ಮತ್ತು ಬಂಗಾರೆಮ್ಮ ದಂಪತಿಗಳು ಆರ್ಥಿಕವಾಗಿ ಬಡವರಿದ್ದರೂ, ಭಕ್ತಿಯಲ್ಲಿ ಶ್ರೀಮಂತಿಕೆ ಹೊಂದಿದವರು. ಕಾಯಕವೇ ಕೈಲಾಸವೆಂದರಿತ ಇವರು, ನೇಯ್ಗೆ ಕಾಯಕದಲ್ಲಿ ನಿರತರಾಗಿ ದೇವರನ್ನು ಆರಾಧಿಸುತ್ತಿದ್ದರು. ಧರ್ಮಪತ್ನಿ ಬಂಗಾರೆಮ್ಮ ಪ್ರತಿದಿನ ಶಿವಲಿಂಗೇಶ್ವರ ದರ್ಶನವಾಗದೆ ನೀರನ್ನೂ ಸಹ ಮುಟ್ಟುತ್ತಿರಲಿಲ್ಲ. ನಿತ್ಯ ಸಾಯಂಕಾಲ ಶಿವಲಿಂಗೇಶ್ವರು ಪೂಜೆಗೆ ಕುಳಿತಾಗ ಹೋಗಿ ಪ್ರಾರ್ಥಿಸುತ್ತಿದ್ದಳು. ದಂಪತಿಗಳಿಗೆ ವಯಸ್ಸಾಗುತ್ತಾ ಬಂದರೂ ಸಂತಾನವಿರಲಿಲ್ಲ. ಮಕ್ಕಳ ಚಿಂತೆ ದಿನೆ ದಿನೆ ಹೆಚ್ಚಾಗ ತೊಡಗಿತು. ಆಗ ಬಂಗಾರಮ್ಮನ ಕನಸ್ಸಿನಲ್ಲಿ ಕಾಣಿಸಿಕೊಂಡ ಶ್ರೀ ಶಿವಲಿಂಗೇಶ್ವರರು, ಅವಳ ಮನದಾಳದ ಚಿಂತೆಯನ್ನು ಮನಗಂಡು, "ತಾಯಿ ನಿನಗೆ ಸುಪುತ್ರನೊಬ್ಬ ಜನಿಸುತ್ತಾನೆ. ಆತನಿಗೆ ನನ್ನ ಹೆಸರನ್ನೇ ಇಡಬೇಕು" ಎಂದು ಆಶೀರ್ವಾದಿಸಿದರಂತೆ.

ಮುಂದೆ ಅವರ ಆಶೀರ್ವಾದದ ಫಲವಾಗಿ ಬಂಗಾರೆಮ್ಮಳಿಗೆ ಬಂಗಾರದಂಥ ಮಗ ಹುಟ್ಟಿದ. ಅದೇ ವೇಳೆಗೆ ಇಲ್ಲಿನ ಶಿವಲಿಂಗೇಶ್ವರರು ಲಿಂಗೈಕ್ಯರಾಗಿದ್ದರು. ಆಗ ಶಿಶುವಿಗೆ "ಶರಣ ಶಿವಲಿಂಗೇಶ" ಎಂದು ನಾಮಕರಣ ಮಾಡಿದರು. ಆತನೆ ಪವಾಡ ಪುರುಷ ಶರಣ ಶಿವಲಿಂಗೇಶ್ವರ ಎಂದೆನಿಸಿಕೊಂಡು ಪ್ರಖ್ಯಾತಿ ಪಡೆದರು. ಇವರು ಮುಂದೆ ದಾರ್ಶನಿಕರಾಗಿ, ಪವಾಡ ಪುರುಷರಾಗಿ ಈ ಭಾಗದ ಜನ ಮಾನಸಕ್ಕೆ ಅಧ್ಯಾತ್ಮಿಕ ಧಾರೆ ಎರೆದರು. ಬಡತನದ ನೋವು–ನಲಿವುಗಳಲ್ಲಿ ನೊಂದು ಬೆಂದವರಿಗೆ, ಅನಾಥರಿಗೆ ಆಶ್ರಯದಾತರೆನಿಸಿಕೊಂಡಿದ್ದರು.

ಶರಣ ಶಿವಲಿಂಗೇಶ್ವರರ ತಾಯಿ ಬಂಗಾರಮ್ಮ, ಶ್ರೀಶೈಲ ಮಲ್ಲಿಕಾರ್ಜುನನಲ್ಲಿಗೆ ಹೋಗಿ ಶಿವಗಣಾರಾಧನೆ ಮಾಡುವ ಹರಕೆ ಹೊತ್ತಿದ್ದಳು ಎಂದು ಪುರಾಣಗಳಿಂದ ತಿಳಿದು ಬರುತ್ತದೆ. ಆದರೆ "ವಯಸ್ಸಾಗಿದ್ದರಿಂದ ಮಗನಿಗೆ ಹೋಗಿ ಹರಕೆ ಈಡೇರಿಸಿ ಬಾ" ಎಂದು ಹೇಳಿದಳು. ತಾಯಿಯ ನುಡಿಯ ಪಾಲನೆ ಮಾಡಿದ ಶರಣ ಶಿವಲಿಂಗೇಶ್ವರರು, ಸಾವಿರಾರು ಭಕ್ತರೊಡನೆ ಶ್ರೀಶೈಲಕ್ಕೆ ಹೆಜ್ಜೆ ಹಾಕಿದರು. ಮುಂದೆ ಯಾವುದೆ ಆಯಾಸಗಳಿಲ್ಲದೆ ಶ್ರೀಶೈಲ ತಲಪಿದಾಗ, ಶರಣ ಶಿವಲಿಂಗೇಶ್ವರನು ಒಬ್ಬನೇ ಮುನ್ನಡೆದನು. ಭಕ್ತರು ಮಾತ್ರ ಈತನನ್ನು ಕಾಣದೆ "ಹರ...ಹರ...ಶರಣ ಶಿವಲಿಂಗೇಶ" ಎಂದು ಹಂಬಲಿಸುತ್ತಾ ಸಾಗಿದರು. ಶ್ರೀಶೈಲ ಚೆನ್ನಮಲ್ಲಿಕಾರ್ಜುನ ಗುಡಿಯ ಮುಂದೆ ಕುಳಿತ ಭಕ್ತರು, "ಕರೆದು ತೋರಯ್ಯ ಮಲ್ಲಯ್ಯ....' ಎಂದು ಪರಿಪರಿಯಾಗಿ ಬೇಡಿಕೊಂಡರು.

ಇತ್ತ ಶರಣ ಶಿವಲಿಂಗೇಶ್ವರರು ಗುಡಿಯ ಹಿಂಬದಿಯಲ್ಲಿ ಸ್ನಾನ ಮುಗಿಸಿಕೊಂಡು ಲಿಂಗ ಪೂಜೆಗಾಗಿ ಗಿಡದ ಕೆಳಗೆ ಅಣಿಯಾಗಿದ್ದರು. ಅವರು ಗಿಡದ ಟೊಂಗೆಗಳ ಕಡೆ ದೃಷ್ಟಿ ಹಾಯಿಸಿದಾಗ, ದಾಸೋಹದ ಬುತ್ತಿಗಳು ಜೋತಾಡುತ್ತಿದ್ದವು. ಅಷ್ಟರಲ್ಲಿಯೇ ಸಂತೋಷಗೊಂಡ ಶರಣರಿಗೆ "ತೆಗೆದುಕೋ" ಎಂಬ ಧ್ವನಿಯೊಂದು ಕೇಳಿಸಿತು. ಆಗ ಭಕ್ತರೆಲ್ಲರು ಎದುರಿಗೆ ಬಂದಾಗ ನಡೆದುದೆಲ್ಲ ಸಂಗತಿಗಳನ್ನು ವಿವರಿಸಿದರು.

ಹೀಗೆ ಹತ್ತು ಹಲವಾರು ಜನಪರ ಕಾರ್ಯಗಳಲ್ಲಿ ನಿರತನಾಗಿ ಸಕಲ ಜೀವಾತ್ಮರರಿಗೆ ಲೇಸನ್ನೆ ಬಯಸಿದರು. ಮಾದನ ಹಿಪ್ಪರಗಾಗ್ರಾಮದ ಪಕ್ಕದಲ್ಲಿರುವ ಚಿಕ್ಕ ಗುಡ್ಡದಲ್ಲಿ ನೀರಿಗಾಗಿ ಗುಂಡ ತೋಡಲು ನಿಂತರು. ಅದು ಎಷ್ಟು ಆಳಕ್ಕೆ ಹೋದರೂ, ನೀರು ಬರುವ ಲಕ್ಷಣಗಳು ಕಾಣಲಿಲ್ಲ. ಆಗ ಶರಣ ಶಿವಲಿಂಗೇಶ್ವರರು ಬನ್ನಿಗಿಡದ ಬುಡದಲ್ಲಿ ಕುಳಿತು ತಪಸ್ಸು ಮಾಡಹತ್ತಿದರು. "ನಾಳಿನ ದಿನಗಳಲ್ಲಿ ನೀವು ತೋಡಿದ ಗುಂಡದಲ್ಲಿ ಗಂಗಾಮಾತೆ ಉದ್ಭವಿಸುತ್ತಾಳೆ ಏಳು" ಎಂದು ಸಾಂತ್ವನದ ನುಡಿ ಕೇಳಿಸಿತು. ಮರುದಿನ ಸದ್ಗುರು ಶರಣ ಶಿವಲಿಂಗೇಶ್ವರರು ಈ ಆಳವಾದ ಗುಂಡದಲ್ಲಿಳಿದು ಗಂಗಾಮಾತೆಯನ್ನು ಸ್ಮರಿಸಿದರು. ಆಗ ಅವರು ತಮ್ಮ ಕೈಯಿಂದ ಸಲಾಕೆ ಹೊಡೆದಾಗ, ಅದ್ಭುತ ಎಂಬಂತೆ ನೀರಿನ ಚಿಲುಮೆ ಚಿಮ್ಮಿತು. ಜಯಕಾರಗಳ ನಡುವೆ ಭಕ್ತ ಸಮೂಹ ಸಂತೋಷದಿಂದ ನೀರು ಕುಡಿಯತೊಡಗಿದರು.

ಇಂದಿಗೂ ಆ ಗುಡ್ಡದಲ್ಲಿನ ನೀರು ಕುಡಿದರೆ ಭೂತ–ಪಿಶಾಚಿಗಳು ಮತ್ತು ಶರೀರದ ವ್ಯಾಧಿಗಳೆಲ್ಲ ನಿವಾರಣ ಆಗುತ್ತವೆಂಬ ನಂಬಿಕೆ ಜನರಲ್ಲಿದೆ. ಈ ಗುಡ್ಡಕ್ಕೆ "ಶ್ರೀ ಶರಣ ಶಿವಲಿಂಗೇಶ್ವರ ತೀರ್ಥ ಗುಂಡ" ಎಂಬ ಹೆಸರು ಪ್ರಚಲಿತವಿದೆ. ಇಂಥ ಸದ್ಗುರು ಶರಣ ಶಿವಲಿಂಗೇಶ್ವರರು ಸಂಸಾರದ ವ್ಯಾಮೋಹಗಳನ್ನು ತೊರೆದು, ಶಿವಶರಣರೆನಿಸಿಕೊಂಡು, ಭಕ್ತಿ ಮಾರ್ಗ ತೋರಲು ನಂದಿಧ್ವಜ ಸ್ಥಾಪಿಸಿದರೆಂಬ ಉಲ್ಲೇಖಗಳಿವೆ.

(ಡಿ.ಎಚ್.ಡಿ.)

ಶಿವಶರಣಪ್ಪ ಮಹಾಂತಪ್ಪ ಮಲ್ದೆ: ಗುಲಬರ್ಗಾ ಜಿಲ್ಲೆಯ ದೊಡ್ಡಾಟದ ಕಲಾವಿದರು. ತಮ್ಮ ಅಪೂರ್ವ ಕಂಠಶ್ರೀಯಿಂದ ದೊಡ್ಡಾಟದ ಹಿಮ್ಮೇಳ ಮುಮ್ಮೇಳಕ್ಕೆ ವಿಶಿಷ್ಟ ಮೆರುಗನ್ನು ತಂದು ಕೊಟ್ಟವರು. ದೊಡ್ಡಾಟದ ಕಂಚಿನ ತಾಳಕ್ಕೆ, ಇವರ ಕಂಠ ಮಾರ್ದನಿಗೊಡುತಿತ್ತು. ಮಲ್ದೆ ಅವರು "ಜೈ ಹನುಮಾನ್ ಸಂಘ"ವೊಂದನ್ನು ಕಟ್ಟಿ, ಆ ಮೂಲಕ ದೊಡ್ಡಾಟದಂತಹ ಕಲೆ ಬೆಳೆಯಲು ಕಾರಣರಾದರು.

ತಮ್ಮ ಜೀವನದ ಉಸಿರಾದ ದೊಡ್ಡಾಟ ಜೀವಂತವಾಗಿ ಉಳಿಯಬೇಕೆಂಬುದು ಇವರ ಕನಸು. ಕಲೆಯ ಕಾಯಕ ಮತ್ತು ಸಂಘಟನಾ ಕಾರ್ಯದಲ್ಲಿ ಹೆಸರಾದ ಶಿವ ಶರಣಪ್ಪ ಮಹಾಂತಪ್ಪ ಮಲ್ದೆ ಅವರದು ಜನಪದ ರಂಗಭೂಮಿ ಕ್ಷೇತ್ರದಲ್ಲಿ ಹಲವು ಪ್ರಯೋಗಗಳನ್ನು ಮಾಡಿದ ದಟ್ಟ ಅನುಭವ ಅವರದು. ದೊಡ್ಡಾಟದ ಗತ್ತು ಗಮ್ಮತ್ತುಗಳನ್ನು ಮನಗಂಡಿರುವ ಶ್ರೀಯುತರು, ಅದರ ವೈಭವವನ್ನು ಮೆರೆಸಲು ಶ್ರಮಿಸುತ್ತಾ ಬಂದವರು.

(ಜಿ.ಆರ್.ಟಿ.)


ಶೆಟಿವಿ: ಜನಪದರ ಒಬ್ಬ ದೇವತೆ. ಇದಿಯಮ್ಮ, ಹಿರಿಯಮ್ಮ, ದೊಡ್ಡಮ್ಮ, ಛಟ್ಟಿಮ್ಮಾ, ತಾಯಿ ಎಂಬಂತಹ ಹಲವಾರು ಹೆಸರುಗಳಿಂದ ಕರೆಯಲಾಗುತ್ತದೆ. ಪುರುಷ ಪ್ರಧಾನವಾದ ಆರ್ಯ ಕಲ್ಪಿತ ಬ್ರಹ್ಮನಿಗೆ ಬದಲಾಗಿ. ಮಾತೃ ಪ್ರಧಾನವಾದ ದ್ರಾವಿಡರು ಕಲ್ಪಿಸಿಕೊಂಡಿರುವ ಸ್ತ್ರೀ ದೇವತೆ ಈಕೆ. ಬ್ರಹ್ಮ ಸೃಷ್ಟಿಕರ್ತನಾಗಿದ್ದರೆ, ಶೆಟಿವಿ ಹುಟ್ಟಿದ ಮಕ್ಕಳ ಹಣೆಬರಹ ಬರೆಯುವ ದೇವತೆ.

ಗ್ರಾಮೀಣ ಪ್ರದೇಶಗಳಲ್ಲೆಲ್ಲ ಮಗು ಹುಟ್ಟಿದ ಐದನೆಯ ದಿವಸವನ್ನು 'ಐದೇಶಿ' ಎಂದು ಆಚರಿಸುತ್ತಾರೆ. ಮುಸ್ಲಿಂ ಜನಾಂಗದಲ್ಲಿ ಆರನೆಯ ದಿವಸದಂದು ಈ ಆಚರಣೆಯಿದೆ. ಅಂತೆಯೇ ಅವರು ಈ ಶೆಟಿವಿಯನ್ನು 'ಛಟ್ಟಿಮಾ' ಎಂದು ಕರೆಯುತ್ತಾರೆ. 'ಐದೇಶಿ' ಎನ್ನುವುದು ಮಗುವಿನ ಐದು ದಿವಸದ ಆಚರಣೆ. ಅಂದು ಶೆಟಿವಿಯು ಆ ಮಗುವಿನ ಹಣೆ ಬರೆಹವನ್ನು ಬರೆಯುವುವ ದಿವಸ. ಈ ಬರೆಹವನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಸ್ವತಃ ಶೆಟಿವಿಗೂ ಇದನ್ನು ತಪ್ಪಿಸಲು ಆಗುವುದಿಲ್ಲವೆಂಬ ನಂಬಿಕೆ ಜನಪದರಲ್ಲಿದೆ. 'ಲಲಾಟದೊಳ್ ಬರೆದ ವಿಧಿ ಲಿಪಿ ಜಲ ಲಿಪಿಯಲ್ಲ'ವೆಂಬುದು ಕವಿಯ ಹೇಳಿಕೆ. ಆದ್ದರಿಂದ ಅಂದಿನ ದಿನ ಜನಿಸಿದ ಮಗುವಿಗೆ ಎಣ್ಣೆ, ಹಚ್ಚಿ ನೀರೆರೆದು ಹೊಸ ಬಟ್ಟೆಯನ್ನು ಆ ಮೊದಲ ಬಾರಿಗೆ ಹಾಕಿ, ಮುತ್ತೈದೆಯರನ್ನು ಕರೆಸಿ ಭಯ ಭಕ್ತಿಯಿಂದ ಅಂದಿನ ಸಂಜೆಯಲ್ಲಿ ಶೆಟಿವಿಯನ್ನು ಪೂಜಿಸುತ್ತಾರೆ. ಜೋಳ, ಸಜ್ಜೆ ಅಥವಾ ಗೋದಿಯ ಕಡಬು ತಯಾರಿಸಿ ಎಡೆ ಹಾಕುತ್ತಾರೆ. ಅಂದಿನ ರಾತ್ರಿ ಬಾಣಂತಿ ಹಾಗೂ ಆ ಮಗು ಮಲಗುವ ಕೋಣೆಯ ದಾರಿಯಲ್ಲಿ ಯಾರೂ ಅಡ್ಡಲಾಗಿ ಮಲಗದಂತೆ ಎಚ್ಚರಿಕೆ ವಹಿಸುತ್ತಾರೆ. ಯಾರಾದರೂ ಹಾಗೆ ಮಲಗಿದ್ದರೆ 'ಇದಿಯಮ್ಮ' ಮಗುವಿನ ಹಣೆಬರಹ ಬರೆಯದೆ ಹಾಗೆಯೇ ಹೋಗುತ್ತಾಳೆಂಬ ಭಯವಿದೆ. ಅಂದಿನ ರಾತ್ರಿ ಆ ಮಗುವಿನ ಸಮೀಪದಲ್ಲಿ ಎದ್ದು ಕಾಣುವಂತೆ ಕ್ಯಾರೊಳ್ ಹಾಗೂ ಸೂಜಿಯನ್ನು, ಹಲವು ಕಡೆ ಇದ್ದಿಲು ಚೂರುಗಳನ್ನು ಇಡುತ್ತಾರೆ. ಈ ಸಾಮಗ್ರಿಯಿಂದಲೇ ಆ ಶೆಟಿವಿಯು ಹಣೆ ಬರೆಹ ಬರೆಯುತ್ತಾಳಂತೆ.

'ಶೆಟಿವಿ'ಯ ಬಗ್ಗೆ ಜನಪದರಲ್ಲಿ ಅನೇಕ ಭಯಯುಕ್ತ ಭಾವನೆಗಳಿವೆ. ಕೂಸನ್ನು ನಿದ್ರೆಯಲ್ಲಿದ್ದಾಗ ಅವಳು ಬೆದರಿಸುತ್ತಾಳಂತೆ ಅದಕ್ಕೆ ಆ ಮಗು ಬೆಚ್ಚಿ ಬೀಳುವುದು. ಒಮ್ಮೊಮ್ಮೆ ಆಡಿಸುತ್ತಾಳಂತೆ ಆಗ ಅದು ನಗುತ್ತದೆ. ಅವಳು ರೂಪದಲ್ಲಿ ಕುರೂಪಿ, ಸ್ವಭಾವದಲ್ಲಿ ಕ್ರೂರಿಯಂತೆ ಹೀಗಾಗಿ ಅವಳನ್ನು ತುಂಬಾ ಭಯ–ಭಕ್ತಿಯಿಂದ ಪೂಜಿಸಿದರೆ ಮಗುವಿನ ಭವಿಷ್ಯವನ್ನು ಒಳ್ಳೆಯ ರೀತಿಯಲ್ಲಿ ಬರೆಯುತ್ತಾಳೆ. ಕೋಪಗೊಂಡರೆ ಕೇಡು ಬಗೆಯುತ್ತಾಳೆಂಬ ನಂಬಿಕೆಗಳಿವೆ. ಇದಿಯಮ್ಮ ತನ್ನ ಮಗಳ ಹಣೆಬರಹವನ್ನು ಆವೇಶದಲ್ಲಿ ಬರೆದು ಪಶ್ಚಾತಾಪ ಪಟ್ಟ ಬಗೆಯನ್ನು ತಾನು ಬರೆದ ಹಣೆ ಬರೆಹವನ್ನು ಅವಳಿಂದಲೇ ತಪ್ಪಿಸಲಾಗಲಿಲ್ಲವೆಂಬ ಜನಪದ ಕಥೆಯೊಂದು ಇಂದಿಗೂ ಇಲ್ಲಿ ಜನ ಜನಿತವಾಗಿದೆ. 'ಶೆಟಿವಿ'ಯನ್ನು ಕುರಿತು ಕಾವ್ಯ, ಕಥೆ, ನಾಟಕಗಳು ಹುಟ್ಟಿಕೊಂಡಿವೆ. ಜನಪದರಲ್ಲಿ ಅನೇಕ ರೀತಿಯ ರೋಚಕ ಕಥೆಗಳೂ ದೊರೆಯುತ್ತವೆ.

'ಶೆಟಿವಿ'ಯ ಮೂರ್ತಿಯುಳ್ಳ ದೇವಾಲಯಗಳು ಈ ಪ್ರದೇಶದಲ್ಲಿಲ್ಲ. ಅಲ್ಲಲ್ಲಿ ಕಲ್ಲನ್ನೇ ಮೂರ್ತಿಯಾಗಿಸಿ ಪೂಜಿಸುವ ಪದ್ಧತಿ, ಮನೆಯಲ್ಲಿ ತುಂಬಿದ ತಂಬಿಗೆ, ಚರಿಗೆಯ ಮೇಲೆ ಟೆಂಗಿನ ಕಾಯಿಟ್ಟು ಪೂಜಿಸುವ ಪದ್ಧತಿಗಳಿವೆ. ಹಾಗೆಯೇ ಕೆಲವು ಕಡೆ ಬಂಗಾರ, ಬೆಳ್ಳಿ ಅಥವಾ ಇತರ ಲೋಹದ ಬಿಲ್ಲೆಗಳ ಮೇಲೆ ಒಂದು ಚಿತ್ರದ ಗೆರೆ ಮೂಡಿಸಿ 'ಐದೇಶಿ' ದಿನ ಕರಿದಾರದಲ್ಲಿ ಮಗುವಿನ ಕೊರಳಲ್ಲಿ ಕಟ್ಟುತ್ತಾರೆ. ಅದೇ ಶೆಟಿವಿಯ ಚಿತ್ರವೆಂದು ಹೇಳಲಾಗುತ್ತದೆ. *(ಎಸ್.ಎಸ್.ವೈ.)*

ಶ್ರೀಶೈಲ ನಾಗರಾಳ: ಮೂಲತಃ ಗುಲಬರ್ಗಾ ಜಿಲ್ಲೆಯ ಜೇವರಗಿ ತಾಲ್ಲೂಕಿ ನವರು. 01.06.1961ರಂದು ಜನಿಸಿದರು. ಅಜ್ಜಿಯ ಕೈ ಹಾರೈಕೆಯಲ್ಲಿ ಬೆಳೆದ ನಾಗರಾಳರವರು ಅಜ್ಜಿಯ ಜಾನಪದ ಬದುಕಿನಿಂದ ಪ್ರೇರಿತರಾಗಿದ್ದಾರೆ. ತಂದೆ ಯಮನಪ್ಪ ತಾಯಿ ಬಸಮ್ಮ ಇವರ ಪ್ರಾಥಮಿಕ, ಮಾಧ್ಯಮಿಕ ಹಾಗೂ ಕಾಲೇಜು ಶಿಕ್ಷಣವನ್ನು ಸಿಂದ–ಗಿಯಲ್ಲಿ ನಡೆಯಿತು. ನಂತರ ಗುಲಬರ್ಗಾ ವಿಶ್ವವಿದ್ಯಾಲಯದಿಂದ 1986ರಲ್ಲಿ ಎಂ.ಎ. ಕನ್ನಡ ಮತ್ತು ಜಾನಪದ ಪದವಿ ಪಡೆದಿದ್ದಾರೆ. 2000ರಲ್ಲಿ ಡಾ. ಎಂ.ಎಂ. ಕಲಬುರ್ಗಿಯವರ ವೀರಶೈವ ಲೇಖನಗಳು,' ಕುರಿತು ಎಂ.ಫಿಲ್, 2008ರಲ್ಲಿ 'ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರ ಜೀವನ ಮತ್ತು ಕೃತಿಗಳು' ಕುರಿತು ಪಿಎಚ್.ಡಿ ಪದವಿ ಪಡೆದಿರುವರು. ಡಾ. ನಾಗರಾಳ ಅವರು ಸಧ್ಯ ಹೈದರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಶ್ರೀಮತಿ ಚಿನ್ನಮ್ಮ ಬಸಪ್ಪ ಪಾಟೀಲ ಪದವಿ ಮಹಾವಿದ್ಯಾಲಯ, ಚಿಂಚೋಳಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಡಾ. ನಾಗರಾಳ ಅವರು ಈಗಾಗಲೇ ಕನ್ನಡದಲ್ಲಿ ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಕಲಬುರ್ಗಿ ಶರಣಬಸವೇಶ್ವರ (2000) ವೀರೇಂದ್ರ ಪಾಟೀಲ (2002, 2006) ಶರಣ ಏಕಾಂತ ರಾಮಯ್ಯ (2006) ಉರಿವ ಬದುಕು (2007) ವೀರೇಂದ್ರ ಸಿಂಪಿ (2009) ಸಿರಿಗಂಧ, ಶ್ರೀ ವಿಜಯ, ಬದುಕಿನ ಬುತ್ತಿ, ಡಾ. ಎಂ.ಎಸ್. ಲಠ್ಠೆ – ಆತ್ಮೀಯ ನೆನಪು, ಬೆಳ್ಳಿ ದಾಂಪತ್ಯ ಇವು ಡಾ. ನಾಗರಾಳ ಅವರ ಸಂಪಾದನೆ ಕೃತಿಗಳಾಗಿವೆ. ಶಿಷ್ಟ ಹಾಗೂ ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಆರಿಸಿಕೊಂಡು ನಾಡಿನ ಬೇರೆ ಪತ್ರಿಕೆಗಳಿಗೆ, ವಿಚಾರ ಸಂಕಿರಣಗಳಲ್ಲಿ ತಮ್ಮ ಪ್ರಬುದ್ಧವಾದ ಪ್ರಬಂಧಗಳನ್ನು ಪ್ರಸ್ತುತಪಡಿಸಿರುತ್ತಾರೆ. ಅನ್ಯಜ್ಞಾನ ಶಿಸ್ತುಗಳ ಮೂಲಕ ಕನ್ನಡ ಸಾಹಿತ್ಯ (1992) ಸಂಶೋಧನ ಕಮ್ಮಟ (1995) ಲಲಿತಕಲಾ ಶಿಬಿರಗಳಲ್ಲಿ, ಕಮ್ಮಟಗಳಲ್ಲಿ ತರಬೇತಿ ಪಡೆದಿರುವರು. ಕೆಳವರ್ಗದ ವಚನಕಾರರು; ಅಕ್ಕಮಹಾದೇವಿ ವಚನಗಳು 'ಜನಪದ ಹಾಡು ಮತ್ತು ಐತಿಹ್ಯಗಳಲ್ಲಿ ಶರಣ ಗಜೇಶ ಮಸಣಯ್ಯನ ಇತಿವೃತ್ತಿ' 'ಕನ್ನಡ ಕವಿಗಳ ಜಾನಪದ ಸಂವೇದನೆ' ಪಂಪನ ಜಾನಪದ ದೃಷ್ಟಿ. ಪುಣ್ಯಕೋಟಿ ಹಸು ಮತ್ತು ಹುಲಿ ಕನ್ನಡ ಕವಿಗಳ ಜಾನಪದ ಸಂವೇದನೆ ಮುಂತಾದ ಲೇಖನಗಳು ಜಾನಪದ ಮನೋಧರ್ಮವನ್ನು ಹೊತ್ತಿರುವ ವಿಮರ್ಶಾ ಬರಹಗಳಾಗಿವೆ.

ಅವರ ಲೇಖನಗಳು ಜಾನಪದ ಹಾಗೂ ಶಿಷ್ಟ ಸಾಹಿತ್ಯವನ್ನು ಸಾಮಾಜೋ ಸಾಂಸ್ಕೃತಿಕ ಅಧ್ಯಯನ ದೃಷ್ಟಿಯಿಂದ ಹೇಗೆ ಅಭ್ಯಾಸ ಮಾಡಬಹುದೆಂಬುದಕ್ಕೆ ಉತ್ತಮ ಮಾದರಿಗಳಾಗಿವೆ. ಅವರು ಜನಪದ ಸಾಹಿತ್ಯವನ್ನು ಸಾಹಿತ್ಯದ ದೃಷ್ಟಿಯಿಂದ ಮಾತ್ರವಲ್ಲದೆ ಸಂಸ್ಕೃತಿಯ ದೃಷ್ಟಿಯಿಂದಲೂ ಅಭ್ಯಾಸ ಮಾಡಿದ್ದಾರೆ. 'ಮೈಲಾರಲಿಂಗ' ಒಂದು ಅಧ್ಯಯನ'ದಲ್ಲಿ ಜಾನಪದ ಅಂಶವನ್ನು ಪ್ರಮುಖವಾಗಿ ಕಾಣುತ್ತೇವೆ.

ಜಾನಪದವನ್ನು ಹೊಸ ಹೊಸ ಜ್ಞಾನ ಶಿಸ್ತುಗಳ ನೆಲೆಯಲ್ಲಿ ಅಧ್ಯಯನಕ್ಕೆ ತೊಡಗಿಸಿಕೊಂಡ ಇತ್ತೀಚಿನ ಕೆಲವೇ ಯುವ ವಿದ್ವಾಂಸರಲ್ಲಿ ಡಾ. ಶ್ರೀಶೈಲ ನಾಗರಾಳ ಅವರೂ ಪ್ರಮುಖರೆನಿಸಿದ್ದಾರೆ.

(ಎಸ್.ಎಚ್.)

ಸ

ಸಂಕ್ರಾಂತಿ: ಹಿಂದೂಗಳ ಒಂದು ಸಾಂಸ್ಕೃತಿಕ ಹಬ್ಬ. ಮೂಲದಲ್ಲಿ ಇದು ನಿಸರ್ಗ ಕ್ರಿಯೆ. ಅಂದು ಸೂರ್ಯ ಉತ್ತರಾಯಣ ಆರಂಭವೆಂದು ಹೇಳಿದರೂ, ಭೂಮಿಯೇ ಆ ಕಡೆ ಸರಿಯುತ್ತಿರುವುದೇ ಸತ್ಯ. ಅಂದಿನಿಂದ ಬಿಸಿಲು ಏರುತ್ತುತ್ತದೆ. ಈ ನೈಸರ್ಗಿಕ ಬದಲಾವಣೆಯನ್ನು ಒಂದು ಸಾಂಸ್ಕೃತಿಕ ಹಬ್ಬವಾಗಿ ಆಚರಿಸಲಾಗುತ್ತದೆ. ಈ ಕ್ರಮಣ ಮಕರಶಿಯ ಆರಂಭ ಆಗುವದ–ರಿಂದ ಇದನ್ನು ಮಕರ ಸಂಕ್ರಮಣ ಎಂದೂ ಹೇಳುತ್ತಾರೆ. ಕೃಷಿಕ ಸಮಾಜ ಸುಗ್ಗಿಯ ಕಡೆ ಮುಖ ಮಾಡಿಯೋ ಸುಗ್ಗಿಯನ್ನು ಆಚರಿಸಲೋ ಈ ದಿನದಿಂದ ಆರಂಭಿಸುತ್ತಾರೆ. ಇದು ಬದಲಾವಣೆಯ ಕಡೆ ಸಂಕ್ರಮಣ, ಕೃಷಿಕರನ್ನು ಇನ್ನಷ್ಟು ಕ್ರಿಯಾಶೀಲರನ್ನಾಗಿಸುವ ದಿನ.

ಈ ಹಬ್ಬದ ಮೊದಲು ದಿನ ಸಾಮಾನ್ಯವಾಗಿ ಜನೇವರಿ ಹನ್ನೆರಡನ್ನು ಹೆಣ್ಣು ಮಕ್ಕಳ ಭೋಗಿ, ಭೋಗಿಯ ದಿನ ಎಲ್ಲರೂ ಎರಕೊಳ್ಳುವರು ಅಂದರೆ ಎಣ್ಣೆ ಮಜ್ಜನ ಮಾಡುವರು. ವಿಶೇಷವಾಗಿ ಪುಡಿಮಾಡಿದ ಎಳ್ಳನ್ನು ಮೈಗೆಲ್ಲ ಸವರಿಕೊಳ್ಳುವರು ಚಳಿಗಾಲ ಕಳೆದು, ಬಿಸಿಲೇರುವ ಈ ದಿನದಂದು ಮೈದೊಗಲಿಗೆ ಸ್ನಿಗ್ದತೆಯ ಸಂಸ್ಕಾರ ಕೊಡುವ ಕ್ರಿಯೆ ಇದು.

ಈ ಹಬ್ಬವನ್ನು ವ್ಯಕ್ತಿ ರೂಪದಲ್ಲಿ ಕಲ್ಪಿಸಿ ಅದೊಂದು ವಾಹನವನ್ನೇರಿ ಬರುತ್ತದೆಂದು ಹೇಳುತ್ತಾರೆ. ಅಲ್ಲದೆ ಇದು ವಿಶೇಷ ಭಕ್ಷ್ಯವನ್ನುಂಡು ಬರುತ್ತದಂತೆ! ಎಲ್ಲರೂ ಅಂದು ಆ ಭಕ್ಷ್ಯವನ್ನೇ ಮಾಡುತ್ತಾರೆ. ಈ ಹಬ್ಬದ ಸ್ವಾಗತಕ್ಕೆ ಮನೆ ಮನೆಗಳನ್ನು ರಂಗೋಲಿಯಿಂದ ಸಿಂಗರಿಸುತ್ತಾರೆ. ಭೋಗಿಯ ದಿನ ಉಮ್ಮಿಗೆ, ಸೀತನಿ, ಸುಲುಗಾಯಿ ರೂಪದಲ್ಲಿ ಹೊಸ ಬೆಳೆಯ ಕಾಳುಗಳನ್ನು ತಿನ್ನುವುರು. ಇದು ಹೈದ್ರಾಬಾದ ಕರ್ನಾಟಕದ ಸಂಪ್ರದಾಯವಾದರೆ, ಇನ್ನುಳಿದ ಕಡೆಗೂ ಬೇರೆ ಬೇರೆ ರೀತಿಯ ಧಾರ್ಮಿಕ ಆಚರಣೆಗಳು ರೂಢಿಯಲ್ಲಿವೆ. ಅವೆಲ್ಲಕ್ಕೂ ಕೃಷಿ ಸುಗ್ಗಿಯ ಸ್ಪರ್ಶ ಇದ್ದೇ ಇದೆ. ಈ ದಿನವನ್ನು ಅಭಿವೃದ್ಧಿಯ ಕಡೆಗೆ ಕರೆದೊಯ್ಯುವ ಆರಂಭದ ದಿನವಾಗಿ ಪರಿಗಣಿಸುತ್ತಾರೆ.

ನಿಸರ್ಗದ ಬದಲಾವಣೆಯನ್ನೂ, ನಮ್ಮ ಬದುಕಿನ ಬದಲಾವಣೆಗೆ ಅನ್ವಯಿಸಿಕೊಂಡು ಆಚರಿಸುವ ಈ ಹಬ್ಬವನ್ನು ಒಂದು ರೀತಿಯ ಕ್ರಾಂತಿಯಾಗಿ ಪರಿಭಾವಿಸಿ ಇದನ್ನು ಸಂಕ್ರಾಂತಿ ಎಂದು ಕರೆದಂತಿದೆ. ಭಾರತದ ಬಹಳಷ್ಟು ಕಡೆ ಈ ಸಾಂಸ್ಕೃತಿಕ ಹಬ್ಬವನ್ನೂ ವೈವಿಧ್ಯಮಯವಾಗಿ ಆಚರಿಸುತ್ತಾರೆ.

ಸಂಕ್ರಾಂತಿ ಕೇವಲ ಮನೆ ಮಂದಿರಗಳ ಪೂಜೋತ್ಸವದ ಹಬ್ಬವಾಗಿರದೆ, ಅದು ಮನ ಮನಗಳ ಪ್ರೇಮೋತ್ಸಾಹದ ಹಬ್ಬವೂ ಆಗಿದೆ. ಅಂದು ಸಿಹಿ ಸ್ನಿಗ್ಧತೆಯ ಸಂಕೇತವಾಗಿ 'ಎಳ್ಳು-ಬೆಲ್ಲ'ವನ್ನು ದೇವರಿಗೆ ಸಮರ್ಪಿಸುವುದಿರಲಿ ಪರಸ್ಪರರೂ ಕೊಟ್ಟುಕೊಂಡು ಪ್ರೀತಿಯಿಂದಿರಲು ಹಾರೈಸುತ್ತಾರೆ. ಹಿರಿಯರಿಗೆ ಎಳ್ಳು-ಬೆಲ್ಲ ಕೊಟ್ಟು ಆಶೀರ್ವಾದ ಪಡೆಯುವುದಿರಲಿ, ಮನೆ ಮನೆಗೆ ಹೋಗಿ ಎಳ್ಳು-ಬೆಲ್ಲ ಕೊಟ್ಟು ಹಾರ್ದಿಕತೆಯನ್ನು ಹಂಚಿಕೊಳ್ಳುತ್ತಾರೆ. ಈ ಎಳ್ಳು-ಬೆಲ್ಲ ಈಗ 'ಕುಸುರೆಳ್ಳಾಗಿ' ರೂಪುಗೊಂಡಿದೆ.

ಎಲ್ಲರಿಗೂ ಹಂಚಿ ಪ್ರೀತಿಯ ಶುಭಾಶಯ ಹೇಳುವುದೇ ಪ್ರಮುಖ ಆಚರಣೆಯಾಗಿದೆ. ಎಲ್ಲರೂ, ಎಳ್ಳು-ಬೆಲ್ಲದಂತೆ ಸಹಿ ಯಾಗಿರಲು ಹಾರೈಸುತ್ತಾರೆ. ಪರಸ್ಪರರು ವಿರಸ ಮರೆತು, ಪ್ರೇಮದ ದಾರಿಯಲ್ಲಿ ಸಂಕ್ರಮಣ ಮಾಡಲು ಇಚ್ಛೆ ಪಡುತ್ತಾರೆ. ಸಂಕ್ರಾಂತಿ ಮನ ಮನಗಳನ್ನು ಪ್ರೀತಿಯಿಂದ ಬೆಸೆಯುವ ಪ್ರಮುಖ ಹಬ್ಬ. *(ಎಂ.ಜಿ.ಬಿ.)*

ಸಂಗಪ್ಪ ಕರಡಿಯಾಳ: ಜನಪದ ಗಾಯಕ. ಬೀದರ್ ಜಿಲ್ಲೆಯ ಕರಡಿಯಾಳದವರಾದ ಇವರು ಭಜನೆ, ತತ್ವಪದಗಳು, ಲಾವಣಿ, ಭೂಲಾಯಿ, ಜೋಗುಳ ಹಾಗೂ ಸೋಬಾನೆ ಮುಂತಾದ ಜಾನಪದ ಗಾಯನ ಕಲೆಯಲ್ಲಿ ಅನುಭವ ನಿಷ್ಣಾತರು. ಆಕಾಶವಾಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಾಹಿತ್ಯ ಪರಿಷತ್ ಹಾಗೂ ಕರ್ನಾಟಕದಾದ್ಯಂತ ಇರುವ ಹಲವಾರು ವಿವಿಧ ಕನ್ನಡ ಸಂಸ್ಥೆಗಳ ಆಶ್ರಯದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತಮ್ಮ ಕಲೆಯನ್ನು ಯಶಸ್ವಿಯಾಗಿ ಪ್ರದರ್ಶಿಸಿ ಜನಮನ್ನಣೆಯನ್ನು ಪಡೆದಿದ್ದಾರೆ. ಜಾನಪದ ಹಾಡುಗಳ ಸವಿಯನ್ನು ಜನಗಳಿಗೆ ಹಂಚುತ್ತಾ ತಮ್ಮ ಜೀವನ ತೂಗಿಸುತ್ತಿದ್ದಾರೆ. ಜಾನಪದ ಹಾಡುಗಳನ್ನು ಸಶ್ರಾವ್ಯವಾಗಿ ಹಾಡುವ ಕೆಲವೇ ಮಂದಿ ಹಿರಿಯರಲ್ಲಿ ಇವರು ಒಬ್ಬರು. ಇವರ ಗಾಯನ ಅನುಭವ ಜಾನಪದ ಹಾಡುಗಳ ಹೊಸ ಗಾಯಕರುಗಳಿಗೆ ಉತ್ಸಾಹ ಉತ್ತೇಜನವನ್ನು ತಂದುಕೊಡುತ್ತದೆ. ಇಂತಹ ಜಾನಪದ ಗಾಯಕರಿಂದ ಕರ್ನಾಟಕ ಜಾನಪದ ಹಾಡುಗಳ ಗಾಯನ ಕ್ಷೇತ್ರ ಶ್ರೀಮಂತವಾಗಿದೆ. *(ಜಿ.ಆರ್.ಟಿ.)*

ಸಂತಪುರ: ಆಧ್ಯಾತ್ಮಿಕ ಸ್ಥಳ. ಬೀದರಿನಿಂದ 30 ಕಿ.ಮೀ. ದೂರದಲ್ಲಿ ಔರಾದ ತಾಲ್ಲೂಕಿನಿಂದ 11 ಕಿ.ಮೀ. ಅಂತರದಲ್ಲಿದೆ. ಸಂತಪೂರ ಸಂತರ ಊರಿರಬೇಕು. ಆ ಕಾರಣದಿಂದ ಇದಕ್ಕೆ ಸಂತಪೂರ ಎಂಬ ಹೆಸರು ಬಂದಿರಬೇಕು ಎಂದು ಊಹಿಸಲಾಗಿದೆ. ಇಲ್ಲಿ ಪುರಾತನ ಮಹಾದೇವ ದೇವಾಲಯವಿದೆ. 1950ರ ದಶಕದಲ್ಲಿ ಚಂದ್ರಶೆಟ್ಟಿ ಎಂಬ ರೈತ ಆಗಿಹೋಗಿದ್ದಾನೆ. ತನ್ನದೆನ್ನುವ ಸಮಸ್ತ ಆಸ್ತಿಯನ್ನು ಸರ್ಕಾರಕ್ಕೆ ಉದಾರವಾಗಿ ನೀಡಿದ್ದನೆಂಬುದು ತಿಳಿದು ಬರುತ್ತದೆ.

ಅಕ್ಕ ತಂಗಿಯರದ್ದೆಂದು ಹೇಳುವ ಎರಡು ಹಳೆಯ ಒಡೆದ ವಿಗ್ರಹಗಳು ಇಲ್ಲಿದ್ದು ಅವುಗಳಲ್ಲಿ ಒಂದು ಮಾತ್ರ ಉಳಿದು ಕೊಂಡಿದೆ. ಇತ್ತೀಚಿಗೆ ಕಟ್ಟಲಾದ ಭವ್ಯ ಅನುಭವ ಮಂಟಪವು ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. *(ಜೆ.ಟಿ.)*

ಸಂತೆ: ಗ್ರಾಮೀಣ ವ್ಯಾಪಾರದ ಕೇಂದ್ರ. ನಿಗದಿತ ವಾರದಂದು, ಸಾಮಾನ್ಯವಾಗಿ ಹನ್ನೊಂದು ಗಂಟೆಗೆ ಸಂತೆ ಸೇರಲನುವಾಗಿ ಆರು ಗಂಟೆಯ ವೇಳೆಗೆ ಬಯಲಾಗುತ್ತದೆ. ಸಂತೆ ಸೇರುವ ಊರು ಸಾಮಾನ್ಯವಾಗಿ, ನೆರೆ ಹೊರೆಯ ಹತ್ತಾರು ಹಳ್ಳಿಗಳಿಗಿಂತ ದೊಡ್ಡದಾಗಿರುತ್ತದೆ. ಸುತ್ತಲಿನ ಐದಾರು ಮೈಲು ವ್ಯಾಪ್ತಿಯ ಹಳ್ಳಿಗರೆಲ್ಲ ಸಂತೆಗೆ ಬರುತ್ತಾರೆ. ಹೀಗೆ ಬೇರೆ ಬೇರೆ ದೊಡ್ಡ ಊರುಗಳಲ್ಲಿ ಬೇರೆ ಬೇರೆ ನಿಗದಿತ ದಿನದಂದು ಸಂತೆ ಸೇರುತ್ತದೆ.

ಸಂತೆಯ ವ್ಯಾಪ್ತಿಯ ಹಳ್ಳಿಗರು ತಾವು ಬೆಳೆದ ಕಾಳು ಕಡಿ, ಕಾಯಿಪಲ್ಲೆ ಮೊದಲಾದ ಹುಟ್ಟುವಳಿಯನ್ನು ಮಾರಾಟಕ್ಕೆ ಹೊತ್ತು ತರುತ್ತಾರೆ ಅದರಂತೆ ದಿನನಿತ್ಯದ ಆವಶ್ಯಕತೆಗಳಾದ ಗಡಿಗೆ ಮಡಕೆ-ಹಗ್ಗ ಕಣ್ಣಿ ಮೊದಲಾದ ಗುಡಿ ಕೈಗಾರಿಕೆಯ ವಸ್ತುಗಳನ್ನು ಮಾರಾಟಕ್ಕೆ ತರುತ್ತಾರೆ. ಅಲ್ಲದೆ ಅಲೆಮಾರಿ ವ್ಯಾಪಾರಿಗಳೂ ಸೂಜಿಯಿಂದಾದಿಯಾಗಿ ಕನ್ನಡಿ ಕರಿಮಣಿಯಂಥ ಜನಾಭಿ ರುಚಿಯ ವಸ್ತುಗಳ ಮಾರಾಟಕ್ಕೂ ಸಂತೆಗೆ ಬರುತ್ತಾ ಇದ್ದರು. ಅಂಥ ಜೋಗೇರ ಜನಾಂಗವೇ ಇತ್ತು. ಅಲ್ಲದೆ ಕೋಳಿ, ಕುರಿ, ದನಗಳೂ ನಿಗದಿತ ಜಾಗದಲ್ಲಿ ಸಂತೆಗೆ ಸೇರುತ್ತಿದ್ದವು.

ಸಂತೆಗೆ ಬಂದವರೆಲ್ಲರೂ ಬಹುತೇಕ ವ್ಯಾಪಾರಿಗಳೂ, ಗ್ರಾಹಕರೂ ಎರಡೂ ಆಗಿರುವುದು, ಸಂತೆಯ ವೈಶಿಷ್ಟ್ಯ. ತಾವು ತಂದ ವಸ್ತುವನ್ನು ಮಾರಿ, ಅದರಿಂದ ಬಂದ ಹಣದಿಂದ ತನಗೆ ಬೇಕಾದ ವಸ್ತುವನ್ನು ಅವರು ಖರೀದಿಸುತ್ತಿದ್ದರು. ತಮ್ಮ ಮಾಲಿಗೆ ತಾವೇ ದರ ನಿಗದಿ ಪಡಿಸುತ್ತಿದ್ದರು. ಹಳ್ಳಿಗರು ತಾವು ತಂದ ಮಾಲನ್ನು ಮಾರಿ ಬಂದ ಹಣದಿಂದ ಎಣ್ಣೆ, ಉಪ್ಪು, ಬೆಲ್ಲ ಮೊದಲಾದ ದಿನನಿತ್ಯ ಬೇಕಾಗುವ, ವಾರಕ್ಕಾಗುವಷ್ಟು ವಸ್ತುಗಳನ್ನು ಕೊಳ್ಳುತ್ತಿದ್ದರು. ಒಂದು ಸಂತೆ ಆ ವ್ಯಾಪ್ತಿಯ ಪ್ರದೇಶದ ಹುಟ್ಟುವಳಿ ಜನಾಭಿರುಚಿ, ಜನರ ಆರ್ಥಿಕ ಸ್ಥಿತಿಗತಿ ಸಾಂಸ್ಕೃತಿಕ ಮಟ್ಟಕ್ಕೆ ಹಿಡಿದ ಕನ್ನಡಿಯಂತಿರುತ್ತಿತ್ತು.

ಜಾತಿ–ಧರ್ಮ ಮುಟ್ಟು–ತಟ್ಟು ಮೇಲು–ಕೀಳೆನ್ನದೆ ಸರ್ವಜನಾಂಗದ ಸಂಗಮ ಸ್ಥಾನವಾಗಿರುವುದು ಸಂತೆಯ ಇನ್ನೊಂದು ವೈಶಿಷ್ಟ್ಯ. ಆದರೂ ಸಂತೆಯಿಂದ ಮನೆಗೆ ಬಂದವರನ್ನು ನೀರು ಸಿಂಪಡಿಸಿ ಶುದ್ಧೀಕರಿಸಿಯೇ ಒಳಗೆ ಸೇರಿಸುತ್ತಿದ್ದರು. ಪರ ಹಳ್ಳಿಯ ಆಪ್ತರನ್ನು ಕಂಡು ಮಾತಾಡಿಸಲು ಇದೊಂದು ಅವಕಾಶವೂ ಆಗಿರುತ್ತಿತ್ತು.

ಸಂತೆ–ಅವ್ಯವಸ್ಥೆಯ ಆಗರ. ಅಲ್ಲಿ ಕಿಸೆ ಕತ್ತರಿಸುವವರು, ಮೋಸ ಮಾಡುವವರು ಸಾಕಷ್ಟು ಜನ. ವಾದ–ವಿವಾದ, ಅಸಭ್ಯ ಭಾಷೆ, ಜಗಳ ಯಾರೂ ಯಾವ ಕಡೆಗೂ ಗಮನಗೊಡದೇ ತಮ್ಮ ತಮ್ಮ ವ್ಯಾಪಾರದಲ್ಲಿ ಮಗ್ನ ಮಾತು ಬಹಳ ಅರ್ಥವಿಲ್ಲ. ಗದ್ದಲಪುರ ಅಂತೆಯೇ, ಅಕ್ಕ ಮಹಾದೇವಿ 'ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯ' ಎಂದು ಹೇಳಿದ್ದು, 'ಸಂತಿಕಿತ ಮದಲ ಗಂಟೇ ಚೌಡೇರ ನೆರದರಂತಃ' ಎನ್ನುವ ಗಾದೆ ಸಂತೆಯಲ್ಲಿಯ ಕಳ್ಳತನ ಸುಳ್ಳು ಮೋಸವನ್ನೇ ಸಾರುತ್ತದೆ. ಅಂತಕ ಅಂತ ಕೂಡಿದರ ಸಂತಿ ಅಗತ್ಯೆತಿ' ಹೌದು ಕೊಡುವವ ಕೊಳ್ಳುವವ ಪರಸ್ಪರರನ್ನೂ ಮೋಸ ಮಾಡಲೆತ್ನಿಸುವವರೇ ಈರ್ವರೂ ಅಂಥವರೇ.

ಸಂತೆಯಲ್ಲಿ ಶಾಸ್ತ್ರ ಹೇಳಿದಂತೆ ಎನ್ನುವ ಮಾತೊಂದಿದೆ. ಅಲ್ಲಿ ಉಪದೇಶ, ತತ್ವ ಯಾವುದೂ ನಡೆಯುವದಿಲ್ಲ. ಎಲ್ಲ ವ್ಯಾವಹಾರಿಕ ಮನೋಭಾವ, 'ಸಂತೆಯಲ್ಲಿ ಶಿವ ಶಿವ ಅಂದರೆ ಯಾರು ಕೇಳುತ್ತಾರೆ, ಎಲ್ಲರ ಚಿತ್ತ ವ್ಯಾಪಾರದಲ್ಲಿ! ಸಂಸಾರವೆಂಬುದು ನಾಕ ದಿನದ ಸಂತಿ' ಎಂದು ಆಧ್ಯಾತ್ಮವಾದಿಗಳು ಹೇಳಿದರೆ, 'ಸಂಸಾರವೆಂಬು ಸಂತಿಯೊಳಗೆ ಚಿಂತಿಯಾತಕೋ ಮನುಜಾ' ಎಂದರು ತತ್ವಪದಕಾರರು. ಹೀಗೆ ಸಂತೆ ಸಂಸಾರದ ಸಂಕೇತವಾಗಿ ಎಲ್ಲರ ಮನದಲ್ಲಿದೆ. ಅಂತೆಯೇ ಸಂತಿ ಸರಿ ಮಾಡಾಂವ ಸಂಸಾರಾನೂ ಸರಿ ಮಾಡತಾನ ಅಂತಾರ ಸಂಸಾರವಂತರು.

ಸಂತೆಯನ್ನು ಕುರಿತು ಹಲವಾರು ಗಾದೆ ಪಡೆನುಡಿಗಳೂ ರೂಢಿಯಲ್ಲಿವೆ. ಅವ್ವ ಸಂತಿ ಮುಗಿಲಾಕ ಬಂದ್ಯೆತಿ 'ಅವ್ವ ಸಂತಿ ಮುಗಿಸಿ ಬಿಟ್ತು' ಸಂತಿ ಚಿಂತಿ ಸನ್ಯಾಸಿಗ್ನೂ ಬಿಟ್ಟಿಲ್ಲ.

ತಮ್ಮ ವಸ್ತುವನ್ನು ಹಳ್ಳಿಗರು ತಲೆಯ ಮೇಲೆ ಹೊತ್ತು ತಂಡ ತಂಡವಾಗಿ, ಸಂಸಾರದ ಸುಖ–ದುಃಖ ಹಂಚಿಕೊಳ್ಳುತ್ತ ಸಂತೆಗೆ ಬಂದು ತಾವು ಕೊಂಡುದನ್ನು ಮತ್ತೆ ತಲೆಯ ಮೇಲೆ ಹೊತ್ತು ಕಳೆಯುವ ಮೊದಲೇ ತಂಡ ತಂಡವಾಗಿ ತಮ್ಮೂರು ಸೇರುತ್ತಿದ್ದರು. ಸಂತೆಗೆ ಹೋದವರು ಏನಾದರೂ ತಿನ್ನಲೋ, ಆಟಕೋ ತರುತ್ತಾರೆಂದು ಮಕ್ಕಳು ಮನೆಯಲ್ಲಿ ಕಾಯುತ್ತಿದ್ದರು. ಸಂಸಾರಕ್ಕೂ ಸಂತೆಗೂ ಸಾಕಷ್ಟು ಸಾಮ್ಯವಿದ್ದುದೇನೂ ಸುಳ್ಳಲ್ಲ.

ಜಾಗತೀಕರಣದ ಪರಿಣಾಮದ 'ಬಿಗ್ ಬಜಾರ'ದಂಥ ಕೇಂದ್ರಗಳು ತಾಲ್ಲೂಕ ಮಟ್ಟದವರೆಗೂ ಹಬ್ಬಿಕೊಂಡಿರುವ ಈ ಕಾಲದಲ್ಲೂ ಹಳ್ಳಿಯ ಸಂತೆಗಳು ಅಂತೆ ಜೀವಂತವಾಗಿವೆ.

(ಎಂ.ಜಿ.ಬಿ.)

ಸಂಬಣ್ಣ ಸಿಂಪಿ: ಪುರವಂತಿಕೆ ಕಲಾವಿದ. ಕಲಬುರ್ಗಿ ಜಿಲ್ಲೆ ಜೇವರಗಿ ತಾಲ್ಲೂಕಿನ ಹಳ್ಳಿ ನೆಲೋಗಿ ಮಹದೇವಪ್ಪ ಸಿಂಪಿಯವರ ಮಗನಾಗಿ ಜನಸಿದರು. ತಂದೆಯಿಂದಲೇ, ಜನಪದಕಲೆ, ಸಾಹಿತ್ಯ, ಕುಣಿತ, ಇವುಗಳಿಗೆ ಮಾರು ಹೋದ ವರು. ತಂದೆಯವರೇ ಗುರು ವಾಗಿ ಪರಿಗಣಿಸಿದ ಇವರು ಪುರವಂತಿಕೆಯಲ್ಲೇ ಮೈ ಮರೆದು ಮುಂದುವರಿ ದವರು. ಎಪ್ಪತ್ತರ ಹರಯದಲ್ಲಿ ಇವರು "ಜಾನಪದ ಮತ್ತು ಯಕ್ಷಗಾನ ಅಕಾಡಮಿ ಪ್ರಶಸ್ತಿ" ಯನ್ನು ಪಡೆದಿದ್ದಾರೆ. (1999) ಇದೀಗ 2010 ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಲಭಿಸಿದೆ.



ರೈತ ಕುಟುಂಬದಲ್ಲಿ ಜನಿಸಿದ ಸಂಬಣ್ಣ ಬಾಲ್ಯದಲ್ಲಿ ಎತ್ತುಗಳನ್ನು ಮೇಯಿಸಲೆಂದು ಕೃಷ್ಣಾನದಿಗೆ ಹೋದಾಗ ಮೊಸಳೆಯ ಹಿಡಿತಕ್ಕೆ ಸಿಕ್ಕರೂ, ಎದೆಗುಂದದೆ ಹೋರಾಡಿ ಬಿಡಿಸಿಕೊಂಡು ಬಂದವರು. ಪುನರ್ಜನ್ಮ ಪಡೆದ ಇವರು ತಂದೆಯ ಮಾರ್ಗದರ್ಶನದಲ್ಲಿ ಪುರವಂತಿಕೆ ವೇಷ ಹಾಕುವದನ್ನೇ ವೃತ್ತಿ ಮಾಡಿಕೊಂಡು ಗುಗ್ಗುಳ ಹೊತ್ತು ಕುಣಿಯುವ ಕಲೆಯಲ್ಲಿ ಪಳಗುತ್ತ ಸಾಗಿದರು.

ಇವರ ಮುಖ್ಯ ಪಾರಂಪರಿಕ ಕಲೆ, ಒಡಪು ಹೇಳುವದು, ಕುತನಿ ಬಟ್ಟೆಯ ಚೂಡಿದಾರ, ಕೊರಳಲ್ಲಿ ಕಂಠಿ, ರುದ್ರಾಕ್ಷಿ ಮಾಲೆ, ಸೊಂಟಕ್ಕೆ ಮುಖ ತಲೆಗೆ ಪಟಕ ಸುತ್ತಿ, ಕೈಯಲ್ಲಿ ಖಡ್ಗ ಮತ್ತಿತರ ಅಸ್ತ್ರಗಳನ್ನು ಹಿಡಿದು, ಸಾಕ್ಷಾತ್ ವೀರಭದ್ರನಂತೆ ವೀರಾವೇಶದಲ್ಲಿ ಇವರು ಉಚ್ಚರಿಸುವ ಒಡಬುಗಳು ಪ್ರೇಕ್ಷಕರನ್ನು ಮೈ ನವಿರೇಳಿಸುತ್ತವೆ. ಶರಣರ, ದಾಸರ, ಅನುಭಾವಿಗಳ ಸರಳ ಮತ್ತು ಆಧ್ಯಾತ್ಮಿಕ ಪದಗಳನ್ನು ಒಡಬುಗಳನ್ನಾಗಿಸಿ, ಸಂಬಾಳ ವಾದ್ಯಗಳೊಂದಿಗೆ ತಮ್ಮ ವಿಶೇಷ ಕಂಠ ಸಿರಿಯಲ್ಲಿ ಹಾಡುವ ಇವರ ಈ ಕಲೆ ಕರ್ನಾಟಕದಾದ್ಯಂತ ಚಿರಪರಿಚಿತರನ್ನಾಗಿಸಿದೆ. 120ಕ್ಕಿಂತಲೂ ಹೆಚ್ಚು ಒಡಬುಗಳನ್ನು ಮಂತ್ರ ಪಠಿಸಿದಂತೆ ಹೇಳಬಲ್ಲರು.

(ಆರ್.ಕೆ.)

ಸಗರ: ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಂತಹ ಗ್ರಾಮ. ಯಾದಗೀರ ಜಿಲ್ಲೆ ಶಹಾಪುರ ತಾಲ್ಲೂಕಿನ ಪರಿಸರದಲ್ಲಿ ಬರುವ ಎಲ್ಲಾ ಗ್ರಾಮಗಳ ಸಾಂಸ್ಕೃತಿಕ ಲಕ್ಷಣಗಳು ಒಂದೇ ರೀತಿಯಾಗಿ ಕಂಡು ಬರುತ್ತವೆ. ಈ ಗ್ರಾಮದಲ್ಲಿ ಪರ್ಶಿಯನ್ ಶಾಸನಗಳು, ಸ್ಮಾರಕಗಳು, ಸಪ್ತ ಮಾತೃಕೆಯ ಶಿಲ್ಪ, ಕಲ್ಯಾಣ ಚಾಲುಕ್ಯರಿಗೆ ಸಂಬಂಧಿಸಿದಂತಹ ಹಲವಾರು ಕುರುಹುಗಳು ಮತ್ತು ಬಹಮನಿ ಸುಲ್ತಾನರ ಆಡಳಿತಕ್ಕೆ ಸಂಬಂಧಿಸಿದಂತಹ ಜಾಮೀಯಾ ಮಸೀದಿ ಹಾಗೂ ಶಾಸನಗಳು ದೊರೆತಿವೆ.

ಈ ಗ್ರಾಮದಿಂದ ಎರಡು ಕಿ.ಮೀ. ದೂರದಲ್ಲಿರುವ ಸೂಫಿ ಶರಮಸ್ತರ ದರ್ಗಾ ಹಿಂದೂ-ಮುಸ್ಲಿಂರ ಭಾವೈಕ್ಯತೆಗೆ ಹೆಸರುವಾಸಿಯಾಗಿದೆ. ಸೂಫಿ ಶರಮಸ್ತರ ಸಂತನ ಸಮಾಧಿಯಾಗಿರುವ ಈ ದರ್ಗಾ ಈ ಭಾಗದ ಹಿಂದೂ-ಮುಸ್ಲಿಂರ ಆರಾಧ್ಯ ದೈವವಾಗಿ ಮಾರ್ಪಟ್ಟಿದೆ. ಸಗರ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿನ ಹಿಂದೂ ಕುಟುಂಬದಲ್ಲಿ ಸೋಪಣ್ಣ, ಸೋಫಿ ಸಾ ಹೆಸರುಗಳು ಸಾಮಾನ್ಯವಾಗಿವೆ. ಈ ಗ್ರಾಮದಲ್ಲಿಯೂ ಸಹ ಮಾರೆಮ್ಮ, ದ್ಯಾಮವ್ವ, ಚೌಡಮ್ಮ, ಕೆಂಚಮ್ಮ, ಪಾಲ್ಕಮ್ಮ, ಬೀರಲಿಂಗೇಶ್ವರ, ತಿಂತಿಣಿ ಮೌನೇಶ್ವರ, 12ನೆಯ ಶತಮಾನದ ಶರಣ ಸಗರದ ಬೊಮ್ಮಯ್ಯ, ಎಲ್ಲಮ್ಮ ಮುಂತಾದ ದೇವ ದೇವತೆಗಳನ್ನು ಎಲ್ಲರೂ ಕೂಡಿ ಸಾಮೂಹಿಕವಾಗಿ ಆರಾಧಿಸುತ್ತಾರೆ. ಸಗರ ಗ್ರಾಮದ ಹಾಗೂ ಸಗರ ನಾಡಿನ ಬಹು ದೊಡ್ಡ ಗ್ರಾಮದೇವತೆಯಾಗಿ ಎಲ್ಲಮ್ಮ ಕಂಗೊಳಿಸಿದ್ದಾಳೆ. ಮಧ್ಯಮ ವರ್ಗದವರು, ತಳ ಸಮಾಜದವರು, ವೀರಶೈವರು ಅತಿ ಹೆಚ್ಚು ಈ ದೇವತೆಗೆ ಹರಕೆಯನ್ನು ಮುಟ್ಟಿಸುತ್ತಾರೆ. ವರ್ಷಕ್ಕೊಮ್ಮೆ ನಡೆಯುವ ಸಗರ ಎಲ್ಲಮ್ಮನ ಜಾತ್ರೆಯಲ್ಲಿ ಉಚ್ಚಿಗುಡುವುದು, ಕುರಿ ಅಥವಾ ಹೋತಗಳನ್ನು ಬಲಿ ಕೊಡುವುದು ಮತ್ತು ಜೋಗ ಜೋಗತಿಯರ ಆಚರಣೆ ಇಲ್ಲಿ ಸಾಮಾನ್ಯವಾಗಿ ಕಾಣಬಹುದಾಗಿದೆ. ಎಲ್ಲಮ್ಮನ ಹೆಸರಿನಲ್ಲಿ ಪಾದ ಕಟ್ಟಿಕೊಳ್ಳುವ ಸಂಸ್ಕೃತಿ ಇಲ್ಲಿ ಇಂದಿಗೂ ಕೂಡ ಕಾಣಬಹುದಾಗಿದೆ. ಎಲ್ಲಮ್ಮನ ಪಾದ ಎಂದು ನಂಬಿರುವ ಎರಡು ಚರ್ಮದ ಚಿಕ್ಕ ಪಾದಗಳನ್ನು ತಾಳಿಯ ಪಕ್ಕದಲ್ಲಿ ಕಟ್ಟಿಕೊಳ್ಳುತ್ತಾರೆ. ಈ ಚರ್ಮದ ಪಾದಗಳಲ್ಲಿ ಎಲ್ಲಮ್ಮನ ಚಿತ್ರವಿರುತ್ತದೆ. ಊರಿನಲ್ಲಿ ಸತ್ತ ಸುದ್ದಿ ಕೇಳಿದರೆ ಎಲ್ಲಮ್ಮನ ಪಾದ ಧರಿಸಿದವರು ಶವ ಸಂಸ್ಕಾರದ ಊಟ ಮಾಡಬಾರದೆಂಬ ನಿಯಮವಿದೆ. ಈ ಪಾದವು ಮನೆಯ ಹಿರಿ ಸೊಸೆ ಅಥವಾ ಅತ್ತೆ ಕಟ್ಟಿಕೊಂಡಿರುತ್ತಾರೆ. ಅತ್ತೆ ತೀರಿಕೊಂಡರೆ ಈ ಪಾದವು ಮನೆಯ ಹಿರಿಯ ಸೊಸೆ ಕಟ್ಟಿಕೊಳ್ಳಬೇಕಾಗುತ್ತದೆ.

ಸಗರ ಗ್ರಾಮದಲ್ಲಿ ಪ್ರತಿ ವರ್ಷ ಹೋಳಿ ಹುಣ್ಣಿಮೆಯ ಹಬ್ಬದಲ್ಲಿ ವಿವಿಧ ರೀತಿಯ ಉಡುಗೆಗಳನ್ನು ತೊಟ್ಟು ಮುಖಕ್ಕೆ ಬಣ್ಣವನ್ನು ಹಚ್ಚಿಕೊಂಡು ಪುರುಷರಿಗೆ ಸೀರೆಯನ್ನು ತೊಡಿಸಿ ಆಡುತ್ತಾ ಕುಣಿಯುತ್ತಾ ಊರೆಲ್ಲಾ ತಿರಿಗಾಡುವರು, ಇದಕ್ಕೆ ಹೋಳಿ ಹುಣ್ಣಿ ಸೋಗು ಎಂದು ಕರೆಯುತ್ತಾರೆ. ಹೈದ್ರಾಬಾದ ಕರ್ನಾಟಕದ ವಿಮೋಚನೆಯ ಹೋರಾಟಗಾರರಲ್ಲಿ ಪ್ರಮುಖರಾದ ಅಚ್ಚಪ್ಪಗೌಡ ಸುಬೇದಾರರು.

(ಎಸ್.ಎಂ.ಡಿ.)

ಸಣ್ಣಾಟ: ಜನಪದ ರಂಗಭೂಮಿಯ ಒಂದು ಪ್ರಕಾರ. ಬಯಲಾಟ, ದೊಡ್ಡಾಟ, ಸಣ್ಣಾಟ- ಈ ಪದಗಳಲ್ಲಿ 'ಆಟ' ಎಂಬುದು ತಪ್ಪದೇ ಉಳಿದುಕೊಂಡು ಬಂದಿದೆ. ಹಳ್ಳಿಗಳಲ್ಲಿ ಈಗಲೂ ಎಲ್ಲ ಜಾನಪದ ದೃಶ್ಯಪ್ರಕಾರಗಳಿಗೆ 'ಆಟ' ವೆಂದೇ ಕರೆಯುತ್ತಾರೆ. ಹೀಗಾಗಿ ಕನ್ನಡಿಗರು ಜಾನಪದ ದೃಶ್ಯಕಲೆಯನ್ನು ಮೊದಲ ಘಟ್ಟದಲ್ಲಿ 'ಆಟ' ವೆಂದೇ ಕರೆಯುತ್ತಿರಬೇಕೆನಿಸುತ್ತದೆ.



ಸಣ್ಣಾಟದ ದೃಶ್ಯ

ಹಗಲು ರಾತ್ರಿ, ಹವ್ಯಾಸಿ-ವೃತ್ತಿ, ಬೀದಿ-ವೇದಿಕೆ ಇತ್ಯಾದಿಗಳ ಹಿನ್ನೆಲೆಯಲ್ಲಿ ಜನಪದರಿಂದ ಪ್ರದರ್ಶಿಸಲ್ಪಡುತ್ತಲಿದ್ದ ರಂಗಭೂಮಿಗೆ ಸಮಾಂತರವಾಗಿ ಕಾಲಗತಿಸಿದಂತೆ ಶಿಷ್ಟಸಮಾಜದ ಆಚ್ಛಾದಿತ (ಸಂಸ್ಕೃತ) ರಂಗಭೂಮಿಯೊಂದು ಹೊರಗಿನಿಂದ ಬಂದಿತು. ಅಂದಿನಿಂದ ಆಚ್ಛಾದಿತ ರಂಗಭೂಮಿಯಿಂದ ಬೇರ್ಪಡಿಸಲು ಈ ಜಾನಪದ ಅನಾಚ್ಛಾದಿತ 'ಆಟ'ವನ್ನು 'ಬಯಲಾಟ' ಎಂಬ ಹೆಸರಿನಿಂದ ಕರೆಯತೊಡಗಿದರೆಂದು ತೋರುತ್ತದೆ. ಆದುದರಿಂದ ಈ ಕಾಲಾವಧಿಯಲ್ಲಿ ಜಾನಪದ ರಂಗಭೂಮಿ, ಮಗ್ಗುಲಿಗೆ ಬಂದುನಿಂತ ಶಿಷ್ಟಪದ ರಂಗ ಭೂಮಿಯಿಂದ ತನ್ನನ್ನು ಪ್ರತ್ಯೇಕಿಸಿಕೊಳ್ಳುವ ಅನುಕೂಲತೆಗಾಗಿ ಹೆಸರನ್ನು ಮಾತ್ರ ಬದಲಿಸಿಕೊಂಡಿತೇ ಹೊರತು ರೂಪ ಬದಲಿಸಿಕೊಂಡು ಮುನ್ನಡೆಯಲಿಲ್ಲವೆಂದು ಹೇಳಬೇಕಾಗುತ್ತದೆ. ಹೀಗೆ ಏಕಕಾಲಕ್ಕೆ ಸಂಭವಿಸಿದ ಶಿಷ್ಟ ರೂಪಕದ ಆಗಮನ, ಜಾನಪದ ರೂಪಕದ ನಾಮಾಂತರ ಘಟನೆಗಳು ನಮ್ಮ ದೃಶ್ಯಕಲೆಯ ಇತಿಹಾಸದಲ್ಲಿ ಎರಡನೆಯ ಘಟ್ಟವೆನಿಸುತ್ತದೆ.

ಹೀಗೆ 'ಬಯಲಾಟ' ವೆಂಬ ಹೊಸ ಹೆಸರನ್ನು ಹೊತ್ತು ಮುನ್ನಡೆದ ಜಾನಪದ ದೃಶ್ಯಕಲೆಯ ಮಗ್ಗುಲಲ್ಲಿ, ದಿನಗಳೆದಂತೆ ಹೊಸ ಸಣ್ಣ ಪ್ರಕಾರವೊಂದು ಕಲವಲೊಡೆದು ನಿಂತಾಗ, ಇವೆರಡನ್ನೂ ವಿಂಗಡಿಸಿ ಕರೆಯುವ ಸೌಕರ್ಯಕ್ಕೋಸ್ಕರ ಹಳೆಯ ಬಯಲಾಟವನ್ನು 'ದೊಡ್ಡಾಟ'ವೆಂದೂ, ಹೊಸ ಬಯಲಾಟವನ್ನು 'ಸಣ್ಣಾಟ'ವೆಂದೂ ಹೆಸರಿಸಿದರು. ಇದು ದೃಶ್ಯಕಲೆಯ ಇತಿಹಾಸದಲ್ಲಿ ಮೂರನೆಯ ಘಟ್ಟವಾಗಿದೆ. ಒಟ್ಟಿನಲ್ಲಿ, ಎರಡನೆಯ ಘಟ್ಟಕ್ಕೆ ಮಗ್ಗುಲಿಗೆ ಬಂದುನಿಂತ ಶಿಷ್ಟಪದ ರಂಗಭೂಮಿ ಕಾರಣವಾದರೆ, ಮೂರನೆಯ ಘಟ್ಟಕ್ಕೆ ಬಯಲಾಟದಿಂದ ಕವಲೊಡೆದ ಸಣ್ಣಾಟವೆಂಬ ಜಾನಪದ ರಂಗಭೂಮಿ ಕಾರಣವೆಂದು ಹೇಳಬಹುದು.

ಕಾಲ ವಿಶಿಷ್ಟವಾದ 'ಅವಸ್ಥಾಭೇಧ' ಶಿಷ್ಟಪದರ ಮೇಲೆ, ದೇಶವಿಶಿಷ್ಟವಾದ 'ಪ್ರಾಂತ್ಯಭೇದ' ಜಾನಪದರ ಮೇಲೆ ಹೆಚ್ಚು ಪ್ರಭಾವ ಬೀರುತ್ತವೆ. ಹೀಗಾಗಿ ಶಿಷ್ಟಪದಕ್ಕಿಂತ ಜಾನಪದದಲ್ಲಿ ಬಹಳಷ್ಟು ಪ್ರಾಂತ್ಯಭೇದಗಳು ಮೈದಾಳುತ್ತವೆ. ಈ ಮೇರೆಗೆ ಕನ್ನಡ ನಾಡಿನ ಪೂರ್ವಭಾಗದಲ್ಲಿ 'ಮೂಡಲಪಾಯ', ಪಶ್ಚಿಮ

ಭಾಗದಲ್ಲಿ 'ಪಡುವಲ ಪಾಯ' ಎಂಬ ಬಯಲಾಟ ಪ್ರಾಂತ್ಯಭೇದಗಳನ್ನು ಸ್ಫುಟವಾಗಿ ಗುರುತಿಸಬಹುದಾಗಿದೆ. ಇವುಗಳಲ್ಲಿ ಪಶ್ಚಿಮ ಕರ್ನಾಟಕದ ಪಡುವಲ ಪಾಯ ಬಯಲಾಟ ಋತುಮಾನ ಕಾರಣವಾಗಿ ಯಕ್ಷಗಾನ, ಪ್ರಸಂಗ ಎಂದು ಎರಡು ಹೋಳಾಗಿ ನಿಂತಿದೆ. ಯಕ್ಷಗಾನ ಬಡಗು ತಿಟ್ಟು ತೆಂಕ ತಿಟ್ಟು ಎಂಬ ಪ್ರಭೇದಗಳನ್ನು ಸೃಷ್ಟಿಸಿಕೊಂಡಿದ್ದು ಇದಕ್ಕೆ ಭೌಗೋಲಿಕ ವ್ಯತ್ಯಾಸ, ನೆರೆಯ ಪ್ರಾಂತ್ಯದ ಪ್ರಭಾವಗಳು ಕಾರಣವಾಗಿವೆ. ಇದೇ ರೀತಿ ಬಯಲು ಸೀಮೆಯ ಬಯಲಾಟವನ್ನು ಉತ್ತರ ಕರ್ನಾಟಕ, ಎಂದು ವಿಂಗಡಿಸಬಹುದೇನೋ? ಬೇರೊಂದು ಕಾರಣದಿಂದಾಗಿ ಪೂರ್ವ ಕರ್ನಾಟಕದ ಮೂಡಲಪಾಯ ಬಯಲಾಟ ಸಣ್ಣಾಟ, ದೊಡ್ಡಾಟವೆಂಬ ಎರಡು ಪ್ರಕಾರಗಳಾಗಿ ನಿಂತಿತೆಂದು ತೋರುತ್ತದೆ. ಜೀವನದೃಷ್ಟಿ ಮತ್ತು ವ್ಯಾಪಾರಗಳಲ್ಲಿಯ ವ್ಯತ್ಯಾಸದಿಂದಾಗಿ ಭಾಷೆ ಮತ್ತು ಸಾಹಿತ್ಯಗಳಲ್ಲಿ ಅವಸ್ಥಾ ಭೇದ, ಪ್ರಾಂತ್ಯ ಭೇದಗಳು ತಲೆದೋರುತ್ತವೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಒಳಗೆ ಜನಜೀವನದಲ್ಲಿ ಆಗಾಗ ಸಂಭವಿಸಿದ ತೀವ್ರ ಬದಲಾವಣೆಗಳಿಂದಾಗಿಯೇ ಹೊರಗೆ ಭಾಷೆ ಪೂರ್ವದ ಹಳಗನ್ನಡ ಹಳಗನ್ನಡ–ನಡುಗನ್ನಡ–ಹೊಸಗನ್ನಡವಾಗುತ್ತ ಬಂದಿತು; ಸಾಹಿತ್ಯರೂಪ ಚಂಪು–ವಚನ–ರಗಳೆ–ಷಟ್ಪದಿ–ಭಾವಗೀತೆ–ನವ್ಯಕಾವ್ಯವಾಗುತ್ತ ಬೆಳೆಯಿತು. ಅಂದರೆ ಒಳಗಿನ ಆಶಯ ಹೊರಗಿನ ಆಕೃತಿಗಳು ಅವಿನಾಭಾವ ಸಂಬಂಧವುಳ್ಳವುಗಳಾಗಿದ್ದು, ಅಂತರಂಗದ ಸುಪ್ತ ಪರಿವರ್ತನ ಬಹಿರಂಗದ ಸ್ಪಷ್ಟ ಬದಲಾಣೆಗೆ ದಾರಿ ಮಾಡಿಕೊಡುತ್ತದೆ. ಇದೇ ರೀತಿ ಕನ್ನಡಿಗರ ಜೀವನದಲ್ಲಿ ಸಂಭವಿಸಿದ ಯಾವುದೋ ಒಂದು ಅಂಥ ಬದಲಾವಣೆಯಿಂದಾಗಿ ಜಾನಪದ ದೃಶ್ಯಕಲೆಯಾದ 'ಬಯಲಾಟ'ದಲ್ಲಿಯೂ ಸಣ್ಣಾಟವೆಂಬ ಕವಲು ಕಾಣಿಸಿಕೊಂಡಿರಬೇಕು. ಆ ಬದಲಾವಣೆ ಯಾವುದು? ಈ ಪ್ರಶ್ನೆಗೆ ವಿದ್ವಾಂಸರು ನೀಡಿದ ಉತ್ತರಗಳು ಹೀಗಿವೆ.

"ದೊಡ್ಡಾಟಗಳು ರಂಗಸಜ್ಜಿಕೆ, ವೇಷಭೂಷಣ, ವಾದ್ಯಗಳ ದೃಷ್ಟಿಯಿಂದ ಹೆಚ್ಚು ವೆಚ್ಚದಾಯಕವಾದವುಗಳು... ಆದರೆ ಸಣ್ಣಾಟಗಳಲ್ಲಿ ಇಂಥ ವೆಚ್ಚದ ಆಡಂಬರ ಇರುವುದಿಲ್ಲ... ಹೀಗೆ ಇದು ಬಡವರು ಸಹಜವಾಗಿ ಪ್ರಯೋಗಿಸಬಹುದಾದ ರೂಪಕವಾಗಿದ್ದುದರಿಂದ ಅವರ ಅನುಕೂಲಕ್ಕಾಗಿ ಹುಟ್ಟಿ ಕೊಂಡಿರಬೇಕು. " ಅಲ್ಲದೆ "ಸಣ್ಣಾಟಗಳು ಸಾಮಾಜಿಕ ಹಾಗೂ ನೈತಿಕ ಉದ್ದೇಶಕ್ಕಾಗಿ ಹುಟ್ಟಿದವುಗಳು. ಜಾನಪದ ಜೀವನಕ್ಕೆ ನಿತ್ಯವೂ ಬೇಕಾಗುವ ದೈವಭಕ್ತಿ, ಭೋಗ ತ್ಯಾಗಗಳನ್ನು ಕುರಿತು ಆಡಂಬರ ರಹಿತ ಮಾತು, ಹಾಡುಗಳಲ್ಲಿ ನೀತಿ ಪಾಟವನ್ನೂ ಮನರಂಜನೆಯನ್ನೂ ಒದಗಿಸಲು ಇವು ಹುಟ್ಟಿಕೊಂಡವು."

(ಹೆಂಡಿ)

"ಹಾಡು ಹೇಳುವ ಧಾಟಿ ಭಿನ್ನವಾದಂತೆ ಆಟದ ಪ್ರಕಾರಗಳು ತಲೆದೋರುತ್ತವೆ. ಈ ದೃಷ್ಟಿಯಿಂದ ಕನ್ನಡ ಬಯಲಾಟವನ್ನು ಪರಾಮರ್ಶಿಸಿದರೆ ಮುಖ್ಯವಾಗಿ ಎರಡು ಪ್ರಭೇದಗಳು ಒಡೆದುಕಾಣುತ್ತವೆ. 1. ದೊಡ್ಡಾಟ 2. ಸಣ್ಣಾಟ". ಮತ್ತು "ಬಯಲಾಟ ವೀರ ರೌದ್ರ ಭಾವನೆಗಳನ್ನು ಮಾತ್ರ ವ್ಯಕ್ತಪಡಿಸಿದರೆ ಸಾಲದು. ಮಿಕ್ಕ ರಸಗಳೂ ಅಲ್ಲಿ ಓತಪ್ರೋತವಾಗಿ ಹರಿಯಬೇಕು. ಶೃಂಗಾರ, ಭಕ್ತಿ, ಕರುಣ, ಹಾಸ್ಯ ಮುಂತಾದ ರಸಗಳಿಗೂ ಪ್ರಾಧಾನ್ಯ ತರುವ ಮಾಧ್ಯಮವೊಂದನ್ನು ಹುಡುಕಲು ಅವರು ಯತ್ನಿಸಿದರು. ಅವರ ಪ್ರಯತ್ನದ ಫಲವಾಗಿ ಸಣ್ಣಾಟ ಹುಟ್ಟಿಕೊಂಡಿತು". (ಸುಂಕಾಪುರ)

ಇಲ್ಲಿ ಹೆಂಡಿ, ಸುಂಕಾಪುರ ಅವರ ಒಂದನೆಯ ಅಭಿಪ್ರಾಯಗಳು ದೊಡ್ಡಾಟ, ಸಣ್ಣಾಟಗಳಲ್ಲಿ ತೋರುವ ವೆಚ್ಚ–ಪ್ರಮಾಣ, ಹಾಡಿನ ರೀತಿಗಳನ್ನು ಗಮನಿಸಿ ಹೇಳಿದವುಗಳಾಗಿದ್ದು, ಇವು ಸಣ್ಣಾಟ ಸೃಷ್ಟಿಯ ಮೂಲಭೂತ ಕಾರಣಗಳನ್ನು ಸೂಚಿಸು ವುದಿಲ್ಲ. ಇದೆ ರೀತಿ ಎರಡನೆಯ ಹೇಳಿಕೆಗಳೂ ಸಣ್ಣಾಟ ಸೃಷ್ಟಿಯ ಕಾರಣಗಳಾಗಿರದೆ ಸ್ವರೂಪ ನಿರೂಪಣೆಗಳಾಗಿವೆ. ಏಕೆಂದರೆ ದೈವ ಭಕ್ತಿ, ನೀತಿಪಾಠ, ಮನರಂಜನೆ, ಕರುಣರಸ, ಹಾಸ್ಯರಸಗಳು ಈ ಹಿಂದಿನ ದೊಡ್ಡಾಟದಲ್ಲಿಯೂ ಎಡೆ ಪಡೆದಿದ್ದುವು. ಹೀಗಾಗಿ ಸಣ್ಣಾಟ ಸೃಷ್ಟಿಯ ಪ್ರಬಲ ಕಾರಣ ಯಾವುದೆಂಬ ಪ್ರಶ್ನೆ ಮತ್ತೆ ಉಳಿದುಕೊಳ್ಳುತ್ತದೆ. ಅದು ಮತ್ತಾವುದೂ ಆಗಿರದೆ ಪ್ರಾಚೀನ ಕನ್ನಡ ಶಿಷ್ಟ ಸಾಹಿತ್ಯದ ಬದಲಾವಣೆಗೂ ಕಾರಣವಾದ ವೀರ ಸಂವೇದನೆಗೆ ಪ್ರತಿಯಾಗಿ ತಲೆಯೆತ್ತಿದ 12 ನೆಯ ಶತಮಾನದ ಭಕ್ತಿ ಸಂವೇದನೆಯೇ ಆಗಿದೆ. ಅಂದರೆ ಕನ್ನಡಿಗರು 'ವೀರ'ಕ್ಕೆ ಬದಲು 'ಭಕ್ತಿ' ಯನ್ನು ಒಂದು ಮೌಲ್ಯವೆಂದು ಪರಿಗಣಿಸುತ್ತಲೇ ಶಿಷ್ಟ ಸಾಹಿತ್ಯದಲ್ಲಿ ಚಂಪು ಹಿಂದೆ ಸರಿದು ವಚನ–ರಗಳೆ–ಷಟ್ಪದಿ ಪ್ರಕಾರಗಳು ಮುಂದೆ ಬಂದಂತೆ, ಜಾನಪದ ಸಾಹಿತ್ಯದಲ್ಲಿಯೂ ದೊಡ್ಡಾಟದ ಮಗ್ಗುಲಲ್ಲಿ ಸಣ್ಣಾಟ ಸೃಷ್ಟಿಯ ಸಂಕಲ್ಪ ಅಂದೇ ಅಂಕುರಿಸಿತೆಂದು ಹೇಳ ಬಹುದು. ಆದರೆ ಜಾನಪದದಲ್ಲಿ ಪರಿ ವರ್ತನೆ ಯಾವ ಕಾಲಕ್ಕೂ ತೀರ ನಿಧಾನ. ಹೀಗಾಗಿ ತಾವು ಭಾಕ್ತಿಕ ಬದುಕನ್ನು ಬಾಳುತ್ತಲಿದ್ದರೂ ಪರಂಪರಾ ಪ್ರಿಯರಾದ ಅವರು "ನೆಲೆಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ" ಎಂಬಂತೆ ಆ ಪೂರ್ವದ ವೀರರಸ ಪ್ರಧಾನವಾದ ಬಯಲಾಟವನ್ನೇ ಮುಂದುವರಿಸಿಕೊಂಡು ಬಂದರು. ಇದರಿಂದಾಗಿ ಜೀವನ ರಂಗ ಮತ್ತು ನಾಟಕ ರಂಗಗಳಲ್ಲಿ ಹೊಂದಿಕೆ ತಪ್ಪುತ್ತ ನಡೆದು, ಕೊನೆಗೆ ವೀರರಸ ಪ್ರಧಾನವಾದ ಬಯಲಾಟಗಳ ಜೊತೆಗೆ ಭಕ್ತಿರಸ ಪ್ರಧಾನವಾದ ಬಯಲಾಟ ಗಳನ್ನೂ ಸೃಷ್ಟಿಸುವ ಹಂಬಲ ಹೆಚ್ಚಾಗಿರಬೇಕು. ಕನ್ನಡ ನಾಡಿನಲ್ಲಿ ವೀರ ಜೀವನ ಸುಪ್ತವಾಗಿಯೇ ಪ್ರವಹಿಸಿತು. 16ನೆಯ ಶತಮಾನದ ಸುಮಾರಿಗೆ ವಿಜಯನಗರ ಸಾಮ್ರಾಜ್ಯದ ಪತನದೊಂದಿಗೆ ಕನ್ನಡಿಗರ ಅಖಂಡ ವೀರ ಜೀವನ ತುಂಡುತುಂಡಾಗುವಲ್ಲಿ ಈ ಸುಪ್ತವಾದ ಭಕ್ತಿ ಜಾನಪದ ರಂಗ ಭೂಮಿಯನ್ನು ಪ್ರವೇಶಿಸಲು ಹವಣಿಸಿತು. ದಿನದಿಂದ ದಿನಕ್ಕೆ ಈ ಹವಣಿಕೆ ಒಂದು ಹದಕ್ಕೆ ಬಂದು, 19 ನೆಯ ಶತಮಾನದಲ್ಲಿ ಭಕ್ತಿರಸ ಪ್ರಧಾನವಾದ ಹೊಸಬಗೆಯ ಬಯಲಾಟ ಆವಿರ್ಭವಿಸಿತು. ಇದು ಎಲ್ಲಂದದಲ್ಲಿ ಮೊದಲಿನ ಬಯಲಾಟಕ್ಕಿಂತ ಸಣ್ಣದಾಗಿದ್ದುದರಿಂದ ಇದನ್ನು 'ಸಣ್ಣಾಟ'ವೆಂದು ಕರೆದರು; ಈ ಕಾರಣದಿಂದಲೇ ಮೊದಲಿ ನಿಂದಲೂ ಬಂದ ಬಯಲಾಟವನ್ನು 'ದೊಡ್ಡಾಟ' ವೆಂದು ಕರೆದರು. ಆದುದರಿಂದ ದೊಡ್ಡಾಟ, ಸಣ್ಣಾಟ ಗಳೆಂಬ ಕವಲುಗಳಿಗೆ ಕನ್ನಡಿಗರ ವೀರಜೀವನ ಭಕ್ತಿ ಜೀವನವಾಗಿ ತಿರುವು ಪಡೆದುದೇ ಕಾರಣ ವಾಗಿದೆ. ಸಣ್ಣಾಟಗಳೆಲ್ಲ ಸಾಮಾನ್ಯವಾಗಿ ಭಕ್ತರಾದ ಶರಣರ, ಸಂತರ ಕಥೆಗಳೇ ಆಗಿರುವುದನ್ನು ನಾವು ಇಲ್ಲಿ ನೆನೆಯಬೇಕು.



ಸುರಪುರ ಕೊಳ



ಹುಚ್ಚಪ್ಪಯ್ಯನ ಮಂಟಪ (ಆನೇಗುಂದಿ)

ಸಣ್ಣಾಟ ಪ್ರಕಾರದ ತವರು ಮನೆ ಉತ್ತರ ಕರ್ನಾಟಕವೇ ಹೊರತು ಕರ್ನಾಟಕದ ಇತರ ಪ್ರದೇಶಗಳಲ್ಲ. ಇಂದಿಗೂ ಸಣ್ಣಾಟ ಒಂದು ಸಿದ್ಧಿಯನ್ನು ಮುಟ್ಟಿ ಹಲವು ಪ್ರಕಾರಗಳಲ್ಲಿ ಪ್ರಚಾರದಲ್ಲಿರುವುದು ಉತ್ತರ ಕರ್ನಾಟದಲ್ಲಿ ಮಾತ್ರ. ಇದಕ್ಕೆ ಕಾರಣಗಳು ಹಲವು: 1. ಶರಣರ ಶಿವಭಕ್ತಿಯ ಆಂದೋಲನ, ದಾಸರ ಹರಿಭಕ್ತಿಯ ಆಂದೋಲನಗಳ ಕಾರ್ಯಕ್ಷೇತ್ರ ಉತ್ತರ ಕರ್ನಾಟಕ. ಇಂಥ ಆಳವಾದ ಆಂದೋಲನಗಳು ಕರ್ನಾಟಕದ ಇತರ ಭಾಗಗಳಲ್ಲಿ ಘಟಿಸಲಿಲ್ಲ. 2. ವಿಜಯನಗರ ಪತನದ ತರುವಾಯ ಅಸ್ತಿತ್ವಕ್ಕೆ ಬಂದ ದಕ್ಷಿಣ ಪಶ್ಚಿಮ ಕರ್ನಾಟಕಗಳ ಮೈಸೂರು, ಕೆಳದಿ ಮೊದಲಾದ ಅರಸುಮನೆತನಗಳಿಂದಾಗಿ ವೀರಕ್ಕೆ ಪ್ರಧಾನಸ್ಥಾನ ಲಭಿಸಿ, ಭಕ್ತಿ ಮತ್ತು ಗೌಣಸ್ಥಾನ ಪಡೆಯಿತು. ಮೊದಲೇ ಶರಣರ ದಾಸರ ಭಕ್ತಿಯ ಆಂದೋಲನಗಳಿಂದ ಹದಗೊಂಡಿದ್ದ ಉತ್ತರ ಕರ್ನಾಟಕ ಮಾತ್ರ ವಿಜಯನಗರ ಪತನದ ತರುವಾಯ ಇದ್ದಷ್ಟೂ ವೀರಜೀವನಕ್ಕೆ ಎರೆವಾಗುವಲ್ಲಿ, ಭಕ್ತಿಗೆ ಇನ್ನೂ ಮುಕ್ತವಾಗಿ ಬೆಳೆಯುವ ಅವಕಾಶ ಲಭಿಸಿತು. 3. ಮುಸಲ್ಮಾನರ ಸಾಮಾಜಿಕ ದಬ್ಬಾಳಿಕೆಯಿಂದ ಜರ್ಜರಿತವಾಗಿದ್ದ ಉತ್ತರ ಕರ್ನಾಟಕ ಇಂಗ್ಲೀಷರ ಸಾಂಸ್ಕೃತಿಕ ದಬ್ಬಾಳಿಕೆಯಿಂದ ಇನ್ನೂ ಹತಾಶಗೊಂಡ ಪರಿಸ್ಥಿತಿಯಲ್ಲಿ, ನಿಜಗುಣರ ಅದ್ವೈತ ನೆಮ್ಮದಿಯ ನೆಲೆಯಾಗಿ ಬಂದಿತು. ಜೊತೆಗೆ ಸಿದ್ಧಾರೂಢ, ಶರೀಫಸಾಹೇಬ, ಗರಗದ ಮಡಿವಾಳಪ್ಪ ಮೊದಲಾದ ಅವಧೂತರ ಆಧ್ಯಾತ್ಮದ ಅಫೀಮು ಭಕ್ತಿಗೆ ಇನ್ನೂ ಬಣ್ಣ ತಂದಿತು.


ಈಗ ತಾವು ಬದುಕುವುದು ವೀರಕ್ಕಿಂತ ಮಿಗಿಲಾಗಿ ಭಕ್ತಿ ಮೌಲ್ಯವನ್ನು; ತಮ್ಮ ಮನಸ್ಸನ್ನು ಆಳುವವರು ರಾಜ ಮಹಾರಾಜರಿಗಿಂತ ಮಿಗಿಲಾಗಿ ಶರಣಸಂತರು. ಇದಕ್ಕನುಗುಣವಾಗಿ ಶಿಷ್ಟರು ಸಾಹಿತ್ಯದಲ್ಲಿ ವಚನ ರಗಳೆ ಷಟ್ಪದಿಗಳ– ಮೂಲಕ ಅಪೂರ್ವ ಪರಿವರ್ತನೆಯನ್ನು ಅಸ್ತಿತ್ವಕ್ಕೆ ತಂದಿದ್ದರು. ಪಂಪನಲ್ಲಿ ವೀರಕಾವ್ಯದ ಭಾರತ, ಕುಮಾರವ್ಯಾಸನಲ್ಲಿ ಭಕ್ತಿಕಾವ್ಯವಾಗಿ ಈ ಮೊದಲೇ ಹೊರಬಂದಿದ್ದಿತು. ಜಾನಪದ ಹಾಡುಗಳಲ್ಲಿ ಭಕ್ತಿಗೆ ಪ್ರವೇಶ ಲಭಿಸಿದ್ದಿತು. ಆದರೆ ಭಕ್ತಿ ಬಯಲಾಟದಲ್ಲಿ ಪ್ರವೇಶ ಪಡೆದಿರಲಿಲ್ಲ. ಆಗ ಭಕ್ತಿಯನ್ನು ಪ್ರತಿನಿಧಿಸುವ ಕಥಾ ಶೋಧ, ಪ್ರಕಾರ ಶೋಧ ನಡೆಸಿ, 'ಸಣ್ಣಾಟ'ದ ಹೆಸರಿನಲ್ಲಿ ಜಾನಪದರು ನಾಟಕದ ಕೃತಿ ಮತ್ತು ಪ್ರದರ್ಶನ ರೀತಿಗಳೆರಡರಲ್ಲಿಯೂ ಹೊಸತನ್ನು ಸೃಷ್ಟಿಸಿದರು.

ಈ ಹಿನ್ನೆಲೆಯಲ್ಲಿ ಭಕ್ತಿಪ್ರಧಾನ, ಅಧ್ಯಾತ್ಮ ಪ್ರಧಾನವಾದ ನಿಜಗುಣ ಶಿವಯೋಗಿ, ತಿರುನೀಲಕಂಠ, ಅಲ್ಲಮಪ್ರಭು, ಹೇಮರಡ್ಡಿ ಮಲ್ಲಮ್ಮ, ಭಕ್ತ ಕಬೀರ, ಕನಕದಾಸ ಮೊದಲಾದ ಸಣ್ಣಾಟಗಳು ಒಂದೊಂದಾಗಿ ಹುಟ್ಟಿಕೊಂಡವು; ಜೀವನ ರಂಗ ಮತ್ತು ನಾಟಕ ರಂಗಗಳಲ್ಲಿ ಹೊಂದಿಕೆಯನ್ನು ಕಲ್ಪಿಸಿದವು.

ಆಗ ವೀರರಸಕ್ಕೆ ಅನುಗುಣವಾಗಿ ಆಕಾರಪಡೆದಿದ್ದ 'ಆಂಗಿಕ'ವೆನಿಸುವ ಕುಣಿತ–ಮಣಿತ, 'ವಾಚಕ'ವೆನಿಸುವ ಮಾತು–ಗೀತ, 'ಆಹಾರ್ಯ' ವೆನಿಸುವ ವೇಷ–ಭೂಷಣ, 'ಸಾತ್ವಿಕ'ವೆನಿಸುವ ಹಾವಭಾವಗಳೆಂಬ ಅಭಿನಯದ ನಾಲ್ಕೂ ಘಟಕಗಳು ಈಗ ಭಕ್ತಿರಸಕ್ಕನುಗುಣವಾಗಿ ಆಕಾರ ಪಡೆಯಬೇಕಾಯಿತು. ಅಂದರೆ ವೀರರಸ ಪ್ರಧಾನವಾದ ಆಟಗಳಲ್ಲಿ ಭೀಮ–ರಾವಣ ಮೊದಲಾದವರಿಗೆ ಒಪ್ಪುವ ವೀರೋಚಿತ ಕುಣಿತ–ಮಣಿತಗಳು, ವೇಷ–ಭೂಷಣಗಳು, ಮಾತು–ಗೀತಗಳು, ಹಾವ–ಭಾವಗಳು ಭಕ್ತಿರಸ ಪ್ರಧಾನವಾದ ಈ ಆಟಗಳಲ್ಲಿ ಬಸವಣ್ಣ, ನಿಜಗುಣ ಶಿವಯೋಗಿ, ಕಬೀರ ಮೊದಲಾದವರಿಗೆ ಆಭಾಸವೆನಿಸತೊಡಗಿದವು. ಆದುದರಿಂದ ಈ ನಾಲ್ಕೂ ಘಟಕಗಳು ಆವೇಶದಿಂದ ಸೌಮ್ಯಕ್ಕೆ, ಅಡಂಬರದಿಂದ ಸಹಜಕ್ಕೆ ಇಳಿದವು. ಈಗ ದೊಡ್ಡದಾಗಿದ್ದ ಬಯಲಾಟದ ಎದುರು ಈ ಪ್ರಕಾರ ಎಲ್ಲಂದದಿಂದ ಸಣ್ಣದಾಗಿ ಕಂಡಿತು. ಇವೆರಡನ್ನು ಪ್ರತ್ಯೇಕಿಸುವ ದೃಷ್ಟಿಯಿಂದ ಹಳೆಯ ಬಯಲಾಟವನ್ನು ದೊಡ್ಡಾಟವೆಂದು ಹೊಸ ಬಯಲಾಟವನ್ನು ಸಣ್ಣಾಟವೆಂದು ಕರೆದರು. ಹೀಗಾಗಿ ಜಾನಪದದಲ್ಲಿ ಆಟ–ಬಯಲಾಟ–ದೊಡ್ಡಾಟ ಎಂಬಿವು ಹಳೆಯ ಪ್ರಕಾರವೊಂದರ ನಾಮಾಂತರಗಳು, ಸಣ್ಣಾಟ ಮಾತ್ರ ರೂಪಾಂತರವೆಂದೇ ಹೇಳಬೇಕು.

ಹೀಗೆ ಭಕ್ತಿ ಏಳುನೂರು ವರ್ಷ ತಡೆದು ಜನಪದ ರಂಗಭೂಮಿಯನ್ನು ಏರುವಷ್ಟರಲ್ಲಿ ಅದೇ ಆಗ ಕರ್ನಾಟಕದಲ್ಲಿ ಜಾಗೃತವಾಗಿದ್ದ ಸಾಮಾಜಿಕ ಪ್ರಜ್ಞೆಯೂ ಬೆನ್ನ ಹಿಂದೆಯೇ ರಂಗಭೂಮಿಯನ್ನೇರಿತು. ಇದರಿಂದಾಗಿ ಕೃತಿರಚನಾ ಚಟುವಟಿಕೆ ಇಬ್ಭಾಗಗೊಂಡು, ವೀರರಸ ಪ್ರಧಾನ ದೊಡ್ಡಾಟದಷ್ಟು ಸಂಖ್ಯಾ ಪ್ರಮಾಣದಲ್ಲಿ ಭಕ್ತಿರಸ ಪ್ರಧಾನವಾದ ಸಣ್ಣಾಟಗಳು ಹುಟ್ಟಲಿಲ್ಲ. ಇಷ್ಟರಲ್ಲಿಯೇ ನಾಟಕ, ಸಿನೇಮಾಗಳು ಕರ್ನಾಟಕವನ್ನು ಪ್ರವೇಶಿಸಿದ ಕಾರಣ ಸಣ್ಣಾಟದ ಸಂಖ್ಯೆಯ ಬೆಳವಣಿಗೆ ಇನ್ನೂ ಕುಂಠಿತಗೊಂಡಿತು. ಮೇಲಾಗಿ ಮೂಲತಃ ಇದು ಕರ್ನಾಟಕ ವ್ಯಾಪ್ತಿಯ ಕಲೆಯಾಗದೆ ಉತ್ತರ ಕರ್ನಾಟಕ, ಅದರಲ್ಲಿಯೂ ಬೆಳಗಾಂವ, ಧಾರವಾಡ, ಬಿಜಾಪೂರ ಜಿಲ್ಲೆಗಳ ತ್ರಿವೇಣಿ ಸಂಧಿಯ ಸೀಮಿತ ಕ್ಷೇತ್ರದಲ್ಲಿ ಹುಟ್ಟಿ ಮಡುಗಟ್ಟಿದ್ದಿತು. ಇದೆಲ್ಲವನ್ನು ಲಕ್ಷಿಸಿದರೆ 'ಸಣ್ಣಾಟ' ಸಂಖ್ಯೆ, ಸಾರ್ವತ್ರಿಕತೆ ದೃಷ್ಟಿಯಿಂದಲೂ 'ದೊಡ್ಡಾಟ'ದ ಎದುರು ಸಣ್ಣದೆಂದೇ ಸ್ಪಷ್ಟವಾಗುತ್ತದೆ.

ಇಲ್ಲಿ ಗಮನಿಸಬೇಕಾದ ಇನ್ನೂ ಕೆಲವು ಅಂಶಗಳಿವೆ: ದೊಡ್ಡಾಟ ಪೌರಾಣಿಕ ವಸ್ತುವನ್ನಾಧರಿಸಿದರೆ ಸಣ್ಣಾಟ ಐತಿಹಾಸಿಕ ವಸ್ತುವನ್ನು, ಆಮೇಲೆ ಕ್ವಚಿತ್ತಾಗಿ ಸಾಮಾಜಿಕ ವಸ್ತುವನ್ನು ಆಧರಿಸಿದೆ. ಹೀಗೆ ದೊಡ್ಡಾಟದ ಕವಚವನ್ನು ಇಳಿಸಿಕೊಂಡು ಸಾಮಾಜಿಕತೆಯತ್ತ ಹೆಜ್ಜೆ ಹಾಕಿದ ಇದು ನಾಟಕಕ್ಕೆ ದಾರಿಮಾಡಿ–ಕೊಟ್ಟ ಪ್ರಕಾರವಾಗಿದೆ. ಆದುದರಿಂದ ಸಣ್ಣಾಟ, ಕರ್ನಾಟಕದ ದೃಶ್ಯ ಕಲೆಯ ಇತಿಹಾಸದಲ್ಲಿ ದೊಡ್ಡಾಟ ಮತ್ತು ನಾಟಕಗಳ ಮಧ್ಯ ಸೇತುವೆಯೆನಿಸುತ್ತದೆ. ಇದರ ಇಂಥದೇ ಇನ್ನೊಂದು ಸಾಧನೆಯೆಂದರೆ, ದಾಸರು ಮೊದಲಾದ ವೃತ್ತಿ ಕಲಾವಿದರು ಪ್ರದರ್ಶಿಸುತ್ತಲಿದ್ದ ಬೀದಿ ರಂಗ ಭೂಮಿಗಳಿಗೆ ಉದ್ಧಾರ ಮಾರ್ಗ ತೋರಿದುದು. ಕೇವಲ ಭಿಕ್ಷಾವೃತ್ತಿಯಲ್ಲಿದ್ದ ಈ ವೃತ್ತಿ ರಂಗಭೂಮಿಗಳು ಸಣ್ಣಾಟದ ಮಾದರಿಯಲ್ಲಿ ಹಿಗ್ಗಿ ನಿಂತು, ಒಂದು ವ್ಯವಸ್ಥಿತ ಚೌಕಟ್ಟು ಪಡೆದು ಪ್ರಸಾರಗೊಂಡವು. ಈಗ ಆ ಕಲಾವಿದರ ಸ್ಥಿತಿಯೂ ಸುಧಾರಿಸಿ ಅವು ರಾಜಾನಾಟ–ರಾಧಾನಾಟ ಇತ್ಯಾದಿಯಾಗಿ ಸಣ್ಣಾಟದ ಮಟ್ಟದಲ್ಲಿ ಶೋಭಿಸಿದವು.



ಬೀದರ್ ಕೋಟೆ



ಬುದ್ಧ ವಿಹಾರ (ಗುಲಬರ್ಗಾ)

ಸಣ್ಣಾಟ ಭಕ್ತಿ-ಶೃಂಗಾರರಸ ಪ್ರಧಾನವಾದ ಐತಿಹಾಸಿಕ ಸಾಮಾಜಿಕ ವಸ್ತುಗಳಿಗೆ ಒಪ್ಪುವ ಜಾನಪದ ಶಿಲ್ಪವಾಗಿದ್ದರೂ ಅದಕ್ಕೆ 'ಐರಾವಣ-ಮೈರಾವಣ', 'ಇಂದ್ರಕೀಲ' ದಂತಹ ವೀರರಸಪ್ರಧಾನ ಪೌರಾಣಿಕ ಕಥೆಗಳನ್ನೂ ಕೆಲವೆಡೆ ಬಳಸಿಕೊಳ್ಳಲಾಗಿದೆ. ಹೀಗೆ ಮಾಡಿದರೆ ಆ ಕಥೆಗಳ ವ್ಯಕ್ತಿತ್ವಕ್ಕೆ, ವೈಭವಕ್ಕೆ ಧಕ್ಕೆಯುಂಟಾಗುವ ಕಾರಣ ಸಣ್ಣಾಟಕ್ಕೆ ಪೌರಾಣಿಕ, ಅದರಲ್ಲಿಯೂ ವೀರರಸ ಪ್ರಧಾನ ವಸ್ತು ಆರಿಸಿಕೊಳ್ಳುವುದು ತೀರ ಆಭಾಸ, ಅಸಂಗತವೆಂದೇ ಹೇಳಬೇಕು.

ಸೀಮಿತ ಪ್ರದೇಶ, ಅಲ್ಪ ಆಯುಷ್ಯ, ಪರಿಮಿತ ಕೃತಿಸಂಖ್ಯೆ, ಭಕ್ತಿ, ಶೃಂಗಾರದಂಥ ಕೆಲವೇ ರಸ ನಿರೂಪಣೆ ಕಾರಣವಾಗಿ ತನ್ನ ಎಲ್ಲ ಆಯಾಮಗಳನ್ನು ಬಿಚ್ಚಿಕೊಳ್ಳದೆ, ಹೆಸರಿಗೆ ತಕ್ಕಂತೆ ಒಂದು ಸಣ್ಣ ಪ್ರಯೋಗ ಸ್ಥಿತಿಯಲ್ಲಿ ನಿಂತು ಬಿಟ್ಟಿತೇ ಹೊರತು, ದೊಡ್ಡಾಟದಂತೆ ಪರಿಣತ ಸಿದ್ಧಿಗೇರಲಿಲ್ಲ; ಸಂಕೀರ್ಣವಾಗಿ ಬೆಳೆಯಲಿಲ್ಲ. ಹೀಗಿದ್ದೂ ಈ ವರ್ಗದ ಶ್ರೀಕೃಷ್ಣ ಪಾರಿಜಾತ ಮಾತ್ರ ಸಣ್ಣಾಟಗಳ ರಾಜ ಎಂಬ ಕೀರ್ತಿ ಹೊತ್ತು, ತನ್ನ ಸಾಮರ್ಥ್ಯದ ಎಲ್ಲ ಸಾಧ್ಯತೆಗಳನ್ನು ಪ್ರಕಟಿಸಿತು. *(ಎಂ.ಎಂ.ಕೆ)*

ಸನ್ನತಿ: ಪ್ರಾಚೀನ ಕರ್ನಾಟಕದ ಬೌದ್ಧ ಕೇಂದ್ರ. ಈಗ ಗುಲಬರ್ಗಾ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನಲ್ಲಿರುವ ಒಂದು ಸಣ್ಣ ಗ್ರಾಮ. ಗುಲಬರ್ಗಾದಿಂದ 75 ಕಿಲೋಮೀಟರ ದೂರದಲ್ಲಿದ್ದು, ಭೀಮಾನದಿಯ ಎಡ ದಡದಲ್ಲಿದೆ. 'ಸನ್ನತಿಯು ಕ್ರಿಸ್ತಶಕದ ಮೊದಲ ಅಥವಾ ಎರಡನೆಯ ಶತಕದಲ್ಲಿ ಬೆಳವಣಿಗೆಗೊಂಡ ಬೌದ್ಧ ಕೇಂದ್ರ'. ಆಗ ಕರ್ನಾಟಕದಲ್ಲಿ ಇದ್ದ ಬೌದ್ಧ ಕೇಂದ್ರಗಳೆಂದರೆ ಎರಡೇ. ಒಂದು ಸನ್ನತಿ ಇನ್ನೊಂದು ಬನವಾಸಿ. ಆಗ ಕರ್ನಾಟಕವನ್ನು ಶಾತವಾಹನರು ಆಳುತ್ತಿದ್ದರು. ಇವರು ಬೌದ್ಧಪರ ನಿಲವುಳ್ಳ ವರಾಗಿದ್ದರು. ಬೌದ್ಧಧರ್ಮವನ್ನು ಪುನಃ ನಮ್ಮ ದೇಶದಲ್ಲಿ ಪ್ರಚಾರ ಮಾಡಬೇಕೆಂಬ ಉದ್ದೇಶ ಇವರದಾಗಿತ್ತು. ಸನ್ನತಿಯನ್ನು ಇವರು ತಮ್ಮ ಆಡಳಿತದ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡಿದ್ದರು. ಇದನ್ನು ಇವರು ಬೌದ್ಧ ಪರಂಪರೆಯ ಮಹಾಯಾನ ಶಾಖೆಯ ಆರಾಧನಾ ಕೇಂದ್ರವಾಗಿ ಬೆಳೆಸಿದರು. ಕ್ರಿ.ಶಕ ಪೂರ್ವ 1ನೆಯ ಶತಮಾನದಿಂದ 3ನೆಯ ಶತಕದೊಳಗಾಗಿ ಸನ್ನತಿ ಜೀರ್ಣಾವಸ್ಥೆಗೆ ಬಂದಂತಿದೆ. ಇಲ್ಲಿ ಬೌದ್ಧ ಧರ್ಮದ ಅನೇಕ ಸ್ಮಾರಕಗಳು, ಅವಶೇಷಗಳು ಬನವಾಸಿಗಿಂತಲೂ ಹೆಚ್ಚಾಗಿ ಸಿಗುತ್ತವೆ. ಈ ಊರಿನ ಮುಂದೆ ಹರಿಯುತ್ತಿರುವ ಭೀಮಾ ನದಿಯ ಎರಡೂ ದಂಡೆಗಳುದ್ದಕ್ಕೂ, ಎರಡೂ-ಮೂರು ಮೈಲುಗಳವರೆಗೆ ಅಂದರೆ ಕಣಗಣ ಹಳ್ಳಿಯವರೆಗೂ ಬೌದ್ಧ ಸ್ಮಾರಕಗಳು ಲಭಿಸುತ್ತವೆ.

ಸನ್ನತಿಯಲ್ಲಿ ಎರಡು ಬೌದ್ಧ ಸ್ತೂಪಗಳಿದ್ದುದಾಗಿ ತಿಳಿದು ಬರುತ್ತದೆ. ಆದರೆ ಈಗ ಒಂದು ಲಭ್ಯವಾಗಿದೆ. ಇನ್ನೊಂದು ಸಂಪೂರ್ಣ ಜೀರ್ಣವಾಗಿ ಹೋಗಿದೆ. ಲಭ್ಯವಿದ್ದುದರಲ್ಲಿ ಸ್ಥಾಪಿಸಿರಬಹುದಾದ ಪವಿತ್ರ ಆಸ್ತಿಗಳಿಗೆ ಮೀಸಲಾಗಿದ್ದ ಕಲ್ಲಿನ ಕರಂಡಕವೂ ಸಿಕ್ಕಿದೆ. ಬುದ್ಧನ ಜನನ, ಪರಿನಿಷ್ಕ್ರಮಣ, ಸಂಬೋಧಿ, ಧರ್ಮಪ್ರವಚನ ಮತ್ತು ನಿರ್ವಾಣಂಗಳೆಂಬ ಐದು ಘಟನೆಗಳನ್ನು ಸಂಕೇತಿಸುವ ಐದು ಆಯತ ಸ್ತಂಭಗಳು ದೊರೆತಿವೆ. ಇವುಗಳಲ್ಲಿ ಬುದ್ಧನ ಅನುಯಾಯಿಗಳ ಕೆತ್ತನೆಯೂ ಇದೆ. ಇಲ್ಲಿ ಒಟ್ಟು ನೂರಕ್ಕಿಂತಲೂ ಹೆಚ್ಚು ಶಿಲ್ಪ ಕಲಾಕೃತಿಗಳು ಸಿಕ್ಕಿವೆ. ಈ ಕಲಾಕೃತಿಗಳು ಅಲ್ಲಿಯೇ ಸ್ಥಳೀಯವಾಗಿ ಸಿಕ್ಕುವ ಸುಣ್ಣದ ಕಲ್ಲಿನಿಂದ ಕೆತ್ತಲ್ಪಟ್ಟಂತಹವಾಗಿವೆ. ಇವೆಲ್ಲ ಬುದ್ಧನ ಜಾತಕ ಕಥೆಗಳು ಹಾಗೂ ಆತನ ಜೀವನವನ್ನು ಸಾಂಕೇತಿಕವಾಗಿ ಒಳಗೊಂಡ ಕಲಾಕೃತಿಗಳು. ಇವು ಆಂಧ್ರದ ಅಮರಾವತಿಯಲ್ಲಿರುವ ಸಾಂಪ್ರದಾಯಿಕ ಕಲಾಕೃತಿಗಳಂತೆ ಇರದೆ, ಇಲ್ಲಿನ ಸ್ಥಳೀಯ ಜಾನಪದ ಶೈಲಿಯನ್ನು ಹೊಂದಿವೆ. ಸ್ತೂಪವಲ್ಲದೆ ಬುದ್ಧನ ಜೀವನವನ್ನು ಚಿತ್ರಿಸುವ ಫಲಕಗಳು, ಬುದ್ಧನ ಪಾದ, ಬೋಧಿ ಗಿಡ, ತ್ರಿರತ್ನ ಇತ್ಯಾದಿ ಚಿತ್ರಗಳು, ಕಲ್ಲು ಚಪ್ಪಡಿಗಳು ರಿಲಿಕ್ ಕ್ಯಾಸ್ಕೆಟ್ ಸ್ಮಾರಕ (Relic Casket), ಇಟ್ಟಿಗೆ ಕೋಟೆ ಗೋಡೆ ಮುಂತಾದುವು ಸಿಕ್ಕಿದ್ದು ಇವೆಲ್ಲ ಶಾತವಾಹನರ ಕಾಲಕ್ಕೆ ಸಂಬಂಧಿಸಿದಂಥವು ಎಂದು ಗುರುತಿಸಲಾಗಿದೆ.

ಬೌದ್ಧ ವಾಸ್ತುವಿನಲ್ಲಿ ವೈಶಿಷ್ಟ್ಯ ಪೂರ್ಣವೆನ್ನಿಸುವ ಯಕ್ಷ ವಿಗ್ರಹವೂ (ಸ್ಥೂಲೋದರ, ಕಟಿ ವಸ್ತ್ರ, ಕುಬ್ಜಾಕಾರ) ಇಲ್ಲಿ ದೊರೆತಿದೆ. ಇಲ್ಲಿ ಈಗ ಭಗ್ನಾವಸ್ಥೆಯಲ್ಲಿರುವ ಭವ್ಯವಾದ ಚಾಮುಂಡಿ ಗುಡಿಯ ಮಂಟಪದ ಎದುರಿನ ಕಟ್ಟೆಯ ಮೇಲೆ ಎರಡು ಕಲ್ಲುಗಳಿವೆ. ಅವುಗಳ ಮೇಲೆ ಬೌದ್ಧರ ಕಾಲದ ಸ್ತೂಪಗಳು, ಕೆತ್ತಲ್ಪಟ್ಟಿವೆ. ಚಂದ್ರಲಾಂಬಾ ಅಥವಾ ಚಂದ್ರಲಾ ಪರಮೇಶ್ವರಿ



ಬುದ್ಧನ ಅವಶೇಷಗಳು – ಸನ್ನತಿ

ದೇವಾಲಯವೂ ಇಲ್ಲಿಯೇ ನದಿಯ ದಂಡೆಯ ಮೇಲಿದೆ. ಇದೀಗ ಇದು ಒಂದು ಯಾತ್ರಾಸ್ಥಳವೂ ಆಗಿದೆ. ಈ ದೇವಾಲಯವು ಬೌದ್ಧರ ಕಾಲದಲ್ಲಿ ಬೌದ್ಧರ ಸ್ಥಾನವಾಗಿಯೂ, ಶೈವ ಶಾಕ್ತರ ಕಾಲದಲ್ಲಿ ಪಾರ್ವತಿ ಮಹಾಕಾಳಿಯ ಸ್ಥಾನವಾಗಿಯೂ, ವೈಷ್ಣವರಿಗೆ ಶ್ರೀರಾಮ ಸರಸ್ವತಿಯ ಸ್ಥಾನವಾಗಿಯೂ ಮಾರ್ಪಾಟು ಹೊಂದುತ್ತ ಬಂದುದನ್ನು ಅರಿಯಬಹುದು.

ಸನ್ನತಿಯಲ್ಲಿ ಪ್ರಾಚೀನ ಕಾಲದ ಗುಂಡ, ಮಣಿ, ನಾಣ್ಯ ಹಾಗೂ ಶಾಸನಗಳು ಸಿಕ್ಕಿವೆ. ಸದ್ಯ ಐವತ್ತಕ್ಕೂ ಹೆಚ್ಚು ಶಾಸನಗಳು ದೊರೆತಿವೆ. ಇವೆಲ್ಲ ಪ್ರಾಕೃತ ಭಾಷೆಯಲ್ಲಿದ್ದು, ಬ್ರಾಹ್ಮೀ ಲಿಪಿಯಲ್ಲಿ ಬರೆಯಲ್ಪಟ್ಟಿವೆ. ಒಂದೋ ಅಥವಾ ಎರಡೋ ಸಾಲುಗಳನ್ನು ಒಳಗೊಂಡ ಇವುಗಳಲ್ಲಿ ಬೌದ್ಧ ಸಂಘಾರಾಮಗಳಿಗೆ, ಸ್ತೂಪ, ವಿಹಾರಗಳಿಗೆ ದಾನವಿತ್ತ ವಿವರಗಳಿವೆ. ಕೆಲವು ಶಾಸನಗಳಲ್ಲಿ ಜನಸಾಮಾನ್ಯರೂ ಕೂಡ ಬೌದ್ಧ ಧರ್ಮಾವಲಂಬಿಗಳು ಅಥವಾ ಉಪಾಸಕರಾಗಿದ್ದುದರ ಉಲ್ಲೇಖವಿದೆ. ವಿಶೇಷವೆಂದರೆ ಅನೇಕ ಸ್ತ್ರೀಯರು ಪುರುಷರಿಗೆ ಸಮಾನರಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮುಕ್ತವಾಗಿ ಭಾಗವಹಿಸಿದ್ದೂ ಅಲ್ಲಿ ವಿದಿತವಾಗಿದೆ. ಇನ್ನು ಕೆಲವು ಮರಣ ಶಾಸನಗಳೂ ಇವೆ. ಈಗ ಇವುಗಳಲ್ಲಿ ಕೆಲವನ್ನು ರಾಜ್ಯ ಸರ್ಕಾರದ ಗುಲಬರ್ಗಾ ವಸ್ತು ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಭಾರತೀಯ ಶಾಸನಗಳ ವಾರ್ಷಿಕ ವರದಿಗಳಲ್ಲಿ (1966–67 ಮತ್ತು 1968–69) ಇವನ್ನು ದಾಖಲಿಸಲಾಗಿದೆ. ಲಿಪಿಶಾಸ್ತ್ರದ ದೃಷ್ಟಿಯಿಂದ ಇವುಗಳ ಕಾಲವನ್ನು ಎರಡನೆಯ ಶತಮಾನವೆಂದು ನಿರ್ಣಯಿಸಲಾಗಿದೆ.

ಸನ್ನತಿಯು ಪ್ರಾಚೀನ ಕಾಲದಲ್ಲಿ ಪಶ್ಚಿಮ ಭಾರತದ ಬೌದ್ಧ ಕೇಂದ್ರಗಳಿಗೂ ಪೂರ್ವ ಭಾರತದ ಶ್ರೀಶೈಲ, ನಾಗಾರ್ಜುನ ಗೊಂಡ, ಅಮರಾವತಿ, ಭಟ್ಟಿ ಪ್ರೋಲು, ಘಂಟ ಸಾಲ ಮುಂತಾದ ಎಡೆಗಳಿಗೂ ನಡುವಣ ಸಂಪರ್ಕ ಕೇಂದ್ರವೇ ಆಗಿದ್ದಿತು. ಎಂಬುದು ತಾಳ್ಳಜೆ ವಸಂತಕುಮಾರ ಅವರ ಅಭಿಪ್ರಾಯ. ಬೌದ್ಧ ಧರ್ಮದ ಅವಶೇಷಗಳು ಹಾಗೂ ಬುದ್ಧನ ಜೀವನಕ್ಕೆ ಸಂಬಂಧಿಸಿದ ಅಮೂಲ್ಯ ಸ್ಮಾರಕಗಳನ್ನು ಒಳಗೊಂಡ ಸನ್ನತಿ. ಇಂದು ಸಂಶೋಧಕರಿಗೆ, ಇತಿಹಾಸ ತಜ್ಞರಿಗೆ ತುಂಬಿದ ಗಣಿಯಾಗಿದೆ.

(ಶ್ರೀ.ಜಿ.ಪಿ.)

ಸಪ್ತಮಾತೃಕೆಯರು: ಹೈದ್ರಾಬಾದ ಮತ್ತು ಮುಂಬಯಿ ಕರ್ನಾಟಕದಲ್ಲಿನ ಸಪ್ತ ಮಾತೃಕೆಯರಲ್ಲಿ ದ್ಯಾಮವ್ವ ಪ್ರಮುಖ ದೇವತೆ. ಉಳಿದ ಆರು ದೇವತೆಗಳು ಈಕೆಗೆ ಸಹಾಯ ಮಾಡುವ ತಂಗಿಯರಾಗಿದ್ದಾರೆ. ಈ ಕೆಳಗೆ ನಮೂದಿಸಲಾದ ಹಾಡಿನಲ್ಲಿ ದ್ಯಾಮವ್ವಳು ಊರಿನಲ್ಲಿರುವ ಜನಗಳ ಮನೆಗೆ ಹೋಗಿ ಪೂಜೆ ಸಾಮಾನು ತರುವುದರ ಹಾಡನ್ನು ಕೇಳಿದಾಗ ಈಕೆ ಸಾಮಾನ್ಯ ಸ್ತ್ರೀ (ಮಹಿಳೆ) ಯಾಗಿರುವುದು ಗೊತ್ತಾಗುತ್ತದೆ.

"ಬಡಿಗ್ಯಾರ ಓಣಿಗೆ ಹೋಗ್ಯಾಳ ದ್ಯಾಮವ್ವ
ಬಡಿಗ್ಯಾರ ಅಣ್ಣನ್ನ ಕರಸ್ಯಾಳ
ಬಡಿಗ್ಯಾರ ಅಣ್ಣನ್ನ ಕರಸಿ ಕೇಳತಾಳ
ಉದಿಯಾಕ ಬಂಡಿ ಬರಬೇಕ"

2. ಮರಗಮ್ಮ: ಹಿರಿಯಕ್ಕಳಾದ ದ್ಯಾಮವ್ವ ಊರ ಅಗಸಿಯ ಒಳಗಿದ್ದರೆ ಮರಗಮ್ಮ ಊರ ಹೊರಗೆ ಇರುವಳು. ಇವರಿಬ್ಬರ ಕೆಲಸ ಊರು ಕಾಯುವುದು. ರೋಗ–ರುಜಿನಗಳು ಪರಿಹಾರಮಾಡಿ ಜನಪದರನ್ನು ಆರೋಗ್ಯವಂತರನ್ನಾಗಿಡುವ ಕೆಲಸ ನಿರ್ವಹಿಸುತ್ತಾರೆ. ಇವರನ್ನು ಸಾವು ಮತ್ತು ನೋವುಗಳಿಂದ ಕಾಪಾಡುವ ತಾಯಿ ಮರಗಮ್ಮ ಆಗಿದ್ದಾಳೆ.


3. ಕಾಳಮ್ಮ: ಜನಪದರಿಗೆ ತಮ್ಮ ಬದುಕನ್ನು ನಡೆಸಲು ಕೃಷಿ ಮುಖ್ಯ ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಒಕ್ಕಲುತನ ಮಾಡಲು ಬೇಕಾಗುವ ನೇಗಿಲು, ಕುಂಟೆ, ಕೂರಿಗೆ, ದಿಂಡುಗಳು, ತಾಳ, ಹಲಗಿ, ಬಂಡಿ, ಮೆಟ್ಟಲಗಿ ಮಾಡಿಕೊಡುವವರು ಬಡಿಗೇರಾಗಿರುವುದರಿಂದ, ಇವರ ಆರಾಧ್ಯ ದೇವತೆ ಕಾಳಮ್ಮ ದೇವಿಯೇ ಆಗಿರುವಳು. ಈ ಬಡಿಗೇರ ತರಹ ಇತರ ಪಂಗಡದವರಾದ ಅಕ್ಕಸಾಲಿಗ, ಕಂಬಾರ, ಕಂಚಗಾರರು ಕೂಡ ಈ ದೇವಿಯ ಭಕ್ತರಾಗಿದ್ದಾರೆ.

ಬಂಡೀಲಿ ಏರಿ ಬರುತಾಳ ಕಾಳಮ್ಮ
ನಾಲ್ಕು ಬಾಜಾರ ತಿರುಗ್ಯಾಳ॥"

4. ಚೌಡಮ್ಮ: ಹಟಗಾರರು, ನೇಕಾರರು, ದೇವಾಂಗದವರು ಮತ್ತು ಹೂಗಾರರು ಆರಾಧಿಸುವ ದೇವತೆ ಚೌಡಮ್ಮಳಾಗಿದ್ದಾಳೆ. ಈಕೆ ಗುಡಿಯ ಮುಂದೆ ಭಕ್ತರೆಲ್ಲ ಸೇರಿ ದೇವಿಯ ಗುಣಗಾನ ಮಾಡುತ್ತ ಕೋಲು ಹಾಕಿ ಹಾಡುತ್ತ ಕುಣಿಯುತ್ತಾರೆ.

"ಶರಣೆನ್ನಿರಯ್ಯ ಶರಣೆನ್ನಿರೊ ತಾಯ್ತಂದೆ ಪಾದಕ್ಕೆ ಶರಣೆನ್ನಿರೊ
ಶರಣೆನ್ನಿರಯ್ಯ ಶರಣೆನ್ನಿರೊ ಈ ಊರ ಚೌಡಮ್ಮಗೆ ಶರಣೆನ್ನಿರೊ"

5. ದುರ್ಗಮ್ಮ: ಎಲ್ಲಮ್ಮ ಐತಿಹಾಸಿಕವಾಗಿ ಹೇಗೆ ಪ್ರಸಿದ್ಧಳೋ ಹಾಗೆಯೇ ದುರಗಮ್ಮನು ಪ್ರಸಿದ್ಧಳು. ಈ ಸಪ್ತಮಾತೃಕೆಯರು ಪುರಾಣ ಕಾಲದವರಾದರೂ ಸಮಯ, ಸಂದರ್ಭ, ಕಾಲ, ಸನ್ನಿವೇಶಗಳಿಂದ ಹೆಸರುಗಳಿಸಿದ್ದಾರೆ. ದುರ್ಗಮ್ಮ ದೇವಿ ಕೋಟೆಗಳ ರಕ್ಷಣೆಗಾಗಿ ಹುಟ್ಟಿದ ದೇವತೆಯಾಗಿದ್ದಾಳೆ. ಇವಳು ರೌದ್ರವತಾರಿ, ಬೆಂಕಿಯಂಥ ಸಿಟ್ಟಿನವಳೆಂದು ಜನಪದರು ನಂಬಿದ್ದಾರೆ. ಎಲ್ಲಮ್ಮಳಿಗೆ ಕುರಿ–ಕೋಳಿ ಬಲಿ ಬೇಕಿದ್ದರೆ, ಇವಳಿಗೆ ಕೋಣನ ಬಲಿ ಬೇಕಾಗುವುದು. ಇವಳ ಜಾತ್ರೆಯಲ್ಲಿ ಜೋಗತಿಯರು ಕುಣಿತ



ಏಳು ಮಕ್ಕಳ ತಾಯಿ

ಮಣಿತಗಳಿಂದ ತಮ್ಮ–ಹಾವ–ಭಾವಗಳಿಂದ ಹಾಡುತ್ತಾರೆ. ಈ ಹಾಡುಗಳು ನೋಡುಗರ ಕಣ್ಣಿಗೆ ಮನರಂಜನೆಯ ಜೊತೆಗೆ ಕೇಳಗರ ಕಿವಿಗಳಿಗೆ ರಸಾನಂದ ನೀಡುತ್ತದೆ.

6. ಲೋಕದೇವತೆಯಾಗಿರುವ ಸಂಪ್ರದಾಯದ ದೇವತೆಗಳಿಗೆ ಒಂದೇ ಬಗೆಯ ಪೌರಾಣಿಕತೆ ಇದೆ. ಎಲ್ಲಮ್ಮ ಕುಟುಂಬದ ಜಮದಗ್ನಿ, ಪರಶುರಾಮ, ಮಾತಂಗಿ, ರೇಣುಕಾ, ಎಲ್ಲಮ್ಮ ಕಥೆ ಇರುವುದು ಕಂಡು ಬರುತ್ತದೆ. ಶೈವರು ವೈಷ್ಣವರು. ಜೈನರು ಮತ್ತು ಶಾಕ್ತರು ತಮ್ಮ ಆಡಳಿತ ಕಾಲಕ್ಕೆ ತಮ್ಮವಳನ್ನಾಗಿ ಮಾಡಿ–ಕೊಂಡಿದ್ದಾರೆಂದು ಚೆನ್ನಣ್ಣ ವಾಲೀಕಾರ ಅವರ ಅಭಿಮತವಾಗಿದೆ.

ಉದಾ:

1. ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಬಗದೂರಿ ಎಲ್ಲಮ್ಮನಿಗೆ ಪರಶುರಾಮ ತಂದೆಯ ಆಜ್ಞೆ ಪ್ರಕಾರ ಕೊಲ್ಲಲು ಬೆನ್ನು ಹತ್ತಿದಾಗ ಆಕೆ ಓಡಿ ಬಂದು ಗುಡ್ಡದಲ್ಲಿರುವ ಗಿಡದಲ್ಲಿ ಹೊಕ್ಕಳಂತೆ ಅದಕ್ಕಾಗಿ ಅಲ್ಲಿ ಗಿಡಕ್ಕೆ ಪೂಜಿಸುವರು.

2. ಗುಲಬರ್ಗಾ ಜಿಲ್ಲೆ ಆಳಂದ ತಾಲ್ಲೂಕಿನ ಚುಂಚೂರು ಮಾಪುರತಾಯಿಯೆಂದು ಹೆಸರಾದ ಎಲ್ಲಮ್ಮನಿಗೆ ಪರಶುರಾಮ ತಂದೆ ಆಜ್ಞೆ ಪ್ರಕಾರ ಕೊಲ್ಲಲು ಬೆನ್ನು ಹತ್ತಿದಾಗ, ಆಕೆ ಅಂಜಿ ಓಡಿ ಬಂದು ಆ ಊರಿನ ಅಡವಿಯಲ್ಲಿರುವ ಹುತ್ತದಲ್ಲಿ ಹೊಕ್ಕಳಂತೆ, ಅದಕ್ಕಾಗಿ ಜನ ಆ ಹುತ್ತಿಗೆ ಪೂಜಿಸುವರು.

(ಎಚ್.ಡಿ)

ಸರಗಿ: ಪ್ರಾಚೀನ ಕಾಲದ ಕಂಠಾಭರಣ, ಜಾನಪದದಲ್ಲಿ 'ಸರ–ಸರಿಗೆ' ಎಂಬ ಜೋಡು ಶಬ್ದಗಳೇ ಹೆಚ್ಚಾಗಿ ಕಂಡು ಬರುತ್ತವೆ. ಗುಂಡಿನ ಸರದ ನಡು ನಡುವೆ ನಕ್ಷೆಯಿದ್ದು ಕುಸುಲು–ಕುಸುಲಿನಿಂದ ಕೂಡಿರುತ್ತಿತ್ತು. ಇಂದಿನ ನೆಕ್‌ಲೆಸ್‌ನಂತಿದ್ದು, ಹಿಂಭಾಗದಲ್ಲಿ ಯಾವ ವಿನ್ಯಾಸವಿಲ್ಲದೆ ಚಿನ್ನದ ದಪ್ಪ ಎಳೆ ಇರುತ್ತಿತ್ತು. ನಿಶ್ಚಿತಾರ್ಥ, ಮದುವೆ ಇತ್ಯಾದಿ ಶುಭ ಸಮಾರಂಭಗಳಂದು 'ದೌಳೇರು' (ಉಳ್ಳವರು) ಅದರಲ್ಲೂ ಸ್ತ್ರೀಯರು ಮಾತ್ರ ಧರಿಸುವ ಚಿನ್ನಾಭರಣ ಇದಾಗಿತ್ತು. ಸರ ತುಂಬಾ ಉದ್ದವಾದುದಾದರೆ ಸರಿಗೆ ಕಂಠದ ಸುತ್ತು ಮಾತ್ರ ಇರುವ ಆಭರಣ. ಅಂದಿನ ಕಾಲದ ಚಿನ್ನದ ತೂಕ (ಅಳತೆ) 'ಸೇರು' ಅಥವಾ 'ಅಚ್ಚೇರು' (ಅರ್ಧ ಸೇರು) ಇರುತ್ತಿತ್ತು. ಒಂದು ಸೇರು ಎಂದರೆ ಹನ್ನೆರಡು ತೊಲೆ. ಹೀಗೆ ಅವರವರ ಶಕ್ತ್ಯಾನುಸಾರ ಇದನ್ನು ಮಾಡಿಸುತ್ತಿದ್ದರು. ಹೆಂಗಳೆಯರ ಮನೆತನದ ಪ್ರತಿಷ್ಠೆಯ ಸಂಕೇತವಾಗಿ ಇದನ್ನು ಧರಿಸುತ್ತಿದ್ದರು.

ಜನಪದ ಹಾಡು, ನೀತಿ, ಗಾದೆ, ಸಣ್ಣಾಟ ಇವುಗಳಲ್ಲೆಲ್ಲಾ ಸರ–ಗಿಯ ಉಲ್ಲೇಖವಿದೆ. 'ಸಂಗ್ಯಾ–ಬಾಳ್ಯಾ ಎಂಬ ಪ್ರಸಿದ್ಧ ಸಣ್ಣಾಟದಲ್ಲಿ ಸಂಗ್ಯಾ ಕುಂಟಲಗಿತ್ತಿ ಪಾರವ್ವನ ಕೈಯಲ್ಲಿ ಸರಗಿಯನ್ನು ಕೊಟ್ಟು ಮಹಾದೇವಿಯು ತನಗೇ ಒಲಿಯಬೇಕೆಂದು ಪ್ರಯತ್ನಿಸುತ್ತಾನೆ. ಹೆಣ್ಣು ಮಕ್ಕಳ ಹಾಡುಗಳಾದ 'ಶ್ರಾವಣ ಮಾಸದ ಹಾಡುಗಳು' 'ಸೀಗಿಯ ಪದಗಳು', 'ಲಕ್ಷಿ ಪದಗಳು' ಇತ್ಯಾದಿಗಳಲ್ಲಿ ಬುಗುಡಿ–ವಾಲಿ, ಮೂಗುತಿ–ನತ್ತು, ವಂಕಿ–ಡಾಬುಗಳೊಂದಿಗೆ ಸರಗಿಯ ಉಲ್ಲೇಖಗಳೂ ಇವೆ.

(ಎಸ್.ವಿ.)

ಸರಿಬೆಸ: ಅಕ್ಷತಾರೋಹಣ ವಾದ ಮೇಲೆ ವಧು ವರರಿಬ್ಬರಿಗೂ ಹಸೆಗಟ್ಟೆಯ ಮೇಲೆ ಕೂಡಿಸಿ ಆಡಿಸುವ ಆಟ. ಇದಕ್ಕೆ ಗಂಡ ಹೆಂಡತಿಯರಲ್ಲಿ ಸ್ವಾಮರಸ್ಯ ಬೆಳೆಯಿಸುವುದೇ ಇದರ ಉದ್ದೇಶ. ಇದು ಮುಂಬರುವ ದಾಂಪತ್ಯ ಜೀವನದ ಸಂಕೇತವೂ ಆದಂತಿದೆ. ಜೀವನದಲ್ಲಿ ಇಬ್ಬರೂ ಸಮಾನರು. ಆದರೆ ಕೆಲವೊಂದು ಸಲ ಗಂಡ ಇಲ್ಲವೆ ಹೆಂಡತಿಯ ಜೋರು ಹೆಚ್ಚಾಗಬಹುದು. ಆಗ ಬೆಸವಾಗದೆ ಸರಿಯಾಗಿ ಬಾಳಲಿ ಎಂಬ ಮನೋಭಾವನೆ ಇದ್ದಂತಿದೆ. ಇಲ್ಲಿ ಬರುವ ಹಾಡುಗಳೂ ಅದನ್ನೇ ಸೂಚಿಸುತ್ತವೆ.

ಮಧು ವರರಿಗೆ ಅಡಕೆಗಳನ್ನು ಕೈಯಲ್ಲಿಡುವರು. ಅವರು ಮುಚ್ಚಿದ ಮುಷ್ಟಿಯಲ್ಲಿ ಅಡಕೆಗಳನ್ನು ಹಿಡಿಯಬೇಕು. ಸರಿಯೋ ಬೆಸವೋ ಇನ್ನೊಬ್ಬರು ಹೇಳಬೇಕು. ಇದರಿಂದ ನೆರೆದವರಿಗೂ ಮನರಂಜನೆಯಾಗುವುದು. ಹಾಡಿನಲ್ಲಿಯೂ ಉತ್ಸಾಹ, ಹುಮ್ಮಸ್ಸು ಕಂಡುಬರುತ್ತದೆ. ಸರಿಬೆಸ ಆಡುವುದು ಮದುಮಕ್ಕಳು. ಅವರಿಗೆ ಹುರಿದುಂಬಿಸುವವರು ಸುತ್ತೆಲ್ಲ ನಿಂತ ಬಂಧುಬಳಗದವರು.

(ವೈ.ಎಸ್.)



ಸವದತ್ತಿಮಠ ಎಸ್.ಡಿ.: ಭಾಷಾ ವಿಜ್ಞಾನಿ, ಸಂಶೋಧಕ, ಕನ್ನಡ ಭಾಷಾ ವ್ಯಾಸಂಗ, ತೌಲನಿಕ ದ್ರಾವಿಡ ಭಾಷಾ ವ್ಯಾಸಂಗ, ಕನ್ನಡ ಭಾಷಾ ಸ್ವರೂಪ, ಮುಂತಾದವುಗಳು ಭಾಷಾ ಅಧ್ಯಯಗಳಲ್ಲಿ ವಿಶಿಷ್ಟ ಸಾಧನೆಯನ್ನು ಮಾಡಿದ್ದಾರೆ.

'ಭಾಷಾಲೇಖ' ಎಂಬುದು ಭಾಷಾ ವಿಜ್ಞಾನ ಕ್ಷೇತ್ರದ ಅವರ ಸಂಶೋಧನಾ ಪ್ರಬಂಧ ವಿಶಿಷ್ಟ ಕೃತಿ. ಆರ್ಯಭಾಷಾ ವ್ಯಾಸಂಗ, ಆರ್ಯ ಭಾಷೆಗಳ ತೌಲನಿಕ ವ್ಯಾಕರಣದ ಅಪರೂಪದ ಕನ್ನಡ ಕೃತಿ ಇದು. ಕನ್ನಡ ಭಾಷಾ ಪ್ರಭೇದಗಳು ಮಕ್ಕಳ ಭಾಷೆ, ಕನ್ನಡ ನಾಟಕಗಳಲ್ಲಿ ಭಾಷೆ ಮುಂತಾದವು ಇವರ ಒಂದೊಂದು ಕೃತಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ.

ಸಂಗಮೇಶ ಸವದತ್ತಿಮಠ ಅವರು ಮುರಗೋಡ ಗ್ರಾಮದ ಸವದತ್ತಿಮಠ ದಂಡಯ್ಯನವರು, ಹುಕ್ಕೇರಿ ಗದ್ದಿಮಠದ ಪಾರ್ವತಿ ದೇವಿ ಇವರ ಹಿರಿಯ ಮಗ, ತಂದೆ ಪ್ರೌಢ ಶಾಲಾ ಶಿಕ್ಷಕ.

1965 ರಿಂದ 68ರ ವರೆಗೆ ಕೊಪ್ಪಳ ಗವಿಸಿದ್ದೇಶ್ವರ ಪ್ರೌಢ ಶಾಲೆಯಲ್ಲಿ ಆನಂತರ 1970ರಿಂದ 72ರ ವರೆಗೆ ನರಗುಂದ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಧ್ಯಾಪಕರಾಗಿ, 1972 ರಿಂದ ನಿವೃತ್ತಿಯವರೆಗೆ ಕರ್ನಾಟಕ ಮತ್ತು ಕಲಬುರ್ಗಿ ವಿಶ್ವವಿದ್ಯಾಲಯದ ಸಹಾಯಕ ಸಂಶೋಧಕ, ಅಧ್ಯಾಪಕ, ಪ್ರವಾಚಕ, ಪ್ರಾಧ್ಯಾಪಕ, ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥ, ಕಲಾ ನಿಕಾಯದ ಡೀನ್, ಸ್ನಾತಕೋತ್ತರ ಕೇಂದ್ರದ ವಿಶೇಷಾಧಿಕಾರಿ, ವಿಶ್ವವಿದ್ಯಾಲಯಗಳ

ವಿವಿಧ ಉನ್ನತ ಸಮಿತಿಗಳ ಅಧ್ಯಕ್ಷ, ಸದಸ್ಯ ಇತ್ಯಾದಿ 19 ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಅಪಾರ ಅನುಭವ ಇವರದು.

ಉತ್ತರ ಕರ್ನಾಟಕದಲ್ಲಿ ಯಕ್ಷಗಾನಗಳು ಇದ್ದವೆಂಬುದನ್ನು ಗುರುತಿಸಿ, ಕೆಲವು ಯಕ್ಷಗಾನಗಳನ್ನು ಸಂಪಾದಿಸಿ ಪ್ರಕಟಿಸುವ ಮೂಲಕ ಹತ್ತು ಹಲವು ಪ್ರಥಮಗಳ, ವಿಶೇಷ ಸಾಧನೆಗಳ ಖ್ಯಾತಿ ಶ್ರೀಯುತರದ್ದು. ಸರ್.ಎಂ. ವಿಶ್ವೇಶ್ವರಯ್ಯ ಪ್ರತಿಷ್ಠಾನದ ದಶಕದ ಶ್ರೇಷ್ಠ ಸಾಹಿತ್ಯ ಪ್ರಶಸ್ತಿ, ಕಲಬುರ್ಗಿ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ರಾಜ್ಯ ಜಾನಪದ ಅಕಾಡೆಮಿ ಪ್ರಶಸ್ತಿ, ಚಿದಾನಂದ ಪ್ರಶಸ್ತಿ, ಮೊದಲಾದ ಹಲವು ಪ್ರಶಸ್ತಿಗಳು ಲಭಿಸಿವೆ. ಡಾ. ಸಂಗಮೇಶ ಸವದತ್ತಿಮಠ ಅವರ ಹಲವು ಕೃತಿಗಳಲ್ಲಿ ಭಾಷಾ ವಿಜ್ಞಾನ, ಸಂಶೋಧನೆ, ಸಂಪಾದನೆ, ಜಾನಪದ, ನಾಟಕ, ಕಾದಂಬರಿ, ವಿಮರ್ಶೆ, ವ್ಯಕ್ತಿಚಿತ್ರ, ಜೀವನಚರಿತ್ರೆ ಮುಂತಾದವುಗಳು ಸೇರಿವೆ. ಇವರ ನಿವೃತ್ತಿಯ ಸಂದರ್ಭದಲ್ಲಿ ಶಿಷ್ಯರು ಅಭಿಮಾನಿಗಳು ಅಭಿನಂದನ ಸಮಾರಂಭವನ್ನೇರ್ಪಡಿಸಿ 'ಭಾಷಾ ಸಂಗಮ' ಎಂಬ ಸಹಸ್ರ ಪುಟಗಳ ಬೃಹತ್ ಅಭಿನಂದನ ಗ್ರಂಥವನ್ನು ಅರ್ಪಿಸಿದ್ದಾರೆ.

(ಜಿ.ಪಿ.)

ಸಸ್ಯ ಜಾನಪದ: ಸಸ್ಯಗಳನ್ನು ಕುರಿತ ವಿಶೇಷ ಅಧ್ಯಯನ. ಇದರಲ್ಲಿ ಸಸ್ಯಗಳನ್ನು ಕುರಿತು ಜನಪದರ ನಂಬುಗೆ, ಆರಾಧನೆಗಳು ಒಳಗೊಳ್ಳುತ್ತವೆ. ಬದುಕಿನ ಅನಾಗರಿಕ ಸ್ಥಿತಿಯಿಂದ ಹಿಡಿದು ಪ್ರೌಢ ಸಂಸ್ಕೃತಿಯವರೆಗಿನ ಎಲ್ಲ ಹಂತಗಳಲ್ಲಿ ಒಂದಿಲ್ಲೊಂದು ರೀತಿಯಿಂದ ಸಸ್ಯ ಸಂಪ್ರದಾಯಗಳು ಸೇರಿಕೊಂಡಿವೆ. ಕಾರಣ ಸಸ್ಯ ಬದುಕಿನ ಅನಿವಾರ್ಯ ಅಂಗ.

ಸಸ್ಯಗಳ ಬದುಕಿನ ಪ್ರಯೋಜನಗಳ ಹಿನ್ನೆಲೆಯಲ್ಲಿ ಜನಿಸಿದ ದಟ್ಟ ಅನುಭವದಿಂದ ರೂಪುಗೊಂಡ ಕಲ್ಪನೆಗಳು ನಂಬುಗೆಗಳಾಗಿ, ಹಲವಾರು ಸಂಪ್ರದಾಯಗಳಾಗಿ, ಹಬ್ಬಗಳ ಆಚರಣೆಗಳಾಗಿ ಸಸ್ಯ ಜಾನಪದ ಸ್ವರೂಪ ತಾಳಿರುವುದು ಸಹಜ. ಆದರೂ ತೀರ ನಿಕಟ, ವೈವಿಧ್ಯಮಯವಾದ ಸಸ್ಯ ಸಂಬಂಧ, ಸಸ್ಯ ಪ್ರಯೋಜನಗಳನ್ನು ಗಣನೆಗೆ ತೆಗೆದುಕೊಂಡಾಗ ಸಸ್ಯ ಜನಪದದ ಅಪಾರ ವ್ಯಾಪ್ತಿಯ ವಿರಾಟ್ ಸ್ವರೂಪದ ಕಲ್ಪನೆ ಬರದಿರದು.

ನಾನಿಲ್ಲಿ ಪ್ರತಿಪಾದಿಸುವ ವಿಷಯ ಪ್ರಮುಖವಾಗಿ ಹೈದ್ರಾಬಾದ ಮತ್ತು ಉತ್ತರ ಕರ್ನಾಟಕ ಪ್ರದೇಶದ ಸಸ್ಯ ಜಾನಪದವಾಗಿದೆ.

ಪುರಾಣ, ಐತಿಹ್ಯ, ಕತೆ, ಗೀತೆ, ಗಾದೆ, ಒಗಟು, ನಂಬಿಕೆ, ಸಂಪ್ರದಾಯ, ಮಾಟ ಮಂತ್ರ ಕಲೆ ಮೊದಲಾದವುಗಳಲ್ಲಿ ಸಸ್ಯ ಜಾನಪದ ಹಬ್ಬಿ ಹರವಾಗಿದೆ. ಅಲ್ಲಲ್ಲಿ ಸಸ್ಯದಿಂದ ನಿರ್ಮಿಸಿದ ಗುಡಿಸಲು, ಬುಟ್ಟಿ, ಹೆಡಿಗೆ, ಕಸಬರಿಗೆ, ಹಿಡಿ, ಸಡ್ಡ, ನೆಲುವು ಔಷಧಿಯಾಗಿ ಈ ವೈಜ್ಞಾನಿಕ ಯುಗದಲ್ಲಿಯೂ ಬಳಸುತ್ತಿರುವುದು ಕೇವಲ ನಂಬುಗೆ ಮಾತ್ರದ ಆಚರಣೆಯಲ್ಲ. ಜಾನಪದ ಪ್ರಗಾಢ ಅನುಭವದಲ್ಲಿ ಮೂಡಿ ಬಂದ ವೈಜ್ಞಾನಿಕ ಸತ್ಯವೂ ಅದಕ್ಕೆ ಹಿನ್ನೆಲೆಯಾಗಿದೆ. ಈ ಅನುಭವ ಸತ್ಯಕ್ಕೆ ಸಂಶೋಧನೆಯ ಪ್ರಮಾಣ ದೊರಕಿಸಿ ಕೊಡುವ ಪ್ರಯತ್ನಗಳು ವಿಶೇಷವಾಗಿ ನಡೆದಿಲ್ಲವೆಂದೇ ಹೇಳಬೇಕು.

ಪ್ರಮುಖವಾಗಿ ಹಬ್ಬಗಳು ಸಸ್ಯ ಜಾನಪದದ ವ್ಯಾಪ್ತಿಗೆ ಸೇರುತ್ತವೆ. ನಮ್ಮ ಹಬ್ಬಗಳ ಆಚರಣೆಯೂ ಒಂದು ರೀತಿಯ ಸಸ್ಯ ಸಂಬಂಧಗಳನ್ನು ಹೊಂದಿರುವುದನ್ನು ಗುರುತಿಸಬಹುದು. ಹೋಳಿ ಹುಣ್ಣಿಮೆಗೆ ಜಾನಪದದಲ್ಲಿ ಬಸಂತನ ಹುಣ್ಣಿಮೆ, 'ಕಾಮನ ಹಬ್ಬ' ಎಂದು ಕರೆಯುತ್ತಾರೆ. ಅಲ್ಲದೆ ಮಾವಿನ ಮರದ ವಿವಿಧ ಹಂತಗಳನ್ನು ಹಬ್ಬಗಳ ಜೊತೆಗೆ ಹೊಂದಿಸಿ ಹೇಳುವುದೂ ಗಮನಿಸಬೇಕಾದ ಅಂಶ. ಬಂದ್ಹುಣ್ಣಿ (ಬನದ ಹುಣ್ಣಿವಿ), ಬನಾ ಒಡಿತ್ಯೆಲೆ (ಹೂ ಬಿಡು), ಭಾರತ ಹುಣ್ಣಿವಿಗಿ ಬಾರಿಕಾಯಟ್ಟು, ಹೋಳಿ ಹುಣ್ಣಿವಿಗಿ ಹೋಳಗಾಯ, ಕಾರ ಹುಣ್ಣಿವಿಗಿ ಕಡಿಗಾಯ ಹೀಗೆ ಹೂ ಬಿಡುವುದರಿಂದ ಹಿಡಿದು ಆಗುವ ಬದಲಾವಣೆಗಳನ್ನು ಹಬ್ಬಗಳ ಜೊತೆ ಗಂಟು ಹಾಕುತ್ತಾರೆ. ಮಾವು ಒಮ್ಮೊಮ್ಮೆ ಒಂದೆರಡು ಗಿಡಗಳಲ್ಲಿ ಮೊದಲೇ ಕಾಯಿ ಆಗಬಹುದು. ಆದರೆ ಅವು ನೀಗಿ, ಗೌರಿಯ ಬಯಕೆಯೂಟಕ್ಕೆಂದೇ ಆಗಿರುತ್ತವೆಯಂತೆ! ಸೀಗೆ ಮತ್ತು ಗೌರಿಯರ ಬಯಕೆಯೂಟಕ್ಕೆ ಈ ಕಾಯಿಗಳು ಸಿಕ್ಕುತ್ತವೆ.

ಯುಗಾದಿಯಲ್ಲಿ ಬೇವು ಕಚ್ಚುವುದು, ಮಹಾ ನವಮಿಯಲ್ಲಿ ಬನ್ನಿ ಮುಡಿಯುವುದು, ಘಟ್ಟ ಹಾಕುವುದು, ಸಸಿ ಹಾಕುವುದು, ದೀಪಾವಳಿಯಲ್ಲಿ ದನಗಳಿಗೆ ಹುಲ್ಲಿನ ಪೀಡೆ ಬೆಳಗುವುದು, ಶಿವರಾತ್ರಿಯ ಪೂಜೆಯಲ್ಲಿ ಬಿಲ್ವ ಪೂಜೆ, ಉತ್ತರಾಣಿಯ ಪೂಜೆ ಹೀಗೆ ಹಿರಿಯ ಹಬ್ಬಗಳಲ್ಲಿ ಸಸ್ಯ ಒಂದಿಲ್ಲೊಂದು ರೀತಿಯಿಂದ ಸುತ್ತು ಹಾಕಿಕೊಂಡೇ ಇದೆ. ಮಾವಿನ ತಳಿರು ತೋರಣವಂತೂ ಹಬ್ಬವೆಂದು ಹೇಳುವ ಬರಹವೇ ಆಗಿ ಬಳಸಲ್ಪಡುತ್ತದೆ.

ಮದುವೆಯಿಂದ, ಹಿಡಿದು ಮಸಣದವರೆಗಿನ ಮಾನವನ ಎಲ್ಲ ಮಂಗಲಾಮಂಗಲ ಕ್ರಿಯೆಗಳಲ್ಲಿ ಸಸ್ಯಗಳಿಲ್ಲದೆ ನಡೆಯುವುದೇ ಇಲ್ಲ. ಆರಾಧನೆಯ ಆಕರಗಳಾಗಿ, ಆಚರಣೆಯ ಅಂಗವಾಗಿ, ನಂಬುಗೆಯ ಬೇರಾಗಿ, ಕಲ್ಪನೆಗಳ ಕುಡಿಯಾಗಿ, ಹಬ್ಬಗಳಾಗಿ ಹಬ್ಬಿ ಬೆಳೆದ ಈ ಸಸ್ಯ ಜಾನಪದ ಪ್ರಪಂಚದುದ್ದಕ್ಕೂ ಬಿದ್ದಿರುವ ಅನವರತ ಜೀವನದ ಸಮಗ್ರ ವ್ಯವಹಾರಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಪವಣಿಸಿ ಕೊಂಡಿರುವುದು ಗಮನಿಸಬೇಕಾದ ಅಂಶ. ಅದಕ್ಕೆ ಸೀಮೆಗಲ್ಲನ್ನೂರಿ ಒಡ್ಡು ಗಟ್ಟುವುದು ಅಷ್ಟು ಸುಲಭ ಸಾಧ್ಯವಲ್ಲ.

ಸಸ್ಯಮಾನವನ ಸಂಬಂಧ: ಸಸ್ಯದೊಂದಿಗೆ ಮಾನವನ ಸಂಬಂಧ ಅನಿವಾರ್ಯ ಮತ್ತು ಅವಿಭಾಜ್ಯ. ಅದು ನೀರು ಮೀನಿನ ಸಂಬಂಧ. ನಿಸರ್ಗದಲ್ಲಿ ಮೊದಲು ಸಸ್ಯ, ಜೀವ, ಅನಂತರ ಮಾನವ. ಇದು ಅಲ್ಲಗಳೆಯದ ಮಾತು. ಸಸ್ಯಲೋಕವಿರದಿರೆ ಮಾನವಲೋಕ ಬದುಕುವುದು ಶಕ್ಯವಿಲ್ಲವೆಂಬುದು ವೈಜ್ಞಾನಿಕ ಸತ್ಯ. ಮಾನವನಿಗೆ ಪ್ರಮುಖವಾಗಿ ಸಸ್ಯ ಆಹಾರವಾಗಿ, ಬದುಕಲು ಮನೆಯಾಗಿ, ಬೆಚ್ಚಗಿರಲು ಬಟ್ಟೆಯಾಗಿ, ಬೇಯಿಸಲು ಉರುವಲಾಗಿ ಇದ್ದುದನ್ನು ಮಾತ್ರ ಜನಸಾಮಾನ್ಯರು ಗುರುತಿಸಿರಬಹುದು. ಆದರೆ ಪರಿಸರ ಮಾಲಿನ್ಯ, ಭೂಮಿಯ ಸವಕಳಿಯನ್ನು ತಡೆಗಟ್ಟುವಲ್ಲಿ, ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವಲ್ಲಿ ಸಸ್ಯಗಳ ಪಾತ್ರಕ್ಕೆ ಸಮ ಇನ್ನೊಂದಿಲ್ಲ. ಸಸ್ಯ ನಾಶ ಮಾನವ ಜನಾಂಗದ ನಾಶವೇ ಸರಿ.

ಮೇಲೆ ಹೇಳಿದ ಪ್ರಯೋಜನಗಳಷ್ಟೇ ಅಲ್ಲದೆ ಜೀವ ವ್ಯಾಧಿಗೆ ಸಸ್ಯ ಮದ್ದೂ ಆಗಿದೆ. ಆದಿಮಾನವ ತನ್ನೆಲ್ಲ ದೈಹಿಕ

ತೊಂದರೆಗಳಿಗೆ ಸಸ್ಯವನ್ನೇ ಔಷಧಿಯನ್ನಾಗಿ ಬಳಸಿಕೊಂಡರೆ, ಆಧುನಿಕ ಮಾನವ ಅದನ್ನು ಸೌಂದರ್ಯ ವರ್ಧಕ ಸಾಧನಗಳಿಗಾಗಿಯೂ ಉಪಯೋಗಿಸಿಕೊಳ್ಳುತ್ತಿದ್ದಾನೆ. ಬದುಕಿನ ಪ್ರತಿ ಹೆಜ್ಜೆಗೂ ಸಸ್ಯವನ್ನು ತೊಡಕು ಹಾಕಿಕೊಂಡೇ ಬದುಕಿದ್ದಾನೆ.

ಅನಾಗರಿಕ ಸ್ಥಿತಿಯಲ್ಲಿ ಮಾನವ ಗಿಡದ ಹೊದರನ್ನೇ ಮನೆ ಮಾಡಿಕೊಂಡಿದ್ದರೆ, ನಾಗರಿಕರಾದ ನಾವು ಗಿಡವನ್ನೇ ಕಡಿದು ಮನೆಯ ತೊಲೆ, ಜಂತಿ, ಬಾಗಿಲು ಮಾಡಿಕೊಂಡು ಮನೆಯನ್ನೇ ಕಟ್ಟಿಕೊಂಡೆವು. ಆದಿಮಾನವ ಗಿಡದ ತಪ್ಪಲಿನಿಂದ ಮೈ, ಮಾನ ಮುಚ್ಚಿಕೊಳ್ಳಲು ಮಾಡಿದ ಪ್ರಯತ್ನ, ಇಂದು ಹತ್ತಿಯಷ್ಟೇ ಅಲ್ಲದೆ, ಹಲವಾರು ಸಸ್ಯಸಾರ, ನಾರು ಮೊದಲಾದವುಗಳು ಬಳಕೆಯಲ್ಲಿ ಬಟ್ಟೆಯಾಗಿ ಪರ್ಯವಸಾನ ಹೊಂದಿವೆ. ಅಲ್ಲದೆ ಇಂದು ನಮಗೆ ದೊರೆಯುವ ರೇಷ್ಮೆ, ಬೆಣ್ಣೆ, ಹಾಲು, ತುಪ್ಪ, ಎಣ್ಣೆ, ಬೆಲ್ಲ, ಸಕ್ಕರೆ ಎಲ್ಲವೂ ಸಸ್ಯ ಸಾರದ ರೂಪಾಂತರ ಮಾತ್ರ. ಒಂದು ಸಸ್ಯ ಇನ್ನೊಂದು ಸಸ್ಯಕ್ಕೆ ಸಾರವಾಗಿ ಅದರ ಫಲವತ್ತತೆಗೂ ಕಾರಣವಾಗುವುದನ್ನರಿತ ಮಾನವ ಅದನ್ನು ಗೊಬ್ಬರವಾಗಿ ಬಳಸಿಕೊಳ್ಳುತ್ತಾನೆ.

ಹೀಗೆ ಆದಿಮಾನವನೇ ಆಗಲಿ, ಆಧುನಿಕ ಮಾನವನೇ ಆಗಲಿ ಸಸ್ಯ ಬಿಟ್ಟು ಬದುಕುವುದು ಸಾಧ್ಯವಿಲ್ಲವೆಂಬುದು ಸಾಬೀತಾಗಿದೆ. ಜನಪದಕ್ಕಂತೂ ಸಂಪೂರ್ಣ ಸಸ್ಯವೇ ಬೇಕು. ಛಳಿ, ಮಳೆ, ಬಿಸಿಲಿನ ಆಸರಕ್ಕೆ ಹೊಲದಲ್ಲಿಯೂ ತನಗೊಂದು ಗುಡಿಸಲು, ದನಗಳಿಗೆ ಛಪ್ಪರ, ತನ್ನ ಪರಿಸರದಲ್ಲಿ ಲಭ್ಯವಿರುವ ಸಸ್ಯಗಳನ್ನು ಬಳಸಿಕೊಂಡೇ ಕಟ್ಟಿರುತ್ತಾನೆ. ಪಟ್ಟಣ ವಾಸದ ಕೊಳಚೆ ಪ್ರದೇಶದ ಗುಡಿಸಲುಗಳಿಗೆ ತಗಡು, ತಟ್ಟು, ರಟ್ಟುಗಳನ್ನು ಬಳಸಿಕೊಂಡರೂ, ತಪ್ಪದೇ ಮನೆಯ ಮುಂದೊಂದು ಗಿಡ ಬೆಳಸಿ ಅದರ ಕೆಳಗೇ ದಿನಗಳೆಯುವದನ್ನು ನೋಡಬಹುದು. ಗ್ರಾಮೀಣರು ಸಸ್ಯಗಳ ಅಪರೋಕ್ಷವಾದ ವೈಜ್ಞಾನಿಕ ಪ್ರಯೋಜನಗಳನ್ನು ಅರಿಯದಿದ್ದರೂ ನೇರವಾಗಿ ಅವುಗಳನ್ನು ಬದುಕಿನ ಪ್ರಯೋಜನಕ್ಕೆ ಬಳಸಿಕೊಳ್ಳದೇ ಬಿಟ್ಟಿಲ್ಲ. 'ನೆರಳಿಗೊಂದು ಮರ, ಕರುಳಿಗೊಂದು ಕೂಸು' ಇದು ಗ್ರಾಮೀಣ ಬಡ ಜನತೆಯ ಸೂತ್ರವೇ ಆಗಿದೆ.

ಒಟ್ಟಿನಲ್ಲಿ ಸಸ್ಯ ಜೀವ ಮಾನವ ಜೀವಕ್ಕೆ ನೇರ ಸಂಬಂಧವಿದೆ ಎಂಬ ಕಲ್ಪನೆ ಜನಪದರಲ್ಲಿದೆ. ಅಲ್ಲದೆ ಸತ್ತಾಗಲೂ ತನ್ನ ಗೋ–ರಿಯ ಮೇಲೆ ಗಿಡ ನೆಡಲು ಹೇಳಿ, ಅದರ ಹಣ್ಣು ತಿಂದಾಗ ಮಕ್ಕಳಾಗುವ, ಮೊದಲಾದ ಇಚ್ಛಾಪೂರ್ತಿಯಾಗುವ ಪ್ರಸಂಗಗಳೂ ಜನಪದ ಕಥೆಗಳಲ್ಲಿ ಉಕ್ತವಾಗಿವೆ. ಮಾನವ ಜೀವ ಮರ ಜೀವವಾಗಿ ಮಾರ್ಪಡುವ ಕಲ್ಪನೆ ಇದು. ಅದಕ್ಕಾಗಿಯೇ ಗೋರ್‍ಯಾಳದ ಗಿಡದಿಂದ ತೊಲೆ, ಜಂತಿ, ಕಂಬ ಮಾಡಬಾರದೆಂಬ ನಂಬುಗೆ ಬೆಳೆದುಬಂದಿವೆ. ಇವುಗಳ ಜೊತೆಗೆ ಆಸೆ ಹೊಂದಿದ ಜೀವ ಮನೆಗೆ ಬರುತ್ತದಂತೆ!

ಇಂದೂ ಸಹಿತ ಗ್ರಾಮೀಣ ಜನತೆ ಬೆಳೆ ಸಮೃದ್ಧವಾಗಿ ಬಂದರೆ ಜನಕ್ಕೇನೋ ಪೀಡೆ ಅನಾಹುತ ಕಾದಿದೆ ಎಂದು ಭಾವಿಸುತ್ತಾರೆ. ಬೆಳೆಗೆ ಬರದ ರೋಗ ಮನುಷ್ಯರಿಗೆ ಬರಬಹುದೆಂಬ ಕಲ್ಪನೆ. ಹಿಂದಂತೂ ಬಹಳ ಉತ್ತಮ ಬೆಳೆ ಬಂದ ವರ್ಷ ದುರಗವ್ವನ ಬ್ಯಾನಿ, ಪ್ಲೇಗು ಮೊದಲಾದವು ತಪ್ಪದೇ ಬರುತ್ತವೆಂದು ಹೆದರಿಕೊಂಡೇ ಬದುಕುತ್ತಿದ್ದರು.

ಮಕ್ಕಳಿಗೆ ಮುಟ್ಟುರೋಗ ಮೊದಲಾದ ರೋಗಗಳಾದರೆ ಆ ಮಕ್ಕಳ ಅಂಗಿಕುಂಚಿಗೆ ಕುಲಾಯಿಗಳನ್ನು ಗಿಡಕ್ಕೆ, ವಿಶೇಷವಾಗಿ ಬನ್ನೀ ಗಿಡಕ್ಕೆ ಸಿಕ್ಕಿಸಿ ಬರುತ್ತಾರೆ. ಮಕ್ಕಳ ರೋಗ ಈ ಮರಕ್ಕೆ ವರ್ಗವಾಗುತ್ತದೆ ಎನ್ನುವ ನಂಬುಗೆ. ಮಕ್ಕಳು ಹುಲ್ಲಾಗಿ ಕಲ್ಲಾಗಿ ನೆಲ್ಲಿಯ ಬಡ್ಯಾಗಿ ಚಿಗಿತು ಬದುಕಲಿ ಎಂದು ಹಾರೈಸುತ್ತಾರೆ.

ಸಸ್ಯಗಳ ಜೊತೆಗೆ ಮಾನವ ಮೇಲು–ಕೀಳು ಎಂಬ ಸಂಬಂಧವನ್ನು ಬೆಳೆಸಿಕೊಂಡಿದ್ದಾನೆ. ತೆಂಗು ಮೇಲು, ಪವಿತ್ರವಾದರೆ ಅದೇ ವರ್ಗಕ್ಕೆ ಸೇರಿದ ಸಿಂದಿಯ ಗಿಡ ಕೀಳು. ಸಿಂದಿಯ ಗಿಡದಿಂದ ಮಾಡಿದ ಪೊರಕೆ, ಹೆಡಿಗೆಗಳನ್ನು ಮುಟ್ಟಿದಾಗಲೆ ಕೈ ತೊಳೆದುಕೊಳ್ಳುತ್ತಾರೆ. ಅವುಗಳನ್ನು ಅಂಗಳದಿಂದ ಮೇಲೆ, ಮನೆಯಲ್ಲಿ ಬಳಸುವುದಿಲ್ಲ. ಅದೇ ಹಾಲಕ್ಕಿಯ ಗಿಡದಿಂದ ಮಾಡಿದ ಹೆಡಿಗೆ ಪಡಸಾಲೆಗೂ ಬರುತ್ತದೆ. ಬಿದಿರಿನಿಂದ ಮಾಡಿದ ಬುಟ್ಟಿ, ಮನೆ, ಹುಲ್ಲಿನ ಕಸಬರಿಗೆಗಳು ಅಡಿಗೆ ಮನೆಯಲ್ಲೂ ಓಡಾಡುತ್ತವೆ. ಮದಿಹುಲ್ಲಿನ ಹಿಡಿ, ಬಾರಿಗೆ, ಉತ್ತರಾಣಿಯ ಕಡ್ಡಿಯ ಸಡ್ಡ ಪೂಜ್ಯವೆನಿಸಿಕೊಳ್ಳುತ್ತವೆ. ಆಹಾರ ಧಾನ್ಯಗಳಾದ ಅಕ್ಕಿ ಗೋದಿಗಿದ್ದ ಶ್ರೇಷ್ಠತೆ ಜೋಳಕ್ಕಿಲ್ಲ. ಸಜ್ಜೆ ನವಣೆಗಳನ್ನಂತೂ ಮಂಗಲ ಕಾರ್ಯದಲ್ಲಿ ಬಳಸುವುದೇ ಇಲ್ಲ. ಮಾವು ಬಾಳೆ ಕಬ್ಬುಗಳಿಗೆ ವಿಶೇಷ ಮೇಲ್ಮೆಯಿದೆ.

ಮಾನವನಿಗೆ ಸಸ್ಯದಂತಹ ಉಪಕಾರಿ ಪ್ರಯೋಜನಕಾರಿ ಬಂಧು ಇನ್ನೊಬ್ಬನಿಲ್ಲ. ಜನಪದ ಬದುಕು ಸಸ್ಯಗಳನ್ನು ತಿಂದುಂಡು ಹಾಸಿ ಹೊದೆದುಕೊಂಡು ಬದುಕುತ್ತದೆ. ಆದರೆ ಪ್ರಾದೇಶಿಕತೆ ಮತ್ತು ಸಂಕೀರ್ಣತೆಗಳು ಸಸ್ಯ ಜಾನಪದದ ವೈಶಿಷ್ಟ್ಯಗಳಾಗಿವೆ.

ಸಸ್ಯಾರಾಧನೆ: ಎದ್ದ ಯಾಳೆದಲೆ ಎಳ್ಳು ಜೀರಿಗಿ ಬೆಳೆವ ಭೂಮಿ ತಾಯಿಯನ್ನು ನೆನೆವ ಜಾನಪದರಿಗೆ ಬದುಕೇ ಒಂದು ಆರಾಧನೆ. ತಮ್ಮ ಬದುಕಿಗೆ ನೆರವಾಗುವ ದನಕರು, ಹೊಲ ನೆಲವನ್ನು ಬಿಡಿ, ಮನೆಯ ಹೊಸಿಲು ಹಿಡಿದು, ಕಲ್ಲು, ಕಸಬರಿಗೆ ಮೊರ ಮೊದಲು ಮಾಡಿಕೊಂಡು ನಿತ್ಯೋಪಯೋಗಿಯಾದ ಹಲವಾರು ವಸ್ತುಗಳನ್ನು ಅವರು ಪೂಜ್ಯವೆಂದು ಭಾವಿಸಿ ಪೂಜಿಸುತ್ತಾರೆ. ಸಸ್ಯಗಳನ್ನಂತೂ ಅವರು ಉಂಡುಟ್ಟು ಹಾಸಿ ಹೊತ್ತುಕೊಂಡು ಬದುಕಿದವರು ಅದಕ್ಕವರ ಆರಾಧನೆ ಸಲ್ಲಲೇಬೇಕು. ಜನಪದ ಹಬ್ಬಗಳಲ್ಲಿ ಒಂದಿಲ್ಲೊಂದು ರೀತಿಯಿಂದ ಸಸ್ಯಾರಾಧನೆ ಸಾಗಿಯೇ ಸಾಗುತ್ತದೆನ್ನುವದಕ್ಕಿಂತ, ಸಸ್ಯಾರಾಧನೆಗಾಗಿಯೇ ಹಬ್ಬಗಳು ಹುಟ್ಟಿಕೊಂಡವೆಂಬ ಮಾತಿನಲ್ಲೇ ಬಹಳಷ್ಟು ಸತ್ಯಾಂಶವಿದ್ದಂತಿದೆ.

ಸೀಗೀ ಹುಣ್ಣಿವೆ, ಎಳ್ಳ ಅಮವಾಸ್ಯೆ, ಭಾರತ ಹುಣ್ಣಿವೆ (ತೆನೆಕಟ್ಟುವ ಹಬ್ಬ), ರಾಸೀ ಚರಗ, ಇವೆಲ್ಲ ತಾವು ಬೆಳೆದ ಸಸ್ಯಗಳ ಬೆಳವಣಿಗೆಯ ಹಂತಗಳನ್ನು ಸೂಚಿಸುತ್ತವೆ. ಸೀಗೀ ಹುಣ್ಣಿವೆಯನ್ನು ಮುಂಗಾರಿಯ ಬೆಳೆ ಬೆಳೆವ ಧಾರವಾಡ, ಬೆಳಗಾವಿಯ ಕಡೆ ವಿಶೇಷವಾಗಿ ಆಚರಿಸುತ್ತಾರೆ. ಎಳ್ಳ ಅಮವಾಸ್ಯೆಯನ್ನು ಹಿಂಗಾರಿಯ ಬೆಳೆಯನ್ನವಲಂಬಿಸಿರುವ ವಿಜಾಪೂರ, ಗುಲ್ಬರ್ಗಾ ಜಿಲ್ಲೆಗಳಲ್ಲಿ ದಟ್ಟವಾಗಿ ಆಚರಿಸುತ್ತಾರೆ. ಈ ಸಮಯದಲ್ಲಿ ಈ ಭಾಗದ ಪ್ರಮುಖ ಬೆಳೆಯಾದ ಜೋಳ ಜೊತೆಗೆ ಬಂದಿರುತ್ತದೆ. ಆ ವರ್ಷದ ಬೆಳೆಯ ಭರವಸೆಗೆ ಆ ನಿಲುವು ಸಾಕ್ಷಿಯಾಗಿರುತ್ತದೆ.

ಅಂದು ಮನೆಯಲ್ಲಿ ಸಡಗರ. ಸಿಹಿ ಊಟ ಮಾಡಿಕೊಂಡು, ಎತ್ತಿನ ಗಾಡಿಯನ್ನು ಹೂಡಿಕೊಂಡು ಹೊಲ ಇಲ್ಲದ ನೆರೆಹೊರೆಯವರನ್ನು ಕರೆದುಕೊಂಡು ಹೊಲಕ್ಕೆ ಹೋಗುತ್ತಾರೆ. ಸಸ್ಯ ಸಡಗರದ ಹೊಲದಲ್ಲಿಯ ಬನ್ನಿಯ ಗಿಡದ ಕೆಳಗೆ ಐದು ಹೆಂಟೆ ಇಲ್ಲವೆ ಕಲ್ಲನ್ನಿಟ್ಟು ಲಕ್ಷ್ಮೀ ಎಂದು ಪೂಜಿಸುತ್ತಾರೆ. ನಾಲ್ಕು ದಿಕ್ಕಿಗೆ ವಿಭೂತಿ ಕುಂಕುಮ ಚೆಲ್ಲಿ, ಸಿಹಿ ಅಡಿಗೆಯ ನೈವೇದ್ಯವನ್ನೂ ಅಗಳಗಳಾಗಿ ಎಲ್ಲ ಕಡೆಗೂ ಸಮರ್ಪಿಸಿ ನಮ್ಮ ಹೊಲಾ ಬೆಳಿಲೊ ಎಂದು ನೀರು ಸಿಂಪಡಿಸುತ್ತಾರೆ. ಇದಕ್ಕೆ ಚರಗ ಚೆಲ್ಲುವುದು ಎನ್ನುತ್ತಾರೆ. ಅಲ್ಲದೇ ನಿಂತ ನೆಲದಲ್ಲೇ ಐದು ಹೊಡೆ ಕೂಡಿಸಿ ಕಟ್ಟಿ ಅದರಲ್ಲಿ ಹೋಳಿಗೆ ಕರಿಗಡಬು ಮುರಗಣ ಇಡುತ್ತಾರೆ. ಇದು ಪ್ರಮುಖವಾಗಿ ಬೆಳೆಯ ಆರಾಧನೆಯ ಹಬ್ಬ.

ಮುಂದೆ ಒಂದೂವರೆ ತಿಂಗಳಲ್ಲೇ ಭಾರತ ಹುಣ್ಣಿವೆ. ಅದನ್ನು ತೆನೆಕಟ್ಟು ಹಬ್ಬವೆಂದು ಹೇಳುತ್ತಾರೆ. ಆಗ ಬೆಳೆ ಮಾಗಲು ಪ್ರಾರಂಭವಾಗುತ್ತದೆ. ಅಂದು ಹೊಲದಿಂದ ಐದು ಜೋಳದ ತೆನೆ, ಒಂದು ಹಿಡಿ ಗೋದಿಯ ಹುಲ್ಲು, ಕುಸುಬಿ, ಅಗಸಿ, ಕಡಲೆಯ ಗಿಡಗಳನ್ನು ಕಿತ್ತು ತಂದು ಮನೆಯ ಜಗುಲಿ (ದೇವರ)ಯ ಮೇಲಿಟ್ಟು ಪೂಜಿಸುತ್ತಾರೆ. ಅಂದು ಬೆಳೆಗಳ ತೆನೆ ಕಾಯಿ ಹುಲ್ಲನ್ನೇ ತಲಬಾಗಿಲಿಗೆ ತಳಿರು ತೋರಣದಂತೆ ಕಟ್ಟುತ್ತಾರೆ. ಪೂಜೆಯ ಕಾಲಕ್ಕೆ ಮಕ್ಕಳೆಲ್ಲ ಗಂಗಾಳ ಬಾರಿಸುತ್ತಾ ಒಳಗಿನ ದೇವರ ಹೊರಗೊ, ಹೊರಗಿನ ದೇವರ ಒಳಗೊ ಎಂದು ಉಗ್ಗಡಿಸುತ್ತಿರುತ್ತಾರೆ. ಇದು ಹೊಸ ಬೆಳೆಯ ಸ್ವಾಗತಕ್ಕೆ ಮಾಡುವ ಆರಾಧನೆ. ಹೀಗೆ ಪೂಜೆ ಮಾಡಿದ ಈ ತೆನೆ, ಗೋದಿಯ ಹುಲ್ಲು ಮೊದಲಾದುವನ್ನು ಆಯಾ ರಾಶಿಯ ಕಣದಲ್ಲಿ ಸೇರಿಸುತ್ತಾರೆ; ಬೆಳೆ ಹುಲುಸಾಗಲೆಂದು.

ಮುಂದಿನ ಹಂತವೇ ರಾಶಿಯ ಚರಗ. ಕಣದ ತುಂಬೆಲ್ಲ ಮುರಿದ ತೆನೆ ಅದರ ಪೂಜೆ. ಅಂದು ಬೆಳಗೆಲ್ಲಾ ಹಂತಿ ಹಾಡು ನೆರೆಯ ಹೊಲದವರಿಗೂ ಬಂಧು ಬಳಗದವರಿಗೂ ಅಂದು ರಾತ್ರಿ ರಾಸಿಯ ಚರಗದೂಟ. ಮರುದಿನ ಕಾಳು ತೂರಿದ ಮೇಲೆ ಮತ್ತೆ ರಾಸಿಯ ಪೂಜೆ. ಈಗ ಬನ್ನಿ, ಎಕ್ಕೆಯ ಪೂಜೆ ನಡೆಯುತ್ತದೆ. ಹೀಗೆ ಕಾರ್ಯದ ಜೊತೆಗೆ ಆರಾಧನೆ ನಡದೇ ಇರುತ್ತದೆ. ಇದರಂತೆ ಕನ್ಯೆ ಬೀಡಿನ ಹತ್ತೀ ಬಿಡಿಸಲು ಆರಂಭಿಸುವಾಗಲೂ ಬೆಳೆಯ ಪೂಜೆ ಮಾಡಿಯೇ ಸಮೃದ್ಧ ಬೆಳೆಗಾಗಿ ಬೇಡಿಕೊಳ್ಳುತ್ತಾರೆ.

ಬಾಳೆ, ಎಲೆ, ಬಳ್ಳಿ ಮೊದಲಾದ ಬೆಳೆಗಳನ್ನು ಉಪ ಭೋಗಿಸಲು ಆರಂಭಿಸುವ ಮೊದಲು ಆ ಬನ (ಪಡ)ಗಳಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಅಂದು ಮುತ್ತೈದೆಯರನ್ನು ಊಟಕ್ಕೆ ಕರೆದು ಅವರಿಗೆ ಸೀರೆ ಕುಪ್ಪಸದ ಆಹೇರಿ ಸಲ್ಲಿಸುತ್ತಾರೆ. ಸಾಂಕೇತಿಕವಾಗಿ ಒಂದು ಗಿಡಕ್ಕೆ ಸೀರೆ ಕುಪ್ಪಸ ಏರಿಸಿ ಪೂಜಿಸುತ್ತಾರೆ. ಅದು ತಮ್ಮ ಮನೆಯ ಹೆಣ್ಣು ಮಗಳಿಗೆ ಸಲ್ಲಬೇಕಾದ ಬಾಜ.

ಚೊಚ್ಚಲ ಬಸುರಿಯರಿಗೆ ಕುಪ್ಪಸ ಮಾಡುವಂತೆ, ಮಾವು, ತೆಂಗು ಮೊದಲಾದ ಗಿಡಗಳ ಮೊದಲ ಫಲ ಇಳಿಸುವ ಮೊದಲು ಕುಪ್ಪಸ ಮಾಡಿ ಒಂದು ರೀತಿಯ ವಿಶೇಷ ಪೂಜೆ ಸಲ್ಲಿಸಿ ಫಲಗಳನ್ನು ಇಳಿಸುತ್ತಾರೆ.

ಜಾನಪದದಲ್ಲಿ ಧರ್ಮ ಒಂದು ಶಕ್ತಿಯೂ ಹೌದು, ಸಾಂತ್ವನವೂ ಹೌದು. ಹಲವಾರು ಗಿಡಮರಗಳನ್ನು ದೇವರ ಅವತಾರವೆಂದು ಭಾವಿಸಿ ಪೂಜಿಸುತ್ತಾರೆ. ಬನ್ನಿ, ಬಿಲ್ವ, ಆಲ, ಆರಳಿ, ಬಸರಿ, ತುಳಸಿ, ನೆಲ್ಲಿ ಮೊದಲಾದ ಗಿಡಗಳನ್ನು ವಿಶೇಷ ಸಂದರ್ಭಗಳಲ್ಲಿ ಆರಾಧಿಸುವ ಧಾರ್ಮಿಕ ಸಂಪ್ರದಾಯ ಅನಂತ ಕಾಲದಿಂದಲೂ ಬೆಳೆದುಬಂದಿದೆ.

ಬನ್ನಿ: ಬನ್ನಿಯನ್ನು ಮಹಾಕಾಳಿಯ ಅವತಾರವೆಂದು ಪರಿಗಣಿಸಲಾಗುತ್ತದೆ. ಪಾಂಡವರು 'ಬನ್ನಿಯ ಎಲೆಯ ಪತ್ರೊಳಿ' ಮಾಡಿ ಉಂಡು ವನವಾಸಕ್ಕೆ ಹೋದುದನ್ನು ತ್ರಿಪದಿಯೊಂದು ತಿಳಿಸುತ್ತದೆ. ಹೋಗುವಾಗ ತಮ್ಮ ಆಯುಧಗಳನ್ನು ಈ ಶಮೀ ತಾಯಿಯ ಬಸಿರಲ್ಲಿ ಬಚ್ಚಿಟ್ಟು ಹೋದರಂತೆ! ಮರಳಿ ಬಂದು ತಮ್ಮ ವಿಜಯೋತ್ಸವವನ್ನು ಈ ಮರದ ಪೂಜೆ ಮಾಡಿ ಆಚರಿಸಿದರಂತೆ. ಅದರ ಸಂಕೇತವಾಗಿ ವಿಜಯ ದಶಮಿಯಂದು ಈ ಬನ್ನೀ ಗಿಡಕ್ಕೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಪ್ರತಿಯೊಬ್ಬರು ಹೊಲದಲ್ಲಿ ಅದನ್ನು ಲಕ್ಷ್ಮೀ ಗಿಡವೆಂದು ಪೂಜಿಸುತ್ತಾರೆ. ಅದರ ಹತ್ತಿರವೇ 'ಕಣ' ಮಾಡುತ್ತಾರೆ. ಅದನ್ನು ಪವಿತ್ರವೆಂದು ಪರಿಗಣಿಸುವುದಷ್ಟೇ ಅಲ್ಲ. ಅದರ ಕಟ್ಟಿಗೆಯನ್ನೂ ಉರಿಸುವುದಿಲ್ಲ. ಅದನ್ನು 'ಮೇಟಿ' ಯಾಗಿ ಮಾಡುತ್ತಾರೆ.

ಆಲ, ಅರಳಿ ಮತ್ತು ಬಸರಿ: 'ಆಲಕ್ಕೆ ಹೂವಿಲ್ಲ' ಎಂಬ ಪ್ರಖ್ಯಾತ ಜಾನಪದ ತ್ರಿಪದಿಯೊಂದಿದೆ. ಆದರೆ ಸಸ್ಯಶಾಸ್ತ್ರದ ಪ್ರಕಾರ ಅದಕ್ಕೆ ಹೂವಿದೆ. ಆಲ, ಅರಳಿ, ಬಸರಿ ಈ ಮೂರು ಒಂದೇ ಸಸ್ಯ ವರ್ಗಕ್ಕೆ ಸೇರಿದ ಮರಗಳು. ಈ ಮೂರು ಗಿಡಗಳನ್ನು ನೆಡುವಾಗ ಜೊತೆಗೆ ಬೇವಿನ ಮರವನ್ನು ನೆಡುತ್ತಾರೆ. ಈ ಜೋಡಿ ಗಿಡಕ್ಕೆ ಅಶ್ವತ್ಥ ವೃಕ್ಷವೆಂಬ ಹೆಸರು. ಸಾಮಾನ್ಯವಾಗಿ ಇವುಗಳನ್ನು ದೇವರ ಅದರಲ್ಲಿಯೂ ಹನುಮಂತ ದೇವರ ಗುಡಿಯ ಮುಂದೆ ಹಚ್ಚುತ್ತಾರೆ. ಈ ಜೋಡಿ ಮರಕ್ಕೆ ಪೂಜೆ ನಮಸ್ಕಾರ ಎಲ್ಲ ಸಲ್ಲುತ್ತವೆ. ಮದುವೆಯಾದ ಬೇವು (ಹೆಣ್ಣು) ತನ್ನ ಹೆಸರನ್ನು ಕಳೆದುಕೊಂಡು ಅಶ್ವತ್ಥದ ಅಂಗವಾಗುತ್ತದೆ. ಈ ಆಲ (ಅಶ್ವತ್ಥ) ವಿಷ್ಣುವಿನ ಅವತಾರವೆಂಬುದು ಪುರಾಣೋಕ್ತ ವಿಷಯ. ಕೃಷ್ಣ ಒಂದಾಲದೆಲೆಯ ಮೇಲೆ ಮಲಗಿದ್ದನ್ನು ಹೇಳುವ ಜನಪದ ಹಾಡುಗಳೂ ಉಂಟು. ಆಲ, ಅರಳಿ, ಬಸರಿ ಎಲ್ಲವೂ ಹಾಲಿದ್ದ ಮರಗಳು. ಇವುಗಳ ವಂಶಾಭಿವೃದ್ಧಿ ಬೀಜದಿಂದಲ್ಲ ಟೊಂಗೆಯಿಂದ. ಇದು ಗಂಡು ಗಿಡ ಎಂದು ಪರಿಗಣಿಸಲ್ಪಟ್ಟಿರುವುದಕ್ಕೆ ಕಾರಣ ವಿಷ್ಣುವಿನ ಅವತಾರವೆಂಬ ನಂಬುಗೆ.

ಆಲ ಬೀಳಲು ಬಿಡುತ್ತ ಅನಂತ ಕಾಲಕ್ಕೆ ಸಾಕ್ಷಿಯಾಗಿ ನಿಲ್ಲಬಲ್ಲ ಮರ. ಇದನ್ನು ವಂಶಾಭಿವೃದ್ಧಿಗೆ, ಜ್ಞಾನಕ್ಕೆ ಸಂಕೇತವಾಗಿ ಅಭಿಜಾತ ಸಾಹಿತ್ಯದಲ್ಲಿಯೂ ಬಳಸಲಾಗಿದೆ. ಈ ಕಾರಣಕ್ಕಾಗಿಯೇ ಇದು ಪೂಜೆಗೊಳ್ಳುತ್ತದೆ. ಇದು ಬೋಧಿ ವೃಕ್ಷವೆಂದು ಪರಿಗಣಿಸಲ್ಪಡುತ್ತದೆ. ಆಲದ ಕಟ್ಟಿಗೆಯನ್ನು ಬಹಳ ಜನ, ಅದರಲ್ಲೂ ಬ್ರಾಹ್ಮಣರು ಸುಡುವುದಿಲ್ಲ.

ಬಿಲ್ವ ವೃಕ್ಷ: ಬಿಲ್ವ ಮಹಿಮೆಯನ್ನು ಸಾರುವ ಪುರಾಣ ಸಾಹಿತ್ಯ ಸಂಸ್ಕಾರದಲ್ಲಿ ಉಪಲಬ್ಧವಿದೆ. ಶಿವಭಕ್ತರಿಗೆ ಇದು

ಅತ್ಯಂತ ಪವಿತ್ರ ವೃಕ್ಷ. ಬಿಲ್ವಪತ್ರಿ ಶಿವನ ಪೂಜೆಗೆ ಸಾಮಗ್ರಿ. ಇದರ ತ್ರಿದಲದಲ್ಲಿ ಬ್ರಹ್ಮ, ವಿಷ್ಣು, ರುದ್ರರು ನೆಲೆಸಿರುತ್ತಾರಂತೆ! ಈ ಮರವನ್ನು ಶಿವರಾತ್ರಿಯಂದು ಪೂಜಿಸಿ 'ಪತ್ರಿ' ತಂದು ಶಿವಪೂಜೆ ಮಾಡುತ್ತಾರೆ. ಇದರ ಎಲೆಯನ್ನು ಜಾನಪದದಲ್ಲಿ ಪತ್ರಿ ಎಂದೇ ಕರೆಯುವುದು. ಈ ಮರ ಮಸಣದಲ್ಲಿ ಮಠದಲ್ಲಿ ಮಾತ್ರ ಬೆಳೆಸುತ್ತಾರೆ. ಮನೆಗೆ ಈ ಮರ ದೂರ, ಇದರ ಎಲೆ ಕಾಯಿ ಆಯುರ್ವೇದ ಔಷಧಿಯಲ್ಲಿ ಪರಮ ಪ್ರಯೋಜನಕಾರಿ. ಇದರ ಕಟ್ಟಿಗೆಯನ್ನು ಶೈವರು ಯಾವುದಕ್ಕೂ ಬಳಸುವುದಿಲ್ಲ. ಯಾವ ಭಾಗವನ್ನೂ ತುಳಿಯುವುದಿಲ್ಲ. ಇದರ ವಾಸನೆಗೆ ಹಾವುಗಳು ದೂರ ಇರುತ್ತವೆಂಬ ಪ್ರತೀತಿ.

ತುಳಸಿ: ತೀರ ಪುಟ್ಟ ಗಿಡ. ಶಿವಭಕ್ತರಿಗೆ ಬಿಲ್ವ ಪವಿತ್ರವಾದರೆ ವಿಷ್ಣುಭಕ್ತರಿಗೆ ತುಳಸಿ ಪವಿತ್ರ ವಿಶೇಷವಾಗಿ ಪ್ರತಿ ಬ್ರಾಹ್ಮಣರ ಮನೆಯ ಮುಂದೆ ತುಳಸಿ ಇದ್ದೇ ಇರುತ್ತದೆ. ನಿತ್ಯ ಅದರ ಪೂಜೆ ನಡೆದೇ ನಡೆಯುತ್ತದೆ. ಇದರಲ್ಲಿ ಬಿಳಿಯ ತುಳಸಿ, ಕೃಷ್ಣ ತುಳಸಿ ಎಂಬೆರಡು ಪ್ರಕಾರವಲ್ಲದೆ ನಾಯಿ ತುಳಸಿಯೊಂದಿದೆ. ಇದನ್ನು ನೊರಜು ಚಿಕ್ಕಾಡುಗಳಾದಾಗ ಕಳ್ಳಿಯೊಂದಿಗೆ ಮನೆಯಲ್ಲಿ ಕಟ್ಟುತ್ತಾರೆ. ಇದು ಪೂಜೆಗೆ ಅರ್ಹವಲ್ಲ ಪೂಜೆಗೊಳ್ಳುವ ಕೃಷ್ಣ ತುಳಸಿ ವಿಶೇಷವಾಗಿ ಔಷಧಿಯ ಗುಣಗಳನ್ನು ಪಡೆದಿರುತ್ತದೆ. ಇದನ್ನು ವಿಷ್ಣುವಿನ ಹೆಂಡತಿ ಎಂದು ಆರಾಧಿಸುತ್ತಾರೆ. ಬಿಲ್ವಪತ್ರಿಯಂತೆ ತುಳಸಿಯ ದಳವನ್ನು ಪೂಜೆಯ ಸಾಮಗ್ರಿಯಾಗಿ ಉಪಯೋಗಿಸುತ್ತಾರೆ.

ಬೇವು: ಆಲ, ಅರಳಿಯ ಜೊತೆಗೆ ಅಶ್ವತ್ಥ ಕಟ್ಟೆಯ ಮೇಲೆ ಬೇವೂ ಪೂಜೆಗೊಳ್ಳುವುದನ್ನು ನೋಡಬಹುದು. ಬೇವು ಶಕ್ತಿಯ ಅವತಾರವೆಂದು ಜಾನಪದದಲ್ಲಿ ಪರಿಗಣಿಸಲ್ಪಟ್ಟಿದೆ. ಎಲ್ಲಮ್ಮ ಅಂಬಾಬಾಯ ಭಕ್ತರಿಗೆ ಇದು ಪವಿತ್ರಮರ. ಲಂಬಾಣಿಗಳಂತೂ ಇದನ್ನು ದೇವಿ ಎಂದು ಪೂಜಿಸುತ್ತಾರೆ. ಬೇವಿನ ತಪ್ಪಲನ್ನು ಹಿಡಿದು ಪ್ರಮಾಣ ಮಾಡಲು ಅವರು ಹೆದರಿ ಸಾಯುತ್ತಾರೆ. ಬೇವು ಶಕ್ತಿಯ ಸಂಕೇತ ಪಡೆದು ಆರಾಧಿಸಲ್ಪಡುತ್ತದೆ. ಆಲ ಗಂಡಾದರೆ ಬೇವು ಹೆಣ್ಣು ಎಂದು ಪರಿಗಣಿಸಲ್ಪಡುತ್ತದೆ. ಎಲ್ಲಮ್ಮನ ಆರಾಧನೆಯಲ್ಲಂತೂ ಬೇವು ಅವಶ್ಯ. ಯುಗಾದಿಯಂದು ಈ ಗಿಡಕ್ಕೆ ವಿಶೇಷ ಗೌರವ.

ಎಕ್ಕೆ ಗಿಡ: ಎಕ್ಕೆಯನ್ನು ಹೊಲದಲ್ಲಿ ರಾಸಿಯ ಕಾಲಕ್ಕೆ ಪೂಜಿಸುತ್ತಾರೆ. ರಾಸಿಗೆ ಎಕ್ಕೆಯ ಹೂವೇ ಬೇಕು. ಕಣ ಮಾಡುವಾಗಲೇ ಎಕ್ಕೆಯ ಗಿಡದ ಸಮೀಪ ಮಾಡುತ್ತಾರೆ. ರಾಸಿ ತೂರಲು ಗಾಳಿ ಬಿಡದಿದ್ದರೆ ಮತ್ತೆ ಎಕ್ಕೆಯನ್ನೇ ಪೂಜಿಸಿ ಬೇಡಿಕೊಳ್ಳುತ್ತಾರೆ. ಇದರಲ್ಲಿ ಕೆಂಪು, ಬಿಳಿ ಎರಡು ಪ್ರಕಾರಗಳಿವೆ. ಶಿವರಾತ್ರಿಯಂದು ಶಿವ ಎಕ್ಕೆಯ ಗಿಡದ ಕೆಳಗೆ ವಾಸಮಾಡುತ್ತಾನೆಂದು ಜನಪದ ನಂಬುಗೆಯೊಂದಿದೆ ಇದರ ಎಲೆಯ ಬತ್ತಿ ಕಟ್ಟಿ ತಂಬಾಕು ಸೇದುತ್ತಾರೆ.

ಉತ್ತರಾಣಿ: ಶಿವರಾತ್ರಿಯಂದು ಶಿವಪೂಜೆಗೆ ಉತ್ತರಾಣಿಯ ಕಡ್ಡಿಯಿಂದಲೇ ದೀಪ ಬೆಳಗುತ್ತಾರೆ. ಅದು ಶಿವಪೂಜೆಗೆ ಅವಶ್ಯವಾಗಿ ಬೇಕು. ಅದರಂತೆ ಕೆಲವು ಕಡೆ ಬಲಿಪಾಡ್ಯದಂದು ಉತ್ತರಾಣಿಯನ್ನು ಪೂಜಿಸುತ್ತಾರಂತೆ. ಬಲಿ ತಾನು ಸಾಯುವ ಪೂರ್ವದಲ್ಲಿ ವರ್ಷಕ್ಕೊಂದು ದಿನ ತನ್ನ ಪೂಜೆ ಸಲ್ಲುವಂತೆ ಕೇಳಿದನಂತೆ. ಅದಕ್ಕಾಗಿ ಉತ್ತರಾಣಿಯ ರೂಪದಲ್ಲಿ ಒಂದು ದಿನ ಅವನ ಪೂಜೆ ಸಲ್ಲುತ್ತದೆ. ಉತ್ತರಾಣಿಯ ಕಡ್ಡಿಯಿಂದಲೇ ಮಾಡಿದ 'ಸಡ್ಡ' ಕಣದಲ್ಲಿ ಬಳಸಲ್ಪಡುತ್ತದೆ. ಅದನ್ನು ಪೂಜ್ಯವೆಂದು ಗೌರವದಿಂದ ಕಾಣುತ್ತಾರೆ.

(ಎಂ.ಜಿ.ಬಿ.)

ಸಾ

ಸಾಂತರವ್ವ ಸಾವಣ್ಣ ಸುಣಗಾರ: ಜನಪದ ಗಾಯಕಿ. ಇವರ ತಾಯಿಯ ತಂದೆ ಲಾವಣಿ ಹೇಳುವುದರಲ್ಲಿ ನಿಷ್ಣಾತರಾದರೆ ಕೈ ಹಿಡಿದ ಗಂಡ ಹಾಡುಗಾರಿಕೆ ಮತ್ತು ಬಯಲಾಟಕ್ಕೆ ಹೆಸರಾದವರು. ಗಂಡನ ಅಕಾಲಿಕ ಮರಣದನಂತರ ತನ್ನ ಹಾಡುಗಾರಿಕೆಯನ್ನೇ ಬಂಡವಾಳವಾಗಿಸಿಕೊಂಡು ಈಕೆ ಬದುಕಬೇಕಾಗಿ ಬಂತು. ನೋವು, ದುಃಖಗಳು ಈಕೆಯ ಕಂಠಶ್ರೀಯೊಡನೆ ಮಿಳಿತವಾಗಿ ಹಾಡುಗಾರಿಕೆ ಯಲ್ಲಿ ಈಕೆಗೆ ಅಪೂರ್ವ ಯಶಸ್ಸನ್ನೇ ತಂದುಕೊಟ್ಟವು. ವೈವಿಧ್ಯ ಮಯ ಹಾಡುಗಳ ಗಣಿ ಎನಿಸಿರುವ ಸಾಂತರವ್ವ ಅನೇಕ ಹೆಸರಾಂತ ಶಿಷ್ಯೆಯರನ್ನೂ ರೂಪಿಸಿದ್ದಾರೆ; ಮೊಮ್ಮಕ್ಕಳಿಗೂ ಇದನ್ನು ಧಾರೆ ಎರೆಯಲು ಸನ್ನದ್ಧರಾಗಿದ್ದಾರೆ. ತವರಿನಲ್ಲಿ ಲಾವಣಿ ಹೇಳುವುದನ್ನು ಕರಗತ ಮಾಡಿ ಹುಟ್ಟಿದ ಹೆಣ್ಣು ಬಯಲಾಟವನ್ನು ಕರಗತ ಮಾಡಿ–ಕೊಂಡವರು. ಹುಟ್ಟಿದ ಮನೆ, ಮೆಟ್ಟಿದ ಮನೆ ಎರಡೂ ಕಡೆಯಿಂದ ತಮ್ಮಲ್ಲಿ ಅಡಗಿದ್ದ ಸುಪ್ತ ಪ್ರಜ್ಞೆಯನ್ನು ಹೊರತರುವಲ್ಲಿ ಪ್ರೋತ್ಸಾಹವನ್ನು ಪಡೆಕೊಂಡು ಗಾಯನದಲ್ಲಿ ಉತ್ತುಂಗ ಮಟ್ಟವನ್ನು ಮುಟ್ಟಿದರು. ಕೊನೆಗಳಿಗೆಯಲ್ಲಿ ಕಾಯಲು ಯಾರೂ ಇಲ್ಲದಾಗ ಈಕೆಯ ಹಾಡೇ ಕಾಯುವಂತಾಯಿತು. ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ.

(ಜಿ.ಆರ್.ಟಿ.)

ಸಾಕರವಾಡಿ: ಮದುವೆಗೆ ಮುನ್ನ ನಿಶ್ಚಿತಾರ್ಥ ಮಾಡುವ ಶುಭ ಕಾರ್ಯ. ಹೈದ್ರಾಬಾದ ಕರ್ನಾಟಕದಲ್ಲಿ ಬ್ರಾಹ್ಮಣೇತರ ಹಿಂದುಗಳಲ್ಲಿ ಮೊದಲಿನಿಂದಲೂ ಈ ಸಂಪ್ರದಾಯ ಆಚರಣೆಯಲ್ಲಿದೆ. 'ಸಕ್ರಿ ಹಂಚು' (ಸಕ್ಕರೆ ಕಾರಣ), 'ಗಟ್ಟಿ ಮಾಡು' (ಮದುವೆ ನಿಶ್ಚಿತಾರ್ಥ) ಎಂದೂ ಇದನ್ನು ಕರೆಯುತ್ತಾರೆ. ಮರಾಠಿಯಲ್ಲಿ 'ಸಾಖರ' ಎಂದರೆ ಸಕ್ಕರೆ 'ವಾಡ' ಎಂದರೆ ಹಂಚು, ನೀಡು ಎಂದರ್ಥ. ಮರಾಠಿ ಮೂಲದಿಂದ ಈ ಪದ ಬಂದಿದೆ. ಇಂದಿಗೂ ಕರ್ನಾಟಕ, ಮಹಾರಾಷ್ಟ್ರದ ಗಡಿ ಭಾಗಗಳಲ್ಲಿ ಇದನ್ನು 'ಸಾಖರ (ಸಾಕರ) ಪುಡಾ, 'ಸಾಕರವಾಡಿ' ಎನ್ನುತ್ತಾರೆ.

ಹೆಣ್ಣು–ಗಂಡುಗಳಿಬ್ಬರು ಪರಸ್ಪರ ಮದುವೆಯಾಗಲು ಒಪ್ಪಿದ ಬಳಿಕ ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿ ನಿಶ್ಚಿತಾರ್ಥ ಇಟ್ಟುಕೊಳ್ಳುತ್ತಾರೆ. ಗಂಡಿನ ಮನೆಯವರು ಮದುವೆ ನಿಶ್ಚಿಯ (ನಿರ್ಧಾರ) ಮಾಡುವ ಕನ್ಯೆಗೆ ಅಂಚು ಸೆರಗಿನ ಸೀರೆ, ಕುಪ್ಪಸದ ಖಣ, ಹೂವು, ಹಣ್ಣು ಸಕ್ಕರೆಯಿಂದ ಮುತ್ತೈದೆ ಕೈಯಿಂದ ಉಡಿ ತುಂಬಿಸುತ್ತಾರೆ. ಆ ಕನ್ಯೆಯು ತುಂಬಿದ ಆ ಉಡಿಯನ್ನು ಭದ್ರವಾಗಿ ಹಿಡಿದುಕೊಂಡು ದೇವರಿಗೆ ನಮಸ್ಕರಿಸಿ ಮತ್ತೆ ಬಂದು ಕೂಡುತ್ತಾಳೆ. ಆನಂತರ ಆಕೆಗೆ 'ಚೈನು' (ಕಾಲಿನ ಗೆಜ್ಜೆ)

ಹಾಕುತ್ತಿದ್ದರು. ಎಲ್ಲರಿಗೂ ಉಡಿಯಲ್ಲಿ 'ಕೆಂಪು ಸಕ್ರಿ' (ಕೆಂಪು ಸಕ್ಕರೆ)ಯನ್ನು ಹಾಕಲಾಗುತ್ತಿತ್ತು ಆನಂತರ ಹಾಡುಗಳನ್ನು ಹಾಡುತ್ತಾ ಕನ್ಯೆಗೆ ಆರತಿ ಎತ್ತಲಾಗುತ್ತದೆ. ಇದು ಹಿಂದಿನಿಂದಲೂ ಬಂದ ವಾಡಿಕೆ.

ಇತ್ತೀಚೆಗೆ ಕೆಂಪು ಸಕ್ಕರೆಯ ಬದಲು ಬಿಳಿ ಸಕ್ಕರೆಯನ್ನು ಚೀಟಿಗಳಲ್ಲಿ ಅಥವಾ ಒಂದಿಷ್ಟು ಚಿಟಿಕೆ ಕೈಯಲ್ಲಿ ಹಾಕುವುದುಂಟು. ಅನುಕೂಲಸ್ಥರು 'ಉಂಗುರ ಕಾರಣ' ವನ್ನು ಪ್ರತ್ಯೇಕವಾಗಿ ಮಾಡುತ್ತಾರೆ. ಮದುವೆ ಹೆಣ್ಣಿಗೆ ಗಂಡಿನವರು, ಗಂಡಿಗೆ ಹೆಣ್ಣಿನವರು ಬಟ್ಟೆ ಆಭರಣಗಳನ್ನು ತರುವುದು ಆನಂತರ ಬಂದ ಆಚರಣೆಗಳು. ಮನೆಗೆ ಬಂದಿದ್ದ ಬೀಗರಿಗೆ 'ಸಕ್ಕರೆ ಹಂಚುವ' ಕಾರ್ಯಕ್ರಮದ ಬಳಿಕ ಹೋಳಿಗೆ (ಒಬ್ಬಟ್ಟು) ಊಟವನ್ನು ಕಡ್ಡಾಯವಾಗಿ ಹಾಕಬೇಕು. ನಿಶ್ಚಿತಾರ್ಥಕ್ಕಿಂತ ಮುಂಚೆ ಹೆಣ್ಣಿನ ಮನೆಯಲ್ಲಿ ಊಟ ಮಾಡಬಾರದು. ಆಕಸ್ಮಾತ್ ಮಾಡಿದರೆ ಮದುವೆ ನಿಶ್ಚಯವಾಗದೆ ಮುರಿದು ಬೀಳುತ್ತದೆ ಎಂಬ ನಂಬಿಕೆಯಿದೆ. *(ಎಸ್.ಪಿ.)*

ಸಾರಥಿ: ದೊಡ್ಡಾಟದ ಒಂದು ಪಾತ್ರ. 'ಹನುಮ' ನಾಯಕ, ದೂತಿ, 'ಕೋಡಂಗಿ' ಎಂದು ಕರೆಯುವುದುಂಟು. ಪಾತ್ರ ವರ್ಗದ ಪರಿಚಾರಕ ಮತ್ತು ರಥ ನಡೆಸುವದರಿಂದ ಇವನಿಗೆ ಸಾರಥಿ ಎನ್ನಲಾಗಿದೆ.


ಬಯಲಾಟದ ಕಥಾ ಪ್ರಸಂಗವನ್ನು ಮುನ್ನಡೆಸಲು ಭಾಗವತನಿಗೆ ಸಹಾಯಕವಾಗಿ ನಿಲ್ಲುತ್ತಾನೆ. 'ಪೀಠಿಕೆ' ಎಂಬ ಭಾಗದಲ್ಲಿ ಮೊದಲಬಾರಿಗೆ ರಂಗದ ಮೇಲೆ ಬರುವ ಪಾತ್ರಗಳನ್ನು ಪ್ರೇಕ್ಷಕರಿಗೆ ಪರಿಚಯಿಸುವುದು ಇವನ ಕೆಲಸ.

ಕಡದ ಕಂಠದ ಮಾಲಿ। ಜಡದ ಮುತ್ತಿನ ವಾಲಿ।
ಒತ್ತಿಟ್ಟ ಒಡ್ಯಾಣ। ಜರದ ಪೀತಾಂಬರವನುಟ್ಟು
ಬಾಗುತ ಬಳುಕುತ ಬಂದಂಥ ತಾವುದಾರು
ತಾಯಿ.....। ಸೌಖ್ಯ ಪ್ರದಾಯಿ।

ಎನ್ನುವಲ್ಲಿ ರಾಣಿಯ ಪಾತ್ರ ಪರಿಚಯವಿದೆ. ಹೀಗೆ ಪಾತ್ರಗಳ ಆಕಾರ, ರೂಪುರೇಷೆ, ಉಡಿಗೆ–ತೊಡಿಗೆಗಳನ್ನು ವ್ಯಾಖ್ಯಾನಿಸುತ್ತಾ ಪ್ರೇಕ್ಷಕರ ಗಮನ ಸೆಳೆಯುತ್ತಾನೆ.

ಪಾತ್ರಗಳು ಭರದಿಂದ ನರ್ತಿಸಿ ಏದುಸಿರು ಬಿಡುವಾಗ ತಕ್ಷಣ ನಿಲ್ಲಿಸಿ ಮಾತನಾಡಲು ಸಾಧ್ಯವಾಗುವುದಿಲ್ಲ. ಭಾಗವತ ಆ ಪಾತ್ರಗಳನ್ನು ಒಂದೆಡೆ ನಿಲ್ಲಿಸಿದಾಗ ಸಾರಥಿಯು ಅಡ್ಡ ಕುಣಿತ ಆರಂಭಿಸುತ್ತಾನೆ. ಇದರಿಂದ ಮುಖ್ಯ ಪಾತ್ರಕ್ಕೆ ವಿರಾಮ ಸಿಗುತ್ತದೆ. ಪ್ರೇಕ್ಷಕರಿಗೆ ಆಭಾಸವೂ ಆಗುವುದಿಲ್ಲ, ಮನರಂಜನೆಯೂ ದೊರೆಯುವುದು. ಆವೇಶದಲ್ಲಿ ಪಾತ್ರಗಳು ಕುಣಿಯುವಾಗ ಬಿದ್ದು ಹೋದ ಆಭರಣಗಳನ್ನು ಎತ್ತಿ ಇಡುವುದಲ್ಲದೆ ಸಡಿಲುಗೊಂಡ ಮೀಸೆ, ಕಿರೀಟ, ಭುಜಕೀರ್ತಿಗಳನ್ನು ಸರಿಪಡಿಸುತ್ತಾನೆ. ಕುಣಿತದಲ್ಲಿ ಹೆಜ್ಜೆ ತಪ್ಪದಂತೆ ತಾನೂ ಕುಣಿದು ದೋಷ ಮರೆಮಾಚಿಸುತ್ತಾನೆ. ರಂಗದ ಮೇಲೆ ಪಾತ್ರಗಳ ಆಗಮನ ತಡವಾದರೆ, ಮಾತುಗಳು ಪ್ರೇಕ್ಷಕರಿಗೆ ಅರ್ಥವಗದಿದ್ದಾಗ ಮಧ್ಯೆ ಪ್ರವೇಶಿಸಿ 'ಅರಕೆ' ತುಂಬುತ್ತಾನೆ. ನಟರು ಯುದ್ಧ, ಭಾವೋದ್ವೇಗಗಳಂತಹ ಸಂದರ್ಭದಲ್ಲಿ ವಾಸ್ತವದಲ್ಲಿ ಬಡಿದಾಡದಂತೆ ನೋಡಿಕೊಳ್ಳುತ್ತಾನೆ. ನಾಯಕನೊಂದಿಗೆ ಆಪ್ತಸಖನಾಗಿ, ಖಳರೊಂದಿಗೆ ತೋರಿಕೆಯ ಮಿತ್ರನಂತೆ ನಡೆದುಕೊಳ್ಳುತ್ತಾನೆ. ಭಾಗವತನೊಡನೆ ಕುಶಲ ಸಂಭಾಷಣೆ, ಚರ್ಚೆ ಮಾಡುತ್ತಾ ಏಕತಾನತೆಯನ್ನು ತೊಡೆಯ ಹಾಸ್ಯದ ಹೊನಲನ್ನು ಹರಿಸುತ್ತಾನೆ. ಪ್ರೇಕ್ಷಕರು ನಿದ್ದೆಗೆ ಜಾರದಂತೆ ಆಗಾಗ ರಂಗದ ಮೇಲೆ ಪ್ರವೇಶಿಸಿ ಕುಣಿದು ಕುಪ್ಪಳಿಸಿ ನಕ್ಕು–ನಗಿಸಿ ಮನೋರಂಜನೆಯನ್ನು ಒದಗಿಸುತ್ತಾನೆ. ಇವನ ವೇಷ ಭೂಷಣಗಳು ಇಂದಿನ ಇಸ್ಪೀಟು ಆಟದ ಜೋಕರ ಪಾತ್ರವನ್ನು ಹೋಲುತ್ತವೆ. *(ಎಸ್.ಪಿ.)*

ಸಾರುವ ಅಯ್ಯಗಳು: ಕೆಲವು ಪಾರಂಪರಿಕ ಮಠಗಳು ತಮ್ಮಲ್ಲಿರುವ ತಾಳೆಯೋಲೆ, ಅಥವಾ ಅನ್ಯ ಮಾಧ್ಯಮಗಳ ಮುಖಾಂತರ, ಆ ವರ್ಷದ ಮಳೆ ಬೆಳೆ ಆಗು ಹೋಗುಗಳನ್ನು ನಿರ್ಧರಿಸುತ್ತಾರೆ ಭವಿಷ್ಯದ ಆ ವಿಚಾರಗಳನ್ನೆಲ್ಲ ಕ್ರೋಡಿಕರಿಸಿ ಸಮಾಜದಲ್ಲಿ ಅವುಗಳನ್ನು ಸಾರಿ ಹೇಳಲು, ಕೆಲವು 'ಅಯ್ಯ'



ಸಾರುವ ಅಯ್ಯಗಳು

ಗಳಿಗೆ ವಿಶೇಷ ತರಬೇತಿ ನೀಡುತ್ತಾರೆ. ಅವರು ಊರೂರಿಗೆ ಹಾಡಿನ ರೂಪದಲ್ಲಿ ಸಾರುತ್ತ ತಿರುಗುತ್ತಾರೆ. ಅದಕ್ಕಾಗಿಯೇ ಇವರನ್ನು ಸಾರುವ ಅಯ್ಯಗಳು ಎಂದು ಕರೆಯುವುದು.

ಜಂಗಮ ಜನಾಂಗದಲ್ಲಿ ಕಸಬಿಗನುಗುಣವಾಗಿ ಹಲವಾರು ತೆರನಾದ ಅಯ್ಯಗಳು ಸಮಾಜದಲ್ಲಿದ್ದಾರೆ. ಸಮಾಜ ಇವರೆಲ್ಲರನ್ನೂ ಗೌರವ, ಪೂಜ್ಯ ಭಾವನೆಯಿಂದ ಕಾಣುತ್ತದೆ. ಸಾರುವ ಅಯ್ಯಗಳು ವಿಶೇಷವಾಗಿ ಎಲ್ಲ ಜನ-ಜನಾಂಗಗಳಿಂದ ಗೌರವ ಪ್ರಾಪ್ತರು.

ಇವರದು ಮೂರು ಜನರ ಒಂದು ಗುಂಪು. ಎಲ್ಲರೂ ಧೋತರ, ಅಂಗಿ, ರುಮಾಲು ಧರಿಸುವರು, ಎಲ್ಲದರ ಬಣ್ಣ ಕಾವಿ. ಇವರು ಸಂಜೆ ಏಳರ ಸುಮಾರು ಜನ ಸೇರುವ ಸ್ಥಳದಲ್ಲಿ ನಿಂತು ತಮ್ಮ ಸಾರುವ ಕಾಯಕ ಮಾಡುತ್ತಾರೆ. ಪ್ರಮುಖ ವ್ಯಕ್ತಿ ಒಂದು ಕೈಯಲ್ಲಿ ತೆರೆದ ಕಾವಿ ಬಣ್ಣದ ಛತ್ರಿ, ಇನ್ನೊಂದು ಕೈಯಲ್ಲಿ ಉರಿಯುತ್ತಿರುವ ಕಂದೀಲು ಹಿಡಿದಿರುತ್ತಾನೆ ಇನ್ನೀರ್ವರಲ್ಲಿ ಒಬ್ಬ ದಮಡಿ, ಇನ್ನೊಬ್ಬ ತಾಳಬಾರಿಸುತ್ತಾರೆ ಇವರು ವಿಷಯ ಸಾರುವ ಮೊದಲು ಜನರನ್ನು ಆಕರ್ಷಿಸಲು ಹೆಸರು ಹೇಳುವ ತಂತ್ರ ಬಳಸುತ್ತಾರೆ. ದುಡ್ಡು ಕೊಟ್ಟವರ ಮತ್ತು ಅವರ ಮನೆದೇವರ ಹೆಸರನ್ನು ಬೆರಳು ಸಂಕೇತ ಬಳಸಿ ಹೇಳುತ್ತಾರೆ. ಛತ್ರಿ ಕಂದೀಲು ಹಿಡಿದ ವ್ಯಕ್ತಿಯಿಂದ ಇನ್ನೀರ್ವರು ದೂರದಲ್ಲಿ ನಿಂತಿರುತ್ತಾರೆ. ಈ ಮುಖ್ಯ ವ್ಯಕ್ತಿ ಕೈ ಬೆರಳು ಸಂಕೇತಗಳಿಂದ ಕಂದೀಲು ಎತ್ತಿ ಹಿಡಿದು ಸನ್ನೆ ಮಾಡುತ್ತಾನೆ. ಅದನ್ನು ಅರ್ಥೈಸಿಕೊಂಡು ದೂರ ನಿಂತ ಈರ್ವರು, ಪ್ರಕಟವಾಗಿ ಗಟ್ಟಿದನಿಯಲ್ಲಿ (ಮಲ್ಲಿಕಾರ್ಜುನ) ಅಲ್ಲೇನ್ರಿ ಮತ್ತಿನ್ಯಾರು ಹೇಳಯ್ಯ' ಎಂದು ಧಮಡಿ, ತಾಳು ಬಾರಿಸುತ್ತ ಸರಾಗವಾಗಿ ಹೇಳುತ್ತಾರೆ. ಅದಕ್ಕಾಗಿ ಅವರನ್ನು 'ಕರಪಲ್ಲ'ದವರು ಎಂದು ಹಳೆ ಮೈಸೂರು ಕಡೆ ಕರೆಯುತ್ತಾರೆ. ಈ ಕೈ ಬೆರಳು ಸಂಕೇತವಲ್ಲದೇ ರೂಪಾಯಿ ಆಣೆ ಪೈಗಳನ್ನು ಹೇಳಿಯೂ ಹೆಸರು ಹೇಳುತ್ತಾರೆ.

ಕೂಡಿದ ಜನರಿಂದ ಹಣ ಪಡೆಯುವುದರ ಜೊತೆಗೆ ರೋಗ, ರುಜಿನ, ದುರಂತ ವರ್ಷದ ಮಳೆ, ಬೆಳೆ, ಆಗು ಹೋಗುಗಳನ್ನು ಹಾಡಿನ ರೂಪದಲ್ಲಿ ಸಾರಿ ಹೇಳುತ್ತಾರೆ. ಜನ ಇವರನ್ನು ಮನೆಗೆ ಪ್ರಸಾದಕ್ಕೆ ಕರೆದು ಊಟವನ್ನು ಹಾಕುವುದುಂಟು. ಹೀಗೆ ಊರಿಂದೂರಿಗೆ ಇವರ ಪಯಣ ಸಾಗುತ್ತದೆ.

ಗುಲಬರ್ಗಾ ಜಿಲ್ಲೆ ಕೊಡೇಕಲ್ಲ ಮಠದಲ್ಲಿ ಸಾಕಷ್ಟು ಕೋರೀ ಕಾಗದ ಹಸ್ತ ಪ್ರತಿಗಳಿವೆ. ಇವುಗಳನ್ನು ಬಳಸಿಕೊಂಡು ಅಲ್ಲಿಂದ ಹಲವಾರು ಜನ ಸಾರುವ ಅಯ್ಯಗಳು ಬಹಳ ಕಡೆ ತಿರುಗಾಡಿ ಬದುಕು ಮಾಡಿಕೊಳ್ಳುತ್ತಾರೆ. ಅವರದು 'ದೇವವಾಣಿ' ಎಂದು ನಂಬಿದ ಜನ, ಅವರು ಸಾರುವುದನ್ನು ನಂಬುವುದರ ಜೊತೆಗೆ ಅವರಿಗೆ ಕಾಣಿಕೆಯನ್ನು ಅರ್ಪಿಸುತ್ತಾರೆ.

ಸಾರುವ ಅಯ್ಯಗಳಿಗೆ ಕರಪಲ್ಲ ವಿದ್ಯೆ, ಸರಾಗ ಸುಸ್ಪಷ್ಟ ಕಂಠ, ಬಹಳ ಮುಖ್ಯ. ಒಂದು ಕಾಲಕ್ಕೆ ಅವರ ಬರವನ್ನು ಊರುರ ಜನತೆ ಕಾಯುತ್ತಿದ್ದರು. ಇಂದು ಸಾಮಾನ್ಯವಾಗಿ ಹಲವಾರು ಮಾಧ್ಯಮ ಗಳಿಂದಾಗಿ ಈ ಕಸಬು ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದೆ.

(ಎಂ.ಜಿ.ಜಿ.)

ಸಿ

ಸಿಡಿ: ಕ್ರೂರ ತೆರನಾದ ಧಾರ್ಮಿಕ ಹರಕೆಯ ವಿಧಾನ. ವ್ಯಕ್ತಿ ತನ್ನಿಚ್ಛೆಯನ್ನು ದೇವರೆದುರು ಹೇಳಿಕೊಂಡು, ಅದು ಪೂರ್ತಿಯಾದೊಡನೆ ಆ ದೇವತೆ ಎದುರು 'ಸಿಡಿ' ಆಡುವುದು ಸಂಪ್ರದಾಯ.

ಈ ಸಂಪ್ರದಾಯ ವಿಶೇಷವಾಗಿ ದೇವತೆಯ ಗುಡಿ ಎದುರು ನಡೆಯುತ್ತದೆ. ಕರ್ನಾಟಕದ ಹಲವು ಕಡೆ ಸಿಡಿ ಆಡುವ ವ್ಯವಸ್ಥೆ ಇದೆ. ಅನ್ಯ ರಾಜ್ಯಗಳಲ್ಲಿಯೂ ಇದೇ ರೀತಿಯ ಅನ್ಯ ವಿಧಾನದ ಹರಕೆಯ ಸಂಪ್ರದಾಯಗಳನ್ನು ಕಾಣಬಹುದಾಗಿದೆ. ಹರಕೆ ಹೊತ್ತವರು ದೇವಿಯ ಸಮ್ಮುಖದಲ್ಲಿ ಪೂಜಾರಿಯ ಮುಂದೆ, ತಾವು ಹೊತ್ತ ಹರಕೆಯನ್ನು ವಿವರವಾಗಿ ಬಹಿರಂಗ ಪಡಿಸಬೇಕಾಗುತ್ತದೆ. ಅನಂತರ ಪೂಜಾರಿ ದೇವಿಯ ಮುಂದೆ ಎಲ್ಲ ಪೂಜಾ ವಿಧಿ ವಿಧಾನಗಳನ್ನು ಪೂರೈಸಿ ಗುಡಿ ಎದುರಿನ ಸಿಡಿ ಗಂಬಕ್ಕೆ ವ್ಯಕ್ತಿಯನ್ನು ಕರೆತರುತ್ತಾನೆ. ನೆರೆದ ಜನ ಸಮ್ಮುಖದಲ್ಲೇ ಹರಕೆ ಹೊತ್ತವರನ್ನು ಬಗ್ಗಿಸಿ, ಬೆನ್ನು ಹುರಿಯ ಮಧ್ಯದ ತೊಗಲಲ್ಲಿ ಬೆರಳು ಗಾತ್ರದ ಸರಳನ್ನು ಆರು ಪಾರಾಗಿ ಚುಚ್ಚುತ್ತಾನೆ. ಕೂಡಲೇ ರಕ್ತ ಬರದಂತೆ ಪ್ರಸಾದವನ್ನೂ ಭಂಡಾರವನ್ನೂ ಹಚ್ಚಿ, ಸರಳಿಗೆ ಬಿಗಿಯಾಗಿ ಹಗ್ಗಕಟ್ಟಿ ದೇಶಿ ತಂತ್ರಜ್ಞಾನದಿಂದ ಸಿದ್ಧ ಪಡಿಸಿದ, ಉದ್ದಾದ ದಪ್ಪನೆಯ ಗಾತ್ರದ ಕೋಲಿನ ಒಂದು ತುದಿಗೆ ನೇತು ಹಾಕುತ್ತಾನೆ. ಕೋಲಿನ ಮೂಲವನ್ನು ಸ್ವೀಕರಿಸಿದ್ದಲ್ಲಿಂದ ಆನಿಕೆಯ (ಮಲಿ) ನೆರವಿನಿಂದ ವ್ಯಕ್ತಿಯ ನೇತುಹಾಕಿದ ತುದಿಯನ್ನು ಹತ್ತು ಹನ್ನೆರಡು ಅಡಿ ಮೇಲಕ್ಕೆತ್ತುತ್ತಾರೆ ಸಿಡಿ ಆಡುವ ವ್ಯಕ್ತಿ ಕೈ ಕಾಲು ಜೋತಾಡಿಸುತ್ತ ಗಾಳಿಯಲ್ಲಿ ತೇಲಾಡುತ್ತಾನೆ. ವ್ಯಕ್ತಿ ಉಡಿಯಲ್ಲಿ ಕಟ್ಟಿಕೊಂಡ ಚುರಮುರಿಯನ್ನು ತೂರುತ್ತ ದೇವಿಯ ನಾಮೋಚ್ಚಾರದ ಘೋಷಣೆ ಮಾಡುತ್ತಾರೆ. ಮೂರ್‍ನಾಲ್ಕು ನಿಮಿಷದಲ್ಲಿ ವ್ಯಕ್ತಿಯನ್ನು ಕೆಳಗಿರಿಸುವರು. ಬೆನ್ನಲ್ಲಿಯ ಸರಳನ್ನು ಹೊರದೆಗೆದು ಭಂಡಾರ ಹಚ್ಚುತ್ತಾರೆ. ಹೀಗೆ ಸಿಡಿ ಆಡುವ ಹರಕೆ ತೀರಿಸುತ್ತಾರೆ.

'ಗುಗ್ಗುಳ' ತೆಗೆದಾಗ ಪುರವಂತರ ಶಸ್ತ್ರ ಹಾಕುವ ಪದ್ಧತಿಗೂ ಇದಕ್ಕೂ ಸಾಕಷ್ಟು ಸಾಮ್ಯ ಇದೆ. ಆಂಧ್ರದ ಕೆಲವೆಡೆ ಮೈ ತುಂಬ ಶಸ್ತ್ರದ ಮೂಲಕ ಉಂಗುರಗಳನ್ನು ಹಾಕಿಕೊಳ್ಳುವುದನ್ನೂ ಕಾಣಬಹುದಾಗಿದೆ.

'ಸಿಡಿ' ಗುಲಬರ್ಗಾದ ಅಫಜಲಪುರ ತಾಲ್ಲೂಕಿನ ಘತ್ತರಗಿ ಭಾಗಮ್ಮನ ದೇವಾಲಯದೆದುರು ಅನಾದಿಕಾಲದಿಂಲೂ ನಡೆದು ಬಂದಿದೆ. ಈ ಅವೈಜ್ಞಾನಿಕ ಪದ್ಧತಿಯನ್ನು ನಿಲ್ಲಿಸಬೇಕೆನ್ನುವ ಪ್ರಯತ್ನಗಳು ಸಫಲವಾಗಿಲ್ಲ. ಬೆಂದೊಗಲಲ್ಲಿ ಚುಚ್ಚಿದ ಸರಳಿನಿಂದಾಗಿ ನಂಜಾಗುವ ಸಾಧ್ಯತೆಯನ್ನು ಅಲ್ಲಗಳೆ ಯಲಾಗದು. ಅಲ್ಲದೆ ಗಳದ ಆಧಾರದಲ್ಲಿ ವ್ಯಕ್ತಿ ಮೇಲೆ ತೇಲಾಡುವಾಗ

ಅನಾಹುತಗಳಾಗುವ ಸಾಧ್ಯತೆಯೂ ಇಲ್ಲದಿಲ್ಲ. ಆದರೂ ಶಾಸನದಿಂದ ಇದನ್ನು ತಡೆಯುವ ಬದಲು ಜನರಿಗೆ ವೈಜ್ಞಾನಿಕ ತಿಳುವಳಿಕೆ ನೀಡುವುದು ಸೂಕ್ತ.

'ಸಿಡಿ' ಶಬ್ದ ಶಾಸನದಲ್ಲಿ ತಲೆಯನ್ನು 'ಸಿಡಿಸು' ಅರ್ಥದಲ್ಲಿ ಉಪಲಬ್ದವಿದೆ. 'ಸಿಡಿ ತಲೆ' ವೀರಣ್ಣನ ವಿಚಾರ ಶಾಸನೋಕ್ತ, ಎರಡೂ ಹರಕೆಗಳೇ ಒಂದು ದೇವಿಯ ಭಕ್ತಿಯ ಹರಕೆಯಾದರೆ ಇನ್ನೊಂದು ಒಡೆಯನ ನಿಷ್ಠೆಯ ಪ್ರತೀಕ. ಒಡೆಯನಿಗಾಗಿ ತನ್ನ ತಲೆಯನ್ನು ತಾನೇ ಖಡ್ಗದಿಂದ ಸಿಡಿಸಿಕೊಂಡು ಬಿಡುವುದು ತಲೆ ಸಿಡಿ ಹರಕೆ. *(ಎಂ.ಜಿ.ಜಿ.)*



ಸಿದ್ದಪ್ಪ ಮೇಟಿ: ಜನಪದ ವೈದ್ಯ ಮತ್ತು ಗಾಯಕ. ಯಾದಗಿರಿ ಜಿಲ್ಲೆ ಶಹಾಪುರ ತಾಲ್ಲೂಕಿನ ಸೈದಾಪುರ ಗ್ರಾಮದವರು. ಮುರಿದ ಮೂಳೆ, ಸರಿಪಡಿಸುವಲ್ಲಿ ತಮ್ಮದೇ ಆದ ಜನಪದ ಚಿಕಿತ್ಸಾ ವಿಧಾನವನ್ನು ಅಳವಡಿಸಿ ಕೊಂಡಿದ್ದಾರೆ. ಸಂಭಾವನಾ ರಹಿತ ಚಿಕಿತ್ಸೆ ನೀಡುವುದು ಇವರ ವೈಶಿಷ್ಟ್ಯ. ಸೀಳಿದ 'ಬಿದರಿನ ಪಟ್ಟಿ', ತಪ್ಪಲದ ಔಷಧಿಯ ಸವರಿ, ಹರಕು ಚಿಂದಿಗಳಿಂದ ಬ್ಯಾಂಡೇಜ್ ಕಟ್ಟಿ, ಮೇಲೆ ಬಿದಿರು ಪಟ್ಟಿ ಹಾಕಿ ಬಿಗಿಯುತ್ತಾರೆ. ಇದರೊಳಗಡೆ ಇಪ್ಪತ್ತೊಂದು (21) ಹೋಳಿಗೆ, ಜೋಳ, ಅಷ್ಟೇ ಪ್ರಮಾಣದ ಇಪ್ಪತ್ತೊಂದು (21) ಲವಂಗ, ಇಪ್ಪತ್ತೊಂದು (21) ಮೆಣಸು, ಇಪ್ಪತ್ತೊಂದು (21) ತತ್ತಿ ಎಲ್ಲವನ್ನು ಸೇರಿಸಿ ಕಟ್ಟುತ್ತಾರೆ. ಅನಂತರ 22 ಗುಳಿಗೆಗಳನ್ನು ನೀಡಿ ಅದನ್ನು ಆಡಿನ ಹಾಲಿನೊಂದಿಗೆ ಸೇವಿಸುವಂತೆ ಸಲಹೆ ಮಾಡುತ್ತಾರೆ.

ಮೂಳೆ ಜೋಡಿಸುವ ಚಿಕಿತ್ಸಾ ವಿದ್ಯೆಯನ್ನು ಮೇಟಿಯವರು ಕಲಿತದ್ದು ಅವರ ದೊಡ್ಡಪ್ಪ 'ಬುಡಪ್ಪ' ಕರಿಗುಡ್ಡಾರವರಿಂದ. ಸಿದ್ದಪ್ಪ ಮೇಟಿ ಒಬ್ಬ ಜನಪದ ಗಾಯಕರೂ ಆಗಿದ್ದಾರೆ. ಇವರು ಹಾಡುವುದು ಹಾಲುಮತ ಮಹಾಪುರಾಣ ಮಹಾಕಾವ್ಯ, ಇವರಲ್ಲಿ ಹಾಡಿನ ಹಬೆ ಇದೆ. ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಸರಕಾರದ ಜಾನಪದ ಶ್ರೀ ಪ್ರಶಸ್ತಿಗೂ ಭಾಜನರಾಗಿದ್ದಾರೆ. *(ಎಸ್.ಐ.)*

ಸಿದ್ಧೇಶ್ವರ: ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಒಂದು ಕ್ಷೇತ್ರ. ಭಾಲ್ಕಿಯಿಂದ ಬೀದರಕ್ಕೆ ಹೋಗುವಾಗ ದಾರಿಯ ಬಲಬದಿಗೆ 12 ಕಿ.ಮೀ. ದೂರದಲ್ಲಿದೆ. ಈ ಊರು ಖ್ಯಾತಿ ಪಡೆದಿದ್ದು ಇಲ್ಲಿರುವ ಸಿದ್ಧೇಶ್ವರ ದೇವಾಲಯದಿಂದ. ಇದು ಪುರಾತನವೂ ಭವ್ಯವಾಗಿದೆ. ಎಲ್ಲಾ ಜಾತಿ ಜನಾಂಗದ ಜನ ಭಕ್ತಿಯಿಂದ ಈ ದೇವಾಲಯಕ್ಕೆ ಮೊರೆ ಹೋಗುತ್ತಾರೆ. ಯಾರ ಮನೆಯಲ್ಲಿಯೇ ಶುಭ ಕಾರ್ಯಗಳಿರಲಿ ಪ್ರಥಮ ಪೂಜೆ ಶ್ರೀ ಸಿದ್ಧೇಶ್ವರನಿಗೆ ಸಲ್ಲುವುದು.

ಭವ್ಯ ಪರಾಂಗಣವನ್ನು ಹೊಂದಿದ ದೇವಾಲಯದ ಎರಡು ಬದಿಗಳಲ್ಲಿ ವಿಸ್ತಾರವಾದ ಕಟ್ಟಡವನ್ನು ಹೊಂದಿದೆ. ಇಲ್ಲಿನ ಕಲ್ಯಾಣ ಮಂಟಪ ಸುತ್ತಮುತ್ತಲಿನ ಊರುಗಳ ಜನತೆಗೆ ಮದುವೆ ಮುಂತಾದ ಮಂಗಳ ಕಾರ್ಯಕ್ರಮಗಳಿಗೆ ಏಕಮೇವ ಸ್ಥಾನದಂತಿತ್ತು. ಕೆಲವು ವರ್ಷಗಳ ಪೂರ್ವದಲ್ಲಿ ಈ ಮಂದಿರದ ಬಲಭಾಗದಲ್ಲಿ ದೇವರ ಭಕ್ತ ಇಮಾಮಸಾಬ ಮುತ್ಯಾ ಎನ್ನುವವರ ಸಮಾಧಿ ಇದೆ. ಅವರು ಮುಸಲ್ಮಾನರಾದರು ಹಿಂದು ದೇವಾಲಯದ ಬಲಭಾಗದಲ್ಲಿ ಅವರ ಸಮಾದಿ ಇರುವದು ಆಶ್ಚರ್ಯಕರ ಸಂಗತಿ. ಇವರ ಅನೇಕ ಪವಾಡಗಳು ಜನಜನಿತವಾಗಿವೆ. ಯುಗಾದಿ ಅಮವಾಸ್ಯೆ ಪಂಚಮಿ, 6,7 ದಿನಗಳ ಇಲ್ಲಿ ಜಾತ್ರೆ ಜರಗುತ್ತದೆ. ಆ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ, ನಾಟಕ, ಕುಸ್ತಿ ಮುಂತಾದವುಗಳು ನಡೆಯುತ್ತವೆ.

ಈ ಊರಿನ ಹಿರಿಯರ ಹೇಳಿಕೆಯಂತೆ ಇದು ಉದ್ಭವಲಿಂಗ, ಕಾಡಸಿದ್ದರು ಎನ್ನುವ ಸಾಧುಗಳು ಇಲ್ಲಿ ಬಂದು ನೆಲೆಸುತ್ತಿದ್ದುಂಟು. ಒಂದು ದಿನ ಕಾಡುಸಿದ್ದರು ಸಿದ್ಧ ಪುರುಷ ಚಿಕ್ಕದಾದ ದೇವಾಲಯ ಪ್ರವೇಶಿಸಿದವನು ಮರಳಿ ಬರಲೇ ಇಲ್ಲ. ಆದ್ದರಿಂದ ಈ ದೇವಾಲಯಕ್ಕೆ ಕಾಡಸಿದ್ದೇವರು ಎಂಬ ಹೆಸರು ಬಂದಿದೆ. ಎಂದು ಹೇಳಲಾಗಿದೆ.

ಸಿದ್ದೇಶ್ವರ ದೇವಾಲಯದಲ್ಲಿ ಯಾರು ಹರಕೆ ಹೋಗುತ್ತಾರೋ ಅವರ ಮನೋಕಾಮನೆ ಪೂರ್ಣಗೊಳ್ಳುತ್ತದೆ. ಆದರೆ ಹರಕೆ ತೀರಿಸದಿದ್ದರೆ ದೇವರು ಕಾಡುತ್ತಾರೆ. ಕಷ್ಟ ಕೊಡುತ್ತಾರೆ. ಆದ್ದರಿಂದ ಕಾಡಸಿದ್ದೇಶ್ವರ ಎಂಬ ಹೆಸರಿದೆ ಎನ್ನುವುದು ಕೆಲವರು ನಂಬಿಕೆ. *(ಜಿ.ಪಿ.ಆ.)*



ಸಿದ್ರಾಮಪ್ಪಾ ಮಡಿವಾಳ: ಬೀದರ ಜಿಲ್ಲೆಯ ಖ್ಯಾತ ನಾಟಿ ವೈದ್ಯರು. ಆಯುರ್ವೇದ ಪದ್ಧತಿಯ ಚಿಕಿತ್ಸಾ ವಿಧಾನ ವನ್ನು ಇವರ ತಂದೆ ಹಣಮಂತಪ್ಪ ಅವರಿಂದ ಕಲಿತರು. ಇವರ ಹುಟ್ಟೂರು ಭಾಲ್ಕಿ ತಾಲ್ಲೂಕಿಗೆ ಸೇರಿದ ಸಿದ್ಧೇಶ್ವರ ಎಂಬ ಹಳ್ಳಿ. ಇವರ ಕುಟುಂಬದ ಕಾಯಕ ಸಂಪೂರ್ಣವಾಗಿ ನಾಟಿ ವೈದ್ಯ ಕೀಯವನ್ನೇ ಅವಲಂಬಿಸಿದೆ.

ಕಾಮಣಿ, ಅಜೀರ್ಣ, ಹೊಟ್ಟೆ ಶೂಲಿ, ಬಂಜೆತನ ನಿವಾರಣೆ, ಕೆಮ್ಮು ದಮ್ಮು, ಮದುಮೇಹ, ರಕ್ತದೊತ್ತಡ, ಕಣ್ಣಿನಲ್ಲಿ ಹೂ, ಹೆಣ್ಣು ಮಕ್ಕಳ ಗುಪ್ತರೋಗ, ಹಾವು ಕಡಿತಕ್ಕೆ ಔಷಧಿ ಹಲವು ವಿಧದ ರೋಗಗಳಿಗೆ ದೇಶಿ ಗಿಡ ಮೂಲಿಕೆಗಳಿಂದ ತಾವು ತಯಾರಿಸಿದ ಔಷಧಿಗಳಿಂದ ಚಿಕಿತ್ಸೆ ನೀಡುವರು. ಕೀಲು, ನೋವು, ಕ್ಯಾನ್ಸರ್ ರೋಗ ನಿವಾರಣೆಗೆ ಇವರು ಔಷಧಿ ನೀಡಿ ಚಿಕಿತ್ಸೆ ಒದಗಿಸಿದ ಉದಾಹರಣೆಗಳಿವೆ. 2003ರಲ್ಲಿ ಬೀದರ ಜಿಲ್ಲಾ ಜಡಿ

ಬೂಟಿ ನಾಟಿ ವೈದ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಇವರ ಮನೆ ನಾಟಿ ವೈದ್ಯಕೀಯ ಗರಡಿ ಮನೆಯಾಗಿದೆ. ಬೀದರ ಜಿಲ್ಲೆಯು ಸಾವಿರಾರು ಗಿಡ ಮೂಲಿಕೆಗಳ ಅರಣ್ಯ ಕೋಶ ವಾಗಿದೆ. ಬೀದರಿಗೆ ಸಮೀಪದ ಖಾನಾಪುರ (ಮೈಲಾರ) ಕ್ಷೇತ್ರದ ಅರಣ್ಯ ವಲಯ ನಾಟಿ ವೈದ್ಯರ ಔಷಧದ ತವರಾಗಿದೆ. ಇವರ ಕುಟುಂಬದವರು ದವಾಖಾನೆಯ ಸರಕಾರಿ ಆಸ್ಪತ್ರೆಯ ಮೆಟ್ಟಲು ಏರಿಲ್ಲ ಎಂದು ಹೆಮ್ಮೆಯಿಂದ ಇವರು ಹೇಳುವರು.

ಸರಳ ಜೀವನ, ಸೇವಾ ಮನೋಭಾವ ಇವರ ಜೀವನದ ಸೂತ್ರಗಳಾಗಿವೆ. ಹಾವು ಕಚ್ಚಿದವರಿಗೆ ಉಚಿತ ಚಿಕಿತ್ಸೆ ನೀಡುವುದು ಇವರ ಮನೆತನದ ಪರಂಪರೆಯಾಗಿದೆ. ವಂಶ ಪಾರಂಪರ್ಯವಾಗಿ ಬಂದ ನಾಟಿ ವೈದ್ಯಕೀಯ ವೃತ್ತಿಯನ್ನು ಮುಂದುವರೆಸಿದ್ದಾರೆ. ಇವರ ಕುಟುಂಬದ ಸದಸ್ಯರಿಗೂ ಈ ಚಿಕಿತ್ಸಾ ವಿಧಾನ ಕಲಿಸಿದ್ದಾರೆ. ಕಡಿಮೆ ಖರ್ಚಿನ ದೇಸೀ ಉಪಚಾರ ಇವರಿಗೆ ಕೀರ್ತಿ ತಂದಿದೆ. ಏಡ್ಸ್‌ಗೂ ಚಿಕಿತ್ಸೆ ಇದೆ ಎಂದು ಹೇಳುವರು. ದನಕರು, ನಾಯಿಗಳಿಗೆ ಹಾವು ಕಚ್ಚಿದಾಗ ಗಿಡ ಮೂಲಿಕೆಯಿಂದ ಗುಣ ಪಡಿಸಿದ ಹೇರಳ ಉದಾಹರಣೆಗಳಿವೆ.ಇವರ ನಿರಂತರ ಸಂಶೋಧನೆ ನಾಟಿ ವೈದ್ಯಕೀಯತೆಗೆ ಮೆರಗು ನೀಡಿದೆ. ಗಿಡ ಮೂಲಿಕೆಗಳೆಂದರೆ ಇವರಿಗೆ ಪಂಚ ಪ್ರಾಣ. ಜಡಿಬೂಟಿ ಮೇಳದ ನಾಟಿ ವೈದ್ಯನಿಗೆ ಸಂದ ಗೌರವಗಳು ಅನೇಕ. *(ಎಂ.ಜಿ.ಜಿ.)*

ಸಿರಗಾಪುರದ ಬಂಡೆಪ್ಪ: ಜನಪದ ಸಾಹಿತ್ಯದಲ್ಲಿ ಕೃಷಿ ಮಾಡಿದವರು. ಹಲವು ಭಜನೆ ಪದಗಳನ್ನು ರಚಿಸಿದ್ದು, ಅವು ತತ್ವ, ಅನುಭವದ ಹಿನ್ನಲೆಯಲ್ಲಿ ವಾಸ್ತವಾಂಶವನ್ನು ಪ್ರತಿಬಿಂಬಿಸುತ್ತವೆ. ಇವರು ಗುಲ್ಬರ್ಗಾ ಜಿಲ್ಲೆಯ ಅತ್ಯಂತ ಸಣ್ಣ ಹಳ್ಳಿಯಾದ ಸಿರಗಾಪುರ ದವರು, ಹುಟ್ಟಿದ್ದು 1900ರಲ್ಲಿ. ತಂದೆ ಮಡೆಪ್ಪ, ತಾಯಿ ವೀರಮ್ಮ, 'ಕೊಟ್ಟರಗಿ' ಇವರ ಮನೆತನದ ಹೆಸರು. ಇವರು ಹೆಚ್ಚು ವಿದ್ಯಾಭ್ಯಾಸ ಮಾಡಲಿಲ್ಲ. ಬಡತನದ ಕುಟುಂಬದವರಾದ ಇವರ ಮನೆತನವು ಕಷ್ಟ ಪಟ್ಟು ಕೂಲಿ, ನಾಲಿ ಮಾಡಿ ಉಪಜೀವನ ನಿರ್ವಹಿಸಿಕೊಂಡು ಹೋಗುತ್ತಿದ್ದರು

ಸಾತ್ವಿಕ ಮನೋವೃತ್ತಿಯ ಇವರು ಚಿಕ್ಕ ವಯಸ್ಸಿನಲ್ಲಿ 'ಬಾದನದ' ಮಹಾಂತ ಸ್ವಾಮಿಗಳ ಮಠದಲ್ಲಿ 10–15 ವರುಷಗಳ ಕಾಲ ಸ್ವಾಮೀಜಿಯ ಸೇವೆಗೈದು ಅನುಭಾವಿ ಕವಿಗಳಾದ ಕಡಕೋಳ ಮಡಿವಾಳಪ್ಪ, ರಾಮಪುರದ ಬಕ್ಕಪ್ಪಯ್ಯ ಮೊದಲಾದವರ ಭಜನೆಯ ಹಾಡುಗಳ ಪ್ರಭಾವವು ಬಂಡೆಪ್ಪನ ಮೇಲಾಯಿತು. ತನ್ನ ತತ್ವಪದಗಳಿಗೆ 'ಸಿರಗಾಪುರದ ಈಶ ವಿರೇಶ' ಎಂಬ ಅಂಕಿತವಿರಿಸಿ ಕೊಂಡು ಬಂಡೆಪ್ಪನವರು ಹಲವು ಭಜನೆ ಪದಗಳನ್ನು ರಚಿಸಿ, ಮಾದರಕುಡ್ಡಿ' ಎಂಬ ದೊಡ್ಡಾಟವನ್ನು ರಚಿಸಿದ್ದಲ್ಲದೇ ಸ್ವತಃ ಕಲಿಸುತ್ತಿದ್ದರು. ಅಲ್ಲದೆ ಸಮೀಪದ ಬಬಲಾದ ಮುತ್ಯಾನನ್ನು ಕುರಿತು ಹಲವು ಭಜನೆ ಹಾಡುಗಳನ್ನು ರಚಿಸಿದ್ದಾನೆ. ಇದುವರೆಗೆ ಈತನ 87 ತತ್ವಪದಗಳು ಅಚ್ಚಾಗಿವೆ. ಈ ಕಾವ್ಯ ಸೆಲೆಗೆ ಸ್ಫೂರ್ತಿಯ ನೆಲೆ ವೀರಭದ್ರ ದೇವಾಲಯ ಹಾಗೂ ನಿಪ್ಪಾಣಿ ಮತ್ತು ನಂದ್ಯಾಡಗಳಲ್ಲಿ ವಾಸ ಮಾಡಿದಾಗ ಹಾಡು ರಚಿಸಿದ್ದುಂಟು. ಬಂಡೆಪ್ಪನವರು ತಾವು ಕಂಡುಂಡ ಜೀವನಾನುಭವ ಮತ್ತು ಸಾದೃಶ್ಯ ಬದುಕಿನ ಚಿತ್ರಣವನ್ನು ತಮ್ಮ ಹಾಡುಗಳಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ಬಂಡೆಪ್ಪ ಸಮಾಜದ ನೈಜ ಚಿತ್ರಣವನ್ನು ತನ್ನ ಅನುಭಾವಿಕ ನುಡಿಗಳಿಂದ ಅಭಿವ್ಯಕ್ತಿ ಪಡಿಸುತ್ತಿದ್ದರು. ಈ ಕವಿ ಸ್ವತಃ ಹಾಡುಗಾರ, ತಬಲಾವಾದನ ದಲ್ಲಿಯೂ ಸಹ ಬಹುಮುಖ ಪ್ರತಿಭೆಯನ್ನುಳ್ಳವರು. ಹೀಗೆ ಹೈದ್ರಾಬಾದ ಕರ್ನಾಟಕ ಭಾಗದಲ್ಲೆಲ್ಲಾ ಸುತ್ತಾಡಿ ತಮ್ಮ ಅನುಭಾವಿಕ ನುಡಿಗಳನ್ನು ಜನ ಸಾಮಾನ್ಯರೆದುರಿಗೆ ಹೇಳುತ್ತಿದ್ದರು. 1959ರಲ್ಲಿ ವೀರಭದ್ರ ದೇವರ ಗುಡಿಯಲ್ಲಿಯೇ ಅವರು ಪ್ರಾಣ ತ್ಯಾಗ ಮಾಡಿದರು. *(ಎಂ.ಎಸ್.ಎಲ್.)*

ಸಿರ್ಸಿ: ಕಾರಂಜಾ ನದಿ ತೀರದ ಪ್ರಾಚೀನ ಗ್ರಾಮ. ಔರಾದಿನ ಸಮೀಪದಲ್ಲಿರುವುದರಿಂದ ಸಿರ್ಸಿ ಔರಾದ (ಸಿರ್ಸಿ 'ಏ') ಎಂದೂ ಗುರುತಿಸಲ್ಪಡುತ್ತದೆ. ಈ ಗ್ರಾಮದಲ್ಲಿ ಕ್ರಿ.ಶ. ಹನ್ನೆರಡನೆಯ ಶತಮಾನದ ಶಿಲಾಶಾಸನವೊಂದು ದೊರೆತಿದೆ. ಅದರಲ್ಲಿ ಚಾವುಂಡಯ್ಯ ಎನ್ನುವಾತ ಶ್ರೀ ಪರ್ವತ (ಶ್ರೀಶೈಲ)ದಿಂದ ಹಜ್ಜೇಶ್ವರ ಲಿಂಗವನ್ನು ತಂದು ಪ್ರತಿಷ್ಠೆ ಮಾಡಿದನಲ್ಲದೆ 50 ಮತ್ತರು ಭೂಮಿಯನ್ನು ದಾನವಾಗಿ ನೀಡಿದ ಹಾಗೂ ರಾಜರಕ್ಷಿತ ಧರ್ಮವಾಗಿ ಮನೆಯೊಂದನ್ನು ನೀಡಿದ ಉಲ್ಲೇಖವಿದೆ. ಸಿರ್ಸಿ ಗ್ರಾಮ ಆ ಕಾಲದಲ್ಲಿ ಅಟ್ಟಳೆ ನಾಡು 300 ಗೆ ಸೇರಿತ್ತು. ಗ್ರಾಮದ ಸಮೀಪದ ರೆಂಜೇರು (ರಂಜೋಳ ಖೇಣಿ) ಆ ನಾಡಿನ ರಾಜಧಾನಿ ಆಗಿತ್ತು.

ಕಾರಂಜಾ (ನಾರಂಜಾ) ನದಿ ಈ ಊರಿಗೆ ಸಮೀಪದಲ್ಲಿದೆ. ಈ ಗ್ರಾಮದಲ್ಲಿ ಶಾಸನಗಳಲ್ಲದೆ ವೀರಗಲ್ಲುಗಳು ಕಾಣಸಿಗುತ್ತವೆ. ಈ ಗ್ರಾಮದ ಸನ್ಯಾಸಿ ಮಠ ಪ್ರಸಿದ್ಧವಾಗಿತ್ತು. ಗ್ರಾಮದಲ್ಲಿ ರಾಚೋಟೇಶ್ವರ, ಬಸವಣ್ಣ, ಲಕ್ಷ್ಮೀ, ಮರಗೆಮ್ಮ ದವಾಲಯಗಳಿವೆ. ರಾಚೋಟೇಶ್ವರ ದೇವಾಲಯದ ಎದುರಿಗೆ ಇದ್ದ ನೀರಿನ ಗುಂಡ (ಕುಂಡ) ಇಂದು ಸುಸ್ಥಿತಿಯಲ್ಲಿ ಉಳಿದಿಲ್ಲವಾದರೂ ದೀಪ ಸ್ತಂಭಗಳು ಉಳಿದುಕೊಂಡಿವೆ. ಅಲ್ಲಲ್ಲಿ ನಾಗ ಶಿಲ್ಪಗಳಿವೆ. ಗ್ರಾಮಕ್ಕೆ ಒಂದು ಕಿ.ಮೀ. ಅಂತರದಲ್ಲಿ ಸಿದ್ದೇಶ್ವರ ಗುಡಿ ಇದೆ. ಮೌನೇಶ್ವರ ದೇವಾಲಯ ಧಾರ್ಮಿಕ ಸಮನ್ವಯದ ಸಂಕೇತವಾಗಿದೆ.

ಇಲ್ಲಿ ಪ್ರತಿವರ್ಷ ಶ್ರಾವಣ ಮಾಸದ ಆರಂಭದಲ್ಲಿ 'ಬುಟ್ಟಿ ಜಾತ್ರೆ' ಪ್ರಸಿದ್ಧವಾಗಿದೆ. ಊರಿನ ಕುಟುಂಬಗಳವರು ಬುಟ್ಟಿಯಲ್ಲಿ ಊಟ ತಿಂಡಿ ತುಂಬಿಕೊಂಡು ಊರ ಹೊರಗಿನ ಸಿದ್ದೇಶ್ವರ ಗವಿಯೆಡೆಗೆ ಹೋಗಿ ಮಳೆಗಾಗಿ ಪ್ರಾರ್ಥಿಸುತ್ತಾರೆ. ಊಟ ವಿಶ್ರಾಂತಿಯ ಆನಂತರ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗುತ್ತಾರೆ.

ಮೊಹರಮ್‌ನ ಕೊನೆಯ ದಿನದಂದು ಊರಿನ ಯುವಕರು ಟೊಂಕಕ್ಕೆ ಕಂಬಳಿ ಸುತ್ತಿ ಬಿಗಿದುಕೊಂಡು ಒನಕೆ ಹಾಗೂ ಕಲ್ಲುಗೂಟಗಳನ್ನು ಕೈಯಿಂದ ಕುಟ್ಟುತ್ತ ತಾಳ ಬದ್ಧವಾಗಿ ಅಲಾವಿ ಕುಣಿಯುತ್ತಾರೆ.

ಇಲ್ಲಿನ ಭೂಮಿಯಾಳದಲ್ಲಿ 'ಜಾಜ' ಎಂಬ ನೈಸರ್ಗಿಕ ಖನಿಜ (ಕಾವಿ ಮಣ್ಣು) ದೊರಕುವುದು. ಈ ಮಣ್ಣಿನ ಬಣ್ಣ ರೆಡ್ ಆಕ್ಸೈಡನಂತೆ ಕೆಂಪು. ಮನೆಗಳಿಗೆ ಸುಣ್ಣ ಬಳಿದ ಆನಂತರ ಕೆಳಗೆ ಕೆಂಪು ಜಾಜದ ಅಲಂಕರಣ ಪಟ್ಟಿ ಕಟ್ಟುತ್ತಾರೆ. *(ಬಿ.ಆರ್.ಕೆ.)*

ಸೀ

ಸೀಗೆ ಕೂಡಿಸುವದು: ಹೈದ್ರಾಬಾದ ಕರ್ನಾಟಕದಲ್ಲಿ ಪ್ರಚಲಿತವಿರುವ ಹಬ್ಬ. ಇದನ್ನು ಹೆಚ್ಚಾಗಿ ಹಿಂದೂಗಳೆಲ್ಲರೂ ಆಚರಿಸುತ್ತಾರೆ. ದಸರ ಹಬ್ಬದ ದಿನದಿಂದ ಏಳು ದಿವಸ ಸೀಗಿ ಗೌರಿಯನ್ನು ಮನೆಯೊಳಗಿಟ್ಟುಕೊಂಡು ಪೂಜೆ ಮಾಡುತ್ತಾರೆ. ಸಾಯಂಕಾಲ ಆದ ಮೇಲೆ ಮಕ್ಕಳು ಮತ್ತು ಮುತ್ತೈದೆಯರು ಬಂದು ಆರತಿ ಮಾಡಿ ಹೋಗುತ್ತಾರೆ. ಪೂಜೆಯ ವೇಳೆಯಲ್ಲಿ ಸಿಹಿ ತಿಂಡಿ ಅಥವಾ ಹಣ್ಣುಗಳ ನೈವೇದ್ಯ ಮಾಡಿ, ಬಂದ ಹೆಣ್ಣುಮಕ್ಕಳಿಗೆ ತಾಂಬೂಲ, ಪ್ರಸಾದವನ್ನು ಕೊಡುತ್ತಾರೆ. ಉಡಿ ತುಂಬುತ್ತಾರೆ. ದಂಡೆ, ಕುಪ್ಪಸ, ಕಾಯಿ, ಹಣ್ಣು ತಾಂಬೂಲದೊಂದಿಗೆ ಈ ಸಂದರ್ಭದಲ್ಲಿ ಮದುವೆಯ ನಿಶ್ಚಿತಾರ್ಥವನ್ನು ಮಾಡಿಕೊಳ್ಳುವುದುಂಟು, ಚಿಕ್ಕ ಪ್ರತಿಮೆಗಳನ್ನು ದಾನ ಮಾಡುತ್ತಾರೆ. ಹೀಗೆ ಮಡುವುದರಿಂದ ಶುಭವಾಗುತ್ತದೆಂಬ ನಂಬಿಕೆಯುಂಟು.

ದೀಪವನ್ನು ಹೊರುವ ಮರದ ಕಂಬಕ್ಕೆ ಸೀಗೆ ಎನ್ನಲಾಗಿದೆ. ಎರಡು ಮಣ್ಣಿನ ಪ್ರತಿಮೆಗಳನ್ನು ಮಾಡಿರುವರು. ಮರಿಗಳೆಂದು ಬೇರೆ ಐದು ಚಿಕ್ಕ ಕಂಬಗಳನ್ನು ಮಾಡಿರುವರು. ಈ ಎಲ್ಲಾ ಪರಿವಾರದೊಂದಿಗೆ ಸೀಗೆ ಗೌರಿ ಪೂಜೆ ನಡೆಯಬೇಕು. "ಇದಕ್ಕೆ ಪೌರಾಣಿಕ ಪ್ರಮಾಣಗಳಾವವೂ ಇಲ್ಲವೆಂಬುದು" ಬೇಟಗೇರಿ ಕೃಷ್ಣಶರ್ಮರ ಅಭಿಪ್ರಾಯ. ಅನೇಕ ಕುಟುಂಬಗಳಲ್ಲಿ ಸುಮಂಗಲೆಯರಿಂದ ಪೂಜಿಸಿಗೊಳ್ಳುವ ಸೀಗೆಯ ಗೌರಿ ದಸರೆಯ ದಿನವೇ ಪ್ರತಿಷ್ಠಾಪನೆಗೊಳ್ಳುವಳು.

ಆಶ್ವೀನಶುಕ್ಲ ಪೌರ್ಣಿಮೆಯ ಸೀಗೆಯ ಹುಣ್ಣಿವೆ, ಬಯಲು ನಾಡಿನ ಒಕ್ಕಲಿಗರಿಗೆಲ್ಲ ಇದು ತುಂಬ ಸಂಭ್ರಮದ ಹಬ್ಬ. ಅಂದು ಮನೆಯಲ್ಲಿಯೂ, ಹೊಲದಲ್ಲಿಯೂ ಪಾಂಡವರ ಪೂಜೆಯನ್ನು ಮಾಡುವರು. ಅಂದಿನ ಪಾಂಡವರ ನೈವೇದ್ಯದ ಅನ್ನವನ್ನು ಸೇರಿಸಿ, ಹೊಲಗಳಲ್ಲಿ ಚರಗವನ್ನು ಚೆಲ್ಲುವರು. ಮುಂಗಾರಿ ಬೆಳಸನ್ನು ಪೂಜಿಸಿ ಎಲ್ಲರೂ ಕೂಡಿ ಊಟಮಾಡಿ ಸಾಯಂಕಾಲ ಮನೆಗೆ ಬರುವರು.

ದೊಡ್ಡ ದಪ್ಪ ಹಲ್ಲೆಯ ಮೇಲೆ ಕ್ರಮವಾಗಿ ಸಣ್ಣ ಸಣ್ಣ ಹಲ್ಲೆಗಳನ್ನು ಅಡಕಲೇರಿಸಿದ ರೀತಿ ಸೀಗೆಯಾಕಾರ, ಈ ಹಲ್ಲೆಗಳು ವಿಷಮ ಸಂಖ್ಯೆಯಲ್ಲಿರುತ್ತವೆ. ಮಣ್ಣಿನಿಂದ ಮಾಡಿದ ಇಂಥ ಜೋಡು ಸೀಗೆಗಳನ್ನು ಕೂಡಿಸುವುದು ನಡೆದುಬಂದ ಸಂಪ್ರದಾಯ. ಇದನ್ನು ಕುಂಬಾರರ ಮನೆಯಿಂದ ತಂದು ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ರಾತ್ರಿ ಆರತಿ ಬೆಳಗುವ ಸಂಭ್ರಮ. ಈ ಪ್ರಸಂಗದಲ್ಲಿ ಮಕ್ಕಳು ಕೋಲು ಪದಗಳನ್ನು, ಆರತಿ ಪದಗಳನ್ನು ಹೇಳುತ್ತಾರೆ. ದಸರೆಯ ದಿನ ಕುಳಿತ ಸೀಗೆಯ ಗೌರಿ ಅಂದು ವಿಶೇಷ ಪೂಜೆ, ನೈವೇದ್ಯಗಳನ್ನು ಪಡೆಯುವಳು. ಸೀಗಿ ಹುಣ್ಣಿಮೆಯ ದಿನ ಸೀಗಿಯನ್ನು ಕಳಿಸುವ ಸಮಾರಂಭ. ಊರ ಮಗ್ಗಲಿನ ಕೆರೆ ಅಥವಾ ಬಾವಿಗೆ ಹೋಗಿ ಸೀಗಿಯನ್ನು ಜಲಸಮಾಧಿಗೊಳಿಸುವದು. ಹೋಗುವಾಗ–ಬರುವಾಗ ಕೋಲಾಟದ ಪದಗಳನ್ನು ಹೇಳುವರು.

(ಆರ್.ಕೆ.)

ಸೀಗೆ ಹುಣ್ಣಿಮೆ: ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕದಲ್ಲಿ ಕಂಡು ಬರುವ ಒಕ್ಕಲಿಗರ ಒಂದು ಆಚರಣೆ. ಈ ಆಚರಣೆಯನ್ನು ಹೇಮಂತ ಋತುವಿನ ಪುಷ್ಯ ಮಾಸದಲ್ಲಿ ಮಾಡುವರು. ಬಹುಪಾಲು ಇದು ಹೆಣ್ಣು ಮಕ್ಕಳ ಹಬ್ಬವಾಗಿದ್ದರೂ ಇದರಲ್ಲಿ ಪುರುಷರು ಕೂಡ ಪಾಲ್ಗೊಳ್ಳುವುದುಂಟು. ಕುಟುಂಬದ ಸದಸ್ಯರೆಲ್ಲಾ ಸೇರಿ ಸಂತಸದಿಂದ ಆಚರಿಸುವ ಆಚರಣೆ ಇದಾಗಿದೆ. ಮುಖ್ಯವಾಗಿ ಇದು ಭೂಮಿ ತಾಯಿಯ ಆರಾಧನೆಯ ಹಿನ್ನೆಲೆಯಲ್ಲಿ ಸೃಷ್ಟಿಗೊಂಡಿರುವಂತಹುದ್ದು.

ಹುಣ್ಣಿಮೆಯ ಪೂರ್ವದಲ್ಲಿಯೆ ಅಂದರೆ ಐದು ದಿನ ಮುಂಚಿತವಾಗಿಯೇ ಮುತ್ತೈದೆಯರೆಲ್ಲಾ ಸೇರಿ ಕುಂಬಾರನ ಮನೆಗೆ ಹೋಗಿ ಅವನ ಹೆಂಡತಿಗೆ ಉಡಿಯಕ್ಕಿ ಹಾಕಿ ಕುಂಬಾರ ಮಾಡಿದ ತ್ರಿಕೋನಾಕೃತಿಯ ಸೀಗಿಯ ಮೂರ್ತಿಯನ್ನು ತಂದು ಮನೆಯಲ್ಲಿಟ್ಟು ಪೂಜೆ ಮಾಡುವರು. ಅನಂತರ ಆ ಐದು ದಿನ ರಾತ್ರಿ ಎಲ್ಲ ಮುತ್ತೈದೆಯರು ಸೀಗಿಗೆ ಪೂಜೆಮಾಡಿ, ಆರುತಿ ಬೆಳಗಿ, ನಿತ್ಯವೂ ಒಂದೊಂದು ಬಗೆಯ ಸಿಹಿ ತಿಂಡಿಗಳನ್ನು ನೈವೇದ್ಯ ಮಾಡುವರು. ಅಲ್ಲದೆ ಆ ಪೌರ್ಣಿಮೆಯ ಬೆಳದಿಂಗಳ ಬೆಳಕಿನಲ್ಲಿ ಪ್ರೌಢ ಹೆಣ್ಣು ಮಕ್ಕಳು ಇಲ್ಲವೆ ಸಣ್ಣ ಸಣ್ಣ ಬಾಲಕಿಯರು ಹಾಡುಗಳನ್ನು ಹೇಳುತ್ತಾ ಕೋಲು ಹಾಕುವರು. ಇದು ನೋಡಲು ತುಂಬಾ ರಮ್ಯ ಮನೋಹರವಾದ ದೃಶ್ಯವಾಗಿರುತ್ತದೆ.

ಗೀತೆಗಳನ್ನು ಲಯಬದ್ಧವಾಗಿ ಹಾಡುತ್ತ ಆ ಇರುಳ ಚಂದಿರನ ಬೆಳದಿಂಗಳಲ್ಲಿ ಉಲ್ಲಾಸದಿಂದ ಕೂಗಿ ಕುಣಿದು ಕುಪ್ಪಳಿಸುವರು. ಸೀಗವ್ವಳನ್ನು ಸಾಮಾನ್ಯವಾಗಿ ಓಣಿಯ ಯಾವುದಾದರು ಒಂದೋ ಅಥವಾ ಎರಡೋ ಮನೆಗಳಲ್ಲಿ ಇಟ್ಟಿರುತ್ತಾರೆ. ಎಲ್ಲಾ ಹೆಣ್ಣು ಮಕ್ಕಳು ಅಲ್ಲಿಯೇ ಆರುತಿಯನ್ನು ಅಥವಾ ದೀಪವನ್ನು ತೆಗೆದುಕೊಂಡು ಹೋಗಿ ಬೆಳಗುವರು.

ಈ ಐದು ದಿನ ಕಳೆದು ಮುಂಬರುವ ಆರನೆಯ ದಿನವೇ ಸೀಗಿ ಹುಣ್ಣಿಮೆಯ ದಿನ. ಅಂದು ಮನೆ ಮಂದಿಯೆಲ್ಲಾ ಬೇಗನೆ ಎದ್ದು, ಎಲ್ಲರೂ ಕೂಡಿ ಹಬ್ಬದ ಕೆಲಸ ಕಾರ್ಯಗಳನ್ನು ಮಾಡುವರು. ಹೆಣ್ಣು ಮಕ್ಕಳು ವಿವಿಧ ಬಗೆಯ ಬಕ್ಷ್ಯ ಭೋಜನಗಳನ್ನು ತಯಾರಿಸುವರು. ವಿಶೇಷವಾಗಿ ಈ ಹಬ್ಬದಲ್ಲಿ ಎಲ್ಲ ನಮೂನೆಯ ಸಿಹಿ ತಿಂಡಿ–ತಿನಿಸುಗಳನ್ನು ಮಾಡಲಾಗಿರುತ್ತದೆ. **ಉದಾಹರಣೆಗೆ:** ಕರ್ಚಿಕಾಯಿ, ಹುರಕ್ಕಿ ಹೋಳಿಗೆ, ಕರಿಗಡಲು, ಚಕ್ಕುಲಿ, ಕೋಡಬಳೆ, ಬಜಿ, ಗಾರ್ಗಿ, ಉಂಡಗಡಬು, ಪುಂಡಿಪಲ್ಲೆ, ಕುಚ್ಚಿದ ಕಾರಾ, ಕರೆದ ಮೆಣಸಿನಕಾಯಿ, ಸಂಡಿಗೆ, ಅಕ್ಕಿ ಹುಗ್ಗಿ, ಚರಗದ ಪಲ್ಲೆ, ಕೋಸಂಬರಿ ಇತ್ಯಾದಿಗಳನ್ನೆಲ್ಲ ಮಾಡುವರು. ಇವೆಲ್ಲವುಗಳನ್ನು ಒಂದೇ ದಿನಕ್ಕೆ ಮಾಡಲು ಸಾಧ್ಯವಿಲ್ಲವಾದರೂ ಕೆಲವೊಂದನ್ನು ಪೂರ್ವದಲ್ಲಿಯೇ ಮಾಡಿ ಇಟ್ಟುಕೊಂಡಿರುತ್ತಾರೆ. ಈ ರೀತಿ ಮಾಡಿದ ಎಲ್ಲ ಅಡುಗೆ ಪದಾರ್ಥಗಳನ್ನು ಈ ಹಬ್ಬಕ್ಕೆಂದೆ ವಿಶೇಷವಾಗಿ ಶೃಂಗರಿಸಿದ

ಬುಟ್ಟಿಯಲ್ಲಿ ಇಡಲಾಗುತ್ತದೆ. ಅದು ಬಿದಿರಿನ ಬುಟ್ಟಿಯಾಗಿದ್ದು ಅದರ ಸುತ್ತಲೂ ಕೆಮ್ಮಣ್ಣನ್ನು ಬಳಿದು ಅದು ಆರಿದ ಮೇಲೆ ಸುಣ್ಣದಿಂದ ಅದರ ಅಂಚಿನ ಸುತ್ತಲೂ ಬೊಟ್ಟು ಇಟ್ಟಿರುತ್ತಾರೆ. ಬುಟ್ಟಿಯ ಸುತ್ತಲೂ ಸೂರ್ಯ, ಚಂದ್ರ, ಪಾಂಡವರು, ಕುಡುಗೋಲು, ಏಣಿ, ಅಷ್ಟದಳದ ಕಮಲ ಇತ್ಯಾದಿಗಳನ್ನೆಲ್ಲಾ ಸುಣ್ಣದಿಂದ ಕೌಶಲ್ಯವಾಗಿ ಬಿಡಿಸಿರುತ್ತಾರೆ.

ಇರಿಲ, ಈ ಬುಟ್ಟಿಯನ್ನು ಸಕಲ ಪೂಜಾ ಸಾಮಗ್ರಿಗಳನ್ನು ತೆಗೆದುಕೊಂಡು ಮನೆಯ ಅಥವಾ ಕುಟುಂಬದ ಎಲ್ಲ ಸದಸ್ಯರು, ಹೊಲ ಇಲ್ಲದಿರುವ ನೆರೆಹೊರೆಯ ಮನೆಯವರು, ಹೊಸದಾಗಿ ಗಂಡನ ಮನೆಗೆ ಹೋಗಿದ್ದ ಮನೆಯ ಹೆಣ್ಣು ಮಕ್ಕಳು ಎಲ್ಲರೂ ಸೇರಿ ಪಾದಯಾತ್ರೆಯ ಮೂಲಕವೋ, ಚಕ್ಕಡಿಯಲ್ಲಿಯೋ, ಟ್ರಾಕ್ಟರ್‌ನಲ್ಲಿಯೋ ಹೊಲಕ್ಕೆ ಹೋಗುವರು. ಹೊಲದಲ್ಲಿ ಬನ್ನಿಗಿಡವೇನಾದರೂ ಇದ್ದರೆ ಅದರ ನೆರಳಿನಲ್ಲಿಯೇ ಐದು ಸಾಧಾರಣ ಗಾತ್ರದ ಕಲ್ಲುಗಳನ್ನಿಡುತ್ತಾರೆ. ಇವರು ಪಾಂಡವರೆಂತಲೂ ಮತ್ತು ಅವುಗಳ ಹತ್ತಿರ ಸ್ವಲ್ಪ ದೊಡ್ಡ ಕಲ್ಲೊಂದನ್ನು ಇಡುತ್ತಾರೆ. ಇದನ್ನು ಕುಂತಿ ಎಂದು ಭಾವಿಸಿ ಪೂಜಿಸಲಾಗುತ್ತದೆ. ಕುಂತಿ ಸಂತಾನ ದೇವತೆ ಎಂದು ಅವಳ ಕೃಪೆಯಿಂದ ಬೆಳೆ ಇಮ್ಮಡಿ, ಮುಮ್ಮಡಿಯಾಗಿ ಬೆಳೆಯಲೆಂದು ಆಶಿಸುವುದುಂಟು. ಕೆಲವು ಕಡೆ ಆ ದೊಡ್ಡ ಕಲ್ಲನ್ನು ಕಳ್ಳ ಎಂತಲೂ ಸಂಭೋದಿಸುವುದುಂಟು. ಈ ಪಾಂಡವರ ಸುತ್ತಲೂ ಐದು ಜೋಳದ ಅಥವಾ ಕಬ್ಬಿನ ಕೋಲುಗಳನ್ನು ಇಡಲಾಗುತ್ತದೆ. ಅನಂತರ ಈ ಪಾಂಡವರನ್ನು ತೊಳೆದು ಸುಣ್ಣ ಮತ್ತು ಕೆಮ್ಮಣ್ಣುಗಳಿಂದ ಪಟ್ಟಿ ಎಳೆದು ಶೃಂಗರಿಸುವರು. ಇದೇ ಸ್ಥಳದಲ್ಲಿಯೇ ಹೆಣ್ಣುಮಕ್ಕಳು ಮನೆಯಿಂದ ತಂದಿದ್ದ ಸೀಗವ್ವಳನ್ನು ಇಡುವರು. ಇವೆಲ್ಲವುಗಳನ್ನು ಮತ್ತು ಭೂಮಿತಾಯಿಯನ್ನು ವಿಭೂತಿ, ಗಂಧ, ಅರಿಷಣ ಕುಂಕುಮದಿಂದ ಪೂಜೆ ಮಾಡಿ, ಹಂಗನೂಲನ್ನು ಹಾಕಿ, ಎಲೆ ಅಡಿಕೆ ಬಾಳೆಹಣ್ಣಿನಿಂದ ಉಡಿ ತುಂಬಿ ಹಸರು ಬಳೆ ಏರಿಸಿ ಜೊತೆಗೆ ಸೀರಿಕುಪ್ಪಸವನ್ನು ಏರಿಸಲಾಗುತ್ತದೆ. ಇಲ್ಲಿ ಭೂಮಿತಾಯಿ, ಸೀಗವ್ವ, ಕುಂತಿ ಇವರೆಲ್ಲ ಹೆಣ್ಣು ಎಂಬ ಕಾರಣಕ್ಕಾಗಿ ಹೀಗೆ ಮಾಡುವರು. ನಂತರ ದೂಪ ದೀಪದಿಂದ ಬೆಳಗಿ, ಟೆಂಗಿನಕಾಯಿ ಒಡೆದು ಅಂದು ಮಾಡಿ–ಕೊಂಡು ಬಂದ ಎಲ್ಲ ಬಗೆಯ ಅಡುಗೆ ಪದಾರ್ಥವನ್ನು ನೈವೇದ್ಯ ಮಾಡುವರು.

ಈ ಹಬ್ಬದ ಇನ್ನೊಂದು ವಿಶೇಷತೆ ಎಂದರೆ ಹೊಲದಲ್ಲಿ ಚರಗ ಚೆಲ್ಲುವುದು. ಅಂದರೆ ಅಂದು ಮಾಡಿದ ಎಲ್ಲ ತಿಂಡಿ–ತಿನಿಸುಗಳನ್ನು ಸ್ವಲ್ಪ ಸ್ವಲ್ಪ ತೆಗೆದುಕೊಂಡು ಜೊತೆಗೆ ಚರಗದ ಪಲ್ಲೆ ಎಂದು ಪ್ರತ್ಯೇಕವಾಗಿ ಮಾಡಿದ್ದನ್ನು, ಎಲ್ಲವನ್ನು ಸೇರಿಸಿ ರೈತ ಹೊಲದ ತುಂಬೆಲ್ಲಾ ಹುಲ್ಲೊ ಹುಲ್ಲೊ ಎನ್ನುತ್ತಾ ಅವನ್ನು ಎರಚುವನು. ಇದು ಭೂಮಿತಾಯಿಗೆ ಊಟ ಬಡಿಸುವ ಒಂದು ಕ್ರಮ. ರೈತನು ಮಾನವ ಸಹಜವಾದ ಗರ್ಭಿಣಿಯ ಬಯಕೆಯನ್ನು ಭೂಮಿಗೂ ಹೋಲಿಸಿ ಅವಳಿಗೆ ಸೀರೆ, ಕುಪ್ಪಸ, ಹಸಿರು ಬಳೆ, ಉಡಿಯಕ್ಕಿ ಇವೆಲ್ಲವನ್ನು ಕೊಟ್ಟು ಅವಳಿಗೆ ಭಕ್ಷ ಭೋಜನಗಳನ್ನು ಉಣ ಬಡಿಸುವನು. ತನಗೆ ಅಷ್ಟೊಂದು ದವಸ ಧಾನ್ಯಗಳನ್ನು ನೀಡುವ ಅವಳಿಗೆ ಈ ಮೂಲಕ ಕೃತಜ್ಞತೆಯನ್ನು ತೋರಿಸುತ್ತಾನೆ.

ಇವೆಲ್ಲಾ ಆದ ಅನಂತರ ಎಲ್ಲರೂ ಸಾಮೂಹಿವಾಗಿ ಕುಳಿತು ಊಟ ಮಾಡುವರು. ಈ ಒಂದು ದೃಶ್ಯ ನೋಡಲು ಎರಡು ಕಣ್ಣು ಸಾಲದು. ಕೂಡು ಕುಟುಂಬವಾಗಿದ್ದರೆ ಅದರ ಸೊಬಗು ಹೇಳತೀರದು. ಈ ಒಂದು ಸಂತೋಷದಲ್ಲಿಯೇ ರೈತರು ತಮ್ಮ ದಣಿವನ್ನು ಮರೆಯುವರು. ಊಟ ಮುಗಿದ ಮೇಲೆ ಎಲ್ಲ ಹಿರಿಯರು ತಾಂಬೂಲ ಹಾಕುತ್ತಾ ಕುಳಿತರೆ, ಮಕ್ಕಳು ಗಾಳಿಪಟವನ್ನು ಹಾರಿಸುವರು. ಹೀಗೆ ಹೊತ್ತುಗಳೆಯುವವರೆಗೂ ಅಂದು ಅಲ್ಲೇ ಇದ್ದು ಹೊಟ್ಟೆಗೆ ಸಿಹಿ ಉಣಿಸಿ, ಕಣ್ಣಿಗೆ ಹಸಿರುಣಿಸಿ, ಪ್ರಕೃತಿಯ ಸವಿಯನ್ನು ಸವೆದು ಮರಳಿ ಮನೆಗೆ ಹೋಗುವರು. ಭೂಮಿತಾಯಿಗೆ ಏರಿಸಿದ ಸೀರೆಯನ್ನು ಹೊಸದಾಗಿ ಗಂಡನ ಮನೆಯಿಂದ ಕರೆಸಿದ್ದ ಹೆಣ್ಣು ಮಗಳಿಗೆ ಉಡಿಸಿ ಕಳಿಸುವರು. ಹೀಗೆ ಆಚರಣಾ ವಿಧಿ ವಿಧಾನಗಳನ್ನು ಸೀಗೆ ಹುಣ್ಣಿಮೆ ಒಳಗೊಂಡಿದೆ. ಈ ಹಬ್ಬ ಆಚರಿಸಲು ಕೆಲವು ಕಾರಣಗಳಿವೆ:

1. ಕುಟುಂಬದ ಎಲ್ಲ ಸದಸ್ಯರುಗಳಲ್ಲಿ ಹಾಗೂ ನೆರೆಹೊರೆಯವರಲ್ಲಿ ಐಕ್ಯತೆ ಮೂಡಿಸುವ ಸಲುವಾಗಿ ಈ ಹಬ್ಬ ಆಚರಿಸಬಹುದು. 2. ಈ ಸಮಯದಲ್ಲಿ ಹೊಲದಲ್ಲಿ ಬೆಳೆಗಳು ಸಮೃದ್ಧವಾಗಿ ಬೆಳೆದಿದ್ದು, ಹಚ್ಚ ಹಸಿರಿನಿಂದ ಕಂಗೊಳಿಸುತ್ತಿದ್ದು ಅವುಗಳನ್ನು ನೋಡಿದರೆ ಮನಸ್ಸಿಗೆ ಆಹ್ಲಾದ ಉಂಟಾಗುತ್ತದೆ. ಈ ಒಂದು ಸಂತೋಷವನ್ನು ಹಂಚಿಕೊಳ್ಳುವುದಕ್ಕಾಗಿ ಅಥವಾ ಅನುಭವಿಸುವುದಕ್ಕಾಗಿ ಈ ಹಬ್ಬವನ್ನು ಆಚರಿಸುತ್ತಿರಬಹುದು. 3. ಹೊಲದಲ್ಲಿ ದುಡಿದು ದುಡಿದು ಬೇಸತ್ತ ರೈತರಿಗೆ ಒಂದು ವಿರಾಮ ಮತ್ತು ಮನೋರಂಜನೆಯ ಅಗತ್ಯವಿದೆ. ಸಾಮಾನ್ಯವಾಗಿ ರೈತರಿಗೆ ಬೀಜ ಸಂಗ್ರಹಿಸುವುದು ಹೊಲವನ್ನು ಹಸನು ಮಾಡುವುದು, ಮಳೆ ಬಿದ್ದಾಗ ಬಿತ್ತುವುದು ಇಲ್ಲವೆ ನಾಟಿ ಮಾಡುವುದು, ಕಳೆ ಕೀಳುವುದು, ರಸಗೊಬ್ಬರಗಳನ್ನು ಹಾಕುವುದು, ಕೀಟ ನಾಶಕಗಳನ್ನು ಸಿಂಪಡಿಸುವುದು ಈ ರೀತಿಯಾದ ಕಾರ್ಯಗಳಲ್ಲಿ ತನ್ನನ್ನು ತಾನು ಸದಾ ತೊಡಗಿಸಿಕೊಂಡಿರುವದರಿಂದ ಖಂಡಿತವಾಗಿಯೂ ಅವನಿಗೊಂದು ಬಿಡುವು ಅಥವಾ ಆತನ ಮನಸ್ಸಿಗೆ ಸಂತೋಷವನ್ನು ಕೊಡುವ ಬೇರೆ ವಾತಾವರಣ ಬೇಕಾಗಿರುತ್ತದೆ. ಈ ಬಗೆಯ ಆಲೋಚನೆ ನಮ್ಮ ಪೂರ್ವಿಕರಲ್ಲಿ ಮೂಡಿದ್ದರಿಂದಲೇ ಇಂತಹ ಒಂದು ಆಚರಣೆ ಬೆಳೆದುಕೊಂಡು ಬಂದಿರಬೇಕು. 4. ಭಯದ ಹಿನ್ನೆಲೆಯಲ್ಲೂ ಈ ಆಚರಣೆ ಬೆಳೆದುಕೊಂಡು ಬಂದಿರಬಹುದು. ಭೂಮಿತಾಯಿ ನಮಗೆ ಇಷ್ಟೆಲ್ಲ ಧಾನ್ಯ ಸಂಪತ್ತನ್ನು ಕೊಟ್ಟರೂ ಅವಳಿಗೆ ಪ್ರತಿಫಲವಾಗಿ ನಾವು ಏನನ್ನೂ ಕೊಡದಿದ್ದರೆ ಭೂಮಿತಾಯಿ ನಮ್ಮ ಮೇಲೆ ಕೋಪಗೊಂಡರೆ ಎಂಬ ಭಯ ರೈತಾಪಿ ಜನಕ್ಕೆ ಇರುವುದರಿಂದ ಅವಳಿಗೆ ವರ್ಷಕ್ಕೊಮ್ಮೆ ಈ ಹಬ್ಬ ಮಾಡಬಹುದು. 5.ಒಕ್ಕಲಿಗರು ಭೂತಾಯಿಗೆ ತೋರಿಸುವ ಗೌರವ, ಕೃತಜ್ಞತೆ, ಭಕ್ತಿಗಳ, ಸಂಕೇತವಾಗಿ ಈ ಆಚರಣೆಗಳು ರೂಢಿಯಲ್ಲಿರಬಹುದು. *(ಎಸ್.ಜಿ.ಎ.)*

ಸೀಮಂತ ಕಾರಣ: ಚೊಚ್ಚಿಲು ಬಸಿರಿಗೆ ಮಾಡುವ ಸಂಸ್ಕಾರಗಳಲ್ಲಿ ಒಂದು. ಇದಕ್ಕೆ 'ಹೂ ಮುಡಿಸುವುದು', 'ಕುಪ್ಪಸ ಮಾಡುವುದು' ಎಂತಲೂ ಕರೆಯುತ್ತಾರೆ. ಹೆಣ್ಣು ಪೂರ್ಣತ್ವ ಪಡೆಯುವುದು

ತಾಯಿಯಾದಾಗಲೇ. ಪ್ರತಿ ಹೆಣ್ಣಿಗೆ ತಾಯಿಯಾಗುವ ಬಯಕೆ ಆದಮ್ಯವಾಗಿರುತ್ತದೆ. ದಂಪತಿಗಳ ನಿರೀಕ್ಷೆ, ಹಾರೈಕೆ, ಹರಕೆಗಳ ಫಲವಾಗಿ, ತಮ್ಮಿಬ್ಬರ ಪ್ರೀತಿಯ ದ್ಯೋತಕವಾಗಿ ಹೆಂಡತಿ ಗರ್ಭಿಣಿಯಾದರೆ ಗಂಡನಿಗೆ ಎಲ್ಲಿಲ್ಲದ ಸಂತಸವಾಗುವುದು, ಕುಟುಂಬದವರಿಗೆಲ್ಲ ಮನೆಯಲ್ಲಿ ಹೊಸ ಜೀವವೊಂದು ಬರುವುದೆಂಬ ಸಂತೋಷ.

ಗರ್ಭಿಣಿಯನ್ನು ಸಂತಸವಾಗಿಡಲು, ಮನೆಯವರು, ಬಂಧು-ಬಳಗ, ನೆರೆ-ಹೊರೆಯವರೆಲ್ಲ ಪ್ರಯತ್ನಿಸುವರು. ಅವಳು ಬಯಸಿದ ತಿನಿಸು, ಊಟ-ತಿಂಡಿ ಉಣಿಸಿ ತಣಿಸುವರು. ಹಸಿರು ಸೀರೆ, ಕುಪ್ಪಸ ಉಡಿಸಿ, ಹಸಿರು ಬಳೆ ತೊಡಿಸಿ ಸಂತೋಷ ಪಡುವರು.

ಗರ್ಭಿಣಿಗೆ ಮೂರು ತಿಂಗಳಾದಾಗ, ತವರಿನವರು 'ಕಳ್ಳ ಕುಬಸ' ಮಾಡುವರು. ಮೂರು ತಿಂಗಳ ಗರ್ಭ ನಿಜವೋ-ಸುಳ್ಳೋ ಎಂದು ಜನರಾಡಿಕೊಳ್ಳಬಹುದೆಂದು, ಬೇರೆಯವರಿಗೆ ಹೇಳದೇ, ಮನೆಯವರೇ ನೆರವೇರಿಸಿಕೊಳ್ಳುವರು. ಆಗ ಹುಗ್ಗಿ, ಹೂರಣ ಗಡಬ, ಮೊಸರನ್ನ ಮಾಡುತ್ತಾರೆ. 'ಎಂಬುಲು ಗಡಿಗೆ' ಯನ್ನು ಪೂಜಾ ಮಾಡಿ ಅದಕ್ಕೆ ಹುಗ್ಗಿ ನೈವೇದ್ಯ ಕೊಟ್ಟು, ಗೋದಿ-ಕೊಬ್ಬರಿ, ಉತ್ತತ್ತಿ, ಅರಿಶಿಣ, ಅಡಿಕೆ ಮುಂತಾದ ಉಡಕ್ಕಿ ಸಾಮಾನುಗಳನ್ನಿಟ್ಟು, ಹಸಿರು ಖಣ-ಮಗ್ಗಿ ಹೂವಿನ ದಂಡಿ ಇಟ್ಟು ಪೂಜಿಸುವರು. ಗರ್ಭಿಣಿಗೆ ಅದೇ ಉಡಿಯಕ್ಕಿ ಹಾಕಿ, ಮಗ್ಗಿ ಹೂವಿನ ದಂಡಿ ಮುಡಿಸುವರು. ಹಸಿರು ಬಳೆ ಇಡಿಸಿ, ಹಸಿರು ಕುಪ್ಪಸ ಹೊಲಿಸಿ ತೊಡಿಸುವರು. ಮುಂದೆ ಐದು ಅಥವಾ ಏಳು ತಿಂಗಳಲ್ಲಿ ದೊಡ್ಡ ಕುಪ್ಪಸ ಮಾಡುವರು. ಹೆಣ್ಣಿನ ತವರಿನವರು ತಮ್ಮ ಮಗಳಿಗೆ ಹಸಿರು ರೇಷ್ಮೆ ಸೀರೆ-ಕುಪ್ಪಸ, ಅಳಿಯನಿಗೆ ಬಟ್ಟೆ-ಬಂಗಾರ ತರುವರು. ಜೊತೆಗೆ ಬಗೆ ಬಗೆಯ ತಿಂಡಿ- ತಿನಿಸು, ಉಂಡಿ-ಕರಚೀಕಾಯಿ, ಸಜ್ಜೀರೊಟ್ಟಿ ಧಪಾಟಿ, ಮುಂಡಿಪಲ್ಲೆ, ಗಟ್ಟಿಬ್ಯಾಳಿ, ಎಣ್ಣೆ ಬದನೀಕಾಯಿ, ಹಿಂಡಿ-ಮೊಸರನ್ನ ತರುವರು. ಓಣಿಯಲ್ಲಿ ಮನೆಮನೆಗೆ ಈ ಪದಾರ್ಥಗಳನ್ನೆಲ್ಲ ಬೀರುವರು. ಕುಪ್ಪಸದ ದಿವಸ ವಿಶೇಷ ಅಡಿಗೆ ಮಾಡಿ ಊರ ಮಂದಿಗೆಲ್ಲ ಉಣಿಸಿ, ಸಾಯಂಕಾಲ ದಂಪತಿಗಳಿಬ್ಬರನ್ನೂ ಕೂಡಿಸಿ, ಆಯ್ಹೇರಿ ಮಾಡುವರು. ಗರ್ಭಿಣಿಗೆ ಉಡಿಯಕ್ಕಿ ಹಾಕಿ, ಗೋದಿ ನೆನೆಹಾಕಿ ಪೋಣಿಸಿದ ಸರವನ್ನು ಅವಳ ಕೊರಳಲ್ಲಿ ಹಾಕುತ್ತಾರೆ. ದಂಪತಿಗಳಿಬ್ಬರಿಗೂ ಆರತಿ ಬೆಳಗಿ ಸುಮಂಗಲಿಯರು ಹಾಡುತ್ತಾರೆ. ಒಂದು ತಿಂಗಳಿಂದ ಒಂಭತ್ತು ತಿಂಗಳವರೆಗೆ ಅವಳಿಗೆ ಎಂಥೆಂಥ ಬಯಕೆಗಳಾಗುತ್ತವೆ ಎಂಬುದೆಲ್ಲ ಆ ಹಾಡಿನಲ್ಲಿರುತ್ತದೆ. ಇದೊಂದು ವಿಶೇಷ ಆಚರಣೆಯಗಿದೆ.

ಕುಪ್ಪಸ ಮಾಡುವ ಉದ್ದೇಶ, ಬಸಿರಿಗೆ, ಮಗುವಿಗೆ ಶುಭ ಹಾರೈಸಿ, ಅಮಂಗಳ ನಿವಾರಣೆ ಮಾಡುವುದಾಗಿದೆ. ಗರ್ಭಿಣಿ ಸಂತೋಷದಿಂದ, ಪ್ರಸನ್ನಳಾಗಿರಲಿ ಎಂಬ ಸದಾಶಯ ಇದರ ಹಿಂದಿರುವುದು. *(ಎನ್.ಕೆ.)*

ಸೀಮಿ ನಾಗನಾಥ: ಕರ್ನಾಟಕದ ಮಹತ್ವದ ಧಾರ್ಮಿಕ ಕ್ಷೇತ್ರ. ಬೀದರ ಜಿಲ್ಲೆಯ ಹಳ್ಳಿಖೇಡ ಬಿ, ರಾಜ್ಯದ ಅತೀ ದೊಡ್ಡ ಗ್ರಾಮ ಪಂಚಾಯತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಗ್ರಾಮ. ಕರ್ನಾಟಕದ ಜೊತೆಗೆ ನೆರೆಯ ಮಹಾರಾಷ್ಟ್ರ, ಹಾಗೂ ಆಂಧ್ರ ಪ್ರದೇಶದ ಅಸಂಖ್ಯಾತ ಭಕ್ತರ ಭಕ್ತಿಯ ಕೇಂದ್ರ. 'ಸೀಮಿ ನಾಗನಾಥ ದೇವರಿಂದಾಗಿ ಪ್ರಸಿದ್ಧಿಗೆ ಬಂದಿರುವ ಈ ಊರು, ಅಪಾರ ಭಕ್ತರು ನಡೆದುಕೊಳ್ಳುವ ಜಾಗೃತ ಸ್ಥಾನ. ಶ್ರೀ ನಾಗನಾಥ ಅಥವಾ 'ಸೀಮಿ ನಾಗಣ್ಣ' ದೇವರ ಕೃಪಾಶೀರ್ವಾದದಿಂದ ಸಕಲ ಸುಖ, ಸಂಪತ್ತಿನ ಒಡೆಯರಾಗಿರುವ ಅಸಂಖ್ಯಾತ ಭಕ್ತರು, ಮುಕ್ತ ಮನಸ್ಸಿನಿಂದ ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಸೀಮಿ ನಾಗಣ್ಣ ಬೇಡಿದ್ದನ್ನು ಕೊಡುವ ದೇವರು ಎಂಬ ಅಚಲ ನಂಬಿಕೆ ಅಸಂಖ್ಯಾತ ಭಕ್ತರಲ್ಲಿದೆ. ಹತ್ತಾರು ವರ್ಷಗಳಿಂದ ಇಲ್ಲಿ ನಡೆದಿರುವ ಪವಾಡಗಳು ಶ್ರೀ ನಾಗನಾಥರ ಮಹಿಮೆ ದಶದಿಕ್ಕುಗಳಿಗೆ ಹರಡುವಂತೆ ಮಾಡಿವೆ. ಜೊತೆಗೆ ಹರಕೆ ಹೊತ್ತವರು, ಹರಕೆ ಸಲ್ಲಿಸದಿದ್ದರೆ ಅನೇಕ ಕಷ್ಟಕ್ಕೆ ಸಿಕ್ಕಿಕೊಂಡ ನಿದರ್ಶನಗಳೂ ಇವೆ. ಈ ಹಿನ್ನೆಲೆಯಲ್ಲಿಯೇ ದೇವಸ್ಥಾನಕ್ಕೆ ಬರುವ ಭಕ್ತರು ನುಡಿದಂತೆ ನಡೆಯುತ್ತಾರೆ. ನಾಗನಾಥ ದೇವರ ಕೃಪೆಗೆ ಪಾತ್ರರಾಗಿ, ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತಾರೆ. ನೂರಾರು ವರ್ಷಗಳಿಂದ ಇದು ನಡೆಯುತ್ತಲೇ ಬಂದಿದೆ.

ಕರ್ನಾಟಕದ ಜೊತೆಗೆ ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶದಲ್ಲಿ ಸೀಮಿ ನಾಗನಾಥ ದೇವರ ಅಸಂಖ್ಯಾತ ಭಕ್ತರಿದ್ದಾರೆ. ದೇವಸ್ಥಾನದಲ್ಲಿ ನಡೆಯುವ ಪ್ರಮುಖ ಮಹೋತ್ಸವಗಳ ಸಂದರ್ಭದಲ್ಲಿ ಸೇರುವ ಭಕ್ತರ ಸಂಖ್ಯೆಯನ್ನು ಗಮನಿಸಿದಾಗ, ಕ್ಷೇತ್ರದ ಮಹಿಮೆ ಎಷ್ಟೆಂಬುದು ಅರಿವಾಗುತ್ತದೆ.

ದೇವಸ್ಥಾನದ ಭವ್ಯತೆ: ವಿಶಾಲವಾದ ಮಂಟಪ, ಅತ್ಯಾಕರ್ಷಕ ದೇವಸ್ಥಾನವನ್ನು ಕಲಾ ಕುಸುರಿಯಿಂದ ಕೂಡಿರುವ ಶಿಖರ, ಆಕರ್ಷಕ ಮಹಾದ್ವಾರ, ಗರ್ಭಗುಡಿಯ ನೇರಕ್ಕೆ ಹೊರಭಾಗದಲ್ಲಿ ಬೃಹದಾಕಾರದ ಹಾಗೂ ಅಷ್ಟೇ ಆಕರ್ಷಕವಾದ ದೀಪಸ್ತಂಬ ಎಲ್ಲರ ಗಮನ ಸೆಳೆಯುತ್ತದೆ. ಕೊಡುಗೈ ದಾನಿಗಳು, ಅಪಾರ ಪ್ರಮಾಣದ ಹಣ ವೆಚ್ಚ ಮಾಡಿ ದೇವಸ್ಥಾನಕ್ಕೊಂದು ಸುಂದರ ಸ್ವರೂಪ ನೀಡಿದ್ದಾರೆ. ನಾಗನಾಥ ದೇವರ ಕೃಪೆಗೆ ಪಾತ್ರರಾದ ಭಕ್ತರು ದೇವಸ್ಥಾನದ ಅಭಿವೃದ್ಧಿಗೆ ಪ್ರಯತ್ನಿಸುತ್ತಿದ್ದಾರೆ. ಈ ಪ್ರಯತ್ನದ ಫಲವಾಗಿಯೇ ಇಂದು ನಾಗನಾಥ ದೇವಸ್ಥಾನ ಗ್ರಾಮೀಣ ಪ್ರದೇಶದಲ್ಲಿ ಅತ್ಯಂತ ಭವ್ಯವಾಗಿ ತಲೆ ಎತ್ತಿನಿಂತಿದೆ. ದೇವಸ್ಥಾನದ ಶಿಖರ ಮುಗಿಲು ಮುಟ್ಟುವಂತಿದೆ.

ದೇವಸ್ಥಾನದ ಹೊರಭಾಗದಲ್ಲಿ ಅತ್ಯಾಕರ್ಷಕ ಉದ್ಯಾನ 'ನಾಗವನ' ಇದೆ. ನವೀನ ರೀತಿಯಲ್ಲಿ ನಿರ್ಮಿಸಲಾಗಿರುವ ಅತ್ಯಾಕರ್ಷಕ ಹಾಗೂ ಬೃಹದಾಕಾರದ ರಥವೂ ಇಲ್ಲಿದೆ. ದೇವಸ್ಥಾನದ ಮುಂಭಾಗದಲ್ಲಿ ಬೃಹತ್ ತೆರೆದ ಬಾವಿ, ಬಾವಿಯ ಮೆಟ್ಟಿಲುಗಳ ವ್ಯವಸ್ಥೆಯೂ ನೋಡುವಂತಿದೆ. ದೇವಸ್ಥಾನದ ಗರ್ಭಗುಡಿಯ ಎಡ ಭಾಗದಲ್ಲಿ ಗಣೇಶ ವಿಗ್ರಹವಿದೆ. ಪ್ರತಿದಿನ ಮೊದಲಿಗೆ ಗಣೇಶ ವಿಗ್ರಹಕ್ಕೆ ಪೂಜೆ ನಡೆಯುತ್ತದೆ. ಬಲಭಾಗದಲ್ಲಿ ಈಶ್ವರಲಿಂಗ ಪ್ರತಿದಿನ ಪೂಜೆ ಸಲ್ಲಿಸಲಾಗುತ್ತದೆ.

ಶ್ರಾವಣ ಶುದ್ಧ ಪಂಚಮಿಯಂದು ಆಚರಿಸುವ 'ನಾಗರ ಪಂಚಮಿ' ಯ ಸಂದರ್ಭದಲ್ಲಿ ಸೀಮಿ ನಾಗನಾಥ ದೇವಸ್ಥಾನದಲ್ಲಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ನಾಗ

ದೇವರಿಗೆ ಹಾಲುಣಿಸುವ ಹಾಗೂ ವಿಶೇಷ ಪೂಜೆ, ಅಭಿಷೇಕ, ಅಲಂಕಾರ ಮುಂತಾದವುಗಳಿಂದಾಗಿ ನಾಗ ಪಂಚಮಿ ಹಳ್ಳಿಖೇಡದಲ್ಲಿ, ಸೀಮಿ ನಾಗನಾಥ ದೇವಸ್ಥಾನದ ಆವರಣ ಸಹಸ್ರಾರು ಭಕ್ತರ ಆಕರ್ಷಣೆಯ ಕೇಂದ್ರವಾಗುತ್ತದೆ. ಗೌರಿ ಹುಣ್ಣಿಮೆ ಸಂದರ್ಭದಲ್ಲಿ ಎಂಟು ದಿನಗಳ ಕಾಲ ನಾಗನಾಥ ಜಾತ್ರಾ ಮಹೋತ್ಸವ ನಡೆಯುತ್ತದೆ. ಈ ಭಾಗದ ಅತ್ಯಂತ ದೊಡ್ಡ ಜಾತ್ರೆ ಎಂದೇ ಇದು ಪ್ರಸಿದ್ಧಿ ಪಡೆದಿದೆ. ನಾಡಿನ ಮೂಲೆ ಮೂಲೆಗಳಿಂದ ಭಕ್ತರು ಅಪಾರ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ನಾಗನಾಥ ದೇವರ ಕ್ಷೇತ್ರದಲ್ಲಿ ನಡೆದ ಪವಾಡಗಳು ಒಂದೆರಡಲ್ಲ. ಭಕ್ತಿ, ಶ್ರದ್ಧೆಯಿಂದ ನಡೆದುಕೊಂಡ ಭಕ್ತರಿಗೆ ಸಂತಾನ ಭಾಗ್ಯವೂ ಸೇರಿದಂತೆ ಎಲ್ಲ ಇಚ್ಛೆಗಳನ್ನು ಪೂರೈಸಿಕೊಂಡಿದ್ದಾರೆ. ನಾಗನಾಥ ದೇವರ ಕೃಪೆಯಿಂದಾಗಿಯೇ ಬದುಕಿನಲ್ಲಿ ಪ್ರಗತಿ ಸಾಧಿಸಿ, ಅಹಂ ಬೆಳೆಸಿಕೊಂಡವರು ಪುನಃ ಮೊದಲಿನ ಸ್ಥಾನಕ್ಕೆ ಬಂದಿದ್ದಾರೆ.

ನಾಗನಾಥ ಕ್ಷೇತ್ರ ಜಾಗೃತ ಸ್ಥಾನವೆಂಬ ಪ್ರಖ್ಯಾತಿ ಹೊಂದಿದ್ದು, ಸೀಮಿ ನಾಗಣ್ಣ ದೇವರು ಕರ್ನಾಟಕ, ಆಂಧ್ರ ಮತ್ತು ಮಹರಾಷ್ಟ್ರ ಮೂರೂ ರಾಜ್ಯಗಳ ಗಡಿಭಾಗದಲ್ಲಿರುವ ಅಸಂಖ್ಯಾತ ಪರಿವಾರಗಳ 'ಮನೆ ದೇವರು'. ಹೀಗಾಗಿ ಪ್ರತಿಯೊಂದು ಮಂಗಲ ಕಾರ್ಯಕ್ರಮ ಇಲ್ಲಿಯೇ ನಡೆಯಬೇಕು. ಸೀಮಿ ನಾಗಣ್ಣ ದೇವರ ವಿದ್ಯುಕ್ತ ದರ್ಶನ ಪಡೆದ ನಂತರವೇ ಮನಸ್ಸಿಗೆ ಸಮಾಧಾನ. ಇಲ್ಲವಾದಲ್ಲಿ, ಏನನ್ನೋ ಕಳೆದುಕೊಂಡವರಂತೆ ಅನುಭವ ಈ ಭಕ್ತರದು.

ಹಳ್ಳಿಖೇಡ ಗ್ರಾಮದವರೇ ಆಗಿದ್ದ ಬಾಬುರಾವ ಶಂಕ್ರಯ್ಯ ಗಣಾಚಾರಿ ಅವರಿಗೆ ಸಂತಾನವಿರಲಿಲ್ಲ. ಸಂತಾನ ಭಾಗ್ಯ ಕರುಣಿಸುವಂತೆ ದೇವರಲ್ಲಿ ಪ್ರಾರ್ಥಿಸಿ, ಸಂಗೀತ ರುದ್ರಾಭಿಷೇಕ ಮಾಡಿಸುವ ಹರಕೆ ಹೊತ್ತರು. ವರ್ಷ ಕಳೆಯುವುದರೊಳಗೆ ಮಡಿಲು ತುಂಬಿತು. ಸುಂದರ ಕನ್ಯಾರತ್ನ ಜನಿಸಿತ್ತು. ಹರಕೆ ಹೊತ್ತಂತೆ ಬಾಬುರಾವ ಅವರು ಸಂಗೀತ ರುದ್ರಾಭಿಷೇಕ ನೆರವೇರಿಸಿ, ನಾಗನಾಥೇಶ್ವರ ದೇವರ ಕೃಪೆಗೆ ಪಾತ್ರರಾದರು.

ಹೀಗೆ ಸೀಮಿ ನಾಗನಾಥ ದೇವರ ಅಸಂಖ್ಯಾತ ಪವಾಡಗಳನ್ನು ಭಕ್ತರು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ. ಜೀವನದಲ್ಲಿ ಕಷ್ಟ ಕಾರ್ಪಣ್ಯಗಳು ಎದುರಾದಾಗ, ನಾಗನಾಥ ದೇವರ ಮೊರೆ ಹೋಗುತ್ತಾರೆ. ಹರಕೆ ಹೊತ್ತು, ಕಷ್ಟದಿಂದ ಮುಕ್ತಿ ಪಡೆಯುತ್ತಾರೆ.

ಸಂತಾನ ಭಾಗ್ಯ. ಬಡವರಿಗೆ ಸಂಪತ್ತು. ಸಮಸ್ಯೆಗಳಲ್ಲಿ ಸಿಲುಕಿದವರಿಗೆ ಪರಿಹಾರ ಹೀಗೆ ನಾನಾ ಇಷ್ಟಾರ್ಥಗಳನ್ನು ಪೂರೈಸುತ್ತ ಬಂದಿರುವ ಸೀಮಿ ನಾಗನಾಥ ದೇವರು ಭಕ್ತರನ್ನು ಉದ್ಧರಿಸಿ, ಮುಕ್ತಿ ಮಾರ್ಗ ತೋರುತ್ತಿದ್ದಾರೆ.

ಇಂದಿಗೂ ಅಸಂಖ್ಯಾತ ಭಕ್ತರು ಸೀಮಿ ನಾಗನಾಥ ದೇವರ ದರ್ಶನದಿಂದ ಇಹ ಪರ ಸುಖ ಪಡೆಯುತ್ತಿದ್ದಾರೆ. ದಿನ ದಿನವೂ ಭಕ್ತರ ಸಂಖ್ಯೆ ಹೆಚ್ಚುತ್ತಲಿದೆ. ನಂಬಿದವರನ್ನು ಕೈಹಿಡಿದು ದಡ ತಲುಪಿಸುವ ನಾಗನಾಥ ದೇವರ ಮಹಿಮೆ ದಶ ದಿಕ್ಕುಗಳಿಗೆ ವ್ಯಾಪಿಸುತ್ತಿದೆ.

(ಎಂ.ಎಸ್.)

ಸು

ಸುನತಿ: ಮುಸ್ಲಿಮರಲ್ಲಿರುವ ಪ್ರಥಮ ಸಂಸ್ಕಾರ. ಉರ್ದುವಿನಲ್ಲಿ "ಖತ್ನ" ಎಂದು ಕರೆಯಲ್ಪಡುತ್ತದೆ. ದೇಸೀ ಭಾಷೆಗಳಲ್ಲಿ 'ಸುನತಿ ಮಾಡುವದು' ಅಥವಾ 'ಸುಂತಿ ಮಾಡುವುದು' ಎಂದು ಕರೆಯಲಾಗಿದೆ. ಮುಸ್ಲಿಂರ ಎಲ್ಲ ಪಂಗಡಗಳು, ಗುಂಪುಗಳು ಜನಾಂಗಗಳು ಇದನ್ನು ಕಡ್ಡಾಯವಾಗಿ ಆಚರಿಸುತ್ತವೆ.

ಗಂಡು ಮಕ್ಕಳು ಮೂರು ವರ್ಷದವರಾದಾಗ ಏಳು ವರ್ಷದವರಾಗುವವರೆಗೆ, ತಂದೆ–ತಾಯಿಗಳಿಗೆ ಅಥವಾ ಪಾಲಕರಿಗೆ ಅನುಕೂಲವಾದ ಸಮಯದಲ್ಲಿ ಇದನ್ನು ಮಾಡಬೇಕು. ಪುರುಷ ಜನನಾಂಗದ ಮುಂದೆ ಪಸರಿಸಿದ ಚರ್ಮವನ್ನು (ಮುಂದೊಗಲು) ಕತ್ತಿ, ಬ್ಲೇಡಿನಿಂದ ಅರಿವಳಿಕೆಯ ಮದ್ದನ್ನು ನೀಡದೇ ಕತ್ತರಿಸಿ ತೆಗೆಯುವದೇ 'ಖತ್ನ' ಅಥವಾ ಸುನತಿ ಮಾಡುವದು ಆಗಿದೆ. ರಕ್ತ ಬರಬೇಕು. ರಕ್ತಬರುವುದು ನಿಲ್ಲಲು ಕೋಳಿ ತತ್ತಿಯನ್ನು ಒಡೆದು, ಒಳಗಿನ ಭಾಗವನ್ನು ಜನನಾಂಗಕ್ಕೆ ಸವರುವರು. ಆಗ ಜನನಾಂಗದ ಉಳಿದ ಯಾವುದೇ ಭಾಗಕ್ಕೆ ಹಾನಿಯಾಗದಂತೆ ಎಚ್ಚರಿಕೆ ವಹಿಸುತ್ತಾರೆ. 8 ರಿಂದ 10 ದಿನಗಳಲ್ಲಿ ಗಾಯ ಮಾಯುವುದು. 40ನೆಯ ದಿನದಂದು ಮಿತ್ರರು ಮತ್ತು ಸಂಬಂಧಿಕರನ್ನು ಕರೆದು ಔತಣ ಕೂಟವನ್ನು ಏರ್ಪಡಿಸಲಾಗುವುದು. ಸುನತಿ ಮಾಡಿಸಿಕೊಂಡ ಹುಡುಗನಿಗೆ ಹೊಸ ಅರಿವೆಗಳನ್ನು ಕಾಣಿಕೆ ಕೊಡಲಾಗುವುದು.

ಈಗ ಸ್ಥಳೀಯ ಅರಿವಳಿಕೆ ಮದ್ದನ್ನು ನೀಡಿ ವಿದ್ಯುತ್ ಸಲಕರಣೆಯಿಂದ "ಖತ್ನ' ಮಾಡಲಾಗುತ್ತದೆ. ಈ ಪದ್ಧತಿಯಲ್ಲಿ ವೈಯಕ್ತಿಕ ಆರೋಗ್ಯ ಕಾಪಾಡಿಕೊಳ್ಳುವ ಅಂಶಗಳಿರುವುದರಿಂದ ಇಂದಿಗೂ ಈ ಆಚರಣೆ ಅನುಸರಿಸುತ್ತ ಬರಲಾಗಿದೆ. ಸುಂತಿ ಮಾಡಿಸಿಕೊಳ್ಳುವುದರಿಂದ ಲೈಂಗಿಕ ರೋಗಗಳಿಂದ ರಕ್ಷಣೆ ಸಿಗುತ್ತದೆ. ಮೂತ್ರದ ಸೋಂಕು ಉಂಟಾಗುವುದಿಲ್ಲ. ತ್ಯಾಜ್ಯ ಸಂಗ್ರಹ ಆಗುವುದಿಲ್ಲ. ಸ್ತ್ರೀಯರ ಸಂಗ ಮಾಡಿದಾಗ ತೊಳೆದುಕೊಂಡರೆ ಮುಗಿಯಿತು. ಮತ್ತು ಲೈಂಗಿಕ ಕ್ರಿಯೆಗೆ ಉತ್ತೇಜನ ದೊರೆತು ಹೆಚ್ಚಿನ ಆನಂದ ಸಿಗುತ್ತದೆ ಮುಂತಾದ ಕಾರಣಗಳಿಂದ ಇದನ್ನು ಅನುಸರಿಸಿಕೊಂಡು ಬರಲಾಗಿದೆ. *(ಆರ್.ಕೆ.)*

ಸುರಗಿ ನೀರು: ಹಿಂದೂ ಸಂಪ್ರದಾಯದಲ್ಲಿ ಲಗ್ನ (ಮದುವೆ)ದಲ್ಲಿ ವಿಧಿ ಪೂರ್ವಕವಾಗಿ ಸ್ನಾನ ಮಾಡಿಸುವ ಪ್ರಸಂಗಗಳು ಎರಡುಸಾರೆ ಬರುತ್ತವೆ. ಒಮ್ಮೆ ಅರಿಷಿಣ ಹಚ್ಚುವಾಗ, ಇನ್ನೊಮ್ಮೆ ಅಕ್ಷತೆಯ ಕಾಲಕ್ಕೆ. ಆಗ ನಾಲ್ಕು ಮೂಲೆಗೆ ನಾಲ್ಕು ತಂಬಿಗೆಗಳನ್ನಿಟ್ಟು ಅವುಗಳ ಸುತ್ತಮುತ್ತ ನೂಲು ಸುತ್ತಿ ಮೇರೆಯಂತೆ ನಟ್ಟ ನಡುವೆ ಮಣೆಗಳನ್ನಿಟ್ಟು ಮದುಮಕ್ಕಳಿಗೆ ಎರೆಯುತ್ತಾರೆ. ಇದಕ್ಕೆ ಸುರಗಿ ನೀರು ಎನ್ನುತ್ತಾರೆ. ಹಾಡುತ್ತ ನೂಲು ಸುತ್ತುವರು ನೂಲುಸುತ್ತುವ ಈ ಹಾಡುಗಳು ಜನಪದ ಸಾಹಿತ್ಯದಲ್ಲಿ ಸಿಗುತ್ತವೆ.

ಸುರಗಿ ಎನ್ನುವದಕ್ಕೆ ಕಿಟೆಲ್ ಕೋಶದಲ್ಲಿ "ಸುರಗಿ, ಸುರಿಗಿ, ಷುರಿಕೆ, ಛುರಿಕೆ (ಕಠಾರಿಗೇಣ) ಈ ಮೊದಲದ ಅರ್ಥಗಳನ್ನು ಕೊಟ್ಟಿದ್ದಾರೆ. ಅಂದರೆ ಅಂದು ನಡೆಯುತ್ತಿದ್ದ ಕನ್ಯೆಯ ಅಪಹರಣವನ್ನು ತಡೆಯುವ ಸಲುವಾಗಿ ಖಡ್ಗ ಧಾರಿಗಳಾದ ವೀರರು ಈ ಸಂದರ್ಭದಲ್ಲಿ ವಧುವರರ ಸುತ್ತಲು ಇರುತ್ತಿದ್ದರೆಂದು ಊಹಿಸಬಹುದಾಗಿದೆ. ನೆಯ್ ಮತ್ತು ಅರಿಷಣ ಹಚ್ಚಿಕೊಂಡಿರ ತಕ್ಕಂತ ಮದುಮಕ್ಕಳು ಬಿಸಿನೀರು ಅಥವಾ ತಣ್ಣೀರಿನಿಂದ ಅದನ್ನೆಲ್ಲ ತೊಳೆದುಕೊಂಡು ಮುಂದಿನ ಶಾಸ್ತಗಳಿಗೆ ಪರಿಶುದ್ಧರಾಗುವ ಸಂದರ್ಭವೇ ಸುರಗಿ ನೀರು. ಸುರಗಿ ಸುತ್ತುವ ಈ ಕಾರ್ಯ ಕ್ರಮವನ್ನು ಮನೆಯ ತಲೆ ಬಾಗಿಲಿನ ಮುಂದೆ ಹಾಕಿದ ಹಂದರದಲ್ಲಿ ನಡೆಸುತ್ತಿದ್ದು, ನಾಲ್ಕು ತಂಬಿಗೆಗಳನ್ನಿಟ್ಟು ಅದರ ಸುತ್ತಲೂ ದಾರ ಸುತ್ತುತ್ತಾರೆ. ವಧೂ ವರರು ಮುಖ ಮಾಡಿ ಕೂಡಬೇಕಾದ ಕಡೆಗೆ ವಿಶೇಷ ಕಳಸವನ್ನಿಟ್ಟು ಅಲ್ಲಿಂದಲೆ ಪ್ರದಕ್ಷಿಣಾಕಾರವಾಗಿ ಐದು ಸುತ್ತು ಸುತ್ತುತ್ತಾರೆ.

ನೀರು ಸಾಕಷ್ಟು ಸುಡುತ್ತಿದ್ದರೆ ಅದಕ್ಕೆ ತಣ್ಣೀರನ್ನು ಬೆರೆಸಿ ಸ್ನಾನಕ್ಕೆ ಯೋಗ್ಯವಾಗುವಷ್ಟು ಬಿಸಿಯನ್ನು ಉಳಿಸಿಕೊಳ್ಳುವರು. ಇಷ್ಟೆಲ್ಲ ತಯಾರಾದಾಗ ಮದುಮಕ್ಕಳು ಬಂದು ಈ ಸುರಗಿಯ ಸುತ್ತ ಪ್ರದಕ್ಷಣಾಕರವಾಗಿ ಕೈಯಲ್ಲಿ ಹಿಡಿದುಕೊಂಡು ಎಲೆಯೊಳಗಿನ ಅಕ್ಕಿಯನ್ನು ಏರಿಸುತ್ತಾ ಐದು ಸುತ್ತು ಹಾಕಿ, ಬಲಗಾಲನ್ನು ಮೊದಲಿಟ್ಟು ಪ್ರವೇಶಿಸುತ್ತಾರೆ. ದೇವಗಣದ ಮುತ್ತೈದೆಯರು ಇಲ್ಲಿ ವಧುವರರಿಗೆ ತಲೆಸ್ನಾನ ಮಡಿಸುತ್ತಾರೆ. ಅಭ್ಯಂಜನ ಸ್ನಾನ ಮಾಡಿಸಿ, ಹೊಸಬಟ್ಟೆ ಧರಿಸಿದ ನಂತರ ಸುಂದರವಾಗಿ ಕಾಣುವ ವಧುವರರ ದೃಷ್ಟಿ ದೋಷದ ಪರಿಹಾರಕ್ಕಾಗಿ ನಿವಾಳಿ ಆರತಿ ಮಾಡುತ್ತಾರೆ.


ನಿವಾಳಿ ತೆಗೆದ ಆನಂತರ ಕಳಸದ ತಂಬಿಗೆಯಲ್ಲಿದ್ದ ನೀರನ್ನು ತಟ್ಟೆಗೆ ಹಾಕಿಕೊಂಡು ಮುಖ ಕೆಳಗೆ ಮಾಡಿ ನೀರನ್ನು ವಧುವರರ ಮೇಲೆ ಬೀಳಿಸುತ್ತಾರೆ. ಇದಕ್ಕೆ ಮುತ್ತಿನ ನೀರು ಎರೆಯುವದು ಎಂದೂ ಕೂಡ ಕರೆಯುತ್ತಾರೆ. ಈ ನೀರು ಬಿದ್ದ ಆನಂತರ ವಧು ವರರು ಚಿಕ್ಕವರಿದ್ದರೆ ಬೇಗನೆ ಬೆಳೆದು ದೊಡ್ಡವರಾಗುತ್ತಾರೆ. ಹಾಗೂ ದೊಡ್ಡವರಿದ್ದರೆ ಇನ್ನಷ್ಟು ಸುಂದರವಾಗಿ ಕಾಣುತ್ತಾರೆ ಎಂಬ ನಂಬಿಗೆಯೂ ಇದೆ. ಮದುಮಗನ ಅಕ್ಕತಂಗಿಯರನ್ನು ಹಿಡಿದು ಐದು ಜನ ಮುತ್ತೈದೆಯರು ಮದುಮಕ್ಕಳಿಗೆ ಹಾಗೂ ಹಿಂದೆ ಕುಳಿತವರಿಗೆ ಆರತಿ ಮಾಡಿದ ಆನಂತರ ಈ ಕಾರ್ಯಕ್ರಮ ಮುಗಿಯುವುದು.

ಸುರಗಿಯಲ್ಲಿ ಪಾಲ್ಗೊಳ್ಳಬೇಕಾದರೆ (ಸ್ನಾನಮಾಡಲೂ ಕೂಡ) ಹಿಂದೆ ಸಾಕಷ್ಟು ಕಟ್ಟು ಪಾಡುಗಳಿದ್ದುವು. ಮರು ಮದುವೆಯಾದವರು, ಓಡಿ ಬಂದವರು, ಶರೀರದ ಯಾವುದೇ ಅಂಗ ಊನ ವಾದವರು, ಅಂದರೆ ಹಲ್ಲು ಮುಕ್ಕಾದವರು, ಬೆರಳು ಮೊಂಡಾದವರು, ಕಿವಿ, ಮೂಗು, ತುಟಿ ಹರಿದವರು, ಭಿನ್ನ ಕುಲದವರು ಇಲ್ಲಿ ಬರುವಂತಿಲ್ಲ. ಹೀಗೆ ಸಾಕಷ್ಟು ಕಟ್ಟುಪಾಡುಗಳಿದ್ದುದು ಕ್ರಮೇಣ ಮಾರ್ಪಾಡು ಹೊಂದಿ ಇದಾವ ಕಟ್ಟಳೆಗಳೂ ಈಗ ಅಷ್ಟಾಗಿ ಪರಿಪಾಲನೆಯಲ್ಲಿಲ್ಲ. *(ಆರ್.ಕೆ.)*

ಸುರಪುರದ ನಾಯಕರು: ಇಂದಿನ ಯಾದಗಿರಿ ಜಿಲ್ಲೆಯ ಸುರಪುರವನ್ನು ರಾಜಧಾನಿಯನ್ನು ಮಾಡಿಕೊಂಡು, ಸುತ್ತಲಿನ ಪ್ರದೇಶಗಳನ್ನು ಆಳಿದ ಸಾಮಂತ ಮನೆತನ. ಇವರು ಬೇಡ ಜನಾಂಗದ ಗೋಸಲ ವಂಶಕ್ಕೆ ಸೇರಿದವರು. ಕಂಪಲಿಯ ರಾಮನಾಥನ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದರೆಂಬ ವಿಷಯ ನಂಜುಂಡನ ರಾಮನಾಥ ಚರಿತದಿಂದ ತಿಳಿದು ಬರುತ್ತದೆ. ಚಾಂದ ಬೀಬಿಯ ಗಂಡ ಸತ್ತ ಮೇಲೆ ಆಕೆಯ ಸಮರ್ಥ ಆಡಳಿತದಲ್ಲಿ ಈ ನಾಯಕರ ಸಹಾಯ ಸಹಕಾರಗಳು ಸಿಕ್ಕಿದ್ದವು.

ಈ ಮನೆತನದ ವಿಷಯದಲ್ಲಿ ಟೇಲರ್ ಹೀಗೆ ಬರೆದಿದ್ದಾನೆ. "ಈ ಮನೆತನವು ಮೊದಲು ಮೈಸೂರು ದೇಶದ ರತ್ನಗಿರಿಯಿಂದ ಬಂದದ್ದಾಗಿದೆ ಎಂದೂ ಇವರು ಅಲ್ಲಿ ದೊಡ್ಡ ಪಾಳೆಯಗಾರರಾಗಿದ್ದು, ವಿಜಯನಗರದ ಅರಸರ ಕಾಲದಲ್ಲಿ ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ನಡುವಿನ ಪ್ರದೇಶದಲ್ಲಿ ಇವರನ್ನು ತಮ್ಮ ಸೀಮೆಯ ರಕ್ಷಣೆಗಾಗಿ ನೆಲೆಗೊಳಿಸಿದರೆಂದು ಹೇಳುತ್ತಾನೆ.

ಸುರಪುರ ಸಂಸ್ಥಾನದ ಸ್ಥಾಪಕ ಗಡ್ಡಿಪಿಡ್ಡ ನಾಯಕನು, (1636–66) ಹಸರಂಗಿ ಪಾಮನಾಯಕ (1666–87) ಪೀತಾಂಬರ ಬಹಿರಿ ಪಿಡ್ಡನಾಯಕ (1687–1726) ಇಮ್ಮಡಿ ಪಾಮನಾಯಕ (1727–41) ಮುಮ್ಮಡಿ ಪಿಡ್ಡಿನಾಯಕ (1742–46) ವೆಂಕಟಪ್ಪನಾಯಕ–1 (ಮೊಂಡುಗೈ) (1747–52), ಮುಮ್ಮಡಿ ಪಾಮನಾಯಕ (1752–



ಹಳೆ ದರ್ಬಾರ – ಸುರಪೂರ

1773), ಇಮ್ಮಡಿ (ಹಿರಿಯ) ವೆಂಕಟಪ್ಪನಾಯಕ (1773–1802) ನಾಲ್ವಡಿರಾಜ ಪಿಡ್ಡನಾಯಕ (1802–1818), ಮುಮ್ಮಡಿರಾಜ ದೇವೇಂದ್ರವೆಂಕಟಪ್ಪ ನಾಯಕ (1818–1827), ರಾಜಕೃಷ್ಣಪ್ಪನಾಯಕ (1827–1843), ನಾಲ್ವಡಿರಾಜ ವೆಂಕಟಪ್ಪನಾಯಕ (1843–1858), ಸುರಪುರದ ಇತಿಹಾಸವೆಂದರೆ ಅದು ಕೇವಲ ಈ ರಾಜರ ಚರಿತ್ರೆಯಲ್ಲ. ಈ ನಾಡಿನ ಅತ್ಯಂತ ಹಿಂದುಳಿದ ಒಂದು ಪರಾಕ್ರಮ ಬೇಡ ಜನಾಂಗದ ಇತಿಹಾಸವಾಗಿದೆ.

ಮಹಾಪರಾಕ್ರಮಿಗಳು, ವಿದ್ವಾಂಸರು, ಕಲೋಪಾಸಕರು, ಹಾಗೂ ಮಹಾದಾನಿಗಳೂ ಆಗಿದ್ದ ಸುರಪುರ ಅರಸರ ಚರಿತ್ರೆ ತುಂಬಾ ರೋಚಕವೂ ರೋಮಾಂಚಕವೂ ಆಗಿದೆ. ಜಗತ್ಪ್ರಸಿದ್ಧ ಮೊಗಲ್ ಚಕ್ರವರ್ತಿಗಳನ್ನು, ಆದಿಲ್‌ಶಾಹಿ ಅರಸರನ್ನು, ಬ್ರಿಟಿಶರನ್ನು ಹಾಗೂ ನಿಜಾಮ ಅರಸರನ್ನು ಸಹ ತಮ್ಮ ಪರಾಕ್ರಮದಿಂದ ಬೆರಗುಗೊಳಿಸಿದ್ದರು.

"ಸುರಪುರದ ನಾಯಕರು ಕೊಡುಗೈ ದೊರೆಗಳೂ ಅಹುದು. ಇವರು ಉದಾರವಾಗಿ ವಂಶ ಪಾರಂಪರ್ಯವಾಗಿ ಅನುಭವಿಸಲು ಕೊಟ್ಟ ಭೂಮಿ, ಜಾಗೀರು, ಇನಾಮುಗಳನ್ನು ಭಾರತದ ಯಾವ ರಾಜನೇ ಆಗಲಿ, ಅಷ್ಟೇಕೆ ಚಕ್ರವರ್ತಿಗಳೆನಿಸಿಕೊಂಡವರೂ ಸಹ ಕೊಟ್ಟಿಲ್ಲವೆಂಬುದು ಅತಿಶಯೋಕ್ತಿಯಲ್ಲ. ಮಂದಿರ ಮಠಗಳಿಗೆ ಕೊಟ್ಟ ರೀತಿಯಲ್ಲಿಯೇ ನಾಡಿನಾದ್ಯಂತ ಮಸೀದಿ, ದರ್ಗಾ, ಆಕ್ಷರ ಖಾನೆಗಳಿಗೂ ಬಿಚ್ಚು ಮನಸ್ಸಿನಿಂದ ಭೂಮಿಗಳನ್ನು ದಾನ ಮಾಡಿದ್ದಾರೆ. ಔದಾರ್ಯ ವಿವರಿಸುವ ಸಾಕಷ್ಟು ಉದಾಹರಣೆಗಳು ಸಿಗುತ್ತವೆ" ಎಂದು ರಾಜಗುರು ಕೃಷ್ಣಮಾಚಾರ್ಯ ಬರೆದಿದ್ದಾರೆ.

ತಾಳಿಕೋಟೆಯ ಕದನದ ಆನಂತರ ಬಿಜಾಪುರದ ಸುಲ್ತಾನನ ಅಧೀನಕ್ಕೆ ಒಳಗಾದ ಇವರ ಶೌರ್ಯ ಸಾಹಸಗಳನ್ನು ಗುರುತಿಸಿದ ಸುಲ್ತಾನ ಬಿರುದುಗಳನ್ನು ನೀಡಿ, ವಾಗಣಗೇರಿಯಲ್ಲಿ ಕಂದಾಯ ವಸೂಲಿ ಮಾಡುವ ಅಧಿಕಾರ ನೀಡಿದ. ಔರಂಗಾಜೇಬ ಬಿಜಾಪುರದ ಮೇಲೆ ದಾಳಿ ಮಾಡಿದಾಗ ತಮ್ಮ ಶೌರ್ಯ ಪ್ರತಾಪಗಳನ್ನು ಪ್ರದರ್ಶಿಸಿದರು. ವಾಗಣಗೇರಿ ಔರಂಗಜೇಬನ ವಶವಾದಾಗ ಇವರು ಸುರಪುರದಲ್ಲಿ ದುರ್ಗಕಟ್ಟಿಸಿ, ಔರಂಗಜೇಬನ ಮನ ಗೆದ್ದು ಎಲ್ಲ ಹಕ್ಕುಬಾಧ್ಯತೆಗಳನ್ನು ಪಡೆದುಕೊಂಡರು.

18ನೆಯ ಶತಮಾನದ ಕೊನೆಯಲ್ಲಿ ನಿಜಾಮ ಮತ್ತು ಮರಾಠರು ಒಂದಾದಾಗ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ನಿಜಾಮನಿಗೆ ರೂ. 50,000 ಕಾಣಿಕೆ ಸಲ್ಲಿಸಿ ಅಪಾಯದಿಂದ ಪಾರಾದರು. ಪ್ರಬಲ ದೊರೆಯಾಗಿದ್ದ ವೆಂಕಟಪ್ಪ ನಾಯಕನ ಮೈತ್ರಿಗಳಿಸಲು ಹೈದರ್‌ಅಲಿ ಮತ್ತು ಟಿಪ್ಪು ಸುಲ್ತಾನರು ವಿಫಲರಾದರು. ನಿಜಾಮನ ಉಪಟಳ ದಿಂದ ಪಾರಾಗಲು ದೊರೆಗೆ ಬ್ರಿಟಿಷರು ಜಾಮೀನಾಗಿದ್ದರು. ಬ್ರಿಟಿಷರ ಕುಟಿಲೋಪಾಯಗಳಿಂದ ಸುರುಪುರದ ಬೊಕ್ಕಸ ಬರಿದಾಗಿತ್ತು.

ಕೃಷ್ಣಪ್ಪ ನಾಯಕ ತೀರಿಕೊಂಡಾಗ ವೆಂಕಟಪ್ಪ ನಾಯಕ ಚಿಕ್ಕವನಾಗಿದ್ದರಿಂದ ಮೆಡೋಸ್ ಟೇಲರನನ್ನು ರಾಜಕೀಯ ಕಾರ್ಯಭಾರಿಯಾಗಿ ನೇಮಿಸಲಾಯಿತು. 1853 ರಲ್ಲಿ ವೆಂಕಟಪ್ಪ ನಾಯಕನಿಗೆ ರಾಜ್ಯದ ಆಡಳಿತವನ್ನು ವಹಿಸಿಕೊಡಲಾಯಿತು. ಡಾಲ್‌ಹೌಸಿಯ ಸೂಚನೆ ಧಿಕ್ಕರಿಸಿದ್ದರಿಂದಲೂ ತನ್ನ ಸೈನ್ಯಕ್ಕೆ ಅರಬ್‌ರು ರೋಹಿಲರನ್ನು ಸೇರಿಸಿಕೊಂಡಿದ್ದರಿಂದಲೂ ನಾನಾ ಸಾಹೇಬನೊಂದಿಗೆ ಸಂಪರ್ಕ ಸಾಧಿಸಿಕೊಂಡಿದ್ದರಿಂದಲೂ ಜಮೀನದಾರರಿಂದ ಧನಸಂಗ್ರಹ ಮಾಡಿದ್ದರಿಂದಲೂ ಬ್ರಿಟಿಷರು ರೊಚ್ಚಿಗೆದ್ದು ಆಕ್ರಮಣಕ್ಕೆ ಸನ್ನದ್ಧರಾದರು. ಕ್ಯಾಪ್ಟನ್ ವೆನ್‌ಹ್ಯಾಮ್ ಸತತ ಪ್ರಯತ್ನ ನಡೆಸಿದ, ಭೀಮರಾಯನೆಂಬ ದೇಶದ್ರೋಹಿಯ ಕುತಂತ್ರದಿಂದ ಸುರಪುರವು ಬ್ರಿಟಿಷರ ಕೈವಶವಾಯಿತು. ತಲೆ ತಪ್ಪಿಸಿಕೊಂಡು ಹೈದ್ರಾಬಾದ ತಲಿಪಿದ ವೆಂಕಟಪ್ಪನಾಯಕ ನಿಜಾಮನ ಮುಖಾಂತರ ಬ್ರಿಟಿಷರ ಬಂಧಿಯಾಗಿ ಸಿಕಂದ್ರಾಬಾದಿನ ಸೆರೆಮನೆ ಸೇರಿದ. ವಿಚಾರಣೆ ನಾಟಕ ಆಡಿದ ಬ್ರಿಟಿಷರು ಮರಣ ದಂಡನೆ ವಿಧಿಸಿದಾಗ ಮೆಡೋಸ್ ಟೇಲರ್‌ನ ಪ್ರವೇಶದಿಂದಾಗಿ ಜೀವಾವಧಿ ಶಿಕ್ಷೆ ಹೋಗಿ, 4 ವರ್ಷಗಳ ಬಂಧನವಾಸಕ್ಕೆ ಪರಿವರ್ತಿತಗೊಂಡು ಕಾರಾಗೃಹಕ್ಕೆ ತೆರಳುವಾಗ ಮಾರ್ಗಮಧ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡು ಮರಣ ಹೊಂದಿದ. 1801 ಮಾರ್ಚ್ 4 ರಂದು ಸುರಪುರ ಸಂಸ್ಥಾನ ನಿಜಾಮ ಸ್ವಾಧೀನಕ್ಕೆ ಒಳಪಟ್ಟಿತು. *(ಆರ್.ಕೆ.)*

ಸುಳಿ: ಒಂದು ಜನಪದ ಸಂಕೇತ. ಭೌತಿಕ ಮತ್ತು ಜೈವಿಕ ವಸ್ತುಗಳನ್ನು ನೋಡುವುದರ ಮೂಲಕ ಕಲ್ಲು, ನೀರು, ಸಸ್ಯ, ಗಾಳಿ, ಕುದುರೆ, ಎತ್ತು, ಹೆಣ್ಣು ಇತ್ಯಾದಿಗಳನ್ನು ನೋಡಿ ಸುಳಿಯನ್ನು ಗುರುತಿಸುವ ಪದ್ಧತಿ ಜನಪದರಲ್ಲಿದೆ.

'ಸುಳಿನೋಡಿ ಕುದರಿ ಕೊಳ್ಳು, ತಳಿನೋಡಿ ಆಕಳಾ ಕೊಳ್ಳು' ಎಂಬುದು ಪ್ರಖ್ಯಾತ ಗಾದೆ. 'ಸುಳಿ ಹ್ವಾದರ ಟೆಂಗ ಬಾದ; ಕಳಿ ಬೆಳದರೆ ಬೆಳಿ ಬಾದ' ಎಂಬುದು ಅನುಭವ ಸತ್ಯ. ಅದರಂತೆ ಕಲ್ಲು ಒಡಯಬೇಕಾದರೆ ಸುಳಿನೋಡಿ ಏಟು ಹಾಕಬೇಕು ಎನ್ನುತ್ತಾನೆ ಕಲ್ಲಿನ ಸುಳಿ ಬಲ್ಲವ. 'ಸುಳಿ ನೋಡಿ ಕಲ್ಲ ಒಡಿ, ಘಳಿನೋಡಿ ಕುಸ್ತಿ ಹಿಡಿ' ಹೀಗೆ ಹತ್ತೆಂಟು ಗಾದೆಗಳಲ್ಲದೆ, 'ಮನಸ್ಯಾ ಎಲ್ಲಾ ಭಾಳ ಚಲೊ ಅದಾನ, ಅದರ ಮಾಡುದೇನು ಸುಳಿ ಸುಮಾರ' ಎನ್ನುವುದು ಜನಪದ ಹಿರಿಯರಿಂದ ಬರುವ ಮಾತು. ಅದರಂತೇ 'ಬಾಳಿ ಸುಳಿ ಬಿಟ್ಟೈತಿ', 'ಟೆಂಗಿನ ಸುಳಿ ಒಣಗೈತಿ', 'ಜ್ವಾಳದ ಸುಳಿ ಬಿದ್ದೈತಿ' ಎನ್ನುವ ಒಕ್ಕಲಿಗರ ಮಾತೂ ಸಾಮಾನ್ಯ. 'ಸುಳಿದೆಗೆದು ಬೆಳೆವ' ನೆನ್ನುವ ಬಸವಣ್ಣನವರ ವಚನೋಕ್ತಿ ಸಾಹಿತ್ಯ ಲೋಕಕ್ಕೆ ಚಿರಪರಿಚಿತ. 'ಸುಳಿ'ಗೆ ಪೆಟ್ಟು ಬಿದ್ದರೆ ಪ್ರಾಣ ಹೋಗುತ್ತದೆಂಬುದು ಗ್ರಾಮೀಣರ ಖಚಿತ ನಂಬುಗೆ.

ಮನುಷ್ಯನನ್ನು ಮೊದಲು ಮಾಡಿಕೊಂಡು ಬಹಳಷ್ಟು ಪ್ರಾಣಿಗಳಿಗೂ ಸುಳಿಗಳಿರುತ್ತವೆ. 'ಸುಳಿ' ಕೂದಲಿನ ಉಂಗುರಾದ ಸ್ಥಳ. 'ಸುಳಿ' ಅಂದರೆ ಸುತ್ತಿಕೊಂಡಿರುವುದು ಎಂದು ಹೇಳಬಹುದು ಗಿಡದ ಕಾಂಡವನ್ನು ಕೊರೆದು ಅದರೊಳಗಿರುವ 'ಸುಳಿ'ಗಳಿಂದ ಅದರ ಆಯುಷ್ಯವನ್ನು ಹೇಳುವುದುಂಟು.

ಮನುಷ್ಯರಿಗೆ ತಲೆಗೂದಲಲ್ಲಿಯ ಸುಳಿ ಸ್ವಾಭಾವಿಕ. ಮೈಮೇಲೂ ಅಲ್ಲಲ್ಲಿ ಕೂದಲಿದ್ದಲ್ಲಿ ಸುಳಿಗಳನ್ನು ಕಾಣಬಹುದು ಅದರಂತೆ ದನಕರುಗಳಿಗೂ ಹಲವು ಸುಳಿಗಳಿರುವುದು ಅಸಂಭವವೇನಲ್ಲ. ವಿಶೇಷವಾಗಿ ಎತ್ತು ಮತ್ತು ಕುದುರೆಗಳ ವಿಷಯದಲ್ಲಿ ಜನಪದರು ಸುಳಿ ಕುರಿತು ತಮ್ಮದೇ ಆದ

ಶಾಸ್ತ್ರವನ್ನು ರಚಿಸಿದ್ದಾರೆ. ಮನುಷ್ಯರಲ್ಲಿ ಹೆಣ್ಣಿನ ಸುಳಿಯನ್ನು ಪರೀಕ್ಷಿಸುವ ಕಾಲವೊಂದಿತ್ತು. ಎತ್ತು, ಕುದುರೆಯ ಸುಳಿಗಳನ್ನು ನೋಡಿ ಸ್ವಭಾವವನ್ನೇ ಹೇಳುವವರು ಇನ್ನೂ ಸಾಕಷ್ಟು ಜನರಿದ್ದಾರೆ. ಅಲ್ಲಿ ಅವರ ಅನುಭವ ಮಾತ್ರ ಎದ್ದುಕಾಣುತ್ತದೆ ಜನಪದರಲ್ಲಿ ಆಳವಾಗಿ ಬೇರು ಬಿಟ್ಟ ಸುಳಿ ಕುರಿತ ವಿಚಾರಗಳು ಅವರ ಬದುಕಿನ ಅಳಿಸಲಾರದ ಅಂಗವಾಗಿ ಇಂದೂ ಇವೆ.

'ಸುಳಿ' ಅಸ್ವಾಭಾವಿಕವಾಗಿದ್ದರೆ ಅಂದರೆ ಇರಬೇಕಾದುದೆಂದು ತಿಳಿದ ಸ್ಥಳದಲ್ಲಿ ಅದು ಇರದಿದ್ದರೆ, ಅದಕ್ಕೆ ಒಳಿತು ಕೆಡುಕಿನ ವಿಶೇಷಾರ್ಥ ಕಲ್ಪಿಸುತ್ತಾರೆ. ಒಂದು ದನದ, ಕುದುರೆಯ ಸುಳಿ ಅದರ ಒಡೆಯನ ಭವಿಷ್ಯತ್ತಿನ ಒಳಿತಿಗಾಗಲೀ, ಕೆಡುಕಿಗಾಗಲೀ ಕಾರಣವಾಗುತ್ತದೆಂಬ ಖಚಿತ ನಂಬುಗೆ ಬಹಳ ಕಾಲದಿಂದಲೂ ಜನಪದರಲ್ಲಿ ಬೇರು ಬಿಟ್ಟಿದೆ. ಮನುಷ್ಯರಲ್ಲಿ ಹೆಣ್ಣುಮಕ್ಕಳ ಸುಳಿಯ ಕಡೆಗೆ ಗಮನ ಕೊಟ್ಟ ಗಂಡಸು, ಎತ್ತು ಮತ್ತು ಗಂಡು ಕುದುರೆಯ ವಿಷಯದಲ್ಲಿ ಮಾತ್ರ ವಿಶೇಷ ಆಸಕ್ತಿ ವಹಿಸಿದ್ದನ್ನು ನೋಡಿದರೆ, ಹೊರಗಿನಿಂದ ತರುವ ಹೆಣ್ಣು ಮತ್ತು ಪ್ರಾಣಿಗಳನ್ನು ಕುರಿತು ಮಾತ್ರ 'ಸುಳಿ'ಯ ಚಿಂತನ ನಡೆದಂತಿದೆ.

ಹೆಣ್ಣು ಹೊರಗಿನಿಂದ ತರುವ 'ವಸ್ತು'ವೆನ್ನುವ ಕಾಲವೊಂದಿತ್ತು. ತೆರಕೊಟ್ಟು ಕೊಂಡು ತಂದಂತೆ ತರುತ್ತಿದ್ದರು. ಹೊರಗಿನ ಜೀವ ಮನೆಗೆ ಬಂದಾಗ ಅವಳನ್ನು ಅಂದಿನ ಸೊಸೆ, ನಾಳಿನ ತಾಯಿ ಎಂದು ಪರಿಗಣಿಸುವುದಕ್ಕಿಂತ ಒಂದು ದುಡಿಯುವ ಆಳೆಂದು ಮಾತ್ರ ತಿಳಿಯುತ್ತಿದ್ದರು. 'ಆ ಮನೆಯಲ್ಲಿ ಕಷ್ಟ ಸೋಸಿ ಸೋಸಿ ಅವಳು ಸೊಸೆಯಾಗುತ್ತಿದ್ದಳು, ಅಲ್ಲಿ ತನ್ನನ್ನು ತೇದು ತೇದು ತಾಯಿಯಾಗುತ್ತಿದ್ದಳು' ಎಂಬುದು ಅನುಭವಿ ಹೆಣ್ಣಿನ ಮಾತು.

ಹೆಣ್ಣು ಮತ್ತು ಸುಳಿ: ಹೆಣ್ಣು ಗಂಡನ ಮನೆಗೆ ಬಂದೊಡನೆ ಏನಾದರೂ ಆಗಂತುಕ ಘಟನೆಗಳು ಸಂಭವಿಸಿದರೆ ಅದಕ್ಕೆ ಅವಳ ಕಾಲ್ಗುಣ ಇಲ್ಲವೆ ಅವಳಿಗಿದ್ದ 'ಸುಳಿ' ಕಾರಣವೆಂದು ತರ್ಕವಿಲ್ಲದ ನಿರ್ಣಯಕ್ಕೆ ಬರುತ್ತಿದ್ದರು. ಅಂಥ ಜನ ಇಂದೂ ಇಲ್ಲದಿಲ್ಲ. ಮುಪ್ಪಿನ ಅತ್ತೆ-ಮಾವ ತೀರಿಕೊಂಡರೂ ಅದಕ್ಕೆ ಅವಳ ಕೆಟ್ಟ ಸುಳಿ ಕಾರಣವೆಂದು ನಂಬಲಾಗುತ್ತಿತ್ತು. ಮನೆಯಲ್ಲಿ ಸಂಭವಿಸುವ ಏನೆಲ್ಲ ಕೆಡುಕಿಗೆ ಅವಳನ್ನೇ ಗುರಿಪಡಿಸಲಾಗುತ್ತಿತ್ತು.

ಇದಕ್ಕಾಗಿಯೇ ಹೆಣ್ಣನ್ನು ಮನೆಗೆ ತರಲು ನಿಶ್ಚಯಿಸುವ ಪೂರ್ವದಲ್ಲಿಯೇ ಅನುಭವಿ ಹಿರಿಯರಿಂದ ಅವಳ ಪರೀಕ್ಷೆ ಮಾಡಿಸುವ ರೂಢಿ ಬಂತು. ಮುದುಕಿಯರು ಕನ್ಯೆಯ ಅಂಗಾಂಗಗಳನ್ನು ಶೋಧಿಸಿ ನೋಡುವುದು ಜನಪದರಲ್ಲಿ ದಟ್ಟವಾಗಿತ್ತು. ಈಗಲೂ ಕನ್ಯಾಪರೀಕ್ಷೆ ಒಂದು ರೀತಿಯಲ್ಲಿ ನಡದೇ ನಡೆಯುತ್ತಿದೆ. ಹೆಣ್ಣುಗಳಲ್ಲಿ ನಾಲ್ಕು ಜಾತಿಯ ಹೆಣ್ಣುಗಳೆಂದು ಹೆಸರಿಡಲಾಗಿದೆ. ಪದ್ಮಿನಿ, ಚಿತ್ತಿನಿ, ಶಂಖಿಣಿ, ಹಸ್ತಿನಿ ಹೆಣ್ಣುಗಳನ್ನು ರತ್ನಾಕರ ವರ್ಣಿಯೂ ಉಲ್ಲೇಖಿಸಿದ್ದಾನೆ. ಅವರ ಸುಳಿ ಸೂತ್ರ, ಲಕ್ಷಣಗಳನ್ನು ಆಧರಿಸಿ ಈ ವಿಭಜನೆ ಮಾಡುತ್ತಿದ್ದರು.

ಪರೀಕ್ಷಕರು ಹೆಣ್ಣಿನ ಅಂಗಾಂಗದಲ್ಲಿ ಹಲವು ಸುಳಿಗಳನ್ನು ಶೋಧಿಸುತ್ತಿದ್ದರು. ತಲೆಯಲ್ಲಿ ಎರಡು ಸುಳಿಗಳಿರುವುದು ಯಾರೂ ಬಯಸುತ್ತಿರಲಿಲ್ಲವಾದರೂ ಅದನ್ನೊಂದು ಮಹಾ ದೋಷವೆಂದೇನೂ ಪರಿಗಣಿಸುತ್ತಿರಲಿಲ್ಲ. ಆದರೆ ಅವು ಸಹಜ ಸ್ಥಳದಲ್ಲಿಯೇ ಸಮೀಪದಲ್ಲಿದ್ದರೆ ಅದನ್ನು ನಿರ್ಲಕ್ಷಿಸುತ್ತಿದ್ದರು. ಆದರೆ ತಲೆಯಲ್ಲಿ ದೂರ ದೂರದಲ್ಲಿ ಎರಡು ಅದಕ್ಕಿಂತ ಹೆಚ್ಚು ಸುಳಿಗಳಿರುವ ಹೆಣ್ಣನ್ನು ಮಂಗಳವಲ್ಲೆಂದು ನಿರಾಕರಿಸುತ್ತಿದ್ದರು. ಪ್ರಮುಖವಾಗಿ ಬೈತಲೆಯ ದಾರಿಯಲ್ಲಿ ಸುಳಿ ಇರಬಾರದು. ಹಣೆಯ ಮೇಲೆ ತಲೆಗೂದಲು ಆರಂಭವಾದಲ್ಲಿ ಸುಳಿಯಿದ್ದರೆ ತಂದ ಮನೆಗೆ ನಷ್ಟ, ದಾರಿದ್ರ್ಯ ತುರುಬು ಕಟ್ಟುವಲ್ಲಿ ಸುಳಿ ಇದ್ದರೆ ಅವಳು ಬೇಗನೇ ವಿಧವೆಯಾಗುತ್ತಾಳೆ; ಗಂಡಿಗೆ ಗಂಡಾಂತರ ಎಂದು ಭಾವಿಸಿ ಅಂಥ ಹೆಣ್ಣಿನ ಆಯ್ಕೆ ಮಾಡುತ್ತಿರಲಿಲ್ಲ.

ಕೆಲವರಿಗೆ (ಗಂಡಿಗೂ) ಬೆನ್ನುಹುರಿಯಲ್ಲಿ ಸುಳಿಗಳಿರುತ್ತವೆ. ಬೆನ್ನಿನ ಮಧ್ಯದಲ್ಲಿದ್ದ ಸುಳಿಯನ್ನು ಸಹಿಸಬಹುದಾಗಿದ್ದರೂ, ಹೆಗಲ ಕಡೆಗೆ, ತೀರ ಕೆಳಗೆ ನಡದ ಕಡೆಗೆ ಸುಳಿಗಳಿರುವುದು ಅಶುಭವೆಂದು, ಅನರ್ಥಕಾರಿ ಎಂದು ಭಾವಿಸುತ್ತಿದ್ದರು. ಮೊಲೆಯ ಕೆಳಗೆ ಸುಳಿಗಳಿದ್ದರೆ ಅದನ್ನಷ್ಟು ಅಪಾಯಕಾರಿ ಎಂದು ಪರಿಗಣಿಸುತ್ತಿರಲಿಲ್ಲ. ಆದರೆ ಮೊಲೆಯ ಮೇಲೆ, ಎದೆಯಲ್ಲಿ ಸುಳಿಗಳಿದ್ದರೆ ಅಂಥ ಹೆಣ್ಣನ್ನು ತಂದುಕೊಳ್ಳಲು ಯಾರೂ ಸಿದ್ಧರಾಗುತ್ತಿರಲಿಲ್ಲ. ಅದಕ್ಕೆ ಹೆದರಿ ಎಷ್ಟೋ ತಾಯಂದಿರು ಹೆಣ್ಣು ಮಗುವಿದ್ದಾಗಲೇ, ಅರಿಷಿಣ ಬೇರಿನ ಬೆಂಕಿಯಿಂದ ಆ ಸುಳಿಯನ್ನು ಸುಟ್ಟು ಬಿಡುತ್ತಿದ್ದರು.

ಹೆಣ್ಣು ನೋಡಲು ಹಿರಿಯರು, ಪರಿಣಿತರು ಊರೂರಿಗೆ ಇರುತ್ತಿದ್ದರು. ಹೆಣ್ಣು ಹುಡುಕಲು ಹೊರಟವರು ಇವರನ್ನು ಕರೆದುಕೊಂಡೇ ಹೋಗಬೇಕಿತ್ತು. ಇಲ್ಲವಾದಲ್ಲಿ ಎಂಥದೋ ಹೆಣ್ಣನ್ನು ತಂದು ಮೋಸ ಹೋಗಬಹುದೆಂದು ಭಾವಿಸುತ್ತಿದ್ದರು.

ಸುಳಿ ನೋಡುವಾಗ ಮೈಮೇಲೆ ಕಪ್ಪು-ಬಿಳುಪು ಕಲೆಗಳಿದ್ದರೆ ಕಣ್ಣಿಗೆ ಬೀಳುತ್ತಿದ್ದುವು. ಬಿಳುಪು ಇದ್ದರಂತೂ ಅವಳ ಜೀವನ ಹಾಳು. ಕಪ್ಪು ಕಲೆಯನ್ನು 'ಮಚ್ಚೆ' ಎಂದು ಕರೆಯುತ್ತಾರೆ. ಅದು ಹೆಣ್ಣುಗಳಿಗೆ ಎಡಭಾಗದಲ್ಲಿದ್ದರೆ ಒಳಿತು, ಬಲಭಾಗದಲ್ಲಿದ್ದರೆ ಕೆಡುಕು ಎಂದು ಭಾವಿಸಲಾಗುತ್ತಿತ್ತು. ಅಂಗಾಂಗ ಊನವಾಗಿ ಇದ್ದರಂತೂ ಹೆಣ್ಣಿನ ಬದುಕು ನರಕ. ಒಂದು ಹಲ್ಲು ಮುಕ್ಕಾದರೂ ಅವಳನ್ನು ದೋಷಿ ಎಂದು ಪರಿಗಣಿಸಲಾಗುತ್ತಿತ್ತು. ಮದುವೆಗೆ ಯಾರೂ ಶಿಫಾರಸು ಮಾಡುತ್ತಿರಲಿಲ್ಲ. ಆದರೂ ಮಧ್ಯಸ್ಥ ಪರಿಣಿತರು ಮನಸ್ಸು ಮಾಡಿದ್ದರೆ ಲಂಚ ವಶೀಲಿಗಳ ವಾಮಮಾರ್ಗದಿಂದ ಏನಾದರೂ ಕಾರಸ್ಥಾನ ಮಾಡಿ ಮದುವೆಗಳನ್ನು ಮಾಡುತ್ತಿದ್ದರು. ಅಂತೆಯೇ 'ನೂರು ಸುಳ್ಳು ಹೇಳಿ ಒಂದು ಕಲ್ಯಾಣ ಕಟ್ಟಬೇಕು' ಎಂಬ ಗಾದೆ ರೂಢಿಗೆ ಬಂತೆಂದು ಕಾಣುತ್ತದೆ. 'ಹೊನ್ನಿದ್ದಕ್ಕೆ ತೊನ್ನು ಮುಚ್ಚಿತು, ಬಟ್ಟಿದ್ದಕ್ಕೆ ಬೆನ್ನ ಮುಚ್ಚಿತು' ಎಂಬ ಗಾದೆಯೂ, ಸಿರಿತನದಲ್ಲಿ ಇಂಥ ಊನಗಳು ಗಣನೆಗೆ ಬರುತ್ತಿರಲಿಲ್ಲವೆಂಬುದನ್ನು ಸೂಚಿಸುತ್ತದೆ.

ಒಂದು ಮನೆತನದ ಹೆಣ್ಣಿನ, ಕೆಲವು ತಲೆಮಾರುಗಳ ಸಮಾಜ ವಿರೋಧಿ ಘಟನೆಗಳೂ ಸೆರಗಿನ ಕೆಂಡವಾಗಿ ಆ ಮನೆತನದ ಕನ್ಯೆಯರ ಬೆನ್ನು ಹತ್ತಿ ಕಾಡುತ್ತಿದ್ದವು. ಕನ್ಯೆಯ ತಾಯಿ, ಅಜ್ಜಿ, ಮುತ್ತಜ್ಜಿ ಯಾರಾದರೂ ಮರು ಮದುವೆಯಾಗಿ ಹೋಗಿದ್ದರೆ ಆ ಮನೆತನಕ್ಕೇ 'ಮೂರು ಗಂಡರ ಸೆರಗಿನ ದೋಷ'. ಅದರಂತೆ ಆ ಮನೆತನದಲ್ಲಿ 'ಉಡಿಕೆ'ಯಾಗಿ

ಬಾಳಿಹೋದ ಹೆಣ್ಣಿದ್ದರೆ, ಇಲ್ಲವೆ ಚಾರಿತ್ರ್ಯ ಕಳೆದುಕೊಂಡವಳು. ಯಾರೊಡನೆಯೋ ಮದುವೆಯಾಗದೆ ಓಡಿ ಹೋದವಳು, ಅನೈತಿಕ ಸಂಬಂಧ ಇಟ್ಟುಕೊಂಡವಳು ಆಗಿ ಹೋಗಿದ್ದರೆ ಅಂಥ ಮನೆತನದ ಕನ್ಯೆಯನ್ನು ಮದುವೆಯಾಗಲು ಯಾರೂ ಮುಂದೆ ಬರುತ್ತಿರಲಿಲ್ಲ. ಹೀಗಾಗಿ ಒಂದು ಹೆಣ್ಣನ್ನು ಮನೆಗೆ ತರುವುದಾದರೆ, ಸುಳಿ–ಸೂತ್ರ–ಲಕ್ಷಣಗಳನ್ನಲ್ಲದೆ ಹಲವಾರು ಸಾಮಾಜಿಕ ಕಟ್ಟುಪಾಡುಗಳನ್ನೂ ಗಣನೆಗೆ ತೆಗೆದುಕೊಳ್ಳುತ್ತಿದ್ದರು. ಇದರಿಂದಾಗಿ ಜನಪದರಿಗೆ ಒಂದು ಒಳ್ಳೆಯ ಕನ್ಯೆ ಹುಡುಕುವುದೂ ಕಷ್ಟವಾಗುತ್ತಿತ್ತು. ಮದುವೆ ಜನಪದರಲ್ಲಿ ಒಂದು ಅನಿವಾರ್ಯ ಮತ್ತು ಮಹತ್ವಪೂರ್ಣ ಕ್ರಿಯೆಯಾಗಿತ್ತೆಂಬುದನ್ನು ಮದುವೆ ಆಗದೆ ಸತ್ತ ತರುಣ–ತರುಣಿಯರಿಗೆ ಒಂದು ಗಿಡದ ಜೊತೆ ಮದುವೆ ಮಾಡಿಯೇ ಸಂಸ್ಕಾರ ಮಾಡುತ್ತಿದ್ದ ಸಂಪ್ರದಾಯ ಸಾರಿ ಹೇಳುತ್ತದೆ.

ಎತ್ತಿನ ಸುಳಿ: ಜನಪದ ಬದುಕಿನ ಬಿಡಿಸದ ಅಂಗವಾಗಿದ್ದ ಪ್ರಾಣಿ ಎತ್ತು. ಅದನ್ನು ನಂದಿಯ ಅವತಾರ ಬಸವಣ್ಣ ಎಂದು ಪೂಜಿಸುತ್ತಾರೆ. ಎತ್ತು ಒಕ್ಕಲಿಗನ ಸ್ನೇಹಿಯಾಗಿ, ಭವಿಷ್ಯ ನಿರ್ಮಾಣದ ಶಕ್ತಿಯಾಗಿ ಬೆಳೆದುಬಂದಿದೆ. ಅದು ಮನೆಯಲ್ಲೇ ಹುಟ್ಟಿದ್ದಾಗಿದ್ದರೆ ಅದರ ಸುಳಿ–ಸೂತ್ರ ಯಾವ ಲಕ್ಷಣವನ್ನೂ ನೋಡುವುದಿಲ್ಲ. ಆದರೆ ಅದನ್ನು ಕೊಂಡು ತರುವುದಾಗಿದ್ದರೆ, 'ಪರಿಣಿತ' ರಿಂದ ಅದರ ಶಾಸ್ತ್ರೀಯ ಪರೀಕ್ಷೆಯಾಗಲೇಬೇಕು. 'ಎತ್ತಿಗೆ ಹತ್ತು ಸುಳಿ' ಎಂದು ಹೇಳುತ್ತಾರೆ. ಹೊಸ ಎತ್ತನ್ನು ಕೊಂಡು ತರುವುದರಿಂದ ಅದರಿಂದ ಮನೆ ಏರಲುಬಹುದು ಇಲ್ಲವೆ ಹಾಳು ಆಗಲೂಬಹುದು. ಒಕ್ಕಲಿಗ ಅನಂತ ಕಾಲದಿಂದ ಹೀಗೆ ನಂಬಿಕೊಂಡೇ ಬಂದಿದ್ದಾನೆ. ಒಳ್ಳೆಯ ಸುಳಿ ಇದ್ದ ಎತ್ತಿಗೆ ಬೇಡಿಕೆ ಜಾಸ್ತಿ. ಅಲ್ಲದೆ ಎಷ್ಟೋ ಜನರು ಅಂಥ ಎತ್ತುಗಳನ್ನು ಮಾರುವುದೇ ಇಲ್ಲ. ಸತ್ತರೂ ಸಹಿತ ಹೊಲ–ತೋಟಗಳಲ್ಲಿ ಹುಗಿದು, ಅದರ ಕಾಲ್ಗುಣದ ಪರಿಣಾಮ ಶಾಶ್ವತವಾಗಿ ಮನೆಗೇ ಉಳಿಯುತ್ತವೆಂಬ ಭಾವನೆ ಬೆಳೆಸಿಕೊಳ್ಳುತ್ತಾರೆ.

ಸಾಮಾನ್ಯವಾಗಿ (ದನ) ಎತ್ತುಗಳಿಗೆ ಹಣೆಯ ಮೇಲೊಂದು ಬೆನ್ನಮೇಲೆ, ಹಣೆಯ ಹಿಂದೆ (ನಂ1) ಐದಾರು ಅಂಗುಲ ಅಳತೆಯಲ್ಲೊಂದು ಸುಳಿಗಳಿರುವುದು ಸ್ವಾಭಾವಿಕ. ಆದರೆ ಹಣಿಗೆ ತೀರ ಹತ್ತಿರ ಅಂದರೆ ಒಂದೆರಡಂಗುಲದಲ್ಲಿ ಸುಳಿ ಇದ್ದರೆ ಅದನ್ನು 'ಕಾಗೆಸುಳಿ' (2) ಎಂದು ಹೇಳುತ್ತಾರೆ. ಕಾಗೆಸುಳಿಯ ಎತ್ತನ್ನು ಯಾರೂ ಕೊಳ್ಳುವದಿಲ್ಲ. ಅದು ಅಪಶಕುನ, ಅವಲಕ್ಷಣ. ಅಂಥ ಎತ್ತು ಮನೆಯಲ್ಲಿದ್ದರೆ ಆ ಮನೆಯ ಉದ್ಧಾರವಾಗುವುದೇ ಇಲ್ಲವಂತೆ.

ಬೆನ್ನು ಹುರಿಯ ಮಧ್ಯದಲ್ಲಿ ನೇರವಾಗಿ ತೋಬರಿಗೆ ಸರಳ ರೇಖೆಯಲ್ಲಿ (3) ಇದ್ದ ಸುಳಿಯನ್ನು 'ಮೂತ್ರಿಸುಳಿ' ಎನ್ನುತ್ತಾರೆ. ಇದನ್ನೂ ಒಳ್ಳೆಯ ಸುಳಿ ಎಂದು ಪರಿಗಣಿಸುವುದಿಲ್ಲ. ಸುಳಿಯಲ್ಲಿ ನೀರು ಹಾಕಿದರೆ ಅದು ತೋಬರಿಯ ತುದಿಯಿಂದ ಬೀಳಬಾರದು

ಹಿಂಗಾಲು ಗೂಟೆಲುಬಿನ ಮುಂದೆ ಐದಾರು ಅಂಗುಲ ಅಂತರದಲ್ಲಿ ಬೆನ್ನು ಹುರಿಯ ಬದಿಗೆ, ಎಡಬಲಕ್ಕೆ ಎರಡು ಸುಳಿಗಳಿರುತ್ತವೆ (4) ಇವುಗಳನ್ನು 'ಕತ್ತರಿಯಸುಳಿ' ಎಂದು ಹೆಸರಿಸಿದ್ದಾರೆ. ಅವು ಬೆನ್ನು ಹುರಿಯ ಆಚೆ–ಈಚೆ ಕತ್ತರಿಯ ಆಕಾರದಲ್ಲಿ ಕಾಣುತ್ತಿರುವುದೇ ಈ ಹೆಸರಿಗೆ ಕಾರಣ. ಇದರ ಹೆಸರೇ ಹೇಳುವಂತೆ, ಈ ಸುಳಿಯ ದನ ತನ್ನ ಒಡೆಯನ ಸಂಸಾರವನ್ನು ಕತ್ತರಿಸುತ್ತಲೇ ಹೋಗುತ್ತದೆಂಬುದು ನಂಬುಗೆ. ಅಲ್ಲಿಯೇ ಗೂಟೆಲುಬಿಗೆ ಹತ್ತಿಯೇ ಎರಡೂ ಕಡೆಗೆ ಇನ್ನೆರಡು ಸುಳಿಗಳಿರುತ್ತವೆ. ಅವುಗಳನ್ನು 'ಮುಟ್ಟಿನ ಸುಳಿ" ಎಂದೂ, 'ಚಾಳಿ ಸುಳಿ' ಎಂದೂ ಹೇಳುತ್ತಾರೆ. ಈ ಸುಳಿಯ ಎತ್ತನ್ನು ಹೂಡಲಿಕ್ಕೆ ಉಪಯೋಗಿಸುವದಿಲ್ಲ. ಆದರೆ ಅದನ್ನು ಸಬರ ಹಾಕಿ ಮೇಲೆ ಕೂಡ್ರಲು, ಹೇರು ಹೇರಲು, ನೀರು ತರಲು ಉಪಯೋಗಿಸುತ್ತಾರೆ. ಅದಕ್ಕೆ 'ಕಂಟ್ಲೆತ್ತು' ಎಂದು ಹೆಸರು. ಈ ಸುಳಿಯ ಎತ್ತನ್ನು ಹೂಡಿದರೆ ಒಕ್ಕಲುತನ ಸರಿಯಾಗಿ ಸಾಗದು ಎಂಬುದು ಕಲ್ಪನೆ ಅದನ್ನು ಕೊಳ್ಳುವವರಿಲ್ಲದಕ್ಕೆ ಮುಟ್ಟು ಹಾಕಿ ಕಂಟ್ಲೆತ್ತೆಂದು ಬಳಸುವಂತಿದೆ.

ಎತ್ತಿಗೆ ಇರುವ ತೀರಾ ಕೆಟ್ಟ ಸುಳಿ 'ಕಸಬರಿಗೆಯ ಸುಳಿ' (6) ಇದನ್ನು 'ಬಾರಿಗೆ ಸುಳಿ' ಎಂದೂ ಹೇಳುತ್ತಾರೆ. ಈ ಸುಳಿ ಇದ್ದ ಎತ್ತು ತನ್ನ ಒಡೆಯನ ಸಂಸಾರವನ್ನೇ ಉಡುಗಿ ಹಾಕುತ್ತದಂತೆ! ಈ ಸುಳಿ ಹಿಂಗಾಲು ಗೂಟೆಲುಬಿನ ಹಿಂದೆ ಒಂದು ಕಡೆ ಧೂಮಕೇತುವಿನಂತೆ ಇರುತ್ತದೆ. ಇಂಥಾ ಎತ್ತನ್ನು ಯಾರೂ ಕೊಳ್ಳುವುದಿಲ್ಲ.

ಎತ್ತು ಹೆಂಡಿಹಾಕುವ (ಗುದದ್ವಾರ) ಸ್ಥಾನದಿಂದ ಕೆಳಗೆ ಒಂದೇ ಸುಳಿ ಇದ್ದರೆ ಅದನ್ನು (7) 'ಲಂಗಟ ಸುಳಿ' ಎಂದು ಗುರುತಿಸುತ್ತಾರೆ. ಹೆಸರೇ ಹೇಳುವಂತೆ ಈ ಎತ್ತಿನ ಒಡೆಯನಿಗೆ ಲಂಗಟವೇ ಗತಿಯಾಗುತ್ತದಂತೆ! ಅವನಿಗೆ ಕಡುಬಡತನ ತರುತ್ತದೆಂಬುದು ಕಲ್ಪನೆ. ಆದರೆ ಅಲ್ಲೇ ಎರಡು ಸುಳಿಗಳಿದ್ದರೆ ಬಹಳ ಒಳ್ಳೆಯದು. ಅಂಥಾ ಎತ್ತನ್ನು ಕೊಂಡವನ ಏಳ್ಗೆಯಾಗುತ್ತದಂತೆ.

ಕೆಲವು ಎತ್ತುಗಳಿಗೆ ಗಂಗೆದೊಗಲಲ್ಲಿ ಎರಡೂ ಕಡೆಗೆ ಸುಳಿಗಳಿರುತ್ತವೆ. ಅವು ಹೂಡಿದಾಗ ಒತ್ತಗೀಲಕ್ಕೆ ಹತ್ತುತ್ತಿರಬೇಕು ಆ ಎತ್ತು ಹೂಡಿ, ದುಡಿಸಿಕೊಳ್ಳಲಿಕ್ಕೆ ಉತ್ತಮ ಎಂದು ಭಾವಿಸುತ್ತಾರೆ. ಇವುಗಳನ್ನು 'ಒತ್ತಗೀಲ ಸುಳಿ' ಎಂದೇ ಕರೆಯುವುದು (8). ಅವು ಒತ್ತಗೀಲಕ್ಕೆ ಹತ್ತಿದಿದ್ದರೆ ಅದು ಸಲ್ಲಕ್ಷಣವಲ್ಲ. ಆ ಎತ್ತುಗಳು ದಡ್ಡ. ಕಡ್ಡ ಇರುತ್ತವಂತೆ ಅದು ತಿಂದಷ್ಟು ದುಡಿಯದ ದನ. ಇದನ್ನು ಅಷ್ಟು ಸೂಕ್ಷ್ಮವಾಗಿ ಪರೀಕ್ಷಿಸಲಾಗುವುದಿಲ್ಲ. ಕಾರಣವು 'ಎತ್ತಿನ ಎದ್ಯಾಗ, ಕುದರಿ ಕುಂಡ್ಯಾಗ ಸುಳಿ ನೋಡಬಾರದೆಂಬುದೊಂದು' ಹೇಳಿಕೆ. ಕಿವಿಯ ಗಡ್ಡಿಯ ಮೇಲೆ ತೋಬರಿಯ ಹಿಂದೆ ಕೆಲವು ಸುಳಿಗಳಿರುತ್ತವೆ. ಅವುಗಳನ್ನೂ ಅಷ್ಟಾಗಿ ಗಮನಿಸುವುದಿಲ್ಲ.

ದನಕ್ಕಿರಬೇಕಾದ ಅತ್ಯುತ್ತಮ ಸುಳಿ 'ದವಣಿ ಸುಳಿ' (9) ಈ 'ಸುಳಿ' ದನ ಇದ್ದ ದಾವಣಿಯಲ್ಲಿ ಯಾವಾಗಲೂ ದನಗಳಿರುತ್ತವೆಯಂತೆ! ಇವು ಎರಡು ಸುಳಿಗಳು. ಒಂದು ಇಣಿಯಿಂದ ಹಿಂದೆ ಬೆನ್ನ ಹುರಿಯಲ್ಲಿ ಒಂದು ಗೇಣಳತೆ ಬಿಟ್ಟು ಇರುತ್ತದೆ. ಇನ್ನೊಂದು ಹಿಂಗಾಲು ಗೂಟೆಲುಬಿನಿಂದ ಮುಂದೆ ಒಂದೆರಡು ಗೇಣುಂತರದಲ್ಲಿ ಮೊದಲಿನ ಸುಳಿಗೆ ನೇರವಾಗಿ ಬೆನ್ನು ಹುರಿಯ ಮೇಲೆಯೇ ಇರುತ್ತದೆ. ಇವೆರಡನ್ನೂ

ಕೂಡಿಸಿಯೇ ಈ ಹೆಸರು. ಈ ದನ ಬಹಳ ಶುಭದಾಯಕವಷ್ಟೇ ಅಲ್ಲ ದವಣಿ ಸುಳಿ ಇದ್ದ ದನದವನ ಒಕ್ಕಲುತನ ಉತ್ಕರ್ಷ ಹೊಂದುತ್ತದೆಂಬ ಬಲವಾದ ನಂಬುಗೆ. ಇಂಥಾ ದನಗಳನ್ನು ಯಾರೂ ಸಾಮಾನ್ಯವಾಗಿ ಮಾರಲು ಮುಂದೆ ಬರುವದಿಲ್ಲ. ಈ ಸುಳಿ ಇದ್ದರೆ ಬೇರೆ ಯಾವ ಸುಳಿಗಳನ್ನೂ ನೋಡುವುದೇ ಇಲ್ಲ. ದವಣಿ ಸುಳಿಯ ದನ ದವಣಿಯಲ್ಲಿದ್ದರೆ ಇನ್ನುಳಿದ ಕೆಟ್ಟ ಸುಳಿಯ ದನದ ಪ್ರಭಾವ ಒಡೆಯನಮೇಲೆ ಅಗುವುದಿಲ್ಲವಂತೆ. ಎರಡೂ ಕಣ್ಣಿನ ಮೇಲೆ ಎರಡು ಸುಳಿಗಳಲ್ಲದೆ ಇನ್ನೂ ಕೆಲವು ಉತ್ತಮ ಲಕ್ಷಣಗಳನ್ನು ಎತ್ತುಗಳ ಆಯ್ಕೆಯಲ್ಲಿ ಜನಪದರು ತೀವ್ರವಾಗಿ ಗಮನಿಸುತ್ತಾರೆ.

- ಎತ್ತಿನ ಕಾಲುಗಳು 'ಸುದ್ದ'ವಾಗಿರಬೇಕು. ಕಾಲುಗಳು ಒಂದಕ್ಕೊಂದು ಬಡಿಯಬಾರದು. ಅದಕ್ಕೆ ನೆವರು ಬಡಿದುಕೊಳ್ಳುವುದು ಎನ್ನುತ್ತಾರೆ. ನೆವರು ಬಡಕ ಎತ್ತು ನಿರುಪಯೋಗಿ. ಕಾಲುಗಳು ದಪ್ಪವಾಗಿರಬಾರದು.
- ಖುರಗಳು ಬಿರುಸಾಗಿದ್ದು ಸಣ್ಣವೂ. ಎತ್ತರವೂ ಆಗಿರಬೇಕು. ಖುರಗಳು ಚಪ್ಪಟೆಯಾಗಿರಬಾರದು. ಕಿಸುಗೊಳಗಾದವಾಗಿರಬಾರದು. ಅಂಗಾಲಲ್ಲಿ ಬಿರುಸಿರಬೇಕು.
- ಎತ್ತಿನ ತೋಬರಿ ಮತ್ತು ಗಂಗೆದೊಗಲು ಉದ್ದಾಗಿ ಇರಬಾರದು. ಗಂಗೆದೊಗಲು ತೀರಾ ತೆಳ್ಳಗಾಗಿರಬೇಕು.
- ಎತ್ತಿನ ಹಣಿ ತೀರಾ ದೊಡ್ಡದಾಗಲೀ, ತೀರಾ ಚಿಕ್ಕದಾಗಲೀ ಇರಕೂಡದು. ಮುಖ ನೀಳವಾಗಿ, ಉದ್ದಾಗಿರಬೇಕು.
- ಕೋಡುಗಳು ಸಣ್ಣಾಗಿ ಎರಡೂ ಒಂದೇ ಅಳತೆ ಆಕಾರದವಾಗಿರಬೇಕು. ಆದರೆ ಬಲಕಿನ ಕೋಡು ಸ್ವಲ್ಪ ಮುಂದಕ್ಕೆ ಚಾಚಿದ್ದರೆ ಒಳ್ಳೆಯ ಲಕ್ಷಣವೆಂದು ಪರಿಗಣಿಸುತ್ತಾರೆ.
- 'ಎತ್ತಿಗೆ ಹೆಗಲು, ಕುದುರೆಗೆ ಕಾಲು' ಎಂಬ ಮಾತಿನಂತೆ ಎತ್ತಿನ ಹೆಗಲು ದಪ್ಪಾಗಿ ಶಕ್ತಿಯುತವಾಗಿದ್ದರಷ್ಟೇ ಸಾಲದು. ಅದು ನೊಗದ ಘರ್ಷಣೆಯಿಂದ ಗಾಯವಾಗದಂತಿರಬೇಕು. ಈಗ 'ಹೆಗಲು ಕೊಟ್ಟಿದೆ' ಎಂದರೆ ಈಗ ಹೂಡಲಿಕ್ಕೆ ಆರಂಭವಾಗಿದೆ. ಎಂದರ್ಥ. 'ಹೆಗಲ ತೊಳದೈತಿ' ಅಂದರೆ ಹೆಗಲಿಗೆ ಗಾಯವಾಗಿದೆ ಎಂದು ಜನಪದರು ತಿಳಿಯುತ್ತಾರೆ. ಆಗಾಗ ಹೆಗಲು ಬರುತ್ತಿದ್ದರೆ ಅಂಥಾ ಎತ್ತು ಹೆಚ್ಚು ಕಾಲ ಉಪಯೋಗವಾಗದು. 'ಕಾಗಿ 'ಕಾ' ಅಂದರ ಲ್ವಾಳೆತ್ತು ಬೆದರಿತ್ತು. ಅನ್ನುವ ಗಾದೆ ಹೆಗಲು ಹುಣ್ಣಾದ ಎತ್ತಿನ ಸ್ಥಿತಿ ಕಂಡೇ ಹೇಳಿದ ಮಾತು.
- ಎತ್ತಿನ ಬಾಲ ಮೂಲದಲ್ಲಿ ದಪ್ಪಾಗಿದ್ದು ಸಣ್ಣಾಗಿ ನೇರವಾಗಿ ಉದ್ದಾಗಿರಬೇಕು. ಸಾಮಾನ್ಯವಾಗಿ ಜಂಡೆದ ಕೂದಲು ಹಿಂಗಾಲು ಮೊಣಕಾಲು ಕೆಳಗೆ ಇಳಿದಿರಬೇಕು.
- ಎತ್ತಿನ ಗುದದ್ವಾರದ ಕೆಳಗೆ ನಾಗರಹೆಡೆಯ ಆಕಾರದ ಚಿಹ್ನೆ ಇದ್ದರೆ ಬಹಳ ಒಳ್ಳೆಯದು. ಆ ಎತ್ತು ನಾಗರ ಹಾವಿನಂತೆ ಚಪಲವಾಗಿರುತ್ತದೆಯಂತೆ.
- ಕೆಲವು ಎತ್ತುಗಳ ಕೊನೆಯ ಪಕ್ಕೆಲುಬು ಉಳಿದ ಎಲುಬುಗಳ ಅರ್ಧ ದಪ್ಪಿರುತ್ತದೆ. ಅದು ಒಂದೇ ಪಕ್ಕೆಗೆ ಇದ್ದರೆ ಅದನ್ನು 'ಮಟ್ಟೆಲುಬು' ಎಂದು ಹೇಳುತ್ತಾರೆ. ಅಂಥಾ ಎತ್ತನ್ನು ಯಾರೂ ಕೊಳ್ಳುವದಿಲ್ಲ. ಆದರೆ ಆ ರೀತಿಯ ಎಲುಬು ಎರಡೂ ಪಕ್ಕೆಗೆ ಇದ್ದರೆ ಅದನ್ನು 'ಗರುಡ' ಎನ್ನುತ್ತಾರೆ. ಗರುಡ ಇದ್ದ ಎತ್ತಿಗೆ ಬೇಡಿಕೆ ಬೆಲೆ ಎರಡೂ ಅಧಿಕ.

ಕುದುರೆಯ ಸುಳಿ: ಜನಪದ ಬದುಕಿನ ಇನ್ನೊಂದು ಸಾಕುಪ್ರಾಣಿ ಕುದುರೆ. ಪ್ರವಾಸಕ್ಕೆ, ಲಗಳಿ ಹಾಕಿ ನೀರು ತರಲು, ಹೊಲದಿಂದ ಭಾರ ತರಲು ಕುದುರೆಯನ್ನು ಬಳಸುತ್ತಿದ್ದರು. 'ಹೆಣ್ಣಿನ ನೆಲೆ, ನೀರಿನ ನೆಲೆ, ಕುದುರೆಯ ನೆಲೆ ತಿಳಿದಿಲ್ಲ' ಎಂಬ ಜನಪದ ಹೇಳಿಕೆ. ಅವರ ಅನುಭವ ಜನ್ಯ. ಕುದುರೆ ಕೊಳ್ಳುವಾಗ ಸುಳಿ ಮಾತ್ರ ನೋಡುವಷ್ಟು ಇನ್ನಾವ ಪ್ರಾಣಿಯನ್ನೂ ನೋಡುತ್ತಿರಲಿಲ್ಲ ಕುದುರೆಯ 'ಸುಳಿ' ಸರಿಯಾಗಿರದಿದ್ದರೆ ಅದರ ಮಾಲೀಕನಿಗೆ ಕೆಡುಕು ಕಟ್ಟಿಟ್ಟದ್ದು. ಎಷ್ಟೋ ಜನರ ಪ್ರಾಣಹಾನಿಗೂ ಅದರ ಸುಳಿ ಕಾರಣವೆಂದು ಪರಿಭಾವಿ ಸಲಾಗುತ್ತಿತ್ತು. ಕುದುರೆಯನ್ನು ಪ್ರತಿಷ್ಠೆಯ ಸಂಕೇತವಾಗಿ ಶ್ರೀಮಂತರು ಬಳಸುತ್ತಿದ್ದರು. ಗೌಡ, ದೇಸಾಯಿ, ದೇಶಮುಖ ರಂಥವರ ಮನೆಗೆ ಕುದುರೆ ಇರಲೇಬೇಕಿತ್ತು. ಅವರ ಮನೆಯ ತಲೆಬಾಗಿಲಿಗೆ 'ಕುದುರೆಯ ಮುಖ'ಗಳನ್ನು ಹಾಕಿಸಿದ್ದನ್ನು ಹಳ್ಳಿ ಹಳ್ಳಿಗೂ ಇಂದೂ ಕಾಣಬಹುದು. 'ಕುದುರೆ ಏರಿಬರು', 'ಕುದುರೆ ಏರಿ ನಿಲ್ಲು' ಮೊದಲಾದ ಪಡೆನುಡಿಗಳು ಜಾನಪದರಲ್ಲಿವೆ. ಅದರ ಪ್ರಯೋಜನಕ್ಕಿಂತ ಅದನ್ನು ಕಟ್ಟಿದ ಹೆಮ್ಮೆಯೇ ಹಿರಿದು.

ಕುದುರೆಗೆ ಮುನ್ನೂರ ಅರವತ್ತು ಸುಳಿಗಳೆಂದು ಹೇಳಲಾಗುತ್ತದೆ ಅದರ ಲದ್ದಿಗೂ ಸುಳಿಗಳಿರುತ್ತವಂತೆ! ಈ ಎಲ್ಲ ಸುಳಿಗಳನ್ನು ಪರಿಶೀಲಿಸಿ ಕುದುರೆಕೊಳ್ಳುವ ಕೆಲಸ ಸಣ್ಣದೇನಲ್ಲ. ಅದನ್ನು ಬಲ್ಲ ಪರಿಣಿತರು ಹಳ್ಳಿ ಹಳ್ಳಿಗೆ ಅಲ್ಲಲ್ಲಿ ಇರುತ್ತಿದ್ದರು. ಹಯ ಶಾಸ್ತ್ರ, ಗಜ ಶಾಸ್ತ್ರಗಳು ನಮ್ಮಲ್ಲಿ ಇದ್ದ ಉಲ್ಲೇಖಗಳಿವೆ. ಕುದುರೆ ಬಲ ಅರಸರ ಚತುರಂಗ ಬಲದ ಪ್ರಮುಖ ಅಂಗವಾಗಿತ್ತು. ರತ್ನಾಕರವರ್ಣಿ 'ತುರಗೇಭಮಣಿ ಪರೀಕ್ಷೆ'ಯ ವಿಷಯ ಪ್ರಸ್ತಾಪಿಸುತ್ತಾನೆ. ರತ್ನ ಪರೀಕ್ಷೆಯ ವಿಷಯವನ್ನೂ ಕನ್ನಡದ ರನ್ನನೇ ಉಲ್ಲೇಖಿಸುತ್ತಾನೆ. ಈ ಶಾಸ್ತ್ರದ ಬುನಾದಿಗೆ ಜನಪದರ ಗಟ್ಟಿಗೊಂಡ ಅನುಭವಗಳೇ ಆಧಾರವೆನ್ನುವ ಮಾತು ತೀರಾ ಸತ್ಯ. ರಾಜರು ಈ ಲಕ್ಷಣಶಾಸ್ತ್ರ ಬಲ್ಲವರನ್ನು ತಮ್ಮಲ್ಲಿ ಇಟ್ಟುಕೊಳ್ಳುತ್ತಿದ್ದರು. ಇಂದೂ ಸಹಿತ ಕುದುರೆಗಳ ಸುಳಿಸೂತ್ರ ಬಲ್ಲವರು ಅಲ್ಲಲ್ಲಿ ಹುಡುಕಿದರೆ ಸಿಕ್ಕುತ್ತಾರೆ.

ಕುದುರೆ ಒಂದೇ ಬಣ್ಣದ್ದಿದ್ದರೆ ಅದನ್ನಷ್ಟು ಒಳ್ಳೆಯದೆಂದು ಭಾವಿಸಲಾಗುತ್ತಿದ್ದಿಲ್ಲವಾದರೆ ಸಂಪೂರ್ಣ ಬಿಳಿಯ ಮತ್ತು ಸಂಪೂರ್ಣ ಕೆಂಪು ಹೆಣ್ಣು ಕುದುರೆಗಳನ್ನು ಬಹಳ ಒಳ್ಳೆಯದೆಂದು ಪರಿಗಣಿಸುತ್ತಿದ್ದರು. ಆದರೆ ಪೂರ್ಣ ಕರಿಯದನ್ನು ಬಹಳ ಜನ ಇಚ್ಛಿಸುತ್ತಿರಲಿಲ್ಲ. ಕರಿಯ ಮಾಸ (ಬೂದಿಬಣ್ಣ) ಕುದುರೆಯನ್ನಂತೂ ಯಾರೂ ಬಯಸುವದಿಲ್ಲ. ಅದನ್ನು ಶುಭ ಸಂಕೇತವೆಂದು ಯಾರು ಭಾವಿಸುತ್ತಿರಲಿಲ್ಲ. ಅಲ್ಲದೆ ಅಂಥ ಬಣ್ಣದ ಕುದುರೆ ಕಡ್ಡ (ಮಂದ) ಇರುತ್ತದೆಂಬುದು ಅವರ ಅಭಿಪ್ರಾಯ.

ಗಂಡು ಕುದುರೆ ಕರಿಯದಿದ್ದು, ಇಲ್ಲವೆ ಕೆಂಪಿದ್ದು ಅದರ ಹಣೆಯ ಮೇಲೆ (ಹಣಚಿಕ್ಕಿ) ಸಣ್ಣ ಬಿಳಿಯ ಪಟ್ಟಿ ಇದ್ದರೆ ಅದನ್ನು ಒಳ್ಳೆಯ ಕುದುರೆ ಎಂದು ತಿಳಿಯಲಾಗುತ್ತಿತ್ತು. ಆದರೆ ಆ ಬಿಳಿಯ ಪಟ್ಟಿ ಬಾಯಿಯವರೆಗೆ ಬಂದಿರಬಾರದು. ಅದನ್ನು ಅಶುಭ ಲಕ್ಷಣವೆನ್ನುವುದಕ್ಕಿಂತ ಅಂಥ ಕುದುರೆ ಹೇಳಿಕೊಳ್ಳಬೇಕಾದಷ್ಟು ಜಾಣ ಇಲ್ಲವೆ ಚಪಲವಲ್ಲ ಎಂಬುದು ಅವರ ಅನುಭವ ಸತ್ಯವಾಗಿರಬಹುದು.

ಕುದುರೆ ಕಪ್ಪು, ಬಿಳಿ ಇಲ್ಲವೆ ಕೆಂಪು ಬಣ್ಣದ್ದಿದ್ದು ಅದರ ಹಣೆಯ ಮೇಲೆ ಬಿಳಿ ಪಟ್ಟಿ ಇರುವುದಲ್ಲದೆ ಅದರ ಸಮಪಾದಗಳು ಬಿಳಿಯವಿರಬೇಕು. ವಿಷಮ ಪಾದಗಳಿಗೆ ಬಿಳಿಯ ಬಣ್ಣವಿದ್ದರೆ ಅದು ಕೊಳ್ಳಲು ಯೋಗ್ಯವೆಂದು ಪರಿಣಿತರು ಹೇಳುತ್ತಿರಲಿಲ್ಲ. ಆದರೆ ನಾಲ್ಕು ಪಾದಗಳೂ ಬಿಳಿಯವಿದ್ದು, ಹಣೆಯ ಮೇಲೆ ಚಿಕ್ಕದಾದ ಬಿಳಿಯ ಪಟ್ಟಿ ಇದ್ದರೆ ಅದು ಬಹಳ ಒಳ್ಳೆಯ ಲಕ್ಷಣವೆಂದು ತಿಳಿಯುತ್ತಿದ್ದರು. ಅಂಥ ಕುದುರೆಯನ್ನು 'ಪಂಚ-ರಂಗಿ', 'ಅಬಲಾಕ' ಎಂದು ಕರೆಯುತ್ತಿದ್ದರು. ಸಂಪೂರ್ಣ ಕೆಂಪು ಬಣ್ಣದ ಕುದುರೆಯ ಬೆನ್ನಮೇಲೆ ಉದ್ದಕ್ಕೂ ಗಡದ್ದಾದ ಕೆಂಪು ಪಟ್ಟಿ ಇದ್ದರೆ ಅದನ್ನು ಸಭ್ಯ ಉತ್ತಮ ಕುದುರೆ ಎಂದು ಪರಿಗಣಿಸಲಾಗುತ್ತದೆ. ಹಂಡಬಂಡ (ಕೆಂಪು ಮತ್ತು ಬಿಳಿ ಅಥವಾ ಕರಿ ಮತ್ತು ಬಿಳಿ) ಕುದುರೆಗಳನ್ನು ಉತ್ತಮ ಕುದುರಿಗಳೆಂದು ನಂಬಲಾಗುತ್ತಿದ್ದರೂ ಅದರಲ್ಲಿ ಬಿಳಿಯ ಭಾಗ ಹೆಚ್ಚಿರಬಾರದಂತೆ! ಅದರಲ್ಲೂ ಕೆಂಪು ಮತ್ತು ಬಿಳಿಯ ಹಂಡಬಂಡದ ಕುದುರೆ ವಿಶೇಷ ಬೇಡಿಕೆಯಲ್ಲಿರುತ್ತವೆ.

ಆಯಾಲು (ಕುತ್ತಿಗೆಯ ಮೇಲಿನ ಜವೆಗೂದಲು) ಹೆಣ್ಣು ಕುದುರೆಗೆ ಎಡಕ್ಕೆ ಬೀಳಬೇಕು. ಗಂಡು ಕುದುರೆಗೆ ಬಲಕ್ಕೆ ಬೀಳಬೇಕು. ಇದಕ್ಕೆ ವ್ಯತಿರಿಕ್ತವಾಗಿದ್ದ ಕುದುರೆ ಮೇಲು ನೋಟದಿಂದಲೇ ತ್ಯಾಜ್ಯ. ಅದರಂತೆ ಬಾಲದ ಜವೆ ನೀಳವಾಗಿರಬೇಕು. ಅವು ಹುರಿಯಾಗಿ ಇಲ್ಲವೆ ಗುಂಗುರಾಗಿ ಇರಕೂಡದು. ಗೊರಸು ಬಿರುಸಾಗಿ ಚಿಕ್ಕವಾಗಿರಬೇಕು. ಚಪ್ಪಟೆ ಗೊರಸಿನ ನಿರುಪಯೋಗಿ. ಕಿವಿಗಳು ಚಿಕ್ಕವಾಗಿರುವುದು ಸಲ್ಲಕ್ಷಣದ ಕುರುಹು. ಉತ್ತಮ ಜಾತಿಯ ಕುದುರೆ ಎಂದೂ ಮಲಗುವುದೇ ಇಲ್ಲ. ಅದರ ನಿದ್ರೆ ನಿಂತಲ್ಲೇ.

ಕುದುರೆಯ ಸುಳಿಗಳಲ್ಲಿ ಪ್ರಮುಖವಾದ ಕೆಲವನ್ನಿಲ್ಲಿ ಪ್ರಸ್ತಾಪಿಸಬಹುದು. ಸಾಮಾನ್ಯವಾಗಿ ಮಸ್ತಕ ಸುಳಿ (ನಂ.1) ಎಲ್ಲ ಕುದುರೆಗಳಿಗೂ ಇರುವಂಥದು. ಅದು ಕಿವಿಯ ಗಡ್ಡಿಯ ಹಿಂದೆ ಒಂದಂಗುಲ ಅಂತರದಲ್ಲಿ ಇರಬೇಕು. ಅದು ಒಳ್ಳೆಯದು. ಅದಕ್ಕೂ ಕೆಳಕ್ಕೆ ಇದ್ದರೆ ಅದು 'ಜಾರಮಸ್ತಕ' (2) ವೆನಿಸುತ್ತದೆ ಅದು ಕುದುರೆಗೆ ಕುಂದು. ಎರಡೂ ಕಣ್ಣಿನ ಮಧ್ಯದಿಂದ ಒಂದೆರಡಂಗುಲ ಮೇಲೆ ಸುಳಿ ಇದ್ದು ಅದರ ಮೇಲೆ ಹಣೆಗೆ ಇನ್ನೊಂದು ಅದಕ್ಕೂ ಚಿಕ್ಕದಾದ ಸುಳಿ ಇದ್ದರೆ ಈ ಎರಡನ್ನು 'ಅಡಕಲ ಸುಳಿ' (3) ಎಂದು ಅಚ್ಚ ಜಾನಪದದಲ್ಲಿ ಹೆಸರಿಸುತ್ತಾರೆ. ಈ ಸುಳಿ ಇದ್ದ ಕುದುರೆ ಕೊಂಡವರ ಮನೆತನ ಅಡಕವೇರಿದಂತೆ ಏರುತ್ತದೆಯಂತೆ! ಒಂದು ವೇಳೆ ಕೆಳಗಿನ ಸುಳಿಗಿಂತ ಮೇಲಿನದು ದೊಡ್ಡದಿದ್ದರೆ ಅಡಕಲು ಉರುಳಿ ಬೀಳುವುದು, ಇದು ಅಶುಭ. ಇಲ್ಲವೆ ಕೆಳಗಿನ ಸುಳಿ ಎರಡೂ ಕಣ್ಣಿನ ಮಧ್ಯೆ ಇದ್ದರೆ ಅದು 'ಶೋಕಾವಳಿ' (5). ಹಾಗೆ ಕರೆಯುವಲ್ಲಿಯೇ ಅದರ ದುಷ್ಪರಿಣಾಮ ಧ್ವನಿಸುತ್ತದೆ! ಸಾಮಾನ್ಯವಾಗಿ ಬಹಳ ಕುದುರೆಗಳಿಗೆ ಹಣೆಯ ನಡುವೆ ಒಂದೇ ಸುಳಿ ಇರುವುದು. ಕುಂಕುಮ ಹಚ್ಚುವ ಸ್ಥಳದಲ್ಲಿ ಅದು ಇರುವುದರಿಂದ ಅದಕ್ಕೆ 'ಕುಂಕುಮ ಸುಳಿ' (4) ಎಂದು ಜನಪದರು ಕರೆದರು.

ಕಣ್ಣಿನಿಂದ ಒಂದಂಗುಲ ಕೆಳಗೆ ಕಪಾಳಕ್ಕೆ ತೀರ ಚಿಕ್ಕದಾದ ಸುಳಿಯೊಂದಿದ್ದು, ಅದರ ಕೆಳಗೆ, ಅಂದರೆ ಕೆಳದವಡೆಯ ಕಡೆಗೆ ಇನ್ನೊಂದು ಅಷ್ಟೇ ಚಿಕ್ಕದಾದ ಸುಳಿ ಇರುತ್ತದೆ ಇವೆರಡನ್ನು ಕೂಡಯೇ 'ಗಾನಕೋಡ ಸುಳಿ' (6) ಎನ್ನುತ್ತಾರೆ. ಈ ಹೆಸರಿನ ಅರ್ಥವಾಗಲೀ ಅದರ ಪರಿಣಾಮವಾಗಲೀ ಸ್ಪಷ್ಟವಾಗಿಲ್ಲ.

ಮೂಗಿನ ಹೊರಳೆಗಳ ಮಧ್ಯೆ ಸುಳಿ ಇದ್ದರೆ ಆ ಕುದುರೆ ತೀರ ದಡ್ಡ ಇರುವುದೆಂದು ಹೇಳುತ್ತಾರೆ. ಅದನ್ನು 'ದಡ್ಡ ಸುಳಿ' (7) ಎಂದೇ ಕರೆಯುತ್ತಾರೆ. ಇದಕ್ಕೂ ಕೆಟ್ಟದಾದ ಇನ್ನೊಂದು ಸುಳಿ 'ಬೊಬ್ಬಿ ಸುಳಿ' (8). ಅದು ಕುದುರೆಯ ಕೆಳ ದುಟಿಯ ಕೆಳಗೆ ಇರುತ್ತದೆ. ಈ ಎರಡೂ ಸುಳಿಗಳಿದ್ದ ಕುದುರೆ ಎಂದೂ ಮಾರಾಟವಾಗುವುದೇ ಕಷ್ಟ. ಕೊಂಡವರು ಬೊಬ್ಬೆ ಹೊಡೆಯದೆ ಬೇರೆ ಗತಿಯಿಲ್ಲವಂತೆ. 'ಕುದುರೆಗೆ ಸುಳಿ ಕೊರಳ ತುಂಬ' ಎಂದು ಹೇಳುತ್ತಾರೆ. ಆದರೆ ಕೆಲವನ್ನಿಲ್ಲಿ ಹೆಸರಿಸಬಹುದು ಮೊದಲನೆಯದಾಗಿ ತೀರ ಕೆಟ್ಟದೆಂದು ಪರಿಗಣಿಸಲ್ಪಡುವ ಸುಳಿ 'ಉರ್ಲ ಸುಳಿ' (9) ಈ ಕುದುರೆ ಕಟ್ಟಿದವ ಸಂಸಾರದ ತಾಪತ್ರಯಕ್ಕೆ, ಬದುಕಿನ ಬೇರೆ ಸಮಸ್ಯೆಗಳಿಗೂ ಹೆದರಿ ಉರ್ಲು ಹಾಕಿಕೊಂಡು ಸಾಯಬೇಕಾಗುತ್ತದಂತೆ. ಈ ಸುಳಿ ಕುದುರೆಯ ಮುಖದಿಂದ ಕುತ್ತಿಗೆ ಆರಂಭವಾಗುವಲ್ಲಿ ಗಂಟಲಿಗೆ ಇರುತ್ತದೆ. ಅದರ ಕೆಳಗೆ ಗೆಜ್ಜೆ, ಲಡ್ಡು ಕಟ್ಟುವಲ್ಲಿ ಇದ್ದ ಸುಳಿಯನ್ನು 'ಕಂಠಾಭರಣ' ಎಂದು (10) ಕರೆಯಲಾಗುತ್ತದೆ. ಇದು ಮಂಗಲದಾಯಕ, ಶುಭ ಸೂಚಕ ಇದಕ್ಕೂ ಕೆಳಗಿನ ಕುತ್ತಿಗೆಯ ಭಾಗದಲ್ಲಿದ್ದ ಅಂದರೆ ಎದೆಯಿಂದ ಕುತ್ತಿಗೆಯ ನಡುವೆ ಇದ್ದ ಸುಳಿಯನ್ನು 'ದೇವಮಣಿ' (11) ಎಂದು ಹೇಳುತ್ತಾರೆ ಈ ಸುಳಿಯ ಕುದುರೆ ಬಹಳ ಚಪಲವಾಗಿದ್ದು ಇದಕ್ಕೆ ಬೇಡಿಕೆ ಅಧಿಕವಾಗಿರುತ್ತದೆ.

ಎರಡೂ ಮುಂಗಾಲ ಮೊಳಕಾಲ ಹಿಂದೆ ಇದ್ದ ಸುಳಿಗಳನ್ನು 'ಬೇಡಿ ಸುಳಿ' (12) ಎಂದು ಹೆಸರಿಸುತ್ತಾರೆ ಈ ಕುದುರೆಯ ಯಜಮಾನನ ಕೈಗೆ ಖಚಿತವಾಗಿ ಬೇಡಿ ಬರುತ್ತದೆಂಬ ನಂಬುಗೆ ಇದು ತೀರ ಕೆಟ್ಟ ಸುಳಿಗಳಲ್ಲೊಂದು. ಹಿಂಗಾಲ ಮೊಳಕಾಲಿಗೂ ಅದೇ ರೀತಿಯ ಸುಳಿಗಳಿದ್ದರೆ ಅವನ್ನೂ ತೀರ ಕೆಟ್ಟವೆಂದು ಪರಿಗಣಿಸುತ್ತಾರೆ. ಗೂಟಾಪಳಿ (15) ಹೆಸರಿನ ಈ ಸುಳಿಯಿದ್ದ ಕುದುರೆ ತನ್ನ ಮಾಲಿಕನನ್ನು 'ಗೂಟ' 'ಫಳಿ' ಕಿತ್ತಿಸುತ್ತದೆ. ಅಂದರೆ ಅವನನ್ನು ಊರು ಬಿಡಿಸುತ್ತದೆಂಬುದು ಜನಜನಿತ ತಿಳಿವಳಿಕೆ. ಇಂಥ ಕುದುರೆಗಳ ಮಾರಾಟ ಇಲ್ಲವೆಂದೇ ತಿಳಿಯಬೇಕು.

ಕೆಲವು ಕುದುರೆಗಳನ್ನು ಹತ್ತಿ ತಿರುಗಾಡಲು ಬಳಸುವುದೇ ಇಲ್ಲ. ಕೇವಲ ಭಾರ ಹೊರಲು, ಸೇಂದಿ ಮೊದಲಾದ ಕೀಳು ವಸ್ತುಗಳನ್ನು ತರಲು ಮಾತ್ರ ಬಳಸುತ್ತಾರೆ. ಇಂಥ ಕುದುರೆಗಳಿಗೆ 'ಪಕಾಲಿ ಸುಳಿ' (16) ಇರುತ್ತದೆ. ಈ ಸುಳಿ ಇದ್ದ ಕುದುರೆಗಳನ್ನು ಮೇಲ್ವರ್ಗದವರಾರೂ ಸಾಕುವುದಿಲ್ಲ. ಹಿಂಗಾಲಿನಿಂದ ಸ್ವಲ್ಪ ಮುಂದೆ ಕಿಪ್ಪೊಟ್ಟೆಯ ಮೇಲೆ ಈ ಸುಳಿ ಇರುವುದು.

ಕೆಲವು ಸುಳಿಗಳು ಒಬ್ಬರಿಗೆ ಅನುಕೂಲವಾಗಿದ್ದರೆ ಅವೇ ಸುಳಿಗಳು ಇನ್ನು ಕೆಲವರಿಗೆ ಪ್ರತಿಕೂಲವೂ ಆಗಿರುವದುಂಟು.

ಗಂಗಾ ವಾಟ (14) ಅಥವಾ ಬಂಗಾರ ಪಾಟ ಎಂದು ಹೇಳುವ ಸುಳಿಯನ್ನು ಉದಾಹರಿಸಬಹುದು. ಥಡಿಯ ಮುಂದಿನ ಭಾಗವಿರುವ ಸ್ಥಳದಲ್ಲಿ ನೀರು ಹಾಕಿದರೆ, ಅದು ಮುಂಗಾಲು ನಡುವಿರುವ ಎದೆಯಿಂದ ಸ್ವಲ್ಪ ಹಿಂದೆ ಹಾದು ಬೀಳುವಲ್ಲಿ ಈ ಸುಳಿ ನೆಲಕ್ಕೆ ಮುಖ ಮಾಡಿ ಇರುತ್ತದೆ. ಈ ಸುಳಿಯಿದ್ದ ಕುದುರೆ ಕೆಲವರ 'ಘರ್ ಸಪಾಟ' ಮಾಡಲೂಬಹುದು. ಇನ್ನೂ ಕೆಲವರಿಗೆ 'ಬಂಗಾರ ಪಾಟ' ಆಗಿ ಅವರನ್ನು ಉತ್ಕರ್ಷಕ್ಕೂ ಒಯ್ಯಬಹುದು. ಮುಂಗಾಲು ಪಚ್ಚೆಯಮೇಲೆ ಇರುವ ಇನ್ನೊಂದು ಸುಳಿಯನ್ನು 'ಹುರದಾವಳಿ' (13) ಎಂದು ಹೇಳುತ್ತಾರೆ. ಈ ಸುಳಿಯ ಕುದುರೆ ಬಹಳ 'ವಾಂಡ' ಇರುತ್ತದೆ. ನಂಬಿಗಸ್ಥವಲ್ಲ. ನಿಯಂತ್ರಣದಲ್ಲಿ ಆ ಕುದುರೆ ಬರುವುದೇ ಇಲ್ಲ. 'ಸದಿಗೆ ಸುಳಿ' (17) ಎಂದು ಹೇಳುವ ಸುಳಿ ತೀರ ಕೆಟ್ಟದ್ದು. ಕುತ್ತಿಗೆ ಮಧ್ಯೆ ಆಯಾಲುವಿನಲ್ಲಿ ಈ ಸುಳಿ ಇರುತ್ತದೆ ಅದು ಅಶುಭವಷ್ಟೇ ಅಲ್ಲ, ಸಾಕಿದ ಸವಾರನ ಸಿದಿಗೆ ಕಟ್ಟಿಸುತ್ತದೆ ಎಂಬುದು ಜನಜನಿತ ಅಭಿಪ್ರಾಯ.

ಮೇಲೆ ಉಲ್ಲೇಖಿಸಿದ ಸುಳಿಗಳ ಹೆಸರುಗಳೇ ಸಂಪೂರ್ಣ ಜಾನಪದ. ಸುಳಿ ಅಧ್ಯಯನ ಒಂದು ಶಾಸ್ತ್ರವಾಗಿತ್ತು. ಆದರೆ ಅದನ್ನು ಬರೆದಿಡುವ ಗೋಜಿಗೆ ಹೋಗದೆ. ಬಾಯಿಂದ ಬಾಯಿಗೆ ಉಳಿಸಿ ಕೊಂಡು ಬಂದರು. ಜನಪದರು ಯಾವುದನ್ನೂ ಅಕ್ಷರ ರೂಪದಲ್ಲಿ ಸಂಗ್ರಹಿಸದೆ ಮೌಖಿಕವಾಗಿಯೇ ಉಳಿಕೊಂಡು ಬಂದಿದ್ದಾರೆ. ಇದೊಂದು ಜನಪದ ವಿಜ್ಞಾನ. ಇದರ ಆಧಾರದ ಮೇಲೆಯೇ ರೂಪುಗೊಂಡ ಗಜಶಾಸ್ತ್ರ, ಹಯ ಶಾಸ್ತ್ರಗಳೂ ಪಂಪ ಪೂರ್ವ ಯುಗದಲ್ಲೇ ಕರ್ನಾಟಕದಲ್ಲಿ ಇದ್ದ ಉಲ್ಲೇಖಗಳಿವೆ.

(ಎಂ.ಜಿ.ಬಿ)

ಸೂ



ಸೂಗಯ್ಯ ಹಿರೇಮಠ: ಪ್ರೊ. ಸೂಗಯ್ಯ ಹಿರೇಮಠ ಅವರು ಗುಲಬರ್ಗಾ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಸಿಂಗನಹಳ್ಳಿಯವರು. 09.05.1950ರಂದು ಜಂಗಮ ಮನೆತನದ ಶರಣಯ್ಯ ಮತ್ತು ಶಾಂತಮ್ಮ ಅವರ ಹಿರಿಯ ಮಗನಾಗಿ ಜನಿಸಿದರು. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡ ಅವರು ಚಿಕ್ಕಮ್ಮನಾದ ಗಿರಿಜಮ್ಮನವರ ಮಡಿಲ ಮಗನಾಗಿ ಬೆಳೆದರು. ಇವರ ತಂದೆ ಖಾಸಗಿ (ಗಾಂವಟಿ) ಶಾಲೆಯ ಮಾಸ್ತರರಾಗಿದ್ದರು. ಜೊತೆಗೆ ಒಂದಷ್ಟು ಪಂಚಾಂಗ, ಪುರಾಣಗಳನ್ನು ಹೇಳುತ್ತಿದ್ದರು. ಚಿಕ್ಕಮ್ಮ ಹೇಳುತ್ತಿದ್ದ ಜಾನಪದ ಹಾಡುಗಳು ಅಪ್ಪನು ಹೇಳುವ ಪುರಾಣ ಹಾಗೂ ಊರಿನ ಜಾನಪದ ಪರಿಸರ ಬಾಲ್ಯದಲ್ಲಿಯೇ ಸೂಗಯ್ಯನವರ ಮೇಲೆ ಪ್ರಭಾವ ಬೀರಿದವು.

ಉತ್ತರ ಕರ್ನಾಟಕ ಜಾನಪದ ಸಂಶೋಧನೆಯ ಅನುಭವ ಅವರಲ್ಲಿ ಅಪಾರವಾಗಿತ್ತು. ಅನೇಕ ಜನಪದ ಗೀತೆ, ಕಥೆ, ಒಗಟು, ಗಾದೆ, ಮುಂತಾದ ಜಾನಪದ ಕೃತಿಗಳನ್ನು ಅಧ್ಯಯನ ಮಾಡುವ ಅವಕಾಶ ಪಡೆದುಕೊಂಡರು. ಇದರಿಂದಾಗಿ ಜಾನಪದ ಸಾಹಿತ್ಯ ಕೃತಿಗಳ ಪ್ರಕಟಣೆ ಕಾರ್ಯವನ್ನು ಕೈಕೊಂಡರು.

ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು, ಜನಪದ ವೈದ್ಯ ಪದ್ಧತಿ, ಜಾನಪದ ಸಂಸ್ಕೃತಿ, ದೇವದೇವ ವನ, ಜಾನಪದ ಒಗಟಿನ ಕಥೆಗಳು, ಅಮೃತಬಳ್ಳಿ, ಪಂಚಾಂಗ, ಇವುಗಳು ಅವರ ಪ್ರಮುಖ ಕೃತಿಗಳಾಗಿವೆ. ಅಲ್ಲದೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ 'ಜನಪದ ವೈದ್ಯಕೋಶ' ಯೋಜನೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿರುವರು. ಅಧ್ಯಯನ, ಅಧ್ಯಾಪನ, ಸಂಶೋಧನೆಗಳ ಜೊತೆಯಲ್ಲಿಯೂ ಅನೇಕ ಜನಪರ ಹೋರಾಟಗಳಲ್ಲಿ ತಮ್ಮನ್ನು ಕ್ರಿಯಾಶೀಲರಾಗಿ ತೊಡಗಿಸಿಕೊಂಡು ಸದಾ ಚಟುವಟಿಕೆಯಲ್ಲಿರುವುದನ್ನೂ ಪ್ರೊ. ಸೂಗಯ್ಯ ಹಿರೇಮಠ ಅವರಲ್ಲಿ ತುಂಬ ವಿಶಿಷ್ಟವಾಗಿ ಕಾಣುವೆವು.

1983ರಲ್ಲಿ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಶ್ರೀಮತಿ ಚೆನ್ನಮ್ಮ ಬಸಪ್ಪ ಪಾಟೀಲ ಪದವಿ ಮಹಾವಿದ್ಯಾಲಯ ಚಿಂಚೋಳಿಯಲ್ಲಿ ಕನ್ನಡ ಉಪನ್ಯಾಸಕ ವೃತ್ತಿಗೆ ಸೇರಿದರು.

ಬೀದರ ಜಿಲ್ಲೆಯ ರಂಜೇರಿನ ಸಿಂಧರು ಪ್ರೊ. ಸೂಗಯ್ಯ ಹಿರೇಮಠರ ಪ್ರಮುಖ ಸಂಶೋಧನೆಯಾಗಿದೆ. ಪ್ರೊ. ಹಿರೇಮಠರು ಜಾನಪದ ತಜ್ಞರಾಗಿರುವಂತೆ. ಸೃಜನಶೀಲ ಕವಿ, ಕಥೆಗಾರ, ವಿಮರ್ಶಕರಾಗಿಯೂ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಜಾನಪದ ಸಾಹಿತ್ಯ ಕ್ಷೇತ್ರಕ್ಕೆ ಪ್ರೊ. ಹಿರೇಮಠರ ಕೊಡುಗೆ ಅಪಾರವಾದುದು. ಅವರೊಬ್ಬ ಅಪ್ಪಟ ಗ್ರಾಮೀಣ ಪ್ರತಿಭೆಯ ವಿದ್ವಾಂಸರು. ಗ್ರಾಮೀಣ ಪರಿಸರದ ಜಾನಪದ ಸೊಗಡು ಅವರ ಬರೆಹ ಹಾಗೂ ವ್ಯಕ್ತಿತ್ವಗಳೆರಡಲ್ಲೂ ವಿಶೇಷವಾಗಿ ಕಾಣುತ್ತೇವೆ.

ಜನಪದ ವೈದ್ಯ ಪದ್ಧತಿ ಕೃತಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟವಾಗಿದೆ. ಜಾನಪದ ಸಂಸ್ಕೃತಿ ಕೃತಿ ಜನಪದ ವಿವಿಧ ವಿಷಯಗಳ ಕುರಿತಾಗಿರುವ ಲೇಖನಗಳ ಸಂಗ್ರಹವಾಗಿದೆ. ದೇವ ದೇವವನ ಕೃತಿಯೂ ಆಯುರ್ವೇದಿಕ ಪದ್ಧತಿಗೆ ಸಂಬಂಧಿಸಿದೆ. ಹೈದ್ರಾಬಾದ ಕರ್ನಾಟಕದ ಒಗಟಿನ ರೂಪದಲ್ಲಿನ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಪ್ರೊ. ಸೂಗಯ್ಯ ಹಿರೇಮಠ ಅವರು ತಮ್ಮ ಹಲವು ಬಗೆಯ ಆಲೋಚನೆ, ದೃಷ್ಟಿಕೋನಗಳನ್ನು ಹೊಂದಿರುವ ಅವರು ಹೈದ್ರಾಬಾದ ಕರ್ನಾಟಕದ ವಿಶಿಷ್ಟ ಜಾನಪದ ವಿದ್ವಾಂಸರು ನಿಸಿದ್ದಾರೆ.


(ಐ.ಕೆ.)

ಸೂಗೂರೇಶ್ವರ: ಹೈದರಾಬಾದ ಕರ್ನಾಟಕದ ರಾಯಚೂರಿನಿಂದ ಉತ್ತರಕ್ಕೆ 18 ಕಿ.ಮೀ.ದ ಅಂತರದಲ್ಲಿರುವ ಕೃಷ್ಣಾನದಿ ತೀರದ ಆಂಧ್ರ ಕರ್ನಾಟಕಗಳ ಗಡಿನಾಡು ಗ್ರಾಮ. ಈ ಗ್ರಾಮದೇವ ಸೂಗೂರೇಶ್ವರನಿಂದಾಗಿ ಈ ಗ್ರಾಮಕ್ಕೆ ದೇವಸುಗೂರು ಎಂಬ ಹೆಸರು ಬಂದಿದೆ.

ದೇವಸ್ಥಾನ ವೀರಶೈವ ಮತದ ಅರ್ಚಕರ ಬಾಯಿಯಿಂದ ಹೊರಹೊಮ್ಮುವ 'ಸಾಹೇಬ ಸಲಾಂ, ಮೆಹರ್ಬಾನ ಸಲಾಂ' ಉರ್ದು ವಾಕ್ಯಗಳು ಕ್ಷಣ ಹೊತ್ತು ನಮ್ಮನ್ನು ಬೆರಗುಗೊಳಿಸುತ್ತವೆ. ಜೊತೆಗೆ ಈ ಪರಾಕುಗಳಲ್ಲಿ ಅಡಗಿದ ಸಂಸ್ಕೃತ ಭೂಯಿಷ್ಠ ಶಬ್ದಗಳನ್ನು ಕೇವಲ ಕನ್ನಡ ಮಾತ್ರ ಬಲ್ಲ ಅರ್ಚಕರು, ಭಾಷಾ ಸ್ಪಷ್ಟತೆಗೆ ಒಂದಿನಿತೂ ಕುಂದಿಲ್ಲದಂತೆ ನುಡಿಯುವ ಆ ಸಹಜತೆ ಅವರ ಪೂರ್ವಜರು ಹಾಕಿಕೊಟ್ಟ ಸಂಪ್ರದಾಯ ನೆನಪಿಗೆ ತರುತ್ತದೆ.

ಧಾರ್ಮಿಕ ಪರಂಪರೆಯ ಜೊತೆಗೆ ಸಾಹಿತ್ಯ, ಸಂಗೀತ, ಸಂಸ್ಕೃತಿ, ಕಲೆಗಳು ಬೆಳೆದು ಬಂದ ಬಗೆಯನ್ನು ಹೇಳುವ ಸಲಾಂ (ಪರಾಕು)ಗಳು ಅನೂಚಾನವಾಗಿ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿವೆ. ಈ ಆಚರಣೆ ಇಂದಿಗೂ ಮುಂದುವರಿಯುತ್ತಿರುವುದು ದೇವಸೂಗೂರಿನ ಶರಣದೇವ ಸುಗೂರೇಶ್ವರ ದೇವಸ್ಥಾನದಲ್ಲಿಯ ವೈಶಿಷ್ಟ್ಯಪೂರ್ಣ ಪದ್ಧತಿಗಳಲ್ಲೊಂದು.

ವರುಷದ ಮುನ್ನೂರಾ ಅರವತ್ತೈದು ದಿನಗಳಲ್ಲಿಯೂ ನಗಾರಿ, ನೌಬತ್ತು, ಶಹನಾಯಿ ಮಂಗಳ ವಾದ್ಯಗಳೊಂದಿಗೆ ನಿತ್ಯವೂ ನಡೆಯುವ ತ್ರಿಕಾಲ ಪೂಜಾ ವೈಭವ ಕಾರ್ಯಕ್ರಮಗಳು ನಿಜಕ್ಕೂ ಚೇತೋಹಾರಿ. ಕನ್ನಡ ನಾಡಿನ ಸಂಪ್ರದಾಯ ಪರಂಪರೆಗಳನ್ನು ಇನ್ನೂ ಜೀವಂತವಾಗಿರಿಸಿಕೊಂಡು ಇಲ್ಲಿಯ ಜನರ ಅಭಿರುಚಿ ಮತ್ತು ಉತ್ಸಾಹಗಳು ದೈವಿಕ ಪ್ರಜ್ಞೆಯ ಜೊತೆಗೆ ಧಾರ್ಮಿಕ ಮೌಲ್ಯಗಳನ್ನು, ಸಾಂಸ್ಕೃತಿಕ ಹಿರಿಮೆ ಎತ್ತಿ ಹಿಡಿಯುವುದನ್ನು ಕಂಡಾಗ, ಹಂಪಿ ಮತ್ತು ದಸರ ಉತ್ಸವಗಳು ನೆನಪಿಗೆ ಬರುತ್ತವೆ.



ಶ್ರೀ ಸೂಗುರೇಶ್ವರ ದೇವಸ್ಥಾನ

ಹೊಲಗದ್ದೆಗಳಲ್ಲಿ ದುಡಿದು ದಣಿದ ಗ್ರಾಮೀಣ ಮಹಿಳೆಯರು ತಮ್ಮ ಆರಾಧ್ಯ ದೈವ ಸುಗೂರೇಶ್ವರ-ಸ್ವಾಮಿಯನ್ನು ತಮ್ಮದೇ ಆದ ಸಹಜ-ಸರಳ ನುಡಿಗಣದಲ್ಲಿ ನುಡಿಯುವ ಪರಿ ಅವರ ಸೃಜನಶೀಲತೆಯ ಪ್ರತೀಕ.

ಗ್ರಾಮೀಣ ಪ್ರತಿಭೆಯನ್ನು ಪ್ರತಿಬಿಂಬಿಸುವ ಇಂತಹ ಹಲವಾರು ತ್ರಿಪದಿಗಳು ಬೇಗು-ಬೆಳಗುಗಳಲ್ಲಿ ಭವ್ಯ ದೇವಾಲಯದ ಕಣ ಕಣಗಳಲ್ಲಿ ಪ್ರತಿಧ್ವನಿಸುತ್ತವೆ. ಮುಗ್ಧ ಭಕ್ತರ ಸಾಮೂಹಿಕ ಪ್ರಾರ್ಥನೆಯ ದ್ಯೋತಕವಾಗಿ ದೇವಸೂಗೂರಿನ ಸೂಗೂರೇಶ್ವರ ದೇವಸ್ಥಾನಕ್ಕೆ 12ನೆಯ ಶತಮಾನದ ಐತಿಹ್ಯವುಂಟು.

ಸಾಹಿತಿ ಸಂಶೋಧಕ ಜ.ಚ.ನಿಯವರ ಕ್ರಿ.ಶ. 10ನೆಯ ಶತಮಾನದ ಪೂರ್ವಾರ್ಧದಿಂದ ಶ್ರೀಶೈಲ ಪೀಠದ ಪರಂಪರೆಯವರೇ ಕಾಶ್ಮೀರದ ಮಾಂಡವ್ಯಪುರದ (ಸವ್ವಾಲಕ್ಷ) ಅರಸರ ಕುಲಗುರುಗಳಾಗಿದ್ದರೆಂದು ತಿಳಿದು ಬರುತ್ತದೆ. ಕ್ರಿ.ಶ. 1160ರಲ್ಲಿ ಆಳುತ್ತಿದ್ದ ಮಹದೇವ ಅರಸನಿಗೆ ಶ್ರೀಶೈಲ ಪೀಠದ ಪರಂಪರೆಯ ಚೆನ್ನವೀರ ಗುರುಗಳು ರಾಜಗುರುಗಳಾಗಿದ್ದರೆಂದು ಚರಿತ್ರೆ ಹೇಳುತ್ತದೆ.

ಕ್ರಿ.ಶ. 1763ರ ಯಾದಗಿರಿ ತಾಲ್ಲೂಕಿನ ಕೋಳೂರಿನ ಶಂಕರ ಕವಿ ರಚಿಸಿದ ಚೋರ ಬಸವೇಶ್ವರ ಕಾವ್ಯದನ್ವಯ ಕಾಶ್ಮೀರದ ಮಹದೇವ ಅರಸು, ಮಡದಿ ಮಹಾದೇವಿಯೊಂದಿಗೆ ನಿತ್ಯವೂ ಆರು ಸಾವಿರ ಜಂಗಮಾರ್ಚನೆ ಮಾಡುವ ವ್ರತದಲ್ಲಿದ್ದರು. ಅದೇ ಸಮಯದಲ್ಲಿ ಕಲ್ಯಾಣದ ಬಸವಣ್ಣನವರು ಒಂದು ಲಕ್ಷ ತೊಂಬತ್ತಾರು ಸಾವಿರ ಜಂಗಮರಿಗೆ ಅರ್ಚಿಸುವ ವಿಚಾರದಲ್ಲಿದ್ದರು. ಅವರಿಗೆ ಆರುಸಾವಿರ ಜಂಗಮರ ಅವಶ್ಯಕತೆಯಿತ್ತು. ಕಾಶ್ಮೀರದ ಮಹದೇವರಸರಲ್ಲಿ ಆರು ಸಾವಿರ ಜಂಗಮರಿರುವುದನ್ನು ಅರಿತ ಬಸವಣ್ಣ ಕಾಶ್ಮೀರಕ್ಕೆ ಕೋರಿಶೆಟ್ಟಿ ವೇಷದಲ್ಲಿ ಹೋಗಿ, ಆರು ಸಾವಿರ ಜಂಗಮರನ್ನು ಕಲ್ಯಾಣಕ್ಕೆ ಕರೆತಂದನೆಂದು ಈ ಕಾವ್ಯ ಹೇಳುತ್ತದೆ.

ಬಸವಣ್ಣನವರು ಕಾಶ್ಮೀರಕ್ಕೆ ಹೋಗುವ ಮುನ್ನ ಅವರ ಆರಾಧ್ಯ ದೈವ ಕೂಡಲ ಸಂಗಮದೇವ, ಶರಣೆ-ನೀಲಾಂಬಿಕೆ ಸ್ವಪ್ನದಲ್ಲಿ ದರುಶನ ನೀಡಿ, ಕಾಶ್ಮೀರದ ಆರು ಸಾವಿರ ಜಂಗಮರಿಗೆ ಮೊಸರನ್ನ ಬಾನದ ಬುತ್ತಿಯನ್ನು ಸುಮಧುರವಾಗಿ ಮಾಡಿ ಕಟ್ಟುವಂತೆ ಆಜ್ಞಾಪಿಸಿದರಂತೆ. ಮಾತಿಗೆ ಸಮರ್ಥನಾ ರೂಪದಲ್ಲಿ ಆ ದೇವಸೂಗೂರಿನಲ್ಲಿ ಕಂಗೊಳಿಸುವ ಸೂಗೂರೇಶ್ವರ ಕೇವಲ ಮೂರ್ತಿಯಲ್ಲ, ಆರು ಸಾವಿರ ಜಂಗಮರನ್ನು ತನ್ನೊಳಗೆ ಅಡಗಿಸಿಕೊಂಡ ಆ ಮಹಿಮಾ ಪುರುಷನಿಗೆ ಅರ್ಪಿತವಾಗುತ್ತಿರುವುದು ಮೊಸರನ್ನ ಬಾನದ ಎಡೆ ಇಂದಿಗೂ ನಿತ್ಯ ಸಾಕ್ಷಿ.

ಬಸವಣ್ಣನ ಅಪೇಕ್ಷೆಯಂತೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಅಮರ ಗಣಂಗಳಿಗೆ ಕ್ರಿಯಾಮೂರ್ತಿ ಆಗಲು ಕಲ್ಯಾಣಕ್ಕೆ ಆಗಮಿಸಿದರು ಚೆನ್ನವೀರ ಚರಶರಣರು.

ಅನುಭವ ಮಂಟಪದಲ್ಲಿ ಅಲ್ಲಮಪ್ರಭು ಅಂತರಂಗದ ಅರಿವಾದಂತೆ ಚೆನ್ನವೀರ ಶರಣರ ಅಂತರಂಗದ ಕ್ರಿಯೆಯಾದ.

ಶರಣ ಕವಿಗಳಾದ ಹರಿಹರ ಚಾಮರಸ, ರಾಘವಾಂಕರು ಅನುಕ್ರಮವಾಗಿ ಬಸವ, ಅಲ್ಲಮ, ಸಿದ್ಧರಾಮರ ಬಗ್ಗೆ ಬೆಳಕು ಚೆಲ್ಲಿದಂತೆ ಯಾರೂ ಚೆನ್ನವೀರರ ಬಗ್ಗೆ ಸಾಹಿತ್ಯ ಸೃಷ್ಟಿ ಮಾಡದೇ ಇರುವುದು ಬಹುಶಃ ಆತನ ಬಗ್ಗೆ ಅವರಿಗೆ ಮೂಲಾಧಾರಗಳು ದೊರಕದಿರುವದೇ ಕಾರಣವಿರಬಹುದು.

ಕಲ್ಯಾಣದ ಕ್ರಾಂತಿಯ ಆ ನಂತರ ಶರಣ ಸಮೂಹ ಮೂರು ಪಂಗಡಗಳಾಗಿ ಅಲ್ಲಮಪ್ರಭು, ಅಕ್ಕ ಮಹಾದೇವಿ ಶ್ರೀಶೈಲಕ್ಕೆ, ಚೆನ್ನಬಸವಣ್ಣ ಉಳುವಿಗೆ, ಸಿದ್ಧರಾಮ ಸೊನ್ನಲಾಪುರಕ್ಕೆ ಹೋಗಿ ನೆಲೆಸಿದಂತೆ. ಚೆನ್ನವೀರ ಶರಣರ ಶಿಷ್ಯ ಗಬ್ಬೂರಿನ ಬಿಬ್ಬೆ ಬಾಚರಸರೊಂದಿಗೆ ಕಲ್ಯಾಣದಿಂದ ರಾಯಚೂರಿನ ಗಬ್ಬೂರಿಗೆ ಆಗಮಿಸಿದರು.

ಗಬ್ಬೂರಿಗೆ ಆಗಮಿಸಿದ ಚೆನ್ನವೀರರು ಇಷ್ಟ ಲಿಂಗೋಪಾಸನೆಗೆ ಆದ್ಯತೆ ನೀಡಿ, ಜಾತಿ, ಮತ, ಪಂಥ ಅಸ್ಪೃಶ್ಯತೆಗಳನ್ನು ಹೋಗಲಾಡಿಸುವ, ಸಕಲ ಮಾನವ ಜನಾಂಗಕ್ಕೆ ಧರ್ಮದ ಬೋಧನೆ ಮಾಡಿ, ಸ್ತ್ರೀ ಸಮುದಾಯಕ್ಕೆ ಸ್ವಾತಂತ್ರ್ಯ ಸಮಾನತೆಗಳನ್ನು ಒದಗಿಸಿ, ಪ್ರಸಾದ, ಕಾಯಕ ದಾಸೋಹಗಳ ಮೂಲಕ ವೃತ್ತಿ ಗೌರವವನ್ನು ಸಾಧಿಸಿದರು. ಮೇಲು-ಕೀಳುಗಳ ಅಂತರ ತೊಡೆದು ಹಾಕಿ ಸಾಮಾಜಿಕ ಭದ್ರತೆಗೂ, ರಾಜಕೀಯ ಶಾಂತಿಗೂ ನಾಂದಿ ಹಾಡಿದರು. ಇದೇ ಸಂದರ್ಭದಲ್ಲಿ ಬಂದೇನವಾಜ್ ಎನ್ನುವ ಮುಸ್ಲಿಂ ಸಂತ ಚೆನ್ನವೀರರ ವಿದ್ವತ್ತು, ವ್ಯಕ್ತಿತ್ವಕ್ಕೆ ಮಾರುಹೋಗಿ ತನ್ನ ಕೊರಳೊಳಗಿನ ಲಾಡಿಗಳನ್ನು ಗುರುಪಾದಕ್ಕೆ ಅರ್ಪಿಸಿ, ಅವರಿಂದ ಕಾವಿ ವಸ್ತ್ರವನ್ನು ಆಶೀರ್ವಾದ ರೂಪದಲ್ಲಿ ಸ್ವೀಕರಿಸಿ ಧನ್ಯನಾದ. ಭಕುತರು ಪ್ರೀತಿಯಿಂದ ಕೊಡುವ ಕಾಣಿಕೆ ಶಿವನಿಗೂ ತೃಪ್ತಿ ಎಂದೆನುತ್ತ ಆ ಲಾಡಿಗಳನ್ನು ಗುರು ಚೆನ್ನವೀರರು ಕೊರಳೊಳಗೆ ಧರಿಸಿದರು. ಪ್ರೀತಿಯ ಶಿಷ್ಯನ ನಿಷ್ಕಲ್ಮಷ ಮನಸ್ಸಿನ ಕುರುಹಾಗಿ, ಅದಕ್ಕೆ ಸಾಕ್ಷಿಯಾಗಿ ಇಂದಿಗೂ ಕಲಬುರ್ಗಿಯ ಬಂದೇನವಾಜ ದರ್ಗಾದ ಗೋರಿಯ ಮೇಲೆ ಹಾಕುವ ರೇಷ್ಮೆ ವಸ್ತ್ರದ ಕೆಳಭಾಗದಲ್ಲಿ ಕಾವಿ ಬಣ್ಣದ ಬಟ್ಟೆ ಹಾಕುತ್ತಿದ್ದು, ಮುಸ್ಲಿಂ ಸಂತನು ಚೆನ್ನವೀರ ಗುರುಗಳಿಗೆ ನೀಡಿದ ಲಾಡಿಯ ಸಂಕೇತವಾಗಿ ಚೆನ್ನವೀರ ಸ್ವಾಮಿಗಳ ಭಕ್ತವೃಂದ ಲಿಂಗದ ಜೊತೆ ಲಾಡಿಯನ್ನು ಕೊರಳೊಳಗೆ ಧರಿಸಿಕೊಳ್ಳುತ್ತಿರುವುದು ಇಂದಿಗೂ ಕಂಡು ಬರುತ್ತಿರುವ ನೈಜ ಸಂಗತಿ. ಇದೊಂದು ಭಾವೈಕ್ಯ ಮನೋಭಾವದ ಸಂಕೇತ. ಹಿಂದೂ ಮುಸ್ಲಿಂ ಐಕತ್ಯೆಯ ಸಾದೃಶ್ಯ.

ಕಾಲಾನಂತರದಲ್ಲಿ ಕಲ್ಯಾಣದ ಘಟನೆಗಳು ಗಬ್ಬೂರಿನಲ್ಲಿ ಮರುಕಳಿಸುತ್ತಿರುವ ಸೂಚನೆಗಳು ಕಂಡು ಬಂದ ಕಾರಣ, ಚೆನ್ನವೀರರು ತಾವಿನ್ನು ಗಬ್ಬೂರಿನಲ್ಲಿ ಇರುವುದು ಒಳಿತಲ್ಲವೆಂದು ನಿರ್ಧರಿಸಿ ಗಬ್ಬೂರಿನ ನಾಗಭೂಷಣನ ಭಾವಿಯಲ್ಲಿ ರಂಗೋಲಿ ಪುಡಿಯಿಂದಾವೃತನಾದ ವೀರಭದ್ರೇಶ್ವರ ಮೂರ್ತಿಯಲ್ಲಿ ತಮ್ಮ ಆರುಸಾವಿರ ಜಂಗಮರು ಮತ್ತು ಶಿಷ್ಯ ಬಿಬ್ಬೆ ಬಾಚರಸರೊಂದಿಗೆ ಅಂತರ್ಧಾನರಾದರೆಂದು ಸ್ಥಳ ಪುರಾಣ ವಿವರಿಸುತ್ತದೆ.

ಕೆಂಚವೀರಯ್ಯ ಆನಂದ ರಾಯ್ಯ ಸುಗೂರಿನ ಜಂಗಮರು. ಅವರ ಕಾಯಕ ರುಮಾಲು ಮಾರುವುದು. ರುಮಾಲದಯ್ಯ ನವರೆಂದೇ ಕರೆಯಿಸಿಕೊಳ್ಳುತ್ತಿದ್ದ ಆ ಜಂಗಮ ಸಹೋದರರು ತಮ್ಮ ಕಾಯಕ ಮಾಡುತ್ತ ಗಬ್ಬೂರಿಗೆ ನಡೆದರು. ಅವರಿಗೆ ನಾನು ಸುಗೂರಿಗೆ ಬರುವೆ ನನ್ನನ್ನು ಕರೆದುಕೊಂಡು ಹೋಗುವಿರಾ ಎಂದು ಗುರು ಚೆನ್ನವೀರರು ಅನುಭೂತಿ ರೂಪದಲ್ಲಿ ನುಡಿದ ನುಡಿ ಆನಂದ ನೀಡಿತು. ಅದಕ್ಕೆ ಸಹೋದರರೀರ್ವರೂ ತ್ರಿಕಾಲ ಪೂಜೆ ಸಲ್ಲಿಸುವುದಾಗಿ ಭಾಷೆ ಕೊಟ್ಟು ಗುರುವನ್ನು ಸೂಗೂರಿಗೆ ಕರೆ ತಂದರು.

ಗಬ್ಬೂರಿನಿಂದ ಸೂಗೂರಿಗೆ ಜಂಗಮ ಸಹೋದರರೊಂದಿಗೆ ಆಗಮಿಸಿದ ಚೆನ್ನವೀರರಿಗೆ ಸೂಗೂರಿನ ಆರಾಧ್ಯ ದೇವತೆ ಶಕ್ತಿ ರೂಪಿಣಿ ನಾಗರ ಯಲ್ಲಮ್ಮ ತಾನು ನೆಲಸಿದ್ದ ಸ್ಥಾನವನ್ನು ಚೆನ್ನವೀರರಿಗೆ ಕೊಟ್ಟು, ತಾನು ಗ್ರಾಮದ ಪೂರ್ವಕ್ಕೆ ನಡೆದಳು. ಸ್ವಾಮಿ ದೇವ ಬಂದ ಸೂಗುರಿಗೆ ಸೂಗೂರು, ದೇವಸೂಗೂರು ಆಯಿತು. ದೇವಸೂಗೂರಿನ ಪುರಾತನ ಇತಿಹಾಸವನ್ನು ಬೀರುವ ಭವ್ಯವಾದ ಘಂಟೆಯ ಮೇಲೆ ತೆಲುಗು ಲಿಪಿಯ ಬರಹವಿದ್ದು ಅದರ ಕನ್ನಡ ಭಾವಾನುವಾದ "ಸನ್ 1136 ವ್ಯಯನಾಮ ಸಂವತ್ಸರ ಮಾಘ ಬಹುಳ ಚತುರ್ದಶಿ ದಿವಸ ಕರಕಗಿರಿಯ ವೀರಣ್ಣ ಶೆಟ್ಟಿಯಿಂದ ಶ್ರೀ ಸೂಗೂರು ವೀರಭದ್ರಸ್ವಾಮಿಗೆ ಈ ಘನ ಘಂಟೆ ಸಮರ್ಪಿತವಾಗಿದೆ" ಎಂದು ನಮೂದಿತವಾಗಿದ್ದು ಈ ದೇವಸ್ಥಾನದ ಗರ್ಭಗುಡಿಯು ರಾಯಚೂರು ಕೋಟೆಯ ನಿರ್ಮಾಣಕ್ಕೂ ಪೂರ್ವಕಾಲದ್ದಾಗಿದ್ದು, ಸುಮಾರು 800 ವರ್ಷಗಳಿಗಿಂತಲೂ ಪುರಾತನವಾದದ್ದೆಂದು ಆಧಾರಗಳ ಮೂಲಕ ತಿಳಿದು ಬರುತ್ತದೆ.

ಮೂಲತಃ ಪುಟ್ಟ ಗುಡಿಯಾಗಿದ್ದ ಈ ದೇವಾಲಯವನ್ನು ಚೆನ್ನವೀರ ಗುರುಗಳ ಕೃಪಾಶೀರ್ವಾದದಿಂದ ತನ್ನ ಕುರೂಪವನ್ನು ಕಳೆದುಕೊಂಡು ಸುಂದರನಾದ ಕೊಲ್ಲೂರ ಬಸವಂತ ಪ್ರಭು ಗರ್ಭಗುಡಿಯನ್ನು ನಿರ್ಮಿಸಿ ಸೇವೆ ಸಲ್ಲಿಸಿದರೆ, ಬಡವನಾದ ಆದವಾನಿ ಬಸವಪ್ಪ ಭಾಗ್ಯವಂತನಾದ ಶಕೆ 1850 ನೇ ವಿಭವ ನಾಮ ಸಂವತ್ಸರದ ಕಾರ್ತಿಕ ಶುದ್ಧ ಪಂಚಮಿ ಅಂದರೆ 1928 ನೇ ಇಸ್ವಿ ನವ್ಹೆಂಬರ್ 17 ನೇ ತಾರೀಖಿನಂದು ಸುತ್ತ ಮಂಟಪವನ್ನು ನಿರ್ಮಿಸಿ ಧನ್ಯನಾದ. ಸ್ವಾಮಿ ಚೆನ್ನವೀರರ ಅಂತರಂಗದ ಭಕ್ತರಲ್ಲಿ ಒಬ್ಬನಾದ ಆದವಾನಿಯ ಎಲೆ ಬಸವಪ್ಪ.

ಮಾರ್ಗಶಿರ ಶುದ್ಧ ಪ್ರತಿಪದದಿಂದ ದಶಮಿ ತಿಥಿಯವರೆಗೂ ನಡೆಯುವ ಜಾತ್ರೆಯಲ್ಲಿ ಮಾರ್ಗಶಿರ ಶುದ್ಧ ಷಷ್ಠಿ ತಿಥಿಯಂದು ಜೋಡು ರಥಗಳ ಉತ್ಸವ ಜರುಗುತ್ತದೆ. ಈ ಹತ್ತು ದಿನಗಳ ವಿಶೇಷ ಕಾರ್ಯಕ್ರಮಗಳಲ್ಲಿ ಕಡುಬಿನ ಕಾಳಗ ರೋಮಾಂಚಕ. ಕಡುಬಿನ ಕಾಳಗ ಸಾಂಕೇತಿಕವಾಗಿ ಪುರುಷ, ಪ್ರಕೃತಿಯ ಸಮ್ಮಿಲನವೆಂದು ಅರ್ಥೈಸುವಂತಿದ್ದು, ಸೃಷ್ಟಿಕ್ರಿಯೆಯ ಕಾರ್ಯವನ್ನು ನಿರೂಪಿಸುತ್ತದೆ. ಈ ಘಟನೆಗೆ ಪೂರಕವಾಗಿ ಅಲಂಕೃತವಾಗಿರುವ ಪಲ್ಲಕ್ಕಿಯ ಎರಡೂ ಬದಿಗೆ ರೂಢಿಯಲ್ಲಿ ಹೇಳುವಂತೆ ಹೆಣ್ಣಿನವರು ಮತ್ತು ಗಂಡಿನವರು ಗುಂಪುಗೂಡಿ ಪಲ್ಲಕ್ಕಿಯನ್ನು ಅತ್ತಿಂದಿತ್ತ ಇತ್ತಿಂದತ್ತ ಎಳೆದಾಡುವ ನೋಟ ರುದ್ರ ಭೀಕರವಾಗಿರುವಂತೆಯೂ, ನಯನ ಮನೋಹರವಾಗಿ ಕಂಡು ಬರುವುದು ಕಡುಬಿನ ಕಾಳಗದ ವೈಶಿಷ್ಟ್ಯ. ಪಲ್ಲಕ್ಕಿ ಸೇವೆಯ ಸಂದರ್ಭದಲ್ಲಿ ಶಹನಾಯಿಯ ದನಿಯಲ್ಲಿ ಕೇಳಿ ಬರುವ ನಾದ-ನಿನಾದ ಹಿಂದುಸ್ತಾನಿ ಸಂಗೀತದಲ್ಲಿ ಭೀಮ ಪಲಾಸ ಆದರೆ

ಕರ್ನಾಟಕ ಸಂಗೀತದಲ್ಲಿ ಅಭೇರಿ ಆನಂದರಾಗ ಜೋಗುಳ ಹಾಡು, ಆ ಲಾಲೀ ಹಾಡಿನ ಮಧುರ ಧ್ವನಿಯ ಆಲಾಪನೆಯೇ ಮರುಷ ಪ್ರಕೃತಿಯ ಲೀಲೆಯೆಂದು ಸೃಷ್ಟಿಯ ಕ್ರಿಯೆಯೆಂದು ಕರೆಯುವುದುಂಟು.

ದೇವಸುಗೂರಿಗೆ ಆಗಮಿಸಿದೊಡನೆಯೇ ಪ್ರಥಮವಾಗಿ ಕಂಡುಬರುವುದು ದಕ್ಷಿಣದ ಮಹಾದ್ವಾರ ದೇವಾಲಯದ ಪೂರ್ವ, ಪಶ್ಚಿಮ ಉತ್ತರ ದಕ್ಷಿಣ ದಿಕ್ಕುಗಳಲ್ಲಿ ನಾಲ್ಕು ಗೋಪುರಗಳಿಂದ ಮಹಾದ್ವಾರಗಳಿಂದ ಚೆಲುವು ಹೊರ ಸೂಸುತ್ತಿವೆ. ಪ್ರತಿಯೊಂದು ಮಹಾದ್ವಾರಗಳ ಮೇಲ್ಭಾಗದಲ್ಲಿ ಶಾಸ್ತ್ರ ಪುರಾಣ ವೇದ ಆಗಮ, ರಾಮಾಯಣ, ಮಹಾಭಾರತ ಕಾವ್ಯಗಳ ಕಥಾ ವಸ್ತುಗಳನ್ನು ಒಳಗೊಂಡ ಶಿಲ್ಪಕಲೆಯ ವೈಖರಿ ಭವ್ಯವಾದ ದಕ್ಷಿಣಾಮೂರ್ತಿ ಪರಶಿವ ಹಾಗೂ ಗರ್ಭಗುಡಿಯ ಮೇಲ್ಭಾಗದಲ್ಲಿ ಸ್ವಾಮಿ ದೇವಸೂಗೂರೇಶ್ವರರ ದಿವ್ಯ ಚರಿತ್ರೆಯನ್ನು ಪ್ರತಿಬಿಂಬಿಸುವ ಸುಂದರ ಮೂರ್ತಿಗಳು ಮುದ ನೀಡುತ್ತವೆ.

ದೇವಸೂಗೂರೇಶ್ವರ ಸ್ವಾಮಿಯ ರಥದ ರಚನೆ ಅಡಿಯಿಂದ ಮುಡಿಯುವರೆಗೂ ಶಾಸ್ತ್ರೀಯ ಬದ್ಧವಾದ ಕೆತ್ತನಾ ಮೂರ್ತಿಗಳಿಂದ ಆವೃತ್ತವಾಗಿದೆ. ಶರಣರ, ದಾಸರ ಸೂರ್ಯ ಚಂದ್ರರ ಸುಂದರ ಮೂರ್ತಿಗಳಲ್ಲದೇ ವಿಶೇಷವಾಗಿ ಸಂಗೀತ ರಾಗ ಮೇಳವೆಂಬ 34 ಕಂಚಿನ ಘಂಟೆಗಳು ಸಂಗೀತ ಲಯ ಬದ್ಧತೆಯಿಂದ ಕೂಡಿವೆ. ಇವುಗಳನ್ನು ಕ್ರಮವಾಗಿ ಬಾರಿಸಿದಾಗ ಸಪ್ತ ಸ್ವರಗಳ ಧ್ವನಿ ಹೊರಡುವುದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅನುಭವಾಗುತ್ತದೆ. *(ಎ.ಎಚ್.)*

ಸೂಗೂರೇಶ್ವರ ದೇವಸ್ಥಾನ: ರಾಯಚೂರು ತಾಲ್ಲೂಕಿನ ಒಂದು ಕ್ಷೇತ್ರ. ಇಲ್ಲಿಯ ಸೂಗೂರೇಶ್ವರ ದೇವಸ್ಥಾನ ಪ್ರಸಿದ್ಧವಾಗಿದೆ. ರಾಯಚೂರು ತಾಲ್ಲೂಕಿನಲ್ಲಿರುವ ದೇವಸಗೂರು ಗ್ರಾಮದ ಈ ದೇವಸ್ಥಾನಕ್ಕೆ ಸುಮಾರು 12ನೇ ಶತಮಾನದ ಐತಿಹಾಸವಿದೆ. ಈ ದೇವಸ್ಥಾನ ಭಕ್ತಿಯ ನೆಲೆಬೀಡು. ದೇವಸ್ಥಾನದ ನಾಲ್ಕು ದಿಕ್ಕಿಗೂ ಗೋಪುರದ ಜೊತೆಗೆ ಮಹಾದ್ವಾರಗಳು ಇವೆ. ಒಳಗಡೆ ಗರ್ಭಗುಡಿ ನೋಡುಗ ಭಕ್ತರ ಕಣ್ಮನ ಸೆಳೆಯುತ್ತದೆ. ದೇವಸ್ಥಾನಕ್ಕೆ ಬರುವ ಭಕ್ತರಿಗಾಗಿ ವಾಸಿಸಲು ಸುಸಜ್ಜಿತ ಕೊಠಡಿ ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಹೊರಗಡೆ ಸೂಗೂರೇಶ್ವರ ದೇವಸ್ಥಾನದ ವಿಶಾಲ ಸ್ಥಳವಿದ್ದು, ಗುಡಿಯ ಸುತ್ತಲೂ ಉದ್ಯಾನವನ ನಿರ್ಮಿಸಿರುವುದರಿಂದ ಭಕ್ತಾದಿಗಳಿಗೆ ಇದೂ ಉತ್ತಮ ತಾಣವಾಗಿದೆ.

ಸೂಗೂರೇಶ್ವರನ ದರ್ಶನಕ್ಕೆ ಒಳಗಡೆ ಹೋಗುತ್ತಿದ್ದಂತೆಯೇ ಮೊದಲಿಗೆ ಗಜಮುಖನ ದೇವಸ್ಥಾನ, ಈಶ್ವರನ ದೇವಸ್ಥಾನ ಆನಂತರ ಪ್ರದಕ್ಷಿಣೆ ಹಾಕುವಾಗ ಸೂಗೂರಿಗೆ ಬಂದು ನೆಲೆಸಿದ ನಂತರ ಮಾಡಿದ ಪವಾಡ (ಲೀಲೆ)ಗಳನ್ನು ಮೂರ್ತಿಯ ಮೂಲಕ ಗರ್ಭಗುಡಿಯ ಮೇಲೆ ಛಾವಣಿಯ ಸುತ್ತಲೂ ನಿರ್ಮಿಸಿದ ಪವಾಡ ಮಂಟಪಗಳು. ವಿವಾಹಗಳು ನಡೆಯಲು ಶಿವಪಾರ್ವತಿಯ ಮಂಟಪ ಶಿವಾನುಭವ ಮಂಟಪ, ದೇವರ ಎದುರಿಗೆ ನಿರ್ಮಿಸಲಾಗಿದ್ದು. ಬೆಳ್ಳಿಯ ಹೊದಿಕೆಯ ನಂದೀಶ್ವರ ವಿಗ್ರಹ ಹೀಗೆ ನೋಡುಗ ಭಕ್ತರ ಕಣ್ಮನ ಸೆಳೆಯುತ್ತಿದೆ.

ಹಿನ್ನೆಲೆ: ದೇವದುರ್ಗ ತಾಲ್ಲೂಕಿನ ಗಬ್ಬೂರು ಗ್ರಾಮದ ನಾಗಭೂಷಣ ಬಾವಿಯೊಳಗಿನಿಂದ ಉದ್ಭವಿಸಿದ ಮೂರ್ತಿಯೇ ಸೂಗೂರೇಶ್ವರ. ಅಲ್ಲಿ ಇರುವ ಗುಡ್ಡದ ಮೇಲೆ ನೆಲೆಸಿದ. ಆನಂತರದ ದಿನಗಳಲ್ಲಿ ತನಗೆ ದಿನನಿತ್ಯ ಪೂಜೆ ಪುನಸ್ಕಾರವಿಲ್ಲದ್ದರಿಂದ ಸೂಗೂರು ಗ್ರಾಮದ ಜವಳಿ ವ್ಯಾಪಾರಿಗಳಾದ ಆನಂದ ವೀರಯ್ಯ, ಕೆಂಚೆ ವೀರಯ್ಯ ಮೂಲಕ ಸೂಗೂರಿನ ಜನರೊಂದಿಗೆ ಸೂಗೂರು ಗ್ರಾಮ ದೇವಸುಗೂರು ಎಂದು ಹೆಸರಾಯಿತು.

ದಾಸೋಹ: ಸೂಗೂರೇಶ್ವರನ ಬಳಿಗೆ ಬರುವ ಭಕ್ತರಿಗೆ ಪ್ರಸಾದ ರೂಪದಲ್ಲಿ 'ಬಿಬ್ಬಿ ಬಾಚರಸ' ಎಂಬ ದಾಸೋಹ ನಿರ್ಮಿಸಲಾಗಿದೆ. ಬಿಬ್ಬಿ ಬಾಚರಸ ದಾಸೋಹ ಅಚ್ಚುಕಟ್ಟಿನಿಂದ ನೂರಾರು ಭಕ್ತ ಸಮೂಹ ಕುಳಿತುಕೊಂಡು ಊಟ ಮಾಡುವ ವ್ಯವಸ್ಥೆ ಸುಸಜ್ಜಿತವಾಗಿದೆ. ದಾಸೋಹದಲ್ಲಿ ವಿವಾಹಗಳು ಮಾಡಲಿಕ್ಕೂ ತುಂಬಾ ಅನುಕೂಲಕರವಾಗಿದೆ.

ಪೂಜೆಗಳು: ಸೂಗೂರೇಶ್ವರನಿಗೆ ದಿನನಿತ್ಯ ತ್ರಿದಶಾರ್ಚಕ ನೇತೃತ್ವದಲ್ಲಿ ತ್ರಿಕಾಲ ಪೂಜೆ, ಕಾರ್ತಿಕ ಮಾಸದಲ್ಲಿ ಒಂದು ತಿಂಗಳ ಕಾಲ ಪಲ್ಲಕ್ಕಿ ಸೇವೆ, ಲಕ್ಷ ದೀಪೋತ್ಸವ, ಬೆಳ್ಳಿಯ ರಥೋತ್ಸವ, ಶ್ರಾವಣ ಸೋಮವಾರ ದೈವ ರುದ್ರಾಭಿಷೇಕ, ಕೊನೆಯಲ್ಲಿ ಕಡಬಿನ ಕಾಳಗ ಮತ್ತು ಛಟ್ಟಿಯ ಅಮವಾಸ್ಯೆಯ ಐದು ದಿನ ಲಕ್ಷಾಂತರ ಭಕ್ತರ ಸಮೂಹದಲ್ಲಿ ಜೋಡು ರಥೋತ್ಸವ ನಡೆಯುತ್ತದೆ. ಹೀಗೆ ದಿನನಿತ್ಯ ವಿಶೇಷ ಪೂಜೆಗಳು, ಲೀಲೆಗಳು ನಡೆಯುತ್ತಿರುತ್ತವೆ.

ಮಾರ್ಗಶಿರ ಶುದ್ಧ ಷಷ್ಠಿಯಂದು ಸಾಯಂಕಾಲ 5.30 ಕ್ಕೆ ಸಕಲ ಬಿರುದಾವಳಿ ಮಂಗಳ ವಾದ್ಯಗಳೊಂದಿಗೆ ಸಾಗುವ ಜೋಡು ರಥೋತ್ಸವದ ವೈಭವ ನೋಡಲು ನಾಡಿನ ನಾನಾ ಭಾಗದಿಂದ ಭಕ್ತಜನ ಸಾಗರ ಹರಿದು ಬರುತ್ತಿದೆ. ಶೈವ ಸಂಸ್ಕೃತಿ ವೀರ ವಿಜಯೋತ್ಸವ ನಡೆಯುತ್ತದೆ. *(ಎಂ.ಎಂ.ಎಸ್.)*

ಸೂಫಿಗಳು: ಅನುಭಾವಿ, ಯೋಗಿ, ಸಿದ್ಧಪುರುಷರು. ಸೂಫಿ ಶಬ್ದದ ಮೂಲ ಕುರಿತು ಚರ್ಚೆ ನಡೆದಿದೆ. ಗ್ರೀಕಿನ ಸೋಫಿಯಾದಿಂದ ಸೂಫಿ ಪದ ಬಂದಿದೆಂದೂ, ಹೇಳಲಾಗಿದೆ. 'ಸೋಫಿಯಾ'ಯೆಂದರೆ ಜ್ಞಾನ ಎಂದರ್ಥ. ಅರಬ್ಬೀಯಲ್ಲಿ ಸುಫ್ಫಾದಿಂದ ಸೂಫಿ ಅಂದರೆ 'ಜಗುಲಿ' ಎಂದರ್ಥ. ಜಗುಲಿಯಲ್ಲಿ ವಾಸಿಸುವ ಎಂದೂ, ಸೂಫ್ ಎಂದರೆ 'ಉಣ್ಣೆ'ಯೆಂದೂ ಉಣ್ಣೆಯ, ಉಡುಪು ಧರಿಸುವವನೆಂದೂ ಹೇಳುತ್ತಾ ಬಂದಿದ್ದಾರೆ.

ಇವರು ಪ್ರವಾದಿ ಮಹಮ್ಮದ್‌ನ ದೀಕ್ಷಾಸಿದ್ಧಾಂತವನ್ನು ಪ್ರತಿಪಾದಿಸುವುದರಿಂದ ಈತ ಮೊದಲ ಸೂಫಿ. ಒಬ್ಬನ ಹೊರತು ದೇವರಿಲ್ಲ ಎಂಬುದು ಸೂಫಿಗಳ ಮೂಲಮಂತ್ರ. ಸೂಫಿಗಳಲ್ಲಿ ಕೇವಲ ಯೋಗಿಗಳಿಲ್ಲ. ಸಂಸಾರಿಗಳು, ಕವಿಗಳು, ವಿರಕ್ತರು, ಶಾಸ್ತ್ರಕಾರರು, ಸಂಗೀತಗಾರರೂ ಇದ್ದಾರೆ. ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಬಂದೇ ನವಾಜ್‌ನಂಥ ಸೂಫಿಗಳು ತತ್ತ್ವಜ್ಞಾನಿಗಳಾಗಿ ಹೆಸರು ಮಾಡಿದ್ದಾರೆ. ಈ ಭಾಗದ ಆದಿಲ್‌ಶಾಹಿ ದೊರೆಯೊಬ್ಬ ತನ್ನನ್ನು 'ಸೂಫಿ' ಎಂದು ಸಂಬೋಧಿಸಿಕೊಂಡಿದ್ದಾನೆ.

'ಸೂಫಿಗಳು' ಬಾಹ್ಯದಿಂದ ಧಾರ್ಮಿಕ ಆಚರಣೆ ಮತ್ತು ಸಂಸ್ಕಾರಗಳಿಗಿಂತ ಆಂತರಿಕ ಆತ್ಮದ ಚಿಂತನೆಗಳಿಗೆ ಹೆಚ್ಚು ಮಹತ್ವ ನೀಡುತ್ತಾರೆ. ಸೂಫಿಗಳನ್ನು ಭಾರತದಲ್ಲಿ ಮೂರುಪಂಥಗಳಲ್ಲಿ ಗುರುತಿಸುತ್ತಾರೆ. 1. ಸಾಂಪ್ರದಾಯಿಕ ಪಂಥ–ಇವರು ಮತಾಂತರವನ್ನು ನಂಬುವವರು ಹಾಗೂ ಧರ್ಮಗ್ರಂಥ ಕುರಾನ್ ಶ್ರೇಷ್ಠವೆಂದು ಹೇಳುವವರು. 2. ವೇದಾಂತ ಪಂಥ ಇವರು ವೇದಾಂತಕ್ಕೆ ಯಾವುದೇ ಮಹತ್ವ ನೀಡುವವರಲ್ಲ, ಅಂದರೆ ದೇಶ, ಜಾತಿ, ಧರ್ಮಗಳಲ್ಲಿ ಅಂತರವನ್ನು ಎಣಿಸುವವರಲ್ಲ. 3. ಜನಪ್ರಿಯ ಪಂಥ–ಇವರು ಹೆಚ್ಚು ಶಿಕ್ಷಣ ಪಡೆದವರಲ್ಲ ಜನಾಕರ್ಷಣೆಗಾಗಿ ಮೂಢನಂಬಿಕೆಗಳನ್ನು ಸಂಗ್ರಹಿಸಿ ಬೋಧನೆ ಮಾಡುವವರು.

ಸೂಫಿಗಳು ಪರಮಾತ್ಮ ಏಕೈಕ ವಸ್ತು, ಆತ್ಮ ವಿನಾಶ, ಕೆಡುಕಿನ ಸಮಸ್ಯೆ, ನೋವಿನ ಸಂಗತಿ, ಪ್ರೀತಿ, ಮಾನವೀಯತೆ, ದೈವೀಕತೆ, ಸೃಷ್ಟಿಯ ಉದ್ದೇಶ ಮುಂತಾಗಿ ಚಿಂತಿಸುತ್ತಾರೆ. ಈ ಚಿಂತನೆಗಳನ್ನು ಗುಲಬರ್ಗಾದ ಬಂದೇನವಾಜ, ಬಿಜಾಪುರದ ಖಾಜಾ ಅಮಿನುದ್ದೀನ್, ಶಿಶುನಾಳ ಶರೀಫ, ಸಾಹಿಬಣ್ಣ ತಾತ, ಚನ್ನೂರ ಜಲಾಲಸಾಬ, ಗುರು ಖಾದರಿಪೀರ ಇವರ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಸೂಫಿಗಳಾದ ಚಂದಾಸಾಹೇಬನ ಗದ್ದುಗೆಯ ಕೆಳಗೆ ಸಂತ ದಿಗ್ಗಿ ಸಂಗಮನಾಥನದು, ಖಾಜಾ ಬಂದೇನವಾಜ್ ಕೆಳಗೆ ಸಾವಳಗಿ ಶಿವಲಿಂಗನದು, ಮಹಮ್ಮದ್ ಪೈಗಂಬರ್ ಕೆಳಗೆ ಮೋನಪ್ಪಯ್ಯನ ಗದ್ದುಗೆಗಳಿರುವುದು ವಿಶೇಷ. ಇವರೆಲ್ಲ ಗೆಳೆಯರಾಗುತ್ತಾರೆ. ಗುರು–ಶಿಷ್ಯರಾಗುತ್ತಾರೆ. ಇದು ಬಹುತೇಕ ಕರ್ನಾಟಕ ಸೂಫಿ–ಸಂತರ ನಡುವಿನ ಭಾವೈಕ್ಯತಾ ಗುಣ.

'ದರ್ಗಾಗಳು' ಸೂಫಿಗಳ ಧಾರ್ಮಿಕ ಆಚರಣೆಯ ಕೇಂದ್ರಗಳಾಗಿವೆ. ಇಲ್ಲಿ ಉರುಸು ಆಚರಣೆಯಲ್ಲಿ ಸಕ್ಕರೆ ಮಾಲ್ದಿ, ಹೂ–ಗಂಧ ಇಟ್ಟು ಲೋಬಾನ ಊದುಗಡ್ಡಿ ಹತ್ತಿಸಿ ಪಾತೆಹಾ ಮಾಡಿಸುತ್ತಾರೆ. ಅನೇಕ ಹರಕೆಗಳ ಸಲ್ಲಿಕೆ ಇಲ್ಲಿ ನೆರವೇರುತ್ತವೆ.

(ಕೆ.ಆರ್.)

ಸೋ

ಸೋಬನ: ಸಂತಾನ ಫಲ ಒದಗಲಿ ಎಂಬ ಶುಭ ಹಾರೈಕೆ. ಬಾಲ್ಯವಿವಾಹ ಪದ್ಧತಿ ಇರುವಾಗ ಮದುವೆಯಾದ ಮೇಲೆ ತವರಿನಲ್ಲಿಯೇ ಹೆಣ್ಣು ಇರುತ್ತಿದ್ದಳು. ಅವಳು ಮೈನೆರೆದ ವಿಷಯ ಗಂಡನ ಮನೆಯವರಿಗೆ ಹೇಳಿ ಕಳುಹಿಸುತ್ತಿದ್ದರು. ಹದಿನಾರನೆಯ ದಿನ ಅಥವಾ ಎರಡು ಮೂರು ತಿಂಗಳ ಅನಂತರ ಈ ಕಾರ್ಯ ಇಟ್ಟುಕೊಳ್ಳುತ್ತಿದ್ದರು. ಈಗ ವಯಸ್ಕರಾದ ಮೇಲೆಯೇ ಮದುವೆಗಳು ಜರುಗುತ್ತವೆ. ಕಾರಣ ಮದುವೆಯ ದಿನದಂದು ಅಥವಾ ಎರಡು ಮೂರು ದಿನಗಳೊಳಗಾಗಿ ಸೋಬನ ಇಟ್ಟುಕೊಳ್ಳುವುದುಂಟು. ಹಳ್ಳಿಯಲ್ಲಿ ಸೋಬನ ಮಾಡುವ ಐದಾರು ದಿನ ಮೊದಲು ಗಂಡ ಹೆಂಡತಿಯರನ್ನು ಸಿಂಗರಿಸಿದ ಮಂಟಪದಲ್ಲಿ ಕೂಡಿಸಿ ಹಾಡಿಸುವರು. ಕೊನೆಯ ದಿನ ತಮ್ಮ ಆಪ್ತ ಬಂಧುಗಳನ್ನು ಊಟಕ್ಕೆ ಕರೆಯುವರು. ಅಳಿಯನಿಗೆ, ಮಗಳಿಗೆ ಒಂದು ಜೊತೆ ಬಟ್ಟೆಯನ್ನು ಹೆಣ್ಣಿನ ತಂದೆಯೇ ತರಬೇಕು. ಹಾಸಿಗೆ ಮಂಚ ಕೂಡ ಕೊಡುವುದುಂಟು. ಹೆಣ್ಣಿಗೆ ಗಂಡನ ಮನೆಯವರು ಸೀರೆ ಕುಪ್ಪಸ ತರುವರು. ಗೋದಿ ಉಡಿಯಕ್ಕಿ ಹಾಕಿ ತೆಂಗಿನ ಫಲಗಳನ್ನು ಉಡಿಯಲ್ಲಿ ಹಾಕುವರು. ಅವಳು ಮೈನೆರೆದಾಗ ಯಾರು ನೀರು ಹಾಕಿರುತ್ತಾರೋ, ಅವಳಿಗೆ ಗಂಡನ ಮನೆಯವರು ಒಂದು ಸೀರೆ ಕೊಡಬೇಕು (ಅದನ್ನು ಮುಟ್ಟೆರದ ಸೀರೆ ಎನ್ನುತ್ತಾರೆ). ಅಂದು ಕೂಡಿಸಿ ಸೋಬಾನೆ ಹಾಡುಗಳನ್ನು ಹಾಡಿ ಆರತಿ ಮಾಡಿ ಗಂಡ ಹೆಂಡತಿಯರ ಹೆಸರು ಕೇಳುವರು. ಆನಂತರ ದೇವರ ಮನೆಯಲ್ಲಿ ದೇವರಿಗೆ ನಮಸ್ಕರಿಸಿ ದಂಪತಿಗಳು ಕೋಣೆ ಪ್ರವೇಶಿಸುತ್ತಾರೆ.

ಈಗೀಗ ಹಳ್ಳಿಗಳಲ್ಲೂ ಮದುಮಕ್ಕಳನ್ನು ಕೂಡಿಸಿ ಹಾಡುವುದು ತುಂಬಾ ಕಡಿಮೆಯಾಗಿದೆ. ಕೆಲವು ಮನೆತನಗಳಲ್ಲಿ ಸೋಬನ ಮಾಡುವ ಸಂಪ್ರದಾಯವೇ ಇರುವುದಿಲ್ಲ. ಮದುವೆಯಾದ ಮೇಲೆ ಶುಭ ದಿನದಂದು ದೇವರಿಗೆ ಹೋಗಿ ಬಂದ ಮೇಲೆ ದಂಪತಿಗಳನ್ನು ಒಂದುಗೂಡಿಸುತ್ತಾರೆ. ಸೋಬನದ ಉದ್ದೇಶ ಮದುವೆಯಾದ ದಂಪತಿಗಳು, ಒಂದಗೂಡುವುದು. ಸಂತಾನವನ್ನು ಪಡೆಯುವುದು. ಒಳ್ಳೆಯ ಗೃಹಸ್ಥರಾಗುವುದಕ್ಕೆ ಅಡಿಪಾಯ ಹಾಕುವುದಾಗಿದೆ.

ಸೋಬಾನೆ ಹಾಡುಗಳು ತುಂಬಾ ವೈವಿಧ್ಯಮಯ ವಾಗಿರುತ್ತವೆ. ಮದುವೆಯ ಇತರ ಯಾವುದೇ ಹಾಡುಗಳಿಗಿಂತ ಸೋಬಾನೆ ಹಾಡುಗಳನ್ನು ಹಾಡುವ ರೀತಿ ಧಾಟಿಗಳಲ್ಲಿ ವೈವಿಧ್ಯತೆ ಇದೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳು ಕಥನ, ಕವನ, ನೀತಿಪದಗಳು, ಹಾಸ್ಯದ ಹಾಡುಗಳು, ಮಹಾಭಾರತದ, ರಾಮಾಯಣದ ಪ್ರಸಂಗಗಳು, ಶರಣರ ಮಹಾತ್ಮೆಯನ್ನು ಎತ್ತಿ ತೋರುವ ಹಾಡುಗಳು, ಹೆಣ್ಣು ಶೀಲ ರಕ್ಷಿಸಿಕೊಂಡ ಪತಿವ್ರತೆಯರ ಕಥೆಗಳು ಇರುತ್ತವೆ. ಸೋಬನದ ಹಾಡುಗಳು ಐದು ಇಲ್ಲವೆ ಒಂಬತ್ತು ಹಾಡಿ ಆನಂತರ ಆರತಿ ಮಾಡಿದ ಬಳಿಕ ಕಾರ್ಯಕ್ರಮ ಮುಗಿಸುತ್ತಾರೆ. *(ವೈ.ಎಸ್.)*

ಸ್ಥಳನಾಮಗಳು: ಸ್ಥಳನಾಮಗಳು ಮಾನವರ ಸಣ್ಣ ನೆಲೆಯಿಂದ ಆರಂಭಿಸಿ ಅತಿದೊಡ್ಡ ಮಾನವ ವಸಾಹತು ನೆಲೆಗಳ ಅರ್ಥವನ್ನು ಹೊಂದಿವೆ. ಸ್ಥಳನಾಮಗಳನ್ನು ಎರಡು ರೀತಿಯಲ್ಲಿ ಅರ್ಥಯಿಸಬಹುದಾಗಿದೆ. ಒಂದು, ಭೌಗೋಳಿಕ ವೈಲಕ್ಷಣವನ್ನು ಸೂಚಿಸುವ ಸಾಮಾನ್ಯಾರ್ಥ. ಈ ಬಗೆಯ ಹೆಸರುಗಳು ಹೆಚ್ಚಾಗಿ ರೂಢನಾಮಗಳ ಸ್ವರೂಪದಲ್ಲಿ ಮಾತ್ರ ಉಳಿಯುತ್ತವೆ. ಎರಡು, ಸಾಂಸ್ಕೃತಿಕ ವೈಶಿಷ್ಟ್ಯವನ್ನು ಸೂಚಿಸುವ ವಿಶೇಷಾರ್ಥ. ಆಯಾ ಜನಸಮುದಾಯವು ನೆಲೆನಿಂತ ಒಂದೊಂದು ಸ್ಥಳದ ವಿಸ್ತೀರ್ಣ, ಅಲ್ಲಿನ ಜನಸಂಖ್ಯೆ ಮುಂತಾದ ಆಧಾರಗಳ ಮೇಲಿಂದ ಅದನ್ನು

ಒಂದು ಹಳ್ಳಿ, ಊರು, ಗ್ರಾಮ, ನಗರ, ಖೇಡ, ಪುರ, ಪಟ್ಟಣ ಎಂದು ಮುಂತಾಗಿ ಕರೆಯಲಾಗುತ್ತದೆ. ಇದರೊಂದಿಗೆ ಆಯಾ ಸ್ಥಳಕ್ಕೆ ಪ್ರಾಪ್ತವಾದ ಒಂದು ರೀತಿಯ ವಿಶಿಷ್ಟ ಘಟಕಗಳು ಬರುತ್ತವೆ. ಇಂಥ ನಿರ್ದಿಷ್ಟ ಹೆಸರುಗಳುಳ್ಳ ಪದಗಳೇ ಸ್ಥಳನಾಮಗಳು. ನಿರ್ದಿಷ್ಟ ಮತ್ತು ವಾರ್ಗಿಕ ಎಂಬೆರಡು ಘಟಕಗಳು ಕೂಡಿ ಸಾಮಾನ್ಯವಾಗಿ ಸ್ಥಳನಾಮಗಳು ಸಿದ್ಧಗೊಳ್ಳುತ್ತವೆ. ಎರಡಕ್ಕಿಂತ ಹೆಚ್ಚು ಘಟಕಗಳು ಇರಬಹುದು ಮತ್ತು ಒಂದೇ ಘಟಕವೂ ಕೂಡ ಅದರಲ್ಲಿರಬಹುದು.

ಅಸ್ಥಳನಾಮಧ್ಯಯನಕ್ಕೆ ದೇಶ ವಿದೇಶಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ದೊರಕಿದೆ. ಭಾರತದಲ್ಲೂ ತಕ್ಕಮಟ್ಟಿಗೆ ಈ ಅಧ್ಯಯನ ನಡೆದಿದೆ. ಕನ್ನಡದಲ್ಲೂ ಈ ವಿಷಯ ಕುರಿತು ಅಧ್ಯಯನವನ್ನು ದೇ. ಜವರೇಗೌಡ, ಶಂಬಾ ಜೋಶಿ, ಸಂಗಮೇಶ ಸವದತ್ತಿಮಠ, ಆರ್.ಸಿ. ಹಿರೇಮಠ, ಎಂ. ಚಿದಾನಂದಮೂರ್ತಿ, ಎಂ.ಎಂ. ಕಲಬುರ್ಗಿ, ಆರ್ಕೆ. ಮಣಿಪಾಲ, ವಿ. ಗೋಪಾಲಕೃಷ್ಣ, ಚೆನ್ನಕ್ಕ ಎಲಿಗಾರ ಮುಂತಾದವರು ನಡೆಸಿದ್ದಾರೆ. ಆದರೆ ಕನ್ನಡದಲ್ಲಿ ಎನ್ನೂ ಇದು "ಸ್ಥಳನಾಮ ವಿಜ್ಞಾನ" ವೆಂಬ ಪ್ರತ್ಯೇಕ ಅಧ್ಯಯನ ಶಾಖೆಯನ್ನೇನೂ ಹೊಂದಿಲ್ಲ. ಹೊಂದಬೇಕಾಗಿದೆ. ಈ ಅಧ್ಯಯನ ನಿಜಕ್ಕೂ ಮಹತ್ವಪೂರ್ಣವಾದುದು. ಸ್ಥಳನಾಮದ ಹಿಂದೆ ಆ ಊರಿನ ಇತಿಹಾಸವೇ ಅಡಗಿರಬಹುದು. ಪ್ರತಿಯೊಂದು ಊರ ಹೆಸರಿನ ಹಿಂದೆ ಸಾಮಾನ್ಯವಾಗಿ ಒಂದು ವಿಧದ ವಿಶೇಷತೆ ಇರುತ್ತದೆ. ಜನತೆಯ ಜೀವನ ವಿಧಾನ, ಅವರ ಸಂಸ್ಕೃತಿ ಅದರಲ್ಲಿ ಅಡಿಗಿರುತ್ತದೆ. "ಒಂದು ಊರಿಗೆ, ಅಲ್ಲಿ ನಡೆದ ಸಾಮಾಜಿಕ, ಧಾರ್ಮಿಕ ಅಥವಾ ರಾಜಕೀಯ ಇತ್ಯಾದಿ ವಿಶೇಷ ಘಟನೆಯ ನೆನಪಿಗಾಗಿ ಹೆಸರು ಇಟ್ಟಿರಲು ಸಾಧ್ಯವಿದೆ.

ಊರುಗಳಿಗೆ ಆಯಾ ಹೆಸರುಗಳು ಬರಬೇಕಾದರೆ ಏನಾದರೂ ಐತಿಹ್ಯಗಳು, ದಂತಕಥೆಗಳು, ಪುರಾಣ ಕಥೆಗಳು ಕಾರಣವಾಗಬಹುದು. ಅಲ್ಲಿನ ಮಣ್ಣು, ಕಲ್ಲು, ಪೈರು, ಗುಡ್ಡ, ಹೊಳೆ, ಹಳ್ಳ, ತೊರೆ ಮುಂತಾದ ನೈಸರ್ಗಿಕ ಹಿನ್ನೆಲೆಯನ್ನೂ ಅವು ಹೊಂದಿರಬಹುದು ಹಾಗೂ ಯಾರಾದರೂ ರಾಜ, ರಾಣಿ, ಮಂತ್ರಿ, ಧಾರ್ಮಿಕ ಮಹಾಪುರುಷ, ಸಾಧು ಸತ್ಪುರುಷರು ಅಲ್ಲಿ ಆಗಿಹೋಗಿದ್ದರೆ, ಅವರ ಪ್ರಭಾವವಾಗಿದ್ದರೆ ದೇವರ ಜಾತ್ರೆ, ಉತ್ಸವ ವಿಶೇಷವಾಗಿ ನಡೆಯುತ್ತಿದ್ದರೆ ಸಾಮಾನ್ಯವಾಗಿ ಇವೆಲ್ಲ ಆಯಾ ಊರುಗಳಿಗೆ ಆ ಹೆಸರುಗಳು ಬರಲು ಕಾರಣವಾಗುತ್ತವೆ. ಊರುಗಳಿಗೆ ಹೆಸರುಗಳು ಬರಲು ಇಂಥವೇ ಕಾರಣಗಳಿರುತ್ತವೆಯೆಂದು ಖಚಿತವಾಗಿ ಬೊಟ್ಟು ಮಾಡಿ ಹೇಳಲಿಕ್ಕೆ ಬರದು. ಆದರೂ ಕೆಲವಾದರೂ ಊರುಗಳಿಗೆ ಆಯಾ ಹೆಸರುಗಳು ಹೇಗೆ ಬಂದುವು ಎಂಬುದನ್ನು ಅಧ್ಯಯನ ಮಾಡಿದರೆ ಅದೊಂದು ರೀತಿಯಲ್ಲಿ ಆ ಊರಿನ ಹಿನ್ನೆಲೆಯನ್ನು, ಸಂಸ್ಕೃತಿಯನ್ನು ತಿಳಿದುಕೊಂಡಂತಾಗುತ್ತದೆ. ಭಾಷಾದೃಷ್ಟಿಯಿಂದ ಅಧ್ಯಯನ ಮಾಡಿದಾಗಲಂತೂ ಆ ಊರ ಹೆಸರಿನ ಮೇಲೆ ಹೊಸಬೆಳಕು ಚೆಲ್ಲಿದಂತಾಗುತ್ತದೆ.

ಗುಲಬರ್ಗಾ ನಗರ ಜಿಲ್ಲಾ ಸ್ಥಳವೂ, ವಿಭಾಗ ಸ್ಥಳವೂ ಆಗಿದ್ದು, ಭಾಷಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಕರ್ನಾಟಕದಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಸಾಹಿತ್ಯಿಕ ದೃಷ್ಟಿಯಿಂದಲೂ ಇದು ಕ್ರಿ.ಶ. 9 ನೆಯ ಶತಮಾನದಿಂದ ತುಂಬ ಮಹತ್ವ ಪಡೆಯುತ್ತ ಬಂದಿದೆ. ರಾಷ್ಟ್ರಕೂಟ ನೃಪತುಂಗ ದೊರೆ ಈ ಜಿಲ್ಲೆಯ ಮಳದಲ್ಲಿದ್ದು, ಸಾಹಿತ್ಯ ಸಂವರ್ಧನೆಗೆ ಶ್ರಮಿಸಿದುದು ಎಲ್ಲರಿಗೂ ತಿಳಿದ ವಿಷಯವೇ. ಕ್ರಿ.ಶ. 14ನೆಯ ಶತಮಾನದಿಂದೀಚೆ ಈ ಭಾಗವು ಮುಸ್ಲಿಂ ರಾಜರ ಆಡಳಿತಕ್ಕೊಳಪಟ್ಟಿತು. ಇದರ ಪರಿಣಾಮವಾಗಿ ಆ ಸಂಸ್ಕೃತಿಯ ಪ್ರಭಾವ ಈ ಭಾಗದ ಮೇಲಾಯಿತು. ಉರ್ದು ಭಾಷೆಯ ಪ್ರಭಾವವಂತೂ ಈ ಭಾಗದ ಮೇಲೆ ಅತ್ಯಂತ ಗಾಢವಾಗಿ ಆಯಿತು. ಅಚ್ಚಗನ್ನಡ ಭಾಗವಾದ ಇದು ನಿಜಾಮನ ಆಡಳಿತಕ್ಕೊಳಪಟ್ಟಾಗಲಂತೂ ಉರ್ದುವನ್ನೇ ತನ್ನ ಆಡಳಿತ ಭಾಷೆಯನ್ನಾಗಿ ಸ್ವೀಕರಿಸಿತ್ತು. ಇಂದಿಗೂ ಇಲ್ಲಿನ ಜನ ದೈನಂದಿನ ಮಾತುಗಳಲ್ಲಿ, "ಕಿಲಾ, ಸವಾರಿ, ಜಲಸಾ, ದೋಬಿ, ರಜಾಯಿ, ದುಕಾನ್, ಖಾರಿಖ್, ಹಿಕಮತ್, ನಜರ್, ಕಿರಾಯ್, ತೇಜ, ಬತಾಯಿ, ಖರಾಬ್, ದುನಿಯಾದ್, ಗುಂಜಾಯಿಸ್, ಮುಷ್ಕಿಲ್, ಮಜಬೂರ್, ಷಿಕಾಯತ್ ಮುಂತಾದ ಉರ್ದು ಪದಗಳನ್ನು ಹೇರಳವಾಗಿ ಬಳಸುವುದುಂಟು. ಇದಕ್ಕೆ "ಕಾರಣವೆಂದರೆ ಸುಮಾರು 600 ವರ್ಷಗಳ ಸುದೀರ್ಘ ಅವಧಿಯ ಮುಸ್ಲಿಂ ಅರಸರ ಆಳ್ವಿಕೆ". ಉರ್ದುವಿನ ಇಂಥ ಅನೇಕ ಶಬ್ದಗಳು ನಮಗೆ ಅರಿವಿಲ್ಲದಂತೆ ನಮ್ಮ ಭಾಷಾಕೋಶದಲ್ಲಿ ಸೇರಿಹೋಗಿವೆ. ಇದು ಸಹಜ ಮತ್ತು ಇದು ಜೀವಂತವಾದ ಎಲ್ಲ ಭಾಷೆಗಳಲ್ಲೂ ನಡೆಯುವ ಪ್ರಕ್ರಿಯೆಯಾಗಿ ಉರ್ದುವಿನ ಪ್ರಭಾವ ಕೇವಲ ಈ ಭಾಗದ ಜನತೆಯ ದೈನಂದಿನ ಮಾತುಗಳಲ್ಲಿ, ವಿವಿಧ ಧಾರ್ಮಿಕ ಆಚರಣೆಗಳಲ್ಲಿ ಅಷ್ಟೇ ಆಗದೆ ಈ ಭಾಗದ ಸ್ಥಳನಾಮಗಳ ಮೇಲೂ ಆದುದನ್ನು ಗುರುತಿಸಬಹುದು. ಇಲ್ಲಿನ ಕೆಲವು ಊರುಗಳ ಹೆಸರುಗಳಂತೂ ಮುಸ್ಲಿಂ ರಾಜರ, ರಾಣಿಯರ ಹಾಗೂ ಮಂತ್ರಿಗಳ ಹೆಸರುಗಳನ್ನು ಹೊಂದಿ ಇಂದಿಗೂ ಪ್ರಚಲಿತದಲ್ಲಿರುವುದನ್ನು ಕಾಣುವೆವು. ಈ ಭಾಗದ ಭಾಷೆಯ ಬಗೆಗೆ ನಡೆದಷ್ಟು ಅಧ್ಯಯನ ಸ್ಥಳನಾಮಗಳ ಮೇಲೆ ನಡೆದಿಲ್ಲ.

ಸಾಂಸ್ಕೃತಿಕ ಅಧ್ಯಯನ: ಸಂಸ್ಕೃತಿ ಜನತೆಯ ಜೀವನ ವಿಧಾನವೇ ಆಗಿದ್ದು, ಅವರವರ ಸಂಸ್ಕಾರಗಳಿಂದ ಹುಟ್ಟಿಕೊಂಡಂಥದು. ಬಾಹ್ಯದಲ್ಲಿ ಕಾಣುವಂಥದ್ದಲ್ಲ, ಇದು ಅಂತರಂಗಕ್ಕೆ ಸಂಬಂಧಪಟ್ಟ ವಿಶೇಷ ಗುಣ. ಇದನ್ನು ಪ್ರತಿಯೊಬ್ಬರೂ ಕಷ್ಟಪಟ್ಟು ಗಳಿಸಿ ಕೊಳ್ಳಬೇಕೇ ವಿನಾ ಇನ್ನೊಬ್ಬರಿಂದ ಪಡೆದುಕೊಳ್ಳಲಾಗದು. ಸಂಸ್ಕೃತಿ ಮಾನವನಲ್ಲಿರುವಂತೆ ಆತ ಊರುಗಳಿಗೆ ಹೆಸರಿಡು ವಾಗಲೂ ಇದನ್ನು ಪ್ರದರ್ಶಿಸಿದ್ದಾನೆ. ಅದನ್ನಿಂದು ಗುರುತಿಸುವ ಅಗತ್ಯವಿದೆ. 'ಒಂದು ಕಾಲಕ್ಕೆ ತನ್ನ ಮೇಲೆ ಗಾಢವಾದ ಪರಿಣಾಮವನ್ನು ಉಂಟುಮಾಡಿದ ವಸ್ತು, ವ್ಯಕ್ತಿ, ಘಟನೆಗಳನ್ನು ಧರ್ಮ, ಸಂಸ್ಕೃತಿಯ ಹಿನ್ನೆಲೆಯಲ್ಲಿ ತಾನು ವಾಸಿಸುವ ಸ್ಥಳಗಳಿಗೆ ಹೆಸರಿಸಿ ಮಾನವನು ತನ್ನ ಉತ್ಕಟ ಭಾವನೆಗಳನ್ನು ವ್ಯಕ್ತಪಡಿಸಿದ್ದಾನೆ. ಈ ಗುಲಬರ್ಗಾ ತಾಲ್ಲೂಕಿನ ಸ್ಥಳನಾಮಗಳಿಗೂ ಅನ್ವಯಿಸುವಂಥದಾಗಿದೆ. ಗುಲಬರ್ಗಾ ತಾಲ್ಲೂಕಿನ ಸ್ಥಳನಾಮಗಳ ಮೇಲೆ ಉರ್ದುಭಾಷೆ, ಸಂಸ್ಕೃತಿಯ ಪ್ರಭಾವ ದಟ್ಟವಾಗಿ ಆಗಿದೆ. ಜೊತೆಗೆ ಆ ಜನಾಂಗದ ಸಂಸ್ಕೃತಿಯ ಪರಿಣಾಮ ಹಿಂದೂಗಳ ಮೇಲಾದುದನ್ನು ಗುರುತಿಸಬಹುದು. ಈ ತಾಲ್ಲೂಕಿನ ಹಲವಾರು ಹಿಂದೂ

ದೇವಾಲಯಗಳು, ಮಠಗಳು, ಮುಸ್ಲಿಂ ಮಸೀದಿಯಾಕಾರದ ಗುಂಬಜಗಳನ್ನು ಹೊಂದಿರುವುದನ್ನು ಕಾಣುವೆವು. ಮುಸ್ಲಿಂರ ಈದ್‌ಮಿಲದ್, ರಮಜಾನ್ ಮುಂತಾದ ಹಬ್ಬಗಳಲ್ಲಿ ವಿಶೇಷವಾಗಿ ಹಳ್ಳಿಗಾಡಿನ ಹಿಂದೂ ಜನ ಸಂಭ್ರಮದಿಂದ ಪಾಲ್ಗೊಳ್ಳುವುದುಂಟು. ಹಿಂದೂ ದೇವಾಲಯಗಳಿಗೆ ಹೋಗುವಂತೆ ಮಸೀದಿ ದರ್ಗಾಗಳಿಗೆ ಹೋಗಿ ತಮ್ಮ ಭಕ್ತಿ ಕಾಣಿಕೆ ಸಲ್ಲಿಸುವುದುಂಟು. ಭಾವೈಕ್ಯತೆಯ ಈ ಗುಣ ಹಿಂದೂಗಳಿಗೆ ರಕ್ತಗತವಾದುದು. ಇದು ಬಹುಮಟ್ಟಿಗೆ ನಿಜವಾದರೂ ಅನೇಕ ಸಂದರ್ಭಗಳಲ್ಲಿ ಮುಸ್ಲಿಂ ರಾಜರ ಆಡಳಿತ ಆದೇಶ ಪ್ರಭಾವ ಒತ್ತಡ ಕಾರಣವಾಗಿಯೂ ಹಿಂದೂಜನ ನಡೆದುಕೊಂಡರೆನ್ನುವುದನ್ನು ಅಲ್ಲಗಳೆಯಲಿಕ್ಕಾಗದು. ಅಧಿಕಾರ ಯಾರ ಬಳಿ ಇರುತ್ತೋ ಸಾಮಾನ್ಯ ಜನ ಅವರಂತೆ ನಡೆದುಕೊಳ್ಳುವುದು ಸಹಜ. ಮುಸ್ಲಿಂರ ಆಳ್ವಿಕೆಯ ಅವಧಿಯಲ್ಲಿ ಈ ಭಾಗದ ಜನ ಅವರ ಧರ್ಮ, ಸಂಸ್ಕೃತಿಯನ್ನು ಬಹಳಷ್ಟು ತಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿ ಕೊಂಡದ್ದು ಉಂಟು. ಇಷ್ಟೇ ಅಲ್ಲದೇ ಈ ತಾಲ್ಲೂಕಿನ ಎಷ್ಟೋ ಊರುಗಳಿಗೆ ಇರುವ ಹೆಸರುಗಳು ಉರ್ದುಮಯವಾಗಿವೆ. ವಿಶೇಷವಾಗಿ ಈ ತಾಲ್ಲೂಕಿನ ಕೆಲವು ಊರುಗಳ ಹೆಸರುಗಳು ಮುಸ್ಲಿಂ ರಾಜ, ರಾಣಿಯರ ಮಂತ್ರಿಗಳ ಹೆಸರು ಹೊಂದಿರುವುದನ್ನು ಈಗಲೂ ಕಾಣಬಹುದು. ಇದಕ್ಕೆ ಹೀರಾಪೂರ, ಫರಹತಾಬಾದ, ಫಿರೋಜಾಬಾದ ಮುಂತಾದವನ್ನು ಹೆಸರಿಸ ಬಹುದು. ಹಿಂದೂ ಮುಸ್ಲಿಂರು ಹಿಂದೆ ಸ್ನೇಹ ಸೌಹಾರ್ದದಿಂದ ಬಾಳುತ್ತಿದ್ದರು. ಅದಕ್ಕೆ ಭಾವೈಕ್ಯತೆಯ ದ್ಯೋತಕವಾಗಿ ಈ ರೀತಿ ಊರುಗಳಿಗೆ ಹೆಸರು ಬಂದಿವೆಯೆಂದು ಕೆಲವರು ಅನ್ನುವುದುಂಟು. ಇದು ಸಂಪೂರ್ಣ ಸರಿಯಲ್ಲ. ಸ್ನೇಹ ಸೌಹಾರ್ದಕ್ಕಿಂತ ಅವರ ಸಂಸ್ಕೃತಿಯನ್ನು ಬಲವಂತವಾಗಿ ಹಿಂದೂಗಳ ಮೇಲೆ ಹೇರಿದ್ದರ ಪರಿಣಾಮ ಈ ತಾಲ್ಲೂಕಿನ ಅನೇಕ ಸ್ಥಳನಾಮಗಳು ಉರ್ದುಮಯವಾಗಿವೆಯೆಂದು ಹೇಳುವುದೇ ಹೆಚ್ಚು ಸೂಕ್ತವೆನಿಸುತ್ತದೆ.

1. ಫಿರೋಜಾಬಾದ: ಈ ಊರು ಹಿಂದೆ ಫಿರೋಜಷಾನ ಆಡಳಿತಕ್ಕೆ ಒಳಪಟ್ಟುದುದರಿಂದ ಇದಕ್ಕೆ ಆತನ ಹೆಸರೇ ಬಂದಿದೆ. ಹಿಂದೆ ಪ್ರಭಾವಿ ವ್ಯಕ್ತಿಗಳ, ಧಾರ್ಮಿಕ ಮಹಾಪುರುಷರ ಸ್ಮರಣೆಗಾಗಿ ಅವರ ಹೆಸರೇ ಊರುಗಳಿಗೆ, ಹೊಳೆಗಳಿಗೆ ಬಂದುದುಂಟು.

2. ಸುಲ್ತಾನಪೂರ: ಬಹಮನಿ ಅರಸರಲ್ಲಿ ಪ್ರಮುಖವಾದ ಆದಿಲ್‌ಶಾಹಿಯ ಪತ್ನಿಯಲ್ಲೊಬ್ಬಳಾದ ಸುಲ್ತಾನಬಿಯ ಸ್ಮರಣಾರ್ಥವಾಗಿ ಆಕೆಯ ಹೆಸರನ್ನು ತಂದು ನಿಂತುದೇ ಸುಲ್ತಾನಪುರ.

3. ಹೀರಾಪೂರ: ಸುಲ್ತಾನಪೂರವು ಸುಲ್ತಾನಬಿಯ ಹೆಸರನ್ನು ತಳೆದು ನಿಂತಂತೆ ಆದಿಲ್‌ಶಾಹಿಯ ಇನ್ನೊಬ್ಬ ಪತ್ನಿ ಹೀರಾಬಿಯ ಸ್ಮರಣಾರ್ಥ ರೂಪಪಡೆದ ಊರು ಹೀರಾಪೂರ.

4. ಗುಲಬರ್ಗಾ: ಗುಲಬರ್ಗಾ ಎಂದೇ ಈಗ ಹೆಚ್ಚಾಗಿ ಈ ಊರು ಕರೆಯಲ್ಪಡುತ್ತಿದ್ದರೂ ಇದರ ಮೂಲ ಹೆಸರು ಕಲಬುರ್ಗಿ. ಕಲಬುರ್ಗಿ, "ಕ್ರಿ.ಶ. 1098ರ ಹುಣಸೀ ಹಡಗಲಿ ಶಾಸನದಲ್ಲಿ ಇದರ ಹೆಸರು 'ಕಲಬುರಗೆ' ಎಂದು ನಿರ್ದೇಶಿದೆ. ಗುಲಬರ್ಗಾ ಜಿಲ್ಲೆಯ ತಾಲ್ಲೂಕು ಸ್ಥಳವಾದ 'ಅಫಜಲಪೂರ' ಅಫಜಲಖಾನನೆಂಬ ಮಂತ್ರಿಯ ಹೆಸರನ್ನು ಹೊತ್ತು ನಿಂತುದನ್ನಿಲ್ಲಿ ಸ್ಮರಸಬಹುದು.

ಸುಲ್ತಾನಪುರ, ಹೀರಾಪುರ ಈ ಊರುಗಳು ಆದಿಲ್‌ಶಾಹಿಯ ಪತ್ನಿಯರ ಹೆಸರು ಹೊತ್ತು ನಿಂತಂತೆ ಇಂದಿನ ಯಾದಗೀರ ಜಿಲ್ಲೆಯ ಸುರಪುರ ನಾಯಕ ದೊರೆಗಳ ಉಪಪತ್ನಿಯರಾದ ರಂಗಮ್ಮ, ವೆಂಕಮ್ಮ, ರುಕ್ಕಮ್ಮ, ಹಸನಮ್ಮ ಇವರ ಸ್ಮರಣಾರ್ಥ ರಂಗಂಪೇಟೆ, ವೆಂಕಟಾಪುರ, ರುಕ್ಕುಂಪೇಟೆ ಹಾಗೂ ಹಸನಾಪುರ ಎಂಬ ಹೆಸರು ಹೊಂದಿ ಈಗಲೂ ಇರುವುದನ್ನು ಇಲ್ಲಿ ಸ್ಮರಿಸಬಹುದು.

ಕಲಂಬುರಗೆಯ ವಿಗ್ರಹ ರೂಪ ಕಲ್ಲುᵕಂಪರಿಗೆ ಎಂದರೆ ಕಲ್ಲುಬಂಡೆಗಳ ಹಾಸುಗಳಿಂದ ಕೂಡಿದ ಊರು. ಇಲ್ಲಿನ ಭೂಮಿಯ ಒಳಭಾಗದಲ್ಲಿ ಕಲ್ಲುಗಳ ಥರ ಥರದ ಹಾಸು ಇದ್ದುದನ್ನು ಕಾಣಬಹುದು. 'ಬುರಗ' ಎಂದರೆ ಕಲ್ಲುಗಳು ಒಂದಕ್ಕೊಂದು ಅಂಟಿಕೊಂಡುದು, ಅಂದರೆ ಕಲ್ಲಿನ ಕಣಿವೆ ಎಂದರ್ಥ. ಕಲ್ಲಿನ ಕಣಿವೆಗಳು ಇಲ್ಲಿರುವುದರಿಂದ ಈ ಊರಿಗೆ ಕಲಬುರ್ಗಿ ಎಂಬ ಹೆಸರು ಬಂದಂತಿದೆ. ಆದರೆ ಎಂ.ಎಂ. ಕಲಬುರ್ಗಿಯವರು ಬೇರೆ ರೀತಿಯಲ್ಲಿ ಈ ಊರ ಹೆಸರನ್ನು ವಿಗ್ರಹಿಸಿ ಅರ್ಥೈಸಿದ್ದಾರೆ. ಅದು ಹೀಗಿದೆ. ಕಲಂಬರ+ ಕೆಯ್=ಕಲಂಬರಕೆ (ಗೆ)>ಕಲಂಬರಗೆ> ಕಲಂಬರಗಿ> ಕಲಬುರಗಿ. ಹಿಂದೆ ಕಲಂಬರು ಎಂಬ ಹೆಸರಿನ ಜನಾಂಗ ವಾಸಿಸುವ ಸ್ಥಳ ಇದಾಗಿತ್ತು. ಅದಕ್ಕೆ ಈ ಊರಿಗೆ ಕಲಬುರಗಿ ಎಂಬ ಹೆಸರು ಬಂದಿದೆ ಎನ್ನುತ್ತಾರೆ. ಕಲ್ಲುಗಳ ಕಣಿವೆ, ಕಲಂಬರು ವಾಸಿಸುವ ಕೃಷಿ ಪ್ರದೇಶ ಎಂಬೆರಡು ರೀತಿಯಲ್ಲಿ ಈ ಊರನ್ನು ಅರ್ಥೈಸಲಾಗಿದೆ. ಇದರ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ. ಅರ್ಥದ ಬಗ್ಗೆ ಇನ್ನೂ ಖಚಿತ ನಿರ್ಧಾರವಾಗಬೇಕಿದ್ದರೂ ಇದರ ಹೆಸರು ಮಾತ್ರ ಕಲಬುರಗಿ ಎಂದೇ ಖ್ಯಾತಿ ಪಡೆದಿತ್ತು. 'ಗುಲಬುರ್ಗಾ'ಕ್ಕಿಂತ ಪ್ರಾಚೀನ ಹೆಸರಾದ ಕಲಬುರ್ಗಿ ಎಂದೇ ಇದಕ್ಕೆ ಕರೆಯುವುದು ಅರ್ಥಪೂರ್ಣವಾದುದು ಮತ್ತು ಸಮರ್ಪಕವಾದುದು.

ಈ ಹೆಸರು ನೈಜಾಂ ಅರಸನ ಕಾಲಕ್ಕೆ ಪಾರಸೀಕರ-ಣಗೊಂಡು ಮುಸ್ಲಿಂರ ಆಡಳಿತ ಹಾಗೂ ಪ್ರಭಾವಕ್ಕೊಳಗಾಗಿ ಗುಲಬರ್ಗಾ ಎಂದಾಯ್ತು. 'ಗುಲಬರ್ಗಾ' ಹೆಸರನ್ನು ಈ ರೀತಿ ಅರ್ಥಯಿಸಿಲಾಗುತ್ತದೆ. 'ಗುಲ್' ಎಂದರೆ ಹೂ, ಬುರ್ಗ ಎಂದರೆ ಎಲೆ ತೋಟ ಎಂದರ್ಥ. ಹೂದೋಟಗಳ ನಗರ ಎಂಬರ್ಥ ಹೊರಡುವುದು. ವಾಸ್ತವವಾಗಿ ನೋಡಿದಾಗ ಈ ಅರ್ಥ ಈ ಊರಿಗೆ ಅಷ್ಟಾಗಿ ಅನ್ವಯಿಸದು. ಏನೇ ಆಗಲಿ ಮುಸ್ಲಿಂರ ಆಡಳಿತ, ಸಂಸ್ಕೃತಿ, ಪ್ರಭಾವ ಕಾರಣವಾಗಿ ಮೂಲದಲ್ಲಿದ್ದ ಕಲಬುರ್ಗಿ ಸ್ಥಳನಾಮವು 'ಗುಲಬರ್ಗಾ' ಎಂದು ಮಾರ್ಪಾಟಾಗಿದೆ. ಹೀಗಾದರೂ ಜನ ಈಗ ಗುಲಬರ್ಗಾ, ಕಲಬುರ್ಗಿ ಎರಡೂ ಹೆಸರುಗಳಿಂದ ಇದನ್ನು ಕರೆಯುತ್ತಾರೆ. ಸಾಮಾನ್ಯವಾಗಿ ಹಳ್ಳಿಗರು ಇದಕ್ಕೆ ಕಲಬುರ್ಗಿ ಎಂದೇ ಹೆಚ್ಚಾಗಿ ಕರೆಯುತ್ತಾರೆ. ಪಟ್ಟಣಿಗರು, ಸುಶಿಕ್ಷಿತರು ಇದಕ್ಕೆ ಗುಲಬರ್ಗಾ ಎಂದು ಅನ್ನುವುದುಂಟು. ಇದರಂತೆಯೇ ಈ ತಾಲ್ಲೂಕಿನ ಇನ್ನೂ ಅನೇಕ ಊರುಗಳು ಹೆಸರಿನ ಬಗ್ಗೆ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವದನ್ನರಿಯಬಹುದು.

5. ಮಹಾಗಾಂವ್: 'ಗಾಂವ್' ಸಂಸ್ಕೃತದ ಗ್ರಾಮದಿಂದ

ಬಂದಂಥ ವಾರ್ಗಿಕ. ಹೆಸರೇ ಸೂಚಿಸುವಂತೆ ಇದು ದೊಡ್ಡ ಊರು. ದೊಡ್ಡ ಊರು ಎಂದು ಒಂದರ್ಥದಲ್ಲಿ ಕೆಲವರು ಇದನ್ನು ಅರ್ಥಯಿಸಿದರೆ, ಇನ್ನೂ ಕೆಲವರು ಇದು ಮಹಾದೇವಿಯಕ್ಕ ಜನಿಸಿದ ಸ್ಥಳವಾದುದರಿಂದ ಇದಕ್ಕೆ ಆ ಹೆಸರು ಪ್ರಾಪ್ತವಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ. ಇದಿನ್ನೂ ಸಂಶೋಧನೆಯಾಗಬೇಕಾದ ಸಂಗತಿ. ಈ ಊರಿನಲ್ಲಿ ಹಾಗೂ ಬೆಣ್ಣೆತೊರಾದ ದಡದಲ್ಲಿ ಮಹಾದೇವಿಯಕ್ಕನ ಗುಡಿಗಳಿವೆ. ಈ ಮಂದಿರಗಳು ಒಂದು ವಿಧದಲ್ಲಿ ಮಹದೇವಿಯಕ್ಕ ಇಲ್ಲಿಯೇ ಜನಿಸಿದಳೆಂಬ ಪ್ರತೀತಿಗೆ, ಐತಿಹ್ಯಕ್ಕೆ ಕಾರಣವಾಗಿವೆ. ಗುಡಿಗಳಿದ್ದ ಮಾತ್ರಕ್ಕೆ ಆಕೆ ಇಲ್ಲಿಯೇ ಜನಿಸಿದಳೆಂದು ಹೇಳಲಿಕ್ಕೆ ಬರದು. ಆದರೂ, ಜನ ನಂಬಿಕೊಂಡು ಬಂದಿರುತ್ತಾರೆ, ಸತ್ಯ ಇನ್ನೂ ಹೊರಬರಬೇಕಿದೆ.


ಧಾರ್ಮಿಕ ವ್ಯಕ್ತಿಗಳ ಹೆಸರನ್ನು ಭೌಗೋಳಿಕ, ಐತಿಹಾಸಿಕ, ಪ್ರಾಕೃತಿಕ ವಸ್ತುಗಳ ಹೆಸರನ್ನು ಹಾಗೂ ಜಾತ್ರೆ, ಉತ್ಸವ, ಹಬ್ಬಗಳ ಸ್ಮರಣೆಗಾಗಿ ವಿಶೇಷ ಹೆಸರನ್ನು ಹಲವಾರು ಊರುಗಳು ಪಡೆದಿರುವುದುಂಟು. ಅವು ಆಯಾ ಹೆಸರುಗಳನ್ನು ಹೊಂದಿದ ಹಿನ್ನೆಲೆಯನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡಿದರೆ, ಆ ಕಾಲದ ಜನರ ರೀತಿ, ನೀತಿ, ಜೀವನ ವಿಧಾನ, ಉಡುಗೆ-ತೊಡಿಗೆ, ಆಚಾರ-ವಿಚಾರ ಇವೆಲ್ಲ ಬೆಳಕಿಗೆ ಬರುವುವು. ತನ್ಮೂಲಕ ಒಂದು ನಾಡಿನ ಸಾಂಸ್ಕೃತಿಕ ಸಂಪತ್ತನ್ನು ಹೊರ ಹಾಕಿದಂತೆ ಆಗುತ್ತದೆ. ಈ ದಿಸೆಯಲ್ಲಿ ಗುಲಬರ್ಗಾ ತಾಲ್ಲೂಕಿನ ಊರುಗಳ ಸಾಂಸ್ಕೃತಿ ಅಧ್ಯಯನವನ್ನು ಇನ್ನೂ ಆಳವಾಗಿ ಮಾಡುವ ಅವಶ್ಯಕತೆಯಿದೆ.

ಒಂದು ಜನಾಂಗದ ಏಳುಬೀಳು, ಕಷ್ಟಸುಖ, ಪ್ರಾಕೃತಿಕ, ಸಾಂಸ್ಕೃತಿಕ ಕಾರಣಗಳು ಊರ ಹೆಸರು ಬರಲು ಪ್ರೇರಕವಾಗಿರುತ್ತವೆ. ಅಲ್ಲದೆ ದಾನಿಗಳ, ವೀರರ, ತ್ಯಾಗಿಗಳ, ರಾಜ-ರಾಣಿ-ಮಂತ್ರಿಗಳ, ಮಹಾಪುರುಷರ ಸ್ಮರಣೆಗಾಗಿಯೂ ಕೆಲವು ಊರ ಹೆಸರುಗಳು ಬಂದಿರುವುದನ್ನಿಲ್ಲಿ ನೋಡಿದೆವು. ಚರಿತ್ರೆಯ ದೃಷ್ಟಿಯಿಂದ ಅಧ್ಯಯನ ಮಾಡುವವರಿಗಂತೂ ಇವು ತುಂಬಿದ ಗಣಿಗಳೇ ಆಗಿವೆ. ಚರಿತ್ರೆ ಮೌನ ತಾಳಿದಲ್ಲಿ ಸ್ಥಳನಾಮಗಳು ಮಾತನಾಡುತ್ತವೆ ಎಂಬ ಮಾತು ಗುಲಬರ್ಗಾ ತಾಲ್ಲೂಕಿನ ಅನೇಕ ಸ್ಥಳನಾಮಗಳಿಗೆ ಅಕ್ಷರಶಃ ಅನ್ವಯಿಸುವುದು. ಈ ತಾಲ್ಲೂಕಿನ ಹಲವಾರು ಸ್ಥಳನಾಮಗಳು ಐತಿಹಾಸಿಕ ಘಟನೆಗಳನ್ನು, ಸಾಂಸ್ಕೃತಿಕ ವಿವರಗಳನ್ನು, ಧಾರ್ಮಿಕ ಪುರುಷರನ್ನು ದಾಖಲೆಯ ರೂಪದಲ್ಲಿ ಉಳಿಸಿಕೊಂಡು ಬಂದಿವೆ. ಆದ್ದರಿಂದ ಇವು ಸಾಂಸ್ಕೃತಿಕ ಅಧ್ಯಯನಕ್ಕಂತೂ ಅಮೂಲ್ಯ ಆಕರಗಳಾಗಬಲ್ಲುವು. ಇವುಗಳಂತೆ ಮನೆತನದ ಅಡ್ಡ ಹೆಸರುಗಳನ್ನು ಅಧ್ಯಯನ ಮಾಡುವುದೂ ಅಗತ್ಯವಿದೆ. ಸಂಗಮೇಶ ಸವದತ್ತಿಮಠ ಅವರು ಬರೆದಂತೆ "ಅಡ್ಡ ಹೆಸರುಗಳಲ್ಲಿ ಕನ್ನಡ ಸಂಸ್ಕೃತಿ ಅಡಗಿದೆ." ಸ್ಥಳನಾಮ ಹಾಗೂ ಮನೆತನದ ಅಡ್ಡ ಹೆಸರುಗಳ ಅಧ್ಯಯನವಿಂದು ಸಾಂಸ್ಕೃತಿಕ ದೃಷ್ಟಿಯಿಂದ ಆಗಬೇಕಾಗಿದೆ. ಗುಲಬರ್ಗಾ ತಾಲ್ಲೂಕಿನ ಸ್ಥಳನಾಮಗಳನ್ನು ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡಿಸಿದುದರ ಪರಿಣಾಮಗಳನ್ನು ಈ ಕೆಳಗಿನ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ.

- ಮುಸ್ಲಿಂ ಅರಸರ ಆಡಳಿತ, ಪ್ರಭಾವ, ಸಂಸ್ಕೃತಿ ಹಿಂದೂಗಳ ಮೇಲೆ ಅದುದರ ಪರಿಣಾಮವಾಗಿ ಈ ತಾಲ್ಲೂಕಿನ ಹಲವು ಸ್ಥಳನಾಮಗಳು ಉರ್ದುಮಯವಾಗಿವೆ.
- ದಕ್ಷಿಣ ಕರ್ನಾಟಕದ ಊರ ಹೆಸರುಗಳಿಗಿಂತ ಗುಲಬರ್ಗಾ ತಾಲ್ಲೂಕಿನ ಊರ ಹೆಸರುಗಳು ಸಾಂಸ್ಕೃತಿಕ ದೃಷ್ಟಿಯಿಂದ ಭಿನ್ನವಾಗಿದೆ.
- ಈ ತಾಲ್ಲೂಕಿನಲ್ಲಿ ತಗ್ಗುದಿನ್ನೆ, ಗುಡ್ಡಗಾಡು ಪ್ರದೇಶ ಇಲ್ಲವೆನ್ನುವಷ್ಟು ಕಡಿಮೆ ಬಯಲು ಪ್ರದೇಶವೇ ಹೆಚ್ಚಾಗಿದೆ. ಇದನ್ನು ಇಲ್ಲಿನ ಊರ ಹೆಸರುಗಳು ಸೂಚಿಸುತ್ತವೆ. ವಿಶಾಲವಾದ, ಸಮತಲವಾದ ಬಯಲು ಪ್ರದೇಶ, ಕೃಷಿ ಪ್ರದೇಶದಲ್ಲಿ ಊರುಗಳಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ. *(ಶ್ರೀ.ಜಿ.ಪಿ.)*


ಸ್ಮಾರಕಗಳು (ಗುಲ್ಬರ್ಗ ಜಿಲ್ಲೆ): ಅಪಾರ ಸಂಶೋಧನೆಗೆ ಸಾಧ್ಯತೆಗಳಿರುವ ನೂರಾರು ಸ್ಮಾರಕಗಳು, ಪಳೆಯುಳಿಕೆಗಳು ಗುಲ್ಬರ್ಗ ಜಿಲ್ಲೆಯ ಅಡಿಗಡಿಗೂ ಲಭ್ಯವಾಗುತ್ತವೆ. ದೇವಸ್ಥಾನಗಳು, ಮಸೀದಿಗಳು, ಗುಂಬಜ್‌ಗಳು, ಮಾಸ್ತಿಕಲ್ಲುಗಳು, ಶಾಸನಗಳು, ಜೈನ ಬಸದಿಗಳು, ಶಿಲ್ಪಗಳು, ಸ್ತಂಭಗಳು, ಕೋಟೆ ಕೊತ್ತಲಗಳು, ಪ್ರಾಚೀನ ಅವಶೇಷಗಳು, ನಾಗ ಶಿಲ್ಪಗಳು, ತೀರ್ಥಗಳು, ಬೃಂದಾವನಗಳು, ಅರಮನೆಗಳು, ಹುಡೆಗಳು, ಫಲಕಗಳು, ದರ್ಗಾಗಳು, ಸಮಾಧಿಗಳು, ವೀರಗಲ್ಲುಗಳು, ಮದನಿಕೆ ವಿಗ್ರಹಗಳು, ಮೂರ್ತಿ ಶಿಲ್ಪಗಳು, ರಥಗಳು, ಕೆತ್ತನೆ ಕೆಲಸಗಳು, ಗುಡಿ ಗೋಪುರಗಳು, ಸ್ಮಾರಕ ಶಿಲೆಗಳು, ನಾಣ್ಯಗಳು-ಒಂದೇ ಎರಡೇ. ಒಂದು ಭಾಗದ, ಒಂದು ಸಂಸ್ಕೃತಿಯ, ಒಂದು ಕಾಲದ ಇತಿಹಾಸ ಕಟ್ಟುವುದಕ್ಕೆ ಏನೆಲ್ಲ ಬೇಕೋ ಅವೆಲ್ಲ ಇಲ್ಲಿವೆ.

ಸುರಪುರ ತಾಲ್ಲೂಕಿನ ಬೂದಿಹಾಳದ ಬೂದಿ ಗುಡ್ಡೆಗಳು (ಸಂಶೋಧನೆ ನಡೆಸಿದಾಗ ಪ್ರಾಗೈತಿಹಾಸಿಕ ಕಾಲದ ಪಳೆಯುಳಿಕೆಗಳು ಇಲ್ಲಿ ಲಭ್ಯವಾಗಿವೆ.) ರಾಜನ ಕೋಳೂರಿನ ಬೃಹತ್ ಶಿಲಾಯುಗದ ಸಮಾಧಿಗಳು, ಸನ್ನತಿಯ ಕೋಟೆ, ರಣಮಂಡಲ, ಹಗೆಯಾಕಾರದ ರಚನೆಗಳು, ಪ್ರಾಚೀನ ಕಟ್ಟಡದ ಅವಶೇಷಗಳು, ಬೌದ್ಧ ಶಿಲ್ಪಗಳು, ಅಶೋಕನ ಶಾಸನ, ಬೌದ್ಧ ಫಲಕಗಳು, ನಾಗಾವಿಯ ತ್ರೈಪುರುಷ ಘಟಿಕಾ ಸ್ಥಾನ, ಮಧುಸೂಧನಾಲಯ, ಎಲ್ಲಮ್ಮನ ದೇವಾಲಯ, ಹನುಮಂತ ದೇವಾಲಯ, ಶಿರವಾಳದ ನಟರಾಜ ಫಲಕ, ದ್ವಿಭುಜ ಗಣಪತಿ, ಸಿದ್ಧಲಿಂಗೇಶ್ವರ ದೇವಾಲಯ, ನನ್ನಯ್ಯ ನಾಗಯ್ಯ ದೇವಾಲಯ, ಮಳಖೇಡದ ಕೋಟೆ, ಜೈನ ಬಸದಿ, ಕಂಚಿನ ಜೈನ ಶಿಲ್ಪಗಳು, ಕೋಟೆ ಮಸೀದಿ, ಮರತೂರಿನ ವಿಜ್ಞಾನೇಶ್ವರ ಶಾಸನ, ಕಾಳಿಂಗೇಶ್ವರ ದೇವಸ್ಥಾನ, ಕಾಶಿ ವಿಶ್ವನಾಥ ದೇವಾಲಯ, ಆತ್ಮ ಬಲಿ ಶಿಲ್ಪಗಳು, ವಳಕುಂದದ ಕೋಟೆ, ಬುರುಜು, ಅರಮನೆಯ ಪಳೆಯುಳಿಕೆಗಳು, ಬಾವಿ ಇತ್ಯಾದಿ. ಏವೂರಿನ ಶಾಂತಿನಾಥ ಬಸದಿ, ಬಾವಿ ಬಸವಣ್ಣ, ಹನುಮಂತ ದೇವಾಲಯ, ಅದೇ ದೇವಾಲಯದ ಭಿತ್ತಿಯಲ್ಲಿರುವ ಬುದ್ಧ ಶಿಲ್ಪ, ಚಿಂಚೋಳಿಯ




ಶೇಖ್ ರೋಜಾ ಮಿನಾರಗಳು – ಗುಲಬರ್ಗಾ

11ನೆಯ ಶತಮಾನದ ಶಾಸನ, ಕಾಳಗಿಯ ಒಂದನೆಯ ಶತಮಾನದ ಚಿತ್ರಿತ ಫಲಕ, ತ್ರಿಕೂಟ ಬಸದಿ, ಕಲ್ಲೇಶ್ವರ ದೇವಾಲಯ, ಸಿದ್ದೇಶ್ವರ ದೇವಾಲಯ, ಕಿರಣ ಸ್ತಂಭ, ಗುಲಬರ್ಗಾ ಕೋಟೆ, ಕೋಟೆಯೊಳಗಿನ ಜಾಮಿಯಾ ಮಸೀದಿ, ಆವರಣದೊಳಗಿನ ಸ್ವಯಂಭು ಸೋಮೇಶ್ವರ ದೇವಾಲಯ, ಮುದನೂರಿನ ರಾಮನಾಥ ದೇವಾಲಯ, ನಿಂಬರಗಿಯ ತ್ರಿಕೂಟ ದೇವಾಲಯ, ಹಗರಟಗಿಯ ಉಗ್ರ ಭೀಮೇಶ್ವರ ದೇವಾಲಯ; ಮೂರು ಕಳಸದ ಗುಡಿ; ರಾಶಿಚಕ್ರ ಕಲ್ಲು, ನಿಂಬರಗಿಯ ಈಶ್ವರ ದೇವಾಲಯ, ಕುಳಗೇರಿಯ ನಾಗಲಿಂಗೇಶ್ವರ ದೇವಾಲಯ; ಅಲ್ಲಿನ ನಾಗಿಣಿ ಮುಂತಾದ ಶಿಲ್ಪಗಳು, ಸುಲೇಪೇಟೆಯ ಈಶ್ವರ ದೇವಾಲಯ, ಅರಕೇರಿಯ ಸಹಸ್ರಲಿಂಗ ದೇವಾಲಯ, ಸೊನ್ನದ ಭರತ ಲಿಂಗದೇವರ ಗುಡಿ, ವಡಗೇರಿಯ ಬಸವೇಶ್ವರ ದೇವಾಲಯ, ಚೇಂಗಟಾದ ಸೋಮೇಶ್ವರ ದೇವಾಲಯ, ಶಹಾಪುರದ ಕೋಟೆ; ಮಹಲ್ ರೋಜಾ, ಯಾದಗಿರಿ ಕೋಟೆ, ಸುರುಪುರದ ಕೋಟೆ; ಮೆಡೋಸ್ ಟೇಲರ್ ಬಂಗಲೆ, ವಾಗಣಗೇರಿ ಕೋಟೆ, ಅವರಾಧಿ ಕೋಟೆ, ಚಿನ್ಮಳ್ಳಿ ಕೋಟೆ, ಹರಣಗೇರಿಯ ಗೌತಮೀಪುತ್ರ ಸಾತಕರ್ಣಿಯ ಕಾಲದ ನಾಣ್ಯಗಳು, ಜೇವರ್ಗಿಯ ಶಾತವಾಹನರ ಕಾಲದ ಸ್ಮಾರಕ ಶಿಲೆಗಳು, ನೆಲವರ್ಗಿಯ ಜೈನ ಬಸದಿ, ಕುಳಗೇರಿಯ ನಾಗೇಶ್ವರ ಗುಡಿ, ಕೊಲ್ಲೂರು ರಾಮೇಶ್ವರ ದೇವಾಲಯ, ಇಂಗಳಗಿಯ ಜೈನ ಬಸದಿ, ನಿಡಗುಂದಿಯ ನವನಾರಾಯಣ ದೇವಾಲಯ, ಕಾಳಿಕಾ ದೇವಾಲಯ, ಔರಂಗಜೇಬನ ಹಸ್ತಮುದ್ರಿಕೆ, ಸೇಡಂನ ಪಂಚಲಿಂಗೇಶ್ವರ ದೇವಾಲಯ; ಬಾಣಂತಿ ಕಂಬ, ಹಂದರಕಿಯ ಆನೇಶ್ವರ ದೇವಾಲಯ, ದಿಗ್ಗಾವಿಯ ಶಂಭುಲಿಂಗೇಶ್ವರ ದೇವಾಲಯ, ಮಾರಾಳದ ಯಾಳಬಾವಿ ತೋಟದ ದೇವಾಲಯ, ಗೊಬ್ಬೂರಿನ ಕಲ್ಮೇಶ್ವರ ದೇವಾಲಯ, ಚಿಂಚನಸೂರಿನ ಮಹೇಶ್ವರ ದೇವಾಲಯ, ರುಮ್ಮನಗೂಡಿನ ನೀಲಕಂಠೇಶ್ವರ ದೇವಾಲಯ; ದ್ವಿಬಾಹು ಗಣಪತಿ ಮುಂತಾದ ಶಿಲ್ಪಗಳು, ಕೋಗನೂರಿನ ಶಂಕರಲಿಂಗ ದೇವಾಲಯ, ಹಿರೇ ಮುದನೂರಿನ ರಾಮನಾಥ ದೇವಾಲಯ, ಹೊಡ ಲದ ರಾಮಲಿಂಗೇಶ್ವರ ದೇವಾ ಲಯ, ಶಿರಸಂಗಿಯ ಮಲ್ಲಿಕಾ ರ್ಜುನ ದೇವಾಲಯ, ಸುಂಬಡದ ಮಲ್ಲಿಕಾರ್ಜುನ ದೇವಾಲಯ, ಲಾಡ್ ಚಿಂಚೋಳಿಯ ಸಿದ್ದೇಶ್ವರ ದೇವಾಲಯ, ರಟಕಲ್‌ನ ಬಂಕನಾಥ ದೇವಾಲಯ, ಅರಳಗುಂಡ–ಗಿಯ ಶರಣ ಬಸವೇಶ್ವರ ದೇವಾಲಯ, ಯಡ್ರಾಮಿಯ ರಾಮತೀರ್ಥ, ಜುಮ್ಮಾ ಮಸೀದಿ, ಫತ್ತರಗಿಯ ಭಾಗಮ್ಮನ ಗುಡಿ, ನರಬೋಳಿಯ ಹನುಮಂತ ದೇವಾಲಯ; ಈಶ್ವರ ದೇವಾಲಯ; ಚತುರ್ಮುಖ ಲಿಂಗ; ಜುಮ್ಮಾ ಮಸೀದಿ, ಸುರು ಪುರದ ಗೋಪಾಲಸ್ವಾಮಿ ದೇವಾಲಯ, ಆತನೂರಿನ ಬಸವೇಶ್ವರ



ಶೋರಗುಂಬಜ್ – ಗುಲಬರ್ಗಾ



ಬಹಮನಿ ಗೇಟ್, ಗುಲಬರ್ಗಾ

ದೇವಾಲಯ; ಆತ್ಮಾಹುತಿ ಸ್ತಂಭ, ಜೇವರ್ಗಿಯ ಷಣ್ಮುಖ ಶಿವಯೋಗಿಗಳ ಮಠ, ಭೀಮರಾಯನ ಗುಡಿಯ ಮಾರುತಿ ದೇವಾಲಯ, ಮಿರ್‍ಯಾಣದ ಮೂರುದೇವರ ಗುಡಿ, ಕೆಂಭಾವಿಯ ಭೋಗಲಿಂಗೇಶ್ವರ ದೇವಾಲಯ, ರಾಮಾಪುರದ ಬೊಕ್ಕಪ್ಪಯ್ಯ ದೇವಾಲಯ, ಮಳಖೇಡದ ಯತಿವರ್ಯರ ಬೃಂದಾವನಗಳು, ಯರಗೋಳದ ಬೃಂದಾವನಗಳು, ಮಣ್ಣೂರಿನ ಬೃಂದಾವನಗಳು, ದೇವಳ ಗಾಣಗಾಪುರದ ದತ್ತಾತ್ರೇಯ ದೇವಾಲಯ, ಚಿಣಮಗೇ-ರಿಯ ವೀರಭದ್ರ ದೇವಾಲಯ; ಮಾಸ್ತಿಕಲ್ಲು, ಆಳಂದದ ಜೈನ ಮಂದಿರಗಳು; ಜೈನ ಶಿಲ್ಪಗಳು, ಚಿಂಚನಸೂರಿನ ಮಹೇಶ್ವರ ದೇವಾಲಯ; ಅಲ್ಲಿನ ಶಿಲ್ಪಗಳು ಮದನಿಕೆ, ಶಾಸನ ಸುಂದರಿ ಹಾಗೂ ಹುಲಿಬೇಟೆ ವೀರಗಲ್ಲು, ಶಿರವಾಳ, ಕರಕಮುಕ್ಕಿ ಮುಂತಾದ ಕಡೆಗಳಲ್ಲಿನ ನಾಗಶಿಲ್ಪಗಳು, ರಾಜಾಪುರದ ವಿಷ್ಣು, ಮೊಘಾ, ಕಾಳಿ, ಉಡುಗಿ, ಭೈರವ ಮುಂತಾದ ಶಿಲ್ಪಗಳು, ನಿಡಗುಂದಿಯ ವೀರಭದ್ರ ದೇವಾಲಯ ಮತ್ತು ಅಲ್ಲಿನ ಶಿಲ್ಪಗಳು; ತೀರ್ಥಂಕರ ಶಿಲ್ಪ, ಗುರುಮಠಕಲ್‌ನ ನಗರೇಶ್ವರ ದೇವಾಲಯ; ಸೂರ್ಯ ಮುಂತಾದ ಶಿಲ್ಪಗಳು, ತಿಂಥಿಣಿಯ ಮೌನೇಶ್ವರ ಸಮಾಧಿ, ಮಾಡಿಯಾಳದ ಪೀಠಸ್ಥ ಚತುರ್ಮುಖ ಬ್ರಹ್ಮ, ಕೋಳಕೂರಿನ ಮಾಸ್ತಿಕಲ್ಲು, ಮಿರ್‍ಯಾಣದ ವೀರಗಲ್ಲು, ಭರತನೂರಿನ ವೀರಗಲ್ಲು, ಶಿರವಾಳದ ಸ್ತಂಭದ ಕೆತ್ತನೆಗಳು, ಬಿಜ್ಜನಹಳ್ಳಿಯ ಹರಳಯ್ಯ ದಂಪತಿಗಳು ಬಸವೇಶ್ವರರಿಗೆ ಅರ್ಪಿಸಿದ ಪಾದರಕ್ಷೆಗಳು, ವಡಗೇರಿಯ ಚಂದ್ರಶಿಲೆ, ಗುಲಬರ್ಗಾದ ಖ್ವಾಜಾ ಬಂದೇ ನವಾಜ್ ದರ್ಗಾ; ಅಲ್ಲಿನ ಕಲ್ಲಿನ ದೋಣಿ, ಭೂತಪುರದ ಸಪ್ತಮಾತೃಕಾ, ಕೊಂಡುಗುಳಿಯ ಭಿತ್ತಿನ ಕೆತ್ತನೆ ಫಲಕ, ಗೋಗಿಯ ಚಂದಾಹುಸೇನಿ ದರ್ಗಾ; ಆದಿಲ್ ಷಾಹಿ ಅರಸರ ಗೋರಿಗಳು, ಬಾರಾದರಿ, ಆಳಂದಡೆ ಲಾಡ್ಲೆ ಮಶಾಕ್ ದರ್ಗಾ; ಜುಮ್ಮಾ ಮಸೀದಿ, ಕರ್ಜಗಿಯ ಖ್ವಾಜಾ ಶಹಾಬುದ್ದೀನ್ ದರ್ಗಾ, ಜಮಖಂಡಿಯ ಶಿವಪ್ಪಯ್ಯನ ದರ್ಗಾ, ಗುಲಬರ್ಗಾ ಐವಾನ್-ಇ-ಷಾಹಿ ಕಟ್ಟಡಗಳು ಹೀಗೆ ದೊಡ್ಡ ಪಟ್ಟಿಯನ್ನೇ ಬೆಳೆಸಬಹುದು. *(ಎಸ್.ಜಿ.)*

ಸ್ವರವಚನಕಾರರು: ಕನ್ನಡ ನಾಡಿನ ಸ್ವರವಚನಕಾರರ ಪರಂಪರೆ ಹನ್ನೆರಡನೆಯ ಶತಮಾನದಿಂದ ಪ್ರಾರಂಭವಾದರೂ ಕೂಡಾ ಅದು ಆಗಾಗ ಕಾಲ ಪ್ರವಾಹಕ್ಕೆ ತುತ್ತಾಗುತ್ತ 18-19ನೆಯ ಶತಮಾನದಲ್ಲಿ ಮತ್ತೆ ತಲೆ ಎತ್ತಿತು. ಕನ್ನಡ ತತ್ವಪದಕಾರರಲ್ಲಿ ಶಿಶುನಾಳ ಶರೀಫ ಸಾಹೇಬ, ಕೈವಾರದ ನಾರಾಯಣ ತಾತ, ಚೆನ್ನೂರದ ಜಲಾಲ ಸಾಬ, ರಾಮಪುರದ ಬಕ್ಕ, ಕಡಕೋಳದ ಮಡಿವಾಳೇಶ್ವರ, ಕೂಡಲೂರ ಬಸವಲಿಂಗ ಶರಣ ಮೊದಲಾದವರು ಪ್ರಸಿದ್ಧ ರಾಗಿದ್ದಾರೆ. ಈ ಸ್ವರ ವಚನಕಾರರ ಪರಂಪರೆಗೆ ಜಿಲ್ಲೆ ಹೊರತಾಗಿಲ್ಲ. ಅದೇ ಸಮಯದಲ್ಲಿ ಬೀದರ ಜಿಲ್ಲೆಯಲ್ಲಿ ಮರಕುಂದಿಯ ಬಸವಣ್ಣಪ್ಪ, ನಿಡವಂಚಿಯ ಭದ್ರೇಶ್ವರ, ಮಾಣಿಕನಗರದ ಮಾಣಿಕಪ್ರಭು, ಕೋಹಿನೂರ ಭದ್ರಪ್ಪ, ಧುಮ್ಮನಸೂರಿನ ಸಿದ್ಧಪ್ರಭು, ಚಿಟಗುಪ್ಪದ ಮಂಕಲ್ ಹಣಮಂತ, ಶಿಲ್ಲಪ್ಪ ಭೂತಾಳೆ, ಖೇಳಗಿಯ ಪೀರಪ್ಪ, ಹಾರಕೂಡಿನ ಶಾಂತಪ್ಪ, ಕೊಳ್ಳೂರಿನ ಹುಸನ, ಮಗಲಗಿಯ ನನ್ನಾಸಾಹೇಬ, ಬಾಗಹಿಪ್ಪರಗಾದ ನಬಿಸಾಬ ಮೊದಲಾದವರು ತಮ್ಮ ತತ್ವಪದಗಳಿಂದ ಸಾಹಿತ್ಯ ಲೋಕ ಬೆಳಗಿದ್ದಾರೆ.

1780 ರಿಂದ 1947ರ ವರೆಗೆ ಬೀದರ ಜಿಲ್ಲೆಯ ತತ್ವಪದಕಾರರ ಸಂಖ್ಯೆ 25 ರ ಗಡಿ ದಾಟುತ್ತದೆ. ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿಯೇ ಹೆಚ್ಚಿನ ಸಂಖ್ಯೆಯ ತತ್ವಪದಕಾರರು ಆಗಿಹೋಗಿದ್ದಾರೆ. ನಂತರ ಹುಮನಾಬಾದ, ಬೀದರ, ಭಾಲ್ಕಿ ಹಾಗೂ ಔರಾದಗಳಲ್ಲಿ ತಲಾ ನಾಲ್ಕೈದು ಜನ ದೊರೆಯುತ್ತಾರೆ. ಇವರು ವಿವಿಧ ಜಾತಿಗಳಿಗೆ ಸೇರಿದವರಾಗಿದ್ದು ವಿವಿಧ ಕಸಬುಗಳನ್ನು ಅವಲಂಬಿಸಿದರೆಂಬ ಸಂಗತಿ ತಿಳಿದುಬರುತ್ತದೆ. ಕೆಲವರು ಒಕ್ಕಲುತನ, ದಿನಗೂಲಿ, ಶಿಕ್ಷಕ ವೃತ್ತಿ, ಗುಮಾಸ್ತ, ನೌಕರ ಮೊದಲಾದ ಹುದ್ದೆಗಳಲ್ಲಿ ಇದ್ದರೆಂದು ತಿಳಿದು ಬರುತ್ತದೆ.

ಪ್ರಸಿದ್ಧ ಸ್ವರವಚನಕಾರರು: ಬೀದರ ಜಿಲ್ಲೆಯ ಪ್ರಸಿದ್ಧ ಸ್ವರವಚನಕಾರರಲ್ಲಿ ಮರಕುಂದಿ ಬಸವಣ್ಣಪ್ಪ, ಧುಮ್ಮನಸೂರಿನ ಸಿದ್ಧಪ್ರಭು, ಮಾಣಿಕನಗರದ ಮಾಣಿಕ ಪ್ರಭು, ಕೋಹಿನೂರ ಹುಸನ, ನಿಡವಂಚಿಯ ನಿಜಲಿಂಗ ಭದ್ರೇಶ್ವರ, ಲಾದಾ ಸಿವರಾಯ, ಮಂಕಲ ಹಣಮಂತ, ಭೂತಾಳೆ ಶಿಲ್ಲಪ್ಪ ಮೊದಲಾದವರು ಪ್ರಮುಖರಾಗಿದ್ದಾರೆ.

ಮರಕುಂದಿಯ ಬಸವಣ್ಣಪ್ಪ: ಬೀದರ ಜಿಲ್ಲೆ ಸ್ವರವಚನಕಾರರಲ್ಲಿ ಪ್ರಥಮನೆಂದು ಹೇಳಬಹುದು. ಈತ ಗುಲಬರ್ಗಾ ಜಿಲ್ಲೆ ಬಾಗೋಡಿ ಗ್ರಾಮದಲ್ಲಿ ಕ್ರಿ.ಶ. 1780ರಲ್ಲಿ ಜನಿಸಿದರೂ ಇವನ ಕಾರ್ಯಕ್ಷೇತ್ರ ಬೀದರ ಜಿಲ್ಲೆಯ ಮರಕುಂದಿ ಗ್ರಾಮವೇ ಆಯಿತು. ಇವನ ಗುರು ಶಿರಡಿಗೆಯ ಸಿದ್ದೇಶ್ವರನಾಗಿದ್ದ. ಸಿದ್ಧ, ರೇವಣ್ಣಸಿದ್ಧ, ಸಿದ್ಧಲಿಂಗ ಹಾಗೂ ಕಾಡಸಿದ್ಧ ಎಂಬ ಅಂಕಿತದಲ್ಲಿ ಇವನು ಸಾವಿರಾರು ಹಾಡುಗಳನ್ನು ರಚಿಸಿದ್ದಾನೆ. ಮಾಣಿಕರಾವ ಧನಶ್ರೀ ಹಾಗೂ ಎಚ್. ಕಾಶೀನಾಥ ರೆಡ್ಡಿಯವರು "ಮರಕುಂದಿಯ ಬಸವಣ್ಣಪ್ಪನ ಭಜನೆಗಳು ಮತ್ತು ತತ್ವ ಪದಗಳು" ಎಂಬ ಹೆಸರಿನಲ್ಲಿ ಸಂಪಾದಿಸಿ ಬಸವತೀರ್ಥ ಪ್ರಕಾಶನದಿಂದ ಪ್ರಕಟಿಸಿದ್ದಾರೆ (1995). 1850ರಲ್ಲಿ ಈತ ಲಿಂಗೈಕ್ಯವಾದ. ಅವನ ಸಮಾಧಿ ಮರಕುಂದಿಯಲ್ಲಿ ಇಂದಿಗೂ ಕಾಣಬಹುದಾಗಿದೆ.

ಮಾಣಿಕಪ್ರಭು: ಮಾಣಿಕ ಪ್ರಭುಗಳು ಕ್ರಿ.ಶ. 1817ರಲ್ಲಿ ಇಂದಿನ ಬಸವಕಲ್ಯಾಣ ತಾಲ್ಲೂಕಿನ ಲಾಡವಂತಿ ಎಂಬ ಹಳ್ಳಿಯಲ್ಲಿ ಜನಿಸಿದರು. ಮನೋಹರ ನಾಯಕ ಹಾಗೂ ಬಾಯಮ್ಮ ಎಂಬ ದಂಪತಿಗಳೇ ಇವರ ತಂದೆ-ತಾಯಿ. ಮಾಣಿಕ ಪ್ರಭುಗಳು ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಆತ್ಮರೂಪ ಪ್ರತೀತಿ', ಮಲ್ಹಾರಿ ಮಹಾತ್ಮೆ, 'ಹನುಮಂತ ಜನ್ಮ', 'ಸಂಗಮೇಶ್ವರ ಮಹಾತ್ಮೆ' ಮೊದಲಾದವು ಪ್ರಸಿದ್ಧವಾಗಿವೆ. ಅವರು ಹಿಂದಿ, ಮರಾಠಿ ಹಾಗೂ ಕನ್ನಡ ಭಾಷೆಯಲ್ಲಿ ಅನೇಕ ತತ್ವ ಪದಗಳನ್ನು ರಚಿಸಿದ್ದಾರೆ. ಅವುಗಳನ್ನು 'ಪದ್ಯಮಾಲಾ ಸಂಗ್ರಹ' ಎಂಬ ಗ್ರಂಥದಲ್ಲಿ ಸಂಗ್ರಹಿಸಲಾಗಿದೆ. ಮಾಣಿಕ ಪ್ರಭುಗಳು ಸಕಲ ಮತಗಳನ್ನು ಸಮನ್ವಯ ದೃಷ್ಟಿಯಿಂದ ಕಂಡು ಜಾತ್ಯತೀತ ಸಮಾಜ ರಚನೆಗೆ ಶ್ರಮಿಸಿದವರು. ಇವರ ಸಾಹಿತ್ಯದಲ್ಲಿ ಈ ಅಂಶವನ್ನು ನಾವು ಕಂಡುಕೊಳ್ಳಬಹುದು. ಅವರು ಪವಾಡ ಪುರುಷರಾಗಿ ಮೆರೆದಿದ್ದಾರೆ. ಪ್ರತಿ ವರ್ಷ ಡಿಸೆಂಬರ ತಿಂಗಳಲ್ಲಿ ಇವರ ಸಮಾಧಿಯ ಸ್ಥಳ ಮಾಣಿಕ ನಗರದಲ್ಲಿ ಜಾತ್ರೆ ನೆರವೇರುತ್ತದೆ. ಈ ಜಾತ್ರೆಗೆ ಆಂಧ್ರಪ್ರದೇಶ, ಮಹಾರಾಷ್ಟ್ರ ಹಾಗೂ

ಕರ್ನಾಟಕದ ಅನೇಕ ಭಾಗಗಳಿಂದ ಜನ ಬಂದು ಸೇರುತ್ತಾರೆ. ಇವರು 1865ರಲ್ಲಿ ಜೀವಂತ ಸಮಾದಿ ಪಡೆದರೆಂದು ಚರಿತ್ರೆಗಾರರು ಉಲ್ಲೇಖಿಸಿದ್ದಾರೆ. ಇವರ ಸ್ವರವಚನಗಳಲ್ಲಿ 'ಮಾಣಿಕ' ಎಂಬ ಅಂಕಿತವು ಬರುತ್ತದೆ.

ನಿಡವಂಚಿಯ ನಿಜಲಿಂಗ ಭದ್ರೇಶ್ವರರು: ಬೀದರ ತಾಲ್ಲೂಕಿನ ನಿಡವಂಚಿ ಗ್ರಾಮದಲ್ಲಿ ನಿಜಲಿಂಗ ಭದ್ರೇಶ್ವರರು 1832 ರಲ್ಲಿ ಜನಿಸಿದರು. ಇವರ ತಂದೆ-ತಾಯಿಗಳಾದ ಸಿದ್ಧಯ್ಯ ಮತ್ತು ರುದ್ರಮ್ಮರು ಜಂಗಮ ಜಾತಿಯವರು. ಭದ್ರೇಶ್ವರರ ಹೆಂಡತಿ ಕಲ್ಲಮ್ಮ. ಇವರು ಸಂಸಾರ ತ್ಯಾಗ ಮಾಡಿ ಉದಗೀರದ ಶಂಕರಲಿಂಗರ ಶಿಷ್ಯರಾಗಿ ಸನ್ಯಾಸ ಸ್ವೀಕರಿಸಿದರು. ತಮಗಾದ ಜೀವನಾನುಭವವನ್ನು ತತ್ವ ಪದಗಳಲ್ಲಿ ರಚಿಸಿ ಹಾಡಿದರು. ಇವರ ಹಾಡುಗಳನ್ನು ಎಂ.ಎಸ್.ಲಠ್ಠೆ ಹಾಗೂ ಎಚ್. ಕಾಶೀನಾಥ ರೆಡ್ಡಿಯವರು "ನಿಜಲಿಂಗ ಭದ್ರೇಶ್ವರರ ಅನುಭವ ಪದಗಳು" ಎಂಬ ಹೆಸರಿನಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ (1987). ಶಂಕರಲಿಂಗ, ನಿಜಲಿಂಗ ಭದ್ರೇಶ್ವರ ಎಂಬ ಅಂಕಿತದಲ್ಲಿ ಅನೇಕ ಪದ್ಯಗಳನ್ನು ರಚಿಸಿದ್ದಾರೆ. ಇವರು ಪವಾಡ ಪುರುಷರಾಗಿ ಮೆರೆದರು. ಸರ್ವಧರ್ಮ ಸಮನ್ವಯ ತತ್ವವನ್ನು ಒಪ್ಪಿಕೊಂಡು ಅದರಂತೆ ಸಮಾಜ ಬದಲಿಸಲು ಪ್ರಯತ್ನಿಸಿದರು.

ಧಮ್ಮನಸೂರಿನ ಸಿದ್ಧಪ್ರಭು: 1887ರಲ್ಲಿ ಹಮನಾಬಾದಿನ ಕೆಳಪ್ಯಾಟಿಯಲ್ಲಿ ಜನ್ಮತಾಳಿದರು. ಇವರು ಮದುವೆಯಾಗಿ ಸಂಸಾರದಲ್ಲಿದ್ದುಕೊಂಡೆ ಪಾರಮಾರ್ಥದ ಒಲವು ಬೆಳೆಸಿಕೊಂಡರು. ಚಿಕ್ಕಂದಿನಿಂದಲೇ ಅನೇಕ ಹಾಡುಗಳನ್ನು ರಚಿಸಿ ಹಾಡುವುದು ಇವರ ಹವ್ಯಾಸವಾಗಿತ್ತು. ಇವರು ಹೊಟ್ಟೆಪಾಡಿಗಾಗಿ ಭಾಲ್ಕಿ ಹಾಗೂ ಜಹಿರಾಬಾದಗಳಲ್ಲಿ ಅಂಗಡಿಯಲ್ಲಿ ಮುನಿಮಗಿರಿ (ಗುಮಾಸ್ತ) ಕೆಲಸ ಮಾಡುತ್ತಿದ್ದರು. ಇವರು ಅಂದಿನ ಪ್ರಸಿದ್ಧ ಶರಣರಾದ ನಾವದಗಿಯ ರೇವಪ್ಪಯ್ಯರನ್ನು ಗುರುವಾಗಿ ಅಂಗೀಕರಿಸಿ ಅನೇಕ ಸ್ವರವಚನಗಳನ್ನು ರಚಿಸಿದರು. ಎಚ್. ಕಾಶೀನಾಥ ರೆಡ್ಡಿಯವರು ಸಿದ್ಧಪ್ರಭುಗಳ ಹನ್ನೆರಡು ನೂರು ಪದ್ಯಗಳನ್ನು ಸಂಗ್ರಹಿಸಿದ್ದಾರೆ. ಅವಿನ್ನೂ ಪ್ರಕಟಗೊಂಡಿಲ್ಲ. ಸಿದ್ಧಪ್ರಭುಗಳು ತಮ್ಮ ಪದ್ಯಗಳಲ್ಲಿ 'ಸಿದ್ಧ' ಎಂಬ ಅಂಕಿತವನ್ನು ಬಳಸಿದ್ದಾರೆ.

ಬೀದರ ಜಿಲ್ಲೆ ತತ್ವಪದಕರರಲ್ಲಿಯೇ ಸಿದ್ಧಪ್ರಭುಗಳಿಗೆ ಬಹು ದೊಡ್ಡ ಸ್ಥಾನವಿದೆ. ಇವರು ತತ್ವದ ಪದಗಳಲ್ಲದೆ ಅನೇಕ ಜನಪದ ಹಾಡುಗಳನ್ನು ಕೂಡ ರಚಿಸಿದ್ದಾರೆ. 'ಭೂಕೈಲಾಸ' ಮತ್ತು 'ಚಂದ್ರಾ ಶಿರೋಮಣಿ' ಎಂಬ ಎರಡು ಸಣ್ಣಾಟಗಳನ್ನು ರಚಿಸಿ ಸ್ವತಃ ಪ್ರದರ್ಶನ ಮಾಡಿದ್ದಾರೆ. ಹನ್ನೆರಡನೆಯ ಶತಮಾನದ ಶಿವಶರಣರ ವಚನ ಸಾಹಿತ್ಯದ ಛಾಯೆ ಅವರ ಹಾಡುಗಳ ಮೇಲೆ ದಟ್ಟವಾಗಿ ಆವರಿಸಿದೆ. ಸಿದ್ಧಪ್ರಭುಗಳು 1977ರಲ್ಲಿ ಲಿಂಗೈಕ್ಯರಾದರೆಂದು ತಿಳಿದು ಬರುತ್ತದೆ.

ಕೋಹಿನೂರ ಭದ್ರಪ್ಪ: ಕ್ರಿ.ಶ. 1846ರಲ್ಲಿ ಬಸವಕಲ್ಯಾಣ ತಾಲ್ಲೂಕಿನ ಕೋಹಿನೂರ (ಕೊಳ್ಳೂರು) ಗ್ರಾಮದಲ್ಲಿ ಇವರ ಜನನವಾಯಿತು. ಇವನು ಚಿಕ್ಕಂದಿನಿಂದಲೂ ಸಂಸಾರದಲ್ಲಿ ಆಸಕ್ತಿ ಇಲ್ಲದೆ ಅಧ್ಯಾತ್ಮದ ಕಡೆಗೆ ಮನಸ್ಸು ಹರಿಸಿದ. ಇವನು ತನ್ನ ಪದ್ಯಗಳಲ್ಲಿ 'ಭದ್ರಪ್ಪ ಗೌಡ' ಎಂಬುದು ಇವನ ಅಂಕಿತ ನಾಮ. ಇವನ ಅನೇಕ ಶಿಷ್ಯರಲ್ಲಿ 'ಹುಸನಸಾಬ' ಪ್ರಮುಖನಾಗಿದ್ದಾನೆ. ಭದ್ರಪ್ಪಗೌಡರು ನೂರಾರು ಪದ್ಯಗಳು ರಚಿಸಿದರೂ ಕೂಡಾ ಇಂದು ಅವುಗಳು ಲಭ್ಯವಿಲ್ಲ. ಅನುಭಾವಿಯಾದ ಭದ್ರಪ್ಪ ಗೌಡರು ಸಮಾಜದಲ್ಲಿಯ ಹುಳುಕುಗಳನ್ನು ದೂರೀಕರಿಸಿ ಸುಧಾರಿಸಲು ಪ್ರಯತ್ನಿಸಿದ್ದಾರೆ. ಇವರ ಹಾಡುಗಳು ಪ್ರಕಟವಾಗಬೇಕಾಗಿದೆ.

ಕೋಹಿನೂರ ಹುಸನಾ: (1874-1964) ಬೀದರ ಜಿಲ್ಲೆಯ ಕೆಲವೇ ಜನ ಮುಸ್ಲಿಮ ತತ್ವಪದಕಾರರಲ್ಲಿ ಒಬ್ಬ. ಮಂಗಲಗಿ ನನ್ನಾಸಾಹೇಬ, ಬಾಗಹಿಪ್ಪರಗಾದ ನಬೀಸಾಬ, ಕೋಹಿನೂರಿನ ಹುಸನಾಸಾಬ, ಕೋಹಿನೂರ ಪಹಾಡಿನ ಲಾಡ್ ಮಹಮ್ಮದ ಮೊದಲಾದವರು ಪ್ರಮುಖರಾಗಿದ್ದಾರೆ. 1874ರಲ್ಲಿ ಜನಿಸಿದ ಹುಸನಸಾಬ ಬಸವಕಲ್ಯಾಣ ತಾಲ್ಲೂಕಿನ ಪ್ರಥಮ ಮುಸ್ಲಿಂ ತತ್ವಪದಕಾರನೆಂದು ಹೇಳಬಹುದು. ಭದ್ರಪ್ಪಗೌಡನಿಗೆ ಗುರುವನ್ನಾಗಿ ಮಾಡಿಕೊಂಡ ಹುಸನಾಸಾಬ ವೀರಶೈವ ಸಿದ್ಧಾಂತವನ್ನು ಸ್ವೀಕರಿಸಿ ಅದಕ್ಕನುಗುಣವಾಗಿ ತನ್ನ ಪದಗಳನ್ನು ರಚಿಸಿದ. ಹಾರಕೂಡ ಮಠ ಚೆನ್ನಬಸವ ಶಿವಯೋಗಿಯನ್ನು ತನ್ನ ಆರಾಧ್ಯ ದೈವವನ್ನಾಗಿ ಮಾಡಿಕೊಂಡು ಅವರಿಂದ ಲಿಂಗದೀಕ್ಷೆಯನ್ನು ಪಡೆದು ಶಿರಗಾಪುರದಲ್ಲಿ ಬಂದು ನೆಲೆಸಿದ. ಅಲ್ಲಿಯೇ ಅನೇಕ ಸ್ವರವಚನಗಳನ್ನು ರಚಿಸಿದನೆಂದು ತಿಳಿದು ಬರುತ್ತದೆ. ಇವನ ಹಾಡುಗಳಲ್ಲಿ 'ಕೊಳ್ಳೂರು ಹಸನಾ' ಎಂಬ ಮುದ್ರಿಕೆಯು ಕಂಡುಬರುತ್ತದೆ. ಜಿ.ಬಿ. ವಿಸಾಜಿ ಹಾಗೂ ವಿಜಯಶ್ರೀ ಸಬರದ ಅವರು ಬೇರೆ ಬೇರೆಯಾಗಿ ಇವನ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಇವನು 1964 ರಲ್ಲಿ ನಿಧನ ಹೊಂದಿದ. ಇವನ ಸಮಾಧಿ ಬಸವಕಲ್ಯಾಣ ತಾಲ್ಲೂಕಿನ ಸಿರಗಾಪುರದಲ್ಲಿ ಇದೆ.

ಲಾಧಾ ಗ್ರಾಮದ ಶಿವರಾಯ: ಬೀದರ ಜಿಲ್ಲೆ ಔರಾದ ತಾಲ್ಲೂಕಿನ ಲಾಧಾ ಗ್ರಾಮದಲ್ಲಿ 1879ರಲ್ಲಿ ಜನಿಸಿದ. ಇವನಿಗೆ ಮುಚಳಂಬಿ ಶಿವರಾಯನೆಂದು ಕೂಡಾ ಕರೆಯುತ್ತಾರೆ. ಇವನು ತತ್ವಪದಗಳ ರಚನೆಯ ಜೊತೆಯಲ್ಲಿ ಡಪ್ಪಿನಾಟಗಳನ್ನು ರಚಿಸಿದ್ದಾನೆ. ತೊರೆಯ ಸೋಮಲಿಂಗೇಶ ಇವನ ಕುಲದೈವ. ಇವನು ಪಿಂಡಾಂಡ ಮೂಲವನ್ನು ಕುರಿತು ತತ್ವಪದಗಳು ರಚಿಸಿದ್ದಾನೆ. ಇವನ ಪದ್ಯಗಳಲ್ಲಿ 'ಸೋಮಲಿಂಗೇಶ' ಎಂಬ ಅಂಕಿತ ಕಂಡುಬರುತ್ತದೆ.

ಚಿಟಗುಪ್ಪಾದ ಮಂಕಲ ಹಣಮಂತಪ್ಪ: ಚಿಟಗುಪ್ಪಾದ ಪ್ರಸಿದ್ಧ ಕೋಮಟಿಗರ ಮನೆತನದಲ್ಲಿ 1900ರಲ್ಲಿ ಜನಿಸಿದ. ವಿದ್ಯಾಭ್ಯಾಸ ಆಗಿನ ಕಾಲದಲ್ಲಿ ಮ್ಯಾಟ್ರಿಕವರೆಗೆ ಆಗಿತ್ತು. ಉದ್ಯೋಗ ಒಕ್ಕಲುತನ. ಇವನು ನಾರಾಯಣ ಗುರುವಿನ ಆಶ್ರಯದಲ್ಲಿ ಹಲವು ಕಾಲವಿದ್ದು ಆಧ್ಯಾತ್ಮ ಸಾಧನೆಗೈದ. ಅನಂತರ ತತ್ವಪದಗಳ ರಚನೆಗೆ ತೊಡಗಿದ. ಇವನು ತನ್ನ ಪದ್ಯಗಳಲ್ಲಿ ಹೆಚ್ಚಾಗಿ 'ರಾಮ', 'ಕೃಷ್ಣ' ರನ್ನು ಸ್ಮರಿಸಿದ್ದಾನೆ. ಜೀವ ಶಿವರ ಐಕ್ಯವನ್ನು ಸರಳ ಮಾತುಗಳಲ್ಲಿ ತಿಳಿಯುವಂತೆ ಬೀದರ ಭಾಷೆಯಲ್ಲಿ ರಚಿಸಿದ್ದಾನೆ. ಇವನ ಆರುನೂರಕ್ಕೂ ಹೆಚ್ಚಿನ ಪದ್ಯಗಳನ್ನು ಎಚ್. ಕಾಶೀನಾಥರೆಡ್ಡಿಯವರು ಸಂಗ್ರಹಿಸಿ ಪ್ರಕಟನೆಗೆ ಸಿದ್ಧಗೊಳಿಸಿದ್ದಾರೆ. ಇವನ ಹಾಡುಗಳಿಗೆ 'ನಿಜಾನಂದ' ಎಂಬ ಅಂಕಿತವಿದೆ. 'ನಿಜಾನಂದ ಭಜನ ಮಾಲಾ' ಎಂಬ ಚಿಕ್ಕ ಗ್ರಂಥ ಹಿಂದಿಯಲ್ಲಿ ಪ್ರಕಟಗೊಂಡಿದೆ. ಈ ಕವಿಗೆ ಹಿಂದಿ, ಮರಾಠಿ ಹಾಗೂ ಕನ್ನಡ ಭಾಷೆಗಳ ಮೇಲೆ ಚೆನ್ನಾಗಿ ಪ್ರಭುತ್ವವಿದ್ದಂತೆ ತಿಳಿದುಬರುತ್ತದೆ.

ಹುಡಗಿ ಕರಬಸಪ್ಪ: ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಹುಡಗಿ ಗ್ರಾಮದ "ಕಲ್ಯಾಣ ಕಟ್ಟಿಮನಿ ಹಿರೇಮಠ"ದ ಏಳನೆಯ ಪೀಠಾಧಿಪತಿ. ವೀರ ದಿಗಂಬರ ಕರಿಬಸವೇಶ್ವರ ಶರಣರು. ಇವರು ಪವಾಡ ಪುರುಷರು. ಸಿದ್ಧ ಪುರುಷರು, ದೇವತಾ ಪುರುಷರೆಂದೇ ಜನರು ಭಾವಿಸುತ್ತಾರೆ. ಚಳಕಾಪೂರ ಗ್ರಾಮದ ಚನ್ನಬಸವ ಮತ್ತು ಜೋತೆಮ್ಮನವರು ಇವರ ತಂದೆ–ತಾಯಿಯರು. ಬಾಲ್ಯದಿಂದಲೇ ಭಜನೆ, ಕೀರ್ತನೆ ಹಾಗೂ ಧ್ಯಾನ, ಜಪಗಳಲ್ಲಿ ಅಪಾರ ಭಕ್ತಿಯನ್ನು ಇಟ್ಟಿದ್ದರು. ಸದಾ ಒಂಟಿ ಜೀವನಕ್ಕೆ ಹಾತೊರೆಯುತ್ತಿದ್ದರು. ಒಂದು ದಿವಸ ರಾತ್ರಿ ಎಲ್ಲರೂ ಮಲಗಿದ ನಂತರ ತನ್ನ ಮೈಮೇಲಿರುವ ಬಟ್ಟೆಯನ್ನು ತೆಗೆದು ದಿಗಂಬರರಾಗಿ ಮನೆಯನ್ನು ಬಿಟ್ಟು ನಡೆದರು. ನೇರವಾಗಿ ಗೋಟ್ವಂ ಗೊಟ್ಟಿಯ ಅರಣ್ಯ ಪ್ರದೇಶವನ್ನು ಹೊಕ್ಕರು. ಅಲ್ಲಿ ಅನುಷ್ಠಾನ ಕೈಗೊಂಡರು. ಅಲ್ಲಿ ಶಿವಸಾಕ್ಷಾತ್ಕಾರ ಪಡೆದುಕೊಂಡು ಹಂಪೆಯ ಗುರು ಗಜವಿರಟ ಮಹಾಸ್ವಾಮಿಗಳ ದರ್ಶನ ಮಾಡಿದರು. ಅವರ ಆಜ್ಞೆಯ ಮೇರೆಗೆ ಒಂಟೆಯ ಮೇಲೆ ಕುಳಿತು ಹುಡಗಿ ಗ್ರಾಮದ ಮಧ್ಯದಲ್ಲಿರುವ ಶಾಂತಿಧಾಮವಾದ ರಾಮಲಿಂಗೇಶ್ವರ ದೇವಾಲಯವನ್ನು ಪ್ರವೇಶಿಸಿದರು. ಇವರು ತಂಗಿದ ರಾಮಲಿಂಗೇಶ್ವರ ದೇವಸ್ಥಾನ ಪವಿತ್ರ ಕ್ಷೇತ್ರವಾಗಿ ಮಾರ್ಪಾಡುಗೊಂಡಿತ್ತು. ಸಹಸ್ರಾರು ಭಕ್ತರು ಬಂದು ಶ್ರೀಗಳ ದರ್ಶನ ಪಡೆದುಕೊಳ್ಳುತ್ತಿದ್ದರು. ಅಲ್ಲಿಯ ಜನ ಹಾಗೂ ಭಕ್ತರ ಒತ್ತಾಯದ ಮೇರೆಗೆ ಅಲ್ಲಿಯ ಹಿರೇಮಠದ ಅಧಿಪತಿಯಾಗಿದ್ದರು. ಸಮಾಜ ಹಿತಕ್ಕಾಗಿ ಹಲವಾರು ಕಾರ್ಯ ಸಾಧನೆ ಗೈದು 1807ರಲ್ಲಿ ಲಿಂಗೈಕ್ಯರಾದರು.

ಧುಮ್ಮನಸೂರ ಸಿದ್ಧಪ್ರಭು: ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನಲ್ಲಿರುವ ಧಮ್ಮನಸೂರ ಗ್ರಾಮ ಸಿದ್ಧಪ್ರಭು ಶರಣರಿಂದ ಪ್ರಸಿದ್ಧವಾಗಿದೆ. ಇವರು ಶರಣ ಸಂಸ್ಕೃತಿಯನ್ನು ಪರಿಪೂರ್ಣ ಅರ್ಥ ಮಾಡಿಕೊಂಡವರು. ನುಡಿದಂತೆ ನಡೆದ ಶರಣರು, ರೇವಪ್ಪಯ್ಯ ಶರಣರ ಪರಮ ಶಿಷ್ಯರಾಗಿದ್ದರು. ತಮ್ಮ ತಪಸ್ಸಿನ ಬಲದಿಂದ ಹಲವಾರು ಸಿದ್ಧಿ ಸಾಧನೆಗಳನ್ನು ಮಾಡಿರುವ ಹೆಗ್ಗಳಿಕೆ ಇವರದು. ಇವರ ಸಿದ್ಧಿಸಾಧನೆಯನ್ನು ಕಂಡು ಜನರು "ಸಿದ್ಧಪ್ರಭು" ಪುರುಷರೆಂಬ ಬಿರುದಿಗೆ ಪಾತ್ರರಾಗಿದ್ದರು.

ಮಾಣಿಕ ನಗರ ಮಾಣಿಕ ಪ್ರಭು: ಲೋಕ ಕಲ್ಯಾಣಕ್ಕಾಗಿ, ಜನ ಕಲ್ಯಾಣಕ್ಕಾಗಿ ಸಂಚಾರ ಗೈದು ಹರಿದ್ವಾರ, ಕೇದಾರ, ಪ್ರಯಾಗ, ಕಾಶಿ, ರಾಮೇಶ್ವರ, ವೆಂಕಟಗಿರಿ, ಗಿರಿನಾದ, ಪಂಢರಪೂರ.... ಮುಂತಾದ ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸಿ ಅನುಷ್ಠಾನ ಗೈದ ಶರಣರು. ಇವರು ಮನೋಹರ ನಾಯಕ ಮತ್ತು ಬಾಯಮ್ಮಾ ಎಂಬ ದಂಪತಿಗಳ ಎರಡನೆಯ ಪುತ್ರನಾಗಿ ಸುಮಾರು 1739 ರಲ್ಲಿ ಜನಿಸಿದರು. ಮಾಣಿಕ ಪ್ರಭುಗಳವರಿಗೆ ಬಸವಕಲ್ಯಾಣದಲ್ಲಿ ಪ್ರಾಥಮಿಕ ಶಿಕ್ಷಣ ಕಲಿಯಲು ಶಾಲೆಯೊಂದರಲ್ಲಿ ಸೇರಿಸಿದರು. ಪ್ರಭುಗಳು ಬಾಲ್ಯದಲ್ಲಿಯೇ ಶಾಲೆಗೆ ಶರಣು ಹೊಡೆದು ಕಲ್ಯಾಣದಲ್ಲಿರುವ ಗವಿಗಳನ್ನು, ಮೂರ್ತಿ, ಮಂದಿರಗಳನ್ನು ಹಾಗೂ ಇನ್ನಿತರ ತೀರ್ಥ ಕ್ಷೇತ್ರಗಳನ್ನು ಗಮನಿಸುತ್ತಾ ಕಾಲ ಕಳೆಯುತ್ತಿದ್ದರು.

ಇವರು ಉಟ್ಟ ಬಟ್ಟೆಯನ್ನು ಹರಿದು ಲಂಗೋಟಿ ಧರಿಸಿ, ಕೈಯಲ್ಲೊಂದು ಜೋಳಿಗೆ ಹಿಡಿದು ಮನೆಯನ್ನು ಪರಿತ್ಯಾಗ ಮಾಡಿ ಅಮೃತ ಕುಂಡವನ್ನು ಸೇರಿದರು. ಅಲ್ಲಿಯೂ ಅನುಷ್ಠಾನವನ್ನು ಕೈಗೊಂಡರು. ಮುಂಚೆ ಚಳಕಾಪೂರ ಹನುಮಾನ ಮಂದಿರದಲ್ಲಿ 4 ತಿಂಗಳ ಉಗ್ರ ತಪಸ್ಸನ್ನು ಮಾಡಿದರು. ಅಲ್ಲಿಂದ ಮೈಲಾರ ಮಲ್ಲಣ್ಣನ ದರ್ಶನ ಪಡೆದು ಆ ಪವಿತ್ರ ಕ್ಷೇತ್ರದಲ್ಲಿಯೇ 41 ದಿವಸಗಳ ಕಾಲ ಅನುಷ್ಠಾನ ಮಾಡಿದರು. ನಂತರ ಭಾಲ್ಕೇಶ್ವರ ದರ್ಶನ ಪಡೆದು ಹುಲಕುಂಟಿಯ ಅರಣ್ಯದಲ್ಲಿ ತಪಸ್ಸು ಮಾಡಿದರು. ಮುಂದೆ ದೇಶ ಸಂಚಾರ ಗೈದು ಗೊಟ್ಟಿಯ ಅರಣ್ಯವನ್ನು ಪ್ರವೇಶಿಸಿ ಅಲ್ಲಿಯೂ ಉಗ್ರ ತಪಸ್ಸು ಮಾಡಿದರು. ಹಲವಾರು ತತ್ವಪದಗಳು, ಭಜನೆ ಪದಗಳು, ಕೀರ್ತನೆಗಳು, ಆರತಿ ಪದಗಳು ರಚಿಸಿ ಹಾಡುತ್ತಿರುವುದು ಇಂದಿಗೂ ಜನರ ನಾಲಿಗೆ ಮೇಲಿವೆ. ಹಲವಾರು ಹಳ್ಳಿ–ಪಟ್ಟಣಗಳಿಗೆ ಪಯಣಿಸಿ, ತತ್ವ ಪದಗಳ ಮುಖಾಂತರ ಜನರನ್ನು ಸನ್ಮಾರ್ಗದತ್ತ ತರಲು ಹಗಲಿರುಳು ಶ್ರಮಿಸಿದ ಶರಣರು. *(ಎಚ್.ಕೆ.)*

ಹ

ಹಂತಿಯ ಹಾಡುಗಳು: ಸುಗ್ಗಿ ಕಾಲದಲ್ಲಿ ಹಂತಿ ಹೊಡೆಯುತ್ತ ಹೇಳುವ ಹಾಡುಗಳು. ಈ ಹಾಡುಗಳು ಹೈದ್ರಾಬಾದ ಕರ್ನಾಟಕದ ವೈಶಿಷ್ಟ್ಯ; ಅದರಲ್ಲಿಯೂ ಬೆಳವಲ ನಾಡಿನ ಭಾಗ್ಯ. ಈ ಹಾಡುಗಳು ಪ್ರಧಾನವಾಗಿ ಹೊಲ ಮನೆಯ ಕಾಯಕವನ್ನು ಕುರಿತು ಹುಟ್ಟಿದ ಅಚ್ಚ ಜನಪದ ಗೀತೆಗಳು. ಅವುಗಳ ಅಧ್ಯಯನದಿಂದ ನಮ್ಮ ಜನಪದರ ಸಂಸ್ಕೃತಿಯನ್ನು ಅರಿಯುವುದರ ಜೊತೆಗೆ ಗ್ರಾಮೀಣ ಜೀವನದ ರೀತಿ–ರಿವಾಜು, ನೋವು–ನಲಿವು, ಭೂತ–ಭವಿಷ್ಯ ಇತ್ಯಾದಿಗಳನ್ನು ತಲಸ್ಪರ್ಶಿ ಯಾಗಿ ತಿಳಿಯಲು ಸಾಧ್ಯ.

ಹಂತಿಯ ಪದಗಳನ್ನು ಕಣಗೆಲಸದ ಸಮಯದಲ್ಲಿ ಬೇಸರ ನಿವಾರಣೆಗಾಗಿ, ಹರುಷದ ಹಿಗ್ಗಿಗಾಗಿ ಶ್ರಮ ಗೀತೆಗಳನ್ನು ದನಿಯೆತ್ತಿ ಹಾಡುತ್ತಿದ್ದ ರೂಢಿಯನ್ನು ಮನಗಾಣುತ್ತೇವೆ. ಮೇ–ಟಿಯ ಸುತ್ತ ಹಾಸಿರುವ ಬೆಳೆಯ ತೆನೆಗಳನ್ನು ತುಳಸಿ ಕಾಲಾಡಿಸಿ, ಕಾಳುಕಂಕಿಯನ್ನು ಬೇರ್ಪಡಿಸಲು ದನಗಳ ಹಂತಿ ಬೇಕು. ಮೇಟಿಗೆ ಹತ್ತಾರು ದನಗಳ ಡಾವಣಿಯನ್ನು ಬಿಗಿದು ತೆನೆಗಳನ್ನು ತುಳಿಸಬೇಕಾದುದು ಮೊದಲ ಕಾರ್ಯ. ಊರ ಮುಂದೆಯೇ ರೈತರು ತಮ್ಮ ತಮ್ಮ ಕಣಗಳನ್ನು ಮಾಡಿಕೊಳ್ಳುವರು. ಅವರ ದವಸ ಧಾನ್ಯ ಅಳತೆ ಮೀರಿರುವುದರಿಂದ ಹಂತಿಯ ಕಾರ್ಯ ಅನೇಕ ದಿನಗಳವರೆಗೆ ನಡೆಯುತ್ತಿತ್ತು. ಒಬ್ಬರನ್ನು ನೋಡಿ ಇನ್ನೊಬ್ಬರು ಹರ್ಷದಿಂದ ಉಬ್ಬುಬ್ಬಿ ಹಂತಿ ಹೊಡೆಯುತ್ತಾರೆ. ಒಬ್ಬ ಕೋಚು ಎತ್ತಿ ಹಾಡು ಮುಗಿಸುವಷ್ಟರಲ್ಲಿಯೇ ಮತ್ತೊಬ್ಬ

ಕೋಚು ಎತ್ತುವನು. ರಾತ್ರಿಯ ಸಮಯವಾದುದರಿಂದ ಅವರ ಧ್ವನಿ ತರಂಗಗಳು ಪ್ರಶಾಂತ ವಾತಾವರಣದಲ್ಲಿ ತೇಲಿಬರುತ್ತವೆ. ಅದೆಲ್ಲ ಕಿವಿಗೆ ಇಂಪು; ಮನಕ್ಕೆ ಸೊಂಪು. ಅಂತಹ ಆನಂದವನ್ನು ಅನುಭವಿಸಿದವನೇ ಬಲ್ಲ. ರೈತರು ತಮ್ಮ ಇಡೀ ವರ್ಷದ ಶ್ರಮದ ಫಲ ಕಣ್ಣೆದುರಿಗೆ ಕಾಳಿನ ರೂಪದಲ್ಲಿ ರಾಸಿಗೊಳ್ಳುವುದನ್ನು ಕಂಡು, ಹಾಡುತ್ತ ನಲಿಯುತ್ತ ಕಣಗೆಲಸ ಮಾಡುತ್ತಿರುವರು. ಉತ್ತಲು, ಬಿತ್ತಲು, ಬೆಳೆ ತೆಗೆಯಲು, ರಾಸಿಮಾಡಲು ಈಗ ಯಂತ್ರಗಳು ಬರತೊಡಗಿವೆ. ಇದರಿಂದ ಬೇಸಾಯ ಕ್ರಮ ಬದಲಾಗತೊಡಗಿದೆ. ಶ್ರಮವೂ ಕಡಿಮೆಯಾಗ ತೊಡಗಿದೆ. ಹೀಗಾಗಿ, ಶ್ರಮ ಗೀತೆಗಳು ನಡೆಯದ ನಾಣ್ಯಗಳಾಗಿ ಮೂಲೆ ಹಿಡಿಯಹತ್ತಿವೆ. ಆದರೂ ಹಾಡು ಕಲಿತವರು ಮರೆಯಲಾರದೆ ಆಗೀಗ ಹಾಡುತ್ತಿರುವುದನ್ನು ಕೇಳುತ್ತೇವೆ.

ಹಂತಿಯ ಹಾಡುಗಳಲ್ಲಿ ಇಂಥವನ್ನೇ ಹಾಡಬೇಕು, ಮಿಕ್ಕವನ್ನು ಹಾಡಬಾರದು ಎಂದು ನಿಯಮವಿಲ್ಲ. ಬೇಸರ ನೀಗಿ, ಉತ್ಸಾಹ ಉಳಿಸಿಕೊಂಡು, ಉದ್ದಾದ ರಾತ್ರಿಯ ಕಾಲವನ್ನು ನೂಕುವುದಕ್ಕಾಗಿ ಎಂಥೆಂಥ ವಿಷಯವನ್ನೊ ಕುರಿತು ಅವರು ಹಾಡಿಕೊಳ್ಳುವರು. ಹಂತಿಯ ಹಾಡಿಗೆ ಒಂದೇ ಧಾಟಿ. ತ್ರಿಪದಿಯನ್ನು ಅಲ್ಲಲ್ಲಿ ಹಿಗ್ಗಿಸಿ, ಕೊನೆಗೆ ಕೋಚುಕೊಟ್ಟು ಹಾಡುವುದೇ ಹಂತಿಯ ಹಾಡಿನ ದಾಟಿ. ವಿಶೇಷವಾಗಿ ಕಣಗೆಲಸಕ್ಕೆ, ಭೂಮಿತಾಯಿಗೆ, ದೇವರು ದಿಂಡರಿಗೆ, ರೈತರ ಬಲಗೈಯಂತಿರುವ ಹೋರಿ, ಎತ್ತುಗಳಿಗೆ ಮತ್ತು ತಮ್ಮ ಆರಾಧ್ಯ ದೇವನಾದ ಶಿವನಿಗೆ ಸಂಬಂಧಿಸಿದ ಹಾಡುಗಳನ್ನು ರೈತರು ಹೇಳುವರು. ಇಲ್ಲಿ ಹೆಂಗಸರು ಭಾಗವಹಿಸಿ ಹಾಡುವುದೇ ಇಲ್ಲ. ಹಂತಿಯ ಪದಗಳು ಗಂಡುನಾಡಿನ ಗಂಡಸರ ಪದಗಳು; ಉತ್ಸಾಹ, ಭಕ್ತಿ, ಹಾಸ್ಯ ಹಾಗೂ ಮನರಂಜಕ ಪ್ರಧಾನ ಉಲ್ಲಾಸ ಗೀತೆಗಳು ಇವುಗಳಲ್ಲಿ ದುಃಖಕ್ಕೆ ಎಡೆಯಿಲ್ಲ. ಅಳು ಮರೆಯಲೆಂದೇ ಹುಟ್ಟಿ ಹೊರಬಂದ ಹಾಡುಗಳಿವು.

ಇಡೀ ಭಾರತೀಯರ ಹಾಗೂ ವಿಶ್ವ ಜಾನಪದರ ಮೂಲಭೂತ ಗುಣಲಕ್ಷಣಗಳೆನಿಸಿದ ಸಂಪ್ರದಾಯ ನಿಷ್ಠೆ, ಭೂ ವ್ಯಾಮೋಹ ಹಾಗೂ ದೈವಭಕ್ತಿಯೇ ಮುಂತಾದ ಹಲವು ಅಂಶಗಳು ಹಂತಿಯ ಹಾಡುಗಳಲ್ಲಿ ಕಲಾತ್ಮಕವಾಗಿ ಚಿತ್ರಿತವಾಗಿರುವುದನ್ನು ಕಾಣುತ್ತೇವೆ. ರೈತರ ಕಣ್ಣಲ್ಲಿ ಎಲ್ಲ ದೇವರೂ ಸರಿ ಸಮಾನ; ಅಷ್ಟೇ ಅಲ್ಲದೆ ಎತ್ತು, ಆಕಳು, ಮೊರ, ಪೊರಕೆ, ಮೇಟಿ, ಮ್ಯಾಟ, ತೂರುವ ಬುಟ್ಟಿ, ಬೀಸುವ ಕಲ್ಲು, ಒರಳು, ಮಡಕೆ, ಧಾನ್ಯ ಮುಂತಾದ ದಿನಬಳಕೆಯ ವಸ್ತುಗಳೆಲ್ಲ ಅವರಿಗೆ ದೇವರ ಸಮಾನ. ಆದ್ದರಿಂದಲೇ ನಮ್ಮ ಜಾನಪದರು ಹಂತಿಯ ಪದಗಳ ಮೊದಲಿಗೆ ಸಾಂಪ್ರದಾಯಕವಾಗಿ ದೇವತೆಗಳನ್ನು ಕುರಿತು ಹಾಡುವದು ಸಹಜವಾಗಿದೆ.

ಹಂತಿಯ ಹಾಡುಗಳನ್ನು ಸಮಗ್ರವಾಗಿ ಸಂಗ್ರಹಿಸುವ ಕಾರ್ಯ ಇನ್ನೂ ಆಗಿಲ್ಲ. ಸಣ್ಣ ಪುಟ್ಟ ಸಂಗ್ರಹಗಳು ಮಾತ್ರ ಅಲ್ಲಲ್ಲಿ ಕಣ್ಣಿಗೆ ಬೀಳುತ್ತಿವೆ. ನಿಜವಾದ ಹಂತಿಯ ಹಾಡುಗಳನ್ನು ಕಂಡು ಹಾಡಿ ಹರ್ಷಿಸಬೇಕಿದ್ದರೆ ಎಂ.ಎಸ್.ಲಠ್ಠೆ ಅವರ ಉತ್ತರ ಕರ್ನಾಟಕದ ಹಂತಿಯ ಹಾಡುಗಳು ಎಂಬ ಕೃತಿಯನ್ನೇ ಆಶ್ರಯಿಸಬೇಕು. ಇದೊಂದು ಅಪೂರ್ವ ಸೊಗಡುಳ್ಳ ಸಂಗ್ರಹ ಗ್ರಂಥ. ಇದರ ಮೊದಲ ವಿಭಾಗದಲ್ಲಿ ದೇವದೇವಿಯರ ಸ್ತುತಿಪದಗಳಿವೆ. ಇವೆಲ್ಲವೂ ತ್ರಿಪದಿಗಳಾಗಿದ್ದು ಅಚ್ಚ ಜಾನಪದೀಯ ಸತ್ವ, ಆವರಣ ಹೊಂದಿವೆ. ಗಣಪ, ಶಿವ, ಪಾರ್ವತಿ, ಕೃಷ್ಣ, ಹನುಮ, ಸರಸ್ವತಿ, ಲಕ್ಷ್ಮಿ, ಭೂಮಿತಾಯಿ, ಎಲ್ಲಮ್ಮ, ಚೌಡಮ್ಮ, ದ್ಯಾಮವ್ವ, ದುರಗಮ್ಮ, ಜಕ್ಕವ್ವ – ಹೀಗೆ ಎಲ್ಲ ದೇವತೆಗಳಿಗೆ ರೈತ ಎದೆಮಣಿದು ಹಾಡಿದ್ದಾನೆ. ಸುಗ್ಗಿಯ ಭಾಗ್ಯಲಕ್ಷ್ಮಿಯನ್ನು ಜನಪದ ಕವಿ ಹಲವು ಬಗೆಯಾಗಿ ಕಲ್ಪಿಸಿಕೊಂಡು ಬಣ್ಣಿಸಿದ್ದಾನೆ. ಹಂತಿಯ ಹಾಡುಗಳ ಸೃಷ್ಟಿಕರ್ತರೂ ಸಂವಾಹಕರೂ ದಿಟವಾದ ಶ್ರಮಜೀವಿಗಳು ಆಗಿರುವ ಹರಿಜನರನ್ನು ಇಲ್ಲಿ ಅವಶ್ಯಕವಾಗಿ ನೆನೆಯಬೇಕು. ಹೆಚ್ಚಾಗಿ ಹಂತಿ ಹೊಡೆಯುವ ಹಕ್ಕು ಅವರದು. ಅಂತೆಯೇ ಅವರು ಎದೆಯುಬ್ಬಿಸಿಕೊಂಡು ಹಂತಿ ಸಾಗಿಸುತ್ತ ಬಂದವರು. ರೈತರಿಗೆ ಅವರು ಬೇಕೇಬೇಕು. ಒಂದು ದೃಷ್ಟಿಯಿಂದ ನೋಡಿದರೆ ಹಂತಿಯ ಹಾಡುಗಳು ಹರಿಜನ ನಿರ್ಮಿತವೆಂದು ಹೇಳಬಹುದಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಹಬ್ಬ ಹರಿದಿನಗಳಲ್ಲಿ ಹರೆ, ತಮಟೆ ಬಡಿದು, ಮೌರಿಯನ್ನು ಊದಿ, ಓಲಗ ನಡೆಸುವವರು ಹರಿಜನರೇ ಆಗಿರುವರು. ಅವರು ಜನಪದ ಸಂಸ್ಕೃತಿಯನ್ನು, ಕಲೆಗಳನ್ನು ಪರಂಪರೆಯಿಂದ ಕಾಯ್ದುಕೊಂಡು ಬಂದಿದ್ದಾರೆ. ಅವರು ಯುಗಯುಗಾಂತರ ಗಳಿಂದ ಸಮಾಜದ ಬೆನ್ನೆಲುವಾಗಿದ್ದು ಕೊಂಡು ದುಡಿಯುತ್ತ ಬಂದಿದ್ದಾರೆ. ಅವರಿಗೆ ಲೋಕ ಋಣಿಯಾಗಿರಬೇಕಾಗಿದೆ.

ಹಂತಿ ತಿರುಗುವುದು ಇಡೀ ರಾತ್ರಿ. ಬೆಳತನಕ ಕೋಚೆತ್ತುವ ಹಾಡುಗಾರರು. ಆ ಸಮಯದಲ್ಲಿ ಹೆಂಸಗರು ಕಣದಲ್ಲಿ ಇರುವುದಿಲ್ಲ. ನಾಚಿಕೆಗೆ ಬಂಧನ ಇರುವುದಿಲ್ಲ. ಎಂತಲೇ ರಸಗಳ ರಾಜನಾದ ಶೃಂಗಾರ ರಸಕ್ಕೆ ಪ್ರಾಧಾನ್ಯ ಬರುತ್ತದೆ. ಒಮ್ಮೊಮ್ಮೆ ಅದು ಅಶ್ಲೀಲದ ಅಂಚು ಮುಟ್ಟುವುದೂ ಉಂಟು. ಶೃಂಗಾರವಿದ್ದಲ್ಲಿ ಹಾಸ್ಯವೂ ಹಾಜರು. ಹೀಗೆ ಶೃಂಗಾರ, ಹಾಸ್ಯವನ್ನೊಳಗೊಂಡ ಅಸಂಖ್ಯಾತ ಹಾಡುಗಳು ಹಂತಿಯ ಹಾಡಾಗಿರುವದನ್ನು ಕಾಣಬಹುದು. *(ಎಸ್.ಬಿ.)*

ಹಕ್ಕಿಪಿಕ್ಕಿ: ಒಂದು ಅಲೆಮಾರಿ ವರ್ಗ. ಹಕ್ಕಿಯನ್ನು ಹಿಡಿಯುವುದರಿಂದ ಈ ಹೆಸರು ಬಂದಿದೆ. "ಹಕ್ಕಿಯನ್ನು ಹೆಕ್ಕು" ಎಂಬ ಪದ (ಹಿಕ್ಕು=ಹಿಡಿ, ಹಿಕ್ಕು>ಪಿಕ್ಕು) ನಿಷ್ಪನ್ನವಾಗಿದೆ. ಈ ಹೆಸರಿನ ಪ್ರಾಚೀನತೆ ಇರುವುದಿಲ್ಲ. ಕಿಟಲ್ ನಿಘಂಟಿನಲ್ಲಿ ಈ ಪದದ ಬಳಕೆ ಇದ್ದರೂ, ಇದಕ್ಕಿಂತ ಮುಂಚೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಜನಾಂಗ ಕರ್ನಾಟಕಕ್ಕೆ ವಲಸೆ ಬಂದು 200 ವರ್ಷಗಳಾಗಿರಬಹುದು. ಈ ಮೊದಲೇನಾದರೂ ಕರ್ನಾಟಕಕ್ಕೆ ಬಂದಿದ್ದರೆ ವ್ಯಾಪಾರದ ದೃಷ್ಟಿಯಿಂದ ಅಂತ ಹೇಳಬಹುದು. ಸಮಕಾಲೀನತೆಯ ಸಂದರ್ಭದಲ್ಲಿ ಹಕ್ಕಿಪಿಕ್ಕಿಯವರು ಹೈದ್ರಾಬಾದ್ ಕರ್ನಾಟಕದ ಬೀದರ್, ಗುಲಬರ್ಗಾ, ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವರು.

ಇವರ ಪ್ರಧಾನ ಕಸಬು ಹಕ್ಕಿಯನ್ನು ಹಿಡಿಯುವುದು. ಇವರು ಹಕ್ಕಿಗಳ ಜೊತೆಗೆ ಚಿಗರೆ, ಮೊಲ, ಕಾಡುಕೋಳಿ, ಕಾಡುಬೆಕ್ಕು, ಇನ್ನೂ ಅನೇಕ ಪ್ರಾಣಿಗಳನ್ನು ಹಿಡಿಯುವರು.



ಹಕ್ಕಿಪಿಕ್ಕಿ

ಬೇಟೆಯೇ ಪ್ರಧಾನ ವೃತ್ತಿಯಾಗಿರುವುದರಿಂದ ಅಲೆಮಾರಿಗಳಾಗಿರುತ್ತಾರೆ. ಇವರು ಅಲೆಮಾರಿಗಳಾಗಿರುವುದರಿಂದ ಆಹಾರ ಪದ್ಧತಿಯು ತುಂಬ ಸರಳವಾಗಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಕಡುಬಡತನ. ಸಸ್ಯ, ತರಕಾರಿ ಅಥವಾ ಮಾಂಸದ ಅಡುಗೆ ಸರಳವಾಗಿರುತ್ತದೆ. ಇವರು ಹೆಚ್ಚಾಗಿ ಅನ್ನವನ್ನೇ ಊಟ ಮಾಡುವರು. ದಿನಕ್ಕೆ ಒಂದೇ ಬಾರಿ ಊಟಮಾಡಿದರೂ ಇವರ ಆರೋಗ್ಯ ಚೆನ್ನಾಗಿರುತ್ತದೆ. ಇತ್ತೀಚೆಗೆ ವ್ಯಾಪಾರವನ್ನು ಅವಲಂಬಿಸಿರುವರು. ಹೆಂಗಸರು ಭಿಕ್ಷೆ ಬೇಡಿದರೂ ಅನೇಕ ಸಾಮಗ್ರಿಗಳನ್ನು ಮಾರಾಟಮಾಡುವರು. ಸಾಮಾನ್ಯವಾಗಿ ಹೆಂಗಸರು ಸೂಜಿ, ದಬ್ಬಣ, ಪಿನ್ನು, ಕಸ್ತೂರಿ, ಗೋರಂಜನ, ಕರಿಮಣಿ, ಹಾಲಮಣಿ, ನವುಲತುಪ್ಪ, ಉಡಿನತುಪ್ಪ, ರುದ್ರಾಕ್ಷಿ, ಸಣ್ಣ ರುದ್ರಾಕ್ಷಿ, ಇದು ನೇಪಾಳದ ಕಡೆ ಸಿಕ್ಕುವುದು. ಜೇನುತುಪ್ಪ, ಹುಲಿ ಉಗುರು, ಹದ್ದಿನ ಉಗುರು, ಹುಲಿ ಹಲ್ಲು ಪಂಚಮುಖಿ ರುದ್ರಾಕ್ಷಿ, ಏಕಮುಖಿ ರುದ್ರಾಕ್ಷಿ, ಹುಲಿಮೀಸೆ, ಹುಲಿಯಚರ್ಮ, ಹೆಂಗಸರೇ ತಯಾರಿಸುವ ಚೌಲಿ, ಮಕ್ಕಳ ಆಟಿಕೆ ಸಾಮಾನುಗಳು ಪೀಪಿ, ಪಿನ್ನ, ಏರಪಿನ್ನ, ಪಟ್ಟಣದಿಂದ ಕೊಂಡುತಂದು ಹಳ್ಳಿಯ ಜನರಿಗೆ ಮಾರಾಟ ಮಾಡುವುದನ್ನು ಇಂದಿಗೂ ಕಾಣಬಹುದಾಗಿದೆ.

ಕೆಲವು ಸಂದರ್ಭದಲ್ಲಿ ಅನೇಕ ರೋಗಗಳಿಗೆ ಔಷಧಿಯನ್ನು ಕೊಡುವರು. ಬಾಣಂತಿ ರೋಗಕ್ಕೆ, ತಲೆಮುದ್ದು, ನಾಯಿಕಚ್ಚಿದರೆ, ಶೀತ, ಹೊಟ್ಟೆನೋವು, ದೃಷ್ಟಿಯಾದರೆ, ಕಾಲಿಗೆ ಮುಳ್ಳು ಚುಚ್ಚಿದರೆ, ಭೇದಿ, ಹಲ್ಲುನೋವು, ಬಿಳಿ ಮುಟ್ಟಾದರೆ, ಹೆರಿಗೆ ನೋವಿನ ತಲೆಕೂದಲು ಬಾರದೆ ಇದ್ದರೆ, ಲಕ್ವಾಹೊಡೆದರೆ, ಮೂಲವ್ಯಾಧಿಗೆ ಮೂರ್ಛೆರೋಗ, ದಮ್ಮು, ಇಸುಬು ಹೀಗೆ ಇನ್ನೂ ಅನೇಕ ರೋಗಗಳಿಗೂ ನಾಟಿ ಔಷಧ ಮಾಡಿಕೊಡುವರು. ಇವರಲ್ಲಿ ಕೆಲವರಿಗೆ ಜಮೀನು ಇದ್ದರೂ ವ್ಯವಸಾಯಕ್ಕಾಗಿ ಹೆಚ್ಚಾಗಿ ತೊಡಗಿಕೊಂಡಿಲ್ಲ. ವ್ಯಾಪಾರವೇ ಹೆಚ್ಚು ಲಾಭದಾಯಕ ಆಗಿರುವುದರಿಂದ ಅತ್ತಕಡೆ ಹೆಚ್ಚು ವಾಲಿರುವರು. ತಮ್ಮ ಜಮೀನನ್ನು ಗುತ್ತಿಗೆ, ವಾರಕ್ಕೆ ಕೊಟ್ಟು ತಾವು ವ್ಯಾಪಾರದಲ್ಲಿ ನಿರತರಾಗಿರುತ್ತಾರೆ. ಕೆಲವು ಸಂದರ್ಭದಲ್ಲಿ ಕೆಲವು ಕಾಲ ಅಲೆಮಾರಿಗಳಾಗಿದ್ದರೆ ಇನ್ನೂ ಕೆಲವು ಸಾರಿ ಎಲ್ಲಿಯೂ ಹೋಗದೆ ವರ್ಷಗಟ್ಟಲೇ ಇರುವುದುಂಟು. ಭಿಕ್ಷೆಯಂತ ಸಾಂಪ್ರದಾಯಿಕವಾದ ಕಸುಬಿನಿಂದ ಹಣ ಸಂಪಾದನೆ ಮಾಡಿದರೂ ಆಭರಣಗಳ ವ್ಯಾಪಾರದವರೆಗೂ ವೈವಿಧ್ಯಮಯವಾದ ಕಸುಬುಗಳನ್ನು ಮಾಡುವರು. ಇವರು ಅಲೆಮಾರಿ ಬದುಕಿನೊಂದಿಗೆ ಲೌಕಿಕ ಜ್ಞಾನ, ಭಾಷಿಕ ಜ್ಞಾನ ವೃದ್ಧಿಯಾಗುತ್ತಿರುತ್ತದೆ. ಅಲ್ಲದೆ ಬಹುಸಂಸ್ಕೃತಿಗಳ, ಬಹುಪ್ರದೇಶಗಳ ಸಂಸ್ಕೃತಿಯೊಂದಿಗೆ ಬೆರೆತು ಅದನ್ನು ತಮ್ಮದಾಗಿ ಮಾಡಿಕೊಳ್ಳಲು ಅವಕಾಶವಿರುತ್ತದೆ ಎಂದು ಹೇಳಬಹುದು. *(ಎಚ್.ಕೆ.ಎನ್.)*

ಹಗಲು ವೇಷಗಾರರು: ಒಂದು ಅಲೆಮಾರಿ ಜನಾಂಗ. ಊರೂರಿಗೆ ಬೀಡಾರ ಹಾಕುತ್ತಾರೆ. ವೇಷಧಾರಿಗಳು, ಬಹುರೂಪಿಗಳು ಎಂದು ಮುಂತಾಗಿ ಕರೆಯುವುದುಂಟು. ಇವರಲ್ಲಿ ಗಂಡಸರು ಹಗಲು ವೇಷ ಧರಿಸಿ ಭಿಕ್ಷೆ ಎತ್ತಿ ತಂದರೆ, ಹೆಣ್ಣುಮಕ್ಕಳು ಗಂಗೆ–ಗೌರಿ ಪದ, ತತ್ತ್ವ ಪದಗಳನ್ನು ಹೇಳುತ್ತ ಕಾಳು ಕಡಿ ಸಂಗ್ರಹಿಸುತ್ತಾರೆ.

ಇವರು ನಿತ್ಯ ಹಗಲಿನಲ್ಲೂ ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣಗಳಿಗೆ ಸಂಬಂಧಿಸಿದ ಪ್ರಸಂಗಗಳನ್ನು ಆಧರಿಸಿ, ರಾಮ–ಸೀತೆ–ಲಕ್ಷ್ಮಣ–ಹನುಮಂತ, ಅರ್ಧನಾರೀಶ್ವರ ಮುಂತಾದ ವೇಷಗಳನ್ನು ಧರಿಸಿ, ಮುಖಕ್ಕೆ ನೀರಿನ ಬಣ್ಣವನ್ನು ಬಳಿದುಕೊಂಡು, ಹಾರ್ಮೋನಿಯಂ ಹಾಗೂ ತಬಲಾ ನುಡಿಸುತ್ತ ಪ್ರತಿ ಮನೆಯ ಮುಂದೆ ನಿಂತು, ಮಾತನ್ನು ಹೇಳುತ್ತ ಹಾಡನ್ನು ಹಾಡುತ್ತ ಸನ್ನಿವೇಶವನ್ನು ನಿರೂಪಿಸುವುದುಂಟು. ಆಗಾಗ ಹುಲಿವೇಷ, ಸಿದ್ಧರ ವೇಷ, ಕರಡಿವೇಷಗಳನ್ನು ಹಾಕಿ ಜನರನ್ನು ರಂಜಿಸುತ್ತ ಊರೆಲ್ಲ ಸುತ್ತುವರು. ಹೀಗೆ 7–8 ದಿನ ಊರೆಲ್ಲ ಸುತ್ತಿ ಆದಮೇಲೆ ಮನೆಮನೆಗೆ ಅಲೆದು ದವಸ–ಧಾನ್ಯಗಳನ್ನು, ಹರಿದ ಬಟ್ಟೆ, ಹಣವನ್ನು ಸಂಗ್ರಹಿಸುವುದುಂಟು.

ಸಾಮಾನ್ಯವಾಗಿ ಇವರು ಹಳ್ಳಿಗಳಿಗೆ ಶ್ರಾವಣ ಮಾಸದಲ್ಲಿ ಆಗಮಿಸುವರು. ಆಗ ರೈತರು ತಮ್ಮ ಹೊಲದ ಬದುಕನ್ನೆಲ್ಲ ಮುಗಿಸಿ ವಿಶ್ರಾಂತಿಯಲ್ಲಿ ಇರುವುದರಿಂದ ಇದು ಇಂಥ ಮನರಂಜನೆಗಳನ್ನು ನೋಡಲು ತಕ್ಕ ಸಮಯ. *(ಬಿ.ಪಿ.ಎಸ್.)*

ಹಚ್ಚೆ: ಸ್ತ್ರೀಯರು ಮೈಮೇಲೆ ಅಲಂಕಾರಿಕವಾಗಿ ಚಿತ್ರ ಬರೆದು ಹಸಿರು ಬಣ್ಣ ತುಂಬಿ ಸೂಜಿಯಿಂದ ಚುಚ್ಚಿದಾಗ ಉಂಟಾಗುವ ಚಿತ್ತಾರ ಹಚ್ಚೆ. ಹಚ್ಚೆ, ಪಚ್ಚೆ, ಹಣಚಿ, ಹಣಚಿಬೊಟ್ಟು, ಅಣಚಿ, ಹಂಚೆ, ಹಂಚಿಬೊಟ್ಟು ಎಂದೆಲ್ಲಾ ಇದನ್ನು ಕರೆಯುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಇದು ಅರಿಶಿಣ, ಕುಂಕುಮ, ಮದರಂಗಿಗಳಂತೆ ಶುಭ, ಸೌಭಾಗ್ಯದ ಸಂಕೇತವಾಗಿದೆ. ಹೆಚ್ಚಾಗಿ ಇದನ್ನು ಲಂಬಾಣಿಗರು ಹಾಕಿಸಿಕೊಳ್ಳುತ್ತಾರೆ. ಮುಸ್ಲಿಂರಲ್ಲಿ ಇದು ನಿಷಿದ್ಧ, ಉಳಿದಂತೆ ಹಿಂದೂಗಳು, ಕ್ರಿಶ್ಚಿಯನ್ನರು ತಮಗೆ ಇಷ್ಟವಿದ್ದ ಚಿತ್ತಾರಗಳನ್ನು, ಧಾರ್ಮಿಕ ಚಿನ್ಹೆಗಳನ್ನು ಹಾಕಿಸಿಕೊಳ್ಳುತ್ತಾರೆ.



ಹಚ್ಚೆ ಹಾಕುವುದು

ಕಣಿ ಹೇಳುವ ಕೊರವಂಜಿಗಳು, ಕೊರವರು, ಕಿಳ್ಳೆಕ್ಯಾತರು, ಒಡ್ಡರು, ಬುರುಡೆ ಬೆಸ್ತರು, ಬೇಡರು, ಮೇದರು, ಜೋಗಿಗಳು ಇದರ ಕಸುಬುದಾರರು. ಇವರು ಊರೂರು ಅಲೆಯುತ್ತಾ ಜಾತ್ರೆ, ಸಂತೆ, ನಾಗರ ಪಂಚಮಿ, ಕಾರ್ತೀಕ ಹಬ್ಬಗಳಂದು ಹಚ್ಚೆಯನ್ನು ಹೊಯ್ಯುತ್ತಾರೆ. ಹಿಂದೂಗಳು ತಮ್ಮ ಮಗಳು ಐದು ವರ್ಷದವಳಾದರೆ ಶುಭ ಮುಹೂರ್ತದಂದು 'ಹಚ್ಚೆ' ಹಾಕಿಸುತ್ತಿದ್ದರು. ಮುತ್ತೈದೆತನ ಶಾಶ್ವತವಾಗಲೆಂದೂ, ಮಾಡಿದ ಅಡುಗೆ ರುಚಿಕಟ್ಟಾಗಲು, ಸತ್ತಾಗ ಜೊತೆ ಬರುವುದು ಅದೊಂದೇ ಎಂದೂ, ಸ್ತ್ರೀಯರನ್ನು ಅಪಹರಿಸದಿರಲೆಂದೂ (ಗಂಡುಳ್ಳ ಬಾಲೆಯೆಂಬ ಕಾರಣ) ನಾನಾ ಕಾರಣಗಳಿಗಾಗಿ ಹಚ್ಚೆ ಹಾಕಿಸುತ್ತಿದ್ದರು. ಹಿಂದೆ ಸೈನ್ಯದಲ್ಲಿದ್ದು ಪುರುಷರೂ, ರಸಿಕರೂ ಇದನ್ನು ಹಾಕಿಸಿಕೊಳ್ಳುತ್ತಿದ್ದರು.

ಬಸವಣ್ಣನವರ ವಚನದಲ್ಲಿ "ಐದೆ ಅಣಚಿಯಿಲ್ಲದವಳಿಗೆ ಸೌಭಾಗ್ಯದ ಹೂವಿನ ಬೋಟ್ಟೇಕೆ?" ಎಂಬ ಉಲ್ಲೇಖವಿದೆ. ಹಚ್ಚೆಯನ್ನು ಸಾಮಾನ್ಯವಾಗಿ ಹಣೆ, ಗಲ್ಲ, ಕೆನ್ನೆ, ಅಂಗೈ, ಬೆನ್ನು, ಎದೆ, ತೋಳುಗಳ ಮೇಲೆ ಹಾಕಿಸುತ್ತಾರೆ. ಇಲ್ಲಿನ ಚಿತ್ರಗಳೆಂದರೆ ನಕ್ಷತ್ರ, ಸೂರ್ಯ, ಚಂದ್ರ, ಬೊಟ್ಟು, ಒಲೆಗುಪ್ಪು, ಕಮಲ, ಗಿಳಿ, ಕಳಸ, ಮಾವಿನೆಲೆ ಮುಂತಾದವುಗಳು.

ಹಚ್ಚೆ ಪದಗಳು: ಹಚ್ಚೆ ಹೊಯ್ಯುವಾಗ ಗಾಬರಿಗೊಂಡಿದ್ದ ತರುಣಿಯರ ಮನಸ್ಸನ್ನು ಇನ್ನೊಂದೆಡೆಗೆ ಹರಿಸಲು, ಹಾಸ್ಯವನ್ನು ಉಕ್ಕಿಸುವುದರಿಂದ ದುಃಖ ಮರೆಸಲು, ನೀತಿ ಬೋಧೆ ಮುಂತಾದ ಈ ಹಾಡುಗಳಲ್ಲಿವೆ. ಹಚ್ಚೆ ಕಸುಬುದಾರರ ಬವಣೆ, ನೋವು–ನಲಿವುಗಳನ್ನು ಇಲ್ಲಿ ಕಾಣುತ್ತೇವೆ. ಕೆಲವು ಹಚ್ಚೆ ಪದಗಳನ್ನು ಇಲ್ಲಿ ನೋಡಬಹುದು:

ಸತ್ತರ ಸಂಗಾತಿ ಇದ್ದರ ಗೆಣಕಾತಿ
ಸತ್ತರ ನಮ ಕೂಟ ಬರೂದಲ್ಲೆ
ಕೈಮ್ಯಾಗಳ ಹಚ್ಚೆ ತರುವಲ್ಲಿ

ಇಲ್ಲಿ ಹಚ್ಚೆ ಶಾಶ್ವತವಾದುದು ದೇಹ ಮಣ್ಣಾದರೂ ಅದು ನಮ್ಮೊಂದಿಗಿದ್ದು ಯಮನ ಕೃಪೆಗೆ ಪಾತ್ರವಾಗುತ್ತದೆ ಎಂಬುದು ಜನಪದರ ಭಾವನೆ.

ಹಣಚಿ ಬೊಟ್ಟು ಚುಚ್ಚಿಕೊಳ್ಳಮ್ಮ
ಹಣಚಿ ಬೊಟ್ಟು ಚುಚ್ಚಿಕೊಳ್ಳೆ ಮಗಳೆ
ಹಾಳು ಹಣೆ ಇರಬಾರದಮ್ಮ
ಗೋದಿ ಕಾಳಿಕನಷ್ಟು ಇರಬೇಕೇನಮ್ಮ
ಹಣಚಿ ಬೊಟ್ಟು ಚುಚ್ಚಿಕೊಳ್ಳಮ್ಮ


ಈ ಪದದಲ್ಲಿ ಹಚ್ಚೆಯ ಬಗೆಗಿನ ನಂಬಿಕೆ, ಧರ್ಮದಲ್ಲಿ ಅದಕ್ಕಿದ್ದ ಸ್ಥಾನಮಾನ (ಮಹತ್ವ)ಗಳು ಕಂಡು ಬರುತ್ತದೆ.

ಕೆಲಸ ನನ್ನದಾಯಿತು ಚೆಲುವು ನಿನ್ನದಾಯತು ಎಂದು ಉತ್ಸಾಹಭರಿತವಾಗಿ ಹಾಡುವಾಗ ಹಚ್ಚೆ ಹಾಕಿಸಿಕೊಂಡವಳು ನೋವನ್ನು ಮರೆಯುತ್ತಾಳೆ, ಹಾಕಿದವಳೂ ಹರ್ಷಗೊಳ್ಳುತ್ತಾಳೆ.

(ಎಸ್.ಪಿ.)

ಹಜರತ್ ಅಮಿನೋದ್ದೀನರು: ಕಲಬುರ್ಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಇಜೇರಿಯಲ್ಲಿ ನೆಲೆಸಿರುವ ಪವಾಡಪುರುಷ ಮೂಲತಃ ವಿಜಾಪುರ ಜಿಲ್ಲೆಯವರು. ಇವರ ವಂಶ ಪರಂಪರೆಯ ಏಳನೆಯ ವಂಶಿಕರು ಹಜರತ್ ಖ್ವಾಜಾ ಅಮಿನೋದ್ದೀನ್ ಅವರ ಇಚ್ಛೆಯಂತೆ ಅಮೀನೋದ್ದೀನ್ ಅವರು ಸುಕ್ಷೇತ್ರ ಇಜೇರಿ ಗ್ರಾಮಕ್ಕೆ ಬಂದು ನೆಲೆಸಿದರೆಂದು ಹೇಳಲಾಗುತ್ತದೆ.

ಹಜರತ್ ಅಮೀನ್ ಅವರ ಹುಟ್ಟು ಒಂದು ವಿಚಿತ್ರ. ಅಮೀನವರ ತಂದೆ ತಾಯಿಗಳಿಗೆ ವಯಸ್ಸು ಮೀರಿದರೂ ಮಕ್ಕಳಾಗಲಿಲ್ಲ. ಮಕ್ಕಳಿಲ್ಲದೆ ನಿರಾಶೆಯಿಂದ ಜೀವನ



ಹಜರತ್ ಅಮಿನೋದ್ದೀನ್, ಇಜೇರಿ

ಕಳೆಯುತ್ತಿದ್ದರು. ಈ ಕೊರಗಿನಿಂದಲೇ ಈ ವಯಸ್ಕ ದಂಪತಿಗಳು ಮನೆಯಲ್ಲಿ ದೀಪವನ್ನೂ ಹಚ್ಚುತ್ತಿರಲಿಲ್ಲ. ಹೀಗೆ ಕತ್ತಲಲ್ಲಿ ದಿನಗಳನ್ನು ಕಳೆಯುತ್ತಿದ್ದಾಗ, ಯೋಗಿಯೊಬ್ಬ ಭಿಕ್ಷೆಗಾಗಿ ಮನೆ ಬಾಗಿಲಿಗೆ ಬಂದು ತಾಯೇ ನಾನು ಹಸಿವಿನಿಂದ ಬಳಲಿದ್ದೇನೆ. ಏನಾದರೂ ಇದ್ದರೆ ಹಾಕಿರಿ ಎಂದು ಕೂಗಿದ. ಅಮೀನವರ ತಾಯಿ ಹೊರಗೆ ಬಂದು, ರೊಟ್ಟಿ ತರಬೇಕು ಎನ್ನುವಷ್ಟರಲ್ಲಿ ಆತ, 'ತಾಯೇ ಊರಿನ ಎಲ್ಲಾ ಮನೆಗಳಲ್ಲಿ ರಾತ್ರಿ ದೀಪ ಬೆಳಗಿದರೆ, ನಿನ್ನ ಮನೆಯಲ್ಲಿ ಮಾತ್ರ ಕತ್ತಲು ತುಂಬಿಕೊಂಡಿದೆಯಲ್ಲ ಯಾಕೆ?' ಎಂದು ಪ್ರಶ್ನಿಸಿದ. ಆಕೆ ಎಲ್ಲರ ಮನೆಯಲ್ಲಿ ದೀಪ ಬೆಳಗುವ ಮಕ್ಕಳಿದ್ದಾರೆ. ಆದರೆ, ನನಗೆ ಆ ಭಾಗ್ಯವಿಲ್ಲ ಎಂದು ಉದಾಸೀನತೆಯಿಂದ ಹೇಳಿದಾಗ, ಆ ಯೋಗಿ ನಕ್ಕು, ಮಕ್ಕಳಿಲ್ಲ ಎಂಬ ದುಃಖ ಪಡಬೇಡ ತಾಯೇ. ನಿನಗೂ ಒಬ್ಬ ಮಗ ಹುಟ್ಟುತ್ತಾನೆ. ಆತ ಮಹಾನ್ ಪವಾಡ ಪುರುಷನಾಗಿ ದೇಶವನ್ನು ಬೆಳಗುತ್ತಾನೆ. ಈ ಮಹಾಪುರುಷನ ಹೆಸರು 'ಜಹಾ ತಕ್ ಜಮೀನ್, ವಹಾ ತಕ್ ಅಮೀನ್, ಎಂದು ಇಡುವಂತೆ ಸೂಚಿಸಿದನೆಂದು ಹೇಳಲಾಗುತ್ತದೆ.

ಈ ತಾಯಿಗೆ ಅಗಲೇ 60 ವರ್ಷ. ಯೋಗಿಯ ಮಾತು ಕೇಳಿ ತಾಯಿ ನಕ್ಕು, ನನಗೆ ಈಗ ಮಕ್ಕಳ ಹೆರುವ ವಯಸ್ಸು ಇದೆಯೇ? ಎಂದಾಗ, ಆ ಯೋಗಿ ದೇವರ ಇಷ್ಟ ಯಾರಿಗೂ ತಿಳಿಯದು. ಆದ ವಯಸ್ಸು ಮಾಗಿದರೆ ಏನೆಲ್ಲ ಆಗುತ್ತದೆ ಎಂದು ಹೇಳಿದ. ಈ ಮಾತಿನಿಂದ ಜೀವನದಲ್ಲಿ ಆಸೆ ಚಿಗುರಿ, ಆ ಮಹಿಳೆ ಭಿಕ್ಷೆ ತರಲು ಒಳಗೆ ಹೋಗಿ ಬರುತ್ತಲೇ, ಯೋಗಿ ಮಾಯವಾಗಿದ್ದ.

ಯೋಗಿಯ ಭವಿಷ್ಯ ವಾಣಿಯಂತೆ ಮುಂದೆ ಅಮೀನ್ ಹುಟ್ಟಿದ. ಎಂಟು ಒಂಬತ್ತು ವರ್ಷದವನಿರುವಾಗಲೇ, ತಂದೆ ತಾಯಿಂದ ಅಗಲಿ ಅಲೆದಾಡುತ್ತ ಇಜೇರಿ ಗ್ರಾಮಕ್ಕೆ ಬಂದ. ಇಜೇರಿ ಗ್ರಾಮಕ್ಕೆ ಬಂದಾಗ, ಅವರನ್ನು ಕಂಡದ್ದು ಮೊದಲು ಕಂಡವರು ಗ್ರಾಮದ ಪಟವಾರಿ ಬಾಪುರಾವು ಹಣಮಂತರಾವ್ ಪಟವಾರಿ. ಪಟವಾರಿಯವರು ಅಮೀನನ ಮುಖ ನೋಡಿ, ಆ ಹುಡುಗನಲ್ಲಿ ಏನೋ ತೇಜಸ್ಸನ್ನು ಕಂಡರು. ಸ್ವತಃ ಪಟವಾರಿ ಜ್ಞಾನಿಯಾಗಿರುವುದರಿಂದ ಆ ಮುಖದಲ್ಲಿನ ಕಳೆ ಅವರನ್ನು ಸೆಳೆಯಿತು. ಆತನಿಗೆ ತಮ್ಮ ಬಳಿ ಕೆಲಸಕ್ಕೆ ನೇಮಿಸಿಕೊಂಡರು. ದಿನಾಲೂ ತೋಟದ ಕೆಲಸ ವಹಿಸಿದರು.

ತೋಟದ ಕೆಲಸ ಮಾಡಿ ಆಯಾಸದಿಂದ ಬಳಲಿ ಮರದ ಕೆಳಗೆ ಅಮೀನ್ ಮಲಗಿಕೊಂಡಿದ್ದ. ಅವರು ಮಲಗಿದ ಸಂದರ್ಭದಲ್ಲಿ ಮುಖದ ಮೇಲೆ ಬಿಸಿಲು ಬಿದ್ದಿತು. ಅವರ ಮುಖದ ಮೇಲೆ ಬಿಸಿಲು ಬೀಳದಂತೆ ಏಳು ಹೆಡೆಯ ಸರ್ಪವೊಂದು ತನ್ನ ಹೆಡೆಯನ್ನು ಬಿಚ್ಚಿ ಅವರ ಮುಖಕ್ಕೆ ನೆರಳು ಮಾಡಿತ್ತು. ಇದನ್ನು ಕಂಡ ಪಟವಾರಿಯವರು, ನಿಬ್ಬೆರಗಾದರು. ಪಟವಾರಿಯವರ ಹೆಜ್ಜೆಯ ಸಪ್ಪಳಕ್ಕೆ ಆ ಸರ್ಪ ಅಲ್ಲಿಂದ ಮಾಯವಾಯಿತು.

ಈತ ಸಮಾನ್ಯ ವ್ಯಕ್ತಿಯಲ್ಲ. ಈತನಿಂದ ದುಡಿಸಿಕೊಳ್ಳುವುದು ಸರಿಯಲ್ಲ ಎಂದು, ನೀನು ಒಬ್ಬ ಮಹಾಪುರುಷ. ಅದಕ್ಕಾಗಿ ನೀನು ದುಡಿಯದೇ ಕೇವಲ ಮೇಲ್ವಿಚಾರಕನಾಗಿ ಕೆಲಸ ಮಾಡುವಂತೆ ಪಟವಾರಿಯವರು ಅಮೀನನಿಗೆ ತಿಳಿಸಿದರು. ಹಾಗೆಯೇ ಅವರಿಗೆ ಬೇರೆ ಸ್ಥಳದಲ್ಲಿ ಇರಲು ಅವಕಾಶ ಮಾಡಿಕೊಟ್ಟರು. ಅಮೀನ್ ಸ್ವತಃ ಒಂದು ಗುಡಿಸಲು ಹಾಕಿಕೊಂಡು ಬೇರೆ ಇರಲು ಪ್ರಾರಂಭಿಸಿದರು.

ಆದರೆ ಈ ಮಹಾನ್ ಪವಾಡ ಪುರುಷನಿಗೆ ಬೆಳಕಿಗೆ ತರಬೇಕೆಂದು ಪಟವಾರಿಯವರು ನಿರ್ಧರಿಸಿದರು, ಅವರ ಅನಿಸಿಕೆಯಂತೆ ಒಂದು ಪವಾಡವೂ ನಡೆದು ಹೋಯಿತು. ಇಜೇರಿ ಗ್ರಾಮದ ಪೊಲೀಸ್ ಪಾಟೀಲಯವರ ಸಂತತಿಯಲ್ಲಿ ಹುಸೇನ ಪಟೇಲ್ ಅವರಿಗೆ ಮೈಯಿಂದ ರಕ್ತ ಸುರಿದು ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದರು. ಆ ಸಮಯದಲ್ಲಿ ಎಲ್ಲರ ವಿರೋಧದ ಮಧ್ಯೆಯೂ ಪಟವಾರಿಯವರು ಅಮೀನ ಅವರಿಗೆ ತಿಳಿಸಿ, ಗುಣಮುಖ ಮಾಡುವಂತೆ ಕೇಳಿಕೊಂಡರು. ಆ ದೇವರ ಇಚ್ಛೆಯಂತೆ ಎಂದು ಹೇಳಿದ ಅಮಿನ್ ಅವರು ಪೊಲೀಸ್ ಗೌಡರ ಮನೆಗೆ ಬಂದು, ಒಂದು ಚಿಟಕೆ ಬೂದಿಯನ್ನು ಅವರ ಬಾಯಿಗೆ ಹಾಕಿದರು. ವಿಚಿತ್ರವೆಂದರೆ ಸಾಯುವಂತಹ ಸ್ಥಿತಿಯಲ್ಲಿದ್ದ ಮನುಷ್ಯ ಚೇತರಿಸಿಕೊಂಡರು. ಎಲ್ಲರ ಜೊತೆಗೆ ಮಾತನಾಡಲು ಪ್ರಾರಂಭಿಸಿದರು.

ಈ ಘಟನೆಯಿಂದ ಅವರ ಕೀರ್ತಿ ಮತ್ತಷ್ಟು ಹೆಚ್ಚಿತು. ಆಗ ಹುಸೇನ್ ಪಟೇಲರು ಸಂತುಷ್ಟರಾಗಿ, ನನ್ನಿಂದ ಏನು ಸೇವೆಯಾಗಬೇಕೆಂದು ಮನವಿ ಮಾಡಿಕೊಂಡರು. ವಿಜಾಪುರದಿಂದ ಬಂದು ಕುದುರೆ ಹೊರಟಿದೆ. ಆ ಕುದುರೆ, ಇಲ್ಲಿಗೆ ಬರುತ್ತದೆ. ಅದು ಇಲ್ಲಿ ಬಂದು ಯಾವ ಜಮೀನಿನಲ್ಲಿ ನಿಲ್ಲುತ್ತದೆ. ಆ ಜಮೀನು ನನಗೆ ಕೊಡಿ. ಅಲ್ಲಿ ಹಜರತ್ ಖಾಜಾ ಅಮೀನುದ್ದೀನವರ ಅಂದರೆ ನಮ್ಮ ತಾತನವರ ದರ್ಗಾ ಕಟ್ಟಿಸಬೇಕಾಗಿದೆ ಎಂದು ಹೇಳಿದರು.

ಅದಕ್ಕೆ ಪಟೇಲರು ಒಪ್ಪಿಗೆ ನೀಡಿದರು. ಪಟೇಲರ ಹೊಲದಲ್ಲಿಯೇ ಕುದುರೆ ಬಂದು ನಿಂತಿತು. ಅವರ ಇಚ್ಛೆಯಂತೆ ಆ ಜಮೀನು ಅಮೀನುದ್ದೀನರ ದರ್ಗಾ ಕಟ್ಟಿಸಲು ಕಾಣಿಕೆ ರೂಪದಲ್ಲಿ ನೀಡಿದರು. ಮುಂದೆ ಅಮೀನವರ ಇಚ್ಛೆಯಂತೆ ಹಜರತ್ ಖ್ವಾಜಾ ಅಮೀನೊದ್ದೀನರ ದರ್ಗಾ ಕಟ್ಟಡ ನಿರ್ಮಾಣ ಪ್ರಾರಂಭವಾಯಿತು. ಈ ದರ್ಗಾ ನಿರ್ಮಾಣ ಸಂದರ್ಭದಲ್ಲಿ ಅಮುನ್ ಅವರು ಕೂಲಿಗಾರರಿಗೆ ಹಣ ಎಣಿಸಿ ಕೊಡುತ್ತಿರಲಿಲ್ಲ. ಸಂಜೆ ಹೊತ್ತಿಗೆ ಮರಳಿನ ಕುಪ್ಪೆಗಳನ್ನು ಮಾಡಿ, ಕೂಲಿಕಾರರರಿಗೆ ಒಂದೊಂದೇ ತೆಗೆದುಕೊಂಡು ಹೋಗುವಂತೆ ಸೂಚಿಸುತ್ತಿದ್ದರು. ಅದರಲ್ಲಿ ಅವರ ಕೆಲಸಕ್ಕೆ ತಕ್ಕಷ್ಟು ಹಣವಿರುತ್ತಿತ್ತು. ಆದರೆ, ಕೆಲಸಗಾರನೊಬ್ಬ, ಬೆಳಿಗ್ಗೆಯಿಂದ ಕೆಲಸ ಮಾಡದೇ ಮರಳಿನ ಕುಪ್ಪೆಯೊಂದನ್ನು ಸಾಯಂಕಾಲ ಕೆದಕಿದಾಗ, ಹಣ ದೊರೆಯಲಿಲ್ಲ. ನೀನು ಕೆಲಸ ಮಾಡಿಲ್ಲ. ನಿನಗೆ ಭಗವಂತ ಪ್ರತಿಫಲ ನೀಡಲಿಲ್ಲ ಎಂದು ಅಮೀನರು ಹೇಳಿದರು. ಅದಕ್ಕೆ ಆ ವ್ಯಕ್ತಿ ಪಶ್ಚಾಪ್ತಾಪ ಪಟ್ಟು ಅಮೀನವರಿಗೆ ಶರಣಾಗುತ್ತಾನೆ.

ದರ್ಗಾ ನಿರ್ಮಾಣ ಕೆಲಸ ಕೊನೆಯ ಘಟ್ಟಕ್ಕೆ ಬಂದಾಗ, ಕುಳಗೇರಿಯ ಸಂತ ಖಾದರ್ ಭಾಷಾ ಅವರು ಒಬ್ಬ ಮೇಧಾವಿ ವ್ಯಕ್ತಿಯಾಗಿದ್ದರು. ಅವರು ಅಮೀನುದ್ದೀನರಿಗೆ ಹೇಳಿ ಕಳಿಸಿದರಂತೆ. ಇಜೇರಿಯಲ್ಲಿ ಅಮೀನ್ ದರ್ಗಾ ಮುಗಿದು, ಕಳಶ

ಇಡುವುದು ಮಾತ್ರ ಅಮೀನ್ ನೋಡುವುದಿಲ್ಲ ಎಂದು ಹೇಳಿ ಕಳಿಸಿದರಂತೆ. ಅದಕ್ಕೆ ಅಮೀನವರು ಪ್ರತ್ಯುತ್ತರವಾಗಿ, ಅಮೀನ್ ಅವರು ದರ್ಗಾ ಆಗುತ್ತದೆ, ಕಳಶ ಸ್ಥಾಪನೆಯು ಆಗುತ್ತದೆ. ಆದರೆ, ಕುಳಗೇರಿಯ ಸಂತ ಖಾದರ ಭಾಷಾ ಅವರೆ ಕಳಶ ಸ್ಥಾಪನೆ ಸುದ್ದಿ ಕೇಳುವುದಿಲ್ಲ ಎಂದರಂತೆ. ಅಮೀನ ಅವರು ಅಂದ ಹಾಗೆ, ದರ್ಗಾದ ಕಟ್ಟಡ ಮುಗಿಯಿತು. ಕಳಶ ಸ್ಥಾಪನೆಯ ವಿಜೃಂಭಣೆಯಿಂದ ನೆರವೇರಿತು. ಕುಳಗೇರಿಯ ಖಾದರ ಭಾಷಾ ಅವರು ದೈವಾಧೀನರಾದ ಸುದ್ದಿ ಬಂದಿತೆಂದು ಹೇಳಲಾಗುತ್ತದೆ.

ಖ್ವಾಜಾ ಅಮೀನುದ್ದೀನರ ದರ್ಗಾ ಕಟ್ಟಿದ ವಾಡಿಯ (ಕಲಬುರ್ಗಿ ಜಿಲ್ಲೆ) ವಡ್ಡರಾದ ಭೀಮಯ್ಯ ಹನುಮಯ್ಯ ಅವರಿಗೆ ದರ್ಗಾ ಕಟ್ಟಡಕ್ಕೆ ನಿಮಗೆ ಏನಾದರೂ ಕಾಣಿಕೆ ನೀಡಬೇಕೆಂದಿದ್ದೇನೆ. ನಿನಗೆ ಜಮೀನು ಬೇಕಾದರೆ ತೆಗೆದುಕೊ, ಹಣ ಬೇಕಾದರೆ ಹೇಳು ಎಂದು ಕೇಳಿದರು. ಆದರೆ, ವಡ್ಡರು ಯಾವುದೇ ಕಾಣಿಕೆ ಸ್ವೀಕರಿಸಲಿಲ್ಲ. ನಮಗೆ ಕಾಣಿಕೆ ಕೊಡಬೇಕೆಂದಿದ್ದರೆ, ನಿಮ್ಮ ಸಾನಿಧ್ಯದಲ್ಲಿ ಸ್ಥಾನ ಕೊಡಿ ಎಂದು ಹೇಳಿದರಂತೆ. ಪ್ರತಿವರ್ಷ ಖ್ವಾಜಾ ಅಮೀನುದ್ದೀನರ ಉರಸ್ ಸಂದರ್ಭದಲ್ಲಿ ಅಮೀನದ್ದೀರ ಗಂಧದ ದಿವಸಕ್ಕೂ ಮೊದಲು ನಮ್ಮಿಂದ ಎರಡು ಧ್ವಜ ಆ ದೇವನಿಗೆ ಏರಿಸುತ್ತೇವೆ. ನಮ್ಮಿಂದ ಧ್ವಜ ಏರಿಸಿದ ಮೇಲೆಯೇ ನಿಮ್ಮ ಉರುಸ್ ಕಾರ್ಯಕ್ರಮ ಪ್ರಾರಂಭವಾಗಬೇಕು ಎಂದು ಅವರು ಕೇಳಿಕೊಂಡರು. ಅದರಂತೆ ಇಂದಿಗೂ ಉರಸ್ ಸಂದರ್ಭದಲ್ಲಿ ಹಿಂದೂ ಮುಸ್ಲೀಮರ ಸಾಂಕೇತಿಕ ಚಿತ್ರಣದ ಒಡ್ಡರ ಧ್ವಜ ಏರಿದ ಮೇಲೆ ಉರಸ್ ಕಾರ್ಯಕ್ರಮಗಳು ಆರಂಭವಾಗುತ್ತದೆ.

ಪ್ರತಿ ವರ್ಷ ಯುಗಾದಿ ನಂತರ 11 ದಿವಸಕ್ಕೆ ಅಮೀನುದ್ದೀನರ ಉರಸ್ ಪ್ರಾರಂಭವಾಗುತ್ತದೆ. ದರ್ಗಾ ಕಟ್ಟಿದ ಭೀಮಯ್ಯ, ಅಮೀನರ ಜಾತ್ರೆಗೆ ಬರಬೇಕೆಂದಾಗ, ಮಧ್ಯದಲ್ಲಿ ಭೀಮಾ ನದಿ ತುಂಬಿ ಹರಿಯುತ್ತಿತ್ತು. ತನ್ನ ಹೆಗಲ ಮೇಲಿನ ಕಂಬಳಿ ನದಿಯಲ್ಲಿ ಹಾಕಿ, ಅಮೀನುದ್ದೀನರ ಹೆಸರು ಹೇಳಿ ಕುಳಿತ. ಕಂಬಳಿ ನಾವಿನಂತೆ ಭೀಮಯ್ಯನನ್ನು ಹೊತ್ತು ದಡ ತಲುಪಿಸಿತು ಎಂಬ ಕಥೆಯೂ ಇದೆ.

ಈ ಜಾತ್ರೆ ಮೊದಲು ಸಣ್ಣ ಪ್ರಮಾಣದಲ್ಲಿ ಜರುಗುತ್ತಿತ್ತು. ಅಮೀನೋದ್ದೀನರ ಕೃಪಾಶೀರ್ವಾದದಿಂದ ಊರಿನ ಎಲ್ಲ ಸಮಸ್ತ ನಾಗರಿಕರು ಸೇರಿ, ಈ ಜಾತ್ರಾ ಇನ್ನಷ್ಟು ವಿಜೃಂಭಣೆಯಿಂದ ಜರುಗಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ದನಗಳ ಜಾತ್ರೆಯೂ ನಡೆಯುತ್ತದೆ. ಈಗ 24 ನೆಯ ವರ್ಷಕ್ಕೆ ಕಾಲಿಡುತ್ತಿರುವ ದನಗಳ ಜಾತ್ರೆ, ಕರ್ನಾಟಕದ ಮೂಲೆಮೂಲೆಗೂ ಪ್ರಸಿದ್ಧಿ ಪಡೆದಿದೆ. ಜಾತ್ರೆಗೆ ಬರುವ ದನಕರುಗಳಿಗೆ ಉಚಿತ ಮೇವಿನ ವ್ಯವಸ್ಥೆ, ಯಾತ್ರಿಕರಿಗೆ ಅನ್ನದಾಸೋಹ, ಪಶುಗಳಿಗೆ ಉಚಿತ ದೀಪ ಎಲ್ಲ ವ್ಯವಸ್ಥೆಯನ್ನೂ ಗ್ರಾಮದವರು ಮಾಡುತ್ತಾರೆ.

(ಎ.ಜೆ.)

ಹಜರತ್ ಖಾಜಾ ಸೈಫನ್ ಮುಲ್ಕ್: ಸೂಫಿ ಸಂತ. ಸರ್ವಧರ್ಮ ಸಮನ್ವಯತೆಯ ಮತ್ತೊಂದು ಕ್ಷೇತ್ರ ಅಫಜಲಪುರ ತಾಲ್ಲೂಕಿನ ಕರ್ಜಗಿ ಗ್ರಾಮಕ್ಕೆ 12ನೆಯ ಶತಮಾನದಲ್ಲಿ ಖಾಜಾ ಸೈಫನ್ ಮೂಲ್ಕ ಅವರು ಇಲ್ಲಿ ಅನುಷ್ಠಾನ ಗೈದಿದ್ದಾರೆ. ಅವರ ಬೆತ್ತ ಮತ್ತು ಜಪಮಣಿಗಳನ್ನು ತಪೋಸ್ಥಾನವಾದ ಕರಜಗಿಯಲ್ಲಿ ಬಿಟ್ಟಿರುವುದರಿಂದ ಇವು ಸದಾಕಾಲ ಪೂಜೆಗೊಳ್ಳುತ್ತಿವೆ. ಸುತ್ತಮುತ್ತಲಿನ ಪ್ರದೇಶದ ಜನ ಖಾಜಾನ ದರ್ಶನ ಪಡೆಯುತ್ತಿದ್ದಾರೆ.

ಅವರ ಬೆತ್ತ ಹಾಗೂ ವಜ್ರದ ಜಪಮಣಿಯನ್ನು ಪ್ರತಿವರ್ಷ ಊರಿನ ಮಾಲಿಪಾಟೀಲ್, ಪೊಲೀಸ್ ಪಾಟೀಲರ ಮನೆತನದಿಂದ ತಮ್ಮ ತಮ್ಮ ಛಾಜಾನುಸಾರವಾಗಿ, ಸುಮಾರು ಎಂಟು ನೂರು ವರ್ಷಗಳಿಂದಲೂ ಭವ್ಯ ಪರಂಪರೆಯಂತೆ ನಡೆದುಕೊಂಡು ಬಂದಿದೆ.

ಕರಜಗಿ ಗ್ರಾಮದ ಹಿಂದಿನ ರಾಜಾಡಳಿತದ ಪದ್ಧತಿ ಅನುಸಾರ ಗ್ರಾಮದಲ್ಲಿನ ಪಟೇಲರು ಮತ್ತು ಗ್ರಾಮದ ಎಲ್ಲ ಸಮುದಾಯದವರು, ಖಾಜಾ ಸೈಫನ್ ಮೂಲ್ಕ ಅವರಿಗೆ ಕರಜಗಿ ಗ್ರಾಮದಲ್ಲಿರುವಂತೆ ಕೋರಿಕೆ ಸಲ್ಲಿಸಿದರು. ಅದರಂತೆ ಬ್ರಾಹ್ಮಣ–ರಾದ ಮಾಲಿಪಾಟೀಲ್ ಕುಟುಂಬದ ಮನೆತನದ ಸ್ಥಳದಲ್ಲಿ ತಪೋನುಷ್ಠಾನ ಕೈಕೊಂಡು, ಈ ನೆಲವನ್ನು ಪುನೀತ ಗೊಳಿಸಿದರು. ಅವರು ತಪಸ್ಸು ಮಾಡಿದ ಸ್ಥಳದಲ್ಲಿಂದು ದರ್ಗಾ ನಿರ್ಮಿಸಲಾಗಿದೆ. ದರ್ಗಾದಲ್ಲಿ ಪ್ರತಿವರ್ಷ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ.

ಸುಮಾರು 875 ವರ್ಷಗಳಿಂದ ಹಜರತ್ ಖಾಜಾ ಸೈಫನ್ ಮುಲ್ಕ ಅವರು ಕರ್ಜಗಿ ಗ್ರಾಮದಲ್ಲಿ ಅನುಷ್ಠಾನಗೈದು ಪಕ್ಕದ ಹೈದ್ರಾ ಗ್ರಾಮದಲ್ಲಿ ಲಿಂಗೈಕ್ಯರಾದರು. ಅದರಿಂದಾಗಿ ಈ ಗ್ರಾಮದಿಂದ ಪ್ರತಿ ವರ್ಷ ಕರ್ನಾಟಕ, ಮಹಾರಾಷ್ಟ್ರ ಸೇರಿದಂತೆ ಸುತ್ತಮುತ್ತಲಿನ ವಿಜಾಪುರ ಹಾಗೂ ಕಲಬುರ್ಗಿ ಜಿಲ್ಲೆಯಿಂದ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ರೈತರು ತಮ್ಮ ಎತ್ತುಗಳನ್ನು ತಂದು, ಬಂಡಿ ಮೂಲಕ ಕರಜಗಿ ತಪೋಸ್ಥಳವಾದ ಹಜರತ್ ಖಾಜಾ ಸೈಫನ್ ಮುಲ್ಕ ಮಂದಿರದಿಂದ ಪ್ರತಿ ವರ್ಷ ರಾತ್ರಿ ಹತ್ತು ಗಂಟೆಗೆ ಮಾಲಿ ಪಾಟೀಲ ಹಾಗೂ ಪೊಲೀಸ್ ಪಾಟೀಲರ ಮನೆತನದಿಂದ ಶ್ರೀಗಂಧದ ಮೆರವಣಿಗೆ ಸಕಲ ವೈದ್ಯ ವೈಭವದೊಂದಿಗೆ ಹೈದ್ರಾ ಗ್ರಾಮಕ್ಕೆ ಹೋಗಿ ಹಜರತ್ ಖಾಜಾ ಅವರ ಸಮಾಧಿಗೆ ಶ್ರೀಗಂಧ ಲೇಪಿಸುತ್ತಾರೆ.

ಬೆಳಗ್ಗೆ ಏಳು ಗಂಟಿಗೆ ಹೈದ್ರಾ ಗ್ರಾಮದಿಂದ ಹೊರಟು ಕರಜಗಿ ಗ್ರಾಮಕ್ಕೆ ಮಧ್ಯಾಹ್ನ 12 ಗಂಟೆಗೆ ತಲಪಿ ಗ್ರಾಮದಲ್ಲಿ ಮನರಂಜನೆ, ಗೀಗೀ ಪದ ಹಾಗೂ ಅನೇಕ ಸಂಗೀತ ಕಾರ್ಯಕ್ರಮಗಳನ್ನು ಗ್ರಾಮದ ಎಲ್ಲಾ ಧರ್ಮದವರು ತಮ್ಮ ತಮ್ಮ ಛಾಜಾನುಸಾರ ಹಜರತ್ ಖಾಜಾ ಸೈಫನ್ ಮುಲ್ಕ ಅವರ ಜಾತ್ರೆಯಲ್ಲಿ ಸೇವೆ ಸಲ್ಲಿಸುತ್ತಾರೆ. *(ಬಿ.ಎಸ್.)*

ಹಟ್ಟಿ: ಚಿನ್ನದ ಗಣಿ ಇರುವ ಸ್ಥಳ. ಲಿಂಗಸೂರು ತಾಲ್ಲೂಕಿನಿಂದ ಈಶಾನ್ಯಕ್ಕೆ 20 ಕಿ.ಮೀ. ದೂರದಲ್ಲಿದೆ. ಪ್ರಾಚೀನ ಕಾಲದಲ್ಲಿ ಹಟ್ಟಿ ಒಂದು ಚಿಕ್ಕ ಹಳ್ಳಿಯಾಗಿತ್ತು. ಪ್ರಸ್ತುತ ಚಿನ್ನದ ಕೈಗಾರಿಕೆಯಿಂದ ದೊಡ್ಡ ಬಡಾವಣೆಯಾಗಿ ನಿರ್ಮಾಣಗೊಂಡಿದೆ. ಪ್ರಾಚೀನ ಕಾಲದಿಂದಲೂ ಬಂಗಾರ ಅಗೆಯುವ ಕಾರ್ಯವು ನಡೆದಿದೆ. ವಿಜಯನಗರ ಅರಸರ ಕಾಲದಲ್ಲಿ ಈ ಊರು ಬಂಗಾರ

ಪೂರೈಸುವ ಪ್ರಮುಖ ಕೇಂದ್ರವಾಗಿತ್ತೆಂದು ಹೇಳುತ್ತಾರೆ. ಪ್ರಾಚೀನ ಕಾಲದಲ್ಲಿ ದೇಶೀಯ ಪದ್ಧತಿಯಲ್ಲಿಯೇ ಬಂಗಾರವನ್ನು ತೆಗೆಯುತ್ತಿದ್ದರು ಆದರೆ ಇಂದು ವೈಜ್ಞಾನಿಕವಾಗಿ ಪರಿಶೋಧಿಸಿ, ಚಿನ್ನ ತೆಗೆಯುತ್ತಿದ್ದಾರೆ.

ಪೂರ್ವದಲ್ಲಿ ಹಟ್ಟಿಯು ಗ್ರಾಮಾಂತರ ಪ್ರದೇಶವಾಗಿತ್ತು. ಆದರೆ ಇಂದು ಗಣಿ ಕೈಗಾರಿಕೆಯಿಂದ ಸರ್ಕಾರಿ ಮತ್ತು ಅರೆಸರಕಾರಿ ನೌಕರರಿಗೆ ಮನೆ, ನೀರು, ವಿದ್ಯುತ್ ಮುಂತಾದ ಸೌಕರ್ಯಗಳಿವೆ. ಹಟ್ಟಿಯಲ್ಲಿ ಗ್ರಾಮಾಂತರ ಭಾಗದ ಜನರು ಕೂಡ ವಾಸವಾಗಿರುವರು. ಈ ಹಳ್ಳಿಯಲ್ಲಿ ಜನಪದ ಕಲಾವಿದರು. ಮತ್ತು ಕಲೆಗಳು ಜೀವಂತವಾಗಿವೆ. ಈ ಊರಲ್ಲಿ ವೇಷಗಾರರು ಬೀಡು ಬಿಟ್ಟಿದ್ದಾರೆ. ಊರಿನ ಬಯಲು ಪ್ರದೇಶದಲ್ಲಿ 10 ರಿಂದ 15 ದಿನಗಳವರೆಗೆ ಬೀಡು ಬಿಟ್ಟು ರಾಮಾಯಣ, ಮಹಾಭಾರತದ ಕಥಾ ಸನ್ನಿವೇಶವನ್ನು ಹಾಗೂ ಸಿಂಧೂರ ಲಕ್ಷ್ಮಣನ ಪಾತ್ರವನ್ನು ಪ್ರತಿನಿಧಿಸುವ ಕನ್ನಡ ನಾಡಿನಾದ್ಯಂತ ಸಂಚರಿಸಿ, ತಮ್ಮ ಕಲಾ ಪ್ರದರ್ಶನದಿಂದ ಹೊಟ್ಟೆ ಹೊರೆಯುತ್ತಾರೆ. *(ಪಿ.ಕೆ.ಕೆ.)*

ಹಟ್ಟಿಗಳು: ನಗರ ಪ್ರದೇಶದಿಂದ ದೂರದಲ್ಲಿ ಕಾಡು, ಮೇಡು, ಗಿರಿ ಗವ್ಹರಗಳಲ್ಲಿ ನೆಲೆ ನಿಂತ ಜನರ ವಾಸ ಸ್ಥಾನಗಳು. ಹಟ್ಟಿಗಳಿಗೆ ಝೋಪಡಿ, ಗುಂಪಿ, ಕುಂಡಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಹಟ್ಟಿಗಳಲ್ಲಿ ಸಾಮಾನ್ಯವಾಗಿ ಅತ್ಯಂತ ಹಿಂದುಳಿದ ಜನಸಮುದಾಯದವರು ವಾಸಿಸುತ್ತಾರೆ. ಈ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ, ಮತ್ತು ಶೈಕ್ಷಣಿಕವಾಗಿ ತೀರಾ ಹಿಂದುಳಿದವರಾಗಿದ್ದು, ಚಿಕ್ಕ ಚಿಕ್ಕ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುವ ವರಾಂಡಾಗಳಿಗೆ ಝೋಪಡ ಪಟ್ಟಿ ಇಲ್ಲವೆ ಹಟ್ಟಿ ಎಂದು ಕರೆಯುತ್ತಾರೆ. ಹಟ್ಟಿಗಳು ಚಿಕ್ಕ ಮತ್ತು ಚೊಕ್ಕದಾದ ಗುಡಿಸಲುಗಳು ಹಾಗೂ ಸೀಮಿತ ಪ್ರದೇಶ ಹೊಂದಿದ್ದು, ಒಂದೆರಡು ಜನಸಮುದಾಯದವರು ಮಾತ್ರ ವಾಸ ಮಾಡುವ ಸ್ಥಳಗಳಾಗಿವೆ.

ಪ್ರಾಚೀನ ಕಾಲದಿಂದಲೂ ತೀರಾ ಹಿಂದುಳಿದ ನೆಲೆಗಳಾಗಿರುವ ಹಟ್ಟಿಗಳು ಸುಸಜ್ಜಿತವಾದ ಮನೆಗಳಿಲ್ಲದೆ ಗಿಡ, ಮರ, ಕಟ್ಟಿಗೆ ಲಕ್ಕಿ ಗಿಡದ ಕಟ್ಟಿಗೆ ಭತ್ತದ ಹುಲ್ಲು, ಮುತ್ತಲು ಗಿಡದ ತಪ್ಪಲು, ಪುಂಡಿ ಕಟ್ಟಿಗೆ, ತೊಗರಿ ಕಟ್ಟಿಗೆ, ಹೀಗೆ ಮುಂತಾದ ಕಟ್ಟಿಗೆ ಹಾಗೂ ತಪ್ಪಲುಗಳು. ಝೋಪಡಿಯ ಮೇಲೆ ಹೊದೆಯುವ ಸಲಕರಣೆಗಳಾಗಿದ್ದು, ಕೆಳಗಡೆ ಗುಂಡು ಕಲ್ಲಿನಿಂದ ಕಟ್ಟಿದ ಗೋಡೆಯಿರುತ್ತದೆ. ಅದು ಸಣ್ಣ ಪ್ರಮಾಣದಲ್ಲಿದ್ದು, ಬಾಗಿಲನ್ನು ಮುಚ್ಚಲು ಮುಳ್ಳಿನ ಗಿಡಗಳಿಂದ ತಯಾರಿಸಿದ ತಟ್ಟಿ/ಬಾಗಿಲು ಇರುತ್ತದೆ. ಈ ರೀತಿಯಾಗಿ ರಚಿತವಾದ ಸಣ್ಣ ಪುಟ್ಟ ಗುಡಿಸಲುಗಳ ಗುಂಪಿಗೆ ಹಟ್ಟಿಗಳು ಎಂದು ಕರೆಯುವ ವಾಡಿಕೆ ಇದೆ.

ಒಂದು ಗ್ರಾಮದ ಸಮೀಪ ಇಲ್ಲವೆ ಗ್ರಾಮದ ಕೊನೆಯ ಮೂಲೆಯಲ್ಲಿ ವಾಸಿಸುವ ಜನಸಮುದಾಯದ ನೆಲೆಗೆ ಹಟ್ಟಿಗಳು ಎಂಬ ಹೆಸರಿದೆ. ಬಹುಶಃ ಇವು ಸಾಮಾನ್ಯವಾಗಿ ದಲಿತ, ಅಲ್ಪಸಂಖ್ಯಾತರ ಹಿಂದುಳಿದ ವರ್ಗದ ಜನರು ವಾಸಿಸುವ ತಾಣಗಳಾಗಿವೆ. ಇಲ್ಲಿರುವ ಜನಸಮುದಾಯದವರು ಕಡು ಬಡತನ ರೇಖೆಯ ಕೆಳಗೆ ವಾಸಿಸುವವರಾಗಿದ್ದಾರೆ. ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜನರಾಗಿದ್ದು, ಪ್ರಮುಖವಾಗಿ ಮೂಲ ಸೌಲಭ್ಯ ಮತ್ತು ಸೌಕರ್ಯಗಳಿಂದ ವಂಚಿತರಾಗಿರುತ್ತಾರೆ. ಸ್ವಾತಂತ್ರ್ಯ ನಂತರದಲ್ಲಿ ಎಲ್ಲಾ ಜನ ವರ್ಗದವರಿಗೆ ಸರ್ಕಾರವು ಕೊಡ ಮಾಡಿರುವ ಸೌಲತ್ತುಗಳನ್ನು ಅಲ್ಪ ಪ್ರಮಾಣದಲ್ಲಿ ಈ ಜನ ಸಮುದಾಯದವರು ಪಡೆಯುತ್ತಿದ್ದಾರೆ. ಹೀಗಾಗಿ ಆರ್ಥಿಕವಾಗಿ ಹಂತ ಹಂತವಾಗಿ ಸ್ವಾವಲಂಬಿಗಳಾಗುತ್ತಿದ್ದು ಸಾಮಾಜಿಕ, ಸ್ಥಾನಮಾನವು ಸಹ ಸಿಗುತ್ತದೆ. ಹೀಗೆ ಪ್ರಗತಿಯ ಪಥದತ್ತ ಈ ಜನರು ದಾಪುಗಾಲಿಡುತ್ತಿದ್ದಾರೆ. *(ಪಿ.ಕೆ.ಕೆ.)*

ಹಣಮಂತ ಮಾರುತಿ ಹೂಗಾರ: ಜನಪದ ವೈದ್ಯ. ಮೂರು ತಲೆಮಾರುಗಳಿಂದ ಜನ ಜಾನುವಾರುಗಳಿಗೆ ಹಸಿರು ಔಷಧಿ ಕೊಡುವ ಮನೆತನದಲ್ಲಿ ಜನಿಸಿದವರು. ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕು ಖಾನಾಪುರ ಗ್ರಾಮದ ಒಕ್ಕಲು ಮಗನಾದ ಇವರು ಹಣದಾಸೆಗೆ ವೈದ್ಯ ಪದ್ಧತಿ ರೂಢಿಸಿಕೊಂಡವರಲ್ಲ. 'ಹಣ ತೆಗೆದುಕೊಂಡರೆ ಔಷಧಿಯೇ ನಾಟದು' ಎಂದು ನಂಬಿದವರು.

ರೋಗ, ಅದರ ಪ್ರಮಾಣ, ಕಾಲ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಒಂದೇ ಕಾಯಿಲೆಗೆ ಎರಡು ಮೂರು ವಿಧಾನದಲ್ಲಿ ಚಿಕಿತ್ಸೆ ಮಾಡುವ, ಕರೆದವರ ಮನೆ ಬಾಗಿಲಿಗೇ ಹೋಗಿ ಇಂಥ ಹಲವು ರೋಗ–ರುಜಿನ–ಗಾಯ–ಹುಣ್ಣುಗಳಿಗೆ ಔಷಧ ಕೊಡುವ ಹಣಮಂತ ಅವರೊಡನೆ ನಾರು–ಬೇರು ಎಲೆ ಕಾಯಿ, ಹೂ, ತೊಗಟೆ, ಹೀಗೆ ಹಲವು ಬಗೆಯ ಗಿಡ ಗಂಟೆಗಳೂ ಊರೂರು ಸುತ್ತುತ್ತವೆ. ಹೀಗಾಗಿ ಗಿಡಮೂಲಿಕೆಗಳ ಔಷಧಿಗೆ ತಮ್ಮ ಸುತ್ತಲ್ಲದೆ ಮಹಾರಾಷ್ಟ್ರದ ಗಡಿ ಭಾಗದಲ್ಲೂ ಇವರು ಹೆಸರಾಗಿದ್ದಾರೆ. ನಾಟಿವೈದ್ಯ ಇವತ್ತು ಹೆಚ್ಚು ಪ್ರಸ್ತುತದಲ್ಲಿ ಚಾಲ್ತಿಗೆ ಬರುತ್ತಿದೆ. ಡಾಕ್ಟರುಗಳಿಂದ ಗುಣಪಡಿಸಲು ಸಾಧ್ಯವಾಗದ ಎಷ್ಟೋ ಕಾಯಿಲೆಗಳನ್ನು ನಾಟಿ ವೈದ್ಯರು ಗುಣ ಪಡಿಸುತ್ತ ಬಂದಿದ್ದಾರೆ. ರೋಗದ ಮೂಲ ಪತ್ತೆ ಮಾಡಿ ಅದಕ್ಕೆ ತಕ್ಕಂತೆ ಔಷಧಿ ಕೊಡುವ ಚಾಕಚಕ್ಯತೆ ಅನೇಕರಲ್ಲಿದೆ. ಅಂಥವರಲ್ಲಿ ಹೂಗಾರ ಒಬ್ಬರೆನ್ನಬಹುದು. *(ಜಿ.ಆರ್.ಟಿ.)*



ಹನುಮಂತರಾವ ಬಿ. ದೊಡ್ಡಮನಿ: ಇವರು ಕಲಬುರಗಿ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಮಲ್ಲಾಬಾದ ಗ್ರಾಮದಲ್ಲಿ ತಂದೆ ಭೀಮಶಾ ತಾಯಿ ಹುಚ್ಚಮ್ಮ (ಪಾರವ್ವ) ಎಂಬ ದಂಪತಿಗಳಿಗೆ ದಿನಾಂಕ 01.06.1958ರಂದು ಜನಿಸಿದರು. ಮಧ್ಯಮ ಕುಟುಂಬದಲ್ಲಿ ಬೆಳೆದು ಬಂದರು. ಸ್ವಂತ ಹೊಲ–ಮನೆ ಎತ್ತುಗಳು, ಜಾನುವಾರ ಗಳು, ಕುರಿಗಳುಳ್ಳ

ರೈತ ಕುಟುಂಬವಿದ್ದರೂ, ದೊಡ್ಡ ಮನಿಯವರ ತಂದೆ–ತಾಯಿಯರು ಮಗನನ್ನು ಅಪರೂಪದಿಂದ ಬೆಳೆಸಿದರು.

ಎಂ.ಎಸ್.ಆಯ್. ಕಿರಿಯ ಮಹಾವಿದ್ಯಾಲಯ ದಿಂದ 1980ರಲ್ಲಿ ಬಿ.ಎ. ಪದವಿ, 1987ರಲ್ಲಿ ಎಂ.ಎ. ಸ್ನಾತಕೋತ್ತರ ಪದವಿ ಪಡೆದಿರುವರು. ತೀರ ಗ್ರಾಮೀಣ ರೈತ ಕುಟುಂಬದಿಂದ ಬಂದಿರುವ ಡಾ. ಹನುಮಂತರಾವ. ದೊಡ್ಡಮನಿಯವರು ಆಳವಾದ ಅಧ್ಯಯನ ಮಾಡಿ 2007ರಲ್ಲಿ "ಚುಂಚೂರು ಮಾಪುರ ತಾಯಿ–ಒಂದು ಅಧ್ಯಯನ" ವಿಷಯ ಕುರಿತು ಗುಲಬರ್ಗಾ ವಿಶ್ವವಿದ್ಯಾಲಯ ದಿಂದ ಪಿಎಚ್.ಡಿ. ಪದವಿ ಪಡೆದರು.

ಪ್ರತಿಭಾನ್ವಿತ ಕವಿ, ಕತೆಗಾರ, ನಾಟಕಕಾರ, ಜಾನಪದ ಸಾಹಿತಿ ಮತ್ತು ಸಂಶೋಧಕರು ಆಗಿ ತಮ್ಮ ಲೇಖನಿಯ ತಿರುಳು ಸಮಾಜದ ಸಮಸ್ಯೆ ಗಳಿಗೆ, ತಮ್ಮ ಸುತ್ತಲಿನ ಭ್ರಷ್ಟ ವ್ಯವಸ್ಥೆ ವಿರುದ್ಧ, ಕಾಲದ ಚೌಕ ಟ್ಟಿನಿಂದ ಅನ್ವಯವಾಗುವಂತೆ ಮನುಷ್ಯನ ಸಂಬಂಧಗಳು ಎಳೆಎಳೆಯಾಗಿ ಬಿಡಿಸಿ ಹೇಳುವ ಕಲೆ ಅವರದು. ಆಡುಭಾಷೆಯ ಬಳಕೆ, ನೇರ ಪದಗಳ ಜೋಡಣೆ ಮೆಚ್ಚುವಂಥದು.

ಡಾ. ಹನುಮಂತರಾವ ಬಿ. ದೊಡ್ಡಮನಿ ಅವರು 'ನೊಂದವರ ಹಾಡು', 'ನಮ್ಮ ದೇಶ ನಮ್ಮ ಜನ', 'ಆಕ್ರೋಶ', 'ದೇವಿಕಾರ್ಯ', 'ಏಡ್ಸ್ ಬಂತು', 'ಬಲಿಪಶು', 'ಜ್ಞಾನಜ್ಯೋತಿ', 'ಸುಕ್ಷೇತ್ರ ಘತ್ತರಗಿ', 'ಜಾನಪದ ಹಬ್ಬಗಳು ಮತ್ತು ಉತ್ಸವಗಳು', 'ಘತ್ತರಗಿ ಭಾಗಮ್ಮ', 'ಜಾನಪದ ತೊಟ್ಟಿಲು', 'ಪಂಚಮ', 'ಚುಂಚೂರು ಮಾಪುರತಾಯಿ: ಒಂದು ಅಧ್ಯಯನ', 'ಮರೆಯಲಾಗದ ಮಹಾನುಭಾವರು', ಈ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. *(ಬಿ.ಎಸ್.ಎಸ್.)*

ಹಮಾಲರು: ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಮಾನು ಸರಂಜಾಮಗಳನ್ನು ಸಾಗಿಸುವ ವ್ಯಕ್ತಿಗಳು. 'ಹಮಾಲಿ' ಎಂಬ ಪದ ಅರಬ್ಬೀ ಭಾಷೆಯಿಂದ ಬಂದಿದೆ. ಇದಕ್ಕೆ ಪರ್ಯಾಯ ಪದವಾಗಿ ಕೂಲಿ, ಆಳು, ಹಮಾಲಿ ಮುಂತಾದ ಪದಗಳಿಂದ ಗುರುತಿಸಲ್ಪಡುತ್ತಾರೆ. ಸಾಮಾನ್ಯವಾಗಿ ಹಮಾಲಿಗಳು ಎಲ್ಲೆಡೆ ಕಂಡು ಬರುತ್ತಾರೆ. ಪ್ರಮುಖವಾಗಿ ರೇಲ್ವೆ ನಿಲ್ದಾಣದಲ್ಲಿ, ಬಸ್ ಸ್ಟಾಂಡ್ ಕೃಷಿ ಮತ್ತು ಮಾರುಕಟ್ಟೆ (ಅಡತ) ಗಳಲ್ಲಿ ಇರುವುದು ಸಹಜ.

ಹಮಾಲರೆಂದರೆ ದುಡಿಮೆಗಾಗಿ ನೀಡುವ ಪ್ರತಿಫಲ. ಕೂಲಿಗಾಗಿ ದುಡಿಯುವ ವ್ಯಕ್ತಿ. ಹಣಕ್ಕಾಗಿ ಸಾಮಾನುಗಳನ್ನು ಹೊತ್ತುಕೊಂಡು ಹೋಗುವವನು ಎಂಬ ಹಲವು ಪರ್ಯಾಯ ಅರ್ಥಗಳಿವೆ.

ಹೈದ್ರಾಬಾದ ಕರ್ನಾಟಕ ಭಾಗದೆಲ್ಲೆಡೆ ಹಮಾಲರು ಕಂಡು ಬರುತ್ತಾರೆ. ಜೀವನ ನಿರ್ವಹಣೆಗೋಸ್ಕರ ವಿವಿಧ ಸ್ಥಳಗಳಲ್ಲಿ ಹಮಾಲಿ ಕೆಲಸ ಮಾಡಿ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸುತ್ತಾರೆ. ಹತ್ತಿಪ್ಪತ್ತು ವರುಷಗಳ ಹಿಂದೆ ಎತ್ತಿನ ಬಂಡಿ ಕಟ್ಟಿಕೊಂಡು ದವಸ ಧಾನ್ಯವನ್ನು ಮಾರಾಟ ಮಾಡುವ ಕೆಲಸವನ್ನು ರೈತಾಪಿ ಜನರು ನಿರ್ವಹಿಸುತ್ತಿದ್ದರು. ಕೂಲಿ ಆಳುಗಳಿಗೆ ಇಂತಿಷ್ಟು ಕಡತವೆಂದು ಅವರ ಖಾತೆಗೆ ದುಡ್ಡು ಜಮಾಯಿಸುತ್ತಿತ್ತು. ಆದರೆ ಇಂದು ವಾಹನಗಳ ಸೌಕರ್ಯವಿರುವುದರಿಂದ ಎತ್ತಿನ ಬಂಡಿಗಳು ನಿರ್ನಾಮವಾಗಿವೆ. ವಿವಿಧ ಕೃಷಿ ಸಲಕರಣೆಗಳು ಲಭ್ಯವಿರುವುದ–ರಿಂದ ಇಂದು ಕೂಲಿಗಳ ಅವಶ್ಯಕತೆಯು ಕಡಿಮೆಯಾಗುತ್ತಿದೆ. ಹೀಗಾಗಿ ಕಡಿಮೆ ಕೂಲಿ ಸಿಗುವುದರಿಂದ ದೇಶ ಸಂಚಾರ ಕೈಗೊಳ್ಳುತ್ತಲಿದ್ದಾರೆ.

(ವಿ.ಎ.ವಿ.)

ಹರಕೆ: ಜನಪದರ ಒಂದು ಆಚರಣೆ. ಬಸವಣ್ಣನವರ ವಚನವೊಂದು "ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು" ಎಂದು ಹೇಳುತ್ತದೆ. ಇದರಿಂದ ಪ್ರಾಣಿಬಲಿ ಕೊಡುವ ಪದ್ಧತಿ ಹರಕೆಯ ಆಚರಣೆಯಲ್ಲಿರುವುದು ತಿಳಿದುಬರುತ್ತದೆ. ಜನ್ನನ ಯಶೋಧರ ಚರಿತೆಯಂಥ ಕನ್ನಡ ಕಾವ್ಯ ಪುರಾಣಗಳು ಹರಕೆಯ ಚಿತ್ರಣವನ್ನು ಢಾಳವಾಗಿ ನೀಡುತ್ತದೆ.

ಹರಕೆಯ ಆಚರಣೆ ಜಗತ್ತಿನಾದ್ಯಂತ ಪ್ರಚಲಿತದಲ್ಲಿದೆ. ಪಶ್ಚಿಮ ಆಫ್ರಿಕದಲ್ಲಿ 'ಪಶುಬಲಿ' ರೂಪದಲ್ಲಿ, ಕೊಂಡ ಬುಡಕಟ್ಟು ಸಮುದಾಯವು ಬಲಿಯ ವ್ಯಕ್ತಿಯನ್ನು ಕೊಂಡು ತಂದು, ಕೆಲದಿನಗಳ ಕಾಲ ಏಕಾಂತದಲ್ಲಿರಿಸಿ, ಗೊತ್ತಾದ ದಿನ ಕೊರಳಿಗೆ ಉರುಲು ಹಾಕಿ ದೇಹದ ಭಾಗವನ್ನು ಛಿದ್ರಮಾಡಿ ಚರಗ ಚೆಲ್ಲುತ್ತಿದ್ದರು. ಅಮೆರಿಕದ ಪೌನೀಸ್ ಜನರು ನಾಯಿ ಬಲಿ ಕೊಡುತ್ತಿದ್ದರು. ಹಿಬ್ರೂ ಜನಾಂಗದಲ್ಲಿ ಹರಕೆ ಪದ್ಧತಿ ಧಾರ್ಮಿಕ ಆಚರಣೆಯಾಗಿ ಬೆಳೆದುಬಂದಿದೆ.

ಹಿಂದೂಧರ್ಮದಲ್ಲಿ ಸಾಮಾಜಿಕ ಪಿಡುಗಾಗಿದ್ದ 'ಸತಿ ಪದ್ಧತಿ'ಯು ಒಂದು ರೀತಿಯ ಹರಕೆ, ಕಲ್ಲನಕೇರಿ ಮಲ್ಲನಗೌಡನು ಕಟ್ಟಿಸಿದ ಕೆರೆಗೆ 'ಆಹಾರ'ವಾಗಿ ಕಿರುಸೊಸೆ ಭಾಗೀರತಿಯನ್ನು ಬಲಿ ಕೊಟ್ಟ ಜಾನಪದ ಕಥನ ಪ್ರಚಲಿತ ದಲ್ಲಿದೆ. ಇಂಥ ಹರಕೆಗಳು ಸಾಮಾಜಿಕ ಒಳಿತಿಗಾಗಿ ಮೀಸಲಾ ಗಿದೆ. ಶಕ್ತಿದೇವತೆಯನ್ನು ವಶಪಡಿಸಿ ಕೊಳ್ಳಲು, ನಿಧಿ ಕೈವಶ ಮಾಡಿ ಕೊಳ್ಳಲು, ಮಕ್ಕಳನ್ನು ಬಲಿಕೊಡುವ ಪದ್ಧತಿ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿದೆ.

ಉರುಳುಸೇವೆ, ತೊಟ್ಟಿಲಸೇವೆ, ಬಚ್ಚಲಸೇವೆ, ದೀಡು ನಮಸ್ಕಾರಸೇವೆ, ಮುಡಿಪು ಕಟ್ಟುವ ರೂಪದಲ್ಲಿ ಹರಕೆಗಳು ಜಾ–ರಿಯಲ್ಲಿವೆ. ಈ ಹರಕೆಯಲ್ಲಿ ವೈಯಕ್ತಿಕ ಹಿತಾಸಕ್ತಿ, ಕೌಟುಂಬಿಕ ಹಿತಾಸಕ್ತಿ ಮತ್ತು ಸಾಮುದಾಯಿಕ ಹಿತಾಸಕ್ತಿ ಇರುವುದನ್ನು ಕಾಣಬಹುದು. ವ್ಯಕ್ತಿಗಳ ತೊಂದರೆ ತಾಪತ್ರಯಗಳು ನಿವಾರಣೆಯಾಗಲೆಂಬ ಹರಕೆ ವೈಯಕ್ತಿಕವಾದದ್ದು; ಸುಖ–ಶಾಂತಿ–ನೆಮ್ಮದಿ, ಅಭಿವೃದ್ಧಿ, ಆರೋಗ್ಯ ನೆಲಸಲೆಂಬ ಹರಕೆ ಕೌಟುಂಬಿಕವಾದದ್ದು, ಊರಿಗೆ, ಕೇರಿಗೆ, ಸಿಡುಬು, ಮಾರಿ, ಪ್ಲೇಗು ರೋಗಗಳಲ್ಲದೆ ಬರ, ಅತಿವೃಷ್ಟಿಗಳಂಥ ಪ್ರಾಕೃತಿಕ ವಿಕೋಪದಿಂದ ಇಡೀ ಗ್ರಾಮವನ್ನು, ನಾಡನ್ನು ಸಂರಕ್ಷಿಸಬೇಕೆಂಬ ಸಂಕಲ್ಪ ಹಿಂದೆ ಸಾಮುದಾಯಿಕ ಹರಕೆಯಿದೆ. ಹೈದ್ರಾಬಾದ್ ಕರ್ನಾಟಕದ ಗೀತಸಾಹಿತ್ಯದಲ್ಲಿ "ತೂಗುತೊಟ್ಟಿ ಲಾಗಲೀ, ಬೆಳ್ಳಿ ಬಟ್ಟಲಾಗಲೀ, ಹಾಲು ಹೊಳೆಯಾಗಿ ಹರಿಯಲಿ" ಎಂಬ ಶುಭಾಶಯವೂ ಹರಕೆಯ ಇಲ್ಲವೇ ಹಾರೈಕೆಯ ರೂಪಗಳೇ ಆಗಿವೆ. ಅಂದರೆ ಹರಕೆ ಭಾಗದಲ್ಲಿ ಕೇವಲ ಹಿಂಸೆಯ ಮಾರ್ಗವನ್ನು ಅನುಸರಿಸಿಲ್ಲ, ಬದಲಾಗಿ ಸಾಂಸ್ಕೃತಿಕ ಹಿತಚಿಂತನೆಯ ರೂಪದಲ್ಲಿ ಆಚರಣೆಗೆ ಬಂದಿದೆಂದು ಹೇಳಬಹುದು. ಕೆಲವು ಪ್ರಮುಖ ಹರಕೆಗಳು ನೋಡುವುದಾದರೆ ಬೆಂಕಿ ಕೆಂಡಕ್ಕೆ ಹರಳು ಹಾಕುವುದು; ನಾಗರಕಲ್ಲು

ಮಾಡಿಸುವುದು, ಬೇವಿನುಡಿಗೆ ತೊಡಿಸುವುದು, ದೇವರ ಹೆಸರನ್ನು ಮಗುವಿಗೆ ಇಡುವುದು ಉದಾ: ಶರಣಬಸಪ್ಪ, ಅಮರೇಶ್ವರ, ಮೋನಪ್ಪಯ್ಯ ಇತ್ಯಾದಿ ರೂಪದಲ್ಲಿ ಹರಕೆ ಪ್ರಚಲಿತದಲ್ಲಿವೆ.

(ಕೆ.ಆರ್.)

ಹರದೇಶಿ–ನಾಗೇಶಿ: ಒಬ್ಬೊಬ್ಬರು ಒಂದೊಂದು ಪಂಥಕ್ಕೆ ಅಂಟಿ–ಕೊಂಡು ಇವುಗಳ ರಚನೆಯಲ್ಲಿ ತೊಡಗಿದಂತಿದೆ. ಪರಸ್ಪರ ವಾದ–ವಿವಾದದಲ್ಲಿಯೇ ಇವುಗಳ ಜೀವಕಳೆ ತುಂಬಿನಿಂತಿದೆ. ಜನರಲ್ಲಿ ಕುತೂಹಲ ಕೆರಳಿಸಿ, ರಂಜನೆಗೈಯ್ಯುವಲ್ಲಿ ಈ ಹಾಡುಗಳು ವಿಶೇಷ ಪಾತ್ರವಹಿಸಿವೆ. ಶಿವ–ಶಕ್ತಿ, ಪುರುಷ–ಪ್ರಕೃತಿಗಳ ಹಿನ್ನೆಲೆಯಲ್ಲಿ ಗಂಡು–ಹೆಣ್ಣು, ಬೀಜ–ಭೂಮಿಗಳಾಗಿ ವಾದಿಸಿ ನಾನು, ತಾನು ಹೆಚ್ಚೆಂದು ಸವಾಲ–ಜವಾಬಗಳ ರೂಪದಲ್ಲಿ ಒಳ್ಳೆಯ ಸ್ಪರ್ಧೆಯಿಂದ ಇವು ಬೆಳೆದುಕೊಂಡು ಬಂದಿವೆ. ಗಂಡಿನ ಪಕ್ಷವಹಿಸಿ ಹಾಡುವವರಿಗೆ 'ಹರದೇಶಿ' ಯವರೆಂದೂ, ಹೆಣ್ಣಿನ ಮೇಲ್ಮೆಯನ್ನು ಸಾರುವವರಿಗೆ 'ನಾಗೇಶಿ'ಯವರೆಂದೂ ಕರೆಯುತ್ತಾರೆ. 'ಹರದೇಶಿ', 'ಶಿರಪೇಚ' (ಆಭರಣ) ತೊಡುವುದರಿಂದ ಅವನ ಪಕ್ಷಕ್ಕೆ 'ತುರಾಯಿ' ಎಂದೂ, ನಾಗೇಶಿ ಹೆಂಗಸರ ಆಭರಣ (ದಂಡಿ) ಹಾಕುವುದರಿಂದ 'ಕಲ್ಗಿ' ಎಂದು ಕರೆಯುವರು. ಕಲ್ಗಿ–ತುರಾ ಈ ಶಬ್ದಗಳು ಅನ್ಯದೇಶೀಯಗಳು. ಮಹಮ್ಮದೀಯರ ಆಳಿಕೆಯಲ್ಲಿ ಬಳಕೆಯಲ್ಲಿ ಬಂದಂತೆ ತೋರುತ್ತದೆ.

ಹಾಡುಗಳು 'ಭೂಮಿ ಮೊದಲೋ ಬೀಜ ಮೊದಲೋ' ಎನ್ನುವ ತಾತ್ವಿಕ ತಳಹದಿಯ ಮೇಲೆ ನಿಂತಿವೆ. ಜನಪದರ ನಿತ್ಯಜೀವನದಲ್ಲಿ ಕಾಣಿಸಿಕೊಳ್ಳುವ ಕಾಮ, ಪ್ರೇಮ, ವ್ಯಭಿಚಾರ, ಸೂಳೆಗಾರಿಕೆ, ಸಮಾಜ ವಿಡಂಬನೆ ಮುಂತಾದ ವಿಷಯಗಳು ಇಲ್ಲಿನ ಹಾಡುಗಳ ಒಳಪದರಿನಲ್ಲಿ ಸೇರಿಕೊಂಡಿವೆ.

ಹಾಡುಗಾರರು ಹಾಡಿನ ಆರಂಭಕ್ಕೆ 'ಸುಖಿ', 'ಗಣ್ಣಿ', ಪದ್ಯವನ್ನು ಸ್ತುತಿಸಿಯೇ ಹಾಡು ಮುಂದುವರಿಸುತ್ತಾರೆ. ಇದು ಇಲ್ಲಿನ ವಿಶಿಷ್ಟವೂ ಹೌದು. ಸಖಿಯ ಆಧಾರದಿಂದ ಇವನು ಇಂಥ ಪಕ್ಷದವನೆಂದು ಗುರುತಿಸಲು ಸಹಕಾರಿಯಾಗುತ್ತದೆ. ಗಂಡಿನ ಪಕ್ಷ ವಹಿಸಿ ಹಾಡು ಹೇಳುವ ಹರದೇಶಿಯವರು ಆರಂಭಕ್ಕೆ ಶಿವ, ಗಣಪತಿ, ವೀರಭದ್ರ ಮುಂತಾದ ಗಂಡು ದೇವರನ್ನು ಸ್ತುತಿಸುತ್ತಾರೆ. ಹೆಣ್ಣಿನ ಪಕ್ಷವಹಿಸಿ ಶಕ್ತಿಯ ಮೇಲ್ಮೆಯನ್ನು ಸಾರುವ ನಾಗೇಶಿಯವರು ಪಾರ್ವತಿ, ಶಾರದೆ ಮುಂತಾದ ಹೆಣ್ಣು ದೇವತೆಗಳನ್ನು ಸ್ತುತಿಸುತ್ತಾರೆ.

ಗಂಡು ಹೆಣ್ಣಿನ ಮೇಲ್ಮೆ ಸಾರುತ್ತ ಒಬ್ಬರನ್ನು ಇನ್ನೊಬ್ಬರು ಹೀಯಾಳಿಸುತ್ತ ಹಾಡುಗಳ ಸುರಿಮಳೆಯೇ ಆಗುವುದು. ಒಬ್ಬನು ಹಾಡಿ ಡಪ್ಪು ಕೆಳಗಿಡುತ್ತಲೇ ಅವನಿಗೆ ಪ್ರತಿಯಾಗಿ ಇನ್ನೊಬ್ಬ ಡಪ್ಪು ಎತ್ತಿ ತನ್ನ ಪಕ್ಷವನ್ನು ಸಮರ್ಥಿಸಿಕೊಳ್ಳುತ್ತಾನೆ. ಜನ–ಮನವನ್ನು ತನ್ನೆಡೆಗೆ ಸೆಳೆದುಕೊಂಡು ಅವರಲ್ಲಿ ಚಿಂತನ–ಮಂಥನ ನಡೆಯಲು ಪ್ರಚೋದನೆ ನೀಡುತ್ತಾನೆ.

ಶೃಂಗಾರ, ಹಾಸ್ಯ, ಅಶ್ಲೀಲ, ಸವಾಲ–ಜವಾಬಗಳ ರೂಪದಲ್ಲಿ ಈ ಹಾಡುಗಳು ಜನಮನಕ್ಕೆ ಮುದ ನೀಡುತ್ತವೆ. ವಿಡಂಬನೆ, ಅಪಹಾಸ್ಯ, ಬೈಗಳು ಎಲ್ಲ ತಮ್ಮ ಪರಾಕಾಷ್ಠೆಗೇರುವುದು ಇಲ್ಲಿಯೆ. ಗ್ರಂಥಸ್ಥ ಶಿಷ್ಟ ಭಾಷೆಗಿಂತ ಗ್ರಾಮ್ಯ ಆಡುನುಡಿಯೆ ಇಲ್ಲಿ ಸಮರ್ಥವಾದ ಮಾಧ್ಯಮವಾಗುತ್ತದೆ. ಆಯಾ ಪ್ರಾದೇಶಿಕ ಭಾಷೆಯ ಶಕ್ತಿ, ಸಹಜತೆ, ಚುರುಕು– ಎಲ್ಲಾ ಒಟ್ಟಿಗೆ ಸೇರಿ ಆಕರ್ಷಣೆಯನ್ನು ಉಂಟುಮಾಡುತ್ತವೆ. ಗ್ರಾಮೀಣ ಭಾಷೆಯ ಶಬ್ದಸೌಂದರ್ಯ ಕಾಣುವುದು ಇಂಥ ಹಾಡುಗಳಲ್ಲಿಯೆ. ಜನ ಹೆಣ್ಣು–ಗಂಡಿನ ಮರ್ಮಾಂಗ, ಕಾಮ, ಪ್ರೇಮಕ್ಕೆ ಸಂಬಂಧಿಸಿದ ನೇರ ಶಬ್ದಗಳು ಹೊರಬೀಳುವುದರಿಂದ ಯುವಕರಿಗಂತೂ ಇನ್ನೂ ಖುಷಿ ನೀಡುತ್ತವೆ. ಒಂದು ಪಕ್ಷದವರು ಹಾಕಿದ ಸವಾಲನ್ನು ಎದುರಿಸಿ ಅದಕ್ಕೆ ಪ್ರತ್ಯುತ್ತರವಾಗಿ ನಿಂತಲ್ಲಿಯೇ ಜವಾಬ ರಚಿಸಿ ಹೇಳುವಲ್ಲಿ ಅವರ ಅಪಾರ ಪ್ರತಿಭೆ ಶಕ್ತಿಯ ಪ್ರದರ್ಶನವಾಗುತ್ತದೆ. ಸವಾಲ್–ಜವಾಬ್ ಹಾಡುಗಳು ಕೊನೆಗೆ ಸಮಾನತೆಯ ಘಟ್ಟಕ್ಕೆ ಬಂದು ಬೀಜ–ಭೂಮಿ ಇದ್ದರೇನೇ ಬೆಳೆಯೆನ್ನುತ್ತ 'ಖ್ಯಾಲಿ'ಯಲ್ಲಿ ತಮ್ಮ ಶಾಂತಿಯನ್ನು ಕಾಣುತ್ತವೆ.


ಹರದೇಶಿ ನಾಗೇಶಿ ಮೇಳ

'ಖ್ಯಾಲಿ' ಹಾಡುಗಳು ಚುಟುಕುಗಳಂತೆ ಇಡೀ ಹಾಡಿನ ಅರ್ಥವನ್ನು ಸಂಕ್ಷಿಪ್ತದಲ್ಲಿ ತಿಳಿಯ ಪಡಿಸುತ್ತವೆ. 'ನೆನಪಿನಲ್ಲಿಡು' ಎನ್ನುವ ಅರ್ಥದಲ್ಲಿ ಈ ಹೆಸರಿನ ಬಳಕೆ ಆದಂತಿದೆ. ಕಥೆ ಮುಕ್ತಾಯಗೊಂಡಾಗ ವಿವಿಧ ಭಾವ, ಭಾವಾವೇಶಗಳು ಮುಗಿದು ಶಾಂತಭಾವ ಮೈದಾಳುವುದು. ಆಗ ಉಪ ಸಂಹಾರ ರೂಪದ ಹಾಡು 'ಖ್ಯಾಲಿ' ನಾಟಕ ಗಳಲ್ಲಿ ಭರತವಾಕ್ಯ ಇರುವಂತೆ. ಖ್ಯಾಲಿಗಳು ನೀತಿ, ಹಾಸ್ಯ, ಶೃಂಗಾರ, ತತ್ತ್ವವನ್ನು ಹೆಚ್ಚಾಗಿ ಬಿತ್ತರಿಸುತ್ತವೆ. ಇವುಗಳ ಕೊನೆಯ ನುಡಿಯಲ್ಲಿ ಕವಿಯ ಅಂಕಿತ, ಊರು ಮುಂತಾದ ಕವಿಗೆ ಸಂಬಂಧಿಸಿದ ಮಾಹಿತಿ ಇರುತ್ತದೆ.

(ಬಿ.ಪಿ.ಪಿ)

ಹರಿಸೇವೆ: ವಿಶೇಷತಃ ವೈಷ್ಣವರು ಮಾಡುವ ಶ್ರೀಮನ್ನಾ ರಾಯಣನ ಸೇವೆ. ಭಕ್ತಿ ಮಾರ್ಗದಿಂದ ಒಲಿಸಿಕೊಳ್ಳಬೇಕು ಎಂಬ ಧಾರ್ಮಿಕ ನಿಯಮವಿದೆ. ಆದರೆ ಮೂಲತಃ ಲಕ್ಷ್ಮಿಯೇ ಮಹಾ ವಿಷ್ಣುವಿನ ಪ್ರಥಮ ಸೇವಕಿ. ತರುವಾಯ ನಾರದ ಮಹರ್ಷಿ ನಂತರ ಭಾಗವತರು (ವಿಷ್ಣುವಿನ ಭಕ್ತರು) ಆತನ ಪರಮ ಭಕ್ತರಾಗಲು ಸಲ್ಲಿಸುವ ಸಾಧನೆ, ನಿಯಮ, ವ್ರತ ಆಚರಣೆಗಳೇ ಹರಿಯ ಸೇವೆಯಾಗಿವೆ.

ಪುರಂದರ ದಾಸರು ತಮ್ಮ ಕೀರ್ತನೆಯೊಂದರಲ್ಲಿ ಏನು ಧನ್ಯಳೋ ಲಕುಮಿ ಎಂಥಮಾನ್ಯಳೋ ಸಾನುರಾಗದಿಂದ ಹರಿಯ ತಾನೇ ಸೇವೆ ಮಾಡುತಿಹಳೋ? ಛತ್ರ, ಚಾಮರ, ವ್ಯಜನ ಪರಿಯಂಕವಿರಲು ಪಾತ್ರ ರೂಪದಲಿ ನಿಂತು ಸೇವೆಗೈಯ್ಯುತಿಹಳು' ಎಂದಿದ್ದಾರೆ.

ಹರಿಯ ವಿವಿಧ ಅವಯವ (ಸರ್ವಾಂಗ)ಗಳನ್ನು ಅಭಿಷೇಕ ಮಾಡಿ, ಅಲಂಕರಿಸಿ, ನವವಿಧ ಭಕ್ತಿ, ಷೋಡಶೋಪಚಾರಗಳಿಂದ ಪೂಜಿಸುತ್ತಾರೆ. ಇಲ್ಲಿ ಬಳಸುವ ಸಾಧನಗಳಾದ ಶಂಖ, ಉದ್ಧರಿಣೆ (ತೀರ್ಥಪಾತ್ರೆ) ಹಲಿಗ್ಯಾರತಿ, (ಹಲಿಗಿ ಆರತಿ) ಛತ್ರ, ಚಾಮರ, ಪರಿಯಂಕ ಮಂಚ, ಶಯನ (ತೊಟ್ಟಿಲು) ಇವೆಲ್ಲವುಗಳೂ ಲಕ್ಷ್ಮಿ ಸ್ವರೂಪವೆನ್ನಲಾಗುತ್ತದೆ. ಸೂರ್ಯೋದಯ ದಿಂದ ಸೂರ್ಯಾಸ್ತದವರೆಗಿನ ಹರಿಯ ಸೇವೆಯನ್ನು ಶಯನೋತ್ಸವ ರೂಪದಲ್ಲಿ ಮಾಡುವುದನ್ನು ತಿರುಪತಿಯಲ್ಲಿ ಇಂದಿಗೂ ಕಾಣುತ್ತೇವೆ.

ವಾದಿರಾಜರು ತಮ್ಮ 'ನಾರಾಯಣನ ನೆನೆ' ಎಂಬ ಕೀರ್ತನೆಯಲ್ಲಿ ಹರಿಸೇವೆಯನ್ನು ಬಣ್ಣಿಸಿದ್ದಾರೆ. ತಮ್ಮ ಕೀರ್ತನೆಯುದ್ದಕ್ಕೂ ವಿಷ್ಣುವಿನ ನಾಮಸ್ಮರಣೆಯೇ ವೈಕುಂಠಕ್ಕೆ ಏರುವ ನಿಚ್ಚಣಿಕೆ (ಏಣಿ). ಇದರಿಂದ ಕಾಲನ ಬಾಧೆ ನೀಗುವುದು ಎಂದಿದ್ದಾರೆ. ಹರಿ ನಿರ್ಮಾಲ್ಯ (ಪೂಜೆಯ ನಂತರ ತೆಗೆದ ಒಣಗಿದ ಹೂವು) ಶಿರದಲ್ಲಿ ಧರಿಸಬೇಕು. ಹರಿ ನೈವೇದ್ಯವ ನಿತ್ಯವೂ ಸೇವಿಸಬೇಕು. ಹಗಲಿರುಳು ಹರಿಸ್ಮರಣೆ ಗೈಯ್ಯಬೇಕು. ಹರಿ ಪದವೇ ತೀರ್ಥವೆಂದೂ, ಹರಿಯೇ ದೈವವೆಂದೂ, ಗುರು ಮುಖದಿಂದ ಸಚ್ಛಾಸ್ತ್ರ ಪುರಾಣವನ್ನು ಕೇಳಬೇಕೆಂದಿದ್ದಾರೆ.


ಹರಿಸೇವೆಯಲ್ಲಿ ಹರಿದಿನಕ್ಕೆ (ಏಕಾದಶಿ) ವಿಶೇಷ ಮಹತ್ವವಿದೆ. ಅಂದು ವ್ರತ ಕೈಗೊಂಡವರು ಅಕ್ಕಿ, ಬೇಳೆ ಕಾಳುಗಳ ಆಹಾರವನ್ನು ಸೇವಿಸದೆ ಹಾಲು ಹಣ್ಣುಗಳನ್ನು ಸೇವಿಸುವರು. ಕೆಲವರು ಕೇವಲ ತೀರ್ಥವನ್ನು ಮಾತ್ರ ಸ್ವೀಕರಿಸುತ್ತಾರೆ. ಇಡೀ ದಿನ ಉಪವಾಸವಿದ್ದು ಮೌನ ವ್ರತವನ್ನೂ ಆಚರಿಸುವರು. ಅಂದು ಹಗಲು ನಿದ್ರೆ ಮಾಡುವುದಿಲ್ಲ. ಸಾಧ್ಯವಾದಷ್ಟೂ ಹರಿಸ್ಮರಣೆ, ಭಜನೆ, ಕೀರ್ತನೆಗಳಲ್ಲಿ ತೊಡಗಿರುತ್ತಾರೆ.

(ಎಸ್.ಪಿ.)


ಹಲಕರ್ಟಿ: ಐತಿಹಾಸಿಕ ಹಾಗೂ ಧಾರ್ಮಿಕ ಕ್ಷೇತ್ರ. ಕಲಬುರ್ಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಗ್ರಾಮ. ಇಲ್ಲಿನ ವೀರಭದ್ರೇಶ್ವರ ದೇವಸ್ಥಾನದಲ್ಲಿರುವ ಶಿಲಾ ಶಾಸನದಲ್ಲಿ ಉಲ್ಲೇಖಿಸಿರುವಂತೆ ಈ ಊರಿನ ಹೆಸರು ಪಲ್ಲಕರಂಟಿಯಾಗಿ ಮುಂದೆ ಹಲ್ಲಕರಟಿ. ಬಹುಶಃ ಪಕಾರದಲ್ಲಿ ಹಕಾರ ಆದೇಶವಾಗಿ, ಹಲ್ಲಕರಂಟಿಯಾಗಿ ಮುಂದೆ ಹಲ್ಲಕರಟಿ ಆಗಿರಬಹುದಾಗಿದೆ. ಹೈದರಾಬಾದ ನಿಜಾಮರ ಆಳ್ವಿಕೆಯಲ್ಲಿ ಆಡಳಿತ ಭಾಷೆ ಉರ್ದು ಇರುವುದರಿಂದ ಉಚ್ಚಾರ ಮತ್ತು ಬರಹಕ್ಕೂ ಅನುಕೂಲವಾಗುವಂತೆ ಇದನ್ನು ಹಲಕಟ್ಟಾ ಎಂದು ಬರೆದುದಾಗಿ ಕಂಡುಬರುತ್ತದೆ.

ಗ್ರಾಮದ ಸುತ್ತಲೂ ಭದ್ರವಾದ ಕೋಟೆ ಇದ್ದು, ಎಲ್ಲ ದಿಕ್ಕಿನಲ್ಲೂ ಎತ್ತರವಾದ ಬುರ್ಜುಗಳಿವೆ. ಕೋಟೆಯ ಪೂರ್ವ ದಿಕ್ಕಿನಲ್ಲಿ ಒಂದು ಮಹಾದ್ವಾರ. ಇನ್ನೊಂದು ಚಿಕ್ಕದ್ವಾರ ಮತ್ತು ಉತ್ತರ ದಿಕ್ಕಿನಲ್ಲಿಯೂ ಮತ್ತೊಂದು ಮಹಾದ್ವಾರಕ್ಕೆ ಹೊಂದಿಕೊಂಡಿರುವಂತೆ ಚಿಕ್ಕ ದ್ವಾರಗಳಿವೆ. ಗ್ರಾಮದ ಒಳಭಾಗದಿಂದ ಹೊರಗೆ ಹೋಗಲು ನೆಲಮಾರ್ಗವಿದೆ. ಈಗಲೂ ಆ ಮಾರ್ಗದ ಅವಶೇಷಗಳು ಕಂಡು ಬರುತ್ತವೆ. ಕಲ್ಯಾಣ ಚಾಲುಕ್ಯ ರಾಜರ ಮಾಂಡಲಿಕನೊಬ್ಬ ಇಲ್ಲಿ ಇರುತ್ತಿದ್ದನೆಂದು ಹೇಳಲಾಗುತ್ತದೆ. ಈ ಗ್ರಾಮದ ಮುಖ್ಯ ದೇವಾಲಯವೆಂದರೆ ವೀರಭದ್ರ ದೇವರ ದೇವಾಲಯ ಹಾಗೂ ಮೈಲಾರಲಿಂಗ ದೇವಾಲಯ. ಇವೆರಡೂ ದೇವಾಲಯಗಳ ಗೋಪುರಗಳು ಚಾಲುಕ್ಯರ ಶಿಲ್ಪಕಲೆಯನ್ನು ಹೋಲುತ್ತವೆ. ಇದಲ್ಲದೆ ಗ್ರಾಮದಲ್ಲಿ ಇನ್ನು ಅನೇಕ ದೇವಾಲಯಗಳು ಮತ್ತು ದೇಗುಲಗಳು ಇವೆ. ಈ ಎಲ್ಲಾ ಅವಶೇಷಗಳನ್ನು ನೋಡಿದಾಗ, ಇದೊಂದು ಪುರಾತನ ಮತ್ತು ಐತಿಹಾಸಿಕ ಪ್ರಸಿದ್ಧ ಗ್ರಾಮವೆಂದು ತಿಳಿದುಬರುತ್ತದೆ.

ಈ ಕ್ಷೇತ್ರದ ಕ್ಷೇತ್ರಾಧಿಪತಿ ಹಲಕರಟಿಯ ವೀರಭದ್ರೇಶ್ವರ ಎಂದೇ ಪ್ರಸಿದ್ಧಿ ಪಡೆದವನು. ದೇವಾಲಯ ಗ್ರಾಮದ



ಗೇಟ್ – ಹಲಕಟ್ಟಾ



ಅಣವೀರಭದ್ರೇಶ್ವರ – ಹಲಕಟ್ಟಾ

ಮಧ್ಯಭಾಗ್ಯದಲ್ಲಿ ಸುತ್ತಮುತ್ತ ಮನೆಗಳಿರುವದರಿಂದ ದೇವಾಲಯಕ್ಕೆ ಜಾಗದ ಕೊರತೆ ಕಂಡಬರುತ್ತದೆ. ದೇವಾಲಯದ ಗರ್ಭಗುಡಿ ಗೋಪುರ ಸುತ್ತಲಿನ ಪೌಳಿ ಮತ್ತು ದ್ವಾರಬಾಗಿಲು ಎಲ್ಲವೂ ಕಲ್ಲಿನಲ್ಲಿಯೇ ನಿರ್ಮಿಸಲ್ಪಟ್ಟಿದ್ದು, ಪ್ರಾಚೀನತೆ ಕಂಡು ಬರುತ್ತದೆ. ಮಧ್ಯ ಮಂಟಪವು ಸುಂದರ ಮತ್ತು ಆಕರ್ಷಕವಾಗಿದ್ದು, ಅರ್ವಾಚೀನತೆಯ ವೈಖರಿ ಸಾರುತ್ತದೆ.

ಈ ಮಂಟಪ ಮಹಾರಾಷ್ಟ್ರದ ಭಾರ್ಕಿಯ ಓರ್ವ ಭಕ್ತ ವೀರಭದ್ರಪ್ಪ ಕರಬಸಪ್ಪ ಶೀಲವಂತ ಎಂಬವರು ಕಟ್ಟಿಸಿದಂತೆ ಇಲ್ಲಿ ನಮೂದಿ ಸಲಾಗಿದೆ. ದೇವಾಲಯದ ಭಕ್ತರು ರಥವನ್ನು ನಿರ್ಮಿಸಿ ಕೊಟ್ಟಿದ್ದು, ಭಕ್ತರು ಉಳಿದು ಕೊಳ್ಳಲು ಧರ್ಮಶಾಲೆ ಕೂಡ ಕಟ್ಟಿಸಿದ್ದಾರೆ.

ವೀರಭದ್ರೇಶ್ವರರ ಅವತಾರ ಪುರಾಣಗಳಲ್ಲಿ ಉಲ್ಲೇಖಿಸಿ ರುವಂತೆ ದಕ್ಷಬ್ರಹ್ಮನ ಗರ್ವಭಂಗ ಮಾಡುವುದಕ್ಕಾಗಿ ಎಂದು ಕಂಡು ಬರುತ್ತದೆ. ದಕ್ಷಬ್ರಹ್ಮನು ತನಗೆ ಶಿವನಿಂದ ಆದ ಅನಾದರದ ಸೇಡು ತೀರಿಸಿಕೊಳ್ಳುವ ದುರಹಂಕಾರ ದಿಂದ ಶಿವನನ್ನು ಬಿಟ್ಟು ಉಳಿದ ಎಲ್ಲಾ ದೇವತೆ ಗಳನ್ನು ಆಮಂತ್ರಿಸಿ ಯಜ್ಞ ಮಾಡುತ್ತಾನೆ. ಶಿವನ ಅರ್ಧಾಂಗಿ ದಾಕ್ಷಾಯಿಣಿಯು, ತಂದೆಯ ಮೇಲಿನ ವಾತ್ಸಲ್ಯ ದಿಂದ ಪತಿಯ ಮಾತಿಗೆ ಕಿವಿ ಗೊಡದೆ ಯಜ್ಞಕ್ಕೆ ಬರುತ್ತಾಳೆ. ದಕ್ಷನು ಮಗಳನ್ನು ಕಟುಮಾತು ಗಳಿಂದ ನಿಂದಿಸುತ್ತಾನೆ. ಅವಮಾನಕ್ಕೆ ಒಳಗಾದ ಪಾರ್ವತಿ ಶಿವನಿಂದೆ ಸಹಿಸದೆ ಯಜ್ಞಕುಂಡಕ್ಕೆ ಹಾರಿ ಆಹುತಿಯಾಗುತ್ತಾಳೆ.

ನಂದಿಯಿಂದ ಈ ಸಮಾಚಾರ ತಿಳಿದ ಶಿವನು ಕೋಪಗೊಳ್ಳುತ್ತಾನೆ. ಶಿವನ ಹಣೆಗಣ್ಣಿನಿಂದ ಭಯಂಕರ ಜ್ವಾಲೆ ಹೊರಹೊಮ್ಮಿತು. ಮಹಾ ಜ್ವಾಲೆಯಲ್ಲಿಯೇ ಶ್ರೀ ವೀರಭದ್ರೇಶ್ವರ ದೇವರ ಅವತಾರವಾಯಿತು. ಹುಟ್ಟಿದ ಕೂಡಲೇ ಶಿವನ ಆಜ್ಞೆಯನ್ನು ಪಡೆದು ದಕ್ಷನ ಯಜ್ಞಮಂಟಪಕ್ಕೆ ಆರ್ಭಟಿಸುತ್ತ, ಕಿಡಿಕಾರುತ್ತ ಬಂದ ವೀರಭದ್ರನನ್ನು ಕಂಡು, ಯಜ್ಞಕ್ಕೆ ಬಂದ ಎಲ್ಲಾ ದೇವತೆಗಳು, ಋಷಿಮುನಿಗಳು ದಿಕ್ಕುಗಾಣದೆ ಓಡುತ್ತಾರೆ. ದುರಹಂಕಾರಿ ದಕ್ಷನ ಸಂಹಾರವಾಗುತ್ತದೆ. ದಕ್ಷನ ಸತಿಯಾದ ಪ್ರಸುತಿಯು ವೀರಭದ್ರೇಶ್ವರನಲ್ಲಿ ಬಂದು ತನಗೆ ಮುತ್ತೈದೆತನ ದಯಪಾಲಿಸಬೇಕೆಂದು ಅಂಗಲಾಚಲು ದಯಾಮಯನಾದ ವೀರಭದ್ರೇಶ್ವರನು, ದಕ್ಷನಿಗೆ ಕುರಿತಲೆ ಇಟ್ಟು ಜೀವದಾನ ಕೊಟ್ಟು ಸಮಂಗಲಿಯಾಗು ಎಂದು ಹರಸುತ್ತಾನೆ.

ಮೇಡ್ರಾಸುರ ದೈತ್ಯನ ಸಂಹಾರವೂ ವೀರಭದ್ರೇಶ್ವರ ದೇವರಿಂದ ಇದೇ ಸ್ಥಳದಲ್ಲಿಯೇ ನಡೆಯಿತೆಂದು ಪುರಾಣದಲ್ಲಿ ಬರುತ್ತದೆ. ಈ ಸ್ಥಳವು ಇಂದಿಗೂ ರುದ್ರತಗ್ಗಾ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ವರ್ಷಕ್ಕೊಮ್ಮೆ ವೀರಭದ್ರ ದೇವರು ಪಲ್ಲಕ್ಕಿಯಲ್ಲಿ ಹೋಗಿ ಆ ಸ್ಥಳಕ್ಕೆ ದರ್ಶನ ಕೊಟ್ಟು ಬರುವ ಪರಿಪಾಠವಿದೆ.

ಹಲಕರಟಿಯ ವೀರಭದ್ರೇಶ್ವರ ಭಕ್ತರು ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಮತ್ತು ತಮಿಳುನಾಡಿನಲ್ಲಿ ಹರಡಿದ್ದಾರೆ. ಎಲ್ಲ ಭಾಗದಿಂದಲೂ ಭಕ್ತರು ಇಲ್ಲಿಗೆ ಬಂದು ಸೇವೆ ಸಲ್ಲಿಸಿ ಪುನೀತರಾಗುತ್ತಾರೆ. ಹೆಬ್ಬಾಳದ ಜಾಡಭಕ್ತ ಅಪಾರವಾದ ಭಕ್ತಿಯಿಂದ ದೇವರನ್ನು ತನ್ನ ಊರಿಗೆ ಕರೆದೊಯ್ಯುವಾಗ, ದಾ–ರಿಯಲ್ಲಿ ಕೋರವಾರ ಸಮೀಪದಲ್ಲಿ ಪ್ರಶಾಂತವಾದ ಸ್ಥಳ ಕಂಡು, ಅಲ್ಲಿಯೇ ನೆಲೆಸಿ ಅಣಿವೀರನೆಂದು ಪ್ರಸಿದ್ಧಿಯಾಗಿದ್ದಾನೆ. ಅದೇರೀತಿಯಾಗಿ ಶಹಾಪೂರದ ಓರ್ವ ಭಕ್ತ ಪ್ರತಿವರ್ಷ ಜಾತ್ರಾ ಸಮಯದಲ್ಲಿ ಬಂದು ಪುರವಂತ ಸೇವೆ ಸಲ್ಲಿಸಿ, ಕೊನೆಗೆ ಶಿರಸ್ಸನ್ನೇ ದೇವರಿಗೆ ನೈವೇದ್ಯವಾಗಿ ಅರ್ಪಿಸಿ ಅವನ ಮುಂಡ ಧರಿಸಿ ಮತ್ತೆ ಮೊದಲಿನಂತೆ ಕಾಣಿಸಿಕೊಳ್ಳುತ್ತಿದ್ದನಂತೆ. ಈ ಅಗಾಧವಾದ ಸುದ್ದಿ ಎಲ್ಲಾ ಕಡೆಗೂ ಹರಡಲು, ಅಂದಿನ ನಿಜಾಮ ಸರಕಾರದ ಕೆಲವು ಅಧಿಕಾರಿಗಳ ಕುಚೇಷ್ಟೆಯಿಂದ ಅವನ ಶಿರಸ್ಸು ತಿರುಗಿ ಕೊಡದೇ ಪುರವಂತನು ಅಲ್ಲೇ ಮರಣ ಹೊಂದಬೇಕಾಯಿತೆಂದು ಹೇಳಲಾಗುತ್ತದೆ. ಈಗಲೂ ಅವನ ಸಮಾಧಿ ದೇವರ ಎದುರಲ್ಲಿದೆ. ಈಗಲೂ ಕೂಡಾ ಬೇರೆ ಬೇರೆ ಭಾಗಗಳಿಂದ ಬಂದ ಭಕ್ತರು ತಮ್ಮ ಇಷ್ಟಾರ್ಥಗಳನ್ನು ಪೂರ್ತಿ ಮಾಡಿಕೊಂಡು ಧನ್ಯರಾಗುತ್ತಾರೆ. ತಮಗಾದ ಅಪಾರ ಅನುಭವ ಮತ್ತು ದೇವರ ಮಹಿಮೆ ಕುರಿತು ತಮ್ಮ ಆಗಾಧವಾದ ಅನಿಸಿಕೆಗಳನ್ನು ಹೇಳಿಕೊಳ್ಳುತ್ತಾರೆ.

ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಕಾರ್ತೀಕ ಮಾಸ ಗೌರಿ ಹುಣ್ಣಿಮೆಯಿಂದ ಪ್ರಾರಂಬವಾಗಿ, ಐದು ದಿವಸಗಳವರೆಗೂ ಬಹು

ವಿಜೃಂಭಣೆಯಿಂದ ನಡೆಯುತ್ತದೆ. ವಿಶೇಷವಾಗಿ ಅಗ್ಗಿಯ ಕಾರ್ಯಕ್ರಮ ರೋಮಾಂಚಕಾರಿಯಾಗಿರುತ್ತದೆ. ವಿವಿಧ ಭಾಗಗಳಿಂದ ಬಂದ ಭಕ್ತರು ಆ ರಾತ್ರಿಯಲ್ಲಿ ಸ್ನಾನಮಾಡಿ ಒದ್ದೆ ಬಟ್ಟೆಗಳಲ್ಲಿ ಬಂದು, ಭಯಂಕರವಾದ ಕಿಡಿಕಾರುತ್ತಿರುವ ಅಗ್ಗಿಯಲ್ಲಿ ಹಾದು ಹೋಗುವುದನ್ನು ಕಂಡರೆ, ನಿಜವಾಗಿಯೂ ದೇವನ ಮಹಿಮೆ ಕೊಂಡಾಡಬೇಕು.

ಇನ್ನೊಂದು ವಿಶೇಷ ಕಾರ್ಯ ಕ್ರಮವೆಂದರೆ, ಮೈಲಾರ ಲಿಂಗನ ಗುಡಿಯಲ್ಲಿ ಸರಪಳಿ ಹರಿಯುವದು. ಮೈಲಾರ ಲಿಂಗನ ಭಕ್ತರಾದ ಒಬ್ಬರು ಉಪವಾಸವಿದ್ದು, ಕಬ್ಬಿಣದ ದಪ್ಪವಾದ ಸರಪಳಿಯನ್ನು 5 ಜನರು ಬೇರೆ ಬೇರೆಯಾಗಿ ಹರಿಯುತ್ತಾರೆ. ಸಾವಿರಾರು ಭಕ್ತರು ಇದನ್ನು ಕಂಡು ದೇವ ಮಹಿಮೆ ಕೊಂಡಾಡುತ್ತಾರೆ. ಮೂರನೆಯದು ಚೌಡೇಶ್ವರಿಯ ಮೆರವಣಿಗೆ.

ವೀರಭದ್ರೇಶ್ವರನು ದಕ್ಷನ ಸೈನ್ಯದೊಂದಿಗೆ ಯುದ್ಧ ಮಾಡುವಾಗ, ಅವನ ಸಹಾಯಕ್ಕೆಂದು ಚೌಡೇಶ್ವರಿಯನ್ನು ಶಿವ ಕಳಿಸುತ್ತಾನೆ. ಅವಳು ದಕ್ಷನ ಸೈನ್ಯವನ್ನು ಯಾವ ರೀತಿಯಾಗಿ ಸಂಹರಿಸಿದಳೆಂಬ ಸಂಕೇತವಾಗಿ ಜಾತ್ರೆಯಲ್ಲಿ ನಕಲಿ ವಾದ್ಯಗಳೊಂದಿಗೆ ಬಂದು ಕುಣಿದು, ಕೊನೆಗೆ ಮೈಲಾರಲಿಂಗನ ಮತ್ತು ವೀರೇಶನ ಗುಡಿಗೆ ಹೋಗಿ ಅವರಿಂದ ಉಡಿ ತುಂಬಿಕೊಂಡು ನಕಲಿ ಮಾರ್ಯಾದೆ ಪಡೆದು, ತನ್ನ ಮಂದಿರಕ್ಕೆ ಹೋಗುತ್ತಾಳೆ.

ವೀರಭದ್ರೇಶ್ವರ ರಥೋತ್ಸವ ಹೂವು, ತಳಿರು, ತೋರಣಗಳಿಂದ ಛತ್ರ-ಚಾಮರಗಳಿಂದ ಅಲಂಕೃತವಾಗಿ ನೋಡುಗರ ಕಣ್ಣಿಗೆ ಆನಂದವನ್ನುಂಟು ಮಾಡುತ್ತದೆ. ಸಾವಿರಾರು ಜನರು ರಥದ ಮುಂದೆ ನೆರೆದು ಹರ್ಷೋಲ್ಲಾಸದಿಂದ ಜಯ ಜಯ ಕಾರ ಮಾಡುತ್ತ ಭಕ್ತಿಯನ್ನು ಅರ್ಪಿಸುತ್ತಾರೆ.

ಆನಂತರ ರಥದ ಎದುರಿನಲ್ಲಿ ಮದ್ದು ಸುಡುವ ದೃಶ್ಯ ನಿಜವಾಗಿಯೂ ಬೆರಗುಗೊಳಿಸುತ್ತದೆ. ಸಕಲ ವಾದ್ಯಗಳು ಮೊಳಗುತ್ತವೆ. ಪಲ್ಲಕ್ಕಿಯಲ್ಲಿ ವೀರಭದ್ರೇಶ್ವರ ಮೂರ್ತಿ ತಂದು ರಥದಲ್ಲಿ ಕೂಡಿಸುವುದೇ ತಡ ಜನರು ಜಯಘೋಷಗಳು ಕೂಗುತ್ತಾ ರಥವನ್ನು ರಥದ ಮೇಲೆ ಹಾರಿಸುತ್ತಾ ಜಯಘೋಷದೊಂದಿಗೆ ಭಕ್ತಿಯಿಂದ ನಮಸ್ಕರಿಸುತ್ತಾರೆ.

ಹಲಕರ್ಟಿ ಗ್ರಾಮವು ಹಿಂದುಗಳಿಗಷ್ಟೇ ಪವಿತ್ರವಾದ ಸ್ಥಳವೆನಿಸದೆ, ಮುಸಲ್ಮಾನರಿಗೂ ಕೂಡ ಇದು ಪವಿತ್ರವಾದ ಕ್ಷೇತ್ರವಾಗಿದೆ. ಇಲ್ಲಿರುವ ಪಾಷಾ ಬಾರಿಯ ಪವಿತ್ರ ದರ್ಗಾದ ಜಾತ್ರೆ, ಮುಸಲ್ಮಾನರಿಗೂ ಮತ್ತು ಹಿಂದುಗಳಿಗೂ ಭಾವೈಕ್ಯತೆಯ ಸಂಕೇತವಾಗಿದೆ. *(ಎಸ್.ಎಂ.ಜಿ.)*

ಹಲಗೆ ಕುಣಿತ: ಹಲವು ಜನಪದ ಕುಣಿತಗಳಲ್ಲಿ ಒಂದು. ಹಲಗೆ ಬಾರಿಸುವವರು ಹೆಚ್ಚಾಗಿ ಹರಿಜನರು. "ಒಲೆ ಇಲ್ಲದ ಒಕ್ಕಲಲ್ಲ, ಹಲಗೆ ಇಲ್ಲದ ಊರಲ್ಲ' ಎನ್ನುವ ಗಾದೆ ಮಾತಿದೆ. ಇದನ್ನು ತಮಟೆ, ತಪ್ಪಡಿ ಎಂದೂ ಕರೆಯುವರು. ಹಳ್ಳಿಗಳಲ್ಲಿ ಉತ್ಸವ, ಮೋಹರಂ ಹಬ್ಬಗಳಲ್ಲಿ ಈ ವಾದ್ಯ ಬೇಕೇ ಬೇಕು. ಕೆಲವು ಕಡೆ ಡಂಗೂರ ಸಾರಲೂ ಇದನ್ನು ಬಳಸುತ್ತಾರೆ.

ವೃತ್ತಾಕಾರದ ಮರದ ಬಳೆಗೆ ಹದಗೊಳಿಸಿದ ನಯವಾದ ಕೋಣನ ಚರ್ಮವನ್ನು ಬಿಗಿದು ಇದನ್ನು ಸಿದ್ಧಪಡಿಸಲಾಗುತ್ತದೆ. ಹೆಗಲಿಗೆ ಹಾಕಿಕೊಳ್ಳಲು ಚರ್ಮದ ಹೆಗಲು ಪಟ್ಟಿ ಇರುತ್ತಿದೆ. ಇದನ್ನು ಬಡಿಯಲು ಒಂದು ದೊಡ್ಡ ಗುಣಿ, ಇನ್ನೊಂದು ಸಣ್ಣ ಕಡ್ಡಿ ಇರುತ್ತದೆ. ಇದನ್ನು ಬಾರಿಸುವ ಮುನ್ನ ಬೆಂಕಿಗೆ ಹಿಡಿದು ಹದವಾಗಿ ಕಾಸಿದರೆ ಅದಕ್ಕೆ ಒಂದು ಮಾಧುರ್ಯ ಬರುತ್ತದೆ.

ಬಾರಿಸುವವನು ಹೆಗಲು ಪಟ್ಟಿಯನ್ನು ಎಡಭಾಗಕ್ಕೆ ಹಾಕಿಕೊಂಡು ಹಲಗೆಯನ್ನು ಸೊಂಟದ ಮೇಲಿಟ್ಟುಕೊಂಡು ಎಡಗೈಯಲ್ಲಿ ಸಣ್ಣ ಕಡ್ಡಿ ಹಿಡಿದು ಮೇಲ್ಭಾಗದಲ್ಲಿ, ಬಲಗೈಯಲ್ಲಿ ದೊಡ್ಡಗುಣಿ ಹಿಡಿದು. ಮಧ್ಯಭಾಗದಲ್ಲಿ ಕಲಾತ್ಮಕವಾಗಿ ಬಡಿಯತೊಡಗಲು ಕೇಳುಗರಿಗೆ ರಮ್ಯತೆಯುಂಟಾಗುತ್ತದೆ. ಈ ಬಡಿತದಲ್ಲಿ ದೀನಬಾಜು, ಹನುಮಂತನ ಗತ್ತು, ಕುದುರಿ ಗತ್ತು, ಗವಾರ ಹೆಜ್ಜೆ, ಚಿತ್ತಾಟ ಎಂಬ ಹಲವಾರು ಪ್ರಕಾರಗಳಿವೆ. ಇವನ್ನು ಬಾರಿಸುವಲ್ಲಿ ಸೂಕ್ಷ್ಮವಾದ ಕೈಚಳಕ ತೋರಿಸುತ್ತಾರೆ. ಕೆಲವರು ಜೋಡು ಹಲಗೆಗಳನ್ನು ನುಡಿಸುತ್ತಾರೆ. ಇವರಿಗೆ ಸಾಥ ಆಗಿ ಸನಾಯಿ, ಸಹನಾಯಿ, ಬುರುಗು ಇರುತ್ತವೆ. ಕಣಿ ಬಾರಿಸುವವನಿಗೂ ಇವನಿಗೂ ಸ್ಪರ್ಧೆ ಏರ್ಪಟ್ಟು ಹರ್ಷದ ಹೊಳೆಯನ್ನೇ ಹರಿಸುವರು. ಇನ್ನೂ ಕೆಲವೆಡೆ ಗಂಟೆಸಾಲೆಯ ವಾದಕ್ಕೆ ತಕ್ಕಂತೆಯೂ ಇದನ್ನೂ ನುಡಿಸುವರು. ಈ ರಭಸಕ್ಕೆ ಮಾರು ಹೋದ ಕೆಲವರು ಚೂರಮರಿ ತೂರುವರು. ನಾಣ್ಯವನ್ನು ಭೂಮಿಯ ಮೇಲಿಟ್ಟು ಹಲಗೆ ಬಾರಿಸುತ್ತಾರೆ. ಹಣೆಗೆ ಹಚ್ಚಿಕೊಳ್ಳಲು ಪ್ರೇರೇಪಿಸುವರು. ಈ ಹಲಗೆ



ಹಲಿಗೆ ಮೇಳ

ಧ್ವನಿಗೆ ತಕ್ಕಂತೆ ಹಲವರು ಎರಡೆರಡು ಸಾಲಾಗಿ ನಿಂತು ಕೋಲನ್ನು ಬಡಿಯುತ್ತ ಕುಣಿಯುವರು; ಕೆಲವು ಸಲ ಹಾಡುವರು.

(ಜಿ.ವಿ.ಎಸ್.)

ಹಲ್ಲಿ ಶಕುನ: 'ಶಕುನ' ಎಂಬ ಶಬ್ದಕ್ಕೆ ಭವಿಷ್ಯದಲ್ಲಿ ಆಗುವುದನ್ನು ಹೇಳುವುದು ಎಂಬರ್ಥವಿದೆ. ನಮ್ಮ ಜನ ಭವಿಷ್ಯದಲ್ಲಿ ಆಗಬಹುದಾದುದನ್ನು ಕಂಡುಕೊಳ್ಳಲು ಜ್ಯೋತಿಷ್ಯದ ಜೊತೆಗೆ ಹಾಲಕ್ಕಿ, ಗೂಗೆ, ಹಲ್ಲಿ ಮೊದಲಾದ ಜೀವಿಗಳು ಮಾಡುವ ಧ್ವನಿಯನ್ನು ಅವಲಂಬಿಸಿದರು. ಅದರಲ್ಲೂ ಮಾನವರ ಮನೆಯಲ್ಲಿಯೇ ವಾಸ ಆಗಿರುವ ಹಲ್ಲಿಯ ನುಡಿಗೆ ಹೆಚ್ಚಿನ ಪ್ರಾಶಸ್ತ್ಯವನ್ನಿತ್ತರು. ಹಲ್ಲಿ ರವಿವಾರ ಪೂರ್ವದಿಕ್ಕಿನಲ್ಲಿ ನುಡಿದರೆ ಭೀತಿ; ಆಗ್ನೇಯೆ ದಿಕ್ಕಿನಲ್ಲಿ ನುಡಿದರೆ ಕಲಹ, ದಕ್ಷಿಣ ದಿಕ್ಕಿನಲ್ಲಿ ನುಡಿದರೆ ಪಿತೃ ಭೀತಿ, ನೈರುತ್ಯದಲ್ಲಿ ನುಡಿದರೆ ಭೋಜನ, ಪಶ್ಚಿಮ ದಿಕ್ಕಿನಲ್ಲಿ ನುಡಿದರೆ ದುರ್ವಾರ್ತೆ ವಾಯವ್ಯದಲ್ಲಿ ನುಡಿದರೆ ಸುಖಪ್ರಾಪ್ತಿ, ಉತ್ತರದಲ್ಲಿ ನುಡಿದರೆ ಲಾಭ, ಈಶಾನ್ಯದಲ್ಲಿ ನುಡಿದರೆ ಲಾಭ, ಮೇಲ್ಭಾಗದಲ್ಲಿ ನುಡಿದರೆ ಶುಭ, ಕೆಳಭಾಗದಲ್ಲಿ ನುಡಿದರೆ ಕಾರ್ಯಸಿದ್ಧಿ ಎಂಬ ಜಂತ್ರಿಯನ್ನೇ ಸಿದ್ಧಪಡಿಸಿದ್ದಾರೆ.

ಹಾಗೆಯೇ ಹಲ್ಲಿ ಮೈ ಮೇಲೆ ಬಿದ್ದ ಶಕುನವನ್ನೂ ಹೀಗೆ ಗುರುತಿಸಿದ್ದಾರೆ. ಹಲ್ಲಿ ಮೈಮೇಲೆ ಬಿದ್ದರೆ–4 ತಿಂಗಳೊಳಗಾಗಿ ತಂದೆ–ತಾಯಿಗಳಿಗೆ ಪೀಡೆ, ತಲೆಯಮೇಲೆ ಬಿದ್ದರೆ 1 ದಿನದಲ್ಲಿ ಹಾನಿ, ತಲೆಯ ಹಿಂಭಾಗದಲ್ಲಿ ಬಿದ್ದರೆ ಸೋದರಮಾವಂದಿರಿಗೆ ಅರಿಷ್ಟ, ಮುಂದೆದೆಯ ಮೇಲೆ ಬಿದ್ದರೆ 1 ತಿಂಗಳಲ್ಲಿ ಶುಭಕಾರ್ಯ, ಎಡಗಣ್ಣಿ ಮೇಲೆ ಬಿದ್ದರೆ ಹಾನಿ, ಬಲಗಣ್ಣ ಮೇಲೆ ಬಿದ್ದರೆ 3 ತಿಂಗಳಲ್ಲಿ ಲಾಭ, ಎಡಗಿವಿಯ ಮೇಲೆ ಬಿದ್ದರೆ ಅಲಂಕಾರ ಪ್ರಾಪ್ತಿ, ಬಲಗಿವಿಯ ಮೇಲೆ ಬಿದ್ದರೆ ಪೀಡೆ, ಹೊಟ್ಟೆಯ ಮೇಲೆ ಬಿದ್ದರೆ ಸಂತೋಷ..., ಹೀಗೆಯೇ ಈ ಪಟ್ಟಿ ಮುಂದುವರಿಯುತ್ತದೆ.

(ಜಿ.ವಿ.ಎಸ್.)

ಹಳ್ಳಿಖೇಡ–(ಬಿ): ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಪ್ರಾಚೀನ ಊರು. 9ನೆಯ ಶತಮಾನದ ವಡ್ಡಾರಾಧನೆ ಎಂಬ ಕಥಾ ಸಂಗ್ರಹವನ್ನು ಈ ಊರಿನ ಬ್ರಾಜಿಷ್ಣು ಎಂಬ ಕವಿ ಬರೆದಿದ್ದಾನೆಂದು ಖ್ಯಾತ ಲೇಖಕ ಹಂಪನಾ ಅವರು ಉಲ್ಲೇಖಿಸಿದ್ದಾರೆ. ಅವರು ಈ ಕುರಿತು ಒಂದು ಗ್ರಂಥವನ್ನೇ ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. ಸಿಂಧ ಅರಸರು ಈ ಭಾಗವನ್ನು ಆಳುವಾಗ ಈ ಗ್ರಾಮಕ್ಕೆ ದತ್ತಿಗಳನ್ನು ನೀಡಿರುವ ಬಗ್ಗೆ ಶಿಲಾಶಾಸನಗಳು ತಿಳಿಸುತ್ತವೆ. ರಂಜೋಳದ ಸಿಂಧರ ಶಿಲಾ ಶಾಸನಗಳು ಈ ಊರಿನ ಬಗ್ಗೆ ಮಾಹಿತಿ ನೀಡುತ್ತವೆ.

ಹಳ್ಳಿಖೇಡ ಹಾಲಖೇಡ ವಾಗಿತ್ತೆಂದು ಕ್ರಿ.ಶ. 200ರಲ್ಲಿದ್ದ ಹಾಲ ರಾಜ ಇದನ್ನು ಸ್ಥಾಪಿಸಿದನೆಂದು ಹಲವು ಮೂಲಗಳು ತಿಳಿಸುತ್ತವೆ. 'ಗಾಥಾ ಸಪ್ತಶತಿ' ಗ್ರಂಥ ಕರ್ತೃ ಹಾಲ ರಾಜನಿಂದ ಈ ಗ್ರಾಮ ಹುಟ್ಟಿರಬೇಕಾದರೆ ಈ ಗ್ರಾಮಕ್ಕೆ ಒಂದು ಸಾವಿರದ ಎಂಟುನೂರು ವರ್ಷಗಳ ಇತಿಹಾಸವಿರುವುದು ತಿಳಿದು ಬರುತ್ತದೆ. ಈ ಭಾಗದಲ್ಲಿ ನಾಗಾರಾಧನೆ ಜಾರಿಯಲ್ಲಿದ್ದು ನಾಗಪೂಜೆ ಪ್ರಚಲಿತವಾಗಿತ್ತು ಎಂಬುದಕ್ಕೆ ಸೀಮೆ ನಾಗಣ್ಣ ದೇವಾಲಯವೇ ಸಾಕ್ಷಿಯಾಗಿದೆ. ಅಲ್ಲದೆ ನಾಗನಕೇರಿ ಎಂಬ ಹೆಸರಿನ ಊರು ಕೂಡಾ ಇದೆ. ತಲಕಾಡಿನ ಗಂಗರ ಕಾಲದಲ್ಲಿ ಖೇಡ, ಖರ್ವ ಎಂದು ಹಳ್ಳಿಗಳಿಗೆ ಕರೆಯುತ್ತಿದ್ದರು ಹಳ್ಳಿಗಿಂತ ಜನಸಂಖ್ಯೆಯಲ್ಲಿ ಸ್ವಲ್ಪ ದೊಡ್ಡವಾಗಿರುವ ಊರುಗಳಿಗೆ 'ಖೇಡ' ಎನ್ನುತ್ತಿದ್ದರು. ಹಾಗಾಗಿ ಈ ಊರಿಗೆ ಹಳ್ಳಿಖೇಡ (ಬಿ) ಎಂದು ಹೆಸರಾಗಿದೆ. ಹಳೆಗನ್ನಡದ 'ಪ' ಕಾರಗಳೆಲ್ಲಾ ಹೊಸಗನ್ನಡಕ್ಕೆ ಬಂದಾಗ ಹ ಕಾರಗಳಾಗಿ ಪರಿಣಮಿಸಿವೆ.

ಹಳ್ಳಿಖೇಡ (ಬಿ) ಎಂದರೆ ಹಳ್ಳಿಖೇಡ ಬುಜುರ್ಗ ಎಂದು ಅರ್ಥವಾಗುತ್ತದೆ. ಬುಜುರ್ಗ ಎಂದರೆ ದೊಡ್ಡದು. 'ಕೆ' ಎಂದರೆ 'ಖುರ್ದ' ಎಂದು ಅರ್ಥವಾಗುತ್ತದೆ. ಖುರ್ದ ಎಂದರೆ ಚಿಕ್ಕದು ಇವು ನಿಜಾಮನ ಆಡಳಿತದಲ್ಲಿ ಇಂತಹ ಹೆಸರುಗಳು ಬಂದಿವೆ.

(ಎಚ್.ಕೆ.)

ಹಳ್ಳಿಖೇಡ (ಕೆ): ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವ ಹೊಂದಿರುವ ಪುಟ್ಟ ಗ್ರಾಮ. ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನಲ್ಲಿದೆ. ಇಲ್ಲಿಯ ಬಸವಕಲ್ಯಾಣದಿಂದ ಸುಮಾರ 30 ಕಿ.ಮೀ. ಅಂತರದಲ್ಲಿದ್ದು, ಕಲ್ಯಾಣ ನಾಡಿನ ಹೆಬ್ಬಾಗಿಲು ಎನಿಸಿಕೊಂಡಿದೆ.

ಹಳ್ಳಿಖೇಡ (ಕೆ) ಧಾರ್ಮಿಕ ಕ್ಷೇತ್ರವೂ ಆಗಿ ಕಂಗೊಳಿಸಬೇಕಾದರೆ ಇಲ್ಲಿರುವ ಶ್ರೀ ಶರಣ ಕಿನ್ನರಿ ಬೊಮ್ಮಯ್ಯನ ಗವಿ ಹಾಗೂ ದೇವಸ್ಥಾನ ಕಾರಣ. ಊರಿಗೆ ಪ್ರಮುಖ ಬೆನ್ನಲುಬಿನಂತೆ ಕಪ್ಪು, ದಪ್ಪ ಬಂಡೆಗಳನ್ನು ಹಿಡಿದಿಟ್ಟುಕೊಂಡ ಗುಡ್ಡ, ಅದರಡಿಯಲ್ಲಿಯೇ ಇರುವ ಗುಹೆ ಹಾಗೂ ಕಿನ್ನರಿ ಬೊಮ್ಮಯ್ಯಗಳ ದೇವಸ್ಥಾನ ಪೂರ್ವ ದಿಕ್ಕಿನ ಮುಖ ಮಾಡಿಕೊಂಡು ಗ್ರಾಮದ ಮೇಲೆ ಎತ್ತರಕ್ಕೆ ಗುಡ್ಡಕ್ಕೆ ಹೊಂದಿಕೊಂಡಿದೆ.

ಸುಮಾರು 64 ಮೆಟ್ಟಿಲುಗಳನ್ನು ಹತ್ತಿಕೊಂಡು ಗರ್ಭಗುಡಿಯ ಮುಂದಿನ ಪ್ರಾಂಗಣಕ್ಕೆ ಹೋಗಿ ನಿಂತಾಗ, ವಿಶಾಲವಾದ ಪ್ರಾಂಗಣ ಕನಿಷ್ಠ 400 ಜನ ಕೂಡಲು ಆಸನ ಒದಗಿಸಿಕೊಡುತ್ತದೆ. ಸುತ್ತಲೂ ಕಬ್ಬಿಣದ ಕುಶಲೋಪರಿಯಿಂದ ನಿರ್ಮಿಸಿದ ಬೇಲಿ (ಗ್ರೀಲ್) ಜೊತೆಗೆ ಆಧುನಿಕವಾಗಿ ನಿರ್ಮಿಸಿದ ಬೃಹತ್ ಛಾವಣಿ ಮಧ್ಯದಲ್ಲಿ ನಂದಿ, ಗರ್ಭಗುಡಿಯಲ್ಲಿ ಇತ್ತೀಚೆಗೆ ಒಂದು ತಲೆಮಾರಿನಿಂದ ತಯಾರಿಸಿದ ಕಂಚಿನ ಮೂರ್ತಿ ಇದೆ. ಅದರ ಹಿಂದೆ ಹಳೆಯ 12ನೆಯ ಶತಮಾನದ ಮೂರು ಶಿಲಾ ಮೂರ್ತಿಗಳಿವೆ. ಅವು ಗ್ರಾಮದ ಈಗಿನ ಗುಡಿಯ ಮುಂಭಾಗದಲ್ಲಿ ಹಾಗೂ ಊರಿನ ಹಿರೇಮಠದಲ್ಲಿ ದೊರೆತವುಗಳಾಗಿವೆ. ಹಳ್ಳಿಖೇಡ (ಕೆ) ಇತಿಹಾಸಕ್ಕೆ ಪೂರಕವಾದ ಹಳೆ ಕಾಲದ ಗುರುಮಠವು ಎತ್ತರದ ಗೋಡೆ ಹಾಗೂ ಬೃಹದಾಕಾರ ಹೊಂದಿದ್ದು, ಎರಡು ಹೊರಬಾಗಿಲುಗಳಿಂದ ನಿರ್ಮಿತವಾಗಿದೆ. ಗ್ರಾಮಕ್ಕೆ ದೊಡ್ಡದಾದ ಈ ಮಠವನ್ನು ಹಿರೇಮಠವೆಂತಲೂ ಕರೆಯುತ್ತಾರೆ. ಅದರ ವಿಶಾಲ ಅಂಗಳದಲ್ಲಿ ಏಳು ತಲೆಮಾರಿನ ಕುರುಹು ತೋರುವ ಏಳು ಕರ್ತೃ ಗದ್ದುಗೆಗಳಿದ್ದು, ಹಳೆಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಪಳಯುಳಿಕೆಗಳಾಗಿವೆ. ಮೊನ್ನೆ ಮೊನ್ನೆಯವರೆಗೂ ಪಾಳು ಬಿದ್ದ ಸ್ಮಾರಕವಾಗಿದ್ದ ಇದರಲ್ಲಿ ಅಂಗನವಾಡಿ ಶಾಲೆ ಹುಟ್ಟಿಕೊಂಡಿದೆ. ನಿಜಾಮರ ಆಳ್ವಿಕೆಯಲ್ಲಿ ಗೌಸಾ ಮಾದರಿಯಲ್ಲಿ ನಿರ್ಮಿತವಾದ ಈ

ಮಠ ದಿನ ದಿನಕ್ಕೆ ಅವಸಾನಗೊಳ್ಳುತ್ತಿದ್ದರೂ ಹಳ್ಳಿಖೇಡ (ಕೆ) ದ ಪ್ರಾಚೀನತೆಯನ್ನು ಅರಿಯುವಲ್ಲಿ ಬೆಳಕಿಂಡಿಯಾಗಿದೆ.

ಶ್ರೀಮಠದಿಂದಲೇ ಪ್ರಾರಂಭಗೊಂಡ ಕಿನ್ನರಿ ಬೊಮ್ಮಯ್ಯನ ಜಾತ್ರೆ ಪ್ರತಿ ವರ್ಷ ಶ್ರಾವಣ ಮಾಸದ ನಡುವಿನ ಸೋಮವಾರ ವಿಜೃಂಭಣೆಯಿಂದ ಅನೇಕ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಾಕ್ರಮಗಳನ್ನು ನಡೆಸಿಕೊಂಡು ಬರುತ್ತದೆ. ಕರ್ನಾಟಕದಲ್ಲಿ ಬೃಹತ ಪ್ರಮಾಣದ ಶಿವನ ಮೂರ್ತಿಯ ಕೈಲಾಸನಾಥೇಶ್ವರ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದು ಪ್ರೇಕ್ಷಕರನ್ನು ಕೈಬೀಸಿ ಕರೆಯುತ್ತಿದೆ. ಇವೆಲ್ಲಕ್ಕೂ ಮಿಗಿಲಾಗಿ ಶರಣ ಕಿನ್ನರಿ ಬೊಮ್ಮಯ್ಯಗಳ ಹಿನ್ನೆಲೆ ಹೇಳುವದಾದರೆ, ಎಂಟು ನೂರು ವರ್ಷಗಳ ಹಿಂದೆ ಜಗಜ್ಯೋತಿ ಬಸವಣ್ಣನವರ ಕಳಚೂರಿ ಬಿಜ್ಜಳ ರಾಜನ ಮಹಾ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. "ಕಾಯಕವೇ ಕೈಲಾಸ" ವೆಂಬ ಶೀರ್ಷಿಕೆಯಡಿ ಸುಂದರ ಅನುಭವ ಮಂಟಪವೆಂಬ ವಿಶ್ವವಿದ್ಯಾನಿಲಯ ಸ್ಥಾಪಿಸಿ, ಅನುಭವ ಮಂಟಪದ ಮೂಲಕ ಅದ್ಭುತವಾದ ಕ್ರಾಂತಿಯನ್ನೇ ನಡೆಸಿದರು. ಆ ಕ್ರಾಂತಿ ಧಾರ್ಮಿಕ, ತಾತ್ವಿಕ, ಸಾಮಾಜಿಕ ಹಾಗೂ ಸಾಹಿತ್ಯ ಕ್ಷೇತ್ರಗಳನ್ನು ವ್ಯಾಪಿಸಿತ್ತು. ಸಾವಿರಾರು ವರ್ಷಗಳಿಂದ ನಡೆದು ಬಂದ ವರ್ಣಾಶ್ರಮ, ಅಂಧಶದ್ಧೆ, ಮೂಢ ನಂಬಿಕೆ, ಕಂದಾಚಾರಗಳ ಸೆಳವಿಗೆ ಸಿಲುಕಿದ ಸಮಾಜವು, ತತ್ತರಿಸುತ್ತಿರುವ ಸಮಯದಲ್ಲಿ ಶರಣರು ಅದನ್ನು ಸಂಪೂರ್ಣ ಧಿಕ್ಕರಿಸಿ ಸಮಾನತೆಯ ತತ್ವದ ಮೇಲೆ ನವಸಮಾಜ ನಿರ್ಮಿಸಲು ಪ್ರಯತ್ನಿಸಿದರು. ಅಂಥ ಶರಣರ ಪೈಕಿ ಕಿನ್ನರಿ ಬೊಮ್ಮಯ್ಯನೆಂಬ ಅನುಪಮ ಶರಣನೂ ಒಬ್ಬ. ಇವನು ಆಂಧ್ರದ ಪೊಡೂರು ಎಂಬ ಗ್ರಾಮದ ಕಲಿದೇವಿಯ ಮಗ. ಮೂಲತಃ ಇವನು ಅಕ್ಕಸಾಲಿಗ ವೃತ್ತಿಯಲ್ಲಿದ್ದವನು. ಒಮ್ಮೆ ತಾನು ಮಾಡಿದ ಗುರುವಿನ ಆಭರಣದಲ್ಲಿ ತೂಕ ಕಡಿಮೆಯಾಗಿತ್ತೆಂದು ಬೇಸರಿಸಿ, ಆ ವೃತ್ತಿಯನ್ನೇ ತ್ಯಜಿಸಿ ಕಲ್ಯಾಣಕ್ಕೆ ಬರುತ್ತಾನೆ. ತನ್ನ ವೃತ್ತಿ ಮೂಲ ಗುಣವಾದ ಬಂಗಾರ ಪರೀಕ್ಷಿಸಿ ತೂಗಿ ತಾಳೆ ನೋಡುವ ಗುಣ ವಿಶೇಷಣ ಹೊಂದಿದ ಅವನಿಗೆ ಅನುಭವ ಮಂಟಪದಲ್ಲಿ ಶರಣರನ್ನು ಪರೀಕ್ಷಿಸಿ ನೋಡುವ ಕಾಯಕವನ್ನು ಹಿರಿಯರಾದ ಅಲ್ಲಮಪ್ರಭುಗಳು ವಹಿಸುತ್ತಾರೆ. ಬೊಮ್ಮಯ್ಯನು ಜೊತೆಗೆ ಕವಿಯೂ ಆಗಿದ್ದ. ಇವನು ಕಲ್ಯಾಣದ ತ್ರಿಪುರಾಂತಕೇಶ್ವರ ದ್ವಾರಪಾಲ ವೃತ್ತಿ ಮಾಡುತ್ತ ಕಿನ್ನರಿ ನುಡಿಸುವ ಕಾಯಕವನ್ನೂ ಮಾಡಿಕೊಂಡಿದ್ದನು. ಅವನು ತನ್ನ ಕಿನ್ನರಿಯ ನಾದದಿಂದ ಶಿವನನ್ನು ಮೆಚ್ಚಿಸಿ, ನಿತ್ಯವೂ ಒಂದು ಬಂಗಾರದ ನಾಣ್ಯ ಪಡೆಯುತ್ತಿದ್ದನು. ಅವನ ಕಾಯಕ ರೂಢಿಯಿಂದ ಅವನಿಗೆ ಕಿನ್ನರಿ ಬೊಮ್ಮಯ್ಯ ಎಂದು ಕರೆದಿದ್ದಾರೆ.

ಬಸವಣ್ಣನಿಗೆ ಆಪ್ತನಾದ ಇವನು ಪ್ರಾಣ ಸ್ನೇಹಿತನೂ ಆಗಿದ್ದ. ಕಲ್ಯಾಣದ ಕ್ರಾಂತಿ ಸಮಯಕ್ಕೆ ಬಿಜ್ಜಳನ ಕಗ್ಗೊಲೆ ಯಾದಾಗಲಂತೂ ಶರಣರಿಗೆ ಒಂದೊದಗಿದ ಅಳಿಗಾಲವೇ ಸರಿ. ಅವರು ತಮ್ಮ ಉಳಿವಿನ ಅನಿವಾರ್ಯಕ್ಕಾಗಿ ಕಲ್ಯಾಣ ಬಿಟ್ಟು ಹೋಗಬೇಕಾದ ಸಂದರ್ಭ ಕರ್ನಾಟಕದ ಇತಿಹಾಸದಲ್ಲೇ ದಾರುಣ. ಅಂತಹ ಸಮಯದಲ್ಲಿ ಶರಣರ ಮತ್ತು ಶರಣ ಸಾಹಿತ್ಯದ ರಕ್ಷಣೆ ಮಾಡಿದವನೇ ಕಿನ್ನರಿ ಬೊಮ್ಮಯ್ಯ.

ಬೊಮ್ಮಯ್ಯನವರ ಆರಾಧನೆಯನ್ನು ಅನುಸರಿಸಿಕೊಂಡು ಬರುತ್ತಿರುವ ಜನ ತಮ್ಮ ಜನಪದದ ಆಧಾರದಿಂದ ಹಾಡುವ ಹಾಡುಗಳು ನಮ್ಮ ಹಿರಿಯ ತಲೆಮಾರಿನಿಂದ ಹಾಸು ಹೊಕ್ಕಾಗಿವೆ. ಅವುಗಳ ಪೈಕಿ ಜನಪದದ ಕಥೆ ಹೇಳಬೇಕೆಂದರೆ, ಹಳ್ಳಿಖೇಡ (ಕೆ) ಗುಡ್ಡದ ಗುಹೆಯಿಂದ ಪ್ರತಿದಿನ ಒಂದು ಹಸು ಬಂದು ಎದುರಿನ ಹೊಲದಲ್ಲಿ ಬೆಳೆ ಮೇದು ಹೋಗುತ್ತಿತ್ತಂತೆ. ಒಂದು ದಿನ ಹೊಲದ ರೈತ ಆ ಹಸುವನ್ನು ಹಿಂಬಾಲಿಸಿಕೊಂಡು ಬರುತ್ತಾನೆ. ಆ ಹಸು ಓಡುತ್ತ ಓಡುತ್ತ ಗುಹೆ ಒಳಗಡೆ ಧಾವಿಸಿ ಹೋಗಬೇಕಾದರೆ, ರೈತ ಅದರ ಬಾಲವನ್ನು ಹಿಡಿದು ಹಸುವಿನ ಜೊತೆಗೆ ಗುಹೆ ಪ್ರವೇಶಿಸುತ್ತಾನೆ. ಅಲ್ಲಿ ಪೂಜೆ ಧ್ಯಾನ ಮಗ್ನರಾದ ಅನಾಮಿಕರನ್ನು ಕಂಡು ಯಾರೆಂದು ಪ್ರಶ್ನಿಸುತ್ತ ನಿಮ್ಮ ದನಗಳು ಮೇಯಲೆಂದು ನಮ್ಮ ಹೊಲವಿದೆ ಏನು? ಹಸುವನ್ನು ನಮ್ಮ ಹೊಲಕ್ಕೆ ಅಟ್ಟಿ ಇಲ್ಲಿ ನಿಶ್ಚಿಂತೆಯಿಂದ ಕುಳಿತು ಯಾರ ಜೀವ ನುಂಗುತ್ತಿರುವಿರೆಂದು ಗದರುವ ಧ್ವನಿಯಲ್ಲಿ ಕೇಳಲು, ವಿನಯವಂತರು, ಸೌಜನ್ಯಶೀಲರೂ ಆದ ಕಿನ್ನರಿ ಬೊಮ್ಮಯ್ಯನು ಆಗ ತಾನೆ ಹಸುವು ಇಟ್ಟ ಸಗಣಿಯನ್ನು ತನ್ನ ಬೊಗಸೆಯಿಂದ ಸವರಿ ತೆಗೆದು, ಕುಳ್ಳರಿ ನಮಗರಿಯದೇ ಈ ಹಸು ನಿಮ್ಮ ಹೊಲದಲ್ಲಿ ಬೆಳೆ ತಿಂದರೂ ಪ್ರಾಣ ಭೀತಿಯಿಂದ ನಮ್ಮನ್ನರಸಿ ಬಂದಂತೆ ಕಾಣುತ್ತದೆ. ಈ ಸಗಣಿಯನ್ನೊಯ್ದು ತಮ್ಮ ಹೊಲದಲ್ಲಿ ಹರವಿ. ಇದು ಕಾಮಧೇನು ಎಂದು ಹೇಳುತ್ತಾ, ರೈತನ ಕಂಬಳಿಯಲ್ಲಿ ಹಾಕುತ್ತಾರೆ. ಆ ರೈತ ಮನಸೋತು ನಿಶಬ್ದ ತಾಣದಲ್ಲಿ ಇವರೇನು ಮಾಡುತ್ತಲಿರುವರು, ಏನಿವರ ಮರ್ಮ, ಉದ್ದೇಶ ಎಂಬೆಲ್ಲಾ ಕಲ್ಪನೆಗಳಿಗೆ ತಲೆ ಕೆಡಿಸಿಕೊಳ್ಳದೇ ಅವರಿತ್ತ ಸಗಣಿಯನ್ನು ಬರುವಾಗ ಪಕ್ಕದ ತಿಪ್ಪೆಯಲ್ಲಿ ಚಲ್ಲಿ ಕೊನೆಗೂ ಬೆಳೆಮೇಯುತ್ತಿರುವ ಕಳ್ಳ ಆಕಳನ್ನು ಹಿಡಿದು ಅವರಿಗೆ ಎಚ್ಚರಿಸಿದೆ ಎಂದು ಮನೆಗೆ ಬಂದು ಮಲಗುತ್ತಾನೆ. ಬೆಳಗಾಗುವದರಲ್ಲಿ ಆತನ ಕಂಬಳಿಯನ್ನು ನೋಡಲು ಅಲ್ಲಲ್ಲಿ ಕಂಬಳಿಗೆ ಮೆತ್ತಿಕೊಂಡ ಸಗಣಿ ಬಂಗಾರವಾಗಿ ಹೊಳೆಯುತ್ತಿರುವುದು ಕಂಡು ಅಯ್ಯೋ ತಪ್ಪು ಮಾಡಿದೆನಲ್ಲ ಅವರು ನಿಜವಾಗಲೂ ದೈವೀ ಪುರುಷರು, ಅನುಭಾವಿ ಶರಣರು ಎಂದು ಗೋಳಾಡಿಕೊಂಡು ಜನಪದ ಕಥೆಯನ್ನು ಗ್ರಾಮದ ಯಾರಿಗೆ. ವಿಚಾರಿಸಿದರೂ ಅದು ಎಂದಿನದೋ ಎಲ್ಲಾ ಹಳೇ ತಲಿಗಳು ಹೇಳಿಕೊಂತ ಹೊಂಟಾರ್ರ. ಅದು ಎಲ್ಲರಿಗೂ ಗೊತ್ತಿದ್ದ ಮಾತೆ ಎಂದು ಸಮ್ಮನಾಗಿ ಬಿಡುತ್ತಾರೆ.

ಅಂದಿನಿಂದ ಇಂದಿನವರೆಗೆ ಗ್ರಾಮದ ಜನ ಭಕ್ತಿ. ಶ್ರದ್ಧೆಯಿಂದ ಕಿನ್ನರಿಬೊಮ್ಮಯ್ಯನಿಗೆ ನಡೆದುಕೊಂಡು ಬರುತ್ತಿದ್ದಾರೆ. ಶರಣರ ಮಂಟಪಕ್ಕೆ ತೆರಳುವ ಭಕ್ತಗಣ ಆತನ ಸ್ಮರಣೆಗಾಗಿ ಧ್ಯಾನ, ಪ್ರಾರ್ಥನೆ, ಚಿಂತನ, ಭಜನೆ ಮಾಡುತ್ತಾ ಇರುವುದು ಇಂದಿಗೂ ಪ್ರತಿನಿತ್ಯ ನಡೆದಿದೆ.

(ಎಸ್.ಎಂ.ಎಲ್.)

ಹಾ

ಹಾರಕೂಡ: ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಸುಕ್ಷೇತ್ರ. ಹಾರಕೂಡ ಮಠ, ಬಸವಾದಿ ಶಿವಶರಣರ ಹಾಗೂ ವೀರಶೈವ ಪರಂಪರೆಯನ್ನು ಪ್ರಬಲ ಅಸ್ತ್ರವಾಗಿಸಿಕೊಡು ಸಮಾಜ ಸೇವೆಗಾಗಿ ತನ್ನನ್ನೆ ತಾನು ಸಮರ್ಥಿಸಿಕೊಂಡಿದೆ. ನೀತಿ, ಚರಿತ್ರೆ, ಪವಿತ್ರ ಪರಂಪರೆಯ ತತ್ತ್ವಗಳೊಂದಿಗೆ ಬೆಳೆದು ಬಂದಿರುವ ಈ ಮಠ, ಸಮಾಜದ ಏಳ್ಗೆ-ಶಾಂತಿ, ನೆಮ್ಮದಿ, ತಾತ್ವಿಕ-ಚಾರಿತ್ರ್ಯವನ್ನು ಮೆರೆದಿದೆ ಎನ್ನಬಹುದು.

ಲಿಂ. ಚನ್ನಬಸವ ಶಿವಯೋಗಿಗಳು ಶ್ರೀಮಠದ ನಡೆದಾಡುವ ದೇವರಾಗಿದ್ದರು. ಅವರ ನಡೆ-ನುಡಿ, ತತ್ತ್ವ-ಸಿದ್ಧಾಂತಗಳು, ಸರ್ವಧರ್ಮ ಸಮ ಭಾವಗಳ ಸಂಗಮವಾಗಿದ್ದುವು. ಬಸವಾದಿ ಶಿವಶರಣರ ವಚನ ಸಾಹಿತ್ಯ, ತತ್ವಗಳನ್ನು ಅರಗಿಸಿ ಕುಡಿದ ಮಹಾಸ್ವಾಮಿಜಿಯವರು, ಇಷ್ಟಲಿಂಗ ಅನುಸಂಧಾನದ ಪ್ರಬಲ ಶಿವಯೋಗಿಗಳಾಗಿದ್ದರು. ನೀತಿ, ಚರಿತ್ರೆ, ದಿವ್ಯ ವ್ಯಕ್ತಿತ್ವಹೊಂದಿದ ಶಿವಯೋಗಿಗಳು ಜೀವಂತ ವಿಭೂತಿ ಪುರುಷರಾಗಿದ್ದರು. ದೇವರನ್ನು ಪೂಜಿಸುತ್ತ ನಾವು ದೇವರಾಗಬೇಕೆಂದು ಬೋಧಿಸುತ್ತಿದ್ದರು. ದಯೆ, ಕರುಣೆ, ಶಾಂತಿಯ ತವನಿಧಿಯಾಗಿದ್ದ ಶಿವಯೋಗಿಗಳು ಸದಾ ಸಂಚರಿಸುತ್ತಾ ನೀತಿ ತತ್ವಬೋಧನೆ, ವೀರಶೈವ ಪರಂಪರೆಯ ಸಿದ್ಧಾಂತಗಳನ್ನು ಸಮಾಜಕ್ಕೆ ಅಳವಡಿಸಲು ನಿರಂತರ ಪ್ರಯತ್ನ ಶೀಲರಾಗಿದ್ದರು.

ಜಾತಿ, ಮತ, ಪಂಥ ಜನಾಂಗದಲ್ಲಿ ಭೇದವೆಣಿಸದೆ, ಯಾರಲ್ಲಿ ನೀತಿ, ಚರಿತ್ರೆ ಉತ್ತಮ ಸಂಸ್ಕಾರವಿದೆಯೋ ಅವರೆಲ್ಲರೂ ದೇವರ ಮಕ್ಕಳು. ಅವರೇ ಸಮಾಜದ ಆಸ್ತಿ ಎನ್ನುತ್ತಿದ್ದರು. ಸರ್ವಧರ್ಮ ಜನಾಂಗದಲ್ಲಿ ಸಮಭಾವ ಹೊಂದಿದ್ದ ಶಿವಯೋಗಿಗಳು, ಹಾರಕೂಡ ಕ್ಷೇತ್ರವನ್ನು ಪವಿತ್ರ ಸ್ಥಾನಕ್ಕೇರಿಸಿದರು. ವೀರಶೈವ ಪರಂಪರೆಯ ಅಡಿಪಾಯದ ಮೇಲೆ ಶ್ರೀಮಠದ ಕೀರ್ತಿಯನ್ನು ಪ್ರತಿಷ್ಠಾಪಿಸಿದ ಶಿವಯೋಗಿಗಳು, ಸರ್ವಧರ್ಮಗಳ ಸಮನ್ವಯತೆಯನ್ನು ಜಗತ್ತಿಗೆ ಸಾರಿದರು.

ಚನ್ನಬಸವ ಶಿವಯೋಗಿಗಳ ದಿವ್ಯ ಪರಂಪರೆ ನೀತಿ ಸಿದ್ಧಾಂತಗಳನ್ನು ಚಾಚೂ ತಪ್ಪದೆ ಮುಂದುವರೆಸಿಕೊಂಡು ಬಂದಿರುವ ಸದ್ಯದ ಮಹಾಸ್ವಾಮಿಜಿಯವರಾದ ಚನ್ನವೀರ ಶಿವಚಾರ್ಯರರು, ಶರಣ ಹಾಗೂ ವೀರಶೈವ ಪರಂಪರೆಯ ಸಾಕಾರ ಮೂರ್ತಿಗಳಾಗಿ, ಸರ್ವಧರ್ಮ ಸಮನ್ವಯದ ಆರಾಧಕರು ಹಾಗೂ ಚಿಂತಕರಾಗಿದ್ದಾರೆ. ಸಮಾಜದಲ್ಲಿ ನೀತಿ, ಚರಿತ್ರೆ ಮನುಷ್ಯತ್ವದ ಪ್ರೀತಿ-ಪ್ರೇಮದ ತತ್ವಗಳೇ ಸಮಾಜವನ್ನು ಬದುಕಿಸುತ್ತದೆ. ನಿರಂತರ ನೆಮ್ಮದಿ ನೆಲೆಸುವಂತೆ ಮಾಡುತ್ತದೆ ಎಂಬ ತಾತ್ವಿಕ ವಿಚಾರದಲ್ಲಿ ಅಪಾರ ನಂಬಿಕೆಯುಳ್ಳವರಾಗಿದ್ದಾರೆ.

ವಿವಿಧ ಸಮಾಜದ ಕಲಾವಿದರನ್ನು, ಸಾಹಿತಿಗಳನ್ನು, ಪಂಡಿತರನ್ನು, ಜ್ಞಾನಿಗಳನ್ನು ಸಮನ್ವಯತೆ ದೃಷ್ಟಿಯಿಂದ ಶ್ರೀ ಮಠಕ್ಕೆ ಬರಮಾಡಿಕೊಂಡು ಅವರಿಗೆ ಗೌರವಿಸುವ ನೀತಿ ಪರಂಪರೆ, ಚನ್ನವೀರ ಶಿವಚಾರ್ಯರ ಸರ್ವಧರ್ಮ ಸಮನ್ವಯತೆಯ ಪ್ರತೀಕವಾಗಿದೆ ಎನ್ನಬಹುದು "ಪಟ್ಟಣಕ್ಕೆ ಪಂಚರಾತ್ರಿ, ಹಳ್ಳಿಗೆ ಏಕ ರಾತ್ರಿ" ಎಂಬ ಮಾತಿನಂತೆ ಸದಾಕಾಲ ಚರ ಜಂಗಮರಾಗಿ ಸಂಚರಿಸುತ್ತ, ಸದಾ ನೀತಿ ಬೋಧನೆ ಮಾಡುತ್ತಿರುವ ಚನ್ನವೀರ ಶಿವಚಾರ್ಯರು, ಆರೋಗ್ಯ ಪೂರ್ಣ ಸಮಾಜ ನಿರ್ಮಾಣದ ಭವರೋಗ ವೈದ್ಯರಾಗಿದ್ದಾರೆಂದರೆ ಅತಿಶಯೋಕ್ತಿಯಾಗದು.

ಕನ್ನಡದ ವೀರಶೈವ ಸಾಹಿತಿಗಳನ್ನು, ಸಂಶೋಧಕರನ್ನು ಶ್ರೀಮಠಕ್ಕೆ ಬರಮಾಡಿಕೊಂಡು ಅವರಿಗೆ ಸತ್ಕರಿಸುವ, ಸಮಾಜಕ್ಕೆ ಅವರ ಬೋಧನೆಗಳನ್ನು ಕೊಡಿಸುವ ಶ್ರೀಗಳ ದಿವ್ಯ ಪರಂಪರೆ ಮಠಾಧೀಶರಿಗೆ ಸ್ವಾಮಿಗಳು ಆದರ್ಶಪ್ರಾಯರಾಗಿದ್ದಾರೆ. ಧರ್ಮ ಜಾಗೃತಿ, ಧರ್ಮ ಸಂಸ್ಕಾರ, ನಿರಂತರ ಜ್ಞಾನ ದಾಸೋಹ, ಅನ್ನ ದಾಸೋಹ, ಲಿಂಗಪೂಜೆಗಳ ಮೂಲಕ ಸೇವೆಸಲ್ಲಿಸುತ್ತಿರುವ ಚನ್ನವೀರ ಶಿವಾಚಾರ್ಯರ ಚಟುವಟಿಕೆಗಳ ಮೂಲಕ ಸುಕ್ಷೇತ್ರ ಹಾರಕೂಡ ಲಿಂ. ಚನ್ನಬಸವ ಶಿವಯೋಗಿಗಳು ಹಾಕಿ ಕೊಟ್ಟ ಸರ್ವಧರ್ಮ ಸಮನ್ವಯತೆಯ ಅಡಿಪಾಯ ತತ್ವಕ್ಕೆ ನೀರೆರೆದು ಬೆಳೆಸಿ ಪ್ರಸಾರ ಮಾಡುತ್ತಿದ್ದಾರೆ. ಸರ್ವಧರ್ಮ ಸಮನ್ವಯತೆ ತತ್ವದ ಹೆಪ್ಪು, ಸುಕ್ಷೇತ್ರ ಹಾರಕೂಡ ಎಂಬ ತುಪ್ಪವನ್ನು ನಾಡಿಗೆ ಧಾರೆಯೆರೆಯುತ್ತಿದೆ ಎನ್ನಬಹುದು.

(ಡಿ.ಪಿ.)



ಶ್ರೀಕ್ಷೇತ್ರ ಹಾರಕೂಡ

ಹಾರಣಗೇರಾ: ಪ್ರಾಚೀನ ವಿದ್ಯಾ ಕೇಂದ್ರ, ಈ ಐತಿಹಾಸಿಕ ಸ್ಥಳ ಯಾದಗಿರಿ ಜಿಲ್ಲೆ ಶಹಾಪುರ ತಾಲ್ಲೂಕಿನಲ್ಲಿದೆ. ಖ್ಯಾತ ಇತಿಹಾಸ ಸಂಶೋಧಕ ಡಿ.ಎನ್. ಅಕ್ಕಿಯವರು ಸುಮಾರು 2000 ವರ್ಷಗಳ ಹಿಂದಿನ ಶಾತವಾಹನರ ಕಾಲದ ಸೀಸದ ನಾಣ್ಯಗಳನ್ನು ಹಾರ–ಣಗೇರಾ ಗ್ರಾಮದಲ್ಲಿ ಪತ್ತೆಮಾಡಿ, ಇದೊಂದು ಪ್ರಾಚೀನ ವಿದ್ಯಾ ಕೇಂದ್ರವೂ ಆಗಿತ್ತೆಂಬುದನ್ನು ಇದೊಂದು ನವಶಿಲಾಯುಗದ ಸಂಸ್ಕೃತಿಯ ತಾಣವೆಂದು ಸಾಬೀತು ಪಡಿಸಿದ್ದಾರೆ. ಪ್ರಾಚೀನ ಇತಿಹಾಸ ಸಾರುವ ಬೂಚಿಗುಡ್ಡ, 10ನೆಯ ಶತಮಾನಕ್ಕೆ ಸೇರಿದ ಶಿವನ ವಿಗ್ರಹ, ಕಾಳಾಮತ ಸಂಪ್ರದಾಯಕ್ಕೆ ಸೇರಿದ ಉಬ್ಬು ಶಿಲ್ಪದ ಶಿಲಾ ಫಲಕ, ನಂದಿ ವಿಗ್ರಹ, ಕಲ್ಯಾಣ ಚಾಲುಕ್ಯರ ಸ್ಥಂಭ ಶಾಸನ, ದಾನ ಶಾಸನ ಮುಂತಾದ ಐತಿಹಾಸಿಕ ಮಹತ್ವದ ಆಧಾರಗಳನ್ನು ಡಿ.ಎನ್. ಅಕ್ಕಿಯವರು ಗುರುತಿಸಿದ್ದಾರೆ. ಇಂತಹ ಐತಿಹಾಸಿಕ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆ ಹೊಂದಿರುವ ಹಾರಣಗೇರಾ ಗ್ರಾಮದಲ್ಲಿ ಹಲವಾರು ಸಾಂಸ್ಕೃತಿಕ ವೈವಿಧ್ಯತೆಯನ್ನು ಕಾಣಬಹುದು.

ಮುಂಗಾರು ಬಿತ್ತನೆಯ ಪೂರ್ವದಲ್ಲಿ ಗ್ರಾಮದೇವತೆಗೆ ಉಡಿ ತುಂಬುವ ಕಾರ್ಯಕ್ರಮ ಆಚರಿಸುವುದು ಒಂದು ಸಂಪ್ರದಾಯ. ಗ್ರಾಮ ದೇವತೆಗಳಾದ ದ್ಯಾಮಮ್ಮ, ಗಾಳೆಮ್ಮ, ಮರೆಮ್ಮ ದೇವತೆಗಳಿಗೆ ಒಂದು ತಿಂಗಳವರೆಗೆ ವಾರ ಹಿಡಿದು ಆಯಾ ವಾರ (ಮಂಗಳವಾರ, ಶುಕ್ರವಾರ) ದೇವತೆಗಳಿಗೆ ಪೂಜೆ ಸಲ್ಲಿಸುತ್ತಾರೆ. ದೇವಿಯ ವಾರ, ದಿವಸ ಮನೆಯಲ್ಲಿ ರೊಟ್ಟಿ ಮಾಡುವುದಿಲ್ಲ. ವಿಶೇಷವಾಗಿ ಅಂದು ಕಡಬು, ಸಜ್ಜಕ, ಸೀರಾ, ಚಪಾತಿ ಮುಂತಾದವು ಆಹಾರ ಪದಾರ್ಥಗಳನ್ನು ಮಾಡಿ ದೇವತೆಗಳಿಗೆ ನೈವೇದ್ಯ ನೀಡುತ್ತಾರೆ. ವಾರ ಮುಗಿಸುವ ಕೊನೆಯ ದಿನ ದೇವತೆಗಳನ್ನು ಬಾಜಾ–ಭಜಂತ್ರಿಗಳ ಮೂಲಕ ಮೆರವಣಿಗೆ ಮಾಡುತ್ತಾರೆ.

ಈ ಗ್ರಾಮದ ಆರಾಧ್ಯ ದೈವ (ನಂದಿ ವಿಗ್ರಹ) ಬಸವಣ್ಣನ ಉತ್ಸವ ಬಹಳ ವಿಶಿಷ್ಟತೆಯಿಂದ ಆಚರಿಸುತ್ತಾರೆ. ಶ್ರಾವಣ ಮಾಸದ ಕೊನೆಯ ಸೋಮವಾರ ಬಸವಣ್ಣನ ಗುಡಿಯಿಂದ 2 ಕಿ.ಮೀ ದೂರದಲ್ಲಿರುವ ದ್ಯಾಮವ್ವನ ಗುಡಿಯವರೆಗೆ 300 ಮೀ ಉದ್ದವಿರುವ ನಂದಿಕೋಲನ್ನು ಹಿಡಿದು ಪಲ್ಲಕ್ಕಿ ಹೊತ್ತುಕೊಂಡು ಮೆರವಣಿಗೆ ಮಾಡುತ್ತಾ ತೆಗೆದುಕೊಂಡು ಹೋಗಿ ಪುನಃ ಬಸವಣ್ಣನ ದೇವಸ್ಥಾನಕ್ಕೆ ಬರುತ್ತಾರೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ಸಹಸ್ರಾರು ಭಕ್ತರು ಈ ಉತ್ಸವವನ್ನು ನೋಡಲು ಬರುತ್ತಾರೆ. ನಂದಿಕೋಲಿಗೆ ಬಣ್ಣದ ಬಟ್ಟೆ ಸುತ್ತಿ ಕೋಲಿನ ತುತ್ತ ತುದಿಗೆ ಕಾವಿ ಬಣ್ಣದ ಧ್ವಜ ಕಟ್ಟಿರುತ್ತಾರೆ. ಕೋಲಿನ ನಡುವೆ ಅತೀ ಚಿಕ್ಕದಾದ ನಂದಿ ವಿಗ್ರಹ ಕಟ್ಟಿ ಅದಕ್ಕೆ ಹಾರ, ತುರಾಯಿ ಹಾಕಿ ಪೂಜಿಸುತ್ತಾರೆ.

ಹಾರಣಗೇರಾ ಗ್ರಾಮದ ಉಟ್ಟಿಗುಡುವುದು ಒಂದು ವ್ರತ. ತಮ್ಮ ಆಸೆಗಳನ್ನು ಈಡೇರಿಸಿಕೊಳ್ಳಲು ಹಾಗೂ ಮಗನ ಮದುವೆ ಸಂದರ್ಭದಲ್ಲಿ ಕುಟುಂಬದ ಹಿರಿಯ ಹೆಣ್ಣು ಮಗಳು ಅಥವಾ ತಾಯಿ ಈ ಉಟ್ಟಿಗುಡುತ್ತಾಳೆ. ಉಟ್ಟಿಗುಡುವಾಗ ಬೇವಿನ ತಪ್ಪಲು ಮತ್ತು ಲಕ್ಕಿ ತಪ್ಪಲಿನಿಂದ ಆ ಹೆಣ್ಣಿನ ಮುಂಬದಿ ಹಾಗೂ ಹಿಂಬದಿ ಮುಚ್ಚುವಷ್ಟು ಉಡಿಗೆ ಉಡಿಸುತ್ತಾರೆ. ಪಾದ ಕಟ್ಟಿಕೊಂಡ ಸ್ತ್ರೀಯರು ಅಡ್ಡ ಸೀರೆ ಹಿಡಿದು ಒಳಗಿನ ಸೀರೆ ಬಿಚ್ಚಿ ಉಟ್ಟಿಗೆ ಉಡಿಸಿಕೊಂಡು ಆ ಸ್ತ್ರೀಯ ಬಾಯಿಯಲ್ಲಿ ಬೇವಿನ ತಪ್ಪಲು ಇಟ್ಟು ಹಣೆಗೆ ಕುಂಕುಮ ಭಂಡಾರ ಹಚ್ಚಿ ತಲೆಯ ಮೇಲೆ ಕಳಸವನ್ನಿಟ್ಟು ಎಲ್ಲಮ್ಮನ ದೇವಸ್ಥಾನಕ್ಕೆ ಬಾಜಿ ಭಜಂತ್ರಿ ಹಾಗೂ ಡೊಳ್ಳಿನ ವಾಲಗಗಳ ಮುಖಾಂತರ ಕರೆದುಕೊಂಡು ಬಂದು ದೇವಾಸ್ಥಾನದ ಸುತ್ತ ಪ್ರದಕ್ಷಿಣೆ ಹಾಕಿಸುತ್ತಾರೆ. ಉಟ್ಟಂತಹ ಸ್ತ್ರೀಯ ಜೊತೆಗೆ ಎಲ್ಲಮ್ಮನ ಬಲಿಗಾಗಿ ಬೆಳೆಯಿಸಿದ ಕುರಿ ಅಥವಾ ಹೋತ, ಬಂಧು ಬಳಗದವರು, ಅವರ ಹಿಂದೆ ಕೊಡ ಹೊತ್ತ ಮದುಮಗ, ನೆರೆ ಹೊರೆಯವರು ಬರುತ್ತಾರೆ. ಪ್ರದಕ್ಷಿಣೆಯ ನಂತರ ಉಟ್ಟಿಗೆ ಉಟ್ಟ ಸ್ತ್ರೀಗೆ ಬಂಧು ಬಳಗದವರು ತಂದ ಹೊಸ ಬಟ್ಟೆಗಳನ್ನು ತೊಡಿಸುವರು. ನಂತರ ಮಾತಂಗಿಯರು, ಪಾದ ಕಟ್ಟಿಸಿಕೊಂಡವರು ಮುತ್ತೈದೆಯರಿಂದ ತಮ್ಮ ಹಡ್ಡಲ್ಲಗೆಯನ್ನು ತುಂಬಿಸಿಕೊಳ್ಳುವರು. ಈ ಹಡ್ಡಲಗೆಯಲ್ಲಿ ಹೋಳಿಗೆ, ಸಜ್ಜೆ ಕಡಬು, ಹಿಂಡಿ ಪಲ್ಲ್ಯೆ ಮುಂತಾದವು ಹಾಕುವರು. ನಂತರ ಮಾತಂಗಿಯರ ಆದೇಶದ ಮೇರೆಗೆ ಎಲ್ಲರೂ ಎದ್ದು ನಿಂತು 'ಯಾಕಲಿಗೆ ಜೋಗ ಯಾಕಲಿಗೆ ಜೋ ಜೋ' ಎಂದು ನಾಲ್ಕೂ ದಿಕ್ಕುಗಳಿಗೆ ತಿರುಗುತ್ತಾ ಹಾಡುವರು. ಇಲ್ಲಿ ಬರುವ ಮಾತಂಗಿಯರು ದಲಿತ ಸ್ತ್ರೀಯರಾಗಿರುತ್ತಾರೆ. ಇಂದಿಗೂ ಕೂಡಾ ಈ ಮಾತಂಗಿ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಹಾರಣಗೇರಾದಿಂದ 10 ಕಿ.ಮೀ. ದೂರದಲ್ಲಿರುವ ಸಿಂಗನಹಳ್ಳಿ (ವಿರಾಟಾನಾಳ) ಎಲ್ಲಮ್ಮನ ಸಂಪ್ರದಾಯದಲ್ಲಿ ಹಾಗೂ ತಾಲ್ಲೂಕಿನ ದೊಡ್ಡ ಸಗರ ಗ್ರಾಮದ ಎಲ್ಲಮ್ಮನ ಸಂಪ್ರದಾಯದಲ್ಲಿ ಈ ಉಟ್ಟಿಗುಡುವ ಸಂಪ್ರದಾಯ ಇದೆ. ಆ ಎಲ್ಲಮ್ಮನ ಜಾತ್ರೆಗಳಲ್ಲಿ ಬಹಳಷ್ಟು ಜನ ಇವತ್ತಿಗೂ ಸಹ ಉಟ್ಟಿಗುಡುವುದನ್ನು ಕಾಣಬಹುದಾಗಿದೆ.

ಹಾರಣಗೇರಾದಲ್ಲಿ ಮೊಹರಂ ಹಬ್ಬವನ್ನು ಬಾವೈಕ್ಯತೆಯಿಂದ ಹಿಂದೂ ಮುಸ್ಲಿಂ ಜನರು ಕೂಡಿ ಆಚರಿಸುತ್ತಾರೆ. ಮೊಹರಂ ಹಬ್ಬದಲ್ಲಿ ಮಸೀದಿ ಮುಂದಿನ ಅಗ್ಗಿಯ ಸುತ್ತ ಹಲಗೆಗಳ, ಬಾಜಾ–ಭಜಂತ್ರಿಗಳ ಹಂತ–ಹಂತವಾದ ನಾದದೊಂದಿಗೆ ಅಲಾಯಿ ನೃತ್ಯ ಮಾಡುತ್ತಾರೆ. ಕುಣಿದು ಕುಣಿದು ಕೊನೆಗೆ ಲಾಲಸಾಹೇಬರೇ ದೋಸ್ತರ ಓ ದಿನ್ ಎಂದು ಮುಗಿಸುತ್ತಾರೆ. ಈ ಹಬ್ಬದಲ್ಲಿ ಹಾಡುವ ಮೊಹರಂ ಹಾಡುಗಳು ಕೂಡ ಜನಪದರ ವಿಶಿಷ್ಟ ಪ್ರಕಾರವಾಗಿದೆ. ಅತೀ ಹೆಚ್ಚು ಹಿಂದೂಗಳು ಮೊಹರಂ ಹಬ್ಬದ ಮುಸ್ಲಿಂ ದೇವರಿಗೆ ಹರಕೆಗಳನ್ನು ಹೊತ್ತುಕೊಂಡು ಆಚರಿಸುತ್ತಾರೆ ಮತ್ತು ಮೊಹರಂ ಹಬ್ಬದ ಮೂರನೇ ದಿನ ಕತ್ತಲ ರಾತರಿಯೆಂದು ಹಿಂದೂ ಕುಟುಂಬದ ಮಕ್ಕಳಲ್ಲಿ ಒಬ್ಬರನ್ನು ಫಕೀರನಾಗಿ ನೇಮಕ ಮಾಡುತ್ತಾರೆ. ಅವರು ಫಕೀರನಾದ ಮರುದಿನ ಊರಿನ ಐದಾರು ಮನೆಗೆ ಹೋಗಿ ಮುಂದೆ ನಿಂತು "ಲಾಲಸಾಹೇಬರೇ ದೋಸ್ತರ ಓ ದಿನ್" ಎಂದು ಹೇಳಬೇಕು. ಆ ಮನೆಯವರು ಫಕೀರ ಬಂದನೆಂದು ತಿಳಿದು ಜೋಳ, ಅಕ್ಕಿ ಇತರೆ ದವಸ ಧಾನ್ಯಗಳನ್ನು ನೀಡುತ್ತಾರೆ. ಒಟ್ಟಿನಲ್ಲಿ ಹಿಂದೂ–ಮುಸ್ಲಿಂರ ಭಾವೈಕ್ಯತೆಯ ಸಂಕೇತವಾಗಿ ಮೊಹರಂ ಹಬ್ಬವನ್ನು ಆಚರಿಸುತ್ತಾ ಬಂದಿರುವುದನ್ನು ಕಾಣಬಹುದು.

ವಿವಿಧ ಜಾತಿಯ ಜನರಿರುವುದರಿಂದ ಇಲ್ಲಿ ಸಾಂಸ್ಕೃತಿಕ ವೈವಿಧ್ಯತೆಗಳನ್ನು ಕಾಣಬಹುದಾಗಿದೆ. ಐತಿಹಾಸಿಕವಾಗಿ, ಶಾಸ್ತ್ರೀಯವಾಗಿ ಈ ಗ್ರಾಮದಲ್ಲಿ ಉತ್ಖನನ ನಡೆಸಿದಲ್ಲಿ ದಕ್ಷಿಣ ಭಾರತದ ಆದಿ ಸಂಸ್ಕೃತಿಯ ಮೆಟ್ಟಿಲೊಂದು ಗೊತ್ತಾಗುತ್ತದೆ ಎಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ. *(ಎಸ್.ಎಂ.ಡಿ.)*

ಹಾಲಕ್ಕಿ ಶಕುನ: ರಾತ್ರಿಯಲ್ಲಿ ಸಂಚರಿಸುವ ಪಕ್ಷಿ 'ಹಾಲಕ್ಕಿ'. ಅಂದರೆ ಗೂಬೆಯ ಜಾತಿಗೆ ಸೇರಿದ ಒಂದು ಬಗೆಯ ಹಕ್ಕಿ. ಇದನ್ನು ಶಕುನದ ಹಕ್ಕಿಯೆಂದು ಕರೆಯುತ್ತಾರೆ. ಬುಡುಬುಡುಕಿಯವರು ಗೊಂದಲಿಗರ ಪಂಗಡಕ್ಕೆ ಸೇರುವಂತವರು. ಇವರು ಕೈಯಲ್ಲಿ ಬುಡುಬುಡುಕಿ ಹಿಡಿದುಕೊಂಡು ಭವಿಷ್ಯ ಹೇಳುವುದನ್ನು 'ಶಕುನಶಾಸ್ತ್ರ' ಇಲ್ಲವೇ 'ಹಾಲಕ್ಕಿ ಶಕುನ' ಎಂದು ಕರೆಯುತ್ತಾರೆ. ಬುಡುಬುಡುಕಿ, ಗೊಂದಲಿಗರ ಕಲೆ, ಶಕುನ ಹೇಳಿಕೊಂಡು ಉಪಜೀವನ ನಡೆಸುವ ಈ ಕಲಾವಿದರು ಚಿಕ್ಕ ಢಮರುವಿನಾಕಾರದ, ಚರ್ಮದಿಂದ ತಯಾರಿಸಿದ ಬುಡುಬುಡುಕಿಯನ್ನು ಶಕುನ ವಾದ್ಯವಾಗಿ ಬಳಸುತ್ತಾರೆ.

ಸಾಗವಾನಿ ಕಟ್ಟಿಗೆಯನ್ನು ನಡುವೆ ಚಿಕ್ಕದಾಗಿ ಕೊರೆದು, ಎರಡೂ ಮಗ್ಗಲು ಅದರ ಬಾಯಿ ದೊಡ್ಡದಾಗಿರುವಂತೆ ಸಿದ್ಧಪಡಿಸಿ, ಆಡಿನ ಜಠರದ ಚರ್ಮವನ್ನು ತೆಗೆದುಕೊಂಡು, ನೆರಳಲ್ಲಿ ಒಣಗಿಸಿ ದೊಡ್ಡದಾದ ಎರಡೂ ಮಗ್ಗಲು ಬಾಯಿಗೆ ಬಿಗಿದಿರುತ್ತಾರೆ. ವಾದ್ಯದ ಮಧ್ಯಭಾಗವನ್ನು 'ಬದ್ದೆ' ಎನ್ನುತ್ತಾರೆ. ಈ ಬದ್ದೆ ದಾರವನ್ನು 8–10 ಎಳೆಗಳನ್ನಾಗಿ ಮಾಡಿ, ಪೋಷಿಸಿರುತ್ತಾರೆ. ಈ ಬದ್ದೆಯ ಭಾಗದಲ್ಲಿ ತದ್ವಿರುದ್ಧವಾಗಿ ಎರಡು ದಾರದ ತುಂಡುಗಳನ್ನು ಕಟ್ಟಿರುತ್ತಾತರೆ. ಈ ತುಂಡುಗಳ ತುದಿಗೆ ಮೇಣವನ್ನು ಅಂಟಿಸಿರುತ್ತಾರೆ. ಈ ಮೇಣದ ತುಂಡುಗಳು ಬುಡುಬುಡುಕಿಯ ಎರಡೂ ಮುಖದ ಮಧ್ಯದಲ್ಲಿ ಬಡಿಯುವಂತೆ ಕಟ್ಟಿರುತ್ತಾರೆ. ಇವುಗಳಿಗೆ 'ತಾಳು' ಎಂದು ಕರೆಯುತ್ತಾರೆ. ಅನುಕೂಲ ಹಾಗೂ ಅಲಂಕಾರಕ್ಕಾಗಿ ಸಣ್ಣದಾದ ವಸ್ತ್ರವನ್ನು, ಒಂದೆರಡು ಗೆಜ್ಜೆಗಳನ್ನು ಕಟ್ಟಿರುತ್ತಾರೆ.



ಹಾಲಕ್ಕಿ ಶಕುನ

ವೃತ್ತಿಗಾಯಕರಾದ ಗೊಂದಲಿಗರು ತಲೆಗೆ ಪೇಟ, ಉದ್ದವಾದ ನಿಲುವಂಗಿ, ಕೋಟು, ಕಚ್ಚೆಪಂಚೆ, ಸೊಂಟಕ್ಕೆ ವಸ್ತ್ರ, ಕಂಕುಳಲ್ಲಿ ಮುಂದು ಇಳಿಬಿಟ್ಟಿರುವ ಜೋಳಿಗೆ ಚೀಲಗಳು, ಹೆಬ್ಬೆರಳಿನಲ್ಲಿ ಗಗ್ಗರ, ಕೈಗೆ ಕಡಗ, ಉದ್ದನೆಯ ನಾಮ ಇವು ಹಾಲಕ್ಕಿ ಶಕುನ ಹೇಳುವ ಬುಡುಬುಡುಕಿಯವರ ವೇಷಭೂಷಣಗಳು.

ಪ್ರತಿನಿತ್ಯ ಕೋಳಿಕೂಗುವ ಹೊತ್ತಿಗೆ ಮುಂಚಿತವಾಗಿ ಎದ್ದು, ದೇವರನ್ನು ಪೂಜಿಸಿ, ವೇಷಧರಿಸಿ, ಹಳ್ಳಿ ಹಳ್ಳಿಗೆ ಹೋಗಿ ಶಕುನ ನುಡಿಯುತ್ತಾರೆ. ಇದನ್ನು ಹಾಲಕ್ಕಿ ಶಾಸ್ತ್ರ ಇಲ್ಲವೇ ಹಾಲಕ್ಕಿ ಶಕುನ ಎಂದು ಕರೆಯುತ್ತಾರೆ. ಜನಪದರಲ್ಲಿ ಈ 'ಹಾಲಕ್ಕಿ ಶಕುನ' ಸತ್ಯವಾಗುತ್ತದೆಂಬ ನಂಬಿಕೆಯಿದೆ. ಪ್ರತಿಮನೆಯ ಬಾಗಿಲಿಗೆ ಹೋಗಿ ಬುಡಬುಡಕಿ ನುಡಿಸುತ್ತಾ 'ಜಯವಾಗಲಿ, ಸ್ವಾಮಿ ಜಯವಾಗಲಿ' ಎಂದು ಶುಭವನ್ನು ಹಾರೈಸುತ್ತಾ, ಶಕುನದ ಹಕ್ಕಿ ನುಡಿದೈತೇ ಶ್ರೀಕೃಷ್ಣ ನುಡಿಸಿದಂತೆ ನುಡಿಯುತ್ತೇನೆ ಎಂದು ಶಕುನ ಹೇಳಲು ಆರಂಭಿಸುತ್ತಾರೆ. ಜನರ ಶುಭಾಶುಭಗಳನ್ನು ತುಂಬಾ ಜಾಣತನದಿಂದ ಹೇಳುವ ಹಾಲಕ್ಕಿ ಶಕುನದವರು ಅಶುಭಕ್ಕೆ ಪರಿಹಾರ ಹಾಗೂ ಶಾಂತಿಯ ಮಾರ್ಗವನ್ನು ಸೂಚಿಸುತ್ತಾರೆ. ಇವರು ಮಧ್ಯರಾತ್ರಿಯಲ್ಲಿ ಸುಡುಗಾಡಿಗೆ ಹೋಗಿ ಅಲ್ಲಿ ಹಾಲಕ್ಕಿ ನುಡಿಯುವುದನ್ನು ಆಲಿಸಿ ಅದನ್ನು ಬೆಳಗಿನ ಜಾವ ಏಕಾಂಗಿಯಾಗಿ ಬುಡುಬುಡುಕಿ ನುಡಿಸುತ್ತಾ ಬೀದಿಯಲ್ಲಿ ಶಕುನ ಪ್ರಸಾರ ಮಾಡುತ್ತಾರೆ.

(ಕೆ.ಆರ್.)

ಹಿ

ಹಿತ್ತಲಗಿಡ ಮದ್ದಲ್ಲ: ಹೈದ್ರಾಬಾದ್ ಕರ್ನಾಟಕವನ್ನು ಒಳಗೊಂಡಂತೆ ಸಮಗ್ರ ಕರ್ನಾಟಕದಲ್ಲಿ ಪ್ರಚಲಿತವಿರುವ ಒಂದು ಗಾದೆ. ಔಷಧ ಗಿಡ ಇಲ್ಲವೇ ಸಕಲ ಜನೋಪಯೋಗಿಯಾಗಿರುವ ಗಿಡವೊಂದು ನಮ್ಮ ಮನೆಯ ಹಿತ್ತಲಲ್ಲೇ ಇದ್ದರೂ ಅದರ ಮಹತ್ವವನ್ನು ಅರಿಯುವುದಿಲ್ಲ ಎಂಬುದು ಈ ಗಾದೆ ಮಾತಿಗೆ ಇರುವ ಮೇಲುನೋಟದ ಅರ್ಥ. ಆದರೆ, ಈ ಗಾದೆ ಇಷ್ಟಕ್ಕೆ ಸೀಮಿತವಾಗಿ ಬಳಕೆಗೊಳ್ಳುತ್ತಿಲ್ಲವೆಂಬುದು; ಇದರ ಬಳಕೆಯಲ್ಲಿ ನಮ್ಮ ಜನಪದೀಯರು ನಿರೂಪಿಸುವ ಬದುಕಿನ ಅನುಭವ ಬೇರೆಯೇ ಆಗಿದೆ. ಪ್ರಾಯಶಃ ಇದು ಹುಟ್ಟುವಾಗ ನಾಟಿಗಿಡ ಮತ್ತು ಅದು ರೋಗವನ್ನು ಉಪಶಮನಗೊಳಿಸುವ ಮದ್ದಿನ ಗುಣದ ಹಿನ್ನೆಲೆಯಲ್ಲಿ ರಚನೆಯಾಗಿರಬೇಕು. ಇದಕ್ಕೆ ಸಂಬಂಧಿಸಿದಂತೆ ಜನಜನಿತವಾದ ಕಥೆಯೊಂದು ಹೀಗಿದೆ.

ಒಂದೂರಿನಲ್ಲಿ ಒಬ್ಬ ವೈದ್ಯನಿದ್ದ; ಅವನು ಸಿಹಿಮೂತ್ರ ರೋಗಕ್ಕೆ ಹಸುರು ಮದ್ದು ಕೊಡುತ್ತಿದ್ದ; ದೂರದಿಂದ ರೋಗಿಗಳು ಅವನ ಬಳಿಗೆ ಬಂದು, ಔಷಧಿ ತೆಗೆದುಕೊಂಡು ಕಾಯಿಲೆ ಗುಣಪಡಿಸಿಕೊಳ್ಳುತ್ತಿದ್ದರು. ಆ ಊರಿನ ಶ್ರೀಮಂತನಿಗೆ ಅಂಥದ್ದೇ ಕಾಯಿಲೆ ಕಾಣಿಸಿಕೊಂಡಿತು. ಅವನು ನಗರದ ಸೀಮೆ ವೈದ್ಯನ ಬಳಿ ಹೋಗಿ ರೋಗಕ್ಕೆ ಮದ್ದನ್ನು ತೆಗೆದುಕೊಂಡ. ತಿಂಗಳುಗಟ್ಟಲೇ ಔಷಧಿ ತೆಗೆದುಕೊಂಡರೂ, ರೋಗ ವಾಸಿಯಾಗಲಿಲ್ಲ. ಆಕಸ್ಮಿಕವಾಗಿ ಅವನಿಗೆ ನಗರದಲ್ಲಿ ಮತ್ತೊಬ್ಬ ಶ್ರೀಮಂತನ ಪರಿಚಯವಾಯಿತು. ಆಗ "ನಿಮ್ಮೂರಿನಲ್ಲಿಯೇ ವೈದ್ಯನಿಟ್ಟುಕೊಂಡು, ಇಷ್ಟುದೂರ ಏಕೆ ಬಂದಿರಿ? ನನ್ನ ಕಾಯಿಲೆ ಗುಣವಾದದ್ದು ಅವನ ಕೈಗುಣದಿಂದ; 'ಹಿತ್ತಲಗಿಡ ಮದ್ದಲ್ಲ' ಎಂದು ನಗರದವನು ಹಳ್ಳಿಯ ರೋಗಿಯನ್ನು ಹಂಗಿಸಿದಂತೆ. ಆಗಿನಿಂದ 'ಹಿತ್ತಲಗಿಡ ಮದ್ದಲ್ಲ'– ಎಂಬ ಗಾದೆ ಪ್ರಚಲಿತಕ್ಕೆ ಬಂದಿತೆಂದು ಹೇಳುತ್ತಾರೆ.

ಈಗ ಈ ಗಾದೆ ಎಷ್ಟು ಸಾರ್ವತ್ರಿಕವಾಗಿದೆಯೆಂದರೆ ಇದನ್ನು ಬಳಸದವರೇ ಇಲ್ಲ. ಬಳಕೆಯ ವಿಧಾನದಲ್ಲಿ ನಮ್ಮ ಜನರ ಮನೋಪ್ರವೃತ್ತಿ ಅಡಕವಾಗಿದೆ. ಹತ್ತಿರದವರು, ಆಪ್ತರು ಬಂಧುಗಳು, ಒಂದು ವಿಷಯದಲ್ಲಿ ಪರಿಣಿತರು ಆಗಿರುವವರನ್ನು ಉಪೇಕ್ಷೆ ಮಾಡಿದಾಗ, ತಿರಸ್ಕಾರ ಮಾಡಿದಾಗ, ಹಿತ್ತಲಗಿಡ ಮದ್ದಲ್ಲ' ಎಂಬ ಗಾದೆಯನ್ನು ಬಳಸಿ ತಮ್ಮ ತಿರಸ್ಕಾರದ ಬಗ್ಗೆ ಅಸಮಧಾನವನ್ನು ವ್ಯಕ್ತಪಡಿಸುವ ಹಿನ್ನೆಲೆಯಲ್ಲಿ ಇದು ಪ್ರಚಲಿತಕ್ಕೆ ಬರುವುದನ್ನು ಕಾಣಬಹುದು. *(ಕೆ.ಆರ್.)*

ಹಿರಿಯರ ಪೂಜೆ: ಸತ್ತವರ ನೆನಪಿಗೆಂದು, ತೃಪ್ತಿಗೆಂದು ವರ್ಷಕ್ಕೊಮ್ಮೆ ದೀಪಾವಳಿಯ ಅಮವಾಸ್ಯೆಯ ಹಿಂದಿನ ದಿನ ಅಥವಾ ಆ ವ್ಯಕ್ತಿ ನಿಧನವಾದ ದಿನದಂದು ಮಾಡುವ ಆಚರಣೆ. ಇದನ್ನು ತಿಥಿ, ಪುಣ್ಯತಿಥಿ, ಆರಾಧನೆ, ಹಿರಿಯರ ಹಬ್ಬ, ಶ್ರಾದ್ಧ, ಪಕ್ಷ ಮುಂತಾಗಿ ಅವರವರ ಧರ್ಮಾನುಸಾರವಾಗಿ ಆಚರಿಸುವುದುಂಟು. ಅಂದು ಮನೆಯನ್ನೆಲ್ಲ ಸಾರಿಸಿ–ಸ್ವಚ್ಛಗೊಳಿಸಿ, ಮನೆಯ ಪೂಜಾ ಕೋಣೆಯ ಜಗಲಿಯ ಪಕ್ಕದಲ್ಲಿ, ಅಥವಾ ಪಡಸಾಲೆಯಲ್ಲಿ ಅಕ್ಷತೆ ಅಥವಾ ಜೋಳದ ಗುಂಪಿ ಹಾಕಿ, ಅದರ ಮೇಲೆ ತೆಂಗಿನಕಾಯಿ ಇಡಲ್ಪಟ್ಟ ತುಂಬಿದ ತಂಬಿಗೆ ಸತ್ತವರ ಭಾವಚಿತ್ರ ಇಟ್ಟು ಸತ್ತವರು ಪುರುಷರಾದರೆ–ಪುರುಷರ ಹೊಸಬಟ್ಟೆ, ಟಾವೆಲ್ಲೂ, ಸ್ತ್ರೀಯಾಗಿದ್ದರೆ ಹೊಸ ಸೀರೆ–ಕುಪ್ಪಸ ಏರಿಸಿ, ಅವರಿಗೆ ಪ್ರಿಯವಾದ ತಿಂಡಿ–ತಿನಿಸುಗಳನ್ನು ಎಡೆಮಾಡಿ ಆರತಿ ಬೆಳಗುವರು. ಆ ಆರತಿಯನ್ನು ಮನೆಯ ಎಲ್ಲ ಬಾಗಿಲುಗಳಿಗೂ, ಹೊರಗೆ ಬಂದು ಆಕಾಶಕ್ಕೂ ಬೆಳಗಿ ಅವರನ್ನು ಸ್ಮರಿಸುವರು. ಆ ಭಾವಚಿತ್ರ ಮುಂದೆ ಪಂಚಾರತಿಯಲ್ಲಿ ಕೆಂಡವನ್ನು ಹಾಕಿ ಇಟ್ಟಿರುವರು. ಹೊರಗಿನಿಂದ ಬಂದ ಬಂಧು–ಬಳಗದವರೆಲ್ಲ ಆ ಕೆಂಡಕ್ಕೆ ದೂಪ ಹಾಕಿ ತಾವು ತಂದಿದ್ದ ಬಾಳೆಹಣ್ಣುಗಳನ್ನು ಬದಿಯಲ್ಲಿಟ್ಟು ಪ್ರಸಾದ ಸ್ವೀಕರಿಸಿ ಹೋಗುವರು. *(ಜಿ.ವಿ.ಎಸ್.)*

ಹಿರೇಮಠ ಎಸ್.ಎಂ.: ಡಾ.ಎಸ್.ಎಂ. ಹಿರೇಮಠರೆಂದೇ ಚಿರಪರಿಚಿತರಾಗಿರುವ ಡಾ. ಶಿವಯ್ಯ ಮಹಾಂತಯ್ಯ ಹಿರೇಮಠ ಅವರು ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕಿನ ನಿಂಬರ್ಗಾ ಗ್ರಾಮದವರು. ತಂದೆ ಪುರಾಣ ರತ್ನ ಮಹಾಂತ ಸ್ವಾಮಿ ತಾಯಿ ನೀಲಮ್ಮ, ದಿನಾಂಕ 22.07. 1956 ರಂದು ಹಿರೇಮಠರು ಜನಿಸಿದರು.



ಸ್ವಗ್ರಾಮದಲ್ಲಿಯೇ ಪ್ರೌಢ ಶಿಕ್ಷಣ ಪೂರೈಸಿದ ಹಿರೇಮಠರು ಕಲಬುರ್ಗಿಯಲ್ಲಿನ ಶರಣ ಬಸವೇಶ್ವರ ಕಲಾಮಹಾ ವಿದ್ಯಾಲಯದಿಂದ ಬಿ.ಎ. ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರದಿಂದ ಎಂ.ಎ. ಪದವಿಯನ್ನು ಪ್ರಪ್ರಥಮ ಶ್ರೇಣಿಯೊಂದಿಗೆ ಮುಗಿಸಿದರು. ಕನ್ನಡ ಸಾಹಿತ್ಯವನ್ನು ಎಂ.ಎ. ಪದವಿಯಲ್ಲಿ ಅಧ್ಯಯನ ಮಾಡಿದ ಹಿರೇಮಠರು ವೀರಶೈವ ಸಾಹಿತ್ಯ–ಸಂಸ್ಕೃತಿಯ ವಿಶೇಷ ಅಧ್ಯಯನಕ್ಕಾಗಿ ಬಂಗಾರದ ಪದಕವನ್ನು ಪಡೆದರು.

ಎಂ.ಎ. ಪದವಿ ಪೂರೈಸಿದ ಹಿರೇಮಠರು ನಾಟಕ–ಚಲನಚಿತ್ರ ರಂಗದ ಅಧ್ಯಯನಕ್ಕಾಗಿ ಬೆಂಗಳೂರಿಗೆ ಹೋಗಿ ಆದರ್ಶ ಫಿಲಂ ಸಂಸ್ಥೆ ಸೇರಿದರು. ಕ್ರಿ.ಶ. 1980–82ರ ವರೆಗೆ ಚಲನಚಿತ್ರ ನಿರ್ದೇಶನದ ಅಧ್ಯಯನ ಕೈಕೊಂಡರು. 'ಶರಣಬಸವೇಶ್ವರರು ಅವರ ಪರಿಸರದ ಸಾಹಿತ್ಯ' ವೆಂಬುದು ಅವರ ಪಿಎಚ್.ಡಿ ಮಹಾ ಪ್ರಬಂಧವಾಗಿದೆ.

ಪದವಿ ಪೂರ್ವ ಮಹಾವಿದ್ಯಾಲಯಗಳಲ್ಲಿ ಹದಿಮೂರು ವರ್ಷಗಳ ಕಾಲ ಕನ್ನಡ ಅಧ್ಯಾಪಕರಾಗಿ ಸೇವೆಸಲ್ಲಿಸಿದ ಹಿರೇಮಠರು ಕ್ರಿ.ಶ. 1995 ರಿಂದ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇರಿಕೊಂಡು ಈಗ ಸಹ ಪ್ರಾಧ್ಯಾಪಕರಾಗಿ ಸೇವೆ ನಿರ್ವಹಿಸುತ್ತಲಿದ್ದಾರೆ.

ಸಂಶೋಧನೆ, ಕಾವ್ಯಮೀಮಾಂಸೆ, ನಾಟಕ ವೀರಶೈವ ಸಾಹಿತ್ಯ ಇವು ಹಿರೇಮಠರ ವಿಶೇಷ ಆಸಕ್ತಿಯ ಕ್ಷೇತ್ರಗಳಗಿವೆ. ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಹಿರೇಮಠರು ಇಲ್ಲಿಯವರೆಗಿನ ಅವಧಿಯಲ್ಲಿ 155 ಗ್ರಂಥಗಳನ್ನು ರಚಿಸಿದ್ದಾರೆ. ಹಿರೇಮಠರ ಸಾಹಿತ್ಯ ಸೇವೆಗೆ ಹಲವಾರು ಪ್ರಶಸ್ತಿ–ಸನ್ಮಾನಗಳು ದೊರಕಿವೆ. ಅವುಗಳಲ್ಲಿ ರಾಜ್ಯ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯದ ರಾಜ್ಯೋತ್ಸವ ಪ್ರಶಸ್ತಿ, ಬೆಂಗಳೂರಿನ ಎಂ.ಜಿ. ರಂಗನಾಥನ್ ಸಾಹಿತ್ಯ ಪ್ರಶಸ್ತಿ, ವಾರಣಾಸಿಯ ವೀರಶೈವ ಸಾಹಿತ್ಯ ಪ್ರತಿಷ್ಠಾನದ 25,000 ರೂ.ಗಳ "ಶಿವ ಕಮಲ" ಪ್ರಶಸ್ತಿ ಮುಖ್ಯವಾದವುಗಳಾಗಿವೆ.

ಕಾವ್ಯ ಮೀಮಾಂಸೆಯ ಕ್ಷೇತ್ರದಲ್ಲಿ ಅವರು ಮಾಡುತ್ತಿರುವ ಕಾರ್ಯ ಅನನ್ಯ ಮತ್ತು ಮಹತ್ವದ್ದು. ಕನ್ನಡ ಕಾವ್ಯ ಮೀಮಾಂಸೆಯ ಪರಂಪರೆಯಲ್ಲಿ ಅವರು ರಚಿಸಿದ "ಜನಪದ ಕಾವ್ಯ ಮೀಮಾಂಸೆ" ಗ್ರಂಥವು ಅವರ ಜನಪದ ಕಾವ್ಯ ಅಧ್ಯಯನದ ಆಸಕ್ತಿಯನ್ನು ಎತ್ತಿ ಹಿಡಿಯುತ್ತದೆ. ಜನಪದ ಕಾವ್ಯ

ಮೀಮಾಂಸೆಯ ಮೂಲಕ ಹಿರೇಮಠರು ಜನಪದ ಸಾಹಿತ್ಯದ ತಾತ್ವಿಕ ನೆಲೆಯನ್ನು ಸಂಶೋಧಿಸಿಕೊಟ್ಟಿರುವರು. *(ಪಿ.ಕೆ.ಕೆ.)*

ಹಿಲಾಲಪುರ: ಇತಿಹಾಸ ಪ್ರಸಿದ್ಧಿ ಪಡೆದ ಗ್ರಾಮ. ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನಿಂದ 12 ಕಿ.ಮೀ ಅಂತದಲ್ಲಿದೆ. ಚಾಲುಕ್ಯರ ಕಾಲದ ಪ್ರಾಚೀನ ದೇವಾಲಯಗಳಿವೆ. ಈ ದೇವಾಲಯಗಳು. ಅಂದಿನ ಸಂಸ್ಕೃತಿ ಪರಂಪರೆ ಹಾಗೂ ರೂಢಿ ಸಂಪ್ರದಾಯವನ್ನು ಹೊಂದಿದೆ. ಅಲ್ಲದೆ ಅತ್ಯಂತ ಹಳೆಯದಾದ ಕಲ್ಲಿನ ಮೇಲೆ ಕೊರೆಯಲ್ಪಟ್ಟ ಶಾಸನವಿದೆ. ಈ ಶಾಸನ ಚಾಲುಕ್ಯರ ಆಳ್ವಿಕೆಯ ಕಾಲದ ಆಡಳಿತ ಪದ್ಧತಿಯನ್ನು ನಿದರ್ಶಿಸುತ್ತದೆ. ಇದಲ್ಲದೇ ಗ್ರಾಮದಲ್ಲಿ ಸಣ್ಣ ಪುಟ್ಟ, ಗುಡಿ, ಗುಂಡಾರಗಳಿವೆ. ಮತ್ತು ಪ್ರಸಿದ್ಧವಾದ ಶಿವದೇವಾಲಯವು ವಿವಿಧ ಅಲಂಕಾರಗಳಿಂದ ಕಂಗೊಳಿಸುತ್ತದೆ. ಈ ಊರಲ್ಲಿ ಜನಪದ ವೈದ್ಯ ಪದ್ಧತಿ ಅನುವಂಶೀಯವಾಗಿ ಬೆಳೆದುಕೊಂಡು ಬಂದಿರುವ ಹಿನ್ನೆಲೆಯಿದೆ. ಮರೆಪ್ಪ ಮೇತ್ರೆ ಎಂಬುವವರು ತಂದೆ ಬನಗೆಪ್ಪ ಮೇತ್ರೆರವರಿಂದ ತೊನ್ನು ರೋಗಕ್ಕೆ ಚಿಕಿತ್ಸೆ ನೀಡುವುದನ್ನು ಬಳುವಳಿಯಾಗಿ ಪಡೆದುಕೊಂಡಿದ್ದಾರೆ. ಇವರು 'ತೊನ್ನು' ರೋಗವನ್ನು ಸಂಪೂರ್ಣವಾಗಿ ಗಿಡ ಮೂಲಿಕೆ ಔಷಧಿಯಿಂದಲೇ ಗುಣಪಡಿಸುವ ಪ್ರಖ್ಯಾತಿಯನ್ನು ಪಡೆದುಕೊಂಡಿದ್ದಾರೆ. ಈಗಾಗಲೇ ಸಾಕಷ್ಟು ತೊನ್ನು ರೋಗವಿರುವ ರೋಗಿಗಳ ಗುಣಮುಖರಾದುದನ್ನು ಕಾಣುತ್ತೇವೆ. ಇವರ ಪ್ರತಿಭೆಯನ್ನು ಮೆಚ್ಚಿ ಕರ್ನಾಟಕ ಸರ್ಕಾರವು 'ಜಾನಪದ ವೈದ್ಯ'ವೆಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಈ ಊರಿನ ಮಹಿಳಾ ಮಂಡಳಿ, ಮತ್ತು ಇನ್ನಿತರ ಸಂಘ ಸಂಸ್ಥೆಗಳು ಸಮಾಜಕ್ಕೆ ತಮ್ಮ ಮಿಗಿಲಾದ ಸೇವೆಯನ್ನು ಸಲ್ಲಿಸುತ್ತಿವೆ. ಜಾನಪದದ ಪ್ರಮುಖ ಕಣಜವೆಂದೇ ಗುರುತಿಸಿಕೊಂಡಿರುವ ಈ ಹಳ್ಳಿಯಲ್ಲಿ ಜಾನಪದ ಹಾಡು, ಗೀತೆ, ಸಂಪ್ರದಾಯ, ನಂಬಿಕೆಗಳು ಕಂಬಿಯಪದ, ಬೀಸುವ ಪದ, ಗರತಿಯ ಹಾಡು, ಸೋಬಾನದ ಹಾಡು ಕಥೆ, ಗೀತೆ, ಲಾವಣಿ ಮುಂತಾದ ಜಾನಪದ ಸಾಹಿತ್ಯ ಪ್ರಕಾರಗಳನ್ನು ಜಾನಪದ ಕಲಾವಿದರು ವಿವಿಧ ಧಾಟಿಯಲ್ಲಿ ಹಾಡಿ ಜನರ ಮನಸ್ಸನ್ನು ಆಹ್ಲಾದಗೊಳಿಸುತ್ತಾರೆ.

(ಪಿ.ಕೆ.ಕೆ.)

ಹು

ಹುಡಗಿ: ಧಾರ್ಮಿಕ ಹಾಗೂ ಸಾಂಸ್ಕೃತಿಕ ಸ್ಥಳ. ಇದು ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಪೂರ್ವ ದಿಕ್ಕಿನಲ್ಲಿದೆ. ಮುಂಬೈ ಹೈದ್ರಾಬಾದ ರಾಷ್ಟ್ರೀಯ ಹೆದ್ದಾರಿ 9ರ ಮೇಲೆ ಇರುವ ಈ ಗ್ರಾಮ. ಚಿಕ್ಕದಾದರೂ ತುಂಬಾ ಸುಸಂಸ್ಕೃತವಾದದ್ದು. ಹುಡಗಿಯೆಂಬ ಹೆಸರು ಒಂದು ರೀತಿಯಲ್ಲಿ ಸಂತ ಕರೀಬಸವಪ್ಪನವರ ಶಿಷ್ಯಳಾದ 'ಎಂಕಮ್ಮ' (ಬನ್ನಳಿ ಗ್ರಾಮದವಳು), ಇವಳು ಹುಡಗಿಯಾಗಿಯೇ ಇದ್ದುದರಿಂದ (ಕನ್ಯೆ) ಹುಡಗಿ ಎಂಬ ಹೆಸರು ಬಂದಿರಬೇಕೆಂದು ಇಲ್ಲಿಯ ಅನೇಕ ತತ್ವಪದಗಳಲ್ಲಿ ಜನಪದರು ಹೇಳುವ ವಿಚಾರವಾಗಿದೆ.

ಇಲ್ಲಿ ವಿವಿಧ ಧರ್ಮದ, ಜಾತಿಯ ಜನಾಂಗಗಳು ತಮ್ಮ ಆಚಾರ ವಿಚಾರ, ನಂಬಿಕೆ ಹಾಗೂ ವೈವಿಧ್ಯಮಯವಾದ ಜೀವನ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಇದು ಸಾಂಸ್ಕೃತಿಕ ಗ್ರಾಮವಾಗಿದ್ದು, ಸುಧಾರಿತ ಹಳ್ಳಿ ಎನಿಸಿದೆ. ಇದು ಹಿಂದೆ ಧಾರ್ಮಿಕ ಸ್ಥಳವಾಗಿದ್ದು ಇಲ್ಲಿ ಕರೀಬಸವಪ್ಪನವರ ಮತ್ತು ಎಂಕ್ಕಮ್ಮನ ಪ್ರಸಿದ್ಧ ದೇವಾಲಯಗಳು ಇಲ್ಲಿವೆ. ಇಲ್ಲಿಯ ಜನರ ದೇಸೀ ಕಲೆಗಳಾದ ಬುಟ್ಟಿ ನೇಯುವುದು ಮತ್ತು ಚಾಪೆ ನೇಯುವುದು, ಕಸೂತಿ, ಕೌಂದಿ ಹೊಲೆಯುವದು ಮುಂತಾದ ಕಲೆಗಳಿಗೆ ಹೆಸರಾಗಿದೆ. ಹಾಗೆಯೇ ಸೀಗಿ, ಬುಲಾಯಿ ಮತ್ತು ಮೋಹರಂ ಹಾಡುಗಳಿಗೆ ಜನಪದರು ಪ್ರಸಿದ್ಧರಾಗಿದ್ದಾರೆ. ಇಲ್ಲಿನ ತತ್ವಪದಕಾರ, ಜನಪದ ಕವಿ ದೇಶಾಂಸ ಹುಡಗಿಯವರು ಪ್ರಸಿದ್ಧರಾಗಿದ್ದಾರೆ. *(ಜಿ.ಎಸ್.ಪಿ.)*

ಹುಮನಾಬಾದ: ಬೀದರ ಜಿಲ್ಲೆಯ ಮಹತ್ವದ ಪಟ್ಟಣ ಹಾಗೂ ತಾಲ್ಲೂಕಿನ ಆಡಳಿತ ಕೇಂದ್ರ, ಚಾಲುಕ್ಯರ ಕಾಲದಿಂದಲೇ ಪ್ರಸಿದ್ಧ ವ್ಯಾಪಾರಿ ಕೇಂದ್ರವಾಗಿತ್ತು. ಆನಂತರ ಸಾಹು ಮಹಾರಾಜನ ಮಂತ್ರಿ ತಾನಾಜಿ ಜಾಧವ ಹಾಗೂ ಅವನ ಮಗ ಚಂದ್ರ ಸೇನ ಜಾಧವರಿಂದ ಈ ಊರು ಪುನರ ನಿರ್ಮಾಣಗೊಂಡು ಆಧುನಿಕ ನಗರವೆನಿಸಿದೆ.

ಜಯಸಿಂಗ ಪುರ ಎಂಬ ಪ್ರಾಚೀನ ಹೆಸರುಳ್ಳ ಇದನ್ನು ಎರಡನೆಯ ಜಯಸಿಂಗ 1940ರಲ್ಲಿ ಕಟ್ಟಿದ್ದಾಗಿ ತಿಳಿದು ಬರುತ್ತದೆ. ಆನಂತರ ಹೂಮಾಯುಮ ಎಂಬ ಬಹಮನಿ ಅರಸನ ಕಾಲದಲ್ಲಿ (1458–61) ಈ ಊರು ತನ್ನ ಹೆಸರನ್ನು ಬದಲಾಯಿಸಿಕೊಂಡು 'ಹುಮಾಯುಮ ಅಬಾದ' ಎಂಬ ಹೆಸರಿನಿಂದ ಕರೆಯಲ್ಪಡತೊಡಗಿತ್ತು. ಈಗಲೂ ಅದನ್ನೇ ಹಮನಾಬಾದ ಎಂಬ ಹೆಸರನ್ನು ಉಳಿಸಿಕೊಂಡಿದೆ.

ಐದು ದಿಕ್ಕಿನಲ್ಲಿ ಐದು ಅಗಸಿಗಳನ್ನು, ಮಧ್ಯದಲ್ಲಿ ಪಗಡಿ ಬಾಜಾರವನ್ನು ವಿಶಾಲವಾದ ರಸ್ತೆಗಳನ್ನು ಪಡೆದಿರುವ ಈ ಊರು ಸಾಂಸ್ಕೃತಿಕವಾದ ಒಂದು ಐತಿಹಾಸಿಕ ಕೇಂದ್ರ, ವಿವಿಧ ಧರ್ಮ, ಜಾತಿ–ಜನಾಂಗ, ಆಚರಣೆ, ನಂಬಿಕೆ ಹಾಗೂ ವೈವಿಧ್ಯಮಯವಾದ ಜೀವನ ಪದ್ಧತಿಯನ್ನು ಅಳವಡಿಸಿಕೊಂಡಿರುವ ಇದು, ಸಾಂಸ್ಕೃತಿಕ ನಗರ. ವ್ಯಾಪಾರ, ವಾಣಿಜ್ಯ, ಕಲೆ, ಸಾಹಿತ್ಯ, ಸಂಗೀತ ಕ್ಷೇತ್ರಗಳಿಗೆ ತಮ್ಮದೇ ಆದ ಕಾಣಿಕೆ ಕೊಟ್ಟಿರುವ ಇದು ಬೀದರ ಜಿಲ್ಲೆಯ ಕೇಂದ್ರ ಸ್ಥಾನವೂ ಹೌದು.

ವೀರಭದ್ರೇಶ್ವರ ಇಲ್ಲಿ ಪ್ರಧಾನ ಗ್ರಾಮ ದೇವತೆಯಾಗಿದ್ದು, ನಗರೇಶ್ವರ, ಭವಾನಿ, ನಾಗಣ್ಣಾ, ಮುರಗೆಮ್ಮ, ಹನುಮಂತ ದೇವರ, ಸಾಯಿಬಾಬಾ ಮೊದಲಾದ ದೇವತೆಗಳ ದೇವಸ್ಥಾನವು ಇಲ್ಲಿದೆ. ಧಮ್ಮನಸೂರಿನ ಸಿದ್ಧ ಪ್ರಭುಗಳು, ತತ್ವ ಪದಕಾರರಾಗಿದ್ದು, ಅವರ ಒಂದು ಸಾವಿರ ಹಾಡುಗಳನ್ನು ಎಂ.ಎಸ್.ಲಠ್ಠೆಯವರು ಸಂಪಾದಿಸಿದ್ದಾರೆ. ಬುಲಾಯಿ ಹಾಡುಗಳು, ಕೋಲಾಟ ಪದಗಳು, ಭೂತೇರ ಹಾಡು, ಮೋಹರಂ ಹಾಡು, ಸಂಪ್ರದಾಯದ ಹಾಡುಗಳನ್ನು ಹಾಡುವ ಅನೇಕ ಜನಪದ ಕಲಾವಿದರು ಇಲ್ಲಿ ಎಲೆ ಮರೆಯ ಕಾಯಿಯಂತೆ ಬದುಕಿದ್ದಾರೆ.

ನೂರಾಎಂಟು ಮಠಗಳನ್ನು, ನೂರಾರು ಚೌಕಿ ಮಠಗಳನ್ನು,

ಐದಾರು ಮಸೀದಿಗಳನ್ನು ಚರ್ಚ ಹಾಗೂ ಆರಬೀಟ ಸಂಸ್ಥೆಗಳನ್ನು ಹೊಂದಿರುವ ಈ ಪಟ್ಟಣವು ಬಹು ಸಂಸ್ಕೃತಿಯ ಪ್ರತೀಕದಂತಿರುವ ಜನಪದ ಜೀವ ಎನಿಸಿದೆ.

(ಜಿ.ಎಸ್.ವಿ.)

ಹುಮನಾಬಾದ ವೀರಭದ್ರೇಶ್ವರ: ಬೀದರ ಜಿಲ್ಲೆ ಹುಮನಾಬಾದ ಪಟ್ಟಣದ ವೀರಭದ್ರೇಶ್ವರ ದೇವಸ್ಥಾನ, ಶತಮಾನಗಳಿಂದ ನಂಬಿದ ಭಕ್ತರ ಇಷ್ಟಾರ್ಥಗಳನ್ನು ಪೂರೈಸುತ್ತ ಬಂದಿರುವ ಆರಾಧ್ಯ ದೈವ. ವೀರಭದ್ರೇಶ್ವರ, ನಿವಾಸಿಗಳ ಕಷ್ಟಕಾಲದಲ್ಲಿ ನೆರವಾಗುವ ಆಪದ್ಬಾಂಧಬ. ಭಕ್ತರ ಇಷ್ಟಾರ್ಥಗಳನ್ನು ಪೂರೈಸುವ ಕಾಮಧೇನು, ಭಕ್ತರ ಪಾಲಿಗೆ ಕಲ್ಪವೃಕ್ಷ. ಪಟ್ಟಣದಲ್ಲಿ ವೀರಭದ್ರೇಶ್ವರ ದೇವಸ್ಥಾನ ನಿರ್ಮಾಣಗೊಂಡಿದ್ದು ಮತ್ತು ವೀರಭದ್ರೇಶ್ವರ ಪ್ರತಿಮೆ ಸ್ಥಾಪನೆಯಾಗಿರುವುದೊಂದು ರೋಚಕ ಇತಿಹಾಸವಿದೆ.

ಮರಾಠಾ ಅರಸರಲ್ಲಿ ಪ್ರಸಿದ್ಧ ದಂಡನಾಯಕನಾಗಿದ್ದ ಧನಾಜಿ ಜಾಧವ್ ಮತ್ತು ಅವರ ಪುತ್ರ ಚಂದ್ರಸೇನ ಜಾಧವ ಅವರು ಈ ಭಾಗದಲ್ಲಿದ್ದ ಮಾಂಡಲೀಕರಿಂದ ಚೌತ್ (ತೆರಿಗೆ) ಸಂಗ್ರಹಕ್ಕಾಗಿ ಬಂದಿದ್ದರು. ಈ ಸಂದರ್ಭದಲ್ಲಿಯೇ ಪಟ್ಟಣ ನಿರ್ಮಾಣಕ್ಕೆ ಅಡಿಗಲ್ಲು ಇಡಲಾಗಿತ್ತು ಎಂದು ಹೇಳಲಾಗುತ್ತದೆ.

ಧನಾಜಿ ಜಾಧವ ತನ್ನ ಶೌರ್ಯ, ಸಾಹಸದಿಂದಾಗಿ ಜೈಸಿಂಗ್ ಎಂಬ ಬಿರುದು ಪಡೆದಿದ್ದ. ಈ ಹಿನ್ನೆಲೆಯಲ್ಲಿ ಧನಾಜಿಯ ಮಗ ಚಂದ್ರಸೇನ ಜಾಧವ, ತನ್ನ ತಂದೆಯ ಹೆಸರಿನಲ್ಲಿ ಜೈಸಿಂಹನಗರ ಎಂಬ ಪಟ್ಟಣವನ್ನು ಕಟ್ಟಸಿದ್ದ. ಈ ಪಟ್ಟಣವೇ ಇಂದಿನ ಹುಮನಾಬಾದ ಎಂಬ ಐತಿಹ್ಯವಿದೆ.


ಚಂದ್ರಸೇನನ ಪುತ್ರ ರಾಜಾ ರಾಮಚಂದ್ರನು ಪಟ್ಟಣವನ್ನು ವಿಸ್ತರಿಸುವ ಕಾರ್ಯಕೈಗೊಂಡಿದ್ದ. ತನ್ನ ರಾಜ್ಯದ ರಾಜಧಾನಿಯನ್ನಾಗಿ ಮಾಡಿಕೊಂಡು, ಇನ್ನಷ್ಟು ಅಭಿವೃದ್ಧಿಗೊಳಿಸಿದ. ಸ್ವತಃ ಶಿಲ್ಪಶಾಸ್ತ್ರದಲ್ಲಿ ಪ್ರವೀಣನಾಗಿದ್ದ ರಾಜಾ ರಾಮಚಂದ್ರ, ಹೊಸ ಹೊಸ ದೇವಸ್ಥಾನಗಳನ್ನು ನಿರ್ಮಿಸುವುದರಲ್ಲಿ ವಿಶೇಷ ಆಸಕ್ತಿ ಹೊಂದಿದ್ದ. ಅರಸನಲ್ಲಿದ್ದ ಈ ಆಸಕ್ತಿ ಹಾಗೂ ಪ್ರತಿಭೆಯ ಫಲವಾಗಿ ಶ್ರೀ ವೀರಭದ್ರೇಶ್ವರ ದೇವಸ್ಥಾನ ಶತಮಾನಗಳಿಂದ ಕಂಗೊಳಿಸುತ್ತಿದೆ.

ಜಯಸಿಂಹನಗರದಲ್ಲಿ ಶಿವನಗರ ನಿರ್ಮಿಸುವುದು ರಾಜಾ ರಾಮಚಂದ್ರನ ಧ್ಯೇಯವಾಗಿತ್ತು. ಕ್ರಿ.ಶ. 1725ರಲ್ಲಿ ದೇವಸ್ಥಾನ ನಿರ್ಮಾಣ ಆರಂಭಿಸಿರಬೇಕೆಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ಆದರೆ, ಗರ್ಭಗುಡಿಯ ರಚನಾ ಶೈಲಿಯಿಂದ ಇದು ಇನ್ನಷ್ಟು ಪ್ರಾಚೀನವಾಗಿರಬೇಕೆಂದು ಇತಿಹಾಸಕಾರರು ಅಭಿಪ್ರಾಯಪಟ್ಟಿದ್ದಾರೆ.

ಅರಸ ಶಿವದೇವಾಲಯ ಕಟ್ಟುವ ಕಾರ್ಯ ಸಂಭ್ರಮದಿಂದ ಕೈಗೊಂಡಿದ್ದ. ವಾಸ್ತುಶಿಲ್ಪದ ಬಗ್ಗೆ ಪರಿಣತಿ ಹೊಂದಿದ್ದರಿಂದ ನಿರ್ಮಾಣ ಕಾರ್ಯದ ಪ್ರತಿ ಹಂತದಲ್ಲಿ ಶಿಲ್ಪಕಲೆ ಅರಳಿತ್ತು. ಒಂದು ರೀತಿಯಲ್ಲಿ ಇಡೀ ದೇವಾಲಯವೇ ಶಿಲ್ಪಕಲೆಯಲ್ಲಿ ಎರಕ ಹೊಯ್ದಿರುವ ರೀತಿಯಲ್ಲಿ ನಿರ್ಮಾಣವಾಗಿತ್ತು.

ದೇವಸ್ಥಾನದಲ್ಲಿ ವೀರಭದ್ರೇಶ್ವರ ಪ್ರತಿಮೆ ಸ್ಥಾಪನೆಯಾಗಿ ರುವುದೊಂದು ರೋಚಕ ಕಥೆ. ಪ್ರತಿಮೆ ಸ್ಥಾಪಿಸುವ ಸಂದರ್ಭ ದಲ್ಲಿಯೇ ರಾಜಾ ರಾಮಚಂದ್ರನಿಗೆ ಒಂದು ದಿನ ಕನಸು ಬಿದ್ದಿತ್ತು. ಕನಸಿನಲ್ಲಿ ಬಂದ ಶ್ರೀ ವೀರಭದ್ರೇಶ್ವರ, ಗಡವಂತಿ ಗ್ರಾಮ ದಲ್ಲಿರುವ ತನ್ನನ್ನು ಹೊಸದಾಗಿ ನಿರ್ಮಿಸಿರುವ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸುವಂತೆ ಅಣತಿ ನೀಡಿದ ಎಂದು ಹೇಳಲಾಗಿದೆ. ನಂತರ ಅರಸ, ಗಡವಂತಿ ಗ್ರಾಮಕ್ಕೆ ಹೋಗಿ ಅಲ್ಲಿದ್ದ ವೀರಭದ್ರೇಶ್ವರ ಪ್ರತಿಮೆಯನ್ನು ತಂದು ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಿದ ಎಂದು ಇತಿಹಾಸದಿಂದ ತಿಳಿದು ಬರುತ್ತದೆ.

ವೀರಭದ್ರೇಶ್ವರ ದೇವಸ್ಥಾನ ವಿಸ್ಮಯಗಳ ಆಗರ. ದೇವಸ್ಥಾನದ ಒಳಭಾಗದಲ್ಲಿರುವ ದೀಪಸ್ತಂಭದ್ದೇ ಒಂದು ಕಥೆ. ಗರ್ಭಗುಡಿಯ ಸಮ್ಮುಖದಲ್ಲಿ ಎರಡೂ ಬದಿಯಲ್ಲಿ ಎರಡು ದೀಪಸ್ಥಂಭಗಳಿವೆ. ಈ ಪೈಕಿ ಬಲಭಾಗದಲ್ಲಿರುವ ದೀಪಸ್ಥಂಭ ಬರೀ ಸ್ಪರ್ಷಮಾತ್ರದಿಂದ ಅಲುಗಾ ಡುತ್ತದೆ! ನಾಲ್ಕಾರು ಜನರು ಸುತ್ತುಗಟ್ಟುವಷ್ಟು ಬೃಹತ್ ಗಾತ್ರದ, ಸಾಕಷ್ಟು ಎತ್ತರ ಹಾಗೂ ಅಷ್ಟೇ ಭವ್ಯತೆ ಹೊಂದಿರುವ ಈ ದೀಪಸ್ಥಂಭದ ಅಡಿಪಾಯ ಭದ್ರವಾಗಿದೆ. ಹತ್ತಾರು ಜನ ಕೆಳಗೆ ನಿಂತು ಬಲಪ್ರಯೋಗಿಸಿದರೂ ಸ್ವಲ್ಪವೂ ಮಿಸುಕಾಡದು. ಆದರೆ, ದೇವಸ್ಥಾನದ ಮೊದಲ ಮಹಡಿಯನ್ನು ಹತ್ತಿ ಮೇಲ್ಭಾಗಕ್ಕೆ ಹೋದರೆ, ಬರೀ



ಹುಮನಾಬಾದ ವೀರಭದ್ರೇಶ್ವರ

ಸ್ಪರ್ಷಮಾತ್ರದಿಂದ ಈ ಬೃಹತ್ ದೀಪಸ್ಥಂಬ ಉಯ್ಯಾಲೆಯಾಡುವ ಅನುಭವ ತಂದುಕೊಡುತ್ತದೆ.

ಕೆಳಭಾಗದಲ್ಲಿ ಭೀಮ ಬಲಕ್ಕೆ ಬಾಗದ ಈ ದೀಪಸ್ಥಂಭ ಮೇಲ್ಭಾಗದಿಂದ ಮಾತ್ರ ತೂಗಾಡುತ್ತದೆ. ದೀಪಸ್ಥಂಭದ ರಚನೆಯಲ್ಲಿ ಬಳಸಲಾದ ತಾಂತ್ರಿಕ ಕೌಶಲ್ಯ ಇಂದಿಗೂ ಅಚ್ಚರಿಗೆ ಕಾರಣವಾಗಿದೆ. ಈಗಿರುವ ಶಿಲ್ಪಕಲಾ ಪ್ರವೀಣರು, ತಂತ್ರಜ್ಞರು ಎಷ್ಟೇ ಪ್ರಯತ್ನ ಪಟ್ಟರೂ, ಅಲುಗಾಡುವ ಕಂಬದ ರಹಸ್ಯ ಮಾತ್ರ ಬೆಳಕಿಗೆ ಬಂದಿಲ್ಲ. ಆದರೆ, ಎಡಭಾಗದಲ್ಲಿರುವ ದೀಪಸ್ಥಂಬ ಮಾತ್ರ ಅಕ್ಷರಶಃ ಕಂಬವೇ ಆಗಿದೆ. ಮೇಲಿಂದಾಗಲಿ, ಕೆಳಭಾಗ ದಿಂದಾಗಲಿ ಯಾವ ಸ್ಪರ್ಷಕ್ಕೂ, ಬಲಕ್ಕೂ ಬಾಗದೇ ಶತಮಾನಗಳಿಂದ ಅಚಲವಾಗಿ ನಿಂತಿದೆ. ದೇವಸ್ಥಾನಕ್ಕೆ ಬರುವ ಭಕ್ತಾದಿಗಳೆಲ್ಲರೂ ಬಲಭಾಗದ ದೀಪ ಸ್ಥಂಭವನ್ನು ಅಲುಗಾಡಿಸಿ ಮೋಜು ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಈಚೆಗೆ ಹೆಚ್ಚಿನವರಿಗೆ ಮಹಡಿ ಹತ್ತಲು ಅವಕಾಶ ನೀಡುತ್ತಿಲ್ಲ. ಈ ಚಮತ್ಕಾರವನ್ನು ಹಾಗೆಯೇ ಉಳಿಸಿಕೊಳ್ಳು ವುದಕ್ಕಾಗಿ ಈ ದೀಪಸ್ಥಂಭವನ್ನು ಕಣ್ಣಿಟ್ಟು ಕಾಯಲಾಗುತ್ತಿದೆ. ಆದಾಗ್ಯೂ ಹಲವಾರು ಈ ದೀಪಸ್ಥಂಭವನ್ನು ಅಲುಗಾಡಿಸಿ, ಅವರ್ಣನೀಯ ಆನಂದ ಪಡೆಯುತ್ತಾರೆ. ಮೊದಲ ಕಿರಣ ಪ್ರಭುವಿನ ಚರಣಕ್ಕೆ ವೀರಭದ್ರೇಶ್ವರ ದೇವಸ್ಥಾನ ಎಲ್ಲ ರೀತಿ ಯಿಂದಲೂ ಭವ್ಯವಾಗಿದೆ. ಆಕಾರ, ಮಹಿಮೆ ಎಲ್ಲವೂ ಒಂದನ್ನೊಂದು ಮೀರಿಸುವಂತಿವೆ. ಭವ್ಯ ದೇವಸ್ಥಾನಕ್ಕೆ ಅಷ್ಟೇ ಭವ್ಯವಾದ ಗರ್ಭಗುಡಿ. ಹೊರಗಿರುವ ಪ್ರವೇಶದ್ವಾರರವೂ ಭವ್ಯವಾಗಿದೆ. ಇನ್ನು ಗರ್ಭಗುಡಿ ಬರೀ ನೋಡಲಷ್ಟೇ ಭವ್ಯವಾಗಿಲ್ಲ. ಶಿಲ್ಪಿಗಳು ಗರ್ಭಗುಡಿಯನ್ನು ಸುಂದರವಾಗಿ ನಿರ್ಮಿಸುವುದರ ಜೊತೆಗೆ ಅಲ್ಲಿಯೂ ತಮ್ಮಲ್ಲಿರುವ ತಾಂತ್ರಿಕ ನೈಪುಣ್ಯವನ್ನೂ ಮೆರೆದಿದ್ದಾರೆ.

ಬೆಳಗಿನ ಮೊದಲ ಕಿರಣಗಳು, ಪ್ರಭು ವೀರಭದ್ರೇಶ್ವರ ಪ್ರತಿಮೆಯ ಚರಣ ಕಮಲಗಳ ಮೇಲೆ ಬೀಳುವಂತೆ ಮಾಡಿರುವುದೇ ಇಲ್ಲಿನ ವಿಶೇಷತೆ. ಸಾಕಷ್ಟು ಎತ್ತರವಾಗಿರುವ ಪ್ರವೇಶದ್ವಾರದ ಗೋಡೆ, ಒಳಭಾಗದಲ್ಲಿರುವ ದೇವಸ್ಥಾನವೂ, ವೇದಿಕೆಗಳೂ ಸಾಕಷ್ಟು ಎತ್ತರದಲ್ಲಿವೆ. ಆದಾಗ್ಯೂ ಯಾವುದೇ ಅಡೆತಡೆಯಿಲ್ಲದಂತೆ ಸೂರ್ಯನ ಮೊದಲ ಕಿರಣಗಳು ನೇರವಾಗಿ ವೀರಭದ್ರೇಶ್ವರ ಪ್ರತಿಮೆಯ ಪಾದವನ್ನು ತಟ್ಟುತ್ತವೆ. ಇದೊಂದು ವಿಸ್ಮಯವೇ ಸರಿ.

ಸೂರ್ಯೋದಯಕ್ಕೆ ಮುನ್ನ ಗರ್ಭಗುಡಿಯಲ್ಲಿ ಕತ್ತಲೆ ವ್ಯಾಪಿಸಿರುತ್ತದೆ. ಸೂರ್ಯೋದಕ್ಕಾಗಿ ಸ್ವಲ್ಪ ಹೊತ್ತು ಕಾದಲ್ಲಿ ಈ ಅಚ್ಚರಿ ಕಾಣಬಹುದು. ಸೂರ್ಯ ಮೇಲೇರುತ್ತಿದ್ದಂತೆ ಮೊದಲ ಕಿರಣಗಳು ಗರ್ಭಗುಡಿ ಪ್ರವೇಶಿಸಿ, ವೀರಭದ್ರೇಶ್ವರ ಪ್ರತಿಮೆಯ ಬಲಪಾದವನ್ನು ಸ್ಪರ್ಷಿಸುತ್ತವೆ. ಇದು ಆಗಿನ ವಾಸ್ತುಶಿಲ್ಪಿಗಳ ಕಲಾ ನೈಪುಣ್ಯಕ್ಕೆ ಸಾಕ್ಷಿಯಾಗಿ ಇಂದಿಗೂ ಕಾಣಬಹುದು.

ದೇವಸ್ಥಾನದ ಬಲಭಾಗದಲ್ಲಿ ನೂರಾರು ಮೆಟ್ಟಿಲುಗಳಿಂದ ಕೂಡಿರುವ ಜಲಕುಂಡವಿದೆ. ಜಲಕುಂಡದಲ್ಲೂ ಶಿಲ್ಪಿಗಳು ಕಲಾಚಾತುರ್ಯ ಮೆರೆದಿದ್ದಾರೆ. ದೇವಸ್ಥಾನದ ಆವರಣ ಗೋಡೆಯನ್ನು ಶ್ರೀ ಲೋಕಮಣಿ ಹಲವಾಯಿ ಎಂಬುವರು ನಿರ್ಮಿಸಿದರೆಂದು ಹೇಳಲಾಗುತ್ತದೆ. ಸಕ್ಕರೆ ಕಾರಖಾನೆಯಿಂದ ಬರುವ ಲಾಭವೆಲ್ಲವನ್ನೂ ಅವರು ದೇವಸ್ಥಾನಕ್ಕೆ ಬಳಸಿದರೆಂದು ಹೇಳಲಾಗುತ್ತದೆ. ದೇವಸ್ಥಾನದ ಮುಂಭಾಗದಲ್ಲಿ ಇತ್ತೆಂದು ಹೇಳಲಾದ ಅರಸನ ಮನೆಯ ಕುರುಹುಗಳೂ ಇಂದು ಮರೆಯಾಗಿವೆ.

ಅಸಂಖ್ಯಾತ ಭಕ್ತಾದಿಗಳನ್ನು ಶತಮಾನಗಳಿಂದ ಸಂರಕ್ಷಿ ಸುತ್ತಿರುವ ವೀರಭದ್ರೇಶ್ವರ ಮಹಿಮೆ ಅಪಾರ. ಹುಮನಾಬಾದ ಪಟ್ಟಣದ ಅಸಂಖ್ಯಾತ ಭಾವುಕರು ಈಗಲೂ ಪವಾಡಗಳನ್ನು ನೆನೆಯುತ್ತ ಧನ್ಯತೆ ಅನುಭವಿಸುವುದನ್ನು ಕಾಣಬಹುದು.

ಪ್ರತಿ ವರ್ಷ ಜನವರಿಯಲ್ಲಿ ನಡೆಯುವ ಇಲ್ಲಿನ ವೀರಭದ್ರೇಶ್ವರ ಜಾತ್ರಾ ಮಹೋತ್ಸವ, ಬರೀ ಜಾತ್ರೆಯಲ್ಲ, ಇದೊಂದು ಸಾಂಸ್ಕೃತಿಕ ಮಹಾ ಉತ್ಸವ. ಪ್ರಾಚೀನ ಸಂಸ್ಕೃತಿಯ ಪ್ರತೀಕವಾಗಿರುವ ವೀರಭದ್ರೇಶ್ವರ ದೇವಸ್ಥಾನದ ಭವ್ಯತೆ ಬಣ್ಣನೆಗೆ ನಿಲುಕದು. ವಿಶಾಲವಾದ ಸುಂದರ ಮಂಟಪ, ಮಹಾದ್ವಾರ, ದೀಪಸ್ಥಂಭಗಳು ಮನೋಹರವಾಗಿವೆ. 'ಬೇಡಿದ್ದನ್ನು ಕೊಡುವ ದೇವರು' ಎಂಬ ಅಚಲ ವಿಶ್ವಾಸ ಭಕ್ತರದು. ಹೀಗಾಗಿ ಶತಮಾನಗಳಿಂದ ವೀರಭದ್ರೇಶ್ವರ ದೇವರು ಹುಮನಾಬಾದ ಮತ್ತು ಸುತ್ತಲಿನ ಗ್ರಾಮಗಳ ನಿವಾಸಿಗಳ ಆರಾಧ್ಯ ದೈವವಾಗಿ ಪೂಜಿಸಲ್ಪಡುತ್ತ ಬಂದಿದ್ದಾರೆ.

ವೀರಭದ್ರೇಶ್ವರ ದೇವಸ್ಥಾನದಲ್ಲಿ ಪ್ರತಿದಿನ ಮೂರು ಬಾರಿ ಅಭಿಷೇಕ ನಡೆಯುತ್ತದೆ. ಜಾತ್ರಾ ಸಮಯದಲ್ಲಿ ಪಟ್ಟಣದ ನಿವಾಸಿಗಳೆಲ್ಲರೂ ಮನಃಪೂರ್ವಕ ಪಾಲ್ಗೊಳ್ಳುವುದು ಇಲ್ಲಿನ ವಿಶೇಷ ಜಾತ್ರೆಗೆ ಮುನ್ನ ಮನೆಗಳನ್ನು ಸ್ವಚ್ಛಗೊಳಿಸಿ, ಬಣ್ಣ ಹಚ್ಚಿ ಅಲಂಕರಿಸುತ್ತಾರೆ. ಬೇರೆ ಬೇರೆ ಊರುಗಳಲ್ಲಿ ಕೆಲಸ ಮಾಡು ತ್ತಿರುವವರೂ ಬಂದುಜಾತ್ರೆಯಲ್ಲಿ ಮನೆಯವರೊಂದಿಗೆ ಭಾ–ಗಿಯಾಗುತ್ತಾರೆ.

ವೈಶಿಷ್ಟ್ಯಗಳು: ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಹಲವು ವೈಶಿಷ್ಟ್ಯಗಳ ಸಂಗಮವಾಗಿದೆ. ಉಚಾಯಿ ಮೆರವಣಿಗೆ, ರಥೋತ್ಸವ, ಭವ್ಯ ಮೆರವಣಿಗೆ, ಮದ್ದು ಸುಡುವ ಕಾರ್ಯಕ್ರಮ, ಶಲ್ಯ ಸುಡುವ ಕಾರ್ಯಕ್ರಮ, ಭಕ್ತಾದಿಗಳಿಗಾಗಿ ವಿಶೇಷತೆಗಳ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಮಕರ ಸಂಕ್ರಮಣದ ದಿನ ಆರಂಭವಾಗುವ ಜಾತ್ರಾ ಮಹೋತ್ಸವ, ಜನವರಿ 26 ರ ವರೆಗೆ ನಡೆಯುತ್ತದೆ. ಉಚಾಯಿ ಮೆರವಣಿಗೆ ವೀರಭದ್ರೇಶ್ವರ ದೇವಸ್ಥಾನ ದಿಂದ ಆರಂಭವಾಗುತ್ತದೆ. ಮುತ್ತು–ರತ್ನಗಳ ಮಾರುಕಟ್ಟೆ ಯಲ್ಲಿರುವ ಬಸವೇಶ್ವರ ವೃತ್ತದಿಂದ ಹಾಯ್ದು, ಪ್ರಮುಖ ರಸ್ತೆಗಳ ಮೂಲಕ ಸಾಗಿ ದೇವಸ್ಥಾನಕ್ಕೆ ಮರಳುತ್ತದೆ.

ಈ ಜಾತ್ರೆಯಲ್ಲಿ ಶಲ್ಯ ಸುಡುವ ಕಾರ್ಯಕ್ರಮ ನಡೆಯುತ್ತದೆ. ಮಕರ ಸಂಕ್ರಾಂತಿಯ ದಿನ ಕೆಳ ಪೇಟೆಯ ಹನುಮಾನ ದೇವಾಲಯದ ಎದುರು ಶಲ್ಯ ಸುಡುವ ಕಾರ್ಯಕ್ರಮ ನಡೆ ಯುತ್ತದೆ. ಅದೇ ದಿನ ಅಗ್ನಿಕುಂಡದಲ್ಲೂ ಶಲ್ಯ ಸುಡಲಾಗುತ್ತದೆ.

ಶಲ್ಯದಲ್ಲಿ ಪವಿತ್ರವಾದ ವಿಭೂತಿಯ ಉಂಡೆ ಕಟ್ಟಲಾಗುತ್ತದೆ. ಮಹೋತ್ಸವದಲ್ಲಿ ಪಾಲ್ಗೊಳ್ಳುವ ಪೂಜ್ಯರು ಈ ಶಲ್ಯಕ್ಕೆ ಅಗ್ನಿ ಸ್ಪರ್ಷ ಮಾಡುತ್ತಾರೆ. ನಂತರ ಧಗಧಗ ಉರಿಯುವ ಶಲ್ಯವನ್ನು ಭಕ್ತರ ಮೇಲೆ ಬೀಸಾಡಲಾಗುತ್ತದೆ. ಯಾವ ಭಕ್ತನ ಮೇಲೆ ಈ ಶಲ್ಯ ಬೀಳುತ್ತದೆಯೋ ಆ ಭಕ್ತನ ಸಕಲ ಇಷ್ಟಾರ್ಥಗಳು ಪೂರೈಸುತ್ತವೆ ಎಂಬ ನಂಬಿಕೆ.

ಅಗ್ನಿಪಥ: ಈ ಜಾತ್ರಾ ಮಹೋತ್ಸವದ ಮತ್ತೊಂದು ವಿಶೇಷವೆಂದರೆ ಪವಿತ್ರವಾದ ಅಗ್ನಿಯಲ್ಲಿ ಭಕ್ತರು ನಡೆಯುವಂತಹದ್ದು. ಸಹಸ್ರಾರು ಭಕ್ತರು ಪವಿತ್ರ ಅಗ್ನಿ ಕುಂಡದ ಹತ್ತಿರ ಸೇರಿ, ಜೈಕಾರದ ಮಧ್ಯೆ ಅಗ್ನಿಕುಂಡ ಪ್ರವೇಶಿಸುವ ದೃಶ್ಯ ಮೈನವಿರೇಳಿಸುತ್ತದೆ.

(ಎಂ.ಎಸ್.)

ಹುಲಿಗಿ ಕ್ಷೇತ್ರ: 'ಹುಲಿಗಿ' ಇದು ಕನ್ನಡ ನಾಡಿನ ಜಾಗೃತ ಶಕ್ತಿ ಕ್ಷೇತ್ರಗಳಲ್ಲಿ ಒಂದು. ಐತಿಹಾಸಿಕ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಗೆ ಸಮೀಪ ತುಂಗಭದ್ರಾ ನದಿ ದಡದಲ್ಲಿರುವ 'ಹುಲಿಗಿ' ಕ್ಷೇತ್ರ, ಈಗ ಹೊಸ ಜಿಲ್ಲೆ ಕೊಪ್ಪಳಕ್ಕೆ ಸೇರಿದೆ.

'ಹುಲಿಗೆಮ್ಮ' ಎಂದೇ ಜನಜನಿತವಾಗಿ ಪ್ರಸಿದ್ಧಿ ಪಡೆದಿರುವ ಕ್ಷೇತ್ರದ ಆರಾಧ್ಯ ದೇವತೆ ಶ್ರೀ ರೇಣುಕಾಂಬಾ ದೇವಿಯ ಆಗಾಧ ಮಹಿಮೆ, ಶಕ್ತಿಯಿಂದಾಗಿ 'ಹುಲಿಗಿ' ನಾಡಿನಾದ್ಯಂತ ಖ್ಯಾತಿ ಪಡೆದು, ಅಪಾರ ಭಕ್ತ ಸಮೂಹವನ್ನು ಹೊಂದಿದೆ. 'ಹುಲಿಗಿ' ಕ್ಷೇತ್ರಕ್ಕೆ ಸುಮಾರು 800 ವರ್ಷಗಳ ಇತಿಹಾಸವಿದೆ. ಗ್ರಾಮದ ಪೂರ್ವಬದಿ ತುಂಗಭದ್ರಾ ನದಿ ದಡದಲ್ಲಿ ಶ್ರೀ ಸೋಮೇಶ್ವರ ಶಿವಾಲಯ, ಈ ಶಿವಾಲಯದಿಂದ ಅನತಿ ದೂರದಲ್ಲಿಯೇ ನೆಲೆಸಿರುವ ಶ್ರೀ ಹುಲಿಗೆಮ್ಮ ದೇವಿ, ಸುಪ್ರಸಿದ್ಧ ಸವದತ್ತಿ ಎಲ್ಲಮ್ಮ ದೇವಿಯ ಅವತಾರ ಎಂಬ ಪ್ರತೀತಿ ಎಲ್ಲಮ್ಮ ದೇವಿಯ ಅವತಾರ ಎಂಬ ಪ್ರತೀತಿ ಪುರಾಣ ಕಥೆಗಳಲ್ಲಿದೆ. ಭಕ್ತರ ಭಕ್ತಿಗೆ ಒಲಿದು ಎಲ್ಲಮ್ಮ ದೇವಿ ಶತಮಾನಗಳ ಹಿಂದೆಯೇ ಹುಲಿಗಿಗೆ ಬಂದು ನೆಲೆಸಿದ್ದಾಳೆ, ಭಕ್ತಿಯಿಂದ ಶರಣುಬಂದವರನ್ನು ಕಾಪಾಡುತ್ತಿದ್ದಾಳೆ. ಹುಲಿಗಿಯ ನಾಗಜೋಗಿ ಹಾಗೂ ಬಸವ-ಜೋಗಿ ಎಂಬ ಇಬ್ಬರು ಭಕ್ತರ ಭಕ್ತಿಗೆ ಎಲ್ಲಮ್ಮದೇವಿ ಇಲ್ಲಿಗೆ ಬಂದು ನೆಲೆಸಿ, ಶ್ರೀ ಹುಲಿಗೆಮ್ಮ ಎಂದು ಪ್ರಸಿದ್ಧಿ ಪಡೆದು ಮಹಾ ಮಹಿಮೆಗಳಿಂದ ಭಕ್ತ ಸಮೂಹವನ್ನು ಉದ್ಧರಿಸುತ್ತಿದ್ದಾಳೆಂಬ ಐತಿಹ್ಯ ಹೇಳುತ್ತದೆ. ಈ ಇಬ್ಬರೂ ಜೋಗಿಗಳು ಸವದತ್ತಿ ಎಲ್ಲಮ್ಮನ ಭಕ್ತರು. ತುಂಗಭದ್ರಾ ನದಿ ತಟಾಕದಲ್ಲಿಯ ಶ್ರೀ ಸೋಮೇಶ್ವರ ಲಿಂಗದ ಅರ್ಚಕ ಶ್ರೀ ಸೋಮನಾಥ ಭಟ್ಟರು ಉಪದೇಶಿಸುತ್ತಿದ್ದ ಶಕ್ತಿ ದೇವಿಯ ಉಪದೇಶಾಮೃತವು, ಈ ಜೋಗಿ ಭಕ್ತರಲ್ಲಿದ್ದ ಶಕ್ತಿ ಆರಾಧನೆಯನ್ನು ಜಾಗೃತಗೊಳಿಸಿತು. ನಾಗಜೋಗಿ ಹಾಗೂ ಬಸವಜೋಗಿ ಮನೆಯಲ್ಲಿ ಪೂರ್ವ ಕಾಲದಿಂದಲೂ ಸವದತ್ತಿ ಎಲ್ಲಮ್ಮನಿಗೆ ನಡೆದುಕೊಳ್ಳುತ್ತಿದ್ದರು. ಅವರ ಪೂರ್ವಜರು ಪ್ರತಿ ಹುಣ್ಣಿಮೆಗೆ ಸವದತ್ತಿಗೆ ಹೋಗಿ ದೇವಿಯ ದರ್ಶನ ಪಡೆಯುತ್ತಿದ್ದರು. ಅದೇ ಸಂಪ್ರದಾಯ ಇವರೂ ಸಹ ಮುಂದುವರೆಸಿದ್ದರು. ಅವರು ದೇವಿಯಲ್ಲಿ ಹೊಂದಿದ್ದ ಅನನ್ಯ ಶ್ರದ್ಧಾ ಭಕ್ತಿಯೇ ಶ್ರೀ ಎಲ್ಲಮ್ಮ ದೇವಿಯನ್ನು ಸವದತ್ತಿಯಿಂದ ಇಲ್ಲಿಗೆ ಕರೆತಂದು ಶ್ರೀ ಹುಲಿಗೆಮ್ಮ ದೇವಿಯಾಗಿ ಅವತರಿಸಲು ಕಾರಣವಾಯಿತು ಎಂದು ಹೇಳಲಾಗುತ್ತದೆ.

ದೇವಿ ಕಥೆ: ಯಾವುದೇ ವಾಹನಗಳ ಸೌಲಭ್ಯವಿಲ್ಲದ ಅಂದಿನ ಕಾಲದಲ್ಲಿ ಊರಿಂದ ಊರಿಗೆ ಪ್ರಯಾಣಿಸುವುದು ತುಂಬಾ ಕಷ್ಟದ ಕೆಲಸವಾಗಿತ್ತು. ಅಂಥ ಕಾಲದಲ್ಲಿಯೂ ಈ ಜೋಗಿಗಳು ಎಲ್ಲಮ್ಮನ ದರ್ಶನಕ್ಕಾಗಿ ಸವದತ್ತಿಗೆ ಹೋಗಿ ಬರುತ್ತಿದ್ದರು. ಒಂದು ಬಾರಿ ಮಳೆಗಾಲದ ಆಷಾಢ ಪೌರ್ಣಿಮೆ. ದರ್ಶನಕ್ಕಾಗಿ ಇವರಿಬ್ಬರು ಎಲ್ಲಮ್ಮನ ಗುಡ್ಡಕ್ಕೆ ಪ್ರಯಾಣ ಬೆಳಸಿದರು. ಚತುರ್ದಶಿ ಹೊತ್ತಿಗೆ ಸವದತ್ತಿ ಸಮೀಪ ಬಂದಾಗ ಭಾರಿ ಮಳೆ ಎಡೆಬಿಡದೆ ಸುರಿದು, ಮಲಪ್ರಭಾ ನದಿಯಲ್ಲಿ ಪ್ರವಾಹ ಬಂದಿದ್ದರಿಂದ ನದಿ ದಾಟುವದು ಕಷ್ಟವಾಯಿತು. ನದಿ ದಾಟಿದರೆ ದೇವಿಯ ದರ್ಶನವಾಗುತ್ತಿತ್ತು. ಆದರೆ ಪ್ರವಾಹ ಇಳಿಯುವವರೆಗೂ ನದಿ ದಾಟುವಂತಿರಲಿಲ್ಲ, ಮಳೆ ನಿಲ್ಲುವ ಲಕ್ಷಣವೂ ಇರದ್ದರಿಂದ ಇಬ್ಬರು ಭಕ್ತರು ಪ್ರವಾಹ ಇಳಿಮುಖವಾಗುವವರೆಗೂ ಕಾಯುತ್ತಾ ನದಿಯ ದಡದಲ್ಲಿ ಕುಳಿತರು. ಪೂರ್ಣಿಮೆಯ ಸಂಜೆ ಮಳೆ ನಿಂತಿತಾದರೂ ನದಿಯಲ್ಲಿ ಪ್ರವಾಹ ಇಳಿಮುಖವಾಗಿರಲಿಲ್ಲ. ಚತುರ್ದಶಿ ಹಾಗೂ ಹುಣ್ಣಿಮೆ ಹೀಗೆ ಅವರು ಎರಡು ದಿನ ನದಿಯ ದಡದಲ್ಲಿ ಊಟವಿಲ್ಲದೆ ಇರಬೇಕಾಯಿತು. ಒಂದೆಡೆ ಹಸಿವಿನ ಬಾಧೆ ಹಾಗೂ ಇನ್ನೊಂದೆಡೆ ಸುರಿಯುವ ಮಳೆಯಲ್ಲಿ ಬಟ್ಟೆ ತೊಯಿದು ಒಣಗದೆ ಇರುವುದರಿಂದ ಚಳಿಯ ಬಾಧೆ ತಾಳದೆ, ಅವರು ತತ್ತರಿಸಿದರು.

ಅಷ್ಟಾದರೂ ಸಹ ಅವರು ದೇವಿಯ ಧ್ಯಾನದಲ್ಲಿ ಮಗ್ನರಾಗಿ ಕುಳಿತಲ್ಲಿಯೇ ವರಗಿದಾಗ ಅವರ ಕನಸಲ್ಲಿ ಒಂದು ಆಗಾಧ ಮಿಂಚಿನ ಬೆಳಕು ಮಿಂಚಿ ಮರೆಯಾಯಿತಂತೆ. ಆ ಬೆಳಕಲ್ಲಿ ತೇಜೋಮಯವಾದ ದೇವಿಯ ಆಕೃತಿಯಲ್ಲಿ ಕಾಣಿಸಿ, 'ಮಕ್ಕಳಿರಾ ನಿಮ್ಮನ್ನು ಬಹಳ ಕಷ್ಟಕ್ಕೆ ಸಿಲುಕಿಸಿದೆ. ಇದರಿಂದ ನಿಮಗೆಷ್ಟು ತೊಂದರೆಯಾಯಿತೊ ಪಾಪ, ಇನ್ನುಮುಂದೆ ನೀವು ಇಷ್ಟೆಲ್ಲ ಕಷ್ಟ ಪಟ್ಟು ನನ್ನ ದರ್ಶನಕ್ಕಾಗಿ ದೂರದಿಂದ ಇಲ್ಲಿಗೆ ಬರುವದು ಬೇಡ. ನೀವಿದ್ದಲ್ಲಿಗೆ ನಾನು ಬರುತ್ತೇನೆ. ನಿಮ್ಮೂರಿನ ಶಿವಾಲಯ ಪಶ್ಚಿಮದಲ್ಲಿ ಹರಿಹರ ಬ್ರಹ್ಮಾದಿಗಳು ಪೂಜಿಸುವ ಶ್ರೀಚಕ್ರ ದೊರಕುವದು. ಅದರೊಂದಿಗೆ ಸಾಲಿಗ್ರಾಮ ಕೂಡ ದೊರೆಯುವದು. ಅದರಲ್ಲಿ ನನ್ನ ಮುಖ ಗೋಚರಿಸುವದು. ಅವುಗಳನ್ನು ಅಲ್ಲಿಯೇ ಪೂಜಿಸಿರಿ. ನಾನು ಅಲ್ಲಿ ನೆಲೆ ನಿಂತು ನಿಮ್ಮನ್ನು ಉದ್ದರಿಸುತ್ತೇನೆ' ಎಂದು ಹೇಳಿ, ದರ್ಶನ ನೀಡಿ ಅಂತರ್ಧಾನಳಾದಳು. ಅಲ್ಲಿಂದ ಊರಿಗೆ ಮರಳಿ ಬಂದು ನಡೆದ ದೃಷ್ಟಾಂತವೆನ್ನೆಲ್ಲ ಗುರು ಶ್ರೀ ಸೋಮನಾಥ ಭಟ್ಟರಿಗೆ ಜೋಗಿಗಳು ವಿವರಿಸಿದರು.

ಶ್ರೀ ದೇವಿಯ ಸೂಚನೆಯಂತೆ ಶಿವಾಲಯದ ಪಶ್ಚಿಮ ದಿಕ್ಕಿನಲ್ಲಿ ಹೋಗಿ ನೋಡಿದಾಗ ಒಂದು ಶ್ರೀಚಕ್ರ ಹಾಗೂ ಸಾಲಿಗ್ರಾಮ ದೊರೆತವು. ಅವುಗಳನ್ನು ಅದೇ ಸ್ಥಳದಲ್ಲಿ ಇರಿಸಿ ಚಿಕ್ಕ ಮಂದಿರವನ್ನು ನಿರ್ಮಿಸಿ ದೇವಿಯನ್ನು ಪ್ರತಿಷ್ಠಾಪಿಸಲಾಯಿತು. ಆ ದೇವಿಯೇ 'ಹುಲಿಗೆಮ್ಮ' ಆಗಿ ಪ್ರಸಿದ್ಧಿ ಪಡೆದಿರುವಳು.

ಶ್ರೀದೇವಿಯ ಮಹಿಮೆಯನ್ನು ಲೋಕಕ್ಕೆ ತೋರಿಸಿ ಕೊಡುವದಕ್ಕಾಗಿ ಸೋಮನಾಥ ಭಟ್ಟರು ಪಾಯಸದ ನಿವೇದನೆ, ಬಾಳೆ ದಂಡಿಗೆ, ಅಗ್ನಿಕುಂಡ ಪ್ರವೇಶ ಕಾರ್ಯಕ್ರಮಗಳನ್ನು ತೋರಿಸಿದರು. ವೈಶಾಖ ಶುದ್ಧ ಪೂರ್ಣಿಮೆಯಿಂದ ಈ ವ್ರತಚರಣೆಗಳು ಆರಂಭವಾದವು. ಏಕಾದಶಿ ತುಂಗಭದ್ರೆಯಲ್ಲಿ ಪೂಜೆಗೈದು ನಾಗಜೋಗಿ ಬಾಳೆ ದಂಡಿಗೆಯನ್ನು ಏರಿದ-ದಂಡಿಗೆಯು ಶ್ರೀದೇವಿಯ ದೇವಾಲಯವನ್ನು ಮೂರು ಬಾರಿ

ಪ್ರದಕ್ಷಿಣೆ ಹಾಕಿ, ಒಳ ಪ್ರವೇಶಿಸಿತು. ಬಾಳೆ ಹರಿಯದಷ್ಟು ನಾಗಜೋಗಿ ಅದರ ಮೇಲೆ ಕುಳಿತಿದ್ದರು. ಮರುದಿನ ದ್ವಾದಶಿ ಎಂದು ಹೊಸ ಹರವಿಯಲ್ಲಿ ಅನ್ನ ಬೇಯಿಸಿಲಾಯಿತು. ಜೋಗಿಗಳಿಬ್ಬರು ಅದರಲ್ಲಿಯ ಬಿಸಿ ಅನ್ನವನ್ನು ಕೈಯಿಂದ ತೆಗೆದು ದೇವಿಗೆ ನೈವೇದ್ಯ ಅರ್ಪಿಸಿದರು. ನಂತರ ವೃತಾಚರಣೆ ಕೊನೆ ಹಂತವಾಗಿತ್ತು. ನಿಗಿ ನಿಗಿ ಕೆಂಡ ತುಂಬಿದ ಅಗ್ನಿ ಕುಂಡದಲ್ಲಿ ಪ್ರವೇಶಿಸಿ, ಮಂದಿರ ತಲುಪಿತು. ಆ ನಂತರ ದೇವಿಗೆ ಅರ್ಪಿಸಿದ್ಧ ಅನ್ನವನ್ನು ಎಲ್ಲ ಭಕ್ತರೊಂದಿಗೆ ಸೇವಿಸಿದರು. ಈ ಪಂಕ್ತಿ 'ಜೋಗ ಪಂಕ್ತಿ' ಎಂದು ಪ್ರಸಿದ್ಧಿಯಾಗಿದ್ದು, ಈ ಪದ್ಧತಿ ಇಂದಿಗೂ ಮುಂದುವರೆದಿದೆ. ಹುಲಿಗೆಮ್ಮ ಅಂದಿನಿಂದ ಇಂದಿನವರೆಗೆ ಅನೇಕ ಲೀಲಾ ವಿಶೇಷಗಳನ್ನು ತೋರಿದ್ದಾಳೆ. ಅನೇಕ ಭಕ್ತರನ್ನು ಉದ್ಧರಿಸಿದ್ದಾಳೆ. ದೇವಿಯ ಉತ್ಸವದಲ್ಲಿ ಅರ್ಪಿತವಾಗುವ ಕುದಿಯುವ ಪಾಯಸದಲ್ಲಿ ಪೂಜಾರಿಗಳು ಕೈ ಹಾಕಿ ಪಾಯಸ ತೆಗೆಯುವದು, ಎಳೆಯ ಬಾಳೆದಿಂಡಿನ ಪಲ್ಲಕ್ಕಿ ಮೇಲೆ ಪೂಜಾರಿ ಕುಳಿತರೂ ಅದು ಮಕ್ಕಾಗದಿರುವ, ಒಲೆಯ ಮೇಲಿಟ್ಟ ರುಮಾಲು ಧಗಧಗಿಸುವ ಉರಿಯಿಂದ ಸುಡದೇ ಇರುವದು, ಅಗ್ನಿ ಕುಂಡ ಪ್ರವೇಶಿಸುತ್ತಿರುವದು ಇದೆಲ್ಲ ದೇವಿಯ ಮಹಿಮೆಯಾಗಿದ್ದು ದರ್ಶಕರಲ್ಲಿ ಅಚ್ಚರಿ ಮೂಡಿಸುವದರೊಂದಿಗೆ ದೇವಿಯಲ್ಲಿ ಭಕ್ತಿ ಹೊಂದುವಂತೆ ಮಾಡುತ್ತದೆ.

(ಯು.ಆ.)

ಹೂ

ಹೂಗಾರರು: ಊರ ಆಯಗಾರರಲ್ಲಿ ಒಬ್ಬರು. ವಿಶೇಷವಾಗಿ ಹೈದ್ರಾಬಾದ ಕರ್ನಾಟಕದ ಹಳ್ಳಿಗಳಲ್ಲಿ ವಾಸವಾಗಿದ್ದು, ಇವರು ಜನತೆಗೆ ದೇವರ ಪೂಜೆಗಾಗಿ ಹೂವು, ಪತ್ರಿಗಳನ್ನು ಅವರ ಮನೆಗೆ ಒಯ್ದು ಕೊಡುವರು. ಇವರು ಈ ಕಾಯಕದ ಜೊತೆಗೆ ಹನುಮಂತ ದೇವರನ್ನು ಪೂಜಿಸುವರು. ಹೂವಿನಹಾರ, ದಂಡೆ, ಬಾಸಿಂಗಗಳನ್ನು ಕಟ್ಟಿ ಊರಿನ ಜನತೆಯ ಕೋರಿಕೆಯ ಮೇರೆಗೆ ಮದುವೆ ಹಾಗೂ ಇನ್ನಿತರ ಮಂಗಳಕಾರ್ಯಗಳಲ್ಲಿ ಕೊಟ್ಟು ಇದಕ್ಕೆ ಪ್ರತಿಯಾಗಿ ಅವರಿಂದ ಹಣ (ಬಾಬು) ಪಡೆಯುವರು. ಇವರು ಊರಲ್ಲಿ ಯಾರಾದರೂ ಸತ್ತರೆ ಅವರ ಶವಕ್ಕೆ ಹೂವಿನ ಹಾರ, ತುರಾಯಿಗಳನ್ನು ಕಟ್ಟಿಕೊಡುವರು. ಶವಸಂಸ್ಕಾರದ ವೇಳೆಯಲ್ಲಿ ಸ್ಮಶಾನದಲ್ಲಿ ನೆರೆದ ಜನರಿಗೆ ಶವದ ಮೇಲೆ ಹಾಕಲು ಹೂ-ಪತ್ರಿಗಳನ್ನು ಕೊಡುವವರೂ ಇವರೇ. ಸುಗ್ಗಿ ಕಾಲದಲ್ಲಿ ರೈತರು ಇವರಿಗೆ ಆಯದ ರೂಪದಲ್ಲಿ ಕಾಳು ಕಡಿಯನ್ನು ಭಕ್ತಿ ಶ್ರದ್ಧೆಯಿಂದ ಕೊಡುವುದುಂಟು. ರಾಶಿ ನಡೆದ ಸ್ಥಳಗಳಿಗೆ ಅಂದರೆ ಕಣಗಳಿಗೆ ಇವರು ಹೋಗಿ ಹೂ-ಪತ್ರಿಯನ್ನು ಕೊಡವರು. ರೈತರು ಇವರಿಂದ ಹೂ-ಪತ್ರಿ ಪಡೆದು ರಾಶಿಗೆ ಏರಿಸುವರು. ಹೀಗೆ ಏರಿಸುವುದರಿಂದ ಅವರ ರಾಶಿ ಹುಲು ಸಾಗುವುದೆಂದು ನಂಬುವರು. ಹಳ್ಳಿಯ ಜನತೆಯ ಜನನದಿಂದ ಮರಣದವರೆಗಿನ ಎಲ್ಲ ಧಾರ್ಮಿಕ ಸಂಸ್ಕಾರಗಳಲ್ಲೂ ಹೂಗಾರರು ಸಹಾಯಕರಾಗಿ ಸಾಂಸ್ಕೃತಿಕ ಕಾರ್ಯಕರ್ತರಾಗಿ ಸೇವೆ ಮಾಡುವರು. ಸೇವಾ ಮನೋಭಾವನೆ ಹಾಗೂ ಪ್ರಾಮಾಣಿಕತೆಗೆ ಹೆಸರು ವಾಸಿಯಾದ ಇವರು ಹೈದ್ರಾಬಾದ್ ಕರ್ನಾಟಕದ ಗುಲಬರ್ಗಾ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಹೆಚ್ಚಾಗಿ ವಾಸವಾಗಿರುವರು. ಈ ಜನಾಂಗದವರು ಅಲ್ಪ ಸಂಖ್ಯಾತರಾಗಿದ್ದು, ಪ್ರತಿ ಊರುಗಳಲ್ಲಿ ಇವರ ನಾಲ್ಕೈದು ಮನೆಗಳಿರುವುದುಂಟು.

ಹೂಗಾರರು ಹನುಮಂತ ದೇವರ ಪೂಜೆ ಮಾಡುವುದ-ರಿಂದ ಇವರಿಗೆ ಪೂಜಾರರೆಂದೂ, ಮದ್ದಳೆ, ಸಂಬಾಳದಂಥ ಚರ್ಮವಾದ್ಯ ಬಾರಿಸುವುದರಿಂದ ಇವರಿಗೆ ಜೀರರೆಂದೂ, ಹೂವಿನ ಸರ ಮಾಡಿ ಮಾರುವುದರಿಂದ ಇವರಿಗೆ ಪೂಲಮಾಲಿ, ಪುಲಾರಿ, ಸರವಂದಿಗ ಹೂವಿಗ ಎಂದೂ ಕರೆಯುವರು. ಬೆಳಗಾವಿ ಹಾಗೂ ವಿಜಾಪುರ ಜಿಲ್ಲೆಗಳಲ್ಲಿ ಹೂಗಾರರಿಗೆ ವಿಶೇಷವಾಗಿ ಗುರವ ಎಂದು ಗೌರವ ಸೂಚಕ ಪದ ಬಳಸಿ ಗುರುತಿಸುವುದುಂಟು. ಈ ಸಮಾಜದವರು ಪ್ರತಿಭಾನ್ವಿತರು, ಕಲಾಕಾರರು. ಇವರು ವಿಶೇಷವಾಗಿ ಬಾಸಿಂಗ, ದಂಡೆಗಳನ್ನು ಸಿದ್ಧಪಡಿಸುವಲ್ಲಿ ಚಾಣಾಕ್ಷರು ಮತ್ತು ಸಂಬಾಳ, ತಬಲಾ, ಮದ್ದಳೆ ಬಾರಿಸುವಲ್ಲಿ ಇವರದು ಎತ್ತಿದಕೈ. ಇವರು ವೀರಶೈವ ಧರ್ಮದ ಒಂದು ಭಾಗವೇ ಆಗಿದ್ದರೂ ಈಗ ವೀರಶೈವರು ಇವರನ್ನು ತಮ್ಮ ಸರಿಸಮಾನರೆಂದು ಪರಿಗಣಿಸುವುದಿಲ್ಲ.

ಪ್ರಾಚೀನ ಕಾಲದಲ್ಲಿ ಈ ಸಮಾಜದವರಿಗೆ ಉನ್ನತವಾದ ಸ್ಥಾನಮಾನಗಳು ಲಭ್ಯವಾಗಿದ್ದುವು. ಹನ್ನೆರಡನೆಯ ಶತಮಾನದ ಶರಣರಲ್ಲಿ ಹೂಗಾರ ಮಾದಯ್ಯ ಹಾಗೂ ಜೀರ ಸಂಕಣ್ಣ ಎಂಬಿಬ್ಬರು ಶರಣರು ಆಗಿ ಹೋದುದನ್ನಿಲ್ಲಿ ಸ್ಮರಿಸಬಹುದು. ಆದರೆ ಈ ಸಮಾಜದವರು ಅಷ್ಟಾಗಿ ಮುಂದೆ ಬಂದಿಲ್ಲ. ಆರ್ಥಿಕವಾಗಿ, ಸಾಮಾಜಿಕವಾಗಿ ತೀರ ಹಿಂದುಳಿದಿದ್ದಾರೆ.

(ವಿ.ಜಿ.ಪಿ.)

ಹೆ

ಹೆಂಡಿ ಬಿ.ಬಿ.: ಜಾನಪದ ತಜ್ಞ, ಬಿಜಾಪುರ ಜಿಲ್ಲೆಯ ನಿಡಗುಂದಿ ಗ್ರಾಮದವರಾದ ಇವರು ಗುಲಬರ್ಗಾ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿ, ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ, ಜಾನಪದಕ್ಕೆ ವಿಶೇಷವಾದ ಸ್ಥಾನಮಾನವನ್ನು ಕಲ್ಪಿಸಿದವರು. ಬಾಗಲಕೋಟೆ ಬಸವೇಶ್ವರ ಕಾಲೇಜಿನಲ್ಲಿ ಉಪನ್ಯಾಸಕ ವೃತ್ತಿಯನ್ನು ಆರಂಭಿಸಿದ ಇವರು ಹನುಗುಂದ ಕಾಲೇಜಿನ ಪ್ರಾಂಶುಪಾಲರಾಗಿ, ಮುಂದೆ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರಾಗಿ ಬಂದವರು. ಚಿಕ್ಕಂದಿನಿಂದಲೂ ತಮ್ಮ ಸುತ್ತಮುತ್ತಲ ಹಳ್ಳಿಗಳಲ್ಲಿನ ಕಲಾವಿದರೊಡನೆ ಬಯಲಾಟದಲ್ಲಿ ಬಣ್ಣಹಾಕಿ, ಗೆಜ್ಜೆ ಕಟ್ಟಿ ಕುಣಿದವರು.



1974ರಲ್ಲಿ ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಸಂಗ್ರಹ, ಸಂಪಾದನೆಗೊಂದು ಯೋಜನೆ ಯನ್ನು ಸಿದ್ದಪಡಿಸಿದರು. ಆ ಮೂಲಕ ಉತ್ತರ ಕರ್ನಾಟಕದ ಜನಪದ ಕಥೆ, ಗೀತೆಗಳ ಸಂಗ್ರಹಕ್ಕೊಂದು ಅಡಿಪಾಯ ಹಾಕಿದವರು. ಸುಮಾರು ಮೂವತ್ತು ಸಂಶೋಧನಾ ಲೇಖನಗಳು ನಾಡಿನ ಪ್ರಮುಖ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. 'ಹದೇಸಿ ನಾಗೇಶಿ', 'ನೂರೆಂಟು ಜನಪದ ಕಥೆಗಳು', 'ಗಾದೆಗಳು' 'ಆಯ್ದ ಜನಪದ ಕಥನ ಗೀತೆಗಳು', ಮುಂತಾದ ಹಲವಾರು ಕೃತಿಗಳನ್ನು ಬೇರೆ ಬೇರೆ ವಿದ್ವಾಂಸರ ಸಹಕಾರದೊಂದಿಗೆ ಹೊರತಂದಿದ್ದಾರೆ. ಜಾನಪದಕ್ಕೆ ಸಂಬಂಧಿಸಿದ ಹಲವಾರು ಕಮ್ಮಟಗಳನ್ನು ಶಿಬಿರಗಳನ್ನು ಏರ್ಪಡಿಸಿ ಯುವ ಪೀಳಿಗೆಗೆ ಮಾರ್ಗದರ್ಶನ ನೀಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಪೀಠದವರು ಲಕ್ಷ್ಮೇಶ್ವರದಲ್ಲಿ ನಡೆಸಿದ ಜಾನಪದ ಸಮ್ಮೇಳನಕ್ಕೆ ಇವರನ್ನು ಸರ್ವಾಧ್ಯಕ್ಷರನ್ನಾಗಿ ಆರಿಸಿ ಗೌರವಿಸಿದೆ. ನಮ್ಮ ಹಿರಿಯ ತಲೆಮಾರಿನ ಪ್ರಮುಖ ಜಾನಪದ ವಿದ್ವಾಂಸರಲ್ಲೊಬ್ಬರಾದ ಹೆಂಡಿ ಅವರ ಸಾಧನೆ ಬಹುಮುಖವಾದುದು. *(ಜಿ.ಆರ್.ಟಿ.)*

ಹೆಜ್ಜೆ ಮೇಳ: ಜಾತ್ರೆ–ಉತ್ಸವಗಳಲ್ಲಿ, ಹೆಚ್ಚಾಗಿ ಮೊಹರಂ ಹಬ್ಬ, ಉರುಸುಗಳಲ್ಲಿ ಹಲಗೆ ವಾದನದ ಗತ್ತಿಗೆ ತಕ್ಕಂತೆ, ಹೆಜ್ಜೆ ಹಾಕುತ್ತ ಕುಣಿಯುವ ಮೇಳ. ಇದರ ರೂಪ ಮತ್ತು ವಿಧಾನದಲ್ಲಿ ಪ್ರಾದೇಶಿಕ ವೈವಿಧ್ಯತೆ ಕಾಣುತ್ತಿದೆ.

ಬಿಳಿ ಅಂಗಿ ಇಲ್ಲದೆ ಬನಿಯನ್ ಧರಿಸಿ, ಮೊಳಕಾಲವರೆಗೆ ಕಚ್ಚೆ ಹಾಕಿದ ಧೋತರ ಉಟ್ಟು ಸೊಂಟಕ್ಕೆ ಬಣ್ಣದ ವಸ್ತ್ರವನ್ನು ಬಿಗಿದುಕೊಂಡಿರುತ್ತಾರೆ. ಒಂದು ಕೈಯಲ್ಲಿ ರಂಗುರಂಗಿನ ಕಾಗದಗಳಿಂದ ತಯಾರಿಸಿದ ಹೂವಿನ ಕೋಲು ಹಿಡಿದಿದ್ದರೆ, ಇನ್ನೊಂದು ಕೈಯಲ್ಲಿ ಬಣ್ಣದ ವಸ್ತ್ರವನ್ನು ಹಿಡಿದು, ತಲೆಗೆ ಬಣ್ಣದ ವಸ್ತ್ರವನೊರಿಬ್ಬನ್ನೊ ಬಿಗಿದು, ಕಾಲಿಗೆ ಗೆಜ್ಜೆ ಕಟ್ಟಿಕೊಂಡಿರುವರು.

ಹಲಗೆ ಬಾರಿಸುವನನ್ನು ಬಿಟ್ಟು ಸಮಸಂಖ್ಯೆಯಲ್ಲಿರುವ ಇವರು ಸಾಲಾಗಿ ನಿಂತು ಹಲಗೆಯ ತಾಳಕ್ಕೆ ಅನುಗುಣವಾಗಿ ಹೆಜ್ಜೆ ಹಾಕುತ್ತ ಕೈಯಲ್ಲಿಯ ಹೂವಿನ ಕೋಲು ಮತ್ತು ವಸ್ತ್ರಗಳನ್ನು ಬೀಸುತ್ತಾರೆ. ಆಗಾಗ ಜೀಗಿಯುತ್ತ, ಕುಪ್ಪಳಿಸುತ್ತ ಹೆಜ್ಜೆಗೆ ವೈವಿಧ್ಯತೆಯನ್ನೊದಗಿಸುತ್ತಾರೆ. ಇದರಲ್ಲಿ 1,2,3,7,9 ಹೆಜ್ಜೆ ಕುಣಿತಗಳಿವೆ. ಬಳ್ಳಿ ಹೆಜ್ಜೆ, ಪಗಡಿ ಹೆಜ್ಜೆ, ಶಿರಕಿ ಹೆಜ್ಜೆ, ಶಮಿ ಹೆಜ್ಜೆ,



ಹೆಜ್ಜೆ ಮೇಳ

ಚಕ್ರ ಹೆಜ್ಜೆ, ತೇರ ಹೆಜ್ಜೆ, ಹಂತೀ ಹೆಜ್ಜೆ, ಬಂದೂಕ ಹೆಜ್ಜೆ, ಮುಳ್ಳ ಹೆಜ್ಜೆ, ಕಡಗೋಲ ಹೆಜ್ಜೆ, ಟೊಪ್ಪಿಗೆ ಹೆಜ್ಜೆ, ಪಟ್ಟಿ ಹೆಜ್ಜೆ, ಹಗ್ಗದ ಹೆಜ್ಜೆ, ಬಿಂದಿಗೆ ಹೆಜ್ಜೆ ಮುಂತಾದ ಪ್ರಕಾರದ ಹೆಜ್ಜೆ ಕುಣಿತಗಳನ್ನು ಪ್ರದರ್ಶಿಸುವದುಂಟು. ಈ ಕುಣಿತದೊಂದಿಗೆ ಆಯಾ ಸಂದರ್ಭದ ಹಾಡುಗಳನ್ನು ಹಾಡುವದುಂಟು.

(ಬಿ.ವಿ.ಎಸ್.)

ಹೆಣ್ಣು ನೋಡುವುದು: ವಿವಾಹ ಪೂರ್ವದಲ್ಲಿ ನಡೆಯುವ ವಧು ಪರೀಕ್ಷೆಯ ಸಂಪ್ರದಾಯ. ಹೆಣ್ಣಿರುವ ಮನೆತನ ಹಾಗೂ ಕನ್ಯೆಯ ಬಗ್ಗೆ ಪೂರ್ವಭಾವಿಯಾಗಿ ಸಾಕಷ್ಟು ಪರಿಚಯವಿರುವಲ್ಲಿಯೇ ತಮ್ಮ ಸಂಬಂಧ ಬೆಳೆಯಿಸಲು ಇಷ್ಟಪಡುತ್ತಾರೆ. ಈ ಮಾನಸಿಕ ಸಿದ್ಧತೆಗಳಿಂದ ಕನ್ಯೆ ಇರುವ ಮನೆಗೆ ಮಧ್ಯಸ್ಥರೊಬ್ಬರ ಮುಖಾಂತರ ಕನ್ಯೆ ನೋಡಲು ಬರುವ ದಿನ ಹೇಳಿ ಕಳಿಸುವರು.

ಒಂದು ಶುಭದಿನವನ್ನು ನಿರ್ಧರಿಸಿ ಶುಭಮುಹೂರ್ತದಲ್ಲಿ ಐದು ಜನ ಇಲ್ಲವೆ ಒಂಬತ್ತು ಜನ ಹಿರಿಯರು, ಮುತ್ತೈದೆಯರು ಹೆಣ್ಣಿನ ಊರಿಗೆ ಪ್ರಯಾಣ ಮಾಡುವರು. ಮನೆಯಿಂದ ಹೊರಗೆ ಬರುವುದರಿಂದ ಮೊದಲ್ಗೊಂಡು ಶುಭ ಶಕುನಗಳನ್ನು ಗಮನಿಸುತ್ತಾರೆ. ಅಶುಭ ಶಕುಗಳೇ ಎದುರಾದರೆ, ಆ ಕನ್ಯೆಯನ್ನು ನೋಡಲು ಹೋಗುವ ಕಾರ್ಯಕ್ರಮವನ್ನು ಕೈ ಬಿಡುವರು. ಅಥವಾ ಹೆಣ್ಣು ನೋಡಿ ಬಂದರೂ ಸಂಬಂಧ ಬೆಳೆಯಿಸುವುದಿಲ್ಲ.

ಶುಭ ಶಕುನಗಳು: ತುಂಬಿದಕೊಡ, ಮುತ್ತೈದೆ ಎದುರಾಗುವುದು, ಮಾರ್ಗಮಧ್ಯದಲ್ಲಿ ಮುಂಗಲಿ, ನರಿ, ತುಂಬಿದ ಬಂಡಿ ಎದುರು ಬರುವುದು ಇತ್ಯಾದಿಗಳು.

ಅಶುಭ ಶಕುನಗಳು: ಪ್ರಯಾಣ ಹೊರಟಾಗ, ಖಾಲಿಕೊಡ, ವಿಧವೆ ಎದುರು ಬರುವುದು, ಸಲಕಿ, ಗುದ್ದಲಿ, ಬುಟ್ಟಿಗಳನ್ನು ತೆಗೆದುಕೊಂಡು ಬರುವುದು, ಬೆಕ್ಕು ಎಡದಿಂದ ಬಲಕ್ಕೆ ಹೋಗುವುದು, ಕಟ್ಟಿಗೆ ಹೊರೆ ಹೊತ್ತು ಕೊಂಡವರು ಬರುವುದು, ಹಾವು ಕಾಣುವುದು, ಒಂಟಿಬ್ರಾಹ್ಮಣ, ಗಾಣಿಗ ಎದುರಾಗುವುದು, ಪ್ರಯಾಣದ ಆರಂಭದಲ್ಲಿ ಒಂಟಿ ಸೀನು ಸೀನುವುದು (ಎರಡು ಸೀನು ಬಂದರೆ ಶುಭ), ಮನೆಯಿಂದ ಹೊರಗೆ ಬರುತ್ತಲೆ ಕಾಗೆ ತಲೆಗೆ ಬಡಿಯುವುದು ಇತ್ಯಾದಿಗಳು. ಇಷ್ಟೆಲ್ಲ ಶುಭಾಶುಭ ಶಕುನಗಳನ್ನು ಗಮನಿಸುತ್ತಾ ಕನ್ಯೆ (ಹೆಣ್ಣು) ಇರುವ ಊರಿಗೆ ಪ್ರಯಾಣ ಬೆಳೆಸುವರು. ಈ ರೀತಿ ಶುಭ ಶಕುನ ನೋಡುವ ಪದ್ಧತಿ ಕರ್ನಾಟಕದ ಎಲ್ಲೆಡೆಗೂ ಇದೆ. ಅಲ್ಲಿ ಹೆಣ್ಣಿನ ತಂದೆ ತಮಗೆ ಬೇಕಾದವರ, ಊರ ಹಿರಿಯರ ಜೊತೆ ಕಾಯುತ್ತಿರುತ್ತಾನೆ. ಬಂದ ಬೀಗರಿಗೆ ಬಹಳ ಮರ್ಯಾದೆಯಿಂದ ಕೈಕಾಲಿಗೆ ನೀರು ಕೊಟ್ಟು ಉಪಚರಿಸುವರು. ಇದಾದ ಬಳಿಕ ಹಿರಿಯ ಮುತ್ತೈದೆಯೊಬ್ಬಳು ಎಲ್ಲರೂ ಕುಳಿತಿರುವ ಕೋಣೆ ಇಲ್ಲವೆ ಪಡಸಾಲೆಯಲ್ಲಿ ಈ ಮೊದಲೇ ಹಾಕಿರುವ ಮಣೆಯ ಮೇಲೆ ಕುಳಿತುಕೊಳ್ಳಲು ಹೆಣ್ಣನ್ನು ಕರೆತರುವಳು. ಬಂದ ಬೀಗರಿಗೆ ಅವಳ ಮುಖ ಚೆನ್ನಾಗಿ ಕಾಣುವಂತೆ ಅವರಿಗೆದುರಾಗಿ ಕೂಡಿಸುವರು. ಕೂಡಿಸುವಾಗಲೂ ವಾರ ಹಾಗೂ ಶುಭ ದಿಕ್ಕು ನೋಡಿ ಕೂಡಿಸುವರು. ಗಂಡಿನ ಪರವಾಗಿ ಬಂದವರಲ್ಲೊಬ್ಬ ಮಾತಾಡಿಸುವುದಕ್ಕಾಗಿ ಅವಳ ಹೆಸರು, ತಂದೆ ಹೆಸರು ಮುಂತಾದವನ್ನು ಕೇಳುವನು. ಇದರಿಂದ ಅವಳು ತೊದಲುತ್ತಾಳೋ, ಸ್ಪಷ್ಟವಾಗಿ ಉಚ್ಚರಿಸುತ್ತಾಳೋ ನೋಡುವ ಉದ್ದೇಶವಿರುತ್ತದೆ. ಆನಂತರ ಅವಳ ಎಡ ಅಂಗೈಯಲ್ಲಿರುವ ರೇಖೆಗಳನ್ನು ಹಸ್ತ ಸಾಮುದ್ರಿಕ ಬಲ್ಲವನೊಬ್ಬ (ಗಂಡಿನವರ ಜೊತೆ ಬಂದಿರವವನು) ಪರೀಕ್ಷಿಸುವನು. ಅನ್ನರೇಖೆ, ಸಂತಾನ ರೇಖೆ, ಆಯುಷ್ಯ ರೇಖೆ, ವಿದ್ಯಾ ರೇಖೆ, ಪತಿ ಪತ್ನಿಯರ ರೇಖೆ, ಶಂಖ ಚಕ್ರಗಳನ್ನು ಪರೀಕ್ಷಿಸುವನು ದಾರ ಹಿಡಿದು ಅಳತೆಯೂ ಕೂಡ ಕೆಲವರು ನೋಡುವರು. ಇದರ ಉದ್ದೇಶ ಅವಳ ಅಂಗಾಂಗಗಳು ಸರಿಯಾಗಿ ಬೆಳೆದಿವೆಯೋ ಇಲ್ಲವೊ ಅಥವಾ ಅವಳಲ್ಲಿ ಏನಾದರೂ ಊನ ವಿದೆಯೋ ಎಂಬುದಾಗಿದೆ. ಹೀಗೆ ನೋಡಿಯಾದ ಮೇಲೆ ಅವಳಿಗೆ ಹಿರಿಯ ಮುತ್ತೈದೆಯೊಬ್ಬಳು ಹಣೆಗೆ ಕುಂಕುಮವಿಡುವಳು. ಅದಕ್ಕೆ ಪ್ರತಿಯಾಗಿ ಅವಳು ಇವಳಿಗೆ ಕುಂಕುಮವಿಡುವಳು. ಕನ್ಯೆಯ ತಲೆಗೆ ಹೂ ಮುಡಿಸಿ ಗಂಡಿನವರು ತಂದ ಕಲ್ಲುಸಕ್ಕರೆ, ಕುಂಕುಮದ ಪೊಟ್ಟಣ, ಐದು ಹಣ್ಣುಗಳಿಂದ ಅವಳ ಉಡಿ ತುಂಬುವರು. ಅವಳನ್ನು ಎದ್ದು ಒಳಗೆ ಹೋಗಲು ಸೂಚಿಸುವರು. ದೇವರ ಜಗಲಿಯ ಮೇಲೆ ಉಡಿಯಲ್ಲಿರುವದನ್ನೆಲ್ಲ ಇಟ್ಟು ದೇವರಿಗೆ ನಮಸ್ಕರಿಸಿ ಮತ್ತೆ ಹೊರಗೆ ಬಂದು ಹಿರಿಯರಿಗೆ ನಮಸ್ಕರಿಸುವಳು. ಬಂದವರಿಗೆಲ್ಲ ಉಪಾಹಾರ ಕೊಡುವರು. ಅಲ್ಲಿ ನೆರೆದವರೆಲ್ಲ ಲೋಕಾಭಿರಾಮವಾಗಿ ಮಾತಾಡುವರು. ಇದೇಹೊತ್ತಿನಲ್ಲಿ ಹೆಣ್ಣಿನ ನಡಿಗೆ ಹೇಗಿದೆಯೋ ನೋಡಬೇಕೆಂದು ಕನ್ಯೆಯನ್ನು ನೀರು ಕೊಡಲೋ ಅಥವಾ ಫಲಾಹಾರ ತಂದು ಕೊಡಲೋ ಹೇಳುವರು. ಅವಳು ತುದಿಗಾಲಿನಲ್ಲಿ ನಡೆಯುವಳೊ, ಕಾಲೆಳೆಯುತ್ತಾಳೊ ಎಂದು ಸೂಕ್ಷ್ಮವಾಗಿ ಪರೀಕ್ಷಿಸುವರು. ಹೆಣ್ಣಿನವರಿಗೆ ಅತಿ ಅನಾಗರಿಕ ಎನ್ನಿಸದಂತೆ ಇವನ್ನೆಲ್ಲ ಸೂಕ್ಷ್ಮವಾಗಿ ಪರೀಕ್ಷಿಸುವರು ಕೆಲವು ಸಲ ಅನಿರೀಕ್ಷಿತವಾಗಿ ಪೂರ್ವಸೂಚನೆ ಇಲ್ಲದೆಯೂ ಹೆಣ್ಣನ್ನು ನೋಡಿ ಮೆಚ್ಚಿಗೆ ಸೂಚಿಸುವುದಾಗಲಿ, ಬಿಡುವುದಾಗಲಿ ಮಾಡುವುದುಂಟು. ಫಲಾಹಾರವಾದ ಮೇಲೆ ಗಂಡಿನವರು ತಮಗೆ ಒಪ್ಪಿಗೆಯಾಗಿದ್ದರೆ, ನೀವೂ ಬಂದು ನಮ್ಮ ಮನೆ ನೋಡಿ ಎಂದು ಹೇಳುವರು.

ಹೆಣ್ಣಿನವರೂ ಒಂದು ಶುಭದಿನದಂದು ಪ್ರಯಾಣ ಮಾಡಿ ಹೊಲಗದ್ದೆ, ತೋಟ ಆಸ್ತಿ ಎಲ್ಲ ನೋಡಿ ಬರುವರು. ಇವರು ಬರುವಾಗಲೂ ಶುಭಾಶುಭ ಶಕುನಗಳನ್ನು ಗಮನಿಸುತ್ತಾರೆ. ಹೆಣ್ಣಿನವರಿಗೆ ಮನೆ, ಮನೆತನ ಒಪ್ಪಿಗೆಯಾದರೆ ಮಾತುಕತೆ ಅಂದೇ ಮುಗಿಸದೆ ಕೆಲವು ದಿನ ಮುಂದೂಡಲೂಬಹುದು. ವರನ ಬಗ್ಗೆ ಇನ್ನಿಷ್ಟು ಕೂಲಂಕಷವಾಗಿ ಕೇಳಿಕೊಳ್ಳುವರು. ಗಂಡಿನವರ ಹೊಲ, ಗದ್ದೆ, ಬಂಧು ಬಾಂಧವರುಗಳ ಬಗ್ಗೆ ವಿಚಾರಿಸಿ ತಿಳಿದುಕೊಳ್ಳುವರು. ಆರ್ಥಿಕ ಸ್ಥಿತಿಗತಿ, ಮೇಲಾಗಿ ಅತ್ತೆಯ ಗುಣ, ವರನ ವಯಸ್ಸು ಎಲ್ಲದರ ಬಗ್ಗೆ ಯೋಚಿಸಿ ಸರಿ ಕಂಡರೆ ಮಗಳಿಗೆ ಕೊಡಬಹುದು ಎಂದು ಆಲೋಚಿಸುತ್ತಾರೆ. ವರ, ಮನೆತನ, ಸಾಲಾವಳಿ ಕೂಡಿ ಬಂದರೆ ಅಂದೆ ಮಾತುಕತೆಯಾಡುವರು. ಹೆಣ್ಣಿನ ತಂದೆ ಗಂಡಿನ ತಂದೆಯವರು ನೇರವಾಗಿ ಭಾಗವಹಿಸದೆ ಎರಡೂ ಪಂಗಡಗಳಲ್ಲಿ ಒಬ್ಬೊಬ್ಬರು,

ವರದಕ್ಷಿಣೆ ವರೋಪಚಾರ, ಸೀರೆ ಒಡವೆಗಳ ಬಗ್ಗೆ ಮಾತನಾಡಿ ಒಂದು ಒಪ್ಪಂದಕ್ಕೆ ಬಂದ ಮಾತುಕತೆಗಳು ಮುಗಿಸುವರು. ಮನೆಯಲ್ಲಿಯ ಸಕ್ಕರೆ ತರಿಸಿ ಎಲ್ಲರಿಗೂ ಕೊಡುವರು. ಹೆಣ್ಣಿನ ತಂದೆ ಎಲೆ ಅಡಿಕೆ ಕೈಯಲ್ಲಿ ಹಿಡಿದು ದೈವ ಸಾಕ್ಷಿ ಹಾಗೂ ದೇವರ ಸಾಕ್ಷಿಯಾಗಿ, ಇವರ ಮಗನಿಗೆ ನನ್ನ ಮಗಳನ್ನು ಕೊಡಲೊಪ್ಪಿದ್ದೇನೆ ಎಂದು ಹೇಳಿ ವರನ ತಂದೆಯ ಕೈಯಲ್ಲಿ ವೀಳ್ಯೆ ಕೊಡುವನು. ಇದೇರೀತಿ ವರನ ತಂದೆಯೂ ಹೆಣ್ಣಿನ ತಂದೆಯ ಕೈಯಲ್ಲಿ ವೀಳ್ಯೆ ಕೊಡುವನು. ದೈವದವರ ಸಾಕ್ಷಿಯಾಗಿ ಈ ರೀತಿ ವೀಳ್ಯೆ ವಿನಿಮಯ ಮಾಡಿಕೊಂಡ ಮೇಲೆ ಮದುವೆ ಸಂಪೂರ್ಣ ನಿಶ್ಚಯವಾದಂತೆ. ಈ ರೀತಿಯ ವೀಳ್ಯೆಯ ವಿನಿಮಯ ಕರ್ನಾಟಕದಲ್ಲಿ ಎಲ್ಲ ಕಡೆಗಿದ್ದಂತೆ ಹೈದ್ರಾಬಾದ ಕರ್ನಾಟಕ ಭಾಗದಲ್ಲೂ ಇದೆ.

ಅಂದು ಬಂದ ಬೀಗರಿಗೆ ಶಾವಿಗೆ ಪಾಯಸ, ಹಾಲು ಅನ್ನ, ಹಪ್ಪಳ ಸಂಡಿಗೆಗಳನ್ನು ಉಣ ಬಡಿಸುವರು. ಸಿಹಿ ಊಟ ಮಾತ್ರ ಕೊಡುತ್ತಾರೆ. ಕಡುಬು, ಶಾವಿಗೆ ಅನ್ನ, ಸಕ್ಕರೆ ಬಡಿಸುವರು. “ಖಾರ” ಕೊಡುವುದಿಲ್ಲ. ಈ ಊಟಕ್ಕೆ “ಗಟ್ಟಿಗಡುಬು” ಎನ್ನುವರು. ಮಾತುಕತೆಯಾದ ಮೇಲೆಯೇ ಕೆಲವರು ಊಟ ಮಾಡುವುದುಂಟು. ಮಾತುಕತೆಗಳು ಒಂದು ಹಂತಕ್ಕೆ ಬಾರದೆ, ಈ ಸಂಬಂಧವೇ ನಿರಾಕರಿಸುವ ಸಂದರ್ಭವಿದ್ದಲ್ಲಿ ಊಟ ಮಾಡದೆ, ಹಿಂತಿರುಗಿ ಹೋಗುತ್ತಾರೆ. ಗಟ್ಟಿಮಾಡಲು ಊರಿಂದ ಬಂದ ಗಂಡಸರಿಗೆ ಹಣೆಗೆ ಕುಂಕುಮವಿಟ್ಟು ಅಕ್ಷತೆ ಹಚ್ಚಿ, ಶಲ್ಯ (ಟಾವೆಲ್) ಮತ್ತು ಟೋಪಿ ಕೊಡುವರು. ಅದರಂತೆ ಹೆಂಗಸರಿಗೆ ಅರಿಶಿನ ಕುಂಕುಮವಿಟ್ಟು “ರವಿಕೆ ಕಣ” ಕೊಡುವರು. ಕೆಲವು ಕಡೆ ಸೀರೆ ಕೊಡುವದೂ ಉಂಟು. ಮುಂದಿನದು ನಿಶ್ಚಯ ಕಾರಣವಾಗಿರುತ್ತದೆ.

ನಿಶ್ಚಯ ಕಾರಣ: ಹೆಣ್ಣಿನವರು ಗಂಡಿನವರು ಪರಸ್ಪರ ಒಪ್ಪಿದ ಮೇಲೆ ಶುಭದಿನ ಶುಭ ಮುಹೂರ್ತ ನೋಡಿ ಗಂಡಿನವರು ನಿಶ್ಚಯ ಕಾರಣಕ್ಕಾಗಿ ಹೆಣ್ಣಿನ ಮನೆಗೆ ಬರುವ ಸಂಪ್ರದಾಯ. ಇದಕ್ಕೆ “ಸಕ್ಕರಿ ಇಡುವ ಕಾರಣ”ವೆಂತಲೂ ಕರೆಯುತ್ತಾರೆ. (ಐದು, ಒಂಬತ್ತು, ಹನ್ನೊಂದು, ಅದಕ್ಕೂ ಹೆಚ್ಚಿಗೆ ಗಂಡಸರು, ಹೆಂಗಸರು, ಮಕ್ಕಳು ಕೂಡಿ ಬರುವರು). ಹೆಣ್ಣಿನ ಮನೆಯಲ್ಲಿ ಅವರಿಗೆ ಸ್ವಾಗತ ಕೋರಿ ಕೂಡಿಸಲಾಗುವುದು. ನಿಶ್ಚಯ ಕಾರಣ ಸಾಯಂಕಾಲವೇ ಹೆಚ್ಚಾಗಿರುವುದರಿಂದ ಬೀಗರಿಗೆ ಊಟ ಮಾಡಿಸಿ ವಿಶ್ರಾಂತಿ ತೆಗೆದುಕೊಳ್ಳುವಂತೆ ಹೇಳುವರು. ಆನಂತರ ಊರ ಹಿರಿಯರಿಗೆ ಕೇರಿಯ ಸಮುಂಗಲಿಯರಿಗೆ, ಅಕ್ಕಪಕ್ಕದ ಮನೆಯವರನ್ನು ಕರೆಯುವರು. ಒಂದು ಕಂಬಳಿ ಇಲ್ಲವೆ, ಜಮಖಾನ ಹಾಸಿ ಅದರ ಮೇಲೆ ಹಸೆ ಬರೆದು ಎದುರಿಗೆ ಕಂಚ ಕಳಸ (ಒಂದು ತಟ್ಟೆಯಲ್ಲಿ ಎರಡು ಆರತಿ, ಒಂದು ಕುತ್ತಿಗೆ ತಂಬಿಗೆ ಕುಂಕುಮದ ಭರಣಿಗೆ ಕಂಚಕಳಸ ಎನ್ನುತ್ತಾರೆ) ಅಡ್ಡಣಿಗೆಯ ಮೇಲೆ ಇಡುವರು. ಹೆಣ್ಣು ಒಳಗಿನಿಂದ ಬರುವವರೆಗೆ ಹಸೆಯ ಮೇಲೆ ಒಬ್ಬರನ್ನು ಕೂಡಿಸವರು. ಮುಂದಿನ ಕಾರ್ಯಕ್ರಮ ಆರಂಭವಾಗುವವರೆಗೆ ಯಾರೂ ಸೀನಬಾರದು, ಅಳಬಾರದು, ಹೆಣ್ಣನ್ನು ಬೇಗ ಕರೆತಂದು ಹಸೆಯ ಮೇಲೆ ಕೂಡಿಸಿ, ಕುಂಕುಮವಿಟ್ಟು, ಬಂಗಾರದ ಉಂಗುರ ಇನ್ನಿತರ ಒಡವೆ ಅವನ್ನೆಲ್ಲ ಹಾಕಿ, ಸೀರೆಗೆ ಕುಂಕುಮ ಹಚ್ಚಿ ಉಡಿಸುವವಳೇ ಮೊದಲು ತನ್ನ ತಲೆಯ ಮೇಲೆ ಸೀರೆಯ ಸೆರಗುಹೊದ್ದುಕೊಂಡ, ಆನಂತರ ಅವಳಿಗೆ ಉಡಿಸುವಳು. ಇದಾದ ಮೇಲೆ ತಲೆಗೆ ದಂಡಿಕಟ್ಟಿ ಉಡಿಯಕ್ಕಿ ಹಾಕಿ, ಅಕ್ಕಿಯ ಸೇಸೆಯನ್ನಿಟ್ಟು ಹಾಡುವರು.

ನಿಶ್ಚಯ ಮಾಡಲು ಬಂದಿರುವ ಬೀಗರು ಹೆಣ್ಣಿಗೆ ಒಡವೆ–ವಸ್ತ್ರ ಏನೇನು ಇಡುವರು, ಅವಳಿಗೆ ಎಂಥೆಂಥ ಆಭರಣವಿಡಬೇಕು, ಯಾವ ಸೀರೆ ಕುಪ್ಪುಸ ತರಬೇಕು, ಎಷ್ಟು ಸಕ್ಕರೆ, ಹೇಗೆ ಹಂಚಬೇಕೆಂದು, ಹಾಡಿನಲ್ಲಿಯೇ ಹೇಳುತ್ತಾರೆ.

ಆನಂತರ ಆರುತಿ ಬೆಳಗಿ ಅವಳ ಗಂಡನ ಹೆಸರು ಕೇಳಿ ಎಲ್ಲರಿಗೂ ಸಕ್ಕರೆ ಹಂಚುವರು. ಅನುಕೂಲವಿರುವವರು ವರನಿಗೂ ಬಂಗಾರ ಇಟ್ಟು, ಆಯೇರಿ ಮಾಡುವ ಪರಿಪಾಠ ಇಚ್ಛೆಗೆ ಬಿಟ್ಟದ್ದು. ಆದರೆ ಹೆಣ್ಣಿಗೆ ಸ್ವಲ್ಪವಾದರೂ ಬಂಗಾರ ಇಟ್ಟು ಹೊಸಸೀರೆ ಉಡಿಸಲೇಬೇಕೆಂಬ ಸಂಪ್ರದಾಯವಿದೆ. ಆನಂತರ ಬಂದ ಬೀಗರಿಗೂ, ತಮಗೆ ಬೇಕಾದ ಊರ ಹಿರಿಯರು, ಬಂಧು ಬಳಗದವರಿಗೂ ಊಟ ಮಾಡಿಸುವರು. ನಿಶ್ಚಯ ಕಾರಣ (ಸಕ್ಕರಿ ಕಾರಣ)ವಾದ ಮೇಲೆ ತಮಗೆ ಅನುಕೂಲ ನೋಡಿ ಕೆಲವು ದಿನಗಳಲ್ಲಿ ಮದುವೆ ಇಟ್ಟುಕೊಳ್ಳುವರು. ಮದುವೆಯವರೆಗೆ ಅನೇಕ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

(ವೈ.ಎಸ್.)



ಹೆಬ್ಬಾಳೆ ಜಗನ್ನಾಥ: ಜನಪದ ತಜ್ಞ, ಲೇಖಕ. ಬೀದರ ಜಿಲ್ಲೆ ನಾವದಗೇರಿಯಲ್ಲಿ 1.9.1964 ರಂದು ಜನಿಸಿದರು. ತಂದೆ ಶಿವರಾಯ. ತಾಯಿ ರತ್ನಮ್ಮ. ಮೂಲತಃ ಇವರದು ರೈತಾಪಿ ಮನೆತನ. ಕೃಷಿ ಕಾಯಕ ದೊಂದಿಗಿನ ಬಾಲ್ಯದ ಒಡನಾಟ ತಂದೆ–ತಾಯಿಗಳ ಲ್ಲಿರುವ ಜಾನಪದ ಪ್ರಜ್ಞೆ ಊರಿನ ಸಾಂಸ್ಕೃತಿಕ ಪರಂಪರೆ, ಪರಿಸರ ಹೆಬ್ಬಾಳೆ ಯವರ ಮೇಲೆ ಸಹಜವಾಗಿ ಪ್ರಭಾವ ವಾಗಿರುವುದನ್ನೂ ಅವರ ಕಾರ್ಯ ವಿಧಾನದಲ್ಲಿ ಎದ್ದು ಕಾಣುತ್ತವೆ.

ಸಾಹಿತ್ಯ–ಸಂಶೋಧನೆಗಳ ಬಗೆಗೆ ಅಪಾರ–ಆಸಕ್ತಿಯುಳ್ಳ ಇವರು 1990ರಲ್ಲಿ ‘ಬೀದರ ಜಾನಪದ ಗೀತೆಗಳು ಒಂದು–ಸಾಂಸ್ಕೃತಿಕ ಅಧ್ಯಯನ’ ಎಂಬ ವಿಷಯ ಕುರಿತು ಕಿರು ಪ್ರಬಂಧವನ್ನು ಹೈದ್ರಾಬಾದ ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಎಂ.ಫಿಲ್. ಪದವಿ ಸಂಪಾದಿಸಿದರು. ಹಾಗೆಯೇ ಪಿ.ಕೆ. ಖಂಡೋಬಾ ಅವರ ಮಾರ್ಗದರ್ಶನದಲ್ಲಿ ‘ಹೈದ್ರಾಬಾದ ಕರ್ನಾಟಕ ಜಾತ್ರೆಗಳು ಒಂದು ಸಾಂಸ್ಕೃತಿಕ ಅಧ್ಯಯನ’ ವಿಷಯ

ಕುರಿತು ಸಲ್ಲಿಸಿದ ಸಂಶೋಧನಾ ಪ್ರಬಂಧಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿಯನ್ನು ಪಡೆದರು (1996).

ಹೆಬ್ಬಾಳೆಯವರ ಸಾಹಿತ್ಯ ಕೃಷಿ ಅಪೂರ್ವವಾಗಿದೆ. ಅವರ ಕವಿತೆ, ವಿಚಾರ ಸಾಹಿತ್ಯ, ವಿಮರ್ಶೆ, ಗ್ರಂಥ ಸಂಪಾದನೆ ಜನಪದ ಸಾಹಿತ್ಯಕ್ಕೆ ಸಂಬಂಧ ಪಟ್ಟಂತೆ ಹಲವಾರು ಕೃತಿಗಳನ್ನು ಈವರೆಗೆ ಪ್ರಕಟಿಸಿದ್ದಾರೆ.

ಕೆಂಪು ಮಣ್ಣಿನ ವಾಸನೆ-(1990), ಕವಿತಾ ಸಂಕಲನ, ಸತ್ತವರ ಹಾಡುಗಳು (1994), ಜಾನಪದ ಹಾಡುಗಳ ಸಂಗ್ರಹ. ಬೀದರ ಜಿಲ್ಲೆಯ ಬುಲಾಯಿ ಪದಗಳು (1996), ಬುಲಾಯಿ ಹಾಡುಗಳು (1996), ಕರ್ನಾಟಕ ಸಾಹಿತ್ಯ ಅಕಾಡೆಮಿ ಮುತ್ತಿನ ಹಾರ ಮಾಲಿಕೆಯ ಕೃತಿ ಜನಪದ ಕಥೆಗಳ ಸಂಗ್ರಹ (2005), ಜನಪದ ನಾಟಿ ವೈದ್ಯ (2006) ಯುಜಿಸಿ ಸಂಶೋಧನಾ ಕೃತಿಯಾಗಿದೆ. ಧರಿನಾಡಿನ ಕಾವ್ಯ (ಸಂಪಾದನೆ) ಹಳೆಗನ್ನಡ ಸಾಹಿತ್ಯ ಸಂಗ್ರಹ (2008), ಬೀದರ ಜಿಲ್ಲೆಯ ಚಿತ್ರ ಕಲಾವಿದರು (2006), ಬಾಹತ್ತಿರ (2006), ಧರಿನಾಡ ಶ್ರೀ (2001), ಗುರುಕುಲ ದರ್ಶನ (ಸಂಪಾದನೆ), ಓ ದೊರೆ ಬಾ ಧರೆಗೆ (2000), ಬಸವ ಪ್ರಭೆ (2006), ಸತ್ಯದ ನಿಲುವು (2007), ಶಿಖರ ಗನ್ನಡಿ (2008), ವಿನೋದ ಸಾಹಿತ್ಯ (1997), ಸಾಹಿತ್ಯ ಅಕಾಡೆಮಿ ಸಂಕಲದ ಮಾಲೆ ಅಕ್ಷರ ಪ್ರೀತಿ (2003) ಮತ್ತು ಬೆಳಕಿಂಡಿ (2007) ಇವು ಪ್ರಸಾರಾಂಗ ಕರ್ನಾಟಕ ಕಾಲೇಜಿನ ಸ್ನಾತಕೋತ್ತರ ಕೇಂದ್ರದ ಪ್ರಕಟಣೆಗಳಾಗಿವೆ. ಅಲ್ಲದೆ ಬೀದರ ಜಿಲ್ಲೆಯ 9ನೇ ಸಾಹಿತ್ಯ ಸಮ್ಮೇಳನದ ಸ್ಮರಣ ಗ್ರಂಥ ಹೊತ್ತಾಳಿಯು ಉತ್ತಮ ಸಂಕಲನವೆಂಬ ಪ್ರಶಂಸೆಗೊಳಗಾಗಿದ್ದು ಅದು ಡಾ. ಜಗನ್ನಾಥ ಹೆಬ್ಬಾಳೆಯವರ ಗ್ರಂಥ ಸಂಪಾದನೆಯ ವೈಜ್ಞಾನಿಕ ಕೃಷಿಗೆ ಸಾಕ್ಷಿಯಾಗಿದೆ. ಜಗನ್ನಾಥ ಹೆಬ್ಬಾಳೆಯವರ ಅನೇಕ ಕೃತಿಗಳು ವಿವಿಧ ವಿಶ್ವವಿದ್ಯಾಲಯಗಳಿಗೆ ಪಠ್ಯಗಳಾಗಿ, ಆಕರಗಳಾಗಿವೆ. *(ಎ.ಕೆ.ಆರ್.)*

ಹೆಳವರು: ಲೌಕಿಕ ವೃತ್ತಿಗಾಯಕರ ಗುಂಪಿಗೆ ಸೇರಿದವರು. ವಿವಿಧ ಪ್ರದೇಶದ ಬೇರೆ ಬೇರೆ ಸಮುದಾಯಗಳ ಕುಲ ಕೊಂಡಾಡಿ, ತನ್ಮೂಲಕ ಆಯಾ ಪ್ರದೇಶದ ಪ್ರಭಾವಶಾಲಿ ಮನೆತನಗಳ ವಂಶಾವಳಿಗಳನ್ನು ತಮ್ಮ ಮೌಖಿಕ ಪರಂಪರೆಯ ಮೂಲಕ, ಕಾಲಾನಂತರ ಚಪ್ಪೋಡು (ಕಡತ)ಗಳಲ್ಲಿ ದಾಖಲೆಗೊಳಸಿ ಕಾಪಾಡಿಕೊಂಡು ಬಂದ ಹಿರಿಮೆ ಇವರದ್ದಾಗಿದೆ. ಒಕ್ಕಲು ಮನೆಗಳ ಕುಲದೊಂಡಾಡುವುದನ್ನೇ ತಮ್ಮ ಮುಖ್ಯ ವೃತ್ತಿಯನ್ನಾಗಿ ಸ್ವೀಕರಿಸಿದ್ದಾರೆ. ಆಂಧ್ರಮೂಲದವರಾದ ಹೆಳವರು 'ಪಿಚ್ಚಕುಂಟಲ' ಜಾತಿಗೆ ಸೇರಿದವರು. ಬಸವಣ್ಣನವರ ಕಾಲಕ್ಕೆ ಆಂಧ್ರದಿಂದ ಕನ್ನಡನಾಡಿಗೆ ವಲಸೆ ಬಂದಿರುತ್ತಾರೆ. ಇವರನ್ನು ಹೆಳವ, ಹೆಳವರು, ಹೇಳುವವರು, ಹೆಳವಯ್ಯ, ಹೆಳವಮಲ್ಲರು, ಒಕ್ಕಾಲಭೃಂಗಿ, ಪಿಚ್ಚಗುಂಟಾ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಹೆಳವರಲ್ಲಿ ಎತ್ತಿನ ಹೆಳವರು, ಗಂಟೆಹೆಳವರು, ಮತ್ತು ಚಾಪೆಹೆಳವರು ಎಂಬ ಮೂರು ಪ್ರಮುಖ ಪಂಗಡಗಳಿವೆ. ಹಂದಿಹಳೆವರು, ದೂದಿಹೆಳವರು, ತಿತ್ತಿಹೆಳವರು, ಕೂಕಣಿ ಹೆಳವರು, ಕಂಬಿಹೆಳವರು, ಅಡವಿಹೆಳವರು, ಊರ ಹೆಳವರು, ಸಾದುಹೆಳವರು, ಜಾತಿಹೆಳವರು ಮತ್ತು ತಂಬೂರಿಹೆಳವರು ಎಂಬ ಉಪಪಂಗಡಗಳಿವೆ.

ಮದುವೆ ಕಾರ್ಯ ಮಾಡಬೇಕಾದರೆ ಬೆಡಗುಗಳ ಆಧಾರದ ಮೇಲೆ ಮಾಡುತ್ತಾರೆ. **ಉದಾ:** ಅಡಕಲವರು, ಅಂಧಕಲವರು, ಅವರೆಲವರು, ವಜಮುನಿಯರು, ಹೊನ್ನಲವರು ಮುಂತಾದ ಬೆಡಗುಗಳಿವೆ. ಸಗೋತ್ರವಿವಾಹ ನಿಷಿದ್ಧ. ಮದುವೆ ಕಾರ್ಯಗಳು ಪಟ್ಟಾಧಿಕಾರಿಯ ನೇತೃತ್ವದಲ್ಲಿ ನಡೆಯುತ್ತದೆ. ಹೈದ್ರಾಬಾದ ಕರ್ನಾಟಕದಲ್ಲಿ ಪಟ್ಟಾಧಿಕಾರಿ ವಧುವಿನ ಕೊರಳಲ್ಲಿ ತಾಳಿಕಟ್ಟಿ ಮಂತ್ರ ಹೇಳುತ್ತಾನೆ. ಮದುವೆ ಸಂದರ್ಭದಲ್ಲಿ ವಧುವರರಿಗೆ ಬಾಸಿಂಗ ಕಟ್ಟುವುದಿಲ್ಲ. ಪ್ರತಿದಿನ ಒಕ್ಕಲುಮನೆಗಳಿಗೆ ಹೋಗುವಾಗ ಎತ್ತಿನ ಹಣೆಗೆ ಮತ್ತು ಪಾದಕ್ಕೆ ಪೂಜೆ ಮಾಡಿ ಹೋಗುತ್ತೇವೆ. ಆದ್ದರಿಂದ ಮದುವೆಯಲ್ಲಿ ಬಾಸಿಂಗ ಕಟ್ಟುವುದಿಲ್ಲ ಎನ್ನುತ್ತಾರೆ. ಆದರೆ ದಕ್ಷಿಣ ಕರ್ನಾಟಕದಲ್ಲಿ ಬಾಸಿಂಗ ಕಟ್ಟುವ ಪದ್ಧತಿ ಇದೆ. ಹೆಳವರಲ್ಲಿ ತಂಟೆತಕರಾರುಗಳಾದರೆ ಅಪರಾಧಿಗಳನ್ನು ಗಮನಿಸಿ ನಾಲ್ಕು ಬಗೆಯ ದಂಡ ಕಟ್ಟುವ ವಿಧಾನವಿದೆ. ಉದಾ: ಚಿಲಮಿದಂಡ, ಹೆಡಬರತಿದಂಡ, ಕಡ್ಡಿದಂಡ ಮತ್ತು ಕುಲಕೂಡಿಸುವುದು. ಬೇರೆ ಜಾತಿಯವರೊಡನೆ ಹೆಣ್ಣುಮಗಳು ವ್ಯಭಿಚಾರಕ್ಕೆ ಇಳಿದರೆ ಅಂಥವುಗಳನ್ನು ಸಮಾಜದಿಂದ ಹೊರಹಾಕುತ್ತಾರೆ. ಅವಳು ಕುಲಗೆಟ್ಟವಳು. ಕುಲದಲ್ಲಿ ಕೂಡಿಸುವವರೆಗೆ ಪ್ರತ್ಯೇಕ ಗುಡಿಸಲು ಮಾಡಿ ಅದರಲ್ಲಿ ಇಡುತ್ತಾರೆ. ಕಟ್ಟೆಮನೆಯ ಯಜಮಾನನ ಸಮ್ಮುಖದಲ್ಲಿ ನ್ಯಾಯ ಮಾಡಿದ ಬಳಿಕ, ಕುಲಗೆಟ್ಟವಳನ್ನು ನಿಲ್ಲಿಸಿ ಅವಳ ಸುತ್ತಲೂ ಕುಳ್ಳು ಒಟ್ಟಿ ಬೆಂಕಿ ಹಚ್ಚುತ್ತಾರೆ. ಆಮೇಲೆ ಬೇವಿನಕಡ್ಡಿಯನ್ನು ಬೆಂಕಿಯಲ್ಲಿ ಕಾಸಿ ಅವಳ ನಾಲಿಗೆ ಸುಡುತ್ತಾರೆ. ಈ ವಿಧಿಕರ್ಮಗಳು ಮಾಡಿದ ಬಳಿಕ ಅಂಥವಳನ್ನು ಕುಲದಲ್ಲಿ ಕೂಡಿಸಿಕೊಳ್ಳುತ್ತಾರೆ. ಒಕ್ಕಲುಮನೆಗಳಿಗೆ ಹೋಗುವಾಗ ಅಂಗಿ,



ಹೆಳವರು

ಧೋತರ, ತಲೆಗೆ ರುಮಲು, ರೈತರು ಕೊಟ್ಟಿರುವ ಹಳೆಕೋಟನ್ನು ತೊಟ್ಟುಕೊಂಡು ಹೆಗಲ ಮೇಲೊಂದು ಕೆಂಪು ಶಾಲ ಹೊದ್ದಿರುತ್ತಾರೆ. ಅದರಲ್ಲಿ ಕಡತ ಹಾಕಿ ಎತ್ತಿನ ಮೇಲೆ ಕುಳಿತುಕೊಂಡು ರೈತರ ಮನೆಗಳಿಗೆ ಹೋಗಿ ಅವರ ಕುಲಕೊಂಡಾಡಿ ಅವರಿಂದ ಕಾಳು–ಕಡಿ, ಅರಿವೆ, ಅಂಚಡಿ, ದುಡ್ಡನ್ನು ಪಡೆದುಕೊಂಡು ಬರುತ್ತಾರೆ. ಕರ್ನಾಟಕದ ಬಹುತೇಕ ಭಾಗಗಳಲ್ಲಿ ನೆಲೆಗೊಂಡಿರುವ ಹೆಳವರು ತಾವು ವಾಸಿಸುವ ಪ್ರದೇಶಗಳಿಗೆ ಹಟ್ಟಿ, ಹುಂಡಿ, ಪಾಳ್ಯಗಳೆಂದು ಕರೆಯುತ್ತಾರೆ. ಒಂದು ಹಟ್ಟಿಯಲ್ಲಿ ಇಂತಿಷ್ಟೇ ಮನೆಗಳಿರಬೇಕೆಂಬ ನಿಯಮವಿಲ್ಲ. ಎಂಟು, ಹತ್ತು ಗುಡಿಸಲುಗಳಿರುವ ಹಟ್ಟಿಗಳು ಉಂಟು, ನೂರಿನ್ನೂರು ಗುಡಿಸಲುಗಳಿರುವ ಹಟ್ಟಿಗಳು ಉಂಟು.

ಕನಿಷ್ಟ ಪಕ್ಷ ಕಡತವನ್ನು ಬರೆಯುವ, ಓದುವ ಮಟ್ಟಿಗಾದರೂ ಹೆಳವರಲ್ಲಿ ಅಕ್ಷರಜ್ಞಾನ ಇರುತ್ತದೆ. ಹೆಚ್ಚಾಗಿ ತಂದೆ ಮಗನಿಗೆ ಅಕ್ಷರ ಜ್ಞಾನ ಮಾಡಿಕೊಡುತ್ತಾನೆ. ಇವರು ವರ್ಷದ ಉದ್ದಕ್ಕೂ ತಮ್ಮ ಕುಲವೃತ್ತಿಗಾಗಿ ಅಲೆಯುವುದರಿಂದ ಶಾಲೆಗೆ ಹೋಗುವುದು ಕಡಿಮೆ. ತಂದೆಯೇ ಗುರು. ಕೆಲವರಂತೂ ಮರಳಿನ ಮೇಲೆ ಅಕ್ಷರ ಜ್ಞಾನ ಮಾಡಿಕೊಡುತ್ತಾರೆ. ಹಳೆಯ ತಲೆಮಾರಿನ ಕಡತಗಳೂ ಹೆಚ್ಚಾಗಿ ಮೋಡಿ ಬರೆಹದಲ್ಲಿಯೇ ಇರುತ್ತವೆ. ಹೆಳವರು ಬಿಡಿ ಹಾಡುಗಳ ಜೊತೆಗೆ ಅನೇಕ ಜನಪದ ಕಾವ್ಯಗಳನ್ನು ಹಾಡುತ್ತಾರೆ. ಆಯಾ ಭಾಗದ ಮುಖ್ಯ ಕಥೋಪಜೀವಿಗಳ ಕೆಲವು ಜನಪ್ರಿಯ ಕಥೆಗಳನ್ನು ಆಯಾ ಪ್ರದೇಶದ ದೈವಗಳನ್ನೂ ಕುರಿತ ಕಥೆಗಳನ್ನು ಅವರು ಹಾಡುತ್ತಾರೆ. ಹೆಳವರ ಬಳಿಯಲ್ಲಿ ತಾಮ್ರಪಟಗಳಿರುತ್ತವೆ. ಅವುಗಳು ತಮಗೆ ಹಿಂದಿನ ಕಾಲದಲ್ಲಿ ರಾಜಮಹಾರಾಜರು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಹೆಳವರಂಥ ಅಲೆಮಾರಿ ಗುಂಪಿನ ಜೀವನ ಕ್ರಿಯೆಯಲ್ಲಿ ಭಾಷೆಯ ಮೌಖಿಕ ಪರಂಪರೆಯದೇ ಪ್ರಮುಖ ಪಾತ್ರ. ಆಂಧ್ರಪ್ರದೇಶದಿಂದ ಕನ್ನಡ ನಾಡಿಗೆ ವಲಸೆ ಬಂದಿರುವ ಹೆಳವರ ಮನೆ ಮಾತು ತೆಲುಗು. ಉತ್ತರ ಕರ್ನಾಟಕದ ಹೆಳವರು ಕನ್ನಡ ಭಾಷೆಯನ್ನೇ ತಮ್ಮ ಮನೆಮಾತನ್ನಾಗಿ ರೂಢಿಸಿಕೊಂಡಿದ್ದಾರೆ.

(ಎಚ್.ಪಿ.)

ಹೈ

ಹೈದರಸಾಹೇಬ ಮೋದೀನಸಾಹೇಬ: ಇವರು ಗೀಗೀ ಕಲಾವಿದ. ಗುರು ಮಹ್ಮದ್ ಸಾಹೇಬರಿಂದ ಚಿಕ್ಕಂದಿನಿಂದಲೇ ಈ ಕಲೆಯನ್ನು ಮೈಗೂಡಿಸಿಕೊಂಡರು. ಜನಿಸಿದ್ದು ಗುಲ್ಬರ್ಗಾ ಜಿಲ್ಲೆ. ಅಫಜಲ್‌ಪುರ ತಾಲ್ಲೂಕಿನ ಬೈರಾಮಡಗಿಯಲ್ಲಿ. ತಂದೆ ಮೋದೀನ ಸಾಹೇಬ ಒಬ್ಬ ಪಠಾಣರು. ತೀರಾ ಬಡತನದಲ್ಲಿ ಹುಟ್ಟಿ ಬೆಳೆದ ಈ ಕಲಾವಿದ ಜೀವನ ಸಾಗಿಸಲು ಕಲೆಯನ್ನು ವೃತ್ತಿಯಾಗಿಸಿಕೊಂಡರು. ತಮ್ಮ ಕಲೆಯನ್ನು ಗುಲ್ಬರ್ಗ ಜಿಲ್ಲೆಯ ಹತ್ತಾರು ಹಳ್ಳಿಗಳಲ್ಲಿ ಮಾತ್ರವಲ್ಲದೆ ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶದ ನೂರಾರು ಭಾಗಗಳಲ್ಲಿ ಪ್ರದರ್ಶಿಸಿ ಜನರನ್ನು ರಂಜಿಸಿದ್ದಾರೆ.

ಗೀಗೀ ಪದ ಮಾತ್ರವಲ್ಲದೆ ಮೊಹರಂ ಹಾಡುಗಳು, ಹರದೇಶಿ ನಾಗೇಶಿ ಮುಂತಾದ ಪ್ರಕಾರಗಳಲ್ಲೂ ಅನುಭವಶಾಲಿಗಳಾದ ಇವರು ಈಗೀಗ ದುಡಿದು ಹಣ್ಣಾಗಿದ್ದಾರೆ. ಆದರೂ ಹತ್ತಾರು ಶಿಷ್ಯರಿಗೆ ಗೀಗೀ ಪದವನ್ನು ಕಲಿಸುವ ಸಾಹಸದಲ್ಲಿದ್ದಾರೆ. ಬಡತನದ ಬೇಗೆಯನ್ನು ಅನುಭವಿಸುತ್ತಲೇ ಜೀವನ ಸಾಗಿಸುತ್ತ ಬಂದ ಕುಟುಂಬದಿಂದ ಬಂದ ಹೈದರ ಸಾಹೇಬರಿಗೆ ಬದುಕುವ ಮಾರ್ಗವೇ ತೋಚಲಿಲ್ಲ. ಮಾಡಲು ಕೆಲಸವಿಲ್ಲ. ಅಂಥ ಸಂದರ್ಭದಲ್ಲಿ ಅವರಿಗೆ ನೆರವಾದದ್ದು ಜನಪದಕಲೆ. ಉತ್ತರ ಕರ್ನಾಟಕದಲ್ಲಿ ಜನಪ್ರಿಯ ಕಲೆ ಎನಿಸಿದ ಗೀಗಿ ಪದಗಳನ್ನು ಹಾಡುತ್ತ ಜೀವನದ ಹಾದಿ ಹಿಡಿದರು.

(ಜಿ.ಆರ್.ಟಿ.)

ಹೊ

ಹೊಡಲ: ಚಾರಿತ್ರಿಕ ಮಹತ್ವದ ಸ್ಥಳ. ಆಳಂದದಿಂದ ಪೂರ್ವಕ್ಕೆ ಕಡಗಂಚಿ ಮಾರ್ಗವಾಗಿ 40ಕಿ.ಮೀ. ಗುಲಬರ್ಗಾದಿಂದ ಉತ್ತರಕ್ಕೆ ಚಿಂಚನಸೂರು ಮಾರ್ಗವಾಗಿ 37 ಕಿ.ಮೀ. ದೂರದಲ್ಲಿ, ಬೆಣ್ಣೆತೊರಾ ನದಿಯ ಬಲದಂಡೆಯ ಮೇಲಿದೆ. ಪ್ರಾಚೀನ ಶಾಸನಗಳಲ್ಲಿ 'ಪೊಡಲು', 'ಪೊಡಲ', ಹೊಡಲ ಎಂದೇ ಉಲ್ಲೇಖಿತಗೊಂಡಿರುವ ಇದು ಹಿಂದೆ ಗೊಂಕ–120ಕ್ಕೆ ಸೇರಿತ್ತು. ಇಲ್ಲಿಂದ ಈವರೆಗೆ ಏಳು ಶಾಸನಗಳು ವರದಿಯಾಗಿದ್ದು, ಇವುಗಳಲ್ಲಿ ಕಳಚೂರಿಗಳ ನಾಲ್ಕು, ಕಲ್ಯಾಣ ಚಾಳುಕ್ಯರ ಎರಡು ಹಾಗೂ ದೇವಗಿರಿ ಸೇವುಣರ ಕಾಲದ ಒಂದು ಶಾಸನಗಳಿವೆ. ಇವುಗಳಲ್ಲಿ 1180 ಕ್ಕೆ ಸೇರಿದ ಕಳಚೂರಿ ಸಂಕಮನ ಶಾಸನವು ದುಗ್ಗಣ ಹಾಗೂ ಅವನ ಮಗ ಬೊಮ್ಮರಸರು ಹೊಡಲದಲ್ಲಿ ಹಬ್ಬೇಶ್ವರ, ರಾಮನಾಥ ಹಾಗೂ ಕೇಶವ ದೇವರುಗಳಿಗೆಂದು ಭವ್ಯವಾದ ತ್ರಿಕೂಟ ದೇವಾಲಯವನ್ನು ನಿರ್ಮಿಸಿದ ಅಂಶವನ್ನು ಹೇಳುತ್ತ, ಆ ದೇವರುಗಳಿಗೆ ಮಹಾಮಂಡಳೇಶ್ವರರಾದ ವೀರಗೊಂಕರಸ ಹಾಗೂ ಮಲ್ಲಿದೇವರಸರು 20 ಮತ್ತರು ಭೂಮಿಯನ್ನು ದಾನಕೊಟ್ಟ ವಿಷಯವನ್ನು ತಿಳಿಸಿದರೆ ಅದೇ ಸಂದರ್ಭದಲ್ಲಿ ವರ್ತಕರು ದೇವರಿಗೆ ದಾನ ಬಿಟ್ಟ ವಿವಿಧ ಸುಂಕಗಳ ಬಗ್ಗೆ ಇನ್ನೊಂದು ಶಾಸನ ತಿಳಿಸುತ್ತದೆ. ಇದೇ ದೇವರಿಗೆ ಚಿಕ್ಕಜವಳಿಗೆ, ವಗ್ಗದರಿ ಗ್ರಾಮಗಳನ್ನು ದಾನ ಬಿಟ್ಟ ವಿಷಯವನ್ನು ಇನ್ನೆರಡು ಶಾಸನಗಳು ತಿಳಿಸಿದರೆ, ಕಲ್ಯಾಣದ ಚಾಳುಕ್ಯ ಅರಸ ನಾಲ್ಕನೆಯ ಸೋಮೇಶ್ವರನ ಕಾಲಕ್ಕೆ

ಸೇರಿದ 1185ರ ಶಾಸನವು ಬಿಟ್ಟ ಜವರಿಗೆ ಗ್ರಾಮವನ್ನು ಹೊಡಲದ ಪ್ರಸನ್ನ ರಾಮೇಶ್ವರ ದೇವರಿಗೆ ದಾನ ಬಿಟ್ಟ ವಿಷಯವನ್ನು ತಿಳಿಸುತ್ತ, ಚಾವನ ದಂಡನಾಯಕನು ಇಲ್ಲಿಯ ಶೃನಂದಿಕೇಶಾಲಯ (ನಂದಿ ಮಂಟಪ)ವನ್ನು ನಿರ್ಮಿಸಿದ ಮಹತ್ವದ ಅಂಶವನ್ನು ತಿಳಿಸುತ್ತದೆ. ಜೊತೆಗೆ ಸಾಂದರ್ಭಿಕವಾಗಿ ಇದು ನೆರೆಯ ಸಲಗರ, ಮುದುಡುಗೆ ಹಾಗೂ ಅಂಬುಲಗೆ ಗ್ರಾಮಗಳನ್ನು ಉಲ್ಲೇಖಿಸುತ್ತದೆ.

ಪ್ರಾಚೀನ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವ ಹೊಡಲು ಪ್ರಸನ್ನ ರಾಮೇಶ್ವರ ದೇವಾಲಯವೇ ಇಂದಿನ ರಾಮಲಿಂಗೇಶ್ವರ ದೇವಾಲಯವಾಗಿದೆ. ಇದೊಂದು ತ್ರಿಕೂಟವಾಗಿದ್ದು ಎತ್ತರವಾದ ಜಗತಿಯ ಮೇಲೆ ಪೂರ್ವಾಭಿಮುಖವಾಗಿದೆ. ಪ್ರತ್ಯೇಕವಾದ ಮೂರು ಗರ್ಭಗೃಹ ಹಾಗೂ ತೆರೆದ ಅಂತರಾಳಗಳನ್ನು ನಡುವಣ ನವರಂಗ ಒಗ್ಗೂಡಿಸಿದ್ದು, ಇದರ ಪೂರ್ವಕ್ಕೆ ಮುಖ ಮಂಟಪವಿದೆ. ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು ಉಳಿದೆರಡು ಗರ್ಭಗೃಹಗಳು ಬರಿದಾಗಿವೆ. ಇಲ್ಲಿಯ ಎಲ್ಲಾ ಬಾಗಿಲವಾಡಗಳು ಚತುರ್ಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮೀ ಕೆತ್ತನೆಗಳಿವೆ. ನವರಂಗದಲ್ಲಿ ದೇವಕೋಷ್ಠಗಳಿದ್ದು ಸಪ್ತಮಾತೃಕಾ, ಪಾರ್ವತಿ-ಪರಮೇಶ್ವರ, ಮಹಿಷ ಮರ್ದಿನಿ, ಕಾರ್ತಿಕೇಯ ಹಾಗೂ ಗಣಪತಿಯ ಸುಂದರ ಶಿಲ್ಪಗಳಿವೆ. ನವರಂಗದ ನಡುವಣ ಛತ್ತನ್ನು ಅಷ್ಟದಿಕ್ಪಾಲಕರ ಸುಂದರ ಶಿಲ್ಪಗಳಿಂದ ಅಲಂಕರಿಸಲಾಗಿದ್ದು, ಇಲ್ಲಿಯ ಕಂಬಗಳು ಅಲಂಕಾರ ಕೆತ್ತನೆಯಿಂದ ಕಂಗೊಳಿಸುತ್ತವೆ. ಮುಖಮಂಟಪವು ಕಕ್ಷಾಸನವನ್ನು ಹೊಂದಿದ್ದು, ಆಕರ್ಷಕವಾಗಿದೆ. ಈ ದೇವಾಲಯದ ಮುಖ ಮಂಟಪದ ಇಕ್ಕೆಲದಲ್ಲಿ ಗಾತ್ರದಲ್ಲಿ ಕಿರಿದಾದರೂ, ಕಲಾತ್ಮಕತೆಯ ದೃಷ್ಟಿಯಿಂದ ಮುಖ್ಯವಾಗಿರುವ ಎರಡು ಕಿರು ತ್ರಿಕೂಟ ದೇವಾಲಯಗಳು ಎದುರು ಬದುರಾಗಿ ನಿಂತಿದ್ದು, ಬಹುಶಃ ಇವನ್ನು ಬೊಮ್ಮರಸನು ತನ್ನ ತಂದೆ ತಾಯಂದಿರ ಸಲುವಾಗಿ ನಿರ್ಮಿಸಿದ್ದಿರಬಹುದೆಂದು ತೋರುತ್ತದೆ. ಇವು ಅಂತರಾಳದ ಸುತ್ತ ಮೂರು ಗರ್ಭಗೃಹಗಳನ್ನು ಹೊಂದಿದ್ದು ಆಕರ್ಷಕವಾದ ಬಾಗಿಲವಾಡಗಳನ್ನು ಹೊಂದಿರುವುದು ಗಮನಾರ್ಹವಾಗಿದೆ. ನವರಂಗದ ಛತ್ತುಗಳೂ ಭವ್ಯವಾಗಿದ್ದು, ಇವುಗಳ ದ್ವಾರಬಂಧಗಳು ದೊಡ್ಡ ಪ್ರಮಾಣದ ಶೈವ ದ್ವಾರಪಾಲಕರ, ಚೌರಿಧಾರಿ ಪರಿಚಾರಿಕೆಯರ ಹಾಗೂ ನಂದಿರೂಢ ಉಮಾ-ಮಹೇಶ್ವರ ಶಿಲ್ಪಗಳನ್ನು ಹೊಂದಿದ್ದು ನಯನ ಮನೋಹರವಾಗಿದ್ದು, ಮೇಲ್ಭಾಗದಲ್ಲಿ ಮಕರ ತೋರಣಗಳಿವೆ. ಈ ದೇವಾಲಯದ ಹೊರ ಭಿತ್ತಿಯಲ್ಲೂ ದೇವಕೋಷ್ಠಗಳಿದ್ದು, ಇಂದು ಹಾಳಾಗಿವೆ. ರಾಮೇಶ್ವರ ದೇವಾಲಯದ ಪೂರ್ವಕ್ಕೆ ವಿಶಾಲವಾದ ತೆರೆದ ನಂದಿ ಮಂಟಪ ಹಾಗೂ ಮುಖ ಮಂಟಪಗಳಿದ್ದು, ನಂದಿ ಮಂಟಪದಲ್ಲಿ ನಡುವೆ ನಂದಿ ಇದ್ದು, ಇದರ ಎಲ್ಲಾ ಛತ್ತುಗಳೂ ಕಮಲಮಯವಾಗಿವೆ. ಇದನ್ನು 1185ರಲ್ಲಿ ಚಾವನ ದಂಡನಾಯಕನು ನಿರ್ಮಿಸಿದ ವಿಷಯವನ್ನು ಅಲ್ಲೇ ಇರುವ ಶಾಸನ ತಿಳಿಸುತ್ತದೆ. ಉಳಿದಂತೆ ಊರಲ್ಲಿ ಮಹಾದೇವ, ಬಸವಣ್ಣ, ಬೀರದೇವರು, ಹನುಮಂತ, ಲಕ್ಷ್ಮೀ ಹಗೂ ದುರ್ಗಾದೇವಿಯ ನವೀನ ದೇವಾಲಯಗಳಿವೆ.


(ಆರ್.ಕೆ.)

ಹೊಡೆಗಳು: ಐತಿಹಾಸಿಕ ಮಹತ್ತ್ವವುಳ್ಳ ಕಾವಲು ಗೋಪುರಗಳು. ಹಿಂದೊಮ್ಮೆ ಇಡೀ ಸಾಮ್ರಾಜ್ಯವನ್ನೇ ಕಾಯುತ್ತಿದ್ದ ಶತಮಾನಗಳ ಇತಿಹಾಸ ಹೊಂದಿರುವ ಪುರಾತನ ಹೊಡೆಗಳು, ಸೂಕ್ತ ರಕ್ಷಣೆಯಿಲ್ಲದೇ ವಿನಾಶದತ್ತ ಸಾಗುತ್ತಿವೆ.

ಕಲಬುರ್ಗಿ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರು, ರಾಷ್ಟ್ರಕೂಟರು, ಬಹುಮನಿ ಸುಲ್ತಾನರು, ಆದಿಲ್ ಶಾಹಿಗಳು, ಹೈದರಾಬಾದ ಅಸಫ್‌ಶಾಹಿ ಮನೆತನದ ನಿಜಾಮರು ಆಳ್ವಿಕೆ ನಡೆಸಿರುವ ಈ ಪ್ರದೇಶದಲ್ಲಿ ಅನೇಕ ಕೋಟೆ ಕೊತ್ತಲಗಳು, ಅವುಗಳ ಸಂರಕ್ಷಣೆಗಾಗಿ ನಿರ್ಮಿಸಲ್ಪಟ್ಟ ಕಾವಲು ಗೋಪುರ ಹೊಡೆಗಳು ಇಂದು ಅವಸಾನದಂಚಿನಲ್ಲಿವೆ.

ಇಷ್ಟೊಂದು ರಾಜಮನೆತನಗಳು ಆಳಿರುವ ಈ ಪ್ರದೇಶ ವಿವಿಧ ಸಂಸ್ಕೃತಿಗಳ ಸಂಗಮವಾಗಿರುವಂತೆ ವಾಸ್ತು ಶಿಲ್ಪದಲ್ಲಿ ವೈವಿಧ್ಯಮಯ, ವಿಶಿಷ್ಟ ವಿನ್ಯಾಸದ ಐತಿಹ್ಯಗಳನ್ನು ಹೊಂದಿದೆ. ಗುಡಿ ಗೋಪುರಗಳು, ವಿಶಾಲವಾದ ಮಸೀದಿಗಳು- ಮಿನಾರುಗಳು ಮತ್ತು ದೇಗುಲ-ಹೊಡೆಗಳು ಇಲ್ಲಿನ ಶಿಲ್ಪ ವೈಭವವನ್ನು ಸಾರಿ ಹೇಳುತ್ತವೆ.

ಅವಜ್ಞೆಗೆ ಒಳಗಾಗಿರುವ ಈ ಪ್ರದೇಶದ ಒಂದು ಪ್ರಮುಖ ವಾಸ್ತು ಶಿಲ್ಪ ಪ್ರಕಾರ 'ಹೊಡೆಗಳು', ಮಹಾರಾಷ್ಟ್ರದ ಹಲವು



ಹೊಡೆ

ಊರುಗಳು ಮತ್ತು ಕರ್ನಾಟಕದ ವಿಜಾಪುರ, ಕಲಬುರ್ಗಿ ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕ ಪ್ರಮಾಣದಲ್ಲಿ ಕಂಡು ಬರುತ್ತವೆ.

ವಿಜಾಪುರದ ಸುಪ್ರಸಿದ್ಧ ಉಪಲಿಬುರ್ಜ್ ಆಕಾರದ ಈ ಕಟ್ಟಡಗಳು ಅದಕ್ಕಿಂತ ತುಂಬ ಹಿಂದಿನ ಕಾಲದಲ್ಲಿ ನಿರ್ಮಾಣವಾದವುಗಳಾಗಿವೆ. ಕಲಬುರ್ಗಿ ಜಿಲ್ಲೆಯ ಆಳಂದ, ಅಫಜಲಪುರ, ಜೇವರ್ಗಿ, ಮಳಖೇಡ, ದಂಡೋತಿ ಮುಂತಾದ ಪ್ರತಿಯೊಂದು ಗ್ರಾಮಗಳಲ್ಲಿ ಮೂರ್ನಾಲ್ಕು ಊರುಗಳಿಗೊಂದು ಅವಸಾನದಂಚಿನಲ್ಲಿರುವ ಹೊಡೆಗಳು ನೋಡಲು ಸಿಕ್ಕುತ್ತವೆ. ಚಿತ್ರದಲ್ಲಿರುವ ಈ ಹೊಡೆ ಕಲಬುರ್ಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಆತನೂರ ಗ್ರಾಮದಲ್ಲಿದೆ. ಆತನೂರ ಗ್ರಾಮ ಇತಿಹಾಸದಲ್ಲಿ ಹನ್ನೆರಡು ಮತ್ತು ಹದಿಮೂರನೆಯ ಶತಮಾನಕ್ಕೆ ಸಂಬಂಧಿಸಿದ ಆಲಂದೆ ಪ್ರಾಂತ್ಯಕ್ಕೆ ಒಳಪಟ್ಟಿತ್ತೆಂದು ಹೇಳಲಾಗುತ್ತಿದೆ. ಅಂದು ಈ ಪ್ರಾಂತ್ಯವನ್ನು ದೇವಗಿರಿಯ ಯಾದವರು ಆಳುತ್ತಿದ್ದರು ಎಂದು ಕೃಷ್ಣಾ ಕೊಲ್ಹಾರ ಕುಲಕರ್ಣಿ ಅವರ 'ವಿಜಾಪುರ ಆದಿಲಶಾಹಿ' ಸಂಶೋಧನಾ ಗ್ರಂಥದಿಂದ ತಿಳಿದು ಬರುತ್ತದೆ. 'ಆಲಂದೆ 1000' ಎಂಬ ಶಾಸನದಲ್ಲಿ ಆತನೂರ ಗ್ರಾಮ ಎಂಭತ್ನಾಲ್ಕು ಹಳ್ಳಿಗಳ ಆಡಳಿತದ ಕೇಂದ್ರ ಸ್ಥಾನವಾಗಿತ್ತು ಜೈನಧರ್ಮದ ಯಾತ್ರಾ ಸ್ಥಳ ಮತ್ತು ನಾಲ್ದೆಸೆಯಲ್ಲೂ ಪ್ರಸಿದ್ಧವಾದ ಅಗ್ರಹಾರವನ್ನು ಹೊಂದಿತ್ತು ಎಂದು ಉಲ್ಲೇಖಿಸಲಾಗಿದೆ.

ಹನ್ನೆರಡು ಮತ್ತು ಹದಿಮೂರನೆಯ ಶತಮಾನಕ್ಕೆ ಸಂಬಂಧಿಸಿದ ನಾಲ್ಕು ಶಾಸನಗಳು ಈ ಗ್ರಾಮದಲ್ಲಿ ದೊರಕಿವೆ. ಈ ಗ್ರಾಮದಲ್ಲಿ ಪ್ರಾಚೀನ ಕಾಲದ್ದೆನ್ನಲಾದ ಐದಾರು ದೇವಾಲಯಗಳುವೆ. ಅವುಗಳಲ್ಲಿ ಶಂಕರಲಿಂಗ, ಬಸ್ತಿ ಬೊಮ್ಮಣ್ಣ, ದೊಡ್ಡ ಬಸವಣ್ಣ, ಹನುಮಾನ ದೇವರ ಗುಡಿಗಳು ಪ್ರಮುಖವಾದವುಗಳಾಗಿವೆ.

ಶಿವಲಿಂಗ ದೇವಾಲಯದಲ್ಲಿ ಗರ್ಭಗೃಹ, ನವರಂಗಗಳಿವೆ. ಗರ್ಭಗೃಹದ ಮಧ್ಯಭಾಗದಲ್ಲಿ ಶಿವಲಿಂಗವಿದೆ. ಇದು ಚತುರ ಶಾಖಾಲಂಕೃತವಾದ ಬಾಗಿಲವಾಡವನ್ನು ಹೊಂದಿದೆ. ಈ ದೇವಾಲಯದ ಉಳಿದ ಭಾಗಗಳು ಶಿಥಿಲಗೊಂಡಿದ್ದು ಪಾಳು ಬಿದ್ದಿವೆ, ದೇವಾಲಯ ನಿರ್ಮಾಣದ ಅನಂತರ ದೀರ್ಘಾವಧಿಯಲ್ಲಿ ಇದರ ಅಡಿಪಾಯದ ಮೇಲೆಯೇ ದೊಡ್ಡ ಹೊಡೆಯನ್ನು ನಿರ್ಮಿಸಲಾಗಿದೆ.

ಸುಮಾರು ಒಂದು ನೂರು ಅಡಿ ವಿಶಾಲ ಅಡಿಪಾಯದ ಮೇಲೆ ವೃತ್ತಾಕಾರದ ಸಿಲಿಂಡರಾಕೃತಿಯಲ್ಲಿರುವ ಈ ಹೊಡೆ ಸುಮಾರು 65 ರಿಂದ 70 ಅಡಿಗಳಷ್ಟು ಎತ್ತರವಿದೆ. ಮೇಲೆ ಹೋದಂತೆ ಬಳೆ ಆಕೃತಿಯಲ್ಲಿ ಗೋಪುರವಾಗಿ ಆಕಾರ ಪಡೆದಿರುವ ಈ ಕಟ್ಟಡದ ಉಲ್ಲೇಖ ಮೇಲ್ಕಾಣಿಸಿದ 'ಅಲಂದೆ 1000' ಎಂಬ ಶಾಸನದಲ್ಲಿದೆ. ಈ ಹೊಡೆಯ ಗೋಡೆಗಳಲ್ಲಿ ವೈವಿಧ್ಯಮಯ ಕೆತ್ತನೆಯ ಹಲವಾರು ಚಿತ್ರಗಳಿವೆ. ಅರಸು, ರಾಣಿ, ವಿವಿಧ ಹೂಗಳು, ಗಜಾರೂಢ ರಾಜ-ರಾಣಿಯರು ಮುಂತಾದ ಚಿತ್ರಗಳನ್ನು ಮನಮೋಹಕವಾಗಿ ಕೆತ್ತಲ್ಪಟ್ಟಿವೆ.

ಇಂತಹ ವಿಶಾಲ ಮತ್ತು ಎತ್ತರವಿರುವ ಹೊಡೆಗಳನ್ನು ಅಫಜಲಪುರ ತಾಲ್ಲೂಕಿನ ಮಾಶಾಳ, ಕರಜಗಿ, ಮಣೂರ, ಬಳೂರಗಿ, ಆತನೂರ, ಗೊಬ್ಬೂರ-ಬಿ, ಮತ್ತಿತರ ಗ್ರಾಮಗಳಲ್ಲಿ ಕಂಡು ಬರುತ್ತವೆ. ಅಲ್ಲದೇ ಜಿಲ್ಲೆಯ ಇನ್ನೂ ಹಲವು ಗ್ರಾಮಗಳಲ್ಲಿ ಹೊಡೆಗಳು ಇತಿಹಾಸದ ಕುರುಹುಗಳಾಗಿದ್ದರೂ ಸೂಕ್ತ ರಕ್ಷಣೆಯ ಕೊರತೆಯಿಂದ ವಿನಾಶದಂಚಿನಲ್ಲಿವೆ. ಇಂಥವುಗಳಲ್ಲಿ ಮಾತೋಳಿ, ಬಳೂರಗಿ ಗ್ರಾಮಗಳಲ್ಲಿ ಇದ್ದ ಹೊಡೆಗಳನ್ನು, ಇತಿಹಾಸದ ಪರಿಜ್ಞಾನವಿಲ್ಲದ ಜನರು ಕೆಡವಿದ್ದಾರೆ. ಹೊಡೆಯ ಕಲ್ಲು ಮತ್ತು ಹಾಳು ಮಣ್ಣನ್ನು ಸಾರ್ವಜನಿಕರು ಹೊತ್ತೊಯ್ದಿದ್ದಾರೆ.

ಹೊಡೆಗಳನ್ನು ಅಂದಿನ ಕಾಲದಲ್ಲಿ ಕಾವಲು ಗೋಪುರಗಳೆಂದು ಇಲ್ಲವೆ ರಾತ್ರಿ ಗ್ರಾಮದ ಅಸ್ತಿತ್ವ ತಿಳಿಯುವ ಪಂಜಿನ ಗೋಪುರಗಳಾಗಿ ಬಳಸುತ್ತಿದ್ದರೆಂದು ಹೇಳಲಾಗುತ್ತದೆ. ಇವುಗಳ ನಿರ್ಮಾಣ ಮತ್ತು ಬಳಕೆಯ ಹಿಂದೆ ಘನವಾದ ಉದ್ದೇಶವಿತ್ತು. ಇಂದಿನ ಪ್ರಾಜ್ಞರು ಸಂಶೋಧನೆಯ ಮೂಲಕ ಯುವ ಪೀಳಿಗೆಯವರಿಗೆ ಇತಿಹಾಸದ ಪ್ರಜ್ಞೆ ಮೂಡಿಸಬೇಕಾಗಿದೆ.

(ಡಿ.ಎಂ.ಎನ್.)

ಹೋ

ಹೋಳಿ: ಫಾಲ್ಗುಣ ಮಾಸದಲ್ಲಿ ಬರುವ ಹಬ್ಬ. ಈ ಹಬ್ಬವನ್ನು ಕಾಮನ ಹಬ್ಬ, ಬೆಂಕಿಯ ಹಬ್ಬ ಎಂತಲೂ ಕರೆಯುತ್ತಾರೆ. ಹೋಳಿಹಬ್ಬ ಎಂದರೆ ಹೈದ್ರಾಬಾದ ಕರ್ನಾಟಕ ಭಾಗದ ಜನರಿಗೆ ಎಲ್ಲಿಲ್ಲದ ಸಡಗರ ಸಂಭ್ರಮ. ನಿಜವಾದ ಹಬ್ಬ ಆರಂಭವಾಗುವುದು ಹುಣ್ಣಿಮೆಯ ದಿನವೇ. ಪ್ರತಿಯೊಂದು ಹಳ್ಳಿಯಲ್ಲಿ ಊರಿಗೊಬ್ಬ ಕಾಮನನ್ನು ಸುಟ್ಟರೆ ಮತ್ತೆ ಕೆಲವು ಕಡೆ ಬೀದಿಗೊಬ್ಬ ಕಾಮನನ್ನು ಸುಡುವುದುಂಟು. ಪ್ರತಿಯೊಂದು ಮನೆಯ ಅಂಗಳದಲ್ಲಿ ಒಂದು ಸಣ್ಣಗುಂಡಿ ತೋಡಿ ಅದನ್ನು ಗೋಮಯದಿಂದ ಸಾರಿಸಿ ಒಂದು ಸಣ್ಣ ದೀಪ ಹಚ್ಚಿ ಇಡುತ್ತಾರೆ. ಗುಂಡಿಯ ಮಧ್ಯದಲ್ಲಿ ಒಂದು ಸಣ್ಣ ಬೆನಕವನ್ನು ನಿಲ್ಲಿಸುವರು, ಅದು ಕಾಮನ ಪ್ರತಿಕೃತಿಯಾಗಿರುತ್ತದೆ. ಕೆಲವರು ಸುಂದರಾಕೃತಿಯಲ್ಲಿ ನಿಲ್ಲಿಸಿದರೆ ಮತ್ತೆ ಕೆಲವರು ಕಾಗದದ ಮೇಲೆ ಚಿತ್ರ ಬಿಡಿಸಿ ಬಿದಿರಿನ ಕೋಲಿಗೆ ಅಂಟಿಸಿ ಕುಣಿಯಲ್ಲಿ ನಿಲ್ಲಿಸುವರು. ಮಧ್ಯಾಹ್ನದ ಹೊತ್ತಿಗೆ ಕುಳ್ಳು-ಕಟ್ಟಿಗೆಗಳನ್ನು ಹಾಕಿ ಮೇಲೊಂದು ಹೋಳಿಗೆಯನ್ನಿಟ್ಟು ಬೆಂಕಿ ಇಡುತ್ತಾರೆ. ಕಾಮನಿಗೆ ಬೆಂಕಿ ಇಡುತ್ತಲೇ "ಹೊಯ್ಕೊಂಡೋರ ಬಾಯಿಗೆ ಹೋಳಿಗೆ ತುಪ್ಪಾ" ಎಂದು ಬಾಯಿ ಬಡಿದುಕೊಳ್ಳುತ್ತಾರೆ. ಇದಾದ ಬಳಿಕ ಕುಟುಂಬದ ಸದಸ್ಯರೊಂದಿಗೆ ಸೇರಿಕೊಂಡು ಹೋಳಿಗೆಯ ಊಟ ಮಾಡುತ್ತಾರೆ. ಇದು ಮನೆಯಲ್ಲಿ ಆಚರಿಸುವ ಹೋಳಿಯ ಆಚರಣೆ. ಸಾರ್ವಜನಿಕವಾಗಿ ಹುಣ್ಣಿಮೆಯ ದಿನದಂದು ರತಿಯನ್ನೊಳಗೊಂಡ ಕಾಮಣ್ಣನ ಸುಂದರ ಮೂರ್ತಿಯನ್ನು ತಂದು ಊರ ಮಧ್ಯ ಭಾಗದಲ್ಲಿ ನಿಗದಿ ಮಾಡಿದ ಸ್ಥಳದಲ್ಲಿ ಹಂದರಹಾಕಿ ತಳಿರು ತೋರಣಗಳಿಂದ ಶೃಂಗರಿಸುತ್ತಾರೆ. ದೊಡ್ಡವರಿಂದ-ಸಣ್ಣವರವರೆಗೂ

ಕಟ್ಟಿಗೆ ತಂದು ಒಟ್ಟುವುದು, ಹಾಡುವುದು, ಮಂಗಳವಾದ್ಯ ಬಾರಿಸುವುದು ಕೇರಿ-ಊರ ತುಂಬೆಲ್ಲ ಹಲಿಗೆ ವಾದ್ಯಗಳಿರುತ್ತದೆ. ಚುಕ್ಕೋಳರ ಕೈಯಲ್ಲಿ ಅಂತೂ ಸಣ್ಣ ಹಲಗೆ ಮತ್ತು ಕೊರಳಲ್ಲಿ ಸಕ್ಕರೆ ಹಾರ ಇರುತ್ತದೆ. ಸುಂದರ-ರತಿ-ಕಾಮರನ್ನು ಕಾಣಲು ಊರ ಜನರೆಲ್ಲ ತಂಡೋಪತಂಡವಾಗಿ ಬಂದು ವೀಕ್ಷಿಸಿ ಆನಂದ ಪಡುತ್ತಾರೆ. ಇದನ್ನು ಕಾಯುತ್ತಿರುವ ಪುಂಡ ಹುಡುಗರು ಕುಳ್ಳು-ಕಟ್ಟಿಗೆಗಳನ್ನು ಕದ್ದು ತಂದು ಕಾಮನ ಮೆರವಣಿಗೆ ಊರ ಬೀದಿಗಳಲ್ಲಿ ಹರಿದಾಡಿ ತಿರುಗಿ ಕಾಮನ ಕಟ್ಟಿಗೆಗಳನ್ನು ಒಟ್ಟಿ ಅದರ ಮೇಲೆ ಕಾಮಣ್ಣನನ್ನು ಕೂಡಿಸುವರು. ಕಾಮನನ್ನು ಪೂಜಿಸಿ ತೆಂಗಿನಕಾಯಿ ಒಡೆಯುತ್ತಾರೆ. ಆಮೇಲೆ ಕಾಮನಿಗೆ ಬೆಂಕಿ ಇಟ್ಟು ಹೊಯ್ಕೊಳ್ಳುತ್ತಾರೆ. ಕೊನೆಕೊನೆಗೆ ಕಾಮನ ತಲೆಯೊಡೆದು, ಕೆಂಡವನ್ನು ಕೆದರಿ, ಬೂದಿಯನ್ನು ಸೂರೆಮಾಡಿ ಜನರು ಕೇಕೆ ಹಾಕುತ್ತ ಕುಣಿದಾಡುತ್ತಾರೆ. ಬೆಳಗಾಗುತ್ತಲೇ ಕಾಮನ ಬೆಂಕಿಯನ್ನು ಒಯ್ದು ಮುತ್ತೈದೆಯರು ತಂತಮ್ಮ ಮನೆಯ ಒಲೆಯನ್ನು ಹೊತ್ತಿಸಿ ಹೋಳಿಗೆ ಮಾಡುವ ರೂಢಿಯೂ ಇದೆ. ಕಾಮನ ಬೆಂಕಿಯಲ್ಲಿ ತೆಂಗು, ಗೆಣಸು, ಕಡಲೇಕಾಯಿ ಸುಟ್ಟು ತಿಂದರೆ ಹಲ್ಲುಗಟ್ಟಿಯಾಗುತ್ತದೆ ಎಂಬುದು ಜನಪದರ ನಂಬಿಕೆ.

(ಎಚ್.ಪಿ.)

ವಿಷಯ ಸೂಚಿ

ಅ

ಅಂಕಲಗಿ (ಹೊಳೆ) 1, 2
ಅಂತ್ಯ ಸಂಸ್ಕಾರ 2, 276
ಅಂಬವ್ವ ಭೀಮಣ್ಣ ಪಟ್ಟಣ 3, 163
ಅಂಬಾಭವಾನಿ 3, 108, 109, 138, 183, 201, 221, 245, 315, 342, 348
ಅಗಸ 4, 19, 65, 115, 120, 145, 206, 207, 376, 377
ಅಗಸಿ 5, 23, 29, 49, 50, 57, 117, 120, 135, 157, 189, 202, 255, 302, 321, 382, 390, 420, 469
ಅಗ್ಗಿ ತುಳಿಯುವುದು 5, 6
ಅಟ್ಟಿ 6, 9, 111, 179, 248, 253, 371, 372, 386, 399
ಅಡಿಪೂಜೆ 6
ಅಣ್ಣಪ್ಪ ಸಾಬಣ್ಣ ಸಂಕರಡಗಿ 7, 163
ಅನುಭಾವ ಪದಗಳು 7, 8
ಅನುಭಾವಿ ಕವಿಗಳು 8
ಅಪರಾಳ ತಮ್ಮಣ್ಣ 8, 9
ಅಪಶಕುನ 9, 193, 195
ಅಬ್ಬೆತುಮಕೂರ ವಿಶ್ವಾರಾಧ್ಯ 9
ಅಮರ ಕಲ್ಯಾಣ 11, 46,
ಅಮರೇಶ್ವರ 11, 12, 22, 39, 257, 404, 459
ಅಮೃತ ಕುಂಡ 12, 376, 449
ಅಮೋಘಸಿದ್ಧ 13, 342
ಅಯ್ಯನವರು 14, 35, 37, 55, 218
ಅಯ್ಯಾಚಾರ 14, 211
ಅರವಟಿಗೆ 15
ಅರಳಗುಂಡಿಗಿ 15
ಅರಳಿಮರ 15
ಅಲಿಯಾಬಾದ 15
ಅಷ್ಟೂರ 16, 403,
ಅಳವಂಡಿ 16, 54, 351

ಆ

ಆಣೆ–ಪ್ರಮಾಣ 17
ಆನಂದೇಶ್ವರ ದೇವಾಲಯ 17
ಆನೆಗೊಂದಿ 17, 18
ಆಯ ಪದ್ಧತಿ 18, 19
ಆಯುಧಗಳು 19, 119, 122, 291
ಆರ 21
ಆರಿಹಾಜ್ ಪೀರ್ ಪಾಷ 21
ಆರೋಲಿ ಹುಲಿಗೆಮ್ಮ 21, 22
ಆಳಂದ 22, 34, 69, 85, 116, 118, 136, 162, 163, 174, 257, 259, 313, 319, 321, 342, 347, 365, 378, 403, 411, 421, 449, 457, 468, 478, 479

ಇ

ಇಟ್ಟಿಗೆ 22, 67, 69, 79, 124
ಇರಕಲ್ಲಗಡ ದ್ಯಾಮಮ್ಮದೇವಿ 23

ಈ

ಈರಮ್ಮ 24, 166,

ಉ

ಉಂಬಳಿ 24, 262, 288, 321, 346
ಉಡಕಿ 24
ಉಡಿತುಂಬುವುದು 25
ಉಡುಗೆ ತೊಡುಗೆಗಳು 25, 26, 123
ಉಡುದಾರ 27, 220
ಉತ್ತರಾಣಿ 28, 422, 425

ಎ

ಎಕ್ಕೆ 28, 424, 425
ಎದುರು ಗೊಳ್ಳುವುದು 29
ಎಲ್ಲಮ್ಮ 29, 44, 45, 107, 108, 118, 120, 121, 123, 138, 145, 148, 149, 166, 177, 201, 205, 207208,

	209,217, 242, 245, 264, 290, 295, 315, 19, 323, 324, 326, 329, 344, 352, 396, 402, 403, 416, 420, 424, 448,452, 466, 472
ಎಳ್ಳ ಅಮವಾಸ್ಯೆ	30, 382, 423
ಏಕನಾಥ	30, 29, 88, 165, 178, 222, 266
ಏವೂರ	30, 31
ಏಳು-ಹನ್ನೊಂದಾತು	31, 32

ಐ

ಐತಿಹಾಸಿಕ ಕಮಾನುಗಳು	32
ಐತಿಹ್ಯಗಳು	33, 34, 154, 259, 445
ಐದೇಸಿ	34
ಐರಾಣಿ	35, 68, 91, 171, 327, 328

ಒ

ಒಗಟುಗಳು	36, 86, 201, 332, 384, 394
ಓಕುಳಿ	37
ಓದಿಸುವ ಅಯ್ಯನವರು	37, 38
ಓಲೆಗರಿ ಗ್ರಂಥ	38, 39
ಓವಿ ಪುಸ್ತಕ	39
ಔರಾದ	39, 105, 166, 168, 178, 180, 214, 220, 315, 374, 408, 414, 429, 449, 450

ಕ

ಕಂದಾಯ(ಸುಂಕ)	40, 76, 97, 435
ಕಂದೀಲು	40, 55, 58, 427
ಕಂಬಳಿ	40, 41, 53, 73, 108, 112, 160, 182, 183, 185, 300, 309, 324, 325, 351, 407, 429, 456, 464, 476
ಕಂಬಳಿ ಮಠ	41, 407
ಕಂಬಾರ	41, 42, 122, 157, 420
ಕಂಬಿ	43, 477
ಕಕ್ಕಯ್ಯ ಮಂದಿರ	44, 45
ಕಟ್ಟೆ ಸಂಗಾವಿ	45
ಕಡ	45
ಕಡಕೋಳ	45, 46, 135, 168, 169, 219, 348, 429, 449
ಕಡಕೋಳ ಮಡಿವಾಳಪ್ಪ	45, 168, 169, 218, 348, 429,
ಕಡತಗಳು	46,
ಕಡೆಯ ಕಲ್ಯಾಣ	46
ಕಣಜ	47, 167, 254, 355, 356, 369, 469
ಕನಕಗಿರಿ	47, 325, 326,
ಕಪಲಿ	48, 107, 198
ಕಪ್ಪೆ ಆಟ	48, 49
ಕಮಠಾಣ	49
ಕರಡಕಲ್	49, 50
ಕರಡಿ ಮಜಲು	50, 53, 161
ಕರಪಾಲ ವಿದ್ಯೆ	
ಕರಿ	51, 52, 74,
ಕರಿ ಹರಿಯುವುದು	51,
ಕರಿಗಾಲಬಾಯಿ	52
ಕಲ್ಮೇಶ್ವರ ದೇವಸ್ಥಾನ	52
ಕಲ್ಯಾಣ	52, 53, 295, 297, 303, 305, 320, 339, 341, 345, 351, 355, 357, 364, 368, 389, 393, 403, 405, 407, 409, 410, 411, 415, 421, 428, 436, 441, 442, 449, 450, 460, 463, 465, 478
ಕಲ್ಲಪ್ಪ ಫಕೀರಪ್ಪ ಹುಗಾರ	53
ಕಲ್ಲೂರು	53, 54
ಕವಲೂರು	54, 351,
ಕವಿರಾಜಮಾರ್ಗ	8, 38, 39, 54, 55, 155, 398, 401
ಕಾಟಿಗ	55

ಕಾಯಕದಯ್ಯ 55, 56
ಕಾರ ಹುಣ್ಣಿಮೆ 56, 72, 198, 202, 273, 319, 365
ಕಾರ್ಯಾ ಆಚರಣೆ 57
ಕಾಲ ನಿರ್ಣಯ 57, 59
ಕಾಲಜ್ಞಾನ 57, 58, 59, 78, 126, 211, 343, 384, 406
ಕಾಲನಿರ್ಣಯದ ಕಲ್ಲುಗಳು 59, 60
ಕಾಲ್ದೂಳಿ ತೆಗೆಯುವುದು 60, 61
ಕಾಶಮ್ಮ 61, 167
ಕಾಶೀನಾಥ ಗವಾಯಿ 61, 62, 167
ಕಾಶೆಪ್ಪ ಮರೆಪ್ಪ ಹಾಲು 62, 163
ಕಾಳಗಿ 62, 63, 261, 293, 448
ಕಾಳಮ್ಮ ಚಲವಾದಿ 63
ಕಿನ್ನಾಳ 64, 112, 182, 267,
ಕಿಷ್ಟಯ್ಯ ಭೀಮಯ್ಯ ದಾಸರ 64
ಕೀರ್ತನ ಕಲೆ 64, 65,
ಕುಂಬಾರ 65, 4, 18, 35, 41, 65, 66, 67, 68, 93, 121, 157, 192, 206, 209, 210, 256, 279, 328, 335, 408, 430
ಕುಕನೂರು 68, 53, 66, 119, 351,
ಕುದಮುಡ ಕರಡಿ 69
ಕುಪ್ಪಸ ಶಾಸ್ತ್ರ 69, 70
ಕುಸ್ತಿ 70, 71, 94, 95, 119, 123, 174, 189, 198, 214, 270, 301, 341, 364, 370, 403, 428, 435
ಕೂಡಲಸಂಗಮ 72
ಕೂಸೊಪ್ಪಿವುದು 72
ಕೃಷಿ ಉಪಕರಣಗಳು 72, 73
ಕೃಷಿ ದೇವತೆಗಳು 73
ಕೃಷಿ ನಂಬಿಕೆಗಳು 73
ಕೃಷ್ಣಪ್ಪ ಕುರ್ಡಿ 74
ಕೆಂಪು ಪಾವಡ 74
ಕೆಂಭಾವಿ 75, 118, 448
ಕೊಂಡ ಹಾಯುವುದು 75
ಕೊಂಡವಾಡೆ 76, 77, 78, 334
ಕೊಂಬು ಕಹಳೆ 78, 174
ಕೊಡೇಕಲ್ 78, 46, 57, 58
ಕೊಲ್ಲೂರು 78, 448
ಕೊಳ್ಳಿದೆವ್ವ 79
ಕೋಟೆ ಕೊತ್ತಲುಗಳು (ಗುಲ್ಬರ್ಗ ಜಿಲ್ಲೆ) 79, 296
ಕ್ಷೇತ್ರಪಾಲ ನರೋಣಾ 85

ಖ

ಖಂಡೋಬಾ ಪಿ.ಕೆ. 85
ಖವಾಲಿ 86, 87, 104, 354
ಖಾಜಾ ಬಂದೇನವಾಜ 87, 289,
ಖಾನಾಪುರ 90, 163, 428, 457

ಗ

ಗಂಗಾಪೂಜೆ 91
ಗಂಗಾವತಿ 91, 47, 325, 379, 393
ಗಂವ್ಹಾರ 92
ಗಜಲ್ ಗುಂಡಮ್ಮ 92, 171
ಗಡಿಕೇಶ್ವಾರ 93,
ಗಬ್ಬೂರು 94, 443,
ಗರಡಿ 94, 95, 70, 298, 429,
ಗವಾನ್ ಮದರಸಾ 95, 96
ಗಾಣಗಾಪುರ 96, 97, 101, 133, 243, 449
ಗಾಣಿಗರು 97, 98, 363,
ಗಾದೆಗಳು 98, 99, 5, 384, 394, 474,
ಗ್ರಾಮದೇವತೆಗಳು (ಯಾದಗಿರಿ ಜಿಲ್ಲೆ) 99, 118, 337
ಗಾಳಿದೆವ್ವ 100, 101
ಗಾಳಿಪಟ 101, 431,
ಗಾಳೆಲಕ್ಕವ್ವ 102
ಗಿಣಿ ಶಾಸ್ತ್ರ 102, 103, 9, 211, 212,
ಗಿರಿಜಾಬಾಯಿ ರಾಠೋಡ 103, 164,
ಗೀಗೀ ಪದಗಳು 103
ಗುಂಡಪ್ಪ ಘಾಳಪ್ಪ ಬೇಮಳಗಿ 104
ಗುರಣ್ಣ ಮಾರ್ತಾಂಡಪ್ಪ ಹಡಪದ 104, 163

ಗುರುನಾಥ ಕೋಟೆ 105, 168
ಗುಳೆ ಹೋಗುವುದು 105, 106
ಗೂಳಿ ಬಿಡುವುದು 107, 288
ಗೊಂಡ 107, 108, 370
ಗೊಂದಲ 3, 108, 109, 165, 176, 177, 315, 331, 398, 404
ಗೊಂದಲಿಗರ ಆಟ 109
ಗೊಂದಲಿಗರು 3, 108, 109, 110, 151 174, 176, 183, 217, 315, 467,
ಗೊಂಬೆ 110, 64, 74, 157, 162, 180, 211, 247, 253, 266, 293, 322, 376, 398
ಗೊಂಬೆಯಾಟ 64, 74, 110, 111, 112, 157, 169, 170, 173, 182, 224, 293, 322, 376, 398
ಗೊಬ್ಬೂರು 112, 291
ಗೊರವರು 112, 113, 209, 212, 396
ಗೋಗಿ 113, 114, 196, 449
ಗೋಗಿ ಬನಶಂಕರಿ ಜಾತ್ರೆ 114
ಗೊರಟಾ 115, 116
ಗೌರಿ ಕೂಡಿಸುವುದು 116, 117
ಗೌರೀ ಹಬ್ಬ 117
ಗೌಳಗಿತ್ತಿ ಡಪ್ಪಿನಾಟ 117
ಗ್ರಾಮದೇವತೆಗಳು
(ಗುಲ್ಬರ್ಗ ಜಿಲ್ಲೆ) .99, 118, 123, 377
ಗ್ವಾಡ್ಲಿಗೂಡು 124

ಘ

ಘತ್ತರಗಿ ಭಾಗ್ಯವಂತಿ 124, 125, 126, 245
ಘತ್ತರಗಿ ಭಾಗ್ಯವಂತಿ ಕ್ಷೇತ್ರ 125
ಘನಲಿಂಗ ರುದ್ರಮುನಿ
(ಬಸವಕಲ್ಯಾಣ) 126, 406
ಘೋಡವಾಡಿ ಪೀರ 126
ಘೋಷಾ ಪದ್ಧತಿ 127

ಚ

ಚಂದನಕೆರೆ 128, 129
ಚಂದ್ರಲಾ ಪರಮೇಶ್ವರಿ 130, 108, 419
ಚಂದ್ರಂಪಳ್ಳಿ 131
ಚಕ್ಕ ಆಟ 132
ಚಕ್ಕಡಿ ಬಂಡಿ 132
ಚಟಗಿ ಒಡೆಯುವದು 133
ಚಟ್ಟ 133, 3, 4, 264
ಚನ್ನಬಸಪ್ಪ ಗೊಂದಳಿ 133, 170
ಚರಗ ಚೆಲ್ಲುವದು 134
ಚರಬಸವೇಶ್ವರ ತಾತನವರು 134
ಚಾಪೆ ಹೆಣೆಯುವುದು 135
ಚಾವಡಿ (ಅಗಸಿ) 135, 149, 333, 398, 400,
ಚಿಂಚನಸೂರು 136, 245, 478
ಚಿಂಚೋಳಿ ನಗರ 136
ಚಿಂಚೋಳಿ 136, 142, 162, 174, 178, 220, 235, 241, 289, 324, 357, 376, 413, 440, 448
ಚಿಟಗುಪ್ಪ 136, 117, 335
ಚಿಣ್ಣಿದಾಂಡು 137, 189, 301,
ಚಿತ್ತಾಪುರ 78, 138, 162, 163, 228, 269, 270, 411
ಚಿನ್ಮಳ್ಳಿ 84, 138, 291, 448
ಚಿಮಣಗೇರಿ 138
ಚಿಮಣಿ 40, 138, 139, 255, 334, 372
ಚುಕ್ಕೋಳ ಪದಗಳು 139, 140
ಚೆಂಚರು 141
ಚೆನ್ನಣ್ಣ ವಾಲೀಕಾರ 22, 141, 421
ಚೇಂಗಟಾ 142, 448
ಚೇಳಿನ ಆಧಾದನೆ 142
ಚೌಕಾಬಾರ 143, 144
ಚೌಡಮ್ಮನ ಜಾತ್ರೆ 144, 185
ಚೌಡಿಕೆ ಮೇಳ 145, 148, 174, 217

ಛಾ

ಛಾಯಾ ಭಗವತಿ 148

ಜ

ಜಂಗ ಜಂಗಮ 149
ಜಗನ್ನಾಥ ಮಹಾರಾಜ 149
ಜಗಲಿ 149, 152, 172, 332, 334, 398, 423, 468, 475
ಜಗ್ಗಲಿಗೆ 152
ಜನಪದ ಅಳತೆ ಮಾಪನಗಳು 152
ಜನಪದ ಕಥೆಗಳು 153, 474
ಜನಪದ ಕಲಾವಿದರು (ಕೊಪ್ಪಳ ಜಿಲ್ಲೆ) 157, 162, 180,
ಜನಪದ ಕಲಾವಿದರು (ಗುಲಬರ್ಗಾ ಜಿಲ್ಲೆ) 162, 157
ಜನಪದ ಕಲಾವಿದರು (ಬೀದರ ಜಿಲ್ಲೆ) 164
ಜನಪದ ಕಲಾವಿದರು (ರಾಯಚೂರು ಜಿಲ್ಲೆ) 169
ಜನಪದ ಕಲೆಗಳು (ಗುಲಬರ್ಗಾ ಜಿಲ್ಲೆ) 173
ಜನಪದ ಕಲೆಗಳು (ಬೀದರ ಜಿಲ್ಲೆ) 176
ಜನಪದ ಕಲೆಗಳು (ರಾಯಚೂರು ಜಿಲ್ಲೆ) 180
ಜನಪದ ಕವಿ–ಕಲಾಕಾರರು (ರಾಯಚೂರ ಜಿಲ್ಲೆ) 187
ಜನಪದ ಕ್ರೀಡೆಗಳು 188
ಜನಪದ ತೂಕ ಮತ್ತು ಅಳತೆಯ ವಿಧಾನಗಳು 189
ಜನಪದ ನಂಬಿಕೆಗಳು 193, 384
ಜನಪದ ನುಡಿಗಟ್ಟು 195
ಜನಪದ ವಸ್ತು ಸಂಗ್ರಹಾಲಯಗಳು 195, 196
ಜನಪದ ವೈದ್ಯ 21, 104, 164, 196, 197, 336, 337, 374, 428, 440, 457, 469
ಜನಪದ ಸಂಕೇತಗಳು 198
ಜನಪದ ಸಂಗೀತ 164, 168, 198, 200, 299
ಜನಪದ ಸಾಹಿತ್ಯ 21, 36, 48, 98, 103, 149, 153, 165, 167, 180, 200, 220, 267
ಜನವಾಡ 202
ಜಲದುರ್ಗ 203
ಜಾತ್ರೋತ್ಸವಗಳು 203
ಜೀವನ ಸಾಬ ವಾಲೀಕಾರ 204
ಜೇವರ್ಗಿ 205, 1, 45, 81, 92, 97, 118, 123, 134, 144, 167, 308, 325, 363, 364, 375, 377, 404, 448, 454, 480
ಜೋಕಾಲಿ 205, 188, 189, 367
ಜೋಕುಮಾರ 205, 206, 4, 68, 73,
ಜೋಗತಿ 207, 208, 29, 146, 151, 177, 242, 290, 295, 300, 347, 352, 416, 420
ಜೋಗತಿ ಕುಣಿತ 208
ಜೋಗಿಗಳು 209, 396, 397, 401, 454, 472
ಜೋಗುಳ 210, 121, 29 146, 158, 165, 167, 187, 199, 221, 227, 414, 443
ಜೋಳಿಗೆ 211, 15, 26, 44, 55, 113, 186, 210, 301, 308, 396, 451, 467
ಜ್ಯೋತಿಷ್ಯ 211, 55, 58, 160, 264, 467

ಟ

ಟಗರಿನ ಕಾಳಗ 212
ಟೇಂಗಳಿ 213

ಠಾ

ಠಾಣ್ಯೆ 214

ಡ

ಡಂಗುರ 214, 77, 315
ಡಪಗಾರ ಕಾಶಪ್ಪ 214
ಡೊಳ್ಳಿನ ಹಾಡುಗಳು 215
ಡೊಳ್ಳು 216, 215, 252, 268, 313, 319, 351, 363, 387

ತ

ತಂತೀವಾದ್ಯ 216
ತಂಬೂರಿಯವರು 217
ತತ್ರಾಣಿ 218, 18, 67, 257
ತತ್ವಪದಕಾರರು 218, 220, 8, 415, 449
ತಮಟೆ ಮೇಳ 221
ತಮಾಶಾ 222
ತರುವು (ಕನ್ಯಾಶುಲ್ಕ) 222
ತಾಂಬೂಲ 223, 350, 396, 406, 430, 431
ತಾಳವಾದ್ಯ 223, 146
ತಾಳಿ 224, 225, 57, 119, 151, 175, 198, 210, 242, 300, 304, 365, 447
ತಿಂಥಿಣಿ ಮೌನೇಶ್ವರ 225
ತೊಟ್ಟಿಲ ಶಾಸ್ತ್ರ 227
ಥಂಡಿ ಮಾಡುವುದು 227

ದ

ದಂಡಗುಂಡ ಬಸವಣ್ಣ 228, 229
ದಂಡ (ದೀಡಿ) ನಮಸ್ಕಾರ 229, 3, 215, 402
ದಂಡಿ 229, 230, 19, 25, 70, 91, 121, 190, 202, 215, 227, 290, 336, 432, 459, 472, 475
ದನಗಾಹಿ 230, 231, 41, 137, 407
ದಲ್ಲಾಳಿಗಳು 231, 106
ದಾವಣಿ ಅಥವಾ ದವಣಿ 231
ದಾಸ ಸಂಪ್ರದಾಯ 231
ದಾಸರಾಟ 232, 234, 174, 373, 374
ದಿಂಡಿಮ್ಯಾಳ ಉತ್ಸವ 235
ದಿಗಂಬರ ಕರಿಬಸವೇಶ್ವರ 235, 451
ದಿಗ್ಗಾಂವ 236, 235,
ದಿಟ್ಟಿ 236
ದಿಡ್ಡಿ ಬಾಗಿಲು 237
ದೀಡ ದುಪ್ಪಟ 237
ದೀಡ ಪಂಡಿತ 237
ದೀಪ ಸ್ತಂಬ 237, 238,
ದೀಪಾವಳಿ 238, 251, 261, 278, 295, 332, 384, 422, 468
ದುಂದುಮಿ ಮೇಳ 238
ದುಮ್ಮಾಲಿ 239, 174
ದುರುಗ ಮುರುಗಿ 239
ದುರ್ಗಮ್ಮ ಬ್ಯಾಡರ 240, 170
ದೆವ್ವ 240, 241, 3, 21, 51, 73, 79, 100, 118, 196, 345
ದೇಗಲಮಡಿ 241, 357
ದೇವದಾಸಿ 242, 107, 141, 158, 232, 299, 315, 403
ದೇವಪುತ್ರ 243, 171
ದೇವಪುರ 243, 83, 100, 391
ದೇವರ ಗಾಣಗಾಪುರ 243, 96
ದೇವರ ಗೋನಾಲ 243, 244
ದೇವರಗಡ್ಡಿಯ ಗದ್ದೆಮ್ಮದೇವಿ 244
ದೇವರು ಬರುವುದು 245
ದೇವಾಂಗ 245
ದೇವೇಂದ್ರಕುಮಾರ ಹಕಾರಿ 245
ದೈವದವರು 246
ದೊಂಬರು 247, 248
ದೊಡ್ಡ ಬಾಳೆಪ್ಪ ಕಿಳ್ಳೇಕ್ಯಾತರ 248
ದೊಡ್ಡಾಟ 248, 249, 7, 27, 53, 64, 105, 110, 158, 168, 174, 176, 178, 188, 195, 201, 214, 224, 234, 286, 291,293, 295, 299, 313, 356, 371, 376, 404, 412, 416, 426, 429

ದೊಡ್ಡಾಟಗಳ ಭಾಷೆ 249
ದೊಡ್ಡಿ 251, 54, 76, 334, 350, 387
ದೋರನಹಳ್ಳಿ 252
ದ್ಯಾಮವ್ವ 253, 54, 118 138, 281, 336, 416,420,451,466
ಧಾನ್ಯ ಸಂಗ್ರಾಹಕಗಳು 253, 255
ಧುತ್ತರಗಾಂವ 257

ನ

ನಂಬಿಕೆಗಳು ಮತ್ತು ಆಚರಣೆಗಳು 258
ನಬೀಲಾಲ 258
ನರೋಣಾ ಕ್ಷೇಮಲಿಂಗ 259
ನಸೋಕ ದಾಸ 260, 261
ನಾಗಮ್ಮ 261, 24, 165, 167, 181, 188, 201
ನಾಗಾಯಿ ವಿಶ್ವವಿದ್ಯಾಲಯ 261, 262
ನಾಗಾವಿ 264, 265, 277, 346, 448
ನಾಗೋರಾ 266
ನಾಗೋಲಿ ಚೌಗೋಲಿ 266
ನಾಚ ಮಲ್ಲಿಯರು 266, 267
ನಾಚವಾರ ಪಂಪಯ್ಯಸ್ವಾಮಿ 267
ನಾಯಕ ಡಿ.ಬಿ. 267
ನಾಯಿಂದ 268
ನಾರಾಯಣಪುರ 268, 269, 244, 295
ನಾಲವಾರ ಕೋರಿಸಿದ್ದೇಶ್ವರ ಜಾತ್ರೆ 269
ನಿಪ್ಪಾಣಿ 270, 429
ನೀಲಾಂಬಿಕೆ ಗವಿ 270
ನುಲಿಯ ಚಂದಯ್ಯನ ಗವಿ 271, 406
ನೂರೊಂದಪ್ಪ ಹೆರೂರ 167, 271,
ನೆಲಕ್ಕಿ ಸಾರಿಸುವುದು 272
ನೈವೇದ್ಯ 273, 274, 7, 12, 21, 34, 70, 91, 116, 119, 122, 144, 145, 151, 202, 206, 235, 245, 253, 282, 285, 290, 310, 313, 336, 362, 366, 424, 430, 460, 461, 466, 473

ಪ

ಪಂಚಮುಖಿ ಕಾಶಿ ವಿಶ್ವನಾಥ ಕ್ಷೇತ್ರ 274
ಪಂಚಲಿಂಗೇಶ್ವರ ದೇವಾಲಯ 275, 448
ಪಟಕ 276, 280, 415
ಪಟೇಗಾರರು 276, 277
ಪಣ ತೊಡುವುದು 277
ಪತ್ತಾರ 279, 280, 122, 162
ಪವಾಡಗಳು 281, 33, 387, 428, 432
ಪಂಚಾಯಿತಿ ಕಟ್ಟೆ 281
ಪಾನೀಯ 282
ಪಿತೃ ಪೂಜೆ 282
ಪುಟಗಮರಿ 283
ಪುರ 283
ಪೋತೆ ಎಚ್.ಟಿ. 286
ಫಕೀರಪ್ಪ ಎನ್ 286, 169
ಪ್ರಭಾವಳಿ ಉತ್ಸವ 286, 287

ಬ

ಬಂಡೆಗುಡ್ಡ ತಾಂಡಾ 287
ಬಕ್ಕಪ್ರಭುಗಳು 288, 132
ಬಗದಲ್ 289
ಬಗದುರಿ ಎಲ್ಲಮ್ಮ 290, 120
ಬಣಕಾರರು 290
ಬಣ್ಣದ ವೇಷ 290, 291, 177
ಬದರವಾಡ 291
ಬನ್ನಿಮರ 291, 292, 134
ಬಯಕೆಯ ಬುತ್ತಿ 292
ಬಯಲಾಟಗಳು 293, 294, 110, 155, 181, 249, 313, 356, 357, 379, 394, 398
ಬರಡು (ಗೊಡ್ಡು) 294
ಬಲೋರಿ ಹಾಡುಗಳು 294, 325

ಬಲ್ಲೋರಿ ಪದಗಳು	294
ಬಸಪ್ಪ ಚೌಡಕಿ	295
ಬಸರೀಗಿಡದ ಶಿವಪ್ಪ	295
ಬಸವಕಲ್ಯಾಣ	295, 12, 52, 61, 85, 115, 126, 164, 165, 168, 180, 189, 219, 258, 268, 270, 271, 290, 313, 341, 354, 393, 403, 405, 408, 409, 410, 421, 449, 450, 463, 465
ಬಸವಕಲ್ಯಾಣ ಕೋಟೆ	295
ಬಸವರಾಜ ಪೋಲಿಸ ಪಾಟೀಲ	298
ಬಸವರಾಜ ಬಾಳಪ್ಪ ಹೂಗಾರ ತಾಳಕೇರಿ	299
ಬಸವರಾಜ ಸಬರದ	299
ಬಸವಿ	300, 107, 207, 352
ಬಳಗಾನೂರು	300
ಬಳೆಗಾರ	301, 70, 127, 157, 209
ಬಾಜಿ ಕಟ್ಟು	301, 302
ಬಾನ	302
ಬಾರ ಅಗಸಿ	302
ಬಾರಕೋಲು	302, 303, 186, 351
ಬಾವಿಗಳು	303, 304, 82, 156, 241, 284, 409
ಬಾಸಿಂಗ	304, 15, 19, 151, 230, 336, 473, 477
ಬಿದರಿ ಕಲೆ	305, 306, 307, 180
ಬಿರಾದಾರ ಮ.ಗು.	307
ಬಿರಾಳ–ಬಿ	308, 309
ಬಿಲ್ವ ಪತ್ರೆ	309
ಬಿಳಿ ಪಾವಡ	309,
ಬೀದರ	310, 312, 12, 15, 16, 24, 30, 39, 48, 49, 52, 57, 60, 61, 72, 79, 85, 96, 97, 101, 105, 120, 126, 132, 136, 149, 153, 158, 162, 164, 165, 166, 167, 168, 174, 176, 178, 179, 180, 200, 201, 202, 214, 217, 219, 221, 223, 235, 237, 248, 258, 260, 266, 289, 290, 295, 305, 306, 307, 313, 321, 325, 327, 35, 336, 338, 341, 343, 354, 68, 370, 374, 389, 394, 407, 408, 409, 410, 420, 428, 432, 440, 449, 463, 469, 470, 476.
ಬೀದಿ ಬಯಲಾಟಗಳು	313, 314, 394
ಬೀರಪ್ಪ ಯಡಿಯಾಪುರ	314
ಬುಟ್ಟಿಜಾತ್ರೆ ಮತ್ತು ಮೂರ್ತಿ ತಿರುಗಿಸುವುದು	315
ಬುಡಬುಡಕಿಯವರು	315
ಬುರ್ರ ಕಥಾ	315, 316, 217
ಬೇಡನಾಯಕರು	316
ಬೈಗುಳಗಳು	317, 318, 354
ಭಂಕೂರ	319
ಭಾತಂಬ್ರಾ	320
ಭಾಸ್ಕರ ಟಿ.ಎಂ.	321, 322
ಭೀಮವ್ವ ದೊಡ್ಡಬಾಳಪ್ಪ ಕಿಳ್ಳಿಕ್ಯಾತರ	322
ಭೂತೇರ ಹಾಡುಗಳು	323, 324
ಭೂಮ	324, 200, 327, 336

ಮ

ಮಟ್ಟೀ ಹಾಡುಗಳು	325
ಮಠ	325, 326, 257, 258,261, 269,291, 299, 321, 342, 345,363, 369, 375, 389, 392, 394, 405, 410, 424, 426, 429, 435, 445, 465
ಮಣೂರು	326
ಮಣ್ಣೆತ್ತಿನ ಅಮವಾಸ್ಯೆ	326, 327, 365
ಮದುವೆ ಆಚರಣೆಗಳು	237
ಮದುವೆ ಸಂಪ್ರದಾಯಗಳು	327, 328

ಮದ್ದರಕಿ	328
ಮನರಂಜಕರು	329
ಮನೆ ಕಟ್ಟಡ ವಸ್ತುಗಳು	329
ಮನೆ ತುಂಬಿಸಿಕೊಳ್ಳುವುದು	331
ಮನೆ ಬಳಕೆಯ ವಸ್ತುಗಳು	331
ಮನೆಯ ಭಾಗಗಳು	333
ಮರಗಾಲು ಕುಣಿತ	334
ಮರತೂರು	335
ಮರಮಕಲ್	335
ಮರಾಠ	336
ಮರೆಪ್ಪ ಮೇತ್ರೆ	336
ಮಲಗಿರುವ ಬುದ್ಧ	337
ಮಲ್ಲಪ್ಪ ಮುರ್ಲಾಪೂರ	337
ಮಸಿಯೂಟ	338
ಮಸೀದಿ	338, 15, 32, 45, 79, 112, 136, 138, 182, 264, 310, 325, 358, 364, 389, 415, 434, 448, 466
ಮಸ್ಕಿ	338, 387
ಮಸ್ಕಿ ಬೆಟ್ಟ	339
ಮಹಾಂತ ಸುತಾರ	341
ಮಹಾದೇವ ಮಂದಿರ	341, 49, 320
ಮಾಟದಾಟಗಳು	342, 174
ಮಾಡಿಯಾಳ	(1159) 342, 16, 448
ಮಾಣಿಕ ನಗರ	342, 343, 220
ಮಾಣಿಕಪ್ರಭು ಸಂಸ್ಥಾನ	343
ಮಾತಂಗಿ	344, 15, 21, 121, 290, 329, 420, 466
ಮಾತೆ ಮಾಣಿಕೇಶ್ವರಿ	345
ಮಾದಕ ದ್ರವ್ಯಗಳು	345
ಮಾದಿನೂರು	345
ಮಾನೇದ ಹೊಲ	346
ಮಾನೋಮಿ (ಮಹಾನವಮಿ) ಪದ	346
ಮಾಪುರತಾಯಿ	347, 108, 118, 120, 221, 229, 458
ಮಾರೆಪ್ಪ ಮಾರೆಪ್ಪ ದಾಸರ	348
ಮಾಶಾಳ	348, 480
ಮಾಸ್ತಮ್ಮ	349
ಮಾಸ್ತಿಗಲ್ಲು	350, 336
ಮುಡಬೂಳ	350, 351
ಮುದಗಲ್ಲು	351
ಮುಧೋಳ್	351
ಮುನಿರಾಬಾದ ಹುಲಿಗೆಮ್ಮ	351, 352
ಮುಯ್ ಮತ್ತು ಕಡ	353
ಮೃತ್ಯುಂಜಯ ಹೊರಕೇರಿ	353
ಮೆಹಬೂಬ ಸಾಹೇಬ	354
ಮೇದ	354, 454
ಮೇದಾವರಾಯನ ಕೋಠಾ	355, 356
ಮೈಂದರ್ಗಿ ಬಯಲಾಟ	356
ಮೋಘ	357
ಮೋಹರಂ ಹಾಡುಗಳು	358

ಯ

ಯಡ್ರಾಮಿ	363, 45, 389, 448
ಯಮನಪ್ಪ ರಾಜಪ್ಪ ಭಜಂತ್ರಿ	363
ಯಲ್ಲಮ್ಮ ಜಾತ್ರೆ	364
ಯಾದಗಿರಿ ಕೋಟೆ	364, 405
ಯುಗಾದಿ	365, 5, 25, 43, 49, 65, 78, 105, 118, 142, 151, 202, 215, 273, 280, 341, 389, 411, 424, 455

ರ

ರಂಗೀನ್ ಮಹಲ್	367, 297, 305
ರಂಜೋಳ ಖೇಣಿ	368
ರಟಕಲ	369
ರತ್ನಮ್ಮ ತಂಬಾಕಿ	369, 116
ರಸ್ತಾಪೂರ	370
ರಾಜಗೊಂಡ	370, 371, 107, 260
ರಾಜಾನಾಟ	371, 372, 373, 374, 174, 314, 418
ರಾಜೇಂದ್ರ ಯರನಾಳೆ	374, 196, 200
ರಾಧಾನಾಟ	374, 174, 234, 248, 294, 314, 418

ರಾಮಗೊಂಡ ಖಂಡಗೊಂಡ ಹಳ್ಳಿಖೇಡೆ 374
ರಾಮಣ್ಣ ಮಾಡ್ಲಗೇರಿ 375
ರಾಮಪುರದ ಬಕ್ಕಪ್ಪಯ್ಯ 375
ರಾಮಪ್ಪ ಭೀಮಪ್ಪ ಕಿಳ್ಳೇಕ್ಯಾತರ 376
ರಾಮಯ್ಯ ಕುಸುನಯ್ಯದಾಸರ 376
ರಾಮಲಿಂಗೇಶ್ವರ ದೇವಾಲಯ 376, 12, 236, 308, 357, 448, 451, 479
ರಾಮೇಶ್ವರ ಎ.ಕೆ. 376
ರಾಸಣಗಿ 377
ರುದ್ರವಾಡಿ 378
ರುದ್ರಾಕ್ಷಿ 378, 379, 26, 55, 151, 177, 224, 252, 268, 271, 288, 341, 399, 415, 453
ರೇಚಪ್ಪ ಮಾಸ್ತರ ಮಡಿವಾಳ 379
ರೊಟ್ಟಿ 380, 381, 10, 28, 30, 60, 70, 106, 134, 139, 153, 186, 192, 193, 206, 237, 266, 274, 292, 331, 332, 355, 432, 455, 466
ರೊಟ್ಟಿಪರ್ವ 382

ಲ

ಲಂಬಾಣಿ ಕುಣಿತ 382, 174
ಲಠ್ಠೆ ಎಂ.ಎಸ್. 384
ಲಾವಣಿ ಹಾಕುವುದು 385
ಲಾವಣಿಗಳು 385, 103, 201, 354
ಲಿಂಗಸೂಗುರು 387, 49
ಲಿಂಗಾವಧೂತರು 387, 388
ಲ್ಯಾವಿಗಂಟು 388

ವ

ವಜ್ಜಲ್ 389
ವಡಗೇರಿ 389, 159, 448
ವತನದಾರರು 390
ವರೋಪಚಾರ 390, 476
ವಾಗಣಗಿರಿ 390
ವಾಡೆಗಳು 392
ವಾರಸುದಾರರು 392, 405
ವಾರಾನ್ನ 392, 393,
ವಿಜ್ಞಾನೇಶ್ವರ ಗವಿ 393, 406
ವಿಪ್ರಗ್ರಾಮ 393
ವೀರಣ್ಣ ದಂಡೆ 394, 153, 381
ವೀರಣ್ಣ ರಾಜೂರ 394
ವೀರಭದ್ರಪ್ಪ ಬಳಿಗಾರ 395
ವೀಳ್ಯ ಸಂಪ್ರದಾಯ 396
ವೃತ್ತಿಗಾಯಕರು 396, 174, 175, 177, 183, 216, 218, 224, 323
ವೇಷಗಾರರು 398, 399, 400, 401, 177, 290, 329, 363, 387, 457
ವ್ರತ 401, 12, 102, 131, 196, 328, 365, 396, 460, 466
ವ್ರತ ಮತ್ತು ಹರಕೆಗಳು 401

ಶ

ಶಕುಂತಲಾ ಭೂತೇರು 403
ಶರಣಪ್ಪ ಗದ್ಲೇಗಾಂವ 403
ಶರಣಪ್ಪ ಭೂತೇರ 403, 166
ಶರಣಪ್ಪ ವಡಿಗೇರಿ 404
ಶರಣಬಸವೇಶ್ವರರು 404, 15, 289, 468
ಶರಣರ ಸ್ಮಾರಕಗಳು 405
ಶಶಿಕಲಾ ಮೋಳ್ದಿ 408
ಶಾಂತಪ್ಪ ಶೀಲವಂತ 409, 165
ಶಿರವಾಳ 409, 448
ಶಿವಪುರ 410, 295, 407
ಶಿವಯೋಗಿಶ್ವರ 411, 320
ಶಿವಲಿಂಗೇಶ್ವರರು 411, 412
ಶಿವಶರಣಪ್ಪ ಮಹಾಂತಪ್ಪಮಲ್ದೆ 412
ಶೆಟಿವಿ 412
ಶ್ರೀಶೈಲ ನಾಗರಾಳ 413

ಸ

ಸಂಕ್ರಾಂತಿ	413, 414, 273, 470
ಸಂಗಪ್ಪ ಕರಡಿಯಾಳ	414
ಸಂತಪುರ	414
ಸಂತೆ	414, 415, 454
ಸಂಬಣ್ಣ ಸಿಂಪಿ	415
ಸಗರ	415, 416, 18, 30, 99, 118, 225, 243, 364, 466
ಸಣ್ಣಾಟ	416, 417, 27, 109, 118, 141, 160, 174, 176, 179, 181, 187, 200, 201, 233, 249, 291, 299, 313, 371, 374, 409,421, 450
ಸನ್ನತಿ	419, 420, 79, 130, 319, 409, 448
ಸಪ್ತಮಾತೃಕೆಯರು	420
ಸರಗಿ	421
ಸರಿಬೆಸ	421, 327
ಸವದತ್ತಿಮಠ ಎಸ್.ಡಿ.	421
ಸಸ್ಯ ಜಾನಪದ	422
ಸಾಂತರವ್ವ ಸಾವಣ್ಣ ಸುಣಗಾರ	425
ಸಾಕರವಾಡಿ	425
ಸಾರಥಿ	426, 27, 163, 167, 173, 251, 271, 293, 322, 357, 384
ಸಾಗುವ ಅಯ್ಯಗಳು	426, 59,
ಸಿಡಿ	427, 124, 310, 352, 401
ಸಿದ್ದಪ್ಪ ಮೇಟಿ	428, 163, 394
ಸಿದ್ದೇಶ್ವರ	428, 50, 86, 262, 269, 326, 351, 369, 429, 448
ಸಿದ್ರಾಮಪ್ಪಾ ಮಡಿವಾಳ	428
ಸಿರಗಾಪುರದ ಬಂಡೆಪ್ಪ	429
ಸಿರ್ಸಿ	429
ಸೀಗೆ ಕೂಡಿಸುವದು	430
ಸೀಗೆ ಹುಣ್ಣಿಮೆ	430, 68, 205
ಸೀಮಂತ ಕಾರಣ	431
ಸೀಮಿ ನಾಗನಾಥ	432, 433
ಸುನತಿ	433
ಸುರಗಿ ನೀರು	433
ಸುರಪುರದ ನಾಯಕರು	434
ಸುಳಿ	435, 436, 437, 338, 339
ಸೂಗಯ್ಯ ಹಿರೇಮಠ	440
ಸೂಗೂರೇಶ್ವರ	341, 342, 107, 184
ಸೂಗೂರೇಶ್ವರ ದೇವಸ್ಥಾನ	443
ಸೂಫಿಗಳು	444
ಸೋಬನ	444
ಸ್ಥಳನಾಮಗಳು	444, 44
ಸ್ಮಾರಕಗಳು (ಗುಲ್ಬರ್ಗ ಜಿಲ್ಲೆ)	448, 32, 52, 303, 369, 391, 405, 419, 448
ಸ್ವರವಚನಕಾರರು	449, 218

ಹ

ಹಂತಿಯ ಹಾಡುಗಳು	451, 452, 90, 384
ಹಕ್ಕಿಪಿಕ್ಕಿ	452
ಹಗಲು ವೇಷಗಾರರು	453
ಹಚ್ಚೆ	453, 454
ಹಜರತ್ ಅಮಿನೋದ್ದೀನರು	454
ಹಜರತ್ ಖಾಜಾ ಸೈಫನ್ ಮುಲ್ಕ್	456
ಹಟ್ಟಿ	456, 457, 113, 322, 334, 387, 398, 447
ಹಟ್ಟಿಗಳು	457
ಹಣಮಂತ ಮಾರುತಿ ಹೂಗಾರ	457
ಹನುಮಂತರಾವ. ಬಿ. ದೊಡ್ಡಮನಿ	457
ಹಮಾಲರು	458
ಹರಕೆ	458, 3, 23, 44, 52, 69, 75, 107, 112, 118, 124, 157, 185, 205, 239, 258, 328, 346, 362, 364, 380, 401, 427, 432, 444

ಹರದೇಶಿ–ನಾಗೇಶಿ 459, 103, 158, 168, 201
ಹರಿಸೇವೆ 460
ಹಲಕರ್ಟಿ 460, 461, 462, 6
ಹಲಗೆ ಕುಣಿತ 462, 169
ಹಲ್ಲಿ ಶಕುನ 463
ಹಳ್ಳಿಖೇಡ–ಕೆ 463
ಹಾರಕೂಡ 465, 165, 189, 220, 259, 326, 409, 450
ಹಾರಣಗೇರಾ 466
ಹಾಲಕ್ಕಿ ಶಕುನ 467
ಹಿತ್ತಲಗಿಡ ಮದ್ದಲ್ಲ 467
ಹಿರಿಯರ ಪೂಜೆ 468
ಹಿರೇಮಠ ಎಸ್.ಎಂ. 468
ಹಿಲಾಲಪುರ 469, 61, 167, 218, 336
ಹುಡಗಿ 469, 451,
ಹುಮನಾಬಾದ 469, 6, 13, 30, 61, 97, 126, 136, 164, 177, 196, 220, 235, 266, 288, 336, 342, 354, 448, 449, 451, 463, 469, 470
ಹುಮನಾಬಾದ ವೀರಭದ್ರೇಶ್ವರ 470, 471
ಹುಲಿಗಿ ಕ್ಷೇತ್ರ 472
ಹೂಗಾರರು 473, 116,
ಹೆಂಡಿ ಬಿ.ಬಿ. 474
ಹೆಜ್ಜೆ ಮೇಳ 474, 184
ಹೆಣ್ಣು ನೋಡುವುದು 475
ಹೆಬ್ಬಾಳೆ ಜಗನ್ನಾಥ 476,
ಹೆಳವರು 477, 224
ಹೈದರ ಸಾಹೇಬ ಮೋದೀನ ಸಾಹೇಬ 478, 163
ಹೊಡಲ 478, 448
ಹೊಡೆಗಳು 479
ಹೋಳಿ 480, 12, 15, 26, 37, 49, 139, 152, 175, 179, 202, 222, 238, 252, 260, 288, 342, 416, 424

ಎ.ಜೆ.	**ಅಶೋಕ ಜೋಷಿ** ಸಜಾದ್ ಸಾಹೇಬ ದರ್ಗಾ ಇಜೇರಿ, ಜೇವರ್ಗಿ ಜಿ. ಗುಲಬರ್ಗಾ.
ಎ.ಡಿ.ಎನ್.	**ಅಕ್ಕಿ ಡಿ.ಎನ್.** ಸಾ. ಗೋಗಿ ತಾ. ಶಹಾಪುರ ಜಿ. ಗುಲಬರ್ಗಾ
ಎ.ಎಚ್.	**ಅಯ್ಯಪ್ಪಯ್ಯ** ಹುಡಾಶಕ್ತಿ ನಗರ,ದೇವಸುಗೂರು,ರಾಯಚೂರು.
ಎ.ಆರ್.ಕೆ.	**ಅಮೃತಾ ಆರ್. ಕಟಕೆ (ಡಾ)** ಸರ್ಕಾರಿ ಪದವಿ ಕಾಲೇಜು, ಗುಲಬರ್ಗಾ
ಎ.ಕೆ.ಆರ್.	**ಎ.ಕೆ. ರಾಮೇಶ್ವರ** ಗೋದಾತಾಯಿ ನಗರ, ಗುಲಬರ್ಗಾ.
ಎ.ಎಂ.ಕೆ.	**ಅಂಬಾರಾವ್ ಎಂ. ಕೋಣೆ** ಅರ್ಜುಣಗಿ ತಾ. ಅಫಜಲಪೂರ ಜಿ.ಗುಲಬರ್ಗಾ
ಬಿ.ಬಿ.ಬಿ.	**ಬಿ.ಬಿ. ಬಿರಾದಾರ (ಡಾ)** ವಿಶ್ರಾಂತ ಪ್ರಾಧ್ಯಾಪಕರು, 13ನೇ ಕ್ರಾಸ್ ನಿರ್ಮಲ ನಗರ, ಧಾರವಾಡ.
ಬಿ.ಬಿ.ಎಚ್.	**ಬಿ.ಬಿ. ಹೆಂಡಿ (ಡಾ)** ನಿವೃತ್ತ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ ಗುಲಬರ್ಗಾವಿಶ್ವವಿದ್ಯಾಲಯ, ಗುಲಬರ್ಗಾ
ಬಿ.ಪಿ.ಟಿ.	**ಬಿ.ಪಿ. ತಾಡಮಲ್ಲೆ** ಕನ್ನಡ ಉಪನ್ಯಾಸಕರು, ಶ್ರೀ ಸಿ.ಎಸ್.ಎಂ. ಪದವಿ ಮಹಾವಿದ್ಯಾಲಯ, ಭಾಲ್ಕಿ, ಜಿ.ಬೀದರ.
ಬಿ.ಎಸ್.ಎಸ್.ಆರ್	**ಬೆಂ.ಶಾ.ಶ್ಯಾಮಲಾ ರತ್ನಕುಮಾರಿ (ಡಾ)**
ಬಿ.ಪಿ.ಎಂ.	**ಬಸವರಾಜ ಪಿ. ಮಸೂತಿ** ವಾಗ್ದರಿ ತಾ. ಅಕ್ಕಲಕೋ ಜಿ.ಸೋಲಾಪೂರ.
ಬಿ.ಆರ್.ಕೆ.	**ಬಿ.ಆರ್. ಕೊಂಡ** ಮ.ನಂ. 40, ನಿವೃತ್ತ ಪ್ರಾಧ್ಯಾಪಕರು,ಗಣೇಶ ನಗರ, ಕುಂಬಾರ ವಾಡಾರಸ್ತೆ, ಬೀದರ.
ಬಿ.ಕೆ.	**ಭಾಗೀರಥಿ. ಕೊಂಡ** ಕನ್ನಡ ಉಪನ್ಯಾಸಕಿ, ಕರ್ನಾಟಕ ಮಹಾವಿದ್ಯಾಲಯ, ಬೀದರ.
ಬಿ.ಬಿ.	**ಬಿಂಡಿಗನವಿಲೆ ಭಗವಾನ**
ಬಿ.ಎನ್.ಕೆ.	**ಬಿ.ಎನ್. ಕನಕ** ಬೆಮಲಖೇಡ ತಾ. ಹುಮನಾಬಾದ, ಜಿ. ಬೀದರ.
ಬಿ.ಎಲ್.ಜಿ	**ಬಿ. ಲಿಂಗಣ್ಣ ಗಾಣದಾಳ (ಡಾ)** ಕನ್ನಡ ಅಧ್ಯಾಪಕರು, ಹಮದರ್ದ ಪದವಿ ಪೂರ್ವ ಮಹಾವಿದ್ಯಾಲಯ, ರಾಯಚೂರು.
ಬಿ.ಪಿ.ಎ.	**ಬಸವನಗೌಡ ಪಾಟೀಲ ಅಲ್ಲಾಳ** ತಾ. ಜೇವರ್ಗಿ. ಜಿ. ಗುಲಬರ್ಗಾ.
ಬಿ.ಪಿ.ಪಿ.	**ಬಸವರಾಜ ಪೊಲೀಸ್** ಪಾಟೀಲ (ಡಾ) ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
ಬಿ.ಪಿ.ಎಸ್.	**ಬಾಬುರಾವ್ ಪರಮಶೆಟ್ಟಿ** ಹುಮನಾಬಾದ.
ಬಿ.ಎಸ್.	**ಭೀಮರಾಯ ಶಿವುಣಗಿ** ವರದಿಗಾರರು, ಸಂಯುಕ್ತ ಕರ್ನಾಟಕ, ಅಫಜಲಪೂರ ಜಿ. ಗುಲಬರ್ಗಾ.
ಬಿ.ಎಸ್ಎ.	**ಬಸವರಾಜ ಸಬರದ (ಡಾ)** ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.
ಬಿ.ಎಸ್.ವಿ.	**ಶ್ರೀ ಭೀಮಶೆಟ್ಟಿ ಎಸ್. ವಡ್ಡನಕೆರಿ** ಕನ್ನಡ ಉಪನ್ಯಾಸಕರು, ಶ್ರೀ ಗುರು ಅಯ್ಯಪ್ಪಸ್ವಾಮಿ, ಕಲಾ ಮಹಾವಿದ್ಯಾಲಯ, ಚಿಟಗುಪ್ಪ, ಬೀದರ.
ಬಿ.ವಿ.ಎಂ.	**ಬಸವರಾಜ ವಿ. ಮೂಲಿಮನಿ** ಇರಕಲ್ಲಗಡ
ಬಿ.ವ್ಹಿ ಎಸ್.	**ಬಿ.ವ್ಹಿ. ಶಿರೂರ (ಡಾ)** ವಿಶ್ರಾಂತ ಪ್ರಾಧ್ಯಾಪಕರು, ಡಾ.ಆರ್.ಸಿ ಹಿರೇಮಠ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಸಿ.ಆರ್.ಬಿ.	**ಚಂದ್ರಕಾಂತ ಆರ್. ಬಹುರೂಪಿ (ಡಾ)** ಚಂದ್ರಶೇಖರ ಪದವಿ ಕಾಲೇಜು, ಯಾದಗಿರಿ
ಸಿ.ಬಿಐ.	**ಚಂದ್ರಕಲಾ ಬಿದರಿ (ಡಾ)** ನೃಪತುಂಗ ಕಾಲೇಜು, ಸೇಡಂ.
ಸಿ.ಜೆ.ಎಂ.	**ಚಿಕ್ಕಳಾ ಜೆ.** ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆಳಂದ ಜಿ. ಗುಲಬರ್ಗಾ.
ಸಿ.ಎಂ.	**ಚನ್ನಬಸವ ಮಲ್ಕಂದಿನ್ನಿ** ದೇವದುರ್ಗ.

ಡಿ.ಎಚ್.ಡಿ.	**ಧರ್ಮಣ್ಣ ಎಚ್. ದನ್ನಿ** ಸಂಯುಕ್ತ ಕರ್ನಾಟಕ ವರದಿಗಾರರು, ಆಳಂದ ಜಿ. ಗುಲಬರ್ಗಾ.	ಜಿ.ಎಚ್.ಓ.	**ಗಿರಿರಾಜ ಹೊಸಮನಿ**
ಡಿ.ಜಿ.	**ದೇವಯ್ಯ ಗುತ್ತೇದಾರ** ಪ್ರಜಾವಾಣಿ ವರದಿಗಾರರು, ಗುಲಬರ್ಗಾ.	ಜಿ.ಕೆ.ಎಂ.	**ಗೋಪಿ ಕುಲಕರ್ಣಿ ಮಾರಡಗಿ** ವರದಿಗಾರರು, ಕಸ್ತೂರಿ, ಕಲಬುರ್ಗಿ.
ಡಿ.ಸಿ.ವೈ	**ಡಿ.ಸಿ. ಯಲಿಗಾರ**	ಜಿ.ಎಂ.ಕೆ.	**ಜಿ.ಎಂ. ಕಾವಡಿ**
ಡಿ.ಎಂ.ಎನ್.	**ಡಿ.ಎಂ. ನದಾಫ್** ಸಾಹಿತಿಗಳು, ಅಫಜಲಪೂರ ಜಿ. ಗುಲಬರ್ಗಾ.	ಜಿ.ಬಿ.ವಿ.	**ಜಿ.ಬಿ. ವಿಸಾಜಿ (ಡಾ)** ವಿಶ್ರಾಂತ ಪ್ರಾಧ್ಯಾಪಕರು, ತಹಶೀಲ ಕಚೇರಿ ಹತ್ತಿರ, ಭಾಲ್ಕಿ, ಬೀದರ.
ಡಿ.ಪಿ.	**ಧನರಾಜ ಪುಲಾರ** ಸಂಯುಕ್ತ ಕರ್ನಾಟಕ ವರದಿಗಾರರು, ಬಸವಕಲ್ಯಾಣ, ಜಿ. ಬೀದರ.	ಜಿ.ಪಿ.ಜಿ.	**ಜಿ. ಪವನಕುಮಾರ** ಗಂಗಾವತಿ ಜಿ. ರಾಯಚೂರ.
ಡಿ.ಪಿ.ಎ.	**ದೇವು ಪತ್ತಾರ** ಪತ್ರಿಕಾ ಪ್ರತಿನಿಧಿಗಳು, ಬೀದರ.	ಜಿ.ಆರ್.ಟಿ	**ಜಿ.ಆರ್. ತಿಪ್ಪೇಸ್ವಾಮಿ (ಡಾ)** ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.
ಡಿ.ಎಸ್.	**ದಿನೇಶ ಶುಕ್ಲ** ಗುರುಮಠಕಲ್. ಯಾದಗಿರಿ ಜಿ. ಗುಲಬರ್ಗಾ.	ಹೆಚ್.ಸಿ.	**ಹೆಚ್. ಚಂದ್ರಶೇಖರ**
ಡಿ.ಎಸ್.ಹೆಚ್	**ದೇವೇಂದ್ರಕುಮಾರ ಎಸ್. ಹಕಾರಿ (ಡಾ)** ವಿಶ್ರಾಂತ ಪ್ರಾಧ್ಯಾಪಕರು, ಯುನಿವರ್ಸಿಟಿ ಕ್ರಾಸ್, ಧಾರವಾಡ.	ಎಚ್.ಪಿ.	**ಹರಿಲಾಲ ಪವಾರ (ಡಾ)** ನಿರ್ದೇಶಕರು, ಪ್ರಾಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಡಿ.ಎಸ್.ಡಿ	**ದಸ್ತಗೀರಸಾಬ ದಿನ್ನಿ (ಡಾ)** ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು.	ಎಚ್.ಡಿ.	**ಹಣಮಂತರಾವ ದೊಡ್ಡಮನಿ (ಡಾ)** ಕನ್ನಡ ಅಧ್ಯಾಪಕರು, ಸರಕಾರಿ ಪದವಿ ಪೂರ್ವ ಕಾಲೇಜು, ಆಳಂದ. ಜಿ. ಗುಲಬರ್ಗಾ.
ಡಿ.ಎಸ್.ಆರ್.	**ಡಿ. ಶ್ಯಾಮರಾವ** ಚಿಂಚೋಳಿ ಜಿ. ಗುಲಬರ್ಗಾ.	ಎಚ್.ಎಚ್.ಬಿ.	**ಹುಲಗಪ್ಪ ಎಚ್. ಬುದ್ದಿನ್ನಿ** ಸಂಶೋಧನಾ ವಿಧ್ಯಾರ್ಥಿ, ಸ್ನಾತಕೋತ್ತರ ಕೇಂದ್ರ,ರಾಯಚೂರು.
ಜಿ.ಆರ್.	**ಗೊರಟಾ ರಾಜಶೇಖರಯ್ಯಸ್ವಾಮಿ** ಜಿ. ಬೀದರ	ಹೆಚ್.ಕೆ.	**ಹೆಚ್., ಕಾಶಿನಾಥರೆಡ್ಡಿ** ನಿವೃತ್ತ ಉಪನ್ಯಾಸಕರು, ವಾಟರ್ ಟ್ಯಾಂಕ್ ಹತ್ತಿರ, ವಾಂಜಿರಾ ಕಲ್ಲೂರ್ ರೋಡ್ ಹುಮನಾಬಾದ, ಬೀದರ.
ಜಿ.ಎಚ್.	**ಗವೀಶ ಹಿರೇಮಠ** ಮಹಾತ್ಮ ಬಸವೇಶ್ವರ ನಗರ, ರಾಘವೇಂದ್ರ. ದೇವಸ್ಥಾನ ಹಿಂಭಾಗ ಗುಲಬರ್ಗಾ.	ಎಚ್.ಕೆ.ಎನ್.	**ಹೆಬ್ಬಾಲೆ ಕೆ. ನಾಗೇಶ (ಡಾ)** ಪ್ರವಾಚಕರು, ಜಾನಪದ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಜಿ.ಪಿ.	**ಗುರುರಾಜ ಪಟ್ಟಣಶೆಟ್ಟಿ** ಶಹಾಪೂರ ಜಿ. ಯಾದಗಿರಿ.	ಎಚ್.ಎಸ್.ಪಿ.	**ಎಚ್.ಎಸ್. ಪಾಟೀಲ** ನಿವೃತ್ತ ಶಿಕ್ಷಕರು, ಕೀರ್ತಿ ಕಾಲೋನಿ, ಭಾಗ್ಯ ನಗರ, ಕೊಪ್ಪಳ.
ಜಿ.ಎಚ್.ಪಿ.	**ಗವಿಸಿದ್ಧಪ್ಪ ಎಚ್. ಪಾಟೀಲ (ಡಾ)** ಸರಕಾರಿ ಪ್ರಾಥಮಿಕ ದರ್ಜೆ ಕಾಲೇಜು, ಬಸವಕಲ್ಯಾಣ.	ಜೆ.ಎಚ್.	**ಜಗನ್ನಾಥ ಹೆಬ್ಬಾಳೆ (ಡಾ)** ಕರ್ನಾಟಕ ಮಹಾವಿದ್ಯಾಲಯ, ಬೀದರ.
ಜಿ.ಕೆ.ಪಿ.	**ಗಂಗಾಂಬಿಕಾ ಕೆ. ಪಾಟೀಲ (ಡಾ)** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಅಕ್ಕಮಹಾದೇವಿ ಮಹಿಳಾ ಕಾಲೇಜು, ಬೀದರ.	ಜೆ.ಟಿ.	**ಜಯದೇವಿ ತೇಲಿ** ಅಮರೇಶ್ವರ ಪದವಿ ಕಾಲೇಜು, ಔರಾದ.

ಕೆ.ಜಿ.ಪಿ.	**ಕಲ್ಯಾಣರಾವ್ ಜಿ. ಪಾಟೀಲ** ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಮಲಾಪುರ.
ಕೆ.ಜಿ.	**ಕಾವ್ಯಜೀವಿ**
ಕೆ.ಎಸ್.ಎನ್.ಐ.	**ಕೆ. ಶರಣಪ್ಪ ನಿಡಶೇಸಿ** ಹಿರೇಮನ್ನಾಪುರ, ಯಲಬರ್ಗಾ ಜಿ. ಕೊಪ್ಪಳ.
ಕೆ.ಆರ್.	**ಕೆ. ರವೀಂದ್ರನಾಥ (ಡಾ)** ಕನ್ನಡ ವಿಶ್ವವಿದ್ಯಾಲಯ, ಹಂಪಿ ಜಿ. ಬಳ್ಳಾರಿ.
ಕೆ.ಎಂ.ಎಂ.	**ಕೆ.ಎಂ. ಮೇತ್ರಿ (ಡಾ)** ಪ್ರಾಧ್ಯಾಸಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಜಿ. ಬಳ್ಳಾರಿ.
ಕೆ.ಎ.ಎಚ್.	**ಕೇದಾರನಾಥ ಅ. ಹಿರೇಮಠ**
ಕೆ.ಕೆ.	**ಕಲ್ಯಾಣರಾವ್ ಕಣಮೇಶ್ವರ** ಜೇವರ್ಗಿ ಜಿ. ಗುಲಬರ್ಗಾ.
ಕೆ.ಎಂ.	**ಕೆ. ಮಲ್ಲಿಕಾರ್ಜುನ,** ರಾಯಚೂರು.
ಕೆ.ಎಸ್.	**ಕೆ. ಶಾರದಾ (ಡಾ)** ಪ್ರಾಧ್ಯಾಪಕರು, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ ಆಂಧ್ರಪ್ರದೇಶ.
ಕೆ.ಎಸ್.ಎನ್.	**ಕೆ.ಎಸ್. ನಾಯಕ ಕನ್ನಡ ಪ್ರಾಧ್ಯಾಪಾಕರು,** ಶರಣಬಸವೇಶ್ವರ ಮಹಾವಿದ್ಯಾಲಯ, ಗುಲಬರ್ಗಾ.
ಎಲ್.ಎ.	**ಲಕ್ಷ್ಮಣ ಅಳವಂಡಿ**
ಎಲ್.ಜಿ.ಎ.	**ಎಲ್. ಗೋವಿಂದರಾಜ ಅಲ್ದಾಳ**
ಎಂ.ಬಿ.	**ಮಂಜುನಾಥ ಬೇವಿನಕಟ್ಟಿ (ಡಾ)** ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಎಂ.ಬಿ.ಎ.	**ಮೀನಾಕ್ಷಿ ಬಾಳಿ (ಡಾ)** ಕನ್ನಡ ಉಪನ್ಯಾಸಕರು, ಎಂ.ಎಸ್.ಐ ಪದವಿ ಮಹಾವಿದ್ಯಾಲಯ, ಗುಲ್ಬರ್ಗಾ.
ಎಂ.ಬಿ.ಬಿ.	**ಮಾಣಿಕ. ಭುರೆ** ಬಸವಕಲ್ಯಾಣ ಜಿ. ಬೀದರ.
ಎಂ.ಸಿ.ಬಿ.	**ಮಲ್ಲಿಕಾರ್ಜುನ ಸಿ. ಬಾಗೋಡಿ. (ಡಾ)** ಸುಲೇಗಾಂವ ಓಣಿ ಚಿತ್ತಾಪುರ ಜಿ. ಗುಲಬರ್ಗಾ.
ಎಂ.ಬಿ.ಪಿ.	**ಮೋಹನರಾವ ಬಿ. ಪಾಂಚಾಳ (ಡಾ)** ಅತಿಥಿ ಉಪನ್ಯಾಸಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಎಂ.ಬಿ.ಪಿ.ಎ.	**ಎಂ.ಬಿ. ಪಾಟೀಲ (ಡಾ)** ಸಹಾಯಕ ನಿರ್ದೇಶಕರು, ದೂರದರ್ಶನ ಕೇಂದ್ರ, ಗುಲಬರ್ಗಾ.
ಎಮ್.ಜಿ.ಬಿ.	**ಮ.ಗು. ಬಿರಾದಾರ (ಡಾ)** ವಿಶ್ರಾಂತ ಪ್ರಾಧ್ಯಾಪಕರು, ಚಿತ್ಕಳಾ ಬಡೇಪುರ ಕಾಲೋನಿ, ಸೇಡಂ ರಸ್ತೆ, ಗುಲಬರ್ಗಾ.
ಎಂ.ಜಿ.ಜಿ.	**ಎಂ.ಜಿ. ಗಂಗನಪಳ್ಳಿ** ನಿವೃತ್ತ ಮುಖ್ಯೋಪಾಧ್ಯಾಯರು, ಮಾಣಿಕಪ್ರಭು ನಿಲಯ, ಎಸ್.ಬಿ.ಐ. ಹೌಸಿಂಗ್ ಕಾಲೋನಿ, ಬೀದರ.
ಎಂ.ಜಿ.ಪಿ.	**ಮಲ್ಲಯ್ಯ ಜಿ. ಪೋಲಂಪಲ್ಲಿ** ದೊರನಹಳ್ಳಿ, ತಾ.ಶಹಾಪೂರ. ಜಿ.ಯಾದಗಿರಿ.
ಎಂ.ಕೆ.ಜೆ.	**ಮೀನಾಕ್ಷಿ ಕೆ. ಜಂಗಮನಿ (ಡಾ)** ಕನ್ನಡ ಉಪನ್ಯಾಸಕರು, ವಿಜಯನಗರ ಕಾಲೇಜು, ಹೊಸಪೇಟೆ.
ಎಂ.ಎಂ.ಎಸ್.	**ಎಂ. ಮಲ್ಲಿಕಾರ್ಜುನಯ್ಯಸ್ವಾಮಿ** ಸಿರವಾರ ಜಿ. ಗುಲಬರ್ಗಾ.
ಎಂ.ಎಂ.ಬಿ.	**ಮ.ಮಾ. ಬೋರಾಳ್ಕರ್** ಚಿಟಗುಪ್ಪ ತಾ. ಹುಮನಾಬಾದ ಜಿ. ಬೀದರ.
ಎಂ.ಎಂ.ಕೆ.	**ಎಂ.ಎಂ. ಕಲಬುರ್ಗಿ (ಡಾ)** ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಕಲ್ಯಾಣ ನಗರ, ಧಾರವಾಡ.
ಎಂ.ಎನ್.ಜಿ.	**ಮಲ್ಲಿಕಾರ್ಜುನ ನಾರಾಯಣಪ್ಪ ಗಚ್ಚಿ** ಗೋಗಿ, ತಾ. ಶಹಾಪುರ ಜಿ. ಗುಲ್ಬರ್ಗಾ.
ಎಂ.ಪಿ.	**ಮಂಡಲಗಿರಿ ಪ್ರಸನ್ನ** ಪ್ರಜಾವಾಣಿ ವರದಿಗಾರರು, ಶಹಾಬಾದ, ಜಿ. ಗುಲಬರ್ಗಾ.
ಎಂ.ಪಿ.ಆರ್.	**ಎಂ.ಪಿ ರಾಮರಾವ್** ಚಿಂಚೋಳಿ, ಜಿ. ಗುಲಬರ್ಗಾ.
ಎಂ.ಎಸ್.	**ಎಂ. ಶಿವಾಜಿ ಮತ್ತು ಸಹೋದರರು,** ನಾರಾಯಣಪುರ ತಾ. ಶಹಾಪುರ, ಜಿ. ಗುಲಬರ್ಗಾ.
ಎಂ.ಎಸ್.ಬಿ.	**ಮಹಾದೇವ ಎಸ್. ಬಡಿಗೇರ (ಡಾ)** ಸರಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ, ಜಿ. ಗುಲಬರ್ಗಾ.
ಎಂ.ಎಸ್.ಎಲ್.	**ಮಲ್ಲಿಕಾರ್ಜುನ ಲಠ್ಠೆ (ಡಾ)** ವಿಶ್ರಾಂತ ಪ್ರಾಧ್ಯಾಪಕರು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
ಎಂ.ಎಸ್.ಓ.	**ಮಾರುತಿ ಸೋನಾರ್** ಸಂಯುಕ್ತ ಕರ್ನಾಟಕ ವರದಿಗಾರರು, ಬೀದರ.
ಎಂ.ಎಸ್.ಆರ್.	**ಎಂ. ಸುರೇಶರೆಡ್ಡಿ** ಕಕ್ಕೇರಾ ತಾ. ಸುರಪೂರ, ಜಿ. ಯಾದಗಿರಿ.

ಎಂ.ಟಿ.ಡಿ. **ಎಂ.ಟಿ. ಧೂಪದ**
ಪ್ರಾಧ್ಯಾಪಕರು,

ಎಂ.ವಿ. **ಮಂಜುನಾಥ ವಕೀಲ್**
ಸಂಯುಕ್ತ ಕರ್ನಾಟಕ ವರದಿಗಾರರು,
ಜೇವರ್ಗಿ. ಜಿ. ಗುಲಬರ್ಗಾ.

ಎನ್.ಬಿ. **ನಾಗೇಂದ್ರ ಬಿರಾದಾರ**
ಮಂಠಾಳ ತಾ. ಬಸವಕಲ್ಯಾಣ ಜಿ.
ಬೀದರ.

ಎನ್.ಬಿ.ಬಿ. **ಎನ್.ಬಿ. ಬುಳ್ಳಾ (ಡಾ)**
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ,
ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

ಎನ್.ಬಿ.ಎ. **ಎನ್. ಬಸವರಾಜ**
ಗುರಗುಂಟಾ ತಾ. ಲಿಂಗಸುಗೂರು,
ಜಿ. ರಾಯಚೂರ.

ಎನ್.ಬಿ.ಎಚ್. **ನಿಂಗಪ್ಪ ಬಿ. ಹೊಸಳ್ಳಿ**
ಜಾನಪದ ಅಧ್ಯಯನ ವಿಭಾಗ, ಕನ್ನಡ
ವಿಶ್ವವಿದ್ಯಾಲಯ, ವಿದ್ಯಾರಣ್ಯ
ಹಂಪಿ. ಜಿ.ಬಳ್ಳಾರಿ.

ಎನ್.ಡಿ.ಎಂ. **ನಾಗಪ್ಪ ಡಿ. ಮಾಲಿಪಾಟೀಲ**
ಕಲಬುರ್ಗಿ.

ಎನ್.ಎಚ್.ಡಿ. **ಎನ್.ಎಚ್. ದೇಸಾಯಿ**
ಪರಸನಹಳ್ಳಿ ತಾ. ಸುರಪೂರ ಜಿ.
ಯಾದಗಿರಿ.

ಎನ್.ಕೆ. **ನೀಲಮ್ಮ ಕತ್ನಳ್ಳಿ (ಡಾ)**
ನಿವೃತ್ತ ಪ್ರಾಂಶುಪಾಲರು, ರೇಣುಕಾ
ನಿವಾಸ ಶರಳಾ ನಗರ' ಶಹಾಬಾದ ಜಿ.
ಗುಲಬರ್ಗಾ.

ಎನ್.ಆರ್.ವಿ. **ನಾಗರಾಜ ಆರ್. ವಾಲಿ**

ಎನ್.ಎಸ್ **ನಿಂಗಣ್ಣ ಸಣ್ಣಕ್ಕಿ (ಡಾ)**
ನೀಲಕಂಠ ನಿವಾಸ, ಬಸವನಗರ,
ಗೋಕಾಕ. ಜಿ. ಬೆಳಗಾವಿ.

ಎನ್.ಎಸ್.ಎಸ್. **ನಾಗರಾಜ ಎಸ್. ಸುರಪುರ**
ವೆಂಕಟಗಿರಿ ದೇಶಪಾಂಡೆ ಹುಣಸಗಿ,
ತಾ. ಶಹಾಪುರ ಜಿ. ಯಾದಗಿರಿ.

ಎನ್.ಟಿ. **ನಂ. ತಪಸ್ವಿಕುಮಾರ (ಡಾ)**
ವಿಶ್ರಾಂತ ಪ್ರಾಧ್ಯಾಪಕರು,
ಮಾನಸಗಂಗೋತ್ರಿ, ಮೈಸೂರು.

ಪಿ. **ಪರಮೇಶ್ವರ (ಪ್ರೊ)**
ಕನ್ನಡ ಉಪನ್ಯಾಸಕರು, ಟಾಗೋರ್
ಪದವಿ ಕಾಲೇಜು, ರಾಯಚೂರು.

ಪಿ.ಎಚ್. **ಪ್ರಕಾಶ ಹುಣಸಗಿ**

ಪಿ.ಕೆ.ಕೆ. **ಪಿ.ಕೆ. ಖಂಡೋಬಾ (ಡಾ)**
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ,
ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.

ಪಿ.ಎಂ. **ಪ್ರಭು ಮಹಾಜನ**
ಕಮಲಾಪುರ, ಜಿ. ಗುಲಬರ್ಗಾ.

ಪಿ.ಪಿ. **ಪಾರ್ವತಿ ಪೂಜಾರ (ಡಾ)**
ಕನ್ನಡ ಅಧ್ಯಾಪಕರು, ಗವಿಸಿದ್ದೇಶ್ವರ
ಪದವಿ ಮಹಾವಿದ್ಯಾಲಯ, ಕೊಪ್ಪಳ.

ಪಿ.ಎಸ್.ಪಿ. **ಪಿ.ಎಸ್. ಪೈಲ್ (ಪ್ರೊ)**
ಕನ್ನಡ ವಿಭಾಗದ ಮುಖ್ಯಸ್ಥರು,
ಪಿ.ಸಿ.ಬಿ ಕಾಲೇಜು, ಲಿಂಗಸೂರು,
ರಾಯಚೂರು.

ಆರ್.ಬಿ. **ರಘುಶಂಕ ಭಾತಂಬ್ರಾ (ಡಾ)**
C/o ಅಪ್ಪಾರಾವ ಬಿರಾದಾರ
ಇಂಡಸ್ಟ್ರಿಯಲ್ ಏರಿಯಾ, ನೌಬಾದ್,
ಬೀದರ.

ಆರ್.ಬಿ.ಎ. **ರಾಜೇಂದ್ರ ಬಡಿಗೇರ**
ಗುಲಬರ್ಗಾ.

ಆರ್.ಪಿ.ಬಿ. **ರಮೇಶ ಪಿ. ಬನ್ನಿಕೊಪ್ಪ**

ಆರ್.ಸಿ.ಎನ್. **ರೇವಣಸಿದ್ದಪ್ಪ ಸಿ. ನಿಂಗಾನಾಯಕ**
ಕನ್ನಡ ಉಪನ್ಯಾಸಕರು, ಕರ್ನಾಟಕ
ಪದವಿ ಮಹಾವಿದ್ಯಾಲಯ, ಶಾಂತನಗರ,
ಭಂಕೂರ, ಜಿ. ಗುಲಬರ್ಗಾ.

ಆರ್.ಜಿ. **ರಾಮಚಂದ್ರಪ್ಪ ಗಣಾಪುರ (ಡಾ)**
ಅತಿಥಿ ಉಪನ್ಯಾಸಕರು, ಸ್ನಾತಕೋತ್ತರ
ಕೇಂದ್ರ, ರಾಯಚೂರು.

ಆರ್.ಕೆ. **ರವೀಂದ್ರ ಕರ್ಜಗಿ (ಡಾ)**
ನೂತನ ವಿದ್ಯಾ ಸಂಸ್ಥೆ, ಗುಲಬರ್ಗಾ.

ಆರ್.ಕೆ.ಎಂ. **ರಾಘವೇಂದ್ರರಾವ ಕುಲಕರ್ಣಿ**
ಮಳ್ಳಿ ತಾ. ಜೇವರ್ಗಿ ಜಿ. ಗುಲಬರ್ಗಾ.

ಆರ್.ವಾಯ್. **ರಾಜೇಂದ್ರ ಯರನಾಳೆ (ಡಾ)**
ಸಹಾಯಕ ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಗುಲಬರ್ಗಾ.

ಎಸ್.ಬಿ. **ಶಿವಾನಂದ ಬೇಕಲ್ (ಡಾ)**
ದೂರದರ್ಶನ ಕೇಂದ್ರ, ಗುಲಬರ್ಗಾ.

ಎಸ್.ಎಸ್. **ಎಸ್. ಶಿವಾನಂದ (ಡಾ)**
ಪ್ರಾಧ್ಯಾಪಕರು,ವಿಜಯನಗರ ಕಾಲೇಜ್,
ಹೊಸಪೇಟೆ, ಜಿ. ಬಳ್ಳಾರಿ.

ಎಸ್.ಎ.ಬಿ. **ಸೊನ್ನ ಪಟೇಲ ಎ.ಬಿ.**
ಸೊನ್ನ ತಾ. ಅಫಜಲಪೂರ ಜಿ.
ಗುಲಬರ್ಗಾ.

ಎಸ್.ಬಿ. **ಸಿದ್ಧಲಿಂಗಪ್ಪ ಬೀಳಗಿ**
ಹುನಗುಂದ.

ಎಸ್.ಬಿ.ಎ. **ಸುಮಂಗಲ ಬಿ. ಅತ್ತಿಗೇರಿ**
ಜಾನಪದ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಎಸ್‌ಯು.ಬಿ. **ಸುಭಾಶ ಬಣಗಾರ**
ವರದಿಗಾರರು, ಸಂಯುಕ್ತ ಕರ್ನಾಟಕ, ಗುಲಬರ್ಗಾ.

ಎಸ್.ಬಿ.ಎಂ. **ಶ್ರೀದೇವಿ ಬಿ. ಮಾಸಿಮಾಡೆ**
ಬಿ.ವಿ.ಬಿ. ಕಾಲೇಜು, ಬೀದರ.

ಎಸ್.ಎಚ್. **ಸೂಗಯ್ಯ ಹಿರೇಮಠ (ಡಾ)**
ವಿಶ್ರಾಂತ ಪ್ರಾಚಾರ್ಯರು, ವೀರೇಂದ್ರ ಪಾಟೀಲ ಬಡಾವಣೆ, ಗುಲಬರ್ಗಾ.

ಎಸ್.ಜಿ.ಡಿ. **ಶಕುಂತಲಾ ಜಿ.ಡಿ**
ಎಲ್.ವಿ.ಡಿ. ಕಾಲೇಜು, ರಾಯಚೂರು.

ಎಸ್.ಜಿ.ಐ. **ಸೋಮಶೇಖರ ಜಿ. ಇಮ್ರಾಪುರ (ಡಾ)**
ವಿಶ್ರಾಂತ ಪ್ರಾಧ್ಯಾಪಕರು, ಚಿತ್ತಾರ 12ನೇ ಕ್ರಾಸ್ ನಿರ್ಮಲ ನಗರ, ಧಾರವಾಡ.

ಎಸ್.ಐ. **ಶಿವಣ್ಣ ಇಜೇರಿ**
ಶಹಾಪುರ, ಜಿ. ಯಾದಗಿರಿ.

ಎಸ್.ಕೆ.ಎಂ. **ಶಿವಲಿಂಗಪ್ಪ ಕೆ. ಮಂಗಳೂರು**

ಎಸ್.ಆರ್. **ಶಿವಗಂಗಾ ರುಮ್ಮಾ (ಡಾ)**
ಕನ್ನಡ ಉಪನ್ಯಾಶಕರು, ಸರಕಾರಿ ಕಾಲೇಜು, ಗುಲಬರ್ಗಾ.

ಎಸ್.ಆರ್.ಐ. **ಶ್ರೀರಾಮ ಇಟ್ಟಣ್ಣನವರ (ಡಾ)**
ನಿವೃತ್ತ ಪ್ರಾಧ್ಯಾಪಕರು, ಬೀಳಗಿ, ಜಿ. ಬಾಗಲಕೋಟ.

ಎಸ್.ಯು.ಕೆ. **ಸುಭಾಶಚಂದ್ರ ಕೌಲಗಿ (ಡಾ)**
ಈರಮ್ಮ ನಿವಾಸ, ಲಕ್ಷ್ಮೀ ನಗರ ಸ್ಟೇಷನ್ ಏರಿಯಾ, ಯಾದಗೀರ, ಜಿ. ಗುಲಬರ್ಗಾ.

ಎಸ್.ಕೆ.ಓ. **ಸುರೇಂದ್ರಾಚಾರ್ಯ ಕೊರ್ಕಕುಂದಿ**
ಸಂಯುಕ್ತ ಕರ್ನಾಟಕ ವರದಿಗಾರರು, ರಾಯಚೂರ.

ಎಸ್.ಎಚ್.ಪಿ. **ಸಿದ್ದನಗೌಡ ಎಚ್. ಪಾಟೀಲ.**
ಪ್ರಾಂಶುಪಾಲರು, ಸರಕಾರಿ ಪದವಿ ಕಾಲೇಜು, ಬಸವಕಲ್ಯಾಣ.

ಎಸ್.ಕೆ.ಯು. **ಸ್ವಾಮಿರಾವ ಕುಲಕರ್ಣಿ (ಡಾ)**
ಪ್ರಾಚಾರ್ಯರು, ನೂತನ ಮಹಾವಿದ್ಯಾಲಯ, ಗುಲಬರ್ಗಾ.

ಎಸ್.ಎಂ.ಬಿ. **ಶರಣಯ್ಯ ಮಾಸ್ತರ ಬೆಲ್ಲದ**
ಹಲಕರ್ಟಿ ತಾ.ಚಿತ್ತಾಪುರ ಜಿ.ಗುಲ್ಬರ್ಗಾ

ಎಸ್.ಎಂ.ಡಿ **ಶಿವರಾಜ ಎಂ. ದೇವಪ್ಪ**
ಕನ್ನಡ ಉಪನ್ಯಾಸಕರು, ಸರಕಾರಿ ಪದವಿ ಪೂರ್ವ ಕಾಲೇಜು, ಶಹಾಪುರ.

ಎಸ್.ಎಂ.ಎಚ್. **ಎಸ್.ಎಂ. ಹಿರೇಮಠ (ಡಾ)**
ಪ್ರವಾಚಕರು, ಕನ್ನಡ ಅಧ್ಯಾಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಎಸ್.ಎಂ.ಎಲ್. **ಶಿವುಕುಮಾರ ಎಂ. ಲಕ್ಕಾ**

ಎಸ್.ಎನ್. **ಸೋಮನಾಥ ನುಚ್ಚಾ (ಡಾ)**
ಚನ್ನಬಸವೇಶ್ವರ ಕಾಲೇಜು, ಭಾಲ್ಕಿ, ಜಿ.ಬೀದರ.

ಎಸ್.ಆರ್.ಎಂ. **ಎಸ್.ಆರ್. ಮಣ್ಣೂರ**
ಸ್ಥಾನಿಕ ಸಂಪಾದಕರು, ಸಂಯುಕ್ತ ಕರ್ನಾಟಕ, ಗುಲಬರ್ಗಾ.

ಎಸ್.ಕೆ.ಇ. **ಸುರೇಂದ್ರಕುಮಾರ ಕೆರಮಗಿ (ಡಾ)**
ಕನ್ನಡ ಉಪನ್ಯಾಸಕರು, ಸರಕಾರಿ ಪದವಿ ಮಹಾವಿದ್ಯಾಲಯ, ಗುಲಬರ್ಗಾ.

ಎಸ್.ಕೆ.ಡಿ. **ಶರಣಬಸಪ್ಪ ಕೆ. ದಾನಕೈ**

ಎಸ್.ಎಲ್.ಜೆ. **ಸುರೇಶ ಎಲ್. ಜಾಧವ (ಡಾ)**
ಕನ್ನಡ ಉಪನ್ಯಾಸಕರು, ಸರಕಾರಿ ಪದವಿ ಮಹಾವಿದ್ಯಾಲಯ, ಗುಲಬರ್ಗಾ.

ಎಸ್.ಎನ್. **ಎಸ್. ನಾಗರಾಜ**
ಸುರಪುರ, ಜಿ. ಗುಲಬರ್ಗಾ.

ಎಸ್.ಎಸ್.ಕೆ. **ಎಸ್.ಎಸ್. ಕೋತಿನ (ಡಾ)**
ವಿಶ್ರಾಂತ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಎಸ್.ಎಸ್.ವೈ. **ಎಸ್.ಎಸ್. ಯಾಳವಾರ (ಡಾ)**
ಎಚ್.ಬಿ.ಸಿ. ಮತ್ತು ಎಸ್.ಬಿ. ಕಾಲೇಜು ಹುಮನಾಬಾದ ಜಿ. ಬೀದರ

ಎಸ್.ಟಿ. **ಸುಶೀಲಾ ತಾಳಿಕೋಟಿ**
ಕುಷ್ಟಗಿ. ಜಿ. ರಾಯಚೂರ.


ಎಸ್.ಬಿ. **ಶೇಖರ ಬ್ಯಾಕೋಡ**

ಎಸ್.ಎನ್.ಡಿ. **ಶ್ರೀನಿವಾಸ ಎನ್. ದೇಸಾಯಿ**
ಯಲಬುರ್ಗಾ, ಜಿ. ಕೊಪ್ಪಳ.

ಎಸ್.ಎಸ್.ಪಿ. **ಎಸ್. ಶರಣಪ್ಪ ಪಾಟೀಲ್**
ಕರಮುಡಿ ಜಿ. ಕೊಪ್ಪಳ.

ಎಸ್.ವಿ. **ಸುವರ್ಣ ವರ್ಝಿ (ಡಾ)**
ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ, ನೃಪತುಂಗ ಮಹಾವಿದ್ಯಾಲಯ, ಸೇಡಂ.


ಎಸ್.ವಾಯ್.ಕೆ.	**ಶಿವಶರಣ. ಯು ಕಟ್ಟಿಮನಿ** ಕೊಡೇಕಲ್ಲ ತಾ. ಸುರಪೂರ ಜಿ. ಯಾದಗಿರಿ.	ವಿ.ಜೆ.	**ವಾಜೇಂದ್ರ ಜೋಷಿ**
ಟಿ.ಎಚ್.	**ತಾರೀಹಳ್ಳಿ ಹನುಮಂತಪ್ಪ (ಡಾ)** ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಮಾನವ ಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.	ವಿ.ಕೆ.	**ವಿಜಯೇಂದ್ರ ಕುಲಕರ್ಣಿ** ಮಳ್ಳಿ ತಾ. ಜೇವರ್ಗಿ, ಜಿ. ಗುಲಬರ್ಗಾ.
ಟಿ.ಎನ್.	**ಟಿ. ನಾಗೇಂದ್ರ** ಶಹಾಪೂರ ಜಿ. ಗುಲಬರ್ಗಾ.	ವಿ.ಎನ್.	**ವೆಂಕಟೇಶ್ ನಿಲಗಲ್ಲ** ಪ್ರಜಾವಾಣಿ ಲೇಖನ
ಯು.ಟಿ.	**ಉಡುಪಿರಾವ ತಿಳಗೂಳ** ಹಿರಿಯ ಉಪ ಸಂಪಾದಕರು, ಸಂಯುಕ್ತ ಕರ್ನಾಟಕ, ಗುಲಬರ್ಗಾ.	ವಿ.ಎಂ.	**ವಾದಿರಾಜ ಮಂಗಲಗಿ**
ವಿ.ಎ.	**ವಾಸುದೇವ ಅಗ್ನಿಹೋತ್ರಿ (ಡಾ)** ಕನ್ನಡ ಪ್ರಾಧ್ಯಾಪಕರು, ನೃಪತುಂಗ ಕಾಲೇಜು, ಸೇಡಂ, ಜಿ. ಗುಲಬರ್ಗಾ.	ವಿ.ಎಂ.ಎ.	**ವೆಂಕಟೇಶ ಮಾನು** ಸಂಯುಕ್ತ ಕರ್ನಾಟಕ ವರದಿಗಾರರು, ಗುಲಬರ್ಗಾ.
ವಿ.ಎ.ವಿ.	**ವಿಜಯನಂದ್ ಅ. ವಗ್ಗೆ (ಡಾ)** ಕನ್ನಡ ಉಪನ್ಯಾಸಕರು, ಹೆಚ್.ಆರ್.ಎಸ್.ಎಂ. ಕಾಲೇಜು ಸರಸ್ವತಿಗಿರಿ, ಆನೆಗೊಂದಿ ರೋಡ್, ಗಂಗಾವತಿ.	ವ್ಹಿ.ಎಂ.ಪಿ.	**ವೀರಶೆಟ್ಟಿ ಎಂ. ಪಾಟೀಲ** ಬಸವಕಲ್ಯಾಣ, ಜಿ. ಬೀದರ.
ವಿ.ಬಿ.	**ವೀರೇಶ ಬಡಿಗೇರ (ಡಾ)** ಪ್ರಾಧ್ಯಾಪಕರು, ಹಸ್ತಪ್ರತಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.	ವಿ.ಎಲ್.ಪಿ.	**ವಿ.ಎಲ್. ಪಾಟೀಲ (ಡಾ)** ಸಹ ಪ್ರಾಧ್ಯಾಪಕರು, ಜಾನಪದ ಅಧ್ಯಯನ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ವಿ.ಡಿ.	**ವೀರಣ್ಣ ದಂಡೆ (ಡಾ)** ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.	ವಿ.ಎನ್.ಎಂ	**ವೀರೇಶ ಎನ್. ಮಠಪತಿ** ಚಿಟಗುಪ್ಪ, ತಾ. ಹುಮನಾಬಾದ, ಜಿ. ಬೀದರ
ವಿ.ಜಿ.ಪಿ.	**ವ್ಹಿ.ಜಿ. ಪೂಜಾರ (ಡಾ)** ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.	ವೈ.ಎಸ್.	**ಯಶೋಧರಾ ಶಾಸ್ತ್ರಿ (ಡಾ)** ಪ್ರಾಧ್ಯಾಪಕರು, ಎಸ್.ಎಸ್. ಮರಗೋಳ ಕಾಲೇಜು, ಶಹಾಬಾದ, ಜಿ. ಗುಲಬರ್ಗಾ.
		ಎಸ್.ಎಂ.	**ಶಾಸ್ವತಸ್ವಾಮಿ ಮುಕ್ಕುಂದಿ ಮಠ (ಡಾ)** ನಿವೃತ್ತ ಪ್ರಾಚಾರ್ಯರು, ಪಟೇಲ್‌ವಾಡಿ ಸಿಂಧನೂರು, ಜಿ. ರಾಯಚೂರ.
		ಎಸ್.ಕೆ.ಜೆ.	**ಎಸ್.ಕೆ. ಜೋಶಿ (ಡಾ)** #60, ಸಿಲ್ವರ್ ಆರ್ಚಿಡ್, ಶ್ರೀರಂಗ ರಸ್ತೆ, ಧಾರವಾಡ – 580001











ಗುಲಬರ್ಗಾ ವಿಶ್ವವಿದ್ಯಾಲಯವು ಕಳೆದ ಮೂರು ದಶಕಗಳಿಂದ ಬೋಧನೆ, ಸಂಶೋಧನೆ ಮತ್ತು ಪ್ರಕಟಣೆಗಳ ಮೂಲಕ ಗಮನ ಸೆಳೆದಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟಣೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟಣೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆಯುತ್ತಿದೆ.

ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವಿಧ ಬಗೆಯ ಮಹತ್ವದ ಯೋಜನೆಗಳನ್ನು ಹಮ್ಮಿಕೊಂಡಿದೆ. ನಮ್ಮ ವಿಶ್ವವಿದ್ಯಾಲಯಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿವಿಧ ಯೋಜನೆಗಳಿಗೆ ಅನುದಾನವನ್ನು ನೀಡಿದೆ. ಇದರ ಅಂಗವಾಗಿ ಕನ್ನಡ ಅಧ್ಯಯನ ಸಂಸ್ಥೆಯು ಕನ್ನಡ ಭಾಷಾಭಿವೃದ್ಧಿ ಯೋಜನೆಯ ಅಡಿಯಲ್ಲಿ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಅವುಗಳಲ್ಲಿ 'ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶದ ಅಡಿಯಲ್ಲಿ 'ಜಾನಪದ' ಮತ್ತು 'ಲಲಿತಕಲೆ'ಗಳ ಎರಡು ಬೃಹತ್ ಸಂಪುಟಗಳು ಅತ್ಯಂತ ಮಹತ್ವದ್ದಾಗಿವೆ.

ಡಾ. ಪಿ.ಕೆ. ಖಂಡೋಬಾ ಅವರು ವಿಶೇಷ ಶ್ರಮವಹಿಸಿ ಈ ಸಂಪುಟಗಳನ್ನು ಸಂಪಾದಿಸಿ ಸಿದ್ಧಪಡಿಸಿದ್ದಾರೆ. ಇಲ್ಲಿಯ ವಿಷಯಗಳು ತುಂಬಾ ಮೌಲಿಕವಾಗಿದ್ದು, ಈ ಭಾಗದ ಜಾನಪದ ಸಾಂಸ್ಕೃತಿಕ ಲೋಕದ ವಿಶಿಷ್ಟತೆಗಳು ಇಲ್ಲಿವೆ. ಈ ಭಾಗದಲ್ಲಿ ನೂರಾರು ಜನ ತತ್ವಪದಕಾರರು, ಲಾವಣಿಕಾರರು, ಶಾಹಿರರು, ಸಣ್ಣಾಟ, ದೊಡ್ಡಾಟ, ಕವಿ-ಕಲಾವಿದರು, ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಈ ಭಾಗದ ಕೆಲವು ಸಾಂಸ್ಕೃತಿಕ ಸಂಗತಿಗಳು ಅತ್ಯಂತ ಕುತೂಹಾಲಕಾರಿಯಾಗಿವೆ. ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪಟ್ಟರೂ ಕೂಡಾ ಇಂದಿನವರೆಗೂ ತನ್ನತನವನ್ನು ಉಳಿಸಿಕೊಂಡು ಬಂದಿರುವ ಇಲ್ಲಿಯ ಜನ, ಅವರ ಸಂಸ್ಕೃತಿ ಇವೆಲ್ಲಾ ದಾಖಲಾಗುವುದು ಅಗತ್ಯ. ಆ ನಿಟ್ಟಿನಲ್ಲಿ ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ: ಜಾನಪದ ಸಂಪುಟವು ಒಂದು ಅಪೂರ್ವ ದಾಖಲೆಯಾಗಿದೆ.

ಈ.ಟಿ. ಪುಟ್ಟಯ್ಯ
ಕುಲಪತಿಗಳು

₹. ೮೦೦/-

ISBN 978-81-921036-8-6